ಸಾರ್ಥ

ಶ್ರೀ ಏಕನಾಥೀ ಭಾಗವತ

(ದ್ವಿತೀಯ ಖಂಡ)



ಅನುವಾದಕರು :

ಹ.ಭ.ಪ. ಕೃಷ್ಣಾಜೀ ಡೋಂಗ್ರಪ್ಪ

ಜ್ಞಾನಮೋಕೆ, ಕೊಪ್ಪಳ

ಪ್ರಕಾಶಕರು : ಶ್ರೀಸಂತ ವಾಙ್ಮಯ ಸೇವಾ ಸಮಿತಿ, ಕೊಪ್ಪಳ

ಪ್ರಕಾಶಕರು : ಶ್ರೀ ಸಂತ ವಾಙ್ಮಯ ಸೇವಾ ಸಮಿತಿ,
ಕೊಪ್ಪಳ - ೫೮೩ ೨೩೧, ಕೊಪ್ಪಳ ಜಿಲ್ಲೆ, ಕರ್ನಾಟಕ

ಮುದ್ರಣ : ಪ್ರಥಮ

ಪ್ರತಿಗಳು : ೨,೦೦೦

ದಿನಾಂಕ : ಚೈತನ್ಯ ಶ್ರೀಗುರು ಹ.ಭ.ಪ. ಗೋಪಾಲ ಮಹಾರಾಜ ಊರ್ಫ್ ಅಣ್ಣಾಸಾಹೇಬ ಭಾವುಸಾಹೇಬ ವಾಸಕರ ಮಹಾರಾಜ ಪಂಢರಪೂರ ಇವರಿಂದ ಗ್ರಂಥ ಬಿಡುಗಡೆ ಶ್ರೀ ಶಾಲಿವಾಹನ ಶಕೆ ೧೯೨೮ನೇ ವ್ಯಯನಾಮ ಸಂವತ್ಸರದ ಫಾಲ್ಗುಣ ಬ.೬ ಶನಿವಾರ (ಏಕನಾಥ ಷಷ್ಠೀ) ತಾ. 10-3-2007 ಕೊಪ್ಪಳದಲ್ಲಿ

ಬೆಲೆ : ದ್ವಿತೀಯ ಖಂಡ ರಿಯಾಯಿತಿ ದರದಲ್ಲಿ ರೂ ೭೫.೦೦

ಅಕ್ಷರ ಜೋಡಣೆ : ಮಲ್ಲಿಕಾರ್ಜುನ ಎಂ. ಕೊತಬಾಳ, ಡಿ.ಸಿ.ಎಸ್,
ರಮೇಶ ಮಲ್ಲಪ್ಪ ತುಪ್ಪದ, ಆಪರೇಟರ್
ಕಂಪ್ಯೂಟೆಕ್ ಡಾಟಾಫೋರ್ಸ್, ಕೊಪ್ಪಳ - ೫೮೩ ೨೩೧

ಮುದ್ರಕರು : ನಿಖಿತಾ ಪ್ರಿಂಟರ್ಸ್
ನಂ. ೩.೭, ಅಯ್ಯಪ್ಪ ದೇವಸ್ಥಾನದ ಎದುರು, ನಂದಿನಿ ಲೇಔಟ್ ಮುಖ್ಯರಸ್ತೆ,
ಮಹಾಲಕ್ಷ್ಮೀ ಲೇಔಟ್, ಬೆಂಗಳೂರು - ೫೬೦ ೦೮೬

ಅರ್ಪಣೆ

ಪರಬ್ರಹ್ಮಲಿಂಗ, ಸರ್ವಾಂತರ್ಯಾಮೀ, ಭಕ್ತವತ್ಸಲ ಶ್ರೀಪಾಂಡುರಂಗನ ದಿವ್ಯ ಕೃಪೆಯಿಂದ, ಶ್ರೀಗುರುದೇವ ದತ್ತಾತ್ರೇಯರ ಅನುಗ್ರಹಿತ ಶ್ರೀಸದ್ಗುರು ಜನಾರ್ದನ ಸ್ವಾಮಿಗಳವರ ಪರಮಶ್ರೇಷ್ಠ ಶಿಷ್ಯರಾದ ಶ್ರೀಸಂತ ಏಕನಾಥ ಮಹಾರಾಜರ ಕಾರುಣ್ಯ ಮನೋಭಾವ ಕಾರಣದಿಂದ, ಜಗದ್ಗುರು ಶ್ರೀಸಂತ ತುಕಾರಾಮ ಮಹಾರಾಜರ ವಿದ್ಯಾವಂಶ ಪೀಠಸ್ಥರಾದ ಚೈತನ್ಯ ಶ್ರೀಗುರುವರ್ಯ ಹ.ಭ.ಪ. ದಾದಾ ಸಾಹೇಬ ತಾತ್ಯಾಸಾಹೇಬ ವಾಸಕರ ಮಹಾರಾಜರ ಶುಭಾಶೀರ್ವಾದದಿಂದ ಚೈತನ್ಯ ಶ್ರೀಗುರು ಹ.ಭ.ಪ. ಗೋಪಾಲ ಮಹಾರಾಜ ಊರ್ಫ್ ಅಣ್ಣಾಸಾಹೇಬ ಭಾವು ಸಾಹೇಬ ವಾಸಕರ ಮಹಾರಾಜ ಪಂಢರಪೂರ ಇವರ ಮಹಾ ಸಾನಿಧ್ಯದಲ್ಲಿ ಈ ಸಾರ್ಥ ಶ್ರೀಏಕನಾಥಿ ಭಾಗವತ ಗ್ರಂಥವನ್ನು ಜನತಾ ಜನಾರ್ದನರಿಗೆ ಅನನ್ಯ ಮನೋಭಾವದಿಂದ ಸಮರ್ಪಿಸಲಾಗಿದೆ.

ಸಂತ ಚರಣ ಸೇವಕರ ಸೇವಕ,

ಕೃಷ್ಣಾಜೀ ಡೋಂಗ್ರಪ್ಪ ಜ್ಞಾನಮೋತೆ,
ಕೊಪ್ಪಳ

ಪ್ರಸ್ತಾವನೆ

ಜಗತ್ತಿನಲ್ಲಿ ಆಗಾಗ ಧರ್ಮದ ಗ್ಲಾನಿಯಾಗುತ್ತಿರುವುದು. ಜನರು ವಿಷಯಾಂಧರಾಗಿ ಧರ್ಮ ಬೋಧೆಯುಕ್ತ ವೇದಶಾಸ್ತ್ರ ಪುರಾಣಗಳನ್ನು ತಿರಸ್ಕರಿಸುತ್ತ ''ನಾನು ನನ್ನದು'' ಎಂಬ ಅಹಂಕಾರ ಮಮಕಾರಗಳಲ್ಲಿ ಸದಾ ತೊಡಗಿ ಕೇವಲ ದುಃಖಕ್ಕೆ ಗುರಿಯಾಗುತ್ತಿರುವರು. ಆತ್ಮಕಲ್ಯಾಣಕಾರಕ ಸರ್ವ ಸಾಧನೆಗಳು ಲೋಪವಾಗಿ ನಿಜಸುಖವು ಹೇಳಹೆಸರಿಲ್ಲದಂತೆ ಆಗುವುದು. ಮಾನವ ಜನ್ಮದ ಸಾರ್ಥಕತೆ ಯಾವುದರಲ್ಲಿದೆ ಎಂಬುವುದು ತಿಳಿಯದಂತಾಗುವುದು. ಎಲ್ಲಿ ನೋಡಿದರೂ ಜನರು ಕಾಮಕ್ರೋಧಾದಿ ಅರಿಷಡ್ವೈರಿಗಳ ಕಾಟಕ್ಕೆ ತುತ್ತಾಗಿ ಅಧೋಗತಿಗೆ ಪ್ರಾಪ್ತರಾಗುತ್ತಿರುವ ಇಂತಹ ದುರ್ಧರ ಪ್ರಸಂಗದಲ್ಲಿ ಕರುಣಾಳು ದಯಾಘನನಾದ ಪರಮಾತ್ಮನು ಸಂತರೂಪದಿಂದ ಜಗತ್ತಿನಲ್ಲಿ ಅವತರಿಸಿ ಮನುಷ್ಯರಿಗೆ ಅತ್ಯಾವಶ್ಯಕವಾದ ಭಕ್ತಿ ಜ್ಞಾನ ವೈರಾಗ್ಯಗಳ ಸಾಧನೆಗಳನ್ನು ಸ್ವತಃ ಆಚರಿಸಿ,ಭಜನೆ, ಕೀರ್ತನೆ, ಪ್ರವಚನಗಳಿಂದ ಸನ್ಮಾರ್ಗಗಳನ್ನು ತೋರಿಸಿಕೊಡುತ್ತಿರುವನು.

ಮಹಾರಾಷ್ಟ್ರದ ಪೈಠಣ ಕ್ಷೇತ್ರದಲ್ಲಿ ಋಗ್ವೇದಿ ಬ್ರಾಹ್ಮಣ, ಕುಲಕರ್ಣಿ ಮನೆತನದಲ್ಲಿ ಮಹಾಭಗವದ್ಭಕ್ತರಾಗಿ ಭಾನುದಾಸರು ಉದಯರಾದರು. ಇವರು ಸೂರ್ಯೋಪಾಸಕರೂ, ಶ್ರೀಪಾಂಡುರಂಗನ ಅನನ್ಯ ಭಕ್ತರೂ ಆಗಿದ್ದರು. ಇವರಿಗೆ ಬ್ರಾಹ್ಮಣ ವೇಶದಲ್ಲಿ ಸೂರ್ಯನಾರಾಯಣನು ಪ್ರತ್ಯಕ್ಷ ದರ್ಶನ ನೀಡಿದ್ದನು. ಕರ್ನಾಟಕದ ವಿಜಯನಗರದ ರಾಜನು ತನ್ನ ಭಕ್ತಿ ಭಾವ ಬಲದಿಂದ ಪಂಢರಪೂರ ಕ್ಷೇತ್ರದ ಶ್ರೀವಿಠ್ಠಲ ಮೂರ್ತಿಯನ್ನು ತನ್ನ ರಾಜಧಾನಿಗೆ ತಂದು ಪ್ರತಿಷ್ಠಾಪಿಸಿದ್ದನು. ಅನೇಕ ಭಕ್ತರ ಅಪೇಕ್ಷೆ ಮೇರೆಗೆ ಭಾನುದಾಸರು ವಿಜಯ ನಗರಕ್ಕೆ ಹೋಗಿ ತಮ್ಮ ದೃಢ ಭಾವಬಲದಿಂದ ಶ್ರೀವಿಠ್ಠಲಮೂರ್ತಿಯನ್ನು ಪುನಃ ಪಂಢರಪೂರಕ್ಕೆ ತಂದು ಮಹಾಕೀರ್ತಿಗೆ ಪ್ರಾಪ್ತರಾದರು.

ಶ್ರೀ ಸಂತ ಭಾನುದಾಸರ ಸುಪುತ್ರ ಚಕ್ರಪಾಣೀ, ಚಕ್ರಪಾಣಿಯ ಸುಪುತ್ರ ಸೂರ್ಯನಾರಾಯಣನು. ಸೂರ್ಯನಾರಾಯಣನಿಗೆ ರುಕ್ಮಿಣಿಬಾಯಿ ಎಂಬ ಪತಿವ್ರತಾ ಧರ್ಮಪತ್ನಿ ಇದ್ದಳು. ಇವರ ಪವಿತ್ರ ಗರ್ಭದಲ್ಲಿ ಶಾಲಿವಾಹನಶಕೆ ೧೪೫೫ ರಲ್ಲಿ ನಮ್ಮ ಕಥಾನಾಯಕ ಶ್ರೀ ಸಂತ ಏಕನಾಥ ಮಹಾರಾಜರ ಜನ್ಮವಾಯಿತು. ಇವರು ಮೂಲಾ ನಕ್ಷತ್ರದಲ್ಲಿ ಜನ್ಮಧರಿಸಿದ ಕಾರಣದಿಂದ ತಮ್ಮ ಮಾತಾಪಿತೃಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡರು. ಇವರ ಎಲ್ಲ ಆಗು ಹೋಗುಗಳನ್ನು ಅಜ್ಜ-ಅಜ್ಜಿಯರು ಬಲುಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು.

ಕುಟುಂಬದಲ್ಲಿ ಪರಂಪರೆಯಿಂದ ನಡೆದು ಬಂದ ಪಾರಮಾರ್ಥಿಕ ಜೀವನವು ಏಕನಾಥರ ಅಂಗದಲ್ಲಿ ಸಹಜವಾಗಿ ನಟ್ಟಿಕೊಂಡಿತು. ಇವರು ಬಾಲ್ಯದಲ್ಲಿಯೇ ಈಶ್ವರ ಭಕ್ತಿಯಲ್ಲಿ ತಲ್ಲೀನರಾಗುತ್ತಿದ್ದರು. ಸತತವಾಗಿ ಇವರ ಅಧ್ಯಾತ್ಮ ಚಿಂತನೆ, ಸಾಧು ಸಜ್ಜನರಲ್ಲಿ ಪಾರಮಾರ್ಥಿಕ ಚರ್ಚೆ ಅಗಾಧವಾಗಿತ್ತು. ಊರಲ್ಲಿ ಎಲ್ಲಿಯಾದರೂ ಕೀರ್ತನೆ, ಪ್ರವಚನೆ ಪುರಾಣ ಶಾಸ್ತ್ರಗಳು ನಡೆಯುತ್ತಿದ್ದರೆ ಅಲ್ಲಿ ಕೂಡಲೇ ಭಾಗವಹಿಸುತ್ತ ಏಕಾಗ್ರಚಿತ್ತದಿಂದ ಶ್ರವಣ ಮಾಡುತ್ತಿದ್ದರು. ಪಾರಮಾರ್ಥಿಕ ಶಾಸ್ತ್ರ ಜ್ಞಾನವನ್ನು ಕರಗತ ಮಾಡಿಕೊಳ್ಳುವ ಉತ್ಕಟ ಹಂಬಲ ಇವರದಾಗಿತ್ತು.

ಒಂದು ದಿನ ಶಿವಮಂದಿರದಲ್ಲಿ ''ಶ್ರೀಗುರು''ವಿಷಯವಾಗಿ ಪ್ರವಚನವು ಅತ್ಯಂತ ರಸಾಳವಾಗಿತ್ತು. ಇದರಲ್ಲಿ ಸದ್ಗುರುವಿನ ಅನುಗ್ರಹವಿಲ್ಲದೇ ಜೀವದ ಕಲ್ಯಾಣವಾಗುವುದಿಲ್ಲ. ಸದ್ಗುರುವಿನ ಸೇವೆ ಇಲ್ಲದೆ ಅವರ ಅನುಗ್ರಹವಾಗುವುದಿಲ್ಲ ಎಂಬ ವಿಷಯದಲ್ಲಿ ಸವಿಸ್ತಾರವಾದ ವಾಣಿಯನ್ನು ಏಕಾಗ್ರತೆಯಿಂದ ಶ್ರವಣದ ನಂತರ ಏಕನಾಥರು ಅಲ್ಲಿಂದ ಮನೆಗೆ ಹೋಗದೇ ''ನನಗೆ ಸದ್ಗುರುಗಳು ಎಂದು ಪ್ರಾಪ್ತರಾದಾರು?'' ಎಂಬ ಒಂದೇ ಚಿಂತನೆಯಲ್ಲಿ ಅಲ್ಲಿಯೇ ಮಂದಿರದಲ್ಲಿ ಉಳಿದುಕೊಂಡರು. ಇವರಲ್ಲಿ ಗುರುಗಳಿಗಾಗಿ ಇರುವ ಏಕನಿಷ್ಠೆ ಕಂಡು ಮಹಾದೇವರು ಅವರ ಸ್ವಪ್ನದಲ್ಲಿ ''ದೇವಗಿರಿ ರಾಜಧಾನಿಯ ಕಿಲ್ಲೆದಾರರಾಗಿರುವ ಶ್ರೀಜನಾರ್ದನಸ್ವಾಮಿಗಳವರು ನಿನಗೆ ಯೋಗ್ಯ ಗುರುಗಳಾಗಿರುವರು. ಅಲ್ಲಿಗೆ ಪಾದಾರ್ಪಣೆ ಮಾಡು'' ಎಂದು ಸಂದೇಶವಾಯಿತು. ಸ್ವಪ್ನದಿಂದ ಎಚ್ಚೆತ್ತಕೂಡಲೇ ಏಕನಾಥರು ದೇವಗಿರಿಗೆ ಹಗಲು ರಾತ್ರಿಯನ್ನದೇ ಹಸಿವೆ ನೀರಡಿಕೆಯನ್ನದೇ ಪಾದಚಾರಿಯಾಗಿ ಮುಂದೆ ಸಾಗುತ್ತ ಕೊನೆಗೆ ಶ್ರೀಜನಾರ್ದನಸ್ವಾಮಿಯವರಲ್ಲಿ ಬಂದು ಮುಟ್ಟಿಕೊಂಡರು. ಶ್ರೀಜನಾರ್ದನ ಸ್ವಾಮಿಯವರ ಆಧ್ಯಾತ್ಮಿಕ ತೇಜವನ್ನು ಪ್ರತ್ಯಕ್ಷ ಕಂಡು ಬಹಳ ಪುಳಕಿತರಾಗಿ ಏಕನಾಥರು ಸ್ವಾಮಿಗಳವರ ಪಾದಗಳಿಗೆ ದೀರ್ಘ

ದಂಡವತ ನಮಸ್ಕಾರಗಳನ್ನು ಹಾಕಿ ಸದ್ಗದಿತ ಅಂತಃಕರಣದಿಂದ ಕೈಜೋಡಿಸಿ ಅವರ ಮುಂದೆ ನಿಂತುಕೊಂಡರು. ಶ್ರೀಜನಾರ್ದನ ಸ್ವಾಮಿಗಳವರು ಈ ಬಾಲಕನ ತೇಜ, ಮುಮುಕ್ಷು ಸ್ಥಿತಿ ಕಂಡು ಬೆರಗಾದರು. ಏಕನಾಥರಿಗೆ ಮಾತೃ ವಾತ್ಸಲ್ಯದಿಂದ :- ಬಾಳಾ, ನೀನಾರು? ಇಲ್ಲಿಗೇಕೆ ಬಂದಿರುವೆ? ನಿನಗೆ ಏನು ಬೇಕಾಗಿದೆ? ಎಂದು ಕುಶಲ ಪ್ರಶ್ನೆ ಮಾಡಿದರು. ಏಕನಾಥರು ತ್ರಿಕರ್ಣ ಪೂರ್ವಕವಾಗಿ ''ಸ್ವಾಮೀ ನನಗೆ ನಿಮ್ಮ ಕೃಪಾಪ್ರಸಾದ'' ಬೇಕಾಗಿದೆ ಎಂದು ಅತ್ಯಂತ ಕಳಕಳಿಯ ವಿನಮ್ರ ಭಾವದಿಂದ ನುಡಿದರು. ಆಗ ಸ್ವಾಮಿಗಳು ; ಬಾಳಾ, ಪರಮಾರ್ಥವು ಹುಡುಗರ ಆಟವಲ್ಲ. ಬಹಳ ಕಷ್ಟಪಡಬೇಕಾಗುವುದು. ಅನೇಕ ವರ್ಷ ನೀನು ಇಲ್ಲಿಯೇ ಇರಬೇಕಾಗುವುದು ಎಂದು ನುಡಿಯುವುದೊಂದೇ ತಡ ಕೂಡಲೇ ಏಕನಾಥರು ಅತ್ಯಂತ ಪ್ರೇಮದಿಂದ ಅದಕ್ಕೆ ಒಪ್ಪಿಕೊಂಡು ಪುನಃ ಪುನಃ ನಮಸ್ಕರಿಸಿದರು.

ಈಗ ಏಕನಾಥರು ಜನಾರ್ದನ ಸ್ವಾಮಿಯವರಲ್ಲಿಯೇ ವಾಸಮಾಡಿ ಅವರ ಸರ್ವ ಕಾರ್ಯಗಳಿಗೆ ಸಹಕರಿಸುತ್ತ ಸದಾ ಸೇವೆಯಲ್ಲಿ ಮನಃಪೂರ್ವಕ ತನ್ಮಯರಾಗುತ್ತಿದ್ದರು. ಮನೆಯ ಎಲ್ಲ ಕೆಲಸಗಳು, ಸ್ವಾಮಿಯವರ ಲೆಕ್ಕ ಪತ್ರ ಬರೆಯುವುದು ಇತ್ಯಾದಿ ಒಂದೂ ಬಿಡದೇ ಅವಿಶ್ರಾಂತವಾಗಿ ಅವರ ಸೇವೆಯಲ್ಲಿ ಇವರು ತತ್ಪರರಾಗುತ್ತಿದ್ದರು. ಯಾವತ್ತೂ ಸೇವೆಗಳನ್ನು ಅತ್ಯಂತ ಶುದ್ಧ ರೀತಿಯಲ್ಲಿ ಮನಸಾ ಪ್ರೇಮದಿಂದ ಮಾಡುತ್ತಿದ್ದರು. ಸ್ವಾಮಿಯವರು ಬಹಿರ್ದೆಶೆಗೆ ಹೋಗುವ ಸ್ಥಾನವನ್ನೂ ಸಹ ಸ್ವಚ್ಛಗೊಳಿಸಿ ಅಲ್ಲಿ ರಂಗೋಲಿ ಹಾಕುತ್ತಿದ್ದರು. ಅಂದಮೇಲೆ ಇವರ ಸೇವೆಯ ಮಹತ್ವವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಆಗುವುದು. ಈ ರೀತಿ ಗೃಹ-ಕಚೇರಿಯ ಸೇವೆಯಲ್ಲದೇ ಯುದ್ಧ ತರಬೇತಿಯನ್ನೂ ಪಡೆದುಕೊಂಡಿದ್ದರು. ಇವರ ಏಕನಿಷ್ಠೆಯ ಪರಿಶುದ್ಧ ಸೇವೆಯಿಂದ ಜನಾರ್ದನಸ್ವಾಮಿಯವರು ಪೂರ್ಣ ಪ್ರಸನ್ನರಾದರು.

ಒಂದು ದಿನ ಏಕನಾಥರು ಎಲ್ಲೋ ಬಿಡಿಕಾಸು ತಪ್ಪಿರುವ ಲೆಕ್ಕ ಶೋಧನೆ ಮಾಡಲಾರಂಭಿಸಿದರು. ಏನು ಮಾಡಿದರೂ ಆ ತಪ್ಪಿದ ಲೆಕ್ಕ ಸಿಗಲಾರದ್ದಕ್ಕೆ ರಾತ್ರಿ ಅನ್ನ ನೀರೂ ಸಹ ಸೇವಿಸದೇ ಅದೇ ಲೆಕ್ಕದ ಶೋಧನೆ ಬಲು ಏಕಾಗ್ರತೆಯಿಂದ ಮಾಡುತ್ತಿರಲು ಮಧ್ಯರಾತ್ರಿಯಲ್ಲಿ ಒಮ್ಮಿಂದೊಮ್ಮೆಲೆ ತಪ್ಪಿದ ಲೆಕ್ಕ ದೊರಕುತ್ತಲೇ ಏಕನಾಥರಿಗೆ ಹಿಡಿಸಲಾರದ ಆನಂದವಾಗಿ ಕೈಚಪ್ಪಾಳೆ ತಟ್ಟುತ್ತ ಕುಣಿದಾಡಿಬಿಟ್ಟರು. ಆಗ ಸಮೀಪದಲ್ಲಿ ಮಲಗಿದ್ದ ಜನಾರ್ದನಸ್ವಾಮಿಗಳವರು ಎಚ್ಚೆತ್ತು ಏಕನಾಥರಿಗೆ ಏನಾಯಿತು ? ಎಂದು ಪ್ರಶ್ನಿಸಿದರು. ಆಗ ಏಕನಾಥರು ಆದ ಸರ್ವ ಸಮಾಚಾರವನ್ನು ಸ್ವಾಮಿಯವರಿಗೆ ನಿವೇದಿಸಿದರು. ಈಗಾಗಲೇ ಸೇವೆಗೆ ಅರ್ಪಿಸಿಕೊಂಡ ಏಕನಾಥರಿಗೆ ಹನ್ನೆರಡು ವರ್ಷಗಳು ಗತಿಸಿದ್ದವು. ಈಗ ಏಕನಾಥನಿಗೆ ಅನುಗ್ರಹಿಸಬೇಕೆಂಬ ಉದ್ದೇಶದಿಂದ ಸ್ವಾಮಿಯವರು ಹೀಗೆ ನುಡಿದರು :ಏಕನಾಥಾ, ನೀನು ಬಿಡಿಕಾಸಿಗಾಗಿ ಇಷ್ಟೊಂದು ಶ್ರಮಪಟ್ಟು ಪರಿಪೂರ್ಣ ಏಕಾಗ್ರತೆಯಿಂದ ಆದ ತಪ್ಪು ಕಂಡು ಹಿಡಿದೆ. ಇದೇ ರೀತಿಯಲ್ಲಿ ಇನ್ನು ನೀನು ನಿನ್ನ ಆತ್ಮಶೋಧೆಯನ್ನುಮಾಡು ಎಂದು ಅನುಗ್ರಹಿಸಿ ಆತನಿಗೆ ಶ್ರೀಗುರುದತ್ತಾತ್ರೇಯರ ಸಾಕ್ಷಾತ್ ದರ್ಶನ ಮಾಡಿಸಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ''ಶೂಲಭಂಜನ'' ನಾಮದ ಪರ್ವತಕ್ಕೆ ಕಳುಹಿಸಿ ಆತ್ಮಸಾಕ್ಷಾತ್ಕಾರವಾಗದೇ ಹಿಂದಿರುಗಬೇಡ ಎಂದು ಆಜ್ಞಾಪಿಸಿದರು.

ಬ್ರಹ್ಮದೇವ-ಅತ್ರಿಮುನಿ-ದತ್ತಾತ್ರೇಯ-ಜನಾರ್ದನಸ್ವಾಮಿ ಈ ಶ್ರೇಷ್ಠ ಗುರುಪರಂಪರೆಯ ಸದ್ಗುರುಗಳ ದಿವ್ಯ ಅನುಗ್ರಹ ಪಡೆದು ಏಕನಾಥರು ಧ್ಯಾನಕ್ಕೆ ಅತಿಯೋಗ್ಯವಾಗಿರುವ ಪ್ರಶಾಂತ ಸ್ಥಾನವಾದ ''ಶೂಲಭಂಜನ'' ಪರ್ವತಕ್ಕೆ ಪಾದಾರ್ಪಣೆ ಮಾಡಿ ಅಲ್ಲಿ ಚಿಕ್ಕ ಪರ್ಣಕುಟೀರ ಕಟ್ಟಿಕೊಂಡು ಸದ್ಗುರುಗಳು ಮಾರ್ಗದರ್ಶನ ಮಾಡಿದ ರೀತಿಯಲ್ಲಿ ಆತ್ಮಧ್ಯಾನ ಆರಂಭಿಸಿದರು. ಧ್ಯಾನವು ಸಿದ್ಧಿಗೊಂಡು ಅವರಿಗೆ ಸಮಾಧಿ ಹತ್ತುತ್ತಿತ್ತು. ಅಲ್ಲಿ ಬಹುದಿನಗಳಿಂದ ವಾಸವಾಗಿದ್ದ ಮಹಾಭಯಂಕರ ಕಾಳಿಂಗ ಸರ್ಪವು ಏಕನಾಥರು ಧ್ಯಾನಸ್ಥರಾದಾಗ ಅವರನ್ನು ಕಚ್ಚಲು ಧಾವಿಸಿ ಬಂದಿತು. ಆದರೆ ಏಕನಾಥರ ದರ್ಶನವಾಗುತ್ತಲೇ ಅದರ ದುಷ್ಟ ಬುದ್ಧಿಯು ನಷ್ಟವಾಗಿ ದಯಾಭರಿತ ಅಂತಃಕರಣದಿಂದ ಏಕನಾಥರ ಶರೀರವನ್ನು ಸುತ್ತಿಕೊಂಡು ತನ್ನ ವಿಶಾಲ ಹೆಡೆಯನ್ನು ಅವರ ಶಿರದ ಮೇಲೆ ಛತ್ರಿಯಂತೆ ಹಿಡಿದು ಸೇವೆ ಮಾಡಲಾರಂಭಿಸಿತು. ಏಕನಾಥರು ಸಮಾಧಿಯಿಂದ ಎಚ್ಚರಾಗುತ್ತಲೇ ಕೂಡಲೇ ಅಲ್ಲಿರದೇ ತನ್ನ ಸ್ಥಳಕ್ಕೆ ಹೋಗುತ್ತಿತ್ತು. ಇದು ಅದರ ನಿತ್ಯ ನೇಮವೇ ಆಗಿಬಿಟ್ಟಿತು.

ಏಕನಾಥರ ಧ್ಯಾನಸಾಧನೆಯು ಪೂರ್ಣ ಸಿದ್ಧಿಗೊಂಡು ಅವರಿಗೆ ನಿರ್ಗುಣ ಆತ್ಮಸಾಕ್ಷಾತ್ಕಾರವಾಯಿತಲ್ಲದೇ ಸಗುಣ ಮೂರ್ತಿ ಶ್ರೀಕೃಷ್ಣಪರಮಾತ್ಮನು ತನ್ನ ಶಂಖ, ಚಕ್ರ, ಗದಾ, ಪದ್ಮದೊಂದಿಗೆ ಚತುರ್ಭುಜನಾಗಿ ದಿವ್ಯ ದರ್ಶನವನ್ನು ಕೊಟ್ಟು ಏಕನಾಥರಿಗೆ ಆಲಿಂಗಿಸಿ ಅನುಗ್ರಹಿಸಿದನು. ''ಆತ್ಮಸಾಕ್ಷಾತ್ಕಾರವಾಗದೇ ಹಿಂದಿರುಗಬೇಡ'' ಎಂಬ ಸದ್ಗುರುಗಳ ಆಜ್ಞೆ ಪರಿಪೂರ್ಣ ಪಾಲಿಸಿ ತಮಗಾದ ದಿವ್ಯದರ್ಶನವನ್ನು ನಿವೇದಿಸಲು ಏಕನಾಥರು ತಮ್ಮ ಸದ್ಗುರು ಜನಾರ್ದನಸ್ವಾಮಿಯವರಲ್ಲಿ ಆಗಮಿಸಿದರು. ಏಕನಾಥರು ಪೂರ್ಣ ಅವಸ್ಥೆಗೆ ಮುಟ್ಟಿದ್ದನ್ನು ಕಂಡ ಜನಾರ್ದನಸ್ವಾಮಿಯವರಿಗೆ ಬಹು ಸಂತೋಷವಾಯಿತು. ಇನ್ನು ಜಗತ್ತಿನ ಜನರ ವರ್ತನೆಯ ಅನುಭವ ಪಡೆಯುವುದಕ್ಕಾಗಿ ಹಾಗೂ ಸರ್ವ ಪವಿತ್ರ ಸ್ಥಾನಗಳ ಮಠ, ಮಂದಿರ, ಮಹಾತ್ಮರ ದರ್ಶನ ಲಾಭಕ್ಕಾಗಿ ಜನಾರ್ದನ ಸ್ವಾಮಿಗಳು ಏಕನಾಥರ ಜೊತೆ ತೀರ್ಥಯಾತ್ರೆ ಆರಂಭಿಸಿ ಉತ್ತರ ಭಾಗದ ನಾಸಿಕ, ತ್ರ್ಯಂಬಕೇಶ್ವರ,

ಕಾಶೀ ಇತ್ಯಾದಿ ಪುಣ್ಯ ಕ್ಷೇತ್ರಗಳ ದರ್ಶನ ಮಾಡಿಸಿದರು. ಏಕನಾಥರು ದಾರಿಯಲ್ಲಿ ಸದ್ಗುರು ಜೊತೆಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ಚರ್ಚೆ ಮಾಡುತ್ತ ಹಾಗೂ ಇದನ್ನು ಸಾಧಿಸಿದ ಹಿಂದಿನ ಅನೇಕ ಸತ್ಪುರುಷರ ದಿವ್ಯ ಚರಿತ್ರೆ ಶ್ರವಣ ಮಾಡುತ್ತ ಆನಂದದಿಂದ ತೀರ್ಥಯಾತ್ರೆ ಮಾಡುತ್ತಿದ್ದರು. ದಾರಿಯಲ್ಲಿಯೇ ಜನಾರ್ದನಸ್ವಾಮಿಗಳು ಏಕನಾಥರಿಗೆ ಚತುಃಶ್ಲೋಕೀ ಭಾಗವತವನ್ನು ಮರಾಠೀ ಭಾಷೆಯಲ್ಲಿ ರಚಿಸಲು ಆಜ್ಞೆ ಮಾಡಿದರು. ನಂತರ ಸಿದ್ಧಗೊಂಡ ಭಾಗವತವನ್ನು ಅಲ್ಲಿನ ಮಠ ಮಂದಿರಗಳಲ್ಲಿ ಜನರನ್ನು ಸೇರಿಸಿ ಏಕನಾಥರಿಂದ ಪ್ರವಚನ ಮಾಡಿಸಲು ಕೂಡಿದ ಎಲ್ಲ ಶ್ರೋತೃಗಳು ಏಕನಾಥರ ರಸಾಳ ಮಂಜುಳ ಪ್ರಾಸಾದಿಕ ವಾಣಿಯನ್ನು ಕೇಳಿ ಬೆರಗಾಗುತ್ತ ಸನ್ಮಾರ್ಗಕ್ಕೆ ಹತ್ತಿಕೊಳ್ಳುತ್ತಿದ್ದರು. ಈ ರೀತಿ ಏಕನಾಥರ ಉಪದೇಶದಿಂದ ಜಗತ್ತಿನ ಜನರು ಪಾವನರಾಗುತ್ತಿದ್ದರು.

ಒಂದು ದಿನ ಸದ್ಗುರು ಜನಾರ್ದನ ಸ್ವಾಮಿಗಳು ಏಕನಾಥರಿಗೆ ಹೀಗೆ ಆಜ್ಞಾಪಿಸಿದರು :ನಾನು ಇನ್ನು ನನ್ನ ಸ್ಥಳಕ್ಕೆ ಹೋಗುವೆ. ಇಂದಿನಿಂದ ನೀನೊಬ್ಬನೇ ಜನತಾ ಜನಾರ್ದನ ಎಂಬ ಭಾವದಿಂದ ಉಳಿದ ತೀರ್ಥಕ್ಷೇತ್ರಗಳ ದರ್ಶನ ಪಡೆಯುತ್ತ ಬದರೀಕಾಶ್ರಮದವರೆಗೂ ಹೋಗಿ ಅಲ್ಲಿಂದ ದಕ್ಷಿಣಭಾಗದ ರಾಮೇಶ್ವರದವರೆಗೂ ತೀರ್ಥಯಾತ್ರೆ ಮಾಡು. ಇದರಿಂದ ನಿನಗೆ ವಿವಿಧ ಭಾಗದ ವಿವಿಧ ಜನರ ಕರ್ಮ ಧರ್ಮಗಳ ಸ್ಪಷ್ಟ ಅನುಭವ ದೊರಕುವುದು. ನಿನ್ನಿಂದ ಜಗತ್ತಿನ ಕಲ್ಯಾಣವಾಗುವುದೆಂದು ಆಶೀರ್ವದಿಸಿದರು. ಸದ್ಗುರುಗಳ ಆಜ್ಞೆಯನ್ನು ಶಿರಸಾ ವಂದಿಸಿ ಏಕನಾಥರು ಮುಂದಿನ ತೀರ್ಥಯಾತ್ರೆಗೆ ಪ್ರಯಾಣಿಸಿದರು. ಹೋದಲ್ಲೆಲ್ಲ ಭಾಗವತ ಧರ್ಮದ ಪತಾಕೆಯನ್ನು ನಾಲ್ಕೂ ಕಡೆ ಹಾರಿಸಿದರು. ಎಲ್ಲ ತೀರ್ಥಯಾತ್ರೆಗಳನ್ನು ಪೂರ್ಣಗೊಳಿಸಿ ಕೊನೆಗೆ ತಮ್ಮ ಜನ್ಮಸ್ಥಾನವಾದ ಪೈಠಣಕ್ಕೆ ಆಗಮಿಸಿದರು.

ಏಕನಾಥರ ಅನೇಕ ವರ್ಷಗಳ ವಿಯೋಗದಿಂದ ಅಜ್ಜ ಅಜ್ಜಿಯರು ಸದಾ ದಾರಿ ಕಾಯುತ್ತ ಚಿಂತಾಗ್ರಸ್ಥರಾಗಿದ್ದರು. ಅಂತೂ ಕೊನೆಯಲ್ಲಿ ಏಕನಾಥರ ಭೇಟಿಯಿಂದ ಅವರ ಅಂತಃಕರಣವು ತುಂಬಿ ಹರಿಯಿತು. ಏಕನಾಥರಿಗೆ ಬಿಗಿಯಾಗಿ ಅಪ್ಪಿಕೊಂಡು ಗಳಗಳನೇ ಅತ್ತರು. ಏಕನಾಥರ ದಿವ್ಯ ತೇಜಃಪುಂಜ ಶರೀರವನ್ನು ನೋಡಿ ಆನಂದ ಪುಳಕಿತರಾದರು. ಇಷ್ಟರಲ್ಲಿ ಸದ್ಗುರು ಜನಾರ್ದನಸ್ವಾಮಿಯವರಿಂದ ''ನೀನು ಪೈಠಣದಲ್ಲಿದ್ದುಕೊಂಡೇ ಜಗತ್ತಿನ ಉದ್ಧಾರ ಮಾಡು'' ಎಂಬ ಪತ್ರವು ಏಕನಾಥರ ಕೈ ಸೇರಿತು. ಆಗ ಅದನ್ನು ಶಿರಸಾ ಮಾನ್ಯ ಮಾಡಿ ಅದರಂತೆ ನಡೆದುಕೊಂಡರು. ಮುಂದೆ ಸದ್ಗುರುಗಳ ಆಜ್ಞೆಯಂತೆ ಸತ್ಕುಲ ಸಂಪನ್ನಳೂ, ಸುಲಕ್ಷಣೆಯೂ, ಸದ್ಗುಣಿಯೂ ಆದ ಗಿರಿಜಾಬಾಯಿಯನ್ನು ಲಗ್ನವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಪ್ರಪಂಚ - ಪಾರಮಾರ್ಥ ವನ್ನು ಹೇಗೆ ಸಾಧಿಸಬೇಕೆಂಬ ಮಾರ್ಗದರ್ಶನಕ್ಕೆ ಕಾರಣರಾದರು. ಮನೆಯಲ್ಲಿ ನಡೆದು ಬಂದ ಕುಲಕರ್ಣಿ ವೃತ್ತಿ ಇತ್ತು. ಇದನ್ನು ನಡೆಸುತ್ತಲೇ ಪಾರಮಾರ್ಥಿಕ ನಿತ್ಯ ನೇಮವನ್ನು ತಪ್ಪದೇ ಆಚರಿಸುತ್ತಿದ್ದರು. ಪ್ರತಿನಿತ್ಯ ಪೂಜಾ ಸಮಾರಂಭ, ಅತಿಥಿ ಸಂತರ್ಪಣೆ, ಸಾಯಂಕಾಲ ಪ್ರವಚನೆ, ರಾತ್ರಿ ಕೀರ್ತನೆ ಇವು ಅವ್ಯಾಹತವಾಗಿ ಸಾಗುತ್ತಿದ್ದವು. ಇವರ ಮಧುರ ರಸಾಳ ವಾಣಿ ಶ್ರವಣ ಮಾಡಲು ಊರಿನ ಹಾಗೂ ಅಕ್ಕಪಕ್ಕದ ಶ್ರೋತೃಗಳು ಪಾಮರರಿಂದ ಪಂಡಿತರವರೆಗೆ ಧಾವಿಸಿ ಬಂದು ಶ್ರವಣದ ಆನಂದ ಪಡೆದು ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳುತ್ತಿದ್ದರು. ಹೀಗಿದ್ದರೂ ಪೈಠಣದ ಕೆಲವು ಬ್ರಾಹ್ಮಣರು ಇವರನ್ನು ದ್ವೇಷ ಭಾವದಿಂದ ಕಾಣುತ್ತ ಸದಾ ಪೀಡಿಸುತ್ತಿದ್ದರು. ಆದರೂ ಏಕನಾಥ ಮಹಾರಾಜರು ಸರ್ವರನ್ನೂ ಸಮಾನವಾಗಿ ಹರಿರೂಪದಿಂದಲೇ ಕಾಣುತ್ತಿದ್ದರು.

ಏಕನಾಥ ಮಹಾರಾಜರು ಶ್ರೀಗುರು ದತ್ತಾತ್ರೇಯರ ಆಜ್ಞೆಯಂತೆ ಭಾಗವತದ ಹನ್ನೊಂದನೆಯ ಸ್ಕಂಧಕ್ಕೆ ಭಾಷ್ಯ ಬರೆಯಲು ಆರಂಭಿಸಿದರು. ಪ್ರಾಕೃತ ಮರಾಠೀ ಭಾಷೆಯಲ್ಲಿ ಭಾಗವತವನ್ನು ಸುಂದರ ಶೈಲಿಯಲ್ಲಿ ಐದು ಅಧ್ಯಾಯಗಳನ್ನು ಪೂರ್ಣಗೊಳಿಸಿದರು. ಈ ಸಮಾಚಾರವು ಕರ್ಣೋಪಕರ್ಣವಾಗಿ ಕಾಶೀ ಪೀಠಾಧಿಕಾರಿ ಗುರುಗಳಿಗೆ ತಿಳಿಯಿತು. ಅವರು ಪರಮ ಪವಿತ್ರವಾದ ಸಂಸ್ಕೃತ ಭಾಷೆಯಲ್ಲಿದ್ದ ಭಾಗವತ ಗ್ರಂಥಕ್ಕೆ ಪ್ರಾಕೃತ ಮರಾಠೀ ಭಾಷೆಯಲ್ಲಿ ಬರೆಯುವುದು ಮಹಾಪರಾಧ. ಅವರನ್ನು ದಂಡಿಸಲೇಬೇಕೆಂದು ಏಕನಾಥ ಮಹಾರಾಜರಿಗೆ ಕಾಶಿಗೆ ಬರಲು ಆಮಂತ್ರಿಸಿದರು. ಕಾಶೀ ಪೀಠಾಧಿಕಾರಿಗಳ ಆಜ್ಞೆಯನ್ನು ಶಿರಸಾ ವಹಿಸಿ ಏಕನಾಥ ಮಹಾರಾಜರು ತಾವು ಬರೆದ ಭಾಗವತ ಪ್ರತಿಯೊಂದಿಗೆ ಕಾಶೀ ಪ್ರಯಾಣವನ್ನು ಪಾದಯಾತ್ರೆಯಿಂದ ಭಜನೆಯೊಂದಿಗೆ ಆರಂಭಿಸಿದರು. ಸತ್ಸಂಗದ ಲಾಭ ಪಡೆಯಲು ಸಾವಿರಾರು ಸಾಧಕ ಭಕ್ತರು ಇವರ ಜೊತೆಯಲ್ಲಿ ಹೊರಟರು. ದಾರಿಯುದ್ದಕ್ಕೂ ಅಲ್ಲಲ್ಲಿ ಅನುಕೂಲ ಸ್ಥಳಗಳಲ್ಲಿ ವಸತಿ ಮಾಡುತ್ತ ಸಾಯಂಕಾಲ ಪ್ರವಚನ ರಾತ್ರಿ ಕೀರ್ತನೆ ಕಾರ್ಯಕ್ರಮ ನಡೆಸುತ್ತ ಸರ್ವರನ್ನು ಶ್ರವಣಾನಂದದಿಂದ ತೃಪ್ತಪಡಿಸುತ್ತಿದ್ದರು ಏಕನಾಥ ಮಹಾರಾಜರು. ಹೀಗೆ ನಾಮ ಸಾಧನೆಯೊಂದಿಗೆ ಸಾಮೂಹಿಕವಾಗಿ ಕಾಶೀಯಾತ್ರೆಗೆ ನಡೆಯುವ ಈ ದಿಂಡಿಯಿಂದ ಅಕ್ಕಪಕ್ಕದ ಗ್ರಾಮಸ್ಥರೂ ಕೂಡ ಇದರ ಲಾಭ ಪಡೆದುಕೊಂಡು ಆನಂದಿಸುತ್ತಿದ್ದರು. ಈ ರೀತಿ ಆನಂದದಿಂದ ಕಾಶೀ ಕ್ಷೇತ್ರ ತಲುಪಿದರು. ಎಲ್ಲರೂ ಪವಿತ್ರ ಗಂಗಾ ಸ್ನಾನ ಮಾಡಿ ಶ್ರೀವಿಶ್ವೇಶ್ವರನ ದರ್ಶನ ಪಡೆದು ಯಾತ್ರೆಯ ಸಾರ್ಥಕತೆ ಪಡೆದರು.

ಇತ್ತ ಕಾಶೀ ಧರ್ಮಾಧಿಕಾರಿಯವರು ಶ್ರೀ ಏಕನಾಥ ಮಹಾರಾಜರಿಗೆ ತಮ್ಮ ಮಠಕ್ಕೆ ಕರೆಯಿಸಿಕೊಂಡು ತುಂಬಿದ ಸಭೆಯಲ್ಲಿ ವಿಶೇಷವಾಗಿ ಯಾವ ಚರ್ಚೆಗೆ ಇಳಿಯದೇ ತಮ್ಮ ಅಧಿಕಾರದ ದರ್ಪದಿಂದ ''ಸಂಸ್ಕೃತ ಭಾಷೆಯ ಭಾಗವತ ಗ್ರಂಥವನ್ನು ಪ್ರಾಕೃತ ಮರಾಠೀ ಭಾಷೆಯಲ್ಲಿ ಬರೆದದ್ದು ಮಹಾಪರಾಧ. ಬರೆದ ಈ ಪ್ರತಿಗಳನ್ನು ಗಂಗಾ ನದಿಯಲ್ಲಿ ಚಲ್ಲಿ ಬಿಡಿರಿ'' ಎಂದು ಆಜ್ಞಾಪಿಸಿ ಅಲ್ಲಿಂದ ಕೂಡಲೇ ನಿರ್ಗಮಿಸಿದರು. ಸಭೆಯಲ್ಲಿ ಕೂಡಿದ ಅನೇಕರಿಗೆ ಇವರ ಡಾಂಭಿಕ, ಸರ್ವಾಧಿಕಾರ ಹಿಡಿಸಲಿಲ್ಲ. ಆದರೆ ಅವರ ಅಧಿಕಾರಕ್ಕೆ ಪ್ರತಿಯಾಗಿ ಏನೂ ಮಾಡುವಂತಿದ್ದಿಲ್ಲ. ಆಜ್ಞೆಯಾಗುವುದೊಂದೇ ತಡ ಅವರ ದುಷ್ಟಶಿಷ್ಯರು ಮನಕರ್ಣಿಕಾ ಘಾಟಕ್ಕೆ ಬಂದು ಅಲ್ಲಿ ಗಂಗಾನದಿಯಲ್ಲಿ ಬರೆದಿರುವ ಭಾಗವತ ಗ್ರಂಥ ಪ್ರತಿಗಳನ್ನು ಎಲ್ಲರೂ ನೋಡುತ್ತಿದ್ದಂತೆಯೇ ಒಗೆದು ಬಿಟ್ಟರು. ಆಗ ತಕ್ಷಣ ಗಂಗಾಮಾತೆಯು ಪ್ರತ್ಯಕ್ಷಳಾಗಿ ತನ್ನ ರತ್ನ ಜಡಿತ ಕಂಕಣಗಳುಳ್ಳ ಹಸ್ತಗಳಿಂದ ಎತ್ತಿ ಹಿಡಿದಳು. ಈ ಅದ್ಬುತ ಚಮತ್ಕಾರವನ್ನು ಪ್ರತ್ಯಕ್ಷವಾಗಿ ಕಂಡ ಸರ್ವರೂ ಒಂದೇ ಧ್ವನಿಯಿಂದ ''ಜಯ ಗಂಗಾಮಾತೆ'' ಎಂಬ ಘೋಷದಿಂದ ಕುಣಿದಾಡಿದರು. ಒಬ್ಬ ಸಾತ್ತ್ವಿಕ ಭಕ್ತನು ನದಿಯಲ್ಲಿ ಇಳಿದು ಗಂಗಾಮಾತೆಯ ಹಸ್ತದಿಂದ ಈ ಪವಿತ್ರ ಗ್ರಂಥವನ್ನು ಸ್ವೀಕರಿಸಿ ಏಕನಾಥ ಮಹಾರಾಜರಿಗೆ ಅರ್ಪಿಸಿದನು. ಇದರಿಂದ ಗರ್ವಿಷ್ಠ ಬ್ರಾಹ್ಮಣರ, ಅಧಿಕಾರಿಯ ಮುಖಗಳು ಕಪ್ಪಾದವು. ಆದ ತಪ್ಪಿಗೆ ಪ್ರಾಯಶ್ಚಿತ್ತ ಪಟ್ಟರು. ಎಲ್ಲರೂ ಏಕನಾಥ ಮಹಾರಾಜರಿಗೆ ಆದ ತಪ್ಪಿಗೆ ಕ್ಷಮೆಯಾಚಿಸಿ ಉಳಿದ ಭಾಗವತ ಗ್ರಂಥವನ್ನು ಕಾಶಿಯಲ್ಲಿಯೇ ಪೂರ್ಣಗೊಳಿಸಿರೆಂದು ವಿನಂತಿಸಿಕೊಂಡರು. ಇವರ ವಿನಂತಿಯನ್ನು ಮನಸಾ ಒಪ್ಪಿಕೊಂಡು ಏಕನಾಥ ಮಹಾರಾಜರು ಕಾಶಿಯಲ್ಲಿಯೇ ಈ ಪವಿತ್ರ ಗ್ರಂಥದ ಬರೆವಣಿಗೆ ಆರಂಭಿಸಿ ಕಾರ್ತಿಕ ಶುದ್ಧ ಪೌರ್ಣಿಮೆ ಸೋಮವಾರ ದಿನದಂದು ಹದಿನೆಂಟು ಸಾವಿರ ಓವೀಗಳುಳ್ಳ ಮೂವತ್ತೊಂದು ಅಧ್ಯಾಯಗಳನ್ನು ಪೂರ್ಣಗೊಳಿಸಿದರು. ಆಗ ಅಲ್ಲಿನ ಸರ್ವ ಭಕ್ತ ಮಂಡಳಿ, ಪಂಡಿತರ ಸಮೂಹ, ಗುರುಗಳು ಹೀಗೆ ಎಲ್ಲರೂ ಕೂಡಿ ಬಹು ಆದರ ಭಾವದಿಂದ ಬರೆದ ಗ್ರಂಥವನ್ನು ಪೂಜಿಸಿ ಅದನ್ನು ಆನೆಯ ಮೇಲೆ ಮೆರವಣಿಗೆ ಮಾಡಿ ಗೌರವಿಸಿದರು. ಇದರಿಂದ ಸರ್ವರಿಗೂ ಬಹಳ ಆನಂದವಾಯಿತು. ಅಲ್ಲಿಂದ ಏಕನಾಥ ಮಹಾರಾಜರು ಭಜನ ದಿಂಡಿ ಯಾತ್ರೆಯೊಂದಿಗೆ ಪೈಠಣಕ್ಕೆ ಬಂದು ಪುನಃ ತಮ್ಮ ನಿತ್ಯ ಸೇವೆಯಲ್ಲಿ ತೊಡಗಿಕೊಂಡರು.

ಪೈಠಣಕ್ಕೆ ಬಂದಮೇಲೆ ಏಕನಾಥ ಮಹಾರಾಜರು ಪ್ರತಿನಿತ್ಯ ಸಾಯಂಕಾಲ ಭಾಗವತ ಗ್ರಂಥದ ಪ್ರವಚನೆ ಆರಂಭಿಸಿದರು. ಇದನ್ನು ಶ್ರವಣ ಮಾಡಲು ಊರಿನ ಹಾಗೂ ಅಕ್ಕಪಕ್ಕ ಊರಿನ ಭಕ್ತ ಭಾವಿಕರು ತಂಡೋಪತಂಡವಾಗಿ ಬರಹತ್ತಿದರು. ಪ್ರತಿಯೊಬ್ಬರ ಹೃದಯಕ್ಕೂ ಮುಟ್ಟಿಕೊಳ್ಳುವಂತೆ ಸರಳ ಶೈಲಿಯಲ್ಲಿ ಎಷ್ಟು ಕೇಳಿದರೂ ತೃಪ್ತಿಯಾಗದಂತೆ ಅಮೃತಕ್ಕೂ ಮೀರಿಸುವ ಏಕನಾಥರ ರಸಾಳ ವಾಣಿಯನ್ನು ಶ್ರವಣ ಮಾಡಿ ಎಲ್ಲರೂ ಆನಂದಿತರಾಗುತ್ತಿದ್ದರು. ರಾತ್ರಿ ಕಾಲೊಳಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಕೀರ್ತನ ರಂಗದಲ್ಲಿ ಕುಣಿಯುತ್ತ ಹಾವಭಾವಗಳೊಂದಿಗೆ ನವರಸಯುಕ್ತ ನಿರೂಪಣೆ ಮಾಡುತ್ತಿದ್ದರು. ಇವರ ಸುಶ್ರಾವ್ಯ ಕೀರ್ತನೆ ಕೇಳಿ ಶ್ರೋತೃಗಳೆಲ್ಲರೂ ಮಂತ್ರಮುಗ್ಧರಾಗುತ್ತಿದ್ದರು. ತಮ್ಮಲ್ಲಿರುವ ಅಜ್ಞಾನದಿಂದ ದೂರ ಸರಿಯುತ್ತ ಸನ್ಮಾರ್ಗಕ್ಕೆ ಹತ್ತಿಕೊಳ್ಳುತ್ತ ತಮ್ಮ ಜೀವನವನ್ನು ಅಧ್ಯಾತ್ಮ ಸಾಧನೆಯಿಂದ ಸಾರ್ಥಕ ಮಾಡಿಕೊಳ್ಳಲಾರಂಭಿಸಿದರು. ಏಕನಾಥ ಮಹಾರಾಜರ ಸದಾಚಾರ, ಸದ್ವಿಚಾರ, ಸದ್ಭಾವಕಂಡು ಶಿಷ್ಯರು ಇವರನ್ನು ಪೂಜ್ಯ ಭಾವದಿಂದ ಕಾಣುತ್ತಿದ್ದರೆ , ಕೆಲವು ದುಷ್ಟ ಬ್ರಾಹ್ಮಣರು, ಇವರ ಕೀರ್ತಿ ಸಹಿಸದೇ ಇವರನ್ನು ಸದಾ ಮತ್ಸರ ಬುದ್ಧಿಯಿಂದ ಕಾಣುತ್ತಿದ್ದರು.ಏನಾದರೂ ಮಾಡಿ ಏಕನಾಥರನ್ನು ಅಪಮಾನಗೊಳಿಸಿ ಅವರ ಕೀರ್ತಿಗೆ ಭಂಗ ತರುವ ಚಿಂತನೆ ಮಾಡುತ್ತಿದ್ದರು.

ಒಂದು ದಿನ ಈ ಚಾಂಡಾಳ ಚೌಕಿ ಮೇಳವು ಒಬ್ಬ ದುಷ್ಟ ಯವನನನ್ನು ತಮ್ಮಲ್ಲಿ ಬರಮಾಡಿಕೊಂಡು ಆತನಿಗೆ ಹಣದ ಆಶೆ ತೋರಿಸಿ ''ಏನಾದರೂ ಮಾಡು, ಏಕನಾಥನಿಗೆ ಕ್ರೋಧ ಬರುವಂತೆ ಹೋರಾಡು'' ಎಂದು ಹೇಳಿ ಆತನಿಗೆ ಹುರಿದುಂಬಿಸಿ ಉಪಾಯ ಸೂಚಿಸಿದರು. ಆ ದುಷ್ಟ ಯವನನು ಇವರ ಮಾತಿಗೆ, ಹಣದ ಆಶೆಗೆ ಮೋಸ ಹೋಗಿ ಈ ಕಾರ್ಯಕ್ಕೆ ತತ್ಪರನಾದನು. ಏಕನಾಥ ಮಹಾರಾಜರು ಪ್ರತಿನಿತ್ಯ ಮುಂಜಾನೆ ಗೋದಾವರಿ ನದಿಗೆ ಸ್ನಾನಕ್ಕಾಗಿ ಹೋಗಿ ಬರುತ್ತಿದ್ದರು. ಇವರು ಸ್ನಾನ ಮಾಡಿ ಬರುವ ಮಾರ್ಗದಲ್ಲಿ ಎತ್ತರ ಸ್ಥಾನದಲ್ಲಿ ಆ ಯವನನು ಕುಳಿತುಕೊಂಡು ತನ್ನ ಮುಖದಲ್ಲಿ ತಾಂಬೂಲ ತುಂಬಿ ಕೊಂಡು ತನ್ನ ಕೆಳಗೆ ಏಕನಾಥರು ಬರುತ್ತಲೇ ಅವರ ಮೇಲೆ ಮುಖದಲ್ಲಿನ ಎಲ್ಲ ತಾಂಬೂಲವನ್ನು ಪಿಚಕಾರಿಯಂತೆ ಉಗುಳಿ ಬಿಟ್ಟನು. ಆದ ಈ ಘಟನೆಯಿಂದ ಏಕನಾಥ ಮಹಾರಾಜರು ಯಾವ ವಿಕಾರ ತಾಳದೇ ಶಾಂತ ಸ್ವಭಾವದಿಂದ ನಸುನಕ್ಕು ಮೈಲಿಗೆ ಆದ ಶರೀರವನ್ನು ತೊಳೆಯಲು ಪುನಃ ನದಿಗೆ ಹೋಗಿ ಸ್ನಾನ ಮಾಡಿಕೊಂಡು ಬರುತ್ತಿರುವಾಗ್ಗೆ ಪುನಃ ಆ ಯವನನು ಅದೇ ರೀತಿಯಲ್ಲಿ ತನ್ನ ಮುಖದಲ್ಲಿನ ತಾಂಬೂಲವನ್ನು ಅವರ ಮೇಲೆ ಉಗುಳಿದನು. ಹೀಗೆ ಈ ದುಷ್ಟ ಯವನನು ೨೧ ಸಾರೆ ಉಗುಳುತ್ತಲೇ ಸಾಗಿದನು. ಏಕನಾಥ ಮಹಾರಾಜರು ತಮ್ಮ ಶಾಂತತೆಯನ್ನು ಭಂಗಗೊಳಿಸದೇ ಹಸನ್ಮುಖಿಯಾಗಿಯೇ ಪದೇ ಪದೇ ಸ್ನಾನ ಮಾಡುತ್ತಲೇ ಬರುತ್ತಿದ್ದರು. ಕೊನೆಗೆ ಆ ಯವನನ ಮುಖವು ತಾಂಬೂಲದಲ್ಲಿನ ಸುಣ್ಣ, ತಂಬಾಕುಗಳ ಪರಿಣಾಮ ದಿಂದ ಹುಣ್ಣಾಗಿ ಬಲು ಪೀಡೆಯಾಯಿತು. ತನ್ನ ಹೇಯ ಕರ್ಮಕ್ಕಾಗಿ ಹೇಸಿಗೆಯಾಯಿತು. ಮನಸ್ಸಿಗೆ ಪ್ರಾಯಶ್ಚಿತ್ತವಾಯಿತು. ಮನದಲ್ಲಿ ಹೀಗೆ ವಿಚಾರಿಸಿದನು; ಅರೇ, ನಾನು ಎಲ್ಲಿಯಾದರೂ ಉಗುಳುವ ಕಾಲಕ್ಕೆ ಯಾರಿಗಾದರೂ ಒಂದು ಹನಿ ತಾಂಬೂಲ ಸಿಡಿದರೆ ಅವರು

ಕ್ರೋಧಕ್ಕೆ ಒಳಗಾಗಿ ನನ್ನಲ್ಲಿ ಜಗಳವಾಡಲು ಬರುತ್ತಿದ್ದರು. ಇವರು ಎಂತಹ ಮಹಾತ್ಮರಿರಬೇಕು? ನಾನು ಅದೆಷ್ಟೋ ಸಾರೆ ಅವರ ಶರೀರ ತುಂಬ ಮನಸಾ ಉಗುಳಿದರೂ ಸ್ವಲ್ಪವೂ ಕ್ರೋಧ ತಾಳದೇ ನನ್ನತ್ತ ಹಸನ್ಮುಖದಿಂದ ನೋಡುತ್ತ ತಮ್ಮಲ್ಲಿನ ಶಾಂತತೆ ಭಂಗಗೊಳಿಸಲಿಲ್ಲ. ಇವರಿಗೆ ಶರಣಾಗಿ ಕ್ಷಮೆ ಕೇಳಬೇಕೆಂದು ಬಯಸಿ ಒಮ್ಮಿಂದೊಮ್ಮೆಲೆ ಕೆಳಗೆ ಬಂದು ಏಕನಾಥ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.ತನ್ನ ಎರಡೂ ಕೈಗಳನ್ನು ಜೋಡಿಸಿ ಗದ್ಗದ ಕಂಠದಿಂದ ಕಣ್ಣೀರಿ ಡುತ್ತ "ಮಹಾರಾಜರೇ ನನ್ನಿಂದ ಅಕ್ಷಮ್ಯ ಅಪರಾಧವಾಯಿತು. ದುಷ್ಟ ಬ್ರಾಹ್ಮಣರ ಮಾತು ಕೇಳಿ ಹಣದಾಶೆಗೆ ನಾನು ಇಂತಹ ನೀಚ ಕಾರ್ಯ ಮಾಡಿದೆ. ನನ್ನನ್ನು ಕ್ಷಮಿಸಿ ಉದ್ಧರಿಸಿರಿ" ಎಂದು ಅತ್ಯಂತ ಕಳಕಳಿಯಿಂದ ವಿನಂತಿಸಹತ್ತಿದನು. ಈತನ ಈ ಸ್ಥಿತಿ ಕಂಡು ಏಕನಾಥ ಮಹಾರಾಜರಿಗೆ ಬಹು ಕಳವಳ ಹಾಗೂ ಸಂತೋಷವಾಗಿ "ಏಳು ಯವನಾ, ನಿನ್ನಿಂದ ಯಾವ ಅಪರಾಧವಾಗಿಲ್ಲ. ನಿನ್ನ ಈ ಕೃತ್ಯದಿಂದ ನನಗೆ ಬಹು ಉಪಕಾರವಾಗಿದೆ. ನೋಡು, ಇಂದು ಏಕಾದಶೀ ಪರ್ವಕಾಲ. ನಿನ್ನಿಂದ ನನಗೆ ಎಂದೂ ಸಾಧಿಸದ ೨೧ ಸಾರೆ ಗೋದಾವರೀ ತೀರ್ಥದ ಸ್ನಾನ ಲಾಭವಾಯಿತು" ಎಂದು ಆತನಿಗೆ ಸಮಾಧಾನ ಹೇಳಿ ತಮ್ಮ ಕೃಪಾದೃಷ್ಟಿಯಿಂದ ಪ್ರಸಾದ ಕೊಟ್ಟು ಉದ್ಧರಿಸಿದರು.

ಯವನ ಅಂಗಾವರಿ ಥುಂಕಿಲಾ ।
ಪ್ರಸಾದ ದೇವೋನಿ ಮುಕ್ತ ಕೇಲಾ ॥

ಈ ಘಟನೆಯನ್ನು ದೂರಿನಿಂದ ಪ್ರತ್ಯಕ್ಷ ಕಂಡ ಆ ದುಷ್ಟ ಬ್ರಾಹ್ಮಣರಿಗೆ ಮುಖಭಂಗವಾಯಿತಾದರೂ ಅವರ ಮತ್ಸರ ಬುದ್ಧಿಯು ಪುನಃ ಇಮ್ಮಡಿಯಾಯಿತು. ಹೇಗಾದರೂ ಮಾಡಿ ಮರು ಪ್ರಯತ್ನದಿಂದ ಏಕನಾಥನಿಗೆ ಕ್ರೋಧಕ್ಕೆ ಒಳಪಡಿಸಬೇಕೆಂದು ಹಠ ತೊಟ್ಟರು. ಒಂದು ದಿನ ಈ ಮೇಳವು ಇದೇ ವಿಚಾರದಲ್ಲಿ ಒಂದೆಡೆ ಕುಳಿತುಕೊಂಡಿರಲು ಆಗ ಅಲ್ಲಿ ಒಬ್ಬ ಬಡ ಬ್ರಾಹ್ಮಣನು ಬಂದು ನನ್ನ ಮಗಳ ಮದುವೆಗೆ ಎರಡು ನೂರು ರೂಪಾಯಿಗಳನ್ನು ಸಹಾಯ ಮಾಡಿರಿ ಎಂದು ದೀನತೆಯಿಂದ ಅವರ ಚರಣಗಳಿಗೆ ಬಿದ್ದು ಬೇಡಿಕೊಂಡನು. ಇದೊಂದು ಉತ್ತಮ ಸಂಧಿ ದೊರಕಿತು ಎಂದುಕೊಂಡು ಆ ಬ್ರಾಹ್ಮಣರು ನೀನು ನಮ್ಮದೊಂದು ಮಾತು ನಡೆಸಿಕೊಟ್ಟರೆ ನಾವು ನಿನಗೆ ತಪ್ಪದೇ ಎರಡು ನೂರು ರೂಪಾಯಿಗಳನ್ನು ಕೊಡುತ್ತೇವೆ ಎಂದರು. ಆಗ ಆ ಬಡ ಬ್ರಾಹ್ಮಣನು ಅದು ಏನೇ ಇರಲಿ ನಾನು ನಿಮ್ಮ ಮಾತು ನಡೆಸಿಕೊಡುವೆ ಎಂದು ವಚನಕೊಟ್ಟನು. ಆಗ ಅವರು ಇಲ್ಲಿ ಏಕನಾಥ ಎಂಬ ಒಬ್ಬ ಬ್ರಾಹ್ಮಣನಿದ್ದಾನೆ. ಆತನಿಗೆ ನೀನು ಹೇಗಾದರೂ ಪ್ರಯತ್ನಿಸಿ ಕ್ರೋಧವು ಉಂಟಾಗುವಂತೆ ಮಾಡಿದರೆ ಸಾಕು, ಕೂಡಲೇ ನಾವು ನಿನ್ನ ಇಚ್ಛೆ ಪೂರೈಸುತ್ತೇವೆ ಎಂದರು. ಆಗ ಆ ಬ್ರಾಹ್ಮಣನು ಇದೇನು ಮಹಾ ! ತಕ್ಷಣ ಆತನಿಗೆ ಕ್ರೋಧ ಹುಟ್ಟಿಸುವೆ ಎಂದು ಹೇಳಿ ಏಕನಾಥ ಮಹಾರಾಜರ ಮನೆಗೆ ಧಾವಿಸಿ ಬಂದು ವಿಚಾರಿಸಿದನು. ಆಗ ಮಹಾರಾಜರು ದೇವರ ಮನೆಯಲ್ಲಿ ಪೂಜೆಯಲ್ಲಿ ನಿರತರಾಗಿರುವುದು ತಿಳಿಯಿತು. ಆಗ ಆತನು ತೊಟ್ಟಿದ್ದ ಪಾದರಕ್ಷೆ ಸಮೇತ ದಢದಢ ಸಾಗಿ ದೇವರ ಮನೆ ಪ್ರವೇಶಿಸಿ ಅಲ್ಲಿ ಪೂಜೆಯಲ್ಲಿ ತೊಡಗಿರುವ ಏಕನಾಥ ಮಹಾರಾಜರ ತೊಡೆಯ ಮೇಲೆ ಹೋಗಿ ಕುಳಿತುಕೊಂಡನು. ಆಗ ಏಕನಾಥ ಮಹಾರಾಜರು ತಮ್ಮ ಶಾಂತ ಸ್ವಭಾವದಿಂದ ಆ ಬಡ ಬ್ರಾಹ್ಮಣನಿಗೆ ಕರುಣಾ ದೃಷ್ಟಿಯಿಂದ ನೋಡುತ್ತ ತನ್ನ ಧರ್ಮಪತ್ನಿಗೆ ಕರೆದು ಇಲ್ಲಿ ನೋಡು, ಈ ಬ್ರಾಹ್ಮಣ ದೇವನಿಗೆ ನಮ್ಮ ಭೇಟಿಯ ಎಷ್ಟೊಂದು ಆತುರತೆ ಇರಬಹುದು? ಕಾಲೊಳಗಿನ ಪಾದರಕ್ಷೆಗಳನ್ನು ತೆಗೆಯದೇ ಧಾವಿಸಿ ಬಂದಿರುವನು. ಇವರಿಗೆ ಸ್ನಾನದ ವ್ಯವಸ್ಥೆ ಮಾಡು. ಪೂಜೆಯ ನಂತರ ಭೋಜನ ಮಾಡಿಸೋಣ ಎಂದು ಹೇಳಿ ಆತನ ಪಾದರಕ್ಷೆಗಳನ್ನು ಮಹಾರಾಜರು ತಮ್ಮ ಕೈಗಳಿಂದ ತೆಗೆದು ಅದಕ್ಕೆ ವಂದಿಸಿ ಹೊರಗೆ ಇಟ್ಟರು. ಇದರಿಂದ ಈ ಬ್ರಾಹ್ಮಣನು ಮನನೊಂದು ತೆಪ್ಪಗಾದನು. ಸ್ನಾನ, ಪೂಜೆಯ ನಂತರ ಏಕನಾಥ ಮಹಾರಾಜರು ಬ್ರಾಹ್ಮಣರ ಭೋಜನ ಪಂಕ್ತಿಯಲ್ಲಿ ಅತಿಥಿಯಾಗಿ ಬಂದ ಈ ಬಡಬ್ರಾಹ್ಮಣನನ್ನು ತಮ್ಮ ಮಗ್ಗುಲಿಗೆ ಕುಳ್ಳಿರಿಸಿಕೊಂಡರು. ಈ ಬಡ ಬ್ರಾಹ್ಮಣನು ಮಗಳ ಮದುವೆಗೆ ಬೇಕಾಗಿರುವ ಎರಡು ನೂರು ರೂಪಾಯಿಗಳ ಪ್ರಾಪ್ತಿ ಕೈತಪ್ಪಿತಲ್ಲವೆಂದು ಬಹು ಚಿಂತೆಗೆ ಒಳಗಾದನು. ಏನಾದರೂ ಆಗಲಿ ಏಕನಾಥರಿಗೆ ಸಿಟ್ಟಿಗೆ ತರಿಸಲೇಬೇಕೆಂದು ದೀರ್ಘ ಆಲೋಚನೆಯಲ್ಲಿದ್ದನು. ಗಿರಿಜಾಬಾಯಿಯು ಏಕನಾಥರಿಗೆ ಭೋಜನ ಬಡಿಸುತ್ತಿರಲು ಆಗ ಆತನು ಮೇಲಕ್ಕೆದ್ದು ದಿಢೀರನೆ ಗಿರಜಾಬಾಯಿಯ ಬೆನ್ನಿಗೆ ಅವಿಚಿಕೊಂಡು ಆಕೆಯ ಮರ್ಯಾದೆ ಸ್ಥಾನಗಳಿಗೆ ತನ್ನ ಕೈಗಳನ್ನು ಇಟ್ಟನು. ಇದನ್ನು ಕಂಡ ಏಕನಾಥ ಮಹಾರಾಜರು ತಮ್ಮ ಧರ್ಮಪತ್ನಿಗೆ ; ನೋಡು, ನೋಡು, ಈತನು ಚಿಕ್ಕ ಬಾಲಕನಂತೆ ನಿನಗೆ ತೆಕ್ಕೆ ಬಿದ್ದಿರುವನು, ಜೋಕೆ, ಆತನನ್ನು ಕೆಡುವಬೇಡ ಎಂದರು. ಆಗ ಗಿರಿಜಾಬಾಯಿಯು, ಸ್ವಾಮೀ ನೀವೇನೂ ಯೋಚಿಸದಿರಿ. ನನಗೆ ನನ್ನ ಹರಿಪಂತ ಬಾಲಕ ಹೀಗೆಯೇ ಬೆನ್ನಿಗೆ ತೆಕ್ಕೆ ಬೀಳುತ್ತಿರುತ್ತಾನೆ. ಆತನಿಗೆ ಸಾಂಭಾಳಿಸುವಂತೆಯೇ ಈತನನ್ನು ಸಾಂಭಾಳಿಸುವೆ ಎಂದು ಉತ್ತರಿಸುವುದೊಂದೇ ತಡ ಈ ಬಡ ಬ್ರಾಹ್ಮಣನಿಗೆ ತನ್ನ ಹೇಯ ಕೃತ್ಯಕ್ಕಾಗಿ ಅತ್ಯಂತ ಪ್ರಾಯಶ್ಚಿತ್ತವಾಗಿ ಏಕನಾಥ ಮಹಾರಾಜರಿಗೂ ಗಿರಿಜಾಬಾಯಿಗೂ ಸಾಷ್ಟಾಂಗ ನಮಸ್ಕಾರ ಹಾಕಿ ಬಿಕ್ಕಿ ಬಿಕ್ಕಿ ಅಳ ಹತ್ತಿದನು. ಆಗ ಮಹಾರಾಜರು ಏನಾಯಿತು? ಹೀಗೇಕೇ ಅಳುತ್ತಿರುವೆ? ನಮ್ಮಿಂದ ಯಾವ ಅಪರಾಧವಾಯಿತು? ಸಂಕೋಚ

ಪಡದೇ ತಿಳಿಸೆಂದರು. ಆಗ ಆತನು ಮಹಾರಾಜರೇ, ನಾನು ಕೇವಲ ಬಡಬ್ರಾಹ್ಮಣನು. ನನ್ನ ಮಗಳ ಮದುವೆಗೆ ಎರಡು ನೂರು ರೂಪಾಯಿಗಳು ಬೇಕಾಗಿದ್ದವು. ಅಲ್ಲಿ ನೋಡಿರಿ ದೂರದಲ್ಲಿ ಕುಳಿತಿರುವ ಆ ದುಷ್ಟರ ಮಾತು ಕೇಳಿ ನಾನು ನಿಮಗೆ ನೀವು ಕೋಪಿಸಲೆಂದೇ ಇಂತಹ ಹೀನ ಕೃತ್ಯಗಳನ್ನು ಮಾಡಿದೆ. ಇದು ನನ್ನ ಅಕ್ಷಮ್ಯ ಅಪರಾಧವಾಗಿದೆ. ದಯ ಮಾಡಿ ನನ್ನನ್ನು ಕ್ಷಮಿಸಿರಿ ಎಂದು ಪುನಃ ಪುನಃ ನಮಸ್ಕರಿಸುತ್ತ ಬಹಳ ರೋಧಿಸಹತ್ತಿದನು. ಆಗ ಮಹಾರಾಜರು ಆತನಿಗೆ ಸಂತೈಸುತ್ತ ಹೇ ಬ್ರಾಹ್ಮಣನೇ, ಈ ವಿಷಯವನ್ನು ನನಗೆ ಮೊದಲೇ ಏಕೆ ತಿಳಿಸಲಿಲ್ಲ? ನನ್ನ ಶಾಂತ ಸ್ವಭಾವವು ನಿನಗೆ ಅಡ್ಡಿಯಾಯಿಯತಲ್ಲ? ಆಗಲಿ, ಆದದ್ದು ಆಗಿ ಹೋಯಿತು. ಇದು ತೆಗೆದುಕೋ ಎರಡು ನೂರು ರೂಪಾಯಿಗಳನ್ನು, ಇಷ್ಟರಿಂದಲೇ ನಿನ್ನ ಮಗಳ ಮದುವೆ ಮುಗಿಯಲಿಕ್ಕಿಲ್ಲ, ಹೊರಗೆ ನಡೆ ನಾನು ಸಿಟ್ಟಿಗೆ ಬಂದು ನಿನಗೆ ಪುನಃ ಎರಡು ನೂರು ರೂಪಾಯಿಗಳನ್ನು ಕೊಡಿಸುವೆ ಎಂದು ಆತನ ಜೊತೆಗೆ ಬಂದು ದೂರದಲ್ಲಿ ಕುಳಿತು ನೋಡುತ್ತಿರುವ ಆ ದುಷ್ಟ ಬ್ರಾಹ್ಮಣರ ಎದುರಿಗೆ ಏಕನಾಥ ಮಹಾರಾಜರು ಬಹಳ ಕ್ರೋಧವನ್ನು ಪ್ರದರ್ಶಿಸಿ ಅವರಿಂದ ಪುನಃ ಎರಡು ನೂರು ರೂಪಾಯಿಗಳನ್ನು ಕೊಡಿಸಿ ಆದರದಿಂದ ಆ ಬ್ರಾಹ್ಮಣನಿಗೆ ಬೀಳ್ಕೊಟ್ಟರು.

ಸದ್ಗುರು ಸೇವೆಯಿಂದ ಹಿಡಿದು ಇಲ್ಲಿಯವರೆಗೆ ಏಕನಾಥ ಮಹಾರಾಜರ ಏಕನಿಷ್ಠೆಯ, ಕೃಷ್ಣಾರ್ಪಣೆಯ ಅಖಂಡ ಸೇವೆ,ನಿಷ್ಕಾಮ ಭಕ್ತಿಯ ಋಣವು ಪರಮಾತ್ಮನಿಗೆ ತುಂಬಾ ಭಾರವಾಯಿತು. ಈ ಸೇವೆಯ ಋಣ ತೀರಿಸಲು ದ್ವಾರಕಾಧೀಶನಾದ ಶ್ರೀಕೃಷ್ಣ ಪರಮಾತ್ಮನು ಅನಾಥ ಬ್ರಾಹ್ಮಣನ ವೇಷ ಧರಿಸಿ ಶ್ರೀಖಂಡ್ಯಾನಾಮದಿಂದ ಏಕನಾಥ ಮಹಾರಾಜರ ಮನೆಗೆ ಬಂದನು. ಆಗ ಮಹಾರಾಜರು ಕುಶಲಪ್ರಶ್ನೆ ಮಾಡಲು ನನಗೆ ಯಾರೂ ದಿಕ್ಕಿಲ್ಲ. ತಂದೆ-ತಾಯಿಗಳಿಲ್ಲ, ಬಂಧು-ಬಳಗವಿಲ್ಲ. ಎಲ್ಲಿಯಾದರೂ ಸೇವೆ ಮಾಡಿ ಬದುಕಬೇಕೆಂದು ಬಹಳ ಕಡೆ ತಿರುಗಾಡಿದೆ. ಆದರೆ ಎಲ್ಲಿಯೂ ನನಗೆ ಸರಿಬೀಳಲಿಲ್ಲ. ನಿಮ್ಮ ಹೆಸರು ಕೇಳಿ ಬಹಳ ಆಶೆಪಟ್ಟು ನಿಮ್ಮಲ್ಲಿಗೆ ಸೇವೆಗಾಗಿ ಬಂದಿರುವೆ. ನನಗೇನೂ ಸಂಬಳ ಬೇಕಿಲ್ಲ. ಊಟ, ಬಟ್ಟೆ ಕೊಟ್ಟರೆ ಸಾಕು. ತಾವು ಹೇಳಿದ ಯಾವುದೇ ಕೆಲಸವಾಗಲಿ ನಾನು ಮಾಡಲು ಸಿದ್ಧ ಎಂದು ವಿನಮ್ರಭಾವದಿಂದ ನುಡಿದಾಗ ಏಕನಾಥ ಮಹಾರಾಜರು ಸಂತೋಷದಿಂದ ಒಪ್ಪಿಕೊಂಡು ಆತನನ್ನು ಮನೆ ಕೆಲಸಕ್ಕೆ ಇಟ್ಟುಕೊಂಡರು. ಶ್ರೀಖಂಡ್ಯಾನು ಬೆಳಿಗ್ಗೆ ಎದ್ದು ಮನೆಯ ಕಸಗೂಡಿಸಿ ಏಕನಾಥ ಮಹಾರಾಜರ ಸ್ನಾನ ಪೂಜೆಗೆ ಎಲ್ಲ ಸಿದ್ಧತೆ ಮಾಡುತ್ತ ಹೂವು, ತುಳಸಿ ಸಂಗ್ರಹಿಸಿ ಗಂಧವನ್ನು ತೇಯ್ದು ಎಲ್ಲ ದೃಷ್ಟಿಯಿಂದ ಹಸನ್ಮುಖದಿಂದ ಸಹಕಾರ ನೀಡುತ್ತಿದ್ದನು. ತದನಂತರ ಅಡುಗೆಯ ಸಿದ್ಧತೆಗೆ ಬೇಕಾಗುವ ಎಲ್ಲ ಸಾಹಿತ್ಯಗಳನ್ನು ಸರಿಪಡಿಸಿ ಮುಖ್ಯವಾಗಿ ಕಾವಡಿಯಿಂದ ನದಿ ನೀರುತುಂಬಿಕೊಂಡು ಮನೆಯಲ್ಲಿನ ದೊಡ್ಡ ಹೌಜು ತುಂಬಿಸುತ್ತಿದ್ದನು. ಪ್ರತಿನಿತ್ಯ ಅತಿಥಿ ಸತ್ಕಾರ, ಭೋಜನಕ್ಕೆ ಬಡಿಸುವುದು, ಎಂಜಲ ಎಲೆಗಳನ್ನು ತೆಗೆಯುವುದು ಹೀಗೆ ಒಂದಲ್ಲ ಎರಡಲ್ಲ ಎಲ್ಲ ಕಾರ್ಯಗಳನ್ನೂ ಕೂಡ ನೀಚ- ಉಚ್ಚವೆನ್ನದೇ, ಹಗಲು -ರಾತ್ರಿ ಎನ್ನದೇ ಹರ್ಷಯುಕ್ತ ಅಂತಃಕರಣದಿಂದ ನಿರಾಲಸ್ಯದಿಂದ ಸೇವೆ ಮಾಡುತ್ತಿದ್ದನು. ಒಟ್ಟಿನಲ್ಲಿ ಈತನ ಸೇವೆ ಕಂಡು ಏಕನಾಥ ಮಹಾರಾಜರು ಗಿರಿಜಾಬಾಯಿಯವರು ಹರ್ಷಚಕಿತರಾಗಿ ಬಹಳ ಕೌತುಕ ಪಡುತ್ತಿದ್ದರು.

ಪ್ರವಚನ, ಕೀರ್ತನೆಯಲ್ಲಿ ಜನರಿಗೆ ಬೋಧಿಸುವ ಪ್ರಸಂಗದಲ್ಲಿ ಏಕನಾಥ ಮಹಾರಾಜರು ''ಸರ್ವಭೂತಗಳಲ್ಲಿಯೂ ಭಗವದ್‌ಭಾವವನ್ನಿಡಬೇಕು'' ಎಂದು ವಿಶೇಷವಾಗಿ ಒತ್ತಿ ಹೇಳುತ್ತಿದ್ದರು. ಈ ಭಾವವನ್ನು ಸ್ವತಃ ತಮ್ಮ ಅಂಗದಲ್ಲಿ ಪರಿಪೂರ್ಣವಾಗಿ ಧರಿಸಿದ್ದರು. ಒಂದು ದಿನ ಬೇಸಿಗೆಯ ಮಧ್ಯಾಹ್ನ ಸಮಯ ಏಕನಾಥ ಮಹಾರಾಜರು ನದಿ ಸ್ನಾನ ಮುಗಿಸಿ ಬರುತ್ತಿರಲು ದಾರಿಯಲ್ಲಿ ಕಾದ ಉಸುಕಿನ ತಾಪ ತಾಳದೇ ಒಬ್ಬ ಮಾದಿಗನ ಚಿಕ್ಕ ಬಾಲಕನು ಜೋರಾಗಿ ಅಳುತ್ತಿದ್ದನು. ಈ ಬಾಲಕನತ್ತ ಯಾರ ಗಮನವೂ ಸೆಳೆಯಲಿಲ್ಲ. ಏಕನಾಥ ಮಹಾರಾಜರು ದಯಾ ಅಂತಃಕರಣದಿಂದ ಆ ಬಾಲಕನ್ನು ಮೇಲೆತ್ತಿಕೊಂಡು ಆತನನ್ನು ಸಂತೈಸುತ್ತ ಮಾದಿಗರ ಓಣಿಗೆ ಬಂದು ತಂದೆ-ತಾಯಿಗಳವರಿಗೆ ಪ್ರೀತಿಯಿಂದ ಒಪ್ಪಿಸಿದರು. ಇದನ್ನು ಕಂಡ ವರ್ಣಾಭಿಮಾನೀ, ಕರ್ಮಾಭಿಮಾನೀ ಬ್ರಾಹ್ಮಣರು ಏಕನಾಥರನ್ನು ಮನಬಂದಂತೆ ಹೀಯಾಳಿಸಿದರು. ಆದರೆ ಅವರತ್ತ ಮಹಾರಾಜರು ಗಮನವನ್ನೇ ಕೊಡಲಿಲ್ಲ.

ಒಂದು ದಿನ ಪಿತೃಶ್ರಾದ್ಧಸಮಯದಲ್ಲಿ ಏಕನಾಥ ಮಹಾರಾಜರು ಬೆಳಿಗ್ಗೆಯಿಂದಲೇ ಅಡುಗೆಯ ಸಿದ್ಧತೆ ನಡೆಸಿದ್ದರು. ನಸುಕಿನಲ್ಲಿ ಬೀದಿ ಕಸಗೂಡಿಸಲು ಮಾದಿಗರ ಕುಟುಂಬ ಒಂದು ನಾಥರ ಮನೆಯ ಅಂಗಳಕ್ಕೆ ಬಂದಾಗ ಒಳಗಿನಿಂದ ಬರುವ ಘಮಘಮಾಟ ರುಚಿಕರ ಪದಾರ್ಥಗಳ ಸುವಾಸನೆ ಕಂಡು ಬೆರಗಾಗಿ ಇಂತಹ ಭಾರೀ ಭೋಜನ ನಮಗೆ ಎಂದು ದೊರಕಬೇಕು? ಎಂದು ಹೆಂಡತಿಯು ಗಂಡನಿಗೆ ಪ್ರಶ್ನಿಸಿದಳು. ಜೊತೆಗಿದ್ದ ಚಿಕ್ಕ ಬಾಲಕನು ನನಗೆ ಇಂತಹ ಊಟವು ಬೇಕೇ ಬೇಕೆಂದು ಹಠ ಹಿಡಿದನು. ಆದರೆ ಗಂಡನು ಹೀಗೆ ಹೇಳಹತ್ತಿದನು, ಹೇ, ನಾವು ಮಾದಿಗರು, ಇಂತಹ ರುಚಿಕಟ್ಟಾದ ಬ್ರಾಹ್ಮಣರ ಭೋಜನ ನಮಗೆಂದು ದೊರಕಬೇಕು? ನಾವು ದುರ್ದೈವಿಗಳು ನಮ್ಮ ಪಾಲಿಗೆ ಅದೇ ಸಂಗಟಿ ಸಾರು ಎಂದು ಖಿನ್ನನಾಗಿ ನುಡಿಯುತ್ತ ಅವರನ್ನು ಮುಂದಾಗಲು ತಿಳಿಸಿದನು. ಆದರೆ ಆ ಬಾಲಕನು ನನಗೆ ಈ ಊಟ ಬೇಕೆಬೇಕೆಂದು ಜೋರು ಜೋರಾಗಿ ಅಳುತ್ತ ಅಲ್ಲಿಯೇ ಕುಳಿತುಬಿಟ್ಟನು. ಇದನ್ನೆಲ್ಲ ಕಂಡ ಏಕನಾಥ ಮಹಾರಾಜರು ಬೇಗನೆ ಅವರತ್ತ ಬಂದು ''ನೀವು ಏನೂ ವ್ಯಥೆ ಪಡುವ ಕಾರಣವಿಲ್ಲ.

ಅಡುಗೆ ಸಿದ್ಧವಾಗುತ್ತಿದೆ. ನೀವು ಯಥೇಚ್ಛವಾಗಿ ಭೋಜನ ಮಾಡುವಿರಂತೆ" ಎಂದು ಹೇಳಿ ತಕ್ಷಣ ಈ ವಿಷಯವನ್ನು ಧರ್ಮಪತ್ನಿ ಗಿರಿಜಾಬಾಯಿಯವರಿಗೆ ತಿಳಿಸಿದರು. ಆಗ ಆ ಸಾಧ್ವಿಯು ವಿನಮ್ರಭಾವದಿಂದ ಈಗ ಈ ಮೂವರು ಭೋಜನ ಮಾಡಿ ತಮ್ಮವರಿಗೆ ತಿಳಿಸಿದಾಗ ಉಳಿದೆಲ್ಲರಿಗೂ ಖೇದವಾಗುವುದು ಸಹಜವಾಗಿದೆ. ಕಾರಣ ಅವರ ಸರ್ವ ಸಮಾಜಕ್ಕೆ ಊಟಕ್ಕೆ ಆಮಂತ್ರಿಸಿರಿ. ಎಲ್ಲವನ್ನು ಬಡಿಸಿ ಬ್ರಾಹ್ಮಣರಿಗಾಗಿ ಮಡಿಯಿಂದ ಪುನಃ ಪಾಕ ಸಿದ್ಧಗೊಳಿಸುವೆ ಎಂದಾಗ ನಾಥರಿಗೆ ಇದು ಪೂರ್ಣ ಒಪ್ಪಿಗೆಯಾಗಿ ಅದರಂತೆ ನೆರವೇರಿಸಿದರು. ಮಾದಿಗ ಸಮಾಜವೆಲ್ಲವೂ ಎಂದೂ ಕಂಡರಿಯದ ಸುಗ್ರಾಸ ಭೋಜನವನ್ನು ಅತ್ಯಂತ ಸಂತೋಷದಿಂದ ಭುಂಜಿಸಿ ತೃಪ್ತರಾಗಿ ನಾಥರನ್ನು ಹರಿಸುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಇತ್ತ ಈ ಸಮಾಚಾರ ತಿಳಿದ ಬ್ರಾಹ್ಮಣ ಸಮಾಜಕ್ಕೆ ತಡೆಯಲಾರದ ಕೋಪವು ಉಂಟಾಯಿತು. ಈ ಏಕನಾಥನು ಬಲು ಭ್ರಷ್ಟನು, ಹೀನನು, ಅನಾಚಾರಿಯು. ಈ ಚಾಂಡಾಲನ ಮುಖ ಕೂಡ ನಾವು ನೋಡಕೂಡದು. ಭೋಜನಕ್ಕೆ ನಮಗೆ ಆಮಂತ್ರಿಸಿ ನಮಗಿಂತ ಮೊದಲೇ ಈ ಭ್ರಷ್ಟ ಮಾದಿಗರಿಗೆ ಬಡಿಸಿರುವುದು ಅಕ್ಷಮ್ಯ ಅಪರಾಧ ಎಂದು ಮನಬಂದಂತೆ ಹೀಯಾಳಿಸುತ್ತ ಏಕನಾಥರ ಮನೆಗೆ ಭೋಜನಕ್ಕೆ ಯಾರೂ ಹೋಗಕೂಡದು ಎಂದು ಆಜ್ಞೆ ಹೊರಡಿಸಿದರು.

ಇತ್ತ ಶ್ರೀಖಂಡ್ಯಾನ ಸಹಕಾರ ಇದ್ದ ಮೇಲೆ ಕೇಳುವುದೇನು? ತಕ್ಷಣ ಬ್ರಾಹ್ಮಣರ ಭೋಜನದ ಸಮಯದ ಒಳಗಾಗಿಯೇ ಮರು ಅಡುಗೆಯು ಮೊದಲಿನಕ್ಕಿಂತಲೂ ಸುಗ್ರಾಸವಾಗಿ ಸಿದ್ಧವಾಯಿತು. ಆದರೆ ಯಾವ ಬ್ರಾಹ್ಮಣನೂ ಮನೆಗೆ ಬರಲಿಲ್ಲ. ಪಿತೃಶ್ರಾದ್ಧದ ಇಂತಹ ಪರ್ವಕಾಲದಲ್ಲಿ ಬ್ರಾಹ್ಮಣರಾರೂ ಬಾರದ್ದಕ್ಕೆ ಏಕನಾಥ ಮಹಾರಾಜರಿಗೆ ಸಂಕಟ ಸಮಯ ಒದಗಿದಂತಾಯಿತು. ಆಗ ಶ್ರೀಖಂಡ್ಯಾ ಮಹಾರಾಜರತ್ತ ಬಂದು ಸ್ವಾಮೀ, ತಾವುಯಾವ ಚಿಂತೆಯನ್ನೂ ಮಾಡಬೇಡಿರಿ. ಬ್ರಾಹ್ಮಣರು ಭೋಜನಕ್ಕೆ ಬಾರದ್ದಕ್ಕೆ ಏನಾಯಿತು? ಅವರ ಪಿತೃಗಳು ಹಾಗೂ ನಿಮ್ಮ ಪಿತೃಗಳೂ ಕೂಡ ಭೋಜನಕ್ಕೆ ಆಗಮಿಸುವರು ನಿಶ್ಚಿಂತರಾಗಿರಿ ಎಂದು ಹೇಳುತ್ತ ಎಲೆಗಳನ್ನು ಬಡಿಸುತ್ತಲೇ ಎಲ್ಲ ಪಿತೃದೇವತೆಗಳು ಎಲೆಯ ಮೇಲೆ ಆಸೀನರಾಗಿ ಬಹಳ ಸಂತೋಷದಿಂದ ತಮಗೆ ಬೇಕಾದ ಪದಾರ್ಥಗಳನ್ನು ಭುಂಜಿಸುತ್ತ ತೃಪ್ತರಾದರು. ಎಲ್ಲರಿಗೂ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಬೀಳ್ಕೊಡುತ್ತಿರಲು ಇದನ್ನು ಎಲ್ಲ ಬ್ರಾಹ್ಮಣರು ಪ್ರತ್ಯಕ್ಷ ಕಂಡು ಮ್ಲಾನ ಮುಖರಾಗಿ ಏಕನಾಥ ಮಹಾರಾಜರ ಯೋಗ್ಯತೆ ಕಂಡು ಪಶ್ಚಾತ್ತಾಪಪಟ್ಟರು. ಸಹಸ್ರ ಬ್ರಾಹ್ಮಣರಿಗೆ ಸಿದ್ಧಮಾಡಿದ ಉಳಿದ ಭೋಜನವನ್ನು ಊರಿನವರಿಗೆ ಹಂಚಿ ಅಂದಿನ ಕಾರ್ಯಕ್ರಮ ಪೂರ್ಣಗೊಳಿಸಲಾಯಿತು.

ಮರುದಿನ ಬ್ರಾಹ್ಮಣರು ಸಭೆ ಸೇರಿಸಿದಾಗ ಕೆಲವರು ಏಕನಾಥ ಮಹಾರಾಜರ ಗುಣಗಾನ ಮಾಡಿದರೆ ಇನ್ನುಳಿದವರು ಕ್ರಿಯಾಕರ್ಮ ಭ್ರಷ್ಟನಿಗೆ ಪ್ರಾಯಶ್ಚಿತ್ತ ಮಾಡಿ ಶುದ್ಧೀಕರಿಸಬೇಕೆಂದರು. ಕೂಡಿದ ಸಭೆಗೆ ಏಕನಾಥರನ್ನು ಕರೆಯಿಸಿ ನೀನು ಮಾಡಿದ ತಪ್ಪಿಗೆ ಶಿಕ್ಷೆಯಾಗಲೇಬೇಕು. ನದಿಗೆ ನಡೆಯಿರಿ ನಾವು ನಿಮಗೆ ಶಾಸ್ತ್ರೋಕ್ತವಾಗಿ ಶುದ್ಧೀಕರಣ ಮಾಡುತ್ತೇವೆ ಎಂದು ಹೇಳಿದಾಗ ನಾಥರು ಅದಕ್ಕೆ ಒಪ್ಪಿಕೊಂಡರು. ಕೂಡಲೇ ಎಲ್ಲರೂ ಗೋದಾವರೀ ನದಿಗೆ ಬಂದು ನಾಥರಿಗೆ ಸ್ನಾನ ಮಾಡಿಸಿ, ಶರೀರಕ್ಕೆ ಗೋಮೂತ್ರ ಸಿಂಪಡಿಸಿ ಮಣ್ಣು ಹಚ್ಚಿ ಮಂತ್ರದೊಂದಿಗೆ ಸ್ನಾನ ಮಾಡಿಸುತ್ತಿರಲು ಅಲ್ಲಿ ದಿಢೀರನೇ ಒಬ್ಬ ಮಹಾಕುಷ್ಠರೋಗಿಯು ಏಕನಾಥ ಮಹಾರಾಜರು ಎಲ್ಲಿದ್ದಾರೆ? ಎಂದು ಪ್ರಶ್ನಿಸಿದನು. ಆಗ ಅಲ್ಲಿನ ಪ್ರಮುಖ ಬ್ರಾಹ್ಮಣರು ಕಾರಣ ಕೇಳಲು ಆತನು ಹೀಗೆಂದನು; ನಾನು ಮಹಾಕುಷ್ಠರೋಗಿಯು. ಈ ರೋಗ ಪರಿಹಾರಕ್ಕಾಗಿ ತ್ರ್ಯಂಬಕೇಶ್ವರದಲ್ಲಿ ಅನೇಕ ವರ್ಷಗಳಿಂದ ಅನುಷ್ಠಾನ ಮಾಡುತ್ತಿರಲು ನನಗೆ ಮಹಾದೇವರು ಸ್ವಪ್ನದಲ್ಲಿ ದರ್ಶನಕೊಟ್ಟು ಪೈಠಣದಲ್ಲಿ ಏಕನಾಥ ಎಂಬ ಮಹಾಭಗವದ್ಭಕ್ತ ಇರುವನು. ಆತನು ಮಾದಿಗರಿಗೆ ಭೋಜನ ಮಾಡಿಸಿರುವನು. ಅದರಲ್ಲಿನ ಒಬ್ಬ ಮಾದಿಗ ಭೋಜನದ ಪುಣ್ಯವನ್ನು ನಿನಗೆ ಧಾರೆ ಎರೆದರೆ ನಿನ್ನ ಕುಷ್ಠರೋಗವು ಪೂರ್ಣ ಗುಣವಾಗುವುದು ಎಂದು ತಿಳಿಸಿದ್ದಕ್ಕೆ ನಾನು ಇಲ್ಲಿಗೆ ಧಾವಿಸಿ ಬಂದಿರುವೆನು. ಅವರು ಎಲ್ಲಿದ್ದಾರೆ? ತೋರಿಸಿರಿ ಎಂದನು. ಅಲ್ಲಿದ್ದ ಎಲ್ಲ ಬ್ರಾಹ್ಮಣರಿಗೆ ಈ ವಚನಗಳನ್ನು ಕೇಳಿ ದಿಗ್ಭ್ರಮೆ ಉಂಟಾಯಿತು. ಅರೇ ನಾವು ಏಕನಾಥನಿಗೆ ಕರ್ಮಭ್ರಷ್ಟನೆಂದು ಪ್ರಾಯಶ್ಚಿತ್ತ ಕೊಟ್ಟು ಶುದ್ಧೀಕರಣ ಮಾಡುತ್ತಿದ್ದೇವೆ. ಮಾದಿಗರಿಗೆ ಭೋಜನ ಕೊಟ್ಟದ್ದು ಪುಣ್ಯವಾಗಲು ಸಾಧ್ಯವೇ ಇಲ್ಲ. ಇದೆಲ್ಲ ಸುಳ್ಳು ಸುಳ್ಳು ಎಂದರು. ಅವರಲ್ಲಿಯೇ ಕೆಲವರು ಏಕೆ ಹೀಗೆ ಹಂಬಲಿಸುವಿರಿ. ಪ್ರತ್ಯಕ್ಷವಾಗಿ ಕಂಡು ಪ್ರಮಾಣಿಸೋಣ ಎಂದು ಹೇಳುತ್ತ ಆತನಿಗೆ ಏಕನಾಥರನ್ನು ತೋರಿಸಿದರು. ಕೂಡಲೇ ಆತನು ಧಾವಿಸಿ ಬಂದು ನಾಥರ ಚರಣಗಳಿಗೆ ಬಿದ್ದು ಒಬ್ಬ ಮಾದಿಗನ ಭೋಜನದ ಪುಣ್ಯವನ್ನು ನನಗೆ ನೀಡಿರಿ ಎಂದು ಬಹಳ ಕನಿಕರದಿಂದ ಬೇಡಿಕೊಂಡನು. ಆಗ ಏಕನಾಥರು ತಡಮಾಡದೇ ಆಗಲಿ ಎಂದು ಒಪ್ಪಿಕೊಂಡು ಆತನು ಹೇಳಿದಂತೆ ಪುಣ್ಯವನ್ನು ಧಾರೆ ಎರೆದರು. ಏನಾಶ್ಚರ್ಯ! ತಕ್ಷಣವೇ ಸರ್ವರ ಸಮಕ್ಷಮದಲ್ಲಿಯೇ ಆ ಕುಷ್ಠರೋಗಿಯು ಸುಂದರ ದೇಹ ಕಾಂತಿಯುಳ್ಳವನಾದನು. ಇದನ್ನು ಕಣ್ಣಾರೆ ಕಂಡ ಸರ್ವ ಬ್ರಾಹ್ಮಣರು ಚಕಿತರಾದರು. ಏಕನಾಥರು ಸಾಮಾನ್ಯ ಮನುಷ್ಯರಲ್ಲ. ಜಗತ್ಕಲ್ಯಾಣಕ್ಕಾಗಿ ಬಂದ ದೇವರ ಅವತಾರಿಯಾಗಿದ್ದಾನೆ ಎಂದು ತಿಳಿದು ಮೌನವಾಗಿ ತಮ್ಮ ತಮ್ಮ ಮನೆಗಳಿಗೆ ನಡೆದರು.

ಒಂದು ದಿನ ಸಂತಶ್ರೇಷ್ಠ ಶ್ರೀಜ್ಞಾನೇಶ್ವರ ಮಹಾರಾಜರು ಏಕನಾಥರ ಸ್ವಪ್ನದಲ್ಲಿ ಆಗಮಿಸಿ ''ಅಜಾನವೃಕ್ಷದ ಬೇರುಗಳು ನನ್ನ ಕಂಠಕ್ಕೆ ಬಿಗಿದುಕೊಂಡಿವೆ, ಬೇಗನೇ ಆಳಂದಿಗೆ ಬಂದು ಆ ಬೇರುಗಳನ್ನು ತೆಗೆಯಬೇಕು'' ಎಂದು ಆಜ್ಞಾಪಿಸಿದರು. ಬೆಳಗ್ಗೆ ಆದ ಸ್ವಪ್ನದಿಂದ ಗಡಬಡಿಸಿ ಎದ್ದು ಕೆಲವು ಭಕ್ತರೊಂದಿಗೆ ಆಳಂದಿಗೆ ಪ್ರಯಾಣಿಸಿದರು. ದಾರಿ ಉದ್ದಕ್ಕೂ ಇವರ ಪ್ರತಿನಿತ್ಯದ ಭಜನೆ, ಪ್ರವಚನೆ, ಕೀರ್ತನೆ ನಡೆಯುತ್ತಲೇ ಇದ್ದವು. ಕೊನೆಗೆ ಆಳಂದಿಗೆ ಬಂದು ಸೇರಿದಾಗ ದುಷ್ಟರ ದಾಳಿಗೆ ತುತ್ತಾಗಿ ಆಗ ಆಳಂದಿ ಗ್ರಾಮವು ವಿಧ್ವಂಸಗೊಂಡಿತ್ತು. ಬಹು ಶ್ರಮಪಟ್ಟು ಶ್ರೀಜ್ಞಾನೇಶ್ವರರ ಸಮಾಧಿ ಶೋಧಿಸಿ ಒಳಪ್ರವೇಶಿಸಿ ಸಿದ್ಧಾಸನದಲ್ಲಿ ಕುಳಿತಿರುವ ದಿವ್ಯ ತೇಜಃಪುಂಜ ಶ್ರೀಜ್ಞಾನೇಶ್ವರ ಮಹಾರಾಜರನ್ನು ಪ್ರತ್ಯಕ್ಷ ದರ್ಶನ ಪಡೆದು ಅತ್ಯಂತ ಆನಂದ ಪುಳಕಿತರಾಗಿ ಗದ್ಗದಕಂಠದಿಂದ ಮಾಉಲಿಯವರ ಚರಣಗಳಿಗೆ ವಂದಿಸಿದರು. ಕಂಠಕ್ಕೆ ಬಿಗಿದುಕೊಂಡಿರುವ ಅಜಾನವೃಕ್ಷದ ಬೇರುಗಳನ್ನು ಕಿತ್ತೊಗೆದರು. ಆಗ ಶ್ರೀಜ್ಞಾನೇಶ್ವರ ಮಹಾರಾಜರು ಏಕನಾಥರಿಗೆ ''ನನ್ನ ಜ್ಞಾನೇಶ್ವರೀ ಗ್ರಂಥವು ಜನರ ದುರ್ಲಕ್ಷದಿಂದ ಬಹಳ ಪಾಠಭೇದವಾಗಿದೆ. ತಪ್ಪುಗಳನ್ನೆಲ್ಲ ಸರಿಪಡಿಸಿ ಶುದ್ಧ ಜ್ಞಾನೇಶ್ವರೀ ಪ್ರತಿ ಸಿದ್ಧಗೊಳಿಸಿರಿ'' ಎಂದು ಹೇಳುತ್ತಲೇ ನಾಥರು ನಿಮ್ಮ ಆಜ್ಞೆ ಅವಶ್ಯ ಪಾಲಿಸುವೆ ಎಂದು ಹೇಳುತ್ತ ಅವರ ದಿವ್ಯ ಆಶೀರ್ವಾದವನ್ನು ಪಡೆದರು. ಪೈಠಣಕ್ಕೆ ಬರುತ್ತಲೇ ನಾಲ್ಕೂ ಕಡೆಯಿಂದ ಜ್ಞಾನೇಶ್ವರೀ ಹಸ್ತಪ್ರತಿಗಳನ್ನು ತರಿಸಿಕೊಂಡು ಎಲ್ಲವನ್ನೂ ಶೋಧಿಸಿ ತಪ್ಪುಗಳನ್ನೆಲ್ಲವನ್ನೂ ಬಹುಶ್ರಮಪಟ್ಟು ಶುದ್ಧೀಕರಿಸಿದರು. ಭಕ್ತ ಸಮಾಜಕ್ಕೆ ಶುದ್ಧ ಪ್ರತಿಯಿಂದ ಬಹಳ ಸಂತೋಷವಾಗಿ ಬಹು ಉಪಯೋಗವಾಯಿತು.

ಶ್ರೀಸಂತ ಏಕನಾಥ ಮಹಾರಾಜರು ತಮ್ಮ ಜೀವಿತ ಸಮಯವನ್ನೆಲ್ಲ ಲೋಕ ಕಲ್ಯಾಣಕ್ಕಾಗಿಯೇ ವಿನಿಯೋಗಿಸಿ ಭಕ್ತಿ ಜ್ಞಾನ ವೈರಾಗ್ಯಗಳನ್ನು ತಮ್ಮ ಸದಾಚಾರ ವರ್ತನೆಯಿಂದ, ಕೀರ್ತನ ಪ್ರವಚನಗಳ ಮುಖಾಂತರ ತಮ್ಮ ರಸಾಳ ಮಂಜುಳ ವಾಣಿಯಿಂದ ನವರಸಭರಿತವಾಗಿ ಬೋಧಿಸಿ ಅನೇಕರಿಗೆ ಸನ್ಮಾರ್ಗಕ್ಕೆ ಹಚ್ಚಿದರು.ತಮ್ಮ ಬಂದ ಕಾರ್ಯ ತೃಪ್ತಿಕರವಾಗಿ ಪೂರ್ಣಗೊಂಡಿದ್ದಕ್ಕೆ ಒಂದು ದಿನ ತಮ್ಮ ದೇಹವನ್ನು ತ್ಯಜಿಸಿದರು. ಆಗ ಇವರ ಶವಸಂಸ್ಕಾರಕ್ಕಾಗಿ ಪೈಠಣದ ಸರ್ವ ಬ್ರಾಹ್ಮಣ ಮಂಡಳಿಯವರು ಕೂಡಿದರು. ನಾಥರ ಪಾರ್ಥಿವ ಶರೀರವನ್ನು ತಮ್ಮ ಹೆಗಲಿಗೆ ಎತ್ತುವ ಪ್ರಸಂಗದಲ್ಲಿ ಒಬ್ಬ ನಿಂದಕ ಬ್ರಾಹ್ಮಣನು ಏಕನಾಥರು ಎಷ್ಟೋ ಪ್ರವಚನೆ ಕೀರ್ತನೆಗಳಲ್ಲಿ ವೈಷ್ಣವರು ಕಾಲನನ್ನು ಜಯಿಸುವರು ಎಂದು ಹೇಳುತ್ತಿದ್ದರು. ಆದರೆ ಇಂದು ತಾವೇ ನಮ್ಮ ಹೆಗಲಿಗೆ ಸ್ಮಶಾನ ಯಾತ್ರೆಗೆ ಬಂದು ಬಿಟ್ಟರು ಎಂದು ಗೇಲಿ ಮಾಡುತ್ತಲೇ ಏಕನಾಥ ಮಹಾರಾಜರು ಕೂಡಲೇ ಎದ್ದು ಕುಳಿತರು. ಎಲ್ಲರೂ ಚಕಿತರಾಗಿ ಯಾವ ಉಪಾಯ ಕಾಣದೇ ತಮ್ಮ ತಮ್ಮ ಮನೆಗೆ ಮರಳಿದರು. ಪುನಃ ಏಕನಾಥ ಮಹಾರಾಜರು ಕೆಲವು ದಿನಗಳ ನಂತರ ತಮ್ಮ ದೇಹ ತ್ಯಜಿಸಿದರು. ಆಗ ಕೂಡಿದ ಎಲ್ಲ ಬ್ರಾಹ್ಮಣರು ಪರಸ್ಪರವಾಗಿ ಏನೂ ಮಾತನಾಡದಂತೆ ಪ್ರತಿಬಂಧಿಸಿದರು. ಸ್ಮಶಾನಯಾತ್ರೆ ಸುರಕ್ಷಿತವಾಗಿ ನಡೆಯಿತು. ದಾರಿಯಲ್ಲಿ ಮದುವೆಯಾದ ಒಬ್ಬ ಮದುಮಗಳು ತನ್ನ ಪತಿಗೃಹಕ್ಕೆ ಮನೆಯಿಂದ ಪಾದಾರ್ಪಣೆ ಮಾಡುವ ಸಮಯಕ್ಕೆ ಈ ಪ್ರೇತಯಾತ್ರೆಯು ಆ ಮನೆಯ ಸಮೀಪ ಬರುತ್ತಲೇ ಆಕೆಯ ಅಜ್ಜಿಯು ಅಪಶಕುನ ಆದದ್ದಕ್ಕೆಬಹಳ ಖೇದಪಟ್ಟು ''ಇಷ್ಟೆಲ್ಲ ಭಜನೆ ಕೀರ್ತನೆ ಮಾಡುವ ಏಕನಾಥರು ಕೊನೆಗೆ ಸತ್ತು ಬಿಟ್ಟರೇ, ಸತ್ತರೆ ಸಾಯಲಿ, ಇಂದೇ ಸತ್ತು ನಮ್ಮ ಶುಭ ಕಾರ್ಯಕ್ಕೆ ಅಡ್ಡಿಪಡಿಸಿದರಲ್ಲ? ಎಂದು ನೊಂದು ನುಡಿಯುತ್ತಲೇ ಏಕನಾಥ ಮಹಾರಾಜರು ಅವರ ಮನೆಯ ಮುಂದೆಯೇ ಎದ್ದು ಕುಳಿತು ''ಹೇ ಅಜ್ಜಿ, ನಾನು ಸತ್ತಿಲ್ಲ ಬದುಕಿರುವೆನು. ಅಪಶಕುನದ ಭಯಬಿಟ್ಟು ನಿನ್ನ ಮೊಮ್ಮಗಳಿಗೆ ಪತಿಗೃಹಕ್ಕೆ ಕಳಿಸು'' ಎಂದು ನುಡಿದರು. ಆಗ ಬ್ರಾಹ್ಮಣರೆಲ್ಲರೂ ಕೂಡಿ ಇದೇನು? ಈ ರೀತಿ ನಾಥರು ಮೇಲಿಂದ ಮೇಲೆ ಸತ್ತವರು ಬದುಕುತ್ತ ಬಂದರೆ ನಾವು ಎಷ್ಟು ಸಾರೆ ನಮ್ಮ ಮನೆ ಮಾರಿನ ಕಾರ್ಯ ಬಿಟ್ಟು ಈ ತೊಂದರೆ ಭೋಗಿಸಬೇಕೆಂದು ನುಡಿಯುತ್ತಿರಲು ಆಗ ನಾಥರು ''ನೀವೇನು ಚಿಂತೆ ಮಾಡಬೇಡಿರಿ ಮುಂದಿನ ಸಲ ನಾನೇ ನನ್ನ ವ್ಯವಸ್ಥೆ ಮಾಡಿಕೊಳ್ಳುವೆ ತಾವು ಬರುವ ಶ್ರಮ ಪಡೆಯಬೇಡಿರಿ'' ಎಂದು ಆಶ್ವಾಸನೆ ಕೊಟ್ಟರು. ಯಾರಿಗೂ ಏನೂ ತೋಚದೇ ಬಂದ ದಾರಿ ಹಿಡಿದು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.

ಶಾಲಿವಾಹನಶಕೆ ೧೫೧೧ ನೇ ವಿಜಯನಾಮ ಸಂವತ್ಸರದ ಫಾಲ್ಗುಣ ವದ್ಯ ಷಷ್ಟಿ ರವಿವಾರದಂದು ಶ್ರೀಸಂತ ಏಕನಾಥ ಮಹಾರಾಜರು ಪ್ರಾತಃಕಾಲದಲ್ಲಿ ಎದ್ದು ತಮ್ಮ ದಿನನಿತ್ಯದಂತೆ ಪೂಜೆ ಪುನಸ್ಕಾರಗಳನ್ನು ಪೂರ್ಣಗೊಳಿಸಿ ತಮ್ಮ ಭಕ್ತ ಸಮೂಹ ಭಜನೆಯ ದಿಂಡಿಯೊಂದಿಗೆ ಗೋದಾವರಿ ನದಿ ತೀರಕ್ಕೆ ಆಗಮಿಸಿ ಎಲ್ಲರ ದೇಹಭಾವವು ಇಲ್ಲದಾಗುವಂತೆ ಭಜನೆರಂಗದಲ್ಲಿ ತನ್ಮಯರಾಗಿ ಮಧ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಗೆ ವೀಣಾ ಸಮೇತರಾಗಿ ತುಂಬಿದ ಗೋದಾವರಿ ನದಿಯಲ್ಲಿ ಇಳಿದು ಎಲ್ಲರನ್ನೂ ಪ್ರಾರ್ಥಿಸುತ್ತ ಸುಖವಾಗಿ ಜಲಸಮಾಧಿ ಸ್ವೀಕರಿಸಿದರು. ಜಲದಲ್ಲಿ ತಮ್ಮ ಶರೀರವನ್ನು ಜಲಸ್ವರೂಪವನ್ನಾಗಿ ಮಾಡಿ ಬಿಟ್ಟರು. ಇದನ್ನು ಪ್ರತ್ಯಕ್ಷ ಕಂಡ ಭಕ್ತ ಸಮೂಹದ ಎಲ್ಲರೂ ದೊಡ್ಡ ಧ್ವನಿಯಿಂದ ಜಯಜಯಕಾರ ಮಾಡಿ ಪುಷ್ಪವೃಷ್ಟಿ ಮಾಡಿದರು. ಕೆಲವು ಸಮಯದ ನಂತರ ಏಕನಾಥ ಮಹಾರಾಜರ ವೀಣೆಯು ತೇಲುತ್ತ ಬಂದು ಭಕ್ತರಕ್ಕೆ ಸೇರಿತು. ಇದೇ ಅವರ ಪ್ರಸಾದವೆಂದು ತಿಳಿದು ಎಲ್ಲರೂ ತೃಪ್ತರಾದರು.

ಫಾಲ್ಗುಣ ಬಹುಳ ಷಷ್ಠಿಯ ದಿವಸವು ಮಹಾಪರ್ವಕಾಳವಾಗಿರುವುದು. ಕಾರಣ, ಇದೇ ಮುಹೂರ್ತಕ್ಕೆ ಅನೇಕ ಪರ್ವಕಾಳಗಳು ಕೂಡಿರುವುವು. ಅಂದು ಏಕನಾಥ ಮಹಾರಾಜರ ಸದ್ಗುರುಗಳಾದ ಶ್ರೀಜನಾರ್ದನಸ್ವಾಮಿಯವರ ಜನ್ಮ ದಿನ. ಇದೇ ಮುಹೂರ್ತದಲ್ಲಿ ಅವರಿಗೆ ಸದ್ಗುರುಗಳಾದ ಶ್ರೀದತ್ತಾತ್ರೇಯರ ಉಪದೇಶವಾಯಿತು. ಕೊನೆಗೆ ಇದೇ ಮುಹೂರ್ತದಲ್ಲಿ ಅವರು ತಮ್ಮ ಶರೀರವನ್ನು ತ್ಯಜಿಸಿದರು. ಇದೇ ಮುಹೂರ್ತಕ್ಕೆ ಸದ್ಗುರು ಜನಾರ್ದನಸ್ವಾಮಿಗಳವರು ಏಕನಾಥ ಮಹಾರಾಜರಿಗೆ ಉಪದೇಶ ನೀಡಿದರು. ಕೊನೆಗೆ ಶ್ರೀ ಸಂತ ಏಕನಾಥ ಮಹಾರಾಜರು ಇದೇ ಶುಭ ಮುಹೂರ್ತದಲ್ಲಿ ತಮ್ಮ ಶರೀರವನ್ನು ತ್ಯಜಿಸಿದರು. ಏಕನಾಥ ಷಷ್ಠಿಯ ಈ ಪ್ರಸಿದ್ಧ ಮುಹೂರ್ತ ಸಾಧಿಸಿ ಪೈಠಣ ಕ್ಷೇತ್ರದಲ್ಲಿ ದೊಡ್ಡ ಜಾತ್ರೆಯು ನೆರವೇರುವುದು. ಈಗಲೂ ಲಕ್ಷ ಗಟ್ಟಲೇ ಭಕ್ತ ಮಂಡಳಿಯವರು ಪೈಠಣ ಕ್ಷೇತ್ರಕ್ಕೆ ಆಗಮಿಸಿ ಅಖಂಡ ನಾಮದ ಉತ್ಸವ ನೆರವೇರಿಸಿ ಪುನೀತರಾಗುತ್ತಿರುವರು. ಪೈಠಣಕ್ಷೇತ್ರದ ಏಕನಾಥರ ವಾಡೆಯಲ್ಲಿ ಈಗಲೂ ಶ್ರೀಖಂಡ್ಯಾ ತುಂಬಿಸುತ್ತಿರುವ ನೀರಿನ ಹೌಜು, ತೇಯ್ದ ಗಂಧದ ಸಾಣೇಕಲ್ಲು, ಅವರು ಅದೃಶ್ಯರಾದ ಕಂಭ, ಪೂಜಿಸಿದ ಶ್ರೀಪಾಂಡುರಂಗ ಮೂರ್ತಿ ಹೀಗೆ ಅನೇಕ ಮಹತ್ವ ವಸ್ತುಗಳ ದರ್ಶನ ಪಡೆಯಬಹುದು. ಇಲ್ಲಿಯ ಪಾರಮಾರ್ಥಿಕ ಕಾರ್ಯಕ್ರಮಗಳನ್ನು ಅವರ ವಂಶಜರು ನಡೆಸುತ್ತ ಬಂದಿರುವರು. ಪಂಢರೀ ವಾರಕರೀಯವರು ಒಂದು ಸಲವಾದರೂ ಈ ಪೈಠಣ ಯಾತ್ರೆ ಮಾಡಬೇಕೆಂದು ಪ್ರತೀತಿ ಇದೆ.

ಶ್ರೀಸಂತ ಏಕನಾಥ ಮಹಾರಾಜರು ತಮ್ಮ ಜೀವಿತ ಕಾಲವನ್ನು ಜಗತ್ಕಲ್ಯಾಣಕ್ಕಾಗಿ ವಿನಿಯೋಗಿಸಿ ಕೊನೆಗೆ ಗ್ರಂಥಗಳ ರೂಪದಿಂದ ಪ್ರತ್ಯಕ್ಷವಾಗಿ ಉಳಿದುಕೊಂಡಿರುವರು. ಇವರು ತಮ್ಮ ಪ್ರಾಸಾದಿಕ ವಾಣಿಯಿಂದ ಅನೇಕ ಗ್ರಂಥಗಳನ್ನು ನಿರ್ಮಿಸಿದರು. ಚತುಃಶ್ಲೋಕಿ ಭಾಗವತ, ಹಸ್ತಾಮಲಕ, ಏಕಾದಶಸ್ಕಂಧ ಭಾಗವತ, ರುಕ್ಮಿಣಿ ಸ್ವಯಂವರ, ಚಿರಂಜೀವ ಪದ, ಆನಂದ ಲಹರೀ, ಸ್ವಾತ್ಮಸುಖ, ಶುಕಾಷ್ಟಕ, ಹರಿಪಾಠ ಅಲ್ಲದೇ ಅನೇಕ ರೂಪಕಗಳ ಸಾವಿರಾರು ಅಭಂಗಗಳನ್ನು ಬರೆದು ತಮ್ಮ ಆಯುಷ್ಯದ ಕೊನೆಯಲ್ಲಿ ಪ್ರಭು ಶ್ರೀರಾಮಚಂದ್ರನ ಆಜ್ಞೆಯಂತೆ ೪೦ ಸಾವಿರ ಓವೀಗಳುಳ್ಳ ಬೃಹತ್ ಪ್ರಮಾಣದ ರಾಮಾಯಣವನ್ನು ವಾಲ್ಮೀಕಿ ರಾಮಾಯಣದ ಆಧಾರದಿಂದ ಮರಾಠೀ ಪ್ರಾಕೃತ ಭಾಷೆಯಲ್ಲಿ ಬಲು ಸುಂದರವಾಗಿ ನಿರ್ಮಿಸಿದರು. ಆಯುಷ್ಯದ ಕೊನೆಯಲ್ಲಿ ಇನ್ನೂ ಉಳಿದ ಸ್ವಲ್ಪ ಭಾಗವನ್ನು ತಮ್ಮಲ್ಲಿರುವ 'ಗಾವಬಾ' ಶಿಷ್ಯನು ಇದನ್ನು ಪೂರ್ಣಗೊಳಿಸಿದನು.

ಈ ಎಲ್ಲ ಗ್ರಂಥಗಳಲ್ಲಿ ಅವರ ಏಕನಾಥೀ ಭಾಗವತ ಗ್ರಂಥವು ಅಗ್ರಸ್ಥಾನ ಪಡೆದಿರುವುದು. ಜಗದ್ಗುರು ಶ್ರೀ ಸಂತ ತುಕಾರಾಮ ಮಹಾರಾಜರು ಈ ಗ್ರಂಥವನ್ನು ಭಾಂಡಾರ ಪರ್ವತದಲ್ಲಿ ಒಂದು ಸಾವಿರ ಪಾರಾಯಣ ಮಾಡಬೇಕಾದರೆ ಈ ಭಾಗವತ ಗ್ರಂಥದ ಮಹಿಮೆ ಎಷ್ಟೆಂದು ವರ್ಣಿಸಬೇಕು? "ತುಕಾಮ್ಹಣೇ ಭಾಗವತ। ಕೇಲೇ ಶ್ರುತ ಸಕಳಾ" ಎಂದು ಈ ಗ್ರಂಥವನ್ನು ಸ್ತುತಿಸಿರುವರು. ಪಾರಮಾರ್ಥಿಕ ಮಂದಿರಕ್ಕೆ ಈ ಭಾಗವತ ಗ್ರಂಥವು ಕಂಭದಂತೆ ಆಧಾರವಾಗಿದೆ ಎಂದು ಸಂತರು ಸ್ತುತಿಸಿರುವರು "ಖಾಂಬ ದಿಲಾ ಭಾಗವತ" ಎಂದು ಕೊಂಡಾಡಿರುವರು. ಈ ಗ್ರಂಥದ ಶ್ರೇಷ್ಠತೆಗೆ ಇನ್ನೊಂದು ಮಹತ್ವದ ಕಾರಣವಿದೆ. ಸರ್ವ ವೇದಗಳ ಮಥಿತಾರ್ಥವು ಶ್ರೀಮದ್ ಭಗವದ್ಗೀತೆಯಾಗಿದೆ. ಭಗವದ್‌ಗೀತೆಯ ಮಥಿತಾರ್ಥವು ಶ್ರೀಜ್ಞಾನೇಶ್ವರೀ ಗ್ರಂಥವಾಗಿದೆ. ಈ ಜ್ಞಾನೇಶ್ವರೀಯ ಮಥಿತಾರ್ಥವು ಶ್ರೀಏಕನಾಥೀ ಭಾಗವತ ಗ್ರಂಥವಾಗಿದೆ. ಇಷ್ಟೊಂದು ಈ ಗ್ರಂಥದ ವೈಭವವಾಗಿದೆ.

ಇಂತಹ ಸರ್ವಶ್ರೇಷ್ಠವಾಗಿರುವ ಅದ್ಭುತ ಗ್ರಂಥವು ನಿರ್ಮಾಣಗೊಂಡು ಐದು ನೂರು ವರ್ಷಗಳಾಗುತ್ತಿದ್ದರೂ ಇದು ಕೇವಲ ಮರಾಠೀ ಭಾಷೆ ಬಲ್ಲವರಿಗೆ ಮಾತ್ರ ಉಪಯೋಗವಾಗಿರುವುದು. ಕರ್ನಾಟಕದ ಕನ್ನಡ ವಾರಕರೀ ಮಂಡಳಿಯವರಿಗೆ, ಸಾಧಕ ಭಕ್ತರಿಗೆ ಈ ಗ್ರಂಥದ ವಾಸನೆಯೂ ಕೂಡ ಬಡೆದಿರುವುದಿಲ್ಲ. ಭಾಷೆಯ ಇದೊಂದು ದೊಡ್ಡ ಕೊರತೆಯಾದ ಸ್ಥಿತಿಯನ್ನು ಶ್ರೀಸಂತ ಏಕನಾಥ ಮಹಾರಾಜರಿಗೆ ಮನದಟ್ಟಾಗಿ ಹೇಗಾದರೂ ಮಾಡಿ ಈ ಭಾವಿಕ ಕನ್ನಡಿಗರಿಗೆ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಮುದ್ರಿಸಿ ಮುಟ್ಟಿಸಬೇಕೆಂಬ ಸತ್ಯ ಸಂಕಲ್ಪ ಮಾಡಿ ಈ ಕಾರ್ಯ ಪೂರ್ಣಗೊಳ್ಳಲು ತಾವೇ ಮುಂದಾಗಿ ನನಗೆ ಕೇವಲ ನಿಮಿತ್ತ ಮಾಡಿ ಭಾಗವತ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಲು ಕಾರಣೀಭೂತರಾದರು.

ಈ ಮಹತ್ವಪೂರ್ಣ ಕಾರ್ಯ ಆರಂಭಿಸಲು ಆಪ್ತ ಸ್ನೇಹಿತರೊಂದಿಗೆ ೧೫ ಜನರು ಎರಡು ಕಾರುಗಳಲ್ಲಿ ಪ್ರಯಾಣಿಸಿ ಪೈಠಣ ಕ್ಷೇತ್ರಕ್ಕೆ ಹೊರಟೆವು. ದಾರಿಯಲ್ಲಿ ಪ್ರಥಮವಾಗಿ ಶ್ರೀಭಕ್ತ ಪುಂಡಲೀಕ, ಪರಬ್ರಹ್ಮ ಶ್ರೀಪಾಂಡುರಂಗ ಇವರ ದರ್ಶನ ಆಶೀರ್ವಾದ ಪಡೆದು ಅಲ್ಲಿಂದ ಸಾಸವಾಡ, ಆಳಂದಿ, ದೇಹೂ, ತ್ರ್ಯಂಬಕೇಶ್ವರ ಕ್ಷೇತ್ರಗಳಲ್ಲಿ ಪೂಜೆಗಳನ್ನು ಸಲ್ಲಿಸಿ ಆಶೀರ್ವಾದಗಳನ್ನು ಪಡೆಯಲಾಯಿತು. ಶ್ರೀಶಾಲಿವಾಹನಶಕೆ ೧೯೨೫ ನೇ ವೃಷನಾಮ ಸಂವತ್ಸರದ ಫಾಲ್ಗುಣ ನಾಮ ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ದಿನದಂದು ಪೈಠಣಕ್ಷೇತ್ರ ತಲುಪಿ ಅಲ್ಲಿನ ಏಕನಾಥ ಮಹಾರಾಜರ ಮುಖ್ಯ ವಂಶಜರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಗೋಸಾವಿ ಇವರನ್ನು ಕಂಡು ನಾಳೆ ದಿನದ ಪರ್ವಕಾಲದಲ್ಲಿ ಏಕನಾಥ ಮಹಾರಾಜರ ದಿವ್ಯ ಸನ್ನಿಧಿಯಲ್ಲಿ ತಮ್ಮಿಂದ ಪೂಜೆ ಪಡೆದು ಕನ್ನಡ ಭಾಷೆಯಲ್ಲಿ ಸಾರ್ಥ ಶ್ರೀ ಏಕನಾಥೀ ಭಾಗವತ ಬರೆಯುವ ಕಾರ್ಯ ಆರಂಭಿಸುವ ನಮ್ಮ ಹೃದ್ಗತ ತಿಳಿಸಿದಾಗ ಅವರು ತುಂಬಾ ಸಂತೋಷಪಟ್ಟು ಬಹು ದಿನಗಳ ನಮ್ಮ ಇಚ್ಛೆ ಈಡೇರಿತು ಎಂದು ಉದ್ಗಾರ ತೆಗೆದರು. ಮರುದಿನ ಏಕನಾಥ

ಷಷ್ಠಿಯ ಶುಭಮುಹೂರ್ತದಲ್ಲಿ ಅಂದರೆ ಫಾಲ್ಗುಣ ಬ.೬ ಬುಧವಾರ ತಾ. ೩-೪-೨೦೦೨ ರಂದು ಅವರು ಸ್ವತಃ ನಮ್ಮನ್ನು ಕರೆದುಕೊಂಡು ಶ್ರೀಖಿಂಡ್ಯಾರೂಪದ ಶ್ರೀಪಾಂಡುರಂಗನು ಯಾವ ಕಂಭದಲ್ಲಿ ಅದೃಶ್ಯನಾಗಿದ್ದನೋ ಮತ್ತು ಯಾವ ಕಂಭದ ಆಶ್ರಯದಿಂದ ಶ್ರೀ ಸಂತ ಏಕನಾಥ ಮಹಾರಾಜರು ಏಕನಾಥೀ ಭಾಗವತ ಗ್ರಂಥವನ್ನು ಬರೆದರೋ ಆ ಪವಿತ್ರ ಸ್ಥಳದಲ್ಲಿ ನನಗೆ ಸ್ಥಾನವನ್ನು ಕೊಟ್ಟರು. ಆಗ ಅಲ್ಲಿ ಏಕನಾಥ ಷಷ್ಠಿಯ ಯಾತ್ರೆಗೆ ಆಗಮಿಸಿರುವ ನಮ್ಮ ಸದ್ಗುರುಗಳಾದ ಹ.ಭ.ಪ. ಗೋಪಾಲ ಮಹಾರಾಜ ವಾಸಕರ ಹಾಗೂ ಹ.ಭ.ಪ. ಶ್ರೀಗುರು ರಾವಸಾಹೇಬ ಗೋಸಾವಿ ಇವರ ಅಮೃತಹಸ್ತದಿಂದ ಗ್ರಂಥವನ್ನು ಪೂಜಿಸಿ ಅಲ್ಲಿಯೇ ಆರಂಭದ ೧೧ ಓವೀಗಳನ್ನು ಕನ್ನಡದಲ್ಲಿ ಬರೆಯಲಾಯಿತು. ಭಕ್ತರಿಗೆ ದರ್ಶನದ ತೊಂದರೆಯಾಗುತ್ತಿರಲು ಆಗ ಮಹಾರಾಜರು ನಮಗೆ ಅಲ್ಲಿನ ಮುಖ್ಯ ದೈವತ ಶ್ರೀಪಾಂಡುರಂಗನ ಗರ್ಭಗುಡಿಯಲ್ಲಿ ಬರೆಯಲು ಸ್ಥಾನವನ್ನು ದಯಪಾಲಿಸಿದರು. ಇದರಿಂದ ಅತಿಯಾದ ಸಂತೋಷದಿಂದ ಅಲ್ಲಿಯೇ ೧೧ ಓವೀಗಳ ಅರ್ಥ ಕನ್ನಡ ಭಾಷೆಯಲ್ಲಿ ಬರೆದು ಬಂದ ಕಾರ್ಯ ಪೂರ್ಣ ಯಶ ಪಡೆದ ಕಾರಣ ಸರ್ವರಿಗೂ ಬಹು ಸಂತೋಷವಾಯಿತು. ಕೊನೆಯಲ್ಲಿ ಈ ಕಾರ್ಯದಿಂದ ಆನಂದ ಪುಳಕಿತರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಇವರು ನನಗೆ ಜಿಗಿದಪ್ಪಿಕೊಂಡು ಆಲಿಂಗನ ಸುಖಕೊಟ್ಟು ಮನಃಪೂರ್ವಕವಾಗಿ ಹಿಡಿದ ಕಾರ್ಯ ಪೂರ್ಣಗೊಳಿಸಲು ಆಶೀರ್ವಾದ ನೀಡಿದರು. ಇದರಿಂದ ನಾವೆಲ್ಲರೂ ಪರಿಪೂರ್ಣ ತೃಪ್ತರಾಗಿ ಮರಳಿ ಕೊಪ್ಪಳಕ್ಕೆ ಬರುವ ದಾರಿಯಲ್ಲಿ ಪುಣ್ಯ ಕ್ಷೇತ್ರಗಳ ದರ್ಶನ ಆಶೀರ್ವಾದ ಪಡೆದುಕೊಂಡೆವು. ಶ್ರೀ ಸಂತ ಏಕನಾಥ ಮಹಾರಾಜರಿಗೆ ಸಾಕ್ಷಾತ್ಕಾರವಾದ ಮಹಾಪವಿತ್ರ ಸ್ಥಳ ''ಶೂಲಭಂಜನ'' ಪರ್ವತ, ಸಂತಶ್ರೇಷ್ಠ ಜ್ಞಾನೇಶ್ವರ ಮಹಾರಾಜರು ಶ್ರೀಜ್ಞಾನೇಶ್ವರೀ ಗ್ರಂಥ ಬರೆದ ಪುಣ್ಯ ಸ್ಥಳ ನೇವಾಸೀ, ಸಂತ ನಿಳೋಬರಾಯರ ಸ್ಥಾನ ಪಿಂಪಳನೇರ, ಶಿವೂರ, ವಾಸೀ ಕ್ಷೇತ್ರಗಳಿಗೆ ಹೋಗಿ ಅಲ್ಲಿ ಪೂಜೆಯೊಂದಿಗೆ ದರ್ಶನ ಆಶೀರ್ವಾದ ಪಡೆಯಲಾಯಿತು. ಕೊಪ್ಪಳಕ್ಕೆ ಬಂದು ಅಲ್ಲಿ ಯಾತ್ರೆಯ ಸಂತರ್ಪಣೆ ಮಾಡಿ ಮರುದಿನದಿಂದಲೇ ಹಗಲು ರಾತ್ರಿಯನ್ನದೇ ಏಕಾಗ್ರಚಿತ್ತದಿಂದ ಭಾಗವತ ಬರೆಯುವ ಸೇವೆ ಆರಂಭಗೊಂಡಿತು. ಸರ್ವರ ಆಶೀರ್ವಾದದ ಫಲವಾಗಿ ೧೫೦೦ ಶ್ಲೋಕಗಳುಳ್ಳ ೧೮೦೦೦ ಓವೀಗಳ ಬೃಹತ್ ಗ್ರಂಥವು ೩-೪ ವರ್ಷಗಳಲ್ಲಿ ಪೂರ್ಣಗೊಂಡಿತು. ಶ್ರೀ ಸಂತ ಏಕನಾಥ ಮಹಾರಾಜರು ಕಾರ್ತಿಕ ಮಾಸದ ಪೌರ್ಣಿಮೆಯ ದಿನದಂದು ಕಾಶೀಕ್ಷೇತ್ರದಲ್ಲಿ ಈ ಗ್ರಂಥವನ್ನು ಪೂರ್ಣಗೊಳಿಸಿರುವ ಆದರ್ಶ ಇಟ್ಟುಕೊಂಡು ಶಾಲಿವಾಹನಶಕೆ ೧೮೨೭ ನೇ ಪಾರ್ಥಿವನಾಮ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಿಮೆಯ ದಿನದಂದು (ತಾ. ೧೬-೧೧-೨೦೦೫) ಶ್ರೀ ಕ್ಷೇತ್ರ ಪಂಢರಪೂರದ ಶ್ರೀ ಮಾಉಲೀ ಮಂಟಪದಲ್ಲಿ ಚೈತನ್ಯ ಶ್ರೀಸದ್ಗುರು ಹ.ಭ.ಪ. ಗೋಪಾಲ ಮಹಾರಾಜ ವಾಸಕರ ಇವರ ಅಮೃತ ಹಸ್ತದಿಂದ ಗ್ರಂಥವನ್ನು ಪೂಜಿಸಿ ಕೊನೆಯ ಹನ್ನೊಂದು ಓವೀಗಳನ್ನು ಅವರ ದಿವ್ಯ ಸನ್ನಿಧಿಯಲ್ಲಿ ಬರೆದು ಈ ಪವಿತ್ರ ಗ್ರಂಥವನ್ನು ಪೂರ್ಣಗೊಳಿಸಲಾಯಿತು.

ಏಕನಾಥೀ ಭಾಗವತದ ಎಲ್ಲ ಅಧ್ಯಾಯಗಳ ಶ್ಲೋಕ, ಓವೀ, ಅರ್ಥ ಬರೆದಿದ್ದನ್ನು ಮೂಲ ಗ್ರಂಥ ಆಧಾರದಿಂದ ತಪ್ಪು ತಡಿಗಳನ್ನು ಹ.ಭ.ಪ.ಪಾಂಡುರಂಗರಾವ ದತ್ತೋಬರಾವ ಮಹೇಂದ್ರಕರ, ನಿವೃತ್ತ ಶಿಕ್ಷಕರು, ಗದಗ ಇವರು ಸರಿಪಡಿಸಿ ಡಿ.ಟಿ.ಪಿ.ಯಲ್ಲಿ ಆಗಿರುವ ಎಲ್ಲ ಅಧ್ಯಾಯಗಳ ಅಕ್ಷರ ದೋಷಗಳನ್ನು ಹಗಲು ರಾತ್ರಿಯನ್ನದೇ ಅತ್ಯಂತ ಏಕಾಗ್ರತೆಯಿಂದ ಶ್ರಮವಹಿಸಿ ತಿದ್ದಿ ಶುದ್ಧಗೊಳಿಸಿದರು. ಈ ಕಾರ್ಯವನ್ನು ಪೂರ್ಣಗೊಳಿಸಲು ೩-೪ ವರ್ಷಗಳೇ ಬೇಕಾದವು. ಈ ಪವಿತ್ರ ಸೇವೆಗಾಗಿ ಅವರು ಮನೆಮಾರಿನ ಚಿಂತೆ ಮಾಡದೇ ಪ್ರಕೃತಿಯತ್ತ ಲಕ್ಷ ಕೊಡದೇ ಏಕನಿಷ್ಠೆಯಿಂದ ನನ್ನ ಬಲಗೈಯಾಗಿ ಸೇವೆ ಸಲ್ಲಿಸಿ ನನಗೆ ಬಹಳ ಸಂತೋಷ ಪಡಿಸಿರುವರು. ಇವರ ಈ ಕಾರ್ಯಕ್ಕೆ ಹ.ಭ.ಪ.ಗೋಪಾಲಕೃಷ್ಣರಾವ ಶಂಕ್ರಪ್ಪ ಘಟಕೆ, ಕೊಪ್ಪಳ ಇವರೂ ಸಹ ಅಕ್ಷರದೋಷ ಸರಿಪಡಿಸಲು ಪೂರ್ಣವಾಗಿ ಸಹಕರಿಸಿದರು. ಆಗಾಗ ವೇಳೆ ಸಿಕ್ಕಾಗ ಹ.ಭ.ಪ.ನರಸಪ್ಪ ಯಮನಪ್ಪ ಹಡಪದ, ಕೊಪ್ಪಳ, ಹ.ಭ.ಪ. ತುಕಾರಾಮ ಡೋಂಗರಿಬಾ ಜ್ಞಾನಮೋತೆ, ಕೊಪ್ಪಳ, ಶ್ರೀಯುತ ರಾಮಚಂದ್ರ ತುಳಜಾರಾಮ ಬೋಂದಾಡೆ, ಕೊಪ್ಪಳ ಹಾಗೂ ಕುಮಾರೀ ದ್ರೌಪತಿ ಡೋಂಗರಿಬಾ ಜ್ಞಾನಮೋತೆ, ಕೊಪ್ಪಳ ಇವರೂ ಕೂಡ ಅಲ್ಪ ಸ್ವಲ್ಪ ಮಟ್ಟಿಗೆ ಸಹಕಾರ ನೀಡಿರುವರು. ಡಿ.ಟಿ.ಪಿ.ಯ ಈ ಕಾರ್ಯವನ್ನು ಕಂಪ್ಯೂಟೆಕ್ ಡಾಟಾ ಪೋರ್ಸ್, ಕೊಪ್ಪಳ ಇದರ ಮಾಲೀಕರಾದ ಶ್ರೀಯುತ ಮಲ್ಲಿಕಾರ್ಜುನ ಮುದಿಯಪ್ಪ ಕೊತಬಾಳ (ಡಿ.ಸಿ. ಎಸ್.) ಇವರು ಯೋಗ್ಯದರದಲ್ಲಿ ಅತ್ಯಂತ ಶ್ರದ್ಧೆಯಿಂದ ನೆರವೇರಿಸಿಕೊಟ್ಟರು. ಇವರ ಮಾರ್ಗದರ್ಶನದಲ್ಲಿ ಶ್ರೀಯುತ ರಮೇಶ ಮಲ್ಲಪ್ಪ ತುಪ್ಪದ, ಕೊಪ್ಪಳ ಇವರು ಅಚ್ಚುಕಟ್ಟಾಗಿ ಸುಂದರವಾಗಿ ಭಾಗವತದ ಎಲ್ಲ ಅಧ್ಯಾಯಗಳ ಅಕ್ಷರಜೋಡಣೆ ಯೋಗ್ಯದರದಲ್ಲಿ ನಡೆಸಿಕೊಟ್ಟರು. ಈ ಭಾಗವತ ಗ್ರಂಥವು ಸುಂದರವಾಗಿ ಹೊರಬರಲಿಕ್ಕೆ ಇವರೀರ್ವರೂ ಸಹ ಕಾರಣರಾದರು. ನಿಕಿತಾ ಪ್ರಿಂಟರ್ಸ್ ಮಾಲೀಕರಾದ ಶ್ರೀಯುತ ಬಿ.ಎಸ್.ನಾರಾಯಣರಾವ್ ಅಷ್ಟಕರ್ ಮತ್ತು ಮಕ್ಕಳು (ಬುಕ್ಕಾಪಟ್ಟಣ) ಇವರು ಈ ಗ್ರಂಥಗಳನ್ನು ವಿಶೇಷ ಸುಂದರವಾಗಿ, ಸುಭದ್ರವಾಗಿ ಯಾವ ಲಾಭವನ್ನೂ ಸ್ವೀಕರಿಸದೆ ಸರ್ವದೃಷ್ಟಿಯಿಂದ ಮುದ್ರಿಸಿ ಸಿದ್ಧಗೊಳಿಸಿಕೊಟ್ಟು ಮಹದುಪಕಾರವನ್ನು ಮಾಡಿರುವರು. ಈ ಗ್ರಂಥಗಳಿಗಾಗಿ ಇವರು ಪರಿಶ್ರಮದೊಂದಿಗೆ ನಿಷ್ಕಾಮ ಸೇವೆ ಸಲ್ಲಿಸುವುದಲ್ಲದೇ ತಮ್ಮ ಉದಾರ ಅಂತಃಕರಣದಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ಸಮರ್ಪಿಸಿರುವರು. ಇವರೆಲ್ಲರಿಗೂ ಹೃತ್ಪೂರ್ವಕವಾಗಿ ಧನ್ಯವಾದಗಳೊಂದಿಗೆ ಕೃತಜ್ಞತೆಯನ್ನು ಸಲ್ಲಿಸುವೆನು.

ಈ ಏಕನಾಥೀ ಭಾಗವತವು ಬೃಹತ್ ಪ್ರಮಾಣದ ಗ್ರಂಥವಾಗಿದ್ದು ಇದರ ಬೆಲೆ ಅಂದಾಜು ರೂ. ೪೫೦-೦೦ ಆಗುತ್ತಲಿದ್ದು, ಸಾಮಾನ್ಯರಿಗೆ ಈ ಗ್ರಂಥದ ಪರಿಚಯವಿಲ್ಲದ ಒಂದನೇ ಕಾರಣವಾದರೆ, ದುಬಾರಿಯಾದ ಎರಡನೇ ಕಾರಣ ವಾಯಿತು. ಹೀಗಾಗಿ ಸರ್ವಸಾಮಾನ್ಯರಿಗೂ ಈ ಗ್ರಂಥ ದೊರಕಬೇಕೆಂಬ ಸದುದ್ದೇಶದಿಂದ ಗ್ರಂಥದ ಬೆಲೆಯನ್ನು ತುಂಬಾ ಕಡಿಮೆ ಮಾಡಿ ಎರಡೂ ಖಂಡಗಳ ಗ್ರಂಥದ ಬೆಲೆ ಕೇವಲ ರೂ.೧೫೦-೦೦ ಇಟ್ಟು ಕೊರತೆ ಬೀಳುವ ಪ್ರತಿ ಗ್ರಂಥಗಳಿಗೆ ರೂ. ೩೦೦-೦೦ನ್ನು ದಾನಿಗಳ ಸಹಕಾರದಿಂದ ತುಂಬಿಕೊಳ್ಳಲಾಯಿತು. ಈ ಕಾರ್ಯಕ್ಕಾಗಿ ಕರ್ನಾಟಕದ ಎಲ್ಲ ಪ್ರಮುಖ ಭಾಗಗಳಿಗೆ ಹೋಗಬೇಕಾದ ಪ್ರಸಂಗದಲ್ಲಿ ಬೆಂಗಳೂರಿನ ಸನ್ಮಾನ್ಯ ಶ್ರೀ ರಾಮಚಂದ್ರಸಾ ಲಕ್ಷ್ಮಣಸಾ ಖೋಡೆ ಇವರು ೨-೩ ತಿಂಗಳವರೆಗೆ ಉಚಿತವಾಗಿ ಒಂದು ಉತ್ತಮ ಕಾರನ್ನು ಚಾಲಕನ ಸಮೇತವಾಗಿ ಕೊಟ್ಟು ಸಹಕರಿಸಿದರು. ಮೊದಲೇ ಹಣ ತುಂಬಿ ಗ್ರಂಥಗಳನ್ನು ಸಿದ್ಧಗೊಳಿಸಲು ನಮ್ಮಲ್ಲಿ ಹಣದ ಅನುಕೂಲತೆ ಇಲ್ಲದ್ದಕ್ಕೆ ಕರ್ನಾಟಕದ ಪ್ರತಿಯೊಂದು ಭಾಗದ ಪ್ರಮುಖರಿಗೆ ರಶೀದಿ ಬುಕ್‌ಗಳನ್ನು ಕೊಟ್ಟು ದೇಣಿಗೆ ಸಮೇತವಾಗಿ ಬೇಕಾದ ಗ್ರಂಥಗಳಿಗೆ ಹಣ ಸಂಗ್ರಹಿಸಲು ತಿಳಿಸಲಾಯಿತು. ಎಲ್ಲರೂ ತಮ್ಮ ತಮ್ಮ ಭಾಗಗಳಲ್ಲಿ ಸಂಚರಿಸಿ ಹಣ ಸಂಗ್ರಹಿಸಿ ನಮಗೆ ಮುಟ್ಟಿಸಲು ೪-೬ ತಿಂಗಳುಗಳು ಗತಿಸಿದವು. ತದನಂತರ ನಮಗೆ ಮುದ್ರಣಾಲಯಕ್ಕೆ ಹೋಗಲು ಅನುಕೂಲವಾಯಿತು.

ಅನೇಕರು ಏಕನಾಥೀ ಭಾಗವತದ ಗ್ರಂಥಕ್ಕೆ ಕೊರತೆ ಬೀಳುವ ಹಣವನ್ನು ಯಥಾಶಕ್ತಿ ದಾನವಾಗಿ ಸಂಗ್ರಹಿಸಿ ಕಳಿಸಿದರು. ಈ ಸತ್ಪಾತ್ರ ದಾನ ವಿಷಯಕ್ಕೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ಭಾವಸಾರ ಕ್ಷತ್ರಿಯ ಸಮಾಜದ ಕಾರ್ಯಕರ್ತರು ಅತ್ಯಂತ ಶ್ರದ್ಧೆಯಿಂದ, ಸ್ಫೂರ್ತಿಯಿಂದ ಈ ಸುಸಂಧಿಯನ್ನು ಸಾಧಿಸಿ ಶ್ರೀಮಂತ ದಾನಿಯವರಿಂದ ಎರಡು ಲಕ್ಷಕ್ಕೂ ಮೀರಿ ಹಣ ಸಂಗ್ರಹಿಸಿ ಕರ್ನಾಟಕದಲ್ಲಿಯೇ ಈ ನಮ್ಮ ಕಾರ್ಯದಲ್ಲಿ ಪ್ರಥಮ ಸ್ಥಾನಕ್ಕೆ ಏರಿ ದಾಖಲೆ ನಿರ್ಮಿಸಿದರು. ಹ.ಭ.ಪ. ನಾಗೇಂದ್ರ ರಾವ ನರಸಿಂಗರಾವ ಲೋಖಂಡೆ, ಬೆಂಗಳೂರು ಇವರು ಬಹು ಪರಿಶ್ರಮದ ಕಾರ್ಯವಾದ ಈ ಬೃಹತ್ ಗ್ರಂಥದ ವರ್ಣಾನು ಕ್ರಮಣಿಕೆಯನ್ನು ಅದರ ಸಂಪೂರ್ಣ ಭಾರ ಹೊತ್ತು ಸುಂದರವಾಗಿ ಸಿದ್ಧಗೊಳಿಸಿ ಕೊಟ್ಟಿರುವರು. ಇವರಿಗೆ ಶ್ರೀಯುತ ಹರೀಶ್ ರಾಮಕೃಷ್ಣ ಚಂದಾವರ, ಬೆಂಗಳೂರು, ಹ.ಭ.ಪ. ಭಾಸ್ಕರ ಕೃಷ್ಣಮೂರ್ತಿ ಢಗೆ, ಬೆಂಗಳೂರು ಹಾಗೂ ಚಂದಾವರ ಪ್ರಿಂಟರ್ಸ್ ಪ್ರಮುಖರು, ಬೆಂಗಳೂರು ಇವರು ಡಿ.ಟಿ.ಪಿ.ಸೇವೆಯನ್ನು ಶ್ರದ್ಧಾಪೂರ್ವಕವಾಗಿ ಶ್ರಮವಹಿಸಿ ಸಹಕಾರ ನೀಡಿರುವರು. ಗ್ರಂಥಗಳ ಪ್ರಚಾರಾರ್ಥವಾಗಿ ಶ್ರೀಯುತ ತಾರಾನಾಥ ತಿಪ್ಪಣ್ಣಾ ಜಾಧವ, ಬೆಂಗಳೂರು ಇವರು ೨೦,೦೦೦ ಪ್ರಚಾರ ಪತ್ರಿಕೆಗಳನ್ನು ಉಚಿತವಾಗಿ ತಯಾರಿಸಿ ಕೊಟ್ಟಿರುವರು. ಶ್ರೀಯುತ ವೆಂಕಟೇಶ್ವರರಾವ ಮಾತಾಡೆ, ರೇಣುಕಾ ಪಬ್ಲಿಸಿಟಿ, ಲಕ್ಷ್ಮೇಶ್ವರ ಇವರು ಈ ಕಾರ್ಯಕ್ಕಾಗಿ ೨೫೦ ರಶೀದಿ ಬುಕ್‌ಗಳನ್ನು ಉಚಿತವಾಗಿ ಮಾಡಿಸಿಕೊಟ್ಟರಲ್ಲದೇ, ಕೆಲವು ಭಾಗಗಳಲ್ಲಿ ನಮ್ಮ ಜೊತೆಗೆ ಇದ್ದು ಅನೇಕ ಕಡೆಗಳಿಂದ ವಸೂಲಿ ಕಾರ್ಯವನ್ನೂ ಸಹ ತಮ್ಮ ಸಂಗಡಿಗರ ಸಹಕಾರದಿಂದ ನೆರವೇರಿಸಿ ಸಹಕರಿಸಿರುವರು. ಶ್ರೀಯುತ ಮಾರ್ಕಂಡೇಶ್ವರರಾವ ಡೋಂಗ್ರಪ್ಪ ಜ್ಞಾನಮೋಠೆ, (ಎಂ.ಕಾಂ.) ಬೆಂಗಳೂರು ಇವರು ಕರ್ನಾಟಕ ದಾದ್ಯಂತ ಮುಖ್ಯ ಮುಖ್ಯ ಭಾಗಗಳಲ್ಲಿ ಪತ್ರಿಕೆಗಳೊಂದಿಗೆ ರಶೀದಿ ಬುಕ್‌ಗಳನ್ನು ಹಂಚಲು ನಮ್ಮ ಜೊತೆಯಲ್ಲಿ ಸಹಕರಿಸಿ ಲೆಕ್ಕಪತ್ರ ಶೋಧಿಸಿ ಸರಿಪಡಿಸುವ ಮಹತ್ವದ ಸೇವೆ ಸಲ್ಲಿಸಿರುವರು. ಒಟ್ಟಿನಲ್ಲಿ ಈ ಗ್ರಂಥ ಸಿದ್ಧಗೊಂಡು ಯಶ ಸಂಪಾದಿಸಲು ಅನೇಕರು ತಮ್ಮ ತಮ್ಮ ಶಕ್ತಿ ಮೀರಿ ಸೇವೆ ಸಲ್ಲಿಸಿರುವರು. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಯಾವುದೇ ರೀತಿಯಲ್ಲಿ ಈ ಏಕನಾಥೀ ಭಾಗವತ ಗ್ರಂಥಕ್ಕೆ ಸಹಾಯ ಸಹಕಾರ ನೀಡಿರುವ ಸರ್ವರಿಗೂ ಭಕ್ತಕಾಮ ಕಲ್ಪದ್ರುಮ ಶ್ರೀಪಾಂಡುರಂಗನು ಆಯುರಾರೋಗ್ಯ ಕೊಟ್ಟು ಸಕಲ ಸನ್ಮಂಗಲಗಳನ್ನು ನೀಡಲೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಪ್ರಕೃತಿಯ ಪ್ರತಿಕೂಲತೆಯ ನನ್ನ ಈ ಎಪ್ಪತ್ತರ ಮುಪ್ಪಾವಸ್ಥೆಯಲ್ಲಿ ಸಾಹಿತ್ಯದ ಸಾರ ಅರಿಯದ, ಮಂದಮತಿಯಾದ ನನ್ನಿಂದ ಯಾವ ಜನ್ಮದ ಪುಣ್ಯದ ಫಲವೋ ಏನೋ, ಶ್ರೀ ಸಂತ ಏಕನಾಥ ಮಹಾರಾಜರು ನನ್ನಿಂದ ಇಂತಹ ಅದ್ಭುತ ಸೇವೆಯನ್ನು ತಮ್ಮ ಶಕ್ತಿಯಿಂದಲೇ ಸ್ವೀಕರಿಸಿರುವರು. ಅವರ ಕೃಪೆಯ ನೆರಳಿನಲ್ಲಿಯೇ ಈ ಗ್ರಂಥವು ಸಿದ್ಧಗೊಂಡಿರುವುದು. ತಮಗೆ ತಿಳಿಯುವಂತೆ, ಸಂತೋಷವಾಗುವಂತೆ ವಾಕ್ಯರಚನೆಗಳಿದ್ದರೆ ಅವು ಎಲ್ಲವೂ ನಾಥರ ಕೃಪೆಯೇ ಹೊರತು ನನ್ನದೇನೂ ಅದರಲ್ಲಿರುವುದಿಲ್ಲ. ಆಕಸ್ಮಾತ್ತಾಗಿ ಎಲ್ಲಿಯಾದರೂ ತಪ್ಪಾಗಿದ್ದರೆ ಅದು ಪೂರ್ಣ ನನ್ನ ಅಜ್ಞಾನದ ಹೊಣೆಯಾಗಿರುವುದು. ಶ್ರೋತೃಗಳು ಇದನ್ನು ಸಹಿಸಿಕೊಳ್ಳಬೇಕಾಗಿ ನಮ್ರವಾಗಿ ವಿನಂತಿಸುತ್ತೇನೆ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಏನಾದರೂ ಹೆಚ್ಚಾಗಿದ್ದರೆ ಅದನ್ನು ತೆಗೆದು ಬಿಡಿರಿ, ಕಡಿಮೆ ಕಂಡರೆ ಪೂರ್ಣಗೊಳಿಸಿರಿ ಎಂದು ನನ್ನ ವಿಶೇಷ ವಿನಂತಿಯಾಗಿರುವುದು.

ತರೀ ನ್ಯೂನ ತೇ ಪುರತೇ । ಅಧಿಕ ತೇ ಸರತೇ ।
ಕರೂನಿ ಘೇಯಾವೇ ಹೇ ತುಮತೇ । ವಿನವಿತು ಆಸೇ ॥

ಸಾರ್ಥ ಶ್ರೀಏಕನಾಥೀ ಭಾಗವತ ಗ್ರಂಥವನ್ನು ಪ್ರಾಪ್ತಮಾಡಿಕೊಂಡವರು ಅದನ್ನು ಮೂಲೆಗುಂಪು ಮಾಡದೇ ಪವಿತ್ರ ಸ್ಥಾನದಲ್ಲಿ ಸ್ಥಾಪಿಸಿ ಪೂಜೆಯೊಂದಿಗೆ ಪ್ರತಿನಿತ್ಯವೂ ಯಥಾಶಕ್ತಿ ಯಥಾವಕಾಶ ಶ್ಲೋಕ, ಓವೀ, ಅರ್ಥಸಮೇತವಾಗಿ ಪಾರಾಯಣ

ಮಾಡಬೇಕು. ಈ ಗ್ರಂಥ ಪೂರ್ಣವಾಗಿ ಅವಲೋಕನೆ ಮಾಡಿದಾಗ ಮಾತ್ರ ತಮ್ಮ ಜೀವನಕ್ಕೆ ಬೇಕಾಗಿರುವ ಸಾಧನೆಗಳು ಅವಶ್ಯಕವಾಗಿ ತೋರುವುವು. ಸಿಕ್ಕ ಸಿಕ್ಕ ಕಡೆ ಅಲ್ಪಸ್ವಲ್ಪ ನೋಡುತ್ತ, ಓದುತ್ತ ಹೋದರೆ ಯಾವುದೂ ಏನೂ ತಿಳಿಯದಂತಾಗಿ ಗ್ರಂಥಕ್ಕಾಗಿ ಉದಾಸೀನತೆ ಉಂಟಾಗುವುದು. ಹೀಗೆ ಮಾಡದೇ ಈ ಗ್ರಂಥದಿಂದ ನನ್ನ ಉದ್ಧಾರವು ನಿಶ್ಚಿತವೆಂಬ ಪೂಜ್ಯ ಭಾವದಿಂದ ದೃಢವಾದ ಶ್ರದ್ಧೆಯಿಂದ ನಿತ್ಯವೂ ತಪ್ಪದೇ ಪಾರಾಯಣ ಮಾಡುತ್ತಿರಲು ಶ್ರೀಪಾಂಡುರಂಗನ ಆಣೆಯಿಟ್ಟು ಹೇಳುವೆ, ಅವರ ಉದ್ಧಾರವು ತಪ್ಪದೇ ಆಗುವುದು. ಇದು ಶ್ರೀಸಂತ ಏಕನಾಥ ಮಹಾರಾಜರ ಆಶೀರ್ವಾದವಾಗಿರುವುದು. ಇವರ ಪೂರ್ಣ ಕೃಪೆಯಿಂದಲೇ ನಮ್ಮ ಭಾಗ್ಯದ ಕಾರಣವಾಗಿ ದೊರೆತ ಈ ಗ್ರಂಥದ ಸದುಪಯೋಗ ಮಾಡಿಕೊಂಡರೆ ಮಾತ್ರ ಈ ಸಾರ್ಥ ಏಕನಾಥೀ ಭಾಗವತ ಗ್ರಂಥದ ನಿರ್ಮಾಣವು ಸಾರ್ಥಕತೆಯಾಗುವುದು. ಇಂತಹ ಸದ್ಬುದ್ಧಿಯು ಗ್ರಂಥ ಪ್ರಾಪ್ತ ಮಾಡಿಕೊಂಡ ಸಾಧಕರಿಗೆ ಉಂಟಾಗಲಿ ಎಂದು ಮನಸಾ ಹಾರೈಸುತ್ತೇನೆ. ಪವಿತ್ರಸ್ಥಾನಗಳಾದ ಮಂದಿರಗಳಲ್ಲಿ ಉತ್ತಮ ವಾಚಕರಿಂದ ಈ ಗ್ರಂಥವನ್ನು ಶ್ರವಣ ಮಾಡಿದರೆ, ಶ್ರವಣ ಮಾತ್ರದಿಂದ ಸರ್ವರ ಉದ್ಧಾರವಾಗುವುದರಲ್ಲಿ ಯಾವ ಸಂದೇಹವಿರುವುದಿಲ್ಲ.

ಈ ಸಾರ್ಥ ಏಕನಾಥೀ ಭಾಗವತ ಗ್ರಂಥದಲ್ಲಿ ಅತ್ಯಂತ ಮಹತ್ವಪೂರ್ಣ ಅನೇಕ ಪ್ರಕರಣಗಳಿರುವುವು. ಇವುಗಳ ಶ್ರವಣ ಮಾತ್ರದಿಂದ ಅಂತಃಕರಣವು ಪರಿವರ್ತನೆಯಾಗುವುದು. ಯದು ಅವಧೂತ ಸಂವಾದದಲ್ಲಿ ಇಪ್ಪತ್ನಾಲ್ಕು ಗುರುಗಳ ಲಕ್ಷಣಗಳಿಂದ ಸರಳವಾಗಿ ಮನಸ್ಸಿಗೆ ಶಿಕ್ಷಣ ದೊರೆಯುವುದು. ಧನದಿಂದ ಹದಿನೈದು ಅನರ್ಥಗಳ ಶ್ರವಣದಿಂದ ಸಹಜವಾಗಿಯೇ ಧನಲೋಭವು ನಾಶವಾಗುವುದು. ಭಿಕ್ಷು ಗೀತೆಯ ಶ್ರವಣದಿಂದ ಪರಪೀಡೆಯ ಸಹನಶಕ್ತಿಯು ನಿಶ್ಚಿತವಾಗಿ ಬೆಳೆಯುವುದು. ಕ್ರೋಧವು ನಾಶ ವಾಗುವುದು. ಶಾಂತಿಯು ಸ್ಥಿರವಾಗುವುದು. ಪುರುರವಾನ ಐಲಗೀತೆಯ ಶ್ರವಣದಿಂದ ಪರಸ್ತ್ರೀ ಹವ್ಯಾಸವು ತಾನೇ ತಾನಾಗಿ ಲೋಪಗೊಳ್ಳುವುದು. ಕುಲಕ್ಷಯದ ಶ್ರವಣದಿಂದ ಯಾರ ಅಗಲುವಿಕೆಯಿಂದಲೂ ಮನಸ್ಸಿಗೆ ಯಾವ ತಾಪವೂ ಆಗಲಾರದು. ಹೀಗೆ ಈ ಗ್ರಂಥದ ಶ್ರವಣ ಮಾತ್ರದಿಂದ ಸಹಜವಾಗಿ ಸದ್ಗುಣಗಳ ಸಂಗ್ರಹವು ಸಾಧಿಸಿ ದುರ್ಗುಣಗಳ ನಾಶವಾಗುವುದು. ಹೀಗೆ ಅನೇಕ ಪ್ರಕರಣಗಳಿರುವುವು. ಪರೀಕ್ಷಿತಿ ಮಹಾರಾಜನು ಈ ಭಾಗವತ ಗ್ರಂಥದ ಕೇವಲ ಶ್ರವಣಮಾತ್ರದಿಂದ ಒಂದೇ ವಾರದಲ್ಲಿ ಜೀವನ್ಮುಕ್ತನಾದ ಪ್ರಸಂಗ ನೋಡಿದರೆ ಇದರ ಮಹತ್ವವು ಎಷ್ಟೆಂದು ಸಹಜವಾಗಿಯೇ ಮನವರಿಕೆಯಾಗುವುದು. ಆದ್ದರಿಂದ ಸರ್ವಭಾವಿಕರು ಈ ಗ್ರಂಥದ ಶ್ರವಣ ಮಾಡಿ ಪುನೀತರಾಗಬೇಕೆಂಬುವುದೇ ಇದರ ಮುಖ್ಯ ಉದ್ದೇಶವಾಗಿದೆ. ಮುಗ್ಧ ಭಾವಿಕ ರಾಗಲಿ ಅಥವಾ ಶಬ್ದ, ಸ್ಪರ್ಷ, ರೂಪ, ರಸ, ಗಂಧಗಳ ಕ್ಷಣಿಕ ಸುಖಕ್ಕೆ ಸದಾ ಬೆನ್ನು ಹತ್ತಿರುವ ವಿಷಯೀ ಸಂಸಾರಿಕ ಜನರಾಗಲಿ ಈ ಗ್ರಂಥದ ಶ್ರವಣ ಪಠಣೆಯಿಂದ ಅವರು ಹರಿಭಕ್ತರಾಗುವರು ಮತ್ತು ಬಹು ಜನರು ಪರಿಪೂರ್ಣವಾಗಿ ಸನ್ಮಾರ್ಗಕ್ಕೆ ಹತ್ತುವರು.

ಭಾಳೀಭೋಳೀ ವಿಷಯೀ ಜನ । ಯಾಚೇ ಕರಿತಾ ಶ್ರವಣ ಪಠಣ ।
ತೇ ಹರಿಭಕ್ತ ಹೋತಿ ಜಾಣ । ಸನ್ಮಾರ್ಗೀ ಪೂರ್ಣ ಬಹುತ ಹೋತೀ ।।ಅ.೩೧-೫೩೭।।

ಇಷ್ಟೊಂದು ಪರಮಾದ್ಭುತ ಪವಿತ್ರ ಪ್ರಾಸಾದಿಕ ಈ ಗ್ರಂಥಕ್ಕೆ ಪ್ರತಿಯೊಬ್ಬರೂ ಮನಗಂಡು ಮಾನ್ಯತೆಕೊಟ್ಟು ಇದರ ಸದುಪಯೋಗ ಪಡೆದು ತಮ್ಮ ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂಬುದೇ ಶ್ರೀ ಸಂತ ಏಕನಾಥ ಮಹಾರಾಜರ ಅತ್ಯಂತ ಕಳಕಳಿಯ ಮನೋಭಾವವಾಗಿದೆ.

ಶ್ರೀಸಂತ ಏಕನಾಥ ಮಹಾರಾಜರ ವಂಶಜರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಗೋಸಾವಿ ಪೈಠಣ ಇವರು ''ಅಭಿಪ್ರಾಯ'' ಬರೆದು ಕೊಟ್ಟು ಈ ಗ್ರಂಥವನ್ನು ಮನಮೆಚ್ಚುವಂತೆ ಶೃಂಗರಿಸಿದ್ದಾರೆ. ಚೈತನ್ಯ ಶ್ರೀಸದ್ಗುರು ಹ.ಭ.ಪ. ದಾದಾಸಾಹೇಬ ತಾತ್ಯಾಸಾಹೇಬ ವಾಸಕರ ಮಹಾರಾಜ ಪಂಢರಪೂರ ಇವರು ''ಹೃದ್ಗತ'' ಬರೆದುಕೊಟ್ಟು ಈ ಗ್ರಂಥದ ಘನತೆಗೆ ಮೆರಗು ನೀಡಿ ಮಹದುಪಕಾರ ಮಾಡಿರುವರು. ಇವರುಗಳ ಪಾದಪಂಕಜಗಳಿಗೆ ನನ್ನ ದೀರ್ಘದಂಡವತ ನಮಸ್ಕಾರಗಳನ್ನು ಸಲ್ಲಿಸಿ ಸದಾವಕಾಲ ನನ್ನ ಮೇಲೆ ಆಶೀರ್ವಾದವಿರಲಿ ಎಂದು ಸ್ತುತಿಸುತ್ತ ಇಲ್ಲಿಗೆ ನನ್ನ ಅಲ್ಪಮತಿಯ ಪ್ರಸ್ತಾವನೆಯನ್ನು ಪೂರ್ಣ ಗೊಳಿಸುವೆ.

ಸಂತ ಚರಣ ಸೇವಕರ ಸೇವಕ,
ಕೃಷ್ಣಾಜೀ ಡೋಂಗ್ರಪ್ಪ ಜ್ಞಾನಮೋತೆ,ಕೊಪ್ಪಳ.

॥ ಶ್ರೀ ಏಕನಾಥ ಮಹಾರಾಜ ಸು-ಪ್ರಸನ್ನ ॥



ಶ್ರೀ ಸಂತ ಏಕನಾಥ ಮಹಾರಾಜ :- ಕಾರ್ಯ ಮತ್ತು ಜೀವನ ಚರಿತ್ರೆ
ಭಾನುದಾಸಾಚೀ ಕುಳೀ ಮಹಾವಿಷ್ಣುಚಾ ಅವತಾರ :- ಶ್ರೀ ಸಂತ ಏಕನಾಥ ಮಹಾರಾಜ

ಶ್ರೀಮಧುಸೂದನ ಬುವಾ ರಂಗನಾಥಬುವಾ ಗೋಸಾವೀ
ತಥಾ ರಾವಸಾಹೇಬ ಮಹಾರಾಜ ನಾಥವಂಶಜ, ಪೈಠಣ

ಬಾಲ್ಯತ್ವ :-

ಶ್ರೀ ಸಂತ ಏಕನಾಥ ಮಹಾರಾಜರ ಜನ್ಮವು ಶಕೆ ೧೪೫೫ ರಲ್ಲಿ ಶ್ರೀಸಂತ ಭಾನುದಾಸ ಮಹಾರಾಜ ಇವರ ಕುಲದಲ್ಲಿ ಶ್ರೀಸೂರ್ಯನಾರಾಯಣ ಹಾಗೂ ಸೌ.ಮಾತಾ ರುಕ್ಮಿಣೀ ಇವರ ಗರ್ಭದಲ್ಲಿ ಆಯಿತು.

ತಯಾ ಸೂರ್ಯಪ್ರಭಾ ಪ್ರತಾಪಕಿರಣೀ । ಮಾತೇ ಪ್ರಸವಲೀ ರುಕ್ಮಿಣೀ ।
ಮ್ಹಣೌನಿ ರಖುಮಾಈ ಜನನೀ । ಆಮ್ಹಾ ಲಾಗುನಿ ಸಾಚಚಿ ।೧ (೧೩೫)

ನಾಥರ ಜನ್ಮವು ಮೂಲಾ ನಕ್ಷತ್ರದಲ್ಲಿ ಆದಕಾರಣ ಮಾತಾಪಿತರ ಸೌಖ್ಯವು ಇವರಿಗೆ ಲಭಿಸಲಿಲ್ಲ. ಅಜ್ಜ ಶ್ರೀಚಕ್ರಪಾಣೀ ಮಹಾರಾಜರು ಇವರನ್ನು ಸಾಂಭಾಳಿಸಿದರು.

ಏಕನಾಥ ಮಹಾರಾಜರು ಬಾಲ್ಯದಿಂದಲೇ ಬುದ್ಧಿಮಾನ ಮತ್ತು ಶ್ರದ್ಧಾವಾನರಾಗಿದ್ದರು. ಇವರಿಗೆ ಬಾಲ್ಯದಿಂದಲೇ ಸ್ನಾನಸಂಧ್ಯಾ ಮಾಡುವುದು, ಹರಿಭಜನೆ ಮಾಡುವುದು, ದೇವರ ಪೂಜೆ ಮಾಡುವುದು, ಶಾಸ್ತ್ರಗಳ ಶ್ರವಣ ಮಾಡುವುದು ಪ್ರಿಯವಾಗಿತ್ತು. ಇವರಲ್ಲಿ ನಿರಭಿಮಾನತ್ವ ಹಾಗೂ ಶಾಂತಿ ಈ ಎರಡು ಅಲೌಕಿಕ ಗುಣಗಳು ಬಾಲ್ಯದಿಂದಲೇ ಎದ್ದು ಕಾಣುತ್ತಿದ್ದವು. ನಾಥರ ಮುಂಜಿಯು ಆರನೆಯ ವರ್ಷದಲ್ಲಿ ಆಯಿತು. ''ಸಂಧ್ಯಾ ವೈಶ್ವದೇವ, ರುದ್ರ, ಪವಮಾನ'' ಇವುಗಳನ್ನು ಇವರು ಬಾಲ್ಯದಲ್ಲಿಯೇ ಪಾಠ ಮಾಡಿದರು. ಬ್ರಾಹ್ಮಣ ಧರ್ಮದಂತೆ ಶುಚಿರ್ಭೂತತನವು ಇವರಲ್ಲಿ ಮೂರ್ತಿಮಂತವಾಗಿ ತೋರುತ್ತಿತ್ತು.

ಗುರುಪದೇಶ :-

ಒಂದು ದಿನ ಮನೆಯಲ್ಲಿ ಯಾರಿಗೂ ಹೇಳದೆ ನಾಥ ಮಹಾರಾಜರು ಗುರುವಿನ ಶೋಧಾರ್ಥವಾಗಿ ಹೊರಟರು. ಗುರುವಾರ ಬೆಳಿಗ್ಗೆ ಅವರು ದೇವಗಿರಿ (ದೌಲತಾಬಾದ) ಕ್ಷೇತ್ರಕ್ಕೆ ಮುಟ್ಟಿದರು. ಅಲ್ಲಿ ಹೋದ ನಂತರ ಜನಾರ್ದನಸ್ವಾಮಿಗಳ ಹಾಗೂ ನಾಥರ ಸಂವಾದವಾಯಿತು. ''ಬ್ರಿದಾವಲೀ'' ನಾಮದ ಅಭಂಗವಲ್ಲಿಯಲ್ಲಿ ಈ ಸಂವಾದದ ವರ್ಣನೆಯು ನೋಡಲು ದೊರಕುವುದು. ಈ ಗ್ರಂಥಕ್ಕೆ ನಾಥರ ಸಾಂಪ್ರದಾಯದಲ್ಲಿ ಅನನ್ಯ ಸಾಧಾರಣ ಮಹತ್ವವಾಗಿರುವುದು. ಯಥಾವಕಾಶದಲ್ಲಿ ನಾಥರಿಗೆ ಶ್ರೀಜನಾರ್ದನಸ್ವಾಮಿಗಳ ಉಪದೇಶವಾಯಿತು. ಅಂದು ನಾಥರ ದತ್ತಾತ್ರೇಯ-ಜನಾರ್ದನ-ಏಕನಾಥ ಹೀಗೆ ತ್ರಯೀ ನಿರ್ಮಾಣವಾಯಿತು.

ಸಂಸಾರದಲ್ಲಿದ್ದು ಅದನ್ನು ಜಯಿಸುವ ನಿಜಗುಹ್ಯವು ನಾಥರಿಗೆ ಪ್ರಾಪ್ತವಾಯಿತು. ಜನಾರ್ದನಸ್ವಾಮಿಯವರು ತಮಗೆ ಯಾವುದನ್ನು ಕಲಿಸಿದರೆಂದು ಹೇಳುವಾಗ ನಾಥ ಮಹಾರಾಜರು ಹೇಳುವರು.

ಹೇಚಿ ಶಿಕವಿಲೇ ಜನಾರ್ದನೇ । ಸರ್ವಭೂತಿ ಮಜಚಿ ಪಾಹಣೇ ।
ಪ್ರಕೃತಿ ಗುಣಾಚೀ ಲಕ್ಷಣೇ । ಸರ್ವಥಾ ಆಪಣೇ ನ ಮಾನಾವೀ ॥ ಏ.ಭಾ.೩೧/೫೧೯

ಹೀಗೆ ಶಿಕ್ಷಣವು ಪೂರ್ಣವಾದ ನಂತರ ಯೋಗ್ಯವೇಳೆಯಲ್ಲಿ ಗುರುಪ್ರಸಾದದಿಂದ ಅವರಿಗೆ ಪರಮಗುರು ಶ್ರೀದತ್ತಾತ್ರೇಯರ ಸಗುಣ ಸಾಕ್ಷಾತ್ಕಾರವಾಯಿತು. ತದನಂತರ ನಾಥರು ಗುರುಗಳ ಸಮೇತರಾಗಿ ತೀರ್ಥಯಾತ್ರೆ ಆರಂಭಿಸಿದರು. ತದನಂತರ ನಾಥರ ಯೋಗ್ಯತೆ ಕಂಡು ಶ್ರೀಕ್ಷೇತ್ರ ತ್ರ್ಯಂಬಕೇಶ್ವರದಲ್ಲಿ ಶ್ರೀಜನಾರ್ದನಸ್ವಾಮಿಯವರು ನಾಥರಿಂದ ಚತುಃಶ್ಲೋಕೀ ಭಾಗವತಕ್ಕೆ ಭಾಷ್ಯ ಬರೆಯಿಸಿದರು. ಇದು ನಾಥರ ಸರ್ವಪ್ರಥಮ ಗ್ರಂಥವಾಗಿರುವುದು. ತದನಂತರ ನಾಥರು ತೀರ್ಥಯಾತ್ರೆ ಪೂರ್ಣಗೊಳಿಸಿದರು. ತದನಂತರ ಅವರ ವಿವಾಹವು ಗಿರಿಜಾಬಾಈ ಇವರಲ್ಲಿ ಸಂಪನ್ನವಾಯಿತು. ಸುಲಕ್ಷಣ, ಗುಣವತೀ, ಪತಿವ್ರತಾ ಧರ್ಮ ಪಾಲಿಸುವ ಇಂತಹ ಗಿರಿಜಾಬಾಈಯು ನಾಥರೊಂದಿಗೆ ಸಂಸಾರ ಮಾಡುತ್ತ ಪರಮಾರ್ಥ ಸಾಧಿಸಿದಳು. ಕೆಲವು ವರ್ಷಗಳ ನಂತರ ನಾಥರಿಗೆ ಗಂಡು ಮಗು ಆಯಿತು. ಆ ಮಗುವಿನ ಹೆಸರನ್ನು ''ಹರಿ'' ಎಂದು ಇಡಲಾಯಿತು. ಕಾಶಿಗೆ ಹೋಗಿ ಆತನು ಅಧ್ಯಯನ ಮಾಡಿದನು. ನಂತರ ಆತನಿಗೆ ಪಂಡಿತ ಎಂಬ ಈ ಪದವಿಯು ಪ್ರಾಪ್ತವಾಯಿತು. ಆದ್ದರಿಂದ ಅವರಿಗೆ ಸರ್ವರೂ ''ಹರಿಪಂಡಿತ'' ಎಂದು ಕರೆಯುತ್ತಿದ್ದರು.

ನಾಥರ ವಿಠ್ಠಲಭಕ್ತಿ :-

ನಾಥರ ಮುತ್ತಜ್ಜ ಭಾನುದಾಸ ಮಹಾರಾಜರಿಂದ ನಡೆದು ಬಂದ ವಿಠ್ಠಲ ಭಕ್ತಿಯಲ್ಲಿ ಇವರೂ ಕೂಡ ತನ್ಮಯರಾದರು. ವಿಠ್ಠಲಭಕ್ತಿಯಲ್ಲಿ ಭಾಗವತ ಧರ್ಮದ ಸರ್ವ ತತ್ವಗಳು ಸಾಕಾರವಾಗಿರುವುವು. ಕರ್ನಾಟಕದ ಪಾಂಡುರಂಗನು ಭಾನುದಾಸ ಮಹಾರಾಜರಿಂದ ಯಾವ ಪ್ರಕಾರವಾಗಿ ಪಂಢರಪೂರದಲ್ಲಿ ವಿರಾಜಮಾನನಾದನೋ, ಅದೇ ಪ್ರಕಾರವಾಗಿ ಕರ್ನಾಟಕದಿಂದ ಪೈಠಣಕ್ಕೆ ನಾಥರತ್ತ ಪಂಚಧಾತುವಿನ ಪಾಂಡುರಂಗನು ವಿರಾಜಮಾನನಾದನು. ಆತನಿಗೆ ನಾಥರು ಬೆಣ್ಣೆ ಕಲ್ಲು ಸಕ್ಕರೆ ನೈವೇದ್ಯ ಮಾಡಿ ಆತನಿಗೆ ''ವಿಜಯೀ ಪಾಂಡುರಂಗ'' ಎಂದು ಹೆಸರಿಟ್ಟರು. ಆಗ ಪಾಂಡುರಂಗನು ಬೆಣ್ಣೆಯನ್ನು ಸೇವಿಸಿ ಹಸ್ತವನ್ನು ನೀಟಾಗಿಟ್ಟನು ಮತ್ತು ಆ ಕ್ಷಣಕ್ಕೆ ಇಟ್ಟಂಗಿಯ ಮೇಲೆ

'ದಾಸ ಮಲಾ ಜೇವೂ ಘಾಲ ವಾ...ನ್'

ಹೀಗೆ ಸ್ವಯಂಭೂ ಅಕ್ಷರಗಳು ಮೂಡಿದವು. ಯಾವ ಪ್ರಕಾರವಾಗಿ ಪಂಢರಿಯ ಪಾಂಡುರಂಗನ ನಿತ್ಯ ಉಪಚಾರ ಇದೆಯೋ, ಅದೇ ಪ್ರಕಾರವಾಗಿ ಇಲ್ಲಿಯೂ ಕೂಡ ವಿಜಯೀ ಪಾಂಡುರಂಗನ ಉಪಚಾರಗಳು ಪೈಠಣದಲ್ಲಿ ನಡೆಯುತ್ತಿವೆ.

ನಾಥರ ಗ್ರಂಥ ಸಂಪತ್ತು :-

ನಾಥರ ಭಗವದ್ಭಕ್ತಿ ಸಂಬಂಧವಾಗಿ, ಶಮದಮಾದಿ ಗುಣ ಸಂಬಂಧವಾಗಿ ಮತ್ತು ಸಮದೃಷ್ಟಿ ಸಂಬಂಧವಾಗಿ ಅನೇಕ ಕಥೆಗಳು ಸರ್ವರಿಗೂ ತಿಳಿದಿರುತ್ತವೆ. ನಾಥರು ಅನೇಕ ಸ್ಫುಟಗಳನ್ನು ರಚಿಸಿದರು. ಅವುಗಳಲ್ಲಿ ಹಸ್ತಾಮಲಕ, ಆನಂದಲಹರೀ, ಸ್ವಾತ್ಮಸುಖ, ಶುಕಾಷ್ಟಕ, ಚಿರಂಜೀವ ಪದ, ಅಭಂಗಗಳ ಗಾಥಾ (ಅಭಂಗ ೪೦೦೫) ಇತ್ಯಾದಿ ಗ್ರಂಥಗಳ ಸಂಪತ್ತನ್ನು ನಾಥರು ಸ್ವಧರ್ಮ ಕರ್ಮಾಚರಣೆ ಸಾಂಭಾಳಿಸುತ್ತ ಕೂಡಿಟ್ಟರು.

ಶ್ರೀಮದ್ ಭಾಗವತದ ಹನ್ನೊಂದನೆಯ ಸ್ಕಂಧಕ್ಕೆ ನಾಥರು ಭಾಷ್ಯ ಬರೆಯಲು ಶ್ರೀಕ್ಷೇತ್ರ ಪೈಠಣದಲ್ಲಿ ಆರಂಭಿಸಿದರು. ಐದು ಅಧ್ಯಾಯಗಳು ಪೂರ್ಣಗೊಂಡಾಗ ಉಳಿದ ಅಧ್ಯಾಯಗಳನ್ನು ಕಾಶೀ ಕ್ಷೇತ್ರದಲ್ಲಿ ಪೂರ್ಣಗೊಳಿಸಿದರು. ಕಾಶಿಯಲ್ಲಿನ ಕೆಲವು ಪಂಡಿತರಿಗೆ ಭಾಗವತದಂತಹ ಪವಿತ್ರ ಗ್ರಂಥಕ್ಕೆ ಪ್ರಾಕೃತ ಭಾಷೆಯ ಸಂಪರ್ಕವಾಗಿದ್ದಕ್ಕೆ ಅವರಿಗೆ ಕ್ರೋಧ ಉಂಟಾಯಿತು. ಆದ್ದರಿಂದ ಆ ಏಕನಾಥೀ ಭಾಗವತ ಗ್ರಂಥವನ್ನು ಪಂಡಿತರು ಗಂಗಾನದಿಯಲ್ಲಿ ಒಗೆದುಬಿಟ್ಟರು. ಗಂಗೆಯು ಅದನ್ನು ತೇಲಿಸಿ ನಾಥರ ಸ್ವಾಧೀನ ಮಾಡಿದಳು. ಆಗ ಪಂಡಿತರಿಗೆ ನಾಥರ ಯೋಗ್ಯತೆಯು ತಿಳಿಯಿತು. ಆಗ ಆನೆಯ ಮೇಲೆ ಭಾಗವತ ಗ್ರಂಥದ ದೊಡ್ಡ ಮೆರವಣಿಗೆ ಮಾಡಲಾಯಿತು.

'ಸಂಸ್ಕೃತ ಭಾಷಾ ದೇವೇ ಕೇಲಿ। ಆಣಿ ಪ್ರಾಕೃತ ಕಾಯ ಚೋರಾಪಾಸೂನಿ ಆಲೀ।'

ಪ್ರಸ್ಥಾನತ್ರಯಿಯಲ್ಲಿ ಸಮಾವೇಶಗೊಂಡಿರುವ ಏಕನಾಥೀ ಭಾಗವತವು ಸರ್ವ ಸಾಧಕರಿಗಾಗಿ, ಭಕ್ತರಿಗಾಗಿ, ಚಿಂತನೀಯ, ಅನುಕರಣೀಯ ಹಾಗೂ ಮನುಷ್ಯಜನ್ಮದ ಸಾರ್ಥಕ, ಆತ್ಮಸ್ವರೂಪದ ಪ್ರಾಪ್ತಿ ಸಾಧಿಸಲು ಪ್ರೇರಕವಾಗಿದೆ.

ಶ್ರೀಕೃಷ್ಣ ದರ್ಶನ :-

ದ್ವಾರಕೇಚೀ ಮೂರ್ತಿ ಏಕನಾಥಾ ಘರೀ।
ಪಾಣೀ ವಾಹೇ ಹರಿ ಕಾವಡೀನೇ॥

॥ ಸಂತ ನಿಳೋಬಾ ॥

ಶ್ರೀ ವಿಠ್ಠಲನು ಬ್ರಾಹ್ಮಣನ ರೂಪ ಧರಿಸಿ ನಾಥರ ಮನೆಯಲ್ಲಿ ಶ್ರೀಖಂಡ್ಯಾ ಹೆಸರಿನಿಂದ ೧೨ ವರ್ಷಗಳವರೆಗೆ ಹೌಜಿನಲ್ಲಿ ನೀರು ತುಂಬುವ ಸೇವೆ ಮಾಡಿದನು. ಅದರಂತೆಯೇ ಶ್ರೀಕೃಷ್ಣನು ೧೨ ವರ್ಷಗಳವರೆಗೆ ನೀರು ಹೊತ್ತನು. ನಂತರ

ಉದ್ಧವನೂ ಕೂಡ ೧೨ ವರ್ಷ ಹೀಗೆಯೇ ನೀರು ತುಂಬಿಸುವ ಸೇವೆ ಮಾಡಿದನು. ಹೀಗೆ ಒಟ್ಟಿಗೆ ೩೬ ವರ್ಷಗಳವರೆಗೆ ಭಗವಂತನು ನಾಥರ ಮನೆಯಲ್ಲಿ ಸೇವೆ ಮಾಡಿದನು.

ಕಾವಡೀನೆ ಪಾಣೀ ಜ್ಯಾಸೀ ಚಕ್ರಪಾಣೀ ವಾಹೇ ।
ಅನನ್ಯಭಕ್ತೀ ಭಾವೇ ನಿಳಾ ವಂದಿ ತ್ಯಾಚೀ ಪಾಯೇ ।

॥ ಸಂತ ನಿಳೋಬಾ ॥

ನಾಥರು ಭಾಗವತದಲ್ಲಿ ವರ್ಣನೆ ಮಾಡಿದ ಪ್ರಕಾರ :-

ಅಗಾಧ ಭಗವಂತಾಚಾ ಮಹಿಮಾ । ತ್ಯಾಚ್ಯಾಪಾರ ನಾಹೀ ಜನ್ಮಕರ್ಮಾ ।
ತ್ಯಾಚಾ ಅನುಷ್ಟುಪ ಹಾ ಮಹಿಮಾ । ತುಜ ಮ್ಯಾ ನರೋತ್ತಮಾ ನಿರೂಪಿಲಾ ಯೇಥೇ ॥

ಏ. ಭಾ. ೪/೨೮೫

ಪ್ರಥಮದಲ್ಲಿ ಕೃಷ್ಣದರ್ಶನ ದೃಷ್ಟಾಂತದಂತೆ ನಾಥರಿಗೆ ವಚನ ಬದ್ಧರನ್ನಾಗಿ ಮಾಡಿ ಭಗವಂತನು ತನ್ನ ಕಾರ್ಯ ಮುಗಿಸಿ ಅದೃಶ್ಯನಾಗುತ್ತಿದ್ದನು. ಆಗ ನಾಥರು ಭಗವಂತನ ಕೈ ಹಿಡಿದು ನನಗೆ ವಚನಮುಕ್ತನನ್ನಾಗಿ ಮಾಡಿ ಸಗುಣ ರೂಪದಲ್ಲಿ ದರ್ಶನ ನೀಡಿರಿ ಎಂದು ವಿನಂತಿಸಿದರು. ಆದರಂತೆ ಭಗವಂತನು ನಾಥರಿಗೆ ಸಗುಣ ರೂಪದಲ್ಲಿ ದರ್ಶನ ಕೊಟ್ಟು ''ರುಕ್ಮಿಣಿ ಸ್ವಯಂವರ'' ಗ್ರಂಥವನ್ನು ಬರೆಯಿಸಿದನು.

ತದನಂತರ ಜ್ಞಾನೇಶ್ವರ ಮಾಉಲಿಯವರ ಕಂಠಕ್ಕೆ ಅಜಾನವೃಕ್ಷದ ಬೇರು ಹತ್ತಿಕೊಂಡಿರುವ ನಿಮಿತ್ತ ಸಾಧಿಸಿ ಪಾಠಾಂತರದಲ್ಲಿ ಶುದ್ಧ-ಅಶುದ್ಧವಾಗಿರುವ ಜ್ಞಾನೇಶ್ವರೀಯನ್ನು ಶುದ್ಧವನ್ನಾಗಿ ಮಾಡಿಸಿಕೊಂಡರು. ಈ ಕಾರ್ಯವನ್ನು ನಾಥರು ಶಕೆ ೧೫೦೬ ರಲ್ಲಿ ಪೂರ್ಣಗೊಳಿಸಿದರು.

ಭಾವಾರ್ಥ ರಾಮಾಯಣ

ಆಯುಷ್ಯದ ಕೊನೆಯವರೆಗೂ ನಾಥರ ಲೇಖನ ಕಾರ್ಯವು ನಡೆದೇ ಇತ್ತು. ಭಾವಾರ್ಥ ರಾಮಾಯಣದ ಲೇಖನವು ತಮ್ಮ ನಿರ್ಯಾಣದ ಸಮಯದಲ್ಲಿನ ಮುಹೂರ್ತ ಸಾಧಿಸುವುದಕ್ಕಾಗಿ ಅದು ಅಪೂರ್ಣಗೊಂಡಿತು. ಇದರ ಪೂರ್ಣತೆಮಾಡುವ ಕಾರ್ಯವನ್ನು ಅವರು ''ಗಾವಬಾ'' ಕಡೆ ಒಪ್ಪಿಸಿದರು. ನಿಜವಾಗಿ ನೋಡಿದರೆ ನಿತ್ಯ ಸಿಹಿ ತಿನ್ನುವ ನಿಮಿತ್ತದಿಂದ ಬಂದಿರುವ ಮೂಕನಾಗಿರುವ ಹಾಗೂ ಅಶಿಕ್ಷಿತನಾಗಿರುವ ಗಾವಬಾ ನಾಥರ ಸಂಗತಿಯಲ್ಲಿದ್ದ ಕಾರಣ ಇಂತಹ ದೊಡ್ಡ ಕಾರ್ಯವನ್ನು ಆತನಿಂದ ನಾಥರೇ ಮಾಡಿಸಿಕೊಂಡರು.

ನಾಥರ ಮೊಮ್ಮಗ ಮುಕ್ತೇಶ್ವರರು ಗಾವಬಾನ ವರ್ಣನೆಯನ್ನು ತಮ್ಮ ಆರತಿಯಲ್ಲಿ ಮಾಡಿರುವರು. ''ಕೋಣ್ಯಾ ಮುಕ್ಯಾ ಹಾತೀ ರಾಮಾಯಣ ವದವೀ''

ನಾಥರ ನಿಜಧಾಮಗಮನ :-

ನಾಥರ ಇಚ್ಛಿತ ಕಾರ್ಯಗಳು ಬಹುತೇಕವಾಗಿ ಪೂರ್ಣವಾಗಿದ್ದಕ್ಕೆ ಅವರು ದೇಹತ್ಯಾಗ ಮಾಡುವುದನ್ನು ನಿಶ್ಚಯಿಸಿದರು. ಅದಕ್ಕಾಗಿ ಅವರು ಫಾಲ್ಗುಣ ಬಹುಳ ಷಷ್ಠೀ ತಿಥಿಯನ್ನು ನೇಮಿಸಿಕೊಂಡರು.

''ಬಾಳಪಣೀ ಕೋಣಾ ಡಂಕೋ ಆಲಾ ಕಾಳ ।
ಅಕರಾ ದಿವಸ ಕಾಳ ಕೋಣೀ ಥಾಂಬವಿಲಾ ॥''

ಹೀಗೆ ಮುಕ್ತೇಶ್ವರರ ವರ್ಣನೆಯಂತೆ ಫಾಲ್ಗುಣ ಬ.೬ ಶಕೆ ೧೫೧೧ ವಿಜಯ ಸಂವತ್ಸರದಲ್ಲಿ ಬೆಳಿಗ್ಗೆ ವಿಜಯೀ ಪಾಂಡುರಂಗನಿಗೆ ಅಭಿಷೇಕ ಮಾಡಿ ನಾಥ ಮಹಾರಾಜರು ಜನಸಮುದಾಯ ಸಹ ನದಿ ತೀರಕ್ಕೆ ಭಜನದಿಂಡಿಯೊಂದಿಗೆ ಹೊರಟು ಅಲ್ಲಿ ನಾಥರು

''ಅವಘೇಚಿ ತ್ರೈಲೋಕ್ಯ ಆನಂದಾಚಿ ಆತಾ ।
ಚರಣೀ ಜಗನ್ನಾಥಾ ಚಿತ್ತ ಠೇಲೇ ॥

ಏ. ಗಾಥಾ

ಈ ಅಭಂಗದ ಮೇಲೆ ಕೀರ್ತನೆಯನ್ನು ಮಾಡಿದರು. ಆ ಸಮಯದಲ್ಲಿ ಅವರಿಗೆ ''ಅವಘೇಚಿ ತ್ರೈಲೋಕ್ಯ ಆನಂದಾಚಿ ಆತಾ'' ಹೀಗೆ ವೃತ್ತಿ ನಿರ್ಮಾಣವಾಯಿತು. ಕೀರ್ತನವು ಪೂರ್ಣಗೊಂಡಾಗ ಸಾವಿರಾರು ಜನರ ಸಮಕ್ಷಮದಲ್ಲಿ ನಾಥರು ಗೋದಾವರಿಯ ನದಿಯಲ್ಲಿ ಪ್ರವೇಶ ಮಾಡಿದರು. ನಾಭಿಸ್ಥಾನದವರೆಗೆ ನೀರಿನಲ್ಲಿ ಪ್ರವೇಶಿಸಿ ತಮ್ಮ ಶರೀರವನ್ನು ಪಂಚತತ್ವದಲ್ಲಿ ವಿಲೀನಗೊಳಿಸಿದರು. ತಕ್ಷಣ ಜನಸಾಗರವು ಸಿಡಿದೆದ್ದಿತು, ಸ್ವರ್ಗದಿಂದ ಪುಷ್ಪವೃಷ್ಟಿಯಾಯಿತು. ತದನಂತರ ಅವರ ಚಿರಂಜೀವಿ ಹರಿಪಂಡಿತರು ಅವರ ದೇಹದ ಮೇಲೆ ಮಂತ್ರಾಗ್ನಿ ಸಂಸ್ಕಾರ ಮಾಡಿದರು.

ಸಮಾಧಿಸ್ತ ಅಶ್ವತ್ಥ ರುಪೇ ಜಯಾಲಾ ।
ಮುಧಾಪಾಮರಾಲಾಗೀ ತಾರಾವಯಾಲಾ ॥

ನಿರಾಕಾರ ಆಕಾರ ಹೋಊನಿ ಯಥಾರ್ಥಾ ।
ನಮಸ್ಕಾರ ಮಾಝಾ ಶ್ರೀಸದ್ಗುರು ಏಕನಾಥಾ ॥

ಈ ಮೇಲಿನ ಅಭಂಗದಂತೆ ದಹನ ರಕ್ಷೆಯಲ್ಲಿ ತುಳಶಿಯ ಹಾಗೂ ಅಶ್ವತ್ಥವೃಕ್ಷದ ಅಗಿಗಳು ಹುಟ್ಟಿಕೊಂಡವು.

ಕೃಷ್ಣ ತುಳಸೀ ರೋಪಾಸೀ ಮಧ್ಯೇ ಏಕ ಪಿಂಪಳಾಸೀ ।
ಇತುಕೇ ದೇಖತಾ ತ್ಯಾಸೀ ನವಲ ಆಶ್ಚರ್ಯಾಸೀ ವರ್ಣಿತೀ ॥
(ಕೆ.ಕೃತನಾಥ ಚರಿತ್ರ, ಅ.೩೧. ಓ.೬೫)

ಈ ತುಳಸೀ ಹಾಗೂ ಅಶ್ವತ್ಥ ಗಿಡಗಳಲ್ಲಿಯೇ ಹರಿಪಂಡಿತನು ನಾಥರ ಸಮಾಧಿ ಕಟ್ಟಿದನು.

ಶರಣ ಶರಣ ಏಕನಾಥಾ । ಪಾಯೀ ಮಾಥಾ ಠೇವಿಲಾ ॥
- ತುಕಾರಾಮ ಮಹಾರಾಜ

ಅಭಿಪ್ರಾಯ

''ಏಕಾಜನಾರ್ದನಾಚೀ ವಿನಂತೀ । ಯೇಊನ ಮನುಷ್ಯದೇಹಾಪ್ರತೀ ।
ಕರೂನಿಯಾ ಭಗವತ್‌ಭಕ್ತೀ ನಿಜಾತ್ಮಪ್ರಾಪ್ತಿ ಸಾಧಾವೀ ॥ ಏ.ಭಾ.

ಹ.ಭ.ಪ. ಶ್ರೀಕೃಷ್ಣಾಜೀ ಡೋಂಗರೇ ಅಪ್ಪಾ ಜ್ಞಾನಮೋತೆ, ಕೊಪ್ಪಳ, ಕರ್ನಾಟಕ

ಇವರು ಶ್ರೀಏಕನಾಥೀ ಭಾಗವತವನ್ನು ಕನ್ನಡ ಭಾಷೆಯಲ್ಲಿ ಭಾಷಾಂತರವನ್ನು ಮಾಡಿ ವಾಚಕರಿಗೆ ಕೊಟ್ಟ ಇದೊಂದು ನಿಧಿಯಾಗಿರುವುದು. ಈ ಕಾರ್ಯವನ್ನು ಇವರು (ಏಕನಾಥ ಷಷ್ಠೀ) ಫಾಲ್ಗುಣ ಬ.೬ಯ ಶುಭಮುಹೂರ್ತದಲ್ಲಿ ಪೈಠಣದಲ್ಲಿ ಪುರಾಣ ಕಂಭದ ಆಶ್ರಯದಲ್ಲಿ ಆರಂಭಿಸಿದರು. ಆದ್ದರಿಂದ ಈ ಕಾರ್ಯಕ್ಕೆ ಶ್ರೀಏಕನಾಥರ ಆಶೀರ್ವಾದವಿದೆ. ಇದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಇವರ ಕೈಯಿಂದ ಹೀಗೆಯೇ ಸಂತಸೇವೆಯು ನೆರವೇರಲಿ ಹಾಗೂ ಇವರಿಗೆ ದೀರ್ಘಾಯುಷ್ಯವು ಲಭಿಸಲಿ. ಇದೇ ಶ್ರೀ ಏಕನಾಥರ ಚರಣಗಳಲ್ಲಿ ಪ್ರಾರ್ಥನೆಯನ್ನು ಮಾಡುವೆ.

ಶ್ರೀ ಮಧುಸೂದನ ರಂಗನಾಥಬುವಾ ಗೋಸಾವಿ
ನಾಥ ವಂಶಜ, ಪೈಠಣ
ಭ್ರಮಣ ಧ್ವನಿ :- ೯೮೨೨೭ ೯೬೬೦೫
ಫೋನ್ : (೦೨೪೩೧) ೨೨೪೧೨೧

॥ ಶ್ರೀಪಾಂಡುರಂಗ ಪ್ರಸನ್ನ ॥



ಭವಸಾಗರದಲ್ಲಿ ಮುಳುಗುತ್ತಿರುವ ಅಸಂಖ್ಯ ಜೀವಿಗಳ ವಿಷಯದಲ್ಲಿ ಅಪಾರವಾದ ಕರುಣೆಯಿಂದಲೇ ಅವರ ತರುಣೋಪಾಯಕ್ಕಾಗಿ ಮಹರ್ಷಿ ವೇದವ್ಯಾಸರು ಶ್ರೀಮದ್‌ಭಾಗವತ ಪುರಾಣದ ನಿರ್ಮಾಣ ಮಾಡಿದರು. ವ್ಯಾಸರ ಪ್ರತ್ಯುತ್ಪನ್ನ ಬುದ್ಧಿಯು ಅಪಾರವಾಗಿದೆ. ''ನಮೋಸ್ತುತೇ ವ್ಯಾಸ ವಿಶಾಲ ಬುದ್ಧೇ'' ಎಂದು ಶ್ರೀವ್ಯಾಸರಿಗೆ ವಂದನೆ ಮಾಡಲಾಗಿದೆ. ವ್ಯಾಸರ ವಿಷಯಕ್ಕೆ ಸುಭಾಷಿತರು ಬಹಳಷ್ಟು ವರ್ಣಿಸಿರುವರು.

ಅಚತುರ್ವದನೋ ಬ್ರಹ್ಮಾ ದ್ವಿಬಾಹೋರಯಿ ಹರಿಃ ।
ಅಭಾಲ ಲೋಚನಃ ಶಂಭುರ್ಭಗವಾನ್ ಬಾದರಾಯಣಃ ॥

ನಾಲ್ಕು ಮುಖಗಳಿಲ್ಲದಿದ್ದರೂ ಕೂಡ ವ್ಯಾಸರು ಬ್ರಹ್ಮದೇವರಾಗಿದ್ದಾರೆ. ಎರಡೇ ಕೈಗಳಿದ್ದರೂ ಸಹ ವಿಷ್ಣೂ ಆಗಿದ್ದಾರೆ. ತ್ರಿಲೋಚನರಲ್ಲ, ಆದರೂ ಸಾಕ್ಷಾತ್ ಶಂಕರರಾಗಿದ್ದಾರೆ. ಬ್ರಹ್ಮದೇವನು ಅಪಾರವಾಗಿ ಸೃಷ್ಟಿಯನ್ನು ನಿರ್ಮಿಸಿದನು. ಆದರಂತೆ ವ್ಯಾಸರು ಅಪಾರವಾಗಿ ವಾಙ್ಮಯ ನಿರ್ಮಾಣ ಮಾಡಿರುವರು. ಇವರು ಸ್ಪರ್ಶ ಮಾಡದೇ ಇರುವ ಒಂದೂ ವಿಷಯವಿರುವುದಿಲ್ಲ. ''ವ್ಯಾಸೋಚ್ಛಿಷ್ಟಮ್ ಜಗತ್ ಸರ್ವಮ್'' ಎಂದು ಇದಕ್ಕಾಗಿಯೇ ಹೇಳುವರು. ವಿಷ್ಣುವಿನಂತೆ ವ್ಯಾಸರು ಪರಮಾರ್ಥದಲ್ಲಿ ಜೀವಿಗಳ ರಕ್ಷಣೆ ಮಾಡಿರುವರು ಮತ್ತು ಶಂಕರನು ಯಾವ ಪ್ರಕಾರವಾಗಿ ಸಂಹಾರಕನಾಗಿರುವನೋ, ಅದರಂತೆಯೇ ಪರಮಾರ್ಥದಲ್ಲಿನ ತ್ಯಾಜ್ಯಗಳನ್ನೆಲ್ಲ ಸಂಹಾರ ಮಾಡುತ್ತಿರುವರು. ವ್ಯಾಸರಕ್ಕಿಂತ ಮೊದಲು ಅನೇಕ ಋಷಿಮುನಿಗಳಾಗಿದ್ದರು, ಆದರೆ ಅವರ ವಾಙ್ಮಯ ನಿರ್ಮಾಣವು ''ಆತ್ಮಾಭಿಮುಖ''ವಾಗಿತ್ತು. ಆದರೆ ವ್ಯಾಸರು ''ಲೋಕಾಭಿಮುಖ''ವಾಗಿ ನಿರ್ಮಾಣ ಮಾಡಿದರು. ಪೂರ್ವದ ಋಷಿಮುನಿಗಳವರು ಸ್ವಹಿತದ ವಿಚಾರ ಮಾಡಿದರು. ಆದರೆ ವ್ಯಾಸರು ಜಗದೋದ್ಧಾರದ ಉದ್ದೇಶಗಳನ್ನು ತಮ್ಮ ಕಣ್ಮುಂದೆ ಇಟ್ಟುಕೊಂಡರು. ಕಲಿಯುಗದಲ್ಲಿನ ಸಾಧನೆಗಳ ವಿಮುಖ ಮತ್ತು ವಿಷಯಾಸಕ್ತ ಜೀವಿಗಳ ಅಪಾರವಾದ ಕರುಣೆಯಿಂದ ವ್ಯಾಸರು ಮಾಡಿರುವ ವಾಙ್ಮಯ ರಚನೆ ಎಂದರೆ ಭವಸಿಂಧು ತಾರಕ ನೌಕೆಯಾಗಿರುವುದು. ಭೋಳ್ಯಾಭಾವಿಕ ಜೀವಿಗಳ ತರುಣೋಪಾಯದ ಸುಲಭ ಉಪಾಯವೆಂದರೆ ''ಶ್ರೀಮದ್‌ಭಾಗವತ'' ಇದನ್ನು ವ್ಯಾಸರು ಸರ್ವರಿಗೂ ಮುಟ್ಟುವಂತೆ ಮಾಡಿರುವರು.

ತುಕಾ ಮ್ಹಣೇ ಭಾಗವತ । ಕೇಲೇ ಶ್ರುತ ಸಕಳಾ ॥

''ಶ್ರೀಮದ್‌ಭಾಗವತ'' ಇದು ಭಕ್ತಿ ಪ್ರಧಾನವಾಗಿರುವುದು. ಇತರ ಸಾಧನೆಗಳಿಗಿಂತ ಭಕ್ತಿಯು ಶ್ರೇಷ್ಠ ಮತ್ತು ಫಲದಾಯಕ ಸಾಧನೆಯಾಗಿರುವುದು. ಮಹರ್ಷಿ ನಾರದರು ಹೇಳುವರು : ''ಅನ್ಯಸ್ಮಾತ್ ಸೌಲಭ್ಯಂ ಭಕ್ತಿ'' ಆದ್ದರಿಂದ ಭಕ್ತಿಯು ಕಠಿಣವಾಗಿರುವುದಿಲ್ಲ. ಇದು ಫಲಪ್ರದವಾಗಿರುವುದು. ನಾರದರು ಇದೇ ಭಕ್ತಿಮಾರ್ಗದ ದಿಶೆಯನ್ನು ವ್ಯಾಸರಿಗೆ ತೋರಿಸಿಕೊಟ್ಟರು ಮತ್ತು ಅವರಿಂದ ''ಶ್ರೀಮದ್‌ಭಾಗವತ''ದಂತಹ ಅಮೌಲ್ಯ ಗ್ರಂಥವನ್ನು ಜಗತ್ತಿನ ಉದ್ಧಾರಕ್ಕಾಗಿ ನಿರ್ಮಾಣ ಮಾಡಿಸಿದರು.

ಯುಗಯುಗಗಳಲ್ಲಿ ''ಭಕ್ತಾ ರಾಖೇ ಪಾಯಾಪಾಶೀ । ದುರ್ಜನಾಸೀ ಸಂಹಾರಿ ॥'' ಈ ಉದ್ದೇಶದಿಂದ ಅವತಾರಕ್ಕೆ ಬಂದ ಭಗವಾನ ವಿಷ್ಣುವಿನ ಲೀಲೆಯು ಈ ಗ್ರಂಥದಲ್ಲಿ ವಿಸ್ತಾರವಾಗಿ ವರ್ಣಿಸಿರುವುದು. ಭಾಗವತದ ದಶಮಸ್ಕಂಧವೆಂದರೆ ಭಕ್ತಿಪ್ರೇಮದ ಆವಿಷ್ಕಾರ ಮತ್ತು ಲೋಕೋತ್ತರ ಕೀರ್ತಿಯ ದೃಷ್ಟಾ ಪ್ರಶಾಸಳ ಭಗವಾನ ಶ್ರೀಕೃಷ್ಣನ ಬಾಲಲೀಲೆಯಿಂದ ತುಂಬಿತುಳುಕುತ್ತಿರುವ ಭಾಗವತದ ತಿರುಳೇ ಆಗಿರುವುದು. ಆದರೆ ಏಕಾದಶಸ್ಕಂಧವೆಂದರೆ ಭಾಗವತದ ಫಲವೇ ಆಗಿರುವುದು. ಭಗವಾನ ಶ್ರೀಕೃಷ್ಣನ ಜೀವನದಲ್ಲಿನ ಮಹತ್ವಪೂರ್ಣ ಉಪದೇಶವೆಂದು ಈ ಸ್ಕಂಧದತ್ತ ಅಧಿಕವಾಗಿ ಜಿಜ್ಞಾಸೆಯಿಂದ ಹಾಗೂ

ಅಧಿಕ ಪ್ರೀತಿಯಿಂದ ಕಾಣಬೇಕಾಗುವುದು.

ಅರ್ಜುನನಿಗೆ ಶ್ರೀಕೃಷ್ಣನು ಗೀತೆಯ ಉಪದೇಶ ಮಾಡಿದನು. ಆದರೆ ಆ ಉಪದೇಶದ ಧ್ಯೇಯವು ಅರ್ಜುನನ ಮೋಹ ನಷ್ಟಗೊಳಿಸಲು ಮತ್ತು ಆತನಿಗೆ ಯುದ್ಧಕ್ಕಾಗಿ ಪ್ರವೃತ್ತಗೊಳಿಸಲು ಇದಾಗಿತ್ತು. ಭಗವಂತನು ಅದನ್ನು ಸಾಧ್ಯಗೊಳಿಸಿದನು. ''ಕರಿಷ್ಯೇ ವಚನಂ ತವ'' ಈ ಅರ್ಜುನನ ಉದ್ಗಾರದಿಂದ ಇದು ಸ್ಪಷ್ಟವಾಗುವುದು. ಯುದ್ಧದ ಪಾರ್ಶ್ವಭೂಮಿ, ಶಾಂತಸ್ಥಿತಿ ಇದ್ದಿಲ್ಲ. ಅರ್ಜುನನ ಮೋಹ ನಾಶ ಮಾಡುವ ಈ ಉದ್ದೇಶವಾಗಿತ್ತು. ಆದ್ದರಿಂದ ಗೀತೆಯಲ್ಲಿನ ಉಪದೇಶವು ಪರಿಣಾಮಕಾರಕ ವಾಗಿದ್ದರೂ ಕೂಡ ಗಡಿಬಿಡಿ ತ್ವರಿತವಾದಂತೆ ಭಾಸವಾಗುತ್ತದೆ. ಆದರೆ ಭಾಗವತವು ಹಾಗಾಗಿರುವುದಿಲ್ಲ. ಕೇವಲ ಜಗತ್ತಿನ ಕಲ್ಯಾಣ, ಸಾಮಾನ್ಯ ಜನರ ಉದ್ಧಾರ ಇದೇ ಉದ್ದೇಶವನ್ನು ಕಣ್ಮುಂದೆ ಇಟ್ಟುಕೊಂಡು ಪರಮಭಕ್ತ ಉದ್ಧವನಿಗೆ ಭಗವಂತನು ಭಾಗವತದ ರಹಸ್ಯವನ್ನು ಹೇಳಿರುವನು ಹಾಗೂ ಈ ಯಾವ ಭಾಗವತ ಧರ್ಮವನ್ನು ಜನಸಾಮಾನ್ಯರಲ್ಲಿ ಪ್ರಚಾರಗೊಳಿಸಲು ಬದ್ರಿಕಾಶ್ರಮಕ್ಕೆ ಹೋಗಲು ತಿಳಿಸಿದನು. ಭಾಗವತದ ಹನ್ನೊಂದನೆಯ ಸ್ಕಂಧವು ಜ್ಞಾನ ಪ್ರಧಾನವಾಗಿದ್ದರೂ ಕೂಡ ಅದರಲ್ಲಿ ಮೂಲಭೂತ ಭಕ್ತಿ ಸಾಧನೆಯ ಮಹತ್ವವನ್ನು ವರ್ಣಿಸಿರುವುದು. ಉದ್ಧವನಂತಹ ಜಿಜ್ಞಾಸು ಭಕ್ತನು ಅತ್ಯಂತ ಕಳಕಳಿಯಿಂದ ಮಾಡಿರುವ ಭವತರಣೋಪಾಯದ ಪ್ರಶ್ನೆಗಳು ಮತ್ತು ಭಗವಾನ ಶ್ರೀಕೃಷ್ಣನೂ ಸಹ ಅಷ್ಟೇ ಕರುಣೆಯಿಂದ ಮಾಡಿರುವ ವಿವೇಚನೆಗಳಿಂದಲೇ ಈ ಸ್ಕಂಧವು ಅತ್ಯಂತ ಸುಗಂಧಯುಕ್ತ ಪುಷ್ಪಗಳಿಂದ ತುಂಬಿತುಳುಕಿದಂತಾಗಿರುವುದು.

ಕದಾಚಿತ್ ಈ ಕಾರಣದಿಂದಲೇ ನಾಥರಾಯರು ತಮ್ಮ ವಾಙ್ಮಯ ನಿರ್ಮಿಸಲು ಏಕಾದಶ ಸ್ಕಂಧವನ್ನು ಆರಿಸಿಕೊಂಡಿರಬಹುದು. ವ್ಯಾಸರಂತೆಯೇ ನಾಥರ ಈ ವಾಙ್ಮಯ ಕಾರ್ಯವು ಕಲಿಯುಗದಲ್ಲಿನ ಆಸಕ್ತ ಜೀವಿಗಳಿಗೆ ಭವತರಣಕಾರಕವಾಗಿರುವುದು.

ವಾರಕರೀ ಸಾಂಪ್ರದಾಯದಲ್ಲಿ ಉಪಲಬ್ಧವಾಗಿರುವ ಸಂತ ವಾಙ್ಮಯದಲ್ಲಿ ನಾಥರಷ್ಟು ರಚನೆಯನ್ನು ಯಾರೂ ಮಾಡಿರುವುದಿಲ್ಲ. ನಾಥರಾಯರ ಕಾಲದಲ್ಲಿ ಮಹಾರಾಷ್ಟ್ರದ ರಾಜಕೀಯ ಪರಿಸ್ಥಿತಿಯು ಬಹಳಷ್ಟು ಪ್ರತಿಕೂಲವಾಗಿತ್ತು. ಜ್ಞಾನೋಬಾರಾಯರ ಅವತಾರ ಸಮಾಪ್ತಿವರೆಗೂ ಅಲ್ಲಿ ಮುಸಲ್ಮಾನ ಸತ್ತೆಯು ಪ್ರಸ್ಥಾಪಿತವಾಗಿರಲಿಲ್ಲ. ಆದರೆ ಮಾಊಲಿಯವರ ಅವತಾರ ಸಮಾಪ್ತಿ ಮತ್ತು ದೇವಗಿರಿಯ ಧ್ವಂಸದ ಈ ಘಟನೆಯು ಸ್ವಲ್ಪಮಟ್ಟಿಗೆ ಒಂದೇ ವೇಳೆಗೆ ನಡೆದವು. ಜ್ಞಾನೋಬಾರಾಯರ ನಂತರ ಅವರ ಸಮಕಾಲೀನ ಸಂತ ಶ್ರೀ ನಾಮದೇವರಾಯರು ಭಕ್ತಿಯ ಶ್ರೇಷ್ಠತೆಯನ್ನು ಯಶಸ್ವಿಯಾಗಿ ಸಾಂಭಾಳಿಸಿದರು. ನಾಮದೇವರಾಯರು ಪಂಢರೀರಾಯನ ಚರಣಗಳಲ್ಲಿ ವಿಲೀನರಾದ ನಂತರ ಎರಡು ನೂರು ವರ್ಷಗಳ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಯಾವುದೇ ಸಂತರ ಉದಯವಾಗಲಿಲ್ಲ. ಇದು ನಮ್ಮ ರಾಷ್ಟ್ರದ ದುರ್ದೈವವೇ ಸರಿ. ಮಹಾರಾಷ್ಟ್ರದಲ್ಲಿ ನಾಥರ ಕಾಲಕ್ಕೆ ರಾಜಕೀಯ ಪರಿಸ್ಥಿತಿಯು ಮೊಗಲರ ಸತ್ತೆಯಿಂದ ಸ್ಥಿರವಾಗಿತ್ತು. ಅವರು ಮಾಡಿರುವ ಸನಾತನ ಧರ್ಮದ ದುರ್ದಶೆ, ದೇವ - ದೇವತೆಗಳ ವಿಟಂಬನೆ ಮತ್ತು ಧರ್ಮಾಂತರದ ಬಲತ್ಕಾರಗಳಿಂದ ಸರ್ವ ಹಿಂದೂ ಸಮಾಜವು ತಮ್ಮ ಶಕ್ತಿಯನ್ನು ಕಳೆದುಕೊಂಡು ಕುಳಿತುಕೊಂಡಿತ್ತು. ಇಂತಹ ಈ ಪ್ರತಿಕೂಲ ಪರಿಸ್ಥಿತಿಯಲ್ಲಿ ಭಾನುದಾಸರ ಕುಲದಲ್ಲಿ ನಾಥರಾಯರು ಅವತರಿಸಿದರು. ನಾಥರಾಯರೆಂದರೆ ಪ್ರತ್ಯಕ್ಷ ವಿಷ್ಣುವಿನ ಅವತಾರವು. ಸದ್ಗುರು ಜನಾರ್ದನಸ್ವಾಮೀ ಮತ್ತು ದತ್ತಾತ್ರೇಯರ ಪೂರ್ಣಕೃಪೆಯು ಅವರಿಗೆ ಲಭಿಸಿತ್ತು. ತಮ್ಮ ರಸಾಳ ವಾಙ್ಮಯದಿಂದ ನಾಥರು ಬಳಲಿಕೊಂಡಿದ್ದ ಮರಾಠೀ ಮನಕ್ಕೆ ಆಸರೆ ನೀಡಿದರು, ಸಮಾಜಕ್ಕೆ ಒಂದು ದಿಶೆಯನ್ನು ತೋರಿಸಿಕೊಟ್ಟರು.

ನಾಥರ ಕಾಲದಲ್ಲಿ ಮರಾಠೀ ಭಾಷೆಯಲ್ಲಿ ಗ್ರಂಥ ರಚನೆ ಮಾಡುವ ಈ ಮಾತು ಕಡಿಮೆತನವೆಂದು ತಿಳಿಯಲ್ಪಡುತ್ತಿತ್ತು. ಮರಾಠಿಯಲ್ಲಿ ರಚಿಸುವವರನ್ನು ತಿರಸ್ಕರಿಸಲ್ಪಡುತ್ತಿತ್ತು. ಜ್ಞಾನೋಬರಾಯರ ಕಾಲದಲ್ಲಿ ಮರಾಠಿಯಲ್ಲಿ ಗ್ರಂಥ ರಚನೆ ಮಾಡಿ ಅಧ್ಯಾತ್ಮ ಜ್ಞಾನವನ್ನು ಸಾಮಾನ್ಯರವರೆಗೆ ಮುಟ್ಟಿಸುವ ಮಹಾಕಾರ್ಯವು ನಡೆಯುತ್ತಿತ್ತು. ಆದರೆ ಈ ಕಾಲದ ಸಂಸ್ಕೃತ ಪಂಡಿತರಿಂದ ಮರಾಠಿಯ ಉಪೇಕ್ಷೆಯು ಆಗುತ್ತಲೇ ಇತ್ತು. ಸಂಸ್ಕೃತ ಗ್ರಂಥಗಳಿಗೆ ಪ್ರಾಕೃತ ಭಾಷೆಯಲ್ಲಿ ಭಾಷಾಂತರಿಸುವುದು ಇದು ಅಕ್ಷಮ್ಯ ಅಪರಾಧವೆಂದು ತಿಳಿಯುತ್ತಿದ್ದರು. ಆದರೆ ನಾಥರಾಯರು ಇಂತಹ ಮಾತುಗಳಿಗೆ ತಮ್ಮ ಲಕ್ಷವನ್ನು ಕೊಡಲೇ ಇಲ್ಲ. ಸಂಸ್ಕೃತ ಭಾಷೆಯು ನಾಥರಿಗೆ ಪೂರ್ಣವಾಗಿ ಪ್ರಾಪ್ತವಾಗಿತ್ತು. ಸಂಸ್ಕೃತದಲ್ಲಿ ಅವರ ಪ್ರೀತಿಯೂ ಇತ್ತು. ಇವರ ಬಾಲ್ಯದಲ್ಲಿ ಸಂಸ್ಕೃತ ಕಲಿಸುವ ಶಾಸ್ತ್ರಿಯು ನನ್ನಲ್ಲಿರುವ ಬಂಡವಾಳವು ಮುಗಿಯಿತು, ನನಗಿಂತಲೂ ಅಧಿಕ ಜ್ಞಾನವಿರುವ ಸದ್ಗುರುವಿಗೆ ಶರಣಾಗಲು ಆದೇಶ ನೀಡಿದರು. ಇದನ್ನು ನೋಡಿದರೆ ನಾಥರಾಯರಲ್ಲಿರುವ ಸಂಸ್ಕೃತ ಪ್ರಭುತ್ವವು ಎಷ್ಟೆಂಬುದು ಮನವರಿಕೆಯಾಗುವುದು. ಒಂದು ದಿನ ಶಿವಾಲಯದಲ್ಲಿ ಪ್ರಾಪ್ತವಾದ ಆದೇಶದಂತೆ ಶ್ರೀನಾಥರಾಯರು ಜನಾರ್ದನಸ್ವಾಮಿಯವರಿಗೆ ಶರಣಾದರು.

ಆ ಕಾಲದಲ್ಲಿ ಸಂಸ್ಕೃತ ಪಂಡಿತರು ಮರಾಠಿಯ ಅವಹೇಳನೆ ಮಾಡುತ್ತಿದ್ದರೂ ಕೂಡ ನಾಥರು ಸಂಸ್ಕೃತ ಭಾಷೆಯ ನಿಂದೆಯಾಗಲಿ ಅಥವಾ ಅಪಮಾನವನ್ನು ಎಲ್ಲಿಯೂ ಮಾಡಲಿಲ್ಲ. ಏಕೆಂದರೆ ಪರಮಾರ್ಥದಲ್ಲಿ ಭಾಷೆಯ ವಿಷಯವು ಗೌಣವಾಗಿರುವುದು. ನಾಥರಾಯರು ಹೀಗೆ ಹೇಳುವರು :

ಸಂಸ್ಕೃತ ವಂದ್ಯ ಪ್ರಾಕೃತ ನಿಂದ್ಯ । ಹೇ ಬೋಲ ಕಾಯ ಹೋತೀ ಶುದ್ಧ ।

ಹಾಹೀ ಅಭಿಮಾನ ವಾದ । ಅಹಂತಾ ಬಂಧ ಪರಮಾರ್ಥೀ ॥ಅ೫॥೧೦೩೨॥

(ಅರ್ಥ :- ಸಂಸ್ಕೃತ ಭಾಷೆಯು ವಂದ್ಯ ಮತ್ತು ಪ್ರಾಕೃತ ಭಾಷೆಯು ನಿಂದ್ಯ, ಹೀಗೆ ಹೇಳುವಿಕೆಯು ಯೋಗ್ಯವೇ? ಈ ವಾದವು ಅಭಿಮಾನದಿಂದ ನಿರ್ಮಾಣವಾಗುವುದು. ಅಹಂಕಾರವು ಇದು ಪರಮಾರ್ಥದಲ್ಲಿನ ಬಂಧನೆಯಾಗಿರುವುದು.)

ಇಂದಿನ ದಿನಗಳಲ್ಲಿ ಯಾವ ಪ್ರಕಾರವಾಗಿ ಇಂಗ್ಲೀಷ ಭಾಷೆಯ ಪ್ರಖರವಾದ ತೇಜದಿಂದ ಮಹಾ ಮಹಾ ವಿದ್ವಾನರು ಮರಾಠೀ ಭಾಷೆಯ ಉಪೇಕ್ಷೆ ಮಾಡುತ್ತಿರುವುದು ತೋರುವುದೋ, ಅದೇ ಪ್ರಕಾರವಾಗಿ ಆ ಕಾಲದಲ್ಲಿ ಸಂಸ್ಕೃತದ ಪ್ರಭಾವದಿಂದ ಮರಾಠೀ ಭಾಷೆಯ ಕುತ್ತಿಗೆಯನ್ನು ಹಿಚುಕಲ್ಪಡುತ್ತಿತ್ತು. ಆ ಕಾಲದಲ್ಲಿ ಪ್ರಾಪ್ತವಾದ ವಾಙ್ಮಯಕ್ಕೆ ಮರಾಠೀ ಭಾಷೆಯಲ್ಲಿ ವಿಶೇಷವಾಗಿ ಗ್ರಂಥ ರಚನೆಯಾಗುತ್ತಿದ್ದಿಲ್ಲ. ಹೀಗೆ ಕಂಡುಬರುವುದು. ಭಾಷೆ- ಇತಿಹಾಸ ಸಂಶೋಧನೆಯ ಪರಿಶ್ರಮದಿಂದ ಇಂದು ಸಂತ ವಾಙ್ಮಯಕ್ಕೆ ಮಹತ್ವ ಕೊಟ್ಟಿದ್ದರೂ ಮುಕುಂದರಾಜನ ''ವಿವೇಕಸಿಂಧೂ'' ಎಂಬ ಗ್ರಂಥ ಬಿಟ್ಟರೆ ಶ್ರೀಜ್ಞಾನೇಶ್ವರ ಮಹಾರಾಜ ಹಾಗೂ ಅವರ ಸಮಕಾಲೀನ ಸಂತರ ಮಾತ್ರ ವಾಙ್ಮಯವು ಉಪಲಬ್ಧವಿದೆ. ತದನಂತರ ನಾಥರಾಯರವರೆಗೆ ನಡುವಿನ ನೂರಾ ಎಪ್ಪತ್ತೈದರಿಂದ ಎರಡು ನೂರು ವರ್ಷಗಳವರೆಗೆ ಯಾವ ಸಂತರಿಂದಲೂ ಸಂತ ವಾಙ್ಮಯವು ನಿರ್ಮಾಣವಾಗಿರುವುದು ಉಪಲಬ್ಧವಿಲ್ಲ. ಜ್ಞಾನೋಬರಾಯ, ನಾಮದೇವರಾಯ ಹಾಗೂ ಆ ಕಾಲದ ಸಂತರ ವಾಙ್ಮಯವು ಇವೇ ಮರಾಠಿಯಲ್ಲಿನ ಪ್ರಮುಖ ಗ್ರಂಥಗಳಾಗಿರುವುವು. ಆ ಕಾಲದಲ್ಲಿ ಮುದ್ರಣ ಕಲೆಯು ಅಸ್ತಿತ್ವದಲ್ಲಿರಲಿಲ್ಲ. ಹಸ್ತಲಿಖಿತ ಗ್ರಂಥಗಳ ಪ್ರತಿಗಳನ್ನು ತಯಾರಿಸುವುದು ಬಹಳ ಕಠಿಣ ಕಾರ್ಯವಾಗಿತ್ತು. ಆದ್ದರಿಂದ ಬಹುಸಂಖ್ಯೆಯಲ್ಲಿ ಜನರು ಸಂತ ವಾಙ್ಮಯದಿಂದ ವಂಚಿತರಾಗಿದ್ದರು. ಸುದೈವದಿಂದ ಇಂದು ಮುದ್ರಣ ಕಲೆಯ ಪ್ರಗತಿಯು ತಂತ್ರಜ್ಞಾನದಿಂದ ಬಹು ಶೀಘ್ರವಾಗಿ ಹಾಗೂ ಆ ಕಾಲದ ತುಲನೆಯಿಂದ ಕಡಿಮೆ ಖರ್ಚಿನಲ್ಲಿ ಗ್ರಂಥದ ಪ್ರತಿಗಳು ಸಿದ್ಧವಾಗುವುವು. ಇಂದು ಅಸಂಖ್ಯ ವಾಚಕರು ಇದರ ಲಾಭವನ್ನು ಪಡೆಯುವಂತಾಗಿರುವುದು. ಆದರೆ ಆ ಕಾಲದಲ್ಲಿ ಈ ಮಾತು ಅಶಕ್ಯವಾಗಿತ್ತು. ಪೂರ್ವಕಾಲದಲ್ಲಿ ಸಂಸ್ಕೃತ ಹಸ್ತಲಿಖಿತ ಗ್ರಂಥಗಳು ಸಾಕಷ್ಟು ದೊರಕುತ್ತಿದ್ದವು. ಆದ್ದರಿಂದ ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಎಷ್ಟೋ ಶಬ್ದಗಳನ್ನು ಇಂದು ಬಳಸುವಿಕೆ ಇರುವುದಿಲ್ಲ. ಎಷ್ಟೋ ಶಬ್ದಗಳ ಮೂಲರೂಪವು ಬಹಳಷ್ಟು ಬದಲಾಯಿಸಿಬಿಟ್ಟಿವೆ. ಇಂದಿನ ನಮ್ಮ ಭಾಷೆಯು ಹೇಗಾಗಿದೆ ಎಂಬುವುದು ಅಭ್ಯಾಸ ಮಾಡುವವರಿಗೆ ನಾಥರಾಯರ ಗ್ರಂಥದಿಂದ ಸಾಕಷ್ಟು ಲಾಭವಾದೀತು.

ಜ್ಞಾನೇಶ್ವರ ಮಹಾರಾಜರ ವಿಚಾರಗಳ ಪ್ರಭಾವವು ನಾಥರಾಯರಲ್ಲಿ ಬೀರಿರುವುದಲ್ಲದೇ ಎಷ್ಟೋ ಕಡೆಗಳಲ್ಲಿ ಅವರ ಓವೀಗಳು ತಂತೋತಂತವಾಗಿ ಕೂಡಿಕೊಳ್ಳುತ್ತವೆ. ಜ್ಞಾನೇಶ್ವರೀಯಲ್ಲಿ ಐದನೆಯ ಅಧ್ಯಾಯದ ಕೊನೆಯಲ್ಲಿ ಮಾಉಲಿಯವರು ಒಂದು ವಿಚಾರವನ್ನು ಮಂಡಿಸಿರುವರು.

ಏಕ್ಹವೀ ತರೀ ಅವಧಾರಾ । ಜೋ ದಾವಿಲಾ ತುಮ್ಹಿ ಅನುಸಾರಾ ।
ತೋ ಪಶ್ಚಿಮ್ಯಾಹೂನಿ ಪಾಯ ಉತಾರಾ । ಸೋಹಪಾ ಜೈಸಾ ॥೧೬೫॥

ತೈಸಾ ಸಾಂಖ್ಯಾಹೂನಿ ಪ್ರಾಂಜಳಾ । ಆಮ್ಹಾಸಾರಿಖಿಯಾ ಅಭೋಳಾ ।
ಏಥ ಆಹಾತಿ ಪರಿ ಕಾಂಹೀ ಕಾಳಾ । ತೋ ಸಾಹೋ ಯೇ ಪರ ॥೧೬೬॥

ನಾಥರಾಯರು ಭಾಗವತದಲ್ಲಿನ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಇದೇ ವಿಷಯವನ್ನು ಮಂಡಿಸಿರುವರು.

ಪಶ್ಚಿಣಿಯಾಪರಿಸ ಪಾಯಉತಾರಾ । ಅಬಳೀ ಉತರಿಜೇ ಭವಸಾಗರಾ ।
ತೈಸಾ ಸಾಧಕಾಲಾಗೀ ಸೋಪಾರಾ । ಉಪಾವ ಪುಢಾರಾ ಹರಿ ಸಾಂಗೇ ॥೭೩೭॥

ಭಾಗವತದ ಇಪ್ಪತ್ತೊಂಭತ್ತನೆಯ ಅಧ್ಯಾಯದಲ್ಲಿ ಇದೇ ಅನುವಾದವು ದೊರಕುವುದು.

ಪಶ್ಚಿಣಿಯಾಪರಿಸ ಪಾಯಉತಾರಾ । ಸ್ತ್ರಿಯಾ ಬಾಳಾ ಅತಿಸೋಪಾರಾ ।
ತೈಶಿಯಾ ಉಪಾಯಪ್ರಕಾರಾ । ಶಾರ್ಙ್ಗಧರಾ ಸಾಂಗಿಜೇ ॥೯೪॥

ಏಕನಾಥೀ ಭಾಗವತ ವ್ಯತಿರಿಕ್ತವಾಗಿ ಭಾವಾರ್ಥ ರಾಮಾಯಣ, ರುಕ್ಮಿಣೀ ಸ್ವಯಂವರ, ಹಸ್ತಾಮಲಕ, ಆನಂದ ಲಹರೀ, ಚಿರಂಜೀವ ಪದ ಹೀಗೆ ಅನೇಕ ಗ್ರಂಥಗಳನ್ನು ನಾಥರಾಯರು ಬರೆದಿರುವರು. ಭಾರುಡದ ಈ ಪ್ರಕಾರವನ್ನು ಪ್ರಥಮವಾಗಿ ನಾಥರಾಯರೇ ಪ್ರಾರಂಭಿಸಿದರು. ಅವರ ಅಭಂಗಗಳಲ್ಲಿ ರಸಾಳ ಮಾಧುರ್ಯವಿರುವುದು. ಕೆಲವು ಸ್ಫುಟ ಅಭಂಗಗಳೂ ಕೂಡ ಸೇರಿಕೊಂಡಿರುವುವು.

ವಾರಕರೀ ಸಾಂಪ್ರದಾಯಗಳಲ್ಲಿ ಜ್ಞಾನೇಶ್ವರೀ, ತುಕಾರಾಮ ಗಾಥಾ ಹಾಗೂ ಶ್ರೀಮದ್‌ಭಾಗವತ ಈ ಮೂರು ಗ್ರಂಥಗಳಿಗೆ ಪ್ರಸ್ಥಾನತ್ರಯೀ ಎಂದು ಮನ್ನಿಸಲಾಗಿರುವುದು. ಈ ಪ್ರಸ್ಥಾನತ್ರಯೀಗಳು ಅಖಿಲ ಸಮಾಜಕ್ಕೆ ಧರ್ಮದ ಧೈರ್ಯ ಹಾಗೂ ಭಕ್ತಿಯ ಭಾವವನ್ನು ಕೊಟ್ಟು ಎಲ್ಲರಿಗೂ ತೀರಿಸಲು ಬಾರದ ಋಣಿಯನ್ನಾಗಿ ಮಾಡಿವೆ.

ನಾಥರಾಯರ ವಾಙ್ಮಯ ಕುರಿತು ಬರೆಯುವಷ್ಟು ಪ್ರಗಲ್ಭತೆ ಹಾಗೂ ಅಭ್ಯಾಸವು ನನ್ನಲ್ಲಿಲ್ಲ. ಪ್ರಸ್ತಾವನೆಯ ರೂಪ

ದಿಂದ ಮನದಲ್ಲಿ ಬಂದ ವಿಚಾರವನ್ನು ಅವರ ಕೃಪೆಯಿಂದಲೇ ವ್ಯಕ್ತಗೊಳಿಸುವ ಪ್ರಯತ್ನ ಮಾಡಿದೆ.

ತರೀ ವಿಶ್ವ ಪ್ರಗಟತಿಯಾ ಗಭಸ್ತೀ । ಕಾಯ ಹಾತಿವೇನ ನ ಕೀಜೇ ಆರತೀ? ।
ಕಾ ಚುಳೋದಕೇ ಅಪಾಂಪತೀ । ಅರ್ಘ್ಯ ನೇದಿಜೇ ॥

ಇದುವೇ ಬರೆಯುವ ಹಿಂದಿನ ಭಾವನೆಯಾಗಿದೆ. ನಾಥರಾಯರ ಚರಣಗಳಲ್ಲಿ ನತಮಸ್ತಕನಾಗುವುದೊಂದೇ ನಮ್ಮ ಕಾರ್ಯವಾಗಿದೆ.

ಶರಣ ಶರಣ ಏಕನಾಥಾ । ಚರಣೀ ಮಾಥಾ ಠೇವಿಲಾ ॥

ಹೃದ್ಗತ

ಸಂತರು ಭಾಷೆಯ ಬಂಧನೆಗಳನ್ನು ಎಂದೂ ಪಾಲಿಸಿರುವುದಿಲ್ಲ. ಜನರತ್ತ ವಿಚಾರ, ಭಾವನೆ ಮುಟ್ಟಿಸುವ ಆದೇ ಭಾಷೆಯು ಸಂತರ ತತ್ವವಾಗಿತ್ತು. ಭಾಗವತದಂತಹ ಗ್ರಂಥವು ಕನ್ನಡ ಭಾಷೆಯಲ್ಲಿ ರೂಪಾಂತರವಾಗುತ್ತಿರುವುದು ಇದು ಕನ್ನಡ ಭಾಷೆಯ ವಾರಕರೀಗಳವರಿಗೆ ಪರ್ವಕಾಲವಾಗಿದೆ. ವಾಸ್ತವಿಕವಾಗಿ ಈ ಕಾರ್ಯವು ಇದಕ್ಕಿಂತ ಮುಂಚೆಯೇ ಆಗಬೇಕಾಗಿತ್ತು. ಆದರೆ, ಯಾವುದೇ ಕಾರ್ಯಕ್ಕೆ ತಕ್ಕ ವೇಳೆ ಬರಬೇಕಾಗುವುದು. ಈ ಸಮಯದಲ್ಲಿ ಭಾಗವತ ಗ್ರಂಥವು ಕನ್ನಡದಲ್ಲಿ ರೂಪಾಂತರ ವಾಗಬೇಕೆಂಬ ಈಶ್ವರ ಸಂಕೇತ ಇದ್ದ ಕಾರಣದಿಂದಲೇ ಈಗ ಈ ಕಾರ್ಯವು ಸಾಧಿಸಿರುವುದು.

ಮರಾಠೀ ಸಂತರ ಸಂಪೂರ್ಣ ವಾಙ್ಮಯವು (ಅಪವಾದ ಬಿಟ್ಟು) ಮರಾಠೀ ಭಾಷೆಯಲ್ಲಿಯೇ ಇರುವುದು. ಈ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆಯುವುದು ಹಾಗೂ ಅಭಂಗಗಳ ಅಥವಾ ಗ್ರಂಥಗಳ ಮತಿತಾರ್ಥವನ್ನು ಕನ್ನಡ ಭಾಷೆಯಲ್ಲಿ ಸ್ಪಷ್ಟೀಕರಣ ಮಾಡುವುದು ಈಗಿನ ಮಹತ್ವದ ಅವಶ್ಯಕತೆಯಾಗಿರುವುದು. ಹ.ಭ.ಪ. ಕೃಷ್ಣಾಜೀ ಜ್ಞಾನಮೋಶೆ ಇವರು ಇದಕ್ಕಿಂತಲೂ ಮುನ್ನ ಕೆಲವು ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ರೂಪಾಂತರ ಮಾಡಿರುವರು. ಈ ಭಾಗವತದ ಕನ್ನಡ ರೂಪಾಂತರ ನಂತರ ಆವರು ಉಳಿದ ಗ್ರಂಥಗಳಿಗೂ ಕೂಡ ಕನ್ನಡದಲ್ಲಿ ರೂಪಾಂತರ ಮಾಡುವ ಕಾರ್ಯವನ್ನು ಶಕ್ಯವಾದಂತೆ ಮಾಡುತ್ತಿರಬೇಕು. ಇರಲಿ.

ನಾಥರಾಯರ ಚರಣಗಳಲ್ಲಿ ವಿನಮ್ರನಾಗಿ ಮಸ್ತಕವನ್ನಿಟ್ಟು ಇಷ್ಟೇ ಹೇಳುವೆನು

ಶರಣ ಶರಣ ಏಕನಾಥಾ । ಚರಣೀ ಮಾಥಾ ಠೇವಿಲಾ ।೧॥ ನಕಾ ಪಾಹೂ ಗುಣದೋಷ ।
ಝಾಲೋ ದಾಸ ಪಾಯಾಂಚಾ ।೨॥ ಆತಾ ತುಮ್ಹೀ ನುಪೇಕ್ಷಿತಾ । ನಾಹೀ ಸತ್ತಾ ಆಪುಲಿಯಾ ।೩॥
ತುಕಾ ಮ್ಹಣೇ ಭಾಗವತ । ಕೇಲೇ ಶ್ರುತ ಸಕಳಾ ।೪॥

– ಹ.ಭ.ಪ. ವಿಠ್ಠಲರಾವ ತಾತ್ಯಾಸಾಹೇಬ ವಾಸಕರ
ಶ್ರೀಕ್ಷೇತ್ರ ಪಂಢರಪೂರ

ವಿಷಯಾನುಕ್ರಮಣಿಕೆ

ಹದಿನಾರನೆಯ ಅಧ್ಯಾಯ

ಹದಿನೇಳನೆಯ ಅಧ್ಯಾಯ

ಹದಿನೆಂಟನೆಯ ಅಧ್ಯಾಯ

ಹತ್ತೊಂಭತ್ತನೆಯ ಅಧ್ಯಾಯ

ಇಪ್ಪತ್ತನೆಯ ಅಧ್ಯಾಯ

ಇಪ್ಪತ್ತೊಂದನೆಯ ಅಧ್ಯಾಯ

ಇಪ್ಪತ್ತೆರಡನೆಯ ಅಧ್ಯಾಯ

ಇಪ್ಪತ್ತೂರನೆಯ ಅಧ್ಯಾಯ

ಇಪ್ಪತ್ನಾಲ್ಕನೆಯ ಅಧ್ಯಾಯ

ಇಪ್ಪತ್ತೈದನೆಯ ಅಧ್ಯಾಯ

ಇಪ್ಪತ್ತಾರನೆಯ ಅಧ್ಯಾಯ

ಇಪ್ಪತ್ತೇಳನೆಯ ಅಧ್ಯಾಯ

ಇಪ್ಪತ್ತೆಂಟನೆಯ ಅಧ್ಯಾಯ

ಇಪ್ಪತ್ತೊಂಭತ್ತನೆಯ ಅಧ್ಯಾಯ

ಮೂವತ್ತನೆಯ ಅಧ್ಯಾಯ

ಮೂವತ್ತೊಂದನೆಯ ಅಧ್ಯಾಯ

ಶ್ರೀಪಾಂಡುರಂಗ ಪ್ರಸನ್ನ



ಏಕಾಜನಾರ್ದನೀ ಪೂಜಿಲೇ । ತೇ ವಿಟೇವರೀ ದೇಖಿಲೇ ॥


ಶ್ರೀಸಂತ ಏಕನಾಥ ಮಹಾರಾಜರು ಪ್ರತಿನಿತ್ಯ ಪೂಜಿಸಿದ ವಿಜಯೀ ಪಾಂಡುರಂಗ

ಶ್ರೀಗುರು ದತ್ತಾತ್ರೇಯ ನಮಃ



ಕಲಿಯುಗೀ ತಾರಕ । ಸ್ವಾಮೀ ದತ್ತರಾಜ ಏಕ ।
ತ್ಯಾಚೇ ನಾಮ ನಿತ್ಯ ಗಾವೇ । ಭವಸಿಂಧೂಸಿ ತರಾವೇ ॥

ಶ್ರೀ ಸದ್ಗುರು ಜನಾರ್ದನಸ್ವಾಮಿ



ಓಂ ನಮೋ ಜೀ ಜನಾರ್ದನಾ । ನಾಹೀ ಭವ ಅಭವ ಭಾವನಾ ।
ನ ದೇಖೋನಿ ಮೀತೂಪಣಾ । ನಮನ ಶ್ರೀ ಚರಣಾ ಸದ್ಗುರುರಾಯಾ

ಶ್ರೀ ಸಂತ ಏಕನಾಥ ಮಹಾರಾಜ



ಶರಣ ಶರಣ ಏಕನಾಥಾ । ಚರಣೆ ಮಾಥಾ ಠೇವಿಲಾ ॥

ಶ್ರೀ ರಾವ ಸಾಹೇಬ ಮಹಾರಾಜ (ನಾಥ ವಂಶಜರು) ಪೈಠಣ



ಬ್ರಹ್ಮಾಂಡಭರೀ ಕೀರ್ತಿ ಸಂತಾಂಚಾ ಮಹಿಮಾ ।
ವರ್ಣಾವಯಾ ಆಮ್ಹಾ ಮತಿ ಥೋಡೀ ॥

ಶ್ರೀ ಸಂತ ಸದ್ಗುರು ಶಂಕರಸ್ವಾಮಿ ಲಾಖೇ, ಶಿವೂರಕರ ಮಹಾರಾಜ



ಸದ್ಗುರು ಸ್ವಾಮೀಚಾ ಮಹಿಮಾ ಅಗಾಧ ।
ವಚನೇಚಿ ಬೋಧ ಕರೀ ಶಿಷ್ಯಾ ॥

ಶ್ರೀ ಚೈತನ್ಯ ಸದ್ಗುರು ಹ.ಭ.ಪ. ತಾತ್ಯಾಸಾಹೇಬ
ವಾಸಕರ ಮಹಾರಾಜ



ಸದ್ಗುರುಚೇ ಚರಣೀ ಠೇವಿಲಾ ಮಸ್ತಕ ।
ದೇಊನಿಯಾ ಹಸ್ತಕ ಉಠವಿಲೇ ॥

ಶ್ರೀ ಚೈತನ್ಯ ಸದ್ಗುರು ಹ.ಭ.ಪ. ದಾದಾಸಾಹೇಬ
ವಾಸಕರ ಮಹಾರಾಜ



ಸದ್ಗುರುನೇ ಮಜ ಆಶೀರ್ವಾದ ದಿಲಾ ।
ಹರುಷ ಭರಲಾ ಹೃದಯೀ ಮಾಝ್ಯಾ ॥

ಸಾರ್ಥ ಶ್ರೀ ಏಕನಾಥೀ ಭಾಗವತ

ಹದಿನಾರನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯನಮಃ ॥ ಓಂ ನಮೋ ಸದ್ಗುರು ಶ್ರೀಮೂರ್ತೀ । ಚರಾಚರ ತುಝೀ ವಿಭೂತೀ । ವಿಶ್ವಾತ್ಮಾ ವಿಶ್ವಸ್ಫೂರ್ತೀ । ಅಮೂರ್ತಮೂರ್ತೀ ಶ್ರೀಗುರುರಾಯಾ ॥೧॥ ತುಝೇ ಮೂರ್ತೀಚೇ ಮಹಿಮಾನ । ಸಕಳ ಶಾಸ್ತ್ರಾ ಅತರ್ಕ್ಯ ಜಾಣ । ಶ್ರುತೀನೇ ಘೇತಲೇ ಮೌನ । ಶಬ್ದೇ ಆಣ ವಾಹಿಲೀ ॥೨॥ ಆಣ ವಾಹಿಲೀ ದೃಷ್ಟಾಂತೀ । ತುಜಸಮಾನ ನಾಹೀ ದುಜೀ ಸ್ಥಿತೀ । ಜೇ ಜೇ ಯೋಜಾವೀ ಉಪಪತ್ತೀ । ತೇ ತೇ ವಿಭೂತೀ ಪೈ ತುಝೀ ॥೩॥ ತುಝಿಯಾ ಪ್ರಭಾವಾಚೀ ಐಶೀ ಖೋಡೀ । ಜೇ ದುಜೇಪಣಾಚೇ ಮೂಳ ತೋಡೀ । ಮಗ ಏಕಪಣಾಚೇ ಪರವಡೀ । ದೃಷ್ಟಾಂತ ಕಾಢೀ ಕೋಣ ಕೋಠೇ ॥೪॥ ಕೋಠೇ ತುಝೇ ಸ್ಥಾನಮಾನ । ಹೇಚ ಸರ್ವಥಾ ನ ಕಳೇ ಜಾಣ । ಅಗಾಧ ತುಝೇ ಮಹಿಮಾನ । ಕೈಸೇನಿ ಧ್ಯಾನ ಕರಾವೇ ॥೫॥ ಹೇತು ಮಾತು ದೃಷ್ಟಾಂತೂ । ನ ರಿಘೇ ಜ್ಯಾಂಚೇ ಶಿವೇ ಆಂತೂ । ತೋ ಭಾಗವತೀಚಾ ಭಾಗವತಾರ್ಥೂ । ಓವಿಯಾ ಆಂತೂ ಬೋಲವಿಶೀ ॥೬॥ ತೇ ಮಾಝೀ ಮರ್ಹಾಟೀ ಆರುಷ ಬೋಲ । ಸದ್ಗುರೂನೀ ಕೇಲೇ ಸಖೋಲ । ತೇಥಿಂಚ್ಯಾ ಪ್ರೇಮಾಚೇ ಜೇ ಬೋಲ । ಜಾಣತೀ ಕೇವಳ ಗುರುಭಕ್ತ ॥೭॥ ಜ್ಯಾಸೀ ನಾಹೀ ಗುರುಚರಣೀ ಭಕ್ತೀ । ತ್ಯಾಸೀ ಕೈಸೇನಿ ಹೋಈಲ ವಿರಕ್ತೀ । ಜರೀ ಪಢಲೇ ಶ್ರುತಿಸ್ಮೃತೀ । ಶಾಸ್ತ್ರವ್ಯುತ್ಪತ್ತೀ ಕೇಲ್ಯಾಹೀ ॥೮॥ ಕರಿತಾ ಸಾಧನಾಂಚ್ಯಾ ಕೋಟೀ । ಸಾಧನೀ ಸಮಾಧಾನ ನುಠೀ । ಝಾಲಿಯಾ ಸದ್ಗುರುಕೃಪಾದೃಷ್ಟೀ । ಬ್ರಹ್ಮತ್ವೇ ಪುಷ್ಟೀ ಗುರುಭಕ್ತಾ ॥೯॥ ತೋ ತೂ ಸದ್ಗುರು ಶ್ರೀಜನಾರ್ದನ । ಸಕಳ ಜಗಾಚೇ ಅಧಿಷ್ಠಾನ । ಭೂತೀ ಭೂತಾತ್ಮಾ ತೂ ಆಪಣ । ಸಹಜೇ ಜಾಣ ಸಮಸಾಮ್ಯೇ ॥೧೦॥ ಸಮಸಾಮ್ಯ ಸರ್ವ ಭೂತೀ । ಜ್ಯಾಂಸೀ ಘಡೇ ಸದ್ಗುರುಭಕ್ತೀ । ತೇಚಿ ಯೇ ಶ್ರೀಮಹಾಭಾಗವತೀ । ಅರ್ಥಪ್ರಾಪ್ತೀ ಪ್ರವಿಷ್ಟ ॥೧೧॥

ಓಂಕಾರರೂಪ ಸದ್ಗುರು ಶ್ರೀಮೂರ್ತಿಯೇ, ನಿನಗೆ ನಮಸ್ಕಾರವು, ಹೇ ಶ್ರೀಸದ್ಗುರುರಾಯನೇ, ಈ ಸರ್ವ ಚರಾಚರ ವಿಶ್ವವು ನಿನ್ನ ಸ್ವರೂಪವಾಗಿದೆ. ವಿಶ್ವದ ಆತ್ಮವು ನೀನೇ ಇರುವೆ ಮತ್ತು ಅದರ ಸ್ಫುರಣೆಯೂ ಸಹ ನೀನೇ ಇರುವೆ. ಅಮೂರ್ತ ಮತ್ತು ಮೂರ್ತ ಹೀಗೆ ಎರಡೂ ಕೂಡ ನೀನೇ ಇರುವೆ ॥೧॥ ನಿನ್ನ ಮೂರ್ತಿಯ ಮಹಿಮೆಯು ಸರ್ವ ಶಾಸ್ತ್ರಗಳಿಗೆ ಅತರ್ಕ್ಯವಾಗಿದೆ. ನಿನ್ನ ವರ್ಣನೆಯನ್ನು ಮಾಡುತ್ತ ಮಾಡುತ್ತ ಶ್ರುತಿಯು ಮೌನ ತಾಳಿತು ಹಾಗೆಯೇ ನಿನ್ನ ಮಹಿಮೆಯನ್ನು ವರ್ಣಿಸಲು ಶಕ್ಯವಿಲ್ಲ ಎಂದು ಶಬ್ದಗಳು ಮಾತ್ರ ಆಣೆ ಮಾಡಿ ಹೇಳಿದವು ॥೨॥ ನಿನ್ನನ್ನು ವರ್ಣಿಸಲು ಅನ್ಯ ಉಪಮೇಯೇ ಇಲ್ಲದ್ದಕ್ಕಾಗಿ ದೃಷ್ಟಾಂತವೂ ಕೂಡ ಆಣೆ ತಿಂದಿತು. ಉಪಮೆಗಾಗಿ ಯಾವ ಯಾವುದನ್ನು ಮುಂದೆ ಮಾಡಬೇಕೋ, ಅವೆಲ್ಲವೂ ನಿನ್ನ ಸ್ವರೂಪವೇ ಆಗಿವೆ ॥೩॥ ನಿನ್ನ ಪ್ರಭಾವದಲ್ಲಿ ಎಂತಹ ಚಾತುರ್ಯವಿದೆ ಎಂದರೆ ಎರಡೆನ್ನುವ ಮಾತು ಬೇರು ಸಮೇತ ಕಿತ್ತಿ ಬೀಳುವುದು. ಆಗ ಸರ್ವತ್ರವೂ ಒಂದೇ ಒಂದು ತುಂಬಿಕೊಂಡಿರಲು ಅದರಂತಹ ಇನ್ನೊಂದು ದೃಷ್ಟಾಂತವನ್ನು ಯಾರಿಗೆ ಹೇಗೆ ಕೊಡಲು ಬರುವುದು? ॥೪॥ ನಿನ್ನ ಸ್ಥಾನವಾದರೂ ಎಲ್ಲಿದೆ ಎಂಬುವುದೂ ಕೂಡ ತಿಳಿಯುವುದಿಲ್ಲ. ನಿನ್ನ ಮಹಿಮೆಯು ನಿಜವಾಗಿಯೂ ಅಗಾಧವಾಗಿದೆ. ಅಂದಮೇಲೆ ನಿನ್ನ ಧ್ಯಾನವಾದರೂ ಹೇಗೆ ಮಾಡಬೇಕು? ॥೫॥ ಯಾವುದರ ಸೀಮೆಯಲ್ಲಿ ಹೇತು, ಮಾತು, ದೃಷ್ಟಾಂತಗಳು ಪ್ರವೇಶಮಾಡಲು ಸಾಧ್ಯವಿಲ್ಲದಿರಲು, ನೀನು ಅಂತಹ ಭಾಗವತದ ಅರ್ಥವನ್ನು ಓವೀ ರೂಪದಲ್ಲಿ ಹೇಳಿಸುತ್ತಿರುವೆ ॥೬॥ ಮರಾಠೀ ಭಾಷೆಯ ನನ್ನ ಯಾವ ಶಬ್ದಗಳು ನಿಜವಾಗಿ ನೋಡಿದರೆ ಅವು ಸಾಧಾರಣವಾಗಿರುವುವು. ಆದರೆ ಸದ್ಗುರುಗಳು ಅವುಗಳನ್ನು ಗಹನಗೊಳಿಸಿದರು. ಅದರಲ್ಲಿನ ಪ್ರೇಮದ ಮಾತುಗಳು ಗುರುಭಕ್ತರಿಗೆ ಮಾತ್ರ ತಿಳಿಯುವುವು ॥೭॥ ಯಾರಲ್ಲಿ ಗುರುಚರಣಗಳಲ್ಲಿನ ಭಕ್ತಿಯು ಇಲ್ಲವೋ, ಅವರು ಶ್ರುತೀ, ಸ್ಮೃತಿಗಳ ಅಭ್ಯಾಸವನ್ನು ಎಷ್ಟೇ ಮಾಡಲಿ, ಅವರಿಗೆ ವಿರಕ್ತಿಯು ಹೇಗೆ ಲಭಿಸಬೇಕು? ॥೮॥ ಕೋಟ್ಯಾವಧೀ ಸಾಧನೆಗಳ ಆಚರಣೆಯನ್ನು ಮಾಡಿದರೂ ಸಹ, ಆ ಸಾಧನೆಗಳಿಂದ ನಿಜವಾದ ಸಮಾಧಾನವು ಪ್ರಾಪ್ತವಾಗುವುದಿಲ್ಲ. ಆದರೆ, ಸದ್ಗುರುಗಳ ಕೃಪೆಯಿಂದ ಗುರುಭಕ್ತನಿಗೆ ಬ್ರಹ್ಮತ್ವದ ಪ್ರಾಪ್ತಿಯು ಸಹಜವಾಗಿ ದೊರೆಯುವುದು ॥೯॥ ಸದ್ಗುರು ಜನಾರ್ದನನು ನೀನು ಹೀಗೆ ಸರ್ವ ಜಗತ್ತಿನ ಅಧಿಷ್ಠಾನನಾಗಿರುವೆ. ಸ್ವಾಭಾವಿಕ ಐಕ್ಯ ರೂಪದಿಂದ ಸರ್ವ ಪ್ರಾಣಿಮಾತ್ರರ ನೀನು ಸ್ವತಃ ಆತ್ಮನಾಗಿರುವೆ ॥೧೦॥ ಯಾರಿಗೆ ಸದ್ಗುರುಗಳ ಭಕ್ತಿಯು ಲಭಿಸುವುದೋ, ಅವರು ಸರ್ವ ಭೂತಮಾತ್ರಗಳಲ್ಲಿ ಸಮತ್ವ ಭಾವದಿಂದಿರುವರು. ಆದ್ದರಿಂದ ಅವರಿಗೆ ಆ ಯಾವ ಭಾಗವತದಲ್ಲಿನ ಪ್ರೇಮದ ರಹಸ್ಯವು ತಿಳಿಯುವುದು ॥೧೧॥

ಝಾಲಿಯಾ ಸದ್ಗುರುಕೃಪಾ ವರಿಷ್ಠ । ನ ಕರಿತಾ ವ್ಯುತ್ಪತ್ತೀಚೇ ಕಷ್ಟ । ಭಾಗವತಾರ್ಥೀ ಹೋಯ ಪ್ರವಿಷ್ಟ । ಭಕ್ತ ಸುಭಟ ಭಾವಾರ್ಥೀ ॥೧೨॥ ಹೃದಯೀ ಝಾಲಿಯಾ ಸದ್ಭಾವೋ । ಭಾವೇ ಪ್ರಕಟೇ ದೇವಾಧಿದೇವೋ । ತೇಥೇ ಭಾಗವತಾಚಾ ಅಭಿಪ್ರಾವೋ । ಸಹಜೇಚಿ ಪಹಾ ವೋ ಠಸಾವೇ ॥೧೩॥ ಯಾಲಾಗೀ ಕರಿತಾ ಗುರುಭಕ್ತೀ । ಪ್ರಾಪ್ತ ಹೋಈಜೇ ಭಾಗವತಾರ್ಥೀ । ತೇಥ ಕ್ಯಾವಾದಿ ವ್ಯುತ್ಪತ್ತೀ । ನಾನಾ ಯುಕ್ತೀ ಕಿಮರ್ಥ ॥೧೪॥ ಕಿಮರ್ಥ ಕರಾವೇ ಶಾಸ್ತ್ರಜ್ಞಾನ । ಕಿಮರ್ಥ ಧರಾವೇ ವೃಥಾ ಧ್ಯಾನ । ಚಾಲತೇ ಬೋಲತೇ ಬ್ರಹ್ಮ ಪೂರ್ಣ । ಸದ್ಗುರುಚರಣ ಸಾಧಕಾ ॥೧೫॥ ವಾಂಚೂನಿಯಾ ಗುರುಭಜನ । ಶಿಷ್ಯಾಸೀ ನೋಹೇ ಸಮಾಧಾನ । ಯಾಹೂನಿಯಾ ಶ್ರೇಷ್ಠ ಸಾಧನ । ನಾಹೀ ಜಾಣ ಸರ್ವಥಾ ॥೧೬॥ ತ್ಯಾ ಸದ್ಗುರುಕೃಪಾಪರಿಪಾಟೀ । ಏಕಾದಶೀ ಪೂರ್ವಾರ್ಧ ಕೋಟೀ । ವಾಖಣಿಲೀ ಜೇ ಮರ್‍ಹಾಟೀ । ಯಥಾರ್ಥದೃಷ್ಟೀ ನಿಜಬೋಧೇ ॥೧೭॥ ಊಸ ಗಾಳಿತಾ ರಸ ಹೋಯೇ । ತೋ ಠೇವಿಲಿಯಾ ಬಹುಕಾಳ ರಾಹೇ । ತ್ಯಾಚಾ ಆಳೂನಿಯಾ ಪಾಹೇ । ಗೂಳ ಹೋಯೇ ಸಪಿಂಡ ॥೧೮॥ ತೋಹೀ ಠೇವಿತಾ ಲಿಗಾಡ ಧರೀ । ಮಗ ಸಾಖರ ಕೀಜೇ ರಾಯಪುರೀ । ತೇಹೀ ಘೋಟೂನಿಯಾ ಚತುರೀ । ನಾಬದ ಕರಿಜೇ ಕೋರಡೀ ॥೧೯॥ ತೈಸೇ ಹೇ ಶ್ರೀಭಾಗವತ ಜಾಣ । ಮುಳೀ ಬೋಲಿಲಾ ಶ್ರೀನಾರಾಯಣ । ತೇಚಿ ಶ್ರೀವ್ಯಾಸೇ ಆಪಣ । ದಶಲಕ್ಷಣ ವರ್ಣಿಲೇ ॥೨೦॥ ತೇ ದಶಲಕ್ಷಣಪರವಡೀ । ಶ್ರೀಶುಕಮುಖೇ ಚಢಲೀ ಗೋಡೀ । ತೇಥೀಲ ಕಠಿಣ ಪದಬಂಧಮೋಡೀ । ಟೀಕಾ ಚೋಖಡೀ ಶ್ರೀಧರೀ ॥೨೧॥ ತೇ ಶ್ರೀಧರೀಚೇ ವ್ಯಾಖ್ಯಾನ । ಭಾವಾರ್ಥದೀಪಿಕಾ ಜಾಣ । ತ್ಯಾ ಭಾವಾರ್ಥಾಚೇ ಸದ್ಭಾವ ಖೂಣ । ಕೇಲೇ ನಿರೂಪಣ ದೇಶಭಾಷಾ ॥೨೨॥ ಮುಳೀ ವಕ್ತಾ ಏಕ ನಾರಾಯಣ । ವ್ಯಾಸ-ಶುಕ-ಶ್ರೀಧರವ್ಯಾಖ್ಯಾನ । ತ್ಯಾಂತ ಮುಳೀಚೇ ಲಕ್ಷೂನಿ ಗೋಡಪಣ ।ಏಕಾ ಜನಾರ್ದನ ಕವಿಕರ್ತಾ ॥೨೩॥ ಮುಳೀ ಬೀಜ ಶ್ರೀನಾರಾಯಣ । ಬ್ರಹ್ಮ ಯಾಚೇ ಠಾಯೀ ಪ್ರೇರಿಲೇ ಜಾಣ । ತೇ ನಾರದಕ್ಷೇತ್ರೀ ಸಂಪೂರ್ಣ । ಪೀಕ ಪರಿಪೂರ್ಣ ನಿಡಾರಲೇ ॥೨೪॥ ತ್ಯಾಚೇ ವ್ಯಾಸೇ ದಶಲಕ್ಷಣ । ಸಂಪೂರ್ಣ ಕೇಲೇ ಸಂವಗಣ । ಶುಕೇ ಪರೀಕ್ಷಿತೀಚ್ಯಾ ಖಳಾ ಜಾಣ । ಮಳೂನಿ ನಿಜಕಣ ಕಾಢಿಲೇ ॥೨೫॥

ಸದ್ಗುರುಗಳ ಕೃಪೆಯು ಪ್ರಾಪ್ತವಾಯಿತೆಂದರೆ ಶಬ್ದಾರ್ಥಗಳನ್ನು ತಿಳಿದುಕೊಳ್ಳುವ ಕಷ್ಟವಾಗುವುದಿಲ್ಲ. ಅನಾಯಾಸವಾಗಿ ಭಾಗವತದ ಅರ್ಥದಲ್ಲಿ ಶ್ರದ್ಧಾಯುಕ್ತ ಭಕ್ತರ ಪ್ರವೇಶವು ಸಹಜವಾಗಿಯೇ ಆಗುವುದು ॥೧೨॥ ಅಂತಃಕರಣದಲ್ಲಿ ಭಕ್ತಿಭಾವವು ಉತ್ಪನ್ನವಾಗುತ್ತಲೇ, ಆ ಯೋಗದಿಂದ ದೇವಾಧಿದೇವನು ಪ್ರಕಟನಾಗುವನು. ಆಗ ಭಾಗವತದ ನಿಜವಾದ ರಹಸ್ಯವು ಸಹಜವಾಗಿಯೇ ಹೃದಯದ ಪರದೆಯಮೇಲೆ ಮೂಡುವುದು ॥೧೩॥ ಅದಕ್ಕಾಗಿ ಗುರುಭಕ್ತಿಯನ್ನು ಮಾಡುವುದರಿಂದ ಭಾಗವತದ ಅರ್ಥವು ತಿಳಿಯುವುದು. ಅಲ್ಲಿ ಕಾವ್ಯ ಇತ್ಯಾದಿಗಳ ಉತ್ಪತ್ತೀ ಹಾಗೂ ಅನೇಕ ಯುಕ್ತಿಗಳ ಯಾವ ಉಪಯೋಗ? ॥೧೪॥ ಸಾಧಕನಿಗೆ ನಡೆದಾಡುವ, ಮಾತನಾಡುವ ಪೂರ್ಣ ಬ್ರಹ್ಮರಾದ ಸದ್ಗುರುಗಳ ಚರಣಗಳು ಲಭಿಸಿದ ಮೇಲೆ ಆತನು ವ್ಯರ್ಥವಾಗಿ ಧ್ಯಾನವನ್ನು ಏಕೆ ಮಾಡಬೇಕು? ಶಾಸ್ತ್ರದ ಜ್ಞಾನವನ್ನಾದರೂ ಏತಕ್ಕಾಗಿ ಪಡೆಯಬೇಕು? ॥೧೫॥ ಗುರು ಭಜನೆಯ ಹೊರತಾಗಿ ಶಿಷ್ಯನಿಗೆ ನಿಜವಾದ ಸಮಾಧಾನವು ದೊರೆಯುವುದಿಲ್ಲ. ಆದ್ದರಿಂದ ಇದಕ್ಕಿಂತಲೂ ಅನ್ಯ ಶ್ರೇಷ್ಠ ಸಾಧನೆಯು ಇಲ್ಲವೇ ಇಲ್ಲ ॥೧೬॥ ಈ ಯಾವ ಸದ್ಗುರುಗಳ ಕೃಪೆಯಿಂದ ಹನ್ನೊಂದನೆಯ ಸ್ಕಂಧದಲ್ಲಿನ ಪೂರ್ವಾರ್ಧವನ್ನು ಮರಾಠೀ ಭಾಷೆಯಲ್ಲಿ ಯಥಾಮತಿ ಆತ್ಮಬೋಧೆಯೊಂದಿಗೆ ವರ್ಣನೆಯನ್ನು ಮಾಡಿ ಹೇಳಿರುವೆನು ॥೧೭॥ ಕಬ್ಬನ್ನು ಗಾಣಕ್ಕೆ ಹಾಕಿ ಸೋಸಲು ಅದರಿಂದ ರಸವು ಸಿದ್ಧವಾಗುವುದು. ಆ ರಸವನ್ನು ಹಾಗೆಯೇ ಇಟ್ಟರೆ ಅದು ಬಹಳ ದಿನ ತಡೆಯುವುದಿಲ್ಲ. ಅದನ್ನೇ ಕರಗಿಸಿ ಬೆಲ್ಲವನ್ನು ತಯಾರಿಸಿ ಪೆಂಡಿ ಕಟ್ಟಿ ಇಡಲು ಬರುವುದು. ಆ ಪೆಂಡಿಯನ್ನು ಬಹಳ ದಿನಗಳವರೆಗೆ ಇಡಲು ಆ ಬೆಲ್ಲವು ದ್ರವಿಸುವುದು ॥೧೮॥ ಅದಕ್ಕಾಗಿ ಅದರ ರಾಯಪುರೀ ಸಕ್ಕರೆಯನ್ನು ಮಾಡಬೇಕಾಗುವುದು. ಚತುರ ಜನರು ಆ ಸಕ್ಕರೆಯನ್ನು ಘೋಟಾಯಿಸಿ ಸ್ವಚ್ಛವಾದ ಒಣಗಿದ ಕಲ್ಲುಸಕ್ಕರೆಯನ್ನು ತಯಾರಿಸುವರು ॥೧೯॥ ಅದರಂತೆಯೇ ಈ ಭಾಗವತದ ಮಾತಾಗಿರುವುದು. ಇದನ್ನು ದೃಢವಾಗಿ ಲಕ್ಷದಲ್ಲಿಡು. ಈ ಭಾಗವತವನ್ನು ಪ್ರಾರಂಭದಲ್ಲಿ ಶ್ರೀನಾರಾಯಣನು ಹೇಳಿದನು. ಇದನ್ನೇ ಮಹರ್ಷೀ ವ್ಯಾಸರು ಹತ್ತು ಪ್ರಕಾರಗಳ ವಿಭಾಗ ಮಾಡಿದರು ॥೨೦॥ ಈ ದಶಲಕ್ಷಣಯುಕ್ತ ಕಥೆಗೆ ಶ್ರೀಶುಕಾಚಾರ್ಯರ ಮುಖದಿಂದ ಬಹಳಷ್ಟು ಮಾಧುರ್ಯವು ಬೆಳೆಯಿತು. ಅದರಲ್ಲಿನ ಕಠಿಣ ಶಬ್ದಗಳನ್ನು ಸ್ಪಷ್ಟಗೊಳಿಸಿ ಶ್ರೀಧರರು ಅದರ ಮೇಲೆ ಉತ್ಕೃಷ್ಟವಾದ ಟೀಕೆಯನ್ನು ಬರೆದರು ॥೨೧॥ ಈ ಯಾವ ಶ್ರೀಧರರ ಟೀಕೆಯು ಭಾವಾರ್ಥ ದೀಪಿಕಾನಾಮದಿಂದ ಪ್ರಸಿದ್ಧವಾಗಿರುವುದು. ಆ ಭಾವಾರ್ಥದ ಅರ್ಥವನ್ನು ನಾನು ಭಕ್ತಿಭಾವದಿಂದ ಮರಾಠಿಯಲ್ಲಿ ಹೇಳಿರುವೆನು ॥೨೨॥ ಮೂಲದ ವಕ್ತಾನು ನಾರಾಯಣನು ಈತನೊಬ್ಬನೇ ಇರುವನು. ಅದರ ಮೇಲೆ ವ್ಯಾಸ-ಶುಕ ಮತ್ತು ಶ್ರೀಧರ ಇವರು ವ್ಯಾಖ್ಯಾನವನ್ನು ಮಾಡಿದರು. ಅದರಲ್ಲಿನ ಮೂಲ ಮಾಧುರ್ಯದ ಮೇಲೆ ಲಕ್ಷವನ್ನಿಟ್ಟು ಏಕಾಜನಾರ್ದನನು ಈ ಕಾವ್ಯದ ಕರ್ತನಾದನು ॥೨೩॥ ಶ್ರೀ ನಾರಾಯಣನು ಪ್ರಾರಂಭದಲ್ಲಿ ಬ್ರಹ್ಮದೇವನ ಹೃದಯದಲ್ಲಿ ಈ ಬೀಜವನ್ನು ಬಿತ್ತಿದನು. ಈ ಬೀಜವು ನಾರದರೂಪ ಹೊಲದಲ್ಲಿ ಹುಟ್ಟಿ,ಬೆಳೆಯು ಬಹು ಭರದಿಂದ ಬೆಳೆಯಿತು ॥೨೪॥ ಈ ಯಾವ ದಶಲಕ್ಷಣಯುಕ್ತ ಸಂಪೂರ್ಣ ಭಾಗವತರೂಪ ತೆನೆಗಳನ್ನು ಮಹರ್ಷೀ ವ್ಯಾಸರು ಕೂಡಿಸಿದರು. ಶುಕಾಚಾರ್ಯರು ಪರೀಕ್ಷಿತಿಯ ಕಣದಲ್ಲಿ ಒಕ್ಕಿ ಧಾನ್ಯದ ರಾಶಿಯನ್ನು ನಿರ್ಮಾಣ ಮಾಡಿದರು ॥೨೫॥

ತೇಚಿ ಶಾಸ್ತ್ರಾರ್ಥೇ ಜಾಣ । ಶ್ರೀಧರೇ ನಿಜಬುದ್ಧೀ ಪಾಖಡೂನ । ಕಾಢಿಲೇ ನಿಡಾರಾಚೇ ಕಣ । ಅತಿಸಘನ ಸುಟಂಕ ।೨೬॥ ತ್ಯಾಂಚೀ ಪಕ್ವಾನ್ನೇ ಚೋಖಡೀ । ಮರ್ಹಾಟಿಯಾ ಪದಮೋಡೀ । ಏಕಾ ಜನಾರ್ದನೇ ಕೇಲೀ ಪರವಡೀ । ತೇ ಜಾಣತೀ ಗೋಡೀ ನಿಜಾತ್ಮಭಕ್ತ ।೨೭॥ ತ್ಯಾ ಶ್ರೋತ್ಯಾಂಚೇನಿ ಅವಧಾನೇ । ಜನಾರ್ದನ ಕೃಪಾ ಸಾವಧಾನೇ । ಪೂರ್ವಾರ್ಧ ಏಕಾ ಜನಾರ್ದನೇ । ಸಂಪೂರ್ಣ ಕರಣೇ ದೇಶಭಾಷಾ ।೨೮॥ ತೇ ಪ್ರಥಮಾಧ್ಯಾಯೀ ಅನುಕ್ರಮ । ವೈರಾಗ್ಯ ಉತ್ಪತ್ತೀಚಾ ಸಂಭ್ರಮ । ಕುಲಕ್ಷಯಾಸೀ ಪುರುಷೋತ್ತಮ । ಕರೀ ಉಪಕ್ರಮ ಬ್ರಹ್ಮಶಾಪೇ ।೨೯॥ ದುಸರ್ಯಾಪಾಸೂನಿ ಚತುರ್ಥವರೀ । ನಾರದೇ ವಸುದೇವಾಚ್ಯಾ ಘರೀ । ನಿಮಿಜಾಯಂತ ಪ್ರಶ್ನೋತ್ತರೀ । ಪಂಚಾಧ್ಯಾಯೀ ಖರೀ ಸಂಪವಿಲೀ ।೩೦॥ ಷಷ್ಠಾಧ್ಯಾಯೀ ಶ್ರೀಕೃಷ್ಣಮೂರ್ತೀ । ಪಾಹೋ ಆಲಿಯಾ ಸುರವರಪಂಕ್ತೀ । ತಿಹೀ ಪ್ರಾರ್ಥಿಲಾ ಶ್ರೀಪತೀ । ನಿಜಧಾಮಾಪ್ರತೀ ಯಾವಯಾ ।೩೧॥ ಐಕೋನಿ ಸುರವರಾಂಚೀ ವಿನಂತೀ । ದೇಖೋನಿ ಅರಿಷ್ಟಭೂತ ದ್ವಾರಾವತೀ । ಉದ್ಧವೇ ಪ್ರಾರ್ಥಿಲಾ ಶ್ರೀಪತೀ । ನಿಜಧಾಮಾಪ್ರತೀ ಮಜ ನೇಈ ।೩೨॥ ತ್ಯಾಚೇ ಪ್ರಶ್ನಾಚೇ ಪ್ರಶ್ನೋತ್ತರ । ತ್ಯಾಗಯುಕ್ತ ಜ್ಞಾನಗಂಭೀರ । ಸಪ್ತಮಾಧ್ಯಾಯೀ ಶಾರ್ಙ್ಗಧರ । ಥೋಡೇನಿ ಫಾರ ಬೋಲಿಲಾ ।೩೩॥ ತೇಥ ತ್ಯಾಗಸಂಗ್ರಹ ಲಕ್ಷಣ । ಯದು ಅವಧೂತ ಸಂವಾದೇ ಜಾಣ । ಚೋವಿಸಾ ಗುರೂಂಚೇ ಪ್ರಕರಣ । ಕೇಲೇ ಸಂಪೂರ್ಣ । ಅಷ್ಟಮೀ ನವಮೀ ।೩೪॥ ಶ್ರದ್ಧಾಸಂಗ್ರಹ ಜ್ಞಾನವಿಶ್ವಾಸ । ತೇಥ ನಾನಾ ಮತಾಂಚಾ ಮತನಿರಾಸ । ದಶಮಾಧ್ಯಾಯೀ ಹೃಷೀಕೇಶ । ಜ್ಞಾನ ವಿಲಾಸ ಬೋಲಿಲಾ ।೩೫॥ ಅಕರಾವೇ ಅಧ್ಯಾಯೀ ಜಾಣ । ಬದ್ಧಮುಕ್ತಾಚೇ ವೈಲಕ್ಷಣ್ಯ । ಸಾಂಗೋನಿ ಸಾಧೂಚೇ ಲಕ್ಷಣ । ಭಕ್ತೀಚೇ ಸಂಪೂರ್ಣ ದಾವಿಲೇ ರೂಪ ।೩೬॥ ಭಾಗವತೀ ಬಾರಾವಾ ಅಧ್ಯಾವೋ । ಅತಿಗುಹ್ಯ ಬೋಲಿಲಾ ದೇವೋ । ತೇಥಿಲ ಲಾವಿತಾ ಅಭಿಪ್ರಾವೋ । ಪಡೇ ಸಂದೇಹೋ ಸಜ್ಞಾನಾ ।೩೭॥ ಬಾರಾವೇ ಅಧ್ಯಾಯಾಚೀ ಕಿಲ್ಲೀ । ಯುಕ್ತಿಪ್ರಯುಕ್ತೀ ನಾತುಡೇ ಬೋಲೀ । ಜನಾರ್ದನಕೃಪಾ ಮಾಉಲೀ । ತೇಣೇ ಮಾರ್ಗೀ ದಾವಿಲೀ ಗ್ರಂಥಾಚೀ ।೩೮॥ ತೇ ದ್ವಾದಶಾಧ್ಯಾಯೀ ನಿರೂಪಣ । ಸತ್ಸಂಗಾಚಾ ಮಹಿಮಾ ಗಹನ । ಕರ್ಮಾಚಾ ಕರ್ತಾ ಕೋಣ । ತ್ಯಾಗಿತೇ ಲಕ್ಷಣ ಕರ್ಮಾಚೇ ।೩೯॥

ಅದೇ ಕಾಳುಗಳನ್ನು ಶ್ರೀಧರಸ್ವಾಮಿಯವರು ತಮ್ಮ ಬುದ್ಧಿರೂಪ ಮರದಿಂದ ಕೇರಿ ಅದರಲ್ಲಿನ ಉತ್ತಮ ನೀಟಾದ ಕಾಳುಗಳನ್ನು ಶಾಸ್ತ್ರಾರ್ಥದಿಂದ ಆರಿಸಿ ತೆಗೆದರು ।೨೬॥ ಏಕಾಜನಾರ್ದನನು ಅದರ ರುಚಿಕರ, ಸ್ವಾದಿಷ್ಟ ಪಕ್ವಾನ್ನವನ್ನು ಸಿದ್ಧಗೊಳಿಸಿ ಮರಾಠೀ ಭಾಷೆಯಲ್ಲಿ ಅದರ ಸಮೃದ್ಧಿಯನ್ನು ಮಾಡಿದನು. ನಿಜಾತ್ಮ ಭಕ್ತರಿಗೆ ಮಾತ್ರ ಇದರ ಸ್ವಾರ್ಥವು ತಿಳಿಯುವುದು ।೨೭॥ ಶ್ರವಣ ಮಾಡುವವರು ಲಕ್ಷಕೊಟ್ಟು ಕೇಳುತ್ತಿರುವುದರಿಂದ ಮತ್ತು ಸದ್ಗುರು ಜನಾರ್ದನಸ್ವಾಮಿಯವರ ಪೂರ್ಣ ಕೃಪೆಯಿಂದ ಏಕನಾಥ ಜನಾರ್ದನನು ಮರಾಠೀ ಭಾಷೆಯಲ್ಲಿ ಈ ಯಾವ ಪೂರ್ವಾರ್ಧವನ್ನು ಸಂಪೂರ್ಣಗೊಳಿಸಿದನು ।೨೮॥ ಇದರ ಅನುಕ್ರಮ ಹೀಗಿದೆ. ಮೊದಲನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಸ್ವಕುಲದ ನಾಶಮಾಡುವುದಕ್ಕಾಗಿ ಬ್ರಾಹ್ಮಣರ ಶಾಪರೂಪದಿಂದ ವೈರಾಗ್ಯದ ಉತ್ಪತ್ತಿಯನ್ನು ಆರಂಭಗೊಳಿಸಿದನು ।೨೯॥ ಎರಡನೆಯ ಅಧ್ಯಾಯದಿಂದ ನಾಲ್ಕನೆಯ ಅಧ್ಯಾಯದವರೆಗೆ ನಾರದರು ವಸುದೇವನ ಮನೆಗೆ ಹೋಗಿ ನಿಮಿಜಾಯಂತ ಪ್ರಶ್ನೋತ್ತರಗಳ ವರ್ಣನೆಯನ್ನು ಮಾಡಿದರು ಮತ್ತು ನಾರದ ವಸುದೇವರ ಸಂವಾದದಿಂದ ಐದನೆಯ ಅಧ್ಯಾಯವು ಮುಗಿಯಿತು ।೩೦॥ ಆರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನ ದರ್ಶನವನ್ನು ಪಡೆಯಬೇಕೆಂಬ ಇಚ್ಛೆಯಿಂದ ಸ್ವರ್ಗದಿಂದ ಶ್ರೇಷ್ಠ ದೇವತೆಗಳವರ ಮೇಳಗಳು ಬಂದವು ಮತ್ತು ಅವರು ಆತನಿಗೆ ನಿಜಧಾಮಕ್ಕೆ ಆಗಮಿಸಲು ಪ್ರಾರ್ಥಿಸಿದರು ।೩೧॥ ಈ ಯಾವ ದೇವಾನುದೇವತೆಯರ ವಿನಂತಿಯನ್ನು ಆಲಿಸಿ ಮತ್ತು ದ್ವಾರಕಾ ನಗರದಲ್ಲಿ ಅರಿಷ್ಟ ಚಿನ್ಹೆಗಳು ವ್ಯಾಪಿಸಿಕೊಂಡಿದ್ದು ಕಂಡು ಉದ್ಧವನು, ನನಗೂ ನಿಮ್ಮ ಜೊತೆಯಲ್ಲಿ ನಿಜಧಾಮಕ್ಕೆ ಒಯ್ಯಬೇಕೆಂದು ಶ್ರೀಹರಿಯನ್ನು ಕುರಿತು ಪ್ರಾರ್ಥಿಸಿದನು ।೩೨॥ ಏಳನೆಯ ಅಧ್ಯಾಯದಲ್ಲಿ ಉದ್ಧವನ ಪ್ರಶ್ನೆಗೆ ಜ್ಞಾನಗಂಭೀರ ಉತ್ತರವನ್ನು ಸಂಕ್ಷಿಪ್ತದಲ್ಲಿ ವಿವರಿಸಿದರು ।೩೩॥ ಎಂಟನೆಯ ಮತ್ತು ಒಂಬತ್ತನೆಯದಲ್ಲಿ ಯದೂ ಅವಧೂತ ಸಂವಾದದ ರೂಪದಲ್ಲಿ ಇಪ್ಪತ್ನಾಲ್ಕು ಗುರುಗಳ ಜ್ಞಾನ ಸಂಗ್ರಹವನ್ನು ಹೇಳಲಾಯಿತು ।೩೪॥ ಹತ್ತನೆಯ ಅಧ್ಯಾಯದಲ್ಲಿ ಶ್ರದ್ಧೆಯನ್ನು ಹೇಗೆ ಹಿಡಿಯಬೇಕು, ಜ್ಞಾನದಲ್ಲಿ ವಿಶ್ವಾಸವನ್ನು ಹೇಗೆ ಇಡಬೇಕು ಎಂಬುವುದನ್ನು ಹೇಳಿ ಅದರಲ್ಲಿನ ಅನೇಕ ಮತಗಳನ್ನು ನಿರಸನೆ ಮಾಡಲು ಜ್ಞಾನದ ಚಮತ್ಕಾರದ ವರ್ಣನೆಯನ್ನು ಮಾಡಲಾಯಿತು ।೩೫॥ ಹನ್ನೊಂದನೆಯ ಅಧ್ಯಾಯದಲ್ಲಿ ಬದ್ಧ ಮತ್ತು ಮುಕ್ತ ಇದರಲ್ಲಿನ ವ್ಯತ್ಯಾಸವನ್ನು ಸ್ಪಷ್ಟಮಾಡಿ ತೋರಿಸಿ ಮತ್ತು ಸಾಧುಗಳ ಲಕ್ಷಣಗಳನ್ನು ಹೇಳುತ್ತ ಭಕ್ತಿಯ ಪೂರ್ಣ ಸ್ವರೂಪವನ್ನು ಸವಿಸ್ತಾರವಾಗಿ ಹೇಳಲಾಯಿತು ।೩೬॥ ಹನ್ನೆರಡನೆಯ ಅಧ್ಯಾಯದಲ್ಲಿ ದೇವನು ಅತ್ಯಂತ ಗೂಢವಾದ ಜ್ಞಾನವನ್ನು ಪ್ರಕಟ ಮಾಡಿದನು. ಅದರ ಅರ್ಥವನ್ನು ಹಚ್ಚಲು ಮಹಾ ಮಹಾ ವಿದ್ವಾನರೂ ಕೂಡ ಸಂಶಯದಲ್ಲಿ ಬೀಳುವರು ।೩೭॥ ಹನ್ನೆರಡನೆಯ ಅಧ್ಯಾಯದ ಗುರುಕೀಲಿಯನ್ನು ಕೇವಲ ಯುಕ್ತಿ ಪ್ರಯುಕ್ತಿಗಳಿಂದ ಹೇಳುವವರಿಗೂ ಕೂಡ ಇದನ್ನು ಹೇಳಲು ಬರುವುದಿಲ್ಲ. ಆದರೆ ಕೃಪಾವಂತರಾದ ಜನಾರ್ದನ ಮಾತೆಯು ನನಗೆ ಮಾರ್ಗವನ್ನು ತೋರಿಸಿದಾಗ ಈ ಗ್ರಂಥವನ್ನು ಬಿಚ್ಚಿ ಹೇಳಲ್ಪಟ್ಟಿತು ।೩೮॥ ಈ ಹನ್ನೆರಡನೆಯ ಅಧ್ಯಾಯದಲ್ಲಿ ಸತ್ಸಂಗತಿಯ ಮಹಿಮೆಯನ್ನು ಹೇಳಿರುವುದು. ಕರ್ಮದ ಕರ್ತನು ಯಾರು? ಮತ್ತು ತ್ಯಾಗವೇ ಕರ್ಮದ ಲಕ್ಷಣವಾಗಿದೆ ಎಂಬುವ ನಿರೂಪಣೆಯನ್ನು ಮಾಡಲಾಗಿದೆ ।೩೯॥

ತೋ ದ್ವಾದಶಾಧ್ಯಾವೋ ಏಕತಾ । ಜ್ಞಾನಸಂಲಗ್ನತಾ ಹೋಯ ಚಿತ್ತಾ । ಆವಡೀ ಠಾಕೇ ವಿಷಯಾವಸ್ಥಾ । ತೇಣೇ ಬಾಧಕತಾ ಸಾಧಕಾ ॥೪೦॥ ಗುಣವೈಷಮ್ಯಾಚೇ ಲಕ್ಷಣ । ತೇಣೇ ವಿಷಯಾವಸ್ಥಾ ಗಹನ । ತೇಥ ಸತ್ವಶುದ್ಧೀಚೇ ಕಾರಣ । ಕೇಲೇ ನಿರೂಪಣ ತ್ರಯೋದಶೀ ॥೪೧॥ ತೇಚಿ ಪ್ರಸಂಗೇ ಯಥೋಚಿತ । ಚಿತ್ತ ವಿಷಯಾಂಚೇ ಜೇ ಗ್ರಥಿತ । ಉಗವಾವಯಾ ಹಂಸಗೀತ । ಸುನಿಶ್ಚಿತ ಸಾಂಗೀತಲೇ ॥೪೨॥ ಹಂಸಗೀತೀ ಜೇ ನಿರೂಪಿಲೇ ಜ್ಞಾನ । ಸಮಾಧಿಪರ್ಯಂತ ಸಮಾಧಾನ । ತೇಚಿ ಸಾಧಾವಯಾ ಸಾಧನ । ಚವದಾವಾ ಆಪಣ ಬೋಲಿಲಾ ದೇವೋ ॥೪೩॥ ಸಾಧನಾಮಾಜೀ ಮುಖ್ಯ ಭಕ್ತೀ । ಸಗುಣ ತೇಚಿ ಮಾಝೀ ನಿರ್ಗುಣ ಮೂರ್ತಿ । ಯೋಗಯುಕ್ತ ಧ್ಯಾನಸ್ಥಿತೀ । ಬೋಲಿಲಾ ಶ್ರೀಪತೀ ಚತುರ್ದಶೀ ॥೪೪॥ ವಿವಿಧಾ ಸಿದ್ಧೀಂಚೀ ಧಾರಣಸ್ಥಿತೀ । ದೇವೇ ಸಾಂಗೀತಲೀ ಉದ್ಧವಾಪ್ರತೀ । ಸಿದ್ಧೀ ಬಾಧಿಕಾ ಮಾಝೀ ಪ್ರಾಪ್ತೀ। ಹೇ ಪಂಧರಾವ್ಯಾ ಅಂತೀ ನಿರೂಪಿಲೇ ॥೪೫॥ ಏವಂ ಪಂಧರಾಧ್ಯಾಯೀ ಪೂರ್ವಾರ್ಧ । ನಿರೂಪಣ ಝಾಲೇ ಅತಿಶುದ್ಧ । ಆತಾ ಉರಲೇ ಉತ್ತರಾರ್ಧ । ತೋ ಕಥಾಸಂಬಂಧ ಅವಧಾರಾ॥ ೪೬॥ ಷೋಡಶೀ ಭಗವದ್ವಿಭೂತೀ । ಸತರಾ ಅಠರಾ ಅಧ್ಯಾಯಾಂಪ್ರತೀ । ವರ್ಣಾಶ್ರಮಕರ್ಮಗತೀ । ವಿಧಾನಸ್ಥಿತೀ ನಿರೂಪಣ॥೪೭॥ ಏಕುಣಿಸಾವಾ ಅಧ್ಯಾಯ ಗಹನ । ಜ್ಞಾನ ನಿರ್ಣಯಾಚೇ ಮಹಿಮಾನ । ಉದ್ಧವಾಚೇ ಯಮನಿಯಮಾದಿ ಪ್ರಶ್ನ । ಸಾಂಗೀತಲೇ ಜ್ಞಾನ ಪರಿಪಾಕೇ ॥೪೮॥ ತ್ಯಾ ಜ್ಞಾನಾಧಿಕಾರಾಚಾ ಯೋಗ । ಅಜ್ಞಾನ ಜ್ಞಾನ ಮಧ್ಯಸ್ಥ ಭಾಗ । ವಿಸಾವೇ ಅಧ್ಯಾಯೀ ಶ್ರೀರಂಗ । ತ್ರಿವಿಧ ವಿಭಾಗ ಬೋಲಿಲಾ ॥೪೯॥ ತೇಥ ಗುಣದೋಷಾಂಚೀ ಅವಸ್ಥಾ । ಉದ್ಧವೇ ಠೇವಿಲೀ ವೇದಾಂಚೇ ಮಾಥಾ । ತೇ ವೇದವಾದ ಸಂಸ್ಥಾ। ಕೇಲೀ ತತ್ತ್ವತಾ ಏಕವಿಸಾಂತ ॥೫೦॥ ತೇಚಿ ವೇದವಾದವ್ಯುತ್ಪತ್ತೀ । ತತ್ತ್ವಾಂಚೀ ಸಂಖ್ಯಾ ಕಿತೀ । ತೇ ತತ್ತ್ವಸಂಖ್ಯಾಉಪಪತ್ತೀ । ಕೇಲೀ ಶ್ರೀಪತಿ ಯಥಾನ್ವಯೇ ॥೫೧॥ ಸಕಳ ತತ್ತ್ವಾಚೇ ವಿವೇಚನ । ಪ್ರಕೃತಿ ಪುರುಷಾಂಚೇ ಲಕ್ಷಣ । ಜನ್ಮ ಮರಣಾಂಚೇ ಪ್ರಕರಣ । ಕೇಲೇ ನಿರೂಪಣ ಬಾವೀಸಾವಾ ॥೫೨॥ ಸಾಹೋನಿಯಾ ಪರಾಪರಾಧ । ಸ್ವಯೇ ರಾಹಾವೇ ನಿರ್ದ್ವಂದ್ವ। ಹಾ ಭಿಕ್ಷುಗೀತಸಂವಾದ । ಕೇಲಾ ವಿಶದ ತೇವಿಸಾವಾ ॥೫೩॥

ಹೀಗಿರುವ ಹನ್ನೆರಡನೆಯ ಅಧ್ಯಾಯವನ್ನು ಕೇಳುತ್ತಲೇ ಚಿತ್ತಕ್ಕೆ ಜ್ಞಾನವು ಜೊತೆಗೂಡುವುದು. ಅದರಲ್ಲಿ ವಿಷಯ ವಾಸನೆಯು ಅಡ್ಡ ಬಂದು ಸಾಧಕನಿಗೆ ಪೀಡೆ ಕೊಡುವುದು ॥೪೦॥ ಆದ್ದರಿಂದ ಹದಿಮೂರನೆಯ ಅಧ್ಯಾಯದಲ್ಲಿ ಗುಣವೈಷಮ್ಯದ ಲಕ್ಷಣವನ್ನು ಮತ್ತು ಅದರಿಂದ ಆಗುವ ವಿಷಯ ಅವಸ್ಥೆಯ ಗಹನತೆಯನ್ನು ನಿರೂಪಿಸಿ ಹೇಳಲಾಗಿದೆ ॥೪೧॥ ಇದೇ ಪ್ರಸಂಗವನ್ನು ಸಾಧಿಸಿ, ವಿಷಯ ಮತ್ತು ಮನಸ್ಸು ಇವುಗಳ ಪರಸ್ಪರರ ಜಗ್ಗಾಟವಿರುವುದು. ಅದರ ಕಾರಣವನ್ನು ಬಿಚ್ಚಿ ಹೇಳುವುದಕ್ಕಾಗಿ ಹಂಸಗೀತವನ್ನು ಹೇಳಲಾಯಿತು ॥೪೨॥ ಹಂಸಗೀತೆಯಲ್ಲಿ ಯಾವ ಜ್ಞಾನವನ್ನು ಹೇಳಿರುವುದೋ ಮತ್ತು ಸಮಾಧಿವರೆಗೆ ಯಾವ ಸಮಾಧಾನ ಮಾಡಿರುವುದೋ, ಅದೇ ಸಾಧನೆಯನ್ನು ಸಾಧಿಸುವ ಮಾರ್ಗವನ್ನು ಶ್ರೀಕೃಷ್ಣನು ತಾನಾಗಿಯೇ ಹದಿನಾಲ್ಕನೆಯ ಅಧ್ಯಾಯದಲ್ಲಿ ಪ್ರತಿಪಾದನೆಯನ್ನು ಮಾಡಿರುವನು ॥೪೩॥ ಸಾಧನೆಗಳಲ್ಲಿ ಭಕ್ತಿಯೇ ಪ್ರಮುಖವಾಗಿರುವುದು. ನನ್ನ ಸಗುಣ ಮೂರ್ತಿಯೇ ನಿರ್ಗುಣ ಸ್ವರೂಪವಾಗಿರುವುದು. ಹೀಗೆಂದು ಹೇಳುತ್ತ ಯೋಗಯುಕ್ತ ಧ್ಯಾನಸ್ಥಿತಿಯನ್ನು ಶ್ರೀ ಕೃಷ್ಣನು ಹದಿನಾಲ್ಕನೆಯ ಅಧ್ಯಾಯದಲ್ಲಿ ವರ್ಣಿಸಿರುವನು ॥೪೪॥ ಹದಿನೈದನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ನಾನಾ ಪ್ರಕಾರದ ಸಿದ್ಧಿಗಳ ವಿವರಗಳನ್ನು ಹೇಳಿ, ಆ ಯಾವ ಸಿದ್ಧಿಗಳು ನನ್ನ ಪ್ರಾಪ್ತಿಗೆ ಬಾಧಕವಾಗಿ ಹೇಗಿವೆ ಎಂಬುದನ್ನು ಕೊನೆಯಲ್ಲಿ ವರ್ಣಿಸಿದನು ॥೪೫॥ ಈ ಪ್ರಕಾರವಾಗಿ ಹದಿನೈದನೆಯ ಅಧ್ಯಾಯದಲ್ಲಿ ಪೂರ್ವಾರ್ಧದ ಅತಿಶುದ್ಧವಾದ ನಿರೂಪಣೆಯನ್ನು ಮಾಡಲಾಯಿತು. ಈಗ ಉತ್ತರಾರ್ಧವನ್ನು ಕೈಗೆತ್ತಿಕೊಂಡಿದೆ. ಈಗ ಇದರ ಅಧ್ಯಾಯ ಕ್ರಮವನ್ನು ಕೇಳಿರಿ ॥೪೬॥ ಹದಿನಾರನೆಯ ಅಧ್ಯಾಯದಲ್ಲಿ ಭಗವಂತನ ವಿಭೂತಿಗಳ ವರ್ಣನೆ ಇರುವುದು. ಹದಿನೇಳನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ವರ್ಣಾಶ್ರಮದ ಪರಿಚಯ ಮತ್ತು ಅದರ ವಿಧಾನಗಳ ಪ್ರಕಾರದ ನಿರೂಪಣೆ ಮಾಡಿರುವುದು ॥೪೭॥ ಹತ್ತೊಂಬತ್ತನೆಯ ಅಧ್ಯಾಯವು ಅತಿಶಯ ಗಹನವಾಗಿರುವುದು. ಅದರಲ್ಲಿ ಜ್ಞಾನನಿರ್ಣಯದ ಮಹಾತ್ಮ್ಯೆಯನ್ನು ವರ್ಣಿಸಿರುವುದು. ಉದ್ಧವನ ಯಮನಿಯ ಮಾದಿ ಪ್ರಶ್ನೆಗಳ ಉತ್ತರವು ಸಿದ್ಧವಾಗಿರುವುದು ॥೪೮॥ ಇಪ್ಪತ್ತನೆಯ ಅಧ್ಯಾಯದಲ್ಲಿ ಅಜ್ಞಾನ, ಜ್ಞಾನ ಮತ್ತು ಮಧ್ಯಸ್ಥಭಾಗ ಈ ಮೂರು ಪ್ರಕಾರಗಳಿಂದ ಜ್ಞಾನಾಧಿಕಾರದ ಯೋಗವನ್ನು ಭಗವಂತನು ಹೇಳಿರುವನು ॥೪೯॥ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಗುಣದೋಷಗಳ ಅವಸ್ಥೆಯನ್ನು ಉದ್ಧವನು ವೇದಗಳ ತಲೆಯ ಮೇಲೆ ಇಡುವುದರಿಂದ ಭಗವಂತನು ವೇದವಾದದ ನಿಜವಾದ ರಹಸ್ಯವನ್ನು ಹೇಳಿ ಅದರ ಉತ್ತರವನ್ನು ಕೊಟ್ಟಿರುವನು ॥೫೦॥ ಆ ವೇದ ಪ್ರಸಂಗದಲ್ಲಿ ಒಟ್ಟಿನಲ್ಲಿ ತತ್ವಗಳ ಸಂಖ್ಯೆ ಎಷ್ಟು? ಎಂಬ ಪ್ರಶ್ನೆಯ ಉತ್ತರವನ್ನು ಶ್ರೀ ಕೃಷ್ಣನು ಯಥಾಶಾಸ್ತ್ರ ಹೇ‌ಳುವನು ॥೫೧॥ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಸರ್ವ ತತ್ವಗಳ ವಿವೇಚನೆಯನ್ನು ಮಾಡಿ ಪ್ರಕೃತಿ ಪುರುಷರ ಲಕ್ಷಣ ಮತ್ತು ಜನ್ಮ-ಮರಣಗಳ ನಿರೂಪಣೆಯನ್ನು ಮಾಡಲಾಗಿದೆ ॥೫೨॥ ಇಪ್ಪತ್ಮೂರನೆಯ ಅಧ್ಯಾಯದಲ್ಲಿ ಭಿಕ್ಷುಗೀತ ಸಂವಾದವಿರುವುದು. ಬೇರೆಯವರು ಮಾಡಿರುವ ಅಪರಾಧಗಳನ್ನು ಸಹಿಸಿಕೊಂಡು ತಾವು ದ್ವಂದ್ವಾತೀತರಾಗಿರಬೇಕು ಎನ್ನುವ ಮಾರ್ಗದರ್ಶನವನ್ನು ವಿಸ್ತಾರ ಪೂರ್ವಕ ಹೇಳಿರುವುದು ॥೫೩॥

ಅದ್ವೈತೀ ರಾಹಾವಯಾ ಸ್ಥಿತೀ । ಚೋವಿಸಾವಾ ಸಾಂಖ್ಯವ್ಯುತ್ಪತ್ತೀ। ನಿರ್ಗುಣಾಪಾಸೋನಿ ಗುಣೋತ್ಪತ್ತೀ । ಗುಣಕ್ಷಯಾ ಅಂತೀ ನಿರ್ಗುಣ ಉರೇ ॥೫೪॥ ಆದಿ ನಿರ್ಗುಣ ಅಂತೀ ನಿರ್ಗುಣ । ಮಧ್ಯೇ ಭಾಸಲೇ ಮಿಥ್ಯಾ ಗುಣ । ಯೇ ಅದ್ವೈತಪ್ರಾಪ್ತೀಲಾಗೀ ಜಾಣ । ಕೇಲೇ ನಿರೂಪಣ ಸಾಂಖ್ಯಾಚೇ ॥೫೫॥ ತೇ ಮಿಥ್ಯಾಗುಣ ಪ್ರವೃತ್ತಿಯುಕ್ತ । ತ್ರಿಗುಣಗುಣಾಂಚಾ ಸನ್ನಿಪಾತ । ಬೋಲಿಲಾ ಪಂಚವೀಸಾವ್ಯಾಂತ । ನಿರ್ಗುಣೋಕ್ತ ನಿಜನಿಷ್ಠಾ ॥೫೬॥ ಸವ್ವಿಸಾವೇ ಅಧ್ಯಾಯಾಪ್ರತೀ । ಅನಿವಾರ ಅನುತಾಪಾಚೀ ಶಕ್ತೀ ಭೋಗಿತಾ ಉರ್ವಶೀ ಕಾಮಪ್ರಾಪ್ತೀ। ಪಾವಲಾ ವಿರಕ್ತೀ ಪುರೂರವಾ ॥೫೭॥ ಭಜನಕ್ರಿಯಾ ಮೂರ್ತಿ ಲಕ್ಷಣ । ವೈದಿಕ ತಾಂತ್ರಿಕ ಮಿಶ್ರ ಭಜನ । ಯಾ ಉದ್ಧವ ಪ್ರಶ್ನಾಚೇ ನಿರೂಪಣ । ಕೇಲೇ ಸಂಪೂರ್ಣ ಸತ್ತಾವಿಸಾವಾ ॥೫೮॥ ಮಹಾಯೋಗ್ಯಾಂಚೇ ಯೋಗಭಾಂಡಾರ । ಪರಮ ಜ್ಞಾನೇ ಜ್ಞಾನಗಂಭೀರ । ನಿಜಸುಖಾಚೇ ಸುಖಸಾರ । ಕೇವಳ ಚಿನ್ಮಾತ್ರ ಅಠ್ಠಾವಿಸಾವಾ ॥೫೯॥ ತ್ಯಾಚೇ ಅಧ್ಯಾಯಾಮಾಜೀ ಜಾಣ । ಸಂಸಾರ ಅಸಂಭವಾಚಾ ಪ್ರಶ್ನ। ಉದ್ಧವೇ ಕೇಲಾ ಅತಿಗಹನ । ತ್ಯಾಂಚೇ ಹೀ ಪ್ರತಿವಚನ ದೀಧಲೇ ದೇವೇ ॥೬೦॥ ಏಕಾದಶಾಚಾ ನಿಜಕಳಸೂ । ಭಕ್ತಿಪ್ರೇಮಾಚೇ ಅತಿವಿಲಾಸೂ । ಏಕುಣತಿಸಾವಾ ಸುರಸುರಸೂ। ಜ್ಞಾನೋಪದೇಶೂ ಭಕ್ತಿಯುಕ್ತ ॥೬೧॥ ಪುಡಿಲೇ ದೋ ಅಧ್ಯಾಯಾಂತ । ಸ್ತ್ರೀ ಪುತ್ರಾದಿ ಕುಳಾಚಾ ಘಾತ । ಹೋತಾ ಡಂಡಳೀನಾ ಜ್ಞಾನಸಮರ್ಥ । ತೇ ಪ್ರತ್ಯಕ್ಷ ಭೂತ ಹರಿ ದಾವೀ॥೬೨॥ ಬ್ರಾಹ್ಮಣಾಂಚಾ ಶಾಪ ಕಠಿಣ । ಶಾಪೇ ಬಾಧಿಲಾ ಶ್ರೀಕೃಷ್ಣ । ಇತರಾಂಚಿ ಕಥಾ ಕೋಣ। ಕುಳನಿರ್ದಳಣ ಬ್ರಹ್ಮಶಾಪೇ ॥೬೩॥ ಬ್ರಾಹ್ಮಣಾಂಚಾ ಕೋಪ ಸಮರ್ಥ । ಸಗಳಾ ಸಮುದ್ರ ಕೇಲಾ ಮೂತ । ಶಿವಾಚಾ ಜಾಲಾ ಲಿಂಗಪಾತ । ಬ್ರಹ್ಮಕ್ಷೋಭಾಂತ ನಿಮಿಷಾರ್ಧೇ ॥೬೪। ಯಾಲಾಗೀ ಸಜ್ಞಾನ ಅಥವಾ ಮುಗ್ಧ । ತಿಹೀ ನ ಕರವಾ ಬ್ರಹ್ಮವಿರೋಧ । ಹೇಚಿ ದಾವಾವಯಾ ಮುಕುಂದ । ಕುಲಕ್ಷಯೋ ಪ್ರಸಿದ್ಧ ದಾಖವೀ ॥೬೫॥ ನಿಜದೇಹಾಸೀ ಜೋ ಕರೀ ಘಾತ । ತೇ ಜರಾವ್ಯಾಧ ಕೇಲಾ ಮುಕ್ತ । ಯೇಥವರೀ ಜ್ಞಾತಾ ದೇಹಾತೀತ । ಕ್ಷಮಾಯುಕ್ತ ತೋ ಸಜ್ಞಾನ ॥೬೬॥

ಇಪ್ಪತ್ನಾಲ್ಕನೆಯ ಅಧ್ಯಾಯದಲ್ಲಿ ಅದ್ವೈದ ವಿಚಾರವು ಸ್ಥಿರವಾಗಿರುವುದಕ್ಕಾಗಿ, ಆತ್ಮಾನಾತ್ಮ ವಿವೇಕ ಮತ್ತು ನಿರ್ಗುಣದಿಂದ ಗುಣಗಳ ಉತ್ಪತ್ತಿಯನ್ನು ಹೇಳಿರುವುದು. ಗುಣಗಳ ಕ್ಷಯವಾಗಲು ಕೊನೆಯಲ್ಲಿ ನಿರ್ಗುಣವೇ ಉಳಿಯುವುದು ॥೫೪॥ ಪ್ರಾರಂಭದಲ್ಲಿ ನಿರ್ಗುಣವು ಮತ್ತು ಕೊನೆಯಲ್ಲಿ ನಿರ್ಗುಣವು, ಅಂದಮೇಲೆ ನಡುವೆ ಭಾಸವಾಗುತ್ತಿರುವ ಗುಣಗಳು ಮಿಥ್ಯೆಯೇ ಆಗಿರುವುವು. ಈ ಅದ್ವೈತದ ಪ್ರಾಪ್ತಿಗಾಗಿ ಆತ್ಮಾ ಮತ್ತು ಅನಾತ್ಮದ ನಿರೂಪಣೆಯನ್ನು ಮಾಡಲಾಗಿದೆ ॥೫೫॥ ಇಪ್ಪತ್ತೈದನೆಯ ಅಧ್ಯಾಯದಲ್ಲಿ ಈ ಮಿಥ್ಯಾ ಗುಣಗಳು ಪ್ರವೃತ್ತಿಯುಕ್ತವಾಗಿರುವುವು ಮತ್ತು ಮೂರು ಗುಣಗಳ ಪರಸ್ಪರ ಸಂಬಂಧವಿರುವುದು ಎಂದು ಹೇಳಲಾಗಿದೆ. ನಿರ್ಗುಣದ ಸಂಬಂಧದಿಂದ ಆತ್ಮ ನಿಷ್ಠೆಯನ್ನು ಹೇಗೆ ಜಾಗೃತವಿಡಬೇಕೆನ್ನುವ ವರ್ಣನೆಯನ್ನು ಮಾಡಲಾಗಿರುವುದು ॥೫೬॥ ಇಪ್ಪಾತ್ತಾರನೆಯ ಅಧ್ಯಾಯದಲ್ಲಿ ಪಶ್ಚಾತ್ತಾಪದ ಶಕ್ತಿಯ ವರ್ಣನೆಯನ್ನು ಮಾಡಿದೆ. ಪುರೂರವಾ ರಾಜನು ಉರ್ವಶಿ ಜೊತೆಯಲ್ಲಿ ಯಥೇಚ್ಛ ವಿಲಾಸವನ್ನು ಭೋಗಿಸುತ್ತಿರಲು ಕೊನೆಗೆ ಆತನಿಗೆ ವಿರಕ್ತಿಯು ಪ್ರಾಪ್ತವಾಯಿತು, ಇದರ ವರ್ಣನೆ ಇದೆ ॥೫೭॥ ಇಪ್ಪತ್ತೇಳನೆಯ ಅಧ್ಯಾಯದಲ್ಲಿ ಭಜನೆಯ ಪ್ರಕಾರ, ಮೂರ್ತಿಯ ಲಕ್ಷಣ, ವೈದಿಕ, ತಾಂತ್ರಿಕ ಹಾಗೂ ಮಿಶ್ರಭಜನ ಈ ಉದ್ಧವನ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿದೆ ॥೫೮॥ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಶ್ರೇಷ್ಠ ಯೋಗಿಗಳ ಯೋಗ ಭಂಡಾರ, ಆತ್ಮಾಸುಖದ ಕೇವಲ ಸಾರವೇ ಆಗಿರುವ ಅಂತಹ ಜ್ಞಾನದಿಂದ ತುಂಬಿರುವುದು ॥೫೯॥ ಯಾವ ಈ ಸಂಸಾರವು ಅಸಂಭವನೀಯವಾಗಿದೆ ಎಂದು ಉದ್ಧವನು ವಿಚಾರಿಸಿದ ಪ್ರಶ್ನೆಯ ಉತ್ತರವನ್ನು ಶ್ರೀಕೃಷ್ಣನು ಇದೇ ಅಧ್ಯಾಯದಲ್ಲಿ ಕೊಟ್ಟಿರುವನು ॥೬೦॥ ಇಪ್ಪತ್ತೊಂಬತ್ತನೆಯ ಅಧ್ಯಾಯವು ಮಾತ್ರ ಈ ಭಾಗವತದ ಹನ್ನೊಂದನೆಯ ಸ್ಕಂಧದ ಕಳಸವೇ ಆಗಿರುವುದು. ಭಕ್ತಿ ಪ್ರೇಮದ ಅತ್ಯಂತ ಮನೋಹರ ಸ್ವರೂಪವಾಗಿರುವ ಅತ್ಯಂತ ರಸಾಳ ಭಕ್ತಿಯುಕ್ತ ಜ್ಞಾನದ ಉಪದೇಶವಿರುವುದು ॥೬೧॥ ಮುಂದಿನ ಎರಡು ಅಧ್ಯಾಯಗಳಲ್ಲಿ ತನ್ನ ಸ್ತ್ರೀಪುತ್ರಾದಿ ಕುಲದ ನಾಶವಾಗಿದ್ದರೂ ಕೂಡ ಜ್ಞಾನಸಂಪನ್ನ ಮನುಷ್ಯನ ಚಿತ್ತವು ಅಲುಗಾಡುವುದಿಲ್ಲವೆಂಬುದನ್ನು ಶ್ರೀಕೃಷ್ಣನು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿರುವನು ॥೬೨॥ ಬ್ರಾಹ್ಮಣರ ಶಾಪವು ಬಹು ಶಕ್ತಿಶಾಲಿಯಾಗಿರುವುದು. ಇದು ಶ್ರೀಕೃಷ್ಣನಿಗೂ ಕೂಡ ಬಾಧಿಸಿತು. ಅಂದಮೇಲೆ ಇತರರ ಯಾವ ಕಥೆ? ಕೇವಲ ಬ್ರಾಹ್ಮಣರ ಶಾಪದಿಂದ ಕುಲದ ಸಂಪೂರ್ಣ ನಾಶವಾಯಿತು ॥೬೩॥ ಬ್ರಾಹ್ಮಣರ ಶಾಪವು ವಿಲಕ್ಷಣ ಸಾಮರ್ಥ್ಯವನ್ನು ಹೊಂದಿರುವುದು. ಅದು ಸರ್ವ ಸಮುದ್ರವನ್ನು ಮೂತ್ರವನ್ನಾಗಿ ಅಪೇಯ ಮಾಡಿತು. ಬ್ರಾಹ್ಮಣರ ಕೋಪದಿಂದ ಕ್ಷಣಾರ್ಧದಲ್ಲಿ ಶಿವನ ಲಿಂಗಪಾತವಾಯಿತು ॥೬೪॥ ಇದಕ್ಕಾಗಿಯೇ ಸಜ್ಞಾನನಾಗಿರಲಿ, ಅಜ್ಞಾನಿಯಾಗಿರಲಿ ಬ್ರಾಹ್ಮಣರಿಗೆ ವಿರೋಧವನ್ನು ಎಂದಿಗೂ ಮಾಡಬಾರದು. ಇದನ್ನು ತೋರಿಸಿಕೊಡುವುದಕ್ಕಾಗಿಯೇ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ತನ್ನ ಕುಲದ ಕ್ಷಯಮಾಡಿ ತೋರಿಸಿದನು ॥೬೫॥ ಯಾವ ಜರಾವ್ಯಾಧನು ಶ್ರೀಕೃಷ್ಣನ ಶರೀರಕ್ಕೆ ಬಾಣದಿಂದ ಘಾಸಿ ಮಾಡಿದನು. ಆದರೆ ಶ್ರೀಕೃಷ್ಣನು ಆತನಿಗೂ ಕೂಡ ಮುಕ್ತನನ್ನಾಗಿ ಮಾಡಿದನು. ಯಾವ ಜ್ಞಾನಿಯು ಈ ಪ್ರಕಾರವಾಗಿ ದೇಹಾತೀತ, ಕ್ಷಮಾಶೀಲನಾಗಿರುವನೋ, ಆತನು ಸಜ್ಞಾನಿ ಎಂದು ತಿಳಿಯಬೇಕು ॥೬೬॥

ಏಕುಣತೀಸ ಅಧ್ಯಾಯಪರ್ಯಂತ । ಕೃಷ್ಣೇ ಉಪದೇಶಿಲಾ ಜ್ಞಾನಾರ್ಥ । ಪುಡೀಲ ದೋನ ಅಧ್ಯಾಯಾಂತ । ಸ್ವಯೇ ದಾವೀತ ವಿದೇಹತ್ವ ॥೬೭॥ ರಾಮ ಅಯೋಧ್ಯಾ ಘೇಊನ ಗೇಲಾ । ಕೃಷ್ಣೇ ನಿಜದೇಹಹೀ ಸಾಂಡಿಲಾ। ಯೇಣೇ ದೇಹಾಭಿಮಾನ ಮಿಥ್ಯಾಕೇಲಾ । ತರಾವಯಾ ಪುಢಿಲಾ ಮುಮುಕ್ಷಾ ॥೬೮॥ ಪಂಧರಾ ಅಧ್ಯಾಯ ಪೂರ್ವಾರ್ಧ । ವ್ಯಾಖ್ಯಾನ ಝಾಲೇ ಅತಿಶುದ್ಧ । ಸೂತ್ರಪ್ರಾಯ ಉತ್ತರಾರ್ಧ । ದಾವಿಲೇ ವಿಶದ ಅಧ್ಯಾಯಾರ್ಥ ॥೬೯॥ ಸಾಹ್ಯ ಸದ್ಗುರು ಜನಾರ್ದನ । ಶ್ರೋತೀ ದ್ಯಾವೇ ಅವಧಾನ । ಪುಢೀಲ ಉತ್ತರಾರ್ಧ ವ್ಯಾಖ್ಯಾನ । ಏಕಾಜನಾರ್ದನ ಬೋಲವೀ ॥೭೦॥ ಝಾಲಿಯಾ ವಸಂತಾಚೇ ರಿಗವಣೇ । ವೃಕ್ಷ ಸಪುಷ್ಪ ಸಫಳ ತೇಣೇ । ತೇವೀ ಜನಾರ್ದನಕೃಪಾಗುಣೇ । ಸಾರ್ಥಕ ವಚನೇ ಕವಿತ್ವಾಚೀ ॥೭೧॥ ಗಗನೀ ಉಗವಲಾ ಅಂಶುಮಾಳೀ । ಜೇವೀ ವಿಕಸಿಜೇ ನವ ಕಮಳೀ । ತೇವೀ ಜನಾರ್ದನಕೃಪಾಮೇಳೀ । ಕವಿತ್ವನವಾಳೀ ವಿಕಾಸೇ ॥೭೨॥ ವೇಣು ಘೇಊನಿ ಹಾತೇ । ವಿಶ್ವಾ ಮೋಹಿಲೇ ಕೃಷ್ಣನಾಥೇ । ತೇವೀ ಕವೀಶ್ವರ ಕರೋನಿ ಮಾತೇ । ವಕ್ತಾ ಯೇಥೇ ಜನಾರ್ದನ ॥೭೩॥ ತೋ ಜನಾರ್ದನಕೃಪಾಕ್ಷೀರಾಬ್ಧೀ । ಜ್ಯಾಚೇ ಕೃಪೇಸೀ ನಾಹೀ ಅವಧೀ । ತೇಣೇ ಉತ್ತರಾರ್ಧೀ ಪ್ರವೇಶೇ ಬುದ್ಧೀ । ಅರ್ಥಸಿದ್ಧೀಸಮವೇತ ॥೭೪॥ ಮಾಗೀಲ ಕಥಾಸಂಗತೀ । ಪಂಧರಾವೇ ಅಧ್ಯಾಯಾಅಂತೀ । ಸಿದ್ಧೀ ಬಾಧಿಕಾ ಮಾಝೇ ಪ್ರಾಪ್ತಿ । ಐಸೇ ಶ್ರೀಪತೀ ಬೋಲಿಲಾ ॥೭೫॥ ಏವಂ ಸಾಂಡೂನಿ ಸಿದ್ಧೀಚೇ ಧ್ಯಾನ । ಮಾಝೇ ಸ್ವರೂಪೀ ರಾಖಾವೇ ಮನ । ಹೇ ಐಕೋನಿ ಕೃಷ್ಣವಚನ । ಉದ್ಧವೇ ಪ್ರಶ್ನ ಮಾಂಡಿಲಾ ॥೭೬॥ ಉದ್ಧವ ಮ್ಹಣೇ ಶ್ರೀಕೃಷ್ಣನಾಥಾ । ವಿನಂತೀ ಅವಧಾರೀ ಸಮರ್ಥಾ । ತುಝ್ಯಾ ವಿಭೂತಿ ನಮಸ್ತಾ । ಮಜ ತತ್ತ್ವತಾ ಸಾಂಗಾವ್ಯಾ ॥೭೭॥

ಉದ್ಧವ ಉವಾಚ:-

ತ್ವಂ ಬ್ರಹ್ಮ ಪರಮಂ ಸಾಕ್ಷಾದನಾದ್ಯಂತಮಪಾವೃತಮ್।
ಸರ್ವೇಷಾಮಪಿ ಭಾವಾನಾಂ ತ್ರಾಣಸ್ಥಿತ್ಯಪ್ಯಯೋದ್ಭವಃ ॥೧॥

ಉದ್ಧವನು ಹೇಳಿದನು :- ಹೇ ಭಗವಂತಾ, ನೀನು ಸ್ವತಃ ಪರಬ್ರಹ್ಮನು. ನಿನಗೆ ಆದಿ ಅಂತ್ಯಗಳಿಲ್ಲ, ನೀನು ಆವರಣರಹಿತನು, ಅದ್ವಿತೀಯ ತತ್ವನಾಗಿರುವೆ. ಸಮಸ್ತ ಪ್ರಾಣಿಗಳ ಮತ್ತು ಪದಾರ್ಥಗಳ ಉತ್ಪತ್ತಿ, ಸ್ಥಿತಿ ಮತ್ತು ಲಯದ ಕಾರಣ ನೀನೇ ಇರುವೆ .

ಇಪ್ಪತ್ತೊಂಬತ್ತನೆಯ ಅಧ್ಯಾಯದವರೆಗೆ ಶ್ರೀಕೃಷ್ಣನು ಜ್ಞಾನದ ಉಪದೇಶವನ್ನು ಮಾಡಿರುವನು. ಅದರ ಮುಂದಿನ ಎರಡು ಅಧ್ಯಾಯಗಳಲ್ಲಿ ಸ್ವತಃ ತಾನೇ ತನ್ನ ವಿದೇಹಸ್ಥಿತಿಯನ್ನು ತೋರಿಸಿಕೊಟ್ಟಿರುವನು ॥೬೭॥ ಶ್ರೀರಾಮಚಂದ್ರನು ತನ್ನ ಜೊತೆಯಲ್ಲಿ ತನ್ನ ಅಯೋಧ್ಯಾ ನಗರವನ್ನೇ ನಿಜಧಾಮಕ್ಕೆ ಒಯ್ದನು. ಆದರೆ ಶ್ರೀಕೃಷ್ಣನು ತನ್ನ ದೇಹವನ್ನೂ ಕೂಡ ತ್ಯಾಗ ಮಾಡಿ ಮುಂದಿನ ಮುಮುಕ್ಷುಗಳವರಿಗೆ ಉದ್ಧಾರ ಮಾಡುವುದಕ್ಕಾಗಿ ದೇಹಾಭಿಮಾನವನ್ನು ಮಿಥ್ಯೆಯನ್ನಾಗಿ ಮಾಡಿ ತೋರಿಸಿದನು ॥೬೮॥ ಹದಿನೈದನೆಯ ಅಧ್ಯಾಯದವರೆಗೆ ಈ ಸ್ಕಂಧದ ಪೂರ್ವಾರ್ಧವಾಯಿತು. ಅದರಲ್ಲಿ ಅತ್ಯಂತ ಪವಿತ್ರವಾಗಿ ವ್ಯಾಖ್ಯಾನಿಸಲಾಗಿದೆ ಮತ್ತು ಉತ್ತರಾರ್ಧದಲ್ಲಿನ ಪ್ರತಿಯೊಂದು ಅಧ್ಯಾಯಗಳನ್ನು ಸೂತ್ರರೂಪವಾಗಿ ವಿಶದಗೊಳಿಸಿದೆ ॥೬೯॥ ನನಗೆ ಸದ್ಗುರು ಜನಾರ್ದನಸ್ವಾಮಿಯವರ ಸಹಾಯವಿದೆ. ಈಗ ಶ್ರೋತೃಗಳವರು ಇತ್ತ ಲಕ್ಷ ಕೊಡಬೇಕು. ಮುಂದಿನ ಉತ್ತರಾರ್ಧ ವ್ಯಾಖ್ಯಾನವನ್ನು ಜನಾರ್ದನಸ್ವಾಮಿಯವರು ನನ್ನಿಂದ ನುಡಿಸುವರು ॥೭೦॥ ವಸಂತ ಋತು ಆರಂಭವಾಗುತ್ತಲೇ ವೃಕ್ಷಗಳು ಫಲಪುಷ್ಪಗಳಿಂದ ಪ್ರಫುಲ್ಲಿತವಾಗುವಂತೆ ಜನಾರ್ದನಸ್ವಾಮಿಯ ಕೃಪಾಕಟಾಕ್ಷದಿಂದ ಕವಿತ್ವದಲ್ಲಿನ ಶಬ್ದಗಳೂ ಕೂಡ ಫಲದ್ರೂಪವಾಗುವುವು ॥೭೧॥ ಆಕಾಶದಲ್ಲಿ ಸೂರ್ಯನಾರಾಯಣನ ಉದಯವಾಗುತ್ತಲೇ ನೂತನ ಕಮಲಗಳು ಪ್ರಫುಲ್ಲಿತವಾಗುವುವು. ಅದರಂತೆಯೇ ಜನಾರ್ದನ ಸ್ವಾಮಿಯವರ ಕೃಪೆಯಿಂದ ಕವಿತ್ವದಲ್ಲಿ ನವನೂತನವಾದ ತೇಜವು ವಿಕಾಸಗೊಳ್ಳುವುದು ॥೭೨॥ ಕೈಯಲ್ಲಿ ಮುರಲಿಯನ್ನು ಹಿಡಿದು ಶ್ರೀಕೃಷ್ಣನು ಸರ್ವ ಜಗತ್ತನ್ನು ಮೋಹಿಸಿಬಿಟ್ಟನು. ಅದರಂತೆಯೇ ನನಗೆ ಕವೀಶ್ವರನನ್ನಾಗಿ ಮಾಡಿ ಕೈಯಲ್ಲಿ ಹಿಡಿದು ಜನಾರ್ದನಸ್ವಾಮಿಯವರು ತಾವು ಸ್ವತಃ ಹೇಳುತ್ತಿರುವರು ॥೭೩॥ ಆ ಯಾವ ಜನಾರ್ದನಸ್ವಾಮಿಯವರ ಕೃಪೆ ಎಂದರೆ ಒಂದು ಕ್ಷೀರಸಾಗರವೇ ಆಗಿರುವುದು. ಅವರ ಕೃಪೆಯು ಅಮರ್ಯಾದಿತವಾದ್ದರಿಂದ ಉತ್ತರಾರ್ಧದಲ್ಲಿ ನನ್ನ ಬುದ್ಧಿಯು ಅರ್ಥಸಿದ್ಧಿಸಹಿತವಾಗಿ ಪ್ರವೇಶವಾಗಿರುವುದು ॥೭೪॥ ಹಿಂದಿನ ಕಥೆಯ ಸಂದರ್ಭವು ಹೀಗಿದೆ, ಹದಿನೈದನೆಯ ಅಧ್ಯಾಯದ ಕೊನೆಯಲ್ಲಿ ನನ್ನ ಪ್ರಾಪ್ತಿಗೆ ಸಿದ್ಧಿಗಳು ಬಾಧಕವಾಗಿವೆ ಎಂದು ಶ್ರೀಕೃಷ್ಣನು ಹೇಳಿರುವನು ॥೭೫॥ ಒಟ್ಟಿನಲ್ಲಿ ಸಿದ್ಧಿಗಳ ಮೇಲೆ ಇರುವ ಲಕ್ಷಣವನ್ನು ಬಿಟ್ಟುಕೊಟ್ಟು ನನ್ನ ಸ್ವರೂಪದಲ್ಲಿ ಮನವನ್ನು ಇಡಬೇಕು. ಈ ಯಾವ ಶ್ರೀಕೃಷ್ಣನ ವಿಚಾರವನ್ನು ಕೇಳಿಕೊಂಡು ಉದ್ಧವನು ಪ್ರಶ್ನೆಯನ್ನು ಕೇಳಿದನು ॥೭೬॥ ಉದ್ಧವನು ಹೇಳಿದನು:- ಹೇ ಶ್ರೀಕೃಷ್ಣನಾಥನೇ, ಸಮರ್ಥನೇ, ನನ್ನದೊಂದು ವಿನಂತಿಯನ್ನು ಕೇಳು, ನಿನ್ನ ಸರ್ವ ಪ್ರಕಾರದ ವಿಭೂತಿಗಳನ್ನು ಒಮ್ಮೆ ನನಗೆ ತತ್ವತಃ ಹೇಳು ॥೭೭॥

ಭೂತಭೌತಿಕಾಂಚೇ ತೂ ಕಾರಣ । ತುಝೋನಿ ಜನ್ಮ - ಸ್ಥಿತಿ - ನಿದಾನ । ಇತುಕೇ ಕರೋನಿ ಅಕರ್ತಾ ಜಾಣ । ಬ್ರಹ್ಮ ಪರಿಪೂರ್ಣ ತೂ ಯಾಲಾಗೀ ॥೭೮॥ ಮ್ಹಣಸೀ ಉತ್ಪತ್ತೀ ಸ್ಥಿತಿ ಮರಣ । ಭೂತಾಂಚೇ ಪ್ರಕೃತಿ ಕರೀ ಜಾಣ । ತೇ ಪ್ರಕೃತಿ ತುಝೀ ಆಧೀನ । ತುಝೋನಿ ಚಲನ ಪ್ರಕೃತೀಸೀ ॥೭೯॥ ಯಾಲಾಗೀ ಪ್ರಕೃತೀ ತೇ ಪರತಂತ್ರ । ತೂ ಪರಮಾತ್ಮಾ ಸ್ವತಂತ್ರ । ಅನಾದಿ ಅವ್ಯಯೋ ಅಪಾರ । ಶ್ರುತೀಸೀ ಪಾರ ನ ಕಳೇಚಿ ॥೮೦॥ ಪ್ರಕೃತೀಸೀ ತುಝೀ ಆವರಣ । ತೂ ಅನಂತ ಗಾ ನಿರಾವರಣ । ಜೀವಾಚೇ ಸ್ವರೂಪ ಗಾ ತೂ ಆಪಣ । ಪರೀ ಜೀವಪಣ ತುಜನಾಹೀ ॥೮೧॥ ಜೀವ್ಹೂ ತಿತುಕಾ ಅಜ್ಞಾನಯುಕ್ತ । ತೂ ಜ್ಞಾನಾಜ್ಞಾನಾತೀತ ನಿಶ್ಚಿತ । ಯಾಲಾಗೀ ಬ್ರಹ್ಮ ತೂ ಸಾಕ್ಷಾತ । ಅವಿನಾಶವಂತ ಅಪರೋಕ್ಷ ॥೮೨॥ ತೋ ತೂ ಅಪರೋಕ್ಷ ಕೈಸಾ ಮ್ಹಣಶೀ । ಸರ್ವೀ ಸರ್ವತ್ರ ಸಬಾಹ್ಯ ಅಸಶೀ । ಐಸಾ ಅಸೋನಿ ಅತರ್ಕ್ಯ ಹೋಶೀ । ಹೃಷೀಕೇಶೀ ತೇ ಐಕ ॥೮೩॥

ಉಚ್ಚಾವಚೇಷು ಭೂತೇಷು ದುರ್ಜ್ಞೇಯಮಕೃತಾತ್ಮಭಿಃ ।
ಉಪಾಸತೇ ತ್ವಾಂ ಭಗವನ್ ಯಾಥಾತಥ್ಯೇನ ಬ್ರಾಹ್ಮಣಾಃ ॥೨॥

ಅರ್ಥ:- ನೀವು ಮೇಲೆ ಕೆಳಗೆ ಸರ್ವಪ್ರಾಣಿ ಮಾತ್ರರಲ್ಲಿ ಸ್ಥಿರರಾಗಿರುವಿರಿ. ಆದರೆ ಯಾವ ಜನರು ತಮ್ಮ ಮನ ಮತ್ತು ಇಂದ್ರಿಯಗಳನ್ನು ಜಯಸಿಲ್ಲವೋ, ಅವರು ನಿಮ್ಮನ್ನು ತಿಳಿಯುವುದಿಲ್ಲ. ನಿಮ್ಮ ಉಪಾಸನೆಯನ್ನು ಬ್ರಹ್ಮವೇತ್ತ ಪುರುಷರು ಮಾಡುವರು.

ಮಶಕಾದಿ ಹಿರಣ್ಯಗರ್ಭಾಪರ್ಯಂತ । ತೂ ಸಬಾಹ್ಯ ಸರ್ವಭೂತೀ ಸತತ । ಐಶಿಯಾ ತೂತೇ ನಿಶ್ಚಿತ । ಬ್ರಾಹ್ಮಣ ಜಾಣತ ವೇದಾರ್ಥೇ ॥೮೪॥ ಆಕಳೂನಿ ಉಪನಿಷದರ್ಥ । ತುಝ್ಯಾ ಠಾಯೀ ಭಜನಯುಕ್ತ । ತೇ ತುಜ ಸರ್ವಗತಾತೇ ಜಾಣತ । ಸುನಿಶ್ಚಿತ ಸರ್ವಾತ್ಮಾ ॥೮೫॥ ತ್ಯಾ ಸರ್ವಾತ್ಮ್ಯಾಚಾ ಪಾಹತಾ ಪಾರ । ಅಚಿಂತ್ಯಾನಂತ ಐಶ್ವರ್ಯಧರ । ತ್ಯಾ ತುಜ ನೇಣತೀ ಪ್ರಾಕೃತ ನರ । ಐಕ ವಿಚಾರ ತಯಾಂಚಾ ॥೮೬॥ ಜೇ ಮನಾಚೇ ವಿಕಿಲೇ । ಉಪಸ್ಥಾಚೇ ಅಂಕಿಲೇ । ಜೇ ರಸನೇಚೇ ಪೋಸಣೇ ಝಾಲೇ । ನಿದ್ರೇಸಿ ಕೇಲೇ ಘರಜಾಂವಯೀ ॥೮೭॥ ತ್ಯಾಂಸೀ ಸ್ವತಃಸಿದ್ಧ ಸ್ವರೂಪ ಪಾಹೀ । ಸರ್ವಗತ ನ ಪಡೇಚಿ ಠಾಯೀ । ನಿಜಾತ್ಮತಾ ನ ಕಳೇ ದೇಹೀ । ಸದಾ ವಿಷಯೀ ಭೂಲಲೇ ॥೮೮॥ ವಿಷಯೀ ಚಂಚಳ ಅಂತಃಕರಣ । ತ್ಯಾಂಸೀ ನವ್ಹೇ ಧ್ಯಾನ ಸಗುಣ । ನಿರ್ಗುಣೀ ಪ್ರವೇಶೇನಾ ಮನ । ಅಜ್ಞಾನ ಜನ ಕೇವೀ ತರಲೇ ॥೮೯॥

ಹೇ ಶ್ರೀಕೃಷ್ಣನೇ, ಭೂತ - ಭೌತಿಕಗಳ ಕಾರಣ ನೀನೇ ಇರುವೆ. ನಿನ್ನಿಂದಲೇ ಉತ್ಪತ್ತೀ, ಸ್ಥಿತೀ ಮತ್ತು ಲಯಗಳಾಗುವುವು. ಇಷ್ಟೆಲ್ಲವನ್ನೂ ಮಾಡಿ ನೀನು ಅಕರ್ತನಾಗಿರುವೆ. ಆದ್ದರಿಂದ ನೀನು ಪರಿಪೂರ್ಣವಾಗಿ ಬ್ರಹ್ಮನಾಗಿರುವೆ ॥೭೮॥ ಈಗ ನೀನು ಹೀಗೆ ಹೇಳಬಹುದು; ಉತ್ಪತ್ತೀ, ಸ್ಥಿತೀ ಮತ್ತು ಲಯ ಹಾಗೂ ಭೂತ - ಭೌತಿಕಗಳು ಮಾಯೆಯಿಂದ ಆಗುತ್ತಿರುವುವು. ಆದರೆ ಆ ಮಾಯಾ ಪ್ರಕೃತಿಯು ನಿನ್ನ ಆಧೀನವಾಗಿಯೇ ಇರುವುದು. ನಿನ್ನಿಂದಲೇ ಪ್ರಕೃತಿಗೆ ಚಾಲನೆ ದೊರಕುವುದು ॥೭೯॥ ಆದ್ದರಿಂದ ಆ ಮಾಯೆಯು ಪರತಂತ್ರವಾಗಿರುವುದು. ಪರಮಾತ್ಮನಾದ ನೀನು ಸ್ವತಂತ್ರನಾಗಿರುವೆ. ನೀನು ಅನಾದೀ, ಅವ್ಯಯ ಮತ್ತು ಅಪಾರನಾಗಿರುವೆ. ವೇದಗಳಿಗೂಕೂಡ ನಿನ್ನ ನೆಲೆಯು ಹತ್ತುವುದಿಲ್ಲ ॥೮೦॥ ಪ್ರಕೃತಿಗೆ ನಿನ್ನ ಆವರಣವಿರುವುದು. ಆದರೆ ನೀನು ಅನಂತನು ಆವರಣ ರಹಿತನಾಗಿರುವೆ. ನೀನು ಸ್ವತಃ ಜೀವದ ಸ್ವರೂಪನಾಗಿರುವೆ. ಆದರೆ ನಿನಗೆ ಮಾತ್ರ ಜೀವತ್ವವು ಇರುವುದಿಲ್ಲ ॥೮೧॥ ಇರುವ ಜೀವಗಳೆಲ್ಲವೂ ಅಜ್ಞಾನಯುಕ್ತವಾಗಿರುವುವು. ಆದರೆ ನೀನು ಜ್ಞಾನ - ಅಜ್ಞಾನ ಇವುಗಳ ಆಚೆ ಇರುವೆ. ಆದ್ದರಿಂದ ನೀನು ಅವಿನಾಶೀ ಮತ್ತು ಅಪರೋಕ್ಷ ಪರಬ್ರಹ್ಮನಾಗಿರುವೆ ॥೮೨॥ ಅಪರೋಕ್ಷ ಹೇಗೆ ಎಂದು ನೀನು ವಿಚಾರಿಸಬಹುದು. ಆದರೆ ನೀನು ಸರ್ವರಲ್ಲಿ ಅಂತರ್ಬಾಹ್ಯನಾಗಿರುವೆ ಮತ್ತು ಹೀಗೆ ವ್ಯಾಪಿಸಿಕೊಂಡವನಾಗಿದ್ದರೂ ಕೂಡ, ಹೇ ಶ್ರೀಕೃಷ್ಣನೇ, ನೀನು ಅತರ್ಕ್ಯನಾಗಿರುವೆ ಅದನ್ನು ಈಗ ಕೇಳು ॥೮೩॥

ನೊಣದಿಂದ ಹಿಡಿದು ಬ್ರಹ್ಮದೇವನವರೆಗೆ ಸರ್ವ ಪ್ರಾಣಿಮಾತ್ರರಲ್ಲಿ ನೀನು ಒಳಗೆ, ಹೊರಗೆ ಪರಿಪೂರ್ಣವಾಗಿ ತುಂಬಿಕೊಂಡು ಇರುವೆ. ಹೀಗೆಂದು ನಿನಗೆ ಬ್ರಾಹ್ಮಣರು ವೇದಾರ್ಥದಿಂದ ತಿಳಿದಿರುವರು ॥೮೪॥ ಉಪನಿಷತ್‌ಗಳ ರಹಸ್ಯವನ್ನು ತಿಳಿದುಕೊಂಡವರು ನಿನ್ನ ಭಜನೆಯಲ್ಲಿ ತನ್ಮಯರಾಗುವರು. ನೀನು ಸರ್ವವ್ಯಾಪೀ ಸರ್ವಾತ್ಮಾನಾಗಿರುವೆ. ಹೀಗೆ ಆ ಯಾವ ಭಕ್ತರು ತಿಳಿದಿರುವರು ॥೮೫॥ ಆ ಯಾವ ನಿನ್ನ ಸರ್ವಾತ್ಮಕತೆಯ ಅಂತಪಾರವನ್ನು ಕಾಣುವ ಪ್ರಯತ್ನವನ್ನು ಮಾಡಹತ್ತಿದರೆ ನೀನು ಅಚಿಂತ್ಯ ಮತ್ತು ಅನಂತ ಐಶ್ವರ್ಯಯುಕ್ತನಾಗಿರುವೆ. ಹೀಗೆಂದು ತಿಳಿಯುತ್ತಿರುವುದು. ಆದರೆ ಹೀಗಿರುವ ನಿನಗೆ ಯಾವ ಸಾಮಾನ್ಯ ಜನರು ತಿಳಿಯುವುದಿಲ್ಲ. ಅವರ ವಿಚಾರವನ್ನು ಕೇಳು ॥೮೬॥ ಅವರು ತಮ್ಮ ಮನಸ್ಸನ್ನು ಮಾರಿಕೊಂಡಿರುವರು. ಅವರು ಕಾಮ ವಾಸನೆಯ ದಾಸರಾಗಿರುವರು. ಅವರು ನಾಲಿಗೆಯಿಂದಲೇ ಬದುಕಿರುವರು. ಇವರಿಗೆ ನಿದ್ರೆಯು ತನ್ನ ಮನೆ ಅಳಿಯನನ್ನಾಗಿ ಮಾಡಿಕೊಂಡಿರುವುದು ॥೮೭॥ ಇಂತಹ ಜನರಿಗೆ ನಿನ್ನ ಸ್ವತಃಸಿದ್ಧ ಹಾಗೂ ಸರ್ವವ್ಯಾಪಕ ಸ್ವರೂಪದ ಕಲ್ಪನೆ ಇರುವುದಿಲ್ಲ. ತಮ್ಮ ದೇಹದಲ್ಲಿ ಆತ್ಮಸತ್ತೆ ಇರುವುದು. ಇದರ ಅರಿವು ಅವರಿಗೆ ಇರುವುದಿಲ್ಲ. ಇವರು ಸದಾ ಸರ್ವಕಾಲದಲ್ಲಿ ವಿಷಯ ಸುಖಗಳಲ್ಲಿ ಭುಲಾಯಿಸಿರುವರು ॥೮೮॥ ವಿಷಯಗಳ ಭೋಗಕ್ಕಾಗಿ ಅವರ ಅಂತಃಕರಣವು ಚಂಚಲವಾಗಿರುವುದು. ಅವರಿಗೆ ಸಗುಣಧ್ಯಾನವು ಸಾಧಿಸುವುದಿಲ್ಲ. ನಿರ್ಗುಣ ತತ್ವದಲ್ಲಿ ಅವರ ಮನವು ಪ್ರವೇಶ ಮಾಡಲು ಶಕ್ಯವಾಗುವುದಿಲ್ಲ. ಇಂತಹ ಅಜ್ಞಾನಿ ಜನರು ಹೇಗೆ ಉದ್ಧಾರರಾಗುವರು? ॥೮೯॥

ನ ಕರಿತಾ ನಾನಾ ವ್ಯುತ್ಪತ್ತೀ । ನ ಧರಿತಾ ಧ್ಯಾನಸ್ಥಿತೀ । ತುಝ್ಯಾ ಉತ್ತಮಾ ಜ್ಯಾ ವಿಭೂತೀ । ತ್ಯಾ ಸಾಂಗ ನಿಶ್ಚಿತೀ ಭಜನಾಸೀ ॥೯೦॥

ಯೇಷು ಯೇಷು ಚ ಭಾವೇಷು ಭಕ್ತ್ಯಾತ್ವಾಂ ಪರಮರ್ಷಯಃ । ಉಪಾಸೀನಾಃ ಪ್ರಪದ್ಯಂತೇ ಸಂಸಿದ್ಧಿಂ ತದ್ವದಸ್ವ ಮೇ ॥೩॥

ಅರ್ಥ:- ಮಹಾ ಮಹಾ ಋಷೀ-ಮಹರ್ಷಿಗಳವರು ನಿಮ್ಮ ಯಾವ ರೂಪದ ಮತ್ತು ವಿಭೂತಿಗಳ ಉಪಾಸನೆಯನ್ನು ಭಕ್ತಿಭಾವದಿಂದ ಮಾಡಿ ಸಿದ್ಧಿಗಳನ್ನು ಪ್ರಾಪ್ತ ಮಾಡಿಕೊಳ್ಳುವರು. ಆ ವಿಭೂತಿಗಳನ್ನು ನೀವು ನನಗೆ ಹೇಳಿರಿ.

ಜ್ಯಾ ಜ್ಯಾ ತುಝ್ಯಾ ವಿಭೂತೀ । ಪೂರ್ವೀ ಉಪಾಸಿಲ್ಯಾ ಸಂತೀ। ದೃಢಭಾವೇ ಕರೋನಿಯಾ ಭಕ್ತೀ । ತುಝೀ ಸ್ವರೂಪಪ್ರಾಪ್ತೀ ಪಾವಲೇ ॥೯೧॥ ತ್ಯಾ ಸಕಳ ತುಝ್ಯಾ ವಿಭೂತೀ । ಕವಣ ಸ್ಥಿತೀ ಕವಣ ವ್ಯಕ್ತೀ । ಕವಣ ಭಾವ ಕವಣ ಗತೀ । ಹೇ ನಿಶ್ಚಿತೀ ಮಜ ಸಾಂಗಾ ॥೯೨॥ ಮ್ಹಣಸೀ ಸಕಳ ಭೂತಾಂಪ್ರತೀ । ತೂಚಿ ವೋಳಖ ಮಾಝ್ಯಾ ವಿಭೂತೀ । ತರೀ ತೇ ತುಝೀ ಅತರ್ಕ್ಯ ಸ್ಥಿತೀ । ನ ಕಳೇ ಶ್ರೀಪತೀ ಆಮುಚೇನೀ ॥೯೩॥

ಗೂಢಶ್ಚರಸಿ ಭೂತಾತ್ಮಾ ಭೂತಾನಾಂ ಭೂತಭಾವನಃ । ನ ತ್ವಾಂ ಪಶ್ಯಂತಿ ಭೂತಾನೀ ಪಶ್ಯಂತ ಮೋಹಿತಾನಿ ತ ॥೪॥

ಅರ್ಥ:- ಸಮಸ್ತ ಪ್ರಾಣಿಗಳ ಜೀವನ ದಾತಾ ಪ್ರಭೂ, ನೀವು ಸರ್ವ ಪ್ರಾಣಿ ಮಾತ್ರರಲ್ಲಿ ಅಂತರಾತ್ಮಾ ರಾಗಿರುವಿರಿ. ತಾವು ಅವರಲ್ಲಿ ಗುಪ್ತವಾಗಿದ್ದು, ಲೀಲೆಗಳನ್ನು ಮಾಡುತ್ತಿರುವಿರಿ. ನೀವು ಎಲ್ಲರನ್ನೂ ನೋಡುವಿರಿ. ಆದರೆ ಜಗತ್ತಿನ ಪ್ರಾಣಿಗಳು ನಿಮ್ಮ ಮಾಯೆಯಿಂದ ಮೋಹಿತರಾಗಿ ನಿಮ್ಮನ್ನೇ ನೋಡಲಾರರಾಗಿರುವರು.

ಸರ್ವ ಭೂತಾಂಚಾ ಹೃದಯಸ್ಥ । ಹೃದಯೀ ಅಸೋನಿ ಗುಪ್ತ । ತ್ಯಾ ತೂತೇ ಭೂತೇ ಸಮಸ್ತ । ನ ದೇಖತ ದೇಹಭ್ರಮೇ ॥೯೪॥ ತ್ಯಾ ದೇಹಭ್ರಮಾಸೀ ದೇವರಾಯಾ । ಮೂಳ ಕಾರಣ ತುಝೀ ಮಾಯಾ । ತೇಥೇ ತುಝೀ ಕೃಪಾ ಝಾಲಿಯಾ । ಮಾಯಾ ಜಾಯಾ ವಿಲಯಾ ಗುಣೇಸೀ ॥೯೫॥ ಮಗ ಸರ್ವತ್ರ ಸರ್ವಾಠಾಯೀ । ಸರ್ವ ಭೂತೀ ಸಬಾಹ್ಯ ದೇಹೀ । ತುಝೇ ಸ್ವರೂಪ ಠಾಯೀ ಠಾಯೀ । ಪ್ರಕಟೇ ಪಾಹೀ ಸದೋದಿತ ॥೯೬॥ ಏವಢೇ ತುಝೇ ಕೃಪೇಚೇ ಕರಣೇ । ತೇ ಕೃಪಾ ಲಾಹಿಜೇ ಕವಣೇ ಗುಣೇ । ಯಾಲಾಗೀ ತುಝ್ಯಾ ವಿಭೂತಿ ಉಪಾಸಣೇ .। ತುಝೇ ಕೃಪೇ ಕಾರಣೇ ಗೋವಿಂದಾ ॥೯೭॥ ಯಾಚಿಲಾಗೀ ವಿಭೂತೀಂಚೀ ಸ್ಥಿತೀ । ಸಮೂಳ ಸಾಂಗಾವೀ ಮಜಪ್ರತೀ । ತೇಚಿ ಅರ್ಥೀಚೀ ವಿನಂತೀ । ಪುಢತಪುಢತೀ ಕರೀತಸೇ ॥೯೮॥

ಯಾಃ ಕಾಷ್ಠ ಭೂಮೌ ದಿವಿ ವೈ ರಸಾಯಾಂ ವಿಭೂತಯೋ ದಿಕ್ಷು ಮಹಾ ವಿಭೂತೇ ।
ತಾ ಮಹ್ಯಮಾಖ್ಯಾಹ್ಯನುಭಾವಿತಾಸ್ತೇ ನಮಾಮಿ ತೇ ತೀರ್ಥಪದಾಂಘ್ರಿಪದ್ಮಮ್ ॥೫॥

ಅರ್ಥ:- ಅಚಿಂತ್ಯ ಐಶ್ವರ್ಯ ಸಂಪನ್ನ ಪ್ರಭುವೇ, ಪೃಥ್ವಿ, ಸ್ವರ್ಗ, ಪಾತಾಳ ಹಾಗೆಯೇ ದಿಶಾ-ವಿದಿಶಾಗಳಲ್ಲಿ ನಿಮ್ಮ ಪ್ರಭಾವದಿಂದ ಯುಕ್ತವಾಗಿರುವ ಯಾವ ಯಾವ ವಿಭೂತಿಗಳಿರುವುವೋ, ಕೃಪೆಮಾಡಿ ಅವುಗಳ ವರ್ಣನೆಯನ್ನು ಮಾಡಿರಿ. ಪ್ರಭೂ, ನಾನು ನಿಮ್ಮ ಚರಣ ಕಮಲಗಳಿಗೆ ವಂದಿಸುತ್ತಿರುವೆನು. ನಿಮ್ಮ ಚರಣಗಳು ತೀರ್ಥಗಳ ತೀರ್ಥವಾಗಿರುವುವು.

ಅದಕ್ಕಾಗಿ ಅನೇಕ ಪ್ರಕಾರದ ಅಭ್ಯಾಸವನ್ನು ಮಾಡದೇ, ಹಾಗೂ ಧ್ಯಾನಧಾರಣೆಯ ಸಾಧನೆಯನ್ನು ಸಾಧಿಸದೇ ಕೇವಲ ಭಜನೆಯನ್ನು ಮಾಡಲು ಬರುತ್ತಿರಬೇಕು, ಅಂತಹ ಪ್ರಕಾರದ ನಿನ್ನ ಉತ್ತಮೋತ್ತಮ ವಿಭೂತಿಗಳಿರುವುವು. ಅವುಗಳನ್ನು ನನಗೆ ಹೇಳು ॥೯೦॥

ಇಲ್ಲಿಯವರೆಗೆ ಅನೇಕ ಸಂತರು ನಿನ್ನ ಯಾವ ವಿಭೂತಿಗಳ ಉಪಾಸನೆಯನ್ನು ಮಾಡಿ ಮತ್ತು ದೃಢ ಭಕ್ತಿಯಿಂದ ನಿನ್ನ ಸ್ವರೂಪದ ಪ್ರಾಪ್ತಿಯನ್ನು ಮಾಡಿಕೊಂಡರು॥೯೧॥ ಈ ಯಾವ ನಿನ್ನ ಸರ್ವ ಪ್ರಕಾರದ ವಿಭೂತಿಗಳು ಅವುಗಳ ಸ್ಥಿತೀ, ಅವುಗಳ ಸ್ವರೂಪ, ಅವುಗಳ ಭಕ್ತಿ ಹಾಗೂ ಅವುಗಳಿಂದ ಅವರಿಗೆ ಪ್ರಾಪ್ತವಾಗುವ ಗತಿ ಈ ಎಲ್ಲವನ್ನೂ ನನಗೆ ನಿಶ್ಚಯವಾಗಿ ಹೇಳು ॥೯೨॥ ಕದಾಚಿತ್ ನೀನು ಹೀಗೆ ಹೇಳಬಹುದು; ಸರ್ವಭೂತ ಮಾತ್ರರಲ್ಲಿರುವ ನನ್ನ ಸ್ವರೂಪವನ್ನು ನೀನೇ ತಿಳಿದುಕೋ. ಆದರೆ ಹೇ ಶ್ರೀಕೃಷ್ಣನೇ, ನಿನ್ನ ಅತರ್ಕ್ಯ ಸ್ಥಿತಿಯು ನಮಗೆ ತಿಳಿಯಲು ಶಕ್ಯವಿಲ್ಲ ॥೯೩॥

ಸರ್ವ ಪ್ರಾಣಿಮಾತ್ರರ ಹೃದಯದಲ್ಲಿ ನೀನು ಗುಪ್ತರೂಪದಲ್ಲಿರುವೆ. ದೇಹವೆಂದರೆ ನಾನೇ ಎಂಬ ಈ ಭ್ರಮೆಯಲ್ಲಿ ಮಾನವರು ಮುಳುಗಿರುವರು. ಆದ್ದರಿಂದ ಅವರು ನಿನ್ನನ್ನು ನೋಡಲಾರರು ॥೯೪॥ ಹೇ ದೇವರಾಯಾ, ಈ ದೇಹಭ್ರಮೆಯ ಮೂಲಕಾರಣವು ನಿನ್ನ ಮಾಯೆಯಾಗಿದೆ,. ಆದರೆ ನಿನ್ನ ಕೃಪೆಯಾದರೆ ಮಾತ್ರ ಈ ಮಾಯೆಯು ಗುಣಸಮೇತವಾಗಿ ಇಲ್ಲದಾಗುವುದು ॥೯೫॥ ತದನಂತರ ಸರ್ವತ್ರ, ಸರ್ವಸ್ಥಳಗಳಲ್ಲಿ ಸರ್ವಭೂತ ಮಾತ್ರರಲ್ಲಿ ಒಳಗೆ ಹೊರಗೆ ನಿನ್ನ ಸ್ವರೂಪವು ಸರ್ವತ್ರವೂ ಸದಾಕಾಲ ಪ್ರಕಟವಾಗುವುದು ॥೯೬॥ ಹೇ ಗೋವಿಂದಾ, ಇಷ್ಟೊಂದು ನಿನ್ನ ಕೃಪೆಯ ಮಹಿಮೆಯಾಗಿದೆ. ನಿನ್ನ ಕೃಪೆಯು ಯಾವ ಗುಣದಿಂದ ಪ್ರಾಪ್ತವಾಗುವುದೋ ಆ ನಿನ್ನ ಕೃಪೆಯನ್ನು ಸಂಪಾದಿಸಲು ಈ ಯಾವ ನಿನ್ನ ವಿಭೂತಿಗಳ ಉಪಾಸನೆಯನ್ನು ಮಾಡಬೇಕಾಗುವುದು ॥೯೭॥ ಆದ್ದರಿಂದ ನಿನ್ನ ವಿಭೂತಿಗಳ ಸ್ವರೂಪವನ್ನು ಪೂರ್ಣವಾಗಿ ನನಗೆ ಹೇಳಬೇಕು. ಇದೇ ಅರ್ಥದ ವಿನಂತಿಯನ್ನು ಉದ್ಧವನು ಪುನಃ ಪುನಃ ಮಾಡುತ್ತಿರುವನು॥೯೮॥

ಸ್ವರ್ಗಮೃತ್ಯು ಪಾತಾಳಸ್ಥಿತೀ । ವಿಸ್ತಾರಲ್ಯಾ ದಶದಿಶಾಂಪ್ರತೀ । ತ್ಯಾ ಸಮಸ್ತ ಹೀ ತುಝ್ಯಾ ವಿಭೂತೀ । ಸಾಂಗ ಶ್ರೀಪತೀ ಮಜಲಾಗೀ ।।೯೯।। ಐಸಾ ಕರೋನಿಯಾ ಪ್ರಶ್ನ । ಉದ್ಧವೇ ಘಾತಲೇ ಲೋಟಾಂಗಣ । ಸಕಳ ತೀರ್ಥಾಚೇ ಜನ್ಮಸ್ಥಾನ। ಮಸ್ತಕೀ ಶ್ರೀಚರಣ ವಂದಿಲೇ ।।೧೦೦।। ಐಕೋನಿ ಉದ್ಧವಾಚ್ಯಾ ಪ್ರಶ್ನಾಸೀ । ಪರಮ ಸಂತೋಷೆ ಹೃಷೀಕೇಶೀ । ಪುರಸ್ಕರೋನಿ ಉದ್ಧವಾಸೀ । ಕಾಯ ತ್ಯಾಸೀ ಬೋಲಿಲಾ ।।೧೦೧।। ಜೋ ವೈರಿಗಜಯೂಥಪಂಚಾನನ । ಕೋದಂಡ ದೀಕ್ಷಾ ಪ್ರತಾಪಗಹನ । ಸಖಾ ಜೀವಲಗ ಪಢಿಯಂತಾ ಜಾಣ । ಜೀವ ಪ್ರಾಣ ಜೋ ಮಾಝಾ ।।೧೦೨।। ಜ್ಯಾಚೇ ರಥೀಂಚೇ ಮೀ ಧುರೇವರೀ । ಜ್ಯಾಚ್ಯಾ ಅಶ್ವಾಂಚೇ ವಾಗ್ದೋರೇ ಧರೀ । ಜೋ ಉಪದೇಶಿಲಾ ಕುರುಕ್ಷೇತ್ರೀ । ಉಭಯ ಸೇನೇಮಾಝಾರೀ ರಣರಂಗೀ ।।೧೦೩।। ತೋ ನರಾವತಾರ ಅರ್ಜುನ । ತ್ಯಾಚ್ಯಾ ಐಸಾ ಹಾ ತುಝಾ ಪ್ರಶ್ನ । ಐಸೇ ಉದ್ಧವಾಸೀ ಸಂತೋಷೋನ । ಕಾಯ ಶ್ರೀಕೃಷ್ಣ ಬೋಲಿಲಾ ।।೧೦೪।।

ಶ್ರೀ ಭಗವಾನುವಾಚ :-

ಏವಮೇತದಹಂ ಪೃಷ್ಟಃ ಪ್ರಶ್ನಂ ಪ್ರಶ್ನವಿದಾಂ ವರ । ಯುಯುತ್ಸುನಾ ವಿನಶನೇ ಸಪತ್ನೈರರ್ಜುನೇನ ವೈ ।।೬।।

ಅರ್ಥ:- ಶ್ರೀ ಕೃಷ್ಣನು ಹೇಳಿದನು; ಹೇ ಉದ್ಧವಾ, ನೀನು ಪ್ರಶ್ನೆಯ ಮರ್ಮವನ್ನು ತಿಳಿದುಕೊಳ್ಳುವ ಶಿರೋಮಣಿಯಾಗಿರುವೆ. ಕುರುಕ್ಷೇತ್ರದಲ್ಲಿ ಕೌರವ ಪಾಂಡವರ ಯುದ್ಧವು ಆರಂಭವಾಗುವ ಕಾಲಕ್ಕೆ ತನ್ನ ಶತ್ರುವಿನೊಂದಿಗೆ ಯುದ್ಧ ಮಾಡುವ ಅರ್ಜುನನು ಇಂತಹದ್ದೇ ಪ್ರಶ್ನೆಯನ್ನು ನನಗೆ ಕೇಳಿದ್ದನು.

ಹಾಚಿ ಪ್ರಶ್ನ ಮಜಕಾರಣೇ । ಪೂರ್ವಿ ಪುಶಿಲಾ ಅರ್ಜುನೇ । ಜೇವ್ಹಾ ತಿರಸ್ಕಾರೋನಿ ದುರ್ಯೋಧನೇ । ಯುದ್ಧ ಸತ್ರಾಣೇ ಮಾಂಡಿಲೇ ।।೧೦೫।। ಅರಿನಿರ್ದಳಣೀ ಪ್ರತಾಪಪೂರ್ಣ । ಧೀರ ವೀರ ಆಣಿ ಸಜ್ಞಾನ । ಪ್ರಶ್ನಕರ್ತ್ಯಾಮಾಜೀ ವಿಚಕ್ಷಣ । ಮಾಝಾ ಆತ್ಮಾ ಜಾಣ ಅರ್ಜುನ ।।೧೦೬।। ತೇಣೇ ಅರ್ಜುನೇ ಕುರುಕ್ಷೇತ್ರೀ । ಯುದ್ಧಸಮಯೀ ಮಹಾಮಾರೀ। ಸ್ವಜನವಧಾಚೇ ಭಯ ಭಾರೀ । ಹಾಚಿ ಪ್ರಶ್ನ ಕರೀ ಮಜ ತೇವ್ಹಾ ।।೧೦೭।।

ಜ್ಞಾತ್ವಾ ಜ್ಞಾತಿವಧಂ ಗರ್ಹ್ಯಮಧರ್ಮಂ ರಾಜ್ಯಹೇತುಕಮ್ ।
ತತೋ ನಿವೃತ್ತೋ ಹಂತಾಹಂ ಹತೋ ಽಯಮಿತಿ ಲೌಕಿಕಃ ।।೭।।

ಸ ತದಾ ಪುರುಷವ್ಯಾಘ್ರೋ ಯುಕ್ತ್ಯಾ ಮೇ ಪ್ರತಿಬೋಧಿತಃ ।
ಅಭ್ಯಭಾಷತ ಮಾಮೇವಂ ಯಥಾ ತ್ವಂ ರಣಮೂರ್ಧನಿ।।೮।।

ಅರ್ಥ:- ಅರ್ಜುನನ ಮನದಲ್ಲಿ ಹೇಗೆ ಮೂಡಿತ್ತೆಂದರೆ ನನ್ನ ಸ್ವಜನರಿಗೆ ಕೊಲ್ಲುವುದು ರಾಜ್ಯದ ದೃಷ್ಟಿಯಿಂದ ನಿಂದನೀಯವಾಗಿದೆ. ಸಾಮಾನ್ಯ ಮನುಷ್ಯರಂತೆ ಆತನು ವಿಚಾರವನ್ನು ಮಾಡುತ್ತಿದ್ದನು. ನಾನು ಕೊಲ್ಲುವವನು ಮತ್ತು ಇವರೆಲ್ಲರೂ ಮರಣಹೊಂದುವವರು. ಹೀಗೆ ವಿಚಾರವನ್ನು ಮಾಡಿ ಆತನು ಯುದ್ಧದಿಂದ ದೂರ ಸರಿದನು. ಆಗ ರಣಭೂಮಿಯ ನೀತಿಯನ್ನು ಹೇಳಿ ನಾನು ಆತನಿಗೆ ತಿಳಿಹೇಳಿದ್ದೆನು. ಆಗ ಅರ್ಜುನನು ನನಗೆ ಪ್ರಶ್ನೆಯನ್ನು ಕೇಳಿದ್ದನ್ನೇ ನೀನು ಈಗ ಕೇಳುತ್ತಿರುವೆ.

ಹೇ ಶ್ರೀಕೃಷ್ಣನೇ, ಸ್ವರ್ಗ , ಮೃತ್ಯು, ಪಾತಾಳಗಳಲ್ಲಿರುವ, ದಶದಿಶೆಗಳಲ್ಲಿ ವಿಸ್ತರಿಸುವ ನಿನ್ನ ಸರ್ವ ವಿಭೂತಿಗಳನ್ನು ನನಗೆ ಹೇಳು ।೯೯।। ಹೀಗೆ ಪ್ರೇಮದಿಂದ ಪ್ರಶ್ನೆಯನ್ನು ಮಾಡಿ ಉದ್ಧವನು ಲೋಟಾಂಗಣೆಯನ್ನು ಹಾಕಿದನು. ಸರ್ವ ತೀರ್ಥಗಳ ಜನ್ಮ ಸ್ಥಾನವಾದ ಶ್ರೀಕೃಷ್ಣನ ಚರಣ ಕಮಲದಮೇಲೆ ಮಸ್ತಕವನ್ನಿಟ್ಟು ವಂದಿಸಿದನು ।।೧೦೦।। ಉದ್ಧವನ ಪ್ರಶ್ನೆಯನ್ನು ಕೇಳಿ ಶ್ರೀಕೃಷ್ಣನಿಗೆ ಪರಮ ಸಂತೋಷವಾಯಿತು. ಈತನು ಉದ್ಧವನನ್ನು ಉದ್ದೇಶಿಸಿ ಏನು ಹೇಳಿದನೆಂಬುವುದನ್ನು ಈಗ ಕೇಳಿರಿ ।।೧೦೧।। ಯಾವ ಶತ್ರುರೂಪ ಆನೆಗಳ ಸಮೂಹದ ನಾಶ ಮಾಡುವಂತಹ ಸಿಂಹನಾಗಿರುವ, ಗಾಂಡೀವಧನುಷ್ಯವನ್ನು ಧರಿಸಿರುವ, ಘನ ಪ್ರತಾಪಿಯಾಗಿರುವ, ನನ್ನ ಜೀವದ ಮಿತ್ರನಾಗಿರುವ ಮತ್ತು ಅತ್ಯಂತ ಪ್ರೀತಿಯ, ನನ್ನ ಜೀವ ಪ್ರಾಣನಾಗಿರುವ ।।೧೦೨।। ಯಾರ ರಥದಲ್ಲಿ ಕುಳಿತುಕೊಂಡು ಸಾರಥಿಯಾಗಿ ಕುದುರೆಯ ಲಗಾಮುಗಳನ್ನು ನಾನು ಕೈಯಲ್ಲಿ ಹಿಡಿದುಕೊಂಡೆನು. ಯಾರಿಗೆ ಕುರುಕ್ಷೇತ್ರದಲ್ಲಿ ಎರಡೂ ಸೈನ್ಯಗಳ ಮಧ್ಯದಲ್ಲಿ ನಾನು ಉಪದೇಶವನ್ನು ಮಾಡಿದೆನು।೧೦೩।। ಅಂತಹ ಯಾವ ನರಾವತಾರ ಅರ್ಜುನನು, ಆತನಂತೆಯೇ ನಿನ್ನ ಈ ಪ್ರಶ್ನೆವಿರುವುದು. ಹೀಗೆ ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ಸಂತೋಷದಿಂದ ಏನು ಹೇಳಿದನೆಂಬುದು ಕೇಳಿರಿ ।।೧೦೪।।

ಪೂರ್ವದಲ್ಲಿ ದುರ್ಯೋಧನನು ನನ್ನನ್ನು ತಿರಸ್ಕಾರ ಮಾಡಿ ಘನಘೋರವಾದ ಮಹಾಯುದ್ಧವನ್ನು ಪ್ರಾರಂಭಿಸಿದಾಗ ಅರ್ಜುನನು ನನಗೆ ಇದೇ ಪ್ರಶ್ನೆಯನ್ನು ಕೇಳಿದ್ದನು ।।೧೦೫।। ಶತ್ರುಗಳನ್ನು ನಾಶ ಮಾಡುವುದರಲ್ಲಿ ಅತ್ಯಂತ ಪ್ರತಾಪೀ,ಧೀರ, ಶೂರ, ಜ್ಞಾನಸಂಪನ್ನ ಮತ್ತು ಪ್ರಶ್ನೆ ಮಾಡುವುದರಲ್ಲಿ ಅತ್ಯಂತ ಚತುರನಾಗಿರುವ ಅರ್ಜುನನು ನನ್ನ ಕೇವಲ ಆತ್ಮನೇ ಆಗಿರುವನು, ಹೀಗೆ ತಿಳಿ ।।೧೦೬।। ಆ ಯಾವ ಅರ್ಜುನನು ಕುರುಕ್ಷೇತ್ರದಲ್ಲಿ ಪ್ರಾಣಘಾತಕರವಾದ ಮಹಾಯುದ್ಧದಲ್ಲಿ ತನ್ನದೇ ಆದ ಸ್ವಜನರ ವಧೆಯಾಗುವುದೆಂಬ ಭಯದಿಂದ ಇದೇ ಪ್ರಶ್ನೆಯನ್ನು ಕೇಳಿದ್ದನು ।।೧೦೭।।

ಕೇವಳ ರಾಜ್ಯಲೋಭಾಕಾರಣೇ । ಗುರು ಗೋತ್ರ ಪಿತೃವ್ಯ ವಧಣೇ । ಹೇ ಅತಿನಿಂದ್ಯ ಮಜಕಾರಣೇ । ನಾಹೀ ಝುಂಝಣೇ ಪ್ರಾಣಾಂತೀ ॥೧೦೮॥ ಲೌಕಿಕ ಧರ್ಮಪ್ರವೃತ್ತೀ । ಮೀ ಮಾರಿತಾ ಹೇ ಮರತೀ । ಹೇ ಮಹಾಮೋಹಾಚೀ ಭ್ರಾಂತೀ । ಉಪಜಲೀ ಚಿತ್ತೀ ಅರ್ಜುನಾ ॥೧೦೯॥ ರಾಜ್ಯಭೋಗಾಚೇ ಧರೋನಿ ವರ್ಮ । ಜ್ಞಾತಿವಧಾಚೇ ನಿಂದ್ಯ ಕರ್ಮ । ಹೋ ಕೇವಳ ಮಜ ಅಧರ್ಮ । ಧರ್ಮಾಚಾ ಸ್ವಧರ್ಮ ಬುಡೇಲ ॥೧೧೦॥ ಜ್ಯಾಚೇ ತೀರ್ಥ ಘ್ಯಾವೇ ಪ್ರತಿದಿನೀ । ಜೇ ಪೂಜಾವೇ ವರಾಸನೀ । ತೇ ಖೋಂಚೂನಿ ತಿಖಟ ಬಾಣೀ । ಭೋಗಾವೀ ಅವನೀ ಸ್ವಗೋತ್ರ ರುಧಿರೇ ॥೧೧೧॥ ಸ್ವಗೋತ್ರರುಧಿರಾಚಾ ಪೂರ । ಪೃಥ್ವಿವರೀ ವಾಹೇಲ ದುಸ್ತರ । ತೇಣೇ ಆಮ್ಹೀ ಹೋಊ ರಾಜ್ಯಧರ । ಹೇ ಕರ್ಮಘೋರ ನ ಕರವೇ ಮಜ ॥೧೧೨॥ ಕುಳೀ ಸುಪುತ್ರ ವಾಂಛಿಜೇ ಜೆಂಹೀ । ಬಾಣ ಖೋಚಾವೇ ತ್ಯಾಂಚೇ ಹೃದಯೀ । ಯಾಪರೀ ಪೂರ್ವಜಾಂಸೀ ಪಾಹೀ । ಝಾಲೋ ಉತರಾಯೀ ಮಾನಾವೇ ॥೧೧೩॥ ಜ್ಯಾಂಚೇ ಕರಾವೇ ಶ್ರಾದ್ಧತರ್ಪಣ । ತ್ಯಾಂಚೇ ಬಾಣವರೀ ಘ್ಯಾವೇ ಪ್ರಾಣ । ಭಲೇ ಪೂರ್ವಜಾ ಝಾಲೋ ಉತ್ತೀರ್ಣ । ಆಲೀ ನಾಗವಣ ನಿಜಧರ್ಮಾ ॥೧೧೪॥

ಸಮಂತ ॥ ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾ ಭೋಕ್ಷ್ಯಸೇ ಮಹೀಮ್ ।

ಯುದ್ಧೀ ನಿಮಾಲಿಯಾ ಸ್ವರ್ಗಗತೀ । ಜಯೋ ಆಲಿಯಾ ರಾಜ್ಯಪ್ರಾಪ್ತೀ। ದೋನ್ಹೀ ನಶ್ವರೇ ಗಾ ಶ್ರೀಪತೀ । ಕೋಣೇ ಹಿತಾರ್ಥೀ ಝುಂಝಾವೇ ॥೧೧೫॥ ಐಸೇನಿ ಅನುತಾಪೇ ಜಾಣ । ಸಾಂಡೂನಿಯಾ ಧನುಷ್ಯಬಾಣ । ಶೋಕಾಕುಲಿತ ಅರ್ಜುನ । ಮ್ಲಾನವದನ ರಣರಂಗೀ ॥೧೧೬॥ ತೇ ಕಾಳೀ ಮ್ಯಾಂಚಿ ಜಾಣ । ತೋ ಮಹಾವೀರಪಂಚಾನನ । ನಾನಾ ಯುಕ್ತೀ ಕೇಲೇ ಸಮಾಧಾನ । ತೇಹೀ ಲಕ್ಷಣ ಅವಧಾರೀ ॥೧೧೭॥ ಅರ್ಜುನಾ ದೇಹ ತಿತುಕಾ ನಶ್ವರ । ಮಳಮೂತ್ರಾಂಚೇ ಕೋಠಾರ । ಕರಿತಾ ನಾನಾ ಉಪಚಾರ । ಮರಣ ತತ್ಪರ ಕ್ಷಣಿಕ ॥೧೧೮॥ ಜೀವ ನಿಜ ನಿತ್ಯ ನಿರ್ಮಳ । ಅಜ ಅವ್ಯಯ ಅಚಳ । ಅಚ್ಛೇದ್ಯ ಅಭೇದ್ಯ ಅಮಳ । ಅಚಂಚಳ ನಿಜಾಂಗೇ ॥೧೧೯॥ ಅರ್ಜುನಾ ಐಕ ಸಾಚೇ । ದೇಹೋ ತುರಘೇನೀ ಪ್ರಯತ್ನೇ ನ ವಾಂಚೇ । ಜೀವ ತುರಘೇನಿ ಮಾರಿಲಾ ನ ವಚೇ । ಪಾತಕ ಹತ್ಯೇಚೇ ಅಹಂಭಾವೇ ॥೧೨೦॥

ಅರ್ಜುನನು ಹೇಳಿದನು; ಕೇವಲ ರಾಜ್ಯಲೋಭಕ್ಕಾಗಿ ಗುರು, ಗೋತ್ರಜ ಮತ್ತು ಜೇಷ್ಠ ಪುರುಷರ ವಧೆಯನ್ನು ಮಾಡುವುದು ಅತ್ಯಂತ ನಿಂದ್ಯವೆನಿಸುವುದು. ಅದಕ್ಕಾಗಿ ಪ್ರಾಣ ಹೋದರೂ ಸರಿಯೇ ನಾನು ಯುದ್ಧವನ್ನು ಮಾಡಲಾರೆನು ॥೧೦೮॥ ಲೌಕಿಕ ಧರ್ಮ ಪ್ರವೃತ್ತಿಯಿಂದ ''ನಾನು ಕೊಲ್ಲುವವನು ಮತ್ತು ಇವರು ಸಾಯುವವರು'' ಎಂಬ ಮೋಹಯುಕ್ತ ಭ್ರಾಂತಿಯು ಅರ್ಜುನನ ಮನದಲ್ಲಿ ನಿರ್ಮಾಣವಾಗಿತ್ತು ॥೧೦೯॥ ರಾಜ್ಯ ಸುಖದ ಇಚ್ಛೆಯಿಂದ ಜ್ಞಾತಿ ಬಾಂಧವರ ವಧೆ ಮಾಡುವುದು ಬಹು ದೊಡ್ಡ ಅಧರ್ಮವೆನಿಸುವುದು. ಅದರಲ್ಲಿ ಧರ್ಮದ ಸ್ವಧರ್ಮವು ಮುಳುಗೀತು ॥ ೧೧೦॥ ಪ್ರತಿನಿತ್ಯವೂ ಯಾರ ಚರಣ ತೀರ್ಥವನ್ನು ಸೇವಿಸಬೇಕೋ ಮತ್ತು ಉಚ್ಚ ಆಸನದ ಮೇಲೆ ಕುಳ್ಳಿರಿಸಿ ಯಾರ ಪೂಜೆಯನ್ನು ಮಾಡಬೇಕೋ ಅಂತಹ ಪೂಜ್ಯ ಆಪ್ತೇಷ್ಟರನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದು ರಕ್ತದಿಂದ ಮೆತ್ತಿಕೊಂಡ ರಾಜ್ಯವನ್ನು ಭೋಗಿಸಬೇಕೆ? ॥೧೧೧॥ ನಮ್ಮ ಆಪ್ತಸುಹೃದರ ರಕ್ತದ ದೊಡ್ಡ ಪೂರವು ಪೃಥ್ವಿಯಲ್ಲಿ ಹರಿಯುತ್ತಿರಲು, ಆಗ ನಾವು ರಾಜ್ಯದ ಉಪಭೋಗವನ್ನು ಪಡೆಯಬೇಕೆ? ಈ ಕರ್ಮವು ಮಹಾ ಭಯಂಕರವಾಗಿದೆ. ಇದು ನನ್ನಿಂದ ಆಗುವುದಿಲ್ಲ ॥೧೧೨॥ ಯಾವ ನಮ್ಮ ಹಿರಿಯರು ಕುಲದಲ್ಲಿ ಸುಪುತ್ರರ ಇಚ್ಛೆಯನ್ನು ಮಾಡಿರುವರು, ಆದರೆ ನಾವು ಅವರದೇ ಹೃದಯಕ್ಕೆ ಬಾಣಗಳನ್ನು ಚುಚ್ಚಿ ಇಂತಹ ನಿಂದ್ಯಕರ್ಮದಿಂದ ಅವರ ಉಪಕಾರವನ್ನು ತೀರಿಸಬೇಕೆ? ॥೧೧೩॥ ಯಾರ ಶ್ರಾದ್ಧ ತರ್ಪಣವನ್ನು ಮಾಡಬೇಕೋ, ಅವರನ್ನು ಬಾಣಗಳಿಂದ ಪ್ರಾಣವನ್ನು ತೆಗೆದುಕೊಳ್ಳಬೇಕೆ? ಹೀಗೆ ಪೂರ್ವಜರ ಉಪಕಾರವನ್ನು ತೀರಿಸುವುದು ಇದು ಯೋಗ್ಯವಾಗುವುದಿಲ್ಲ. ಇದರಿಂದ ನಮ್ಮ ಧರ್ಮದ ನಾಶವಾಗುವುದು ॥೧೧೪॥

ಈ ಯುದ್ಧದಲ್ಲಿ ಮರಣವಾದರೆ ಸ್ವರ್ಗಸಿಗುವುದು, ಜಯವಾದರೆ ರಾಜ್ಯವು ಪ್ರಾಪ್ತವಾಗುವುದು. ಆದರೆ ಹೇ ಶ್ರೀಕೃಷ್ಣನೇ, ಈ ಎರಡೂ ಕೂಡ ನಶ್ವರವಾಗಿರುವುವು. ಅಂದಮೇಲೆ ಯಾವ ಹಿತಕ್ಕಾಗಿ ಯುದ್ಧವನ್ನು ಮಾಡಬೇಕು? ॥೧೧೫॥ ಹೀಗೆ ಖೇದಪಟ್ಟು ಹೇಳುತ್ತ ಧನುಷ್ಯ ಬಾಣಗಳನ್ನು ಕೆಳಗೆ ಒಗೆದು, ಶೋಕಾಕುಲದಿಂದ ಮ್ಲಾನಮುಖನಾಗಿ ಅರ್ಜುನನು ರಣರಂಗದಲ್ಲಿ ಕುಳಿತುಕೊಂಡನು ॥೧೧೬॥ ಇಂತಹ ಸಮಯದಲ್ಲಿ ನಾನೇ ಅನೇಕ ಪ್ರಕಾರದ ಯುಕ್ತಿಗಳಿಂದ ಆ ವೀರಸಿಂಹನನ್ನು ಸಮಧಾನ ಮಾಡಿದೆನು. ಅದನ್ನೇ ಈಗ ನಿನಗೆ ಹೇಳುವೆನು, ಕೇಳು ॥೧೧೭॥ ಹೇ ಅರ್ಜುನನೇ, ಇರುವ ಎಲ್ಲ ದೇಹಗಳು ನಶ್ವರವಾಗಿವೆ. ಮಲಮೂತ್ರದ ಭಾಂಡಾರವಾಗಿದೆ. ಇದಕ್ಕೆ ಎಷ್ಟೇ ಉಪಚರಿಸಿದರೂ ಕೂಡ ಅದು ಕ್ಷಣಿಕವಾಗಿದೆ, ಮರಣಾಧೀನವಾಗಿದೆ ॥೧೧೮॥ ಜೀವವು ಇದು ನಿತ್ಯ, ಶುದ್ಧ, ಅಜ, ಅವ್ಯಯ, ಅಚಲ, ಅಚ್ಛೇದ್ಯ, ಅಭೇದ್ಯ ಮತ್ತು ನಿರ್ಮಲವಾಗಿದೆ. ಅದು ಸ್ವಾಭಾವಿಕವಾಗಿಯೇ ಸ್ವತಃ ಸಿದ್ಧವಾಗಿದೆ ॥೧೧೯॥ ಹೇ ಅರ್ಜುನನೇ ಕೇಳು, ನೀನು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಕೂಡ ಈ ದೇಹವು ಬದುಕಿರಲಾರದು. ಆದರೆ ಆತ್ಮವು ನಿನ್ನ ಹೊಡೆತದಿಂದ ಸಾಯಲಾರದು. ಅಂದ ಮೇಲೆ ಕೊಂದರೆ ಪಾಪವು ಹತ್ತುವುದೆಂಬುದು ಕೇವಲ ಅಹಂಕಾರದಿಂದ ನಿನಗೆ ಹೀಗೆ ಅನಿಸುವುದು ॥೧೨೦॥

ಹೋ ಕಾ ತ್ವಾಂ ಅಸತೇ ಕೇಲೇ । ಜೀವ ತುರ್ಝೇನಿ ಜಾತೇ ಮಾರಿಲೇ । ಮೀ ಮಾರಿತಾ ಯೇಣೇ ಬೋಲೇ । ತುಜಸೀ ಗೋವಿಲೇ ಅಭಿಮಾನೇ ॥೧೨೧॥ ಜೋ ದೇಹಾಚಾ ನಿರ್ಮಾಣಕರ್ತಾ । ತೋಚಿ ತಯಾಚಾ ಸಂಹರ್ತಾ । ತೂ ಕರಣ್ಯಾ ಮಾರಣ್ಯಾ ಪರತಾ । ವ್ಯರ್ಥ ಅಹಂತಾ ಕಾ ಘೇಸಿ ॥೧೨೨॥ ಜರೀ ಹೇ ಅಹಂತಾ ತೂ ನ ಸಾಂಡಿಶೀ। ತರೀ ಸಕಳ ಹತ್ಯೇಚಿಯಾ ರಾಶೀ । ಸಾಚಚೀ ಆಲ್ಯಾ ತುಜಪಾಶೀ । ದೋಷಿ ಝಾಲಾಸೀ ಅರ್ಜುನಾ ॥೧೨೩॥ ಐಕ ಪಾ ಬಾಪಾ ಪಾರ್ಥಾ । ದೇಹಾದಿ ಕರ್ಮಾಚೀ ಅಹಂತಾ । ಜೋ ಘೇ ಆಪುಲೇ ಮಾಥಾ । ತೋ ದೋಷೀ ಸರ್ವಥಾ ತಿಹೀ ಲೋಕೀ ॥೧೨೪॥ ಹೋ ಕಾ ಸ್ವಧರ್ಮಚಿ ತೂ ಪುಸಶೀ । ತರೀ ಐಕ ಕ್ಷತ್ರಿಯಾಂಚ್ಯಾ ಕ್ಷಾತ್ರಧರ್ಮಾಸೀ । ಸಮರಾಂಗಣೇ ಪಿತ್ಯಾಪುತ್ರಾಂಸೀ । ವಧಿತಾ ಕ್ಷತ್ರಿಯಾಸೀ ದೋಷ ನಾಹೀ ॥೧೨೫॥ ಯುದ್ಧ ಮ್ಹಣಿಜೇ ಸ್ವಧರ್ಮತೀರ್ಥ । ಸಮರಂಗಣೇ ನಿಮೇ ತೋ ನಿತ್ಯಮುಕ್ತ । ಜೇ ತುಜ ನಿಜಭಾಗ್ಯೇ ಪ್ರಾಪ್ತ । ತೇ ತೂ ಅಹಿತ ಮಾನಿಸೀ ॥೧೨೬॥ ಕರ್ತಾ ದೋಷ ಅಹಂತೇಚ್ಯಾ ಮಾಥಾ । ತೇ ಜೋ ನಾತಳೇ ದೇಹ ಅಹಂತಾ । ತೋಚಿ ಕರ್ಮ ಕರೂನಿ ಅಕರ್ತಾ । ಭೋಗೂನಿ ಅಭೋಕ್ತಾ ತೋಚಿ ಐಕ ॥೧೨೭॥ ತೋಚಿ ಸಂಗಾಮಾಜೀ ನಿಃಸಂಗ । ಅವಘೇ ಜಗ ತೋ ಏಕಲಾ ಸಾಂಗ । ಜೋ ನಿರಭಿಮಾನೀ ಅವ್ಯಂಗ । ತೋ ಸೈರಾ ಚಾಂಗ ಸಮರಂಗೀ ॥೧೨೮॥ ಅರ್ಜುನಾ ಅಭಿಮಾನ ಸಾಂಡಿತಾ । ತೂ ಮಾಝೀ ಪಾವಶೀ ಸಮಸಾಮ್ಯತಾ । ತೇವ್ಹಾ ಸಕಳ ಪಾಪಾಚೀ ವಾರ್ತಾ । ತುಜ ಸರ್ವಥಾ ಸ್ಪರ್ಶೇನಾ ॥೧೨೯॥ ಮ್ಹಣಶೀ ಕೇವೀ ಜಾಯ ಅಹಂತಾ । ತರೀ ಮಜ ಲಕ್ಷೂನಿ ತತ್ತ್ವತಾ । ಸ್ವಧರ್ಮಕರ್ಮಾತೇ ಆಚರಿತಾ । ಚಿತ್ತಶೋಧಕತಾ ತೇಣೇ ಹೋಯ ॥೧೩೦॥ ನಿರ್ಮಳತ್ವ ಆಲಿಯಾ ಚಿತ್ತಾ । ತೋ ಲಾಗೇ ಮಾಝಿಯಾ ಭಕ್ತಿಪಂಥಾ । ಭಜನೇ ಮಾಝಿಯಾ ಸಮರಸತಾ । ಮಾಝ್ಯಾ ನಿಜಭಕ್ತಾ ತತ್ಕಾಳ ॥೧೩೧॥ ಅರ್ಜುನಾ ಸಾಂಡಾವಯಾ ಅಭಿಮಾನ । ತೂ ನಾಇಕಸೀ ಮಾಝೇ ವಚನ । ತರೀ ಜನ್ಮ ಮರಣಾಂಚೇ ಭೂಷಣ । ಸಕಳ ದೋಷ ಜಾಣ ಭೋಗಿಸೀ ॥೧೩೨॥ ತೂ ನಿತ್ಯಮುಕ್ತ ಅಜ ಅವ್ಯಯೋ । ಹಾ ಬುಡೇಲ ತುಝಾ ಸದ್ಭಾವೋ । ಮಗ ಜನ್ಮ ಮರಣಾಂಚಾ ನಿರ್ವಾಹೋ । ಅವಿಶ್ರಮ ಪಹಾ ಹೋ ಭೋಗಿಸೀ ॥೧೩೩॥ ಯಾಲಾಗೀ ಕರಣೇ ನ ಕರಣೇ ದೋನ್ಹೀ । ಪ್ರಕೃತೀಚೇ ಮಾಥಾ ಠೇವೂನೀ । ತೂ ಕಾಯಾವಾಚಾಮನಿಹೂನೀ । ಮಜಲಾಗುನೀ ಶರಣರಿಘೇ ॥೧೩೪॥

ಒಂದು ವೇಳೆ ನೀನೇ ಈ ಜಗತ್ತನ್ನು ನಿರ್ಮಾಣ ಮಾಡಿದ್ದರೆ ನಿನ್ನಿಂದ ಸಂಹಾರವಾಗುತ್ತಿತ್ತು. ಆದರೆ ಹಾಗಿರುವುದಿಲ್ಲ. ನಾನು ಕೊಲ್ಲುವವನು ಎಂದು ನಿನ್ನ ಅನಿಸಿಕೆಯು ಇದು ಕೇವಲ ಅಹಂಕಾರದಿಂದಾಗುವದು ॥೧೨೧॥ ಯಾರು ದೇಹಗಳನ್ನು ನಿರ್ಮಿಸುವನೋ, ಅವನೇ ದೇಹಗಳನ್ನು ಸಂಹರಿಸುತ್ತಿರುವನು. ನೀನು ನಿರ್ಮಾಣಕರ್ತನೂ ಅಲ್ಲ, ಸಂಹಾರ ಕರ್ತನೂ ಅಲ್ಲ, ಅಂದ ಮೇಲೆ ವ್ಯರ್ಥವಾಗಿ ಅಹಂಕಾರವನ್ನು ಏಕೆ ಧರಿಸುವೆ ॥೧೨೨॥ ಹೇ ಅರ್ಜುನಾ, ನೀನು ಈ ಅಹಂಕಾರವನ್ನು ಬಿಡದಿದ್ದರೆ, ಸರ್ವ ಹತ್ಯೆಯ ಪಾಪದ ರಾಶಿಯು ನಿನ್ನ ತಲೆಯ ಮೇಲೆ ಬರುವುದು, ಇದರಿಂದ ನೀನು ಮಹಾದೋಷಿಯಾಗುವೆ ॥೧೨೩॥ ಇದನ್ನು ಕೇಳು; ದೇಹಾದಿ ಕರ್ಮಗಳ ಅಹಂಕಾರವನ್ನು ಯಾರು ತಮ್ಮ ತಲೆಯ ಮೇಲೆ ಹೊರುವರೋ, ಅವರು ಮೂರೂ ಲೋಕಗಳಲ್ಲಿ ಸಂಪೂರ್ಣ ದೋಷಿಗಳಾಗುವರು ॥೧೨೪॥ ಈಗ ನೀನು ಸ್ವಧರ್ಮದ ವಿಚಾರವನ್ನು ಮಾಡಿದರೆ, ಕ್ಷತ್ರಿಯರ ಧರ್ಮವನ್ನು ಹೇಳುವೆನು ಕೇಳು. ಯುದ್ಧದಲ್ಲಿ ತಮ್ಮ, ತಂದೆ, ಮಕ್ಕಳನ್ನು ಕೊಂದರೂ ಕೂಡ ಕ್ಷತ್ರಿಯನಿಗೆ ಯಾವ ದೋಷವು ಹತ್ತುವುದಿಲ್ಲ ॥೧೨೫॥ ಯುದ್ಧವು ಕ್ಷತ್ರಿಯರಿಗೆ ಧರ್ಮತೀರ್ಥವೇ ಆಗಿರುವುದು. ರಣರಂಗದ ಯುದ್ಧದಲ್ಲಿ ಮರಣವಾದರೆ ಅವನು ನಿತ್ಯಮುಕ್ತನಾಗುವನು. ಉತ್ತಮ ಭಾಗ್ಯದಿಂದ ನಿನಗೆ ಇದು ಪ್ರಾಪ್ತವಾಗಿದೆ. ಆದರೆ ನೀನು ಇದಕ್ಕೆ ಅಹಿತವೆಂದು ಭಾವಿಸುತ್ತಿರುವೆ ॥೧೨೬॥ ಕರ್ತೃತ್ವವನ್ನು ಧರಿಸಿದರೆ ಈ ದೋಷವು ಅಹಂಕಾರದ ತಲೆಯ ಮೇಲೆ ಬರುವುದು. ಈ ದೇಹ ಅಹಂಕಾರಕ್ಕೆ ಯಾರು ಸ್ಪರ್ಶವನ್ನು ಮಾಡುವುದಿಲ್ಲವೋ, ಅವನುಕರ್ಮಗಳನ್ನು ಮಾಡಿದರೂ ಅಕರ್ತನಾಗಿರುವನು. ಭೋಗ ಭೋಗಿಸಿಯೂ ಅಭೋಕ್ತನಾಗಿರುವನು ॥೧೨೭॥ ಆತನು ಸಂಗದಲ್ಲಿದ್ದರೂ ನಿಃಸಂಗನು. ಆತನೊಬ್ಬನೇ ಸರ್ವಜಗತ್ತಾಗುವನು. ಆತನು ಅವ್ಯಂಗ, ನಿರಾಭಿಮಾನಿಯು. ಆತನೇ ಯುದ್ಧದಲ್ಲಿ ನಿಜವಾದ ಶೂರನು॥೧೨೮॥ ಹೇ ಅರ್ಜುನನೇ, ನೀನು ಅಭಿಮಾನವನ್ನು ಬಿಟ್ಟರೆ ಮಾತ್ರ ನನ್ನ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುವೆ. ಆಗ ಯಾವುದೇ ಪ್ರಕಾರದ ಪಾಪದ ವಾರ್ತೆಯೂ ಕೂಡ ನಿನಗೆ ಸ್ಪರ್ಶ ಮಾಡಲಾರದು ॥೧೨೯॥ ಈಗ ಆ ಅಹಂಕಾರವು ಹೇಗೆ ಇಲ್ಲದಂತಾಗುವುದು ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು, ನನ್ನ ಸ್ಮರಣೆಯನ್ನು ಮಾಡುತ್ತ ಸ್ವಧರ್ಮದ ಆಚರಣೆಯನ್ನು ಮಾಡುತ್ತಿರಲು ಚಿತ್ತದ ಶುದ್ಧಿಯಾಗುವುದು ॥೧೩೦॥ ಚಿತ್ತದ ಶುದ್ಧಿಯು ಪ್ರಾಪ್ತವಾಗುತ್ತಲೇ ಆತನು ನನ್ನ ಭಕ್ತಿಮಾರ್ಗವನ್ನು ಅನುಸರಿಸುವನು. ಭಜನೆಯ ಸಹಾಯದಿಂದ ನನ್ನ ಭಕ್ತರಿಗೆ ತತ್ಕಾದಲ್ಲಿ ನನ್ನೊಳಗೆ ಏಕರೂಪತೆಯು ಪ್ರಾಪ್ತವಾಗುವುದು ॥೧೩೧॥ ಹೇ ಅರ್ಜುನನೇ, ಅಭಿಮಾನವನ್ನು ಬಿಟ್ಟುಬಿಡುವುದಕ್ಕಾಗಿ ನೀನು ನನ್ನ ಮಾತು ಕೇಳದಿದ್ದರೆ ನಿನಗೆ ಜನ್ಮಮರಣಗಳ ಸರ್ವ ದೋಷಗಳನ್ನು ಭೋಗಿಸಬೇಕಾಗುವುದು ॥೧೩೨॥ ನೀನು ನಿತ್ಯ ಮುಕ್ತನು, ಅಜನ್ಮನು ಮತ್ತು ಅವಿನಾಶಿಯಾಗಿರುವೆ. ಈ ನಿನ್ನ ಸದ್ಬುದ್ಧಿಯು ಇಲ್ಲದಾಗಿ, ತದನಂತರ ನಿರಂತರವಾಗಿ ಜನ್ಮಮರಣದ ಚಕ್ರದಲ್ಲಿ ತಿರುಗಬೇಕಾದೀತು ॥೧೩೩॥ ಆದ್ದರಿಂದ ಮಾಡುವಿಕೆ, ಮಾಡದಿರುವಿಕೆ ಈ ಎರಡನ್ನೂ ಪ್ರಕೃತಿಯ ತಲೆಯ ಮೇಲೆ ಹೇರಿ ನೀನು ಕಾಯಾ, ವಾಚಾ, ಮನಸಾ ನನಗೆ ಶರಣಾಗು ॥೧೩೪॥

ಯಾಪರೀ ಗಾ ತತ್ತ್ವತಾ । ಮಜ ಸದ್ಭಾವೇ ಶರಣ ಯೇತಾ । ತುಜ ಸಕಳ ಕರ್ಮಾಚೀ ವಾರ್ತಾ । ಮೀ ಸರ್ವಥಾ ಶಿವೋ ನೇದೀ ॥೧೩೫॥ ಯಾಲಾಗೀ ಗಾ ಕೋದಂಡಪಾಣೀ । ಮರತೇ ಮಾರಿತೇ ಸಾಂಡೂನಿ ದೋನ್ಹೀ । ಸೌರಾ ಹೋಯೀ ರಣಾಂಗಣೀ । ಮೀ ತುಜಲಾಗೋನೀ ಉದ್ಧರೀನ ॥೧೩೬॥ ತೂ ಏಕ ಯೇಥೇ ಕರ್ಮ ಕರಿತಾ । ಮೀ ಏಕ ತೂತೇ ಉದ್ಧರಿತಾ । ಐಸೇ ಭಿನ್ನತ್ವ ಗಾ ಪಾರ್ಥಾ । ಮಾಝ್ಯಾ ಶರಣಾಗತಾ ಅಸೇನಾ ॥೧೩೭॥ ಮಜ ಅನಂತಾ ಶರಣ ಯೇಣೇ । ಆಣಿ ಜೀವತ್ವೇ ವೇಗಳೇ ಉರಣೇ । ತೇ ಗುಳದಗಡಾಐಸೇ ಜಿಣೇ । ಅನನ್ಯಪಣೇ ನವ್ಹೇ ಶರಣ ॥೧೩೮॥ ಸರಿತಾ ಸಾಗರಾ ಶರಣ ಗೇಲೀ । ತೇ ಸಮುದ್ರಚಿ ಹೋಊನಿ ಠೇಲೀ । ಪುಢತೀ ಪರತಾವಯಾ ಮುಕಲೀ । ಸಮರಸಿಲೀ ಸಿಂಧುತ್ವೇ ॥೧೩೯॥ ಗಂಗಾ ಪಾವೋನಿ ಸಿಂಧುತ್ವಾಸೀ । ಮಾಗೀಲ ಯಾವಾ ವಂಚೀನಾ ತಿಸೀ। ಸಬಾಹ್ಯ ಆತ್ಮಸಮರಸೀ । ಶರಣ ಅಹರ್ನಿಶೀ ಅಖಂಡತ್ವೇ ॥೧೪೦॥ ದೀಪ ದಾವಾಗ್ನಿ ಭೇಟೋ ಗೇಲಾ । ತೋ ತೇವ್ಹಡಾಚಿ ಹೋಊನಿ ಠೇಲಾ । ತೇವೀ ಮಜಲಾಗೀ ಜೋ ಶರಣ ಆಲಾ । ತೋ ಮೀಚಿ ಝಾಲಾ ಅರ್ಜುನಾ ॥೧೪೧॥ ಪಾರ್ಥಾ ಪರಿಸ ಪಾ ಚಿನ್ಹ ಪ್ರಾಪ್ತಾಚೇ । ಹೇ ಭೂತಾಕಾರ ಮಜ ಅಚ್ಯುತಾಚೇ । ಐಸೇ ಸದ್ಭಾವೇ ಜೋ ದೇಖೇ ಸಾಚೇ । ತ್ಯಾಸೀ ಬ್ರಹ್ಮಸಾಯುಜ್ಯಾಚೇ ಸಾಮ್ರಾಜ್ಯ ಲಾಭೇ ॥೧೪೨॥ ಮಜ ಆತ್ಮಯಾಚೇ ನಿಜಸ್ಥಿತೀ । ಸಂಸಾರ ಮುಳೀ ಮುಖ್ಯ ಭ್ರಾಂತೀ । ತೇಥ ಮಾರಿತಾ ಮೀ ಹೇ ಮರತೀ । ಕೋಣೇ ಹೇ ಯುಕ್ತೀ ಮಾನಾವೀ ॥೧೪೩॥ ಮೃಗಜಳ ಜೇಥೇ ನಸೇ । ತೇಥೇ ತಂವ ಕೋರಡೇಚಿ ಅಸೇ । ಮಾ ಜೇ ಠಾಯೀ ಆಭಾಸೇ । ತೇಥ ತರ್ಹೀ ಅಸೇ ವೋಲ್ಹಾಂಶು ಕಾಯೀ॥೧೪೪॥ ತೇವೀ ಸಂಸಾರಾಚೇ ರೂಪ ನಾಮ । ಠೇವಿತೀ ತೇಥೇ ನಿಖಳ ಬ್ರಹ್ಮ । ಹಾಚಿ ಜ್ಯಾಚಾ ಸ್ವಭಾವ ಪರಮ । ತೇ ಚಾಲತೇ ಬ್ರಹ್ಮ ವರ್ತತಾ ದೇಹೀ ॥೧೪೫॥ ದೇಹಾ ಜಡತ್ವೇ ನ ಬಾಧೀ ಕರ್ಮ । ಆತ್ಮಾ ನಾತಳೇ ಧರ್ಮಾಧರ್ಮ । ಹೇ ಜ್ಯಾಸೀ ಕಳಲೇ ವರ್ಮ । ತೇ ಚಾಲತೇ ಬ್ರಹ್ಮ ವರ್ತತಾ ದೇಹೀ ॥೧೪೬॥ ದೇಹೀ ವರ್ತತಾ ತೋ ವಿದೇಹ । ವಿದೇಹ ತೇಚ ತ್ಯಾಚೇ ದೇಹ । ಹೇ ಮಾಝೇ ಪರಮ ಗುಹ್ಯ। ಅರ್ಜುನಾಸೀ ಪಾಹೇ ಸಾಂಗಿತಲೇ ॥೧೪೭॥ ಯಾಪರೀ ಮ್ಯಾ ನಾನಾಯುಕ್ತೀ । ಯುದ್ಧೀ ಬೋಧಿಲಾ ಸುಭದ್ರಾಪತೀ । ತೇಣೇಹೀ ಮಜ ಕರೋನಿ ವಿನಂತೀ । ಪುಸಿಲ್ಯಾ ವಿಭೂತೀ ತುಝ್ಯಾಐಶಾ ॥೧೪೮॥

ನಿಜವಾಗಿ ಈ ರೀತಿಯಲ್ಲಿ ನೀನು ಸುಬುದ್ಧಿಯಿಂದ ನನಗೆ ಶರಣಾಗಲು ಯಾವುದೇ ಕರ್ಮದ ವಾರ್ತೆಯನ್ನು ನಾನು ನಿನಗೆ ಮುಟ್ಟಿಸಿಕೊಡುವುದಿಲ್ಲ ॥೧೩೫॥ ಹೇ ಅರ್ಜುನನೇ, ಇದಕ್ಕಾಗಿ ನಾನು ಕೊಲ್ಲುವವನು, ಅವರು ಸಾಯುವವರು ಎಂಬ ಈ ಎರಡೂ ಭಾವನೆಯನ್ನು ಬಿಟ್ಟುಕೊಟ್ಟು ನೀನು ರಣಾಂಗಣದಲ್ಲಿ ಶೂರನಾಗಿರು. ಆಗ ನಾನು ನಿನ್ನ ಉದ್ಧಾರವನ್ನು ಮಾಡುವೆನು ॥೧೩೬॥ ನೀನು ಒಬ್ಬ ಕರ್ಮವನ್ನು ಮಾಡುವವನು ಮತ್ತು ನಾನು ನಿನ್ನ ಉದ್ಧಾರವನ್ನು ಮಾಡುವವನು ಎಂಬ ಈ ಭೇದಭಾವವೂ ಕೂಡ ನನಗೆ ಶರಣು ಬಂದವರ ಹೃದಯದಲ್ಲಿ ಇರುವುದಿಲ್ಲ ॥೧೩೭॥ ಹೇ ಅರ್ಜುನಾ, ಅನಂತನಾದ ನನಗೆ ಶರಣಾಗಿ ಜೀವಭಾವದಿಂದ ಭಿನ್ನನಾದರೆ ಬೆಲ್ಲದಲ್ಲಿನ ಕಲ್ಲಿನಂತಾಗುವುದು. ಅಂದರೆ ಕಲ್ಲು ಬೆಲ್ಲದಲ್ಲಿ ಏಕರೂಪವಾಗಲಾರದು. ಹೀಗಾದರೆ ಅನನ್ಯ ಶರಣಾಗುವುದಿಲ್ಲ ॥೧೩೮॥ ನದಿಯು ಸಮುದ್ರಕ್ಕೆ ಶರಣು ಹೋಗಲು ಅದು ಸಮುದ್ರವೇ ಆಗಿಬಿಡುವುದು. ತಿರುಗಿ ಬರುವುದನ್ನು ಅದು ಪರಿಪೂರ್ಣವಾಗಿ ಮರೆತುಬಿಡುವುದು. ಕಾರಣ ಅದು ಸಮುದ್ರದಲ್ಲಿ ಏಕರೂಪವಾಗಿರುವುದು ॥೧೩೯॥ ಗಂಗೆಯು ಸಮುದ್ರಕ್ಕೆ ಹೋಗಿ ಕೂಡಲು ಹಿಂದಿನ ಪ್ರವಾಹವು ಅದನ್ನು ಹಿಂದಕ್ಕೆ ಜಗ್ಗುವುದಿಲ್ಲ. ಅದರಂತೆ ಆತ್ಮಸ್ವರೂಪದಲ್ಲಿ ಏಕರೂಪನಾಗಿ ನನ್ನ ಭಕ್ತನು ಸತತವಾಗಿ ಹಗಲು ರಾತ್ರಿ ಶರಣು ಬಂದಿರುವನು ॥೧೪೦॥ ದೀಪವು ದಾವಾಗ್ನಿಯಲ್ಲಿ ಕೂಡಲು ಹೋದಾಗ್ಗೆ, ಆಗ ಅದು ದಾವಾಗ್ನಿಯಷ್ಟಾಗಿಬಿಡುವುದು. ಹೇ ಅರ್ಜುನನೇ, ಅದರಂತೆ ನನಗೆ ಯಾರು ಶರಣು ಬರುವರೋ, ಅವರು ನನ್ನಲ್ಲಿ ಏಕರೂಪರಾಗಿ ಇರುವರು ॥೧೪೧॥ ಹೇ ಅರ್ಜುನಾ, ಈಗ ಮುಕ್ತನ ಲಕ್ಷಣವನ್ನು ಕೇಳು , ಭಿನ್ನ ಭಿನ್ನವಾಗಿ ಕಾಣುವ ಪ್ರಾಣಿ ಮಾತ್ರರೆಲ್ಲರೂ ನನ್ನ ಕೃಷ್ಣಸ್ವರೂಪವೇ ಆಗಿರುವರು ಎಂದು ಇಂತಹ ದೃಢವಾದ ಶ್ರದ್ಧೆಯಿಂದ ಯಾರು ಕಾಣುವರೋ, ಅವರಿಗೆ ಬ್ರಹ್ಮ ಸ್ವರೂಪದ ಸಾಮ್ರಾಜ್ಯವು ಪ್ರಾಪ್ತವಾಗುವುದು ॥೧೪೨॥ ನನ್ನ ಆತ್ಮ ಸ್ವರೂಪದಲ್ಲಿ ಸಂಸಾರವೆಂಬುದು ಮೂಲತಃ ಭ್ರಮೆಯಾಗಿರುವುದು. ಹೀಗಿರುವಾಗ ನಾನೊಬ್ಬನು ಕೊಲ್ಲುವವನು ಮತ್ತು ಇವರೆಲ್ಲರೂ ಸಾಯುವವರು ಎಂಬ ಈ ಮಾತನ್ನು ಯಾರು ಮನ್ನಿಸುವರು? ॥೧೪೩॥ ಎಲ್ಲಿ ಮೃಗಜಲ ಇರುವುದಿಲ್ಲ ಅಲ್ಲಿ ಭೂಮಿಯು ಒಣಗಿರುವುದು. ಆದರೆ ಎಲ್ಲಿ ಮೃಗಜಲದ ಭಾಸವಾಗುವುದೋ, ಅಲ್ಲಿ ಏನಾದರೂ ಭೂಮಿಯು ಹಸಿಯಾಗಿರುವುದೆ? ॥೧೪೪॥ ಅದರಂತೆ ಸಂಸಾರಕ್ಕೆ ನಾಮ ರೂಪವನ್ನು ಕಲ್ಪಿಸುವರು. ನಿಜವಾಗಿಯೂ ಅಲ್ಲಿ ನಾಮರೂಪದ ಆಭಾಸವಿರುವುದು, ಹಾಗೂ ಶುದ್ಧ ಬ್ರಹ್ಮವೇ ಇರುವುದು. ಹೀಗೆ ಯಾರ ಭಾವನೆಯು ದೃಢವಾಗಿರುವುದೋ, ಆತನು ದೇಹದಲ್ಲಿದ್ದರೂ ಸಹ ನಡೆದಾಡುವ, ಮಾತನಾಡುವ ಬ್ರಹ್ಮವೇ ಆಗಿರುವನು ॥೧೪೫॥ ದೇಹವು ಜಡವಾಗಿರುವುದರಿಂದ ಅದಕ್ಕೆ ಕರ್ಮವು ಬಾಧಿಸುವುದಿಲ್ಲ. ಆತ್ಮವು ಧರ್ಮ ಅಧರ್ಮಗಳಿಗೆ ಎಂದಿಗೂ ಸ್ಪರ್ಶ ಮಾಡುವುದಿಲ್ಲ. ಈ ಮರ್ಮವು ಯಾರಿಗೆ ತಿಳಿದಿರುವುದೋ, ಆತನು ದೇಹದಲ್ಲಿ ಇದ್ದರೂ ಕೂಡ ನಡೆದಾಡುವ ಬ್ರಹ್ಮವೇ ಆಗಿರುವನು ॥೧೪೬॥ ಆತನು ದೇಹದಲ್ಲಿ ವರ್ತಿಸುತ್ತಿದ್ದರೂ ಸಹ ವಿದೇಹಿಯಾಗಿರುವನು. ವಿದೇಹವೇ ಆತನ ದೇಹವಾಗಿರುವುದು. ಇದು ನನ್ನ ಪರಮ ಗುಹ್ಯವಾದ ಜ್ಞಾನವನ್ನು ಅರ್ಜುನನಿಗೆ ಹೇಳಿದೆನು ॥೧೪೭॥ ಹೀಗೆ ನಾನು ಅನೇಕ ಪ್ರಕಾರದ ಯುಕ್ತಿಗಳಿಂದ ಆ ಸಮರಾಂಗಣದಲ್ಲಿ ಅರ್ಜುನನಿಗೆ ಬೋಧಿಸಿದೆನು. ಆಗ ಆತನೂ ಕೂಡ ನನ್ನನ್ನು ವಿನಂತಿಸಿ ನಿನ್ನಂತೆಯೇ ನನ್ನ ವಿಭೂತಿಗಳನ್ನು ಕೇಳಿದ್ದನು ॥೧೪೮॥

ಜ್ಯಾ ಸಾಂಗೀತಲ್ಯಾ ಅರ್ಜುನಾಸೀ । ತ್ಯಾಚಿ ಮೀ ಸಾಂಗೇನ ತುಜಪಾಶೀ। ಐಸೇ ಪುರಸ್ಕರೋನಿ ಉದ್ಧವಾಸೀ। ನಿಜವಿಭೂತಿ ತ್ಯಾಸೀ ಸಾಂಗತ ॥೧೪೯॥ ಉದ್ಧವಾ ಜ್ಯಾ ಪುಶಿಲ್ಯಾ ವಿಭೂತಿ । ತ್ಯಾ ಮಾಝ್ಯಾ ಮಜ ನ ಗಣವತೀ । ಮೀ ಜಗದಾತ್ಮಾ ತ್ರಿಜಗತೀ । ಸಂಖ್ಯಾಸಂಸ್ಥಿತೀ ಗಣೀ ಕೋಣ ॥೧೫೦॥

ಅಹಮಾತ್ಮೋದ್ಧವಾಮೀಷಾಂ ಭೂತಾನಾಂ ಸುಹೃದೀಶ್ವರಃ । ಅಹಂ ಸರ್ವಾಣಿ ಭೂತಾನಿ ತೇಷಾಂ ಸ್ಥಿತ್ಯುದ್ಭವಾಪ್ಯಯಃ ।೯।

ಅರ್ಥ :- ಹೇ ಉದ್ಧವಾ, ನಾನು ಸರ್ವ ಪ್ರಾಣಿಮಾತ್ರರ ಆತ್ಮನು, ಹಿತೈಷಿಯು, ಸುಹೃದಯನು ಮತ್ತು ಈಶ್ವರ, ನಿಯಾಮಕಾರಕನಾಗಿರುವೆನು. ನಾನೇ ಸರ್ವ ಪ್ರಾಣಿಗಳ ಮತ್ತು ಪದಾರ್ಥಗಳ ರೂಪದಿಂದ ಇರುವೆನು. ನಾನೇ ಅವುಗಳ ಉತ್ಪತ್ತೀ ಸ್ಥಿತೀ ಮತ್ತು ಲಯ ಇವುಗಳ ಕಾರಣ ರೂಪನಾಗಿರುವೆನು.

ಮೀ ಹೃದಯಸ್ಥ ಸಮರ್ಥ ಹೃದಯೀ । ತ್ಯಾ ಮಜ ಜೀವೂ ಮಾಗೇ ಜೇ ಕಾಹೀ । ತ್ಯಾಸೀ ವಿಮುಖ ಮೀ ನವ್ಹೇ ಕಾಂಹೀ । ಪುರವೀ ಸರ್ವಹೀ ಈಶ್ವರತ್ವೇ ॥೧೫೧॥ ಜೀವೂ ಅತಿಅಡಲೇಪಣೇ । ಜೇ ಮಾಗೇ ಮಜಕಾರಣೇ । ತೇ ಮೀ ತ್ಯಾಸೀ ಅಲೋಟ ದೇಣೇ । ಯಾಲಾಗೀ ಮ್ಹಣಣೇ ಈಶ್ವರ ಮಜ ॥೧೫೨॥ ಮೀ ಆತ್ಮಾ ಅಸೇ ಹೃದಯೀ । ಹಾ ವಿಶ್ವಾಸ ಜಯಾಂಸೀ ನಾಹೀ । ತೇ ಮೃಗಜಳಾಚೇ ಡೋಹೀ । ನಾವೇಸಕಟ ಪಾಹೀ ಬುಡಬುಡೋ ಗೇಲೇ ॥೧೫೩॥ ತೇಥ ನಾವ ಕರಾವಯಾಚೇ ಕಷ್ಟ । ವೃಥಾ ಗೇಲೇ ಫುಕಟ । ತೇವೀ ಸಾಧನೇ ಸೋಸೂನಿ ಕಚಾಟ । ಸಾಧನೇ ಸಕಟ ಬುಡೋ ಗೇಲೇ ॥೧೫೪॥ ಮಾಝೀ ಪ್ರಾಪ್ತೀಚೇ ಮುಖ್ಯವರ್ಮ । ಮೀ ಹೃದಯೀ ಅಸೇ ಪರಬ್ರಹ್ಮ । ಹೇಚಿ ಜ್ಯಾಚೇ ನಿತ್ಯ ಕರ್ಮ । ತೋ ವಿಭೂತೀ ಪರಮ ಪೈ ಮಾಝೀ॥೧೫೫॥ ಮೀ ಸರ್ವಭೂತ ಹೃದಯವಾಸೀ । ಸುಹೃದ ಸೋಯರಾ ಮೀ ಸರ್ವಾಸೀ । ನಿಯಂತಾ ಈಶ್ವರಸತ್ತೇಸೀ । ನಿಯಾಮಕ ಭೂತಾಂಸೀ ಮೀ ಏಕ ॥೧೫೬॥ ಏವಂ ಸರ್ವಭೂತಾಂಚಾ ಮೀ ಸ್ವಾಮೀ । ಇಯೇ ಸರ್ವ ಭೂತೇ ತೇಹೀ ಮೀ । ಭೂತಾಂಚೇ ಜನ್ಮ ಭೂಮೀಚೀ ಮೀ ಭೂಮೀ । ಉತ್ಪತ್ತ್ಯಾದಿ ಕರ್ಮೀ ಮೀ ಕರ್ತಾ ॥೧೫೭॥ ಕೃಷೀವಳಾಚಿಯೇ ಪರೀ । ಮೀ ಸೃಜೀ ಪಾಳೀ ಸಂಹಾರೀ । ಬ್ರಹ್ಮಾ ವಿಷ್ಣು ತ್ರಿಪುರಾರೀ । ಗುಣಾವತಾರೀ ಮೀ ಏಕ ॥೧೫೮॥ ಕರ್ಮಾಚೀ ಜೇ ಕ್ರಿಯಾಶಕ್ತೀ । ತೇ ಮೀ ಮ್ಹಣೇ ಶ್ರೀಪತೀ । ಹೇ ಸಾಮಾನ್ಯೇ ಬೋಲಿಲೀ ಸ್ಥಿತೀ । ವಿಶೇಷ ವಿಭೂತೀ ತ್ಯಾ ಐಕ ॥೧೫೯॥

ಅಹಂ ಗತಿರ್ಗತಿಮತಾಂ ಕಾಲಃ ಕಲಯತಾಮಹಮ್ । ಗುಣಾನಾಂ ಚಾಪ್ಯಹಂ ಸಾಮ್ಯಂ ಗುಣಿನ್ಯೌತ್ಪತ್ತಿಕೋ ಗುಣಃ ॥೧೦॥

ಅರ್ಥ :- ಗತಿಶೀಲ ಪದಾರ್ಥಗಳಲ್ಲಿ ನಾನು ಗತಿಯಾಗಿರುವೆನು. ನಿಯಂತ್ರಿಸುವವರೆಲ್ಲರ ಕಾಲನೂ ನಾನು. ಗುಣಗಳಲ್ಲಿ ಅದರ ಗುಣಸ್ವರೂಪ ಸಾಮ್ಯಾವಸ್ಥಾ ನಾನಾಗಿರುವೆನು. ಇರುವ ಸರ್ವ ಪದಾರ್ಥಗಳಲ್ಲಿನ ಸ್ವಾಭಾವಿಕ ಗುಣವು ನಾನಾಗಿರುವೆನು.

ಆಗ ನಾನು ಅರ್ಜುನನಿಗೆ ವಿಭೂತಿಗಳನ್ನು ಹೇಳಿದೆನು. ಈಗ ಅದನ್ನೇ ನಿನಗೆ ಹೇಳುವೆನು. ಹೀಗೆ ಉದ್ಧವನಿಗೆ ಆಶ್ವಾಸನವನ್ನು ಕೊಟ್ಟು ಶ್ರೀಕೃಷ್ಣನು ತನ್ನ ವಿಭೂತಿಗಳನ್ನು ಹೇಳಲಾರಂಭಿಸಿದನು ॥೧೪೯॥ ಹೇ ಉದ್ಧವಾ, ನೀನೇನು ನನ್ನ ವಿಭೂತಿಗಳನ್ನು ಕೇಳಿದ್ದು, ಆದರ ಗಣನೆಯನ್ನು ನನಗೂ ಮಾಡಲು ಬರುವುದಿಲ್ಲ. ನಾನು ಮೂರು ಲೋಕಗಳ ಜಗದಾತ್ಮನಾಗಿರುವೆನು. ಅಂದಮೇಲೆ ನನ್ನ ವಿಭೂತಿಗಳ ಸಂಖ್ಯೆಯನ್ನು ಯಾರಿಗೆ ಹೇಳಲು ಸಾಧ್ಯ? ॥೧೫೦॥

ನಾನು ಸರ್ವ ಸಮರ್ಥನಾಗಿರುವೆನು. ನಾನು ಪ್ರತಿಯೊಂದು ಜೀವಿಗಳ ಹೃದಯದಲ್ಲಿ ಹೃದಯಸ್ಥನಾಗಿರುವೆನು. ಜೀವವು ಯಾವಯಾವುದನ್ನು ಏನೇ ಬೇಡಲಿ, ಆಗ ನಾನು ಎಂದಿಗೂ ಇಲ್ಲವೆನ್ನುವುದಿಲ್ಲ. ಪ್ರಭುತ್ವದ ರೂಪದಿಂದ ನಾನು ಎಲ್ಲವನ್ನೂ ಅದಕ್ಕೆ ಕೊಡುತ್ತಿರುವೆನು ॥೧೫೧॥ ಜೀವವು ಅತಿಶಯವಾಗಿ ಸಂಕಟದಲ್ಲಿ ಬೀಳಲು, ಆಗ ಅದು ಏನೇ ಬೇಡಲಿ, ನಾನು ಸಾಕಷ್ಟು ಪ್ರಮಾಣದಲ್ಲಿ ಕೊಡುವೆನು. ಆದ್ದರಿಂದ ನನಗೆ ಈಶ್ವರನೆಂದು ಕರೆಯುವರು ॥೧೫೨॥ ಪರಮಾತ್ಮನಾದ ನಾನು ಹೃದಯದಲ್ಲಿ ಸ್ಥಿತನಾಗಿರುವೆನು. ಹೀಗೆಂದು ಯಾರಿಗೆ ವಿಶ್ವಾಸವಿರುವುದಿಲ್ಲವೋ, ಆತನು ಮೃಗಜಲದ ಮಡುವಿನಲ್ಲಿ ದೋಣಿಸಮೇತವಾಗಿ ಮುಳುಗಿ ಹೋಗುವನು ॥೧೫೩॥ ಅದಕ್ಕಾಗಿ ದೋಣಿ ಕಟ್ಟುವ ಆತನ ಕಷ್ಟವು ವ್ಯರ್ಥವಾಗುವುದು. ಅದರಂತೆ ಕ್ಲಿಷ್ಟ ಸಾಧನೆಗಳ ಕಷ್ಟವನ್ನು ಸೋಸಿಯೂ ಸಹ ಕೊನೆಗೆ ಆತನು ಸಾಧನೆ ಸಮೇತನಾಗಿ ಮುಳುಗಿ ಹೋಗುವನು ॥೧೫೪॥ ಪರಬ್ರಹ್ಮನಾದ ನಾನು ಹೃದಯಲ್ಲಿರುವೆ ಎಂದು ತಿಳಿಯುವುದೇ ನನ್ನ ಪ್ರಾಪ್ತಿಯ ಚಿನ್ಹೆಯಾಗಿರುವುದು. ಇದುವೇ ಭಕ್ತನ ನಿತ್ಯ ಕರ್ಮವಾಗಿರುವುದು. ಆತನೇ ಭಕ್ತನು, ನನ್ನ ಶ್ರೇಷ್ಠ ವಿಭೂತಿಯಾಗಿರುವನು ॥೧೫೫॥ ನಾನು ಸರ್ವಪ್ರಾಣಿ ಮಾತ್ರರ ಹೃದಯದಲ್ಲಿ ಇರುವವನಾಗಿರುವೆನು. ನಾನು ಸರ್ವರ ಸುಹೃದನಾಗಿರುವೆನು. ಈಶ್ವರ ಸತ್ತೆಯ ನಿಯಂತನು ಸರ್ವ ಭೂತಗಳ ನಿಯಂತ್ರಕನು ನಾನೇ ಇರುವೆನು ॥೧೫೬॥ ಈ ಪ್ರಕಾರವಾಗಿ ನಾನು ಸರ್ವಭೂತಗಳ ಸ್ವಾಮಿಯಾಗಿರುವೆನು ಮತ್ತು ಸರ್ವಭೂತಗಳೂ ಕೂಡ ನಾನೇ ಆಗಿರುವೆನು. ಪ್ರಾಣಿಗಳ ಜನ್ಮಭೂಮಿಯ ಮೂಲನೂ ಕೂಡ ನಾನೇ ಆಗಿರುವೆನು. ಉತ್ಪತ್ತೀ, ಸ್ಥಿತೀ ಮತ್ತು ಲಯ ಇವುಗಳನ್ನೂ ಸಹ ನಾನೇ ನಿರ್ಮಾಣ ಮಾಡಿರುವೆನು॥೧೫೭॥ ನಾನು ಒಕ್ಕಲಿಗನಂತೆ ಬಿತ್ತಿ ಹುಟ್ಟಿಸುವುದು, ಅವುಗಳನ್ನು ರಕ್ಷಿಸುವುದು ಕೊನೆಗೆ ಸಂಹರಿಸುವುದನ್ನು ಮಾಡುವೆನು. ಭಿನ್ನ ಭಿನ್ನ ಗುಣಗಳ ಪದ್ಧತಿಯಿಂದ ಬ್ರಹ್ಮಾ, ವಿಷ್ಣು ಮತ್ತು ಮಹೇಶ ಈ ಅವತಾರಗಳನ್ನು ತೆಗೆದುಕೊಳ್ಳುವವನು ನಾನೇ ಇರುವೆನು ॥೧೫೮॥ ಕರ್ಮಗಳ ಕ್ರಿಯಾಶಕ್ತಿಯೂ ಕೂಡ ನಾನೇ ಆಗಿರುವೆನು. ಇದನ್ನು ನಾನು ನಿನಗೆ ಸಾಮಾನ್ಯ ರೂಪದಿಂದ ಹೇಳಿರುವೆನು. ಈಗ ವಿಶೇಷ ವಿಭೂತಿಗಳನ್ನು ಹೇಳುವೆನು, ಇದನ್ನು ಕೇಳು ಎಂದು ಶ್ರೀ ಕೃಷ್ಣನು ಹೇಳಿದನು ॥೧೫೯॥

ಗತಿಮಂತಾಮಾಜೀ ಜೇ ಗತೀ । ತೇ ಮೀ ಮ್ಹಣೇ ಲಕ್ಷ್ಮೀಪತೀ । ಗತೀಸೀ ಮಾಝೇನಿ ನಿಜಗತೀ । ಜಾಣ ನಿಶ್ಚಿತೀ ಉದ್ಧವಾ ॥೧೬೦॥ ಚೇತನೇನೇ ಸರ್ವಾ ಗತೀ । ತೇ ಚೇತನಾ ಚೈತನ್ಯಾಚೀ ಶಕ್ತೀ । ಚೇತನೇಸ್ತವ ಇಂದ್ರಿಯಪ್ರವೃತ್ತೀ । ಏವಂ ಗತೀಚೀ ಗತೀ ಮೀ ಏಕ ॥೧೬೧॥ ಸಕಳ ಗತೀಂಚೀ ಪರಮ ಗತೀ । ಪ್ರಾಣ್ಯಾಸೀ ಮುಖ್ಯತ್ವೇ ಮುಕ್ತೀ । ತೇ ಮುಕ್ತೀಸೀ ಮಜಮಾಜೀ ಮುಕ್ತೀ । ಏವಂ ಗತೀಚೀ ಗತೀ ಮೀ ಏಕ ॥೧೬೨॥ ಸುರನರಾ ತೇ ಜಾಣ ಕಾಳಾಚೀ ಸತ್ತಾ । ತ್ಯಾ ಕಾಳಾಚಾ ಮೀ ಆಕಳಿತಾ । ಜಾಣ ತತ್ತ್ವತಾ ಮೀ ಮಹಾಕಾಳೂ ॥೧೬೩॥ ತಿಹೀ ಗುಣಾಂಚೀ ಸಮಾನಾವಸ್ಥಾ । ತೇ ಮೀ ಜಾಣ ಗಾ ನಿಜಭಕ್ತಾ । ಅಕೃತ್ರಿಮ ಗುಣ ಜೋ ಧರ್ಮತಾ । ತೋ ಮೀ ತತ್ತ್ವತಾ ಮ್ಹಣೇ ಹರೀ ॥೧೬೪॥

ಗುಣಿನಾಮಪ್ಯಹಂ ಸೂತ್ರಂ ಮಹತಾಂ ಚ ಮಹಾನಹಮ್ । ಸೂಕ್ಷ್ಮಾಣಾಮಪ್ಯಹಂ ಜೀವೋ ದುರ್ಜಯಾನಾಮಹಂ ಮನಃ ॥೧೧॥

ಅರ್ಥ :-ಗುಣಯುಕ್ತ ವಸ್ತುಗಳಲ್ಲಿ ನಾನು ಕ್ರಿಯಾಶಕ್ತಿ ಪ್ರಧಾನವಾದ ಪ್ರಥಮಕಾರ್ಯ ಸೂತ್ರಾತ್ಮಾನಾಗಿರುವೆನು. ನಾನು ಮಹಾನ ಪದಾರ್ಥಗಳಲ್ಲಿನ ಮಹತತ್ತ್ವನಾಗಿರುವೆನು. ನಾನು ಸೂಕ್ಷ್ಮ ವಸ್ತುಗಳಲ್ಲಿನ ಜೀವನಾಗಿರುವೆನು. ನಾನು ದುರ್ಜಯ ವಸ್ತುಗಳಲ್ಲಿ ಮನಸ್ಸಾಗಿರುವೆನು.

ಗುಣೀ ಮ್ಹಣಾವಯಾ ಹೇಚಿ ಕಾರಣ । ಜ್ಯಾ ಮಜಮಾಜೀ ಸೂತ್ರ ಕ್ರಿಯಾಪ್ರಧಾನ । ಮಾಯೇಚೇ ಪ್ರಥಮಕಾರ್ಯ ಜಾಣ । ತೋ ಗುಣೀ ಮೀ ಸಂಪೂರ್ಣ ಉದ್ಧವಾ ॥೧೬೫॥ ಜಗೀ ಆಕಾಶ ಥೋರ ಪಾಹೀ । ತೇ ಮಜಮಾಜೀ ಖೇಳೇ ಲಪಂಡಾಯೀ । ಮಾಝ್ಯಾ ಮಹತ್ತತ್ತ್ವಾಚೀ ನವಾಯೀ । ಮಜಹೀ ನಿಶ್ಚಯೀ ನೇಮೇನಾ ॥೧೬೬॥ ಮಹತ್ತತ್ತ್ವ ಜೇ ಜ್ಞಾನಪ್ರಧಾನ । ತೇ ಮೀ ಮ್ಹಣೇ ನಾರಾಯಣ । ಸೂಕ್ಷ್ಮಾಮಾಜೀ ಜೀವೂ ಮೀ ಆಪಣ । ಬ್ರಹ್ಮಾದಿಕಾ ಜಾಣ ಅತರ್ಕ್ಯ ॥೧೬೭॥ ದುರ್ಜಯಾಮಾಜೀ ಮೀ ಮನ । ತ್ಯಾಸೀ ಜಿಂಕಾವಯಾ ಜಾಣ । ಮಜವೇಗಳೀ ಆಂಗವಣ । ನಾಹೀ ಸಂಪೂರ್ಣ ಆಣಿಕಾಸೀ ॥೧೬೮॥ ಮಜ ಲಕ್ಷಿತಾ ಮನ ಆಕಳೇ । ಮಜ ವಿಸರತಾ ಮನ ಚೌತಾಳೇ । ಮನ ನ ಧರವೇ ವೇದಶಾಸ್ತ್ರಬಳೇ । ಮನ ನಾಕಳೇ ಮಜವೀಣ ॥೧೬೯॥ ಮನ ತೇಚಿ ಮೀ ಆಹೇ । ಮಜ ಚಿಂತಿತಾ ತೇ ವಿರೋನಿ ಜಾಯೇ । ಮಜ ವಿಸರತಾ ತೇ ಪಾಹೇ । ಸ್ವೈರಾ ಜಾಯೇ ಸುನಾಟ ॥೧೭೦॥

ಹಿರಣ್ಯಗರ್ಭೋ ವೇದಾನಾಂ ಮಂತ್ರಾಣಾಂ ಪ್ರಣವಸ್ತ್ರಿವೃತ್ । ಅಕ್ಷರಾಣಾಮಕಾರೋಽಸ್ಮಿ ಪದಾನಿ ಛಂಧಸಾಮಹಮ್ ॥೧೨॥

ಅರ್ಥ :-ನಾನು ವೇದದಲ್ಲಿನ ಸೂಕ್ಷ್ಮ-ಸಮಷ್ಟಿ ಅಭಿಮಾನೀ ಹಿರಣ್ಯಗರ್ಭನಾಗಿರುವೆನು. ಮಂತ್ರಗಳಲ್ಲಿನ ಮೂರು ಮಾತ್ರಾ ಕಾರ, ಅಕಾರ, ಮಕಾರದ ಓಂಕಾರವು, ಅಕ್ಷರಗಳಲ್ಲಿ ಅಕಾರವು, ಛಂದಗಳಲ್ಲಿ ತ್ರಿಪದಾ ಗಾಯತ್ರಿ ಛಂದವು ನಾನಾಗಿರುವೆನು.

ಗತಿಯುಳ್ಳ ಜನರ ಯಾವ ಗತಿವಿರುವುದೋ, ಅದು ನಾನೇ ಇರುವೆನು. ನನ್ನಿಂದಲೇ ಗತಿಗೆ ಗತಿತ್ವವು ಪ್ರಾಪ್ತವಾಗುವುದು. ಇದನ್ನು ನಿಶ್ಚಯವಾಗಿ ತಿಳಿ ಎಂದು ಲಕ್ಷ್ಮೀಪತಿಯು ಹೇಳಿದನು ॥೧೬೦॥ ಯಾವ ಶಕ್ತಿಯಿಂದ ಸರ್ವರಿಗೂ ಗತಿಯು ಪ್ರಾಪ್ತವಾಗುವುದೋ, ಆ ಚೇತನೆಯು ನನ್ನ ಶಕ್ತಿಯಾಗಿರುವುದು. ಚೇತನದಿಂದಲೇ ಇಂದ್ರಿಯಗಳ ಪ್ರವೃತ್ತಿಯಾಗುವುದು. ಅರ್ಥಾತ್ ಗತಿಯ ಗತಿಯು ನಾನೇ ಆಗಿರುವೆನು ॥೧೬೧॥ ಸರ್ವಗತಿಗಳಲ್ಲಿ ಪ್ರಾಣಿಗಳ ಪರಮಗತಿ ಎಂದರೆ ಮುಕ್ತಿಯಾಗಿರುವುದು. ಆ ಮುಕ್ತಿಯ ಮುಕ್ತತೆಯು ನನ್ನಲ್ಲಿ ಆಗುತ್ತಿರುವುದು. ಆದ್ದರಿಂದ ಗತಿಯ ಗತಿಯು ನಾನೇ ಒಬ್ಬನಾಗಿರುವೆನು ॥೧೬೨॥ ದೇವತೆಗಳಿಗೆ ಮತ್ತು ಮನುಷ್ಯರಿಗೆ ಮರ್ಯಾದಿತ ವೇಳೆವರೆಗೆ ಇಡುವುದು ಕಾಲನ ಸತ್ತೆಯಾಗಿರುವುದು. ಆದರೆ ಆ ಕಾಲನಿಗೂ ನಿಜವಾಗಿ ಮಾರ್ಯದಿತನಾಗಿ ಇಡುವ ಅಂತಹ ಯಾವ ಮಹಾ ಕಾಲನು ನಾನಾಗಿರುವೆನು ॥೧೬೩॥ ಸ್ವಾತ್ವಿಕ, ರಾಜಸ ಮತ್ತು ತಾಮಸ ಈ ಮೂರು ಗುಣಗಳಲ್ಲಿ ಸಾಮ್ಯಾವಸ್ಥೆಯು ನಾನಿರುವೆನು. ಹೇ ಪ್ರಿಯ ಭಕ್ತ ಉದ್ಧವಾ, ಆಕಾಶಾದಿಕದ ಯಾವ ಶಬ್ದಾದಿ ಗುಣರೂಪ ಸ್ವಾಭಾವಿಕ ಧರ್ಮವು ನಾನಾಗಿರುವೆನು ಎಂದು ಶ್ರೀಪತಿಯು ಹೇಳಿದನು ॥೧೬೪॥

ಹೇ ಉದ್ಧವಾ, ನನ್ನಲ್ಲಿ ಕ್ರಿಯೆಗಳ ಪ್ರಥಮಸೂತ್ರವು ಪ್ರಧಾನವಾಗಿರುವುದು. ಮಾಯೆಯ ಮೊದಲನೆಯ ಯಾವ ಕಾರ್ಯವು ನಾನೇ ಇರುವೆನು. ಆದ್ದರಿಂದ ಸರ್ವಸ್ವ ಗುಣಿಯು ನಾನೇ ಇರುವೆನು ॥೧೬೫॥ ಜಗತ್ತಿನಲ್ಲಿ ಎಲ್ಲೆಲ್ಲಿಯೂ ವ್ಯಾಪಕವಾಗಿ ಆಕಾಶವಿರುವುದು. ಆದರೆ ಅದೂ ಕೂಡ ನನ್ನಲ್ಲಿಯೇ ಕಣ್ಣುಮುಚ್ಚಾಲೇ ಆಟವನ್ನು ಆಡುತ್ತಿರುವುದು. ನನ್ನ ಮಹತ್ತತ್ತ್ವದ ಚಮತ್ಕಾರವನ್ನು ನನಗೂ ಕೂಡ ನಿಶ್ಚಿತವಾಗಿ ಕಲ್ಪನೆಯನ್ನು ಮಾಡಲು ಬರುವುದಿಲ್ಲ ॥೧೬೬॥ ಜ್ಞಾನಪ್ರಧಾನವಾದ ಯಾವ ಮಹತ್ತತ್ತ್ವವು ಅದು ನಾನು ನಾರಾಯಣನೇ ಆಗಿರುವೆನು. ಬ್ರಹ್ಮದೇವಾದಿಕರಿಗೂ ಅತರ್ಕ್ಯವಾಗಿರುವ ಅತ್ಯಂತ ಸೂಕ್ಷ್ಮದಲ್ಲಿಯೇ ಸೂಕ್ಷ್ಮವಾಗಿರುವ ಯಾವ ಜೀವವೂ ನಾನೇ ಆಗಿರುವೆನು ॥೧೬೭॥ ಜಯವನ್ನು ಸಂಪಾದಿಸಲು ಅತ್ಯಂತ ಕಠಿಣವಾಗಿರುವ ವಸ್ತುಗಳಲ್ಲಿ ಮನಸ್ಸು ನಾನೇ ಆಗಿರುವೆನು. ಆ ಯಾವ ಮನಸ್ಸು ಜಯಿಸಲು ನನ್ನ ಹೊರತಾಗಿ ಅನ್ಯರಾರೂ ಸಮರ್ಥರಾಗಿರುವುದಿಲ್ಲ ॥೧೬೮॥ ನನ್ನ ಸ್ಮರಣೆಯನ್ನು ಮಾಡಿದರೆ ಮಾತ್ರ ಮನಸ್ಸು ಅಂಕಿತದಲ್ಲಿರುವುದು. ಹಾಗೆಯೇ ನನ್ನನ್ನು ಮರೆತುಬಿಟ್ಟರೆ ಆಗ ಆ ಯಾವ ಮನಸ್ಸು ನಾಲ್ಕೂ ದಿಕ್ಕುಗಳಿಗೆ ಧಾವಿಸುತ್ತಿರುವುದು. ಕೇವಲ ವೇದಶಾಸ್ತ್ರಗಳ ಅಭ್ಯಾಸದಿಂದ ಮನಸ್ಸು ಅಂಕಿತವಾಗುವುದಿಲ್ಲ. ನನ್ನ ಹೊರತಾಗಿ ಆ ಮನಸ್ಸು ಎಂದಿಗೂ ಅಂಕಿತವಾಗಲು ಶಕ್ಯವಿಲ್ಲ ॥೧೬೯॥ ನಿಜವಾಗಿಯೂ ನಾನೇ ಮನಸ್ಸಾಗಿರುವೆನು. ನನ್ನ ಚಿಂತನೆಯನ್ನು ಮಾಡಲು ಆ ಯಾವ ಮನವು ಅಲ್ಲಿಯೇ ಕರಗಿ ಹೋಗುವುದು. ನನ್ನನ್ನು ಮರೆತರೆ ಅದೇ ಮನಸ್ಸು ತನ್ನ ಮನಬಂದಂತೆ ಸಿಕ್ಕ ಸಿಕ್ಕಲ್ಲಿ ಧಾವಿಸುತ್ತಿರುವುದು ॥೧೭೦॥

ವೇದ-ಅಧ್ಯಾಪಕ ಪ್ರಸಿದ್ಧ । ಹಿರಣ್ಯಗರ್ಭಮೀ ಮ್ಹಣೇ ಗೋವಿಂದ । ಮಾಝೇನಿ ಜಗೀ ಅನುಲ್ಲಂಘ್ಯ ವೇದ । ವೇದವಾದ ತೋಹೀ ಮೀ ॥೧೭೧॥ ಓಂಕಾರಾವೀಣ ಮಂತ್ರಶ್ರೇಣೀ । ತೇ ಜಾಣ ಬಾಳಾಕಾಚೀ ಕಹಾಣೀ । ಮಂತ್ರೀ ಓಂಕಾರ ಮೀ ಚಕ್ರಪಾಣೀ । ಸಕಳ ಮಂತ್ರ ತ್ಯಾಚೇನಿ ಪಾವನ ॥೧೭೨॥ ಅಕಾರ ಉಕಾರ ಮಕಾರ । ಅರ್ಧಮಾತ್ರೇಸೀ ಉಚ್ಚಾರ । ಯಾ ನಾಂವ ''ತ್ರಿವಿಧ ಓಂಕಾರ'' । ಪಾವನ ಮಂತ್ರ ಯೇಣೇಸೀ ॥೧೭೩॥ ಅಕ್ಷರಾಂಚ್ಯಾ ಉಚ್ಚಾರಾಸೀ । ಅಕಾರ ಲಾಗಲಾ ಸರ್ವಾಸೀ । ತೋ ಅಕಾರೂ ಮೀ ಹೃಷೀಕೇಶೀ । ಜಾಣ ನಿಶ್ಚಯೇಸೀ ಉದ್ಧವಾ ॥೧೭೪॥ ಅಕ್ಷರೀ ಅಕಾರ ಮೀ ಮುಕುಂದೂ । ಛಂದಾಮಾಜೀ ಗಾಯತ್ರೀ ಛಂದೂ । ತೋ ಮೀ ಮ್ಹಣೇ ಗೋವಿಂದೂ । ಯಾಲಾಗೀ ಬ್ರಹ್ಮವೃಂದೂ ಸೇವಿತೀ ॥೧೭೫॥ ಛಂದಾಮಾಜೀ ಗಾಯತ್ರೀ ಛಂದ । ಸಕಳ ದ್ವಂದ್ವಾಮಾಜೀ ನಿರ್ದ್ವಂದ್ವ । ತೋ ಮ್ಹೀ ಮ್ಹಣೇ ಗೋವಿಂದ । ಪೂಜ್ಯ ದ್ವಿಜವೃಂದ ಯೇಣೇಂಚಿ ಮಜ ॥೧೭೬॥

ಇಂದ್ರೋಽಹಂ ಸರ್ವದೇವಾನಾಂ ವಸೂನಾಮಸ್ಮಿ ಹವ್ಯವಾಟ್ । ಆದಿತ್ಯಾನಾಮಹಂ ವಿಷ್ಣು ರುದ್ರಾಣಾಂ ನೀಲಲೋಹಿತಃ ॥೧೩॥

ಅರ್ಥ :- ಸಮಸ್ತ ದೇವತೆಗಳವರಲ್ಲಿ ಇಂದ್ರ, ಎಂಟು ವಸುಗಳಲ್ಲಿ ಅಗ್ನೀ, ದ್ವಾದಶ ಆದಿತ್ಯಗಳವರಲ್ಲಿ ವಿಷ್ಣು ಮತ್ತು ಏಕಾದಶ ರುದ್ರರಲ್ಲಿ ನೀಲಲೋಹಿತ ನಾಮದ ರುದ್ರ ನಾನಾಗಿರುವೆನು.

ದೇವಾಮಾಜೀ ಮೀ ಇಂದ್ರ ಜಾಣ । ವಸೂಮಾಜೀ ಮೀ ಹುತಾಶನ । ಆದಿತ್ಯಾಮಾಜೀ ಮೀ ವಾಮನ । ರುದ್ರಾಮಾಜೀ ಜಾಣ ನೀಲಲೋಹಿತೂ ॥೧೭೭॥

ಬ್ರಹ್ಮರ್ಷೀಣಾಂ ಭೃಗುರಹಂ ರಾಜರ್ಷೀಣಾಮಹಂ ಮನುಃ । ದೇವರ್ಷೀಣಾಂ ನಾರದೋಽಹಂ ಹವಿರ್ಧಾನ್ಯಸ್ಮಿ ಧೇನುಷು ॥೧೪॥

ಅರ್ಥ :- ನಾನು ಬ್ರಹ್ಮ ಋಷಿಗಳಲ್ಲಿ ಭೃಗು, ರಾಜರ್ಷಿಗಳಲ್ಲಿ ಮನು, ದೇವರ್ಷಿಗಳಲ್ಲಿ ನಾರದ ಮತ್ತು ಆಕಳುಗಳಲ್ಲಿ ಕಾಮಧೇನು ಆಗಿರುವೆನು.

ಶಾಪೂನಿ ಬ್ರಹ್ಮಾ ಅಪೂಜ್ಯ ಕೇಲಾ । ಶಿವಾಚಾ ನೈವೇದ್ಯ ತ್ಯಾಗವಿಲಾ । ವಿಷ್ಣೂ ಹೃದಯೀ ಲಾತಾ ಹಾಣಿತಲಾ । ಭೃಗು ವಾಖಾಣಿಲಾ ಶ್ರೀವತ್ಸೇ ॥೧೭೮॥ ಬ್ರಹ್ಮ ಋಷೀಮಾಜೀ ಸಂಪನ್ನ । ಭೃಗು ತೋ ಮೀ ಮ್ಹಣೇ ಶ್ರೀಕೃಷ್ಣ । ಮನುಸ್ವರೂಪೇ ಮೀ ಆಪಣ । ರಾಜರ್ಷಿ ಜಾಣ ಮುಖ್ಯತ್ವೇ ॥೧೭೯॥ ದೇವರ್ಷೀಮಾಜೀ ಮುನಿ ನಾರದ । ತೋಹೀ ಮೀ ಮ್ಹಣೇ ಗೋವಿಂದ । ಕಾಮಧೇನು ಅತಿಶುದ್ಧ । ಸ್ವರೂಪ ಪ್ರಸಿದ್ಧ ತೇ ಮಾಝೇ ॥೧೮೦॥

ವೇದವನ್ನು ಕಲಿಸುವುದರಲ್ಲಿ ಪ್ರಸಿದ್ಧನಾಗಿರುವ ಬ್ರಹ್ಮದೇವನು ನಾನೇ ಆಗಿರುವೆನು ಎಂದು ಗೋವಿಂದನು ಹೇಳಿದನು. ನನ್ನಿಂದಲೇ ಜಗತ್ತಿನಲ್ಲಿ ವೇದದ ಉಲ್ಲಂಘನೆಯನ್ನು ಮಾಡಲು ಬರುವುದಿಲ್ಲ. ವೇದ ಸಂಬಂಧವಾದ ಸರ್ವ ವಿಚಾರಗಳೂ ಕೂಡ ನಾನೇ ಆಗಿರುವೆನು ॥೧೭೧॥ ಓಂಕಾರವು ಉಚ್ಚರಿಸದಿದ್ದರೆ ಸರ್ವ ಮಂತ್ರಗಳ ಸಮೂಹ ಚಿಕ್ಕ ಬಾಲಕರ ಭಾಷಣದಂತಾಗುವುದು. ಈ ಮಂತ್ರಗಳಲ್ಲಿನ ಓಂಕಾರವು ಶ್ರೀಕೃಷ್ಣನಾದ ನಾನಾಗಿರುವೆನು ಎಲ್ಲ ಮಂತ್ರಗಳು ನನ್ನಿಂದಲೇ ಪಾವನವಾಗುವುವು ॥೧೭೨॥ ಅಕಾರ, ಉಕಾರ ಮತ್ತು ಮಕಾರ ಇವುಗಳ ಅರ್ಧಮಾತ್ರಾ ಸಮೇತವಾಗಿ ಆಗುವ ಯಾವ ಉಚ್ಚಾರವು ಅದು ತ್ರಿವರ್ಣಾತ್ಮಕ ಓಂಕಾರವಾಗಿರುವುದು. ಈ ಯೋಗದಿಂದಲೇ ಮಂತ್ರಗಳು ಪಾವನವಾಗುವುವು ॥೧೭೩॥ ಅಕ್ಷರಗಳನ್ನು ಉಚ್ಚರಿಸಬೇಕಾದರೆ ''ಅ'' ಕಾರದ ಅಗತ್ಯವಿದೆ. ಹೇ ಉದ್ಧವಾ, ಆ ಯಾವ ಅಕ್ಷರವೂ ಕೂಡ ಶ್ರೀಕೃಷ್ಣನಾದ ನಾನೇ ಆಗಿರುವೆನು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೭೪॥ ಹೀಗೆ ಅಕ್ಷರಗಳಲ್ಲಿ ಅಕಾರವು ನಾನು ಶ್ರೀಕೃಷ್ಣನಾಗಿರುವೆನು. ಛಂದಗಳಲ್ಲಿ ಗಾಯತ್ರೀ ಛಂದವು ನಾನಾಗಿರುವೆನು. ಆದ್ದರಿಂದಲೇ ಬ್ರಹ್ಮವೃಂದವು ಈ ಯಾವ ಗಾಯತ್ರಿ ಮಂತ್ರದ ಸೇವನೆಯನ್ನು ಮಾಡುವುದು ॥೧೭೫॥ ಹೀಗೆ ಸರ್ವ ಛಂದಗಳಲ್ಲಿ ಮುಖ್ಯವಾಗಿರುವ ಇಂತಹ ಗಾಯತ್ರಿ ಛಂದವು ಮತ್ತು ಸರ್ವ ದ್ವಂದ್ವಗಳಲ್ಲಿ ನಿರ್ದ್ವಂದ್ವವು ನಾನೇ ಆಗಿರುವೆನು. ಈ ಗಾಯತ್ರಿ ಮಂತ್ರದ ಕಾರಣವಾಗಿಯೇ ಬ್ರಹ್ಮ ವೃಂದವು ನನಗೆ ಪ್ರಿಯವಾಗಿರುವುದು ॥೧೭೬॥

ದೇವತೆಗಳವರಲ್ಲಿ ಇಂದ್ರನು ನಾನು ವಸೂಗಳವರಲ್ಲಿ ಅಗ್ನಿಯು ನಾನು, ಆದಿತ್ಯಗಳವರಲ್ಲಿ ವಾಮನನು ನಾನು ಮತ್ತು ರುದ್ರರಲ್ಲಿ ನೀಲ ಲೋಹಿತನು ನಾನಾಗಿರುವೆನು ॥೧೭೭॥

ಶಾಪವನ್ನು ಕೊಟ್ಟು ಬ್ರಹ್ಮದೇವನಿಗೆ ಪೂಜೆಗೆ ಅಯೋಗ್ಯನನ್ನಾಗಿ ಮಾಡಿದ, ಶಂಕರನ ನೈವೇದ್ಯ ಭಕ್ಷಣೆಯನ್ನು ಮಾಡುವುದು ನಿಷಿದ್ಧವನ್ನಾಗಿ ಮಾಡಿದ ಆ ಯಾವ ಭೃಗುಋಷಿಯು ವಿಷ್ಣುವಿನ ಹೃದಯದ ಮೇಲೆ ಕಾಲಿನಿಂದ ಒದ್ದನು. ಈ ಒದಿಕೆಯ ಚಿನ್ಹವು ಶ್ರೀವತ್ಸಲಾಂಛನವೆಂದು ಭೃಗುವಿನ ಮಹಿಮೆಯನ್ನು ವರ್ಣಿಸಲ್ಪಟ್ಟಿತು ॥೧೭೮॥ ಬ್ರಹ್ಮರ್ಷಿಗಳವರಲ್ಲಿ ಪೂಜ್ಯನಾಗಿರುವ ಭೃಗು ಋಷಿಯು ನಾನು ಮತ್ತು ಮನುವಿನ ರೂಪದಿಂದ ಶ್ರೇಷ್ಠನಾಗಿರುವ ರಾಜರ್ಷಿಯು ನಾನಾಗಿರುವೆನು ಎಂದು ಶ್ರೀಕೃಷ್ಣನು ಹೇಳಿದನು ॥೧೭೯॥ ದೇವರ್ಷಿಗಳವರಲ್ಲಿ ನಾರದಮುನಿಯು ನಾನು. ಕಾಮಧೇನು ಸಹ ನನ್ನದೇ ಪ್ರಸಿದ್ಧವಾದ ಶುದ್ಧ ಸ್ವರೂಪವಾಗಿರುವುದು ಎಂದು ಗೋವಿಂದನು ಹೇಳಿದನು ॥೧೮೦॥

ಸಿದ್ಧೇಶ್ವರಾಣಾಂ ಕಪಿಲಃ ಸುಪರ್ಣೋಽಹಂ ಪತತ್ರಿಣಾಮ್ । ಪ್ರಜಾಪತೀನಾಂ ದಕ್ಷೋಽಹಂ ಪಿತೄಣಾಮಹಮರ್ಯಮಾ ।।೧೫।।

ಅರ್ಥ :- ನಾನು ಸಿದ್ಧೇಶ್ವರಗಳಲ್ಲಿ ಕಪಿಲ, ಪಕ್ಷಿಗಳಲ್ಲಿ ಗರುಡ, ಪ್ರಜಾಪತಿಯವರಲ್ಲಿ ದಕ್ಷ ಪ್ರಜಾಪತಿ ಮತ್ತು ಪಿತೃಗಳಲ್ಲಿ ಅರ್ಯಮಾ ಆಗಿರುವೆನು.

ಸಿದ್ಧಾಮಾಜೀ ಕಪಿಲ ಮುನೀಶ್ವರ । ತೋ ಮೀ ಮ್ಹಣೇ ಸಾರಂಗಧರ । ಪಕ್ಷ್ಯಾಮಾಜೀ ಖಗೇಶ್ವರ । ತೋ ಮೀ ಶ್ರೀಧರ ಗರುಡರೂಪೇ ।।೧೮೧।। ಪ್ರಜಾಪತೀಮಾಜೀ ಮುಖ್ಯ । ಕೃಷ್ಣಮ್ಹಣೇ ತೋ ಮೀ ದಕ್ಷ । ಪಿತೃಗಣಾಮಾಜೀ ಅಧ್ಯಕ್ಷ । ಅರ್ಯಮಾ ಪ್ರತ್ಯಕ್ಷ ಸ್ವರೂಪ ಮಾಝೇ ।।೧೮೨।।

ಮಾ ವಿದ್ಧ್ಯುದ್ಧವ ದೈತ್ಯಾನಾಂ ಪ್ರಹ್ಲಾದಮಸುರೇಶ್ವರಮ್ । ಸೋಮಂ ನಕ್ಷತ್ರೌಷಧೀನಾಂ ಧನೇಶಂ ಯಕ್ಷರಕ್ಷಸಾಮ್ ।।೧೬।।

ಅರ್ಥ:-ಪ್ರಿಯ ಉದ್ಧವಾ, ನಾನು ದೈತ್ಯರಲ್ಲಿ ದೈತ್ಯರಾಜ ಪ್ರಹ್ಲಾದನು, ನಕ್ಷತ್ರಗಳಲ್ಲಿ ಚಂದ್ರನು, ಔಷಧಗಳಲ್ಲಿ ಸೋಮರಸನು ಮತ್ತು ಯಕ್ಷ ರಾಕ್ಷಸಲ್ಲಿ ಕುಬೇರನು ಆಗಿರುವೆನು.

ಭಕ್ತಿಪ್ರತಾಪೇ ಅತಿಅಗಾಧ । ತೋ ದೈತ್ಯಾಮಾಜೀ ಮೀ ಪ್ರಹ್ಲಾದ । ನಕ್ಷತ್ರ ಔಷಧೀಚಾ ಜೋ ಸ್ವಾಮೀ ಚಂದ್ರ । ತೇ ಮ್ಹಣೇ ಗೋವಿಂದ ಸ್ವರೂಪ ಮಾಝೇ ।।೧೮೩।। ಯಕ್ಷರಾಕ್ಷಸಾಮಾಜೀ ಥೋರ । ಮಾಝೇ ಸ್ವರೂಪ ತೋ ಕುಬೇರ । ಜ್ಯಾಚೇ ವಿಶ್ವಾಸೇ ನಿರಂತರ । ಅಸೇ ಭಾಂಡಾರ ಹರೀಚೇ ।।೧೮೪।।

ಐರಾವತಂ ಗಜೇಂದ್ರಾಣಾಮ್ ಯಾದಸಾಂ ವರುಣಂ ಪ್ರಭುಮ್ ।
ತಪತಾಂ ದ್ಯುಮತಾಂ ಸೂರ್ಯ ಮನುಷ್ಯಾಣಾಂ ಚ ಭೂಪತಿಮ್ ।।೧೭।।

ಅರ್ಥ :-ನಾನು ಆನೆಗಳಲ್ಲಿ ಐರಾವತನು, ಜಲಜಂತುಗಳ ಸ್ವಾಮೀ ವರುಣನು, ಉಷ್ಣವನ್ನು ಕೊಡುವ ಮತ್ತುಪ್ರಕಾಶಿಸುವವರಲ್ಲಿ ಸೂರ್ಯನು ಮತ್ತು ಮನುಷ್ಯರಲ್ಲಿ ರಾಜನು ಆಗಿರುವೆನು.

ಐರಾವತ ಜೋ ಗಜೇಂದ್ರ । ತೋ ಮೀ ಮ್ಹಣೇ ಯಾದವೇಂದ್ರ । ವರುಣ ಜೋ ಜಳಚರೇಂದ್ರ । ತೇ ಮ್ಹಣೇ ಉಪೇಂದ್ರ ಸ್ವರೂಪ ಮಾಝೇ ।।೧೮೫।। ಸ್ವಪ್ರಭಾ ಪ್ರಕಾಶನಿಷ್ಠ । ಜಗ ಪ್ರಕಾಶೂನಿ ಉದ್ಭಟ । ತೋ ಸೂರ್ಯ ಮೀ ಮ್ಹಣೇ ವೈಕುಂಠ । ಅತಿತಿಖಟ ನಿಜತೇಜೇ ।।೧೮೬।। ಮನುಷ್ಯಾಮಾಜೀ ಜೋ ಭೋಗೀ ಕ್ಷಿತೀ । ಸರ್ವಭೂಮೀ ಜ್ಯಾಚ್ಯಾ ಹಾತೀ । ಜ್ಯಾತೇ ಬೋಲತೀ ಭೂಪತೀ। ತೇ ಮಾಝೀ ವಿಭೂತೀ ಹರಿ ಮ್ಹಣೇ ।।೧೮೭।।

ಉಚ್ಚೈಃಶ್ರವಾಸ್ತುರಂಗಾಣಾಂ ಧಾತೂನಾಮಸ್ಮಿ ಕಾಂಚನಮ್ ।
ಯಮಃ ಸಂಯಮತಾಂಚಾಹಂ ಸರ್ಪಾಣಾಮಸ್ಮಿ ವಾಸುಕಿಃ ।।೧೮।।

ನಾಗೇಂದ್ರಾಣಾಮನಂತೋಽಹಂ ಮೃಗೇಂದ್ರಃ ಶೃಂಗಿದಂಷ್ಟ್ರಿಣಾಮ್ ।
ಆಶ್ರಮಾಣಾಮಹಂ ತುರ್ಯೋ ವರ್ಣಾನಾಂ ಪ್ರಥಮೋಽನಘ ।।೧೯।।

ಅರ್ಥ:-ನಾನು ಕುದುರೆಗಳಲ್ಲಿ ಉಚ್ಚೈಶ್ರವನು, ಧಾತುಗಳಲ್ಲಿ ಸುವರ್ಣನು, ದಂಡವನ್ನು ಕೊಡುವವರಲ್ಲಿ ಯಮನು ಮತ್ತು ಸರ್ಪಗಳಲ್ಲಿ ವಾಸುಕಿಯಾಗಿರುವೆನು. ನಾನು ನಾಗರಾಜರಲ್ಲಿ ಶ್ರೇಷ್ಠ ಶೇಷನಾನು. ಕೋಡು ದವಡೆಗಳಿರುವ ಪ್ರಾಣಿಗಳಲ್ಲಿ ಸಿಂಹನು, ಆಶ್ರಮಗಳಲ್ಲಿ ಸನ್ಯಾಸವು ಮತ್ತು ವರ್ಣಗಳಲ್ಲಿ ಬ್ರಾಹ್ಮಣನು ಆಗಿರುವೆನು.

ಸಿದ್ಧರಲ್ಲಿ ಕಪಿಲ ಮುನಿಯು ನಾನೇ ಆಗಿರುವೆನು. ಪಕ್ಷಿಗಳ ರಾಜನಾದ ಗರುಡನೂ ಕೂಡ ನಾನೇ ಆಗಿರುವೆನು ಎಂದು ಸಾರಂಗಧರನಾದ ಶ್ರೀಧರನು ಹೇಳಿದನು ।।೧೮೧।। ಪ್ರಜಾಪತಿಗಳವರಲ್ಲಿ ದಕ್ಷನು ನಾನೇ ಆಗಿರುವೆನು. ಪಿತೃಗಣಗಳಲ್ಲಿ ಶ್ರೇಷ್ಠನಾದ ಅರ್ಯಮಾ ಆತನೂ ಕೂಡ ನನ್ನದೇ ಪ್ರತ್ಯಕ್ಷ ಸ್ವರೂಪನಾಗಿರುವನು ।।೧೮೨।।

ಭಕ್ತಿಪ್ರತಾಪದಿಂದ ಅತ್ಯಂತ ಅಗಾಧನಾಗಿರುವ ದೈತ್ಯರಲ್ಲಿ ಪ್ರಹ್ಲಾದನು ನಾನು ಎಂದು ಶ್ರೀಕೃಷ್ಣನು ಹೇಳಿದನು. ನಕ್ಷತ್ರಗಳ ಮತ್ತು ಔಷಧಗಳ ಸ್ವಾಮಿಯಾಗಿರುವ ಚಂದ್ರನೂ ಕೂಡ ನನ್ನ ಸ್ವರೂಪವೇ ಆಗಿರುವನು ।।೧೮೩।। ಯಕ್ಷ ರಾಕ್ಷಸರಲ್ಲಿ ಶ್ರೇಷ್ಠನಾಗಿರುವ ಕುಬೇರನೂ ಕೂಡ ನನ್ನ ಸ್ವರೂಪನಾಗಿರುವನು. ಆತನ ವಿಶ್ವಾಸದ ಆಧಾರದ ಮೇಲೆ ಶ್ರೀಹರಿಯ ಭಾಂಡಾರವು ಯಾವಾಗಲೂ ಆತನಲ್ಲಿರುವುದು ।।೧೮೪।।

ಎಲ್ಲ ಆನೆಗಳಲ್ಲಿ ಶ್ರೇಷ್ಠವಾಗಿರುವ ಐರಾವತವು ನಾನೇ ಆಗಿರುವೆನು. ಜಲಚರಗಳ ರಾಜನಾದ ಯಾವ ವರುಣನೂ ಕೂಡ ನನ್ನ ಸ್ವರೂಪನೇ ಆಗಿರುವನು ಎಂದು ಶ್ರೀಕೃಷ್ಣನು ಹೇಳಿದನು।।೧೮೫।। ತನ್ನ ಪ್ರಭೆಯಿಂದ ನಿರಂತರವಾಗಿ ಪ್ರಕಾಶವನ್ನು ಕೊಡುವ, ಸಂಪೂರ್ಣ ಜಗತ್ತನ್ನು ಪ್ರಕಾಶಿತವನ್ನಾಗಿ ಮಾಡಿ ತನ್ನ ತೇಜದಿಂದ ಅತಿ ಪ್ರಖರನಾಗಿರುವ ಸೂರ್ಯನು ನಾನೇ ಆಗಿರುವೆನು ।।೧೮೬।। ಮನುಷ್ಯರಲ್ಲಿ ಪೃಥ್ವಿಯ ಉಪಭೋಗವನ್ನು ಪಡೆದಿರುವ ಸರ್ವಭೂಮಿಯನ್ನು ತನ್ನ ಅಂಕಿತವನ್ನಾಗಿ ಮಾಡಿರುವ, ಆ ರಾಜನು ನನ್ನ ವಿಭೂತಿಯಾಗಿರುವನು. ಹೀಗೆಂದು ಶ್ರೀಕೃಷ್ಣನು ಹೇಳಿದನು ।।೧೮೭।।

ಉಚ್ಚೈಃಶ್ರವಾ ತುರಂಗಜಾತೀ । ತೋ ಮೀ ಮ್ಹಣೇ ಕಮಳಾಪತೀ । ಸುವರ್ಣ ಧಾತು ಮಾಝೀ ವಿಭೂತೀ । ಜೇಲಾಗೀ ಲುಲಾತೀ ತಿನೀ ಲೋಕ ।।೧೮೮।। ದಂಡಧರಿತ್ಯಾ ಮಾಜೀ ಗಹನ । ಯಮಧರ್ಮ ಮೀ ಆಪಣ । ಸರ್ಪಾಮಾಜೀ ಜಾಣ । ಮೀ ನಾರಾಯಣ ವಾಸುಕೀ ।।೧೮೯।। ಅನಂತ ಯಾ ನಾಮಾತೇ ಜೋ ಧರೀ । ತೋ ನಾಗ ಮೀ ಮ್ಹಣೇ ಶ್ರೀಹರೀ । ನಖದಂಷ್ಟ್ರಾಶೃಂಗ ಧಾರೀ । ತ್ಯಾಮಾಜೀ ಕೇಸರೀ ಮ್ಹಣೇ ದೇವೋ ।।೧೯೦।। ಚತುರ್ಥಾಶ್ರಮ ಸನ್ಯಾಸ ಜಾಣ । ತೋ ಮೀ ಮ್ಹಣೇ ನಾರಾಯಣ । ವರ್ಣಾಗ್ರಜ ಜೇ ಬ್ರಾಹ್ಮಣ । ತೇವೀ ಬ್ರಹ್ಮ ಜಾಣ ಬೋಲತೇ ।।೧೯೧।।

ತೀರ್ಥಾನಾಂ ಸ್ರೋತಸಾಂ ಗಂಗಾ ಸಮುದ್ರ : ಸರಸಾಮಹಮ್ ।
ಆಯುಧಾನಾಂ ಧನುರಹಂ ತ್ರಿಪುರಘ್ನೋ ಧನುಷ್ಮತಾಮ್ ।।೨೦।।

ಅರ್ಥ:- ನಾನು ತೀರ್ಥ ಮತ್ತು ನದಿಗಳಲ್ಲಿ ಗಂಗೆಯಾಗಿರುವೆನು. ಜಲಾಶಯಗಳಲ್ಲಿ ಸಮುದ್ರನು, ಅಸ್ತ್ರ ಶಸ್ತ್ರಗಳಲ್ಲಿ ಧನುಷ್ಯನಾಗಿರುವೆನು ಮತ್ತು ಧನುರ್ಧಾರಿಗಳಲ್ಲಿ ಶಂಕರನು ನಾನಾಗಿರುವೆನು.

ತೀರ್ಥಸರಿತಾಮಾಜೀ ಗಾಂಗ । ತೇ ಮೀ ಮ್ಹಣೇ ಶ್ರೀರಂಗ । ತಡಾಗೀ ಶ್ರೇಷ್ಠ ತಡಾಗ । ಸಮುದ್ರ ಸಾಂಗ ಮೀ ಮ್ಹಣೇ ಹರೀ ।।೧೯೨।। ಆಯುಧೀ ಧನುಷ್ಯ ಹತಿಯೇರ । ತೇ ಮೀ ಮ್ಹಣೇ ಸಾರಂಗಧರ । ತ್ರಿಪುರಾರೀ ಮೀ ಧನುರ್ಧರ । ಜೇಣೇ ಕೇಲಾ ಸಂಹಾರ ತ್ರಿಪುರಾಚಾ ।।೧೯೩।।

ಧಿಷ್ಣ್ಯಾನಾಮಸ್ಮ್ಯಹಂ ಮೇರುರ್ಗಹನಾನಾಂ ಹಿಮಾಲಯಃ । ವನಸ್ಪತೀನಾಮಶ್ವತ್ಥ ಓಷಧೀನಾಮಹಂ ಯವಃ ।।೨೧।।

ಅರ್ಥ :- ಧಾಮಗಳಲ್ಲಿ ಸುಮೇರು ಪರ್ವತ ನಾನು ದುರ್ಗಮ ಸ್ಥಾನಗಳಲ್ಲಿ ಹಿಮಾಲಯ ನಾನು, ವೃಕ್ಷಗಳಲ್ಲಿ ಅಶ್ವತ್ಥ ವೃಕ್ಷ ನಾನು, ಸಸ್ಯಗಳಲ್ಲಿ ಬಾರ್ಲಿ ಧಾನ್ಯ ನಾನು.

ತ್ರಿಭುವನನಿವಾಸಸ್ಥಾನ ಮಹಾಮೇರೂ । ತೋ ಮೀ ಮ್ಹಣೇ ಧರಾಧರೂ । ದುರ್ಗಮತ್ವೇ ಅತಿದುರ್ಧರೂ। ತೋ ಮೀ ಹಿಮಗಿರಿವರೂ ಮ್ಹಣೇ ಕೃಷ್ಣ ।।೧೯೪।। ವೃಕ್ಷಾ ಮಾಜೀ ಜೋ ಅಶ್ವತ್ಥೂ । ತೋ ಮೀ ಮ್ಹಣೇ ಶ್ರೀಕೃಷ್ಣನಾಥೂ । ಔಷಧೀಮಾಜೀ ಅತಿವಿಖ್ಯಾತೂ । ಯವ ಮೀ ಅಚ್ಯುತೂ ಮ್ಹಣೇ ವೇಗೇ ।।೧೯೫।।

ಪುರೋಧಸಾಂ ವಸಿಷ್ಠೋಽಹಂ ಬ್ರಹ್ಮಿಷ್ಠಾನಾಂ ಬ್ರಹಸ್ಪತಿಃ । ಸ್ಕಂದೋಽಹಂ ಸರ್ವಸೇನಾನ್ಯಾಮಗ್ರಣ್ಯಾಂ ಭಗವಾನಜಃ ।।೨೨।।

ಅರ್ಥ :- ಪುರೋಹಿತರಲ್ಲಿ ವಸಿಷ್ಠ, ವೇದಾಂತ ನಿಷ್ಠರಲ್ಲಿ ಬ್ರಹ್ಮಸ್ಪತಿ, ಸಮಸ್ತ ಸೇನಾಪತಿಯರಲ್ಲಿ ಸ್ವಾಮೀ ಕಾರ್ತಿಕ, ಸನ್ಮಾರ್ಗ ಪ್ರಕಾಶಕ ಭಗವಾನ ಬ್ರಹ್ಮಾ ನಾನಾಗಿರುವೆನು.

ಶ್ರೀ ರಾಮಪೌರೋಹಿತ್ಯೇ ಶ್ರೇಷ್ಠ । ದೇವೋ ಮ್ಹಣೇ ತೋ ಮೀ ವಸಿಷ್ಠ । ವೇದವೇತ್ಯಾಮಾಜೀ ಉದ್ಭಟ । ಸುರಗುರೂ ವರಿಷ್ಠ ಮೀ ಉದ್ಧವಾ ।।೧೯೬।।

ಸರ್ವ ಕುದುರೆಗಳಲ್ಲಿ ಶ್ರೇಷ್ಠವಾಗಿರುವ ಉಚ್ಚೈಃಶ್ರವಾ ನಾನಾಗಿರುವೆನು. ಯಾವುದಕ್ಕಾಗಿ ವಿಶ್ವದ ಜನರು ಚಡಪಡಿಸುತ್ತಿರುವರೋ, ಆ ಯಾವ ಬಂಗಾರವು ನಾನಾಗಿರುವೆನು।೧೮೮।। ದಂಡವನ್ನು ಕೊಡುವುದರಲ್ಲಿ ಶ್ರೇಷ್ಠ ಶಾಸನವನ್ನು ಮಾಡುವ ಯಮಧರ್ಮನು ಸ್ವತಃ ನಾನೇ ಆಗಿರುವೆನು. ಸರ್ಪಗಳಲ್ಲಿ ವಾಸುಕಿಯು ನಾನು ಎಂದು ನಾರಾಯಣನು ಹೇಳುತ್ತ , ಇದನ್ನು ಲಕ್ಷದಲ್ಲಿಡು ಎಂದನು ।೧೮೯।। ನಾಗಗಳಲ್ಲಿ ಅನಂತ ಎಂಬ ನಾಮ ಧರಿಸಿರುವುದೋ, ಅದು ನಾನೇ ಎಂದು ಶ್ರೀಹರಿಯು ಹೇಳಿದನು, ಉಗುರುಗಳು, ಕೋಡುಗಳು, ದವಡೆಗಳು ಹೀಗೆ ಧರಿಸಿರುವ ಯಾವ ಶ್ವಾಪದಗಳು ಇದ್ದು, ಅವುಗಳಲ್ಲಿ ಸಿಂಹವು ನಾನೇ ಎಂದು ಹೀಗೆ ತಿಳಿಯಬೇಕು ।೧೯೦।। ನಾಲ್ಕು ಆಶ್ರಮಗಳಲ್ಲಿ ಉತ್ತಮವಾಗಿರುವ ಸನ್ಯಾಸ ಆಶ್ರಮವು ನಾರಾಯಣನಾದ ನಾನೇ ಆಗಿರುವೆನು. ನಾಲ್ಕೂ ವರ್ಣಗಳಲ್ಲಿ ಶ್ರೇಷ್ಠ ವರ್ಣವಾಗಿರುವ ಯಾವ ಬ್ರಾಹ್ಮಣ ವರ್ಣವು ನಾನೇ ಆಗಿರುವೆನು ।೧೯೧।।

ಪವಿತ್ರ ನದಿಗಳಲ್ಲಿ ಗಂಗಾನದಿಯು ನಾನೇ ಆಗಿರುವೆನು. ಜಲಾಶಯಗಳಲ್ಲಿ ವಿಸ್ತೃತವಾಗಿರುವ ಸಮುದ್ರವೂ ಕೂಡ ನಾನೇ ಆಗಿರುವೆನು ಎಂದು ಶ್ರೀರಂಗನು ಹೇಳಿದನು ।೧೯೨।। ಆಯುಧಗಳಲ್ಲಿ ಮುಖ್ಯ ಆಯುಧವಾಗಿರುವ ಧನುಷ್ಯವು ನಾನಾಗಿರುವೆನು. ತ್ರಿಪುರರನ್ನು ಸಂಹರಿಸಿದ ಶಂಕರನೂ ಕೂಡ ನಾನೇ ಆಗಿರುವೆನು ಎಂದು ಸಾರಂಗಧರನು ಹೇಳಿದನು ।೧೯೩।। ಸಂಪೂರ್ಣ ತ್ರಿಭುವನದ ನಿವಾಸಸ್ಥಾನವಾದ ಮಹಾಮೇರು ಪರ್ವತವು ನಾನೇ ಆಗಿರುವೆನು. ಏರಿ ಹೋಗಲು ಅತ್ಯಂತ ಕಠಿಣವಾಗಿರುವ ಹಿಮಾಲಯವು ನಾನೇ ಎಂದು ಶ್ರೀಕೃಷ್ಣನು ಹೇಳಿದನು ।೧೯೪।। ವೃಕ್ಷಗಳಲ್ಲಿ ಅಶ್ವತ್ಥ ವೃಕ್ಷವು ನಾನೇ ಎಂದು ಶ್ರೀಕೃಷ್ಣನು ಹೇಳಿದನು. ಔಷಧಗಳಲ್ಲಿ ಪ್ರಸಿದ್ಧವಾಗಿರುವ ಯವ (ಬಾರ್ಲಿ) ನಾನೇ ಎಂದು ಅಚ್ಯುತನು ಬಹು ಉಲ್ಹಾಸದಿಂದ ಹೇಳಿದನು ।೧೯೫।।

ಶ್ರೀರಾಮಚಂದ್ರನ ಪುರೋಹಿತ ಮಾಡಿ ಶ್ರೇಷ್ಠ ಪದವಿಯನ್ನು ಪಡೆದ ವಸಿಷ್ಠ ಋಷಿ ನಾನೇ ಆಗಿರುವೆನು. ವೇದವೆತ್ತೇಯರಲ್ಲಿ ಶ್ರೇಷ್ಠನಾಗಿರುವ ದೇವತೆಗವರ ಗುರು ಬ್ರಹಸ್ಪತಿಯು ನಾನೇ ಆಗಿರುವೆನು।೧೯೬।।

ಸ್ಕಂದ ಸೇನಾಪತಿಶಿರೋಮಣೀ । ತೋ ಮೀ ಮ್ಹಣೇ ಚಕ್ರಪಾಣೀ । ಸ್ವಧರ್ಮಪ್ರವರ್ತಕೂ ಅಗ್ರಗಣೀ । ವಂದ್ಯ ಬ್ರಾಹ್ಮಣೀ ತೋ ಬ್ರಹ್ಮಾ ಮೀ ॥೧೯೮॥

ಯಜ್ಞಾನಾಂ ಬ್ರಹ್ಮಯಜ್ಞೋಽಹಂ ವ್ರತಾನಾ ಮವಿಹಿಂಸನಮ್ ।
ವಾಯ್ವಗ್ನ್ಯರ್ಕಾಂಬುವಾಗಾತ್ಮಾ ಶುಚೀನಾಮಪ್ಯಹಂ ಶುಚಿ ॥೨೩॥

ಅರ್ಥ :- ಮಂಚಮಹಾ ಯಜ್ಞಗಳಲ್ಲಿ ಬ್ರಹ್ಮಯಜ್ಞ ನಾನೇ ಆಗಿರುವೆನು. ವ್ರತಗಳಲ್ಲಿ ಅಹಿಂಸಾ ವ್ರತ ನಾನಾಗಿರುವೆನು ಮತ್ತು ಶುದ್ಧಗೊಳಿಸುವ ಪದಾರ್ಥಗಳಲ್ಲಿ ನಿತ್ಯ ಶುದ್ಧ ವಾಯುೂ ನಾನೇ ಆಗಿರುವೆನು. ಅಗ್ನೀ, ಸೂರ್ಯ, ಜಲ, ವಾಣೀ ಮತ್ತು ಆತ್ಮಾ ನಾನಾಗಿರುವೆನು.

ಯಜ್ಞಾಮಾಜೀ ಬ್ರಹ್ಮಯಜ್ಞ । ತೋ ಮೀ ಮ್ಹಣೇ ಸರ್ವಜ್ಞ । ದೇವರ್ಷಿ ಪಿತೃಭೂತಗಣ । ಆಬ್ರಹ್ಮಭುವನ ಜೇಣೇ ತೃಪ್ತ ॥೧೯೯॥ ಜೀವಮಾತ್ರಾಸೀ ಪೈ ಜಾಣ । ನೇದಾವೇ ದುಃಖವಚನ । ವ್ರತಾಮಾಜೀ ಜೇ ಅವಿಹಿಂಸನ । ತೇ ಮೀ ಶ್ರೀಕೃಷ್ಣ ಸ್ವಯೇ ಮ್ಹಣೇ ॥೧೯೯॥ ಏಕಾ ವಾಯೂಚೇನಿ ಪವಿತ್ರಪಣ । ಏಕ ಅಗ್ನೀಸ್ತವ ಪವಿತ್ರ ಜಾಣ । ಏಕಾತೇ ಪವಿತ್ರ ಕರೀ ಜೀವನ । ಏಕ ಪಾವನ ವಚನಮಾತ್ರೇ ॥೨೦೦॥ ಏಕ ಬುದ್ಧೀಸ್ತವ ಪವಿತ್ರ ಜಾಣ । ಯಾ ಸಮಸ್ತಾಮಾಜೀ ಪವಿತ್ರಪಣ । ತೇ ಮಾಝೇ ಸ್ವರೂಪ ಮ್ಹಣೇ ಶ್ರೀಕೃಷ್ಣ । ಪಾವನಾ ಪಾವನ ಮೀ ಏಕ ॥೨೦೧॥ ಜಗ ಮಾಝೇನಿ ನಾಮೇ ಪುನೀತ । ಹೇ ಸರ್ವಾಚೇ ಸಂಮತ । ತ್ಯಾ ಮಾಝೇ ಸ್ವರೂಪ ಜೇ ಯೇಥ । ಪರಮ ಪುನೀತ ಪುನೀತಾ ॥೨೦೨॥

ಯೋಗಾನಾಮಾತ್ಮಸಂರೋಧೋ ಮಂತ್ರೋಽಸ್ಮಿ ವಿಜಿಗೀಷತಾಮ್ ।
ಆನ್ವೀಕ್ಷಿಕೀ ಕೌಶಲಾನಾಂ ವಿಕಲ್ಪಃ ಖ್ಯಾತಿ ವಾದಿ ನಾಮ್ ॥೨೪॥

ಅರ್ಥ :- ಅಷ್ಟಾಂಗ, ಯೋಗಗಳಲ್ಲಿ ಚಿತ್ತ ನಿರೋಧ ರೂಪ ಸಮಾಧೀ ನಾನಾಗಿರುವೆನು. ಶತ್ರುಗಳನ್ನು ಜಯಿಸುವ ಇಚ್ಛೆ ಮಾಡುವ ರಾಜರಲ್ಲಿ ನಾನು ನೀತಿಯಾಗಿರುವೆನು. ವಿವೇಕಗಳಲ್ಲಿನ ನಿಪುಣತೆಯ ಆತ್ಮಾನಾತ್ಮ ವಿದ್ಯೆಯು ನಾನಾಗಿರುವೆನು. ಖ್ಯಾತಿಗಳ ವಿಕಲ್ಪ ಅಂದರೆ ಆಕ್ಷೇಪ ನಾನಾಗಿರುವೆನು.

ವಿವಿಧ ಯೋಗಾಮಾಜೀ ಆತ್ಮರೋಧೂ । ತೋ ಯೋಗ ಮೀ ಮ್ಹಣೇ ಗೋವಿಂದೂ । ಜೇಣೇ ಪ್ರಕಟೇ ಪರಮಾನಂದೂ । ಸಮಾಧಿಬೋಧೂ ಸಾಧಕಾ ॥೨೦೩॥ ಮುಖ್ಯತ್ವೇ ವಿವೇಕ ಧರೋನಿ ಹಾತೀ । ಜೋ ನ್ಯಾಯತಾ ವಿಜಯೋ ವಾಂಛೀ ಚಿತ್ತೀ । ತೇ ನೀತೀಚೀ ಮೀ ಶ್ರೀಪತೀ । ಜಾಣ ನಿಶ್ಚಿತೀ ಉದ್ಧವಾ ॥೨೦೪॥ ಆತ್ಮಾನಾತ್ಮ ವಿವೇಕ ಕೇವಳ । ತೇ ಆನ್ವೀಕ್ಷಿಕೀ ವಿದ್ಯಾ ಕುಶಳ । ತೇ ವಿದ್ಯಾ ಮ್ಹಣೇ ಮೀ ಗೋಪಾಳ । ವಿವೇಕ ಪ್ರಬಳ ಮಾಝೇನಿ ॥೨೦೫॥ ವಾದಾಮಾಜೀ ವಾದ ಅನಂತ । ಜೇಥ ವಿಕಲ್ಪಾ ನಾಹೀ ಅಂತ । ತೋ ವಾದೂ ಮೀ ಮ್ಹಣೇ ಅಚ್ಯುತ । ಏಕ ನಿಶ್ಚಿತ ವಿಕಲ್ಪ ॥೨೦೬॥

ಸರ್ವ ಸೇನಾಪತಿಗಳ ನಾಯಕನಾಗಿರುವ ಕಾರ್ತಿಕ ಸ್ವಾಮಿಯು ನಾನೇ ಆಗಿರುವೆನು. ಸ್ವಧರ್ಮ ಪ್ರವರ್ತಕರಲ್ಲಿ ಮುಖ್ಯ ಬ್ರಾಹ್ಮಣರಿಗೆ ಪೂಜ್ಯನಾಗಿರುವ ಬ್ರಹ್ಮದೇವನು ನಾನೇ ಆಗಿರುವೆನು ॥೧೯೮॥

ದೈವ ಋಷಿ, ಪಿತರರು, ಭೂತಗಣ ಇವರನ್ನೊಳಗೊಂಡ ಆ ಬ್ರಹ್ಮ ಸ್ತಂಭದವರೆಗೆ ಸರ್ವ ಸೃಷ್ಟಿಯು ಯಾವುದರಿಂದ ತೃಪ್ತವಾಗುವುದೋ ಆ ಯಜ್ಞಗಳಲ್ಲಿ ಬ್ರಹ್ಮಯಜ್ಞವು ನಾನಾಗಿರುವೆನು ॥೧೯೯॥ ಯಾವ ಪ್ರಾಣಿಮಾತ್ರರಿಗೆ ಕಾಯಾ, ವಾಚಾ, ಮನದಿಂದ ನೋವು ಕೊಡದ ಶ್ರೇಷ್ಠವಾದ ಅಹಿಂಸವ್ರತವು ನಾನೇ ಆಗಿರುವೆನು ಎಂದು ಶ್ರೀಕೃಷ್ಣನು ಹೇಳಿದನು ॥೧೯೯॥ ಕೆಲವು ವಾಯುವಿನಿಂದ ಪವಿತ್ರವಾಗುವುವು, ಕೆಲವು ಅಗ್ನಿಯಿಂದ ಪವಿತ್ರವಾಗುವುವು, ಕೆಲವು ನೀರಿನಿಂದ ಶುದ್ಧವಾಗುವುವು. ಕೆಲವರು ಕೇವಲ ಮಾತಿನಿಂದ ಪಾವನರಾಗುವರು ॥೨೦೦॥ ಕೆಲವರು ಬುದ್ಧಿಯಿಂದ ಪವಿತ್ರರಾಗುವರು. ಇವು ಎಲ್ಲವೂ ನನ್ನ ಸ್ವರೂಪವು. ಏಕೆಂದರೆ ಪಾವನಗಳಿಗೆ ಪಾವನ ಮಾಡುವವನು ನಾನೊಬ್ಬನೇ ಇರುವನು ॥೨೦೧॥ ನನ್ನ ನಾಮದಿಂದ ಜಗತ್ತು ಪವಿತ್ರವಾಗುವುದು. ಇದು ಎಲ್ಲರಿಗೂ ಸಮ್ಮತವಾಗಿದೆ. ಈ ನನ್ನ ಸ್ವರೂಪವು ಸರ್ವ ಪಾವನಗಳಲ್ಲಿಯೂ ಕೂಡ ಪಾವನವಾಗಿದೆ ॥೨೦೨॥

ಹೇ ಉದ್ಧವಾ, ಯಾವುದರಿಂದ ಸಾಧಕನ ಅಂತಃಕರಣದಲ್ಲಿ ಪರಮಾನಂದವು ನಿರ್ಮಾಣವಾಗುವುದೋ ಮತ್ತು ಸಮಾಧಿಯ ಜ್ಞಾನವು ಪ್ರಾಪ್ತವಾಗುವುದೋ ಆಂತಹ ಚಿತ್ತ ನಿರೋಧ ಯೋಗವು ನಾನೇ ಆಗಿರುವೆನು ಎಂದು ಗೋವಿಂದನು ಹೇಳಿದನು ॥೨೦೩॥ ವಿವೇಕವನ್ನು ಕೈಯಲ್ಲಿ ಹಿಡಿದು ನೀತಿಯಿಂದ ಜಯಪಡೆಯಲು ಯಾರು ಇಚ್ಛಿಸುವರೋ ಆತನ ನೀತಿಯ ನೀತಿಯು ನಾನೇ ಆಗಿರುವೆನು ॥೨೦೪॥ ಕೇವಲ ಆತ್ಮಾನಾತ್ಮಾದ ವಿಚಾರವನ್ನು ಮಾಡುವಂತಹ ಆಧ್ಯಾತ್ಮ ವಿದ್ಯೆಯು ನಾನಾಗಿರುವೆನು. ನನ್ನಿಂದಲೇ ವೀವೇಕವು ಬೆಳೆಯುತ್ತಿರುವುದು ॥೨೦೫॥ ಯಾವುದರಲ್ಲಿ ವಿಕಲ್ಪಕ್ಕೆ ಅಂತವೇ ಇಲ್ಲ, ವಾದಗಳಲ್ಲಿ ಯಾವಾಗಲೂ ನಡೆಯುತ್ತಿರುವ ಯಾವ ವಾದವು ನಾನೇ ಆಗಿರುವೆನು. ಇನ್ನೂ ವಿಕಲ್ಪಗಳು ಯಾವುವು ಎಂಬುದನ್ನು ಕೇಳು ॥೨೦೬॥

ಆಖ್ಯಾತಿ ಅನ್ಯಥಾಖ್ಯಾತೀ । ಶೂನ್ಯಖ್ಯಾತಿ ಸತ್ಖ್ಯಾತೀ । ಅನಿರ್ವಚನೀಯ ಜೇ ಖ್ಯಾತೀ । ತೋ ವಾದೂ ನಿಶ್ಚಿತೀ ಮೀ ಉದ್ಧವಾ ।೨೦೭॥

ಸ್ತ್ರೀಣಾಂ ತು ಶತರೂಪಾಹಂ ಪುಂಸಾಂ ಸ್ವಾಯಂಭುವೋ ಮನುಃ ।
ನಾರಾಯಣೋ ಮುನೀ ನಾಂ ಚ ಕುಮಾರೋ ಬ್ರಹ್ಮ ಚಾರಿಣಾಮ್ ।೨೫॥

ಅರ್ಥ :- ನಾನು ಸ್ತ್ರೀಯರಲ್ಲಿ ಮನುಪತ್ನಿ ಶತರೂಪಾ, ಪುರುಷರಲ್ಲಿ ಸ್ವಾಯಂಭುವ ಮನೂ, ಮುನೀಶ್ವರರಲ್ಲಿ ನಾರಾಯಣ ಮತ್ತು ಬ್ರಹ್ಮ ಚರ್ಯೇರಲ್ಲಿ ಸನತಕುಮಾರನು.

ಶತರೂಪಾ ಆಣಿ ಮನೂ । ಇಯೇ ದೋನೀ ಮೀ ಮ್ಹಣೇ ಜನಾರ್ದನೂ । ಮುನೀಮಾಜೀ ಮೀ ನಾರಾಯಣೂ । ಬದರೀ ಸೇವುನೂ ಸದಾ ಅಸೇ ।೨೦೮॥ ನೈಷ್ಠಿಕ ಬ್ರಹ್ಮ ಚರ್ಯಧರ । ಮಾಝೇ ಸ್ವರೂಪ ಸನತ್ಕುಮಾರ । ಸ್ವಯೇ ಸಾಂಗ ತಾಹೇ ಶ್ರೀಧರ । ಜಾಣ ಸಾಚಾರ ಉದ್ಧವಾ ।೨೦೯॥

ಧರ್ಮಾಣಾಮಸ್ಮಿ ಸನ್ಯಾಸ : ಕ್ಷೇಮಾಣಾಮಬಹಿರ್ಮತಿಃ ।
ಗುಹ್ಯಾನಾಂ ಸೂನೃತಂ ಮೌನಂ ಮಿಥುನಾನಾಮಜಸ್ತ್ವಹಮ್ ।೨೬॥

ಅರ್ಥ :- ಧರ್ಮದಲ್ಲಿನ ತತ್ವಗಳಲ್ಲಿ ಸನ್ಯಾಸಾಶ್ರಮವಾಗಿದ್ದೇನೆ. ಎಲ್ಲ ಬಗೆಯ ಭದ್ರತೆಗಳಲ್ಲಿ ಶಾಶ್ವತ ಆತ್ಮದೊಳಗಿನ ಪ್ರಜ್ಞೆಯಾಗಿದ್ದೇನೆ. ರಹಸ್ಯಗಳಲ್ಲಿ ಮಧುರ ವಚನ ಮತ್ತು ಮೌನನಾಗಿದ್ದೇನೆ. ಸ್ತ್ರೀ-ಪುರುಷರ ಮಿಥುನದಲ್ಲಿ ಪ್ರಜಾಪತಿ ನಾನಾಗಿದ್ದೇನೆ.

ಭೂತಾ ಅಭಯದಾನಉಪಕ್ರಮೂ । ಸರ್ವಾಭೂತೀ ಮೀ ಆತ್ಮಾರಾಮೂ । ಹಾ ಸನ್ಯಾಸಾಚಾ ಮುಖ್ಯ ಧರ್ಮು । ತೋ ಧರ್ಮ ಪುರುಷೋತ್ತಮೂ ಸ್ವಯೇ ಮೀ ಮ್ಹಣೇ ।೨೧೦॥ ಭೂತಾಂಸೀ ಕಾಯಾ ವಾಚಾ ಮನೇ । ದುಃಖ ನೇದೂನಿ ಸುಖ ದೇಣೇ । ಯಾ ನಾಂವ ಸನ್ಯಾಸಧರ್ಮ ಮ್ಹಣಣೇ । ತೋ ಧರ್ಮ ಮೀ ಮ್ಹಣೇ ಗೋವಿಂದ ।೨೧೧॥ ಅಂತರೀ ಶುದ್ಧ ನಾಹೀ ಬೋಧ । ದಾಂತ ಚಾವೋನಿ ಸಾಹತಾ ದ್ವಂದ್ವ । ತೇ ಕ್ಷಮಾ ನೋಹೇ ಶುದ್ಧ । ಐಕ ವಿನೋದ ಕ್ಷಮೇಚಾ ।೨೧೨॥ ಅಂತರೀ ಠಸಾವಲೇ ಪರಬ್ರಹ್ಮ । ಬಾಹ್ಯ ಸರ್ವಾಭೂತೀ ಜಾಹಲಾ ಸಮ । ತೇ ಕ್ಷಮಾ ಮೀ ಮ್ಹಣೇ ಪುರುಷೋತ್ತಮ । ದ್ವಂದ್ವಾರಾಮ ಬಾಧೀನಾ ।೨೧೩॥ ಅಸತ್ಯ ಪಾಪೀ ಸಕಳ ಸೃಷ್ಟೀ । ಅಸತ್ಯಾಮಾಜೀ ಪಾಪಕೋಟೀ । ಅಸತ್ಯಾಚೀ ಖೋಟೀ ಗೋಠೀ । ಜೋ ತೋ ಪೋಟೀ ಸಾಂಡೀನಾ ।೨೧೪॥ ಉಭಯ ಲೌಕಿಕೀ ಖೋಟೇಪಣೇ । ಅಸತ್ಯ ಬಹಿರ್ಮುಖ ನಾಣೇ । ತೇ ಮನೀಹೂನಿ ಜೇಣೇ ಸಾಂಡಣೇ । ತೋ ಮ್ಯಾ ಶ್ರೀಕೃಷ್ಣೇ ವಂದಿಜೇ ।೨೧೫॥ ತೇ ಗುಹ್ಯಾಮಾಜೀ ಅತಿಗುಹ್ಯ ಜಾಣ । ಸತ್ಯ ವಾಚಾ ಕಾ ಮನೀಹೂನಿ ಮೌನ । ತೇ ಮೀ ಮ್ಹಣೇ ಮಧುಸೂದನ । ಸತ್ಯಪ್ರಿಯ ಜಾಣ ನಿಜಗುಹ್ಯ ।೨೧೬॥

ಹೇ ಉದ್ಧವಾ, ಆಖ್ಯಾತೀ, ಅನನ್ಯ ಖ್ಯಾತೀ, ಶೂನ್ಯಖ್ಯಾತೀ ಸತ್‌ಖ್ಯಾತೀ ಮತ್ತು ಅನಿರ್ವಚನೀಯವಾಗಿರುವ ಯಾವ ಖ್ಯಾತಿಯ ವಾದವೂ ಕೂಡ ನಿಜವಾಗಿ ನಾನೇ ಆಗಿರುವೆನೆಂದು ನಿಶ್ಚಯವಾಗಿ ತಿಳಿ ।೨೦೭॥ ಶತರೂಪಾ ಮತ್ತು ಮನು ಈ ಈರ್ವರೂ ನಾನೇ ಆಗಿರುವೆನು. ಯಾವಾಗಲೂ ಬದರಿಕಾಶ್ರಮದಲ್ಲಿ ಇರುವ ಮುನಿಗಳವರಲ್ಲಿ ನಾರಾಯಣನು ನಾನೇ ಆಗಿರುವೆನು ।೨೦೮॥ ಹೇ ಉದ್ಧವನೇ, ಶ್ರೇಷ್ಠ ನೈಷ್ಠಿಕ ಬ್ರಹ್ಮಚರ್ಯವನ್ನು ಧರಿಸುವ ಆ ಯಾವ ಸನತ್ಕುಮಾರನು ನಾನೇ ಆಗಿರುವೆನು ।೨೦೯॥

ಸರ್ವಪ್ರಾಣಿಮಾತ್ರರಲ್ಲಿರುವ ಆತ್ಮವು ನಾನಾಗಿರುವೆನು. ಇದನ್ನು ತಿಳಿದು ಸರ್ವ ಪ್ರಾಣಿಗಳಿಗೆ ಕಾಯಾ, ವಾಚಾ, ಮನದಿಂದ ಅಭಯವನ್ನು ಕೊಡುವುದು ಇದುವೇ ಸನ್ಯಾಸದ ಮುಖ್ಯ ಧರ್ಮವಾಗಿರುವುದು. ಆ ಧರ್ಮವು ಸ್ವತಃ ನಾನೇ ಆಗಿರುವೆನು. ಹೀಗೆ ಪುರಷೋತ್ತಮನು ಹೇಳಿದನು ।೨೧೦॥ ಯಾವುದೇ ಪ್ರಾಣಿಗಳಿಗೆ ದುಃಖವನ್ನು ಕೊಡದೇ ಸುಖವನ್ನು ಕೊಡುವುದಕ್ಕೆ ಮಾತ್ರ ಸನ್ಯಾಸ ಧರ್ಮವೆಂದು ಹೇಳುವರು. ಆ ಧರ್ಮವು ಗೋವಿಂದನಾದ ನಾನೇ ಆಗಿರುವೆನು।೨೧೧॥ ಅಂತಃಕರಣದಲ್ಲಿ ಶುದ್ಧವಾದ ಜ್ಞಾನವು ಆಗಿರುವುದಿಲ್ಲ. ತುಟಿ ಹಲ್ಲು ಕಡಿಯುತ್ತ ಸುಖದುಃಖಗಳನ್ನು ಸಹಿಸುವನು. ಇದು ಆತನ ಶುದ್ಧ ಕ್ಷಮೆಯಾಗಿರುವುದಿಲ್ಲ. ಇದು ಕ್ಷಮೆಯ ಒಂದು ತರಹದ ಚೇಷ್ಟೆಯಾಗಿರುವುದು. ಈಗ ಕ್ಷಮೆಯ ಸ್ವರೂಪವನ್ನು ಕೇಳು ।೨೧೨॥ ಯಾರ ಅಂತಃಕರಣದಲ್ಲಿ ಪರಬ್ರಹ್ಮವು ದೃಢವಾಗಿ ನಟ್ಟಿಕೊಂಡಿರುವುದು ಮತ್ತು ಹೊರಗೆ ಸರ್ವ ಭೂತಗಳವರಲ್ಲಿ ಸಮನಾಗಿರುವುದು, ಎಲ್ಲರಲ್ಲಿಯೂ ಪ್ರೇಮದಿಂದ ವರ್ತಿಸುವುದು. ಹೀಗಿರುವ ಯಾವ ವೃತ್ತಿಯು ಕ್ಷಮೆಯಾಗಿರುವುದು. ಈ ಕ್ಷಮೆಯು ನಾನಾಗಿರುವೆನು. ಹೀಗೆ ಕ್ಷಮೆಯು ಯಾರಲ್ಲಿರುವುದೋ, ಅವರಿಗೆ ದ್ವಂದ್ವವು ಬಾಧಿಸುವುದಿಲ್ಲ ।೨೧೩॥ ಜಗತ್ತಿನಲ್ಲಿ ಎಲ್ಲರೂ ಅಸತ್ಯವಾದಿ ಮನುಷ್ಯರು ಪಾತಕೀಗಳಾಗಿರುವರು. ಅಸತ್ಯದಲ್ಲಿ ಕೋಟ್ಯಾವಧಿ ಪ್ರಕಾರದ ಪಾತಕಗಳು ತುಂಬಿರುವುವು. ಅಸತ್ಯದ ಮಾತುಗಳು ಬಹಳ ಕೆಟ್ಟದ್ದಾಗಿರುವುವು. ಇದನ್ನು ಯಾರೂ ಮನದಲ್ಲಿ ಹಚ್ಚಿಕೊಳ್ಳುವುದಿಲ್ಲ ।೨೧೪॥ ಬಹಿರ್ಮತಿಯಾಗಿರುವುದು ಇಹಲೋಕದಲ್ಲಿ ಪರಲೋಕದಲ್ಲಿ ಖೊಟ್ಟಿ ನಾಣ್ಯದಂತೆಯೇ ಸರಿ. ಇದನ್ನು ಮನಃಪೂರ್ವಕವಾಗಿ ಯಾರು ಬಿಡುವರೋ, ಅವರನ್ನು ಶ್ರೀಕೃಷ್ಣನಾದ ನಾನು ವರ್ಣಿಸುತ್ತಿರುವೆನು ।೨೧೫॥ ಸತ್ಯವಾಗಿ ಮಾತನಾಡುವುದು ಅಥವಾ ಮನಃಪೂರ್ವಕವಾಗಿ ಮೌನವನ್ನು ಧರಿಸುವುದು ಇದುವೇ ಗುಹ್ಯದಲ್ಲಿನ ಅತಿ ಗುಹ್ಯಯಾಗಿರುವುದು. ಆ ಗುಹ್ಯವು ನಾನಾಗಿರುವೆನು. ಏಕೆಂದರೆ ಸತ್ಯಪ್ರಿಯತ್ವವು ಇದೇ ನನ್ನ ಗುಹ್ಯಯಾಗಿರುವುದು ।೨೧೬॥

ಸೃಷ್ಟ್ಯಾಚೇ ದೇಹ ದ್ವಿಧಾ ಜಾಣ । ಮನು ಶತರೂಪಾ ಮೂಳಮಿಥುನ । ತೇ ಮೀ ಮ್ಹಣೇ ನಾರಾಯಣ । ಮನುಷ್ಯಸೃಜನ ಸದ್ಭಾವೇ ॥೨೧೭॥

ಸಂವತ್ಸರೋಽಸ್ಮ್ಯ ನಿಮಿಷಾಮೃತೂನಾಂ ಮಧುಮಾಧವೌ
ಮಾಸಾನಾಂ ಮಾರ್ಗಶೀರ್ಷೋಽಹಂ ನಕ್ಷತ್ರಾಣಾಂ ತಥಾಽಭಿಜಿತ್ ॥೨೭॥

ಅರ್ಥ :- ಜಾಗೃತ ಕಾಲಚಕ್ರದಲ್ಲಿ ನಾನು ಸಂವತ್ಸರನು, ಋತುಗಳಲ್ಲಿ ವಸಂತ ಋತು ನಾನು, ಮಾಸಗಳಲ್ಲಿ ಮಾರ್ಗಶೀರ್ಷ ನಾನು ಮತ್ತು ನಕ್ಷತ್ರಗಳಲ್ಲಿ ಅಭಿಜಿತ್ ಮೂಹುರ್ತವು ನಾನು.

ಸಾವಧಾನೇ ಅವಿಕಳ । ನ ಚುಕತಾ ಪಳೇ ಪಳ । ಸಂವತ್ಸರಾತ್ಮಕ ಜೋ ಕಾಳ । ತೋ ಮೀ ಗೋಪಾಳ ಸ್ವಯೇ ಮ್ಹಣೇ ॥೨೧೮॥ ತ್ರಸರೇಣೂಪಾಸೋನಿ ಜಾಣ । ಲವನಿಮಿಷದಿನಮಾನ । ಸಂವತ್ಸರವರೀ ಸಾವಧಾನ । ಗಣೀ ಮೀ ಸಂಕರ್ಷಣ ಕಾಳಗಣನಾ ॥೨೧೯॥ ಮಧುಮಾಧವಸಂತಯುಕ್ತೂ । ಕೃಷ್ಣ ಮ್ಹಣೇ ತೋ ಮೀ ಋತೂ । ಮಾರ್ಗಶೀರ್ಷ ಮೀ ಮಾಸಾ ಆಂತೂ । ಧಾನ್ಯಪಾಕಯುಕ್ತೂ ಆಲ್ಹಾದೀ ॥೨೨೦॥ ಗಣಿತಾ ನ ಯೇ ಪಂಚಾಂಗಾಂತ । ನಕ್ಷತ್ರೀ ಅಸೋನಿ ಸದಾ ಗುಪ್ತ । ಅವ್ಯಕ್ತ ಪರೀ ಸಜ್ಞಾನಾ ಪ್ರಾಪ್ತ । ತೇ ಮೀ ಅಭಿಜಿತ್ ಮ್ಹಣೇ ಹರೀ ॥೨೨೧॥

ಅಹಂ ಯುಗಾನಾಂ ಚ ಕೃತ್ಯಂ ಧೀರಣಾಂ ದೇವಲೋಽಸಿತಃ ।
ದ್ವೈಪಾಯನೋಽಸ್ಮಿ ವ್ಯಾಸಾನಾಂ ಕವೀನಾಂ ಕಾವ್ಯ ಆತ್ಮವಾನ್ ॥೨೮॥

ಅರ್ಥ :- ಯುಗಗಳಲ್ಲಿ ಕೃತಯುಗ ನಾನು, ಬುದ್ಧಿಮಾನರಲ್ಲಿ ದೇವಲ ಅಸಿತ್ ನಾನು, ವ್ಯಾಸರಲ್ಲಿ ಶ್ರೀಕೃಷ್ಣ-ದ್ವೈಪಾಯನ ವ್ಯಾಸ ಹಾಗೂ ಕವಿಗಳಲ್ಲಿ ಮನಸ್ವಿ ಶುಕಾಚಾರ್ಯ ನಾನು.

ಯುಗಾಮಾಜೀ ಕೃತಯುಗ । ತೇ ಮೀ ಮ್ಹಣೇ ಶ್ರೀರಂಗ । ತೇಥ ಸಂಪೂರ್ಣ ಧರ್ಮ ಸಾಂಗ । ಅಧರ್ಮಭಾಗ ಅಸೇನಾ ॥೨೨೨॥ ನಿಜಧೈರ್ಯ ಅತಿಅದ್ಭುತ । ಅಸಿತ ದೇವಲ ಧೈರ್ಯವಂತ । ತೋ ಮೀ ಮ್ಹಣೇ ಗಾ ಅಚ್ಯುತ । ಜಾಣ ನಿಶ್ಚಿತ ಉದ್ಧವಾ ॥೨೨೩॥ ವೇದವಿಭಾಗೀ ರಾಜಹಂಸ । ಜೋ ಕಾ ದ್ವೈಪಾಯನ ವ್ಯಾಸ । ತೋ ಮೀ ಮ್ಹಣೇ ಹೃಷೀಕೇಶ । ನಿವಡೂನಿ ದ್ವಿಜಾಂಸ ದೀಧಲೇ ವೇದ ॥೨೨೪॥ ಕವಿ ತ್ಯಾಮಾಜೀ ಪರಮಾರ್ಥಜ್ಞಾತಾ । ಉಶನಾ ಕವಿ ಜಾಣ ತತ್ತ್ವತಾ । ತೋ ಮೀ ಮ್ಹಣೇ ರಮಾಭರ್ತಾ । ನಿಜಾತ್ಮಕವಿತಾ ಮೀ ಶುಕ್ರ ॥೨೨೫॥

ವಾಸುದೇವೋ ಭಗವತಾಂ ತ್ವಂತು ಭಾಗವತೇಷ್ವಹಮ್ । ಕಿಂಪುರುಷಾಣಾಂ ಹನುಮಾನ್ವಿದ್ಯಾಧ್ರಾಣಾಂ ಸುದರ್ಶನಃ ॥೨೯॥

ಅರ್ಥ :- ಭಗವಾನ್ ಎಂಬ ಹೆಸರಿಗೆ ಹಕ್ಕುದಾರರಾದವರಲ್ಲಿ ನಾನು ವಾಸುದೇವನು. ಉದ್ಧವನಾದ ನೀನು ದಿಟವಾಗಿಯೂ ಭಕ್ತರಲ್ಲಿ ನನ್ನ ಪ್ರತಿನಿಧಿ. ಕಿಂಪುರುಷರಲ್ಲಿ ನಾನು ಹನುಮಂತನು. ವಿದ್ಯಾಧರರಲ್ಲಿ ಸುದರ್ಶನ ನಾನು.

ಬ್ರಹ್ಮದೇವರ ದೇಹವು ಮನೂ ಮತ್ತು ಶತರೂಪಾ ಇವರ ಜೋಡಿಯು ಪ್ರಪ್ರಥಮವಾಗಿ ಎರಡು ಭಾಗಗಳಲ್ಲಿ ಆಗಿತ್ತು. ಏಕನಿಷ್ಠೆಯಿಂದ ಮನುಷ್ಯ ಸೃಷ್ಟಿಯನ್ನು ಉತ್ಪನ್ನಗೊಳಿಸುವ ಮನು ನಾನೇ ಆಗಿರುವೆನೆಂದು ನಾರಾಯಣನು ಹೇಳಿದನು॥೨೧೭॥

ಒಂದು ನಿಮಿಷವೂ ಕೂಡ ತಪ್ಪಾಗದಂತೆ ಸತತವಾಗಿ ಅತ್ಯಂತ ಜಾಗೃತನಾಗಿರುವ ಯಾವ ಸಂವತ್ಸರಾತ್ಮಕ ಕಾಲನು ನಾನಾಗಿರುವೆನು ಎಂದು ಶ್ರೀಕೃಷ್ಣನು ಹೇಳಿದನು ॥೨೧೮॥ ಸೂರ್ಯ ಕಿರಣಗಳಿಂದ ಕಾಣಿಸುವ ಸೂಕ್ಷ್ಮ ಪರಮಾಣೂ ಆಗಿರುವ ತ್ರಸರೇಣುವಿನಿಂದ ಹಿಡಿದು ಕ್ಷಣ, ನಿಮಿಷ, ಘಳಿಗೆ ಪ್ರಹರ, ದಿವಸ ಇತ್ಯಾದಿ ಸಂವತ್ಸರದವರೆಗೆ ಜಾಗೃತದಿಂದ ಕಾಲಗಣನೆಯನ್ನು ಮಾಡುವವ ನಾನು ಸಂಕರ್ಷಣನಾಗಿರುವೆನು ॥೨೧೯॥ ಚೈತ್ರ ವೈಶಾಖಗಳಿಂದ ಕೂಡಿರುವ ವಸಂತಋತು ನಾನೇ ಆಗಿರುವೆನು, ಧಾನ್ಯಗಳನ್ನು ಬೆಳೆಸುವ ಮತ್ತು ಆನಂದವನ್ನು ಕೊಡುವ ಆಹ್ಲಾದಕರ ಮಾಸಗಳಲ್ಲಿ ಮಾರ್ಗಶೀರ್ಷ ಮಾಸವು ನಾನಾಗಿರುವೆನು॥೨೨೦॥ ಗಣಿತದಿಂದ ಪಂಚಾಂಗದಲ್ಲಿ ದೊರಕಲಾಗದ, ನಕ್ಷತ್ರಗಳಲ್ಲಿದ್ದೂ ಕೂಡ ಗುಪ್ತವಾಗಿರುವ, ಅದೃಶ್ಯವಾಗಿದ್ದರೂ ಸಹ ಯಾವ ಸೂಜ್ಞ ಜನರಿಗೆ ಪ್ರಾಪ್ತವಾಗುವ , ಆ ಯಾವ ಅಭಿಜಿತ್ ನಕ್ಷತ್ರವು ನಾನಾಗಿರುವೆನು ॥೨೨೧॥

ಯಾವ ಯುಗದಲ್ಲಿ ಸರ್ವಧರ್ಮಗಳು ಪೂರ್ಣವಾಗಿರುವುವೋ, ಅಧರ್ಮದ ಲವಲೇಶವೂ ಕೂಡ ಇರುವುದಿಲ್ಲವೋ, ಈ ಪ್ರಕಾರದ ಕೃತಯುಗವು ನಾನಾಗಿರುವೆನು ಎಂದು ಶ್ರೀರಂಗನು ಹೇಳಿದನು ॥೨೨೨॥ ಹೇ ಉದ್ಧವಾ , ಸರ್ವ ಪ್ರಕಾರದ ಧೈರ್ಯಗಳಲ್ಲಿ ಆತ್ಮಧೈರ್ಯವು ಬಹು ವಿಲಕ್ಷಣವಾಗಿರುವುದು. ಇಂತಹ ಪರಮ ಧೈರ್ಯಶಾಲೀಯಾಗಿರುವ ಅಸಿತ ಮತ್ತು ದೇವಲ ಇವರು ನಾನೇ ಆಗಿರುವೆನೆಂದು ನಿಶ್ಚಯವಾಗಿ ತಿಳಿ ಎಂದು ಅಚ್ಯುತನು ಹೇಳಿದನು ॥೨೨೩॥ ವೇದವಿಭಾಗವನ್ನು ಮಾಡುವುದರಲ್ಲಿ ರಾಜಹಂಸನೇ ಆಗಿರುವ, ವೇದಗಳನ್ನು ಆರಿಸಿ ಅವುಗಳನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟಿರುವ ಆ ಯಾವ ದ್ವೈಪಾಯನ ವ್ಯಾಸನು ನಾನೇ ಆಗಿರುವೆನು ॥೨೨೪॥ ಕವಿಗಳವರಲ್ಲಿ ನಿಜವಾಗಿಯೂ ಪರಮಾರ್ಥ ಜ್ಞಾನಿಯಾದ ಉಶನಾ ಅಂದರೆ ಶುಕಾಚಾರ್ಯ ಕವಿಯು ನಾನಾಗಿರುವೆನು. ಈತನು ಸಾಕ್ಷಾತ ಆತ್ಮಸ್ವರೂಪ ಜ್ಞಾನವೇ ಆಗಿರುವನು ॥೨೨೫॥

ಷಡ್‌ಗುಣಭಾಗ್ಯೇ ಭಾಗ್ಯವಂತ । ಪೂರ್ಣಾಂಶೇ ಜೋ ಭಗವಂತ । ವಾಸುದೇವನಾಮೇ ವಿಖ್ಯಾತ । ಜಾಣ ತೋ ಮೀ ಯೇಥ ಶ್ರೀಕೃಷ್ಣ ।।೨೨೬।। ಭಾಗವತಾಮಾಜೀ ಅತಿಗಹನ । ಉದ್ಧವಾ ತೂ ತೋ ಮೀಚಿ ಜಾಣ । ಐಸೇ ಬೋಲತಾ ಶ್ರೀಕೃಷ್ಣ । ಉದ್ಧವೇ ಶ್ರೀಚರಣ ವಂದಿಲೇ ।।೨೨೭।। ಉದ್ಧವೇ ಕರಿತಾ ನಮನ । ಕೃಷ್ಣೇ ದೀಧಲೇ ಆಲಿಂಗನ । ಆನಂದೇ ಕೋಂದಲೇ ತ್ರಿಭುವನ । ಸ್ವಾನಂದಘನ ತುಷ್ಟಲಾ ।।೨೨೮।। ಉದ್ಧವ ಆಣಿ ಶ್ರೀಕೃಷ್ಣ । ದೋನೀ ಏಕ ಜಾಹಲೇ ಜಾಣ । ''ಮೀ ತೋ ತೂ '' ಜೇ ಬೋಲಿಲಾ ಶ್ರೀಕೃಷ್ಣ । ತೇ ಉದ್ಧವಾಸೀ ಆಪಣ ಸತ್ಯತ್ವೇ ದಾವೀ ।।೨೨೯।। ದೋಘಾಚೇ ಮೋಡಲೇ ದೋನೀಪಣ । ಉದ್ಧವ ಜಾಹಲಾ ಶ್ರೀಕೃಷ್ಣ । ಕೃಷ್ಣಾ ಅಂಗೀ ಉದ್ಧವಪಣ । ಸಂಪೂರ್ಣ ಜಾಣ ಬಾಣಲೇ ।।೨೩೦।। ತೇಣೇ ಉದ್ಧವ ಝಾಲಾ ವಿಸ್ಮಿತ । ನಾವೇಕ ಶ್ಲಾಘಲಾ ಆಪಣಾಂತ । ಮೀಚ ಕೃಷ್ಣಾಚಾ ಪ್ರಿಯ ಭಕ್ತ । ಹೇ ಜಾಣೋನಿ ಅನಂತ ಬೋಲಿಲಾ ।।೨೩೧।। ವಾನರಾಮಾಜೀ ಹನುಮಂತ । ತೋ ಮೀ ಮ್ಹಣೇ ಕೃಷ್ಣನಾಥ । ತಂವ ಉದ್ಧವ ಜಾಹಲಾ ಗರ್ವಹತ । ಲಾಜಲಾ ಪೋಟಾಂತ ತೇ ಕಾಳೀ ।।೨೩೨।। ಜೇಥ ವಾನರ ಆಣಿ ವನಚರ । ಮಜಹೂನಿ ಕೃಷ್ಣಾಚೇ ಪ್ರಿಯಕರ । ನ ಕಳೇ ಹರಿ ಭಕ್ತಾಂಚಾ ಪಾರ । ಮೀ ಕೋಣ ಕಿಂಕರ ತೇ ಠಾಯೀ ।।೨೩೩।। ಐಸೇ ವಿಚಾರೂನಿ ಚಿತ್ತಾ । ಸವೇಂಚೀ ನಮಿಲೇ ಕೃಷ್ಣನಾಥಾ । ತುಝ್ಯಾ ವಿಭೂತಿ ಅಚುಂಬಿತಾ । ಕೃಪೇನೇ ತತ್ತ್ವತಾ ಮಜ ಸಾಂಗ ।।೨೩೪।। ತಂವ ಹಾಂಸೋನಿ ಶ್ರೀಧರ । ಕಾಯ ಬೋಲಿಲಾ ಉತ್ತರ । ಸುದರ್ಶನ ಜೋ ವಿದ್ಯಾಧರ । ತೋ ವಿಭೂತಿ ಸಾಚಾರ ಪೈ ಮಾಝೀ ।।೨೩೫।।

ರತ್ನಾನಾಂ ಪದ್ಮರಾಗೋಽಸ್ಮಿ ಪದ್ಮಕೋಶಃಸುಪೇಶಸಾಮ್ ।
ಕುಶೋಽಸ್ಮಿ ದರ್ಭಜಾತೀನಾಂ ಗವ್ಯಮಾಜ್ಯಂ ಹವಿಷ್ವಹಮ್ ।।೩೦।।

ಅರ್ಥ :- ರತ್ನಗಳಲ್ಲಿ ಪದ್ಮರಾಗ, ಸುಂದರ ವಸ್ತುಗಳಲ್ಲಿ ಕಮಲದ ಕಾಂತಿ, ತೃಣಗಳಲ್ಲಿ ಕುಶ, ಹವಿಸ್ಸುಗಳಲ್ಲಿ ಆಕಳ ತುಪ್ಪ ನಾನಾಗಿರುವೆನು.

ರತ್ನಮಾಜೀ ಜೋ ಪದ್ಮರಾಗ । ತೋ ಮೀ ಮ್ಹಣೇ ಶ್ರೀರಂಗ । ಮನೋಹರಾಮಾಜೀ ಅವ್ಯಂಗ । ಹರಿ ಮ್ಹಣೇ ಸಾಂಗ ಪದ್ಮಕಳಾ ತೋ ಮೀ ।।೨೩೬।। ದಶದರ್ಭಾಮಾಝಾರೀ । ಕುಶ ತೋ ಮೀ ಮ್ಹಣೇ ಶ್ರೀಹರೀ । ಸಕಳ ಹವಿಷಾಂಚ್ಯಾ ಶಿರೀ । ಗೋ ಘೃತ ಶ್ರೀಹರಿ ಸ್ವಯೇ ಮೀ ಮ್ಹಣೇ ।।೨೩೭।।

ವ್ಯವಸಾಯಿನಾಮಹಂ ಲಕ್ಷ್ಮೀಃ ಕಿತವಾನಾಂ ಛಲಗ್ರಹಃ । ತಿತಿಕ್ಷಾಽಸ್ಮಿ ತಿತಿಕ್ಷೂಣಾಂ ಸತ್ತ್ವಂ ಸತ್ತ್ವವತಾಮಹಮ್ ।।೩೧।।

ಅರ್ಥ :- ಉದ್ಯೋಗ ಪುರುಷರಲ್ಲಿ ಧನಾದಿ ಸಂಪತ್ತು ನಾನಾಗಿರುವೆನು. ಜೀಡೆ, ಕಪಟ ಮಾಡುವ ಮನುಷ್ಯರಲ್ಲಿ ಜೂಜು ನಾನಾಗಿರುವೆನು. ತಿತಿಕ್ಷಾವಂತರಲ್ಲಿ ಸಹನಶೀಲತೆ ನಾನಾಗಿರುವೆನು. ಸಾತ್ವಿಕ ಪುರುಷರಲ್ಲಿರುವ ಸತ್ವಗುಣವು ನಾನಾಗಿರುವೆನು.

ಷಡ್‌ಗುಣ ಐಶ್ವರ್ಯ ಸಂಪನ್ನ, ಪೂರ್ಣಾಂಶದಿಂದ ಅವತಾರವನ್ನು ಧರಿಸಿರುವ, ವಾಸುದೇವ ಎಂಬ ನಾಮದಿಂದ ಪ್ರಸಿದ್ಧವಾಗಿರುವ ಭಗವಾನನು ನಾನೇ ಇಲ್ಲಿ ಶ್ರೀಕೃಷ್ಣರೂಪದಿಂದ ಇದ್ದೇನೆ ।।೨೨೬।। ಹೇ ಉದ್ಧವಾ, ಭಗವತ್ ಭಕ್ತರಲ್ಲಿ ಶ್ರೇಷ್ಠನಾಗಿರುವ ನೀನೂ ಕೂಡ ನಾನೇ ಆಗಿರುವೆನು. ಇದನ್ನು ನೀನು ನಿಶ್ಚಿತವಾಗಿ ಲಕ್ಷದಲ್ಲಿಡು. ಹೀಗೆ ಶ್ರೀಕೃಷ್ಣನು ಹೇಳುತ್ತಲೇ ಉದ್ಧವನು ಆತನ ಚರಣಗಳಿಗೆ ವಂದಿಸಿದನು ।।೨೨೭।। ಉದ್ಧವನು ನಮಸ್ಕರಿಸುತ್ತಿರಲು ಆಗ ಶ್ರೀಕೃಷ್ಣನು ಪ್ರೇಮದಿಂದ ಆತನನ್ನು ಆಲಿಂಗಿಸಿದನು. ಇದರಿಂದ ತ್ರೈಲೋಕ್ಯದಲ್ಲಿ ಆನಂದವು ತುಂಬಿ ತುಳುಕಿತು. ಸ್ವಾನಂದಘನ ಶ್ರೀಕೃಷ್ಣನು ಸಂತುಷ್ಟನಾದನು ।।೨೨೮।। ಉದ್ಧವ ಮತ್ತು ಶ್ರೀಕೃಷ್ಣ ಈರ್ವರೂ ಏಕರೂಪರಾದರು. ''ನಾನೇ ನೀನು'' ಎಂದು ಹೇಳಿದ್ದನ್ನು ಶ್ರೀಕೃಷ್ಣನು ಪ್ರತ್ಯಕ್ಷವಾಗಿ ನಿಜಮಾಡಿ ತೋರಿಸಿದನು ।।೨೨೯।। ಈ ಈರ್ವರ ದ್ವೈತವು ಸಂಪೂರ್ಣವಾಗಿ ನಷ್ಟವಾಯಿತು. ಉದ್ಧವನು ಶ್ರೀಕೃಷ್ಣನಾದನು, ಶ್ರೀಕೃಷ್ಣನ ಅಂಗದಲ್ಲಿ ಉದ್ಧವನು ಪೂರ್ಣವಾಗಿ ಬಿಂಬಿಸಿದನು ।।೨೩೦।। ಆದ್ದರಿಂದ ಉದ್ಧವನು ಆಶ್ಚರ್ಯಚಕಿತನಾದನು. ನಾನೇ ಶ್ರೀಕೃಷ್ಣನ ಪ್ರಿಯ ಭಕ್ತನೆಂದು ಮನದಲ್ಲಿಯೇ ತನ್ನನ್ನು ಹೊಗಳಿಕೊಂಡನು. ಈ ಅಭಿಮಾನವನ್ನು ಕಂಡು ಶ್ರೀಕೃಷ್ಣನು ಹೀಗೆ ನುಡಿದನು ।।೨೩೧।। ವಾನರರಲ್ಲಿ ಆ ಯಾವ ಭಕ್ತಶ್ರೇಷ್ಠ ಹನುಮಂತನು ನಾನೇ ಆಗಿರುವೆನು. ಈ ಯಾವ ಶ್ರೀಕೃಷ್ಣನ ಶಬ್ದವನ್ನು ಕೇಳುತ್ತಲೇ ಉದ್ಧವನ ಗರ್ವವು ನಷ್ಟವಾಯಿತು. ಹಾಗೆಯೇ ಆತನು ತನ್ನ ಮನದಲ್ಲಿಯೇ ಲಜ್ಜಿತನಾದನು ।।೨೩೨।। ಕಾರಣ ಕಪಿಗಳು ಮತ್ತು ವನಚರರೂ ಕೂಡ ನನಗಿಂತಲೂ ಪ್ರಿಯಕರ ಭಕ್ತರಾದರು. ಇಲ್ಲಿ ಹರಿಭಕ್ತರ ಯೋಗ್ಯತೆ ತಿಳಿಯುವುದು. ಅತ್ಯಂತ ಕಠಿಣವಾಗಿರುವುದು. ನನ್ನಂತಹ ಕಿಂಕರನ ಯಾವ ಪಾಡು? ।।೨೩೩।। ಹೀಗೆ ಮನದಲ್ಲಿ ವಿಚಾರವನ್ನು ಮಾಡಿ ಉದ್ಧವನು ಕೂಡಲೇ ಶ್ರೀಕೃಷ್ಣನಿಗೆ ನಮಸ್ಕರಿಸಿದನು. ಮತ್ತು ಹೀಗೆ ಹೇಳಿದನು; ಹೇ ಶ್ರೀಕೃಷ್ಣನೇ , ನಿಜವಾಗಿ ನಿನ್ನ ವಿಭೂತಿಗಳನ್ನು ಕೃಪೆ ಮಾಡಿ ನನಗೆ ಹೇಳು ।।೨೩೪।। ಆಗ ಶ್ರೀಕೃಷ್ಣನು ನಗುತ್ತ ಹೀಗೆ ಹೇಳಿದನು; ಯಾವ ವಿದ್ಯಾಧರ ಸುದರ್ಶನವು ನಿಜವಾಗಿಯೂ ನನ್ನದೇ ವಿಭೂತಿಯಾಗಿರುವುದು ।।೨೩೫।।

ರತ್ನಗಳಲ್ಲಿ ಪದ್ಮರಾಗ ರತ್ನವು ನಾನೇ ಆಗಿರುವೆನು. ನಯನ ರಮ್ಯ ವಸ್ತುಗಳಲ್ಲಿ ಅತ್ಯಂತ ನಿರ್ದೋಷಿಯಾಗಿರುವ ಕಮಲದ ಕಾಂತಿಯು ನಾನಾಗಿರುವೆನು ।।೨೩೬।। ಹತ್ತು ಪ್ರಕಾರದ ದರ್ಭಗಳಲ್ಲಿ ಕುಶ ಎನ್ನುವುದು ನಾನಾಗಿರುವೆನು. ಹೋಮ ದ್ರವ್ಯಗಳಲ್ಲಿ ಅಗ್ರಗಣ್ಯವಾದ ಆಕಳ ತುಪ್ಪವು ನಾನಾಗಿರುವೆನು ।।೨೩೭।।

ವ್ಯವಸಾಯಾಚೇ ವ್ಯವಸ್ಥಿತೀ । ದಾನಯುಕ್ತ ಅತಿಸಂಪತ್ತೀ । ತೇ ಲಕ್ಷ್ಮೀ ಮೀ ಮ್ಹಣೇ ಶ್ರೀಪತೀ । ಜಾಣ ನಿಶ್ಚಿತೀ ಉದ್ಧವಾ ॥೨೩೮॥ ಕಪಟಾಚಿಯೇ ಕಪಟಗತೀ । ಅಗಮ್ಯ ಜೇ ಛಳಣಸ್ಥಿತೀ । ತೋ ಮೀ ಕೃಷ್ಣ ಮಾಯಿಕ ಮೂರ್ತೀ । ಅತರ್ಕ್ಯ ಯುಕ್ತೀ ಛಳಣಾಚೀ ॥೨೩೯॥ ಬ್ರಹ್ಮಾಚೇ ಅಂಗೀ ನಿಜಜೀವಿತಾ । ಜೀವಾಸೀ ಬ್ರಹ್ಮಸಾಯುಜ್ಯತಾ । ತ್ಯಾ ಕಪಟಾಚಾ ಮೀಚಿ ಕರ್ತಾ । ದೇವಾದೇವತಾ ಅತರ್ಕ್ಯ ॥೨೪೦॥ ಆಮ್ಹೀ ಮಾಯಾನಿಯಂತೇ ಮ್ಹಣವಿತೀ । ತೋ ಶಿವೂ ಠಕಿಲಾ ಮೋಹಿನೀ ಪ್ರತೀ । ಬ್ರಹ್ಮ ಠಕಿಲಾ ವತ್ಸಹರಣಾರ್ಥೀ । ಠಕಡಾ ನಿಶ್ಚಿತೀ ಮೀ ಏಕೂ ॥೨೪೧॥ ಸಹನಶೀಳೀ ಸಹನಶಕ್ತೀ । ತೇ ಮೀ ಮ್ಹಣೇ ಕಮಳಾಪತೀ । ಸಾತ್ವಿಕಾಂಚೀ ನಿಜಸತ್ವವೃತ್ತೀ । ತೇ ಮೀ ಶ್ರೀಪತೀ ಸ್ವಯೇ ಮ್ಹಣೇ ॥೨೪೨॥

ಓಜಃಸಹೋ ಬಲವತಾಂ ಕರ್ಮಾಹಂ ವಿದ್ಧಿ ಸಾತ್ತ್ವತಾಮ್ ।
ಸಾತ್ತ್ವತಾ ನವ ಮೂರ್ತೀ ನಾಮಾದಿ ಮೂರ್ತಿರಹಂ ಪರ : ॥೩೨॥

ಅರ್ಥ :- ನಾನು ಬಲವಂತರಲ್ಲಿ ಉತ್ಸಾಹ ಹಾಗೂ ಪರಾಕ್ರಮನಾಗಿರುವೆನು. ಭಗವದ್ಭಕ್ತರಲ್ಲಿ ಭಕ್ತಿಯುಕ್ತ ನಿಷ್ಕಾಮ ಕರ್ಮನಾಗಿರುವೆನು. ವೈಷ್ಣವರಲ್ಲಿ ಪೂಜ್ಯವಾಗಿರುವ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ , ಅನಿರುದ್ಧ, ನಾರಾಯಣ, ಹಯಗ್ರೀವ, ವರಾಹ, ನೃಸಿಂಹ ಮತ್ತು ವಾಮನ ಈ ಒಂಬತ್ತು ಮೂರ್ತಿಗಳಲ್ಲಿ ಮೊದಲನೇ ಶ್ರೇಷ್ಠಮೂರ್ತಿ ವಾಸುದೇವ ನಾನಾಗಿರುವೆನು.

ಬಳವಂತಾಚ್ಯಾ ಠಾಯೀ ಪ್ರಬಳ । ಮನೋಬಳ ಶರೀರಬಳ । ಧೈರ್ಯಬಳ ತೇ ಮೀ ಗೋಪಾಳ । ಜೇಣೇ ಅಳುಮಾಳ ಡಂಡಳೀನಾ ॥೨೪೩॥ ಭಕ್ತಾಂಚ್ಯಾ ಠಾಯೀ ಭಜನಕರ್ಮ । ಜೇಣೇ ಮಾಝೇ ಅನಿವಾರ ಪ್ರೇಮ । ತೇ ಕರ್ಮ ಮ್ಹಣೇ ಮೀ ಪುರುಷೋತ್ತಮ । ಭಕ್ತಕಾಮನಿರ್ದಳಣೂ ॥೨೪೪॥ ನವವ್ಯೂಹ ಅರ್ಚನಸ್ಥಿತೀ । ಸಾತ್ವತಾಜ್ಯಾ ನವಮೂರ್ತೀ । ತ್ಯಾಂತ ವಾಸುದೇವ ಪ್ರಥಮಸ್ಥಿತೀ । ಏಕ ವ್ಯುತ್ಪತ್ತೀ ನವಾಂಚೀ ॥೨೪೫॥ ವಾಸುದೇವ ಸಂಕರ್ಷಣ । ಅನಿರುದ್ಧ ಆಣಿ ಪ್ರದ್ಯುಮ್ನ । ಹಯಗ್ರೀವ ನಾರಾಯಣ । ವರಾಹ ವಾಮನ ನರಸಿಂಹ ॥೨೪೬॥ ಹೇ ನವವ್ಯೂಹಾಂಚೀ ವ್ಯುತ್ಪತ್ತೀ । ಯಾಮಾಜೀ ಮೀ ಪ್ರಥಮ ಮೂರ್ತೀ । ಯೇರ ಆಠಹೀ ಮಾಝ್ಯಾ ವಿಭೂತೀ । ಜಾಣ ನಿಶ್ಚಿತೀ ಉದ್ಧವಾ ॥ ೨೪೭॥ ಹಯಗ್ರೀವ ವೇದಮೂರ್ತೀ । ತೇಥೇ ಶ್ರೀವ್ಯಾಸೇ ಕರೂನಿ ಭಕ್ತೀ । ವೇದವ್ಯಾಸಪದಪ್ರಾಪ್ತೀ । ಹೇ ಕೇಲೀ ಖ್ಯಾತೀ ತೀಹೀ ಲೋಕೀ ॥೨೪೮॥

ಹೇ ಉದ್ಧವನೇ, ವ್ಯಾಪಾರ, ಉದ್ಯೋಗ ಧಂದೆಗಳನ್ನು ಮಾಡಲು ಸಾಧನವಾಗಿರುವ ಮತ್ತು ಇತರರಿಗೆ ದಾನವನ್ನು ಕೊಡಲು ಅಪರಂಪಾರ ಸಂಪತ್ತು ಲಕ್ಷ್ಮೀ ನಾನೇ ಆಗಿರುವೆನು. ಇದನ್ನು ಲಕ್ಷದಲ್ಲಿಡು ॥೨೩೮॥ ಕಪಟಗಳಲ್ಲಿ ಯಾವ ಕಪಟಯುಕ್ತ, ಪೀಡೆಕೊಡುವ ಅಗಮ್ಯಯುಕ್ತೀ, ಹೀಗಿರುವ ಯಾವ ಮಾಯೆಯ ಮೂರ್ತಿಯೂ ಕೂಡ ನಾನೇ ಶ್ರೀಕೃಷ್ಣನಾಗಿರುವೆನು. ನನ್ನ ಪೀಡಿಸುವಿಕೆಯ ಯುಕ್ತಿಯು ಕೇವಲ ಅತರ್ಕ್ಯವಾಗಿರುವುದು. ॥೨೩೯॥ ಪರಬ್ರಹ್ಮನಲ್ಲಿ ಜೀವದ ಕಲ್ಪನೆಯು ಮತ್ತು ಜೀವದ ಬ್ರಹ್ಮಸ್ವರೂಪದಲ್ಲಿ ಐಕ್ಯವು, ಈ ಕಪಟದ ಕರ್ತನೂ ಕೂಡ ನಾನೇ ಆಗಿರುವೆನು. ಈ ಕಪಟತನವು ದೇವಾದೇವತೆಗಳಿಗೂ ಸಹ ಅತರ್ಕ್ಯವಾಗಿರುವುದು ॥೨೪೦॥ ಬ್ರಹ್ಮದೇವನು ಮತ್ತು ಶಂಕರನು, ಇವರು ನಾವು ಮಾಯೆಯ ನಿಯಂತ್ರಕರೆಂದು ಹೇಳುವರು. ಆದರೆ ಅದೇ ಶಂಕರನಿಗೆ ನಾನು ಮೋಹಿನೀ ದರ್ಶನದಿಂದ ಮೋಸಗೊಳಿಸಿದೆ. ಬ್ರಹ್ಮದೇವನಿಗೆ ಆಕಳು, ಕರುಗಳನ್ನು ಕದ್ದು ಒಯ್ಯುವಾಗ ಮೋಸಗೊಳಿಸಿದೆ. ಹೀಗೆ ಇಬ್ಬರಿಗೂ ಮೋಸ ಮಾಡಿದವ ನಾನೇ ಆಗಿರುವೆನು ॥೨೪೧॥ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಹೀಗೆ ಹೇಳಿದನು; ಸಹನ ಶೀಲತೆಗಳಲ್ಲಿ ಸಹನಶಕ್ತಿ ಎಂದುಕರೆಯುವುದು, ಅದು ನಾನಾಗಿರುವೆನು. ಸಾತ್ವಿಕ ಜನರ ಮೂಲವಾದ ಸತ್ವ ಪ್ರವೃತ್ತಿಯು ಅದೂ ಕೂಡ ನಾನೇ ಆಗಿರುವೆನು ॥೨೪೨॥

ಬಲವಂತರಲ್ಲಿ ಅತ್ಯಂತ ಪ್ರಬಲವಾಗಿರುವ ಮನೋಬಲ, ಶರೀರ ಬಲ, ಮತ್ತು ಧೈರ್ಯಬಲವಿದ್ದು ಯಾವುದರಿಂದ ಯತ್ಕಿಂಚಿತವೂ ಹೊಯದಾಟವಾಗದ ಆ ಯಾವ ಧೈರ್ಯವು ನಾನಾಗಿರುವೆನು ॥೨೪೩॥ ಯಾವುದರಿಂದ ನನ್ನಲ್ಲಿ ನಿಃಸ್ವಾರ್ಥ ಪ್ರೇಮವು ಅತಿಶಯವಾಗಿ ಬೆಳೆಯುವುದೋ ಮತ್ತು ಭಕ್ತರ ಕಾಮನೆಯ ನಾಶವಾಗುವುದೋ, ಅಂತಹ ಭಕ್ತರಲ್ಲಿ ಭಜನೆಯು ನಾನೇ ಆಗಿರುವೆನು ॥೨೪೪॥ ಭಕ್ತರಿಗೆ ಪೂಜಾವಿಧಿಗಾಗಿ ಒಂಬತ್ತು ಪ್ರಕಾರದ ಮೂರ್ತಿಗಳಾಗಿರುವುವು. ಅವುಗಳಲ್ಲಿ ನನ್ನ ವಾಸುದೇವ ಮೂರ್ತಿಯು ಪ್ರಥಮವಾಗಿರುವುದು. ಈಗ ಈ ಒಂಬತ್ತು ಮೂರ್ತಿಗಳ ಪ್ರತಿಪಾದನೆಯನ್ನು ಕೇಳು ॥೨೪೫॥ ವಾಸುದೇವ, ಸಂಕರ್ಷಣ, ಅನಿರುದ್ಧ , ಪ್ರದ್ಯುಮ್ನ, ಹಯಗ್ರೀವ, ನಾರಾಯಣ, ವರಾಹ, ವಾಮನ ಮತ್ತು ನರಸಿಂಹ ಹೀಗೆ ಒಂಬತ್ತು ಮೂರ್ತಿಗಳಾಗಿರುವುವು ॥೨೪೬॥ ಈಗ ಯಾವ ಒಂಬತ್ತು ಮೂರ್ತಿಗಲ್ಲಿರುವ ಮೊದಲನೆಯ ಮೂರ್ತಿಯು ನಾನಿರುವೆನು. ಹೇ ಉದ್ಧವಾ, ಉಳಿದ ಎಂಟು ಮೂರ್ತಿಗಳ ಬಗ್ಗೆ ವಿಚಾರಿಸಿ ನೋಡಲು ಅವು ಕೂಡ ನನ್ನದೇ ವಿಭೂತಿಗಳಾಗಿರುವುವು ॥೨೪೭॥ ಹಯಗ್ರೀವ ಇದು ವೇದದ ಮೂರ್ತಿಯಾಗಿರುವುದು. ಈ ಮೂರ್ತಿಯ ಭಕ್ತಿಯನ್ನು ವ್ಯಾಸರು ಮಾಡಿದ್ದರಿಂದ ಅವರಿಗೆ ''ವೇದವ್ಯಾಸ'' ಎಂದು ಪದವಿಯು ಪ್ರಾಪ್ತವಾಯಿತು. ಇದರಿಂದ ಅವರ ಕೀರ್ತಿಯು ಮೂರು ಲೋಕಗಳಲ್ಲಿಯೂ ಅಜರಾಮರವಾಯಿತು ॥೨೪೮॥

ನಾರಾಯಣ ನಿಜಮೂರ್ತೀ । ಸೃಷ್ಟ್ಯಾನೇ ಕರೂನಿ ತ್ಯಾಚೀ ಭಕ್ತೀ । ಚತುಃಶ್ಲೋಕೀ ಜ್ಞಾನಸ್ಥಿತೀ । ಪಾವೋನ ನಿಶ್ಚಿತೀ ಬ್ರಹ್ಮತ್ವಾ ಆಲಾ ॥೨೪೯॥ ಶ್ವೇತವರಾಹ ಮಹಾಮೂರ್ತೀ । ಧರೇನೇ ಕೇಲೀ ಪೂರ್ಣ ಭಕ್ತೀ । ತೀಸ ಉದ್ಧರೂನಿ ಕೃಪಾಮೂರ್ತೀ । ಅಭಿನವ ಶಾಂತೀ ಅರ್ಪಿಲೀ ॥೨೫೦॥ ಮಾಝೀ ನಿಜಮೂರ್ತಿ ವಾಮನ । ದೇವೀ ಕರೂನಿ ಪೂರ್ಣ ಭಜನ । ತ್ಯಾಂಚ್ಯಾ ಛಳೇ ಬಳೀ ಬಾಂಧೋನ । ದೇವಾಂಚಾ ಸನ್ಮಾನ ಸ್ವಾಧಿಕಾರ ಕೇಲಾ ॥೨೫೧॥ ನರಹರಿ ದಿವ್ಯಮೂರ್ತೀ । ಪ್ರಹ್ಲಾದೇ ಕರೂನಿ ಅನನ್ಯಭಕ್ತೀ । ಮೀ ಸರ್ವಾತ್ಮಾ ಸರ್ವಾ ಭೂತೀ । ಹೇ ಲೋಕಪ್ರತೀತೀ ವಿಶ್ವಾಸಿಲೀ ಜೇಣೇ ॥೨೫೨॥ ಸಂಕರ್ಷಣ ಶ್ರೇಷ್ಠ ಮೂರ್ತೀ । ಬ್ರಹ್ಮಾಜ್ಞಾ ರೈವತೇ ಕೇಲೀ ಭಕ್ತೀ । ಅರ್ಪುನಿಯಾ ರೇವತೀ । ಸ್ವಾನಂದಸ್ಥಿತೀ ನಿವಾಲಾ ॥೨೫೩॥ ಪ್ರದ್ಯುಮ್ನ ಕಾಮಮೂರ್ತೀ । ಸಕಾಮ ಕಾಮುಕೀ ಕರೂನಿಯಾ ಭಕ್ತೀ । ಜೇ ಜೇ ಕಾಮ ವಾಂಛಿತೀ । ತೇ ತೇ ನಿಶ್ಚಿತೀ ತೋ ಪುರವೀ ॥೨೫೪॥ ಅನಿರುದ್ಧ ಮಾಝಾ ನಿಜಸಖಾ । ಶಿವಾಜ್ಞಾ ಭಕ್ತಿ ಕೇಲೀ ಉಖಾ । ಬಾಣಾಸುರ ತಾರಿಲಾ ದೇಖಾ । ಸಾಹ್ಯ ಚಿತ್ರರೇಖಾ ನಾರದಾಜ್ಞಾ ॥೨೫೫॥ ಪೂರ್ಣಾಂಶೇ ಬ್ರಹ್ಮಸ್ಥಿತೀ । ವಾಸುದೇವ ಮೀ ಆದಿಮೂರ್ತೀ । ಲೀಲೇನೇ ನೇಣೋ ಕಿತೀ । ತೇಥೀಲ ನಿಜಭಕ್ತೀ ಉದ್ಧವಾರ್ಜುನೀ ನಾಂದೇ ॥೨೫೬॥ ನವ ಭಕ್ತಿ ನವ ಮೂರ್ತೀ । ತೇಥೀಲ ಭಕ್ತೀಚೀ ಸ್ಥಿತೀ । ಉದ್ಧವಾ ಮ್ಯಾ ತುಜಪ್ರತೀ । ಯಥಾರ್ಥ ಗತೀ ಸಾಂಗಿತಲೀ ॥೨೫೭॥

ವಿಶ್ವಾವಸುಃ ಪೂರ್ವಚಿತ್ತಿರ್ಗಂಧರ್ವಾಪ್ಸರ ಸಾಮಹಮ್ ।
ಭೂಧರಾಣಾಮಹ ಸ್ಥೈರ್ಯಂ ಗಂಧಮಾತ್ರಮಹಂ ಭುವಃ ॥೩೩॥

ಅರ್ಥ :- ಗಂಧರ್ವರಲ್ಲಿ ವಿಶ್ವಾವಸು, ಅಪ್ಸರೆಯಲ್ಲಿ ಬ್ರಹ್ಮದೇವನ ದರಬಾರದಲ್ಲಿನ ಪೂರ್ವಚಿತ್ತಿ ಅಪ್ಸರಾ, ಪರ್ವತಗಳಲ್ಲಿ ಸ್ಥೈರ್ಯ, ಪೃಥ್ವಿಯ ಶುದ್ಧವಾದ ಅವಿಕಾರೀ ಗಂಧವು ನಾನಾಗಿರುವೆನು.

ಜ್ಯಾಚೇ ಗಾಯನ ಅತಿಅಪೂರ್ವ । ಜೋ ವಿಶ್ವಾವಸೂ ಗಂಧರ್ವ । ತೋ ಮೀ ಮ್ಹಣೇ ಮಾಧವ । ಐಕೇ ಉದ್ಧವ ಸಾವಧ ॥೨೫೮॥ ನೃತ್ಯ ಕರೂನಿ ಮನೋಹರಾ । ಸಬಾಹ್ಯ ಸದ್ಭಾವೇ ಸುಂದರಾ । ಪೂರ್ವಚಿತ್ತೀ ಜೇ ಅಪ್ಸರಾ । ತೇ ಮೀ ಮ್ಹಣೇ ಸೋವರಾ ಭೀಮಕೀಚಾ ॥೨೫೯॥ ಪರ್ವತಾಮಾಜೀ ಜೇ ''ಸ್ಥೈರ್ಯಪಣ'' । ತೇ ಮೀ ಮ್ಹಣೇ ನಾರಾಯಣ । ಪೃಥ್ವೀಮಾಜೀ ಜೋ ''ಗಂಧ'' ಜಾಣ । ತೋ ಮೀ ಶ್ರೀಕೃಷ್ಣ ಸ್ವಯೇ ಮ್ಹಣೇ ॥೨೬೦॥

ನಾರಾಯಣ ಮೂರ್ತಿಯು ನನ್ನ ಸ್ವರೂಪದ ಮೂರ್ತಿಯಾಗಿರುವುದು. ಬ್ರಹ್ಮ ದೇವನು ಈತನ ಭಕ್ತಿಯನ್ನು ಮಾಡಿ ಚತುಃಶ್ಲೋಕಗಳಿಂದ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡನು. ಇದರಿಂದ ಆತನು ನಿಜವಾಗಿ ಬ್ರಹ್ಮ ಪದವಿಯನ್ನು ಮುಟ್ಟಿಕೊಂಡನು ॥೨೪೯॥ ಶ್ವೇತ ವರಾಹ ಈ ಮಹಾಮೂರ್ತಿಯ ಪೂರ್ಣ ಭಕ್ತಿಯನ್ನು ಪೃಥ್ವಿಯು ಮಾಡಿದಳು. ಆದ್ದರಿಂದ ಆ ಯಾವ ಕೃಪಾಮೂರ್ತಿಯು ಆಕೆಯನ್ನು ಉದ್ಧರಿಸಿ ಪೂರ್ಣ ಶಾಂತಿಯನ್ನು ಪ್ರದಾನಮಾಡಿತು ॥೨೫೦॥ ವಾಮನ ಮೂರ್ತಿಯೂ ಕೂಡ ನನ್ನ ಮೂರ್ತಿಯೇ ಆಗಿರುವುದು. ದೇವತೆಗಳು ಆತನ ಭಜನೆಯನ್ನು ಮಾಡುತ್ತಲೇ ಮೂರ್ತಿಯು ಪ್ರಸನ್ನವಾಗಿ ದೇವತೆಗಳವರಿಗೆ ಪೀಡಿಸುತ್ತಿರುವ ಬಲಿಚಕ್ರವರ್ತಿಯನ್ನು ಆತನು ಕಟ್ಟಿಹಾಕಿದನು. ದೇವತೆಗಳವರಿಗೆ ಅವರ ಅಧಿಕಾರವನ್ನು ಕೊಟ್ಟು ಅವರನ್ನು ಸನ್ಮಾನಿಸಿದನು ॥೨೫೧॥ ನರಹರಿ ಮೂರ್ತಿಯು ಇದೊಂದು ದಿವ್ಯಮೂರ್ತಿಯಾಗಿರುವುದು. ಪ್ರಹ್ಲಾದನು ಈ ಮೂರ್ತಿಯ ಏಕನಿಷ್ಠೆ ಭಾವದಿಂದ ಭಕ್ತಿಯನ್ನು ಮಾಡಿದನು. ಇದರಿಂದ ನನಗೆ ಪ್ರಸನ್ನನನ್ನಾಗಿ ಮಾಡಿದನು ಮತ್ತು ನಾನು ಸರ್ವಭೂತಗಳಲ್ಲಿರುವ ಸರ್ವಾತ್ಮಾನಾಗಿರುವೆ ಎಂಬುವ ಪ್ರತ್ಯಕ್ಷ ಅನುಭವವನ್ನು ಸರ್ವರಿಗೆ ತೋರಿಸಿಕೊಟ್ಟನು ॥೨೫೨॥ ಬ್ರಹ್ಮದೇವನ ಆಜ್ಞೆಯಿಂದ ಸಂಕರ್ಷಣ ಶ್ರೇಷ್ಠಮೂರ್ತಿಯ ಭಕ್ತಿಯನ್ನು ರೈವತಕ ಪರ್ವತವು ಮಾಡಿತು. ಸಂಕರ್ಷಣ ಎಂದರೆ ಬಲರಾಮನು. ರೈವತಕನು ತನ್ನ ಮಗಳಾದ ರೇವತಿಯನ್ನು ಆತನಿಗೆ ಅರ್ಪಿಸಿ ಆತನು ಆತ್ಮಾನಂದಾನುಭವದಿಂದ ತೃಪ್ತನಾದನು ॥೨೫೩॥ ಸಕಾಮ ಕಾಮ ಪುರುಷರು ಪ್ರದ್ಯುಮ್ನನ ಕಾಮಮೂರ್ತಿಯ ಭಕ್ತಿಯನ್ನು ಮಾಡಿ ಪ್ರಸನ್ನಗೊಳಿಸುವರು. ಆದ್ದರಿಂದ ಆತನು ಅವರವರ ಕಾಮನೆಗಳನ್ನು ನಿಶ್ಚಯವಾಗಿ ಪೂರೈಸುವನು ॥೨೫೪॥ ಅನಿರುದ್ಧನು ನನ್ನ ಅತ್ಯಂತ ಜೀವದ ಸಖನಾಗಿರುವನು. ಶಿವನ ಆಜ್ಞೆ ಮೇರೆಗೆ ಉಷೆಯು ಆತನ ಭಕ್ತಿಯನ್ನು ಮಾಡಿ ಬಾಣಾಸುರನ ಉದ್ಧಾರ ಮಾಡಿದಳು. ನಾರದನ ಆಜ್ಞೆಯಿಂದ ಚಿತ್ರಲೇಖೆಯು ಆಕೆಗೆ ಸಹಾಯಮಾಡಿದಳು ॥೨೫೫॥ ಬ್ರಹ್ಮ ಸ್ವರೂಪದ ಆದಿಮೂರ್ತಿ ನಾನು ವಾಸುದೇವನಾಗಿರುವೆನು. ನನ್ನ ಸಹಜ ಲೀಲೆಯಿಂದ ಅದೆಷ್ಟು ಜನರ ಉದ್ಧಾರವನ್ನು ಮಾಡಿರುವೆನೋ ಅದರ ಗಣತವೇ ಇಲ್ಲ. ಈ ಅವತಾರದ ನನ್ನ ಭಕ್ತಿಯು ಅರ್ಜುನ ಮತ್ತು ಉದ್ಧವರಲ್ಲಿ ವಿಶೇಷವಾಗಿರುವುದು ॥೨೫೬॥ ಹೇ ಉದ್ಧವಾ ಈ ಪ್ರಕಾರವಾಗಿ ಒಂಬತ್ತು ಪ್ರಕಾರದ ಭಕ್ತಿ, ಒಂಬತ್ತು ಪ್ರಕಾರದ ಮೂರ್ತಿ ಮತ್ತು ಆ ಭಕ್ತಿಗಳ ಪ್ರಕಾರವನ್ನು ನಾನು ಯಥಾರ್ಥವಾಗಿ ನಿನಗೆ ಹೇಳಿದೆನು ॥೨೫೭॥ ಯಾರ ಗಾಯನವು ಅತ್ಯಂತ ಅಪೂರ್ವವಾಗಿರುವ ವಿಶ್ವಾವಸೂ ನಾಮದ ಗಂಧರ್ವನು ನಾನಾಗಿರುವೆನು ಎಂದು ಮಾಧವನು ಹೇಳಿದ್ದನ್ನು ಉದ್ಧವನು ಲಕ್ಷ ಕೊಟ್ಟು ಕೇಳಿದನು ॥೨೫೮॥ ತಾಳ ತಕ್ಕಂತೆ ನೀಟಾಗಿ ನೃತ್ಯ ಮಾಡುವ, ಸುಸ್ವಭಾವದ, ಅಂತರಬಾಹ್ಯವಾಗಿ ಸುಂದರವಾಗಿಕಾಣುವ ಮತ್ತು ಮನವನ್ನು ಮೋಹಿತಗೊಳಿಸುವ ''ಪೂರ್ವಚಿತ್ತೀ'' ನಾಮದ ಅಪ್ಸರೆಯು ನಾನಾಗಿರುವೆನು ಎಂದು ರುಕ್ಮಿಣೀ ಪತಿ ಶ್ರೀಕೃಷ್ಣನು ಹೇಳಿದನು ॥೨೫೯॥ ಪರ್ವತದಲ್ಲಿನ ಸ್ಥಿರತೆಯು ನಾನೇ ಆಗಿರುವೆನು. ಪೃಥ್ವಿಯಲ್ಲಿನ ಯಾವ ಗಂಧವೂ ಕೂಡ ನಾನೇ ಆಗಿರುವೆನು ॥೨೬೦॥

ಅಪಾಂ ರಸಶ್ಚ ಪರಮಸ್ತೇಜಿಷ್ಠಾನಾಂ ವಿಭಾವಸುಃ । ಪ್ರಭಾ ಸೂರ್ಯೇಂದು ತಾರಾಣಾಂ ಶಬ್ದೋऽಹಂ ನಭಸಃ ಪರಃ ।೩೪॥

ಅರ್ಥ :- ಜಲದಲ್ಲಿ ರಸ, ತೇಜಸ್ವಿಗಳಲ್ಲಿ ಪರಮ ತೇಜಸ್ವೀ ಅಗ್ನಿ, ಸೂರ್ಯ, ಚಂದ್ರ, ನಕ್ಷತ್ರಗಳ ಪ್ರಭೇ, ಆಕಾಶದ ಪರಾ ನಾಮದ ಶಬ್ದವು ನಾನೇ ಆಗಿರುವೆನು.

ಉದಕಾಚ್ಯಾ ಠಾಯೀ ''ರಸ'' ಸುರಸು । ತೋ ಮೀ ಮ್ಹಣೇ ಶ್ರೀನಿವಾಸು । ತೇಜಿಷ್ಠಾ ಮಾಜೀ-ಜೋ ''ಪ್ರಕಾಶು'' । ತೋ ಮೀ ನಿಜತೇಜಸು ಉದ್ಧವಾ ।೨೬೧॥ ಚಂದ್ರಸೂರ್ಯತಾರಾಂಚ್ಯಾ ಠಾಯೀ । ಜೇ ''ತೇಜ'' ತೇ ಮಾಝೇ ಪಾಹೀ । ''ಅನಾಹತಶಬ್ದ'' ತೋ ಮಿಹೀ । ಜೋ ಗಗನಾಸೀ ಕಂಹೀ ನಾತಳೇ ।೨೬೨॥

ಬ್ರಹ್ಮಣ್ಯಾನಾಂ ಬಲಿರಹಂ ವೀರಾಣಾಮಹಮರ್ಜುನಃ । ಭೂತಾನಾಂ ಸ್ಥಿತಿರುತ್ಪತ್ತಿರಹಂ ವೈ ಪ್ರತಿ ಸಂಕ್ರಮಃ ।೩೫॥

ಅರ್ಥ :- ಬ್ರಾಹ್ಮಣ ಭಕ್ತರಲ್ಲಿ ಬಳಿ, ವೀರರಲ್ಲಿ ಅರ್ಜುನ ಮತ್ತು ಪ್ರಾಣಿ ಮಾತ್ರರ ಉತ್ಪತ್ತೀ, ಸ್ಥಿತೀ ಮತ್ತು ಪ್ರಳಯ ನಾನಾಗಿರುವೆನು.

ಬ್ರಾಹ್ಮಣ ಭಜನೀ ''ಬಳೀ'' ಚೀ ಥೋರೀ । ತೋಮೀ ಕೃಷ್ಣ ಮ್ಹಣೇ ನಿರ್ಧಾರೀ । ಬ್ರಾಹ್ಮಣ ಭಜನ ಪ್ರತಾಪೇ ಕರೀ । ಮೀ ಬಳೀಚ್ಯಾ ದ್ವಾರೀ ದ್ವಾರಪಾಳು ।೨೬೩॥ ನರಾವತಾರೇ ಅತಿ ಸಂಪನ್ನ । ಪಾಂಡವಾಮಾಜೀ ವೀರ ''ಅರ್ಜುನ'' । ತೋ ಮೀ ಮ್ಹಣೇ ನಾರಾಯಣ । ಜೀವಪ್ರಾಣ ತೋ ಮಾಝಾ ।೨೬೪॥ ಭೂತಾಂಚೀ ''ಉತ್ಪತ್ತೀ-ಸ್ಥಿತೀ'' । ತೇ ಮೀ ಮ್ಹಣೇ ಶ್ರೀಪತೀ । ಭೂತಾಂಸೀ ಜೇ ''ಪ್ರಳಯಗತೀ'' । ತೇಹೀ ಮೀ ನಿಶ್ಚಿತೀ ಉದ್ಧವಾ ।೨೬೫॥

ಗತ್ಯುಕ್ತ್ಯುತ್ಸರ್ಗೋಪಾದಾನಮಾನಂದ ಸ್ಪರ್ಶಲಕ್ಷಣಮ್ । ಆಸ್ವಾದ ಶ್ರುತ್ಯವ ಘ್ರಾಣಮಹಂ ಸರ್ವೇಂದ್ರಿಯೇಂದ್ರಿಯಮ್ ।೩೬॥

ಅರ್ಥ :- ಕಾಲುಗಳ ನಡೆಯುವ ಶಕ್ತಿ, ವಾಣಿಯಲ್ಲಿನ ಮಾತನಾಡುವ ಶಕ್ತಿ, ಹೊಟ್ಟೆಯಲ್ಲಿ ಮಲತ್ಯಾಗದ ಶಕ್ತಿ ,ಕೈಯಲ್ಲಿ ಹಿಡಿಯುವ ಶಕ್ತಿ, ಜನನೇಂದ್ರಿಯದಲ್ಲಿ ಆನಂದದ ಉಪಭೋಗ ಪಡೆಯುವ ಶಕ್ತಿ, ಚರ್ಮದಲ್ಲಿ ಸ್ಪರ್ಶಜ್ಞಾನ, ನೇತ್ರಗಳಲ್ಲಿ ದರ್ಶನ, ರಸಗಳಲ್ಲಿ ಸ್ವಾದ, ಕಿವಿಗಳಲ್ಲಿ ಶ್ರವಣ ಮತ್ತು ಮೂಗಿನಲ್ಲಿ ವಾಸನೆ ತೆಗೆದುಕೊಳ್ಳುವ ಶಕ್ತಿ. ಈ ಸರ್ವವೂ ನಾನೇ ಆಗಿರುವೆನು. ಸರ್ವ ಇಂದ್ರಿಯಗಳ ಇಂದ್ರಿಯ ಶಕ್ತಿಯು ನಾನೇ ಆಗಿರುವೆನು.

ಜ್ಞಾನ-ಕರ್ಮ ಉಭಯ ಇಂದ್ರಿಯೇ । ತ್ಯಾ ಇಂದ್ರಿಯಾಂಚೇ ಮೀ ಇಂದ್ರಿಯ ಪಾಹೇ । ತ್ಯಾಂಚೀ ಕ್ರಿಯಾ ಜೇ ಜೇ ಆಹೇ । ತೇ ಮಾಝೇನಿ ಹೋಯೇ ಅಭಿವ್ಯಕ್ತ ।೨೬೬॥ ''ಗತಿ-ಗ್ರಹಣ-ಗಮನ'' । ''ಉತ್ಸರ್ಗ'' ಆಣಿ ''ಮೋಹನ'' । ''ದರ್ಶನ'' ''ಸ್ಪರ್ಶನ'' ''ಘ್ರಾಣ'' । ''ಶ್ರವಣ'' ''ಸ್ವಾದನ'' ಮಾಝೇನೀ ।೨೬೭॥ ತೇ ಇಂದ್ರಿಯಕ್ರಿಯೇಚೇ ಚಲನ । ತಿಳಭರೀ ನವ್ಹೇ ಮಜವೀಣ । ಏಕ ತ್ಯಾಚೇಹೀ ಲಕ್ಷಣ । ತುಜ ಮೀ ಸಂಪೂರ್ಣ ಸಾಂಗೇನ ।೨೬೮॥ ಮೀ ಮನಾಚೇಹೀ ''ಮಹಾಮನ'' । ನಯನಾಚೇಹೀ ''ನಯನ'' । ಸ್ಪರ್ಶಾಚೇಹೀ ''ಸ್ಪರ್ಶನ'' । ಜಿವ್ಹೇಚೇ ಜಾಣ ''ನಿಜಜಿವ್ಹಾ'' ।೨೬೯॥

ಜಲದಲ್ಲಿ ಸುರಸವಾದ ರಸ ನಾನೇ ಆಗಿರುವೆನು. ತೇಜಸ್ವಿ ಪದಾರ್ಥಗಳಲ್ಲಿನ ತೇಜವು ನಾನೇ ಎಂದು ಶ್ರೀನಿವಾಸನು ಹೇಳಿದನು ।೨೬೧॥ ಚಂದ್ರ, ಸೂರ್ಯ, ನಕ್ಷತ್ರಗಳಲ್ಲಿ ತೇಜವು ನನ್ನದೇ ಆಗಿರುವುದು. ಆಕಾಶಕ್ಕೆ ಎಂದಿಗೂ ಸ್ಪರ್ಶ ಮಾಡದ ಯಾವ ಅನಾಹತ ಶಬ್ದವು ನಾನೇ ಆಗಿರುವೆನು ।೨೬೨॥

ಬ್ರಾಹ್ಮಣ ಭಜನೆಯಲ್ಲಿ ಬಲಿಯ ಸ್ಥಾನವು ಶ್ರೇಷ್ಠವಾಗಿರುವುದು. ಆ ಯಾವ ಬಲಿಯು ನಾನೇ ಆಗಿರುವೆನು. ಬ್ರಾಹ್ಮಣ ಭಜನೆಯ ಸಾಮರ್ಥ್ಯದಿಂದ ನನಗೆ ಬಲಿಯು ದ್ವಾರದ ದ್ವಾರಪಾಲಕನನ್ನಾಗಿ ಮಾಡಿದೆ ಎಂದು ಶ್ರೀಕೃಷ್ಣನು ಹೇಳಿದನು ।೨೬೩॥ ಪಾಂಡವರಲ್ಲಿ ಪರಿಪೂರ್ಣ ವೀರನಾಗಿರುವ ನರಾವತಾರ ಅರ್ಜುನನೂ ಕೂಡ ನಾನೇ ಆಗಿರುವೆನು. ಆದ್ದರಿಂದ ಆತನು ನನಗೆ ಜೀವ ಪ್ರಾಣನಾಗಿರುವನು ಎಂದು ನಾರಾಯಣನು ಹೇಳಿದನು ।೨೬೪॥ ಹೇ ಉದ್ಧವನೇ, ಪ್ರಾಣಿಮಾತ್ರರ ಉತ್ಪತ್ತೀ, ಸ್ಥಿತಿ ಮತ್ತು ಪ್ರಳಯಗತಿ ನಾನೇ ಆಗಿರುವೆನು ಎಂದು ಶ್ರೀಪತಿಯು ಹೇಳಿದನು ।೨೬೫॥

ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ಈ ಎರಡು ಪ್ರಕಾರದ ಇಂದ್ರಿಯಗಳ ನಿಜವಾದ ಇಂದ್ರಿಯವು ನಾನೇ ಆಗಿರುವೆನು. ಆ ಎಲ್ಲ ಇಂದ್ರಿಯಗಳ ಕ್ರಿಯೆಗಳೆಲ್ಲವೂ ನನ್ನಿಂದಲೇ ನಡೆಯುವುವು ।೨೬೬॥ ಗತಿ, ಗ್ರಹಣ, ಗಮನ, ಮಲವಿಸರ್ಜನ, ಮೋಹನ, ದರ್ಶನ, ಸ್ಪರ್ಶನ, ಅವಘ್ರಾಣ, ಶ್ರವಣ ಮತ್ತು ರಸಸ್ವಾದನ ಈ ಸರ್ವವೂ ನನ್ನಿಂದಲೇ ಆಗುತ್ತಿರುವುವು ।೨೬೭॥ ನನ್ನ ಹೊರತಾಗಿ ಈ ಯಾವ ಇಂದ್ರಿಯಗಳ ಕ್ರಿಯೆಗಳು ಎಳ್ಳಷ್ಟೂ ಕೂಡ ನಡೆಯಲಾರವು. ಅವುಗಳ ಲಕ್ಷಣಗಳನ್ನು ಈಗ ನಿನಗೆ ಸಂಪೂರ್ಣವಾಗಿ ಹೇಳುವೆನು ಅದನ್ನು ಕೇಳು ।೨೬೮॥ ನಾನು ಮನದ ಮಹಾಮನನಾಗಿರುವೆನು. ನಯನದ ನಯನವೂ ನಾನೇ ಆಗಿರುವೆನು. ಸ್ಪರ್ಶದ ಸ್ಪರ್ಶವೂ ಕೂಡ ನಾನಾಗಿರುವೆನು. ಜಿವ್ಹೆಯ ಮೂಲ ಜಿವ್ಹೆಯು ನಾನಾಗಿರುವೆನು ।೨೬೯॥

ಮೀ ಘ್ರಾಣಾಚೇಹೀ ನಿಜ ''ಘ್ರಾಣ'' । ಶ್ರವಣೋ ''ಆದಿಶ್ರವಣ'' । ಗ್ರಹಣಾಚೇ ''ನಿಜಗ್ರಹಣ'' । ಗತೀಚೀ ಜಾಣ ಮೀ ಗತೀ ।।೨೭೦।। ಮೀ ಆನಂದಾಚಾ ''ಅನಂದು'' । ಮೀ ಬುದ್ಧೀಚಾಹೀ ''ಪ್ರಭೋಧು'' । ಸಕಳ ಇಂದ್ರಿಯಾಂಚಾ ''ವಿಷಯ ಸ್ವಾದು'' । ತೋ ಮೀ ಮುಕುಂದು ಉದ್ಧವಾ ।।೨೭೧।। ಮೀ ವಾಚೇಚೀ ''ವಾಚಾ'' ಸಾವಕಾಶ । ಮೀ ಪರೇಚಾಹೀ ''ಪರೇಶ'' । ಸಕಳ ಇಂದ್ರಿಯಾಂಚಾ ಮೀ ''ಈಶ'' । ಯಾಲಾಗೀ ''ಹೃಷೀಕೇಶ'' ನಾವ ಮಾಝೇ ।।೨೭೨।।

ಪೃಥಿವೀವಾಯುರಾಕಾಶ ಆಪೋ ಜ್ಯೋತಿರಹಂ ಮಹಾನ್ ।
ವಿಕಾರಃ ಪುರುಷೋಽವ್ಯಕ್ತಂ ರಜಃ ಸತ್ತ್ವಂ ತಮಃ ಪರಮ್. ।೩೭।।

ಅರ್ಥ :- ಪೃಥ್ವಿ, ವಾಯು, ಆಕಾಶ, ಜಲ, ತೇಜ, ಅಹಂಕಾರ, ಮಹತ್ತತ್ತ್ವ ಪಂಚಮಹಾಭೂತ ಜೀವ, ಅವ್ಯಕ್ತ, ಪ್ರಕೃತಿ,ಸತ್ತ್ವ, ರಜ, ತಮ ಈ ಮೂರು ಗುಣಗಳ ಆಚೆ ಇರುವ ಬ್ರಹ್ಮ, ಈ ಎಲ್ಲವೂ ನಾನೇ ಆಗಿರುವೆನು.

ತತ್ತ್ವಸಂಖ್ಯಾ ಪಂಚವೀಸ । ತ್ರಿಗುಣ ಘಾಲಿತಾ ಅಠ್ಠಾವೀಸ । ಐಕ ತ್ಯಾಂಚಾಹೀ ವಿಲಾಸ । ಸಾವಕಾಶ ಸಾಂಗೇನ ।।೨೭೩।। ಅಹಂ ಮಹತತ್ತ್ವ ಪಂಚತನ್ಮಾತ್ರಾ । ಹಾ ಸ್ಥೂಲ ಪ್ರಕೃತೀಚಾ ಉಭಾರಾ । ಮಹಾಭೂತೇಂದ್ರಿಯೇ ಅಕರಾ । ಹೇ ಷೋಡಶ ವಿಕಾರಾಂಚೀ ಸಂಖ್ಯಾ ।।೨೭೪।। ಯಾಂತ ಮಿಳಾಲ್ಯಾ ಪ್ರಕೃತಿ ಪುರುಷ । ತತ್ತ್ವಸಂಖ್ಯಾ ಪಂಚವೀಸ । ಪ್ರತೃತೀಮಾಜೀ ಗುಣಾಂಚಾ ವಾಸ । ಹಾ ತತ್ತ್ವವಿಲಾಸ ತತ್ತ್ವಾಂಚಾ ।।೨೭೫।। ಪ್ರಕೃತಿ ಗುಣವಿಕಾರ । ತತ್ತ್ವಸಂಖ್ಯಾ ನಿರ್ಧಾರ । ಹಾ ಮ್ಯಾ ಸಾಂಗಿತಲಾ ಜೋ ವಿಚಾರ । ತೇ ಪರಾತ್ಪರ ಸ್ವರೂಪ ಮಾಝೇ ।।೨೭೬।।

ಅಹಮೇತತ್ಪ್ರಸಂಖ್ಯಾನಂ ಜ್ಞಾನಂ ತತ್ತ್ವವಿನಿಶ್ಚಯಃ ಮಯೇಶ್ವರೇಣ ಜೀವೇನ ಗುಣೇನ ಗುಣಿನಾ ವಿನಾ ।
ಸರ್ವಾತ್ಮನಾಪಿ ಸರ್ವೇಣ ನ ಭಾವೋ ವಿದ್ಯತೇ ಕ್ವಚಿತ್ ।೩೮।।

ಅರ್ಥ :- ಈ ತತ್ತ್ವಗಳ ಗಣನೆ,ಅವುಗಳ ಲಕ್ಷಪೂರ್ವಕ ಜ್ಞಾನ ಮತ್ತು ಆ ಜ್ಞಾನದ ತತ್ತ್ವ ನಿರೂಪಣೆ ಫಲವು ನಾನೇ ಆಗಿರುವೆನು.ನಾನು ಈಶ್ವರನಾಗಿರುವೆನು, ನಾನು ಜೀವನಾಗಿರುವೆನು. ನಾನು ಗುಣನು ಮತ್ತು ಗುಣಿಯು ಆಗಿರುವೆನು, ನಾನು ಸರ್ವರ ಆತ್ಮನಾಗಿರುವೆನು. ಏನೆಲ್ಲವು ನಾನೇ ಆಗಿರುವೆನು.ನನ್ನ ಹೊರತಾದ ಅನ್ಯ ಯಾವ ಪದಾರ್ಥವೂ ಇರುವುದಿಲ್ಲ.

ಏವಂ''ಪಂಚವೀಸತತ್ತ್ವಸಂಖ್ಯಾನ'' । ತೇ ಅವಘೇ ಮೀ ಚಿ ಜಾಣ । ಯಾ ಗಣಣ್ಯಾಚೇ ಗಣಿತೇ ''ಜ್ಞಾನ'' । ತೇಹೀ ಮೀ ಆಪಣ ಮ್ಹಣೇ ದೇವೋ ।।೨೭೭।। ಹೇ ಹೀ ಜಾಣತೇ ಜೇ ಲಕ್ಷಣ । ತೇಹೀ ದೇವೋ ಮ್ಹಣೇ ಮೀ ಆಪಣ । ಮಜವೇಗಳೇ ಅಣುಪ್ರಮಾಣ । ಸರ್ವಥಾ ಜಾಣ ಅಸೇನಾ ।।೨೭೮।। ಜೀವ ಆಣಿ ಈಶ್ವರ । ಗುಣೀ ಆಣಿ ಗುಣಾವತಾರ । ಕ್ಷೇತ್ರಕ್ಷೇತ್ರಜ್ಞ ನಿರ್ಧಾರ । ಸರ್ವಹೀ ಸಾಚಾರ ಮೀಚೀ ಮೀ ।।೨೭೯।।

ಮೂಗಿನ ನಿಜಮೂಗು ನಾನಾಗಿರುವೆನು. ಕಿವಿಯ ಆದ್ಯ ಕಿವಿಯು ನಾನಾಗಿರುವೆನು. ಗ್ರಹಣದ ನಿಜಗ್ರಹಣನು ನಾನಾಗಿರುವೆನು ಮತ್ತು ಗತಿಯ ಗತಿಯು ನಾನಾಗಿರುವೆನು. ಇದನ್ನು ತಿಳಿ ।೨೭೦।। ಹೇ ಉದ್ಧವನೇ, ಆನಂದದ ಆನಂದವು ನಾನಾಗಿರುವೆನು. ಬುದ್ಧಿಯ ಪ್ರಕಾಶಕನು ನಾನಾಗಿರುವೆನು ಮತ್ತು ಸರ್ವ ಇಂದ್ರಿಯಗಳ ವಿಷಯ ಸ್ವಾದವೂ ಕೂಡ ನಾನೇ ಮುಕುಂದನಾಗಿರುವೆನು ।೨೭೧।। ನಾನು ವಾಣಿಯ ವಾಣೀಯಾಗಿರುವೆನು. ಪರಾ ವಾಣಿಯ ಪ್ರೇರಕ ಶಕ್ತಿಯು ನಾನಾಗಿರುವೆನು. ಸರ್ವ ಇಂದ್ರಿಯಗಳ ಸ್ವಾಮಿಯು ನಾನಾಗಿರುವೆನು. ಆದ್ದರಿಂದ ನನಗೆ ಹೃಷೀಕೇಶ ಎಂಬ ನಾಮವು ಪ್ರಾಪ್ತವಾಗಿರುವುದು ।೨೭೨।।

ಮೂಲ ತತ್ತ್ವದ ಸಂಖ್ಯೆಯು ಇಪ್ಪತ್ತೈದಾಗಿರುವುದು. ಅವುಗಳಲ್ಲಿ ಸತ್ವ ರಜ, ತಮ ಈ ಮೂರು ಗುಣಗಳನ್ನು ಕೂಡಿಸಲು ಇಪ್ಪತ್ತೆಂಟು ಸಂಖ್ಯೆಯಾಗುವುದು. ಅದರ ವಿಸ್ತಾರವನ್ನು ಈಗ ನಾನು ನಿನಗೆ ಹೇಳುವೆನು, ಕೇಳು ।೨೭೩।। ಅಹಂಕಾರ, ಮಹತ್‌ತತ್ತ್ವ ಮತ್ತು ಪೃಥ್ವಿ, ಆಕಾಶ, ಉದಕ ಮತ್ತು ತೇಜ ಈ ಯಾವ ಪಂಚ ತನ್ಮಾತ್ರಾಗಳು ಕೂಡಿ ಪೃಥ್ವಿಯು ಸಿದ್ಧವಾಗುವುದು. ಪಂಚ ಮಹಾಭೂತಗಳು ಮತ್ತು ಹನ್ನೊಂದು ಇಂದ್ರಿಯಗಳು ಕೂಡಿ ವಿಕಾರಗಳ ಸಂಖ್ಯೆಯು ಹದಿನಾರು ಆಗುವುದು ।೨೭೪।। ಇದರಲ್ಲಿ ಪ್ರಕೃತಿ ಮತ್ತು ಪುರುಷ ಈ ಎರಡನ್ನು ಕೂಡಿಸಲು ಒಟ್ಟಿನಲ್ಲಿ ತತ್ವಗಳ ಸಂಖ್ಯೆಯು ಇಪ್ಪತ್ತೈದು ಆಗುವುದು. ಪ್ರಕೃತಿಯಲ್ಲಿ ಗುಣಗಳ ವಾಸ್ತವ್ಯವಿರುವುದು. ಇದು ತತ್ವಗಳ ತತ್ವ ವಿಲಾಸವಾಗಿರುವುದು ।೨೭೫।। ಗುಣ ವಿಕಾರಯುಕ್ತ ಪ್ರಕೃತಿ ಮತ್ತು ತತ್ವ ಸಂಖ್ಯೆಯ ನಿಶ್ಚಯದ ವಿಚಾರವನ್ನು ನಾನು ನಿನಗೆ ಹೇಳಿದೆನು. ಅಲ್ಲಿ ನಿಜವಾಗಿಯೂ ನನ್ನ ಪರಾತ್ಪರ ಸ್ವರೂಪವಿರುವುದು ।೨೭೬।।

ಈ ಪ್ರಕಾರವಾಗಿ ಇಪ್ಪತ್ತೈದು ತತ್ವಗಳ ಯಾವ ಜ್ಞಾನವು ನಾನೇ ಆಗಿರುವೆನು. ಈ ಲೆಕ್ಕವನ್ನು ಮಾಡುವ ಗಣಿತದ ಜ್ಞಾನವೂ ಕೂಡ ನಾನೇ ಆಗಿರುವೆನು ।೨೭೭।। ಗಣಿತವನ್ನು ತಿಳಿಯುವ ಯಾವ ಲಕ್ಷಣವೂಕೂಡ ನಾನೇ ಆಗಿರುವೆನು. ನನ್ನ ಹೊರತಾಗಿ ಒಂದು ಅಣುವೂ ಮಾತ್ರವೂ ಕೂಡ ಬೇರೆ ಯಾವುದೂ ಇರುವುದಿಲ್ಲ. ಇದನ್ನು ನಿಶ್ಚಯವಾಗಿ ತಿಳಿ ।೨೭೮।। ಜೀವ ಮತ್ತು ಈಶ್ವರ, ಗುಣ ಮತ್ತು ಗುಣಾವತಾರ, ಕ್ಷೇತ್ರ ಮತ್ತು ಕ್ಷೇತ್ರಜ್ಞ ಈ ಎಲ್ಲವೂ ನಾನೇ ಆಗಿರುವೆನು ।೨೭೯।।

ಮಜವೇಗಳೇ ಅಣುಮಾತ್ರ । ಉರಲೇ ನಾಹೀಗಾ ಸ್ವತಂತ್ರ । ಮೀ ಸರ್ವಾತ್ಮಾ ಸರ್ವತ್ರ । ಕೇವಳ "ಚಿನ್ಮಾತ್ರ" ತೇಹೀ ಮೀ ।೨೮೦॥ ಮಜವೇಗಳೇ ತೇಥ ಕಾಂಹೀ । ಉದ್ಧವಾ ಗಾ ಉರಲೇ ನಾಹೀ । ಸರ್ವ ಸಾಧಾರಣ ಪಾಹೀ । ಸರ್ವಾದೇಹೀ ಅಸೇ ಮೀ ।೨೮೧॥ ಉದ್ಧವಾ ಐಸೇ ಮ್ಹಣಸೀ ಕಾಂಹೀ । "ಸಂಕ್ಷೇಪು ನ ಕರಾವಾ ಪಾಹೀ" । ವಿಸ್ತಾರೂ ನ ಚಲೇ ಯೇ ಠಾಯೀ । ಐಕ ತೇಹೀ ಸಾಂಗೇನ ।೨೮೨॥

ಸಂಖ್ಯಾನಂ ಪರಮಾಣೂನಾಂ ಕಾಲೇನ ಕ್ರಿಯತೇ ಮಯಾ । ನ ತಥಾ ಮೇ ವಿಭೂತೀನಾಂ ಸೃಜತೋಽಂಡಾನಿ ಕೋಟಿಶಃ ।೩೯॥

ಅರ್ಥ :-ನಾನು ಪರಮಾಣುಗಳ ಸಂಖ್ಯೆಗಳನ್ನು ಎಣಿಸಬಲ್ಲೆನು. ಆದರೆ ನನ್ನ ವಿಭೂತಿಗಳವರನ್ನು ಎಣಿಸಲಾರೆನು. ನಾನು ರಚಿಸಿರುವ ಕೋಟಿ ಕೋಟಿ ಬ್ರಹ್ಮಾಂಡಗಳ ಗಣನೆಯನ್ನು ಮಾಡಲು ಬರುವುದಿಲ್ಲ. ಅಂದಮೇಲೆ ನನ್ನ ವಿಭೂತಿಗಳ ಗಣನೆಯನ್ನು ಹೇಗೆ ಮಾಡಲು ಸಾಧ್ಯ ?

ಪೃಥ್ವೀಚಿಯಾ ಪರಮಾಣುಕಣಾ । ಮೀ ಕಾಳರೂಪೇ ಕರೀ ಗಣನಾ । ಪರೀ ವಿಭೂತಿ ಸಂಖ್ಯಾಪ್ರಮಾಣಾ । ಮಾಝ್ಯೋನಿಹೀ ಜಾಣಾ ನ ಗಣವತೀ ।೨೮೩॥ ಮ್ಯಾ ಸೃಜಿಲೇ ಅನಂತ ಬ್ರಹ್ಮಗೋಳ । ತೇ ಮಜ ಗಣವತೀ ನಾ ಸಕಳ । ಮಾ ವಿಭೂತಿ ಮಾಝ್ಯಾ ಕೇವಳ । ಕೋಣ ತೋಂಡಾಳ ಗಣೂ ಶಕೇ ।೨೮೪॥ ಮೀ ಸರ್ವಜ್ಞ ಶ್ರೀನಾರಾಯಣ । ಮಾಝ್ಯಾ ವಿಭೂತಿ ಮಜ ಜಾಣ । ಗಣಾವಯಾ ನಾಹೀ ಆಂಗವಣ । ಮಾ ನಿರೂಪಣ ಕೇವೀ ಸಾಂಗೇ ।೨೮೫॥ ಮನುಷ್ಯಾಮಾಜೀ ಮಾಝೀ ವಿಭೂತಿ । ನಾಂದತಸೇ ಕೋಣೇ ಸ್ಥಿತೀ । ತೇ ಖೂಣ ಸಾಂಗೇನ ಮೀ ತುಜಪ್ರತೀ। ಐಕ ನಿಶ್ಚಿತೀ ಉದ್ಧವಾ ।೨೮೬॥

ತೇಜಃ ಶ್ರೀಃಕೀರ್ತಿರೈಶ್ವರ್ಯ ಹ್ರಿಸ್ತ್ಯಾಗಃ ಸೌಭಗಭಗಃ । ವೀರ್ಯ ತಿತಿಕ್ಷಾ ವಿಜ್ಞಾನ ಯತ್ರ ಯತ್ರ ಸ ಮೇ ಽ ಶಕಃ ।೪೦॥

ಅರ್ಥ : ಯಾವುದರಲ್ಲಿ ತೇಜ, ಶ್ರೀ, ಕೀರ್ತಿ, ಐಶ್ವರ್ಯ, ಲಜ್ಜಾ, ತ್ಯಾಗ, ಸೌಂದರ್ಯ, ಸೌಭಾಗ್ಯ, ಪರಾಕ್ರಮ, ತಿತಿಕ್ಷಾ, ಮತ್ತು ವಿಜ್ಞಾನ, ಈ ಗುಣಗಳು ಇದ್ದಲ್ಲಿ ನನ್ನದೇ ಅಂಶವಾಗಿರುವುವು ಎಂದು ಹೀಗೆ ತಿಳಿ

ಜ್ಯಾಚೀ ಪ್ರಬಳ ಪ್ರತಾಪಶಕ್ತೀ । ಜೇಥ ನಿರಂತರ ಲಕ್ಷ್ಮೀಚೀ ವಸ್ತೀ । ಜ್ಯಾಸೀ ಮರ್ಯಾದಾ ನಾಹೀ ಸಂಪತ್ತೀ । ಜಾಚೀ ಉದಾರ ಕೀರ್ತಿ ಸ್ವಧರ್ಮೇ ।೨೮೭॥ ಜ್ಯಾಚ್ಯಾ ಐಶ್ವರ್ಯಾಚೀ ಪರಮಗತೀ । ಆಜ್ಞೇವರೀ ನೇಮೀ ತ್ರಿಜಗತೀ । ಜ್ಯಾಚೀ ಅನಾವರ ದಾನಸ್ಥಿತೀ । ಜೇಥ ಭಾಗ್ಯಾಚೀ ಉತ್ಪತ್ತೀ ನೀಚ ನವೀ ದಿಸೇ ।೨೮೮॥ ಜ್ಯಾಚೇ ಸಾಮರ್ಥ್ಯ ಅತಿದುರ್ಧರ । ಕೋಣೇ ಬೋಲೋ ಶಕೇನಾ ಉತ್ತರ । ಜ್ಯಾಚೇ ಸೌಭಾಗ್ಯ ಮನೋಹರ । ಆಹ್ಲಾದಕರ ಜನನಯನಾ ।೨೮೯॥ ಜ್ಯಾಸೀ ಸಹನಶೀಳತೇಚೀ ಪೋಜ । ಜ್ಯಾಸೀ ನಿಂದ್ಯ ಕರ್ಮಾಚೀ ಲಾಜ । ಜೋ ವಿಜ್ಞಾನಾಚೇ ಭೋಜ । ಸಹಜೇಚಿ ನಿಜ ನಾಚತ ।೨೯೦॥

ನನ್ನ ಹೊರತಾದ ಒಂದು ಅಣುಮಾತ್ರ ಸ್ಥಳವೂ ಕೂಡ ಸ್ವತಂತ್ರವಾಗಿರುವುದಿಲ್ಲ. ಸರ್ವತ್ರವೂ ನಾನೇ ಸರ್ವಾತ್ಮಾನಾಗಿರುವೆನು ಮತ್ತು ಕೇವಲ ಚಿನ್ಮಾತ್ರವೂ ಕೂಡ ನಾನೇ ಆಗಿರುವೆನು ।೨೮೦॥ ಹೇ ಉದ್ಧವನೇ , ನನಗಿಂತಲೂ ಅನ್ಯ ವಸ್ತು ಯಾವುದೂ ಇರುವುದಿಲ್ಲ. ಸರ್ವಸಾಧಾರಣವಾಗಿ ದೇಹದಲ್ಲಿ ನಾನೇ ಇರುವೆನು ।೨೮೧॥ ಉದ್ಧವಾ, ನೀನೀಗ ಸಂಕ್ಷಿಪ್ತ ಮಾಡಬೇಡವೆಂದು ಕದಾಚಿತ್ ಹೇಳಬಹುದು. ಇಲ್ಲಿ ವಿಸ್ತಾರ ಮಾಡಲು ಬರುವುದೇ ಇಲ್ಲ. ಅದು ಹೇಗೆ ಎಂಬುದು ಈಗ ಹೇಳುವೆನು ಕೇಳು ।೨೮೨॥

ನಾನು ಕಾಲರೂಪದಿಂದ ಪೃಥ್ವಿಯ ಪರಮಾಣುಗಳನ್ನೂ ಕೂಡ ಎಣಿಸಬಲ್ಲೆನು. ಆದರೆ ನನ್ನ ವಿಭೂತಿಗಳ ಸಂಖ್ಯೆ ಗಣನೆಯನ್ನು ನನಗೂ ಸಹ ಮಾಡಲು ಬರುವುದಿಲ್ಲ ।೨೮೩॥ ಆಕಾಶದ ಪೊಳ್ಳಿನಲ್ಲಿ ನಾನು ಅನಂತ ಬ್ರಹ್ಮಾಂಡಗಳನ್ನು ನಿರ್ಮಾಣಗೊಳಿಸಿರುವೆನು. ಈ ಎಲ್ಲವನ್ನೂ ನನಗೆ ಎಣಿಸಲು ಬರುವುದಿಲ್ಲ. ಅಂದಮೇಲೆ ನನ್ನ ಎಲ್ಲ ವಿಭೂತಿಗಳನ್ನು ಹೇಗೆ ಎಣಿಸಲು ಸಾಧ್ಯ ? ।೨೮೪॥ ನಾನು ಸರ್ವಜ್ಞನಾದ ಶ್ರೀನಾರಾಯಣನಾಗಿರುವೆನು. ಆದರೆ ವಿಭೂತಿಗಳನ್ನು ಎಣಿಸುವ ಶಕ್ತಿಯು ನನ್ನಲ್ಲಿರುವುದಿಲ್ಲ. ಅಂದ ಮೇಲೆ ಅವುಗಳ ವರ್ಣನೆಯನ್ನು ಹೇಗೆ ಮಾಡಲಾದೀತು ? ।೨೮೫॥ ಹೇ ಉದ್ಧವನೇ ಮನುಷ್ಯರಲ್ಲಿ ನನ್ನ ವಿಭೂತಿಯು ಯಾವ ಸ್ವರೂಪದಲ್ಲಿರುವುದೆಂಬುವ ನಿಶ್ಚಿತ ಲಕ್ಷಣಗಳನ್ನು ನಿನಗೆ ನಾನು ಹೇಳುವೆನು, ಅದನ್ನು ಕೇಳು ।೨೮೬॥

ಯಾರ ಪ್ರತಾಪಶಕ್ತಿಯು ಪ್ರಬಲವಾಗಿರುವುದು, ಯಾರಲ್ಲಿ ನಿರಂತರವಾಗಿ ಲಕ್ಷ್ಮೀಯು ವಾಸ ಮಾಡಿರುವಳು, ಯಾರಲ್ಲಿ ಅಮರ್ಯಾದಿತ ಸಂಪತ್ತು ಇರುವುದು, ಯಾರ ಸ್ವಧರ್ಮದಲ್ಲಿ ಅಗಣಿತ ಕೀರ್ತಿ ಇರುವುದು ।೨೮೭॥ ಯಾರ ವೈಭವದ ಸಾಮರ್ಥ್ಯವು ಎಷ್ಟಿದೆ ಎಂದರೆ, ಸಂಪೂರ್ಣ ಮೂರು ಲೋಕಗಳನ್ನು ತನ್ನ ಆಜ್ಞೆಯ ಅಡಿಯಲ್ಲಿ ನಡೆಸುವನು ಮತ್ತು ಯಾರ ದಾನವನ್ನು ಕೊಡವುದರಲ್ಲಿ ಸೀಮೆಯೇ ಇರುವುದಿಲ್ಲ, ಯಾರ ಭಾಗ್ಯವು ಉತ್ತರೋತ್ತವಾಗಿ ನೂತನವಾಗಿಬೆಳೆಯುತ್ತಲೇ ಸಾಗುತ್ತಿರುವುದು ।೨೮೮॥ ಯಾರ ಅಲೌಕಿಕ ಸಾಮರ್ಥ್ಯದ ಎದುರಿನಲ್ಲಿ ಯಾರೂ ಒಂದು ಶಬ್ದವನ್ನೂ ಕೂಡ ಉಚ್ಚರಿಸಲಾರರು. ಇಂತಹ ಅಪಾರವಾದ ಈ ವೈಭವವು ಜನರ ನೇತ್ರಗಳಿಗೆ ಅಹ್ಲಾದವನ್ನು ಕೊಡುತ್ತಿರುವುದು ।೨೮೯॥ ಯಾರಿಗೆ ಸಹನಶೀಲತೆಯ ಅತಿಶಯ ಪ್ರೀತಿ ಇರುವುದು. ನಿಂದ್ಯ ಕರ್ಮಗಳಿಗಾಗಿ ಯಾರಲ್ಲಿ ಲಜ್ಜೆಯಾಗುವುದು. ವ್ಯವಹಾರ ನೈಪುಣ್ಯದ ಸಾಕ್ಷಾತ್ ಮೂರ್ತಿಯೇ ಸಹಜವಾಗಿ ಆತನಲ್ಲಿ ನರ್ತಿಸುತ್ತಿರುವುದು ।೨೯೦॥

ಇಯೇ ಲಕ್ಷಣೇ ಜೇಥ ವರ್ತತೀ । ತೇ ಜಾಣ ಮಾಝೀ ವಿಭೂತೀ । ಯಾಂತ ಏಕಾ ಲಕ್ಷಣಾಚೀ ಜೇಥ ಪ್ರಾಪ್ತೀ । ತೇಹೀ ವಿಭೂತೀ ಪೈ ಮಾಝೀ ।೪೯೧॥

ಏತಾಸ್ತೇ ಕೀರ್ತಿತಾಃ ಸರ್ವಾಃ ಸಂಕ್ಷೇಪೇಣ ವಿಭೂತಯಃ । ಮನೋವಿಕಾರಾ ಏವೈತೇ ಯಥಾ ವಾಚಾಽಭಿಧೀಯತೇ ।೪೧॥

ಅರ್ಥ :- ಹೇ ಉದ್ಧವಾ, ನಾನು ನಿನ್ನ ಪ್ರಶ್ನೆಯ ಅನುಸಾರವಾಗಿ ಸ್ವಲ್ಪದರಲ್ಲಿ ವಿಭೂತಿಗಳ ವರ್ಣನೆಯನ್ನು ಮಾಡಿದೆನು. ಈ ಎಲ್ಲ ಪರಮಾರ್ಥ ವಸ್ತುವಲ್ಲ. ಮನೋವಿಕಾರ ಮಾತ್ರ ಇರುವುದು. ಕಾರಣ ಮನಸ್ಸಿನಿಂದ ವಿಚಾರ ಮಾಡಿದ ಮತ್ತುವಾಣಿಯಿಂದ ಹೇಳುವ ಯಾವ ವಸ್ತುವೂ ವಾಸ್ತವಿಕವಾಗಿ ಪರಮಾರ್ಥವಿರುವುದಿಲ್ಲ. ಆದರ ಒಂದು ಕಲ್ಪನೆ ಮಾತ್ರ ಇರುವುದು.

ಕೇವಳ ಸಂಕೋಚ ಸಂಕ್ಷೇಪಸ್ಥಿತೀ । ಮ್ಯಾಸಾಂಗಿತಲ್ಯಾ ಜ್ಯಾ ವಿಭೂತಿ । ತ್ಯಾ ಮನೋವಿಕಾರ ಪ್ರತೀತೀ । ಜಾಣ ನಿಶ್ಚಿತೀ ಉದ್ಧವಾ ।೪೯೨॥ ಸಾಧಕಾಂಚೇ ಸಾಧನಸ್ಥಿತೀ । ಸತ್ಯ ಜಾಣಾವ್ಯಾ ಮಾಝ್ಯಾ ವಿಭೂತೀ । ವಿಚಾರಿತಾ ಪರಮಾರ್ಥಗತೀ । ತರೀ ಯಾ ಕಲ್ಪಿತೀ ಮನೋಜನ್ಯಾ ।೪೯೩॥ ಮಾಝೇ ಸ್ವರೂಪ ಅದ್ವೈತ ಜಾಣ । ನಾಹೀ ನಾಮರೂಪ ಗುಣ ವರ್ಣ । ತೇಥ ನಾನಾ ವಿಭೂತಿ ಲಕ್ಷಣ । ಮಿಥ್ಯಾ ಜಾಣ ವಾಚಿಕ ।೪೯೪॥

ವಾಚಂ ಯಚ್ಛ ಮನೋ ಯಚ್ಛ ಪ್ರಾಣಾನ್ ಯಚ್ಛೇಂದ್ರಿಯಾಣಿ ಚ । ಆತ್ಮಾನಮಾತ್ಮನಾ ಯಚ್ಛ ನ ಭೂಯಃ ಕಲ್ಪಸೇಽಧ್ವನೇ ।೪೨॥

ಅರ್ಥ :- ಆದ್ದರಿಂದ ನೀನು ವಾಣಿಯ ಸ್ವಚ್ಛಂದ ಭಾಷಣಕ್ಕೆ ನಿಲ್ಲಿಸು. ಮನದ ಸಂಕಲ್ಪವಿಕಲ್ಪಗಳನ್ನು ತಡೆ ಮಾಡು. ಪ್ರಾಣದ ನಿಯಮನ ಮಾಡು. ಇದರಿಂದ ನಿನಗೆ ಜನ್ಮಮೃತ್ಯುವಿನ ಚಕ್ರದಲ್ಲಿನ ತಿರುಗಾಟವು ತಪ್ಪುವುದು.

ಮಾಝೇ ಸ್ವರೂಪ ನಿತ್ಯ ನಿರ್ವಿಕಾರ । ಮನಬುದ್ಧಿ ವಾಚಾ ನ ಕಳೇ ಪಾರ । ತೇಥ ಬಾಪುಡೀ ಇಂದ್ರಿಯೇ ಕಿಂಕರ । ಪ್ರಾಣ ನಿರ್ಧಾರ ತೇ ನೇಣೇ ।೪೯೫॥ ಯಾಲಾಗೀ ಶಮದಮಾಂಚ್ಯಾ ಅನುಕ್ರಮೀ । ಮನಬುದ್ಧಿ ಇಂದ್ರಿಯೇ ವಾಚಾ ನೇಮೀ । ಪ್ರಾಣ ನೇಮೂನಿ ಪ್ರಾಣಧರ್ಮೀ । ಆತ್ಮಾರಾಮೀ ಪಾವಸೀ ।೪೯೬॥ ಮನಬುದ್ಧ್ಯಾದಿ - ಇಂದ್ರಿಯನೇಮ । ಕರಾವಯಾಚೇ ನ ಕಳೇ ವರ್ಮ । ಮ್ಹಣಸೀ ತರೀ ತೋ ಅನುಕ್ರಮ । ಐಕ ಸುಗಮ ಸಾಂಗೇನ ।೪೯೭॥ ''ವಾಚಾ'' ನೇಮಾಮೀ ಮಾಝೇನಿ ನಾಮೇ । ''ಮನ'' ನೇಮಾವೇ ಧ್ಯಾನಸಂಭ್ರಮೇ । ''ಪ್ರಾಣ'' ನೇಮಾವಾ ಪ್ರಾಣಾಯಾಮೇ । ''ಇಂದ್ರಿಯೇ'' ದಮೇ ನೇಮಾವೀ ।೪೯೮॥ ಬುದ್ಧಿ ನೇಮಾವೀ ಆತ್ಮ ವಿವೇಕೇ । ಜೀವ ನೇಮಾವಾ ಪರಮಾತ್ಮ ಸುಖೇ । ಇತಕೇನ ತೂ ಆವಶ್ಯಕೇ । ಹೋಸೀ ಕೌತುಕೇ ಮದ್ರೂಪ ।೪೯೯॥ ಮದ್ರೂಪ ಝಾಲಿಯಾಪಾಠೀ । ಸಂಸಾರಚಿ ನ ಪಡೇ ದಿಠೀ । ಖಿಂಟಲ್ಯಾ ಜನ್ಮ ಮರಣಾಂಚಿಯಾ ಗೋಠೀ । ಗಮನಾಗಮನ ಆಟಾಆಟೀ ನಿಮಾಲೀ ।೫೦೦॥

ತಾತ್ಪರ್ಯವೇನೆಂದರೆ ಈ ಲಕ್ಷಣಗಳು ಎಲ್ಲಿ ಇರುವುವೋ, ಅದು ನನ್ನ ವಿಭೂತಿಯಾಗಿರುವುದು. ಈ ಲಕ್ಷಣಗಳಲ್ಲಿ ಒಂದು ಲಕ್ಷಣ ಪ್ರಾಪ್ತವಾದದ್ದು ಕಂಡರೂ ಕೂಡ ಅದು ನನ್ನದೇ ವಿಭೂತಿಯಾಗಿರುವುದು ।೪೯೧॥

ಹೇ ಉದ್ಧವಾ, ನಾನು ಸ್ವಲ್ಪದರಲ್ಲಿಯೇ ನಿನಗೆ ನನ್ನ ವಿಭೂತಿಗಳನ್ನು ಹೇಳಿದೆನು. ನಿಜವಾಗಿಯೂ ಮನೋವಿಕಾರದ ಅನುಭವ ರೂಪದಿಂದ ಮಾತ್ರ ಆ ಯಾವ ವಿಭೂತಿಗಳನ್ನು ತಿಳಿದುಕೊಳ್ಳಬೇಕಾಗುವುದು ।೪೯೨॥ ಸಾಧಕರ ಸಾಧನ ಸ್ಥಿತಿಯ ದೃಷ್ಟಿಯಿಂದ ನೋಡಲು ನನ್ನ ವಿಭೂತಿಗಳು ಸತ್ಯವೆಂದು ಅನಿಸುವುದು. ಆದರೆ ಪರಮಾರ್ಥ ದೃಷ್ಟಿಯಿಂದ ವಿಚಾರ ಮಾಡಲು ಇವು ಮನೋಜನ್ಯ ಕಲ್ಪನೆ ಎಂದು ತಿಳಿಯುವುದು ।೪೯೩॥ ವಸ್ತುತಃ ನನ್ನ ಸ್ವರೂಪವು ಅದ್ವೈತವಾಗಿರುವುದು, ಇದನ್ನು ಲಕ್ಷದಲ್ಲಿಡು. ನನಗೆ ನಾಮ, ರೂಪ, ಗುಣ ವರ್ಣ ಯಾವುದೂ ಇಲ್ಲ,ಅಂದಮೇಲೆ ನಾನಾ ಪ್ರಕಾರದ ವಿಭೂತಿಗಳ ಲಕ್ಷಣವು ಮಿಥ್ಯಾ ಅಂದರೆ ಕೇವಲ ಶಾಬ್ದಿಕವಾಗಿದೆ ಎಂದು ತಿಳಿಯಬೇಕು ।೪೯೪॥

ನನ್ನ ಸ್ವರೂಪವು ನಿತ್ಯ ಮತ್ತು ನಿರ್ವಿಕಲ್ಪವಾಗಿರುವುದು. ಆದ್ದರಿಂದ ಮನಸ್ಸಿಗೆ, ಬುದ್ಧಿಗೆ, ವಾಣಿಗೆ ಅದರ ಅಂತವು ಹತ್ತಲು ಶಕ್ಯವಿಲ್ಲ. ಪಾಪ! ಬಡ ಇಂದ್ರಿಯಗಳು ಏನು ಮಾಡಬಲ್ಲವು? ಪ್ರಾಣಕ್ಕೂ ಸಹ ಅದರ ನಿರ್ಧಾರವನ್ನು ಮಾಡಲು ಸಾಧ್ಯವಾಗುವುದಿಲ್ಲ ।೪೯೫॥ ಆದ್ದರಿಂದಲೇ ಶಮದಮಾದಿಗಳ ಸಹಾಯದಿಂದ ಮೆಲ್ಲಮೆಲ್ಲನೇ ಅನುಕ್ರಮವಾಗಿ ಮನ, ಬುದ್ಧಿ ಮತ್ತು ವಾಣಿಗಳ ನಿಯಂತ್ರಣವನ್ನು ಮಾಡಬೇಕು. ಪ್ರಾಣಧರ್ಮದಲ್ಲಿ ಪ್ರಾಣದ ನಿಯಂತ್ರಣವನ್ನು ಮಾಡಲು ಆತ್ಮ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುವೆ ।೪೯೬॥ ಮನ,ಬುದ್ಧಿ, ಮತ್ತು ವಾಣೀ ಇವುಗಳ ಇಂದ್ರಿಯ ನಿಗ್ರಹದಿಂದ ನಿಯಂತ್ರಣ ಮಾಡುವ ಮರ್ಮವು ತಿಳಿಯುವುದಿಲ್ಲವೆಂದು ನೀನು ಹೀಗೆ ಹೇಳಿದರೆ, ಅವುಗಳ ಅನುಕ್ರಮಗಳನ್ನು ನಿನಗೆ ಸುಲಭ ರೀತಿಯಲ್ಲಿ ಹೇಳುವೆನು, ಏಕಾಗ್ರ ಚಿತ್ತದಿಂದ ಆಲಿಸು ।೪೯೭॥ ನನ್ನ ನಾಮಸ್ಮರಣೆಯಿಂದ ವಾಣಿಯ ನಿಯಂತ್ರಣ ಮಾಡಬೇಕು. ಮನಸ್ಸಿಗೆ ಧ್ಯಾನದಲ್ಲಿ ತೊಡಗಿಸಿ ಅದರ ನಿಯಂತ್ರಣವನ್ನುಮಾಡಬೇಕು ಮತ್ತು ದಮದಿಂದ ಇಂದ್ರಿಯಗಳ ನಿಯಂತ್ರಣ ಮಾಡಬೇಕು. ಪ್ರಾಣಾಯಾಮದಿಂದ ಪ್ರಾಣದ ನಿಯಂತ್ರಣ ಮಾಡಬೇಕು ।೪೯೮॥ ಪರಮಾತ್ಮನ ಚಿಂತನೆಯಿಂದ ಬುದ್ಧಿಯನ್ನು ನಿಯಂತ್ರಿಸಬೇಕು. ಜೀವವನ್ನು ಪರಮಾತ್ಮನ ಸುಖದಲ್ಲಿ ನಿಯಂತ್ರಿಸಬೇಕು. ಇಷ್ಟು ಮಾಡಿದರೆ ಸಾಕು, ನೀನು ಸಹಜವಾಗಿಯೇ ನನಲ್ಲಿ ಏಕರೂಪನಾಗುವೆ ।೪೯೯॥ ನೀನೊಮ್ಮೆ ನನ್ನಲ್ಲಿ ಏಕರೂಪನಾಗುವುದೊಂದೇ ತಡ, ಸಂಸಾರವು ನಿನ್ನ ದೃಷ್ಟಿಗೆ ಬೀಳುವುದೇ ಇಲ್ಲ. ಜನ್ಮ ಮರಣದ ಮಾತು ಮುಗಿದು ಹೋಗುವುದು. ಬರು ಹೋಗುವ ಚಕ್ರವು ನಿಂತುಬಿಡುವುದು ।೫೦೦॥

ಮ್ಯಾ ಸಾಂಗಿತಲ್ಯಾ ನೇಮಪರಿಪಾಟೀ । ಹಾ ನೇಮ ಕರಣೇ ನಾಹೀ ಜ್ಯಾಚ್ಯಾ ಪೋಟೀ। ತೋ ಭೋಗೀ ದುಃಖಾಂಚಿಯಾ ಕೋಟೀ । ಐಕ ತೇ ಗೋಠೀ ಸಾಂಗೇನ ।।೩೦೧।।

ಯೋ ವೈ ವಾಂಗನಸೀ ಸಮ್ಯಗಸಂಯಚ್ಛನ್ ಧಿಯಾ ಯತಿಃ । ತಸ್ಯ ವ್ರತಂ ತಪೋ ದಾನ ಸ್ರವತ್ಯಾಮಘಟಾಂಬುವತ್ ।।೪೩।।

ಅರ್ಥ :- ಯಾವ ಸಾಧಕನು ಬುದ್ಧಿಯ ದ್ವಾರಾ ವಾಣೀ ಮತ್ತು ಮನವನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲಾರನೋ, ಅವರ ವ್ರತ, ತಪ ಮತ್ತು ದಾನ ಇವು ಹಸೀ ಗಡಿಗೆಯಲ್ಲಿನ ನೀರಿನಂತೆ ಇಲ್ಲದಾಗುವುದು.

ಮ್ಯಾ ಸಾಂಗಿತಲ್ಯಾ ನೇಮಾಚೇ ನಿಗುತೀ । ಮನಬುದ್ಧಿ ಇಂದ್ರಿಯಪಂಕ್ತೀ । ತೋ ನೇಮೀನಾ ಸಾಕ್ಷೇಪಸ್ಥಿತೀ । ತ್ಯಾಚೇ ಸಾಧನೇ ಹೋತೀ ನಶ್ವರ ।।೩೦೨।। ತ್ಯಾಚೇ ವ್ರತ ತಪ ದಾನ । ಯೋಗ ಯಾಗ ಶಬ್ದ ಜ್ಞಾನ । ಕಾಚೇ ಭಾಂಡ್ಯಾಂತೀಲ ಜೀವನ । ತೈಶೀ ಜಾಣ ನಾಸತೀ ।।೩೦೩।। ಜೇವೀ ರಾಖೇ ಮಾಜೇ ಕೇಲಾ ಹೋಮ । ಕಾ ಅಶೌಚೇ ಆಚರಲಾ ಕರ್ಮ । ಕುಪಾತ್ರೀ ದಾನಧರ್ಮ । ತೈಸಾ ಸಂಭ್ರಮ ಸಾಧನಾ ।।೩೦೪।। ಉಖರೀ ಪೇರಿಲೇ ಬೀಜ । ಕಾ ಗೋಳಕ ಆವಂತಿಲಾ ದ್ವಿಜ । ಡೋಹಳ್ಯಾಂಚೇ ಸೋಹಳೇ ಭೋಗೀ ವಾಂಝ । ತೈಶೀ ವೋಜ ಸಾಧನಾ ।।೩೦೫।। ಯಾಪರೀ ಗಾ ನಿಶ್ಚಿತೀ । ವಿಧ್ಯುಕ್ತ ನೇಮ ನಾಹೀ ಚಿತ್ತೀ । ತ್ಯಾಚೇ ಸಾಧನೇ ವೃಥಾ ಜಾತೀ । ಹಾತೋಹಾತೀ ಉದ್ಧವಾ ।।೩೦೬।। ಯಾಲಾಗೀ ಮನಾದಿ ಇಂದ್ರಿಯವೃತ್ತೀ । ನೇಮಾವ್ಯಾ ಗಾ ಯಥಾನಿಗುತೀ । ಹೇಚಿ ಉದ್ಧವಾಪ್ರತೀ । ಸ್ವಯೇ ಶ್ರೀಪತಿ ಸಾಂಗತ ।।೩೦೭।।

ತಸ್ಮಾನ್ಮನೋ ವಚಃ ಪ್ರಾಣಾನ್ ನಿಯಚ್ಛೇನ್ಮತ್ಪರಾಯಣಃ । ಮದ್ಭಕ್ತಿಯುಕ್ತಯಾ ಬುದ್ಧ್ಯಾ ತತಃ ಪರಿಸಮಾಪ್ಯತೇ ।।೪೪।।
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಷೋಡಶೋಽಧ್ಯಾಯಃ ।।೧೬।।

ಅರ್ಥ :- ಆದ್ದರಿಂದ ನನ್ನ ಪ್ರೇಮ ಭಕ್ತಿಯಿಂದ ಮತ್ಪರಾಯಣರಾಗಿ ಭಕ್ತಿಯುಕ್ತ ಬುದ್ಧಿಯಿಂದ ವಾಣೀ , ಮನ ಮತ್ತು ಪ್ರಾಣಗಳ ಸಂಯಮ ಮಾಡಬೇಕು. ಹೀಗೆ ಮಾಡುವುದರಿಂದ ಆತನಿಗೆ ಅನ್ಯ ಸಾಧನೆಗಳನ್ನು ಮಾಡಬೇಕಾಗುವುದಿಲ್ಲ. ಇದರಿಂದ ಆತನ ಜೀವನವು ಕೃತಕೃತ್ಯವಾಗುವುದು.

ಮನ ಬುದ್ಧಿ ಇಂದ್ರಿಯ ಪ್ರಾಣ । ಅವಶ್ಯ ನೇಮಾವೀ ಗಾ ಜಾಣ । ವೃತ್ತಿ ಕರೋನಿ ಸಾವಧಾನ । ಮಾಝೇ ಭಜನ ಜೋ ಕರೀ ।।೩೦೮।। ಭಾವೇ ಕರಿತಾ ಮಾಝೀ ಭಕ್ತೀ । ವಿಷಯ ವಾಸನಾ ಜಳೋನಿ ಜಾತೀ । ನಿರ್ವಿಕಲ್ಪ ಉಪಜೇ ಶಾಂತೀ । ಮಾಝೇ ಭಕ್ತಿಪಂಥೀ ಚಾಲತಾ ।।೩೦೯।। ಚಾಲತಾ ಮಾಝೇ ಭಕ್ತಿ ಪಂಥೀ । ಸಕಳ ಸಾಧನೇ ಲಾಜೋನಿ ಜಾತೀ । ಭಾವೇ ಪ್ರಕಟೇ ಮೀ ಶ್ರೀಪತೀ । ಕರೀ ಸಂಸಾರನಿವೃತ್ತೀ ನಿಜಭಕ್ತಾ ।।೩೧೦।।

ನಾನು ಹೇಳಿದ ಪ್ರಕಾರವಾಗಿ ಯಾರು ನಿಯಂತ್ರಣವನ್ನು ಮಾಡುವುದಿಲ್ಲವೋ, ಅವರು ಕೋಟ್ಯಾವಧಿ ಪ್ರಕಾರಗಳ ದುಃಖದ ರಾಶಿಯನ್ನೇ ಭೋಗಿಸುತ್ತಿರುವರು. ಆ ವಿಷಯಕ್ಕೆ ಈಗ ಹೇಳುವೆನು, ಅದನ್ನು ಕೇಳು ।೩೦೧।।

ನಾನು ಹೇಳಿರುವ ನಿಯಂತ್ರಣಗಳಿಂದ ಮನ, ಬುದ್ಧಿ ಮತ್ತು ಇಂದ್ರಿಯಸಮೂಹಗಳ ನಿಯಂತ್ರಣವನ್ನು ಯಾರು ಏಕಾಗ್ರ ಚಿತ್ತದಿಂದ ಮಾಡುವುದಿಲ್ಲವೋ, ಅವರ ಸರ್ವ ಸಾಧನೆಗಳು ವ್ಯರ್ಥ ಹೋಗುವುವು।೩೦೨।। ಹಸೀ ಗಡಿಗೆಯಿಂದ ನೀರು ಸೋರಿ ಹೋಗುವಂತೆ ಅವರ ವ್ರತ, ತಪ, ದಾನ, ಯೋಗ, ಯಾಗ ಶಬ್ದ ಜ್ಞಾನ ಈ ಎಲ್ಲವೂ ವ್ಯರ್ಥವಾಗಿ ಹೋಗುವುವು ।೩೦೩।। ಬೂದಿಯಲ್ಲಿ ಹೋಮ ಮಾಡಿದಂತೆ ಅಥವಾ ಶುಚಿರ್ಭೂತನಾಗದೇ ಅಮಂಗಲದಿಂದ ಕರ್ಮ ಮಾಡಿದಂತೆ ಇಲ್ಲವೇ ಕುಪಾತ್ರದಲ್ಲಿ ದಾನಧರ್ಮ ಮಾಡಿದಂತೆ, ಇವರ ಸಾಧನೆಗಳ ಖಟಾಟೋಪವು ವ್ಯರ್ಥವಾಗಿರುವುದು ।೩೦೪।। ಬರಡು ಭೂಮಿಯಲ್ಲಿ ಬಿತ್ತಿದ ಬೀಜಗಳು, ಅಥವಾ ಕಲಬೆರಕೆಯವರು ಬ್ರಾಹ್ಮಣರಿಗೆ ಕೊಟ್ಟ ಆಮಂತ್ರಣ, ಅಥವಾ ಬಂಜೆಯ ಬಯಕೆಯ ವೈಭವವು ಹೇಗೋ, ಅದರಂತೆಯೇ ಆ ಸಾಧನೆಗಳ ಅವಸ್ಥೆಯಾಗಿರುವುದು ।೩೦೫।। ಹೇ ಉದ್ಧವಾ, ಯಾರು ಮನದಲ್ಲಿ ವಿಧಿಯುಕ್ತವಾಗಿ ನಿಯಮವನ್ನು ಮಾಡದಿದ್ದರೆ, ಅವರ ಸರ್ವ ಸಾಧನೆಗಳು ಪರಿಪೂರ್ಣ ವ್ಯರ್ಥವಾಗಿ ಹೋಗುವುವು ।೩೦೬।। ಅದಕ್ಕಾಗಿ ಮನಾದಿ ಇಂದ್ರಿಯಗಳ ನಿಯಂತ್ರಣವನ್ನು ಮಾಡಬೇಕು. ಹೀಗೆ ಸ್ವತಃ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ।೩೦೭।।

ಮನ, ಬುದ್ಧಿ ಪ್ರಾಣ ಮತ್ತು ಇಂದ್ರಿಯಗಳ ನಿಯಂತ್ರಣವನ್ನು ಅವಶ್ಯವಾಗಿ ಮಾಡಬೇಕು, ಈ ಪ್ರಕಾರವಾಗಿ ಸಾವಧಾನ ವೃತ್ತಿಯನ್ನು ಇಟ್ಟುಕೊಂಡು ಯಾರು ನನ್ನ ಭಜನೆಯನ್ನು ಮಾಡುವರೋ।೩೦೮।। ಏಕನಿಷ್ಠೆಯಿಂದ ಯಾರು ನನ್ನ ಭಕ್ತಿಯನ್ನು ಮಾಡುವರೋ ಅವರ ವಿಷಯ ವಾಸನೆಗಳು ಸುಟ್ಟು ಹೋಗವುವು. ಈ ರೀತಿಯಲ್ಲಿ ನನ್ನ ಭಕ್ತಿ ಮಾರ್ಗದಿಂದ ನಡೆಯುತ್ತಿರಲು ನಿರ್ವಿಕಲ್ಪವಾದ ಶಾಂತಿಯು ಪ್ರಾಪ್ತವಾಗುವುದು ।೩೦೯।। ಹೀಗೆ ನನ್ನ ಭಕ್ತಿ ಮಾರ್ಗದಿಂದ ಮುಂದೆ ಸಾಗುತ್ತಿರಲು ಇತರು ಸಾಧನೆಗಳು ಇಲ್ಲವಾಗುವುವು. ನನ್ನ ಮೇಲೆ ಭಾವಭಕ್ತಿ ಶ್ರದ್ಧೆ ಇಡುವುದರಿಂದ ಶ್ರೀಪತಿಯಾದ ನಾನು ಪ್ರಕಟನಾಗುವೆನು. ಹಾಗೆಯೇ ನನ್ನ ಭಕ್ತರ ಸಂಸಾರದ ನಿವೃತ್ತಿಯನ್ನು ಮಾಡುವೆನು ।೩೧೦।।

ಹೋ ಕಾ ಮಾಝಿಯಾ ನಿಜಭಕ್ತಾ । ಸಂಸಾರಬಾಧೇಚೀ ವ್ಯಥಾ । ತೇ ಲಾಜ ಮಜ ಭಗವಂತಾ । ಗಾಂಜೂ ನಿಜಭಕ್ತಾ ಮೀ ನೇದೀ ।೩೧೧॥ ಪ್ರಹ್ಲಾದ ಗಾಂಜಿತಾ ಜಗಜೇಠೀ । ಮೀ ಪ್ರಕಟಲೋ ಕೋರಡೇ ಕಾಷ್ಠೀ । ವೈಕುಂಠ ಸಾಂಡೂನಿ ಉಠಾಉಠೀ । ಗಜೇಂದ್ರಾಸಾಠೀ ಪಾವಲೋ ।೩೧೨॥ ದ್ರೌಪದೀ ಗಾಂಜಿತಾ ತತ್ಕಾಳೀ । ಮ್ಯಾ ಕೌರವಾಂಚೀ ತೋಂಡೇ ಕೇಲೀ ಕಾಳೀ। ಆಗೀನೇ ಗಾಂಜಿತಾ ಗೋವಳೀ । ಮ್ಯಾ ಪ್ರಾಶಿಲಾ ತೇ ಕಾಳೀ ದಾವಾಗ್ನೀ ।೩೧೩॥ ಗೋಕುಳ ಗಾಂಜಿತಾ ಸುರಪತೀ । ಮ್ಯಾ ಗೋವರ್ಧನ ಧರಿಲಾ ಹಾತೀ । ಕೀ ಗೋಪಿಕಾಂಚೀ ಪುರವಾವಯಾ ಆರ್ತೀ । ಮೀ ಝಾಲೋ ಶ್ರೀಪತಿ ಕಾಮಾರಾ ।೩೧೪॥ ಅರ್ಜುನಪ್ರತೀಜ್ಞೇಚೇ ಪ್ರಾಪ್ತಿ । ಮ್ಯಾ ದಿವಸಾ ಲಪವಿಲಾ ಗಭಸ್ತೀ । ಲಾವೂನಿ ಜಯದ್ರಥಾಸೀ ಖ್ಯಾತೀ । ಸುಭದ್ರಾಪತಿ ವಾಂಚವಿಲಾ ।೩೧೫॥ ಅಂಬರೀಷಾಚೇ ಗರ್ಭವಾಸ । ಮ್ಯಾಂಚಿ ಸೋಸಿಲೇ ಸಾವಕಾಶ । ಉಣೇ ಆಪುಲ್ಯಾ ನಿಜಭಕ್ತಾಸ । ಮೀ ಹೃಷೀಕೇಶ ಯೇವೋ ನೇದೀ ।೩೧೬॥ ಭಕ್ತಾಂಚೇ ಪಾಯೀಚೇ ಮಾತೀ । ಮೀ ಹೃದಯೀ ವಾಹೇ ಶ್ರೀಪತೀ । ವಾನರೇ ವನಚರೇ ಭಾವಾರ್ಥೀ । ಮ್ಯಾ ಆಪುಲೇ ಪಂಕ್ತೀ ಬೈಸವಿಲೀ ।೩೧೭॥ ಯಾಲಾಗೀ ಉದ್ಧವಾ ಪುಢತಪುಢತೀ। ಮೀ ಸಾಂಗೇ ಕರಾವೀ ಮಾಝೀ ಭಕ್ತೀ । ಮೀ ಭಜನೇ ಮಾಝೀ ಪ್ರಾಪ್ತೀ । ಅವಲೀಳಾ ಪಾವತೀ ಮದ್ಭಾವೇ ।೩೧೮॥ ಮದ್ಭಾವೇ ಕರಿತಾ ಮಾಝೀ ಭಕ್ತೀ । ಮೀ ಅನಂತ ಆತುಡೇ ತ್ಯಾಂಚಾ ಹಾತೀ । ಶೇಖೀ ಕಾಮಾರಾ ಹೋಯ ಭಕ್ತಾಪ್ರತೀ । ಭಕ್ತೀಚೀ ಪ್ರೀತೀ ಮಜ ಐಶೀ ।೩೧೯॥ ಮಾಝಿಯೇ ಭಕ್ತೀಪರತೇ । ಸುಗಮ ಸಾಧನ ನಾಹೀ ಯೇಥೇ । ಹೇ ಜಾಣೋನಿ ಮ್ಯಾ ತೂತೇ । ಭಜನಪಂಥೇ ಲಾವಿಲೇ ।೩೨೦॥ ಲಾವಿಲ್ಯಾ ಲಾಗೇ ಸದ್ಭಕ್ತೀ । ತೈ ಸಂಸಾರ ಬಾಪುಡೇ ತೇ ಕಿತೀ । ಹೇಳಸೂನ ಚಾರೀ ಮುಕ್ತೀ । ನಿಜಸುಖ ಭೋಗಿಲೇ ಮದ್ಭಕ್ತ ।೩೨೧॥ ಮದ್ಭಕ್ತಾಚೇ ಮಹಿಮಾನ । ಅತಿಶಯೇ ಅಗಮ್ಯ ಗಹನ । ಐಸೇ ಬೋಲೂನಿಯಾ ಶ್ರೀಕೃಷ್ಣ । ಉದ್ಧವಾಸೀ ಜಾಣ ಕುರವಾಳೀ ।೩೨೨॥ ತೇಣೇ ಶ್ರೀಕೃಷ್ಣ ಕರಾಗ್ರಸ್ಪರ್ಶೇ । ಉದ್ಧವಾಸೀ ಝಾಲೇ ಕೈಸೇ । ವ್ಯಾಲೇ ಧೇನೂಚೇನಿ ಪೋರಸೇ । ವತ್ಸ ಜೈಸೇ ಉಲ್ಹಾಸೇ ।೩೨೩॥ ಜೇವಿ ಕಾ ಲಾಗತಾ ಚಂದ್ರಕರ । ಸಬಾಹ್ಯ ನಿವೋ ಲಾಗೇ ಚಕೋರ । ಮೇಘ ದೇಖೂನಿ ಮಯೂರ । ನತ್ಯ ತತ್ಪರ ಸ್ವಾನಂದೇ ।೩೨೪॥

ನನ್ನ ಭಕ್ತರಿಗೆ ಸಂಸಾರ ಬಾಧೆಯ ವ್ಯಥೆಯಾಗಲು ಆಗ ಅದರ ಮಾನಮರ್ಯಾದೆ ಭಗವಂತನಾದ ನನಗೆ ಇರುವದು. ನಾನು ಭಕ್ತರಿಗೆ ಪೀಡೆ ಎಂದಿಗೂ ಆಗಗೊಡುವುದಿಲ್ಲ ।೩೧೧॥ ಹೇ ಭಕ್ತ ಶ್ರೇಷ್ಠ ಉದ್ಧವಾ, ಪ್ರಹ್ಲಾದನಿಗೆ ಪೀಡೆಯಾಗ ಹತ್ತಿತು. ನಾನು ನರಸಿಂಹ ರೂಪದಿಂದ ಒಣ ಕಟ್ಟಿಗೆಯ ಕಂಬದಲ್ಲಿ ಪ್ರಕಟನಾದೆನು ಮತ್ತು ಗಜೇಂದ್ರನಿಗಾಗಿ ವೈಕುಂಠವನ್ನು ಬಿಟ್ಟುಕೊಟ್ಟು ಧಾವಿಸುತ್ತ ಓಡಿ ಬಂದೆನು ।೩೧೨॥ ಕೌರವರು ದ್ರೌಪದಿಯನ್ನು ಪೀಡಿಸುತ್ತಿರಲು, ಆಗ ನಾನು ಆ ಯಾವ ಕೌರವರ ಮುಖಗಳನ್ನು ಕಪ್ಪಾಗಿ ಮಾಡಿಬಿಟ್ಟೆನು, ಅಗ್ನಿಯು ಗೋ ಪಾಲಕರಿಗೆ ಪೀಡೆಯನ್ನು ಕೊಡಲು, ಆಗ ನಾನು ಗೋಕುಳದ ದಾವಾಗ್ನಿಯನ್ನು ನುಂಗಿ ಬಿಟ್ಟೆನು ।೩೧೩॥ ಇಂದ್ರನು ಗೋಕುಳವನ್ನು ಪೀಡಿಸಲು ಆಗ ನಾನು ಗೋವರ್ಧನ ಪರ್ವತವನ್ನು ಬೆರಳಿನ ಮೇಲೆ ಎತ್ತಿ ಹಿಡಿದುಕೊಂಡೆನು. ಗೋಪಿಕಾ ಸ್ತ್ರೀಯರ ಮನೋರಥವನ್ನು ಪೂರ್ಣಗೊಳಿಸಲು ನಾನು ಕಾಮಿಯಾದೆನು ।೩೧೪॥ ಅರ್ಜುನನ ಪ್ರತಿಜ್ಞೆಯನ್ನು ಪಾಲನೆ ಮಾಡುವುದಕ್ಕಾಗಿ ನಾನು ಹಗಲಿನಲ್ಲಿಯೇ ಸೂರ್ಯನನ್ನು ಮುಚ್ಚಿ ಹಾಕಿದೆನು. ಹಾಗೆಯೇ ಜಯದ್ರಥನಿಗೆ ಕೊಲ್ಲುವ ಪರಾಕ್ರಮ ಕೊಟ್ಟು ಅರ್ಜುನನಿಗೆ ಬದುಕಿಸಿದೆನು ।೩೧೫॥ ಅಂಬಋಷಿಯ ಗರ್ಭವಾಸವನ್ನು ನಾನು ಸುಖವಾಗಿ ಸೋಸಿದೆನು. ಹೃಷೀಕೇಶಿಯಾದ ನಾನು ನನ್ನ ಭಕ್ತರಲ್ಲಿ ಎಂದಿಗೂ ಕಿರುಕುಳವನ್ನು ಬರಗೊಡುವುದಿಲ್ಲ ।೩೧೬॥ ಭಕ್ತರ ಪಾದಧೂಳಿಯನ್ನು ಶ್ರೀಪತಿಯಾದ ನಾನು ನನ್ನ ಹೃದಯದಮೇಲೆ ಧರಿಸಿರುವೆನು. ಇಷ್ಟೇ ಏಕೆ? ಕರಡಿ, ಕಪಿಗಳನ್ನೂ ಕೂಡ ನಾನು ನನ್ನ ಪಂಕ್ತಿಯಲ್ಲಿ ಕೂಡ್ರಿಸಿದೆನು ।೩೧೭॥ ಆದ್ದರಿಂದ ಹೇ ಉದ್ಧವನೇ, ನನ್ನ ಭಕ್ತಿಯನ್ನು ಮಾಡಬೇಕೆಂದು ಪುನಃ ಪುನಃ ನಿನಗೆ ನಾನು ಹೇಳುತ್ತಿರುವೆನು. ನನ್ನ ಭಜನೆಯನ್ನು ಮಾಡುವುದರಿಂದ ಭಕ್ತನು ಸಹಜವಾಗಿ ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳುವನು ।೩೧೮॥ ಸರ್ವತ್ರವೂ ನನ್ನದೇ ಭಾವವನ್ನು ಧರಿಸಿ ನನ್ನ ಭಜನೆಯನ್ನು ಮಾಡಲು ಅನಂತನಾದ ನಾನು ಅವರ ಕೈಗೆ ಸಿಕ್ಕುವೆನು. ಕೊನೆಗೆ ನಾನು ಅವರ ಸೇವಕನಾಗುವೆನು. ಇಷ್ಟೊಂದು ನನಗೆ ಭಕ್ತರಲ್ಲಿ ಪ್ರೀತಿ ಇರುವುದು ।೩೧೯॥ ನನ್ನ ಭಕ್ತಿಯಂತಹ ಅನ್ಯ ಸುಗಮ ಸಾಧನೆಯು ಇರುವುದಿಲ್ಲ. ಇದನ್ನು ತಿಳಿದುಕೊಂಡೇ ನಾನು ನಿನಗೆ ಭಕ್ತಿ ಮಾರ್ಗಕ್ಕೆ ಹಚ್ಚಿರುವೆನು ।೩೨೦॥ ಸದ್ಭಕ್ತಿಯನ್ನು ರೂಢಿಗೊಳಿಸಲು ಅದು ಬೇಗನೇ ಹತ್ತಿಕೊಳ್ಳುವುದು. ಈ ರೂಢಿಯು ಒಮ್ಮೆ ಹತ್ತಿಕೊಳ್ಳಲು, ಆಗ ಆ ಭಕ್ತಿಯ ಎದುರಿನಲ್ಲಿ ಸಂಸಾರವು ಏಕೆ? ನಾಲ್ಕು ಮುಕ್ತಿಗಳನ್ನೂ ಕೂಡ ನನ್ನ ಭಕ್ತನು ದೂರು ಮಾಡಿ ಆತ್ಮಸುಖದ ಉಪಭೋಗವನ್ನು ಮಾಡುತ್ತಿರುವನು ।೩೨೧॥ ನನ್ನ ಭಕ್ತನ ಮಹಿಮೆಯು ಅತ್ಯಂತ ಅತರ್ಕ್ಯ ಮತ್ತು ಗಹನವಾಗಿರುವುದು. ಹೀಗೆ ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ಪ್ರೀತಿಯಿಂದ ಮೈಮೇಲೆ ಕೈಯಾಡಿಸಿದನು ।೩೨೨॥ ಆಕಳವು ಕರುವನ್ನು ಹೆತ್ತುತ್ತಲೇ ಆ ಕರುವಿಗೆ ಮೊಲೆಯ ಹಾಲು ಸಿಕ್ಕಾಗ ಆಗುವ ಸಂತೋಷದಂತೆ ಶ್ರೀಕೃಷ್ಣನ ಆ ಯಾವ ದಿವ್ಯ ಪ್ರೇಮಮಯ ಹಸ್ತಸ್ಪರ್ಶದಿಂದ ಉದ್ಧವನಿಗೆ ಬಹು ಸಂತೋಷವಾಯಿತು ।೩೨೩॥ ಅಥವಾ ಚಂದ್ರಕಿರಣಗಳ ಸ್ಪರ್ಶವಾಗುತ್ತಲೇ ಚಕೋರ ಪಕ್ಷಿಗೆ ಅಂತರ್ಬಾಹ್ಯ ತೃಪ್ತವಾಗುವಂತೆ ಅಥವಾ ಮೋಡಗಳನ್ನು ಕಂಡಾಕ್ಷಣಕ್ಕೆ ನವಿಲು ತನ್ನ ಗರೆ ತೆರೆದು ಆನಂದದಿಂದ ನೃತ್ಯ ಮಾಡುವಂತೆ ।೩೨೪॥

ಯಾಪರೀ ಉದ್ಧವ ಜಾಣ । ಸ್ವಾನಂದೇ ಝಾಲಾ ಪರಿಪೂರ್ಣ । ವಿಸರಲಾ ದೇವಭಕ್ತಪಣ । ಕೃಷ್ಣಹೀ ಕೃಷ್ಣಪಣ ವಿಸರಲಾ ॥೩೨೫॥ ಯಾಪರೀ ಭಕ್ತಿಸುಖಾ ಆಂತ । ದೋಘೇಹೀ ಐಕ್ಯೇ ಝಾಲೇ ಉನ್ಮತ್ತ । ಪರಮಾನಂದಾಚಾ ತೇಥ । ಧೇಂಡಾ ನಾಚತ ಸ್ವಾನಂದೇ ॥೩೨೬॥ ಯಾ ಭಕ್ತಿ ಸುಖಾಚೀ ಗೋಡೀ । ಭಾಗ್ಯೇವೀಣ ನ ಕಳೇ ಪುಡೀ । ಉದ್ಧವಭಜನಾಚೇ ಕುಳವಾಡೀ । ಜೋಡಲಾ ಜೋಡೀ ಶ್ರೀಕೃಷ್ಣ ॥೩೨೭॥ ಏಕಾ ಜನಾರ್ದನಾ ಶರಣ । ಭಜನಸುಖಾಚೀ ಉಣಖೂಣ । ತೋ ಏಕ ಜಾಣೇ ಸಂಪೂರ್ಣ । ಭಕ್ತ ಜೀವನ ಜಿವ್ಹಾಳಾ ॥೩೨೮॥ ಜೋ ನಿಜಭಕ್ತಾಚಾ ಜಿವ್ಹಾಳಾ । ತೋ ಗೋಕುಳೀ ಹೋಊನ ಗೋವಳಾ । ಕ್ರೀಡೋನಿ ತ್ಯಾಂಚಿಯಾ ಖೇಳಾಮೇಳಾ । ಗೋಪೀ-ಗೋಪಾಳಾ ಉದ್ಧರಿಲೇ ॥೩೨೯॥ ಸ್ವಯೇ ಖೇಳೂನೀ ತ್ಯಾಂಚಿಯಾ ಖೇಳಾ । ಉದ್ಧರಿಲೇ ಬಾಳಗೋಪಾಳಾ । ಹೇ ನವಲನವ್ಹೇ ತ್ಯಾಚೀ ಕಳಾ । ಉದಾರ ಲೀಳಾ ತೇ ಐಕಾ ॥೩೩೦॥ ಪರ್ವತ ಪಾಷಾಣ ತೃಣ ತರುವರ । ಭೃಂಗ ಮತ್ಸ್ಯ ಮೃಗ ಮಗರ । ವ್ಯಾಘ್ರ ವನಚರ ವಿಖಾರ । ಪಾರಾವತೇ ಮಯೂರ ಆದಿಕರೂನ ॥೩೩೧॥ ಯೇಣೇಸೀ ಸಮವೇತ । ಗೋಕುಳೀಚೇ ಜೀವ ಸಮಸ್ತ । ಸ್ವಯೇ ಉದ್ಧರೀ ಶ್ರೀಕೃಷ್ಣನಾಥ । ಕೃಪಾಳೂ ಸಮರ್ಥ ಸ್ವಲೀಲಾ ॥೩೩೨॥ ಕಾ ಪಿತೃವಚನ ಪುಢಾರಾ । ಸೀತೇಚಿಯಾ ವಿಯೋಗದ್ವಾರಾ । ರಿಸಾ ಆಣಿ ವಾನರಾ । ಉದ್ಧರೀ ನಿಶಾಚರಾ ರಘುನಾಥ ॥೩೩೩॥ ಸೇವೇನೇ ತಾರಿಲೇ ರೀಸವಾನರ । ಯುದ್ಧೇ ತಾರಿಲೇ ನಿಶಾಚರ । ಹೇ ನವಲ ಕಾಂಹೀ ನವ್ಹೇ ಥೋರ । ಐಕ ಉದಾರ ಲೀಲಾ ತ್ಯಾಚೀ ॥೩೩೪॥ ಅಯೋಧ್ಯೇ ಪಾಸೂನ ಲಂಕೇಪರ್ಯಂತ । ಮಾರ್ಗೀ ವೃಕ್ಷವ ಪಾಷಾಣ ಪರ್ವತ । ತೃಣಾದಿ ಜೀವ ಸಮಸ್ತ । ಉದ್ಧರೀ ರಘುನಾಥ ಸ್ವಲೀಲಾ ॥೩೩೫॥ ಏವಂ ನಾನಾವತಾರೀ ಜನಾರ್ದನ । ಯಾಪರೀ ಉದ್ಧರೀ ಸಕಳ ಜನ । ತೇಣೇ ಏಕಾ ಏಕೂ ಕೇಲಾ ಪಾವನ । ಹೇ ನವಲ ಕೋಣ ಮಾನಾವೇ ॥೩೩೬॥ ಪರೀ ನವಲ ಏಕ ಕೇಲೇ ಮೋಠೇ । ಮಜ ಮೂರ್ಖಾಚೇಹೀ ಮುಖಾವಾಟೇ । ಶ್ರೀಭಾಗವತಬೋಲ ಕೇಲೇ ಮರ್ಹಾಟೇ । ಹೇ ಆಶ್ಚರ್ಯ ವಾಟೇ ಮಾಝೇಚಿ ಮಜ ॥೩೩೭॥ ಯಾಲಾಗೀ ಏಕಾ ಜನಾರ್ದನಾ ಶರಣ । ಜ್ಯಾಚೀ ಕೃಪಾ ಐಶೀ ಪರಿಪೂರ್ಣ ತ್ಯಾಚೇ ಸ್ಮರೋನಿ ಶ್ರೀಚರಣ । ಕೇಲಾ ಸಂಪೂರ್ಣ ಸೋಳಾವಾ ॥೩೩೮॥

ಉದ್ಧವನೂ ಸಹ ಆತ್ಮಾನಂದದಲ್ಲಿ ಪೂರ್ಣವಾಗಿ ತನ್ಮಯನಾದನು. ನಾನು ದೇವನ ಭಕ್ತನಾಗಿರುವೆನೆಂಬುದನ್ನು ಆತನು ಮರೆತುಬಿಟ್ಟನು ಮತ್ತು ಕೃಷ್ಣನೂ ಕೂಡ ತನ್ನ ದೇವತ್ವವನ್ನು ಮರೆತುಬಿಟ್ಟನು ॥೩೨೫॥ ಈ ಪ್ರಕಾರವಾಗಿ ಈ ಈರ್ವರೂ ಭಕ್ತಿ ಸುಖದಿಂದ ರಮಮಾಣರಾಗಿ ಪರಮಾನಂದದ ಪತಾಕೆಯನ್ನು ಹಿಡಿದು ಸ್ವಾನಂದದಿಂದ ಕುಣಿಯಹತ್ತಿದರು ॥೩೨೬॥ ಈ ಯಾವ ಭಕ್ತಿ ಸುಖದ ಆನಂದವು ಭಾಗ್ಯವಂತರಿಗಲ್ಲದೇ ಅನ್ಯ ಯಾರಿಗೂ ತಿಳಿಯಲಾರದು. ಉದ್ಧವನ ಭಜನೆಯ ರೂಪದ ವ್ಯಾಪಾರದಲ್ಲಿ ಶ್ರೀಕೃಷ್ಣರೂಪದ ಲಾಭವು ಪ್ರಾಪ್ತವಾಯಿತು ॥೩೨೭॥ ಏಕನಾಥನು ಜನಾರ್ದನರಿಗೆ ಶರಣು ಹೋಗಿದ್ದಕ್ಕೆ ಆತನಿಗೆ ಭಜನಸುಖದ ರಹಸ್ಯವು ಪೂರ್ಣವಾಗಿ ತಿಳಿಯಿತು. ಹಾಗೆಯೇ ಭಕ್ತನ ಅಂತಃಕರಣದಲ್ಲಿನ ಗುಹ್ಯವೂ ಕೂಡ ತಿಳಿಯಿತು ॥೩೨೮॥ ಭಕ್ತರ ಕೇವಲ ಪ್ರಾಣವೇ ಆಗಿರುವಂತಹ ಪರಮಾತ್ಮನು ಗೋಕುಲದಲ್ಲಿ ಗವಳಿಗನಾಗಿ ಆ ಗೌಳಿಗರ ಸಲುಗೆಯ ಪ್ರೀತಿಯಿಂದ ಆಡುತ್ತಿದ್ದನು, ಮತ್ತು ಗೋಪಾಲಕರ ಉದ್ಧಾರವನ್ನು ಮಾಡಿದನು ॥೩೨೯॥ ಅವರದೇ ಆಟದಲ್ಲಿ ಸ್ವತಃ ತಾನು ಆಟವಾಡಿ ಆತನು ಬಾಲಗೋಪಾಲಕರ ಉದ್ಧಾರವನ್ನು ಮಾಡಿದನು. ಇದರಲ್ಲಿ ಯಾವ ಮಹದಾಶ್ಚರ್ಯವಿಲ್ಲ. ಆತನ ಅಪೂರ್ವವಾದ ಮತ್ತು ಉದಾರವಾದ ಲೀಲೆಯು ವಿಶೇಷವಾಗಿರುವುದನ್ನು ಈಗ ಹೇಳುವೆನು ಕೇಳು ॥೩೩೦॥ ಪರ್ವತ, ಪಾಷಾಣ, ತೃಣ, ವೃಕ್ಷ, ಭೃಂಗ, ಮತ್ಸ್ಯ, ಮೃಗ, ಮಕರ, ವ್ಯಾಘ್ರ, ವನಚರ, ಸರ್ಪ ಇತ್ಯಾದಿ ಪ್ರಕಾರದ ವಿಷಾರೀ ಪ್ರಾಣಿಗಳು, ಪಕ್ಷಿಗಳು, ನವಿಲು ಮೊದಲು ಮಾಡಿ ॥೩೩೧॥ ಗೋಕುಲದಲ್ಲಿನ ಸರ್ವ ಜೀವಿಗಳನ್ನು ಕೃಪಾಳೂ, ಸರ್ವಸಮರ್ಥ ಶ್ರೀಕೃಷ್ಣನು ತನ್ನ ಸ್ವತಃ ಅಲೌಕಿಕ ಲೀಲೆಯಿಂದ ಉದ್ಧರಿಸಿದನು ॥೩೩೨॥ ಪಿತೃ ವಚನವನ್ನು ನಿಮಿತ್ತಮಾಡಿ ಸೀತಾ ವಿಯೋಗದ ಕಾರಣವನ್ನು ಮುಂದು ಮಾಡಿ ಶ್ರೀರಾಮಚಂದ್ರನು ಕರಡೀ, ಕಪೀ ರಾಕ್ಷಸರ ಉದ್ಧಾರವನ್ನು ಮಾಡಿದನು ॥೩೩೩॥ ಸೇವೆಯ ಯೋಗದಿಂದ ಕರಡೀ, ಕಪಿಗಳನ್ನು ಉದ್ಧಾರ ಮಾಡಿದನು. ಯುದ್ಧದ ನಿಮಿತ್ತದಿಂದ ರಾಕ್ಷಸರ ಉದ್ಧಾರವನ್ನು ಮಾಡಿದನು. ಇದೇನು ಮಹದಶ್ಚರ್ಯವಲ್ಲ. ಆತನ ಲೀಲೆಯು ಇದಕ್ಕಿಂತಲೂ ದೊಡ್ಡದಾಗಿರುವದನ್ನು ಕೇಳಿರಿ ॥೩೩೪॥ ಅಯೋಧ್ಯೆಯಿಂದ ಲಂಕೆಯವರೆಗೆ ದಾರಿ ಉದ್ದಕ್ಕೂ ವೃಕ್ಷಗಳು, ಪರ್ವತ, ತೃಣಾದಿ ವನಸ್ಪತೀ ಹಾಗೂ ಕ್ರಿಮಿ ಕೀಟಕ, ಇವುಗೆಳಲ್ಲವನ್ನೂ ಶ್ರೀರಾಮಚಂದ್ರನು ತನ್ನ ಲೀಲೆಯಿಂದ ಉದ್ಧರಿಸಿದನು ॥೩೩೫॥ ಈ ಪ್ರಕಾರವಾಗಿ ಜನಾರ್ದನನು ಅನೇಕ ಪ್ರಕಾರವಾದ ಅವತಾರಗಳನ್ನು ಮಾಡಿ ಸರ್ವರ ಉದ್ಧಾರವನ್ನು ಮಾಡುತ್ತಿರುವನು. ಆತನು ಈಗ ಒಬ್ಬ ಏಕನಾಥನನ್ನು ಪಾವನಗೊಳಿಸಿರವುದು ಯಾವ ಆಶ್ಚರ್ಯವಿದೆ? ॥೩೩೬॥ ಹೀಗಿದ್ದರೂ ಆತನು ಒಂದನ್ನು ಮಾತ್ರ ಮಹದಶ್ಚರ್ಯದ ಕಾರ್ಯವನ್ನು ಮಾಡಿರುವನು. ಅದೇನೆಂದರೆ ನನ್ನಂತಹ ಮೂರ್ಖನ ಮುಖದಿಂದ ಶ್ರೀಮದ್‌ಭಾಗವತದ ವಚನಗಳನ್ನು ಮರಾಠೀ ಭಾಷೆಯಲ್ಲಿ ನುಡಿಸಿದನು! ಈ ಯಾವ ನನ್ನ ಘಟನೆಯು ನನಗೂ ಕೂಡ ಆಶ್ಚರ್ಯವನ್ನುಂಟು ಮಾಡಿದೆ ॥೩೩೭॥ ಹೀಗೆ ಪರಿಪೂರ್ಣ ಕೃಪೆ ಮಾಡುವ ಆ ಜನಾರ್ದನ ಸ್ವಾಮಿಯವರಲ್ಲಿ ಈ ಏಕನಾಥನು ಪರಿಪೂರ್ಣವಾಗಿ ಶರಣಾಗಿರುವನು. ಅವರ ಚರಣ ಕಮಲಗಳ ಸ್ಮರಣೆಯನ್ನು ಮಾಡಿ ಈ ಯಾವ ಹದಿನ್ನಾರನೆಯ ಅಧ್ಯಾಯವನ್ನು ಸಂಪನ್ನಗೊಳಿಸಿದನು ॥೩೩೮॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವ-ಸಂವಾದೇ ಏಕಾಕಾರ-ಟೀಕಾಯಾಂ । ವಿಭೂತಿಯೋಗೋ ನಾಮ ಷೋಡಶೋಽಧ್ಯಾಯಃ ॥೧೬॥ ಶ್ರೀಕೃಷ್ಣಾರ್ಪಣಮಸ್ತು

॥ಶ್ಲೋಕ ।೪೪॥ ಓವ್ಯಾ ।೩೩೮॥

ಇತಿ ಶ್ರೀ ಭಾಗವತ ಮಹಾಪುರಾಣದ ಹನ್ನೊಂದನೆ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜರ ಭಾಷ್ಯೆಯ ವಿಭೂತಿಯೋಗ ನಾಮದ ಹದಿನಾರನೆಯ ಅಧ್ಯಾಯ ಸಂಪೂರ್ಣ। ಶ್ಲೋಕ ।೪೪॥ ಓವೀ ।೩೩೮॥

॥ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹದಿನೇಳನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯನಮಃ ॥ ಓಂ ನಮೋ ಶ್ರೀ ಸದ್ಗುರು ಮಹಾಮೇರು । ಸೂಕ್ಷ್ಮಸ್ವರೂಪೇ ತೂ ಗಿರಿವರು । ಚೈತನ್ಯ ಸ್ವಭಾವೇ ಅತಿಥೋರು । ತೂ ಆಧಾರೂ ಸರ್ವಾಂಚಾ ॥೧॥ ತುರ್ಝ್ಯಾ ನಿಜಬೋಧಾಚೀ ಶಿಖರೇ । ವೈಕುಂಠಕೈಲಾಸಾದಿ ಅತಿಥೋರೇ । ತೇಥೇ ಬ್ರಹ್ಮಾ ವಿಷ್ಣು ಮಹಾರುದ್ರೇ । ತುರ್ಝೇನಿ ಆಧಾರೇ ನಾಂದಿಜೇ ॥೨॥ ತುರ್ಝಿಯಾ ಆಧಾರಸ್ಥಿತೀ । ನಾಂದತೀ ತ್ರೈಲೋಕ್ಯ-ಲೋಕಪಂಕ್ತಿ । ಸಕಳ ಭೂತಾಂಚೀ ಉತ್ಪತ್ತೀ ಸ್ಥಿತೀ । ನಿದಾನ ಅಂತೀ ತುಜಮಾಜೀ ॥೩॥ ಸುರಾಸುರ ಲಹಾನಥೋರ । ಏಕ ಸೌಮ್ಯ ಏಕ ಕ್ರೂರ । ಇಯೇ ಭೂತೇ ಧರೂನಿ ನಿರ್ವಿಕಾರ । ಸ್ವರೂಪ ಸಾಚಾರ ಪೈ ತುರ್ಝೇ ॥೪॥ ತೇಥ ವಿವೇಕಾಚೇ ಆಗರ । ಸಚ್ಚಿದಾನಂದಾಚೇ ರತ್ನಾಕರ । ತೇಥಿಲ ಲಾಧಲ್ಯಾ ಕಂಕರ । ನೀಚ ತೇ ಥೋರ ವೇಲ್ಹಾರೇ ಹೋತೀ ॥೫॥ ಜ್ಯಾಚ್ಯಾ ಔಷಧೀಂಚಾ ಚಮತ್ಕಾರ । ಸೇವಿತಾ ಕರಿತೀ ಅಜರಾಮರ । ಜೇಥ ಚಿದ್ಗಂಗೇಚೇ ನಿರ್ಝರ । ನಿರಂತರ ಪ್ರವಾಹತೀ ॥೬॥ ಜೋ ಸುರನರಾಂಚಾ ವಿಶ್ರಾಮು । ಜೋ ಸಕಳ ಆಶ್ರಮಾಂಚಾ ಆಶ್ರಮು । ಜೋ ಕ್ರಿಯಾಕರ್ಮಾಚೇ ನೈಷ್ಕರ್ಮ್ಯ ।ಜೋ ನಿಜಧಾಮ ಜೀವಾಚೇ ॥೭॥ ಜೋ ಭಜನಾಚೀ ಕುಳವಾಡೀ । ಜೋ ಭಕ್ತಜೀವನಾಚೀ ವಾಡೀ । ಜೋ ಆವಡೀಚೀ ನಿಜ ಆವಡೀ । ಜೋ ಗೋಡಿಯೇಚೀ ಗೋಡೀ ನಿಜಾತ್ಮತಾ ॥೮॥ ಐಸಾ ಸದ್ಗುರು ಮಹಾಮೇರು । ಜೋ ಕಠಿಣತ್ವೇವೀಣ ಆಧಾರು । ಜ್ಯಾಚೇನಿ ಅಂಗೇ ಸಂಸಾರು । ಹೋಯ ಸುಖಕರು ಸಾಧಕಾ ॥೯॥ ತ್ಯಾ ಸಾಧಕಾಂಚೇ ಸಮಾಧಾನ । ಶಿಷ್ಯಾಂಚಾ ಸ್ವಾನಂದಘನ । ಆರ್ತ-ಚಾತಕಾ ನಿಜಜೀವನ । ಸ್ವಾಮೀ ಜನಾರ್ದನ ತುಷ್ಟಲಾ ॥೧೦॥ ತಯಾಚಾ ಜೋ ಚರಣಪ್ರಸಾದು ॥ ಶ್ರೀಭಾಗವತೀ ಏಕಾದಶಸ್ಕಂಧು । ಪೂರ್ವಾರ್ಧಾಚಾ ವಿನೋದು । ಭಾಷಾಪ್ರಬಂಧು ವಾಖಾಣಿಲಾ ॥೧೧॥

ಹೇ ಓಂಕಾರರೂಪ ಸದ್ಗುರುಸ್ವಾಮಿಯೇ, ನಿನಗೆ ನಮಸ್ಕಾರವು. ನಿನ್ನ ಸ್ವರೂಪವು ಮಹಾಮೇರು ಸಮಾನವಾಗಿದೆ. ನಿನ್ನ ಸ್ವರೂಪವು ಅತ್ಯಂತ ಸೂಕ್ಷ್ಮವಾದ್ದರಿಂದ ನೀನು ಯಾರಿಗೂ ಕಾಣಿಸುವುದಿಲ್ಲ. ಆದರೆ ಚೈತನ್ಯ ರೂಪದಿಂದ ನೀನು ಅತಿಶಯವಾಗಿ ದೊಡ್ಡವನಾದ್ದರಿಂದ ಸಂಪೂರ್ಣ ವಿಶ್ವದ ಆಧಾರನಾಗಿರುವೆ ॥೧॥ ನಿನ್ನ ಆತ್ಮಜ್ಞಾನದ ಶಿಖರಗಳು ಅತ್ಯಂತ ಎತ್ತರವಾಗಿವೆ. ವೈಕುಂಠ, ಕೈಲಾಸಕ್ಕಿಂತಲೂ ಅವು ಅತಿ ದೊಡ್ಡದಾಗಿವೆ. ಬ್ರಹ್ಮಾ, ವಿಷ್ಣು, ಮಹೇಶ್ವರರು ನಿನ್ನ ಆಧಾರದಿಂದ ವರ್ತಿಸುವರು ॥೨॥ ತ್ರೈಲೋಕ್ಯಾದಿ ಅನೇಕ ಭುವನಗಳಿಗೆ ನಿನ್ನದೇ ಆಧಾರವಿರುವುದು. ಸರ್ವ ಪ್ರಾಣಿಮಾತ್ರರ ಉತ್ಪತ್ತೀ,ಸ್ಥಿತಿ ಮತ್ತು ಪ್ರಳಯಗತಿ ಇವು ನಿನ್ನಲ್ಲಿ ಆಗುತ್ತಿರುವುವು ॥೩॥ ದೇವ,ದೈತ್ಯ, ಚಿಕ್ಕ, ದೊಡ್ಡ ಸೌಮ್ಯ, ಕ್ರೂರ ಹೀಗೆ ವಿವಿಧ ಪ್ರಕಾರದ ಭೂತಗಳನ್ನು ಧಾರಣೆ ಮಾಡಿದರೂ ನಿನ್ನ ಸ್ವರೂಪವು ನಿಜವಾಗಿಯೂ ನಿರ್ವಿಕಾರವಾಗಿರುವುದು ॥೪॥ ಅಲ್ಲಿ ವಿವೇಕದ ಆಗರವಿದ್ದು ಚಿದ್ರತ್ನದ ಖಣಿ ಇರುವುದು. ಅಲ್ಲಿನ ಒಂದು ಹರಳು ಮಾತ್ರ ಕೈಗೆ ಹತ್ತಲು ಬಡ ಮನುಷ್ಯನೂ ಕೂಡ ಮಹಾಶ್ರೀಮಂತನಾಗುವನು ॥೫॥ ಅಲ್ಲಿ ಔಷಧಗಳ ಮಹಾ ಚಮತ್ಕಾರವಿರುವುದು. ಇವುಗಳ ಸೇವನೆಯನ್ನು ಮಾಡಲು,ಮನುಷ್ಯನು ಕೂಡಲೇ ಅಜರಾಮರನಾಗುವನು. ಆ ಮೇರುಪರ್ವತದಿಂದ ಜ್ಞಾನಗಂಗೆಯ ಝರಿಗಳು ಅಖಂಡವಾಗಿ ಹರಿಯುತ್ತಿರುವುವು ॥೬॥ ಯಾವ ದೇವತೆಗಳ ಮತ್ತು ಮನುಷ್ಯರ ವಿಶ್ರಾಂತಿ ಸ್ಥಾನವು, ಯಾವ ಬ್ರಹ್ಮಚರ್ಯಾದಿ ಸರ್ವ ಆಶ್ರಮಗಳ ಆಶ್ರಮವು, ಯಾವ ಕ್ರಿಯಾಶಕ್ತಿಯ ನೈಷ್ಕರ್ಮ್ಯವು ಮತ್ತು ಜೀವದ ನಿಜಧಾಮವು ॥೭॥ ಯಾವಭಜನೆಯ ಕ್ಷೇತ್ರವು, ಭಕ್ತರ ಜೀವನದ ತೋಟದ ಭೂಮಿಯು, ಯಾವ ಪ್ರೀತಿಯ ಪ್ರೀತಿಯು, ಮತ್ತು ಆತ್ಮಾನುಭವದಿಂದ ಆನಂದದ ಆನಂದವು ॥೮॥ ಯಾರ ಆಧಾರದಿಂದ ಸಾಧಕರ ಸಂಸಾರವು ಸುಖಮಯ, ಪ್ರೇಮಮಯವಾಗುವುದೋ, ಅಂತಹ ಯಾವ ಸದ್ಗುರು ರೂಪ ಮಹಾಮೇರು ಕಠಿಣತ್ವವಿಲ್ಲದೇ ಸರ್ವರಿಗೂ ಆಧಾರವನ್ನು ಕೊಡುತ್ತಿರುವುದು ॥೯॥ ಆ ಯಾವ ಸಾಧಕರ ಸಮಾಧಾನ, ಶಿಷ್ಯರಿಗೆ ಮಾತ್ರ ಆತ್ಮಾನಂದರೂಪ ಮೇಘವೇ ಆಗಿ ಮುಮುಕ್ಷುರೂಪ ಚಾತಕಗಳ ಕೇವಲ ಜೀವನವಾಗಿರುವ ಆ ಯಾವ ಜನಾರ್ದನ ಸ್ವಾಮಿಯವರು ಪ್ರಸನ್ನರಾದರು ॥೧೦॥ ಅವರ ಚರಣ ಪ್ರಸಾದದ ಸಹಾಯದಿಂದ ಶ್ರೀಮದ್‌ಭಾಗವತದಲ್ಲಿನ ಹನ್ನೊಂದನೆಯ ಸ್ಕಂಧದ ಪೂರ್ವಾರ್ಧವನ್ನು ಅತ್ಯಂತ ಆನಂದದಿಂದ ಕವಿತಾರೂಪದಿಂದ ವರ್ಣಿಸಲ್ಪಟ್ಟಿತು ॥೧೧॥

ತೇಥೇ ಉದ್ಧವೇ ಪುಶಿಲ್ಯಾ ವಿಭೂತೀ । ತ್ಯಾ ಷೋಡಶಾಧ್ಯಾಯೀ ಶ್ರೀಪತೀ । ಸಾಂಗಿತಲ್ಯಾ ಯಥಾನಿಗುತೀ । ಭಜನಸ್ಥಿತೀ ಲಾಗೋನಿ ।।೧೨।। ತ್ಯಾ ವಿಭೂತೀಮಾಜೀ ನಿಜವರ್ಮ । ''ಭಕ್ತಾಂಚೇ ಜೇ ಭಜನಕರ್ಮ । ತೇ ಮೀ ಕೇವಳ ಆತ್ಮಾರಾಮ'' । ಐಸೇ ಪುರುಷೋತ್ತಮ ಬೋಲಿಲಾ ।।೧೩।। ತೇಥ ಆಶಂಕೇಚೀ ಉತ್ಪತ್ತೀ । ''ಕರಿತಾ ಕರ್ಮಾಚೀ ಕರ್ಮಗತೀ । ಕರ್ಮಠ ಜಾಹಲೇ ನೇಣೋ ಕಿತೀ । ತರೀ ಕರ್ಮೇ ಭಕ್ತೀ ಘಡೇ ಕೇವೀ'' ।।೧೪।। ಕರ್ಮೇ ಕರಿತಾ ವಾಡೇಕೋಡೇ । ಕರ್ಮೀ, ಕರ್ಮಠತಾ ನ ಚಢೇ । ಕರ್ಮಾ-ಮಾಜೀ ಮೋಕ್ಷ ಆತುಡೇ । ಹೇಚಿ ರೋಕಡೇ ಪುಸೋ ಪಾ ।।೧೫।। ಸ್ವಯೇ ಬೋಲಿಲಾ ಶ್ರೀಪತೀ । ಸಾತ್ತ್ವಿಕಾಂಚೀ ಜೇ ಕರ್ಮಸ್ಥಿತೀ । ತೇ ಕರ್ಮಚಿ ಮಾಝೀ ವಿಭೂತೀ । ಹೇ ಸೋಳಾವ್ಯಾ ಅಂತೀ ನಿರೂಪಿಲೇ ।।೧೬।। ಸ್ವಯೇ ಆಚರಿತಾ ಸ್ವಕರ್ಮ । ತೇ ಕರ್ಮಚಿ ಹೋಯ ಬ್ರಹ್ಮ । ಹೇಚಿ ಕರ್ಮಕ್ರಿಯೇಚೇ ವರ್ಮ । ದೇವಾಸೀ ಸುಗಮ ಪುಸೋ ಪಾ ।।೧೭।। ಐಸಾ ಪೋಟೀಚಾ ಆವಾಂಕಾ । ತೇಚಿ ಪುಸಾವಯಾ ಆಶಂಕಾ । ವರ್ಣಾಶ್ರಮಾಂಚೀ ಸ್ವಧರ್ಮಪೀಠಿಕಾ । ದೇವಾಸೀ ದೇಖಾ ಪುಸತ ।।೧೮।।

ಉದ್ಧವ ಉವಾಚ:-

ಯಸ್ತ್ವಯಾಭಿಹಿತಃ ಪೂರ್ವ ಧರ್ಮಸ್ತ್ವದ್ಭಕ್ತಿ ಲಕ್ಷಣಃ। ವರ್ಣಾಶ್ರಮಾಚಾರವತಾಂ ಸರ್ವೇಷಾಂ ದ್ವಿಪದಾಮಪಿ ।।೧।।

ಅರ್ಥ :- ಉದ್ಧವನು ಹೇಳಿದನು :-ಹೇ ಕಮಲನಯನ ಶ್ರೀಕೃಷ್ಣನೇ, ನೀನು ಪ್ರಾರಂಭದಲ್ಲಿ ವರ್ಣಾಶ್ರಮ ಧರ್ಮದ ಪಾಲನೆಯನ್ನು ಮಾಡುವುದಕ್ಕಾಗಿ ಮತ್ತು ಸಾಮಾನ್ಯ ಮನುಷ್ಯ ಮಾತ್ರರಿಗಾಗಿ ಧರ್ಮದ ಉಪದೇಶವನ್ನು ಮಾಡಿದ್ದೆ. ಆದರಿಂದ ನಿನ್ನ ಪ್ರಾಪ್ತಿಯಾಗುವಂತಹದ್ದು.

ಉದ್ಧವ ಮ್ಹಣೇ ಗಾ ಭಕ್ತಪತೀ । ಐಕತಾ ತುಝ್ಯಾ ನಿಜವಿಭೂತಿ । ಮಜ ಐಸೇ ಗಮಲೇ ಚಿತ್ತೀ । ಸ್ವಧರ್ಮೇಸೀ ಭಕ್ತೀ ಘಡೇ ಕೈಸೀ ।।೧೯।। ತುವಾ ಕಲ್ಪಾದಿ ವಾಡೇಕೋಡೇ । ಸ್ವಧರ್ಮಕರ್ಮೇ ಭಕ್ತಿ ಜೋಡೇ । ಹೇ ವರ್ಣಾಶ್ರಮನಿಜನಿವಾಡೇ । ನಿರೂಪಣ ಚೋಖಡೇ ನಿರೂಪಿಲೇ ।।೨೦।। ಸರ್ವಾ ಮಾನವಾ ಪರಮ ಗತಿ। ಸ್ವಧರ್ಮೇ ಘಡೇ ಭಗವದ್ಭಕ್ತಿ । ಯಾ ನಿರೂಪಣಾಚೀ ನಿಗುತೀ । ತುವಾ ನಿಶ್ಚಿತೀ ನಿರೂಪಿಲೀ ।।೨೧।।

ಯಥಾಽನುಷ್ಠೀಯಮಾನೇನ ತ್ವಯಿ ಭಕ್ತಿರ್ನೃಣಾಂ ಭವೇತ್। ಸ್ವಧರ್ಮೇಣಾಽರವಿಂದಾಕ್ಷ ತತ್ಸಮಾಖ್ಯಾತುಮರ್ಹಸಿ ।।೨।।

ಅರ್ಥ:- ಮನುಷ್ಯನು ಯಾವ ಪ್ರಕಾರದ ತನ್ನ ಧರ್ಮದ ಅನುಷ್ಠಾನ ಮಾಡಿದರೆ ನಿಮ್ಮ ಚರಣ ಕಮಲಗಳಲ್ಲಿ ಆತನಿಗೆ ಭಕ್ತಿಯು ಪ್ರಾಪ್ತವಾಗುವುದೆಂಬುದನ್ನು ಈಗ ಕೃಪೆ ಮಾಡಿ ಹೇಳಿರಿ.

ಅದರಲ್ಲಿ ಉದ್ಧವನು ಶ್ರೀಕೃಷ್ಣನಿಗೆ ವಿಭೂತಿ ವಿಷಯವಾಗಿ ಕೇಳಿದನು. ಶ್ರೀಹರಿಯು ಹದಿನಾರನೆಯ ಅಧ್ಯಾಯದಲ್ಲಿ ವಿಭೂತಿಗಳನ್ನು ಸವಿಸ್ತಾರವಾಗಿವರ್ಣಿಸಿದನು,. ಮತ್ತು ಭಜನೆಯ ಸ್ಥಿತಿಯನ್ನೂ ಕೂಡ ಹೇಳಿದನು ।।೧೨।। ಆ ವಿಭೂತಿಗಳ ವರ್ಣನೆಯಲ್ಲಿ ಶ್ರೀಕೃಷ್ಣನು ಗುಹ್ಯವಾದ ಮಾತನ್ನು ಹೇಳಿದನು. ಭಕ್ತರ ಯಾವ ಭಜನಕರ್ಮವು ಅದು ಕೇವಲ ನಾನೇ ಆತ್ಮರಾಮನಾಗಿರುವೆ. ಇದೇ ಆ ಮರ್ಮವು ।।೧೩।। ಆಗ ಅದರಲ್ಲಿ ಕರ್ಮಗಳನ್ನು ಮಾಡುತ್ತ ಎಷ್ಟೋ ಜನರು ಕರ್ಮಠರಾಗುವರು. ಇದರ ಗಣೆತವೇ ಇಲ್ಲ. ಹಾಗಾದರೆ ಕರ್ಮದಿಂದ ಮುಕ್ತಿಯು ಹೇಗೆ ದೊರಕುವುದು? ಎಂಬ ಪ್ರಶ್ನೆಯು ಹುಟ್ಟಿಕೊಂಡಿತು ।।೧೪।। ಪ್ರೀತಿಯಿಂದ ಕರ್ಮಗಳನ್ನು ಮಾಡುತ್ತಿರಲು ಕರ್ಮಗಳಲ್ಲಿ ಕರ್ತೃತ್ವ ಅಹಂಕಾರವು ನಿರ್ಮಾಣವಾಗದ ಮತ್ತು ಕರ್ಮದಿಂದ ಮೋಕ್ಷವಾಗುವ ಅಂತಹ ಉಪಾಯವನ್ನು ಪ್ರತ್ಯಕ್ಷವಾಗಿ ಕೇಳೋಣ ।।೧೫।। ಕಾರಣ ಸಾಧಕರ ಯಾವ ಸಾತ್ವಿಕ ಕರ್ಮವು ಅದು ನನ್ನ ವಿಭೂತಿಯಾಗಿರುವುದು ಎಂದು ಹದಿನಾರನೆಯ ಅಧ್ಯಾಯದ ಕೊನೆಯಲ್ಲಿ ಸ್ಪಷ್ಟವಾಗಿ ಸ್ವತಃ ಶ್ರೀಕೃಷ್ಣನೇ ಹೇಳಿರುವನು ।।೧೬।। ತಾನಾಗಿಯೇ ಸ್ವಕರ್ಮದ ಆಚರಣೆಯನ್ನು ಮಾಡಲು ಆ ಕರ್ಮವೇ ಬ್ರಹ್ಮಸ್ವರೂಪವಾಗುವುದು. ಈ ಯಾವ ಕರ್ಮದಲ್ಲಿನ ಮರ್ಮವನ್ನು ಸುಲಭಮಾಡಿ ಹೇಳುವುದಕ್ಕಾಗಿ ದೇವನಿಗೆ ಕೇಳೋಣ ।।೧೭।। ಈ ಪ್ರಕಾರವಾಗಿ ಉದ್ಧವನು ತನ್ನ ಮನದಲ್ಲಿನ ಶಂಕೆಯನ್ನು ನಿರಸನಗೊಳಿಸಲು ಶ್ರೀಕೃಷ್ಣನಿಗೆ ನಮ್ರತೆಯಿಂದ ವರ್ಣಾಶ್ರಮ ಮತ್ತು ಸ್ವಧರ್ಮ ಇವುಗಳ ಮೂಲ ಪೀಠಿಕೆಯನ್ನು ಕೇಳಹತ್ತಿದನು ।।೧೮।।

ಉದ್ಧವನು ಹೇಳಿದನು :- ಹೇ ಭಕ್ತರ ಈಶ್ವರನೇ, ನಿನ್ನ ಆತ್ಮವಿಭೂತಿ ಎಲ್ಲವನ್ನೂ ಕೇಳಿ ಸ್ವಧರ್ಮದಿಂದ ಭಕ್ತಿಯು ಹೇಗೆ ಸಾಧಿಸುವುದು? ಎಂದು ನನ್ನ ಮನಸ್ಸಿಗೆ ಹೀಗೆ ಅನಿಸುತ್ತಿರುವುದು ।।೧೯।। ಸ್ವಧರ್ಮ ಕರ್ಮದಿಂದ ಭಕ್ತಿಯು ಪ್ರಾಪ್ತವಾಗುವುದು, ಹೀಗೆ ನೀನು ಕಲ್ಪದ ಪ್ರಾರಂಭದಿಂದಲೂ ಹೇಳುತ್ತಿರುವೆ. ಅದಕ್ಕಾಗಿ ವರ್ಣಾಶ್ರಮಗಳು ಹೇಗೆ ಶ್ರೇಷ್ಠವಾಗಿವೆ ಎಂಬುವ ಉತ್ಕೃಷ್ಟ ಪ್ರತಿಪಾದನೆಯನ್ನು ನೀನು ಮಾಡಿರುವೆ ।।೨೦।। ಸರ್ವ ಪ್ರಾಣಿ ಮಾತ್ರರಿಗೆ ಉತ್ತಮ ಗತಿ ಮತ್ತು ಭಗವದ್ಭಕ್ತಿ ಇವು ಸ್ವಧರ್ಮದಿಂದಲೇ ಪ್ರಾಪ್ತವಾಗಬಲ್ಲವು ಎಂದು ನೀನು ಯಥಾರ್ಥವಾಗಿ ಮತ್ತು ನಿಶ್ಚಿತವಾಗಿ ನಿರೂಪಣೆಯನ್ನು ಮಾಡಿರುವೆ ।।೨೧।।

ಐಕೇ ಕಮಲನಯನಾ ಅಚ್ಯುತಾ । ಜೋ ಕಾ ಸ್ವಧರ್ಮ ಅನುಷ್ಠಿತಾ । ತುಝೀ ನಿಜಭಕ್ತೀ ಸ್ವಭಾವತಾ। ಪ್ರಾಣಿಯಾಂಚ್ಯಾ ಹಾತಾ ಜೇಣೇ ಲಾಭೇ ॥೨೨॥ ತೇ ಕರ್ಮಕುಶಲತೇಚೀ ಸ್ಥಿತೀ । ಮಜಲಾಗೀ ಸಾಂಗಾವೀ ಸುನಿಶ್ಚಿತೀ । ಕಮಲನಯನಾ ಕಮಲಾಪತೀ । ಕೃಪಾಮೂರ್ತೀ ಮಾಧವಾ ॥೨೩॥ ತೂ ಐಸೇ ಮ್ಹಣಶೀಲ ಶ್ರೀಪತೀ । "ಮ್ಯಾ ಕಲ್ಪಾಚೇ ಆಧೀ ಕವಣಾಪ್ರತೀ । ಸಾಂಗಿತಲೀ ಸ್ವಧರ್ಮಸ್ಥಿತೀ" । ತರೀ ತೇ ವಿನಂತೀ ಅವಧಾರೀ ॥೨೪॥

ಪುರಾ ಕಿಲ ಮಹಾಬಾಹೋ ಧರ್ಮಂ ಪರಮಕಂ ಪ್ರಭೋ । ಯತ್ತೇನ ಹಂಸರೂಪೇಣ ಬ್ರಹ್ಮಣೇಽಭಾತ್ಥ ಮಾಧವ ॥೩॥

ಅರ್ಥ:- ಹೇ ಮಹಾಭಾಹೋ, ಪ್ರಭೋ, ತಾವು ಪ್ರಾರಂಭದಲ್ಲಿ ಹಂಸರೂಪದಿಂದ ಅವತಾರ ಧಾರಣೆ ಮಾಡಿ ಬ್ರಹ್ಮದೇವನಿಗೆ ಆತನ ಪರಮಧರ್ಮದ ಉಪದೇಶವನ್ನು ಮಾಡಿರುವಿರಿ.

ಜಾಚ್ಯಾ ಬಾಹೂಚಾ ಪ್ರತಾಪ ಅದ್ಭುತ । ವಿಶ್ವಮರ್ಯಾದಾ ಧರ್ಮಸೇತ । ರಾಖೋ ಜಾಣೇ ಯಥಾಸ್ಥಿತ । ತ್ಯಾಲಾಗೀ ಮ್ಹಣಿಪತ "ಮಹಾಬಾಹೋ" ॥೨೫॥ ಸ್ವಧರ್ಮಕರ್ಮಾಚಾ ದ್ಯೋತಕು । ಅನಾದಿ ವಕ್ತಾ ತೂ ಏಕು । ವರ್ಣಾಶ್ರಮಾದಿ ವಿವೇಕು। ಉಪದೇಶಕು ತೂ ಸ್ರಷ್ಟ್ಯಾಚಾ ॥೨೬॥ ಪೂರ್ವೀ ಹಂಸರೂಪೇ ಸವಿಸ್ತರ । ಬೋಲಿಲಾಸೀ ಸ್ವಧರ್ಮಾಚಾ ನಿರ್ಧಾರ । ತ್ಯಾಂತೀಲ ತುವಾ ಅಧ್ಯಾತ್ಮಸಾರ । ನಿವಡೂನಿ ಸಾಚಾರ ಮಜ ಸಾಂಗಿತಲೇ ॥೨೭॥ ತೇಥೀಲ ಸ್ವಧರ್ಮಾಚೇ ಲಕ್ಷಣ । ಮಜ ನ ಕಳೇಚಿ ನಿರೂಪಣ । ಜೇ ತೂ ಹಂಸರೂಪೇ ಆಪಣ । ಸ್ವಧರ್ಮ ಜಾಣ ಬೋಲಿಲಾಸೀ ॥೨೮॥ ತುರ್ಝೇನಿ ಮುಖೇ ಯಥೋಚಿತೇ । ಭಕ್ತಿಯುಕ್ತ ಆಶ್ರಮಧರ್ಮಾತೇ । ಸನತ್ಕುಮಾರ ಜಾಹಲೇ ಶ್ರೋತೇ । ತೇಚಿ ಮಾತೇ ಸಾಂಗಾವೇ ॥೨೯॥ ಮ್ಹಣಸೀ "ಸನತ್ಕುಮಾರಾದ್ವಾರಾ । ಧರ್ಮ ವಿಸ್ತಾರಲಾ ಪರಂಪರಾ । ತೋ ವಿಚಾರೂನಿ ಕರೀ ನಿರ್ಧಾರಾ" । ಹೇ ಸಾರಂಗಧರಾ ಘಡೇನಾ ॥೩೦॥

ಸ ಇದಾನೀ ಸುಮಹತಾ ಕಾಲೇನಾಮಿತ್ರಕರ್ಶನ । ನ ಪ್ರಾಯೋ ಭವಿತಾ ಮರ್ತ್ಯಲೋಕೇ ಪ್ರಾಗನುಶಾಸಿತಃ ॥೪॥

ಅರ್ಥ :-ಹೇ ರಿಪುದನನೇ, ಬಹಳ ಕಾಲವಾದ್ದರಿಂದ ಆ ಉಪದೇಶವು ಮರ್ತ್ಯಲೋಕದಲ್ಲಿ ಬಹುಶಃ ಇಲ್ಲದಾಗಿದೆ. ಕಾರಣ ನಿಷ್ಠು ಆ ಉಪದೇಶಕ್ಕೆ ಅನಂತ ಕಾಲ ಗತಿಸಿರುವುದು.

ಕಾಮ ಕ್ರೋಧ ಲೋಭ ಅಭಿಮಾನ । ಹೇ ಭಕ್ತಾಂಚೇ ವೈರೀ ಸಹಾಜಣ । ತ್ಯಾಂಚೇ ತೂ ಕರಿಶೀ ನಿರ್ದಳಣ । ಅರಿಮರ್ದನ ಯಾ ಹೇತೂ ॥೩೧॥ ಭಕ್ತಾಂಚೇ ಅರಿನಿರ್ದಳಣ । ತುಜವಾಂಚೋನಿ ಕರ್ತಾ ಆನ । ತಿಹೀ ಲೋಕೀ ನಾಹೀ ಜಾಣ । ಅನನ್ಯಶರಣ ಯಾಲಾಗೀ ॥೩೨॥

ಹೇ ಕಮಲ ನಯನನೇ, ಅಚ್ಯುತನೇ, ಕೇಳು. ಯಾವ ಸ್ವಧರ್ಮದ ಆಚರಣೆಯನ್ನು ಮಾಡಲು ನಿನ್ನ ಭಕ್ತಿಯು ಭಕ್ತರಿಗೆ ಸಹಜವಾಗಿ ಪ್ರಾಪ್ತವಾಗುವುದು ॥೨೨॥ ಹೇ ಕಮಲ ನಯನೇ, ಕಮಲಾಪತಿಯೇ, ಕೃಪಾಮೂರ್ತಿಯೇ, ಮಾಧವನೇ, ನನಗೆ ಆ ಯಾವ ಕರ್ಮ ಕೌಶಲ್ಯದ ಲಕ್ಷಣಗಳನ್ನು ನಿಶ್ಚಿತವಾಗಿ ಹೇಳು ॥೨೩॥ ಹೇ ಲಕ್ಷ್ಮೀಪತಿಯೇ, ನೀನು ಕದಾಚಿತ್‌ವಾಗಿ ನಾನು ಕಲ್ಪದ ಆದಿಯಲ್ಲಿ ಸ್ವಧರ್ಮದ ಸ್ಥಿತಿಯನ್ನು ಯಾರಿಗೆ ಹೇಳಿದೆ ಎಂದು ಹೇಳಬಹುದು ಅದಕ್ಕಾಗಿ ಕೇಳು ॥೨೪॥

ಯಾರ ಬಾಹುಗಳ ಪರಾಕ್ರಮವು ಅತ್ಯಂತ ಅದ್ಭುತವಾಗಿದ್ದು, ಯಾರು ವಿಶ್ವ ಮರ್ಯಾದೆಯಲ್ಲಿನ ಧರ್ಮರೂಪ ಸೇತುವೆಯನ್ನು ವ್ಯವಸ್ಥಿತವಾಗಿ ಇಡಬಲ್ಲನೋ, ಆತನಿಗೆ ಮಹಾಬಾಹು ಎಂದು ಹೇಳುವರು ॥೨೫॥ ನೀನು ಸ್ವಧರ್ಮದ ಪ್ರಕಾಶಕನಾಗಿರುವೆ, ನೀನು ಅನಾದಿಯಿಂದಲೂ ವಕ್ತಾನಾಗಿರುವೆ. ಬ್ರಹ್ಮದೇವನಿಗೆ ವರ್ಣಾಶ್ರಮ ಕರ್ಮಗಳನ್ನು ವಿವೇಕದಿಂದ ಉಪದೇಶವನ್ನು ಮಾಡುವವ ನೀನಾಗಿರುವೆ ॥೨೬॥ ಈ ಹಿಂದೆ ಹದಿಮೂರನೆಯ ಅಧ್ಯಾಯದಲ್ಲಿ ಹಂಸರೂಪದಿಂದ ಯಾವ ಸ್ವಧರ್ಮದ ನಿಶ್ಚಿತ ವಿಚಾರ ನೀನು ಹೇಳಿರುವೆ. ಅದರಲ್ಲಿನ ಆತ್ಮಜ್ಞಾನದ ಸಾರವನ್ನು ತೆಗೆದು ನೀನು ಉತ್ಕೃಷ್ಟ ಪ್ರಕಾರಗಳಿಂದ ನನಗೆ ಹೇಳಿರುವೆ ॥೨೭॥ ಆದರೆ ಹಂಸರೂಪದಿಂದ ನೀನಾಗಿಯೇ ಯಾವ ಸ್ವಧರ್ಮವನ್ನು ಹೇಳಿರುವಿಯೋ, ಆ ಸ್ವಧರ್ಮದ ಲಕ್ಷಣ ಹಾಗೂ ಅದರ ನಿರೂಪಣೆಯು ನನಗೆ ಯಾವುದೂ ತಿಳಿಯಲಿಲ್ಲ ॥೨೮॥ ಅದಕ್ಕಾಗಿಯೇ ಸನತ್ಕುಮಾರರು ನಿಮ್ಮ ಮುಖದಿಂದ ಯಾವ ಯಥಾರ್ಥ ಭಕ್ತಿಯುಕ್ತ ಆಶ್ರಮಧರ್ಮವನ್ನು ಕೇಳಿದರೋ, ಅದನ್ನೇ ನೀವು ನನಗೀಗ ಹೇಳಿರಿ ॥೨೯॥ ಹೇ ಸಾರಂಗಧರನೇ, ನಾನು ಸನತ್‌ಕುಮಾರರ ಮುಖಾಂತರವಾಗಿ ಪರಂಪರೆಯಿಂದ ಧರ್ಮವನ್ನು ಪ್ರಸಾರಗೊಳಿಸಿರುವೆನು. ಅದರ ವಿಚಾರವನ್ನು ಮಾಡಿ ನಿಶ್ಚಿತಗೊಳಿಸು ಎಂದು ನೀನು ನನಗೆ ಹೇಳಬಹುದು. ಆದರೆ ಅದು ಈಗ ಶಕ್ಯವಿಲ್ಲ ॥೩೦॥

ಕಾಮ, ಕ್ರೋಧ, ಲೋಭ, ಅಭಿಮಾನ ಇತ್ಯಾದಿ ಇವು ಆರು ಭಕ್ತರ ಮಹಾ ವೈರಿಗಳಾಗಿರುವುವು. ಇವುಗಳ ನಾಶವನ್ನು ನೀನೇ ಮಾಡುವೆ. ಆದ್ದರಿಂದ ನಿನಗೆ ಅರಿಮರ್ದನ ಎಂದು ಹೇಳುವರು ॥೩೧॥ ಭಕ್ತರ ಶತ್ರುಗಳನ್ನು ನಾಶ ಮಾಡುವವರು ಈ ತ್ರಿಭುವನದಲ್ಲಿ ನಿನ್ನನ್ನು ಬಿಟ್ಟು ಇನ್ನಾರೂ ಇರುವುದಿಲ್ಲ. ಆದ್ದರಿಂದ ನಾನು ನಿನಗೆ ಅನನ್ಯ ಭಾವದಿಂದ ಶರಣು ಬಂದಿರುವೆನು ॥೩೨॥

ತುವಾ ಕಲ್ಪಾಚಿಯೇ ಆದೀಸೀ । ಉಪದೇಶಿಲೇ ಸನಕಾದಿಕಾಂಸೀ । ಬಹುಕಾಳ ಜಾಹಲೇ ತ್ಯಾ ಬೋಲಾಸೀ । ತೇ ಧರ್ಮ ಕೋಣಾಪಾಶೀ ಪ್ರಾಯಶಾ ನಾಹೀ ।೩೩।। ಪ್ರಾಯಶಾ ಯೇ ಕಾಳೀ ನರ । ನಾಹೀ ಸ್ವಧರ್ಮೀ ತತ್ಪರ । ಶಿಶ್ನೋದರೀ ಅತ್ಯಾದರ । ಸ್ವಧರ್ಮವಿಚಾರ ವಿಸರೋನೀ ।೩೪।। ಯಥಾತಥ್ಯೇ ಧರ್ಮಪ್ರತಿಷ್ಠಾ । ಕರೀ ಐಸಾ ನಾಹೀ ಉಪದೇಷ್ಟಾ । ಯಾಲಾಗೀ ಜೀ ವೈಕುಂಠಾ । ಸ್ವಧರ್ಮನಿಜನಿಷ್ಠಾ ಮಜ ಸಾಂಗ ।೩೫।।

ವಕ್ತಾ ಕರ್ತಾಽವಿತಾ ನಾನ್ಯಾ ಧರ್ಮಸ್ಯಾಚ್ಯುತ ತೇ ಭುವಿ । ಸಭಾಯಾಮಪಿ ವೈರಿಂಚ್ಯಾಂ ಯತ್ರ ಮೂರ್ತಿಧರಾಃ ಕಲಾಃ ।೮।।

ಕರ್ತಾಽವಿತ್ರಾ ಪ್ರವಕ್ತ್ರಾಚ ಭವತಾ ಮಧುಸೂದನ । ತ್ಯಕ್ತೇ ಮಹೀತಲೇ ದೇವ ವಿನಿಷ್ಟಂ ಕಃ ಪ್ರವಕ್ಷ್ಯತಿ ।೯।।

ಅರ್ಥ :- ಹೇ ಅಚ್ಯುತನೇ, ಈ ಭೂಲೋಕದಲ್ಲಿ ಆ ಯಾವ ಧರ್ಮದ ವಕ್ತಾ, ಕರ್ತಾ ಮತ್ತು ರಕ್ಷಿತಾ ನಿನ್ನ ಹೊರತಾಗಿ ಅನ್ಯರಾರೂ ಇರುವುದಿಲ್ಲ. ಕಾರಣ ಬ್ರಹ್ಮದೇವನ ಸಭೆಯಲ್ಲಿಯೂ ಕೂಡ ನೀನು ವೇದಾದಿ ಕರ್ತನಾಗಿರುವೆ. ಹೀಗೆ ಕರ್ತಾ, ರಕ್ಷಿತಾ ಮತ್ತು ಪ್ರವಕ್ತಾನಾಗಿರುವ ನೀನು ಭೂಲೋಕದ ತ್ಯಾಗವನ್ನು ಮಾಡಿದ ನಂತರ ನಷ್ಟವಾಗಿರುವ ಈ ಧರ್ಮದ ಉಪದೇಶವನ್ನು ಯಾರು ಮಾಡಬೇಕು?

ಅಲುಪ್ತಜ್ಞಾನೇ ಸ್ವಧರ್ಮವಕ್ತಾ । ಯೇ ಭೂಲೋಕೀ ಗಾ ತತ್ತ್ವತಾ । ತುಜವಾಂಚೋನಿ ಅಚ್ಯುತಾ । ಆಣಿಕ ಸರ್ವಥಾ ಅಸೇನಾ ।೩೬।। ಏಕ ಶಾಸ್ತ್ರಮರ್ಯಾದಾವ್ಯುತ್ಪತ್ತೀ । ಕರ್ಮಕಲಾಪ ಬೋಲೋ ಜಾಣತೀ । ಪರೀ ಕರ್ಮಾಚೀ ಆಚರತೀ ಗತೀ । ತೇಹೀ ನೇಣತೀ ತತ್ತ್ವತಾ ।೩೭।। ಯಾಲಾಗೀ ಗಾ ಭಗವಂತಾ । ಧರ್ಮಾಚಾ ಕರ್ತಾ ವಕ್ತಾ । ಧರ್ಮ ವಿಸ್ತಾರೂನಿ ರಕ್ಷಿತಾ । ಆಣಿಕ ಸರ್ವಥಾ ಅಸೇನಾ ।೩೮।। ಪಹಾತಾ ಯಾ ಲೋಕಾಂಚಾ ಠಾಯೀ । ತುಜ ಐಸಾ ಸರ್ವಜ್ಞ ನಾಹೀ । ಐಸೇ ವಿಚಾರಿತಾ ಲೋಕೀ ತಿಹೀ । ತುಜ ಸಮಾನ ನಾಹೀ ಸಾಂಗತಾ ।೩೯।। ಜರೀ ಸತ್ಯಲೋಕ ಪಾಹಣೇ । ಜೇಥೇ ಚಾರೀ ವೇದ ಷಡ್‌ದರ್ಶನೇ । ಇತಿಹಾಸ ಸ್ಮೃತಿ ಪುರಾಣೇ । ಮೂರ್ತಿಮಂತಪಣೇ ಉಭೀ ಅಸತೀ ।೪೦।। ತೇಥೇ ಸನಕಾದಿಕಾಂಚಾ ಪ್ರಶ್ನ । ಬ್ರಹ್ಮಯಾಸೀ ನ ಸಾಂಗವೇ ಜಾಣ । ತುವಾ ಹಂಸರೂಪೇ ಯೇಊನ ಸಮಾಧಾನ ದೀಧಲೇ ।೪೧।। ತೇ ಬ್ರಹ್ಮಸಭೇಚ್ಯಾ ಠಾಯೀ । ತುಜಐಸಾ ವಕ್ತಾ ನಾಹೀ । ತೋ ತೂ ಭಕ್ತಾನುಗ್ರಹೇ ಪಾಹೀ । ಯಾ ಲೋಕಾಂಚ್ಯಾ ಠಾಯೀ ಮೂರ್ತಿಮಂತ ಬ್ರಹ್ಮ ।೪೨।। ತೇಣೇ ತುವಾ ಸರ್ವ ಕರ್ಮಧರ್ಮಸಂಸ್ಥಾ । ಕರೂನಿ ದಾವಿಲೀ ತತ್ತ್ವತಾ । ತೋ ತೂ ನಿಜಧಾಮಾ ಗೇಲಿಯಾ ಆತಾ । ಸ್ವಧರ್ಮವಕ್ತಾ ಮಗ ಕೈಚಾ ।೪೩।।

ಕಲ್ಪದ ಪ್ರಾರಂಭದಲ್ಲಿ ನೀನು ಸನಕಾದಿಕರಿಗೆ ಉಪದೇಶವನ್ನು ಮಾಡಿರುವೆ. ಆದರೆ ಆ ಉಪದೇಶಕ್ಕೆ ಬಹಳಷ್ಟು ಕಾಲವು ಗತಿಸಿರುವುದು. ಈಗ ಆ ಧರ್ಮವು ಬಹುತೇಕವಾಗಿ ಯಾರಿಗೂ ಕಲ್ಪನೆಕೂಡ ಇರಲಿಕ್ಕಿಲ್ಲ ।೩೩।। ಕಾರಣ ಈ ಕಾಲದಲ್ಲಿ ಜನರು ಸ್ವಧರ್ಮದಲ್ಲಿ ತತ್ಪರಾಗಿರುವುದಿಲ್ಲ. ಆ ಯಾವ ಸ್ವಧರ್ಮವನ್ನು ಮರೆತುಬಿಟ್ಟಿರುವರು. ಇವರು ಶಿಶ್ನೋದರ ಪರಾಯಣರಾಗಿ ಅದರಲ್ಲಿಯೇ ರಮಾರಮಣರಾಗಿರುವರು ।೩೪।। ಆದ್ದರಿಂದ ಯಥಾರ್ಥವಾದ ಧರ್ಮವು ಹೃದಯಕ್ಕೆ ನಾಟುವಂತೆ ಉಪದೇಶವನ್ನು ಮಾಡುವವರು ಯಾರೂ ಉಳಿದಿರುವುದಿಲ್ಲ. ಅದಕ್ಕಾಗಿ ಹೇ ವೈಕುಂಠನಾಯಕನೇ, ಸ್ವಧರ್ಮದ ನಿಷ್ಠೆಯನ್ನು ಕೃಪೆಮಾಡಿ ನೀನೇ ನನಗೆ ಈಗ ಹೇಳು ।೩೫।।

ಹೇ ಶ್ರೀಕೃಷ್ಣನೇ, ಯಾರ ಜ್ಞಾನವು ಮಾಯೆಯಿಂದ ಆಚ್ಛಾದಿತವಾಗಿರುವುದಿಲ್ಲವೋ, ಅಂತಹ ಧರ್ಮದ ಉಪದೇಶಕನು ಈ ಜಗತ್ತಿನಲ್ಲಿ ನಿನ್ನ ಹೊರತಾಗಿ ಬೇರೆ ಯಾರೊಬ್ಬರೂ ಕಾಣಸುತ್ತಿಲ್ಲ ।೩೬।। ಅನೇಕ ವಿದ್ವಾನರು ಹೀಗಿರುವರು, ಅವರು ಅನೇಕ ಶಾಸ್ತ್ರಸಿದ್ಧ ಗ್ರಂಥಗಳ ಅಭ್ಯಾಸವನ್ನು ಮಾಡಿ, ಅದರರ್ಥವನ್ನು ಮತ್ತು ಅಖಿಲ ಕರ್ಮಗಳ ಉಪದೇಶವನ್ನು ಹೇಗೆ ಮಾಡಬೇಕೆಂಬುದು ಉತ್ತಮ ರೀತಿಯಲ್ಲಿ ತಿಳಿದಿರುವರು. ಆದರೆ ಆ ಕರ್ಮಗಳ ಆಚರಣೆಯನ್ನು ಹೇಗೆ ಮಾಡಬೇಕೆಂಬುವುದು ಮಾತ್ರ ಆ ವಿದ್ವಾನರು ತಿಳಿದಿರುವುದಿಲ್ಲ ।೩೭।। ಅದಕ್ಕಾಗಿಯೇ ಹೇ ಭಗವಾನ ಶ್ರೀಕೃಷ್ಣನೇ, ಧರ್ಮದ ಕರ್ತಾ, ಧರ್ಮದ ವಕ್ತಾ, ಧರ್ಮದ ವಿಸ್ತಾರವನ್ನು ಮಾಡಿ ಅದರ ಸಂವರ್ಧನ ಮತ್ತು ಸಂರಕ್ಷಣ ಮಾಡುವವರು ನಿನ್ನ ಹೊರತಾಗಿ ಇನ್ನಾರೂ ಕಾಣಸರು ।೩೮।। ಈ ಲೋಕದಲ್ಲಿ ನೋಡಲು ಹೋದರೆ ನಿನ್ನಂತಹ ಸರ್ವಜ್ಞರು ಯಾರೊಬ್ಬರೂ ಇರುವುದಿಲ್ಲ. ವಿಚಾರ ಮಾಡಿ ನೋಡಿದರೆ ನಿನ್ನಂತಹ ಉಪದೇಶಕರು ಈ ಮೂರು ಲೋಕಗಳಲ್ಲಿಯೂ ಇರುವುದಿಲ್ಲ ।೩೯।। ಸತ್ಯಲೋಕದತ್ತ ನೋಡಲು ಹೋದರೆ ನಾಲ್ಕು ವೇದಗಳು, ಆರು ಶಾಸ್ತ್ರಗಳು, ಇತಿಹಾಸಗಳು, ಸ್ಮೃತಿ, ಪುರಾಣಗಳು ಇವು ಅಲ್ಲಿ ಮೂರ್ತಿಮಂತವಾಗಿನಿಂತುಕೊಂಡಿರುವುವು ।೪೦।। ಆದರೆ ಅಲ್ಲಿಯೂ ಕೂಡ ಸನಕಾದಿಕರ ಪ್ರಶ್ನೆಗೆ ಬ್ರಹ್ಮದೇವನಿಗೂ ಸಹ ಉತ್ತರ ಹೇಳಲು ಬರಲಿಲ್ಲ. ಆದ್ದರಿಂದ ನೀನು ಅಲ್ಲಿ ಹಂಸರೂಪದಿಂದ ಪ್ರಕಟನಾದೆ. ಅವರ ಪ್ರಶ್ನೆಯ ಉತ್ತರವನ್ನು ಕೊಟ್ಟು ಅವರನ್ನು ಸಮಾಧಾನಪಡಿಸಿದೆ ।೪೧।। ಬ್ರಹ್ಮದೇವನ ಸಭೆಯಲ್ಲಿ ನಿನ್ನಂತಹ ವಕ್ತಾ ಇರುವುದಿಲ್ಲ. ನಿಜವಾಗಿಯೂ ನೀನು ಮೂರ್ತಿಮಂತ ಬ್ರಹ್ಮವೇ ಆಗಿರುವೆ. ಕೇವಲ ಭಕ್ತರ ಉದ್ಧಾರಕ್ಕಾಗಿ ನೀನು ಈ ಲೋಕದಲ್ಲಿ ಅವತರಿಸಿರುವೆ ।೪೨।। ಹೀಗೆ ಆ ಯಾವ ಸರ್ವ ಧರ್ಮಗಳ ಸ್ಥಾಪನೆಯನ್ನು ಮಾಡಿ ಪ್ರತ್ಯಕ್ಷವಾಗಿ ಅದರಂತೆ ಆಚರಣೆಯನ್ನು ಮಾಡಿ ತೋರಿಸುವೆ. ಹೀಗಿರುವ ನೀನು ಈಗ ನಿಜಧಾಮಕ್ಕೆ ಹೊರಟು ಹೋಗಲು ಸ್ವಧರ್ಮವನ್ನು ಹೇಳುವವರು ಯಾರಿದ್ದಾರೆ? ।೪೩।।

ಭಕ್ತಿಯುಕ್ತ ಸ್ವಧರ್ಮಗತೀ । ಸಾಂಗವಯಾ ಯಥಾಸ್ಥಿತೀ । ತುಜವಾಂಚೋನಿಯಾ ಶ್ರೀಪತೀ । ಆಣಿಕಾಸೀ ಶಕ್ತಿ ಅಸೇನಾ ॥೪೪॥ ತೂ ಭಕ್ತಸಾಹ್ಯಜಗಜ್ಜೀವನ । ಭಕ್ತ ಮದಗಜಭಂಜನ । ಯಾಲಾಗೀ ನಾವೇ ತೂ ''ಮಧುಸೂದನ'' । ಐಸೇ ಪ್ರಾರ್ಥೂನ ಬೋಲತ ॥೪೫॥

ತತ್ತ್ವಂ ನಃ ಸರ್ವಧರ್ಮಜ್ಞ ಧರ್ಮಸ್ತ್ವದ್ಭಕ್ತಿ ಲಕ್ಷಣಃ । ಯಥಾ ಯಸ್ಯ ವಿಧೀಯೇತ ತಥಾ ವರ್ಣಯ ಮೇ ಪ್ರಭೋ ॥೭॥

ಅರ್ಥ :- ನೀವು ಸರ್ವಧರ್ಮಗಳ ಮರ್ಮಜ್ಞರಾಗಿರುವಿರಿ. ಆದ್ದರಿಂದ ಹೇ ಪ್ರಭೋ, ನೀವು ಆ ಧರ್ಮದ ವರ್ಣನೆಯನ್ನು ಮಾಡಿರಿ, ಇದರಿಂದ ನಿಮ್ಮ ಭಕ್ತಿಯು ಪ್ರಾಪ್ತವಾದೀತು. ಯಾವ ಮನುಷ್ಯನಿಗೆ ಯಾವುದು ವಿಹಿತವೋ, ಆದರಂತೆಯೇ ನನಗೆ ಹೇಳಿರಿ.

ತೂ ಸರ್ವಜ್ಞ ಜ್ಞಾನಮೂರ್ತಿ । ತರೀ ಮನುಷ್ಯಾಂಚೀ ಕರ್ಮಗತಿ । ವರ್ಣಾಶ್ರಮಾಂಚಿ ಧರ್ಮಸ್ಥಿತೀ । ಯಥಾನಿಗುತೀ ಮಜ ಸಾಂಗಾ ॥೪೬॥ ವರ್ಣಬಾಹ್ಯಾಚೇ ನಿಜಕರ್ಮ । ತೋಹೀ ಸಾಂಗವಾ ವಿಹಿತ ಧರ್ಮ । ಉದ್ಧವೇ ಪ್ರಾರ್ಥಿಲಾ ಪುರುಷೋತ್ತಮ । ತೇಣೇ ಮೇಘಶ್ಯಾಮ ತುಷ್ಟಲಾ ॥೪೭॥ ಸಕಳ ಜನಾಂಚಾ ಹಿತಕರ । ಉದ್ಧವೇ ಪ್ರಶ್ನ ಕೇಲಾ ಸಧರ । ತೋ ಐಕೋನಿ ಶುಕಯೋಗೀಂದ್ರ । ಆನಂದ-ನಿರ್ಭರ ತೇಣೇ ಪ್ರಶ್ನೆ ॥೪೮॥ ಶುಕ ಮ್ಹಣೇ ಪರೀಕ್ಷಿತೀಸೀ । ಧನ್ಯ ಬುದ್ಧೀ ತೇ ಉದ್ಧವಾಸೀ । ಜೇಣೇ ಪ್ರಾರ್ಥೂನಿ ಹೃಷೀಕೇಶೀ । ಜಾಹಲಾ ಜಗಾಸೀ ಉಪಕಾರೀ ॥೪೯॥

ಶ್ರೀ ಬಾದರಾಯಣಿರುವಾಚ:-

ಏವಂ ಸ್ವಭೃತ್ಯ ಮುಖ್ಯೇನ ಪೃಷ್ಟ: ಸ ಭಗವಾನ್ಹರಿಃ ।
ಪ್ರೀತಃ ಕ್ಷೇಮಾಯ ಮರ್ತ್ಯಾನಾಂ ಧರ್ಮಾನಾಹ ಸನಾತನಾನ್ ॥೮॥

ಅರ್ಥ :- ಶುಕದೇವನು ಹೇಳಿದನು :- ಪರೀಕ್ಷಿತಿಯೇ, ಭಕ್ತಶಿರೋಮಣಿ ಉದ್ಧವನು ಹೀಗೆ ಪ್ರಶ್ನೆಯನ್ನು ಕೇಳಲು ಆಗ ಭಗವಾನ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾಗಿ ಪ್ರಾಣಿಮಾತ್ರರ ಕಲ್ಯಾಣಕ್ಕಾಗಿ ಆತನಿಗೆ ಸನಾತನ ಧರ್ಮದ ಉಪದೇಶವನ್ನು ಮಾಡಿದನು.

ಶುಕಮ್ಹಣೇ ಗಾ ಪರೀಕ್ಷಿತೀ । ಸಾವಧಾನ ಹೋಈ ಚಿತ್ತೀ । ಧನ್ಯ ಉದ್ಧವಾಚೀ ಪ್ರಶ್ನೋಕ್ತೀ । ಸ್ವಕರ್ಮೇ ಮುಕ್ತೀ ಪುಶಿಲೀ ॥೫೦॥ ಜೋ ಭೃತ್ಯಾಮಾಜೀ ಪಢಿಯಂತಾ । ಅತ್ಯಂತ ಆವಡೇ ಕೃಷ್ಣನಾಥಾ । ತ್ಯಾವೇಗಳೇ ಶ್ರೀಅನಂತಾ । ಕ್ಷಣಹೀ ಸರ್ವಥಾ ಕರಮೇನಾ ॥೫೧॥ ಜ್ಯಾಪಾಶೀ ಗಾ ನಿಜಗುಜ । ಸದಾ ಸಾಂಗೇ ಗರುಡಧ್ವಜ। ಜ್ಯಾವೇಗಳೇ ಆಪ್ತಕಾಜ । ಅಧೋಕ್ಷಜ ಬೋಲೇನಾ ॥೫೨॥ ಜ್ಯಾಚಾ ವಚನಾಸೀ ವಿಲಂಬು । ಕ್ಷಣ ನ ಕರೀಚ ರಮಾವಲ್ಲಭು । ಜೋ ಬ್ರಹ್ಮಾದಿಕಾ ದುರ್ಲಭು । ತೋ ಜಾಹಲಾ ಸುಲಭು ಉದ್ಧವಾ ॥೫೩॥

ಹೇ ಶ್ರೀಕೃಷ್ಣನೇ, ಭಕ್ತಿಯುಕ್ತ ಸ್ವಧರ್ಮದಿಂದ ರಹಸ್ಯವನ್ನು ಯಥಾರ್ಥ ರೀತಿಯಲ್ಲಿ ಪ್ರತಿಪಾದನೆಯನ್ನು ಮಾಡುವ ಅಲೌಕಿಕ ಸಾಮರ್ಥ್ಯವು ಕೇವಲ ನಿನ್ನಲ್ಲಿ ಮಾತ್ರ ಇರುವುದು. ಇತರರಲ್ಲಿ ಇರುವುದಿಲ್ಲ ॥೪೪॥ ನೀನು ಭಕ್ತರಿಗೆ ಸಹಾಯ ಮಾಡುವ ಜಗಜ್ಜೀವನನಾಗಿರುವೆ. ನೀನು ಭಕ್ತರ ಅಭಿಮಾನರೂಪ ಸೊಕ್ಕಿದ ಆನೆಯ ಮದವನ್ನು ನಾಶಗೊಳಿಸುವವನಾಗಿರುವೆ. ಆದ್ದರಿಂದ ನಿನಗೆ ಮಧುಸೂದನ ಎಂದು ಕರೆಯುವರು. ಹೀಗೆ ಶ್ರೀಕೃಷ್ಣನ ಪ್ರಾರ್ಥನೆಯನ್ನು ಮಾಡಿ ಉದ್ಧವನು ಹೇಳ ಹತ್ತಿದನು ॥೪೫॥

ನೀನು ಸರ್ವಜ್ಞನು. ಕೇವಲ ಜ್ಞಾನದ ಮೂರ್ತಿಯಾಗಿರುವೆ. ಆದ್ದರಿಂದ ಮನುಷ್ಯರ ಕರ್ಮಗತಿ ಮತ್ತು ವರ್ಣಾಶ್ರಮದ ಧರ್ಮಸ್ಥಿತಿಯನ್ನು ನನಗೆ ಸವಿಸ್ತಾರವಾಗಿ ಹೇಳು ॥೪೬॥ ಹಾಗೆಯೇ ವರ್ಣಬಾಹ್ಯ ಜನರ ಕರ್ಮ ಮತ್ತು ಅವರ ಯಾವ ವಿಹಿತ ಧರ್ಮ ಅವುಗಳನ್ನೂ ಕೂಡ ಕಥನ ಮಾಡು. ಈ ಪ್ರಕಾರವಾಗಿ ಉದ್ಧವನು ಶ್ರೀಕೃಷ್ಣನಿಗೆ ಪ್ರಾರ್ಥನೆಯನ್ನು ಮಾಡಿದನು. ಆಗ ಮೇಘಶ್ಯಾಮ ಶ್ರೀಕೃಷ್ಣನು ಸಂತುಷ್ಟನಾದನು॥೪೭॥ ಉದ್ಧವನು ಸರ್ವ ಜನರಿಗೆ ಹಿತವಾಗುವಂತಹ ಉತ್ತಮ ಪ್ರಶ್ನೆಯನ್ನು ಮಾಡಿದನು. ಇದನ್ನು ಕೇಳಿ ಮಹಾನ ಯೋಗೇಶ್ವರ ಶುಕಾಚಾರ್ಯರು ಆನಂದಪಟ್ಟರು ॥೪೮॥ ಶುಕಾಚಾರ್ಯರು ಹೇಳಿದರು; ಉದ್ಧವನ ಬುದ್ಧಿಯು ಧನ್ಯವಾಗಿದೆ. ಕಾರಣ ಆತನು ಶ್ರೀಕೃಷ್ಣನ ಪ್ರಾರ್ಥನೆಯನ್ನು ಮಾಡಿ ಸಂಪೂರ್ಣ ಜಗತ್ತಿಗೆ ಮಹದುಪಕರಾವನ್ನು ಮಾಡಿರುವನು॥೪೯॥

ಶುಕಾಚಾರ್ಯರು ಹೇಳಿದರು:- ಹೇ ಪರಿಕ್ಷಿತಿಯೇ, ಈಗ ಸಾವಧಾನ ಚಿತ್ತದಿಂದ ಆಲಿಸು, ಉದ್ಧವನ ಪ್ರಶ್ನೆಯು ನಿಜವಾಗಿಯೂ ಧನ್ಯವಾಗಿರುವುದು. ಏಕೆಂದರೆ ಆತನು ಸ್ವಕರ್ಮದಿಂದ ಮುಕ್ತಿಯನ್ನು ಕೇಳಿದನು॥೫೦॥ ಯಾವ ಸರ್ವ ಸೇವಕರಲ್ಲಿ ಅತ್ಯಂತ ಪ್ರಿಯನಾದ ಮತ್ತು ಶ್ರೀಕೃಷ್ಣನಿಗೆ ಅತಿಶಯವಾಗಿ ಬೇಕಾಗಿರುವ, ಆತನಿಲ್ಲದೇ ಅನಂತನಿಗೆ ಒಂದು ಕ್ಷಣವೂ ಕೂಡ ಹೊತ್ತು ಹೋಗುತ್ತಿಲ್ಲ ॥೫೧॥ ಆತನಿಗೆ ಶ್ರೀಕೃಷ್ಣನು ಯಾವಾಗಲೂ ತನ್ನ ರಹಸ್ಯಗಳನ್ನು ಹೇಳುತ್ತಿದ್ದನು. ಶ್ರೀಕೃಷ್ಣನು ತನ್ನ ನಿಜಗುಹ್ಯವನ್ನು ಆತನನ್ನು ಬಿಟ್ಟು ಇನ್ನಾರಿಗೂ ಹೇಳುತ್ತಿದ್ದಿಲ್ಲ ॥೫೨॥ ಆತನ ಪ್ರಶ್ನೆಯ ಉತ್ತರಕ್ಕಾಗಿ ರಮಾವಲ್ಲಭನು ಒಂದು ಕ್ಷಣವೂ ಕೂಡ ತಡಮಾಡಲಿಲ್ಲ. ಬ್ರಹ್ಮದೇವನಿಗೆ ದುರ್ಲಭನಾಗಿರುವ ಯಾವ ಪರಮಾತ್ಮನು ಉದ್ಧವನಿಗೆ ಸುಲಭನಾಗಿದ್ದನು ॥೫೩॥

ಯಾಲಾಗೀ ''ಭೃತ್ಯಮುಖ್ಯತಾ'' । ಆಲೀ ಉದ್ಧವಾಚೇ ಹಾತಾ । ತೇಣೇ ಪ್ರಾರ್ಥೂನಿಯಾ ಭಗವಂತಾ । ''ಸ್ವಕರ್ಮೇ ಮುಕ್ತತಾ'' । ಪುಸಿಲೀ ॥೫೪॥ ಹೋ ಕಾ ಜ್ಯಾಚೇನಿ ಪ್ರಶ್ನಧರ್ಮೇ । ಜಗ ಉದ್ಧರಿಲೇ ಯಥಾನುಕ್ರಮೇ । ಜ್ಯಾಲಾಗೀ ಗಾ ಪುರುಷೋತ್ತಮೇ । ಮೋಕ್ಷ ಸ್ವಧರ್ಮೇ ಪ್ರಕಟಿಜೇ ॥೫೫॥ ಸ್ವಧರ್ಮ ಕರಿತಾ ಸ್ವಭಾವತಾ । ನಿಜಮೋಕ್ಷ ಲಾಭೇ ಆಯಿತಾ । ಏವಢ್ಯಾ ಉಪಕರಾಚೀ ಕಥಾ । ಉದ್ಧವೇ ತತ್ತ್ವತಾ ಪುಸಿಲೀ ॥೫೬॥ ಐಕೋನಿ ಚಾತಕಾಚೇ ವಚನ । ಗರ್ಜೋನಿ ವರ್ಷೇ ಜೇವೀ ಘನ । ಕಾ ವತ್ಸಹುಂಕಾರೇ ಜಾಣ । ಯೇ ಹುಂಬರೋನ ಧೇನು ಜೈಶೀ ॥೫೭॥ ತೇವೀ ಐಕೋನಿ ಉದ್ಧವಾಚ್ಯಾ ಬೋಲಾ । ಶ್ರೀಕೃಷ್ಣ ನಿಜಬೋಧೇ ಗರ್ಜಿನ್ನಲಾ । ಅತಿಸ್ವಾನಂದೇ ಸಂತೋಷಲಾ । ಕಾಯ ಬೋಲಿಲಾ ಗೋವಿಂದು ॥೫೮॥

ಶ್ರೀ ಭಗವಾನುವಾಚಃ:-

ಧರ್ಮ್ಯ ಏಷ ತವ ಪ್ರಶ್ನೋ ನೈಃಶ್ರೇಯಸಕರೋ ನೃಣಾಮ್ । ವರ್ಣಾಶ್ರಮಾಚಾರವಂತಾ ತಮುದ್ಧವ ನಿಬೋಧ ಮೇ ॥೯॥

ಅರ್ಥ:- ಶ್ರೀಕೃಷ್ಣನು ನುಡಿದನು:- ಪ್ರಿಯ ಉದ್ಧವಾ, ನಿನ್ನ ಪ್ರಶ್ನೆಯು ಧರ್ಮಮಯವಾಗಿದೆ. ಕಾರಣ ಇದರಿಂದ ವರ್ಣಾಶ್ರಮ ಧರ್ಮಿ ಮಾನವರಿಗೆ ಪರಮಕಲ್ಯಾಣ ಸ್ವರೂಪ ಮೋಕ್ಷದ ಪ್ರಾಪ್ತಿಯಾಗಬಲ್ಲದು.

ಜೇವೀ ಕಾ ಪುತ್ರ ಏಕುಲತಾ । ತ್ಯಾಸಿ ಕಾಂಹೀ ವಂಚೀನಾ ಮಾತಾ । ತೇವೀ ಉದ್ಧವ ಶ್ರೀಕೃಷ್ಣನಾಥಾ । ತ್ಯಾಚೇ ವಚನ ವೃಥಾ ಹೋ ನೇದೀ ॥೫೯॥ ಹರಿಖೇ ಮ್ಹಣೇ ಸಾರಂಗಪಾಣೀ । ಧನ್ಯ ಧನ್ಯ ಉದ್ಧವಾ ತುಝೀ ವಾಣೀ । ಮೋಕ್ಷಮಾರ್ಗೀಚೀ ನಿಶಾಣೀ । ಹೇ ಜನಾಲಾಗೋನಿ ತ್ವಾಂ ಕೇಲೀ ॥೬೦॥ ತುಝ್ಯಾ ಪ್ರಶ್ನಾಚೇ ಪ್ರಶ್ನೋತ್ತರ । ವರ್ಣಾಶ್ರಮೀ ಜೇ ಕೋಣೇ ನರ । ತ್ಯಾಂಸೀ ಸ್ವಧರ್ಮಚಿ ಮೋಕ್ಷಕರ । ಐಕ ಸಾಚಾರ ಸಾಂಗೇನ ॥೬೧॥ ಕಲ್ಪಾದಿಪಾಸೋನಿ ಸ್ವಧರ್ಮಸಂಸ್ಥಾ । ಪುರಾತನಯುಗವರ್ತೀ ಕಥಾ । ತುಜ ಮೀ ಸಾಂಗೇನ ತತ್ತ್ವತಾ । ಐಕ ಆತಾ ಉದ್ಧವಾ ॥೬೨॥

ಆದೌ ಕೃತಯುಗೇ ವರ್ಣೋ ನೃಣಾಂ ಹಂಸ ಇತಿ ಶ್ರುತಃ । ಕೃತಕೃತ್ಯಾಃ ಪ್ರಜಾ ಜಾತ್ಯಾ ತಸ್ಮಾತ್ಕೃತಯುಗಂ ವಿದುಃ ॥೧೦॥
ವೇದಃ ಪ್ರಣವ ಏವಾಗ್ರೇ ಧರ್ಮೋಽಹಂ ವೃಷರೂಪಧೃಕ್ । ಉಪಾಸತೇ ತಪೋನಿಷ್ಠಾ ಹಂಸಂ ಮಾಂ ಮುಕ್ತಕಿಲ್ಬಿಷಾಃ ॥೧೧॥

ಅರ್ಥ :- ಆದಿಯಲ್ಲಿ ಅಂದರೆ ಸತ್ಯಯುಗದಲ್ಲಿ ಹಂಸ ಎಂದು ಒಂದೇ ಸಾಮಾಜಿಕ ವರ್ಣ ಪದ್ಧತಿ ಇತ್ತು. ಎಲ್ಲ ಮಾನವರೂ ಈ ವರ್ಣ ಪದ್ಧತಿಗೆ ಸೇರಿದ್ದರು. ಆ ಯುಗದಲ್ಲಿ ಎಲ್ಲ ಜನರೂ ಹುಟ್ಟಿನಿಂದಲೇ ಭಗವಂತನ ಪರಿಶುದ್ಧ ಭಕ್ತರಾಗಿದ್ದರು. ಕೃತಕೃತ್ಯರಾದದ್ದಕ್ಕೆ ಈ ಯುಗಕ್ಕೆ ಕೃತಯುಗವೆಂದು ಕರೆಯುತ್ತಾರೆ. ಈ ಯುಗದಲ್ಲಿ ವಿಭಜಿತ ವೇದವು ಓಂಕಾರದಿಂದ ಅಭಿವ್ಯಕ್ತಿ ಪಡೆಯಿತು. ಸಕಲ ಮನೋವ್ಯಾಪರಗಳಿಗೆ ನಾನೊಬ್ಬನೇ ವಸ್ತುವು ತಪಸ್ಸು, ಶೌಚ, ದಯಾ ಮತ್ತು ಸತ್ಯ ಸ್ವರೂಪದ ಚತುಷ್ಪಾದಿ ಧರ್ಮ ವೃಷಭನಾಗಿ ಪ್ರಕಟಗೊಳ್ಳುತ್ತೇನೆ. ಹೀಗೆ ಸತ್ಯಯುಗದ ಜನರು ತಪೋನಿಷ್ಠರಾಗಿ, ಸಕಲ ಪಾಪಗಳಿಂದ ಮುಕ್ತರಾಗಿ ನನ್ನನ್ನು ಭಗವಾನ್ ಹಂಸನೆಂದು ಪೂಜಿಸುತ್ತಾರೆ.

ಅದಕ್ಕಾಗಿ ಸೇವಕರಲ್ಲಿನ ಪ್ರಮುಖತ್ವವು ಈ ಜಗತ್ತಿನಲ್ಲಿ ಈ ಒಬ್ಬ ಉದ್ಧವನ ಕೈಗೆ ಬಂದಿತ್ತು. ಆದ್ದರಿಂದ ಆತನೇ ಭಗವಂತನ ಪ್ರಾರ್ಥನೆಯನ್ನು ಮಾಡಿ ಸ್ವಕರ್ಮದಿಂದಲೇ ಮುಕ್ತತೆಯು ಹೇಗೆ ದೊರಕುವುದೆಂಬ ಪ್ರಶ್ನೆಯನ್ನು ಕೇಳಿದನು ॥೫೪॥ ಉದ್ಧವನ ಪ್ರಶ್ನೆಯ ಯೋಗದಿಂದ ಕ್ರಮವಾಗಿ ಸರ್ವ ಜಗತ್ತಿನ ಉದ್ಧಾರವಾಯಿತು. ಉದ್ಧವನಿಗಾಗಿ ಶ್ರೀಕೃಷ್ಣನು ಸ್ವಧರ್ಮದಿಂದಲೇ ಮೋಕ್ಷವು ಹೇಗೆ ಪ್ರಾಪ್ತವಾಗುವುದೆಂಬುದನ್ನು ಸ್ಪಷ್ಟವಾಗಿ ಹೇಳಿದನು ॥೫೫॥ ತನ್ನ ಸ್ವಾಭಾವಿಕವಾದ ಸ್ವಧರ್ಮದಿಂದ ಆಚರಣೆಯನ್ನು ಮಾಡಲು ಮೋಕ್ಷವು ಸಹಜ ಪ್ರಾಪ್ತಿಯಾಗುವುದು. ಇಂತಹ ಉಪಕಾರದ ಕಥೆಯನ್ನು ಉದ್ಧವನು ತತ್ತ್ವಃ ಕೇಳಿದನು ॥೫೬॥ ಚಾತಕ ಪಕ್ಷಿಗಳ ಧ್ವನಿಯನ್ನು ಕೇಳುತ್ತಲೇ ಮೇಘವು ಗರ್ಜಿಸುತ್ತ ಪ್ರೇಮದಿಂದ ಮಳೆಗರೆಯುವುದು ಅಥವಾ ಕರುವಿನ ಆರ್ತ ಹುಂಕಾರವನ್ನು ಕೇಳುತ್ತಲೇ ಆಕಳವು ಡುರಕಿ ಹೊಡೆಯುತ್ತ ಧಾವಿಸಿ ಓಡಿಬರುವುದು ॥೫೭॥ ಅದರಂತೆ ಉದ್ಧವನ ಭಾವಪೂರ್ಣ ಪ್ರಾರ್ಥನೆಯನ್ನು ಕೇಳುತ್ತಲೇ ಶ್ರೀಕೃಷ್ಣನು ಆತ್ಮಜ್ಞಾನದ ಗರ್ಜನೆಯನ್ನು ಮಾಡಿದನು. ಮತ್ತು ಸ್ವಾನಂದದಿಂದ ಪ್ರಸನ್ನನಾಗಿ ಶ್ರೀಕೃಷ್ಣನು ಏನು ಹೇಳಿದನೆಂಬುವುದನ್ನು ಕೇಳು ॥೫೮॥

ಒಬ್ಬನೇ ಮಗನಿರಲು ತಾಯಿಯು ಆತನನ್ನು ಸ್ವಲ್ಪವೂ ವಂಚಿಸುವುದಿಲ್ಲ. ಅದರಂತೆಯೇ ಶ್ರೀಕೃಷ್ಣನು ಉದ್ಧವನ ಶಬ್ದವನ್ನು ಎಂದಿಗೂ ವ್ಯರ್ಥಪಡಿಸುತ್ತಿದ್ದಿಲ್ಲ ॥೫೯॥ ಸಾರಂಗಪಾಣಿಯು ಆನಂದದಿಂದ ಹೇಳಿದನು;- ಹೇ ಉದ್ಧವಾ, ನಿನ್ನ ವಾಣಿಯು ಧನ್ಯಧನ್ಯವಾಗಿದೆ. ನೀನು ಸರ್ವಜನರಿಗಾಗಿ ಮೋಕ್ಷಮಾರ್ಗದ ನಿಚ್ಚಣಿಕೆಯನ್ನು ಮಾಡಿಕೊಟ್ಟಿರುವೆ ॥೬೦॥ ವರ್ಣಾಶ್ರಮ ಜನರಿಗೆ ಸ್ವಧರ್ಮವು ಮೋಕ್ಷಕರವಾಗಿದೆ ಎಂಬ ನಿನ್ನ ಪ್ರಶ್ನೆಗೆ ನಾನು ಉತ್ತರಿಸುವೆನು. ಅದನ್ನು ನೀನೀಗ ಕೇಳು ॥೬೧॥ ಹೇ ಉದ್ಧವನೇ, ಕಲ್ಪದ ಪ್ರಾರಂಭದಿಂದಲೂ ಪ್ರವೃತ್ತವಾಗಿರುವ ಸ್ವಧರ್ಮ ಸಂಸ್ಥೆಯ ಯುಗಾನುರೂಪವಾದ ಪ್ರಾಚೀನ ಕಥೆಯನ್ನು ನಿನಗೆ ನಾನು ತತ್ತ್ವತಃ ಹೇಳುವೆನು, ಅದನ್ನು ಕೇಳು ॥೬೨॥

ಪೂರ್ವೀಲ ಕೃತಯುಗೀಚೇ ಲಕ್ಷಣ । ತ್ಯೆ ನವ್ಹತೇ ಗಾ ಚಾರೀ ವರ್ಣ । ಬಹುಶಾಖಾ ವೇದಪಠಣ । ಕರ್ಮಾಚರಣ ತ್ಯೆ ನಾಹೀ ॥೧೩॥ ತ್ಯೆ ಸಕಳ ಮನುಷ್ಯಾಂಸೀ ಜಾಣ । ''ಸೋಹಂಹಂಸಾ'' ಚೇ ಅಖಂಡ ಧ್ಯಾನ । ಯಾಲಾಗೀ ''ಹಂಸೆ'' ಹಾ ಏಕಚಿ ವರ್ಣ । ಸರ್ವಾಸಹೀ ಜಾಣ ತೇ ಕಾಳೀ ॥೧೪॥ ತ್ಯೆ''ಪ್ರಣವ ಮಾತ್ರೇ'' ವೇದಪಠಣ । ವೃಷರೂಪೇ ಮೀ ಆಪಣ । ಧರ್ಮ ಚತುಷ್ಪಾದ ಸಂಪೂರ್ಣ । ಅಧರ್ಮಾಚೇ ಜಾಣ ನಾಂವ ಹೀನಾಹೀ ॥೧೫॥ ತೇ ಕಾಳೀ ಶ್ರೇಷ್ಠ ಸತ್ತ್ವಗುಣ । ಯಾಲಾಗೀ ಸತ್ಯವಾದೀ ಜನ । ಅವಘೇ ಧರ್ಮಪರಾಯಣ । ಕಪಟ ತ್ಯೆ ಜಾಣ ಜನ್ಮಲೇ ನಾಹೀ ॥೧೬॥ ಪರದ್ರವ್ಯ ಆಣಿ ಪರದಾರಾ । ಯಾಂಚ್ಯಾ ಅಭಿಲಾಷಾಚಾ ಥಾರಾ । ಸ್ಪರ್ಶಲಾ ನಾಹೀ ಜಿವ್ಹಾರಾ । ತೇ ಕಾಳೀಚ್ಯಾ ನರಾ ಧರ್ಮಿಷ್ಠಾ ॥೧೭॥ ತೇ ಕಾಳೀಚ್ಯಾ ಜನಾ ಧರ್ಮಿಷ್ಠಾ । ''ಸೋಹಂಹಂಸಾ'' ಚೀ ಆತ್ಮನಿಷ್ಠಾ । ಹೇಚಿ ಭಜನ ಮಜ ವರಿಷ್ಠಾ । ''ತಪೋನಿಷ್ಠಾ'' ತಯಾ ನಾಂವ ॥೧೮॥ ತ್ಯೆ ಸ್ವರ್ಗಾ ಜಾವೇ ಹೇ ನಾಹೀ ಕಥಾ । ನೇಣತೀ ನರಕಾಚೀ ವಾರ್ತಾ । ಅಧರ್ಮಾಚೀ ಅವಸ್ಥಾ । ಸ್ವಪ್ನೀಹೀ ಚಿತ್ತಾ ಸ್ಪರ್ಶೇನಾ ॥೧೯॥ ಯಾಪರೀ ಪ್ರಜಾ ಸಮಸ್ತ । ಸ್ವಧರ್ಮಸ್ವಭಾವೇ ಕೃತಕೃತ್ಯ । ಯಾಲಾಗೀ ಜಾಣ ನಿಶ್ಚಿತ । ತ್ಯಾತೇ ಬೋಲಿಜೇತ ''ಕೃತಯುಗ'' ॥೨೦॥

ತ್ರೇತಾಮುಖೇ ಮಹಾಭಾಗ ಪ್ರಾಣಾನ್ಮೇ ಹೃದಯಾತ್ರಯೀ । ವಿದ್ಯಾ ಪ್ರಾದುರಭೂತ್ತಸ್ಯಾ ಅಹಮಾಸಂ ತ್ರಿವೃನ್ಮಖಃ ॥೧೨॥

ಅರ್ಥ :- ಮಹಾಭಾಗ್ಯಶಾಲಿ ಉದ್ಧವನೇ, ಸತ್ಯಯುಗದ ನಂತರ ತ್ರೇತಾಯುಗವು ಆರಂಭವಾಯಿತು. ನನ್ನ ವಿರಾಟ ಸ್ವರೂಪದ ಪ್ರಾಣ ನಿಮಿತ್ತದಿಂದ ಹೃದಯದಿಂದ ವೇದವಿದ್ಯೆಯು ಪ್ರಕಟವಾಯಿತು. ಆ ವಿದ್ಯೆಯಿಂದ ನಾನು ಹೌತ್ರ, ಆಧ್ವರ್ಯವ ಔದ್ಗಾತ್ರ ಈ ರೂಪದಿಂದ ತ್ರಿರೂಪವಾದ ವಿಷ್ಣು ಆದೆನು.

ಉದ್ಧವಾ ಯಾ ಕಲಿಯುಗಾಚ್ಯಾ ಠಾಯೀ । ತುಝ್ಯಾ ಭಾಗ್ಯಾಚೀ ಪರಮ ನವಾಯೀ । ಕೃತಯುಗೀಚ್ಯಾ ಪ್ರಜಾಪರೀಸ ಪಾಹೀ । ತುಜ ಮಾಝ್ಯಾ ಠಾಯೀ ವಿಶ್ವಾಸ ॥೨೧॥ ತ್ರೇತಾಯುಗೀ ಪ್ರಕಟಲೇ ಕರ್ಮ । ಜೋ ವೈರಾಜ ಮೀ ಪುರುಷೋತ್ತಮ ! ತ್ಯಾ ಮಾಝೇನಿ ನಿಃಶ್ವಾಸೇ ತ್ರಯೀಧರ್ಮ । ವೇದಸಂಭ್ರಮ ವಾಢಲಾ ॥೨೨॥ ತೇಥ ತ್ರೈವಿದ್ಯಾ ವಿವಿಧ ಭೇದ । ನಾನಾ ಮಂತ್ರ ನಾನಾ ಛಂದ । ಋಗ್ವೇದಾದಿ ತಿನ್ಹೀ ವೇದ । ಪ್ರಕಟಲೇ ಪ್ರಸಿದ್ಧ ನಿಜಶಾಖೀ ॥೨೩॥ ತ್ಯಾ ವೇದಾಪಾಸಾವ ತ್ರಿವಿಧ ಮಖ । ತ್ರಿಮೇಖಲಾಯುಕ್ತ ಮೀಚಿ ದೇಖ । ಜೇಥ ಹೋತ ಆಧ್ವರ್ಯವ ಹೌತ್ರಿಕ । ಕರ್ಮ ವಿಶೇಖ ಜೇ ಠಾಯೀ ॥೨೪॥

ಪೂರ್ವದ ಕೃತಯುಗದಲ್ಲಿ ನಾಲ್ಕು ವರ್ಣಗಳು ಮೂಲತಃ ಇದ್ದಿಲ್ಲ. ಅನೇಕ ಶಾಸ್ತ್ರಗಳ ವೇದಾಧ್ಯಯನವು ಅಥವಾ ಕರ್ಮಾಚರಣೆಯು ಆಗ ಇದ್ದಿಲ್ಲ ॥೧೩॥ ಆ ಕಾಲದಲ್ಲಿ ಸರ್ವ ಜನರು ''ಸೋಹಂ'' ಅಂದರೆ ''ನಾನೇ ಬ್ರಹ್ಮನು'' ಈ ಮಂತ್ರದ ಸತತ ಧ್ಯಾನವನ್ನು ಮಾಡುತ್ತಿದ್ದರು. ಆದ್ದರಿಂದ ಅವರೆಲ್ಲರ ಹಂಸ ಎಂಬ ಒಂದೇ ವರ್ಣವಿತ್ತು ॥೧೪॥ ಆ ಕಾಲದಲ್ಲಿ ಓಂಕಾರ ರೂಪದಿಂದ ವೇದ ಪಠಣೆಯಾಗುತ್ತಿತ್ತು. ತಪ, ಸತ್ಯ, ದಯಾ ಮತ್ತು ಶುದ್ಧಿ ಈ ನಾಲ್ಕು ಪಾದಗಳನ್ನು ಧರಿಸುವವನಾದ ನಾನು ವೃಷರೂಪ ಧರ್ಮನಾಗಿದ್ದೆನು. ಆ ಕಾಲದಲ್ಲಿ ಅಧರ್ಮದ ಹೆಸರೂ ಕೂಡ ಇದ್ದಿಲ್ಲ. ಇದನ್ನು ಲಕ್ಷದಲ್ಲಿಡು ॥೧೫॥ ಆ ಕಾಲದಲ್ಲಿ ಸತ್ವಗುಣವು ಶ್ರೇಷ್ಠವಾಗಿತ್ತು. ಆದ್ದರಿಂದ ಎಲ್ಲ ಜನರು ಸತ್ಯದ ಆಚರಣೆಯನ್ನು ಮಾಡುತ್ತಿದ್ದರು. ಎಲ್ಲರೂ ಧರ್ಮಪರಾಯಣರಾಗಿದ್ದರು. ಆ ಕಾಲದಲ್ಲಿ ಕಪಟತನವು ಜನ್ಮವನ್ನೇ ಧರಿಸಿದ್ದಿಲ್ಲ ॥೧೬॥ ಆ ಕಾಲದ ಧರ್ಮನಿಷ್ಠ ಜನರ ಅಂತಃಕರಣದಲ್ಲಿ ಪರದ್ರವ್ಯ ಮತ್ತು ಪರಸ್ತ್ರೀ ಇವುಗಳ ಅಭಿಲಾಷೆಯು ಎಂದಿಗೂ ಪ್ರಕಟವಾಗುತ್ತಿದ್ದಿಲ್ಲ ॥೧೭॥ ಆ ಕಾಲದಲ್ಲಿ ಧರ್ಮಶೀಲ ಜನರ ''ಬ್ರಹ್ಮವೇ ನಾನು'' ಎಂಬ ಆತ್ಮಸ್ವರೂಪವು ದೃಢನಿಷ್ಠೆಯಿಂದ ಕೂಡಿತ್ತು. ನಿಜವಾಗಿಯೂ ಇದುವೇ ನನ್ನ ಶ್ರೇಷ್ಠ ಭಜನೆಯಾಗಿರುವುದು. ಅದಕ್ಕೆ ತಪೋನಿಷ್ಠ ಎಂದು ಹೇಳುವರು ॥೧೮॥ ಇವರಿಗೆ ಸ್ವರ್ಗಕ್ಕೆ ಹೋಗುವ ಯಾವ ಕಥೆಯೂ ಗೊತ್ತಿರುವುದಿಲ್ಲ. ನರಕದ ಹೆಸರೂ ಕೂಡ ತಿಳಿದಿರುವುದಿಲ್ಲ ಮತ್ತು ಅವರ ಸ್ವಪ್ನದಲ್ಲಿಯೂ ಕೂಡ ಅಧರ್ಮದ ವಿಚಾರಗಳು ಬರುತ್ತಿದ್ದಿಲ್ಲ ॥೧೯॥ ಈ ಪ್ರಕಾರವಾಗಿ ಸರ್ವ ಪ್ರಜೆಗಳು ಸ್ವಧರ್ಮದ ಆಚರಣೆಯಿಂದ ಕೃತಕೃತ್ಯರಾಗಿದ್ದರು. ಈ ಕಾರಣವಾಗಿಯೇ ನಿಜವಾಗಿ ಆ ಕಾಲಕ್ಕೆ ಕೃತಯುಗವೆಂದು ಹೇಳುವರು ॥೨೦॥

ಹೇ ಉದ್ಧವನೇ, ಕಲಿಯುಗದಲ್ಲಿ ನಿನ್ನ ಭಾಗ್ಯವು ಮಹಾ ಆಶ್ಚರ್ಯಕಾರಕವಾಗಿ ತೋರುವುದು. ಕಾರಣವೇನೆಂದರೆ, ಕೃತಯುಗದ ಪ್ರಜೆಕ್ಕಿಂತಲೂ ನಿನ್ನ ವಿಶ್ವಾಸವು ನನ್ನ ಮೇಲೆ ಅಧಿಕವಾಗಿಯೇ ಇರುವುದು ॥೨೧॥ ತ್ರೇತಾಯುಗದಲ್ಲಿ ಕರ್ಮವು ಪ್ರಕಟವಾಯಿತು. ನನ್ನ ವಿರಾಟರೂಪ ಪುರುಷೋತ್ತಮನ ಶ್ವಾಸೋಚ್ಛ್ವಾಸದಿಂದ ಮೂರು ವೇದಗಳು ಉತ್ಪನ್ನವಾದವು. ಹಾಗೆಯೇ ಅವುಗಳ ವಿಸ್ತಾರವು ಬೆಳೆಯುತ್ತಲೇ ಸಾಗಿತು ॥೨೨॥ ಆಗ ಮೂರು ಪ್ರಕಾರದ ವಿದ್ಯೆಗಳು ಮತ್ತು ನಾನಾ ಪ್ರಕಾರಗಳ ಭೇದ, ಅನೇಕ ತರಹ ತರಹದ ಮಂತ್ರಗಳು, ಅನೇಕ ಛಂದಗಳು ಮತ್ತು ಋಗ್ವೇದ ಮೊದಲು ಮಾಡಿ ತನ್ನ ಶಾಖೆಯಿಂದ ಉದಯಕ್ಕೆ ಬಂದವು ॥೨೩॥ ಆ ವೇದಗಳಿಂದ ಆಗಿರುವ ಮೂರು ಮೇಖಲಾಯುಕ್ತ ವಿವಿಧ ಯಜ್ಞಗಳು ನಾನೇ ಆಗಿರುವೆನು. ಅವುಗಳಲ್ಲಿ ಹೌತ್ರ, ಆಧ್ವರ್ಯವ ಮತ್ತು ಔದ್ಗಾತ್ರ ಇವುಗಳ ವಿಶಿಷ್ಟ ಕರ್ಮಗಳು ಆಗ ಹತ್ತಿದವು ॥೨೪॥

ಐಸೇ ಮದ್ರೂಪ ಯಜ್ಞಕರ್ಮ । ತೇಥಿಲ್ಯಾ ಅಧಿಕಾರಾಚೇ ವರ್ಮ । ದೋ ಶ್ಲೋಕೀ ಪುರುಷೋತ್ತಮ । ವರ್ಣಾಶ್ರಮ ಸಾಂಗತ ॥೭೫॥

ವಿಪ್ರಕ್ಷತ್ರಿಯವಿಟ್‌ಶೂದ್ರಾ ಮುಖಬಾಹೂರುಪಾದಜಾಃ । ವೈರಾಜಾತ್ಪುರುಷಾಜ್ಜಾತಾ ಯ ಆತ್ಮಾಚಾರ ಲಕ್ಷಣಾಃ ॥೧೩॥

ಅರ್ಥ :- ವಿರಾಟ ಪುರುಷನ ಮುಖದಿಂದ ಬ್ರಾಹ್ಮಣ, ಭುಜಗಳಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ, ಕಾಲಿನಿಂದ ಶೂದ್ರರ ಉತ್ಪತ್ತಿಯಾಯಿತು. ಆತನ ಪರಿಚಯ ಸ್ವಭಾವಾನುಸಾರ ಮತ್ತು ಆಚರಣೆಯಿಂದ ಆಗುವುದು.

ವೈರಾಜ ಪುರುಷಾಪಾಸಾವ ಜಾಣ । ಮುಖೀ ಉಪಜಲೇ ''ಬ್ರಾಹ್ಮಣ'' । ಬಾಹೂಪಾಸೂನಿ ''ರಾಜನ್ಯ'' । ಉರೂ ಜನ್ಮಸ್ಥಾನ ''ವೈಶ್ಯಾಂಚೇ'' ॥೭೬॥ ''ಶೂದ್ರ'' ಚರಣೀ ಜನ್ಮಲೇ ಜಾಣ । ಯಾಪರೀ ಜಾಹಲೇ ಚಾರೀ ವರ್ಣ । ಯಾಂಚೇ ಐಕ ಮುಖ್ಯ ಲಕ್ಷಣ । ಸ್ವಧರ್ಮಾಚರಣ ಸರ್ವಾಂಶೀ ॥೭೭॥ ಚತುರ್ವರ್ಣಾಚೀ ಉತ್ಪತ್ತೀ । ವೈರಾಜ ಪುರುಷಾಪಾಸೂನಿ ಯಾ ರೀತೀ । ಆತಾ ಆಶ್ರಮಾಂಚೀ ಸ್ಥಿತೀ । ಐಕ ನಿಶ್ಚಿತೀ ಸಾಂಗೇನ ॥೭೮॥

ಗೃಹಾಶ್ರಮೋ ಜಘನತೋ ಬ್ರಹ್ಮಚರ್ಯ ಹೃದೋ ಮಮ । ವಕ್ಷಃಸ್ಥಲಾದ್ವನೇ ವಾಸೋ ನ್ಯಾಸಃ ಶೀರ್ಷಣಿ ಸಂಸ್ಥಿತಃ ॥೧೪॥

ಅರ್ಥ :- ಹೇ ಉದ್ಧವಾ, ವಿರಾಟ ಪುರುಷನು ನಾನು. ನನ್ನ ಪೃಷ್ಠಪ್ರದೇಶದಿಂದ ಗ್ರಹಸ್ಥಾಶ್ರಮ, ಹೃದಯದಿಂದ ನೈಷ್ಠಿಕ ಬ್ರಹ್ಮಚರ್ಯ ಆಶ್ರಮ, ವಕ್ಷಃಸ್ಥಲದಿಂದ ಕೆಳಗಿನ ಪ್ರದೇಶದವರೆಗೆ ವಾನಪ್ರಸ್ಥಾಶ್ರಮ ಮತ್ತು ತಲೆಯಿಂದ ಸನ್ಯಾಶ್ರಮದ ಉತ್ಪತ್ತಿಯಾಯಿತು.

''ಗ್ರಹಸ್ಥಾಶ್ರಮಾಸೀ'' ಜಘನಸ್ಥಾನ । ''ಬ್ರಹ್ಮಚರ್ಯ'' ಮಾಝ್ಯಾ ಹೃದಯೀ ಜಾಣ । ''ವಾನಪ್ರಸ್ಥಾಸೀ'' ಮೀ ಆಪಣ । ವಾಢವೀ ಮಹಿಮಾನ ವಕ್ಷಃಸ್ಥಳೀ ॥೭೯॥ ಚತುರ್ಥಾಶ್ರಮ ಜೋ ''ಸನ್ಯಾಸ'' । ತ್ಯಾಚಾ ಮಾಝೇ ಶಿರೀ ರಹಿವಾಸ । ಏವಂ ವರ್ಣಾಶ್ರಮ ವಿಲಾಸ । ತುಜ ಸಾವಕಾಶ ಸಾಂಗಿತಲಾ ॥೮೦॥

ವರ್ಣಾನಾಮಾಶ್ರಮಾಣಾಂ ಚ ಜನ್ಮಭೂಮ್ಯನುಸಾರಿಣಿಃ । ಆಸನ್ಪ್ರಕೃತಯೋ ನೃಣಾಂ ನೀಚೈರ್ನೀಚೋತ್ತಮೋತ್ತಮಾಃ ॥೧೫॥

ಅರ್ಥ :-ಈ ವರ್ಣ ಮತ್ತು ಆಶ್ರಮಗಳ ಪುರುಷರ ಸ್ವಭಾವವು ಅವರ ಜನ್ಮಸ್ಥಾನದ ಅನುಸಾರವಾಗಿ ಉತ್ತಮ, ಮಧ್ಯಮ ಮತ್ತು ಅಧಮವಾಗಿರುವುವು. ಉತ್ತಮ ಸ್ಥಾನದಿಂದ ಉತ್ಪನ್ನವಾಗುವ ವರ್ಣ ಮತ್ತು ಆಶ್ರಮದ ಸ್ವಭಾವವು ಉತ್ತಮವಾಗಿ ಮತ್ತು ಅಧಮ ಸ್ಥಾನದಿಂದ ಉತ್ಪನ್ನವಾಗಿರುವರ ಸ್ವಭಾವವು ಅಧಮವಾಯಿತು.

ಜೈಸೇ ಜನ್ಮ ಜೈಸೇ ಸ್ಥಾನ । ತ್ಯಾ ವರ್ಣಾಶ್ರಮಾ ತೈಸೇ ಗುಣ । ಉತ್ತಮೀ ಉತ್ತಮತ್ವ ಜಾಣ । ನೀಚೀ ನೀಚಪಣ ಸಹಜೇಂಚಿ ॥೮೧॥ ''ಸತ್ತ್ವಪ್ರಾಧಾನ್ಯೇ'' ಬ್ರಾಹ್ಮಣ । ''ಸತ್ತ್ವರಜೇ'' ಕ್ಷತ್ರಿಯ ಜಾಣ । ''ರಜತಮೇ'' ವೈಶ್ಯವರ್ಣ । ಶೂದ್ರ ತೇ ಜಾಣ ''ತಪೋನಿಷ್ಠ'' ॥೮೨॥ ತೇಚಿ ಬ್ರಾಹ್ಮಣಾದಿ ಚಾರೀ ವರ್ಣ । ತ್ಯಾಂಚೇ ಪ್ರಕೃತೀಚೇ ಲಕ್ಷಣ । ವೇಗಳೇ ವೇಗಳೇಚಿ ಪೈ ಜಾಣ । ಸ್ವಯೇ ನಾರಾಯಣ ಸಾಂಗತ ॥೮೩॥

ಈ ಪ್ರಕಾರವಾಗಿ ಯಾವ ಯಜ್ಞ ಕರ್ಮಗಳು ಮದ್ರೂಪದಿಂದ ಆಗುತ್ತಿದ್ದವು. ಇವು ಅವುಗಳಲ್ಲಿನ ಅಧಿಕಾರದ ಮರ್ಮವಾಗಿರುವುದು. ಈಗ ಮುಂದಿನ ಎರಡು ಶ್ಲೋಕಗಳಿಂದ ಪುರೋಷತ್ತಮನು ಈ ಯಾವ ವರ್ಣಾಶ್ರಮವನ್ನು ಕುರಿತು ಹೇಳುವನು ॥೭೫॥

ವಿರಾಟ ಪುರುಷನ ಮುಖದಿಂದ ಬ್ರಾಹ್ಮಣರು ಜನ್ಮಕ್ಕೆ ಬಂದರು. ಬಾಹೂಗಳಿಂದ ಕ್ಷತ್ರಿಯರು ಜನ್ಮಕ್ಕೆ ಬಂದರು ಮತ್ತು ತೊಡೆಗಳಿಂದ ವೈಶ್ಯರು ಜನ್ಮಕ್ಕೆ ಬಂದರು ॥೭೬॥ ಶೂದ್ರರು ಕಾಲಿನಿಂದ ಉತ್ಪನ್ನರಾದರು. ಈ ಪ್ರಕಾರವಾಗಿ ಈ ನಾಲ್ಕೂ ವರ್ಣಗಳು ನಿರ್ಮಾಣವಾದವು. ಅವರು ತಮ್ಮ ತಮ್ಮ ಧರ್ಮದಂತೆ ಆಚರಣೆಯನ್ನು ಮಾಡುವುದು ಅವರ ಮುಖ್ಯ ಲಕ್ಷಣವಾಗಿದೆ ॥೭೭॥ ಹೀಗೆ ವಿರಾಟ ಪುರುಷನಿಂದ ನಾಲ್ಕೂ ವರ್ಣಗಳ ಉತ್ಪತ್ತಿಯಾಯಿತು. ಈ ನಾಲ್ಕು ಆಶ್ರಮಗಳ ಸ್ಥಿತಿ ಹೇಳುವೆನು ॥೭೮॥

ನನ್ನ ನಡುವಿನ ಕೆಳ ಭಾಗವು ಗೃಹಸ್ಥಾಶ್ರಮದ್ದಾಗಿರುವುದು. ಬ್ರಹ್ಮಚರ್ಯವು ನನ್ನ ಹೃದಯಸ್ಥಾನದಲ್ಲಿರುವುದು ಮತ್ತು ವಾನಪ್ರಸ್ಥ ಆಶ್ರಮದ ಮಹಿಮೆಯನ್ನು ನಾನು ಸ್ವತಃ ವಕ್ಷಃಸ್ಥಳದಲ್ಲಿ ಬೆಳೆಯಿಸುತ್ತಿರುತ್ತೇನೆ ॥೭೯॥ ನಾಲ್ಕನೆಯ ಸನ್ಯಾಸಾಶ್ರಮವು ನನ್ನ ಮಸ್ತಕದ ಮೇಲೆ ವಾಸಿಸುವುದು. ಈ ರೀತಿಯಲ್ಲಿ ವರ್ಣ ಮತ್ತು ಆಶ್ರಮ ಇವುಗಳ ವ್ಯವಸ್ಥೆಯನ್ನು ನಿನಗೆ ಯೋಗ್ಯ ರೀತಿಯಲ್ಲಿ ಹೇಳಿದೆನು ॥೮೦॥

ಹೇಗೆ ಜನ್ಮವೋ ಮತ್ತು ಹೇಗೆ ಸ್ಥಾನವೋ, ಅದರಂತೆಯೇ ಆ ಯಾವ ವರ್ಣಾಶ್ರಮಗಳಲ್ಲಿ ಗುಣಗಳಿರುವುವು. ಉತ್ತಮ ಸ್ಥಾನ ವಿದ್ದರೆ ಉತ್ತಮ ಗುಣಗಳಿರುವುವು ಮತ್ತು ನೀಚ ಸ್ಥಾನವಿದ್ದರೆ ಗುಣಗಳೂ ಸಹ ಸಹಜವಾಗಿ ನೀಚವಾಗುವುವು ॥೮೧॥ ಸತ್ವಗುಣ ಪ್ರಧಾನವಾಗಿದ್ದರೆ ಬ್ರಾಹ್ಮಣರಾಗುವರು ಸತ್ವ ಮತ್ತು ರಜ ಇವುಗಳ ಮಿಶ್ರಣದಿಂದ ಕ್ಷತ್ರಿಯರಾಗುವರು. ರಜ ಮತ್ತು ತಮ ಇವುಗಳ ಮಿಶ್ರಣದಿಂದ ವೈಶ್ಯರು ಉತ್ಪನ್ನರಾಗುವರು ಮತ್ತು ಶೂದ್ರರು ಕೇವಲ ತಮೋಗುಣ ನಿಷ್ಠರಾಗಿರುವರು ॥೮೨॥ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಮತ್ತು ಅವುಗಳ ಸ್ವಭಾವಗಳ ವರ್ಣನೆಯನ್ನು ಭಿನ್ನ ಭಿನ್ನ ರೂಪದಲ್ಲಿ ಸ್ವತಃ ಶ್ರೀಕೃಷ್ಣನು ಮುಂದಿನ ಎರಡು ಶ್ಲೋಕಗಳಲ್ಲಿ ಹೇಳುವನು॥೮೩॥

ಶಮೋ ದಮಸ್ತಪಃ ಶೌಚಂ ಸಂತೋಷಃ ಕ್ಷಾಂತಿರಾರ್ಜವಮ್ ।
ಮದ್ಭಕ್ತಿಶ್ಚ ದಯಾ ಸತ್ಯಂ ಬ್ರಹ್ಮಪ್ರಕೃತಯಸ್ತ್ವಿಮಾಃ ॥೧೬॥

ಅರ್ಥ :- ಶಮ, ದಮ, ತಪಸ್ಸು, ಪವಿತ್ರತೆ, ಸಂತೋಷ, ಕ್ಷಮಾಶೀಲತೆ, ಸರಳತನ, ನನ್ನ ಭಕ್ತಿ, ದಯೆ ಮತ್ತು ಸತ್ಯ ಇವು ಬ್ರಾಹ್ಮಣರ ಸ್ವಭಾವವಾಗಿರುವುದು.

ಉದ್ಧವಾಸೀ ಮ್ಹಣೇ ಶ್ರೀಕೃಷ್ಣ । ಬ್ರಾಹ್ಮಣ ಪ್ರಕೃತಿ ದಶಲಕ್ಷಣ । ತುಜ ಮೀ ಸಾಂಗೇನ ನಿರೂಪಣ । ತೇ ಸಾವಧಾನ ಅವಧಾರೀ ॥೮೪॥ ಮನಾದಿ ಜ್ಞಾನೇಂದ್ರಿಯವೃತ್ತೀ । ಬಾಹ್ಯ ದೃಷ್ಟೀ ಪರಿಚಾರಸ್ಥಿತೀ । ತೇ ಆವರೂನಿ ವಿವೇಕಯುಕ್ತೀ । ಆತ್ಮಪ್ರತೀತಿ ಧರಾವೀ ॥೮೫॥ ತೇಚಿ ವೃತ್ತೀಚೇ ಧರಣೇ ಐಸೇ । ಕೃಷ್ಣಸರ್ಪಾಚೇ ಮುಖ ಧರಣೇ ಜೈಸೇ । ತೋ ವೇಢೇ ಉಕಲೀ ಜಂವ ಆಪೈಸೇ । ತಂವ ಧಾರಣಾಸೌರಸೇ ನೇಹಟಾವಾ ॥೮೬॥ ತೇವೀ ವೈರಾಗ್ಯ - ಪ್ರತಾಪವಶೀ । ಗುರುವಚನಾಚೇನಿ ವಿಶ್ವಾಸೇ । ಅಂತರವೃತ್ತೀತೇ ನೇಹಟಾವೇ ಐಸೇ । ಜಂವ ಯೇ ಆತ್ಮ ಸಮರಸೇ ನಿಜಾತ್ಮತಾ ॥೮೭॥ ಮುಖ್ಯ ಕರೂನಿ ಗುರುವಚನ । ತದರ್ಥೀ ಬುದ್ಧಿ ನಿಮಗ್ನ । ತತ್ಪರವಣ ಹೋಯ ಮನ । ''ಶಮ'' ತೋ ಜಾಣ ಯಾ ನಾಂವ ॥೮೮॥ ಬ್ರಾಹ್ಮಣ ಪ್ರಕೃತೀ ಮಾಜೀ ಜಾಣ । ಹೇ ಸ್ವಾಭಾವಿಕ ನಿಜಲಕ್ಷಣ । ಯಾ ನಾಂವ ಗಾ ಶಮಗುಣ । ಐಕ ನಿರೂಪಣ ದಮಾಚೇ ॥೮೯॥ ವಿಷಯಪ್ರವೃತ್ತಿ ಪ್ರಚಂಡ । ಕರ್ಮೇಂದ್ರಿಯಾಂಚೇ ಬಳ ಬಂಡ । ವಿಧೀನೇ ತ್ಯಾಂಚೇ ಠೇಂಚೂನಿ ತೋಂಡ । ಸ್ವೈರಾ ವಿತಂಡ ವಿಚರೋ ನೇದೀ ॥೯೦॥ ವೇದವಿಧೀಚೇನಿ ಹಾತೇ । ದೇಹನಿರ್ವಾಹಾಪುರತೇ । ಖಾಣೇ ಜೇವಣೇ ಇಂದ್ರಿಯಾಂತೇ । ತೋ ಜಾಣ ಯೇಥೇ ''ದಮ'' ಗುಣ ॥೯೧॥ ತೇಥ ಶಮ ತೋ ಜಾಣ ಮುಖ್ಯ ರಾಜಾ । ದಮಾದಿ ಇತರ ತ್ಯಾಚ್ಯಾ ಪ್ರಜಾ । ತೇ ದೋನೀ ಸಾಂಗಿತಲೇ ವೋಜಾ । ಐಕ ತಿಜಾ ತಪೋನೇಮು ॥೯೨॥ ಶಮೇ ಜ್ಞಾನೇಂದ್ರಿಯ ಉಪಶಮು । ತೋಚಿ ಕರ್ಮೇಂದ್ರಿಯಾ ಮುಖ್ಯ ದಮು। ಯಾಹೀವರೀ ವೇದೋಕ್ತ ಕರ್ಮು । ತೇ ಜ್ಞಾನ ಪರಮು ಗೌರವಾಚೇ ॥೯೩॥ ಶರೀರಶೋಷಣಾ ನಾಂವ ತಪ । ತೇ ಪ್ರಾರಬ್ಧಭೋಗಾನುರೂಪ । ಹೃದಯೀ ಹರಿ ಚಿಂತಣೇ ಸದ್ರೂಪ । ಹೇ ಮುಖ್ಯ ತಪ ತಪಾಮಾಚೀ ॥೯೪॥ ಜೋ ವರ್ತತಾ ಸ್ವಧರ್ಮಸ್ಥಿತೀ । ಹರೀತೇ ವಿಸಂಬೇನಾ ನಿಜವೃತ್ತೀ । ಜೋ ನಿಜಾತ್ಮ ನಿಶ್ಚಯೋ ಚಿತ್ತೀ । ಅಹೋ ರಾತೀ ವಿವಂಚಿತ ॥೯೫॥

ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು; ಬ್ರಾಹ್ಮಣರ ಸ್ವಭಾವದಲ್ಲಿ ಇರುವ ಯಾವ ಹತ್ತು ಲಕ್ಷಣಗಳನ್ನು ನಾನು ನಿನಗೆ ಹೇಳುವೆನು. ಅದನ್ನು ನೀನು ಲಕ್ಷಪೂರ್ವಕವಾಗಿ ಕೇಳು ॥೮೪॥ ಮನಾದಿ ಇಂದ್ರಿಯವೃತ್ತಿಗಳು ಯಾವಾಗಲೂ ಬಾಹ್ಯ ದೃಷ್ಟಿಗಳತ್ತ ಧಾವಿಸುತ್ತಿರುವುವು. ಅವುಗಳಿಗೆ ವಿವೇಕದಿಂದ ಜಗ್ಗಿಕೊಂಡು ಆತ್ಮಸ್ವರೂಪದಲ್ಲಿ ಸ್ಥಿರಗೊಳಿಸಬೇಕು ॥೮೫॥ ಈಗ ಹೀಗೆ ವೃತ್ತಿಯನ್ನು ಜಗ್ಗಿಕೊಂಡು ಹಿಡಿಯುವಿಕೆ ಎಂದರೆ ಕಾಳಿಂಗ ಸರ್ಪದ ಮುಖವನ್ನು ಹಿಡಿಯುವಂತೆ ಅತ್ಯಂತ ಕಠಿಣವಾಗಿರುವುದು. ಅದು ತನ್ನನ್ನು ಸುತ್ತು ಹಾಕಿಕೊಂಡಿದ್ದನ್ನು ತನ್ನಷ್ಟಕ್ಕೆ ತಾನೇ ಬಿಟ್ಟುಕೊಡುವವರೆಗೂ ಅದರ ಮುಖವನ್ನು ಹಿಡಿದುಕೊಂಡೇ ಇರಬೇಕಾಗುವುದು ॥೮೬॥ ಈ ಪ್ರಕಾರವಾಗಿ ವೈರಾಗ್ಯದ ಸಾಮರ್ಥ್ಯದಿಂದ ಮತ್ತು ಗುರುವಾಕ್ಯಗಳ ವಿಶ್ವಾಸದಿಂದ ಆತ್ಮಸ್ವರೂಪದಲ್ಲಿ ಐಕ್ಯವಾಗುವವರೆಗೂ ವೃತ್ತಿಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕು ॥೮೭॥ ಗುರುವಚನವು ಇದು ಮುಖ್ಯವೆಂದು ತಿಳಿದು ಅದರಲ್ಲಿಯೇ ಬುದ್ಧಿಯನ್ನು ನಿಮಗ್ನಮಾಡಿ ಇಡಬೇಕು ಮತ್ತು ಮನವನ್ನು ತತ್ಪರಗೊಳಿಸಬೇಕು. ಇದಕ್ಕೆ ಶಮವೆಂದು ಹೇಳುವರು ॥೮೮॥ ಬ್ರಾಹ್ಮಣ ಸಮಾಜದಲ್ಲಿ ಈ ಗುಣವು ಸ್ವಾಭಾವಿಕವಾಗಿ ಇರುವುದು. ಇದಕ್ಕೆ ಶಮಗುಣವೆನ್ನುವರು. ಈಗ ದಮದ ನಿರೂಪಣೆಯನ್ನು ಹೇಳುವೆನು, ಅದನ್ನು ಕೇಳು॥೮೯॥ ವಿಷಯ ಪ್ರವೃತ್ತಿಯು ಅತಿಶಯವಾಗಿ ಪ್ರಚಂಡವಾಗಿರುವುದು. ಮತ್ತು ಕರ್ಮೇಂದ್ರಿಯಗಳ ಬಂಡತನವು ಅನಿವಾರ್ಯವಾಗಿರುವುದು. ಅದಕ್ಕಾಗಿ ಶಾಸ್ತ್ರವಿಧಿಗಳಿಂದ ಅವುಗಳ ಮುಖಕ್ಕೆ ಜಜ್ಜಿ, ಬಗ್ಗು ಬಡೆದು ಅವುಗಳಿಗೆ ಸಿಕ್ಕಸಿಕ್ಕಂತೆ ಧಾವಿಸಲು ಬಿಡಬಾರದು ॥೯೦॥ ವೇದವಿಧಾನದಂತೆ ಕೇವಲ ಶರೀರ ಪೋಷಣೆಯಾಗುವಷ್ಟು ಇಂದ್ರಿಯಗಳಿಗೆ ಅನ್ನವನ್ನು ಕೊಡಬೇಕು. ಹೆಚ್ಚಿಗೆ ಕೊಡಬಾರದು. ಇದಕ್ಕೆ ದಮಗುಣವೆನ್ನುವರು ॥೯೧॥ ಇದರಲ್ಲಿ ಶಮವು ಮುಖ್ಯವಾಗಿ ರಾಜನಾಗಿರುವುದು. ಮತ್ತು ದಮ ಇತ್ಯಾದಿ ಅದರ ಪ್ರಜೆಗಳಾಗಿರುವುವು ಎಂದು ತಿಳಿಯಬೇಕು. ಈ ಎರಡನ್ನೂ ನಿನಗೆ ಯಥಾಯೋಗ್ಯ ರೀತಿಯಿಂದ ಹೇಳಿರುವೆನು. ಈಗ ಮೂರನೆಯದಾದ ಯಾವ ತಪೋ ನಿಯಮ, ಅದನ್ನೂ ಕೂಡ ನಿನಗೆ ಹೇಳುವೆನು, ಅದನ್ನು ಕೇಳು ॥೯೨॥ ಶಮ ಗುಣಗಳಿಂದ ಜ್ಞಾನೇಂದ್ರಿಯಗಳಿಗೆ ಶಾಂತಿಯು ಪ್ರಾಪ್ತವಾಗುವುದು ಮತ್ತು ದಮ ಗುಣಗಳಿಂದ ಕರ್ಮೇಂದ್ರಿಯಗಳಿಗೆ ಶಾಂತಿಯು ಪ್ರಾಪ್ತವಾಗುವುದು. ಇದಲ್ಲದೇ ಯಾವುದು ವೇದೋಕ್ತ ಕರ್ಮಾಚರಣೆವಿರುವುದೋ, ಆತನ ಜ್ಞಾನವು ಬಹಳ ಮಹತ್ವದ್ದಾಗಿರುವುದು ॥೯೩॥ ವ್ರತಾದಿಗಳ ಯೋಗದಿಂದ ಶರೀರವನ್ನು ಕಷ್ಟಿಸುವುದು ಇದಕ್ಕೆ ತಪ ಎಂದು ಹೇಳುವರು. ಇದು ಪ್ರಾರಬ್ಧ ಕರ್ಮಾನುಸಾರವಾಗಿ ಆಗುತ್ತಿರುವುದು. ಹೃದಯದಲ್ಲಿ ಶ್ರೀಹರಿಯ ಸ್ವರೂಪವನ್ನು ಚಿಂತಿಸುವುದೇ ತಪಗಳಲ್ಲಿ ಶ್ರೇಷ್ಠ ತಪವಾಗಿರುವುದು ॥೯೪॥ ಯಾರು ಸ್ವಧರ್ಮದಂತೆ ಆಚರಿಸುತ್ತಿರುವನೋ, ಆತನು ಅಂತಃಕರಣದಲ್ಲಿ ಶ್ರೀಹರಿಯನ್ನು ಮರೆಯಲಾರನು. ಆತನು ಹಗಲು ರಾತ್ರಿ ಮನದಲ್ಲಿ ಶ್ರೀಹರಿಯ ನಿಶ್ಚಯದ ವಿವಂಚನೆಯನ್ನು ಮಾಡುತ್ತಿರುವನು ॥೯೫॥

ಜೇವೀ ಲೋಭಿಯಾ ವಾಹೇ ಧನ । ಕಾ ತಾರುಣ್ಯಾಲಾಗೀ ತರುಣೀ ಜಾಣ । ತೈಸೇ ನಿಜಾತ್ಮ ವಿವಂಚನ । ಜಯಾಚೇ ಮನ ಸದಾ ಕರೀ ॥೯೬॥ ತ್ಯಾ ನಂವ ಗಾ ತಪೋನಿಷ್ಠ । ಹೇ ತಪಾಮಾಜೀ ತಪ ವರಿಷ್ಠ । ಬ್ರಾಹ್ಮಣ ಪ್ರಕೃತೀಮಾಜೀ ಶ್ರೇಷ್ಠ । ''ತಪ'' ತೇ ಉದ್ಧಟ ಯಾನಾಂವ ॥೯೭॥ ಐಕ ''ಶೌಚಾ'' ಚಾ ವಿಚಾರ । ತೋ ಆಹೇ ದ್ವಿಪ್ರಕಾರ । ಅಂತರೀ ಜ್ಞಾನನಿರ್ಧಾರ । ಬಾಹ್ಯ ಆಚಾರ ವೇದೋಕ್ತ ॥೯೮॥ ಬಾಹ್ಯ ಮಳಾಚೇ ಕ್ಷಾಳಣ । ಮೃಜ್ಜಲಾದಿ ವೇದವಿಧಾನ । ಆಂತರ ಮಳಾಚೇ ನಿರ್ದಳಣ । ಆತ್ಮಜ್ಞಾನ ನಿಜನಿಷ್ಠಾ ॥೯೯॥ ಶುದ್ಧ ಶೌಚಾಚೇ ನಿರ್ಮಳಪಣ । ಮುಖ್ಯತ್ವೇ ಉದ್ಧವಾ ಹೇಚಿ ಜಾಣ । ಆತಾ ಸಂತೋಷಾಚೇ ಲಕ್ಷಣ । ಐಕ ಸಂಪೂರ್ಣ ಸಾಂಗೇನ ॥೧೦೦॥ ಪುತ್ರ ಜನ್ಮಲ್ಯಾ ಹೋಯ ಸುಖ । ತೋ ಗೇಲಿಯಾ ಸವೇಂಚಿ ದುಃಖ । ಧನ ಜೋಡಲಿಯಾ ಹೋಯ ಹರಿಖ । ಸವೇಂಚಿ ಶೋಕ ತನ್ನಾಶೀ ॥೧೦೧॥ ಜ್ಯಾ ಸುಖಾಚೇ ಹೋತಾ ಭೇಟೀ । ನಿಃಶೇಷ ಮಾವಳೇ ದುಃಖಕೋಟೀ । ಯಾ ನಾಂವ ''ಸತ್ಯಸುಖ'' ಸೃಷ್ಟೀ । ಇತರ ಚಾವಟೀ ತೇ ಮಿಥ್ಯಾ ॥೧೦೨॥ ನಿರುಪಚಾರ ಅಂತರಗತೀ । ಮದ್ಭಾವೇ ಜೇ ಸುಖಪ್ರಾಪ್ತೀ । ಜಾಹಲಿಯಾ ಸಂಪತ್ತೀ ವಿಪತ್ತೀ । ಜೇ ಸಂತೋಷ ಪ್ರಾಪ್ತೀ ಸಮಸಾಮ್ಯೇ ॥೧೦೩॥ಯೇಚಿ ಪದೀ ಪಾಠಾಂತರ । ''ತಿತಿಕ್ಷಾ'' ಮ್ಹಣತೀ ಥೋರಥೋರ । ಐಕ ತ್ಯಾಚೇಹೀ ಅರ್ಥಾಂತರ । ಪದಾರ್ಥವಿಚಾರ ತೋ ಐಸಾ ॥೧೦೪॥ ಶೀತ- ಉಷ್ಣ-ಮೃದು-ಕಠಿಣ । ಅಂಗೀ ಆದಳತಾಂಹೀ ಜಾಣ । ಜ್ಯಾಚೇ ಡಂಡಳೀನಾ ಮನ । ಭಾವನಾ ಪೂರ್ಣ ಮದ್ಭಾವೇ ॥೧೦೫॥ ಸಂತೋಷ ತಿತಿಕ್ಷಾ ವ್ಯಾಖ್ಯಾನ । ಹೇ ಪಾಂಚವ್ಯಾ ಪದಾಚೇ ಲಕ್ಷಣ । ಉದ್ಧವಾಸೀ ಮ್ಹಣೇ ಶ್ರೀಕೃಷ್ಣ । ಐಕ ನಿರೂಪಣ ಶಾಂತೀಚೇ ॥೧೦೬॥ ಮಾರ್ಝಾ ನಿರ್ಧಾರಿತಾ ನಿಜಬೋಧ । ಅಂತರೀ ನಿಮಾಲೇ ಕಾಮಕ್ರೋಧ । ತ್ಯಾಂಸೀ ಕೇಲಿಯಾಹೀ ಅಪರಾಧ । ನ ಮನೀ ವಿರುದ್ಧ ಪುಢಿಲಾಂಚೇ ॥೧೦೭॥ ಪರೀ ತೇಥೀಂಚೇ ನವಲಪರೀ । ಅಪಕಾರ್ಯಾಹೋಯ ಉಪಕಾರೀ । ವಿಕಾರ ನಾಹೀ ಜ್ಯಾಚೇ ಅಂತರೀ । ಜಾಣ ತೇ ಖರೀ ''ನಿಜಶಾಂತಿ'' ॥೧೦೮॥ ಐಶೀ ಸದಾ ಶಾಂತಿ ಸಂಪೂರ್ಣ । ತೇ ಬ್ರಾಹ್ಮಣಾಚೇ ಷಷ್ಠ ಲಕ್ಷಣ । ಐಕ ಆರ್ಜವಾಚೇ ನಿರೂಪಣ ।ಜೀವೀಚೇ ಖೂಣ ಸಾಂಗೇನ ॥೧೦೯॥

ಲೋಭಿಯಾದ ಮನುಷ್ಯನು ಧನದ ಚಿಂತನೆ ಮಾಡುವಂತೆ ಅಥವಾ ತರುಣಿಯು ತರುಣನ ಚಿಂತನೆಯನ್ನು ಮಾಡುವಂತೆ ಯಾರ ಮನವು ಆತ್ಮಚಿಂತನೆಯನ್ನು ಮಾಡುತ್ತಿರುವುದೋ, ಆತನಿಗೆ ತಪೋನಿಷ್ಠ ಎಂದು ಹೀಗೆ ಹೇಳುವರು ॥೯೬॥ ಸರ್ವ ತಪಗಳಲ್ಲಿ ಈ ತಪವು ಶ್ರೇಷ್ಠವಾಗಿರುವುದು. ಬ್ರಾಹ್ಮಣ ಸ್ವಭಾವದಲ್ಲಿನ ಈ ಶ್ರೇಷ್ಠ ಗುಣಕ್ಕೆ ಉಜ್ವಲ ತಪವೆಂದು ಹೇಳುವರು ॥೯೭॥ ಈಗ ಶುಚಿರ್ಭೂತದ ಪ್ರಕಾರವನ್ನು ಹೇಳುವೆನು,ಕೇಳು. ಅದು ಎರಡು ಪ್ರಕಾರದ್ದಾಗಿರುವುದು. ಒಂದು ಅಂತಃಕರಣದಲ್ಲಿ ಶುದ್ಧ ಜ್ಞಾನದ ವಿಷಯವಾಗಿರುವುದು ಮತ್ತು ಇನ್ನೊಂದು ಹೊರಗೆ ವೇದೋಕ್ತ ಆಚರಣೆಯಾಗಿರುವುದು ॥೯೮॥ ಶರೀರದ ಮೇಲೆ ಬಾಹ್ಯ ಹೊಲಸು ಇರುವುದು. ಅದರ ಕ್ಷಾಲನೆಯನ್ನು ವೇದವಿಧಾನಗಳಂತೆ ಮಣ್ಣು ಮತ್ತು ಜಲ ಇತ್ಯಾದಿಗಳಿಂದ ಮಾಡಬೇಕು. ಆತ್ಮನಿಷ್ಠೆಯಿಂದ ಅಂತಃಕರಣದ ಶುದ್ಧಿಯನ್ನು ಮಾಡಬೇಕು ॥೯೯॥ ಹೇ ಉದ್ಧವಾ, ಈ ಪ್ರಕಾರವಾಗಿ ಅಂತರ್ಬಾಹ್ಯ ನಿರ್ಮಲತ್ವವನ್ನು ಪ್ರಾಪ್ತಮಾಡುವುದೇ ಶೌಚದ ಮುಖ್ಯ ಲಕ್ಷಣವಾಗಿರುವುದು. ಈಗ ಸಂತೋಷದ ಲಕ್ಷಣವನ್ನು ಹೇಳುವೆನು, ಅದನ್ನು ಕೇಳು ॥೧೦೦॥ ಪುತ್ರನು ಹುಟ್ಟಿದ ಕೂಡಲೇ ಆನಂದವಾಗುವುದು. ಆದರೆ ಆ ಕೂಸು ಸತ್ತ ಕೂಡಲೇ ದುಃಖ ಉಂಟಾಗುವುದು. ಧನವು ಪ್ರಾಪ್ತವಾಗುತ್ತಲೇ ಹರ್ಷವಾಗುವುದು. ಅದೇ ಧನವು ಮುಗಿಯುತ್ತಲೇ ತತ್ಕಾಲದಲ್ಲಿ ದುಃಖವಾಗುವುದು ॥೧೦೧॥ ಆದರೆ ಯಾವ ಸುಖದ ಪ್ರಾಪ್ತಿಯಾಗುತ್ತಲೇ ತತ್ಕಾಲದಲ್ಲಿ ಕೋಟಿ ದುಃಖಗಳು ಇಲ್ಲದಾಗುವುವು. ಇದುವೇ ನಿಜವಾದ ಸುಖವಾಗಿರುವುದು. ಇದರ ಹೊರತಾದ ಅನ್ಯ ಸುಖಗಳು ಕೇವಲ ತೋರಿ ಅಡಗುವ ಸುಳ್ಳುಸುಖಗಳಾಗಿವೆ ॥೧೦೨॥ ನನ್ನ ಭಕ್ತಿಯಿಂದ ಅಂತಃಕರಣದಲ್ಲಿ ಯಾವ ಸ್ವಾಭಾವಿಕವಾದ ಸುಖವು ಪ್ರಕಟವಾಗುವುದೋ, ಆ ಸುಖವು ಸಂಪತ್ತು, ವಿಪತ್ತುಗಳು ಬಂದರೂ ಕೂಡ ಸಮಭಾವದಿಂದ ಸಂತೋಷವನ್ನೇ ಕೊಡುತ್ತಿರುವುದು ॥೧೦೩॥ ಈ ವಿಷಯದಲ್ಲಿ ಪಾಠಭೇದವಿರುವುದು ಕಂಡುಬರುವುದು. ಮಹಾ ಮಹಾ ವಿದ್ವಾನ ಜನರು ಸಂತೋಷದ ಬದಲು ''ತಿತಿಕ್ಷಾ'' ಎಂದು ಕರೆಯುವರು. ಈಗ ಅದರ ಅರ್ಥವನ್ನೂ ಕೇಳು ॥೧೦೪॥ ನನ್ನ ಭಕ್ತಿಯಲ್ಲಿ ಯಾರ ಭಾವನೆಯು ಪೂರ್ಣವಾಗಿರುವುದೋ, ಆತನಿಗೆ ಶೀತ- ಉಷ್ಣ, ಮೃದು-ಕಠಿಣ ಇವುಗಳಲ್ಲಿ ಯಾವುದೇ ಪ್ರಾಪ್ತಿಯಾಗಲಿ ಆತನ ಮನವು ಎಂದಿಗೂ ಅಸ್ಥಿರಗೊಳ್ಳುವುದಿಲ್ಲ ॥೧೦೫॥ ಈ ಪ್ರಕಾರವಾಗಿ ಸಂತೋಷ ತಿತಿಕ್ಷೆಯ ವ್ಯಾಖ್ಯಾನವು ಇದು ಐದನೆಯ ಪದದ ಲಕ್ಷಣವಾಗಿರುವುದು. ಶ್ರೀಕೃಷ್ಣನು ಈಗ ಶಾಂತಿಯ ನಿರೂಪಣೆಯನ್ನು ಕೇಳು ಎಂದು ಉದ್ಧವನಿಗೆ ಹೇಳಿದನು ॥೧೦೬॥ ನನ್ನ ನಿಜಬೋಧೆಯು ಅಂತಃಕರಣದಲ್ಲಿ ದೃಢವಾಯಿತೆಂದರೆ ಮನದಲ್ಲಿನ ಕಾಮ ಕ್ರೋಧಗಳು ಇಲ್ಲದಾಗುವುವು. ಯಾರೇ ಅಪರಾಧವನ್ನು ಮಾಡಲಿ, ಅವರಿಗೆ ಯಾವ ವಿರುದ್ಧವೂ ಅನಿಸುವುದಿಲ್ಲ ॥೧೦೭॥ ಆದರೆ ಅವರ ಎಂತಹ ಆಶ್ಚರ್ಯವೆಂದರೆ ಅಪಕಾರವನ್ನು ಮಾಡಿದವರಿಗೆ ಉಪಕಾರವನ್ನು ಮಾಡುತ್ತಿರುವರು. ಅವರ ಅಂತಃಕರಣದಲ್ಲಿ ಯಾವ ವಿಕಾರವೂ ನಿರ್ಮಾಣವಾಗುವುದಿಲ್ಲ. ಇದುವೇ ನಿಜವಾದ ಆತ್ಮಶಾಂತಿಯಾಗಿರುವುದು ॥೧೦೮॥ ಈ ಪ್ರಕಾರದ ಸದೈವ, ಪರಿಪೂರ್ಣ ಆತ್ಮಶಾಂತಿ ಇರುವಿಕೆಯು ಇದು ಬ್ರಾಹ್ಮಣರ ಆರನೆಯ ಲಕ್ಷಣವಾಗಿರುವುದು. ಈಗ ಆರ್ಜವದ ನಿರೂಪಣೆಯನ್ನು ಮಾಡುವೆನು,ಕೇಳು. ಆತನ ಅಂತಃಕರಣದಲ್ಲಿನ ಚಿನ್ಹೆಯನ್ನು ಹೇಳುವೆನು ॥೧೦೯॥

ಕುರೂಪ ಜರೀ ಜಾಹಲೀ ಮಾತಾ । ತರೀ ಸ್ನೇಹಾಸೀ ನಾಹೀ ಕುರೂಪತಾ । ಕಾ ಸುವರ್ಣಾಚೇ ನಾಗ ಕರಿತಾ ।
ಸೋನೇ ಸರ್ವಥಾ ನವ್ಹೇ ಸರ್ಪು ॥೧೧೦॥ ತೇವೀ ಕುಟಿಲಾಂಸೀ ಕುಟಿಲತಾ । ಕರಾವೀ ಮ್ಹಣೋನಿ ಶಿಕವಿತಾ ।
ಕುಟಿಲತ್ವ ನುಪಜೇ ಚಿತ್ತಾ । ಜಾಣ ತತ್ತ್ವತಾ ತೇ ''ಆರ್ಜವ'' ॥೧೧೧॥ ಗಾಯೀಸೀ ಗೋಡ ವ್ಯಾಘ್ರಾಸೀ ಕಡೂ
। ಹಾ ಗಂಗಾಜಳೀ ನಾಹೀ ಪವಾಡು । ತೇವೀ ಆರ್ಜವಾಚಾ ಪಡಿಪಾಡು । ವಿಷಮಾಂಹೀ ಗೋಡು ಸಮಸಾಮ್ಯೇ
॥೧೧೨॥ ಯಾ ನಾಂವ ಜಾಣ ''ಆರ್ಜವ'' । ಸಾತವೇ ಲಕ್ಷಣ ಅಪೂರ್ವ । ಆತಾ ನಿಜಭಕ್ತೀಚಾ ಸ್ವಭಾವ ।
ದೇವಾಧಿದೇವ ಸಾಂಗತ ॥೧೧೩॥ ವನ ಉದ್ಯಾನ ಗಂಗಾದಿ ಜೀವನ । ಯಾಂಸೀ ಪೃಥ್ವೀಚಿ ಜೇವೀ ಅಧಿಷ್ಠಾನ ।
ತೇವೀ ಸಕಳ ಲಕ್ಷಣಾ ಜನ್ಮಸ್ಥಾನ । ಮಾಝೀ ''ಭಕ್ತಿ'' ಜಾಣ ಉದ್ಧವಾ ॥೧೧೪॥ ಸಕಳ ಪಿಕಾಂಚಿಯೇ ಪ್ರಾಪ್ತೀ
। ಆಧಾರಭೂತ ಜೇವೀ ಕ್ಷಿತೀ । ತೇವೀ ಸಕಳ ಲಕ್ಷಣಾ ಉತ್ಪತ್ತೀ । ಮಾಝಿಯೇ ಭಕ್ತೀಮಾಝಾರೀ ॥೧೧೫॥
ಐಕ ತೇ ಭಕ್ತೀಚಾ ಇತ್ಯರ್ಥ । ಸಾಂಡೋನಿಯಾ ವಿಷಯಸ್ವಾರ್ಥ । ಜೀವೀಹೂನಿ ಮಜಲಾಗೀ ಭಾವಾರ್ಥ ।
ತೋಚಿ ನಿಜಭಕ್ತ ಪೈ ಮಾಝಾ ॥೧೧೬॥ ಭಕ್ತ ಆಣಿ ಕರೀ ಧನಾರ್ಜನ । ಹೇಚಿ ಭಕ್ತೀಸೀ ಮುಖ್ಯ ವಿಘ್ನ ।
ಧನಲೋಭೀ ತೋ ಅಭಕ್ತ ಪೂರ್ಣ । ಸತ್ಯ ಜಾಣ ಉದ್ಧವಾ ॥೧೧೭॥ ಮಾಝಾ ಭಾವ ನಾಹೀ ಜಿವ್ಹಾರೀ ।
ಆಹಾಚವಾಹಾಚ ಮಾಝೀ ಭಕ್ತಿ ಕರೀ । ತೋ ಆಂಧಳ್ಯಾ ಗರುಡಾಚೇ ಪರಿ । ಉಡೇ ಪರೀ ನಿರ್ಧಾರೀ ಸ್ಥಾನ
ನೇಣೇ ॥೧೧೮॥ ಮಾಝಾ ಭಾವಾರ್ಥ ಜೇಥ ಹೋಯೇ । ತೇಥ ಮೀ ಜಾತೀ ಕುಳ ನ ಪಾಹೇ । ಮೀ ಭಾವಾಚೇನಿ
ಲವಲಾಹೇ । ವಶ್ಯ ಹೋಯೇ ನಿಜಭಕ್ತಾ ॥೧೧೯॥ ಜೇಥ ಭಾವಾರ್ಥೇ ಮಾಝೀ ಆವಡೀ । ತೇಥ ಅವಶ್ಯ
ಮಾಝೀ ಪಡೇ ಉಡೀ । ಜೇಣೇ ಭಾವಾರ್ಥಾಚೀ ಉಭವಿಲೀ ಗುಢೀ । ತೋ ಜಾಣೇ ಗೋಡೀ ಮದ್ಭಕ್ತೀಚೀ
॥೧೨೦॥ ಜೇ ಜೇ ಭೇಟೇ ತೋಚಿ ದೇವೋ । ಐಸಾ ಭಾವಾರ್ಥೀ ಜ್ಯಾಚಾ ಭಾವೋ । ತೋ ಏಕ ಪಢಿಯಂತಾ
ಮಜ ಪಹಾ ಹೋ । ತ್ಯಾಚೇನಿ ಭಾವೇ ಜೀವೋ ಆಮ್ಹೀ ಉದ್ಧವಾ ॥೧೨೧॥ ತೋಚಿ ಮಾಝಾ ಜೀವಪ್ರಾಣ
। ತ್ಯಾಸೀ ಮೀ ಸರ್ವಸ್ವೇ ಕರೀ ನಿಂಬಲೋಣ । ಮೀ ಸರ್ವದಾ ತ್ಯಾ ಆಧೀನ । ಜೇವೀ ವ್ಯಾಲೀ ಧೇನು ವತ್ಸಾಸೀ
॥೧೨೨॥

ತಾಯಿಯು ಕುರೂಪಿಯಾಗಿದ್ದರೂ ಆಕೆಯ ಪ್ರೇಮದಲ್ಲಿ ಕುರೂಪತೆಯು ಇರುವುದಿಲ್ಲ. ಅಥವಾ ಬಂಗಾರದ ನಾಗಸರ್ಪವನ್ನು ಮಾಡಲು
ಬಂಗಾರವು ಸರ್ವಥಾ ಸರ್ಪವಾಗಲಾರದು ॥೧೧೦॥ ಅದಕ್ಕಾಗಿ ಕಪಟ ಜನರಲ್ಲಿ ಕಪಟತನದಿಂದ ವರ್ತಿಸಬೇಕೆಂದು ಯಾರಾದರೂ
ಕಲಿಸಿಕೊಟ್ಟರೂ ಆತನ ಮನದಲ್ಲಿ ಕಪಟತನದ ಭಾವವು ಸ್ವಲ್ಪವೂ ಕೂಡ ನಿರ್ಮಾಣವಾಗುವುದಿಲ್ಲ. ಇದಕ್ಕೆ ಆರ್ಜವ ಎಂದು ಹೇಳುವರು
॥೧೧೧॥ ಗಂಗಾ ನದಿಯ ನೀರು ಆಕಳಿಗೆ ಸಿಹಿ ಮತ್ತು ಹುಲಿಗೆ ಕಹಿಯಾಗುವಿಕೆ ಹೀಗೆ ಅದಕ್ಕೆ ಪಕ್ಷಪಾತವಿರುವುದಿಲ್ಲ. ಅದರಂತೆಯೇ ಆರ್ಜವದ
ಪ್ರಕಾರವಾಗಿರುವುದು. ಯಾರೇಯಾಗಲಿ ವಿರೋಧವಾಗಿ ವರ್ತಿಸಿದರೂ ಕೂಡ ಅವರಲ್ಲಿ ಸರಳವಾಗಿಯೇ ನಡೆದುಕೊಳ್ಳುವರು ॥೧೧೨॥
ಇದಕ್ಕೇನೇ ಆರ್ಜವ ಅಂದರೆ ಅಂತಃಕರಣಾದ ಸರಳತನವು ಎಂದು ಹೇಳುವರು. ಇದು ಬ್ರಾಹ್ಮಣರ ಏಳನೆಯ ಅಪೂರ್ವ ಲಕ್ಷಣವಾಗಿರುವುದು.
ಈಗ ದೇವಾಧಿದೇವನು ಆತ್ಮ ಭಕ್ತಿಯ ಲಕ್ಷಣವನ್ನು ಹೇಳುವನು ॥೧೧೩॥ ಹೇ ಉದ್ಧವನೇ, ವನ, ಉಪವನ ಮತ್ತು ಗಂಗಾಜಲ ಇವಗಳಿಗೆ
ಪೃಥ್ವಿಯು ಹೇಗೆ ಆಧಾರವಾಗಿದೆಯೋ, ಅದರಂತೆಯೇ ಸರ್ವ ಲಕ್ಷಣಗಳ ಉತ್ಪತ್ತಿಯ ಸ್ಥಾನವು ನನ್ನ ಭಕ್ತಿಯೊಂದೇ ಆಗಿರುವುದೆಂದು
ಹೀಗೆ ತಿಳಿ ॥೧೧೪॥ ಯಾವ ರೀತಿಯಲ್ಲಿ ಸರ್ವ ಪ್ರಕಾರದ ಬೆಳೆಗಳು ಭೂಮಿಯ ಆಧಾರದಿಂದ ಬೆಳೆದು ಫಲಗಳನ್ನು ಕೊಡುವುವೋ, ಅದರಂತೆ
ನನ್ನ ಭಕ್ತಿಯಿಂದ ಸರ್ವ ಲಕ್ಷಣಗಳ ಉತ್ಪತ್ತಿಯಾಗುವುದು ॥೧೧೫॥ ಈಗ ಆ ಭಕ್ತಿಯ ಲಕ್ಷಣವನ್ನು ಕೇಳು. ವಿಷಯಗಳ ಆಸಕ್ತಿಯನ್ನು
ಬಿಟ್ಟುಕೊಟ್ಟು ಯಾರು ನನ್ನ ಮೇಲೆ ನಿಃಸ್ವಾರ್ಥ ಪ್ರೇಮವನ್ನು ಮಾಡುವನೋ, ಆತನೇ ನನ್ನ ನಿಜವಾದ ಭಕ್ತನಾಗಿರುವನು ॥೧೧೬॥
ಭಕ್ತನೆಂದು ಹೇಳಿಸಿಕೊಳ್ಳುವುದು ಮತ್ತು ಆ ಭಕ್ತಿಯಿಂದ ಹಣವನ್ನು ಪ್ರಾಪ್ತಿಮಾಡಿಕೊಳ್ಳುವುದು ಇದು ಭಕ್ತಿಯಲ್ಲಿನ ಮುಖ್ಯವಾದ
ವಿಘ್ನವಾಗಿರುವುದು ಹೇ ಉದ್ಧವನೇ, ಧನಲೋಭಿಯಾದ ಮನುಷ್ಯನು ಪರಿಪೂರ್ಣವಾಗಿ ಅಭಕ್ತನಾಗಿರುವನು. ಹೀಗೆ ತಿಳಿ ॥೧೧೭॥
ನಿಜವಾಗಿಯೂ ಅಂತಃಕರಣದಲ್ಲಿ ನನ್ನ ಭಕ್ತಿಯು ಇರುವುದಿಲ್ಲ. ಆದರೆ ದಾಂಭಿಕತನದಿಂದ ಅವನು ಮೇಲ್ನೋಟಕ್ಕೆ ಭಕ್ತಿಯನ್ನು
ಮಾಡುತ್ತಿರುವನು. ಕುರುಡ ಗರುಡವು ಆಕಾಶದಲ್ಲಿ ವಿಹರಿಸುವಂತೆ, ನಿಶ್ಚಿತ ಸ್ಥಾನವನ್ನು ತಿಳಿಯದಂತೆ ಅವನಾಗಿರುವನು ॥೧೧೮॥ ಎಲ್ಲಿ
ನನ್ನ ಭಕ್ತಿಯು ಇರುವುದೋ, ಅಲ್ಲಿ ನಾನು ಜಾತಿಯ ಅಥವಾ ಕುಲದ ವಿಚಾರವನ್ನು ಮಾಡುವುದಿಲ್ಲ. ಕೇವಲ ಭಕ್ತರಿಗಾಗಿ ನಾನು ಭಕ್ತರ
ಆಧೀನನಾಗುವೆನು ॥೧೧೯॥ ಎಲ್ಲಿ ನನ್ನ ಭಕ್ತಿಭಾವದ ಪ್ರೀತಿ ಇರುವುದೋ, ಅಲ್ಲಿ ನಾನು ಅವಶ್ಯವಾಗಿ ಜಿಗಿಯುತ್ತ ಓಡಿ ಬರುವೆನು. ಯಾರು
ನನ್ನ ಭಕ್ತಿಯ ಧ್ವಜವನ್ನು ಏರಿಸಿ ನಿಲ್ಲಿಸುವನೋ, ಆತನೇ ನನ್ನ ಭಕ್ತಿಯ ಸುಖವನ್ನು ತಿಳಿದಿರುವನು ॥೧೨೦॥ ಹೇ ಉದ್ಧವಾ, ಕಣ್ಣಿಗೆ
ಕಾಣುವುದೆಲ್ಲವೂ ಅವು ಸರ್ವವೂ ದೇವರೇ ಎಂಬ ಹೀಗೆ ಆತನ ಭಕ್ತಿ ಭಾವನೆವಿರುವುದು. ಆತನೊಬ್ಬನೇ ನನ್ನ ಪ್ರಿಯಭಕ್ತನಾಗಿರುವನು.
ಆತನ ಭಾವಿಕತನದಿಂದಲೇ ನಾನು ಬದುಕಿರುವೆನು ॥೧೨೧॥ ಹೀಗೆ ನನ್ನ ಭಕ್ತನು ನನ್ನ ಜೀವ ಪ್ರಾಣನಾಗಿರುವನು. ಆತನ ಮೇಲೆ ನಾನು
ನನ್ನ ಸರ್ವಸ್ವವನ್ನು ನಿವಾಳಿಸಿ ಒಗೆಯುವೆನು. ಯಾವ ಪ್ರಕಾರವಾಗಿ ಜನ್ಮ ಕೊಟ್ಟ ಆಕಳು ತನ್ನ ಕರುವಿನ ಆಧೀನವಾಗಿರುವುದೋ, ಅದ
ರಂತೆಯೇ ನಾನೂ ಕೂಡ ಆ ಭಕ್ತನ ಆಧೀನನಾಗಿರುವೆನು ॥೧೨೨॥

ಏವಂ ನಿಃಸೀಮ ಭಾವಾರ್ಥಾಚೀ ಸ್ಥಿತೀ । ತ್ಯಾ ನಾಂವ ಉದ್ಧವಾ ಮಾಝೀ ಭಕ್ತೀ । ಯಾಪರೀ ಭಕ್ತೀಚೀ ವ್ಯುತ್ಪತ್ತೀ । ಐಕ ಪಾ ಖ್ಯಾತೀ ದಯೇಚೀ ।।೧೨೩।। ಬಾಳಕ ದೇಖೋನಿ ಸಂಕಟೀ । ಜೇವೀ ನ ಸಾಂವರತ ಮಾಯ ಉಠೀ । ತೇವೀ ದೀನ ದೇಖೋನಿ ದೃಷ್ಟೀ । ಜ್ಯಾಚೇ ಪೋಟೀ ದಯಾ ದ್ರವೇ ।।೧೨೪।। ಐಶಿಯಾ ದಯೇಚ್ಯಾ ಠಾಯೀ ಜಾಣ । ಆಪುಲೇ ಪಾರಕೇ ಪುಸೇ ಕೋಣ । ಸ್ವಜಾತಿ-ವಿಜಾತಿಲಕ್ಷಣ । ಪುಸಾಯಾಹೀ ಪಣ ಧೀರ ನಾಹೀ ।।೧೨೫।। ಮಹಾಪೂರೀ ಬುಡತಯಾತೇ । ಕೃಪಾಳೂ ಜಾತೀ ನ ಪುಸೇ ತೇಥೇ । ಉಡೀ ಘಾಲೂನಿ ವಾಂಚವೀ ತ್ಯಾತೇ । ''ದಯಾ''ನಿಶ್ಚಿತೇ ತೀ ನಾಂವ ।।೧೨೬।। ದೀನಾಚಿಯೇ ದಯೇಲಾಗೀ । ಜೋ ರಿಘೇ ಜಳತ್ಯಾ ಆಗೀ । ತ್ಯಾಚೇ ಚರಣ ಮೀ ವಂದೀ ವೇಗೀ । ಧನ್ಯ ಜಗೀ ದಯಾಳೂ ।।೧೨೭।। ಐಶಿಯೇ ದಯೇಚೇನಿ ಗುಣೇ । ಮಜ ಅನಂತಾಲಾಗೀ ತೇಣೇ । ವಿಕತ ಘೇತಲೇ ಜೀವೇಪ್ರಾಣೇ । ಕೀ ಜಾಹಲೋ ಪೋಸಣೇ ಮೀ ತ್ಯಾಚೇ ।।೧೨೮।। ಯಾಲಾಗೀ ದಯಾಳುವಾಚೇ ಘರೀ । ಮೀ ಸದಾ ನಾಟಿಕಾ ಕಾಮ ಕರೀ । ಜೇ ದಯಾವಂತಾಚೇ ಅವಸರೀ । ತೇ ಮಾಝೇ ಶಿರೀ ಸರ್ವದಾ ।।೧೨೯।। ಜೋ ಜಾಣೇ ದೀನಾಂಚಾ ವಿಚಾರ । ದೀನದಯಾಳೂ ಜೋ ಸಾಚಾರ । ಉದ್ಧವಾ ತೋ ಮಾಝೇ ನಿಜಭಾಂಡಾರ । ಸುಖಾಚೇ ಸುಖಸಾರ ತೋ ಮಾಝೇ ।।೧೩೦।। ಯಾ ನಾಂವ ಗಾ ''ದಯಾ'' ಜಾಣ । ತೇ ಹೇ ನವವೇ ಲಕ್ಷಣ । ಆತಾ ಸತ್ಯಾಚೇ ಉಣಖೂಣ । ತುಜ ಮೀ ಸಂಪೂರ್ಣ ಸಾಂಗೇನ ।।೧೩೧।। ಸತ್ಯಾಚೇ ಸತ್ಯತ್ವ ತೇ ಐಸೇ । ಜಾಗೃತಿಸ್ವಪ್ನಸುಷುಪ್ತಿವಶೇ । ಜ್ಯಾಸೀ ಅಸತ್ಯತಾ ನಾ ಸ್ಪರ್ಶೇ । ನಿಜಸತ್ಯ ಐಸೇ ನಿಡಾರಿಲೇ ।।೧೩೨।। ಐಸೇ ಸತ್ಯ ಪರಿಪಕ್ವಲ್ಯಾ ಪೋಟೀ । ಸತ್ಯ ವಾಚಾ ಸತ್ಯ ದೃಷ್ಟೀ । ನಿಜಸತ್ಯತ್ವೇ ಸತ್ಯ ಸೃಷ್ಟೀ । ಪಡಿಲೀ ತುಟೀ ಅಸತ್ಯಾಚೀ ।।೧೩೩।। ಯಾಪರೀ ಗಾ ''ಸತ್ಯತ್ವ''ಜಾಣ । ತ್ಯಾ ನಾಂವ ದಹಾವೇ ಲಕ್ಷಣ । ಹೇ ಬ್ರಾಹ್ಮಣಾಚೇ ಸಂಪೂರ್ಣ । ಕರ್ಮಾಚರಣ ಸ್ವಭಾವೇ ।।೧೩೪।। ಬ್ರಾಹ್ಮಣಪ್ರಕೃತೀಚೇ ಸ್ಥಿತೀ । ಯಾ ದಶಲಕ್ಷಣಾಂಚೀ ಉತ್ಪತ್ತೀ । ಸ್ವಾಭಾವಿಕ ಸಹಜಗತೀ । ಅಕೃತ್ರಿಮ ಸ್ಥಿತೀ ಉದ್ಧವಾ ।।೧೩೫।। ಯೇಹೀ ದಶ ಲಕ್ಷಣೇ ಸಂಪೂರ್ಣ । ವರ್ಣವರಿಷ್ಠ ವಂದ್ಯ ಬ್ರಾಹ್ಮಣ । ಆತಾ ಕ್ಷಾತ್ರಪ್ರಕೃತೀಚೇ ಗುಣ । ಐಕ ನಿರೂಪಣ ಉದ್ಧವಾ ।।೧೩೬।।

ಉದ್ಧವಾ, ಈ ಪ್ರಕಾರದ ನಿಃಸೀಮ ಪ್ರೇಮದ ಯಾವ ಅವಸ್ಥೆಯು, ಇದೇ ನನ್ನಭಕ್ತಿಯಾಗಿರುವುದು. ಈ ರೀತಿಯಲ್ಲಿ ಭಕ್ತಿಯ ಲಕ್ಷಣಗಳಾಗಿರುವುವು. ಈಗ ದಯೆಯ ಸ್ವರೂಪವನ್ನು ಕೇಳು ।।೧೨೩।। ತನ್ನ ಚಿಕ್ಕ ಬಾಲಕನು ಸಂಕಟದಲ್ಲಿ ಬಿದ್ದದ್ದನ್ನು ಕಂಡಾಕ್ಷಣವೇ ಆ ತಾಯಿಯು ಧಾವಿಸುತ್ತ, ಓಡುತ್ತ ಹೋಗಿ ಆತನನ್ನು ಹೇಗೆ ಸಹಾಯವನ್ನು ಮಾಡುವಳೋ, ಅದರಂತೆ ಯಾವುದೇ ದೀನ ಪ್ರಾಣಿಯನ್ನು ಕಂಡ ಕೂಡಲೇ ಆತನ ಹೃದಯದಲ್ಲಿ ದಯೆಯು ನಿರ್ಮಾಣವಾಗುವುದು ।।೧೨೪।। ಈ ಪ್ರಕಾರವಾಗಿ ಆತನ ಹೃದಯದಲ್ಲಿ ದಯೆಯು ಹುಟ್ಟಿದ ಮೇಲೆ ಆತನು ಅವರು ನಮ್ಮವರೋ, ಬೇರೆಯವರೋ, ಎಂಬ ಭೇದಭಾವವನ್ನು ಹೇಗೆ ಮಾಡುವನು ? ಆ ಪ್ರಾಣಿಯು ನಮ್ಮ ಜಾತಿಯದೋ ಅಥವಾ ಇತರ ಜಾತಿಯದೋ ಇದನ್ನು ನೋಡುವ ಧೈರ್ಯವು ಆತನಲ್ಲಿರುವುದಿಲ್ಲ ।।೧೨೫।। ಯಾವ ಮಹಾಪೂರದಲ್ಲಿ ಮುಳುಗುತ್ತಿರುವ ಮನುಷ್ಯನ ಜಾತಿಯನ್ನು ದಯಾವಂತ ಮನುಷ್ಯನು ವಿಚಾರಿಸುತ್ತ ಕೂಡ್ರಲಾರನು. ಮೊದಲು ಆತನು ನೀರಿನಲ್ಲಿ ಜಿಗಿಯುವನು ಮತ್ತು ಮುಳುಗುವವನಿಗೆ ಬದುಕಿಸುವನು. ಇದರ ನಾಮವೇ ನಿಜವಾದ ದಯೆ ಎಂದಾಗಿರುವುದು ।।೧೨೬।। ದೀನರಲ್ಲಿ ದಯೆ ಮಾಡಲು ಯಾವನು ಪ್ರಜ್ವಲಿತ ಅಗ್ನಿಯಲ್ಲಿ ಜಿಗಿಯಬಲ್ಲವನಿಗೆ ಆತನ ಚರಣಗಳಿಗೆ ನಾನು ವಂದಿಸುವೆನು. ಇಂತಹ ಸ್ವಭಾವದ ದಯಾವಂತ ಮನುಷ್ಯನು ನಿಜವಾಗಿಯೂ ಜಗತ್ತಿನಲ್ಲಿ ಧನ್ಯ ಧನ್ಯನು ।।೧೨೭।। ಈ ಪ್ರಕಾರದ ದಯೆಯ ಗುಣದಿಂದ ಅನಂತನಾಗಿರುವ ನನಗೆ ಆತನು ಜೀವಭಾವಸಮೇತವಾಗಿ ಖರೀದಿ ಮಾಡಿರುವನು. ಒಟ್ಟಿನಲ್ಲಿ ನಾನೇ ಆತನ ಆಶ್ರಿತನಾಗಿರುವೆನು ।।೧೨೮।। ಆದ್ದರಿಂದ ದಯಾಳೂ ಪುರುಷನ ಮನೆಯಲ್ಲಿ ಯಾವುದೇ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿರುವೆನು. ದಯಾಳು ಪುರುಷನಲ್ಲಿ ಯಾವುದಾದರೂ ಪ್ರಸಂಗ ಒದಗಿದರೆ ಅದನ್ನು ನಾನು ನನ್ನಮೇಲೆ ತೆಗೆದುಕೊಳ್ಳುವೆನು ।।೧೨೯।। ಹೇ ಉದ್ಧವನೇ, ಯಾವನು ದೀನಜನರ ವಿಚಾರವನ್ನು ಮಾಡುವನೋ, ಆತನೇ ನಿಜವಾಗಿ ದೀನದಯಾಳು ಆಗಿರುವನು. ಆತನು ನನ್ನ ಕೇವಲ ಭಾಂಡಾರನಾಗಿರುವನು. ಆತನೇ ನನ್ನ ಕೇವಲ ಸುಖದ ಸಾರನಾಗಿರುವನು ।।೧೩೦।। ಇಂತಹ ವೃತ್ತಿಗೆ ದಯೆ ಎಂದು ಹೇಳುವರು. ಇದು ಒಂಬತ್ತನೆಯ ಲಕ್ಷಣವಾಗಿದೆ. ಈಗ ಸತ್ಯದ ಸಂಪೂರ್ಣ ಲಕ್ಷಣವನ್ನು ನಿನಗೆ ಹೇಳುವೆನು, ಅದನ್ನು ಕೇಳು ।।೧೩೧।। ಜಾಗೃತಿ, ಸ್ವಪ್ನ ಅಥವಾ ಸುಷುಪ್ತಿಯಲ್ಲಿ ಯಾರಿಗೆ ಅಸತ್ಯತನವು ಸ್ಪರ್ಶ ಮಾಡಲಾರದೋ ಅದು ನಿಜವಾದ ಸತ್ಯವಾಗಿರುವುದು. ಸತ್ಯದ ಸತ್ಯತ್ವವು ಹೀಗೆ ಇರುವುದು ।।೧೩೨।। ಈ ಪ್ರಕಾರವಾಗಿ ಸತ್ಯತ್ವವು ಪರಿಪೂರ್ಣವಾಗಿ ವಿಕಸಿತವಾಗಲು ಆತನ ವಾಣಿಯು ಮತ್ತು ದೃಷ್ಟಿಯು ಸತ್ಯವಾಗುವುದು. ಅಂತಃಕರಣದಲ್ಲಿನ ಸತ್ಯದಿಂದ ಸರ್ವ ಸೃಷ್ಟಿಯು ಸತ್ಯಂ ಶಿವಂ ಸುಂದರಮ್‌ದಿಂದ ತುಂಬಿದ್ದು ಕಾಣುವುದು. ಅಸತ್ಯ ಸಂಪೂರ್ಣ ಇಲ್ಲದಾಗುವುದು ।।೧೩೩।। ಸತ್ಯವು ಈ ಪ್ರಕಾರವಾಗಿರುವುದನ್ನು ನೀನು ಲಕ್ಷದಲ್ಲಿಡು. ಇದು ಹತ್ತನೆಯ ಲಕ್ಷಣವಾಗಿರುವುದು. ಇವು ಬ್ರಾಹ್ಮಣರ ಸ್ವಭಾವಸಿದ್ಧ ಕರ್ಮಾಚರಣೆಯಾಗಿರುವುದು ।।೧೩೪।। ಹೇ ಉದ್ಧವಾ, ಬ್ರಾಹ್ಮಣ ವೃತ್ತಿಯ ಪ್ರಕೃತಿಯಲ್ಲಿ ಈ ಹತ್ತು ಲಕ್ಷಣಗಳು ನಿರ್ಮಾಣವಾಗುತ್ತಿರುವುವು. ಅವರ ಈ ಸ್ಥಿತಿಯು ಸ್ವಯಂಭೂ, ಸಹಜವಾದ ಮತ್ತು ಅಕೃತ್ರಿಮ ಸ್ವರೂಪದಿಂದ ಕೂಡಿರುವುದು ।।೧೩೫।। ಈ ಯಾವ ಹತ್ತು ಲಕ್ಷಣಗಳಿಂದ ಪರಿಪೂರ್ಣರಾದ ಬ್ರಾಹ್ಮಣರು ಶ್ರೇಷ್ಠ ಮತ್ತು ವಂದ್ಯರಾಗಿರುವರು. ಹೇ ಉದ್ಧವನೇ, ಈಗ ಕ್ಷತ್ರಿಯರ ಗುಣಗಳನ್ನು ಕುರಿತು ಅದರ ನಿರೂಪಣೆಯನ್ನು ಕೇಳು ।।೧೩೬।।

ತೇಜೋ ಬಲಂ ಧೃತಿಃ ಶೌರ್ಯಂ ತಿತಿಕ್ಷೌದಾರ್ಯಮುದ್ಯಮಃ । ಸ್ಥೈರ್ಯ ಬ್ರಹ್ಮಣ್ಯತೈಶ್ವರ್ಯ ಕ್ಷಾತ್ರಪ್ರಕೃತಯಸ್ತ್ವಿಮಾಃ ॥೧೭॥

ಅರ್ಥ:- ತೇಜ, ಬಲ, ಧೃತಿ, ವೀರತೆ, ಸಹನಶೀಲತೆ, ಉದಾರತ್ವ, ಉದ್ಯೋಗಶೀಲತೆ, ಸ್ಥಿರತೆ, ಬ್ರಾಹ್ಮಣಭಕ್ತಿ, ಐಶ್ವರ್ಯ ಇವು ಕ್ಷತ್ರಿಯರ ಗುಣಗಳು.

ಬ್ರಾಹ್ಮಣಪ್ರಕೃತಿ ದಶ ಲಕ್ಷಣ । ತುಜ ಮ್ಯಾ ಸಾಂಗಿತಲೀ ಸುಲಕ್ಷಣ । ಆತಾ ಕ್ಷಾತ್ರವೃತ್ತೀಚೇ ದಶ ಗುಣ । ಐಕ ಸಂಪೂರ್ಣ ಉದ್ಧವಾ ॥೧೩೭॥ ''ತೇಜ'' ಮ್ಹಣಜೇ ಪ್ರತಾಪಶಕ್ತೀ । ಜೈಸಾ ಕ್ಷಿತಿತಳೀಂಚಾ ಗಭಸ್ತೀ । ಜ್ಯಾಚಿಯಾ ಪ್ರತಾಪದೀಪ್ತೀ । ಲೋಪಲೇ ಜಾತೀ ಮಹೀಂದ್ರ ॥೧೩೮॥ ಕ್ಷಾತ್ರಧರ್ಮೀ ಪ್ರಥಮ ಕಾಜ । ತಯಾ ನಾಂವ ಜಾಣ ತೇಜ । ಆತಾ ಕ್ಷಾತ್ರಬಳಾಚೇ ವೋಜ । ಐಕ ಚೋಜ ಸಾಂಗೇನ ॥೧೩೯॥ ಜ್ಯಾಚ್ಯಾ ಶರೀರಬಳಾಚೇ ಕೋಡ । ಏಕಲಾ ಲಕ್ಷಾವರೀ ದೇ ಝಡ । ಜರೀ ತುಟಲಾ ದುಧಡ । ತರೀ ವೈರಿಯಾಂಚೇ ತೋಂಡ ವಿಭಾಂಡೀ ॥೧೪೦॥ ರಿಘತಾ ರಣಾಮಾಝಾರೀ । ದುಜಯಾಚೇ ಸಾಹ್ಯ ನ ವಿಚಾರೀ । ಜೇವೀ ವನಗಜೀ ಕೇಸರೀ । ತೇವೀ ರಿಘೋನಿ ದಳಭಾರೀ ವಿಭಾಂಡೀ ವೀರ ॥೧೪೧॥ ಆಕಾಶ ದಾಟಲ್ಯಾ ನಿಶಾಚರೀ । ಭೂಮಂಡಳ ಕೋಂದಲ್ಯಾ ಅಸುರೀ । ಐಸೇ ಪ್ರಬಳ ಬಳೇ ಆಲ್ಯಾ ವೈರೀ । ಜಾಚೇ ಧೃತೀಮಾಝಾರೀ ವಿಸ್ಮಯೋ ನುಠೀ ॥೧೪೨॥ ಆಕಾಶ ಪಡಾವಯಾ ಗಡಾಡೀ । ಪೃಥ್ವೀ ಉಲಥಾವಯಾ ಹಡಬಡೀ । ತರೀ ಜ್ಯಾಚೇ ಧೃತೀಚೇ ರೋಕಡೀ । ನವ್ಹೇ ವಾಂಕುಡೀ ರೋಮಾವಳೀ ॥೧೪೩॥ ವೋಡವಲಿಯಾಹೀ ಕಲ್ಪಾಂತಾ । ಧಾಕ ರಿಘೋ ನೇಣೇ ಜ್ಯಾಚ್ಯಾ ಚಿತ್ತಾ । ಐಸೇ ನಿಜಧೈರ್ಯ ಸ್ವಭಾವತಾ । ''ಧೃತಿ'' ತತ್ತ್ವತಾ ತೀ ನಾಂವ ॥೧೪೪॥ ಚೌರ್‍ಯಾಂಶೀ ದಂಡಾಯುಧೇ ಧರೂ ಜಾಣತೀ । ಶಸ್ತ್ರಾಸ್ತ್ರ-ಧಾರಣಾಶಕ್ತೀ । ಸ್ವಧರ್ಮೇ ಆವಶ್ಯಕೇ ಕರಿತೀ । ಯಾ ನಾಂವ ''ಧೃತಿ'' ಕ್ಷತ್ರಿಯಾಂಚೀ ॥೧೪೫॥ ಶೂರಾಂಚೇ ಶೌರ್ಯ ತೇ ಕೈಸೇ । ಶತ್ರೂಂಚೇ ನಿಃಶೇಷ ನಾಂವಚಿ ಪುಸೇ । ವೈರೀ ಕೋಣೇ ಕೋಠೇಚಿ ನಸೇ । ಕರಣೇ ಐಸೇ ತೇ ಶೌರ್ಯ ॥೧೪೬॥ ಧರ್ಮಯುದ್ಧಾಚೀ ಶೌರ್ಯವೃತ್ತೀ । ಜೇಣೇ ವಿಜಯಶ್ರೀ ಚಢೇ ಹಾತೀ । ದುಶ್ಚಿತ ನಿಃಶಸ್ತ್ರೀ ನ ಹಾಣೆತೀ । ಪಳತಯಾ ನ ಮಾರಿತೀ ಮಹಾಶೂರ ॥೧೪೭॥ ಸಂಮುಖ ಆಲಿಯಾ ರಣಾಂಗಣೀ । ಮಾಗೇ ಪಾವೋ ನ ಠೇವೀ ರಣೀ । ಏಕಲಾ ವಿಭಾಂಡೀ ವೀರಕ್ಷೋಣೀ । ಹೇ ಸ್ವಧರ್ಮ ಕರಣೀ ನಿಜಶೌರ್ಯೀ ॥೧೪೮॥

ಹೇ ಉದ್ಧವಾ, ಬ್ರಾಹ್ಮಣ ಪ್ರಕೃತಿಯ ಹತ್ತು ಉತ್ತಮ ಲಕ್ಷಣಗಳನ್ನು ನಿನಗೆ ಹೇಳಿದೆನು. ಈಗ ಕ್ಷತ್ರಿಯ ಸ್ವಭಾವದಲ್ಲಿನ ಹತ್ತು ಲಕ್ಷಣಗಳನ್ನು ನಿನಗೆ ನಾನು ಹೇಳುವೆನು. ಆದನ್ನು ಕೇಳು ॥೧೩೭॥ ತೇಜವೆಂದರೆ ಕ್ಷತ್ರಿಯರ ಅಲೌಕಿಕ ಪ್ರತಾಪಶಕ್ತಿಯಾಗಿರುವುದು. ಭೂಲೋಕದ ಸೂರ್ಯನೋ ಏನೋ ಎಂಬಂತೆ ಆತನ ಪ್ರಖರವಾದ ತೇಜದಿಂದ, ಪ್ರತಾಪದಿಂದ ಸಂಪೂರ್ಣ ರಾಜ್ಯವು ಬೆಳಗುತ್ತಿರುವುದು ॥೧೩೮॥ ಕ್ಷತ್ರಿಯ ಧರ್ಮದಲ್ಲಿನ ಇದು ಪ್ರಮುಖವಾದ ಗುಣವಾಗಿರುವುದು. ಇದಕ್ಕೆ ತೇಜವೆಂದು ಕರೆಯುವರು. ಈಗ ಕ್ಷತ್ರಿಯರ ಸಾಮರ್ಥ್ಯದ ಸ್ವರೂಪವನ್ನು ಹೇಳುವೆನು. ಅದರ ಚಮತ್ಕಾರವನ್ನು ಈಗ ಕೇಳು ॥೧೩೯॥ ಆತನ ಶರೀರ ಸಾಮರ್ಥ್ಯವು ಅಚಾಟವಾಗಿರುವುದು. ಆತನ ಕೌತುಕವೇನೆಂದರೆ ಒಬ್ಬನೇ ಲಕ್ಷಾವಧೀ ಮನುಷ್ಯರ ಮೇಲೆ ಏರಿ ಬೀಳುವನು. ತನ್ನ ಶರೀರವು ಎರಡು ತುಂಡಾಗಿದ್ದರೂ ಶತ್ರುಗಳ ಮುಖಗಳನ್ನು ತುಂಡರಿಸಿಬಿಡುವನು ॥೧೪೦॥ ಆತನು ಯುದ್ಧಕ್ಕೆ ಹೊರಡಲು ತನಗೆ ಅನ್ಯರ ಸಹಾಯವು ಇದೆ ಅಥವಾ ಇಲ್ಲವೆಂಬ ಈ ವಿಚಾರವನ್ನು ಮಾಡಲಾರನು. ಸಿಂಹವು ಆನೆಗಳತ್ತ ಏರಿಹೋಗುವಂತೆ ಈ ಪರಾಕ್ರಮಿ ವೀರನು ದೊಡ್ಡ ಸೈನ್ಯದ ಮೇಲೆ ಏರಿ ಹೋಗಿ ಅದರ ಹೇಳ ಹೆಸರಿಲ್ಲದಂತೆ ಮಾಡುವನು ॥೧೪೧॥ ನಿಶಾಚರರು ಸರ್ವ ಆಕಾಶವನ್ನು ವ್ಯಾಪಿಸಿಕೊಂಡಿರುವ ಅಥವಾ ಅಸುರರು ಭೂಮಂಡಲದಲ್ಲೆಲ್ಲ ತುಂಬಿಕೊಂಡಿರುವ, ಇಂತಹ ಪ್ರಚಂಡವಾದ ಸೈನ್ಯದೊಂದಿಗೆ ಬಲಾಢ್ಯ ಶತ್ರು ತನ್ನತ್ತ ಬಂದರೂ ಕೂಡ ಈ ವೀರನ ಧೈರ್ಯವು ಎಂದಿಗೂ ಕುಂದುವುದಿಲ್ಲ ಮತ್ತು ಈತನಿಗೆ ಅದಕ್ಕಾಗಿ ಯಾವ ಆಶ್ಚರ್ಯವೂ ಆಗುವುದಿಲ್ಲ ॥೧೪೨॥ ಆಕಾಶದಲ್ಲಿ ಪ್ರಚಂಡವಾದ ಘನಗರ್ಜನೆಯಾಗಿ ಈಗ ಆಕಾಶವು ಕಳಚಿ ಬೀಳುವಂತೆ ಕಂಡರೂ, ಪೃಥ್ವಿಯು ಬುಡಮೇಲಾಗಲು ನಡುಗುತ್ತಿದ್ದರೂ ಕೂಡ ಆತನ ಧೈರ್ಯವು ಸ್ವಲ್ಪವೂ ಕೂಡ ಕುಂದಲು ಸಾಧ್ಯವಿಲ್ಲ ॥೧೪೩॥ ಪ್ರಳಯ ಕಾಲವು ಒದಗಿ ಬಂದರೂ ಸಹ ಆತನ ಮನಸ್ಸಿಗೆ ಸ್ವಲ್ಪವೂ ಕೂಡ ಭಯವು ಉಂಟಾಗುವುದಿಲ್ಲ. ಈ ಪ್ರಕಾರದ ಆತನ ಸ್ವಾಭಾವಿಕ ಧೈರ್ಯವಿರುವುದು. ಅದಕ್ಕೆ ಧೃತಿ ಎಂದು ಹೇಳುವರು ॥೧೪೪॥ ಎಂಬತ್ನಾಲ್ಕು ಪ್ರಕಾರಗಳ ದಂಡಾಯುಧಗಳನ್ನು ನಡೆಸುವ ನಿಪುಣತೆ ಇದ್ದು, ಯಾವ ಸ್ವಧರ್ಮದಂತೆ ಶಸ್ತ್ರ ಮತ್ತು ಅಸ್ತ್ರ ವಿದ್ಯೆಗಳಲ್ಲಿ ಪ್ರವೀಣನಾಗಿದ್ದು, ಯುಕ್ತಿ - ಪ್ರಯುಕ್ತಿಗಳಿಂದ ಯುದ್ಧದಲ್ಲಿ ಅವುಗಳ ಯೋಗ್ಯ ಉಪಯೋಗವನ್ನು ತಿಳಿದಿರುವನು. ಆತನ ಈ ಗುಣಕ್ಕೇನೇ ಕ್ಷತ್ರಿಯರ ಧೈರ್ಯವೆಂದು ಹೇಳುವರು ॥೧೪೫॥ ಶೂರನ ಶೌರ್ಯವು ಹೇಗಿರುವುದೆಂಬುದನ್ನು ಈಗ ಕೇಳು. ಶತ್ರುಗಳ ಸರ್ವ ನಾಮ ನಿಶಾನೆಗಳನ್ನು ಒರೆಸಿ ಒಗೆದಿರುವುದರಿಂದ ಆತನಿಗೆ ಮೂಲತಃ ಶತ್ರುಗಳೇ ಉಳಿದಿರುವುದಿಲ್ಲ. ಹೀಗೆ ಮಾಡುವಿಕೆಯು ಶೌರ್ಯವಾಗಿರುವುದು. ॥೧೪೬॥ ಆತನ ಶೌರ್ಯದ ವೃತ್ತಿಯ ಧರ್ಮಯುದ್ಧದಿಂದ ಕೂಡಿರುವುದು. ಆದ್ದರಿಂದ ಆತನಿಗೆ ಯಾವಾಗಲೂ ವಿಜಯವು ದೊರಕುತ್ತಿರುವುದು. ನಿಃಶಸ್ತ್ರ ಮನುಷ್ಯರ ಮೇಲೆ, ದುಶ್ಚಿತನಾಗಿರುವವನ ಮೇಲೆ ಆತನು ಎಂದಿಗೂ ಯುದ್ಧವನ್ನು ಮಾಡಲಾರನು ॥೧೪೭॥ ಯುದ್ಧ ಭೂಮಿಯಲ್ಲಿ ಶತ್ರುಗಳ ಸಂಮುಖನಾಗಲು ತನ್ನ ಕಾಲನ್ನು ಹಿಂದಕ್ಕೆ ಎಂದಿಗೂ ಇಡಲಾರನು. ಸ್ವತಃ ಒಬ್ಬನೇ ಶತ್ರುಗಳ ಅಸಂಖ್ಯೆ ಸೈನ್ಯದಲ್ಲಿ ಯುದ್ಧವನ್ನು ಮಾಡುತ್ತಿರುವನು. ಇದೇ ಸ್ವಧರ್ಮಯುಕ್ತ ನಿಜವಾದ ಶೌರ್ಯವಾಗಿರುವುದು ॥೧೪೮॥

ಮೃತ್ಯೂಏವಢಾ ಮಹಾವೈರೀ । ಜೋ ನಿಃಶೇಷ ನಾಹೀ ಕರೀ । ತ್ಯಾಚ್ಯಾ ಶೌರ್ಯಾಚೀ ಥೋರೀ । ಸುರಾಸುರೀ ವಾನಿಜೇ ।।೧೪೯।। ಏವಂ ನಿಜಶೌರ್ಯಾನಿರ್ಧಾರಾ । ನಿರ್ವೈರ ಕರಣೇ ಧರಾ । ಹಾ ಚೌಥಾ ಗುಣ ಖರಾ । ಜಾಣ ಕ್ಷಾತ್ರದ್ವಾರಾ ಕ್ಷತ್ರಿಯಾಂಚಾ ।।೧೫೦।। ಶಸ್ತ್ರಾಂಚೇ ಘಾಯ ವಾಜತಾ ಮಾಥಾ । ಕಾ ಸಪಿಚ್ಛ ಬಾಣ ಖಡತರತಾ । ರಣಾಂಗಣೀ ನ ಸರೇ ಮಾಗುತಾ । ಹೇ ''ಸಹಿಷ್ಣುತಾ'' ಕ್ಷತ್ರಿಯಾಚೀ ।।೧೫೧।। ಆಲಿಯಾ ಗಜದಳಾಚೇ ಥಾಟ । ಮಹಾವೀರಾಂಚೇ ಘಡಘಡಾಟ । ತೋ ಯಾವಾ ಸಾಹೇ ಸುಭಟ । ''ಸಹಿಷ್ಣುತಾ'' ಚೋಖಟ ತೀ ನಾಂವ ।।೧೫೨।। ಸಮುದ್ರಲಹರೀಂಚ್ಯಾ ಸಂಪಾತಾ । ಕುಲಾಚಲ ನ ಸರೇ ಪರತಾ । ತೇವೀ ಪರಸೈನ್ಯಾಚ್ಯಾ ಆಘಾತಾ । ನ ಸರೇ ಮಾಗುತಾ ರಣಾಂಗಣೀ ।।೧೫೩।। ತೇಥ ಯಶಅಪಯಶಾಂಚೀ ವ್ಯಥಾ । ಹರ್ಷಶೋಕವಿಷಮತಾ । ಬಾಧೀನಾ ಕ್ಷತ್ರಿಯಾಂಚ್ಯಾ ಚಿತ್ತಾ । ಸರ್ವಸಹಿಷ್ಣುತಾ ಯಾ ನಾಂವ ।।೧೫೪।। ಯಾ ನಾಂವ ''ತಿತಿಕ್ಷಾ'' ಜಾಣ । ಹೇ ಕ್ಷತ್ರಿಯಾಂಚೇ ಪಾಂಚವೇ ಲಕ್ಷಣ । ಐಕ ಔದಾರ್ಯಾಚಾ ಗುಣ । ದಾತೇಪಣ ಕ್ಷತ್ರಿಯಾಂಚೇ ।।೧೫೫।। ಕ್ಷತ್ರಿಯಾಂಚೇ ಪ್ರಕೃತೀಸ ಜಾಣ । ದ್ರವ್ಯ ತೇ ತೃಣಾಸಮಾನ। ಯಾಚಕಾಂಚೇ ನಿವೇ ಮನ । ತಂವ ದೇಣೇ ದಾನ ಸರ್ವಸ್ವ ।।೧೫೬।। ದೇಶ ಕಾಲ ಸತ್ಪಾತ್ರ ಸ್ಥಾನ । ತೇಥಹೀ ದೇಊನಿ ಸನ್ಮಾನ । ನಿರ್ವಿಕಲ್ಪಭಾವೇ ಗಹನ । ದೇಣೇ ದಾನ ವಿಧ್ಯುಕ್ತ ।।೧೫೭।। ಚಂದ್ರ ಚಕೋರಾತೇ ಪಾಹೀ । ಸದಾ ದೇತಾ ನುಬಗೇ ಕಂಹೀ । ತೇವೀ ಹಾ ಯಾಚಕಾಚೇ ಠಾಯೀ । ಪರಾಂಗ್ಮುಖತಾ ನಾಹೀ ಕ್ಷತ್ರಿಯಾಸೀ ।।೧೫೮।। ಐಸೇ ಸ್ವಾಭಾವಿಕ ಜೇ ದಾನ । ಹಾ ಕ್ಷತ್ರಿಯಾಂಚಾ ಪ್ರಕೃತಿಗುಣ । ಯಾ ನಾಂವ ಗಾ ''ಉದಾರಪಣ'' । ಸಹಾವೇ ಲಕ್ಷಣ ಕ್ಷತ್ರಿಯಾಂಚೇ ।।೧೫೯।। ಪರಮಾರ್ಥಪ್ರಾಪ್ತಿ ಉಪಾಯೀ । ಸ್ವಧರ್ಮನಿಷ್ಠಾ ಕ್ಷತ್ರಿಯಾಠಾಯೀ । ಜೋ ಜೋ ವ್ಯವಸಾವೋ ಕರಣೇ ಕಾಂಹೀ । ತೋ ''ಉದ್ಯಮ'' ಪಾಹೀ ಬೋಲಿಜೇ ।।೧೬೦।। ವೇಂಚೂನಿಯಾ ನಿಜಪ್ರಾಣ । ಗೋಬ್ರಾಹ್ಮಣಾಂಚೇ ಸಂರಕ್ಷಣ । ಸ್ವಧರ್ಮೇ ಪ್ರಜಾಪಾಲನ । ಪೃಥ್ವೀರಕ್ಷಣ ನಿರುಪದ್ರವ ।।೧೬೧।। ಯಾ ನಾಂವ ಗಾ ''ಉದ್ಯಮ'' ಜಾಣ । ಕ್ಷತ್ರಿಯಾಂಚೇ ಸಾತವೇ ಲಕ್ಷಣ । ಆತಾ ಸ್ವಧರ್ಮಸ್ಥೈರ್ಯ ಗುಣ । ತೇಹೀ ನಿರೂಪಣ ಅವಧಾರೀ ।।೧೬೨।।

ಮೃತ್ಯು ಅಂತಹ ಅತ್ಯಂತ ಪ್ರಬಲ ಶತ್ರುವನ್ನೂ ಸಹ ಆತನು ಇಲ್ಲದಂತೆ ಮಾಡುವನು. ಆದ್ದರಿಂದ ಆತನ ಶೌರ್ಯದ ಗುಣಗಾಣವನ್ನು ದೇವ, ದಾನವರೂ ಕೂಡ ಮಾಡುವರು ।।೧೪೯।। ಈ ಪ್ರಕಾರವಾಗಿ ತನ್ನ ಅಂಗದ ಅಘಾಟ ಶೌರ್ಯದಿಂದ ಆತನು ಸರ್ವ ಪೃಥ್ವಿಯನ್ನು ಶತ್ರುಶೂನ್ಯವನ್ನಾಗಿ ಮಾಡಿಬಿಡುವನು. ಇದು ಕ್ಷತ್ರಿಯರ ಧರ್ಮದಂತೆ ಕ್ಷತ್ರಿಯರ ನಾಲ್ಕನೆಯ ಗುಣವಾಗಿರುವುದು ।।೧೫೦।। ಮಸ್ತಕದ ಮೇಲೆ ಶಸ್ತ್ರದ ಘಾಯವಾದರೂ ಅಥವಾ ಸಂಪೂರ್ಣ ಬಾಣವು ಶರೀರದಲ್ಲಿ ಬಂದು ಚುಚ್ಚಿಕೊಂಡರೂ ಆತನು ರಣರಂಗದಲ್ಲಿ ಸ್ವಲ್ಪವೂ ಸಹ ಹಿಂದಕ್ಕೆ ಸರಿಯಲಾರನು. ಇದೇ ಕ್ಷತ್ರಿಯರ ಸಹಿಷ್ಣುತೆಯಾಗಿರುವುದು ।।೧೫೧।। ಗಜದಳದ ದೊಡ್ಡ ಸಮೂಹವು ಗರ್ಜಿಸುತ್ತ ಬಂದರೂ ಅಥವಾ ಮಹಾ ಮಹಾ ವೀರರು ಆರ್ಭಟಿಸುತ್ತ ಮೇಲೆ ಬಿದ್ದರೂ ವೀರಶಿರೋಮಣಿಯಾದ ಆತನು ಈ ಎಲ್ಲವನ್ನೂ ಸಹಿಸುವನು. ಇದರ ನಾಮವೇ ನಿಜವಾದ ಸಹಿಷ್ಣುತೆಯಾಗಿರುವುದು ।।೧೫೨।। ಸಮುದ್ರದ ದೊಡ್ಡ ದೊಡ್ಡ ತೆರೆಗಳ ಆಘಾತಗಳಿಂದ ಪರ್ವತವು ಸ್ವಲ್ಪವೂ ಕೂಡ ಹಿಂದೆ ಸರಿಯದಂತೆ ಆತನು ಶತ್ರುಗಳ ಸೈನ್ಯದ ಆಘಾತಗಳಿಂದ ರಣರಂಗದಿಂದ ಎಂದಿಗೂ ಹಿಂದಕ್ಕೆ ಸರಿಯಲಾರನು ।।೧೫೩।। ಯಶ-ಅಪಯಶ, ಸುಖ-ದುಃಖ, ಹರ್ಷ-ಶೋಕ ಇವು ಕ್ಷತ್ರಿಯರ ಚಿತ್ತಕ್ಕೆ ಬಾಧೆಯನ್ನುಂಟು ಮಾಡಲಾರವು. ಇದಕ್ಕೇನೇ ಪರಿಪೂರ್ಣವಾದ ಸಹಿಷ್ಣುತೆ ಎಂದು ಹೇಳುವರು ।।೧೫೪।। ಇದಕ್ಕೆ ''ತಿತಿಕ್ಷಾ'' ಎಂದೂ ಕೂಡ ಹೇಳುವರು. ಇದು ಕ್ಷತ್ರಿಯರ ಐದನೆಯ ಲಕ್ಷಣವಾಗಿರುವುದು. ಈಗ ಕ್ಷತ್ರಿಯರ ದಾನಶೀಲತೆ ಅಂದರೆ ಔದಾರ್ಯವನ್ನು ಕುರಿತು ಕೇಳು ।।೧೫೫।। ಕ್ಷತ್ರಿಯರ ಸ್ವಭಾವಕ್ಕೆ ದ್ರವ್ಯವು ತೃಣಸಮಾನವಾಗಿ ತೋರುವುದು. ಆದ್ದರಿಂದ ಅವರು ಯಾಚಕರ ಮನಸ್ಸು ತೃಪ್ತವಾಗುವವರೆಗೂ ಸರ್ವಸ್ವವನ್ನು ದಾನವಾಗಿ ಕೊಡುತ್ತಿರುವರು ।।೧೫೬।। ದೇಶ, ಕಾಲ ಮತ್ತು ಸತ್ಪಾತ್ರವನ್ನು ನೋಡಿಕೊಂಡು ಹಾಗೂ ಸನ್ಮಾನದಿಂದ ಮತ್ತು ಮನದಲ್ಲಿ ಯಾವುದೇ ವಿಕಲ್ಪಗಳನ್ನು ಧರಿಸದೇ ವಿಧಿಯುಕ್ತವಾಗಿ ಮಹಾ ದಾನಗಳನ್ನು ಕೊಡಬೇಕಾಗುವುದು ।।೧೫೭।। ಚಂದ್ರನು ಚಕೋರಕ್ಕೆ ತನ್ನ ಬೆಳದಿಂಗಳನ್ನು ಕೊಡುವಲ್ಲಿ ಹೇಗೆ ಹಿಂಜರಿಯಲಾರನೋ, ಅದರಂತೆಯೇ ಕ್ಷತ್ರಿಯರಿಗೆ ಯಾಚಕರಿಗಾಗಿ ಪರಾಂಗ್ಮುಖವಾಗಲು ಬರುವುದಿಲ್ಲ ।।೧೫೮।। ಈ ಪ್ರಕಾರವಾಗಿ ಸ್ವಾಭಾವಿಕತನದಿಂದ ದಾನ ಮಾಡುವಿಕೆಯು ಇದು ಕ್ಷತ್ರಿಯರ ಪ್ರಕೃತಿಯ ಗುಣವಿರುವುದು. ಇದಕ್ಕೆ ಮಾತ್ರ ಉದಾರತೆ ಎನ್ನುವರು. ಇದು ಕ್ಷತ್ರಿಯರ ಆರನೆಯ ಗುಣವಾಗಿರುವುದು ।।೧೫೯।। ಸ್ವಧರ್ಮದಲ್ಲಿ ನಿಷ್ಠೆಯನ್ನಿಡುವುದೇ ಅವರ ಪರಮಾರ್ಥಪ್ರಾಪ್ತಿಯ ಸಾಧನೆಯಾಗಿರುವುದು. ಇದಕ್ಕೆ ಅನುಸರಿಸಿಯೇ ಅವರು ತಮ್ಮ ಉದ್ಯೋಗ ವ್ಯವಸಾಯಗಳನ್ನು ಮಾಡುತ್ತಿರುವರು ।।೧೬೦।। ತಮ್ಮ ಪ್ರಾಣವನ್ನೇ ಬಳಸಿಕೊಂಡು ಗೋ ಬ್ರಾಹ್ಮಣರ ಸಂರಕ್ಷಣೆಯನ್ನು ಮಾಡುತ್ತಿರುವರು. ಸ್ವಧರ್ಮದಿಂದ ಪ್ರಜೆಗಳ ಪಾಲನೆಯನ್ನು ಮಾಡುತ್ತಿರುವರು. ಯಾರನ್ನೂ ತೊಂದರೆಗೀಡು ಮಾಡದೇ ಪೃಥ್ವಿಯ ಸಂರಕ್ಷಣೆಯನ್ನು ಮಾಡುತ್ತಿರುವರು ।।೧೬೧।। ಇದಕ್ಕೇನೇ ಉದ್ಯಮ ಎಂದು ಕರೆಯುವರು. ಇದನ್ನು ಲಕ್ಷದಲ್ಲಿಡು. ಇದು ಕ್ಷತ್ರಿಯರ ಏಳನೆಯ ಲಕ್ಷಣವಾಗಿರುವುದು. ಈಗ ಅವರ ಧರ್ಮದಲ್ಲಿನ ಸ್ಥೈರ್ಯ ಗುಣದ ಲಕ್ಷಣವನ್ನು ಹೇಳುವೆನು, ಅದನ್ನು ಕೇಳು ।।೧೬೨।।

ಗೋಬ್ರಾಹ್ಮಣಸಂರಕ್ಷಣತಾ । ಸ್ವಧರ್ಮೀ ಪ್ರಜಾಪ್ರತಿಪಾಳತಾ । ಯೇ ಠಾಯೀ ಉಬಗು ನ ಯೇ ಚಿತ್ತಾ । ಯಾ ನಾಂವ ''ಸ್ಥಿರತಾ'' ಕ್ಷತ್ರಿಯಾಂಚೇ ।।೧೬೩।। ಸ್ವಧರ್ಮೀ ಜೇ ಸ್ಥಿರತಾ । ತೇ ಆಠವೇ ಲಕ್ಷಣ ತತ್ತ್ವತಾ । ಬ್ರಾಹ್ಮಣ ಭಕ್ತೀಚೀ ಜೇ ಕಥಾ । ಐಕ ಆತಾ ಸಾಂಗೇನ ।।೧೬೪।। ಪರಮಾರ್ಥಪ್ರಾಪ್ತೀಚೇ ಕಾರಣ । ಕ್ಷತ್ರಿಯಾಸೀ ಮುಖ್ಯತ್ವೇ ಗುರು ಬ್ರಾಹ್ಮಣ । ತ್ಯಾ ಬ್ರಾಹ್ಮಣಾಂಚೇ ಬ್ರಹ್ಮಭಾವೇ ಭಜನ। ಸರ್ವಸ್ವೇ ಜಾಣ ಕರಾವೇ ।।೧೬೫।। ಬ್ರಾಹ್ಮಭಾವೇ ಬ್ರಾಹ್ಮಣಭಜನ । ವಿಧಿಯುಕ್ತ ದೇವೋನಿ ಸನ್ಮಾನ । ಅನುದಿನೀ ಬ್ರಾಹ್ಮಣಪೂಜನ । ಸದ್ಭಾವೇ ಜಾಣ ಜೋ ಕರೀ ।।೧೬೬।। ಜೋ ಮದ್ಭಾವೇ ಬ್ರಾಹ್ಮಣಪೂಜಾ । ಸನ್ಮಾನೇ ಸುಖೀ ಕರೀ ದ್ವಿಜಾ । ಉದ್ಧವಾ ತೋ ಆತ್ಮಾ ಮಾಝಾ । ತೇಣೇ ಮಜ ಅಧೋಕ್ಷಜಾ ಪೂಜಿಲೇ ।।೧೬೭।। ಕ್ಷತ್ರಿಯ ಸನ್ಮಾನೇ ದ್ವಿಜ ಪೂಜಿತೀ । ತೇಣೇ ತ್ಯಾಂಸೀ ಐಶ್ವರ್ಯಪ್ರಾಪ್ತೀ । ಬ್ರಾಹ್ಮಣ ಬ್ರಾಹ್ಮಣಾ ದ್ವೇಷಿತೀ । ತೇಣೇ ತೇ ಪಾವತೀ ದರಿದ್ರದುಃಖ ।।೧೬೮।। ಐಸೇ ಕರಿತಾ ಬ್ರಾಹ್ಮಣಭಜನ । ಮೀ ಪರಬ್ರಹ್ಮ ಹೋಯ ತ್ಯಾ ಆಧೀನ । ತ್ಯಾಚ್ಯಾ ಐಶ್ವರ್ಯಾಚೇ ಚಿನ್ಹ । ದಹಾವೇ ಲಕ್ಷಣ ತೇ ಐಕ ।।೧೬೯।। ನ ಕರಿತಾ ಬ್ರಾಹ್ಮಣಭಜನ । ಅಂಗೀ ಐಶ್ವರ್ಯ ನ ಯೇ ಜಾಣ । ಮೀ ಜಾಹಲೋ ಷಡ್‌ಗುಣೈಶ್ವರ್ಯಸಂಪನ್ನ । ಸದಾ ದ್ವಿಜಚರಣ ಹೃದಯೀ ದೃಢ ವಾಹತಾ ।।೧೭೦।। ಬ್ರಾಹ್ಮಣಭಜನಮಾರ್ಗೀ । ಬ್ರಹ್ಮಸುಖ ಪಾಯಾ ಲಾಗೇ ।-ಬ್ರಹ್ಮಸಾಯುಜ್ಯ ಘರ ರಿಘೇ । ತರೀ ಭಕ್ತ ನೇಘೇ ದ್ವಿಜಭಜನೇ ।।೧೭೧।। ಬ್ರಾಹ್ಮಣಭಜನೇ ಸ್ವಭಾವತಾ । ಮಾಝೀ ಸತ್ತಾ ಯೇ ತ್ಯಾಚ್ಯಾ ಹಾತಾ । ತೇವ್ಹಾ ತ್ಯಾಚೀ ಆಜ್ಞಾ ವಂದಿತೀ ಮಾಥಾ । ಜಾಣ ತತ್ತ್ವತಾ ಸುರಾಸುರ ।।೧೭೨।। ತ್ಯಾಚೇ ಆಜ್ಞೇಭೇಣ । ಪಡೋ ನ ಶಕೇ ಅವರ್ಷಣ । ನ್ಯಾಯತಾ ಪ್ರಜಾಪಾಲನ । ಧರ್ಮಸಂರಕ್ಷಣ ತ್ಯಾಚೇನೀ ।।೧೭೩।। ಯೇಣೇಂಚ ಸ್ವಧರ್ಮೇ ಅತಿಚೋಖ । ಭರತ ಪುರೂರವಾ ಜನಕಾದಿಕ । ಮಹಾಐಶ್ವರ್ಯ ಪಾವಲೇ ದೇಖ । ಅಲೋಕಿಕ ದ್ವಿಜಭಜನೇ ।।೧೭೪।। ಏವಂ ಕ್ಷತ್ರಿಯಾಂಚೇ ದಶಲಕ್ಷಣ ; ತುಜ ಮ್ಯಾ ಕೇಲೇ ನಿರೂಪಣ । ಯಾಂತ ಮುಖ್ಯತ್ವೇ ಬ್ರಾಹ್ಮಣಭಜನ । ಶ್ರೇಯಸ್ಕರ ಸರ್ವಾಂಸೀ ।।೧೭೫।। ವೈಶ್ಯಾಚೇ ಪ್ರಕೃತೀಸ ಜಾಣ । ಸ್ವಾಭಾವಿಕ ಪಂಚಲಕ್ಷಣ । ಐಕ ತ್ಯಾಂಚೇಹೀ ನಿರೂಪಣ । ಆಚರಣ ಯಥಾರ್ಥೇ ।।೧೭೬।।

ಗೋಬ್ರಾಹ್ಮಣರ ಸಂರಕ್ಷಣೆಯನ್ನು ಮಾಡುತ್ತಿರಲು ಮತ್ತು ಸ್ವಧರ್ಮದಿಂದ ಪ್ರಜೆಗಳ ಪಾಲನೆಯನ್ನು ಮಾಡುತ್ತಿರಲು ಅವರ ಮನಸ್ಸಿಗೆ ಬೇಸರವಾಗುವುದಿಲ್ಲ. ಇದುವೇ ಕ್ಷತ್ರಿಯರ ಸ್ಥಿರತೆಯಾಗಿರುವುದು ।।೧೬೩।। ಸ್ವಧರ್ಮದಲ್ಲಿನ ಯಾವ ಸ್ಥಿರತೆಯು ಇದು ಕ್ಷತ್ರಿಯರ ಎಂಟನೆಯ ಲಕ್ಷಣವಾಗಿರುವುದು. ಈಗ ಅವರ ಬ್ರಾಹ್ಮಣಭಕ್ತಿಯ ಲಕ್ಷಣವನ್ನು ಹೇಳುವೆನು, ಅದರ ಶ್ರವಣವನ್ನು ಮಾಡು ।।೧೬೪।। ಕ್ಷತ್ರಿಯರಿಗೆ ಪರಮಾರ್ಥದ ಪ್ರಾಪ್ತಿಗಾಗಿ ಬ್ರಾಹ್ಮಣರು ಗುರುವಾಗಿರುವರು. ಈ ಯಾವ ಬ್ರಾಹ್ಮಣರನ್ನು ಬ್ರಹ್ಮಭಾವದಿಂದ ಭಕ್ತಿಯನ್ನು ಮಾಡಬೇಕಾಗುವುದು ।।೧೬೫।। ಬ್ರಾಹ್ಮಣರಲ್ಲಿ ಬ್ರಹ್ಮಭಾವನೆಯನ್ನು ಕಲ್ಪಿಸಿ ಯಥಾಯೋಗ್ಯ ಅವರ ಸನ್ಮಾನವನ್ನು ಮಾಡಿ ಪ್ರತಿನಿತ್ಯದಲ್ಲಿ ಯಾರು ಭಕ್ತಿಭಾವನೆಯಿಂದ ಬ್ರಾಹ್ಮಣರ ಪೂಜೆಯನ್ನು ಮಾಡುವನೋ ।।೧೬೬।। ಯಾರು ನನ್ನ ಭಾವನೆಯನ್ನೇ ಹಿಡಿದು ಬ್ರಾಹ್ಮಣರ ಪೂಜೆಯನ್ನು ಮಾಡುವನೋ, ಸನ್ಮಾನದಿಂದ, ಆದರದಿಂದ ಬ್ರಾಹ್ಮಣರನ್ನು ಸಂತೋಷಪಡಿಸುವನೋ, ಹೇ ಉದ್ಧವಾ, ಆತನು ಕೇವಲ ನನ್ನ ಆತ್ಮವೇ ಆಗಿರುವನು. ಆತನು ಶ್ರೀಕೃಷ್ಣನಾದ ನನ್ನ ಪೂಜೆಯನ್ನೇ ಮಾಡಿದಂತಾಗುವುದು ।।೧೬೭।। ಕ್ಷತ್ರಿಯ ಜನರು ಸನ್ಮಾನದಿಂದ ಬ್ರಾಹ್ಮಣರ ಪೂಜೆಯನ್ನು ಮಾಡುವುದರಿಂದಲೇ ಅವರಿಗೆ ಐಶ್ವರ್ಯವು ಲಭಿಸುತ್ತಿರುವುದು. ಆದರೆ ಬ್ರಾಹ್ಮಣರು ಬ್ರಾಹ್ಮಣರ ದ್ವೇಷವನ್ನು ಮಾಡುವುದರಿಂದ ಅವರು ದಾರಿದ್ರ್ಯ ಮತ್ತು ದುಃಖವನ್ನು ಭೋಗಿಸುತ್ತಿರುವರು ।।೧೬೮।। ಈ ಪ್ರಕಾರವಾಗಿ ಬ್ರಾಹ್ಮಣರ ಪೂಜೆಯನ್ನು ಮಾಡುವುದರಿಂದ ಪರಬ್ರಹ್ಮನಾದ ನಾನು ಅವರ ಆಧೀನನಾಗುವೆನು. ಅವರ ಐಶ್ವರ್ಯದ ಈ ಚಿನ್ಹೆಯು ಅವರ ಹತ್ತನೆಯ ಲಕ್ಷಣವಾಗಿರುವುದು ।।೧೬೯।। ಬ್ರಾಹ್ಮಣರ ಭಜನೆಯನ್ನು ಮಾಡದಿರಲು ಅಂಗದಲ್ಲಿ ಐಶ್ವರ್ಯವು ಬರಲಾರದು. ನಾನು ಬ್ರಾಹ್ಮಣನ ಪಾದವನ್ನು ಹೃದಯದಲ್ಲಿ ಧರಿಸಿರುವುದರಿಂದ ಷಡ್‌ಗುಣ, ಐಶ್ವರ್ಯಸಂಪನ್ನನಾಗಿರುವೆನು ।।೧೭೦।। ಬ್ರಾಹ್ಮಣ ಭಜನೆಯ ಮಾರ್ಗವನ್ನು ಹಿಡಿಯಲು ಬ್ರಹ್ಮಸುಖವು ಕಾಲಿಗೆ ಬೀಳುವುದು. ಬ್ರಹ್ಮಸಾಯುಜ್ಯವು ಮನೆಯಲ್ಲಿ ಬಂದು ಸೇರುವುದು. ಆದರೂ ಕೂಡ ಬ್ರಾಹ್ಮಣ ಭಜನೆಗಾಗಿ ಭಕ್ತರು ಅದನ್ನು ಸ್ವೀಕರಿಸುವುದಿಲ್ಲ ।।೧೭೧।। ಬ್ರಾಹ್ಮಣ ಭಜನೆಯನ್ನು ಮಾಡುವುದರಿಂದ ಸಹಜವಾಗಿಯೇ ನನ್ನ ಸತ್ತೆಯು ಅವರ ಕೈಗೆ ಹತ್ತುವುದು. ಆದ್ದರಿಂದಲೇ ದೇವ, ದಾನವರೂ ಕೂಡ ಅವರ ಆಜ್ಞೆಯನ್ನು ಶಿರಸಾ ವಂದ್ಯ ಎಂದು ಮನ್ನಿಸುವರು ।।೧೭೨।। ಅವರ ಆಜ್ಞೆಯ ಭಯದಿಂದ ಅವರ್ಷಣವು ಬೀಳುವುದಿಲ್ಲ. ನ್ಯಾಯದಿಂದ ಪ್ರಜೆಯ ಪಾಲನೆಯು ಮತ್ತು ಧರ್ಮದ ಸಂರಕ್ಷಣೆಯು ಅವರಿಂದಲೇ ಆಗುತ್ತಿರುವುದು ।।೧೭೩।। ಈ ಸ್ವಧರ್ಮದ ಯೋಗದಿಂದ ಭರತ, ಪುರೂರವಾ, ಜನಕ ಇತ್ಯಾದಿ ಮಹಾರಾಜರು ಮಹಾ ಐಶ್ವರ್ಯಕ್ಕೆ ಪ್ರಾಪ್ತರಾದರು. ಈ ಪ್ರಕಾರವಾಗಿ ಬ್ರಾಹ್ಮಣರ ಸೇವೆಯು ಅಲೌಕಿಕವಾಗಿರುವುದು ।।೧೭೪।। ಈ ಪ್ರಕಾರವಾಗಿ ಕ್ಷತ್ರಿಯರ ಹತ್ತು ಲಕ್ಷಣಗಳನ್ನು ನಾನು ನಿನಗೆ ಹೇಳಿದೆನು. ಇವುಗಳಲ್ಲಿ ಪ್ರಾಮುಖ್ಯವಾಗಿ ಬ್ರಾಹ್ಮಣ ಭಜನೆಯು ಶ್ರೇಯಸ್ಕರವಾಗಿರುವುದು ।।೧೭೫।। ಈಗ ವೈಶ್ಯರ ಪ್ರಕೃತಿಯ ಸ್ವಾಭಾವಿಕವಾದ ಐದು ಲಕ್ಷಣಗಳಿರುವುವು. ಅವುಗಳ ನಿರೂಪಣೆಯನ್ನು ಮತ್ತು ಆಚರಣೆಗಳನ್ನು ಸ್ಪಷ್ಟಮಾಡಿ ಹೇಳುವೆನು. ಅದನ್ನು ನೀನು ಏಕಾಗ್ರಚಿತ್ತದಿಂದ ಆಲಿಸು ।।೧೭೬।।

ಆಸ್ತಿಕ್ಯಂ ದಾನನಿಷ್ಠಾ ಚ ಅದಂಭೋ ಬ್ರಹ್ಮಸೇವನಮ್ । ಅತುಷ್ಟಿ ರರ್ಥೋಪಚಯೈರ್ವೈಶ್ಯಪ್ರಕೃತಯಸ್ತ್ವಿಮಾಃ ॥೧೮॥

ಅರ್ಥ:- ಆಸ್ತಿಕತೆ, ದಾನಶೀಲತೆ, ದಂಭಹೀನತೆ, ಬ್ರಾಹ್ಮಣಸೇವಾನಿರತೆ, ಹೆಚ್ಚಾಗಿ ಧನಸಂಗ್ರಹಿಸುವ ಅಭಿಲಾಷತೆ ಇವು ವೈಶ್ಯರ ಸ್ವಾಭಾವಿಕ ಗುಣಗಳಾಗಿರುವುವು.

ವೈಶ್ಯಾಚೀ ಪ್ರಕೃತೀಸೀ ಜಾಣ । ಅರ್ಥತೃಷ್ಣಾ ಅತಿಗಹನ । ಜಾಹಲಿಯಾ ಕೋಟ್ಯಾನುಕೋಟೀ ಧನ । ತೃಷ್ಣಾ ಪರಿಪೂರ್ಣ ಹೋ ನೇಣೇ ॥೧೭೭॥ ''ಆಸ್ತಿಕ್ಯ'' ಅರ್ಥಸಂಚಯಾಸೀ । ದ್ವಿಪೀಹೂನಿ ದ್ವೀಪಾಂತರಾಸೀ । ನಾನಾ ವಸ್ತು ನೇ ವಿಶ್ವಾಸೇಸೀ । ಸಾಧಾವಯಾ ಅರ್ಥಾಸೀ ಭಾವಾರ್ಥೀ ॥೧೭೮॥ ಕಾ ವೇದಶಾಸ್ತ್ರೀ ಅತಿವಿಶ್ವಾಸೀ । ಹೇ ಮುಖ್ಯತ್ವೇ '' ಆಸ್ತಿಕ್ಯ''ವೈಶ್ಯಾಸೀ । ವೇದೇ ಲಿಹಿಲ್ಯಾ ಸ್ವಧರ್ಮಾಸೀ । ನವ್ಹೇ ಉದಾಸೀ ಅಣುಮಾತ್ರ ॥೧೭೯॥ ವೈಶ್ಯಾಚೇ ಸ್ವಧರ್ಮಾಚರಣ । ನೇಮೇಸೀ ದ್ಯಾವೇ ನಿತ್ಯದಾನ । ಪ್ರಾಣಾಂತ ಮಾಂಡಲ್ಯಾ ಜಾಣ । ದಾನಖಂಡಣ ಹೋ ನೇದೀ ॥೧೮೦॥ ಪರಲೋಕಪ್ರಾಪ್ತೀಚೇ ಕಾರಣ । ''ಬ್ರಾಹ್ಮಣಾಚೀ ಸೇವಾ'' ಜಾಣ । ಬ್ರಾಹ್ಮಣ ಆಜ್ಞಾ ಪರಮ ಪ್ರಮಾಣ । ವಿಶೇಷ ಜಾಣ ಗುರುಸೇವಾ ॥೧೮೧॥ ವೇದಶಾಸ್ತ್ರಾರ್ಥ ಪ್ರಮಾಣ । ಸದ್ಗುರು ಪರಬ್ರಹ್ಮ ಜಾಣ । ತದ್ರೂಪೇ ದೇಖಾವೇ ಬ್ರಾಹ್ಮಣ । ಸೇವೇಸೀ ಪ್ರಾಣ ಅರ್ಪಾವಾ ॥೧೮೨॥ ಮೀ ಮಾನ್ಯ ಹೋಈನ ಅತಿಶ್ರೇಷ್ಠ । ಕಾ ಲೌಕಿಕೀ ಜೋಡಾವೀ ಪ್ರತಿಷ್ಠಾ । ಐಶೀ ಜೇ ದಾಂಭಿಕ ನಿಷ್ಠಾ । ವೈಶ್ಯಾ ವರಿಷ್ಠಾ ಸ್ಪರ್ಶೇನಾ ॥೧೮೩॥ ಸಾಂಡೂನಿಯಾ ಧೂರ್ತಪಣ । ನಿರ್ಲೋಭ ''ನಿರ್ದಂಭ''ಜಾಣ । ವಿಪ್ರಸೇವೇಸೀ ವೋಪಿತೀ ಪ್ರಾಣ । ಹೇ ಮುಖ್ಯ ಲಕ್ಷಣ ವೈಶ್ಯಾಚೇ ॥೧೮೪॥ ಯೇಣೇಂಚಿ ಪರಮಾರ್ಥಪ್ರಾಪ್ತೀ । ಸತ್ಯ ಜಾಣ ವೈಶ್ಯಯಾತೀ । ಹೇ ಸ್ವಾಭಾವಿಕ ಗಾ ಪ್ರಕೃತೀ । ಜಾಣ ನಿಶ್ಚಿತೀ ವೈಶ್ಯಾಚೀ ॥೧೮೫॥ ಆತಾ ಶೂದ್ರಾಚಿಯಾ ಪ್ರಕೃತೀ । ತ್ರಿವಿಧ ಕರ್ಮಾಚೀ ಪೈ ಪ್ರಾಪ್ತೀ । ತೇಹೀ ಸಾಂಗೇನ ಮೀ ತುಜಪ್ರತೀ । ಐಕ ನಿಶ್ಚಿತೀ ಉದ್ಧವಾ ॥೧೮೬॥

ಶುಶ್ರೂಷಣಂ ದ್ವಿಜಗವಾಂ ದೇವಾನಾಂ ಚಾಪ್ಯ ಮಾಯಯಾ । ತತ್ರ ಲಬ್ಧೇನ ಸಂತೋಷಃ ಶೂದ್ರಪ್ರಕೃತಯಸ್ತ್ವಿಮಾಃ ॥೧೯॥

ಅರ್ಥ:- ಬ್ರಾಹ್ಮಣ, ಆಕಳು ಮತ್ತು ದೇವತೆಗಳ ಸೇವೆಯನ್ನು ನಿಷ್ಕಪಟ ಭಾವದಿಂದ ಮಾಡುವುದು. ಅವುಗಳಿಂದ ಏನೇ ಪ್ರಾಪ್ತವಾಗಲಿ ಅಷ್ಟರಲ್ಲಿಯೇ ಸಂತೋಷ ಪಡುವುದು ಇದು ಶೂದ್ರರ ಸ್ವಭಾವವಾಗಿರುವುದು.

ಸ್ವಧರ್ಮ ಶೂದ್ರಾಚಿಯೇ ಜ್ಞಾತೀ । ದ್ವಿಜಸೇವಾ ಯಥಾನಿಗುತೀ । ತ್ಯಾಂಚೇನಿ ಪ್ರಸಾದೇ ಜೀವಿಕಾವೃತ್ತೀ । ನಿಷ್ಕಪಟ ಸ್ಥಿತೀ ಸೇವೇಚೀ ॥೧೮೭॥ ಕರಾವೇ ಗೃಹಸ್ಥಾಂಚೇ ಗೋರಕ್ಷಣ । ಚಾರಾವ್ಯಾ ಜೇಥೇ ತೃಣಜೀವನ । ಶ್ವಾಪದಭಯ ಆಲಿಯಾ ಜಾಣ । ವೇಂಚೂನಿ ಪ್ರಾಣ ರಕ್ಷಾವ್ಯಾ ॥೧೮೮॥

ವೈಶ್ಯರ ಸ್ವಭಾವವು ಅತ್ಯಂತವಾಗಿ ದ್ರವ್ಯಲೋಭಿಯಾಗಿರುವುದು. ಕೋಟ್ಯಾವಧಿ ಧನವು ಅವರಲ್ಲಿದ್ದರೂ ಕೂಡ ಅವರ ತೃಪ್ತಿಯು ಎಂದಿಗೂ ಆಗುವುದಿಲ್ಲ ॥೧೭೭॥ ದ್ರವ್ಯ ಸಂಬಂಧವಾಗಿಯೇ ಅವರಲ್ಲಿ ಆಸ್ತಿಕ್ಯ ಭಾವವು ಇರುವುದು. ಧನಲಾಭಕ್ಕಾಗಿ ಇವರು ಒಂದು ದ್ವೀಪದಿಂದ ಇನ್ನೊಂದು ದ್ವೀಪದವರೆಗೆ ಅನೇಕ ವಸ್ತುಗಳನ್ನು ಒಯ್ಯುವರು, ತರುವರು ॥೧೭೮॥ ಅಥವಾ ವೇದಶಾಸ್ತ್ರಗಳಲ್ಲಿ ದೃಢವಿಶ್ವಾಸ ವಿಡುವುದು ಪ್ರಾಮುಖ್ಯವಾಗಿ ವೈಶ್ಯರ ಆಸ್ತಿಕ್ಯವಾಗಿರುವುದು. ವೇದವು ಹೇಳಿರುವ ಧರ್ಮಾಚರಣೆಯಲ್ಲಿ ಅವರು ಸ್ವಲ್ಪವೂ ಕೂಡ ಉದಾಸೀನತೆಯನ್ನು ಮಾಡಲಾರರು ॥೧೭೯॥ ನಿತ್ಯ ನಿಯಮದಿಂದ ದಾನ ಧರ್ಮವನ್ನು ಮಾಡುವುದು ಇದೇ ವೈಶ್ಯರ ಸ್ವಧರ್ಮಾಚರಣೆಯಾಗಿರುವುದು. ಪ್ರಾಣಾಂತ ಸಮಯವು ಒದಗಿದರೂ ಕೂಡ ದಾನ ಧರ್ಮಕೊಡುವುದರಲ್ಲಿ ಎಂದಿಗೂ ನ್ಯೂನತೆ ಮಾಡಲಾರರು ॥೧೮೦॥ ಪರಲೋಕ ಪ್ರಾಪ್ತಿಗಾಗಿ ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಬ್ರಾಹ್ಮಣರ ಆಜ್ಞೆಯನ್ನು ಪ್ರಮಾಣವನ್ನಾಗಿ ಮನ್ನಿಸಬೇಕು. ಇದಕ್ಕಿಂತಲೂ ವಿಶೇಷವೆಂದರೆ ಗುರುಸೇವೆಯನ್ನು ಮಾಡಬೇಕು ॥೧೮೧॥ ಸದ್ಗುರುಗಳು ಸಾಕ್ಷಾತ ಪರಬ್ರಹ್ಮರಾಗಿರುವರು. ಇದು ವೇದಶಾಸ್ತ್ರ ಪ್ರಮಾಣವಾಗಿರುವುದು. ಆದಕ್ಕಾಗಿ ಬ್ರಾಹ್ಮಣರಿಗೆ ಸದ್ಗುರುಗಳು ಎಂದು ಭಾವಿಸಿ ಅವರ ಸೇವೆಗಾಗಿ ಪ್ರಾಣವನ್ನೂ ಕೂಡ ಅರ್ಪಿಸಲು ಸಿದ್ಧರಾಗಬೇಕು ॥೧೮೨॥ ಶ್ರೇಷ್ಠ ಜನರಲ್ಲಿ ತನ್ನ ಪ್ರತಿಷ್ಠೆಯಾಗಬೇಕು, ದೊಡ್ಡವರಿಂದ ತನಗೆ ಮಾನ್ಯತೆಯು ದೊರೆಯಬೇಕು ಎಂಬ ಈ ಪ್ರಕಾರದ ಡಾಂಭಿಕ ವೃತ್ತಿಯು ಉತ್ತಮ ವೈಶ್ಯರಿಗೆ ಸ್ಪರ್ಶ ಕೂಡ ಮಾಡುವುದಿಲ್ಲ ॥೧೮೩॥ ಸರ್ವ ಪ್ರಕಾರದ ಕಪಟಗಳನ್ನು ತ್ಯಜಿಸಿ, ಲೋಭರಹಿತ ಹಾಗೂ ದಂಭರಹಿತರಾಗಿ ಬ್ರಾಹ್ಮಣರ ಸೇವೆಯನ್ನು ಮಾಡುವುದು ಇದು ವೈಶ್ಯರ ಮುಖ್ಯ ಲಕ್ಷಣವಾಗಿದೆ ॥೧೮೪॥ ಈ ಗುಣಗಳಿಂದ ವೈಶ್ಯರಿಗೆ ಪರಮಾರ್ಥದ ಪ್ರಾಪ್ತಿಯಾಗುವುದು. ಇದು ವೈಶ್ಯ ಕುಲದ ಸ್ವಾಭಾವಿಕ ವೃತ್ತಿಯಾಗಿರುವುದು ॥೧೮೫॥ ಹೇ ಉದ್ಧವಾ, ಶೂದ್ರರ ಸ್ವಭಾವವು ಮೂರು ಪ್ರಕಾರಗಳ ಕರ್ಮಗಳನ್ನು ಮಾಡುತ್ತಿರುವುದು. ಈಗ ಈ ಪ್ರಕಾರಗಳನ್ನೂ ಹೇಳುವೆನು. ಅದನ್ನು ಲಕ್ಷಪೂರ್ವಕವಾಗಿ ಕೇಳು ॥೧೮೬॥

ಮನಃಪೂರ್ವಕವಾಗಿ ಬ್ರಾಹ್ಮಣರ ಸೇವೆಯನ್ನು ಮಾಡುವುದು ಮತ್ತು ಅವರ ಮಾರ್ಗದರ್ಶನದಲ್ಲಿ ಉಪಜೀವನ ನಡೆಸುವ ಇಂತಹ ನಿಷ್ಕಪಟ ಸೇವೆಯು ಶೂದ್ರಜಾತಿಯ ಸ್ವಕರ್ಮವಾಗಿರುವುದು ॥೧೮೭॥ ಇವರು ಮೇವು, ನೀರು ಇದ್ದಲ್ಲಿ ಗೋವುಗಳನ್ನು ಮೇಯಿಸಬೇಕು. ಹಿಂಸೆ ಪ್ರಾಣಿಗಳ ಭಯವನ್ನು ಕಂಡರೆ ತನ್ನ ಪ್ರಾಣದ ಪರಿವೆ ಇಲ್ಲದೇ ಗೋವುಗಳ ರಕ್ಷಣೆಯನ್ನು ಮಾಡಬೇಕು ॥೧೮೮॥

ಗೋರಕ್ಷಿಣೇ ವೇಂಚಿಲ್ಯಾ ಪ್ರಾಣ । ತ್ಯಾಸೀ ಉತ್ತಮ ಗತಿ ಜಾಹಲೀ ಜಾಣ । ಜ್ಯಾಸೀ ಗಾಯೀಂಚಾ ಕಳವಳಾ ಗಹನ । ತ್ಯಾಸೀ ಮೀ ಶ್ರೀಕೃಷ್ಣ ಸದಾ ಸಾಹ್ಯ ॥೧೮೯॥ ದ್ವಿಜಸೇವಾ ಗೋರಕ್ಷಣ । ದೋನಹೀ ವೃತ್ತಿ ನ ಮಿಳತಾ ಜಾಣ । ತರೀ ದೇವಾಲಯೀ ಸಂಮಾರ್ಜನ । ಜೀವಿಕಾರ್ಥ ಜಾಣ ಕರಾವೇ ॥೧೯೦॥ ನಿಷ್ಕಪಟಭಾವೇ ಆಪಣ । ನಿರ್ಮಳ ಕರಾವೇ ಹರಿರಂಗಣ । ತೇಥೀಲ ಪ್ರಾಪ್ತೀಚೇನಿ ಜಾಣ । ಕರಾವೀ ಪೂರ್ಣ ಜೀವಿಕಾ ॥೧೯೧॥ ತೇಥ ಜೇ ಜೇ ಕಾಳೀ ಜೇ ಜೇ ಪ್ರಾಪ್ತೀ । ತೇಣೇ ಸುಖೇ ಅಸಾವೇ ನಿಜವೃತ್ತೀ । ಹೇ ಸ್ವಧರ್ಮಕರ್ಮಸ್ಥಿತೀ । ಶೂದ್ರಪ್ರಕೃತಿಸ್ವಭಾವೇ ॥೧೯೨॥ ವಿಪ್ರಾಸೀ ಅಗ್ನಿಹೋತ್ರಾದಿಕ ಕರ್ಮ । ಶೂದ್ರ ನಮೀ ದ್ವಿಜೋತ್ತಮ । ತೇತ ದೋಹೀಚಾ ಸ್ವಧರ್ಮ । ಸಹಜೇ ಸಮ ಹೋತಸೇ ॥೧೯೩॥ ''ಗೃಹಸ್ಥಾಶ್ರಮಾಚೇ''ವರ್ತನ । ತಿನ್ಹೀ ಆಶ್ರಮಾ ಆಶ್ರಯೋ ಆಪಣ । ಅನ್ನ ವಸ್ತ್ರ ದೇಊನಿ ಜಾಣ । ಸಂರಕ್ಷಣ ಕರಾವೇ ॥೧೯೪॥ ''ಬ್ರಹ್ಮಚರ್ಯಾಶ್ರಮ''ವರ್ತನ । ಗುರುಸೇವಾ ವೇದಾಧ್ಯಯನ । ತ್ಯಾಸೀ ದ್ಯಾವಯಾ ದಾನ । ಅಧಿಕಾರ ಜಾಣ ಅಸೇನಾ ॥೧೯೫॥ ಬ್ರಹ್ಮಚರ್ಯಾಸೀ ಜೇ ಜೇ ಯೋಜಿಲೇ । ತೇ ಪಾಹಿಜೇ ಗುರೂಸೀ ಸಮರ್ಪಿಲೇ । ಗುರೂಸೀ ವಂಚೂನಿ ದಾನ ದಿಧಲೇ । ತೇ ತೇಣೇ ಕೇಲೇ ಅಧರ್ಮ ॥೧೯೬॥ ''ವಾನಪ್ರಸ್ಥಾಶ್ರಮೀ'' ಜಾಣ । ಮುಖ್ಯತ್ವೇ ತಪ ಪ್ರಧಾನ । ಕರಾವೇ ಅಗ್ನಿಶುಶ್ರೂಷಣ । ವೇದೋಕ್ತಲಕ್ಷಣ ಪ್ರಕಾರೇ ॥೧೯೭॥ ಸನ್ಯಾಸೀ ಬ್ರಹ್ಮಚಾರೀ ದೀನ । ಸಮಯೀ ಆಶ್ರಮಾ ಆಲ್ಯಾ ಜಾಣ । ಯಥಾನುಶಕ್ತ್ಯಾ ದ್ಯಾವೇ ಅನ್ನ । ಹೇ ಆಶ್ರಮರಕ್ಷಣ ವಾನಪ್ರಸ್ಥಾ ॥೧೯೮॥ ''ಸನ್ಯಾಶಾಸೀ'' ಅಹಿಂಸಾ ಪ್ರಧಾನ । ಜ್ಞಾನಪರಿಪಾಕೇ ಶಾಂತಿ ಸಂಪೂರ್ಣ । ಅನೋಳಖೀ ಭಿಕ್ಷಾಟಣ । ಹಾ ಮುಖ್ಯ ಧರ್ಮ ಜಾಣ ಚತುರ್ಥಾಶ್ರಮೀ ॥೧೯೯॥ ವರ್ಣಾಶ್ರಮಾಹೂನಿ ಬಾಹ್ಯ ಜಾಣ । ಕೇವಳ ಅಂತ್ಯಜಾದಿ ಜೇ ಜನ । ತ್ಯಾಂಚೇ ಪ್ರಕೃತೀಚೇ ಜೇ ಲಕ್ಷಣ । ಸ್ವಯೇ ನಾರಾಯಣ ಸಾಂಗತ ॥೨೦೦॥

ಅಶೌಚಮನೃತಂ ಸ್ತೇಯಂ ನಾಸ್ತಿಕ್ಯಂ ಶುಷ್ಕವಿಗ್ರಹಃ । ಕಾಮಃ ಕ್ರೋಧಶ್ಚ ತರ್ಷಶ್ಚ ಸ್ವಭಾವೋಽಂತವಸಾಯಿನಾಮ್ ॥೨೦॥

ಅರ್ಥ:- ಅಪರಿಪಕ್ವತೆ, ಅಸತ್ಯ ನುಡಿಯುವಿಕೆ, ಕಳ್ಳತನ ಮಾಡುವಿಕೆ, ಈಶ್ವರ ಮತ್ತು ಪರಲೋಕದ ಪರಿವೆ ಇಲ್ಲದಿರುವಿಕೆ, ಸಂಘರ್ಷ ಮಾಡುವಿಕೆ, ಕಾಮಕ್ರೋಧಗಳಿಗೆ ವಶನಾಗುವಿಕೆ, ಇವು ಅಂತ್ಯಜರ ಸ್ವಭಾವವಾಗಿರುವುದು.

ಯೇ ಶ್ಲೋಕೀಚೇ ಅಷ್ಟ ಗುಣ । ತ್ಯಾಗಾವಯಾ ನ ಮನೀ ಜ್ಯಾಚೇ ಮನ । ತೋಹೀ ಅಂತಜ್ಯಾಸಮಾನ । ಹೇ ಪ್ರಕೃತಿಲಕ್ಷಣ ಅತಿನಿಂದ್ಯ ॥೨೦೧॥

ಗೋರಕ್ಷಣೆಯಲ್ಲಿ ಪ್ರಾಣವನ್ನು ಕಳೆದುಕೊಂಡವರಿಗೆ ಉತ್ತಮ ಗತಿಯು ಪ್ರಾಪ್ತವಾಗುವುದು. ಯಾರ ಹೃದಯದಲ್ಲಿ ಗೋವುಗಳಿಗಾಗಿ ಅತ್ಯಂತ ಕಳಕಳಿಯು ಇರುವುದೋ, ಅವರನ್ನು ಶ್ರೀಕೃಷ್ಣನಾದ ನಾನು ನಿರಂತರವಾಗಿ ಸಹಾಯವನ್ನು ಮಾಡುತ್ತಿರುವೆನು ॥೧೮೯॥ ಒಂದುವೇಳೆ ಬ್ರಾಹ್ಮಣರ ಸೇವೆ ಮತ್ತು ಗೋವುಗಳ ರಕ್ಷಣೆ ಈ ಎರಡು ಕಾಯಕಗಳು ದೊರೆಯದಿದ್ದರೆ ಶೂದ್ರರು ದೇವಾಲಯಕ್ಕೆ ಹೋಗಿ ಅಲ್ಲಿ ಅಂಗಳದ ಕಸಗೂಡಿಸಬೇಕು. ನೀರು ಎರಚಿ ಸೆಗಣಿಯಿಂದ ಸಾರಿಸಬೇಕು. ಇಷ್ಟರಿಂದಲೇ ತನ್ನ ಉಪಜೀವನವನ್ನು ನಡೆಸಬೇಕು ॥೧೯೦॥ ನಿಷ್ಕಪಟ ಮನಸ್ಸಿನಿಂದ ದೇವಾಲಯದ ಸಭಾಮಂಟಪ, ಇತ್ಯಾದಿ ಸ್ವಚ್ಛಗೊಳಿಸಬೇಕು. ಇದರಿಂದ ದೊರಕುವ ದ್ರವ್ಯದಿಂದ ತನ್ನ ಉದರ ಪೋಷಣೆಯನ್ನು ಮಾಡಬೇಕು ॥೧೯೧॥ ಯಾವ ಸಮಯದಲ್ಲಿ ಯಾವುದು ಪ್ರಾಪ್ತವಾಗುವುದೋ, ಅಷ್ಟರಿಂದಲೇ ಸಮಾಧಾನ ಪಡೆಯಬೇಕು. ಸೇವೆ ವೃತ್ತಿಯಿಂದ ಉಪಜೀವನವನ್ನು ನಡೆಸಬೇಕು. ಇದು ಶೂದ್ರರ ಜನ್ಮಸಿದ್ಧ ಸ್ವಭಾವವಾಗಿರುವುದು ॥೧೯೨॥ ಬ್ರಾಹ್ಮಣರ ಅಗ್ನಿಹೋತ್ರಾದಿ ಕರ್ಮ ಮತ್ತು ಶೂದ್ರರ ಶ್ರೇಷ್ಠ ಬ್ರಾಹ್ಮಣರ ನಮನ ಇವು ಎರಡೂ ನಿಜವಾಗಿಯೂ ಸರಿಸಮಾನ ಸ್ವಧರ್ಮವಾಗಿರುವುವು ॥೧೯೩॥ ಮೂರೂ ಆಶ್ರಮಗಳಿಗೆ ಆಶ್ರಯ ನೀಡುವುದು ಗೃಹಸ್ಥಾಶ್ರಮದ ಧರ್ಮವಾಗಿರುವುದು. ಮೂರು ಆಶ್ರಮಗಳ ಜನರಿಗೆ ಅನ್ನ-ವಸ್ತ್ರಗಳನ್ನು ಕೊಟ್ಟು ಅವರ ಸಂರಕ್ಷಣೆಯನ್ನು ಮಾಡಬೇಕಾಗುವುದು ॥೧೯೪॥ ಬ್ರಹ್ಮಚರ್ಯ ಆಶ್ರಮದ ವರ್ತನೆ ಎಂದರೆ ಗುರುಗಳ ಸೇವೆಯನ್ನು ಮತ್ತು ವೇದಾಧ್ಯಯನವನ್ನು ಮಾಡಬೇಕು. ಈತನಿಗೆ ದಾನವನ್ನು ಕೊಡುವ ಅಧಿಕಾರವು ಇರುವುದಿಲ್ಲ ॥೧೯೫॥ ಬ್ರಹ್ಮಚರ್ಯನಿಗೆ ಏನೇ ದೊರೆಯಲಿ, ಅದನ್ನು ಶ್ರೀಗುರುಗಳ ಚರಣಗಳಿಗೆ ಅರ್ಪಿಸಬೇಕು. ಗುರುಗಳಿಗೆ ವಂಚಿಸಿ ಇತರರಿಗೆ ದಾನಧರ್ಮವನ್ನು ಮಾಡಿದರೆ ಅದು ಅಧರ್ಮವಾಗುವುದು ॥೧೯೬॥ ವಾನಪ್ರಸ್ಥನಿಗೆ ತಪಸ್ಸು ಶ್ರೇಷ್ಠವಾಗಿರುವುದು. ವೇದೋಕ್ತ ವಿಧಿಯಂತೆ ಅರಣ್ಯದಲ್ಲಿದ್ದುಕೊಂಡು ಆತನು ಅಗ್ನಿಸೇವೆ ಹಾಗೂ ತಪಶ್ಚರ್ಯವನ್ನು ಮಾಡಬೇಕು ॥೧೯೭॥ ಒಂದುವೇಳೆ ಸನ್ಯಾಸೀ, ಬ್ರಹ್ಮಚಾರೀ ಅಥವಾ ದೀನ ಯಾಚಕನು ಬಾಗಿಲಿಗೆ ಬಂದು ನಿಲ್ಲಲು ಆತನಿಗೆ ಯಥಾಶಕ್ತಿ ದಾನವನ್ನು ಮಾಡುವುದು ಆಶ್ರಮದ ಧರ್ಮವಾಗಿರುವುದು ॥೧೯೮॥ ಸನ್ಯಾಸಿಗೆ ಅಹಿಂಸೆಯೇ ಮುಖ್ಯವಾಗಿರುವುದು. ಆತನ ಜ್ಞಾನವು ಪರಿಪಕ್ವವಾಗಲು ಆತನಿಗೆ ಪರಿಪೂರ್ಣ ಶಾಂತಿಯು ಲಭಿಸುವುದು. ಅಪರಿಚಿತ ಸ್ಥಳಗಳಲ್ಲಿ ಭಿಕ್ಷೆಯನ್ನು ಬೇಡುತ್ತ ತಿರುಗುತ್ತಿರುವುದೇ ಆತನ ಧರ್ಮವಾಗಿರುವುದು. ಹೀಗೆ ತಿಳಿ ॥೧೯೯॥ ಈಗ ಈ ನಾಲ್ಕು ವರ್ಣಗಳಿಗಿಂತಲೂ ಭಿನ್ನವಾಗಿರುವ ಅಂತ್ಯಜಾದಿ ವರ್ಣಬಾಹ್ಯ ಜನರಿರುವರು. ಅವರ ಸ್ವಭಾವದ ಲಕ್ಷಣಗಳನ್ನು ನಾರಾಯಣನು ಹೇಳುತ್ತಿರುವನು ॥೨೦೦॥

ಈ ಶ್ಲೋಕದಲ್ಲಿನ ಎಂಟು ಗುಣಗಳನ್ನು ತ್ಯಜಿಸುವ ಬುದ್ಧಿಯು ಯಾರ ಮನದಲ್ಲಿ ಹುಟ್ಟುವುದಿಲ್ಲವೋ ಆತನು ಅಂತ್ಯಜ ಸಮಾನನು. ಇದು ಪ್ರಕೃತಿಯ ಅತ್ಯಂತ ನಿಂದ್ಯ ಲಕ್ಷಣವಾಗಿರುವುದು ॥೨೦೧॥

ಜ್ಯಾಸೀ ಸ್ನಾನಸಂಧ್ಯಾ ಶೌಚಾಚಾರ । ಸ್ವಕರ್ಮ ನಾವಡೇ ಸಾಚಾರ । ಅಂತರೀ ವಿಕಲ್ಪ ಅಪಾರ । ಜೈಸಾ ವಿಖಾರ ಕಾಳಿಯಾ ॥೨೦೨॥ ''ಕನಕಫಳ''ಹೇ ನಾಮ ಗೋಮಟೇ । ಆಂತ ಮಾಜಿರೇ ಬಾಹೇರ ಕಾಂಟೇ । ತೈಸೇ ಸಬಾಹ್ಯ ವೋಖಟೇ। ''ಅಶೌಚ'' ಮೋಠೇ ತ್ಯಾ ನಾಂವ॥೨೦೩॥ ಶರೀರೀ ಶ್ವೇತ ಕುಷ್ಠ ನಿರ್ನಾಸಿಕ। ತೋಂಡಾಳ ವೋಢಾಳ ಪತಿನಿಂದಕ । ತೇ ಸ್ತ್ರೀಯೇಚಾ ಐಸೇ ದೇಖ । ಅಶೌಚಕ ಸಬಾಹ್ಯ ॥೨೦೪॥ ಯಾಪರೀ ಗಾ ''ಅಶೌಚತಾ'' । ಜ್ಯಾಚೇ ಅಂಗೀ ಸ್ವಭಾವತಾ । ತೋ ಜಾಣ ಪಾ ತತ್ತ್ವತಾ । ಗುಣ ಪ್ರಥಮತಾ ಅಂತ್ಯಜಾಚಾ ॥೨೦೫॥ ''ಅಸತ್ಯತಾ'' ಜೇ ಪ್ರಕೃತೀಪಾಶೀ। ಅಖಂಡ ವೈಸೇ ಅಹರ್ನಿಶೀ । ಮಾತಾಪಿತಾದಿ ಗುರೂಂಸೀ । ಝಕ ವಣೇ ತ್ಯಾಂಸೀ ಮಿಥ್ಯಾತ್ವೇ ॥೨೦೬॥ ಜೇವೀ ಕಾ ಶಿಮಗ್ಯಾಚ್ಯಾ ಸಣೀ। ''ರಾಮಕೃಷ್ಣ'' ನ ಮ್ಹಣೇ ಕೋಣೀ। ಉಪಸ್ಥ ನಾಮೇ ಗರ್ಜೇ ವಾಣೀ । ಸಂತೋಷೋನೀ ಸ್ವಾನಂದೇ ॥೨೦೭॥ ತೇವೀ ಜಾಗೃತಿ-ಸ್ವಪ್ನ-ಸುಷುಪ್ತೀ । ''ಅಸತ್ಯ''ಆವಡೇ ಜ್ಯಾಚ್ಯಾ ಚಿತ್ತೀ । ತೋ ಜಾಣ ಪಾ ನಿಶ್ಚಿತೀ। ಅಂತ್ಯಜಪ್ರಕೃತಿ ಸ್ವಭಾವೇ ॥೨೦೮॥ ಪಡಿಲಿಯಾ ದೃಷ್ಟೀ ಬುಡೀ । ಮಾಯಬಾಪಾಂಚೇ ಠೇವಣೇ ಕಾಢೀ । ನಾನಾ ವಿಶ್ವಾಸಪರವಡೀ । ಬುಡವೀ ಗಾಂಠೋಡೀ ಗುರೂಚಿ ॥೨೦೯॥ಸಧನ ಸಾಂಪಡಲ್ಯಾ ಹಾತಾ । ನಾನಾಯುಕ್ತೀ ಅತಿಕ್ಷುದ್ರತಾ । ನಾತರೀ ಬಲತ್ಕಾರೇ ತತ್ತ್ವತಾ । ಘ್ಯಾವೇ ಸರ್ವಥಾ ಸರ್ವಸ್ವ ॥೨೧೦॥ ಯಾಪರೀ ಗಾ ಅಧರ್ಮತಾ । ಪರದ್ರವ್ಯ ಯಾವಯಾ ಹಾತಾ । ಆಸಕ್ತಿ ಜ್ಯಾಚಿಯಾ ಚಿತ್ತಾ । ಜಾಣ ತತ್ತ್ವತಾ ತೇ ''ಚೋರೀ''॥೨೧೧॥ಸ್ವಧರ್ಮಕರ್ಮೀ ಸ್ವಭಾವತಾ। ವಿಶ್ವಾಸ ನಾಹೀ ಜ್ಯಾಚ್ಯಾ ಚಿತ್ತಾ। ವೇದಶಾಸ್ತ್ರಪುರಾಣಾರ್ಥಾ । ಮಿಥ್ಯಾ ಸರ್ವಥಾ ಜೋ ಮಾನೀ ॥೨೧೨॥ ಉದ್ಧವಾ ಜಾಣ ತತ್ತ್ವತಾ । ಯಾ ನಾಂವ ಗಾ ''ನಾಸ್ತಿಕತಾ'' । ಆಸ್ತಿಕ್ಯಭಾವೋ ಸ್ವಭಾವತಾ । ಅನುಮಾತ್ರತಾ ಜೇಥ ನಾಹೀ॥೨೧೩॥ ಗಾಂಠೀ ಅಸತಾ ಲಕ್ಷಕೋಡೀ । ಸದಾ ನಾಸ್ತಿಕತಾ ಜ್ಯಾಚೇ ತೋಂಡೀ । ಘರೀಂಚ್ಯಾಸೀ ಆಪದಾ ಲಾವೀ ಗಾಢೀ । ತೇ ಪ್ರಕೃತಿ ರೋಕಡೀ ಅಂತ್ಯಜಾಚೀ ॥೨೧೪॥ ಕಾರ್ಯೇವೀಣ ಕೋರಡೀ ಕಳೀ ।ಸಂಬಂಧೇವೀಣ ವೃಥಾ ಸಳೀ । ಅಖಂಡ ಕರೀ ದಾಂತಕಸಾಳೀ । ತೇ ಅಂತ್ಯಜಾಚೀ ಬಳೀ ನಿಜವೃತ್ತೀ ॥೨೧೫॥ ಜ್ಯಾಸೀ ಸದಾ ವಿರೋಧ ಪೋಟೀ । ವರೀವರೀ ಗೋಡ ಮೈಂದ ಗೋಠೀ । ಭೀತರೀ ದ್ವೇಷಾಚಾ ಭಡಕಾ ಉಠೀ । ಜೋ ಕ್ರೂರದೃಷ್ಟೀ ಸರ್ವದಾ ॥೨೧೬॥

ಈತನಿಗೆ ಸ್ನಾನಸಂಧ್ಯಾ ಪವಿತ್ರತೆ, ಆಚಾರಗಳು ಮತ್ತು ಸ್ವಕರ್ಮ ಇವು ಸ್ವಲ್ಪವೂ ಪ್ರಿಯವಾಗಿರುವುದಿಲ್ಲ. ಕಾಳಿಂಗ ಸರ್ಪದಂತೆ ಆತನ ಮನದಲ್ಲಿ ಅನೇಕ ತರಹದ ವಿಕಲ್ಪಗಳು ನಿರ್ಮಾಣವಾಗುತ್ತಿರುವುವು ॥೨೦೨॥ ಕನಕಫಲವೆಂದರೆ ಧತ್ತೂರಿ ವಿಷಾರಿ ಫಲವಾಗಿದ್ದು ಇದರ ಹೆಸರು ಮಾತ್ರ ಉತ್ತಮವೆನಿಸುವುದು. ಆದರೆ ಅದು ಒಳಭಾಗದಿಂದ ಉನ್ಮಾದ ಉಂಟಾಗುವುದು. ಹೊರಭಾಗದಲ್ಲಿ ಮುಳ್ಳಿನಿಂದ ತುಂಬಿರುವುದು. ಹೀಗೆ ಒಳಹೊರಗೆ ಮಲಿನವಾಗಿರುವುದಕ್ಕೆ ಅಶೌಚ ಅಂದರೆ ಅಮಂಗಲವೆಂದು ಹೇಳುವರು ॥೨೦೩॥ ಶರೀರದಲ್ಲಿ ಬಿಳಿ ತೊನ್ನು, ಕುಷ್ಠರೋಗ, ನಿರ್ನಾಸಿಕ, ಬಾಯಿಬಡಕತನ, ಆಲಸ್ಯತನ, ಮೇಲಾಗಿ ಪತಿನಿಂದಕಳಾದ ಸ್ತ್ರೀ ಇದ್ದಂತೆ ಇದು ಸಬಾಹ್ಯ ಅಶೌಚವಾಗಿರುವುದು ॥೨೦೪॥ ಈ ಪ್ರಕಾರದ ಅಪವಿತ್ರತೆಯು ಸ್ವಭಾವತಃ ಯಾರ ಅಂಗದಲ್ಲಿರುವುದೋ, ಅದು ಅಂತ್ಯಜನ ಮೊದಲನೆಯ ಲಕ್ಷಣವಾಗಿರುವುದು ॥೨೦೫॥ ಯಾರ ಸ್ವಭಾವದಲ್ಲಿ ಅಸತ್ಯ ಭಾಷಣವು ನಿರಂತರವಾಗಿ ತುಂಬಿಕೊಂಡಿರುವುದು. ತಂದೆ ತಾಯೀ, ಗುರು ಇತ್ಯಾದಿಕರಿಗೆ ಯಾವನು ಅಸತ್ಯತನದಿಂದ ಮೋಸಗೊಳಿಸುತ್ತಿರುವನು ॥೨೦೬॥ ಹೋಳಿ ಹುಣ್ಣಿಮೆಯ ಹಬ್ಬದಲ್ಲಿ ರಾಮಕೃಷ್ಣ ನಾಮದ ಉಚ್ಚಾರವಾಗುವುದಿಲ್ಲ. ಆದರೆ ಬಹುತೇಕವಾಗಿ ಎಲ್ಲರೂ ಅಶ್ಲೀಲ ಶಬ್ದಗಳ ಉಚ್ಚಾರವನ್ನು ಗರ್ಜಿಸುತ್ತಿರುವರು ॥೨೦೭॥ ಅದರಂತೆಯೇ ಜಾಗೃತಿ, ಸ್ವಪ್ನ, ಸುಷುಪ್ತಿ ಈ ಮೂರೂ ಅವಸ್ಥೆಗಳಲ್ಲಿ ಅವರ ಚಿತ್ತಕ್ಕೆ ಅಸತ್ಯದ ಪ್ರೀತಿವಿರುವುದು. ಇದು ಅಂತ್ಯಜರ ಎರಡನೆಯ ಸ್ವಭಾವವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೨೦೮॥ ಹುಗಿದಿಟ್ಟ ತಂದೆ ತಾಯಿಯರ ನಿಧಿಯ ಮೇಲೆ ಅವನ ದೃಷ್ಟಿ ಬೀಳಲು ಅದನ್ನು ಹೊರತೆಗೆಯಲು ಅವನು ತಪ್ಪುವುದಿಲ್ಲ. ಮೇಲಿಂದಮೇಲೆ ವಿಶ್ವಾಸವನ್ನು ತೋರಿಸುತ್ತ ಇವನು ಗುರುಗಳ ಹಣವನ್ನೂ ಕೂಡ ಮುಳುಗಿಸುವನು ॥೨೦೯॥ ಇವನಿಗೆ ಒಂದುವೇಳೆ ಶ್ರೀಮಂತ ವ್ಯಕ್ತಿಯು ಸಿಕ್ಕನೆಂದರೆ ಸಾಕು ಆತನಲ್ಲಿ ಅನೇಕ ಪ್ರಕಾರದ ಕುಯುಕ್ತಿಗಳನ್ನು ಯೋಜಿಸಿ ಉಪಾಯದೊಂದಿಗೆ, ಕೊನೆಗೆ ಬಲತ್ಕಾರವಾಗಿ ಆತನ ಸರ್ವಸ್ವವನ್ನು ಲುಟಾಯಿಸುವನು ॥೨೧೦॥ ಈ ಪ್ರಕಾರವಾಗಿ ಪರದ್ರವ್ಯವನ್ನು ಪಡೆಯುವ ಆಸಕ್ತಿ ಇರುವುದು. ಓಗೆ ಅಧರ್ಮ ಮಾಡುವ ಈ ವೃತ್ತಿಗೆ ಕಳ್ಳತನ ಎಂದು ಕರೆಯುವರು ॥೨೧೧॥ ಸ್ವಧರ್ಮ ಕರ್ಮದಲ್ಲಿ ಆತನ ವಿಶ್ವಾಸವು ಸ್ವಭಾವತವಾಗಿಯೇ ಇರುವುದಿಲ್ಲ. ಯಾವನು ವೇದಶಾಸ್ತ್ರ ಪುರಾಣಗಳ ಅರ್ಥಕ್ಕೆ ಸುಳ್ಳು ಎಂದು ತಿಳಿದಿರುವನೋ ॥೨೧೨॥ ಆತನ ಈ ವೃತ್ತಿಗೆ ನಾಸ್ತಿಕತನವೆಂದು ಹೇಳುವರು. ಹೇ ಉದ್ಧವಾ, ಆತನ ಸ್ವಭಾವದಲ್ಲಿ ಯಾವುದೇ ಪ್ರಕಾರದ ಆಸ್ತಿಕ್ಯಭಾವವು ಅಣು ಮಾತ್ರವೂ ಕೂಡ ಇರುವುದಿಲ್ಲ ॥೨೧೩॥ ಸ್ವತಃ ತನ್ನಲ್ಲಿ ಕೋಟಿಗಟ್ಟಲೇ ಧನವು ಇದ್ದರೂ ಸಹ ನನ್ನಲ್ಲಿ ಏನೂ ಇಲ್ಲವೆನ್ನುವನು. ಮನೆಯಲ್ಲಿ ಸಂಕಟಗಳು ಒದಗಲು ಆಗ ಅವನು ಹೇರಳವಾಗಿ ಧನವನ್ನು ಖರ್ಚಿಸುವನು. ಇದು ಅಂತ್ಯಜನ ಸ್ವಭಾವವಾಗಿರುವುದು ॥೨೧೪॥ ಕಾರಣವಿಲ್ಲದೇ ಕೆಲಸಕ್ಕೆ ಬಾರದ ಜಗಳ ಹುಟ್ಟಿಸುವಿಕೆ, ಯಾವ ಉದ್ದೇಶವಿರದೇ ಇತರ ಜನರಿಗೆ ತೊಂದರೆಗಳನ್ನು ಕೊಡುವಿಕೆ, ಸದಾಕಾಲದಲ್ಲಿ ತುಟಿಗಳನ್ನು ಹಲ್ಲಿನಿಂದ ಕಡಿಯುವಿಕೆ, ಇವು ಅಂತ್ಯಜನ ಸ್ವಭಾವವಾಗಿರುವುದು ಎಂದು ತಿಳಿಯಬೇಕು ॥೨೧೫॥ ಇವನ ಅಂತಃಕರಣದಲ್ಲಿ ಯಾವಾಗಲೂ ವಿರೋಧಭಾವವು ಇರುವುದು. ಮೇಲ್ನೋಟಕ್ಕೆ ಮೋಹಕ ಮಾತುಗಳನ್ನಾಡುವನು. ಇವನ ದೃಷ್ಟಿಯು ಯಾವಾಗಲೂ ಕ್ರೂರವಾಗಿರುವುದು. ಹೊಟ್ಟೆಯಲ್ಲಿ ಸತತವಾಗಿ ದ್ವೇಷದ ಜ್ವಾಲೆಯನ್ನು ತುಂಬಿಕೊಂಡಿರುವನು ॥೨೧೬॥

ಜನ್ಮವರೀ ಕೇಲ್ಯಾ ಉಪಕಾರಕೋಟೀ । ತ್ಯಾಸೀ ಏಕಾಚಿ ಉತ್ತರಾಸಾಠೀ । ಅಪಕಾರೂ ಕರಾವಯಾ ಪೋಟೀ । ಛಿದ್ರದೃಷ್ಟೀ ಸದಾ ಠೇವೀ ॥೨೧೭॥ ಉಪಕಾರ್ಯಾ ಅಪಕಾರಸ್ಥಿತೀ । ಅಂತ್ಯಜಹೀ ನ ಕರೀ ಪ್ರಾಣಾಂತೀ । ಐಶಿಯಾ ವಿರೋಧಾತೇ ಜೇ ವಾಹತೀ । "ಶುಷ್ಕವಿಗ್ರಹಗತೀ" ತ್ಯಾ ನಾಂವ ॥೨೧೮॥ ಜೋ ಸುಹೃದಾಮಾಜೀ ಪಾಡೀ ವೈರ । ಅಪಾಯೀ ಘಾಲೀ ಥೋರ ಥೋರ । ಅಶೌಚ ನಾಸ್ತಿಕ್ಯ ಘೋರ । ಜಾಣಾವಾ ನರ "ಅತಿವಿಗ್ರಹೀ" ॥೨೧೯॥ ಸ್ವಾರ್ಥೇವೀಣ ಪರಕಾರ್ಯ ನಾಶೀ । "ಶುಷ್ಕವಿಗ್ರಹೀ" ಮ್ಹಣಿಪೇ ತ್ಯಾಸೀ । ಉದ್ಧವಾ ಐಶೀ ಪ್ರಕೃತಿ ಜ್ಯಾಸೀ । ಅಂತ್ಯಜಹೀ ತ್ಯಾಸೀ ಪೈ ಭೀತೀ ॥೨೨೦॥ ಐಕ ಕಾಮಾಚಿ ಕಥಾ । ಕನಕ ಆಣಿ ಕಾಂತಾ । ಯೇವಿಷಯೀ ಅತಿಲೋಭತಾ । ಉಪರಮು ಚಿತ್ತಾ ಅಸೇನಾ ॥೨೨೧॥ ಸ್ತ್ರೀ - ಕಾಮಾಚೇನಿ ನಾಂವೇ । ಲಿಂಗಮಾತ್ರಚಿ ಅಸಾವೇ । ಮಗ ಸೇವಾಸೇವ್ಯ ಭಾವೇ । ವಿಚಾರೂ ಜೀವೇ ಸ್ಮರೇನಾ ॥೨೨೨॥ ತೈಸಾಚಿ ಜಾಣ ದ್ರವ್ಯಾರ್ಥಾ । ಭಲತೈಸೇ ಯಾವೇ ಹಾತಾ । ನ ವಿಚಾರೀ ವಿಹಿತಾ ಅವಿಹಿತಾ । ಅತಿಕಾಮತಾ ಅರ್ಥಾರ್ಥೀ ॥೨೨೩॥ ಅವಿಹಿತ ಕಾಮಸ್ಥಿತೀ । ಹಾ ಸ್ವಭಾವ ಜ್ಯಾಚೇ ವೃತ್ತೀ । ತೇ ಅಂತ್ಯಜಾದಿ ಪ್ರಕೃತೀ । ಜಾಣ ನಿಶ್ಚಿತೀ ಉದ್ಧವಾ ॥೨೨೪॥ ಪಾಹೇ ಪಾ ಕಾಮಿಕಾಂಚ್ಯಾ ಪೋಟಿ । ಸದಾ ಕ್ರೋಧಾಚಿ ಆಗಟೀ । ಕಾಮಅಪ್ರಾಪ್ತೀ ಐಕತಾ ಗೋಷ್ಟೀ । ಭಡಕಾ ಉಠೀ ಪ್ರಳಯಾಂತ ॥೨೨೫॥ ಜ್ಯಾಚಿಯೇ ಶರೀರಸ್ಥಿತೀ । ಉಸಂತು ನಾಹೀ ಕ್ರೋಧಾಹಾತೀ । ಸದಾ ಧುಪಧುಪೀತ ವೃತ್ತೀ । ತೇ ಜಾಣ ಪ್ರಕೃತೀ ಅತಿನೀಚ ॥೨೨೬॥ ಪ್ರಾಪ್ತಭೋಗೇ ತೃಷ್ಣಾ ನ ಬಾಣೇ । ಐಕಿಲ್ಯಾಹೀ ಭೋಗಾ ಕಾರಣೇ । ಅಖಂಡ ಮನಾಚೇ ಬೈಸೇ ಧರಣೇ । ತೇ ಪ್ರಕೃತಿ ಜಾಣೇ ಅತಿನೀಚ ॥೨೨೭॥ ಮ್ಯಾ ಸಾಂಗಿತಲೇ ಜೇ ಆಠಹೀ ಗುಣ । ಹೇ ಜ್ಯಾಚೇ ಪ್ರಕೃತೀಸ ಲಕ್ಷಣ । ತೋ ಹೋ ಕಾ ಭಲತಾ ವರ್ಣ । ಪರೀ ಅಂತ್ಯಜಪಣ ತ್ಯಾಮಾಜೀ ॥೨೨೮॥ ಅವಗುಣ ಸಾಂಗಿತಲೇ ಸಮಸ್ತ । ಏಕ ಏಕ ನರಕದಾನೀ ವಿಖ್ಯಾತ । ಮಾ ಆಠಹೀ ಮಿಳಾಲೇ ಜೇಥ । ಉಗಂಡ ತೇಥ ಮಗ ಕೈಚಾ ॥೨೨೯॥ ತ್ಯಾಗಾವಯಾ ನಿಜಸ್ಥಿತೀ । ಯಾ ಆಠ ಅವಗುಣಾಂಚೀ ವ್ಯುತ್ಪತ್ತೀ । ಮ್ಯಾ ಸಾಂಗಿತಲೀ ತುಜಪ್ರತೀ । ಜಾಣ ನಿಶ್ಚಿತೀ ಉದ್ಧವಾ ॥೨೩೦॥

ಜೀವನ ತುಂಬ ಒಬ್ಬನು ಆತನಲ್ಲಿ ಬೇಕಾದಷ್ಟು ಉಪಕಾರಗಳನ್ನು ಮಾಡಿರಲಿ, ಒಂದುವೇಳೆ ಒಂದೇ ಒಂದು ಮಾತಿಗೆ ಆತನಲ್ಲಿ ಮುರಿದುಬಿದ್ದು ಅಪಕಾರವನ್ನು ಮಾಡಲು ಸಿದ್ಧನಾಗುವನು ॥೨೧೭॥ ಉಪಕಾರಗಳನ್ನು ಮಾಡಿದವರ ಮೇಲೆ ಅಂತ್ಯಜನೂ ಕೂಡ ಪ್ರಾಣಾಂತಕ್ಕೂ ಅಪಕಾರವನ್ನು ಮಾಡಲಾರನು. ಆದರೆ ಇವನು ಇದರ ವಿರುದ್ಧ ವರ್ತನೆ ಮಾಡುವುದಕ್ಕೆ "ಶುಷ್ಕವಿಗ್ರಹ" ಎಂದು ನಾಮವಿರುವುದು ॥೨೧೮॥ ಯಾವನು ತನ್ನ ಬಂಧು ಬಳಗದವರಲ್ಲಿ ವೈರತ್ವವನ್ನು ನಿರ್ಮಾಣಗೊಳಿಸುತ್ತಿರುವನು. ಅನೇಕರಿಗೆ ಸಂಕಟಗಳಿಗೆ ಗುರಿ ಮಾಡುವನು. ಇವನ ಈ ಅಮಂಗಲ ವರ್ತನೆ, ನಾಸ್ತಿಕತನ ಬಹಳ ಬೆಳೆದಿರುವುದು. ಇದಕ್ಕೆ "ಅತಿವಿಗ್ರಹೀ" ಎಂದು ಹೇಳುವರು ॥೨೧೯॥ ತನಗೆ ಯಾವ ಲಾಭವೂ ಇರದಂತಹ ಇತರರ ಕಾರ್ಯಗಳನ್ನು ನಾಶ ಮಾಡಲು ಪ್ರವೃತ್ತನಾಗುವಿಕೆಗೆ "ಶುಷ್ಕವಿಗ್ರಹೀ" ಎಂದು ಹೇಳುವರು. ಇಂತಹ ಸ್ವಭಾವದ ಮನುಷ್ಯನಿಗೆ ಅಂತ್ಯಜರೂ ಕೂಡ ಭಯಪಡುತ್ತಿರುವರು ॥೨೨೦॥ ಈಗ ಆತನ ಮನದಲ್ಲಿನ ಕಾಮದ ಕಥೆಯನ್ನು ಕೇಳು. ಆತನಿಗೆ ಕನಕ ಮತ್ತು ಕಾಂತಾ ಇವುಗಳ ಮೇಲೆ ಅತಿಶಯವಾದ ಪ್ರೀತಿ ಇರುವುದು. ಆತನ ಚಿತ್ತವು ಸತತವಾಗಿ ಚಂಚಲವಾಗಿರುವುದು ॥೨೨೧॥ ಸ್ತ್ರೀ ಉಪಭೋಗದ ಅತ್ಯಂತಿಕ ಕಾಮವು ಆತನ ಮನದಲ್ಲಿರುವುದು. ಶರೀರದಿಂದ ಸ್ತ್ರೀ ಇದ್ದರೆ ಸಾಕು, ಆಕೆಯ ಸೇವನೆ ಯೋಗ್ಯವೋ ಅಯೋಗ್ಯವೋ ಎಂಬ ವಿಚಾರವನ್ನು ಮಾಡಲರಿಯನು ॥೨೨೨॥ ಹಣದ ಸಂಬಂಧದಲ್ಲಿಯೂ ಈತನ ಅದೇ ಅವಸ್ಥೆಯು ಇರುವುದು. ಕೆಟ್ಟ ಮಾರ್ಗದಿಂದ ಸಂಪತ್ತು ಒದಗುತ್ತಿದ್ದರೂ ಕೂಡ ಅದಕ್ಕಾಗಿ ಅವನು ಯೋಗ್ಯ-ಅಯೋಗ್ಯದ ವಿಚಾರವನ್ನು ಮಾಡಲಾರನು. ಯಾವುದೇ ಮಾರ್ಗದಿಂದಾಗಲಿ ಹಣ ಗಳಿಸುವ ಲೋಭವು ಆತನ ಮನದಲ್ಲಿ ಅತಿಶಯವಾಗಿ ಇರುವುದು ॥೨೨೩॥ ಕೆಟ್ಟ ಮಾರ್ಗಗಳಿಂದಲೇ ತನ್ನ ಇಚ್ಛೆಯನ್ನು ಪೂರ್ಣಗೊಳಿಸುವ ಇಂತಹ ಅಪೇಕ್ಷೆಗಳು ಇವನಲ್ಲಿರುವುವು. ಹೀಗಿರುವುದು ಇದು ಅಂತ್ಯಜನ ಸ್ವಭಾವವಾಗಿರುವುದು ॥೨೨೪॥ ಕಾಮುಕರಲ್ಲಿ ಸದಾ ಕ್ರೋಧಾಗ್ನಿಯು ಧಗಧಗಿಸುವುದು. ತಮ್ಮ ಇಚ್ಛೆಯು ಈಡೇರದಿದ್ದಲ್ಲಿ ಪ್ರಳಯಾಂತಕ ಕ್ರೋಧಾಗ್ನಿಯು ಭಡಕಾಯಿಸುವುದು ॥೨೨೫॥ ಇವರ ಶರೀರವು ಸತತವಾಗಿ ಕ್ರೋಧದ ಅಧೀನವಾಗಿರುವುದು. ಆದ್ದರಿಂದ ಇವರಿಗೆ ಒಂದು ಕ್ಷಣವೂ ಕೂಡ ಶಾಂತಿಯು ಲಭಿಸದು. ಇವರ ವೃತ್ತಿಯು ಯಾವಾಗಲೂ ಕೆಟ್ಟ ವಿಚಾರಗಳಲ್ಲಿಯೇ ತೊಡಕಿಕೊಂಡಿರುವುದು. ಇಂತಹ ಸ್ವಭಾವವು ಅತಿನೀಚವಾಗಿರುವುದು ॥೨೨೬॥ ಪ್ರಾಪ್ತ ಭೋಗಗಳಲ್ಲಿ ಆತನಿಗೆ ಎಂದಿಗೂ ತೃಪ್ತಿಯಾಗುವುದಿಲ್ಲ. ಕಂಡ, ಕೇಳಿದ ಭೋಗಗಳತ್ತ ಆತನು ನಿರಂತರವಾಗಿ ಧಾವಿಸುತ್ತಿರುವನು. ಇಂತಹ ಸ್ವಭಾವವು ಅತಿನೀಚವಾಗಿರುವುದು ॥೨೨೭॥ ಹೇ ಉದ್ಧವನೇ, ನಿನಗೆ ಹೇಳಿದ ಈ ಎಂಟು ಗುಣಗಳು ಯಾರ ವೃತ್ತಿಯಲ್ಲಿರುವುವೋ, ಅವನು ಯಾವುದೇ ವರ್ಣದಲ್ಲಿರಲಿ ಅವನ ಅಂಗದಲ್ಲಿ ಅಂತ್ಯಜತ್ವವು ಇದೆ ಎಂದು ತಿಳಿಯಬೇಕು ॥೨೨೮॥ ಈ ಯಾವ ಹೇಳಿರುವ ಅವಗುಣಗಳಲ್ಲಿ ಪ್ರತಿಯೊಂದು ಅವಗುಣವು ನರಕದ ಪ್ರಾಪ್ತಿಯನ್ನು ಮಾಡಿಕೊಡುವುದು. ಅಂದಮೇಲೆ ಈ ಎಂಟೂ ಗುಣಗಳು ಒಂದುಗೂಡಿದಲ್ಲಿ ಅವನು ಭವಸಾಗರದಿಂದ ಹೇಗೆ ಬಿಡುಗಡೆಯಾಗಬೇಕು? ॥೨೨೯॥ ಹೇ ಉದ್ಧವಾ, ನಮ್ಮ ಶರೀರದ ಅವಗುಣಗಳನ್ನು ತ್ಯಜಿಸುವುದಕ್ಕಾಗಿಯೇ ನಾನು ನಿನಗೆ ಈ ಎಲ್ಲವನ್ನೂ ಸ್ಪಷ್ಟ ಮಾಡಿ ಹೇಳಿರುವೆನು ॥೨೩೦॥

ಯಾ ಗುಣಾಂತೇ ಅಂಗೀಕಾರಿತೀ । ತೇ ನರಕಗಾಮೀ ಗಾ ನಿಶ್ಚಿತೀ । ಯಾ ಗುಣಾಂತೇ ಜೇ ತ್ಯಾಗಿತೀ । ತೇ ಪಾವತೀ ಪದ ಮಾರ್ಝೇ ।।೨೩೧।। ಜೇಣೇ ಮಾರ್ಝ್ಯಾ ಪದಾಚೀ ಪ್ರಾಪ್ತೀ । ಸರ್ವಾ ವರ್ಣಾ ಉತ್ತಮ ಗತೀ । ಐಶಿಯಾ ಗುಣಾಂಚೀ ವ್ಯುತ್ಪತ್ತೀ । ಸಾಂಗೇನ ತುಜಪ್ರತೀ ಉದ್ಧವಾ ।।೨೩೨।। ಸಕಳ ಲಕ್ಷಣಾಂಚೇ ನಿಜಸಾರ । ಜೇ ಗುಹ್ಯಗುಣಾಂಚೇ ಭಾಂಡಾರ । ಜೇಣೇ ಪಾವಿಜೇ ಸಂಸಾರಪಾರ । ಐಕ ಸಾಚಾರ ಉದ್ಧವಾ ।।೨೩೩।। ಜೋ ಸರ್ವ ವರ್ಣಾಂಚಾ ಸಹಜ ಧರ್ಮ । ಜೇಣೇ ಪಾವಿಜೇ ಪರಬ್ರಹ್ಮ । ಜೇ ನಾಸಿತೀ ಚಿತ್ತಭ್ರಮ । ತೇ ಗುಣ ಉತ್ತಮ ಅವಧಾರೀ ।।೨೩೪।।

ಅಹಿಂಸಾ ಸತ್ಯಮಸ್ತೇಯಮಕಾಮಕ್ರೋಧಲೋಭತಾ ।
ಭೂತಪ್ರಿಯಹಿತೇಹಾ ಚ ಧರ್ಮೋಽಯಂ ಸಾರ್ವವರ್ಣಿಕಃ ।।೨೧।।

ಅರ್ಥ:- ಅಹಿಂಸಾವ್ರತ, ಸತ್ಯನಿಷ್ಠೆ,ಪ್ರಾಮಾಣಿಕತೆ, ಸರ್ವರೂ ಸುಖಿಯಾಗಿರಬೇಕೆಂಬ ಅಪೇಕ್ಷೆ, ಕಾಮ, ಕ್ರೋಧ, ಲೋಭ ಇತ್ಯಾದಿಗಳಿಂದ ಮುಕ್ತನಾಗಿರುವುದು. ಇದು ಸಮಾಜದ ಸಕಲರ ಕರ್ತವ್ಯಗಳು.

ಹೋ ಕಾ ಉಪಾಯೇ ಜೇಣೇ ತೇಣೇ । ಪುಢಿಲಾಸೀ ಜೇ ಸುಖ ದೇಣೇ । ತೇ ಉಪತಿಷ್ಠೆ ಮಜಕಾರಣೇ । ತೋ ಗುಣ ಮ್ಯಾ ಶ್ರೀಕೃಷ್ಣೇ ವಂದಿಜೇ ।।೨೩೫।। ತೈಸೇಂಚ ಪರಪೀಡಾ ಅಸುಖ । ಪುಢಿಲಾಂಸೀ ನ ದೇಣೇ ದುಃಖ । ತೇಣೇಹೀ ಮಜ ಹೋಯ ಸುಖ । ಜಾಣ ನಿಷ್ಟಂಕ ಉದ್ಧವಾ ।।೨೩೬।। ದುಃಖ ನೇದೂನಿ ಸುಖ ದೇಣೇ । ಯಾ ನಾಂವ ''ಅಹಿಂಸಾ'' ಮ್ಹಣಣೇ । ಹಾ ಪಹಿಲಾ ಗುಣ ಜಾಣಣೇ । ಐಕ ಲಕ್ಷಣೇ ಸತ್ಯಾಚೀ ।।೨೩೭।। ಸತ್ಯ ಜೇ ಜಾಣ ಪಾ ಐಸೇ । ಜ್ಯಾಚೇ ಮನ ವಾಚಾ ಅಸತ್ಯದೋಷೇ । ಜಾಗೃತಿಸ್ವಪ್ನಸುಷುಪ್ತಿವಶೇ । ಸ್ಪರ್ಶಲೇ ನಸೇ ಅಣುಮಾತ್ರ ।।೨೩೮।। ನಿಂದಾ ಆಣಿ ನರಸ್ತವನ । ಕದಾ ಮಿಥ್ಯಾ ನ ಬೋಲೇ ವಚನ । ವಾಚಾ ಅನಸುಟ ಧರಣೇ ಜಾಣ । ''ಸತ್ಯ'' ಸಂಪೂರ್ಣ ಯಾ ನಾಂವ ।।೨೩೯।। ಹೋ ಕಾ ಅಧರ್ಮಾಚಿಯೇ ಜೋಡೀ । ಕೋಡೀ ಧರೋನಿಯಾ ಕವಡೀ । ಜೋ ರಿಘೋ ನೇದೀ ದೃಷ್ಟೀಬುಡೀ । ಪುಟಕೀ ಕವಡೀ ಸ್ಪರ್ಶೇನಾ ।।೨೪೦।। ತೇಥೇಹೀ ಚೋರೀ ಕರಣೇ । ಕಾ ದೃಷ್ಟೀ ಚುಕವೂನಿ ವಸ್ತು ಘೇಣೇ । ಅಥವಾ ನ ಪುಸತಾ ನೇಣೇ । ಹೇ ಜೀವೇಪ್ರಾಣೇ ನ ಸಂಭವೇ ।।೨೪೧।। ಅನ್ಯಾಯೋಪಾರ್ಜಿತ ಧನ । ಸ್ವಪ್ನೀಹೀ ನಾತಳೇ ಮನ । ಹೇ ''ಅಚೌರ್ಯಾಚೇ'' ಲಕ್ಷಣ । ತಿಸರಾ ಗುಣ ಉದ್ಧವಾ ।।೨೪೨।।

ಈ ಅವಗುಣಗಳನ್ನು ಸ್ವೀಕರಿಸಿದವರು ಸಹಜವಾಗಿಯೇ ನರಕಕ್ಕೆ ತೆರಳುವರು. ಈ ಅವಗುಣಗಳನ್ನು ತ್ಯಜಿಸಿದವರು ನನ್ನ ಪದವಿಗೆ ಪ್ರಾಪ್ತರಾಗುವರು ।೨೩೧।। ಹೇ ಉದ್ಧವಾ, ಯಾವ ಗುಣಗಳ ಸಹಾಯದಿಂದ ನನ್ನ ಪದವಿಯು ಪ್ರಾಪ್ತಿಯಾಗುವುದೋ, ಹಾಗೂ ಸರ್ವ ವರ್ಣದವರಿಗೆ ಉತ್ತಮ ಗತಿಯು ದೊರಕುವುದೋ, ಅಂತಹ ಗುಣಗಳ ಪ್ರಕಾರವನ್ನು ನಾನು ನಿನಗೆ ಹೇಳುವೆನು ।೨೩೨।। ಹೇ ಉದ್ಧವಾ, ಸರ್ವಲಕ್ಷಣಗಳ ಸಾರವಾಗಿರುವ, ಗೂಢ ಗುಣಗಳ ಭಾಂಡಾರವಾಗಿರುವ, ಯಾವುದರ ಸಹಾಯದಿಂದ ನಿಜವಾಗಿಯೂ ಭವಸಾಗರದಿಂದ ಪಾರಾಗುವ, ಇವುಗಳನ್ನು ಈಗ ನೀನು ನೀಟಾಗಿ ಕೇಳು ।೨೩೩।। ಸರ್ವ ವರ್ಣಗಳ ಸ್ವಾಭಾವಿಕ ಧರ್ಮವು ಯಾವುದರಿಂದ ಪರಬ್ರಹ್ಮದ ಸಹಜ ಪ್ರಾಪ್ತಿಯಾಗುವುದೋ ಮತ್ತು ಮನಸ್ಸಿನ ಚಂಚಲತೆಯು ಇಲ್ಲದಾಗಿ ಮನಕ್ಕೆ ಅಪಾರವಾದ ಶಾಂತಿಯು ಲಭಿಸುವುದೋ, ಅದನ್ನು ಈಗ ಕೇಳು ।೨೩೪।।

ಯಾವ ಉಪಾಯಗಳಿಂದ ಇತರರಿಗೆ ಸುಖಶಾಂತಿಯು ಪ್ರಾಪ್ತವಾಗುವುದೋ, ಅಂತಹ ಉಪಾಯಗಳನ್ನು ಮಾಡಲು ಅವು ನನಗೆ ಮುಟ್ಟುವುವು. ಶ್ರೀಕೃಷ್ಣನಾದ ನಾನು ಆ ಗುಣಗಳಿಗೆ ವಂದಿಸುವೆನು ।೨೩೫।। ಅದರಂತೆಯೇ ಯಾರಿಗೂ ಯಾವ ಪ್ರಕಾರದ ಪೀಡೆಯನ್ನು ಕೊಡದ, ಇತರಿಗೆ ದುಃಖವನ್ನು ಮಾಡದ, ಇಂತಹ ಕಾರ್ಯಗಳಿಂದ ಹೇ ಉದ್ಧವಾ, ನನಗೆ ಸುಖವಾಗುತ್ತಿರುವುದು, ಇದನ್ನು ನೀನು ತಿಳಿ ।೨೩೬।। ದುಃಖವನ್ನು ಕೊಡದೇ ಸುಖವನ್ನು ಕೊಡುವುದಕ್ಕೆ ''ಅಹಿಂಸಾ'' ಎಂದು ನಾಮವಿರುವುದು. ಇದು ಮೊದಲನೆಯ ಗುಣವಾಗಿರುವುದು. ಈಗ ಎರಡನೆಯ ಗುಣವಾದ ಸತ್ಯದ ಲಕ್ಷಣವನ್ನು ಕೇಳು ।೨೩೭।। ಯಾರ ಮನಸ್ಸಿಗೆ ಮತ್ತು ವಾಣಿಗೆ ಜಾಗೃತಿ, ಸ್ವಪ್ನ, ಸುಷುಪ್ತಿಗಳಲ್ಲಿ ಅಸತ್ಯವಿಚಾರದ ಸ್ಪರ್ಶ ಸಹ ಆಗುವುದಿಲ್ಲವೋ, ಅದಕ್ಕೆ ಸತ್ಯ ಎಂದು ಕರೆಯುವರು ।೨೩೮।। ನಿಂದಾ ಮತ್ತು ನರಸ್ತುತೀ, ಸುಳ್ಳು ಹೇಳುವಿಕೆ, ಇವು ಯಾರಿಗೆ ಗೊತ್ತೇ ಇಲ್ಲವೋ, ಈ ಪ್ರಕಾರವಾಗಿ ಯಾರು ತಮ್ಮ ವಾಣಿಯನ್ನು ಮಡಿಯನ್ನಾಗಿ ಇಟ್ಟಿರುವರೋ, ಇವುಗಳಿಗೆಲ್ಲ ''ಸತ್ಯ'' ವೆಂದು ಹೇಳುವರು ।೨೩೯।। ಅಧರ್ಮದಿಂದ ಕೋಟ್ಯಾವಧಿ ಹಣವು ಪ್ರಾಪ್ತವಾಗುತ್ತಿದ್ದರೂ ಕೂಡ ಆತನು ಅದಕ್ಕೆ ಕವಡೀ ಸಮಾನವೆಂದು ಭಾವಿಸಿ ಅದರತ್ತ ಹೊರಳಿ ನೋಡುವುದಿಲ್ಲ ಅಥವಾ ಅದನ್ನು ಸ್ಪರ್ಶ ಕೂಡ ಮಾಡುವುದಿಲ್ಲ ।೨೪೦।। ಈ ಮನುಷ್ಯನು ಕಳ್ಳತನ ಮಾಡುವುದು, ಕಣ್ಣು ತಪ್ಪಿಸಿ ಬೇರೆಯವರ ವಸ್ತುಗಳನ್ನು ತೆಗೆದುಕೊಳ್ಳುವುದು, ಹೇಳದೇ ಕೇಳದೇ ವಸ್ತುಗಳನ್ನು ಒಯ್ಯುವುದು. ಈ ಕೃತ್ಯಗಳನ್ನು ಪ್ರಾಣಹೋದರೂ ಮಾಡಲಾರನು ।೨೪೧।। ಅನ್ಯಾಯದಿಂದ, ಅಧರ್ಮದಿಂದ ಗಳಿಸಿರುವ ಹಣಕ್ಕೆ ಆತನ ಮನವು ಸ್ವಪ್ನದಲ್ಲಿಯೂ ಕೂಡ ಮುಟ್ಟಲಾರದು. ಹೇ ಉದ್ಧವಾ, ಇದೊಂದು ಅಚೌರ್ಯದ ಲಕ್ಷಣವಾಗಿದೆ, ಇದು ಮೂರನೆಯ ಗುಣವಾಗಿದೆ ।೨೪೨।।

ಸ್ವಧರ್ಮೇ ಧನ ಯಾವೇ ಹಾತಾ । ಹೇಹೀ ನಸೇ ಧನಕಾಮತಾ । ಕಾಮಿನೀಕಾಮಾಚೀ ನೇಣೇ ವಾರ್ತಾ । ಪರಸ್ತ್ರೀ ತೇ ಮಾತಾ ನೇಮಸ್ತ ।।೨೪೩।। ಹೋ ಕಾ ಸ್ವದಾರಾಭಿಗಮನ । ತೇಥೇಹೀ ಆಸಕ್ತ ನಸೇ ಮನ । ಆಶ್ರಮ ಧರ್ಮಾರ್ಥ ಜಾಣ । ಪ್ರತಿಪಾಲನ ಸ್ತ್ರೀಯೇಚೇ ।।೨೪೪।। ಯಾ ನಾಂವ ಗಾ ''ಅಕಾಮತಾ'' । ಉದ್ಧವಾ ಜಾಣ ತತ್ತ್ವತಾ । ಹೇ ಚೌಥೀ ಲಕ್ಷಣತಾ । ಐಕ ಆತಾ ಅಕ್ರೋಧು ।।೨೪೫।। ಜೇಥ ಕಾಮಾಚಾ ಆದರು ನಾಹೀ । ತೇಥ ಕ್ರೋಧಾಚೇ ನ ಚಲೇ ಕಾಂಹೀ । ಜೇವೀ ಆಕಾಶಾಚೇ ಠಾಯೀ । ನ ರುಪತೀ ಪಾಹೀ ನಿಜಶಸ್ತ್ರೇ ।।೨೪೬।। ಜರೀ ಬೀಜ ಜಾಹಲೇ ಗೋಮಟೇ । ತರೀ ಭೂಮೀವೀಣ ಅಂಕುರ ನ ಫುಟೇ । ತೈಸೇ ಕಾಮಾವಾಂಚೂನಿ ಕೋಠೇ । ಕ್ರೋಧ ಉದ್ಭಟ ನ ವಾಢೇ ।।೨೪೭।। ಏವಂ ಕಾಮಾಚೀ ಜೇ ಬೋಳವಣ । ತೇಚಿ ಕ್ರೋಧಾಚೀಹೀ ಜಾಣ । ಜೈಸೇ ಗರೋದರೀಚೇ ಮರಣ । ಕರೀ ನಿರ್ದಳಣ ಗರ್ಭಾಚೇ ।।೨೪೮।। ಶಿರ ತುಟಲಿಯಾ ಪಾಠೀ । ಹಸ್ತಪಾದಾದಿ ಕ್ರಿಯಾ ನುಠೀ । ಕಾಮ ನಿಮಾಲಿಯಾಪಾಠೀ । ನಿಮಾಲೀ ಗೋಷ್ಟೀ ಕ್ರೋಧಾಚೀ ।।೨೪೯।। ಜೇಥ ಕಾಮ ಕ್ರೋಧ ನಾಹೀ । ತೇಥ ಲೋಭ ಉಠೀ ಕೋಣೇ ಠಾಯೀ । ತಳವಟೀ ನಸತಾ ಭುಯೀ । ವೃಕ್ಷ ಕಂಹೀ ವಾಢೇನಾ ।।೨೫೦।। ಶೀಸ ಬೋಡಿಲೇ ಸಕೇಶೀ । ತೇಥ ರಾಹೂ ನ ಶಕೇ ಊ ಜೈಸೀ । ತೇವೀ ಗೇಲಿಯಾ ಕಾಮಕ್ರೋಧಾಂಸೀ । ವಸ್ತೀ ಲೋಭಾಸೀ ಅಸೇನಾ ।।೨೫೧।। ಜೇವೀ ಕಾ ಭ್ರತಾರಾಚೇ ಮರಣ । ಘೇಊನಿ ಜಾಯ ಅಹೇವಪಣ । ತೇವೀ ಕಾಮಕ್ರೋಧೇವೀಣ । ಲೋಭಲಕ್ಷಣ ಅಸೇನಾ ।।೨೫೨।। ಯಾ ನಾಂವ ''ನಿರ್ಲೋಭತಾ'' । ಸತ್ಯ ಜಾಣ ಸರ್ವಥಾ । ಕ್ರೋಧಲೋಭಾಂತೇ ವಾಢವಿತಾ । ಜಾಣ ತತ್ತ್ವತಾ ಕಾಮಚೀ ।।೨೫೩।। ಜೇಥ ಕಾಮಾಚೇ ಅಪೂರ್ಣ ಕಾಜ । ತೇಥ ಕ್ರೋಧಾಚೇ ಖವಳೇ ತೇಜ । ಜೇವ್ಹಾ ಕಾಮಾಚೇ ಪೂರ್ಣ ನಿಜ । ತೇವ್ಹಾ ನಾಚೇ ಭೋಜ ಲೋಭಾಚೇ ।।೨೫೪।। ಜೇವೀ ದೀಪಾಚೇ ದೀಪಕಳಾ । ತೇ ಸವೇ ವಾಗವೀ ತೇಜಕಾಜಳಾ । ತೇವೀ ಕ್ರೋಧಲೋಭಾಂಚಾ ಸೋಹಳಾ । ಕಾಮಾಜವಳಾ ಸಂತತ ।।೨೫೫।। ಜೇವೀ ಕಾ ಶಾರಿಯಾಚೇ ಶೀತ । ಘಾಮಜ್ವರಾಸಮವೇತ । ತೇವೀ ಕ್ರೋಧಲೋಭಯುಕ್ತ । ಜಾಣ ನಿಶ್ಚಿತ ಕಾಮಚಿ ।।೨೫೬।। ಜೇಥ ಕಾಮಾಚಾ ನಾಹೀ ಪಾಂಗು । ತೋಚಿ ಕ್ರೋಧಲೋಭಾಂಚಾ ತ್ಯಾಗು । ಹಾ ಸಮೂಳ ಉಪಾವೋ ಚಾಂಗು । ಸ್ವಯೇ ಶ್ರೀರಂಗು ಬೋಲಿಲಾ ।।೨೫೭।।

ಏವಂ ಕಾಮತ್ಯಾಗೇ ಸರ್ವಥಾ । ತ್ಯಾಗು

ಸ್ವಧರ್ಮದಿಂದ ಹೇರಳವಾಗಿ ಧನಸಂಗ್ರಹಿಸಬೇಕೆಂಬ ವಿಚಾರವು ಆತನ ಅಂತಃಕರಣದಲ್ಲಿರುವುದಿಲ್ಲ. ಆತನು ಕನಕ, ಕಾಮಿನಿಯರ ಅಪೇಕ್ಷೆ ಕೂಡ ಮಾಡಲಾರನು. ಪರಸ್ತ್ರೀಯಳನ್ನು ತಾಯೀ ಸಮಾನವಾಗಿ ಭಾವಿಸುವನು ।।೨೪೩।। ಹೆಚ್ಚಿಗೇನು ಹೇಳಬೇಕು? ತನ್ನ ಸ್ವತಃ ಪತ್ನಿಯಲ್ಲಿಯೂ ಕೂಡ ಆತನ ಮನದಲ್ಲಿ ಕಾಮದ ಅತ್ಯಂತಿಕ ಲಾಲಸೆ ಇರುವುದಿಲ್ಲ. ನಿಃಸ್ವಾರ್ಥ ಪ್ರೇಮದಿಂದ ಗೃಹಸ್ಥಾಶ್ರಮದಲ್ಲಿ ಪತ್ನಿಯ ಪಾಲನೆಯನ್ನು ಮಾಡುತ್ತಿರುವನು ।।೨೪೪।। ಉದ್ಧವಾ, ಇದರ ನಾಮವೇ ''ಅಕಾಮತಾ'' ಅಂದರೆ ನಿರಿಚ್ಛತೆಯಾಗಿರುವುದು. ಇದು ನಾಲ್ಕನೆಯ ಲಕ್ಷಣವಾಗಿದೆ. ಈಗ ಅಕ್ರೋಧದ ಲಕ್ಷಣವನ್ನು ಕೇಳು ।।೨೪೫।। ಕಾಮವನ್ನು ವಶಪಡಿಸಿಕೊಳ್ಳಲು ಅಲ್ಲಿ ಕ್ರೋಧವು ಏನೂ ಮಾಡಲಾರದು. ಆಕಾಶದಲ್ಲಿ ಶಸ್ತ್ರಗಳಿಂದ ಪ್ರಹಾರ ಮಾಡಿದರೂ ನಿರರ್ಥಕವಾಗುವಂತೆ ಅದಾಗುವುದು ।।೨೪೬।। ಅಥವಾ ಎಂತಹ ಉತ್ತಮ ಬೀಜಗಳಿದ್ದರೂ ಉತ್ತಮ ಭೂಮಿಯ ಹೊರತಾಗಿ ಅವುಗಳಿಗೆ ಅಂಕುರಗಳು ಹುಟ್ಟಲಾರವು. ಅದರಂತೆ ಕಾಮವಿಲ್ಲದೇ ಕ್ರೋಧವು ಎಂದಿಗೂ ಬೆಳೆಯಲಾರದು ।।೨೪೭।। ಗರ್ಭವತಿ ಸ್ತ್ರೀಯಳು ಸಾಯುತ್ತಲೇ ಗರ್ಭದ ನಾಶವೂ ಸಹ ಆಗುವುದು. ಅದರಂತೆ ಕಾಮಕ್ಕೆ ಓಡಿಸಲು ಕ್ರೋಧವೂ ಕೂಡ ಓಡಿ ಹೋಗುವುದು ।।೨೪೮।। ತಲೆಯು ಕತ್ತರಿಸಿಬೀಳಲು ಆಗ ಕೈಕಾಲುಗಳ ಕ್ರಿಯೆಗಳೂ ಕೂಡ ನಿಂತುಹೋಗುವುವು. ಕಾಮದ ಬೇರು ಇಲ್ಲದಾಗಲು ಕ್ರೋಧವು ಹುಟ್ಟುವುದೇ ಇಲ್ಲ ।।೨೪೯।। ಎಲ್ಲಿ ಕಾಮ, ಕ್ರೋಧಗಳು ಇರುವುದಿಲ್ಲವೋ, ಅಲ್ಲಿ ಲೋಭವಾದರೂ ಹೇಗೆ ನಿರ್ಮಾಣವಾಗಬೇಕು? ಏಕೆಂದರೆ ತಳದಲ್ಲಿ ಭೂಮಿಯು ಇಲ್ಲದಿದ್ದರೆ ಕಲ್ಲಿನ ಮೇಲೆ ವೃಕ್ಷವು ಎಂದಿಗೂ ಬೆಳೆಯಲಾರದು ।।೨೫೦।। ತಲೆಯ ಮೇಲಿನ ಎಲ್ಲ ಕೂದಲುಗಳನ್ನು ಕತ್ತರಿಸಿ ಮುಂಡನ ಮಾಡಲು ಅಲ್ಲಿ ಹೇನುಗಳಿಗೆ ಹೇಗೆ ಇರಲು ಸಾಧ್ಯ ? ಅದರಂತೆ ಕಾಮ, ಕ್ರೋಧಗಳು ಹೊರಟು ಹೋಗಲು ಅಲ್ಲಿ ಲೋಭಕ್ಕೆ ವಾಸಮಾಡಲು ಸ್ಥಳಾವಕಾಶವೇ ಇರುವುದಿಲ್ಲ ।।೨೫೧।। ಪತಿಯ ಮರಣವು ಪತ್ನಿಯ ಸೌಭಾಗ್ಯವನ್ನು ಒಯ್ಯುವಂತೆ ಕಾಮಕ್ರೋಧಗಳ ಜೊತೆಯಲ್ಲಿ ಲೋಭವೂ ಕೂಡ ನಾಶಹೊಂದುವುದು ।।೨೫೨।। ಇದಕ್ಕೇನೇ ''ನಿರ್ಲೋಭತೆ'' ಎಂದು ಹೇಳುವರೆಂದು ನೀನು ತಿಳಿ. ನಿಜವಾಗಿ ನೋಡಿದರೆ ಕ್ರೋಧದ ಮತ್ತು ಲೋಭದ ಬೆಳವಣಿಗೆಗೆ ಒಂದು ಕಾಮವೇ ಕಾರಣೀಭೂತವಾಗಿರುವುದು ।।೨೫೩।। ಕಾಮವು ಪೂರ್ಣವಾಗಿ ಈಡೇರಲಿಲ್ಲದಿದ್ದರೆ, ಆಗ ಕ್ರೋಧವು ರೊಚ್ಚಿಗೇಳುವುದು. ಕಾಮನೆಯು ಪೂರ್ಣವಾಯಿತೆಂದರೆ, ಆಗ ಲೋಭದ ವೈಭವವು ನರ್ತಿಸುತ್ತಿರುವುದು ।।೨೫೪।। ದೀಪದ ಜೊತೆಯಲ್ಲಿ ಪ್ರಕಾಶ, ಕಾಡಿಗೆ ಇರುವಂತೆಯೇ ಕ್ರೋಧ, ಲೋಭಗಳು ಇವು ಕಾಮನೆಯ ಜೊತೆಯಲ್ಲಿಯೇ ಸತತವಾಗಿರುತ್ತವೆ ।।೨೫೫।। ಅಥವಾ ಮೈಮೇಲೆ ರೋಮಾಂಚನವಾಗಿ ಚಳಿಯು ಹುಟ್ಟಲು ಆಗ ಅದರ ಜೊತೆಯಲ್ಲಿಯೇ ಜ್ವರ ಮತ್ತು ಬೆವರು ಬರುತ್ತಿರುವುದು. ಅದರಂತೆ ಈ ಯಾವ ಕಾಮನೆಯು ಕ್ರೋಧ, ಲೋಭಯುಕ್ತವಾಗಿರುವುದು ।।೨೫೬।। ಎಲ್ಲಿ ಕಾಮನೆಯೇ ಇಲ್ಲದಾಗಲು ಅಲ್ಲಿ ಕ್ರೋಧ ಮತ್ತು ಲೋಭಗಳ ತ್ಯಾಗವು ಸಹಜವಾಗಿಯೇ ಆಗುವುದು. ಈ ಉತ್ತಮವಾದ ಉಪಾಯವನ್ನು ಸ್ವತಃ ಶ್ರೀಕೃಷ್ಣನೇ ಹೇಳಿದನು ।।೨೫೭।।

ಪಾವೇ ಕ್ರೋಧಲೋಭತಾ । ಭೂತಾಂಸೀ ಪ್ರಿಯತ್ವೇ ಜೇ ಹಿತತಾ । ಐಕ ತತ್ತ್ವತಾ ಸಾಂಗೇನ ।।೨೫೮।। ಜೈಶೀ ಶಕ್ತಿ ಆಪಣಾಸೀ । ತೈಸೇ ಪ್ರಿಯ ಕರಾವೇ ಭೂತಾಂಸೀ । ಅಗತ್ಯ ವಿಚಂಬು ಜ್ಯಾಚಾ ಜ್ಯಾಸೀ । ತೇ ತೇ ತ್ಯಾಸೀ ಅರ್ಪಾವೇ ।।೨೫೯।। ಅನ್ನ ವಸ್ತ್ರದಾನ ಮಾನ। ಪೋಟೀಚ್ಯಾ ಕಳವಳ್ಯಾನೇ ಜಾಣ । ಕರಾವೇ ಭೂತೀ ಪ್ರಿಯಾಚರಣ । ಹಾ ಸ್ವಧರ್ಮ ಜಾಣ ಸರ್ವಾಂಚಾ ।।೨೬೦।। ಐಸೇ ಪ್ರಿಯ ಕರಾವೇ ಭೂತಾ । ಜೇ ಪರಿಪಾಕೀ ಯೇ ತ್ಯಾಚ್ಯಾ ಹಿತಾ । ಜೇಣೇ ಪ್ರಿಯೇ ಉಪಜೇ ಬಾಧಕತಾ । ತೇ ಸರ್ವಥಾ ನ ಕರಾವೇ ।।೨೬೧।। ಜೋ ಭೂತಪ್ರಿಯ ಹಿತಕಾರೀ । ಐಸಾ ಜೋ ಪುರುಷ ಸಂಸಾರೀ । ಮೀ ಭಗವಂತ ತ್ಯಾಚ್ಯಾ ಘರೀ । ಸರ್ವ ಹಿತ ಕರೀ ಸರ್ವದಾ ।।೨೬೨।। ತ್ಯಾಚ್ಯಾ ಅಶುಭಾಂಚೀ ಹೋಳೀ । ಭೂತಹಿತ ಪ್ರಿಯಮೇಳೀ । ಮೀ ಸ್ವಯೇ ಕರೀ ವನಮಾಳೀ । ತೇಚಿ ಕಾಹೀ ತತ್ತ್ವತಾ ।।೨೬೩।। ಜೋ ಸದ್ಭಾವೇ ಸತ್ಯ ಸಾಚಾರ । ಭೂತಾಂಸೀ ಹಿತತ್ವೇ ಪ್ರಿಯಕರ । ತ್ಯಾಸೀ ಮೀ ಭೂತಾತ್ಮಾ ಶ್ರೀಧರ । ಕರೀ ಸಂಸಾರ ಸುಖರೂಪ ।।೨೬೪।। ಅಹಿಂಸಾದಿ ಸಪ್ತ ಲಕ್ಷಣ । ಹಾ ಸರ್ವಾಂಚಾ ಸ್ವಧರ್ಮ ಜಾಣ । ಸರ್ವಾಶ್ರಮ ಸರ್ವ ವರ್ಣ । ತ್ಯಾಂಸೀ ಮುಖ್ಯತ್ವೇ ಜಾಣ ಹಾ ಧರ್ಮ ।।೨೬೫।। ಚತುರ್ವರ್ಣಸ್ವಭಾವಪ್ರಕೃತೀ । ವರ್ಣಬಾಹ್ಯಾಂಚೀ ಲಕ್ಷಣಸ್ಥಿತೀ । ಸರ್ವ ವರ್ಣಾಂಚೀ ಸ್ವಧರ್ಮಗತೀ । ತೇ ಮ್ಯಾ ತುಜಪ್ರತೀ ಸಾಂಗಿತಲೀ ।।೨೬೬।। ಯಾವರೀ ಆಶ್ರಮಸ್ವಧರ್ಮತಾ । ತುಜ ಮೀ ಸಾಂಗೇನ ಆತಾ। ಉದ್ಧವಾ ಐಕ ಗಾ ತತ್ತ್ವತಾ । ಪ್ರಥಮತಾ ಬ್ರಹ್ಮಚರ್ಯ ।।೨೬೭।। ಬ್ರಹ್ಮಚರ್ಯ ದ್ವಿವಿಧ ಜಾಣ । ಏಕಾಚೇ ''ನೈಷ್ಠಿಕ'' ಸಂಪೂರ್ಣ । ಏಕ ತೋ ''ಉಪಕುರ್ವಾಣ'' । ಐಕ ಲಕ್ಷಣ ದೋಹೀಂಚೇ ।।೨೬೮।। ವ್ರತಬಂಧ ವೇದಾಧ್ಯಯನ ಜಾಹಲ್ಯಾಪಾಠೀ । ಜೋ ಪರಮಾರ್ಥೀ ಠೇವೂನಿ ದೃಷ್ಟೀ । ಗೃಹಸ್ಥಾಶ್ರಮಾಚೀ ನ ಕರೀ ಗೋಠೀ । ''ನೈಷ್ಠಿಕ'' ಪರಿಪಾಠೀ ತ್ಯಾ ನಾಂವ ।।೨೬೯।। ವೇದಶಾಸ್ತ್ರ ಸಂಪೂರ್ಣ ಪಠನ । ಗುರುದಕ್ಷಿಣಾ ವ್ರತವಿಸರ್ಜನ । ಕರೂನಿ ಕರೀ ಪಾಣಿಗ್ರಹಣ । ''ಉಪಕುರ್ವಾಣ'' ಯಾ ನಾಂವ ।।೨೭೦।।

ಒಟ್ಟಿನಲ್ಲಿ ಕಾಮದ ತ್ಯಾಗವನ್ನು ಮಾಡುತ್ತಲೇ ಕ್ರೋಧ ಮತ್ತು ಲೋಭದ ತ್ಯಾಗವಾಗುವುದು. ಈಗ ಪ್ರಾಣಿಮಾತ್ರರಿಗೆ ಪ್ರಿಯರಾಗಿ ಅವರ ಹಿತವನ್ನು ಹೇಗೆ ಸಾಧಿಸಬೇಕೆಂಬುದನ್ನು ಹೇಳುವೆ, ಕೇಳು ।೨೫೮।। ತನಗೆ ಎಷ್ಟು ಸಾಧ್ಯವೋ ಅಷ್ಟು ಪ್ರಾಣಿಮಾತ್ರರ ಹಿತವನ್ನು ಮನಸ್ಸಿನಿಂದ ಮಾಡಬೇಕು. ಯಾರಿಗೆ ಯಾವ ವಸ್ತುವಿನ ಅವಶ್ಯವಿರುವುದೋ, ಅದನ್ನು ಅವರಿಗೆ ಅರ್ಪಿಸಬೇಕು ।೨೫೯।। ಅಂತಃಕರಣದ ಕಳಕಳಿಯಿಂದ ಪ್ರಾಣಿಮಾತ್ರರಿಗೆ ಅನ್ನ, ವಸ್ತ್ರ, ದಾನ, ಮಾನ ಇತ್ಯಾದಿಗಳನ್ನು ಅರ್ಪಿಸುತ್ತಿರಬೇಕು. ಅವರಿಗೆ ಪ್ರಿಯವಾಗುವಂತೆ ಆಚರಿಸಬೇಕು. ಇದು ಸರ್ವರ ಸ್ವಧರ್ಮವಾಗಿದೆ ।೨೬೦।। ಯಾವುದರಿಂದ ಪ್ರಾಣಿಮಾತ್ರರ ಹಿತವಾಗುವುದೋ, ಅಂತಹ ಪ್ರಿಯ ಕರ್ಮಗಳನ್ನು ಮಾಡಬೇಕು. ಯಾವ ಪ್ರಿಯವು ಅವರ ಹಿತಕ್ಕೆ ಬಾಧಕವಾಗುತ್ತಿದ್ದರೆ ಅದನ್ನು ಎಂದಿಗೂ ಮಾಡಕೂಡದು ।೨೬೧।। ಅಂತಃಕರಣದಿಂದ ಪ್ರಾಣಿಮಾತ್ರರ ಪ್ರಿಯ ಮತ್ತು ಹಿತವನ್ನು ಮಾಡುವ ಸಂಸಾರೀ ಪುರುಷನ ಮನೆಯಲ್ಲಿ ಭಗವಂತನಾದ ನಾನು ಇರುವೆನು ಮತ್ತು ಸತತವಾಗಿ ಆತನ ಹಿತವನ್ನು ಮಾಡುತ್ತಿರುವೆನು ।೨೬೨।। ಆತನು ಭೂತಮಾತ್ರರ ಪ್ರಿಯ ಮತ್ತು ಹಿತವನ್ನು ಮಾಡುವವನಾಗಿರುವುದರಿಂದ ಆತನ ಮೇಲೆ ಯಾವುದೇ ಸಂಕಟಗಳು ಒದಗಲು ನಾನು ಆ ಸಂಕಟಗಳನ್ನು ಸುಟ್ಟು ಹಾಕುವೆನು ।೨೬೩।। ಯಾವನು ಸದ್ಭಾವನೆಯಿಂದ ಪ್ರಾಣಿಮಾತ್ರರ ಹಿತವನ್ನು ಮಾಡುತ್ತಿರುವನೋ, ಅವನು ಸರ್ವಪ್ರಾಣಿಗಳಲ್ಲಿ ಪ್ರಿಯಕರನಾಗಿರುವನು. ಆತನಿಗೆ ಸರ್ವರ ಹೃದಯದಲ್ಲಿರುವ ನಾನು ಪರಮಾತ್ಮನು ಆತನ ಸರ್ವ ಸಂಸಾರವನ್ನು ಸುಖರೂಪವನ್ನಾಗಿ ಮಾಡುವೆನು ।೨೬೪।। ಅಹಿಂಸಾ ಮೊದಲು ಮಾಡಿ ಏಳು ಗುಣಗಳನ್ನು ಈ ಶ್ಲೋಕದಲ್ಲಿ ಹೇಳಿರುವುದು. ಇವು ಸರ್ವರ ಸ್ವಧರ್ಮವು ಸರ್ವ ವರ್ಣಗಳ ಮತ್ತು ಸರ್ವ ಆಶ್ರಮದವರಿಗೆ ಪ್ರಾಮುಖ್ಯವಾಗಿ ಇದೇ ಧರ್ಮವಾಗಿರುವುದು ।೨೬೫।। ನಾಲ್ಕೂ ವರ್ಣಗಳ ಪ್ರಕೃತಿ ಸ್ವಭಾವ, ವರ್ಣ, ಬಾಹ್ಯಸ್ಥಿತಿ ಮತ್ತು ಲಕ್ಷಣಗಳನ್ನು ಹಾಗೂ ಸರ್ವ ವರ್ಣಗಳ ಸ್ವಧರ್ಮಗತಿ ನಾನು ನಿನಗೆ ಹೇಳಿದೆನು ।೨೬೬।। ಹೇ ಉದ್ಧವಾ, ನಾನೀಗ ನಿನಗೆ ಆಶ್ರಮದ ಧರ್ಮವನ್ನು ಸವಿಸ್ತಾರವಾಗಿ ಹೇಳುವೆನು. ಪ್ರಾರಂಭದಲ್ಲಿ ಬ್ರಹ್ಮಚರ್ಯ ಲಕ್ಷಣವನ್ನು ಶ್ರವಣ ಮಾಡು ।೨೬೭।। ಬ್ರಹ್ಮಚರ್ಯವು ಎರಡು ಪ್ರಕಾರವಾಗಿ ಇರುವುದು. ಒಂದರ ನಾಮವು ಪೂರ್ಣ ನೈಷ್ಠಿಕ ಮತ್ತು ಇನ್ನೊಂದು ಉಪಕುರ್ವಾಣ ಬ್ರಹ್ಮಚರ್ಯವಾಗಿದೆ. ಈ ಎರಡರ ಲಕ್ಷಣಗಳನ್ನು ಕೇಳು ।೨೬೮।। ಮುಂಜಿಯಾಗಿ ವೇದಾಧ್ಯಯನವಾದ ನಂತರ ಯಾವನು ಪರಮಾರ್ಥಕ್ಕೆ ಪೂರ್ಣವಾಗಿ ಅಂಟಿಕೊಂಡು ಗೃಹಸ್ಥಾಶ್ರಮದ ಹೆಸರೆತ್ತುವುದಿಲ್ಲವೋ ಆತನಿಗೆ ''ನೈಷ್ಠಿಕಬ್ರಹ್ಮಚಾರೀ'' ಎನ್ನುವರು ।೨೬೯।। ವೇದಾಧ್ಯಯನವಾದ ನಂತರ ಬ್ರಹ್ಮಚರ್ಯಕ್ಕೆ ಸಮಾಪ್ತಿ ಮಾಡಿ ವಿವಾಹ ಮಾಡಿಕೊಂಡು ಗೃಹಸ್ಥಾಶ್ರಮವನ್ನು ಪ್ರಾರಂಭಿಸುವಾತನಿಗೆ ಉಪಕುರ್ವಾಣವೆನ್ನುವರು ।೨೭೦।।

ದ್ವಿತೀಯಂ ಪ್ರಾಪ್ಯಾನುಪೂರ್ವ್ಯಾಜ್ಜನ್ಮೋಪನಯನಂ ದ್ವಿಜಃ । ವಸಂಗುರುಕುಲೇ ದಾಂತೋ ಬ್ರಹ್ಮಾಽಧೀಯೀತ ಚಾಹೂತಃ ॥೨೨॥

ಮೇಖಲಾಽಜಿನದಂಡಾಕ್ಷಬ್ರಹ್ಮಸೂತ್ರಕಮಂಡಲೂನ್ । ಜಟಿಲೋಽಧೌತದದ್ವಾಸೋಽರಕ್ತಪೀಠಃ ಕುಶಾನ್ ದಧತ್ ॥೨೩॥

ಸ್ನಾನಭೋಜನಹೋಮೇಷು ಜಪೋಚ್ಚಾರೇ ಚ ವಾಗ್ಯತಃ । ನ ಚ್ಛಿಂದ್ಯಾನ್ನಖರೋಮಾಣಿ ಕಕ್ಷೋಪಸ್ಥಗತಾನ್ಯಪಿ ॥೨೪॥

ಅರ್ಥ:- ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಇವರು ಗರ್ಭದಾನ ಇತ್ಯಾದಿ ಸಂಸ್ಕಾರದಿಂದ ಕ್ರಮವಾಗಿ ಯಜ್ಞೋಪವೀತ ಸಂಸ್ಕಾರ ರೂಪ ಎರಡನೆಯ ಜನ್ಮ ಪ್ರಾಪ್ತಮಾಡಿಕೊಂಡು ಗುರುಕುಲದಲ್ಲಿರಬೇಕು. ತಮ್ಮ ಇಂದ್ರಿಯಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕು. ಆಚಾರ್ಯರು ಅಧ್ಯಯನಕ್ಕಾಗಿ ಕರೆ ನೀಡಲು ಅವರಲ್ಲಿ ಹೋಗಿ ವೇದದ ಅಧ್ಯಯನ ಮಾಡಬೇಕು ಮತ್ತು ಅರ್ಥದ ವಿಚಾರವನ್ನು ಮಾಡಬೇಕು. ಆಯಾ ವರ್ಣಗಳಿಗೆ ಉಚಿತವಾಗಿರುವ ಮೇಖಲಾ, ಅಜಿನ, ದಂಡ, ಜಪಮಾಳಾ, ಯಜ್ಞೋಪವೀತ, ಕಮಂಡಲ, ಇವು ಗಳನ್ನು ಧರಿಸುವವನು ಅಭ್ಯಂಗಾದಿ ಮಾಡದಿರುವುದರಿಂದ ಆತನ ಕೇಶಗಳಿಗೆ ಜಡೆ ಬಂದಿರುವುವು. ಆತನು ಗೃಹಸ್ಥರಂತೆ ಹಲ್ಲು ಮತ್ತು ವಸ್ತ್ರಗಳನ್ನು ತೊಳೆದಿರುವುದಿಲ್ಲ ಮತ್ತು ಆತನು ತನ್ನ ಆಸನವನ್ನು ರಂಗುಗೊಳಿಸಿರುವುದಿಲ್ಲ. ಪವಿತ್ರಾದಿ ನಿಮಿತ್ತದಿಂದ ದರ್ಭದ ಧಾರಣೆಯನ್ನು ಮಾಡಿರುವನು. ಸ್ನಾನ, ಭೋಜನ, ಹವನ, ಜಪ ಮತ್ತು ಮಲಮೂತ್ರ ವಿಸರ್ಜನೆಯ ವೇಳೆಯಲ್ಲಿ ಮೌನವನ್ನು ಧರಿಸಬೇಕು. ಖಾಕಾ ಮತ್ತು ಇತರ ಗುಪ್ತ ಇಂದ್ರಿಯಗಳ ಕೇಶಗಳನ್ನು ಮತ್ತು ಉಗುರುಗಳನ್ನು ಕತ್ತರಿಸಬಾರದು.

ಗರ್ಭಾಧಾನ ಪುಂಸವನ । ಜಾತಕರ್ಮ ಅನ್ನಪ್ರಾಸನ । ಹೀ ಸಮಸ್ತ ಕರ್ಮೇ ಪೂರ್ವೀ ಜಾಣ । ಕೇಲೀ ಸಂಪೂರ್ಣ ಚೌಲಾಂತ ॥೨೭೧॥ ಯಾ ಉಪರೀ ಉಪನಯನ । ಗುರುದ್ವಾರಾ ಗಾಯತ್ರೀಗ್ರಹಣ । ಸಾವಿತ್ರಜನ್ಮ ಹೇ ಸಂಪೂರ್ಣ । "ವ್ರತಬಂಧ" ಜಾಣ ಯಾ ನಾಂವ ॥೨೭೨॥ ಏವಂ ಗಾಯತ್ರೀಮಂತ್ರ ಜಾಣ । ದ್ವಿಜನ್ಮೇ ಹೋತೀ ತೀನೀ ವರ್ಣ । ಹಾ ಬ್ರಹ್ಮಚರ್ಯಾಶ್ರಮ ಸಂಪೂರ್ಣ । ವ್ರತಧಾರಣ ವೇದಾರ್ಥ ॥೨೭೩॥ ತೇಥೇ ವೇದಾಧ್ಯಯನ ನಿರ್ಧಾರೀ । ಗುರುಗೃಹೀ ವಸೇ ಬ್ರಹ್ಮಚಾರೀ । ತ್ಯಾಚ್ಯಾ ವ್ರತನೇಮಾಚೀ ಕುಸರೀ । ಐಕ ತೇ ಪರೀ ಸಾಂಗೇನ ॥೨೭೪॥ ಮುಂಜೀ ಜಾನವೇ ಕೃಷ್ಣಾಜಿನ । ಪಳಸಾಚೇ ದಂಡಗ್ರಹಣ । ಕಮಂಡಲು ವಾಗವಾವಾ ಜಾಣ। ಜಳಾಚರಣ ಕರಾವಯಾ ॥೨೭೫॥ ನ ಕರಾವೇ ಮಸ್ತಕವಪನ । ನ ಕರಾವೇ ತೈಲಾಂಭ್ಯಂಗಸ್ನಾನ । ನ ಕರಾವೇ ದಂತಧಾವನ । ಕೇಶವಿಂಚರಣ ನ ಕರಾವೇ ॥೨೭೬॥ ನ ಕರಾವೇ ನಖನಿಕೃಂತನ । ನ ಕರಾವೇ ರೋಮಚ್ಛೇದನ । ಬಾಹುಮೂಲಾದಿಕ ಜೇ ಜಾಣ । ಗುಹ್ಯಸ್ಥಾನ ಅತಿವ್ಯಾಪ್ತ ॥೨೭೭॥ ರಜಕಕ್ಷಾಳಿತ ವಸ್ತ್ರೇ ಜಾಣ । ತ್ಯಾಚೇ ನ ಕರಾವೇ ಪರಿಧಾನ । ಪ್ರವಾಹೀ ಕರಾವೇ ಸ್ನಾನ । ಪ್ರಾತರ್ಮಧ್ಯಾನ್ಹದೋಹೀ ಕಾಳೀ ॥೨೭೮॥ ಆಸನೀ ಶ್ವೇತ ಪೀಠಾಸನ । ಶ್ವೇತ ವಸ್ತ್ರಾಂಚೇ ಧಾರಣ । ರುದ್ರಾಕ್ಷ ಅಥವಾ ಪದ್ಮಾಕ್ಷ ಜಾಣ । ಮಾಲಾಗ್ರಹಣ ಜಪಾರ್ಥ ॥೨೭೯॥ ಕುಶಾದಿ ದರ್ಭ ಪವಿತ್ರ । ತಿಹೀ ಯುಕ್ತ ಅಸಾವೇ ಕರ । ಐಕ ಮೌನಾಚಾ ವಿಚಾರ । ತುಜ ಮೀ ಸಾಚಾರ ಸಾಂಗೇನ ॥೨೮೦॥ ಮಳಮೂತ್ರ, ಕಾ ಕರಿತಾ ಸ್ನಾನ । ಜಪ ಹೋಮ ಆಣಿ ಭೋಜನ । ಉಭಯ

ಗರ್ಭದಾನ, ಪುಂಸವನ, ಜಾತಕರ್ಮ, ಅನ್ನಪ್ರಾಶನ ಈ ಎಲ್ಲ ಕರ್ಮಗಳು ಚೌಲಾಕರ್ಮದವರೆಗೆ ಈ ಯಾವ ಶಾಸ್ತ್ರಸಿದ್ಧ ಧಾರ್ಮಿಕ ಸಂಸ್ಕಾರವು ಪೂರ್ವದಲ್ಲಿಯೇ ಆಗಿರುವುದು ॥೨೭೧॥ ತದನಂತರ ಉಪನಯನ, ಗುರುಮುಖದಿಂದ ಗಾಯತ್ರೀ ಮಂತ್ರದ ಸ್ವೀಕಾರವಾಯಿತೆಂದರೆ ಆತನ ಎರಡನೆಯ "ಸಾವಿತ್ರ" ಜನ್ಮವಾಗುವುದು. ಇದಕ್ಕೆ ವ್ರತಬಂಧ ಎಂದು ಹೇಳುವರು ॥೨೭೨॥ ಈ ಪ್ರಕಾರವಾಗಿ ಗಾಯತ್ರೀ ಮಂತ್ರದಿಂದ ಮೂರೂ ವರ್ಣಗಳ ಎರಡು ಎರಡು ಸಾರೆ ಜನ್ಮಗಳಾಗುವುವು. ಇದು ಬ್ರಹ್ಮಚರ್ಯಾಶ್ರಮವಾಗಿರುವುದು. ಈ ವ್ರತಧಾರಣೆಯು ಕೇವಲ ವೇದದ ಅಧ್ಯಯನಕ್ಕಾಗಿಯೇ ಇರುವುದು ॥೨೭೩॥ ಆದ್ದರಿಂದ ವೇದದ ಅಧ್ಯಯನವನ್ನು ಮಾಡುವ ನಿಮಿತ್ತದಿಂದ ಬ್ರಹ್ಮಚಾರಿಯಾದವನು ಗುರುಗಳ ಮನೆಯಲ್ಲಿಯೇ ಇರುವನು. ಅಲ್ಲಿನ ವ್ರತ ಮತ್ತು ನಿಯಮಗಳ ಪ್ರಕಾರವನ್ನು ಹೇಳುವೆನು, ಕೇಳು ॥೨೭೪॥ ಬ್ರಹ್ಮಚಾರಿಯು ನಡುವಿಗೆ ಒಂದು ಪ್ರಕಾರದ ಹುಲ್ಲಿನ ಉಡುದಾರವನ್ನು ಕಟ್ಟಿಕೊಳ್ಳಬೇಕು. ಜನಿವಾರ ಧರಿಸಬೇಕು. ಚಿಗರಿಚರ್ಮ, ಮುತ್ತಲ ಮರದ ದಂಡ ಮತ್ತು ನೀರನ್ನು ಕುಡಿಯುವುದಕ್ಕಾಗಿ ಕಮಂಡಲ ಇತ್ಯಾದಿ ವಸ್ತುಗಳನ್ನು ಉಪಯೋಗಿಸಬೇಕು ॥೨೭೫॥ ಆತನು ತಲೆಯ ಮೇಲಿನ ಕೂದಲುಗಳನ್ನು ಕತ್ತರಿಸಬಾರದು. ತಲೆಗೆ ತೈಲ ಹಚ್ಚಿಕೊಂಡು ಮಂಗಲ ಸ್ನಾನವನ್ನು ಮಾಡಬಾರದು. ದಂತಮಂಜನಗಳಿಂದ ಹಲ್ಲುಗಳನ್ನು ತಿಕ್ಕಬಾರದು. ಸುಗಂಧ ತೈಲ ಹಚ್ಚಿ ತಲೆಯನ್ನು ಬಾಚಿಕೊಳ್ಳಬಾರದು ॥೨೭೬॥ ಉಗುರುಗಳನ್ನು ಕತ್ತರಿಸಬಾರದು. ಶರೀರದ ಯಾವುದೇಭಾಗಗಳ ಕೇಶಗಳನ್ನು ಕೊಯ್ಯಬಾರದು. ಕೊಂಕಳದಲ್ಲಿನ ಮತ್ತು ಗುಪ್ತಾಂಗಗಳಲ್ಲಿ ಬೆಳೆದ ಕೇಶಗಳನ್ನು ಹಾಗೆಯೇ ಇಡಬೇಕು ॥೨೭೭॥ ಅಗಸನು ತೊಳೆದು ಕೊಟ್ಟ ಬಟ್ಟೆಗಳನ್ನು ಎಂದಿಗೂ ತೊಡಬಾರದು. ಮುಂಜಾನೆ ಮತ್ತು ಮಧ್ಯಾಹ್ನ ಎರಡೂ ವೇಳೆಯಲ್ಲಿ ಹರಿಯುವ ನದಿಯ ಸ್ನಾನವನ್ನು ಮಾಡಬೇಕು ॥೨೭೮॥ ಶುಭ್ರ ಆಸನದ ಮೇಲೆ ಬಿಳಿ ವಸ್ತ್ರವನ್ನು ಹಾಕಬೇಕು. ರುದ್ರಾಕ್ಷಿಯ ಅಥವಾ ಕಮಲ ಬೀಜಗಳ ಮಾಲೆಯನ್ನು ಜಪ ಮಾಡುವುದಕ್ಕಾಗಿ ಹತ್ತಿರ ಇಟ್ಟುಕೊಳ್ಳಬೇಕು ॥೨೭೯॥ ಕುಶ ಮೊದಲು ಮಾಡಿ ಪವಿತ್ರ, ದರ್ಭವು ಕೈಯಲ್ಲಿರಬೇಕು. ಈಗ ಆತನ ಮೌನದ ವಿಚಾರವನ್ನು ನಿನಗೆ ಹೇಳುವೆನು, ಕೇಳು ॥೨೮೦॥ ಮಲವಿಸರ್ಜನೆ, ಸ್ನಾನ, ಜಪ, ಹೋಮ ಮತ್ತು ಭೋಜನ ಈ ಪ್ರಸಂಗಗಳಲ್ಲಿ ಮತ್ತು ಮುಂಜಾನೆ, ಸಾಯಂಕಾಲಗಳಲ್ಲಿ ಸಂಧ್ಯಾ ಕರ್ಮ ಮಾಡುತ್ತಿರುವಾಗ ನಿಯಮಿತವಾಗಿ ಮೌನವ್ರತವನ್ನು ಧರಿಸಬೇಕು ॥೨೮೧॥

ಸಂಧ್ಯಾಕಾಳೀ ಜಾಣ । ನಿಶ್ಚಿತ ಮೌನ ಧರಾವೇ ।।೨೮೧।।
ನಾಹೀ ಅಭ್ಯಂಗ ಕೇಶವಿಂಚರಣ । ತೇಣೇ ಜಟಾ ವಳಲ್ಯಾ ಆಪಣ । ಹೇ ಬ್ರಹ್ಮ ಚಾರಿ ಯಾಸೀ ಜಾಣ । ವ್ರತಧಾರಣ ನೇಮಸ್ತ ।।೨೮೨।। ಇತುಕೇನಿ ವ್ರತೇಸೀ ಜಾಣ । ಸದಾ ಗುರುಸೇವೇಸೀ ಸಾವಧಾನ । ಗುರುಕೃಪೇನೇ ಸಾಂಗೇ ಅಧ್ಯಯನ । ತೇವ್ಹಾ ವೇದಪಠನ ಕರಾವೇ ।।೨೮೩।। ಮಜ ಪಡೋ ಸಾಂಗಾವೇ ಆತಾ । ಹಾ ಆಗ್ರಹ ನ ಕರಾವಾ ಗುರುನಾಥಾ । ತ್ಯಾಚೀ ಆಜ್ಞಾ ವಂದೂನಿ ಮಾಥಾ । ನಿಷ್ಕಪಟತಾ ಗುರುಸೇವಾ ।।೨೮೪।। ಅಧ್ಯಯನ ಸಾಂಗೇನಾ ಲವಲಾಹ್ಯ । ತರೀ ಸಾಂಡೂನಿ ಕುಲಾಚಾರ್ಯಾ । ಪಢೋ ಗೇಲಿಯಾ ಆಣಿಕಾ ಠಾಯಾ । ಗುರು ತ್ಯಾಗಿಲಿಯಾ ಮಹಾದೋಷ ।।೨೮೫।। ಸೇವಾ ಕರಾವೀ ಅಹರ್ನಿಶೀ । ಜೇಣೇ ಕೃಪಾ ಉಪಜೇ ಸ್ವಾಮೀಸೀ । ತೇ ಕೃಪೇಸ್ತವ ಅಧ್ಯಯನಾಸೀ। ಅಹರ್ನಿಶೀ ಸಾಂಗೇಲ ।।೨೮೬।। ಠೇವೂನಿ ಗುರುಚರಣೀ ಭಾವಾರ್ಥಾ । ಪಢಾವೇ ಗಾ ವೇದಶಾಸ್ತ್ರಾರ್ಥಾ । ಆಕಳಾವೇ ವೇದತತ್ತ್ವಾರ್ಥಾ । ಪರಮಾರ್ಥತಾ ನಿಜಬುದ್ಧೀ ।।೨೮೭।।

ರೇತೋ ನಾವಕಿರೇಜ್ಜಾತು ಬ್ರಹ್ಮವ್ರತಧರಃ ಸ್ವಯಮ್ । ಅವಕೀರ್ಣೇಽವಗಾಹ್ಯಾಪ್ಸು ಯತಾಸುಸ್ತ್ರಿಪದಾಂ ಜಪೇತ್ ।।೨೫।।

ಅರ್ಥ:- ಬ್ರಹ್ಮಚರ್ಯ ವ್ರತವನ್ನು ಆಚರಿಸುವವನು ವೀರ್ಯಸ್ಖಲನವನ್ನು ಮಾಡಬಾರದು. ಅಕಸ್ಮಾತ್ತಾಗಿ ವೀರ್ಯವು ಸ್ವಯಮೇವ ಸ್ಖಲನಗೊಂಡರೆ ಬ್ರಹ್ಮಚಾರಿಯು ತಕ್ಷಣ ಸ್ನಾನ ಮಾಡಿ ಪ್ರಾಣಾಯಾಮದ ಮೂಲಕ ಶ್ವಾಸವನ್ನು ನಿಗ್ರಹಿಸಿ ಗಾಯತ್ರೀ ಮಂತ್ರವನ್ನು ಜಪಿಸಬೇಕು.

ಯಾ ರೀತೀ ಬ್ರಹ್ಮಚಾರೀ ದೇಖ । ವೀರ್ಯತ್ಯಾಗ ಬುದ್ಧಿಪೂರ್ವಕ । ಕರೂ ನಯೇ ಆವಶ್ಯಕ । ವ್ರತ ವಿಶೇಷ ಬ್ರಹ್ಮಚರ್ಯ ।।೨೮೮।। ಸ್ವಪ್ನೀ ಜಾಹಲ್ಯಾ ವೀರ್ಯಪತನ । ಶಾಸ್ತ್ರೋಕ್ತವಿಧೀ ಕರಾವೇ ಸ್ನಾನ । ಮಗ ಪ್ರಾಯಶ್ಚಿತ್ತಾರ್ಥ ಜಾಣ । ಗಾಯತ್ರೀಸ್ಮರಣ ಕರಾವೇ ।।೨೮೯।। ಬ್ರಹ್ಮಚಾರೀ ವಾನಪ್ರಸ್ಥ ಸನ್ಯಾಸೀ । ಪ್ರಯತ್ನೇ ವೀರ್ಯತ್ಯಾಗು ನಾಹೀ ತ್ಯಾಂಸೀ । ಜೋ ಕರೀ ತೋ ಅತಿದೋಷೀ । ಆಶ್ರಮಧರ್ಮಾಸೀ ಬುಡವಿಲೇ ।।೨೯೦।।ಸ್ವಪ್ನೀ ಜಾಹಲಿಯಾ ವೀರ್ಯಪತನ । ಕರಾವೇ ಮೃತ್ತಿಕಾ ಸಚೈಲ ಸ್ನಾನ । ಮಗ ಪ್ರಾಯಶ್ಚಿತ್ತಾರ್ಥ ಜಾಣ । ವಿಹಿತಾಚರಣ ಜಪ ಕೀಜೇ ।।೨೯೧।।

ಅಗ್ನ್ಯರ್ಕಾಚಾರ್ಯಗೋವಿಪ್ರಗುರು ವೃದ್ಧಸುರಾನ್ ಶುಚಿಃ । ಸಮಾಹಿತ ಉಪಾಸೀತ ಸಂಧ್ಯೇಚ ಯತವಾಗ್ ಜಪನ್ ।।೨೬।।

ಅರ್ಥ:- ಬ್ರಹ್ಮಚಾರಿಯು ಪವಿತ್ರತೆಯಿಂದ ಏಕಾಗ್ರಚಿತ್ತದಿಂದ ಅಗ್ನೀ, ಸೂರ್ಯ, ಆಚಾರ್ಯ, ಗೋವು, ಬ್ರಾಹ್ಮಣ, ಗುರು,

---

ಎಣ್ಣೆ ಹಚ್ಚಿಕೊಂಡು ಅಭ್ಯಂಗಸ್ನಾನವನ್ನು ಮಾಡಕೂಡದು.ತಲೆ ಕೂದಲುಗಳನ್ನು ಬಾಚಬಾರದು. ಇದರಿಂದ ಆತನ ಕೂದಲುಗಳಿಗೆ ಸಹಜವಾಗಿಯೇ ಜಡೆಯು ಬೆಳೆಯುವುದು. ಇದು ಬ್ರಹ್ಮಚಾರಿಯರ ನೇಮಿಸಿದ ವ್ರತವಾಗಿರುವುದು ।।೨೮೨।। ಈ ವ್ರತಗಳಿಂದ ಯುಕ್ತನಾಗಿ ಆತನು ಯಾವಾಗಲೂ ಗುರುಸೇವೆಯಲ್ಲಿ ತತ್ಪರನಾಗಬೇಕು. ಗುರುಗಳು ಕೃಪೆ ಮಾಡಿ ಎಂದು ಪಾಠ ಹೇಳಿಕೊಡುವರೋ, ಆಗ ವೇದಪಠಣೆಯನ್ನು ಮಾಡಬೇಕು ।।೨೮೩।। ನನಗೆ ಈಗಲೇ ಪಾಠವನ್ನು ಹೇಳಿರಿ ಎಂದು ಈ ಪ್ರಕಾರದ ಆಗ್ರಹವನ್ನು ಎಂದಿಗೂ ಮಾಡಬಾರದು. ಅವರ ಆಜ್ಞೆಯಂತೆ ವರ್ತಿಸುತ್ತ ನಿಷ್ಕಪಟ ಭಾವದಿಂದ ಗುರುಸೇವೆಯನ್ನು ಮಾಡಬೇಕು ।।೨೮೪।। ಗುರುಗಳ ತೀವ್ರಗತಿಯಲ್ಲಿ ಅಭ್ಯಾಸಕ್ರಮವನ್ನು ಪೂರ್ಣ ಮಾಡುವುದಿಲ್ಲವೆಂದು ತಿಳಿಯುತ್ತ ತನ್ನ ಆಶ್ರಮದ ಗುರುಗಳನ್ನು ತ್ಯಜಿಸಿ ಬೇರೆ ಆಶ್ರಮದ ಗುರುಗಳತ್ತ ಹೋಗಕೂಡದು. ತನ್ನ ಗುರುಗಳನ್ನು ತ್ಯಜಿಸುವುದು ಮಹಾದೋಷವಾಗುವುದು ।।೨೮೫।। ಗುರುಗಳ ಹೃದಯದಲ್ಲಿ ಕೃಪೆಯು ಹುಟ್ಟುವಂತೆ ಅವರ ಸೇವೆಯನ್ನು ಹಗಲು ರಾತ್ರಿ ಮಾಡಬೇಕು. ಅಂದರೆ ಅವರೇ ಹಗಲು ರಾತ್ರಿ ಅನ್ನದೇ ಸತತವಾಗಿ ಪಾಠಗಳನ್ನು ಕಲಿಸುವರು ।।೨೮೬।। ಭಕ್ತಿಭಾವನೆಯಿಂದ ಗುರುಗಳ ಚರಣಗಳಲ್ಲಿ ಮಸ್ತಕವನ್ನಿಟ್ಟು ವೇದಶಾಸ್ತ್ರಗಳ ಸಖೋಲ ಅಭ್ಯಾಸವನ್ನು ಮಾಡಬೇಕು. ತನ್ನ ಸದ್ಬುದ್ಧಿಯಿಂದ ವೇದದಲ್ಲಿನ ಸೂತ್ರಗಳನ್ನು ತಿಳಿದುಕೊಳ್ಳಬೇಕು ।।೨೮೭।।

ಈ ಪ್ರಕಾರವಾಗಿ ಬ್ರಹ್ಮಚರ್ಯದ ವ್ರತವನ್ನು ಪಾಲಿಸಬೇಕು. ಆತನು ಬುದ್ಧಿಪೂರ್ವಕವಾಗಿ ವೀರ್ಯತ್ಯಾಗವನ್ನು ಎಂದಿಗೂ ಮಾಡಬಾರದು. ಇದೇ ಬ್ರಹ್ಮಚರ್ಯ ಪಾಲನೆಯ ಮುಖ್ಯವಾದ ವ್ರತವಾಗಿದೆ ।।೨೮೮।। ಒಂದುವೇಳೆ ಸ್ವಪ್ನದಲ್ಲಿ ವೀರ್ಯಪತನವಾದರೆ ಶಾಸ್ತ್ರದಲ್ಲಿನ ವಿಧಿಪೂರ್ವಕವಾಗಿ ಸ್ನಾನವನ್ನು ಮಾಡಬೇಕು ಮತ್ತು ಪ್ರಾಯಶ್ಚಿತ್ತಕ್ಕಾಗಿ ಗಾಯತ್ರೀ ಮಂತ್ರದ ಜಪ ಮಾಡಬೇಕು ।।೨೮೯।। ಬ್ರಹ್ಮಚಾರೀ, ವಾನಪ್ರಸ್ಥ, ಅಥವಾ ಸನ್ಯಾಸೀ ಇವರಿಗೆ ಪ್ರಯತ್ನ ಮಾಡಿ ವೀರ್ಯಪತನ ಮಾಡುವ ಅಧಿಕಾರವು ಇರುವುದಿಲ್ಲ. ಹೀಗಿದ್ದೂ ಕೂಡ ಯಾರು ಬ್ರಹ್ಮಚರ್ಯವನ್ನು ಪಾಲಿಸುವುದಿಲ್ಲವೋ, ಆತನಿಗೆ ಆಶ್ರಮಧರ್ಮವನ್ನು ಮುಳುಗಿಸಿದ ಮಹಾ ದೋಷವು ಬಡೆದುಕೊಳ್ಳುವುದು ।।೨೯೦।। ಆತನಿಗೆ ಸ್ವಪ್ನಾವಸ್ಥೆಯಾಯಿತೆಂದರೆ, ಆತನು ಶರೀರಕ್ಕೆ ಮಣ್ಣನ್ನು ಹಚ್ಚಿ ಸಚೈಲ ಸ್ನಾನವನ್ನು ಮಾಡಬೇಕು. ಹಾಗೆಯೇ ಪ್ರಾಯಶ್ಚಿತ್ತವೆಂದು ವಿಧಿಯುಕ್ತವಾಗಿ ಜಪವನ್ನು ಮಾಡಬೇಕು ।।೨೯೧।।

ವೃದ್ಧರು ಮತ್ತು ದೇವತೆಗಳ ಉಪಾಸನೆಯನ್ನು ಮಾಡಬೇಕು. ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಮೌನವ್ರತವನ್ನು ಧರಿಸಿ ಗಾಯತ್ರೀ ಮಂತ್ರವನ್ನು ಜಪಿಸಬೇಕು.

ಗಾಯತ್ರೀದಾತ್ಯಾ ಆಚಾರ್ಯಪಣ । ಮಾತಾ ಪಿತಾ ತೇ ಗುರುಸ್ಥಾನ । ಅಗ್ನಿಸೂರ್ಯಾದಿ ಸುರಗಣ । ಗೋ ಬ್ರಾಹ್ಮಣ ಆಣಿ ಜ್ಯೇಷ್ಠ ।।೯೨।। ಯಾಂಚೇ ಕರಾವಯಾ ಉಪಾಸನ । ಬಾಹ್ಯ ಶುಚಿ ಅಂತರೀ ಸಮಾಧಾನ । ಗುರುಚರಣೀ ಅನನ್ಯ ಶರಣ । ಆಜ್ಞಾ ಪಾಲನ ಪಿತರಾಂಚೇ ।।೯೩।। ಅಗ್ನೀಚೇ ಠಾಯೀ ಹವನ । ಇಂದ್ರಾದಿ ದೇವಾಂಚೇ ಸ್ತವನ । ಬ್ರಾಹ್ಮಣ ತೇ ಪೂಜ್ಯಸ್ಥಾನ । ಅರ್ಘ್ಯದಾನ ಸೂರ್ಯಾಸೀ ।।೯೪।। ಜ್ಯೇಷ್ಠಾಂಸೀ ಸಾಷ್ಟಾಂಗ ನಮನ । ಗಾಯೀಸೀ ಅಂಗಕುರವಾಳಣ । ಸಾಯಂಪ್ರಾತಃಸಂಧ್ಯೇಸೀ ಮೌನ । ಮಧ್ಯಾಹ್ನೀ ಜಾಣ ಮೌನ ನಾಹೀ ।।೯೫।। ಸದ್ಗುರೂಚಾ ಸಮರ್ಥವಾದು । ಸರ್ವಾ ವರಿಷ್ಠ ಸರ್ವವಂದ್ಯು । ಜ್ಯಾಚಾ ಪ್ರತಾಪ ಪ್ರಸಿದ್ಧು । ಸ್ವಯೇ ಗೋವಿಂದು ಸಾಂಗತ ।।೯೬।।

ಆಚಾರ್ಯಂಮಾಂ ವಿಜಾನೀಯಾನ್ನಾವಮನ್ಯೇತ್ ಕರ್ಹಿಚಿತ್ । ನ ಮರ್ತ್ಯ ಬುದ್ಧ್ಯಾsಸೂಯೇತ ಸರ್ವದೇವಮಯೋ ಗುರುಃ ।।೨೭।।

ಅರ್ಥ:- ಆಚಾರ್ಯರಿಗೆ ನನ್ನ ಸ್ವರೂಪರೆಂದು ತಿಳಿಯಬೇಕು. ಅವರ ತಿರಸ್ಕಾರವನ್ನು ಎಂದಿಗೂ ಮಾಡಬಾರದು. ಅವರನ್ನು ಸಾಧಾರಣ ಮನುಷ್ಯನೆಂದು ಭಾವಿಸಿ ದೋಷ ದೃಷ್ಟಿಯನ್ನಿಡಬಾರದು. ಕಾರಣ ಗುರುವು ಸರ್ವ ದೇವತೆಗಳ ಪ್ರತಿನಿಧಿಯು.

ಜೋ ಅಂತರ್ಯಾಮೀ ಈಶ್ವರು । ಜೋ ವಿಶ್ವಾತ್ಮಾ ವಿಶ್ವಂಭರು । ಜೋ ಅನಂತ ಅಪರಂಪಾರು । ತೋ ಮೀ ಶ್ರೀಗುರು ಶಿಷ್ಯಾಚಾ ।।೯೭।। ಗುರುನಾಮಾಚೀ ಜೇ ಮಾತು । ತೋ ಮೀ ಸಾಚಾರ ಭಗವಂತು । ದೇಖೋನಿ ಭಜನಭಾವಾರ್ಥು । ಪುರವೀ ಮನೋರಥು ಶಿಷ್ಯಾಚಾ ।।೯೮।। ಜ್ಯಾ ಸದ್ಗುರೂಚ್ಯಾ ಅಂಗುಷ್ಠೀ । ಬ್ರಹ್ಮಾದಿ ದೇವಾಂಚಿಯಾ ಕೋಟೀ । ಜ್ಯಾಚ್ಯಾ ನಾಂವಾಚೀ ಗೋಠೀ । ವಂದ್ಯ ವೈಕುಂಠೀ ಕೈಲಾಸೀ ।।೯೯।। ಜ್ಯಾಚೇ ನಾಂವ ಐಕತಾ ಕಾನೀ । ಯಮ ಕಾಳ ಕಾಂಪತೀ ದೋನೀ । ಬ್ರಹ್ಮಾ ವಿಷ್ಣು ರುದ್ರ ತಿನ್ಹೀ । ಹಾತ ಜೋಡೋನಿ ತಿಷ್ಠತೀ।।೧೦೦।। ಸಕಳ ವೇದಾಂಚೇ ನಿಜಸಾರ। ತೇ ಸದ್ಗುರುಸ್ವರೂಪ ಸಾಚಾರ । ಐಸಾ ಶಿಷ್ಯಾಸೀ ನಿರ್ಧಾರ । ನಿರಂತರ ಅಸಾವಾ ।।೧೦೧।। ತ್ಯಾಸೀ ಮನುಷ್ಯ ಬುದ್ಧೀ ಆಪಣ । ಕದಾ ನ ಕರಾವೇ ಹೇಳಣ । ಗುರುನಿಂದಾ ಬೋಲತಾ ಜಾಣ। ಆಲೀ ನಾಗವಣ ಸರ್ವಾರ್ಥೀ।।೧೦೨।। ಸದ್ಗುರುನಿಂದೇಚಾ ಏಕಾಂತು। ಕರೂ ಆಲಾ ಪರಮ

ಗಾಯತ್ರೀ ಮಂತ್ರದ ಉಪದೇಶವನ್ನು ಮಾಡುವವರು ಆಚಾರ್ಯರಾಗಿರುವರು. ಮಾತಾ ಪಿತರು ಗುರುಸ್ಥಾನದವರಾಗಿರುವರು. ಅಗ್ನೀ, ಸೂರ್ಯ ಇತ್ಯಾದಿ ದೇವತೆಗಳು ಮತ್ತು ಗೋಬ್ರಾಹ್ಮಣರು ಇವರು ಅತಿಶಯ ಪೂಜ್ಯರಾಗಿರುವರು ।।೯೨।। ಈ ಸರ್ವರ ಉಪಾಸನೆಯನ್ನು ಮಾಡುವುದಕ್ಕಾಗಿ ಹೊರಗಿನ ಶುದ್ಧತೆ ಮತ್ತು ಅಂತಃಕರಣದಲ್ಲಿ ಸಮಾಧಾನದ ಅವಶ್ಯಕತೆವಿರುವುದು. ಗುರುಚರಣಗಳಿಗೆ ಅನನ್ಯಭಾವದಿಂದ ಶರಣಾಗಬೇಕು ಮತ್ತು ಮಾತಾಪಿತರರ ಆಜ್ಞೆಯ ಪಾಲನೆಯನ್ನು ಮಾಡಬೇಕು ।।೯೩।। ಅಗ್ನಿಯಲ್ಲಿ ಹವನವನ್ನು ಮಾಡಬೇಕು. ಇಂದ್ರಾದಿ ದೇವತೆಗಳ ಸ್ತವನ ಮಾಡಬೇಕು. ಬ್ರಾಹ್ಮಣರ ಪೂಜೆಯನ್ನು ಮಾಡಬೇಕು. ಸೂರ್ಯನಿಗೆ ಅರ್ಘ್ಯದಾನವನ್ನು ಕೊಡಬೇಕು ।।೯೪।। ಜೇಷ್ಠರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು. ಆಕಳಿನ ಶರೀರ ಮೇಲೆ ಪ್ರೇಮದಿಂದ ಕೈಯಾಡಿಸಬೇಕು. ಮುಂಜಾನೆ ಮತ್ತು ಸಾಯಂಕಾಲದಲ್ಲಿ ಮೌನವನ್ನು ಧರಿಸಿ ಸಂಧ್ಯಾ ಮಾಡಬೇಕು. ಮಧ್ಯಾಹ್ನದ ಸಂಧ್ಯಾದಲ್ಲಿ ಮೌನವನ್ನು ಧರಿಸದಿದ್ದರೂ ನಡೆಯುವುದು ।।೯೫।। ಸದ್ಗುರುಗಳು ಜೀವನದ ಅರ್ಥವನ್ನು ಬಿಡಿಸಿ ಹೇಳುವರು. ಆದ್ದರಿಂದ ಅವರು ಎಲ್ಲರಕ್ಕಿಂತಲೂ ವರಿಷ್ಠರಾಗಿರುವರು ಮತ್ತು ಸರ್ವ ವಂದ್ಯರಾಗಿರುವರು. ಇದನ್ನು ಸ್ವತಃ ಶ್ರೀಕೃಷ್ಣನು ಇವರ ಪ್ರಭಾವದ ವರ್ಣನೆಯನ್ನು ಮಾಡುತ್ತಿರುವನು ।।೯೬।।

ಅಂತರ್ಯಾಮಿಯಾಗಿರುವ ಈಶ್ವರ, ವಿಶ್ವಾತ್ಮಾ, ವಿಶ್ವಂಭರ, ಅನಂತ ಮತ್ತು ಅಪರಂಪಾರನಾದ ನಾನೇ ವಿಶ್ವದ ಗುರುವಾಗಿರುವೆನು ।।೯೭।। ಗುರುನಾಮದಲ್ಲಿರುವ ಸರ್ವ ಪ್ರಭಾವವು ನಾನೇ ಆಗಿರುವೆನು. ಶಿಷ್ಯನ ಭಕ್ತಿಯನ್ನು ಕಂಡು ನಾನು ಆತನ ಸರ್ವ ಮನೋರಥಗಳನ್ನು ಪೂರ್ಣ ಮಾಡುವೆನು ।।೯೮।। ಆ ಯಾವ ಸದ್ಗುರುಗಳ ಪಾದದ ಹೆಬ್ಬೆರಳಿನಲ್ಲಿ ಕೋಟ್ಯಾನುಕೋಟೀ ದೇವತೆಗಳಿರುವುವು. ಆತನ ನಾಮದ ಮಹಿಮೆಯು ವೈಕುಂಠ ಕೈಲಾಸಗಳಲ್ಲಿ ವಂದನೀಯವಾಗಿರುವುದು ।।೯೯।। ಆತನ ನಾಮವನ್ನು ಹೇಳುತ್ತಲೇ ಯಮ ಮತ್ತು ಕಾಲನು ಗಡಗಡ ನಡುಗುವರು ಮತ್ತು ಆತನ ಮುಂದೆ ಬ್ರಹ್ಮಾ, ವಿಷ್ಣು, ಮಹೇಶ್ವರರು ಕೈಜೋಡಿಸಿ ನಿಂತುಕೊಂಡಿರುವರು ।।೧೦೦।। ಸರ್ವ ವೇದಗಳ ಸಾರವು ನಿಜವಾಗಿಯೂ ಸದ್ಗುರುಗಳ ಸ್ವರೂಪವಾಗಿರುವುದು ಎಂದು ಶಿಷ್ಯನ ದೃಢ ವಿಶ್ವಾಸವು ಸತತವಾಗಿರಬೇಕು ।।೧೦೧।। ಗುರುಗಳಿಗೆ ಕೇವಲ ಸಾಮಾನ್ಯ ಬುದ್ಧಿಯ ಮನುಷ್ಯನು ಎಂದು ತಿಳಿಯಬಾರದು ಮತ್ತು ಎಂದಿಗೂ ಅವರ ಅನಾದರವನ್ನು ಮಾಡಕೂಡದು. ಅವರ ನಿಂದೆಯನ್ನು ಮಾಡಬಾರದು. ಒಂದುವೇಳೆ ಗುರುಗಳ ನಿಂದೆಯನ್ನು ಮಾಡಿದರೆ ಸರ್ವಸ್ವವೂ ನಾಶವಾಗುವುದು ।।೧೦೨।। ಒಂದುವೇಳೆ ತನ್ನ ಪ್ರೀತಿಯ ಆಪ್ತನು ಏಕಾಂತದಲ್ಲಿ ಗುರುಗಳನ್ನು ನಿಂದಿಸಲು ಬರಲು ಆಗ ಆತನನ್ನು ಪಾಪೀ ಮನುಷ್ಯನಿಗೆ ದೂರ ಮಾಡುವಂತೆ ಆತನನ್ನು ತಳ್ಳಬೇಕು. ಇದು ಸಾಧ್ಯವಾಗದಿದ್ದರೆ ತಾನು ಸ್ವತಃ ಅಲ್ಲಿಂದ ದೂರ ಓಡಿ ಹೋಗಬೇಕು ।।೧೦೩।। ಸದ್ಗುರುಗಳ ನಿಂದಾತ್ಮಕ ಶಬ್ದಗಳು ಕಿವಿಗಳಿಗೆ ಬೀಳಲು ಕೂಡಲೇ ಎರಡೂ ಕಿವಿಗಳನ್ನು ತನ್ನ ಬೊಟ್ಟುಗಳಿಂದ ಮುಚ್ಚಬೇಕು. ಪರಮ ಶ್ರದ್ಧೆಯಿಂದ ಸದ್ಗುರುಗಳ ಸ್ಮರಣೆಯನ್ನು ಮಾಡುತ್ತ ಆ ಸ್ಥಳವನ್ನು ಬಿಟ್ಟುಕೊಟ್ಟು ಅಲ್ಲಿಂದ ದೂರ ಹೋಗಬೇಕು ।।೧೦೪।।

ಆಪ್ತ । ತೋ ತ್ಯಾಗಾವಾ ಜೇವೀ ಪತಿತು। ಹಾ ನವ್ಹೇ ಅರ್ಥು ತೈ ಪಳಾವೇ।।೩೦೩।। ಸದ್ಗುರುನಿಂದೇಚೀ ವಾಣೀ । ಐಕತಾ ಬೋಟೇ ದ್ಯಾವೀ ಕಾನೀ। ಸದ್ಗುರೂಸೀ ಭಾವೇ ಸ್ಮರೋನೀ। ತೈ ಸ್ಥಾನಹೀ ತ್ಯಜೋನಿ ಪಳಾವೇ ।।೩೦೪।। ತ್ಯಾ ಸದ್ಗುರುನಿಂದೇಚೀ ಸ್ವಯೇ ಮಾತು । ಕರಿತಾ ಬುಡಾಲಾ ನಿಜಸ್ವಾರ್ಥು । ಧುಳೀಸ ಮಿಳಾಲಾ ಪರಮಾರ್ಥು । ಆಲಾ ಅಪಘಾತು ಅಂಗಾಸೀ ।।೩೦೫।। ಐಶಿಯಾ ಗುರೂಚ್ಯಾ ಠಾಯೀ ಜಾಣ । ಪತ್ರ ಪುಷ್ಪ ಅನ್ನ ಧನ । ಶಿಷ್ಯೇ ಕರೂ ನಯೇ ವಂಚನ । ತೇ ಸ್ವಯೇ ಶ್ರೀಕೃಷ್ಣ ಸಾಂಗತ ।।೩೦೬।।

ಸಾಯಂ ಪ್ರಾತರುಪಾನೀಯ ಭೈಕ್ಷ್ಯಂ ತಸ್ಮೈ ನಿವೇದಯೇತ್ ।
ಯಚ್ಚಾನ್ಯದಪ್ಯನುಜ್ಞಾತಮುಪಯುಜ್ಜೀತ ಸಂಯತಃ ।।೨೮।।

ಅರ್ಥ:- ಮುಂಜಾನೆ, ಸಾಯಂಕಾಲಗಳಲ್ಲಿ ಭಿಕ್ಷೆಯನ್ನು ತಂದು ಅದನ್ನು ಸದ್ಗುರುಗಳ ಚರಣಗಳಿಗೆ ಅರ್ಪಿಸಬೇಕು. ಬೇರೆ ಏನೇ ದೊರೆಯಲಿ ಅದನ್ನು ಸದ್ಗುರುಗಳಿಗೆ ಅರ್ಪಣೆಯನ್ನು ಮಾಡಬೇಕು. ಗುರುಗಳ ಆಜ್ಞೆಯಂತೆ ಅತ್ಯಂತ ಸಂಯಮದಿಂದ ಭಿಕ್ಷೆಯ ಯಥಾಯೋಗ್ಯ ಉಪಯೋಗವನ್ನು ಮಾಡಿಕೊಳ್ಳಬೇಕು.

ಅನ್ನಧನಪುಷ್ಪೀ ಫಳೀ । ಸಾಯಂಪ್ರಾತರ್ಮಧ್ಯಾನ್ಹಕಾಳೀ । ಭಿಕ್ಷಾ ಮಿಳೇ ತೇ ಗುರೂಜವಳೀ । ಅರ್ಪೂನಿ ಕೃತಾಂಜಳೀ ರಹಾವೇ ।।೩೦೭।। ತೇಥ ಗುರು ಆಜ್ಞಾ ಜಾಹಲ್ಯಾಹೀ ಜಾಣ । ಉದರಾಪುರತೇ ಘ್ಯಾವೇ ಅನ್ನ । ಅನ್ನಾವೇಗಳೇ ಪದಾರ್ಥಭರಣ । ಘೇವೋ ನ ಯೇ ಜಾಣ ಬ್ರಹ್ಮಚಾರ್ಯಾ ।।೩೦೮।। ಸಾಯಂ ಪ್ರಾತಃಕಾಳೀ ಜಾಣ । ಬ್ರಹ್ಮಚಾರ್ಯಾ ವಿಹಿತ ಭೋಜನ । ಗುರು ಆಜ್ಞಾ ಜೇ ದಿಧಲೇ ಅನ್ನ । ತೇಣೇ ಪ್ರಾಣತರ್ಪಣ ಕರಾವೇ ।।೩೦೯।। ತೇಥ ನ ಮ್ಹಣಾವೇ ಧಡಗೋಡ ।ನ ಕರಾವೇ ರಸನಾಕೋಡ । ನ ವಾಢವಾವಾ ವಿಷಯ ವಾಡ । ದೇಹನಿರ್ವಾಹೀ ಚಾಡ ಶಿಷ್ಯಾಸೀ ।।೩೧೦।। ಭೋಜನೀ ಕಾಂಹೀ ನ ಮಾಗಾವೇ ಜಾಣ । ಯಾಲಾಗೀ ದೃಢ ಧರಾವೇ ಮೌನ । ಅಧಿಕ ಸ್ವಾದಲಿಯಾ ಅನ್ನ । ತೇ ಪ್ರತಿಬಂಧನ ಗುರುಸೇವೇ ।।೩೧೧।। ಆಹಾರೀ ಅಧಿಕ ಘೇತಲಿಯಾ ಅನ್ನ । ನಿದ್ರಾ ಆಲಸ್ಯ ದಾಟೇ ಗಹನ । ಅತ್ಯಂತ ಅಲ್ಪ ಜೇ ಭೋಜನ । ತೇಣೇ ವಿಕಳಚಳಣ ದೇಹಾಚೇ ।।೩೧೨।। ಗುರುಸೇವೇಲಾಗೀ ಜಾಣ । ವೃತ್ತೀ ರಾಖಾವೀ ಸಾವಧಾನ । ಯಾಲಾಗೀ ಶಿಷ್ಯಾಸೀ ಭೋಜನ । ಯುಕ್ತಾಹಾರಪಣ ಸರ್ವದಾ ।।೩೧೩।। ಗುರುಸೇವೇಲಾಗೀ ಜಾಣ । ಶರೀರ ರಾಖಾವೇ ಸಾವಧಾನ । ತೇ ಗುರುಸೇವೇಚೇ ಲಕ್ಷಣ । ಸ್ವಯೇ ಜನಾರ್ದನ ಸಾಂಗತ ।।೩೧೪।।

ಶುಶ್ರೂಷಮಾಣ ಆಚಾರ್ಯಂ ಸದೋಪಾಸೀತ ನೀಚವತ್ ।
ಯಾನಶಯ್ಯಾಸನಸ್ಥಾನೈರ್ನಾತಿದೂರೇ ಕೃತಾಂಜಲಿಃ ।।೨೯।।

ಅರ್ಥ:- ಆಚಾರ್ಯರು ನಡೆಯುತ್ತಿರಲು ಅವರ ಹಿಂದೆ ಮೆಲ್ಲಮೆಲ್ಲನೆ ನಡೆಯಬೇಕು. ಆಚಾರ್ಯರು ಮಲಗಿಕೊಂಡರೆ, ಅತ್ಯಂತ ಸಾವಧಾನರಾಗಿ ಅವರಿಂದ ದೂರ ಮಲಗಿಕೊಳ್ಳಬೇಕು. ಅವರು ದಣಿದುಕೊಂಡಿದ್ದರೆ, ಅವರ ಕೈಕಾಲುಗಳನ್ನು ಒತ್ತಬೇಕು.

ಸದ್ಗುರುಗಳ ನಿಂದೆಯನ್ನು ತಾನು ಸ್ವತಃ ಮಾಡಿದರೆ ತನ್ನ ಸರ್ವಸ್ವವೂ ಮುಳುಗಿತೆಂದು ತಿಳಿಯಬೇಕು. ಸರ್ವ ಪರಮಾರ್ಥವು ಧೂಳಿಪಟವಾಗುವುದು. ಅನೇಕ ಅಪಘಾತಗಳು ಮೈಮೇಲೆ ಬೀಳುವುವು ।।೩೦೫।। ಅದಕ್ಕಾಗಿ ಗುರುಗಳಿಗೆ ಪತ್ರ, ಪುಷ್ಪ, ಅನ್ನ, ಧನ ಇವುಗಳ ವಿಷಯವಾಗಿ ಶಿಷ್ಯನು ಎಂದಿಗೂ ವಂಚಿಸಬಾರದು. ಅದನ್ನೇ ಶ್ರೀಕೃಷ್ಣನು ಈಗ ಹೇಳುವನು ।।೩೦೬।।

ಶಿಷ್ಯನಿಗೆ ಮುಂಜಾನೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಭಿಕ್ಷೆಯಲ್ಲಿ ದೊರೆಯುವ ಅನ್ನ, ಧನ, ಫಲ, ಪುಷ್ಪ ಇತ್ಯಾದಿ ಎಲ್ಲವನ್ನು ಶ್ರೀಗುರುಗಳ ಹತ್ತಿರ ತಂದು ಇಡಬೇಕು ಹಾಗೆಯೇ ಕೈ ಜೋಡಿಸಿ ನಿಂತುಕೊಳ್ಳಬೇಕು ।।೩೦೭।। ತದನಂತರ ಗುರುಗಳ ಆಜ್ಞೆಯನ್ನು ಪಡೆದು ಹೊಟ್ಟೆಗೆ ಬೇಕಾಗುವಷ್ಟೇ ಅನ್ನವನ್ನು ಪಡೆಯಬೇಕು. ಅನ್ನದ ಹೊರತಾಗಿ ಬ್ರಹ್ಮಚಾರಿಯು ಅನ್ಯ ಯಾವುದೇ ಪದಾರ್ಥಗಳನ್ನು ಸ್ವೀಕರಿಸಬಾರದು ।।೩೦೮।। ಮುಂಜಾನೆ ಮತ್ತು ಸಾಯಂಕಾಲದಲ್ಲಿ ಬ್ರಹ್ಮಚಾರಿಯು ಭೋಜನವನ್ನು ಮಾಡಬೇಕು. ಗುರುಗಳ ಆಜ್ಞೆಯಂತೆ ಪ್ರಾಪ್ತವಾದಷ್ಟೇ ಅನ್ನದಿಂದ ಹಸಿವೆಯನ್ನು ಶಾಂತಗೊಳಿಸಬೇಕು ।।೩೦೯।। ಪ್ರಾಪ್ತವಾಗಿರುವ ಅನ್ನಕ್ಕೆ ಒಳ್ಳೇಯದು, ಕೆಟ್ಟದ್ದು ಅನ್ನಬಾರದು. ನಾಲಿಗೆಯ ಚಟಕ್ಕೆ ಒಳಗಾಗಬಾರದು. ವಿಷಯಗಳ ಪ್ರೀತಿಯನ್ನು ಬೆಳೆಸಬಾರದು. ಕೇವಲ ಶರೀರ ರಕ್ಷಣೆಗಾಗಿ ಶಿಷ್ಯನು ಅನ್ನಗ್ರಹಣ ಮಾಡಬೇಕು ।।೩೧೦।। ಭೋಜನ ಮಾಡುತ್ತಿರಲು ಆಗ ಏನನ್ನೂ ಬೇಡಬಾರದು. ಅದಕ್ಕಾಗಿ ಮೌನವನ್ನು ಧರಿಸಬೇಕು. ಅನ್ನವನ್ನು ಹೆಚ್ಚಾಗಿ ಭಕ್ಷಿಸಿದರೆ ಗುರುಸೇವೆಯಲ್ಲಿ ಪ್ರತಿಬಂಧವಾಗುವುದು ।।೩೧೧।। ಅಧಿಕವಾಗಿ ಅನ್ನವನ್ನು ತಿನ್ನಲು ನಿದ್ರೆಯು ಹೆಚ್ಚಾಗುವುದು. ಆಲಸ್ಯತನವು ಬೆಳೆಯುವುದು ಬಹಳ ಕಡಿಮೆಯೂ ಸೇವಿಸಬಾರದು. ಕಾರಣ ಶರೀರವು ದುರ್ಬಲವಾಗುವುದು ।।೩೧೨।। ಗುರುಸೇವೆಗಾಗಿ ಶರೀರ ಪ್ರಕೃತಿಯನ್ನು ಯೋಗ್ಯವಾಗಿಡಲು ಶಿಷ್ಯನು ಯಾವಾಗಲೂ ಯುಕ್ತ ಆಹಾರವನ್ನು ಸೇವಿಸಬೇಕು ।।೩೧೩।। ಗುರುಸೇವೆಗಾಗಿ ಶರೀರದ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು. ಈ ಯಾವ ಗುರುಸೇವೆಯ ಲಕ್ಷಣವನ್ನು ಶ್ರೀಕೃಷ್ಣನು ಹೇಳಿದನು ।।೩೧೪।।

ಅವರು ಕುಳಿತುಕೊಂಡಿದ್ದರೆ ಅವರ ಆದೇಶಕ್ಕಾಗಿ ಅವರ ಎದುರಿನಲ್ಲಿ ಕೈ ಜೋಡಿಸಿ ನಿಂತುಕೊಳ್ಳಬೇಕು. ಈ ಪ್ರಕಾರವಾಗಿ ಕಿಂಕರಭಾವದಿಂದ ಸೇವೆ ಮುಖಾಂತರ ಆಚಾರ್ಯರ ಆಜ್ಞೆಯನ್ನು ಪಾಲಿಸಬೇಕು.

ಸರ್ವದಾ ಅತಿಸಾದರ । ನ ಪಡತಾಂಹೀ ಅಂತರ । ಗುರುಸೇವೇಸೀ ನಿರಂತರ । ಅತಿತತ್ಪರ ಉಲ್ಹಾಸೇ ॥೩೧೫॥ ಗುರು ಯಾನಾರೂಢ ಅಸತಾ । ಪುಢೇ ಚಾಲಾವೇ ಸಾಟೋಪತಾ । ಪಾಠೀಸೀ ಯಾವೇ ಚರಣೀ ಚಾಲತಾ । ಉಪಚಾರತಾಸಮವೇತ॥೩೧೬॥ ಸಮಯೋಚಿತ ಜಾಣೋನ । ದ್ಯಾವೇ ತಾಂಬುಲ ಜೀವನ । ಕರಾವೇ ಚರಣಸಂವಾಹನ । ಘಾಲಾವೇ ಆಸನ ಬೈಸತೀ ತೇಥೇ ॥೩೧೭॥ ಸದ್ಗುರು ಬೈಸಲ್ಯಾ ಆಸನೀ । ಶಿಷ್ಯೇ ನ ಬಸಾವೇ ನೆಹಟುನೀ । ದೂರೀ ನವಜಾವೇ ತೇಥೂನೀ । ನಯನೋನ್ಮಿಲನೀ ರಾಹವೇ ॥೩೧೮॥ ಅಂಜಳೀಸಂಪುಟ ಜೋಡೂನೀ । ಸಮ್ಮುಖ ರಾಹಾವೇ ಸಾವಧಾನೀ । ಗುರೂಚೀ ಸಂಜ್ಞಾ ಜ್ಯಾಲಾಗೂನೀ । ತೇ ಅವಿಲಂಬಿನೀ ಕರಾವೇ ॥೩೧೯॥ ಗುರು ಶೇಜೇವರೀ ನಿಜಲೇ ಅಸತಾ । ಜವಳೀ ನಸಾವೇ ತತ್ತ್ವತಾ । ಜೇಥೂನಿ ಐಕೂ ಯೇ ವಚನಾರ್ಥಾ । ತೇಥೇ ನಿಶೀ ಅವಸ್ಥಾ ಕ್ರಮಾವೀ ॥೩೨೦॥ ಮೀ ಏಕ ಸೇವೇನೇ ಸಂಪನ್ನ । ಐಸಾ ಧರಿಲಿಯಾ ಅಭಿಮಾನ । ಕೇಲೇ ಸೇವೇಸೀ ಆಂಚವಣ । ಸವೇಂಚಿ ಜಾಣ ಹೋಈಲ ॥೩೨೧॥ ಸೇವಕಾಮಾಜೀ ಮೀ ಏಕ । ಕೇವಳ ರಂಕಾಚಾಹೀ ರಂಕ । ಐಸಾ ಭಾವೋ ನಿಷ್ಟಂಕ । ಸೇವೇಸೀ ದೇಖ ಧರಾವಾ ॥೩೨೨॥ ನೀಚ ಕಾಮ ಕರಿತಾ । ಲಾಜ ನ ಧರಾವೀ ಸರ್ವಥಾ । ಉಬಗ ನ ಮಾನೂನೀ ಚಿತ್ತಾ । ಉಲ್ಹಾಸತಾ ಗುರುಭಜನೀ ॥೩೨೩॥

ಏವಂವೃತ್ತೋ ಗುರುಕುಲೇ ವಸೇದ್ಭೋಗವಿವರ್ಜಿತಃ । ವಿದ್ಯಾ ಸಮಾಪ್ಯತೇ ಯಾವದ್ ಬಿಭ್ರದ್ವ್ರತಮಖಂಡಿತಮ್ ॥೩೦॥

ಅರ್ಥ:- ಶಿಷ್ಯನು ತನ್ನ ವೇದಾಧ್ಯಯನ ಸಂಪೂರ್ಣಗೊಳ್ಳುವವರೆಗೆ ಗುರುಗಳ ಆಶ್ರಮದಲ್ಲಿ ಕಾರ್ಯನಿರತನಾಗಿರಬೇಕು. ಸಂಪೂರ್ಣವಾಗಿ ಐಹಿಕ ಇಂದ್ರಿಯ ತೃಪ್ತಿಯಿಂದ ಮುಕ್ತನಾಗಿರಬೇಕು ಮತ್ತು ಬ್ರಹ್ಮಚರ್ಯ ವ್ರತವನ್ನು ಭಂಗಗೊಳಿಸಬಾರದು.

ಸಾಂಡೋನಿ ಸಕಳ ಭೋಗಾಂತೇ । ಗುರುಕುಳೀ ರಾಹೋನಿ ತೇಥೇ । ಗುರುಸೇವೇಚೇನಿ ವ್ರತೇ । ಪ್ರಿಯ ಸರ್ವಾತೇ ತೋ ಜಾಹಲಾ ॥೩೨೪॥ ಏವಂ ಗುರುಸೇವಾಯುಕ್ತ । ಧರೋನಿಯಾ ಅಖಂಡ ವ್ರತ । ಪಾವಲಾ ವೇದಶಾಸ್ತ್ರ ಸಮಸ್ತ । ಪಢಣೇ ಸಮಾಪ್ತ ಪೈ ಜಾಹಲೇ ॥೩೨೫॥ ಏವಂ ವಿದ್ಯಾ ಜಾಹಲಿಯಾ ಸಮಾಪ್ತ । ಉಪಕುರ್ವಾಣ ನೈಷ್ಠಿಕ ವ್ರತ । ಸ್ವಯೇ ಸಾಂಗಾವಯಾ ಅನಂತ । ಪುಢೀಲ ಶ್ಲೋಕಾರ್ಥ ಸಾಂಗತು ॥೩೨೬॥

ಯದ್ಯಸೌ ಛಂದಸಾಂ ಲೋಕಮಾರೋಕ್ಷ್ಯನ್ ಬ್ರಹ್ಮವಿಷ್ಟಪಮ್ ।
ಗುರವೇ ವಿನ್ಯಸದ್ದೇಹಂ ಸ್ವಾಧ್ಯಾಯಾರ್ಥೇ ಬೃಹದ್‌ವ್ರತಃ ॥೩೧॥

ಗುರುಸೇವೆಯಲ್ಲಿ ಸ್ವಲ್ಪವೂ ಕೂಡ ಖಂಡವಾಗಕೂಡದು. ಸದಾ ಸರ್ವ ಕಾಲದಲ್ಲಿ ಅತ್ಯಂತ ಉಲ್ಹಾಸಭರಿತನಾಗಿ ಸೇವೆಯಲ್ಲಿ ತತ್ಪರನಾಗಿರಬೇಕು ॥೩೧೫॥ ಒಂದು ವೇಳೆ ಗುರುಗಳು ವಾಹನದಲ್ಲಿ ಕುಳಿತಿರಲು ಶಿಷ್ಯನು ಅವರ ಸಾಮಾನುಗಳನ್ನು ಹೊತ್ತುಕೊಂಡು ಮುಂದೆ ನಡೆಯುತ್ತ ಸಾಗಬೇಕು. ಗುರುಗಳು ಒಂದು ವೇಳೆ ನಡೆಯುತ್ತ ಸಾಗುತ್ತಿದ್ದರೆ ಶಿಷ್ಯನು ಅವರ ಸಾಮಾನುಗಳನ್ನು ಹೊತ್ತುಕೊಂಡು ಹಿಂದೆ ಹಿಂದೆ ನಡೆಯುತ್ತಿರಬೇಕು ॥೩೧೬॥ ಸಮಯೋಚಿತವನ್ನು ತಿಳಿದುಕೊಂಡು ಗುರುಗಳಿಗೆ ಶಿಷ್ಯನು ನೀರು, ತಾಂಬೂಲವನ್ನು ಕೊಡಬೇಕು. ಅವರು ಎಲ್ಲಿ ಕುಳಿತುಕೊಳ್ಳುವರೋ, ಅಲ್ಲಿ ಆಸನವನ್ನು ಹಾಕಬೇಕು ಮತ್ತು ಅವರ ಚರಣಗಳನ್ನು ತಿಕ್ಕಬೇಕು ॥೩೧೭॥ ಸದ್ಗುರುಗಳು ಆಸನದಲ್ಲಿ ಕುಳಿತಿರಲು ಶಿಷ್ಯನು ಅವರ ಅತಿ ಸಮೀಪವಾಗಿ ಕುಳಿತುಕೊಳ್ಳಬಾರದು ಮತ್ತು ಅತಿಶಯವಾಗಿ ದೂರ ಕೂಡ ಹೋಗಬಾರದು. ಸತತವಾಗಿ ಅವರ ಕಣ್ಣುಗಳಿಗೆ ಕಾಣುವಂತೆ ಇರಬೇಕು ॥೩೧೮॥ ಕೈಗಳನ್ನು ಜೋಡಿಸಿಕೊಂಡು ಗುರುಗಳ ಎದುರಿನಲ್ಲಿ ನಿಂತುಕೊಳ್ಳಬೇಕು. ಗುರುಗಳು ಒಂದು ವೇಳೆ ಕಣ್ಣು ಸನ್ನೆಯಿಂದ ಕೆಲಸವನ್ನು ಹೇಳಲು, ಅದನ್ನು ತತ್ಕಾಲದಲ್ಲಿ ಮಾಡಬೇಕು ॥೩೧೯॥ ಗುರುಗಳು ಹಾಸಿಗೆಯ ಮೇಲೆ ಮಲಗಲು ಶಿಷ್ಯನು ಅವರ ಬಳಿ ನಿಂತುಕೊಳ್ಳಬಾರದು. ಅವರು ಕೂಗಿದರೆ ಕೇಳುವಷ್ಟು ಅಂತರದಲ್ಲಿ ತಾನು ಮಲಗಿಕೊಳ್ಳಬೇಕು ॥೩೨೦॥ ನಾನೊಬ್ಬನೇ ಗುರುಗಳ ಸೇವೆಯನ್ನು ಮಾಡುವವನು ಎಂಬ ಇಂತಹ ಅಭಿಮಾನವನ್ನು ಮನದಲ್ಲಿ ತರಬಾರದು. ಏಕೆಂದರೆ ಅಭಿಮಾನದಿಂದ ಸೇವೆಯು ವ್ಯರ್ಥವಾಗುವುದು ॥೩೨೧॥ ಅನೇಕ ಸೇವಕರಲ್ಲಿ ನಾನೊಬ್ಬನು ಅವರ ದಾಸರ ದಾಸನಾಗಿರುವೆ ಎಂಬ ಇಂತಹ ನಿರಭಿಮಾನ ವೃತ್ತಿಯನ್ನು ಇಡಬೇಕು ॥೩೨೨॥ ಹಾಗೆಯೇ ಗುರುಗಳ ಯಾವುದೇ ನೀಚ ಕೆಲಸಗಳನ್ನು ಮಾಡುವಾಗ ನಾಚಿಕೆ ಪಡಬಾರದು. ಗುರುಗಳ ಯಾವುದೇ ಕೆಲಸಗಳಲ್ಲಿ ಬೇಸರಪಡಬಾರದು. ಗುರುಭಜನೆಯಲ್ಲಿ ಯಾವಾಗಲೂ ಉಲ್ಹಾಸವನ್ನು ಬೆಳೆಸುತ್ತಿರಬೇಕು ॥೩೨೩॥

ಈ ಪ್ರಕಾರವಾಗಿ ಸರ್ವ ಸುಖೋಪಭೋಗಗಳನ್ನು ತ್ಯಜಿಸಿ ಗುರುಗೃಹದಲ್ಲಿದ್ದುಕೊಂಡು ಯಾವ ಶಿಷ್ಯನು ನಿಃಸ್ವಾರ್ಥ ಭಾವನೆಯಿಂದ ಮನಃಪೂರ್ವಕವಾಗಿ ಗುರುಸೇವೆಯ ವ್ರತವನ್ನು ಆಚರಿಸುವನೋ, ಆತನು ಸರ್ವರಿಗೂ ಪ್ರಿಯನಾಗುವನು ॥೩೨೪॥ ಹೀಗೆ ಗುರುಗಳ ಸೇವೆಯನ್ನು ಮಾಡಿ ಅಖಂಡವಾಗಿ ಬ್ರಹ್ಮಚರ್ಯವನ್ನು ಪಾಲನೆ ಮಾಡಿ ಸಮಸ್ತ ವೇದಶಾಸ್ತ್ರಗಳ ಅಧ್ಯಯನವು ಪೂರ್ಣವಾಯಿತೆಂದರೆ ಆತನ ಅಭ್ಯಾಸ ಕ್ರಮವು ಸಂಪನ್ನವಾಗುವುದು ॥೩೨೫॥ ಒಟ್ಟಿನಲ್ಲಿ ಈ ವಿದ್ಯೆಯನ್ನು ಪೂರ್ಣವಾಗಿ ಕಲಿತುಕೊಂಡನಂತರ ನೈಷ್ಠಿಕ ಮತ್ತು ಉಪಕುರ್ವಾಣ ವ್ರತವನ್ನು ಹೇಗೆ ಸಾಧಿಸಬೇಕೆಂಬುವುದನ್ನು ಮುಂದಿನ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳುವನು ॥೩೨೬॥

ಅರ್ಥ:- ಬ್ರಹ್ಮಚಾರಿಯು ಬ್ರಹ್ಮಲೋಕಗಳಿಗೆ ಆರೂಢನಾಗಲು ಬಯಸಿದಲ್ಲಿ ತನ್ನ ಸಂಪೂರ್ಣ ಜೀವನವನ್ನು ಗುರು ಸೇವೆಯಲ್ಲಿ ಅರ್ಪಿಸಬೇಕು. ಆಜನ್ಮ ನೈಷ್ಠಿಕ ಬ್ರಹ್ಮಚರ್ಯೆಯ ಬ್ರಹತ್ ವ್ರತವನ್ನು ಆಚರಿಸಬೇಕು. ವೇದಗಳ ಉನ್ನತ ಅಭ್ಯಾಸಕ್ಕೆ ತನ್ನನ್ನು ಸಮರ್ಪಿಸಿಕೊಳ್ಳಬೇಕು.

ಜರೀ ಬ್ರಹ್ಮಚಾರೀ ವ್ರತಸ್ಥ । ಯೇಣೇಚಿ ಆಶ್ರಮೇ ನಿಶ್ಚಿತ । ಸತ್ಯಲೋಕ ವೈಕುಂಠಪರ್ಯಂತ । ವಾಂಛೀ ವೇದೋಕ್ತ ಮತ್ಪ್ರಾಪ್ತೀ ।೩೨೭॥ ತೇಣೇ ಯಾವಜ್ಜನ್ಮ ಆಪಣ । ದೃಢ ಕರಾವೇ ಗುರುಭಜನ । ನಿಜದೇಹಾಚೇಹೀ ಜಾಣ । ಕರೀ ಸಮರ್ಪಣ ಗುರುಚರಣೀ ।೩೨೮॥ ಸದ್ಗುರುಭಜನಾಚೀ ಪರವಡೀ । ನಿತ್ಯ ನೂತನ ಆವಡೀ । ನಿಜಾತ್ಮಭಾವೇ ಚೋಖಡೀ । ಲಾಗಲೀ ಗೋಡೀ ಗುರುಚರಣೀ ।೩೨೯॥ ಪೂರ್ವೀಲ ವ್ರತೇ ವ್ರತ ಧರೀ । ತೇಚಿ ವ್ರತ ದೃಢ ಕರೀ । ಹೋಯ ನೈಷ್ಠಿಕ ಬ್ರಹ್ಮಚಾರೀ । ಗುರುಭಜನಾವರೀ ನಿರ್ಧಾರು ।೩೩೦॥ ನ ಮನೀ ಸನ್ಮಾನಾಚೇ ಕೋಡ । ನ ಮ್ಹಣೇ ವಿಷಯ ಗೋಡ । ನ ಧರೀ ಸಂಸಾರಾಚೀ ಚಾಡ । ವ್ರತೀ ದೃಢ ವ್ರತಸ್ಥ ।೩೩೧॥ ಐಸಾ ಘೋರ ವ್ರತೇ ವ್ರತಧರ । ತೈಸಾಚಿ ಗುರುಭಜನೀ ಸಾದರ । ಕರೀ ಸದ್ಗುರೂಶೀ ವಿಚಾರ । ವೇದಾಂತಸಾರ ಸ್ವಾಧ್ಯಾಯೇ ।೩೩೨॥ "ಸ್ವ" ಮ್ಹಣಿಜೇ ಆತ್ಮಾ ಜಾಣ । ತೇ ಠಾಯೀ ನಿತ್ಯ ಅನುಸಂಧಾನ । ತೋ "ಸ್ವಾಧ್ಯಾಯ" ಮ್ಹಣತೀ ಸಜ್ಞಾನ । ಜ್ಞಾನವಿಚಕ್ಷಣ ನಿಜದ್ರಷ್ಟೇ ।೩೩೩॥ ಐಶಿಯಾ ಸಾಧಕಾಸೀ ಜಾಣ । ಸರ್ವತ್ರ ಬ್ರಹ್ಮಭಾವನ । ಹೇಚಿ ಸ್ವಮುಖೇ ಮಧುಸೂದನ । ಸ್ವಯೇ ಆಪಣ ಸಾಂಗತ ।೩೩೪॥

ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷು ಮಾಂ ಪರಮ್ । ಅಪೃಥಗ್ಧೀರುಪಾಸೀತ ಬ್ರಹ್ಮವರ್ಚಸ್ವ್ಯಕಲ್ಮಷಃ ।೩೨॥

ಅರ್ಥ:- ಗುರುಗಳಿಗೆ ಸೇವೆ ಸಲ್ಲಿಸಿ, ಎಲ್ಲ ಪಾಪಗಳಿಂದ ಮತ್ತು ದ್ವಂದ್ವಗಳಿಂದ ಮುಕ್ತನಾಗಿ ವೇದಜ್ಞಾನದಿಂದ ವರ್ಚಸ್ವಿಯಾದವನು ಅಗ್ನಿಯಲ್ಲಿ, ಗುರುವಿನಲ್ಲಿ, ಆತ್ಮದಲ್ಲಿ ಹಾಗೂ ಸಕಲ ಜೀವಿಗಳಲ್ಲಿ ಆವಿರ್ಭವಿಸುವ ಪರಮಾತ್ಮನಾದ ನನ್ನನ್ನು ಭಜಿಸಬೇಕು.

ಬ್ರಹ್ಮಚರ್ಯವ್ರತ ಧರಣೇ । ಬ್ರಹ್ಮವರ್ಚಸ್ವ ಚಢೇ ತೇಣೇ । ಆಣಿ ಸದ್ಗುರೂಚೇನಿ ಭಜನೇ । ನಿಷ್ಪಾಪ ಹೋಣೇ ನಿಜವೃತ್ತೀ ।೩೩೫॥ ತೇಥೇ ಅಗ್ನಿ ಗುರು ಆಪಣ । ಸರ್ವ ಭೂತಾಂಚ್ಯಾ ಠಾಯೀ ಜಾಣ । ಅಭಿನ್ನ ಬ್ರಹ್ಮಭಾವನ । ಅನುಸಂಧಾನ ಸರ್ವದಾ ।೩೩೬॥ ತೇವ್ಹಾ ಜೇ ಜೇ ದೇಖೇ ದೃಶ್ಯಜಾತ । ತೇಥ ಬ್ರಹ್ಮಭಾವೋ ಅಚುಂಬಿತ । ಯಾಪರೀ ಮಾತೇ ಉಪಾಸಿತ । ಬ್ರಹ್ಮಯುಕ್ತ ಸದ್ಭಾವೇ ।೩೩೭॥ ನೈಷ್ಠಿಕ ಬ್ರಹ್ಮಚರ್ಯಾಚಾ ನೇಮ । ವಾನಪ್ರಸ್ಥಸನ್ಯಾಸಿಯಾ ಸಮ । ತೇಥೀಲ ಆವಶ್ಯಕ ಜೋ ಧರ್ಮ । ಮುಖ್ಯ ವರ್ಮ ತ್ಯಾಗಾಚೇ ।೩೩೮॥

ಸ್ತ್ರೀಣಾಂ ನಿರೀಕ್ಷಣಸ್ಪರ್ಶಸಂಲಾಪಕ್ಷ್ವೇಲನಾದಿಕಮ್ ।
ಪ್ರಾಣಿನೋ ಮಿಥುನೀಭೂತಾ ನ ಗೃಹಸ್ಥೋಽಗ್ರತಸ್ತ್ಯಜೇತ್ ।೩೩॥

ಬ್ರಹ್ಮಚರ್ಯದ ವ್ರತವನ್ನು ಪಾಲನೆ ಮಾಡುತ್ತಿರಲು ಅದೇ ಆಶ್ರಮವನ್ನು ನಿರಂತರವಾಗಿ ನಡೆಸುವ ದೃಢ ನಿಶ್ಚಯ ಮಾಡಿದಾತನಿಗೆ ಮತ್ತು ವೇದದಲ್ಲಿ ಹೇಳಿದಂತೆ ಸತ್ಯಲೋಕದಿಂದ ವೈಕುಂಠದವರೆಗೆ ನನ್ನ ಪ್ರಾಪ್ತಿಯಾಗಬೇಕೆಂಬ ಇಚ್ಛಿಸಿದಾತನಿಗೆ ।೩೨೭॥ ಆತನು ಯಾವಜ್ಜನ್ಮ ಗುರುಗಳ ಸೇವೆಗಾಗಿ ತನ್ನ ಶರೀರವನ್ನು ಗುರುಗಳ ಚರಣಗಳಿಗೆ ಅರ್ಪಿಸಬೇಕು ।೩೨೮॥ ನಿತ್ಯ ನೂತನವಾಗಿ ಪ್ರೇಮದಿಂದ ಸದ್ಗುರುಗಳ ಭಜನೆಯನ್ನು ಮಾಡಬೇಕು.ಗುರುಗಳ ಚರಣಗಳಲ್ಲಿ ಆತ್ಮಭಾವನೆಯನ್ನಿಡಬೇಕು. ಇದರಿಂದ ಸಹಜವಾಗಿಯೇ ಆನಂದವು ಬೆಳೆಯುತ್ತ ನಡೆಯುವುದು ।೩೨೯॥ ಯಾರು ಪ್ರಾರಂಭದಿಂದ ಹಿಡಿದ ಬ್ರಹ್ಮಚರ್ಯ ವ್ರತವನ್ನು ಮುಂದೆ ನಡೆಸುತ್ತ ತನ್ನ ಬದುಕುಪೂರ್ಣ ಗುರುಭಜನೆಯಲ್ಲಿ ನಿಷ್ಠೆಯನ್ನಿಡುವನೋ, ಆತನಿಗೆ ನೈಷ್ಠಿಕ ಬ್ರಹ್ಮಚಾರೀ ಎಂದು ಹೇಳುವರು ।೩೩೦॥ ಆತನ ಮನಸ್ಸಿನಲ್ಲಿ ಮಾನಸನ್ಮಾನಗಳ ಇಚ್ಛೆಯಿರುವುದಿಲ್ಲ. ಆತನು ವಿಷಯಗಳನ್ನು ಪ್ರೀತಿಸುವುದಿಲ್ಲ. ಸಂಸಾರದಲ್ಲಿ ಸೇರುವ ಅಪೇಕ್ಷೆ ಪಡುವುದಿಲ್ಲ. ವ್ರತಸ್ಥನಾಗಿ ತನ್ನ ಬ್ರಹ್ಮಚರ್ಯವ್ರತವನ್ನು ಮುನ್ನಡೆಸುವನು ।೩೩೧॥ ಹೀಗೆ ದೃಢವ್ರತವನ್ನು ಪಾಲಿಸುತ್ತ ಆತನು ವ್ರತಧಾರಿಯಾಗುವನು. ಹಾಗೆಯೇ ಆತನು ಗುರುಭಕ್ತಿಯಲ್ಲಿ ತತ್ಪರನಾಗಿರುವನು. ಆತನು ಸದ್ಗುರುಗಳಲ್ಲಿ ಅಭ್ಯಾಸಪೂರ್ವಕ ವೇದಶಾಸ್ತ್ರಗಳಲ್ಲಿನ ವಿಚಾರ ಮಾಡುತ್ತಿರುವನು ।೩೩೨॥ "ಸ್ವ" ಅಂದರೆ ಆತ್ಮವು. ಆ ಆತ್ಮತತ್ವದ ನಿತ್ಯ ಚಿಂತನೆಗೆ ಆತ್ಮಜ್ಞಾನಿಯು ಸ್ವಾಧ್ಯಾಯವೆಂದು ಹೇಳುವನು ।೩೩೩॥ ಇಂತಹ ಸಾಧಕನಿಗೆ ಸರ್ವತ್ರವೂ ಆತ್ಮಭಾವನೆಯೇ ಸ್ಪಷ್ಟವಾಗಿ ತೋರುವುದು. ಇದನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುವನು ।೩೩೪॥

ಈ ಪ್ರಕಾರವಾಗಿ ಬ್ರಹ್ಮಚರ್ಯವ್ರತದ ಪಾಲನೆಯನ್ನು ಮಾಡುತ್ತಿರಲು ಅಂಗದಲ್ಲಿ ಬ್ರಹ್ಮತೇಜವು ನಿರ್ಮಾಣವಾಗುವುದು. ಗುರುಗಳ ಸೇವೆಯಿಂದ ಶಿಷ್ಯನ ವೃತ್ತಿಯು ಪಾಪರಹಿತವಾಗುವುದು ।೩೩೫॥ ಆತನು ಅಗ್ನೀ, ಗುರು ಹಾಗೂ ಸರ್ವಪ್ರಾಣಿಮಾತ್ರರಲ್ಲಿ ತಾನೇ ಇರುವೆನೆಂಬ ಅನುಸಂಧಾನವನ್ನು ಸತತವಾಗಿ ಇಡುವನು ।೩೩೬॥ ಯಾವ ಯಾವ ದೃಶ್ಯ ಪದಾರ್ಥಗಳು ಆತನ ಕಣ್ಣಿಗೆ ಬೀಳುವುವೋ, ಅವುಗಳೆಲ್ಲವೂ ಬ್ರಹ್ಮಸ್ವರೂಪವೇ ಆಗಿವೆ ಎಂದು ಆತನಿಗೆ ಅನಿಸುವುದು. ಈ ಪ್ರಕಾರವಾಗಿ ಆತನು ಬ್ರಹ್ಮಸ್ವರೂಪನಾಗಿ ಸದ್ಭಾವನೆಯಿಂದ ನನ್ನ ಉಪಾಸನೆಯನ್ನು ಮಾಡುತ್ತಿರುವನು ।೩೩೭॥ ಇಂತಹ ಪ್ರಕಾರದ ನೈಷ್ಠಿಕ ಬ್ರಹ್ಮಚರ್ಯದ ವ್ರತವು ವಾನಪ್ರಸ್ಥ ಮತ್ತು ಸನ್ಯಾಸೀ ಇವರಿಗೂ ಕೂಡ ಅದೇ ರೀತಿಯಾಗಿರುತ್ತದೆ. ಸರ್ವಸಂಗ ಪರಿತ್ಯಾಗವೇ ಅದರಲ್ಲಿನ ಮುಖ್ಯಮರ್ಮವಾಗಿರುತ್ತದೆ ।೩೩೮॥

ಅರ್ಥ:- ಬ್ರಹ್ಮಚಾರೀ, ವಾನಪ್ರಸ್ಥ ಮತ್ತು ಸನ್ಯಾಸಿಗಳವರು ಸ್ತ್ರೀಯರತ್ತ ನೋಡಬಾರದು. ಅವರನ್ನು ಮುಟ್ಟಕೂಡದು. ಅವರಲ್ಲಿ ಹಾಸ್ಯ, ವಿನೋದ ಮಾಡಬಾರದು. ಮಾತನಾಡಬಾರದು. ಮೈಥುನದಲ್ಲಿರುವ ಪ್ರಾಣಿಗಳತ್ತ ನೋಡಕೂಡದು.

ನೈಷ್ಠಿಕ ಬ್ರಹ್ಮಚಾರೀ ಸನ್ಯಾಸೀ । ವಾನಪ್ರಸ್ಥ ವನವಾಸೀ । ತಿಹೀ ನ ಪಹಾವೇ ಸ್ತ್ರೀಯಾಂಸೀ । ಹಾ ಮುಖ್ಯತ್ವೇ ತ್ಯಾಂಸೀ ಸ್ವಧರ್ಮ ॥೩೩೯॥ ಸ್ತ್ರೀ ದೇಖತಾಂಚಿ ದಿಠೀ । ಸಾಂಡೂನಿಯಾ ಪರ್ಣಕುಟೀ । ಪಳಾವೇ ಗಾ ಉಠಾಉಠೀ । ಮಾ ಕರಾವ್ಯಾ ಗೋಠೀ ಫುಡೇ ಕೇವೀ ॥೩೪೦॥ ಸ್ವಪ್ನೀಹೀ ಸ್ತ್ರೀಯೇಚ್ಯಾ ಸ್ಪರ್ಶಾಶೀ । ಕರೂ ನಯೇ ಯಾ ತಿಘಾಂಶೀ । ಕರಿತಾಂಚಿ ಮದನು ತ್ಯಾಂಸೀ । ವೀರ್ಯಪಾತಾಸೀ ಉಪಜವೀ ॥೩೪೧॥ ತ್ಯಾ ಸ್ತ್ರೀಯಾಂಸೀ ಕ್ರೀಡಾವಿನೋದ । ಕರಿತಾ ವಿಧ್ವಂಸೇ ಸ್ವಧರ್ಮಕಂದ । ಯಾಲಾಗೀ ಸ್ತ್ರೀಗುಣಾನುವಾದ । ನ ಕರಿತೀ ಶುದ್ಧ ಸಜ್ಞಾನ ॥೩೪೨॥ ಸ್ತ್ರೀಯಾಂಚೇ ಹಾವಭಾವದರ್ಶನ । ಏಕಾಂತ ಗುಹ್ಯ ಸಂಭಾಷಣ । ನಾನಾ ವಿನೋದ ಅಂಗದರ್ಶನ । ಪರಿಹಾಸನ ಮದನೋಕ್ತೀ ॥೩೪೩॥ ಇತುಕೇಹೀ ಜೇಥ ಘಡೇ । ತೇಥ ಕಾಮಾಚಾ ಘಾಲಾ ಪಡೇ । ಸ್ವಧರ್ಮ ಸಮೂಳ ಬುಡೇ । ಧೈರ್ಯಾಚೇ ಉಡೇ ನಿಜಸತ್ತ್ವ ॥೩೪೪॥ ಗೃಹಸ್ಥಾಚಿಯೇ ಪ್ರವೃತ್ತೀ । ಪರಸ್ತ್ರೀಯೇಸೀ ಐಸೀ ಗತೀ । ಜಾಹಲಿಯಾ ಜಾಣ ನಿಶ್ಚಿತೀ । ಅಪಾವೋ ಅಂತೀ ಪಾವೇಲ ॥೩೪೫॥ ಸ್ತ್ರೀ ತೇ ಅಗ್ನಿಕುಂಡಾಸಮಾನ । ಪುರುಷ ತೋ ಘೃತಕುಂಭ ಜಾಣ । ತೇಥ ದ್ರವತಾ ಅಂತಃಕರಣ । ಅರ್ಧಕ್ಷಣ ಲಾಗೇನಾ ॥೩೪೬॥ ಘೃತ ವೇಂಚಲಿಯಾಪಾಠೀ । ಘಟಾಸೀ ಝಾಲೀ ವರ್ಷೇ ಸಾಠೀ । ತರೀ ಅಗ್ನೀಶೀ ಜಾಹಲ್ಯಾ ಭೇಟೀ । ದ್ರವತಾ ಪೋಟೀ ತೋಹೀ ಧರೀ ॥೩೪೭॥ ತೇವೀ ವಾರ್ಧಕ್ಯವಯಸೇಸೀ । ಏಕಾಂತ ಜಾಹಲಿಯಾ ಸ್ತ್ರೀಯೇಶೀ । ಗೋಷ್ಟಿಮಾತ ವಿನೋದೇಸೀ । ಕಾಮಾಚಾ ತ್ಯಾಸೀ ಘಾಲಾ ಪಡೇ ॥೩೪೮॥ ತ್ಯಾಗಾವೀ ಕಾಮಿನೀ ಸಂಗತೀ । ಹಾ ಮುಖ್ಯ ತ್ಯಾಗ ಪರಮಾರ್ಥೀ । ಹೇಚಿ ಸ್ವಮುಖೇ ಶ್ರೀಪತೀ । ಉದ್ಧವಾಪ್ರತಿ ಬೋಲಿಲಾ ॥೩೪೯॥ ಪರಾಶರಾಐಸಾ ಮಹಂತ । ಮತ್ಸ್ಯೋದರೀಶೀ ಜಾಹಲಾ ರತ । ಯಾಲಾಗೀ ಸ್ತ್ರೀಯೇಚಾ ಏಕಾಂತ । ಅನರ್ಥಭೂತ ಪುರುಷಾಸೀ ॥೩೫೦॥ ಮೈಥುನ ಭೂತ ಜೇ ಪ್ರಾಣೀ । ಪಶುಪಕ್ಷೀ ಆದಿಕರೂನೀ । ಸಾದರೇ ನ ಪಹಾವೇ ನಯನೀ । ಪಾಹತಾ ಕಡಕಡೂನಿ

ನೈಷ್ಠಿಕ ಬ್ರಹ್ಮಚಾರೀ, ಸನ್ಯಾಸೀ ಹಾಗೂ ವನದಲ್ಲಿರುವ ವಾನಪ್ರಸ್ಥ ಇವರು ಸ್ತ್ರೀಯರತ್ತ ನೋಡಕೂಡದು. ಇದೇ ಅವರ ಮುಖ್ಯವಾಗಿರುವ ಸ್ವಧರ್ಮವಾಗಿರುವುದು ॥೩೩೯॥ ಸ್ತ್ರೀಯಳು ದೃಷ್ಟಿಗೆ ಬೀಳುತ್ತಲೇ ಇವರು ಕೂಡಲೇ ತಮ್ಮ ಪರ್ಣ ಕುಟೀರವನ್ನು ಬಿಟ್ಟು ಓಡಿಹೋಗಬೇಕು. ಅಂದಮೇಲೆ ಅವರಲ್ಲಿ ಮಾತನಾಡುವ ಕ್ರಿಯೆಯು ದೂರ ಉಳಿಯಿತು ॥೩೪೦॥ ಈ ಮೂವರಿಗೆ ಸ್ವಪ್ನದಲ್ಲಿಯೂ ಕೂಡ ಸ್ತ್ರೀಯರ ಸ್ಪರ್ಶವು ಆಗಕೂಡದು. ಕಾರಣವೇನೆಂದರೆ, ಸ್ವಪ್ನದಲ್ಲಿಯೂ ಸಹ ಸ್ತ್ರೀಯರ ಸ್ಪರ್ಶವಾಯಿತೆಂದರೆ, ತತ್ಕಾಲದಲ್ಲಿ ಕಾಮವಾಸನೆಯು ಪ್ರಬಲವಾಗುವುದು. ಹಾಗೂ ಸ್ವಪ್ನಾವಸ್ಥೆ ಅಂದರೆ ವೀರ್ಯಪತನವಾಗುವುದು ॥೩೪೧॥ ಸ್ತ್ರೀಯರಲ್ಲಿ ಕ್ರೀಡಿಸುವಿಕೆ, ವಿನೋದ ಮಾಡುವಿಕೆಯಿಂದ ಧರ್ಮದ ಮೂಲ ಬೀಜವು ನಾಶವಾಗುವುದು. ಆದ್ದರಿಂದ ಜ್ಞಾನೀ ಪುರುಷರು ಸ್ತ್ರೀ ಗುಣದ ವರ್ಣನೆಯನ್ನು ಮಾಡಲಾರರು ॥೩೪೨॥ ಸ್ತ್ರೀಯರ ಹಾವಭಾವಗಳನ್ನು ನೋಡುವುದು, ಅವರನ್ನು ಕಣ್ತುಂಬ ಕಾಣುವುದು, ಏಕಾಂತದಲ್ಲಿ ಮಾತನಾಡುವುದು, ನಾನಾ ಪ್ರಕಾರಗಳ ವಿನೋದಗಳನ್ನು ಮಾಡುತ್ತ ಅವರನ್ನು ಮುಟ್ಟುವುದು, ಕಾಮುಕ ಶೃಂಗಾರ ಶಬ್ದಗಳನ್ನು ನುಡಿಯುವುದು ॥೩೪೩॥ ಈ ಪ್ರಕಾರಗಳು ಎಲ್ಲಿ ನಡೆಯುವುವೋ ಅಲ್ಲಿ ಕಾಮದ ಪ್ರಚೋದನೆಯು ಅವಶ್ಯವಾಗಿ ಆಗುವುದು. ಸ್ವಧರ್ಮವು ಮುಳುಗಿಹೋಗುವುದು ಹಾಗೂ ಧೈರ್ಯದ ಮೂಲತತ್ವವು ಇಲ್ಲದಾಗಿಬಿಡುವುದು ॥೩೪೪॥ ಗೃಹಸ್ಥಾಶ್ರಮದ ಮನುಷ್ಯರೂ ಕೂಡ ಈ ರೀತಿಯಾಗಿ ವರ್ತಿಸುತ್ತಿದ್ದರೆ, ಕೊನೆಯಲ್ಲಿ ಅವರ ನಾಶವೂ ಕೂಡ ಅವಶ್ಯವಾಗಿ ಆಗುವುದು ॥೩೪೫॥ ನಿಜವಾಗಿಯೂ ಸ್ತ್ರೀಯಳು ಅಗ್ನಿಯ ಕುಂಡದಂತಿರುವಳು, ಪುರುಷನು ತುಪ್ಪದ ಕುಡಿಕೆಯಂತಿರುವನು. ಅಗ್ನಿಯ ಸಮೀಪ ತುಪ್ಪದ ಕುಡಿಕೆ ಇಡಲು ಅದು ಕರಗಲು ಅರ್ಧಕ್ಷಣವೂ ಬೇಕಾಗುವುದಿಲ್ಲ. ಅದರಂತೆ ಸ್ತ್ರೀ ಸಾನಿಧ್ಯದಿಂದ ಪುರುಷನ ಅಂತಃಕರಣವು ತಕ್ಷಣ ದ್ರವಿಸುವುದು ॥೩೪೬॥ ಕುಡಿಕೆಯಲ್ಲಿನ ತುಪ್ಪವು ಮುಗಿದು ಅರವತ್ತು ವರ್ಷಗಳಾಗಿದ್ದರೂ ಕೂಡ, ಅದಕ್ಕೆ ಅಗ್ನಿಯ ಸಂಪರ್ಕವಾಗಲು ಕೂಡಲೇ ಅದರಲ್ಲಿನ ದ್ರವವು ನಿಶ್ಚಯವಾಗಿ ದ್ರವಿಸುವುದು ॥೩೪೭॥ ಅದರಂತೆಯೇ ವೃದ್ಧ ಮನುಷ್ಯನು ಸ್ತ್ರೀಯಳ ಏಕಾಂತವನ್ನು ಸಾಧಿಸಿ ಹಾಸ್ಯ ವಿನೋದ ಚೇಷ್ಟೆಗಳನ್ನು ಮಾಡಲು, ಅವನೂ ಕೂಡ ಕೂಡಲೇ ಕಾಮಾತುರನಾಗುವನು ॥೩೪೮॥ ಅದಕ್ಕಾಗಿ ಸ್ತ್ರೀಯರ ಸಂಗತಿಯನ್ನು ತ್ಯಜಿಸಬೇಕು. ಇದೇ ಪರಮಾರ್ಥದಲ್ಲಿನ ಮುಖ್ಯ ತ್ಯಾಗವಾಗಿರುವುದು. ಹೀಗೆ ಶ್ರೀಕೃಷ್ಣನು ಸ್ವಮುಖದಿಂದ ಉದ್ಧವನಿಗೆ ಹೇಳಿದನು ॥೩೪೯॥ ಪರಾಶರಮುನಿಯಂತಹ ಅತ್ಯಂತ ಶ್ರೇಷ್ಠ ತಪಸ್ವಿಯು ಆತನಿಗೂ ಕೂಡ ಮೀನುಗಾರನ ಕನ್ಯಾ ಮತ್ಸ್ಯಗಂಧಾ ಸ್ತ್ರೀಯಳು ದೃಷ್ಟಿಗೆ ಬೀಳುತ್ತಲೇ ಆತನು ತನ್ನ ಧರ್ಮದಿಂದ ಭ್ರಷ್ಟನಾದನು. ಇದರಿಂದ ಸ್ತ್ರೀಯಳ ಏಕಾಂತವು ಪುರುಷನಿಗೆ ಅನರ್ಥಕಾರಕವಾಗಿದೆ ಎಂದು ತಿಳಿಯಬೇಕು ॥೩೫೦॥ ಪಶು ಪಕ್ಷಿ ಮೊದಲು ಮಾಡಿ ಯಾವುದೇ ಪ್ರಾಣಿಯು ಮೈಥುನದಲ್ಲಿರಲು ಆಗ ಅದನ್ನು ಮುದ್ದಾಮು ಉತ್ಸುಕತೆಯಿಂದ ಎಂದಿಗೂ ನೋಡಬಾರದು. ಏಕೆಂದರೆ ಅದನ್ನು ನೋಡಲು ಕಾಮವಾಸನೆಯು ತೀವ್ರಗತಿಯಿಂದ ಎದ್ದು ನಿಲ್ಲುವುದು ॥೩೫೧॥ ಕೇವಲ ಮೀನುಗಳ ಕಾಮಕ್ರೀಡೆಗಳನ್ನು ಕಂಡದ್ದರಿಂದ ಸೌರಭ ಋಷಿಯ ಕಾಮವು ಪ್ರಚೋದನೆಯಾಗಿ ಅದರ ತೃಪ್ತಿಗಾಗಿ ಆತನು ತನ್ನ ಕೋಟ್ಯಾವಧಿ ವರ್ಷಗಳ ತಪಶ್ಚರ್ಯವನ್ನು ನಾಶಮಾಡಿಕೊಂಡನು ॥೩೫೨॥

ಕಾಮ ಖವಳೇ ।।೩೫೧।। ಮತ್ಸ್ಯಮೈಥುನ ದೇಖಿಲ್ಯಾಸಾಠೀ । ಖವಳಲ್ಯಾ ಕಾಮಾಚ್ಯಾ ಪರಿಪಾಠೀ । ಸೌರಭ ಋಷೀಶ್ವರೇ ತಪಕೋಟೀ । ಮೈಥುನಾಸಾಠೀ ನಾಶಿಲ್ಯಾ ।।೩೫೨।। ಯಾಲಾಗೀ ಕಾಮಾಚೇ ದರ್ಶನ । ಕಾ ಕಾಮಾಚೀ ಆಠವಣ । ಪುರುಷಾಸೀ ಬಾಧಕ ಜಾಣ । ಕಾಮಸ್ಮರಣ ನ ಕರಾವೇ ।।೩೫೩।। ಹೃದಯೀ ನವ್ಹೇ ಕಾಮಸಂಚಾರ । ತೈಸಾ ಕರಾವಾ ಸದಾಚಾರ । ಭೂತೇ ಪಹಾವೀ ಮದಾಕಾರ । ಹಾ ಮುಖ್ಯ ಪ್ರಕಾರ ಹರಿ ಬೋಲೇ ।।೩೫೪।।

ಶೌಚಮಾಚನಂ ಸ್ನಾನಂ ಸಂಧ್ಯೋಪಾಸನಮಾರ್ಜವಮ್ ।
ತೀರ್ಥಸೇವಾ ಜಪೋಽಸ್ಪೃಶ್ಯಾಭಕ್ಷ್ಯಾಸಂಭಾಷ್ಯವರ್ಜನಮ್ ।।೩೪।।

ಅರ್ಥ:- ಬಾಹ್ಯ ಮತ್ತು ಅಂತರ ಶೌಚ, ಆಚಮನ, ತ್ರಿಕಾಲ ಸ್ನಾನ, ಸಂಧ್ಯೋಪಾಸನ, ಮನಸ್ಸಿನ ಸರಳತನ, ತೀರ್ಥಯಾತ್ರಾಗಮನ, ಜಪ ಇವುಗಳನ್ನು ಸಾಧಿಸಬೇಕು. ಅಸ್ಪೃಶ್ಯ, ಅಭಕ್ಷ್ಯ ಮತ್ತು ಸಂಭಾಷಣಕ್ಕೆ ಅಯೋಗ್ಯವಾದುದನ್ನು ತ್ಯಜಿಸಬೇಕು.

ಶೌಚ ಆಚಮನ ಸ್ನಾನ । ಸಂಧ್ಯಾ ತರ್ಪಣ ಉಪಾಸನ । ಜಪಾದಿಕ ಅನುಷ್ಠಾನ । ತೀರ್ಥಸೇವನ ವಿಶ್ವಾಸೇ ।।೩೫೫।। ಅಧರ್ಮ-ಅಕರ್ಮಾಚಾ ವಿಟಾಳು । ಹೋ ನ ದ್ಯಾವಾ ಅಳುಮಾಳು । ಆಲಿಯಾಹೀ ಸಂಕಟಕಾಳು । ಅಭಕ್ಷ್ಯ ಲಕ್ಷಣಶೀಳು ನವ್ಹೇ ಭಾವೋ ।।೩೫೬।। ಜ್ಯಾಸೀ ಅಸೇ ವ್ರತಧಾರಣ । ತೇಣೇ ರಜಸ್ವಲಾದಿ ನಿಂದ್ಯ ಜನ । ತ್ಯಾಂಸೀ ನ ಕರಾವೇ ಸಂಭಾಷಣ । ಧರಾವೇ ಮೌನ ನಿಂದಾಸ್ತವನೀ ।।೩೫೭।। ಸರ್ವಾಹೀ ಆಶ್ರಮಾಂಸೀ ಜಾಣ । ಸ್ವಧರ್ಮನಿಯಮಾಚೇ ಲಕ್ಷಣ । ಸಾಂಗೇನ ಮ್ಹಣೇ ಶ್ರೀಕೃಷ್ಣ । ಐಕ ಸಾವಧಾನ ಉದ್ಧವಾ ।।೩೫೮।।

ಸರ್ವಾಶ್ರಮಪ್ರಯುಕ್ತೋಽಯಂ ನಿಯಮಃ ಕುಲನಂದನ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯಸಂಯಮಃ ।।೩೫।।

ಅರ್ಥ:- ಇದು ಸಾಧಾರಣವಾಗಿ ಸರ್ವ ಆಶ್ರಮಗಳ ನಿಯಮವಾಗಿರುವುದು. ಸರ್ವ ಭೂತಮಾತ್ರರಲ್ಲಿ ಮದ್ಭಾವವನ್ನಿಡುವುದು ಮತ್ತು ಮನಸ್ಸು, ವಾಣೀ ಮತ್ತು ಶರೀರ ಇವುಗಳ ನಿಯಂತ್ರಣವು ಇದು ಕೂಡ ಸರ್ವ ಆಶ್ರಮಗಳ ಸಾಧಾರಣ ನಿಯಮವಾಗಿರುವುದು.

ಯದುವಂಶಕುಲನಂದನಾ । ಐಕ ಉದ್ಧವಾ ಸಜ್ಞಾನಾ । ವರ್ಣಾಶ್ರಮಸ್ವಧರ್ಮಲಕ್ಷಣಾ । ಸರ್ವಾಸ ಜಾಣಾ ಹೇ ಏಕೀ ನಿಷ್ಠಾ ।।೩೫೯।। ಮನಸಾವಾಚಾ ಕರ್ಮಣಾ । ನೇಮೂನಿ ಆಪ ಆಪಣಾ । ಸರ್ವಾಭೂತೀ ಬ್ರಹ್ಮಭಾವನಾ । ಅಖಂಡ ಧಾರಣಾ ರಾಖಾವೀ ।।೩೬೦।। ಐಸಾ ಮದ್ಭಾವ ಸರ್ವಾಭೂತೀ । ದೃಢ ಠಸಾವಲ್ಯಾ ಚಿತ್ತವೃತ್ತೀ । ಐಶಾ ನೈಷ್ಠಿಕ ಬ್ರಹ್ಮಚಾರ್ಯಾಪ್ರತೀ । ಮೋಕ್ಷಫಲಪ್ರಾಪ್ತೀ ಹರಿ ಬೋಲೇ ।।೩೬೧।।

ಏವಂ ಬೃಹದ್‌ವ್ರತಧರೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।
ಮದ್ಭಕ್ತಸ್ತೀವ್ರತಪಸಾ ದಗ್ಧಕರ್ಮಾಶಯೋಽಮಲಃ ।।೩೬।।

ಕಾಮದ ದರ್ಶನವು ಅಥವಾ ಕಾಮದ ಚಿಂತನೆಯು ಪುರುಷನಿಗೆ ಅತಿಶಯವಾಗಿ ಬಾಧಕವಾಗಿರುವುದು. ಆದ್ದರಿಂದ ಎಂದೆಂದಿಗೂ ಕಾಮದ ಸ್ಮರಣೆಯನ್ನು ಮಾಡಕೂಡದು ।।೩೫೩।। ಯಾವುದರಿಂದ ಕಾಮವು ಅಂತಃಕರಣದಲ್ಲಿ ಪ್ರವೇಶವಾಗಲಾರದೋ, ಅಂತಹ ಸದಾಚಾರ ಸಂಪನ್ನರಾಗಿ ವರ್ತಿಸಬೇಕು. ಸರ್ವ ಪ್ರಾಣಿಮಾತ್ರರಲ್ಲಿ ನನ್ನ ಸ್ವರೂಪವನ್ನೇ ಕಾಣಬೇಕು. ಈ ಮುಖ್ಯವಾದ ಮಾತನ್ನೇ ಶ್ರೀಹರಿಯು ಹೇಳುವನು ।।೩೫೪।।

ಶುಚಿರ್ಭೂತತನ, ಆಚಮನ, ಸ್ನಾನ, ಸಂಧ್ಯಾ, ತರ್ಪಣ, ಪೂಜಾ ಅರ್ಚನ, ಜಪಾದಿ ಅನುಷ್ಠಾನ, ಭಕ್ತಿಯುಕ್ತತೀರ್ಥಸೇವನ, ಇತ್ಯಾದಿಗಳನ್ನು ಆಚರಿಸಬೇಕು ।।೩೫೫।। ಅಧರ್ಮದ ಅಥವಾ ಅಕರ್ಮದ ಸ್ವಲ್ಪವೂ ಕೂಡ ಮೈಲಿಗೆಯಾಗಗೊಡಬಾರದು. ಎಷ್ಟೇ ಸಂಕಟ ಸಮಯ ಒದಗಲಿ ಆದರೂ ಕೂಡ ಅಭಕ್ಷ್ಯ ಭಕ್ಷಣವನ್ನು ಎಂದಿಗೂ ಮಾಡಬಾರದು ।।೩೫೬।। ವ್ರತಸ್ಥ ಪುರುಷನು ರಜಸ್ವಲೇ ಮತ್ತು ನಿಂದ್ಯ ಜನರೊಂದಿಗೆ ಭಾಷಣ ಮಾಡಬಾರದು. ನಿಂದಾಸ್ತುತಿಯ ವಿಷಯದಲ್ಲಿ ಮೌನವನ್ನು ಧರಿಸಬೇಕು ।।೩೫೭।। ಹೇ ಉದ್ಧವನೇ, ಸರ್ವ ಆಶ್ರಮದವರಿಗೆ ಸಮಾನವಾಗಿರುವಂತಹ ಸ್ವಧರ್ಮ ನಿಯಮಗಳ ಲಕ್ಷಣವನ್ನು ನಾನೀಗ ಹೇಳುವೆನು, ಸಾವಧಾನ ಚಿತ್ತದಿಂದ ಕೇಳು ಎಂದು ಶ್ರೀಕೃಷ್ಣನು ಹೇಳಿದನು ।।೩೫೮।।

ಹೇ ಯದುವಂಶ ಕುಲನಂದನಾ, ಜ್ಞಾನವಂತ ಉದ್ಧವಾ, ಕೇಳು. ವರ್ಣಾಶ್ರಮಗಳ ಸ್ವಧರ್ಮದ ಲಕ್ಷಣಗಳು ಸರ್ವರಿಗೂ ಸರಿ ಸಮಾನವಾಗಿರುವುವು ।।೩೫೯।। ಕಾಯಾ, ವಾಚಾ, ಮನದಿಂದ ಆತ್ಮಸಂಯಮವನ್ನು ಮಾಡಬೇಕು. ಸರ್ವ ಪ್ರಾಣಿಮಾತ್ರರಲ್ಲಿ ಬ್ರಹ್ಮಸ್ವರೂಪದ ಭಾವನೆಯನ್ನು ಧರಿಸಬೇಕು ।।೩೬೦।। ಈ ಪ್ರಕಾರವಾಗಿ ಸರ್ವಭೂತಮಾತ್ರರಲ್ಲಿ ನನ್ನ ಸ್ವರೂಪದ ಭಾವನೆಯನ್ನು ದೃಢಪಡಿಸಲು ಬ್ರಹ್ಮಚಾರಿಯವರಿಗೆ ಮೋಕ್ಷದ ಪ್ರಾಪ್ತಿಯಾಗುವುದು ।।೩೬೧।।

ಅರ್ಥ:- ನೈಷ್ಠಿಕ ಬ್ರಹ್ಮಚಾರೀ ಬ್ರಾಹ್ಮಣನು ಈ ನಿಯಮಗಳ ಪಾಲನೆಯನ್ನು ಮಾಡುವುದರಿಂದ ಅಗ್ನಿಯಂತೆ ತೇಜಸ್ವಿಯಾಗುವನು. ಪ್ರಖರವಾದ ತಪಶ್ಚರ್ಯಗಳಿಂದ ಆತನ ಕರ್ಮ ಸಂಸ್ಕಾರಗಳು ಭಸ್ಮವಾಗುವುವು. ಅಂತಃಕರಣವು ಶುದ್ಧವಾಗುವುದು ಮತ್ತು ಆತನು ನನ್ನ ಭಕ್ತನಾಗಿ ನನ್ನನ್ನು ಪಡೆಯುವನು.

ಯಾಪರೀ ಜೋ ಬ್ರಹ್ಮಚಾರೀ । ಮಹಾವ್ರತೇ ವ್ರತ ಧರೀ । ಮದ್ಭಾವನಾ ಭೂತಾಕಾರೀ । ಧಾರಣಾ ಧರೀ ಅವಿಶ್ರಮ ॥೩೬೨॥ ಯಾಪರೀ ಕರಿತಾ ಮದ್ಭಜನಾ । ಜಳಾಲ್ಯಾ ಕರ್ಮಬೀಜೇಸೀ ವಾಸನಾ । ತೇವ್ಹಾ ಪೂರ್ಣ ಭಕ್ತಿ ಮಾಝೀ ಜಾಣಾ । ತರಿ ಅಂತಃಕರಣಾ ಭಕ್ತಾಂಚ್ಯಾ ॥೩೬೩॥ ತೇವ್ಹಾ ನಿರುಪಚಾರ ನಿಜಸ್ಥಿತೀ । ಸಹಜಚಿ ಘಡೇ ಮಾಝೀ ಭಕ್ತೀ । ತೇಥ ಜ್ಯಾ ಜ್ಯಾ ದೇಖೇ ದೃಶ್ಯ ವ್ಯಕ್ತೀ । ಮದ್ಭಾವಪ್ರತೀತೀ ಚಿದ್ರೂಪೇ ॥೩೬೪॥ ಐಶೀ ಘಡತಾ ಮಾಝೀ ಭಕ್ತೀ । ಆರ್ತ ಜಿಜ್ಞಾಸು ಅರ್ಥಾರ್ಥೀ । ಯಾಂಚೀ ಉಠವೂನಿಯಾ ಪಂಕ್ತೀ । ಚಿನ್ಮಾತ್ರೈಕ ಚೌಥೀ ಭಕ್ತಿ ತೋ ಲಾಭೇ ॥೩೬೫॥ ಸಾಚಚೀ ಜೇ ಭಕ್ತೀಚ್ಯಾ ಠಾಯೀ । ಚಾರೀ ಮುಕ್ತೀ ಲೋಳತೀ ಪಾಯೀ । ತೋ ಸ್ವಾನಂದ ಮದ್ಭಕ್ತಾಂಚ್ಯಾ ದೇಹೀ । ಸಂಪೂರ್ಣ ಪಾಹೀ ಉಲ್ಹಾಸೇ ॥೩೬೬॥ ತೇವ್ಹಾ ಮಜ ವ್ಹಾವೀ ಮುಕ್ತತಾ । ಹೇಹೀ ನಾಠವೇ ತ್ಯಾಚ್ಯಾ ಚಿತ್ತಾ । ಹೋ ಕಾ ''ಗೇಲಿ ಮಾಝೀ ಬದ್ಧತಾ'' । ಹೇಹೀ ಸರ್ವಥಾ ಸ್ಮರೇನಾ ॥೩೬೭॥ ಏವಂ ಮಾಝೇನಿ ಭಜನಸುಖೇ । ವಿಸರಲಾ ಸಕಳ ಸುಖದುಃಖೇ । ಮಾಝೇ ಭಕ್ತೀಚೇನಿ ಹರಿಖೇ । ಸ್ವಾನಂದತೋಖೇ ಸಂತುಷ್ಟ ॥೩೬೮॥ ಐಸಾ ನೈಷ್ಠಿಕ ಬ್ರಹ್ಮಚಾರೀ । ಮಜ ಪಾವಲಾ ಸ್ವಧರ್ಮೇಕರೀ । ಆತಾ ಉಪಕುರ್ವಾಣಾಚೀ ಪರಿ । ಐಕ ದುಸರೀ ಅವಸ್ಥಾ ॥೩೬೯॥

ಅಥಾನಂತರಮಾವೇಕ್ಷನ್ಯಥಾ ಜಿಜ್ಞಾಸಿತಾಗಮಃ । ಗುರವೇ ದಕ್ಷಿಣಾಂ ದತ್ವಾ ಸ್ನಾಯಾದ್ಗುರ್ವನುಮೋದಿತಃ ॥೩೭॥

ಅರ್ಥ:- ಪ್ರಿಯ ಉದ್ಧವಾ, ನೈಷ್ಠಿಕ ಬ್ರಹ್ಮಚರ್ಯಯವನ್ನು ಗ್ರಹಣ ಮಾಡುವ ಇಚ್ಛೆಯು ಇರದಿದ್ದರೆ, ಗೃಹಸ್ಥಾಶ್ರಮವನ್ನು ಪ್ರವೇಶಿಸುವುದಕ್ಕಾಗಿ ಅಪೇಕ್ಷೆಯಾದರೆ ವಿಧಿಯುಕ್ತವಾಗಿ ವೇದಾಧ್ಯಯನವನ್ನು ಸಮಾಪ್ತಗೊಳಿಸಿ ಆಚಾರ್ಯರಿಗೆ ದಕ್ಷಿಣೆಯನ್ನು ಮುಟ್ಟಿಸಬೇಕು. ಆಚಾರ್ಯರ ಅನುಮತಿಯನ್ನು ಪಡೆದು ಸಮಾವರ್ತನ ಸಂಸ್ಕಾರವನ್ನು ಮಾಡಬೇಕು. ಅಭ್ಯಂಗಸ್ನಾನವನ್ನು ಮಾಡಿ ಗುರುಕುಲದಿಂದ ನಿವೃತ್ತನಾಗಬೇಕು.

ಸಂಪೂರ್ಣ ಕೇಲಿಯಾ ಅಧ್ಯಯನ । ಜಾಹಲಿಯಾ ವೇದಶಾಸ್ತ್ರಸಂಪನ್ನ । ತೇಣೇ ಗುರೂಸೀ ಆಜ್ಞಾ ಪುಸೋನ । ವ್ರತವಿಸರ್ಜನ ಸಕಾಮಾ ॥೩೭೦॥ ಸಕಾಮನಿಷ್ಕಾಮತೇಚಾ ಭರೂ । ದೇಖೋನಿ ವಿವೇಕ ವಿಚಾರೂ । ತೈಶೀಚ ಆಜ್ಞಾ ದೇತೀ ಗುರೂ । ಜೈಸಾ ಅಧಿಕಾರೂ ಶಿಷ್ಯಾಚಾ ॥೩೭೧॥ ಜ್ಯಾಸೀ ಗೃಹಾಶ್ರಾಮಾಚೀ ಆಸಕ್ತೀ ।

ಯಾವ ಬ್ರಹ್ಮಚಾರಿಯು ಇಂತಹ ಮಹಾವ್ರತದ ಪಾಲನೆಯನ್ನು ಮಾಡುವನೋ, ಮತ್ತು ಸರ್ವಪ್ರಾಣಿಮಾತ್ರರಲ್ಲಿ ನನ್ನದೇ ಭಾವನೆಯನ್ನಿಟ್ಟು ಅದನ್ನು ಅಂತಃಕರಣದಲ್ಲಿ ದೃಢಕರಿಸುವನೋ ॥೩೬೨॥ ಆತನ ಸರ್ವ ವಾಸನೆಗಳು ನನ್ನ ಭಕ್ತಿಕಾರಣವಾಗಿ ಕರ್ಮಬೀಜ ಸಹ ಸುಟ್ಟು ಹೋಗುವುವು. ಹಾಗೆಯೇ ನನ್ನ ಪರಿಪೂರ್ಣ ಭಕ್ತಿಯು ಆತನ ಅಂತಃಕರಣದಲ್ಲಿ ನಟ್ಟಿಕೊಳ್ಳುವುದು ॥೩೬೩॥ ಆಗ ಯಾವುದೇ ಉಪಚಾರಗಳಿಲ್ಲದೇ ಸಹಜ ಸ್ಥಿತಿಯಿಂದ ಆತನಿಗೆ ನನ್ನ ಭಕ್ತಿಯು ಸಾಧಿಸುವುದು. ಆಗ ಆತನು ಯಾವ ಯಾವ ದೃಶ್ಯ ವ್ಯಕ್ತಿಯನ್ನು ಕಾಣುವನೋ, ಅವರಲ್ಲಿ ಚಿದ್ರೂಪದಿಂದ ನಾನೇ ಇರುವೆನೆಂಬ ಹೀಗೆ ಆತನಿಗೆ ಪ್ರತೀತಿಯಾಗುವುದು ॥೩೬೪॥ ಇಂತಹ ನನ್ನ ಪ್ರೇಮಸ್ವರೂಪ ಭಕ್ತಿಯು ಪ್ರಾಪ್ತವಾಯಿತೆಂದರೆ, ಆತನು ಆರ್ತ, ಜಿಜ್ಞಾಸು, ಅರ್ಥಾರ್ಥಿ ಈ ಮೂವರ ಭಕ್ತಿಯ ಪಂಕ್ತಿಯಿಂದ ದಾಟಿಕೊಂಡು ಸರ್ವಕ್ಕಿಂತಲೂ ಶ್ರೇಷ್ಠವಾಗಿರುವ ನನ್ನ ನಾಲ್ಕನೆಯ ಜ್ಞಾನಭಕ್ತಿಯನ್ನು ಆತನು ಪ್ರಾಪ್ತಮಾಡಿಕೊಳ್ಳುವನು ॥೩೬೫॥ ನಿಜವಾಗಿಯೂ ಯಾವ ಈ ಭಕ್ತಿಯಿಂದ ನಾಲ್ಕೂ ಮುಕ್ತಿಗಳು ಆತನ ಪಾದದಡಿಯಲ್ಲಿ ಉರುಳಾಡುವುವು. ಆ ಸ್ವಾನಂದವು ನನ್ನ ಭಕ್ತರ ದೇಹದಲ್ಲಿ ಪರಿಪೂರ್ಣವಾಗಿ ಉಲ್ಹಾಸ ಭರಿತವಾಗಿರುವುದು ॥೩೬೬॥ ಅಂತಹ ಸಮಯದಲ್ಲಿ ತಾನು ಮುಕ್ತನಾಗಬೇಕೆಂಬ ವಿಚಾರವೂ ಕೂಡ ಆತನ ಮನದಲ್ಲಿ ಮೂಡುವುದಿಲ್ಲ. ಅಥವಾ ನನ್ನ ಬಂಧನವು ಬಿಡುಗಡೆಯಾಯಿತು ಎಂಬ ಈ ಸ್ಮರಣೆಯು ಆತನಿಗೆ ಇರುವುದಿಲ್ಲ ॥೩೬೭॥ ತಾತ್ಪರ್ಯವೇನೆಂದರೆ ನನ್ನ ಭಜನೆಯ ಸುಖದಲ್ಲಿಯೇ ಆತನು ತನ್ನ ಸರ್ವ ಸುಖದುಃಖಗಳನ್ನು ಮರೆತು ಬಿಡುವನು ಹಾಗೂ ನನ್ನ ಭಕ್ತಿಯ ಹರುಷದಲ್ಲಿ ಸ್ವಾನಂದಸುಖದಿಂದ ತೃಪ್ತನಾಗಿರುವನು ॥೩೬೮॥ ಹೀಗಿರುವ ನೈಷ್ಠಿಕ ಬ್ರಹ್ಮಚಾರಿಯು ತನ್ನ ಸ್ವಧರ್ಮಾಚರಣೆಯಿಂದ ನನಗೆ ಪ್ರಾಪ್ತನಾಗುವನು. ಈಗ ಬ್ರಹ್ಮಚರ್ಯ ಆಶ್ರಮದಲ್ಲಿನ ಉಪಕುರ್ವಾಣ ನಾಮದ ಎರಡನೆಯ ಯಾವ ಅವಸ್ಥೆಯ ಪ್ರಕಾರವನ್ನು ಹೇಳುವೆನು, ಕೇಳು ॥೩೬೯॥

ಅಧ್ಯಯನವು ಪೂರ್ಣಗೊಂಡು ವೇದಶಾಸ್ತ್ರ ಸಂಪನ್ನನಾಗಿ ಅವುಗಳ ಪೂರ್ಣ ಜ್ಞಾನವು ಪ್ರಾಪ್ತವಾದನಂತರ ಗುರುಗಳ ಆಜ್ಞೆಯನ್ನು ಪಡೆದು ಗೃಹಸ್ಥಾಶ್ರಮದಲ್ಲಿ ಪ್ರವೇಶವನ್ನು ಮಾಡುವ ಇಚ್ಛೆ ಇದ್ದವರು ವ್ರತ ವಿಸರ್ಜನೆಯನ್ನು ಮಾಡಬೇಕು ॥೩೭೦॥ ವಿಷಯಭೋಗದ ಇಚ್ಛೆ ಅಥವಾ ಅನಿಚ್ಛೆ ಯಾರಲ್ಲಿ ಹೇಗೆ ಇರುವುದನ್ನು ಸರಿಯಾಗಿ ವಿಚಾರಿಸಿ ಶಿಷ್ಯನ ಅಧಿಕಾರದಂತೆ ಗುರುಗಳೂ ಕೂಡ ಆಜ್ಞೆಯನ್ನು ಕೊಡುವರು ॥೩೭೧॥ ಯಾರಿಗೆ ಗೃಹಸ್ಥಾಶ್ರಮದಲ್ಲಿ ಪ್ರವೇಶ ಮಾಡಬೇಕಾಗಿದೆಯೋ, ಆತನು ಯಥಾಶಕ್ತಿ ಗುರುದಕ್ಷಿಣೆಯನ್ನು ಕೊಡಬೇಕು ಹಾಗೆಯೇ ತನ್ನ ವ್ರತವನ್ನು ಸಮಾಪ್ತಿಗೊಳಿಸಬೇಕು ॥೩೭೨॥ ತದನಂತರ ಗುರುಗಳ ಆಜ್ಞೆಯೊಂದಿಗೆ ಸಮಾವರ್ತನ ಅಂದರೆ ಲಗ್ನಕ್ಕೆ ಮುಂಚಿತವಾಗಿ ಬ್ರಹ್ಮಚರ್ಯ ಸಮಾಪ್ತಿಯ ವಿಧಿಗಾಗಿ ಮಂಗಲ ಸ್ನಾನ ಮಾಡಿ ವ್ರತವಿಸರ್ಜನೆಯನ್ನು ಮಾಡಬೇಕು ॥೩೭೩॥

ತೇಣೇ ಆಪುಲ್ಯಾ ಯಥಾಶಕ್ತೀ । ದಕ್ಷಿಣಾ ದೇಊನಿ ಗುರುಪ್ರತೀ । ವ್ರತಸಮಾಪ್ತೀ ಕರಾವೀ ।೩೭೨॥ ಕರಾವಯಾ ಸಮಾವರ್ತನ । ಘೇಊನಿ ಗುರೂಚೇ ಅನುಮೋದನ । ಕರಾವೇ ಮಂಗಲಸ್ನಾನ । ವಿಸರ್ಜನ ವ್ರತಬಂಧಾ ।೩೭೩॥

ಯೇಥ ಅಧಿಕಾರಾಚಾ ಭೇದು । ಸ್ವಯೇ ಸಾಂಗತೋ ಗೋವಿಂದು । ತೋಚಿ ಶ್ಲೋಕಾರ್ಥೇ ವಿಶದು । ವೈರಾಗ್ಯಸಂಬಂಧು ಅಧಿಕಾರಾ ।೩೭೪॥

ಗೃಹಂ ವನಂ ವೋಪವಿಶೇತ್ಪ್ರವ್ರಜೇದ್ವಾ ದ್ವಿಜೋತ್ತಮಃ ।
ಆಶ್ರಮಾದಾಶ್ರಮಂ ಗಚ್ಛೇನ್ನಾನ್ಯಥಾ ಮತ್ಪರಶ್ಚರೇತ್ ।೩೮॥

ಅರ್ಥ:- ಬ್ರಹ್ಮಚಾರಿಯು ಸಕಾಮನಾದರೆ ಆತನು ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. ಅಂತಃಕರಣ ಶುದ್ಧಿಯನ್ನು ಮಾಡಿಕೊಳ್ಳುವ ಇಚ್ಛೆಯಾದರೆ ವಾನಪ್ರಸ್ಥಾಶ್ರಮದ ಸ್ವೀಕಾರ ಮಾಡಬೇಕು. ಅಂತಃಕರಣ ಶುದ್ಧವಿರುವ ಬ್ರಾಹ್ಮಣನು ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಬ್ರಹ್ಮಚರ್ಯಾಶ್ರಮದಿಂದ ಗೃಹಸ್ಥಾಶ್ರಮಕ್ಕೆ, ಗೃಹಸ್ಥಾಶ್ರಮದಿಂದ ವಾನಪ್ರಸ್ಥಾಶ್ರಮಕ್ಕೆ, ವಾನಪ್ರಸ್ಥಾಶ್ರಮದಿಂದ ಸನ್ಯಾಸಾಶ್ರಮಕ್ಕೆ ಪಾದಾರ್ಪಣೆ ಮಾಡಬೇಕು. ನನ್ನಲ್ಲಿ ಏಕರೂಪನಾದ ಪುರುಷನು ಅನಾಶ್ರಮಿಯಾಗಬಾರದು. ಉಲಟಾ ಕ್ರಮದಿಂದ ಆಶ್ರಮವನ್ನು ಸ್ವೀಕರಿಸಬಾರದು.

ಜ್ಯಾಸೀ ವೈರಾಗ್ಯ ನಾಹೀ ಸರ್ವಥಾ । ಹೃದಯೀ ಸ್ತ್ರೀಕಾಮಾಚೀ ಆಸ್ಥಾ । ತೇಣೇ ದ್ವಿತಿಯಾಶ್ರಮಸಂಸ್ಥಾ । ಗಾರ್ಹಸ್ಥ್ಯ ಕರಾವೇ ।೩೭೫॥ ಸ್ತ್ರೀಕಾಮು ತರೀ ನಾವಡೇ । ವಿವೇಕ ವೈರಾಗ್ಯ ಜ್ಯಾಸೀ ಥೋಡೇ । ತೇಣೇ ವಾನಪ್ರಸ್ಥಾಶ್ರಮಾಕಡೇ । ನಿಘಾವೇ ರೋಕಡೇ ತತ್ಕಾಳ ।೩೭೬॥ ಜೋ ವಿವೇಕತೇಜೇ ದೀಪ್ತಿಮಂತ । ಜ್ಯಾಸೀ ಸದಾ ವೈರಾಗ್ಯ ಧಡಧಡೀತ । ಜೋ ಸವಾರ್ಥೀ ದಿಸೇ ವಿರಕ್ತ । ತ್ಯಾಸೀಚ ನಿಶ್ಚಿತ ಚತುರ್ಥಾಶ್ರಮ ।೩೭೭॥ ಮುಖ್ಯತ್ವೇ ಜ್ಯಾಸೀ ಬ್ರಾಹ್ಮಣಜನ್ಮ । ತೋಚಿ ಬೋಲಿಜೇ ದ್ವಿಜೋತ್ತಮ । ತ್ಯಾಸೀಚ ಬೋಲಿಲಾ ಚತುರ್ಥಾಶ್ರಮ । ವೈಶ್ಯಕ್ಷತ್ರಿಯಾ ನೇಮ ಸನ್ಯಾಸೀ ನಾಹೀ ।೩೭೮॥ ಕ್ಷತ್ರಿಯ ಸನ್ಯಾಸ ಅಂಗೀಕಾರಿತೀ । ತಿಹೀ ರಿಘಾವೇ ಮಹಾಪಂಥೀ । ದಂಡಕಮಂಡಲಾದಿಪ್ರವೃತ್ತೀ । ವ್ಯವಹಾರಸ್ಥಿತೀ ತ್ಯಾ ನಾಹೀ ।೩೭೯॥ ಬ್ರಾಹ್ಮಣಾಸೀ ಬ್ರಹ್ಮಚರ್ಯಾಚ್ಯಾ ಪೋಟೀ । ಧಡಧಡೀತ ಜೈ ವೈರಾಗ್ಯ ಉಠೀ । ತೈ ಸನ್ಯಾಸಪರಿಪಾಠೀ । ಉಠಾಉಠೀ ಅಂಗೀಕಾರೂ ।೩೮೦॥ ಬೈಸತಾ ಭಾರ್ಯೇಚ್ಯಾ ಪಾಟೀ । ಬಹುಲ್ಯಾವರೀ ವೈರಾಗ್ಯ ಉಠೀ । ತ್ಯಾಸೀ ಸನ್ಯಾಸಗ್ರಹಣೀ ಗೋಠೀ । ಅಧಿಕಾರೂ ಶ್ರೇಷ್ಠೀ ಬೋಲಿಲಾ ।೩೮೧॥ ಸನ್ಯಾಸಗ್ರಹಣೀ ಜ್ಯಾಚೇ । ವೈರಾಗ್ಯ ದಿಸೇ ಅರ್ಧಕಾಚೇ । ತ್ಯಾಸೀ ಸನ್ಯಾಸಗ್ರಹಣಾಚೇ । ಯೋಗ್ಯತ್ವ ಸಾಚೇ ಅಸೇನಾ ।೩೮೨॥ ಜೈಸಾ ಕಾ ವೋಕಿಲಾ

ಇದರಲ್ಲಿಯ ಅಧಿಕಾರದ ಭೇದವನ್ನು ಈಗ ಶ್ರೀಕೃಷ್ಣನು ಹೇಳುವನು, ವೈರಾಗ್ಯದ ಆಧಾರದಿಂದ ಪ್ರಾಪ್ತವಾಗುವ ಅಧಿಕಾರದ ಭೇದವು ಹೇಗಿರುವುದೆಂಬುದನ್ನು ಭಗವಾನನು ಮುಂದಿನ ಶ್ಲೋಕದಲ್ಲಿ ಸ್ಪಷ್ಟಮಾಡಿ ಹೇಳುವನು ।೩೭೪॥

ಯಾರ ಮನಸ್ಸಿಲ್ಲಿ ಸ್ವಲ್ಪವೂ ಕೂಡ ವೈರಾಗ್ಯವು ಇರುವುದಿಲ್ಲವೋ, ಹಾಗೂ ಅಂತಃಕರಣದಲ್ಲಿ ಸತತವಾಗಿ ಸ್ತ್ರೀಸುಖದ ಲಾಲಸೆವಿರುವುದೋ, ಆತನು ಎರಡನೆಯದಾದ ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಬೇಕು ।೩೭೫॥ ಯಾರಿಗೆ ಸ್ತ್ರೀ ಸುಖದ ವಿಶೇಷ ಪ್ರೇಮವಿರುವುದಿಲ್ಲವೋ, ಹಾಗೆಯೇ ವಿವೇಕ ವೈರಾಗ್ಯವು ಬಹು ತೀವ್ರ ಸ್ವರೂಪದಲ್ಲಿರುವುದಿಲ್ಲವೋ, ಆತನು ಕೂಡಲೇ ವಾನಪ್ರಸ್ಥ ಆಶ್ರಮದ ಸ್ವೀಕಾರವನ್ನು ಮಾಡಬೇಕು ।೩೭೬॥ ಯಾರು ವಿವೇಕದ ತೇಜದಿಂದ ಪ್ರಖರ ತೇಜಸ್ವಿಯಾಗಿರುವನೋ, ಯಾರ ಅಂತಃಕರಣದಲ್ಲಿ ವಿವೇಕವು ಸದಾ ಜಾಗೃತವಾಗಿರುವುದೋ, ಯಾರು ಯಾವುದೇ ವಿಷಯಗಳಲ್ಲಿ ವಿರಕ್ತನಾಗಿರುವನೋ, ಆತನು ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು ।೩೭೭॥ ಯಾರಿಗೆ ಪ್ರಾಮುಖ್ಯವಾಗಿ ಬ್ರಾಹ್ಮಣಧರ್ಮವಿದ್ದರೆ, ಆತನಿಗೆ ದ್ವಿಜೋತ್ತಮ ಎಂದು ಹೇಳುವರು. ಆತನು ಸನ್ಯಾಸವನ್ನು ಪಡೆಯಬೇಕು. ವೈಶ್ಯ ಮತ್ತು ಕ್ಷತ್ರಿಯರಿಗೆ ಸನ್ಯಾಸಾಶ್ರಮದ ನಿಯಮವನ್ನು ಹೇಳಿರುವುದಿಲ್ಲ ।೩೭೮॥ ಕ್ಷತ್ರಿಯರು ಸನ್ಯಾಸವನ್ನು ಸ್ವೀಕರಿಸಬೇಕಾದರೆ ಅವರು ಬಹುದಕ ಸನ್ಯಾಸವನ್ನು ಪಡೆಯಬೇಕು ಹಾಗೆಯೇ ಮಹಾಯಾತ್ರೆಗಳನ್ನು ಮಾಡುತ್ತ ತಿರುಗುತ್ತಿರಬೇಕು. ಇವರಿಗೆ ದಂಡ, ಕಮಂಡಲಗಳ ನಿಯಮವಿರುವುದಿಲ್ಲ ।೩೭೯॥ ಬ್ರಾಹ್ಮಣನಿಗೆ ಬ್ರಹ್ಮಚರ್ಯ ಆಶ್ರಮದಲ್ಲಿ ಅಂತಃಕರಣಪೂರ್ವಕ ಪ್ರಖರವಾದ ವೈರಾಗ್ಯವು ನಿರ್ಮಾಣವಾದರೆ ಆತನು ತತ್ಕಾಲದಲ್ಲಿ ಸನ್ಯಾಸವನ್ನು ಸ್ವೀಕರಿಸಬೇಕು ।೩೮೦॥ ವಿವಾಹವನ್ನು ಮಾಡಿಕೊಳ್ಳುವುದಕ್ಕಾಗಿ ಹೆಂಡತಿಯ ಎದುರಿನಲ್ಲಿ ಲಗ್ನಮಂಟಪದ ಮೇಲೆ ನಿಂತುಕೊಂಡಿದ್ದರೂ ಕೂಡ ಅಂತಃಕರಣದಲ್ಲಿ ತೀವ್ರ ವೈರಾಗ್ಯವು ನಿರ್ಮಾಣವಾಯಿತೆಂದರೆ ಆತನು ಸನ್ಯಾಸ ಆಶ್ರಮದ ಸ್ವೀಕಾರವನ್ನು ಮಾಡಬೇಕು. ಹೀಗೆ ಜೇಷ್ಠ ಪುರುಷರು ಆತನಿಗೆ ಸನ್ಯಾಸದ ಅಧಿಕಾರವನ್ನು ಹೇಳಿರುವರು ।೩೮೧॥ ಸನ್ಯಾಸವನ್ನು ಗ್ರಹಣ ಮಾಡಲಿಕ್ಕೆ ಯಾರ ಮನದಲ್ಲಿ ವೈರಾಗ್ಯವು ಹೊಯ್ದಾಡುತ್ತಿರುವುದೋ, ಆತನಿಗೆ ಸನ್ಯಾಸದ ಅಧಿಕಾರವು ನಿಜವಾಗಿಯೂ ಇರುವುದಿಲ್ಲ ।೩೮೨॥ ವಾಂತಿ ಮಾಡಿಕೊಂಡ ಅನ್ನದತ್ತ ಪುನಃ ನೋಡಲು ಮನಸ್ಸಿಗೆ ಹೇಸಿಗೆಯಾಗುವಂತೆ ಯಾರಿಗೆ ವಿಷಯ ಭೋಗದ ಸುಖಕ್ಕಾಗಿ ಹೇಸಿಗೆ ಬರುತ್ತಿರುವುದೋ ।೩೮೩॥ ನಿಜವಾಗಿಯೂ ಆತನಿಗೆ ಸನ್ಯಾಸವನ್ನು ಸ್ವೀಕರಿಸುವ ಅಧಿಕಾರವು ಇರುವುದು. ಯಾರಿಗೆ ವಿಷಯಗಳ ವಿಕಾರವು ಸ್ವಲ್ಪವೂ ಕೂಡ ಬಾಧಿಸುವುದಿಲ್ಲವೋ, ಆತನೇ ನಿಜವಾದ ಸನ್ಯಾಸಿಯಾಗಿರುವನು ।೩೮೪॥

ವೋಕ । ಜ್ಯಾಚಾ ತ್ಯಾಸ ನಾವಡೇ ದೇಖ । ತೈಸೇ ವಿಷಯಭೋಗಸುಖ । ಜ್ಯಾಸೀ ನಿಃಶೇಷ ನಾವಡೇ ।೩೮೩॥ ತ್ಯಾಸೀ ಸನ್ಯಾಸೀ ಅಧಿಕಾರು । ತೋಚಿ ಸನ್ಯಾಸೀ ಸಾಚಾರು । ಜ್ಯಾಸೀ ವಿಷಯಾಂಚಾ ವಿಕಾರು । ಅಣುಮಾತ್ರ ಬಾಧೇನಾ ।೩೮೪॥

ಪ್ರಥಮ ಬ್ರಹ್ಮಚರ್ಯಯುಕ್ತ । ವೈರಾಗ್ಯ ನ ಚಢೇಚಿ ಹಾತ । ತರೀ ಹೋಊನಿ ಗೃಹಸ್ಥ । ಸ್ವಧರ್ಮಯುಕ್ತ ವರ್ತಾವೇ ।೩೮೫॥ ತೇಥೇ ಸ್ವಧರ್ಮೇ ವಿಷಯ ಸೇವಿತಾ । ದೃಢ ಸಾಧಾವೀ ವಿರಕ್ತತಾ । ತೇಥೇಹೀ ವೈರಾಗ್ಯ ನ ಯೇ ಹಾತಾ । ತರೀ ವಾನಪ್ರಸ್ಥಾಶ್ರಮೀ ವ್ಹಾವೇ ।೩೮೬॥ ಯಾಪರೀ ಆಶ್ರಮಾದಾಶ್ರಮಾ ಜಾತಾ । ವೈರಾಗ್ಯೇ ಸನ್ಯಾಸಗ್ರಹಣತಾ । ಪರೀ ಅನಾಶ್ರಮೀ ತತ್ತ್ವತಾ । ನಾಹೀ ಸರ್ವಥಾ ಅಧಿಕಾರೂ ।೩೮೭॥ ಸಾಂಡೂನಿ ಪೂರ್ವಾಶ್ರಮಾಸೀ । ಜೋ ಗೇಲಾ ಆಶ್ರಮಾಂತರಾಸೀ । ತೇಥೂನಿ ಪುಢಾರಾ ಮಾರ್ಗ ತ್ಯಾಸೀ । ಪರೀ ಮಾಗೇ ಯಾವಯಾಸೀ ವಿಧಿ ನಾಹೀ ।೩೮೮॥ ಕಾ ಮತ್ಪರ ಜೋ ಮಾಝಾ ಭಕ್ತ । ತ್ಯಾಸೀ ಆಶ್ರಮನೇಮ ನಾಹೀ ಯೇಥ । ತೋ ಮಾಝೇನಿ ಭಜನೇ ಕೃತಕೃತ್ಯ । ಜಾಣ ನಿಶ್ಚಿತ ಉದ್ಧವಾ ।೩೮೯॥ ಸದ್ಭಾವೇ ಮಾಝೀ ಭಕ್ತಿ ಕರಿತಾ । ವಿವೇಕವೈರಾಗ್ಯ-ಯೋಗ್ಯತಾ । ಪಾವೋನಿ ಮಾಝೀ ಪೂರ್ಣ ಸತ್ತಾ । ಸಾಯುಜ್ಯತಾ ನೇಘತೀ ।೩೯೦॥ ಐಸೇ ಜೇ ಮಾಝೇ ಭಕ್ತೋತ್ತಮ । ತ್ಯಾಸೀ ನ ಲಗೇ ಆಶ್ರಮನೇಮ । ತ್ಯಾಂಚಾ ಸರ್ವಹೀ ಮೀ ಸ್ವಧರ್ಮ । ಐಸೇ ಪುರುಷೋತ್ತಮ ಬೋಲಿಲಾ ।೩೯೧॥ ಉದ್ಧವಾ ಐಕ ಪಾ ನಿಶ್ಚಿತೀ । ಗೃಹಸ್ಥಾಚೀ ಸ್ವಧರ್ಮಸ್ಥಿತೀ । ಸಮೂಳ ಸಾಂಗೇನ ತುಜಪ್ರತೀ । ಐಸೇ ಶ್ರೀಪತಿ ಬೋಲಿಲಾ ।೩೯೨॥

ಗೃಹಾರ್ಥೀ ಸದೃಶಿಂ ಭಾರ್ಯಾಮುದ್ವಹೇದಜುಗುಪ್ಸಿತಾಮ್ ।
ಯವೀಯಸೀಂ ತು ವಯಸಾ ಯಾಂ ಸವರ್ಣಾಮನುಕ್ರಮಾತ್ ।೩೯॥

ಅರ್ಥ - ಗೃಹಸ್ಥಾಶ್ರಮ ಜೀವನ ಬಯಸುವವರು ತಮ್ಮ ಜಾತಿಯಲ್ಲಿಯೇ ನಿಂದಾತೀತಳೂ ತಮಗಿಂತ ವಯಸ್ಸಿನಲ್ಲಿ ಕಿರಿಯಳೂ ಆದ ಕನ್ಯೆಯನ್ನು ಮದುವೆ ಮಾಡಿಕೊಳ್ಳಬೇಕು. ಅಧಿಕ ಪತ್ನಿಯರನ್ನು ಬಯಸುವವರು ಮೊದಲ ಮದುವೆಯ ತರುವಾಯವೇ ಉಳಿದವರನ್ನು ವಿವಾಹ ಮಾಡಿಕೊಳ್ಳಬೇಕು ಹಾಗೂ ಇಂತಹ ಪತ್ನಿಯರು ಕೆಳಜಾತಿಗೆ ಸೇರಿದವರಾಗಿರಬೇಕು.

ಕರೋನಿಯಾ ಸಮಾವರ್ತನ । ವ್ರತಬಂಧಾಚೇ ವಿಸರ್ಜನ । ಗುರುಆಜ್ಞಾ ಘೇಊನಿ ಜಾಣ ।

ಯಾರಿಗೆ ಬ್ರಹ್ಮಚರ್ಯ ಆಶ್ರಮದಲ್ಲಿ ಇದ್ದಾಗ ಅಂತರಂಗದಲ್ಲಿ ವಿರಕ್ತಿಯು ಉತ್ಪನ್ನವಾಗದಿದ್ದರೆ, ಆತನು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಸ್ವಧರ್ಮದಿಂದ ವರ್ತಿಸಬೇಕು ।೩೮೫॥ ಗೃಹಸ್ಥಾಶ್ರಮದ ಧರ್ಮದಂತೆ ವಿಷಯ ಭೋಗಗಳನ್ನು ಪಡೆಯುತ್ತಿದ್ದರೂ, ಮೆಲ್ಲಮೆಲ್ಲನೆ ಆ ವಿಷಯಗಳಿಂದ ವಿರಕ್ತನಾಗುತ್ತ ನಡೆಯಬೇಕು. ಒಂದುವೇಳೆ ಅದರಲ್ಲಿಯೂ ಕೂಡ ವೈರಾಗ್ಯವು ಉತ್ಪನ್ನವಾಗದಿದ್ದರೆ ಆತನು ವಾನಪ್ರಸ್ಥ ಆಶ್ರಮವನ್ನು ಸ್ವೀಕರಿಸಬೇಕು ।೩೮೬॥ ಈ ಪ್ರಕಾರವಾಗಿ ಒಂದು ಆಶ್ರಮದಿಂದ ಇನ್ನೊಂದು ಆಶ್ರಮದಲ್ಲಿ ಪ್ರವೇಶವನ್ನು ಮಾಡುತ್ತಿರಲು ಉತ್ತರೋತ್ತರವಾಗಿ ವೈರಾಗ್ಯವನ್ನು ಬೆಳೆಸುತ್ತಿರಬೇಕು ಮತ್ತು ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಆದರೆ ಯಾವುದೇ ಆಶ್ರಮದ ಹೊರತಾಗಿ ಇರಲು ಯಾವುದೇ ಪ್ರಕಾರದ ಅಧಿಕಾರವು ಇರುವುದಿಲ್ಲ ।೩೮೭॥ ತನ್ನ ಮೊದಲನೆಯ ಆಶ್ರಮವನ್ನು ಬಿಟ್ಟುಕೊಟ್ಟು ಎರಡನೆಯ ಆಶ್ರಮದಲ್ಲಿ ಯಾರು ಪ್ರವೇಶವನ್ನು ಮಾಡುವನೋ, ಆತನಿಗೆ ಮುಂದಿನ ಆಶ್ರಮದಲ್ಲಿ ಹೋಗುವ ಅಧಿಕಾರವು ಇರುವುದು. ಆದರೆ ಹಿಂದಿನ ಆಶ್ರಮಕ್ಕೆ ಬರುವ ವಿಧಿಯು ಶಾಸ್ತ್ರದಲ್ಲಿ ಮಾನ್ಯಮಾಡಿರುವುದಿಲ್ಲ ।೩೮೮॥ ಯಾವ ಭಕ್ತನು ನನ್ನ ಭಜನೆಯಲ್ಲಿ ಅತಿಶಯ ಪ್ರೇಮದಿಂದ ತತ್ಪರನಾಗುವನೋ, ಆತನಿಗೆ ಮಾತ್ರ ಈ ಆಶ್ರಮಗಳ ನಿಯಮಗಳು ಸಂಬಂಧಪಡಲಾರವು. ಹೇ ಉದ್ಧವನೇ, ಆತನು ಕೇವಲ ನನ್ನ ಭಜನೆಯಿಂದಲೇ ಕೃತಕೃತ್ಯನಾಗುವನು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೮೯॥ ಸದ್ಭಾವನೆಯಿಂದ ನನ್ನ ಭಜನೆಯನ್ನು ಮಾಡುತ್ತಿರಲು ವಿವೇಕಯುಕ್ತ ವೈರಾಗ್ಯವು ನಿರ್ಮಾಣವಾಗುವುದು.ನನ್ನ ಸಂಪೂರ್ಣ ಸತ್ತೆಯು ಆತನ ಕೈಸೇರುವುದು. ಆದ್ದರಿಂದ ಆತನಿಗೆ ಸಾಯುಜ್ಯ ಮುಕ್ತಿಯನ್ನು ಕೊಟ್ಟರೂ ಸಹ ಆತನು ಅದರ ಸ್ವೀಕಾರವನ್ನು ಮಾಡಲಾರನು ।೩೯೦॥ ಹೀಗಿರುವ ನನ್ನ ಶ್ರೇಷ್ಠ ಭಕ್ತರಿಗೆ ಈ ಯಾವ ಆಶ್ರಮಗಳ ಬಂಧನವು ಬಾಧಿಸಲಾರದು. ಅವರ ಯಾವತ್ತೂ ಸ್ವಧರ್ಮವೆಂದರೆ ನಾನೇ ಆಗಿರುವೆನು. ಹೀಗೆ ಶ್ರೀಕೃಷ್ಣನು ಹೇಳಿದನು ।೩೯೧॥ ಹೇ ಉದ್ಧವನೇ ಗೃಹಸ್ಥಾಶ್ರಮದ ಸ್ವಧರ್ಮ ಸ್ಥಿತಿಗಳನ್ನು ನಿನಗೆ ಸಂಪೂರ್ಣವಾಗಿ ತಿಳಿಸುವೆನು, ಅದನ್ನು ನೀನು ಕೇಳೆಂದು ಶ್ರೀಪತಿಯು ನುಡಿದನು ।೩೯೨॥

ಬ್ರಹ್ಮಚಾರಿಯು ಬ್ರಹ್ಮಚರ್ಯೆಯ ಸಮಾಪ್ತಿ ವಿಧಿಯನ್ನು ಮಾಡಿ ವ್ರತಬಂಧದ ವಿಸರ್ಜನೆಯನ್ನು ಮಾಡಬೇಕು. ಗುರುಗಳ ಆಜ್ಞೆಯನ್ನು ಪಡೆದು ವಿವಾಹವನ್ನು ಮಾಡಿಕೊಳ್ಳಬೇಕು ।೩೯೩॥ ತಮ್ಮ ವರ್ಣದಲ್ಲಿನ ಕುಮಾರಿಯೊಂದಿಗೆ ವಿವಾಹವನ್ನು ಮಾಡಬೇಕು. ಅದರಂತೆಯೇ ಸ್ವಗೋತ್ರ ಮತ್ತು ಪ್ರವರವನ್ನು ವರ್ಜಿಸಿ ತಮ್ಮ ವೇದ ಮತ್ತು ತಮ್ಮ ಶಾಖೆಯನ್ನು ನೋಡಿ ವಿವಾಹವನ್ನು ಮಾಡಬೇಕು ।೩೯೪॥ ಯಾರ ಉಭಯ ಕುಲಗಳು ಶುದ್ಧವಾಗಿರುವುವೋ, ಶಾಸ್ತ್ರೋಕ್ತವಾಗಿ ಹತ್ತು ಲಕ್ಷಣಗಳಿಂದ ಅನಿಂದ್ಯ ಮತ್ತು ಕನ್ಯಾದಾನದಿಂದ ತಂದೆತಾಯಿಯವರಿಗೆ ಆನಂದವಾಗುವುದೋ, ಅದುವೇ ಯೋಗ್ಯ ಸಂಬಂಧವೆಂದು ತಿಳಿಯಬೇಕು ।೩೯೫॥

ಪಾಣಿಗ್ರಹಣ ಕರಾವೇ ॥೩೯೩॥ ಭಾರ್ಯಾ ಪರ್ಣಾವೀ ಸವರ್ಣ । ಇತರ ವರ್ಜಿಲೇ ತಿನ್ಹೀ ವರ್ಣ । ಸ್ವವೇದ-ಸ್ವಶಾಖೇಚೇ ವರ್ಣ । ಸಗೋತ್ರಪಣ ಚುಕವೂನೀ ॥೩೯೪॥ ಜೇ ಉಭಯ ಕುಳೀ ವಿಶುದ್ಧ । ಜೇ ದಶಲಕ್ಷಣೀ ಅನಿಂದ್ಯ । ದೇತಾ ಮಾತಾಪಿತ್ಯಾಂಸೀ ಆಹ್ಲಾದ । ತೋ ಶ್ಲಾಘ್ಯ ಸಂಬಂಧ ಪರ್ಣಾವಾ ॥೩೯೫॥ ಜಿಚೀ ಜನ್ಮೋತ್ತರೀ ಪಾಹತಾ । ಸ್ವಯೇ ವರಾಪರೀಸ ಅಧಿಕತಾ । ಕಾ ಸಮಾನ ವಯೇ ಸಮತಾ । ಯಾ ದೋನೀ ಸರ್ವಥಾ ತ್ಯಾಗಾವ್ಯಾ ॥೩೯೬॥ ಜನ್ಮಪತ್ರ ಪಾಹತಾ ದಿಠೀ । ವರುಷೇ ಸಾತೇ ಪಾಂಚೇ ಧಾಕುಟೀ । ತೇ ಪರ್ಣಾವೀ ಸ್ವಧರ್ಮದೃಷ್ಟೀ । ಭಾರ್ಯಾ ಗೋಮಟೀ ತೀ ನಾಂವ ॥೩೯೭॥ ನೋವರೀ ಪಾಣಿಗ್ರಹಣಯುಕ್ತ । ಆಠಾಪಾಸೂನಿ ದಶವರ್ಷಾಂತ । ಅಧಿಕ ತೇ ವೃಷಲೀ ನಿಶ್ಚಿತ । ಶಾಸ್ತ್ರಾರ್ಥಪ್ರಯೋಗೇ ॥೩೯೮॥ ಗರ್ಭಾಷ್ಟಮಾಹೂನಿ ಖಾಲತೀ । ಜಿಚೀ ವಯಸಾ ಅಸೇ ನಿಶ್ಚಿತೀ । ತೇ ನೋವರೀ ವರಾಧಿಕಾರೀ ಅಪ್ರಾಪ್ತೀ । ಐಸೇ ಶಾಸ್ತ್ರಾರ್ಥೀ ಬೋಲಿಲೇ ॥೩೯೯॥ ಐಶಾ ಲಕ್ಷಣಾಂಚಾ ನಾಹೀ ಬಾಧೂ । ತೈಸೀ ಪರ್ಣಾವೀ ಶುದ್ಧ ವಧೂ । ಮಗ ಆಶ್ರಮಧರ್ಮ ಅತಿಶುದ್ಧೂ । ಶಾಸ್ತ್ರ ಅವಿರುದ್ಧು ತೋ ಏಕ ॥೪೦೦॥

ಇಜ್ಯಾಧ್ಯಯನದಾನಾನಿ ಸರ್ವೇಷಾಂ ಚ ದ್ವಿಜನ್ಮನಾಮ್ ।
ಪ್ರತಿಗ್ರಹೋಽಧ್ಯಾಪನಂ ಚ ಬ್ರಾಹ್ಮಣಸ್ಯೈವ ಯಾಜನಮ್ ॥೪೦॥

ಅರ್ಥ:- ಯಜ್ಞಯಾಗಾದಿ ಅಧ್ಯಯನ ಮತ್ತು ದಾನ ಮಾಡುವ ಅಧಿಕಾರವು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಸರಿಸಮಾನವಾಗಿರುವುದು. ಆದರೆ ದಾನವನ್ನು ಸ್ವೀಕರಿಸುವುದು, ಕಲಿಸುವುದು, ಯಜ್ಞ ಮಾಡುವುದು ಈ ಅಧಿಕಾರವು ಬ್ರಾಹ್ಮಣರಿಗೆ ಇರುವುದು.

ಬ್ರಾಹ್ಮಣಾಚೇ ಷಟ್‌ಕರ್ಮ ಜಾಣ । ಯಜನ ಆಣಿ ಯಾಜನ । ಅಧ್ಯಯನ ಆಣಿ ಅಧ್ಯಾಪನ । ಪ್ರತಿಗ್ರಹೋ ದಾನ ಹೇ ಸಾಹೀ ॥೪೦೧॥ ಹೋ ಕಾ ದ್ವಿಜನ್ಮೇ ತಿನ್ಹೀ ವರ್ಣ । ತ್ಯಾಂತ ಕ್ಷತ್ರಿಯ ವೈಶ್ಯ ದೋಘೇ ಜಾಣ । ತ್ಯಾಂಸ ತೀ ಕರ್ಮೀ ಅಧಿಕಾರಪಣ । ಯಜನ-ದಾನ-ಅಧ್ಯಯನ ॥೪೦೨॥ ಜೇ ಉತ್ತಮಜನ್ಮೇ ಬ್ರಾಹ್ಮಣ । ತ್ಯಾಂಸೀ ಷಟ್‌ಕರ್ಮೀ ಅಧಿಕಾರ ಜಾಣ । ತೀನೀ ಪರಮಾರ್ಥಾಸೀ ಪೂರ್ಣ । ಜೀವಿಕಾವರ್ತನ ತೀ ಕರ್ಮೀ ॥೪೦೩॥ ಕೋಣೇ ಕರ್ಮೇ ಜೀವಿಕೇಸೀ । ಕೋಣೇ ಪಾವಿಜೇ ಪರಮಾರ್ಥಾಸೀ । ತ್ಯಾ ಬ್ರಾಹ್ಮಣಕರ್ಮವಿಭಾಗಾಸೀ । ಐಕ ತುಜಪಾಶೀ ಸಾಂಗೇನ ॥೪೦೪॥ ''ಯಜನ'' ತೇ ಯಜ್ಞಾಚರಣ । ''ಅಧ್ಯಯನ'' ತೇ

ಯಾವ ಕನ್ಯೆಯ ಜನ್ಮ ಪತ್ರಿಕೆಯಿಂದ ಆಕೆಯ ವಯಸ್ಸು ವರನ ವಯಸ್ಸಿಗಿಂತ ಅಧಿಕವಾಗಿದ್ದರೆ ಅಥವಾ ಇಬ್ಬರ ವಯಸ್ಸು ಒಂದೇ ಇದ್ದರೆ ಈ ಎರಡೂ ಕನ್ಯೆಯರು ತ್ಯಾಜ್ಯರೆಂದು ತಿಳಿಯಬೇಕು ॥೩೯೬॥ ಯಾವ ಕನ್ಯೆಯು ವರನಿಗಿಂತ ಐದು, ಏಳು ವರ್ಷ ಚಿಕ್ಕವಳಾಗಿದ್ದರೆ, ಆಕೆಯೊಡನೆ ಸ್ವಧರ್ಮದಂತೆ ವಿವಾಹವನ್ನು ಮಾಡಬೇಕು. ಈ ಪತ್ನಿಯೇ ಉತ್ತಮಳು ॥೩೯೭॥ ವಿವಾಹದ ಸಮಯದಲ್ಲಿ ವಧುವಿನ ವಯಸ್ಸು ಎಂಟು-ಹತ್ತು ವರ್ಷದವರೆಗೆ ಇರಬೇಕು. ಅದಕ್ಕಿಂತಲೂ ಹೆಚ್ಚಿಗೆ ವಯಸ್ಸಾಗಿದ್ದರೆ ಆಕೆಯನ್ನು ಶೂದ್ರಳೆಂದು ಭಾವಿಸಬೇಕು. ಹೀಗೆ ಶಾಸ್ತ್ರಸಮ್ಮತವಾಗಿರುವುದು ॥೩೯೮॥ ಗರ್ಭಾವಸ್ಥೆಯಿಂದ ಎಂಟು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಕನ್ಯೆಯು ವಿವಾಹಕ್ಕೆ ಅಪಾತ್ರಳು ಎಂದು ಶಾಸ್ತ್ರವು ಹೇಳಿರುವುದು ॥೩೯೯॥ ಈ ಪ್ರಕಾರದ ಪವಿತ್ರ ಲಕ್ಷಣಗಳಿಂದ ಕೂಡಿದ ವಧುವಿನ ಜೊತೆಯಲ್ಲಿ ವಿವಾಹವನ್ನು ಮಾಡಿಕೊಳ್ಳಬೇಕು. ಈಗ ಶಾಸ್ತ್ರೋಕ್ತವಾಗಿರುವ ಅತಿಶಯ ಶುದ್ಧವಾದ ಆಶ್ರಮಧರ್ಮದ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ॥೪೦೦॥

ಬ್ರಾಹ್ಮಣರು ಮಾಡಬೇಕಾದ ಷಟ್ ಕರ್ಮಗಳಿರುವುವು. ಅವು ಯಾವವುವೆಂದರೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ಪ್ರತಿಗ್ರಹ ಮತ್ತು ದಾನ ಹೀಗೆ ಆರು ಕರ್ಮಗಳಾಗಿರುವುವು ॥೪೦೧॥ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ಗುಣಗಳಿಗೆ ದ್ವಿಜರು ಎಂದು ಹೇಳುವರು. ವೈಶ್ಯ ಮತ್ತು ಕ್ಷತ್ರಿಯರಿಗೆ ಯಜನ, ದಾನ ಮತ್ತು ಅಧ್ಯಯನ ಈ ಮೂರು ಕರ್ಮಗಳ ಅಧಿಕಾರವಿರುವುದು ॥೪೦೨॥ ಆದರೆ ಶ್ರೇಷ್ಠ ಜನ್ಮವಾಗಿರುವ ಬ್ರಾಹ್ಮಣರಿಗೆ ಆರು ಕರ್ಮಗಳ ಅಧಿಕಾರವಿರುವುದು. ಇವುಗಳಲ್ಲಿ ಮೊದಲಿನ ಮೂರು ಕರ್ಮಗಳು ಅಂದರೆ ಯಜನ, ಅಧ್ಯಾಪನ ಮತ್ತು ದಾನ ಹೀಗೆ ಮೂರು ಕರ್ಮಗಳಾಗಿರುವುವು. ಈ ಮೂರು ಪರಮಾರ್ಥಪ್ರಾಪ್ತಿಯ ಸಾಧನೆಗಳಾಗಿರುವುವು. ಉಳಿದ ಮೂರು ಕರ್ಮಗಳು ಉದರ ಪೋಷಣೆಯ ಸಾಧನೆಗಳಾಗಿರುವುವು ॥೪೦೩॥ ಯಾವ ಕರ್ಮಗಳು ಉದರಪೋಷಣೆಗೆ ಉಪಯೋಗ ಬೀಳುವುವು ಮತ್ತು ಯಾವ ಕರ್ಮಗಳಿಂದ ಪರಮಾರ್ಥದ ಪ್ರಾಪ್ತಿಯಾಗುವುದೆಂಬ ಈ ಬ್ರಾಹ್ಮಣರ ಕರ್ಮಗಳ ಭೇದವನ್ನು ನಾನೀಗ ಹೇಳುವೆನು, ಕೇಳು ॥೪೦೪॥ ಯಜನವೆಂದರೆ ಯಜ್ಞಯಾಗ ಮಾಡುವುದು, ಅಧ್ಯಯನವೆಂದರೆ ವೇದ ಪಠಣೆ ಮತ್ತು ಶಾಸ್ತ್ರಾಭ್ಯಾಸವನ್ನು ಮಾಡುವುದು, ದಾನವೆಂದರೆ ಇನ್ನೊಬ್ಬರಿಗೆ ಧನ, ಧಾನ್ಯ, ವಸ್ತ್ರ ಇತ್ಯಾದಿ ಕೊಡುವುದು. ಈ ಮೂರು ಕರ್ಮಗಳು ಪರಮಾರ್ಥದ ಪ್ರಾಪ್ತಿಯನ್ನು ಮಾಡಿಕೊಡುವುವು ॥೪೦೫॥ ಯಾಜನವೆಂದರೆ ತಾನು ಗುರುವಾಗಿ ಅಂದರೆ ತಾನು ಪುರೋಹಿತನಾಗಿ ಬೇರೆಯವರಿಂದ ಯಜ್ಞವನ್ನು ಮಾಡಿಸುವುದು. ಅಧ್ಯಾಪನವೆಂದರೆ ಶಿಷ್ಯನಿಗೆ ವೇದಶಾಸ್ತ್ರಗಳನ್ನು ಕಲಿಸುವುದು ಮತ್ತು ಪ್ರತಿಗ್ರಹವೆಂದರೆ ಕೊಟ್ಟ ದಾನವನ್ನು ಸ್ವೀಕಾರ ಮಾಡುವುದು ॥೪೦೬॥

ವೇದಪಠಣ । ''ದಾನ'' ಜೇ ದೇಣೇ ಆಪಣ । ಹೇ ತ್ರಿಕರ್ಮ ಜಾಣ ಪರಮಾರ್ಥಾ ॥೪೦೫॥ ಗುರುತ್ವ ಘೇಊನಿ ಆಪಣೇ । ''ಯಾಜನ'' ತೇ ಯಾಗ ಕರವಿಣೇ । ''ಅಧ್ಯಾಪನ'' ವೇದ ಪಢವಣೇ । ಸ್ವಯೇ ದಾನ ಘೇಣೇ ತೋ ''ಪ್ರತಿಗ್ರಹೋ'' ॥೪೦೬॥

ಜಾಹಲಿಯಾ ಸಚ್ಛಿಷ್ಯಸಂಪತ್ತೀ । ಇಯೇ ತಿಹೀ ಕರ್ಮೀ ಜೀವಿಕಾವೃತ್ತೀ । ಗುರುತ್ವೇ ಗುರುಪೂಜಾಪ್ರಾಪ್ತೀ । ತೇಣೇ ಜೀವಿಕಾಸ್ಥಿತೀ ಬ್ರಾಹ್ಮಣಾ ॥೪೦೭॥ ಕ್ಷತ್ರಿಯವೈಶ್ಯದ್ವಿಜನ್ಮ್ಯಾಂಸೀ । ಗುರುತ್ವ ಬೋಲಿಲೇ ನಾಹೀ ಯಾಂಸೀ । ಹೀ ತಿನ್ಹೀ ಕರ್ಮೆ ತ್ಯಾಂಸೀ । ನಿಷೇಧತೇಸೀ ಯಾಲಾಗೀ ॥೪೦೮॥ ಆತಾ ಬ್ರಾಹ್ಮಣಾಚೇ ಲಕ್ಷಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ''ಮುಖ್ಯ'' ''ಮುಖ್ಯತಮ'' ''ಸಾಧಾರಣ''। ತ್ರಿವಿಧ ಜಾಣ ಉದ್ಧವಾ ॥೪೦೯॥

ಪ್ರತಿಗ್ರಹಂ ಮನ್ಯಮಾನಸ್ತಪಸ್ತೇಜೋಯಶೋನುದಮ್ ।
ಅನ್ಯಾಭ್ಯಾಮೇವ ಜೀವೇತ ಶಿಲೈರ್ವಾ ದೋಷದೃಕ್ ತಯೋಃ ॥೪೧॥

ಅರ್ಥ:- ದಾನ ಸ್ವೀಕಾರದಿಂದ ತನ್ನ ತಪಸ್ಸಿಗೆ, ಅಧ್ಯಾತ್ಮಿಕ ಪ್ರಭಾವ ಮತ್ತು ಯಶಸ್ಸಿಗೆ ಭಂಗ ಬರುವುದೆಂದು ಭಾವಿಸುವ ಬ್ರಾಹ್ಮಣನು ಉಳಿದೆರಡು ಬ್ರಾಹ್ಮಣ ವೃತ್ತಿಗಳಾದ ವೇದಜ್ಞಾನ ಬೋಧನೆ ಮತ್ತು ಯಜ್ಞಾಚರಣೆ ಕೈಗೊಂಡು ಜೀವನ ನಿರ್ವಹಣೆ ಮಾಡಬಹುದು. ಈ ಎರಡು ವೃತ್ತಿಯಲ್ಲಿಯೂ ತನ್ನ ಅಧ್ಯಾತ್ಮಕ್ಕೆ ಬಾಧಕ ಉಂಟಾಗುತ್ತದೆ ಎಂದು ಭಾವಿಸುವ ಬ್ರಾಹ್ಮಣನು ಹೊಲಗದ್ದೆಗಳಲ್ಲಿ ಶೇಷ ಧಾನ್ಯವನ್ನು ಸಂಗ್ರಹಿಸಿ ಯಾರ ಹಂಗೂ ಇಲ್ಲದೇ ಬದುಕಬಹುದು.

ಸ್ವಧರ್ಮನಿಷ್ಠ ಬ್ರಾಹ್ಮಣಾಪಾಶೀ । ತಪ-ತೇಜ-ಧೈರ್ಯ-ಯಶೋರಾಶೀ । ಪ್ರತಿಗ್ರಹೋ ಇತುಕಿಯಾಂಸೀ । ಮೂಳ ನಾಶಾಸೀ ಕಾರಣ ॥೪೧೦॥ ಜೋ ಸ್ವಧರ್ಮನಿಷ್ಠ ಬ್ರಾಹ್ಮಣ । ಕರೀ ಪ್ರತಿಗ್ರಹೋ ಅಂಗೀಕರಣ । ತೋ ಜಾಣ ಪಾ ''ಸಾಧಾರಣ''। ಹೇ ಏಕ ಲಕ್ಷಣ ದ್ವಿಜಾಚೇ ॥೪೧೧॥ ಜೋ ಪ್ರತಿಗ್ರಹಾ ಪರಾಂಗ್‌ಮುಖ ಬ್ರಾಹ್ಮಣ । ತೇಣೇ ಯಾಜನ ಅಧ್ಯಾಪನ ಜಾಣ । ಸ್ವಧರ್ಮೇಕರೂನಿ ದ್ರವ್ಯಾರ್ಜನ । ಜೀವಿಕಾವರ್ತನ ಕರಾವೇ ॥೪೧೨॥ ಧರೋನಿ ದ್ರವ್ಯಾಶಾ ಮಾನಸೀ । ನ ಕರಾವೇ ಯಾಗಾಂತ ಕರ್ಮಾಸೀ । ಕಾ ಸಾಂಗೋನಿ ವೇದಾಕ್ಷರಾಸೀ । ದ್ರವ್ಯ ತ್ಯಾಪಾಶೀ ಇಚ್ಛೂ ನಯೇ ॥೪೧೩॥ ಕರೂನಿ ವೇದಾಕ್ಷರದಾನ । ಜೋ ಶಿಷ್ಯಾಚೇಹೀ ನ ಘೇ ಧನ । ಐಸಾ ವೈರಾಗ್ಯೇ ಪರಿಪೂರ್ಣ । ತೋ ''ಶುದ್ಧ ಬ್ರಾಹ್ಮಣ'' ಸರ್ವಥಾ ॥೪೧೪॥ ಐಕ ತ್ಯಾಚೇ ಜೀವಿಕಾವರ್ತನ । ''ಶೀಲ'' ಕಾ ''ಉಂಛವೃತ್ತೀ'' ಜಾಣ । ಐಕ ತ್ಯಾಚೇಹೀ ಲಕ್ಷಣ । ಸಕಾರಣ ಸಾಂಗೇನ ॥೪೧೫॥ ಶೇತ ಸಂವಗೂನಿ ನೇಲ್ಯಾ ಜಾಣ । ತೇ ಶೇತೀ ಪ್ರಾಪ್ತ ಕಣಸೇ ಕಾ ಕಣ । ತೇ ಶೀಲವೃತ್ತಿ ಸಂಪೂರ್ಣ ।

ಉತ್ತಮೋತ್ತಮ ಶಿಷ್ಯನು ಪ್ರಾಪ್ತನಾದರೆ ಈ ಮೂರು ಕರ್ಮಗಳ ಯೋಗದಿಂದ ಉಪಜೀವನವು ನಡೆಯುತ್ತಿರುವುದು. ಇದರಿಂದ ಗುರುತ್ವವು ಪ್ರಾಪ್ತವಾಗಿ ಗುರುಪೂಜೆಯ ಮಾನವು ದೊರೆತು ಬ್ರಾಹ್ಮಣರ ಚರಿತಾರ್ಥವು ನಡೆಯುತ್ತಿರುವುದು ॥೪೦೭॥ ಕ್ಷತ್ರಿಯರು ಮತ್ತು ವೈಶ್ಯರು ಇವರು ದ್ವಿಜರಾಗಿದ್ದರೂ ಕೂಡ ಇವರಿಗೆ ಗುರುಗಳಾಗುವ ಅಧಿಕಾರವು ಇರುವುದಿಲ್ಲ. ಆದ್ದರಿಂದ ಈ ಮೂರು ಕರ್ಮಗಳು ಇವರಿಗೆ ನಿಷೇಧವಾಗಿರುವುವು ॥೪೦೮॥ ಹೇ ಉದ್ಧವಾ, ಈಗ ಬ್ರಾಹ್ಮಣರ ಲಕ್ಷಣಗಳನ್ನು ಕೇಳು. ಅವುಗಳಲ್ಲಿ ಉತ್ತಮ, ಮಧ್ಯಮ ಮತ್ತು ಸಾಮಾನ್ಯ ಹೀಗೆ ಮೂರು ಭೇದಗಳಿರುವುವು ॥೪೦೯॥

ಬ್ರಾಹ್ಮಣರಿಗೆ ಸ್ವಧರ್ಮದಲ್ಲಿ ನಿಷ್ಠೆಯಿರುವುದು. ಅವರಲ್ಲಿ ತಪ, ತೇಜ, ಧೈರ್ಯ ಮತ್ತು ಯಶ ಇವುಗಳ ಸಂಪತ್ತು ಇರುವುದು. ಆದರೆ ಅವರು ಪ್ರತಿಗ್ರಹ ತೆಗೆದುಕೊಂಡರೆ ಅವರ ಈ ಶ್ರೇಷ್ಠ ಸಂಪತ್ತಿನ ನಾಶವಾಗುವುದು ॥೪೧೦॥ ಬ್ರಾಹ್ಮಣನು ಸ್ವಧರ್ಮನಿಷ್ಠನಾಗಿದ್ದು ಪ್ರತಿಗ್ರಹದ ಸ್ವೀಕಾರ ಮಾಡುತ್ತಿದ್ದರೆ ಆತನು ಸಾಧಾರಣ ಬ್ರಾಹ್ಮಣನೆಂದು ತಿಳಿಯಬೇಕು. ಇದು ಬ್ರಾಹ್ಮಣರ ಒಂದು ಲಕ್ಷಣವಾಗಿರುವುದು ॥೪೧೧॥ ಯಾವ ಬ್ರಾಹ್ಮಣನು ಪ್ರತಿಗ್ರಹದ ಸ್ವೀಕಾರ ಮಾಡುವುದಿಲ್ಲವೋ, ಆತನು ಯಾಜನ ಮತ್ತು ಅಧ್ಯಾಪನಗಳನ್ನು ಮಾಡಿ ಸ್ವಧರ್ಮದಿಂದ ಹಣ ಕೂಡಿಸಿ ಅದರಿಂದ ತನ್ನ ಉದರ ನಿರ್ವಹಣೆ ಮಾಡಬೇಕು ॥೪೧೨॥ ದ್ರವ್ಯಕ್ಕಾಗಿ ಮನದಲ್ಲಿ ಲಾಲಸೆಯನ್ನಿಟ್ಟುಕೊಂಡು ಯಾರಿಂದಲೂ ಯಜ್ಞವನ್ನು ಮಾಡಿಸಿಕೊಳ್ಳಬಾರದು. ಅದರಂತೆಯೇ ಶಿಷ್ಯನಿಗೆ ವೇದವನ್ನು ಕಲಿಸಿ ಆತನಿಂದ ದ್ರವ್ಯದ ಅಪೇಕ್ಷೆಯನ್ನು ಒಡಿಯಬಾರದು ॥೪೧೩॥ ಯಾವ ಬ್ರಾಹ್ಮಣನು ವೇದಗಳಲ್ಲಿನ ವಿಚಾರಗಳನ್ನು ತಿಳಿಸಿ ಹೇಳಿ ಶಿಷ್ಯನಿಂದ ಸ್ವಲ್ಪವೂ ಕೂಡ ಧನವನ್ನು ಸ್ವೀಕರಿಸದೇ ಇಂತಹ ವೈರಾಗ್ಯದಿಂದ ಪರಿಪೂರ್ಣನಾಗಿರುವನೋ, ಆತನೇ ಶುದ್ಧ ಬ್ರಾಹ್ಮಣನಾಗಿರುವನು ॥೪೧೪॥ ಆತನ ಜೀವಿತಕಾರ್ಯದ ವೃತ್ತಿಯನ್ನು ಹೇಳುವೆನು, ಕೇಳು. ಆತನು ತನ್ನ ಚರಿತಾರ್ಥವನ್ನು ಶೀಲ ವೃತ್ತಿಯಿಂದ ಅಥವಾ ಉಂಛವೃತ್ತಿಯಿಂದ ನಡೆಸಬೇಕು. ಇದರ ಯಥಾರ್ಥ ಲಕ್ಷಣವನ್ನೂ ಕೂಡ ನಾನು ನಿನಗೆ ಹೇಳುವೆನು ॥೪೧೫॥ ಹೊಲಗದ್ದೆಗಳಲ್ಲಿ ಕೋಯ್ಲು, ರಾಶೀ ಮುಗಿದ ಮೇಲೆ ಅಲ್ಲಿ ಬಿದ್ದಿರುವ ತೆನೆಗಳನ್ನು ಅಥವಾ ಧಾನ್ಯಗಳನ್ನು ಆರಿಸಿಕೊಂಡು ಅದರಲ್ಲಿಯೇ ತನ್ನ ಜೀವನವನ್ನು ನಡೆಸಲು ಅದಕ್ಕೆ ಶೀಲವೃತ್ತಿ ಎಂದು ಹೇಳುವರು. ಈಗ ಉಂಛ ವೃತ್ತಿಗಾಗಿ ಕೇಳು ॥೪೧೬॥ ಬಜಾರದಲ್ಲಿ ಯಾರ ಸ್ವಾಮಿತ್ವವಿಲ್ಲದೇ ಬಿದ್ದಿರುವ ಧಾನ್ಯದ ಕಣಗಳನ್ನು ಆರಿಸಿ ತಂದು ಅದರ ಮೇಲೆ ತನ್ನ ಉಪಜೀವನವನ್ನು ಮಾಡಬೇಕು ॥೪೧೭॥ ಇದಕ್ಕೆ ಉಂಛ ವೃತ್ತಿ ಎಂದು ಹೇಳುವರು. ಇದು ಬ್ರಾಹ್ಮಣರ ಅತ್ಯಂತ ಪವಿತ್ರವಾಗಿರುವ ಸ್ಥಿತಿಯಾಗಿರುವುದು. ಆದ್ದರಿಂದ ಈ ಪ್ರಕಾರವನ್ನೂ ಸಹ ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹೇಳಿದನು ॥೪೧೮॥

ಐಕ ಲಕ್ಷಣ ಉಂಛವೃತ್ತೀಚೇ ॥೪೧೬॥ ಸ್ವಾಮೀ ನಸತಾ ಸಾಂಡಲೇ ಜಾಣ । ಐಸೇ ಹಾಟವಾಟೀ ಪಡಿಲೇ ಕಣ । ತೇ ವೇಂಚೂನಿ ಘೇಣೇ ಆಪಣ । ಜೀವಿಕಾವರ್ತನ ತಯಾವರೀ ॥೪೧೭॥ ಯಾ ನಾಂವ ಉಂಛವೃತ್ತೀ । ಬ್ರಾಹ್ಮಣಾಚೀ "ಅತಿಶುದ್ಧ" ಸ್ಥಿತೀ । ತೋಹೀ ಪ್ರಕಾರ ಉದ್ಧವಾಪ್ರತೀ । ಸ್ವಯೇ ಶ್ರೀಪತಿ ಸಾಂಗತ ॥೪೧೮॥

ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತ । ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ ॥೪೨॥

ಅರ್ಥ:- ಹೇ ಉದ್ಧವಾ, ಬ್ರಾಹ್ಮಣ ಶರೀರವು ಅತ್ಯಂತ ದುರ್ಲಭವು. ಈ ಶರೀರವು ತುಚ್ಛವಾದ ವಿಷಯ ಭೋಗಗಳನ್ನು ಭೋಗಿಸುವುದಕ್ಕಾಗಿ ಅಲ್ಲ. ಇದು ಜೀವನ ತುಂಬ ಕಷ್ಟವನ್ನು ಭೋಗಿಸುವುದಕ್ಕಾಗಿ ತಪಸ್ಸುಗಳನ್ನು ಆಚರಿಸುವುದಕ್ಕಾಗಿ ಅನಂತ ಆನಂದ ಮೋಕ್ಷದ ಪ್ರಾಪ್ತಿಗಾಗಿ ಇರುವುದು.

ವರ್ಣಾಮಾಜೀ ಉತ್ತಮ ವರ್ಣ । ತ್ಯಾ ಬ್ರಾಹ್ಮಣಾಚಾ ದೇಹೋ ಜಾಣ । ಕ್ಷುದ್ರಕಾಮಾರ್ಥ ನಿರ್ಮಾಣ । ದೇವೇ ಆಪಣ ನಾಹೀ ಕೇಲಾ ॥೪೧೯॥ ಪಶುಪಕ್ಷ್ಯಾದಿ ಯೋನೀಂಚ್ಯಾ ಠಾಯೀ । ಕಾಮಾವಾಂಚೂನಿ ಆನ ನಾಹೀ । ತೇಚಿ ಜರೀ ಬ್ರಾಹ್ಮಣಾಚೇ ದೇಹೀ । ತೈ ವಿಶೇಷ ಕಾಯೀ ಉತ್ತಮತ್ವೇ ॥೪೨೦॥ ಬ್ರಾಹ್ಮಣಾಂಚೇ ದೇಹೀ ಜಾಣ । ಕರಾವೇ ಸ್ವಧರ್ಮೀ ಅನುಷ್ಠಾನ । ಮಾರ್ಘೋನಿ ಉದ್ದೇಶೇ ಸಂಪೂರ್ಣ । ತಪಸಾಧನ ಕೃಚ್ಛ್ರಾದಿಕೇ ॥೪೨೧॥ ಮೀ ಹೃದಯೀ ಧರೋನಿ ಅನಂತ । ಜೋ ಪೂರ್ಣವೈರಾಗ್ಯಯುಕ್ತ । ತಪಾದಿ ಸಾಧನೀ ಸತತ । ಸದಾ ಶಿಣತ ಬ್ರಾಹ್ಮಣ ಜೇ ॥೪೨೨॥ ತ್ಯಾಂಸೀ ದೇಹಪಾತಾಚ್ಯಾ ಅಂತೀ । ಮಾಝ್ಯಾ ಅನಂತ ಸುಖಾಚೀ ಪ್ರಾಪ್ತೀ । ತೇಥ ಸ್ವರ್ಗಸುಖಾದಿ ಸಂಪತ್ತೀ । ಮಾವಳತೀ ತತ್ಕಾಳ ॥೪೨೩॥ ಜ್ಯಾ ಸುಖಾಚೇ ಸುಖಸ್ಥಿತೀ । ಸ್ಫುರೇನಾ ಸಂಸಾರಸ್ಫೂರ್ತೀ । ಜೇಥೂನಿ ನಾಹೀ ಪುನರಾವೃತ್ತೀ । ತೇ ಸುಖಪ್ರಾಪ್ತೀ ತ್ಯಾ ಬ್ರಾಹ್ಮಣಾ ॥೪೨೪॥ ಕೃಚ್ಛ್ರಾದಿ ಸಾಧನಯುಕ್ತೀ । ಬ್ರಾಹ್ಮಣಾ ಬ್ರಹ್ಮಸುಖಪ್ರಾಪ್ತೀ । ತ್ಯಾಚಿ ಸುಖಾಚೀ ಸುಖಸಂಪತ್ತೀ । ಶಿಲೋಂಛವೃತ್ತೀ ಸಾಧಕಾ ॥೪೨೫॥

ಶಿಲೋಂಛವೃತ್ತ್ಯಾ ಪರಿತುಷ್ಟಚಿತ್ತೋ ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಮಯ್ಯರ್ಪಿತಾತ್ಮಾ ಗೃಹ ಏವ ತಿಷ್ಠನ್ನಾತಿಪ್ರಸಕ್ತಃ ಸಮುಪೈತಿ ಶಾಂತಿಮ್ ॥೪೩॥

ಅರ್ಥ:- ಬ್ರಾಹ್ಮಣನು ಮನೆಯಲ್ಲಿದ್ದುಕೊಂಡು ಮಹಾನ್ ಧರ್ಮಗಳ ನಿಷ್ಕಾಮ ಭಾವನೆಯಿಂದ ಪಾಲಿಸುತ್ತ ಮತ್ತು ಹೊಲಗದ್ದೆಗಳಲ್ಲಿ ಅಥವಾ ಬಜಾರದಲ್ಲಿ ಚೆಲ್ಲಾಡಿದ ಧಾನ್ಯಗಳನ್ನು ಸಂತೋಷವಾಗಿ ಆರಿಸಿಕೊಂಡು ತನ್ನ ಜೀವನವನ್ನು ಗತಿಸಬೇಕು. ತನ್ನ ಶರೀರ, ಪ್ರಾಣ, ಅಂತಃಕರಣ ಮತ್ತು ಆತ್ಮವನ್ನು ನನಗೆ ಸಮರ್ಪಿಸಬೇಕು. ಎಲ್ಲಿಯೂ ಅತಿಯಾದ ಆಸಕ್ತಿಯನ್ನಿಡಬಾರದು. ಇಂತಹವನು ಸನ್ಯಾಸ ಸ್ವೀಕರಿಸದೇ ಪರಮ ಶಾಂತಿರೂಪ ಪರಮಪದವನ್ನು ಪ್ರಾಪ್ತಿಮಾಡಿಕೊಳ್ಳುವನು.

ಸರ್ವ ವರ್ಣಗಳಲ್ಲಿ ಬ್ರಾಹ್ಮಣ ವರ್ಣವು ಉತ್ತಮ ವರ್ಣವಾಗಿರುವುದು. ಬ್ರಾಹ್ಮಣ ದೇಹವನ್ನು ದೇವನು ಕ್ಷುದ್ರ ಕರ್ಮಗಳನ್ನು ಮಾಡಲು ನಿರ್ಮಿಸಿರುವುದಿಲ್ಲ ॥೪೧೯॥ ಪಶುಪಕ್ಷಿಗಳ ಯೋನಿಗಳಲ್ಲಿ ಕಾಮ ವಿಷಯಗಳನ್ನು ಬಿಟ್ಟು ಇನ್ನೇನೂ ಇರುವುದಿಲ್ಲ. ಬ್ರಾಹ್ಮಣ ಜನ್ಮವನ್ನು ಪ್ರಾಪ್ತಮಾಡಿಕೊಂಡು ಕಾಮವಾಸನೆಗಳ ವಿಚಾರ ಮಾಡಿದರೆ ಉತ್ತಮ ವರ್ಣದ ವಿಶೇಷವು ಏನೆಂದು ಉಳಿಯಬೇಕು ? ॥೪೨೦॥ ಬ್ರಾಹ್ಮಣ ದೇಹವು ಪ್ರಾಪ್ತವಾಯಿತೆಂದರೆ ಸ್ವಧರ್ಮದ ಅನುಷ್ಠಾನವನ್ನು ಮಾಡಬೇಕು. ಮದರ್ಪಣ ಬುದ್ಧಿಯನ್ನಿಟ್ಟು ಕೃಚ್ಛ್ರಚಾಂದ್ರಾಯಣಾದಿ ತಪಸ್ಸುಗಳನ್ನು ನಿಃಸ್ವಾರ್ಥ ಭಾವನೆಯಿಂದ ಮಾಡುತ್ತಿರಬೇಕು ॥೪೨೧॥ ಅನಂತನಾದ ನನ್ನನ್ನು ಯಾವ ೧ ಬ್ರಾಹ್ಮಣರು ತಮ್ಮ ಅಂತಃಕರಣದಲ್ಲಿ ಸ್ಥಿರಮಾಡಿ, ಪೂರ್ಣ ವೈರಾಗ್ಯ ಸಂಪನ್ನರಾಗಿ ತಪಾದಿ ಸಾಧನೆಗಳಲ್ಲಿಯೇ ತಮ್ಮ ದೇಹವನು ಸದಾಕಾಲ ದಂಡಿಸುತ್ತಿರುವರೋ ॥೪೨೨॥ ಇವರು ಮರಣೋತ್ತರದಲ್ಲಿ ನನ್ನ ದಿವ್ಯವಾದ ಆನಂದಕ್ಕೆ ಪ್ರಾಪ್ತರಾಗುವರು. ಈ ಯದ್ದನ್ನು ದಿವ್ಯವಾದ ಆನಂದದ ಎದುರಿನಲ್ಲಿ ಸ್ವರ್ಗಸುಖಾದಿಕ ಸರ್ವ ಪ್ರಕಾರದ ಐಶ್ವರ್ಯಗಳು ಲೋಪವಾಗುವುವು ॥೪೨೩॥ ಆ ನಿಜಾನಂದ್ಗಳ ಮೇಲೆ ಸಂಸಾರದ ಸ್ಫೂರ್ತಿಯೂ ಕೂಡ ಉಳಿಯುವುದಿಲ್ಲ. ಅಲ್ಲಿಂದ ಪುನಃ ಜನ್ಮ ಧರಿಸುವ ಭಯವೇ ಇಲ್ಲದಾಗುವುದು. ಇಂತಹ ಸ್ರ್ವಕವಾಗಿ ಪ್ರಾಪ್ತಿಯು ಬ್ರಾಹ್ಮಣರಿಗಾಗುವುದು ॥೪೨೪॥ ಕೃಚ್ಛ್ರಚಾಂದ್ರಾಯಣ ವ್ರತಗಳನ್ನು ಮಾಡಿ ಬ್ರಾಹ್ಮಣರಿಗೆ ಬ್ರಹ್ಮಸುಖವು ಲ೬॥ ಪ್ರಜೆಗಳ ಶಿಲೋಂಛವೃತ್ತಿಯನ್ನು ಸಾಧಿಸುವವರಿಗೂ ಕೂಡ ಇದೇ ಸುಖದ ವೈಭವವು ಪ್ರಾಪ್ತವಾಗುವುದು ॥೪೨೫॥ ಳ್ಳಬೇಕು. ಇದು

ಯಾವ ಬ್ರಾಹ್ಮಣರು ಶೀಲ ಅಥವಾ ಉಂಚ್ಛವೃತ್ತಿಯಿಂದ ಜೀವನವನ್ನು ಸಾಗಿಸುವರೋ, ತಮ್ಮ ಸ್ವಂತ ಬಲದಿಂದಲೇ ಸಂತೋಷವನ್ನಾಗಿಡುವರೋ, ವಿಷಯಗಳ ವಿಷಯದಲ್ಲಿ ವೈರಾಗ್ಯವನ್ನು ಧರಿಸುವರೋ, ಹಾಗೆಯೇ ಅತಿಥಿಗಳವರನುಳನ್ನೂ ಕೂಡ ಹೊರಗೆ ಪೂಜಿಸುವರೋ, ಅವರು ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳುವರು ॥೪೨೬॥ ಅತಿಥಿಗಳವರು ಆಗಮಿಸಲು ತಮ್ಮ ಪ್ರಾಣಪತಿಯಾಗಿರುವ ರಾಜನು ಅವರನ್ನು ವಿಮುಖಗೊಳಿಸುವುದಿಲ್ಲ. ಪ್ರಸಂಗಾನುಸಾರವಾಗಿ ತಮ್ಮ ಸ್ವತಃದ ಹಸಿವೆ, ನೀರಡಿಕೆಗಳನ್ನು ಮರೆತು ಊಡ ತನ್ನ ಬಾಹುಬಲದಿಂದ ಪ್ರೇಮದಿಂದ ಭೋಜನವನ್ನು ಕೊಡುವರು ॥೪೨೭॥ ಈ ಪ್ರಕಾರವಾಗಿ ಅತ್ಯಂತ ಆದರದಿಂದ ಮತ್ತು ಸನ್ಮಾಕಾರದ ಫಲಪ್ರಾಪ್ತಿಯಾಗುವು ಅನ್ನದಾನವನ್ನು ಮಾಡುವರು. ಜನಾರ್ದನನಾದ ನಾನು ಅವರಲ್ಲಿ ಸಂತುಷ್ಟನಾಗುವೆನು ॥೪೨೮॥

ಶೀಲ ಅಥವಾ ಉಂಛವೃತ್ತೀ । ಕರೂನಿ ಸಂತುಷ್ಟ ಚಿತ್ತವೃತ್ತೀ । ವಿಷಯವೈರಾಗ್ಯೇ ಮತ್‌ಪ್ರಾಪ್ತೀ । ಪೂಜಿತೀ ಅತಿಥೀ ಮದ್ಭಾವೇ ॥೪೨೬॥ ಅತಿಥಿ ಆಲಿಯಾ ದೇಖ । ಪ್ರಾಣಾಂತೀಹೀ ನವ್ಹೇ ಪರಾಂಗ್ಮುಖ । ನಾತವೇ ನಿಜ ತಹಾನಭೂಕ । ಸಮಯೀ ಆವಶ್ಯಕ ದೇ ಅನ್ನ ॥೪೨೭॥ ತೇಥ ಅತ್ಯಾದರೇಸೀ ಜಾಣ । ದೇಊನಿ ಅತ್ಯಂತ ಸನ್ಮಾನ । ಯಥಾನುಶಕ್ತ್ಯಾ ದೇತಾ ಅನ್ನ । ಮೀ ಜನಾರ್ದನ ಸಂತುಷ್ಟೇ ॥೪೨೮॥

ಸಾಂಡೂನಿಯಾ ಅಭಿಮಾನ । ಸರ್ವ ಜೀವಾಂಸೀ ಸರ್ವದಾ ಲೀನ । ಯಾ ನಾಂವ ''ಮಹದ್ಧರ್ಮ'' ಜಾಣ । ಶುದ್ಧ ಲಕ್ಷಣ ಹೇ ಧರ್ಮಾಚೇ ॥೪೨೯॥ ಐಸೇ ಜೇ ಸ್ವಧರ್ಮಾಚರಣ । ತೇ ಕರ್ತ್ಯಾಸೀ ಅತಿಭೂಷಣ । ಯೇ ಧರ್ಮೀ ನ ರಿಘೇ ದೂಷಣ । ''ಅತಿಶುದ್ಧಾಚರಣ'' ಯಾ ನಾಂವ ॥೪೩೦॥ ಮಜಮಾಜೀ ರಂಗಲೀ ಚಿತ್ತವೃತ್ತೀ । ಯಾಲಾಗೀ ವಿಸರಲಾ ಗೃಹಾಸಕ್ತೀ । ತ್ಯಾಸೀ ಗೃಹಾಶ್ರಮೀ ಮಾಝೀ ಪ್ರಾಪ್ತೀ । ಸುಖಸಂಪತ್ತೀ ನಿಜಬೋಧು ॥೪೩೧॥ ನಿರ್ಧನಾಸೀ ಐಶಿಯಾ ರೀತೀ । ಗೃಹಾಶ್ರಮೀ ಮಾಝೀ ಪ್ರಾಪ್ತೀ । ಆತಾ ಸಾಧನಾಚೇ ಪ್ರಾಪ್ತೀಚೀ ಸ್ಥಿತೀ । ಐಕ ತುಜಪ್ರತೀ ಸಾಂಗೇನ ॥೪೩೨॥ ಸಧನ ಹೋಯ ಜೈ ಸಜ್ಞಾನ । ತೈ ನ ಕರಿತಾ ಅತಿಸಾಧನ । ಮಾಝೀ ಪ್ರಾಪ್ತಿ ಅತಿಸುಗಮ ಜಾಣ । ಐಕ ಲಕ್ಷಣ ತಯಾಚೇ ॥೪೩೩॥

ಸಮ್ಮೃದ್ಧರಂತಿ ಯೇ ವಿಪ್ರಂ ಸೀದಂತ ಮತ್ಪರಾಯಣಮ್ । ತಾನುದ್ಧರಿಷ್ಯೇ ನಚಿರಾದಾಪದ್‌ಭ್ಯೋ ನೌರಿವಾರ್ಣವಾತ್ ॥೪೪॥

ಅರ್ಥ - ಮತ್ಪರಾಯಣರಾಗಿರುವ, ಆದರೆ ದಾರಿದ್ರ್ಯದಿಂದ ಪೀಡಿತರಾಗಿರುವ ಆ ಯಾವ ಬ್ರಾಹ್ಮಣರ ದಾರಿದ್ರ್ಯದಿಂದ ಯಾರು ಪಾರು ಮಾಡುವರೋ, ಅವರಿಗೆ ಹಡಗವು ಸಮುದ್ರದಿಂದ ಪಾರು ಮಾಡುವಂತೆ ಆಪತ್ತಿನ ಸಮಯದಲ್ಲಿ ಕೂಡಲೇ ನಾನು ಅವರನ್ನು ಉದ್ಧರಿಸುವೆನು.

ಆಧೀಂಚ ಪೂಜ್ಯ ಬ್ರಾಹ್ಮಣ । ತ್ಯಾಹೀವರೀ ಮಾಝಾ ಭಕ್ತ ಜಾಣ । ಮಾಝೇ ನಿಜಭಜನೇ ಅತಿ ಸಂಪನ್ನ । ಮದ್ಭಾವೇ ಪೂರ್ಣ ಪರಿಪಕ್ವ ॥೪೩೪॥ ಮಾಗಣೇ ನಾಹೀ ಸರ್ವಥಾ । ಹಾ ನೇಮ ಮಾಝಿಯಾ ನಿಜಭಕ್ತಾ । ತ್ಯಾಸೀ ಪೀಡಿಜೇ ಕ್ಷುಧಾದಿ ವ್ಯಥಾ । ತೇ ನಿವಾರಿತಾ ಜೋ ಹೋಯ ॥೪೩೫॥ ದೇಊನಿ ಅನ್ನ ಧನ ಜೀವನ । ವಸ್ತ್ರ ಆದಿಕರೂನಿ ಲವಣ । ಐಸೇ ವೇಂಚೂನಿಯಾ ನಿಜಧನ । ಭಕ್ತಸಂರಕ್ಷಣ ಜೋ ಕರೀ ॥೪೩೬॥ ನಾಹೀ ದೇಣೇ ನಿರ್ಭರ್ತ್ಸಿತಾ । ದೇಊನಿ ಆಭಾರ ನ ಠೇವೀ ಮಾಥಾ । ಸನ್ಮಾನೇ ಅತಿನಮ್ರತಾ । ಜೋ ಮದ್ಭಕ್ತಾ ಸಂರಕ್ಷೀ ॥೪೩೭॥ ಜೇವೀ ಪೋಟಾಂತಲೇ ಕಳವಳೇಸೀ । ಮಾತಾ ಗೋಡ ತೇ ದೇ ಬಾಳಕಾಸೀ । ತೇವೀ

ಸರ್ವ ಪ್ರಕಾರದ ಅಭಿಮಾನವನ್ನು ಬಿಟ್ಟುಕೊಟ್ಟು ಸರ್ವಪ್ರಾಣಿಮಾತ್ರರಲ್ಲಿ ನಿರಂತರವಾಗಿ ಲೀನರಾಗಿರಬೇಕು. ಇದಕ್ಕೇನೇ ಮಹದ್‌ಧರ್ಮವೆಂದು ಹೇಳುವರು. ಇದು ಧರ್ಮದ ಶುದ್ಧ ಲಕ್ಷಣವಾಗಿರುವುದು ॥೪೨೯॥ ಹೀಗಿರುವ ಸ್ವಧರ್ಮಾಚರಣೆಯನ್ನು ಆಚರಿಸುವವರಿಗೆ ಇದೊಂದು ಅತ್ಯಂತ ಭೂಷಣಮಯವಾಗಿರುವುದು. ಈ ಧರ್ಮದಲ್ಲಿ ಎಲ್ಲಿಯೂ ದೋಷವಿರುವುದಿಲ್ಲ. ಇದಕ್ಕೆ ಮಾತ್ರ ಅತಿಶುದ್ಧವಾದ ಆಚರಣೆ ಎಂದು ಹೇಳುವರು ॥೪೩೦॥ ನನ್ನಲ್ಲಿ ಸಂಪೂರ್ಣವಾಗಿ ಚಿತ್ತವೃತ್ತಿಯು ತನ್ಮಯವಾಗಿರುವುದರಿಂದ ಮನೆಮಾರುಗಳ ಆಸಕ್ತಿಯು ಸಹಜವಾಗಿಯೇ ಇಲ್ಲದಾಗಿರುವುದು. ಆತನಿಗೆ ಗೃಹಸ್ಥಾಶ್ರಮದಲ್ಲಿಯೇ ನನ್ನ ಪ್ರಾಪ್ತಿಯಾಗುವುದು. ಆತ್ಮಜ್ಞಾನವೇ ಆತನ ಸುಖಸಂಪತ್ತಾಗಿರುವುದು ॥೪೩೧॥ ನಿರ್ಧನರಾಗಿರುವ ಇಂತಹ ಪ್ರಕಾರದ ಗೃಹಸ್ಥಾಶ್ರಮದಲ್ಲಿ ಇದ್ದವರಿಗೆ ನನ್ನ ಪ್ರಾಪ್ತಿಯಾಗುವುದು. ಈಗ ಶ್ರೀಮಂತರಾಗಿ ಇರುವವರಿಗೆ ನನ್ನ ಪ್ರಾಪ್ತಿಯು ಹೇಗಾಗುವುದೆಂಬುದನ್ನು ನಿನಗೆ ಹೇಳುವೆ, ಕೇಳು ॥೪೩೨॥ ಶ್ರೀಮಂತನಾಗಿದ್ದುಕೊಂಡು ಸಜ್ಞಾನನಾಗಿದ್ದರೆ ಆತನಿಗೆ ಅತಿಸಾಧನೆಗಳನ್ನು ಮಾಡದೇ ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳುವುದು ಅತ್ಯಂತ ಸುಲಭವಾಗಿರುವುದು. ಈ ಲಕ್ಷಣಗಳನ್ನು ಈಗ ಹೇಳುವೆನು, ಅದನ್ನು ಕೇಳು ॥೪೩೩॥

ಮೊದಲೇ ಬ್ರಾಹ್ಮಣನು ಎಂದೊಡನೆಯೇ ಆತನು ಪೂಜ್ಯನಾಗಿರುವನು. ಮೇಲಾಗಿ ಪುನಃ ಆತನು ನನ್ನ ಭಕ್ತನಾಗಿದ್ದರೆ ಮತ್ತು ॥೬ ಭಜನೆಯಿಂದ ಸಂಪನ್ನನಾಗಿದ್ದರೆ ಹಾಗೆಯೇ ಮದ್‌ಭಾವನೆಯಿಂದ ಪೂರ್ಣ ಹಾಗೂ ಪಕ್ವದಶೆಗೆ ಮುಟ್ಟಿಕೊಂಡಿದ್ದರೆ ॥೪೩೪॥ ಸ್ವಧಃದೇ ಯಾರಲ್ಲಿಯೂ ಎಂದಿಗೂ ಏನನ್ನೂ ಬೇಡದಿರುವ ಅಂತಹ ನನ್ನ ಭಕ್ತನ ನಿಯಮ ಪಾಲಿಸುವವರಾದ ಇಂತಹವರಿಗೆ ಕ್ಷುಧಾದಿ ಯಾರಿಂವ್ಯಥೆಯನ್ನು ಯಾರು ನಿವಾರಣೆಯನ್ನು ಮಾಡುವನೋ ॥೪೩೫॥ ಆತನಿಗೆ ಅನ್ನ, ಧನ,ವಸ್ತ್ರ, ಜಲ, ಲವಣ ಇತ್ಯಾದಿ ಕೊಡುವನೋ, ಓಡಿಯಬವಾಗಿ ತನ್ನ ಸ್ವತಃದ ಧನವನ್ನು ಖರ್ಚಿಸಿ ಯಾರು ನನ್ನ ಭಕ್ತರ ಸಂರಕ್ಷಣೆಯನ್ನು ಮಾಡುತ್ತಿರುವನೋ ॥೪೩೬॥ ಹೀಗೆ ದಾನ ಸ್ವೀಕರಿಸದೇ ಬಹಳ ಉಪಕಾರವೆಂಬ ಭಾವನೆಯು ಮನದಲ್ಲಿರದೇ ಯಾರು ಅತ್ಯಂತ ಆದರಭಾವನೆಯಿಂದ, ನಮ್ರಭಾವನೆಯಿಂದ ನನ್ನ ವೃತ್ತಿಯನ್ನು ಹೆಚ್ಚು ಮಾಡುತ್ತಿರುವನೋ ॥೪೩೭॥ ತಾಯಿಯು ತನ್ನ ಮಗನಿಗೆ ರುಚಿರುಚಿಯಾದ ಪದಾರ್ಥಗಳನ್ನು ತನ್ನ ಹೃದಯದ ಯಥಾರ್ಥ ಲಕ್ಷಣೆ ಕೊಡುತ್ತಿರುವಳೋ, ಅದರಂತೆ ತನ್ನ ಸರ್ವಪ್ರಕಾರದ ಸ್ವಾರ್ಥವನ್ನು ತ್ಯಜಿಸಿ ನನ್ನ ಭಕ್ತರ ರಕ್ಷಣೆಯನ್ನು ಯಾವನು ತೆನೆಗಳನ್ನು ಅಥವಾ ೬॥ ಆತನಿಗೆ ನಾನು ನನ್ನ ತಲೆಯಮೇಲೆ ಹೊತ್ತುಕೊಂಡು ಕುಣಿದಾಡುವೆನು. ನನ್ನ ಭಕ್ತರಿಗೂ ಕೂಡ ಓಂದಕ್ಕೆ ಸರಿಸಿ, ಈಗ ಉಂಛ ವೃತ್ತಿಗಾಗ ಮೇಲ್ಭಾಗಕ್ಕೆ ಒಯ್ದು ಮುಟ್ಟಿಸುವೆನು ॥೪೪೫॥ ಯಾರಿಗೆ ನಾನು ನನ್ನ ತಲೆಯಮೇಲೆ ತೆಗೆದುಕೊಂಡಾಗ ಆತನಿಗೆ ಮೇಲೆ ತನ್ನ ಉಪಜೀವನಉಳಿಯುವುದು? ಯಾರು ನನ್ನ ಭಕ್ತರ ಸಂರಕ್ಷಣೆಯನ್ನು ಮಾಡುವನೋ, ಆತನ ಉದ್ಧಾರವನ್ನು ನಾನು ಪವಿತ್ರವಾಗಿರುವ ಸ್ಥಿತಿಯಾಗಿ..

ಸಾಂಡೋನಿ ನಿಜಸ್ವಾರ್ಥಾಸೀ । ಮಾಝ್ಯಾ ಭಕ್ತಾಂಸೀ ಜೋ ರಕ್ಷೀ ।।೪೩೮।। ತೈ ಮಾಗೇ ಸಾಂಡೂನಿ ನಿಜಭಕ್ತಾ । ತ್ಯಾಸೀ ಮೀ ವಾಹೀ ಆಪುಲೇ ಮಾಥಾ । ಮಗ ವೈಕುಂಠಾಹೀ ವರುತಾ । ತ್ಯಾಹೀಪರತಾ ಪಾವವೀ ।।೪೩೯।। ಜ್ಯಾಸೀ ಮ್ಯಾ ವಾಹಿಲೇ ನಿಜಮಾಥಾ । ತ್ಯಾಸೀ ಕೋಣ್ಯಾ ಅರ್ಥಾಚೀ ದುರ್ಲಭತಾ । ಜೋ ಸಂರಕ್ಷೀ ಮಾಝ್ಯಾ ನಿಜಭಕ್ತಾ । ತ್ಯಾಸೀ ಉದ್ಧರಿತಾ ಮೀ ಉದ್ಧವಾ ।।೪೪೦।। ಮಾಝೇ ಭಕ್ತಾಂಚೇ ಸಾಂಕಡೀ । ಜೋ ಕೋಣೇ ನಿಜಾಂಗೇ ದವಡೀ । ತ್ಯಾಸೀ ಭವಾರ್ಣವಪರಥಡೀ । ತತ್ಕಾಳ ರೋಕಡೀ ಮೀ ಪಾವವೀ ।।೪೪೧।। ಜೇವೀ ಕಾ ಜಳಸಾಗರೀ । ನಾವ ಧನವಂತಾತೇ ತಾರೀ । ತೇವೀ ಭಕ್ತರಕ್ಷಕಾ ಸಂಸಾರೀ । ಮೀ ಉದ್ಧರೀ ಉದ್ಧವಾ ।।೪೪೨।। ಯಾಪರೀ ಧನವಂತ ಜನ । ಜೋ ಕರೀ ಭಕ್ತಸಂರಕ್ಷಣ । ದೇವಕೀವಸುದೇವಾಂಚೀ ಆಣ । ತ್ಯಾಚೇ ಉದ್ಧರಣ ಮೀ ಕರೀ ।।೪೪೩।। ಸರ್ವಾಂಚೇ ಆಪತ್ತೀಚೇ ನಿವಾರಣ । ರಾಜೇನಿ ಕರಾವೇ ಆಪಣ । ತ್ಯಾ ರಾಜಧರ್ಮಾಚೇ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೪೪೪।।

ಸರ್ವಾ: ಸಮುದ್ಧರೇದ್ರಾಜಾ ಪಿತೇವ ವ್ಯಸನಾತ್ಪ್ರಜಾ: ।
ಆತ್ಮಾನಮಾತ್ಮನಾ ಧೀರೋ ಯಥಾ ಗಜಪತಿರ್ಗಜಾನ್ ।।೪೫।।

ಅರ್ಥ:- ರಾಜನು ತಂದೆಯ ಸಮಾನವಾಗಿ ಸರ್ವ ಪ್ರಜೆಗಳ ಉದ್ಧಾರ ಮಾಡಬೇಕು. ಯಾವ ಪ್ರಕಾರವಾಗಿ ಗಜರಾಜನು ಇತರ ಗಜಗಳ ಸಂರಕ್ಷಣೆ ಮಾಡುವಂತೆ ಪ್ರಜೆಗಳ ಉದ್ಧಾರವನ್ನು ಮಾಡಿ ಧೀರ ಪುರುಷನು ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು.

ಸರ್ವಾಂಚೇ ಆಪತ್ತೀತ ರಕ್ಷಣ । ರಾಯೇ ಕರಾವೇ ಆಪಣ । ದೀನ ದುರ್ಬಳ ಬ್ರಾಹ್ಮಣ । ಅಯಾಚಿತ ಜನ ಶೋಧೂನೀ ।।೪೪೫।। ವ್ಯಸನಪ್ರಾಪ್ತ ನಿಜಾತ್ಮತಾ । ಪಿತಾ ಸಂರಕ್ಷಣೇ ನಿಘೇ ಪ್ರಜಾ । ತೇವೀ ಆಪತ್ತೀಪಾಸೋನಿ ಪ್ರಜಾ । ಸಂರಕ್ಷಣೇ ರಾಜಾ ಸಾದರ ।।೪೪೬।। ಕರೂನಿ ಪ್ರಜಾಂಚೇ ಸಂರಕ್ಷಣ। ಆಪುಲ್ಯಾ ಆಪತ್ತೀಸೀ ಆಪಣ । ಸ್ವಯೇ ಕರಾವೇ ನಿವಾರಣ। ಹಾ ಸ್ವಧರ್ಮ ಜಾಣ ರಾಯಾಚಾ ।।೪೪೭।। ಚಿಖಲೀ ರುತಲ್ಯಾ ಭದ್ರಜಾತೀ । ಸ್ವಯೇ ನಿಘೇ ಆತ್ಮಶಕ್ತೀ । ಗಜೇ ಗಜಶಾವೇ ನೇಣೋ ಕಿತೀ । ಕಾಢೀ ರುತೀಬಾಹೇರೀ ।।೪೪೮।। ತೇವೀ ರಾಜಾ ಜೋ ಭೂಪತೀ । ತೇಣೇ ಪ್ರಜಾ ರಕ್ಷಾವ್ಯಾ ಆಪತ್ತೀ । ಆಪುಲೇಹೀ ಆಪತ್ತೀಚೀ ನಿವೃತ್ತೀ । ನಿಜಾತ್ಮಶಕ್ತೀ ಜೋ ಕರೀ ।।೪೪೯।। ಐಶಿಯಾ ಸ್ವಧರ್ಮಸ್ಥಿತೀ । ಸಾದರೇ ವರ್ತೇ ಜೋ ಭೂಪತೀ । ತ್ಯಾಚ್ಯಾ ಸ್ವಧರ್ಮಾಚೀ ಫಲಪ್ರಾಪ್ತೀ। ಸ್ವಯೇ ಶ್ರೀಪತೀ ಸಾಂಗತ ।।೪೫೦।।

ಏವಂವಿಧೋ ನರಪತಿರ್ವಿಮಾನೇ ನಾರ್ಕವರ್ಚಸಾ ।

ನನ್ನ ಭಕ್ತರ ಸಂಕಟಗಳನ್ನು ತಾನಾಗಿಯೇ ಮುಂದೆ ಬಿದ್ದು ಯಾವನು ದೂರ ಮಾಡುವನೋ, ಆತನಿಗೆ ನಾನು ಸಂಸಾರದ ಆಚೆ ದಂಡೆಗೆ ಪಾರು ಮಾಡಿ ಮುಟ್ಟಿಸುವೆನು ।।೪೪೧।। ಹೇ ಉದ್ಧವನೇ, ಹಡಗವು ಯಾವ ಪ್ರಕಾರವಾಗಿ ಭಯಂಕರವಾದ ಸಮುದ್ರದಿಂದ ಮನುಷ್ಯನಿಗೆ ಪಾರು ಮಾಡುತ್ತ ಒಯ್ಯುತ್ತಿರುವುದೋ, ಅದರಂತೆಯೇ ಯಾರು ನನ್ನ ಭಕ್ತರ ಸಂರಕ್ಷಣೆಯನ್ನು ಮಾಡುತ್ತಿರುವರೋ, ಅವರನ್ನು ನಾನು ಸಂಸಾರ ಸಾಗರದಿಂದ ಉದ್ಧಾರವನ್ನು ಮಾಡುವೆನು ।।೪೪೨।। ಈ ಪ್ರಕಾರವಾಗಿ ಯಾವ ಧನವಾನ ಮನುಷ್ಯನು ನನ್ನ ಭಕ್ತರ ಸಂರಕ್ಷಣೆಯನ್ನು ಮಾಡುವನೋ, ಆತನ ಉದ್ಧಾರವನ್ನು ನಾನು ನಿಶ್ಚಿತವಾಗಿ ಮಾಡುತ್ತಿರುವೆನು. ಇದನ್ನು ನಾನು ನನ್ನ ತಂದೆತಾಯಿಯರಾದ ವಸುದೇವ ದೇವಕಿಯರ ಆಣೆ ಮಾಡಿ ಹೇಳುವೆನು ।।೪೪೩।। ಸರ್ವರ ವಿಪತ್ತುಗಳ ನಿವಾರಣೆಯನ್ನು ರಾಜನಾದವನು ತಾನು ಸ್ವತ: ಮುಂದಾಗಿ ಮಾಡಬೇಕು. ಈ ಯಾವ ರಾಜಧರ್ಮದ ಲಕ್ಷಣಗಳನ್ನು ಈಗ ಸ್ವತ: ಶ್ರೀಕೃಷ್ಣನು ಹೇಳುವನು ।।೪೪೪।।

ರಾಜನಾದವನು ದೀನರು, ಬಡವರು ಇರುವ ಬ್ರಾಹ್ಮಣರನ್ನು, ಅಯಾಚಿತ ಎಂದರೆ ಭಿಕ್ಷೆ ಬೇಡದ, ತಾನಾಗಿಯೇ ಬಂದದ್ದನ್ನು ಸ್ವೀಕರಿಸುವ ಭಕ್ತರನ್ನು ಅವರ ಸರ್ವ ಸಂಕಟಗಳಿಂದ ತಾನಾಗಿಯೇ ಮುಂದಾಗಿ ರಕ್ಷಣೆಯನ್ನು ಮಾಡಬೇಕು ।।೪೪೫।। ತನ್ನ ಮಕ್ಕಳ ಮೇಲೆ ಒಂದುವೇಳೆ ಏನಾದರೂ ಸಂಕಟಗಳು ಬಂದು ಬೀಳಲು ಆಗ ತಂದೆಯಾದವನು ಅವರ ರಕ್ಷಣೆಗಾಗಿ ಲಗುಬಗೆಯಿಂದ ನಿಶ್ಚಯಪೂರ್ವಕವಾಗಿ ಹೊರಡುವನು. ಅದರಂತೆಯೇ ತನ್ನ ಪ್ರಜೆಗಳಸಂಕಟಗಳನ್ನು ರಾಜನು ಸ್ವತ: ನಿವಾರಣೆಯನ್ನು ಮಾಡಬೇಕು ।।೪೪೬।। ಪ್ರಜೆಗಳ ಸಂರಕ್ಷಣೆಯನ್ನು ಮಾಡಿ. ತನ್ನಮೇಲೆ ಒದಗಿ ಬಂದಿರುವ ಸಂಕಟಗಳನ್ನೂ ಕೂಡ ತಾನೇ ನಿವಾರಣೆಯನ್ನು ಮಾಡಿಕೊಳ್ಳಬೇಕು. ಇದು ರಾಜನ ಸ್ವಧರ್ಮವಾಗಿರುವುದು ।।೪೪೭।। ಒಂದುವೇಳೆ ಗಂಡಾನೆಯು ಹುದುಲಿನಲ್ಲಿ ಸಿಕ್ಕಿಕೊಳ್ಳಲು ಆಗ ಅದು ತನ್ನ ಸ್ವಂತ ಬಲದಿಂದಲೇ ಅಲ್ಲಿಂದ ಹೊರಬೀಳುವುದು. ಹಾಗೆಯೇ ಹುದುಲಿನಲ್ಲಿ ಸಿಕ್ಕಿಕೊಂಡಿರುವ ಹೆಣ್ಣಾನೆ ಹಾಗೂ ಇತರ ಸಣ್ಣ ಆನೆಗಳನ್ನೂ ಕೂಡ ಹೊರಗೆ ತರುವುದು. ಈ ಯಾವ ಇದರ ಕಾರ್ಯವನ್ನು ಗಣಿತ ಮಾಡಲು ಬರುವುದೇ ಇಲ್ಲ ।।೪೪೮।। ಅದರಂತೆ ಭೂಪತಿಯಾಗಿರುವ ರಾಜನು ಪೃಥ್ವಿಯಲ್ಲಿನ ಪ್ರಜೆಗಳ ರಕ್ಷಣೆಯನ್ನು ಮಾಡಬೇಕು. ಹಾಗೆಯೇ ತನಗಾಗಿರುವ ಆಪತ್ತುಗಳನ್ನೂ ಕೂಡ ತನ್ನ ಬಾಹುಬಲದಿಂದ ನಿವಾರಿಸಿಕೊಳ್ಳಬೇಕು ।।೪೪೯।। ಈ ಪ್ರಕಾರವಾಗಿ ಸ್ವಧರ್ಮದಿಂದ ವರ್ತಿಸುತ್ತಿರುವ ರಾಜನಿಗೆ ಯಾವ ಪ್ರಕಾರದ ಫಲಪ್ರಾಪ್ತಿಯಾಗುವುದೆಂಬುದನ್ನು ಈಗ ಶ್ರೀಕೃಷ್ಣನು ಸ್ವತ: ಹೇಳುವನು ।।೪೫೦।।

ವಿಧೂಯೇಹಾಶುಭಂ ಕೃತ್ಸ್ನಮಿಂದ್ರೇಣ ಸಹ ಮೋದತೇ ॥೪೬॥

ಅರ್ಥ:- ಯಾವ ರಾಜನು ಈ ಪ್ರಕಾರವಾಗಿ ಪ್ರಜೆಗಳ ರಕ್ಷಣೆಯನ್ನು ಮಾಡಿ ತನ್ನ ಸರ್ವ ಪಾಪಗಳಿಂದ ಮುಕ್ತನಾಗುವನು ಮತ್ತು ಅಂತ್ಯಕಾಲದಲ್ಲಿ ಸೂರ್ಯಸಮಾನ ತೇಜಸ್ವೀ ವಿಮಾನದಲ್ಲಿ ಕುಳಿತುಕೊಂಡು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಇಂದ್ರನ ಸಮಾನ ಸುಖ ಭೋಗಿಸುವನು.

ಯಾಪರೀ ಜೋ ಕಾ ನೃಪತೀ । ಇಹಲೋಕಿಂಚ್ಯಾ ರಾಜ್ಯಪ್ರಾಪ್ತೀ । ಅಧರ್ಮ ನಾಶೋನಿ ಸ್ವಧರ್ಮಸ್ಥಿತೀ । ಸ್ವರ್ಗ ಪ್ರಾಪ್ತೀ ತೋ ಪಾವೇ ॥೪೫೧॥ "ರಾಜ್ಯಾಚೇ ಅಂತೀ ನರಕ" । ಐಸೇ ಬೋಲತೀ ಜ್ಞಾತೇ ಲೋಕ । ತೇ ನಿರಯಗತೀ ನಾಶೋನಿ ದೇಖ । ಸ್ವಧರ್ಮೇ ಪರಲೋಕ ಪಾವಲೇ ॥೪೫೨॥ ತೇ ಸ್ವರ್ಗಲೋಕೀ ಗಾ ಜಾಣ । ಅರ್ಕಪ್ರಕಾಶಾಸಮ ವಿಮಾನ । ತೇಥ ಆರೂಢೋನಿ ಆಪಣ । ಇಂದ್ರಸಮಾನ ಸುಖ ಭೋಗಿತೀ ॥೪೫೩॥ ಗೃಹಸ್ಥಾಶ್ರಮ ಅತಿವಿಷಮ । ತೇಥೇ ಆಚರತಾ ಸ್ವಧರ್ಮ । ಪೋಡವೇ ಜೈ ಕಾ ದುರ್ಗಮ । ತೇ ಅಪದ್ಧರ್ಮ ಅವಧಾರೀ ॥೪೫೪॥

ಸೀದನ್ ವಿಪ್ರೋ ವಣಿಗ್ವೃತ್ತ್ಯಾ ಪಣ್ಯೈರೇವಾಪದಂ ತರೇತ್ । ಖಡ್ಗೇನ ವಾಪದಾಕ್ರಾಂತೋ ನ ಶ್ವವೃತ್ತ್ಯಾ ಕಥಂಚನ ॥೪೭॥

ಅರ್ಥ:- ಒಂದುವೇಳೆ ಬ್ರಾಹ್ಮಣನು ಅಧ್ಯಾಯನ ಮತ್ತು ಯಜ್ಞಯಾಗಾದಿಗಳಿಂದ ತನ್ನ ಜೀವನವು ನಡೆಯದೇ ಇದ್ದಾಗ ಆತನು ವೈಶ್ಯ ವೃತ್ತಿಯ ಆಶ್ರಯವನ್ನು ಮಾಡಬೇಕು. ತನ್ನ ವಿಪತ್ತು ದೂರಾಗುವವರೆಗೂ ವೈಶ್ಯ ಕರ್ಮವನ್ನು ಮಾಡುತ್ತಿರಬೇಕು. ಒಂದುವೇಳೆ ಅತಿದೊಡ್ಡ ಆಪತ್ತಿನ ಪ್ರಸಂಗ ಒದಗಲು ಆಗ ಖಡ್ಗವನ್ನು ಹಿಡಿದು ಕ್ಷತ್ರಿಯ ವೃತ್ತಿಯ ಆಶ್ರಯವನ್ನು ಪಡೆಯಬೇಕು. ಆದರೆ ಯಾವುದೇ ಪರಿಸ್ಥಿತಿಯಲ್ಲಿ ನೀಚರ ಸೇವೆಯನ್ನು ಮಾಡಕೂಡದು.

ಸ್ವಧರ್ಮೇ ಪೀಡಿತಾ ಬ್ರಾಹ್ಮಣಾಸೀ । ತೇಣೇ ಕರಾವೇ ವಾಣಿಗ್ವೃತ್ತೀಸೀ । ಕಾ ದುರಾವಲೇ ಕ್ಷಾತ್ರಧರ್ಮಾಸೀ । ತೇಹೀ ಸದೋಷೀ ಅತಿದುಷ್ಟ ॥೪೫೫॥ ಬ್ರಾಹ್ಮಣಾಸೀ ಹಿಂಸಾಕರ್ಮ । ತೋ ಜಾಣ ಪಾಪರಮ ಅಧರ್ಮ । ಲಾಗಲ್ಯಾ ಅನುಪಪತ್ತೀ ದುರ್ಗಮ । ತೈ ಕ್ಷಾತ್ರಧರ್ಮ ಕರಾವಾ ॥೪೫೬॥ ಕರಿತಾ ವಾಣಿಜ್ಯಕರ್ಮಾಸ । ತಿಳ ಸರ್ಷಪ ಕಾರ್ಪಾಸ । ಕಾ ಲವಣಾದಿ ರಸ ತೈಜಸ । ಯಾಂಚ್ಯಾ ಮಹಾದೋಷ ವಿಕ್ರಯೀ ॥೪೫೭॥ ತ್ಯಾ ಸೋಡೂನಿ ಸದೋಷಾ ಸಮಸ್ತಾ । ಲಾಗಾವೇ ವಾಣಿಜ್ಯ ಪಂಥಾ । ತಾಂಬೂಲಪರ್ಣೇ ಶ್ವೇತವಸ್ತ್ರತಾ । ಹೇ ವಿಕಿತಾ ನಿರ್ದುಷ್ಟ ॥೪೫೮॥ ಐಶಿಯಾ ವಾಣಿಜ್ಯಸ್ಥಿತೀ । ಜ್ಯಾಚೀ ಢಳೇನಾ ಅನುಪಪತ್ತೀ । ತೇಣೇ ಖಡ್ಗ ಘೇಊನೀ ಹಾತೀ । ಕ್ಷಾತ್ರವೃತ್ತೀ ಕರಾವೀ ॥೪೫೯॥ ತೇಥೇ ಚೋರಾವೀ ನಾ ಅಂಗೇ । ರಣೀ ನ

ಈ ಪ್ರಕಾರವಾಗಿ ನೃಪತಿಯು ಇಹಲೋಕದಲ್ಲಿ ರಾಜ್ಯವನ್ನಾಳುತ್ತಿರುವನು. ಅಧರ್ಮದ ನಾಶವನ್ನು ಮಾಡಿ ಸ್ವಧರ್ಮದ ಆಚರಣೆಯಲ್ಲಿ ನಿರತನಾಗಿರುವನು. ಈತನಿಗೆ ಸ್ವರ್ಗದ ಪ್ರಾಪ್ತಿಯಾಗುವುದು ॥೪೫೧॥ ರಾಜನಿಗೆ ಅಂತ್ಯದಲ್ಲಿ ನರಕವಾಸವಾಗುವುದು ಎಂದು ಹೀಗೆ ತಿಳಿದವರು ಹೇಳುತ್ತಿರುವರು. ಆದರೆ ಈ ನರಕವಾಸವನ್ನು ತಪ್ಪಿಸಿಕೊಂಡು ಅನೇಕ ರಾಜರು ಸ್ವರ್ಗಪ್ರಾಪ್ತಿಯನ್ನು ಮಾಡಿಕೊಳ್ಳುವರು ॥೪೫೨॥ ಇವರು ಸ್ವರ್ಗಲೋಕದಲ್ಲಿ ಸೂರ್ಯಪ್ರಭೆಯುಳ್ಳ ದೇದಿಪ್ಯಮಾನದಿಂದ ಬೆಳಗುತ್ತಿರುವ ವಿಮಾನದಲ್ಲಿ ಕುಳಿತುಕೊಂಡು ಇಂದ್ರಸಮಾನವಾದ ಸುಖಭೋಗಗಳನ್ನು ಭೋಗಿಸುವರು ॥೪೫೩॥ ಗೃಹಸ್ಥಾಶ್ರಮವು ಅತ್ಯಂತ ಕಠಿಣವಾಗಿರುವುದು. ಇದರಲ್ಲಿ ಸ್ವಧರ್ಮದ ಆಚರಣೆಯನ್ನು ಮಾಡುತ್ತಿರಲು ಅನೇಕ ಕಠಿಣ ಪ್ರಸಂಗಗಳು ನಿರ್ಮಾಣವಾಗುತ್ತಿರುವುವು. ಆಗ ಆ ಸಮಯದ ಅಪದ್ಧಕರ್ಮಗಳ ವಿಷಯಕ್ಕೆ ಹೇಳುವೆನು. ಅದನ್ನೀಗ ಕೇಳು ॥೪೫೪॥

ಬ್ರಾಹ್ಮಣರು ಸ್ವಧರ್ಮದಿಂದ ನಡೆಯುತ್ತಿರಲು ಆಗ ಅವರಿಗೆ ಪೀಡೆ ತೊಂದರೆಗಳಾದರೆ ಅವರು ವೈಶ್ಯವೃತ್ತಿಯನ್ನು ಸ್ವೀಕರಿಸಬೇಕು. ಹಾಗೆಯೇ ವ್ಯಾಪಾರ ಉದ್ಯೋಗವನ್ನು ಮಾಡಬೇಕು. ಕ್ಷಾತ್ರ ಧರ್ಮದ ಸ್ವೀಕಾರವನ್ನು ಮಾಡಿ ಹಿಂಸಾದಿ ದೋಷಗಳನ್ನು ಮಾಡಕೂಡದು. ಏಕೆಂದರೆ ಅದು ಕೆಟ್ಟ ವೃತ್ತಿಯಾಗಿರುವುದು ॥೪೫೫॥ ಬ್ರಾಹ್ಮಣನು ಹಿಂಸೆ ಕರ್ಮಗಳನ್ನು ಮಾಡುವುದು ಮಹಾ ಅಧರ್ಮವಾಗಿರುವುದು. ಆದರೆ ಅವರಿಗೆ ಬೇರೆ ಯಾವ ಮಾರ್ಗವೂ ಇಲ್ಲದಾದರೆ ಕೊನೆಯಲ್ಲಿ ಕ್ಷಾತ್ರವೃತ್ತಿಯನ್ನು ಸ್ವೀಕರಿಸಬೇಕು ॥೪೫೬॥ ಬ್ರಾಹ್ಮಣನು ವೈಶ್ಯರ ದಂಧೆಯನ್ನು ಸ್ವೀಕರಿಸಿದರೆ, ಎಳ್ಳು, ಸಾಸ್ವಿ, ಅರಳೆ, ಉಪ್ಪು, ಎಣ್ಣೆ, ತುಪ್ಪ ಇತ್ಯಾದಿ ಪದಾರ್ಥಗಳನ್ನು ಮಾರಕೂಡದು ॥೪೫೭॥ ಇತರ ಪದಾರ್ಥಗಳ ವ್ಯಾಪಾರವನ್ನು ಮಾಡಬೇಕು. ತಾಂಬೂಲ ಎಲೆಗಳು ಮತ್ತು ಬಿಳಿ ವಸ್ತ್ರಗಳನ್ನು ಮಾರಾಟ ಮಾಡಿದರೆ ದೋಷವು ತಟ್ಟಲಾರದು ॥೪೫೮॥ ಈ ಪ್ರಕಾರವಾಗಿ ವೈಶ್ಯರ ಧಂಧೆಯನ್ನು ಮಾಡಿದರೂ ಕೂಡ ಅವರ ಸಂಕಟಗಳು ದೂರವಾಗದಿದ್ದರೆ ಅವರು ಕೈಯಲ್ಲಿ ಖಡ್ಗವನ್ನು ಧರಿಸಿ ಕ್ಷತ್ರಿಯರ ವೃತ್ತಿಯನ್ನು ಸ್ವೀಕರಿಸಬೇಕು ॥೪೫೯॥ ಆಗ ಆ ವೃತ್ತಿಯಲ್ಲಿ ಯಾವ ಪ್ರಕಾರದ ಪೈಗಳ್ಳತನವನ್ನು ಮಾಡಬಾರದು. ರಣರಂಗದಿಂದ ಮರಳಿ ತಿರುಗಬಾರದು. ಸ್ವಾಮಿಕಾರ್ಯಕ್ಕಾಗಿ ದೇಹದ ಮೇಲೆ ಆಶೆಯನ್ನು ಬಿಟ್ಟು ಯುದ್ಧವನ್ನು ಮಾಡಬೇಕು ॥೪೬೦॥ ಈ ಪ್ರಕಾರದ ಶುದ್ಧವಾದ ಕ್ಷತ್ರಿಯ ವೃತ್ತಿಯಿಂದ ಬ್ರಾಹ್ಮಣರು ತಮ್ಮ ಆಪತ್ತುಗಳನ್ನು ದೂರ ಮಾಡಿಕೊಳ್ಳಬೇಕು. ಆದರೆ ಪ್ರಾಣ ಹೋದರೂ ಕೂಡ ನೀಚ ಜನರ ಸೇವೆ ಮಾಡುತ್ತ ಕುಳಿತುಕೊಳ್ಳಬಾರದು ॥೪೬೧॥ ಸ್ವಧರ್ಮದಿಂದ ನಡೆಯುತ್ತಿರಲು ಕ್ಷತ್ರಿಯರಿಗೆ ಒಂದುವೇಳೆ ಸಂಕಟಗಳು ಒದಗಿದರೆ ಆಗ ಅವರು ಯಾವ ಪ್ರಕಾರವಾಗಿ ವರ್ತಿಸಬೇಕೆಂಬುದನ್ನು ಈಗ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ॥೪೬೨॥

ಸರಾವೇ ಮಾಗೇ । ಸ್ವಾಮಿಕಾರ್ಯಾಚೇನಿ ಯೋಗೇ । ದೇಹತ್ಯಾಗೇ ಉಠಾವೇ ॥೪೬೦॥ ಐಶಿಯಾ ಶುದ್ಧ ಕ್ಷಾತ್ರ ವೃತ್ತೀ । ಬ್ರಾಹ್ಮಣೇ ಕಂಠಾವೀ ಅನುಪಪತ್ತೀ । ಪರೀ ನೀಚಸೇವಾ ಪ್ರಾಣಾಂತೀ । ಶ್ವವೃತ್ತೀ ನ ಕರಾವೀ ॥೪೬೧॥ ಕ್ಷತ್ರಿಯಾಂಸೀ ಸ್ವಧರ್ಮೇ ಅನುಪಪತ್ತೀ । ಲಾಗಲ್ಯಾ ವರ್ತಾವೇ ಕೋಣೇ ಸ್ಥಿತೀ । ತೇ ವಿಶದ ಕರೂನಿ ಶ್ರೀಪತೀ । ಉದ್ಧವಾಪ್ರತೀ ಸಾಂಗತ ॥೪೬೨॥

ವೈಶ್ಯವೃತ್ತ್ಯಾ ತು ರಾಜನ್ಯೋ ಜೀವೇನ್ಮೃಗಯಯಾಽಽಪದಿ । ಚರೇದ್ವಾ ವಿಪ್ರರೂಪೇಣ ನ ಶ್ವವೃತ್ತ್ಯಾ ಕಥಂಚನ ॥೪೮॥

ಅರ್ಥ:- ಈ ಪ್ರಕಾರವಾಗಿ ಕ್ಷತ್ರಿಯತ್ವ ಪ್ರಜಾಪಾಲನೆ ಇತ್ಯಾದಿಗಳಿಂದ ಜೀವನದ ಉದರ ನಿರ್ವಹಣೆ ನಡೆಯದಿದ್ದರೆ ವೈಶ್ಯವೃತ್ತಿ ವ್ಯಾಪಾರ ಉದ್ಯೋಗಗಳನ್ನು ಮಾಡಬೇಕು. ಬಹುದೊಡ್ಡ ವಿಪತ್ತು ಒದಗಲು ಬೇಟೆಯಾಡಿ ಅಥವಾ ವಿದ್ಯಾರ್ಥಿಗಳವರಿಗೆ ಕಲಿಸಿ ತನ್ನ ಆಪತ್ತನ್ನು ದೂರಮಾಡಬೇಕು. ಆದರೆ ನೀಚ ಜನರ ಸೇವೆ, ಸಂಗತಿಯನ್ನು ಮಾಡಕೂಡದು.

ಕ್ಷತ್ರಿಯಾಸೀ ಲಾಗಲ್ಯಾ ಅನುಪಪತ್ತೀ । ಪೂರ್ವೋಕ್ತ ಕರಾವೀ ವಣಿಗ್ವೃತ್ತೀ । ಕಾ ಪಾರಧೀ ಕರಾವೀ ವನಾಂತೀ । ತೇಣೇ ಅನುಪಪತ್ತೀ ಕಂಠಾವೀ ॥೪೬೩॥ ಯೇಣೇಹೀ ನ ಕಂಠೇ ಅನುಪಪತ್ತೀ । ತರೀ ಭೀಕ ಮಾಗಾವೀ ವಿಪ್ರಗತೀ । ಪರೀ ನೀಚಸೇವಾ ಪ್ರಾಣಾಂತೀ । ಶ್ವವೃತ್ತೀ ನ ಕರಾವೀ ॥೪೬೪॥ ಸ್ವಧರ್ಮೇ ವೈಶ್ಯಾಸೀ ಅನುಪಪತ್ತೀ । ಲಾಗಲ್ಯಾ ವರ್ತಾವೇ ಕೋಣೇ ಸ್ಥಿತೀ । ತೇ ವಿವಂಚನಾ ಉದ್ಧವಾಪ್ರತೀ । ಕೃಷ್ಣ ಕೃಪಾಮೂರ್ತಿ ಸಾಂಗತ ॥೪೬೫॥

ಶೂದ್ರವೃತ್ತಿಂ ಭಜೇ ದ್ವೈಶ್ಯಃ ಶುದ್ರಃ ಕಾರುಕಟಕ್ರಿಯಾಮ್ । ಕೃಚ್ಛ್ರಾನ್ಮುಕ್ತೋ ನ ಗರ್ಹ್ಯೇಣ ವೃತ್ತಿಂ ಲಿಪ್ಸೇತ ಕರ್ಮಣಾ ॥೪೯॥

ಅರ್ಥ:- ಆಪತ್ಕಾಲದಲ್ಲಿ ವೈಶ್ಯರು ಶೂದ್ರವೃತ್ತಿಯಿಂದ ಉಪಜೀವನವನ್ನು ನಡೆಸಬೇಕು. ಚಾಪಿ, ತಟ್ಟು, ಬಿದರಿನ ಬುಟ್ಟಿಗಳು ಇತ್ಯಾದಿ ಹೆಣೆದು ಅದರಿಂದ ಉಪಜೀವನವನ್ನು ನಡೆಸಬೇಕು. ಆದರೆ ಹೇ ಉದ್ಧವಾ, ಈ ಎಲ್ಲವೂ ಆಪತ್ಕಾಲಕ್ಕಾಗಿ ಇರುವುವು. ಈ ಆಪತ್ಕಾಲವು ಮುಗಿದ ನಂತರ ತಾತ್ಕಾಲಿಕವಾಗಿ ಸ್ವೀಕರಿಸಿದ ಈ ಕರ್ಮಗಳನ್ನು ಬಿಟ್ಟು ಪೂರ್ವದ ಕರ್ಮಗಳನ್ನೇ ಮಾಡಬೇಕು.

ವೈಶ್ಯಾಸೀ ಲಾಗಲ್ಯಾ ಅನುಪಪತ್ತೀ । ತೇಣೇ ಧರಾವೀ ಶೂದ್ರವೃತ್ತೀ । ನಿಷ್ಕಪಟ ಸೇವಾ ಯಥಾಸ್ಥಿತೀ । ತೀ ವರ್ಣಾಪ್ರತೀ ಕರಾವೀ ॥೪೬೬॥ ವೈಶ್ಯ ಪೀಡಿಲ್ಯಾಹೀ ಅನುಪಪತ್ತೀ । ಬ್ರಾಹ್ಮಣಕ್ಷತ್ರಿಯಾಂಚೀ ವೃತ್ತೀ । ಸರ್ವಥಾ ಧರೂ ನಯೇ ಹಾತೀ । ಜಾಣ ನಿಶ್ಚಿತೀ ಉದ್ಧವಾ ॥೪೬೭॥ ವೈಶ್ಯಾಸೀ ಅತಿಅನುಪಪತ್ತೀ । ಮಾಂಡಲ್ಯಾಹೀ ಪ್ರಾಣಾಂತಗತೀ । ತರೀ ನೀಚಸೇವೇಚೀ ಸ್ಥಿತೀ । ಕೋಣೇಹೀ ಅರ್ಥೀ ನ ಕರಾವೀ ॥೪೬೮॥ ಶೂದ್ರಾಸೀ ಲಾಗಲಿಯಾ ಅನುಪಪತ್ತೀ । ತೇಣೇಹೀ ನ ಕರಾವೀ ಶ್ವವೃತ್ತೀ । ಧರೂನಿ ಬುರುಡಕ್ರಿಯಾ ಹಾತೀ । ಜೀವಿಕಾವೃತ್ತೀ

ಕ್ಷತ್ರಿಯರಿಗೆ ವಿಪತ್ತುಗಳು ಬಂದರೆ ಅವರೂ ಕೂಡ ಈ ಹಿಂದೆ ಹೇಳಿದ ಪ್ರಕಾರವಾಗಿ ವೈಶ್ಯ ವೃತ್ತಿಯ ಸ್ವೀಕಾರವನ್ನು ಮಾಡಿ ವ್ಯಾಪಾರವನ್ನು ಮಾಡಬೇಕು ಅಥವಾ ಅರಣ್ಯದಲ್ಲಿ ಹೋಗಿ ಬೇಟೆಯಾಡಿ ತಮ್ಮ ಚರಿತಾರ್ಥವನ್ನು ಸಾಗಿಸಬೇಕು ॥೪೬೩॥ ಇಷ್ಟು ಮಾಡಿದರೂ ಸಹ ವಿಪತ್ತುಗಳು ದೂರವಾಗದಿದ್ದರೆ ಅವರು ಬ್ರಾಹ್ಮಣರಂತೆ ಭಿಕ್ಷೆಯನ್ನು ಬೇಡಬೇಕು. ಆದರೆ ಜೀವ ಹೋದರೂ ಸರಿಯೇ ನೀಚ ಜನರ ಸೇವಾ, ಸಂಗತಿಯನ್ನು ಮಾಡಕೂಡದು ॥೪೬೪॥ ವೈಶ್ಯರು ಸ್ವಧರ್ಮದಿಂದ ವರ್ತಿಸುತ್ತಿರಲು ಅವರಿಗೆ ವಿಪತ್ತುಗಳು ಒದಗಿದರೆ ಅವರು ಯಾವ ಪ್ರಕಾರವಾಗಿ ಆಚರಣೆಯನ್ನು ಮಾಡಬೇಕೆಂಬುವ ವಿಚಾರವನ್ನು ಕೃಪಾಮೂರ್ತಿಯಾದ ಶ್ರೀಕೃಷ್ಣನು ಈಗ ಹೇಳುತ್ತಿರುವನು ॥೪೬೫॥

ವೈಶ್ಯರಿಗೆ ಆಪತ್ಕಾಲವು ಬಂದರೆ ಅವರು ಸೇವಾ ಧರ್ಮವನ್ನು ಪಾಲಿಸಬೇಕು. ಇವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರೂ ವರ್ಣಗಳ ಸೇವೆಯನ್ನು ನಿಃಸ್ವಾರ್ಥ ಭಾವನೆಯಿಂದ ಮಾಡುತ್ತಿರಬೇಕು ॥೪೬೬॥ ಹೇ ಉದ್ಧವಾ, ವೈಶ್ಯರಿಗೆ ಯಾವುದೇ ಪ್ರಕಾರದ ಮಹಾ ವಿಪತ್ತುಗಳು ಬಂದೊದಗಿದರೂ ಕೂಡ ಅವರು ಬ್ರಾಹ್ಮಣ ಅಥವಾ ಕ್ಷತ್ರಿಯರ ವ್ಯವಸಾಯವನ್ನು ಎಂದಿಗೂ ಮಾಡಬಾರದು. ಇದನ್ನು ನಿಶ್ಚಯವಾಗಿ ತಿಳಿ ॥೪೬೭॥ ಅದರಂತೆಯೇ ವೈಶ್ಯ ವರ್ಣದವರಿಗೆ ಪ್ರಾಣಾಂತಿಕ ಆಪತ್ತುಗಳು ಬಂದು ಎರಗಲು ಆಗ ಅವರು ಪ್ರಾಣ ಹೋದರೂ ಕೂಡ ಯಾವುದೇ ಕಾರಣದಿಂದ ನೀಚ ಜನರ ಸೇವೆಯನ್ನು ಮಾಡಕೂಡದು ॥೪೬೮॥ ಶೂದ್ರರಿಗೆ ಆಪತ್ಕಾಲವು ಒದಗಲು ಅವರು ನೀಚ ಜನರ ಸೇವೆಯನ್ನು ಮಾಡಕೂಡದು. ಅವರು ಮೇದಾರ ದಂಧೆಯನ್ನು ಮಾಡಿ ತಮ್ಮ ಜೀವನವನ್ನು ನಡೆಸಬೇಕು ॥೪೬೯॥ ಇವರು ಹಗ್ಗ, ಮಿಣೆ, ನೆಲವು ಇವುಗಳನ್ನು ತಯಾರಿಸಿ ಮಾರಬೇಕು. ಅಥವಾ ಮಣೆಗಳು, ಒರಳುಕಲ್ಲು, ಚುಚುಗಾ ಇತ್ಯಾದಿಗಳ ಮಾರಾಟ ಮಾಡಬೇಕು. ಇಲ್ಲವೇ ಹೊಟ್ಟೆತುಂಬಿಕೊಳ್ಳಲು ತಲೆಯ ಮೇಲೆ ಕಟ್ಟಿಗೆಗಳನ್ನು ಹೊತ್ತು ಮಾರಬೇಕು ॥೪೭೦॥ ಆಪತ್ಕಾಲವು ಒದಗಲು ನಾಲ್ಕೂ ವರ್ಣದವರು ತಮ್ಮ ತಮ್ಮ ಉದರ ಪೋಷಣೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ನಾನು ನಿನಗೆ ಹೇಳಿದೆನು. ಒಟ್ಟಿನಲ್ಲಿ ನೀಚ ಜನರ ಸೇವೆಯನ್ನು ಯಾರೂ ಎಂದಿಗೂ ಮಾಡಬಾರದು ॥೪೭೧॥ ಆಪತ್ಕಾಲವು ಬಂದಾಗ ಯಾವ ಜೀವನವನ್ನು ನಡೆಸಲು ಇಲ್ಲಿಯವರೆಗೆ ಹೇಳಿದ್ದನ್ನು ಮಾಡಬೇಕು. ಆದರೆ ಆಪತ್ಕಾಲವು ಮುಗಿಯಿತೆಂದರೆ ಆ ಜೀವನದಲ್ಲಿ ಲೋಭವನ್ನಿಡದೇ ತಮ್ಮ ಪೂರ್ವದ ಸ್ವಧರ್ಮವನ್ನೇ ಆಚರಿಸಬೇಕು ॥೪೭೨॥

ಕರಾವೀ ॥೪೭೯॥ ವಿಕಾವೀ ದೋರ ದಾವೀ ಶಿಂಕೀ । ಪಾಟೇ ವರವಂಟೇ ಟವಳೀ ನಿಕೀ । ಕಾ ಕಾಷ್ಠೇ ವಾಹಾವೀ ಮಸ್ತಕೀ । ಜೀವಿಕೇವಿಖೀ ಉದರಾರ್ಥ ॥೪೮೦॥ ಆಪತ್ಕಾಳಾಚಿಯೇ ಗತೀ । ಚತುರ್ವರ್ಣಾಚೀ ಜೀವಿಕಾಸ್ಥಿತೀ । ಮ್ಯಾ ಸಾಂಗೀತಲೀ ತುಜಪ್ರತೀ । ಪರೀ ಸರ್ವಥಾ ಶ್ವವೃತ್ತೀ ಸಾಂಡಾವೀ ॥೪೮೧॥ ಏವಂ ಕ್ರಮಲಿಯಾ ಅನುಪಪತ್ತೀ । ಮ್ಯಾ ಸಾಂಗಿತಲ್ಯಾ ಜ್ಯಾ ಜೀವಿಕಾವೃತ್ತೀ । ತೇಥೇ ದೇಖಿಲಿಯಾಹೀ ಲಾಭಪ್ರಾಪ್ತೀ । ಸರ್ವಥಾ ಹಾತೀ ನ ಧರಾವ್ಯಾ ॥೪೮೨॥

ಆಪತ್ಕಾಳೀಂಚ್ಯಾ ಆಪದ್ವೃತ್ತೀ । ಅನುತಾಪೇ ಕ್ರಮಿಲ್ಯಾ ಅಂತೀ । ಸಾಂಡೂನಿಯಾ ಸ್ವಧರ್ಮಸ್ಥಿತೀ । ಯಥಾನಿಗುತೀ ರಹಾವೇ ॥೪೮೩॥ ಗೃಹಸ್ಥಾಚೇ ವಿಹಿತ ಕರ್ಮ । ತ್ಯಾಂತೀಲಹೀ ಆವಶ್ಯಕ ಧರ್ಮ । ತೇಥೀಲ ಬ್ರಹ್ಮಾರ್ಪಣ ವರ್ಮ । ಸ್ವಯೇ ಪುರುಷೋತ್ತಮ ಸಾಂಗತ ॥೪೮೪॥

ವೇದಾಧ್ಯಾಯಸ್ವಧಾಸ್ವಾಹಾಬಲ್ಯನ್ನಾದ್ಯೈರ್ಯಥೋದಯಮ್ ।
ದೇವರ್ಷಿಪಿತೃಭೂತಾನಿ ಮದ್ರೂಪಾಣ್ಯನ್ವಹಂ ಯಜೇತ್ ॥೫೦॥

ಅರ್ಥ :- ಗೃಹಸ್ಥ ಪುರುಷರು ವೇದಾಧ್ಯಯನರೂಪ ಬ್ರಹ್ಮಯಜ್ಞ, ತರ್ಪಣರೂಪ ಪಿತೃಯಜ್ಞ, ಹವನರೂಪ ದೇವಯಜ್ಞ, ಕಾಕಬಲಿ ಆದಿ ಭೂತಯಜ್ಞ ಮತ್ತು ಅನ್ನದಾನರೂಪ ಅತಿಥಿಯಜ್ಞ ಇತ್ಯಾದಿ ದ್ವಾರಾ ನನ್ನ ಸ್ವರೂಪಭೂತ ಋಷೀ, ದೇವತಾ, ಪಿತೃ, ಮನುಷ್ಯ ಮತ್ತು ಅನ್ಯ ಸಮಸ್ತ ಪ್ರಾಣಿಗಳ ಯಥಾಶಕ್ತಿ ದಿನಾಲೂ ಪೂಜೆಯನ್ನು ಮಾಡಬೇಕು.

ಸ್ವಾಧ್ಯಾಯ ''ವೇದಾಧ್ಯಯನ''। ವೇದಪ್ರೋಕ್ತ ಬ್ರಹ್ಮಯಜ್ಞ । ''ಸ್ವಧಾ''ಮ್ಹಣಿಜೇ ಪಿತೃತರ್ಪಣ । ''ಸ್ವಾಹಾ'' ಜಾಣ ದೇವತಾದಿಕಾ ॥೪೮೫॥ ಬಳಿದಾನಾದಿಕೀ ಜಾಣ । ತೃಪ್ತ ಹೋಯ ''ಭೂತಗಣ'' । ''ಮನುಷ್ಯಾಂಸೀ'' ಅನ್ನೋದಕದಾನ । ಹೇ ಪಂಚಯಜ್ಞ ಜಾಣ ನಿತ್ಯಕರ್ಮ ॥೪೮೬॥ ಹೇಚಿ ಬ್ರಹ್ಮಕರ್ಮ ಜಾಣ । ಜೇಣೇ ಹೋಯ ಬ್ರಹ್ಮಾರ್ಪಣ । ತ್ಯಾ ಅರ್ಪಣಾಚೀ ನಿಜಖೂಣ । ತುಜ ಮೀ ಸಂಪೂರ್ಣ ಸಾಂಗೇನ ॥೪೮೭॥ ಮೀ ಏಕ ಕರ್ಮಕರ್ತಾ ಯೇಥೇ । ಹೇ ಸಾಂಡೋನಿಯಾ ನಿಜಚಿತ್ತೇ । ಭಗವದ್ರೂಪ ಭಾವಿತಾ ಭೂತೇ । ಬ್ರಹ್ಮಾರ್ಪಣ ತೇಥೇ ಹೋಯ ಕರ್ಮ ॥೪೮೮॥ ಸಾಂಡಿತಾ ಕರ್ಮಾಭಿಮಾನ । ಕರ್ಮ ಹೋಯ ಬ್ರಹ್ಮಾರ್ಪಣ । ಹೇ ಸಂಕಲ್ಪೇವೀಣ ಜಾಣ । ಅರ್ಪಿತೀ ಖೂಣ ಉದ್ಧವಾ ॥೪೮೯॥ ಮಾಝೇನಿ ಹೇ ಕರ್ಮ ಜಾಹಲೇ । ತೇ ಮ್ಯಾ ಕೃಷ್ಣಾರ್ಪಣ ಕೇಲೇ । ಯೇಣೇ ಸಂಕಲ್ಪಾಚೇನಿ ಬೋಲೇ । ಅಂಗಾ ಆಲೇ ಕರ್ತೃತ್ವ ॥೪೯೦॥ ಜೋ ಮ್ಹಣೇ ಮೀ ಕರ್ಮಕರ್ತಾ । ತೋ ಹೋಯ ಕರ್ಮಫಳಭೋಕ್ತಾ । ಮುಖ್ಯ ಬಾಧಕ ತೇ ಅಹಂತಾ । ಜಾಣ

ಆಪತ್ಕಾಲದಲ್ಲಿ ಅನಿವಾರ್ಯ ಪ್ರಸಂಗದಿಂದ ಸ್ವೀಕರಿಸಿರುವ ಬೇರೆಯವರ ವ್ಯವಸಾಯವನ್ನು ಆ ಆಪತ್ಕಾಲವು ಮುಗಿಯುತ್ತಲೇ ಅದನ್ನು ಬಿಟ್ಟು ಬಿಡಬೇಕು. ಪುನಃ ಮೊದಲಿನಂತೆ ತಮ್ಮ ಸ್ವಧರ್ಮವನ್ನು ಆರಂಭಿಸಬೇಕು ॥೪೮೩॥ ಗೃಹಸ್ಥರ ಯಾವ ವಿಹಿತ ಕರ್ಮಗಳು, ಅವುಗಳಲ್ಲಿನ ಆವಶ್ಯಕ ಧರ್ಮ ಮತ್ತು ಅವುಗಳನ್ನು ಬ್ರಹ್ಮಾರ್ಪಣ ಮಾಡುವ ಮರ್ಮವನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೪೮೪॥

ಸ್ವಾಧ್ಯಾಯವೆಂದರೆ ವೇದಾಧ್ಯಯನವನ್ನು ಮಾಡುವುದು, ವೇದದಲ್ಲಿ ಹೇಳಿದ ಪ್ರಕಾರ ಬ್ರಹ್ಮಯಜ್ಞವನ್ನು ಮಾಡುವುದು, ಸ್ವಧಾ ಎಂದರೆ ಪಿತೃತರ್ಪಣೆ ಮತ್ತು ಸ್ವಾಹಾ ಎಂದರೆ ದೇವತೆಗಳವರಿಗೆ ಹವನ ಕೊಡುವುದು ॥೪೮೫॥ ಬಲಿದಾನ ಸಮಾನವಾಗಿ ದಾನವನ್ನು ಮಾಡಬೇಕು. ಇದರಿಂದ ಭೂತಗಣಗಳು ತೃಪ್ತವಾಗುವುವು. ಮನುಷ್ಯರಿಗೆ ಅನ್ನ ನೀರು ದಾನ ಮಾಡಬೇಕು. ಈ ಯಾವ ಪಂಚಮಹಾಯಜ್ಞಗಳು ಗೃಹಸ್ಥರ ನಿತ್ಯಕರ್ಮವಾಗಿರುವುವು ॥೪೮೬॥ ಇವುಗಳ ನಾಮವೇ ಬ್ರಹ್ಮಕರ್ಮ ಎಂದಾಗಿರುವುದು. ಯಾವುದರಿಂದ ಬ್ರಹ್ಮಾರ್ಪಣ ಆಗುವುದೋ ಅಂತಹ ಅರ್ಪಣೆಯ ನಿಜಮರ್ಮವನ್ನು ಈಗ ನಾನು ನಿನಗೆ ಹೇಳುವೆನು ॥೪೮೭॥ ಮಾಡುವ ಕರ್ಮಗಳಲ್ಲಿ ''ನಾನೇ ಒಬ್ಬ ಕರ್ತನು'' ಎಂಬ ಈ ಪ್ರಕಾರದ ಅಭಿಮಾನವನ್ನು ಬಿಟ್ಟು ಸರ್ವ ಭೂತಮಾತ್ರರಲ್ಲಿ ಭಗವತ್ ಭಾವನೆಯನ್ನು ಇಡಬೇಕು. ಆಗ ಆ ಕರ್ಮಗಳು ಸಹಜವಾಗಿಯೇ ಬ್ರಹ್ಮಾರ್ಪಣವಾಗುವುವು ॥೪೮೮॥ ಕರ್ಮಗಳಲ್ಲಿನ ಅಹಂಕಾರವನ್ನು ಬಿಡುತ್ತಲೇ ಆ ಕರ್ಮಗಳು ಬ್ರಹ್ಮಾರ್ಪಣವಾಗುವುವು. ಹೇ ಉದ್ಧವಾ, ಸಂಕಲ್ಪವಿಲ್ಲದೇ ಕರ್ಮಗಳು ಬ್ರಹ್ಮಾರ್ಪಣವಾಗುವುದು ಇದು ರಹಸ್ಯವಾಗಿದೆ ॥೪೮೯॥ ನನ್ನಿಂದಲೇ ಈ ಕರ್ಮವಾಯಿತು, ಇದನ್ನು ನಾನು ಕೃಷ್ಣಾರ್ಪಣೆಯನ್ನು ಮಾಡಿದೆ, ಹೀಗೆಂದು ಮನದಿಂದ, ವಾಣಿಯಿಂದ ಸಂಕಲ್ಪ ಮಾಡಲು ಅದರ ಕರ್ತೃತ್ವವು ತನ್ನ ಮೈಮೇಲೆ ಬರುವುದು ॥೪೯೦॥ ಮತ್ತು ಯಾವ ಕರ್ಮದ ''ಕರ್ತಾ'' ನಾನು ಎಂದಾಗಲೇ ಆ ಕರ್ಮದ ''ಭೋಕ್ತಾ'' ತಾನಾಗುವನು. ಅದಕ್ಕಾಗಿ ಹೇ ಉದ್ಧವಾ, ಅಹಂಕಾರವೇ ಮುಖ್ಯವಾಗಿ ಬಾಧಕವಾಗಿರುವುದು ॥೪೯೧॥ ಯಾರಲ್ಲಿ ಅಹಂಕಾರ, ಮಮಕಾರವಿರುವುದೋ, ಅವರಲ್ಲಿ ನಿತ್ಯಬದ್ಧತೆಯು ಇರುವುದು ಮತ್ತು ಯಾರಲ್ಲಿ ಅಭಿಮಾನವು ಇರುವುದಿಲ್ಲವೋ, ನಿರ್ಭಯನಾಗಿರುವನೋ, ಆತನಲ್ಲಿ ನಿತ್ಯ ಮುಕ್ತತೆಯು ಇರುವುದು ॥೪೯೨॥ ಅದಕ್ಕಾಗಿ ಸರ್ವ ಪ್ರಕಾರದ ಅಭಿಮಾನವನ್ನು ಬಿಟ್ಟು ಪಂಚಮಹಾಯಜ್ಞಗಳನ್ನು ಮಾಡುತ್ತಿರಬೇಕು. ಇದರಿಂದ ಆತನ ಸರ್ವ ಕರ್ಮಗಳು ಸಹಜವಾಗಿಯೇ ಬ್ರಹ್ಮಾರ್ಪಣವಾಗುವುವು ॥೪೯೩॥ ಗೃಹಸ್ಥನ ನಿತ್ಯಕರ್ಮಗಳು ಯಾರಲ್ಲಿ ಬ್ರಹ್ಮಾರ್ಪಣವಾಗುವುದೋ, ಅದನ್ನು ನಾನು ನಿನಗೆ ಯಥಾರ್ಥ ರೀತಿಯಲ್ಲಿ ಹೇಳಿದೆನು. ಈಗ ಯಜ್ಞಾದಿಗಳ ಕಥೆಯನ್ನು ಹೇಳುವೆನು. ಅದನ್ನು ಕೇಳು ॥೪೯೪॥

ತತ್ತ್ವತಾ ಉದ್ಧವಾ ।೫೮೧॥ ಜ್ಯಾಚ್ಯಾ ಠಾಯೀ ಅಹಂಮಮತಾ । ತ್ಯಾಚೇ ಅಂಗೀ ನಿತ್ಯಬದ್ಧತಾ । ಜೋ ನಿರಭಿಮಾನೀ ನಿರ್ಮಮತಾ। ನಿತ್ಯಮುಕ್ತತಾ ತ್ಯಾಪಾಶೀ।೫೮೨॥ ಯಾಲಾಗೀ ಸಾಂಡೂನಿ ಅಭಿಮಾನ । ಪಂಚಮಹಾಯಜ್ಞಾಚರಣ । ಗೃಹಸ್ಥೇ ಪ್ರತ್ಯಹೀ ಕರಿತಾ ಜಾಣ । ಕರ್ಮ ಬ್ರಹ್ಮಾರ್ಪಣ ಸಹಜೇಚಿ ।೫೮೩॥ ಜೈಸೇನಿ ಅರ್ಪೇ ಭಗವಂತಾ । ತೇ ಗೃಹಸ್ಥಾಚೇ ನಿತ್ಯಿಕರ್ಮತಾ । ತುಜ ಮ್ಯಾ ಸಾಂಗಿತಲೀ ತತ್ತ್ವತಾ । ಯಜ್ಞಾದಿ ಕಥಾ ತೇ ಐಕ ।೫೮೪॥

ಯಜ್ಞ ಕರಾವಯಾ ಅಧಿಕಾರವಂತ । ಗಾಂಠೀ ಶುದ್ಧ ಬಾರಾ ಸಹಸ್ರ ಅರ್ಥ । ಜ್ಯಾಸೀ ವೇದಿ ಜ್ಞಾನ ಯಜ್ಞಾಂತ । ತೇಚಿ ಯೇಥ ಅಧಿಕಾರೀ ।೫೮೫॥

ಯದೃಚ್ಛಯೋಪಪನ್ನೇನ ಶುಕ್ಲೇನೋಪಾರ್ಜಿತೇನ ವಾ । ಧನೇನಾऽಪೀಡಯನ್ ಭೃತ್ಯಾನ್ ನ್ಯಾಯೇನೈವಾऽಹರೇತ್ ಕ್ರತೂನ್ ।೪೧॥

ಅರ್ಥ:- ಗೃಹಸ್ಥ ಪುರುಷನು ಅನಾಯಾಸವಾಗಿ ಪ್ರಾಪ್ತವಾದ ಅಥವಾ ಶಾಸ್ತ್ರಶುದ್ಧ ರೀತಿಯಲ್ಲಿ ಕೂಡಿಸಿರುವ ತನ್ನ ಶುದ್ಧ ಧನದಿಂದ ಪ್ರಜೆಗಳಿಗೆ ಯಾವುದೇ ಪ್ರಕಾರದ ಕಷ್ಟವಾಗದಂತೆ ನ್ಯಾಯವಾಗಿ ಮತ್ತು ವಿಧಿಪೂರ್ವಕವಾಗಿ ಯಜ್ಞವನ್ನು ಮಾಡಬೇಕು.

ಉದೀಮವ್ಯಾಪಾರೇ ಜೋಡಿಲೇ । ಕಾ ಜೇ ಅಸತ್ಪ್ರತಿಗ್ರಹೇ ಆಲೇ । ನಾತರೀ ಪರಪೀಡಾ ಪ್ರಾಪ್ತ ಜಾಹಲೇ । ಕಾ ಆಡವೂನಿ ಘೇತಲೇ ಜೇ ದ್ರವ್ಯ ।೫೮೬॥ ದ್ರವ್ಯ ದೇತಾ ಚರಫಡೀ । ತೇ ಶಿಷ್ಯಾ ಘಾಲೂನ ಸಾಂಕಡೀ । ಐಸಾ ಅರ್ಥ ಜೋಡಿಲಾ ಜೋಡೀ । ತೇ ಅಪರವಡೀ ದ್ರವ್ಯಾಚೇ ।೫೮೭॥ ಜೇ ಯದ್ರುಚ್ಛಾ ಸಹಜ ಆಲೇ । ಕಾ ಜೇ ಶುಕ್ಲವೃತ್ತೀ ಜೋಡಿಲೇ । ಜೇ ಸುಖೋಪಾಯೇ ಹಾತಾ ಆಲೇ । ತೇ ದ್ರವ್ಯ ವಿಹಿಲೇ ಯಜ್ಞಾರ್ಥ ।೫೮೮॥ ಪಾಡೂನಿ ಕುಟುಂಬಾಸೀ ಲಂಘನ । ಸರ್ವ ದ್ರವ್ಯ ವೇಂಚೂನಿ ಜಾಣ । ಕರೂ ನಯೇ ಯಜ್ಞಾಚರಣ । ಅಧರ್ಮಪಣ ತೇಣೇಹೀ ।೫೮೯॥ ಕಾ ಜೇವಿಕಾ ಜೀವನವೃತ್ತೀ । ಯಾಗ ಕರೂ ನಯೇ ನಿಶ್ಚಿತೀ । ಲೌಕಿಕೀ ಮಿರವಾವಯಾ ಸ್ಥಿತೀ । ಯಾಗ ಕರಿತೀ ತೇ ಮಂದ ।೫೯೦॥ ನ ಧರಿತಾ ಕರ್ಮಾಭಿಮಾನ । ಶುದ್ಧ ದ್ರವ್ಯ ಜೋಡಿಲ್ಯಾ ಜಾಣ । ಕರಾವೇ ಯಜ್ಞಾಚರಣ । ಹೇ ಸ್ವಧರ್ಮಲಕ್ಷಣ ಗೃಹಸ್ಥಾಚೇ ।೫೯೧॥ ಸಾಂಡೂನಿಯಾ ವಿಷಯಲಿಪ್ಸಾ ಚಿತ್ತೀ । ತ್ಯಜೂನಿ ಗೃಹಾಚೇ ಗೃಹಾಸಕ್ತೀ । ಗೃಹಸ್ಥೇ ಧರಾವೀ ನಿವೃತ್ತೀ । ಹೇ ಸ್ವಯೇ ಶ್ರೀಪತಿ ಸಾಂಗತ ।೫೯೨॥

ಕುಟುಂಬೇಷು ನ ಸಜ್ಜೇತ ನ ಪ್ರಮಾದ್ಯೇತ್ಕುಟುಂಬ್ಯಪಿ । ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಿಮಪಿ ದೃಷ್ಟವತ್ ।೪೨॥

ಅರ್ಥ:- ಪ್ರಿಯ ಉದ್ಧವಾ, ಗೃಹಸ್ಥ ಪುರುಷನು ಕುಟುಂಬದಲ್ಲಿ ಆಸಕ್ತನಾಗಬಾರದು. ಕುಟುಂಬವು ದೊಡ್ಡದಾಗಿದ್ದರೂ ಕೂಡ ಭಜನೆಯಲ್ಲಿ ಆಲಸ್ಯವನ್ನು ಮಾಡಕೂಡದು. ಬುದ್ಧಿಮಾನ ಪುರುಷನು ಇದನ್ನು ಅರಿತಿರಬೇಕು. ಈ ಲೋಕದಲ್ಲಿ ಸರ್ವ ವಸ್ತುಗಳು

ಯಾರಲ್ಲಿ ಕನಿಷ್ಠವಾಗಿ ಹನ್ನೆರಡು ಸಾವಿರ ರೂಪಾಯಿಗಳಿರುವುವೋ, ಆತನು ಯಜ್ಞ ಮಾಡುವ ಅಧಿಕಾರಿಯಾಗಿರುವನು. ಅಥವಾ ಯಾರಿಗೆ ವೇದಾರ್ಥದ ಜ್ಞಾನವಿರುವುದೋ, ಆತನಿಗೆ ಯಜ್ಞ ಮಾಡುವ ಅಧಿಕಾರವಿರುವುದು ।೫೮೫॥

ಬ್ರಾಹ್ಮಣನು ವ್ಯಾಪಾರ ಧಂದೆಗಳನ್ನು ಮಾಡಿ ಕೂಡಿಸಿರುವ ಧನ, ಅಥವಾ ನಿಷಿದ್ಧ ದಾನಗಳಿಂದ ಕೂಡಿಸಿರುವ ಧನ, ಅಥವಾ ಇತರರಿಗೆ ಪೀಡೆಯನ್ನು ಕೊಟ್ಟು ಕೂಡಿಸಿರುವ ಧನ, ಇನ್ನೊಬ್ಬನಿಗೆ ಅಡ್ಡಗಟ್ಟಿ ಕೂಡಿಸಿರುವ ಧನ ।೫೮೬॥ ಅಥವಾ ಇನ್ನೊಬ್ಬರ ಮನನೊಂದಿಸಿ ಪಡೆದ ಧನ, ಶಿಷ್ಯರಲ್ಲಿ ಸಂಕಟ ಹುಟ್ಟಿಸಿ ಕೂಡಿಸಿರುವ ಧನ, ಹೀಗಿದ್ದರೆ ಈ ಧನವು ಯಜ್ಞ ಆಚರಿಸಲಿಕ್ಕೆ ಅಯೋಗ್ಯವೆಂದು ತಿಳಿಯಬೇಕು ।೫೮೭॥ ದೇವರ ದಯದಿಂದ ಸಹಜವಾಗಿ ಕೂಡಿರುವ ಧನ ಅಥವಾ ಸದಾಚಾರ, ನೀತಿ ನ್ಯಾಯದಿಂದ ಕೂಡಿಸಿರುವ ಧನ ಇಲ್ಲವೇ ಉತ್ತಮ ಉಪಾಯಗಳಿಂದ ಪ್ರಾಪ್ತವಾದ ಧನ, ಇದೇ ಯಜ್ಞದ ಉಪಯೋಗಿಯಾಗಿರುವುದು ।೫೮೮॥ ಕುಟುಂಬ ವರ್ಗದವರಿಗೆ ಉಪವಾಸ ಕೆಡವಿ ಸರ್ವಧನವನ್ನು ಖರ್ಚಿಸಿ ಯಜ್ಞವನ್ನು ಮಾಡಕೂಡದು. ಕಾರಣ ಅದು ಅಧರ್ಮವಾಗುವುದು ।೫೮೯॥ ಅಥವಾ ತನ್ನ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಯಜ್ಞವನ್ನು ಮಾಡಬಾರದು. ಜನರಲ್ಲಿ ತನ್ನ ಕೀರ್ತಿಯು ಬೆಳೆಯಬೇಕೆಂಬ ಉದ್ದೇಶದಿಂದ ಯಜ್ಞವನ್ನು ಮಾಡುವವರು ಮಂದಬುದ್ಧಿಯವರಾಗಿರುವರು ।೫೯೦॥ ಕರ್ಮಗಳ ಯಾವುದೇ ಪ್ರಕಾರದ ಅಭಿಮಾನವನ್ನು ಹಿಡಿಯದೇ ಅತ್ಯಂತ ಶುದ್ಧವಾದ, ಪವಿತ್ರವಾದ ಮಾರ್ಗದಿಂದ ದ್ರವ್ಯವನ್ನು ಸಂಪಾದಿಸಿಕೊಂಡು ಯಜ್ಞವನ್ನು ಮಾಡಬೇಕು. ಇದು ಗೃಹಸ್ಥನ ಸ್ವಧರ್ಮವಾಗಿರುವುದು ।೫೯೧॥ ಮನದಲ್ಲಿನ ವಿಷಯಭೋಗದ ಆಶೆಯನ್ನು ತ್ಯಜಿಸಿ, ಪರಸ್ತ್ರೀಯರ ಆಸಕ್ತಿಯನ್ನು ತೊರೆದು, ಗೃಹಸ್ಥನು ನಿವೃತ್ತಿ ಮಾರ್ಗವನ್ನು ಅನುಸರಿಸಬೇಕು. ಹೀಗೆಂದು ಶ್ರೀಕೃಷ್ಣನು ಸ್ವತ: ಹೇಳುತ್ತಿರುವನು ।೫೯೨॥

ಸ್ತ್ರೀ ಪುತ್ರರ ಯೋಗದಿಂದ ಕುಟುಂಬದ ವೃದ್ಧಿಯಾಗಿದ್ದರೆ, ಅದರಲ್ಲಿ ಬಹಳಷ್ಟು ಆಸಕ್ತಿಯನ್ನಿಡಬಾರದು. ಪರಮಾತ್ಮಯುಕ್ತಿಯ ಸಾಧನೆಗಳಿಂದ ಚಿತ್ತವೃತ್ತಿಯನ್ನು ಸತತವಾಗಿ ಸಾವಧಾನವನ್ನಾಗಿಡಬೇಕು ।೫೯೩॥ ಕಲ್ಪನೆಗಳನ್ನು, ದೋಷಗಳನ್ನು ಮತ್ತು ಸ್ತ್ರೀಸಂಗ ಇವೆಲ್ಲವನ್ನೂ ಬಿಟ್ಟುಕೊಟ್ಟು ಈಶ್ವರನಲ್ಲಿ ಪರಮ ನಿಷ್ಠೆಯನ್ನಿಡಬೇಕು ಮತ್ತು ಈ ವೃತ್ತಿಯನ್ನು ಖಂಡಗೊಳಿಸದೇ ಕಾಯ್ದುಕೊಳ್ಳಬೇಕು ।೫೯೪॥ ಹೇ ಉದ್ಧವಾ, ಗೃಹ, ಕುಟುಂಬ, ವಿಷಯಾಸಕ್ತಿ ಇವುಗಳ ವಿಷಯವಾಗಿ ಸರಿಯಾಗಿ ವಿಚಾರವನ್ನು ಮಾಡಲು ಕೊನೆಯಲ್ಲಿ ಇದರ ಪರಿಣಾಮವು ನಿಜವಾಗಿಯೂ ಅಶಾಶ್ವತವಾಗಿರುವುದು. ಇದನ್ನು ತಿಳಿ ।೫೯೫॥

ನಾಶಿವಂತವಾಗಿರುವುವು. ಇದರಂತೆಯೇ ಸ್ವರ್ಗಾದಿ ಭೋಗಗಳೆಲ್ಲವೂ ಕೂಡ ನಾಶಿವಂತವಾಗಿರುವುವು.

ಜರೀ ಜಾಹಲೀ ಸ್ತ್ರೀಪುತ್ರಗೃಹಸ್ಥಿತೀ । ಪರೀ ನ ಧರಾವೀ ತ್ಯಾಂಚೀ ಆಸಕ್ತೀ । ಸಾವಧ ರಾಖಾವೀ ಚಿತ್ತವೃತ್ತೀ । ಪರಮಾತ್ಮಯುಕ್ತಿ ಸಾಧನೇ ॥೯೩॥ ಸಾಂಡೂನಿ ಕಲ್ಪನಾ ಪ್ರಮಾದ ಸಂಗ । ಚುಕವೂನಿ ಪ್ರಮದಾಂಚೇ ಅಂಗ। ಈಶ್ವರನಿಷ್ಠಾ ಅತಿಚಾಂಗ। ವೃತ್ತಿ ಅಭಂಗ ರಾಖಾವೀ॥೯೪॥ ಗೃಹ-ಕುಟುಂಬ-ವಿಷಯಾಸಕ್ತೀ । ಪಾಹತಾ ವಿವೇಕಾಚಿಯೇ ಸ್ಥಿತೀ । ಪರಿಪಾಕೇ ನಶ್ವರಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೯೫॥
ಜೈಸಾ ಇಹಲೋಕೀಂಚಾ ಪರಿಪಾಕ । ತೈಸಾಚಿ ಜಾಣ ಸ್ವರ್ಗಲೋಕ । ಉಭಯತಾ ನಶ್ವರ ದೇಖ । ಕೇವಳ ಮಾಯಿಕ ಮಿಥ್ಯಾತ್ವೇ ॥೯೬॥ ಸ್ತ್ರೀ ಪುತ್ರ ಆಣಿ ಧನ । ಹೇ ನಶ್ವರ ಜೈಸೇ ಕಾ ಸ್ವಪ್ನ । ಯೇಚಿವಿಷಯೀ ನಿರೂಪಣ । ಸ್ವಯೇ ನಾರಾಯಣ ಸಾಂಗತ ॥೯೭॥

ಪುತ್ರ ದಾರಾಪ್ತಬಂಧೂನಾಂ ಸಂಗಮಃ ಪಾಂಥಸಂಗಮಃ । ಅನುದೇಹಂ ವಿಯಂತ್ಯೇತೇ ಸ್ವಪ್ನೋ ನಿದ್ರಾನುಗೋ ಯಥಾ ॥೫೩॥

ಅರ್ಥ:- ಸ್ತ್ರೀ, ಪುತ್ರ, ಆಪ್ತ, ಬಂಧು ಇವರ ಸಮಾಗಮವು ದಾರಿನಡೆಯುವವರ ಅರವಟ್ಟಿಗೆಯಂತೆ ಅಥವಾ ಧರ್ಮಶಾಲೆಯಲ್ಲಿನ ಸಮಾಗಮದಂತಾಗಿರುವುದು. ಯಾವ ಪ್ರಕಾರವಾಗಿ ನಿದ್ರೆಯ ಅಧೀನವಾಗಿರುವ ಸ್ವಪ್ನವು ನಿದ್ರೆಯು ಮುಗಿಯುತ್ತಲೇ ಇಲ್ಲದಾಗುವುದು. ಅದರಂತೆ ಶರೀರ ಇರುವವರೆಗೆ ಜೊತೆಯಲ್ಲಿ ಕೂಡಿಕೊಂಡು ಇರುವ ಸಂಬಂಧ ಬರುವುದು. ತದನಂತರ ಯಾರೂ ಯಾರನ್ನೂ ವಿಚಾರಿಸುವುದಿಲ್ಲ.

ಜೈಸೇ ವೃಕ್ಷಾಚಳೀ ಪಾಂಥಿಕ । ಏಕತ್ರ ಮೀನಲೇ ಕ್ಷಣ ಏಕ । ಜೈಸೇ ಪುತ್ರದಾರಾಪ್ತಲೋಕ । ಸರ್ವಹೀ ಕ್ಷಣಿಕ ಸಂಗಮ ॥೯೮॥ ಉಭಯ ನದೀಪ್ರವಾಹೇಸೀ । ಕಾಷ್ಠೇ ಮೀನಲೀ ಸಂಗಮೀ ಜೈಸೀ । ಸೋಯರೀ ಸರ್ವ ಜಾಣ ತೈಸೀ । ಹೇಲಾವ್ಯಾಸರಸೀ ಫಾಂಕತೀ ॥೯೯॥ ಜೇ ಯೋನೀ ತೋ ಜೀವ ದೇಹಧಾರೀ । ತೇಥೇ ತೇಚಿ ಯೋನೀಚೀ ಸೋಯರೀ । ಐಶೀ ಅನಂತ ಜನ್ಮೇ ಸಂಸಾರೀ । ತ್ಯೆ ಅಮಿತ ಸೋಯರೀ ಜೀವಾಂಚೀ ॥೧೦೦॥ ಪರೀ ಯೇ ಯೋನೀಚೀ ತೇ ಯೋನ್ಯಂತರೀ । ಯೇರಯೇರಾ ನೋಳಖತೀ ಸೋಯರೀ । ಜೈಸೀ ಯೇ ಸ್ವಪ್ನೀಂಚೀ ಪದಾರ್ಥಪರೀ । ತ್ಯಾ ಸ್ವಪ್ನಾಂತರೀ ರಿಘೇನಾ ॥೧೦೧॥ ಯಾಪರೀ ಹೇ ಸಮಸ್ತ । ಸ್ತ್ರೀ ಪುತ್ರ ಬಂಧು ಆಪ್ತ । ಮಾಯಾಮಯ ಕಲ್ಪಿತ । ಜಾಣೇ ನಿಶ್ಚಿತ ತೋ ಧನ್ಯ ॥೧೦೨॥

ಇತ್ಥಂ ಪರಿಮೃಶನ್ಮುಕ್ತೋ ಗೃಹೇಷ್ವತಿಥಿವದ್ವಸನ್ । ನ ಗೃಹೈರನುಬಧ್ಯೇತ ನಿರ್ಮಮೋ ನಿರಹಂಕೃತಃ ॥೫೪॥

ಅರ್ಥ:- ಗೃಹಸ್ಥನು ಹೀಗೆ ವಿಚಾರಿಸಿ ಗೃಹ, ಗೃಹಸ್ಥರಲ್ಲಿ ಮೋಸಹೋಗಬಾರದು. ಗೃಹಸ್ಥಾಶ್ರಮದಲ್ಲಿ ಅನಾಸಕ್ತನಾಗಿ

ಈ ಯಾವ ಇಹಲೋಕದ ಪರಿಣಾಮದಂತೆಯೇ ಸ್ವರ್ಗಲೋಕದ್ದೂ ಕೂಡ ಅದೇ ರೀತಿಯಾಗಿರುವುದು. ಈ ಎರಡೂ ಪರಿಣಾಮಗಳು ನಶ್ವರ ಮತ್ತು ಮಾಯಿಕವಾಗಿರುವುದರಿಂದ ಮಿಥ್ಯೆಯಾಗಿರುವುವು ॥೯೬॥ ಸ್ತ್ರೀ,ಪುತ್ರ ಮತ್ತು ಧನ ಇವು ಸ್ವಪ್ನದಂತೆ ನಶ್ವರವಾಗಿರುವುವು. ಈಗ ಶ್ರೀಕೃಷ್ಣನು ಈ ನಿರೂಪಣೆಯನ್ನೇ ಮುಂದೆ ಮಾಡುತ್ತಿರುವನು ॥೯೭॥

ಒಂದುವೇಳೆ ಯಾವ ಪ್ರಕಾರವಾಗಿ ಪ್ರವಾಸಿಗರು ಒಂದು ವೃಕ್ಷದ ಕೆಳಗೆ ಸ್ವಲ್ಪ ಸಮಯದವರೆಗೆ ವಿಶ್ರಾಂತಿಯನ್ನು ಪಡೆಯಲು ಕುಳಿತುಕೊಳ್ಳುವರೋ, ಅದರಂತೆ ಸ್ತ್ರೀ, ಪುತ್ರ, ಆಪ್ತೇಷ್ಟರು ಈ ಸರ್ವರ ಸಹವಾಸವು ಸ್ವಲ್ಪ ಸಮಯದವರೆಗೆ ಇರುತ್ತಿರುವುದು ॥೯೮॥ ಎರಡೂ ಕಡೆಯಿಂದ ಎರಡು ನದಿಗಳ ಪ್ರವಾಹವು ಬಂದಿತೆಂದರೆ ಆಗ ಅವುಗಳಲ್ಲಿ ಹರಿಯುತ್ತ ಬಂದ ಕಾಷ್ಠಗಳ ಗುಂಪು ಸಂಗಮದಲ್ಲಿ ಕೂಡಿಕೊಂಡು ಬರುತ್ತಿರುವುವು. ಇದರಂತೆ ಬೀಗರು ಬಿಜ್ಜರು ಒಂದೆಡೆ ಸೇರುತ್ತಿರುವರು. ನೀರಿನ ಪ್ರವಾಹದಲ್ಲಿ ಒಂದು ತೆರೆಯು ಅಪ್ಪಳಿಸಲು ಆಗ ಕೂಡಿ ಬಂದ ಕಾಷ್ಠಗಳು ದಿಕ್ಕೆಟ್ಟು ಹತ್ತು ದಿಶೆಗಳತ್ತ ಧಾವಿಸುವುವು. ಇದೇ ಪ್ರಕಾರ ಬಂಧುಬಳಗದವರ ಗತಿಯಾಗಿರುವುದು ॥೯೯॥ ಯಾವ ಯೋನಿಯಲ್ಲಿ ಜೀವವು ಜನ್ಮವನ್ನು ಧರಿಸುವುದೋ, ಅದೇ ಯೋನಿಗಳಲ್ಲಿನ ಅನೇಕ ಆಪ್ತರನ್ನು ಅದು ಕೂಡಿಸಿಕೊಳ್ಳುವುದು. ಇದರಂತೆ ಜೀವನು ಅಸಂಖ್ಯ ಜನ್ಮಗಳಲ್ಲಿ ಅಗಣಿತ ಜೀವಿಗಳ ಸಹವಾಸವನ್ನು ಮಾಡಿರುವನು ॥೧೦೦॥ ಆದರೆ ಒಂದು ಸ್ವಪ್ನದಲ್ಲಿ ಕಂಡ ಪದಾರ್ಥಗಳು ಯಾವ ಪ್ರಕಾರವಾಗಿ ಇನ್ನೊಂದು ಸ್ವಪ್ನದಲ್ಲಿ ತೋರುವುದಿಲ್ಲವೋ, ಅದರಂತೆಯೇ ಈ ಜನ್ಮದಲ್ಲಿನ ಬಂಧುಬಳಗದವರು ಇನ್ನೊಂದು ಜನ್ಮದಲ್ಲಿ ಒಬ್ಬರಿಗೊಬ್ಬರು ಗುರುತಿಸಲಾರರು ॥೧೦೧॥ ಇದರಂತೆಯೇ ಹೆಂಡರು, ಮಕ್ಕಳು, ಅಣ್ಣತಮ್ಮಂದಿರು, ಬೀಗರು ಬಿಜ್ಜರು ಈ ಎಲ್ಲ ಜನರೂ ಮಾಯಾಮಯರಾಗಿದ್ದು ಕೇವಲ ಕಾಲ್ಪನಿಕರಾಗಿರುವರು. ಹೀಗೆ ಯಾರು ದೃಢವಾದ ನಿಶ್ಚಯದಿಂದ ತಿಳಿದುಕೊಂಡಿರುವರೋ, ಅವರೇ ನಿಜವಾಗಿಯೂ ಧನ್ಯರು ॥೧೦೨॥

ಈ ಪ್ರಕಾರದ ವಿಚಾರಗಳಿಂದ ಯಾರು ವಿವೇಕಿಯಾಗುವನೋ, ಆತನಿಗೆ ಮೋಹ ಮತ್ತು ಮಮತೆಯು ಎಂದಿಗೂ ಇರುವುದಿಲ್ಲ. ಅತಿಥಿಯಂತೆ ಆತನು ಮನೆಯಲ್ಲಿದ್ದರೂ ಕೂಡ ಅಲಿಪ್ತನಾಗಿರುವನು ॥೧೦೩॥ ಈ ಪ್ರಕಾರವಾಗಿ ಯಾರು ಮೋಹ, ಮಮತೆ, ಮಾನಗಳ ವಿಷಯದಲ್ಲಿ ಉದಾಸೀನನಾಗಿರುವನೋ, ಯಾರು ನಿಷ್ಕಾಮ, ನಿರ್ಲೋಭನಾಗಿರುವನೋ, ಆತನಿಗೆ ಯಾವುದೇ ಪ್ರಕಾರದ ಅಹಂಕಾರವು ಬಾಧಿಸಲಾರದು ॥೧೦೪॥

ಹೇಗಿರಬೇಕೆಂದರೆ ಅತಿಥಿಯವರ ನಿವಾಸದಲ್ಲಿದ್ದಂತಿರಬೇಕು. ಯಾರು ಶರೀರ ನನ್ನದು ಎನ್ನುವುದಿಲ್ಲವೋ, ಶರೀರದ ಅಹಂಕಾರವನ್ನಿಡುವುದಿಲ್ಲವೋ, ಮನೆಮಾರಿನಲ್ಲಿ ಮಮತೆಯನ್ನಿಡುವುದಿಲ್ಲವೋ, ಆತನಿಗೆ ಗೃಹಸ್ಥಾಶ್ರಮವು ಬಾಧಿಸುವುದಿಲ್ಲ.

ಐಸೇನಿ ವಿವೇಕೇ ವಿವೇಕವಂತಾ । ಕದಾ ನ ಬಾಧೀ ಮೋಹಮಮತಾ । ಅತಿಥೀಚ್ಯಾ ಪರೀ ಸರ್ವಥಾ । ಅನಾಸಕ್ತತಾ ಗೃಹವಾಸೀ ॥೫೦೩॥ ಏವಂ ನಿರ್ಮಾನಮೋಹಮಮತಾ । ಜೋ ಉದಾಸೀನ ಗೃಹಾವಸ್ಥಾ । ಜ್ಯಾಂಸೀ ನಿಷ್ಕಾಮ ನಿರ್ಲೋಭತಾ । ತ್ಯಾಸೀ ಅಹಂತಾ ಬಾಧೀನಾ ॥೫೦೪॥
ನಿರ್ಮಮತಾ ನಿರಭಿಮಾನ । ವ್ಹಾವಯಾ ಮುಖ್ಯ ಗುರುಭಜನ । ತೇಣೇ ವೈರಾಗ್ಯ-ವಿವೇಕ-ಜ್ಞಾನ । ಸಹಜಚಿ ಜಾಣ ಗುರುಭಕ್ತಾ ॥೫೦೫॥ ಐಶಿಯಾ ವೈರಾಗ್ಯ ವಿವೇಕಸ್ಥಿತೀ । ಗೃಹೀ ವಸತಾ ಗೃಹಸ್ಥಾ ಪ್ರತೀ । ಪ್ರಾಪ್ತ ಹೋಯ ನಿಜಮುಕ್ತೀ । ಜಾಣ ನಿಶ್ಚಿತೀ ಉದ್ಧವಾ ॥೫೦೬॥ ಆತಾ ಆಶ್ರಮಾಂತರಾಚೀ ಗತೀ । ಸ್ವಯೇ ಸಾಂಗತಾಹೇ ಲಕ್ಷ್ಮೀಪತಿ । ಭಕ್ತಿ ವಿರಕ್ತಿ ನಿಜಶಾಂತೀ । ಆಶ್ರಮಸ್ಥಿತಿವಿಭಾಗ ॥೫೦೭॥

ಕರ್ಮಭಿರ್ಗೃಹಮೇಧೀಯೈರಿಷ್ಟ್ವಾ ಮಾಮೇವ ಭಕ್ತಿಮಾನ್ ।
ತಿಷ್ಠೇದ್ವನಂ ವೋಪವಿಶೇತ್ ಪ್ರಜಾವಾನ್ ವಾ ಪರಿವ್ರಜೇತ ॥೫೫॥

ಅರ್ಥ:- ಈ ಪ್ರಕಾರವಾಗಿ ಭಕ್ತಿವಾನ ಗೃಹಸ್ಥನು ಗೃಹಸ್ಥಾಶ್ರಮದಲ್ಲಿನ ಕರ್ಮದಿಂದ ನನ್ನ ಪೂಜೆಯನ್ನು ಮಾಡಬೇಕು. ಹೀಗೆ ಗೃಹಸ್ಥಾಶ್ರಮದಲ್ಲಿರಬೇಕು. ಮಗನಿದ್ದರೆ ಮಾತ್ರ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು ಅಥವಾ ಸನ್ಯಾಸ ಆಶ್ರಮವನ್ನು ಸ್ವೀಕರಿಸಬೇಕು.

ಗೃಹೀ ಅಸೋನಿ ಆಶ್ರಮಸ್ಥಿತೀ । ಜ್ಯಾಸೀ ಮುಖ್ಯತ್ವೇ ಭಗವದ್ಭಕ್ತೀ । ತ್ಯಾಸೀ ಆಶ್ರಮಾಂತರಪ್ರಾಪ್ತೀ । ನ ಲಗೇ ನಿಶ್ಚಿತೀ ಮದ್ಭಕ್ತಾ ॥೫೦೮॥ ತೇಚಿ ಮಾಝೇ ಕೈಸೇ ಭಜನ । ಸ್ವಾಹಾ ಸ್ವಧಾ ಯಜ್ಞದಾನ । ಜೇ ಜೇ ಯೇಥೇ ಅರ್ಪೇ ಜಾಣ । ತೇ ತೇ ಮದರ್ಪಣ ನಿಶ್ಚಿತ ॥೫೦೯॥ ಕಾಳೀ ಅಕಾಳೀ ಸರ್ವಥಾ । ಭಜನೀ ಪಾಲಟ ನಾಹೀ ಚಿತ್ತಾ । ಐಶೀ ಜ್ಯಾ ಗೃಹಸ್ಥಾಚೀ ಅವಸ್ಥಾ । ತೇಣೇ ಅಸಾವೇ ಸರ್ವಥಾ ಗೃಹಾಶ್ರಮೀ ॥೫೧೦॥ ಜ್ಯಾ ಕರ್ಮಾಚೀ ಅತಿ ಆಸಕ್ತೀ । ಆಣಿ ವಿಷಯಾಂಚೀ ಅನಾಸಕ್ತೀ । ನಾಹೀ ಜ್ಞಾನಯುಕ್ತ ನಿಜಶಾಂತೀ । ತ್ಯಾಸೀ ವಾನಪ್ರಸ್ಥೀ ಅಧಿಕಾರು ॥೫೧೧॥ ಜ್ಯಾಸೀ ವಿರಕ್ತಿ ಶಾಂತಿ ಜ್ಞಾನಸ್ಥಿತೀ । ಕರತಳಾಮಲಕ ಹಸ್ತಪ್ರಾಪ್ತೀ । ತ್ಯಾಂಸೀ ಸನ್ಯಾಸಗ್ರಹಣಸ್ಥಿತೀ । ಜಾಣ ನಿಶ್ಚಿತಿ ಅಧಿಕಾರ ॥೫೧೨॥ ಜಾಹಲಿಯಾ ಪುತ್ರಸಂತತೀ । ಭಾರ್ಯಾ ದೇಊನಿ ಪುತ್ರಾಚ್ಯಾ ಹಾತೀ । ಸನ್ಯಾಸ ಕರಾವಾ ನಿಶ್ಚಿತೀ । ಶ್ರುತಿ ಯೇ ಅರ್ಥೀ ಸಂಮತ ॥೫೧೩॥ ಜ್ಯಾಸೀ ಗೃಹಸ್ಥಾಶ್ರಮೀ ನಾವಡೇ ಭಕ್ತೀ । ಅಪಾರ ಪೋರಾಂಚೀ ಸಂತತೀ । ಜಾಹಲ್ಯಾಹೀ ನ ಧರೀ ವಿರಕ್ತೀ । ಜೋ ವಾನಪ್ರಸ್ಥೀ ರಿಘೇನಾ ॥೫೧೪॥ ಜ್ಯಾಚಾ ನ ಫಿಟೇ ವಿಷಯಭ್ರಮ । ಜೋ ಸನ್ಯಾಸೀ ನವ್ಹೇ ನಿಷ್ಕರ್ಮ । ತ್ಯಾಚೇ ಜಾಣ ನಿಂದ್ಯ

ಮಮತಾಶೂನ್ಯ ಮತ್ತು ಅಹಂಕಾರರಹಿತನಾಗುವುದಕ್ಕಾಗಿ ಗುರುಭಜನೆ ಇದೊಂದೇ ಉಪಾಯವಾಗಿರುವುದು. ಗುರುಭಕ್ತರಾದ ಇವರಿಗೆ ವೈರಾಗ್ಯ, ವಿವೇಕ ಮತ್ತು ಜ್ಞಾನ ಇವು ಸಹಜವಾಗಿಯೇ ಪ್ರಾಪ್ತವಾಗುವುವು ॥೫೦೫॥ ಹೇ ಉದ್ಧವಾ, ಹೀಗೆ ವೈರಾಗ್ಯ, ವಿವೇಕಯುಕ್ತರಾಗಿರುವ ಗೃಹಸ್ಥನಿಗೆ ಮನೆಯಲ್ಲಿದ್ದರೂ ಕೂಡ ಮುಕ್ತಿಯು ಪ್ರಾಪ್ತವಾಗುವುದು ॥೫೦೬॥ ಈಗ ಬೇರೆ ಆಶ್ರಮದಲ್ಲಿನ ಆಚಾರ, ವಿಚಾರ, ಭಕ್ತಿ, ವಿರಕ್ತಿ ಮತ್ತು ಶಾಂತಿ ಇತ್ಯಾದಿಗಳನ್ನು ಆಶ್ರಮಗಳ ವಿಭಾಗಪೂರ್ವಕವಾಗಿ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೫೦೭॥

ಯಾವ ಗೃಹಸ್ಥನು ಮನೆಯಲ್ಲಿಯೇ ಇದ್ದುಕೊಂಡು ಆಶ್ರಮ ಧರ್ಮವನ್ನು ಮಾಡುತ್ತ ಮತ್ತು ಪ್ರತಿಯೊಂದು ಕರ್ಮಗಳನ್ನು ಭಕ್ತಿಯುಕ್ತ ಅಂತಃಕರಣದಿಂದ ಆಚರಿಸುತ್ತ ನನ್ನ ಭಜನೆಯನ್ನು, ಪೂಜೆಯನ್ನು ಮಾಡುವನೋ, ಆತನಿಗೆ ಇತರ ಆಶ್ರಮಗಳ ಬದಲಿಸುವ ಯಾವ ಕಾರಣವೂ ಉಳಿಯುವುದಿಲ್ಲ ॥೫೦೮॥ ಅವರು ನನ್ನ ಭಜನೆಯನ್ನು ಹೇಗೆ ಮಾಡುವರೆಂಬುದನ್ನು ಕೇಳು. ಸ್ವಾಹಾ, ಸ್ವಧಾ, ಯಜ್ಞದಾನ ಇತ್ಯಾದಿ ಮಾಡುವುದೆಲ್ಲವನ್ನೂ ಅವು ಮದರ್ಪಣವಾಗುತ್ತಿರುವುವು ॥೫೦೯॥ ಯಾವುದೇ ಸಮಯದಲ್ಲಾಗಲಿ ಆತನ ಚಿತ್ತದಲ್ಲಿ ನನ್ನ ಭಜನೆಯಲ್ಲಿ ಅಂತರವಿರುವುದಿಲ್ಲ. ಹೀಗೆ ಯಾವ ಗೃಹಸ್ಥನ ಸ್ಥಿತಿವಿರುವುದೋ, ಆತನು ನಿರಂತರವಾಗಿ ಗೃಹಸ್ಥಾಶ್ರಮದಲ್ಲಿಯೇ ಇರಬೇಕು ॥೫೧೦॥ ಯಾರಿಗೆ ಕರ್ಮಗಳಲ್ಲಿ ಅತ್ಯಂತ ಆಸಕ್ತಿ ಇದ್ದು ವಿಷಯಗಳಲ್ಲಿ ಅನಾಸಕ್ತಿವಿರುವುದೋ ಮತ್ತು ಅಂತಃಕರಣದಲ್ಲಿ ಜ್ಞಾನಯುಕ್ತಶಾಂತಿವಿರುವುದಿಲ್ಲವೋ, ಆತನಿಗೆ ವಾನಪ್ರಸ್ಥ ಆಶ್ರಮದ ಅಧಿಕಾರವಿರುವುದು ॥೫೧೧॥ ಯಾರಿಗೆ ವಿರಕ್ತಿ, ಶಾಂತಿ ಮತ್ತು ಜ್ಞಾನ ಇವು ಅಂಗೈಯಲ್ಲಿನ ನೆಲ್ಲಿಕಾಯಿಯಂತೆ ಸುಲಭವಾಗಿರುವುವೋ, ಆತನು ಸನ್ಯಾಸವನ್ನು ಸ್ವೀಕರಿಸಲು ಅಧಿಕಾರಿಯಾಗಿರುವನು ॥೫೧೨॥ ಪುತ್ರಪ್ರಾಪ್ತಿಯಾದ ನಂತರ ತನ್ನ ಪತ್ನಿಯನ್ನು ಪುತ್ರನ ಸ್ವಾಧೀನ ಮಾಡಿ ಗೃಹಸ್ಥನು ಸನ್ಯಾಸವನ್ನು ಸ್ವೀಕರಿಸಬೇಕು. ಹೀಗೆಂದು ಶ್ರುತಿಯ ಪ್ರಮಾಣವಿರುವುದು ॥೫೧೩॥ ಗೃಹಸ್ಥಾಶ್ರಮದಲ್ಲಿದ್ದು ಯಾರಿಗೆ ಭಕ್ತಿಯು ಬೇಕಾಗಿಲ್ಲವೋ, ಅನೇಕ ಪುತ್ರರು ಇದ್ದರೂ ಕೂಡ ಯಾರು ವಿರಕ್ತಿಯನ್ನು ಹಿಡಿಯುವುದಿಲ್ಲವೋ ಮತ್ತು ಯಾರು ವಾನಪ್ರಸ್ಥಾಶ್ರಮಕ್ಕಾಗಿ ವನಕ್ಕೆ ಹೋಗಲಾರರೋ ॥೫೧೪॥ ಆತನ ವಿಷಯಗಳ ಭ್ರಮೆಯು ಮುಗಿದಿರುವುದಿಲ್ಲ. ಯಾವನು ನಿಷ್ಕಾಮ ಸನ್ಯಾಸಿಯಾಗುವುದಿಲ್ಲವೋ, ಆತನ ನಿಂದ್ಯಕರ್ಮಗಳ ವರ್ಣನೆಯನ್ನು ಶ್ರೀಕೃಷ್ಣನು ಮಾಡುತ್ತಿರುವನು ॥೫೧೫॥

ಕರ್ಮ । ಸ್ವಯೇ ಪುರುಷೋತ್ತಮ ಸಾಂಗತ ।೫೧೫॥

ಯಸ್ತ್ವಾಸಕ್ತಮತಿರ್ಗೇಹೇ ಪುತ್ರವಿತ್ತೈಷಣಾತುರಃ । ಸ್ತ್ರೈಣಃ ಕೃಪಣಧಿರ್ಮೂಢೋ ಮಮಾಹಮಿತಿ ಬಧ್ಯತೇ ।೫೬॥

ಅರ್ಥ:- ಪ್ರಿಯ ಉದ್ಧವಾ, ಯಾವ ಜನರು ಈ ಪ್ರಕಾರದ ಗೃಹಸ್ಥ ಜೀವನವನ್ನು ಆಚರಿಸುತ್ತ ಮನೆಯಲ್ಲಿಯೇ ಸಂಪೂರ್ಣವಾಗಿ ಆಸಕ್ತರಾಗುವವರು. ಸ್ತ್ರೀ, ಪುತ್ರ ಮತ್ತು ಧನ ಇವುಗಳ ವಾಸನೆಗಳಲ್ಲಿ ಸಿಲುಕಿಕೊಂಡಿರುವರು ಮತ್ತು ಅಜ್ಞಾನಿ, ಸ್ತ್ರೀಲಂಪಟ, ಕೃಪಣರಾಗಿ ನಾನು ನನ್ನದೆಂಬ ಚಕ್ರದಲ್ಲಿ ಕಟ್ಟಲ್ಪಡುವರು.

ಜೋ ಗೃಹಾಸಕ್ತೀ ಸುಭಟು । ತೋ ಈಶಣಾತ್ರಯೀ ವರಿಷ್ಠು । ಜೋ ವಿಷಯಾಲಾಗೀ ಲಂಪಟು । ಅತಿಲೋಭಿಷ್ಠು ಧನೇಚ್ಛಾ ।೫೧೬॥ ಜೋ ವಿಕಾರಾಂಚಾ ಅಂಕಿಲಾ । ಜೋ ಅಹಂಮಮತೇಚಾ ಪೋಸಣಾ ಜಾಹಲಾ । ಜೇ ಸ್ತ್ರೀಯೇಸೀ ಜೀವೇ ವಿಕಿಲಾ । ತೋ ಮೂಢತೇಚ್ಯಾ ಪಡಿಲಾ ಮಹಾದುರ್ಗೀ ।೫೧೭॥ ಜೋ ಆಶೇಚಿಯಾ ವಣವಣಾ । ಸರ್ವಾಂಗಾಚಾ ವೋಳಗಣಾ । ಯಾಲಾಗೀ ಬದ್ಧತೇಚಾ ಜಾಣಾ । ಜಾಹಲಾ ಆಂದಣಾ ಜೀವೇಭಾವೇ ।೫೧೮॥ ತೇಚಿ ಬದ್ಧತೇಚೀ ಗತಿ । ತ್ಯಾಚ್ಯಾ ಮೂರ್ಖತ್ವಾಚೀ ವದಂತೀ । ಸ್ವಯೇ ಸಾಂಗತಾಹೇ ಶ್ರೀಪತೀ । ಉದ್ಧವಾಪ್ರತೀ ಉದ್ದೇಶೇ ।೫೧೯॥

ಅಹೋ ಮೇ ಪಿತರೌ ವೃದ್ಧೌ ಭಾರ್ಯಾ ಬಾಲಾತ್ಮಜಾತ್ಮಜಾಃ । ಅನಾಥಾ ಮಾಮೃತೇ ದೀನಾಃ ಕಥಂ ಜೀವಂತಿ ದುಃಖಿತಾ ।೫೭॥

ಅರ್ಥ:- ''ಅಯ್ಯೋ, ನನ್ನ ವೃದ್ಧ ತಂದೆತಾಯಿಗಳೇ, ಬಗಲಲ್ಲಿ ಮಗುವನ್ನೆತ್ತಿಕೊಂಡಿರುವ ಹೆಂಡತಿಯೇ, ನನ್ನ ಚಿಕ್ಕ ಮಕ್ಕಳೇ, ಇವರನ್ನು ರಕ್ಷಿಸುವವರು ನನ್ನನ್ನು ಬಿಟ್ಟರೆ ಯಾರೂ ಇಲ್ಲ. ಇವರು ತಡೆಯಲಾರದ ಯಾತನೆ ಭೋಗಿಸುವರು. ನನ್ನ ಬಡ ಬಂಧು ಬಾಂಧವರು ನಾನಿಲ್ಲದೇ ಬದುಕಲಾರರು''.

ಮಾತಾ ಪಿತಾ ವೃದ್ಧೇ ಕೇವಳೇ । ಭಾರ್ಯಾ ಧಾಕುಟೀ ತಾನ್ಹೀ ಬಾಳೇ । ಮಜ ಹೋತಾ ಯಾವೇಗಳೇ । ತೇಣೇಂಚೀ ಕಾಳೇ ಮರತೀಲ ।೫೨೦॥ ಐಶಿಯಾ ನಾನಾವಸ್ಥಾ । ಆಪುಲ್ಯಾಹೀ ಮರಣಾಪರತಾ । ವಾಹೇ ಕುಟುಂಬಾಚೀ ಚಿಂತಾ । ಐಕ ಆತಾ ಸಾಂಗೇನ ।೫೨೧॥ ವಿಖಾದೇನಿ ಅಕಾಳಕಾಳೇ । ಮಜಚಿ ಜೈ ಮರಣ ಆಲೇ । ತೈ ಕಾಯ ಕರಿತೀಲ ಸ್ತ್ರೀಯಾ ಬಾಳೇ । ಆಂಸುವೇ ಡೋಳೇ ಲೋಟತೀ ।೫೨೨॥ ಮಾತ್ಯಾಪಿತ್ಯಾಂಚೀ ಪಡೋ ವಾಟ । ಸ್ತ್ರೀಯೇಸೀ ಹೋಈಲ ಹೃದಯಸ್ಫೋಟ । ಬಾಳಾಂಚಾ ಶೋಷೇಲ ಕಂಠ । ಪಿಟೀ ಲಲಾಟ ತೇಣೇ ದುಃಖೇ ।೫೨೩॥ ಮಜ ನಿಮಾಲಿಯಾ ಅಂತೀ । ಹೀ ಅತಿದುಃಖೀ ಕೈಶೀ ಜೀತೀ । ಐಶೀ ಜೀತಾಂಚೀ ಕರೀ ಖಂತೀ । ಮೂಢಮತಿ ಯಾಲಾಗೀ ।೫೨೪॥ ಗಾಢ ಮೂಢತೇಚೇ ಭರಿತೇ । ಅಪಾರ ಉಥಳಲೇ ತೇಥೇ । ವಿವೇಕಾಚೇ ತಾರೂ ತೇಥೇ । ವಿಪರೀತಾರ್ಥೇ ಬುಡಾಲೇ ।೫೨೫॥

ಯಾರಿಗೆ ಗೃಹಾಸಕ್ತಿಯ ಅತ್ಯಂತ ಲಾಲಸೆವಿರುವುದೋ, ಯಾರಿಗೆ ದ್ರವ್ಯ, ಪತ್ನಿ ಮತ್ತು ಜನರಲ್ಲಿ ಅತಿಶಯವಾದ ಪ್ರಬಲವಾದ ಇಚ್ಛೆವಿರುವುದೋ, ಯಾರು ವಿಷಯಗಳಲ್ಲಿ ಅತಿಶಯವಾಗಿ ಲಂಪಟರಾಗಿರುವರೋ, ಯಾರ ಮನದಲ್ಲಿ ದ್ರವ್ಯಕ್ಕಾಗಿ ಅತಿಶಯ ಲೋಭವಿರುವುದೋ ।೫೧೬॥ ಯಾರು ಅಹಂ ಮಮತೆಯ ಆಧೀನನಾಗಿರುವನೋ ಮತ್ತು ಅಜ್ಞಾನದ ಆಳವಾದ ತೆಗ್ಗಿನಲ್ಲಿ ಬಿದ್ದಿರುವನೋ, ಯಾವನು ವಿಕಾರಗಳ ಅಂಕಿತನೋ, ಸ್ತ್ರೀಗಾಗಿ ತನ್ನ ಜೀವವನ್ನೇ ಮಾರಿಕೊಂಡಿರುವನೋ ।೫೧೭॥ ಯಾವನು ಆಶೆಯ ಭ್ರಮೆಯಿಂದ ಇಂದ್ರಿಯಗಳ ದಾಸನಾಗಿರುವನೋ, ಅವನು ಬಂಧನಕ್ಕೆ ಕಾಣಿಕೆಯಾಗಿ ಕೊಟ್ಟ ದಾಸಿಯಂತಾಗುವನು ।೫೧೮॥ ಹೀಗಿರುವ ಯಾವ ಬದ್ಧತೆಯ ಸ್ವರೂಪವನ್ನು ಮತ್ತು ಮೂರ್ಖನ ಬಡಬಡಿಕೆಯು ಹೇಗಿರುವುದೆಂಬುದನ್ನು ಸ್ವತಃ ಶ್ರೀಕೃಷ್ಣನು ಉದ್ಧವನಿಗೆ ಉದ್ದೇಶಿಸಿ ಹೇಳುತ್ತಿರುವನು ।೫೧೯॥

ಆತನು ಹೀಗೆ ಹೇಳುವನು, ನನ್ನ ತಂದೆತಾಯಿಯವರು ಈಗ ಮುದಕರಾಗಿರುವರು. ಹೆಂಡತಿಯು ಇನ್ನೂ ಚಿಕ್ಕವಳಾಗಿರುವಳು. ಮಕ್ಕಳಂತೂ ತೀರಾ ಚಿಕ್ಕವರಾಗಿರುವರು. ಇವರಿಂದ ನಾನು ಒಂದುವೇಳೆ ದೂರಾದರೆ ತತ್ಕಾಲದಲ್ಲಿ ಇವರು ತಮ್ಮ ಜೀವವನ್ನೇ ಬಿಟ್ಟು ಬಿಡುವರು ।೫೨೦॥ ಈ ಪ್ರಕಾರವಾಗಿ ಈ ಯಾವ ಮೂಢ ಗೃಹಸ್ಥನು ತನ್ನ ಮರಣದ ನಂತರ ಏನಾದೀತು? ಎಂಬ ಭಯಾನಕ ಕಲ್ಪನೆಗಳನ್ನು ಮಾಡುತ್ತ ಕುಟುಂಬದವರ ಚಿಂತೆಯನ್ನು ಹೇಗೆ ಮಾಡುತ್ತಾನೆಂಬುದನ್ನು ಈಗ ಕೇಳು ।೫೨೧॥ ಅಕಸ್ಮಾತಾಗಿ ಒಂದುವೇಳೆ ನನಗೆ ಅಕಾಲಮರಣವು ಒದಗಿಬಂದರೆ ನನ್ನ ಹೆಂಡತಿ, ಮಕ್ಕಳ ಗತಿ ಏನಾದೀತೆಂದು ಹೇಳುತ್ತ ಅವನು ತನ್ನ ಕಣ್ಣುಗಳಿಂದ ನೀರು ಸುರಿಸುತ್ತಿರುವನು ।೫೨೨॥ ತಂದೆ ತಾಯಿಯವರ ಗತಿಯು ಒಂದೆಡೆ ಇರಲಿ, ಹೆಂಡತಿಯು ಮಾತ್ರ ಎದೆ ಹೊಡೆದುಕೊಂಡು ಸತ್ತಾಳು. ಮಕ್ಕಳು ಮಾತ್ರ ಅತ್ತೂ ಅತ್ತೂ ಅವರ ಕಂಠ ಒಣಗಿ ಹೋದೀತು. ಈ ಪ್ರಕಾರ ಕಾಲ್ಪನಿಕ ದುಃಖದಿಂದ ಇವನು ತನ್ನ ಹಣೆಯನ್ನು ಬಡೆದುಕೊಳ್ಳುವನು ।೫೨೩॥ ನನ್ನ ಮೃತ್ಯುನಂತರ ನನ್ನ ಹೆಂಡತಿ ಮಕ್ಕಳು ಅತಿದುಃಖದಿಂದ ಜೀವಂತವಾಗಿ ಉಳಿಯುವುದಾದರೂ ಹೇಗೆ? ಹೀಗೆ ಇವನು ಜೀವಂತರಾಗಿರುವ ಮನುಷ್ಯರ ಕಾಳಜಿ ವಹಿಸುತ್ತಿರುವನು. ಆದ್ದರಿಂದ ಇವನು ಮೂಢ ಬುದ್ಧಿಯವನಾಗಿರುವನು ।೫೨೪॥ ಈ ಪ್ರಕಾರವಾಗಿ ಎಲ್ಲಿ ಮೂರ್ಖತನದ ಅಪಾರವಾದ ಪೂರವು ಬಂದೊದಗಲು, ಆಗ ಅಲ್ಲಿ ವಿಪರೀತ ಅರ್ಥದ ಬಿರುಗಾಳಿಯಿಂದ ವಿವೇಕದ ನೌಕೆಯು ಖಾತ್ರಿಯಿಂದ ಮುಳುಗಿ ಹೋಗುವುದು ।೫೨೫॥

ಏವಂ ಗೃಹಾಶಯಾಕ್ಷಿಪ್ತಹೃದಯೋ ಮೂಢಧೀರಯಮ್ । ಅತೃಪ್ತಸ್ತಾನನುಧ್ಯಾಯನ್ ಮೃತೋಽಂಧಂ ವಿಶತೇ ತಮಃ ।೫೮॥
ಇತಿ ಶ್ರೀಭಾಗವತೇ ಮಹಾಪುರಾಣೇಏಕಾದಶಸ್ಕಂದೇ ಸಪ್ತದಶೋಽಧ್ಯಾಯಃ ।೧೭॥

ಅರ್ಥ:- ಈ ಪ್ರಕಾರವಾಗಿ ಯಾರ ಮನವು ತನ್ನ ಮನೆತನದ ವಾಸನೆಯಿಂದ ವಿಕ್ಷಿಪ್ತವಾಗಿರುವುದೋ, ಆ ಮೂಢಬುದ್ಧಿಯ ಪುರುಷನು ವಿಷಯಭೋಗದಿಂದ ಎಂದಿಗೂ ತೃಪ್ತನಾಗುವುದಿಲ್ಲ. ಅದರಲ್ಲಿಯೇ ಸಿಲುಕಿಕೊಂಡು ತನ್ನ ಜೀವನವನ್ನು ವ್ಯರ್ಥವಾಗಿ ಖರ್ಚಿಸುವನು. ಸತ್ತಮೇಲೆ ಘೋರವಾದ ಅಂದಃಕಾರಮಯ ನರಕದಲ್ಲಿ ಹೋಗಿ ಬೀಳುವನು.

ಯಾಪರೀ ಗೃಹಾಸಕ್ತೀ ಆಸಕ್ತ । ಸದಾ ವಿಷಯೀ ಅತೃಪ್ತಚಿತ್ತ । ಅಖಂಡ ಸ್ತ್ರೀಪುತ್ರಾಂತೇ ಧ್ಯಾತ । ಹೃದಯಾ
ಆಂತ ಮೋಹಿತ ।೫೨೬॥ ತ್ಯಾ ಮೋಹಾಚೇ ಮೋಹವಿಧೀ । ಮೂಢ ಜಾಹಲೀ ಹೃದಯಬುದ್ಧೀ । ಐಸಾ ನಿಮಾಲಾ
ಜೋ ತ್ರಿಶುದ್ಧೀ । ತೋ ಪ್ರವೇಶೇ ಅಂಧೀ ಮಹಾತಮೀ ।೫೨೭॥ ಜ್ಯಾ ತಮಾಚೇನಿ ಮಹಾಬಳೇ । ಜ್ಞಾನ
ಹೋಊನಿ ಠಾಕೇ ಆಂಧಳೇ । ತೇಥ ಸೂರ್ಯಾಚೇ ಫುಟತೀ ಡೋಳೇ । ತೇ ತಮೀ ಲೋಳೇ ತೋ ತಾಮಸು
।೫೨೮॥ ಜ್ಯಾ ತಮಾಪಾಸೂನಿ ಉಪರತೀ । ಹೋ ನೇಣೇ ಗಾ ಕಲ್ಪಾಂತೀ । ತ್ಯಾ ಅಂಧ-ತಮಾತೇ ಪಾವತೀ ।
ಮೂಢಮತಿ ಅತಿಮಂದ ।೫೨೯॥ ಮಹಾಮೋಹಾಚೇ ಪರಿಪಾಟೀ । ನಶ್ವರ ವಿಷಯಾಸಾಠೀ । ಚುಕೋನಿ
ಅನಂತಸುಖಾಚೀ ಪುಷ್ಟೀ । ದುಃಖಕೋಟೀ ಭೋಗಿತೀ ।೫೩೦॥ ಯಾಲಾಗೀ ಮನುಷ್ಯದೇಹೀ ಜಾಣ ।
ಕರೋನಿಯಾ ಭಗವದ್ಭಜನ । ಚುಕವಾವೇ ಜನ್ಮಮರಣ । ಆಪಣಾ ಆಪಣ ಉದ್ಧರಾವೇ ।೫೩೧॥ ಜೀವಾ ಜೇ
ಜೇ ಯೋನೀ ಜನ್ಮಗತೀ । ತೇಥ ತೇಥ ವಿಷಯಾಸಕ್ತೀ । ತೇಚಿ ಮನುಷ್ಯದೇಹೀ ವಿಷಯಸ್ಥಿತೀ । ತೈ
ಪರಮಾರ್ಥಪ್ರಾಪ್ತೀ ಕೋಣೇ ದೇಹೀ ।೫೩೨॥ ವಿಶೇಷೇ ಉತ್ತಮೋತ್ತಮ । ಪ್ರಾಪ್ತ ಜಾಹಲ್ಯಾ ಬ್ರಾಹ್ಮಣಜನ್ಮ
। ಜ್ಯಾಚೇ ನಿತ್ಯಕರ್ಮೀ ಪರಬ್ರಹ್ಮ । ಅತಿಸುಗಮ ಸಹಜಚಿ ।೫೩೩॥ ಜ್ಯಾಸೀ ವರ್ತತಾ ಅಹೋರಾತೀ ।
ಸಂಧ್ಯಾವಂದನವಿಧಾನಸ್ಥಿತೀ । ತ್ರಿಕಾಳ ಪಾಪಾಚೀ ನಿವೃತ್ತೀ । ಜಾಣ ನಿಶ್ಚಿತೀ ಬ್ರಾಹ್ಮಣಾ ।೫೩೪॥ ಸಕಳ ಸಾರಾಚೀ
ಸಾರಮೂರ್ತೀ । ತೋ ಗಾಯತ್ರೀಮಂತ್ರ ಜ್ಯಾಚೇ ಹಾತೀ । ವೇದ ಮುಖಾಚೀ ವಾಸ ಪಾಹತೀ । ಏವಢೀ
ಪ್ರಾಪ್ತೀ ಬ್ರಾಹ್ಮಣಾ ।೫೩೫॥ ಬ್ರಾಹ್ಮಣಾಚೇ ಹೃದಯೀ ಜಾಣ । ವೇದರೂಪೇ ನಾರಾಯಣ । ಸ್ವಯೇ ರಾಹಿಲಾ

ಈ ಪ್ರಕಾರವಾಗಿ ಯಾವ ಗೃಹಸ್ಥನು ತನ್ನ ಮನೆಮಾರಿನ ಆಸಕ್ತಿಯಿಂದ ಲುಬ್ಧನಾಗಿರುವನೋ, ಯಾವನು ವಿಷಯಗಳ ವಿಷಯದಲ್ಲಿ ಸದಾವಕಾಲ ಅತೃಪ್ತನಾಗಿರುವನೋ, ಹೆಂಡತಿ, ಮಕ್ಕಳ ಸ್ಮರಣೆಯನ್ನು ಯಾವನು ಅಖಂಡವಾಗಿ ಮಾಡುತ್ತಿರುವನೋ, ಅವನ ಅಂತಃಕರಣದಲ್ಲಿ ಮೋಹ ಎಂಬುದು ಅತಿಯಾಗಿ ತುಂಬಿರುವುದು ।೫೨೬॥ ಮೋಹಕತ್ವದ ಮೋಹದಲ್ಲಿ ಅವನ ಬುದ್ಧಿಯು ಮೂಢವಾಗಿರುವುದು. ಇಂತಹ ಸ್ಥಿತಿಯಲ್ಲಿ ಯಾವನು ಮರಣನಾಗುವನೋ, ಅವನು ಅಂಧತಮ ನಾಮದ ನರಕದಲ್ಲಿ ಹೋಗಿ ಬೀಳುವನು ।೫೨೭॥ ಈ ಯಾವ ಅಜ್ಞಾನ ಅಂಧಃಕಾರದ ಶಕ್ತಿಯಿಂದ ಜ್ಞಾನ ಎಂಬುದು ಕುರುಡಾಗಿಬಿಡುವುದು ಮತ್ತು ಎಲ್ಲಿ ಸೂರ್ಯನ ಕಣ್ಣುಗಳೂ ಕೂಡ ಒಡೆದು ಹೋಗುವಂತಹ ಅಂಧತಮದಲ್ಲಿ ಆ ಯಾವ ತಾಮಸೀ ಜೀವವು ಉರುಳಾಡುತ್ತ ಬಿದ್ದಿರುವುದು ।೫೨೮॥ ಹೀಗಿರುವ ಮೂಢಮತಿಯವರು ಮತ್ತು ಮಂದಬುದ್ಧಿಯ ಜನರು, ಅವರು ಕಲ್ಪಾಂತಕ್ಕೂ ಕೂಡ ಇದರಿಂದ ಮುಕ್ತರಾಗುವುದಿಲ್ಲ. ಇಂತಹ ಅಂಧತಮ ನರಕಕ್ಕೆ ಹೋಗುವರು ।೫೨೯॥ ಮಹಾಮೋಹದ ಕಾರಣದಿಂದಾಗಿ ಕ್ಷಣಭಂಗುರವಾದ ಇಂತಹ ವಿಷಯಗಳ ನಾದದಿಂದ ಅನಂತಸುಖದ ಸ್ಥಾನವನ್ನು ಕಳೆದುಕೊಂಡು ದುಃಖದ ರಾಶಿಯನ್ನೇ ಭೋಗಿಸುತ್ತಿರುವರು ।೫೩೦॥ ಆದ್ದರಿಂದ ಮನುಷ್ಯ ದೇಹವು ಪ್ರಾಪ್ತವಾಗಿದ್ದಕ್ಕೆ ಪ್ರೇಮದಿಂದ ಭಗವದ್ಭಜನೆಯನ್ನು ಮಾಡಬೇಕು. ಜನ್ಮಮರಣದ ತಿರುಗಾಟವನ್ನು ತಪ್ಪಿಸಿಕೊಳ್ಳಬೇಕು. ಹೀಗೆ ತಾವೇ ತಮ್ಮ ಉದ್ಧಾರವನ್ನು ಮಾಡಿಕೊಳ್ಳಬೇಕು ।೫೩೧॥ ಜೀವವು ಯಾವ ಯಾವ ಯೋನಿಗಳಲ್ಲಿ ಜನ್ಮವನ್ನು ಧರಿಸುತ್ತಿರುವುದೋ, ಆ ಎಲ್ಲ ದೇಹಗಳಲ್ಲಿ ಕೇವಲ ವಿಷಯಗಳ ಆಸಕ್ತಿಯೇ ಇರುವುದು. ಆದರೆ ಮನುಷ್ಯದೇಹದಲ್ಲಿಯೂ ಕೂಡ ಅದೇ ವಿಷಯಗಳ ಆಸಕ್ತಿಯನ್ನಿಟ್ಟರೆ ಇನ್ನು ಮುಂದೆ ಯಾವ ದೇಹದಲ್ಲಿ ಪರಮಾರ್ಥದ ಪ್ರಾಪ್ತಿಯಾಗಬೇಕು ? ।೫೩೨॥ ವಿಶೇಷವಾಗಿ ಉತ್ತಮೋತ್ತಮವಾದ ಬ್ರಾಹ್ಮಣ ಜನ್ಮವು ಪ್ರಾಪ್ತವಾಗಿರಲು ಅವರ ನಿತ್ಯ ಕರ್ಮಗಳಿಂದ ಪರಬ್ರಹ್ಮವು ಅತಿಶಯವಾಗಿ ಸಹಜ ಸುಲಭವಾಗುವುದು ।೫೩೩॥ ಅವರು ಪ್ರತಿನಿತ್ಯ ನಿಯಮದಿಂದ ತ್ರಿಕಾಲ ಸಂಧ್ಯಾವಂದನೆ ಮಾಡಲು ಅವರ ಪಾತಕಗಳು ನಿಶ್ಚಿತವಾಗಿ ಇಲ್ಲದಾಗುವುವು ।೫೩೪॥ ಸರ್ವ ಸಾರಗಳ ಸಾರಭೂತವಾಗಿರುವ ಮೂರ್ತಿಮಂತ ಗಾಯತ್ರಿ ಮಂತ್ರವು ಇವರ ಕೈಯಲ್ಲಿರುವುದು. ವೇದವೂ ಕೂಡ ಇವರ ಮುಖದತ್ತ ದಾರಿ ಕಾಯುತ್ತಿರುವುದು. ಹೀಗೆ ಇವರ ಶ್ರೇಷ್ಠವಾದ ಯೋಗ್ಯತೆಯಾಗಿರುವುದು ।೫೩೫॥ ಯಾವ ಬ್ರಾಹ್ಮಣರ ಹೃದಯದಲ್ಲಿ ಸ್ವತಃ ನಾರಾಯಣನು ವೇದರೂಪದಿಂದ ಇರುವನು. ಈಬ್ರಾಹ್ಮಣರು ಮೂರು ಲೋಕಗಳಲ್ಲಿ ಧನ್ಯರಾಗಿರುವರು ।೫೩೬॥ ಯಾವ ಬ್ರಾಹ್ಮಣರ ಚರಣಗಳಿಗೆ ದೇವತೆಗಳವರೂ ಕೂಡ ಶಿರಸಾ ವಂದನೆಯನ್ನು ಮಾಡುವರು. ಆ ಯಾವ ಬ್ರಾಹ್ಮಣನ ಚರಣವನ್ನು ಸಾಕ್ಷಾತ ನಾರಾಯಣನೂ ಸಹ ತನ್ನ ಹೃದಯದಲ್ಲಿ ಧರಿಸಿರುವನು. ಇಂತಹ ಯೋಗ್ಯತೆಯು ಇವರದಾಗಿರುವುದು ।೫೩೭॥ ಸಂಧ್ಯಾವಂದನೆಗಳನ್ನು ಮಾಡುತ್ತಿರುವುದರಿಂದ ಅವರ ಅಂಗದಲ್ಲಿ ಒಂದು ಕಣ ಕೂಡ ಪಾಪವು ಉಳಿಯುವುದಿಲ್ಲ. ಆದ್ದರಿಂದ ಬ್ರಾಹ್ಮಣರು ಪುಣ್ಯಮೂರ್ತಿಯಾಗಿರುವರು ಎಂದು ಸ್ವತಃ ರಮಾಪತಿಯು ಹೇಳುವನು ।೫೩೮॥ ''ಕಿಂಪುನರ್ಬ್ರಾಹ್ಮಣಾಃ ಪುಣ್ಯಾಃ'' ಎಂಬ ಈ ವಚನದಿಂದ ಭಗವಂತನೂ ಕೂಡ ಬ್ರಾಹ್ಮಣರ ವರ್ಣನೆಯನ್ನು ಮಾಡುವನು. ಈ ಯಾವ ಭಗವದ್ಗೀತೆಯ ವಚನಕ್ಕೆ ಮೇಲಿನ ಉದ್ದೇಶದಿಂದಲೇ ಸತ್ಯತ್ವವು ಬರುವುದು ।೫೩೯॥

ಬ್ರಾಹ್ಮಣ ಆಣಿ ಭಗವದ್ಭಕ್ತ । ತೈ ಸಕಳ ಭಾಗ್ಯ ಆಲೇ ತೇಥ । ತ್ಯಾಸೀ ಕೋಣ ಅರ್ಥ ಅಪ್ರಾಪ್ತ । ಜ್ಯಾಚೇ ಬೋಲಾಂತ ಹರಿ ತಿಷ್ಠೇ ॥೫೪೦॥ ತೇ ಕಾಷ್ಠಪಾಷಾಣಪ್ರತಿಮೇ ಪಹಾ ಹೋ । ಪ್ರತಿಷ್ಠಿತೀ ತೇಥ ಪ್ರಕಟೇ ದೇವೋ । ಐವಢಾ ಬ್ರಾಹ್ಮಣೀ ಸದ್ಭಾವೋ । ಸಹಜಾನ್ವಯೋ ಸಾಮರ್ಥ್ಯ ॥೫೪೧॥ ತೋ ಪಾವೋನಿಯಾ ಬ್ರಾಹ್ಮಣಜನ್ಮ । ಜೋ ಕರೀ ಕ್ಷುದ್ರ ವಿಷಯಕರ್ಮ । ತ್ಯಾಚೇ ಹಾತೀಚಾ ಗೇಲಾ ಪುರುಷೋತ್ತಮ । ಅಂಧತಮ ತೋ ಪಾವೇ ॥೫೪೨॥ ಏಕಾ-ಜನಾರ್ದನಾಚೀ ವಿನಂತೀ। ಯೇಊನಿ ಮನುಷ್ಯದೇಹಾಪ್ರತೀ । ಕರೋನಿಯಾ ಭಗವದ್ಭಕ್ತೀ । ನಿಜಾತ್ಮಪ್ರಾಪ್ತೀ ಸಾಧಾವೀ ॥೫೪೩॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ
ಬ್ರಹ್ಮಚರ್ಯಗೃಹಸ್ಥ ಕರ್ಮಧರ್ಮನಿರೂಪಣೇ ಏಕಾಕಾರ ಟೀಕಾಯಾಂ ಸಪ್ತದಶೋಽಧ್ಯಾಯಃ

॥ಶ್ರೀಕೃಷ್ಣಾರ್ಪಣಮಸ್ತು ॥

ಬ್ರಾಹ್ಮಣನಾದವರಿಗೆ ಭಗವದ್ಭಕ್ತಿಯು ಒದಗಲು, ಆಗ ಸರ್ವ ಭಾಗ್ಯಗಳು ಆತನ ಪಾದದಡಿಯಲ್ಲಿ ಬರುವುವು. ಅವರ ವಚನಗಳಲ್ಲಿ ಹರಿಯು ಇರುತ್ತಿರುವನು ॥೫೪೦॥ ಹೀಗಾಗಲು ಅವರಿಗೆ ಅಪ್ರಾಪ್ಯ ಎಂಬುದು ಹೇಗೆ ಇದ್ದೀತು ? ಕಲ್ಲು, ಕಾಷ್ಠಗಳ ಪ್ರತಿಮೆಗಳಲ್ಲಿ ಬ್ರಾಹ್ಮಣರು ಪ್ರಾಣಪ್ರತಿಷ್ಠೆಯನ್ನು ಮಾಡುವರು. ಕೂಡಲೇ ದೇವನು ಅಲ್ಲಿ ಪ್ರಕಟನಾಗುವನು. ಬ್ರಾಹ್ಮಣರಲ್ಲಿ ಇಂತಹ ಸದ್ಭಾವನೆ ಮತ್ತು ಸಾಮರ್ಥ್ಯವು ಸಹಜವಾಗಿರುವುದು ॥೫೪೧॥ ಹೀಗಿರುತ್ತಿರಲು ಬ್ರಾಹ್ಮಣ ಜನ್ಮವು ಪ್ರಾಪ್ತವಾಗಿದ್ದರೂ ಕೂಡ ಯಾರು ಕ್ಷುದ್ರವಾದ ವಿಷಯಗಳಲ್ಲಿ ಲೋಲುಪ್ತರಾಗುವರೋ, ಅವರು ತಮ್ಮ ಕೈಯಲ್ಲಿರುವ ಪುರುಷೋತ್ತಮನನ್ನು ಕಳೆದುಕೊಳ್ಳುವರೆಂದು ತಿಳಿಯಬೇಕು. ಈ ಬ್ರಾಹ್ಮಣನು ಅಂಧತಮ ನರಕಕ್ಕೆ ಹೋಗುವನು ॥೫೪೨॥ ಆದ್ದರಿಂದ ಏಕಾ ಜನಾರ್ದನನು ಸರ್ವರಲ್ಲಿಯೂ ಮಾಡುವ ವಿನಂತಿ ಏನೆಂದರೆ, ಮನುಷ್ಯದೇಹ ಪ್ರಾಪ್ತವಾದಮೇಲೆ ಭಗವದ್ಭಕ್ತಿಯನ್ನು ಮಾಡಬೇಕು. ಆತ್ಮಸ್ವರೂಪದ ಪ್ರಾಪ್ತಿಮಾಡಿಕೊಂಡು ಸರ್ವತ್ರವೂ ಸಚ್ಚಿದಾನಂದದ ದರ್ಶನವನ್ನು ಪಡೆಯಬೇಕು ॥೫೪೩॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ- ಉದ್ಧವ ಸಂವಾದದ
ಬ್ರಹ್ಮಚರ್ಯಗೃಹಸ್ಥಕರ್ಮಧರ್ಮನಿರೂಪಣೆ ನಾಮದ ಏಕನಾಥಮಹಾರಾಜರ ಭಾಷ್ಯೆಯ ಹದಿನೇಳನೆಯ ಅಧ್ಯಾಯ ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀ ಏಕನಾಥೀ ಭಾಗವತ

ಹದಿನೆಂಟನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ॥ ಶ್ರೀಕೃಷ್ಣಾಯ ನಮಃ॥ ಓಂ ನಮೋ ಕರ್ಮಪ್ರಕಾಶಕಾ। ಸದ್ವಿದ್ಯಾ ವಿಧಿವಿವೇಕಾ। ಕರ್ಮಧರ್ಮಪ್ರತಿಪಾಳಕಾ। ಜಗನ್ನಾಯಕಾ ಗುರುವರ್ಯಾ ॥೧॥ ವರ್ಣಾಶ್ರಮಾದಿ ಮರ್ಯಾದಾ। ತ್ಯಾಚಾ ಸೇತೂ ತೂ ಗೋವಿಂದಾ। ತೂ ಕಾರಣ ವೇದಾನುವಾದಾ। ವಿವಾದಸಂವಾದಾ ತೂ ಮೂಳ ॥೨॥ ತೂ ಶಬ್ದಸೃಷ್ಟೀಚಾ ಅರ್ಕು। ತೂ ವೇದಗುಹ್ಯಪ್ರಕಾಶಕು। ತೂಚಿ ಏಕಲಾ ಅನೇಕು। ವ್ಯಾಪ್ಯ ವ್ಯಾಪಕು ತೂಚಿ ತೂ ॥೩॥ ತೂಚಿ ತೂ ವಿಧಿ ವಿಧಾನ। ತೂ ಬೋಲಕಾ ತೂಚಿ ಮೌನ। ಏಕಾ ಆಣಿ ಜನಾರ್ದನ। ದೋನೀ ಸಂಪೂರ್ಣ ತೂ ಗುರುರಾಯಾ ॥೪॥ ಯಾಲಾಗೀ ಶ್ರೀಭಾಗವತಾ। ತೂಚಿ ಅರ್ಥ ತೂ ಕವಿತಾ। ತೂಚಿ ಅರ್ಥಾವಬೋಧಕತಾ। ಹೇಹೀ ಬೋಲವಿತಾ ತೂಚಿ ಆಮ್ಹಾ ॥೫॥ ಜೈಶೀ ಆಪುಲೀಚಿ ಉತ್ತರೇ। ಪಡಸಾದೇ ಹೋತೀ ಪ್ರತ್ಯುತ್ತರೇ। ತೇವೀ ಮಾಝೇ ಮುಖಾಂತರೇ। ತೂ ಕವಿತ್ವದ್ವಾರೇ ಬೋಲಕಾ ॥೬॥ ಬೋಲಕಾ ಶ್ರೀಭಾಗವತೀ। ಶ್ರೀಕೃಷ್ಣ ಕೃಪಾಮೂರ್ತೀ। ತೇಣೇ ವರ್ಣಾಶ್ರಮ ಉತ್ಪತ್ತೀ। ಯಥಾಸ್ಥಿತೀ ಸಾಂಗೀತಲೀ ॥೭॥ ಸಪ್ತದಶಾಧ್ಯಾಯೀ ಸುಗಮ। ಸಾಂಗೀತಲೇ ಬ್ರಹ್ಮಚರ್ಯ-ಧರ್ಮ। ಗೃಹಸ್ಥಾಚೇ ಸ್ವಧರ್ಮಕರ್ಮ। ನಿತ್ಯನೇಮ ನಿರೂಪಿಲೇ ॥೮॥ ಆತಾ ಅಷ್ಟಾದಶಾಧ್ಯಾಯೀ ಜಾಣ। ವಾನಪ್ರಸ್ಥಾಶ್ರಮಲಕ್ಷಣ। ಸನ್ಯಾಸ ಧರ್ಮಾಚೇ ನಿರೂಪಣ। ಸ್ವಯೇ ಶ್ರೀಕೃಷ್ಣ ಸಾಂಗತ ॥೯॥

ಶ್ರೀಭಗವಾನುವಾಚ:-

ವನಂ ವಿವಿಕ್ಷುಃ ಪುತ್ರೇಷು ಭಾರ್ಯಾಂ ನ್ಯಸ್ಯ ಸಹೈವ ವಾ।
ವನ ಏವ ವಸೇಚ್ಛಾಂತಸ್ತೃತೀಯಂ ಭಾಗಮಾಯುಷಃ ॥೧॥

ಅರ್ಥ:- ಪ್ರಿಯ ಉದ್ಧವಾ, ಗೃಹಸ್ಥ ಮನುಷ್ಯನು ವಾನಪ್ರಸ್ಥ ಆಶ್ರಮಕ್ಕೆ ಹೋಗಬೇಕೆಂದು ಇಚ್ಛಿಸಿದರೆ ಆತನು ತನ್ನ ಪತ್ನಿಯನ್ನು ಪುತ್ರನ ಸ್ವಾಧೀನ ಮಾಡಬೇಕು. ಇಲ್ಲವೇ ತನ್ನ ಜೊತೆಯಲ್ಲಿ ವನಕ್ಕೆ ಒಯ್ಯಬೇಕು. ಅಲ್ಲಿದ್ದುಕೊಂಡು ಶಾಂತ ಚಿತ್ತದಿಂದ ಆಯುಷ್ಯದ ಮೂರನೆಯ ಭಾಗವನ್ನು ಮುಗಿಸಬೇಕು.

ಹೇ ಕರ್ಮಪ್ರಕಾಶಕನೇ, ಸದ್‌ವಿದ್ಯಾ ವಿಧಿವಿವೇಕನೇ, ಹೇ ಕರ್ಮಧರ್ಮ ಪ್ರತಿಪಾಲಕನೇ, ಜಗನ್ನಾಯಕನೇ, ಓಂಕಾರರೂಪ ಗುರುವರ್ಯನೇ, ನಿನಗೆ ನನ್ನ ಸಾಷ್ಟಾಂಗ ನಮಸ್ಕಾರವು ॥೧॥ ಹೇ ಗೋವಿಂದನೇ, ವರ್ಣಾಶ್ರಮಾದಿ ಧರ್ಮಗಳ ಮರ್ಯಾದೆಯ ಆಧಾರವು ನೀನೇ ಆಗಿರುವೆ. ವೇದಾನುವಾದದ ಕಾರಣವೂ ಕೂಡ ನೀನೇ ಆಗಿರುವೆ. ವಿತಂಡವಾದದ ಮತ್ತು ಸುಖಸಂವಾದದ ಮೂಲವು ನೀನೇ ಆಗಿರುವೆ ॥೨॥ ಶಬ್ದಸೃಷ್ಟಿಯ ನೀನು ದಿವ್ಯವಾಗಿರುವ ಸೂರ್ಯನಾರಾಯಣನಾಗಿರುವೆ. ನೀನು ವೇದದಲ್ಲಿನ ಗುರುವಾಗಿರುವೆ. ಜ್ಞಾನ ಪ್ರಕಾಶವನ್ನು ಮಾಡುವವನು ನೀನಾಗಿರುವೆ. ನೀನು ಒಬ್ಬನೇ ಇದ್ದು ನಿನ್ನ ಲೀಲಾವಿಲಾಸದಿಂದ ಅನೇಕ ಅಂಗಗಳಿಂದ ಪ್ರಕಟನಾಗಿರುವೆ. ವ್ಯಾಪ್ತ ಮತ್ತು ವ್ಯಾಪಕವೂ ಕೂಡ ನೀನೇ ಆಗಿರುವೆ ॥೩॥ ವಿಧಿ ಮತ್ತು ವಿಧಾನ ನೀನೇ ಆಗಿರುವೆ. ಮಾತನಾಡುವವನೂ ನೀನೇ ಮತ್ತು ಮೌನವನ್ನು ಧರಿಸುವವನೂ ನೀನೇ ಆಗಿರುವೆ. ಹೇ ಗುರುರಾಯಾ, ಏಕನಾಥ ಮತ್ತು ಜನಾರ್ದನ ನೀನೇ ಆಗಿರುವೆ ॥೪॥ ಅದಕ್ಕಾಗಿ ಭಾಗವತದಲ್ಲಿನ ಕವಿತೆಯೂ ಕೂಡ ನೀನೇ ಮತ್ತು ಅರ್ಥವೂ ಕೂಡ ನೀನೇ ಆಗಿರುವೆ. ಅರ್ಥಜ್ಞಾನವನ್ನೂ ಸಹ ನೀನೇ ಆಗಿರುವೆ ಮತ್ತು ನನ್ನಿಂದ ಹೇಳಿಸುವವನು ನೀನೇ ಆಗಿರುವೆ ॥೫॥ ಪ್ರತಿಧ್ವನಿಯು ನಾವು ಉಚ್ಚರಿಸಿದ ಶಬ್ದಗಳನ್ನು ಯಾವ ಪ್ರಕಾರವಾಗಿ ಹುಟ್ಟಿಸುವುದೋ, ಅದರಂತೆಯೇ ನನ್ನ ಮುಖದಿಂದ ಕವಿತ್ವದ ರೂಪದಿಂದ ನೀನೇ ಹೇಳುತ್ತಿರುವೆ ॥೬॥ ಶ್ರೀಭಾಗವತದಲ್ಲಿ ಕೃಪಾಮೂರ್ತಿಯಾದ ಶ್ರೀಕೃಷ್ಣನೇ ವಕ್ತಾನಾಗಿರುವನು. ಆತನು ವರ್ಣಾಶ್ರಮದ ಉತ್ಪತ್ತಿಯನ್ನು ಯಥಾರ್ಥ ಪದ್ಧತಿಯಿಂದ ಪ್ರತಿಪಾದನೆಯನ್ನು ಮಾಡಿದನು ॥೭॥ ಹದಿನೇಳನೆಯ ಅಧ್ಯಾಯದಲ್ಲಿ ಬ್ರಹ್ಮಚರ್ಯದ ಧರ್ಮವನ್ನು ಶ್ರೀಕೃಷ್ಣನು ಸುಲಭವನ್ನಾಗಿ ಮಾಡಿ ಹೇಳಿದನು ಮತ್ತು ಗೃಹಸ್ಥನ ಮತ್ತು ನಿತ್ಯನಿಯಮಗಳ ನಿರೂಪಣೆಯನ್ನೂ ಸಹ ಮಾಡಿದನು ॥೮॥ ಈಗ ಹದಿನೆಂಟನೆಯ ಅಧ್ಯಾಯದಲ್ಲಿ ವಾನಪ್ರಸ್ಥಾಶ್ರಮದ ಲಕ್ಷಣಗಳನ್ನು ಮತ್ತು ಸನ್ಯಾಸಧರ್ಮದ ನಿರೂಪಣೆಯನ್ನು ಶ್ರೀಕೃಷ್ಣನು ಸ್ವತಃ ಹೇಳುವನು ॥೯॥

ಆತಾ ಕ್ರಮೇಚಿ ನಿರೂಪಣ । ವಾನಪ್ರಸ್ಥಾಚೇ ಆಲೇ ಜಾಣ । ತ್ಯಾಸೀ ವನಾಸ ನಿಘಾವಯಾ ಕಾರಣ । ಆಯುಷ್ಯಲಕ್ಷಣ ವಿಭಾಗ ॥೧೦॥ ''ಶತಾಯುಃಪುರುಷ'' ಮರ್ಯಾದಾ ಶ್ರುತೀ । ತ್ಯಾಚ್ಯಾ ತೃತೀಯಭಾಗಾಚೀ ಸ್ಥಿತೀ । ಸಾಸಷ್ಟೀ ಕ್ರಮಿಲ್ಯಾ ಅಂತೀ । ವನಾಪ್ರತೀ ನಿಘಾವೇ ॥೧೧॥ ನಿಘಾವಯಾ ವನಾಪ್ರತೀ । ಭಾರ್ಯಾ ದೇಊನಿ ಪುತ್ರಾಚೇ ಹಾತೀ । ಆಪಣ ನಿಘಾವೇ ಶೀಘ್ರಗತೀ ।ವಾನಪ್ರಸ್ಥೀ ವನವಾಸಾ ।೧೨॥ ಭಾರ್ಯಾ ಸಾಧ್ವೀ ಪತಿವ್ರತಾ ಸತೀ । ಈಶ್ವರಸ್ವರೂಪ ಮಾನೀ ಪತೀ। ಭ್ರತಾರ ನಿಘತಾ ವಾನಪ್ರಸ್ಥೀ । ಜೇ ಪುತ್ರಾಪ್ರತೀ ರಾಹೇನಾ ॥೧೩॥ ಸಾಂಡಿತಾ ಭ್ರತಾರಸೇವೇಸೀ । ಕಲ್ಪಾಂತ ಹೋ ಪಾಹೇ ಜಿಸೀ । ಜೇ ಭ್ರತಾರಚರಣಾಂಚೀ ದಾಸೀ । ತೇ ಸವೇ ವನಾಸೇ ಆಣಾವೀ ॥೧೪॥ ಜೋ ಪುರುಷ ಸ್ತ್ರೀಸಮವೇತ । ವನೀ ಝಾಲಾ ವಾನಪ್ರಸ್ಥ । ತೇಣೇ ಸ್ತ್ರೀಕಾಮಾಸೀ ಅಲಿಪ್ತ । ವ್ಹಾವೇ ದೃಢವ್ರತ ತೇ ಆಶ್ರಮೀ ॥೧೫॥ ಜೋ ವಾನಪ್ರಸ್ಥ ವನವಾಸೀ । ತೇಣೇ ದೃಢ ಧರಾವೀ ಶಾಂತಿ ಮಾನಸೀ ।ನಾತಳಾವೇ ಕಾಮಕ್ರೋಧಾಸೀ । ಹೇಹೀ ವ್ರತ ತ್ಯಾಸೀ ಆವಶ್ಯಕ ॥೧೬॥

ಕಂದಮೂಲಫಲೈರ್ವನ್ಯೈರ್ಮೇಧ್ಯೈರ್ವೃತ್ತಿ ಪ್ರಕಲ್ಪಯೇತ್ । ವಸೀತ ವಲ್ಕಲಂ ವಾಸಸ್ತೃಣ ಪರ್ಣಾಜಿನಾನಿ ಚ ॥೨॥

ಅರ್ಥ:- ವನದಲ್ಲಿ ಕಂದಮೂಲ ಫಲಗಳಿಂದ ತಮ್ಮ ಶರೀರದ ಉದರ ನಿರ್ವಾಹ ನಡೆಸಬೇಕು. ವಸ್ತ್ರದ ಬದಲಾಗಿ ಗಿಡಗಳ ತೊಗಟೆ, ಹುಲ್ಲು, ಎಲೆಗಳು, ಚಿಗರೆ ಹುಲಿ ಇತ್ಯಾದಿಗಳ ಚರ್ಮಗಳನ್ನು ಶಯ್ಯಾ, ಆಸನ, ಆಚ್ಛಾದನಕ್ಕಾಗಿ ಬಳಸಬೇಕು.

ವನೀಂಚೀ ಕಂದಮೂಲಫಳೇ । ಜೇ ನಿಪಜಲೀ ಋತುಕಾಳೇ । ತೀಹೀ ಅತಿಪವಿತ್ರೇ ನಿರ್ಮಳೇ । ಆಹಾರ ತೇಣೇ ಮೇಳೇ ಕರಾವಾ ॥೧೭॥ ವನವಾಸೀ ವಸ್ತ್ರೇ ಜಾಣ । ವಲ್ಕಲೇ ವ್ಯಾಘ್ರಮೃಗಾಜಿನ । ಅಥವಾ ನೇಸಾವೇ ಕೇವಳ ತೃಣ । ಕಾ ಪರ್ಣಾಭರಣ ವೃಕ್ಷಾಂಚೇ ॥೧೮॥ ವಾನಪ್ರಸ್ಥೀ ನೇಮಗ್ರಹಣ। ಐಕ ತ್ಯಾಚೇಹೀ ಲಕ್ಷಣ । ತ್ಯಾ ನೇಮಾಚೇ ನಿರೂಪಣ । ಸ್ವಯೇ ನಾರಾಯಣ ಸಾಂಗತ ॥೧೯॥

ಕೇಶರೋಮನಖಶ್ಮಶ್ರು-ಮಲಾನಿ ಬಿಭೃಯಾದ್ದತಃ । ನ ಧಾವದಪ್ಸು ಮಜ್ಜೇತ ತ್ರಿಕಾಲಂ ಸ್ಥಂಡಿಲೇಶಯಃ ॥೩॥

ಅರ್ಥ:-ತಲೆಗೂದಲು, ಗಡ್ಡಮೀಸೆಗಳನ್ನು ಬಾಚಿಕೊಳ್ಳಬಾರದು, ಉಗುರುಗಳನ್ನು ಕತ್ತರಿಸಬಾರದು. ಹಲ್ಲುಗಳನ್ನು ದಂತಮಂಜನಗಳಿಂದ ತಿಕ್ಕಬಾರದು. ನಿತ್ಯವೂ ತ್ರಿಕಾಲ ಸ್ನಾನ ಮಾಡಬೇಕು. ನೆಲದ ಮೇಲೆ ಮಲಗಬೇಕು.

ಕೇಶ ಮ್ಹಣಿಜೇ ಮಸ್ತಕೀಚೇ । ಶ್ಮಶ್ರು ಬೋಲಿಜೇ ಮುಖೀಚೇ । ರೋಮ ತೇ ಕಕ್ಷೋಪಸ್ಥೀಚೇ । ಛೇದನ ಯಾಂಚೇ ನ ಕರಾವೇ ॥೨೦॥ ಮಸ್ತಕೀ ನ ಕರಾವೇ ವಪನ । ನ ಕರಾವೇ ಶ್ಮಶ್ರುಕರ್ಮ ಜಾಣ । ನ ಕರಾವೇ ರೋಮನಖಚ್ಛೇದನ । ದಂತ ಧಾವನ ನ ಕರಾವೇ ॥೨೧॥

ಈಗ ಕ್ರಮವಾಗಿ ಪ್ರಾಪ್ತವಾಗಿರುವ ವಾನಪ್ರಸ್ಥಾಶ್ರಮದ ವರ್ಣನೆಯನ್ನು ಮಾಡಲಾಗುತ್ತಿರುವುದು. ಆತನ ವನವಾಸದ ಕಾಲವನ್ನು ಆತನ ಆಯುಷ್ಯದಿಂದ ವಿಭಾಗಿಸಲ್ಪಟ್ಟಿರುವುದು ॥೧೦॥ ಪುರುಷನ ಆಯುಷ್ಯವು ನೂರು ವರ್ಷಗಳೆಂದು ಶ್ರುತಿಯು ಹೇಳಿರುವುದು. ಆ ಆಯುಷ್ಯದ ಮೂರನೆಯ ಭಾಗವು ಆರಂಭವಾಗುತ್ತಲೇ ಅಂದರೆ ವಯಸ್ಸಿಗೆ ಅರವತ್ತಾರು ವರ್ಷ ಮುಗಿಯುತ್ತಲೇ ವನಕ್ಕೆ ಸೇರಲು ಹೊರಡಬೇಕಾಗುವುದು ॥೧೧॥ ತನ್ನ ಪತ್ನಿಯನ್ನು ಮಕ್ಕಳ ಸ್ವಾಧೀನವನ್ನು ಮಾಡಿ ತಾನು ಕೂಡಲೇ ವನವನ್ನು ಸೇರಲು ಹೊರಡಬೇಕು ॥೧೨॥ ಒಂದುವೇಳೆ ತನ್ನ ಪತ್ನಿಯು ಸಾಧ್ವಿಯಾಗಿ ಪತಿವ್ರತೆ ಇದ್ದು ತನ್ನ ಪತಿಯನ್ನು ಈಶ್ವರರೂಪದಿಂದ ಕಾಣುತ್ತಿದ್ದು, ತನ್ನ ಪತಿಯು ವನಕ್ಕೆ ಹೋಗುತ್ತಿರಲು ತಾನು ಪುತ್ರರಲ್ಲಿ ಇರಲು ಸಿದ್ಧಳಾಗದಿದ್ದರೆ ॥೧೩॥ ಪತಿಯ ಸೇವೆಯು ತಪ್ಪಲು ಆಕೆಗೆ ಕಲ್ಪಾಂತವಾದಂತೆ ದುಃಖವಾಗುತ್ತಿದ್ದರೆ, ತನ್ನ ಪತಿಯ ಚರಣಗಳನ್ನು ಮನೋಭಾವದಿಂದ ಪೂಜಿಸುತ್ತಿದ್ದರೆ, ಇಂತಹ ಪತ್ನಿಯನ್ನು ಪತಿಯು ತನ್ನ ಜೊತೆಯಲ್ಲಿ ವನಕ್ಕೆ ಒಯ್ಯಬೇಕು ॥೧೪॥ ಯಾವ ಪುರುಷನು ತನ್ನ ಸ್ತ್ರೀಸಮೇತ ವನಕ್ಕೆ ಹೋಗಿ ವಾನಪ್ರಸ್ಥನಾಗುವನೋ, ಆತನು ಸ್ತ್ರೀಸಂಗದಿಂದ ದೂರವಿರಬೇಕು. ಈ ಆಶ್ರಮದ ಈ ವ್ರತವನ್ನು ದೃಢವಾಗಿ ಪಾಲಿಸಬೇಕು ॥೧೫॥ ಯಾರು ವನದಲ್ಲಿದ್ದುಕೊಂಡು ವಾನಪ್ರಸ್ಥನಾಗುವನೋ, ಆತನು ತನ್ನ ಮನವನ್ನು ದೃಢವಾದ ಶಾಂತಿಯಿಂದ ಇಡಬೇಕು. ಕಾಮಕ್ರೋಧಗಳಿಗೆ ಎಂದಿಗೂ ಸ್ಪರ್ಶವನ್ನು ಮಾಡಕೂಡದು. ಈ ವ್ರತವನ್ನೂ ಕೂಡ ಆತನು ಅವಶ್ಯವಾಗಿ ಪಾಲಿಸಬೇಕು ॥೧೬॥

ವನದಲ್ಲಿ ಯಾವ ಯಾವ ಋತುಗಳಲ್ಲಿ ಯಾವ ಯಾವ ಕಂದಮೂಲಗಳು ಮತ್ತು ಫಲಗಳು ದೊರಕುವುವೋ ಅವುಗಳಲ್ಲಿ ನಿರ್ಮಲ ಮತ್ತು ಪವಿತ್ರವಾದವುಗಳನ್ನು ಸ್ವೀಕರಿಸಿ, ಅವುಗಳಿಂದಲೇ ತನ್ನ ಉದರಪೋಷಣೆಯನ್ನು ಮಾಡಿಕೊಳ್ಳಬೇಕು ॥೧೭॥ ವನದಲ್ಲಿ ವಲ್ಕಲೇ ಅಂದರೆ ನಾರುಬಟ್ಟೆ, ಚಿಗರೆ, ಹುಲಿಚರ್ಮ ಅಥವಾ ಮರಗಳ ಎಲೆಗಳನ್ನೇ ವಸ್ತ್ರದಂತೆ ಉಪಯೋಗಿಸಬೇಕು ॥೧೮॥ ವಾನಪ್ರಸ್ಥಾಶ್ರಮದಲ್ಲಿ ಪಾಲಿಸಬೇಕಾದ ನಿಯಮಗಳ ಲಕ್ಷಣವನ್ನು ಕೇಳು. ಇದರ ನಿರೂಪಣೆಯನ್ನು ಸ್ವತಃ ಶ್ರೀಕೃಷ್ಣನು ಮಾಡುತ್ತಿರುವನು ॥೧೯॥

ಕೇಶವೆಂದರೆ ತಲೆಯ ಮೇಲೆ ಬೆಳೆಯುವ ಕೂದಲುಗಳು, ಶ್ಮಶ್ರು ಎಂದರೆ ಮೀಸೆ, ಗಡ್ಡಗಳ ಕೂದಲುಗಳು, ರೋಮ ಎಂದರೆ ಬಗಲಲ್ಲಿ ಮತ್ತು ಗುಹ್ಯಭಾಗಗಳ ಕೂದಲುಗಳು ಇವುಗಳನ್ನು ಛೇದಿಸಕೂಡದು ॥೨೦॥ ತಲೆಯನ್ನು ಬೋಳಿಸುವಂತಿಲ್ಲ, ಗಡ್ಡಮೀಸೆ ಕತ್ತರಿಸುವಂತಿಲ್ಲ. ಉಗುರುಗಳನ್ನು ತಗೆಯುವಂತಿಲ್ಲ, ಹಲ್ಲುಗಳನ್ನು ತಿಕ್ಕುವಂತಿಲ್ಲ ॥೨೧॥

ಸ್ನಾನ ಮುಸಲವತ್ ಕೇವಳ । ಅವಶ್ಯ ಕರಾವೇ ತ್ರಿಕಾಳ । ಪ್ರಕ್ಷಾಳಾವೇ ನಾ ಶರೀರಮಳ । ವ್ರತ ಪ್ರಬಳ ವನಸ್ಥಾ ।೨೨।। ಕೇವಳ ಭೂಮೀವರೀ ಶಯನ । ಸದಾಸರ್ವದಾ ಕರಾವೇ ಜಾಣ । ತಳೀ ಘಾಲಾವೇ ನಾ ತೃಣ । ಮಗ ಆಸ್ತರಣ ತೇ ಕೈಚೇ ।೨೩।। ಯಾಪರೀ ವಾನಪ್ರಸ್ಥೇ ಜಾಣ । ದೃಢ ಧರೂನಿ ವ್ರತಧಾರಣ । ಕರಾವೇ ತಪಾಚರಣ । ತೇ ತಪಲಕ್ಷಣ ಅವಧಾರೀ ।೨೪।।

ಗ್ರೀಷ್ಮೇ ತಪ್ಯೇತ ಪಂಚಾಗ್ನೀನ್ ವರ್ಷಾಸ್ವಾಸಾರಷಾಡ್ ಜಲೇ । ಆಕಂಠಮಗ್ನಃ ಶಿಶಿರ ಏವಂವೃತ್ತಸ್ತಪಶ್ಚರೇತ್ ।೪।।

ಅರ್ಥ:- ಬೇಸಿಗೆಯ ಕಾಲದಲ್ಲಿ ಪಂಚಾಗ್ನಿ ತಪವನ್ನು ಮಾಡಬೇಕು. ಮಳೆಗಾಲದಲ್ಲಿ ಬೈಲುಜಾಗೆಯಲ್ಲಿ ನಿಂತುಕೊಂಡು ಮಳೆಯ ಹೊಡೆತವನ್ನು ಸಹಿಸಬೇಕು. ಚಳಿಗಾಲದಲ್ಲಿ ಕಂಠದವರೆಗೆ ನೀರಿನಲ್ಲಿ ಮುಳುಗಿ ಉದಕವಾಸ ನಾಮದ ವ್ರತವನ್ನು ಆಚರಿಸಬೇಕು. ಈ ಪ್ರಕಾರದ ಘೋರ ತಪಸ್ಸುಗಳ ವ್ರತಗಳನ್ನು ಆಚರಿಸಬೇಕು.

ಉಷ್ಣಕಾಳೀ ಪಂಚಾಗ್ನಿ । ಅಗ್ನಿಕುಂಡೇ ಚಹೂ ಕೋಣೀ । ಪಾಂಚವಾ ರವಿ ಮಾಧ್ಯಾಹ್ನೀ । ಐಸಾ ಪಂಚಾಗ್ನೀ ಸಾಧಾವಾ ।೨೫।। ಮಾಳಾ ಕರೋನಿ ಉಚ್ಚ ಪ್ರದೇಶೀ । ಘನ ವರ್ಷತಾ ಧಾರಾವರ್ತ್ತೆಸೀ । ತೇಥ ವ್ಹಾವೇ ಆಕಾಶವಾಸೀ । ವರ್ಷಾಕಾಳೀ ಐಸೀ ತಪಪ್ರಾಪ್ತೀ ।೨೬।। ಆಲಿಯಾ ಹೇಮಂತ ಋತೂಸೀ । ಆಕಂಠಮಗ್ನ ಜಳವಾಸೀ । ಜಳ ವಾಸ ಕರಾವಾ ನಿಶೀ । ವಾನಪ್ರಸ್ಥಾಸೀ ತಪಕ್ರಿಯಾ ।೨೭।। ಹೇ ತಪಕ್ರಿಯಾ ಪ್ರತಿವರುಷೀ । ವಿಹಿತ ವಾನಪ್ರಸ್ಥಾಸೀ । ವಯಸಾಪರತ್ವೇ ಭಕ್ಷಣಾಸೀ । ಹೃಷೀಕೇಶೀ ಸಾಂಗತ ।೨೮।।

ಅಗ್ನಿಪಕ್ವಂ ಸಮಶ್ನೀಯಾತ್ ಕಾಲಪಕ್ವಮಥಾಪಿ ವಾ । ಉಲೂಖಲಾಶ್ಮಕುಟ್ಟೋ ವಾ ದಂತೋಲೂಖಲ ಏವ ವಾ ।೫।।

ಅರ್ಥ:- ಕಂದಮೂಲಗಳನ್ನು ಕೇವಲ ಕೆಂಡದಲ್ಲಿ ಸುಟ್ಟು ತಿನ್ನಬೇಕು. ಮಾಗಿದ ಹಣ್ಣುಗಳನ್ನು ತಿನ್ನಬೇಕು. ಭಕ್ಷ್ಯ ಪದಾರ್ಥಗಳನ್ನು ಒರಳಿನಲ್ಲಿ ಕುಟ್ಟಿ ಅಥವಾ ಕಲ್ಲಿನಮೇಲೆ ಜಜ್ಜಿ ತಿನ್ನಬೇಕು. ಇಲ್ಲವೇ ಹಲ್ಲಿನಿಂದ ಕಡಿದು ತಿನ್ನಬೇಕು.

ಅಗ್ನೀಸ್ತವ ಪಾಕಾ ಆಲೀ । ಕಾ ಕಾಳೇ ಜೇ ಪರಿಪಕ್ವ ಝಾಲೀ । ತೀ ತಾಪಸಲಾಗೀ ಭಲೀ । ಆಹಾರೀ ವಿಹಿಲೀ ಉದರಾರ್ಥ ।೨೯।। ದಾಂತ ಅಸಲಿಯಾ ಬಳೀ । ಫಳೇ ಖಾವೀ ತೇಣೇ ಸಗಳೀ । ಕಾ ಗೇಲಿಯಾ ದಾಂತ ಸಮೂಳೀ । ಕಾಂಡೂನಿ ಉಖಳೀ ಸುಖೇ ಖಾವೀ ।೩೦।। ಜರೀ ಉಖಳ ನ ಮಿಳೇ ವನೀ । ತರೀ ಖಾವೀ ದಗಡೇ ಠೇಂಚುನೀ । ನಾಹೀ ಚಾಡ ಗೋಡಪಣೀ । ಕ್ಷುಧಾ ನಿವಾರಣೀ ಆಹಾರಾರ್ಥ ।೩೧।।

ಸ್ವಯಂಸಂಚಿನುಯಾತ್ ಸರ್ವಮಾತ್ಮನೋ ವೃತ್ತಿಕಾರಣಮ್ । ದೇಶಕಾಲಬಲಾಭಿಜ್ಞೋ ನಾದದೀತಾನ್ಯದಾಹೃತಮ್ ।೬।।

ಅರ್ಥ:- ವಾನಪ್ರಸ್ಥನು ಎಚ್ಚರಿಕೆಯಿಂದ ಸ್ವತಃ ಕಾಲ, ಸ್ಥಳ ಮತ್ತು ತನ್ನಸಾಮರ್ಥ್ಯಕ್ಕೆ ತಕ್ಕಂತೆ ತನ್ನ ಶರೀರಧಾರಣೆಗೆ ಆಗತ್ಯವಾದುದನ್ನು ಮಾತ್ರ ಸಂಗ್ರಹಿಸಬೇಕು. ಅವನು ಎಂದಿಗೂ ಮುಂದೆ ತನಗೆ ಬೇಕಾಗಬಹುದು ಎಂದು ಏನನ್ನೂ ಸಂಗ್ರಹ ಮಾಡಕೂಡದು.

ಶರೀರವನ್ನು ತಿಕ್ಕುತ್ತ ಸ್ನಾನವನ್ನು ಮಾಡುವಂತಿಲ್ಲ, ಕೇವಲ ನೀರಿನಲ್ಲಿ ಮುಳುಗಿ ಒಣಕೆಯಂತೆ ಮೇಲಕ್ಕೆ ನೀರಿನಿಂದ ಬರಬೇಕು. ಪ್ರತಿದಿನ ಮೂರುಸಲ ಸ್ನಾನವನ್ನು ಮಾಡಬೇಕು. ಇದು ವಾನಪ್ರಸ್ಥದ ದೊಡ್ಡ ವ್ರತವಾಗಿರುವುದು ।೨೨।। ಯಾವಾಗಲೂ ನೆಲದಮೇಲೆಯೇ ಮಲಗಬೇಕು. ಕೆಳಗೆ ಹುಲ್ಲು ಕೂಡ ಹಾಕಬಾರದು. ಅಂದಮೇಲೆ ವಸ್ತ್ರಗಳ ಮಾತು ದೂರ ಉಳಿಯಿತು ।೨೩।। ಈ ಪ್ರಕಾರವಾಗಿ ವಾನಪ್ರಸ್ಥ ಆಶ್ರಮದವನು ದೃಢವಾದ ವ್ರತವನ್ನು ಧರಿಸಬೇಕು ಮತ್ತು ತಪಾಚರಣೆಯನ್ನು ಮಾಡಬೇಕು. ಆ ತಪದ ಲಕ್ಷಣಗಳನ್ನು ಈಗ ಕೇಳು ।೨೪।।

ನಾಲ್ಕು ಕಡೆಗಳಲ್ಲಿ ನಾಲ್ಕು ಅಗ್ನಿಕುಂಡಗಳನ್ನಿಟ್ಟು ಮಧ್ಯಾಹ್ನ ಹೊತ್ತಿನಲ್ಲಿ ಸೂರ್ಯನು ನೆತ್ತಿಯ ಮೇಲೆ ಪ್ರಜ್ವಲಿಸುತ್ತಿರಬೇಕು. ಹೀಗೆ ಪಂಚಾಗ್ನೀ ಸಾಧನೆಯನ್ನು ಬೇಸಿಗೆಯ ಕಾಲದಲ್ಲಿ ಮಾಡಬೇಕು ।೨೫।। ಮಳೆಗಾಲದಲ್ಲಿ ಎತ್ತರ ಸ್ಥಳದಲ್ಲಿ ಅಟ್ಟವನ್ನು ಕಟ್ಟಬೇಕು. ಜೋರಾಗಿ ಮಳೆಯು ಸುರಿಯುತ್ತಿರಲು ಆಗ ಅಟ್ಟದಮೇಲೆ ಏರಿ ಬತ್ತಲು ಕುಳಿತುಕೊಳ್ಳಬೇಕು. ಇದು ಮಳೆಗಾಲದ ತಪಸ್ಸಾಗಿರುವುದು ।೨೬।। ಚಳಿಗಾಲದ ಮೈಕೊರೆಯುವ ಥಂಡಿಯಲ್ಲಿ ಕಂಠದವರೆಗೆ ನೀರಿನಲ್ಲಿ ಮುಳುಗಿ ಇರಬೇಕು. ಇದಕ್ಕೆ ಉದಕವಾಸವೆನ್ನುವರು. ಇದು ವಾನಪ್ರಸ್ಥನ ತಪಶ್ಚರ್ಯವಾಗಿರುವುದು ।೨೭।। ಈ ತಪಸ್ಸು ವಾನಪ್ರಸ್ಥನಿಗೆ ಪ್ರತಿವರ್ಷವೂ ಮಾಡಬೇಕಾಗುವುದು. ಈಗ ಈ ಆಶ್ರಮದವರಿಗೆ ವಯಸ್ಸಿನ ಪ್ರಕಾರ ಆಹಾರವು ಹೇಗಿರಬೇಕೆಂಬುದನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।೨೮।।

ಕಂದಮೂಲಗಳನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನಬೇಕು. ಮಾಗಿದ ಹಣ್ಣುಗಳನ್ನು ತಿನ್ನಬೇಕು. ತಪಸ್ಸಿಗೆ ಉದರನಿರ್ವಾಹಕ್ಕಾಗಿ ಇವುಗಳ ಭಕ್ಷಣಾ ಯೋಗ್ಯವಾಗಿರುವುದು।೨೯।। ಹಲ್ಲುಗಳು ಗಟ್ಟಿಯಾಗಿದ್ದರೆ ಎಲ್ಲ ಫಲಗಳನ್ನು ಹಲ್ಲಿನಿಂದ ಕಡೆದು ತಿನ್ನಬೇಕು. ಆದರೆ ಹಲ್ಲುಗಳು ಬಿದ್ದುಹೋಗಿರಲು ಆಗ ಆ ಫಲಗಳನ್ನು ಒರಳಿನಲ್ಲಿ ಕುಟ್ಟಿ ತಿನ್ನಬೇಕು ।೩೦।। ವನದಲ್ಲಿ ಒರಳು ಇಲ್ಲದಿದ್ದರೆ ಅವುಗಳನ್ನು ಕಲ್ಲಿನಿಂದ ಜಜ್ಜಿ ತಿನ್ನಬೇಕು. ಆಗ ರುಚಿಯ ಬಗ್ಗೆ ಬಹಳ ವಿಚಾರವನ್ನು ಮಾಡಬಾರದು. ಹಸಿವೆಯನ್ನು ಹಿಂಗಿಸುವಿಕೆಯೇ ಪ್ರಧಾನವಾದ ಉದ್ದೇಶವಾಗಿರಬೇಕು ।೩೧।।

ಋತುಕಾಳೀ ಫಳೇ ಸಂಪೂರ್ಣೇ । ತೀ ಕಾಲಾಂತರಾಕಾರಣೇ । ಸಂಗ್ರಹೋ ಸರ್ವಥಾ ನ ಕರಣೇ । ವ್ರತಧಾರಣೇ ವನಸ್ಥಾ ।೩೨॥ ಪೂರ್ವದಿವಸೀ ಫಳೇ ಆಣಿಲೀ । ಅಪರದಿವಸೀ ಜರೀ ಉರಲೀ । ತೀ ಅವಶ್ಯ ಪಾಹಿಜೇ ತ್ಯಾಗಿಲೀ । ನಾಹೀ ಬೋಲಿಲೀ ಆಹಾರಾರ್ಥ ।೩೩॥ ಪ್ರತ್ಯಹೀ ಆಹಾರಾರ್ಥ ಜಾಣ । ಫಳೇ ಆಣಾವೀ ನೂತನ । ಜೀರ್ಣ ಫಳಾಂಚೇ ಭಕ್ಷಣ । ನಿಷಿದ್ಧ ಜಾಣ ವಾನಪ್ರಸ್ಥಾ ।೩೪॥ ಆಣಿಕೇ ಫಳೇ ಜೇ ಆಣಿಲೀ । ತೀ ಅಂಗೀಕಾರಾ ನಿಷಿದ್ಧ ಝಾಲೀ । ಜೇ ಸ್ವಕಷ್ಟೇ ಅರ್ಜಿಲೀ । ತೀಂಚಿ ವಹಿಲೀ ಆಹಾರಾರ್ಥ ।೩೫॥ ದೇಶ ಕಾಳ ವರ್ತಮಾನ । ಇತ್ಥಂಭೂತ ಕಳಲೇ ಜ್ಞಾನ । ತರೀ ಸಂಗ್ರಹ ನ ಕರಾವಾ ಜಾಣ । ಅದೃಷ್ಟಧಾರಣ ನಿರ್ಧಾರೇ ।೩೬॥ ಪರಾಚಾ ಪ್ರತಿಗ್ರಹೋ ಪೂರ್ಣ । ಸರ್ವಥಾ ನ ಕರಾವಾ ಆಪಣ । ಪ್ರತಿಗ್ರಹ ಘೇತಾ ಜಾಣ । ವ್ರತಖಂಡನ ವಾನಪ್ರಸ್ಥಾ ।೩೭॥

ವನ್ಯೈಶ್ಚರುಪುರೋಡಾಶೈರ್ನಿರ್ವಪೇತ್ಕಾಲಚೋದಿತಾನ್ । ನ ತು ಶ್ರೌತೇನ ಪಶುನಾ ಮಾಂ ಯಜೇತ್ ವನಾಶ್ರಮೀ ।೭॥

ಅರ್ಥ:- ವಾನಪ್ರಸ್ಥನು ಚರು ಮತ್ತು ಕಾಡಿನಲ್ಲಿ ಬೆಳೆದ ಅಕ್ಕಿ ಇತರ ಧ್ಯಾನಗಳಿಂದ ತಯಾರಿಸಿದ ಕಜ್ಜಾಯವನ್ನು ಹವಿಸ್ಸಾಗಿ ಅರ್ಪಿಸಿ ಕಾಲೋಚಿತವಾಗಿ ಯಜ್ಞಗಳನ್ನು ಆಚರಿಸಬೇಕು. ಯಜ್ಞದಲ್ಲಿ ಪ್ರಾಣಬಲಿಯನ್ನು ನನಗೆ ಎಂದಿಗೂ ಅರ್ಪಿಸಬಾರದು.

ಜೋ ವಾನಪ್ರಸ್ಥ ಸ್ತ್ರೀ ಸಮವೇತ । ತ್ಯಾಸೀ ಅಗ್ನಿಹೋತ್ರ ಝಾಲೇ ಪ್ರಾಪ್ತ । ತೇವ್ಹಾ ಕರ್ಮ ಜೇ ವೇದೋಕ್ತ । ತೇ ಕರಾವೇ ಸಮಸ್ತ ವನವಾಸೀ ।೩೮॥ ವನೀ ಜೇ ಫಳೇ ಜ್ಯಾ ಋತೂಸ । ತೋಚಿ ಕಲ್ಪಾವಾ ಚರುಪುರೋಡಾಸ । ತೇಣೇ ಯಜಾವಾ ಮೀ ಯಜ್ಞಪುರುಷ । ಸಾವಕಾಶ ಮಂತ್ರೋಕ್ತ ।೩೯॥ ಯಾಪರೀ ಶ್ರೌತಕರ್ಮವಿಧಾನ । ಯಾಗಾರ್ಥ ಪಶುಹನನ । ತೇ ವಾನಪ್ರಸ್ಥಾಸೀ ನಾಹೀ ಜಾಣ । ವನಫಳೀ ಯಜನ ಯಾಗಾಚೇ ।೪೦॥

ಅಗ್ನಿಹೋತ್ರಂ ಚ ದರ್ಶಶ್ಚ ಪೌರ್ಣಮಾಸಶ್ಚ ಪೂರ್ವವತ್ । ಚಾತುರ್ಮಾಸ್ಯಾನಿ ಚ ಮುನೇರಾಮ್ನಾಯಾನಿ ಚ ನೈಗಮೈ: ।೮॥

ಅರ್ಥ:- ವೇದಜ್ಞಾನಿಗಳವರು ವಾನಪ್ರಸ್ಥರಿಗೆ ಅಗ್ನಿಹೋತ್ರ, ದರ್ಶ, ಪೌರ್ಣಮಾಸ ಮತ್ತು ಚಾತುರ್ಮಾಸ ಇವುಗಳ ವಿಧಾನ ಗೃಹಸ್ಥಾಶ್ರಮದ ಸಮಾನವಾಗಿ ಹೇಳಿರುವರು.

ಪೂರ್ವೀ ಅಗ್ನಿಹೋತ್ರಕರ್ಮೇ ಜೈಸೀ । ಗೃಹೀ ಹೋತೀ ಗೃಹಸ್ಥಾಸೀ । ತೀಚಿ ಚಾಲವಾವೀ ವನವಾಸೀ । ವೇದಾಜ್ಞೇಸೀ ವನಸ್ಥೆ ।೪೧॥ ಆಮ್ನಾಯೇ ಆಗಮನಿಗಮಾಂಸೀ । ಜಾಣೋನಿ ಕರಾವೇ ಯಾಗಾಸೀ । ದರ್ಶಪೌರ್ಣಮಾಸಚಾತುರ್ಮಾಸ್ಯಾಂಸೀ । ನಿಷ್ಕಾಮತೇಸೀ ವೇದಾಜ್ಞಾ ।೪೨॥

ಹಣ್ಣುಗಳ ಸುಗ್ಗಿಯು ಬರಲು ಆಗ ಬೇಕಾದಷ್ಟು ಫಲಗಳು ದೊರಕುವುವು. ಆದರೆ ಮುಂದಿನ ಪ್ರಸಂಗಗಳಲ್ಲಿ ಇವು ಉಪಯೋಗವಾಗುವುವು ಎಂದು ಆ ಫಲಗಳನ್ನು ಸಂಗ್ರಹಿಸಬಾರದು. ಇದು ವಾನಪ್ರಸ್ಥನ ವ್ರತವಾಗಿರುವುದು ।೩೨॥ ಇಂದು ತಂದಿರುವ ಫಲಗಳು ಉಳಿದುಕೊಂಡರೆ ಅವು ನಾಳಿಗೆ ಬರುವುವು ಎಂದು ಕೂಡಿಡಬಾರದು. ಅವಶ್ಯಕ್ಕಿಂತ ಹೆಚ್ಚಿನ ಫಲಗಳನ್ನು ಹೊರಗೆ ಚೆಲ್ಲಿಬಿಡಬೇಕು ।೩೩॥ ಪ್ರತಿದಿನವೂ ತಿನ್ನಲು ತಾಜಾಹಣ್ಣುಗಳನ್ನು ತರಬೇಕು. ವಾನಪ್ರಸ್ಥನಿಗೆ ತಂಗಳ ಫಲಗಳು ನಿಷಿದ್ಧ ಎಂದು ಶಾಸ್ತ್ರದಲ್ಲಿ ಹೇಳಿರುವುದು ।೩೪॥ ಇನ್ನೊಬ್ಬರು ತಂದು ಕೊಟ್ಟ ಫಲಗಳ ಸ್ವೀಕಾರವನ್ನು ವಾನಪ್ರಸ್ಥನು ಮಾಡಕೂಡದು. ಈತನು ಸ್ವತ: ಶೋಧಿಸಿ ಫಲಗಳನ್ನು ತರಬೇಕು. ಈ ಫಲಗಳೇ ಆಹಾರಕ್ಕೆ ಯೋಗ್ಯವಾಗಿರುವುವು ।೩೫॥ ದೇಶ, ಕಾಲ ಮತ್ತು ವರ್ತಮಾನ ಇವುಗಳ ಯಥಾರ್ಥವಾದ ಜ್ಞಾನವು ಇದ್ದರೂ ಕೂಡ ಯಾವುದೇ ಪ್ರಕಾರದ ಸಂಗ್ರಹವನ್ನು ಮಾಡಬಾರದು. ಪ್ರಾರಬ್ಧದ ಮೇಲೆ ವಿಶ್ವಾಸವನ್ನಿಟ್ಟು ಜೀವನವನ್ನು ಸಾಗಿಸಬೇಕು ।೩೬॥ ಯಾರೇ ಆಗಲೀ ಎಂತಹದ್ದೇ ಆಗಲಿ, ದಾನವಾಗಿ ಕೊಟ್ಟರೆ, ಅದರ ಸ್ವೀಕಾರವನ್ನು ಮಾಡಕೂಡದು. ದಾನದ ಸ್ವೀಕಾರವನ್ನು ಮಾಡಲು ವ್ರತವು ಭಂಗವಾಗುವುದೆಂದು ತಿಳಿಯಬೇಕು ।೩೭॥

ಯಾವ ಗೃಹಸ್ಥನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ತನ್ನ ಸ್ತ್ರೀಸಮೇತನಾಗಿ ವನಕ್ಕೆ ಹೋಗುವನೋ, ಅಲ್ಲಿಯೂ ಕೂಡ ಆತನಿಗೆ ಅಗ್ನಿಹೋತ್ರವನ್ನು ಪಾಲಿಸಬೇಕಾಗುವುದು. ಈತನು ವನದಲ್ಲಿ ಸರ್ವ ವೇದೋಕ್ತ ಕರ್ಮಗಳನ್ನು ಮಾಡಬೇಕು ।೩೮॥ ವನದಲ್ಲಿ ಯಾವ ಋತುವಿನಲ್ಲಿ ಯಾವ ಫಲಗಳು ದೊರೆಯುವುವೋ, ಅವುಗಳ ಚರೂ ಮತ್ತು ಪುರೋಡಾಶ ಮಾಡಿ ಆತನು ಯಥಾಶಾಸ್ತ್ರ ಯಜ್ಞಪುರುಷನ ಮಂತ್ರೋಕ್ತ ಪೂಜೆಯನ್ನು ಮಾಡಬೇಕು ।೩೯॥ ಶ್ರೌತಕರ್ಮ ವಿಧಾನದಂತೆ ವಾನಪ್ರಸ್ಥನು ಯಜ್ಞಕ್ಕಾಗಿ ಪಶುವಧೆಯನ್ನು ಎಂದಿಗೂ ಮಾಡಕೂಡದು. ವನದಲ್ಲಿನ ಫಲಗಳಿಂದಲೇ ಯಜ್ಞಕ್ಕೆ ಬಲಿಯನ್ನು ಕೊಡಬೇಕು ।೪೦॥

ಗೃಹಸ್ಥಾಶ್ರಮದಲ್ಲಿ ಗೃಹಸ್ಥನಿಗೆ ಪೂರ್ವದಲ್ಲಿರುವ ಅಗ್ನಿಹೋತ್ರಾದಿ ಕರ್ಮಗಳನ್ನು ವಾನಪ್ರಸ್ಥಾಶ್ರದಲ್ಲಿಯೂ ಕೂಡ ಅದನ್ನೇ ವೇದಾಜ್ಞೆಯಂತೆ ನಡೆಸಬೇಕು. ವೇದಗಳ ಆಧಾರದಿಂದ ಶಾಸ್ತ್ರವಿಧಿಗಳನ್ನು ತಿಳಿದುಕೊಂಡು ಯಜ್ಞವನ್ನು ಮಾಡಬೇಕು ।೪೧॥ ವೈದಿಕ ಕ್ರಿಯೆಗಳನ್ನು ಮತ್ತು ಶಾಸ್ತ್ರಪ್ರಮಾಣಗಳನ್ನು ನೋಡಿಕೊಂಡು ಯಜ್ಞವನ್ನು ಮಾಡಬೇಕು. ಅದರಂತೆ ವೇದಗಳ ಆಜ್ಞೆಯಂತೆ ದರ್ಶ, ಪೌರ್ಣಮಾಸ, ಚಾತುರ್ಮಾಸ ಯಾಗ ಇತ್ಯಾದಿ ಕೃತ್ಯಗಳನ್ನೂ ಕೂಡ ನಿಷ್ಕಾಮ ಭಾವನೆಯಿಂದ ಮಾಡಬೇಕು ।೪೨॥

ಐಸಾ ಮುನೀಶ್ವರ ವನವಾಸೀ । ತಪಸ್ವೀ ತೇಜೋರಾಶೀ । ತ್ಯಾಚಿಯೇ ಫಳಪ್ರಾಪ್ತೀಸೀ । ಸ್ವಯೇ ಹೃಷೀಕೇಶೀ ಸಾಂಗತ ।।೪೩।।

ಏವಂ ಚೀರ್ಣೇನ ತಪಸಾ ಮುನಿರ್ಧರ್ಮನಿಸಂತತಃ । ಮಾಂ ತಪೋಮಯಮಾರಾಧ್ಯ ಋಷಿಲೋಕಾದುಪೈತಿ ಮಾಮ್ ।।೯।।

ಅರ್ಥ:- ಈ ಪ್ರಕಾರದ ಕಠೋರ ತಪಸ್ಸಿನಿಂದ ಶರೀರದ ಸರ್ವ ಮಾಂಸವು ಒಣಗಿ ಹೋಗಿ ಕೇವಲ ನರ, ಎಲವು, ತೊಗಲು ಉಳಿದಿರುವುದು. ಇಂತಹ ಮುನಿಯು ತಪೋಮಯವಾಗಿರುವ ನನ್ನ ಆರಾಧನೆಯನ್ನು ಮಾಡಿ ಋಷಿಲೋಕಕ್ಕೆ ಮುಟ್ಟುವನು. ತದನಂತರ ನನ್ನಲ್ಲಿ ಬಂದು ಕೂಡವನು. ಕಾರಣ ತಪಸ್ಸು ನನ್ನ ಸ್ವರೂಪವು.

ಐಸೇ ವೇದೋಕ್ತ ತಪ ಸಾಚಾರ । ಆಸ್ತಿಕ್ಯ ಭಾವೇ ಅತ್ಯಾದರ । ಸಾಕ್ಷೇಪೇ ಕರಿತಾ ನಿರಂತರ । ಅಸ್ಥಿ ಮಾತ್ರ ದೇಹ ಉರೇ ।।೪೪।। ಶುಷ್ಕಶರೀರಪಾಂಜರಾ । ತ್ವಚೇನೇ ಝಾಂಕಿಲಿಯಾ ಶಿರಾ । ಪರೀ ಸಾಮರ್ಥ್ಯೇ ಅತಿ ಖರಾ । ನ ಸರೇ ಮಾಘಾರಾ ತಪೋನಿಷ್ಠೇ ।।೪೫।। ಐಸೇ ಯಾವಜ್ಜನ್ಮ ಕರಿತಾ ತಪ । ತೋ ಸಬಾಹ್ಯ ಝಾಲಾ ನಿಷ್ಪಾಪ । ಲಾಹೋನಿ ಜ್ಞಾನ ಸದ್ರೂಪ । ಮಾಝೇ ನಿಜಸ್ವರೂಪ ತೋ ಪಾವೇ ।।೪೬।। ಅವಶೇಷ ವಾಸನಾ ಅಸತಾ । ಸೂಕ್ಷ್ಮ ರೂಪ ಪ್ರತಿಬದ್ಧಕತಾ । ತಪಾಭಿಮಾನೇ ತತ್ತ್ವತಾ । ದೇಹಅಹಂತಾ ಅಣುಮಾತ್ರ ।।೪೭।। ಪರೀ ಫಳಾಶಾ ಪೋಟೀ ನಾಹೀ । ಐಸೇನಿ ನಿಮಾಲಾ ಜೋ ದೇಹೀ । ತೋ ಪಾವೋನಿ ಋಷಿಲೋಕಾಚ್ಯಾ ಠಾಯೀ । ತೇಥೋನಿ ಪಾಹೀ ಮಜ ಪಾವೇ ।।೪೮।। ಜೋ ಋಷಿಲೋಕಾತೇ ಪಾವಲಾ । ತೋ ಕ್ರಮೇ ಮುಕ್ತೀಚ್ಯಾ ಮಾರ್ಗಾ ಆಲಾ । ತೇಥೂನಿ ಕ್ರಮೇಂಚಿ ಮಜ ಪಾವಲಾ । ಯಾಪರೀ ಉದ್ಧರಲಾ ವನಸ್ಥ ।।೪೯।।

ಯಸ್ತ್ವೇತತ್ ಕೃಚ್ಛ್ರತಶ್ಚೀರ್ಣ ತಪೋ ನಿಃಶ್ರೇಯಸಂ ಮಹತ್ ।
ಕಾಮಾಯಾಲ್ಪೀಯಸೇ ಯುಂಜ್ಯಾದ್ ಬಾಲಿಶಃ ಕೋಽಪರಸ್ತತಃ ।।೧೦।।

ಅರ್ಥ:- ಪ್ರಿಯ ಉದ್ಧವಾ, ಈ ಯಾವ ಮಹಾ ಕಷ್ಟದಿಂದ ಪ್ರಾಪ್ತವಾಗುವ ಮತ್ತು ಮೋಕ್ಷವನ್ನು ಕೊಡುವ ತಪಶ್ಚರ್ಯವನ್ನು ಸ್ವರ್ಗ, ಬ್ರಹ್ಮಲೋಕ ಇತ್ಯಾದಿ ಚಿಕ್ಕ ಚಿಕ್ಕ ಫಲದ ಪ್ರಾಪ್ತಿಗಾಗಿ ಮಾಡುವರು. ಇವರಿಗಿಂತಲೂ ಹೆಚ್ಚಿನ ಮೂರ್ಖರು ಯಾರಿರುವರು ? ಆದಕ್ಕಾಗಿ ತಪಸ್ಸಿನ ಅನುಷ್ಠಾನವನ್ನು ನಿಷ್ಕಾಮಭಾವದಿಂದ ಮಾಡಬೇಕು.

ಏವಂ ವಾನಪ್ರಸ್ಥ ಅತಿಕಷ್ಟೀ । ತಪಾದಿಸಾಧನಸಂಕಟೀ । ಭೋಗಫಳಾಶೇಚ್ಯಾ ತುಟೀ । ಮೋಕ್ಷ ಪರಿಪಾಟೀ ಪಾವಲೇ ।।೫೦।। ಜೇ ಹಾತಾ ಆಲೇ ಮೋಕ್ಷಫಳ । ಆವಿರಿಂಚ್ಯಾದಿ ಮಂಗಳ । ತೇ ತಪಾದಿಸಾಧನ ನಿರ್ಮಳ । ಕಾಮಾರ್ಥ ಕೇವಳ ಕಲ್ಪಿತೀ ।।೫೧।।

ಹೀಗೆ ಯಾವ ತಪಶ್ಚರ್ಯವನ್ನು ಮಾಡುವ ತೇಜಸ್ವೀ, ಶ್ರೇಷ್ಠ, ಮುನೀಶ್ವರನು ವನದಲ್ಲಿ ವಾಸಿಸುವನೋ, ಆತನಿಗೆ ಯಾವ ಫಲಪ್ರಾಪ್ತಿಯಾಗುವುದೆಂಬುದನ್ನು ಈಗ ಶ್ರೀಕೃಷ್ಣನು ಹೇಳುತ್ತಿರುವನು ।।೪೩।।

ಈ ಪ್ರಕಾರವಾಗಿ ವೇದೋಕ್ತ ತಪಗಳನ್ನು ಶ್ರದ್ಧೆಯಿಂದ ಆದರ ಭಾವನೆಯಿಂದ ಸತತವಾಗಿ ಮಾಡುತ್ತಿರಲು ಆತನ ದೇಹದ ಕೇವಲ ಅಸ್ಥಿಪಂಜರವು ಮಾತ್ರ ಉಳಿದುಕೊಳ್ಳುವುದು ।।೪೪।। ಶುಶ್ಕಶರೀರದ ಅಸ್ಥಿಪಂಜರವು ತನ್ನ ತ್ವಚೆಯಿಂದ ನರನಾಡಿಗಳನ್ನು ಹೆದ್ದಿಸಿರುವುದು. ಹೀಗಿದ್ದರೂ ಕೂಡ ಅವರ ಅಂತರಿಕ ಸಾಮರ್ಥ್ಯವು ಮಾತ್ರ ಅತಿಶಯವಾಗಿ ಶ್ರೇಷ್ಠವಾಗಿರುವುದು. ತಪಶ್ಚರ್ಯದ ನಿಷ್ಠೆಯಿಂದ ಆತನು ಎಂದಿಗೂ ಹಿಂದಕ್ಕೆ ಸರಿಯಲಾರನು ।।೪೫।। ಆಯುಷ್ಯದ ಕೊನೆಯ ಕ್ಷಣದವರೆಗೂ ಹೀಗೆ ತಪವನ್ನು ಆಚರಿಸುತ್ತಿರಲು ಆತನು ಒಳಹೊರಗೆ ನಿಷ್ಪಾಪನಾಗಿಬಿಡುವನು. ಆತನಿಗೆ ಆತ್ಮಸ್ವರೂಪದ ಜ್ಞಾನವಾಗಿ ಆ ಯಾವ ನನ್ನ ಸ್ವರೂಪದಲ್ಲಿ ಐಕ್ಯ ಹೊಂದುವನು ।।೪೬।। ಒಂದುವೇಳೆ ಆತನಲ್ಲಿ ಸೂಕ್ಷ್ಮವಾದ ವಾಸನೆಗಳು ಉಳಿದುಕೊಂಡಿದ್ದರೆ ಮತ್ತು ತಪದ ಅಭಿಮಾನದಿಂದ ತನ್ನ ದೇಹದಲ್ಲಿ ಅಹಂಕಾರವು ಅಣುಮಾತ್ರವಿದ್ದರೆ, ಅದು ಸೂಕ್ಷ್ಮರೂಪದಿಂದ ಪ್ರತಿಬಂಧಕವಾಗಿರುವುದು ।।೪೭।। ಆದರೆ ಮನದಲ್ಲಿ ಯಾವುದೇ ಪ್ರಕಾರದ ಫಲದ ಅಪೇಕ್ಷೆಯನ್ನಿಡದೆ ಯಾರು ದೇಹವನ್ನು ಬಿಡುವನೋ, ಆತನು ಆರಂಭದಲ್ಲಿ ಋಷಿಲೋಕಕ್ಕೆ ಪಾದಾರ್ಪಣೆಯನ್ನು ಮಾಡಿ ಅಲ್ಲಿಂದ ಆತನು ನನ್ನತ್ತ ಬರುವವನಾಗುವನು ।।೪೮।। ಯಾವನು ಋಷಿಲೋಕಕ್ಕೆ ಹೋಗಿ ಮುಟ್ಟಕೊಳ್ಳುವನೋ, ಆತನು ಕ್ರಮವಾಗಿ ಮುಕ್ತಿಯ ಮಾರ್ಗಕ್ಕೆ ಹತ್ತಿಕೊಂಡಿರುವನು. ಅಲ್ಲಿಂದ ಕ್ರಮವಾಗಿ ನನ್ನಸ್ವರೂಪಕ್ಕೆ ಬಂದು ಕೂಡಿಕೊಳ್ಳುವನು. ಹೇ ಉದ್ಧವಾ, ಈ ಪ್ರಕಾರವಾಗಿ ವಾನಪ್ರಸ್ಥನ ಉದ್ಧಾರವಾಗುತ್ತಿರುವುದು ।।೪೯।।

ಈ ರೀತಿಯಲ್ಲಿ ವಾನಪ್ರಸ್ಥಾಶ್ರಮದ ಅಪಾರ ಕಷ್ಟಗಳನ್ನು ಸೋಸಿ ಮತ್ತು ತಪಾದಿಕ ಸಾಧನೆಗಳಿಂದ ಸಂಕಟಗಳನ್ನು ಸಹಿಸುತ್ತ ಯಾವನು ಯಾವುದೇ ಫಲದ ಅಪೇಕ್ಷೆಯನ್ನು ಮನದಲ್ಲಿ ಹಿಡಿಯುವುದಿಲ್ಲವೋ, ಆತನು ಮೋಕ್ಷಕ್ಕೆ ಪ್ರಾಪ್ತನಾಗುವನು ।।೫೦।। ಯಾವ ಈ ತಪಶ್ಚರ್ಯದಿಂದ ಸತ್ಯಲೋಕದವರೆಗೆ ಮೋಕ್ಷಫಲವು ಕೈಗೆ ಬರುವ ಯಾವ ನಿರ್ಮಲವಾದ ತಪಾದಿ ಸಾಧನೆಗಳ ಉಪಯೋಗವನ್ನು ಯಾರು ಕೇವಲ ತಮ್ಮ ಕಾಮನಾಪೂರ್ತಿಗಾಗಿ ಬಳಸುವರೋ ।।೫೧।।

ಜೇವೀ ಕಾ ಚಿಂತಾಮಣೀಚಿಯೇಸಾಠೀ । ಮಾಗೇ ಚಾತೀಲಾಗೀ ಖಾಪರಖುಂಟೀ । ಕಾ ಪರೀಸ ದೇವೋನಿ ಪಾಲಟೀ । ಕಾಳೀ ಗೋಮಟೀ ವೀಟ ಮಾಗೇ ।೫೨॥ ತೇವೀ ಮನುಷ್ಯಪಣಾಚಿಯೇ ಸ್ಥಿತೀ । ಉತ್ತಮ ಜನ್ಮೀ ತಪಃಪ್ರಾಪ್ತೀ । ತೇ ತಪಃಕ್ರಿಯಾ ವ್ಯರ್ಥ ಕರಿತೀ । ಕಾಮ ವಾಂಛಿತೀ ತೇ ಮೂರ್ಖ ।೫೩॥ ತ್ಯಾ ಮೂರ್ಖಾಚೇ ಮೂರ್ಖಪಣ । ಕಿತೀ ಸಾಂಗಾವೇ ಗಾ ಗಹನ । ಮೋಕ್ಷಪ್ರಾಪ್ತೀಚೇ ಸಾಧನ । ಕಾಮಲಿಪ್ಸಾ ಜಾಣ ನಾಶಿಲೇ ।೫೪॥ ಅಸೋ ಹೇ ಮೂರ್ಖಾಚೇ ಕಥನ । ವಾನಪ್ರಸ್ಥಾಚೇಂಚೇ ಲಕ್ಷಣ । ಪುಢೀಲ ಸಾಂಗೇನ ಸಂಪೂರ್ಣ । ಶಾಸ್ತ್ರಾರ್ಥ ಜಾಣ ಸುನಿಶ್ಚಿತ ।೫೫॥ ಜೋ ವಾನಪ್ರಸ್ಥ ಆಪಣ । ತಪಾದಿ ಸಾಧನೀ ಅತಿಕ್ಷೀಣ । ಝಾಲಾ ತರೀ ವೈರಾಗ್ಯಜ್ಞಾನ । ಜ್ಯಾಸೀ ಜಾಣ ನುಪಜೇಚಿ ।೫೬॥ ಪನ್ನಾಸ ವರ್ಷೇ ಗಾರ್ಹಸ್ಥ್ಯ । ದೋನೀ ದ್ವಾದಶೇ ವಾನಪ್ರಸ್ಥ । ಝಾಲಾ ತರೀ ಜೋ ಅಪ್ರಾಪ್ತ । ವೈರಾಗ್ಯಯುಕ್ತ ನಿಜಜ್ಞಾನಾ ।೫೭॥ ಆಯುಷ್ಯಾಚೇ ತೀನ ಭಾಗವರೀ । ವೇಂಚಲೇ ಗಾ ಐಶಾಪರೀ । ಆತಾ ಚತುರ್ಥ ಭಾಗ ಉರಲ್ಯಾವರೀ । ಕ್ಷೀಣ ಶರೀರೀ ಜರ್ಜರ ।೫೮॥ ಐಸೇ ಶರೀರ ಝಾಲಿಯಾ ಕ್ಷೀಣ । ಅಲ್ಪಹೀ ವೈರಾಗ್ಯ ಝಾಲ್ಯಾ ಜಾಣ । ಕರಾವೇ ಸನ್ಯಾಸಗ್ರಹಣ । ಕರ್ಮಾಚರಣ ಯಥಾಶಕ್ತೀ ।೫೯॥ ವಾನಪ್ರಸ್ಥಾಶ್ರಮೀ ಝಾಲ್ಯಾಹೀ । ನಿಃಶೇಷ ವೈರಾಗ್ಯ ಅಲ್ಪಹೀ । ಸರ್ವಥಾ ನುಪಜೇ ಜ್ಯಾಚ್ಯಾ ಠಾಯೀ । ತ್ಯಾಚಾ ಅಧಿಕಾರ ಪಾಹೀ ಹರೀ ಬೋಲೇ ।೬೦॥

ಯದಾಽಸೌ ನಿಯಮೇಽಕಲ್ಪೋ ಜರಯಾ ಜಾತವೇಪಥುಃ । ಆತ್ಮನ್ಯಗ್ನೀನ್ ಸಮಾರೋಪ್ಯ ಮಚ್ಚಿತ್ತೋಽಗ್ನಿಂ ಸಮಾವಿಶೇತ್ ।೧೧॥

ಅರ್ಥ:- ಪ್ರಿಯ ಉದ್ಧವಾ, ವಾನಪ್ರಸ್ಥನು ತನ್ನ ಆಶ್ರಮದ ನೇಮವನ್ನು ಪಾಲಿಸಿಕೊಂಡು ಹೋಗಲು ಅಸಮರ್ಥನಾದರೆ, ವಯಸ್ಸಾಗಿ ಶರೀರವು ನಡುಗುತ್ತಿದ್ದರೆ, ಆತನು ಆತ್ಮತತ್ವದಲ್ಲಿ ಅಗ್ನಿಯ ಸಮಾರೋಪವನ್ನು ಮಾಡಿ ನನ್ನಲ್ಲಿ ಚಿತ್ತವನ್ನಿಟ್ಟು ಅಗ್ನಿಯಲ್ಲಿ ಪ್ರವೇಶ ಮಾಡಬೇಕು.

ಸರ್ವಥಾ ವೈರಾಗ್ಯ ನುರೀದೇಹೀ । ಜರಾ ಆದಳಲೀ ಠಾಯೀಂಚೇ ಠಾಯೀ । ಸ್ವಧರ್ಮಾಚರಣೀ ಶಕ್ತಿ ನಾಹೀ । ಕಂಪ ಪಾಹೀ ಸರ್ವಾಂಗೀ ।೬೧॥ ಐಸಾ ವಾನಪ್ರಸ್ಥ ವನವಾಸೀ । ಆತ್ಮಸಮಾರೋಪ ಕರೂನಿ ಅಗ್ನೀಸೀ । ಮಾತೇ ದೃಢ ಧ್ಯಾಊನಿ ಮಾನಸೀ । ಅಗ್ನಿಪ್ರವೇಶೀ ರಿಘಾವೇ ।೬೨॥ ವಾನಪ್ರಸ್ಥಾಶ್ರಮೀ ವನಸ್ಥ । ಅತಿಶಯೇ ಝಾಲಾ ಜೋ ವಿರಕ್ತ । ತ್ಯಾಚೇ ಉತ್ತರವಿಧಿ ಸಮಸ್ತ । ಸ್ವಯೇ ಭಗವಂತ ಸಾಂಗತಸೇ ।೬೩॥

ಯದಾ ಕರ್ಮವಿಪಾಕೇಷು ಲೋಕೇಷು ನಿರಯಾತ್ಮಸು । ವಿರೋಗೋ ಜಾಯತೇ ಸಮ್ಯಙ್ ನ್ಯಸ್ತಾಗ್ನಿಃ ಪ್ರವ್ರಜೇತ್ತತಃ ।೧೨॥

ಅರ್ಥ:- ಕಾಮ್ಯ ಕರ್ಮಗಳಿಂದ ಫಲಸ್ವರೂಪವಾದ ಯಾವ ಲೋಕಗಳು ಪ್ರಾಪ್ತವಾಗುವವೋ, ಅವು ನರಕಸಮಾನ ದುಃಖರೂಪವಾಗಿವೆ ಎಂದು ತಿಳಿದು ಮನದಲ್ಲಿ ಲೋಕ-ಪರಲೋಕಗಳ ಸಂಬಂಧವಾಗಿ ಪೂರ್ಣ ವೈರಾಗ್ಯವು ನಿರ್ಮಾಣವಾಗಿದ್ದರೆ ಮಾತ್ರ ಆತನು ವಿಧಿಪೂರ್ವಕವಾಗಿ ಯಜ್ಞಾಗ್ನಿಗಳ ಪರಿತ್ಯಾಗಮಾಡಿ ಸನ್ಯಾಸವನ್ನು ಸ್ವೀಕರಿಸಬೇಕು.

ಅವರು ತಮ್ಮ ಕೈಯಲ್ಲಿರುವ ಚಿಂತಾಮಣಿಯನ್ನು ಕೊಟ್ಟು ಬೋಕಿಬಿಲ್ಲಿಗಳನ್ನು ತಯಾರಿಸಲು ಒಂದು ಕೊಯ್ಲಿ ಕೇಳುವ ಅಥವಾ ಪರೀಸಮಣಿಯನ್ನು ಕೊಟ್ಟು ಅತಿಕಪ್ಪಾಗಿರುವ ಇಟ್ಟಂಗಿಯನ್ನು ಬೇಡುವ ಮೂರ್ಖನಂತಾಗುವುದು ।೫೨॥ ಅದರಂತೆಯೇ ಶ್ರೇಷ್ಠವಾಗಿರುವ ಮನುಷ್ಯ ಜನ್ಮವು ಪ್ರಾಪ್ತವಾಗಿರಲು, ಮೇಲಾಗಿ ಉತ್ತಮ ತಪವು ದೊರಕಿರಲು ಮೋಕ್ಷಪ್ರಾಪ್ತಿಯ ಫಲವನ್ನು ವ್ಯರ್ಥವಾಗಿ ಕಳೆದುಕೊಂಡು ವಿಷಯಗಳ ಇಚ್ಛೆ ಮಾಡುವವರು ನಿಜವಾಗಿಯೂ ಮೂರ್ಖರೇ ಸರಿ ।೫೩॥ ಈ ಮೂರ್ಖರ ಮೂರ್ಖತನವನ್ನು ಏನೆಂದು ಹೇಳಬೇಕು? ಇವರು ವಿಷಯ ವಾಸನೆಯ ಲೋಭದಿಂದ ಮೋಕ್ಷ ಪ್ರಾಪ್ತಿಯ ಸಾಧನೆಗಳನ್ನು ಇಲ್ಲದಾಗಿ ಮಾಡಿಬಿಡುವರು ।೫೪॥ ಈಗ ಈ ಮೂರ್ಖ ಜನರ ಕಥೆಯು ಇರಲಿ. ವಾನಪ್ರಸ್ಥಾಶ್ರಮದ ಮುಂದಿನ ಶಾಸ್ತ್ರೋಕ್ತ ಮತ್ತು ಸವಿಸ್ತಾರವಾದ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ।೫೫॥ ಯಾವ ವಾನಪ್ರಸ್ಥನು ತಪಾದಿ ಸಾಧನೆಗಳಿಂದ ಅತಿಶಯವಾಗಿ ಕ್ಷೀಣಗೊಂಡಿದ್ದರೂ ಕೂಡ ಆತನ ಹೃದಯದಲ್ಲಿ ಜ್ಞಾನ ವೈರಾಗ್ಯವು ನಿರ್ಮಾಣವಾಗುವುದಿಲ್ಲ ।೫೬॥ ಐವತ್ತು ವರ್ಷಗಳನ್ನು ಗೃಹಸ್ಥಾಶ್ರಮದಲ್ಲಿ ಮತ್ತು ಇಪ್ಪತ್ನಾಲ್ಕು ವರ್ಷಗಳನ್ನು ವಾನಪ್ರಸ್ಥಾಶ್ರಮದಲ್ಲಿ ಕಳೆದರೂ ಕೂಡ ಈತನಿಗೆ ವೈರಾಗ್ಯಯುಕ್ತ ಜ್ಞಾನದ ಪ್ರಾಪ್ತಿಯಾಗಿರುವುದಿಲ್ಲ ।೫೭॥ ಆಯುಷ್ಯದ ಮೂರು ಭಾಗಗಳು ಈ ರೀತಿಯಾಗಿ ಮುಕ್ತಾಯವಾದವು ಮತ್ತು ಮುಂದೆ ನಾಲ್ಕನೆಯ ಭಾಗವು ಉಳಿದ ಆತನ ಶರೀರವು ಕ್ಷೀಣವಾಗಿ ಜರ್ಜರಿತವಾಗುವುದು ।೫೮॥ ಹೀಗೆ ಶರೀರವು ಅತಿಶಯವಾಗಿ ಕ್ಷೀಣವಾಗಲು ಅದರಲ್ಲಿ ಸ್ವಲ್ಪಾದರೂ ವೈರಾಗ್ಯವು ಉತ್ಪನ್ನವಾದರೆ ಆತನು ಸನ್ಯಾಸವನ್ನು ಸ್ವೀಕರಿಸಿ ಯಥಾಶಕ್ತಿ ಕರ್ಮಗಳನ್ನು ಮಾಡುತ್ತಿರಬೇಕು ।೫೯॥ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಯಾರಿಗೆ ಅಲ್ಪವೂ ಕೂಡ ವೈರಾಗ್ಯವು ಹುಟ್ಟುವುದಿಲ್ಲವೋ, ಅವನ ಅಧಿಕಾರವನ್ನು ಶ್ರೀಕೃಷ್ಣನು ಈಗ ಹೇಳುತ್ತಿರುವನು ।೬೦॥

ವಾರ್ಧಕ್ಯದಿಂದ ಶರೀರವು ಜರ್ಜರಿತವಾಗಿದೆ, ಶಕ್ತಿ ಕಡಿಮೆಯಾಗಿ ಕೈಯಿಂದ ಸ್ವಧರ್ಮವನ್ನು ಸಾಧಿಸದಾಗಿದೆ, ಶರೀರವು ಥರಥರ ನಡುಗುತ್ತಿದೆ. ಇಷ್ಟಾದರೂ ಕೂಡ ದೇಹ ವಿಷಯದಲ್ಲಿ ವಿರಕ್ತಿಯು ನಿರ್ಮಾಣಗೊಂಡಿರುವುದಿಲ್ಲ ।೬೧॥ ಇಂತಹ ಸ್ಥಿತಿಯಲ್ಲಿ ವಾನಪ್ರಸ್ಥಾಶ್ರಮಿಯು ವನದಲ್ಲಿದ್ದರೆ ಆತನು ಆತ್ಮಸ್ವರೂಪದಲ್ಲಿ ಅಗ್ನಿಯ ಸಮಾರೋಪವನ್ನು ಮಾಡಬೇಕು. ಮನದಲ್ಲಿ ನನ್ನ ದೃಢವಾದ ಧ್ಯಾನವನ್ನು ಮಾಡುತ್ತ ಅಗ್ನಿಪ್ರವೇಶವನ್ನು ಮಾಡಬೇಕು ।೬೨॥ ಯಾವ ವಾನಪ್ರಸ್ಥಾಶ್ರಮಿಯು ವನದಲ್ಲಿದ್ದುಕೊಂಡು ಅತಿಶಯವಾಗಿ ವೈರಾಗ್ಯವನ್ನು ಧರಿಸಿರಲು ಆತನು ಮುಂದೆ ಹೇಗೆ ವರ್ತಿಸಬೇಕೆಂಬುದನ್ನು ಈಗ ಸ್ವತಃ ಭಗವಂತನು ಹೇಳುತ್ತಿರುವನು ।೬೩॥

ವಾನಪ್ರಸ್ಥೀ ಅನುಷ್ಠಾ । ತೇಣೇ ವೈರಾಗ್ಯ ಅತಿಗಹನ । ಇಂದ್ರಚಂದ್ರಾದಿಬ್ರಹ್ಮಸದನ । ನಿರಯಾಸಮಾನ ಜೋ ಮಾನೀ ॥೧೪॥ ಐಸಾ ದೃಢ ವೈರಾಗ್ಯ ಉಠಾವಾ । ತೇಣೇ ವಿಹಿತಾಗ್ನಿ ಬೋಳವಾವಾ । ತ್ಯಾಗ ಕರೂನಿ ಆಘವಾ । ಅಂಗೀಕಾರಾವಾ ಸನ್ಯಾಸ ॥೧೫॥ ತೇ ಸನ್ಯಾಸಗ್ರಹಣಸ್ಥಿತೀ । ಯಥಾಶಾಸ್ತ್ರ ಯಥಾಪದ್ಧತೀ । ಸ್ವಯೇ ಸಾಂಗತಾಹೇ ಶ್ರೀಪತೀ । ಯಥಾನಿಗುತಿ ವಿಹಿತಾರ್ಥೇ ॥೧೬॥

ಇಷ್ಟ್ವಾ ಯಥೋಪದೇಶಂ ದತ್ತ್ವಾ ಸರ್ವಸ್ವ ಮೃತ್ವಿಜೇ । ಅಗ್ನಿನ್ ಸ್ವಪ್ರಾಣ ಆವೇಶ್ಯ ನಿರಪೇಕ್ಷ: ಪರಿವ್ರಜೇತ್ ॥೧೩॥

ಅರ್ಥ:- ಯಾವ ವಾನಪ್ರಸ್ಥನು ಸನ್ಯಾಸಿಯಾಗಬೇಕೆಂದು ಇಚ್ಛಿಸಿದರೆ ಆತನು ಪ್ರಾರಂಭದಲ್ಲಿ ವೇದವಿಧಿಯಂತೆ ಎಂಟು ಪ್ರಕಾರಗಳ ಶ್ರಾದ್ಧಗಳನ್ನು ಮತ್ತು ಪ್ರಾಜಪತ್ಯ ಯಜ್ಞದಿಂದ ಯಜನವನ್ನು ಮಾಡಿ ಋತ್ವಿಜರಿಗೆ ತನ್ನ ಎಲ್ಲವನ್ನೂ ಕೊಟ್ಟು ಅಗ್ನಿಯ ಆತ್ಮದಲ್ಲಿ ಸಮಾರೋಪವನ್ನು ಮಾಡಬೇಕು. ಹಾಗೆಯೇ ಪುತ್ರ, ವಿತ್ತ ಮತ್ತು ಲೋಕಗಳ ಇಚ್ಛೆಯ ತ್ಯಾಗವನ್ನು ಮಾಡಿ ಸನ್ಯಾಸ ಗ್ರಹಣವನ್ನು ಮಾಡಬೇಕು.

ಅಷ್ಟಶ್ರಾದ್ಧಾದಿ ವಿಧಾನ । ಪ್ರಾಜಾಪತ್ಯನಾಮೇಷ್ಟಿಸಾಧನ । ಮಜ ಭಗವಂತಾತೇ ಯಜೂನ । ಸರ್ವಸ್ವದಾನ ಋತ್ವಿಜಾ ॥೧೭॥ ಮುಖ್ಯತ್ವೇ ಮೂರ್ತ ಜೋ ಅಗ್ನೀ । ತೋ ನಿಜಹೃದಯೀ ಸಂಸ್ಥಾಪೂನೀ । ಆಶಾ ನಿಃಶೇಷ ಛೇದೂನೀ । ಸನ್ಯಾಸ ಕರೂನೀ ನಿರಪೇಕ್ಷ ॥೧೮॥ ಸನ್ಯಾಸ ಕರಿತೇ ಠಾಯೀ । ವಿಘ್ನೇ ಅಪಾರ ಉಠತೀ ಪಾಹೀ । ತೀ ರಗಡೂನಿಯಾ ಪಾಯೀ । ಸನ್ಯಾಸ ತಿಹೀ ಕರಾವಾ ॥೧೯॥

ವಿಪ್ರಸ್ಯ ವೈ ಸನ್ಯಾಸತೋ ದೇವಾ ದಾರಾದಿರೂಪಿಣ: । ವಿಘ್ನಾನ್ಕುರ್ವಂತ್ಯಯಂ ಹ್ಯಸ್ಮಾನಾಕ್ರಮ್ಯ ಸಮಿಯಾತ್ ಪರಮ್ ॥೧೪॥

ಅರ್ಥ:- ಹೇ ಉದ್ಧವಾ, ಯಾವ ಸಮಯದಲ್ಲಿ ಬ್ರಾಹ್ಮಣನು ಸನ್ಯಾಸವನ್ನು ಸ್ವೀಕರಿಸುತ್ತಿದ್ದಾಗ ದೇವತೆಯರು ಸ್ತ್ರೀಪುತ್ರಾದಿ ರೂಪಧಾರಣೆಯನ್ನು ಮಾಡಿ ಸನ್ಯಾಸಗ್ರಹಣೆಯ ಕಾಲದಲ್ಲಿ ಅನೇಕ ಪ್ರಕಾರದ ವಿಘ್ನಗಳನ್ನು ಒಡ್ಡುವರು. ಇವರು ಹೀಗೆ ಹೇಳುವರು, ಇದು ನಮ್ಮ ಅವಹೇಳನವಾಗಿದೆ, ನಮಗೆಲ್ಲರಿಗೂ ಬಿಟ್ಟುಕೊಟ್ಟು ಪರಮೇಶ್ವರನ ಪ್ರಾಪ್ತಿಗಾಗಿ ಈತನು ಹೊರಟಿರುವನು.

ಸನ್ಯಾಸ ಕರಿತಾ ತೋ ಬ್ರಾಹ್ಮಣ । ತ್ಯಾಸೀ ಸಮಸ್ತ ದೇವ ಮಿಳೋನ । ನಾನಾ ಸ್ತ್ರೀಯಾದಿ ರೂಪೇ ಜಾಣ । ಅನಂತ ವಿಘ್ನೇ ಕರೂ ಯೇತೀ ॥೨೦॥ ವಿಘ್ನ ಕರಾವಯಾ ಕಾರಣ । ಮನುಷ್ಯ ದೇವಾಂಚಾ ಪಶು ಜಾಣ । ಸದಾ ಅರ್ಪೀ ಬಳಿದಾನ । ದೇವಾಅಧೀನ ಹಾ ಸರ್ವದಾ ॥೨೧॥ ತೋ ಬಳೀ ನೇದೀ ಯೇಥೂನಿ ಆತಾ । ಪಾಯ ದೇಊನಿ ಆಮುಚೇ ಮಾಥಾ । ಘೇಊ ಪಾಹೇ ಬ್ರಾಹ್ಮಸಾಯುಜ್ಯತಾ । ಯಾಲಾಗೀ ಸರ್ವಥಾ ವಿಘ್ನೇ ಕರಿತೀ ॥೨೨॥ ತೇಥ ವೈರಾಗ್ಯಬಳೇ ತತ್ತ್ವತಾ । ವಿಘ್ನೇ ಹಾಣೂನಿಯಾ ಲಾತಾ । ಅವಗಣೂನಿ ದೇವಾ ಸಮಸ್ತಾ । ಸನ್ಯಾಸ ಸರ್ವಥಾ ಕರಾವಾ ॥೨೩॥

ವಾನಪ್ರಸ್ಥಾಶ್ರಮದಲ್ಲಿ ಅತ್ಯಂತ ಘೋರ ತಪಶ್ಚರ್ಯವನ್ನು ಮಾಡಲಾಗಿರುವುದು. ಆದರಿಂದ ಪ್ರಖರವಾದ ವೈರಾಗ್ಯವು ನಿರ್ಮಾಣವಾಗಿರುವುದು. ಆದ್ದರಿಂದ ಆತನು ಇಂದ್ರಲೋಕ, ಚಂದ್ರಲೋಕ, ಸತ್ಯಲೋಕ ಇತ್ಯಾದಿ ಲೋಕಗಳನ್ನು ನರಕಸಮಾನವೆನ್ನುವನು ॥೧೪॥ ಇಂತಹ ಪ್ರಖರವಾದ ವೈರಾಗ್ಯವು ಅಂತಃಕರಣದಲ್ಲಿ ನಿರ್ಮಾಣವಾದ್ದರಿಂದ ಆತನು ವಿಹಿತವಾದ ಅಗ್ನಿಯ ಸಮಾರೋಪವನ್ನು ಮಾಡಿ ಮತ್ತು ಎಲ್ಲವನ್ನೂ ತ್ಯಾಗ ಮಾಡಿ ಸನ್ಯಾಸವನ್ನು ಸ್ವೀಕರಿಸಬೇಕು ॥೧೫॥ ಸನ್ಯಾಸಗ್ರಹಣದ ಯಥಾಶಾಸ್ತ್ರ ಪದ್ಧತಿಯನ್ನು ಸಂಪ್ರದಾಯಾನುಸಾರವಾಗಿ ಶ್ರೀಕೃಷ್ಣನು ಯಥಾರ್ಥ ರೀತಿಯಲ್ಲಿ ಹೇಳುತ್ತಿರುವನು ॥೧೬॥

ಎಂಟು ಪ್ರಕಾರಗಳ ಶ್ರಾದ್ಧಗಳನ್ನು ಯಥಾವಿಧಿಯಾಗಿ ಮಾಡಬೇಕು. ಮತ್ತು ಪ್ರಾಜಪತ್ಯ ನಾಮದ ಯಜ್ಞವನ್ನು ಮಾಡಿ,, ಭಗವಂತನ ಪ್ರೀತ್ಯರ್ಥಕ್ಕಾಗಿ ಒಂದು ಯಜ್ಞವನ್ನು ಮಾಡಿ ಋತ್ವಿಜರಿಗೆ ಸರ್ವವನ್ನೂ ದಾನವಾಗಿ ಕೊಡಬೇಕು ॥೧೭॥ ಮುಖ್ಯವಾಗಿ ತಾನು ಸಾಕ್ಷಾತ್ಕರಿಸಿದ ಅಗ್ನಿಯನ್ನು ತನ್ನ ಹೃದಯದಲ್ಲಿ ಸ್ಥಾಪಿಸಿಕೊಂಡು ಸರ್ವ ಪ್ರಕಾರದ ಆಶೆಯನ್ನು ತ್ಯಜಿಸಿ ಪರಿಪೂರ್ಣವಾಗಿ ನಿರಪೇಕ್ಷನಾಗಬೇಕು. ಆಗ ಸನ್ಯಾಸವನ್ನು ಸ್ವೀಕರಿಸಬೇಕು ॥೧೮॥ ಹೀಗೆ ಸನ್ಯಾಸವನ್ನು ಸ್ವೀಕರಿಸುತ್ತಿರುವಾಗ್ಗೆ, ಸಾವಿರಾರು ಪ್ರಕಾರಗಳ ವಿಘ್ನಗಳು ನಿರ್ಮಾಣವಾಗುವುವು. ಈ ಎಲ್ಲವನ್ನೂ ತನ್ನ ಕಾಲಿನಡಿಯಲ್ಲಿ ತುಳಿದು ಸನ್ಯಾಸವನ್ನು ಗ್ರಹಣ ಮಾಡಬೇಕು ॥೧೯॥

ಯಾವ ಬ್ರಾಹ್ಮಣನು ಸನ್ಯಾಸವನ್ನು ಸ್ವೀಕರಿಸಲು ಇಚ್ಛೆಪಡುವನೋ, ಆತನ ಮಾರ್ಗದಲ್ಲಿ ಅನೇಕ ಪ್ರಕಾರಗಳ ವಿಘ್ನಗಳನ್ನು ನಿರ್ಮಾಣಮಾಡಲು ಎಲ್ಲ ದೇವತೆಗಳವರು ಕೂಡಿ ಸ್ತ್ರೀಯರ ರೂಪವನ್ನು ಧರಿಸಿ ಬರುವರು ॥೨೦॥ ಈತನಿಗೆ ಹೀಗೆ ವಿಘ್ನಗಳನ್ನು ಒಡ್ಡಲು ಕಾರಣವೇನೆಂದರೆ, ಮನುಷ್ಯನು ದೇವತೆಗಳ ಪಶುವಾಗಿರುವನು. ಈತನು ಯಾವಾಗಲೂ ದೇವತೆಗಳಿಗೆ ಬಲಿಗಳನ್ನು ಅರ್ಪಿಸುತ್ತ ಸತತವಾಗಿ ಅವರ ಆಧೀನನಾಗಿರುವನು ॥೨೧॥ ಯಾವ ಈ ಮನುಷ್ಯನು ಸನ್ಯಾಸವನ್ನು ಸ್ವೀಕರಿಸಲು ಇನ್ನು ಮುಂದೆ ತಮಗೆ ಬಲಿಗಳನ್ನು ಕೊಡಲಾರನು. ಬದಲಾಗಿ ನಮ್ಮ ತಲೆಗಳ ಮೇಲೆ ತನ್ನ ಕಾಲುಗಳನ್ನಿಟ್ಟು ಬ್ರಹ್ಮಪದವನ್ನು ಪಡೆಯುವವನಾಗಿರುವುದನ್ನು ತಿಳಿದು ದೇವತೆಗಳು ಈತನಿಗೆ ಯಾವಾಗಲೂ ವಿಘ್ನಗಳನ್ನು ಮಾಡುತ್ತಿರುವರು ॥೨೨॥ ಇಂತಹ ಪ್ರಸಂಗದಲ್ಲಿ ವೈರಾಗ್ಯದ ಬಲದಿಂದ ವಿಘ್ನಗಳನ್ನು ದೂರಮಾಡಬೇಕು ಮತ್ತು ದೇವತೆಗಳವರಿಗೆ ಮಗ್ಗಲಿಗೆ ಸರಿಸಿ ತಾನು ಶಾಂತತೆಯಿಂದ ಸನ್ಯಾಸವನ್ನು ಗ್ರಹಣ ಮಾಡಬೇಕು ॥೨೩॥

ಐಸಾ ವೈರಾಗ್ಯೇ ಉದ್ಭಟ । ವಿವೇಕಜ್ಞಾನೇ ಅತಿಶ್ರೇಷ್ಠ । ಸನ್ಯಾಸ ಗ್ರಹಣ ವರಿಷ್ಠ । ವಿಧಿನಿಷ್ಠ ವಿಭಾಗೇ ॥೮೪॥ ಏವಂ ಝಾಲ್ಯಾ ಸನ್ಯಾಸಗ್ರಹಣ । ತ್ಯಾಚೇ ವಿಧೀಚೇ ವಿಧಿವಿಧಾನ । ಸ್ವಯೇ ಸಾಂಗತಾಹೇ ನಾರಾಯಣ । ಸ್ವಧರ್ಮಲಕ್ಷಣ ಸನ್ಯಾಸಿಯಾ ॥೮೫॥

ಬಿಭೃಯಾಚ್ಚೆನ್ಮುನಿರ್ವಾಸಃ । ಕೌಪೀನಾಚ್ಛಾದನಂ ಪರಮ್ । ತ್ಯಕ್ತಂ ನ ದಂಡಪಾತ್ರಾಭ್ಯಾಮನ್ಯತ್ಕಿಂಚಿದನಾಪದಿ ॥೧೫॥

ಅರ್ಥ:- ಸನ್ಯಾಸಿಯು ವಸ್ತ್ರವನ್ನು ಧರಿಸಬೇಕೆಂದರೆ ಆತನು ಕೇವಲ ಲಂಗೋಟಿಯನ್ನು ಕಟ್ಟಿಕೊಂಡು ಚಿಕ್ಕ ವಸ್ತ್ರದಿಂದ ಅದನ್ನು ಮುಚ್ಚಬೇಕು. ಹಾಗೆಯೇ ಆಶ್ರಮಕ್ಕೆ ಉಚಿತವಾದ ದಂಡ, ಕಮಂಡಲ ಹೊರತಾಗಿ ಅನ್ಯ ಯಾವುದೇ ವಸ್ತುಗಳನ್ನು ತನ್ನಲ್ಲಿ ಇರಕೂಡದು. ಈ ನಿಯಮವು ಆಪತ್‌ಕಾಲವನ್ನು ಬಿಟ್ಟು ಇತರ ಸರ್ವಕಾಲಕ್ಕೂ ಇರುವುದು.

ಭೂತಾ ಅಬಯದಾನಪುರಸ್ಕರ । ಸಂಕಲ್ಪಪೂರ್ವಕ ಪ್ರಣವೋಚ್ಚಾರ । ತೈ ಉರಲೇ ದಿಸೇ ದೇಹಮಾತ್ರ । ಸರ್ವಸ್ವ ಯೇರ ತ್ಯಾಗಿಲೇ ॥೮೬॥ ಜೋ ಗುರುವಾಕ್ಯಶ್ರವಣಾಸರಿಸಾ । ವಸ್ತೂಚಿ ಹೋಊನಿ ಠೇಲಾ ಆಪೈಸಾ । ಉಡಾಲಾ ದೇಹಬುದ್ಧೀಚಾ ವಳಸಾ । ತುಟಲಾ ಫಾಂಸಾ ಕರ್ಮಾಚಾ ॥೮೭॥ ತ್ಯಾಸೀವಿಧಿ ವಿಧಾನಕರ್ತವ್ಯತಾ । ಬೋಲೋಚಿ ನಯೇ ಗಾ ಸರ್ವಥಾ । ನವನೀತ ಆಲಿಯಾ ಹಾತಾ । ರಿತೇ ತಾಕ ಆತಾ ಕೋಣ ಘುಸಳೀ ॥೮೮॥ ಕಾಪೂರ ಮಿಳಾಲಿಯಾ ವನ್ಹೀ । ತೋ ಪರತೇನಾ ಕಾಪೂರಪಣೀ । ತೇವೀ ವಸ್ತು ಝಾಲಾ ಜೋ ಗುರುಶ್ರವಣೀ । ತೋ ವಿಧಿಕಿಂಕರಪಣೀ ವರ್ತೇನಾ ॥೮೯॥ ಪರೀ ಗುರುವಾಕ್ಯೇ ತತ್ತ್ವತಾ । ಜ್ಯಾಸಿ ಐಶೀ ಹೇ ಅವಸ್ಥಾ । ಸತ್ಯ ನ ಬಾಣೇಚಿ ಸರ್ವಥಾ । ತ್ಯಾಚೀ ವಿಧಾನತಾ ಅವಧಾರೀ ॥೯೦॥ ಗುರುವಾಕ್ಯಾಚೇ ಕರಿತಾ ಮನನ । ನಾಗವೇಪಣೀ ಲಾಜೇ ಮನ । ತರೀ ಲಿಂಗಮಾತ್ರ ಆಚ್ಛಾದನ । ಕೌಪೀನ ಜಾಣ ಧರಾವೀ ॥೯೧॥ ಇತುಕೇನ ನಿರ್ವಾಹ ನ ಸರೇ । ಐಸೇ ಜಾಣವಲೇ ಜೈ ಪುರೇ । ತೈ ವಸ್ತ್ರಖಂಡ ದುಸರೇ । ಸ್ವಾಧೀಕಾರೇ ಧರಾವೇ ॥೯೨॥ ದಂಡ ಕಮಂಡಲು ಜಂವ ಆಹೇ । ತಂವ ಕೌಪೀನ ಬಹಿವಾಸ ರಾಹೇ । ದಂಡತ್ಯಾಗಾಸವೇ ಪಾಹೇ । ತ್ಯಾಗ ಹೋಯೇ ವಸ್ತ್ರಾಂಚಾ ॥೯೩॥ ಆಪತ್ತೀಕಾಳೀ ಸನ್ಯಾಸಾಶೀ । ರೋಗ ಲಾಗಲಾ ಹೋಯ ಜ್ಯಾಸೀ । ಕಾ ಜರೇನೇ ವ್ಯಾಪಿಲೇ ದೇಹಾಸೀ । ತೈ ಜೇ ಲಾಗೇಲ ತ್ಯಾಸೀ ತೇ ದ್ಯಾವೇ॥೯೪॥ ಗುರುವಾಕ್ಯೇ ಶ್ರವಣ ಮನನ । ಐಸೇ ಸಾಧೀ ಜೋ ಸಾಧನ । ತ್ಯಾ ಸಾಧಕಾಚೇ ಲಕ್ಷಣ ಸ್ವಯೇ ಶ್ರೀಕೃಷ್ಣ ಸಾಂಗತ ॥೯೫॥

ಈ ಪ್ರಕಾರವಾಗಿ ಪ್ರಖರವಾದ ವೈರಾಗ್ಯದಿಂದ, ವಿವೇಕನಿಷ್ಠೆಯಿಂದ ಮತ್ತು ಶಾಸ್ತ್ರವಿಧಿಗಳಲ್ಲಿ ತತ್ಪರನಾಗಿ ಸನ್ಯಾಸವನ್ನು ಸ್ವೀಕರಿಸುವವನು ಅತ್ಯಂತ ಶ್ರೇಷ್ಠನಾಗಿರುವನು ॥೮೪॥ ಈ ಪ್ರಕಾರವಾಗಿ ಸನ್ಯಾಸದೀಕ್ಷೆಯನ್ನು ಪಡೆದುಕೊಂಡಾಗ ಆತನು ವಿಧಿಪೂರ್ವಕವಾಗಿ ಹೇಗೆ ವರ್ತಿಸಬೇಕೆಂಬುವ ಯಾವ ಸನ್ಯಾಸಿಯ ಸ್ವಧರ್ಮಲಕ್ಷಣಗಳನ್ನು ಸ್ವತಃ ನಾರಾಯಣನು ಹೇಳುತ್ತಿರುವನು ॥೮೫॥

ಪ್ರಾಣಿಮಾತ್ರರಿಗೆ ಅಭಯದಾನವನ್ನು ಕೊಡುವುದಕ್ಕಾಗಿ ಸಂಕಲ್ಪಪೂರ್ವಕ ಪ್ರಣವೋಚ್ಚಾರ ಮಾಡಿದನಂತರ ಆತನ ದೇಹಮಾತ್ರವು ಉಳಿದದ್ದು ಕಾಣುವುದು. ಇತರ ಎಲ್ಲವನ್ನೂ ಈತನು ಪೂರ್ವದಲ್ಲಿಯೇ ತ್ಯಾಗ ಮಾಡಿರುವನು ॥೮೬॥ ಯಾವ ಗುರುಗಳ ಮಂತ್ರ ಉಪದೇಶದ ಜೊತೆಯಲ್ಲಿಯೇ ಆತನು ಸ್ವಭಾವತಃವೇ ಬ್ರಹ್ಮಸ್ವರೂಪನಾಗಿಬಿಡುವನು. ಆತನ ದೇಹಬುದ್ಧಿಯ ಬಂಧನವು ಎಂದೋ ಮುರಿದು ಹೋಗಿರುವದು. ಕರ್ಮದ ಬಲೆಯು ಹರಿದು ಹೋಗಿರುವುದು ॥೮೭॥ ಈತನು ಶಾಸ್ತ್ರವು ಹೇಳಿರುವ ಕರ್ತವ್ಯ ವಿಧಿವಿಧಾನಗಳ ಮಾತನ್ನೂ ಕೂಡ ಆಡಲಾರನು. ಒಂದುಸಾರೆ ಬೆಣ್ಣೆಯು ಕೈಗೆ ಬರಲು ಆಗ ಮಜ್ಜಿಗೆಯನ್ನು ಯಾರು ಕಡೆಯುತ್ತ ಕುಳಿತುಕೊಳ್ಳುವರು? ॥೮೮॥ ಕರ್ಪೂರವು ಒಂದುಸಲ ಅಗ್ನಿರೂಪವನ್ನು ಪ್ರಾಪ್ತಮಾಡಿಕೊಳ್ಳಲು, ಪುನಃ ಅದು ತನ್ನ ಮೂಲಸ್ವರೂಪದ ಕರ್ಪೂರಕ್ಕೆ ಬರಲು ಸಾಧ್ಯವೇ ಇಲ್ಲ. ಅದರಂತೆ ಒಂದು ಸಲ ಗುರುಗಳು ಉಪದೇಶದಿಂದ ಆತನಿಗೆ ಆತ್ಮಾನಾತ್ಮ ವಿವೇಕದ ತಿಳುವಳಿಕೆ ಪ್ರಾಪ್ತವಾಗಲು, ಆಗ ಆತನ ವಿಧಿಗಳ ಅಂಕಿತನಾಗಿ ಇರಲು ಸಾಧ್ಯವಿಲ್ಲ ॥೮೯॥ ಆದರೆ ಗುರುಗಳ ಉಪದೇಶದಿಂದ ಯಾರ ಮನಸ್ಸಿನಲ್ಲಿ ಈ ಅವಸ್ಥೆಯು ಸಂಪೂರ್ಣವಾಗಿ ಮಾಡಲಾರದಕ್ಕೆ, ಆ ವಿಷಯವನ್ನು ಕುರಿತು ಆತನಿಗಾಗಿ ವಿಧಾನವನ್ನು ಈಗ ಹೇಳುವೆನು, ಕೇಳು ॥೯೦॥ ಗುರುಗಳ ವಚನಗಳ ಮನನವನ್ನು ಮಾಡುತ್ತಿರಲು ಯಾರಿಗೆ ತನ್ನ ಶರೀರದ ನಾಚಿಕೆಯಾಗುವದೋ, ಆತನು ಕೇವಲ ಲಿಂಗವನ್ನು ಮುಚ್ಚಿಕೊಳ್ಳುವದಕ್ಕಾಗಿ ಕೌಪೀನವನ್ನು ಧರಿಸಬೇಕು ॥೯೧॥ ಇಷ್ಟರಿಂದಲೇ ಆತನಿಗೆ ಯೋಗ್ಯ ಅನಿಸದಿದ್ದರೆ ತನಗೆ ಯೋಗ್ಯವಾದ ಬೇರೆ ವಸ್ತ್ರದ ತುಂಡನ್ನು ಧರಿಸಿ ತನ್ನ ಶರೀರವನ್ನು ಮುಚ್ಚಿಕೊಳ್ಳಬೇಕು ॥೯೨॥ ಎಲ್ಲಿಯವರೆಗೆ ಸನ್ಯಾಸಿಯ ಹತ್ತಿರ ದಂಡ ಮತ್ತು ಕಮಂಡಲ ಇರುವುದೋ, ಅಲ್ಲಿಯವರೆಗೆ ಆತನು ಲಂಗೋಟಿ ಮತ್ತು ಛಾಟಿ ಅಂದರೆ ಕ್ಯಾವಿ ಹೊದಿಕೆ ಬಳಸಬೇಕು. ಆದರೆ ಯಾವ ಸಮಯಕ್ಕೆ ದಂಡದ ತ್ಯಾಗವಾಗವುದೋ ಆಗ ಅದರ ಜೊತೆಯಲ್ಲಿಯೇ ವಸ್ತ್ರದ ತ್ಯಾಗವನ್ನೂ ಕೂಡ ಮಾಡಬೇಕು ॥೯೩॥ ಸನ್ಯಾಸಿಗೆ ವಿಪತ್ತು ಕಾಲವು ಒದಗಲು ಅಥವಾ ರೋಗವು ಬರಲು ಅಥವಾ ವಾರ್ಧಕ್ಯದಿಂದ ದೇಹವು ಜರ್ಜರಿತವಾಗಲು, ಆಗ ಮಾತ್ರ ಆತನಿಗೆ ಬೇಕಾದಷ್ಟು ಕೊಡಬೇಕಾಗುವುದು ॥೯೪॥ ಗುರುವಚನದಂತೆ ಶ್ರವಣ ಮತ್ತು ಮನನವು ಸಾಧಿಸುತ್ತಿರುವ ಆ ಯಾವ ಸಾಧಕನ ಲಕ್ಷಣವನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೯೫॥

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್ । ಸತ್ಯಪೂತಾಂ ವದೇದ್ವಾಂಚಂ ಮನಃಪೂತಂ ಸಮಾಚರೇತ್ ॥೧೬॥

ಅರ್ಥ:- ಕಾಲುಗಳ ಕೆಳಗಡೆಯಲ್ಲಿ ಜೀವಜಂತುಗಳು ಪುಡಿಪುಡಿಯಾಗಬಾರದು. ಅದಕ್ಕಾಗಿ ಕೆಳಗೆ ನೋಡುತ್ತ ಹೆಜ್ಜೆಗಳನ್ನಿಡಬೇಕು. ವಸ್ತ್ರದಿಂದ ಸೋಸಿ ನೀರನ್ನು ಕುಡಿಯಬೇಕು. ಸತ್ಯವಾದ ಪವಿತ್ರವಾದ ವಾಣಿಯನ್ನು ಉಚ್ಚರಿಸಬೇಕು. ಶರೀರದಿಂದ ಮಾಡುವ ಯಾವುದೇ ಕರ್ಮವು ವಿಚಾರಪೂರ್ವಕವಾಗಿರಬೇಕು. ಶುದ್ಧವಾದ ಆಚರಣೆ ಮಾಡಬೇಕು.

ದೃಷ್ಟಿ ಠಾಯೀ ಠೇವೂನಿ ಜಾಣ । ಪೃಥ್ವೀ ಪಾಹೂನಿ ಪಾವನ । ಹಂಸಗತೀ ಕರೀ ಗಮನ । ಅನುಸಂಧಾನ ನಿಜವೃತ್ತೀ ॥೮೬॥ ಜೇಥ ಜೀವಸಂಪದಾ ದೃಷ್ಟೀ ಪಡೇ । ತೈ ಪ್ರಾಣ ಗೇಲ್ಯಾ ನ ಚಲೇಪುಢೇ । ಜೀವಾಂಚೇ ಕಾಢೂನಿ ಕಡೇ । ಪಾಊಲ ಪಡೇ ಅತಿಶುದ್ಧ ॥೮೭॥ ಆಧೀಂಚ ಪವಿತ್ರ ಗಂಗಾಜಳ । ತ್ಯಾಚಾ ನಿರ್ಮಳ ವಸ್ತ್ರೀ ನಿರಸೋನಿ ಮಳ । ಯಾಪರೀ ಕರೋನಿಯಾ ನಿರ್ಮಳ । ಗಂಗಾಜಳ ಸೇವಿತೀ ॥೮೮॥ ಜ್ಯಾಚೇ ವಾಚೇಚೇ ಆಳಾ । ಅಸತ್ಯಾಚ್ಯಾ ತೃಣಶಾಳಾ। ಜಾಳೂನಿ ವೈರಾಗ್ಯಜ್ವಾಳಾ । ಸತ್ಯಾಚಾ ಉಗವಲಾ ಕಲ್ಪದ್ರುಮ ॥೮೯॥ ಜ್ಯಾ ಕಲ್ಪದ್ರುಮಾಚೀ ವಚನಫಳೇ । ಪರಿಪಕ್ವೇ ಆಣಿ ಸೋಜ್ವಳೇ । ಮಧುರರಸೇಸೀ ರಸಾಳೇ । ಅತಿನಿರ್ಮಳೇ ಘಮಘಮಿತೇ ॥೯೦॥ ಜೇ ಶ್ರವಣೇ ಅತಿಗೋಡ । ಪುರವೀ ಶ್ರೋತ್ಯಾಂಚೇ ಕೋಡ । ನಿವವೀ ಜೀವಾಚೀ ಚಾಡ । ಸತ್ಯ ಸುರವಾಡ ಹಾ ವಾಚೇಚಾ ॥೯೧॥ ಸಹಜೇ ಸನ್ಯಾಶಾಚೇ ಧ್ಯಾನ । ''ಅಹಮೇವ ನಾರಾಯಣ'' । ತೇ ದೃಢ ಧರೋನಿ ಅನುಸಂಧಾನ । ಪವಿತ್ರ ಮನ ಕರಾವೇ ॥೯೨॥ ಮನಕರೋನಿ ಪಾವನ । ಪೃಥ್ವೀ ವಿಚರಾವೀ ಜಾಣ। ತ್ಯಾ ಮನಾಚೇ ಪವಿತ್ರಪಣ । ಸರ್ವತ್ರ ಆಪಣ ಲಕ್ಷಾವೇ ॥೯೩॥ ಸನ್ಯಾಶಾಚೇ ಧರ್ಮೀ ಜಾಣ । ಮುಖ್ಯತ್ವೇ ಹೇಚಿ ಲಕ್ಷಣ । ಪವಿತ್ರ ಕರೋನಿ ಅಂತಃಕರಣ । ಸವತ್ರ ನಾರಾಯಣ ಲಕ್ಷಾವಾ ॥೯೪॥ ಮನಾಚೇ ಪವಿತ್ರಪಣ । ಉದ್ಧವಾ ಯಾ ನಾಂವ ಜಾಣ । ಆತಾತ್ರಿದಂಡಾಚೇ ಲಕ್ಷಣ । ಸನ್ಯಾಸನಿರೂಪಣ ತೇ ಐಕ ॥೯೫॥

ಮೌನಾನೀಹಾನಿಲಾಯಾಮಾ ದಂಡಾ ವಾಗ್ದೇಹಚೇತಸಾಮ್ । ನ ಹ್ಯೇತೇ ಯಸ್ಯ ಸಂತ್ಯಂಗ ವೇಣುಭಿರ್ನ ಭವೇದ್ಯತಿಃ ॥೧೭॥

ಅರ್ಥ:- ಮೌನ ಇದು ವಾಣಿಯ ದಂಡವಾಗಿರುವುದು. ಕಾಮ್ಯ ಕರ್ಮದ ತ್ಯಾಗವು ಇದು ದೇಹದ ದಂಡವಾಗಿರುವುದು. ಪ್ರಾಣಾಯಾಮವು ಇದು ಚಿತ್ತದ ದಂಡವಾಗಿರುವುದು. ಹೇ ಉದ್ಧವಾ, ಈ ಮೂರು ದಂಡಗಳು ಇಲ್ಲದೇ ಕೇವಲ ಬಿದಿರಿನ ದಂಡದಿಂದ ಸನ್ಯಾಸಿಯಾಗಲಾರನು.

ಮೌನ ಅಥವಾ ಸತ್ಯ ಭಾಷಣ । ಕಾ ಶ್ರೀರಾಮನಾಮಾಚೇ ಸ್ಮರಣ । ಹೋ ಕಾ ಓಂಕಾರಾಚೇ ಉಚ್ಚಾರಣ । ''ವಾಗ್ದಂಡ'' ಜಾಣ ಯಾ ನಾಂವ ॥೯೬॥ ಶರೀರೀಚೇ ಜಿತುಕೇ ಚಳಣ । ತೇ ಪ್ರಾಣಾಚೇನಿ ಬಳೇ ಜಾಣ । ತ್ಯಾ ಪ್ರಾಣಾಚೇ ಪ್ರಾಣರೋಧನ । ಕರಾವೇ ಆಪಣ ಪ್ರಾಣಾಯಾಮೇ ॥೯೭॥

ಕೆಳಗೆ ದೃಷ್ಟಿಯನ್ನಿಟ್ಟು ಪವಿತ್ರ ಭೂಮಿಯನ್ನು ಕಂಡು ಆತ್ಮತತ್ವದ ಚಿಂತನೆಯನ್ನು ಮಾಡುತ್ತ ಹಂಸಗತಿಯಿಂದ ನಡೆಯಬೇಕು ॥೮೬॥ ಜೀವ ಜಂತುಗಳು ಕಂಡಾಕ್ಷಣವೇ ಆತನು ಅಲ್ಲಿಂದ ಕಾಲನ್ನು ಹಾಕುವುದಿಲ್ಲ. ಅವುಗಳನ್ನು ಬದಿಗೆ ಬಿಟ್ಟು ಲಕ್ಷಕೊಟ್ಟು ಹೆಜ್ಜೆಯನ್ನಿಡುವನು ॥೮೭॥ ಗಂಗೆಯ ಜಲವು ಮೂಲತಃ ಪವಿತ್ರವು. ಆದರೂ ಆತನು ಅದನ್ನು ವಸ್ತ್ರದಿಂದ ಶೋಧಿಸಿ ಶುದ್ಧಗೊಳಿಸಿ ಕುಡಿಯುವನು ॥೮೮॥ ಆತನು ತನ್ನ ವಾಣಿಯ ಬಂಧನದಲ್ಲಿ ಅಸತ್ಯರೂಪ ಹುಲ್ಲಿನ ಪೆಂಡಿಗಳನ್ನು ವೈರಾಗ್ಯದಿಂದ ಅಗ್ನಿಯ ಪ್ರಖರವಾದ ಜ್ವಾಲೆಯಿಂದ ಸುಟ್ಟುಬಿಡುವನು. ಅಲ್ಲಿ ಸತ್ಯದ ಕಲ್ಪವೃಕ್ಷವನ್ನು ಹಚ್ಚುವನು ॥೮೯॥ ಆ ಯಾವ ಕಲ್ಪವೃಕ್ಷದ ವಚನರೂಪ ಫಲಗಳು ಅತ್ಯಂತ ರಸಾಳವಾಗಿರುವುವು. ಅವು ಪರಿಪಕ್ವವಾಗಿ ಮಧುರವಾದ ರಸದಿಂದ ತುಂಬಿಕೊಂಡಿರುವುವು. ಅತ್ಯಂತ ನಿರ್ಮಲಹಾಗೂ ಉತ್ಕೃಷ್ಟ ಸ್ವಾದಭರಿತವಾಗಿರುವುವು ॥೯೦॥ ಈ ಯಾವ ವಚನರೂಪ ಫಲಗಳನ್ನು ಶ್ರವಣಮುಖದಿಂದ ನೆಕ್ಕಲು ಅತ್ಯಂತ ರುಚಿಯಾಗಿರುವುವು. ಇವು ಶ್ರೋತೃಗಳವರ ಇಚ್ಛೆಯನ್ನು ಪೂರ್ಣಗೊಳಿಸುವುವು. ಜೀವಿಗಳ ಅಪೇಕ್ಷೆಗಳನ್ನು ಪೂರೈಸುವುವು. ಹೀಗೆ ಈ ವಾಣಿಯಲ್ಲಿ ಸತ್ಯದ ಸುಕಾಳವಿರುವುದು ॥೯೧॥ ನಾನೂ ಕೂಡ ನಾರಾಯಣನ ಸ್ವರೂಪನಾಗಿರುವೆನು ಎಂಬುದು ಸನ್ಯಾಸಿಯ ಸಸ್ವಾಭಾವಿಕ ಧ್ಯಾನವಾಗಿರುವುದು. ಇದನ್ನೇ ಯಾವಾಗಲೂ ದೃಢವಾದ ಅನುಸಂಧಾನವನ್ನು ಮಾಡಬೇಕು ಮತ್ತು ಮನವನ್ನು ಪವಿತ್ರಗೊಳಿಸಬೇಕು ॥೯೨॥ ಮನಸ್ಸನ್ನು ಪರಮಪವಿತ್ರವನ್ನಾಗಿ ಮಾಡಿ ಭೂಮಿಯ ಮೇಲೆ ಸಂಚಾರವನ್ನು ಮಾಡಬೇಕು. ಸರ್ವತ್ರವೂ ಆತ್ಮಸ್ವರೂಪವಾಗಿ ಕಾಣಬೇಕು. ಇದುವೇ ಮನದ ಪವಿತ್ರತೆಯಾಗಿರುವುದು ॥೯೩॥ ಅಂತಃಕರಣವನ್ನು ಪರಮ ಪವಿತ್ರಗೊಳಿಸಿ ಎಲ್ಲಲ್ಲಿಯೂ ನಾರಾಯಣ ಸ್ವರೂಪದ ಭಾವವನ್ನಿಡಬೇಕು. ಇದೇ ಸನ್ಯಾಸಧರ್ಮದ ಮುಖ್ಯ ಲಕ್ಷಣವಾಗಿರುವುದು ॥೯೪॥ ಇದಕ್ಕೇನೇ ಮನಸ್ಸಿನ ಪವಿತ್ರತೆ ಎನ್ನುವರು. ಇದನ್ನು ಲಕ್ಷದಲ್ಲಿಡು. ಹೇ ಉದ್ಧವಾ, ಈಗ ಸನ್ಯಾಸಿಯ ತ್ರಿದಂಡದ ಲಕ್ಷಣವನ್ನು ಹೇಳುವೆನು, ಅದರ ಶ್ರವಣವನ್ನು ಮಾಡು ॥೯೫॥

ಮೌನವನ್ನು ಧರಿಸುವುದು ಅಥವಾ ಸತ್ಯವನ್ನೇ ನುಡಿಯುವುದು ಅಥವಾ ಶ್ರೀರಾಮನಾಮದ ನಾಮಸ್ಮರಣೆಯನ್ನು ಮಾಡುವುದು ಇಲ್ಲವೇ ಓಂಕಾರದ ಉಚ್ಚಾರವನ್ನು ಮಾಡುವುದು. ಇದಕ್ಕೆ ವಾಗ್ದಂಡವೆಂದು ಹೇಳುವರು ॥೯೬॥ ಶರೀರದಲ್ಲಿ ನಡೆಯುವ ಎಲ್ಲಕ್ರಿಯೆಗಳು ಪ್ರಾಣದಿಂದಾಗುತ್ತಿರುತ್ತವೆ. ಆ ಪ್ರಾಣವನ್ನು ಪ್ರಾಣಾಯಾಮದಿಂದ ನಿರೋಧಿಸಬೇಕು ॥೯೭॥

ಪ್ರಾಣಾಯಾಮೇ ನಿಜಪ್ರಾಣ । ಜಿಣೋನಿ ಕರಾವಾ ಸ್ವಾಧೀನ। ಯಾ ನಾಂವ ''ದೇಹದಂಡ'' ಜಾಣ । ಐಕ ಲಕ್ಷಣ ''ಮನೋದಂಡಾಚೇ'' ।೯೮॥ ಮನಾಚೇ ಚಪಳಪಣ । ಸಂಕಲ್ಪ ವಿಕಲ್ಪ ಜಾಣ । ತ್ಯಾಚೇ ಕರಾವಯಾ ಛೇದನ । ಬ್ರಹ್ಮಾನುಸಂಧಾನ ಕರಾವೇ ।೯೯॥ ಮಾಝೇ ಸ್ವರೂಪ ಸರ್ವಗತ । ತೇಥ ನಿಶ್ಚಯೇ ಠೇವಿತಾ ಚಿತ್ತ । ಮನ ಸಂಕಲ್ಪವಿಕಲ್ಪೇ ಜಾಯ ಜೇಥ । ತೇಥ ತೇಥ ಸ್ವರೂಪ ।೧೦೦॥ ಐಸೇ ಸಾವಧ ರಾಖಿತಾ ಮನ । ದೃಢ ಲಾಗಲ್ಯಾ ಅನುಸಂಧಾನ । ತಂವ ಸಂಕಲ್ಪ ವಿಕಲ್ಪ ಕ್ಷೀಣ । ಸಹಜಚಿ ಜಾಣ ಸ್ವಯೇ ಹೋತೀ ।೧೦೧॥ ದೇಹ ವಾಚಾ ಆಣಿ ಮನ । ಯಾ ತ್ರಿದಂಡಾಚೇ ಲಕ್ಷಣ । ತುಜ ಮ್ಯಾ ಸಾಂಗಿತಲೇ ಸಂಪೂರ್ಣ । ಸನ್ಯಾಸತ್ವ ಜಾಣ ಯೇಣೇ ಸತ್ಯ ।೧೦೨॥ ಹೇ ತಿನ್ಹೀ ದಂಡ ನಸತಾ ಜಾಣ। ಕೇವಳ ವೇಳುದಂಡಗ್ರಹಣ । ತೇಣೇ ಸನ್ಯಾಸತ್ವ ನ ಘಡೇ ಜಾಣ । ದೇಹವಿಟಂಬನ ದಂಭಾರ್ಥ ।೧೦೩॥ ಸನ್ಯಾಶಾಚಾ ಆಹಾರ ವಿಹಾರ । ಆಚಾರ ಸಂಚಾರ ವಿಚಾರ । ಸ್ವಧರ್ಮಯುಕ್ತ ಸಾಚಾರ । ಸ್ವಯೇ ಸಾರಂಗಧರ ಸಾಂಗತು ।೧೦೪॥

ಭಿಕ್ಷಾಂ ಚತುಷು ವರ್ಣೇಷು ವಿಗರ್ಹ್ಯಾನ್ ವರ್ಜಯಂಶ್ಚರೇತ್ । ಸಪ್ತಾಗಾರಾನಸಂಕ್ಲೃಪ್ತಾಂಸ್ತುಷ್ಯೇಲ್ಲಬ್ಧೇನ ತಾವತಾ ।೧೮॥

ಅರ್ಥ:- ದೋಷಿಯಾದವರ, ಪಾಪಿಯರ ಮನೆಗಳನ್ನು ಬಿಟ್ಟು ನಾಲ್ಕೂ ವರ್ಣದವರಿಂದ ಭಿಕ್ಷೆಯನ್ನು ಪಡೆಯಬೇಕು. ಈ ಮನೆಗೆ ಹೋದರೆ ನನಗೆ ಲಾಭವಾದೀತೆಂಬ ಮೊದಲೇ ಯೋಜನೆಯನ್ನು ಹಾಕಿಕೊಳ್ಳದೇ ಏಳು ಮನೆಗಳಲ್ಲಿ ಭಿಕ್ಷೆಯನ್ನು ಬೇಡಬೇಕು. ಈ ಏಳು ಮನೆಗಳಲ್ಲಿ ಸಿಗುವ ಭಿಕ್ಷೆಯಲ್ಲಿಯೇ ಸಂತುಷ್ಟನಾಗಬೇಕು.

ಪೂರ್ವಿ ಜಾಣ ಸನ್ಯಾಶಾಸೀ । ಚತುರ್ವರ್ಣೀ ಭಿಕ್ಷಾ ಹೋತೀ ತ್ಯಾಸೀ । ಕಲಿಯುಗೀ ಗೋಷ್ಟೀ ಝಾಲೀ ಕೈಸೀ । ಬ್ರಾಹ್ಮಣಾಪಾಶೀ ಚತುರ್ವರ್ಣ ।೧೦೫॥ ಜಾಚೀ ಜೀವಿಕಾ ಜೇಣೇ ಜಾಣ । ತ್ಯಾ ಬ್ರಾಹ್ಮಣಾಚಾ ತೋಚಿ ವರ್ಣ । ಐಕಾ ತೇಹೀ ಪ್ರಕರಣ । ಜೀವಿಕಾಲಕ್ಷಣ ಸಾಂಗೇನ ।೧೦೬॥ ''ಮುಖ್ಯಬ್ರಾಹ್ಮಣಾಚೀ ವೃತ್ತಿ'' ಜಾಣ । ''ಶೀಲ'' ''ಉಂಛ'' ಕಾ ''ಕೋರಾನ್ನ'' । ಅಯಾಚಿತ ಕಾ ಅಧ್ಯಾಪನ । ಅಥವಾ ಯಾಜನ ಜೀವಿಕೇಸೀ ।೧೦೭॥ ಜೋ ಜೀವಿಕೇಲಾಗೀ ನಿರ್ಧಾರೀ । ಶಸ್ತ್ರ ಘೇಊನಿಯಾ ಕರೀ । ಶೂರವೃತ್ತೀ ಜೀವಿಕಾ ಕರೀ । ತೋ ಜಾಣಾವಾ ''ಕ್ಷತ್ರೀ'' ಬ್ರಾಹ್ಮಣಾಮಾಜೀ ।೧೦೮॥ ಜೋ ವಾಣಿಜ್ಯ ವೃತ್ತೀವರೀ । ನಿತ್ಯ ಜೀವಿಕಾ ಆಪುಲೀ ಕರೀ । ತೋ ಬ್ರಾಹ್ಮಣ ಬ್ರಾಹ್ಮಣಮಾಝಾರೀ । ''ವೈಶ್ಯ'' ನಿರ್ಧಾರೀ ನಿಶ್ಚಿತ ।೧೦೯॥ ಜೋ ಶುದ್ರಾಚೇ ಶೂದ್ರಕರ್ಮಕರೀ ಸದಾ ಸರ್ವದಾ ಜೀವಿಕಾ ಕರೀ । ತೋ ಬ್ರಾಹ್ಮಣ ಶುದ್ರಕರ್ಮೀಕರೀ । ''ಶುದ್ರತ್ವ'' ಧರೀ ಕ್ರಿಯಾಯೋಗೇ ।೧೧೦॥

ಪ್ರಾಣಾಯಾಮದ ಸಹಾಯದಿಂದ ಪ್ರಾಣವನ್ನು ಜಯಿಸಿ ತನ್ನ ಸ್ವಾಧೀನವನ್ನಾಗಿ ಮಾಡಬೇಕು. ಇದಕ್ಕೆ ದೇಹದಂಡವೆನ್ನುವರು. ಈಗ ಮನೋದಂಡದ ಲಕ್ಷಣವನ್ನು ಕೇಳು ।೯೮॥ ಸಂಕಲ್ಪ ಮತ್ತು ವಿಕಲ್ಪಗಳು ಇದೇ ಮನಸ್ಸಿನ ಚಂಚಲತೆಯಾಗಿರುವುದು. ಈ ಯಾವ ಚಂಚಲತೆಯ ಛೇದವನ್ನು ಮಾಡಲು ಸತತವಾಗಿ ಬ್ರಹ್ಮಸ್ವರೂಪದ ಅನುಸಂಧಾನವನ್ನು ಮಾಡಬೇಕು ।೯೯॥ ನನ್ನ ಸ್ವರೂಪವು ಸರ್ವವ್ಯಾಪಿಯಾಗಿರುವುದು. ಅದರಲ್ಲಿ ದೃಢವಾದ ಭಾವನೆಯನ್ನು ಇಡುವುದರಿಂದ ಸಂಕಲ್ಪವಿಕಲ್ಪಗಳಿಂದ ಮನಸ್ಸು ಎಲ್ಲಿಯೇ ಹೋಗುತ್ತಿರಲಿ ಅಲ್ಲಿ ನನ್ನ ಸ್ವರೂಪವೇ ಕಾಣಬರುವುದು ।೧೦೦॥ ಈ ಪ್ರಕಾರವಾಗಿ ಮನಸ್ಸನ್ನು ಜಾಗೃತವನ್ನಾಗಿಡಲು ಮತ್ತು ಬ್ರಹ್ಮಸ್ವರೂಪದ ದೃಢ ಅನುಸಂಧಾನವು ಲಭಿಸಲು ಸಂಕಲ್ಪ ವಿಕಲ್ಪಗಳು ತಾವಾಗಿಯೇ ಇಲ್ಲದಾಗುವುವು ।೧೦೧॥ ಈ ಪ್ರಕಾರವಾಗಿ ಕಾಯಾ, ವಾಚಾ ಮತ್ತು ಮನ ಈ ತ್ರಿದಂಡ ಲಕ್ಷಣಗಳನ್ನು ನಾನು ನಿನಗೆ ಸಂಪೂರ್ಣವಾಗಿ ಹೇಳಿದೆನು. ಇವುಗಳಿಂದ ಸನ್ಯಾಸತ್ವವು ಪ್ರಾಪ್ತವಾಗುವುದು ।೧೦೨॥ ಈ ಯಾವ ಮೂರು ದಂಡಗಳು ಇಲ್ಲದೇ ಕೇವಲ ಬಿದಿರಿನ ದಂಡವನ್ನು ಧರಿಸಿ ತಿರಗುತ್ತಿರುವುದರಿಂದ ನಿಜವಾದ ಸನ್ಯಾಸವು ಸಾಧಿಸುವುದಿಲ್ಲ. ಇದು ಕೇವಲ ಡಾಂಭಿಕ, ದೇಹದ ಲಜ್ಜಾಸ್ಪದವಾಗಿರುವುದು ।೧೦೩॥ ಈಗ ಸನ್ಯಾಸಿಯ ಆಹಾರ ವಿಹಾರ, ಆಚಾರ-ವಿಚಾರ,ಸಂಚಾರ ಇವುಗಳನ್ನು ಶ್ರೀಕೃಷ್ಣನು ಸ್ವತ: ಹೇಳುತ್ತಿರುವನು ।೧೦೪॥

ಪೂರ್ವದಲ್ಲಿ ಸನ್ಯಾಸಿಯವರಿಗೆ ನಾಲ್ಕೂ ವರ್ಣಗಳಲ್ಲಿ ಭಿಕ್ಷೆಯು ಸಿಗುತ್ತಿತ್ತು. ಆದರೆ ಕಲಿಯುಗದಲ್ಲಿ ಏನಾಗಿದೆ ಎಂದರೆ, ಬ್ರಾಹ್ಮಣರಲ್ಲಿಯೇ ನಾಲ್ಕು ವರ್ಣಗಳು ಉತ್ಪನ್ನವಾಗಿರುವುವು ।೧೦೫॥ ಯಾವ ವೃತ್ತಿಯಿಂದ ಬ್ರಾಹ್ಮಣರ ಉದರಪೋಷಣೆಯಾಗುವದೋ, ಅದೇ ಬ್ರಾಹ್ಮಣರ ವರ್ಣವಾಗಿರುವುದು. ಈಗ ಬ್ರಾಹ್ಮಣರ ಜೀವನದ ಪ್ರಕಾರಗಳನ್ನು ಹೇಳುವೆನು, ಕೇಳು ।೧೦೬॥ ಶೀಲ, ಉಂಛ, ಕೋರಾನ್ನ ಅಯಾಚಿತ, ಅಧ್ಯಾಪನ ಮತ್ತು ಯಾಜನ ಇವುಗಳಿಂದ ಉಪಜೀವನವನ್ನು ನಡೆಸುವುದು ಬ್ರಾಹ್ಮಣರ ಮುಖ್ಯ ವೃತ್ತಿಯಾಗಿರುವುದು ।೧೦೭॥ ಯಾವ ಬ್ರಾಹ್ಮಣನು ಕೈಯಲ್ಲಿ ಶಸ್ತ್ರವನ್ನು ಹಿಡಿದು ಯುದ್ಧದಲ್ಲಿ ಶೌರ್ಯವನ್ನು ಪ್ರದರ್ಶಿಸುವನೋ ಮತ್ತು ಇದರಿಂದ ತನ್ನ ಉಪಜೀವನವನ್ನು ನಡೆಸುವನೋ ಆತನು ಕ್ಷತ್ರಿಯನು ।೧೦೮॥ ಯಾರು ವ್ಯಾಪಾರ ದಂಧೆಗಳನ್ನು ಸ್ವೀಕರಿಸಿ ತನ್ನ ಉದರ ಪೋಷಣೆಯನ್ನು ಮಾಡುವನೋ ಆತನು ಬ್ರಾಹ್ಮಣರಲ್ಲಿ ವೈಶ್ಯನಾಗುವನು ।೧೦೯॥ ಯಾವನು ಶೂದ್ರರ ಕ್ರಿಯೆಗಳನ್ನಾಚರಿಸುತ್ತ ಯಾವಾಗಲೂ ತನ್ನ ಉಪಜೀವನವನ್ನು ನಡೆಸುವನೋ, ಈತನಿಗೆ ಶೂದ್ರಕರ್ಮಗಳಿಂದ ಶೂದ್ರತ್ವವು ಬರುವುದು ।೧೧೦॥

ಜೈ ಉತ್ತಮ ಬ್ರಾಹ್ಮಣಾಚೇ ಭಿಕ್ಷಾ ನ ಲಭೇ । ತೈ ಕ್ಷತ್ರಿಯ ಬ್ರಾಹ್ಮಣೀ ಭಿಕ್ಷಾ ಲಾಭೇ । ಕ್ಷಾತ್ರಬ್ರಾಹ್ಮಣಾಂಚೇನಿ ಅಲಾಭೇ । ವೈಶ್ಯಾದಿ ಬ್ರಾಹ್ಮಣೀ ಲಾಭೇ ಭಿಕ್ಷಾಗ್ರಹಣ ॥೧೧೧॥ ಬ್ರಾಹ್ಮಣ - ಕ್ಷತ್ರಿಯ - ವೈಶ್ಯ - ಬ್ರಾಹ್ಮಣೀ । ಭಿಕ್ಷೇಸ ಅಪ್ರಾಪ್ತ ಹೇ ತಿನೀ । ತೈ ಶುದ್ರಜೀವಿಕಾ-ಬ್ರಾಹ್ಮಣೀ । ಭಿಕ್ಷಾಗ್ರಹಣೀ ಅಧಿಕಾರು ॥೧೧೨॥ ಯಾಂತ ನಿಂದ್ಯ ಜೇ ಬ್ರಾಹ್ಮಣಾ ಆಂತು । ಕೇವಳ ದೋಷೀ ಅಥವಾ ಅಭಿಶಪ್ತು । ತೇ ಭಿಕ್ಷೇಸೀ ನ ಲಾವಾವಾ ಹಾತು । ಹಾ ಸ್ವಧರ್ಮಾರ್ಥು ಭಿಕ್ಷೇಚಾ ॥೧೧೩॥ ತೇಹೀ ಭಿಕ್ಷಾ ಅತಿನೇಮಸ್ತ । ಭಿಕ್ಷೇಸೀ ಯೇತೋ ಹೇ ಕಳೋ ನೇದಿತ । ಮಾಗಾವೀ ನೇಮಿಲೀ ಘರೇ ಸಾತ । ಜೇ ಝಾಲೇ ಪ್ರಾಪ್ತ ತೇಣೇ ಸುಖೀ ॥೧೧೪॥ ಜೇ ಸಾತಾಘರೀ ಭಿಕ್ಷಾ ಪ್ರಾಪ್ತ । ತೇ ಭಿಕ್ಷೇಚಾ ಧರ್ಮು ವಿಹಿತ । ಸ್ವಯೇ ಸಾಂಗೇ ಶ್ರೀಕೃಷ್ಣನಾಥ । ಸ್ಮೃತಿಶಾಸ್ತ್ರಾರ್ಥಪ್ರಯೋಗೇ ॥೧೧೫॥

ಬಹಿರ್ಜಲಾಶಯಂ ಗತ್ವಾ ತತ್ರೋಪಸ್ಪೃಶ್ಯ ವಾಗ್ಯತಃ । ವಿಭಜ್ಯ ಪಾವಿತಂ ಶೇಷಂ ಭುಂಜೀತಾಽಶೇಷಮಾಹೃತಮ್ ॥೧೯॥

ಅರ್ಥ:- ಈ ಪ್ರಕಾರವಾಗಿ ಭಿಕ್ಷೆಯನ್ನು ಪಡೆದು ಊರಹೊರಗಿನ ಜಲಾಶಯಕ್ಕೆ ಹೋಗಿ ಅಲ್ಲಿ ಕೈಕಾಲು ಮುಖಗಳನ್ನು ತೊಳೆದುಕೊಂಡು ಜಲದಿಂದ ಭಿಕ್ಷೆಯನ್ನು ಶುದ್ಧಗೊಳಿಸಬೇಕು ಹಾಗೂ ಶಾಸ್ತ್ರೋಕ್ತ ಪದ್ಧತಿಯಂತೆ ಭಿಕ್ಷೆಯ ಭಾಗವನ್ನು ಅರ್ಪಿಸಬೇಕು. ಉಳಿದ ಭಿಕ್ಷೆಯನ್ನು ಮೌನವ್ರತಧಾರಿಯಾಗಿ ಭುಂಜಿಸಬೇಕು. ಇನ್ನೊಂದು ವೇಳೆಗಾಗಿ ಭಿಕ್ಷೆಯನ್ನು ಉಳಿಸಬಾರದು. ಅದಕ್ಕಾಗಿ ಹೆಚ್ಚಿಗೆ ಭಿಕ್ಷೆಯನ್ನು ಬೇಡಿ ತರಬಾರದು.

ಗ್ರಾಮಬಾಹೇರ ಗಂಗಾತೀರೀ । ಅಥವಾ ತಡಾಗಾಚೇ ಪರಿಸರೀ । ಭಿಕ್ಷಾ ಧರೋನಿಯಾ ಕರೀ । ಆಚಮನ ತೀರೀ ಕರಾವೇ ॥೧೧೬॥ ಯಾಚಿತ ಜೇ ಭಿಕ್ಷೇಚೇ ಅನ್ನ । ತೇ ದ್ವಾದಶಪ್ರಣವೇ ಅಭಿಮಂತ್ರೂನ । ತೇಣೇ ಮಂತ್ರೋದಕೇ ಪ್ರೋಕ್ಷಿತಾ ಜಾಣ । ಹೋಯ ಪಾವನ ಪವಿತ್ರ ॥೧೧೭॥ ಚತುರ್ಥಾ ಕರಾವೇ ತ್ಯಾ ಅನ್ನಾತೇ । ಚಾರ ಅಧಿಕಾರೀ ತ್ಯಾ ಭಾಗಾತೇ । ಬ್ರಹ್ಮ ವಿಷ್ಣು ಅರ್ಕ ಆಣಿ ಭೂತೇ । ಅರ್ಪಣ ತೇಥೇ ಅವಧಾರೀ ॥೧೧೮॥ ವಿಷ್ಣುಕಲ್ಪಿತ ಜೋ ಭಾಗ । ತೋ ಜಳೀ ಘಾಲಾವಾ ಸಾಙ್ಗ । ಭೂತಕಲ್ಪಿತ ಜೋ ವಿಭಾಗ । ತೋ ಪೃಥ್ವೀವರೀ ಚಾಂಗ ಠೇವಾವಾ ॥೧೧೯॥ ಉರಲೇ ಜೇ ವಿಭಾಗ ದೋನೀ । ಯತೀಸೀ ಅಧಿಕಾರ ಸೇವನೀ । ದೀನ ಮಾಗೋ ಆಲಿಯಾ ತೇ ಕ್ಷಣೀ । ಭೂತದಯಾಗುಣೇ ಅನ್ನ ದ್ಯಾವೇ ॥೧೨೦॥ ಪರೀ ಮೀ ಏಕ ಅನ್ನದಾತಾ । ಹೇ ಆಠವೋಹೀ ನಯೇ ಚಿತ್ತಾ । ಆಲ್ಯಾ ದಾತೇಪಣಾಚೀ ಅಹಂತಾ । ಅಧರ್ಮತಾ ಸನ್ಯಾಸೀ ॥೧೨೧॥ ಮಧುಕರೀಚೇ ಅವಘೇಚಿ ಅನ್ನ । ಸಮಯೀ ಮಾಗೋ ಯೇತೀ ದೀನ । ಯೇಣೇ ಉದ್ದೇಶೇ ಅಧಿಕ ಅನ್ನ । ಸರ್ವಥಾ ಜಾಣ ಮಾಗೋ ನಯೇ ॥೧೨೨॥

ಉತ್ತಮ ಬ್ರಾಹ್ಮಣರ ಭಿಕ್ಷೆಯು ದೊರಕದಾಗ ಕ್ಷತ್ರಿಯ ವೃತ್ತಿಯಿಂದ ಇರುವ ಬ್ರಾಹ್ಮಣರಿಂದ ಭಿಕ್ಷೆಯನ್ನು ಪಡೆಯಬೇಕು. ಕ್ಷತ್ರಿಯ ಬ್ರಾಹ್ಮಣರ ಮನೆಯಲ್ಲಿ ಭಿಕ್ಷೆಯು ದೊರಕದಿರಲು ಆಗ ವೈಶ್ಯ ಬ್ರಾಹ್ಮಣರಿಂದ ಭಿಕ್ಷೆಯನ್ನು ಪಡೆಯಬೇಕು ॥೧೧೧॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಬ್ರಾಹ್ಮಣರಲ್ಲಿಯೂ ಕೂಡ ಭಿಕ್ಷೆಯು ದೊರೆಯದಿದ್ದರೆ, ಶೂದ್ರವೃತ್ತಿಯಿಂದ ಜೀವನವನ್ನು ನಡೆಯಿಸುತ್ತಿರುವ ಬ್ರಾಹ್ಮಣನ ಮನೆಯಲ್ಲಿ ಭಿಕ್ಷೆಯನ್ನು ಬೇಡುವ ಅಧಿಕಾರವಿರುವುದು ॥೧೧೨॥ ಯಾವ ಬ್ರಾಹ್ಮಣರು ನಿಂದಾಸ್ಪದರೋ, ದೋಷಿಗಳೋ, ಅಥವಾ ಬಹಿಷ್ಕೃತರಾಗಿರುವರೋ ಅವರ ಭಿಕ್ಷೆಗೆ ಕೈಯಿಂದ ಮುಟ್ಟಕೂಡದು. ಹೀಗೆ ಭಿಕ್ಷೆಯ ವಿಷಯದಲ್ಲಿ ಸ್ವಧರ್ಮವಿರುವುದು ॥೧೧೩॥ ಭಿಕ್ಷೆಯನ್ನು ನಿಯಮಿತವಾಗಿ ಸ್ವೀಕರಿಸಬೇಕು. ತಾನು ಭಿಕ್ಷೆಗೆ ಬರುವುದನ್ನು ಯಾರಿಗೂ ತಿಳಿಯಬಾರದು. ಕೇವಲ ಏಳು ಮನೆಗಳಲ್ಲಿ ಮಾತ್ರ ಭಿಕ್ಷೆಯನ್ನು ಸ್ವೀಕರಿಸಬೇಕು. ಇದರಲ್ಲಿ ಯಾವುದು ಎಷ್ಟು ಲಭಿಸುವುದೋ, ಅಷ್ಟರಲ್ಲಿಯೇ ತೃಪ್ತನಾಗಬೇಕು ॥೧೧೪॥ ಏಳು ಮನೆಗಳಲ್ಲಿನ ದೊರೆತ ಭಿಕ್ಷೆಯ ವಿಹಿತ ಧರ್ಮವು ಹೇಗಿರುವುದೆಂಬುದನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೧೧೫॥

ಪ್ರಾಪ್ತವಾಗಿರುವ ಭಿಕ್ಷೆಯನ್ನು ಕೈಯಲ್ಲಿ ಹಿಡಿದುಕೊಂಡು ಗ್ರಾಮದ ಹೊರಗೆ ನದಿದಂಡೆಯ ಮೇಲೆ ಅಥವಾ ಸರೋವರದ ದಂಡೆಯ ಮೇಲೆ ಹೋಗಬೇಕು. ಅಲ್ಲಿ ಪ್ರಾರಂಭದಲ್ಲಿ ಆಚಮನವನ್ನು ಮಾಡಬೇಕು ॥೧೧೬॥ ಭಿಕ್ಷೆಯನ್ನು ಬೇಡಿ ತಂದ ಅನ್ನವನ್ನು ಹನ್ನೆರಡು ಪ್ರಣವಳಿಂದ ಅಭಿಮಂತ್ರಿಸಬೇಕು. ಆ ಯಾವ ಮಂತ್ರೋದಕದಿಂದ ಅನ್ನವನ್ನು ಪ್ರೋಕ್ಷಣೆಯನ್ನು ಮಾಡಿ ಪವಿತ್ರಗೊಳಿಸಬೇಕು ॥೧೧೭॥ ತದನಂತರ ಆ ಅನ್ನದ ಸಮವಾಗಿ ನಾಲ್ಕು ಭಾಗಗಳನ್ನು ಮಾಡಬೇಕು. ಆ ಭಾಗಗಳಿಗೆ ಬ್ರಹ್ಮದೇವ, ವಿಷ್ಣು, ಸೂರ್ಯ ಮತ್ತು ಭೂತಗಳು ಹೀಗೆ ನಾಲ್ವರು ಅಧಿಕಾರಿಗಳಿರುವರು. ಈಗ ಅದನ್ನು ಹೇಗೆ ಅರ್ಪಿಸಬೇಕೆಂಬುದನ್ನು ಕೇಳು ॥೧೧೮॥ ವಿಷ್ಣುವಿನಗಾಗಿ ತಗೆದ ಭಾಗವನ್ನು ಜಲದಲ್ಲಿ ಸಮರ್ಪಿಸಬೇಕು. ಭೂತಗಳಿಗಾಗಿ (ಜೀವಿಗಳಿಗಾಗಿ) ತಗೆದ ಭಾಗವನ್ನು ಸರಿಯಾಗಿ ಭೂಮಿಯ ಮೇಲೆ ಇಡಬೇಕು ॥೧೧೯॥ ಉಳಿದಿರುವ ಎರಡು ಭಾಗಗಳ ಸೇವನೆ ಮಾಡಲು ಸನ್ಯಾಸಿಗೆ ಅಧಿಕಾರವಿರುವುದು. ಒಂದು ವೇಳೆ ಅಲ್ಲಿಗೆ ಒಬ್ಬ ದೀನ ಮನುಷ್ಯನು ಬಂದರೆ, ಆಗ ಭೂತದಯೆಯಿಂದ ಆತನಿಗೆ ಅನ್ನವನ್ನು ಕೊಡಬೇಕಾಗುವದು ॥೧೨೦॥ ಈ ಅನ್ನವನ್ನು ಕೊಡುತ್ತಿರಲು ಆಗ ನಾನು ಅನ್ನದಾತನು ಎಂಬ ಯಾವ ಅಭಿಮಾನವನ್ನು ಮನದಲ್ಲಿ ತರಬಾರದು. ಕಾರಣವೇನೆಂದರೆ, ದಾತೃತ್ವದ ಅಭಿಮಾನವು ನಿರ್ಮಾಣವಾದರೆ ಸನ್ಯಾಸಿಗೆ ಅಧರ್ಮದ ದೋಷವು ತಗಲುವುದು ॥೧೨೧॥ ಮಾಧುಕರೀ ಮಾಡಿದ ಎಲ್ಲ ಅನ್ನವನ್ನು ಆ ಸಮಯಕ್ಕೆ ಬಂದ ದೀನನಿಗೆ ಕೊಡಬೇಕಾಗುವದೆಂಬ ಉದ್ದೇಶದಿಂದ ಹೆಚ್ಚಾಗಿ ಅನ್ನದ ಭಿಕ್ಷೆಯನ್ನು ಸರ್ವಥಾ ಬೇಡಬಾರದು ॥೧೨೨॥

ಕರಿತಾ ಮಧುಕರೀಭೋಜನ । ಠಾಯೀ ಅಧಿಕ ಉರಲಿಯಾ ಅನ್ನ । ತೇ ಸಾಂಡಿತಾ ಅತಿಪತನ । ಅವಘೇಚ ಜಾಣ ಭಕ್ಷಾವೇ ॥೧೨೩॥ ಸನ್ಯಾಸಧರ್ಮೀ ಲಘು ಆಹಾರ । ನಿತ್ಯ ಕರಾವಾ ನಿರಂತರ । ಅಧಿಕ ಆಹಾರೀ ವಿಕಾರ । ನಿದ್ರಾ ಆಳಸ ಥಾರ ಬಾಧಿತೀ ॥೧೨೪॥ ಜ್ಯಾಲಾಗೀ ಕೀಜೇಚತುರ್ಥಾಶ್ರಮ । ತೋ ಸನ್ಯಾಶಾಚಾ ಮುಖ್ಯ ಧರ್ಮ । ಸ್ವಯೇ ಸಾಂಗೇ ಪುರುಷೋತ್ತಮ । ಜೇಣೇ ಆತ್ಮಾರಾಮ ಪಾವಿಜೇ ॥೧೨೫॥

ಏಕಶ್ಚರೇನ್ಮಹೀಮೇತಾಂ ನಿಃಸಂಗಃ ಸಂಯತೇಂದ್ರಿಯಃ । ಆತ್ಮಕ್ರೀಡ ಆತ್ಮರತ ಆತ್ಮವಾನ್ ಸಮದರ್ಶನಃ ॥೫೦॥

ಅರ್ಥ:- ಸನ್ಯಾಸಿಯು ಭೂಮಿಯ ಮೇಲೆ ಒಬ್ಬನೇ ದಾರಿ ನಡೆಯಬೇಕು. ಆತನು ಯಾವುದರಲ್ಲಿಯೂ ಆಸಕ್ತಿಯನ್ನಿಡಕೂಡದು. ಸರ್ವ ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ತನ್ನ ಆತ್ಮತತ್ವದಲ್ಲಿ ರಮಮಾಣನಾಗಬೇಕು. ಪ್ರತಿಕೂಲ ಅವಸ್ಥೆಗಳಲ್ಲಿ ಧೈರ್ಯವನ್ನು ಕಾಯ್ದುಕೊಳ್ಳಬೇಕು. ಸರ್ವತ್ರವೂ ಸಮಾನಭಾವದಿಂದ ಇರುವ ಭಗವಂತನನ್ನು ಸದಾವಕಾಲ ಕಾಣಬೇಕು.

ಸದಾ ವೈರಾಗ್ಯ ಅಂಗೀ ಪುರತೇ । ಜೋ ಅಪೇಕ್ಷಿನಾ ಸಾಂಗಾತ್ಯಾತೇ । ನಿಃಸಂಗ ಹೋತ್ಸಾತಾ ಚಿತ್ತೇ । ಸುಖೇ ಪೃಥ್ವೀತೇ ವಿಚರತು ॥೧೨೬॥ ಇಂದ್ರಿಯೇ ಬಾಂಧೋನಿ ಚಿತ್ತಾಚ್ಯಾ ಪಾಯೀ । ಚಿತ್ತ ಲಾವೀ ಚೈತನ್ಯಾಚ್ಯಾ ಠಾಯೀ । ತೇಣೇ ಚಿನ್ಮಾತ್ರ ಠಸಾವೇ ಪಾಹೀ । ದೇಹತ್ವ ದೇಹೀ ಸ್ಮರೇನಾ ॥೧೨೭॥ ಐಸಾ ಆತ್ಮಸ್ಥಿತೀಚಾ ಉದ್ಯಮ । ತೇಣೇ ಆತ್ಮಕ್ರೀಡೇಚಾ ಆರಾಮ । ಆತ್ಮಸುಖಾಚಾ ಸಂಭ್ರಮ । ಅನುಭವ ಪರಮ ತೋ ಐಕ ॥೧೨೮॥ ಆತ್ಮಸ್ಥಿತಿ ನಿಜಾತ್ಮಯುಕ್ತ । ತೇಣೇ ಆತ್ಮಸುಖೇ ಉಲ್ಹಾಸತ । ಸದಾ ಸಮದರ್ಶನೇ ಡುಲ್ಲತ । ವೋಸಂಡತ ಸಮಸಾಮ್ಯೇ ॥೧೨೯॥ ಐಶಿಯಾ ಸಮಸುಖಾಚೀ ಸಂಪತ್ತೀ । ಭೋಗಾವಯಾ ಸುನಿಶ್ಚಿತೀ । ಸದಾ ಏಕಾಕೀ ವಸೇ ಏಕಾಂತೀ । ತೇಚಿ ಶ್ರೀಪತೀ ಸಾಂಗತ ॥೧೩೦॥

ವಿವಿಕ್ತಕ್ಷೇಮಶರಣೋ ಮದ್ಭಾವವಿಮಲಾಶಃ । ಆತ್ಮಾನಂ ಚಿಂತಯೇದೇಕಮಭೇದೇನ ಮಯಾ ಮುನಿಃ ॥೫೧॥

ಅರ್ಥ:- ಸನ್ಯಾಸಿಯು ನಿರ್ಜನ ಮತ್ತು ನಿರ್ಭಯವಾದ ಏಕಾಂತ ಸ್ಥಾನದಲ್ಲಿರಬೇಕು. ಆತನ ಹೃದಯದಲ್ಲಿ ಯಾವಾಗಲೂ ನನ್ನ ಚಿಂತನೆಯೇ ನಡೆಯುತ್ತಿರಬೇಕು. ಆತನು ನನ್ನಲ್ಲಿ ಅಭೇದವಾಗಿ ಒಂದೇ ಆತ್ಮದ ಚಿಂತನೆಯನ್ನು ಮಾಡಬೇಕು.

ಪವಿತ್ರ ಆಣಿ ವಿಜನ । ಪ್ರಶಸ್ತ ಆಣಿ ಏಕಾಂತಸ್ಥಾನ । ತೇಥೇ ಮಾಝೇ ಅನುಸಂಧಾನ । ಸದ್ಭಾವೇ ಜಾಣ ಸರ್ವದಾ ॥೧೩೧॥ ತೇಣೇ ಸಾಂಡೂನ ಜನಪದ ದುಶ್ಚಿತ । ಸದಾ ಏಕಾಂತೀ ವ್ಹಾವೇ ನಿರತ । ಮದ್ಭಾವೇ ಸುನಿಶ್ಚಿತ ಆತ್ಮಸುಖ ಪ್ರಾಪ್ತ ಸಾಧಕಾ ॥೧೩೨॥ ಜ್ಯಾಸೀ ನಿಜಾತ್ಮಸುಖ ಝಾಲೇ ಪ್ರಾಪ್ತ । ತೋ ಹೋಯ ಅನನ್ಯ ಶರಣಾಗತ ಮೀ ವಾಂಚೂನಿ ಜಗಾ ಆಂತ । ಆಣಿಕ ಅರ್ಥ ದೇಖೇನಾ ॥೧೩೩॥

ಮಾಧುಕರೀ ಬೇಡಿ ತಂದ ಆಹಾರವು ಅಧಿಕವಾಗಲು, ಅದನ್ನು ಒಗೆದುಬಿಟ್ಟರೆ ಆತನಿಗೆ ಅಧಃಪಾತವು ಬರುವದು. ಆದ್ದರಿಂದ ಎಲ್ಲ ಅನ್ನವನ್ನು ಭಕ್ಷಣೆ ಮಾಡಬೇಕು ॥೧೨೩॥ ಸನ್ಯಾಸ ಆಶ್ರಮದಲ್ಲಿ ಅಲ್ಪ ಆಹಾರವನ್ನು ಸೇವಿಸಬೇಕು. ಏಕೆಂದರೆ ಆಹಾರವನ್ನು ಹೆಚ್ಚಿಗೆ ಸೇವಿಸಲು ನಿದ್ರೆ ಆಲಸ್ಯ ವಿಕಾರಗಳು ಬಹಳಷ್ಟು ಪೀಡೆಯನ್ನು ಕೊಡುವುವು ॥೧೨೪॥ ಯಾವುದಕ್ಕಾಗಿ ಸನ್ಯಾಸ ಆಶ್ರಮವನ್ನು ಸ್ವೀಕರಿಸಬೇಕು? ಆ ಯಾವ ಸನ್ಯಾಸದ ಮುಖ್ಯ ಧರ್ಮವು, ಯಾವುದರಿಂದ ಆತ್ಮಾರಾಮನ ಪ್ರಾಪ್ತಿಯಾಗುವುದೆಂಬುದನ್ನು ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೧೨೫॥

ಯಾರ ಅಂಗದಲ್ಲಿ ಪರಿಪೂರ್ಣ ವೈರಾಗ್ಯವು ಬಿಂಬಿಸಿರುವುದೋ, ಆತನು ತನ್ನ ಜೊತೆಗಾರನ ಅಪೇಕ್ಷೆಯನ್ನು ಮಾಡಲಾರನು. ಆತನು ಮನಃಪೂರ್ವಕವಾಗಿ ನಿಃಸಂಗನಾಗಿ ಭೂಮಿಯಲ್ಲಿ ಆನಂದದಿಂದ ಸಂಚಾರವನ್ನು ಮಾಡುತ್ತಿರುವನು ॥೧೨೬॥ ಇಂದ್ರಿಯಗಳನ್ನು ಚಿತ್ತದಿಂದ ಬಂಧಿಸಿ, ಆ ಚಿತ್ತವನ್ನು ಚೈತನ್ಯದಲ್ಲಿ ಹಚ್ಚುವನು. ಅದರಿಂದ ಸರ್ವತ್ರವೂ ಆತನಿಗೆ ಚೈತನ್ಯರೂಪವಾಗಿ ಕಾಣುವುದು. ದೇಹದ ದೇಹತ್ವವು ಸ್ಮರಣವಾಗಲು ಸಾಧ್ಯವಿಲ್ಲದಾಗುವುದು ॥೧೨೭॥ ಈ ಪ್ರಕಾರದ ಆತ್ಮಸ್ಥಿತಿಯ ಸಾಧನೆಯಿಂದ ಆತನಿಗೆ ಆತ್ಮಕ್ರೀಡೆಯಲ್ಲಿ ವಿಶ್ರಾಂತಿಯು ದೊರೆಯುವುದು. ಆತನ ಆತ್ಮಸುಖದ ಶ್ರೇಷ್ಠವಾದ ಅನುಭವವನ್ನು ಹೇಳುವೆನು, ಅದಕ್ಕಾಗಿ ಕೇಳು ॥೧೨೮॥ ಆತನು ಆತ್ಮಸ್ವರೂಪದಿಂದ ಯುಕ್ತನಾದನೆಂದರೆ ಆತ್ಮಾನಂದದಲ್ಲಿ ರಮಮಾಣನಾಗಿರುವನು. ಸರ್ವತ್ರವೂ ಐಕ್ಯ ಭಾವದಿಂದ ಕೂಡಿಕೊಳ್ಳಲು ಅಂದರೆ ಸಮದರ್ಶಿಯಾದನೆಂದರೆ ಸದಾ ಸರ್ವಕಾಲದಲ್ಲಿಯೂ ಆನಂದದಿಂದ ತೂಗಾಡುತ್ತಾ ಸಮತ್ವಭಾವದಿಂದ ತುಂಬಿತುಳುಕುತ್ತಿರುವನು ॥೧೨೯॥ ಇಂತಹ ಸಮತ್ವಸುಖದ ಐಶ್ವರ್ಯವು ಅಂದರೆ ಸುಖಾನಂದವನ್ನು ನಿಶ್ಚಯವಾಗಿ ಭೋಗಿಸುವುದಕ್ಕಾಗಿ ಆತನು ಯಾವಾಗಲೂ ಏಕಾಂತದಲ್ಲಿ ಹೋಗಿ ಇರುತ್ತಿರುವನು. ಈ ವಿಷಯಕ್ಕಾಗಿ ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೧೩೦॥

ಪವಿತ್ರವಾಗಿರುವ, ನಿರ್ಮಲವಾಗಿರುವ, ರಮ್ಯವಾಗಿರುವ ಇಂತಹ ಏಕಾಂತ ಸ್ಥಳದಲ್ಲಿ ಕುಳಿತುಕೊಂಡು ಈತನು ಸದ್‌ಭಾವನೆಯಿಂದ ಸತತವಾಗಿ ನನ್ನ ಚಿಂತನೆಯನ್ನು ಮಾಡಬೇಕು ॥೧೩೧॥ ಸಂಸಾರ ದುಃಖಗಳಿಂದ ದುಃಖಿತರಾದ ಜನರ ಸಂಗತಿಯನ್ನು ಬಿಟ್ಟುಕೊಟ್ಟು ಸನ್ಯಾಸಿಯು ಏಕಾಂತದಲ್ಲಿ ರಮಮಾಣನಾಗಿರಬೇಕು. ಇದರಿಂದ ಸದ್‌ಭಾವನೆಯೊಡನೆ ಆತ್ಮಸುಖವು ನಿಶ್ಚಿತವಾಗಿ ಪ್ರಾಪ್ತವಾಗುವುದು ॥೧೩೨॥ ಆತ್ಮಸುಖ ಪ್ರಾಪ್ತಿಯಾದವನು ನನ್ನಲ್ಲಿ ಅನನ್ಯಭಾವದಿಂದ ಶರಣಾಗಿರುವನು. ಆತನಿಗೆ ನನ್ನ ಹೊರತಾಗಿ ಜಗತ್ತಿನಲ್ಲಿ ಅನ್ಯ ವಿಷಯವು ಕಾಣುವುದೇ ಇಲ್ಲ ॥೧೩೩॥

ಐಸೇ ಅನನ್ಯ ಕರಿತಾ ಮಾಝೇ ಧ್ಯಾನ । ಸಾಧಕ ವಿಸರೇ ಮೀತೂಪಣ । ತೆವ್ಹಾ ಅಭೇದೇ ಚೈತನ್ಯಘನ । ಮದ್ರೂಪ ಜಾಣ ತೋ ಹೋಯ ॥೧೩೪॥ ತ್ಯಾ ಮದ್ರೂಪಾಚೀ ಸ್ವರೂಪಸ್ಥಿತೀ । ಪಾಹೋ ಜಾತಾ ನಿಜಾತ್ಮವೃತ್ತೀ । ಮೀ ನಾ ತೋ ಐಶೀ ಹೋಯ ಗತೀ । ''ಅಭೇದಪ್ರಾಪ್ತೀ'' ಯಾ ನಾಂವ ॥೧೩೫॥ ಜಂವ ಅಸೇ ದ್ವೈತವಾರ್ತಾ । ತಂವ ಭಯಾಚೀ ಬಾಧಕತಾ । ಅಭೇದತ್ವ ಆಲ್ಯಾ ಹಾತಾ । ನಿರ್ಭಯತಾ ಸಾಧಕಾ ॥೧೩೬॥ ಅಭೇದಪ್ರಾಪ್ತೀಚ್ಯಾ ಠಾಯೀ । ಬಂಧಮೋಕ್ಷಾಂಚೀ ವಾರ್ತಾ ನಾಹೀ । ಗಡಗರ್ಜೇ ಬಂಧಮೋಕ್ಷ ಪಾಹೀ । ನಾಂದತೀ ನವಾಯೀ ಹರಿ ಬೋಲೇ ॥೧೩೭॥

ಅನ್ವೀಕ್ಷೇತಾತ್ಮನೋ ಬಂಧಂ ಮೋಕ್ಷಂ ಚ ಜ್ಞಾನನಿಷ್ಠಯಾ । ಬಂಧ ಇಂದ್ರಿಯವಿಕ್ಷೇಪೋ ಮೋಕ್ಷ ಏಷಾಂ ಚ ಸಂಯಮಃ ॥೨೨॥

ಅರ್ಥ:- ಆತ್ಮನಿಗೆ ಬಂಧವು ಹೇಗಾಗುವುದು ಮತ್ತು ಅದು ಮುಕ್ತ ಹೇಗಾಗುವುದೆಂಬುದನ್ನು ಜ್ಞಾನನಿಷ್ಠೆಯಿಂದ ವಿಚಾರವನ್ನು ಮಾಡಬೇಕು. ಇಂದ್ರಿಯಗಳ ವಿಕ್ಷೇಪವು ಅಂದರೆ ವಿಷಯಪ್ರವೃತ್ತಿಯೇ ಬಂಧಕ್ಕೆ ಕಾರಣವು ಮತ್ತು ಸಂಯಮವೇ ಮೋಕ್ಷವೆಂದು ತಿಳಿಯಬೇಕು.

ಐಕ್ಯೇ ಪಾವೋನಿ ಏಕಾತ್ಮತಾ । ತೇಥೂನಿ ಬಂಧಮೋಕ್ಷ ಪಾಹತಾ । ದೋಹೀಂಚೀ ಮಿಥ್ಯಾವಾರ್ತಾ । ಮಾಯಿಕತಾ ನಿಶ್ಚಿತ ॥೧೩೮॥ ಪ್ರವೃತ್ತೀಮಾಜೀ ಬಂಧಮೋಕ್ಷತಾ । ತ್ಯಾ ದೋಹೀಂಚೀ ವಿಭಾಗತಾ । ಇಂದ್ರಿಯಾಂಚೀ ಜೇ ವಿಷಯಾಸಕ್ತತಾ । ''ದೃಢಬದ್ಧತಾ'' ತೀ ನಾಂವ ॥೧೩೯॥ ಕಾಯಾ-ವಾಚಾ-ಚಿತ್ತವೃತ್ತೀ । ನಿಃಶೇಷ ವಿಷಯಾಂಚೀ ವಿರಕ್ತೀ । ಯಾ ನಾಂವ ಸಾಚಾರ ''ಮುಕ್ತೀ'' । ಜಾಣ ನಿಶ್ಚಿತೀ ಉದ್ಧವಾ ॥೧೪೦॥ ಜ್ಯಾಸೀ ಸಾಚಾರ ಪಾಹಿಜೇ ಮುಕ್ತೀ । ತೇಣೇ ಕರಾವೀ ವಿಷಯನಿವೃತ್ತೀ । ಹೇಚಿ ಮುಖ್ಯತ್ವೇ ಉಪಾಯಸ್ಥಿತೀ । ಕೃಷ್ಣ ಕೃಪಾಮೂರ್ತೀ ಸಾಂಗತ ॥೧೪೧॥

ತಸ್ಮಾನ್ನಿಯಮ್ಯ ಷಡ್ವರ್ಗ ಮದ್‌ಭಾವೇನ ಚರೇನ್ಮುನಿಃ । ವಿರಕ್ತಃ ಕ್ಷುಲ್ಲಕಾಮೇಭ್ಯೋ ಲಬ್ಧ್ವಾತ್ಮನಿ ಸುಖಂ ಮಹತ್ ॥೨೩॥

ಅರ್ಥ:- ಸನ್ಯಾಸಿಯು ಮನವನ್ನು ಮತ್ತು ಐದು ಜ್ಞಾನ ಇಂದ್ರಿಯಗಳನ್ನು ಜಯಿಸಬೇಕು. ಉಪಭೋಗಗಳ ಕ್ಷುದ್ರತೆಯನ್ನು ತಿಳಿದು ಅವುಗಳಿಂದ ದೂರವಿರಬೇಕು ಮತ್ತು ತನ್ನ ಆತ್ಮತತ್ವದಲ್ಲಿಯೇ ಆನಂದದ ಅನುಭವವನ್ನು ಪಡೆಯಬೇಕು. ಈ ಪ್ರಕಾರವಾಗಿ ಸರ್ವತ್ರವೂ ನನ್ನನ್ನು ಕಾಣುತ್ತ ಆತನು ಭೂಮಿಯಲ್ಲಿ ಸಂಚರಿಸಬೇಕು.

ಯೇಣೇ ವಿಚಾರೇ ವಿಚಾರಿತಾ । ವಿಷಯಾಸಕ್ತೀ ದೃಢಬದ್ಧತಾ । ತ್ಯಾ ವಿಷಯಾಂಚಾ ತ್ಯಾಗ ಕರಿತಾ । ನಿಜಮುಕ್ತತಾ ಸಹಜೇಚೀ ॥೧೪೨॥ ತೇಚಿ ವಿಷಯಾಂಚೀ ವಿರಕ್ತೀ । ಕೇವೀ ಆತುಡೇ ಆಪುಲ್ಯಾ ಹಾತೀ । ಯಾಲಾಗೀ ವೈರಾಗ್ಯಾಚೀ ಉತ್ಪತ್ತೀ । ಸಾಧಕೇ ನಿಶ್ಚಿತೀ ಸಾಧಾವೀ ॥೧೪೩॥

ಈ ಪ್ರಕಾರವಾಗಿ ನನ್ನ ಧ್ಯಾನವನ್ನು ಅನನ್ಯ ಭಾವದಿಂದ ಮಾಡುವುದರಿಂದ ಸನ್ಯಾಸಿಯು ನಾನು, ನೀನು ಎಂಬ ಈ ಭಾವವನ್ನು ಮರೆತುಬಿಡುವನು. ಇದರಿಂದ ಆತನು ಭೇದರಹಿತ ಚೈತನ್ಯಮಯ ಮದ್ರೂಪನಾಗುವನು ॥೧೩೪॥ ಈ ಯಾವ ಮದ್ರೂಪದ ಸ್ವರೂಪಸ್ಥಿತಿಯನ್ನು ತಿಳಿಯಲು ಹೋದರೆ, ಅದು ವಾಸ್ತವಿಕವಾಗಿ ಆತ್ಮಸ್ವರೂಪವೇ ಆಗಿರುವುದು. ''ನಾನುನೀನೆಂಬ'' ಈ ಭಾವದ ಇಲ್ಲದಾಗುವಿಕೆಯ ಸ್ಥಿತಿಗೆ ಅಭೇದಪ್ರಾಪ್ತಿ ಎನ್ನುವರು ॥೧೩೫॥ ಎಲ್ಲಿಯವರೆಗೆ ದ್ವೈತದ ವಾರ್ತೆವಿರುವುದೋ, ಅಲ್ಲಿಯವರೆಗೆ ಸಾಧಕನಿಗೆ ಸಂಸಾರದ ಬಾಧೆಯು ಆಗುತ್ತಿರುವುದು. ದ್ವೈತವು ಸಂಪೂರ್ಣವಾಗಿ ನಿರಸನೆಯಾಗಲು, ಆಗ ವಿಶ್ವಚೈತನ್ಯದೊಂದಿಗೆ ಏಕರೂಪತೆಯು ಪ್ರಾಪ್ತವಾಗಿ ಸನ್ಯಾಸಿಯು ನಿರ್ಭಯನಾಗುವನು ॥೧೩೬॥ ಅಭೇದ ಭಾವವು ನಿರ್ಮಾಣವಾಗುತ್ತಲೇ ಬಂಧ, ಮೋಕ್ಷ ಎಂಬ ಭಾವವೂ ಕೂಡ ಇರುವುದಿಲ್ಲ. ಈಗ ಬಂಧ ಮತ್ತು ಮೋಕ್ಷ ಇವುಗಳ ಸ್ವರೂಪವನ್ನು ನೀನು ನೋಡು. ಹೀಗೆನ್ನುತ್ತ ಶ್ರೀಕೃಷ್ಣನು ಅವುಗಳ ಆಶ್ಚರ್ಯಕಾರಕ ಸ್ಥಿತಿಯನ್ನು ಹೇಳತೊಡಗಿದನು ॥೧೩೭॥

ಐಕ್ಯಭಾವದಿಂದ ಜೀವ-ಶಿವರ ಮಿಲನವನ್ನು ಮಾಡಿ ಬಂಧಮೋಕ್ಷದತ್ತ ನೋಡುತ್ತಿದ್ದರೆ, ಅವು ಎರಡೂ ಕೂಡ ಮಾಯಿಕ ಮತ್ತು ಮಿಥ್ಯೆಯಾಗಿ ಭಾಸವಾಗುವುವು ॥೧೩೮॥ ಬಂಧ ಮತ್ತು ಮೋಕ್ಷ ಇವು ಎರಡೂ ಪ್ರವೃತ್ತಿಯಲ್ಲಿರುವುವು. ಈ ಎರಡರ ಭೇದವನ್ನು ವಿಭಾಗಿಸಲು ಇಂದ್ರಿಯಗಳ ವಿಷಯಸಂಬಂಧಿತ ಆಸಕ್ತಿಯ ನಾಮವೇ ದೃಢಬಂಧನವಾಗಿರುವುದು ॥೧೩೯॥ ಹೇ ಉದ್ಧವಾ, ಕಾಯಾ, ವಾಚಾ, ಮನದಿಂದ ಪರಿಪೂರ್ಣವಾಗಿ ವಿಷಯಗಳ ಯಾವ ವಿರಕ್ತಿಯು, ಇದೇ ನಿಜವಾಗಿ ಮುಕ್ತಿ ಎಂದು ತಿಳಿಯಬೇಕು ॥೧೪೦॥ ಅದಕ್ಕಾಗಿಯೇ ನಿಜವಾಗಿಯೂ ಯಾರಿಗೆ ಮುಕ್ತಿಯು ಬೇಕಾಗಿದೆಯೋ, ಆತನು ವಿಷಯಗಳ ನಿವೃತ್ತಿಯನ್ನು ಮಾಡಬೇಕು. ಕೃಪಾಮೂರ್ತಿಯಾದ ಶ್ರೀಕೃಷ್ಣನು ಪ್ರಾಮುಖ್ಯವಾಗಿ ಈ ನಿವೃತ್ತಿಯ ಉಪಾಯವನ್ನೇ ಹೇಳುತ್ತಿರುವನು ॥೧೪೧॥

ಈ ಪ್ರಕಾರವಾಗಿ ವಿಚಾರ ಮಾಡಿ ನೋಡಲು ವಿಷಯಗಳ ಆಸಕ್ತಿಯಿಂದ ದೃಢವಾದ ಬಂಧನವು ಪ್ರಾಪ್ತವಾಗುತ್ತಿರುವುದು. ಹಾಗೆಯೇ ವಿಷಯಗಳನ್ನು ತ್ಯಾಗ ಮಾಡಲು, ಆಗ ಮುಕ್ತಿಯು ಸಹಜವಾಗಿಯೇ ದೊರೆಯುವುದು ॥೧೪೨॥ ಆದರೆ ಈ ಯಾವ ವಿಷಯಗಳ ವಿರಕ್ತಿಯು ತನ್ನ ಕೈಗೆ ಹೇಗೆ ಬಂದು ಮುಟ್ಟೀತು ಎಂಬ ಅಪೇಕ್ಷೆಯೊಂದಿಗೆ ಸಾಧಕನು ತನಗೆ ವೈರಾಗ್ಯವು ಉತ್ಪನ್ನವಾಗುವಂತೆ ಪ್ರಯತ್ನ ಪಡಬೇಕು ॥೧೪೩॥

ಅಂತರೀ ವಾಸನಾ ದೃಢಮೂಳ । ವಿಷಯಶಾಖಾ ತೇಣೇ ಸಬಳ । ತೇ ವಾಸನಾ ಛೇದಾವಯಾ ಸಮೂಳ । ವೈರಾಗ್ಯ ಸಬಳ ಸಾಧಾವೇ ॥೧೪೪॥ ವೈರಾಗ್ಯಪ್ರಾಪ್ತೀಚೇ ಕಾರಣ । ಸ್ವಧರ್ಮಕರ್ಮ ಮದರ್ಪಣ । ಸಾಂಡಾವೇ ಕರ್ಮಾಚೇ ಕರ್ತೇಪಣ । ''ಮದರ್ಪಣ'' ಯಾ ನಾಂವ ॥೧೪೫॥ ಮದರ್ಪಣೇ ಕರ್ಮಸ್ಥಿತೀ । ತೇಣೇ ಮಾಝ್ಯಾ ಠಾಯೀ ಉಪಜೇ ಪ್ರೀತೀ । ಮಾಜೇ ನಾಮ ಮಾಝೀ ಕೀರ್ತೀ । ಚಿಂತನ ಚಿತ್ತೀ ಪೈ ಮಾಝೇ ॥೧೪೬॥ ಐಶಿಯಾ ಮಾಝ್ಯಾ ಪರಮ ಪ್ರೀತೀ । ಹೋಯ ವೈರಾಗ್ಯಾಚೀ ಉತ್ಪತ್ತೀ । ತೇಣೇ ವಿಷಯಾಂಚೀ ವಿರಕ್ತೀ । ಮಾಝೀ ಸುಖಪ್ರಾಪ್ತೀ ಶನೈಃಶನೈಃ ॥೧೪೭॥ ಮಾಝೇನಿ ಸುಖೇ ಮಾಝೇ ಭಜನ । ಅತ್ಯಂತ ಥೋರಾವೇ ಪೈ ಜಾಣ । ತೇವ್ಹಾ ಸರ್ವತ್ರ ಮದ್ಭಾವನ । ಬ್ರಹ್ಮತ್ವೇ ಪೂರ್ಣ ಠಸಾವೇ ॥೧೪೮॥ ಸರ್ವತ್ರ ಬ್ರಹ್ಮ ಭಾವನ । ಬ್ರಹ್ಮ ಸುಖಾಚೇ ಅನುಸಂಧಾನ । ಧರೂನಿ ಕರಾವೇ ಪರ್ಯಟಣ । ಜಂವ ನಿರ್ವಾಸನ ಮನ ಹೋಯ ॥೧೪೯॥

ಪುರಗ್ರಾಮವ್ರಜಾನ್ ಸಾರ್ಥಾನ್ ಭಿಕ್ಷಾರ್ಥಂ ಪ್ರವಿಶಂಶ್ಚರೇತ್ । ಪುಣ್ಯದೇಶಸರಿಚ್ಛೈಲವನಾಶ್ರಮವತೀ ಮಹೀಮ್ ॥೨೪॥

ಅರ್ಥ:- ಸನ್ಯಾಸಿಯು ನದಿಗಳು ಹರಿಯುತ್ತಿರುವ, ಏಕಾಂತವಾಗಿರುವ ಪರ್ವತಗಳು ಮತ್ತು ಕಾನನಗಳ ನಡುವಿನ ಪುಣ್ಯ ಸ್ಥಳಗಳಲ್ಲಿ ಸಂಚರಿಸಬೇಕು. ನಗರ, ಪಟ್ಟಣ, ಗ್ರಾಮಗಳಲ್ಲಿ ತನ್ನ ಉಳುವಿಗಾಗಿ ಮಾತ್ರ ಭಿಕ್ಷೆಯನ್ನು ಬೇಡಬೇಕು.

ಪೃಥ್ವೀ ವಿಚರಣೇ ವಿಚಿತ್ರ । ಪುಣ್ಯದೇಶ ಕುರುಕ್ಷೇತ್ರ । ಸಪ್ತ ಪುರ್ಯಾ ಪರಮ ಪವಿತ್ರ । ಪುಷ್ಕರಾದಿ ಥೋರ ಮಹಾತೀರ್ಥೇ ॥೧೫೦॥ ಕೃತಮಾಲಾ ಪಯಸ್ವಿನೀ । ಪುಣ್ಯರೂಪ ತಾಮ್ರಪರ್ಣೀ । ಗೌತಮೀ ರೇವಾ ತ್ರಿವೇಣೀ । ಪರಮ ಪಾವನೀ ಗೋಮತೀ ॥೧೫೧॥ ಕೃಷ್ಣಾ ವೇಣ್ಯಾ ತುಂಗಭದ್ರಾ । ತಪತೀ ಪಯೋಷ್ಣೀ ಭಿಂವರಾ । ಯಮುನಾ ಭಾಗೀರಥೀ ನೀರಾ । ಗಂಗಾ ಸಾಗರಾಸಂಗಮೀ ॥೧೫೨॥ ಋಷ್ಯಮೂಕ ಶ್ರೀಶೈಲ ವ್ಯಂಕಟಾದ್ರೀ । ಮೂಳಪೀಠೀಂಚಾ ಸಹ್ಯಾದ್ರೀ । ಗೌತಮೀತೀರೀಂಚಾ ಬ್ರಹ್ಮ ಗಿರೀ । ತೋ ಪಾಪೇ ಸಂಹಾರೀ ಯಾತ್ರಾಮಾತ್ರೇ ॥೧೫೩॥ ಹೋ ಕಾ ಚಢತಾ ಹಿಮಗಿರೀ । ಪದೀ ದುರಿತಾಂತೇ ದೂರ ಕರೀ । ನಿಃಶೇಷ ಪಾಪಾಂತೇ ನಿವಾರೀ । ತೇ ಯಾತ್ರಾ ಮುನೀಶ್ವರೀ ಅವಶ್ಯ ಕೀಜೇ ॥೧೫೪॥ ದಂಡಕಾರಣ್ಯ ಬ್ರಹದ್ವನ । ನೈಮಿಷಾರಣ್ಯ ಆನಂದವನ । ಇತ್ಯಾದಿ ವನಾಂಚೇ ಗಮನ । ಸನ್ಯಾಶೀ ಜಾಣ ಕರಾವೇ ॥೧೫೫॥

ತನ್ನ ಅಂತಃಕರಣದಲ್ಲಿ ವಾಸನೆಯ ಮೂಲವು ಇರುವುದು. ಇದರಿಂದ ವಿಷಯರೂಪ ಶಾಖೆಗಳು ಬೆಳೆಯುತ್ತಿರುವುವು. ಆದ್ದರಿಂದ ವಾಸನೆಯ ಬೇರನ್ನು ಕಿತ್ತೊಗೆದು ತೀವ್ರವಾದ ವೈರಾಗ್ಯವನ್ನು ಧರಿಸಬೇಕು ॥೧೪೪॥ ಸ್ವಧರ್ಮವನ್ನು ಆಚರಿಸುತ್ತ ಅದನ್ನು ನನಗೆ ಅರ್ಪಿಸಬೇಕು. ಇದೇ ವೈರಾಗ್ಯಪ್ರಾಪ್ತಿಯ ಮುಖ್ಯ ಲಕ್ಷಣವಾಗಿರುವುದು. ಕರ್ಮಗಳನ್ನು ಮಾಡುತ್ತ ಅವುಗಳ ಕರ್ತೃತ್ವ ಭಾವವನ್ನು ಬಿಟ್ಟುಕೊಡುವುದು. ಇದಕ್ಕೇನೇ ''ಮದರ್ಪಣ'' ಎಂದು ಹೇಳುವರು ॥೧೪೫॥ ಮದರ್ಪಣ ಬುದ್ಧಿಯಿಂದ ಕರ್ಮಗಳನ್ನು ಮಾಡುತ್ತಿರಲು, ಆಗ ನನ್ನ ವಿಷಯದಲ್ಲಿ ಪ್ರೇಮವು ನಿರ್ಮಾಣವಾಗುವುದು ಮತ್ತು ಮನದಲ್ಲಿ ನನ್ನದೇ ನಾಮವು,ನನ್ನ ಕೀರ್ತಿ ಮತ್ತು ನನ್ನದೇ ಆದ ಚಿಂತನೆಯು ಸಾಧಿಸಲ್ಪಡುವುದು ॥೧೪೬॥ ಹೀಗೆ ನನ್ನಲ್ಲಿ ನಿಃಸ್ವಾರ್ಥ ಪ್ರೇಮವು ಬೆಳೆಯಲು, ಆಗ ಮನದಲ್ಲಿ ಸಹಜವಾಗಿಯೇ ವೈರಾಗ್ಯವು ಉತ್ಪನ್ನವಾಗುವುದು. ಇದರಿಂದ ವಿಷಯಗಳಲ್ಲಿ ವಿರಕ್ತಿಯು ಹುಟ್ಟುವುದು. ಹಾಗೆಯೇ ಮೆಲ್ಲಮೆಲ್ಲನೆ ನನ್ನ ಆನಂದದ ಪ್ರಾಪ್ತಿಯಾಗುವುದು ॥೧೪೭॥ ನನ್ನ ಆನಂದದಿಂದ ನನ್ನ ಭಜನೆಯು ದೃಢವಾಗುತ್ತ ಸಾಗುವುದು ಮತ್ತು ಸರ್ವತ್ರವೂ ನನ್ನದೇ ಭಾವನೆಯು ನಿರ್ಮಾಣವಾಗಿ ಬ್ರಹ್ಮತ್ವ ಭಾವನೆಯು ಪರಿಪೂರ್ಣವಾಗಿ ನಟ್ಟಿಕೊಳ್ಳುವುದು ॥೧೪೮॥ ಇದಕ್ಕಾಗಿ ಸರ್ವತ್ರವೂ ಬ್ರಹ್ಮಸ್ವರೂಪವು ತುಂಬಿರುವುದು. ಇದೆಲ್ಲವೂ ಭಗವಂತನ ಲೀಲಾವಿಲಾಸವಾಗಿರುವುದು ಎಂದು ತಿಳಿದು ಬ್ರಹ್ಮಾನಂದದಲ್ಲಿ ಲಕ್ಷವನ್ನಿಟ್ಟು ಮನವು ವಾಸನಾರಹಿತವಾಗುವವರೆಗೂ ಪೃಥ್ವಿಯ ಮೇಲೆ ಸಂಚರಿಸುತ್ತಲೇ ಇರಬೇಕು ॥೧೪೯॥

ಉತ್ತಮೋತ್ತಮವಾದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತ ಪೃಥ್ವಿಯ ಪರ್ಯಟನೆಯನ್ನು ಮಾಡಬೇಕು. ಪವಿತ್ರವಾದ ಕುರುಕ್ಷೇತ್ರ, ಪಾವನಗಳಾದ ಸಪ್ತಪುರಿಗಳು ಅಂದರೆ ಅಯೋಧ್ಯಾ, ಮಥುರಾ, ಮಾಯಾ, ಕಾಶೀ, ಕಾಂಚೀ, ಅವಂತಿಕಾ, ಜಗನ್ನಾಥಪುರಿ ಮತ್ತು ದ್ವಾರಕಾ ಹಾಗೆಯೇ ಪುಷ್ಕರ ಪ್ರಯಾಗ ಇತ್ಯಾದಿ ಮಹಾತೀರ್ಥಗಳು ॥೧೫೦॥ ಕೃತಮಾಲಾ, ಪಯಸ್ವಿನೀ, ಪುಣ್ಯಪ್ರದ, ತಾಮ್ರಪರ್ಣೀ, ಗೋದಾವರೀ, ನರ್ಮದಾ, ತ್ರಿವೇಣೀ, ಪರಮಪವಿತ್ರ ಗೋಮತೀ ॥೧೫೧॥ ಕೃಷ್ಣಾ, ವೇಣ್ಯಾ, ತುಂಗಭದ್ರಾ, ತಾಪೀ, ಚಂದ್ರಭಾಗಾ, ಪಯೋಷ್ಣೀ, ಯಮುನಾ, ಭಾಗೀರಥೀ,ನೀರಾ ಇವುಗಳ ನದಿ ತೀರಗಳು ಅಥವಾ ಎಲ್ಲಿ ಗಂಗಾ ಮತ್ತು ಸಮುದ್ರವು ಸಂಗಮವಾಗುವುದೋ, ಆ ಪ್ರದೇಶವು ॥೧೫೨॥ ಋಷ್ಯಮೂಕ, ಶ್ರೀಶೈಲ, ವೆಂಕಟಗಿರೀ, ಮೂಲಪೀಠದ ಸಹ್ಯಾದ್ರಿ, ಯಾವ ಯಾತ್ರಾಮಾತ್ರದಿಂದ ಸರ್ವ ಪ್ರಕಾರಗಳ ಪಾಪಗಳು ನಾಶವಾಗುವುವೋ ಅಂತಹ ಗೌತಮತೀರದ ಬ್ರಹ್ಮಗಿರಿ ॥೧೫೩॥ ಮತ್ತು ಯಾವುದರ ಮೇಲೆ ಹತ್ತುತ್ತ ಹೋಗಲು, ಪ್ರತಿಯೊಂದು ಹೆಜ್ಜೆಗೆ ಪಾಪಗಳನಾಶವಾಗುವುದು. ಯಾವುದು ಸರ್ವಪ್ರಕಾರದ ಪಾತಕಗಳನ್ನು ಪರಿಪೂರ್ಣವಾಗಿ ನಿವಾರಣೆಯನ್ನು ಮಾಡುವುದು. ಇಂತಹ ಯಾವ ಹಿಮಾಲಯದ ಯಾತ್ರೆಯನ್ನು ಮುನೀಶ್ವರರು ಅವಶ್ಯವಾಗಿ ಮಾಡಬೇಕು ॥೧೫೪॥ ದಂಡಕಾರಣ್ಯ ನಾಮದ ದೊಡ್ಡ ಅರಣ್ಯವು, ನೈಮಿಷಾರಣ್ಯ, ಆನಂದವನ ನಾಮದ ಕಾಶಿಕ್ಷೇತ್ರ ಹತ್ತಿರದ ವನವು. ಈ ಸ್ಥಳಕ್ಕೆಸನ್ಯಾಸಿಗಳು ಅವಶ್ಯವಾಗಿ ಯಾತ್ರೆ ಮಾಡಬೇಕು ॥೧೫೫॥

ಚ್ಯವನಕಪಿಲವ್ಯಾಸಾಶ್ರಮ । ಗೌತಮವಾಮನ ಆಶ್ರಮೋತ್ತಮ । ಯಾತ್ರಾ ಶ್ರೇಷ್ಠ ಬದರಿಕಾಶ್ರಮ । ಜೋ ಸಕಳ ಕರ್ಮದಾಹಕು ।।೧೫೬।। ಐಶೀ ಸ್ಥಳೇ ಜೇ ಪಾವನ । ತೇಥೇ ಸನ್ಯಾಶಿಯೇ ಕರಾವೇ ಗಮನ । ಮಾರ್ಗೀ ಭಿಕ್ಷಾರ್ಥ ಜೇ ಅಟನ । ತೇಹೀ ನಿರೂಪಣ ಅವಧಾರೀ ।।೧೫೭।। ಹಾಟ ಹಾಟವಟಿಯಾ ಅತಿ ಉತ್ತಮ । ತ್ಯಾತೇ ''ಪುರ'' ಮ್ಹಣತೀ ನರೋತ್ತಮ । ಹಾಟಹಾಟವಟಿಯಾಹೀನ ತೋ ''ಗ್ರಾಮ''। ಭಿಕ್ಷೇಚಾ ನೇಮ ಸಾರಾವಾ ತೇಥೇ ।।೧೫೮।। ಗಾಯೀಗೌಳಿಯಾಂಚೇ ನಿವಾಸಸ್ಥಾನ । ''ವ್ರಜ'' ತ್ಯಾತೇ ಮ್ಹಣತೀ ಜಾಣ । ''ಸಾರ್ಥ'' ಮ್ಹಣಿಜೇ ಪವ್ಹಾ ಸಂಪೂರ್ಣ । ಭಿಕ್ಷಾರ್ಥ ಅಟನ ಕರಾವೇ ತೇಥೇ ।।೧೫೯।। ಪವಿತ್ರ ಭಿಕ್ಷೇಚೇ ಪ್ರಾಪ್ತೀಕಾರಣೇ । ಸನ್ಯಾಸೀ ಅವಶ್ಯ ಜಾಣೇ । ತೇಚಿ ಅರ್ಥೀಚೇ ನಿರೂಪಣೇ । ಸ್ವಯೇ ಶ್ರೀಕೃಷ್ಣೇ ಸಾಂಗಿಜೇ ।।೧೬೦।।

ವಾನಪ್ರಸ್ಥಾಶ್ರಮಪದೇಷ್ವಭೀಕ್ಷ್ಣಂ ಭೈಕ್ಷಮಾಚರೇತ್ । ಸಂಸಿಧ್ಯತ್ಯಾಶ್ವಸಂಮೋಹಃ ಶುದ್ಧಸತ್ತ್ವಃ ಶಿಲಾಂಧಸಾ ।।೨೫।।

ಅರ್ಥ:- ವಾನಪ್ರಸ್ಥಾಶ್ರಮದಲ್ಲಿ ಭಿಕ್ಷಾಚರಣೆಯನ್ನು ಮಾಡಬೇಕು. ಶೀಲವೃತ್ತಿಯಿಂದ ಪ್ರಾಪ್ತಮಾಡಿಕೊಂಡ ಅನ್ನದಿಂದ ಸನ್ಯಾಸಿಯ ಚಿತ್ತವು ಶುದ್ಧವಾಗುವುದು. ಸರ್ವ ಪ್ರಕಾರದ ಮೋಹವು ದೂರಾಗುವುದು ಹಾಗೂ ಆತನು ಮುಕ್ತನಾಗುವನು.

ಶುದ್ಧವ್ಹಾವಯಾ ಅಂತರ । ವಾನಪ್ರಸ್ಥಾಶ್ರಮೀ ಜೋ ನರ । ಜಾಊನಿ ಠಾಕಾವೇ ತ್ಯಾಚೇ ದ್ವಾರ । ಅತಿಸಾದರ ಭಿಕ್ಷಾರ್ಥ ।।೧೬೧।। ಸೇವಿತಾ ಸಾತ್ತ್ವಿಕಾಚೇ ಅನ್ನಾಸೀ । ಶುದ್ಧ ಸತ್ತ್ವತಾ ಸಾಧಕಾಸೀ । ತತ್ಕಾಳ ಹೋಯ ಗ್ರಾಸೋಗ್ರಾಸೀ । ಶುದ್ಧ ಅನ್ನಾಸೀ ಹಾ ಮಹಿಮಾ ।।೧೬೨।। ಯಾಲಾಗೀ ವಾನಪ್ರಸ್ಥಾಚೇ ದ್ವಾರ । ಠಾಕೋನಿ ಜಾವೇ ವಾರಂವಾರ । ತೇಣೇ ಸತ್ತ್ವಶುದ್ಧೀ ಅನಿವಾರ । ಹೋಯ ಸಾಚಾರ ಸಾಧಕಾ ।।೧೬೩।। ಶುದ್ಧ ಭಿಕ್ಷೇಚಿಯೇ ಪ್ರಾಪ್ತೀ । ಸತ್ತ್ವಶುದ್ಧ ಹೋಯ ವೃತ್ತೀ । ತೇಣೇ ವಾಸನಾ ನಿಃಶೇಷ ನಾಸತೀ । ನಿಜಶಾಂತೀ ಉಲ್ಹಾಸೇ ।।೧೬೪।। ವಾಸನಾ ನಾಸಲ್ಯಾ ನಿಲಾಗ । ತೋ ಸತ್ಯತ್ವೇ ನ ದೇಖೇ ಜಗ । ವಿಷಯಾಸಕ್ತಿ ಕೈಚೀ ಮಗ । ಸಹಜ ವಿರಾಗ ಉದ್ಭಟ ।।೧೬೫।।

ನೈತದ್ವಸ್ತುತಯಾ ಪಶ್ಯೇದ್ ದೃಶ್ಯಮಾನಂ ವಿನಶ್ಯತಿ । ಅಸಕ್ತಚಿತ್ತೋ ವಿರಮೇದಿಹಾಮುತ್ರ ಚಿಕೀರ್ಷಿತಾತ್ ।।೨೬।।

ಅರ್ಥ:- ವಿಚಾರವಂತ ಸನ್ಯಾಸಿಯು ದೃಶ್ಯಮಯ ಜಗತ್ತನ್ನು ಸತ್ಯವಸ್ತು ಎಂದು ತಿಳಿಯಬಾರದು. ಕಾರಣ ಇದು ಪ್ರತ್ಯಕ್ಷವಾಗಿ ನಾಶಿವಂತವಾಗಿರುವುದು. ಈ ಜಗತ್ತಿನಲ್ಲಿ ಎಲ್ಲಿಯೂ ತನ್ನ ಚಿತ್ತವನ್ನು ಹಚ್ಚಕೂಡದು. ಈ ಲೋಕದ ಮತ್ತು ಪರಲೋಕದ ಏನನ್ನೂ ಪಡೆಯುವ ಇಚ್ಛೆಯನ್ನು ಇಡಕೂಡದು.

ಯೇಥೇ ಜೇ ಜೇ ದಿಸೇ ತೇ ತೇ ನಾಸೇ । ಹೇ ಸರ್ವಾಸೀ ಪ್ರತ್ಯಕ್ಷ ಆಭಾಸೇ । ಪರೀ ಅಜ್ಞಾನೇ ಭುಲಲೇ ಕೈಸೇ । ವಿಷಯವಿಲಾಸೇ ಗುಂತೋನೀ ।।೧೬೬।।

ಚ್ಯವನ, ಕಪೀಲ,ಮತ್ತು ವ್ಯಾಸ ಇವರ ಆಶ್ರಮ, ಗೌತಮ ಮತ್ತು ವಾಮನ ಇತ್ಯಾದಿ ಶ್ರೇಷ್ಠ ಋಷಿಗಳ ಆಶ್ರಮ ಹಾಗೆಯೇ ಸರ್ವ ಕರ್ಮದಾಹಕವಾಗಿರುವ ಬದರಿಕಾಶ್ರಮದ ಯಾತ್ರೆಯನ್ನು ಮಾಡಬೇಕು ।।೧೫೬।। ಹೀಗೆ ಪರಮ ಪವಿತ್ರ ತೀರ್ಥ ಕ್ಷೇತ್ರಗಳು ಅನೇಕ ಇರುವುವು. ಅಲ್ಲಿ ಸನ್ಯಾಸಿಗಳು ಅವಶ್ಯವಾಗಿ ಹೋಗಬೇಕು. ಈಗ ಮಾರ್ಗದಲ್ಲಿ ಭಿಕ್ಷೆಯನ್ನು ಎಲ್ಲಿ ಬೇಡಬೇಕೆಂಬುದು ಹೇಳುವೆನು, ಕೇಳು ।।೧೫೭।। ಎಲ್ಲಿ ದೊಡ್ಡ ರಸ್ತೆ, ಬಜಾರ ಇರುವುದೋ ಅದಕ್ಕೆ ತಿಳಿದವರು ''ಪುರ'' ಎಂದು ಕರೆಯುವರು. ಎಲ್ಲಿ ದೊಡ್ಡ ರಸ್ತೆ, ಬಜಾರಗಳಿರುವುದಿಲ್ಲವೋ ಇದಕ್ಕೆ ಪುಟ್ಟ ಗ್ರಾಮವೆನ್ನುವರು. ಇಲ್ಲಿ ಹೋಗಿ ಭಿಕ್ಷೆಯ ನೇಮವನ್ನು ಪೂರ್ಣಗೊಳಿಸಬೇಕು ।।೧೫೮।। ಗೋವು, ಗೌಳಿಯರು ಇದ್ದಲ್ಲಿ ''ವ್ರಜ'' ಎನ್ನುವರು. ''ಸಾರ್ಥ'' ಎಂದರೆ ಅನ್ನಛತ್ರ. ಅಲ್ಲಿ ಸನ್ಯಾಸಿಗಳು ಭಿಕ್ಷೆಗಾಗಿ ತಿರುಗುತ್ತಿರಬೇಕು।।೧೫೯।। ಪವಿತ್ರ ಭಿಕ್ಷೆಗಾಗಿ ಸನ್ಯಾಸಿಗಳವರು ಈ ಪ್ರಕಾರವಾಗಿ ತಿರುಗಬೇಕು, ಇದೇ ಅರ್ಥದ ನಿರೂಪಣೆಯನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುವನು ।।೧೬೦।।

ಅಂತಃಕರಣವು ಶುದ್ಧವಾಗುವುದಕ್ಕಾಗಿ ವಾನಪ್ರಸ್ಥ ಸ್ವೀಕರಿಸಿರುವ ಪುರುಷನ ಬಾಗಿಲಲ್ಲಿ ಭಿಕ್ಷೆ ಬೇಡಲು ಅತ್ಯಂತ ಆದರದಿಂದ ಹೋಗಿ ನಿಲ್ಲಬೇಕು ।।೧೬೧।। ಏಕೆಂದರೆ ಸಾತ್ವಿಕ ಮನುಷ್ಯನ ಮನೆಯಲ್ಲಿನ ಅನ್ನವನ್ನು ಸೇವಿಸಲು ಪ್ರತಿಯೊಂದು ತುತ್ತು ತುತ್ತಿಗೂ ಸಾಧಕನ ಸತ್ವಗುಣವು ಬೆಳೆಯುತ್ತ ಸಾಗುವುದು. ಶುದ್ಧ ಅನ್ನದ ಮಹಿಮೆ ಇದಾಗಿರುವುದು ।।೧೬೨।। ಅದಕ್ಕಾಗಿ ವಾನಪ್ರಸ್ಥನ ಬಾಗಿಲವನ್ನು ಕಂಡು ಅಲ್ಲಿ ಮೇಲಿಂದ ಮೇಲೆ ಹೋಗುತ್ತಿರಬೇಕು. ಇದರಿಂದ ಸಾಧಕನ ಚಿತ್ತವು ಸಹಜವಾಗಿಯೇ ಸತ್ವಶುದ್ಧಿಯಾಗುವುದು ।।೧೬೩।। ಶುದ್ಧವಾದ, ಪವಿತ್ರವಾದ ಭಿಕ್ಷೆಯು ದೊರೆತರೆ ತನ್ನ ವೃತ್ತಿಯು ಸಾತ್ವಿಕವಾಗುವುದು. ಇದರಿಂದ ವಾಸನೆಯೂ ಕೂಡ ಇಲ್ಲದಾಗುವುದು ಹಾಗೂ ಆತ್ಮಶಾಂತಿಯು ಪ್ರಕಟವಾಗುವುದು ।।೧೬೪।। ವಾಸನೆಯು ಪರಿಪೂರ್ಣವಾಗಿ ಮುಗಿದುಹೋಯಿತೆಂದರೆ ಆತನಿಗೆ ಜಗತ್ತು ಸತ್ಯತ್ವದಿಂದ ತೋರುವುದಿಲ್ಲ. ಇದರಿಂದ ವಿಷಯಗಳ ಆಸಕ್ತಿಯು ಪೂರ್ಣವಾಗಿ ನಷ್ಟವಾಗಿ ಮಂಗಲಮಯವಾದ ವೈರಾಗ್ಯವು ಪ್ರಕಟವಾಗುವುದು ।।೧೬೫।।

ಈ ಯಾವ ಸೃಷ್ಟಿಯಲ್ಲಿ ಏನೇನು ಕಾಣುವುದೋ, ಅದೆಲ್ಲವೂ ನಾಶಿವಂತವಾಗಿರುವುದು. ಆದರೆ ಅಜ್ಞಾನಿ ಜನರು ವಿಷಯ ವಿಲಾಸಗಳಲ್ಲಿ ಸಿಲುಕಿಕೊಂಡು ಹೇಗೆ ಮರಳಾಗುವರೋ ತಿಳಿಯದು ।।೧೬೬।।

ಯಾಲಾಗಿ ಶುದ್ಧ ಭಿಕ್ಷೇಚಿಯೇ ಪ್ರಾಪ್ತೀ । ಜ್ಯಾಚೇ ಶುದ್ಧಸತ್ತ್ವ ಝಾಲೀ ವೃತ್ತೀ । ತ್ಯಾಸೀ ವಿಷಯ ಸತ್ಯತ್ವೇ ನ ದಿಸತೀ । ಮಾ ವಿಷಯಾಸಕ್ತೀ ತೇಥೇ ಕೈಚೀ ॥೧೬೭॥ ಐಸೇ ಮಿಥ್ಯಾ ವಿಷಯಾಂಚೇ ಭಾನ । ತ್ಯಾಚೇ ವಿಷಯಾಸಕ್ತ ನವ್ಹೇ ಮನ । ಯಾಲಾಗೀ ಭವಸ್ವರ್ಗಸಾಧನ । ದೋನ್ಹೀ ತೋ ಜಾಣ ಸ್ಪರ್ಶೇನಾ ॥೧೬೮॥ ಐಸಾ ಜೋ ವಿಷಯವಿರಕ್ತ । ತ್ಯಾಚೇ ಪರಮಾರ್ಥಿ ಲಾಗೇ ಚಿತ್ತ । ತೋ ಜಗೀ ವಿಚರೇ ಅನಾಸಕ್ತ । ಪರಮಾರ್ಥಯುಕ್ತ ನಿಜಬೋಧೇ ॥೧೬೯॥ ತ್ಯಾಚ್ಯಾ ನಿಜಬೋಧಾಚೇ ಲಕ್ಷಣ । ಸ್ವಯೇ ಸಾಂಗತಾಹೇ ನಾರಾಯಣ । ಪ್ರಪಂಚಾಚೇ ಮಿಥ್ಯಾಪಣ । ಸಮಾಧಾನ ನಿಜಾತ್ಮತಾ ॥೧೭೦॥

ಯದೇತದಾತ್ಮನಿ ಜಗನ್ಮನೋವಾಕ್‌ಪ್ರಾಣಸಂಹತಮ್ । ಸರ್ವ ಮಾಯೇತಿ ತರ್ಕೇಣ ಸ್ವಸ್ಥಸ್ತ್ಯಕ್ತ್ವಾ ನತತ್ಸ್ಮರೇತ್ ॥೨೭॥

ಅರ್ಥ:- ಮಮತೆಯ ಮತ್ತು ಅಹಂಕಾರದ ಸ್ಥಾನವಾದ ಮನ, ವಾಕ್ ಮತ್ತು ಪ್ರಾಣ ಇವುಗಳ ಸಮೇತ ಈ ಶರೀರವು ಸರ್ವ ಸುಖಿಗಳು ಇತ್ಯಾದಿ ಸರ್ವ ಜಗತ್ತು ಇವು ಆತ್ಮನಲ್ಲಿ ಮಾಯಾ ಮಾತ್ರ ಕಲ್ಪಿತವಾಗಿರುವುವು. ಈ ವಿಚಾರದಿಂದ ಅವುಗಳ ತ್ಯಾಗವನ್ನು ಮಾಡಿ ತಮ್ಮ ಆತ್ಮಸ್ವರೂಪದಲ್ಲಿ ಸ್ಥಿರರಾಗಿರಬೇಕು. ಪುನಃ ಮಿಥ್ಯೆಯಾದ ಜಗತ್ತಿನ ವಿಚಾರವನ್ನೇ ಮಾಡಬಾರದು.

ಮನಸಾ-ವಾಚಾ-ಪ್ರಾಣಪ್ರವಾಹೀ । ಅಹಂಕಾರಕೃತ ಉಭಯದೇಹೀ । ಜಗ ಆತ್ಮ್ಯಾಚ್ಯಾ ಠಾಯೀ । ಮಿಥ್ಯಾ ಮಾಯಿಕ ಪಾಹೀ ಆಭಾಸೇ ॥೧೭೧॥ ದೋರಾಅಂಗೀ ಸರ್ಪಾಭಾಸ । ಶುಕ್ತಿಕೇಮಾಜೀ ರಜತಪ್ರಕಾಶ । ಉಖರೀ ಮೃಗಜಳಾಚಾ ವಿಲಾಸ । ತೈಸಾ ಜಗದಾಭಾಸ ಚಿನ್ಮಾತ್ರೀ ॥೧೭೨॥ ಜೈಸಾ ಸ್ವಪ್ನೀಂಚಾ ವ್ಯವಹಾರ । ತೈಸೇ ಭಾಸೇ ಚರಾಚರ । ಐಸೇ ಮಿಥ್ಯಾ ಜಾಣೋನಿ ಸಾಚಾರ । ಪುಢತೀ ಸ್ಮರಣಾದರ ಸ್ಫುರೇನಾ ॥೧೭೩॥ ಜೋ ಜಾಗಾ ಝಾಲಾ ಇತ್ಯಂಭೂತ । ತೈ ಸ್ವಪ್ನಭೋಗ ನ ವಾಂಛೀ ಚಿತ್ತ । ತೇವೀ ಸ್ವರೂಪೀ ಜೋ ಸುನಿಶ್ಚಿತ । ತೋ ಪ್ರಪಂಚಜಾತ ಸ್ಮರೇನಾ ॥೧೭೪॥ ತ್ರಿದಂಡೀ ಬಹೂದಕಾಚೇ ಕರ್ಮ । ತುಜ ಮ್ಯಾ ಸಾಂಗೀತಲೇ ಸುಗಮ । ಆತಾ ಹಂಸ ಪರಮಹಂಸಾಚೇ ಧರ್ಮ । ಯಥಾನುಕ್ರಮ ಅವಧಾರೀ ॥೧೭೫॥ ಸನ್ಯಾಸ ಚತುರ್ವಿದ ದೇಖ । ''ಹಂಸ'' ''ಪರಮಹಂಸ'' ಏಕ । ಏಕ ತೋ ''ಬಹೂದಕ'' । ''ಕುಟೀಚಕ'' ತೋ ಭಿನ್ನ ॥೧೭೬॥ ಕರ್ಮ ತ್ಯಾಗೋನಿ ಝಾಲಾ ಸನ್ಯಾಸೀ । ಜ್ಞಾನ ಧ್ಯಾನ ನಾಹೀ ಮಾನಸೀ । ಅನ್ನಾಲಾಗೀ ಸ್ವಗ್ರಾಮವಾಸೀ । ''ಕುಟೀಚಕ'' ತಯಾಸೀ ಬೋಲಿಜೇ ॥೧೭೭॥

ಅದಕ್ಕಾಗಿ ಸಾತ್ವಿಕ ಭಿಕ್ಷೆಯ ಪ್ರಾಪ್ತಿಯಿಂದ ಆತನ ಚಿತ್ತಶುದ್ಧಿಯು ಆಗಿದ್ದರೆ, ಆತನಿಗೆ ಈ ವಿಷಯಗಳು ಸತ್ಯವಾಗಿ ತೋರುವುದಿಲ್ಲ. ಅಂದಮೇಲೆ ಆತನ ಮನದಲ್ಲಿ ವಿಷಯಾಸಕ್ತಿಯು ಹೇಗೆ ನಿರ್ಮಾಣವಾದೀತು? ॥೧೬೭॥ ಈ ಪ್ರಕಾರವಾಗಿ ವಿಷಯಗಳು ಮಿಥ್ಯೆಯಾಗಿವೆ ಎಂದು ಒಮ್ಮೆ ತಿಳಿದರೆ ಸಾಕು, ಆತನ ಮನವು ವಿಷಯಗಳಿಂದ ಆಸಕ್ತವಾಗಲಾರದು. ಆದ್ದರಿಂದ ಆತನು ಸಂಸಾರ ಮತ್ತು ಸ್ವರ್ಗ ಈ ಎರಡರ ಪ್ರಾಪ್ತಿಯ ಸಾಧನೆಗಳಿಗೆ ಸ್ಪರ್ಶ ಕೂಡ ಮಾಡಲಾರನು ॥೧೬೮॥ ಈ ಪ್ರಕಾರವಾಗಿ ಯಾವನು ವಿಷಯಗಳ ವಿಷಯಕ್ಕೆ ವಿರಕ್ತನಾಗುವನೋ, ಆತನ ಚಿತ್ತವು ಪರಮಾರ್ಥದತ್ತ ನಟ್ಟಿಕೊಳ್ಳುವುದು. ಆದ್ದರಿಂದ ಆತನು ಅನಾಸಕ್ತನಾಗಿ ನಿಜಬೋಧೆಯಿಂದ ಪ್ರೇಮಮಯನಾಗಿ ಜಗತ್ತಿನಲ್ಲಿ ಸಂಚಾರವನ್ನು ಮಾಡುತ್ತಿರುವನು ॥೧೬೯॥ ಆತನ ನಿಜಬೋಧದ ಲಕ್ಷಣವೇನೆಂದರೆ, ಪ್ರಪಂಚದ ಮಿಥ್ಯತ್ವ ಮತ್ತು ಆತ್ಮಸ್ವರೂಪದಿಂದ ಬರುವ ಸಮಾಧಾನವಾಗಿರುವುದು. ಇದರ ವರ್ಣನೆಯನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೧೭೦॥

ಮನ, ವಾಣೀ ಮತ್ತು ಪ್ರಾಣ ಇವುಗಳ ಪ್ರವಾಹದಲ್ಲಿ ಅಹಂಕಾರವು ನಿರ್ಮಿಸಿರುವ ಯಾವ ಸ್ಥೂಲ ಮತ್ತು ಸೂಕ್ಷ್ಮ ಹೀಗೆ ಎರಡೂ ದೇಹಗಳು ಆತ್ಮನಲ್ಲಿ ಮಿಥ್ಯೆಯಾಗಿ ಭಾಸಿಸುತ್ತಿರುವುವು ॥೧೭೧॥ ಯಾವ ಪ್ರಕಾರವಾಗಿ ಹಗ್ಗದಲ್ಲಿ ಸರ್ಪದ ಭಾಸವಾಗುತ್ತಿರುವುದೋ, ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯ ಭಾಸವಾಗುತ್ತಿರುವುದೋ, ಅಥವಾ ಬಯಲು ಭೂಮಿಯಲ್ಲಿ ಮೃಗಜಲದ ಭಾಸವಾಗುತ್ತಿರವುದೋ, ಅದೇ ಪ್ರಕಾರವಾಗಿ ಚಿನ್ಮಾತ್ರ ಬ್ರಹ್ಮತತ್ತ್ವದಲ್ಲಿ ಜಗತ್ತಿನ ಭಾಸವಾಗುತ್ತಿರುವುದು ॥೧೭೨॥ ಸ್ವಪ್ನದಲ್ಲಿನ ಯಾವತ್ತೂ ವ್ಯವಹಾರಗಳು ಯಾವ ಪ್ರಕಾರವಾಗಿ ಮಿಥ್ಯೆಯಾಗಿರುವುವೋ, ಅದೇ ಪ್ರಕಾರವಾಗಿ ಈ ಯಾವ ಸರ್ವ ಚರಾಚರ ಜಗತ್ತು ಮಿಥ್ಯೆಯಾಗಿರುವುದು. ಈ ಎಲ್ಲವೂ ನಿಜವಾಗಿ ಮಿಥ್ಯೆ ಎಂದು ದೃಢನಿಶ್ಚಯವಾಗಲು, ತದನಂತರ ಸ್ಮರಣೆಯ ವಿಷಯದಲ್ಲಿ ಯಾವ ಆದರವೂ ಉಳಿಯುವುದಿಲ್ಲ ॥೧೭೩॥ ಯಾವ ವ್ಯಕ್ತಿಯು ನಿದ್ರೆಯಿಂದ ಪೂರ್ಣ ಎಚ್ಚರಾದ ಮೇಲೆ ಆತನ ಮನವು ಸ್ವಪ್ನದಲ್ಲಿನ ಭೋಗಗಳನ್ನು ಇಚ್ಛಿಸುವುದಿಲ್ಲ. ಅದರಂತೆ ಸ್ವರೂಪದಲ್ಲಿ ಯಾರ ಮನವು ಸ್ಥಿರವಾಗಿದೆಯೋ ಆತನು ಪ್ರಪಂಚದ ಯಾವುದೇ ವಸ್ತುವಿನ ಸ್ಮರಣೆಯನ್ನು ಮಾಡುವುದಿಲ್ಲ ॥೧೭೪॥ ಈ ಪ್ರಕಾರವಾಗಿ ತ್ರಿದಂಡಿ ಮತ್ತು ಬಹೂದಕ ಈ ಸನ್ಯಾಸಿಗಳವರ ಕರ್ಮಗಳನ್ನು ನಾನು ನಿನಗೆ ಸುಗಮ ಮಾಡಿ ತಿಳಿಸಿರುವೆನು. ಈಗ ಹಂಸ ಮತ್ತು ಪರಮಹಂಸ ಇವುಗಳ ಧರ್ಮವನ್ನೂ ಕೂಡ ನಿನಗೆ ಕ್ರಮವಾಗಿ ಹೇಳುವೆನು ॥೧೭೫॥ ಸನ್ಯಾಸವು ನಾಲ್ಕು ಪ್ರಕಾರಗಳಾಗಿರುವುವು. ಒಂದನೇಯ ಹಂಸ, ಎರಡನೇಯ ಪರಮಹಂಸ, ಮೂರನೆಯ ಬಹೂದಕ ಮತ್ತು ನಾಲ್ಕನೆಯ ಕುಟೀಚಕವಾಗಿದೆ ॥೧೭೬॥ ಯಾವನು ಕರ್ಮಗಳನ್ನು ಬಿಟ್ಟುಕೊಟ್ಟು ಸನ್ಯಾಸಿಯಾಗಿ ಮನದಲ್ಲಿ ಧ್ಯಾನವೂ ಇಲ್ಲ. ಜ್ಞಾನವೂ ಇಲ್ಲ ಮತ್ತು ಅನ್ನಕ್ಕಾಗಿ ತನ್ನ ಊರಲ್ಲಿಯೇ ಇರುತ್ತಿರುವನೋ, ಈತನಿಗೆ ಕುಟೀಚಕ ಎಂದು ಹೇಳುವರು ॥೧೭೭॥

ವಾರ್ಧಕೀ ಕುಟೀಚಕಾಚೀ ಪರೀ । ಅಗ್ನಿಹೋತ್ರ- ಸ್ತ್ರೀಯೇಚಾ ತ್ಯಾಗ ಕರೀ । ಪರೀ ಶಿಖಾಸೂತ್ರ ನ ಅವ್ಹೇರೀ । ಗಾಯತ್ರೀಮಂತ್ರೀ ಅಧಿಕಾರು ।।೧೭೮।। ನಿತ್ಯ ಭಿಕ್ಷಾ ಪುತ್ರಾಚೇ ಘರೀ । ಪರ್ಣಕುಟೀ ಬಾಂಧೇ ತ್ಯಾಚೇ ದ್ವಾರೀ । ಮಠಿಕಾ ಸಾಂಡೋನಿ ನ ವಚೇ ದೂರೀ । ''ಕುಟೀಚಕ'' ನಿರ್ಧಾರೀ ಯಾ ನಾಂವ ।।೧೭೯।। ಶಿಖಾಸೂತ್ರ ತ್ಯಾಗೋನಿ ಜಾಣ । ಕರೂನಿ ತ್ರಿದಂಡಾಚೇ ಗ್ರಹಣ । ಕೇವಳ ಕರೀ ಕರ್ಮಾಚರಣ । ಜ್ಞಾನಾಚೇ ಲಕ್ಷಣ ಜಾಣೇನಾ ।।೧೮೦।। ನಾಹೀ ವೈರಾಗ್ಯ ವರಿಷ್ಠ । ನ ದಿಸೇ ಜ್ಞಾನನಿಷ್ಠಾ ಶ್ರೇಷ್ಠ । ಅತಿಶಯೇಸೀ ಜೋ ಕರ್ಮಿಷ್ಠ । ''ಬಹೂದಕ'' ಜ್ಯೇಷ್ಠ ತ್ಯಾಸೀ ಮ್ಹಣತೀ ।।೧೮೧।। ತೋ ಕಾ ವೈರಾಗ್ಯಾಚಾ ನಿರ್ಧಾರೀ । ಜ್ಞಾನಸಾಧನಾರ್ಥ ವಿಚಾರೀ । ಶಿಖಾಸೂತ್ರ ಕರ್ಮತ್ಯಾಗ ಕರೀ । ಆತ್ಮ ಚಿಂತನಾವರೀ ನಿಜನಿಷ್ಠಾ ।।೧೮೨।। ಐಸಾ ಜೋ ತ್ಯಾಗವಿಲಾಸ । ಯಾ ನಾಂವ ''ವಿವಿದಿಷಾ'' ಸನ್ಯಾಸ । ಐಶಿಯಾ ನಿಷ್ಠೇ ವರ್ತೆ ತೋ ''ಹಂಸ'' । ಏಕ ಪರಮಹಂಸ ಹಾ ಮ್ಹಣತೀ ।।೧೮೩।। ಏಕ ಪರಮಹಂಸಾಚೇ ಲಕ್ಷಣ । ಜ್ಞಾನಪರಿಪಾಕೇ ಪರಿಪೂರ್ಣ । ಅತಏವ ಶಾಂತಿ ವೋಳಂಗೇ ಆಂಗಣ । ದೇಖೇ ತಿನ್ಹೀ ಗುಣ ಮಿಥ್ಯಾತ್ವೇ ।।೧೮೪।। ಮಿಥ್ಯಾ ಜಾಣೇ ಕರ್ಮಾಚೀ ವಾರ್ತಾ । ಆಪುಲೀ ದೇಖೇ ನಿತ್ಯ ನಿಷ್ಕರ್ಮತಾ । ಕರ್ಮಕ್ರಿಯಾ ಜೇ ಕರ್ತವ್ಯತಾ । ತೇ ಪ್ರಕೃತೀಚೇ ಮಾಥಾ ಪ್ರಾರಬ್ಧೇ ।।೧೮೫।। ಐಶಿಯಾ ಸ್ಥಿತೀ ಸಾವಕಾಶ । ತ್ಯಾ ನಾಂವ ಜಾಣ ''ಪರಮಹಂಸ'' । ನಾಹೀ ಮಠ ಮಠಿಕಾ ವಿಲಾಸ । ನಿತ್ಯ ಉದಾಸ ನಿರಾಶ್ರಯೀ ।।೧೮೬।। ಆತಾ ಹಂಸ ಪರಮಹಂಸಾಂಚೇ ಧರ್ಮ । ಸ್ವಯೇ ಸಾಂಗತಾಹೇ ಪುರುಷೋತ್ತಮ । ತ್ಯಾ ಧರ್ಮಾಚೇ ವಿಶದ ವರ್ಮ । ಏಕ ಸುಗಮ ಉದ್ಧವಾ ।।೧೮೭।।

ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾಽನಪೇಕ್ಷಕ : । ಸಲಿಂಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ।।೨೮।।

ಅರ್ಥ:- ಜ್ಞಾನನಿಷ್ಠ, ವಿರಕ್ತ, ಮುಮುಕ್ಷು ಮತ್ತು ಮೋಕ್ಷದ ಅಪೇಕ್ಷೆಯನ್ನಿಡದ ನನ್ನ ಭಕ್ತನು ಆಶ್ರಮದ ಮರ್ಯಾದೆಗೆ ಬದ್ಧನಾಗಲಾರನು. ಆತನು ಆಶ್ರಮ ಮತ್ತು ಅದರ ಚಿನ್ಹೆಗಳನ್ನು ತ್ಯಜಿಸಿ ವೇದಶಾಸ್ತ್ರಗಳ ವಿಧಿ-ನಿಷೇಧಗಳ ಆ ಕಡೆ ಹೋಗಿ ಸ್ವಚ್ಛಂದವಾಗಿ ವಿಹರಿಸುವನು.

ವಿಷಯಾಂಚೀ ನಾವಡೇ ಮಾತು । ಜ್ಞಾನಪ್ರಾಪ್ತೀಲಾಗೀ ಉದ್ಯತು । ಯಾಪರೀ ಜೋ ಅತಿವಿರಕ್ತು । ತೋ ಸನ್ಯಾಸ ಬೋಲಿಜೇತು ಮುಖ್ಯತ್ವೇ ।।೧೮೮।।

ಅಥವಾ ಯಾರು ವಾರ್ಧಕ್ಯಕಾರಣದಿಂದ ಅಗ್ನಿಹೋತ್ರ ಮತ್ತು ಸ್ತ್ರೀ ಇವುಗಳನ್ನು ತ್ಯಾಗ ಮಾಡುವನು. ಆದರೆ ಜನಿವಾರ ಮತ್ತು ಜುಟ್ಟು ತೆಗೆದು ಒಗೆಯಲಾರನು. ಗಾಯತ್ರೀ ಮಂತ್ರವನ್ನು ಜಪಿಸುತ್ತಿರುವನು ।।೧೭೮।। ಯಾವಾಗಲೂ ತನ್ನ ಪುತ್ರನ ಮನೆಯಲ್ಲಿ ಭಿಕ್ಷೆಯನ್ನು ಬೇಡುವನು. ಆತನ ಬಾಗಿಲದಲ್ಲಿಯೇ ತನ್ನ ಪರ್ಣಕುಟೀರವನ್ನು ಕಟ್ಟಿಕೊಂಡಿರುವನು. ತನ್ನ ಕುಟೀರವನ್ನು ಬಿಟ್ಟು ಎಲ್ಲಿಯೂ ಹೊರಗೆ ಹೋಗಲಾರನು. ಆದ್ದರಿಂದ ಆತನ ಹೆಸರು ಕುಟೀಚಕ ಎಂದಿರುವುದು ।।೧೭೯।। ಯಾರು ಜುಟ್ಟು ಮತ್ತು ಜನಿವಾರಗಳನ್ನು ತ್ಯಜಿಸಿ ಕಾಯಿಕ, ವಾಚಿಕ ಮತ್ತು ಮಾನಸಿಕವಾಗಿ ತ್ರಿದಂಡದ ಗ್ರಹಣವನ್ನು ಮಾಡಿಕೊಂಡಿದ್ದು ಕೇವಲ ಕರ್ಮಾಚರಣೆಯನ್ನು ಮಾಡುವನು. ಆದರೆ ಜ್ಞಾನದ ಲಕ್ಷಣಗಳನ್ನು ತಿಳಿಯಲಾರನು ।।೧೮೦।। ವರಿಷ್ಠವಾದ ವೈರಾಗ್ಯವಿಲ್ಲ. ಜ್ಞಾನದಲ್ಲಿಯೂ ಕೂಡ ಉತ್ತಮ ಪ್ರಕಾರದ ನಿಷ್ಠೆ ಇಲ್ಲ. ಆದರೆ ಈತನು ಅತಿಶಯವಾಗಿ ಕರ್ಮಠನಾಗಿರುವನು. ಈತನು ಬಹೂದಕರಲ್ಲಿ ಶ್ರೇಷ್ಠನಾಗಿರುವನು ।।೧೮೧।। ಯಾರು ಪೂರ್ಣ ವಿರಕ್ತಿಯಿಂದ ಯುಕ್ತನಾಗಿ ಜ್ಞಾನಸಾಧನೆಯ ವಿಚಾರವನ್ನು ಮಾಡುವನೋ, ಜುಟ್ಟು ಜನಿವಾರ ಕರ್ಮ ಈ ಸರ್ವವನ್ನು ತ್ಯಾಗ ಮಾಡುವನೋ, ಮತ್ತು ಕೇವಲ ಆತ್ಮ ಚಿಂತನೆಯಲ್ಲಿ ಮಗ್ನನಾಗಿರುವನೋ ।।೧೮೨।। ಆತನಿಗೆ ''ವಿವಿದಿಶಾ'' ಸನ್ಯಾಸಿ ಎಂದು ಹೀಗೆ ಹೇಳುವರು ಮತ್ತು ಹೀಗೆ ಯಾರು ದೃಢನಿಶ್ಚಯವಾಗಿ ವರ್ತಿಸುವನೋ, ಆತನಿಗೆ ''ಹಂಸ'' ಎಂದು ಕರೆಯುವರು. ಕೆಲವರು ಈತನಿಗೇನೇ ''ಪರಮಹಂಸ'' ಎಂದು ಹೇಳುವರು ।।೧೮೩।। ಈಗ ಪರಮಹಂಸನ ಲಕ್ಷಣಗಳನ್ನು ಹೇಳುವೆ, ಅದನ್ನು ಕೇಳು, ಆತನು ಜ್ಞಾನನಿಷ್ಠೆಯಿಂದ ಪರಿಪೂರ್ಣನಾಗಿರುವನು. ಆತನ ಬಾಗಿಲಲ್ಲಿ ಶಾಂತಿಯು ಸದಾ ವರ್ತಿಸುತ್ತಿರುವುದು. ಆತನು ಸತ್ವ, ರಜ, ತಮ ಈ ಮೂರು ಗುಣಗಳಿಗೆ ಮಿಥ್ಯೆ ಎಂದು ತಿಳಿದಿರುವನು ।।೧೮೪।। ಆತನು ಕರ್ಮಗತಿಗಳನ್ನು ಮಿಥ್ಯೆಯಾಗಿ ಕಾಣುವನು. ಸ್ವತಃದ ಕರ್ಮಗಳೂ ಕೂಡ ಆತನು ನಿಷ್ಕರ್ಮವಾಗಿಯೇ ಕಾಣುವನು. ಕರ್ಮ, ಕ್ರಿಯೆ ಮತ್ತು ಕರ್ತವ್ಯತೆಗಳನ್ನು ಪ್ರಾರಬ್ಧಾನುಸಾರವಾಗಿ ಆಗುತ್ತಿರುವ ಪ್ರಕೃತಿಯ ಕಾರ್ಯವೆಂದು ತಿಳಿಯುವನು. ತನ್ನಿಂದಲೇ ಆಗುವುದು ಎಂದು ಹೀಗೆ ತಿಳಿಯಲಾರನು ।।೧೮೫।। ಇಂತಹ ಸ್ಥಿತಿಯಲ್ಲಿ ಯಾರು ಅಖಂಡವಾಗಿ ಸಮಾಧಾನದಲ್ಲಿರುವನೋ, ಆತನ ಹೆಸರು ಪರಮಹಂಸ ಎಂದಾಗಿರುವುದು. ಆತನಿಗೆ ಮಠ, ಮಠೀ ಯಾವುದೂ ಇರುವುದಿಲ್ಲ. ಆತನು ಸರ್ವ ವಿಷಯಗಳಲ್ಲಿಯೂ ಉದಾಸನಾಗಿರುವನು ಮತ್ತು ಯಾವುದೇ ಆಶ್ರಮವನ್ನು ಮಾಡಲಾರದವನಾಗಿರುವನು ।।೧೮೬।। ಈಗ ಶ್ರೀಕೃಷ್ಣನು ಹಂಸ ಮತ್ತು ಪರಮಹಂಸ ಇವುಗಳ ಧರ್ಮ ವಿಷಯವಾಗಿ ಹೇಳುವನು. ಅದಕ್ಕಾಗಿ ಹೇ ಉದ್ಧವನೇ, ಆ ಯಾವ ಧರ್ಮದ ಸ್ಪಷ್ಟವಾದ ಮತ್ತು ಸುಗಮವಾದ ಮರ್ಮವನ್ನು ಈಗ ಕೇಳು ।।೧೮೭।।

ಯಾರಿಗೆ ವಿಷಯಗಳ ಮಾತುಗಳು ಸ್ವಲ್ಪವೂ ಕೂಡ ಪ್ರಿಯವೆನಿಸುವುದಿಲ್ಲ. ಜ್ಞಾನಪ್ರಾಪ್ತಿಗಾಗಿ ಯಾರು ಅತ್ಯಂತ ಉತ್ಸುಕನಾಗಿರುವನೋ, ಇಂತಹ ವಿರಕ್ತನಿಗೆ ಪ್ರಾಮುಖ್ಯವಾಗಿ ಸನ್ಯಾಸೀ ಎನ್ನುವರು ।।೧೮೮।।

ಜೋ ಜ್ಞಾನನಿಷ್ಠಾ ಅತಿಸಂಪನ್ನ । ಸದಾ ಸ್ವರೂಪೀ ರಂಗಲೇ ಮನ । ಕದಾ ನ ಮೋಡೇ ಅನುಸಂಧಾನ । ಪರಮಹಂಸಾಸಮಾನ ಹಾ ಹಂಸ ॥೧೮೯॥ ಜ್ಯಾಸೀ ಕರಿತಾ ಭಗವದ್ಭಕ್ತೀ । ಅಪೇಕ್ಷಾ ಮಾತ್ರಾಚೀ ಝಾಲೀ ಶಾಂತೀ । ಮೋಕ್ಷಾಪೇಕ್ಷಾ ನುಪಜೇ ಚಿತ್ತೀ । ಹೇ ಸನ್ಯಾಸಪದ್ಧತೀ ಅತಿಶ್ರೇಷ್ಠ ॥೧೯೦॥ ಜ್ಞಾನನಿಷ್ಠ ಕಾ ಮದ್‌ಭಕ್ತ । ಇಹೀ ಆಶ್ರಮಧರ್ಮ ದಂಡಾದಿಯುಕ್ತ । ತ್ಯಾಗ ಕರಾವಾ ಹೃದಯೀ ಸಮಸ್ತ ಬಾಹ್ಯ ಲೋಕರಕ್ಷಣಾರ್ಥ ರಾಖಾವೇ ॥೧೯೧॥ ಯೇಚಿ ಅರ್ಥೀಚೇ ನಿರೂಪಣ । ಪುಢೇ ಸಾಂಗೇಲ ಶ್ರೀಕೃಷ್ಣ । ಪ್ರಸ್ತುತ ತ್ಯಾಗಾಚೇ ಲಕ್ಷಣ । ಐಕ ಸಂಪೂರ್ಣ ಹರಿ ಬೋಲೇ ॥೧೯೨॥ ಆಶ್ರಮಧರ್ಮ ಸಮಸ್ತ ಕರೀ । ಪರೀ ವಿಧಿಕಿಂಕರತ್ವ ತೋ ನ ಧರೀ । ಪ್ರತಿಬಿಂಬ ಕಾಂಪತಾ ಜಳಾಂತರೀ । ಆಪಣ ಬಾಹೇರೀ ಕಾಂಪೇನಾ ॥೧೯೩॥ ತೇವೀ ಸ್ವಧರ್ಮಕರ್ಮ ಕರ್ತವ್ಯತಾ । ಕರೀ ಪರೀ ನಾಹೀ ಕರ್ಮಠತಾ । ಆಪುಲೀ ಕರ್ಮಾತೀತತಾ । ಜಾಣೇ ತತ್ತ್ವತಾ ನಿಜಕರ್ಮೀ ॥೧೯೪॥ ಯಾಪರೀ ಸ್ವಧರ್ಮಕರ್ಮ ಕರೀ । ಪರೀ ವಿಧೀಚೇ ಭಯ ತೋ ನ ಧರೀ । ವಿಧಿನಿಷೇಧ ಘಾಲೂನ ತೋಡರೀ । ಕರ್ಮೇ ಕರೀ ಅಹೇತುಕ ॥೧೯೫॥ ಜೋ ನಾತಳೇ ಸ್ವಾಶ್ರಮಕರ್ಮಗತೀ । ದಂಡಾದಿ ಲಿಂಗ ನ ಧರೀ ಹಾತೀ । ಐಸಿಯಾ ಸರ್ವತ್ಯಾಗಾಚೀ ಸ್ಥಿತೀ । ಪುಢೇ ಶ್ರೀಪತೀ ಸಾಂಗೇಲ ॥೧೯೬॥ ಪ್ರಸ್ತುತ ಹೇಚಿ ನಿರೂಪಣ । ಲೋಕರಕ್ಷಣಾರ್ಥ ಲಿಂಗಧಾರಣ । ಅಂತರೀ ಜೋ ನಿಷ್ಕರ್ಮ ಜಾಣ । ತ್ಯಾಚೇ ಲಕ್ಷಣ ಹರಿ ಬೋಲೇ ॥೧೯೭॥

ಬುಧೋ ಬಾಲಕವತ್ ಕ್ರೀಡೇತ್ ಕುಶಲೋ ಜಡವಚ್ಚರೇತ್ । ವದೇದುನ್ಮತ್ತವದ್ವಿದ್ವಾನ್ ಗೋಚರ್ಯಾಂ ನೈಗಮಶ್ಚರೇತ್ ॥೨೯॥

ಅರ್ಥ:- ಈತನು ಬುದ್ಧಿವಮಾನನಾಗಿದ್ದರೂ ಬಾಲಕನಂತೆ ಕ್ರೀಡಿಸುವನು. ನಿಪುಣನಾಗಿದ್ದರೂ ಜಡವಾಗಿರುವನು. ವಿದ್ವಾನನಾಗಿದ್ದರೂ ಅಜ್ಞಾನಿಯಂತೆ ಮಾತನಾಡುತ್ತಿರುವನು ಮತ್ತು ಸರ್ವ ವೇದವಿಧಿಗಳನ್ನು ತಿಳಿದವನಾಗಿದ್ದರೂ ಕೂಡ ಪಶು ವೃತ್ತಿ ಸಮಾನವಾಗಿ ಆಚರಿಸುತ್ತಿರುವನು.

ವಿವೇಕಜ್ಞಾನ ಶುದ್ಧ ಆಹೇ । ಪರೀಬಾಳಕಾಚ್ಯಾ ಪರೀ ಆಹೇ । ಮಾನಾಪಮಾನ ಸುಖೇ ಸಾಹೇ । ಸಾಂಡೋನಿ ಸೋಯೇ ದೇಹಾಭಿಮಾನಾಚೀ ॥೧೯೮॥ ನಿಜನೈಷ್ಕರ್ಮ್ಯೇ ಅತಿಕುಶಲ । ಪರೀ ಕರ್ಮಜಡಾಐಸಾ ಕೇವಳ । ಕರ್ಮೇ ಆಚರೇ ತೋ ಸಕಳ । ಕೋಠೇಹೀ ವಿಕಳ ದಿಸೋ ನೇದೀ ॥೧೯೯॥ ಜಾಣೇ ಧರ್ಮಾಧರ್ಮಲಕ್ಷಣ 'ಸರ್ವಾರ್ಥೀ ಅತಿಸಜ್ಞಾನ । ಪರೀ ನ ಕರೀ ಪ್ರಶ್ನಸಮಾಧಾನ । ಅಪ್ರಮಾಣಿಕ ಜಾಣ ಸ್ವಯೇ ಬೋಲೇ ॥೨೦೦॥

ಯಾರು ಜ್ಞಾನನಿಷ್ಠೆಯಿಂದ ಅತಿಶಯವಾಗಿ ಸಂಪನ್ನನಾಗಿರುವನೋ, ಯಾರ ಮನವು ಆತ್ಮಸ್ವರೂಪದಲ್ಲಿ ತನ್ಮಯಗೊಂಡಿರುವುದೋ, ಯಾರ ಆತ್ಮಚಿಂತನೆಯು ಎಂದಿಗೂ ಬಿಟ್ಟಿರುವುದಿಲ್ಲವೋ, ಆತನು ಹಂಸ ಪರಮಹಂಸ ಸರಿಸಮಾನನಾಗಿರುವನು ॥೧೮೯॥ ಈತನು ಭಗವದ್ಭಕ್ತಿಯನ್ನು ಮಾಡುತ್ತಿರುವನು. ಯಾವುದೇ ಇಚ್ಛೆಯನ್ನು ಮಾಡಲಾರನು. ಆತನ ಮನದಲ್ಲಿ ಮೋಕ್ಷದ ಇಚ್ಛೆಯೂ ಕೂಡ ಇರುವುದಿಲ್ಲ. ಆತನು ಸರ್ವಶ್ರೇಷ್ಠ ಸನ್ಯಾಸ ಪದ್ಧತಿಯವನಾಗಿರುವನು ॥೧೯೦॥ ಯಾರು ಜ್ಞಾನನಿಷ್ಠನಾಗಿ ನನ್ನ ಭಕ್ತನಾಗಿರುವನೋ, ಆತನು ದಂಡಾದಿಕ ಆಶ್ರಮಗಳ ತ್ಯಾಗವನ್ನು ಅಂತಃಕರಣ ಪೂರ್ವಕವಾಗಿ ಮಾಡಬೇಕು ಮತ್ತು ಲೋಕಸಂಗ್ರಹಕ್ಕಾಗಿ ಆ ಯಾವ ಧರ್ಮಗಳನ್ನು ಕೇವಲ ಹೊರನೋಟಕ್ಕೆ ಪಾಲಿಸಬೇಕು ॥೧೯೧॥ ಇದೇ ಅರ್ಥದ ನಿರೂಪಣೆಯನ್ನು ಮುಂದೆ ಶ್ರೀಕೃಷ್ಣನು ಹೇಳುವವನಾಗಿರುವನು. ಈಗ ತ್ಯಾಗದ ಎಲ್ಲ ಲಕ್ಷಣಗಳನ್ನು ಕೇಳು ಎಂದು ಹೀಗೆ ಶ್ರೀಹರಿಯು ಹೇಳಿದನು ॥೧೯೨॥ ಆತನು ಆಶ್ರಮಧರ್ಮಗಳನ್ನೆಲ್ಲವನ್ನೂ ಆಚರಿಸುತ್ತಿರುವನು. ಆದರೆ ವಿಧಿ-ನಿಷೇಧಗಳ ದಾಸನಾಗಿರುವುದಿಲ್ಲ. ನೀರು ಹೋಯ್ದಾಡಲು ಅದರಲ್ಲಿನ ಪ್ರತಿಬಿಂಬವು ಹೋಯ್ದಾಡುತ್ತಿರುವುದು. ಆದರೆ ಇದರಿಂದ ನಿಜವಾದ ಬಿಂಬವು ಯಾವ ಚಂಚಲವೂ ಆಗುವುದಿಲ್ಲ ॥೧೯೩॥ ಅದರಂತೆ ಸ್ವಧರ್ಮಕರ್ಮ-ಕರ್ತವ್ಯಗಳನ್ನು ಅವನು ಮಾಡುತ್ತಿರುವನು, ಆದರೆ ಕರ್ಮಠತನವನ್ನು ಪಾಲಿಸುವುದಿಲ್ಲ. ಆತನು ತನ್ನ ಸರ್ವಕರ್ಮಗಳಲ್ಲಿ ತನ್ನ ಕರ್ಮಾತೀತತೆಯನ್ನು ನಿಶ್ಚಯವಾಗಿ ತಿಳಿದಿರುವನು ॥೧೯೪॥ ಆತನು ತನ್ನ ಸ್ವಧರ್ಮ ಕರ್ಮಗಳನ್ನೆಲ್ಲವನ್ನೂ ಮಾಡುತ್ತಿರುವನು. ಆದರೆ ಆತನಿಗೆ ವಿಧಿಯ ಭಯವು ಇರುವುದಿಲ್ಲ. ಆತನು ವಿಧಿ-ನಿಷೇಧಗಳನ್ನು ಕಾಲಲ್ಲಿ ತುಳಿದು ಯಾವಾಗಲೂ ಯಾವ ಉದ್ದೇಶವಿಲ್ಲದ ಕರ್ಮಗಳನ್ನು ಮಾಡುತ್ತಿರುವನು ॥೧೯೫॥ ಆತನು ಆಶ್ರಮಗಳ ಮತ್ತು ಕರ್ಮಗತಿಗಳ ಸ್ಪರ್ಶ ಕೂಡ ಮಾಡಲಾರನು. ದಂಡಕಮಂಡಲ ಮೊದಲು ಮಾಡಿ ತ್ರಿದಂಡಾದಿ ಬಾಹ್ಯ ಚಿನ್ಹೆಗಳನ್ನು ಕೈಯಲ್ಲಿ ಎಂದಿಗೂ ಹಿಡಿಯಲಾರನು. ಹೀಗೆ ಸರ್ವಸ್ವ ತ್ಯಾಗದ ಲಕ್ಷಣಗಳನ್ನು ಮುಂದೆ ಶ್ರೀಕೃಷ್ಣನು ಹೇಳುವವನಾಗಿರುವನು ॥೧೯೬॥ ಲೋಕ ಸಂಗ್ರಹಕ್ಕಾಗಿ ಬಾಹ್ಯ ಚಿನ್ಹೆಗಳನ್ನು ಧರಿಸಿ, ಅಂತಃಕರಣದಲ್ಲಿ ಯಾರು ನಿಷ್ಕಾಮರಾಗಿರುವರೋ, ಆತನ ಲಕ್ಷಣಗಳನ್ನು ಶ್ರೀಕೃಷ್ಣನು ಈಗ ಹೇಳುತ್ತಿರುವನು ॥೧೯೭॥

ಆತನಲ್ಲಿ ಶುದ್ಧವಾದ ವಿವೇಕಜ್ಞಾನವು ಇರುವುದು. ಆದರೆ ಆತನು ಬಾಲಕನಂತೆ ವರ್ತಿಸುವನು. ದೇಹದ ಅಭಿಮಾನವನ್ನು ಬಿಟ್ಟು ಮಾನ ಅಥವಾ ಪ್ರಾಪ್ತವಾದ ಅಪಮಾನವನ್ನು ಆತನು ಸುಖವಾಗಿ ಸಹಿಸಿಕೊಳ್ಳುವನು ॥೧೯೮॥ ಆತನು ತನ್ನ ನೈಷ್ಕರ್ಮ್ಯದಲ್ಲಿ ಅತಿಶಯವಾಗಿ ಪ್ರವೀಣನಾಗಿರುವನು. ಆದರೆ ಕರ್ಮಠರಂತೆ ಸರ್ವಕರ್ಮಗಳನ್ನು ಆಚರಿಸುತ್ತಿರುವನು. ಎಲ್ಲಿಯೂ ನ್ಯೂನತೆಯನ್ನು ಕಾಣಿಸಿಕೊಡಲಾರನು ॥೧೯೯॥ ಆತನು ಧರ್ಮ,ಅಧರ್ಮಗಳ ಸರ್ವ ಲಕ್ಷಣಗಳನ್ನು ತಿಳಿದಿರುವನು. ಸರ್ವ ಅರ್ಥಗಳ ತಿಳುವಳಿಕೆಯಲ್ಲಿ ಬಹು ಜಾಣನಾಗಿರುವನು. ಆದರೆ ಆತನಿಗೆ ಯಾರಾದರೂ ಪ್ರಶ್ನೆಗಳನ್ನು ವಿಚಾರಿಸಿದರೆ, ಆಗ ಆತನು ಯಾವುದೇ ಸಮಾಧಾನಕಾರಕ ಉತ್ತರಗಳನ್ನು ಕೊಡಲಾರನು. ಅಜ್ಞಾನಿ ಮನುಷ್ಯರಂತೆ ಏನಾದರೂ ಪ್ರಮಾಣರಹಿತ ಮಾತುಗಳನ್ನು ಆಡುತ್ತಿರುವನು ॥೨೦೦॥

ಕರಿತಾ ಪ್ರಶ್ನಸಮಾಧಾನ । ಲೌಕಿಕೀ ವಾಢೇಲ ಸನ್ಮಾನ । ಯಾಲಾಗೀ ಸಾಕ್ಷೇಪೇ ಜಾಣ । ಉನ್ಮತ್ತ ವಚನ ಸ್ವಯೇ ಬೋಲೇ ।।೨೦೧।। ವೇದತತ್ತ್ವಾರ್ಥ ವಿಹಿತ ಜಾಣೇ । ತೇ ಲೌಕಿಕೀ ನಾಹೀ ಮಿರವಣೇ । ಸಕಳಿಕೀ ಮೂರ್ಖಚಿ ಮ್ಹಣಣೇ । ತೈಶೀ ''ಪಶು'' ಲಕ್ಷಣೇ ಸ್ವಯೇ ದಾವೀ ।।೨೦೨।। ಯಾಲಾಗೀ ವೇದವಾದಸಂವಾದ । ನ ಕರೀ ವಾದ ಅತಿವಾದ । ಯೇಚಿ ಅರ್ಥೀ ಅತಿವಿಶದ । ಸ್ವಯೇ ಗೋವಿಂದ ಸಾಂಗತ ।।೨೦೩।।

ವೇದವಾದರತೋ ನ ಸ್ಯಾನ್ನ ಪಾಷಂಡೀ ನ ಹೈತುಕಃ । ಶುಷ್ಕವಾದವಿವಾದೇ ನ ಕಂಚಿತ್ಪಕ್ಷಂ ಸಮಾಶ್ರಯೇತ್ ।।೩೦।।

ಅರ್ಥ:- ಈತನು ವೇದದಲ್ಲಿನ ಕರ್ಮಕಾಂಡ ಭಾಗದ ವ್ಯಾಖ್ಯಾನವನ್ನು ಮಾಡಕೂಡದು. ತರ್ಕ-ವಿತರ್ಕಗಳಿಂದ ದೂರವಿರಬೇಕು. ಎಲ್ಲಿ ವಾದವಿವಾದಗಳು ನಡೆಯುತ್ತಿರುತ್ತವೆಯೋ, ಅಲ್ಲಿ ಯಾವ ಪಕ್ಷವನ್ನೂ ಸೇರಬಾರದು.

ಧರೋನಿಯಾ ಮೀಮಾಂಸಕಮತ । ಕರ್ಮಕಾಂಡೀಚೇ ಶಾಸ್ತ್ರಾರ್ಥ । ನಾನಾವಾದ ಕರ್ಮಾರ್ಥ । ನ ಕರೀ ನಿಶ್ಚಿತ ನಿಜಬೋಧೇ ।।೨೦೪।। ತಾರ್ಕಿಕಾಚೇ ಅತಿತರ್ಕ । ತರ್ಕ ವಿತರ್ಕ ಕುತರ್ಕ । ಹೇಹೀ ವಾದ ಕರೀನಾ ದೇಖ । ನಿಜಾತ್ಮಸುಖ ಜೋ ಜಾಣೇ ।।೨೦೫।। ಬಾಹೇರೀ ಬ್ರಹ್ಮಜ್ಞಾನೇ ಗರ್ಜೇ ತೋಂಡ । ಭೀತರೀ ವಿಷಯವಾಸನಾ ಉದಂಡ । ಐಸೇ ಮಹಾವಾದೀ ಪ್ರಚಂಡ । ಅತರ್ಕ್ಯ ''ಪಾಖಂಡ'' ತ್ಯಾ ನಾಂವ ।।೨೦೬।। ನಸೋನಿ ಬ್ರಹ್ಮಾನುಭವ ಸಾಚಾರ । ಜೋ ಉಚ್ಛೇದೀ ನಿಜಾಚಾರ । ತೋ ಕೇವಳ ಪಾಖಂಡೀ ನರ । ಉದರಂಭರ ದುಃಶೀಲ ।।೨೦೭।। ಐಶಿಯಾ ವಾದಾಚಾ ವಿಟಾಳ । ಜ್ಯಾಚೇ ವಾಚೇಸೀ ನಾಹೀ ಅಳುಮಾಳ । ನ ಲಗೇ ಅಸತ್ಯಾಚಾ ಸಮೂಳ ಮಳ । ನಿತ್ಯ ನಿರ್ಮಳ ನಿಜಬೋಧೇ ।।೨೦೮।। ''ಶುಷ್ಕವಾದ'' ಜ್ಯಾ ವೃಥಾ ಗೋಷ್ಟೀ । ತ್ಯಾಂತಹೀ ವಾಗ್ವಾದ ಉಠೀ । ಹೋಯ ನವ್ಹೇ ಕಪಾಳಪಿಟೀ । ಮಿಥ್ಯಾ ಚಾವಟೀ ಕರೀನಾ ।।೨೦೯।। ಐಶಿಯಾ ವಿವಾದಾಚೀ ಕಥಾ । ದೃಷ್ಟೀ ನ ಪಾಹೇ ನಿಜಜ್ಞಾತಾ । ಮಾ ಸ್ವಯೇ ಕರೀಲ ಐಶಾ ವಾರ್ತಾ । ಹೇ ಸರ್ವಥಾ ಘಡೇನಾ ।।೨೧೦।। ಹೋತಾ ಶಾಸ್ತ್ರಾರ್ಥಮಹಾವಾದ । ದೇತಾ ಯುಕ್ತೀಚೇ ಪ್ರತಿಬಾಧ । ತೇಥ ನ ಕರೀ ಪಕ್ಷಪಾತ ಶುದ್ಧ । ಜಾಣೇ ಪರೀ ಶಬ್ದ ಬೋಲೇನಾ ।।೨೧೧।। ಶ್ರುತಿಸ್ಮೃತೀಸೀ ವಿರುದ್ಧ । ಹೋತಾ ದೇಖೇ ಅತಿವಾದ । ಸ್ವಯೇ ಜಾಣೇ ಶಾಸ್ತ್ರಾರ್ಥ ಶುದ್ಧ । ಪರೀ ಪಕ್ಷಪಾತ ಕರೀನಾ ।।೨೧೨।।

ತಾನು ಒಂದುವೇಳೆ ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟು ಸಮಾಧಾನಗೊಳಿಸಿದರೆ, ಆಗ ತನಗೆ ಲೌಕಿಕದಲ್ಲಿ ಪ್ರತಿಷ್ಠೆಯು ಬೆಳೆದೀತೆಂದು ತಿಳಿದು ಆತನು ತಿಳಿದೂ ತಿಳಿದೂ ಅಜ್ಞಾನಿಯವರಂತೆ ಉತ್ತರವನ್ನು ಕೊಡುತ್ತಿರುವನು ।೨೦೧।। ಆತನು ವೇದದ ರಹಸ್ಯ ಮತ್ತು ವಿಹಿತ ಶಾಸ್ತ್ರಾರ್ಥಗಳನ್ನು ತಿಳಿದಿರುವನು. ಆದರೆ ಅದನ್ನು ಜನರಲ್ಲಿ ಯಾವುದೇ ಪ್ರಕಾರದಲ್ಲಿ ಮೆರೆಯುವಂತೆ ಮಾಡಲಾರನು. ಇಷ್ಟೇ ಅಲ್ಲ ಎಲ್ಲರೂ ತನಗೆ ಅಜ್ಞಾನಿ, ಮೂರ್ಖ ಅನ್ನಬೇಕೆಂದು ಆತನು ಪಶುವಿನಂತೆ ದಡ್ಡತನ ತೋರಿಸುವನು ।೨೦೨।। ಈ ಕಾರಣವಾಗಿ ಆತನು ವೇದವಿಷಯಕ್ಕೆ ಎಂದಿಗೂ ಸಂವಾದವನ್ನು ಅಥವಾ ವಾದವಿವಾದಗಳನ್ನು ಮಾಡಲಾರನು. ಇದನ್ನು ಈಗ ಭಗವಾನ ಶ್ರೀಕೃಷ್ಣನು ಸ್ಪಷ್ಟಮಾಡಿ ಹೇಳುವನು ।೨೦೩।।

ಆತನು ಆತ್ಮಜ್ಞಾನಿಯಾಗಿರುವನು. ಆದ್ದರಿಂದ ಮೀಮಾಂಸಕರ ಮತವನ್ನು ಸ್ವೀಕರಿಸಿ ಯಜ್ಞಯಾಗಾದಿ ಕರ್ಮಕಾಂಡದ ಪುರಸ್ಕಾರವನ್ನು ಮಾಡಲಾರನು ।೨೦೪।। ಆತನಿಗೆ ಆತ್ಮಾನಂದದ ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದಿರುವುದು. ಆದ್ದರಿಂದ ಆತನು ತರ್ಕಶಾಸ್ತ್ರದಂತೆ ತರ್ಕ, ವಿತರ್ಕ ಅಥವಾ ಕುತರ್ಕಗಳನ್ನು ಹೊರತೆಗೆದು ಯಾವುದೇ ಪ್ರಕಾರದ ವಾದವನ್ನು ಬೆಳೆಸುತ್ತ ಕುಳಿತುಕೊಳ್ಳಲಾರನು ।೨೦೫।। ಹೊರನೋಟಕ್ಕೆ ಮುಖದಿಂದ ಆತ್ಮಜ್ಞಾನದ ದೊಡ್ಡ ದೊಡ್ಡ ಮಾತುಗಳನ್ನಾಡುವುದು, ಅಂತಃಕರಣದಲ್ಲಿ ಸತತವಾಗಿ ವಿಷಯವಾಸನೆಯ ಚಿಂತನೆಯನ್ನು ಮಾಡುವುದು. ಇಂತಹವರು ವಾದ ಮಾಡುವ ಮಹಾವಾದಿಗಳಾಗಿರುವರು. ಇವರಿಗೆ ಪಾಖಂಡೀ ಎಂದು ಹೇಳುವರು ।೨೦೬।। ಸರ್ವತ್ರವೂ ಸಮಪ್ರಮಾಣದಲ್ಲಿ ಪರಬ್ರಹ್ಮದ ಅನುಭವವು ಇಲ್ಲದೇ ಯಾವ ಪುರುಷನು ತನ್ನ ಆಚಾರಗಳನ್ನು ಒಗೆದುಬಿಟ್ಟಿರುವನೋ, ಆತನು ಪಾಖಂಡೀ ಹೊಟ್ಟೆತುಂಬಿಕೊಳ್ಳುವ ದುಷ್ಟ ಸ್ವಭಾವದ ಮನುಷ್ಯನು ಎಂದು ತಿಳಿಯಬೇಕು ।೨೦೭।। ಯಾರ ವಾಣಿಗೆ ಇಂತಹ ಅಸತ್ಯ ವಿತಂಡವಾದದ ಮಲಿನತ್ವವು ಯತ್ಕಿಂಚಿತವೂ ಹತ್ತಿರುವುದಿಲ್ಲ ಮತ್ತು ಯಾರಿಗೆ ಅಸತ್ಯದ ಹೊಲಸು ಹತ್ತುವುದಿಲ್ಲವೋ, ಆತನು ಆತ್ಮಜ್ಞಾನದಿಂದ ನಿತ್ಯ ನಿರ್ಮಲನಾಗಿರುವನು ।೨೦೮।। ಶುಷ್ಕವಾದ ಮತ್ತು ನಿರರ್ಥಕವಾದ ಮಾತುಗಳನ್ನು ಆತನು ಆಡಲಾರನು. ಏಕೆಂದರೆ ಇದರಲ್ಲಿ ವಾದವು ಉತ್ಪನ್ನವಾಗುವುದು. ಅದಕ್ಕಾಗಿಯೇ ಹೌದು, ಅಲ್ಲ ಎಂಬ ವಿಚಾರಗಳ ಮೂಲಕ ತಲೆಗೆ ತೊಂದರೆಯಾಗುವಂತಹ ವ್ಯರ್ಥವಾದ ಬಡಬಡಿಕೆಗಳನ್ನು ಮಾಡಲಾರನು ।೨೦೯।। ಆತನು ನಿಜವಾಗಿಯೂ ಆತ್ಮಜ್ಞಾನಿಯಾಗಿರುವನು. ಆತನಿಗೆ ಇಂತಹ ವಾದವಿವಾದಗಳ ಬೇಸರಿಕೆಯಾಗುವುದು. ಅಂದಮೇಲೆ ಆತನು ಸ್ವತಃ ಇಲ್ಲದ ಮಾತನಾಡುವಿಕೆಯು ಸಂಭವಿಸಲಾರದು ।೨೧೦।। ಶಾಸ್ತ್ರಾರ್ಥಗಳ ದೊಡ್ಡ ವಾದವು ನಡೆಯುತ್ತಿರಲಿ, ಮತ್ತು ಯುಕ್ತಿಗಳಿಂದ, ಪ್ರಮಾಣಗಳಿಂದ ಪ್ರಶ್ನೋತ್ತರಗಳು ಆರಂಭವಾಗಿರಲಿ, ಆದರೂ ಕೂಡ ಆತನು ಯಾರ ಪಕ್ಷವನ್ನು ಸ್ವೀಕರಿಸಲಾರನು. ನಿಜವೇನೆಂಬುದು ಆತನಿಗೆ ಇದರ ಜ್ಞಾನವಿರುವುದು. ಆದರೂ ಆತನು ಏನನ್ನೂ ಹೇಳಲಾರನು ।೨೧೧।। ಶ್ರುತಿಸ್ಮೃತಿಯ ವಿರುದ್ಧ ವಾದಗಳು ಜೋರಾಗಿ ನಡೆಯುತ್ತಿರುವುದು ಆತನು ನೋಡುವನು. ಆದರೆ ನಿಜವಾದದ್ದು ಮತ್ತು ಶುದ್ಧಶಾಸ್ತ್ರಾರ್ಥ ಯಾವುದೆಂಬುದನ್ನು ತಿಳಿದಿದ್ದರೂ ಕೂಡ ಆತನು ಯಾವುದೇ ಪಕ್ಷಕ್ಕೆ ಕೂಡಿಕೊಳ್ಳಲಾರನು ।೨೧೨।।

ವಾಗ್ವಾದೀ ಬೋಲತಾ ಜಾಣ । ದುಖವೇಲ ಪುಢಿಲಾಂಚೇ ಮನ । ಕಾ ಕ್ರೋಧೇಲ ಸ್ವಾಂತಃಕರಣ । ಯಾಲಾಗೀ ವಚನ ಬೋಲೇನಾ ॥೨೧೩॥

ನೋದ್ವಿಜೇತ ಜನಾದ್ಧೀರೋ ಜನಂ ಚೋದ್ವೇಜಯೇನ್ನ ತು । ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ ॥೩೧॥

ಅರ್ಥ:- ಈತನು ಧೀರನಾಗಿರಬೇಕು, ಈತನ ಮನದಲ್ಲಿ ಯಾವ ಪ್ರಾಣಿಮಾತ್ರರಲ್ಲೂ ಉದ್ವೇಗವಾಗಬಾರದು ಮತ್ತು ಯಾರಿಗೂ ಉದ್ವಿಗ್ನಗೊಳಿಸಬಾರದು. ಯಾರಾದರು ತನಗೆ ನಿಂದಿಸಿದರೆ ಪ್ರಸನ್ನತೆಯಿಂದ ಅದನ್ನು ಸ್ವೀಕರಿಸಬೇಕು. ತಾನು ಯಾರಿಗೂ ಅಪಮಾನಿಸಬಾರದು.

ಜನಾಪಾಸೋನಿ ಉದ್ವೇಗಗತೀ । ಜ್ಞಾತಾ ನ ಪವೇ ಸರ್ವಥಾ ಚಿತ್ತೀ । ನಿಂದಾ ಅವಗಣನಾ ಅಪಮಾನಿತೀ । ತೇ ಆತ್ಮಸ್ಥಿತೀ ಸ್ವಯೇ ಸಾಹೇ ॥೨೧೪॥ ಜನ ಜೇ ಜೇ ಉಪದ್ರವ ದೇತೀ । ಜ್ಞಾತಾ ಸಾಹೇ ಐಶಿಯಾ ರೀತೀ । ಮೀಚಿ ಆತ್ಮಾ ಏಕ ಸರ್ವ ಭೂತೀ । ಯಾಲಾಗೀ ಖಂತೀ ಮಾನೀನಾ ॥೨೧೫॥ ಆಪುಲಿಯಾ ಅವಯವವಿಕಾರತಾ । ಉದ್ವೇಗ ನುಪಜೇ ಜೇವೀ ಚಿತ್ತಾ । ತೇವೀ ಸರ್ವಾಭೂತೀ ಏಕಾತ್ಮತಾ । ಜಾಣೂನ ತತ್ತ್ವತಾ ಉಬಗು ನ ಮನೀ ॥೨೧೬॥ ತೈಸೇಂಚಿ ಜ್ಯಾಚಿಯಾ ಸ್ಥಿತೀ । ಭೂತೇ ಉದ್ವೇಗ ನ ಮಾನಿತೀ । ಜ್ಯಾಚಿಯಾ ನಿಜಾಚಾರಗತೀ । ಸುಖೀ ಹೋತೀ ಜೀವಮಾತ್ರ ॥೨೧೭॥ ಸರ್ವ ಭೂತೀ ಭಗವಂತ ಆಹೇ । ಝಣೇ ತ್ಯಾಸೀ ಉಪದ್ರವ ಹೋಯೇ । ಯಾಲಾಗೀ ವಾಗವಿತಾ ಹಾತಪಾಯೇ । ಸಾವಧ ರಾಹೇ ನಿಜದೃಷ್ಟೀ ॥೨೧೮॥ ಥೋರ ದೇತಾ ಆರೋಳೀ । ಝಣೇ ದಚಕೇಲ ವನಮಾಳೀ । ಕಾ ನೇಟೇ ಭವಂಡಿತಾ ಜಪಮಾಳೀ । ದೇವಾಚೇ ಕಪಾಳೀ ಝಣೇ ಲಾಗೇ ॥೨೧೯॥ ಯಾಲಾಗೀ ಕರಚರಣಾಂಚ್ಯಾ ಚೇಷ್ಟಾ । ಆವರೋನಿಯಾ ನಿಜಾತ್ಮನಿಷ್ಠಾ । ಭೂತೀ ಲಾಗೋ ನೇದೀ ಝಟಾ । ಝಣೇ ವೈಕುಂಠಾ ಉಪದ್ರವ ಲಾಗೇ ॥೨೨೦॥ ಐಶಿಐಶಿಯಾ ನಿಜಾತ್ಮಗತೀ । ಉದ್ವೇಗ ಉಪಜೋ ನೇದೀ ಭೂತೀ । ತೇಥ ವಾಗ್ವಾದಾಚೀ ಗತೀ । ಕೈಶಾ ರೀತೀ ಸಂಭವೇ ॥೨೨೧॥ ಸರ್ವಭೂತೀ ಭೂತಾತ್ಮಾ ಈಶ್ವರ । ಯಾಲಾಗೀ ಉಂಚ ನ ಬೋಲೇ ಉತ್ತರ । ತೇಥ ಅತಿವಾದ್ಯಾಸೀ ಸಮೋರ । ಸರ್ವಥಾ ಅಧರ ಉಚಲೀನಾ ॥೨೨೨॥ ಪಡಲ್ಯಾ ಜೀವಸಂಕಟ ಪ್ರಾಣಾಂತೀ । ಅಪಮಾನ ನ ಕರವೇ ಕೋಣೇ ವ್ಯಕ್ತೀ । ಅಪಮಾನೀನಾ ಭೂತಾಕೃತೀ । ಸರ್ವಾಭೂತೀ ಹರೀ ದೇಖೇ ॥೨೨೩॥ ಜನಾಸ್ತವ ಉದ್ವೇಗತಾ । ಕದಾಕಾಳೀ ನ ಪವೇ ಜ್ಞಾತಾ । ಜ್ಞಾತ್ಯಾಪಾಸೋನಿ ಉದ್ವೇಗತಾ । ನವ್ಹೇ ಸರ್ವಥಾ ಜನಾಸೀ ॥೨೨೪॥

ವಾದವಿವಾದಗಳಲ್ಲಿ ಮಾತನಾಡುತ್ತಿರಲು ಅನ್ಯರಿಗೆ ಮನವು ದುಃಖವಾದೀತೆಂದು ತಿಳಿದು ಅಥವಾ ಕದಾಚಿತ್‌ವಾಗಿ ತನ್ನ ಅಂತಃಕರಣದಲ್ಲಿ ಕ್ರೋಧವು ನಿರ್ಮಾಣವಾದೀತೆಂದು ತಿಳಿದು ಆತನು ಯಾವ ಒಂದು ಶಬ್ದವನ್ನೂ ಕೂಡ ನುಡಿಯಲಾರನು ॥೨೧೩॥

ಜ್ಞಾನಿಯು ಜನರಿಂದ ಎಂದಿಗೂ ಉದ್ವಿಗ್ನನಾಗುವುದಿಲ್ಲ. ಯಾರಾದರೂ ನಿಂದೆ, ತಿರಸ್ಕಾರ,ಅಪಮಾನ ಮಾಡಿದರೆ ಆತ್ಮಭಾವನೆಯಿಂದ ಆತನು ಎಲ್ಲವನ್ನೂ ಸಹಿಸಿಕೊಳ್ಳುವನು ॥೨೧೪॥ ಜನರು ಏನೇನೇ ಉಪದ್ರವಗಳನ್ನು ಕೊಡುತ್ತಿರಲಿ,ಜ್ಞಾನಿಯು ಅವುಗಳನ್ನೆಲ್ಲ ಸಹಿಸಿಕೊಳ್ಳುವನು. ಸರ್ವಪ್ರಾಣಿಮಾತ್ರರಲ್ಲಿ ಒಂದೇ ಚೈತನ್ಯವು ತುಂಬಿರುವುದನ್ನು ತಿಳಿದು ಆತನು ಜನರಿಂದ ದುಃಖಿಯಾಗುವುದಿಲ್ಲ ॥೨೧೫॥ ತನ್ನದೇ ಆದ ಅವಯವಗಳಿಂದ ತನಗೆ ತೊಂದರೆಯಾಗಲು ಅದಕ್ಕಾಗಿ ಯಾವನು ಯಾವ ಉದ್ವೇಗನಾಗಲಾರನೋ, ಅದರಂತೆ ಸರ್ವಪ್ರಾಣಿಮಾತ್ರರಲ್ಲಿ ಒಂದೇ ಚೈತನ್ಯವು ವಿರಾಜಮಾನವಾಗಿರುವುದರಿಂದ ಆತನು ಎಂದಿಗೂ ಇತರರಿಂದ ಖಿನ್ನನಾಗಲಾರನು ॥೨೧೬॥ ಆತನಿಂದ ಪ್ರಾಣಿಮಾತ್ರರಿಗೆ ಯಾವುದೇ ಪ್ರಕಾರದ ಉದ್ವೇಗವಾಗುವುದಿಲ್ಲ ಮತ್ತು ಆತನ ಶ್ರೇಷ್ಠವರ್ತನೆಯಿಂದ ಜೀವಮಾತ್ರಕ್ಕೆ ಸುಖಶಾಂತಿಯು ಲಭಿಸುತ್ತಿರುವುದು ॥೨೧೭॥ ಸರ್ವಪ್ರಾಣಿಮಾತ್ರರಲ್ಲಿ ಭಗವಂತನು ವಾಸ್ತವ್ಯ ಮಾಡಿರುವುದರಿಂದ, ಆತನಿಗೆ ಉಪದ್ರವವಾಗಬಾರದೆಂದು ಆತನು ತನ್ನ ಕೈಕಾಲುಗಳ ಚಲನೆಯಲ್ಲಿಯೂ ಆತ್ಮದೃಷ್ಟಿಯಿಂದ ಅತಿಶಯವಾಗಿ ಜಾಗೃತನಾಗಿರುವನು ॥೨೧೮॥ ಗಟ್ಟಿಯಾಗಿ ಕೂಗಲು ದೇವನು ದಚಕಬಹುದೆಂದು ತಿಳಿದು ಅಥವಾ ಜಪಮಾಲೆಯನ್ನು ಜೋರಾಗಿ ತಿರುಗಿಸಲು ದೇವರ ಕಪಾಳಕ್ಕೆ ಬಡೆಯಬಹುದೆಂದು ತಿಳಿಯುತ್ತಾನೆ ॥೨೧೯॥ ಆದ್ದರಿಂದ ಆತನು ಕೈಕಾಲುಗಳ ಕ್ರಿಯೆಗಳನ್ನು ಆತ್ಮದೃಷ್ಟಿಯಿಂದ ಆವರಿಸಿ ಹಿಡಿದುಕೊಳ್ಳುವನು. ತನ್ನಿಂದ ದೇವರಿಗೆ ಪೀಡೆಯಾದೀತೆಂದು ತಿಳಿದು ಆತನು ಪ್ರಾಣಿಗಳವರಿಗೆ ಸ್ವಲ್ಪವೂ ಕೂಡ ಉಪದ್ರವವನ್ನು ಕೊಡಲಾರನು ॥೨೨೦॥ ಆತನ ಆತ್ಮನಿಷ್ಠೆಯು ಅತಿಶಯವಾಗಿ ವಿಶಾಲವಾಗಿರುವುದು. ಆತನು ಯಾವ ಪ್ರಾಣಿಮಾತ್ರರ ಮನಸ್ಸಿಗೆ ಉದ್ವೇಗವನ್ನು ತಂದುಕೊಡಲಾರನು. ಅಂದಮೇಲೆ ಆತನು ವಾದವಿವಾದಗಳಿಗೆ ಹೇಗೆ ಲಕ್ಷವನ್ನು ಕೊಡಬಲ್ಲನು ?।'೨೨೧॥ ಸರ್ವ ಪ್ರಾಣಿಮಾತ್ರರ ಹೃದಯದಲ್ಲಿ ಒಂದೇ ಆತ್ಮತ್ವವು ಇರುವುದನ್ನು ತಿಳಿದುಕೊಂಡು ಆತನು ಯಾರಿಗೂ ಕಠೋರ ಶಬ್ದಗಳಿಂದ ಎತ್ತರ ಸ್ವರದಲ್ಲಿ ಗದರಿಸಿ ಮಾತನಾಡಲಾರನು. ಹಾಗೆಯೇ ವಿತಂಡವಾದಿಯ ಎದುರಿನಲ್ಲಿ ತುಟಿಗಳನ್ನೂ ಕೂಡ ಅಲುಗಾಡಿಸಲಾರನು ॥೨೨೨॥ ತನ್ನ ಜೀವಕ್ಕೆ ಸಂಕಟಗಳು ಒದಗಿ ಪ್ರಾಣಾಂತ ಸಮಯವು ಬಂದರೂ ಕೂಡ ಯಾವ ಮನುಷ್ಯನಿಗೂ ಅಪಮಾನಗೊಳಿಸಲಾರನು. ಆತನು ಯಾವುದೇ ಕೃತಿಗಳ ಅಪಮಾನವನ್ನು ಮಾಡಲಾರನು. ಆತನು ಸರ್ವಭೂತರಲ್ಲಿ ಶ್ರೀಹರಿಯನ್ನು ಕಾಣುತ್ತಿರುವನು ॥೨೨೩॥ ಜನರ ಕೃತಿಗಳಿಂದ ಆತನು ಎಂದಿಗೂ ಉದ್ವಿಗ್ನನಾಗುವುದಿಲ್ಲ. ಈ ಜ್ಞಾನಿಯಿಂದ ಜನರಿಗೆ ಯಾವ ಉದ್ವಿಗ್ನವು ಉಂಟಾಗುವುದಿಲ್ಲ ॥೨೨೪॥

ಐಶೀ ನಿಜಾತ್ಮಸ್ಥಿತೀ ಸಾಚಾರ । ತೋ ಕೋಣಾಸೀ ನ ಕರೀ ವೈರ । ಯೇಚಿ ಅರ್ಥೀ ಶಾರಂಗಧರ । ವಿಶದ ಉತ್ತಮ ಸಾಂಗತ ॥೨೨೫॥

ದೇಹಮುದ್ದಿಶ್ಯ ಪಶುವದ್ ವೈರಂ ಕುರ್ಯಾನ್ನ ಕೇನಚಿತ್ । ಏಕ ಏವ ಪರೋ ಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ ॥೩೨॥

ಅರ್ಥ:- ಸನ್ಯಾಸಿಯು ಯಾರನ್ನೂ ಯಾವುದೇ ಪ್ರಕಾರವಾಗಿ ವೈರವನ್ನು ಮಾಡಕೂಡದು. ವೈರವನ್ನು ಪಶುಗಳು ಮಾಡುತ್ತಿರುವುವು. ಪಂಚಭೂತಗಳು ಶರೀರಗಳೂ ಕೂಡ ಒಂದೇ ಆಗಿವೆ. ಕಾರಣ ಸರ್ವವೂ ಪಂಚಭೌತಿಕವಾಗಿರುವುವು.

ಕೇವಳ ಪಶೂಚಿಯಾಪರೀ । ಹೋಊನಿಯಾ ದೇಹಅಹಂಕಾರೀ । ಕೋಣಾಸೀ ವೈರ ನ ಕರೀ । ತೇಹೀ ಪರೀ ಪರಿಯೇಸೀ ॥೨೨೬॥ ಪ್ರಕೃತಿ-ಪರಚಿದಾತ್ಮಾ ಆಹೇ । ತೋಚಿ ಸರ್ವಾಭೂತೀ ಭೂತಾತ್ಮಾ ಪಾಹೇ । ಮಜಮಾಜೀಹೀ ತೋಚಿ ರಾಹೇ । ಐಶೀ ಸರ್ವ ಭೂತೀ ವಾಹೇ ಏಕಾತ್ಮತಾ ಜೋ ॥೨೨೭॥ ತ್ಯಾಸೀ ಕೋಣ ಆಪ್ತ ಕೋಣ ಇತರ । ಕೋಣಾಸೀ ಕರಾವೇ ವೈರ । ಸರ್ವ ಭೂತೀ ಮೀಚಿ ಸಾಚಾರ । ನಿರಂತರ ನಿಜಾತ್ಮಾ ॥೨೨೮॥ ಏಕ ಆತ್ಮಾ ಸರ್ವಭೂತಾಂತ । ಯೇಚಿ ಅರ್ಥೀಚಾ ದೃಷ್ಟಾಂತ । ಸ್ವಯೇ ಸಾಂಗೇ ಶ್ರೀಕೃಷ್ಣನಾಥ । ಶ್ರೋತಾ ಸಾವಚಿತ್ತ ಉದ್ಧವಾ ॥೨೨೯॥

ಯಥೇಂದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ । ಅಲಬ್ಧ್ವಾ ನ ವಿಷೀದೇತ ಕಾಲೇ ಕಾಲೇಽಶನಂ ಕ್ವಚಿತ್ ।
ಲಬ್ಧ್ವಾ ನ ಹೃಷ್ಯೇದ್ ಧೃತಿಮಾನುಭಯಂ ದೈವತಂತ್ರಿತಮ್ ॥೩೩॥

ಅರ್ಥ:- ಯಾವ ಪ್ರಕಾರವಾಗಿ ಒಬ್ಬನೇ ಚಂದ್ರನು ತುಂಬಿದ ವಿಭಿನ್ನ ಪಾತ್ರೆಗಳಲ್ಲಿ ಬೇರೆ ಬೇರೆಯಾಗಿ ಕಾಣಿಸುವನೋ, ಅದರಂತೆ ಒಬ್ಬ ಪರಮಾತ್ಮನು ಸರ್ವಪ್ರಾಣಿಮಾತ್ರರಲ್ಲಿ ಸ್ಥಿತನಾಗಿರುವನು. ಸರ್ವರ ಆತ್ಮವು ಒಂದೇ ಆಗಿರುವುದು. ಸನ್ಯಾಸಿಗೆ ಒಂದು ದಿನ ಸರಿಯಾದ ಸಮಯಕ್ಕೆ ಭೋಜನವು ಸಿಗದೇ ಹೋದರೆ ಆತನು ದುಃಖಿಯಾಗಬಾರದು. ಏಕೆಂದರೆ ಭೋಜನವು ಸಿಗುವುದು, ಬಿಡುವುದು ಇದು ಪ್ರಾರಬ್ಧದ ಅಧೀನವಾಗಿರುವುದು.

ಸಹಸ್ರ ಘಟೀ ಭರಲ್ಯಾ ಜಳ । ಬಿಂಬೇ ಏಕಚಿ ಚಂದ್ರಮಂಡಳ । ತೇವೀ ನಿಜಾತ್ಮಾ ಏಕ ಕೇವಳ । ಭೂತೀ ಸಕಳ ಭೂತಾತ್ಮಾ ॥೨೩೦॥ ದೇಖೇ ಭೂತಾಕೃತಿ ಜ್ಯಾ ಭಿನ್ನ । ತ್ಯಾಹೀ ಪರಮಕಾರಣೀ ಅಭಿನ್ನ । ಜೇವೀ ಅಳಂಕಾರೀ ಸುವರ್ಣ । ಆಕಾರೀಹೀ ಜಾಣ ಭಿನ್ನತ್ವ ನಾಹೀ ॥೨೩೧॥ ಜೇವೀ ಮೃತ್ತಿಕೇಚೀ ಗೋಕುಳೇ ಕೇಲೀ । ನಾನಾಕಾರೀ ಪೂಜ್ಯ ಝಾಲೀ । ಪರೀ ತೇ ಮೃತ್ತಿಕಾಚಿ ಸಂಚಲೀ । ತೇವೀ ಭೂತೇ ಭಾಸಲೀ ಭಗವಂತೀ ॥೨೩೨॥ ಕಾ ವಿಣೋನಿಯಾ ಸುತೇ ಸುತ । ಶೇಲಾ ಪರಕಳಾ ಪಾತಳ ಮ್ಹಣತ । ತೈಶೀ ವಸ್ತೂಚಿ ವಸ್ತುತ್ವೇ ಯೇಥ । ಸಾಕಾರ ಭಾಸತ ಭವರೂಪೇ ॥೨೩೩॥

ಹೀಗೆ ಯಾರ ಆತ್ಮಸ್ಥಿತಿಯಾಗಿರುವುದೋ, ಆತನು ಯಾರಲ್ಲಿಯೂ ವೈರಭಾವವನ್ನಿಡುವುದಿಲ್ಲ. ಈ ವಿಷಯವಾಗಿ ಈಗ ಶ್ರೀಕೃಷ್ಣನು ವಿಸ್ತಾರವಾಗಿ ವರ್ಣನೆಯನ್ನು ಮಾಡುವನು ॥೨೨೫॥

ಕೇವಲ ಪಶುವಿನಂತೆ ದೇಹದ ಅಹಂಕಾರಿಯಾಗಿ ಆತನು ಯಾರಲ್ಲಿಯೂ ವೈರಭಾವನ್ನು ಮಾಡುವುದಿಲ್ಲ. ಅದರ ಪ್ರಕಾರವನ್ನು ಈಗ ಹೇಳುವೆನು, ಅದನ್ನು ಕೇಳು ॥೨೨೬॥ ಪ್ರಕೃತಿಯ ಆಕಡೆ ಇರುವ ಜ್ಞಾನರೂಪ ಆತ್ಮನೇ ಸರ್ವಭೂತಗಳ ಶರೀರದಲ್ಲಿರುವನು ಮತ್ತು ನನ್ನ ಶರೀರದಲ್ಲಿಯೂ ಇರುವನು. ಹೀಗೆ ವಿಶಾಲವಾದ ಏಕಾತ್ಮತೆಯನ್ನು ಈತನು ಸರ್ವಪ್ರಾಣಿಮಾತ್ರರಲ್ಲಿಡುವನು ॥೨೨೭॥ ಆದ್ದರಿಂದ ಇವರು ನನ್ನ ಆಪ್ತರು ಇವರು ಪರಕೀಯರು ಎಂಬ ಭೇದಭಾವವು ಆತನ ಹೃದಯದಲ್ಲಿ ಇರುವುದಿಲ್ಲ. ಸರ್ವಭೂತಮಾತ್ರರಲ್ಲಿ ನಾನೇ ನಿರಂತರವಾಗಿ ಆತ್ಮರೂಪದಿಂದ ಇದ್ದೇನೆ ಎಂಬ ಪೂರ್ಣ ಅರಿವು ಆದಮೇಲೆ ವೈರವನ್ನು ಯಾರು ಯಾರಲ್ಲಿ ಮಾಡಬೇಕು ? ॥೨೨೮॥ ಸರ್ವಪ್ರಾಣಿಮಾತ್ರರಲ್ಲಿ ಸಮಾನ ಸ್ವರೂಪದಲ್ಲಿ ಒಂದೇ ಆತ್ಮತತ್ತ್ವವು ಇರುವುದು. ಈ ಅರ್ಥದ ದೃಷ್ಟಾಂತವನ್ನು ಶ್ರೀಕೃಷ್ಣನು ಈಗ ಹೇಳುತ್ತಿರುವನು ಮತ್ತು ಉದ್ಧವನು ಲಕ್ಷಕೊಟ್ಟು ಕೇಳುತ್ತಿರುವನು ॥೨೨೯॥

ಬೇರೆಬೇರೆಯಾಗಿರುವ ಸಾವಿರಾರು ನೀರು ತುಂಬಿದ ಕೊಡಗಳಲ್ಲಿ, ಆ ಯಾವ ಪ್ರತಿಯೊಂದು ಕೊಡದಲ್ಲಿಯೂ ಒಂದೇ ಚಂದ್ರನ ಪ್ರತಿಬಿಂಬವು ಬಿದ್ದಿರುವುದು. ಅದರಂತೆ ಸರ್ವಪ್ರಾಣಿಮಾತ್ರರಲ್ಲಿ ಒಬ್ಬನೇ ಪರಮಾತ್ಮನು ತುಂಬಿರುವನು ॥೨೩೦॥ ಪ್ರಾಣಿಮಾತ್ರರ ಆಕಾರವು ಭಿನ್ನ ಭಿನ್ನವಾಗಿ ಕಾಣಿಸುತ್ತಿರುವುವು. ಆದರೆ ಮೂಲ ಮಾಯೆಯಲ್ಲಿ ಅವೆಲ್ಲವೂ ಒಂದೇ ಆಗಿರುವುವು. ಯಾವ ಪ್ರಕಾರವಾಗಿ ಅಲಂಕಾರಗಳಲ್ಲಿನ ವಿವಿಧ ಪ್ರಕಾರಗಳ ಆಕಾರದಿಂದ ಬಂಗಾರದಲ್ಲಿ ಯಾವ ಭೇದವೂ ಆಗುವುದಿಲ್ಲ ॥೨೩೧॥ ಮಣ್ಣಿನ ಗೋಕುಲಗಳನ್ನು ಅಂದರೆ ನಂದ, ಯಶೋದಾ, ಕೃಷ್ಣ ಇತ್ಯಾದಿ ಮಣ್ಣಿನ ಮೂರ್ತಿಗಳನ್ನು ಮಾಡಲು ಅವು ಭಿನ್ನ ಭಿನ್ನ ಆಕಾರಗಳಿಂದ ಪೂಜೆಗೆ ಯೋಗ್ಯವಾಗುವುವು. ಆದರೆ ಅವುಗಳೆಲ್ಲವೂ ಕೇವಲ ಮಣ್ಣುಮಾತ್ರ ಆಗಿರುವುವು. ಅದರಂತೆ ಭಗವಂತನಲ್ಲಿ ಪ್ರಾಣಿಗಳ ಭಾಸವಾಗುವುದು ॥೨೩೨॥ ಅದರಂತೆಯೇ ನೂಲುಗಳಲ್ಲಿ ನೂಲನ್ನು ನೇಯಲು ಆಗ ಅದಕ್ಕೆ ಪಟಗ, ಶೆಲ್ಲೆ, ಸೀರೆ ಇತ್ಯಾದಿಯಾಗಿ ಹೇಳುವರು. ಅದರಂತೆ ಬ್ರಹ್ಮವೇ ತನ್ನ ಆತ್ಮಸ್ವರೂಪದಲ್ಲಿ ಇರುವುದು. ಸಂಸಾರದ ರೂಪದಿಂದ ಭಾಸವಾಗುತ್ತಿರುವುದು ॥೨೩೩॥

ಏವಂ ಸಾಕಾರ ನಿರಾಕಾರ । ಉಭಯತಾ ಬ್ರಹ್ಮ ಚಿ ಸಾಚಾರ । ಐಸಾ ಜ್ಯಾಚಾ ಜ್ಞಾನನಿರ್ಧಾರ । ತ್ಯಾಚಾ '' ಆಹಾರ'' ತೂ ಐಕ ।೭೩೪॥ ಆಹಾರ ನ ಮಿಳೇ ಜಿಯೇ ಕಾಳೀ । ದುಃಖೀ ನವ್ಹೇ ತಿಯೇ ವೇಳೀ । ಅನ್ನಾಲಾಗೀ ನ ತಳಮಳೀ । ಧಾರಣಾಬಳೀ ಬಲಿಷ್ಠ ।೭೩೫॥ ಆಹಾರ ಮಿಳಾಲ್ಯಾ ಉತ್ತಮ । ಹರಿಖೇಜೇನಾ ಮನೋಧರ್ಮ । ದೈವಾಧೀನ ಜಾಣೇ ವರ್ಮ । ನಿಜಕರ್ಮಪ್ರಾಪ್ತೀಸೀ ।೭೩೬॥ ಏವಂ ಪ್ರಾಪ್ತಾ ಪ್ರಾಪ್ತಾ ಚೀ ಕಥಾ । ಜಾಣೇ ದೈವಾಧೀನ ತತ್ತ್ವತಾ । ಯಾಲಾಗೀ ಹರ್ಷವಿಷಾದತಾ । ತ್ಯಾಚೇ ಚಿತ್ತಾ ಸ್ಪರ್ಶೇನಾ ।೭೩೭॥ ದೈವಾಧೀನ ಪ್ರಾಪ್ತೀ ಪ್ರಾಣಿಯಾಂಸೀ । ಐಸೇ ಸತ್ಯ ಕಳಲೇ ಜ್ಯಾಸೀ । ತೈ ಭಿಕ್ಷೇಸೀ ಕಾ ಹಿಂಡಣೇ ಮ್ಹಣಸೀ । ತೇಚಿ ಹೃಷೀಕೇಶೀ ಸಾಂಗತ ।೭೩೮॥

ಆಹಾರಾರ್ಥಂ ಸಮೀಹೇತ ಯುಕ್ತಂ ತತ್ಪ್ರಾಣಧಾರಣಮ್ । ತತ್ತ್ವಂ ವಿಮೃಶ್ಯತೇ ತೇನ ತದ್ವಿಜ್ಞಾಯ ವಿಮುಚ್ಯತೇ ।೩೪॥

ಅರ್ಥ:- ಭಿಕ್ಷೆಯನ್ನು ಅವಶ್ಯವಾಗಿ ಬೇಡಲೇಬೇಕು. ಹೀಗೆ ಮಾಡುವುದು ಉಚಿತವಾಗಿದೆ. ಭಿಕ್ಷೆಯಿಂದ ಪ್ರಾಣದ ರಕ್ಷಣೆಯಾಗುವುದು. ಪ್ರಾಣವಿದ್ದರೆ ಮಾತ್ರ ತತ್ವದ ವಿಚಾರಮಾಡಲು ಬರುವುದು. ತತ್ವವಿಚಾರದಿಂದ ತತ್ವಜ್ಞಾನವು ಪ್ರಾಪ್ತವಾಗಿ ಮುಕ್ತಿಯು ದೊರೆಯುವುದು.

ಪಾಳಾವಯಾ ಆಶ್ರಮಧರ್ಮಾಸೀ । ಅವಶ್ಯ ಹಿಂಡಾವೇ ಭಿಕ್ಷೇಸೀ । ಮಧುಕರೀ ಸನ್ಯಾಶಾಂಸೀ । ಸ್ವಧರ್ಮಾಶೀ ಅತಿವಿಹಿತ ।೭೩೯॥ ಸಾಧಕಾ ತರೀ ಆಹಾರಾರ್ಥ । ಅವಶ್ಯ ಹಿಂಡಾವೇ ಲಾಗೇ ಯೇಥ । ಆಹಾರೇವೀಣ ತ್ಯಾಂಚೇ ಚಿತ್ತ । ವಿಕ್ಷೇಪಭೂತ ಹೋ ಪಾಹೇ ।೭೪೦॥ ತಿಹೀ ರಸಾಸಕ್ತೀ ಸಾಂಡೂನ । ಭಿಕ್ಷೇಸೀ ಕರಾವಾ ಪ್ರಯತ್ನ । ಆಹಾರೇವೀಣ ತ್ಯಾಂಚೇ ಮನ । ಅತಿಕ್ಷೀಣ ಸರ್ವಾರ್ಥೀ ।೭೪೧॥ ಸಾಧಕಾಂಸೀ ಆಹಾರೇವೀಣ । ನ ಸಂಭವೇ ಶ್ರವಣ ಮನನ । ನ ಕರವೇ ಧ್ಯಾನ ಚಿಂತನ । ಅನುಸಂಧಾನ ರಾಹೇನಾ ।೭೪೨॥ ಸನ್ಯಾಶಾಂಸೀ ಧ್ಯಾನ ನ ಘಡೇ । ತೈ ಆಶ್ರಮಧರ್ಮಾಚೇ ತಾರೂ ಬುಡೇ । ಯಾಲಾಗೀ ಭಿಕ್ಷೇಸೀ ರೋಕಡೇ । ಹಿಂಡಣೇ ಘಡೇ ಹಿತಾರ್ಥ ।೭೪೩॥ ಮಿಳಾವೇ ಮಿಷ್ಟಾನ್ನ ಗೋಡ । ಹೇ ಸಾಂಡೂನಿ ರಸನಾಚಾಡ । ಕರಾವೇ ಭಿಕ್ಷೇಚೇ ಕೋಡ । ಪರಮಾರ್ಥ ದೃಢ ಸಾಧಾವಯಾ ।೭೪೪॥ ಆಹಾರ ಘೇತಲಿಯಾ ಜಾಣ । ಸಾಧಕಾಂಸೀ ಘಡೇ ಸಾಧನ । ಸಾಧನ ಕರಿತಾ ಪ್ರಕಟೇ ಜ್ಞಾನ । ಜ್ಞಾನಾಸ್ತವ ಜಾಣ ನಿಜಮೋಕ್ಷ ಲಾಭೇ ।೭೪೫॥

ಈ ರೀತಿಯಾಗಿ ಸಾಕಾರವಾಗಿರಲಿ ಅಥವಾ ನಿರಾಕಾರವಾಗಿರಲಿ ಈ ಎರಡೂ ಕೂಡ ನಿಜವಾಗಿಯೂ ಬ್ರಹ್ಮವೇ ಆಗಿರುವುವು. ಹೀಗೆ ಯಾರ ಜ್ಞಾನದ ಈ ನಿರ್ಧಾರವಿರುವುದೋ, ಆತನ ಆಹಾರ ವಿಷಯವಾಗಿ ನೀನು ಕೇಳು ।೭೩೪॥ ಆತ್ಮಜ್ಞಾನಿ ಪುರುಷನಿಗೆ ತಿನ್ನಲು ಏನೂ ಸಿಗದಿದ್ದರೆ, ಆಗ ಆತನು ದುಃಖಿಯಾಗುವುದಿಲ್ಲ. ಆತನ ಮನೋನಿಗ್ರಹವು ಅತಿಶಯವಾಗಿ ಬಲಿಷ್ಠವಾಗಿರುವುದು. ಆದ್ದರಿಂದ ಆತನು ಅನ್ನಕ್ಕಾಗಿ ತಳಮಳಿಸುವುದಿಲ್ಲ ।೭೩೫॥ ಉತ್ತಮ ಆಹಾರವು ಪ್ರಾಪ್ತವಾದರೆ, ಆಗ ಆತನು ಅತಿಶಯವಾಗಿ ಹರ್ಷಚಕಿತನಾಗುವುದಿಲ್ಲ. ಕಾರಣ ತನ್ನ ಪ್ರಾರಬ್ಧಕರ್ಮದಂತೆ ಯಾವತ್ತೂ ಘಟನೆಗಳು ದೈವಾಧೀನವಾಗಿರುವುವು ಎಂಬ ಈ ಮರ್ಮವು ಆತನಿಗೆ ತಿಳಿದಿರುವುದು ।೭೩೬॥ ಪ್ರಾಪ್ತವಾಗುವಿಕೆಯು ಅಥವಾ ಪ್ರಾಪ್ತವಾಗದೇ ಇರುವಿಕೆಯು ಈ ಎರಡೂ ಕೂಡ ದೈವಾಧೀನವಾಗಿರುವುವು. ಇದರ ವಿಷಯಕ್ಕೆ ಆತನಿಗೆ ಪರಿಪೂರ್ಣವಾಗಿ ಅರಿವು ಇರುವುದು. ಆದ್ದರಿಂದ ಸುಖವಾಗಲಿ ಅಥವಾ ದುಃಖವಾಗಲಿ, ಆತನ ಚಿತ್ತಕ್ಕೆ ಸ್ಪರ್ಶ ಕೂಡ ಮಾಡಲು ಸಾಧ್ಯವಿಲ್ಲ ।೭೩೭॥ ಪ್ರಾಣಿಮಾತ್ರರಿಗೆ ಅವರವರ ದೈವಾಧೀನದಿಂದ ಅನ್ನಾದಿಕಗಳ ಪ್ರಾಪ್ತವಾಗುವುದೆಂಬ ಈ ಮಾತು ಸತ್ಯವೆಂದು ತಿಳಿದುಕೊಂಡಿದ್ದರೆ, ಆತನು ಮನೆ ಮನೆಗೆ ಭಿಕ್ಷೆಗಾಗಿ ಏಕೆ ತಿರುಗಬೇಕು? ಹೀಗೆ ಒಂದುವೇಳೆ ಕೇಳಬಹುದು. ಆದ್ದರಿಂದ ಅದಕ್ಕಾಗಿಯೂ ಶ್ರೀಕೃಷ್ಣನು ಹೇಳುವನು ।೭೩೮॥

ಸನ್ಯಾಸಿಯು ಆಶ್ರಮಧರ್ಮವನ್ನು ಪಾಲಿಸುವುದಕ್ಕಾಗಿ ಆತನು ಭಿಕ್ಷೆಯನ್ನು ಬೇಡಲು ಅವಶ್ಯವಾಗಿ ತಿರುಗಬೇಕು. ಕಾರಣ ಸನ್ಯಾಸಿಯ ಸ್ವಧರ್ಮವಾಗಿರುವ ಮಾಧುಕರಿಯು ಇದು ಅತ್ಯಂತ ಯೋಗ್ಯವಾಗಿರುವುದು ।೭೩೯॥ ಸಾಧಕನಿಗೆ ಆಹಾರಕ್ಕಾಗಿ ತಿರುಗಲೇಬೇಕಾಗುವುದು. ಕಾರಣ ಆಹಾರವಿಲ್ಲದೇ ಆತನ ಮನಸ್ಸು ಅಸ್ಥಿರವಾಗಬಲ್ಲದು ।೭೪೦॥ ಆತನು ಅನ್ನರಸದಲ್ಲಿನ ರುಚಿಯ ಆಸಕ್ತಿಯನ್ನು ಬಿಟ್ಟುಕೊಟ್ಟು ಭಿಕ್ಷೆಯನ್ನು ಕೂಡಿಸುವ ಪ್ರಯತ್ನವನ್ನು ಮಾಡಬೇಕು. ಕಾರಣ ಆಹಾರವನ್ನು ಬಿಟ್ಟರೆ ಆತನ ಮನವು ದುರ್ಬಲವಾಗುವುದು ।೭೪೧॥ ಸಾಧಕನಿಗೆ ಅನ್ನವು ದೊರೆಯದಿದ್ದರೆ ಆತನಿಗೆ ಶ್ರವಣ, ಮನನ, ಧ್ಯಾನ, ಚಿಂತನ ಇತ್ಯಾದಿಗಳನ್ನು ಮಾಡುವ ಸಾಮರ್ಥ್ಯವು ಉಳಿಯುವುದಿಲ್ಲ ಮತ್ತು ಚಿತ್ತದ ಏಕಾಗ್ರತೆಯೂ ಕೂಡ ಆಗುವುದಿಲ್ಲ ।೭೪೨॥ ಸನ್ಯಾಸಿಗೆ ಅಖಂಡವಾಗಿ ಅನುಸಂಧಾನ, ಧ್ಯಾನ ಇತ್ಯಾದಿಗಳು ಸಾಧಿಸದಿದ್ದರೆ ಆತನ ಆಶ್ರಮಧರ್ಮರೂಪ ಹಡಗವು ಮುಳುಗಿ ಹೋಗುವುದು. ಅದಕ್ಕಾಗಿ ಆತನು ತನ್ನ ಹಿತಕ್ಕಾಗಿ ಅವಶ್ಯವಾಗಿ ಭಿಕ್ಷೆಯನ್ನು ಬೇಡಬೇಕು ।೭೪೩॥ ರುಚಿರುಚಿಯಾದ ಮೃಷ್ಟಾನ್ನವು ದೊರಕಬೇಕೆಂಬ ನಾಲಿಗೆಯ ಚಟವನ್ನು ಬೆಳೆಸಬಾರದು. ಪರಮಾರ್ಥದ ಸಾಧನೆಗಾಗಿ ಮಾತ್ರ ಭಿಕ್ಷೆಯಲ್ಲಿ ಪ್ರೀತಿಯನ್ನು ಇಡಬೇಕು ।೭೪೪॥ ಸಾಧಕನು ಆಹಾರವನ್ನು ಸೇವಿಸಿದರೆ ಆತನಿಂದ ಸಾಧನೆಗಳು ಸಾಧ್ಯವಾಗುವುವು. ಸಾಧನೆಗಳಿಂದ ಜ್ಞಾನಪ್ರಾಪ್ತಿಯಾಗುವುದು ಮತ್ತು ಜ್ಞಾನದಿಂದ ಮೋಕ್ಷದ ಲಾಭವಾಗುವುದು ।೭೪೫॥

ಸರ್ವಥಾ ನ ವಾಂಛಾವೇ ಮಿಷ್ಟಾನ್ನ । ತರೀ ಭಿಕ್ಷಾ ಮಾಗಾವೀ ಕೋಣ । ಐಸೇ ಕಾಂಹೀ ಕಲ್ಪೀಲ ಮನ । ತೇಚಿ ಶ್ರೀಕೃಷ್ಣ ಸಾಂಗತ ॥೭೪೬॥

ಯದೃಚ್ಛಯೋಪಪನ್ನಾನ್ನಮದ್ಯಚ್ಛ್ರೇಷ್ಠಮುತಾಽಪರಮ್ । ಯಥಾ ವಾಸಸ್ತಥಾ ಶಯ್ಯಾಂ ಪ್ರಾಪ್ತಂ ಪ್ರಾಪ್ತಂ ಭಜೇನ್ಮುನಿಃ ॥೩೫॥

ಅರ್ಥ:- ಸನ್ಯಾಸಿಯು ಪ್ರಾರಭ್ದಾನುಸಾರವಾಗಿ ಒಳ್ಳೆಯ, ಕೆಟ್ಟದ್ದೆನ್ನದೇ ಯಾವುದೇ ಭಿಕ್ಷೆಯು ದೊರೆಯಲಿ ಅದರಿಂದಲೇ ತನ್ನ ಹೊಟ್ಟೆಯನ್ನು ತುಂಬಿಕೊಳ್ಳಬೇಕು. ಬಟ್ಟೆ, ಹಾಸಿಗೆಗಳು ಸಿಕ್ಕ ಸ್ಥಿತಿಯಲ್ಲಿಯೇ ಕಾರ್ಯ ನಡೆಸಬೇಕು. ಇದಕ್ಕಾಗಿ ಉತ್ತಮ, ಕನಿಷ್ಠ ಎಂದು ಭೇದಭಾವ ಮಾಡುವಂತಿಲ್ಲ.

ಸಹಜ ಭಿಕ್ಷೇಸೀ ಆಲೇ ಜಾಣ । ಶುಷ್ಕ ಅಥವಾ ಮಿಷ್ಟಾನ್ನ । ತೇಣೇ ಕರಾವೇ ಪ್ರಾಣಧಾರಣ । ರಸನಾಲಾಲನ ಸಾಂಡೋನೀ ॥೭೪೮॥ ನಿದ್ರಾಲಸ್ಯಾಚೇ ನ ಯೇ ಪ್ರಸ್ಥಾನ । ತೈಸೇ ಕರಾವೇ ಪ್ರಾಣಧಾರಣ। ದೃಢ ಠಸಾವೇ ಆಸನಧ್ಯಾನ । ''ಯುಕ್ತಾಹಾರ'' ಜಾಣ ಯಾ ನಾಂವ ॥೭೪೯॥ ವಲ್ಕಲ ಅಥವಾ ಅಜಿನ । ನವೇ ಅಥವಾ ವಸ್ತ್ರ ಜೀರ್ಣ । ಸಹಜೇ ಪ್ರಾಪ್ತ ಝಾಲ್ಯಾ ಜಾಣ । ಕರೀ ಪ್ರಾವರಣ ಯಥಾಸುಖೇ ॥೭೪೯॥ ಕಂಥಾ ಹೋ ಕಾ ಮೃದು ಆಸ್ತರಣ । ತೃಣಶಯ್ಯಾ ಕಾ ಭೂಮಿಶಯನ । ಸ್ವಭಾವೇ ಪ್ರಾಪ್ತ ಝಾಲ್ಯಾ ಜಾಣ । ತೇಥಹೀ ಶಯನ ಕರೀ ಮುನಿ ॥೭೫೦॥ ಮೀ ಏಕ ಭೋಕ್ತಾ ಶಯನಕರ್ತಾ । ಹೇಹೀ ನಾಹೀ ತ್ಯಾಸೀ ಅಹಂತಾ । ಸ್ನಾನಾದಿ ಕರ್ಮೀ ವರ್ತತಾ । ತ್ಯಾಚೀ ನಿರಭಿಮಾನತಾ ಹರಿ ಸಾಂಗೇ ॥೭೫೧॥

ಶೌಚಮಾಚನಂ ಸ್ನಾನಂ ನ ತು ಚೋದನಯಾ ಚರೇತ್ । ಅನ್ಯಾಂಶ್ಚ ನಿಯಮಾನ್ ಜ್ಞಾನೀ ಯಥಾಽಹಂ ಲೀಲಯೇಶ್ವರಃ ॥೩೬॥

ಅರ್ಥ:- ಯಾವ ಪ್ರಕಾರವಾಗಿ ಈಶ್ವರನಾದ ನಾನು ಸರ್ವ ಕಾರ್ಯಗಳನ್ನು ಮಾಡುತ್ತಿರುತ್ತೇನೆಯೋ ಅದರಂತೆ ಜ್ಞಾನನಿಷ್ಠ ಪುರುಷನು ಶೌಚ, ಆಚಮನ, ಸ್ನಾನ ಮತ್ತು ಅನ್ಯ ನಿಯಮಗಳನ್ನು ಅನಾಸಕ್ತ ಭಾವನೆಯಿಂದ ಮಾಡಬೇಕು. ವಿಧಿಕಿಂಕರನಾಗಿ ಅವುಗಳನ್ನು ಮಾಡಕೂಡದು.

ಆಚಮನ ಸ್ನಾನ ಶೌಚಾಚಾರ । ಕರಿತಾ ನವ್ಹೇ ವಿಧಿಕಿಂಕರ । ಕರ್ಮಾಭಿಮಾನಾಚೀ ಮೋಡಲೀ ಥಾರ । ಜೈಸಾ ಮೀ ಅವತಾರ ತೈಸಾ ತೋ ॥೭೫೨॥ ಜೈಸಾ ಮೀ ''ಲೀಲಾವತಾರ'' ಧರೀ । ಅಲಿಪ್ತಪಣೇ ಕರ್ಮೇ ಕರೀ । ತೈಸೀಚಿ ಜಾಣ ಯೋಗ್ಯಾಚೀ ಪರೀ। ಸರ್ವ ಕರ್ಮಾಚಾರೀ ಅಲಿಪ್ತ ॥೭೫೩॥ ಜ್ಯಾಸಿ ವಿಧೀಚೇ ಭಯ ನಾಹೀ ಪೋಟೀ । ತೋ ಕರ್ಮೇ ಕರಾವಯಾ ಕದಾ ನುಠೀ । ತೇಚಿ ವಿಖಿಂಚೀ ವಿಶದ ಗೋಠೀ । ಕೃಷ್ಣ ಜಗಜೇಠೀ ಸಾಂಗತ ॥೭೫೪॥

ಮೃಷ್ಟಾನ್ನವನ್ನು ಸರ್ವಥಾ ಅಪೇಕ್ಷಿಸಬಾರದು. ಹಾಗಾದರೆ ಭಿಕ್ಷೆಯನ್ನು ಎಂತಹದ್ದು ಬೇಡಬೇಕು? ಈ ಪ್ರಕಾರದ ವಿಕಲ್ಪವು ಯಾರ ಮನದಲ್ಲಿಯಾದರೂ ಬರಬಹುದು. ಅದಕ್ಕಾಗಿ ಅದರ ನಿರಸನೆಯನ್ನು ಶ್ರೀಕೃಷ್ಣನು ಮಾಡುತ್ತಿರುವನು ॥೭೪೬॥

ಸಾದಾ ಆಹಾರವಾಗಲಿ ಅಥವಾ ಮೃಷ್ಟಾನ್ನವಾಗಲಿ, ಹೀಗೆ ಯಾವುದೇ ದೊರೆಯಲಿ, ಅದರಲ್ಲಿಯೇ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನಾಲಿಗೆಯ ಪ್ರೇಮದತ್ತ ಸ್ವಲ್ಪವೂ ಕೂಡ ಲಕ್ಷವಿರಬಾರದು ॥೭೪೮॥ ನಿದ್ರೆ ಅಥವಾ ಆಲಸ್ಯವು ಬೆಳೆಯಲಾರದಂತೆ ಈ ರೀತಿಯಲ್ಲಿ ಅಲ್ಪ ಆಹಾರವನ್ನು ಸೇವಿಸುತ್ತ ಪ್ರಾಣಧಾರಣೆನ್ನು ಮಾಡಬೇಕು. ಆಸನದ ಮೇಲೆ ಕುಳಿತುಕೊಂಡು ದೃಢವಾದ ಧ್ಯಾನವನ್ನು ಮಾಡಬೇಕು. ಇದಕ್ಕೆ ''ಯುಕ್ತಾಹಾರ'' ಅಂದರೆ ನಿಯಮಿತವಾದ ಭೋಜನವೆಂದು ಹೇಳುವರು ॥೭೪೮॥ ನಾರುಬಟ್ಟೆ ಅಥವಾ ಮೃಗಚರ್ಮ, ಹೊಸ ಅಥವಾ ಹಳೆಯ ವಸ್ತ್ರ, ಹೀಗೆ ಸಹಜವಾಗಿ ಯಾವುದು ಲಭಿಸುವುದೋ ಅದನ್ನೇ ಆನಂದದಿಂದ ಹೊದ್ದುಕೊಂಡು ಶರೀರವನ್ನು ಮುಚ್ಚಿಕೊಳ್ಳಬೇಕು ॥೭೪೯॥ ಕೌದಿಯ ಹಾಸಿಗೆಯಾಗಲಿ, ಮೃದು ಹಾಸಿಗೆಯಾಗಲಿ, ಹುಲ್ಲಿನ ಹಾಸಿಗೆಯಾಗಲಿ ಅಥವಾ ನೆಲದ ಹಾಸಿಗೆಯಾಗಲಿ ಹೀಗೆ ಯಾವುದೇ ದೊರೆಯಲಿ ಅದರಲ್ಲಿಯೇ ಮುನಿಯು ಮಲಗಿಕೊಳ್ಳುತ್ತಿರುವನು ॥೭೫೦॥ ನಾನೊಬ್ಬ ದೊಡ್ಡ ಭೋಕ್ತನು ಅಥವಾ ಮಹಾ ಸಹಿಸಿಕೊಳ್ಳುವಾತನು ಎಂಬ ಈ ಪ್ರಕಾರದ ಅಹಂಕಾರವು ಆತನಿಗೆ ಇರುವುದಿಲ್ಲ. ಸ್ನಾನಾದಿಕರ್ಮಗಳಲ್ಲಿ ಆತನ ನಿರಭಿಮಾನವೃತ್ತಿಯು ಹೇಗೆ ಇರುವುದೆಂಬುದನ್ನು ಶ್ರೀಕೃಷ್ಣನು ಹೇಳುತ್ತಿರುವನು ॥೭೫೧॥

ಆಚಮನ, ಸ್ನಾನ ಅಥವಾ ಪ್ರಾತರ್ವಿಧಿ ಇತ್ಯಾದಿ ಕರ್ಮಗಳನ್ನು ಮಾಡುತ್ತಿರಲು ಆತನು ಶಾಸ್ತ್ರ ವಿಧಿಗಳ ದಾಸನಾಗಿ ಆಚರಿಸುವುದಿಲ್ಲ. ಕಾರಣ ಆತನ ಕರ್ಮಾಭಿಮಾನದ ಆಧಾರವೇ ಇಲ್ಲದಾಗಿರುವುದು. ಸಾರಾಂಶವೇನೆಂದರೆ ನಾನು ಹೇಗೆ ಅವತಾರಿಯೋ ಆತನೂ ಕೂಡ ಹಾಗೆಯೇ ಆಗುವನು ॥೭೫೨॥ ನಾನು ಯಾವ ಪ್ರಕಾರವಾಗಿ ಲೀಲಾಮಾತ್ರವಾಗಿ ಅವತಾರವನ್ನು ಧರಿಸುವೆನೋ ಮತ್ತು ಅಲಿಪ್ತನಾಗಿ ಸರ್ವ ಕರ್ಮಗಳನ್ನು ಮಾಡುತ್ತಿರುವೆನೋ, ಅದೇಪ್ರಕಾರವಾಗಿ ಯೋಗಿಗಳ ಆಚರಣೆಗಳಿರುವುವು. ಇವರು ಸರ್ವ ಕರ್ಮಗಳನ್ನು ಮಾಡುತ್ತಿದ್ದರೂ ಅಲಿಪ್ತರಾಗಿರುವರು ॥೭೫೩॥ ಅವರ ಮನದಲ್ಲಿ ಎಂದಿಗೂ ವಿಧಿಯ ಭಯವು ಇರುವುದಿಲ್ಲ. ಆದ್ದರಿಂದ ಅವರು ಕರ್ಮಗಳನ್ನು ಆಚರಿಸಲು ಎಂದಿಗೂ ಎದ್ದು ನಿಲ್ಲುವುದಿಲ್ಲ. ಈ ವಿಷಯದ ರಹಸ್ಯವನ್ನು ಜಗಜೇಠಿಯಾದ ಶ್ರೀಕೃಷ್ಣನು ಸ್ಪಷ್ಟಮಾಡಿ ಹೇಳುತ್ತಿರುವನು ॥೭೫೪॥

ನ ಹಿ ತಸ್ಯ ವಿಕಲ್ಪಾಖ್ಯಾ ಯಾ ಚ ಮದ್ವೀಕ್ಷಯಾ ಹತಾ । ಆದೇಹಾಂತಾ ತ್ಕಕ್ವಚಿತ್ ಖ್ಯಾತಿಸ್ತತಃ ಸಂಪದ್ಯತೇ ಮಯಾ ।೩೭॥

ಅರ್ಥ:- ಜ್ಞಾನನಿಷ್ಠ ಪುರುಷನಿಗೆ ಭೇದದ ಅನುಭವವು ಬರುವುದಿಲ್ಲ. ಆತನು ಪ್ರಾರಂಭದಲ್ಲಿ ಭೇದ ಉಳ್ಳವನಾಗಿದ್ದರೆ ಅದು ನನ್ನ ಸರ್ವಾತ್ಮಕ ಸಾಕ್ಷಾತ್ಕಾರದಿಂದ ನಷ್ಟವಾಗುವುದು. ಮೃತ್ಯುಕಾಲದವರೆಗೂ ಆಗಾಗ ಬಾಧಕ ಭೇದದ ಪ್ರತೀತಿಯಾಗುತ್ತಿರುವುದು. ದೇಹಪಾತನಂತರ ಆತನು ನನ್ನಲ್ಲಿ ಏಕರೂಪನಾಗುವನು.

ಕರ್ಮಕರಣೇ ನ ಕರಣೇ । ಐಶಿಯಾ ಸಂದೇಹಾಚೇ ಠಾಣೇ । ಪಳಾಲೇ ಮಾಝೇನಿ ದರ್ಶನೇ । ಸಂಕಲ್ಪಾಚೇ ಜಿಣೇ ನಿಮಾಲೇ ।೨೫೫॥ ಸಂಕಲ್ಪು ನಿಮತಾಂಚಿ ಪೋಟೀ । ವಿರಾಲೀ ಲಿಂಗದೇಹಾಚೀ ಗಾಂಠೀ । ಭೇದಾಚೀ ಹಾರಪಲೀ ತ್ರಿಪುಟೀ । ಮೀ ಪರಮಾತ್ಮಾ ದಿಠೀ ದೇಖತಾ ।೨೫೬॥ ಜ್ಯಾಸಿ ನಾಹೀ ಭೇದಾಚೇ ಭಾನ । ತ್ಯಾಚೇ ದೇಹಾಚೇ ಭರಣ ಪೋಷಣ । ಸ್ನಾನ - ಭೋಜನಶಯನ । ಗಮನಾಮಗನ ಕೇವೀ ಘಡೇ ।೨೫೭॥ ಜೋ ಜಿಣೋನಿಯಾ ವಿಕಲ್ಪಭ್ರಾಂತೀ । ತ್ರಿಶುದ್ಧೀ ಮಿಸಳಲಾ ಅದ್ವೈತೀ । ತ್ಯಾಚೇ ದೇಹಾಚೀ ಸ್ಥಿತಿಗತೀ । ಪ್ರಾರಬ್ಧಾಹಾತೀ ನಿಶ್ಚಿತ ।೨೫೮॥ ವೃಕ್ಷ ಸಮೂಳ ಉಪಡಲಿಯಾ ಪಾಹೇ । ಪರೀ ಸಾರ್ದ್ರತಾ ವೃಕ್ಷೀ ರಾಹೇ । ತಾಂಬೂಲ ಖಾಊನಿಯಾ ಜಾಯೇ । ತರೀ ಅಧರೀ ರಾಹೇ ಸುರಂಗತಾ ।೨೫೯॥ ಹೋ ಕಾ ಕನ್ಯಾದಾನ ಕೇಲ್ಯಾ ಪಾಹೇ । ವರು ಕನ್ಯಾಹೀ ಘೇಉನಿ ಜಾಯೇ । ತರೀ ಉಗಾ ಮಾನ ಉರಲಾ ರಾಹೇ । ರುಸಣೇ ಫುಗಣೇ ನ ಜಾಯೇ ದೇಹಾಂತ ।೨೬೦॥ ತೈಸಾ ಅಭಿಮಾನಾಚೇನಿ ಸಳೇ । ಮೀ ಕರ್ಮಕರ್ತಾ ಮ್ಹಣವೀ ಬಳೇ । ತೇ ಅಹಂತಾ ನಿಮೇ ಜ್ಞಾನಬಳೇ । ತರೀ ಶರೀರ ಚಳೇ ಪ್ರಾರಬ್ಧೇ ।೨೬೧॥ ಕುಲಾಲ ದಂಡ ಭಾಂಡೇ ಘೇಊನಿ ಜಾಯೇ । ಪೂರ್ವಭವಂಡೀ ಚಕ್ರ ಭವಂತ ರಾಹೇ । ತೇವೀ ಅಭಿಮಾನ ಗೇಲಿಯಾ ಪಾಹೇ । ದೇಹ ವರ್ತತಾಹೇ ಪ್ರಾರಬ್ಧೇ ।೨೬೨॥ ತ್ಯಾ ದೇಹಾಚೇ ಭರಣಪೋಷಣ । ಪ್ರಾರಬ್ಧಚಿ ಕರಿತೇ ಜಾಣ । ಜ್ಞಾತ್ಯಾಸಿ ಪ್ರಪಂಚಾಚೇ ಭಾನ । ಸತ್ಯತ್ವೇ ಜಾಣ ಅಸೇನಾ ।೨೬೩॥ ಜೈಶೀ ಮಿಥ್ಯಾ ಛಾಯಾ ದೇಹಾಪಾಶೀ । ತೈಸಾ ದೇಹ ದಿಸೇ ಸಜ್ಞಾನಾಸೀ । ಯಾಲಾಗೀ ದೇಹಬುದ್ಧಿ ತ್ಯಾಸೀ । ಸತ್ಯತ್ವೇಸೀ ಉಪಜೇನಾ ।೨೬೪॥ ಛಾಯಾ ಸುಖಾಸನಾಮಾಜೀ ಬೈಸೇ । ಕಾ ವಿಷ್ಠೇವರೀ ಪಡಲೀ ದಿಸೇ । ತ್ಯಾ ಛಾಯೇಚೇ ಅಭಿಮಾನವಶೇ । ಸುಖದುಃಖ ನಸೇ ಪುರುಷಾಸೀ ।೨೬೫॥ ತೇವೀ ದೇಹಾಚಿ ಖ್ಯಾತಿವಿಪತ್ತಿ । ಬಾಧೀನಾ ಸಜ್ಞಾನಾಚೇ ಸ್ಥಿತೀ। ಪ್ರಾರಬದ್ಧಕ್ಷಯಾಚೇ ಅಂತೀ । ವಿದೇಹ ಪಾವತೀ ಕೈವಲ್ಯ ।೨೬೬॥

ಆ ಯಾವ ಯೋಗಿಗೆ ನನ್ನ ದರ್ಶನದಿಂದ ಕರ್ಮಗಳನ್ನು ಮಾಡಬೇಕೋ ಅಥವಾ ಬಿಡಬೇಕೋ ಎಂಬ ಸಂಶಯದ ಸ್ಥಳವೇ ಓಡಿ ಹೋಗುವುದು. ಮತ್ತು ಸಂಕಲ್ಪದ ಪ್ರಾಣವೇ ಹೊರಟುಹೋಗುವುದು ।೨೫೫॥ ಪರಮಾತ್ಮನಾದ ನನಗೆ ದೃಷ್ಟಿಯಿಂದ ನೋಡುತ್ತಲೇ ಸಂಕಲ್ಪವೆಂಬುದು ತನ್ನಲ್ಲಿಯೇ ತಾನು ಕರಗಿಹೋಗುವುದು ಮತ್ತು ಲಿಂಗದೇಹದ ಗಂಟು ಬಿಚ್ಚುವುದು. ಇದರಿಂದ ಭೇದದ ತ್ರಿಪುಟಿಯು ಪರಿಪೂರ್ಣವಾಗಿ ಲೋಪವಾಗಿಬಿಡುವುದು ।೨೫೬॥ ಈತನಿಗೆ ಭೇದಗಳ ಯಾವುದೇ ಪ್ರಕಾರದ ಸ್ಮರಣವೇ ಇರುವುದಿಲ್ಲ. ಅಂದಮೇಲೆ ಈತನ ದೇಹದ ಪಾಲನೆಪೋಷಣೆಗಳನ್ನು, ಸ್ನಾನ, ಪಾನ, ಭೋಜನ, ಗಮನಾಗಮನ, ಶಯನ ಇತ್ಯಾದಿಗಳು ಹೇಗೆ ಸಾಧಿಸಬೇಕು? ।೨೫೭॥ ಈತನು ವಿಕಲ್ಪದ ಭ್ರಾಂತಿಯನ್ನು ಜಯಿಸಿರುವನು, ಅದ್ವೈತಸ್ವರೂಪದಲ್ಲಿ ಕೂಡಿಕೊಂಡಿರುವನು. ಆತನ ದೇಹದ ಸ್ಥಿತಿಗತಿ, ಚಲನವಲನಗಳು ಪ್ರಾರಬ್ಧದಲ್ಲಿಯೇ ಇರುವುವು ।೨೫೮॥ ಒಂದು ವೃಕ್ಷವನ್ನು ಬೇರು ಸಮೇತವಾಗಿ ಕಿತ್ತು ಒಗೆಯಲು, ಆಗ ಅದರಲ್ಲಿ ಹಸಿರು, ತೇವು ಇದ್ದೇ ಇರುವುದು. ಅಥವಾ ತಾಂಬೂಲವನ್ನು ತಿಂದು ಎಲ್ಲವನ್ನೂ ಉಗುಳಿದರೂ ಕೂಡ ತುಟಿಗಳಲ್ಲಿ ಸುರಂಗ ಅಂದರೆ ಕೆಂಪು ಬಣ್ಣವು ಇದ್ದೇ ಇರುವುದು ।೨೫೯॥ ಅಥವಾ ಕನ್ಯಾದಾನವಾಗಿ ಆ ಕನ್ಯೆಯ ವರನು ಆಕೆಗೆ ತನ್ನ ಮನೆಗೆ ಒಯ್ದರೂ ಕೂಡ ಮನೆಯಲ್ಲಿ ಇನ್ನೂ ಬೀಗರು ಬಿಜ್ಜರಿಗೆ ಮಾನಪಾನಗಳು ನಡೆಯುತ್ತಲೇ ಇರುವುವು. ಮತ್ತು ಸಾಯುವವರೆಗೂ ಮುನಿಸಿಕೊಳ್ಳುವುದು, ಉಬ್ಬಿಕೊಳ್ಳುವುದು ಇವು ಏನು ಮಾಡಿದರೂ ಹೋಗಲಾರವು ।೨೬೦॥ ಈ ಪ್ರಕಾರವಾಗಿ ಅಭಿಮಾನವು ಇರುವುದರಿಂದ ನಾನು ಕರ್ಮಕರ್ತನೆಂದು ಬಲುಮೆಯಿಂದ ಹೇಳಿಸಿಕೊಳ್ಳುವನು. ಈ ಯಾವ ಅಹಂಕಾರವು ಜ್ಞಾನದಿಂದ ನಷ್ಟವಾಗುತ್ತಿರುವುದು. ಶರೀರವು ಮಾತ್ರ ತನ್ನ ಪ್ರಾರಬ್ಧಕರ್ಮದಂತೆ ನಡೆಯುತ್ತಿರುವುದು ।೨೬೧॥ ಮಡಿಕೆಯು ಸಿದ್ಧವಾಗುತ್ತಲೇ ಕುಂಬಾರನು ಅದನ್ನು ಚಕ್ರದಿಂದ ಹೊರಗೆ ತೆಗೆಯುವನು. ಮತ್ತು ಆ ಚಕ್ರದಲ್ಲಿನ ತಿರುಗಿಸುವ ಕೋಲನ್ನೂ ಕೂಡ ತೆಗೆದುಬಿಡುವನು. ಆದರೆ ಚಕ್ರಕ್ಕೆ ಪ್ರಾರಂಭದಲ್ಲಿ ಗತಿಯು ದೊರಕಿದ್ದರಿಂದ ಆ ಗತಿಯು ಮುಗಿಯುವವರೆಗೂ ಆ ಚಕ್ರವು ತಿರುಗುತ್ತಲೇ ಇರುವುದು. ಅದರಂತೆ ಈ ಶರೀರವು ಅಭಿಮಾನವು ನಷ್ಟವಾದ ಮೇಲೆಯೂ ಪ್ರಾರಬ್ಧಕರ್ಮಪ್ರಮಾಣದಂತೆ ವರ್ತಿಸುತ್ತಿರುವುದು ।೨೬೨॥ ಈ ಯಾವ ಶರೀರದ ರಕ್ಷಣೆಯನ್ನು ಅದರ ಪ್ರಾರಬ್ಧವೇ ಮಾಡುತ್ತಿರುವುದು. ಕಾರಣ ಆತ್ಮಜ್ಞಾನೀ ಪುರುಷನಿಗೆ ನಿಜವಾಗಿಯೂ ಪ್ರಪಂಚದ ಸ್ಮರಣೆಯೇ ಇರುವುದಿಲ್ಲ ।೨೬೩॥ ಶರೀರದ ಜೊತೆಯಲ್ಲಿನ ನೆರಳು ಯಾವ ಪ್ರಕಾರವಾಗಿ ಮಿಥ್ಯೆಯಾಗಿರುವುದೋ, ಅದರಂತೆಯೇ ಜ್ಞಾನೀ ಪುರುಷನ ದೇಹವೂ ಕೂಡ ಮಿಥ್ಯೆಯಾಗಿರುವುದು. ಆತನಿಗೆ ದೇಹವೆಂದರೆ ನಾನು ಎಂಬ ಈ ಬುದ್ಧಿಯು ನಿಜವಾಗಿಯೂ ಬರುವುದಿಲ್ಲ ।೨೬೪॥ ತನ್ನ ನೆರಳು ಪಾಲಖಿಯ ಮೇಲೆ ಇರಲಿ ಅಥವಾ ಮಲದಮೇಲೆ ಬಿದ್ದಿರಲಿ ಇದನ್ನು ಕಂಡ ಯಾವ ಮನುಷ್ಯನಿಗೂ ಸುಖವಾಗಲಿ ಅಥವಾ ದುಃಖವಾಗಲಿ ಹೀಗೆ ಯಾವುದೂ ಆಗುವುದಿಲ್ಲ ।೨೬೫॥ ಅದರಂತೆ ಜ್ಞಾನೀ ಪುರುಷನಿಗೆ ದೇಹದಿಂದಾಗುವ ಸುಖ ದುಃಖಗಳಿಂದ ಆತನಿಗೆ ಯಾವ ಪರಿಣಾಮವೂ ಆಗುವುದಿಲ್ಲ. ಪ್ರಾರಬ್ಧವು ಕ್ಷೀಣವಾಗುತ್ತಲೇ ಆತನು ದೇಹತ್ಯಾಗ ನಂತರ ಬ್ರಹ್ಮಸ್ವರೂಪಕ್ಕೆ ಪ್ರಾಪ್ತನಾಗುವನು ।೨೬೬॥

ಜೈಶೀ ಜಳಾಚೀ ಲಹರೀ । ನಿಶ್ಚಳ ಹೋಯ ಸಾಗರೀ । ತೈಸಾ ಜ್ಞಾತಾ ಮಜಮಾಝಾರೀ । ವಿದೇಹ ಕರೀ ಸಮರಸೇ ।೨೬೭॥ ಉಗಮ ಸಂಗಮ ಪ್ರವಾಹಗತೀ। ಸರಿತಾಂಚೀ ನಾಮರೂಪಖ್ಯಾತೀ । ಜೇವೀ ಪ್ರಳಯೋದಕೀ ಹಾರಪತೀ । ತೇವೀ ಸಮರಸತೀ ಮಜಮಾಜೀ ಜ್ಞಾತೇ ।೨೬೮॥ ಅಪರೋಕ್ಷ ಸಾಕ್ಷಾತ್ಕಾರ ಸನ್ಯಾಸೀ । ತ್ಯಾಚೀ ಸ್ಥಿತಿಗತಿ ಸ್ವಧರ್ಮೇಸೀ । ಉದ್ಧವಾ ಸಾಂಗಿತಲೀ ತುಜಪಾಶೀ । ಆತಾ ಮುಮುಕ್ಷು ಸನ್ಯಾಸೀ ತೇ ಐಕ ।೨೬೯॥

ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್ । ಅಜಿಜ್ಞಾಸಿತಮದ್ಧರ್ಮೋ ಮುನಿಂ ಗುರುಮುಖಪವ್ರಜೇತ್ ।೪೦॥

ಅರ್ಥ:- ಜಿತೇಂದ್ರಿಯ ಪುರುಷನು ಸಂಸಾರಿಕ ವಿಷಯಭೋಗಗಳ ಫಲವು ದುಃಖವೇ ದುಃಖವೆಂದು ತಿಳಿದುಕೊಂಡಾಗ ಆತನು ವಿರಕ್ತನಾಗುವನು. ಆತನು ನನ್ನ ಪ್ರಾಪ್ತಿಯ ಸಾಧನೆಗಳನ್ನು ಅರಿಯದಿದ್ದರೆ, ಆಗ ಆತನು ಭಗವಂತನ ಚಿಂತನೆಯಲ್ಲಿ ರಮಮಾಣನಾಗಿರುವ ಬ್ರಹ್ಮನಿಷ್ಠ ಸದ್ಗುರುವಿಗೆ ಶರಣಾಗಬೇಕು.

ಶೇಂಡಾ ಧರೂನಿ ಸಮೂಳ । ಜ್ಯಾಚೇ ಉತ್ತರೋತ್ತರ ದುಃಖ ಫಳ । ಅತಿಬಾಧಕ ವಿಷಯಜಾಳ । ತ್ಯಾಸೀ ಕೇವಳ ಜೋ ಅನಾಸಕ್ತ ।೨೭೦॥ ಮಾಝೀ ಪ್ರಾಪ್ತೀಲಾಗೀ ಚಿತ್ತ । ಸದಾ ಜ್ಯಾಚೇ ಆರ್ತಭೂತ । ಸ್ವಧರ್ಮಕರ್ಮೀ ವರ್ತತ । ಜೋ ವೇದಶಾಸ್ತ್ರಾರ್ಥ ವಿವಂಚೀ ।೨೭೧॥ ಇಹಾಮುತ್ರಭೋಗೀ ನಿಶ್ಚಿತ । ತ್ರಾಸಲೇ ಅಸೇ ಜ್ಯಾಚೇ ಚಿತ್ತ । ಐಸಾ ಜೋ ಕಾ ನಿತ್ಯ ವಿರಕ್ತ । ಅತಿವಿಖ್ಯಾತ ಮುಮುಕ್ಷು ।೨೭೨॥ ತೇಣೇ ಸಾಧಾವಯಾ ಬ್ರಹ್ಮಜ್ಞಾನ । ತೇಚಿ ಸಾಧನೀ ಲಾವಿತಾ ಮನ । ಸ್ವಕರ್ಮ ಝಾಲಿಯಾ ವಿಲಕ್ಷಣ । ಆಲೀ ನಾಗವಣ ಪ್ರತ್ಯವಾಯೇ ।೨೭೩॥ ತೇಣೇ ಕರ್ಮ ಸನ್ಯಾಸೋನಿ ಜಾಣ । ಕರಾವೇ ಸನ್ಯಾಸಗ್ರಹಣ । ಸದ್ಗುರೂಸೀ ರಿಘಾವೇ ಶರಣ। ತೇಣೇ ಬ್ರಹ್ಮಜ್ಞಾನಪದಪ್ರಾಪ್ತೀ ।೨೭೪॥ ಏಕ ಕೇವಳ ಭಾವಾರ್ಥೀ । ನೇಣೇ ಸ್ವಧರ್ಮಕರ್ಮಗತೀ । ನೇಣೇ ಶಾಸ್ತ್ರಶ್ರವಣ ವ್ಯುತ್ಪತ್ತೀ । ಪರೀ ಮಾಝೀ ಪ್ರೀತೀ ಅನಿವಾರ ।೨೭೫॥ ತೇಣೇಹೀ ಸನ್ಯಾಸೂನಿ ಜಾಣ। ಗುರೂಸೀ ರಿಘಾವೇ ಶರಣ । ತ್ಯಾಸೀಹೀ ಗುರುಕೃಪಾ ಜಾಣ । ಬ್ರಹ್ಮಜ್ಞಾನಅವಾಪ್ತಿ ।೨೭೬॥ ಗುರು ಕರಾವಾ ಅತಿಶಾಂತ । ಶಾಸ್ತ್ರಾರ್ಥಪರಮಾರ್ಥಪಾರಂಗತ । ತ್ಯಾಚೇ ಸೇವೇಚಾ ಭಾವಾರ್ಥ । ಸ್ವಯೇ ಶ್ರೀಕೃಷ್ಣನಾಥ ಸಾಂಗತ ।೨೭೭॥

ತಾವತ್ಪರಿಚರೇದ್ಭಕ್ತ: ಶ್ರದ್ಧಾವಾನನಸೂಯಕಃ । ಯಾವತ್‌ಬ್ರಹ್ಮ ವಿಜಾನೀಯಾನ್ಮಾಮೇವ ಗುರುಮಾದೃತ: ।೪೧॥

ಅರ್ಥ:- ಆತನು ಗುರುವಿನ ದೃಢಭಕ್ತಿಯನ್ನು ಮಾಡಬೇಕು. ಗುರುವಿನಲ್ಲಿ ಪರಮಶ್ರದ್ಧೆಯನ್ನಿಟ್ಟು ಆತನ ಯಾವುದೇ ದೋಷವನ್ನು ಎಂದಿಗೂ ಎಣಿಸಬಾರದು. ಗುರುಗಳ ರೂಪದಲ್ಲಿ ನನ್ನನ್ನು ಕಾಣುತ್ತ ಬ್ರಹ್ಮಜ್ಞಾನವಾಗುವವರೆಗೂ ಅವರ ಸೇವೆಯನ್ನು ಮಾಡಬೇಕು.

ಸಮುದ್ರದಲ್ಲಿನ ತೆರೆಗಳು ಯಾವ ಪ್ರಕಾರವಾಗಿ ಸಮುದ್ರದ ನೀರಿನಲ್ಲಿಯೇ ಲಯವಾಗಿ ಹೋಗುವುವೋ, ಅದರಂತೆಯೇ ಜ್ಞಾನೀ ಪುರುಷನು ನನ್ನಲ್ಲಿ ವಿದೇಹತ್ವದಿಂದ ಏಕರೂಪನಾಗಿಬಿಡುವನು ।೨೬೭॥ ನದಿಯ ಉಗಮ, ಸಂಗಮ, ಪ್ರವಾಹ ಇತ್ಯಾದಿ ನಾಮರೂಪಗಳು ಈ ಎಲ್ಲವೂ ಪ್ರಳಯಕಾಲದ ನೀರಿನಲ್ಲಿ ಮುಳುಗಿಹೋಗುವುವು. ಅದರಂತೆ ಜ್ಞಾನೀ ಪುರುಷನು ನನ್ನಲ್ಲಿ ಏಕರೂಪನಾಗುವನು ।೨೬೮॥ ಹೇ ಉದ್ಧವನೇ, ಈ ಪ್ರಕಾರವಾಗಿ ಅಪರೋಕ್ಷ ಆತ್ಮಸಾಕ್ಷಾತ್ಕಾರವಾಗಿರುವ ಸನ್ಯಾಸಿಯ ಸ್ಥಿತಿ,ಗತಿಗಳನ್ನು ಮತ್ತು ಆತನ ಸ್ವಧರ್ಮವನ್ನು ನಾನು ನಿನಗೆ ಹೇಳಿದೆನು. ಈಗ ಮೋಕ್ಷದ ಇಚ್ಛೆಯನ್ನು ಮಾಡುವ ಸನ್ಯಾಸಿಯು ಹೇಗೆ ವರ್ತಿಸುವನೆಂಬುದನ್ನು ಕೇಳು ।೨೬೯॥

ನಖಶಿಖಾಂತರವಾಗಿ ಯಾವುದರ ಫಲಗಳು ಉತ್ತರೋತ್ತರವಾಗಿ ದುಃಖದಾಯಕವಾಗಿರುವುವೋ, ಇಂತಹ ಬಾಧಕವುಳ್ಳ ವಿಷಯಗಳ ಜಾಲದಲ್ಲಿ ಆತನು ಆಸಕ್ತನಾಗಿರುವುದಿಲ್ಲ ।೨೭೦॥ ಆತನ ಚಿತ್ತವು ಸತತವಾಗಿ ನನ್ನ ಪ್ರಾಪ್ತಿಗಾಗಿ ಉತ್ಸುಕವಾಗಿರುವುದು. ಆತನು ತನ್ನ ಆಶ್ರಮದ ಧರ್ಮದಂತೆ ಆಚರಿಸುತ್ತಿರುವನು. ಆತನು ವೇದಶಾಸ್ತ್ರಗಳ ಚಿಂತನೆಯನ್ನು ಮಾಡುತ್ತಿರುವನು ।೨೭೧॥ ಇಹಲೋಕದ ಮತ್ತು ಪರಲೋಕದ ಸುಖಕ್ಕಾಗಿ ಯಾವಾತನ ಮನವು ನಿಶ್ಚಯವಾಗಿ ತ್ರಾಸುಗೊಂಡಿರುವುದೋ, ಹೀಗಿರುವ ಯಾವ ವಿರಕ್ತ ಮತ್ತು ಮುಮುಕ್ಷುವಾಗಿರುವನೋ ।೨೭೨॥ ಆತನು ಬ್ರಹ್ಮಜ್ಞಾನದ ಪ್ರಾಪ್ತಿಗಾಗಿ ಸಾಧನೆಗಳತ್ತ ಲಕ್ಷವನ್ನು ಕೊಡಬೇಕು. ಯಾವ ಈ ಕರ್ಮಗಳು ಯಥಾಸಾಂಗವಾಗಿ ಪೂರ್ಣವಾಗದಿದ್ದರೆ ಆತನಿಗೆ ಅದರ ದೋಷವು ಬಡೆದುಕೊಳ್ಳುವುದು ।೨೭೩॥ ಅದಕ್ಕಾಗಿ ಆತನು ವಿಧಿಪೂರ್ವಕವಾಗಿ ಕರ್ಮಗಳ ತ್ಯಾಗವನ್ನು ಮಾಡಿ ಸನ್ಯಾಸವನ್ನು ಸ್ವೀಕರಿಸಬೇಕು ಮತ್ತು ಸದ್ಗುರುಗಳಿಗೆ ಶರಣು ಹೋಗಬೇಕು. ಹಾಗಾದರೆ ಆತನಿಗೆ ಶ್ರೇಷ್ಠವಾದ ಬ್ರಹ್ಮಜ್ಞಾನದ ಪ್ರಾಪ್ತಿಯಾಗುವುದು ।೨೭೪॥ ಆದರೆ ಎಷ್ಟೋ ಜನರು ಭೋಳ್ಯಾಭಾವಿಕರಾಗಿರುವರು. ಅವರಿಗೆ ತಮ್ಮ ಸ್ವಧರ್ಮದ ಪ್ರಕಾರಗಳು ತಿಳಿಯುವುದಿಲ್ಲ. ಶಾಸ್ತ್ರಶ್ರವಣ ಇತ್ಯಾದಿ ಯಾವುದೂ ಅವರಿಗೆ ಗೊತ್ತಿರುವುದಿಲ್ಲ ಆದರೆ, ನನ್ನಲ್ಲಿ ಮಾತ್ರ ಅವರ ಪ್ರೇಮವು ತುಂಬಿ ತುಳುಕುತ್ತಿರುವುದು ।೨೭೫॥ ಆತನೂ ಕೂಡ ಸನ್ಯಾಸವನ್ನು ಸ್ವೀಕರಿಸಿ ಸದ್ಗುರುಗಳಿಗೆ ಶರಣಾಗಬೇಕು. ಆತನಿಗೆ ಗುರುಕೃಪೆಯಿಂದ ಬ್ರಹ್ಮಜ್ಞಾನದ ಪ್ರಾಪ್ತಿಯಾಗುವುದು ।೨೭೬॥ ಯಾರ ಅಂತಃಕರಣದಲ್ಲಿ ಅಪಾರವಾದ ಶಾಂತಿಯು ನೆಲೆಸಿಕೊಂಡಿರುವುದೋ, ಯಾರು ಪರೋಕ್ಷ ಮತ್ತು ಅಪರೋಕ್ಷ ಜ್ಞಾನದ ಪಾರಾಂಗತನಾಗಿರುವನೋ, ಅಂತಹ ಗುರುಗಳನ್ನು ಪಡೆಯಬೇಕು. ಆತನ ಸೇವೆಯನ್ನು ಮಾಡುವ ಪ್ರಕಾರವನ್ನು ಈಗ ಶ್ರೀಕೃಷ್ಣನು ಹೇಳುತ್ತಿರುವನು ।೨೭೭॥

ಅಚಳ ಅಮಳ ಅವಿನಾಶ । ಪರಾತ್ಪರತರ ಪರೇಶ । ಗುರು ತೋ ಪರಬ್ರಹ್ಮ ಈಶ । ಹಾ ದೃಢ ವಿಶ್ವಾಸ ಧರಾವಾ ।೨೭೮।। ತ್ಯಾ ವಿಶ್ವಾಸಾಚ್ಯಾ ಪಡಿಪಾಡೀ । ನವಲ ಗುರುಚರಣೀ ಆವಡೀ । ನಿತ್ಯ ನೂತನ ನವೀಗೋಡೀ । ಚಢೋವಾಢೀ ಭಜನಾರ್ಥ ।೨೭೯।। ಐಶಿಯಾ ಭಜನಪರವಡೀ । ಹೃದಯೀ ಶ್ರದ್ಧಾ ಉಸಳೇ ಗಾಢೀ । ಗುರು ಆಜ್ಞೇಚೀ ನುಲ್ಲಂಘೀ ಕಾಡೀ । ಆಳಸ ತೋಡೀ ಸಮೂಳ ।೨೮೦।। ಗುರುವಾಕ್ಯಾಚೇನಿ ಶ್ರವಣೇ । ವಿಕಲ್ಪಾಚೇ ಖಿತ ಖಾಣಣೇ । ಸಂಕಲ್ಪಾಸೀ ಸೂಳೀ ದೇಣೇ । ಜೀವೇ ಘೇಣೇ ಅಭಿಮಾನಾ ।೨೮೧।। ತೇಥ ಅಸೂಯಾ ಕೈಚೀ ಉರೀ। ಧಾಕೇಚಿ ನಿಮಾಲೀ ಉಠಾಉರೀ । ಐಶೀ ಗುರುಚರಣೀ ಶ್ರದ್ಧಾ ಮೋಠೀ । ಪರಬ್ರಹ್ಮದೃಷ್ಟೀ ಗುರು ಪಾಹೇ ।೨೮೨।। ನಿರ್ಗುಣ ಜೋ ನಿರ್ವಿಕಾರೂ । ತೋಚಿ ಮೂರ್ತಿಮಂತ ಮಾಝಾ ಗುರೂ । ಕರೂನಿ ಅಕರ್ತಾ ಈಶ್ವರೂ । ತೋಚಿ ಹಾ ಸಾಚಾರೂ ಗುರು ಮಾಝಾ ।೨೮೩।। ನಿತ್ಯ ನಿರ್ವಿಕಲ್ಪ ದೇಖ । ಜ್ಯಾಸೀ ಮ್ಹಣತೀ ಸಮಾಧಿಸುಖ । ತೇ ಮಾಝ್ಯಾ ಗುರೂಚೇ ಚರಣೋದಕ । ಐಸಾ ಭಾವೇ ನೇಟಕ ಭಾವಾರ್ಥೀ।೨೮೪।। ಗುರೂತೇ ಪಾಹತಾ ಬ್ರಹ್ಮದೃಷ್ಟೀ। ಶಿಷ್ಯ ಬ್ರಹ್ಮತ್ವೇ ಆಲಾ ಪುಷ್ಟೀ । ಬ್ರಹ್ಮರೂಪ ದೇಖೇ ಸೃಷ್ಟೀ । ನಿಜ ಐಕ್ಯೇ ಮಿಠೀ ಗುರುಚರಣೀ ।೨೮೫।। ಐಸೇ ಬ್ರಹ್ಮರೂಪೀ ಐಕ್ಯ ಘಡೇ । ತಂವ ಗುರುಸೇವಾ ಕರಣೇ ಪಡೇ । ಐಕ್ಯ ಝಾಲಾಹೀ ಪುಢೇ । ಸೇವಾ ನ ಮೋಡೇ ಅಖಂಡತ್ವೇ ।೨೮೬।। ಕಾಪೂರ ಘಾತಲಿಯಾ ಜಳೀ । ಸ್ವಯೇ ವಿರೋನಿ ಜಳ ಪರಮಳೀ । ತೇವೀ ಅಹಂ ಜಾ ಊನಿ ಸೇವಾ ಸಕಳೀ । ಸರ್ವೀ ಸರ್ವಕಾಳೀ ಗುರುಚರಣೀ ।೨೮೭।। ಐಶೀ ಅವಸ್ಥಾ ನ ಯೇತಾ ಹಾತಾ । ಕೇವಳ ಮುಂಡೂನಿಯಾ ಮಾಥಾ । ಸನ್ಯಾಸೀ ಮ್ಹಣವೀ ಪೂಜ್ಯತಾ । ತ್ಯಾಚಿ ಅನುಚಿತತಾ ಹರಿ ಬೋಲೇ ।೨೮೮।। ಸ್ವಯೇ ಸನ್ಯಾಸ ಅಂಗೀಕಾರೀ । ಬ್ರಹ್ಮಸಾಕ್ಷಾತ್ಕಾರ ಜೋ ನ ಕರೀ । ತ್ಯಾಲಾಗೀ ಸ್ವಯೇ ಶ್ರೀಹರೀ । ಅತಿಧಿಕ್ಕಾರೀ ನಿಂದೀತ ।೨೮೯।।

ಗುರುಗಳು ಯಾವ ಸ್ಥಿರವಾದ, ನಿರ್ಮಲವಾದ, ಶಾಶ್ವತವಾದ, ಪ್ರಕೃತಿಯ ಆಚೆಕಡೆಯಲ್ಲಿರುವ ಪರಮೇಶ್ವರ, ಪರಬ್ರಹ್ಮ ಈಶ್ವರರಾಗಿರುವರು. ಈ ಪ್ರಕಾರವಾಗಿ ದೃಢವಾದ ವಿಶ್ವಾಸವನ್ನು ಮನದಲ್ಲಿ ಧರಿಸಬೇಕು ।೨೭೮।। ಈ ಪ್ರಕಾರದ ದೃಢವಿಶ್ವಾಸದಿಂದ ಸದ್ಗುರುಗಳ ಚರಣಗಳಲ್ಲಿ ಅಪೂರ್ವವಾದ ಪ್ರೇಮವು ನಿರ್ಮಾಣವಾಗುವುದು. ಭಜನೆಗೆ ನಿತ್ಯನೂತನವಾಗಿ ಹೊಸದಾದ ಪ್ರೇಮವು ಉತ್ತರೋತ್ತರವಾಗಿ ಅಧಿಕತೆಯಿಂದ ಬೆಳೆಯುತ್ತ ಸಾಗುತ್ತಿರುವುದು ।೨೭೯।। ಇಂತಹ ಭಜನೆಯ ಪ್ರೇಮವು ಉತ್ಪನ್ನವಾಯಿತೆಂದರೆ ಅಂತಃಕರಣದಲ್ಲಿ ಅಪಾರವಾದ ಶ್ರದ್ಧೆಯು ನಿರ್ಮಾಣವಾಗುವುದು. ಆತನು ಗುರುಗಳ ಆಜ್ಞೆಯ ಉಲ್ಲಂಘನೆಯನ್ನು ಸ್ವಲ್ಪವೂ ಕೂಡ ಮಾಡಲಾರನು. ಸೇವೆಯಲ್ಲಿ ತನ್ನ ಆಲಸ್ಯವನ್ನೆಲ್ಲ ಇಲ್ಲದಾಗಿ ಮಾಡುವನು ।೨೮೦।। ಸದ್ಗುರುಗಳ ವಾಕ್ಯಗಳ ಶ್ರವಣದಿಂದ ವಿಕಲ್ಪಗಳ ಮಲಿನತೆಯನ್ನು ಅಗೆದು ಒಗೆಯುವನು ಮತ್ತು ಸಂಕಲ್ಪಗಳಿಗೆ ಶೂಲಕ್ಕೆ ಏರಿಸಿ, ಅಭಿಮಾನವನ್ನು ಕೊಂದು ಹಾಕುವನು ।೨೮೧।। ಅಂದಮೇಲೆ ಆತನ ಎದುರಿನಲ್ಲಿ ಮತ್ಸರವು ಹೇಗೆ ನಿಂತುಕೊಳ್ಳಲು ಸಾಧ್ಯ ? ಮತ್ಸರವು ಭಯಪಟ್ಟು ತಾನಿದ್ದಲ್ಲಿಯೇ ಇಲ್ಲದಾಗಿಬಿಡುವುದು. ಈ ಪ್ರಕಾರವಾಗಿ ಗುರುಗಳಲ್ಲಿ ಅತಿಶಯವಾಗಿ ಶ್ರದ್ಧೆಯು ನಿರ್ಮಾಣವಾಗುವುದು. ಆತನು ಶ್ರೀಗುರುಗಳವರಿಗೆ ಪರಬ್ರಹ್ಮ ದೃಷ್ಟಿಯಿಂದ ಕಾಣುತ್ತಿರುವನು ।೨೮೨।। ನನ್ನ ಗುರುಗಳು ನಿರ್ಗುಣ ನಿರಾಕಾರ ಮೂರ್ತಿಮಂತ ಬ್ರಹ್ಮವೇ ಆಗಿರುವರು. ವಿಶ್ವವನ್ನು ನಿರ್ಮಾಣ ಮಾಡಿ ಯಾವ ಅಕರ್ತಾ ಈಶ್ವರನೇ ನನ್ನ ಗುರುವಾಗಿರುವರು ।೨೮೩।। ನಿತ್ಯ ನಿರ್ವಿಕಲ್ಪವಾಗಿರುವ ಯಾವ ಸಮಾಧಿಸುಖವು, ಅದು ನನ್ನ ಗುರುಗಳ ಚರಣತೀರ್ಥವಾಗಿರುವುದು. ಹೀಗೆ ಆತನ ದೃಢವಾದ ಶ್ರದ್ಧೆವಿರುವುದು ।೨೮೪।। ಗುರುವಿನಲ್ಲಿ ಈ ಪ್ರಕಾರದ ದೃಷ್ಟಿಯಿಂದ ಕಾಣಲು, ಆಗ ಆ ಶಿಷ್ಯನು ಬ್ರಹ್ಮತ್ವದಿಂದ ಸಂಪನ್ನನಾಗುವನು. ಆತನಿಗೆ ಸರ್ವ ಸೃಷ್ಟಿಯು ಬ್ರಹ್ಮರೂಪವಾಗಿ ತೋರುತ್ತಿರುವುದು ಮತ್ತು ಆತನು ಪರಬ್ರಹ್ಮನದಲ್ಲಿ ತಾದಾತ್ಮ್ಯನಾಗಿ ಸದ್ಗುರುಗಳ ಚರಣಗಳಿಗೆ ಆಲಿಂಗಿಸುವನು ।೨೮೫।। ಈ ಪ್ರಕಾರವಾಗಿ ಬ್ರಹ್ಮಸ್ವರೂಪದಲ್ಲಿ ಐಕ್ಯವಾಗುವವರೆಗೂ ಗುರುಸೇವೆಯನ್ನು ಮಾಡಬೇಕಾಗುವುದು ಮತ್ತು ಬ್ರಹ್ಮಸ್ವರೂಪದಲ್ಲಿ ಐಕ್ಯವಾದ ನಂತರವೂ ಗುರುಸೇವೆಯು ಅಖಂಡವಾಗಿ ನಡೆಯುತ್ತಿರುವುದು ।೨೮೬।। ಕರ್ಪೂರವನ್ನು ನೀರಿನಲ್ಲಿ ಹಾಕಲು, ಆಗ ಅದು ಸ್ವತಃ ಕರಗಿಹೋಗುವುದು. ಆದರೆ ಆ ನೀರಿಗೆ ಸುಗಂಧಿತವನ್ನಾಗಿ ಮಾಡುವುದು. ಅದರಂತೆ ಶಿಷ್ಯನ ಅಹಂಕಾರವು ಇಲ್ಲದಾಗಿ ಆತನ ಸರ್ವ ಸೇವೆಗಳು ಗುರುಗಳ ಚರಣಗಳಿಗೆ ಸಮರ್ಪಿತವಾಗುತ್ತಿರುವುವು ।೨೮೭।। ಇಂತಹ ಅವಸ್ಥೆಯು ಪ್ರಾಪ್ತವಾಗದೇ ಯಾವನು ಕೇವಲ ತಲೆಯನ್ನು ಬೋಳಿಸಿಕೊಳ್ಳುವನೋ, ಮತ್ತು ಸನ್ಯಾಸಿಯಾಗಿ ತನ್ನ ಮಹತ್ವವನ್ನು ತಾನೇ ಬೆಳೆಸುತ್ತಿರುವನೋ, ಆತನ ಈ ಅನುಚಿತತನವನ್ನು ಶ್ರೀಕೃಷ್ಣನು ಈಗ ಹೇಳುವನು ।೨೮೮।। ಸ್ವತಃ ಸನ್ಯಾಸವನ್ನು ಸ್ವೀಕರಿಸಿ ಯಾವನು ಬ್ರಹ್ಮಸ್ವರೂಪದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದಿಲ್ಲವೋ, ಆತನನ್ನು ಸ್ವತಃ ಶ್ರೀಕೃಷ್ಣನು ನಿಂದಿಸುತ್ತ ಧಿಕ್ಕರಿಸುವನು ।೨೮೯।।

ಯಸ್ತ್ವಸಂಯತಷಡ್ವರ್ಗಃ ಪ್ರಚಂಡೇಂದ್ರಿಯಸಾರಥಿಃ । ಜ್ಞಾನವೈರಾಗ್ಯರಹಿತಸ್ತ್ರಿದಂಡಮುಪಜೀವತೀ ।।೪೦।।
ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಧರ್ಮಹಾ । ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ ।।೪೧।।

ಅರ್ಥ:- ಯಾರು ಐದು ಇಂದ್ರಿಯಗಳನ್ನು ಮತ್ತು ಮನಸ್ಸನ್ನು ಈ ಆರನ್ನು ಜಯಿಸಿರುವುದಿಲ್ಲವೋ, ಯಾರ ಇಂದ್ರಿಯರೂಪ ಕುದುರೆಗಳು ಮತ್ತು ಬುದ್ಧಿರೂಪ ಸಾರಥಿ ಇವು ಸರಿಯಾಗಿಲ್ಲವೋ, ಯಾರ ಹೃದಯದಲ್ಲಿ ಜ್ಞಾನ ಮತ್ತು ವೈರಾಗ್ಯವು ಇಲ್ಲವೋ, ಆತನು ತ್ರಿದಂಡೀ ಸನ್ಯಾಸಿಯ ವೇಷವನ್ನು ಧರಿಸಿಕೊಂಡು ಹೊಟ್ಟೆ ತುಂಬಿಕೊಳ್ಳುತ್ತಿದ್ದರೆ ಆತನು ಸನ್ಯಾಸ ಧರ್ಮವನ್ನು ನಾಶಮಾಡುತ್ತಿರುವನು. ತನ್ನ ಪೂಜ್ಯ ದೇವತೆಗಳವರಿಗೆ, ತನ್ನ ಸ್ವತಃಕ್ಕೆ ಮತ್ತು ಹೃದಯದಲ್ಲಿರುವ ನನ್ನನ್ನು ಮೋಸಗೊಳಿಸುವ ಪ್ರಯತ್ನ ಮಾಡುವನು. ಸನ್ಯಾಸದ ಕೇವಲ ವೇಷವನ್ನು ಧರಿಸಿದರೆ ವಾಸನೆಯು ಕಡಿಮೆಯಾಗುವುದಿಲ್ಲ. ಆದ್ದರಿಂದ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಆತನಿಗೆ ಏನೂ ಪ್ರಾಪ್ತಿಯಾಗುವುದಿಲ್ಲ.

ನಾಹೀ ವೈರಾಗ್ಯಾಚೀ ಸ್ಥಿತೀ । ನಸತಾ ವಿಷಯವಿರಕ್ತೀ । ದೇಖೋದೇಖೀ ಸನ್ಯಾಸ ಘೇತೀ । ಕೇವಳ ವೃತ್ತೀ ಅನ್ನಾರ್ಥ ।।೨೯೦।। ಸನ್ಯಾಸ ನೇಘತಾ ಪೂರ್ವದೃಷ್ಟೀ । ಜೇ ವೈರಾಗ್ಯ ಹೋತೇ ಪೋಟೀ । ತೇ ಸನ್ಯಾಸ ಘೇತಲ್ಯಾ ಪಾಠೀ । ಉಠಾಉಠೀ ಪಳಾಲೇ ।।೨೯೧।। ಜ್ಞಾನೇಂದ್ರಿಯೇ ಪಾಂಚ ಸಹಾವೇ ಮನ । ಹೇಚಿ ಅರಿಷಡ್ವರ್ಗ ಜಾಣ । ಯಾಂಚೇ ನ ಕರಿತಾ ನಿರ್ದಳಣ । ಸನ್ಯಾಸಪಣ ತೋ ವಿಟಂಬು ।।೨೯೨।। ಅವೈರಾಗ್ಯೇ ಸಕಾಮ ಮನ । ತೇಣೇ ವಿಷಯಾಕುಲಿತ ಬುದ್ಧಿ ಜಾಣ । ನಾಹೀ ಜ್ಞಾನ ಧ್ಯಾನ ಸಾಧನ । ದಂಡಗ್ರಹಣ ಉದರಾರ್ಥ ।।೨೯೩।। ನುಪಜೇಚ ಅನುತಾಪ ಜಾಣ । ನ ಕರೀಚ ಶ್ರವಣ ಮನನ । ಆದರೇ ನ ಸಾಧೀಚಿ ಸಾಧನ । ತ್ಯಾಸೀ ಬ್ರಹ್ಮಜ್ಞಾನ ನವ್ಹೇಚಿ ।।೨೯೪।। ತ್ಯಾಚಾ ವ್ಯರ್ಥ ಸನ್ಯಾಸ ಜಾಣ । ವ್ಯರ್ಥ ತ್ಯಾಚೇ ದಂಡ ಮುಂಡಣ । ವ್ಯರ್ಥ ಕಾಷಾಯವಸ್ತ್ರಗ್ರಹಣ । ಜೇವೀ ವೇಷಧಾರಣ ನಟಾಚೇ ।।೨೯೫।। ಸನ್ಯಾಸ ಘೇತಲಿಯಾ ಪಾಠೀ । ಕಾಮ ಉಚಂಬಳೇ ಉಠಾಉಠೀ । ಕ್ರೋಧಲೋಭಾಂಚೀ ಧುಮೇ ಆಗಿಟೀ । ಚೌಗುಣಾ ಪೋಟೀ ಅಭಿಮಾನ ।।೨೯೬।। ಆಸಕ್ತಿ ಅಧಿಕಾಧಿಕ ಉಠೀ । ಸದಾ ಗ್ರಾಮಣೀ ಚಾವಟೀ । ಕರಣೇ ಪಶುನ್ಯಾಚ್ಯಾ ಗೋಷ್ಟೀ । ದಂಡ ಕಾಸೋಟೀ ದಂಭಾರ್ಥ ।।೨೯೭।। ಅನಧಿಕಾರೀ ದಂಡಗ್ರಹಣ । ತೇಣೇ ಸನ್ಯಾಸರೂಪೇ ಜಾಣ । ಕೇವಳ ಆಲೀ ನಾಗವಣ । ಆಪಲ್ಯಾ ಆಪಣ ನಾಡಿಲೇ ।।೨೯೮।। ನಾಡಿಲೇ ಯಜ್ಞಾಧಿಕಾರೀ ಸುರಗಣ । ನಾಡಿಲೇ ಸ್ವಾಧಾಕಾರಾಚೇ ಪಿತೃಗಣ । ನಾಡಿಲೇ ಋಷಿಭೂತಗಣ । ಬಳಿ ಅರ್ಪಣ ಠಾಕೇನಾ ।।೨೯೯।। ಜೀವರೂಪೇ ಮೀ ಪರಮಾತ್ಮಾ ಆಪಣ । ತ್ಯಾ ಮಜ ಹೃದಯಸ್ಥಾ ಠಾಕಿಲೇ ಜಾಣ । ಜೀವೋದ್ಧಾರೀ ಜೇ ಸನ್ಯಾಸಗ್ರಹಣ । ತೇಚಿ ದೃಢಬಂಧನ ತ್ಯಾಸೀ ಝಾಲೇ ।।೩೦೦।।

ಅಂಗದಲ್ಲಿ ವೈರಾಗ್ಯವು ಹುಟ್ಟದೇ ಇರುವಾಗ, ವಿಷಯಗಳ ವಿರಕ್ತಿಯು ಬಾರದೇ ಇದ್ದಾಗ ಯಾವನು ಯಾವ ವಿಚಾರವನ್ನು ಮಾಡದೇ ಏಕಾಏಕೀ ಸನ್ಯಾಸವನ್ನು ಸ್ವೀಕರಿಸಿದರೆ, ಆತನ ವೃತ್ತಿಯು ಕೇವಲ ಹೊಟ್ಟೆಯನ್ನು ತುಂಬಿಕೊಳ್ಳುವುದ್ದಾಗಿರುವುದು ।।೨೯೦।। ಸನ್ಯಾಸವನ್ನು ಸ್ವೀಕರಿಸುವ ಪೂರ್ವದಲ್ಲಿ ಆತನಿಗೆ ಸ್ವಲ್ಪ ವೇಳೆಗಾಗಿ ಮಾತ್ರ ವೈರಾಗ್ಯವು ಬಂದಂತಾಗಿರುವುದು. ಸನ್ಯಾಸವನ್ನು ಸ್ವೀಕರಿಸಿದ ನಂತರ ಆ ಯಾವ ವೈರಾಗ್ಯವು ತತ್ಕಾಲದಲ್ಲಿ ಓಡಿ ಹೋಗಿರುವುದು ।।೨೯೧।। ಐದು ಇಂದ್ರಿಯಗಳು ಮತ್ತು ಮನಸ್ಸು, ಇವು ಆರು ಬಹು ದೊಡ್ಡ ಶತ್ರುಗಳಾಗಿರುವುವು. ಅವುಗಳನ್ನು ಜಯಿಸದ ಹೊರತು ಸನ್ಯಾಸವನ್ನು ಸ್ವೀಕರಿಸುವುದೆಂದರೆ ಕೇವಲ ಹಾಸ್ಯಾಸ್ಪದವಾಗಿರುವುದು ।।೨೯೨।। ವೈರಾಗ್ಯವು ಇಲ್ಲದಿದ್ದರೆ ಮನಸ್ಸು ಲೋಭಿಯಾಗಿರುವುದು ಮತ್ತು ಬುದ್ಧಿಯೂ ಕೂಡ ವಿಷಯಲಂಪಟವಾಗಿರುವುದು. ಅವರಿಗೆ ಜ್ಞಾನ,ಧ್ಯಾನ, ಸಾಧನೆ ಇವು ಯಾವುವೂ ಇರುವುದಿಲ್ಲ. ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಮಾತ್ರ ದಂಡವನ್ನುಕೈಯಲ್ಲಿ ಹಿಡಿದುಕೊಂಡಿರುವರು ।।೨೯೩।। ಇವರ ಮನಸ್ಸಿನಲ್ಲಿ ಎಂದಿಗೂ ವೈರಾಗ್ಯವು ನಿರ್ಮಾಣವಾಗುವುದಿಲ್ಲ. ಇವರು ಎಂದಿಗೂ ಶ್ರವಣ ಮನನವನ್ನು ಮಾಡುವುದಿಲ್ಲ. ಆದರ ಭಾವನೆಯಿಂದ ಎಂದಿಗೂ ಸಾಧನೆಗಳನ್ನು ಆಚರಿಸುವುದಿಲ್ಲ. ಇವರಿಗೆ ಬ್ರಹ್ಮಜ್ಞಾನವು ಆಗುವುದೇ ಇಲ್ಲ ।।೨೯೪।। ಇವರ ಸನ್ಯಾಸವು ವ್ಯರ್ಥವಾಗಿರುವುದು. ಇವರ ದಂಡವೂ ಕೂಡ ವ್ಯರ್ಥವೇ ಸರಿ ಮತ್ತು ಇವರ ಮುಂಡನವು, ಕ್ಯಾವೀ ವಸ್ತ್ರಗಳು ಇವೆಲ್ಲವೂ ವ್ಯರ್ಥವೇ ಆಗಿರುವುವು. ಇವರ ಈ ಬಾಹ್ಯ ವೇಶವು ನಟನು ಧರಿಸಿರುವ ಸನ್ಯಾಸದ ವೇಶದಂತಾಗಿದೆ ಎಂದು ತಿಳಿಯಬೇಕು ।।೨೯೫।। ಆತನಿಗೆ ಸನ್ಯಾಸವನ್ನು ಸ್ವೀಕರಿಸಿದ ನಂತರ ಕಾಮವು ಉಕ್ಕಿ ಮೇಲಕ್ಕೆ ಏಳುತ್ತಿರುವುದು. ಕ್ರೋಧ ಲೋಭಗಳ ಅಗ್ನಿಷ್ಟಿಯು ಉರಿಯುತ್ತಿರುವುದು ಮತ್ತು ಮನದಲ್ಲಿನ ಅಭಿಮಾನವು ನಾಲ್ಕುಪಟ್ಟಾಗಿ ಬೆಳೆಯುವುದು ।।೨೯೬।। ಆತನಿಗೆ ಅಧಿಕಾಧಿಕವಾಗಿ ಆಸಕ್ತಿಯು ಅಂಟಿಕೊಳ್ಳುವುದು. ಆತನು ಯಾವಾಗಲೂ ಊರಿನ ಕೆಟ್ಟ ಸುದ್ದಿಗಳನ್ನು ಹಬ್ಬಿಸುತ್ತಿರುವನು. ಕುಚ್ಯೋದ್ಯತನದ ಗ್ರಾಮ್ಯ ಹರಟೆಯನ್ನು ಹೊಡೆಯುತ್ತಿರುವನು. ನಿರ್ದಯತೆಯ ಮಾತುಗಳನ್ನು ಆಡುತ್ತಿರುವನು. ದಂಡ ಮತ್ತು ಕೌಪೀನಗಳನ್ನು ಕೇವಲ ದಂಭಕ್ಕಾಗಿ ಧಾರಣೆಯನ್ನು ಮಾಡಿರುವನು ।।೨೯೭।। ಇಂತಹ ಸನ್ಯಾಸಿಯು ದಂಡವನ್ನು ಧರಿಸಲು ಪರಿಪೂರ್ಣವಾಗಿ ಅನಧಿಕಾರಿಯಾಗಿರುವನು. ಸನ್ಯಾಸದ ನಿಮಿತ್ತದಿಂದ ತನ್ನನ್ನು ತಾನೇ ಮೋಸ ಮಾಡುತ್ತಿರುವನು ।।೨೯೮।। ಯಜ್ಞಗಳ ಅಧಿಕಾರಿಯಾಗಿರುವ ದೇವತೆಗಳು, ಸ್ವಧೆಯ ಅಧಿಕಾರಿಯಾಗಿರುವ ಪಿತೃಗಣ ಇವರನ್ನು ಬಿಟ್ಟಿದ್ದಲ್ಲದೇ ಋಷಿಗಳಿಗೆ, ಭೂತಗಣಕ್ಕೆ ಕೊಡಬೇಕಾದ ಬಲಿಗಳ ಅರ್ಪಣೆಯನ್ನೂ ಮಾಡುವುದಿಲ್ಲ ।।೨೯೯।। ಜೀವರೂಪದಿಂದ ಹೃದಯದಲ್ಲಿರುವ ಪರಮಾತ್ಮನಾದ ನನಗೂ ಕೂಡ ಆತನು ಮೋಸಗೊಳಿಸುತ್ತಿರುವನು. ನಿಜವಾದ ಸಂಗತಿ ಎಂದರೆ ಜೀವಿಗಳ ಉದ್ಧಾರಕ್ಕಾಗಿಯೇ ಸನ್ಯಾಸವಾಗಿರುವುದು. ಆದರೆ ಅದೇ ಸನ್ಯಾಸವು ದೃಢವಾದ ಬಂಧನಕ್ಕೆ ಕಾರಣೀಭೂತವಾಗುವುದು ।।೩೦೦।।

ಸನ್ಯಾಸಗ್ರಹಣೇ ದೃಢಬಂಧನ । ವ್ಹಾವಯಾ ಕೋಣ ಕಾರಣ । ತೇಚಿ ವಿಷಯೀಚೇ ನಿರೂಪಣ। ಸ್ವಯೇ ನಾರಾಯಣ ಬೋಲಿಲಾ ।೩೦೧॥ ಪೂರ್ವಶ್ಲೋಕೀಚೇ ತಿನೀ ಚರಣ । ತೇಥೀಲ ಹೇ ನಿರೂಪಣ । ಶ್ರೋತೀ ದ್ಯಾವೇ ಅವಧಾನ । ಝಣೇ ವಿಲಕ್ಷಣ ಕೋಣೇ ಮ್ಹಣೇ ।೩೦೨॥

''ನಿಹ್ನುತೇ ಮಾಂ ಚ ಧರ್ಮಹಾ । ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ ॥''

ಅರ್ಥ:- ಇಂತಹ ಸನ್ಯಾಸಿಯು ಧರ್ಮಕ್ಕೆ ಮತ್ತು ಚರಾಚರಗಳಲ್ಲಿನ ಬ್ರಹ್ಮಸ್ವರೂಪಕ್ಕೆ (ಅಂದರೆ ಭಗವಂತನಾದ ನನ್ನನ್ನು) ಮರೆತಿರುವನು. ಆತನ ಮಾನಸಿಕ ಸ್ಥಿರತೆಯು ಅಪರಿಪಕ್ವವಾಗಿರುವುದು.

ಕರೋನಿಯಾ ಸನ್ಯಾಸಗ್ರಹಣ । ನ ಕರೀ ಜ್ಞಾನ ಧ್ಯಾನ ಸಾಧನ । ನ ಕರೀ ಪ್ರಣವ ಉಚ್ಚಾರಣ। ಅವಿರಕ್ತ ಜಾಣ ವಿಷಯಾರ್ಥೀ ।೩೦೩॥ ತೇಣೇ ದಾರಾದಿ ಅಭಿಲಾಷಣ । ಕರಿತೀ ದ್ರವ್ಯಾಚೇ ಸಂರಕ್ಷಣ । ಆಣಿ ಗೋದಾನಾದಿ ಗ್ರಹಣ। ಪಚನ ಪಾಚನ ಕರವಿತೀ ।೩೦೪॥ ಮಠಾಧಿಪತ್ಯಾಚಿಯೇ ಬುದ್ಧೀ । ಧನಧಾನ್ಯಸ್ನೇಹಸಮೃದ್ಧೀ । ನಾನಾ ವಾಢವಿತಾ ಉಪಾಧೀ । ಜೀವಾತ್ಮಾ ತ್ರಿಶುದ್ಧೀ ನಾಡಿಲಾ ।೩೦೫॥ ಐಸೇ ಕರಿತಾ ಅಧರ್ಮಪಣ । ಜೀವಾಸೀ ಲಾಗಲೇ ದೃಢ ಬಂದನ । ಜೇಣೇ ಇಹಲೋಕಪರಲೋಕಸಾಧನ । ತ್ಯಾ ನರದೇಹಾಸೀ ಜಾಣ ನಾಡಿಲೇ ।೩೦೬॥ ಚೌರ್‍ಯಾಂಸೀ ಲಕ್ಷ ಯೋನಿಪ್ರತೀ। ಜ್ಯೈ ಅಸಂಖ್ಯ ಫೇರೇ ಹೋತೀ । ತೈ ನರದೇಹಾಚೀ ಪ್ರಾಪ್ತೀ । ಅವಚಟೇ ಪಾವತೀ ಸಭಾಗ್ಯ ।೩೦೭॥ ತ್ಯಾ ನರದೇಹಾಸೀ ಯೇಊನಿ ಜಾಣ । ಸ್ವಯೇ ನಾಗವಲಾ ಆಪಣ । ಕರಿತಾ ಅಧರ್ಮಾಚರಣ। ನರಕ ದಾರುಣ ಸನ್ಯಾಶಾ ।೩೦೮॥ ಜ್ಯಾ ನಾಂವ ಗಾ ''ಆಶ್ರಮ ಚೌಥಾ'' । ಜ್ಯಾಸೀ ದೇವೋ ವಂದೀ ಮಾಥಾ । ತೇಥೇಹೀ ಅಧರ್ಮ ಕರಿತಾ । ನರಕಪಾತಾ ಪಾವಲೇ ।೩೦೯॥ ಜ್ಯಾ ನರಕಾಚೇ ಠಾಯೀ । ಕೋಟಿ ವರ್ಷೇ ಬುಡತಾ ಪಾಹೀ । ಠಾವಚಿ ನ ಲಗೇ ಕಂಹೀ । ತೈಸೇ ಠಾಯೀ ಬುಡಾಲೇ ।೩೧೦॥ ಮುಖ್ಯ ಚತುರ್ಥಾಶ್ರಮೀ ಹೇ ಸ್ಥಿತೀ । ತೈ ಇತರ ಆಶ್ರಮಾ ಕೈಚೀ ಗತೀ । ಯಾಲಾಗೀ ಆಶ್ರಮಧರ್ಮಯುಕ್ತೀ । ಸ್ವಯೇ ಶ್ರೀಪತೀ ಸಾಂಗತ ।೩೧೧॥

ಭಿಕ್ಷೋರ್ಧರ್ಮಃ ಶಮೋಽಹಿಂಸಾ ತಪ ಈಕ್ಷಾ ವನೌಕಸಃ ।
ಗೃಹಿಣೋ ಭೂತರಕ್ಷೇಜ್ಯಾ ದ್ವಿಜಸ್ಯಾಽಚಾರ್ಯಸೇವನಮ್ ।೪೨॥

ಅರ್ಥ:- ಸನ್ಯಾಸಿಯ ಮುಖ್ಯ ಧರ್ಮವು ಶಾಂತೀ ಮತ್ತು ಅಹಿಂಸೆಯಾಗಿರುವುದು. ವಾನಪ್ರಸ್ಥನ ಮುಖ್ಯ ಧರ್ಮವು ತಪಸ್ಸು ಮತ್ತು ಭಗವದ್ಭಾವನೆ, ಗೃಹಸ್ಥಾಶ್ರಮದ ಮುಖ್ಯ ಧರ್ಮವು ಪ್ರಾಣಿಗಳ ರಕ್ಷಣೆ ಮತ್ತು ಯಜ್ಞ-ಯಾಗ ಹಾಗೂ ಬ್ರಹ್ಮಚರ್ಯ, ಮುಖ್ಯ ಧರ್ಮವು ಆಚಾರ್ಯರ ಸೇವೆಯಾಗಿರುವುದು.

ಸನ್ಯಾಸಗ್ರಹಣವು ದೃಢವಾದ ಬಂಧನಕ್ಕೆ ಇದೇ ಕಾರಣವಾಗಲು ಯಾವ ಕಾರಣವು ? ಈ ವಿಷಯದ ನಿರೂಪಣೆಯನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।೩೦೧॥ ಹೀಗೆ ಹೇಳುವುದು ವಿಲಕ್ಷಣೆಯಾಗುವುದೆಂದು ಹೀಗೆ ಯಾರಾದರೂ ಕೇಳಿದರೆ ಇದು ಹಿಂದಿನ ಶ್ಲೋಕದಲ್ಲಿನ ಮೂರು ಚರಣಗಳ ಅರ್ಥದ ನಿರೂಪಣೆಯಾಗಿರುವುದು. ಅದಕ್ಕಾಗಿ ಶ್ರವಣ ಮಾಡುವವರು ಲಕ್ಷಕೊಟ್ಟು ಏಕಾಗ್ರಚಿತ್ತದಿಂದ ಕೇಳಬೇಕು ।೩೦೨॥

ಯಾರು ಸನ್ಯಾಸವನ್ನು ಸ್ವೀಕಾರ ಮಾಡಿ ಜ್ಞಾನ ಮತ್ತು ಧ್ಯಾನ ಇತ್ಯಾದಿಗಳ ಸಾಧನೆಗಳನ್ನು ಮಾಡುವುದಿಲ್ಲ. ಹಾಗೆಯೇ ಓಂಕಾರದ ಜಪವನ್ನೂ ಸಹ ಮಾಡುವುದಿಲ್ಲ. ಆತನ ಮನಸ್ಸಿನಲ್ಲಿ ವಿಷಯಗಳ ವಿಷಯಕ್ಕೆ ಯಾವ ವಿರಕ್ತಿಯೂ ಇರುವುದಿಲ್ಲ ।೩೦೩॥ ಆದ್ದರಿಂದ ಆತನು ಸ್ತ್ರೀಪುತ್ರರಲ್ಲಿ ಆಸಕ್ತಿಯನ್ನಿಟ್ಟು ದ್ರವ್ಯದ ಸಂಗ್ರಹವನ್ನು ಮಾಡುತ್ತಿರುವನು. ಗೋಪ್ರದಾನಾದಿ ಸ್ವೀಕಾರವನ್ನು ಮಾಡಿ ಯಜ್ಞಯಾಗಗಳನ್ನು ಮಾಡುವನು ।೩೦೪॥ ಮಠಾಧಿಪತಿಯಾಗಿರುವ ನೆಪದಿಂದ ಧನಧಾನ್ಯಗಳ ಲೋಭವನ್ನು ಬೆಳೆಸುತ್ತಿರುವನು. ಇದರಿಂದ ನಾನಾ ಪ್ರಕಾರಗಳ ಉಪಾಧಿಗಳು ಹತ್ತಿಕೊಳ್ಳುವುವು. ಈ ಕಾರಣವಾಗಿ ನಿಜವಾಗಿಯೂ ಜೀವಾತ್ಮನು ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುವನು ।೩೦೫॥ ಈ ಪ್ರಕಾರವಾಗಿ ಅಧರ್ಮವನ್ನು ಮಾಡುತ್ತಿರಲು ಆಗ ಜೀವಕ್ಕೆ ದೃಢವಾದ ಬಂಧನವು ಪ್ರಾಪ್ತವಾಗುವುದು ಮತ್ತು ಇಹಲೋಕ ಮತ್ತು ಪರಲೋಕ ಇವುಗಳ ಸಾಧನೆಗಳಿಗೆ ಈ ದೇಹವು ಸಂಬಂಧವಿಲ್ಲದಂತಾಗಿಬಿಡುವುದು ।೩೦೬॥ ಎಂಬತ್ನಾಲ್ಕು ಲಕ್ಷ ಜೀವ ಯೋನಿಗಳಲ್ಲಿ ಪ್ರತಿಯೊಂದು ಯೋನಿಗಳ ಅಸಂಖ್ಯವಾಗಿ ತಿರುಗಾಟವಾಗಲು ಆಗ ಮಾತ್ರ ಭಾಗ್ಯವಂತ ಜೀವಿಗೆ ಅಕಸ್ಮಾತ್ತಾಗಿ ಇಂತಹ ನರದೇಹವು ಪ್ರಾಪ್ತವಾಗುತ್ತಿರುವುದು ।೩೦೭॥ ಇಂತಹ ಬೆಲೆಕಟ್ಟಲು ಬಾರದ ಅನಮೋಲ ಮನುಷ್ಯ ಜನ್ಮವನ್ನು ತಾನೇ ಸ್ವತಃ ಅಧರ್ಮಕರ್ಮಗಳಿಂದ ವ್ಯರ್ಥವನ್ನಾಗಿ ಮಾಡಲು, ಆಗ ಸನ್ಯಾಸಿಗೆ ದಾರುಣವಾದ ನರಕದ ಪ್ರಾಪ್ತಿಯಾಗುವುದು ।೩೦೮॥ ಯಾವ ಈ ಆಶ್ರಮಕ್ಕೆ ''ನಾಲ್ಕನೆಯ ಆಶ್ರಮ''ವೆಂದು ನಾಮವಿರುವುದು. ಈ ಆಶ್ರಮಕ್ಕೆ ದೇವತೆಗಳು ಶಿರಸಾ ವಂದನೆಯನ್ನು ಮಾಡುವರು. ಈ ಆಶ್ರಮದಲ್ಲಿ ಅಧರ್ಮವನ್ನು ಮಾಡಿದರೆ ನರಕದಲ್ಲಿ ಬೀಳುವರು ।೩೦೯॥ ಯಾವ ಈ ನರಕದಲ್ಲಿ ಕೋಟ್ಯಾವಧೀ ವರ್ಷಗಳವರೆಗೆ ಮುಳುಗಿದ್ದರೂ ಕೂಡ ಅವರ ಪತ್ತೆಯೇ ಹತ್ತುವುದಿಲ್ಲ. ಇಂತಹ ದುರ್ಗಮ ನರಕದಲ್ಲಿ ಇವರು ಮುಳುಗುವರು ।೩೧೦॥ ಮುಖ್ಯವಾಗಿರುವ ಯಾವ ಇಂತಹ ನಾಲ್ಕನೆಯ ಆಶ್ರಮಕ್ಕೆ ಈ ಸ್ಥಿತಿಯಾಗಲು, ಇನ್ನು ಇತರ ಆಶ್ರಮಗಳ ಯಾವ ಕಥೆ? ಆದ್ದರಿಂದಲೇ ಸ್ವತಃ ಶ್ರೀಕೃಷ್ಣನು ಈಗ ಆಶ್ರಮಧರ್ಮದ ಪರಿಚಯವನ್ನು ಹೇಳುತ್ತಿರುವನು ।೩೧೧॥

ಸನ್ಯಾಶಾಸೀ ಮುಖ್ಯ ''ಶಮ'' । ಸಬಾಹ್ಯ ''ಇಂದ್ರಯನೇಮ'' । ''ಅಹಿಂಸಾ'' ತ್ಯಾಚಾ ಸ್ವಧರ್ಮ । ಹಾ ಪರಮಧರ್ಮ ಸನ್ಯಾಶಾಸೀ ॥೩೧೨॥ ವಾನಪ್ರಸ್ಥಾಚಾ ಸ್ವಧರ್ಮ । ''ತಪಪ್ರಾಧಾನ್ಯ ಮಂತ್ರ ಹೋಮ'' । ಆತಾ ಗೃಹಸ್ಥಾಚಾ ನೇಮ । ತಿಹೀ ಆಶ್ರಮಾ ವಿಶ್ರಾಮದಾತಾ ॥೩೧೩॥ ಗೃಹಸ್ಥಾ ಮುಖ್ಯ ''ಅಗ್ನಿಹೋತ್ರ'' ಜಾಣ । ಸನ್ಯಾಸೀಬ್ರಹ್ಮಚರ್ಯ್ಯಾಂಸೀ ದ್ಯಾವೇ ಅನ್ನ । ಕರಾವೇ ''ಭೂತಸಂರಕ್ಷಣ'' । ತೇಹೀ ಲಕ್ಷಣ ಅವಧಾರೀ ॥೩೧೪॥ ಅಸಿಲೇನಿ ಸಾಮರ್ಥ್ಯೇ ಜಾಣ । ಅನ್ನ ಧನ ವಸ್ತ್ರ ಜೀವನ । ತೃಣ ಪರ್ಣ ನಿವಾಸಸ್ಥಾನ । ದೇ ಊನಿ ದೀನ ರಕ್ಷಾವೇ ॥೩೧೫॥ ಬ್ರಹ್ಮಚರ್ಯಾಚೇ ಸ್ವಧರ್ಮೀ ಜಾಣ। ಶ್ರದ್ಧಾಯುಕ್ತ ''ಗುರುಸೇವನ'' । ಏವಂ ಆಶ್ರಮಧರ್ಮಲಕ್ಷಣ । ಮುಖ್ಯತ್ವೇ ಹೇ ಜಾಣ ಉದ್ಧವಾ ॥೩೧೬॥ ಗೃಹಸ್ಥಾಶ್ರಮೀ ಜೋ ಧರ್ಮ ಆಹೇ । ತೋ ಇತರ ಆಶ್ರಮೀ ಕರೂ ನಯೇ । ಇತರಾಶ್ರಮೀಂಚಾ ಧರ್ಮ ಪಾಹೇ । ಗೃಹಸ್ಥಾಶ್ರಮೀ ಹೋಯೇ ಕರಣೀಯ ॥೩೧೭॥

ಬ್ರಹ್ಮಚರ್ಯ ತಪಃ ಶೌಚಂ ಸಂತೋಷೋ ಭೂತಸೌಹೃದಮ್ । ಗೃಹಸ್ಥಸ್ಯಾಪ್ಯೃತೌ ಗಂತುಃ ಸರ್ವೇಷಾಂ ಮದುಪಾಸನಮ್ ॥೪೩॥

ಅರ್ಥ:- ಗೃಹಸ್ಥಾಶ್ರಮದಲ್ಲಿ ಕೇವಲ ಋತುಕಾಲದಲ್ಲಿ ಸ್ತ್ರೀಯ ಸಹವಾಸ ಮಾಡಬೇಕು. ಆತನಿಗಾಗಿ ಬ್ರಹ್ಮಚರ್ಯ, ತಪಸ್ಸು, ಶೌಚ ಮತ್ತು ಸಂತೋಷ ಹಾಗೂ ಸರ್ವಪ್ರಾಣಿಮಾತ್ರರಲ್ಲಿ ಪ್ರೇಮಭಾವವು ಮುಖ್ಯ ಧರ್ಮವಾಗಿರುವುದು.ನನ್ನ ಉಪಾಸನೆಯನ್ನು ಮಾತ್ರ ಸರ್ವರೂ ಮಾಡಬೇಕಾಗುವುದು.

ಗೃಹಸ್ಥೇ ವ್ಹಾವಯಾ ನಿಷ್ಪಾಪ । ಠಾಕೇ ತೋ ಕರಾವಾ ಜಪ ತಪ । ಉಭಯ ಶೌಚಾಂಚೇ ಸ್ವರೂಪ । ಅತಿಸಾಟೋಪ ಕರಾವೇ ॥೩೧೮॥ ಪೋಟೇಂಚೇ ಸಾಂಡೂನಿ ಕುಸಮುಸ । ಯಥಾಲಾಭೇ ಅತಿಸಂತೋಷ । ಪರೋಪಕಾರೀ ಅತಿಹವ್ಯಾಸ । ಸುಹೃದ ಸರ್ವಾಂಸ ಸ್ವಾತ್ಮತ್ವೇ ॥೩೧೯॥ ಗೃಹಸ್ಥೀ ಬ್ರಹ್ಮಚರ್ಯಲಕ್ಷಣ । ಋತುಕಾಳೀ ಸ್ವದಾರಾಭಿಗಮನ । ಮುಖ್ಯತ್ವೇ ಕರಾವೇ ಮಾಝೇ ಭಜನ । ಹಾ ಸ್ವಧರ್ಮ ಜಾಣ ಸರ್ವಾಂಚಾ ॥೩೨೦॥ ಸರ್ವ ಆಶ್ರಮ ಸರ್ವ ವರ್ಣ । ತ್ಯಾಂಸೀ ಹಾಚಿ ಸ್ವಧರ್ಮ ಜಾಣ । ಸಾಂಡೋನಿ ವಿಷಯಾಂಚೇ ಭಾನ । ಮಾಝೇ ಭಜನ ಕರಾವೇ ॥೩೨೧॥ ಕರಿತಾ ಸ್ವಧರ್ಮೇ ಮಾಝೀ ಭಕ್ತೀ । ಭಕ್ತಾಸೀ ಹೋಯ ಜೇ ಪ್ರಾಪ್ತೀ । ತೇಚಿ ಸಾಂಗತಾಹೇ ಶ್ರೀಪತೀ । ಉದ್ಧವಾಪ್ರತೀ ಸ್ವಾನಂದೇ ॥೩೨೨॥

ಇತಿ ಮಾಂ ಯಃ ಸ್ವಧರ್ಮೇಣ ಭಜನ್ನಿತ್ಯಮನನ್ಯಭಾಕ್ । ಸರ್ವಭೂತೇಷು ಮದ್ಭಾವೋ ಮದ್ಭಕ್ತಿಂ ವಿಂದತೇಽಚಿರಾತ್ ॥೪೪॥

ಅರ್ಥ:- ಈ ಯಾವ ಪುರುಷನು ಈ ಪ್ರಕಾರವಾಗಿ ಅನನ್ಯಭಾವದಿಂದ ತನ್ನ ವರ್ಣಾಶ್ರಮ ಧರ್ಮದ ಮುಖಾಂತರವಾಗಿ ನನ್ನ ಸೇವೆಯಲ್ಲಿ ಇರುವನು. ಮತ್ತು ಸಮಸ್ತ ಪ್ರಾಣಿಗಳಲ್ಲಿ ನನ್ನ ಭಾವನೆಯನ್ನು ಇಡುವನು. ಆತನಿಗೆ ನನ್ನ ಅವಿಚಲವಾದ ಭಕ್ತಿಯು ಪ್ರಾಪ್ತವಾಗುವುದು.

ಸನ್ಯಾಸಿಗೆ ಪರಮಶಾಂತಿಯು ಮುಖ್ಯವಾಗಿರುವುದು. ಇದಲ್ಲದೇ ಅಂತರ್ಬಾಹ್ಯ ಇಂದ್ರಿಯಗಳ ನಿಗ್ರಹವು ಬೇಕಾಗುವುದು. ಅಹಿಂಸೆಯು ಮಾತ್ರ ಅವರ ಸ್ವಧರ್ಮವಾಗಿರುವುದು. ಸನ್ಯಾಸದ ಶ್ರೇಷ್ಠವಾದ ಧರ್ಮವು ಇದೇ ಆಗಿರುವುದು ॥೩೧೨॥ ಯಾವ ಆಶ್ರಮದಲ್ಲಿ ಮುಖ್ಯವಾಗಿ ತಪಶ್ಚರ್ಯ ಮತ್ತು ಮಂತ್ರಹೋಮಗಳು ನಡೆಯುವುವೋ ಅದು ವಾನಪ್ರಸ್ಥಾಶ್ರಮದ ಸ್ವಧರ್ಮವಾಗಿರುವುದು.ಮೂರು ಆಶ್ರಮಗಳಿಗೆ ಆಶ್ರಯವನ್ನು ನೀಡಿ ಅವರಿಗೆ ಸುಖಗೊಳಿಸುವುದು ಇದು ಗೃಹಸ್ಥದ ಧರ್ಮವಾಗಿರುವುದು ॥೩೧೩॥ ಅಗ್ನಿಹೋತ್ರವು ಇದು ಗೃಹಸ್ಥನಿಗೆ ಮುಖ್ಯವಾಗಿರುವುದು. ಸನ್ಯಾಸಿಗಳವರಿಗೆ ಮತ್ತು ಬ್ರಹ್ಮಚಾರಿಗಳವರಿಗೆ ಅನ್ನದಾನವನ್ನು ಮಾಡಬೇಕು. ಅವರ ಪ್ರಾಣಗಳ ರಕ್ಷಣೆಯನ್ನು ಮಾಡಬೇಕು. ಅದರ ಲಕ್ಷಣವನ್ನು ಈಗ ಹೇಳುವೆನು, ಅದನ್ನು ಕೇಳು ॥೩೧೪॥ ಗೃಹಸ್ಥನು ಯಾಚಕನಿಗೆ ತನ್ನ ಶಕ್ತ್ಯಾನುಸಾರವಾಗಿ ಜಲ, ವಸ್ತ್ರ,ದ್ರವ್ಯ, ವಾಸಿಸಲು ಸ್ಥಳ, ಪಶುಪಕ್ಷಿಗಳಿಗೆ ಮೇವು, ಹುಲ್ಲು, ಪತ್ರಗಳು ಮತ್ತು ಆಶ್ರಯವನ್ನು ಕೊಟ್ಟು ದೀನ ಪ್ರಾಣಿಗಳ ರಕ್ಷಣೆಯನ್ನು ಮಾಡಬೇಕು ॥೩೧೫॥ ಬ್ರಹ್ಮಚಾರಿಯು ಗುರುಗಳ ದೃಢವಾದ ಶ್ರದ್ಧೆಯಿಂದ ಸೇವೆಯನ್ನು ಮಾಡಿ ತನ್ನ ಸ್ವಧರ್ಮದ ಪಾಲನೆಯನ್ನು ಮಾಡಬೇಕು. ಹೇ ಉದ್ಧವಾ, ಈ ಆಶ್ರಮದ ಇಂತಹ ಲಕ್ಷಣಗಳು ಇರುವುವು ॥೩೧೬॥ ಗೃಹಸ್ಥಾಶ್ರಮಕ್ಕೆ ಯಾವ ಧರ್ಮವನ್ನು ಹೇಳಿರುವುದೋ, ಅದರ ಆಚರಣೆಯನ್ನು ಇತರ ಆಶ್ರಮದವರು ಮಾಡಬಾರದು. ಆದರೆ ಇತರ ಆಶ್ರಮಗಳಲ್ಲಿನ ಧರ್ಮವನ್ನು ಗೃಹಸ್ಥಾಶ್ರಮದ ಜನರು ಮಾಡಬಹುದು ॥೩೧೭॥

ಗೃಹಸ್ಥನು ತಾನು ನಿಷ್ಪಾಪನಾಗಲು ಹೆಚ್ಚು ಹೆಚ್ಚಾಗಿ ಜಪ ಮತ್ತು ತಪಗಳನ್ನು ಮಾಡಬೇಕು. ಒಳಗಿನ ಮತ್ತು ಹೊರಗಿನ ಶುದ್ಧಿಯನ್ನು ಅವಶ್ಯವಾಗಿ ಮಾಡಬೇಕು ॥೩೧೮॥ ಮನಸ್ಸಿನ ತಳಮಳವನ್ನು ನಿವಾರಿಸಿಕೊಳ್ಳಬೇಕು ಮತ್ತು ಸಿಕ್ಕ ಸ್ಥಿತಿಯಲ್ಲಿಯೇ ಸಮಾಧಾನವನ್ನು ಸಾಧಿಸಬೇಕು. ತಾನು ಎಲ್ಲರ ಸ್ನೇಹಿತನೆಂದು ಭಾವಿಸಿಕೊಂಡು ಸರ್ವರಲ್ಲಿಯೂ ಉಪಕಾರವನ್ನು ಮಾಡಬೇಕು ॥೩೧೯॥ ಗೃಹಸ್ಥಾಶ್ರಮದಲ್ಲಿನ ಬ್ರಹ್ಮಚರ್ಯದ ಲಕ್ಷಣವು ಯಾವುದೆಂದರೆ, ಋತುಕಾಲದಲ್ಲಿ ಮಾತ್ರ ತನ್ನ ಸ್ತ್ರೀಯಲ್ಲಿ ಕೂಡಬೇಕು. ಪ್ರಾಮುಖ್ಯವಾಗಿ ನನ್ನ ಭಜನೆಯನ್ನು ಮಾಡುವುದೇ ಸರ್ವರ ಸ್ವಧರ್ಮವಾಗಿರುವುದು ॥೩೨೦॥ ಸರ್ವ ವರ್ಣದವರಿಗೂ ಮತ್ತು ಸರ್ವ ಆಶ್ರಮದವರಿಗೂ, ಇದೇ ಸ್ವಧರ್ಮವಾಗಿದೆ. ಯಾವುದೆಂದರೆ ಅವರು ವಿಷಯಗಳ ಸ್ಮರಣೆಯನ್ನು ಬಿಟ್ಟುಕೊಟ್ಟು ನಿಃಸ್ವಾರ್ಥ ಪ್ರೇಮದಿಂದ ನನ್ನ ಭಜನೆಯನ್ನು ಮಾಡುತ್ತಿರಬೇಕು ॥೩೨೧॥ ಸ್ವಧರ್ಮದಿಂದ ನನ್ನ ಭಕ್ತಿಯನ್ನು ಮಾಡುವುದರಿಂದ ಭಕ್ತರಿಗಾಗುವ ಫಲಪ್ರಾಪ್ತಿಯ ವಿಷಯಕ್ಕಾಗಿ ಸ್ವತಃ ಶ್ರೀಕೃಷ್ಣನು ಆನಂದದಿಂದ ವರ್ಣನೆಯನ್ನು ಮಾಡುತ್ತಿರುವನು॥೩೨೨॥

ಸರ್ವ ಭಾವೇ ಅನನ್ಯಗತೀ । ಕರಿತಾ ಸ್ವಧರ್ಮೇ ಮಾಝೀ ಭಕ್ತೀ । ಮಾಝಾ ಭಾವೋ ಸರ್ವಾಭೂತೀ । ಶೀಘ್ರಗತೀ ಉಲ್ಹಾಸೇ ॥೩೨೩॥ ಮದ್ಭಾವೋ ಜೋಡಲ್ಯಾ ಸರ್ವಭೂತೀ । ತೇಣೇ ಪ್ರಕಟೇ ಮಾಝೀ ಚೌಥೀ ಭಕ್ತೀ । ತಿಚ್ಯಾ ಪಾಯೀ ಚಾರೀ ಮುಕ್ತೀ । ಸದಾ ಲಾಗತೀ ಸ್ವಾನಂದೇ ॥೩೨೪॥ ಅನಿವಾರ ಅನನ್ಯಗತೀ । ಸರ್ವಸ್ವೇ ಜ್ಯಾಸೀ ಮಾಝೀ ಪ್ರೀತೀ । ತೋ ಲಾಹೇ ಮಾಝೀ ಪರಮಭಕ್ತೀ । ಜೇಥೋನಿ ಕಲ್ಪಾಂತೀ ಚ್ಯವೇನಾ ॥೩೨೫॥

ಭಕ್ತ್ಯೋದ್ಧವಾನಪಾಯಿನ್ಯಾ ಸರ್ವಲೋಕಮಹೇಶ್ವರಮ್ ।
ಸರ್ವೋತ್ಪತ್ತ್ಯಪ್ಯಯಂ ಬ್ರಹ್ಮ ಕಾರಣಂ ಮೋಪಯಾತಿ ಸಃ ॥೪೫॥

ಅರ್ಥ:- ಹೇ ಉದ್ಧವಾ, ನಾನು ಸಂಪೂರ್ಣ ಲೋಕಗಳ ಏಕಮಾತ್ರ ಸ್ವಾಮಿಯಾಗಿರುವೆನು. ಸರ್ವರ ಉತ್ಪತ್ತಿಯ ಮತ್ತು ಪ್ರಳಯದ ಪರಮಕಾರಣ ಬ್ರಹ್ಮ ನಾನಾಗಿರುವೆನು. ಆತನು ನಿತ್ಯ ನಿರಂತರವಾಗಿ ಬೆಳೆಯುತ್ತಿರುವ ಅಖಂಡ ಭಕ್ತಿಯದ್ವಾರಾ ನನಗೆ ಪ್ರಾಪ್ತಮಾಡಿಕೊಳ್ಳುವನು.

ಸಕಳ ಸಚ್ಚಿದಾನಂದಸ್ಥಿತೀ । ಜೇಮಾಜೇ ಸಾಂಪಡೇ ಮೀ ಸಹಜಗತೀ । ತೀ ನಾಂವ ಮಾಝೀ ''ಪರಮಭಕ್ತೀ'' । ಜಾಣ ನಿಶ್ಚಿತೀ ಉದ್ಧವಾ ॥೩೨೬॥ ವಿಪರೀತ ಸಂಸಾರಾಂಚೇ ಭಾನ । ದಿಸೇ ದೃಶ್ಯ-ವಿಲಕ್ಷಣ । ತೇಥ ಸದಾ ಸ್ವಾನಂದಪೂರ್ಣ । ತೇ ಚೌಥೀ ಜಾಣ ಭಕ್ತೀ ಮಾಝೀ ॥೩೨೭॥ ಜೇಥ ದೇವ ಭಕ್ತ ಏಕ ಹೋತೀ । ಏಕಪಣೇ ಭಜನಸ್ಥಿತೀ । ಐಸೀ ಸಾಧಕಾಂಸೀ ಪ್ರಾಪ್ತೀ । ತೇ ''ಪರಮಭಕ್ತೀ'' ಉದ್ಧವಾ ॥೩೨೮॥ ಮಾಝೀ ಪ್ರಕಟಲ್ಯಾ ಪರಮ ಭಕ್ತೀ । ಪತನ ನಾಹೀ ಪ್ರಳಯಾಂತೀ । ಸಾಧಕ ಮದ್ರೂಪಾ ಯೇತೀ । ಸ್ವರೂಪಸ್ಥಿತೀ ಸಮಸಾಮ್ಯೇ ॥೩೨೯॥ ತ್ಯಾ ಸ್ವರೂಪಾಚೇ ಲಕ್ಷಣ। ಸಾಂಗತಾಹೇ ಶ್ರೀನಾರಾಯಣ । ಉತ್ಪತ್ತಿ-ಸ್ಥಿತಿ-ನಿದಾನ । ಕಾರಣಾ ಕಾರಣ ಜೋ ಚಿದಾತ್ಮಾ ॥೩೩೦॥ ಜೋ ಸಕಳ ನಿಯಂತಾ ಈಶ್ವರು । ಜೋ ವಿಶ್ವಾತ್ಮಾ ವಿಶ್ವಂಭರು । ಜೋ ಉಪನಿಷದಾಂಚೇ ಸಾರು । ಜೋ ಮಹೇಶ್ವರು ಜಗಾಚಾ ॥೩೩೧॥ ತ್ಯಾ ಪದಾಚೇ ಪದಪ್ರಾಪ್ತೀ । ಭಕ್ತ ಪಾವಲೇ ಪರಮಭಕ್ತೀ । ತೇಚಿ ಪುಢತೀ ಉದ್ಧವಾಪ್ರತೀ । ಸ್ವಾನಂದೇ ಶ್ರೀಪತಿ ಸಾಂಗತ ॥೩೩೨॥

ಇತಿ ಸ್ವಧರ್ಮನಿರ್ಣಿಕ್ತಸತ್ತ್ವೋ ನಿರ್ಜ್ಞಾತಮದ್ಗತಿಃ ।
ಜ್ಞಾನವಿಜ್ಞಾನಸಂಪನ್ನೋ ನಚಿರಾತ್ಸಮುಪೈತಿ ಮಾಮ್ ॥೪೬॥

ಅರ್ಥ:- ಈ ಪ್ರಕಾರವಾಗಿ ಆ ಗೃಹಸ್ಥನು ತನ್ನ ಧರ್ಮಪಾಲನೆಯಿಂದ ಅಂತಃಕರಣವನ್ನು ಶುದ್ಧಮಾಡಿ ಈಶ್ವರನಾದ ನನಗೆ, ನನ್ನ ಸ್ವರೂಪವನ್ನು ತಿಳಿದುಕೊಳ್ಳುವನು ಮತ್ತು ಜ್ಞಾನವಿಜ್ಞಾನ ಸಂಪನ್ನನಾಗಿ ಬಹುಬೇಗ ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳುವನು.

ಸರ್ವಭಾವದಿಂದ, ಅನನ್ಯಗತಿಯಿಂದ ಮತ್ತು ಸ್ವಧರ್ಮದಿಂದ ನನ್ನ ಭಕ್ತಿಯನ್ನು ಮಾಡಲು, ಆಗ ಸರ್ವಭೂತಮಾತ್ರರಲ್ಲಿ ನನ್ನ ಭಾವನೆಯು ದೃಢವಾಗಿ ಉಳಿಯುವುದು ॥೩೨೩॥ ಸರ್ವ ಪ್ರಾಣಿಮಾತ್ರರಲ್ಲಿ ನನ್ನ ಭಾವನೆಯು ದೃಢವಾಗಲು ಆಗ ನಾಲ್ಕನೆಯಭಕ್ತಿಯು ಪ್ರಕಟವಾಗಿ ನಾಲ್ಕೂ ಮುಕ್ತಿಗಳು ಆನಂದದಿಂದ ಇವರ ಕಾಲಿಗೆ ಬೀಳುವುವು ॥೩೨೪॥ ಇಂತಹ ಅನನ್ಯವಾದ ಭಕ್ತಿಯು ಯಾರಲ್ಲಿರುವುದೋ ಮತ್ತು ಯಾರ ಸರ್ವಸ್ವ ಪ್ರೇಮವು ನನ್ನಲ್ಲಿರುವುದೋ, ಆತನಿಗೆ ನನ್ನಪರಮಭಕ್ತಿಯು ಪ್ರಾಪ್ತವಾಗುವುದು. ಈ ಭಕ್ತಿಯಿಂದ ಆತನು ಕಲ್ಪಾಂತಕ್ಕೂ ಚ್ಯುತನಾಗಲು ಶಕ್ಯವಿಲ್ಲ ॥೩೨೫॥

ಹೇ ಉದ್ಧವನೇ, ಯಾವ ಸಂಪೂರ್ಣವಾದ ಸಚ್ಚಿದಾನಂದ ಸ್ಥಿತಿಯಲ್ಲಿ ನಾನು ಸಹಜಗತಿಯಲ್ಲಿ ಸಿಗುತ್ತಿರುವೆನೋ, ಅದಕ್ಕೆ ಮಾತ್ರ ನನ್ನ ಪರಮಭಕ್ತಿ ಎಂದು ಹೇಳುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೩೨೬॥ ಯಾವ ಸ್ವರೂಪದಲ್ಲಿ ಪ್ರಪಂಚದ ಸ್ವರೂಪವು ವಿರುದ್ಧವಾಗಿ ತೋರಹತ್ತುವುದು. ದೃಶ್ಯಗಳು ವಿಲಕ್ಷಣವಾಗಿ ತೋರುವುವು ಮತ್ತು ಸರ್ವಸಮಯದಲ್ಲಿ ಸ್ವಾನಂದದ ಪರಿಪೂರ್ಣ ಅನುಭವವು ಬರುತ್ತಿರುವುದು. ಇದು ನನ್ನನಾಲ್ಕನೆಯ ಭಕ್ತಿಯಾಗಿರುವುದು ॥೩೨೭॥ ಹೇ ಉದ್ಧವಾ, ಎಲ್ಲಿ ದೇವ ಮತ್ತು ಭಕ್ತ ಇವರು ಪ್ರೇಮದಿಂದ ಏಕರೂಪವಾಗುವರೋ ಮತ್ತು ಐಕ್ಯರೂಪದಿಂದ ಭಜನೆಯು ಸಾಧಿಸುವುದೋ, ಇಂತಹ ಯಾವ ಸಾಧಕನ ಸಾಧನೆಯ ಪ್ರಾಪ್ತಿಯು, ಅದೇ ನನ್ನ ಪರಮಭಕ್ತಿಯಾಗಿರುವುದು ॥೩೨೮॥ ಈ ಪ್ರಕಾರವಾಗಿ ಒಂದು ಸಲ ನನ್ನ ಪರಮಭಕ್ತಿಯು ಪ್ರಕಟವಾಯಿತೆಂದರೆ, ಆಗ ಪ್ರಳಯಕಾಲದಲ್ಲಿಯೂ ಸಹ ಆತನ ಪತನವು ಆಗುವುದಿಲ್ಲ. ಕಾರಣ ಸಾಧಕನು ನನ್ನಸ್ವರೂಪಕ್ಕೆ ಪ್ರಾಪ್ತನಾಗಿ ಸ್ವರೂಪಸ್ಥಿತಿಯಲ್ಲಿ ಸಮಸಾಮ್ಯದಿಂದ ಇರುತ್ತಿರುವನು ॥೩೨೯॥ ಈ ಯಾವ ಸ್ವರೂಪದ ಲಕ್ಷಣಗಳನ್ನು ಶ್ರೀ ನಾರಾಯಣನು ಹೇಳುತ್ತಿರುವನು. ಉತ್ಪತ್ತಿ, ಸ್ಥಿತಿ ಮತ್ತು ಲಯ ಈ ಕಾರಣಗಳ ಕಾರಣವಾಗಿರುವ ಯಾವ ಚಿದಾತ್ಮಾವಾಗಿರುವುದು ॥೩೩೦॥ ಆತನು ಸರ್ವರ ನಿಯಂತ್ರಕನಾದ ಈಶ್ವರನಾಗಿರುವನು. ಆತನು ವಿಶ್ವಾತ್ಮನು ಮತ್ತು ವಿಶ್ವಂಭರನಾಗಿರುವನು. ಆತನು ಉಪನಿಷದಗಳ ಸಾರನಾಗಿರುವನು ಮತ್ತು ಸರ್ವ ಜಗತ್ತಿನ ಸ್ವಾಮೀ, ಪರಮೇಶ್ವರನಾಗಿರುವನು ॥೩೩೧॥ ಆತನ ಈ ಯಾವ ಪದವಿಗೆ ಯಾವ ಭಕ್ತನು ಈ ನನ್ನ ಪರಮಭಕ್ತಿಯನ್ನು ಆಚರಿಸಿ ಅದನ್ನು ಪ್ರಾಪ್ತಮಾಡಿಕೊಳ್ಳುವನು. ಇದನ್ನೇ ಮುಂದೆ ಶ್ರೀಕೃಷ್ಣನು ಉದ್ಧವನಿಗೆ ಆನಂದದಿಂದ ಹೇಳುತ್ತಿರುವನು ॥೩೩೨॥

ಐಶಿಯಾ ಪದಾಚೀ ಪದಪ್ರಾಪ್ತೀ । ಸಾಧಕ ಪಾವೇ ಸ್ವಧರ್ಮಸ್ಥಿತೀ । ತೇ ಸ್ವಧರ್ಮಪ್ರಯೋಜನಗತೀ । ಯಥಾನಿಗುತೀ ಸಾಂಗತ ॥೩೩೩॥ ಕರಿತಾ ಸ್ವಧರ್ಮಾನುಷ್ಠಾನ । ರಜತಮೋ ನಾಶತೀ ಜಾಣ। ಶುದ್ಧಸತ್ತ್ವ ಅಂತಃಕರಣ । ತೇಥ ಮಾಝೇ ಜ್ಞಾನ ಪ್ರಕಾಶೇ ॥೩೩೪॥ ಪ್ರಕಾಶಲ್ಯಾ ಮಾಝೇ ಜ್ಞಾನ । ತೇಣೇ ಉಲ್ಹಾಸೇ ಮಾಝೇ ಭಜನ । ಭಜನಾಸ್ತವ ಮನ । ವಿಕಲ್ಪಪಣ ಪೈ ತ್ಯಾಗೀ ॥೩೩೫॥ ವಿಕಲ್ಪತ್ಯಾಗಾಚಿಯೇ ಗತೀ । ವೈರಾಗ್ಯೇ ಉಚಂಬಳೇ ವಿರಕ್ತೀ । ಭಾಸೇ ಪರಮಾತ್ಮಾ ಸರ್ವ ಭೂತೀ । ತೇಣೇ ''ಪರಮಭಕ್ತೀ'' ಉಲ್ಹಾಸೇ ॥೩೩೬॥ ಉಲ್ಹಾಸಲ್ಯಾ ಪರಮಭಕ್ತೀ । ಭಕ್ತಾಸೀ ಮಾಝೀ ಸ್ವರೂಪಪ್ರಾಪ್ತೀ । ತೇಚಿ ಸ್ವರೂಪಾಚೀ ಸ್ವರೂಪಸ್ಥಿತೀ । ಯಥಾನಿಗುತೀ ಸಾಂಗತ ॥೩೩೭॥ ಪರಮಾತ್ಮಾ ಪರಂಜ್ಯೋತಿ । ಪರಬ್ರಹ್ಮ ಪರಂಜ್ಞಪ್ತೀ। ಪರಾತ್ಪರತರ ಪ್ರಕೃತೀ । ವೇದ ಬೋಲತೀ ''ಪರಾವರ'' ಜೋ ॥೩೩೮॥ ಅಜ ಅವ್ಯಯ ಅಕ್ಷರ । ಅರೂಪ ಅನಾಮ ಅಗೋತ್ರ । ಅಲಕ್ಷ್ಯ ಅತರ್ಕ್ಯ ಅಪಾರ । ಅಪರಂಪರಸ್ವರೂಪ ॥೩೩೯॥ ಐಶೀ ನಿಜಸ್ವರೂಪೀ ನಿಜಪ್ರಾಪ್ತೀ। ಭಕ್ತ ಪಾವಲೇ ಸ್ವಧರ್ಮಸ್ಥಿತೀ । ಜೇಥೂನಿ ಪರತಲಿಯಾ ಶ್ರುತೀ । ನೇತಿನೇತೀ ನಿಜನಿಷ್ಠಾ ॥೩೪೦॥ ಐಸೇ ಮದ್ರೂಪ ಪಾವಲ್ಯಾಪಾಠೀ । ಸಂಸಾರಾಚೀ ಕಾಢಿಲೀ ಕಾಂಟೀ । ನಾಂವರೂಪಾಂಚೀ ಬುಡಾಲೀ ಗೋಠೀ । ಪಡಲೀ ತುಟೀ ಜನ್ಮಮರಣಾ ॥೩೪೧॥ ಏವಂ ಸ್ವಧರ್ಮಾಚೇನಿ ಧರ್ಮಾವಶೇ । ಮೀ ತೂಪಣಾಚೇ ನಾಂವಚಿ ಪುಸೇ । ಮದ್ರೂಪಾಚೇನಿ ಸಾಮರಸ್ಯೇ । ಅನಾಯಾಸೇ ಮೀಚಿ ಜಾಹಲೇ ॥೩೪೨॥ ''ಪೂರ್ವಿ'' ಹೋತೋ ಮೀ ಜೀವ । ಆತಾ ಝಾಲೋ ''ಸದಾಶಿವ'' । ಹಾಹೀ ಬುಡಾಲಾ ಆಠವ । ಐಸಾ ಮಾಝಾ ಅನುಭವ ಮದ್‌ಭಕ್ತಾ ॥೩೪೩॥ ಶೂನ್ಯ ಪಡಿಲೇ ಸಂಸಾರಸ್ಥಿತೀ । ತೇಥ ಕೈಚೀ ಪುನರಾವೃತ್ತೀ । ಐಶೀ ಮದ್‌ಭಕ್ತಾ ಮಾಝೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೩೪೪॥ ಏವಂ ಸ್ವಧರ್ಮೇ ಮತ್ಪ್ರಾಪ್ತಿ ಜಾಣ। ತಯಾಸ್ವಧರ್ಮಾಚೇ ಮಹಿಮಾನ। ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಸಾವಧಾನ ಪರಿಯೇಸಾ ॥೩೪೫॥

ವರ್ಣಾಶ್ರಮವತಾಂ ಧರ್ಮ ಏಷ ಆಚಾರಲಕ್ಷಣಃ । ಸ ಏವ ಮದ್ಭಕ್ತಿಯುತೋ ನಿಃಶ್ರೇಯಸಕರಃ ಪರಃ ॥೪೭॥

ಅರ್ಥ:- ನಾನು ನಿನಗೆ ಈ ಸದಾಚಾರ ಸ್ವರೂಪವಾದ ವರ್ಣಾಶ್ರಮ ಧರ್ಮವನ್ನು ಹೇಳಿದೆನು. ಈ ಧರ್ಮಕ್ಕೆ ನನ್ನ ಭಕ್ತಿಯ ಜೊತೆ ಕೂಡಲು, ಆಗ ಅನಾಯಾಸವಾಗಿ ಈ ಯಾವ ಪರಮಕಲ್ಯಾಣರೂಪ ಮೋಕ್ಷದ ಪ್ರಾಪ್ತಿಯಾಗುವುದು.

ಸಾಧಕರು ಸ್ವಧರ್ಮದ ಆಚರಣೆಯಿಂದ ಇಷ್ಟೊಂದು ಶ್ರೇಷ್ಠ ಪದವಿಗೆ ಪ್ರಾಪ್ತರಾಗುವರು. ಅದೇ ಸ್ವಧರ್ಮದ ಪ್ರಯೋಜನವನ್ನು ಉತ್ತಮ ಪ್ರಕಾರವಾಗಿ ಹೇಳುವರು ॥೩೩೩॥ ಸ್ವಧರ್ಮದಿಂದ ಅನುಷ್ಠಾನವನ್ನು ಮಾಡುವುದರಿಂದ ರಜ ಮತ್ತು ತಮ ಈ ಗುಣಗಳು ನಾಶವಾಗುವುವು. ಮತ್ತು ಅಂತಃಕರಣವು ಶುದ್ಧವಾಗಿ ಸತ್ತ್ವಯುಕ್ತವಾಯಿತೆಂದರೆ ಅಲ್ಲಿ ನನ್ನ ಜ್ಞಾನವು ಪ್ರಕಾಶಮಾನವಾಗುವುದು ॥೩೩೪॥ ನನ್ನ ಜ್ಞಾನವು ಪ್ರಕಾಶಮಾನವಾಯಿತೆಂದರೆ ನನ್ನ ಭಜನೆಯ ಬೆಳವಣಿಗೆಯು ಆಗುವುದು ಮತ್ತು ಭಜನೆಯ ವಿಕಾಸವಾಯಿತೆಂದರೆ ಮನದಲ್ಲಿನ ಸಂಕಲ್ಪವಿಕಲ್ಪಗಳು ಇಲ್ಲದಾಗುವುವು ॥೩೩೫॥ ವಿಕಲ್ಪಗಳು ಮುಗಿದುಹೋದವೆಂದರೆ ವಿರಕ್ತಿಯು ಪ್ರಕಟವಾಗುವುದು ಮತ್ತು ಸರ್ವಭೂತಮಾತ್ರರಲ್ಲಿ ಪರಮಾತ್ಮನು ತೋರಹತ್ತುವನು. ಅದರಿಂದ ಪರಮಭಕ್ತಿಯು ವಿಕಸಿತವಾಗುವುದು ॥೩೩೬॥ ಪರಮಭಕ್ತಿಯ ವಿಕಾಸವಾಯಿತೆಂದರೆ ಆಗ ಭಕ್ತನಿಗೆ ನನ್ನ ಸ್ವರೂಪದ ಪ್ರಾಪ್ತಿಯಾಗುವುದು. ಅದರ ವರ್ಣನೆಯನ್ನು ಶ್ರೀಕೃಷ್ಣನು ಹೇಳುತ್ತಿರುವನು ॥೩೩೭॥ ಪರಮಾತ್ಮನು ಪರಂಜ್ಯೋತಿ, ಪರಬ್ರಹ್ಮ, ಪರಂಜ್ಞಪ್ತಿ, ಪ್ರಕೃತಿ ಆಚೆಯ ಪರಾತ್ಪರನು ಮತ್ತು ಆತನಿಗೆ ಪರಾವರ ಎಂದು ಹೇಳುವರು ॥೩೩೮॥ ಅಜ, ಅವ್ಯಯ, ಅಕ್ಷರ, ಅರೂಪ, ಅನಾಮ, ಅಗೋತ್ರ, ಅಲಕ್ಷ್ಯ, ಅತರ್ಕ್ಯ, ಅಪಾರ ಮತ್ತು ಅನಂತಸ್ವರೂಪ ॥೩೩೯॥ ಈ ಪ್ರಕಾರದ ಆತ್ಮಸ್ವರೂಪದ ಪ್ರಾಪ್ತಿಯು ಭಕ್ತರಿಗೆ ಸ್ವಧರ್ಮಸ್ಥಿತಿಯಿಂದ ದೊರಕುವುದು. ''ನೇತಿನೇತೀ'' ಎಂದು ಶ್ರುತಿಯು ಎಲ್ಲಿಂದ ತಿರುಗಿ ಹೊರಟಿತೋ, ಅಂತಹ ಸ್ವರೂಪಸ್ಥಿತಿಗೆ ನನ್ನ ಭಕ್ತರು ಸಹಜವಾಗಿ ಮುಟ್ಟುವರು ॥೩೪೦॥ ಇಂತಹ ನನ್ನ ಸ್ವರೂಪಕ್ಕೆ ಮುಟ್ಟಿದ ನಂತರ ಸಂಸಾರದ ಬಂಧನೆಯು ಮುರಿದು ಬೀಳುವುದು. ನಾಮರೂಪದ ಮಾತೇ ಇಲ್ಲದಾಗಿ ಬಿಡುವುದು ಮತ್ತು ಜನ್ಮಮರಣದ ಮುರುಗಡೆಯಾಗುವುದು ॥೩೪೧॥ ಈ ಪ್ರಕಾರವಾಗಿ ಸ್ವಧರ್ಮದಿಂದ ಆಚರಣೆಯನ್ನು ಮಾಡಲು ಆಗ ''ನಾನು, ನೀನು'' ಎಂಬ ನಾಮವು ಒರೆಸಿ ಹೋಗುವುದು ಮತ್ತು ನನ್ನ ಸ್ವರೂಪದಲ್ಲಿ ಏಕರೂಪವಾಗುವುದರಿಂದ ಅವರು ಅನಾಯಾಸವಾಗಿ ನನ್ನ ಸ್ವರೂಪವನ್ನೇ ಪಡೆಯುವರು ॥೩೪೨॥ ಪೂರ್ವದಲ್ಲಿ ನಾನು ಜೀವನಾಗಿದ್ದೆನು, ಈಗ ನಾನು ಶಿವನಾಗಿರುವೆನು ಇದರ ಸ್ಮರಣೆಯೂ ಕೂಡ ಇವರಿಗೆ ಇರುವುದಿಲ್ಲ. ಹೀಗೆ ನನ್ನ ಭಕ್ತರಿಗೆ ನನ್ನ ಅನುಭವವು ಪ್ರಾಪ್ತವಾಗುವುದು ॥೩೪೩॥ ಈ ಪ್ರಕಾರವಾಗಿ ಸಂಸಾರಶೂನ್ಯವಾದ ನಂತರ ಪುನರ್ಜನ್ಮದ ಪ್ರಶ್ನೆಯೇ ಉಳಿಯುವುದಿಲ್ಲ, ಹೇ ಉದ್ಧವಾ, ನನ್ನ ಭಕ್ತರಿಗೆ ಇಂತಹ ಪ್ರಾಪ್ತಿಯಾಗುವುದು ॥೩೪೪॥ ತಾತ್ಪರ್ಯವೇನೆಂದರೆ, ಸ್ವಧರ್ಮದಿಂದ ನನ್ನ ಪ್ರಾಪ್ತಿಯಾಗುವುದು. ಇದನ್ನು ನಿಶ್ಚಯಪೂರ್ವಕವಾಗಿ ಲಕ್ಷದಲ್ಲಿಡು. ಈಗ ಆ ಯಾವ ಸ್ವಧರ್ಮದ ಮಹಿಮೆಯನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು. ಅದಕ್ಕಾಗಿ ಸಾವಧಾನ ಚಿತ್ತದಿಂದ ಕೇಳಬೇಕು ॥೩೪೫॥

ಅನಾದಿ ಜೋ ಸ್ವಧರ್ಮಾಚಾರ । ಜೋ ಕಾ ಮೋಕ್ಷ ಕರ ಸಾಚಾರ । ತೇಣೇ ಸ್ವಧರ್ಮೇ ಸಕಾಮ ನರ । ಲೋಕಾಂತರ ವಾಂಛಿತೀ ।೩೪೬॥ ಝಾಲಿಯಾ ಲೋಕಾಂತರಪ್ರಾಪ್ತೀ । ತೇಥೂನಿ ಹೋಯ ಪುನರಾವೃತ್ತೀ । ನ ಕರೂನಿಯಾ ಮಾಝೀ ಭಕ್ತೀ । ಸ್ವಧರ್ಮ ನಾಶಿತೀ ಸಕಾಮೇ ।೩೪೭॥ ಬ್ರಾಹ್ಮಣಾ ಆಲಾ ಭದ್ರಜಾತೀ । ಆಮ್ಹಾ ನ ಪೋಸವೇ ಹಾ ನಿಶ್ಚಿತೀ । ಮಗ ತೋ ದೇಊನಿಯಾ ಘೇತೀ । ವಾಹಾವಯಾ ಪೋಥೀ ವೃದ್ಧ ಢೋರ ।೩೪೮॥ ಯಾಪರೀ ಸ್ವಧರ್ಮ ಜಾಣ । ಉಪೇಕ್ಷಿತೀ ಗಾ ಬ್ರಾಹ್ಮಣ । ಮಗ ಲೋಕಾಂತರೀ ಕೋರಾನ್ನ । ಮಾಗಾವಯಾ ಕಣ ಧಾಂವತೀ ।೩೪೯॥ ಘರೀ ಆಣೋನಿ ದೀಧಲೀ ಕಾಮಧೇನು । ಆಮ್ಹಾ ನ ಪೋಸವೇ ಮ್ಹಣೂನು । ತಾಕಾಸಾರೀ ದೇತೀ ಹೇಳಸೂನು । ಆಲೀ ನಾಗವಣು ತೇ ನೇಣೇ ।೩೫೦॥ ತೇವೀ ಮ್ಯಾ ಜಾಣ ಗಾಯತ್ರೀ ಮಂತ್ರ । ದಿಧಲಾ ಬ್ರಾಹ್ಮಣಾಂಸೀ ಸ್ವತಂತ್ರ । ತೋ ಉಪೇಕ್ಷೂನಿಯಾ ಮಂತ್ರತಂತ್ರ । ಶೂದ್ರಾಚಾರ ಆಚರತೀ ।೩೫೧॥ ಸೌರ ಶಾಕ್ತ ಗಾಣಪತ್ಯಾದಿ ಜಾಣ। ನಾನಾ ಮಂತ್ರದೀಕ್ಷಾ ಘೇತೀ ಬ್ರಾಹ್ಮಣ । ಪರೀ ಗಾಯತ್ರೀಚೇ ಅನುಷ್ಠಾನ । ಏಕಹೀ ಜಾಣ ನ ಕರಿತೀ ।೩೫೨॥ ನಾಹೀ ಗಾಯತ್ರೀ ಚೇ ಅನುಷ್ಠಾನ । ಪರೀ ವಿಪರೀತ ಝಾಲೇ ಆನ । ಗಾಯತ್ರೀಚೇ ಶ್ರೇಯ ಜಾಣ । ದೇತೀ ಬ್ರಾಹ್ಮಣ ದ್ರವ್ಯಾರ್ಥ ।೩೫೩॥ ಗಾಯತ್ರೀಮಂತ್ರ ಅಸೋನಿ ಘರೀ । ತಿಚಾ ಭಾವಾರ್ಥ ಕೋಣೀ ನ ಧರೀ । ದೀಕ್ಷೆಲಾಗೀ ಮೂರ್ಖಾಚೇ ದ್ವಾರೀ । ಲೋಳಿಜೇ ದ್ವಿಜವರೀ ಐಸೇ ಝಾಲೇ ।೩೫೪॥ ಶಾಸ್ತ್ರಾರ್ಥೀ ರಥ ಸುದೃಢೂ । ತ್ಯಾವರೀ ಬೈಸವಿಲಾ ಭೇಡೂ । ಸಾಂಡೂನಿ ಪಳಣೇ ಮಾನೀ ಸುರವಾಡೂ । ನ ಶಕೇ ವಿಭಾಂಡೂ ರಣಾಂಗಣ ।೩೫೫॥ ತೇವೀ ವೇದರೂಪ ಮೀ ನಾರಾಯಣ। ಬ್ರಾಹ್ಮಣಹೃದಯೀ ಅಸೇ ಜಾಣ । ತ್ಯಾಚೇ ನೇಣೂನಿ ಮಹಿಮಾನ । ವೇದಪಾರಾಯಣ ವಿಕಿತೀ ।೩೫೬॥ ವಾಂಛೂನಿಯಾ ಸ್ವರ್ಗಫಳ । ನಾನಾ ಯಾಗ ಕರಿತೀ ಪ್ರಬಳ । ಕಾಮಕಲ್ಪನಾ ಕೇವಳ । ಸ್ವಧರ್ಮ ವಿಕಳ ಪಾಡಿತೀ ।೩೫೭॥ ವೇದೀ ಪ್ರತಿಪಾದ್ಯ ಕರ್ಮಫಳ । ತೋ ವೇದು ಮಿಥ್ಯಾ ನವ್ಹೇ ಕೇವಳ । ತೋ ವೇದವಾದ ಸಮೂಳ । ನೇಣೋನಿ ಬರಳ ಹಾ ಮಾನಿತೀ ।೩೫೮॥

ಅತಿಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಯಾವ ಈ ಸ್ವಧರ್ಮದ ಆಚರಣೆಯು ನಿಜವಾಗಿಯೂ ಮೋಕ್ಷವನ್ನು ಕೊಡುವಂತಹದ್ದಾಗಿದೆ. ಇಂತಹ ಸ್ವಧರ್ಮವನ್ನು ಆಚರಿಸಿ ಸಕಾಮ ಪುರುಷನು ಸ್ವರ್ಗಾದಿಕಗಳ ಇಚ್ಛೆಯನ್ನು ಮಾಡುವನು ।೩೪೬॥ ಆದರೆ ಸ್ವರ್ಗಲೋಕವು ಒಂದುವೇಳೆ ಪ್ರಾಪ್ತವಾದರೂ ಕೂಡ ಅಲ್ಲಿಂದ ಮೃತ್ಯುಲೋಕದಲ್ಲಿ ಜನ್ಮವನವನ್ನು ಧರಿಸಬೇಕಾಗುವುದು. ನನ್ನ ಭಕ್ತಿಯನ್ನು ಮಾಡದೇ ಇರುವುದರಿಂದ ಜನರು ಸಕಾಮುಗಳಿಂದ ಸ್ವಧರ್ಮವನ್ನು ಹಾಳುಮಾಡಿ ಬಿಡುವರು ।೩೪೭॥ ಒಬ್ಬ ಬ್ರಾಹ್ಮಣನಿಗೆ ಉತ್ತಮ ಪ್ರಕಾರದ ಆನೆಯೊಂದು ದಾನವಾಗಿ ಪ್ರಾಪ್ತವಾಗಲು ಆಗ ಆತನು ಇದನ್ನು ತನಗೆ ಜೋಪಾನ ಮಾಡಲು ಸಾಧ್ಯವಿಲ್ಲವೆಂದು ತಿಳಿದು ಆ ಆನೆಯನ್ನು ಬೇರೆಯವರಿಗೆ ಕೊಟ್ಟು ತನ್ನ ಗ್ರಂಥಗಳನ್ನು ಹೊತ್ತು ಒಯ್ಯಲು ಒಂದು ಮುಪ್ಪಾದ ಎತ್ತನ್ನು ಪಡೆದಂತೆ ।೩೪೮॥ ಇದರಂತೆಯೇ ಇವರು ಸ್ವಧರ್ಮದ ಉಪೇಕ್ಷೆಯನ್ನು ಮಾಡುತ್ತಿರುವರು. ತದನಂತರ ಸ್ವರ್ಗದಲ್ಲಿ ಭಿಕ್ಷೆ ಬೇಡಿ ಧಾನ್ಯ ಕೂಡಿಸಲು ಹೋಗುವರು ।೩೪೯॥ ಮನೆಗೆ ಯಾರಾದರೂ ಕಾಮಧೇನು ಆಕಳನ್ನು ತಂದು ಕೊಟ್ಟನಂತರ, ಇದನ್ನು ನಮಗೆ ರಕ್ಷಿಸಲು ಆಗುವುದಿಲ್ಲವೆಂದು ತಿಳಿದು ಮಜ್ಜಿಗೆಗಾಗಿ ಅದನ್ನು ಕೊಟ್ಟುಬಿಡುವರು. ಆದರೆ ಅದರಲ್ಲಿ ತಮ್ಮದು ಎಷ್ಟೊಂದು ಹಾನಿಯಾಗುವುದೆಂಬುದು ಇವರಿಗೆ ತಿಳಿಯುವುದಿಲ್ಲ ।೩೫೦॥ ಅದರಂತೆ ನಾನು ಬ್ರಾಹ್ಮಣರಿಗೆ ಗಾಯತ್ರಿಯ ಯಾವ ಸ್ವತಂತ್ರ ಮಂತ್ರವನ್ನು ಕೊಟ್ಟಿರಲು, ಇದರ ಉಪೇಕ್ಷೆಯನ್ನು ಮಾಡಿ ಇವರು ಸಿಕ್ಕ ಸಿಕ್ಕ ಯಾವುದೇ ಮಂತ್ರಗಳನ್ನು ಜಪಿಸುತ್ತಿರುವರು ಮತ್ತು ಇವರು ಶೂದ್ರರ ಆಚರಣೆಯಿಂದ ತಮ್ಮ ಬದುಕನ್ನು ಸಾಗಿಸುವರು ।೩೫೧॥ ಬ್ರಾಹ್ಮಣ ಜನರು ಸೌರ, ಶಾಕ್ತ, ಗಾಣಪತ್ಯ ಇತ್ಯಾದಿ ಅನೇಕ ಪ್ರಕಾರದ ದೀಕ್ಷೆಯನ್ನು ಪಡೆಯುವರು. ಆದರೆ ಗಾಯತ್ರೀಮಂತ್ರದ ಅನುಷ್ಠಾನವನ್ನು ಯಾರೂ ಮಾಡುವುದಿಲ್ಲ ।೩೫೨॥ ಇವರು ಗಾಯತ್ರೀ ಮಂತ್ರದ ಅನುಷ್ಠಾನವನ್ನು ಮಾಡುವುದೇ ಇಲ್ಲ. ಆದರೆ ಅದರ ವಿರುದ್ಧವಾಗಿ ನಡೆದುಕೊಳ್ಳುವರು. ಈ ಬ್ರಾಹ್ಮಣರು ಗಾಯತ್ರೀಮಂತ್ರದ ಸರ್ವ ಶ್ರೇಯಸ್ಸನ್ನು ಹಣಕ್ಕಾಗಿ ಮಾರುತ್ತಿರುವರು ।೩೫೩॥ ಗಾಯತ್ರಿಯ ಮಂತ್ರವು ಮನೆಯಲ್ಲಿದ್ದರೂ ಕೂಡ ಅದರ ಮಹಿಮೆಯನ್ನು ಯಾರೂ ತಿಳಿದಿರುವುದಿಲ್ಲ ಮತ್ತು ಮೂರ್ಖ ಜನರ ಬಾಗಿಲಲ್ಲಿ "ದೀಕ್ಷೆಯನ್ನು ಕೊಡಿರಿ" ಎಂದು ಅಲ್ಲಿ ಉರುಳಾಡುತ್ತಿರುವರು. ನಿಜವಾಗಿಯೂ ಇಂತಹ ಪ್ರಕಾರವು ಆಗಿರುವುದು ।೩೫೪॥ ಶಸ್ತ್ರ-ಅಸ್ತ್ರಗಳಿಂದ ಸಜ್ಜಾಗಿರುವ ಬಲಿಷ್ಠವಾದ ರಥದಲ್ಲಿ ಒಬ್ಬ ಪುಕ್ಕ ಮನುಷ್ಯನಿಗೆ ತಂದು ಅದರಲ್ಲಿ ನಿಲ್ಲಿಸಿದರೆ ಅವನು ರಣರಂಗಕ್ಕೆ ಹೋಗಿ ಯುದ್ಧವನ್ನು ಮಾಡದೇ ರಥವನ್ನು ಬಿಟ್ಟುಕೊಟ್ಟು ಓಡಿಹೋಗುವುದೇ ಭೂಷಣವು ಎಂದು ತಿಳಿಯುವನು ।೩೫೫॥ ಅದರಂತೆ ಬ್ರಾಹ್ಮಣರ ಹೃದಯದಲ್ಲಿ ಇರುವ ವೇದರೂಪ ನಾರಾಯಣನಾದ ನನ್ನ ಮಹಿಮೆಯನ್ನು ತಿಳಿಯದೇ ಅವರು ವೇದಪಾರಾಯಣವನ್ನು ಮಾರಿಕೊಳ್ಳುವರು ।೩೫೬॥ ಮನದಲ್ಲಿ ಸ್ವರ್ಗಪ್ರಾಪ್ತಿಯ ಇಚ್ಛೆಯನ್ನು ಇಟ್ಟುಕೊಂಡು ಇವರು ಅನೇಕ ಪ್ರಕಾರಗಳ ದೊಡ್ಡ ದೊಡ್ಡ ಯಜ್ಞಗಳನ್ನು ಮಾಡುವರು. ತಮ್ಮ ಯಾವ ಲೋಭದ ಕಲ್ಪನೆಯಿಂದ ತಮ್ಮ ಸ್ವಧರ್ಮವನ್ನು ಮುಳುಗಿಸಿಬಿಡುವರು ।೩೫೭॥ ಯಾವ ವೇದದಲ್ಲಿ ಕರ್ಮಗಳ ಫಲವನ್ನು ಹೇಳಿರುವುದು. ಆ ವೇದವು ಮಿಥ್ಯೆಯಾಗಿರುವುದಿಲ್ಲ. ಆ ಯಾವ ವೇದದಲ್ಲಿ ನಿಜವಾಗಿ ಏನು ಹೇಳಿರುವುದೋ, ಅದೂ ಕೂಡ ಮಿಥ್ಯೆಯಾಗಿರುವುದಿಲ್ಲ. ಆ ಯಾವ ವೇದದಲ್ಲಿ ಹೇಳಿರುವುದು ನಿಜವಾದದ್ದು ಏನು ಎಂಬುದು ಸ್ವಲ್ಪವೂ ಸಹ ತಿಳಿಯಲಾರದೇ ಸುಮ್ಮನೇ ಏನೇನೋ ಬಡಬಡಿಸುವುದು ನಿಜವೆಂದು ತಿಳಿಯುವರು ।೩೫೮॥

ಘ್ಯಾವಯಾ ವ್ಹೋಖದಾಚೀ ವಾಟೀ । ಮಾತಾ ಸಾಕರ ದೇ ಚಿಮುಟೀ । ತೇ ಮುಖ್ಯ ಫಳ ನವ್ಹೇ ದೃಷ್ಟೀ । ಜಾವಯಾ ಪೋಟೀಚಾ ಮಹಾರೋಗು ।೬೫೯॥ ತೇವೀ ವೇದ ಬೋಲೇ ಜೇ ಫಳ । ತೇ ಪ್ರವರ್ತಿ ರೋಚನಾ ಕೇವಳ । ಸ್ವಧರ್ಮ ವಿಚಾರಿತಾ ಸಮೂಳ । ಚಿತ್ತ ಮಳಕ್ಷಾಳಕ ।೬೬೦॥ ಸ್ವಧರ್ಮ ಸಾಂಡೂನಿ ಸರ್ವಥಾ । ಸಕಾಮ ಕರ್ಮೀ ಕರೂ ಜಾತಾ । ತೇಹೀ ಶಿಣಲ್ಯಾವೇಗಳೇ ತತ್ತ್ವತಾ । ಕ್ಷುದ್ರಕಾಮತಾ ಫಳೇನಾ ।೬೬೧॥ ಜೇಣೇ ದ್ರವ್ಯೇ ಅಮೃತ ಯೇ ಹಾತಾ । ತೇ ವೇಂಚೂನಿ ಮದ್ಯಘೇತಾ । ಅಧರ್ಮ ಆಣಿ ಉನ್ಮತ್ತತಾ । ಪಿಶಾಚಂತಾ ಜಗ ಥುಂಕೀ ।೬೬೨॥ ಸ್ವಪತೀಸೀ ಕಾಮ ಭೋಗಿತಾ । ಪರಲೋಕ ಪಾವೇ ಪತಿವ್ರತಾ । ತೋಚಿ ಕಾಮ ಪರಪುರುಷೀ ಕರಿತಾ । ಅಧಃಪಾತಾ ನೇತಸೇ ।೬೬೩॥ ಜಿಹ್ವಾ ದುರುಕ್ತೀ ಬೋಲತಾ । ಯಮಪ್ರಹಾರ ವಾಜತೀ ಮಾಥಾ । ತಿಣೇಂಚಿ ''ರಾಮ ರಾಮ'' ಮ್ಹಣತಾ । ಹರಿಭಕ್ತಾ ಯಮ ಕಾಂಪೇ ।೬೬೪॥ ತೇವೀ ಪಾವೋನಿ ಉತ್ತಮ ಜನ್ಮ । ಕರ್ಮ ಕರೂನಿ ಸಕಾಮ। ಭೋಗಾವೇ ದುಃಖ ಪರಮ । ಮರಣ ಜನ್ಮ ಅನಿವಾರ ।೬೬೫॥ ತೇಣೇಂಚಿ ದೇಹೇ ಸ್ವಧರ್ಮ । ಕರಿತಾ ನಿರಸೇ ಸಕಳ ಕರ್ಮ । ನಿವಾರೇ ಮರಣಜನ್ಮ । ಬಹುತಾ ಹೇ ವರ್ಮ ಕಳೇನಾ ।೬೬೬॥ ಸ್ವಧರ್ಮೀ ಘಡೇ ಭಗವದ್ಭಕ್ತೀ । ಐಶೀ ಅತಿಗುಹ್ಯ ಆಹೇ ವ್ಯುತ್ಪತ್ತೀ । ತೇ ಮೀ ಸಾಂಗೇ ತುಜಪ್ರತೀ । ಯಥಾನಿಗುತೀ ಉದ್ಧವಾ ।೬೬೭॥ ಸ್ವಧರ್ಮ ಕರಣೇ ಆವಶ್ಯಕ । ತೇಥೇ ಸಾಂಡಣೇ ಫಳಾಭಿಲಾಖ । ತೇಚಿ ''ಮದರ್ಪಣ'' ಚೋಖ । ನ ಕರಿತಾ ದೇಖ ಸಂಕಲ್ಪು ।೬೬೮॥ ಹೋ ಕಾ ಘರಿಚ್ಯಾಚಿ ರಾಂಜಣೀ । ನಿಫತೀ ಮುಕ್ತಾಫಳಾಂಚ್ಯಾ ಶ್ರೇಣೀ । ತರೀ ಕಾ ತಾಮ್ರಪರ್ಣೀ । ಸಮುದ್ರಮಿಳಣೀ ಶೋಧಾವೀ ।೬೬೯॥ ಆಪುಲೇಚ ಘರೀಂಚಿ ಝಾಡೇ । ಫಳತೀ ಕಲ್ಪತರೂಚೇನಿ ಪಾಡೇ । ತರೀ ಅಮರಾವತೀಚೇ ಚಾಡೇ । ವೃಥಾ ವೇಡೇ ಕಾ ಶಿಣತೀ ।೬೭೦॥ ಹೋ ಕಾ ಸದ್ಗುರೂಚೇ ತೀರ್ಥ ಘೇತಾ । ಪಾವಿಜೇ ಪರಮ ಪವಿತ್ರತಾ । ತರೀ ಧಾಂವಾವಯಾ ನಾನಾ ತೀರ್ಥಾ । ವಿಶೇಷತಾ ತೇ ಕಾಯೀ ।೬೭೧॥

ತನ್ನ ಬಾಲಕನು ಬಟ್ಟಲದಲ್ಲಿನ ಔಷಧವನ್ನು ಕುಡಿಯಲಿ ಎಂದು ತಾಯಿಯು ಆತನಿಗೆ ಒಂದು ಚಿಮಟಿ ಸಕ್ಕರೆಯನ್ನು ಕೊಡುವಳು. ಆದರೆ ಅದು ಯಾವ ಮುಖ್ಯ ಫಲವಾಗಿರುವುದಿಲ್ಲ. ಆತನ ಉದರದಲ್ಲಿನ ರೋಗವು ನಷ್ಟವಾಗಬೇಕೆಂಬುವುದೇ ಸದಿಚ್ಛೆಯಾಗಿರುವುದು ।೬೫೯॥ ಅದರಂತೆ ವೇದವು ಸ್ವರ್ಗಾದಿ ಫಲವನ್ನು ಹೇಳಿಕೊಂಡಿರುವ ಉದ್ದೇಶವು ಏನೆಂದರೆ ಇವರು ಸ್ವಧರ್ಮ ಆಚರಣೆಯತ್ತ ಪ್ರವೃತ್ತರಾಗಬೇಕೆಂದು ಅದರ ರುಚಿಯನ್ನು ಉತ್ಪನ್ನ ಮಾಡುವ ಪ್ರವೃತ್ತಿಯಾಗಿದೆ. ಕಾರಣವೇನೆಂದರೆ, ಸ್ವಧರ್ಮದ ಆಚರಣೆಯನ್ನು ಮಾಡಿದರೆ ಮಾತ್ರ ಚಿತ್ತಶುದ್ಧಿಯಾಗುತ್ತಿರುವುದು ।೬೬೦॥ ಆದರೆ ಸ್ವಧರ್ಮವನ್ನು ಬಿಟ್ಟು ಸಕಾಮ ಕರ್ಮಗಳನ್ನು ಮಾಡಹತ್ತಲು, ಆ ಕರ್ಮಗಳನ್ನು ಮಾಡುವ ತೊಂದರೆಗಳು ನಮ್ಮ ಪಾಲಿಗೆ ಬರುವುವು. ಆದರೆ ಇಷ್ಟ ಫಲದ ಪ್ರಾಪ್ತಿಯು ಮಾತ್ರ ಆಗುವುದಿಲ್ಲ ।೬೬೧॥ ಯಾವ ದ್ರವ್ಯದಿಂದ ಅಮೃತವು ಕೈಗೆ ಬರುವ ಸಾಧ್ಯತೆ ಇರುವಾಗ ಅದೇ ದ್ರವ್ಯವನ್ನು ಖರ್ಚು ಮಾಡಿ ಮದ್ಯವನ್ನು ಕೊಂಡುಕೊಳ್ಳಲು ಅಧರ್ಮವು ಬೆಳೆಯುವುದು. ಸೊಕ್ಕು ಬೆಳೆಯುವುದು. ಹುಚ್ಚ ಹುಚ್ಚರ ನಡತೆಗಳು ಬೆಳೆಯುವುವು. ಆಗ ಸರ್ವಜನರು ಆತನಿಗೆ ಛೀ, ಥೂ ಎಂದು ಉಗುಳುವರು ।೬೬೨॥ ಪತಿವ್ರತಾ ಸ್ತ್ರೀಯಳು ತನ್ನ ಪತಿಯಲ್ಲಿ ರಮಮಾಣಳಾದರೆ ಆಕೆಗೆ ಸ್ವರ್ಗವು ಪ್ರಾಪ್ತವಾಗುವುದು. ಆದರೆ ಅದೇ ಸ್ತ್ರೀಯಳು ಪರಪುರುಷನಲ್ಲಿ ಸಂಗವನ್ನು ಮಾಡಿದರೆ ಆಕೆಗೆ ಅಧಃಪಾತವಾಗುವುದು ।೬೬೩॥ ನಾಲಿಗೆಯು ಕೆಟ್ಟ ಮಾತುಗಳನ್ನು ಆಡಲು ಆಗ ಯಮದಂಡವನ್ನು ಭೋಗಿಸಬೇಕಾಗುವುದು ಮತ್ತು ಅದೇ ನಾಲಿಗೆಯಿಂದ ''ರಾಮರಾಮ'' ಎಂದು ಉಚ್ಚಾರ ಮಾಡಿದರೆ ಈ ಹರಿಭಕ್ತನ ಎದುರಿನಲ್ಲಿ ಅದೇ ಯಮನು ಗಡಗಡ ನಡುಗುವನು ।೬೬೪॥ ಅದೇ ಪ್ರಕಾರವಾಗಿ ಮನುಷ್ಯದೇಹದಂತಹ ಉತ್ತಮ ಜನ್ಮವನ್ನು ಪ್ರಾಪ್ತಮಾಡಿಕೊಂಡು ಸಕಾಮ ಕರ್ಮಗಳನ್ನು ಮಾಡುತ್ತಿದ್ದರೆ ಜನ್ಮಮರಣಗಳ ದಾರುಣ ದುಃಖಗಳನ್ನು ಬೋಗಿಸಬೇಕಾಗುವುದು ।೬೬೫॥ ಆದರೆ ಅದೇ ಅಮೌಲ್ಯ ದೇಹದಿಂದ ಸ್ವಧರ್ಮದಿಂದ ಆಚರಣೆಯನ್ನು ಮಾಡಿದರೆ ಸರ್ವಕರ್ಮಗಳು ಇಲ್ಲದಾಗುವುವು ಮತ್ತು ಜನ್ಮಮರಣದ ತಿರುಗಾಟವು ಮುಗಿದುಹೋಗುವುದು. ಆದರೆ, ಈ ಮರ್ಮವು ಅನೇಕ ಜನರಿಗೆ ತಿಳಿಯುವುದಿಲ್ಲ ।೬೬೬॥ ಸ್ವಧರ್ಮದಿಂದ ಭಗವಂತನ ಭಕ್ತಿಯು ಸಾಧಿಸುವುದು. ಇದುವೇ ಇದರಲ್ಲಿನ ಪ್ರಮುಖವಾದ ಮರ್ಮವಾಗಿರುವುದು. ಹೇ ಉದ್ಧವಾ, ಇದನ್ನೇ ಈಗ ನಾನು ಯಥಾರ್ಥ ರೀತಿಯಲ್ಲಿ ಹೇಳುವೆನು ।೬೬೭॥ ಸ್ವಧರ್ಮದ ಆಚರಣೆಯನ್ನು ಮಾಡುವುದು ಅತ್ಯಂತ ಆವಶ್ಯಕವಾಗಿರುವುದು. ಆದರೆ ಅದರಲ್ಲಿ ಫಲದ ಅಪೇಕ್ಷೆಯನ್ನು ಬಿಡಬೇಕು. ಅಂದರೆ ಸಂಕಲ್ಪವನ್ನು ಮಾಡದೇ ಅದು ನಿಜವಾಗಿಯೂ ನನಗೆ ಅರ್ಪಣೆಯಾಗುವುದು ।೬೬೮॥ ಮನೆಯಲ್ಲಿನ ನೀರಿನ ಹೌಜಿನಲ್ಲಿ ಮುತ್ತುಗಳು ರಾಶಿರಾಶಿಯಾಗಿ ಸಿಗುತ್ತಿರಲು, ಆಗ ತಾಮ್ರಪರ್ಣಿ ನದಿಯು ಎಲ್ಲಿ ಸಮುದ್ರಕ್ಕೆ ಕೂಡುತ್ತದೆಯೋ, ಅಲ್ಲಿಗೆ ಹೋಗಿ ಮುತ್ತುಗಳನ್ನು ಹುಡುಕುವ ಯಾವ ಕಾರಣವಿದೆ? ।೬೬೯॥ ತನ್ನ ತೋಟದಲ್ಲಿನ ವೃಕ್ಷಗಳು ಕಲ್ಪವೃಕ್ಷಕ್ಕಿಂತಲೂ ಅಧಿಕವಾಗಿ ಫಲಗಳನ್ನು ಕೊಡುತ್ತಿರಲು ಪುನಃ ಆ ಫಲಗಳಿಗಾಗಿ ಅಮರಾವತಿಗೆ ಹೋಗಿ ವ್ಯರ್ಥವಾಗಿ ಶ್ರಮಪಡುವ ಜನರು ಹುಚ್ಚರಲ್ಲದೇ ಮತ್ತೇನು? ।೬೭೦॥ ಸದ್ಗುರುಗಳ ಚರಣತೀರ್ಥವನ್ನು ಸ್ವೀಕರಿಸುವುದರಿಂದ ಪರಮ ಪವಿತ್ರತೆಯು ಪ್ರಾಪ್ತವಾಗುವುದು. ಅಂದಮೇಲೆ ಪವಿತ್ರತೆಗಾಗಿ ತೀರ್ಥಯಾತ್ರಾಗಳಿಗೆ ಹೋಗುವುದರಲ್ಲಿ ಯಾವ ಅರ್ಥವಿದೆ? ।೬೭೧॥

ಕಾ ಈಶ್ವರತ್ವೇ ಪಿತಾ ಪೂಜಿತಾ । ನಿಜಮೋಕ್ಷ ಲಾಭೇ ಆಇತಾ । ತರೀ ಭಜಾವೇ ದೇವಾ ದೇವತಾ । ಕೋಣ್ಯಾ ಅರ್ಥಾ ಸಜ್ಞಾನೀ ।೩೭೨॥ ತೇವೀ ಸ್ವಕರ್ಮಚಿ ಕರಿತಾ । ಲಾಭೇ ಆಪಲೀ ನಿಷ್ಕರ್ಮತಾ । ತೇ ಸ್ವಧರ್ಮಿ ಕಾಮ ಕಲ್ಪಿತಾ । ಜೀವ ನಿಜಸ್ವಾರ್ಥಾ ನಾಡಲೇ ।೩೭೩॥ ನಿರ್ವಿಕಲ್ಪೇ ಸ್ವಧರ್ಮಾಚರಣ । ತ್ಯಾ ನಾಂವ ಮಾಝೇ "ಶುದ್ಧ ಭಜನ" । ತೇಣೇ ಭಜನೇ ಹೋಊನಿ ಪ್ರಸನ್ನ । ಮೀ ವಿವೇಕ-ವೈರಾಗ್ಯ-ಜ್ಞಾನ ಭಕ್ತಾಂಸೀ ದೇ ।೩೭೪॥ ತೇಣೇಚಿ ಜ್ಞಾನೇ ಹೋಯ ಶುದ್ಧ ಮತೀ । ಚಿತ್ತಶುದ್ಧಿ ಮಾಜೀ ಪರಮಭಕ್ತೀ । ತೇ ಭಕ್ತೀನೇ ಮಾಝೀ ಪರಮ ಪ್ರಾಪ್ತೀ । ಭಕ್ತ ಪಾವತೀ ಉದ್ಧವಾ ।೩೭೫॥ ಯಾಲಾಗೀ ನೈರಾಶ್ಯೇ ಜೇ ಸ್ವಧರ್ಮಕರ್ಮ । ತೇಚಿ ಮಾಝೇ ಭಜನ ಪರಮ । ತೇಣೇ ಭಜನೇ ಭಕ್ತೋತ್ತಮ । ಸ್ವಯೇ ಪುರುಷೋತ್ತಮ ಹೋಊನಿ ಠಾಕತೀ ।೩೭೬॥ ಯಾಪರೀ ಸ್ವಧರ್ಮಸ್ಥಿತೀ । ಲಾಭೇ ಆಪುಲೀ ನಿಜಮುಕ್ತೀ । ತೇಚಿ ಮ್ಯಾ ತುಜಪ್ರತೀ । ಯಥಾನಿಗುತೀ ಸಾಂಗಿತಲೀ ।೩೭೭॥

ಯತತ್ತೇಽಭಿಹಿತಂ ಸಾಧೋ ಭವಾನ್ಪೃಚ್ಛತಿ ಯಚ್ಚ ಮಾಮ್ ।
ಯಥಾ ಸ್ವಧರ್ಮಸಂಯುಕ್ತೋ ಭಕ್ತೋ ಮಾಂ ಸಮಿಯಾತ್ಪರಮ್ ।೪೮॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಅಷ್ಟಾದಶೋಽಧ್ಯಾಯಃ ।೧೮॥

ಅರ್ಥ:- ಹೇ ಉದ್ಧವಾ, ನೀನು ನನಗೆ ಪ್ರಶ್ನೆಯನ್ನು ಕೇಳಿದ್ದೆ. ಅದರ ಉತ್ತರವಾಗಿ ನಾನು ಈ ರೀತಿಯಾಗಿ ಹೇಳಿರುವೆನು; ತನ್ನ ಧರ್ಮವನ್ನು ಪಾಲಿಸುವ ಭಕ್ತನು ನನ್ನ ಪರಬ್ರಹ್ಮ ಸ್ವರೂಪಕ್ಕೆ ಮುಟ್ಟುವನು. ಅದು ಯಾವ ಪ್ರಕಾರವಾಗಿ ಎಂಬುದನ್ನು ಹೇಳಿರುವೆನು.

ಉದ್ಧವಾ ಪುಸಿಲೇ ತ್ವಾಂ ಮಜಪ್ರತೀ । ಸ್ವಧರ್ಮೇ ಕೇವೀ ಘಡೇ ಮುಕ್ತೀ । ಭಕ್ತೀನೇ ಪಾವಿಜೇ ನಿಜಮುಕ್ತೀ । ತೇ ಮ್ಯಾ ತುಜಪ್ರತೀ ಸಾಂಗಿತಲೇ ।೩೭೮॥ ಹಾತಾ ಆಲಿಯಾ ಸ್ವಧರ್ಮ । ತತ್ಕಾಳ ನಿರಸೇ ಸ್ವಕರ್ಮ । ಉಡೋನಿ ಜಾಯ ಭವಭ್ರಮ । ಪ್ರಾಪ್ತಿ ಪರಮ ಸ್ವಧರ್ಮೇ ।೩೭೯॥ ಮಾಝಿಯಾ ಪ್ರಾಪ್ತೀಲಾಗೀ ಸ್ವಕರ್ಮ । ನೈರಾಶ್ಯೇ ಆಚಾರಾವಾ ಸ್ವಧರ್ಮ । ಹೇ ಜ್ಯಾಸೀ ಕಳೇ ವರ್ಮ । ತಯಾ ಪುರುಷೋತ್ತಮ ಸದಾ ವಶ್ಯ ।೩೮೦॥ ಸ್ವಧರ್ಮಾಐಸಾ ಸ್ಪರ್ಶಮಣೀ । ಸಾಂಪಡಲ್ಯಾ ನಿರ್ವಿಕಲ್ಪಪಣೇ । ತೋ ಲಾವಿತಾ ದೃಶ್ಯಸ್ಥಾನೀ । ಚಿನ್ಮಾತ್ರ ಸುವರ್ಣೀ ತೇಜ ಉರೀ ।೩೮೧॥ ಸ್ವಧರ್ಮಾಐಸಾ ದಿನಮಣೀ । ನೈರಾಶ್ಯೇ ಉಗವಲಿಯಾ ಸ್ವಭುವನೀ । ತೋ ಅಜ್ಞಾನನಿಶಾ ನಿರಸುನೀ । ಸ್ವಪ್ರಕಾಶಪಣೇ ಸದಾ ವರ್ತೇ ।೩೮೨॥

ಈಶ್ವರ ಭಾವನೆಯಿಂದ ತಂದೆಯ ಪೂಜನೆಯನ್ನು ಮಾಡಿದರೆ ಸಹಜವಾಗಿ ಮೋಕ್ಷವು ಪ್ರಾಪ್ತಿಯಾಗುವುದು. ಅಂದಮೇಲೆ ಸಜ್ಞಾನ ಮನುಷ್ಯರು ದೇವದೇವತೆಗಳ ಭಜನೆಯನ್ನು ಏತಕ್ಕಾಗಿ ಮಾಡಬೇಕು ? ।೩೭೨॥ ಅದರಂತೆ ಸ್ವಧರ್ಮವನ್ನು ಆಚರಿಸುತ್ತಿರಲು ಆಗ ನಿಷ್ಕರ್ಮತೆಯು ಪ್ರಾಪ್ತವಾಗುತ್ತಿರುವುದು. ಆದರೆ ಅದೇ ಸ್ವಧರ್ಮದಲ್ಲಿ ಫಲದ ಇಚ್ಛೆಯನ್ನು ಹಿಡಿದರೆ ಆ ಪ್ರಾಣಿಯು ತನ್ನ ನಿಜವಾದ ಸ್ವಾರ್ಥಕ್ಕೆ ವಂಚಿತನಾಗುವನು ।೩೭೩॥ ನಿರ್ವಿಕಲ್ಪ ಚಿತ್ತದಿಂದ ಸ್ವಧರ್ಮದ ಆಚರಣೆಯನ್ನು ಮಾಡುವುದೆಂದರೆ, ಇದರ ನಾಮವೇ ನನ್ನ ಶುದ್ಧಭಜನೆಯಾಗುವುದು. ಈ ಯಾವ ಭಜನೆಯಿಂದ ನಾನು ಪ್ರಸನ್ನನಾಗಿ ನನ್ನ ಭಕ್ತರಿಗೆ ವಿವೇಕಯುಕ್ತ ವೈರಾಗ್ಯ ಮತ್ತು ಜ್ಞಾನವನ್ನು ಕೊಡುವೆನು ।೩೭೪॥ ಇದೇ ಜ್ಞಾನದಿಂದ ಬುದ್ಧಿಯು ಪವಿತ್ರವಾಗುವುದು. ಚಿತ್ತವು ಶುದ್ಧವಾಗುತ್ತಲೇ ಅದರಲ್ಲಿಯೇ ನನ್ನ ಪರಮ ಭಕ್ತಿಯು ಉತ್ಪನ್ನವಾಗುವುದು. ಹೇ ಉದ್ಧವಾ, ಈ ಭಕ್ತಿಯಿಂದ ಭಕ್ತರಿಗೆ ನನ್ನ ಶ್ರೇಷ್ಠವಾದ ಸ್ವರೂಪದ ಪ್ರಾಪ್ತಿಯಾಗುವುದು ।೩೭೫॥ ಅದಕ್ಕಾಗಿ ಹೇ ಉದ್ಧವಾ, ಫಲದ ಆಶೆಯನ್ನು ಬಿಟ್ಟು ಮಾಡುವ ಸ್ವಧರ್ಮದ ಆಚರಣವೇ ನನ್ನ ಶ್ರೇಷ್ಠವಾದ ಭಜನೆಯಾಗಿರುವುದು. ಈ ಯಾವ ಭಜನೆಯಿಂದ ನನ್ನ ಉತ್ತಮ ಭಕ್ತರು ಸ್ವತಃವೇ ಪುರುಷೋತ್ತಮರಾಗುವರು ।೩೭೬॥ ಇಂತಹ ಸ್ವಧರ್ಮದ ಆಚರಣೆಯಿಂದ ಅನಾಯಾಸವಾಗಿ ಮುಕ್ತಿಯು ಲಭಿಸುವುದು. ಈ ಮಾತನ್ನು ನಾನು ನಿನಗೆ ಸವಿಸ್ತಾರವಾಗಿ ಹೇಳಿರುವೆನು ।೩೭೭॥

ಹೇ ಉದ್ಧವಾ, ಸ್ವಧರ್ಮದಿಂದ ಮುಕ್ತಿಯು ಹೇಗೆ ಲಭಿಸುವುದು? ಎಂದು ನೀನು ನನಗೆ ವಿಚಾರಿಸಿದೆ. ಅದಕ್ಕಾಗಿ ಭಕ್ತಿಯಿಂದ ಮುಕ್ತಿಯು ಪ್ರಾಪ್ತವಾಗುವ ವಿಷಯವನ್ನು ನಾನು ನಿನಗೆ ಸವಿಸ್ತಾರವಾಗಿ ತಿಳಿಸಿರುವೆನು ।೩೭೮॥ ಸ್ವಧರ್ಮವು ಕೈಗೆ ಹತ್ತಲು ಸ್ವಕರ್ಮವು ತತ್ಕಾಲದಲ್ಲಿ ಇಲ್ಲದಾಗುವುದು. ಸಂಸಾರದ ಭ್ರಮವು ಹಾರಿಹೋಗುವುದು. ಸ್ವಧರ್ಮದಿಂದ ಪರಮಪದದ ಪ್ರಾಪ್ತಿಯಾಗುವುದು ।೩೭೯॥ ನನ್ನ ಪ್ರಾಪ್ತಿಗಾಗಿ ಫಲಾಸಕ್ತಿಯನ್ನು ಬಿಟ್ಟುಕೊಟ್ಟು ಸ್ವಧರ್ಮದ ಆಚರಣೆಯನ್ನು ಮಾಡಬೇಕು. ಈ ಯಾವ ಗೂಢರಹಸ್ಯವು ಯಾರಿಗೆ ತಿಳಿಯುವುದೋ, ಆತನಿಗೆ ಪುರುಷೋತ್ತಮನು ಯಾವಾಗಲೂ ವಶನಾಗಿರುವನು ।೩೮೦॥ ಸ್ವಧರ್ಮದಂತಹ ಪರೀಸಮಣಿಯು ನಿರ್ವಿಕಲ್ಪಭಾವದಿಂದ ಪ್ರಾಪ್ತವಾಗಿರಲು, ಅದನ್ನು ದೃಶ್ಯ ಪದಾರ್ಥಗಳಿಗೆ ಸ್ಪರ್ಶ ಮಾಡುತ್ತಲೇ, ಆ ಪದಾರ್ಥವು ಬ್ರಹ್ಮರೂಪ ಸುವರ್ಣವಾಗಿಬಿಡುವುದು ।೩೮೧॥ ಸ್ವಧರ್ಮದಂತಹ ಸೂರ್ಯನು ನಿಷ್ಕಾಮಭಾವದಿಂದ ಅಂತಃಕರಣದಲ್ಲಿ ಉದಯನಾದನೆಂದರೆ, ಆತನು ಅಜ್ಞಾನರೂಪ ರಾತ್ರಿಯನ್ನು ಕಳೆದುಬಿಡುವನು ಮತ್ತು ಸದಾ ಸರ್ವದಾ ಸ್ವಪ್ರಕಾಶದಿಂದ ವರ್ತಿಸುವನು ।೩೮೨॥

ಸ್ವಧರ್ಮಾಐಸೇ ನಿಜಅಮೃತ। ಜೇ ನಿರ್ವಿಕಲ್ಪೇ ಸೇವೂ ಜಾಣತ । ತ್ಯಾಂಸೀ ಜನ್ಮ ಮರಣಾಂಚಾ ಆವರ್ತ । ಮೀ ಶ್ರೀಅನಂತ ಲಾಗೋ ನೇದೀ ।।೮೩।। ಜೇ ಕಾ ಸ್ವಧರ್ಮೀ ವಿಮುಖ । ತ್ಯಾಂಸೀ ಮಾಝೀ ಪ್ರಾಪ್ತಿ ನಾಹೀ ದೇಖ । ಜನ್ಮ ಕೋಟೀ ಪರಮ ದುಃಖ । ಸಕಾಮೇ ಮೂರ್ಖ ಭೋಗಿಲೇ ।।೮೪।। ತ್ಯಾ ಸ್ವಧರ್ಮಾಚೀ ಅತರ್ಕ್ಯ ಗೋಷ್ಟೀ । ನ ಕಳೇ ನೈಷ್ಕರ್ಮ್ಯ ನಿಜದೃಷ್ಟೀ । ಯಾಚಿಲಾಗೀ ಜನ್ಮ ಕೋಟೀ । ಅತಿಸಂಕಟೀ ಜೀವ ಭೋಗೀ ।।೮೫।। ಸ್ವಧರ್ಮೇ ಕರಿತಾ ಸ್ವಕರ್ಮ । ಜೈ ನೈಷ್ಕರ್ಮ್ಯತೇಚೇ ಕಳೇ ವರ್ಮ । ತೈ ವಿಭಾಂಡೂನಿ ಮರಣಜನ್ಮ । ಪರಬ್ರಹ್ಮ ಪಾವತೀ ।।೮೬।। ಏವಂ ಸ್ವಧರ್ಮ ಯಾಪರೀ । ತಾರಕ ಹೋಯ ಸಂಸಾರೀ । ಸ್ವಧರ್ಮಾಚೇ ನಾವೇವರೀ । ತರಲೇ ಭವಸಾಗರೀ ನಿಜಭಕ್ತ ।।೮೭।। ಸಂಸಾರ ತರಲೇ ಹಾ ಬೋಲು ಕುಡಾ । ಸ್ವಧರ್ಮ ಕರಿತಾ ಮಾಝಿಯಾ ಚಾಡಾ । ಹೋಯ ಭವಸಾಗರ ಕೋರಡಾ । ಮೀ ಸಾಂಪಡೇ ಪುಢಾ ನಿಜಾತ್ಮಾ ।।೮೮।। ಐಶೀ ಸ್ವಧರ್ಮಾಚೀ ಥೋರೀ । ನಿಷ್ಕಾಮತೇಚ್ಯಾ ನಿಜಕುಸರೀ । ದೇವೋ ಸಾಂಗೇ ಆವಡೀಭರೀ ।ನಾನಾ ಪರೀ ಪ್ರಬೋಧೇ ।।೮೯।। ಭಕ್ತಿ ಪ್ರಾಧಾನ್ಯ ಭಾಗವತ । ಮುಖ್ಯ ಭಕ್ತೀ ತೇ ಸ್ವಧರ್ಮಯುಕ್ತ । ಯೇಣೇ ಸ್ವಧರ್ಮಭಜನೇ ಸಮಸ್ತ । ಪರಮ ಭಾಗವತ ಉದ್ಧರಲೇ ।।೯೦।। ತ್ಯಾ ಸ್ವಧರ್ಮಕರ್ಮಾಚಾ ಏಕಾಂತ । ನಿಜಭಜನಭಕ್ತೀಚಾ ಭಾವಾರ್ಥ । ಉದ್ಧವಾಸೀ ಶ್ರೀಕೃಷ್ಣನಾಥ । ಸ್ವಯೇ ಸಾಂಗತ ಏಕಾದಶೀ ।।೯೧।। ತ್ಯಾ ಏಕಾದಶಾಚ್ಯಾ ಗೋಷ್ಟೀ । ಸ್ವಧರ್ಮಕರ್ಮಾಚೀ ಕಸವಟೀ । ಏಕಾ ಜನಾರ್ದನಕೃಪಾದೃಷ್ಟೀ । ಟೀಕಾ ಮರಾಠೀ ಹೇ ಕೇಲೀ ।।೯೨।। ಹೇ ಕರಣೇ ಕೇಲೀ ಜನಾರ್ದನೇ । ಮಜ ಅಭಂಗೀ ಘಾತಲೇ ತೇಣೇ । ಶೇಖೀ ಮೀತೂಪಣಾಚೇ ಠಾಣೇ । ಯೇಣೇ ನಿರೂಪಣೇ ಉಡವಿಲೇ ।।೯೩।। ಉಡವಿಲೇ ವಿಷಯೀ ವಿಷಯಪಣ । ಉಡವಲೇ ಭೇದಾಚೇ ಭಾನ । ಉಡವಿಲೇ ಜೀವಶಿವಪಣ । ಜನೀ ಜನಾರ್ದನ ತುಷ್ಟೋನೀ ।।೯೪।। ಜನಾರ್ದನೇ ಜನಕೇ ತೇಣೇ । ಆಮ್ಹಾ ಕೇಲೇ ಪರಬ್ರಹ್ಮ ಖೇಳಣೇ । ಯಾಲಾಗೀ ಸಕಳ ಕ್ರಿಯಾ ತೇಣೇ ಹೋಣೇ । ಸ್ವಧರ್ಮಪಣೇ ಸಹಜೇಚಿ ।।೯೫।। ಸಹಜೇ ಲಾಗಲ್ಯಾ ಸ್ವಧರ್ಮ । ಕರ್ಮಚಿ ಹೋಯ ನಿಷ್ಕರ್ಮ । ಸಂಸಾರ ಹೋಯ ಪರಬ್ರಹ್ಮ । ಹೇ ಕೃಪಾ ಪರಮ ಜನಾರ್ದನೀ ।।೯೬।।

ಸ್ವಧರ್ಮದಂತಹ ಅಮೃತವನ್ನು ಯಾರು ನಿರ್ವಿಕಲ್ಪ ಮನದಿಂದ ಸೇವನೆ ಮಾಡುವುದನ್ನು ತಿಳಿದಿರುವನೋ, ಆತನಿಗೆ ಶ್ರೀಹರಿಯು ಜನ್ಮ ಮರಣದ ತಿರುಗಣೆಯ ಸ್ಪರ್ಶ ಕೂಡ ಆಗಗೊಡಲಾರನು ।।೮೩।। ಆದರೆ ಯಾರು ಸ್ವಧರ್ಮಕ್ಕೆ ವಿಮುಖರಾಗುವರೋ, ಅವರಿಗೆ ನನ್ನ ಪ್ರಾಪ್ತಿಯು ಆಗಲಾರದು. ಆ ಮೂರ್ಖರು ಫಲಗಳ ಆಸಕ್ತಿಯಿಂದ ಕೋಟ್ಯಾವಧಿ ಜನ್ಮ ದುಃಖಗಳನ್ನು ಭೋಗಿಸುತ್ತಿರುವರು ।।೮೪।। ಈ ಯಾವ ಸ್ವಧರ್ಮದ ಪ್ರಭಾವವು ಅತರ್ಕ್ಯವಾಗಿರುವುದು. ಅದರ ನಿಷ್ಕಾಮತೆಯು ಕಣ್ಣಿಗೆ ಎಂದೂ ಕಾಣಿಸುವುದಿಲ್ಲ. ಆದ್ದರಿಂದ ಅಜ್ಞಾನಿ ಜೀವಿಗಳು ಕೋಟಿ ಕೋಟಿ ಪ್ರಕಾರದ ದುಃಖಗಳನ್ನು ಭೋಗಿಸುತ್ತಿರುವರು ।।೮೫।। ಸ್ವಧರ್ಮದಿಂದಲೇ ಸ್ವಕರ್ಮವನ್ನು ಆಚರಿಸುತ್ತಿರಲು ನಿಷ್ಕಾಮತನದ ಮರ್ಮವು ತಿಳಿದರೆ ಮಾತ್ರ ಅದು ಜನ್ಮ ಮರಣದ ಸುತ್ತನ್ನು ತಪ್ಪಿಸುವುದು. ಅವರು ಪರಬ್ರಹ್ಮ ಸ್ವರೂಪಕ್ಕೆ ಪ್ರಾಪ್ತರಾಗುವರು ।।೮೬।। ಈ ಪ್ರಕಾರವಾಗಿ ಸ್ವಧರ್ಮವು ಈ ಸಂಸಾರಕ್ಕೆ ತಾರಕವಾಗಿರುವುದು. ಸ್ವಧರ್ಮರೂಪ ಹಡಗದಿಂದ ನನ್ನ ಅನೇಕ ಭಕ್ತರು ಸಂಸಾರ ಸಾಗರದಿಂದ ದಾಟಿ ಪಾರಾಗಿರುವರು ।।೮೭।। ಸಂಸಾರದಿಂದ ಪಾರಾದರು ಎಂದು ಹೇಳುವುದೂ ಕೂಡ ತಪ್ಪಾಗುವುದು. ಕಾರಣ ನನ್ನ ಪ್ರಾಪ್ತಿಯ ಇಚ್ಛೆಯಿಂದ ಸ್ವಧರ್ಮದ ಆಚರಣೆಯನ್ನು ಮಾಡಲು ಯಾವ ಸಂಸಾರ ಸಾಗರವು ಪೂರ್ಣವಾಗಿ ಒಣಗಿಹೋಗಿರುವುದು. ಪರಮಾತ್ಮನಾದ ನಾನು ಅವರಿಗೆ ಸಹಜವಾಗಿಯೇ ಎದುರಿನಲ್ಲಿಯೇ ಪ್ರಾಪ್ತನಾಗುವೆನು ।।೮೮।। ನಿಷ್ಕಾಮತನದ ಸಹಾಯದಿಂದ ಆಗುವ ಸ್ವಧರ್ಮಾಚರಣೆಯ ಮಹತ್ವವು ದೊಡ್ಡದಾಗಿರುವುದು. ಈ ವಿಷಯಕ್ಕೆ ಶ್ರೀಕೃಷ್ಣನಿಗೆ ಅತಿಶಯವಾದ ಪ್ರೇಮವಿರುವುದರಿಂದ ಆತನು ಸ್ವಧರ್ಮವನ್ನು ನಾನಾ ಪ್ರಕಾರವಾಗಿ ತಿಳಿಸಿ ಹೇಳಿರುವನು ।।೮೯।। ಭಾಗವತವು ಇದು ಭಕ್ತಿಪ್ರಧಾನವಾಗಿರುವುದು. ಅದರಲ್ಲಿನ ಭಕ್ತಿ ಎಂಬುವುದು ಸ್ವಧರ್ಮಯುಕ್ತವಾಗಿದೆ. ಆ ಯಾವ ಸ್ವಧರ್ಮ ಭಜನೆಯಿಂದಲೇ ಅನೇಕ ಶ್ರೇಷ್ಠ ಭಕ್ತರು ನಿಜವಾಗಿಯೂ ಉದ್ಧಾರರಾದರು ।।೯೦।। ಈ ಯಾವ ಸ್ವಧರ್ಮ ಕರ್ಮಗಳಲ್ಲಿನ ರಹಸ್ಯವನ್ನು ಮತ್ತು ಆತ್ಮ ಭಜನೆ, ಭಕ್ತಿಯ ಭಾವಾರ್ಥವನ್ನು ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹನ್ನೊಂದನೆಯ ಸ್ಕಂಧದಲ್ಲಿ ಹೇಳಿರುತ್ತಾನೆ ।।೯೧।। ಈ ಯಾವ ಹನ್ನೊಂದನೆಯ ಸ್ಕಂಧದ ಕಥೆ ಎಂದರೆ ಸ್ವಧರ್ಮದ ಪರೀಕ್ಷೆಯೇ ಆಗಿರುವುದು. ಶ್ರೀಜನಾರ್ದನರ ಕೃಪೆಯಿಂದಲೇ ಏಕನಾಥನು ಇದನ್ನು ಮರಾಠೀ ಭಾಷೆಯಲ್ಲಿ ಭಾವಾರ್ಥ ಬರೆದನು ।।೯೨।। ವಾಸ್ತವಿಕವಾಗಿ ನೋಡಲು ಜನಾರ್ದನ ಸ್ವಾಮಿಯವರೇ ಈ ಕೃತಿಯನ್ನು ಮಾಡಿರುವರು. ಕವಿತೆಯಲ್ಲಿ ನನ್ನ ಹೆಸರನ್ನು ಸೇರಿಸಿರುವರು. ಕೊನೆಯಲ್ಲಿ ಈ ನಿರೂಪಣೆಯಿಂದ ನಾನು ನೀನೆಂಬ ಸ್ಥಳವೇ ಹಾರಿ ಹೋಯಿತು ।।೯೩।। ವಿಷಯಗಳಲ್ಲಿನ ವಿಷಯತ್ವವನ್ನು ಹಾರಿಸಿಬಿಟ್ಟರು. ಭೇದದ ಸ್ಮರಣೆಯನ್ನೂ ಹಾರಿಸಿಬಿಟ್ಟರು. ಜನೀ ಜನಾರ್ದನನು ಸಂತುಷ್ಟನಾಗಿ ಜೀವಶಿವತ್ವವನ್ನು ಹಾರಿಸಿಬಿಟ್ಟರು ।।೯೪।। ಜನಾರ್ದನಸ್ವರೂಪರಾದ ಯಾವ ನಮ್ಮ ಪಿತನು. ಪರಬ್ರಹ್ಮವನ್ನು ನಮ್ಮ ಕೈಯಲ್ಲಿನ ಆಟದಗೊಂಬೆಯನ್ನಾಗಿ ಮಾಡಿಬಿಟ್ಟರು. ಆದ್ದರಿಂದ ಅವರ ಯೋಗದಿಂದ ಆಗುವ ಎಲ್ಲ ಕಾರ್ಯಗಳು ಅವು ತಮ್ಮಷ್ಟಕ್ಕೆ ತಾವೇ ಸ್ವಧರ್ಮರೂಪದಲ್ಲಿ ಸಾಧಿಸುವುವು ।।೯೫।। ಸಹಜವಾಗಿ ಸ್ವಧರ್ಮವು ಸಾಧಿಸಲು ಆಗ ಅದು ಸಹಜವಾಗಿಯೇ ನಿಷ್ಕರ್ಮವಾಗುವುದು. ಸಂಸಾರವೂ ಕೂಡ ಪರಬ್ರಹ್ಮವಾಗುವುದು. ಇದು ಜನಾರ್ದನರ ಮಹತ್ತರ ಕೃಪೆಯಾಗಿರುವುದು ।।೯೬।।

ಯಾಲಾಗೀ ಸಾಂಡೂನಿಯಾ ಏಕಪಣ । ಏಕಾ ಜನಾರ್ದನ ಶರಣ । ಸ್ವಧರ್ಮಕರ್ಮಾಚೇ ನಿರೂಪಣ । ಝಾಲೇ ಸಂಪೂರ್ಣ ತಯಾ ಕೃಪಾ ।೫೯೭॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ ಏಕಾಕಾರಟೀಕಾಯಾಂ ವಾನಪ್ರಸ್ಥ ಸನ್ಯಾಸಧರ್ಮ ನಿರೂಪಣಂ ನಾಮ ಅಷ್ಟದಶೋಧ್ಯಾಯಃ

॥ಶ್ರೀಕೃಷ್ಣಾರ್ಪಣಮಸ್ತು॥

ಆದಕ್ಕಾಗಿ ಏಕನಾಥನು ತನ್ನ ಏಕತ್ವವನ್ನು ಬಿಟ್ಟುಕೊಟ್ಟು ಜನಾರ್ದನರಿಗೆ ಶರಣು ಹೋದನು. ಆದ್ದರಿಂದ ಅವರ ಕೃಪೆಯಿಂದ ಸ್ವಧರ್ಮ-ಕರ್ಮಗಳ ನಿರೂಪಣೆಯು ಸಂಪೂರ್ಣವಾಯಿತು ।೫೯೭॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದಲ್ಲಿನ ಶ್ರೀಕೃಷ್ಣೋದ್ಧವ ಸಂವಾದದ ಏಕನಾಥ ಮಹಾರಾಜರ ಭಾಷ್ಯೆಯ ವಾನಪ್ರಸ್ಥಸನ್ಯಾಸಧರ್ಮನಿರೂಪಣೆಯ ನಾಮದ ಹದಿನೆಂಟನೆಯ ಅಧ್ಯಾಯವು ಸಂಪೂರ್ಣವಾಯಿತು.

॥ಶ್ರೀಕೃಷ್ಣಾರ್ಪಣಮಸ್ತು॥

ಸಾರ್ಥ ಶ್ರೀಏಕನಾಥೀ ಭಾಗವತ

ಹತ್ತೊಂಬತ್ತನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ತ್ರ್ಯಂಬಕಾ । ಬ್ರಹ್ಮಗಿರಿ ನಿವಾಸನಾಯಕಾ । ತ್ರಿಗುಣತ್ರಿಪುರಭೇದಕಾ । ಕಾಮಾಂತಕಾ ಗಿರಿಜೇಶಾ ।೧॥ ತುಝಾ ಅನಾಹತಾಚಾ ಡಮರೂ । ಸರ್ವಶಬ್ದೇ ಕರೀ ಗಜರೂ । ವೇದಾನುವಾದೇ ನಿರಂತರೂ । ತ್ರಿಕಾಂಡೀ ಘೋರೂ ಗರ್ಜತ ।೨॥ ತುಝೇ ಹಾತೀಚೇ ಖಟ್‌ವಾಂಗ । ಕರೀ ಜೀವಾಚಾ ಜೀವಭಂಗ । ಅನಂಗೇಸೀ ಜಾಳೂನಿ ಅಂಗ । ಅಂಗಸಂಗ ತ್ವೈ ದೇಶೀ ।೩॥ ತ್ರಿನಯನಾ ತ್ರ್ಯಂಬಕಲಿಂಗಾ । ತಿಜಪಾಸೋನಿ ಪ್ರವಾಹೇ ಚಿದ್ಗಂಗಾ । ತೇ ಪವಿತ್ರಪಣೇ ಉದ್ಧರೀ ಜಗಾ । ಪ್ರಕಾಶಗರ್ಭಾ ಶಂಕರಾ ।೪॥ ಪ್ರತ್ಯಕ್ಷ ದಿಸತೀ ದೊನ್ಹೀ ಲೋಚನ । ತಿಸರಾ ಗುಪ್ತ ಜ್ಞಾನನಯನ । ಯಾಲಾಗೀ ತೂ ತ್ರಿಲೋಚನ । ನಯನೇವೀಣ ದೀಸಶೀ ।೫॥ ನಿಜಾಂಗೇ ವಾಹಸೀ ಬೋಧಚಂದ್ರ । ಯಾಲಾಗೀ ತೂ ಚಂದ್ರಶೇಖರ । ಚಂದ್ರಸೂರ್ಯಾದಿ ಚರಾಚರ । ತುಝೇನಿ ಸಾಚಾರ ಪ್ರಕಾಶೇ।೬॥ ''ಭವ'' ಯಾ ನಾಂವಾಚೀ ಖ್ಯಾತೀ । ಭವಪ್ರಕಾಶಕ ತುಝೀ ಚಿಚ್ಛಕ್ತೀ । ತೂಂಚಿ ವಿಷ್ಣು ಪ್ರಜಾಪತೀ । ರುದ್ರ ತೂ ಅಂತೀ ಸಂಹರ್ತಾ ।೭॥ ಮೋಡೂನಿಯಾ ನಾಮರೂಪಮುದ್ರಾ । ಜೀವ ಆಣೇಶೀ ಏಕಾಕಾರಾ । ಅತ್ಯಂತ ಪ್ರಳಯೀಂಚ್ಯಾ ಪ್ರಳಯರುದ್ರಾ । ಚಿತ್ಸಮುದ್ರಾ ಶಿವರೂಪಾ ।೮॥ ಶಿವ ಶಿವ ಜೇ ಗುರುರಾಯಾ । ನಿಜಭಾವೇ ಲಾಗತಾ ಪಾಯಾ । ತಂವ ಗುರುಶಿಷ್ಯತ್ವ ಗೇಲೇ ಲಯಾ । ದಾವೂನಿಯಾ ನಿಜರೂಪ ।೯॥ ತೇ ನಿಜರೂಪ ದೇಖತಾ ದೃಷ್ಟೀ । ಕೈಚಾ ಜೀವ ಕೈಚೀ ಸೃಷ್ಟೀ । ನಿಮಾಲೀ ತ್ರಿಗುಣೇಸೀ ತ್ರಿಪುಟೀ । ಪಡಲೀ ಮಿಠೀ ಸ್ವಾನಂದೀ।೧೦॥ ತ್ಯಾ ಸ್ವಾನಂದಾಚೇ ಉದ್ಗಾರ । ಸಾಂವರತಾ ನಾವರತೀ ಥೋರ । ತ್ಯಾ ಸ್ವಾನಂದಾಚೇ ನಿಜಸಾರ । ಸತ್ಯಸಾಚಾರ ಏಕಾದಶ ।೧೧॥

ಹೇ ಓಂಕಾರರೂಪ ಸದ್ಗುರುವೇ, ಹೇ ತ್ರ್ಯಂಬಕನೇ, ಹೇ ಬ್ರಹ್ಮಗಿರಿಪರ್ವತದಲ್ಲಿ ವಾಸಿಸುವವನೇ, ಹೇ ತ್ರಿಗುಣರೂಪ ತ್ರಿಪುರರ ಭೇದಕನೇ, ಹೇ ಕಾಮಾಂತಕಾ ಗಿರಿಜೇಶನೇ, ನಿನಗೆ ನನ್ನ ನಮಸ್ಕಾರವು ।೧॥ ನಿನ್ನ ಅನುಹತಶಬ್ದರೂಪ ಡಮರವು ಸರ್ವತ್ರವೂ ಗರ್ಜಿಸುವುದು ಮತ್ತು ನಿರಂತರವಾಗಿ ವೇದಾನುವಾದದಿಂದ ಕರ್ಮ, ಜ್ಞಾನ ಮತ್ತು ಭಕ್ತಿ ಈ ಮೂರು ಕಾಂಡಗಳ ರೂಪದಿಂದ ಗರ್ಜನೆಯನ್ನು ಮಾಡುತ್ತಿರುವುದು ।೨॥ ನಿನ್ನ ಕೈಯಲ್ಲಿನ ಖಟ್‌ವಾಂಗ ಆಯುಧವು ಜೀವದ ಜೀವತ್ವವನ್ನು ನಾಶ ಮಾಡುವುದು. ನೀನು ಜೀವದ ವಿಷಯವಾಸನೆಸಹ ದೇಹಭಾವವನ್ನು ಇಲ್ಲದಾಗಿ ಮಾಡಿ ತದನಂತರ ಆತನಿಗೆ ಶಬ್ದರೂಪದಲ್ಲಿ ಕೂಡಿಸಿಕೊಳ್ಳುವೆ ।೩॥ ಹೇ ತ್ರಿನಯನನೇ, ತ್ರ್ಯಂಬಕಲಿಂಗನೇ, ಚಿತ್‌ಪ್ರಕಾಶಗರ್ಭಾ ಶಂಕರನೇ, ನಿನ್ನಿಂದ ಚಿದ್‌ಗಂಗೆಯ ಪ್ರವಾಹವು ಹರಿಯುತ್ತಿರುವುದು ಮತ್ತು ಆ ಪ್ರವಾಹವು ಪವಿತ್ರತೆಯಿಂದ ಸಂಪೂರ್ಣ ಜಗತ್ತನ್ನು ಪಾವನಗೊಳಿಸುವುದು ।೪॥ ನಿನ್ನ ಎರಡು ನೇತ್ರಗಳು ಪ್ರತ್ಯಕ್ಷವಾಗಿ ಕಾಣುವುವು. ಆದರೆ ಮೂರನೆಯ ನೇತ್ರವು ಗುಪ್ತವಾಗಿರುವುದು. ಆದ್ದರಿಂದ ನಿನಗೆ ತ್ರಿನಯನಾ ಎಂದು ಹೇಳುವರು. ಇಂದ್ರಿಯಗಳಿಲ್ಲದೇ ನಿನ್ನ ಜ್ಞಾನವಾಗುವುದು ।೫॥ ನೀನು ನಿನ್ನ ಮಸ್ತಕದಮೇಲೆ ಬೋಧರೂಪ ಚಂದ್ರನನ್ನು ಧರಿಸಿರುವೆ. ಆದ್ದರಿಂದ ನಿನಗೆ ಚಂದ್ರಶೇಖರಾ ಎಂದು ಕರೆಯುವರು. ನಿಜವಾಗಿಯೂ ಚಂದ್ರಸೂರ್ಯಾದಿ ಸರ್ವ ಜಗತ್ತು ನಿನ್ನಿಂದಲೇ ಪ್ರಕಾಶಿತವಾಗಿರುವುವು ।೬॥ ''ಭವ'' ನಾಮದ ಬಹು ಖ್ಯಾತಿ ಇರುವುದು. ನಿನ್ನ ಚಿತ್‌ಶಕ್ತಿಯು ಈ ಯಾವ ಭವಕ್ಕೆ ಪ್ರಕಾಶಿತಗೊಳಿಸುವುದು. ನೀನೇ ವಿಷ್ಣು, ಬ್ರಹ್ಮದೇವ ಮತ್ತು ಸಂಹಾರಕರ್ತ ರುದ್ರನಾಗಿರುವೆ ।೭॥ ನೀನು ಜೀವದ ನಾಮರೂಪ ಆಕಾರವನ್ನು ಮುರಿದು ಆತನಿಗೆ ಆತ್ಮರೂಪನಾಗಿ ಮಾಡುವೆ. ನೀನು ಪ್ರಳಯ ಕಾಲದಲ್ಲಿ ಪ್ರಳಯವನ್ನು ಮಾಡುವ ರುದ್ರನಾಗಿರುವೆ. ಚಿತ್‌ಸಾಗರ ಶಿವರೂಪನಾಗಿರುವೆ ।೮॥ ಹೇ ಗುರುರಾಯನೇ, ಶಿವ ಶಿವ ಎನ್ನುತ್ತ ಅತ್ಯಂತ ಭಾವಿಕತನದಿಂದ ನಿನ್ನ ಚರಣ ಕಮಲಗಳನ್ನು ಹಿಡಿಯುತ್ತಲೇ ನೀನು ಆತ್ಮಸ್ವರೂಪವನ್ನು ತೋರಿಸುವೆ. ಆದ್ದರಿಂದ ಗುರು-ಶಿಷ್ಯ ಎಂಬ ಈ ಭಾವನೆಯೇ ಇಲ್ಲದಾಗಿ ಬಿಡುವುದು ।೯॥ ನಿನ್ನ ಆತ್ಮರೂಪದ ಅನುಭವವು ಒಮ್ಮೆ ಬಂದ ಮೇಲೆ ಎಲ್ಲಿಯ ಜೀವವು? ಎಲ್ಲಿಯ ಸೃಷ್ಟಿ? ಮೂರುಗುಣಗಳ ಸಮೇತವಾಗಿ ತ್ರಿಪುಟಿಯು ನಾಶವಾಗಿ ಸ್ವಾನಂದದಲ್ಲಿ ತೆಕ್ಕೆಬೀಳುವುದು ।೧೦॥ ಆ ಯಾವ ಸ್ವಾನಂದದ ಉದ್ಗಾರವನ್ನು ಎಷ್ಟು ಪ್ರಯತ್ನಿಸಿದರೂ ಅದನ್ನು ತಡೆಯುವುದಾಗುವುದಿಲ್ಲ. ಈ ಏಕಾದಶಸ್ಕಂಧವೆಂದರೆ ಆ ಯಾವ ಸ್ವಾನಂದದ ಸಾರವಾಗಿರುವುದು ।೧೧॥

ತ್ಯಾಹೀಮಾಜೀ ಅತಿಗಹನ । ಸುಖಸ್ವಾನಂದನಿರೂಪಣ । ತೋ ಹಾ ಏಕುಣಿಸಾವಾ ಅಧ್ಯಾಯ ಜಾಣ । ಪರಮ ಕಾರಣ ಶಾಸ್ತ್ರಾರ್ಥೀ॥೧೨॥ ಜೇ ಐಕತಾ ನಿರೂಪಣ । ಪರಮಾನಂದ ಉಥಳೇ ಜಾಣ । ಏಕಾ ವಿನವೀ ಜನಾರ್ದನ । ಶ್ರೋತಾ ಅವಧಾನ ಮಜ ದ್ಯಾವೇ ॥೧೩॥ ಸತ್ರಾವೇ ಅಠರಾವೇ ಅಧ್ಯಾಯಾಂಪ್ರತೀ । ಸ್ವಧರ್ಮಕರ್ಮೇ ಬ್ರಹ್ಮಪ್ರಾಪ್ತೀ । ವರ್ಣಾಶ್ರಮಸ್ಥಿತಿಗತೀ । ಉದ್ಧವಾ ಪ್ರತೀ ಸಾಂಗೀತಲೀ ॥೧೪॥ ಏಕುಣಿಸಾವೇ ಅಧ್ಯಾಯೀ ಜಾಣ । ಜೇಣೇ ಜ್ಞಾನೇ ಸಾಧಿಲೇ ನಿಜಜ್ಞಾನ । ತ್ಯಾ ಜ್ಞಾನಾಚೇ ತ್ಯಾಗಲಕ್ಷಣ। ಸ್ವಯೇ ಶ್ರೀಕೃಷ್ಣ ಸಾಂಗತ ॥೧೫॥ ಕರ್ಮ-ಕರ್ತವ್ಯತಾ-ಕಾರಣ । ಜೀವನ್ಮುಕ್ತಾ ಸೀ ನಾಹೀ ಜಾಣ । ಉದ್ಧವಾಚೇ ಯಮಾದಿ ಪ್ರಶ್ನ । ಹೇಹೀ ಶ್ರೀಕೃಷ್ಣ ಸಾಂಗೇಲ ॥೧೬॥ ಶಾಸ್ತ್ರಯುಕ್ತ ಪಾಂಡಿತ್ಯಜ್ಞಾನ । ಪ್ರಪಂಚಾಚೇ ಮಿಥ್ಯಾ ನಿರೂಪಣ । ತೇ ''ಅನುಮಾನಿಕ'' ಪುಸ್ತಕಜ್ಞಾನ । ಸತ್ಯಪಣ ತ್ಯಾ ನಾಹೀ ॥೧೭॥ ಪೂರ್ವೇ ಆಹೇ ಮಾರ್ಝೇ ಗಮನ । ಹೇ ಪೂರ್ವಿಲ ಶುದ್ಧ ಸ್ಮರಣ । ಪರೀ ದಿಗ್ಭ್ರಮ ಪಡಿಲ್ಯಾ ಜಾಣ। ಪಶ್ಚಿಮೇ ಆಪಣ ಪೂರ್ವ ಮಾನೀ ॥೧೮॥ ತೈಸೇ ಶಾಬ್ದಿಕ ಶಾಸ್ತ್ರಜ್ಞಾನ । ಬೋಲೇ ಆನ ಕರೀ ಆನ । ತೇಣೇ ನವ್ಹೇ ಸಮಾಧಾನ । ಸರ್ವಥಾ ಜಾಣ ಸಾಧಕಾ ॥೧೯॥ ಜೇವೀ ಕಾ ದಿಗ್ಭ್ರಮ ಮೋಡೇ । ತೈ ಪೂರ್ವೇಚಾ ಚಾಲೇ ಪೂರ್ವೇಕಡೇ । ತೇವೀ ಅಪರೋಕ್ಷಜ್ಞಾನ ಜೈ ಜೋಡೇ । ತೈ ಸಾಧಕ ಪಡೇ ಸ್ವಾನಂದೀ ॥೨೦॥ ಜೇ ಜೇ ಐಕೇ ವೇದಾಂತಶ್ರವಣ । ತೇ ಅಂಗೇ ಹೋತ ಜಾಣ ಆಪಣ । ಹೇ ಅಪರೋಕ್ಷಾಚೇ ಲಕ್ಷಣ। ಸತ್ಯತ್ವೇ ಜಾಣ ಅತಿಶುದ್ಧ ॥೨೧॥ ಐಸೇ ನವ್ಹತಾ ಅಪರೋಕ್ಷಜ್ಞಾನ। ಸಾಂಡೂನಯೇ ಶ್ರವಣಮನನ। ಅವಶ್ಯ ಕರಾವೇ ಸಾಧನ। ಪ್ರತ್ಯಗಾವೃತ್ತೀ ಜಾಣ ಅತ್ಯಾದರೇ॥೨೨॥ ಝಾಲಿಯಾ ಅಪರೋಕ್ಷಜ್ಞಾನ । ಪ್ರಪಂಚಾಚೇ ಮಿಥ್ಯಾ ಭಾನ। ವಿಷಯಾಂಸೀ ಪಡಲೇ ಶೂನ್ಯ। ಕಲ್ಪನಾ ಜಾಣ ನಿಮಾಲೀ॥೨೩॥ ತೇಣೇಚಿ ಪುರುಷೇ ಆಪಣ। ತ್ಯಾಗಾವೇ ಗಾ ಜ್ಞಾನಸಾಧನ। ಹೇಚಿ ನಿರೂಪಣೀ ನಿರೂಪಣ । ದೇವ ಸಂಪೂರ್ಣ ಸಾಂಗತ ॥೨೪॥

ಶ್ರೀಭಗವಾನುವಾಚ :-

ಯೋ ವಿದ್ಯಾಶ್ರುತಸಂಪನ್ನ ಆತ್ಮವಾನ್ನಾನುಮಾನಿಕಃ । ಮಾಯಾಮಾತ್ರಮಿದಂ ಜ್ಞಾತ್ವಾ ಜ್ಞಾನಂ ಚ ಮಯೀ ಸನ್ಯಸೇತ್ ॥೧॥

ಅರ್ಥ:- ಶ್ರೀಕೃಷ್ಣನು ನುಡಿದನು; ಹೇ ಉದ್ಧವಾ ಯಾವನು ಉಪನಿಷದ್‌ಗಳ ಶಾಸ್ತ್ರಗಳ ಮನನ ಮತ್ತು ನಿಧಿಧ್ಯಾಸ ಮುಖಾಂತರವಾಗಿ ಸಾಕ್ಷಾತ್ಕಾರವನ್ನು ಮಾಡಿಕೊಂಡಿರುವನೋ, ಯಾವನು ಬ್ರಹ್ಮನಿಷ್ಠನಾಗಿರುವನೋ, ಯಾವನು ಕೇವಲ ಪರೋಕ್ಷ ಜ್ಞಾನಿಯಾಗಿರುವುದಿಲ್ಲವೋ, ಆತನು ಈ ದ್ವೈತ ಮತ್ತು ಅದರ ನಿವೃತ್ತಿಯ ಸಾಧನೆಗಳು ನನ್ನಲ್ಲಿ ಮಾಯಾ ಮಾತ್ರ ಅಂದರೆ ಕಲ್ಪಿತವಾಗಿವೆ ಎಂದು ತಿಳಿದು ಜ್ಞಾನ ಮತ್ತು ಜ್ಞಾನದ ಸಾಧನೆಗಳ ತ್ಯಾಗವನ್ನು ಮಾಡುವನು.

ಅದರಲ್ಲಿ ಅತಿಶಯ ಗಹನವಾದ ಈ ಯಾವ ಸ್ವಾನಂದಸುಖದ ನಿರೂಪಣೆಯೇ ಈ ಹತ್ತೊಂಬತ್ತನೆಯ ಅಧ್ಯಾಯವಾಗಿರುವುದು. ಅದು ಶಾಸ್ತ್ರಪ್ರಮಾಣಗಳಿಂದ ಸಿದ್ಧವಾಗಿರುವುದು ॥೧೨॥ ಈ ನಿರೂಪಣೆಯನ್ನು ಕೇಳುತ್ತಲೇ ಪರಮಾನಂದವು ಉಕ್ಕಿಬರುವುದು. ಅದಕ್ಕಾಗಿ ಏಕಾಜನಾರ್ದನನು ವಿನಂತಿ ಮಾಡುವುದೇನೆಂದರೆ, ಶ್ರೋತೃಗಳವರು ಈಗ ನನ್ನತ್ತ ಏಕಾಗ್ರತೆಯಿಂದ ಲಕ್ಷವನ್ನು ಕೊಡಬೇಕು ॥೧೩॥ ಹದಿನೇಳನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ಸ್ವಧರ್ಮಕರ್ಮಗಳಿಂದ ಪರಬ್ರಹ್ಮಪ್ರಾಪ್ತಿಯಾಗುವುದೆಂದು ಹೇಳುತ್ತ ವರ್ಣಾಶ್ರಮಗಳ ಸರ್ವ ಪ್ರಕಾರಗಳನ್ನು ಹೇಳಲಾಯಿತು ॥೧೪॥ ಈಗ ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಯಾವ ಜ್ಞಾನದಿಂದ ಆತ್ಮಪ್ರಾಪ್ತಿಯಾಗುವುದೋ, ಆ ಜ್ಞಾನದ ತ್ಯಾಗವನ್ನು ಹೇಗೆ ಮಾಡಬೇಕೆಂಬ ಲಕ್ಷಣವನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೧೫॥ ಜೀವನ್ಮುಕ್ತ ಪುರುಷನಿಗೆ ಕರ್ಮಕರ್ತವ್ಯಗಳ ಆವಶ್ಯಕತೆಯು ಇರುವುದಿಲ್ಲ. ಉದ್ಧವನು ಕೇಳಿದ ಯಮಾದಿ ಪ್ರಶ್ನೆಗಳ ಉತ್ತರವನ್ನು ಶ್ರೀಕೃಷ್ಣನು ಇದೇ ಅಧ್ಯಾಯದಲ್ಲಿ ಕೊಡುತ್ತಿರುವನು ॥೧೬॥ ಶಾಸ್ತ್ರಯುಕ್ತ ಪಂಡಿತರ ಜ್ಞಾನವು ಅಥವಾ ಅವರು ಪ್ರಪಂಚದ ಮಿಥ್ಯತ್ವವನ್ನು ಮಾಡಿರುವ ವರ್ಣನೆಯು ಇದು ಕೇವಲ ಅನುಮಾನಿಕ ಮತ್ತು ಪುಸ್ತಕಜ್ಞಾನವಾಗಿರುವುದು. ಅದರಲ್ಲಿ ಮೂಲತಃ ಸತ್ಯವಿರುವುದಿಲ್ಲ ॥೧೭॥ ತನಗೆ ಪೂರ್ವದಿಕ್ಕಿನತ್ತ ಹೋಗಬೇಕಾಗಿರುವ ಶುದ್ಧಸ್ಮರಣೆಯು ಇದ್ದರೂ ಕೂಡ ದಿಗ್‌ಭ್ರಮೆಯಿಂದ ಆತನು ಪಶ್ಚಿಮದಿಕ್ಕಿಗೆ ಪೂರ್ವದಿಕ್ಕು ಎಂದು ತಿಳಿಯುವನು ॥೧೮॥ ಅದರಂತೆ ಈ ಶಾಬ್ದಿಕ ಶಾಸ್ತ್ರಿಯ ಜ್ಞಾನವಾಗಿರುವುದು. ಆತನು ಹೇಳುವುದೊಂದು ಮಾಡುವುದು ಇನ್ನೊಂದು. ಆದ್ದರಿಂದ ಸಾಧಕನಿಗೆ ಸಮಾಧಾನವು ಲಭಿಸುವುದಿಲ್ಲ ॥೧೯॥ ಆಗಿರುವ ಅದೇ ದಿಗ್‌ಭ್ರಮೆಯು ಇಲ್ಲದಾಗಲು, ಆಗ ಪೂರ್ವದಲ್ಲಿ ನಡೆಯುತ್ತಿರುವ ಮನುಷ್ಯನು ಮೊದಲಿನಂತೆಯೇ ಪೂರ್ವದಿಕ್ಕಿನತ್ತಲೇ ನಡೆಯುತ್ತಿರುವನು. ಅದರಂತೆ ಅನುಭವ ಜ್ಞಾನವು ಪ್ರಾಪ್ತವಾಯಿತೆಂದರೆ ಸಾಧಕನಿಗೆ ಪರಮಾನಂದದ ಲಾಭವು ಪ್ರಾಪ್ತವಾಗುವುದು ॥೨೦॥ ಆತನು ಯಾವ ಯಾವ ವೇದಾಂತದ ಶ್ರವಣವನ್ನು ಮಾಡುವನೋ, ಅದೆಲ್ಲವನ್ನು ಸ್ವತಃ ತಾನೇ ಆಗುವನು. ಹೀಗೆ ಈ ಅನುಭವಜನ್ಯ ಜ್ಞಾನವು ಅತಿಶುದ್ಧವಾಗಿರುವುದು. ಇದನ್ನು ಸತ್ಯವೆಂದು ತಿಳಿ ॥೨೧॥ ಇಂತಹ ಅನುಭವಿಕ ಜ್ಞಾನವು ಪ್ರಾಪ್ತವಾಗುವವರೆಗೂ ಶ್ರವಣ ಮತ್ತು ಮನನಗಳನ್ನು ಬಿಡಕೂಡದು. ಇಷ್ಟೇ ಅಲ್ಲ, ಆತ್ಮಾನುಸಂಧಾನದ ಅಭ್ಯಾಸವನ್ನು ಪುನಃ ಪುನಃ ಮಾಡುತ್ತಿರಬೇಕು ॥೨೨॥ ಅಪರೋಕ್ಷ ಜ್ಞಾನವು ಪ್ರಾಪ್ತವಾಯಿತೆಂದರೆ ಆಗ ಪ್ರಪಂಚದ ಜ್ಞಾನವು ಸುಳ್ಳಾಗಿ ತೋರುತ್ತಿರುವುದು. ವಿಷಯಗಳ ಆಸಕ್ತಿಯು ಇಲ್ಲದಾಗಿಬಿಡುವುದು ಮತ್ತು ಕಲ್ಪನೆಗಳೂ ಕೂಡ ಕರಗಿಹೋಗುವುವು ॥೨೩॥ ಇಂತಹ ಅವಸ್ಥೆಗೆ ಯಾವ ಸಾಧಕನು ತಲುಪಿಕೊಂಡಿರುವನೋ, ಆತನು ಜ್ಞಾನಸಾಧನೆಯ ತ್ಯಾಗವನ್ನು ಮಾಡಬೇಕು. ಇದರ ಸವಿಸ್ತಾರವಾದ ನಿರೂಪಣೆಯನ್ನು ಶ್ರೀಕೃಷ್ಣನು ಮಾಡುತ್ತಿರುವನು ॥೨೪॥

ವೇದಶಾಸ್ತ್ರಾರ್ಥೀ ಪರಿನಿಷ್ಠಿತ । ಶ್ರವಣಮನನ ಅಭ್ಯಾಸಯುಕ್ತ । ಜ್ಯಾಸೀ ಬ್ರಹ್ಮವಿದ್ಯಾ ಪ್ರಾಪ್ತ । ಸುನಿಶ್ಚಿತ ಸ್ವಾನುಭಾವೇ ।೨೫।। ತೋಚಿ ಅನುಭವ ಐಸಾ । ದೋರಾಅಂಗೀ ಸರ್ಪು ಜೈಸಾ । ನ ಮಾರಿತಾ ನಾಶೇ ಆಪೈಸಾ । ಭವಭ್ರಮ ತೈಸಾ ತ್ಯಾ ನಾಹೀ ।೨೬।। ಜೇವೀ ಕಾ ನಟಾಚೇ ರಾವೋ ರಾಣೇ । ದೋಘೇ ಖೇಳತೀ ಲಟಿಕೇಪಣೇ । ತೇವೀ ಪ್ರಕೃತಿ ಪುರುಷ ಉಭವಣೇ । ಮಿಥ್ಯಾಪಣೇ ಜೋ ಜಾಣೇ ।೨೭।। ಜೈಶೀ ಭಿಂತೀಮಾಜೇ ನಾನಾಕಾರ । ಚಿತ್ರೇ ಲಿಹಿಲೀ ವಿಚಿತ್ರ । ತೇ ಭಿಂತೀಚಿ ಏಕ ಸಾಚಾರ । ತೇವೀ ಐಕ್ಯೇ ಚರಾಚರ ಜೋ ದೇಖೇ ।೨೮।। ಸ್ವಪ್ನೀಚೇ ನಾನಾ ಕರ್ಮೇ ಜಾಣ । ತ್ಯಾಚೇ ಜಾಗೃತೀ ನವ್ಹೇ ಬಂಧನ । ತೇವೀ ಮಿಥ್ಯಾ ನಿಜಕರ್ಮಾಚರಣ । ಜೀವಿತ್ವೇಸೀ ಪ್ರಾಣ ಜೋ ದೇಖೇ ।।೨೯।। ಐಶೀ ಸಾಚಾರ ಜ್ಯಾಚೀ ಸ್ಥಿತೀ । ತ್ಯಾ ನಾಂವ ಶುದ್ಧ ''ಆತ್ಮಪ್ರಾಪ್ತೀ''। ''ನಿಜಾನುಭವ'' ತ್ಯಾತೇ ಮ್ಹಣತೀ । ಹೇ ಜಾಣ ನಿಶ್ಚಿತೀ ಉದ್ಧವಾ ।೩೦।। ಆಣಿಕ ಏಕ ತೇಥೀಚೇ ಖೂಣ । ''ವಿಷಯಾವೀಣ ಸ್ವಾನಂದ ಪೂರ್ಣ'' । ಹೇ ಅನುಭವಾಚೇ ಮುಖ್ಯ ಲಕ್ಷಣ । ಸತ್ಯ ಜಾಣ ಸಾತ್ವತಾ ।೩೧।। ಐಸಾ ಅನುಭವ ನಸತಾ ದೇಖ । ಕೇವಳ ಜ್ಞಾನ ಜೇ ಶಾಬ್ದಿಕ । ತ್ಯಾತೇ ಮ್ಹಣಿಜೇ ''ಅನುಮಾನಿಕ'' । ಜಾಣ ನಿಷ್ಟಂಕ ನಿಜಭಕ್ತಾ ।।೩೨।। ಜ್ಯಾಚ್ಯಾ ಅನುಭವಾಭೀತರೀ । ನಾಹೀ ಅನುಮಾನಾಸೀ ಉರೀ । ಜೋ ಅಪರೋಕ್ಷಸಾಕ್ಷಾತ್ಕಾರೀ । ನಿರಂತರೀ ನಾಂದತ ।೩೩।। ಐಸಾ ಜೋ ಪುರುಷ ಜಾಣ । ತೇಣೇ ಜ್ಞಾನಾಚೇ ಸಾಧನ । ಆಣೇ ವೃತ್ತಿರೂಪ ಜೇ ಜ್ಞಾನ । ತೇಹೀ ಆಪಣ ತ್ಯಾಗಾವೇ ।೩೪।। ತೇ ನ ತ್ಯಾಗಿತಾ ಲವಲಾಹೇ । ಸಹಜಚಿ ತ್ಯಾಚಾ ತ್ಯಾಗ ಹೋಯೇ । ಜೇವೀ ಸೂರ್ಯೋದಯೀ ಪಾಹೇ । ಸಚಂದ್ರ ತೇಜ ಜಾಯೇ ತಾರಾಂಗಣಾಚೇ ।೩೫।। ಜೇವೀ ಹನುಮಂತ ದೇಖೋನಿ ಯೇತಾ । ನವಚಂಡೀ ಪಳೇ ತತ್ತ್ವತಾ । ಮಾ ರಾಹಾವಯಾ ಯೇರಾ ಭೂತಾ । ಉರೀ ಸರ್ವಥಾ ಉರೇನಾ ।೩೬।। ತೇವೀ ಮಾಝೇ ಸಾಕ್ಷಾತ್ಕಾರೀ । ತ್ಯಾಸಿ ಬದ್ಧತಾ ನಾಹೀ ಖರೀ । ಮಾ ಜ್ಞಾನ ತಿಯೇಚೇ ನಿವೃತ್ತೀವರೀ । ಕೈಶಾಪರೀ ರಾಹೇಲ ।೩೭।। ಮಾಝಿಯಾ ಅನುಭವಾಚ್ಯಾ ಠಾಯೀ । ಬಂಧಮೋಕ್ಷ ಮಿಥ್ಯಾ ಪಾಹೀ । ತೇಥ ಸಾಧನಜ್ಞಾನಾಚಾ ಕಾಂಹೀ । ಉಪೇಗು ನಾಹೀ ಉದ್ಧವಾ ।೩೮।।

ಪರಮಾತ್ಮಸ್ವರೂಪಾಚ್ಯಾ ಠಾಯೀ । ಬಂಧಮೋಕ್ಷ

ವೇದಶಾಸ್ತ್ರಗಳಲ್ಲಿ ಯಾವನು ನಿಪುಣನಾಗಿ ಶ್ರವಣ, ಮನನ, ಅಭ್ಯಾಸದಲ್ಲಿ ಕೂಡಿಕೊಂಡಿರುವನೋ, ಆತನಿಗೆ ಬ್ರಹ್ಮವಿದ್ಯೆಯು ಪ್ರಾಪ್ತವಾಗುವುದು. ಆತನು ಸ್ವಾನುಭವದಿಂದ ನಿಶ್ಚಿತನಾಗುವನು ।೨೫।। ಆ ಅನುಭವವು ಹೇಗಿದೆ ಎಂದರೆ, ಹಗ್ಗದಲ್ಲಿನ ಸರ್ಪದ ಭಾಸವು ಅದನ್ನು ಕೊಲ್ಲದೇ ತನ್ನಷ್ಟಕ್ಕೆ ತಾನೇ ನಾಶವಾಗುವುದು. ಅದರಂತೆ ಆತನ ಭವಭ್ರಮವು ಇಲ್ಲದಾಗುವುದು ।೨೬।। ಅಥವಾ ನಾಟಕದಲ್ಲಿನ ರಾಜಾ-ರಾಣೀ ಪಾತ್ರಧಾರಿಗಳಿಬ್ಬರೂ ಮಿಥ್ಯೆಯಾಗಿರುವರು. ಆದರೆ ಅವರು ರಾಜಾ,ರಾಣಿಯರ ಭಾವನೆಯನ್ನು ತರುತ್ತಿರುವರು. ಅದರಂತೆ ಪ್ರಕೃತಿ-ಪುರುಷ ಈ ಎರಡರ ಸ್ಥಾಪನೆಯು ಸುಳ್ಳಾಗಿರುವುದೆಂದು ಆತನು ತಿಳಿದಿರುವನು ।೨೭।। ಅಥವಾ ಗೋಡೆಯ ಮೇಲೆ ಅನೇಕ ಪ್ರಕಾರಗಳ ಚಿತ್ರವಿಚಿತ್ರ ರಂಗುರಂಗಿನ ಚಿತ್ರಗಳನ್ನು ತಗೆದಿರುವುದು. ವಾಸ್ತವಿಕವಾಗಿ ಗೋಡೆಯು ಮಾತ್ರ ಒಂದೇ ಇರುವುದು. ಅದರಂತೆಯೇ ಈತನು ಈ ಯಾವ ಸರ್ವ ಚರಾಚರ ಸೃಷ್ಟಿಯಲ್ಲಿ ಐಕ್ಯನಾಗುತ್ತಿರುವನು ।೨೮।। ಇಲ್ಲವೇ ಸ್ವಪ್ನದಲ್ಲಿ ಮಾಡಿರುವ ಅನೇಕ ಪ್ರಕಾರಗಳ ಕರ್ಮಗಳು ಎಚ್ಚರಾದ ಮೇಲೆ ಅವು ಬದ್ಧನನ್ನಾಗಿ ಮಾಡಲು ಶಕ್ಯವಿಲ್ಲ. ಅದರಂತೆ ಜೀವನಾದ ನಾನು ಇಂತಹ ಕರ್ಮಗಳನ್ನು ಮಾಡುತ್ತಿರುವೆನು ಎಂದು ಈತನು ತಿಳಿಯುವುದಿಲ್ಲ. ಆದ್ದರಿಂದ ಆ ಕರ್ಮಗಳಿಂದ ಈತನು ಎಂದಿಗೂ ಬದ್ಧನಾಗುವುದಿಲ್ಲ ।೨೯।। ಯಾವನು ಇಂತಹ ಸ್ಥಿತಿಗೆ ಮುಟ್ಟಿಕೊಳ್ಳುವನೋ, ಆತನಿಗೆ ಮಾತ್ರ ನಿಜವಾಗಿ ಆತ್ಮಪ್ರಚೀತಿಯು ಪ್ರಾಪ್ತವಾಗುವುದು. ಹೇ ಉದ್ಧವಾ, ಅದಕ್ಕೆ ನಿರುಪಾಧಿಕ ಆನಂದ ಎಂದು ಹೇಳುವರು ।೩೦।। ಆ ಯಾವ ಅವಸ್ಥೆಗೆ ಮುಟ್ಟಿಕೊಳ್ಳಲು ಬೇರೆ ಇನ್ನೊಂದು ಲಕ್ಷಣ ಹೀಗಿದೆ; ವಿಷಯೋಪಭೋಗಗಳಿಲ್ಲದೇ ಪೂರ್ಣ ಸ್ವಾನಂದದ ಅನುಭವವನ್ನು ಪಡೆಯುವುದು ಇದು ಆತ್ಮ ಸಾಕ್ಷಾತ್ಕಾರದ ಮುಖ್ಯ ಲಕ್ಷಣವಾಗಿದೆ. ಸತ್ವಕುಲದ ಭಕ್ತಶ್ರೇಷ್ಠ ಉದ್ಧವನೇ, ಇದನ್ನು ನೀನು ಅಗದೀ ಸತ್ಯವೆಂದು ತಿಳಿ ।೩೧।। ಇಂತಹ ಅನುಭವವಿಲ್ಲದ ಯಾವ ಕೇವಲ ಶಾಬ್ದಿಕ ಜ್ಞಾನಕ್ಕೆ ಅದು ಅನುಮಾನಿಕ ಜ್ಞಾನವೆಂದು ಹೇಳುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೨।। ಯಾರ ಅನುಭವದಲ್ಲಿ ಅನುಮಾನದ ಪ್ರವೇಶವೂ ಕೂಡ ಆಗುವುದಿಲ್ಲವೋ, ಆತನೇ ಅಪರೋಕ್ಷ ಸಾಕ್ಷಾತ್ಕಾರದಲ್ಲಿ ನಿರಂತರವಾಗಿ ವರ್ತಿಸುತ್ತಿರುವನು ।೩೩।। ಇಂತಹ ಸಾಧಕನು ಜ್ಞಾನದ ಸಾಧನೆ ಮತ್ತು ವೃತ್ತಿರೂಪ ಜ್ಞಾನವನ್ನೂ ಸಹ ತ್ಯಾಗವನ್ನು ಮಾಡಬೇಕು ।೩೪।। ಆ ಜ್ಞಾನದ ತ್ಯಾಗವನ್ನು ಮಾಡದಿದ್ದರೂ ಕೂಡ ಅದು ತನ್ನಷ್ಟಕ್ಕೆ ತಾನೇ ತ್ಯಾಗವಾಗುವುದು. ಯಾವ ಪ್ರಕಾರವಾಗಿ ಸುರ್ಯೋದಯವಾಗುತ್ತಲೇ ಚಂದ್ರ ಸಹ ನಕ್ಷತ್ರಗಳ ತೇಜವು ನಷ್ಟಗೊಳ್ಳುವುದು ।೩೫।। ಹನುಮಂತನನ್ನು ನೋಡಿದ ಮಾತ್ರಕ್ಕೆ ಅಹಿರಾವದ ದೇವೀ ನವಚಂಡಿಯು ಓಡಲಾರಂಭಿಸುವಳು. ಅಂದ ಮೇಲೆ ಇತರ ಭೂತಪಿಶಾಚಿಗಳ ಯಾವ ಕಥೆ? ಹನುಮಂತನ ಎದುರಿನಲ್ಲಿ ನಿಲ್ಲುವ ಧೈರ್ಯವು ಇವರಿಗೆ ಆಗುವುದಿಲ್ಲ ।೩೬।। ಅದರಂತೆ ನನ್ನ ಸಾಕ್ಷಾತ್ಕಾರವು ಪ್ರಾಪ್ತವಾದನಂತರ ಬದ್ಧತೆಯೇ ಇರುವುದಿಲ್ಲ. ಅಂದ ಮೇಲೆ ಬದ್ಧತೆಯನ್ನು ಕಳೆಯಲು ಜ್ಞಾನವಾದರೂ ಅಲ್ಲಿರಲು ಹೇಗೆ ಸಾಧ್ಯ? ।೩೭।। ನನ್ನ ಅನುಭವದ ಸ್ಥಾನದಲ್ಲಿ ಬಂಧ ಮತ್ತು ಮೋಕ್ಷ ಇವು ಎರಡೂ ಕೂಡ ಮಿಥ್ಯೆಯಾಗಿರುವುವು. ಇದನ್ನು ನೀನು ಲಕ್ಷದಲ್ಲಿಡು. ಹೇ ಉದ್ಧವಾ, ಅಲ್ಲಿ ಸಾಧನೆಗಳ ಜ್ಞಾನದ ಯಾವುದೂ ಉಪಯೋಗವಿಲ್ಲ ।೩೮।।

ಮಾಯಿಕ ಪಾಹೀ । ತೇಥೇ ಜ್ಞಾನಧ್ಯಾನ ಜೇ ಕಾಂಹೀ । ನ ತ್ಯಾಗಿತಾ ಪಾಹೀ ತ್ಯಾಗಿಲೇ ।।೯।। ತ್ಯಾಗೋನಿಯಾ ಜ್ಞಾನಧ್ಯಾನ । ಜ್ಞಾನಿಯಾಂಸೀ ಮಾಝೀ ಪ್ರೀತಿ ಗಹನ । ತೇಚಿ ಪ್ರೀತೀಚೇ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೪೦।।

ಜ್ಞಾನಿನಸ್ತ್ವಹವೇಷ್ಟಃ ಸ್ವಾರ್ಥೋ ಹೇತುಶ್ಚ ಸಂಮತಃ ।
ಸ್ವರ್ಗ ಶ್ಚೈವಾಪವರ್ಗಶ್ಚ ನಾನ್ಯೋಽರ್ಥೋ ಮದೃತೇ ಪ್ರಿಯಃ ।।೨।।

ಅರ್ಥ:- ಜ್ಞಾನೀ ಪುರುಷನ ಅಭೀಷ್ಟ ಪದಾರ್ಥವೆಂದರೆ ನಾನಾಗಿರುವೆನು. ಆತನ ಸಾಧನೆ-ಸಾಧ್ಯ, ಸ್ವರ್ಗ ಮತ್ತು ಅಪವರ್ಗ ನಾನೇ ಆಗಿರುವೆನು. ನನ್ನ ಹೊರತಾಗಿ ಆತನು ಯಾವುದೇ ಪದಾರ್ಥಗಳಲ್ಲಿ ಪ್ರೇಮವನ್ನು ಮಾಡುವುದಿಲ್ಲ.

ಜೋ ಮೀ ಅದ್ವಯಾನಂದಸ್ಥಿತೀ । ತ್ಯಾ ಮಾಜೇ ಜ್ಞಾನಿಯಾಂಸೀ ಪ್ರೀತೀ । ತೇ ಪ್ರೀತೀಚೀ ಉಪಪತ್ತೀ । ಐಕ ನಿಶ್ಚಿತೀ ಉದ್ಧವಾ ।।೪೧।। ಜ್ಞಾನಿಯಾಸೀ ಅತಿವಲ್ಲಭ । ಜೋ ಮೀ ಪರಮಾತ್ಮಾ ಸ್ವಯಂಭ । ಜ್ಞಾನಿಯಾಂಚಾ ಪರಮ ಲಾಭ । ಮೀ ಪದ್ಮನಾಭ ನಿಜಧನ ।।೪೨।। ಜ್ಞಾನಿಯಾಂಸೀ ಜೋ ಸ್ವರ್ಗ ಚಾಂಗ । ತೋ ಮಜ ವೇಗಳಾ ನಾಹೀ ಮಾರ್ಗ । ಜ್ಞಾನಿಯಾಂಚಾ ಜೋ ಮೋಕ್ಷಭಾಗ । ತೋ ಮೀ ಶ್ರೀರಂಗ ನಿಜಾತ್ಮಾ ।।೪೩।। ಜ್ಞಾನಿಯಾಂಚೇ ಸ್ವಧರ್ಮಸಾಧನ । ತೇ ಮೀ ಪರಮಾತ್ಮಾ ನಾರಾಯಣ । ಮಜವೇಗಳೇ ಕಾಂಹೀ ಆನ । ಜ್ಞಾತ್ಯಾಂಸೀ ಜಾಣ ಅಸೇನಾ ।।೪೪।। ಜ್ಞಾತ್ಯಾಂಸೀ ಸ್ವರ್ಗಮೋಕ್ಷಸುಖ । ಮಜವೇಗಳೇ ಉರಲೇ ನಾಹೀ ದೇಖ । ಮೀ ಚಿದಾತ್ಮಾ ನಿಜವ್ಯಾಪಕ । ಭಾವೇ ನಿಷ್ಟಂಕ ಪಾವಲೇ ।।೪೫।। ಜ್ಞಾತ್ಯಾಂಚಾ ಅರ್ಥ ಸ್ವಾರ್ಥ ಪರಮಾರ್ಥ । ಮೀ ಪುರುಷೋತ್ತಮ ಗಾ ಸಮಸ್ತ । ಆದ್ಯ ಅವ್ಯ ಅನಂತ । ಮಾಝೋ ನಿಜಸುಖ ಪ್ರಾಪ್ತ ತ್ಯಾ ಜಾಹಲೇ ।।೪೬।। ಐಸೀ ಜ್ಞಾನಿಯಾಂಸೀ ಮಾಝೀ ಪ್ರೀತೀ । ತೇಹೀ ತೈಸೇಚ ಮಜ ಪ್ರಿಯ ಹೋತೀ । ತೇಚಿ ಸ್ವಯೇ ಶ್ರೀಪತೀ । ಉದ್ಧವಾಪ್ರತೀ ಸಾಂಗತ ।।೪೭।।

ಜ್ಞಾನವಿಜ್ಞಾನಸಂಸಿದ್ಧಾಃ ಪದಂ ಶ್ರೇಷ್ಠ ವಿದುರ್ಮಮ ।
ಜ್ಞಾನೀ ಪ್ರಿಯತಮೋತೋ ಮೇ ಜ್ಞಾನೇನಾಸೌ ಬಿಭರ್ತಿ ಮಾಮ್ ।।೩।।

ಅರ್ಥ:- ಯಾರು ಜ್ಞಾನ ಮತ್ತು ವಿಜ್ಞಾನದಿಂದ ಸಂಪನ್ನನಾದ ಸಿದ್ಧಪುರುಷನಾಗಿರುವನೋ, ಆತನು ನನ್ನ ವಾಸ್ತವಿಕ ಸ್ವರೂಪವನ್ನು ತಿಳಿಯುವನು. ಆದ್ದರಿಂದ ಜ್ಞಾನೀ ಪುರುಷನು ನನಗೆ ಸರ್ವರಲ್ಲಿ ಪ್ರಿಯನಾಗಿರುವನು. ಹೇ ಉದ್ಧವಾ, ಜ್ಞಾನೀ ಪುರುಷರು ತಮ್ಮ ಜ್ಞಾನದ್ವಾರಾ ನಿರಂತರವಾಗಿ ನನ್ನನ್ನು ತಮ್ಮ ಅಂತಃಕರಣದಲ್ಲಿ ಧರಿಸಿರುವರು.

ಜ್ಞಾನವಿಜ್ಞಾನನಿಜಸಂಪತ್ತೀ । ಜಾಹಲಿಯಾವೀಣ ಮಾಝೀ ಪ್ರಾಪ್ತೀ । ಕೋಣಾಸೀ ನವ್ಹೇ ಸ್ವರೂಪಸ್ಥಿತೀ । ಮತ್ಪದೀ ಗತೀ ಜ್ಞಾನವಿಜ್ಞಾನೇ ।।೪೮।।

ಪರಮಾತ್ಮನ ಸ್ವರೂಪದ ಎದುರಿನಲ್ಲಿ ಬಂಧ ಮತ್ತು ಮೋಕ್ಷ ಈ ಎಲ್ಲವೂ ಕಾಲ್ಪನಿಕವಾಗಿವೆ. ಆತನಲ್ಲಿ ಜ್ಞಾನ-ಧ್ಯಾನ ಈ ಎಲ್ಲವೂ ತಮ್ಮಷ್ಟಕ್ಕೆ ತಾವೇ ತ್ಯಾಗವಾಗುವುವು ।।೯।। ಜ್ಞಾನಧ್ಯಾನಗಳ ತ್ಯಾಗವನ್ನು ಮಾಡಿದರೂ ಕೂಡ ಜ್ಞಾನೀ ಭಕ್ತನಿಗೆ ನನ್ನ ಅತ್ಯಂತ ಪ್ರೇಮವಿರುವುದು. ಆ ಯಾವ ಪ್ರೀತಿಯ ಲಕ್ಷಣವನ್ನು ಸ್ವತಃ ಶ್ರೀಕೃಷ್ಣನು ಈಗ ಹೇಳುತ್ತಿರುವನು ।।೪೦।।

ಹೇ ಉದ್ಧವನೇ, ಅದ್ವಯಾನಂದರೂಪನಾದ ನನ್ನಲ್ಲಿ ಆ ಯಾವ ನನ್ನ ಭಕ್ತನ ಅತಿಶಯವಾದ ಪ್ರೇಮವಿರುವುದು. ಆ ಪ್ರೀತಿಯ ಲಕ್ಷಣವನ್ನು ಈಗ ಕೇಳು ।।೪೧।। ಜ್ಞಾನೀ ಭಕ್ತರಿಗೆ ಅತ್ಯಂತ ಪ್ರಿಯನಾದ ಸ್ವಯಂಭೂ ಪರಮಾತ್ಮನಾದ ನಾನು ಆ ಜ್ಞಾನಿಗಳ ಲಾಭನಾಗಿರುವೆನು. ಕೇವಲ ಜೀವಶ್ಚ, ಕಂಠಶ್ಚ ನಿಧಿಯಾದ ಪದ್ಮನಾಭನು ನಾನಾಗಿರುವೆನು ।।೪೨।। ಜ್ಞಾನಿಯರಿಗೆ ನನ್ನ ಹೊರತಾದ ಉತ್ತಮ ಸ್ವರ್ಗವಿಲ್ಲ. ಜ್ಞಾನಿಯರಿಗೆ ಮೋಕ್ಷ ಭಾಗವು ನಿಜಾತ್ಮನಾದ ಶ್ರೀರಂಗನು ನಾನೇ ಆಗಿರುವೆನು ।।೪೩।। ಜ್ಞಾನಿಯರ ಯಾವ ಸ್ವಧರ್ಮ ಸಾಧನವು ನಾನೇ ಪರಮಾತ್ಮನಾದ ನಾರಾಯಣನಾಗಿರುವೆನು. ನನ್ನ ಹೊರತಾಗಿ ಅವರು ಇನ್ನೊಂದು ಯಾವುದೂ ತಿಳಿಯಲಾರರು ।।೪೪।। ಅವರಿಗೆ ಸ್ವರ್ಗಸುಖ ಅಥವಾ ಮೋಕ್ಷಸುಖ ನನ್ನನ್ನು ಬಿಟ್ಟು ಬೇರೆ ಯಾವುದೂ ಉಳಿದಿರುವುದಿಲ್ಲ. ಅವರು ತಮ್ಮ ಶುದ್ಧವಾದ ಭಕ್ತಿಭಾವನೆಯಿಂದ ನನ್ನ ಸರ್ವವ್ಯಾಪಿ ಚಿದಾತ್ಮಸ್ವರೂಪಕ್ಕೆ ನಿಶ್ಚಯವಾಗಿ ಮುಟ್ಟಿಕೊಂಡಿರುವರು ।।೪೫।। ಜ್ಞಾನಿಗಳವರ ಅರ್ಥ, ಸ್ವಾರ್ಥ, ಪರಮಾರ್ಥ ಈ ಎಲ್ಲವೂ ಪುರುಷೋತ್ತಮನಾದ ನಾನೇ ಆಗಿರುವೆನು. ಆದ್ಯ, ಅವ್ಯಯ, ಅನಂತನಾಗಿರುವ ನನ್ನ ನಿಜಸುಖವನ್ನು ನನ್ನ ಭಕ್ತರಿಗೆ ಪ್ರಾಪ್ತವಾಗುವುದು ।।೪೬।। ಜ್ಞಾನೀ ಭಕ್ತರ ಪ್ರೀತಿಯು ನನ್ನಲ್ಲಿ ಈ ಪ್ರಕಾರವಾಗಿರುವುದು ಮತ್ತು ನನಗೂ ಕೂಡ ಇವರಲ್ಲಿ ಅಷ್ಟೇ ಪ್ರೀತಿವಿರುವುದು. ಈ ವಿಷಯಕ್ಕಾಗಿ ಸ್ವತಃ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ।।೪೭।।

ಜ್ಞಾನವಿಜ್ಞಾನ ಹೊರತಾಗಿ ನನ್ನ ಪ್ರಾಪ್ತಿಯು ಯಾರಿಗೂ ಆಗುವುದಿಲ್ಲ. ಅಂದರೆ ಆತ್ಮಸ್ವರೂಪಸ್ಥಿತಿಯನ್ನು ಯಾರಿಗೂ ತಿಳಿಯುವುದಾಗುವುದಿಲ್ಲ. ಜ್ಞಾನವಿಜ್ಞಾನದಿಂದ ನನ್ನ ಪದವಿಯು ಪ್ರಾಪ್ತವಾಗುವುದು ।।೪೮।।

ಕರಿತಾ ಗುರುಮುಖೇ ಶಾಸ್ತ್ರಶುದ್ಧಶ್ರವಣ। ತೇಣೇ ಜಾಹಲೇ ತೇ ಮ್ಹಣಿಜೇ ''ಜ್ಞಾನ'' । ತ್ಯಾಚಾ ಅನುಭವ ತೇಚಿ ''ವಿಜ್ಞಾನ'' । ಐಕ ಲಕ್ಷಣ ತ್ಯಾಚೇಹೀ ॥೪೯॥ ಸ್ವಯೇ ಸ್ವಯಂಪಾಕ ಕೇಲಾ ಜಾಣ । ನ ಜಾಣೇ ಕಟು ಮಧುರ ಲವಣ । ಜಂವ ಚಾಖಿಲಾ ನಾಹೀ ಆಪಣ । ತೇ ದಶಾ ಸಜ್ಞಾನ ''ಜ್ಞಾನ'' ಮ್ಹಣತೀ ॥೫೦॥ ಕೇಲಿಯಾ ರಸಾಚೇ ರಸಾಸ್ವಾದನ । ಸ್ವಯೇ ಗೋಡೀ ಸೇವೀ ಆಪಣ । ಐಶೀ ಜೇ ದಶಾ ತೇ ''ವಿಜ್ಞಾನ'' । ಉದ್ಧವಾ ಜಾಣ ನಿಶ್ಚಿತೀ ॥೫೧॥ ಏವಂ ವಿಜ್ಞಾನಜ್ಞಾನನಿಜಸಂಪತ್ತೀ । ಮಾಝ್ಯಾ ಉತ್ತಮಪದಾಚೀ ಪದಪ್ರಾಪ್ತೀ । ಮಾಝೇ ವಾಸ್ತವಸ್ವರೂಪ ಜೇ ಜಾಣತೀ । ತ್ಯಾಂಚೀ ಮಜ ಪ್ರೀತೀ ಅನನ್ಯತ್ವೇ ॥೫೨॥ ವೇದ-ಶಾಸ್ತ್ರ-ಯುಕ್ತಿಬಳೇ । ಮಾಝೇ ಸ್ವರೂಪ ಕಾಇಸೇನಿ ನ ಕಳೇ । ತೇ ಜ್ಯಾಸೀ ವಸ್ತುತಾ ಆಕಳೇ । ಮಜ ತ್ಯಾವೇಗಳೇ ಪ್ರಿಯ ನಾಹೀ ॥೫೩॥ ತೇಚಿ ಅತಿಪ್ರೀತೀಚೇ ಲಕ್ಷಣ । ತ್ಯಾಚ್ಯಾ ಪಾಊಲಾ ಪಾಉಲೀ ಜಾಣ। ಸರ್ವಾಂಗ ವೋಡವೀ ಮೀ ಆಪಣ । ಕರೀ ನಿಂಬಲೋಣ ಸರ್ವಸ್ವೇ ॥೫೪॥ ತ್ಯಾಸೀ ಜೇ ವೇಳೇ ಜೇ ಲಗೇ । ತೇ ಮೀ ನ ಮಾಗತಾ ಪುರವೀ ವೇಗೇ । ತ್ಯಾಸೀ ವಿರುದ್ಧ ಯೇ ಜೇಣೇ ಮಾರ್ಗೇ । ತೇ ಮೀ ನಿಜಾಂಗೇ ನಿವಾರೀ ॥೫೫॥ ತ್ಯಾಸೀ ಝುಣೇ ಸಂಸಾರವಾರಾ ಲಾಗೇ । ಯಾಲಾಗೀ ಮೀಚ ಮೀ ಪುಢೇ ಮಾಗೇ । ಸಂಭವತಾ ರಾಹೇ ಸರ್ವಾಂಗೇ । ಅತಿಪ್ರೀತಿಪಾಂಗೇ ಪಾಂಗಲೋ ॥೫೬॥ ಜೇಣೇ ಜ್ಞಾನೇ ಜ್ಞಾನೀ ಪ್ರಿಯ ಹೋತೀ । ತ್ಯಾ ಜ್ಞಾನಾಚೀ ಪವಿತ್ರ ಕೀರ್ತೀ । ದೇವೋ ಸಾಂಗೇ ಉದ್ಧವಾಪ್ರತೀ । ಯಥಾರ್ಥಸ್ಥಿತೀ ನಿಜಬೋಧೇ ॥೫೭॥

ತಪಸ್ತೀರ್ಥಂ ಜಪೋ ದಾನಂ ಪವಿತ್ರಾಣೀತರಾಣಿ ಚ । ನಾಲಂಕುರ್ವಂತಿ ತಾಂ ಸಿದ್ಧಿಂ ಯಾ ಜ್ಞಾನಕಲಯಾ ಕೃತಾ ॥೪॥

ಅರ್ಥ:- ತತ್ವಜ್ಞಾನದ ಲೇಶಮಾತ್ರ ಉದಯವಾಯಿತೆಂದರೆ ಆಗ ಆಗುವ ಸಿದ್ಧಿಯು ತಪಸ್ಸು, ತೀರ್ಥ, ಜಪ,ದಾನ ಅಥವಾ ಅಂತಃಕರಣ ಶುದ್ಧಿ ಮತ್ತು ಯಾವುದೇ ಸಾಧನೆಗಳಿಂದ ಪೂರ್ಣತೆಯು ಪ್ರಾಪ್ತವಾಗುವುದಿಲ್ಲ.

ಸಕಳ ಸಾಧನಾ ನವ್ಹೇ ಜೇ ಶುದ್ಧೀ । ತೇ ಜ್ಞಾನಲೇಶೇ ಹೋಯ ತ್ರಿಶುದ್ಧೀ । ಐಕ ಉದ್ಧವಾ ಸುಬುದ್ಧೀ। ತೇ ಜ್ಞಾನಶುದ್ಧೀಚಾ ಮಹಿಮಾ ॥೫೮॥ ''ತಪ'' ಜೇ ಪರಾರ್ಕ ಪಂಚಾಗ್ನೀ । ''ತೀರ್ಥ'' ಗಂಗಾದಿ ಸರಿತಾ ತ್ರಿವೇಣೀ । ''ಜಪು'' ಜೇ ನಾನಾ ಮಂತ್ರಶ್ರೇಣೀ । ಗೋ-ಭೂ-ತಿಲ ''ದಾನೀ'' ಸುವರ್ಣಾದಿ ॥೫೯॥ ಆಣಿಕಹೀ ಇತರ ''ಪವಿತ್ರೇ'' । ಜೇ ''ಸ್ವಧರ್ಮಕರ್ಮಾದಿ'' ಸ್ವಾಚಾರೇ । ನಾನಾ ''ಯಾಗ'' ಅಗ್ನಿಹೋತ್ರೇ । ಪವಿತ್ರಕರೇ ಅತಿಶುದ್ಧ ॥೬೦॥

ಗುರುಗಳ ಮುಖದಿಂದ ಶಾಸ್ತ್ರಾರ್ಥದ ಶುದ್ಧ ಶ್ರವಣವನ್ನು ಮಾಡಿದ ನಂತರ ಯಾವುದು ತಿಳಿಯುವದೋ ಅದಕ್ಕೆ ''ಜ್ಞಾನ'' ವೆಂದು ಹೇಳುವರು. ಅದರ ಸವಿಸ್ತಾರವಾದ ಲಕ್ಷಣವನ್ನು ಹೇಳುವೆನು, ಕೇಳು ॥೪೯॥ ತಾನು ಸ್ವತಃ ಸಿದ್ಧಗೊಳಿಸಿದ ಅಡುಗೆಯನ್ನು ಅದರ ರುಚಿಯನ್ನು ಎಲ್ಲಿಯವರೆಗೆ ನೋಡಲಾರನೋ, ಅಲ್ಲಿಯವರೆಗೆ ಆತನಿಗೆ ಅದರ ಕಹಿ,ಸಿಹಿ, ಹುಳಿ, ಖಾರ ಹೇಗಿದೆ ಎಂಬುದು ಹೇಗೆ ತಿಳಿಯಬೇಕು ? ಈ ಸ್ಥಿತಿಗೆ ತಿಳಿದವರು ''ಜ್ಞಾನ'' ಎಂದು ಹೇಳುವರು ॥೫೦॥ ಮಾಡಿದ ಅಡುಗೆಯನ್ನು ಸೇವಿಸಿ ಅವುಗಳ ರುಚಿಯನ್ನು ಪ್ರತ್ಯಕ್ಷವಾಗಿ ಅನುಭವಿಸಿದಾಗ ಆ ಸ್ಥಿತಿಗೆ ''ವಿಜ್ಞಾನ'' ಎಂದು ಹೇಳುವರು. ಉದ್ಧವಾ ಇದನ್ನು ನಿಶ್ಚಯವಾಗಿ ತಿಳಿ ॥೫೧॥ ಇಂತಹ ಜ್ಞಾನ-ವಿಜ್ಞಾನದಿಂದ ಸಂಪನ್ನನಾಗುತ್ತಲೇ ಆ ಭಕ್ತನಿಗೆ ಪರಬ್ರಹ್ಮಪದದ ಪ್ರಾಪ್ತಿಯಾಗುವುದು. ಅವರು ನನ್ನ ನಿಜವಾದ ಸ್ವರೂಪವನ್ನು ಅರಿತಿರುವರು. ಅವರ ಐಕ್ಯಭಾವದಿಂದ ಅವರಲ್ಲಿ ನನ್ನ ಅನನ್ಯ ಪ್ರೇಮವಿರುವುದು ॥೫೨॥ ವೇದಶಾಸ್ತ್ರ, ಯುಕ್ತಿ ಇವು ಯಾವುದರಿಂದಲೂ ತಿಳಿಯಲಾರದ ನನ್ನ ಸ್ವರೂಪವನ್ನು ಯಾರು ಸಹಜವಾಗಿಯೇ ತಿಳಿಯುವರೋ, ಅವರಿಗಿಂತ ನನಗೆ ಬೇರೆ ಯಾರೂ ಪ್ರಿಯರಾಗಿರುವುದಿಲ್ಲ ॥೫೩॥ ಅವರಲ್ಲಿ ನನ್ನ ಅತ್ಯಂತ ಪ್ರೇಮದ ಕಾರಣವು ಇದೇ ಆಗಿರುವುದು. ಇಂತಹ ಭಕ್ತರ ಮುಂದೆ ಹೆಜ್ಜೆ ಹೆಜ್ಜೆಗೆ ನಾನು ನನ್ನ ಸರ್ವ ಅಂಗವನ್ನು ಮುಂದೆ ಮಾಡುವೆನು. ಇಷ್ಟೇ ಅಲ್ಲ, ನಾನು ನನ್ನ ಸರ್ವಸ್ವವನ್ನು ಆತನ ಮೇಲಿಂದ ನಿವಾಳಿಸಿ ಒಗೆಯುವೆನು ॥೫೪॥ ಆ ಯಾವ ಭಕ್ತನಿಗೆ ಯಾವ ಸಮಯಕ್ಕೆ ಯಾವುದರ ಅವಶ್ಯಕತೆವಿರುವದೋ, ಅವುಗಳನ್ನೆಲ್ಲವನ್ನೂ ನಾನು ಆತನು ಬೇಡದೇ ಇದ್ದರೂ ಕೂಡ ಪೂರೈಸುವೆನು. ಆತನ ಮಾರ್ಗದಲ್ಲಿ ಏನಾದರೂ ವಿಘ್ನಗಳು ಒಡ್ಡಲು ಆಗ ನಾನು ಸ್ವತಃ ಮುಂದಾಗಿ ಅವುಗಳನ್ನು ನಿವಾರಿಸುವೆನು ॥೫೫॥ ಆತನಿಗೆ ಸಂಸಾರದ ಗಾಳಿಯು ಹತ್ತಬಾರದೆಂದು ನಾನೇ ಹಿಂದೆ ಮುಂದೆ ಸರ್ವಾಂಗದಿಂದ ನಿಂತುಕೊಳ್ಳುವೆನು. ಉತ್ಕಟವಾದ ಪ್ರೇಮದಿಂದ ನಾನು ಆತನಿಗೆ ವಶನಾಗಿರುವೆನು ॥೫೬॥ ಜ್ಞಾನಿಯು ಯಾವ ಜ್ಞಾನದಿಂದ ತನಗೆ ಪ್ರಿಯನಾದನೆಂಬ, ಆ ಜ್ಞಾನದ ಪವಿತ್ರ ಕೀರ್ತಿಯನ್ನು ಯಥಾರ್ಥ ರೀತಿಯಲ್ಲಿ ಆತ್ಮಜ್ಞಾನಪೂರ್ವಕವಾಗಿ ಉದ್ಧವನಿಗೆ ದೇವನು ಹೇಳುತ್ತಿರುವನು ॥೫೭॥

ಸರ್ವ ಸಾಧನೆಗಳಿಂದ ಯಾವುದು ಶುದ್ಧಿಯಾಗುವುದಿಲ್ಲವೋ, ಅದು ಜ್ಞಾನದ ಒಂದಂಶದಿಂದ ಆಗುವುದು. ಹೇ ಬುದ್ಧಿವಂತನಾದ ಉದ್ಧವನೇ, ಇಂತಹ ಆ ಯಾವ ಜ್ಞಾನಸಿದ್ಧಿಯ ಮಹಿಮೆಯನ್ನು ಈಗ ಕೇಳು ॥೫೮॥ ಯಾವ ಸಾಧಕರು ಪಂಚಾಗ್ನಿ ಸಾಧನೆಯಿಂದ ತಪಸ್ಸನ್ನು ಆಚರಿಸುವರು, ಗಂಗಾ, ತ್ರಿವೇಣಿ ಇತ್ಯಾದಿ ತೀರ್ಥಯಾತ್ರೆಗಳನ್ನು ಮಾಡುವರು, ಅನೇಕ ಮಂತ್ರಗಳ ಜಪ ಮಾಡುವರು, ಗೋ,ಭೂಮಿ, ಎಳ್ಳು ಮತ್ತು ಸುವರ್ಣಾದಿ ದಾನಗಳನ್ನು ಕೊಡುವರು ॥೫೯॥ ಅಥವಾ ಇನ್ನೂ ಅನೇಕ ಪ್ರಕಾರಗಳ ಸ್ವಧರ್ಮದ ಪವಿತ್ರ ಆಚರಣೆಗಳನ್ನು ಮಾಡುವರು. ಯಜ್ಞ, ಅಗ್ನಿಹೋತ್ರ ಇತ್ಯಾದಿ ಅನೇಕ ಪಾವನಗೊಳಿಸುವ ಕರ್ಮಗಳನ್ನು ಮಾಡುವರು ॥೬೦॥

ಏವಂ ತಪಾದಿಕ ಜೇ ಸಾಧನ । ಯಾ ಸಕಳಾಂಚೀ ಶುದ್ಧೀ ಗಹನ । ತೇ ಜ್ಞಾನಲೇಶಾಸಮಾನ । ಪವಿತ್ರಪಣ ತುಳೇನಾ ।।೬೧।। ಜ್ಞಾನನಿಷ್ಠಾ ಅರ್ಧಕ್ಷಣೇ । ಜೇ ಪವಿತ್ರತಾ ಸ್ವಯೇ ಲಾಹಣೇ । ತೇ ತಪಾದಿ ನಾನಾ ಸಾಧನೇ । ನಾಹೀ ಪಾವಣೇ ಕಲ್ಪಾಂತೀ ।।೬೨।। ಐಸೇ ಜೇ ''ಪವಿತ್ರಜ್ಞಾನ'' । ತೇ ಮುಖ್ಯತ್ವೇ ಧರೋನಿ ಜಾಣ। ಮಾಝೇ ಕರಾವೇ ಭಜನ । ತೇಚಿ ನಿರೂಪಣ ಹರಿ ಬೋಲೇ ।।೬೩।।

ತಸ್ಮಾಜ್ಜ್ಞಾನೇನ ಸಹಿತಂ ಜ್ಞಾತ್ವಾ ಸ್ವಾತ್ಮಾನಮುದ್ಧವ ।
ಜ್ಞಾನವಿಜ್ಞಾನಸಂಪನ್ನೋ ಭಜ ಮಾಂ ಭಕ್ತಿಭಾವಿತಃ ।।೫।।

ಅರ್ಥ:- ನನ್ನ ಪ್ರಿಯ ಉದ್ಧವನೇ, ಅದಕ್ಕಾಗಿ ನೀನು ಜ್ಞಾನಸಹಿತವಾಗಿ ನಿನ್ನ ಆತ್ಮಸ್ವರೂಪವನ್ನು ತಿಳಿದುಕೋ. ತದನಂತರ ಜ್ಞಾನವಿಜ್ಞಾನದಿಂದ ಸಂಪನ್ನನಾಗಿ ಭಕ್ತಿಭಾವದಿಂದ ನನ್ನ ಭಜನೆಯನ್ನು ಮಾಡು.

ಯಾಕಾರಣೇ ಗಾ ಉದ್ಧವಾ । ಐಸಾ ಪವಿತ್ರ ಜ್ಞಾನಾಚಾ ಯಾವಾ । ತೇಥ ಪ್ರಕ್ಷಾಳೂನಿ ನಿಜಭಾವಾ । ಜೀವು ತೋ ವೋಳಖಾವಾ ಪರಮಾತ್ಮತ್ವೇ ।।೬೪।। ಜೀವು ಪರಮಾತ್ಮಾ ದೋನಿ ಏಕ । ಐಸೇ ಜಾಣಣೇ ತೇ ''ಜ್ಞಾನ'' ದೇಖ । ಐಕ್ಯೇ ಭೋಗಣೇ ಪರಮಾತ್ಮಸುಖ । ''ವಿಜ್ಞಾನ'' ಸಮ್ಯಕ ತ್ಯಾ ನಾಂವ ।।೬೫।। ಐಸಾ ಜ್ಞಾನವಿಜ್ಞಾನ ಸಂಪನ್ನ । ಹೋಊನ ಕರಾವೇ ಮಾಝೇ ಭಜನ । ತ್ಯಾ ನಿಜಭಜನಾಚೀ ಖೂಣ । ಐಕ ಸಂಪೂರ್ಣ ಉದ್ಧವಾ ।।೬೬।। ತೇವ್ಹಾ ತೇಥೇ ದೇಖೇ ಜೇ ಕಾಂಹೀ । ತೇ ಮೀ ವಾಂಚೂನಿ ಆನ ನಾಹೀ । ಮಗ ಅನನ್ಯಭಾವೇ ತಿಯೇ ಠಾಯೀ । ಭಜೇ ಪಾಹೀ ಭಾವಾರ್ಥೇ ।।೬೭।। ಐಶಿಯಾ ಮಾಝ್ಯಾ ಭಜನಾಹಾತೀ । ಉಸಂತ ನಾಹೀ ಅಹೋರಾತೀ । ಜಾಗೃತಿ - ಸ್ವಪ್ನ - ಸುಷುಪ್ತೀ । ಮಾಝೀ ನಿಜಭಕ್ತೀ ನ ಮೋಡೇ ।।೬೮।। ವಿಸರೋನಿ ಜಾವೇ ಜೇಥೇ । ತೇಥೇಚಿ ದೇಖೇ ಮಾತೇ । ಮರಣ ಆಲೇ ವಿಸ್ಮರಣಾತೇ । ಸ್ಮರಣಹೀ ತೇಥೇ ಹಾರಪಲೇ ।।೬೯।। ಯಾಪರೀ ಜ್ಞಾನವಿಜ್ಞಾನಸಂಪನ್ನ । ಮಜವೇಗಳೇ ನ ದೇಖತೀ ಆನ । ತೈಸೇಚಿ ಮಾಝೇ ಅನನ್ಯ ಭಜನ । ''ಶುದ್ಧಭಕ್ತಿ'' ಜಾಣ ಯಾ ನಾಂವ ।।೭೦।। ಮಾಗಾ ಮುನೀಶ್ವರೀ ಯಾಚಿ ಗತೀ । ಮಾಝೀ ಕರೋನಿ ಅನನ್ಯ ಭಕ್ತೀ । ಮಜ ಪಾವಲೇ ಜೈಶಾ ರೀತೀ । ಐಕ ತುಜಪ್ರತೀ ಸಾಂಗೇನ ।।೭೧।।

ಜ್ಞಾನವಿಜ್ಞಾನಯಜ್ಞೇನ ಮಾಮಿಷ್ಟ್ವಾತ್ಮಾನಮಾತ್ಮನಿ ।
ಸರ್ವಯಜ್ಞಪತಿಂ ಮಾಂ ವೈ ಸಂಸಿದ್ಧಿಂ ಮುನಯೋಽಗಮನ್ ।।೬।।

ಅರ್ಥ:- ಮಹಾ ಮಹಾ ಮುನಿಗಳು ಜ್ಞಾನವಿಜ್ಞಾನ ಯಜ್ಞದಿಂದ ನನ್ನ ಆತ್ಮವನ್ನು ತಮ್ಮ ಅಂತಃಕರಣದಲ್ಲಿ ಪೂಜಿಸಿ ಸರ್ವ ಯಜ್ಞಗಳ ಸ್ವಾಮಿಯಾದ ನನ್ನ ಸ್ವಸಿದ್ಧಿಗೆ ಪ್ರಾಪ್ತರಾದರು.

ಈ ಎಲ್ಲವೂ ಅತ್ಯಂತ ಶುದ್ಧ ಮಾಡುವ ಕ್ರಿಯೆಗಳಾಗಿದ್ದರೂ ಕೂಡ ನನ್ನ ಜ್ಞಾನದ ಒಂದಂಶದ ಸರಿಸಮಾನವಾಗಿ ಇವುಗಳ ಪವಿತ್ರತನದ ತುಲನೆಯಾಗುವುದಿಲ್ಲ ।।೬೧।। ಜ್ಞಾನನಿಷ್ಠೆಯಿಂದ ಅರ್ಧಕ್ಷಣದಲ್ಲಿ ಯಾವ ಪವಿತ್ರತೆಯು ಪ್ರಾಪ್ತವಾಗುವುದೋ, ಅದು ತಪಾದಿ ನಾನಾ ಸಾಧನೆಗಳಿಂದ ಕಲ್ಪಾಂತಕ್ಕೂ ಲಭಿಸುವುದಿಲ್ಲ ।।೬೨।। ಇಂತಹ ನನ್ನ ಪವಿತ್ರ ಜ್ಞಾನದಿಂದ ಯುಕ್ತನಾಗಿ ಮುಖ್ಯವಾಗಿ ನನ್ನ ಭಜನೆಯನ್ನು ಮಾಡಬೇಕು. ಈ ನಿರೂಪಣೆಯನ್ನೇ ಈಗ ಶ್ರೀಕೃಷ್ಣನು ಹೇಳುತ್ತಿರುವನು ।।೬೩।।

ಅದಕ್ಕಾಗಿ ಹೇ ಉದ್ಧವನೇ, ಪವಿತ್ರವಾದ ಜ್ಞಾನದ ಪ್ರಭಾವದಿಂದ ಜೀವಭಾವಕ್ಕೆ ಪಾವನಗೊಳಿಸಿ ಜೀವವು ಪರಮಾತ್ಮ ಸ್ವರೂಪವಾಗಿದೆ ಎಂದು ತಿಳಿಯಬೇಕು ।।೬೪।। ಜೀವ ಮತ್ತು ಪರಮಾತ್ಮಾ ಈ ಎರಡೂ ಒಂದೇ ಎಂದು ತಿಳಿಯುವುದು ಜ್ಞಾನವಾಗಿರುವುದು. ಜೀವವು ಪರಮಾತ್ಮನಲ್ಲಿ ಏಕರೂಪವಾಗಿ ಪರಮಾತ್ಮಸ್ವರೂಪದ ಅನುಭವವನ್ನು ಪಡೆಯುವುದು, ಇದಕ್ಕೆ ವಿಜ್ಞಾನ ಎಂದು ಹೇಳುವರು ।।೬೫।। ಈ ರೀತಿಯಾಗಿ ಜ್ಞಾನವಿಜ್ಞಾನ ಸಂಪನ್ನನಾಗಿ ಪ್ರೇಮದಿಂದ ನನ್ನ ಭಜನೆಯನ್ನು ಮಾಡಬೇಕು. ಆ ಭಜನೆಯ ಯಾವತ್ತೂ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ।।೬೬।। ನನ್ನ ಭಕ್ತನು ನನ್ನ ಪ್ರೇಮದಲ್ಲಿ ರಮಮಾಣನಾಗಲು ಆಗ ಆತನು ನನ್ನ ಹೊರತಾಗಿ ಎಲ್ಲಿಯೂ ಬೇರೆ ವಸ್ತುಗಳನ್ನು ನೋಡಲಾರನು. ಸರ್ವ ಪದಾರ್ಥಗಳಲ್ಲಿಯೂ ನನ್ನದೇ ಭಾವವನ್ನಿಟ್ಟು ಅನನ್ಯ ಭಾವದಿಂದ ನನ್ನನ್ನು ಭಜಿಸುತ್ತಿರುವನು ।।೬೭।। ಈ ಪ್ರಕಾರವಾಗಿ ಹಗಲೂ ರಾತ್ರಿ ಆತನ ಭಜನೆಯಲ್ಲಿ ಖಂಡವಾಗುವುದಿಲ್ಲ. ಜಾಗೃತಿ ಸ್ವಪ್ನ ಮತ್ತು ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿಯೂ ನನ್ನನ್ನು ಮರೆಯಲಾರನು ।।೬೮।। ನನ್ನನ್ನು ಮರೆತು ಆತನು ಎಲ್ಲಿಯಾದರೂ ಹೋಗಲಿ, ಅಲ್ಲಿ ಆತನಿಗೆ ನಾನೇ ಕಾಣಿಸಿಕೊಳ್ಳುವೆನು. ಈ ಪ್ರಮಾಣವಾಗಿಯೇ ವಿಸ್ಮರಣೆಗೆ ಮರಣವು ಬರುವುದು. ಇಲ್ಲದಿದ್ದರೆ ಸ್ಮರಣವೂ ಕೂಡ ಇಲ್ಲದಾಗಿಬಿಡುವುದು ।।೬೯।। ಈ ಪ್ರಕಾರವಾಗಿ ಜ್ಞಾನವಿಜ್ಞಾನ ಸಂಪನ್ನನಾದ ಭಕ್ತನು ನನ್ನ ಹೊರತಾಗಿ ಬೇರೆ ಯಾವುದನ್ನೂ ತಿಳಿಯಲಾರನು. ಅದರಂತೆಯೇ ಅನನ್ಯವಾಗಿ ಭಜನೆಯನ್ನು ಮಾಡುವುದು. ಇದರ ನಾಮವೇ ಶುದ್ಧಭಕ್ತಿ ಎಂದಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು ।।೭೦।। ಪೂರ್ವದಲ್ಲಿ ಇದೇ ಮಾರ್ಗದಿಂದ ಮಹಾ ಮಹಾ ಮುನೀಶ್ವರರು ನನ್ನ ಅನನ್ಯ ಭಕ್ತಿಯನ್ನು ಮಾಡಿ ನನ್ನಲ್ಲಿ ಬಂದು ಕೂಡಿಕೊಂಡರು. ಇದರ ಕಥೆಯನ್ನು ಈಗ ನಾನು ನಿನಗೆ ಹೇಳುವೆನು, ಅದಕ್ಕಾಗಿ ಕೇಳು ।।೭೧।।

ಜೇ ಜ್ಞಾನಧನೇ ಅತಿಸಂಪನ್ನ । ಪರಮ ಪವಿತ್ರ ವಿಜ್ಞಾನೇ ಜಾಣ । ಐಸೇ ಬ್ರಹ್ಮಭೂತ ಜೇ ಬ್ರಾಹ್ಮಣ । ಯಜ್ಞದ್ವಾರಾ ಯಜನ ಕರಿತೀ ಮಾಝೇ ॥೭೨॥ ಹೃದಯಾಚ್ಯಾ ನಿಜಭುವನೀ । ವಿಕಲ್ಪಾಚೀ ಭೂಮಿ ಖಾಣೋನಿ । ಶಮ-ದಮ-ವಿರಕ್ತೀ ಕುಂಡೇ ತಿನ್ಹೀ । ಕೇಲೀ ಆವೋ ಸಾಧುನೀ ಶ್ರದ್ಧೇಚಾ ॥೭೩॥ ತೇಥೇ ಕ್ಷರಾಕ್ಷರ ಅರಣೇ ದೋನ್ಹೀ । ಗುರು ಮಂತ್ರೇ ದೃಢಮಂಥೂನೀ । ಕಾಢಿಲಾ ಸೂಕ್ಷ್ಮ ನಿರ್ಧೂಮಾಗ್ನೀ । ಕುಂಡೀ ಸ್ಥಾಪೂನೀ ಪೇಟವಿಲಾ ॥೭೪॥ ಶುದ್ಧಸತ್ತ್ವಾಚೇ ಘೃತ ತೇಥ । ರಜತಮದ್ರವ್ಯೇಸೀ ಮಿಶ್ರಿತ । ವೈರಾಗ್ಯಸ್ರುವೇನೇ ಆಹುತೀ ದೇತ । ಮಂತ್ರ ತೇಥ ಯುಕ್ತೀಚೇ ॥೭೫॥ ಘೇಊನಿ ವಿದ್ಯಾಶಸ್ತ್ರ ಲಖಲಖಿತ । ಸಂಕಲ್ಪಪಶೂಚಾ ಕರೂನಿ ಘಾತ । ತೇಣೇ ಯಜ್ಞಪತಿ ಶ್ರೀಅನಂತ । ಕೇಲಾ ತೃಪ್ತ ನಿಜಬೋಧೇ ॥೭೬॥ ತೇಥ ಪೂರ್ಣಾಹೂತೀಸ ಕಾರಣ । ಘಾಲಿತಾ ಜೀವಭಾವಾಚೇ ಅವದಾನ । ಯಜ್ಞಭೋಕ್ತಾ ಮೀ ಶ್ರೀನಾರಾಯಣ। ಪರಮಾತ್ಮಾ ಜಾಣ ಸುಖೀ ಝಾಲೋ ॥೭೭॥ ಯಾಪರೀ ಮಾಝೇ ಯಜನ । ಕರೂನಿಯಾ ಮುನಿಗಣ। ನಿವಾರೂನಿ ಜನ್ಮಮರಣ। ಮಾಝೀ ಸಿದ್ಧಿ ಜಾಣ ಪಾವಲೇ ॥೭೮॥ ಮುನೀಶ್ವರೀ ಸಾಧಿಲೀ ಸಿದ್ಧೀ । ತೇಚಿ ಉದ್ಧವಾಲಾಗೀ ತ್ರಿಶುದ್ಧೀ । ವ್ಹಾವಯಾ ಕೃಷ್ಣ ಕೃಪಾನಿಧೀ । ಪ್ರಪಂಚನಿಷೇಧೀ ವಸ್ತು ಸಾಂಗೇ ॥೭೯॥

ತ್ವಯ್ಯುದ್ಧವಾಶ್ರಯತಿ ಯಸ್ತ್ರಿವಿಧೋ ವಿಕಾರೋ ಮಾಯಾಂತರಾ ಪತತಿ ನಾದ್ಯಪವರ್ಗಯೋರ್ಯತ್ ।
ಜನ್ಮಾದಯೋಽಸ್ಯ ಯದಮೀ ತವ ತಸ್ಯ ಕಿಂ ಸ್ಯುರಾದ್ಯಂತಯೋರ್ಯದಸತೋಽಸ್ತಿ ತದೇವ ಮಧ್ಯೇ ॥೭॥

ಅರ್ಥ:- ಉದ್ಧವಾ, ಆಧ್ಯಾತ್ಮಿಕ , ಆಧಿದೈವಿಕ ಮತ್ತು ಆದಿಭೌತಿಕ ಈ ಮೂರು ವಿಕಾರಗಳ ಸಮಷ್ಟಿಯು ಈ ಶರೀರವಾಗಿರುವುದು. ಮತ್ತು ಇದು ಸರ್ವಥಾ ನಿಮ್ಮ ಆಶ್ರಿತವಾಗಿದೆ. ಇದು ಪೂರ್ವದಲ್ಲಿ ಇದ್ದಿಲ್ಲ ಮತ್ತು ಕೊನೆಗೆ ಇರುವುದಿಲ್ಲ. ಮಧ್ಯದಲ್ಲಿ ಕೇವಲ ಭಾಸಮಾನವಾಗಿದೆ. ಆದ್ದರಿಂದ ಇದಕ್ಕೆ ಜಾದೂ ಆಟದಂತೆ ಮಾಯಾ ಎಂದು ತಿಳಿಯಬೇಕು. ಇದಕ್ಕೆ ಹುಟ್ಟುವುದು, ಇರುವುದು, ಬೆಳೆಯುವುದು, ಬದಲಾಗುತ್ತಿರುವುದು, ಕ್ಷೀಣಿಸುವುದು, ನಷ್ಟವಾಗುವುದು ಹೀಗೆ ಆರು ಭಾವವಿಕಾರಗಳಿರುವುವು. ಆದರ ನಿಮ್ಮಿಂದ ಯಾವ ಸಂಬಂಧವೂ ಇಲ್ಲ. ಇದು ಆದರ ವಿಕಾರವೂ ಕೂಡ ಇರುವುದಿಲ್ಲ. ಕಾರಣ ಅದು ಸ್ವತಃ ಅಸತ್‌ವಾಗಿರುವುದು. ಈ ಅಸತ್ ವಸ್ತು ಪ್ರಾರಂಭದಲ್ಲಿಲ್ಲ, ಕೊನೆಯಲ್ಲಿಲ್ಲ, ಮಧ್ಯದಲ್ಲಿ ಮಾತ್ರ ಭಾಸವಾಗಿ ತೋರುತ್ತಿರುವುದು.

''ಮೀ ಉದ್ಧವ'' ಐಸೇ ಮ್ಹಣತಾ । ತೂ ಕೋಣ ಆಹೇಸೀ ತತ್ತ್ವತಾ । ಐಕ ತ್ಯಾ ಸ್ವರೂಪಾಚೀ ಕಥಾ । ತುಜ ಮೀ ಆತಾ ಸಾಂಗೇನ ॥೮೦॥ ಜನ್ಮ ಸ್ಥಿತಿ ಆಣಿ ನಿಧನ । ತ್ರಿವಿಧವಿಕಾರೇಸೀ ತ್ರಿಗುಣ । ತ್ಯಾಂಚೀ ಅಧಿಷ್ಠಾತ್ರೀ ಮಾಯಾ ಜಾಣ । ತಿಸೀ ಚಳಣ ತುಝೇನೀ ॥೮೧॥ ಮಾಯಾದಿ ಗುಣಕಾರ್ಯಾ ಸಮಸ್ತಾ । ತೂ ಆಶ್ರಯೋ ಪೈ ಸಬಾಹ್ಯತಾ । ತುಝೇನಿ ಅಂಗೇ ಯಾಸೀ ಚಪಳತಾ । ತೂ ಯಾಪರತಾ ಚಿದಾತ್ಮಾ ॥೮೨॥

ಜ್ಞಾನಧನದಿಂದ ಅತ್ಯಂತ ಸಂಪನ್ನರಾಗಿರುವ ಮತ್ತು ವಿಜ್ಞಾನದಿಂದ ಪರಮ ಪವಿತ್ರವಾದ ಬ್ರಹ್ಮಸ್ವರೂಪರಾಗಿರುವ ಬ್ರಾಹ್ಮಣರು ಯಜ್ಞದ್ವಾರಾ ನನ್ನ ಯಜನವನ್ನು ಮಾಡುತ್ತಿರುವರು ॥೭೨॥ ಅವರು ತಮ್ಮ ಹೃದಯರೂಪ ಮಂದಿರದಲ್ಲಿ ವಿಕಲ್ಪರೂಪ ಭೂಮಿಯನ್ನು ಅಗೆದು ಅಲ್ಲಿ ಶ್ರದ್ಧೆಯ ಆಕಾರದ ಶಮ, ದಮ ಮತ್ತು ವಿರಕ್ತೀ ಈ ಮೂರು ಕುಂಡಗಳನ್ನು ತಯಾರಿಸುವರು ॥೭೩॥ ಆ ಕುಂಡದಲ್ಲಿ ಕ್ಷರ ಅಂದರೆ ಸರ್ವಭೂತಗಳು ಮತ್ತು ಅಕ್ಷರವೆಂದರೆ ಕೂಟಸ್ಥ ಆತ್ಮನು. ಈ ಎರಡು ಕಾಷ್ಟಗಳನ್ನು ಗುರುಮಂತ್ರರೂಪದ ಮಂಥನದಿಂದ ಒಂದರಮೇಲೊಂದು ತಿಕ್ಕುವರು. ಅದರಲ್ಲಿ ಹೊಗೆವಿಲ್ಲದ ತೇಜಸ್ವಿಯಾದ ಸೂಕ್ಷ್ಮ ಹೋಮಾಗ್ನಿಯು ಪ್ರಕಟವಾಗುವುದು. ಅದನ್ನು ಕುಂಡಗಳಲ್ಲಿ ಸ್ಥಾಪಿಸಿ ಪ್ರಜ್ವಲಿಸುವರು ॥೭೪॥ ಶುದ್ಧವಾದ ಸ್ವಸ್ವರೂಪ ತುಪ್ಪದಲ್ಲಿ ರಜತಮಾದಿ ಹೋಮದ್ರವ್ಯಗಳನ್ನು ಮಿಶ್ರಿತಮಾಡಿ ಯುಕ್ತಿ ಎಂಬ ಮಂತ್ರಗಳಿಂದ ವೈರಾಗ್ಯರೂಪ ಕಟ್ಟಿಗೆಯ ಚಮಚೆಯಿಂದ ಅವುಗಳಲ್ಲಿ ಆಹುತಿ ಕೊಡುವರು ॥೭೫॥ ತದನಂತರ ವಿದ್ಯಾರೂಪ ಲಖಲಖೀತ ತೇಜಸ್ವಿಯಾದ ಶಸ್ತ್ರವನ್ನು ಕೈಯಲ್ಲಿ ಹಿಡಿದು ಸಂಕಲ್ಪರೂಪ ಶತ್ರು ಪಶುವಿನ ಘಾತಮಾಡಿ ಯಜ್ಞದ ಸ್ವಾಮಿಯಾದ ಯಾವ ಶ್ರೀ ಅನಂತನಿಗೆ ನಿಜಬೋಧೆಯಿಂದ ಸಂತುಷ್ಟಪಡಿಸುವರು ॥೭೬॥ ಅವರು ಪೂರ್ಣಾಹುತಿಯ ಸಮಯದಲ್ಲಿ ಜೀವಭಾವದ ಆಹುತಿಯನ್ನು ಕೊಡಲು, ಆಗ ಯಜ್ಞಭೋಕ್ತಾನಾದ ಪರಮಾತ್ಮನಾಗಿರುವ ನಾನು ನಾರಾಯಣನು ಸಂತುಷ್ಟನಾಗುವೆನು ॥೭೭॥ ಈ ಪ್ರಕಾರವಾಗಿ ನನ್ನ ಯಜನವನ್ನು ಮಾಡಿ ಅನೇಕ ಮುನೀಶ್ವರರು ಜನ್ಮಮರಣಗಳಿಂದ ಬಿಡುಗಡೆಯಾಗಿ ನನ್ನ ಸ್ವರೂಪಕ್ಕೆ ಪ್ರಾಪ್ತರಾಗಿರುವರು ॥೭೮॥ ಮಹಾಮಹಾ ಮುನಿಗಳು ಯಾವ ಸಿದ್ಧಿಯನ್ನು ಪ್ರಾಪ್ತಮಾಡಿಕೊಂಡರೋ, ಆ ಸಿದ್ಧಿಯು ಉದ್ಧವನಿಗೆ ಪ್ರಾಪ್ತವಾಗಬೇಕೆಂದು ಕೃಪಾಮೂರ್ತಿಯಾದ ಶ್ರೀಕೃಷ್ಣನು ಪ್ರಪಂಚದ ನಿಷೇಧವನ್ನು ಮಾಡಿ ವಸ್ತುತತ್ವವನ್ನು ಹೇಳುತ್ತಿರುವನು ॥೭೯॥

''ನಾನು ಉದ್ಧವನು'' ಎಂದು ಹೇಳುವಾಗ್ಗೆ, ನಿಜವಾಗಿಯೂ ನೀನು ಯಾರು ಇರುವೆ? ಆ ಯಾವ ನಿನ್ನ ಸ್ವರೂಪದ ಕಥೆಯನ್ನು ಈಗ ಹೇಳುವೆನು, ಅದನ್ನು ಕೇಳು ॥೮೦॥ ಸತ್ವ, ರಜ ಮತ್ತು ತಮ ಈ ಮೂರು ಗುಣಗಳು ಜನ್ಮ, ಸ್ಥಿತಿ ಮತ್ತು ಮೃತ್ಯು ಈ ತ್ರಿವಿಧ ವಿಕಾರಗಳಿಗೆ ಕಾರಣವಾಗಿವೆ. ಮಾಯೆಯು ಈ ತ್ರಿಗುಣಗಳ ಅಧಿಷ್ಠಾನವಾಗಿದೆ ಮತ್ತು ನೀನು ಈ ಮಾಯೆಗೆ ಚಾಲನೆಯನ್ನು ಕೊಡುವವನಾಗಿರುವೆ ॥೮೧॥ ನಿಜವಾಗಿಯೂ ಮಾಯೆಯ ಮತ್ತು ತ್ರಿಗುಣಗಳ ಸರ್ವಕಾರ್ಯಗಳಿಗೆ ಅಂತರ್ಬಾಹ್ಯವಾಗಿ ನಿನ್ನ ಆಶ್ರಯವೇ ಇರುವುದು. ನಿನ್ನಸತ್ತೆಯಿಂದ ಮಾಯೆಯು ಚಂಚಲವಾಗಿರುವುದು. ನೀನು ಮಾಯೆಯಿಂದ ಭಿನ್ನವಾದ ಚಿದಾತ್ಮನಾಗಿರುವೆ ॥೮೨॥

''ಮಾಝೇನಿ ಗುಣಕರ್ಮಾ ಚಳಣತಾ । ತೈ ಪ್ರಪಂಚಾಸೀ ಆಲೀ ಸತ್ಯತಾ'' । ಹೇ ಮಾಯಾಮಯ ಗಾ ತತ್ತ್ವತಾ । ಮೃಗಜಳತಾ ಆಭಾಸು ॥೮೩॥ ಸಕಳ ಪ್ರಪಂಚಾಚೇ ಜೇ ಭಾನ । ತೇ ತಂವ ಮೃಗಜಳಾಸಮಾನ । ದಿಸೇ ತೇಹೀ ಮಿಥ್ಯಾದರ್ಶನ । ವಸ್ತುತ್ವೇ ಜಾಣ ಸತ್ಯ ನವ್ಹೇ ॥೮೪॥ ತೂ ಜನ್ಮ ಮರಣಾಪರತಾ । ತ್ರಿಗುಣಾಂತೇ ನಾತಳತಾ । ಪ್ರಪಂಚಾಸೀ ಅಲಿಪ್ತತಾ । ತುಝೀ ತತ್ತ್ವತಾ ತೂ ಏಕ ॥೮೫॥ ತೇಚಿ ಪ್ರಪಂಚಾಚೀ ಅಲಿಪ್ತ ಯುಕ್ತೀ । ಐಶೀ ಆಹೇ ಪರಮ ಪ್ರತೀತೀ । ಉತ್ಪತ್ತಿ- ಸ್ಥಿತಿ- ಪ್ರಳಯಾಂತೀ । ಪ್ರಪಂಚಾಚೀ ವಸ್ತೀ ಸತ್ಯತ್ವೇ ನಾಹೀ ॥೮೬॥ ಉತ್ಪತ್ತಿ ಆದೀ ಪ್ರಪಂಚ ನಸೇ । ಅಂತೀ ಕಾಂಹೀ ಉರಲಾ ನ ದಿಸೇ । ಮಧ್ಯೇ ಜೋ ಕಾಂಹೀ ಆಭಾಸೇ । ತೋ ಮಾಯಾವಶೇ ಮಿಥ್ಯಾಭೂತ ॥೮೭॥ ಪ್ರಪಂಚಾ ಆದೀ ಪರಬ್ರಹ್ಮ । ಅಂತೀ ತೇಚಿ ಉರೇ ನಿರುಪಮ । ಮಧ್ಯೇ ಸ್ಥಿತಿಕಾಳೀ ತೇಚಿ ಬ್ರಹ್ಮ । ಮಿಥ್ಯಾ ಭವಭ್ರಮ ಭ್ರಾಂತಾಸೀ ॥೮೮॥ ಸೂರ್ಯಾ ಆದೀ ಮೃಗಜಳ ನಸೇ । ಅಸ್ತಮಾನೀ ಉರಲೇ ನ ದಿಸೇ । ಮಧ್ಯೇ ಜೇ ಕಾಂಹೀ ಆಭಾಸೇ । ತೇಥಹೀ ನಸೇ ಜಳಲೇಶ ॥೮೯॥ ಸರ್ಪಾಆದೀ ದೋರತ್ವೇ ದೋರೂ । ಅಂತೀ ದೋರ ಉರೇ ಸಾಚಾರು । ಮಧ್ಯೇ ಭ್ರಮೇ ಭಾಸೇ ಸರ್ಪಾಕಾರೂ । ತೋಹೀ ದೋರೂ ದೋರರೂಪೇ ॥೯೦॥ ಯಾಪರೀ ಆದ್ಯಂತೀ ವಿಚಾರಿತಾ । ವಸ್ತು ಸತ್ಯ ಪ್ರಪಂಚ ಮಿಥ್ಯಾ । ಹೇ ಉದ್ಧವಾ ಜಾಣ ತತ್ತ್ವತಾ । ವೇದಶಾಸ್ತ್ರಾರ್ಥಾ ಸಂಮತ ॥೯೧॥ ಐಶೀ ಯಾ ಪ್ರಪಂಚಾಚೀ ಘಡಾಮೋಡೀ । ಹೋತಾ ಜನ್ಮಮರಣಕೋಡೀ । ಉದ್ಧವಾ ತುಜ ನ ಲಾಗೇ ವೋಢೀ । ತೂ ಪರಾಪರಥಡೀ ನಿತ್ಯಮುಕ್ತ ॥೯೨॥ ನಿರ್ಗುಣ ನಿಃಸಂಗ ನಿರ್ವಿಕಾರ । ಅಜಅವ್ಯಯ ಅಕ್ಷರ । ಬ್ರಹ್ಮ ಅನಂತ ಅಪರಂಪಾರ । ತೇ ತೂ ಸಾಚಾರ ಉದ್ಧವಾ ॥೯೩॥ ಹೇ ಐಕೋನಿ ದೇವಾಚೀ ಗೋಷ್ಠೀ । ಉದ್ಧವೇ ಬಾಂಧೀಲೀ ಶಕುನಗಾಂಠೀ । ಹರಿಖೇ ಆನಂದು ನ ಜಿರೇ ಪೋಟೀ । ಏಕಲಾ ಸೃಷ್ಟೀ ನ ಸಮಾಯೇ ॥೯೪॥ ''ತೂಬ್ರಹ್ಮ'' ಮ್ಹಣತಾ ಯದುರಾಜೇ । ತೇಣೇ ಹರಿಖಾಚೇನಿ ಫುಂಜೇ । ಉದ್ಧವ ನಾಚೇ ಸ್ವಾನಂದಭೋಜೇ । ವೈಕುಂಠರಾಜೇ ತುಷ್ಟಲೇ ॥೯೫॥

ನನ್ನಿಂದ ಗುಣಕರ್ಮಗಳಿಗೆ ಚಂಚಲತ್ವವು ಪ್ರಾಪ್ತವಾಯಿತೆಂದು ಹೇಳಿದರೆ ಸರ್ವ ಪ್ರಪಂಚವು ಸತ್ಯವೆಂದು ತಿಳಿಯಬೇಕಾಗುವುದು. ಆದರೆ ಈ ಜಗತ್ತು ಮಾಯಾಮಯವಾಗಿದ್ದು ಮೃಗಜಲದಂತೆ ಶುದ್ಧವಾದ ಭಾಸಮಾತ್ರವಾಗಿರುವುದು ॥೮೩॥ ತೋರುವ ಪ್ರಪಂಚ ಎಲ್ಲವೂ ಮೃಗಜಲದ ಸಮಾನವಾಗಿರುವುದು. ಕಣ್ಣಿಗೆ ಕಾಣುವುದೆಲ್ಲವೂ ಮಿಥ್ಯೆಯಾಗಿರುವುದೆಂದು ತಿಳಿ. ನಿಜವಾಗಿಯೂ ಸತ್ಯವಾಗಿರುವುದಿಲ್ಲ ॥೮೪॥ ನೀನು ಜನ್ಮ ಮರಣಕ್ಕಿಂತಲೂ ಭಿನ್ನನಾಗಿರುವೆ. ನೀನು ತ್ರಿಗುಣಗಳಿಗೆ ಸ್ಪರ್ಶ ಕೂಡ ಮಾಡುವುದಿಲ್ಲ. ನೀನು ಪ್ರಂಪಚದಿಂದ ಹೇಗೆ ಅಲಿಪ್ತನಾಗಿರುವೆ ಎಂಬುದನ್ನು ಕೇಳು ॥೮೫॥ ಪ್ರಪಂಚದಿಂದ ಅಲಿಪ್ತನಾಗುವುದಕ್ಕಾಗಿ ಇದೇ ಯುಕ್ತಿಯಾಗಿರುವುದು. ಆ ಯುಕ್ತಿಯು ಪ್ರಚೀತಿಯು ಹೇಗಿರುವುದೆಂದರೆ, ಉತ್ಪತ್ತಿ, ಸ್ಥಿತಿ ಮತ್ತು ಲಯ ಇವುಗಳಲ್ಲಿ ಪ್ರಪಂಚದ ನಿಜವಾದ ಅಸ್ತಿತ್ವವು ಇರುವುದಿಲ್ಲ ॥೮೬॥ ಸೃಷ್ಟಿಯ ಉತ್ಪತ್ತಿಯು ಆಗುವುದಕ್ಕಿಂತ ಪೂರ್ವದಲ್ಲಿ ಪ್ರಪಂಚವು ಇರುವುದಿಲ್ಲ. ಸೃಷ್ಟಿಯು ಅಂತ್ಯವಾದ ನಂತರ ಪ್ರಪಂಚವು ಇರುವುದಿಲ್ಲ. ನಡುವಿನ ಅವಸ್ಥೆಯಲ್ಲಿ ಇದು ಭಾಸಮಾತ್ರವಾಗಿರುವುದು. ಆದರೆ ಇದು ಮಾಯಾಮಯವಾದ್ದರಿಂದ ಇದು ಮಿಥ್ಯೆಯಾಗಿರುವುದು ॥೮೭॥ ಸೃಷ್ಟಿಯ ಉತ್ಪತ್ತಿ ಪೂರ್ವದಲ್ಲಿ ಕೇವಲ ಪರಬ್ರಹ್ಮವಿರುವುದು. ಹಾಗೆಯೇ ಸೃಷ್ಟಿಯ ಲಯವಾದ ನಂತರವೂ ಕೂಡ ನಿರುಪಮ ಪರಬ್ರಹ್ಮವು ಉಳಿಯುವುದು. ಮಧ್ಯದ ಕಾಲದಲ್ಲಿ ಅದೇ ಬ್ರಹ್ಮವು ಭ್ರಾಂತ ಜೀವಿಗಳಿಗೆ ಪ್ರಪಂಚರೂಪದಿಂದ ಭಾಸವಾಗುತ್ತಿರುವುದು ॥೮೮॥ ಸೂರ್ಯನ ಉದಯಕ್ಕಿಂತ ಮುಂಚಿತವಾಗಿ ಮೃಗಜಲವು ಇರುವುದಿಲ್ಲ. ಸೂರ್ಯಾಸ್ತವಾದ ನಂತರವೂ ಕೂಡ ಅದು ಕಾಣಿಸುವುದಿಲ್ಲ. ಮಧ್ಯಾಹ್ನ ಕಾಲದಲ್ಲಿ ನೀರಿನಂತೆ ಭಾಸವಾಗುವುದು. ಆದರೆ ಅದರಲ್ಲಿ ನೀರಿನ ಒಂದು ಹನಿಯೂ ಕೂಡ ಇರುವುದಿಲ್ಲ ॥೮೯॥ ಹಗ್ಗದಲ್ಲಿ ಸರ್ಪದ ಭಾಸವಾಗುವುದಕ್ಕಿಂತ ಪೂರ್ವದಲ್ಲಿ ಅಲ್ಲಿ ಹಗ್ಗವೇ ಬಿದ್ದಿರುವುದು. ಅದು ಸರ್ಪದ ಭಾಸವು ಇಲ್ಲದಾಗಲು ಆಗಲೂ ಕೂಡ ಹಗ್ಗವೇ ಇರುವುದು. ಮಧ್ಯದಲ್ಲಿ ಕಾಣುವ ಸರ್ಪವು ಅದು ಭಾಸಮಾನವಾಗಿರುವುದು ಆಗಲೂ ಕೂಡ ಹಗ್ಗವೇ ಹಗ್ಗರೂಪದಿಂದಿರುವುದು ॥೯೦॥ ಹೇ ಉದ್ಧವಾ, ಸೃಷ್ಟಿಯ ಆದಿ ಮತ್ತು ಅಂತ್ಯದ ವಿಚಾರವನ್ನು ಮಾಡಲು ಆರಂಭದಲ್ಲಿ ಮತ್ತು ಕೊನೆಯಲ್ಲಿ ಇರುವ ಯಾವ ಬ್ರಹ್ಮವು ಸತ್ಯವಾಗಿದ್ದು ಮಧ್ಯದಲ್ಲಿ ಭಾಸವಾಗುವ ಪ್ರಪಂಚವು ಸುಳ್ಳೆಂದು ನಿರ್ಣಯಿಸಲ್ಪಡುವುದು. ಇದು ವೇದಶಾಸ್ತ್ರಗಳಿಗೆ ಸಮ್ಮತವಾಗಿರುವುದು ಸತ್ಯವೆಂದು ನೀನು ತಿಳಿ ॥೯೧॥ ಇಂತಹ ಈ ಯಾವ ಮಿಥ್ಯಾ ಪ್ರಪಂಚದ ಆಗುಹೋಗುಗಳು ನಡೆದಿರುವಾಗ್ಗೆ ಅನೇಕ ಪ್ರಕಾರದ ಜನ್ಮಮರಣಗಳ ತಿರುಗಾಟವು ಆಗುತ್ತಿರುವುವು. ಆದರೆ ನಿನಗೆ ಅದರ ಸ್ಪರ್ಶ ಕೂಡ ಆಗುವುದಿಲ್ಲ. ಕಾರಣ ನೀನು ಪ್ರವೃತ್ತಿ ಮತ್ತು ನಿವೃತ್ತಿಯ ಆಚೆಕಡೆ ಇರುವುದರಿಂದ ನಿತ್ಯ ಮುಕ್ತನಾಗಿರುವೆ ॥೯೨॥ ಹೇ ಉದ್ಧವನೇ, ನಿರ್ಗುಣ, ನಿಃಸಂಗ, ನಿರ್ವಿಕಾರ, ಅಜ, ಅವ್ಯಯ, ಅಕ್ಷರ, ಅನಂತ ಮತ್ತು ಅಪರಂಪಾರ ಓಗಿರುವ ಯಾವ ಬ್ರಹ್ಮವು ನೀನಾಗಿರುವೆ ॥೯೩॥ ಈ ಯಾವ ಶ್ರೀಕೃಷ್ಣನ ವಿಚಾರವನ್ನು ಕೇಳಿ ಉದ್ಧವನು ತನ್ನ ಮನದಲ್ಲಿ ಶಕುನವನ್ನು ಕಟ್ಟಿಟ್ಟನು. ಆತನಿಗೆ ಹರ್ಷವಾಯಿತು. ಆನಂದವು ಹೃದಯದಲ್ಲಿ ಹಿಡಿಸದಂತಾಯಿತು. ಆತನಿಗೆ ಇರಲಿಕ್ಕೆ ಸೃಷ್ಟಿಯು ಸಾಲದಾಯಿತು ॥೯೪॥ ''ನೀನು ಬ್ರಹ್ಮನು'' ಎಂದು ಶ್ರೀಕೃಷ್ಣನು ಹೇಳುತ್ತಲೇ ಉದ್ಧವನು ಆದ ಆನಂದದ ಭರದಲ್ಲಿ ಕುಣಿಯಲಾರಂಭಿಸಿದನು. ಇದನ್ನು ಕಂಡು ವೈಕುಂಠದ ಸ್ವಾಮಿ ಶ್ರೀಕೃಷ್ಣನು ಸಂತುಷ್ಟನಾದನು ॥೯೫॥

ಸ್ವಮುಖೇ ತುಷ್ಟೋನಿ ಶ್ರೀಕೃಷ್ಣ । ಮಜ ಮ್ಹಣೇ ''ತೂ ಬ್ರಹ್ಮ ಪೂರ್ಣ'' । ಆಜಿ ಮೀ ಸಭಾಗ್ಯ ಧನ್ಯ ಧನ್ಯ । ಧಾಂವೋನಿ ಶ್ರೀಚರಣ ವಂದಿಲೇ ॥೯೬॥ ''ತೂಚಿ'' ಅಂಗೇ ಪರಬ್ರಹ್ಮ। ಐಸೇ ಬೋಲಿಲಾ ಮೇಘಶ್ಯಾಮ । ತೇಚಿ ಅರ್ಥೀಚೇ ನಿಜವರ್ಮ । ಉದ್ಧವ ಸಪ್ರೇಮ ಪೂಸತ ॥೯೭॥

ಉದ್ಧವ ಉವಾಚ :-

ಜ್ಞಾನಂ ವಿಶುದ್ಧಂ ವಿಪುಲಂ ಯಥೈತದ್ವೈರಾಗ್ಯವಿಜ್ಞಾನಯುತಂ ಪುರಾಣಮ್।
ಆಖ್ಯಾಹೀ ವಿಶ್ವೇಶ್ವರ ವಿಶ್ವಮೂರ್ತೇ ತ್ವದ್ಭಕ್ತಿಯೋಗಂ ಚ ಮಹದ್ವಿಮೃಗ್ಯಮ್ ॥೮॥

ಅರ್ಥ:- ಉದ್ಧವನು ನುಡಿದನು; ವಿಶ್ವರೂಪ ಪರಮಾತ್ಮನೇ, ನೀವೇ ವಿಶ್ವದ ಸ್ವಾಮಿಯಾಗಿರುವಿರಿ, ವೈರಾಗ್ಯ ಮತ್ತು ವಿಜ್ಞಾನದಿಂದ ಕೂಡಿರುವ ನಿಮ್ಮ ಈ ಸನಾತನವಾದ ವಿಶುದ್ಧವಾದ ಜ್ಞಾನವು ಯಾವ ಪ್ರಕಾರವಾಗಿ ವಿಪುಲವಾಗುವುದು? ಮತ್ತು ಬ್ರಹ್ಮದೇವನಿಂದ ಪ್ರಾರ್ಥಿಸಲ್ಪಟ್ಟ ನಿನ್ನ ಭಕ್ತಿಯೋಗವು ಯಾವ ರೀತಿಯಿಂದ ಪ್ರಾಪ್ತವಾಗುವುದು ಇದನ್ನು ಹೇಳಿರಿ.

ವಿಷ್ವಕ್ಸೇನಾ ವಿಶ್ವೇಶ್ವರಾ । ವಿಶ್ವಮೂರ್ತಿ ವಿಶ್ವಂಭರಾ । ಜೇಣೇ ಪಾವಿಜೇ ಬ್ರಹ್ಮಸಾಕ್ಷಾತ್ಕಾರಾ । ತ್ಯಾ ಜ್ಞಾನನಿರ್ಧಾರಾ ಮಜ ಸಾಂಗ ॥೯೮॥ ನುಸಧೇ ಸಾಂಗತೀ ಜ್ಞಾನ । ತೇ ಕೇವಳ ಮೂಢ ಜಾಣ । ಸಾಂಗ ತೂ ವೈರಾಗ್ಯಯುಕ್ತೀ ತೀಕ್ಷ್ಣ । ಜೇ ಛೇದಿ ಬಂಧನ ಜೀವಾಂಚೇ॥೯೯॥ ಜ್ಞಾನೇವೀಣ ವೈರಾಗ್ಯ ಆಂಧಳೇ। ತೇ ಅರಥೀ ದರಡೀ ಆದಳೇ । ವೈರಾಗ್ಯೇವೀಣ ಜ್ಞಾನ ಪಾಂಗಳೇ । ಯುಕ್ತಿ ದೇಖೇ ಪರೀ ನ ಚಲೇ ಪುರುಷಾರ್ಥ ॥೧೦೦॥ ವಿವೇಕ ವೈರಾಗ್ಯ ದೋನೀ । ಪ್ರವೇಶಲ್ಯಾ ಹೃದಯಭುವನೀ । ತೋ ವಿಷಯಾವಸ್ಥಾ ನಿರಸೂನೀ । ಸೋಹಂಪಣೇ ಜೀವ ವರ್ತೇ ॥೧೦೧॥ ಜಂವ ಜ್ಞಾನಾಸೀ ನ ಭೇಟೇ ವಿಜ್ಞಾನ । ತಂವ ನ ನಿರಸೇ ಜೀವಪಣ । ಯಾಲಾಗೀ ಸಾಂಗಾವೇ ವಿಜ್ಞಾನ । ಜೇ ಜೀವಶಿವಪಣ ನಿವಾರೀ ॥೧೦೨॥ ಅಸಂಭಾವನಾದೋಷಶೂನ್ಯ । ತೇ ಬೋಲಿಜೇ ''ಶುದ್ಧ-ಜ್ಞಾನ''। ಜೇ ವಿಪರೀತಭಾವನೇವೀಣ । ತ್ಯಾತೇ ಸಜ್ಞಾನ ''ವಿಪುಲ'' ಮ್ಹಣತೀ॥೧೦೩॥ ಐಸೇ ವಿಶುದ್ಧ -ವಿಪುಲ-ಜ್ಞಾನ । ತದ್ಯುಕ್ತ ವೈರಾಗ್ಯ-ವಿಜ್ಞಾನ । ತ್ಯಾಮಾಜೀಹೀ ಶ್ರೇಷ್ಠ ತುಝೇ ಭಜನ । ಕೃಪಾ ಕರೂನ ಸಾಂಗಿಜೇ ॥೧೦೪॥ ಜ್ಞಾನ-ವಿಜ್ಞಾನ-ವೈರಾಗ್ಯಸ್ಥಿತೀ । ಜುನಾಟ ತುಝೀ ಭಗವದ್ಭಕ್ತೀ । ಮಜ ಸಾಂಗಾವೀ ಸುನಿಶ್ಚಿತೀ । ಕೃಪಾಮೂರ್ತೀ ಶ್ರೀಕೃಷ್ಣಾ ॥೧೦೫॥ ತುಝೀ ಉತ್ತಮಭಕ್ತೀಕಾರಣೇ । ಸಾಧು ಪಡಲೇ ಗವೇಷಣೇ । ಧರಣೇ ಬೈಸಲೇ ಜೀವೇಪ್ರಾಣೇ । ತೇ ಭಕ್ತಿ ಸಾಂಗಣೇ ಮಜಲಾಗೀ ॥೧೦೬॥ ತುಝೀ ಕರಿತಾ ಉತ್ತಮ ಭಕ್ತೀ । ತ್ರಿವಿಧ ತಾಪ ಕ್ಷಯಾ ಜಾತೀ । ಆಪುಲೀ ಲಾಭೇ ನಿಜಮುಕ್ತೀ । ಉದ್ಧವ ತೇ ಅರ್ಥೀ ವಿನವೀತ ॥೧೦೭॥

ಶ್ರೀಕೃಷ್ಣನು ಸಂತುಷ್ಟನಾಗಿ ತನ್ನ ಮುಖದಿಂದ ನೀನು ಪೂರ್ಣ ಬ್ರಹ್ಮನಾಗಿರುವೆ ಎಂದು ನನಗೆ ಹೇಳಿದನು. ಅಂದಮೇಲೆ ಇಂದು ನಾನು ನಿಜವಾಗಿಯೂ ಧನ್ಯನಾದೆನು. ನಾನು ಭಾಗ್ಯವಂತನು ಎಂದು ಮನದಲ್ಲಿ ತಂದು ಉದ್ಧವನು ಶ್ರೀಕೃಷ್ಣನ ಚರಣಗಳಿಗೆ ವಂದಿಸಿದನು ॥೯೬॥ ನೀನು ಸ್ವತಃ ಪರಬ್ರಹ್ಮನಾಗಿರುವೆ ಎಂದು ಶ್ರೀಕೃಷ್ಣನು ಹೇಳಿದನು. ಅದರ ಮರ್ಮವನ್ನು ಉದ್ಧವನು ಶ್ರೀಕೃಷ್ಣನಿಗೆ ಕೇಳಲಾರಂಭಿಸಿದನು ॥೯೭॥

ಹೇ ವಿಷ್ವಕ್ಸೇನಾ, ವಿಶ್ವೇಶ್ವರಾ, ವಿಶ್ವಮೂರ್ತೇ, ವಿಶ್ವಂಭರಾ, ಶ್ರೀಕೃಷ್ಣಾ, ಯಾವುದರಿಂದ ಆತ್ಮಸಾಕ್ಷಾತ್ಕಾರವಾಗುವುದೋ ಅಂತಹ ನಿಶ್ಚಿತವಾದ ಜ್ಞಾನವನ್ನು ನನಗೆ ಹೇಳಿರಿ ॥೯೮॥ ಕಾರಣ ಕೇವಲ ಜ್ಞಾನವನ್ನು ಹೇಳುವವರು ನಿವ್ವಳ ಮೂರ್ಖರಾಗಿರುವುದೆಂಬುದು ನಾನು ಬಲ್ಲೆನು. ಅದಕ್ಕಾಗಿ ಜೀವದ ಬಂಧನವು ಯಾವುದರಿಂದ ಸಹಜವಾಗಿ ಬಿಡುಗಡೆಯಾಗುವುದೋ, ಅಂತಹ ತೀಕ್ಷ್ಣ ವೈರಾಗ್ಯದ ಯುಕ್ತಿಯನ್ನು ನನಗೆ ಹೇಳಬೇಕು ॥೯೯॥ ಏಕೆಂದರೆ ಜ್ಞಾನವಿಲ್ಲದ ವೈರಾಗ್ಯವು ಅದು ಕುರುಡಾಗಿರುವುದು. ಅದು ತೆಗ್ಗು ದಿನ್ನೆಗಳಿಗೆ ಬಡೆಯುತ್ತಾ ಸಾಗುತ್ತಿರುವುದು. ವೈರಾಗ್ಯವಿಲ್ಲದ ಜ್ಞಾನವು ಇದು ಕುಂಟಾಗಿರುವುದು. ಇದಕ್ಕೆ ಯುಕ್ತಿಯು ತಿಳಿಯುತ್ತದೆ. ಆದರೆ ಅದರಿಂದ ಯಾವ ಪುರುಷಾರ್ಥವೂ ಸಾಧಿಸುವುದಿಲ್ಲ ॥೧೦೦॥ ಅದಕ್ಕಾಗಿ ಹೃದಯ ಮಂದಿರದಲ್ಲಿ ವಿವೇಕ ಮತ್ತು ವೈರಾಗ್ಯ ಈ ಎರಡೂ ಪ್ರವೇಶವಾದವೆಂದರೆ, ಆಗ ವಿಷಯಗಳ ನಿರಸನೆಯನ್ನು ಮಾಡಿ ಜೀವವು ನಾನು ಬ್ರಹ್ಮನು ಎಂದು ತಿಳಿದು ಆಚರಣೆಗಳನ್ನು ಮಾಡುವುದು ॥೧೦೧॥ ಎಲ್ಲಿಯವರೆಗೆ ಜ್ಞಾನಕ್ಕೆ ವಿಜ್ಞಾನದ ಜೊತೆಯು ದೊರಕುವುದಿಲ್ಲವೋ, ಅಲ್ಲಿಯವರೆಗೆ ಜೀವತ್ವದ ಭಾವನೆಯು ನಿರಸನೆಯಾಗುವುದಿಲ್ಲ. ಅದಕ್ಕಾಗಿ ಜೀವಶಿವದ ನಿರಸನೆಯನ್ನು ಮಾಡುವಂತಹ ವಿಜ್ಞಾನವನ್ನು ನನಗೆ ಹೇಳಬೇಕು ॥೧೦೨॥ ಯಾವುದರಲ್ಲಿ ಅಸಂಭಾವನೆಯ ದೋಷವು ತಿಲಮಾತ್ರಕ್ಕೂ ಕೂಡ ಇರಲು ಸಾಧ್ಯವಿಲ್ಲವೋ ಅದಕ್ಕೆ ಶುದ್ಧ ಜ್ಞಾನವೆಂದು ಹೇಳುವರು. ಯಾವುದರಲ್ಲಿ ವಿಪರೀತ ಭಾವನೆಯು ಇರುವುದಿಲ್ಲವೋ ಅದಕ್ಕೆ ವಿದ್ವಾನ ಜನರು ವಿಪುಲಜ್ಞಾನವೆಂದು ಹೇಳುವರು ॥೧೦೩॥ ಹೀಗಿರುವ ಯಾವ ಅತ್ಯಂತ ಶುದ್ಧವಾದ ಮತ್ತು ವಿಪುಲ ಜ್ಞಾನದಿಂದ ಕೂಡಿಕೊಂಡಿರುವ ವೈರಾಗ್ಯವು ಮತ್ತು ವಿಜ್ಞಾನವು ಇವುಗಳಲ್ಲಿ ಶ್ರೇಷ್ಠವಾಗಿರುವ ನಿನ್ನ ಭಜನೆ, ಕೃಪೆ ಮಾಡಿ ಇವುಗಳನ್ನು ನನಗೆ ಹೇಳು ॥೧೦೪॥ ಹೇ ಕೃಪಾಮೂರ್ತಿಯಾದ ಶ್ರೀಕೃಷ್ಣನೇ, ಜ್ಞಾನ, ವಿಜ್ಞಾನ, ವೈರಾಗ್ಯ ಇವುಗಳ ಸಮೇತವಾದ ನಿನ್ನ ಹಿಂದಿನಕಾಲದ ಭಕ್ತಿಯನ್ನು ನನಗೆ ನಿಶ್ಚಯ ಪೂರ್ವಕವಾಗಿ ಹೇಳು ॥೧೦೫॥ ನಿನ್ನ ಈ ಯಾವ ಶ್ರೇಷ್ಠವಾದ ಭಕ್ತಿಗಾಗಿ ಮಹಾ ಮಹಾ ಸಾಧುಗಳವರೂ ಕೂಡ ನಿನ್ನ ಶೋಧವನ್ನು ಮಾಡುತ್ತ ತಿರುಗುತ್ತಿರುವರು. ಅವರು ಜೀವ ಪ್ರಾಣವನ್ನು ಒತ್ತೆ ಇಟ್ಟು ಸತ್ಯಾಗ್ರಹವನ್ನು ಹೂಡಿರುವರು. ಆ ಭಕ್ತಿಯನ್ನು ನನಗೆ ಹೇಳು ॥೧೦೬॥ ನಿನ್ನ ಉತ್ತಮವಾದ ಭಕ್ತಿಯನ್ನು ಮಾಡಲು ತ್ರಿವಿಧ ತಾಪಗಳು ಇಲ್ಲದಾಗಿ ಹೋಗುವುವು. ಮತ್ತು ಮುಕ್ತಿಯು ಅನಾಯಾಸವಾಗಿ ಲಭಿಸುವುದು. ಆದ್ದರಿಂದಲೇ ಇದಕ್ಕಾಗಿ ಉದ್ಧವನು ವಿನಂತಿಯನ್ನು ಮಾಡುತ್ತಿರುವನು ॥೧೦೭॥

ತಾಪತ್ರಯೇಣಾಭಿಹತಸ್ಯ ಘೋರೇ ಸಂತಪ್ಯಮಾನಸ್ಯ ಭವಾಧ್ವನೀಶ ।
ಪಶ್ಯಾಮಿ ನಾನ್ಯಚ್ಛರಣಂ ತವಾಂಘ್ರಿದ್ವಂದ್ವಾತಪತ್ರಾದಮೃತಾಭಿವರ್ಷಾತ್ ॥೯॥

ಅರ್ಥ:- ಹೇ ಭಗವಂತನೇ, ತ್ರಿವಿಧ ತಾಪದಿಂದ ವ್ಯಾಕುಲರಾಗಿರುವ ಮತ್ತು ಘೋರವಾದ ಸಂಸಾರ ಮಾರ್ಗದಲ್ಲಿ ಸಂತಪ್ತರಾಗುತ್ತಿರುವ ಪುರುಷರಿಗೆ ಚರಣದ್ವಯರೂಪ ನಿನ್ನ ಛತ್ರದಲ್ಲಿ ಮತ್ತು ಅಮೃತ ಮಳೆಗರೆಯುವ ನಿನ್ನ ಚರಣದ್ವಯಕ್ಕಿಂತ ರಕ್ಷಣೆ ಮಾಡುವ ಬೇರೆ ಯಾವುದೂ ನನಗೆ ಕಾಣಿಸುವುದಿಲ್ಲ.

ಜೇ ತ್ರಿವಿಧ ತಾಪೇ ತಾಪಲೇ । ಜೇ ಕಾಮಕ್ರೋಧೀ ಜರ್ಜರ ಕೇಲೇ । ಆಶಾತೃಷ್ಣಾ ವಿಸಂಚಿಲೇ । ಜೇ ನಿರ್ಬುಜಲೇ ಜನ್ಮ ಮರಣೇ ॥೧೦೮॥ ಸಂಸಾರಮಾರ್ಗ ಅತಿಘೋರ । ದುಃಖೇ ನುಲ್ಲಂಘವೇ ದುಸ್ತರ । ಐಸೇ ಶ್ರಮಲೇ ಜೇ ನರ । ತ್ಯಾಂಸೀ ನಿಜಛತ್ರ ಹರಿಪಾದಪದ್ಮ ॥೧೦೯॥ ತುರ್ಝ್ಯಾ ಚರಣಾರವಿಂದಾಪರತೇ । ಶರಣ್ಯ ನ ದೇಖೋ ಆಣಿಕಾಂತೇ । ಯಾಲಾಗೀ ಕಾಯಾವಾಚಾಚಿತ್ತೇ । ಶರಣ ಭಾವಾರ್ಥೇ ತುಜ ಆಲೋ ॥೧೧೦॥ ಛತ್ರ ನಿವಾರೀ ಕೇವಳ ತಾಪ । ಚರಣಛತ್ರಾಚೇ ಭಿನ್ನ ರೂಪ । ತ್ರಿವಿಧ ತಾಪೇಂಸೀ ಸಂತಾಪ । ನಿರಸೋನಿ ನಿಷ್ಪಾಪ ಕರೀ ಜನ ॥೧೧೧॥ ಏಕ ಶರಣ ನಿಜಚಿತ್ತೇ । ಏಕ ವೈರೇ ಮಿಸಳಲೇ ತೂತೇ । ಏಕ ತೇ ಭಜನಭಾವಾರ್ಥೇ । ಏಕ ತೇ ಭಯಾರ್ತೇ ಸ್ಮರಲೇ ತೂತೇ ॥೧೧೨॥ ಏಕ ತೇ ಸುಹೃದತ್ವೇ ಸಗೋತ್ರ ।ಏಕಾಚೇ ಕೇವಳ ಸ್ನೇಹಸೂತ್ರ । ಏಕಾ ಅಂಗಸಂಗ ಕಾಮತಂತ್ರ । ಏಕ ಆಜ್ಞಾಧಾರಕ ನೇಮಸ್ತ ॥೧೧೩॥ ಏವಂ ನಾನಾಪರೀ ವಿಚಿತ್ರ । ಜಿಹೀ ಠಾಕಿಲೇ ಚರಣಛತ್ರ । ಭವಭಯ ಜೇ ಮಹಾಘೋರ । ತೇ ತ್ಯಾಸಮೋರ ಹೋ ನ ಶಕೇ ॥೧೧೪॥ ಭಕ್ತ ವೈರೀ ಆಣಿ ಸುಹೃದ । ಅವಘ್ಯಾ ದೇಣೇ ನಿಜ ಐಕ್ಯಪದ । ಬಾಪ ಉದಾರತಾ ಅಗಾಧ । ತೂ ಸ್ವಾನಂದಬೋಧ ಸರ್ವಾಂಚಾ ॥೧೧೫॥ ಹೋಮೇ ಜೇ ದೀಜೇ ಅಗ್ನೀವರೀ । ತೇ ಅಗ್ನೀ ಆಪುಲ್ಯಾ ಐಸೇ ಕರೀ । ಮಾ ಅವಚಟೇ ಪಡಿಲ್ಯಾವರೀ । ತೇಹೀ ಕರೀ ತೈಸೇಂಚಿ ॥೧೧೬॥ ಏವಂ ನಾನಾಯೋಗೇ ಗೋವಿಂದಾ । ಜೇ ಮೀನಲೇ ತುಝಿಯಾ ಸಂಬಂಧಾ । ತ್ಯಾಂಚೀ ನಿರಸೋನಿ ಸಂಸಾರಬಾಧಾ । ಸಮತ್ವೇ ನಿಜಪದಾ ತೂ ನೇಸೀ ॥೧೧೭॥ ತ್ಯಾ ತುಝೇ ಚರಣಛತ್ರ ಯೇಥೇ । ನಿವಾರೀ ತ್ರಿವಿಧ ತಾಪಾಂತೇ । ಸದಾ ವರ್ಷೇ ಪರಮಾಮೃತೇ । ಶರಣ ಚರಣಾಂತೇ ಯಾಲಾಗೀ ॥೧೧೮॥ ಜ್ಯಾ ಸಂಸಾರಭಯಾಭೇಣ । ತುರ್ಝ್ಯಾ ಚರಣಾ ಆಲೋ ಶರಣ । ತ್ಯಾ ಭವಭಯಾಚೇ ನಿರೂಪಣ । ಉದ್ಧವ ಆಪಣ ಸಾಂಗತ ॥೧೧೯॥

ಯಾವ ಜನರು ತ್ರಿವಿಧ ತಾಪಗಳಿಂದ ತ್ರಸ್ತರಾಗಿರುವರೋ, ಕಾಮಕ್ರೋಧಗಳಿಂದ ಜರ್ಜರಿತರಾಗಿರುವರೋ, ಆಶೆ-ತೃಷ್ಣೆಗಳಿಂದ ಪರಿಪೂರ್ಣವಾಗಿ ತುಂಬಿರುವರೋ, ಮತ್ತು ಜನ್ಮ ಮರಣದಲ್ಲಿ ಸಿಲುಕಿಕೊಂಡಿರುವರೋ ॥೧೦೮॥ ಘನಘೋರವಾದ ಸಂಸಾರದ ಮಾರ್ಗವನ್ನು ಬಹು ಕಷ್ಟಗಳಿಂದಲೂ ಆಕ್ರಮಣ ಮಾಡಲು ಸಮರ್ಥರಾಗಿರುವುದಿಲ್ಲವೋ, ಅವರಿಗೆ ಶ್ರೀಹರಿಯ ಚರಣಕಮಲಗಳ ಶೀತಲವಾದ ಆಶ್ರಯವಿರುವುದು ॥೧೦೯॥ ನಿನ್ನ ಚರಣ ಕಮಲಗಳ ಹೊರತಾಗಿ ಶರಣು ಹೋಗಲು ಬೇರೆ ಯಾವ ಸ್ಥಾನವೇ ಕಾಣುವುದಿಲ್ಲ. ಆದ್ದರಿಂದ ಕಾಯಾ-ವಾಚಾ-ಮನದಿಂದ ಭಕ್ತಿಭಾವದಿಂದ ನಾನು ನಿನಗೆ ಶರಣು ಬಂದಿರುವೆನು ॥೧೧೦॥ ಛತ್ರವು ಕೇವಲ ಸೂರ್ಯನ ತಾಪವನ್ನು ಮಾತ್ರ ನಿವಾರಣೆ ಮಾಡುವುದು. ಆದರೆ ನಿನ್ನ ಚರಣರೂಪ ಛತ್ರವು ತ್ರಿವಿಧ ತಾಪಗಳ ನಾಶವನ್ನು ಮಾಡಿ ಜನರನ್ನು ನಿಷ್ಪಾಪರನ್ನಾಗಿ ಮಾಡುವುದು ॥೧೧೧॥ ಕೆಲವರು ನಿನಗೆ ಮನಃಪೂರ್ವಕವಾಗಿ ಶರಣಾಗುವರು, ಕೆಲವರು ನಿನ್ನಲ್ಲಿ ವಿರೋಧ ಭಕ್ತಿಯಿಂದ ಸಮರಸರಾಗುವರು, ಕೆಲವರು ಪ್ರೇಮಭಾವದಿಂದ ಶರಣಾಗುವರು, ಕೆಲವರು ಭಯದಿಂದ ವ್ಯಾಕುಲರಾಗಿ ನಿನ್ನನ್ನು ಸ್ಮರಿಸುವರು ॥೧೧೨॥ ಕೆಲವರು ನಿನ್ನ ಕುಲದಲ್ಲಿ ಜನ್ಮ ಧರಿಸಿ ನಿನ್ನ ಸುಹೃದರಾಗುವರು, ಕೆಲವರು ನಿನ್ನಲ್ಲಿ ಸ್ನೇಹಪ್ರೀತಿಯಿಂದ ಕೂಡುವರು, ಕೆಲವರು ಕಾಮಾಸಕ್ತರಾಗಿ ನಿನ್ನ ಸಂಗವನ್ನು ಮಾಡುವರು. ಇನ್ನೂ ಕೆಲವರು ಆಜ್ಞಾಧಾರಕರಾಗಿರುವರು ॥೧೧೩॥ ಈ ಪ್ರಕಾರವಾಗಿ ಅನೇಕ ರೀತಿಯಲ್ಲಿ ನಿನ್ನ ಚರಣರೂಪ ಛತ್ರದ ಆಶ್ರಯವನ್ನು ಪಡೆಯುವರು. ಅವರಲ್ಲಿ ಸಂಸಾರದ ಭಯವು ಉಳಿಯುವುದಿಲ್ಲ ॥೧೧೪॥ ಭಕ್ತನಾಗಿರಲಿ, ವೈರಿಯಾಗಿರಲಿ ಅಥವಾ ಆಪ್ತನಾಗಿರಲಿ, ಅವರಿಗೆಲ್ಲರಿಗೂ ನೀನು ನಿನ್ನ ನಿಜಪದವಿಯನ್ನು ಕೊಡುವೆ. ಇದು ನಿನ್ನ ಅಲೌಕಿಕ ಔದಾರ್ಯವಾಗಿರುವುದು. ನೀನು ಸರ್ವರಿಗೂ ಸ್ವಾನಂದ ಬೋಧೆಯನ್ನು ಕೊಡುವೆ ॥೧೧೫॥ ಹೋಮ ಹವನಗಳನ್ನು ಮಾಡಿ ಅಗ್ನಿಗೆ ಯಾವ ಯಾವ ಪದಾರ್ಥಗಳನ್ನು ಅರ್ಪಿಸಲ್ಪಡುವುದೋ, ಆಗ ಅಗ್ನಿಯು ಎಲ್ಲವನ್ನೂ ತನ್ನಂತೆ ಮಾಡಿಕೊಳ್ಳುವುದು. ಅಕಸ್ಮಾತ್ ಆ ಅಗ್ನಿಯಲ್ಲಿ ಇನ್ನು ಏನಾದರು ಬಿದ್ದರೂ ಕೂಡ ಅದರ ಗತಿಯು ಅದೇ ಆಗುವುದು ॥೧೧೬॥ ಈ ಪ್ರಕಾರವಾಗಿ ಹೇ ಗೋವಿಂದನೇ, ಭಿನ್ನ ಭಿನ್ನ ಭಾವಗಳಿಂದ ಬಂದವರಿಗೆಲ್ಲರಿಗೂ ಅವರ ಸಂಸಾರ ಬಾಧೆಯನ್ನು ಇಲ್ಲದಾಗಿ ಮಾಡಿ ನೀನು ಅವರಿಗೆ ಸಮತ್ವದಿಂದ ಆತ್ಮಪದಕ್ಕೆ ಒಯ್ಯುವೆ ॥೧೧೭॥ ಈ ಪ್ರಕಾರದ ನಿನ್ನ ಚರಣಕಮಲರೂಪವಾದ ಛತ್ರವು ತ್ರಿವಿಧ ತಾಪಗಳನ್ನು ನಾಶಮಾಡಿ ಪರಮಾಮೃತವನ್ನು ಸತತವಾಗಿ ಮಳೆಗರೆಯುವುದು. ಆದ್ದರಿಂದ ನಾನು ನಿನ್ನ ಚರಣಕಮಲಗಳಿಗೆ ಶರಣು ಬಂದಿರುವೆನು ॥೧೧೮॥ ಯಾವ ಸಂಸಾರಭಯದ ಕಾರಣವಾಗಿ ನಾನು ನಿನ್ನ ಚರಣಗಳಿಗೆ ಶರಣು ಬಂದಿರುವೆನೋ, ಆ ಯಾವ ಸಂಸಾರಭಯದ ವರ್ಣನೆಯನ್ನು ಮಾಡುವೆ ಎಂದು ಉದ್ಧವನು ಹೇಳಿದನು ॥೧೧೯॥

ದಷ್ಟಂ ಜನಂ ಸಂಪತಿತಂ ಬಿಲೇಽಸ್ಮಿನ್ ಕಾಲಾಹಿನಾ ಕ್ಷುದ್ರಸುಖೋರುತರ್ಷಮ್ ।
ಸಮುದ್ಧರೈನಂ ಕೃಪಯಾಪವರ್ಗ್ಯೈರ್ವಚೋಭಿರಾಸಿಂಚ ಮಹಾನುಭಾವ ॥೧೦॥

ಅರ್ಥ:- ಹೇ ಮಹಾನುಭವ ಈಶ್ವರನೇ, ನಿಮ್ಮ ಈ ಸೇವಕನು ಕತ್ತಲಾದ ಬಾವಿಯಲ್ಲಿ ಬಿದ್ದಿರುವನು. ಕಾಲರೂಪ ಸರ್ಪವು ಆತನಿಗೆ ಕಚ್ಚುತ್ತಲೇ ಇದೆ. ಆದರೂ ಕೂಡ ವಿಷಯಗಳ ಕ್ಷುದ್ರಸುಖದ ತೀವ್ರ ತೃಷ್ಣೆಯು ತಣ್ಣಗಾಗುವುದಿಲ್ಲ. ಅದು ಬೆಳೆಯುತ್ತಲೇ ಸಾಗಿದೆ. ನೀವು ಕೃಪೆ ಮಾಡಿ ಉದ್ಧರಿಸಿರಿ ಮತ್ತು ಇದರಿಂದ ಮುಕ್ತನನ್ನಾಗಿ ಮಾಡುವ ಅಮೃತಮಯ ವಾಣಿಯ ಮಳೆಗರೆಯಿರಿ.

ಸಂಸಾರಕುಹರಾಮಾಜೀ ಜನ । ಗೃಹದಾರಾಕೂಪೀ ಪಡಲೇ ಜಾಣ । ತ್ಯಾಹೀ ಮಾಜೀ ದುಃಖ ಗಹನ । ಕಾಳಸರ್ಪೇ ದಾರುಣ ಡಂಖಿಲೇ ॥೧೨೦॥ ತ್ಯಾ ಕಾಳಸರ್ಪಾಚೇ ವಿಖ। ಕ್ಷಣಕ್ಷಣಾ ಚಢೇ ದೇಖ । ಅಭಿಮಾನೇ ಭುಲಲೇ ಲೋಕ । ವಿಷಯಸುಖ ವಾಂಛಿತೀ ॥೧೨೧॥ ನವಲ ಕಾಳಸರ್ಪಾಚಾ ಪಡಿಪಾಡು । ವಿಷಪ್ರಾಯ ವಿಷಯ ಕೇಲೇ ಗೋಡು । ಗೋಡಾಂಚಾ ಗೋಡ ಪರಮಾರ್ಥ ದೃಢು । ತೋ ಕೇಲಾ ಕಡೂ ಜೀವೇಭಾವೇ ॥೧೨೨॥ ವಿಖಾಹೂನಿ ವಿಷಯ ಅಧಿಕ । ವಿಖ ಏಕ ವೇಳಾ ಮಾರಕ । ವಿಷಯೋ ಪುನಃ ಪುನಃ ಘಾತಕ । ಕಾಳಸರ್ಪೇ ಲೋಕ ಭುಲವಿಲೇ ॥೧೨೩॥ ವಿಷಯ ತೋ ಕೇವಳ ವಿಖ । ತ್ಯಾಲಾಗೀ ಭುಲಲೇ ಮೂರ್ಖ । ವಿಷಯಾಂಚೀ ತೃಷ್ಣಾ ದೇಖ । ಅಧಿಕಾಧಿಕ ವಾಢವಿತೀ ॥೧೨೪॥ ಐಸೇ ದುಃಖನಿಮಗ್ನ ಜೇ ಜನ । ತ್ಯಾಂಚೇ ಕರಾವೇ ಜೀ ಉದ್ಧರಣ । ಮ್ಹಣಶೀಲ ''ಹೇ ಕರಿತೀಲ ಸಾಧನ । ತೈ ಉದ್ಧರಣ ಕರೀನ ಮೀ ''॥೧೨೫॥ ಸ್ವಾಮೀ ತುಝೀ ಕೃಪಾ ನ ಹೋತಾ । ಕೋಟ್ಯಾನುಕೋಟೀ ಸಾಧನ ತೇ ವೃಥಾ । ತುಝೀ ಕೃಪಾ ಜಾಹಲಿಯಾ ಅಚ್ಯುತಾ । ಭವವ್ಯಥಾ ಸ್ಪರ್ಶೇನಾ ॥೧೨೬॥ ಐಕೇ ಕೃಪಾಳುವಾ ಶ್ರೀಅನಂತಾ । ತುಝ್ಯಾ ಮೋಕ್ಷಫಳರೂಪ ಜ್ಯಾ ಕಥಾ । ತೇಣೇ ಅಮೃತೇ ಶಿಂಪೋನಿ ಕೃಷ್ಣನಾಥಾ । ಜನಾ ಸಮಸ್ತಾ ಉದ್ಧರೀ ॥೧೨೭॥ ತುರೆಝೀ ಮುಖೀಚೇ ಕಥಾಪೀಯೂಖ । ಬಿಂದುಮಾತ್ರ ಲಾಭತಾ ದೇಖ । ಭವಸರ್ಪಾಚೇ ಉತರೇ ವಿಖ । ಉಪಜವೀ ಸುಖ ಸ್ವಾನಂದೇ ॥೧೨೮॥ ''ಸಕಳ ಜನಾಂಚ್ಯಾ ವಿಷಯೀ'' । ಮ್ಹಣಸೀ ಆಗ್ರಹ ಕಾ ತುಝ್ಯಾ ಠಾಯೀ । ಜನ ಮಾತೇ ಪ್ರಾರ್ಥಿತ ನಾಹೀ'' । ದೇವಾ ಐಸೇ ಕಾಂಹೀ ಕಲ್ಪಿಸೀ ॥೧೨೯॥ ಆಂಧಳೇ ಅಂಧಕೂಪೀ ಪಡತಾ । ದೇಖಣೇನೀ ಲಾವಾವೇ ಸತ್ಪಥಾ । ತೇವೀ ಜ್ಞಾನಾಂಧ ದುಃಖೀ ಬುಡತಾ । ಉದ್ಧರಾವಯಾ ತತ್ತ್ವತಾ ಮೀ ಪ್ರಾರ್ಥಿತಸೇ ॥೧೩೦॥ ಜನ ಅಂಧ ಕಾ ಜಾಹಲೇ ಮ್ಹಣಸೀ । ಸಂಸಾರಸರ್ಪೇ ಗ್ರಾಸಿಲೇ ತ್ಯಾಂಸೀ । ಯಾಲಾಗೀ ವಿಸರೋನಿ ನಿಜಸುಖಾಸೀ । ವಿಷಯಸುಖಾಸೀ ಲೋಧಲೇ ॥೧೩೧॥

ಈ ಎಲ್ಲ ಜನರು ಸಂಸಾರರೂಪ ಗುಹೆಯಲ್ಲಿ ಸಿಲುಕಿಕೊಂಡು, ಮನೆಮಾರು, ಸ್ತ್ರಿ-ಪುತ್ರ ಈ ಪ್ರಕಾರದ ಬಾವಿಯಲ್ಲಿ ಬಿದ್ದಿರುವರು. ಅಲ್ಲಿ ಅವರಿಗೆ ಕಾಲರೂಪ ಸರ್ಪವು ಕಚ್ಚುತ್ತಿರುವುದು. ಅದರ ವೇದನೆಯು ಅತ್ಯಂತ ಭಯಾನಕವಾಗಿರುವುದು ॥೧೨೦॥ ಆ ಯಾವ ಕಾಲರೂಪ ಸರ್ಪದ ವಿಷವು ಕ್ಷಣಕ್ಷಣಕ್ಕೆ ಏರುತ್ತಲೇ ಇರುವುದು. ಆದರೂ ಕೂಡ ಜನರು ಅಭಿಮಾನಕ್ಕೆ ಭುಲಾಯಿಸಿ ವಿಷಯ ಸುಖದ ಇಚ್ಛೆಯನ್ನು ಮಾಡುವರು ॥೧೨೧॥ ಕಾಲಸರ್ಪದ ಪ್ರತಾಪವು ಅತಿಶಯವಾಗಿ ವಿಲಕ್ಷಣವಾಗಿರುವುದು. ಅದು ವಿಷದಂತಿರುವ ವಿಷಯಗಳನ್ನು ಸಿಹಿಯನ್ನಾಗಿ ಮಾಡಿರುವುದು. ಸಿಹಿಯಲ್ಲಿಯೇ ಸಿಹಿಯಾಗಿರುವ ಯಾವ ಇಂತಹ ಪರಮಾರ್ಥವನ್ನು ಜೀವಭಾವದಿಂದ ವಿಷವನ್ನಾಗಿ ಮಾಡಿರುವುದು ॥೧೨೨॥ ಈ ವಿಷಯಗಳು ವಿಷಕ್ಕಿಂತಲೂ ಮಹಾಭಯಂಕರ ವಿಷವಾಗಿರುವುವು. ಕಾರಣ ವಿಷವು ಒಂದೇ ಸಲ ಸಾಯಿಸುವುದು. ಆದರೆ ವಿಷಯಗಳು ಪುನಃ ಪುನಃ ಮನುಷ್ಯರ ಘಾತವನ್ನು ಮಾಡುತ್ತಿರುವುದು. ಇಷ್ಟೊಂದು ಕಾಲಸರ್ಪವು ಜನರನ್ನು ಭುಲಾಯಿಸಿಬಿಟ್ಟಿದೆ ॥೧೨೩॥ ವಿಷಯವು ಇದು ಕೇವಲ ಶುದ್ಧವಾದ ವಿಷವಿರುವುದು. ಮೂರ್ಖ ಜನರು ಇದಕ್ಕೆ ಭುಲಾಯಿಸುವರು. ವಿಷಯಗಳ ತೃಷ್ಣೆಯನ್ನು ಹೆಚ್ಚು ಹೆಚ್ಚಾಗಿ ಬೆಳೆಸಲು ಪ್ರಯತ್ನಿಸುತ್ತಿರುವರು ॥೧೨೪॥ ಹೀಗೆ ಯಾರು ದುಃಖಗಳಲ್ಲಿ ಪೂರ್ಣವಾಗಿ ಮುಳುಗಿರುವರೋ, ಅವರ ಉದ್ಧಾರವನ್ನು ಮಾಡಬೇಕು. ಹಾಗಾದರೆ ಅವರು ಸಾಧನೆಗಳನ್ನು ಮಾಡಲಿ, ಅಂದರೆ ನಾನು ಅವರನ್ನು ಉದ್ಧರಿಸುವೆನು ಎಂದು ನೀನು ಹೀಗೆ ಕದಾಚಿತ್ ಹೇಳಬಹುದು ॥೧೨೫॥ ಆದರೆ ಹೇ ಸ್ವಾಮಿಯೇ, ನಿಮ್ಮ ಕೃಪೆ ಇಲ್ಲದೇ ಕೋಟ್ಯಾವಧೀ ಸಾಧನೆಗಳನ್ನು ಮಾಡಿದರೂ ವ್ಯರ್ಥವಾಗುವುದು. ಶ್ರೀಕೃಷ್ಣನೇ, ನಿನ್ನ ಕೃಪೆಯಾದರೆ ಸಂಸಾರದ ವ್ಯಥೆಯು ಸ್ವಲ್ಪವೂ ಸ್ಪರ್ಶವಾಗದು ॥೧೨೬॥ ಹೇ ಕೃಪಾನಿಧಿಯೇ, ಶ್ರೀಅನಂತನೇ, ಕೃಷ್ಣನಾಥನೇ, ನನ್ನ ವಿನಂತಿಯನ್ನು ಕೇಳು. ನಿನ್ನ ಯಾವ ಮೋಕ್ಷಫಳರೂಪದ ಕಥೆಗಳೆಂಬ ಅಮೃತ ಸಿಂಚನೆಯಿಂದ ಸರ್ವ ಜನರ ಉದ್ಧಾರವನ್ನು ಮಾಡು ॥೧೨೭॥ ನಿನ್ನ ಮುಖದಿಂದ ಹೊರಬೀಳುವ ಆ ಯಾವ ಕಥಾಮೃತದ ಹನಿಯೊಂದು ಸಿಕ್ಕರೆ ಸಾಕು, ಅದರಿಂದ ಸರ್ಪದ ವಿಷವು ಇಳಿದು ಹೋಗುವುದು ಮತ್ತು ಸ್ವಾನಂದಸುಖವು ಪ್ರಾಪ್ತವಾಗುವುದು ॥೧೨೮॥ ಹೇ ದೇವನೇ, ಸರ್ವ ಜಗತ್ತಿನ ಕಾಳಜಿಯು ಸುಮ್ಮನೇ ನಿನಗೇಕೇ? ಆ ಜನರು ಅದಕ್ಕಾಗಿ ನನ್ನನ್ನು ಪ್ರಾರ್ಥಿಸಿರುವುದಿಲ್ಲ ಎಂದು ನೀನು ನಿನ್ನ ಮನದಲ್ಲಿ ಕಲ್ಪಿಸಿಕೊಂಡು ಕೇಳಬಹುದು ॥೧೨೯॥ ಒಬ್ಬ ಕುರುಡ ಮನುಷ್ಯ ಆಳವಾದ ಬಾವಿಯಲ್ಲಿ ಬಿದ್ದದ್ದನ್ನು ಕಂಡವನು ಆತನನ್ನು ಮೇಲಕ್ಕೆ ತಂದು ಸರಳವಾದ ಮಾರ್ಗಕ್ಕೆ ಹಚ್ಚಬೇಕಾಗುವುದು. ಇದು ಆತನ ಕರ್ತವ್ಯವಾಗಿರುವುದು. ಅದರಂತೆ ಜ್ಞಾನಾಂಧರು ಸಂಸಾರದ ದುಃಖದಲ್ಲಿ ಮುಳಿಗಿರುವುದನ್ನು ಕಂಡು ಅವರ ಉದ್ಧಾರಕ್ಕಾಗಿ ನಾನು ನಿನ್ನನ್ನು ಪ್ರಾರ್ಥಿಸುತ್ತಿರುವೆನು ॥೧೩೦॥ ಈ ಜನರು ಹೀಗೇಕೆ ಅಂಧರಾಗುವರು ಎಂದು ನೀನು ಕೇಳಿದರೆ, ಅವರಿಗೆ ಸಂಸಾರರೂಪ ಸರ್ಪವು ಕಚ್ಚಿರುವುದರಿಂದ ಅವರು ಆತ್ಮಸುಖವನ್ನು ಮರೆತು ವಿಷಯ ಸುಖಕ್ಕೆ ಭುಲಾಯಿಸಿರುವರು ॥೧೩೧॥

ಐಶಿಯಾ ದೀನಾಂತೇ ಶ್ರೀಅನಂತಾ । ಕೃಪೇನೇ ಉದ್ಧರಾವೇ ತತ್ತ್ವತಾ । ಮ್ಹಣೋನಿ ಚರಣೀ ಠೇವಿಲಾ ಮಾಥಾ । ಶ್ರೀಕೃಷ್ಣನಾಥಾ ಪ್ರಾರ್ಥಿಲೇ ॥೧೩೨॥ ಐಕೋನಿ ಭಕ್ತಾಚೀ ವಿನಂತೀ । ಸಂತೋಷಲಾ ಭಕ್ತಪತೀ । ಉತ್ತಮ ಸಭೇಚೀ ಜ್ಞಾನಸ್ಥಿತೀ । ಉದ್ಧವಾಪ್ರತೀ ಸಾಂಗೇಲ ॥೧೩೩॥ ಜೇ ಸಭೇಸೀ ಮುಖ್ಯತ್ವೇ ಹೃಷೀಕೇಶೀ । ದೇವರ್ಷಿ ಆಣಿ ಬ್ರಹ್ಮರ್ಷೀ । ತೇಥ ಮಿಳಾಲೇ ರಾಜರ್ಷೀ । ತಪೋರಾಶೀ ಜ್ಞಾನನಿಧೀ ॥೧೩೪॥ ತೇ ಸಭೇಚಾ ಜ್ಞಾನಮಥಿತಾರ್ಥ । ಉದ್ಧವಾಸೀ ಸಾಂಗೇಲ ಶ್ರೀಕೃಷ್ಣನಾಥ । ಶ್ರೋತೀ ಅವಧಾನ ದ್ಯಾವೇ ತೇಥ । ಏಕಾ ವಿನವೀತ ಜನಾರ್ದನು ॥೧೩೫॥ ಜ್ಞಾನ ಆಣಿ ಪುರಾತನ । ವಕ್ತಾ ಭಗವಂತ ಆಪಣ । ಶ್ರೋತಾ ಉದ್ಧವ ಸಾವಧಾನ । ಕಾಯ ಶ್ರೀಕೃಷ್ಣ ಬೋಲಿಲಾ ॥೧೩೬॥

ಶ್ರೀಭಗವಾನುವಾಚ :-

ಇತ್ಥಮೇತತ್‌ಪುರಾ ರಾಜಾ ಭೀಷ್ಮಂ ಧರ್ಮಭೃತಾಂ ವರಮ್ ।
ಅಜಾತಶತ್ರುಃ ಪ್ರಪಚ್ಛ ಸರ್ವೇಷಾಂ ನೋಽನುಶೃಣ್ವತಾಮ ॥೧೧॥

ಅರ್ಥ:- ಭಗವಂತನು ಹೇಳಿದನು, ಹೇ ಉದ್ಧವಾ, ಈಗ ನೀನು ನನಗೆ ಯಾವ ಪ್ರಶ್ನೆಯನ್ನು ಮಾಡಿರುವಿಯೋ, ಅದೇ ಪ್ರಶ್ನೆಯನ್ನು ಅಜಾತಶತ್ರುವಾಗಿರುವ ಧರ್ಮರಾಜನು ಧಾರ್ಮಿಕ ಶಿರೋಮಣಿಯಾದ ಭೀಷ್ಮ ಪಿತಾಮಹರನ್ನು ವಿಚಾರಿಸಿದ್ದನು.

ತುವಾಪುಶಿಲೇ ಜೈಶಾ ರೀತೀ । ತೈಸಾಯಾಚಿ ಗಾ ಉಪಪತ್ತೀ । ಧರ್ಮೇ ಪುಶಿಲೇ ಭಿಷ್ಮಾಪ್ರತೀ । ದೇಹಾಂತೀ ಶರಪಂಜರೀ ॥೧೩೭॥ ಐಕ ತ್ಯಾ ಧರ್ಮಾಚೀ ಥೋರೀ । ಜ್ಯಾಸೀ ಶತ್ರುನಾಹೀ ಸಂಸಾರೀ । ಸತ್ಯವಾದೀ ನಿಜನಿರ್ಧಾರೀ । ಜೋ ಋಷಿಮಂತ್ರೀ ಜನ್ಮಲಾ ॥೧೩೮॥ ಕರಾವಯಾ ಪಾಂಡವನಿರ್ದಳಣ । ವಜ್ರದೇಹೀ ವ್ಹಾವಯಾ ಆಪಣ । ವರ್ಮ ಪುಸತಾ ದುರ್ಯೋಧನ । ಧರ್ಮ ಅಸತ್ಯ ವಚನ ನ ಬೋಲೇ ॥೧೩೯॥ ಐಸಾ ರಾಜಾ ಯುಧಿಷ್ಠಿರ । ನಿರ್ಮತ್ಸರ ಪರಮ ಪವಿತ್ರ । ತೇಣೇ ಕರೂನಿ ಅತ್ಯಾದರ । ಭೀಷ್ಮ ಮಹಾವೀರ ವಿನವಿಲಾ ॥೧೪೦॥ ಜೋ ಪರಮ ಧಾರ್ಮಿಕ ನಿಜನಿರ್ಧಾರೀ । ಜೋ ಸ್ವಧರ್ಮನಿಯಮೇ ವ್ರತಧಾರೀ । ಜೋ ಯಾವಜ್ಜನ್ಮ ಬ್ರಹ್ಮಚಾರೀ । ಜೋ ಮಹಾಶೂರೀ ವಂದಿಜೇ ॥೧೪೧॥ ನ ಮೋಡತಾ ಗುರುತ್ವಾಚೀ ಪಾಯರೀ । ಜೋ ಪರಶುರಾಮೇಸೀ ಯುದ್ಧ ಕರೀ । ಪರೀ ಕಾಶೀಶ್ವರಾಚೀ ಕುಮರೀ । ಜೋ ನ ಕರೀಚ ನೋವರೀ ಬ್ರಹ್ಮಚರ್ಯೇ ॥೧೪೨॥

ಹೇ ಕೃಷ್ಣನೇ, ನೀವು ನಿಜವಾಗಿಯೂ ಕೃಪೆ ಮಾಡಿ ದೀನ ಜನರ ಉದ್ಧಾರವನ್ನು ಮಾಡಿರಿ. ಹೀಗೆ ಹೇಳುತ್ತ ಉದ್ಧವನು ಶ್ರೀಕೃಷ್ಣನ ಚರಣಕಮಲಗಳಲ್ಲಿ ತನ್ನ ಮಸ್ತಕವನ್ನಿಟ್ಟನು. ಮತ್ತು ಆತನ ಪ್ರಾರ್ಥನೆಯನ್ನು ಮಾಡಿದನು ॥೧೩೨॥ ಈ ಯಾವ ಭಕ್ತನ ವಿನಂತಿಯನ್ನು ಆಲಿಸಿ ಭಕ್ತರ ಪ್ರಭುವಾಗಿರುವ ಶ್ರೀಕೃಷ್ಣನು ಪ್ರಸನ್ನನಾದನು. ಆತನು ಉದ್ಧವನಿಗೆ ಉತ್ತಮ ಸಭೆಗಳಲ್ಲಿನ ಜ್ಞಾನವನ್ನು ಹೇಳಲು ಆರಂಭಿಸಿದನು ॥೧೩೩॥ ಆ ಯಾವ ಸಭೆಯಲ್ಲಿ ದೇವರ್ಷೀ, ಮಹರ್ಷಿ, ಬ್ರಹ್ಮರ್ಷೀ, ರಾಜರ್ಷೀ, ತಪೋನಿಷ್ಠ ಮತ್ತು ಶ್ರೇಷ್ಠರಾಗಿರುವ ಜ್ಞಾನಿಗಳವರು ಕೂಡಿಕೊಂಡಿದ್ದರು ॥೧೩೪॥ ಆ ಯಾವ ಸಭೆಯಲ್ಲಿನ ಜ್ಞಾನದ ನಿರ್ಣಯವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು. ಆದ್ದರಿಂದ ಶ್ರೋತೃಗಳವರು ಇತ್ತ ಲಕ್ಷ ಕೊಡಬೇಕೆಂದು ಏಕನಾಥ, ಜನಾರ್ದನರು ವಿನಂತಿಸಿಕೊಳ್ಳುವರು ॥೧೩೫॥ ಜ್ಞಾನ, ಅದರಲ್ಲಿ ಪುರಾತನವಾದದ್ದು, ಮೇಲಾಗಿ ಅದರ ವಕ್ತಾ ಸ್ವತಃ ಭಗವಾನನು!! ಆದ್ದರಿಂದ ಶ್ರೀಕೃಷ್ಣನು ಏನು ಹೇಳಬಹುದೆಂದು ಉದ್ಧವನು ಲಕ್ಷ ಕೊಟ್ಟು ಕೇಳಹತ್ತಿದನು ॥೧೩೬॥

ಹೇ ಉದ್ಧವಾ, ನೀನು ನನಗೆ ಯಾವ ಪ್ರಕಾರದ ಪ್ರಶ್ನೆಯನ್ನು ಕೇಳಿರುವಿಯೋ, ಅಂತಹ ಪ್ರಶ್ನೆಯನ್ನೇ ಈ ಹಿಂದೆ ಭೀಷ್ಮಾಚಾರ್ಯರು ಶರಪಂಜರದಲ್ಲಿ ಮರಣೋನ್ಮುಖರಾಗಿ ಬಿದ್ದಿರುವಾಗ ಧರ್ಮರಾಜನು ಅವರನ್ನು ವಿಚಾರಿಸಿದ್ದನು ॥೧೩೭॥ ಈಗ ಧರ್ಮರಾಜನ ಯೋಗ್ಯತೆಯನ್ನು ಹೇಳುವೆನು, ಕೇಳು. ಆತನಿಗೆ ಸಂಸಾರದಲ್ಲಿ ಶತ್ರು ಎಂಬುವವರೇ ಇರಲಿಲ್ಲ. ಆತನು ನಿಶ್ಚಯಾತ್ಮಕವಾಗಿ ಮತ್ತು ಸತ್ಯವನ್ನೇ ನುಡಿಯುತ್ತಿದ್ದನು. ಋಷಿಯ ಮಂತ್ರದಿಂದ ಆತನ ಜನ್ಮವಾಗಿತ್ತು ॥೧೩೮॥ ಪಾಂಡವರನ್ನು ಸಂಹಾರ ಮಾಡುವುದಕ್ಕಾಗಿ ತಾನು ವಜ್ರದೇಹೀಯಾಗಬೇಕೆಂದು ಬಯಸಿ, ಈ ಉದ್ದೇಶದಿಂದಲೇ ದುರ್ಯೋಧನನು ಧರ್ಮರಾಜನಿಗೆ ಉಪಾಯವನ್ನು ಕೇಳಿದ್ದನು. ಆ ಸಮಯದಲ್ಲಿ ಧರ್ಮರಾಜನು ಅಸತ್ಯವನ್ನು ನುಡಿಯದೇ ಸತ್ಯವನ್ನೇ ಹೇಳಿದನು ॥೧೩೯॥ ಹೀಗೆ ಮತ್ಸರರಹಿತ ಮತ್ತು ಪರಮಪವಿತ್ರ ರಾಜನು ಯುಧಿಷ್ಠಿರನಾಗಿದ್ದನು. ಆತನು ಅತ್ಯಂತ ಆದರದಿಂದ ಮಹಾಶೂರವೀರ ಭೀಷ್ಮಾಚಾರ್ಯರಿಗೆ ವಿನಂತಿಸಿದನು ॥೧೪೦॥ ಭೀಷ್ಮಾಚಾರ್ಯರು ನಿಜನಿರ್ಧಾರವಾದ ಪರಮ ಧಾರ್ಮಿಕನಾಗಿದ್ದನು. ಸ್ವಧರ್ಮ ಪ್ರಕಾರವಾಗಿ ವ್ರತದ ಪಾಲನೆಯನ್ನು ಮಾಡುತ್ತಿದ್ದನು. ಜನ್ಮವಿರುವವರೆಗೂ ಬ್ರಹ್ಮಚಾರಿಯಾಗಿದ್ದು ಮತ್ತು ಮಹಾ ಮಹಾ ವೀರರಿಗೆ ವಂದ್ಯನಾಗಿದ್ದನು ॥೧೪೧॥ ಆತನು ಗುರುತ್ವದ ಮರ್ಯಾದೆಯನ್ನು ರಕ್ಷಿಸಿ ಪರಶುರಾಮರಲ್ಲಿ ಯುದ್ಧವನ್ನು ಮಾಡಿದನು. ಬ್ರಹ್ಮಚರ್ಯ ವ್ರತವನ್ನು ಪಾಲನೆ ಮಾಡುವ ಕಾರಣದಿಂದ ಕಾಶೀರಾಜನ ಕನ್ನೆಯನ್ನು ಆತನು ಅಂಗೀಕಾರ ಮಾಡಲಿಲ್ಲ ॥೧೪೨॥

ಧನುರ್ವಿದ್ಯೆಸೀ ಗೂರು ಪರಶುರಾಮ । ತೋ ರಣೀ ಜಿಂತಿಲಾ ಕರೂನಿ ನೇಮ । ತೇಣೇ ಸಂತೋಷೋನಿ ಪರಮ । ಆಪುಲೇ ನಾಮ ಆಂಕಣಾ ಘಾತಲೇ ।।೧೪೩।। ಅಧಿಕ ಸಂತುಷ್ಟೇ ಪರಶುರಾಮ । ಮಾಝ್ಯಾ ಬ್ರಹ್ಮಚರ್ಯಾಚಾ ವ್ರತನೇಮ । ಭೀಷ್ಮಾ ತುಜ ಕದಾ ಬಾಧಿನಾ ಕಾಮ । ವರ ಪರಮ ದೀಧಲಾ ।।೧೪೪।। ಜನಕಸಂತೋಷಾಕಾರಣೇ । ಆಪುಲೇ ತಾರುಣ್ಯ ದೀಧಲೇ ಜೇಣೇ । ವಾರ್ಧಕ್ಯ ಘೇಊನಿ ಆಪಣೇ । ಸುಖೀ ಕರಣೇ ಶಂತನು ।।೧೪೫।। ಪಿತ್ಯಾನೇ ದೀಧಲೇ ಆಶೀರ್ವಾದಾ । ''ಐಕ ಭೀಷ್ಮಾ ಅತಿಪ್ರಬುದ್ಧಾ । ವಾರ್ಧಕ್ಯೀ ಕ್ಷೀಣಶಕ್ತೀಚೀ ಆಪದಾ । ತೇ ತುಜ ಕದಾ ಬಾದೇನಾ ।।೧೪೬।। ಯಾಲಾಗೀ ಜಂವ ಜಂವ ಮ್ಹಾತಾರಪಣ। ತಂವ ತಂವ ತ್ಯಾಚಾ ಪ್ರತಾಪ ಗಹನ । ಕಾಳಾಚೀ ಶಕ್ತಿ ಖುಂಟಲೀ ಜಾಣ । ನ ಕರವೇ ಕ್ಷೀಣ ಭೀಷ್ಮಾಸೀ ।।೧೪೭।। ಯಾಲಾಗೀ ತೋಡರೀ ಕಾಳ ಕಾಮ ।। ಆಂಕಣಾ ರಿಘಾಲಾ ಪರಶುರಾಮ । ಹಾಚಿ ಧರ್ಮಿಷ್ಠೀ ''ವರಿಷ್ಠಧರ್ಮ'' । ಹೇ ಸಾಜೇ ನಾಮ ಭೀಷ್ಮಾಸೀ ।।೧೪೮।। ಜ್ಯಾಚಿಯೇ ಪ್ರತಿಜ್ಞೇಚ್ಯಾ ನಿರ್ಧಾರೀ । ದೇವಾಸೀ ಲಾವೂನಿಯಾ ಹಾರೀ । ನಿಃಶಸ್ತ್ರಾ ಕರೀ ಶಸ್ತ್ರಧಾರೀ । ಏವಢೀ ಥೋರೀ ಪ್ರತಿಜ್ಞೇಚೀ ।।೧೪೯।। ನ ಮೋಡತಾ ಭಜನಮರ್ಯಾದಾ । ಯುದ್ಧೀ ಮಿಸಳೋನಿ ಗೋವಿಂದಾ । ಹಾರೀ ಲಾವೂನಿಯಾ ಮುಕುಂದಾ । ಚರಣಾರವಿಂದಾ ಲಾಗಲಾ ।।೧೫೦।। ಆಣ ವಾಹೂನಿ ನಿರ್ಧಾರೀ । ಶಸ್ತ್ರಾಸ್ತ್ರೇ ಸಾಂಡಿಲೀ ದೂರೀ । ಪುಢತೀ ಬಾಣ ಭೇದಿತಾ ಜಿವ್ಹಾರೀ । ಶಸ್ತ್ರ ಕರೀ ನ ಧರೀಚ ।।೧೫೧।। ಬಾಣೀ ಖಡತರಲೇ ಜಿವ್ಹಾರ । ವಿಕಳತಾ ದೇಖೋನಿ ಥೋರ । ಭೀಷ್ಮೇ ಕರೂನಿ ನಿಜನಿರ್ಧಾರ । ಜಾಹಲಾ ತತ್ಪರ ದೇಹತ್ಯಾಗ ।।೧೫೨।। ಹೇ ದಕ್ಷಿಣಾಯನ ಅತಿಘೋರ । ಭೀಷ್ಮೇ ಐಕತಾ ಉತ್ತರ । ಕಾಳಾಸೀ ಕರೂನಿಯಾ ದೂರ । ಸ್ವಶರೀರ ರಾಖಿಲೇ ।।೧೫೩।। ಮಗ ನಿಜಾತ್ಮನಿರ್ಧಾರೀ । ಭೀಷ್ಮ ಪಹುಡೇ ಶರಪಂಜರೀ । ತ್ಯಾತೇ ಯುಧಿಷ್ಠಿರ ಪ್ರಶ್ನ ಕರೀ । ಮಹಾಋಷೀಶ್ವರೀ ಪರಿವಾರಿಲಾ ।।೧೫೪।। ಆಮ್ಹಾ ಸಕಳಾ ದೇಖತಾ । ಜಾಹಲಾ ಯುಧಿಷ್ಠಿರ ಪುಸತಾ । ತೇಚಿ ಪುರಾತನ ಕಥಾ । ತುಜ ಮೀ ಆತಾ ಸಾಂಗೇನ ।।೧೫೫।।

ನಿವೃತ್ತೇ ಭಾರತೇ ಯುದ್ಧೇ ಸುಹೃನ್ನಿಧನವಿಹ್ವಲಃ । ಶ್ರುತ್ವಾ ಧರ್ಮಾನ್ ಬಹೂನ್‌ಪಶ್ಚಾನ್ಮೋಕ್ಷಧರ್ಮಾನಪೃಚ್ಛತ ।।೧೨।।

ಅರ್ಥ:- ಆಗ ಭಾರತ ಯುದ್ಧವು ಮುಗಿದಿತ್ತು. ಧರ್ಮರಾಜ ಯುಧಿಷ್ಠಿರನು ತನ್ನ ಸಜ್ಜನರನ್ನು ವಧೆ ಮಾಡಿ ವ್ಯಾಕುಲನಾಗಿದ್ದನು. ಆಗ ಆತನು ಭೀಷ್ಮಪಿತಾಮಹನಿಂದ ಅನೇಕ ಧರ್ಮಸಂಬಂಧದ ವಿಚಾರವನ್ನು ಕೇಳಿದನು. ತದನಂತರ ಆತನು ಮೋಕ್ಷ ಸಾಧನೆಗಾಗಿ ಪ್ರಶ್ನೆಯನ್ನು ಕೇಳಿದನು.

ಧನುರ್ವಿದ್ಯೆಯಲ್ಲಿ ಪರಶುರಾಮನು ಆತನ ಗುರುವಾಗಿದ್ದನು. ಆತನಿಗೂ ಕೂಡ ಪ್ರತಿಜ್ಞೆಯೊಂದಿಗೆ ಪಣತೊಟ್ಟು ರಣರಂಗದಲ್ಲಿ ಜಯಿಸಿದನು. ಆಗ ಪರಶುರಾಮನು ಅತ್ಯಂತ ಸಂತುಷ್ಟನಾಗಿ ತನ್ನ ನಾಮದ ಬಿರುದನ್ನು ಭೀಷ್ಮಾಚಾರ್ಯರ ಕಾಲಿನಲ್ಲಿ ತೊಡಿಸಿದನು ।।೧೪೩।। ಪರಶುರಾಮನು ಇಷ್ಟಕ್ಕೆ ತೃಪ್ತನಾಗದೇ ಅಧಿಕವಾದ ಪ್ರಸನ್ನತೆಯಿಂದ ಹೇ ಭೀಷ್ಮನೇ, ನನ್ನ ಬ್ರಹ್ಮಚರ್ಯ ವ್ರತ ಪಾಲನೆಯ ಮಹಿಮೆಯಿಂದ ಇಂದಿನಿಂದ ನಿನಗೆ ಎಂದಿಗೂ ಕಾಮದ ಬಾಧೆಯಾಗುವುದಿಲ್ಲ ಎಂದು ಹೀಗೆ ಅತಿಶಯವಾದ ಉತ್ತಮ ವರವನ್ನು ಕೊಟ್ಟನು ।।೧೪೪।। ಭೀಷ್ಮಾಚಾರ್ಯರು ತಮ್ಮ ತಂದೆಗೆ ಸಂತೋಷಪಡಿಸುವುದಕ್ಕಾಗಿ ಆತನಿಗೆ ತನ್ನ ತಾರುಣ್ಯವನ್ನು ಕೊಟ್ಟನು ಮತ್ತು ತಾನು ತನ್ನ ತಂದೆಯ ವಾರ್ಧಕ್ಯವನ್ನು ಪಡೆದು ಆತನಿಗೆ ಸುಖಿಯನ್ನಾಗಿ ಮಾಡಿದನು ।।೧೪೫।। ಆಗ ಪಿತನು ಆತನಿಗೆ ಹೀಗೆ ಆಶೀರ್ವಾದವನ್ನು ಕೊಟ್ಟನು. ಹೇ ಭೀಷ್ಮಾ, ವಾರ್ಧಕ್ಯದಲ್ಲಿ ನಿನ್ನ ಶರೀರ ಶಕ್ತಿಯು ಕಡಿಮೆಯಾಗುವ ವಿಪತ್ತು ನಿನಗೆ ಎಂದಿಗೂ ಬರುವುದಿಲ್ಲ ।।೧೪೬।। ಇದರಿಂದ ಆತನಿಗೆ ವಯಸ್ಸಾದಂತೆಲ್ಲ ಆತನ ಪ್ರತಾಪ ಶಕ್ತಿಯು ಬೆಳೆಯುತ್ತಲೇ ಸಾಗಿತು. ಕಾಲನ ಶಕ್ತಿಯು ಕುಂಠಿತವಾಯಿತು. ಆ ಯಾವ ಕಾಲನು ಭೀಷ್ಮನಿಗೆ ಕ್ಷೀಣವನ್ನಾಗಿ ಮಾಡಲು ಸಮರ್ಥನಾಗಲಿಲ್ಲ ।।೧೪೭।। ಆದ್ದರಿಂದ ಭೀಷ್ಮಾಚಾರ್ಯರು ತಮ್ಮ ಕಾಲಿನಲ್ಲಿ ಕಾಲ, ಕಾಮ, ಮತ್ತು ಪರಶುರಾಮ ಈ ಮೂವರ ಬಿರುದಾಳಿಯನ್ನು ಕಟ್ಟಿದ್ದನು. ಆತನು ಧರ್ಮನಿಷ್ಠೆಯಲ್ಲಿ ಶ್ರೇಷ್ಠ ಪುರುಷನಾಗಿದ್ದನು. ಆದ್ದರಿಂದ ಭೀಷ್ಮ ಎಂಬ ನಾಮವು ಆತನಿಗೆ ಶೋಭಿಸುತ್ತಿತ್ತು ।।೧೪೮।। ಆತನ ಪ್ರತಿಜ್ಞೆಯ ನಿರ್ಧಾರದಿಂದ ಶ್ರೀಕೃಷ್ಣನು ತನ್ನ ಸೋಲನ್ನು ಒಪ್ಪಿಕೊಂಡನು ಮತ್ತು ನಿಃಶಸ್ತ್ರನಾದ ಶ್ರೀಕೃಷ್ಣನಿಗೆ ಶಸ್ತ್ರಧಾರಿಯನ್ನಾಗಿ ಮಾಡಿದನು. ಇಷ್ಟೊಂದು ಆತನ ಪ್ರತಿಜ್ಞೆಯು ಶ್ರೇಷ್ಠವಾದ ಯೋಗ್ಯತೆಯಿಂದ ಕೂಡಿತ್ತು ।।೧೪೯।। ಭಜನ ಮರ್ಯಾದೆಯನ್ನು ಮುರಿಯದೇ ಆತನು ಯುದ್ಧದಲ್ಲಿ ಶ್ರೀಕೃಷ್ಣನಿಗೆ ಸೋಲನ್ನು ತಂದು ಆತನ ಚರಣಾರವಿಂದಗಳಿಗೆ ವಂದಿಸಿದನು ।।೧೫೦।। ತದನಂತರ ಆತನು ನಿರ್ವಾಣದ ಶಪಥವನ್ನು ಮಾಡಿ ಮತ್ತು ಶಸ್ತ್ರಾಸ್ತ್ರಗಳನ್ನು ದೂರ ಚೆಲ್ಲಿಬಿಟ್ಟನು. ತನ್ನ ಮರ್ಮಾಂಗಗಳಿಗೆ ಶತ್ರುಗಳ ಬಾಣಗಳು ಬಡೆದರೂ ಆತನು ತನ್ನ ಕೈಯಲ್ಲಿ ಯಾವುದೇ ಪ್ರಕಾರದ ಶಸ್ತ್ರಗಳನ್ನು ಹಿಡಿಯಲಿಲ್ಲ ।।೧೫೧।। ಬಾಣಗಳಿಂದ ತನ್ನ ಮರ್ಮಾಂಗಗಳೆಲ್ಲವೂ ಛೇದಿಸಿಕೊಂಡ ಕಾರಣ ಆತನು ಅತ್ಯಂತ ವ್ಯಾಕುಲಕಕ್ಕೆ ಒಳಗಾಗಿ ಕೊನೆಗೆ ಭೀಷ್ಮಾಚಾರ್ಯರು ದೇಹತ್ಯಾಗದ ನಿಶ್ಚಯವನ್ನು ಮಾಡಿ ಅದಕ್ಕಾಗಿ ಸಿದ್ಧನಾದನು ।।೧೫೨।। ಆದರೆ ಆಗ ಅತಿದೊಡ್ಡದಾದ ದಕ್ಷಿಣಾಯನ ಇರುವುದನ್ನು ಆತನು ತಿಳಿದು ಕಾಲನಿಗೆ ದೂರ ಸರಿಸಿ ತನ್ನ ಶರೀರದ ರಕ್ಷಣೆಯನ್ನು ಮಾಡಿದನು ।।೧೫೩।। ತದನಂತರ ಆತನು ತನ್ನ ದೃಢವಾದ ನಿಶ್ಚಯದಿಂದ ಶರಪಂಜರದ ಮೇಲೆಯೇ ಶಯನ ಮಾಡಿದನು. ಆ ಸಮಯದಲ್ಲಿ ಮಹಾ ಮಹಾ ಋಷಿ ಮುನಿಗಳ ಸಮುದಾಯದಲ್ಲಿ ಧರ್ಮರಾಜನು ಭೀಷ್ಮಾಚಾರ್ಯರಿಗೆ ಪ್ರಶ್ನೆಯನ್ನು ಮಾಡಿದನು ।।೧೫೪।। ನಮ್ಮ ಸರ್ವರ ಸಮಕ್ಷಮದಲ್ಲಿ ಯುಧಿಷ್ಠರನು ಪ್ರಶ್ನೆ ಮಾಡಿದ ಆ ಯಾವ ಪುರಾತನ ಕಥೆಯನ್ನು ನಾನು ಈಗ ನಿನಗೆ ಹೇಳುವೆನು ।।೧೫೫।।

ಮೀ ಸಂಧೀ ಕರಿತಾ ಶ್ರೀಕೃಷ್ಣ । ತೇ ನ ಮನೀಚ ದುರ್ಯೋಧನ । ವ್ಯಾಸೇ ವರ್ಜಿತಾ ಆಪಣ । ತರೀ ದೃಪ್ತಪಣ ಯುದ್ಧಾಸೀ ॥೧೫೬॥ ಏವಂ ದೈವಬಳೇ ಕುರುಕ್ಷೇತ್ರೀ । ಕೌರವಪಾಂಡವಾ ಝುಂಜಾರೀ । ಸಾಪತ್ನ ದುರ್ಯೋಧನಾದಿ ವೈರೀ । ಸಪರಿವಾರೀ ಮಾರಿಲೇ ॥೧೫೭॥ ಯುದ್ಧ ನಿವರ್ತಲ್ಯಾಪಾಠೀ । ಧರ್ಮ ಬೈಸಲ್ಯಾ ರಾಜ್ಯಪಟೀ । ತೇಣೇ ಅಭಿಮಾನ ಘೇತಲಾ ಪೋಟೀ । ಮಹಾದೋಷೀ ಸೃಷ್ಟೀ ಮೀ ಏಕ ॥೧೫೮॥ ಮೀ ರಾಜ್ಯೀ ಬೈಸವಿತಾ ಆಪಣ । ಮ್ಹಣೇ ಮ್ಯಾ ಮಾರಿಲಾ ಗುರೂ ಬ್ರಾಹ್ಮಣ । ಮ್ಯಾ ಮಾರಿಲಾ ಕರ್ಣ ದುಃಶಾಸನ । ರಾಜಾ ದುರ್ಯೋಧನ ಮ್ಯಾ ಮಾರಿಲಾ ॥೧೫೯॥ ಉತ್ಪತ್ತಿಸ್ಥಿತಿಪ್ರಲಯಕರ್ತಾ । ಯೇಥ ಈಶ್ವರು ಜಾಣ ತತ್ತ್ವತಾ । ತೇ ಸಾಂಡೋನಿಯಾ ಸರ್ವಥಾ । ''ಅಹಂ ಕರ್ತಾ'' ಮ್ಹಣೇ ಧರ್ಮ ॥೧೬೦॥ ದೇಹಾಭಿಮಾನಾಚೇ ಖಟಾಟೋಪೀ । ಘೋರ ಹೋಊನಿಯಾ ಅನುತಾಪೀ । ಗೋತ್ರಹಂತಾ ಮೀ ಮಹಾಪಾಪೀ । ಐಸೇ ಆರೋಪೀ ನಿಜಮಾಥಾ ॥೧೬೧॥ ತ್ಯಾಸೀ ದ್ಯಾವಯಾ ಸಮಾಧಾನ । ಸಮಯೋ ಭೀಷ್ಮಾಂಚೇ ನಿರ್ಯಾಣ । ತೇಥೇ ಮ್ಯಾ ನೇಊನಿಯಾ ಜಾಣ । ಧರ್ಮೇ ಕೇಲೇ ಪ್ರಶ್ನ ತೇ ಐಕಾ ॥೧೬೨॥ ರಾಜಧರ್ಮ ದಾನಧರ್ಮ । ಪುಶಿಲಾ ತೇಣೇ ಆಪದ್ಧರ್ಮ । ಮುಖ್ಯತ್ವೇ ಪುಶಿಲಾ ''ಮೋಕ್ಷಧರ್ಮ'' । ಉತ್ತಮೋತ್ತಮ ಪರಿಯೇಸೀ ॥೧೬೩॥

ತಾನಹಂ ತೇಽಭಿಧಾಸ್ಯಾಮಿ ದೇವವ್ರತಮುಖಾಚ್ಚುತಾನ್ । ಜ್ಞಾನವೈರಾಗ್ಯವಿಜ್ಞಾನಂ ಶ್ರದ್ಧಾಭಕ್ತ್ಯುಪಬೃಂಹಿತಾನ್ ॥೩॥

ಅರ್ಥ:- ಆಗ ಭೀಷ್ಮ ಪಿತಾಮಹನ ಮುಖದಿಂದ ಕೇಳಿದ ಮೋಕ್ಷಧರ್ಮವನ್ನು ನಾನು ನಿನಗೆ ಹೇಳುವೆನು. ಕಾರಣ ಅದು ಜ್ಞಾನ, ವೈರಾಗ್ಯ, ವಿಜ್ಞಾನ ಮತ್ತು ಶ್ರದ್ಧೆ ಹಾಗೂ ಭಕ್ತಿಭಾವದಿಂದ ಪರಿಪೂರ್ಣವಾಗಿರುವುದು.

ತೇ ಭೀಷ್ಮಮುಖೀಚೇ ಮೋಕ್ಷಧರ್ಮ । ಮ್ಯಾ ಪರಿಶಿಲೇ ಅತಿ ಉತ್ತಮ । ಜೇ ನಿರಸಿತೀ ಭವಭ್ರಮ । ಸಕಳ ಕರ್ಮದಾಹಕ ॥೧೬೪॥ ಜ್ಞಾನ ವಿಜ್ಞಾನ ಶ್ರದ್ಧಾಭಕ್ತೀ । ಅನಿತ್ಯ ನಾಸೇ ವೈರಾಗ್ಯಸ್ಥಿತೀ । ಭೀಷ್ಮೇ ಸಾಂಗಿತಲೀ ಧರ್ಮಾಪ್ರತೀ । ತೇ ಮೀ ನಿಶ್ಚಿತೀ ಸಾಂಗೇನ ॥೧೬೫॥ ಮ್ಹಣಣೇ ಭೀಷ್ಮಾಸೀ ''ದೇವವ್ರತ''। ತೇಣೇ ದೇವಾವರೀ ಠೇವೂನಿ ಚಿತ್ತ । ಶರಪಂಜರೀ ಸುನಿಶ್ಚಿತ । ನಿಜಾತ್ಮಯುಕ್ತ ಪಹುಡಲಾ ॥೧೬೬॥ ತೇಣೇ ಸಾಂಗಿತಲಾ ಮೋಕ್ಷಧರ್ಮ । ತ್ಯಾಂತ ಮುಖ್ಯತ್ವೇ ''ಜ್ಞಾನ'' ಪ್ರಥಮ । ತೇ ಜ್ಞಾನ ಸಾಂಗೇ ಪುರುಷೋತ್ತಮ । ಅತಿ ಉತ್ತಮ ಅವಧಾರೀ ॥೧೬೭॥

ಶ್ರೀಕೃಷ್ಣನಾದ ನಾನು ಸ್ವತಃ ಸಂಧಾನಮಾಡಲು ಹೋಗಿದ್ದೆನು. ಆ ಸಮಯದಲ್ಲಿ ದುರ್ಯೋಧನನು ಅದನ್ನು ಮಾನ್ಯ ಮಾಡಲಿಲ್ಲ. ಸ್ವತಃ ವ್ಯಾಸಮುನಿಗಳು ಅದರ ನಿಷೇಧ ಮಾಡಿದರೂ ಕೂಡ ಆತನು ಗರ್ವದಿಂದ ಯುದ್ಧಕ್ಕೆ ನಿಂತುಕೊಂಡನು ॥೧೫೬॥ ಒಟ್ಟಿನಲ್ಲಿ ದೈವಾಧೀನದಿಂದ ಕುರುಕ್ಷೇತ್ರದಲ್ಲಿ ಪಾಂಡವ ಮತ್ತು ಕೌರವರ ಮಹಾಯುದ್ಧವು ನಡೆದು ಅದರಲ್ಲಿ ದುರ್ಯೋಧನಾದಿ ಶತ್ರುಗಳ ಸರ್ವ ಪರಿವಾರ ಸಹ ಸಂಹಾರವಾಯಿತು ॥೧೫೭॥ ಯುದ್ಧವು ಸಮಾಪ್ತವಾದಮೇಲೆ ಧರ್ಮರಾಜನು ರಾಜ್ಯಪದದಮೇಲೆ ಆರೂಢನಾದನು. ಆಗ ಆತನ ಅಂತಃಕರಣದಲ್ಲಿ ಅಭಿಮಾನವು ನಿರ್ಮಾಣವಾಗಿ ಈ ಪೃಥ್ವಿಯಲ್ಲಿ ಮಹಾಪಾತಕಿ ನಾನೊಬ್ಬನೇ ಆಗಿರುವೆನು ಎಂದು ತಿಳಿಯಹತ್ತಿದನು ॥೧೫೮॥ ನಾನು ಆತನಿಗೆ ರಾಜ್ಯಪದದ ಮೇಲೆ ಆರೂಢನನ್ನಾಗಿ ಮಾಡಲು ಆಗ ಆತನು ಹೀಗೆ ಹೇಳಹತ್ತಿದನು ; ನಾನು ಈ ರಾಜ್ಯಪದವಿಗಾಗಿ ಬ್ರಾಹ್ಮಣಗುರುಗಳಿಗೆ ಕೊಂದೆನು. ಕರ್ಣ, ದುಶ್ಯಾಸನ, ರಾಜಾ ದುರ್ಯೋಧನ ಇವರನ್ನೆಲ್ಲರಿಗೂ ಕೊಂದು ಹಾಕಿದೆನು ॥೧೫೯॥ ಸಂಪೂರ್ಣ ಸೃಷ್ಟಿಯ ಉತ್ಪತ್ತೀ, ಸ್ಥಿತೀ ಮತ್ತು ಲಯ ಮಾಡುವವ ಒಬ್ಬ ಈಶ್ವರನಿದ್ದಾನೆ ಎಂಬುದನ್ನು ಬಿಟ್ಟುಕೊಟ್ಟು ಧರ್ಮರಾಜನು ಯಾವತ್ತೂ ಕರ್ತಾ ನಾನೇ ಆಗಿರುವೆನು ಎಂದು ತಿಳಿಯಹತ್ತಿದನು ॥೧೬೦॥ ಹೀಗೆ ಆತನು ದೇಹಾಭಿಮಾನದಲ್ಲಿ ಸಿಲುಕಿಕೊಂಡನು. ಆದ್ದರಿಂದ ಅತಿಯಾಗಿ ಅನುತಾಪಪಡುತ್ತ ನನ್ನ ಕುಲದ ಘಾತವನ್ನು ನಾನೇ ಮಾಡಿಬಿಟ್ಟೆನು. ನಾನು ಮಹಾಪಾತಕಿಯಾಗಿರುವೆನು ಎಂಬ ಈ ಆರೋಪವನ್ನು ತಾನೇ ತನ್ನ ತಲೆಯ ಮೇಲೆ ಹೊತ್ತುಕೊಂಡನು ॥೧೬೧॥ ಆಗ ಆತನ ಮನಸ್ಸಿಗೆ ಸಮಾಧಾನವು ಪ್ರಾಪ್ತವಾಗುವುದಕ್ಕಾಗಿ ನಾನು ಭೀಷ್ಮಾಚಾರ್ಯರ ದೇಹಾವಸಾನದ ಪ್ರಸಂಗದಲ್ಲಿ ಧರ್ಮರಾಜನಿಗೆ ಆತನಲ್ಲಿ ತಂದು ನಿಲ್ಲಿಸಿದೆ. ಆಗ ಧರ್ಮರಾಜನು ಆತನನ್ನು ಪ್ರಶ್ನೆ ಮಾಡಿದನು. ಅದನ್ನು ಈಗ ಕೇಳು ॥೧೬೨॥ ಆತನು ರಾಜಧರ್ಮ, ದಾನಧರ್ಮ, ಆಪದ್ಧರ್ಮ ಮತ್ತು ಮುಖ್ಯವಾಗಿ ಉತ್ತಮೋತ್ತಮವಾಗಿರುವ ಮೋಕ್ಷಧರ್ಮವನ್ನು ಕೇಳಿದನು. ಈಗ ಅದನ್ನು ಕೇಳು ॥೧೬೩॥

ಭೀಷ್ಮಾಚಾರ್ಯರ ಮುಖದಿಂದ ಪ್ರಕಟವಾದ ಅತಿ ಉತ್ತಮವಾದ ಮೋಕ್ಷಧರ್ಮವನ್ನು ನಾನು ಶ್ರವಣ ಮಾಡಿದೆನು. ಇದರ ಯೋಗದಿಂದ ಸಂಸಾರದ ಭ್ರಮವು ದೂರವಾಗುವುದು ಮತ್ತು ಸರ್ವಕರ್ಮಗಳು ದಗ್ಧವಾಗಿಬಿಡುವುವು ॥೧೬೪॥ ಜ್ಞಾನ, ವಿಜ್ಞಾನ, ಶ್ರದ್ಧಾ, ಭಕ್ತೀ, ಅನಿತ್ಯವಸ್ತುಗಳ ನಶ್ವರತೆ ಮತ್ತು ವೈರಾಗ್ಯಸ್ಥಿತಿ ಈ ಸಂಬಂಧವಾಗಿ ಭೀಷ್ಮಾಚಾರ್ಯರು ಧರ್ಮರಾಜನಿಗೆ ಯಾವುದನ್ನು ಹೇಳಿದರೋ, ಅದನ್ನೇ ನಾನು ನಿನಗೆ ನಿಶ್ಚಿತವಾಗಿ ಹೇಳುವೆನು ॥೧೬೫॥ ಭೀಷ್ಮನಿಗೆ ದೇವವ್ರತ ಎಂದು ಕರೆಯುವರು. ಇದರ ಕಾರಣವೇನೆಂದರೆ, ಆತನು ದೇವರಲ್ಲಿ ಚಿತ್ತವನ್ನಿಟ್ಟು ನಿಶ್ಚಯಪೂರ್ವಕವಾಗಿ ಆತ್ಮಾನುಸಂಧಾನವನ್ನು ಮಾಡಿದನು ಮತ್ತು ಶರಪಂಜರದಲ್ಲಿ ಬಿದ್ದು ಅದನ್ನು ಸಾಧಿಸಿದನು ॥೧೬೬॥ ಆತನು ಯಾವ ಮೋಕ್ಷಧರ್ಮವನ್ನು ಹೇಳಿರುವುದರಲ್ಲಿ ಮುಖ್ಯವಾಗಿ ಪ್ರಥಮದಲ್ಲಿ ಜ್ಞಾನವನ್ನು ಹೇಳಿದನು. ಅದೇ ಅತಿ ಉತ್ತಮವಾಗಿರುವ ಜ್ಞಾನವನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೧೬೭॥

ನವೈಕಾದಶ ಪಂಚ ತ್ರೀನ್ ಭಾವಾನ್ ಭೂತೇಷು ಯೇನ ವೈ । ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್ ॥೧೪॥

ಅರ್ಥ:- ಹೇ ಉದ್ಧವಾ, ಯಾವ ಜ್ಞಾನದಿಂದ ಪ್ರಕೃತಿ, ಪುರುಷ, ಮಹತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರಾ ಇವು ಒಂಬತ್ತು, ಐದು ಜ್ಞಾನೇಂದ್ರಿಯಗಳು, ಐದಿ ಕರ್ಮೇಂದ್ರಿಯಗಳು ಮತ್ತು ಒಂದು ಮನವು, ಇವು ಹನ್ನೊಂದು, ಐದು ಪಂಚಮಹಾಭೂತಗಳು, ಮೂರು ಗುಣಗಳು ಅರ್ಥಾತ ಈ ಇಪ್ಪತ್ತೆಂಟು ತತ್ತ್ವಗಳು ಬ್ರಹ್ಮನಿಂದ ಹಿಡಿದು ಹುಲ್ಲಿನವರೆಗೆ ಸಂಪೂರ್ಣವಾಗಿ ಕಾರ್ಯದಲ್ಲಿ ಕಾಣಲಾಗುವುದು ಮತ್ತು ಇವುಗಳಲ್ಲಿ ಒಬ್ಬ ಪರಮಾತ್ಮನೇ ಅನುರಾಗ ರೂಪದಲ್ಲಿ ಕಾಣಲಾಗುವುದು. ಇದು ಪರೋಕ್ಷಜ್ಞಾನವಾಗಿದೆ ಎಂದು ನನ್ನ ನಿಶ್ಚಯವು.

ಪ್ರಕೃತಿ ಪುರುಷ ಮಹತ್ತತ್ತ್ವ । ಪಂಚತನ್ಮಾತ್ರಾ ಸೂಕ್ಷ್ಮಸ್ವಭಾವ । ಅಹಂಕಾರಾಸಕಟ ''ನವ''। ತತ್ತ್ವವೈಭವ ಹೇ ಸಂಖ್ಯಾ ॥೧೬೮॥ ''ಏಕಾದಶ'' ಬೋಲಿಜೇತೇ । ತೇ ಅಕರಾಹೀ ಇಂದ್ರಿಯೇ ಯೇಥೇ । ''ಪಂಚ'' ತೇ ಪಂಚಮಹಾಭೂತೇ । ''ತಿನೀ'' ತೇ ನಿಶ್ಚಿತ ತೀನ ಗುಣ ॥೧೬೯॥ ಹೇ ತತ್ತ್ವಸಂಖ್ಯಾ ಉಣಖೂಣ। ಗಣಿತಾ ಅಠ್ಠಾವೀಸ ಜಾಣ । ಇಯೇ ಸರ್ವ ಭೂತೀ ಸಮಸಮಾನ । ತತ್ತ್ವೇ ಜಾಣ ವರ್ತತೀ ॥೧೭೦॥ ಹಿರಣ್ಯಗರ್ಭಾದಿ ಸ್ಥಾವರಾಂತ । ತತ್ತ್ವೇ ಸಮಾನ ಗಾ ಸಮಸ್ತ । ಅಧಿಕ ಉಣೇ ನಾಹೀ ಯೇಥ । ಜಾಣ ನಿಶ್ಚಿತ ಉದ್ಧವಾ ॥೧೭೧॥ ತೈಸೇಂಚಿ ಗಾ ಜೀವಚೈತನ್ಯ । ಪ್ರತಿಬಿಂಬಲೇಸೇ ಸಮಸಮಾನ । ಜೇ ನಾಮರೂಪ ಅಭಿಮಾನ । ಸರ್ವಾಸೀ ಜಾಣ ಪ್ರಕಾಶಕ ॥೧೭೨॥ ಥಿಲ್ಲರೀ ವಿಹಿರೀ ಸಾಗರೀ । ಚಂದ್ರಮಾ ಪ್ರತಿಬಿಂಬ ಸಮಚಿ ಧರೀ । ತೇವೀ ಬ್ರಹ್ಮಾದಿ ಮಶಕವರೀ । ಜೀವತ್ವ ಶರೀರೀ ಸಮಸಾಮ್ಯೇ ॥೧೭೩॥ ಭೂತೇ ಸಮಸಮಾನ ಚೈತನ್ಯ । ಏಕಾತ್ಮತಾ ದೇಖಣೇ ಜಾಣ । ಯಾ ನಾಂವ ಗಾ ''ಶುದ್ಧಜ್ಞಾನ'' । ಮಾಝಾಹೀ ಜಾಣ ಹಾ ನಿಶ್ಚಯ ॥೧೭೪॥ ಆತಾ ವಿಜ್ಞಾನಾಚೇ ಲಕ್ಷಣ । ತುಜ ಮೀ ಸಾಂಗೇನ ಸಂಪೂರ್ಣ । ತೇ ಶ್ಲೋಕಾರ್ಧೇ ನಿರೂಪಣ । ಸ್ವಯೇ ನಾರಾಯಣ ಸಾಂಗತ ॥೧೭೫॥

ಏತದೇವ ಹಿ ವಿಜ್ಞಾನಂ ನ ನಥೈಕೇನ ಯೇನ ಯತ್ ॥

ಪೂರ್ವೀ ದೇಖತೇನೀ ಸ್ವಭಾವೇ । ವ್ಯಾಪಕ ವಸ್ತೂನಿಯೇ ಸರ್ವೇ । ವ್ಯಾಪಿಲೀ ಅಸತೀ ದೇಹಾದಿ ತತ್ತ್ವೇ । ಹೇ ಮಾನೀ ಜೀವೇಭಾವೇ ನಿಶ್ಚಿತ ॥೧೭೬॥ ಜೇವೀ ಕಾ ಘಟಮಾತ್ರಾಸ । ಸಬಾಹ್ಯ ವ್ಯಾಪಕ ಆಕಾಶ । ತೇವೀ ಸಕಳ ಪ್ರಪಂಚಾಸ । ಚಿದಾಭಾಸ ವ್ಯಾಪಕ ॥೧೭೭॥ ಐಸೇ ಜೇ ಕಾ ಶುದ್ಧಜ್ಞಾನ । ತೇ ಜ್ಞೇಯಪ್ರಾಪ್ತೀಚೇ ಕಾರಣ । ಜ್ಞೇಯ ಪಾವಲಿಯಾ ಜ್ಞಾನ । ಹಾರಪೇ ಜಾಣ ವೃತ್ತೀಸೀ ॥೧೭೮॥

ಪ್ರಕೃತೀ, ಪುರುಷ, ಮಹತತ್ತ್ವ ,ಪಂಚತನ್ಮಾತ್ರಾ ಅಂದರೆ ಐದು ಸೂಕ್ಷ್ಮಭೂತಗಳು ಮತ್ತು ಅಹಂಕಾರ ಇವು ಎಲ್ಲವೂ ಕೂಡಿದರೆ ತತ್ತ್ವಗಳ ಸಂಖ್ಯೆಯು ಒಂಬತ್ತಾಗುವುದು ॥೧೬೮॥ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು ಒಂದುಗೂಡಿ ತತ್ತ್ವಗಳ ಸಂಖ್ಯೆಯು ಹನ್ನೊಂದು ಎಂದು ಕೆಲವರು ಹೇಳುವರು. ಈ ಪ್ರಕಾರವಾಗಿ ಒಂಬತ್ತು ಮತ್ತು ಹನ್ನೊಂದು ಮತ್ತು ಆಕಾಶಾದಿ ಐದು ಮಹಾಭೂತಗಳು ಮತ್ತು ಸತ್ವ ರಜ ಮತ್ತು ತಮ ಈ ಮೂರು ಗುಣಗಳು ॥೧೬೯॥ ಈ ಎಲ್ಲ ತತ್ತ್ವಗಳ ಸಂಖ್ಯೆಗಳನ್ನು ಒಟ್ಟುಗೂಡಿಸಲು ಇಪ್ಪತ್ತೆಂಟು ಆಗುವುದು. ಈ ಎಲ್ಲ ತತ್ತ್ವಗಳು ಎಲ್ಲ ಪ್ರಾಣಿಮಾತ್ರಗಳಲ್ಲಿ ಸರಿಸಮಾನ ಭಾವನೆಯಿಂದ ವರ್ತಿಸುತ್ತಿರುವುವು ॥೧೭೦॥ ಬ್ರಹ್ಮದೇವನಿಂದ ಸ್ಥಾವರದವರೆಗೆ ಈ ಸರ್ವ ತತ್ತ್ವಗಳು ಸರ್ವರಲ್ಲಿ ಸರಿಸಮಾನವಾಗಿ ತುಂಬಿಕೊಂಡಿರವುವು. ಇವುಗಳಲ್ಲಿ ಒಂದಕ್ಕೂ ಕೂಡ ಹೆಚ್ಚು ಕಡಿಮೆ ಇರುವುದಿಲ್ಲ. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೭೧॥ ಇದೇ ಪ್ರಕಾರವಾಗಿ ಜೀವಚೈತನ್ಯ ಇವೂ ಕೂಡ ಸಮರೂಪದಲ್ಲಿ ಪ್ರತಿಬಿಂಬಿತವಾಗಿರುವುವು. ಇವು ಸರ್ವರ ನಾಮ, ರೂಪ ಮತ್ತು ಅಭಿಮಾನ ಇವುಗಳಲ್ಲಿ ಪ್ರಕಾಶಗೊಳಿಸುವುವು ॥೧೭೨॥ ಚಿಕ್ಕ ಮಡುವಿನಲ್ಲಿ, ಬಾವಿಯಲ್ಲಿ ಅಥವಾ ಸಮುದ್ರದಲ್ಲಿ ಚಂದ್ರನ ಪ್ರತಿಬಿಂಬವು ಒಂದೇ ರೀತಿಯಾಗಿರುವುದು. ಅದರಂತೆಯೇ ಬ್ರಹ್ಮದೇವನಿಂದ ಹಿಡಿದು ನೊಣದವರೆಗೆ ಎಲ್ಲರ ಶರೀರಗಳಲ್ಲಿ ಜೀವವು ಒಂದೇ ರೀತಿಯಲ್ಲಿರುವುದು ॥೧೭೩॥ ಸರ್ವ ಭೂತಮಾತ್ರರಲ್ಲಿ ಚೈತನ್ಯವು ಸರಿಸಮಾನವಾಗಿರುವುದರಿಂದ ಸರ್ವರ ಆತ್ಮವು ಒಂದೇ ಆಗಿದೆ ಎಂದು ಹೀಗೆ ತಿಳಿದುಕೊಳ್ಳುವಿಕೆಗೆ ಶುದ್ಧಜ್ಞಾನ ಎಂದು ಕರೆಯುವರು. ನನ್ನದೂ ಸಹ ಇದೇ ದೃಢವಾದ ಮತವಾಗಿರುವುದು ॥೧೭೪॥ ಈಗ ನಾನು ನಿನಗೆ ವಿಜ್ಞಾನದ ಸವಿಸ್ತಾರ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು. ಮುಂದಿನ ಅರ್ಧ ಶ್ಲೋಕದಿಂದ ಅದರದೇ ನಿರೂಪಣೆಯನ್ನು ಸ್ವತಃ ಶ್ರೀನಾರಾಯಣನು ಹೇಳುವನು ॥೧೭೫॥

ಪೂರ್ವದಲ್ಲಿ ನೋಡುತ್ತಿದ್ದ ರೀತಿಯಲ್ಲಿ ಅತ್ಯಂತ ವಿಶಾಲ ವ್ಯಾಪಕವಾಗಿರುವ ಪರಬ್ರಹ್ಮನು ದೇಹಾದಿಕ ಸರ್ವತತ್ತ್ವಗಳಿಂದ ವ್ಯಾಪಿಸಿಕೊಂಡಿರುವನು. ಹೀಗೆ ಆತನು ಪರಿಪೂರ್ಣ ಜೀವಭಾವದಿಂದ ನಿಶ್ಚಿತವಾಗಿ ಕಾಣುವನು ॥೧೭೬॥ ಯಾವ ಪ್ರಕಾರವಾಗಿ ಘಟಾದಿಕಗಳಿಗೆ ಒಳಹೊರಗೆ ಆಕಾಶವೇ ಹೇಗೆ ವ್ಯಾಪಿಸಿಕೊಂಡಿರುವುದೋ, ಅದರಂತೆಯೇ ಸಂಪೂರ್ಣ ಪ್ರಪಂಚಕ್ಕೆ ಚಿದಾಭಾಸವೇ ವ್ಯಾಪಿಸಿಕೊಂಡಿರುವುದು ॥೧೭೭॥ ಹೀಗಿರುವ ಯಾವ ಶುದ್ಧ ಜ್ಞಾನವು ಇದೇ ಜ್ಞೇಯ ಪ್ರಾಪ್ತಿಗೆ ಕಾರಣವಾಗಿರುವುದು. ಮತ್ತು ಜ್ಞೇಯವು ಪ್ರಾಪ್ತವಾಗುತ್ತಲೇ ಆ ಜ್ಞಾನವು ವೃತ್ತಿಸಮೇತವಾಗಿ ಲೋಪವಾಗಿಬಿಡುವುದು ॥೧೭೮॥

ಜ್ಞಾನೈಕಗಮ್ಯ ವಸ್ತು ಜೇ । ಯಾಲಾಗೀ ತ್ಯಾ ''ಜ್ಞೇಯ'' ಮ್ಹಣಜೇ । ಜ್ಞೇಯ ಪಾವಲಿಯಾ ಜ್ಞಾನ ಲಾಜೇ । ಜೇವೀ ಕಾ ಸೂರ್ಯತೇಜೇ ಖದ್ಯೋತ ॥೧೮೯॥ ಜಳೀ ರಿಘಾಲ್ಯಾ ಲವಣ । ಲವಣಪಣಾ ಮುಕೇ ಜಾಣ । ತೇವೀ ಜ್ಞೇಯ ಪಾವಲಿಯಾ ಜ್ಞಾನ । ಜ್ಞಾತೇಪಣ ಹಾರವೀ ॥೧೯೦॥ ಜ್ಞೇಯ ಪಾವಲಿಯಾ ಸಮ್ಯಕ । ಸ್ವರೂಪೀ ಚಿನ್ಮಾತ್ರೈಕ ಏಕ । ತೇಥ ಮಿಥ್ಯಾ ವ್ಯಾಪ್ಯವ್ಯಾಪಕ । ಸಾಧಕ ಬಾಧಕ ಅಸೇನಾ ॥೧೯೧॥ ಜೇವೀ ಉದೇಲಿಯಾ ಗಭಸ್ತೀ । ಸತಾರಾ ಲೋಪೇ ರೋಹಿಣೀಪತೀ । ತೇವೀ ಜಗೇಸೀ ಜ್ಞಾನಸಂಪತ್ತೀ । ಶ್ರೇಯಾಚೇ ಪ್ರಾಪ್ತೀಪುಢೇ ಲೋಪೇ ॥೧೯೨॥ ಐಸೇ ಅಪರೋಕ್ಷ ನವ್ಹತಾ ಸಾಙ್ಗ । ದೇಹಾದಿ ಪ್ರಪಂಚಾಚೇ ಲಿಂಗ । ಆತ್ಮ್ಯಾವೇಗಳೇ ದೇಖೇ ಜಗ । ಶಬ್ದೇ ಲಗಬಗ ಬ್ರಹ್ಮಜ್ಞಾನಾ ॥೧೯೩॥ ಶುದ್ಧ ಶಾಬ್ದಿಕ ಜೇ ಬ್ರಹ್ಮಜ್ಞಾನ । ತೇಹೀ ಗುಣಾತ್ಮಕ ಜಾಣ । ವಸ್ತು ನಿರಾಕಾರ ನಿರ್ಗುಣ । ಜನ್ಮಮರಣ ತಿಶೀ ನಾಹೀ ॥೧೯೪॥ ತ್ರಿಗುಣ ತಿತುಕೇ ನಾಶವಂತ । ಯೇಚಿ ವಿಖೀ ಪ್ರಸ್ತುತ । ಸಾಂಗತಾಹೇ ಶ್ರೀಕೃಷ್ಣನಾಥ । ಅಂತವಂತ ಸಾಕಾರ ॥೧೯೫॥

(ಉತ್ತರಾರ್ಧ) ಸ್ಥಿತ್ಯುತ್ಪತ್ತ್ಯಪ್ಯಯಾನ್ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್ ॥೧೫॥

ಅರ್ಥ:- ಯಾವ ಒಂದೇ ತತ್ವದಿಂದ ಕೂಡಿದ ಏಕಾತ್ಮ ಭಾವನೆಯೊಂದಿಗೆ ಪೂರ್ವದಲ್ಲಿ ಕಾಣುವವನು, ಆತನು ಪೂರ್ವದಂತೆ ಕಾಣಕೂಡದು. ಆದರೆ ಒಂದು ಪರಮ ಕಾರಣವಾದ ಬ್ರಹ್ಮನನ್ನೇ ಕಾಣಬೇಕು. ಆಗ ಇದಕ್ಕೆ ನಿಶ್ಚಿತ ವಿಜ್ಞಾನ ಅಪರೋಕ್ಷಜ್ಞಾನವೆಂದು ಕರೆಯಲ್ಪಡುವುದು. ಈ ಜ್ಞಾನ ಮತ್ತು ವಿಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವ ಯುಕ್ತಿಯಾವುದೆಂದರೆ, ಈ ಶರೀರ ಇತ್ಯಾದಿ ಇರುವ ಸಾವಯವ ವಸ್ತುಗಳ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವುಗಳ ವಿಚಾರವನ್ನು ಮಾಡಬೇಕು.

ಜರೀ ನಸತೇ ನಾಶವಂತ । ತರೀ ಸಗುಣ ಮಾನೂ ಯೇತೇ ಸತ್ಯ । ಉತ್ಪತ್ತಿಸ್ಥಿತಿನಿದಾನವಂತ । ಜಾಣ ಯೇಥ ತ್ರಿಗುಣಚಿ ॥೧೯೬॥ ರಜೋಗುಣೇ ಹೋಯ ಉತ್ಪತ್ತೀ । ಸತ್ತ್ವಗುಣೇ ಕೀಜೇ ಸ್ಥಿತೀ । ತಮೋಗುಣ ನಾಶೀ ಅಂತೀ । ಹಾ ಗುಣಪ್ರವೃತ್ತೀ-ಸ್ವಭಾವೋ ॥೧೯೭॥ ಯಾ ಗುಣಾಮಾಜೀ ವಸ್ತು ಅಸೇ । ಜಿಚೇನಿ ಗುಣಕರ್ಮ ಪ್ರಕಾಶೇ । ಪರೀ ಜನ್ಮಮರಣಾದಿ ದೋಷೇ । ಅಲಿಪ್ತ ವಸೇ ಅವಿನಾಶೀ ॥೧೯೮॥ ಜೇ ತಿನೀ ಗುಣಾ ಆಶ್ರಯಭೂತ । ಜಿಚೇನಿ ಗುಣಕರ್ಮೇ ವರ್ತತ । ತೀ ವಸ್ತು ತ್ರಿಗುಣಾತೀತ । ತೇಚಿ ಸಾಂಗತ ಶ್ರೀಕೃಷ್ಣ ॥೧೯೯॥

ಅದನ್ನು ಕೇವಲ ಜ್ಞಾನದಿಂದ ತಿಳಿಯಲ್ಪಡುವುದರಿಂದ ಅದಕ್ಕೆ ಜ್ಞೇಯ ಎಂದು ಹೇಳುವರು. ಆ ಜ್ಞೇಯವು ಅಂದರೆ ಬ್ರಹ್ಮವು ಒಮ್ಮೆ ಪ್ರಾಪ್ತವಾಯಿತೆಂದರೆ ಸೂರ್ಯನ ಎದುರಿನಲ್ಲಿ ಮಿಂಚುಹುಳವು ನಿಸ್ತೇಜವಾಗುವಂತೆ ಜ್ಞೇಯದ ಎದುರಿನಲ್ಲಿ ಜ್ಞಾನವು ಸಪ್ಪಗಾಗುವುದು ॥೧೮೯॥ ಲವಣವು ನೀರಿನಲ್ಲಿ ಬೀಳುತ್ತಲೇ ಅದು ತನ್ನ ಲವಣದ ಲವಣತ್ವದಿಂದ ಇಲ್ಲದಾಗುವುದು. ಅದರಂತೆ ಜ್ಞೇಯವು ಪ್ರಾಪ್ತವಾಗುತ್ತಲೇ ಜ್ಞಾನದ ಜ್ಞಾನತ್ವವು ಇಲ್ಲದಾಗುವುದು ॥೧೯೦॥ ಒಮ್ಮೆ ಜ್ಞೇಯದ ಯಥಾರ್ಥ ಪ್ರಾಪ್ತಿಯಾಯಿತೆಂದರೆ ಸ್ವರೂಪದಲ್ಲಿ ಒಂದೇ ಚಿನ್ಮಾತ್ರವು ಇರುವುದು. ಅಲ್ಲಿ ವ್ಯಾಪ್ತ ಮತ್ತು ವ್ಯಾಪಕವು ಮಿಥ್ಯೆಯಾಗುವುದು. ಸಾಧಕ ಮತ್ತು ಬಾಧಕ ಹೀಗೆ ಯಾವುದೊಂದೂ ಉಳಿಯುವುದಿಲ್ಲ ॥೧೯೧॥ ಸೂರ್ಯನ ಉದಯವಾಗುತ್ತಲೇ ನಕ್ಷತ್ರಗಳ ಸಮೇತವಾಗಿ ಚಂದ್ರನು ಹೇಗೆ ಲೋಪನಾಗುವನೋ, ಅದರಂತೆ ಜ್ಞೇಯದ ಪ್ರಾಪ್ತಿಯ ಎದುರಿನಲ್ಲಿ ಸಂಪೂರ್ಣ ಜಗತ್ತು ಸಮೇತವಾಗಿ ಯಾವ ಜ್ಞಾನಸಂಪತ್ತು ಲೋಪವಾಗುವುದು ॥೧೯೨॥ ಈ ಪ್ರಕಾರದ ಪರಿಪೂರ್ಣ ಅಪರೋಕ್ಷ ಜ್ಞಾನವು ಎಲ್ಲಿಯವರೆಗೆ ಆಗುವುದಿಲ್ಲವೋ, ಅಲ್ಲಿಯವರೆಗೆ ದೇಹಾದಿಕ ಪ್ರಪಂಚದ ಸ್ವರೂಪವು ಮತ್ತು ಇಡೀ ಜಗತ್ತು ಇದು ಆತ್ಮಕ್ಕಿಂತ ಭಿನ್ನವಾಗಿದೆ ಎಂದು ಆತನು ತಿಳಿಯುವನು ಮತ್ತು ಶುಷ್ಕವಾದ ಶಬ್ದಗಳಿಂದ ಬ್ರಹ್ಮಜ್ಞಾನದ ವಿಷಯಕ್ಕೆ ಪಟಗುಡುತ್ತಿರುವನು ॥೧೯೩॥ ಹೀಗೆ ಈ ಶುದ್ಧ ಶಾಬ್ದಿಕ ಬ್ರಹ್ಮಜ್ಞಾನವು ಅದು ಕೂಡ ತ್ರಿಗುಣಾತ್ಮಕವಿರುವುದು. ಮತ್ತು ಪರಬ್ರಹ್ಮವು ಮಾತ್ರ ನಿರಾಕಾರ ಮತ್ತು ನಿರ್ಗುಣವಾಗಿರುವುದು. ಅದಕ್ಕೆ ಜನ್ಮಮರಣಗಳಿರುವುದಿಲ್ಲ ॥೧೯೪॥ ತ್ರಿಗುಣಾತ್ಮಕವಾಗಿರುವ ಯಾವತ್ತೂ ವಸ್ತುಗಳು ನಾಶಿವಂತವಾಗಿರುವುವು. ಈ ವಿಷಯದ ನಾಶಿವಂತ ಮತ್ತು ಸಾಕಾರ ಇವುಗಳ ನಿರೂಪಣೆಯನ್ನು ಈಗ ಶ್ರೀಕೃಷ್ಣನಾಥನು ಹೇಳುವನು ॥೧೯೫॥

ನಿಜವಾಗಿಯೂ ಆಕಾರ ಉಳ್ಳ ವಸ್ತುಗಳ ಒಂದುವೇಳೆ ನಾಶಿವಂತವಾಗಿರದಿದ್ದರೆ, ಇರುವ ಎಲ್ಲ ಸಗುಣ ರೂಪಗಳನ್ನೆಲ್ಲವನ್ನೂ ಸತ್ಯವೆಂದು ತಿಳಿಯಬೇಕಾಗಿತ್ತು. ಉತ್ಪತ್ತೀ, ಸ್ಥಿತೀ,ಲಯ ಇವು ತ್ರಿಗುಣಾತ್ಮಕವಾಗಿರುವುವು ॥೧೯೬॥ ರಜೋಗುಣದಿಂದ ಪದಾರ್ಥಗಳ ಉತ್ಪತ್ತಿಯಾಗುವುದು. ಸತ್ವಗುಣದಿಂದ ಸ್ಥಿತಿಯಾಗುವುದು ಮತ್ತು ತಮೋಗುಣದಿಂದ ಕೊನೆಯಲ್ಲಿ ನಾಶವಾಗುವುದು. ಇದು ಗುಣಗಳ ವೃತ್ತಿಯ ಸ್ವಭಾವವೇ ಆಗಿರುವುದು ॥೧೯೭॥ ಈ ಮೂರು ಗುಣಗಳಲ್ಲಿ ಆತ್ಮಸತ್ತೆ ವಿರುವುದು.ಅದರಿಂದ ಗುಣಗಳ ಕಾರ್ಯಗಳು ಪ್ರಕಾಶಿತವಾಗುತ್ತಿರುವುವು. ಆದರೆ ಆ ಸತ್ತೆಯು ಜನ್ಮಮರಣ ಇತ್ಯಾದಿ ದೋಷಗಳಿಂದ ಅಲಿಪ್ತವಾಗಿರುವುದರಿಂದ ಅದು ಅವಿನಾಶಿಯಾಗಿರುವುದು ॥೧೯೮॥ ಯಾವ ಆತ್ಮತತ್ವವು ಮೂರೂ ಗುಣಗಳಿಗೆ ಆಶ್ರಯಭೂತವಾಗಿರುವುದು. ಯಾವುದರಿಂದ ಗುಣಗಳ ಕಾರ್ಯವಾಗುವುದೋ, ಆ ತತ್ವವು ಗುಣಾತೀತವಾಗಿರುವುದು. ಇದನ್ನೇ ಈಗ ಶ್ರೀಕೃಷ್ಣನು ಹೇಳುವನು ॥೧೯೯॥

ಆದಾವಂತೇ ಚ ಮಧ್ಯೇ ಚ ಸೃಜ್ಯಾತ್ಸೃಜ್ಯಂ ಯದನ್ವಿಯಾತ್ । ಪುನಸ್ತತ್ಪ್ರತಿಸಂಕ್ರಾಮೇ ಯಚ್ಛಿಷ್ಯೇತ ತದೇವ ಸತ್ ॥೧೬॥

ಅರ್ಥ:- ಯಾವ ವಸ್ತು ಸೃಷ್ಟಿಯ ಪ್ರಾರಂಭ ಕಾಲದಲ್ಲಿ ಮತ್ತು ಅಂತ್ಯಕಾಲದಲ್ಲಿ ಕಾರಣರೂಪದಿಂದ ಸ್ಥಿತವಾಗಿರುವದೋ ಅದು ಮಧ್ಯದಲ್ಲಿಯೂ ಇರುವುದು. ಒಂದು ಕಾರ್ಯದಿಂದ ಇನ್ನೊಂದು ಕಾರ್ಯದಲ್ಲಿ ಅನುವೃತ್ತವಾಗುವ ಆ ಸರ್ವದರ ಪ್ರಳಯದ ನಂತರ ಯಾವುದು ಅವಶಿಷ್ಟವಾಗಿರುವುದೋ, ಅದೇ ಸತ್‌ವಾಗಿದೆ ಎಂದು ತಿಳಿಯಬೇಕು.

ಗುಣಾ ಆದಿ-ಮಧ್ಯ-ಅವಸಾನೀ । ಸೃಷ್ಟಿ ಉತ್ಪತ್ತಿ-ಸ್ಥಿತಿ-ನಿದಾನೀ । ಜೇ ಅಸೇ ಅವಿನಾಶಪಣೇ । ತೇ ಮೀ ಮಾನೀ ಸಂತತ್ವೇ ॥೧೯೦॥ ತೇಚಿ ಸಂತತ್ವ ಗಾ ಐಸೇ । ಜ್ಯಾಚೇನಿ ಆಧಾರೇ ಜಗ ವಸೇ । ಜೇ ಜಗಾ ಸಬಾಹ್ಯ ಭರಲೇ ಅಸೇ । ಜಗ ಪ್ರಕಾಶೇ ಜ್ಯಾಚೇನೀ ॥೧೯೧॥ ಹೇ ಜಗಚಿ ಹೋಯ ಜಾಯೇ । ಪರೀ ತೇ ಸಂಚಲೇಚಿ ರಾಹೇ । ಐಶೀ ಜೇ ನಿಜವಸ್ತು ಆಹೇ । ತೇ ತೂ ಪಾಹೇ ಸಂತತ್ತ್ವೇ ॥೧೯೨॥ ಜೈಸೇ ಘಟಮಠ ಹೋತೀ ಜಾತೀ । ಆಕಾಶ ರಾಹೇ ಸಹಜಗತೀ । ತೇವೀ ಬ್ರಹ್ಮಾಂಡಾ ಲಯೋತ್ಪತ್ತೀ । ವಸ್ತೂಚೇ ಸ್ಥಿತೀ ಸಂಚಲೀ ॥೧೯೩॥ ಜೇವೀ ಅಲಂಕಾರಪೂರ್ವೀ ಸೋನೇ । ಅಲಂಕಾರೀ ಸೋನೇ ಸೋನೇಪಣೇ । ಅಲಂಕಾರನಾಶೀ ನಾಸೋ ನೇಣೇ । ಜೇವೀ ಕಾ ಸೋನೇ ನಿಜಸ್ಥಿತೀ ॥೧೯೪॥ ತೇವೀ ಆಕಳೋನಿ ಚರಾಚರ । ವಸ್ತು ಅಸೇ ಅಖಂಡಾಕಾರ । ಹೋತಾ ಜಾತಾ ಆಕಾರವಿಕಾರ । ವಸ್ತು ಅಣುಮಾತ್ರ ವಿಕಾರೇನಾ ॥೧೯೫॥ ಐಶೀ ಜೇ ವಸ್ತು ಅಖಂಡಪಣೇ । ತಿಚ್ಯಾ ಠಾಯೀ ಚಾರ ಪ್ರಮಾಣೇ । ಇಹೀ ಪ್ರಮಾಣೇ ವಸ್ತು ಜಾಣಣೇ । ಪ್ರಪಂಚ ದೇಖಣೇ ಮಿಥ್ಯಾತ್ವೇ ॥೧೯೬॥

ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್ । ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್‌ಸ ವಿರಜ್ಯತೇ ॥೧೭॥

ಅರ್ಥ:- ಈ ಆತ್ಮಸ್ವರೂಪದಲ್ಲಿ ಅಲ್ಪವೂ ಕೂಡ ಭೇದವಿಲ್ಲ. ಶ್ರುತಿ, ಪ್ರತ್ಯಕ್ಷ, ಐತಿಹ್ಯ ಮತ್ತು ಅನುಮಾನ ಪ್ರಮಾಣ ಇವು ನಾಲ್ಕು ಮುಖ್ಯವಾಗಿವೆ. ಇವುಗಳ ಶೋಧನೆಯಿಂದ ದೃಶ್ಯ ಪ್ರಪಂಚವು ನಶ್ವರ ಮತ್ತು ವಿಕಾರ ಉಳ್ಳದ್ದಾಗಿರುವುದರಿಂದ ಸತ್ಯವೆಂದು ಸಿದ್ಧವಾಗುವುದಿಲ್ಲ. ಆದ್ದರಿಂದ ವಿವೇಕಿ ಪುರುಷನು ಈ ವಿವಿಧ ಕಲ್ಪನಾರೂಪ ಅಥವಾ ಶಬ್ದಮಾತ್ರ ಪ್ರಪಂಚದಿಂದ ವಿರಕ್ತನಾಗುವನು.

ಏಕ ಅದ್ವೈತ ಬ್ರಹ್ಮ ಪಾಹೀ । ದುಸರೇ ಆಣಿಕ ಕಾಂಹೀ ನಾಹೀ । ಪ್ರಪಂಚ ಮಿಥ್ಯಾ ವಸ್ತೂಚೇ ಠಾಯೀ । ಹೇ ಪ್ರಮಾಣ ಪಾಹೀ ''ವೇದವಾಕ್ಯ'' ॥೧೯೭॥ ''ಪ್ರತ್ಯಕ್ಷ'' ದೇಖಿಜೇ ಆಪಣ । ದೇಹಾದಿಕಾಂಚೇ ನಶ್ವರಪಣ । ಹೇ ದುಸರೇ ಪರಮ ಪ್ರಮಾಣ । ಜೇ ಕ್ಷಣಿಕತ್ವ ಜಾಣ ಪ್ರಪಂಚಾ ॥೧೯೮॥ ಮಾರ್ಕಂಡೇಯೋ ಆಣಿ ಭೃಶುಂಡೀ । ಇಹೀ ಪ್ರಪಂಚಾಚೀ ರಾಖೋಂಡೀ । ದೇಖಿಲೀ ಗಾ ರೋಕಡೀ । ವೇಳಾ ಕೋಡೀ ಕಲ್ಪಾಂತೀ ॥೧೯೯॥

ಗುಣಗಳ ಪ್ರಾರಂಭದಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಹಾಗೆಯೇ ಉತ್ಪತ್ತೀ, ಸ್ಥಿತೀ ಮತ್ತು ಲಯದ ಸಮಯದಲ್ಲಿ ಯಾವುದು ಅವಿನಾಶಿರೂಪದಿಂದ ಇರುತ್ತದೆಯೋ, ಅದುವೇ ಸತ್ ಅಂದರೆ ಬ್ರಹ್ಮವಾಗಿದೆ ಎಂದು ನಾನು ಮನ್ನಿಸುವೆನು ॥೧೯೦॥ ಯಾವುದರ ಆಧಾರದಿಂದ ಈ ಎಲ್ಲ ಜಗತ್ತು ಇರುವುದೋ, ಯಾವುದು ಜಗತ್ತಿನ ಒಳಹೊರಗೆ ತುಂಬಿಕೊಂಡಿರುವುದೋ, ಯಾವುದರಿಂದ ಈ ಸರ್ವ ಸೃಷ್ಟಿಯು ಪ್ರಕಾಶಿತವಾಗುವುದೋ, ಅದುವೇ ಶಾಶ್ವತವಾದ ಬ್ರಹ್ಮವಾಗಿರುವುದು ॥೧೯೧॥ ಈ ಜಗತ್ತು ಹುಟ್ಟುವುದು, ನಾಶವಾಗುವುದು ನಡೆದೇ ಇದೆ. ಆದರೆ ಅದರಲ್ಲಿನ ಯಾವ ಆತ್ಮವಸ್ತುವು ಯಾವಾಗಲೂ ಇರುವುದು. ಅದೇ ಸತ್ ಬ್ರಹ್ಮವಾಗಿರುವುದು. ಹೀಗೆ ನೀನು ತಿಳಿ ॥೧೯೨॥ ಯಾವ ಪ್ರಕಾರವಾಗಿ ಮಣ್ಣಿನಿಂದ ಘಟಮಠಗಳು ಸಿದ್ಧಗೊಳ್ಳುವುವು ಮತ್ತು ನಾಶವಾಗುತ್ತಿರುವುವು. ಆದರೆ ಅವುಗಳಲ್ಲಿ ಒಳಹೊರಗೆ ವ್ಯಾಪಿಸಿರುವ ಆಕಾಶವು ಯಾವಾಗಲೂ ಇದ್ದೇ ಇರುವುದು. ಅದರಂತೆ ಬ್ರಹ್ಮಾಂಡದ ಉತ್ಪತ್ತಿ ಮತ್ತು ಲಯವಾಗುತ್ತಿದ್ದರೂ ಅದಕ್ಕೆ ಒಳಹೊರಗೆ ವ್ಯಾಪಿಸಿರುವ ಬ್ರಹ್ಮತತ್ತ್ವವು ಯಾವಾಗಲೂ ಇದ್ದೇ ಇರುವುದು ॥೧೯೩॥ ಅಥವಾ ಅಲಂಕಾರಕ್ಕಿಂತ ಪೂರ್ವದಲ್ಲಿ ಸುವರ್ಣವು, ಅಲಂಕಾರ ಸಿದ್ಧಗೊಂಡಾಗಲೂ ಸುವರ್ಣವು, ಮತ್ತು ಅಲಂಕಾರವನ್ನು ಮುರಿದು ಹಾಕಿದರೂ ಸುವರ್ಣವೇ ಇರುವುದು. ಅದರಲ್ಲಿ ಯಾವ ಬದಲಾವಣೆಯಾಗುವುದಿಲ್ಲ ॥೧೯೪॥ ಅದರಂತೆ ಎಲ್ಲ ಚರಾಚರಗಳಿಗೆ ಒಳಹೊರಗೆ ವ್ಯಾಪಿಸಿಕೊಂಡಿರುವ ಪರಬ್ರಹ್ಮವು ಅಖಂಡಾಕಾರವಾಗಿ ಇರುವುದು. ಯಾವುದೇ ಪ್ರಕಾರದ ಆಕಾರ,ವಿಕಾರಗಳು ಹುಟ್ಟಲಿ ಅಥವಾ ಮುರಿದುಬೀಳಲಿ, ಆದರೆ ಪರಬ್ರಹ್ಮಕ್ಕೆ ಸ್ವಲ್ಪವೂ ಸಹ ವಿಕಾರವಾಗುವುದಿಲ್ಲ ॥೧೯೫॥ ಈ ಪ್ರಕಾರದ ಅಖಂಡತ್ವದಿಂದ ಇರುವ ಯಾವ ಪರಬ್ರಹ್ಮಸ್ವರೂಪ ವಸ್ತುವಿಗೆ ನಾಲ್ಕು ಪ್ರಮಾಣಗಳಿರುವುವು. ಆ ಯಾವ ಪ್ರಮಾಣಗಳಿಂದ ಆ ವಸ್ತುವನ್ನು ತಿಳಿದುಕೊಂಡು ಪ್ರಪಂಚದ ಮಿಥ್ಯಾಸ್ವರೂಪವನ್ನು ಅರಿತುಕೊಳ್ಳಬೇಕು ॥೧೯೬॥

ಕೇವಲ ಒಂದೇ ಒಂದು ಅದ್ವೈತ ಬ್ರಹ್ಮವಿರುವುದು. ಎರಡನೆಯದಾಗಿ ಬೇರೆ ಯಾವುದೂ ಇರುವುದಿಲ್ಲ. ಈ ಪರಬ್ರಹ್ಮದಲ್ಲಿ ಈ ಯಾವ ಅಸತ್ಯ ಪ್ರಪಂಚವು ಭಾಸವಾಗುತ್ತಿರುವುದು. ಇದಕ್ಕೆ ವೇದವ್ಯಾಕದ ಪ್ರಮಾಣವಿರುವುದು ॥೧೯೭॥ ದೇಹಾದಿಕಗಳ ಕ್ಷಣಭಂಗುರತೆಯನ್ನು ನಾವು ಪ್ರತ್ಯಕ್ಷವಾಗಿ ಕಣ್ಣುಗಳಿಂದ ನೋಡುತ್ತೇವೆ. ಇದೇ ಪ್ರಪಂಚದ ಕ್ಷಣಿಕತ್ವದ ಎರಡನೆಯ ಪ್ರತ್ಯಕ್ಷ ಪ್ರಮಾಣವಾಗಿರುವುದು ॥೧೯೮॥ ಮಾರ್ಕಂಡೇಯ ಮತ್ತು ಭೃಶುಂಡಿ ಇವರು ಕೋಟ್ಯಾವಧೀ ಕಲ್ಪಾಂತದ ಸಮಯದಲ್ಲಿ ಪ್ರಪಂಚವು ಲಯವಾಗಿರುವುದನ್ನು ನೋಡಿರುವರು ॥೧೯೯॥

ಮಹಾಜನಪ್ರಸಿದ್ಧ ಹೇ ಶ್ರವಣ । ಪ್ರಪಂಚಾಸೀ ಕ್ಷಣಿಕಪಣ । ಹೇ ತಿಸರೇ ಗಾ ಪ್ರಮಾಣ । ಉದ್ಧವಾ ಜಾಣ ''ಐತಿಹ್ಯ'' ।೨೦೦॥ ಶಾಸ್ತ್ರಪ್ರಸಿದ್ಧೀ ಅನುಮಾನ । ಮಿಥ್ಯಾ ಪ್ರಪಂಚಾಚೇ ಭಾನ । ದಿಸೇ ಮೃಗಜಳಾಸಮಾನ । ವಸ್ತುತಾ ಜಾಣ ಅಸೇನಾ ।೨೦೧॥ ದೋರ ದೋರಪಣೇ ಸಾಚಾರ । ಭ್ರಮೇ ಭಾಸೇ ನಾನಾಕಾರ । ಕಾಷ್ಠ ಸರ್ಪ ಕೀ ಮೋತ್ಯಾಂಚಾ ಹಾರ । ನಾ ಹೇ ಜಳಧಾರ ಜಳಾಚೀ ।೨೦೨॥ ತೇವೀ ವಸ್ತು ಏಕ ಚಿದ್‌ಘನ । ತೇಥ ಭ್ರಮೇ ಮತವಾದ ಗಹನ । ಹೇ ಶೂನ್ಯ ಕಿಂವಾ ಸಗುಣ । ಕರ್ಮಧರ್ಮಾಚರಣ ತೇ ಮಿಥ್ಯಾ ।೨೦೩॥ ಯಾಪರೀ ಕರಿತಾ ''ಅನುಮಾನ'' । ಮಿಥ್ಯಾ ಪ್ರವೃತ್ತಿ ಪಂಚಜ್ಞಾನ । ಹೇ ವೇದಾಂತಮತ ಪ್ರಮಾಣ । ಸತ್ಯ ಜಾಣ ಉದ್ಧವಾ ।೨೦೪॥ ತಂತೂವೇಗಳಾ ಪಟ ಕಾಂಹೀ । ಯೋಜೇನಾ ಆಣಿಕಿಯೇ ಠಾಯೀ । ತೇವೀ ಬ್ರಹ್ಮಾವೇಗಳಾ ಪಾಹೀ । ಪ್ರಪಂಚು ನಾಹೀ ಸತ್ಯತ್ವೇ ।೨೦೫॥ ಚಹೂ ಪ್ರಮಾಣೇ ಪ್ರಪಂಚಸ್ಥಿತೀ । ಮಿಥ್ಯಾ ಸಾಧಿಲೀ ನಿಶ್ಚಿತೀ । ತೇ ಪ್ರಪಂಚೀ ವಿಷಯಾಸಕ್ತೀ । ಸಾಂಡೂನಿ ವಿರಕ್ತೀ ಧರಾವೀ ।೨೦೬॥ ಯೇಚಿವಿಖೀಚೇ ನಿರೂಪಣ। ಸ್ವಯೇ ಸಾಂಗತಾಹೇ ನಾರಾಯಣ । ಉಭಯ ಲೋಕೀ ವಿಷಯಧ್ಯಾನ । ತೇ ಮಿಥ್ಯಾ ಜಾಣ ಅಮಂಗಳ ।।೨೦೭॥

ಕರ್ಮಣಾಂ ಪರಿಣಾಮಿತ್ವಾದಾವಿರಿಂಚ್ಯಾದಮಂಗಲಮ್ । ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ।೧೮॥

ಅರ್ಥ:- ವಿವೇಕ ಪುರುಷರು ಸ್ವರ್ಗಾದಿ ಫಲವನ್ನು ಕೊಡುವ ಯಜ್ಞಾದಿ ಕರ್ಮಗಳು ಪರಿಣಾಮದಲ್ಲಿ ಅವು ನಶ್ವರವಾಗಿರುವುದರಿಂದ ಬ್ರಹ್ಮಲೋಕದವರೆಗೆ ಸ್ವರ್ಗಾದಿ ಸರ್ವ ಅದೃಷ್ಟಕ್ಕೆ ಪ್ರತ್ಯಕ್ಷ ವಿಷಯ ಸುಖದ ಸಮಾನವಾಗಿರುವ ಈ ಅಮಂಗಲ, ದುಃಖದಾಯೀ ಮತ್ತು ನಶ್ವರವೆಂದು ತಿಳಿಯಬೇಕು.

ಕರೂನಿ ಕರ್ಮಾಚೇ ಸಾಧನ । ಪಾವಿಜೇ ಲೋಕ ತೋ ನಶ್ವರ ಜಾಣ । ಆದಿಕರೂನಿ ಬ್ರಹ್ಮಸದನ । ನಶ್ವರತ್ವೇ ಜಾಣ ಅಮಂಗಳ ।೨೦೮॥ ಜೇ ತೇ ಲೋಕೀಚೇ ಸುಖ ಗಹನ । ತೇ ವಿಖೇ ರಾಂಧಿಲೇ ಜೈಸೇ ಅನ್ನ । ಖಾತಾ ಗೋಡ ಪರಿಪಾಕೇ ಮರಣ । ತೇವೀ ಅಧಃಪತನ ಸ್ವರ್ಗಸ್ಥಾ ।೨೦೯॥ ಜೈಸಾ ದೇಖಿಲಾ ಹಾ ಲೋಕ ಯೇಥ । ತೈಸಾಚಿ ಸ್ವರ್ಗಭೋಗ ತೇಥ । ಜೇ ದೋನ್ಹೀ ಜಾಣ ಅಂತವಂತ । ನಾಶ ಪ್ರಾಪ್ತ ದೋಹೋಸೀ ।೨೧೦॥ ಕಾಳೇ ಪಾಂಢರೇ ದೋನೀ ಸುಣೇ । ಜೇವೀ ಸಮ ಅಪವಿತ್ರಪಣೇ । ತೇವಿ ಇಹಪರಲೋಕ ದೋನ್ಹೀ । ನಶ್ವರಪಣೇ ಸಮಾನ ।೨೧೧॥

ಮಹಾಪುರುಷರ ಮುಖದಿಂದ ಪ್ರಪಂಚದ ಕ್ಷಣಿಕತ್ವದ ವಿಚಾರವಾಗಿ ಅನೇಕ ಕಥೆಗಳನ್ನು ನಾವು ಕೇಳುತ್ತೇವೆ. ಇದು ಮೂರನೆಯ ಐತಿಹಾಸಿಕ ಪ್ರಮಾಣವಾಗಿರುವುದು ।೨೦೦॥ ಶಾಸ್ತ್ರಸಿದ್ಧಗಳಿಂದ ಮತ್ತು ಅನುಮಾನ ಇವುಗಳಿಂದ ಯಾವ ಈ ಪ್ರಪಂಚದ ಭಾನವು ಮಿಥ್ಯೆ ಎಂದು ನಿರ್ಣಯವಾಗುವುದು. ಈ ಪ್ರಪಂಚವು ಮೃಗಜಲಸಮಾನವಾಗಿರುವುದು. ಇದರಲ್ಲಿ ಯಾವ ಸತ್ಯತ್ವವು ಇರುವುದಿಲ್ಲ ।೨೦೧॥ ಒಂದೇ ಹಗ್ಗವು ತನ್ನ ಮೂಲ ಸ್ವರೂಪದ ಹಗ್ಗವಾಗಿಯೇ ಬಿದ್ದಿರುವುದು. ಆದರೆ ಭ್ರಮದಿಂದ ಅದರಲ್ಲಿ ನಾನಾ ಪ್ರಕಾರಗಳ ಕಲ್ಪನೆಗಳನ್ನು ಮಾಡಲ್ಪಡುವುವು. ಯಾರೋ ಅದಕ್ಕೆ ಕೋಲು ಎನ್ನುವರು. ಕೆಲವರು ಅದಕ್ಕೆ ಸರ್ಪವೆನ್ನುವರು. ಕೆಲವರು ಮುತ್ತಿನ ಸರವೆಂದರೆ ಇನ್ನು ಕೆಲವರು ಅದಕ್ಕೆ ನೀರಿನ ಝರಿ ಎನ್ನುವರು ।೨೦೨॥ ಇದರಂತೆ ಪರಬ್ರಹ್ಮವು ಒಂದೇಯಾಗಿದ್ದು ಭ್ರಮದಿಂದ ಅದರಲ್ಲಿ ಅನೇಕ ಪ್ರಕಾರದ ಭೇದಗಳು ಉಂಟಾಗುವುವು. ಯಾರೋ ಅದಕ್ಕೆ ಶೂನ್ಯ ಎನ್ನುವರು. ಕೆಲವರು ಸಗುಣವೆನ್ನುವರು, ಕರ್ಮಧರ್ಮಾಚರಣೆಗಳು ಮಿಥ್ಯೆ ಎಂದು ತಿಳಿಯುವರು ।೨೦೩॥ ಈ ಪ್ರಕಾರವಾಗಿ ಅನುಮಾನಗಳಿಂದ ವಿಚಾರವನ್ನು ಮಾಡಲು ಪ್ರವೃತ್ತಿ ಮತ್ತು ಪ್ರಪಂಚಜ್ಞಾನವು ಮಿಥ್ಯೆ ಎಂದು ನಿರ್ಣಯವಾಗುವುದು. ಹೇ ಉದ್ಧವಾ, ವೇದಾಂತದ ಸತ್ಯ ಮತ್ತು ಪ್ರಮಾಣಸಿದ್ಧವಾದ ಮತವು ಇದೇ ಆಗಿದೆ ।೨೦೪॥ ವಸ್ತ್ರವು ನೂಲಿನಿಂದ ಎಂದಿಗೂ ಬೇರೆಯಾಗಿ ಇರುವುದಿಲ್ಲ. ಅದರಂತೆ ಯಾವ ಈ ಪ್ರಪಂಚವು ಬ್ರಹ್ಮ ಹೊರತಾಗಿ ಬೇರೆಯಾಗಿ ಇರುವುದಿಲ್ಲ ।೨೦೫॥ ಈ ಪ್ರಕಾರವಾಗಿ ಪ್ರಪಂಚದ ಅಸ್ತಿತ್ವವು ನಾಲ್ಕು ಪ್ರಕಾರಗಳಿಂದ ಮಿಥ್ಯೆಯಾಗಿರುವುದು ಎಂದು ನಿರ್ಣಯಿಸಲ್ಪಡುವುದು. ಆದ್ದರಿಂದ ಈ ಪ್ರಪಂಚದಲ್ಲಿನ ಆಸಕ್ತಿಯನ್ನು ಬಿಟ್ಟುಕೊಟ್ಟು ವೈರಾಗ್ಯವನ್ನು ಧರಿಸಬೇಕು ।೨೦೬॥ ವಿಷಯಗಳ ಚಿಂತನೆಯು ಮಿಥ್ಯೆಯಾಗಿರುವುದು. ಇದು ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಅಮಂಗಲಕಾರಕವಾಗಿರುವುದು. ಇದೇ ವಿಷಯಕ್ಕಾಗಿ ಈಗ ಶ್ರೀಕೃಷ್ಣನು ಸ್ವತಃ ನಿರೂಪಣೆಯನ್ನು ಮಾಡುವನು ।೨೦೭॥

ಯಜ್ಞಯಾಗಗಳ ಕರ್ಮಸಾಧನೆಯನ್ನು ಮಾಡಿ ಪ್ರಾಪ್ತ ಮಾಡಿಕೊಳ್ಳುವ ಯಾವ ಲೋಕಗಳು ನಶ್ವರವಾಗಿರುವುವು. ಬ್ರಹ್ಮಲೋಕ ಮೊದಲು ಮಾಡಿ ಇರುವ ಯಾವತ್ತೂ ಲೋಕಗಳು ಅವುಗಳೆಲ್ಲವೂ ನಶ್ವರವಾಗಿರುವುವು. ಆದ್ದರಿಂದ ಅವು ಅಮಂಗಳಕಾರಕಗಳಾಗಿರುವುವು ।೨೦೮॥ ಆಯಾ ಲೋಕಗಳಲ್ಲಿ ಇರುವ ಸುಖವು ವಿಷವನ್ನು ಹಾಕಿ ಕುದಿಸಿರುವ ಅನ್ನದಂತಾಗಿರುವುದು. ವಿಷಯುಕ್ತ ಅನ್ನವನ್ನು ಸೇವಿಸಲು ಆಗೇನೋ ಸಿಹಿ ಅನಿಸುವುದು. ಆದರೆ ಕೊನೆಯಲ್ಲಿ ಮರಣವು ಬರುವುದು. ಅದರಂತೆ ಸ್ವರ್ಗಲೋಕದಲ್ಲಿ ಇರುವವರಿಗೆ ಕೊನೆಯಲ್ಲಿ ಅಧಃಪಾತವಾಗುವುದು ।೨೦೯॥ ಈ ಲೋಕವು ಇಲ್ಲಿ ಹೇಗೆ ತೋರುವುದೋ, ಅದರಂತೆಯೇ ಸ್ವರ್ಗಲೋಕವೂ ಕೂಡ ಅಲ್ಲಿ ತೋರುತ್ತಿರುವುದು. ಈ ಎರಡೂ ಲೋಕಗಳು ನಿಜವಾಗಿಯೂ ನಾಶಿವಂತವಾಗಿರುವುವು. ಕೊನೆಯಲ್ಲಿ ಈ ಎರಡೂ ಲೋಕಗಳ ನಾಶವು ನಿಶ್ಚಿತವಾಗಿರುವುದು ।೨೧೦॥ ನಾಯಿಯು ಕಪ್ಪು ಬಣ್ಣದ್ದಾಗಲಿ ಅಥವಾ ಬಿಳಿ ಬಣ್ಣದ್ದಾಗಲಿ ಆದರೆ ಅವು ಎರಡೂ ನಾಯಿಗಳು ಸರಿಸಮಾನವಾಗಿ ಅಪವಿತ್ರವಾಗಿರುವುವು. ಅದರಂತೆಯೇ ಇಹಲೋಕ ಮತ್ತು ಪರಲೋಕ ಈ ಎರಡರ ನಶ್ವರತೆಯು ಸಮಾನವಾಗಿರುವುದು ।೨೧೧॥

ಇಹಾಮುತ್ರ ಭೋಗಾಸಕ್ತೀ । ಯಾಂವರೀ ಧರಾವೀ ವಿರಕ್ತೀ । ಯಾವ ನಾಂವ ''ವೈರಾಗ್ಯಸ್ಥಿತೀ''। ಜಾಣ ನಿಶ್ಚಿತೀ ಉದ್ಧವಾ ॥೨೧೨॥ ಮಾಗೀಲ ತುರ್ಝೀ ಪ್ರಶ್ನತೀಸ್ಥಿ । ಪುಶಿಲೀ ಹೋತೀ ಮಾಝೀ ಭಕ್ತೀ । ತೇ ಮೀ ಸಾಂಗೂನ ತುಜಪ್ರತೀ । ಯಥಾನಿಗುತೀ ನಿಜಬೋಧೇ ॥೨೧೩॥

ಭಕ್ತಿಯೋಗಃ ಪುರೈವೋಕ್ತಃ ಪ್ರೀಯಮಾಣಾಯ ತೇಽನಘ । ಪುನಶ್ಚ ಕಥಯಿಷ್ಯಾಮಿ ಮದ್ಭಕ್ತೇಃ ಕಾರಣಂ ಪರಮ್ ॥೧೯॥

ಅರ್ಥ:- ಹೇ ಉದ್ಧವಾ, ಈ ಭಕ್ತಿಯೋಗ ವರ್ಣನೆಯ ನಿರೂಪಣೆಯನ್ನು ನೀನು ನನ್ನಿಂದ ಈ ಮೊದಲು ಕೇಳಿರುವೆ. ಆದರೆ ಅದರಲ್ಲಿ ನಿನ್ನ ಪ್ರೇಮವು ಅಧಿಕವಾಗಿದೆ. ಆದ್ದರಿಂದ ನಾನು ನಿನಗೆ ಭಕ್ತಿ ಪ್ರಾಪ್ತವಾಗುವ ಶ್ರೇಷ್ಠ ಸಾಧನೆಯನ್ನು ಪುನಃ ಹೇಳುವೆನು.

ಪೂರ್ವೀ ಭಕ್ತೀಚೀ ಮಹತ್ಖ್ಯಾತೀ । ತುಜ ಸಾಂಗಿತಲೀ ನಿಜಸ್ಥಿತೀ । ತೇ ಭಕ್ತೀಚೀ ತುಜ ಅತೀಪ್ರೀತೀ । ತರೀ ಮೀ ಮಾಗುತೀ ಸಾಂಗೇನ ॥೨೧೪॥ ಐಕ ಉದ್ಧವಾ ಪುಣ್ಯಮೂರ್ತೀ । ಜ್ಯಾಸೀ ಆವಡೇ ಮಾಝೀ ಭಕ್ತೀ । ತೋ ಮಜ ಪಢಿಯಾ ತ್ರಿಜಗತೀ । ಭಜನೇ ಪರಮ ಪ್ರಾಪ್ತೀ ಮದ್ಭಕ್ತಾ ॥೨೧೫॥ ತೇ ಭಕ್ತೀಚೇ ನಿಜಲಕ್ಷಣ । ಪ್ರಥಮ ಭೂಮಿಕಾ ಆರಂಭೂನ । ದೇವೋ ಸಾಂಗತಾಹೇ ಆಪಣ । ಯೇಥೇ ಸಾವಧಾನ ವ್ಹಾವೇ ಶ್ರೋತ್ರಾ ॥೨೧೬॥

ಶ್ರದ್ಧಾಮೃತಕಥಾಯಾಂ ಮೇ ಶಶ್ವನ್ಮದನುಕೀರ್ತನಮ್ । ಪರಿನಿಷ್ಠಾ ಚ ಪೂಜಾಯಾಂ ಸ್ತುತಿಭಿಃ ಸ್ತವನಂ ಮಮ ॥೨೦॥

ಅರ್ಥ:- ಯಾರು ನನ್ನ ಭಕ್ತಿಯನ್ನು ಪ್ರಾಪ್ತಮಾಡಿಕೊಳ್ಳಲು ಇಚ್ಛಿಸುವರೋ, ಅವರು ನನ್ನ ಅಮೃತಮಯ ಕಥೆಯಲ್ಲಿ ಶ್ರದ್ಧೆಯನ್ನಿಡಬೇಕು. ನಿರಂತರವಾಗಿ ನನ್ನ ಗುಣ ಲೀಲೆಗಳನ್ನು ಮತ್ತು ನಾಮದ ಸಂಕೀರ್ತನೆಯನ್ನು ಮಾಡಬೇಕು. ನನ್ನ ಪೂಜೆಯಲ್ಲಿ ಅತ್ಯಂತ ನಿಷ್ಠೆಯನ್ನಿಡಬೇಕು. ಮತ್ತು ಸ್ತೋತ್ರಗಳ ಮುಖಾಂತರವಾಗಿ ನನ್ನ ಸ್ತುತಿಯನ್ನು ಮಾಡಬೇಕು.

ಅಮೃತರೂಪ ಜ್ಯಾ ಮಾಝ್ಯಾ ಕಥಾ । ಶ್ರದ್ಧಾಯುಕ್ತ ಶ್ರವಣ ಕರಿತಾ । ಫಿಕೇ ಕರೂನಿಯಾ ಅಮೃತಾ । ಗೋಡೀ ಭಕ್ತಿಪಂಥಾ ತತ್ಕಾಳ ಲಾಗೇ ॥೨೧೭॥ ಅಮರ ಅಮೃತಪಾನ ಕರಿತೀ । ತೇಹೀ ಶೇಖೀ ಮರೋನಿ ಜಾತೀ । ಮಾಝೀ ಕಥಾಮೃತ ಜೇ ಸೇವಿತೀ । ತೇ ನಾಗವತೀ ಕಳಿಕಾಳಾ ॥೨೧೮॥ ಸೇವಿತಾ ಕಥಾಸಾರಾಮೃತ । ಅತಿಶಯೇ ಜಾಹಲೇ ಉನ್ಮತ್ತ । ಮಾತಲೇ ಮರಣಾತೇ ಮಾರಿತ । ಧಾಕೇ ಪಳೇ ಸಮಸ್ತ ಸಂಸಾರೂ ॥೨೧೯॥ ಸೇವಿತಾ ಕಥಾಮೃತಸಾರ । ಮದ್ಭಾವೀ ರಂಗಲೇ ಅಂತರ । ತೈ ಮಾಝೇ ಗುಣ ಮಾಝೇ ಚರಿತ್ರ । ಗಾತಿ ಸಾದರ ಉಲ್ಹಾಸೇ ॥೨೨೦॥ ಮಾಝೀ ನಾಮ ಮಾಝೀ ಪದೇ । ನಾನಾ ಛಂದೇ ಅದ್ವೈತಬೋಧೇ । ಕೀರ್ತನೀ ಗಾತೀ ಸ್ವಾನಂದೇ । ಪರಮಾನಂದೇ ಡುಲ್ಲತ ॥೨೨೧॥

ಹೇ ಉದ್ಧವಾ, ಅದಕ್ಕಾಗಿ ಇಹಲೋಕದಲ್ಲಾಗಲಿ ಅಥವಾ ಪರಲೋಕದಲ್ಲಾಗಲಿ ಸಿಗುವ ಭೋಗಗಳಲ್ಲಿ ಆಸಕ್ತಿಯನ್ನು ತ್ಯಜಿಸಿ ಆ ವಿಷಯಕ್ಕೆ ವಿರಕ್ತನಾಗಬೇಕು. ಇದಕ್ಕೆ ಮಾತ್ರ ನಿಜವಾದ ವೈರಾಗ್ಯವೆನ್ನುವರು ॥೨೧೨॥ ಪೂರ್ವದಲ್ಲಿ ನೀನು ನನ್ನ ಭಕ್ತಿಯ ವಿಷಯಕ್ಕೆ ಪ್ರಶ್ನೆಯನ್ನು ಕೇಳಿದ್ದೆ. ಅದರ ಉತ್ತರವನ್ನು ಆತ್ಮಬೋಧೆಯಿಂದ ಯಥಾರ್ಥ ರೀತಿಯಲ್ಲಿ ಕೊಡುವೆನು ॥೨೧೩॥

ಭಕ್ತಿಯ ಮಹಿಮೆಯು ಹೇಗೆ ಗರಿಷ್ಠವಾಗಿದೆ ಎಂಬುದನ್ನು ನಾನು ನಿನಗೆ ಪೂರ್ವದಲ್ಲಿ ಹೇಳಿರುವೆನು. ಆ ಯಾವ ಭಕ್ತಿಯಲ್ಲಿ ನಿನ್ನ ಪ್ರೇಮವು ವಿಶೇಷವಾಗಿರುವುದರಿಂದ ನಾನು ನಿನಗೆ ಪುನಃ ಹೇಳುತ್ತಿರುವೆನು ॥೨೧೪॥ ಹೇ ಪುಣ್ಯ ಮೂರ್ತಿಯಾದ ಉದ್ಧವನೇ, ಯಾರಿಗೆ ನನ್ನ ಭಕ್ತಿಯು ಪ್ರಿಯವಾಗುವುದೋ ಆತನು ತ್ರಿಭುವನದಲ್ಲಿ ನನಗೆ ಪ್ರಿಯನಾಗುವನು. ನನ್ನ ಭಕ್ತರಿಗೆ ನನ್ನ ಭಜನೆಯಿಂದ ಪರಮಪದವು ಪ್ರಾಪ್ತವಾಗುವುದು ॥೨೧೫॥ ಆ ಯಾವ ಭಕ್ತಿಯ ಲಕ್ಷಣವನ್ನು ಆರಂಭದಿಂದ ಹೇಳಲಾರಂಭಿಸಿದನು. ಆದ್ದರಿಂದ ಶ್ರೋತೃಗಳವರು ಈಗ ಸಾವಧಾನಚಿತ್ತರಾಗಬೇಕು ॥೨೧೬॥

ಯಾವ ನನ್ನ ಅಮೃತಮಯ ಕಥೆಗಳನ್ನು ಪರಮಶ್ರದ್ಧೆಯಿಂದ ಶ್ರವಣ ಮಾಡಲು, ಭಕ್ತರಿಗೆ ಅದರ ಮುಂದೆ ಅಮೃತವೂ ಕೂಡ ಸಪ್ಪಗಾಗುವುದು, ಹಾಗೆಯೇ ಭಕ್ತಿಮಾರ್ಗದ ಸುಖವು ಬೆಳೆಯುತ್ತ ಸಾಗುವುದು ॥೨೧೭॥ ಇಂದ್ರಾದಿಕ ಶ್ರೇಷ್ಠ ದೇವತೆಗಳವರು ಅಮೃತಪಾನವನ್ನು ಮಾಡುವರು. ಆದರೆ ಕೊನೆಯಲ್ಲಿ ಅವರು ಮೃತ್ಯುಮುಖದಲ್ಲಿ ಬೀಳುವರು. ಆದರೆ ನನ್ನ ಕಥಾರೂಪ ಅಮೃತದ ಸೇವನೆಯನ್ನು ಮಾಡುವ ಭಕ್ತರು ಕಲಿಕಾಲನ ಕೈಯಲ್ಲಿ ಸಿಕ್ಕಿಕೊಳ್ಳಲಾರರು ॥೨೧೮॥ ನನ್ನ ಕಥಾರೂಪ ಅಮೃತದ ಸೇವನೆಯನ್ನು ಮಾಡಿ ಭಕ್ತರ ಮಾನಸಿಕ ಶಕ್ತಿಯು ಬೆಳೆಯುವುದು. ಇದರಿಂದ ಅವರು ಪ್ರಬಲವಾದ ಮರಣಕ್ಕೂ ಹೊಡೆದೋಡಿಸುವರು. ಇವರ ಭಯದಿಂದ ಸಮಸ್ತ ಸಂಸಾರವು ದೂರ ಓಡುವುದು ॥೨೧೯॥ ನನ್ನ ಕಥಾರೂಪ ಅಮೃತದ ಸೇವನೆಯನ್ನು ಮಾಡುವುದರಿಂದ ಅವರ ಹೃದಯವು ನನ್ನಭಕ್ತಿಯಲ್ಲಿ ತನ್ಮಯವಾಗುವುದು. ಆದ್ದರಿಂದ ಅವರು ನನ್ನ ಗುಣಗಳನ್ನು ಚರಿತ್ರೆಗಳನ್ನು ಆದರಯುಕ್ತ ಉಲ್ಹಾಸದಿಂದ ಹಾಡುವರು ॥೨೨೦॥ ಅವರು ನನ್ನ ನಾಮುಗಳನ್ನು ಮತ್ತು ನನ್ನ ಸ್ತುತಿಗಳನ್ನು ಅದ್ವೈತಬೋಧೆಯಿಂದ ಅನೇಕ ಪ್ರಕಾರದ ಛಂದಗಳಿಂದ ಕೀರ್ತನದಲ್ಲಿ ಸಂಗೀತದ ಭಿನ್ನ ಭಿನ್ನ ರಾಗಗಳಲ್ಲಿ ಹಾಡುತ್ತ ಪರಮಾನಂದದಿಂದ ತೂಗಾಡುತ್ತಿರುವರು ॥೨೨೧॥

ಸಪ್ರೇಮ ಸಂಭ್ರಮಾಚೇ ಮೇಳೀ । ಗರ್ಜತೀ ನಾಮಾಚ್ಯಾ ಕಲ್ಲೋಳೀ । ನಾಮಾಸರಿಸೀ ವಾಜೇ ಟಾಳೀ । ಜಾಹಲೀ ಹೋಳೀ ಮಾಹಾಪಾಪಾ ।೨೨೨॥ ಐಶಿಯಾ ಕೀರ್ತನಾಚೇ ಆವಡೀ । ಜಾಹಲೀ ಪ್ರಾಯಶ್ಚಿತ್ತೇ ದೇಶಧಡೀ । ತೀರ್ಥೇ ಹೋಊನಿ ಠೇಲೀ ಬಾಪುಡೀ । ಫಿಟಲೀ ಸಾಂಕಡೀ ಜಪತಪಾಂಚಿ ।೨೨೩॥ ಐಕೋನಿ ಕೀರ್ತನಾಚಾ ಗಜರ । ಠೇಲಾ ಯಮಲೋಕಿಂಚಾ ವ್ಯಾಪಾರ । ರಿಕಾಮೇ ಯಮಕಿಂಕರ । ಯಮೇ ಪಾಶಭಾರ ಲಪವಿಲಾ।೨೨೪॥ ದೇಖೋನಿ ಕೀರ್ತನಾಚೀ ಗೋಡೀ। ದೇವ ಧಾಂವೇ ಲವಡಸವಡೀ । ವೈಕುಂಠೀಹೂನಿ ಘಾಲೀ ಉಡೀ । ಅತಿತಾಂತಡೀ ಸ್ವಾನಂದೇ ।೨೨೫॥ ಐಸಾ ಕೀರ್ತನಾಚಾ ಗಜರ । ಕರಿತಾ ನಿತ್ಯ ನಿರಂತರ । ತ್ಯಾ ಆಧೀನ ಮೀ ಶ್ರೀಧರ । ಭುಲಲೋ ಸಾಚಾರ ಕೀರ್ತನೇ ।೨೨೬॥ ಜೈಸೇ ಕೀರ್ತನ ತೈಶೀಚ ಪೂಜಾ । ಆದರೇ ಪುಜೀ ಗರುಡಧ್ವಜಾ । ಪುಷ್ಪಾದಿಸಂಭಾರಸಮಾಜಾ । ಅತಿವೋಜಾ ಘವಘವೀತ ।೨೨೭॥ ಅತಿನಿಷ್ಠಾ ಸಾವಧಾನ । ಯಾಪರೀ ಕರೀ ಮಾಝೇ ಪೂಜನ । ಮಾಝೀ ಸ್ತುತಿ ಮಾಝೇ ಸ್ತವನ । ರಿಕಾಮಾ ಅರ್ಧ ಕ್ಷಣ ಜಾವೋ ನೇದೀ ।೨೨೮॥

ಆದರಃ ಪರಿಚರ್ಯಾಯಾಂ ಸರ್ವಾಙ್ಗೈರಭಿವಂದನಮ್ । ಮದ್ಭಕ್ತಪೂಜಾಽಭ್ಯಧಿಕಾ ಸರ್ವಭೂತೇಷು ಮನ್ಮತಿಃ ।೨೧॥

ಅರ್ಥ:- ನನ್ನ ಸೇವೆ ಪೂಜೆಯಲ್ಲಿ ಪ್ರೇಮವಿಡಬೇಕು. ನನಗೆ ಸಾಷ್ಟಾಂಗ ನಮಸ್ಕಾರವನ್ನು ಹಾಕಬೇಕು. ನನ್ನ ಭಕ್ತರ ಪೂಜೆಯನ್ನು ನನಗಿಂತಲೂ ಅಧಿಕವಾಗಿ ಮಾಡಬೇಕು. ಸರ್ವಪ್ರಾಣಿಮಾತ್ರರಲ್ಲಿ ನನ್ನನ್ನು ಕಾಣಬೇಕು.

''ಇಂದ್ರಿಯೇ'' ವೇಂಚಿಲೀ ಪೂಜಾವಿಧಾನೇ । ''ವಾಚಾ'' ವೇಂಚಲೀ ಹರಿಕೀರ್ತನೇ । ''ಹೃದಯ''ವೇಂಚಲೇ ಮಾಝೇನಿ ಧ್ಯಾನೇ । ಅಷ್ಟಾಂಗ ನಮನೇ ವೇಂಚಲೇ ।೨೨೯॥ ಐಸಾ ಅತ್ಯಾದರೇ ವಾಡೇ ಕೋಡೇ । ಸಬಾಹ್ಯ ವೇಂಚಲಾ ಮಜಕಡೇ । ಮಾಝೇ ಭಕ್ತ ದೀಖಿಲ್ಯಾ ಪುಢೇ । ಹರಿಖೇ ಮಜಕಡೇ ಯೇವೋಂಚಿ ವಿಸರೇ ।೨೩೦॥ ಮಾಝೇ ಭಕ್ತ ಭಾಗ್ಯೇ ಯೇತೀ ಘರಾ । ತೈ ಪರ್ವಕಾಳ ದಿವಾಳೀ ದಸರಾ । ತೇಥೇ ತೀರ್ಥೇ ಧಾಂವತೀ । ಮಾಹೇರಾ । ಜೇವೀ ಸಾಸರಾಹೂನಿ ಕುಮಾರೀ ।೨೩೧॥ ಪಹಾವಯಾ ಭಕ್ತಪೂಜೇಚೀ ಆವಡೀ । ಸನಕಾದಿಕಾಂಚೀ ಪಡೇ ಉಡೀ । ನಾರದಪ್ರಹ್ಲಾದಾದಿ ಭಕ್ತಕೋಡೀ । ಚಢೋವಢೀ ಧಾಂವತೀ ।೨೩೨॥ ತೇಥ ಸಿದ್ಧ ಯೇತೀ ಗಾ ಅಲೋಟೇ । ಸುರವರಾಂಚೇ ಟೇಕ ಪುಟೇ । ಮಹಾನುಭವಾಂಚಾ ಢೀಗ ದಾಟೇ । ಪಿತರ ನೇಟೇಪಾಟೇ ಧಾವಂತೀ ।೨೩೩॥

ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅವರು ಪ್ರೇಮದಿಂದ ನನ್ನ ನಾಮದ ಗರ್ಜನೆಯನ್ನು ಮಾಡುವರು. ನಾಮಘೋಷದೊಂದಿಗೆ ಆನಂದದಿಂದ ತಾಳಗಳನ್ನು ಬಾರಿಸುವರು. ಹೀಗೆ ಮಾಡುವುದರಿಂದ ಮಹಾಪಾಪಗಳ ಹೋಳಿಯಾಗುವುದು ।೨೨೨॥ ನನ್ನ ನಾಮ ಸಂಕೀರ್ತನೆಯ ಗರ್ಜನೆಯು ಆರಂಭವಾಗುತ್ತಲೇ ಪ್ರಾಯಶ್ಚಿತ್ತಗಳು ಗುಳೇಕಟ್ಟಿ ದೂರಾಗುವುವು. ತೀರ್ಥಗಳು ಪಾಪ! ಬಡಕಲಾಗುವುವು. ಜಪತಪಗಳ ಸಂಕಟಗಳು ಇಲ್ಲದಾಗುವುವು ।೨೨೩॥ ಪ್ರೇಮದಿಂದ ನಡೆದಿರುವ ಕೀರ್ತನೆಯ ಗರ್ಜನೆಯನ್ನು ಕೇಳಿ ಯಮಲೋಕದ ಎಲ್ಲ ವ್ಯವಹಾರಗಳು ನಿಂತುಹೋಗುವುವು. ಯಮದೂತರು ಯಾವ ಕೆಲಸವಿಲ್ಲದೇ ಬರೀಗೈಯಿಂದ ತಿರುಗಾಡುತ್ತಿರುವರು. ಯಮಧರ್ಮನು ತನ್ನ ಪಾಶದ ಹೊರೆಯನ್ನು ಬಚ್ಚಿಡುವನು ।೨೨೪॥ ಕೀರ್ತನದಲ್ಲಿನ ಸುಖಾನಂದವನ್ನು ಕಂಡು ದೇವನು ತ್ವರಿತವಾಗಿ ಅಲ್ಲಿ ಧಾವಿಸಿ ಬರುವನು. ವೈಕುಂಠದಿಂದ ಸ್ವಾನಂದದಿಂದ ಆತನು ಕೂಡಲೇ ಜಿಗಿದೋಡಿ ಬರುವನು ।೨೨೫॥ ಈ ಪ್ರಕಾರವಾಗಿ ನಿಃಸ್ವಾರ್ಥ ಪ್ರೇಮದಿಂದ ಯಾರು ನಿತ್ಯ ನಿರಂತರವಾಗಿ ಕೀರ್ತನೆಯ ಗರ್ಜನೆಯನ್ನು ಮಾಡುವನೋ, ಶ್ರೀಕೃಷ್ಣನಾದ ನಾನು ಆತನ ಆಧೀನನಾಗುವೆನು. ಈ ಪ್ರಕಾರವಾಗಿ ನಾನು ಕೀರ್ತನದಮೇಲೆ ಲುಬ್ಧನಾಗುತ್ತಿರುವೆನು ।೨೨೬॥ ಕೀರ್ತನದಂತೆಯೇ ಆತನು ಗರುಡಧ್ವಜನಾದ ನನ್ನ ಪೂಜನೆಯನ್ನೂ ಕೂಡ ಬಹು ಆನಂದದಿಂದ, ಆದರದಿಂದ ಮಾಡುವನು. ಸುಗಂಧಿತ ಪುಷ್ಪಾದಿಕಗಳ ಸಾಮಗ್ರಿಯಿಂದ ಆತನು ನನ್ನ ಸೊಗಸಾದ ಪೂಜೆಯನ್ನು ಮಾಡುವನು ।೨೨೭॥ ನನ್ನಲ್ಲಿ ಅತ್ಯಂತ ನಿಷ್ಠೆಯನ್ನಿಟ್ಟು ಲಕ್ಷಪೂರ್ವಕವಾಗಿ ನನ್ನ ಪೂಜೆಯನ್ನು ಮಾಡಿ ನನ್ನ ಸ್ತವನೆಯನ್ನು ಮಾಡುವನು. ಅರ್ಧಕ್ಷಣವನ್ನು ಕೂಡ ವ್ಯರ್ಥವಾಗಿ ಕಳೆಯಲಾರನು ।೨೨೮॥

ಯಾರು ತನ್ನ ಇಂದ್ರಿಯಗಳನ್ನು ಪೂಜಾವಿಧಿಗಳಿಗಾಗಿ ಬಳಸುವುದು, ತನ್ನ ವಾಣಿಯನ್ನು ಹರಿಕೀರ್ತನೆಯಲ್ಲಿ ತೊಡಗಿಸುವುದು, ತನ್ನ ಹೃದಯವನ್ನು ನನ್ನ ಧ್ಯಾನದಲ್ಲಿ ಹಚ್ಚುವುದು ಮತ್ತು ತನ್ನ ಎಂಟೂ ಅಂಗಗಳಿಗೆ ನಮಸ್ಕಾರಕ್ಕಾಗಿ ಬಿಡುವುದು ।೨೨೯॥ ಈ ಪ್ರಕಾರವಾಗಿ ಅತ್ಯಂತ ಆದರದಿಂದ ಮತ್ತು ಪ್ರೇಮದಿಂದ ನನ್ನನ್ನು ಆರಾಧಿಸುವ ನನ್ನ ಸಾಧಕ ಭಕ್ತನು ತನ್ನ ಮುಂದೆ ಬರುತ್ತಿರುವುದನ್ನು ಕಾಣುತ್ತಲೇ ಆತನು ಹರ್ಷದಿಂದ ನನ್ನತ್ತ ಬರುವುದನ್ನು ಮರೆತುಬಿಡುವನು ।೨೩೦॥ ಮಹಾ ಭಾಗ್ಯದಿಂದ ನನ್ನ ಭಕ್ತನು ತನ್ನ ಮನೆಗೆ ಬರುತ್ತಲೇ ಆತನಿಗೆ ದೀಪಾವಳೀ-ದಸರಾ ಹಬ್ಬದಂತೆ ದೊಡ್ಡ ಪರ್ವಕಾಳದಂತಾಗುವುದು. ಕನ್ನೆಯು ತನ್ನ ಅತ್ತೆ ಮನೆಯಿಂದ ತವರು ಮನೆಗೆ ಧಾವಿಸಿ ಬರುವಂತೆ ಸರ್ವ ತೀರ್ಥಗಳು ಅಲ್ಲಿ ಧಾವಿಸಿ ಬರುವುವು ।೨೩೧॥ ಭಕ್ತರ ಪೂಜೆಯ ಪ್ರೇಮವನ್ನು ಕಾಣುವುದಕ್ಕಾಗಿ ಸನಕಾದಿಕರೂ ಸಹ ಧಾವಿಸಿ ಬರುವರು. ನಾರದ ಪ್ರಹ್ಲಾದಿಕ ಅಸಂಖ್ಯ ಭಕ್ತರು ಮುಗಿಬಿದ್ದು ಅಲ್ಲಿಗೆ ಧಾವಿಸುತ್ತಿರುವರು ।೨೩೨॥ ಆ ಸ್ಥಳದಲ್ಲಿ ಅನೇಕ ಸಿದ್ಧಪುರುಷರು ಒಂದುಗೂಡುವರು. ದೇವತೆಗಳವರ ಒಂಡಿಗೆ ಒಂಡೇ ಎದ್ದು ಬರುವುದು. ಮಹಾಪುರುಷರ ದಟ್ಟಣೆಯಾಗುವುದು. ಮತ್ತು ಪಿತೃದೇವತೆಗಳು ಬಹು ತ್ವರೆಯಿಂದ ಓಡೋಡಿ ಬರುವರು ।೨೩೩॥

ವೇದಾಂಸೀ ರಿಘಾವಾ ನ ಘಡೇ । ವಿಧಿ ನಿರ್ಬುಜಲಾ ಮಾಗೇ ಮುರಡೇ । ಮಾಝ್ಯಾ ಭಕ್ತಪೂಜೇಚೇನಿ ಕೋಡೇ । ದಾರಾಪುಢೇ ಥಾಟ ದಾಟೇ ।।೨೩೪।। ಮದ್ಭಕ್ತಪೂಜೇಚಿಯಾ ಉಲ್ಹಾಸಾ ।ಮಜ ಟಕ ಪಡೇ ಹೃಷೀಕೇಶಾ । ಇತರಾಂಚಾ ಪಾಡ ಕಾಇಸಾ । ಭಕ್ತಪೂಜನೀ ಐಸಾ ಮಹಿಮಾ ಆಹೇ ।।೨೩೫।। ಮಾಗಾ ಸಾಂಡೂನಿ ಮಾಝೀ ಪೂಜಾ । ಜೇಣೇ ಮದ್‌ಭಕ್ತ ಪೂಜಿಲೇ ವೋಜಾ । ತೇಣೇ ಮಜ ಪೂಜಿಲೇ ಅಧೋಕ್ಷಜಾ । ಪರಿವಾರ ಸಮಾಜಾಸಮವೇತ ।।೨೩೬।। ಪ್ರತಿಮಾ ಮಾಝ್ಯಾ ಅಚೇತನ ವ್ಯಕ್ತೀ । ಭಕ್ತ ಮಾಝ್ಯಾ ಸಚೇತನ ಮೂರ್ತಿ । ತ್ಯಾಂಸೀ ಪೂಜಿಲ್ಯಾ ಮೀ ಶ್ರೀಪತೀ । ಯಥಾನಿಗುತೀ ಸಂತೋಷೇ ।।೨೩೭।। ಜೈಸಾ ಮದ್ಭಾವ ಮದ್ಭಕ್ತೀ । ತೋಚಿ ಭಾವೋ ಸರ್ವಾಭೂತೀ । ನಾನಾಕಾರ ಭೂತಾಕೃತೀ । ಪರೀ ಆತ್ಮಸ್ಥಿತೀ ಅವಿಕಾರ ।।೨೩೮।। ದಿಸೇ ದೇಹಾಕೃತೀ ಮುಂಡಲೀ । ತೀತೇ ಮ್ಹಣತೀ ಹೇ ರಾಂಡಲೀ । ಪರೀ ಆತ್ಮ್ಯಾಚೇ ರಾಂಡ ನಾಹೀ ಜಾಹಲೀ । ಅಸೇ ಸಂಚಲೀ ಆತ್ಮಸ್ಥಿತಿ ।।೨೩೯।। ಧೀರ್ಘ ವಕ್ರ ಆಣಿ ವರ್ತುಳ । ದಿಸತೀ ಭಿನ್ನ ಭಿನ್ನ ಇಂಗಳ । ಪರೀ ಅಗ್ನಿ ಏಕಚಿ ಕೇವಳ । ತೇವೀ ಭೂತೇ ಸಕಳ ಮದ್ರೂಪೇ ।।೨೪೦।। ಚಿತ್ರಾಮಾಜೀ ನಾನಾಕೃತೀ । ಪಾಹತಾ ಅವಘೀ ಏಕಚಿ ಭಿಂತೀ । ತೇವೀ ಮೀ ಚಿದಾತ್ಮಾ ಸರ್ವಭೂತೀ । ನಿಜಭಾವೇ ನಿಶ್ಚಿತೀ ಜಾಣಾವಾ ।।೨೪೧।। ಸಾಂಡೂನಿ ಅಹಂಕಾರ ದುಜಾ । ಸರ್ವಭೂತೀ ಭಾವೋ ಮಾಝಾ । ಹೇ ಉತ್ತಮೋತ್ತಮ ಮಾಝೀ ಪೂಜಾ । ಮಜ ಅಧೋಕ್ಷಜಾ ಪಢಿಯಂತೀ ।।೨೪೨।। ಐಶೀ ಜೋ ಮಾಝೀ ಪೂಜಾ ಕರೀ । ತೋ ಮಜ ಪಢಿಯಂತಾ ಗಾ ಭಾರೀ । ಮೀ ಸರ್ವಾಂಗೇ ರಾಬೇ ತ್ಯಾಚಾ ಘರೀ । ತೋ ಮಜವರೀ ಮಿರಾಶೀ ।।೨೪೩।। ತ್ಯಾಚ್ಯಾ ಚೇಷ್ಟಾಂಚೀ ಜೇ ಗತೀ । ತೇಚಿ ಮಾಝೀ ಭಜನಸ್ಥಿತೀ । ಹೇಚಿ ಸ್ವಮುಖೇ ಶ್ರೀಪತೀ । ಉದ್ಧವಾಪ್ರತೀ ಸಾಂಗತ ।।೨೪೪।।

ಮದರ್ಥೇಷ್ವಂಗಚೇಷ್ಟಾ ಚ ವಚಸಾ ಮದ್ಗುಣೇರಣಮ್ ।
ಮಯ್ಯರ್ಪಣಂ ಚ ಮನಸಃ ಸರ್ವಕಾಮವಿವರ್ಜನಮ್ ।।೨೨।।

ಅರ್ಥ:- ತನ್ನ ಪ್ರತಿಯೊಂದು ಅಂಗದ ಕರ್ಮವನ್ನು ಕೇವಲ ನನಗಾಗಿಯೇ ಮಾಡಬೇಕು. ವಾಣಿಯಿಂದ ನನ್ನ ಗುಣಗಳ ಗಾಯನವನ್ನು ಮಾಡಬೇಕು ಮತ್ತು ತನ್ನ ಮನವನ್ನು ನನಗೆ ಅರ್ಪಣೆಯನ್ನು ಮಾಡಬೇಕು. ಎಲ್ಲ ಇಚ್ಛೆಗಳನ್ನು ಬಿಟ್ಟುಬಿಡಬೇಕು.

ಅಲ್ಲಿ ವೇದಗಳಿಗೆ ಪ್ರವೇಶವೇ ಇಲ್ಲ. ವಿಧಿವಿಧಾನಗಳು ನಾಚಿಕೆಪಡುವುವು. ಕೊನೆಗೆ ಹೊರಳಿ ಹೊರಟು ಹೋಗುವುವು. ನನ್ನ ಭಕ್ತರ ಪೂಜೆಯ ಕೌತುಕವನ್ನು ಕಾಣುವುದಕ್ಕಾಗಿ ಬಾಗಿಲಲ್ಲಿ ಜನದಟ್ಟನೆಯಾಗುವುದು ।।೨೩೪।। ನನ್ನ ಭಕ್ತರ ಪೂಜೆಯಲ್ಲಿ ಪ್ರೇಮದ ಉಲ್ಹಾಸವನ್ನು ಕಂಡು ಭಗವಂತನಾದ ನನಗೂ ಸಹ ಕಣ್ಣುಮಿಳುಕಿಸದೇ ತಟಸ್ಥನಾಗಬೇಕಾಗುವುದು. ಅಂದಮೇಲೆ ಅಲ್ಲಿ ಇತರರ ಯಾವ ಕಥೆ ? ಭಕ್ತರ ಪೂಜೆಯ ಮಹಿಮೆಯು ಇಷ್ಟೊಂದು ಅಗಾಧವಾಗಿರುವುದು ।।೨೩೫।। ನನ್ನ ಪೂಜೆಯನ್ನೂ ಕೂಡ ಹಿಂದಕ್ಕೆ ಸರಿಸಿ ಯಾರು ನನ್ನ ಭಕ್ತರ ಪೂಜೆಯನ್ನು ಪ್ರೇಮದಿಂದ ಮಾಡುವರೋ, ಅವರು ಶ್ರೀಹರಿಯಾದ ನನಗೆ ನನ್ನ ಸರ್ವ ಪರಿವಾರ ಸಹ ಪೂಜೆ ಮಾಡಿದಂತೆ ಎಂದು ನಾನು ತಿಳಿಯುವೆನು ।।೨೩೬।। ಏಕೆಂದರೆ ನನ್ನ ಪ್ರತಿಮೆಯು ಇದು ನಿರ್ಜೀವ ಮೂರ್ತಿಯಾಗಿರುವುದು. ಭಕ್ತನು ನನ್ನ ಸಜೀವ ಮೂರ್ತಿಯಾಗಿರುವನು. ಆ ಯಾವ ಪ್ರೇಮಮಯ ಭಕ್ತರ ಯಥಾಸಾಂಗ ಪೂಜೆಯನ್ನು ಮಾಡಲು ಶ್ರೀಪತಿಯಾದ ನಾನು ಬಹಳ ಸಂತುಷ್ಟನಾಗುವೆನು ।।೨೩೭।। ಯಾವ ಪ್ರಕಾರವಾಗಿ ನನ್ನ ಮೇಲಿನ ಪ್ರೇಮವನ್ನು ನನ್ನ ಭಕ್ತರಲ್ಲಿ ಹೇಗೆ ಇಡುವರೋ, ಅದೇ ಪ್ರೇಮಭಾವವನ್ನು ಸರ್ವ ಭೂತಮಾತ್ರರಲ್ಲಿ ಇಡಬೇಕು. ಪ್ರಾಣಿಮಾತ್ರರ ಆಕಾರವು ಭಿನ್ನ ಭಿನ್ನವಾಗಿದ್ದರೂ ಅವರಲ್ಲಿನ ಆತ್ಮಸ್ಥಿತಿಯು ಒಂದೇ ಇರುವುದು ।।೨೩೮।। ಸ್ತ್ರೀಯಳ ತಲೆಯನ್ನು ಬೋಳಿಸಲು ಆಗ ಆಕೆಗೆ ರಂಡೆಯಾದಳೆನ್ನುವರು. ಆದರೆ ನಿಜವಾಗಿಯೂ ಆಕೆಯ ಆತ್ಮವು ರಂಡೆಯಾಗುವುದಿಲ್ಲ. ಅದು ತನ್ನ ಮೂಲ ಸ್ವರೂಪದಲ್ಲಿಯೇ ಯಾವಾಗಲೂ ಸ್ಥಿರವಾಗಿರುವುದು ।।೨೩೯।। ಅಗ್ನಿಯ ಜ್ವಾಲೆಯು ಧೀರ್ಘ, ವಕ್ರ, ವರ್ತುಲ ಹೀಗೆ ಭಿನ್ನ ಭಿನ್ನ ಆಕಾರದಲ್ಲಿ ತೋರುತ್ತಿರುವುದು, ಆದರೆ ಅಗ್ನಿಯು ಮಾತ್ರ ಒಂದೇಯಾಗಿರುವುದು. ಅದರಂತೆಯೇ ಈ ಸರ್ವ ಪ್ರಾಣಿಗಳು ಭಿನ್ನ ಭಿನ್ನವಾಗಿದ್ದರೂ ಮದ್ರೂಪವಾಗಿರುವುವು ।।೨೪೦।। ಗೋಡೆಯ ಮೇಲಿನ ಚಿತ್ರಗಳು ನಾನಾ ಪ್ರಕಾರದ ಆಕೃತಿಗಳೊಂದಿಗೆ ತೋರುತ್ತಿರುವುವು. ಆದರೆ ನಿಜವಾಗಿ ವಿಚಾರಿಸಿ ನೋಡಲು ಗೋಡೆ ಮಾತ್ರ ಒಂದೇ ಇರುವುದು. ಅದರಂತೆಯೇ ಒಬ್ಬನೇ ಆದ ನಾನು ಪರಮಾತ್ಮನು ಸರ್ವಭೂತಮಾತ್ರರಲ್ಲಿ ಸಮಪ್ರಮಾಣದಲ್ಲಿರುವೆನು. ಇದನ್ನು ನೀನು ನಿಶ್ಚಯವಾಗಿ ತಿಳಿ ।।೨೪೧।। ಹೃದಯದಲ್ಲಿನ ಸರ್ವ ಪ್ರಕಾರದ ಅಹಂಕಾರವನ್ನು ಒಗೆದು ದ್ವೈತಭಾವನೆಯನ್ನು ತ್ಯಜಿಸಿ ಸರ್ವಪ್ರಾಣಿಮಾತ್ರರಲ್ಲಿ ಯಾರು ನನ್ನನ್ನು ನೋಡುವವನೋ ಆತನೇ ಪರಮೇಶ್ವರನಾದ ನನಗೆ ಅತ್ಯಂತ ಪ್ರಿಯನಾಗಿರುವನು. ಇದುವೇ ನನ್ನ ಉತ್ತಮದಲ್ಲಿ ಉತ್ತಮ ಪೂಜೆಯಾಗಿರುವುದು ।।೨೪೨।। ಯಾರು ಈ ಪ್ರಕಾರವಾಗಿ ನನ್ನ ಪೂಜೆಯನ್ನು ಮಾಡುವರೋ, ಅವರು ನನಗೆ ಅತಿಶಯವಾಗಿ ಪ್ರಿಯರಾಗುವರು. ನಾನು ಅವರ ಮನೆಯಲ್ಲಿ ಸರ್ವಾಂಗದಿಂದ ದುಡಿಯುತ್ತ ಸೇವೆಯನ್ನು ಮಾಡುವೆನು. ಏಕೆಂದರೆ ಅವರದು ನನ್ನ ಮೇಲೆ ಸ್ವಾಮಿತ್ವವು ಇರುವುದು ।।೨೪೩।। ಅವರ ಕಾರ್ಯಗಳು ಯಾವುದೇ ಇರಲಿ ಅವೆಲ್ಲವೂ ನನ್ನ ಭಜನೆಯೇ ಆಗಿರುವುದು. ಇದ್ದನ್ನೇ ಈಗ ಶ್ರೀಕೃಷ್ಣನು ಸ್ವಮುಖದಿಂದ ಉದ್ಧವನಿಗೆ ಹೇಳುತ್ತಿರುವನು ।।೨೪೪।।

ಲೌಕಿಕ ಶರೀರ ಕರ್ಮಗತೀ । ತದ್ದ್ವಾರಾ ನಿಪಜೇ ಮಾಝೀ ಭಕ್ತೀ । ಅಭಿನವ ಮಾಝೀ ಭಜನಸ್ಥಿತೀ । ಸಾಂಗೋ ಕಿತೀ ಉದ್ಧವಾ ॥೨೪೫॥ ಬೈಸೋನಿಯಾ ಹಾಟವಟೀ । ಸಾಂಗತಾ ಲೌಕಿಕೀಹೀ ಗೋಷ್ಟೀ । ತ್ಯಾಮಾಜೀ ಮಾಝೇ ಕೀರ್ತನ ಉಠೀ । ಮದ್ಗುಣೇ ಗೋಮಟೀ ಗರ್ಜೇ ವಾಚಾ ॥೨೪೬॥ ಸ್ವಧರ್ಮಕರ್ಮಕ್ರಿಯಾ ಕರಣೇ । ತೇಹೀ ಅರ್ಪೀ ಮಜಕಾರಣೇ । ಮಜವೇಗಳೇ ಕಾಂಹೀ ಕರಣೇ । ಕರೂನೇಣೇ ಅಣುಮಾತ್ರ ॥೨೪೭॥ ಸರ್ವೇಂದ್ರಿಯಾಂಚಿಯೇ ಸ್ಥಿತೀ । ಸಹಜೇ ನಿಪಜೇ ಮಾಝೀ ಭಕ್ತೀ । ಮಾಝೇ ನಾಮ ಮಾಝೀ ಕೀರ್ತೀ । ವಾಚಾ ರಿತೀ ರಾಹೋ ನೇಣೇ ॥೨೪೮॥ ಮನಾಸೀ ಆವಡೇ ಜೇ ಜೇ ಕಾಂಹೀ । ತೇ ತೇ ಅರ್ಪೀ ಮಜಚಿ ಪಾಹೀ । ಶೇಖೀ ಆಪುಲೇ ಮನ ತೇಹೀ । ಮಾಝ್ಯಾ ಠಾಯೀ ಸಮರ್ಪೀ ॥೨೪೯॥ ಮಾಝೇ ಸ್ವರೂಪಾಚೇ ಠಾಯೀ ಜಾಣ। ಕೇವೀ ಘಡೇ ಮನಾಚೇ ಅರ್ಪಣ । ತೇಚಿವಿಷಯೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೨೫೦॥

ಮದರ್ಥೇಽರ್ಥಪರಿತ್ಯಾಗೋ ಭೋಗಸ್ಯ ಚ ಸುಖಸ್ಯ ಚ । ಇಷ್ಟಂ ದತ್ತಂ ಹುತಂ ಜಪ್ತಂ ಮದರ್ಥ ಯದ್ವ್ರತಂ ತಪಃ ॥೨೩॥

ಅರ್ಥ:- ನನಗಾಗಿ ಧನ, ಭೋಗ ಮತ್ತು ಪ್ರಾಪ್ತಸುಖದ ತ್ಯಾಗವನ್ನು ಮಾಡಬೇಕು. ಆ ಯಾವ ಯಜ್ಞ, ದಾನ, ಹವನ, ಜಪ, ವ್ರತ, ತಪ ಮಾಡುವ ಸರ್ವವೂ ನನಗಾಗಿಯೇ ಇರಬೇಕು.

ಮೀ ಪರಮಾತ್ಮಾ ಪರಮಸ್ವಾರ್ಥ । ಐಸಾ ಕರೂನಿ ನಿಶ್ಚಿತಾರ್ಥ । ವೇಂಚಿತ ಧನ ಧಾನ್ಯ ಸರ್ವಾರ್ಥ । ನಿಜಪರಮಾರ್ಥ ಸಾಧಾವಯಾ ॥೨೫೧॥ ಪರಮಾರ್ಥ ಸಾಧಾವಯಾ ಅವ್ಯಂಗ । ಸಾಚಾರ ಪೋಟೇಂಚಾ ವಿರಾಗ । ಮೀ ಭೇಟಾವಯಾ ಶ್ರೀರಂಗ । ಸಕಳ ಭೋಗ ಸಾಂಡಿತೀ ॥೨೫೨॥ ಛತ್ರ ಚಾಮರ ಹಸ್ತೀ ಘೋಡೇ । ತ್ಯಾಗೂನಿ ಹೋತೀ ಗಾ ಉಘಡೇ । ಐಸೇ ವೈರಾಗ್ಯ ಧಡಪುಡೇ । ಮಜ ರೋಕಡೇ ಪಾವಾವಯಾ ॥೨೫೩॥ ಮಾಝೇ ಪಾವಾವಯಾ ನಿಜಸುಖ । ದ್ರವ್ಯದಾರಾಪುತ್ರಾದಿಕ । ತ್ಯಾಗೂನಿ ಸಾಂಡಿತೀ ನಿಃಶೇಖ । ಯಾಪರೀ ದೇಖ ಅನುತಾಪೀ ॥೨೫೪॥ ಆವಡೀ ಕರಿತಾ ಮಾಝೇ ಭಜನ । ವಿಸರೇ ಭೋಗಾಚೇ ಆಠವಣ । ಮಾಝೇ ಪ್ರಾಪ್ತೀಲಾಗೀ ಜಾಣ । ರಿತಾ ಕ್ಷಣ ಜಾವೋ ನೇದೀ ॥೨೫೫॥ ಮಾಝೇನಿ ಉದ್ದೇಶೇ ಪರಮ । ಕರೀ ಶ್ರೌತ ಸ್ಮಾರ್ತ ಸ್ವಕರ್ಮ । ಅಗ್ನಿಹೋತ್ರಾದಿ ಯಾಗ ಪರಮ । ವ್ರತ ನೇಮ ಮಜಲಾಗೀ ॥೨೫೬॥

ಹೇ ಉದ್ಧವನೇ, ಶರೀರದಿಂದ ಆಗುತ್ತಿರುವ ಯಾವುದೇ ಕರ್ಮಗಳಾಗಿರಲಿ ಅವುಗಳ ಮುಖಾಂತರವಾಗಿ ನನ್ನ ಭಕ್ತಿಯಾಗುತ್ತಿರುವುದು. ನನ್ನ ಭಜನೆಯ ಸ್ವರೂಪವು ಹೀಗೆ ಅಪೂರ್ವವಾಗಿರುವುದು. ಇದರ ವರ್ಣನೆಯನ್ನು ಎಷ್ಟೆಂದು ಮಾಡಬೇಕು? ॥೨೪೫॥ ಬಜಾರದಲ್ಲಿ ಕುಳಿತುಕೊಂಡು ಲೌಕಿಕದ ಮಾತುಗಳನ್ನು ಆಡುತ್ತಿದ್ದರೂ ಕೂಡ ಅದರಲ್ಲಿ ನನ್ನ ಕೀರ್ತನೆಯೇ ಆಗುತ್ತಿರುವುದು. ಆತನ ರಸಾಳ ವಾಣಿಯು ನನ್ನ ಗುಣಗಳ ಗಾಯನದಿಂದ ಗರ್ಜನೆ ಮಾಡುತ್ತಿರುವುದು ॥೨೪೬॥ ನನ್ನ ಭಕ್ತನು ಮಾಡುವ ಸ್ವಧರ್ಮಕರ್ಮಗಳನ್ನೆಲ್ಲವನ್ನೂ ನನಗೆ ಅರ್ಪಿಸುವನು. ನನ್ನನ್ನು ಬಿಟ್ಟು ಬೇರೆ ಯಾವುದೂ ಅಣುಮಾತ್ರವೂ ಕೂಡ ಮಾಡುವಂತಿಲ್ಲ ಎಂಬುವುದು ಆತನು ತಿಳಿದಿರುವನು ॥೨೪೭॥ ಆತನ ಸರ್ವ ಇಂದ್ರಿಯಗಳ ಕರ್ಮಗಳಲ್ಲಿ ನನ್ನ ಭಕ್ತಿಯು ಸಹಜವಾಗಿ ತನ್ನಷ್ಟಕ್ಕೆ ತಾನೇ ಪ್ರಕಟವಾಗುತ್ತಿರುವುದು. ನನ್ನ ನಾಮ ಮತ್ತು ನನ್ನ ಕೀರ್ತಿಯನ್ನು ನುಡಿಯುವುದನ್ನು ಬಿಟ್ಟು ವಾಣಿಗೆ ಸುಮ್ಮನೇ ಇಡುವುದು ಆತನಿಗೆ ಗೊತ್ತೇ ಇರುವುದಿಲ್ಲ ॥೨೪೮॥ ಆತನ ಮನಸ್ಸಿಗೆ ಯಾವ ಯಾವುದು ಪ್ರಿಯವಾಗುತ್ತದೆಯೋ, ಅವುಗಳೆಲ್ಲವನ್ನೂ ನನಗೆ ಅರ್ಪಿಸುತ್ತಿರುವನು. ಕೊನೆಯಲ್ಲಿ ತನ್ನ ಮನವನ್ನೂ ಸಹ ನನಗೆ ಅರ್ಪಿಸಿಬಿಡುವನು ॥೨೪೯॥ ನನ್ನ ಸ್ವರೂಪದಲ್ಲಿ ಮನವು ಹೇಗೆ ಅರ್ಪಣೆಯಾಗುವುದೆಂಬ ಇದರ ನಿರೂಪಣೆಯನ್ನು ಶ್ರೀಕೃಷ್ಣನು ಸ್ವತಃ ಮಾಡುತ್ತಿರುವನು ॥೨೫೦॥

ಪರಮಾತ್ಮನಾಗಿರುವ ನನ್ನನ್ನು ಮಾತ್ರ ತನ್ನ ಶ್ರೇಷ್ಠವಾದ ಸ್ವಾರ್ಥವೆಂದು ಮನದಲ್ಲಿ ನಿಶ್ಚಯಮಾಡಿ ಪರಮಾರ್ಥವನ್ನು ಸಾಧಿಸುವುದಕ್ಕಾಗಿ ತನ್ನ ಧನಧಾನ್ಯಾದಿಗಳೆಲ್ಲವನ್ನೂ ಖರ್ಚಿಸುವನು ॥೨೫೧॥ ಪೂರ್ಣ ಪರಮಾರ್ಥವನ್ನು ಸಾಧಿಸುವುದಕ್ಕಾಗಿ ಅಂತಃಕರಣದಲ್ಲಿ ನಿಜವಾದ ವಿರಕ್ತಿಯು ನಿರ್ಮಾಣವಾಗಬೇಕು. ಆದ್ದರಿಂದ ಶ್ರೀಹರಿಯಾದ ನನ್ನನ್ನು ಕೂಡಿಕೊಳ್ಳುವುದಕ್ಕಾಗಿ ಸರ್ವ ಸುಖೋಪಭೋಗಗಳ ತ್ಯಾಗವನ್ನು ಮಾಡಬೇಕು ॥೨೫೨॥ ಛತ್ರ, ಚಾಮರ, ಆನೆ, ಕುದುರೆ ಇತ್ಯಾದಿ ವೈಭವಗಳ ತ್ಯಾಗವನ್ನು ಮಾಡಿ ನನ್ನ ಭಕ್ತನು ನಿಚ್ಚಳವಾಗಿ ನಿಃಕಾಂಚನನಾಗುವನು. ಹೇ ಉದ್ಧವನೇ, ನನ್ನ ಪ್ರಾಪ್ತಿಗಾಗಿ ಇಂತಹ ತೀವ್ರ ವೈರಾಗ್ಯದ ಅವಶ್ಯಕವಾಗಿರುವುದು ॥೨೫೩॥ ನನ್ನ ಆತ್ಮ ಸುಖದ ಪ್ರಾಪ್ತಿಗಾಗಿ ಅವರು ದ್ರವ್ಯ, ಸ್ತ್ರೀಪುತ್ರರ ನಿಃಶೇಷವಾಗಿ ತ್ಯಾಗವನ್ನು ಮಾಡುವರು. ಇಷ್ಟೊಂದು ಅವರ ಅನುತಾಪವಾಗಿರುವುದು ॥೨೫೪॥ ಪ್ರೇಮದಿಂದ ನನ್ನ ಭಜನೆಯನ್ನು ಮಾಡುತ್ತಿರಲು ಅವರು ಉಪಭೋಗಗಳ ಸ್ಮರಣೆಯನ್ನೇ ಮರೆತುಬಿಡುವರು. ನಿಜವಾದ ಭಕ್ತನಾಗಿರುವವನು ಆತನು ನನ್ನ ಪ್ರಾಪ್ತಿಗಾಗಿ ಒಂದು ಕ್ಷಣವನ್ನೂ ಕೂಡ ವ್ಯರ್ಥವಾಗಿ ಕಳೆಯಲಾರನು ॥೨೫೫॥ ನನ್ನ ಪ್ರಾಪ್ತಿಯಾಗಬೇಕೆಂದೇ ಆತನು ಶ್ರೌತ, ಸ್ಮಾರ್ತ ಕರ್ಮಗಳನ್ನು ಮಾಡುತ್ತಿರುವನು. ಹಾಗೆಯೇ ಅಗ್ನಿಹೋತ್ರ, ಯಜ್ಞ ಯಾಗ ದೊಡ್ಡ ದೊಡ್ಡ ವ್ರತಗಳನ್ನು ಮತ್ತು ನೇಮಗಳನ್ನು ಈ ಎಲ್ಲವನ್ನೂ ಕೇವಲ ನನ್ನ ಪ್ರೇಮಕ್ಕಾಗಿಯೇ ಮಾಡುತ್ತಿರುವನು ॥೨೫೬॥

ಮಾಝೀ ಠಾಕಾವಯಾ ಚಿದ್ರೂಪ । ಗಾಯತ್ರ್ಯಾದಿ ಮಂತ್ರಜಪ । ಮಾಝೀ ಪಾವಾವಯಾ ನಿಜಸ್ವರೂಪ । ದುಷ್ಕರ ತಪ ಆಚರತೀ ॥೨೫೭॥ ಮೀ ವಿಶ್ವಾತ್ಮಾ ವಿಶ್ವತೋಮುಖೀ । ವಿಶ್ವಂಭರ ಹೋತಸೇ ಸುಖೀ । ಯಾಲಾಗೀ ತೋ ದೀನಮುಖೀ । ಕರೀ ಆವಶ್ಯಕೀ ಅನ್ನದಾನ ॥೨೫೮॥ ಹೃದಯೀ ಮೀ ಸ್ವತಃ ಸಿದ್ಧ ಜಾಣ । ತ್ಯಾ ಮಾಝೇ ಕರೂನಿ ಆವಾಹನ । ಆಪಣ ಕರೀ ಜೇ ಭೋಜನ । ತೇಹೀ ಮದರ್ಪಣ ತೋ ಕರೀ ॥೨೫೯॥ ಕವಳಕವಳೀ ಹರಿಸ್ಮರಣ । ತೇ ಅನ್ನಚಿ ಹೋಯ ಬ್ರಹ್ಮಪೂರ್ಣ । ಯಾಪರೀ ಮಾಝೇ ಭಕ್ತ ಜಾಣ । ಕರ್ಮ ಮದರ್ಪಣ ಸ್ವಯೇ ಕರಿತೀ ॥೨೬೦॥ ಐಶೀ ಸರ್ವ ಕರ್ಮೇ ಕೃಷ್ಣಾರ್ಪಣ । ಸರ್ವದಾ ಜೋ ಕರೀ ಜಾಣ । ತ್ಯಾಚೇ ಮನ ಹೋಯ ಮದರ್ಪಣ । ತೇಚಿ ನಿರೂಪಣ ದೇವೋ ಸಾಂಗೇ ॥೨೬೧॥

ಏವಂ ಧರ್ಮೈರ್ಮನುಷ್ಯಾಣಾಮುದ್ಧವಾತ್ಮನಿವೇದಿನಾಮ್ ।
ಮಯೀ ಸಂಜಾಯತೇ ಭಕ್ತಿ: ಕೋಽನ್ಯೋಽರ್ಥೋಽಸ್ಯಾವಶಿಷ್ಯತೇ ॥೨೪॥

ಅರ್ಥ:- ಹೇ ಉದ್ಧವಾ, ಯಾವ ಮನುಷ್ಯನು ಧರ್ಮದ ಪಾಲನೆಯನ್ನು ಮಾಡುವನೋ ಮತ್ತು ನನಗಾಗಿ ಆತ್ಮನಿವೇದನವನ್ನು ಮಾಡುವನೋ, ಆತನ ಹೃದಯದಲ್ಲಿ ನನ್ನ ಪ್ರೇಮಮಯ ಭಕ್ತಿಯು ಉದಯವಾಗುವುದು. ಯಾರಿಗೆ ನನ್ನ ಭಕ್ತಿಯು ಪ್ರಾಪ್ತವಾಗುವುದೋ, ಆತನಿಗೆ ಅನ್ಯ ಯಾವ ಮಾತಿನ ಪ್ರಾಪ್ತಿಯು ಬೇಕಾಗುವುದಿಲ್ಲ.

ಸರ್ವ ಕರ್ಮೇ ಮದರ್ಪಣ । ಕರಿತಾ ಶುದ್ಧ ಹೋಯ ಮನ । ಜೇವೀ ಲೋಹ ಕಮಾವಿತಾ ಜಾಣ। ಹೋಯ ದರ್ಪಣ ಸೋಜ್ಜ್ವಳ ॥೨೬೨॥ ಪುಟೀ ಘಾಲಿತಾ ಸುವರ್ಣ । ಅಧಿಕ ತೇಜ ಚಢೇ ಜಾಣ । ಕರಿತಾ ವಸ್ತ್ರಾಚೇ ಕ್ಷಾಳಣ । ಸ್ವಚ್ಛಪಣ ಧೋವಟೀ ॥೨೬೩॥ ತೈಸೀ ಸರ್ವ ಕರ್ಮೇ ಮದರ್ಪಣ । ಕರಿತಾ ನಿರ್ಮಳ ಹೋಯ ಮನ । ತೇ ಕಾಳೀ ಮನಾಚೇ ಅರ್ಪಣ । ಮದ್ರೂಪೀ ಜಾಣ ಹೋ ಲಾಗೇ ॥೨೬೪॥ ಪೂರ ದಾಟಲಿಯಾ ಸರಿತಾಂಸೀ । ಸವೇಗ ಠಾಕತೀ ಸಿಂಧೂಸೀ । ತೇವೀ ನಿರ್ಮಳತ್ವೇ ಮನಾಸೀ । ಮಾಝ್ಯಾ ಸ್ವರೂಪಾಸೀ ಪಾವಣೇ ॥೨೬೫॥ ಮಾಝೇ ಸ್ವರೂಪೀ ಮನಾಚೀ ಸ್ಥಿತೀ । ತೈ ಆರ್ತ ಜಿಜ್ಞಾಸು ಅರ್ಥಾರ್ಥೀ । ಹೇ ತೀನಹೀ ತೇ ಕಾಳೀ ಹಾರಪತೀ । ಮಾಝೀ ಭಕ್ತೀ ಚೌಥೀ ಉಲ್ಹಾಸೇ ॥೨೬೬॥ ಮಾಝೇ ಭಾಂಡವಲ ಮಜ ಏಕಭಕ್ತೀ । ತೇಥ ದುಜೀ ತಿಜೀ ಆಣಿ ಚೌಥೀ । ಹೇ ಸಾಧಕಾಂಚೀ ಸಾಧನಭ್ರಾಂತೀ । ಬಹುತಾ ಭಕ್ತೀ ಮಜ ನಾಹೀ ॥೨೬೭॥ ತೇಚಿ ಮಾಝೀ ಮುಖ್ಯಭಕ್ತೀ । ಯೇಣೇ ಸಾಧನೇ ಹೋಯ ಪ್ರಾಪ್ತೀ । ಜೇ ಭಕ್ತೀಸ್ತವ ಭಕ್ತ ಮ್ಹಣವಿತೀ । ಬ್ರಹ್ಮಾ ಉಮಾಪತಿ ಸನಕಾದಿಕ ॥೨೬೮॥

ನನ್ನ ಸ್ವರೂಪದ ಪ್ರಾಪ್ತಿಗಾಗಿ ಆತನು ಗಾಯತ್ರಿ ಮಂತ್ರದ ಜಪವನ್ನು ವಿಶೇಷವಾಗಿ ಮಾಡುತ್ತಿರುವನು. ಘೋರವಾದ ತಪಸ್ಸಿನ ಆಚರಣೆಯನ್ನೂ ಕೂಡ ಆತನು ನನ್ನ ಪ್ರಾಪ್ತಿಗಾಗಿಯೇ ಮಾಡುತ್ತಿರುವನು ॥೨೫೭॥ ನಾನು ವಿಶ್ವಂಭರನಾಗಿದ್ದು ಸರ್ವವ್ಯಾಪಿ ಮತ್ತು ಸರ್ವತೋಮುಖಿಯಾಗಿರುವುದರಿಂದ ಆತನು ಬಡವರ ಪಡಲಿಗೆ ಅನ್ನವನ್ನು ದಾನ ಮಾಡುವನು. ಅದರಿಂದ ನಾನು ಸುಖೀಯಾಗುವೆನು ॥೨೫೮॥ ಹೃದಯದಲ್ಲಿ ನಾನು ಸ್ವತಃ ಸಿದ್ಧನಾಗಿರುವೆನು. ಹೀಗಿರುವ ನನ್ನನ್ನು ಆತನು ಆವಾಹನ ಮಾಡುವನು ಮತ್ತು ಅನ್ನಗ್ರಹಣವನ್ನು ಮಾಡುವನು. ಅದನ್ನೂ ಕೂಡ ನನಗೇನೇ ಅರ್ಪಿಸುವನು ॥೨೫೯॥ ಪ್ರತಿಯೊಂದು ತುತ್ತು ತುತ್ತಿಗೆ ಶ್ರೀಹರಿಯ ಸ್ಮರಣೆಯನ್ನು ಮಾಡುವುದರಿಂದ ಆ ಅನ್ನವು ಪೂರ್ಣಬ್ರಹ್ಮವಾಗುವುದು. ಈ ಪ್ರಕಾರವಾಗಿ ನನ್ನ ಭಕ್ತರು ತಾವಾಗಿಯೇ ತಮ್ಮ ಸರ್ವ ಕರ್ಮಗಳನ್ನು ನನಗೆ ಅರ್ಪಣೆಯನ್ನು ಮಾಡುತ್ತಿರುವರು ॥೨೬೦॥ ಈ ರೀತಿಯಲ್ಲಿ ಆ ಭಕ್ತನು ಯಾವಾಗಲೂ ತನ್ನ ಸರ್ವ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವನು. ಆತನ ಮನವೂ ಕೂಡ ನನಗೆ ಅರ್ಪಣೆಯಾಗುವುದು. ಈ ನಿರೂಪಣೆಯನ್ನೇ ಈಗ ದೇವನು ಹೇಳುತ್ತಿರುವನು ॥೨೬೧॥

ಕಬ್ಬಿಣವನ್ನು ಸರಿಯಾಗಿ ತಿಕ್ಕಿ ಅತಿಶಯವಾಗಿ ನಿರ್ಮಲಗೊಳಿಸಲು ಅದು ಕನ್ನಡಿಯಂತೆ ಚಮಕಾಯಿಸುವುದು. ಅದರಂತೆ ಸರ್ವಕರ್ಮಗಳನ್ನು ನನಗೆ ಅರ್ಪಣೆಯನ್ನು ಮಾಡಲು ಚಿತ್ತವು ಶುದ್ಧವಾಗುವುದು ॥೨೬೨॥ ಅಥವಾ ಬಂಗಾರವನ್ನು ಪುಟಕೊಟ್ಟಂತೆ ಅದು ಅಧಿಕವಾಗಿ ಶುದ್ಧವಾಗುವುದು. ಹಾಗೆಯೇ ವಸ್ತ್ರವನ್ನು ತೊಳೆದಂತೆ ಅದು ಹೆಚ್ಚಾಗಿ ಸ್ವಚ್ಛವಾಗುವುದು ॥೨೬೩॥ ಅದರಂತೆ ಕರ್ಮಗಳನ್ನು ನನಗೆ ಅರ್ಪಿಸುತ್ತಿರಲು ಮನವು ನಿರ್ಮಲವಾಗುವುದು. ಮನವು ಶುದ್ಧವಾಗುತ್ತಲೇ ನನ್ನ ಸ್ವರೂಪದಲ್ಲಿ ಅರ್ಪಣೆಯಾಗುವುದು ॥೨೬೪॥ ನದಿಗಳಿಗೆ ಪೂರವು ಬಂದೊಡನೆಯೇ ಅವು ಹೇಗೆ ಧಾವಿಸುತ್ತ ಸಮುದ್ರಕ್ಕೆ ಹೋಗಿ ಕೂಡಿಕೊಳ್ಳುವುವೋ, ಅದರಂತೆ ಮನವು ನಿರ್ಮಲವಾಗುತ್ತಲೇ ಅದು ನನ್ನ ಸ್ವರೂಪದಲ್ಲಿ ಬಂದು ಕೂಡುವುದು ॥೨೬೫॥ ಹೀಗೊಮ್ಮೆ ಮನವು ನನ್ನ ಸ್ವರೂಪದಲ್ಲಿ ಲೀನವಾಗುವುದೊಂದೇ ತಡ, ಸಾಧಕನ ಆರ್ತ, ಜಿಜ್ಞಾಸು ಮತ್ತು ಅರ್ಥಾರ್ಥೀ ಈ ಅವಸ್ಥೆಗಳು ಇಲ್ಲದಾಗಿ ಕೇವಲ ನಾಲ್ಕನೆಯ ಭಕ್ತಿ ಮಾತ್ರ ಅಲ್ಲಿ ಪ್ರಕಟವಾಗುವುದು ॥೨೬೬॥ ನನ್ನ ಭಕ್ತಿ ಒಂದೇ ನಿಜವಾದ ನನ್ನ ಬಂಡವಾಳವಾಗಿರುವುದು. ಅದರಲ್ಲಿ ಎರಡನೆಯ, ಮೂರನೆಯ, ನಾಲ್ಕನೆಯ ಹೀಗೆ ತಿಳಿಯುವುದು ಇದು ಸಾಧಕನ ಕೇವಲ ಭ್ರಾಂತಿಯಾಗಿರುವುದು. ನನ್ನ ಭಕ್ತಿಯು ಅನೇಕವಾಗಿ ಇರುವುದಿಲ್ಲ ॥೨೬೭॥ ಯಾವ ಸಾಧನೆಯ ಮುಖಾಂತರವಾಗಿ ನನ್ನ ಪ್ರಾಪ್ತಿಯಾಗುವುದೋ, ಅದೇ ನನ್ನ ಮುಖ್ಯ ಭಕ್ತಿಯಾಗಿರುವುದು. ಬ್ರಹ್ಮದೇವರು, ಮಹಾದೇವರು, ಸನಕಾದಿಕರು ಇದೇ ಭಕ್ತಿಯಿಂದ ನನ್ನ ಭಕ್ತರೆನ್ನಿಸಿಕೊಳ್ಳುವರು ॥೨೬೮॥

ನಿಃಶೇಷ ಮಾವಳಲ್ಯಾ ಅಹಂಕೃತೀ । ಭೂತೇ ನಿಜಾತ್ಮ ರೂಪ ದಿಸತೀ । ಮಾಝ್ಯಾ ಸ್ವರೂಪಾಚೀ ''ಸಹಜಸ್ಥಿತೀ'' । ತೇ ಮಾಝೀ ಮುಖ್ಯ ಭಕ್ತಿ ಉದ್ಧವಾ ॥೭೬೯॥ ಯೇ ಭಕ್ತೀಚ್ಯಾ ಲೇಶಸ್ಥಿತೀ । ಆರ್ತ ಜಿಜ್ಞಾಸು ಅರ್ಥಾರ್ಥೀ । ಪ್ರಕಾಶಲೇ ಗಾ ವರ್ತತೀ । ನಿಜಸ್ವಾರ್ಥೀ ಸಾಧಕ ॥೭೭೦॥ ಹೇಚಿ ಆರ್ತಾಚ್ಯಾ ವಿಷಯೀ । ಆರ್ತೀತೇ ಪ್ರಕಾಶೀ ಪಾಹೀ । ಮಗ ''ಆರ್ತ'' ಐಸೇ ತ್ಯಾಚ್ಯಾ ಠಾಯೀ । ನಾಂವಾಚೀ ನವಾಯೀ ಉಪತಿಷ್ಠೇ ॥೭೭೧॥ ರೋಗಿಯಾ ನಾಂವ ಆರ್ತತಾ । ಹೇ ವ್ಯಾಖ್ಯಾನ ನವ್ಹೇ ಪರಮಾರ್ಥಾ । ಭಗವತ್ಪ್ರಾಪ್ತೀಚೀ ತೀವ್ರ ವ್ಯಥಾ । ತೇ ಆರ್ತತಾ ಪರಮಾರ್ಥೀ ॥೭೭೨॥ ಜೋ ಭಗವಂತಾಚೇ ಪ್ರಾಪ್ತೀಲಾಗೀ । ಕಡಾ ಘಾಲೂ ಧಾಂವೇ ವೇಗೀ । ಕಾ ರಿಘೋ ಪಾಹೇ ಜಳತೇ ಆಗೀ । ತೋ ''ಆರ್ತ'' ಸವೇಗೀ ಬೋಲಿಜೇ ॥೭೭೩॥ ಆರ್ತಾಚೀ ಸ್ಥಿತಿ ಐಸೀ । ''ಜಿಜ್ಞಾಸು'' ನಿವಾರೀ ತ್ಯಾಸೀ । ಮನುಷ್ಯದೇಹ ಬ್ರಹ್ಮಪ್ರಾಪ್ತೀಸೀ । ತೋ ಆತ್ಮಹತ್ಯೇಸೀ ನಕೋ ಯೋಜೂ ॥೭೭೪॥ ಮಾಗೀಲ ಭಕ್ತ ಕೊಣೇ ರೀತೀ । ಜಾಣೋನಿ ಪಾವಲೇ ಭಗವದ್ಭಕ್ತೀ । ಜೀವೇಭಾವೇ ತ್ಯಾ ವಿವರೀ ಯುಕ್ತೀ । ''ಜಿಜ್ಞಾಸು''ನಿಶ್ಚಿತೀ ಯಾ ನಾಂವ ॥೭೭೫॥ ಮಜ ಜಾಣಾವಯಾಚೀ ಐಶೀ ಜೇ ಆಶಾ । ತೀತೇ ಮ್ಹಣತೀ ಶುದ್ಧ ''ಜಿಜ್ಞಾಸಾ''। ತೇಹೀ ಪ್ರಕಾಶಕ ಮಾಝ್ಯಾ ಪ್ರಕಾಶಾ । ಮೀ ಜಿಜ್ಞಾಸು ಐಸಾ ತೇಣೇ ಜಾಣೇ ॥೭೭೬॥ ಬ್ರಹ್ಮಪ್ರಾಪಕ ಯುಕ್ತೀಚಾ ಠಸಾ । ಯಾ ನಾಂವ ''ಶುದ್ಧ-ಜಿಜ್ಞಾಸಾ'' । ವೇದಶಾಸ್ತ್ರಜಾಣೀವವಳಸಾ । ''ಲೌಕಿಕ-ಜಿಜ್ಞಾಸಾ'' ತ್ಯಾ ನಾಂವ ॥೭೭೭॥ ಸರ್ವಾ ಅರ್ಥೀ ಮೀಚಿ ಅರ್ಥನಾ । ಶುದ್ಧ ''ಅರ್ಥಾರ್ಥೀ'' ಯಾ ನಾಂವ ಜಾಣಾ । ಮ್ಹಣತೀ ಅರ್ಥಾರ್ಥೀ ದ್ರವ್ಯಕಾಮನಾ । ತೇ ಮಂದ ವ್ಯಾಖ್ಯಾನಾ ಪ್ರವರ್ತತೀ ॥೭೭೮॥ ದೃಷ್ಟೀ ಪಡೇ ನಾನಾ ಅರ್ಥೀ । ಜೋ ವಿವಂಚೋನಿ ಲಾವೀ ಪರಮಾರ್ಥೀ । ತ್ಯಾ ನಾಂವ ಬೋಲಿಜೇ ''ಅರ್ಥಾರ್ಥೀ'' । ತ್ಯಾತೇಹೀ ನಿಜಭಕ್ತೀ ಪ್ರಕಾಶೇ ಮಾಝೀ ॥೭೭೯॥ ಏವಂ ಆರ್ತ - ಜಿಜ್ಞಾಸು - ಅರ್ಥಾರ್ಥೀ । ತ್ಯಾಂತೇ ಪ್ರಕಾಶೇ ಮಾಝೀ ''ಸಹಜ - ಭಕ್ತೀ'' । ತೀತೇ ಭಕ್ತ ಚತುರ್ಧಾ ಮಾನಿತೀ । ಅಧಿಕಾರಸ್ಥಿತಿವಿಭಾಗೇ ॥೭೮೦॥ ಭಕ್ತ ಕಲ್ಪನೇಚಿಯಾ ಭ್ರಾಂತೀ । ಮಾಝೀ ಭಕ್ತಿ ಚತುರ್ಧಾ ಮಾನಿತೀ । ತೇ ಮಿಥ್ಯಾ ಗಾ ವದಂತೀ । ಮಾಝೀ ನಿಜಭಕ್ತೀ ಏಕಲೀ ॥೭೮೧॥

ಹೇ ಉದ್ಧವಾ, ಅಹಂಕಾರವು ಸಂಪೂರ್ಣವಾಗಿ ಇಲ್ಲದಾಗಲು ಸರ್ವಪ್ರಾಣಿಮಾತ್ರರಲ್ಲಿ ಆತ್ಮರೂಪವು ತೋರುವುದು. ತದನಂತರ ನನ್ನ ಸ್ವರೂಪದ ಸಹಜಸ್ಥಿತಿಯೇ ನನ್ನ ಶ್ರೇಷ್ಠವಾದ ಭಕ್ತಿಯಾಗಿರುವುದು ॥೭೬೯॥ ಈ ಭಕ್ತಿಯ ಒಂದಂಶವು ಪ್ರಾಪ್ತವಾದರೂ ಸಾಕು, ಆರ್ತ, ಜಿಜ್ಞಾಸು ಮತ್ತು ಅರ್ಥಾರ್ಥೀ ಇವರು ಸಜ್ಞಾನರಾಗಿ ವರ್ತಿಸುವರು. ಅವರು ನಿಜವಾದ ಸಾಧಕರಾಗಿ ನಿಜಸ್ವಾರ್ಥವನ್ನು ಸಾಧಿಸುವರು ॥೭೭೦॥ ಇದೇ ಭಕ್ತಿಯು ಅರ್ತಜೀವಿಯ ಮನದಲ್ಲಿ ಆರ್ತತೆಯನ್ನು ಉತ್ಪನ್ನ ಮಾಡುವುದು. ಆದ್ದರಿಂದ ಆರ್ತ ಎಂಬ ಈ ಶಬ್ದದಲ್ಲಿ ಒಂದು ಹೊಸತನ ಹುಟ್ಟಿಕೊಳ್ಳುವುದು ॥೭೭೧॥ ರೋಗಿಗೂ ಕೂಡ ಆರ್ತನು ಎಂದು ಹೇಳುವರು. ಆದರೆ ಇಲ್ಲಿ ಆರ್ತ ಶಬ್ದದ ಅರ್ಥವು ವಿಹಿತವಾಗುವುದಿಲ್ಲ. ಪಾರಮಾರ್ಥಿಕ ಆರ್ತತೆಯು ಹೇಗೆಂದರೆ, ಮನಸ್ಸಿಗೆ ಆಗುವ ಭಗವತ್ಪ್ರಾಪ್ತಿಯ ತಳಮಳ ಎಂದಾಗುವುದು. ಇದೇ ಅರ್ಥವು ವಿಹಿತವಾಗಿರುವುದು ॥೭೭೨॥ ಯಾವನು ಭಗವಂತನ ಪ್ರಾಪ್ತಿಗಾಗಿ ಬೆಟ್ಟದಿಂದ ಜಿಗಿಯಲು ಧಾವಿಸುವನೋ, ಸುಡುವ ಅಗ್ನಿಯಲ್ಲಿ ಬೀಳಲು ಸಿದ್ಧನಾಗುವನೋ, ಅದಕ್ಕೆ ನಿಜವಾಗಿ ಆರ್ತ ಎಂದು ಹೇಳುವರು ॥೭೭೩॥ ಹೀಗೆ ಆರ್ತನ ಸ್ಥಿತಿಯಾಗಿರುವುದು. ಜಿಜ್ಞಾಸು ಅದರ ನಿವಾರಣೆಯನ್ನು ಮಾಡುವನು. ಹೇಗೆಂದರೆ ಈ ಮನುಷ್ಯದೇಹವು ಬ್ರಹ್ಮಪ್ರಾಪ್ತಿಗಾಗಿ ಇರುವುದು. ಅದನ್ನು ಆತ್ಮಹತ್ಯೆಯೊಂದಿಗೆ ನಾಶ ಮಾಡಬಾರದು ॥೭೭೪॥ ಪೂರ್ವದ ಭಕ್ತರು ಯಾವ ಪದ್ಧತಿಯಿಂದ ಭಗವತ್ಪ್ರಾಪ್ತಿಯನ್ನು ಮಾಡಿಕೊಂಡರೆಂಬುದು ತಿಳಿದುಕೊಂಡು ಜೀವಭಾವದಿಂದ ಆ ಯುಕ್ತಿಯನ್ನು ವಿವರಿಸಿ, ಅದರಂತೆ ನಡೆಯುವನು. ಇದಕ್ಕೆ ಜಿಜ್ಞಾಸು ಎನ್ನುವರು ॥೭೭೫॥ ನನ್ನನ್ನು ತಿಳಿಯುವ ಆಶೆಗೆ ನಿಜವಾದ ಜಿಜ್ಞಾಸು ಎಂದು ಹೇಳವರು. ಈ ಜಿಜ್ಞಾಸು ನನ್ನ ಸ್ವರೂಪವನ್ನು ತೋರಿಸಿಕೊಡುವುದು. ಆದ್ದರಿಂದ ಅವರಿಗೆ ಜಿಜ್ಞಾಸು ಎಂದು ತಿಳಿಯಬೇಕು ॥೭೭೬॥ ಪರಬ್ರಹ್ಮನನ್ನು ಪ್ರಾಪ್ತಮಾಡಿಕೊಳ್ಳುವುದಕ್ಕಾಗಿ ಯಾವ ಯುಕ್ತಿಯ ಪ್ರತಿಪಾದನೆಯ ಹೆಸರನ್ನು ಶುದ್ಧ ಜಿಜ್ಞಾಸು ಎಂದು ಹೇಳುವರು. ವೇದಶಾಸ್ತ್ರಗಳ ಅರ್ಥ, ಜ್ಞಾನ ಸಂಬಂಧದಿಂದ ನಡೆಯುವ ಪ್ರಯತ್ನಕ್ಕೆ ಲೌಕಿಕ ಜಿಜ್ಞಾಸು ಎಂದು ಹೇಳುವರು ॥೭೭೭॥ ಪ್ರತಿಯೊಂದು ಅರ್ಥದಲ್ಲಿ ನನ್ನ ಬೇಡಿಕೆ ಅಥವಾ ನನಗೆ ಶೋಧಿಸುವಿಕೆಗೆ ಶುದ್ಧವಾದ ಅರ್ಥಾರ್ಥೀ ಎಂದು ಇದರ ನಾಮವಾಗಿರುವುದು. ಇದನ್ನು ಲಕ್ಷದಲ್ಲಿಡು. ಅರ್ಥಾರ್ಥೀ ಎಂದರೆ ದ್ರವ್ಯದ ಇಚ್ಛೆ ಎಂದು ಹೇಳುವಿಕೆಯು ಇದು ತಪ್ಪಾದ ಅರ್ಥವಾಗಿದೆ ಎಂದು ತಿಳಿಯಬೇಕು ॥೭೭೮॥ ಜಗತ್ತಿನಲ್ಲಿ ಅನೇಕ ಅರ್ಥ ಅಥವಾ ವಸ್ತುಗಳು ಕಾಣುತ್ತಿರುವುವು. ಅವುಗಳ ವಿಚಾರವನ್ನು ಮಾಡಿ ಪಾರಮಾರ್ಥದತ್ತ ದೃಷ್ಟಿನ್ನಿಡುವರೋ, ಅದಕ್ಕೆ ಅರ್ಥಾರ್ಥೀ ಎಂದು ಹೇಳುವರು. ಆತನಿಗೂ ಕೂಡ ನನ್ನ ಭಕ್ತಿಯು ಪ್ರಕಾಶಿತಗೊಳಿಸುವುದು ॥೭೭೯॥ ಈ ಪ್ರಕಾರವಾಗಿ ಆರ್ತ, ಜಿಜ್ಞಾಸು, ಅರ್ಥಾರ್ಥೀ ಇವರಿಗೆ ನನ್ನ ಸಹಜ ಭಕ್ತಿಯು ಪ್ರಾಪ್ತವಾಗುವುದು. ಆ ಭಕ್ತಿಗೆ ಭಕ್ತನು ತನ್ನ ಅಧಿಕಾರತಕ್ಕಂತೆ ನಾಲ್ಕು ಪ್ರಕಾರವಾಗಿ ಮನ್ನಿಸುವನು ॥೭೮೦॥ ಭಕ್ತರು ತಮ್ಮ ಕಲ್ಪನೆಯ ಭ್ರಮದಿಂದ ನನ್ನ ಭಕ್ತಿಯನ್ನು ನಾಲ್ಕು ಪ್ರಕಾರವಾಗಿ ತಿಳಿಯುವರು. ಆದರೆ ಈ ಮಾತು ಸುಳ್ಳಾಗಿರುವುದು. ನನ್ನ ನಿಜಭಕ್ತಿ ಎಂಬುವುದು ಅದು ಒಂದೇಯಾಗಿರುವುದು ॥೭೮೧॥

ಐಶಿಯೇ ನಿಜಭಕ್ತೀಚೀ ಪ್ರಾಪ್ತೀ । ಆತ್ಮನಿವೇದನಾಚೀ ಸ್ಥಿತೀ । ಉದ್ಧವಾ ಮ್ಯಾ ತುಜಪ್ರತೀ । ಯಥಾನಿಗುತೀ ನಿರೂಪಿಲೀ ।೨೮೨॥ ಮಾಝಿಯೇ ನಿಜಭಕ್ತೀಚೇ ಸಾರ । ಭಕ್ತ ಪಾವೇ ಜೇ ಸಾಚಾರ । ತ್ಯಾಂಚೇ ಸರ್ವಹೀ ವ್ಯಾಪಾರ । ಮದಾಕಾರ ಹೋಊನಿ ಠಾಕತೀ ।೨೮೩॥ ತೋ ಜೇಉತೀ ವಾಸ ಪಾಹೇ । ತೇ ದಿಶಾಚಿ ಮೀ ಹೋಊನಿ ಠಾಯೇ । ತೋ ಜೇಉತೇ ಚಾಲವೀ ಪಾಯೇ । ತೇ ಧರಾ ಮೀ ಹೋಯೇ ಧರಾಧರ ।೨೮೪॥ ತೋ ಕರೂ ಬೈಸಲ್ಯಾ ಭೋಜನ । ಷಡ್ರಸ ಹೋಯ ಮೀ ಆಪಣ । ತ್ಯಾಸೀ ಕರಾವಯಾ ಪ್ರಾಶನ । ನಿಜಜೀವನ ಮೀ ಹೋಯೇ ।೨೮೫॥ ತ್ಯಾಸೀ ಚಾಲತಾ ನಿಜಪದೀ । ಬೋಧೇ ದೃಶ್ಯಾಚೀ ನಿವಾರೀ ಮಾಂದೀ । ಶಾಂತಿ ಪಾಯಘಡ್ಯಾ ಘಾಲೀ ಆಧೀ । ಕರೀ ಪದೋಪದೀ ಲಿಂಬಲೋಣ ।೨೮೬॥ ಶಮ ದಮ ಆಜ್ಞಾಧಾರೀ । ಹಾತ ಜೋಡೋನಿ ಉಭೇ ದ್ವಾರೀ । ಋದ್ಧಿ ಸಿದ್ಧೀ ದಾಸೀ ಘರೀ । ವಿವೇಕ ಕಾಮಾರೀ ಘರೀಚಾ ಸದಾ ।೨೮೭॥ ತ್ಯಾಚಾ ಬೈಸತಾ ಅವಕಾಶ । ಅಂಗೇ ಮೀ ಹೋಯ ಹೃಷೀಕೇಶ । ತೋ ನಿಜಾವಯಾ ಸಾವಕಾಶ । ಸಮಾಧೀ ಮೀ ತ್ಯಾಸ ಆಂಥುರೀ ।೨೮೮॥ ತೋ ಜೇ ಕಾಂಹೀ ಬೋಲ ಬೋಲೇ । ತೇ ನಿಃಶಬ್ದ ಬ್ರಹ್ಮ-ಶಬ್ದಾ ಆಲೇ । ಯಾಲಾಗೀ ಶ್ರೋತ್ಯಾಂಸೀ ವಹಿಲೇ । ಹೋಯ ಭಲೇ ಸಮಾಧಾನ ।೨೮೯॥ ತೋ ಅವಲೀಲಾ ಬೋಲೇ ವೋರೀ । ಶಬ್ದಾಸವೇ ಮಾಝೀ ಗೋಠೀ ಉಠೀ । ಶ್ರೋತ್ಯಾಂಚೀ ತೇಥೇ ಪಡೇ ಮಿಠೀ । ಸ್ವಭಾವೇ ಗೋಠೀ ಐಕತಾ ।೨೯೦॥ ಚಢತಾ ಪರೇಚೇ ಉಪರೀ । ವೈಕುಂಠ ಕೈಲಾಸ ಪಾಯರೀ । ಉನ್ಮನೀ ಘಾಲೋನಿ ಬಾಹೇರೀ । ಸುಖಶೇಜಾರೀ ತೋ ಪಹುಡೇ ।೨೯೧॥ ಮಿಳೋನಿಯಾ ಮುಕ್ತೀ ಚಾರೀ । ಪಾಣೀ ವಾಹತೀ ತ್ಯಾಚ್ಯಾ ಘರೀ । ಶ್ರೀಸಹಿತ ರಾಬೇ ಮೀ ಶ್ರೀಹರೀ । ಯೇರಾಂಚಿ ಥೋರೀ ಕೋಣ ಪುಸೇ ।೨೯೨॥ ಅವಚಟೇ ಯೇ ತ್ಯಾಚ್ಯಾ ಮುಖಾಸೀ । ಮ್ಹಣೇ ಜ್ಯಾಸೀ ''ತೂ ಉದ್ಧರಿಲಾಸೀ '' । ತೋ ಮಾಥಾ ವಾಹೇ ಮೀ ಹೃಷೀಕೇಶೀ । ಶಬ್ದೇ ನಿಜಧಾಮಾಸೀ ಪಾವವೀ ವೇಗೀ ।೨೯೩॥ ಜೇ ಪಾವಲೇ ಮಾಝೀ ''ಸಹಜಭಕ್ತೀ'' । ತ್ಯಾಂಚೇ ಲಳೇ ಪಾಳೀ ಮೀ ಯಾ ರೀತೀ । ತ್ಯಾಂಚೀ ಮಜ ಅನನ್ಯ ಪ್ರೀತೀ । ಸಾಂಗೋ ಕಿತೀ ಉದ್ಧವಾ ।೨೯೪॥ ಬಹುತ ಬೋಲೀ ಕಾಯ ಕಾರಣ। ಮೀ ದೇಹೋ ತೋ ಆತ್ಮಾ ಜಾಣ । ತೋ ಮಾಝಾ ಜೀವ ಪ್ರಾಣ । ಹೇ ಜಾಣತೀ ಖೂಣ ನಿಜಭಕ್ತ ।೨೯೫॥

ಹೇ ಉದ್ಧವಾ, ಹೀಗೆ ಇರುವ ನನ್ನ ಭಕ್ತಿಯು ಹೇಗೆ ಪ್ರಾಪ್ತಮಾಡಿಕೊಳ್ಳಬೇಕೆಂಬುವ ಮತ್ತು ಆತ್ಮನಿವೇದನವು ಹೇಗಿರುವುದು ಎಂಬುದನ್ನು ನಾನು ನಿನಗೆ ಸ್ಪಷ್ಟಮಾಡಿ ಹೇಳಿರುವೆನು ।೨೮೨॥ ಯಾವ ಭಕ್ತನ ಹಸ್ತದಲ್ಲಿ ನನ್ನ ಭಕ್ತಿಯ ಸಾರವು ಲಭ್ಯವಾಗಿರುವುದೋ, ಆತನ ಸರ್ವ ವ್ಯಾಪಾರವು ಮದ್ರೂಪವಾಗಿಬಿಡುವುದು ।೨೮೩॥ ಆತನು ಎಲ್ಲಿ ಲಕ್ಷವನ್ನಿಟ್ಟು ಕುಳಿತುಕೊಂಡಿರುವನೋ, ಅಲ್ಲಿನ ದಿಕ್ಕೇ ನಾನಾಗಿಬಿಡುವೆನು. ಆತನು ತನ್ನ ಕಾಲುಗಳಿಂದ ಎಲ್ಲಿ ನಡೆಯುವನೋ, ಅಲ್ಲಿನ ಭೂಮಿಯನ್ನು ಧರಾಧರನಾದ ನಾನೇ ಆಗುವೆನು ।೨೮೪॥ ಆತನು ಭೋಜನವನ್ನು ಮಾಡುತ್ತ ಕುಳಿತಿರಲು ಆಗ ನಾನು ಷಡ್‌ರಸ ಆಗುವೆನು. ಆತನು ಕುಡಿಯುವ ನೀರು ಸಹ ನಾನೇ ಆಗುವೆನು ।೨೮೫॥ ಆತನು ತನ್ನ ಪಾದಗಳಿಂದ ದಾರಿ ನಡೆಯುತ್ತಿರಲು ಆಗ ನಾನು ನಿಜಬೋಧೆಯಿಂದ ಮುಂದಿನ ದೃಶ್ಯ ಸಮುದಾಯವನ್ನು ಇಲ್ಲದಾಗಿ ಮಾಡುವೆನು ಮತ್ತು ಮೊದಲೇ ಶಾಂತಿ ಎಂಬ ಕಾಲ್ಕಡಗವನ್ನು ಕಾಲಿಗೆ ಹಾಕಿಕೊಂಡಿರಲು ನಾನು ಹೆಜ್ಜೆ ಹೆಜ್ಜೆಗೆ ಆತನಿಗೆ ನಿವಾಳಿ ತೆಗೆದು ಒಗೆಯುವೆನು ।೨೮೬॥ ಶಮೋ ದಮೋ ಇವರು ಆಜ್ಞಾಧಾರಕರಾಗಿ ಬಾಗಿಲಲ್ಲಿ ಕೈಜೋಡಿಸಿ ನಿಂತುಕೊಳ್ಳುವರು. ಋದ್ಧಿಸಿದ್ಧಿ ಇವು ಆತನ ಮನೆಯಲ್ಲಿ ದಾಸರಾಗಿರುವರು ಮತ್ತು ವಿವೇಕವು ಆತನ ಸೇವಕನಾಗಿ ಆತನ ಮನೆಯಲ್ಲಿರುವುದು ।೨೮೭॥ ಆತನು ಕುಳಿತುಕೊಳ್ಳುವ ಸ್ಥಳ ನಾನೇ ಆಗುವೆನು. ಆತನು ಸ್ವಸ್ಥನಾಗಿ ಮಲಗಲಿ ಎಂದು ನಾನು ಆತನಿಗೆ ಸಮಾಧಿಯ ಹಾಸಿಗೆ ಹಾಕಿಕೊಡುವೆನು ।೨೮೮॥ ಆತನು ಯಾವುದೇ ಶಬ್ದಗಳನ್ನು ನುಡಿಯಲ್ಲಿ ಅದರಲ್ಲಿ ನಿಃಶಬ್ದವಾದ ಬ್ರಹ್ಮವೇ ಶಬ್ದರೂಪದಿಂದ ಪ್ರಕಟವಾಗುತ್ತಿರುವುದು. ಆದ್ದರಿಂದಲೇ ಶ್ರೋತೃಗಳವರು ಸಮಾಧಾನದಿಂದ ಶ್ರವಣವನ್ನು ಮಾಡುತ್ತಿರುವರು ।೨೮೯॥ ಆತನು ತನ್ನ ಮುಖದಿಂದ ಸಹಜವಾಗಿಯೇ ಮಾತನಾಡ ಹತ್ತಲು ಆಗ ಆ ವಚನಗಳಲ್ಲಿ ನನ್ನದೇ ಗುಣಗಾನವು ಪ್ರಕಟವಾಗುತ್ತಿರುವುದು. ಆದ್ದರಿಂದ ಶ್ರೋತೃಗಳು ಸ್ವಾಭಾವಿಕವಾಗಿಯೇ ತಲ್ಲಿನರಾಗಿಬಿಡುವರು ।೨೯೦॥ ಆತನು ಪರಾವಾಣಿಯಿಂದ ಮೇಲೆ ಹೋಗುತ್ತಿರಲು ಆಗ ವೈಕುಂಠ, ಕೈಲಾಸಗಳ ಮೆಟ್ಟಿಲುಗಳನ್ನು ದಾಟಿ ಹೋಗುವನು ಮತ್ತು ಉನ್ಮನಿಗೆ ಹೊರಗೆ ತಳ್ಳಿ ಸುಖಶಯ್ಯದ ಮೇಲೆ ಪಹುಡಿಸುವನು ।೨೯೧॥ ನಾಲ್ಕೂ ಮುಕ್ತಿಗಳು ಕೂಡಿಕೊಂಡು ಆತನ ಮನೆಗೆ ಬಂದು ನೀರು ತುಂಬುವುವು. ಶ್ರೀಹರಿಯಾದ ನಾನೂ ಕೂಡ ಪ್ರತ್ಯಕ್ಷವಾಗಿ ಲಕ್ಷ್ಮೀಸಮೇತನಾಗಿ ಆತನ ಮನೆಯಲ್ಲಿ ದುಡಿಯುವೆನು, ಅಂದಮೇಲೆ ಇತರರ ದೊಡ್ಡಸ್ಥಿಕೆಯನ್ನು ಯಾರು ಕೇಳಬೇಕು? ।೨೯೨॥ ಆತನ ಮುಖದಿಂದ ಯಾರಿಗಾದರೂ ''ನಿನ್ನ ಉದ್ಧಾರವಾಯಿತು'' ಎಂದು ಅಕಸ್ಮಾತಾಗಿ ಹೀಗೆ ಶಬ್ದವು ಹೊರಬೀಳಲು, ಆಗ ಆತನನ್ನು ಹೃಷೀಕೇಶಿಯಾದ ನಾನು ನನ್ನ ಮಸ್ತಕದಮೇಲೆ ಹೊತ್ತುಕೊಂಡು ಭಕ್ತನ ವಚನದಂತೆ ಆತನನ್ನು ನಿಜಧಾಮಕ್ಕೆ ಮುಟ್ಟಿಸುವೆನು ।೨೯೩॥ ಯಾರಿಗೆ ನನ್ನ ಸಹಜಭಕ್ತಿಯು ಪ್ರಾಪ್ತವಾಗಿರುವುದೋ, ಆತನ ಸರ್ವ ಅಭಿರುಚಿಗಳನ್ನು ನಾನು ಈ ಪ್ರಕಾರವಾಗಿ ಪೊರೈಸುತ್ತಿರುವೆನು. ಹೇ ಉದ್ಧವಾ, ಇದಕ್ಕಿಂತಲೂ ಇನ್ನು ಏನೆಂದು ಎಷ್ಟು ವರ್ಣಿಸಬೇಕು? ನನಗೆ ಆತನಲ್ಲಿ ಅನನ್ಯ ಪ್ರೀತಿವಿರುವುದು. ಇದನ್ನು ನಾನು ನಿನಗೆ ಎಷ್ಟು ಸಾರೆ ಹೇಳಲಿ ? ।೨೯೪॥ ಹೇ ಉದ್ಧವಾ, ಹೆಚ್ಚಿಗೇನು ಹೇಳಬೇಕು? ನಾನು ದೇಹ, ಆತನು ಆತ್ಮನಾಗಿರುವನು. ಆತನು ನನಗೆ ಜೀವಪ್ರಾಣನಾಗಿರುವನು. ಈ ಚಿನ್ಹೆಯು ನಿಜಭಕ್ತರಿಗೆ ಮಾತ್ರ ತಿಳಿದಿರುವುದು ।೨೯೫॥

ನಾಂದತಾ ''ಸಹಜಭಕ್ತೀ''ಆತ । ಮೀ ದೇವೋ ತೋ ಮಾಝಾ ಭಕ್ತ । ಯೇರವೀ ಮೀ ಸಗಳಾ ತ್ಯಾ ಆಂತ । ತೋ ಸಮಸ್ತ ಮಜಮಾಜೀ ।೧೯೬॥ ನಿಜಭಕ್ತ ಮಜಭೀತರೀ । ಮೀ ತಯಾ ಆಂತಬಾಹೇರೀ । ಐಸೇ ಸಮಾರಸ್ಯೇ ನಾಂದೋ ಭಾರೀ । ವೇಗಳೇ ಬಾಹೇರೀ ನಾಮಮಾತ್ರ ।೧೯೭॥ ಮಾಝಿಯಾ ಸಾಯುಜ್ಯಾ ಜೇ ಆಲೇ । ತೇ ಮೀಚಿ ಹೋಊನಿಯಾ ಠೇಲೇ । ಪರೀ ಮೀ ಹೋಊನಿ ಮಜ ಭಜಲೇ । ತೇ ''ಭಕ್ತ'' ಮಾನಿಲೇ ಮ್ಯಾ ಐಸೇ ।೧೯೮॥ ಸಾಯುಜ್ಯಾಪರೀಸ ಭಕ್ತಗೋಡ । ಯಾಚಿ ನಿರೂಪಣಾಚೇ ಕೋಡ । ಉದ್ಧವಾ ತುಝೀ ಜಾಣೋನಿ ಚಾಡ । ವಿಶದ ನಿವಾಡ ಸಾಂಗಿತಲಾ ।೧೯೯॥ ಐಶಿಯಾ ಮಾಝ್ಯಾ ನಿಜಭಕ್ತಾಂಸೀ । ಅವಶೇಷ ಅರ್ಥ ನುರೇಚಿ ತ್ಯಾಂಸೀ । ಮೀ ತುಷ್ಟಲೋ ಗಾ ಹೃಷೀಕೇಶೀ । ನಿಜ ಭಾವಾಸೀ ಸರ್ವಸ್ವೇ ।೨೦೦॥ ''ಭಕ್ತಿಪ್ರಧಾನ'' ಭಾಗವತಶಾಸ್ತ್ರ । ತೇ ನಿಜಭಕ್ತೀಚೇ ನಿಜಸಾರ । ತುಜ ಮೀ ಸಾಂಗಿತಲೇ ಸಾಚಾರ । ಅತ್ಯಾದರ ಪೂರ್ವಕ ।೨೦೧॥ ಉದ್ಧವಾ ತುಝೇ ಪ್ರೀತೀಚೇನಿ ವ್ಯಾಜೇ ।ಮಜ ಗುಹ್ಯಾಚೇ ನಿಜಗುಹ್ಯ ಹೇ ಜೇ । ತೇ ಭಕ್ತೀಚೇ ಕರೂನಿಯಾ ಖಾಜೇ । ತುಜ ಮ್ಯಾ ವೋಜೇ ದೀಧಲೇ ।೨೦೨॥ ಮ್ಯಾ ಸಾಂಗೀತಲೇ ಜೈಶಾ ರೀತೀ । ತೈಶೀ ಸೇವಾವೀ ಮಾಝೀ ನಿಜಭಕ್ತೀ । ಐಸೇ ಬೋಲತ ಬೋಲತಾ ಶ್ರೀಪತೀ । ಉದ್ಧವ ಪ್ರೀತೀ ಉಚಲಿಲಾ ।೨೦೩॥ ಮಾಗಾ ಟಾಕೂನಿ ಪೀತಾಂಬರೇ । ಸಾಂಡೋನಿಯಾ ಶಂಖಚಕ್ರೇ । ಉದ್ಧವ ಉಚಲಿಲಾ ಶ್ರೀಧರೇ । ತರೀ ಪ್ರೇಮ ನ ಸಾಂವರೇ ದೇವಾಚೇ ।೨೦೪॥ ಹಾಂವ ನ ಬಾಣೇಚಿ ದೋ ಕರೀ । ಮಗ ಚಾರೀ ಭುಜಾ ಪಸರೀ । ಉದ್ಧವಾತೇ ಹೃದಯಾವರೀ । ಪ್ರೀತೀ ಥೋರೀ ಆಲಿಂಗೀ ।೨೦೫॥ ಹೃದಯೀ ಹೃದಯ ಏಕ ಜಾಹಲೇ । ಯೇ ಹೃದಯೀಚೇ ತೇ ಹೃದಯೀ ಘಾತಿಲೇ । ಕೃಷ್ಣೇ ಸರ್ವಸ್ವ ಜೇ ಆಪುಲೇ । ತೇ ಹೃದಯೀ ಸೂದಲೇ । ಉದ್ಧವಾಚೇ ।೨೦೬॥ ದೇವ ಅವಾಪ್ತಕಾಮ ನಿಚಾಡ । ತ್ಯಾಸೀಹೀ ಭಕ್ತೀಚೀ ಐಸೀ ಚಾಡ । ಅತಿಶಯೇ ಉದ್ಧವ ಲಾಗಲಾ ಗೋಡ । ಸ್ವಾನಂದೇ ಕೋಡ ಪುರವೀ ತ್ಯಾಚೇ ।೨೦೭॥ ಉದ್ಧವ ಪ್ರೇಮಾಚಾ ಲವಲಾಹೋ । ಆಲಿಂಗನ ಸೋಡೂ ವಿಸರೇ ದೇವೋ । ಕೃಷ್ಣ ಹೃದಯಾ ಹೃದಯ ಜಡಲ್ಯಾ ಪಹಾ ಹೋ । ಉದ್ಧವಾ ಉದ್ಧವೋ ವಿಸರಲಾ ।೨೦೮॥ ಐಸೇ ಸ್ವಾನಂದೀ ವಾಡಾಕೋಡಾ । ದೋಘೇಹೀ ಮಿಸಳಲೇ ನಿಚಾಡಚಾಡಾ । ಭಕ್ತಿಸುಖಾಚಾ ಸುರವಾಡಾ । ಉದ್ಧವ ಗಾಢಾ ಮೀನಲಾ ।೨೦೯॥

ಸಹಜವಾಗಿ ಭಕ್ತಿಯನ್ನು ಮಾಡುತ್ತಿರಲು ಆಗ ನಾನು ದೇವನು, ಆತನು ನನ್ನ ಭಕ್ತನಾಗಿರುವನು. ಸಾಮಾನ್ಯವಾಗಿ ನಾನು ಸಂಪೂರ್ಣವಾಗಿ ಆತ್ಮನಲ್ಲಿ ವ್ಯಾಪಿಸಿಕೊಂಡು ಇರುವೆನು. ನಾನು ಆತನ ಒಳಗೆ ಇರುವೆನು, ಆತನು ನನ್ನ ಒಳಗೆ ಇರುವನು ।೧೯೬॥ ನನ್ನ ಭಕ್ತನು ನನ್ನ ಒಳಗೆ ಇರುವನು ಮತ್ತು ನಾನು ಆತನ ಒಳಹೊರಗೆ ಹೀಗೆ ಏಕತ್ವದಿಂದ ನಾವು ವಾಸ್ತವ್ಯ ಮಾಡುತ್ತಿರುವೆವು. ಹೊರನೋಟಕ್ಕೆ ಹೆಸರಿಗೆ ಮಾತ್ರ ನಾವು ಭಿನ್ನ ಭಿನ್ನರಾಗಿ ಕಾಣುತ್ತೇವೆ ।೧೯೭॥ ಯಾರು ನನ್ನ ಸಾಯುಜ್ಯಕ್ಕೆ ಬರುವರೋ, ಅವರು ನಾನೇ ಆಗಿಬಿಡುವರು. ಆದರೆ ಮದ್ರೂಪರಾಗಿಯೂ ಕೂಡ ಯಾರು ನನ್ನ ಭಕ್ತಿಯನ್ನು ಮಾಡುವರೋ, ಆ ನನ್ನ ಭಕ್ತರು ನನಗೆ ನನ್ನಂತೆಯೇ ತೋರುವರು ।೧೯೮॥ ಹೇ ಉದ್ಧವಾ ಸಾಯುಜ್ಯ ಮುಕ್ತಿಗಿಂತಲೂ ಭಕ್ತಿಯು ಅತಿಶಯವಾಗಿ ಆನಂದದಾಯಕವಾಗಿದೆ. ಈ ನಿರೂಪಣೆಯನ್ನು ಕೇಳಲು ನಿನಗೆ ಬಹಳ ಪ್ರಿಯವೆನಿಸುವುದು. ಇದನ್ನು ತಿಳಿದು ನಾನು ಸ್ಪಷ್ಟಮಾಡಿ ಹೇಳಿರುವೆನು ।೧೯೯॥ ಹೀಗಿರುವ ನನ್ನ ಭಕ್ತರಿಗೆ ಅನ್ಯ ಯಾವ ಪ್ರಕಾರದ ಲಾಭದ ಅಪೇಕ್ಷೆಯಿರುವುದಿಲ್ಲ. ಶ್ರೀಹರಿಯಾದ ನಾನು ಆತನ ಈ ನಿಜಭಾವನೆಯಿಂದಲೇ ಅತ್ಯಂತ ಸಂತುಷ್ಟನಾಗಿರುವೆನು ।೨೦೦॥ ಈ ಭಾಗವತ ಶಾಸ್ತ್ರವು ಭಕ್ತಿಪ್ರಾಧ್ಯಾನ್ಯವಾಗಿರುವುದು. ನಾನು ಅತ್ಯಂತ ಆದರದಿಂದ ನಿಜಭಕ್ತಿಯ ಸಾರವನ್ನು ಯಥಾರ್ಥ ರೀತಿಯಲ್ಲಿ ಹೇಳಿರುವೆನು ।೨೦೧॥ ಹೇ ಉದ್ಧವಾ, ನಿನ್ನ ಮೇಲಿನ ಪ್ರೇಮಕ್ಕಾಗಿ ನಾನು ನನ್ನ ಗುಟ್ಟುಗಳಲ್ಲಿನ ನಿಜಗುಟ್ಟಾದ ಭಕ್ತಿಯನ್ನು, ಮತ್ತು ಆ ಭಕ್ತಿಯ ತಿನಸು ಮಾಡಿ ಬಹುಪ್ರೀತಿಯಿಂದ ನಿನಗೆ ಕೊಟ್ಟಿರುವೆನು ।೨೦೨॥ ನಾನು ಹೇಳಿದ ರೀತಿಯಲ್ಲಿ ನನ್ನ ಭಕ್ತಿಯನ್ನು ಮಾಡಬೇಕು. ಹೀಗೆಂದು ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ಬಹು ಪ್ರೀತಿಯಿಂದ ಮೇಲಕ್ಕೆ ಎತ್ತಿಕೊಂಡನು ।೨೦೩॥ ಪೀತಾಂಬರವು ಹಿಂದಕ್ಕೆ ಸರಿಸಿದನು. ಕೈಗಳಲ್ಲಿನ ಶಂಖಚಕ್ರಗಳನ್ನು ಬದಿಯಲ್ಲಿಟ್ಟನು. ದೇವನು ಪ್ರೇಮದಿಂದ ಉದ್ಧವನಿಗೆ ಹೃದಯಕ್ಕೆ ಹಚ್ಚಿಕೊಂಡನು. ಇಷ್ಟಾದರೂ ದೇವನ ಪ್ರೇಮದ ಪೂರವು ಕಡಿಮೆಯಾಗಲಿಲ್ಲ ।೨೦೪॥ ಆತನಿಗೆ ಎರಡು ಕೈಗಳಿಂದ ಆಲಿಂಗಿಸಿದಾಗ ತೃಪ್ತಿಯಾಗಲಿಲ್ಲ. ಆಗ ಭಗವಂತನು ತನ್ನ ನಾಲ್ಕೂ ಕೈಗಳನ್ನು ಪಸರಿಸಿ ಉದ್ಧವನಿಗೆ ಹೃದಯಕ್ಕೆ ಅಪ್ಪಿಕೊಂಡನು ।೨೦೫॥ ಆಗ ಎರಡೂ ಹೃದಯಗಳು ಒಂದಾದವು. ಈ ಹೃದಯದಿಂದ ಆ ಹೃದಯಕ್ಕೆ ಹಾಕಿದನು. ಶ್ರೀಕೃಷ್ಣನು ತನ್ನ ಸರ್ವಸ್ವವನ್ನು ಉದ್ಧವನ ಹೃದಯದಲ್ಲಿ ಹಾಕಿದನು ।೨೦೬॥ ದೇವನು ಪೂರ್ಣಕಾಮ, ನಿಷ್ಕಾಮನಾಗಿದ್ದರೂ ಕೂಡ ಭಕ್ತಿಯ ಇಂತಹ ಪ್ರೇಮವಿರುವುದು. ಉದ್ಧವನಿಗೆ ಹರಿಭಕ್ತಿಯ ಪ್ರೇಮವು ಹತ್ತಿತು. ಆದ್ದರಿಂದ ದೇವನು ಆತನ ಅಭಿರುಚಿಯನ್ನು ಆನಂದದಿಂದ ಪೂರೈಸಿದನು ।೨೦೭॥ ಉದ್ಧವನ ಮೇಲಿರುವ ಅತ್ಯಂತ ಪ್ರೇಮಕಾರಣದಿಂದ ದೇವನು ಆತನನ್ನು ಬಿಗಿದಪ್ಪಿಕೊಂಡಿದ್ದನ್ನು ಬಿಡುವುದು ಮರೆತುಬಿಟ್ಟನು. ಶ್ರೀಕೃಷ್ಣನ ಹೃದಯಕ್ಕೆ ತನ್ನ ಸ್ವತಃ ಹೃದಯದ ಸ್ಪರ್ಶವಾಗುತ್ತಲೇ ಉದ್ಧವನು ತನ್ನನ್ನು ಮರೆತುಬಿಟ್ಟನು ।೨೦೮॥ ಈ ಪ್ರಕಾರವಾಗಿ ಸ್ವಾನಂದದಿಂದ ಪ್ರೇಮಯುಕ್ತರಾಗಿ ಇಬ್ಬರೂ ನಿಷ್ಕಾಮ ಪ್ರೀತಿಯಲ್ಲಿ ಪೂರ್ಣವಾಗಿ ಮುಳುಗಿಬಿಟ್ಟರು. ಉದ್ಧವನು ಮಾತ್ರ ಭಕ್ತಿಸುಖದ ಸಮೃದ್ಧಿಯಲ್ಲಿ ಪರಿಪೂರ್ಣವಾಗಿ ಕೂಡಿಕೊಂಡನು ।೨೦೯॥

ಕೃಷ್ಣೇ ಸರ್ವಸ್ವ ಆಪುಲೇ । ಉದ್ಧವಾಚೇ ಹೃದಯೀ ಸೂದಲೇ। ಹೇ ಉದ್ಧವಾ ಕಳೋ ನಾಹೀ ದೀಧಲೇ । ಲಾಘವ ಕೇಲೇ ಗೋವಿಂದೇ।।೩೧೦।। ಹಾ ಅರ್ಥ ಕಳಲ್ಯಾ ಉದ್ಧವಾಸೀ ।ಹಾ ಯೇಈಲ ಮಜಸೀ ಐಕ್ಯಾಸೀ। ಪುಢೀಲ ಕಥಾ ಸುರಸ ಐಸೀ। ಮಗ ಕೋಣಾಪಾಶೀ ಸಾಂಗಾವೀ।।೩೧೧।। ಉದ್ಧವಾ ಮಜ ವಾಡೇಕೋಡೇ । ಅಖಂಡ ಹೇಚಿ ಬೋಲೋ ಆವಡೇ। ಪರೀ ತೈಸಾ ಶ್ರೋತಾ ನ ಜೋಡೇ। ಹೇ ಥೋರ ಸಾಂಕಡೇ ಮಜಲಾಗೀ ।।೩೧೨।। ಭಕ್ತಿಸುಖಾಚಾ ಸುರವಾಡ । ಸಾಂಗತಾ ಮಾಝೀ ಪುರೇ ಕೋಡ । ಐಸಾ ಶ್ರೋತಾ ಕೈಚಾ ಗೋಡ । ಯಾಲಾಗೀ ಉದ್ಧವಾ ಆಡ ಪ್ರೇಮ ಸೂಯೇ ।।೩೧೩।। ಸೂರ್ಯಪಾಸೂನಿ ಫಾಂಕತೀ ಕಿರಣ । ತೈಸೇ ಸುಟಲೇ ಆಲಿಂಗನ । ಕೃಷ್ಣ ಉದ್ಧವ ಜಾಹಲೇ ಭಿನ್ನ । ಪರೀ ಅಭಿನ್ನಪಣ ಮೋಡೇನಾ ।।೩೧೪।। ಪುಢೀಲ ಕಥೇಚಿ ಸಂಗತೀ । ದೂರ ಠೇಲೀ ಶ್ಲೋಕಸಂಗತೀ । ಶ್ರೋತಾ ವಿರುದ್ಧ ನ ಘ್ಯಾವೇ ಚಿತ್ತೀ । ಸಮೂಳಾರ್ಥ ನಿಶ್ಚಿತೀ ವಿಚಾರಾವಾ ।।೩೧೫।। ಮೂಳೀಂಚೇ ಪದ ಸಂಕೋಚಿತ । ತೇಥ ಉತ್ತಮ ಭಕ್ತಿಭಾವಾರ್ಥ । ಸ್ವಯೇ ಬೋಲಿಲಾ ಶ್ರೀಕೃಷ್ಣನಾಥ । ತೋಚಿ ಮ್ಯಾ ಅರ್ಥ ವಿಸ್ತಾರಿಲಾ ।।೩೧೬।। ನಾರಳಾಂತಲ್ಯಾ ವಸ್ತ್ರಾಚೀ ಘಡೀ । ಉಕಲಿತಾ ಥೋರ ವಾಢೇ ವಾಡೀ । ತೇವೀಮೂಳಪದಾಚೀ ಘಡಾಮೋಡೀ । ಕಥಾ ಏವಢೀ ವಿಸ್ತಾರಲೀ ।।೩೧೭।। ಮೂಳಪದಾಚಾ ಪದಪದಾರ್ಥ । ಶ್ಲೋಕೀ ಪಹಾಮಾ ಸಾವಚಿತ್ತ । ಶ್ಲೋಕ ಉತ್ತರಾರ್ಧೀ ಭಗವಂತ । ಧ್ವನಿತಾರ್ಥ ಬೋಲೋನಿ ಗೇಲಾ ।।೩೧೮।। ತ್ಯಾಚಿ ಧ್ವನಿತಾಚೇ ಪೋಟೀ । ಹೋತೀ ಭಕ್ತರಹಸ್ಯಾಚೀ ಪೇಟೀ । ತೇ ಮ್ಯಾ ಉಘಡೂನಿ ದಾವಿಲೀ ದಿಠೀ । ವೃಥಾ ಚಾವಟೀ ಝಣೇ ಮ್ಹಣಾಲ ।।೩೧೯।। ತಂವ ಶ್ರೋತೇ ಮ್ಹಣತೀ ನವಲ ಯೇಥ । ಮೂಳೀಂಚೇ ಪದ ಹೋತೇ ಗುಪ್ತ । ತೇ ಕಾಢಿಲೇ ಭಕ್ತಿಸಾರಾಮೃತ । ಸುಹೃದಯಸ್ಥ ಹರೀಚೇ ।।೩೨೦।। ತುಝೇ ಹೃದಯೀ ಶ್ರೀಕೃಷ್ಣನಾಥ । ಪ್ರಕಟೋನಿ ಆಪುಲೇ ಹೃದ್ಗತ । ಗ್ರಂಥೀ ಅಸೇ ಬೋಲವಿತ । ಹೇ ಸುನಿಶ್ಚಿತ ಕಳಲೇ ಆಮ್ಹಾ ।।೩೨೧।। ಆಮ್ಹಾ ಐಕತಾ ಭಕ್ತಿಸಾರಾಮೃತ । ಚಿತ್ತೀ ಚೈತನ್ಯ ಉಥಳತ । ಹೋಶೀ ದೇಖಣಾ ಸುನಿಶ್ಚಿತ । ಗ್ರಂಥ ಯಥಾರ್ಥ ಅರ್ಥಿಲಾ ।।೩೨೨।।

ಶ್ರೀಕೃಷ್ಣನು ತನ್ನ ಸರ್ವಸ್ವವನ್ನು ಉದ್ಧವನ ಹೃದಯದಲ್ಲಿ ಹಾಕಿದನು. ಆದರೆ ಇದನ್ನು ಉದ್ಧವನಿಗೆ ತಿಳಿಯಗೊಡಲಿಲ್ಲ. ಹೀಗೆ ಗೋವಿಂದನು ತನ್ನ ಚಾತುರ್ಯದ ಕೌತುಕವನ್ನು ತೋರಿಸಿದನು ।೩೧೦॥ ಈಗ ದೇವನಿಗೆ ಹೀಗೆ ತೋರಹತ್ತಿತು. ಏನೆಂದರೆ, ಈ ನನ್ನ ಹೃದ್ಗತವು ಉದ್ಧವನಿಗೆ ತಿಳಿದುಬಂದರೆ ಆಗ ಆತನು ನನ್ನಲ್ಲಿ ಐಕ್ಯರೂಪನಾಗಿಬಿಡುವನು. ಹಾಗಾದಲ್ಲಿ ಇನ್ನು ಮುಂದಿನ ಸುರಸವಾದ ಕಥೆಯನ್ನು ಯಾರಲ್ಲಿ ಹೇಳಬೇಕು? ।೩೧೧॥ ಉದ್ಧವನ ಪ್ರೇಮವು ನನ್ನ ಮೇಲೆ ಅತಿಶಯವಾಗಿದೆ. ಈ ಕಥೆಯನ್ನು ಅಖಂಡವಾಗಿ ನಾನು ಹೇಳುತ್ತಿದ್ದರೆ ಆತನಿಗೆ ಯಾವಾಗಲೂ ಪ್ರಿಯವಾಗುತ್ತದೆ. ಅದಕ್ಕಾಗಿ ಆತನಂತಹ ಶ್ರೋತೃ ನನಗೆ ಬೇರೆ ಯಾರೂ ದೊರಕಲಾರರು. ಇದೇ ನನ್ನ ದೊಡ್ಡದಾದ ಅಡಚಣೆಯಾಗಿದೆ ।೩೧೨॥ ಭಕ್ತಿಸುಖದ ವರ್ಣನೆಯನ್ನು ಮಾಡುವುದು ನನಗೆ ಬಲು ಇಷ್ಟ. ಆದರೆ ಇದನ್ನು ಕೇಳುವ ಪ್ರೇಮಳ ಶ್ರೋತಾ ನನಗೆಲ್ಲಿಂದ ಸಿಗಬೇಕು? ಆದ್ದರಿಂದ ದೇವನು ತನ್ನ ಪ್ರೇಮವನ್ನು ಉದ್ಧವನಿಗೆ ಅಡ್ಡವಾಗಿಟ್ಟನು ।೩೧೩॥ ಸೂರ್ಯನಿಂದ ಯಾವ ಪ್ರಕಾರವಾಗಿ ಕಿರಣಗಳು ಬಿಟ್ಟುಕೊಳ್ಳುವುವೋ, ಅದರಂತೆಯೇ ಆತನು ಅಪ್ಪಿಕೊಂಡದ್ದು ಸಡಿಲಾಗಿ ಬಿಟ್ಟುಕೊಟ್ಟಿತು. ತದನಂತರ ಶ್ರೀಕೃಷ್ಣ ಮತ್ತು ಉದ್ಧವರು ಒಬ್ಬರಿಂದ ಒಬ್ಬರು ದೂರ ಸರಿದರು. ಆದರೆ ಅವರ ಅಭಿನ್ನತೆಯನ್ನು ಬಿಟ್ಟುಕೊಡಲು ಸಾಧ್ಯವಾಗಲಿಲ್ಲ ।೩೧೪॥ ಮುಂದಿನ ಕಥೆಯ ಸಂದರ್ಭವು ಮತ್ತು ಶ್ಲೋಕದ ಸಂಬಂಧವು ದೂರ ಉಳಿಯಿತು ಎಂದು ಶ್ರೋತೃಗಳವರು ಅದಕ್ಕಾಗಿ ವಿಕಲ್ಪವನ್ನು ಮಾಡಬಾರದು. ಮೂಲದಲ್ಲಿನ ಅರ್ಥದ ಸರಿಯಾದ ವಿಚಾರವನ್ನು ತಿಳಿದುಕೊಳ್ಳಬೇಕು ।೩೧೫॥ ಮೂಲದಲ್ಲಿನ ಪದವು ಸಂಕ್ಷಿಪ್ತವಾಗಿರುವುದು. ಆ ಪ್ರಕಾರವಾಗಿ ಶ್ರೀಕೃಷ್ಣನು ಸ್ವತಃ ಭಕ್ತಿಭಾವದೊಂದಿಗೆ ಉತ್ತಮ ರೀತಿಯಲ್ಲಿ ಪ್ರತಿಪಾದನೆಯನ್ನು ಮಾಡಿರುವನು. ಅದೇ ಅರ್ಥವನ್ನು ನಾನು ವಿಸ್ತಾರವನ್ನಾಗಿ ಮಾಡಿ ಹೇಳಿರುವೆನು ।೩೧೬॥ ತೆಂಗಿನಕಾಯಿಯಲ್ಲಿ ಹಾಕಿ ತಂದ ವಸ್ತ್ರದ ಗಳಿಗೆಯನ್ನು ಬಿಚ್ಚಿ ಹೊರತೆಗೆಯಲು ಅದು ವಿಸ್ತಾರವಾಗಿ ಹೊರಬೀಳುವುದು. ಅದರಂತೆ ಮೂಲ ಪದದ ವರ್ಣನೆಯನ್ನು ಮಾಡುತ್ತಿರಲು ಇಷ್ಟೊಂದು ವಿಸ್ತಾರವು ಸಹಜವಾಗಿ ಆಗಿರುವುದು ।೩೧೭॥ ಮೂಲದಲ್ಲಿರುವ ಪದ ಮತ್ತು ಆ ಪದದ ಅರ್ಥವನ್ನು ಶ್ಲೋಕದಲ್ಲಿ ವಿಚಾರಪೂರ್ವಕವಾಗಿ ನೋಡಿದರೆ ಅದರಲ್ಲಿ ಶ್ಲೋಕದ ಉತ್ತರಾರ್ಧದಲ್ಲಿ ಶ್ರೀಕೃಷ್ಣನು ತನ್ನ ಮತಿತಾರ್ಥವನ್ನು ಇದನ್ನೇ ಧ್ವನಿತಗೊಳಿಸಿರುವುದು ತಿಳಿದು ಬರುವುದು ।೩೧೮॥ ಈ ಯಾವ ಧ್ವನಿತ ಅರ್ಥದ ಹೊಟ್ಟೆಯಲ್ಲಿಯೇ ಭಕ್ತಿರಹಸ್ಯದ ಪೆಟ್ಟಿಗೆ ಇತ್ತು. ಅದನ್ನೇ ನಾನು ತೆರೆದು ತೋರಿಸಿರುವೆನು. ಅದಕ್ಕಾಗಿ ಇದು ವ್ಯರ್ಥವಾದ ಬಡಬಡಿಕೆಯಾಗಿದೆ ಎಂದು ಹೀಗೆ ತಿಳಿಯಬಾರದು ।೩೧೯॥ ಆಗ ಶ್ರೋತೃಗಳವರು ಹೀಗೆ ಹೇಳಿದರು; ಇದು ಮಹಾ ಆಶ್ಚರ್ಯಕಾರಕವಾಗಿದೆ. ಮೂಲದಲ್ಲಿ ಯಾವ ಪದವು ಅತ್ಯಂತ ಗೂಢವಾಗಿತ್ತು. ಅದರಲ್ಲಿನ ಶ್ರೀಹರಿಯ ಹೃದಯದಲ್ಲಿರುವ ಈ ಯಾವ ಭಕ್ತಿಸಾರಾಮೃತವನ್ನು ನೀನೇ ತಗೆದಿರುವೆ ।೩೨೦॥ ಶ್ರೀಕೃಷ್ಣನು ನಿನ್ನ ಹೃದಯದಲ್ಲಿ ಪ್ರವೇಶವನ್ನು ಮಾಡಿ ತನ್ನ ಹೃದ್ಗತವನ್ನು ನಿನ್ನಿಂದ ಗ್ರಂಥದಲ್ಲಿ ನುಡಿಸಿರುವನು. ಇದು ಈಗ ನಮಗೆ ನಿಶ್ಚಯವಾಗಿ ತಿಳಿಯಿತು ।೩೨೧॥ ಈ ಯಾವ ಭಕ್ತಿಸಾರಾಮೃತವನ್ನು ಶ್ರವಣ ಮಾಡುತ್ತಲೇ ನಮ್ಮ ಚಿತ್ತದಲ್ಲಿ ಚೈತನ್ಯವೇ ತುಂಬಿ ತುಳುಕಾಡುತ್ತಿದೆ. ನೀನು ಅತಿಶಯವಾಗಿ ಚತುರನಾಗಿರುವೆ. ಆದ್ದರಿಂದ ಈ ಗ್ರಂಥದ ಅರ್ಥವನ್ನು ಯಥಾರ್ಥವಾಗಿ ಬಿಚ್ಚಿ ಹೇಳಿರುವೆ ।೩೨೨॥

ಹೇ ಐಕೋನಿ ಸಂತಾಚೇ ವಚನ । ಹರಿಖಲಾ ಏಕಾಜನಾರ್ದನ । ಮಸ್ತಕೀ ವಂದಿಲೇ ಶ್ರೀಚರಣ । ಪುಢೀಲ ನಿರೂಪಣ ಅವಧಾರಾ ।೩೨೩॥ ನಿಜಭಕ್ತೀಚೇ ದೃಢೀಕರಣ । ಆದರೇ ಕರಿತಾಹೇ ಶ್ರೀಕೃಷ್ಣ । ಸಾಂಗಿತಲೇ ತೇಚಿ ನಿರೂಪಣ । ಪುಢತೀ ಜಾಣ ಸಾಂಗತ ।೩೨೪॥

ಯದಾತ್ಮನ್ಯರ್ಪಿತಂ ಚಿತ್ತಂ ಶಾಂತಾಂ ಸತ್ತ್ವೋಪಬೃಂಹಿತಮ್ । ಧರ್ಮಂ ಜ್ಞಾನಂ ಸವೈರಾಗ್ಯಮೈಶ್ವರ್ಯಂ ಚಾಭಿಪದ್ಯತೇ ।೨೫॥

ಅರ್ಥ:- ಈ ಪ್ರಕಾರವಾಗಿ ಧರ್ಮದ ಪಾಲನೆಯನ್ನು ಮಾಡಲು ಚಿತ್ತದಲ್ಲಿ ಸತ್ವಗುಣದ ವೃದ್ಧಿಯಾಗಿ, ಶಾಂತನಾಗಿ ಆತ್ಮತತ್ವದಲ್ಲಿ ಏಕರೂಪನಾಗುವನು. ಆಗ ಸಾಧಕನಿಗೆ ಧರ್ಮ, ಜ್ಞಾನ ಮತ್ತು ವೈರಾಗ್ಯ ಹಾಗೂ ಐಶ್ವರ್ಯ ಪ್ರಾಪ್ತವಾಗುವುದು.

ಆಪುಲೇ ಜೇ ಕಾ ಅಂತಃಕರಣ। ತೇ ಕರಿತಾ ಗಾ ಮದರ್ಪಣ । ಮಾಝೀ ನಿಜಭಕ್ತಿ ಉಲ್ಹಾಸೇ ಜಾಣ । ಜಿಚೇ ನಿರೂಪಣ ಮ್ಯಾ ಕೇಲೇ ।೩೨೫॥ ಮದ್ರೂಪೀ ಅರ್ಪಾವಯಾ ಮನ । ಸುಗಮ ವರ್ಮ ಸಾಂಗೇನ ಜಾಣ। ಮಾಝೇ ಕರಿತಾ ನಾಮಸ್ಮರಣ । ಪಾಪ ನಿರ್ದಳಣ ತೇಣೇ ಹೋಯ ।೩೨೬॥ ಸಕಾಮ ಸ್ಮರತಾ ನಾಮ । ನಾಮ ಪುರವೀ ಸಕಳ ಕಾಮ । ನಿರ್ವಿಕಲ್ಪೇ ಸ್ಮರತಾ ನಾಮ । ಕರೀ ಭಸ್ಮ ಪಾಪಾಚೇ ।೩೨೭॥ ಹೋತಾ ಪಾಪಚೇ ಕ್ಷಾಳಣ । ರಜ ತಮ ಜಿಣೋನಿ ಜಾಣ । ಸಹಜೇ ವಾಢೇ ಸತ್ತ್ವಗುಣ । ಧರ್ಮಪರಾಯಣ ಧಾರ್ಮಿಕ ।೩೨೮॥ ಸ್ವಧರ್ಮನಿಷ್ಠ ಸತ್ವಗುಣೇ । ಅಢಳ ಪಡೇ ವೈರಾಗ್ಯಾಚೇ ಠಾಣೇ । ವೈರಾಗ್ಯೇ ವಿಷಯ ನಿರ್ದಳಣೇ । ನಿಜಜ್ಞಾನ ತೇಣೇ ಪ್ರಕಾಶೇ ।೩೨೯॥ ವಾಢಲ್ಯಾ ಸವಿವೇಕ ಜ್ಞಾನ । ಲಾಗೇ ಸ್ವರೂಪಾಚೇ ಅನುಸಂಧಾನ । ಚಢೇ ಶಾಂತೀಚೇ ಸಮಾಧಾನ । ತೈ ಮದರ್ಪಣ ಮನಹೋಣೇ ।೩೩೦॥ ಮನ ಜಾಹಲ್ಯಾ ಮದರ್ಪಣ। ನಿಜಭಕ್ತಿ ಉಲ್ಹಾಸೇ ಜಾಣ । ಜಿಚೇ ಗತಶ್ಲೋಕೀ ನಿರೂಪಣ । ಮ್ಯಾ ಸಂಪೂರ್ಣ ಸಾಂಗಿತಲೇ ।೩೩೧॥ ನಿಜಭಕ್ತಿ ಪಾವಲ್ಯಾ ಸಂಪೂರ್ಣ । ಭಕ್ತೇ ನ ಮಾಗತಾ ಜಾಣ । ಅಷ್ಟ ಮಹಾಸಿದ್ಧೀ ಆಪಣ । ತ್ಯಾಚೇ ಆಂಗಣ ವೋಳಂಗತೀ।೩೩೨॥ ಜೋ ಸಿದ್ಧೀ ಕಡೇ ಕದಾ ನ ಪಾಹೇ । ತ್ಯಾಸೀ ಅವಶೇಷ ಕೋಣ ಅರ್ಥ ರಾಹೇ । ಮಾಝೀ ಸಂಪೂರ್ಣ ಪದವೀ ಲಾಹೇ । ಮದೈಕ್ಯ ಹೋಯೇ ಮದ್‌ಭಕ್ತಾ ।೩೩೩॥ ಐಶೀ ನ ಜೋಡತಾ ಮಾಝೀ ಭಕ್ತೀ । ನ ಲಾಭತಾ ಆತ್ಮಸ್ಥಿತೀ । ವರ್ತಣೇ ಜೈ ವಿಷಯಾಸಕ್ತೀ । ತೈ ಅನರ್ಥಪ್ರಾಪ್ತೀ ಅನಿವಾರ ।೩೩೪॥

ಯದರ್ಪಿತಂ ತದ್ವಿಕಲ್ಪೇ ಇಂದ್ರಿಯೈಃ ಪರಿಧಾವತಿ । ರಜಸ್ವಲಂ ಚಾಸನ್ನಿಷ್ಠಂ ಚಿತ್ತಂ ವಿದ್ಧಿ ವಿಪರ್ಯಯಮ್ ।೨೬॥

ಅರ್ಥ:- ಈ ಸಂಸಾರವು ವಿವಿಧ ಕಲ್ಪನೆಗಳಿಂದ ತುಂಬಿರುವುದು. ನಿಜವಾದ ವಿಚಾರವನ್ನು ಮಾಡಲು ಇದು ಹೆಸರಿಗೆ ಮಾತ್ರ ಇದ್ದು, ಸಂಸಾರ ನಾಮದ ಯಾವ ವಸ್ತುವೂ ಇರುವುದಿಲ್ಲ. ಚಿತ್ತವು ಇದರಲ್ಲಿ ಕೂಡಲು ಆಗ ಇಂದ್ರಿಯಗಳೊಂದಿಗೆ ಅತ್ತಿತ್ತ ಓಡಾಡುತ್ತಿರುವುದು. ಹೀಗೆ ಚಿತ್ತದಲ್ಲಿ ರಜೋಗುಣವು ಬೆಳೆಯಲು ಆಗ ಅಸತ್ ವಸ್ತುಗಳೊಂದಿಗೆ ಕೂಡಿಕೊಳ್ಳುವುದು. ಆಗ ಆತನ ಸರ್ವ ಜ್ಞಾನವು ಲೋಪವಾಗುವುದು. ಆತನು ಅಧರ್ಮ, ಅಜ್ಞಾನ ಮತ್ತು ಮೋಹದ ಮನೆಯಾಗುವನು.

ಈ ಯಾವ ಸಂತರ ವಚನಗಳನ್ನು ಕೇಳಿ ಏಕಾ ಜನಾರ್ದನನು ಅತಿಶಯವಾಗಿ ಸಂತುಷ್ಟನಾದನು. ಆತನು ಶ್ರೀಚರಣಗಳಿಗೆ ಮಸಕ್ತದಿಂದ ವಂದಿಸಿದನು. ಈಗ ಮುಂದಿನ ನಿರೂಪಣೆಯನ್ನು ಕೇಳಿರಿ ।೩೨೩॥ ಶ್ರೀಕೃಷ್ಣನು ತನ್ನ ಭಕ್ತಿಯನ್ನು ದೃಢೀಕರಿಸಲು ಆದರ ಪೂರ್ವಕವಾಗಿ ಈ ಹಿಂದೆ ಹೇಳಿದ ನಿರೂಪಣೆಯನ್ನೇ ಮುಂದೆ ಪುನಃ ಹೇಳುತ್ತಿರುವನು ।೩೨೪॥

ತನ್ನ ಅಂತಃಕರಣವನ್ನು ನನಗೆ ಸಮರ್ಪಿಸಲು, ಆಗ ನನ್ನ ನಿಜಭಕ್ತಿಯು ಒಳಗಿನಿಂದ ಉಲ್ಹಾಸಗೊಳ್ಳುವುದು. ಈ ವಿಷಯವನ್ನು ನಾನು ಈ ಪೂರ್ವದಲ್ಲಿ ಪ್ರತಿಪಾದನೆಯನ್ನು ಮಾಡಿರುವೆನು ।೩೨೫॥ ಈಗ ಮನಸ್ಸನ್ನು ನನ್ನ ಸ್ವರೂಪದಲ್ಲಿ ವಿಲಿನಗೊಳಿಸುವ ಸುಲಭವಾದ ಮರ್ಮವನ್ನು ನಾನು ನಿನಗೆ ಹೇಳುವೆನು. ಅದನ್ನು ಲಕ್ಷದಲ್ಲಿಡು. ನನ್ನ ನಾಮಸ್ಮರಣೆಯನ್ನು ಮಾಡುವುದರಿಂದ ಸರ್ವ ಪಾಪಗಳ ನಾಶವಾಗುವುದು ।೩೨೬॥ ಮನದಲ್ಲಿ ಯಾವುದಾದರೂ ಕಾಮನೆಯನ್ನಿಟ್ಟು ನಾಮಸ್ಮರಣೆಯನ್ನು ಮಾಡಿದರೆ, ಆ ನಾಮವು ಅವರ ಸರ್ವ ಅಪೇಕ್ಷೆಗಳನ್ನು ಪೂರ್ಣಗೊಳಿಸುವುದು ಮತ್ತು ಮನದಲ್ಲಿ ಯಾವ ಅಪೇಕ್ಷೆಯನ್ನು ಮಾಡದೇ ಅದೇ ನಾಮಸ್ಮರಣೆಯನ್ನು ಮಾಡುವುದರಿಂದ ಸರ್ವ ಪಾಪಗಳು ಭಸ್ಮವಾಗುವುವು ।೩೨೭॥ ಪಾಪಗಳ ನಾಶವಾಗಲು ಆಗ ರಜ ಮತ್ತು ತಮ ಈ ಗುಣಗಳನ್ನು ಜಯಿಸಲ್ಪಟ್ಟು ಸಹಜವಾಗಿಯೇ ಧರ್ಮಪರಾಯಣ ಮತ್ತು ಧಾರ್ಮಿಕ ಸತ್ವಗುಣವು ಬೆಳೆಯ ಹತ್ತುವುದು ।೩೨೮॥ ಸತ್ವಗುಣದಿಂದ ಧರ್ಮನಿಷ್ಠನಾಗುವನು ಮತ್ತು ವೈರಾಗ್ಯದ ನಿಶ್ಚಿತ ಸ್ಥಳವಾಗಿ ಕುಳಿತುಕೊಳ್ಳುವನು. ಇದರಿಂದ ದಿವ್ಯವಾದ ಬ್ರಹ್ಮಜ್ಞಾನದ ಉದಯವಾಗುವುದು ।೩೨೯॥ ವಿವೇಕ ಸಮೇತವಾಗಿ ಜ್ಞಾನವು ವೃದ್ಧಿಯಾಯಿತೆಂದರೆ ಆಗ ತನ್ನಷ್ಟಕ್ಕೆ ತಾನೇ ಸ್ವರೂಪದ ಚಿಂತನೆಯು ನಿರ್ಮಾಣವಾಗುವುದು. ಶಾಂತಿಯ ಸಮಾಧಾನವು ವೃದ್ಧಿಯಾಗುತ್ತ ಸಾಗುವುದು. ತದನಂತರ ಮನವು ಮದರ್ಪಣವಾಗುವುದು ।೩೩೦॥ ಮನಸ್ಸು ಮದರ್ಪಣವಾಗುತ್ತಲೇ ಆಗ ನನ್ನ ಭಕ್ತಿಯು ವಿಕಾಸವಾಗುತ್ತ ಸಾಗುವುದು. ಇದರ ಸರ್ವ ನಿರೂಪಣೆಯನ್ನು ನಾನು ಈ ಹಿಂದಿನ ಶ್ಲೋಕದಲ್ಲಿ ವಿವರಿಸಿ ಹೇಳಿರುವೆನು ।೩೩೧॥ ಹೀಗೆ ನನ್ನ ಪೂರ್ಣವಾದ ಭಕ್ತಿಯು ಪ್ರಾಪ್ತವಾಗುತ್ತಲೇ ಆಗ ಅಷ್ಟಮಹಾಸಿದ್ಧಿಗಳು ಭಕ್ತರು ಬಯಸದಿದ್ದರೂ ತಾವಾಗಿಯೇ ಅವರ ಬಾಗಿಲಲ್ಲಿ ಬಂದು ನಿಂತುಕೊಳ್ಳುವುವು ।೩೩೨॥ ಆದರೆ ಆ ಭಕ್ತನು ಯಾವ ಈ ಸಿದ್ಧಿಗಳತ್ತ ಹೊರಳಿಯೂ ನೋಡುವುದಿಲ್ಲ. ಏಕೆಂದರೆ ನನ್ನ ಭಕ್ತನು ನನ್ನಲ್ಲಿ ತಾದಾತ್ಮ್ಯನಾಗಿರುವನು. ಆದ್ದರಿಂದ ನನ್ನ ಸರ್ವ ಸತ್ತೆಯು ಆತನಿಗೆ ಪ್ರಾಪ್ತವಾಗಿರುವುದು. ಅಂದ ಮೇಲೆ ಪಡೆಯಬೇಕಾದ ಅನ್ಯ ಯಾವುದೂ ವಸ್ತು ಉಳಿದಿರುವುದಿಲ್ಲ ।೩೩೩॥ ಇಂತಹ ನನ್ನ ಭಕ್ತಿಯು ಪ್ರಾಪ್ತವಾಗದೇ ಮತ್ತು ಆತ್ಮಸ್ಥಿತಿಯಲ್ಲಿ ಐಕ್ಯನಾಗದೇ ಸಾಧಕನು ವಿಷಯಗಳ ಆಸಕ್ತಿಯಿಂದ ವರ್ತಿಸಲು ಆಗ ಅನಿವಾರ್ಯವಾಗಿ ಅನರ್ಥವು ಬಂದು ಒದಗುವುದು ।೩೩೪॥

ಜೋ ಸತ್ಯ ನ ಮಾನೀ ವೇದಶಾಸ್ತ್ರಾರ್ಥ । ಸಾಚ ನ ಮ್ಹಣೇ ತೋ ಪರಮಾರ್ಥ । ಜೋ ಗೃಹದಾರಾದ್ರ ವ್ಯಾಸಕ್ತ । ಲೋಲಂಗತ ವಿಷಯಾಂಸೀ ।೩೩೫॥ ತೇಣೇ ಅತ್ಯಂತ ಸಮಳಮೇಳೇ । ದಾರುಣ ರಜೋಗುಣ ಖವಳೇ । ತೇಣೇ ಚಿತ್ತ ಹೋಯ ಜ್ಞಾನಾಂಧಳೇ । ವಿಪರೀತ ಕಳೇ ಜ್ಞಾನಾರ್ಥ ।೩೩೬॥ ಜ್ಯಾಸೀ ವಿಷಯಾಂಚ್ಯಾ ಯುಕ್ತೀ ಗಹನ । ತ್ಯಾಸೀ ಮ್ಹಣತೀ ಅತಿಸಜ್ಞಾನ । ಜೋ ಕರೀ ಯುಕ್ತೀಚೇ ಛಳನ । ಹೋಯ ಮಾನ್ಯ ಪಂಡಿತ ಪಣೇ ।೩೩೭॥ ಜ್ಯಾಸೀ ಪ್ರಪಂಚಾಚಾ ಅತಿವಿಸ್ತಾರ । ತ್ಯಾಸ ಮ್ಹಣತೀ ಭಾಗ್ಯ ಥೋರ । ಜೋ ನಾನಾ ಭೋಗೀ ಪಾಳೀ ಶರೀರ । ಸುಕೃತೀ ನರ ತ್ಯಾ ಮ್ಹಣತೀ ।೩೩೮॥ ಜೋ ಅನುತಾಪೀ ಪರಮಾರ್ಥವಿಖೀ । ತ್ಯಾಸೀ ಮ್ಹಣತೀ ಪರಮ ದುಃಖೀ । ಜೋ ನಾನಾ ವಿಷಯಾಂತೇ ಪೋಖೀ । ತ್ಯಾತೇ ಮಹಾಸುಖೀ ಮಾನಿತೀ ।೩೩೯॥ ಜ್ಯಾಚೇನಿ ಬೋಲೇ ಮನುಷ್ಯ ಮರೇ । ತ್ಯಾಚೇ ಸಿದ್ಧತ್ವ ಮಾನಿತೀ ಖರೇ । ಜೋ ಉದಾಸ ರಾಹಟೇ ಅನಾಚಾರೇ । ಮುಕ್ತ ನಿರ್ಧಾರೇ ತೋ ಮ್ಹಣತೀ ।೩೪೦॥ ಜ್ಯಾಚಾ ದಾಂಭಿಕ ಆಚಾರ । ತ್ಯಾತೇ ಮ್ಹಣತೀ ಪವಿತ್ರ ನರ । ಜೇ ಸ್ತ್ರೀಯಾದಿ ಶೂದ್ರಾ ದೇತೀ ಮಂತ್ರ । ತೇ ಜ್ಞಾತೇ ಥೋರ ಮಾನಿತೀ ।೩೪೧॥ ಜೋ ಕಾ ಅನುತಾಪೀ ವೈರಾಗೀ । ತ್ಯಾತೇ ಮ್ಹಣತೀ ಅತಿಅಭಾಗೀ । ಜೋ ಉಘಡ ವಿಷಯಾಂತೇ ಭೋಗೀ । ತೋ ರಾಜಯೋಗೀ ಮಾನಿತೀ ।೩೪೨॥ ಸ್ವಯೇ ದ್ರವ್ಯಾಚಾ ಅಭಿಲಾಖೀ । ದ್ರವ್ಯ ವೇಂಚಿ ತ್ಯಾತೇ ಮೂರ್ಖ ಲೇಖೀ । ನ ವೇಂಚೀ ತ್ಯಾತೇ ಮ್ಹಣತೀ ವಿವೇಕೀ । ಧರ್ಮಜ್ಞ ಲೋಕೀ ಹಾ ಏಕ ।೩೪೩॥ ಜ್ಯಾಚೇ ಗಾಂಠಿ ಬಹುಸಾಲ ಧನ । ತೋ ಸರ್ವಾಸೀ ಅವಶ್ಯ ಮಾನ್ಯ । ತೋಚಿ ಪವಿತ್ರ ತೋಚಿ ಸಜ್ಞಾನ । ಐಸೇ ವಿಪರೀತ ಜ್ಞಾನ ಹೋ ಲಾಗೇ ।೩೪೪॥ ಆಪಣ ಸರ್ವಾತ್ಮಾ ಸರ್ವೇಶ । ಹೇ ವಿಸರೋನಿಯಾ ನಿಃಶೇಷ । ಅಧರ್ಮೀ ಅಕರ್ಮೀ ಅನೀಶ । ಮೀ ಅಜ್ಞಾನ ಪುರುಷ ಹೇ ಮಾನೀ ।೩೪೫॥ ತೇಥ ಕೈ ಉಪಜೇ ಮಾಝೀ ಭಕ್ತೀ । ಕೈಸೇನಿ ಹೋಈಲ ಮಾಝೀ ಪ್ರಾಪ್ತೀ । ಐಸೇ ಭ್ರಮಲೇ ನೇಣೋ ಕಿತೀ । ಸಂಸಾರ ಆವರ್ತೀ ವರ್ತತಾ ।೩೪೬॥ ರಮಾತ್ಮಪ್ರಾಪ್ತೀಚೇ ಕಾರಣೇ । ಅತಿಗುಹ್ಯ ಚಾರೀ ಲಕ್ಷಣೇ । ಪೋಟಾಂತಲ್ಯಾ ಕೃಪಾಗುಣೇ । ಉದ್ಧವಾಕಾರಣೇ ಹರಿ ಸಾಂಗೇ ।೩೪೭॥

ಯಾವನು ವೇದಶಾಸ್ತ್ರಗಳಿಗೆ ಸತ್ಯವೆನ್ನುವುದಿಲ್ಲವೋ, ಪರಮಾತ್ಮನ ಸತ್ಯಸ್ವರೂಪವನ್ನು ತಿಳಿದುಕೊಳ್ಳಲಾರನೋ, ಆತನು ಮನೆಮಾರು ಸ್ತ್ರೀಪುತ್ರ ಮತ್ತು ಧನಸಂಪತ್ತುಗಳಲ್ಲಿ ಆಸಕ್ತನಾಗಿ ವಿಷಯಗಳಲ್ಲಿ ಲುಬ್ಧನಾಗಿ ಬಿಡುವನು ।೩೩೫॥ ಆದ್ದರಿಂದ ಅದರ ದೃಢ ಸಹವಾಸದಿಂದ ಅವರ ರಜೋಗುಣವು ಅತಿಶಯವಾಗಿ ಉದ್ರೇಕವಾಗುವುದು. ಅವರ ಚಿತ್ತವು ಜ್ಞಾನದ ವಿಷಯಕ್ಕೆ ಕುರುಡಾಗುವುದು. ಅವರಿಗೆ ಜ್ಞಾನದ ಅರ್ಥವು ಸರ್ವವೂ ವಿರುದ್ಧವಾಗಿಯೇ ತೋರುವುದು ।೩೩೬॥ ಯಾರಿಗೆ ವಿಷಯಗಳ ಉಪಭೋಗದ ನಾನಾ ಪ್ರಕಾರದ ಉಪಾಯಗಳು ಹೊಳೆಯುತ್ತವೆಯೋ, ಆತನಿಗೆ ದೊಡ್ಡ ಜ್ಞಾನೀ ಎಂದು ತಿಳಿಯುವರು ಮತ್ತು ಛಲಯುಕ್ತ ವಾದಗಳ ಯುಕ್ತಿಗಳನ್ನು ಪ್ರಯೋಗಿಸುವವನಿಗೆ ಇವನು ಪಂಡಿತನು ಎಂದು ಹೇಳುವರು ।೩೩೭॥ ಯಾರ ಪ್ರಪಂಚವು ಅತಿವಿಸ್ತಾರವಾಗಿರುವುದೋ, ಆತನಿಗೆ ಇವರು ಮಹಾಭಾಗ್ಯವಂತನೆಂದು ತಿಳಿಯುವರು ಮತ್ತು ಯಾವನು ನಾನಾ ಪ್ರಕಾರದ ಉಪಭೋಗಗಳಿಂದ ಯಾವ ಶರೀರದ ಪೋಷಣೆಯನ್ನು ಮಾಡುತ್ತಿರುವನೋ, ಆತನಿಗೆ ಇವರು ಮಹಾಪುಣ್ಯವಂತನು ಎಂದು ತಿಳಿಯುವರು ।೩೩೮॥ ಯಾರ ಹೃದಯದಲ್ಲಿ ಪರಮಾರ್ಥ ವಿಷಯಕ್ಕಾಗಿ ತಳಮಳವಿರುವುದೋ, ಆತನಿಗೆ ಇವರು ದುಃಖೀ ಎಂದು ತಿಳಿಯುವರು ಮತ್ತು ಯಾವನು ಅನೇಕ ವಿಷಯಗಳ ಉಪಭೋಗ ಪಡೆಯುತ್ತಿರುವನೋ, ಆತನಿಗೆ ಇವರು ಮಹಾಸುಖೀ ಎಂದು ತಿಳಿಯುವರು ।೩೩೯॥ ಯಾವನ ಹೇಳಿಕೆಯಿಂದ ಯಾರಾದರೊಬ್ಬ ಮನುಷ್ಯನು ಸತ್ತನೆಂದರೆ ಆತನಿಗೆ ಇವರು ನಿಜವಾದ ಸಿದ್ಧಪುರುಷನು ಎಂದು ತಿಳಿಯುವರು. ಯಾವ ದುರಾಚರಿಯು ಮನಬಂದಂತೆ ಹೇಗೋ ವರ್ತಿಸುತ್ತಿರುವವನಿಗೆ ಇವರು ಈತನು ಮುಕ್ತಪುರುಷ ಎಂದು ಹೇಳುವರು ।೩೪೦॥ ಯಾರ ಆಚರಣೆಯು ಡಾಂಭಿಕತನದಿಂದ ಕೂಡಿರುತ್ತದೆಯೋ, ಆತನಿಗೆ ಇವರು ಪವಿತ್ರ ಮನುಷ್ಯನು ಎಂದು ಹೇಳುವರು. ಯಾವ ಢೋಂಗೀ ಜನರು ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಗುರುಮಂತ್ರವನ್ನು ಕೊಡುವರೋ, ಅವರಿಗೆ ಇವರು ಜ್ಞಾನಿಗಳು ಎಂದು ತಿಳಿಯುವರು ।೩೪೧॥ ಯಾವ ಜನರು ಅನುತಾಪದಿಂದ ವಿರಕ್ತರಾಗಿರುವರೋ, ಅವರಿಗೆ ಇವರು ದುರ್ಭಾಗಿಗಳು ಎಂದು ತಿಳಿಯುವರು. ಯಾರು ಮುಚ್ಚು ಮರೆ ಇಲ್ಲದೇ ಎಲ್ಲರೆದುರಿನಲ್ಲಿ ವಿಷಯಗಳ ಉಪಭೋಗ ಪಡೆಯುವವರಿಗೆ ಇವರು ರಾಜಯೋಗಿಗಳು ಎಂದು ತಿಳಿಯುವರು ।೩೪೨॥ ಯಾರು ಸ್ವತಃ ದ್ರವ್ಯದ ಅಭಿಲಾಷೆಯನ್ನು ಮಾಡುವರೋ, ಮೂರ್ಖ ಜನರಲ್ಲಿ ದ್ರವ್ಯದ ಅಪವ್ಯಯ ಮಾಡುವರೋ, ಅವರಿಗೆ ಇವರು ವಿವೇಕಿಗಳು ಎಂದು ತಿಳಿಯುವರು. ಸರ್ವ ಜಗತ್ತಿನಲ್ಲಿ ಇವರೇ ಮಹಾ ಧರ್ಮಜ್ಞರು ಎಂದು ತಿಳಿಯುವರು ।೩೪೩॥ ಯಾರಲ್ಲಿ ಹೇರಳವಾಗಿ ದ್ರವ್ಯವಿರುವುದೋ, ಆತನಿಗೆ ಜನರು ಮಾನಸವ್ಮಾನಗಳನ್ನು ಮಾಡುವರು. ಅವನು ಮಹಾಜ್ಞಾನೀ ಮತ್ತು ಪವಿತ್ರ ಪುರುಷನು ಎಂದು ತಿಳಿಯಲ್ಪಡುವನು. ಹೀಗೆ ವಿಪರೀತ ಜ್ಞಾನವು ಅವರಿಗೆ ಆಗ ಹತ್ತುವುದು ।೩೪೪॥ ತಾನು ಸರ್ವಾತ್ಮನು ಮತ್ತು ಸರ್ವೇಶನು ಎಂಬುದನ್ನು ಪರಿಪೂರ್ಣವಾಗಿ ಮರೆತು ತಾನು ಅಧರ್ಮೀ, ಅಕರ್ಮೀ, ದೀನದುರ್ಬಲನು ಮತ್ತು ಅಜ್ಞಾನಿಯು ಎಂದು ಹೀಗೆ ತಿಳಿಯುತ್ತಿರುವನು ।೩೪೫॥ ಇಂತಹ ವಿಚಾರಸರಣಿಯಲ್ಲಿ ನನ್ನ ಭಕ್ತಿಯು ಹೇಗೆ ನಿರ್ಮಾಣವಾಗಬೇಕು? ನನ್ನ ಪ್ರಾಪ್ತಿಯಾದರೂ ಹೇಗಾಗಬೇಕು? ಈ ಪ್ರಕಾರವಾಗಿ ಸಂಸಾರದ ಚಕ್ರದಲ್ಲಿ ಸಿಲುಕಿ ಅದೆಷ್ಟೋ ಜನರು ಭ್ರಮಿಷ್ಠರಾಗಿರುವರೋ, ಅದರ ಗಣಿತವನ್ನು ಮಾಡಲಿಕ್ಕಾಗದು ।೩೪೬॥ ಪರಮಾತ್ಮನ ಪ್ರಾಪ್ತಿಗೆ ಕಾರಣವಾದ ನಾಲ್ಕು ಅತಿಗುಹ್ಯ ಲಕ್ಷಣಗಳಿರುವುವು. ತನ್ನ ಹೃದಯದ ಪ್ರೇಮ ವಾತ್ಸಲ್ಯಕಾರಣಕ್ಕಾಗಿ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ।೩೪೭॥

ಧರ್ಮಾಚೀ ಭಜನ ಭೋಯ । ಜ್ಞಾನ ವೈರಾಗ್ಯ ಐಶ್ವರ್ಯ । ಮಾಝೀ ಪ್ರಾಪ್ತಿ ಅವಶ್ಯ ಹೋಯ । ತೇ ಚಾರೀ ಉಪಾಯ ಅವಧಾರೀ ।೩೪೮॥

ಧರ್ಮೋ ಮದ್‌ಭಕ್ತಿಕೃತ್ಪ್ರೋಕ್ತೋ ಜ್ಞಾನಂ ಚೈಕಾತ್ಮ್ಯದರ್ಶನಮ್ ।
ಗುಣೇಷ್ವಸಂಗೋ ವೈರಾಗ್ಯಮೈಶ್ವರ್ಯ ಚಾಣಿಮಾದಯಃ ।೨೮॥

ಅರ್ಥ:- ಹೇ ಉದ್ಧವಾ, ಯಾವುದರಿಂದ ನನ್ನ ಭಕ್ತಿಯು ಪ್ರಾಪ್ತವಾಗುವುದೋ, ಅದೇ ನನ್ನ ಧರ್ಮವಾಗಿದೆ. ಯಾವುದರಿಂದ ಬ್ರಹ್ಮ ಮತ್ತು ಆತ್ಮದ ಏಕತೆಯ ಸಾಕ್ಷಾತ್ಕಾರವಾಗುವುದೋ, ಅದು ಜ್ಞಾನವಾಗಿದೆ. ವಿಷಯಗಳಿಂದ ಅಸಂಗ ನಿರ್ಲೇಪವಾಗಿರುವುದೇ ವೈರಾಗ್ಯವಾಗಿದೆ ಮತ್ತು ಅಣಿಮಾದಿ ಸಿದ್ಧಿಗಳು ಇವು ಐಶ್ವರ್ಯವಾಗಿವೆ.

ಐಕ ಉದ್ಧವಾ ನಿಜವರ್ಮ । ಗುಹ್ಯ ಸಾಂಗೇನ ಮೀ ಪರಮ । ಮಾಝೀ ಭಕ್ತೀ ಜೇ ಸಪ್ರೇಮ । ಉತ್ತಮ "ಧರ್ಮ" ಜೋ ಜಾಣ ।೩೪೯॥ ಐಕ್ಯೇ ಏಕಾತ್ಮತಾ ನಿಜಬೋಧ । ಪರತೋನಿ ಕದಾ ನುಪಜೇ ಭೇದ । ಯಾ ನಾಂವ ಗಾ "ಜ್ಞಾನ" ಶುದ್ಧ । ಕೃಷ್ಣ ಪರಮಾನಂದ ಸಾಂಗತ ।೩೫೦॥ ಧನಧಾನ್ಯ ರತ್ನಾಂಚ್ಯಾ ರಾಶೀ । ಉರ್ವಶೀ ಆಲ್ಯಾ ಶೇಜಾರಾಸೀ । ತೇ ಅವಘೇ ತೃಣಪ್ರಾಯ ಜ್ಯಾಸೀ । "ವೈರಾಗ್ಯ" ತ್ಯಾಸೀ ಆಮ್ಹೀ ಮ್ಹಣೋ ।೩೫೧॥ ಐಕ ಉದ್ಧವಾ ಸುಬುದ್ಧೀ । ಮಾಝ್ಯಾ ಜ್ಯಾ ಅಷ್ಟ ಮಹಾಸಿದ್ಧೀ । ತ್ಯಾ ಮಜವೇಗಳ್ಯಾ ದೂರೀ ಕಧೀ । ಜಾಣ ತ್ರಿಶುದ್ಧೀ ನ ಢಳತೀ ಕದಾ ।೩೫೨॥ ಮಾಝೀ ನಿಜಭಕ್ತೀಚ್ಯಾ ನಿರ್ಧಾರೀ । ತೋ ಮಾಝೀ ಪದವೀ ಘೇ ಐಕ್ಯೇಕರೀ । ಮಾಝ್ಯಾ ಸಿದ್ಧೀ ತ್ಯಾಚ್ಯಾ ಘರೀ । ಹೋತೀ ಕಿಂಕರೀ ನಿಜದಾಸೀ ।೩೫೩॥ ಸಿದ್ಧೀ ಸೇವಾ ಕರಿತೀ । ಹೇಚಿ ನವಲ ಸಾಂಗೋ ಕಿತೀ । ಶ್ರೀಯೇಸಹಿತ ಮೀ ಶ್ರೀಪತೀ । ಭಕ್ತಾಂಚೀ ಭಕ್ತೀ ಸರ್ವಸ್ವೇ ಕರೀ ।೩೫೪॥ "ಐಶ್ವರ್ಯಾಚೇ ಮುಖ್ಯ ಲಕ್ಷಣ" । ಅತಿಶಯೇಸೀ ಸಂಪೂರ್ಣ । ಭಗವತ್ಪದವೀ ಘೇಣೇ ಆಪಣ । ಅತಿಸಂಪನ್ನ ಐಶ್ವರ್ಯೇ ।೩೫೫॥ ಮ್ಯಾ ಹೇ ಸಾಂಗಿತಲೀ ಜೇ ಬೋಲೀ । ತೇ ನಿಜಗುಹ್ಯ ಭಾಂಡಾರಾಚೀ ಕಿಲ್ಲೀ । ಯೇಣೇ ಉಘಡೂನಿ ಸ್ವಾನಂದಖೋಲೀ । ಭೋಗೀ ಆಪುಲೀ ಸುಖಸಿದ್ಧೀ ।೩೫೬॥ ಚಹೂ ಪದಾಂಚೀ ಉತ್ತರೇ । ವಾಖಾಣಿಲೀ ಅತಿಗಂಭೀರೇ । ಐಕೋನಿ ಉದ್ಧವ ಚಮತ್ಕಾರೇ । ಅತ್ಯಾದರೇ ವಿಸ್ಮಿತ ।೩೫೭॥ ಧರ್ಮಾದಿ ಚಹೂ ಪದಾಂಚಾ ಅರ್ಥ । ಅಲೋಲಿಕ ಸಾಂಗೇ ಶ್ರೀಕೃಷ್ಣನಾಥ । ತರೀ ಯಮಾದಿಕಾಂಚಾ ಉತ್ತಮಾರ್ಥ । ದೇವಾಸೀ ಪ್ರತ್ಯಕ್ಷ ಪುಸೋ ಪಾ ।೩೫೮॥

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ಈ ನಾಲ್ಕು ಉಪಾಯಗಳಿಂದ ಅವಶ್ಯಕವಾಗಿ ನನ್ನ ಪ್ರಾಪ್ತಿಯಾಗುವುದು. ಆದ್ದರಿಂದ ಈಗ ಆ ಸಾಧನೆಗಳನ್ನು ಕೇಳು ।೩೪೮॥

ಹೇ ಉದ್ಧವಾ, ಈಗ ನನ್ನ ಪರಮ ಗುಟ್ಟಾದ ರಹಸ್ಯವನ್ನು ನಿನಗೆ ಹೇಳುವೆನು. ಅದನ್ನು ಲಕ್ಷಪೂರ್ವಕವಾಗಿ ಕೇಳು. ನನ್ನ ಸಪ್ರೇಮ ಭಕ್ತಿಯು ಮಾತ್ರ ಇದು ಸರ್ವರಲ್ಲಿ ಶ್ರೇಷ್ಠವಾದ ಧರ್ಮವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೪೯॥ ಐಕ್ಯ ಭಾವದಿಂದ ಏಕಾತ್ಮತೆಯ ಯಾವ ಸಾಕ್ಷಾತ್ ಬೋಧವಾಗುತ್ತದೆಯೋ ಮತ್ತು ಪುನಃ ಎಂದಿಗೂ ಭೇದಭಾವವು ಉತ್ಪನ್ನವಾಗುವುದಿಲ್ಲವೋ, ಅದರ ನಾಮವೇ ಶುದ್ಧ ಜ್ಞಾನವಾಗಿರುವುದು. ಇದನ್ನು ಪರಮಾನಂದ ಸ್ವರೂಪನಾಗಿರುವ ಶ್ರೀಕೃಷ್ಣನು ಹೇಳಿದನು ।೩೫೦॥ ಧನಧಾನ್ಯದ ಅಥವಾ ರತ್ನಗಳ ರಾಶಿಯನ್ನೇ ಮುಂದಿದ್ದರೂ ಕೂಡ ಅಥವಾ ಊರ್ವಶಿಯು ತನ್ನ ಮಗ್ಗಲಲ್ಲಿ ಬಂದರೂ ಕೂಡ ಅದನ್ನು ತೃಣಸಮಾನವಾಗಿ ಕಾಣುವ ಈ ಸ್ಥಿತಿಗೆ ನಾವು ವೈರಾಗ್ಯ ಎಂದು ಹೇಳುತ್ತೇವೆ ।೩೫೧॥ ಹೇ ಬುದ್ಧಿವಂತನಾದ ಉದ್ಧವನೇ, ಕೇಳು. ನನ್ನ ಅಷ್ಟ ಮಹಾಸಿದ್ಧಿಗಳಿರುವುವು ಅವು ನನ್ನಿಂದ ಎಂದಿಗೂ ದೂರಾಗಲು ಸಾಧ್ಯವಿಲ್ಲ. ಅಥವಾ ನನ್ನಿಂದ ಕದಲುವುದೇ ಇಲ್ಲ. ಇದನ್ನು ನೀನು ಲಕ್ಷದಲ್ಲಿಡು ।೩೫೨॥ ನನ್ನ ಈ ಯಾವ ಶ್ರೇಷ್ಠ ಭಕ್ತಿಯ ನಿಶ್ಚಯದಿಂದ ಯಾವನು ಏಕಾತ್ಮತೆಯನ್ನು ಕರತಲಾಮಲಕವತ್ತಾಗಿ ಮಾಡಿ ನನ್ನ ಪದವಿಯನ್ನು ಪ್ರಾಪ್ತ ಮಾಡಿಕೊಳ್ಳುವನೋ, ಆತನ ಮನೆಯಲ್ಲಿ ನನ್ನ ಸಿದ್ಧಿಗಳು ದಾಸಿಯಾಗಿರುವುವು ।೩೫೩॥ ಸಿದ್ಧಿಗಳು ಇವರ ಸೇವೆಯನ್ನು ಮಾಡುತ್ತವೆ ಎನ್ನುವದರಲ್ಲಿ ಯಾವ ಆಶ್ಚರ್ಯವಿದೆ? ಪ್ರತ್ಯಕ್ಷವಾಗಿ ನಾನು ಶ್ರೀಪತಿಯು ಲಕ್ಷ್ಮೀ ಸಮೇತನಾಗಿ ಸರ್ವಭಾವದಿಂದ ಭಕ್ತನ ಸೇವೆಯನ್ನು ಮಾಡುತ್ತಿರುತ್ತೇನೆ ।೩೫೪॥ ಐಶ್ವರ್ಯದ ಮುಖ್ಯಲಕ್ಷಣವೇನೆಂದರೆ ತಾನು ಸ್ವತಃ ಭಗವಂತನ ಯೋಗ್ಯತೆಯನ್ನು ಪ್ರಾಪ್ತಮಾಡಿಕೊಂಡು ತದನಂತರ ಭಗವತ್ ಐಶ್ವರ್ಯ ಸಂಪನ್ನನಾಗಿರುವುದು ।೩೫೫॥ ಈ ಯಾವ ಮಾತನ್ನು ಹೇಳಿರುವ ನಿನಗೆ ಇದು ನನ್ನ ಗುಪ್ತ ಭಾಂಡಾರದ ಕೀಲಿಯಾಗಿರುವುದು. ಈ ಕೀಲಿಯನ್ನು ತೆಗೆದುಕೊಂಡು ಆತ್ಮಾನಂದದ ಕೋಣೆಯನ್ನು ತೆರೆದು ನಿನ್ನ ಆತ್ಮಸುಖದ ಅನುಭವವನ್ನು ಪಡೆದುಕೋ ।೩೫೬॥ ಶ್ಲೋಕದಲ್ಲಿನ ನಾಲ್ಕು ಶಬ್ದಗಳ ಅರ್ಥವನ್ನು ಈ ಪ್ರಕಾರವಾಗಿ ಸಖೋಲತೆಯಿಂದ ವರ್ಣಿಸಿದ್ದನ್ನು ಕೇಳಿ ಉದ್ಧವನಿಗೆ ಬಹಳ ಚಮತ್ಕಾರವೆನಿಸಿತು. ಇದರಿಂದ ಆತನು ಬಹಳವಾಗಿ ಆಶ್ಚರ್ಯಚಕಿತನಾದನು ।೩೫೭॥ ಧರ್ಮ ಆದಿಯಾಗಿ ನಾಲ್ಕು ಶಬ್ದಗಳ ಅರ್ಥವನ್ನು ಬಹಳ ಉತ್ತಮಪ್ರಕಾರವಾಗಿ ಹೇಳಿದನು. ಅದರಂತೆ ಈಗ ಯಮಾದಿಕಗಳ ಗೂಢವಾದ ಅರ್ಥವನ್ನು ಪ್ರತ್ಯಕ್ಷವಾಗಿ ದೇವರಿಗೇನೇ ಕೇಳೋಣ ।೩೫೮॥

ಗುಹ್ಯಾರ್ಥ ಸಾಂಗೇಲ ಶ್ರೀಕೃಷ್ಣ । ಯಾಲಾಗೀ ಯಮಾದಿಕಾಂಚೇ ಪ್ರಶ್ನ । ಉದ್ಧವ ಪುಸತಾಹೇ ಆಪಣ । ಪರಮಾರ್ಥ ಪೂರ್ಣ ಆಕಳಾವಯಾ ।।೫೯।। ಪಾಂಚ ಶ್ಲೋಕ ಪಂಚತೀಸ ಪ್ರಶ್ನ । ಉದ್ಧವೇ ಕೇಲೇ ಜ್ಞಾನಗಹನ । ಜ್ಯಾಂಚೇ ಐಕತಾ ಪ್ರತಿವಚನ । ಸಮಾಧಾನ ಜೀವಶಿವಾ ।।೬೦।। ಪಹಿಲ್ಯಾ ಶ್ಲೋಕೀಚೇ ಸಹಾ ಪ್ರಶ್ನ । ದುಸರ್ಯಾಮಾಜೀ ನವ ಜಾಣ । ತಿಸರಾ ಚೌಥಾ ಆಠ ಆಠ ಪೂರ್ಣ । ಚಾರೀ ಪ್ರಶ್ನ ಪಂಚಮೀ ।।೬೧।।

ಉದ್ಧವ ಉವಾಚ: ಯಮಃ ಕತಿವಿಧಃ ಪ್ರೋಕ್ತೋ ನಿಯಮೋ ವಾऽರಿಕರ್ಶನ ।
ಕಃ ಶಮಃ ಕೋ ದಮಃ ಕೃಷ್ಣಕಾ ತಿತೀಕ್ಷಾ ಧೃತಿಃ ಪ್ರಭೋ ।೨೮।।

ಅರ್ಥ:- ಉದ್ಧವನು ನುಡಿದನು:- ಯಮ ಮತ್ತು ನಿಯಮಗಳು ಎಷ್ಟು ಪ್ರಕಾರಗಳಾಗಿರುವುವು? ಶಮವೆಂದರೆ ಏನು? ಹೇ ಪ್ರಭಫ ತಿತೀಕ್ಷಾ ಮತ್ತು ಧ್ರಿ ಎಂದರೆ ಯಾವುವು?

ಅಹಂರಿಪುನಿರ್ದಾಳಣಾ ಶ್ರೀಪತೀ । ''ಯಮ'' ''ನಿಯಮ'' ಪ್ರಕಾರ ಕಿತೀ । ''ಶಮ'' ''ದಮ'' ಕೋಣ ಮ್ಹಣಿಜೇತೀ । ''ತಿತಿಕ್ಷಾ'' ''ಧೃತಿ'' ತೇ ಕೈಶೀ ।।೬೨।।

ಕಿಂ ದಾನಂ ಕಿಂ ತಪಃ ಶೌರ್ಯ ಕಿಂ ಸತ್ಯಮೃತಮುಚ್ಯತೇ । ಕಸ್ತ್ಯಾಗಃ ಕಿಂ ಧನಂ ಚೇಷ್ಟಂ ಕೋ ಯಜ್ಞಃ ಕಾ ಚ ದಕ್ಷಿಣಾ ।೨೯।।

ಅರ್ಥ:- ದಾನ, ತಪಸ್ಸು, ಶೌರ್ಯ, ಸತ್ಯ ಮತ್ತು ಋತ ಇವುಗಳ ಸ್ವರೂಪವನ್ನು ನೀವು ನನಗೆ ಹೇಳಿರಿ. ತ್ಯಾಗವೆಂದರೇನು? ಇಷ್ಟವಾದ ಧನಯಾವುದು? ಯಜ್ಞವೆಂದು ಯಾವುದಕ್ಕೆ ಹೇಳುವರು? ಮತ್ತು ದಕ್ಷಿಣೆ ಅಂದರೆ ಯಾವುದು?

ಕೋಣ ''ದಾನ'' ಕೋಣ ''ತಪ'' ಯೇಥ । ''ಶೌರ್ಯ'' ಕೋಣ ಕೈಸೇ ತೇ ''ಸತ್ಯ'' । ''ಋತ'' ಜೇ ಕಾ ಮ್ಹಣಿಜೇತ । ತೇಹೀ ನಿಶ್ಚಿತ ಸಾಂಗಾವೇ ।।೬೩।। ಕೋಣತಾ ಜೇ ''ತ್ಯಾಗ'' ಯೇಥೇ । ಇಷ್ಟ ''ಧನ'' ಕೋಣ ಪುರುಷಾತೇ । ''ಯಜ್ಞ'' ಕಶಾತೇ ಮ್ಹಣಿಜೇತೇ । ''ದಕ್ಷಿಣಾ'' ತೇಥೇ ತೇ ಕಾಯೀ ।।೬೪।।

ಪುಂಸಃ ಕಿಂಸ್ವಿದ್‌ಬಲಂ ಶ್ರೀಮನ್ ದಯಾ ಲಾಭಶ್ಚ ಕೇಶವ । ಕಾ ವಿದ್ಯಾ ಹ್ರೀಃ ಪರಾ ಕಾ ಶ್ರೀಃ ಕಿಂ ಸುಖಂ ದುಃಖಮೇವಚ ।೩೦।।

ಅರ್ಥ:- ಶ್ರೀಮಾನ್ ಕೇಶವನೇ, ಪುರುಷನ ನಿಜವಾದ ಬಲಯಾವುದು? ಐಶ್ವರ್ಯ ಮತ್ತು ಲಾಭ ಯಾವುದು? ಪರಾವಿದ್ಯಾ, ಲಜ್ಜೆ ಮತ್ತು ಮಂಡನ ಹಾಗೂ ಸುಖ, ದುಃಖ ಯಾವುವು?

ಪುರುಷಾಸೀ ''ಬಳಾಚೀ'' ಕೋಣ ಶಕ್ತೀ । ''ದಯಾ'' ಬೋಲಿಜೇ ಕೋಣೇ ಸ್ಥಿತೀ । ''ಲಾಭ'' ತೋ ಕೋಣ ಗಾ ಶ್ರೀಪತೀ । ಸಾಂಗ ಕೃಪಾಮೂರ್ತೀ ಕೇಶವಾ ।।೬೫।। ''ವಿದ್ಯಾ'' ಮ್ಹಣಾವೇ ಕಶಾತೇ । ''ಲಜ್ಜಾ'' ಕೋಣೇ ಠಾಯೀ ವರ್ತೇ । ಉತ್ಕೃಷ್ಟ ''ಲಕ್ಷ್ಮೀ'' ಕೋಣ ಯೇಥೇ । ತೇಹೀ ಅನಂತೇ ಸಾಂಗಾವೀ ।।೬೬।। ಯೇಥೀಲ ಕೋಣ ಪಾ ಕೈಸೇ ಸುಖ । ಮಜ ಸಾಂಗಾವೇ ಕೃಪಾಪೂರ್ವಕ । ಸುಖಾಚೇ ಸಾಂಗಾತೀ ಜೇ ''ದುಃಖ'' ತ್ಯಾಚೇಹೀ ರೂಪಕ ಸಾಂಗಾವೇ ।।೬೭।।

ಹೀಗೆ ಕೇಳಿದಾಗ ಶ್ರೀಕೃಷ್ಣನು ಅದರ ಗುಪ್ತವಾದ ಅರ್ಥವನ್ನು ಹೇಳುವನು. ಇದನ್ನು ಮನದಲ್ಲಿ ವಿಚಾರಿಸಿಕೊಂಡು ಪರಮಾರ್ಥವು ಪರಿಪೂರ್ಣವಾಗಿ ತಿಳಿಯುವುದಕ್ಕಾಗಿ ಉದ್ಧವನು ತಾನಾಗಿಯೇ ಮುಂದಾಗಿ ಈ ಯಾವ ಯಮಾದಿಕಗಳ ಪ್ರಶ್ನೆಯನ್ನು ಕೇಳುತ್ತಿರುವನು ।।೫೯।। ಕೇವಲ ಐದೇ ಶ್ಲೋಕಗಳಲ್ಲಿ ಉದ್ಧವನು ಗಹನವಾದ ಜ್ಞಾನದ ಮೂವತ್ತೈದು ಪ್ರಶ್ನೆಗಳನ್ನು ಕೇಳಿರುವನು. ಈ ಯಾವ ಪ್ರಶ್ನೆಗಳ ಉತ್ತರವನ್ನು ಕೇಳುವುದರಿಂದ ಜೀವಶಿವದ ಸಮಾಧಾನವು ನಿಶ್ಚಿತವಾಗಿ ಆಗುವುದು ।।೬೦।। ಮೊದಲನೆಯ ಶ್ಲೋಕದಲ್ಲಿ ಆರು ಪ್ರಶ್ನೆಗಳಿರುವುವು, ಎರಡನೆಯ ಶ್ಲೋಕದಲ್ಲಿ ಒಂಬತ್ತು ಪ್ರಶ್ನೆಗಳಿರುವುವು. ಮೂರನೆಯ ಶ್ಲೋಕದಲ್ಲಿ ಎಂಟು ಮತ್ತು ನಾಲ್ಕನೆಯ ಶ್ಲೋಕದಲ್ಲಿ ಎಂಟು ಹೀಗೆ ಹದಿನಾರು ಪ್ರಶ್ನೆಗಳಿರುವುವು. ಐದನೆಯ ಶ್ಲೋಕದಲ್ಲಿ ನಾಲ್ಕು ಪ್ರಶ್ನೆಗಳಿರುವುವು. (ಹೀಗೆ ಒಟ್ಟಿಗೆ ಮೂವತ್ತೈದು ಪ್ರಶ್ನೆಗಳಾಗುವವು) ।।೬೧।। ಅಹಂಕಾರರೂಪ ಶತ್ರುವಿನ ನಾಶ ಮಾಡುವವನಾದ ಹೇ ಶ್ರೀಕೃಷ್ಣನೇ, ಯಮನಿಯಮಗಳ ಪ್ರಕಾರಗಳು ಎಷ್ಟಿರುವುವು? ಶಮ ಮತ್ತು ದಮ ಎಂದು ಯಾವುದಕ್ಕೆ ಹೇಳುವರು? ಹಾಗೆಯೇ ತಿತಿಕ್ಷಾ ಮತ್ತು ಧೃತಿ ಇವು ಹೇಗೆ ಇರುವುವು ।।೬೨।।

ಇಲ್ಲಿ ದಾನ ಅಂದರೆ ಯಾವುದು? ಮತ್ತು ತಪಸ್ಸು ಅಂದರೆ ಏನು? ಶೌರ್ಯ ಎಂದು ಯಾವುದಕ್ಕೆ ಹೇಳುವರು? ಸತ್ಯವೆಂದರೆ ಅದು ಹೇಗಿರುವುದು? ಋತ ಎಂದು ಯಾವುದಕ್ಕೆ ಅನ್ನುವರು? ಇವುಗಳನ್ನು ನನಗೆ ಯಥಾರ್ಥವಾಗಿ ಹೇಳಿರಿ ।।೬೩।। ಅದರಂತೆಯೇ ತ್ಯಾಗ ಅಂದರೆ ಯಾವುದು? ಪುರುಷನ ಇಷ್ಟ ಧನವು ಯಾವುದಿರುವುದು? ಯಜ್ಞ ಎಂದು ಯಾವುದಕ್ಕೆ ಹೇಳುವರು? ಅದರಲ್ಲಿ ದಕ್ಷಿಣೆ ಅಂದರೆ ಏನು? ।।೬೪।।

ಪುರುಷನಿಗೆ ಬಲದ ಶಕ್ತಿ ಯಾವುದು? ದಯಾ ಎಂದು ಯಾವುದಕ್ಕೆ ಹೇಳುವರು? ಹಾಗೆಯೇ ಹೇ ಕೃಪಾಮೂರ್ತಿಯಾದ ಶ್ರೀಕೃಷ್ಣನೇ ಲಾಭ ಯಾವುದು? ಇದನ್ನೂ ಕೂಡ ಹೇಳಿರಿ ।।೬೫।। ವಿದ್ಯಾ ಎಂದು ಯಾವುದಕ್ಕೆ ಹೇಳಬೇಕು? ಲಜ್ಜೆಯು ಎಲ್ಲಿರುವುದು? ಅದರಂತೆಯೇ ಇಲ್ಲಿ ಉತ್ಕೃಷ್ಟವಾದ ಲಕ್ಷ್ಮೀ ಯಾರು? ಇದನ್ನೂ ಕೂಡ ದೇವನು ಹೇಳಬೇಕು ।।೬೬।। ಇಲ್ಲಿಯ ಸುಖವು ಯಾವುದು? ಮತ್ತು ಅದು ಹೇಗೆ ಇರುವುದು? ಇದನ್ನು ನನಗೆ ಕೃಪೆ ಮಾಡಿ ಹೇಳಿರಿ. ಹಾಗೆಯೇ ಸುಖದ ಹೊರಗೆ ಇರುವ ಯಾವ ದುಃಖವು, ಅದರ ಸ್ವರೂಪದ ವರ್ಣನೆಯನ್ನು ಮಾಡಿರಿ ।।೬೭।।

ಕಃ ಪಂಡಿತಃ ಕಶ್ಚ ಮೂರ್ಖಃ ಕಃ ಪಂಥಾ ಉತ್ಪಥಶ್ಚ ಕಃ । ಕಃ ಸ್ವರ್ಗೋ ನರಕಃ ಕಃ ಸ್ವಿತ್ಕೋ ಬಂಧುರುತ ಕಿಂ ಗೃಹಮ್ ।೩.೧॥

ಅರ್ಥ:- ಪಂಡಿತ ಮತ್ತು ಮೂರ್ಖನ ಲಕ್ಷಣಗಳೆಷ್ಟು? ಸುಮಾರ್ಗ ಮತ್ತು ಕುಮಾರ್ಗ ಇವುಗಳ ಲಕ್ಷಣಗಳೇನು? ಸ್ವರ್ಗ ಮತ್ತು ನರಕ ಇವು ಏನಿರುವವು? ಬಂಧುಗಳೆಂದು ಯಾರಿಗೆ ತಿಳಿಯಬೇಕು? ಮನೆ ಯಾವುದು?

''ಪಂಡಿತಾಚೇ'' ಕಾಯ ಲಕ್ಷಣ । ''ಮೂರ್ಖ'' ಮ್ಹಣಾವಯಾ ಕೋಣ ಗುಣ । ''ಸುಮಾರ್ಗ'' ಮ್ಹಣಾವಯಾ ತೋ ಕೋಣ। ಸಾಂಗೇ ನಿರೂಪಣ ''ಉನ್ಮಾರ್ಗಾಚೇ'' ।೩.೧೮॥ ''ಸ್ವರ್ಗ'' ಕಶಾತೇ ಬೋಲಿಜೇ । ''ನರಕ'' ಕೈಸಾ ವೋಳಖಿಜೇ । ಸಖಾ ''ಬಂಧು'' ಕೋಣ ಮ್ಹಣಿಜೇ ''ಗೃಹ'' ಮಾಝೇ ತೇ ಕೋಣ ।೩.೧೯॥

ಕ ಆಢ್ಯಃ ಕೋ ದರಿದ್ರೋ ವಾ ಕೃಪಣಃ ಕಃ ಕ ಈಶ್ವರಃ । ಏತಾನ್ ಪ್ರಶ್ನಾನ್ಮಮ ಬ್ರೂಹಿ ವಿಪರೀತಾಂಶ್ಚ ಸತ್ಪತೇ ।೩.೨॥

ಅರ್ಥ:- ಧನವಂತ ಮತ್ತು ನಿರ್ಧನೀ ಎಂದು ಯಾರಿಗೆ ಹೇಳುವರು? ಕೃಪಣನು ಯಾರು? ಈಶ್ವರ ಎಂದು ಯಾರಿಗೆ ಹೇಳುವರು? ಹೇ ಭಕ್ತವತ್ಸಲ ಪ್ರಭುವೇ, ನೀನು ನನ್ನ ಈ ಪ್ರಶ್ನೆಗಳಿಗೆ ಉತ್ತರಿಸಿ ವಿರೋಧಿ ಭಾವಗಳ ವ್ಯಾಖ್ಯಾನವನ್ನು ಮಾಡಬೇಕು.

'' ಆಢ್ಯ''ಕೈಸೇನಿ ಮ್ಹಣಿಜೇ । ''ದರಿದ್ರೀ'' ಕೈಸೇನಿ ಜಾಣಿಜೇ । ''ಕೃಪಣ'' ಕೋಣಾತೇ ಬೋಲಿಜೇ । ''ಈಶ್ವರ'' ವೋಳಖಿಜೇ ತೋ ಕೈಸಾ ।೩.೨೦॥ ಹೇ ಮಾಝೇ ಪ್ರಶ್ನ ಜೇ ಸಮಸ್ತ । ಯಾಂಚಾ ಸಾಂಗಾವಾ ವಿಶದಾರ್ಥ । ಜೋ ಲೌಕಿಕಹೂನಿ ವಿಪರೀತ । ಉಪಯುಕ್ತ ಪರಮಾರ್ಥಾ ।೩.೨೧॥ ಲೌಕಿಕಾಹೂನಿ ವಿಪರೀತಾರ್ಥ । ತ್ಯಾತೇ ಬೋಲತೀ ಗಾ ''ವಿಪರೀತ'' । ಯಾ ಅವಘಿಯಾಂಚಾ ಮಥಿತಾರ್ಥ । ಪರಮಾರ್ಥಯುಕ್ತ ಪ್ರಶ್ನ ಸಾಂಗಾ ।೩.೨೨॥ ಜ್ಞಾನೇ ಸಜ್ಞಾನ ಸಂತಮೂರ್ತೀ । ತ್ಯಾಂಚಾ ಸ್ವಾಮೀ ತೂ ನಿಶ್ಚಿತೀ । ಯಾಲಾಗೀ ತೂತೇ ಗಾ ''ಸತ್ಪತ್ತೀ''। ಸಜ್ಞಾನ ಮ್ಹಣತೀ ಶಾಸ್ತ್ರಾರ್ಥೇ ।೩.೨೩॥ ಮಾಝ್ಯಾ ಪ್ರಶ್ನಾಂಚೀ ಪ್ರಶ್ನೋಕ್ತೀ । ಪರಮಾರ್ಥಪ್ರಾಪ್ತೀಲಾಗೀ ಶ್ರೀಪತೀ । ಮಜ ಸಾಂಗಾವೇ ಯಥಾರ್ಥಸ್ಥಿತೀ । ದೇವಾಸೀ ವಿನಂತೀ ಉದ್ಧವೇ ಕೇಲೀ ।೩.೨೪॥ ಐಕೋನಿ ಭಕ್ತಾಚೀ ವಿನವಣ । ಕೃಪಾ ದ್ರವಲಾ ನಾರಾಯಣ । ಪರಮಾರ್ಥರೂಪ ತ್ಯಾಚೇ ಪ್ರಶ್ನ । ಸ್ವಯೇ ಶ್ರೀಕೃಷ್ಣ ಸಾಂಗೇಲ ।೩.೨೫॥ ಪ್ರಥಮ ತೀ ಶ್ಲೋಕೀ ಯಮ ನಿಯಮ । ವಿಶದ ಸಾಂಗೇಲ ಪುರುಷೋತ್ತಮ । ಇತರ ಪ್ರಶ್ನ ಅತಿ ಉತ್ತಮ । ಸಾಂಗೇ ಮೇಘಶ್ಯಾಮ ಅಧ್ಯಾಯಾಂತೀ ।೩.೨೬॥

ಶ್ರೀಭಗವಾನುವಾಚ :-

ಅಹಿಂಸಾ ಸತ್ಯಮಸ್ತೇಯಮಸಂಗೋ ಹ್ರೀರಸಂಚಯಃ । ಆಸ್ತಿಕ್ಯಂ ಬ್ರಹ್ಮಚರ್ಯಂಚ ಮೌನಂ ಸ್ಥೈರ್ಯಂ ಕ್ಷಮಾಽಭಯಮ್ ।೩.೩॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು; ಯಾವುದೇ ಪ್ರಾಣಿಗೆ ಪೀಡೆಯನ್ನು ಕೊಡದಿರುವಿಕೆ, ತನಗೆ ತಿಳಿದಷ್ಟೇ ಮಾತನ್ನಾಡುವಿಕೆ, ಮನದಿಂದಲೂ ಕೂಡ ಪರಧನದ ಗ್ರಹಣೆ ಮಾಡದಿರುವಿಕೆ, ಯಾವುದೇ ಆಸಕ್ತಿಯನ್ನು ಇಡದಿರುವಿಕೆ, ಕೆಟ್ಟಕಾರ್ಯಗಳಿಗಾಗಿ ನಾಚಿಕೆಪಡೆಯುವಿಕೆ, ಯಾವುದೇ ಸಂಗ್ರಹವನ್ನು ಮಾಡದಿರುವಿಕೆ, ಧರ್ಮದಲ್ಲಿ ನಿತಾಂತವಾದ ನಂಬಿಕೆ ಇಡುವಿಕೆ, ಬ್ರಹ್ಮಚರ್ಯದ ವ್ರತದ ಪಾಲನೆ ಮಾಡುವಿಕೆ, ವಾಣಿಯ ನಿವೃತ್ತೀ, ಸ್ಥಿರತೆ ಕಾಪಾಡುವಿಕೆ, ಅಪಶಬ್ದ ನುಡಿದರೂ ಅಥವಾ ತಾಡನ ಮಾಡಿದರೂ ಮನವನ್ನು ನಿರ್ವಿಕಾರವಾಗಿಡುವಿಕೆ, ಸ್ವಧರ್ಮ ಆಚರಣೆಯಲ್ಲಿ ಯಾವ ಭಯವೂ ಇಲ್ಲದಿರುವಿಕೆ.

ಪಂಡಿತನ ಲಕ್ಷಣವೇನು? ಮೂರ್ಖನ ಲಕ್ಷಣವು ಯಾವುದು? ಸುಮಾರ್ಗವು ಯಾವುದು? ಮತ್ತು ಕುಮಾರ್ಗವು ಯಾವುದು? ಇವುಗಳ ನಿರೂಪಣೆಯನ್ನು ಮಾಡಿರಿ ।೩.೧೮॥ ಸ್ವರ್ಗವೆಂದು ಯಾವುದಕ್ಕೆ ಹೇಳುವರು? ನರಕವೆಂದು ಹೇಗೆ ತಿಳಿಯಬೇಕು? ಸಖಾಬಂಧು ಎಂದು ಯಾರಿಗೆ ಹೇಳಬೇಕು? ಮತ್ತು ನನ್ನ ಮನೆಯು ಯಾವುದು? ।೩.೧೯॥

ಆಢ್ಯ ಎಂದು ಯಾರಿಗೆ ಹೇಳಬೇಕು? ದರಿದ್ರ ಮನುಷ್ಯನನ್ನು ಹೇಗೆ ಕಂಡುಹಿಡಿಯಬೇಕು? ಕೃಪಣನು ಎಂದು ಯಾರಿಗೆ ಹೇಳಬೇಕು? ಈಶ್ವರನನ್ನು ಹೇಗೆ ತಿಳಿದುಕೊಳ್ಳಬೇಕು? ।೩.೨೦॥ ಹೀಗಿರುವ ನನ್ನ ಪ್ರಶ್ನೆಗಳಿಗೆ, ಅವುಗಳ ಉತ್ತರವನ್ನು ಹೇಳಿರಿ. ಇವುಗಳ ಲೌಕಿಕ ಅರ್ಥವನ್ನು ಹೇಳದೇ ಪಾರಮಾರ್ಥಿಕ ಅರ್ಥವನ್ನು ಹೇಳಿರಿ ।೩.೨೧॥ ಲೌಕಿಕದ ಯಾವ ವಿರುದ್ಧ ಅರ್ಥಕ್ಕೆ ವಿಪರೀತ ಎಂದು ಹೇಳುವರು. ಆದ್ದರಿಂದ ಈ ನನ್ನ ಎಲ್ಲ ಪ್ರಶ್ನೆಗಳ ಮತಿತಾರ್ಥವನ್ನು ಮತ್ತು ಪರಮಾರ್ಥಪರವಾದ ಅರ್ಥವನ್ನು ನನಗೆ ಹೇಳಿರಿ ।೩.೨೨॥ ಸಂತಮೂರ್ತಿಗಳು ಜ್ಞಾನದಿಂದ ಜ್ಞಾನಸಂಪನ್ನರಾಗಿರುವರು. ಅವರಿಗೂ ಕೂಡ ನಿಜವಾಗಿಯೂ ನೀನು ಸ್ವಾಮಿಯಾಗಿರುವೆ. ಆದ್ದರಿಂದ ನಿನಗೆ ಶಾಸ್ತ್ರಾರ್ಥದ ಜ್ಞಾನಸಂಪನ್ನ ಜನರು ಸತ್ಪತೀ ಎಂದು ಹೇಳುವರು ।೩.೨೩॥ ಹೇ ಶ್ರೀಕೃಷ್ಣನೇ, ಪರಮಾರ್ಥ ಪ್ರಾಪ್ತಿಗಾಗಿ ನನ್ನ ಈ ಪ್ರಶ್ನೆಗಳ ಯಥಾರ್ಥ ಉತ್ತರವನ್ನು ನೀವು ನನಗೆ ಹೇಳಿರಿ ಎಂದು ಉದ್ಧವನು ಶ್ರೀಕೃಷ್ಣನಿಗೆ ವಿನಂತಿಸಿಕೊಂಡನು ।೩.೨೪॥ ಆಗ ತನ್ನ ಭಕ್ತನ ಈ ವಿನಂತಿಯನ್ನು ಕೇಳಿ ನಾರಾಯಣನು ಕೃಪೆಯಿಂದ ದ್ರವಿಸಿದನು ಹಾಗೂ ಆತನ ಪರಮಾರ್ಥರೂಪ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾರಂಭಿಸಿದನು ।೩.೨೫॥ ಪ್ರಾರಂಭದಲ್ಲಿ ಮೂರು ಶ್ಲೋಕಗಳಲ್ಲಿ ಶ್ರೀಕೃಷ್ಣನು ಯಮ ಮತ್ತು ನಿಯಮ ಇವುಗಳ ವರ್ಣನೆಯನ್ನು ಮಾಡುವನು. ತದನಂತರ ಉಳಿದ ಅತಿ ಉತ್ತಮವಾದ ಪ್ರಶ್ನೆಗಳ ಉತ್ತರಗಳನ್ನು ಈ ಅಧ್ಯಾಯದ ಕೊನೆಯವರೆಗೆ ಹೇಳುವನು ।೩.೨೬॥

ಪ್ರಥಮ ಶ್ಲೋಕೀಚಾ ಉಭಾರಾ । ಯಮಾಚೀ ಲಕ್ಷಣೇ ಬಾರಾ । ಪುಶಿಲ್ಯಾ ಪ್ರಶ್ನಾನುಸಾರಾ । ಪ್ರತಿ ಉತ್ತರಾ ಹರಿ ಬೋಲೇ ।।೩೭೭।। ಪುಢಾ ಪ್ರಶ್ನ ಆಹೇತ ಫಾರ । ಯಾಲಾಗೀ ಯಮನಿಯಮಾಂಚೇ ಉತ್ತರ । ಆವರೂನಿ ಸಂಕ್ಷೇಪಾಕಾರ । ಸ್ವಯೇ ಶ್ರೀಧರ ಸಾಂಗತ ।।೩೭೮।। ''ಅಹಿಂಸಾ''ಕಾಯಾವಾಚಾ ಮನೇ । ಪರಪೀಡಾ ತ್ಯಾಗ ಕರಣೇ। ''ಸತ್ಯ'' ತೇ ಯಥಾರ್ಥ ಬೋಲಣೇ। ''ಅಚೌರ್ಯ'' ಲಕ್ಷಣೇ ತೀ ಐಕ।।೩೭೯।। ಹಾತೇ ಚೋರೀ ನಾಹೀ ಕರಣೇ । ಪರೀ ಪರದ್ರವ್ಯಾಕಾರಣೇ । ಮನೀ ಅಭಿಲಾಷ ನಾಹೀ ಧರಣೇ । ''ಅಸ್ತೇಯ'' ಲಕ್ಷಣ ತ್ಯಾ ನಾಂವ ।।೩೮೦।। ಅಸತಾ ದೇಹಗೇಹ ಸಂಗತೀ । ಜ್ಯಾಚೇ ಪೋಟೀ ನಾಹೀ ಆಸಕ್ತೀ । ಜೇವೀ ಯಾತ್ರೇಮಾಜೀ ಲೋಕ ಯೇತೀ । ಪರೀ ಸಂಗಾಸಕ್ತೀ ತ್ಯಾ ನಾಹೀ ।।೩೮೧।। ಸ್ಫಟಿಕ ಠೇವಿಲಾ ಜ್ಯಾ ರಂಗಾವರೀ । ತ್ಯಾಸಾರಿಖಾ ದಿಸೇ ಬಾಹೇರೀ । ಆಪಣ ನಿರ್ವಿಕಾರ ಅಂತರೀ । ತೇವೀ ಜೋ ಶರೀರೀ ''ಅಸಂಗತಾ'' ತೇ ।।೩೮೨।। ನಿಂದ್ಯ ಕರ್ಮಾಕಾರಣೇ । ಪೋಟಾಂತೂನಿ ಕಂಟಾಳಣೇ । ಲೌಕಿಕೀ ನಿಂದ್ಯ ಕರ್ಮಾ ಲಾಜಣೇ । ''ಹ್ರೀ'' ಮ್ಹಣಣೇ ಯಾ ನಾಂವ ।।೩೮೩।। ಇಹಲೋಕೀ ಸಂಗ್ರಹೋ ಕರೂ ನೇಣೇ । ಜಾಣೇ ದೈವಾಧೀನ ದೇಹಾಚೇ ಜಿಣೇ । ಸ್ವರ್ಗಸುಖ ಭೋಗಾಕಾರಣೇ । ನಾಹೀ ಸಂಗ್ರಹಣೇ ಪುಣ್ಯಾತೇ ।।೩೮೪।। ಪುಣ್ಯೇ ಸ್ವರ್ಗಭೋಗಪ್ರಾಪ್ತೀ। ಪುಣ್ಯಕ್ಷಯೇ ಹೋಯ ಪುನರಾವೃತ್ತೀ । ಜೇಣೇ ಕ್ಷಯೋ ಪಾವೇ ಪುಣ್ಯಸಂಪತ್ತೀ । ತೇ ನ ಸಂಚಿತೀ ನಿಜಭಕ್ತ ।।೩೮೫।। ಯಾ ನಾಂವ ಗಾ ''ಅಸಂಚಯೋ'' । ಐಕ ''ಆಸ್ತಿಕ್ಯಾಚಾ'' ನಿರ್ವಾಹೋ । ಸರ್ವತ್ರ ಮಾಝಾ ಬ್ರಹ್ಮಭಾವೋ । ಕೋಠೇಹೀ ಅಭಾವೋ ಘೇಊ ನೇಣೇ ।।೩೮೬।। ''ಬ್ರಹ್ಮಚರ್ಯ'' ಐಸೇ ಯೇಥ । ಜೈಸೇ ಆಶ್ರಮ ಪ್ರಯುಕ್ತ । ಬೋಲಿಲೇ ಶಾಸ್ತ್ರೀ ಯಥೋಚಿತ । ತೇಚಿ ನಿಶ್ಚಿತ ಕರಾವೇ ।।೩೮೭।। ''ಮೌನೀ'' ನ ಬೋಲಾವೇ ಇತುಕೇ ಜಾಣ। ಮಿಥ್ಯಾಲಾಪ ಅಸಂಭಾಷಣ । ನಿತ್ಯ ಕರಾವೇ ವೇದಪಠಣ। ಗಾಯತ್ರೀಸ್ಮರಣ ಕಾ ಹರಿನಾಮ ।।೩೮೮।। ಸ್ಥಿರವೃತ್ತಿ ಆತ್ಮಾರಾಮೀ । ಕಾ ಅಸಾವೀ ನಿಜಧರ್ಮೀ । ಭಾವಾರ್ಥೀ ಸಂತಸಮಾಗಮೀ । ''ಸ್ಥಿರತಾ'' ಉಪಕ್ರಮೀ ಯಾ ನಾಂವ।।೩೮೯।। ಸ್ವದೇಹ ದಂಡಿಲೇ ಕಾ ವಂದಿಲೇ । ಪರೀ ಕ್ಷಮಾ ಸಮ ದೋಹೀ ಕಾಳೀ । ದೇಹಾಚಾ ಭೋಗ ತೋ ದೈವಮೇಳೀ । ಯೇಣೇ ವಿವೇಕಮೇಳೀ ಕ್ಷಮಾವಂತ ।।೩೯೦।।

ಮೊದಲನೆಯ ಶ್ಲೋಕದಲ್ಲಿ ಯಮದ ಹನ್ನೆರಡು ಲಕ್ಷಣಗಳಿರುವುವು. ಉದ್ಧವನು ಕೇಳಿರುವ ಪ್ರಶ್ನೆಗೆ ಅನುಸಾರವಾಗಿ ಶ್ರೀಕೃಷ್ಣನು ಅದರ ಉತ್ತರವನ್ನು ಕೊಡುತ್ತಿರುವನು ।।೩೭೭।। ಮುಂದೆ ಇನ್ನು ಅನೇಕ ಪ್ರಶ್ನೆಗಳಿರುವುವು. ಇದನ್ನರಿತು ಶ್ರೀಕೃಷ್ಣನು ಯಮ, ನಿಯಮಗಳ ಉತ್ತರವನ್ನು ಸಂಕ್ಷಿಪ್ತವಾಗಿ ಹೇಳುತ್ತಿರುವನು ।।೩೭೮।। ಕಾಯಾ, ವಾಚಾ ಮತ್ತು ಮನ ಇವುಗಳಿಂದ ಇನ್ನೊಬ್ಬರಿಗೆ ಪೀಡೆಯನ್ನು ಕೊಡದಿರುವಿಕೆಗೆ ಅಹಿಂಸೆ ಎಂದು ಹೇಳುವರು. ನಿಜವಾದದ್ದನ್ನೇ ಹೇಳುವಿಕೆಗೆ ಇದರ ಹೆಸರು ಸತ್ಯ ಎಂದಾಗುವುದು. ಈಗ ಅಚೌರ್ಯದ ಲಕ್ಷಣವನ್ನು ಹೇಳುವೆನು, ಅದನ್ನು ಕೇಳು ।।೩೭೯।। ತಾನು ಸ್ವತಃ ತನ್ನ ಕೈಗಳಿಂದ ಕಳ್ಳತನವನ್ನು ಮಾಡುವುದಂತೂ ಇಲ್ಲವೇ ಇಲ್ಲ ಆದರೆ ಇತರರ ದ್ರವ್ಯದ ಅಭಿಲಾಷೆಯನ್ನು ಮನದಲ್ಲಿಯೂ ಕೂಡ ಇಡುವಂತೆ ಇಲ್ಲ. ಹೀಗಿರುವುದಕ್ಕೆ ಅಚೌರ್ಯ ಎಂದು ಹೇಳುವರು ।।೩೮೦।। ಯಾತ್ರಿಕರು ಯಾತ್ರೆಗಾಗಿ ಹೋಗಿರುವ ಸ್ಥಳದಮೇಲೆ ಯಾವ ಪ್ರಕಾರವಾಗಿ ಆಸಕ್ತಿಯನ್ನು ಇಡುವುದಿಲ್ಲವೋ, ಅದರಂತೆಯೇ ಮನೆಮಾರಿನ ಮೇಲೆ ಹಾಗೆಯೇ ತನ್ನ ಸ್ವತಃದ ದೇಹದಮೇಲೆ ಯಾರ ಆಸಕ್ತಿಯು ಇರುವುದಿಲ್ಲವೋ ।।೩೮೧।। ಅಥವಾ ಸ್ಫಟಿಕ ಮಣಿಯನ್ನು ಯಾವುದೇ ಬಣ್ಣದ ಮೇಲಿಡಲಿ ಅದು ಅದರಂತೆಯೇ ಹೊರಗಿನಿಂದ ತೋರುವುದು. ಆದರೆ ಅದು ಒಳಗಿನಿಂದ ನಿರ್ವಿಕಾರವಾಗಿಯೇ ಇರುವುದು. ಇದರಂತೆ ಯಾರು ಶರೀರದಲ್ಲಿರುವರೋ, ಅವರಿಗೆ ಅಸಂಗತಾ ಎಂದು ಹೇಳುವರು ।।೩೮೨।। ನಿಂದ್ಯ ಕರ್ಮಗಳಲ್ಲಿ ಯಾರಿಗೆ ಹೇಸಿಗೆಯಾಗುವುದೋ, ಲೌಕಿಕದಲ್ಲಿ ನಿಂದ್ಯ ಕರ್ಮ ಮಾಡಲು ನಾಚುವನೋ ಅದಕ್ಕೆ ಹ್ರೀ ಎಂದು ಹೇಳುವರು ।।೩೮೩।। ಈ ಲೋಕದಲ್ಲಿ ಯಾವನು ಸಂಗ್ರಹವನ್ನು ಮಾಡುವುದಿಲ್ಲ. ಅನ್ನ, ವಸ್ತ್ರಗಳು ಪ್ರಾಬ್ಧಾಧೀನ ಎಂದು ತಿಳಿಯುವವನು ಮತ್ತು ಸ್ವರ್ಗಸುಖಭೋಗಕ್ಕಾಗಿ ಪುಣ್ಯ ಸಂಚಯ ಮಾಡುವುದಿಲ್ಲ ।।೩೮೪।। ಕಾರಣ ಪುಣ್ಯದಿಂದ ಸ್ವರ್ಗಭೋಗಗಳು ಪ್ರಾಪ್ತವಾಗುವುವು. ಅದೇ ಪುಣ್ಯದ ಕ್ಷಯವಾಗಲು ಪುನಃ ಜನ್ಮ ಧರಿಸಬೇಕಾಗುವುದು. ಆದ್ದರಿಂದ ಪುಣ್ಯ ಸಂಪತ್ತು ಕ್ಷಯವಾಗುವಂತಹ ವಸ್ತುಗಳ ಸಂಗ್ರಹವನ್ನು ನನ್ನ ಭಕ್ತನು ಮಾಡಲಾರನು ।।೩೮೫।। ಇದರ ಹೆಸರೇ ಅಸಂಚಯವಾಗಿರುವುದು. ಅಂದರೆ ಸಂಗ್ರಹವನ್ನು ಮಾಡದೇ ಇರುವುದಾಗಿರುವುದು. ಈಗ ಆಸ್ತಿಕ್ಯದ ಲಕ್ಷಣವನ್ನು ಹೇಳುವೆನು. ಎಲ್ಲಸ್ಥಳಗಳಲ್ಲಿ ಸಮ ಪ್ರಮಾಣದಲ್ಲಿ ನನ್ನದೇ ಬ್ರಹ್ಮಸ್ವರೂಪವು ವ್ಯಾಪಿಸಿರುವುದನ್ನುಕಾಣುವವನಿಗೆ ನನ್ನ ಅಭಾವವು ಎಲ್ಲಿಯೂ ತೋರುವುದಿಲ್ಲ. ಇದಕ್ಕೆ ಆಸ್ತಿಕ್ಯ ಎಂದು ಹೇಳುವರು ।।೩೮೬।। ಬ್ರಹ್ಮಚರ್ಯವೆಂದರೆ ತಮ್ಮ ಆಶ್ರಮಕ್ಕೆ ವಿಹಿತವಾಗಿರುವ ಯಾವ ಶಾಸ್ತ್ರಸಿದ್ಧ ನಿಯಮಗಳಿರುವುವೋ, ಅದರಂತೆ ನಿಶ್ಚಯಪೂರ್ವಕವಾಗಿ ಆಚರಣೆಯನ್ನು ಇಡುವುದು ।।೩೮೭।। ಸುಳ್ಳು ಮತ್ತು ಅನುಚಿತ ಭಾಷಣವನ್ನು ಮಾಡದಿರುವಿಕೆಯೇ ಮೌನವಾಗಿರುವುದು. ನಿತ್ಯದಲ್ಲಿ ವೇದ ಪಠಣೇ, ಗಾಯತ್ರೀಯ ಸ್ಮರಣೆ, ಭಗವಂತನ ನಾಮಸ್ಮರಣೆ ಇವುಗಳನ್ನು ಮಾಡುವುದೇ ಮೌನವಾಗಿರುವುದು ।।೩೮೮।। ತನ್ನ ವೃತ್ತಿಯನ್ನು ಆತ್ಮಸ್ವರೂಪದಲ್ಲಿ, ಸ್ವಧರ್ಮದಲ್ಲಿ ಅಥವಾ ಸಾಧುಗಳ ಸಂಗತಿಯಲ್ಲಿಡುವುದು ಇದರ ನಾಮವೇ ಸ್ಥಿರತೆಯಾಗಿರುವುದು ।।೩೮೯।। ತನ್ನ ದೇಹಕ್ಕೆ ಯಾರೋ ವಂದಿಸಿದರು ಅಥವಾ ಯಾರೋ ತೊಂದರೆಕೊಟ್ಟು ಶರೀರಕ್ಕೆ ತಾಡನೆ ಮಾಡಿದರೂ ಕೂಡ ನಡೆದ ಈ ಎರಡೂ ಘಟನೆಯಲ್ಲಿ ಒಂದೇ ರೀತಿಯ ಕ್ಷಮೆವಿರಬೇಕು. ದೇಹದ ಯಾವತ್ತೂ ಭೋಗವು ದೈವವನ್ನು ಅವಲಂಬಿಸಿರುವುದನ್ನು ವಿಚಾರಿಸಿ ತಿಳಿದು ಯಾವಾಗಲೂ ಕ್ಷಮಾಶೀಲನಾಗಿರಬೇಕು ।।೩೯೦।।

ಯಾ ನಾಂವ ''ಕ್ಷಮಾ'' ಮ್ಹಣಿಜೇ । ಅಭಯ ತೇ ಐಸೇ ಜಾಣಿಜೇ । ಜೇ ಜೇ ಪಾರಿಖೇ ದೇಖಿಜೇ। ತೇ ತೇ ಹೋಈಜೇ ಆಪಣಚಿ ॥೯೧॥ ಆತ್ಮಾ ಏಕ ಪಂಚಭೂತೇ ಏಕ । ದುಜೇ ಪಾಹತಾ ನಾಹೀ ದೇಖ । ನಿಮಾಲೇ ಭಯಾಚೇ ಮಹಾದುಃಖ । ''ಅಭಯ'' ನಿಃಶೇಖ ಯಾ ನಾಂವ ॥೯೨॥ ನಿಮಾಲ್ಯಾ ದುಜಯಾಚ್ಯಾ ಗೋಠೀ । ವೋಖದಾಸೀ ಭಯ ನ ಮಿಳೇ ಸೃಷ್ಟೀ । ಅಭಯಾಚೀ ಸ್ವಾನಂದಪುಷ್ಟೀ । ನಿಜದೃಷ್ಟೀ ಠಸಾವೇ ॥೯೩॥ ಯಾ ನಾಂವ ಗಾ ಬಾರಾಹೀ ''ಯಮ''। ಉದ್ಧವಾ ಸಾಂಗಿತಲೇ ಸವರ್ಮ । ಆತಾ ಜಯಾಚೇ ನಾಮ ''ನೇಮ'' । ತೇಹೀ ಸುಗಮ ಅವಧಾರೀ ॥೯೪॥

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾऽऽತಿಥ್ಯಂ ಮದರ್ಚನಮ್ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್ ॥೩೪॥

ಅರ್ಥ:- ಬಾಹ್ಯ ಮತ್ತು ಆಂತರಿಕ ಹೀಗೆ ಎರಡು ಪ್ರಕಾರದ ಶೌಚ, ಮಂತ್ರಾದಿಕಗಳ ಜಪ, ಹೋಮ, ಧರ್ಮ ವಿಷಯದಲ್ಲಿ ಆದರ, ಅತಿಥಿ ಸತ್ಕಾರ, ನನ್ನ ಪೂಜೆ, ತೀರ್ಥಯಾತ್ರಾ, ಶ್ರೇಷ್ಠ ಪುರುಷಾರ್ಥದ ಇಚ್ಛೆ, ಸಂತೋಷ ಮತ್ತು ಆಚಾರ್ಯಶುಶ್ರೂಷಿ.

ಶೌಚಾಚೀ ಐಶೀ ಪರೀ। ಅಂತರೀ ಶುಚಿ ವಿವೇಕೇಕರೀ । ಬಾಹ್ಯ ತೇ ವೇದಾಜ್ಞೇವರೀ । ''ಶೌಚ'' ಕರೀ ಮೃಜ್ಜಲೇ ॥೯೫॥ ಪರಿಸೇ ''ಜಪಾಚಾ'' ವಿಚಾರ । ಜ್ಯಾಸೀ ಜೈಸಾ ಅಧಿಕಾರ । ತೈಸಾ ಜಪಾವಾ ನಾಮಮಂತ್ರ । ಕಾ ಸ್ವತಂತ್ರ ಗುರುನಾಮ ॥೯೬॥ ಬ್ರಾಹ್ಮಣಾಚಾ ಜಪ ವೇದೋಚ್ಚಾರ । ಸನ್ಯಾಸೀ ಜಪೇ ಓಂಕಾರ । ದ್ವಿಜನ್ಮ್ಯಾಸೀ ಆಗಮಮಂತ್ರ । ಕಾ ನಾಮಮಂತ್ರ ಸರ್ವಾಸೀ ॥೯೭॥ ತಪಾಚಾ ಜೋ ಮುಖ್ಯ ಪ್ರಕಾರ । ಜೇಣೇ ಶುದ್ಧ ಹೋಯ ಅಭ್ಯಂತರ । ತೋ ಸ್ವಧರ್ಮೀ ಗಾ ಸಾದರ । ಅತ್ಯಾದರ ಕರಾವಾ ॥೯೮॥ ಶರೀರಶೋಷಣಾ ನಾಂವ ತಪ । ಹಾ ಮೂರ್ಖಾಚಾ ಖಟಾಟೋಪ । ಹೃದಯೀ ಶ್ರೀಹರೀ ಚಿಂತಣೇ ಸದ್ರೂಪ । ಪರಮ ''ತಪ'' ಯಾ ನಾಂವ ॥೯೯॥ ಐಕ ಹೋಮಾಚಾ ವಿಚಾರ । ದೇವಾಚೇ ಮುಖ ವೈಶ್ವಾನರ । ಪಂಚಮಹಾಯಜ್ಞ ಅಗ್ನಿಹೋತ್ರ । ''ಹೋಮ'' ಸಾಚಾರ ಯಾ ನಾಂವ ॥೧೦೦॥ ಭಜನಾಚೀ ಅತಿ ಆವಡೀ । ಕಾ ಧರ್ಮಾಚೀ ಅಧಿಕ ಗೋಡೀ । ಯಾ ನಾಂವ ''ಶ್ರದ್ಧಾ'' ರೋಕಡೀ । ಜಾಣ ಧಡಪುಡೀ ಉದ್ಧವಾ ॥೧೦೧॥ ನಸತಾಂಹೀ ಅನ್ನಧನೇ । ಆತಿಥ್ಯೇ ದೇ ಸಮಾಧಾನೇ । ಮಸ್ತಕೀ ವಂದೂನಿಯಾ ದೀನೇ । ನಿವವೀ ವಚನೇ ಸುಖರೂಪೇ ॥೧೦೨॥

ಇದಕ್ಕೇನೇ ಕ್ಷಮೆ ಎಂದು ಹೇಳುವರು. ಈಗ ಅಭಯ ಎಂದು ಯಾವುದಕ್ಕೆ ಹೇಳುವರೆಂಬುದನ್ನು ಹೇಳುವೆನು. ಕಾಣುವ ಬೇರೆ ಎಲ್ಲವೂ ತಾನೇ ಆಗಬೇಕು ॥೯೧॥ ಆತ್ಮಸತ್ತೆಯು ಇದು ಒಂದೇ ಇರುವುದು. ಪಂಚಮಹಾಭೂತಗಳು ಎಲ್ಲವೂ ಒಂದೇಯಾಗಿರುವುವು. ವಾಸ್ತವಿಕವಾಗಿ ನೋಡಲು ಅವುಗಳಲ್ಲಿ ಬೇರೆಯಾಗಿರುವ ಯಾವುದೊಂದು ಇರುವುದಿಲ್ಲ. ಹೀಗೆ ಭಾವನೆಯು ದೃಢವಾದರೆ ಮಹಾ ದುಃಖ ರೂಪವಾದ ಭಯವು ಇಲ್ಲದಾಗಿಬಿಡುವುದು. ಇದಕ್ಕೆ ಮಾತ್ರ ಪೂರ್ಣ ಅಭಯವೆಂದು ಹೇಳುವರು ॥೯೨॥ ಒಂದು ಸಾರೆ ಭಿನ್ನತ್ವದ ಭಾವನೆಯು ಇಲ್ಲದಾಯಿತೆಂದರೆ ಆಗ ಸರ್ವಸೃಷ್ಟಿಯಲ್ಲಿ ಭಯ ಎಂಬುವುದು ಸ್ವಲ್ಪವೂ ಕೂಡ ಉಳಿಯುವುದಿಲ್ಲ. ಈ ಪ್ರಕಾರವಾಗಿ ಅಭಯದ ಆನಂದದ ಪುಷ್ಟಿಯು ಆತ್ಮದೃಷ್ಟಿಯಿಂದ ನಾಟಿಕೊಳ್ಳುತ್ತಿರುವುದು ॥೯೩॥ ಈ ಹನ್ನೆರಡು ಲಕ್ಷಣಗಳ ಹೆಸರು ಯಮ ಎಂದು ಹೇಳಲ್ಪಡುವುದು. ಹೇ ಉದ್ಧವಾ, ಅವುಗಳಲ್ಲಿನ ರಹಸ್ಯವನ್ನು ಈಗ ನಿನಗೆ ಹೇಳಿರುವೆನು, ಈಗ ನಿಯಮ ಎಂದು ಯಾವುದಕ್ಕೆ ಹೇಳುವರು? ಅದರ ಲಕ್ಷಣಗಳನ್ನು ಸುಲಭ ರೀತಿಯಲ್ಲಿ ನಿನಗೆ ಹೇಳುವೆನು, ಅದನ್ನು ಕೇಳು ॥೯೪॥

ಈಗ ಶುಚಿರ್ಭೂತದ ಪ್ರಕಾರವನ್ನು ಹೇಳುವೆನು, ಅದನ್ನು ಕೇಳು. ವಿವೇಕವನ್ನು ವೃದ್ಧಿಗೊಳಿಸಿ ಅಂತಃಕರಣದ ಶುದ್ಧಿಯನ್ನು ಮಾಡಬೇಕು. ವೇದದ ಆಜ್ಞೆಯಂತೆ ಮಣ್ಣು ಮತ್ತು ಜಲ ಇವುಗಳಿಂದ ಬಾಹ್ಯ ಶುದ್ಧಿ ಅಂದರೆ ದೇಹವನ್ನು ಸ್ವಚ್ಛಗೊಳಿಸಬೇಕು ॥೯೫॥ ಈಗ ಜಪದ ವಿಚಾರವನ್ನು ಹೇಳುವೆನು. ಅದನ್ನು ಕೇಳು. ಯಾರಿಗೆ ಹೇಗೆ ಅಧಿಕಾರವಿರುವುದೋ ಅವರು ಅದರಂತೆ ಜಪವನ್ನು ಮಾಡಬೇಕು. ಅಥವಾ ಗುರುಗಳು ಕೊಟ್ಟಿರುವ ನಾಮಮಂತ್ರದ ಜಪವನ್ನು ಮಾಡಬೇಕು ॥೯೬॥ ಬ್ರಾಹ್ಮಣರ ಜಪವು ವೇದಘೋಷವಾಗಿರುವುದು. ಸನ್ಯಾಸಿಯ ಜಪವು ಓಂಕಾರವಾಗಿರುವುದು. ಕ್ಷತ್ರಿಯ ವೈಶ್ಯ ಮತ್ತು ಬ್ರಾಹ್ಮಣ ಜಾತಿಗಳಿಗೆ ದ್ವಿಜನ್ಮ ಎಂದು ಹೇಳುವರು. ಇವರು ಆಗಮೋಕ್ತ ಮಂತ್ರವನ್ನು ಜಪಿಸಬೇಕು. ನಾಮಮಂತ್ರವು ಮಾತ್ರ ಇದು ಸರ್ವರಿಗಾಗಿಯೇ ಇರುವುದು ॥೯೭॥ ಯಾವುದನ್ನು ಮಾಡುವುದರಿಂದ ಅಂತಃಕರಣದ ಶುದ್ಧತೆಯಾಗುವುದೋ, ಅದು ತಪಸ್ಸಿನ ಮುಖ್ಯ ಪ್ರಕಾರವಾಗಿರುವುದು. ಇದನ್ನು ಸರ್ವ ಸ್ವಧರ್ಮಿಯವರು ಅತ್ಯಂತ ಆದರದಿಂದ, ಪ್ರೇಮದಿಂದ ಆಚರಿಸಬೇಕು ॥೯೮॥ ತಪಸ್ಸು ಎಂದರೆ ಶರೀರಕ್ಕೆ ತ್ರಾಸನ್ನು ಕೊಡುವುದು. ಇದು ಅಜ್ಞಾನಿ ಜನರ ಖಟಾಟೋಪವಾಗಿರುವುದು. ಹೃದಯದಲ್ಲಿ ಯಾವಾಗಲೂ ಶ್ರೀಹರಿಯ ಚಿಂತನೆಯನ್ನು ಮಾಡುವುದೇ ನಿಜವಾದ ತಪಶ್ಚರ್ಯವಾಗಿರುವುದು ॥೯೯॥ ಈಗ ಹೋಮದ ಪ್ರಕಾರವನ್ನು ಹೇಳುವೆನು ಕೇಳು. ವೈಶ್ವಾನರವೆಂದರೆ ದೇವರ ಮುಖವು ಅಗ್ನಿಯಾಗಿರುವುದು. ಅದಕ್ಕಾಗಿ ಪಂಚಮಹಾಯಜ್ಞ, ಅಗ್ನಿಹೋತ್ರ ಇತ್ಯಾದಿಗಳನ್ನು ಮಾಡುವಿಕೆಗೆ ಹೋಮ ಎಂದು ಹೇಳುವರು ॥೧೦೦॥ ಹೇ ಉದ್ಧವಾ, ನನ್ನ ನಾಮದಲ್ಲಿ ಅತಿಶಯವಾಗಿ ಪ್ರೀತಿಯನ್ನು ಇಡುವಿಕೆ ಮತ್ತು ಧರ್ಮದಲ್ಲಿ ಅತ್ಯಂತ ಅಭಿರುಚಿ ಇಡುವಿಕೆಗೆ ನಿಜವಾದ ಶ್ರದ್ಧೆ ಎಂದು ಹೇಳುವರು ॥೧೦೧॥ ತನ್ನಲ್ಲಿ ಸಮಯಕ್ಕೆ ಸರಿಯಾಗಿ ಅನ್ನ ಧನ ಇಲ್ಲದಿದ್ದರೂ ಕೂಡ ಬಾಗಿಲಲ್ಲಿ ಬಂದ ಅತಿಥಿಯನ್ನು ಮನೋಭಾವದಿಂದ ಶಿರಸಾ ವಂದಿಸಿ ಪ್ರಿಯ ಶಬ್ದಗಳಿಂದ ಆತನ ಸತ್ಕಾರವನ್ನು ಮಾಡಬೇಕು ॥೧೦೨॥

ದೀನ ದೇಖೋನಿ ತತ್ತ್ವತಾ । ಅತಿನಮ್ರ ವಿನೀತತಾ । ಯಥಾಶಕ್ತಿ ಅರ್ಪಣೇ ಅರ್ಥಾ । ''ಆತಿಥ್ಯ'' ತತ್ತ್ವತಾ ಯಾ ನಾಂವ ।।೪೦೩।। ಪೋಟೇಚ್ಯಾ ಕಳವಳೇನಿ ಪೋಜಾ । ಅತ್ಯಾದರೇ ಗರುಡಧ್ವಜಾ । ಸಾಂಗ ಸಾಜಿರೀ ಕರಣೇ ಪೂಜಾ । ಶ್ರದ್ಧಾ ಸಮಾಜಾಸಂಭಾರೀ ।।೪೦೪।। ಮೇಳವೂನಿ ಬ್ರಾಹ್ಮಣಸಂಭಾರ । ಶ್ರದ್ಧಾಯುಕ್ತ ಷೋಡಶೋಪಚಾರ । ಪೂಜಿತಾ ಸಂತೋಷೇ ಮೀ ಶ್ರೀಧರ । ''ಪೂಜಾ'' ಪವಿತ್ರ ಬ್ರಾಹ್ಮಣಾಂಚೀ ।।೪೦೫।। ಶುದ್ಧ ವ್ಹಾವಯಾ ಅಂತಃಕರಣ । ಕರಾವೇ ಗಾ ತೀರ್ಥಗಮನ । ತೀರ್ಥಯಾತ್ರೀ ಶ್ರದ್ಧಾ ಗಹನ । ''ತೀರ್ಥಾಟನ'' ಯಾ ನಾಂವ ।।೪೦೬।। ಪದೋಪದೀ ಮಾಝೇ ನಾಮ । ಗರ್ಜತಾ ಸ್ಮರತೀ ಮಾಝೇ ಕರ್ಮ । ಯಾತ್ರಾ ಕರಣೇ ನಿಜನಿಷ್ಕಾಮ । ''ತೀರ್ಥಯಾತ್ರಾ'' ಪರಮ ಯಾ ನಾಂವ ।।೪೦೭।। ಪರೋಪಕಾರಾರ್ಥ ಪರ್ವತ । ಜೇವೀ ಕಾ ಸಾಮಗ್ರೀ ವಾಹತ । ತೇವೀ ಕ್ರಿಯಾಮಾತ್ರೀ ಉಪಕಾರಾರ್ಥ । ಸದಾ ವರ್ತತ ಉಪಕಾರೀ ।।೪೦೮।। ಜೇವೀ ಕಾ ಚಂದ್ರಾಚೇ ಕಿರಣ । ಲಾಗತಾಂಚಿ ನಿವವಿತೀ ಜಾಣ । ತೇವೀ ಜಯಾಚೇ ಆಚರಣ । ''ಉಪಕಾರೇ'' ಜನ ಸುಖೀ ಕರೀ ।।೪೦೯।। ಜೇ ಪ್ರಾಪ್ತ ಜಾಹಲೇ ಅದೃಷ್ಟೀ। ತೇಣೇ ಕಾಳ ಯಥಾಸುಖೇ ಲೋಟೀ । ಕದಾ ಸಮಾಸಮ ನಾಹೀ ಪೋಟೀ । ''ಯಥಾಲಾಭಸಂತುಷ್ಟೀ'' ಯಾ ನಾಂವ ।।೪೧೦।। ಕಾಯಾವಾಚಾಮನೇ ಧನೇ । ಜೋ ವಿನಟಲಾ ಗುರೂಕಾರಣೇ । ತ್ಯಾಚೇ ಉಠೇ ಸಂಸಾರಧರಣೇ । ''ಗುರುಸೇವಾ'' ಮ್ಹಣಣೇ ಯಾ ನಾಂವ ।।೪೧೧।। ಉಭಯ ಶೌಚಾಚೇ ದೋನೀ ಗುಣ । ಜಪಾದಿ ಯೇರ ದಶಲಕ್ಷಣ । ಹೇ ಬಾರಾ ''ನೇಮ'' ಜಾಣ । ದೇವೋ ಆಪಣ ಬೋಲಿಲಾ ।।೪೧೨।।

ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ । ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹಂತಿ ಹಿ ।।೩೫।।

ಅರ್ಥ:- ಮೇಲಿನ ಎರಡು ಶ್ಲೋಕಗಳಲ್ಲಿ ಈ ಪ್ರಕಾರವಾಗಿ ಹನ್ನೆರಡು ಯಮ ನಿಯಮಗಳನ್ನು ಹೇಳಲಾಗಿದೆ. ಹೇ ಉದ್ಧವಾ, ಸೇವನೆ ಮಾಡಿರುವ ಈ ಯಮ, ನಿಯಮಗಳು ಪ್ರವೃತ್ತ ಮತ್ತು ನಿವೃತ್ತ ಪುರುಷರ ಇಚ್ಛೆಯಂತೆ ಮೋಕ್ಷ ಮತ್ತು ಅಭ್ಯುದಯವನ್ನು ಕೊಡುವುವು.

ದೋಹೀ ಶ್ಲೋಕೀ ಯಮ ನಿಯಮ । ನಿರೂಪಿಲೇ ಉತ್ತಮೋತ್ತಮ । ಬಾರಾ ಬಾರಾ ಯಾಂಚೇ ವರ್ಮ । ಗುಹ್ಯ ಪರಮ ಶಾಸ್ತ್ರಾರ್ಥೀ ।।೪೧೩।।

ದೀನ ಮನುಷ್ಯನನ್ನು ಕಂಡಾಕ್ಷಣವೇ ವಿನಯಪೂರ್ವಕವಾಗಿ ಆತನಲ್ಲಿ ನಮ್ರನಾಗಿ ತನ್ನ ಯಥಾಶಕ್ತಿ ಆತನಿಗೆ ಧನವನ್ನು ಕೊಡಲು ಅದಕ್ಕೆ ಅತಿಥಿಸತ್ಕಾರ ಎಂದು ಹೇಳುವರು ।।೪೦೩।। ಅಂತಃಕರಣದಲ್ಲಿನ ನಿಜವಾದ ಕಳಕಳಿಯಿಂದ ಅತ್ಯಂತ ಪ್ರೇಮದಿಂದ ಸಮಾಜ, ಜನರನ್ನು ಒಟ್ಟುಗೂಡಿಸಿ ಬಹು ಸಮಾರಂಭದಿಂದ ಭಗವಂತನಾದ ನನ್ನ ಪೂಜೆಯನ್ನು ಮಾಡಬೇಕು ।।೪೦೪।। ಅಥವಾ ಬ್ರಾಹ್ಮಣರ ಸಮುದಾಯವನ್ನು ಏಕತ್ರ ಮಾಡಿ ಶ್ರದ್ಧೆಯಿಂದ ಅವರ ಷೋಡಶೋಪಚಾರ ಪೂಜೆಯನ್ನು ಮಾಡಲು ಶ್ರೀಪತಿಯಾದ ನಾನು ಸಂತುಷ್ಟನಾಗುವೆನು. ಕಾರಣ ಬ್ರಾಹ್ಮಣರ ಪೂಜೆಯು ಬಹಳ ಪವಿತ್ರವಾಗಿರುವುದು. ಇದರ ನಾಮವೇ ಮದರ್ಚನವಾಗಿರುವುದು ।।೪೦೫।। ಅಂತಃಕರಣದ ಶುದ್ಧಿಗಾಗಿ ತೀರ್ಥಯಾತ್ರೆಗಳನ್ನು ಮಾಡಬೇಕು. ತೀರ್ಥಯಾತ್ರೆಗಳಲ್ಲಿ ದೃಢವಾದ ಶ್ರದ್ಧೆಯನ್ನಿಡಬೇಕು. ಇದಕ್ಕೆ ಮಾತ್ರ ತೀರ್ಥಾಟನೆ ಎಂದು ಹೇಳವರು ।।೪೦೬।। ಹೆಜ್ಜೆ ಹೆಜ್ಜೆಗೂ ನನ್ನ ನಾಮವನ್ನು ಗರ್ಜಿಸುತ್ತ ಮತ್ತು ನನ್ನ ಚರಿತ್ರೆಗಳನ್ನು ವರ್ಣಿಸುತ್ತ ನಿಜವಾದ ನಿಷ್ಕಾಮ ಬುದ್ಧಿಯಿಂದ ಯಾತ್ರೆಯನ್ನು ಮಾಡಬೇಕು. ಇದಕ್ಕೆ ಮಾತ್ರ ಶ್ರೇಷ್ಠವಾದ ತೀರ್ಥಯಾತ್ರಾ ಎಂದು ಹೇಳುವರು ।।೪೦೭।। ಪರ್ವತವು ಯಾವ ಪ್ರಕಾರವಾಗಿ ಕೇವಲ ಪರೋಪಕಾರಕ್ಕಾಗಿಯೇ ಖನಿಜ ಪದಾರ್ಥಗಳನ್ನು ಮತ್ತು ಅನೇಕ ಪ್ರಕಾರದ ವನಸ್ಪತಿಗಳ ಭಾರವನ್ನು ಹೊರುತ್ತಿರುವುದೋ, ಅದರಂತೆ ಕೇವಲ ಪರೋಪಕಾರಕ್ಕಾಗಿಯೇ ನಿರಂತರವಾಗಿ ಕರ್ಮಗಳನ್ನುಮಾಡುತ್ತ ಸರ್ವ ಕಾಲದಲ್ಲಿ ಉಪಕಾರವನ್ನು ಮಾಡುತ್ತಿರಬೇಕು ।।೪೦೮।। ಚಂದ್ರನ ಕಿರಣಗಳು ಯಾವ ಪ್ರಕಾರವಾಗಿ ತಮ್ಮ ಸ್ಪರ್ಶದಿಂದ ಜೀವಿಗಳ ತಾಪವನ್ನು ಶಾಂತಗೊಳಿಸುವುವೋ, ಅದೇ ಪ್ರಕಾರವಾಗಿ ಮನುಷ್ಯನು ತನ್ನ ಶುದ್ಧ ಆಚರಣೆಗಳಿಂದ ಜನರನ್ನು ಸುಖಿಗಳನ್ನಾಗಿ ಮಾಡಬೇಕು ।।೪೦೯।। ದೈವಯೋಗದಿಂದ ಯಾವುದು ಎಷ್ಟು ಪ್ರಾಪ್ತವಾಗುವುದೋ, ಅಷ್ಟರಲ್ಲಿಯೇ ಸಮಾಧಾನವನ್ನು ಪಡೆಯಬೇಕು. ಮತ್ತು ಸಂತೋಷದಿಂದ ಕಾಲವನ್ನು ಕಳೆಯಬೇಕು, ಹೀಗಿರುವುದರಿಂದ ಮನದಲ್ಲಿ ಸಮ-ವಿಷಮಗಳ ಭಾವನೆಯೇ ನಿರ್ಮಾಣವಾಗುವುದಿಲ್ಲ ಇದಕ್ಕೆ ಮಾತ್ರ ''ಯದೃಚ್ಛಯಾಲಾಭಸಂತುಷ್ಟ'' ಅಂದರೆ ಸಿಕ್ಕಷ್ಟರಲ್ಲಿಯೇ ಸಂತೋಷವಾಗಿರುವುದು ಎಂದು ಹೇಳುವರು ।।೪೧೦।। ಯಾವನು ಕಾಯಾ,ವಾಚಾ, ಮನ ಮತ್ತು ಧನದಿಂದ ಗುರುವಿಗೆ ಶರಣಾಗುವನೋ, ಆತನಿಗೆ ಸಂಸಾರಬಂಧನವು ಇಲ್ಲದಾಗುವುದು. ಇದಕ್ಕೆ ಮಾತ್ರ ''ಗುರುಸೇವೆ'' ಎನ್ನುವರು ।।೪೧೧।। ಹೀಗೆ ಎರಡು ದೇಹಗಳ ಶುದ್ಧಿಯ ಎರಡು ಗುಣಗಳು ಮತ್ತುಜಪಾದಿ ಹತ್ತು ಗುಣಗಳನ್ನು ಕೂಡಿಸಿ ಈ ಹನ್ನೆರಡು ನಿಯಮಗಳನ್ನು ಶ್ರೀಕೃಷ್ಣನು ಸ್ವತಃ ಪ್ರತಿಪಾದನೆಯನ್ನು ಮಾಡಿದನು ।।೪೧೨।।

ಮೇಲಿನ ಎರಡು ಶ್ಲೋಕಗಳಲ್ಲಿ ಯಮನಿಯಮಗಳ ಉತ್ತಮ ನಿರೂಪಣೆಯನ್ನು ಮಾಡಲಾಗಿದೆ. ಪ್ರತಿಯೊಂದರ ಹನ್ನೆರಡು ಹನ್ನೆರಡು ಲಕ್ಷಣಗಳನ್ನು ಹೇಳಲಾಗಿದೆ ಇದಕ್ಕೆಮಾತ್ರ ಶಾಸ್ತ್ರದಲ್ಲಿ ಪರಮಗುಹ್ಯ ಎಂದು ಹೇಳಲಾಗಿರುವುದು ।।೪೧೩।।

ಪುರುಷ ಯಾಂಚೇ ಉಪಾಸನ । ಜರೀ ಕರೀ ಸಕಾಮನ । ತೈ ಕಾಮಧೇನೂಚ್ಯಾ ಐಸೇ ಜಾಣ । ಕರಿತೀ ಪೂರ್ಣ ಸಕಳ ಕಾಮ ।।೪೧೪।। ಹೇಚಿ ಪೈ ಗಾ ಯಮ ನೇಮ । ಪುರುಷ ಉಪಾಸೀ ನಿಷ್ಕಾಮ । ತೈ ತ್ಯಾಸಿ ಮಾಝೇಂ ನಿಜಧಾಮ । ಅತಿಸುಗಮ ನಿಜಪ್ರಾಪ್ತೀ ।।೪೧೫।। ಆತಾ ಶಮದಮಾದಿಕ ತುಝೇ ಪ್ರಶ್ನ । ಜೇಣೇ ಹಾತಾ ಪಾವೇ ಬ್ರಹ್ಮಜ್ಞಾನ । ತೇ ಸಾಂಗೇನ ಗುಹ್ಯ ನಿರೂಪಣ । ಸಾವಧಾನ ಉದ್ಧವಾ ।।೪೧೬।। ಪ್ರಶ್ನೋತ್ತರ ಸಾಂಗೇಲ ಶ್ರೀಕೃಷ್ಣ । ತೇ ಅವಧಾರಿತಾ ಸಾವಧಾನ । ತತ್ಕಾಳ ಹೋಯ ಬ್ರಹ್ಮಜ್ಞಾನ । ಹೇ ಪರಮ ಪ್ರಮಾಣ ಅತಿಗುಹ್ಯ ।।೪೧೭।। ತೃಪ್ತ ವ್ಹಾವಯಾ ಬಾಲಕಾಸೀ । ನಿಜಕರೇ ಮಾತಾ ಗ್ರಾಸ ದೇ ತ್ಯಾಸೀ । ತೇವೀ ಶ್ರೀಕೃಷ್ಣ ಉದ್ಧವಾಸೀ । ಬ್ರಹ್ಮಜ್ಞಾನಾಸೀ ದೇತಸೇ ।।೪೧೮।। ಜೋ ರಸು ಗೋಡ ಲಾಗೇ ಪಿತ್ಯಾಸೀ । ತೋ ಬಳೇಂಚಿ ಪಾಜೀ ಬಾಲಕಾಸೀ । ತೇವೀ ಶ್ರೀಕೃಷ್ಣ ಉದ್ಧವಾಸೀ । ಬ್ರಹ್ಮರಸಾಸೀ ದೇತಸೇ ।।೪೧೯।। ಆಧೀಂಚಿ ತಾನಯಾಚೇ ಪ್ರೇಮ ಮೋಠೇ । ವರೀ ಲಾಗತಾ ತ್ಯಾಚೇ ಮುಖವಟೇ । ಮಗ ಸ್ವಾನಂದಾಚೇನಿ ನೇಟೇ । ಪಾನ್ಹಾ ಲೋಟೇ ಅನಿವಾರ ।।೪೨೦।। ತೇವೀ ಸ್ವಯೇ ಶ್ರೀಕೃಷ್ಣ । ದಾಟೂನಿ ದೇತಸೇ ಬ್ರಹ್ಮಜ್ಞಾನ । ತೇಥೇ ಉದ್ಧವೇ ಪುಶಿಲೇ ಪ್ರಶ್ನ । ತೇಣೇ ಅಧಿಕ ಜಾಣ ತುಷ್ಟಲಾ ।।೪೨೧।। ಆಧೀಂಚ ಪರ್ಜನ್ಯ ಖರಾ । ವರೀ ಮೀನಲಾಸೇ ವೀಜ ವಾರಾ । ಮಗ ಅನಿವಾರ ವರ್ಷೇ ಧಾರಾ । ಖಣೋನಿ ಧರಾ ವಾಹತಸೇ ।।೪೨೨।। ತೇವೀ ದ್ಯಾವಯಾ ಬ್ರಹ್ಮಜ್ಞಾನ । ಮಿಷ ಉದ್ಧವಾಚೇ ಪ್ರಶ್ನ । ಸ್ವಾನಂದೇ ತುಷ್ಟಲಾ ಶ್ರೀಕೃಷ್ಣ । ಬ್ರಹ್ಮಪೂರ್ಣ ದೇತಸೇ ।।೪೨೩।। ನಿಮೋಲೇ ದೇತಾ ಮಿಠಾಚೇ ಖಡೇ । ಚಿಂತಾಮಣೀ ಹಾತೀ ಚಢೇ । ಕಾ ವಿಟೇಸಾಠೀ ಪರೀಸ ಜೋಡೇ । ನ ಘೇ ತೋ ನಾಡೇ ನಿಜಸ್ವಾರ್ಥಾ ।।೪೨೪।। ತೇವೀ ಉದ್ಧವಾಚೇ ಥೋಡೇ ಪ್ರಶ್ನ । ತೇಣೇ ಆತುಡೇ ಬ್ರಹ್ಮ ಪೂರ್ಣ । ಏಕಾ ವಿನವೀ ಜನಾರ್ದನ । ಶ್ರೋತಾ ಅವಧಾನ ಮಜ ದ್ಯಾವೇ ।।೪೨೫।। ಉದ್ಧವಾಚೇ ಚೌತೀಸ ಪ್ರಶ್ನ । ತ್ಯಾಂತ ಯಮ ನಿಯಮ ಜಾಹಲೇ ಜಾಣ । ಉರಲೇ ಬತ್ತೀಸ ಗುಣ । ತೇಹೀ ವಿವಂಚನ ಅವಧಾರಾ ।।೪೨೬।। ಪ್ರಶ್ನೀ ದಯೇಚೇ ಪ್ರತಿಉತ್ತರ । ನ ಸಾಂಗೇಚಿ ಶಾರಂಗಧರ । ತ್ಯಾ ಅರ್ಥೀ ಭಾವಗರ್ಭ ಸಾರ । ಷಡ್‌ಗುಣ್ಯೈಶ್ವರ್ಯ ಬೋಲಿಲೇ ।।೪೨೭।।

ಏಹೀ ವಿಖೀಚೇ ವ್ಯಾಖ್ಯಾನ । ಪುಢೇ ಸಾಂಗೇಲ ಶ್ರೀಕೃಷ್ಣ ।

ಇವುಗಳ ಉಪಾಸನೆಯನ್ನು ಯಾವುದೇ ಪುರುಷನು ಮನದಲ್ಲಿ ಅಪೇಕ್ಷಿಪಟ್ಟು ಮಾಡಿದರೆ ಕಾಮಧೇನುವಿನಂತೆ ಆತನ ಸರ್ವ ಕಾಮನೆಗಳನ್ನು ಪೂರ್ಣ ಮಾಡುವುದು ।।೪೧೪।। ಇದೇ ಯಮ ನಿಯಮಗಳ ಉಪಾಸನೆಯನ್ನು ನಿಷ್ಕಾಮ ಭಾವನೆಯಿಂದ ಮಾಡಿದರೆ, ಆ ಪುರುಷನಿಗೆ ನನ್ನ ನಿಜಧಾಮದ ಅಂದರೆ ಸ್ವಸ್ವರೂಪದ ಪ್ರಾಪ್ತಿಯು ಸಹಜವಾಗಿ ಆಗುವುದು ।।೪೧೫।। ಹೇ ಉದ್ಧವಾ, ಈಗ ಶಮದಮಾದಿಕ ಸಂಬಂಧದ ನಿನ್ನ ಪ್ರಶ್ನೆಯ ಯೋಗದಿಂದ ಬ್ರಹ್ಮಜ್ಞಾನದ ಪ್ರಾಪ್ತಿಯಾಗುವಂತಹ ಯಾವ ಗುಹ್ಯವಾಗಿರುವ ನಿರೂಪಣೆಯನ್ನು ನಿನಗೆ ಹೇಳುವೆನು. ಅದರತ್ತ ನಿನ್ನ ಲಕ್ಷ ವಿರಲಿ ।।೪೧೬।। ಈಗ ಆ ಯಾವ ಪ್ರಶ್ನೆಗಳ ಉತ್ತರವನ್ನು ಶ್ರೀಕೃಷ್ಣನು ಹೇಳುವನು. ಅದನ್ನು ನೀವು ಲಕ್ಷಪೂರ್ವಕವಾಗಿ ಶ್ರವಣವನ್ನು ಮಾಡಬೇಕು. ಅಂದರೆ ಮಾತ್ರ ಬ್ರಹ್ಮಜ್ಞಾನದ ಪ್ರಾಪ್ತಿಯಾಗುವುದು. ಇದೇ ಅದರಲ್ಲಿನ ಅತ್ಯಂತ ಗುಹ್ಯವಾದ ಶ್ರೇಷ್ಠ ಪ್ರಮಾಣವಾಗಿರುವುದು ।।೪೧೭।। ಬಾಲಕನ ಹಸಿವೆಯನ್ನು ನಿವಾರಿಸಲು ತಾಯಿಯು ತನ್ನ ಕೈಯಿಂದ ತುತ್ತು ಮಾಡಿ ತಿನ್ನಿಸುವಳು. ಅದರಂತೆಯೇ ಶ್ರೀಕೃಷ್ಣನು ಉದ್ಧವನಿಗೆ ಬ್ರಹ್ಮಜ್ಞಾನವನ್ನು ಹೇಳುತ್ತಿರುವನು ।।೪೧೮।। ಯಾವ ರಸವು ತಂದೆಗೆ ರುಚಿಯಾಗಿ ತೋರುವುದೋ ಆತನು ಅದನ್ನು ಬಲುಮೆಯಿಂದ ಬಾಲಕನಿಗೂ ಕೂಡ ಕುಡಿಸುವನು. ಅದರಂತೆ ಶ್ರೀಕೃಷ್ಣನು ಉದ್ಧವನಿಗೆ ಬ್ರಹ್ಮರಸವನ್ನು ಕೊಡುತ್ತಿರುವನು ।।೪೧೯।। ಮೊದಲೇ ತಾಯಿಯ ಪ್ರೇಮವು ತನ್ನ ಕೂಸಿನ ಮೇಲೆ ಇದ್ದೇ ಇರುತ್ತದೆ. ಅದರಲ್ಲಿ ಆ ಕೂಸಿನ ಮುಖವು ಸ್ಪರ್ಶವಾಗುತ್ತಲೇ, ಆಕಗೆ ಪ್ರೇಮವು ಹೆಚ್ಚಾಗಿ ಮೊಲೆಯಲ್ಲಿ ಹಾಲು ಉಕ್ಕೇರುವುದು. ಇದು ಅನಿವಾರ್ಯವಾಗಿರುವುದು ।।೪೨೦।। ಅದರಂತೆಯೇ ಶ್ರೀಕೃಷ್ಣನು ಸ್ವತಃ ಬ್ರಹ್ಮಜ್ಞಾನವನ್ನು ಕೊಡುತ್ತಿರುವ ಸಮಯದಲ್ಲಿ ಉದ್ಧವನು ಪ್ರಶ್ನೆಯನ್ನು ಮಾಡಿದನು. ಅದರಿಂದ ಶ್ರೀಕೃಷ್ಣನು ಇನ್ನೂ ಹೆಚ್ಚಾಗಿಯೇ ಸಂತುಷ್ಟನಾದನು ।।೪೨೧।। ಮೊದಲೇ ಮಳೆಯು ಶುರುವಾಗಿರುವುದು. ಆಗ ಅದಕ್ಕೆ ಗಾಳಿ, ಗುಡುಗು, ಸಿಡ್ಲು ಇವುಗಳ ಸಹಾಯವು ಒದಗಲು, ಆಗ ದೊಡ್ಡ ಹನಿಗಳ ಮಳೆಯು ಸುರಿಯುತ್ತ ಭೂಮಿಯನ್ನು ಅಗೆಯುತ್ತ ಹರಿಯತೊಡಗುವುದು ।।೪೨೨।। ಅದರಂತೆ ಬ್ರಹ್ಮಜ್ಞಾನವನ್ನು ಕೊಡಲು ಉದ್ಧವನ ಪ್ರಶ್ನೆಗಳ ನಿಮಿತ್ತವಾಯಿತು. ಆದ ಕಾರಣ ಶ್ರೀಕೃಷ್ಣನು ಸ್ವಾನಂದಭರಿತನಾಗಿ ಪ್ರಸನ್ನನಾದನು. ಈಗ ಯಾವ ಪರಿಪೂರ್ಣ ಬ್ರಹ್ಮಜ್ಞಾನವನ್ನು ಉದ್ಧವನ ಸ್ವಾಧೀನ ಮಾಡುವನು ।।೪೨೩।। ಉಚಿತವಾಗಿ ಸಿಗುತ್ತಿರುವ ಉಪ್ಪನ್ನು ಕೊಟ್ಟು ಅದರಿಂದ ಚಿಂತಾಮಣಿಯು ಪ್ರಾಪ್ತವಾಗುತ್ತಿದ್ದರೆ ಅಥವಾ ಇಟ್ಟಂಗಿಯನ್ನು ಕೊಟ್ಟು ಪರೀಸಮಣಿಯು ಪ್ರಾಪ್ತವಾಗುತ್ತಿದ್ದರೆ ಅದನ್ನು ಸ್ವೀಕಾರ ಮಾಡುವವನು ಇಲ್ಲದಿದ್ದರೆ ಆಗುವ ಲಾಭವನ್ನು ಕಳೆದುಕೊಳ್ಳಬೇಕಾಗುವುದು ।।೪೨೪।। ಅದರಂತೆ ಉದ್ಧವನ ಪ್ರಶ್ನೆಗಳು ಸಾಮಾನ್ಯವಾಗಿದ್ದರೂ ಮಹತ್ವಪೂರ್ಣವಾಗಿ ಪೂರ್ಣಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಡುವುವು. ಆದ್ದರಿಂದ ಏಕಾ ಜನಾರ್ದನರು ಶ್ರೋತೃಗಳವರಿಗೆ ವಿನಂತಿಸುವುದೇನೆಂದರೆ ಈಗ ಎಲ್ಲರೂ ನನ್ನತ್ತ ಲಕ್ಷವನ್ನು ಕೊಡಿರಿ ।।೪೨೫।। ಉದ್ಧವನು ಮೂವತ್ನಾಲ್ಕು ಪ್ರಶ್ನೆಗಳನ್ನು ಕೇಳಿದ್ದನು. ಇವುಗಳ ಪೈಕಿ ಈಗಾಗಲೇ ಯಮ, ನಿಯಮ ಈ ಎರಡನ್ನು ಹೇಳಲಾಗಿರುವುದು. ಈಗ ಮೂವತ್ತೆರಡು ಪ್ರಶ್ನೆಗಳು ಉಳಿದಿರುವುವು. ಅವುಗಳ ವಿಚಾರವನ್ನೂ ಕೇಳಿರಿ ।।೪೨೬।। ಪ್ರಶ್ನೆಗಳಲ್ಲಿ ದಯೆಯ ಉತ್ತರವನ್ನು ಶ್ರೀಕೃಷ್ಣನು ಕೊಟ್ಟಿರುವುದಿಲ್ಲ. ಆದರೆ ಅದರ ಗೂಢಾರ್ಥವನ್ನೂ ಕೂಡ ಷಡ್‌ಗುಣ್ಯೈಶ್ವರ್ಯಸಂಪನ್ನನಾದ ಈಶ್ವರನು ಧ್ವನಿತಾರ್ಥದಿಂದ ಸೂಚನೆಯನ್ನು ಕೊಟ್ಟಿರುವನು ।।೪೨೭।।

ದಯೇಚ್ಯಾ ಠಾಯೀ ಭಾಗ್ಯ ಸಂಪೂರ್ಣ । ಕೋಣ ಕಾರಣ ಸಾಂಗಾವಯಾ ।।೪೨೮।। ಏವಂ ಉರಲೇ ಏಕತೀಸ ಪ್ರಶ್ನ । ಅಧಿಕ ಏಕ ಸಾಂಗೇಲ ಶ್ರೀಕೃಷ್ಣ । "ಕರ್ಮಸ್ವಸಂಗಮ ಶೌಚ" ಜಾಣ । ಕಾರ್ಯಕಾರಣಸಂಬಂಧಾ ।।೪೨೯।। ಐಸೇ ಹೇ ತೇಹತೀಸ ಪ್ರಶ್ನ। ವ್ಯಾಖ್ಯಾನ ಸಾಂಗೇಲ ಶ್ರೀಕೃಷ್ಣ । ತೇ ಕರತಳೀ ಬ್ರಹ್ಮಜ್ಞಾನ । ಉದ್ಧವಾಸೀ ಜಾಣ ದೇತಸೇ ।।೪೩೦।।

ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇಂದ್ರಿಯಸಂಯಮಃ । ತಿತಿಕ್ಷಾ ದುಃಖಸಂಮರ್ಷೋ ಜಿಹೋಪಸ್ಥಜಯೋ ಧೃತಿಃ ।।೧೬।।

ಅರ್ಥ:- ಬುದ್ಧಿಯನ್ನು ನನ್ನಲ್ಲಿ ಅರ್ಪಿಸುವುದಕ್ಕೆ ಶಮ ಎಂದು ಹೇಳುವರು. ಇಂದ್ರಿಯಗಳ ಸಂಯಮ ಅಂದರೆ ದಮವೆಂದಾಗುವದು. ನ್ಯಾಯವಾಗಿ ಪ್ರಾಪ್ತವಾಗುವ ದುಃಖಗಳನ್ನು ಸಹಿಸುವಿಕೆಗೆ ತಿತಿಕ್ಷಾ ಎಂದು ಹೇಳುವರು. ನಾಲಿಗೆ ಮತ್ತು ಜನನೇಂದ್ರಿಯಗಳ ಮೇಲ ವಿಜಯ ಪ್ರಾಪ್ತಮಾಡಿಕೊಳ್ಳುವಿಕೆಗೆ ಧೈರ್ಯವೆಂದು ಹೇಳುವರು.

ಬುದ್ಧಿ ಜೇ ಕಾ ವಿವೇಕವಂತೀ । ಅಸಾರ ಸಾಂಡೂನಿ ಸಾರ ಧರಿತೀ । ತಿಣೇ ಮನಾಚ್ಯಾ ಸಕಳ ವೃತ್ತೀ । ವಿವೇಕಸ್ಥಿತೀ ಆವರೋನಿ ।।೪೩೧।। ತ್ಯಾ ವೃತ್ತೀಸಮವೇತ ಆಪಣ । ಬುದ್ಧಿ ಪರಮಾತ್ಮೀಮಿಳೇ ಜಾಣ । ಜೇವೀ ಸಾಗರಾಸೀ ಲವಣ । ಹೇ ಆಲಿಂಗನ ಭಾವಾರ್ಥೀ ।।೪೩೨।। ಸಮುದ್ರೀ ಮಿಳತಾ ಲವಣ । ಸಮುದ್ರಚಿ ಹೋಯ ಆಪಣ । ತೇವೀ ಆತ್ಮನಿಶ್ಚಯೇ ಬುದ್ಧಿ ಪೂರ್ಣ । ಚೈತನ್ಯಘನ ಸ್ವಯೇ ಹೋಯ ।।೪೩೩।। ಐಸಾ ಬುದ್ಧೀಚಾ ಉಪರಮು । ತ್ಯಾತೇ ಮ್ಹಣಿಜೇ ಗಾ "ಶಮು" । ಯಾಪೂರ್ವೀ ಕರಾವಯಾ ದಮು । ತೋಹೀ ಅನುಕ್ರಮ ಅವಧಾರೀ ।।೪೩೪।। ಶತ್ರೂಚೇ ಜೇ ದುರ್ದಮನ । ತೋ ದಮು ಯೇಥೇ ನವ್ಹೇ ಜಾಣ । ಕರಾವೇ ಇಂದ್ರಿಯದಮನ । ತೇಹೀ ಲಕ್ಷಣ ಅವಧಾರೀ ।।೪೩೫।। ಜೇಣೇ ಸಹಾಯ ಹೋತೀ ಶಮಾಸೀ । ತಯಾ ಯುಕ್ತೀ ರಾಖಣೇ ಇಂದ್ರಿಯಾಂಸೀ । ವಿಧಿವೇಗಳೇ ನೇದೀ ಭೋಗಾಸೀ । ಆವರೀ ಅಹರ್ನಿಶೀ ವೈರಾಗ್ಯೇ ।।೪೩೬।। ಐಸೇ ಇಂದ್ರಿಯಾಂಚೇ ನಿಗ್ರಹಣ। ತ್ಯಾ ನಾಂವ ಗಾ "ದಮ" ಗುಣ । ಆತಾ ತಿತಿಕ್ಷೇಚೇ ಲಕ್ಷಣ। ಏಕ ಸಂಪೂರ್ಣ ಸಾಂಗೇನ ।।೪೩೭।। ಮಹಾಸುಖ ಆಲೇ ಹೋಯೇ । ತೇ ಜೇಣೇ ಉಲ್ಹಾಸೇ ಅಂಗೀ ವಾಹೇ । ತೇಣೇಚಿ ಉಲ್ಹಾಸೇ ಪಾಹೇ । ದುಃಖಹೀ ಸಾಹೇ ನಿಜಾಂಗೀ ।।೪೩೮।। ತೇಜ ಆಣಿ ಮಹಾ ಆಂಧಾರೀ । ನಭ ಸಮತ್ವೇ ಅಂಗೀ ಧರೀ। ತೇಜೀ ಜೋ ಅವಿಕಾರೀ । ಸುಖದುಃಖಪರೀ ಸಾಹತಾ ।।೪೩೯।।

ದಯೆಯ ಬದಲಾಗಿ ಸಂಪೂರ್ಣವಾಗಿ ಭಾಗ್ಯವನ್ನು ಹೇಳುವ ಕಾರಣವಾದರೂ ಏನು? ಈ ವಿಷಯಕ್ಕೆ ಶ್ರೀಕೃಷ್ಣನು ಮುಂದೆ ಹೇಳುವನು ।।೪೨೮।। ಈ ಪ್ರಕಾರವಾಗಿ ಈಗ ಒಟ್ಟಿನಲ್ಲಿ ಮೂವತ್ತೊಂದು ಪ್ರಶ್ನೆಗಳು ಉಳಿದುಕೊಂಡಿರುವುವು. ಅದರಲ್ಲಿ ಶ್ರೀಕೃಷ್ಣನು ಒಂದನ್ನು ಅಧಿಕವಾಗಿ ಹೇಳಿರುವನು ಅದು ಶೌಚವಾಗಿರುವುದು. ಕಾರ್ಯಕಾರಣಸಂಬಧವಾಗಿ ಅದನ್ನು ಹೇಳಬೇಕಾಗಿರುವುದು ।।೪೨೯।। ಹೀಗೆ ಅವು ಮೂವತ್ತೊರು ಪ್ರಶ್ನೆಗಳಿರುವುವು. ಇವುಗಳ ವಾಖ್ಯಾನವನ್ನು ಶ್ರೀಕೃಷ್ಣನು ಹೇಳುವನು. ಇದರಿಂದ ಉದ್ಧವನಿಗೆ ಅಂಗೈಯಲ್ಲಿನ ನೆಲ್ಲಿಕಾಯಿಯಂತೆ ಬ್ರಹ್ಮಜ್ಞಾನವನ್ನು ಸುಲಭವಾಗಿ ಕೊಡುತ್ತಿರುವನು ।।೪೩೦।।

ವಿವೇಕಯುಕ್ತ ಬುದ್ಧಿಯು ಅಸಾರದ ತ್ಯಾಗವನ್ನು ಮಾಡುವುದು, ಸಾರವನ್ನು ಗ್ರಹಣ ಮಾಡುವುದು, ಇದರಿಂದಾಗಿ ಮನಸ್ಸಿನ ಅನೇಕ ವೃತ್ತಿಗಳು ವಿವೇಕದಲ್ಲಿ ಬಂದು ಕೂಡಿಕೊಳ್ಳುವುವು ।।೪೩೧।। ಲವಣವು ಸಮುದ್ರಕ್ಕೆ ಯಾವ ಪ್ರಕಾರವಾಗಿ ಬಹುಪ್ರೀತಿಯಿಂದ ಆಲಿಂಗನವನ್ನು ಕೊಡುವುದೋ, ಅದರಂತೆ ಬುದ್ಧಿಯು ತಾನಾಗಿಯೇ ಪರಮಾತ್ಮನಲ್ಲಿ ಏಕರೂಪವಾಗುವುದು ।।೪೩೨।। ಸಮುದ್ರದಲ್ಲಿ ಲವಣವು ಹೋಗಿ ಕೂಡಿಕೊಳ್ಳುತ್ತಲೇ ಅದು ಸಮುದ್ರವೇ ಆಗಿಬಿಡುವುದು. ಅದರಂತೆ ಆತ್ಮಸ್ವರೂಪದ ನಿಶ್ಚಯದಿಂದ ಬುದ್ಧಿಯು ಚೈತನ್ಯಘನವಾಗುವುದು ।।೪೩೩।। ಈ ಪ್ರಕಾರವಾಗಿ ಬುದ್ಧಿಗೆ ಶಾಂತ ಸ್ವರೂಪವು ಪ್ರಾಪ್ತವಾಗುವುದು. ಇದಕ್ಕೇನೇ ಶಮ ಎಂದು ಹೇಳುವರು. ಆದರೆ ಇದಕ್ಕಿಂತಲೂ ಪೂರ್ವದಲ್ಲಿ ದಮವನ್ನು ಸಾಧಿಸಬೇಕಾಗುವುದು. ಅದರ ಪ್ರಕಾರವನ್ನೂ ಕೂಡ ಈಗ ಕೇಳು ।।೪೩೪।। ಶತ್ರುಗಳ ದಮನ ಮಾಡುವಿಕೆಯು ಇದು ದಮವಲ್ಲ. ಆದರೆ ಇಂದ್ರಿಯಗಳ ದಮನಮಾಡುವಿಕೆಯು ಅತ್ಯಂತ ಅವಶ್ಯಕವಾಗಿರುವುದು. ಅದರ ಲಕ್ಷಣಗಳನ್ನು ಈಗ ಹೇಳುವೆನು, ಅದನ್ನು ಕೇಳು ।।೪೩೫।। ಶಮಕ್ಕೆ ಸಹಾಯವಾಗುವಂತಹ ಯಾವ ಯುಕ್ತಿಗಳಿಂದ ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವುದು, ಶಾಸ್ತ್ರವಿಧಿಗಳ ಹೊರತಾಗಿ ಯಾವುದೇ ಭೋಗಗಳನ್ನು ಅವುಗಳಿಗೆ ಕೊಡುವಂತಿಲ್ಲ ಹಗಲು ರಾತ್ರಿ ಅವುಗಳನ್ನು ವೈರಾಗ್ಯದಿಂದ ಆವರಿಸಿಕೊಂಡು ಹಿಡಿದುಕೊಳ್ಳಬೇಕು ।।೪೩೬।। ಈ ಪ್ರಕಾರವಾಗಿ ಇಂದ್ರಿಯಗಳ ನಿಗ್ರಹವನ್ನು ಮಾಡುವಿಕೆಯ ನಾಮವೇ ದಮಗುಣ ಎಂದು ಕರೆಯುವರು. ಈಗ ತಿತಿಕ್ಷೆಯ ಸಂಪೂರ್ಣ ಲಕ್ಷಣಗಳನ್ನು ಹೇಳುವೆನು. ತಿತಿಕ್ಷಾ ಅಂದರೆ ಸಹನಶೀಲತೆಯಾಗಿರುವುದು. ಇದನ್ನು ಕೇಳು ।।೪೩೭।। ದೊಡ್ಡ ದೊಡ್ಡ ಸುಖಗಳು ಪ್ರಾಪ್ತವಾಗಲು, ಆಗ ಎಷ್ಟೊಂದು ಉಲ್ಹಾಸದಿಂದ ಅವುಗಳನ್ನು ಭೋಗಿಸುತ್ತೇವೆಯೋ, ಅಷ್ಟೇ ಉಲ್ಹಾಸದಿಂದ ದುಃಖಗಳನ್ನೂ ಕೂಡ ಸಹಿಸುವುದನ್ನು ಕಲಿಯಬೇಕು ।।೪೩೮।। ಯಾವ ಪ್ರಕಾರವಾಗಿ ಆಕಾಶವು ಪ್ರಕಾಶ ಮತ್ತು ಅಂಧಕಾರ ಈ ಎರ[illegible] ಸರಿಸಮಾನವಾಗಿ ಧರಿಸುತ್ತಿರುವುದೋ, ಅದೇ ಪ್ರಕಾರವಾಗಿಯೇ ಸುಖದುಃಖಗಳನ್ನು ನಿರ್ವಿಕಾರ ಮನದಿಂದ ಸಹಿಸಿಕೊಳ್ಳಬೇಕು ।।೪೩೯।।

ಗೋಫಣೇಚಾ ಸುವರ್ಣಪಾಷಾಣ । ಲಾಗೇ ತೋ ದುಃಖೀ ಹೋಯ ಪೂರ್ಣ । ತೋಚಿ ವೋಳಖಿಲಿಯಾ ಸುವರ್ಣ । ದುಃಖ ಜಾಊನ ಸುಖ ವಾಟೇ ॥೪೪೦॥ ತೈಸೇ ದ್ವಂದ್ವಾಚೇ ನಿಜಸ್ವರೂಪ । ವೋಳಖಿಲಿಯಾ ಸದ್ರೂಪ । ತೇವ್ಹಾ ದ್ವಂದ್ವೇ ಹೋತೀ ಚಿದ್ರೂಪ । ಹೇ ಮುಖ್ಯಸ್ವರೂಪ ತಿತಿಕ್ಷೇಚೇ ॥೪೪೧॥ ಸಾಂಡೂನಿಯಾ ದೇಹಅಹಂತೇ । ಸುಖದುಃಖಾಹೀ ಪರತೇ । ದೇಖಣೇ ಜೇ ಆಪಣಾತೇ । ತೇಚಿ ಯೇಥೇ ''ತಿತಿಕ್ಷಾ'' ॥೪೪೨॥ ಸ್ವಪ್ನೀಚೇ ದರಿದ್ರ ಆಣಿ ಸಧನತಾ । ಜಾಗೃತೀಸೀ ದೋನ್ಹೀ ಮಿಥ್ಯಾ । ತೇವೀ ಸುಖದುಃಖಾಪರತಾ । ದೇಖಣೇ ತತ್ತ್ವತಾ ತೇ ''ತಿತಿಕ್ಷಾ'' ॥೪೪೩॥ ಜಿವ್ಹಾ ಆಣಿ ದುಸರೇ ಶಿಶ್ನ । ಯಾಂಚಾ ಜಯೋ ಕರಾವಾ ಆಪಣ । ಯಾ ನಾಂವ ''ಧೃತಿ'' ಸಂಪೂರ್ಣ । ವಿದ್ಯಾ ಧಾರಣ ಧೃತೀ ನವ್ಹೇ ॥೪೪೪॥ ಜೇವೀ ಕೃಷ್ಣಸರ್ಪ ಧರಿಜೇ ಹಾತೀ । ಹೇ ದೋನೀ ಧರಿಜೇ ತೈಶಿಯಾ ರೀತೀ ।ಅಳುಮಾಳ ಢಿಲಾವತಾ ಧೃತೀ । ಪರತೋನಿ ಖಾತೀ ಧರಿತ್ಯಾಸೀ ॥೪೪೫॥ ಜ್ಯಾಸೀ ದ್ರವ್ಯದಾರಾಸಕ್ತೀ । ತೇಥ ಕದಾ ನ ರಿಗೇ ಹೇ ಧೃತೀ । ದ್ರವ್ಯದಾರಾ ಅನಾಸಕ್ತೀ । ತ್ಯಾಚೇ ಘರೀ ಧೃತೀ ಪೋಷಣೆ ಸದಾ ॥೪೪೬॥

ದಂಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್ । ಸ್ವಭಾವವಿಜಯಃ ಶೌರ್ಯಂ ಸತ್ಯಂಚ ಸಮದರ್ಶನಮ್ ॥೩೭॥

ಅರ್ಥ:- ಯಾರನ್ನೂ ದ್ರೋಹವನ್ನು ಮಾಡದೇ ಸರ್ವರಿಗೂ ಅಭಯವನ್ನು ಕೊಡುವುದೇ ದಾನವಾಗಿರುವುದು. ಕಾಮನೆಗಳ ತ್ಯಾಗ ಮಾಡುವುದೇ ತಪಸ್ಸಾಗಿರುವುದು. ತನ್ನ ವಾಸನೆಗಳ ಮೇಲೆ ವಿಜಯವನ್ನು ಸಾಧಿಸುವುದೇ ಶೂರತೆಯಾಗಿರುವುದು. ಸರ್ವತ್ರವೂ ಸಮಸ್ವರೂಪ ಪರಮಾತ್ಮನ ದರ್ಶನ ಪಡೆಯುವುದೇ ಸತ್ಯವಾಗಿರುವುದು.

ಸರ್ವ ಭೂತಾಂಸೀ ನ ದ್ಯಾವೇ ದುಃಖ । ಯಾಚೇ ಪೋಟೀ ಆಲೇ ಸುಖ । ''ಮಹಾದಾನ'' ತೇ ಹೇಚಿ ದೇಖ। ದ್ಯಾವೇ ಸುಖ ಸರ್ವಾಸೀ ॥೪೪೭॥ ದುಃಖ ನಿರಸೂನಿ ಭೂತಾಂಸೀ । ಸುಖ ದೇಣೇ ಗಾ ಸರ್ವಾಸೀ । ಹೇಚಿ ಉತ್ತಮ ದಾನ ಪೃಥ್ವೀಸೀ। ಆನ ಯಾಸೀ ತುಕೇನಾ॥೪೪೮॥ ಜನ್ಮ ಮರಣಾಚೇ ದುಃಖ । ನಿರಸೂನಿ ದ್ಯಾವೇ ನಿಜಸುಖ । ಯಾಚಿ ನಾಂವೇ ''ದಾನ'' ದೇಖ । ಅಲೌಕಿಕ ಉದ್ಧವಾ ॥೪೪೯॥ ಯಾ ನಾಂವ ಗಾ ''ಪರಮದಾನ'' । ಉದ್ಧವಾ ನಿಶ್ಚಯೇಸೀ ಜಾಣ । ಐಕ ತಪಾಚೇ ಲಕ್ಷಣ । ತುಜ ಸಂಪೂರ್ಣ ಸಾಂಗೇನ ॥೪೫೦॥ ಕರೂನಿಯಾ ಕಾಮಾಚಾ ತ್ಯಾಗ । ತಪ ಕರಣೇ ತೇ ಅತಿಚಾಂಗ । ಹೃದಯೀ ಅಸತಾ ಕಾಮದಾಘ । ತಪಾಚೇ ಲಿಂಗ ಶೋಭೇನಾ ॥೪೫೧॥

ಸಕಾಮ ವನಾ ಜಾಯ ತಪಾಸೀ । ತೋ ವನೀಹೀ ಚಿಂತೀ ವನಿತೇಸೀ । ತೇ ತಪಚಿ ಬಾಧಕ ಹೋಯ ತ್ಯಾಸೀ । ಕಾಮ

ಕವಣೆಯಿಂದ ಹೊಡೆದ ಬಂಗಾರದ ಹರಳು ಶರೀರಕ್ಕೆ ತಗಲಿದಾಗ ಪ್ರಥಮದಲ್ಲಿ ದುಃಖವಾಗುವುದು. ಆದರೆ ಇದು ಬಂಗಾರದ ಕಲ್ಲು ಎಂದು ತಿಳಿದಾಕ್ಷಣವೇ ದುಃಖವು ಇಲ್ಲದಾಗಿ ಆ ಹೊಡೆತದಿಂದ ಸುಖವು ಪ್ರಾಪ್ತವಾಗುವುದು ॥೪೪೦॥ ಅದರಂತೆ ದ್ವಂದ್ವದ ಸ್ವರೂಪವು ಮದ್ರೂಪವಾಗಿದೆ ಎಂದು ತಿಳಿದುಕೊಂಡಾಗ ಸರ್ವ ದಂದ್ವಗಳು ಚಿದ್ರೂಪವಾಗಿಬಿಡುವುವು. ಇದು ತಿತಿಕ್ಷೆಯ ಮುಖ್ಯ ಲಕ್ಷಣವಾಗಿರುವುದು ॥೪೪೧॥ ದೇಹದ ಅಭಿಮಾನವನ್ನು ಬಿಟ್ಟುಕೊಟ್ಟು ಸುಖದುಃಖದ ಆಚೆಕಡೆಯಲ್ಲಿ ಆತ್ಮಸ್ವರೂಪವಿರುವುದೆಂದು ಕಾಣುವಿಕೆಗೆ ತಿತಿಕ್ಷಾ ಎಂದು ಹೇಳುವರು ॥೪೪೨॥ ಸ್ವಪ್ನದಲ್ಲಿನ ದಾರಿದ್ರ್ಯ ಅಥವಾ ಶ್ರೀಮಂತಿಕೆ ಈ ಎರಡೂ ಕೂಡ ಜಾಗೃತದಲ್ಲಿ ಯಾವ ರೀತಿಯಲ್ಲಿ ಮಿಥ್ಯೆ ಎಂದು ನಿರ್ಣಯಿಸಲ್ಪಡುವುವೋ, ಅದರಂತೆಯೇ ತಾನು ಸುಖ ದುಃಖಗಳಿಂದ ಭಿನ್ನನಾಗಿರುವೆನು ಎಂದು ತಿಳಿಯುವುದೇ ನಿಜವಾದ ತಿತಿಕ್ಷಾ ಆಗಿರುವುದು ॥೪೪೩॥ ನಾಲಿಗೆ ಮತ್ತು ಶಿಶ್ನ ಇವುಗಳನ್ನು ಪರಿಪೂರ್ಣವಾಗಿ ಅಂಕಿತದಲ್ಲಿಟ್ಟುಕೊಳ್ಳಬೇಕು. ಇದುವೇ ನಿಜವಾದ ಧೃತಿಯಾಗಿರುವುದು. ಕೇವಲ ವಿದ್ಯೆಯನ್ನು ಧರಿಸುವಿಕೆಯು ಇದು ನಿಜವಾದ ಧೃತಿಯಲ್ಲ ॥೪೪೪॥ ಕರೇ ನಾಗರ ಹಾವನ್ನು ಅದರ ಮುಖಕ್ಕೆ ಗಟ್ಟಿಯಾಗಿ ಹೇಗೆ ಹಿಡಿದುಕೊಳ್ಳಬೇಕೋ ಅದರಂತೆ ಈ ಎರಡು ಇಂದ್ರಿಯಗಳಿಗೆ ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಅವುಗಳಿಗೆ ಸ್ವಲ್ಪಾದರೂ ಸಡಿಲುಬಿಟ್ಟರೆ ಅವು ಹಿಡಿದವನಿಗೆ ತಿಂದು ಬಿಡುವುವು ॥೪೪೫॥ ಯಾರಿಗೆ ದ್ರವ್ಯ ಮತ್ತು ಕಾಮಿನಿ ಇವುಗಳ ಅತ್ಯಂತ ಆಸಕ್ತಿವಿರುವುದೋ, ಅವರಿಗೆ ಧೃತಿಯು ಎಂದಿಗೂ ಪ್ರಾಪ್ತವಾಗದು. ಯಾರ ಮನದಲ್ಲಿ ಧನದಾರಾ ಎಂಬ ಈ ವಿಷಯದಲ್ಲಿ ಅನಾಸಕ್ತಿವಿರುವುದೋ, ಅವರ ಮನೆಯಲ್ಲಿ ಧೃತಿಯು ನಿರಂತರವಾಗಿ ದಾಸಿಯಾಗಿ ಇರುವುದು ॥೪೪೬॥

ಯಾವ ಪ್ರಾಣಿಮಾತ್ರಕ್ಕೂ ದುಃಖವನ್ನು ಕೊಡಕೂಡದು. ಅಂದರೆ ಅವರಿಗೆ ಸುಖವನ್ನು ಕೊಡಬೇಕೆಂದು ಸಹಜವಾಗಿ ಅರ್ಥವಾಗುವುದು. ಸರ್ವರಿಗೂ ಸುಖವನ್ನು ಕೊಡುವುದೇ ಮಹಾದಾನವಾಗಿರುವುದು ॥೪೪೭॥ ಪ್ರಾಣಿಮಾತ್ರರ ದುಃಖಗಳನ್ನು ನಿವಾರಿಸಿ ಅವರನ್ನು ಸುಖಿಯನ್ನಾಗಿ ಮಾಡುವುದು ಇದು ಸರ್ವದರಲ್ಲಿಯೂ ಉತ್ತಮ ಪ್ರಕಾರದ ದಾನವಾಗಿರುವುದು. ಇಡೀ ಪೃಥ್ವಿಯನ್ನು ದಾನವಾಗಿ ಕೊಟ್ಟರೂ ಇದರ ಸರಿಸಮಾನ ತುಲನೆಯಾಗದು ॥೪೪೮॥ ಹೇ ಉದ್ಧವಾ, ಜನ್ಮ ಮರಣದ ದುಃಖವನ್ನು ದೂರ ಮಾಡಿ ಆತ್ಮಸುಖದ ಅಲೌಕಿಕ ಲಾಭವನ್ನು ಪ್ರಾಪ್ತಮಾಡಿಕೊಡುವುದು. ಇದಕ್ಕೆ ಮಾತ್ರ ಅಲೌಕಿಕ ದಾನವೆಂದು ಹೇಳುವರು. ಇದನ್ನು ಧ್ಯಾನದಲ್ಲಿಡು ॥೪೪೯॥ ಹೇ ಉದ್ಧವಾ, ಇದರ ನಾಮವೇ ನಿಜವಾಗಿಯೂ ಪರಮದಾನವೆಂದು ನೀನು ನಿಶ್ಚಯವಾಗಿ ತಿಳಿ. ಈಗ ತಪದ ಲಕ್ಷಣವನ್ನು ಕೇಳು. ಅದನ್ನೂ ಕೂಡ ನಿನಗೆ ಹೇಳುವೆನು ॥೪೫೦॥ ಸರ್ವಪ್ರಕಾರದ ಕಾಮನೆಗಳ ತ್ಯಾಗವನ್ನು ಮಾಡಿ ತಪವನ್ನು ಆಚರಿಸುವಿಕೆಯು ಇದು ಅತ್ಯಂತ ಉತ್ತಮವಾದ ತಪಸ್ಸಾಗಿರುವುದು. ಅಂತಃಕರಣದಲ್ಲಿ ಕಾಮರೂಪ ಅಗ್ನಿಯು ಪ್ರಜ್ವಲಿತವಾಯಿತೆಂದರೆ ತಪಸ್ಸಿನ ಈ ಲಕ್ಷಣವು ಶೋಭಿಸಲಾರದು ॥೪೫೧॥

ಆಂಗೇಸೀ ವರ್ತತಾ ।।೪೫೨।। ತ್ಯಾಗೋನಿ ಕಾಮಾಚೀ ಕಾಮಸ್ಥಿತೀ । ತೈ ತಪಾಚೀ ಉತ್ತಮ ಗತೀ । ಅಖಂಡ ಲಾಗೇ ಮಾಝೀ ಸ್ಮೃತೀ । ''ಶುದ್ಧತಪ'' ಪ್ರಾಪ್ತೀ ಯಾ ನಾಂವ ।।೪೫೩।। ಮಾಝ್ಯಾ ಠಾಯೀ ಅನುತಾಪ । ತ್ಯಾ ನಾಂವ ಗಾ ''ಶುದ್ಧತಪ'' । ಕಾ ಹೃದಯೀ ಚಿಂತಿತಾ ಚಿತ್ಸ್ವರೂಪ । ಹೇ ''ಪರಮತಪ'' ತಪಾಮಾಜೀ ।।೪೫೪।। ಐಕ ಶೌರ್ಯಾಚಾ ವಿಚಾರ । ರಣೀ ಮರ್ದೂನಿ ಅರಿವೀರ । ಜಿಂತಿಲಾ ಶತ್ರೂಂಚಾ ಸಂಭಾರ । ತೋ ಏಥ ಶೂರ ಮಾನೇನಾ ।।೪೫೫।। ಪ್ರವಾಹರೂಪೇ ಅನಿವಾರ । ಜೀವಭಾವ ಲಾಗಲಾ ಥೋರ । ತ್ಯಾತೇ ಜಿಂಕೇ ಜೋ ಮಹಾವೀರ । ತೋ ''ಪರಮಶೂರ'' ಬೋಲಿಜೇ ।।೪೫೬।। ''ಮಾಝಾ ಸದಾಚಾರ ನಿರ್ವಾಹೋ । ಮೀ ಸಜ್ಞಾನ ನಿಃಸಂದೇ ಹೋ । ಮಾಝಾ ಪವಿತ್ರ ಬ್ರಾಹ್ಮಣದೇಹೋ'' । ಹಾ ''ಜೀವಭಾವೋ'' ಜೀವಾಚಾ ।।೪೫೭।। ದೇಹಾಚೇ ಮಾಥಾ ವರ್ಣಾಶ್ರಮ । ಆಶ್ರಮಾಚೇ ಮಾಥಾ ಕರ್ಮ । ತೋ ಕರ್ಮಾಭಿಮಾನ ಜ್ಯಾ ಪರಮ । ತ್ಯಾಸೀ ದೇಹಭ್ರಮ ಅನಿವಾರ ।।೪೫೮।। ಜಿಣೋನಿ ಜೀವಾಚೇ ಸ್ವಭಾವ । ಚಿದಾನಂದಾಚೀ ರಾಣೀವ । ಭೋಗಿಜೇ ಸ್ವರಾಜ್ಯವೈಭವ । ಹೇ ಪರಮ ಗೌರವ ಶೌರ್ಯಾಚೇ ।।೪೫೯।। ಜ್ಯಾ ನಾಂವ ಬೋಲಿಜೇ ನಿಜಸತ್ಯ । ತೇ ಮೀ ಸಾಂಗೇನ ನಿಶ್ಚಿತ । ಸಮ ಬ್ರಹ್ಮ ದೇಖಣೇ ಸತತ । ತೇ ''ಪರಮಸತ್ಯ'' ಉದ್ಧವಾ ।।೪೬೦।। ವಸ್ತು ನ ದೇಖತಾ ಸರ್ವಸಮ । ಜೇ ಜೇ ದೇಖಣೇ ಗಾ ವಿಷಮ । ತೇಚಿ ಅಸತ್ಯ ಅತಿದುರ್ಗಮ । ''ಸತ್ಯ'' ತೇ ಬ್ರಹ್ಮ ಸಮಸಾಮ್ಯ ।।೪೬೧।। ಕೇವಳ ಜೇ ಸತ್ಯ ಭಾಷಣ । ತೇ ನಿಜಸತ್ಯ ನವ್ಹೇ ಜಾಣ । ತೇಚಿವಿಖೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೪೬೨।।

ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ । ಕರ್ಮಸ್ವಸಂಗಮಃ ಶೌಚಂ ತ್ಯಾಗಃ ಸನ್ಯಾಸ ಉಚ್ಯತೇ ।೩೮।।

ಅರ್ಥ:- ಹೀಗಿರುವ ಸತ್ಯ ಮತ್ತು ಮಧುರ ಭಾಷಣಕ್ಕೆ ಮಹಾತ್ಮರು ಋತ ಎಂದು ಹೇಳುವರು. ಕರ್ಮದಲ್ಲಿ ಆಸಕ್ತನಾಗದಿರುವುದೇ ಶೌಚವಾಗಿರುವುದು. ಕಾಮನೆಗಳ ತ್ಯಾಗ ಮಾಡುವುದೇ ನಿಜವಾದ ಸನ್ಯಾಸವಾಗಿರುವುದು.

ಇತರ ಕವೀಂಚೀ ವದಂತೀ । ''ಋತ'' ಯಾ ನಾಂವ ಸತ್ಯ ಮ್ಹಣತೀ । ಹೇ ಸತ್ಯ ಮಾನಾವೇ ಪ್ರವೃತ್ತೀ । ಸಮ ಬ್ರಹ್ಮ ನಿಜವೃತ್ತೀಮಾಜೀ ಸತ್ಯ ।।೪೬೩।।
ಋತ ಮ್ಹಣಿಜೇ ತೇ ಐಸೇ ಯೇಥ । ಸತ್ಯ ವಾಚಾ ಜೇ ಶ್ರೋತ್ಯಾಂಚೇ ಹಿತ । ತೇಹೀ ದುಃಖಸಂಬಂಧರಹಿತ ।

ಸಾಧಕನು ಮನದಲ್ಲಿ ಕಾಮನೆಗಳನ್ನು ಇಟ್ಟುಕೊಂಡು ಅರಣ್ಯಕ್ಕೆ ಹೊರಟು ಅಲ್ಲಿ ಸ್ತ್ರೀಚಿಂತನೆ ಮಾಡುತ್ತಿದ್ದರೆ ಈ ಕಾಮದ ಆಸಕ್ತಿಯಿಂದ ಆತನ ತಪವು ಆತನಿಗೆ ಬಾಧಕವಾಗುವುದು ।।೪೫೨।। ವಾಸನೆಗಳನ್ನು ನಿಃಶೇಷವಾಗಿ ತ್ಯಜಿಸಿ ವಿಷಯಗಳ ವಿಷಯದಲ್ಲಿ ಉದಾಸೀನನಾಗಿರುವುದು. ಇದುವೇ ತಪಸ್ಸಿನ ನಿಜವಾದ ಸಾಧನೆಯಾಗಿರುವುದು. ಅಖಂಡವಾಗಿ ನನ್ನ ಸ್ಮರಣೆಯನ್ನು ಮಾಡುವುದೇ ಇದು ಶುದ್ಧವಾದ ತಪಸ್ಸಾಗಿರುವುದು ।।೪೫೩।। ಅನುತಾಪಪೂರ್ವಕವಾಗಿ ನನ್ನ ಸ್ವರೂಪದಲ್ಲಿ ಚಿತ್ತವನ್ನು ಹಚ್ಚುವಿಕೆಗೆ ಶುದ್ಧತಪವೆಂದು ಇದರ ಹೆಸರಾಗಿರುವುದು. ಅಥವಾ ನನ್ನ ಚಿತ್‌ಸ್ವರೂಪವನ್ನು ಹೃದಯದಲ್ಲಿ ಚಿಂತಿಸುವುದು ಇದುವೇ ಸರ್ವದರಲ್ಲಿ ಶ್ರೇಷ್ಠವಾದ ತಪವಾಗಿರುವುದು ।।೪೫೪।। ಈಗ ಶೌರ್ಯದ ವಿಚಾರವನ್ನು ಕೇಳು. ಯಾವನು ರಣರಂಗದಲ್ಲಿ ಬಲಾಢ್ಯ ಸೈನ್ಯದ, ಶತ್ರುಗಳನ್ನು ಹೊಡೆದು ಶತ್ರುಗಳ ಸೈನ್ಯವನ್ನು ಜಯಿಸಿದರೆ ಆತನಿಗೆ ಶೂರನೆಂದು ಕರೆಯುವುದು ಇಲ್ಲಿ ಮನ್ನಿಸಲಾಗದು ।।೪೫೫।। ಅನಿವಾರ್ಯವಾಗಿರುವ ಯಾವ ಜೀವಭಾವವು ಪ್ರವಾಹ ರೂಪದಿಂದ ತನ್ನ ಬೆನ್ನಿಗೆ ಹತ್ತಿರುವುದು. ಅದನ್ನು ಜಯಿಸುವ ಮಹಾವೀರನು ನಿಜವಾದ ಶೂರನಾಗಿರುವನು ।।೪೫೬।। ನಾನು ಯಾವಾಗಲೂ ಸದಾಚಾರದಿಂದ ನಡೆಯುತ್ತಿರುವೆನು, ನಾನೊಬ್ಬನೇ ಜ್ಞಾನಿಪುರುಷನು, ನನ್ನ ಈ ಬ್ರಾಹ್ಮಣ ದೇಹವು ಪವಿತ್ರವಾಗಿರುವುದು. ಹೀಗೆ ಯಾವ ಅಹಂಕಾರದ ವಿಚಾರವು ಇದೇ ಜೀವಭಾವವಾಗಿರುವುದು ।।೪೫೭।। ದೇಹದ ತಲೆಯ ಮೇಲೆ ವರ್ಣಾಶ್ರಮವು, ಆಶ್ರಮಯದ ತಲೆಯ ಮೇಲೆ ಕರ್ಮವು, ಆ ಕರ್ಮಗಳ ಅತಿಶಯವಾದ ಅಭಿಮಾನಕ್ಕೆ ಅನಿವಾರ್ಯವಾದ ದೇಹಭ್ರಮವು ಉಂಟಾಗುವುದು ।।೪೫೮।। ಆದಕಾರಣ ಜೀವಸ್ವಭಾವವನ್ನು ಜಯಿಸಿ ಚಿದಾನಂದದ ರಾಜ್ಯದ ಮೇಲೆ ಕುಳಿತುಕೊಂಡು ತನ್ನ ಚಿದಾನಂದ ಆತ್ಮಸ್ವರೂಪ ಸ್ವರಾಜ್ಯದಲ್ಲಿ ವೈಭವದ ಸುಖವನ್ನು ಭೋಗಿಸುವಿಕೆಗೆ ನಿಜವಾದ ಶೌರ್ಯವೆಂದು ಹೇಳುವರು ।।೪೫೯।। ಈಗ ಯಾವುದಕ್ಕೆ ಸತ್ಯವೆಂದು ಹೇಳುವರೋ ಅದನ್ನು ನಾನು ನಿನಗೆ ನಿಶ್ಚಿತವಾಗಿ ಹೇಳುವೆನು. ಹೇ ಉದ್ಧವಾ, ಸರ್ವತ್ರ ಸದಾ ಸಮಬ್ರಹ್ಮವನ್ನು ಕಾಣುವುದು ಇದುವೇ ಪರಮಸತ್ಯವಾಗಿರುವುದು ।।೪೬೦।। ಪರಬ್ರಹ್ಮವು ಸರ್ವತ್ರವೂ ಸಮಾನರೂಪದಿಂದ ತುಂಬಿಕೊಂಡಿರಲು ಅದಕ್ಕೆ ಅಲಲ್ಲಿ ಭಿನ್ನ ಭಿನ್ನವಾಗಿ ಕಾಣುವುದು ಇದು ಅತ್ಯಂತ ಅಸತ್ಯವಾಗಿರುವುದು. ಬ್ರಹ್ಮವು ಸರ್ವ ವ್ಯಾಪಕವಾಗಿದ್ದು ಅದು ಸರ್ವತ್ರ ಸಮಾನ ಸ್ವರೂಪದಲ್ಲಿರುವುದು. ಹೀಗೆ ತಿಳಿಯುವುದೇ ಸತ್ಯವಾಗಿರುವುದು ।।೪೬೧।। ಸಾರಾಂಶವೇನೆಂದರೆ, ಕೇವಲ ಸತ್ಯ ಭಾಷಣ ಮಾಡುವುದು ಸತ್ಯವಲ್ಲ. ಈ ವಿಷಯಕ್ಕೆ ದ್ವಾರಕಾಧೀಶನಾದ ಶ್ರೀಕೃಷ್ಣನು ನಿರೂಪಣೆಯನ್ನು ಮುಂದುವರೆಸಿದನು ।।೪೬೨।।

ಇತರ ಕವಿಗಳು, ವಿದ್ವಾನ ಜನರು ಋತ ಎಂದರೆ ಸತ್ಯವೆಂದು ತಿಳಿಯುತ್ತಾರೆ. ಇದನ್ನು ಪ್ರವೃತ್ತಿರೂಪದಿಂದ ನೋಡಿದರೆ ನಿಜವಾಗಿರುವುದು. ಆದರೆ ನಿವೃತ್ತಿಯ ದೃಷ್ಟಿಯಿಂದ ನೋಡಿದರೆ ಮಾತ್ರ ಸಮಬ್ರಹ್ಮಕ್ಕೆ ಸತ್ಯವೆಂದು ತಿಳಿಯುವುದು ಯೋಗ್ಯವಾಗಿರುವುದು ।।೪೬೩।।

''ಋತ'' ನಿಶ್ಚಿತ ಯಾ ನಾಂವ ।।೪೬೪।। ಚಿತ್ರೀ ಪಾಹತಾ ದಿಸೇ ವಿಷಮ । ತ್ಯಾಮಾಜೀ ಭಿಂತೀ ಸದಾ ಸಮ । ತೇವೀ ಜಗ ದೇಖತಾ ವಿಷಮ । ಜ್ಯಾ ಬ್ರಹ್ಮ ಸಮ ನಿಜಬೋಧೇ ।।೪೬೫।। ಯಾ ನಾಂವ ಗಾ ''ಸತ್ಯ'' ಜಾಣ । ಉದ್ಧವೇ ಕೇಲಾ ನಾಹೀ ಜೋ ಪ್ರಶ್ನ । ತ್ಯಾ ಶೌಚಾಚೇ ನಿರೂಪಣ । ದೇವೋ ಆಪಣ ಸಾಂಗತ ।।೪೬೬।। ನವ್ಹತಾ ಶುದ್ಧ ಅಂತಃಕರಣ । ತ್ಯಾಗ ಸನ್ಯಾಸ ನ ಘಡೇ ಜಾಣ । ಆಂತರಶುದ್ಧ್ಯರ್ಥ ಶೌಚ ಪೂರ್ಣ । ಸ್ವಧರ್ಮಾಚರಣ ಹರಿ ಸಾಂಗೇ ।।೪೬೭।। ಅಂತರೀ ಕರ್ಮಮಳಾಚೇ ಬಂಧನ । ತ್ಯಾಚೇ ಸ್ವಧರ್ಮೇ ಕರಾವೇ ಕ್ಷಾಲನ । ಕರ್ಮೇ ಕರ್ಮಾಚೇ ನಿರ್ದಳಣ । ಕರೂನಿ ಆಪಣ ನಿಷ್ಕರ್ಮ ವ್ಹಾವೇ ।।೪೬೮।। ತೇ ಸ್ವಧರ್ಮೀ ಫಳಾಶಾ ಸುಟತಾ । ಕರ್ಮಬಂಧನೇ ತುಟತೀ ಸರ್ವಥಾ । ಯಾಲಾಗೀ ಫಳನಿರಾಶತಾ । ಆಂತರಶೌಚತಾ ಅತಿಶೀಘ್ರ ।।೪೬೯।। ನೈರಾಶ್ಯೇ ಸ್ವಧರ್ಮಾಚರಣ । ತೇಣೇ ಅಂತರಮಳಾಚೇ ಕ್ಷಾಲನ । ಯಾ ನಾಂವ ಗಾ ಶೌಚ ಜಾಣ । ''ಶೌಚ'' ಸಂಪೂರ್ಣ ನೈರಾಶ್ಯೇ ।।೪೭೦।। ಐಸೇ ಶೌಚ ಶುದ್ಧ ಅಂತಃ ಕರಣೇ । ತೇ ಭೂಮಿಕಾ ಸನ್ಯಾಸಗ್ರಹಣೇ । ಯಾಲಾಗೀ ಶೌಚ ಅಪ್ರಶ್ನೀ । ಸಾರಂಗಪಾಣೀ ಬೋಲಿಲಾ ।।೪೭೧।। ಸಕಳ ಸಂಕಲ್ಪಾಂಚಾ ತ್ಯಾಗ । ಹಾಚಿ ಪೈ ''ಸನ್ಯಾಸ'' ಚಾಂಗ । ಐಸೇ ಬೋಲಿಲಾ ತೋ ಶ್ರೀರಂಗ । ''ತ್ಯಾಗ'' ತೋ ಚಾಂಗ ಯಾವ ನಾಂವ ।।೪೭೨।। ಮೀ ದೇಹ ಹೇ ದೃಢತಾ ಜೀವೀ । ಸಂಕಲ್ಪೇ ತಗಮಗ ನಿತ್ಯ ನವೀ । ಬಾಹ್ಯ ದಂಡ ಕಮಂಡಲು ಭಗವೀ । ಸನ್ಯಾಸಪದವೀ ಲೌಕಿಕ ।।೪೭೩।।

ಧರ್ಮ ಇಷ್ಟಂ ಧನಂ ನೃಣಾಂ ಯಜ್ಞೋಽಹಂ ಭಗವತ್ತಮಃ ।
ದಕ್ಷಿಣಾ ಜ್ಞಾನಸಂದೇಶಃ ಪ್ರಾಣಾಯಾಮಃ ಪರಂ ಬಲಮ್ ।೧೯।।

ಅರ್ಥ:- ಧರ್ಮವು ಮನುಷ್ಯನ ಅಭೀಷ್ಟ ಧನವಾಗಿರುವುದು. ಪರಮೇಶ್ವರನಾಗಿರುವ ನಾನು ಯಜ್ಞನಾಗಿರುವೆನು. ಜ್ಞಾನದ ಉಪದೇಶವನ್ನು ಕೊಡುವುದು ದಕ್ಷಿಣೆಯಾಗಿರುವುದು ಮತ್ತು ಪ್ರಾಣಾಯಾಮವು ಇದು ಶ್ರೇಷ್ಠ ಬಲವಾಗಿರುವುದು.

ಧನ ಧಾನ್ಯ ಪಶು ರತ್ನ । ಹೇ ಪ್ರಾಣ್ಯಾಸೀ ನವ್ಹೇ ಇಷ್ಟ ಧನ । ಮೋಕ್ಷಮಾರ್ಗೀ ಸಬಳ ಜಾಣ । ಇಷ್ಟ ಧನ ತೋ ಧರ್ಮ ।।೪೭೪।। ಘರೀ ಜೇ ಪುರಿಲೇ ಧನ । ತೇ ಘರೀಚ ರಾಹೇ ಜಾಣ । ಧರ್ಮ ತೋ ಸವೇ ಚಾಲತೇ ಧನ । ಅಂಗಾ ಬಂಧನ ಯೇವೋ ನೇದೀ ।।೪೭೫।।
ಧರ್ಮಿಷ್ಠಾ ಯೇವಢಾ ಕೃಪಣ । ನ ದೇಖೇ ಮೀ ಆಣಿಕ ಜಾಣ । ಮರತಾಂಹೀ ಸ್ತ್ರೀಪುತ್ರಾ ವಂಚೂನ । ಅವಘೇಚಿ ಧನ ಸವೇ ನೇ ।।೪೭೬।। ಧಾರ್ಮಿಕೀ ಧರ್ಮಾರ್ಥ ವೇಂಚೂನಿ ಧನ । ಮೀ ಭಾಂಡಾರೀ ಕೇಲಾ ನಾರಾಯಣ ।

ಇಲ್ಲಿ ಋತ ಎಂದರೆ ಶ್ರೋತೃಗಳ ದುಃಖಸಂಬಂಧರಹಿತ ಹಿತವನ್ನು ಮಾಡುವ ಇಂತಹ ಸತ್ಯವಾಣಿಗೆ ಮಾತ್ರ ನಿಜವಾದ ಋತ ಎಂದು ಹೇಳುವರು ।।೪೬೪।। ಗೋಡೆಯ ಮೇಲೆ ಬರೆದ ಚಿತ್ರಗಳು ವಿವಿಧ ಬಣ್ಣಗಳಿಂದ ಮತ್ತು ವಿವಿಧ ಪ್ರಕಾರಗಳಿಂದ ಕೂಡಿದ್ದರೂ, ಆ ಚಿತ್ರಗಳಿಗೆ ಆಶ್ರಯಭೂತ ವಾಗಿರುವ ಗೋಡೆಯು ಒಂದೇ ಇರುವುದು. ಅದರಂತೆ ಜಗತ್ತು ಭಿನ್ನ ಭಿನ್ನಸ್ವರೂಪದಿಂದ ತೋರುತ್ತಿದ್ದರೂ ಆತ್ಮೈಕ್ಯ ದೃಷ್ಟಿಯಿಂದ ಅದರ ಅಧಿಷ್ಠಾನವು ಬ್ರಹ್ಮವೇ ಆಗಿರುವುದು. ಇದು ಸರ್ವತ್ರ ಸಮಾನವಾಗಿರುವುದು ।।೪೬೫।। ಇದರ ನಾಮವೇ ಸತ್ಯ ಎಂದಾಗಿ ರುವುದು. ಇದನ್ನು ಲಕ್ಷದಲ್ಲಿಡು. ಈಗ ಉದ್ಧವನು ಕೇಳದೇ ಇದ್ದ ಶೌಚ ಸಂಬಂಧವಾಗಿ ಈ ನಿರೂಪಣೆಯನ್ನು ಸ್ವತಃ ಶ್ರೀಕೃಷ್ಣನು ಮಾಡುತ್ತಿ ರುವನು ।।೪೬೬।। ಅಂತಃಕರಣವು ಶುದ್ಧವಾಗದ ಹೊರತು ತ್ಯಾಗ ಅಥವಾ ಸನ್ಯಾಸವು ಸಾಧಿಸುವುದಿಲ್ಲ. ಚಿತ್ತಶುದ್ಧಿಯಾಗುವುದಕ್ಕಾಗಿ ಆವಶ್ಯಕ ವಾಗಿರುವ ಸ್ವಧರ್ಮಾಚರಣೆಯನ್ನು ಶ್ರೀಕೃಷ್ಣನು ಹೇಳತ್ತಿರುವನು ।।೪೬೭।। ಅಂತಃಕರಣದಲ್ಲಿ ಕರ್ಮಮಲದ ಬಂಧವಿರುತ್ತದೆ. ಅದನ್ನು ಸ್ವಧರ್ಮದಿಂದ ಕ್ಷಾಲನೆಗೊಳಿಸಬೇಕು. ಕರ್ಮದಿಂದಲೇ ಕರ್ಮದ ನಾಶವನ್ನು ಮಾಡಿ ತಾನು ನಿಷ್ಕರ್ಮನಾಗಬೇಕು ।।೪೬೮।। ಸ್ವಧರ್ಮ ದಲ್ಲಿನ ಫಲಾಶೆಯು ಬಿಟ್ಟು ಹೋಗಲು ಕರ್ಮಬಂಧನೆಗಳು ಮುರಿದುಬೀಳುವುವು. ಆದ್ದರಿಂದ ಫಲದ ಆಸಕ್ತಿಯನ್ನು ತೊರೆದು ಅಂತಃಕರಣ ಶುದ್ಧಿಯನ್ನು ತ್ವರಿತವಾಗಿ ಮಾಡಬೇಕು ।।೪೬೯।। ನೈರಾಶ್ಯ ವೃತ್ತಿಯಿಂದ ಸ್ವಧರ್ಮಾಚರಣೆಯನ್ನು ಮಾಡಿದರೆ ಅಂತಃಕರಣದಲ್ಲಿನ ಮಲಿನತ್ವದ ಕ್ಷಾಲನೆಯಾಗುವುದು. ಇದರ ನಾಮವೇ ಶೌಚವಾಗಿರುವುದು. ಸರ್ವ ಪ್ರಕಾರದ ಆಶೆಯನ್ನು ಬಿಟ್ಟು ಬಿಡುವುದರಿಂದಲೇ ಶೌಚವು ಸಾಧ್ಯವಾ ಗುವುದು ।।೪೭೦।। ಅಂತಃಕರಣದಲ್ಲಿನ ಇಂತಹ ಶುದ್ಧತೆಯೇ ಸನ್ಯಾಸದ ಬುನಾದಿಯಾಗಿರುವುದು. ಆದ್ದರಿಂದ ಶೌಚ ವಿಷಯಕ್ಕೆ ಪ್ರಶ್ನೆಯನ್ನು ಕೇಳದಿದ್ದರೂ ಶ್ರೀಕೃಷ್ಣನು ಅದರ ಸ್ಪಷ್ಟೀಕರಣವನ್ನು ಮಾಡಿದನು ।।೪೭೧।। ಸರ್ವಪ್ರಕಾರದ ಸಂಕಲ್ಪಗಳ ತ್ಯಾಗವನ್ನು ಮಾಡುವುದೇ ಉತ್ತಮವಾದ ಸನ್ಯಾಸವಾಗಿರುವುದು. ಹೀಗೆ ಶ್ರೀಕೃಷ್ಣನು ಹೇಳಿದನು. ಇದಕ್ಕೆ ಮಾತ್ರ ಶ್ರೇಷ್ಠ ತ್ಯಾಗವೆನ್ನುವರು ।।೪೭೨।। ದೇಹವೇ ಆತ್ಮವು ಎಂಬ ಈ ದೃಢ ಭಾವನೆಯನ್ನು ಮನದಲ್ಲಿಟ್ಟುಕೊಂಡು ಇದರಿಂದ ಒಳಗಡೆ ತಳಮಳವು ಹತ್ತಿರುವುದು. ಆದರೆ ಹೊರಗೆ ನೋಟ ಮಾತ್ರಕ್ಕೆ ದಂಡ, ಕಮಂಡಲ, ಕ್ಯಾವಿ ವಸ್ತ್ರಗಳು ಇವುಗಳ ಡೌಲು ತೋರಿಸುವುದು ಇದು ಲೌಕಿಕವಾದ ಸನ್ಯಾಸ ದೀಕ್ಷೆಯಾಗಿರುವುದು ।।೪೭೩।।

ಧನ, ಧಾನ್ಯ, ಎಮ್ಮೆ, ಆಕಳು, ರತ್ನ ಇತ್ಯಾದಿಗಳು ಇವು ಯಾವ ಮನುಷ್ಯನ ನಿಜವಾದ ಹಿತ ಮಾಡುವ ಸಂಪತ್ತು ಅಲ್ಲ. ಮೋಕ್ಷ ಮಾರ್ಗದಲ್ಲಿ ಬಲಿಷ್ಠವಾದ ಯಾವ ಧರ್ಮವೇ ಇಷ್ಟ ಅಂದರೆ ಹಿತಕಾರಕ ಧನವಾಗಿರುವುದು ।।೪೭೪।। ಮನೆಯಲ್ಲಿ ಹುಗಿದಿಟ್ಟ ಧನವು ಅದು ಮನೆಯಲ್ಲಿ ಇಟ್ಟಲ್ಲೇ ಇರುವುದು. ಆದರೆ ಧರ್ಮವು ಮಾತ್ರ ನಮ್ಮ ಜೊತೆಯಲ್ಲಿ ನಡೆದು ಬರುವಂತಹ ಧನವಾಗಿರುವುದು. ಅದು ನಮ್ಮನ್ನು ಯಾವ ಪ್ರಕಾರದ ಬಂಧನೆಗೆ ಒಳಪಡಿಸುವುದಿಲ್ಲ ।।೪೭೫।।

ಜೇ ಸಮಯೀ ಜೇ ಜೇ ಲಾಗೇ ಜಾಣ । ತೇ ಮೀ ಆಪಣ ಸ್ವಯೇ ಪುರವೀ ॥೪೭೭॥ ಯಾಲಾಗೀ ಧರ್ಮ ತೋ ಇಷ್ಟ ಧನ । ಹೇ ಸತ್ಯ ಸತ್ಯ ಮಾಝೇ ವಚನ । ಐಕ ಯಜ್ಞಾಚೇ ವ್ಯಾಖ್ಯಾನ । ಯಥಾರ್ಥ ಜಾಣ ಸಾಂಗತೋ ॥೪೭೮॥ ಅಗ್ನಿ ತೋ ಮಾಝೇ ಮುಖ ಜಾಣ । ಯಜ್ಞಭೋಕ್ತಾ ಮೀ ನಾರಾಯಣ । ಅವಘಾ ಯಜ್ಞಚಿ ಮೀ ಶ್ರೀಕೃಷ್ಣ । ಪರಮ ಪ್ರಮಾಣ ವೇದೋಕ್ತ ॥೪೭೯॥ ತೇಥೇ ಮಾಝೇ ಸ್ವರೂಪ ಬ್ರಾಹ್ಮಣ । ಮದ್ದೀಕ್ಷಾ ದೀಕ್ಷಿತ ಜಾಣ । ಸದ್ಭಾವೇ ಕರೂನಿಯಾ ಯಜನ । ವಾಝೇ ಸುಖ ಸಂಪೂರ್ಣ ಪಾವಲೇ ॥೪೮೦॥ ತೇಥ ಅಧರ್ಮದ್ರವ್ಯಾಚೇನಿ ಕೋಡೇ ।ಅವಿಧೀ ದಾಂಭಿಕ ಯಾಗ ಘಡೇ । ತೋಹೀ ಮಜ ಮುಖೀಚ ಪಡೇ । ಪರೀ ತೇ ಕೋರಡೇ ಖಡಖಡಿತ ॥೪೮೧॥ ಅವಿಧೀ ಜಾಹಲೇ ಪಶುಘಾತಕೀ । ತೇಣೇ ಅವದಾನೇ ಮೀ ನವ್ಹೇ ಸುಖೀ । ದಂಭೇ ಪಡಲೇ ಕುಂಭಿಪಾಕೀ । ಮಹಾ ನರಕೀ ರೌರವೀ ॥೪೮೨॥ ಸರ್ವ ಭೂತಾಂಚ್ಯಾ ಭೂತಮುಖೀ । ಅರ್ಪೀ ತೇ ಪಾವೇ ಯಜ್ಞಪುರುಖೀ । ಹೇ ದೀಕ್ಷಾ ನೇಣೋನಿ ಯಾಜ್ಞಿಕೀ । ಜಾಹಲೇ ನಾರಕೀ ಹಿಂಸಾದೋಷೇ ॥೪೮೩॥ ಜೇ ಮದ್‌ಭಾವೇ ದೀಕ್ಷಿತ ಜಾಣ । ವಿಶ್ವತೋಮುಖೀ ಜ್ಯಾಂಚೇ ಯಜನ । ತಯಾಂಚಾ ''ಯಜ್ಞ'' ತೋ ಮೀ ನಾರಾಯಣ । ದಕ್ಷಿಣಾ ಕೋಣ ತೇ ಐಕಾ ॥೪೮೪॥ ಯಜ್ಞಾಸೀ ಮೋಲ ನಾಹೀ ದೇಖ । ತ್ಯಾಸೀ ಜ್ಞಾನದಕ್ಷಿಣಾ ಅಮೋಲಿಕ । ಹಾತಾ ಯೇತಾಂಚಿ ಯಾಜ್ಞಿಕ । ಮಹಾಸುಖ ಪಾವಲೇ ॥೪೮೫॥ ದಕ್ಷಿಣಾ ಆಲ್ಯಾ ಜ್ಞಾನಧನ । ಯಾಜ್ಞಿಕ ಹೋತೀ ಅತಿಸಂಪನ್ನ । ಕಲ್ಪಾಂತೀ ವೇಂಚೇನಾ ತೇ ಧನ । ನಿಜೇ ಸಮಾಧಾನ ಜೀವಶಿವಾ ॥೪೮೬॥ ಸರ್ವಾಮಾಜೀ ಪ್ರಾಣ ಸಬಳ । ಪ್ರಾಣಬಳೇ ಬಳೀ ಸಕಳ । ಪ್ರಾಣಯೋಗೇ ಮನ ಚಪಳ । ಅತಿಚಂಚಳ ಪ್ರಾಣಸ್ಪಂದೇ ॥೪೮೭॥ ಯಾಪರೀ ಗಾ ಬಳಿಷ್ಠ ಪ್ರಾಣ । ಪ್ರಾಣಾ ಆಧೀನ ಸದಾ ಮನ । ತೋ ಪ್ರಾಣ ಜಿಂಕಾವಾ ಆಪಣ । ''ಬಳವಂತಪಣ'' ಯಾ ನಾಂವ ॥೪೮೮॥

ಗಜ ಉಪಡಿಜೇ ಪಾಯೀ ಧರೂನ । ಘಾಯೀ ಚೂರ ಕೀಜೇ ಪಂಚಾನನ । ಪ್ರಾಣ ನ ಜಿಂಕತಾ ಜಾಣ । ಶೂರಾಂಚೇ ಪ್ರಮಾಣ ನವ್ಹೇ ಬಳ ॥೪೮೯॥ ಪ್ರಾಣಾ ಆಧೀನ ಜೀವ ಮನ । ತ್ಯಾ ಪ್ರಾಣಾಚೇ ಕರೂನಿ ದಮನ । ತೋ ಸ್ವಯೇ

ಧಾರ್ಮಿಕ ಮನುಷ್ಯನಂತಹ ಕೃಪಣನನ್ನು ನಾನು ಬೇರೆ ಯಾರನ್ನೂ ಕಾಣೆನು, ಕಾರಣ ಆತನು ಮರಣ ಹೊಂದಿದಾಗ ತನ್ನ ಹೆಂಡತಿ ಮಕ್ಕಳನ್ನು ವಂಚಿಸಿ ಸರ್ವ ಧನವನ್ನು ತನ್ನ ಜೊತೆಯಲ್ಲಿ ಒಯ್ಯುವನು ॥೪೭೬॥ ಧಾರ್ಮಿಕ ಭಕ್ತರು ತಮ್ಮ ಸರ್ವ ಧನವನ್ನು ಧರ್ಮಾರ್ಥವಾಗಿ ಖರ್ಚನ್ನು ಮಾಡಿ ನಾರಾಯಣನಾದ ನನಗೆ ಬೊಕ್ಕಸದ ಅಧಿಕಾರಿಯನ್ನಾಗಿ ಮಾಡಿರುವರು. ಆದ್ದರಿಂದ ಯಾವ ಸಮಯಕ್ಕೆ ಅವರಿಗೆ ಏನೇನು ಬೇಕಾಗುವುದೋ ಅದನ್ನೆಲ್ಲ ನಾನಾಗಿಯೇ ಪೂರೈಸುವೆನು ॥೪೭೭॥ ಆದ್ದರಿಂದ ಧರ್ಮವೇ ನಿಜವಾದ ದ್ರವ್ಯದ ನಿಧಿಯಾಗಿರುವುದು. ಈ ಯಾವ ನನ್ನ ವಚನವು ಅತಿ ಸತ್ಯವಾಗಿರುವುದು. ಈಗ ಯಜ್ಞದ ಅರ್ಥವನ್ನು ಕೇಳು. ಅದನ್ನು ನಾನು ನಿನಗೆ ಸ್ಪಷ್ಟಮಾಡಿ ಹೇಳುವೆನು ॥೪೭೮॥ ಅಗ್ನಿಯು ನನ್ನ ಮುಖವಾಗಿರುವುದು. ಮತ್ತು ಯಜ್ಞದ ಭೋಕ್ತಾ ನಾರಾಯಣ ನಾದ ನಾನಾಗಿರುವೆನು, ಇದನ್ನು ನೀನು ತಿಳಿ. ಹೆಚ್ಚಿಗೇನು ಹೇಳಬೇಕು? ಸಂಪೂರ್ಣ ಯಜ್ಞವೇ ನಾನು ಶ್ರೀಕೃಷ್ಣನಾಗಿರುವೆ. ಇದಕ್ಕೆ ವೇದದ ಪ್ರಮಾಣವಿರುವುದು ॥೪೭೯॥ ಅದರಲ್ಲಿ ಬ್ರಾಹ್ಮಣನೆಂದರೆ ನನ್ನ ಸ್ವರೂಪನಾಗಿರುವನು. ಯಜ್ಞ ದೀಕ್ಷೆಯನ್ನು ಸ್ವೀಕರಿಸಿರುವ ಯಾವ ದೀಕ್ಷಿತರು ಭಕ್ತಿಭಾವದಿಂದ ನನ್ನ ಯಜನವನ್ನು ಮಾಡಿ ನನ್ನ ಪೂರ್ಣ ಸುಖವನ್ನು ಪ್ರಾಪ್ತಮಾಡುವರು ॥೪೮೦॥ ಆದರೆ ಅದರಲ್ಲಿಯೂ ಯಾರು ಅಧರ್ಮದಿಂದ ದ್ರವ್ಯ ಸಂಪಾದನೆಯನ್ನು ಮಾಡುತ್ತ ಅವಿಧಿಯಿಂದ ಕೇವಲ ಡಾಂಭಿಕತನದ ಯಜ್ಞವನ್ನು ಮಾಡುವರೋ ಆ ಯಾಗವು ನನ್ನದೇ ಮುಖದಲ್ಲಿ ಬಿದ್ದರೂ ಅದರ ಫಲವು ಅವರಿಗೆ ಯಾವುದೂ ಕೂಡ ದೊರೆಯಲಾರದು. ಅವರು ಕೇವಲ ಬರಿದಾಗಿರುವರು ॥೪೮೧॥ ಇವರು ಅವಿಧಿಯಿಂದ ಪಶುಗಳ ಘಾತವನ್ನು ಮಾಡುತ್ತಿರುವರು. ಆದರೆ ಈ ಅವದಾನದಿಂದ ನನಗೆ ಸುಖವಾಗುವುದಿಲ್ಲ. ಇವರು ಈ ಡಾಂಭಿಕತ ನದಿಂದ ಕುಂಭೀಪಾಕ ಎಂಬ ಅತಿ ಭಯಂಕರ ರೌರವ ನರಕದಲ್ಲಿ ಬೀಳುವರು ॥೪೮೨॥ ಸರ್ವ ಪ್ರಾಣಿಮಾತ್ರರ ಮುಖದಲ್ಲಿ ಯಾರು ಅರ್ಪಣೆ ಯನ್ನು ಮಾಡುವರೋ ಅದು ನನ್ನ ಯಜ್ಞಪುರುಷನಿಗೇನೇ ಪ್ರಾಪ್ತವಾಗುವುದು. ಆದರೆ ಈ ದೀಕ್ಷೆಯನ್ನು ಅರಿಯದೇ ಯಜ್ಞವನ್ನು ಮಾಡು ವವರು ಹಿಂಸೆಯ ದೋಷವನ್ನು ಮಾಡಿ ನರಕದಲ್ಲಿ ಮಾತ್ರ ಬೀಳುವರು ॥೪೮೩॥ ನನ್ನ ಭಕ್ತಿಯನ್ನೇ ಯಜ್ಞದೀಕ್ಷೆಯನ್ನಾಗಿ ಸ್ವೀಕರಿಸಿ ಯಾವ ಸಂಪೂರ್ಣ ಚರಾಚರ ವಿಶ್ವವೇ ನನ್ನ ಮೂಲಸ್ವರೂಪವೆಂದು ತಿಳಿದು ಅದರ ಯಜನವನ್ನು ಮಾಡುವರೋ ಅದರ ಯಜ್ಞವು ನಾರಾಯಣ ನಾದ ನಾನೇ ಆಗಿರುವೆನು. ಈಗ ದಕ್ಷಿಣೆ ಯಾವುದು ಎಂಬುವುದನ್ನು ಕೇಳು ॥೪೮೪॥ ಯಜ್ಞಕ್ಕೆ ಯಾವ ಬೆಲೆಯೂ ಇಲ್ಲ. ಅದರಲ್ಲಿ ಜ್ಞಾನವು ಅಮೌಲ್ಯ ದಕ್ಷಿಣೆಯಾಗಿರುವುದು. ಅದು ಕೈ ಸೇರುತ್ತಲೇ ಯಾಜ್ಞಿಕರು ಮಹಾಸುಖ ಸಂಪನ್ನರಾಗುವರು ॥೪೮೫॥ ಜ್ಞಾನಧನ ದಕ್ಷಿಣೆಯಿಂದ ಯಾಜ್ಞಿಕರು ಸುಖಿಯಾಗುವುದು. ಈ ಧನವು ಕಲ್ಪಾಂತಕ್ಕೂ ಖರ್ಚಾಗುವುದಿಲ್ಲ. ಇದರಿಂದ ಜೀವಕ್ಕೂ ಶಿವನಿಗೂ ಸಮಾಧಾನ ಉಂಟಾ ಗುವುದು ॥೪೮೬॥ ಎಲ್ಲದರಲ್ಲಿಯೂ ಪ್ರಾಣವು ಪ್ರಬಲವಾಗಿರುವುದು. ಪ್ರಾಣದಿಂದಲೇ ಸರ್ವರಿಗೂ ಬಲವು ಪ್ರಾಪ್ತವಾಗುವುದು. ಪ್ರಾಣದಿಂದಲೇ ಮನವು ಚಪಲವಾಗಿರುವುದು ಮತ್ತು ಪ್ರಾಣದ ಸ್ಫೂರ್ತಿಯಿಂದಲೇ ಅದು ಅತ್ಯಂತ ಚಂಚಲವಾಗಿರುವುದು ॥೪೮೭॥ ಈ ಪ್ರಕಾರವಾಗಿ ಪ್ರಾಣವು ಬಲಾಢ್ಯವಾಗಿರುವುದು. ಮನವು ಸತತವಾಗಿ ಪ್ರಾಣದ ಅಧೀನದಲ್ಲಿರುವುದು. ಇಂತಹ ಪ್ರಾಣವನ್ನು ಜಯಿಸುವುದಕ್ಕೆ ಬಲಾಢ್ಯತನ ಎನ್ನುವ ನಾಮವಿರುವುದು ॥೪೮೮॥

ಕೀಜೇ ಗಾ ಸ್ವಾಧೀನ । ''ಅತಿಬಳ'' ಜಾಣ ಯಾ ನಾಂವ ।।೯೦।। ದೃಢ ಪ್ರಾಣಾಯಾಮ ಸಾಧಿಲ್ಯಾಪಾಠೀ । ಧೋರಲಾ ದೇವೋ ಧಾಂವೇ ಭೇಟೀ । ಭೇಟಲಿಯಾ ನ ಸುಟೇ ಮೀಠೀ । ಐಸಾ ''ಬಳೀ'' ಸೃಷ್ಟೀ ಪ್ರಾಣಾಯಾಮೀ ।।೯೧।।

ಭಗೋ ಮೇ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ ।
ವಿದ್ಯಾತ್ಮನಿ ಭಿದಾಬಾಧೋ ಜುಗುಪ್ಸಾ ಹ್ರಿರಕರ್ಮಸು ।।೪೦।।

ಅರ್ಥ:- ನನ್ನ ಸ್ವರೂಪವೇ ನಿಜವಾದ ಐಶ್ವರ್ಯವಾಗಿರುವುದು. ನನ್ನ ಶ್ರೇಷ್ಠವಾದ ಭಕ್ತಿಯೇ ಉತ್ತಮ ಲಾಭವಾಗಿರುವುದು. ಯಾವುದರಿಂದ ಬ್ರಹ್ಮ ಮತ್ತು ಆತ್ಮದ ಭೇದವು ಅಳಿಕಿಸಿ ಹೋಗುವುದೋ ಅದುವೇ ನಿಜವಾದ ವಿದ್ಯೆಯಾಗಿರುವುದು. ಪಾಪ ಮಾಡುವುದಕ್ಕೆ ಮನಕ್ಕೆ ಹೇಸಿಗೆಯಾಗುವುದೇ ನಿಜವಾದ ಲಜ್ಜೆಯಾಗಿರುವುದು.

ಉದ್ಧವೇ ಪುಶಿಲಾ ದಯೇಚಾ ಪ್ರಶ್ನ । ತೇ ನ ಸಾಂಗೋನಿ ಶ್ರೀಕೃಷ್ಣ । ಪರಮ ಭಾಗ್ಯಾಚೇ ನಿರೂಪಣ । ಸ್ವಯೇ ಆಪಣ ಸಾಂಗತ ।।೯೨।। ಕೇವಳ ಭಾಗ್ಯೇವೀಣ । ದಯಾ ತಿತುಕೀ ವಾಂಝು ಜಾಣ । ಯಾಲಾಗೀ ಭಾಗ್ಯ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೯೩।। ಮ್ಹಣಸೀ ಕೃಪಣಾಚೇ ಭಾಗ್ಯ । ತೋ ಅಸತೇನಿ ಧನೇ ಅಭಾಗ್ಯ । ಪರಮ ಭಾಗ್ಯ ತ್ಯಾಚೇ ಚಾಂಗ । ಜೋ ದಯೇತೇ ಸಾಂಗ ಪ್ರತಿಪಾಳೀ ।।೯೪।। ತ್ಯಾ ಪರಮ ಭಾಗ್ಯಾಚೇ ಲಕ್ಷಣ । ತುಜ ಮೀ ಸಾಂಗೇನ ಸಂಪೂರ್ಣ । ಐಕ ತೇಥೀಚೇ ಉಣಖೂಣ । ಉದಾರಪಣ ಭಾಗ್ಯಾಚೇ ।।೯೫।। ''ಜ್ಞಾನ'' ಆಣಿ ''ವೈರಾಗ್ಯ'' ಪೂರ್ಣ । ''ಲಕ್ಷ್ಮೀ'' ಆಣಿ '' ಔದಾರ್ಯ'' ಗುಣ । ''ಐಶ್ವರ್ಯ'' ಆಣಿ ''ಯಶ'' ಗಹನ । ಹೇ ಷಡ್‌ಗುಣ ಜಾಣ ಮಹಾಭಾಗ್ಯ ।।೯೬।। ಹೇ ಷಡ್‌ಗುಣ ಮಾಝೇ ಭಾಗ್ಯ । ಭಾಗ್ಯೇ ಪಾವೇ ಜೋ ಸಭಾಗ್ಯ । ತೋಚಿ ದಯೇತೇ ಪಾಹೀ ಸಾಂಗ । ಅತಿ ಅವ್ಯಂಗ ಪೂರ್ಣತ್ವೇ ।।೯೭।। ಜೋ ಷಡ್‌ಗುಣೇಶೀ ಸಂಪನ್ನ । ತೋಚಿ ದೀನದಯಾಳೂ ಜಾಣ । ದೇಊ ಜಾಣೇ ದಾನ ಸನ್ಮಾನ । ದರಿದ್ರವಿಚ್ಛಿನ್ನ ಕರೂ ಶಕೇ ।।೯೮।। ಐಶಿಯಾ ಸಭಾಗ್ಯಾಚೀ ಭೇಟೀ । ಹೋಯ ತೇ ಭಾಗ್ಯ ಪಾಹಿಜೇ ಲಲಾಟೀ । ಮಾಝ್ಯಾ ಭಾಗ್ಯಾಸಮ ಸೃಷ್ಟೀ । ಆಣಿಕ ದೃಷ್ಟೀ ದಿಸೇನಾ ।।೯೯।। ಐಸೇನಿ ಐಶ್ವರ್ಯೇ ಸಂಪನ್ನ । ತೋ ದಯೇಚೇ ಮಾಹೇರ ಜಾಣ । ತಿಸೀ ಸೋಹಳೇ ಕರಿತೀ ಆಪಣ । ದಯಾ ಸಂಪನ್ನ ತ್ಯಾಚೇನಿ ।।೧೦೦।।

ಯಾಲಾಗೀ ದಯೇಚೇ ಪೋಟೀ । ಮ್ಯಾ ಸಾಂಗಿತಲೀ ಭಾಗ್ಯಾಚೀ ಗೋಠೀ । ಭೂತದಯಾ ಜಯಾಚ್ಯಾ ಪೋಟೀ । ತೋ ಅಭಾಗ್ಯ ಸೃಷ್ಟೀ ಕದಾ ನೋಹೇ ।।೧೦೧।। ತುವಾ ಪುಶಿಲಾ ಲಾಭ ತೋ ಕೋಣ । ಐಕ ತ್ಯಾಚೇಹೀ

ಆನೆಯ ಕಾಲನ್ನು ಹಿಡಿದು ಜಗಿದೊಗೆಯುವುದು ಅಥವಾ ಒಂದೇ ಹೊಡೆತದಿಂದ ಸಿಂಹವನ್ನು ಚೂರು ಚೂರು ಮಾಡುವುದು ಇದು ಯಾವ ಶೂರನ ಬಲದ ಪ್ರಮಾಣವಲ್ಲ ।।೮೯।। ಜೀವ ಮತ್ತು ಮನವು ಪ್ರಾಣದ ಆಧೀನದಲ್ಲಿರುವುವು. ಆ ಪ್ರಾಣದ ದಮನವನ್ನು ಮಾಡಿ ಅದನ್ನು ತನ್ನ ಸ್ವಾಧೀನ ಮಾಡಿಕೊಂಡರೆ ಅದಕ್ಕೆ ಅತಿಬಲ ಎಂದು ಹೇಳುವರು ।।೯೦।। ದೃಢವಾದ ಪ್ರಾಣಾಯಾಮವು ಸಾಧ್ಯವಾಗಲು ಆಗ ದೇವಾಧಿದೇವನು ಆತನ ಭೇಟಿಗಾಗಿ ಧಾವಿಸಿ ಬರುವನು. ದೇವನ ಭೇಟಿಯು ಒಂದು ಸಲ ಆದರೆ ಸಾಕು ಆತನ ಕೂಟವು ಎಂದಿಗೂ ಬಿಡುವುದಿಲ್ಲ. ಪ್ರಾಣಾಯಾಮವನ್ನು ಮಾಡುವವನು ಇಷ್ಟೊಂದು ಬಲಾಢ್ಯನಾಗಿರುವನು ।।೯೧।।

ಉದ್ಧವನು ದಯೆಯ ಸಂಬಂಧವಾಗಿ ಪ್ರಶ್ನೆಯನ್ನು ವಿಚಾರಿಸಿದ್ದನು. ಅದರ ಉತ್ತರವನ್ನು ಹೇಳದೇ ಶ್ರೀಕೃಷ್ಣನು ಮಹಾಭಾಗ್ಯದ ನಿರೂಪಣೆಯನ್ನು ಮಾಡಿದನು ।।೯೨।। ಇದಕ್ಕೆ ಕಾರಣವೇನೆಂದರೆ, ಕೇವಲ ಭಾಗ್ಯದ ಹೊರತಾಗಿ ದಯೆಯು ಎಷ್ಟೇ ಇದ್ದರೂ ಕೂಡ ಅದು ಬಂಜೆಯಾಗಿರುವುದು. ಆದ್ದರಿಂದ ಶ್ರೀಕೃಷ್ಣನು ಪ್ರಾರಂಭದಲ್ಲಿ ಭಾಗ್ಯದ ಲಕ್ಷಣವನ್ನು ಹೇಳುವನು ।।೯೩।। ಕೃಪಣನು ಭಾಗ್ಯವಂತನು ಎಂದು ನಿನಗೆ ಹೇಳಬಹುದು. ಆತನು ಶ್ರೀಮಂತನಾಗಿದ್ದರೂ ಕೂಡ ಅಭಾಗ್ಯನಾಗಿರುವನು. ಯಾವನು ದಯೆಯ ಪಾಲನೆಯನ್ನು ಮಾಡುವನೋ ಆತನೇ ನಿಜವಾದ ಭಾಗ್ಯಶಾಲಿಯಾಗಿರುವನು ।।೯೪।। ಆ ಯಾವ ಪರಮ ಭಾಗ್ಯದ ಸಂಪೂರ್ಣ ಲಕ್ಷಣವನ್ನು ನಿನಗೆ ಹೇಳುವೆನು. ಆ ಭಾಗ್ಯದ ಸ್ವರೂಪವನ್ನು ಈಗ ಕೇಳು. ಆ ಭಾಗ್ಯದ ಉದಾರತ್ವ ಅಂದರೆ ಉತ್ಕೃಷ್ಟತೆ, ರಹಸ್ಯಪೂರ್ವಕವಾಗಿ ಹೇಳುವೆನು ಕೇಳು ।।೯೫।। ಜ್ಞಾನ ಮತ್ತು ವೈರಾಗ್ಯ, ಲಕ್ಷ್ಮೀ ಮತ್ತು ಔದಾರ್ಯ, ಐಶ್ವರ್ಯ ಮತ್ತು ಯಶ ಈ ಆರುಗುಣಗಳು ಭಾಗ್ಯವಾಗಿರುವುವು ।।೯೬।। ಈ ಷಡ್‌ಗುಣಗಳು ನನ್ನ ಭಾಗ್ಯವಾಗಿರುವುವು. ಇಂತಹ ಭಾಗ್ಯವು ಸುದೈವದಿಂದ ಯಾರಿಗೆ ಲಭಿಸುವುದೋ ಆತನೇ ಯಥಾಯೋಗ್ಯ ಪರಿಪೂರ್ಣವಾಗಿ ದಯೆಯ ಧರ್ಮವನ್ನು ಪಾಲಿಸುತ್ತಿರುವನು ।।೯೭।। ಈ ಆರು ಗುಣಗಳಿಂದ ಸಂಪನ್ನನಾದ ಮನುಷ್ಯನೇ ದೀನದಯಾಳು ಆಗಿರುವನು. ಕಾರಣ ಆತನು ಸನ್ಮಾನದಿಂದ ದಾನವನ್ನು ಕೊಡುವನು. ಮತ್ತು ದಾರಿದ್ರ್ಯವನ್ನು ಇಲ್ಲದಾಗಿ ಮಾಡುವನು ।।೯೮।। ಇಂತಹ ಭಾಗ್ಯವಾದ ಮನುಷ್ಯನ ಭೇಟಿಯು ಆಗುವುದಕ್ಕೆ ದೊಡ್ಡ ದೈವಯೋಗವು ಬೇಕಾಗುವುದು. ಸಾರಾಂಶವೇನೆಂದರೆ ನನ್ನ ಭಾಗ್ಯದಂತಹ ಭಾಗ್ಯವು ಜಗತ್ತಿನಲ್ಲಿ ಬೇರೆ ಯಾವುದೂ ನೋಡಲು ಸಿಗುವುದಿಲ್ಲ ।।೯೯।। ಇಂತಹ ಐಶ್ವರ್ಯದಿಂದ ಸಂಪನ್ನನಾಗಿ ಯಾವನು ಇರುವನೋ ಆತನೇ ದಯೆಯ ತವರು ಮನೆಯಾಗಿ ರುವನು. ಆತನೇ ಅದರ ಬೇಡಿಕೆಯನ್ನು ಪೂರೈಸುವನು. ಮತ್ತು ಈತನಿಂದಲೇ ದಯೆಯು ಸಮರ್ಥವಾಗಿರುವುದು ।।೧೦೦।।

ಲಕ್ಷಣ । ಮಾಝೀ ಉತ್ತಮ ಭಕ್ತಿ ಜಾಣ । ''ಲಾಭ'' ಸಂಪೂರ್ಣ ತ್ಯಾ ನಾಂವ ।೫೦೨॥ ಮಾಝೀ ಕರಿತಾ ಉತ್ತಮ ಭಕ್ತೀ । ಚಾರೀ ಮುಕ್ತೀ ಪಾಯಾ ಲಾಗತೀ । ಸುರವರ ಲೋಟಾಂಗಣೀ ಯೇತೀ । ಲಾಭ ಶ್ರೀಪತೀ ಮೀ ಲಾಭೇ ।೫೦೩॥ ಹಾ ಲಾಭ ನ ಯೇತಾ ಹಾತೀ । ಧನಾದಿಕಾಂಚೀ ಜೇ ಪ್ರಾಪ್ತೀ । ತೋ ನಾಡು ಜಾಣ ನಿಶ್ಚಿತೀ । ನರಕಗತಿದಾಯಕ ।೫೦೪॥ ಯಾಲಾಗೀ ಪರಮ ಲಾಭ ಮಾಝೀ ಭಕ್ತೀ । ಜೇಣೇ ಮೀ ಲಾಭೇ ಶ್ರೀಪತೀ । ಐಕ ವಿದ್ಯೇಚೀ ವ್ಯುತ್ಪತ್ತೀ । ಯಥಾನಿಗುತೀ ಸಾಂಗೇನ ।೫೦೫॥ ದೃಢ ವಾಸನೇಚಿಯಾ ಸಂಬಂಧಾ । ಶುದ್ಧಾಸ ಆಣಿ ಜೀವಪದಾ । ಅಭೇದೀ ಉಪಜವೀ ಭೇದಾ । ''ಅವಿದ್ಯಾಬಾಧಾ'' ಯಾ ನಾಂವ ।೫೦೬॥ ದೇಹಾಚೇ ಮಾಥಾ ವರ್ಣಾಶ್ರಮ । ಆಶ್ರಮಾಚೇ ಮಾಥಾ ಕರ್ಮ । ತ್ಯಾ ಕರ್ಮಾಚಾ ಅಭಿಮಾನ ಪರಮ । ತೋ ''ಜೀವಧರ್ಮ'' ದೇಹಬುದ್ಧೀ ।೫೦೭॥ ತೇ ಭೇದೋನಿ ಜೀವಾಚೀ ಬಾಧಾ । ತೋ ಮೇಳವಿಜೇ ಚಿದಾನಂದಾ । ತೀ ನಾಂವ ಶುದ್ಧ ''ಆತ್ಮವಿದ್ಯಾ'' । ಯೇರ ತೇ ಅವಿದ್ಯಾ ಸರ್ವಹೀ ।೫೦೮॥ ಜೇ ನಿರಸೀ ಗಾ ಅವಿದ್ಯಾ । ತೇ ಬೋಲಿಜೇ ಶುದ್ಧ ವಿದ್ಯಾ । ಯೇರೀ ಶಾಸ್ತ್ರಾದಿ ಚೌದಾ ವಿದ್ಯಾ । ತೇ ಜಾಣ ಅವಿದ್ಯಾ ಪಾಲ್ಹೇಲೀ ।೫೦೯॥ ಜೇ ನಿರಸೀ ಜೀವಾಚೀ ಬಾಧಾ । ತೇ ಬೋಲಿಜೇ ಶುದ್ಧ ಆತ್ಮವಿದ್ಯಾ । ಆಇಕ ಹ್ರೀಚ್ಯಾ ಸಂಬಂಧಾ । ಲಾಜಾವೇ ಸದಾ ನಿಂದ್ಯಕರ್ಮೀ ।೫೧೦॥ ಕೇವಳ ಅವಯವ ಝಾಂಕಣೇ । ತೇ ಲಜ್ಜಾ ಯೇಥ ಕೋಣ ಮ್ಹಣೇ । ಗೇಲಿಯಾಹೀ ಜೀವೇಪ್ರಾಣೇ । ಅಕರ್ಮ ನ ಕರಣೇ ತೇ ಲಜ್ಜಾ ।೫೧೧॥

ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ ।
ದುಃಖಂ ಕಾಮಸುಖಾಪೇಕ್ಷಾ ಪಂಡಿತೋ ಬಂಧಮೋಕ್ಷವಿತ್ ।೫೧॥

ಅರ್ಥ:- ನಿರಪೇಕ್ಷಾ ಇತ್ಯಾದಿ ಗುಣಗಳು ಇವು ಶರೀರದ ನಿಜವಾದ ಸೌಂದರ್ಯವು. ಸುಖದುಃಖ ಎಂಬ ಎರಡೂ ಭಾವನೆಯನ್ನು ಯಾವಾಗಲೂ ನಷ್ಟಗೊಳಿಸುವುದೇ ಸುಖವಾಗಿರುವುದು. ವಿಷಯ ಭೋಗಗಳ ಕಾಮನೆಯು ದುಃಖವಾಗಿರುವುದು. ಯಾವನು ಬಂಧ-ಮೋಕ್ಷ ತತ್ವವನ್ನು ತಿಳಿಯುವನೋ, ಅವನೇ ಪಂಡಿತನು.

ಸಕಳ ಸಾಮ್ರಾಜ್ಯವೈಭವೇಸೀ । ಚತುರ್ದಶಭುವನವಿಲಾಸೇಸೀ । ಅಂಗೀ ಲಕ್ಷ್ಮೀ ಆಲಿಯಾ ಜಯಾಪಾಶೀ । ಪರೀ ಥುಂಕೋನಿ ತಿಸೀ ಪಾಹೇನಾ ।೫೧೨॥
ಐಶೀ ಜ್ಯಾಚೀ ನಿರಪೇಕ್ಷತಾ । ತೇ ಉತ್ಕೃಷ್ಟ ''ಶ್ರೀ'' ತತ್ತ್ವತಾ । ತ್ಯಾಸೀ ಮೀ ಶ್ರೀಕೃಷ್ಣ ವಂದೀ ಮಾಥಾ । ಇತರಾಂಚೀ ಕಥಾ ಕಾಯಸೀ।೫೧೩॥ ಜ್ಯಾಸೀ ಲಕ್ಷ್ಮೀಚೀ ನಿರಪೇಕ್ಷತಾ । ತ್ಯಾಚೀ ನಿತ್ಯ ವಸ್ತೀ ಮಾಝೀ ಮಾಥಾ

ಆದಕ್ಕಾಗಿ ನಾನು ದಯೆಯ ಮುಂಚಿತವಾಗಿ ನಿನಗೆ ಭಾಗ್ಯದ ಮಾತನ್ನು ಹೇಳಿದೆನು. ಯಾರ ಹೃದಯದಲ್ಲಿ ದಯೆಯು ತುಂಬಿರುವುದೋ, ಆತನು ಜಗತ್ತಿನಲ್ಲಿ ಎಂದಿಗೂ ಅಭಾಗ್ಯನಾಗಿರುವುದಿಲ್ಲ ।೫೦೧॥ ಈಗ ಲಾಭ ಯಾವುದು? ಎಂದು ನೀನು ಪ್ರಶ್ನೆಯನ್ನು ಕೇಳಿರುವೆ, ಅದರ ಲಕ್ಷಣವನ್ನು ಹೇಳುವೆನು, ಕೇಳು. ನನ್ನ ಉತ್ತಮೋತ್ತಮ ಭಕ್ತಿಗೆ ಲಾಭ ಎನ್ನುವರು ।೫೦೨॥ ನನ್ನ ಭಕ್ತಿಯನ್ನು ಅಂತಃಕರಣಪೂರ್ವಕವಾಗಿ ಮಾಡುವುದರಿಂದ ನಾಲ್ಕೂ ಮುಕ್ತಿಗಳು ಭಕ್ತನ ಕಾಲಿಗೆ ಬೀಳುವುವು. ಮತ್ತು ಶ್ರೇಷ್ಠರಾದ ದೇವತೆಗಳು ಆತನಿಗೆ ಲೋಟಾಂಗನೆಯನ್ನು ಹಾಕುವರು ಹಾಗೂ ನನ್ನ ಶ್ರೀಪತಿಯ ಲಾಭವು ಸಾಧಿಸುವುದು ।೫೦೩॥ ನನ್ನ ಪ್ರಾಪ್ತಿಯ ಈ ಲಾಭವನ್ನು ಕೈಬಿಟ್ಟು ದ್ರವ್ಯಾದಿಕಗಳಿಂದ ಆಗುವ ಯಾವ ಲಾಭವು ನರಕದ ಗತಿಯನ್ನು ಕೊಡುವಂತಹ ಹಾನಿಕಾರಕವಾಗಿರುವುದು ।೫೦೪॥ ಆದ್ದರಿಂದ ಸರ್ವ ಶ್ರೇಷ್ಠ ಲಾಭವೆಂದರೆ ನನ್ನ ಭಕ್ತಿಯಾಗಿರುವುದು. ಈ ಯಾವ ಭಕ್ತಿಯಿಂದಲೇ ಶ್ರೀಪತಿಯಾದ ನಾನು ಪ್ರಾಪ್ತನಾಗುವೆನು. ಈಗ ವಿದ್ಯೆಯ ಯಥಾರ್ಥ ಲಕ್ಷಣವನ್ನು ಕೇಳು ।೫೦೫॥ ಯಾವ ವಾಸನೆಗಳ ಸಂಬಂಧವನ್ನು ಇಟ್ಟುಕೊಂಡು ನಿರ್ವಿಕಾರದ ಶುದ್ಧ ಆತ್ಮಕ್ಕೆ ಜೀವಪದಕ್ಕೆ ತರುವುದು. ಅಭೇದದಲ್ಲಿ ಭೇದವನ್ನು ಉತ್ಪನ್ನಗೊಳಿಸುವುದು ಇದಕ್ಕೆ ಅವಿದ್ಯಾ-ಬಾಧೆ ಎಂದು ನಾಮವಿರುವುದು ।೫೦೬॥ ದೇಹದ ತಲೆಯ ಮೇಲೆ ವರ್ಣಾಶ್ರಮವು ಮತ್ತು ವರ್ಣಾಶ್ರಮಗಳ ತಲೆಯ ಮೇಲೆ ಕರ್ಮವಿರುವುದು. ಈ ಯಾವ ಕರ್ಮದ ಅತ್ಯಂತ ಅಭಿಮಾನದಿಂದ ಜೀವಕ್ಕೆ ದೇಹಬುದ್ಧಿಯು ಉತ್ಪನ್ನವಾಗುವುದು ।೫೦೭॥ ಜೀವದ ಬಾಧೆಯನ್ನು ಭೇದಿಸಿ ಅದಕ್ಕೆ ಚಿದಾನಂದರೂಪದಲ್ಲಿ ಏಕರೂಪವಾಗಿ ಮಾಡುವುದೇ ನಿಜವಾದ ಆತ್ಮವಿದ್ಯೆಯಾಗಿರುವುದು. ಇತರ ಎಲ್ಲ ವಿದ್ಯೆಗಳೂ ಅವಿದ್ಯೆಯಾಗಿರುವುವು ।೫೦೮॥ ಯಾವುದರಿಂದ ಅವಿದ್ಯೆಯ ನಿರಸನೆಯಾಗುವುದೋ ಅದಕ್ಕೆ ಮಾತ್ರ ಶುದ್ಧ ವಿದ್ಯೆ ಎನ್ನುವರು. ಶಾಸ್ತ್ರಾದಿ ಇತರ ಹದಿನಾಲ್ಕು ವಿದ್ಯೆಗಳು ಅವು ಕೇವಲ ಅವಿದ್ಯೆಯ ವಿಸ್ತಾರವಾಗಿರುವುವು ।೫೦೯॥ ಜೀವದ ಸರ್ವ ಬಾಧೆಗಳನ್ನು ಯಾವುದರಿಂದ ಇಲ್ಲದಾಗುವುದೋ ಅದಕ್ಕೆ ಶುದ್ಧವಾದ ಆತ್ಮವಿದ್ಯೆ ಎಂದು ಹೇಳುವರು. ಈಗ ಹ್ರೀ ಎಂದರೆ ಲಜ್ಜೆಯಾಗಿರುವುದು. ಇದರ ವಿಷಯಕ್ಕೆ ಕೇಳು ನಿಂದ್ಯಕರ್ಮಗಳ ವಿಷಯದಲ್ಲಿ ತಿರಸ್ಕಾರ ಉಂಟಾಗುವಿಕೆಗೆ ಲಜ್ಜೆ ಎಂದು ಹೇಳುವರು ।೫೧೦॥ ಇಲ್ಲಿ ಕೇವಲ ತಮ್ಮ ಅವಯವಗಳನ್ನು ಮುಚ್ಚಿಕೊಳ್ಳುವುದಕ್ಕೆ ಲಜ್ಜೆ ಎಂದು ಯಾರು ಹೇಳುವರು? ಜೀವಪ್ರಾಣ ಹೋದರೂ ಸರಿಯೇ, ಕೆಟ್ಟ ಕಾರ್ಯಗಳನ್ನು ಮಾಡದಿರುವುದೇ ಲಜ್ಜೆಯಾಗಿರುವುದು ।೫೧೧॥

ಒಂದು ವೇಳೆ ಹದಿನಾಲ್ಕು ಭುವನಗಳ ಸಾಮ್ರಾಜ್ಯದ ವೈಭವವು ಲಕ್ಷ್ಮೀ ಸಮೇತವಾಗಿ ಮನೆಗೆ ನಡೆದು ಬಂದರೂ ಕೂಡ ಯಾವನು ಅದರತ್ತ ಹೊರಳಿಯೂ ನೋಡುವುದಿಲ್ಲ ।೫೧೨॥

। ತ್ಯಾಹೀಹೋನಿ ಪಢಿಯಂತಾ । ಆಣಿಕ ಸರ್ವಥಾ ಮಜ ನಾಹೀ ॥೫೧೪॥ ಸುಖ ಆಣಿ ಮಹಾದುಃಖ । ದೋನೀತೇ ಗ್ರಾಸೋನಿಯಾ ದೇಖ । ಪ್ರಕಟೇ ಸ್ವಾನಂದ ಸ್ವಾಭಾವಿಕ । ಯಾ ನಾಂವ ''ಸುಖ'' ಉದ್ಧವಾ ॥೫೧೫॥ ಜೇಥ ದುಜಯಾಚೀ ಚಾಡ ನಾಹೀ । ಇಂದ್ರಿಯಾಂಚಾ ಪಾಂಗ ನ ಪಡೇ ಕಾಂಹೀ । ವಿಷಯಾವೀಣ ಆನಂದ ಹೃದಯೀ । ''ನಿಜಸುಖ'' ಪಾಹೀ ಯಾ ನಾಂವ ॥೫೧೬॥ ವಿಸರೋನಿ ಹೇ ನಿಜಸುಖ । ಕಾಮಾಪೇಕ್ಷಾ ಕರಣೇ ದೇಖ । ಯಾಚಿ ನಾಂವ ಗಾ ಪರಮ ''ದುಃಖ'' । ಕೇವಳ ತೇ ಮೂರ್ಖ ಸೇವಿತೀ ॥೫೧೭॥ ನಿತ್ಯ ಹೋತಾ ಕಾಮಪ್ರಾಪ್ತೀ । ಕದಾ ನವ್ಹೇ ಕಾಮತೃಪ್ತೀ । ಕಾಮಾಪೇಕ್ಷಾ ಪಾಡೀ ದುಃಖಾವರ್ತೀ । ದುಃಖ ನಿಶ್ಚಿ ತೀ ಕಾಮಾಪೇಕ್ಷಾ ॥೫೧೮॥ ಹಾ ಬಂಧ ಹಾ ಮೋಕ್ಷ ಚೋಖ । ಜಾಣಣೇ ಜೇ ಅಲೌಕಿಕ । ಕದಾ ನವ್ಹೇ ಆನು ಮಾನಿಕ । ''ಪಂಡಿತ'' ದೇಖ ಯಾ ನಾಂವ ॥೫೧೯॥ ಐಸೀ ನ ಜೋಡತಾ ಅವಸ್ಥಾ । ಆಮ್ಹೀ ಸಜ್ಞಾನ ವೇದಶಾಸ್ತ್ರತಾ । ಐಶೀ ಅಭಿಮಾನೀ ಪಂಡಿತತಾ । ತೇ ನ ಯೇ ಸರ್ವಥಾ ಉಪೇಗಾ ॥೫೨೦॥ ಜ್ಯಾಸೀ ಶಾಂತಿ ಆಣಿ ಸಮಾಧಾನ । ಸಾಚಾರ ಬಂಧಮೋಕ್ಷಾಚೇ ಜ್ಞಾನ । ತೋ ''ಮಹಾಪಂಡಿತ'' ಜಾಣ । ಐಸೇ ಶ್ರೀಕೃಷ್ಣ ಬೋಲಿಲಾ ॥೫೨೧॥

ಮೂರ್ಖೋ ದೇಹಾದ್ಯಹಂಬುದ್ಧಿಃ ಪಂಥಾ ಮನ್ನಿಗಮಃ ಸ್ಮೃತಃ ।
ಉತ್ಪಥಶ್ಚಿತ್ತವಿಕ್ಷೇಪಃ ಸ್ವರ್ಗಃ ಸತ್ತ್ವಗುಣೋದಯಃ ॥೫೨॥

ಅರ್ಥ:- ದೇಹಗೇಹ ಇತ್ಯಾದಿಗಳಲ್ಲಿ ಅಹಂಕಾರ ಅಭಿಮಾನಗಳನ್ನಿಡುವವನು ಅಜ್ಞಾನಿಯಾಗಿರುವನು. ಯಾವುದು ನನ್ನ ಪ್ರಾಪ್ತಿಯನ್ನು ಮಾಡಿಕೊಡುವುದೋ, ಅದುವೇ ನಿವೃತ್ತಿಮಾರ್ಗ, ಸನ್ಮಾರ್ಗವಾಗಿರುವುದು ಕಂಟಕಾದಿ ಶೂನ್ಯ ಮಾರ್ಗವೆಂದರೆ ಅದು ಸನ್ಮಾರ್ಗ ಅಲ್ಲ, ಪ್ರವೃತ್ತಿಮಾರ್ಗವು ಕುಮಾರ್ಗವಾಗಿರುವುದು. ಸತ್ವಗುಣದ ವೃದ್ಧಿಯೇ ಸ್ವರ್ಗವಾಗಿರುವುದು.

ವೇದಶಾಸ್ತ್ರ ನೇಣತಾ ಏಕ । ತ್ಯಾಸೀ ಮೂರ್ಖ ಮ್ಹಣತೀ ಲೋಕ । ತೇ ಮೂರ್ಖತಾ ಯೇಥೇ ನ ಮನೇ ದೇಖ । ಕೇವಳ ಮೂರ್ಖ ದೇಹಾಭಿಮಾನೀ ॥೫೨೨॥ ಕೇವಳ ನಶ್ವರ ದೇಹ ದೇಖ । ತೋ ಮೀ ಮ್ಹಣೋನಿ ಮಾನೀ ಹರಿಖ । ದೇಹಾಭಿಮಾನೇ ಭೋಗೀ ನರಕ । ಯಾಪರತಾ ಮೂರ್ಖ ಕೋಣ ಆಹೇ ॥೫೨೩॥ ವಿಟಾಳೇ ದೇಹಾಚಾ ಸಂಭವೋ । ವಿಟಾಳೇ ದೇಹಾಚಾ ಉದ್ಭವೋ । ವಿಟಾಳೇಂಚೇ ನಿಧನ ಪಹಾಹೋ । ವಿಟಾಳಾಸೀ ಠಾವೋ ದೇಹಾಪಾಶೀ ॥೫೨೪॥

ದೇಹಾಚೇ ನಿಜರೂಪ ಯೇಥ । ಅಸ್ಥಿ ಚರ್ಮ ವಿಷ್ಠಾ ಮೂತ್ರ । ತೋ ಮೀ ಮ್ಹಣವೂನಿ ಜೋ ಶ್ಲಾಘತ । ''ಮೂರ್ಖ'' ನಿಶ್ಚಿತ ತೋ ಜಾಣ ॥೫೨೫॥ ಐಶೀ ಜೇ ಕಾ ದೇಹಅಹಂತಾ । ತೀ ನಾಂವ ಪರಮಮೂರ್ಖತಾ ।

ಹೀಗೆ ನಿರಪೇಕ್ಷನಾಗಿದ್ದರೆ ಮಾತ್ರ, ಆತನ ನಿಜವಾದ ಶ್ರೀ ಎಂದರೆ ಶ್ರೇಷ್ಠ ಸಂಪತ್ತಾಗಿ ರುವುದು. ಶ್ರೀಕೃಷ್ಣನಾದ ನಾನೂ ಕೂಡ ಆತನಿಗೆ ಶಿರಸಾ ವಂದಿಸುವೆನು. ಅಂದಮೇಲೆ ಇತರರ ಯಾವ ಕಥೆ? ॥೫೧೩॥ ಯಾವನು ಸಂಪತ್ತಿನ ವಿಷಯದಲ್ಲಿ ನಿಜವಾಗಿಯೂ ನಿರಪೇಕ್ಷನಾಗಿ ರುವನೋ ಆತನು ನಿತ್ಯವೂ ನನ್ನ ಮಸ್ತಕದ ಮೇಲಿರುವನು. ಆತನಕ್ಕಿಂತಲೂ ಅನ್ಯರು ಯಾರೂ ನನಗೆ ಪ್ರಿಯರಾಗುವುದಿಲ್ಲ ॥೫೧೪॥ ಹೇ ಉದ್ಧವನೇ, ಸುಖ ಮತ್ತು ದುಃಖ ಈ ಎರಡನ್ನೂ ನುಂಗಿಕೊಂಡು ಸ್ವಾಭಾವಿಕವಾಗಿರುವ ಯಾವ ಆನಂದವು ಪ್ರಕಟವಾಗುತ್ತಿರುವುದೋ ಅದಕ್ಕೆ ಶುದ್ಧವಾದ ಸುಖವೆಂದು ನಾಮವಿರುವುದು ॥೫೧೫॥ ಎಲ್ಲಿ ಬೇರೆ ಯಾವ ವಸ್ತುಗಳ ಅವಶ್ಯಕತೆಯು ಇಲ್ಲದೇ ಹಾಗೆಯೇ ಇಂದ್ರಿಯಗಳ ಆಸರೆವಿಲ್ಲದೇ, ಹೀಗಿರುವ ಯಾವ ಹೃದಯದಲ್ಲಿನ ವಿಷಯರಹಿತ ಆನಂದವಿರುವುದೋ, ಅದುವೇ ನಿಜಸುಖವಾಗಿರುವುದು ॥೫೧೬॥ ಈ ಯಾವ ಆತ್ಮಸುಖವನ್ನು ಮರೆತು ವಿಷಯಗಳ ಇಚ್ಛೆಯನ್ನು ಮಾಡುವಿಕೆಗೆ ಪರಮದುಃಖವೆಂದು ಇದರ ನಾಮವಾಗಿರುವುದು. ಕೇವಲ ಮೂರ್ಖ ಜನರು ಮಾತ್ರ ಇದರ ಸೇವನೆಯನ್ನು ಮಾಡುವರು ॥೫೧೭॥ ಪ್ರತಿನಿತ್ಯವೂ ವಿಷಯಗಳು ಪ್ರಾಪ್ತವಾದರೂ ಕೂಡ ವಾಸನೆಯ ತೃಪ್ತಿಯು ಆಗುವುದಿಲ್ಲ. ವಿಷಯಗಳ ಇಚ್ಛೆಯೇ ದುಃಖದ ಮಡುವಿನಲ್ಲಿ ತಿರುಗುತ್ತಿರುತ್ತದೆ. ಕಾಮಾಪೇಕ್ಷೆಯೇ ನಿಶ್ಚಿತವಾದ ದುಃಖವಾಗಿರುವುದು ॥೫೧೮॥ ಯಾವನು ಬಂಧ ಮತ್ತು ಮೋಕ್ಷವನ್ನು ಸ್ಪಷ್ಟವಾಗಿ ತಿಳಿದಿರುವನೋ, ಅನುಮಾನಕ್ಕೆ ಆಸ್ಪದ ಕೊಡುವುದಿಲ್ಲವೋ, ಆತನೇ ನಿಜವಾದ ಪಂಡಿತನಾಗಿರುವನು ಎಂದು ಹೇಳುವರು ॥೫೧೯॥ ಆದರೆ ಈ ಯಾವ ಯಥಾರ್ಥ ಜ್ಞಾನವಿಲ್ಲದೇ ಜನರು ನಾವು ವೇದಶಾಸ್ತ್ರ ಸಂಪನ್ನ ಮಹಾನ ವಿದ್ವಾನರು ಎಂದು ಹೇಳುತ್ತಿರುವರು. ಅವರು ನಿಜವಾಗಿಯೂ ಪಂಡಿತರಲ್ಲ, ಇವರಿಂದ ಯಾವ ಉಪಯೋಗವೂ ಆಗದು ॥೫೨೦॥ ಯಾರಿಗೆ ಶಾಂತಿ ಮತ್ತು ಸಮಾಧಾನವು ಇರುವುದೋ ಮತ್ತು ಯಾರಿಗೆ ಬಂಧಮೋಕ್ಷಗಳ ಯಥಾರ್ಥ ಜ್ಞಾನವಿದೆಯೋ, ಆತನೇ ಮಹಾಪಂಡಿತನು ಎಂದು ಶ್ರೀಕೃಷ್ಣನು ಹೀಗೆ ಹೇಳಿದನು ॥೫೨೧॥

ಒಬ್ಬ ಮನುಷ್ಯನು ವೇದಶಾಸ್ತ್ರಗಳನ್ನು ತಿಳಿಯದಿದ್ದರೆ ಜನರು ಆತನಿಗೆ ಮೂರ್ಖ ಎಂದು ಹೇಳುವರು. ಆದರೆ ನಾವು ಮಾತ್ರ ಆತನಿಗೆ ಮೂರ್ಖ ಎಂದು ಹೇಳುವುದಿಲ್ಲ. ದೇಹದ ಅಭಿಮಾನ ಇದ್ದವನೇ ನಿಜವಾದ ಮೂರ್ಖನಾಗಿರುವನು ॥೫೨೨॥ ಕೇವಲ ನಶ್ವರನಾಗಿರುವ ಈ ದೇಹಕ್ಕೆ ನಾನು ಎಂದು ತಿಳಿದು ಯಾವನು ಆನಂದಪಡುತ್ತಿರುವನೋ ಮತ್ತು ಕೊನೆಯಲ್ಲಿ ಈ ದೇಹದ ಅಭಿಮಾನದಿಂದ ನರಕಕ್ಕೆ ಹೋಗುವನೋ, ಅವನಂತಹ ಮೂರ್ಖನು ಯಾರಿರುವರು? ॥೫೨೩॥ ಯಾವ ಈ ದೇಹವು ಮೈಲಿಗೆಯ ರಕ್ತದಿಂದ ಉತ್ಪನ್ನವಾಗುವುದು ಮತ್ತು ಅದರಿಂದಲೇ ಅದು ಬೆಳೆಯುತ್ತಿರುವುದು. ಅದರಲ್ಲಿಯೇ ಅದಕ್ಕೆ ಮರಣವೂ ಸಹ ಉಂಟಾಗುತ್ತಿರುವುದು. ಹೀಗೆ ದೇಹದಲ್ಲಿ ಯಾವಾಗಲೂ ಆ ಮೈಲಿಗೆಯ ವಸತಿ ಇರುವುದು ॥೫೨೪॥ ಇಂತಹ ಯಾವ ಈ ದೇಹದ ಸ್ವರೂಪವನ್ನು ನೋಡಲು

ಚಾಲಣೇ ಮಾರ್ಝ್ಯಾ ವೇದಪಂಥಾ । ''ಸನ್ಮಾರ್ಗತಾ'' ತೀ ನಾಂವ ।೫೨೬॥ ಜ್ಯಾಸೀ ಜಾಹಲೀ ಚಿತ್ತವಿಕ್ಷೇಪತಾ । ತೋ ನಿಂದೀ ಗುರುದೇವತಾ । ಜೋ ನ ಮಾನೀ ವೇದಶಾಸ್ತ್ರಾರ್ಥಾ । ತೋ ಉತ್ಪಥಾಮಾಜಿ ಪಡೇ ।೫೨೭॥ ಜೋ ಗುರುದೋಷದರ್ಶೀ ಸಮತ್ಸರತಾ । ಜೋ ಕ್ರೋಧ ಕರೀ ಸುಹೃದ ಆಪ್ತಾ । ತೋ ಧಿಕ್ಕಾರಿ ಮಾತಾಪಿತಾ । ''ಚಿತ್ತವಿಕ್ಷೇಪತಾ'' ಯಾ ನಾಂವ।೫೨೮॥ ಜೋ ಸನ್ಮಾನಾಲಾಗೀ ಪಾಹೀ । ಸಾಧು ಸಜ್ಜನಾಂತೇ ಕರೀ ದ್ರೋಹೀ । ಜೋ ದೋಷದೇಖೇ ಠಾಯೀ ಠಾಯೀ। ''ಚಿತ್ತವಿಕ್ಷೇಪ'' ಪಾಹೀ ಯಾ ನಾಂವ।೫೨೯॥ ಜೋ ವದೇ ಪರಾಪವಾದಾ । ಜೋ ಕರೂ ರಿಘೇ ಪರನಿಂದಾ । ಜೋ ವಿಶ್ವಾಸೇ ಸ್ತ್ರಿಯೇಚೇ ಶಬ್ದಾ । ''ಚಿತ್ತವಿಕ್ಷೇಪಬಾಧಾ'' ತೀ ನಾಂವ ।೫೩೦॥ ಜೋ ಸನ್ಮಾರ್ಗಾಪಾಸೂನಿ ಚೇವತಾ । ಪಡೇ ಅಧರ್ಮಾಅಕರ್ಮಾ ಉತ್ಪಥಾ । ತೇಹೀ ''ಚಿತ್ತವಿಕ್ಷೇಪತಾ'' । ಜಾಣ ತತ್ತ್ವತಾ ಉದ್ಧವಾ ।೫೩೧॥ ಆಪಣ ತತ್ತ್ವತಾ ಪರಬ್ರಹ್ಮ । ಜಾಣಣೇ ಹಾ ''ವೇದಮಾರ್ಗ'' ಉತ್ತಮ । ಹೇ ನೇಣೋನಿ ವರ್ತಣೇ ಸಕಾಮ । ತೋಚಿ ಪರಮ '' ಉನ್ಮಾರ್ಗ'' ।೫೩೨॥ ಸ್ವರ್ಗಶಬ್ದಾಚೀ ವ್ಯುತ್ಪತ್ತೀ । ತೇ ಸತ್ತ್ವಗುಣಾಚೀ ಉತ್ಪತ್ತೀ । ಜೇಣೇ ನಿಜಸುಖಾಚೀ ಹೋಯ ಪ್ರಾಪ್ತೀ । ಪರೀ ಇಂದ್ರಲೋಕಗತೀ ತೋ ಸ್ವರ್ಗ ನೋಹೇ ।೫೩೩॥ ಅಮರಭುವನಾ ಜೇಜೇ ಗೇಲೇ । ತೇ ಪರತೋನಿ ಪತನಾ ಆಲೇ । ಶುದ್ಧ ಸತ್ತ್ವೀ ಜೇ ಮಿಸಳಲೇ । ತೇ ಪಾವಲೇ ನಿಜಸುಖ ।೫೩೪॥ ಐಸಾ ಜೋ ಕಾ ಸತ್ತ್ವಗುಣ। ತೋಚಿ ಯೇಥೇ ''ಸ್ವರ್ಗ'' ಜಾಣ । ಆತಾ ನರಕಾಚೇ ಲಕ್ಷಣ । ತುಜ ಸಂಪೂರ್ಣ ಸಾಂಗೇನ ।೫೩೫॥

ನರಕಸ್ತಮ ಉನ್ನಾಹೋ ಬಂಧುರ್ಗುರುರಹಂ ಸಖೇ । ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ ।೫೩॥

ಅರ್ಥ:- ತಮೋ ಗುಣದ ಅತಿರೇಕವಾಗುವಿಕೆಯೇ ನರಕವಾಗಿರುವುದು. ಗುರುವೇ ಬಂಧುವಾಗಿರುವನು. ಹೇ ಉದ್ಧವಾ, ಆ ಜಗದ್ಗುರು ನಾನೇ ಇರುವೆನು. ಮನುಷ್ಯ ದೇಹವೇ ಮನೆಯಾಗಿರುವುದು. ಗುಣಗಳಿಂದ ಸಂಪನ್ನನಾದವನೇ ಶ್ರೀಮಂತನು.

ಕಾಮಕ್ರೋಧಲೋಭಉದ್ರೇಕ । ತೇಣೇ ಖವಳೇ ಮಹಾಮೋಹ ದೇಖ । ತೋ ಬುಡವೀ ಸಜ್ಞಾನ ವಿವೇಕ । ಏಕಲೇ ಏಕ ತಮ ವಾಢೇ ।೫೩೬॥
ಅರುಣೋದಯೀ ದಾಟ ಕುಹರ । ನಿಬಿಡ ಪಡೇ ಅಂಧಕಾರ । ನ ಕಳೇ ದಿವಸನಿಶಾವ್ಯವಹಾರ । ಸೂರ್ಯಚಂದ್ರ ದಿಸೇನಾ ।೫೩೭॥ ಯಾಪರೀ ಗಾ ನಿಜಚಿತ್ತೀ । ಅಂಧತಮೇ ವಾಢೇ ವೃತ್ತೀ । ಕರ್ತವ್ಯಾಕರ್ತವ್ಯಸ್ಥಿತೀ । ಏಕಹೀ

ಹೋದರೆ, ಎಲುಬು,ತೊಗಲು, ಮಲ, ಮೂತ್ರ ಇವುಗಳು ಕೂಡಿಕೊಂಡಿರುವುದು ತೋರುವುದು. ಇಂತಹ ದೇಹದಲ್ಲಿ ನಾನು ಎಂದು ಅಭಿಮಾನವನ್ನಿಟ್ಟು ಪ್ರೌಢತ್ವವನ್ನು ಇಟ್ಟುಕೊಳ್ಳುವವನು ನಿಜವಾಗಿಯೂ ಮೂರ್ಖನಾಗಿರುವನು ।೫೨೫॥ ಈ ಪ್ರಕಾರವಾದ ದೇಹದ ಮೇಲಿನ ಮಮತ್ವವು ಇರುವುದಕ್ಕೆ ಪರಮಮೂರ್ಖತನ ಎಂದು ಹೇಳುವರು. ನನ್ನ ವೇದಮಾರ್ಗದಿಂದನಡೆಯುವುದು ಇದೇ ನಿಜವಾದ ಸನ್ಮಾರ್ಗವಾಗಿರುವುದು ।೫೨೬॥ ಯಾರ ಚಿತ್ತಕ್ಕೆ ಭ್ರಮವು ಉಂಟಾಗಿರುವುದೋ ಆತನೇ ಗುರುದೇವತೆಗಳ ನಿಂದೆಯನ್ನು ಮಾಡುವನು. ಯಾವನು ವೇದಕ್ಕೆ ಮಾನ್ಯ ಮಾಡಲಾರನೋ, ಅವನು ಕೆಟ್ಟ ಮಾರ್ಗದಲ್ಲಿ ನಡೆಯುತ್ತಿರುವನು ।೫೨೭॥ ಯಾವನು ತನ್ನ ಬಂಧುಬಳಗದವರಲ್ಲಿ ಕೋಪಿಸುವನೋ, ಮತ್ಸರಭಾವದಿಂದ ಗುರುಗಳ ದೋಷವನ್ನು ಎಣಿಸುವನೋ, ತಂದೆ ತಾಯಿಯವರಿಗೆ ಧಿಃಕ್ಕರಿಸುವನೋ ಇಂತಹವರ ವೃತ್ತಿಗೆ ಚಿತ್ತವಿಕ್ಷೇಪ ಅಂದರೆ ಬುದ್ಧಿ ಭ್ರಂಶ ಎಂದು ಹೇಳುವರು ।೫೨೮॥ ಯಾವನು ತನ್ನ ಸತ್ಕಾರಕ್ಕಾಗಿ ಸಾಧು ಸಂತರ ದ್ವೇಷವನ್ನು ಮಾಡುವನೋ, ಮತ್ತು ಎಲ್ಲದರಲ್ಲಿಯೂ ದೋಷವನ್ನು ಕಾಣುತ್ತಿರುವನೋ, ಆ ಯಾವ ಅವನ ದೃಷ್ಟಿಗೆ ಚಿತ್ತವಿಕ್ಷೇಪ ಎಂದು ಹೇಳುವರು ।೫೨೯॥ ಯಾವನು ಇತರರ ನ್ಯೂನ್ಯತೆ ಎಣಿಸುವನೋ, ಸತತವಾಗಿ ಇತರರನ್ನು ನಿಂದಿಸುತ್ತಿರುವನೋ ಯಾವನು ಸ್ತ್ರೀಯರ ಶಬ್ದಗಳಲ್ಲಿ ವಿಶ್ವಾಸವನ್ನಿಡುವನೋ, ಆತನಿಗೆ ಚಿತ್ತಭ್ರಂಶವಿಕಾರವಾಗಿದೆ ಎಂದು ತಿಳಿಯಬೇಕು ।೫೩೦॥ ಯಾವನು ಸನ್ಮಾರ್ಗದಿಂದ ದೂರಾಗಿ ಅಧರ್ಮದಲ್ಲಿ ಅಥವಾ ಅಕರ್ಮಗಳಲ್ಲಿ ಬೀಳುವನೋ, ಅವನೂ ಕೂಡ ನಿಜವಾಗಿಯೂ ಚಿತ್ತಭ್ರಂಶನಾಗಿರುವನು. ಹೇ ಉದ್ಧವಾ, ಇದನ್ನು ನೀನು ತಿಳಿದುಕೋ ।೫೩೧॥ ತಾನು ನಿಜವಾಗಿಯೂ ಪರಬ್ರಹ್ಮಸ್ವರೂಪನಾಗಿರುವುದನ್ನು ತಿಳಿಯುವುದೇ ಉತ್ತಮವಾದ ವೇದಮಾರ್ಗವಾಗಿರುವುದು. ಇದನ್ನು ತಿಳಿಯದೇ ಜನರು ಕಾಮನೆಗಳಲ್ಲಿ ಆಸಕ್ತರಾಗುವರು. ಇದು ಅಡ್ಡಮಾರ್ಗವಾಗಿರುವುದು ।೫೩೨॥ ಈಗ ಸ್ವರ್ಗ ಶಬ್ದದ ಅರ್ಥವನ್ನು ತಿಳಿದುಕೋ. ಸತ್ವಗುಣದ ಬುದ್ಧಿಯಿಂದ ಆತ್ಮಸುಖವನ್ನು ಪ್ರಾಪ್ತಮಾಡಿಕೊಳ್ಳುವಿಕೆಯೇ ನಿಜವಾದ ಸ್ವರ್ಗವಾಗಿರುವುದು. ಇಂದ್ರಲೋಕಕ್ಕೆ ಗಮನಮಾಡುವುದು ಎಂದರೆ ಇದು ಸ್ವರ್ಗವಲ್ಲ ।೫೩೩॥ ಕಾರಣವೇನೆಂದರೆ, ಇಂದಿನವರೆಗೆ ಇಂದ್ರಲೋಕಕ್ಕೆ ಹೋಗಿರುವ ಜನರೆಲ್ಲರೂ ಅಲ್ಲಿಂದ ಹೊರಳಿ ಕೆಳಗೆ ಬಂದಿರುವರು. ಯಾರು ಶುದ್ಧವಾದ ಸತ್ವಗುಣವನ್ನು ಬೆಳೆಯಿಸಿರುವನೋ, ಸತ್ಯದಲ್ಲಿ ಒಂದಾಗಿರುವನೋ, ಆತನು ಆತ್ಮಸುಖವನ್ನು ಹೊಂದಿರುವನು ।೫೩೪॥ ಹೀಗಿರುವ ಸತ್ವಗುಣಕ್ಕೆ ಮಾತ್ರ ಸ್ವರ್ಗ ಎಂದು ಕರೆಯಲ್ಪಟ್ಟಿದೆ. ಈಗ ನಿನಗೆ ನರಕದ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ॥೫೩೫॥

ಕಾಮ, ಕ್ರೋಧ ಮತ್ತು ಲೋಭ ಇವುಗಳ ಅತಿರೇಕ ನಿರ್ಮಾಣವಾಗಲು ಆಗ ಮಹಾಮೋಹವು ಉಗ್ರಗೊಂಡು ಎದ್ದು ನಿಲ್ಲುವುದು. ಅದು ಜ್ಞಾನಸಹಿತವಾಗಿ ವಿವೇಕವನ್ನು ಮುಳುಗಿಸಿ ಇಲ್ಲದಾಗಿ ಮಾಡುವುದು. ಆಗ ಒಂದೇ ಒಂದಾದ ತಮೋಗುಣವು ಬೆಳೆಯುತ್ತಿರುವುದು ।೫೩೬॥

ಸ್ಫೂರ್ತಿ ಸ್ಫುರೇನಾ ॥೫೩೮॥ ಐಸಾ ತಮಾಚಾ ಉನ್ನಾಹ ಉದ್ರೇಕ । ತ್ಯಾ ನಾಂವ ಜಾಣ ''ಮಹಾನರಕ'' । ಪರೀ ಯಮಯಾತನಾ ಜೇ ದುಃಖ । ತೋ ನರಕ ಮ್ಹಣೋ ನಯೇ ॥೫೩೯॥ ಯಮಯಾತನಾ ಪಾಪ ಝಿಡೇ । ಮಹಾಮೋಹೇ ಪಾಪ ವಾಢೇ । ಯಾಮ್ಯ ನರಕ ತೇ ಬಾಪುಡೇ । ಅತಿನರಕ ಗಾಢೇ ಮಹಾಮೋಹೀ ॥೫೪೦॥ ಕಾಮಕ್ರೋಧ ಲೋಭ ದೇಖ । ಹೇಚಿ ತೀನೀ ನಿರಯದಾಯಕ । ತೇಥ ಮಹಾಮೋಹೋ ಆವಶ್ಯಕ । ಜೇ ಹೋಯ ಏಕ ಅಂಧತಮ ॥೫೪೧॥ ಇತುಕಾ ಮಿಳೇ ಜೇಥ ಸಮುದಾವೋ । ತ್ಯಾತೇ ಬೋಲಿಜೇ ''ತಮ ಉನ್ನಾಹೋ'' । ಐಸಾ ಜೇಥ ಘಡೇ ಭಾವೋ । ತೋ ಪುರುಷ ಪಹಾ ಹೋ ನರಕರೂಪ ॥೫೪೨॥ ಜೋ ಘೋರನರಕಾಪ್ರತೀ ಜಾಯೇ । ತ್ಯಾಚಾ ತೇಥೂನ ಉದ್ಧಾರ ಹೋಯೇ । ''ತಮ ಉನ್ನಾಹ'' ಜ್ಯಾ ಪ್ರಾಪ್ತ ಹೋಯೇ । ತ್ಯಾಚಾ ನಿರ್ಗಮ ನೋಹೇ । ಮಹಾ ಕಲ್ಪಾಂತೀ ॥೫೪೩॥ ಐಶೀ ತಮ ಉನ್ನಾಹಾಚೀ ಖ್ಯಾತೀ । ಐಕೋನಿ ಉದ್ಧವ ಕಂಟಾಳೇ ಚಿತ್ತೀ । ಐಸೇ ಬುಡತೇ ಜೀವ ತಮೋವೃತ್ತೀ । ತ್ಯಾಂಚೀ ಉದ್ಧಾರಗತೀ ಕೋಣ ಕರೀ ॥೫೪೪॥ ಐಸಾ ಉದ್ಧವಾಚಾ ಭಾವೋ । ಜಾಣೋನಿ ಬೋಲಿಲಾ ದೇವಾಧಿದೇವೋ । ಬುಡತಯಾತೇ ಉದ್ಧರೀ ಪಹಾ ಹೋ । ಗುರುರಾವೋ ನಿಜಸಖಾ ॥೫೪೫॥ ಐಸಾ ಗುರು ತೋ ತೂ ಕೋಣ ಮ್ಹಣಶೀ । ಮೀ ನಿತ್ಯ ಲಾಗೇ ಜ್ಯಾಚ್ಯಾ ಪಾಯಾಂಶೀ । ಜೋ ದೇ ಚಿನ್ಮಾತ್ರ ಪೂರ್ಣಬ್ರಹ್ಮಾಸೀ । ''ಗುರು'' ನಾಮ ತಯಾಸೀ ಬೋಲಿಜೇ ॥೫೪೬॥ ತ್ಯಾ ಬ್ರಹ್ಮಾ ಪರೀಸ ಅಧಿಕತಾ । ಗುರೂಸೀ ಆಲೀಸೇ ತತ್ತ್ವತಾ । ಬ್ರಹ್ಮ ಬ್ರಹ್ಮತ್ವೇ ಹಾ ಪ್ರತಿಪಾದಿತಾ । ಯೇರ್ಹವೀ ಬ್ರಹ್ಮಾಚೀ ವಾರ್ತಾ ಕೋಣ ಪುಸೇ ॥೫೪೭॥ ಅಜ ಅವ್ಯಯ ಅನಂತ । ಅಚ್ಛೇದ್ಯ ಅಭೇದ್ಯ ಅಪರಿಮಿತ । ಹೇ ಬ್ರಹ್ಮಮಹಿಮಾ ಸಮಸ್ತ । ಸದ್‌ಗುರೂನೀ ಯೇಥ ವಿಸ್ತಾರಲೀ ॥೫೪೮॥ ಐಶೀ ಐಕತಾ ಸದ್ಗುರುಕೀರ್ತೀ । ಜಡಜೀವ ಉದ್ಧರತೀ । ''ಗುರೂ'' ನಾಮಾಚೀ ಮಹಾಖ್ಯಾತೀ । ಐಕೋನಿ ಕಾಂಪತೀ ಯಮಕಾಳ ॥೫೪೯॥

ತ್ಯಾ ಸದ್ಗುರೂಚೇ ಮಹಿಮಾನ। ಕರೀ ಬುಡತ್ಯಾಚೇ ಉದ್ಧರಣ। ನಿವಾರೀ ಜನ್ಮಮರಣ । ಶಿಷ್ಯಸಮಾಧಾನ ನಿಜದಾತಾ ॥೫೫೦॥ ಸುಹೃದ ಆಪ್ತ ಸಖಾ ಬಂಧು । ಶಿಷ್ಯಾಚೇ ಸದ್ಗುರೂ ಪ್ರಸಿದ್ಧು । ನಿವಾರೂನಿ ನರಕಸಂಬಂಧು

ನಸುಕಿನಲ್ಲಿ ಇಬ್ಬನ್ನಿಯು ಹಬ್ಬಿಕೊಂಡಾಗ ಸರ್ವತ್ರವೂ ದಟ್ಟವಾದ ಅಂಧಕಾರವು ತುಂಬಿಕೊಳ್ಳುವುದು. ರಾತ್ರಿಯೋ ಹಗಲೋ ಎನ್ನುವ ಭೇದವೇ ತಿಳಿಯದಂತಾಗುವುದು. ಸೂರ್ಯ ಚಂದ್ರರು ಕೂಡ ಕಾಣದಾಗುವರು ॥೫೩೭॥ ಅದರಂತೆಯೇ ತನ್ನ ಚಿತ್ತವೃತ್ತಿಯ ಮೇಲೆ ಅಜ್ಞಾನರೂಪ ದಟ್ಟವಾದ ಅಂಧಕಾರವು ಹಬ್ಬಿಕೊಳ್ಳುತ್ತಲೇ ಕರ್ತವ್ಯ ಯಾವುದು ಮತ್ತು ಅಕರ್ತವ್ಯ ಯಾವುದೆಂಬುದು ತಿಳಿಯುವುದೇ ಇಲ್ಲ ॥೫೩೮॥ ಈ ಪ್ರಕಾರವಾಗಿ ಯಾವ ತಮೋಗುಣದ ಉದ್ರೇಕಸ್ಥಿತಿಗೆ ಮಹಾನರಕವೆಂದು ಹೇಳುವರು. ಯಮಲೋಕದ ಯಾವ ಯಾತನೆಗಳಾಗುವುವೋ, ಅವುಗಳಿಗೆ ಮಹತ್ವವನ್ನು ಕೊಡಬಾರದು ॥೫೩೯॥ ಕಾರಣ, ಯಮಯಾತನೆಯನ್ನು ಭೋಗಿಸುತ್ತಿರುವುದರಿಂದ ಪಾಪವು ಕ್ಷಯವಾಗುತ್ತ ಮುಗಿಯುತ್ತಿರುತ್ತದೆ. ಆದರೆ ಮಹಾಮೋಹದಿಂದ ಪಾಪವು ಒಂದೇ ಸವನೆ ಬೆಳೆಯುತ್ತಲೇ ಸಾಗುತ್ತದೆ. ಮಹಾಮೋಹದ ಭಯಂಕರವಾದ ನರಕದ ಮುಂದೆ ಯಮಲೋಕದ ದುಃಖವು ಏನೂ ಅಲ್ಲ ॥೫೪೦॥ ಕಾಮ, ಕ್ರೋಧ ಮತ್ತು ಲೋಭ ಇವು ಮೂರು ಕೂಡ ನರಕವನ್ನು ಕೊಡುವುವು. ಮಹಾಮೋಹವು ನಿಶ್ಚಿತವಾಗಿ ಅಂಧತಮ ನಾಮದ ನರಕದಲ್ಲಿ ದಬ್ಬಿಬಿಡುವುದು ॥೫೪೧॥ ಈ ಮೂರರ ಸಮುದಾಯವು ಎಲ್ಲಿ ಒಂದಾಗಿ ಕೂಡುವುವೋ ಅಲ್ಲಿ ಅಜ್ಞಾನದ ವೃದ್ಧಿಯಾಗುತ್ತಿರುವುದು. ಯಾವ ಮನುಷ್ಯನು ಇವುಗಳೊಂದಿಗೆ ವರ್ತಿಸುತ್ತಿರುವನೋ, ಅವನು ಸಾಕ್ಷಾತ ನರಕರೂಪನೇ ಆಗಿರುವನು ॥೫೪೨॥ ಘೋರವಾದ ನರಕದಲ್ಲಿ ಬಿದ್ದ ಮನುಷ್ಯನ ಉದ್ಧಾರವಾಗುತ್ತಿರುವುದು. ಆದರೆ ಮೋಹ ಅಂಧಕಾರದಲ್ಲಿ ಯಾವನು ಬೀಳುವನೋ, ಅವನ ಉದ್ಧಾರವು ಕಲ್ಪಾಂತಕ್ಕೂ ಆಗುವುದಿಲ್ಲ ॥೫೪೩॥ ಹೀಗೆ ಈ ತಮೋಗುಣದ ವಿಲಕ್ಷಣ ಖ್ಯಾತಿಯನ್ನು ಕೇಳಿ ಉದ್ಧವನ ಮನದಲ್ಲಿ ಹೇಸಿಗೆಯುಂಟಾಯಿತು. ಆತನು ಮನದಲ್ಲಿ ಹೀಗೆ ವಿಚಾರಿಸಿದನು; ಈ ಯಾವ ತಮೋಗುಣದಲ್ಲಿ ಮುಳುಗಿದ ಮನುಷ್ಯನ ಉದ್ಧಾರವನ್ನು ಯಾರು ಮಾಡಬೇಕು ? ॥೫೪೪॥ ಹೀಗೆ ಉದ್ಧವನ ಮನದಲ್ಲಿ ನಿರ್ಮಾಣವಾಗಿರುವ ಭಾವವನ್ನರಿತುಕೊಂಡು ದೇವಾಧಿದೇವನು ಹೀಗೆ ಹೇಳಿದನು; ಈ ರೀತಿಯಾಗಿ ಮುಳುಗುತ್ತಿರುವ ಜನರನ್ನು ನಿಜವಾದ ಸಖಿಗಳಾಗಿರುವ ಯಾವ ಶ್ರೀಗುರುಗಳು, ಅವರೇ ಇವರ ಉದ್ಧಾರವನ್ನು ಮಾಡಬಲ್ಲರು ॥೫೪೫॥ ಇಂತಹ ಗುರುಗಳು ಯಾರಿರುವರು? ಎಂದು ನೀನು ಮನದಲ್ಲಿ ವಿಚಾರಿಸಬಹುದು, ಅದಕ್ಕಾಗಿ ಕೇಳು. ನಾನು ನಿತ್ಯವೂ ಯಾರ ಪಾದಕ್ಕೆ ಬೀಳುವೆನೋ ಅಂತಹ ಚಿತ್‌ಸ್ವರೂಪ ಪೂರ್ಣ ಪರಬ್ರಹ್ಮ ಗುರುವಾಗಿರುವನು ॥೫೪೬॥ ಗುರುಗಳ ಯೋಗ್ಯತೆಯು ನಿಜವಾಗಿಯೂ ಬ್ರಹ್ಮನಿಗಿಂತಲೂ ಅಧಿಕವಾಗಿರುವುದು. ಕಾರಣ ಆತನು ''ಇದು ಬ್ರಹ್ಮವು'' ಎಂದು ಬ್ರಹ್ಮದ ಪ್ರತಿಪಾದನೆಯನ್ನು ಮಾಡಬಲ್ಲನು. ನಮಗೆ ತೋರಿಸಿಕೊಡಬಲ್ಲನು. ಇಲ್ಲದಿದ್ದರೆ ಬ್ರಹ್ಮನ ವಾರ್ತೆಯನ್ನು ಯಾರಿಂದ ವಿಚಾರಿಸಬೇಕು? ॥೫೪೭॥ ಬ್ರಹ್ಮವು ಅಜ, ಅವ್ಯಯ, ಅನಂತ, ಅಚ್ಛೇದ್ಯ, ಅಪರಿಮಿತವಾಗಿರುವುದು. ಈ ಪ್ರಕಾರದ ಬ್ರಹ್ಮದ ಮಹಿಮೆಯನ್ನು ಸದ್‌ಗುರುಗಳೇ ಜಗತ್ತಿನಲ್ಲಿ ಸರ್ವತ್ರವೂ ತಿಳಿಸಿ ಹೇಳಿರುವರು ॥೫೪೮॥ ಇಂತಹ ಸದ್ಗುರುಗಳ ಕೀರ್ತಿಯನ್ನು ಶ್ರವಣ ಮಾಡುವುದರಿಂದ ಜಡಜೀವಿಗಳ ಉದ್ಧಾರವಾಗುವುದು. ಗುರುನಾಮದ ಖ್ಯಾತಿಯು ಬಹಳದೊಡ್ಡದಾಗಿರುವುದು. ಇದನ್ನು ಕೇಳಿ ಯಮ ಮತ್ತು ಕಾಲನೂ ಕೂಡ ಗಡಗಡನೇ ನಡುಗುವರು. ॥೫೪೯॥

। ಪರಮಾನಂದು ಸುಖದಾತಾ ।೫೫೧॥ ಆತಾ ಗೃಹಾಚೇ ಲಕ್ಷಣ । ತುಜ ಮೀ ಸಾಂಗೇನ ಸಂಪೂರ್ಣ । ಮಾಡ್ಯಾ ಗೋಪುರೇ ಧವಲಾರೇ ಜಾಣ । ಗೃಹಪ್ರಮಾಣ ತೇ ನವ್ಹೇ ।೫೫೨॥ ಮನುಷ್ಯದೇಹ ತೋ ಗೃಹಾಶ್ರಮ। ತೇಥೇ ನಿತ್ಯ ವಸೇ ಮೀ ಪುರುಷೋತ್ತಮ । ತೇಥೀಲ ಕರಿತಾ ಸ್ವಧರ್ಮಕರ್ಮ । ಆತ್ಮಾರಾಮ ಉಲ್ಹಾಸೇ।೫೫೩॥ ಜ್ಯಾ ನರದೇಹಾಚಿಯೇ ಪ್ರಾಪ್ತೀ। ಇಂದ್ರಾದಿಕ ದೇವ ವಾಂಛಿತೀ। ವೇದ ವಾನೀ ಜ್ಯಾ ದೇಹಾಚೀ ಕೀರ್ತೀ । ನಿಜಮೋಕ್ಷ ಪ್ರಾಪ್ತೀ ನರದೇಹೀ ।೫೫೪॥ ನಿಜ ''ಗೃಹ'' ಜೇ ಸಾಚಾರ । ತೇ ಜಾಣಾವೇ ನರಶರೀರ । ಆತಾ ಆಢ್ಯಪಣಾಚಾ ವಿಚಾರ । ತೋಹೀ ಪ್ರಕಾರ ಅವಧಾರೀ ।೫೫೫॥ ಜೋ ಜ್ಞಾನಗುಣೇ ಅತಿಸಂಪನ್ನ । ಜೇ ಕಲ್ಪಾಂತೀಹೀ ನ ವೇಚೇ ಧನ । ತೋಚಿ ''ಆಢ್ಯತಮ'' ಜಾಣ । ಯೇರ ತೇ ಧನ ನಶ್ವರ ।೫೫೬॥ ನಶ್ವರ ಧನಾಚೀ ಆಢ್ಯತಾ । ಅವಶ್ಯ ನೇತ ಅಧಃಪಾತಾ । ಜ್ಞಾನಧನೇ ಜೇ ಆಢ್ಯತಾ । ತೇಣೇ ಯೇ ಹಾತಾ ಪರಬ್ರಹ್ಮ ।೫೫೭॥

ದರಿದ್ರೋ ಯಸ್ತ್ವಸಂತುಷ್ಟಃ ಕೃಪಣೋ ಯೋಽಜಿತೇಂದ್ರಿಯಃ । ಗುಣೇಷ್ವಸಕ್ತಧೀರಿಶೋ ಗುಣಸಂಗೋ ವಿಪರ್ಯಯಃ ।೪೪॥

ಅರ್ಥ:- ಯಾರ ಚಿತ್ತದಲ್ಲಿ ಅಸಂತೋಷವಿದೆಯೋ ಅಭಾವದ ಬೋಧವಿರುವುದೋ ಅವನು ದರಿದ್ರನು. ಯಾವನು ಜಿತೇಂದ್ರಿಯನಲ್ಲವೋ, ಅವನು ಕೃಪಣನು. ಅದೇ ಯಾರು ಇಂದ್ರಿಯ ಲೋಲುಪತೆಯ ಬಗೆಗೆ ನಿರಾಸಕ್ತನೋ ಅವನು ನಿಜವಾದ ಸಂಯಮಿ ಇದರ ವಿರುದ್ಧವಾಗಿ ಯಾವನು ವಿಷಯಗಳಲ್ಲಿ ಆಸಕ್ತನಾಗಿರುವನೋ ಅವನು ಸರ್ವಥಾ ಅಸಮರ್ಥನು.

ಐಕ ದರಿದ್ರಾಚೇ ಲಕ್ಷಣ । ಗಾಠೀ ಅಸತಾ ಕೋಟೀ ಧನ । ಜ್ಯಾಚೇ ಸಂತುಷ್ಟ ನಾಹೀ ಮನ । ಪರಮ ''ದರಿದ್ರೀ'' ಜಾಣ ಯಾ ನಾಂವ ।೫೫೮॥ ಜ್ಯಾಚೇ ಗಾಂಠೀ ನಾಹೀ ಕಾಂಚವಟೀ । ಪರೀ ಸಂತುಷ್ಟತಾ ನಿತ್ಯ ಪೋಟೀ । ತೋಚಿ ಸಂಪನ್ನ ಸಕಳ ಸೃಷ್ಟೀ । ಸತ್ಯ ಗೋಷ್ಟೀ ಹೇ ಉದ್ಧವಾ ।೫೫೯॥ ಗಾಂಠೀ ಅಸೋನಿಯಾ ಧನ । ಜೋ ಪೋಟಾ ನ ಖಾಯ ಆಪಣ । ಸದಾ ಲೋಲಿಂಗತ ಮನ । ದರಿದ್ರ ಲಕ್ಷಣ ಯಾ ನಾಂವ ।೫೬೦॥ ಯಾಪರೀ ಜೇ ಕೃಪಣಪಣ । ಐಖ ತ್ಯಾಚೇಹೀ ಲಕ್ಷಣ । ಜೇವೀ ರಾಜಾ ಬಾಂಧೀ ಸೇವಕಜನ । ತೇವೀ ಇಂದ್ರಿಯಾಅಧೀನ ಜೋ ಹೋಯ ।೫೬೧॥ ನಿರ್ಧಾರಿತಾ ನಿಜರೂಪ ಜಾಣ । ಸರ್ವಾಚಾ ರಾಜಾ ತೋ ಆಪಣ । ತೇ ವಿಸರೋನಿ ಹೋಯ ದೀನ । ಇಂದ್ರಿಯಾ ಅಧೀನ ಹೋಊನ ಠಾಕೇ ।೫೬೨॥
ಮನ ತಯಾಚೇ ಆಜ್ಞಾಧಾರ । ಮನಾಚೇ ಇಂದ್ರಿಯೇ ಕಿಂಕರ । ತ್ಯಾಂಚಾಹಿ ಹಾ ಹೋಯ ಡಿಂಗರ । ಅಜಿತೇಂದ್ರಿಯೇ ಹೋಯ ಘೋರ ''ಕೃಪಣತ್ವ'' ಐಸೇ ।೫೬೩॥ ನಿಜ ಕಿಂಕರಾಚೇ ಕಿಂಕರೇ । ತ್ಯಾ ಇಂದ್ರಿಯಾಂಚೇ ಹಾ

ಈ ಯಾವ ಸದ್ಗುರುಗಳ ಮಹಿಮೆಯು ಮುಳುಗುತ್ತಿರುವ ಜೀವಿಗಳ ಉದ್ಧಾರವನ್ನು ಮಾಡುತ್ತಿರುವುದು. ಮತ್ತು ಜನ್ಮಮರಣದ ನಿವಾರಣೆಯನ್ನು ಮಾಡುತ್ತಿರುವುದು. ಅದುವೇ ಶಿಷ್ಯನಿಗೆ ಸಮಾಧಾನವನ್ನು ನೀಡುತ್ತಿರುವುದು ।೫೫೦॥ ಆಪ್ತ, ಸುಹೃದ, ಸಖಾ, ಬಂಧು ಈ ಎಲ್ಲವೂ ನಿಜವಾಗಿ ಗುರುವೇ ಆಗಿರುವನು.ನರಕದ ನಿವಾರಣೆಯನ್ನು ಮಾಡಿ ಶಿಷ್ಯನಿಗೆ ಆ ಯಾವ ಪರಮಾನಂದವನ್ನು ಕೊಡುವನು ।೫೫೧॥ ಈಗ ಗೃಹದ ಲಕ್ಷಣವನ್ನು ನಿನಗೆ ಹೇಳುವೆನು.ಮಹಡಿ, ಗೋಪುರ,ಬಂಗಲೇ ಇವು ಯಾವವೂ ನಿಜವಾದ ಮನೆಗಳಲ್ಲ ।೫೫೨॥ ಮನುಷ್ಯದೇಹವೇ ನಿಜವಾದ ಗೃಹಸ್ಥಾಶ್ರಮವಾಗಿರುವುದು. ಅದೇ ಮನೆಯಲ್ಲಿ ಪುರುಷೋತ್ತಮನಾದ ನಾನು ಯಾವಾಗಲೂ ಇರುವೆನು. ಆ ಮನೆಯ ಸ್ವಧರ್ಮ ಕರ್ಮವನ್ನು ಮಾಡಿದರೆ ಆತ್ಮಾರಾಮನಾದ ನನಗೆ ಸಂತೋಷವಾಗುವುದು ।೫೫೩॥ ಈ ಯಾವ ನರದೇಹ ಪ್ರಾಪ್ತಿಯ ಇಚ್ಛೆಯನ್ನು ಇಂದ್ರಾದಿ ದೇವತೆಗಳೂ ಕೂಡ ಮಾಡುತ್ತಿರುವರು. ವೇದವೂ ಕೂಡ ಈ ದೇಹದ ಕೀರ್ತಿಯನ್ನು ಹೊಗಳುತ್ತಿರುವುದು. ಈ ನರದೇಹದಲ್ಲಿ ಮಾತ್ರ ಮೋಕ್ಷ ಪ್ರಾಪ್ತಿಯಾಗುವುದು ।೫೫೪॥ ಆದ್ದರಿಂದ ನಮ್ಮ ಮನೆ ಎಂದರೆ ಅದು ನರ ಶರೀರ ಎಂದು ತಿಳಿಯಬೇಕು. ಈಗ ಆಢ್ಯತೆಯ ವಿಚಾರವನ್ನು ಹೇಳುವೆನು, ಅದನ್ನು ಕೇಳು ।೫೫೫॥ ಯಾವನು ಜ್ಞಾನಗುಣದಿಂದ ಸಂಪನ್ನನೋ, ಆತನ ಈ ಯಾವ ಜ್ಞಾನ ಧನವು ಕಲ್ಪಾಂತಕ್ಕೂ ಮುಗಿಯುವುದಿಲ್ಲವೋ ಇದಕ್ಕೆ ಮಾತ್ರ ದೊಡ್ಡದಾದ ಆಢ್ಯತೆ ಎಂದು ಕರೆಯುವರು. ಇತರ ಸರ್ವ ಧನವು ನಶ್ವರವಾಗಿ ರುವುದು ।೫೫೬॥ ನಶ್ವರ ಧನದ ಯಾವ ಆತ್ಮತೆಯು ಅಂದರೆ ಶ್ರೀಮಂತಿಕೆಯು, ಅದು ಅವಶ್ಯವಾಗಿ ಅಧಃಪಾತವನ್ನು ಹುಟ್ಟಿಸುವುದು. ಆದರೆ ಜ್ಞಾನರೂಪ ಧನವು ಇದು ಅಲೌಕಿಕ ಶ್ರೀಮಂತಿಕೆಯಾಗಿದ್ದು ಅದರಿಂದ ಪರಬ್ರಹ್ಮವು ಪ್ರಾಪ್ತವಾಗುವುದು ।೫೫೭॥

ಈಗ ದರಿದ್ರನ ಲಕ್ಷಣವನ್ನು ಕೇಳು. ಕೋಟಿಗಟ್ಟಲೇ ದ್ರವ್ಯದ ರಾಶಿಯು ತನ್ನ ಹತ್ತಿರವಿದ್ದರೂ ಕೂಡ ಯಾವನು ಸಂತುಷ್ಟನಾಗಿ ಇರುವುದಿಲ್ಲವೋ ಆತನಿಗೆ ದರಿದ್ರ ಎಂದು ಹೇಳುವರು ।೫೫೮॥ ಯಾರಲ್ಲಿ ಒಡಕು ಕವಡಿಯೂ ಕೂಡ ಇಲ್ಲದಿದ್ದರೂ ಸಹ ಆತನು ನಿತ್ಯ ಸಂತುಷ್ಟನಾಗಿರುವನು. ಆತನು ಸರ್ವ ಜಗತ್ತಿನಲ್ಲಿ ಸಂಪನ್ನನಾಗಿರುವನು. ಹೇ ಉದ್ಧವಾ, ಇದು ಪರಿಪೂರ್ಣ ಸತ್ಯವಾಗಿರುವುದು ।೫೫೯॥ ತನ್ನಲ್ಲಿ ದ್ರವ್ಯವು ಇದ್ದರೂ ಸಹ ಹೊಟ್ಟೆಗೆ ಯಾವನು ತಿನ್ನುವುದಿಲ್ಲವೋ ಮತ್ತು ಮನದಲ್ಲಿ ಸದಾಸರ್ವದಾ ಲೋಭವು ತುಂಬಿಕೊಂಡಿರುವುದೋ, ಇದು ದರಿದ್ರನ ಲಕ್ಷಣವಾಗಿರುವುದು ।೫೬೦॥ ಇದಲ್ಲದೇ ಯಾವ ಕೃಪಣತನದ ಲಕ್ಷಣವನ್ನು ಈಗ ಹೇಳುವೆನು. ರಾಜನಿಗೆ ಆತನ ಸೇವಕರು ಬಂಧನದಲ್ಲಿಟ್ಟರೆ ಹೇಗೋ, ಅದರಂತೆಯೇ ಕೃಪಣನು ಇಂದ್ರಿಯಗಳ ಆಧೀನದಲ್ಲಿರುವನು ।೫೬೧॥ ಆತ್ಮಸ್ವರೂಪದ ವಿಚಾರವನ್ನು ಮಾಡಲು ಮನುಷ್ಯನು ಸ್ವತಃ ಇಂದ್ರಿಯಗಳ ರಾಜನಾಗಿರುವನು. ಆದರೆ ಆತನಿಗೆ ಇದರ ವಿಸ್ಮರಣೆಯಾಗಿ ದೀನನಾಗುವನು. ಇಂದ್ರಿಯಗಳಿಗೆ ವಶನಾಗಿ ವರ್ತಿಸುತ್ತಿರುವನು ।೫೬೨॥

ವೋಳಂಗೇ ದ್ವಾರೇ ।ಅಜಿತೇಂದ್ರಿಯತ್ವೇ ಅತಿಖರೇ । ನಿಜಾಂಗೀ ಸುಭರೇ ಕೃಪಣತ್ವ ।೫೬೪॥ ಯಾ ನಾಂವ ಗಾ "ಕೃಪಣಪಣ"। ತುಜ ಮ್ಯಾ ಸಾಂಗಿತಲೇ ಜಾಣ । ಆತಾ ಈಶ್ವರಾಚೇ ಸುಲಕ್ಷಣ । ಐಕ ಸಂಪೂರ್ಣ ಉದ್ಧವಾ ।೫೬೫॥ ಕನಕ ಆಣಿ ಕಾಮಿನೀ । ಜ್ಯಾಸೀ ನಾವಡೇ ಮನೀಹುನೀ । ತೋಚಿ "ಈಶ್ವರ" ತ್ರಿಭುವನೀ । ಸತ್ಯ ಸತ್ಯ ಹೇ ವಾಣೀ ಉದ್ಧವಾ ।೫೬೬॥ ತುವಾ ಜಿತುಕೇ ಕೇಲೇ ಪ್ರಶ್ನ । ತಿತುಕೇ ಜ್ಯಾಸೀ ವೋಳಂಗತೀ ಗುಣ । ತ್ಯಾಂಸೀಹೀ ಜ್ಯಾಚೇ ಅಲಿಪ್ತಪಣ । ಈಶ್ವರತ್ವ ಸಂಪೂರ್ಣ ತ್ಯಾ ನಾಂವ ।೫೬೭॥ ಕನಕ ಆಣೀ ಕಾಮಿನೀ । ಯಾಂಚಾ ಪಂಗಿಸ್ತ ಮನೀಹೂನೀ । ತೋಚಿ "ಅನೀಶ್ವರೂ" ಜನೀ । ಹೇ ಸತ್ಯ ಮಾನೀ ಉದ್ಧವಾ ।೫೬೮॥ ಶಮಾದಿ ಸಾಂಗಿತಲೇ ಪ್ರಶ್ನ । ತ್ಯಾಂಚೇ ಜೇ ವಿಪರೀತ ಲಕ್ಷಣ । ತೇಚಿ ಅನೀಶ್ವರತ್ವ ಜಾಣ । ಅಶಮಾದಿ ಗುಣ ಜೇ ಠಾಯೀ ।೫೬೯॥

ಏತ ಉದ್ಧವ ತೇ ಪ್ರಶ್ನಾಃ ಸರ್ವೇ ಸಾಧು ನಿರೂಪಿತಾಃ । ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ ।೪೫॥

ಅರ್ಥ:- ಪ್ರಿಯ ಉದ್ಧವಾ, ನೀನು ಕೇಳಿದ ಪ್ರಶ್ನೆಗಳಿಗೆಲ್ಲ ನಾನು ಅವುಗಳ ಉತ್ತರ ಕೊಟ್ಟಿರುವೆನು. ಆ ಎಲ್ಲ ಉತ್ತರಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಇವು ಮೋಕ್ಷ ಮಾರ್ಗಕ್ಕೆ ಸಹಾಯಕವಾಗಿವೆ. ಹೆಚ್ಚಿಗೆ ಏನೆಂದು ವರ್ಣಿಸಬೇಕು?

ಉದ್ಧವಾ ತುಝೇ ಸಕಳ ಪ್ರಶ್ನ । ಮ್ಯಾ ನಿರೂಪಿಲೇ ಸುಲಕ್ಷಣ । ಜೇಣೇ ಹೋಇಜೇ ಬ್ರಹ್ಮಸಂಪನ್ನ । ತೈಸೇ ವ್ಯಾಖ್ಯಾನ ಸಾಂಗಿತಲೇ ।೫೭೦॥ ಸಂಸಾರೀ ಗುಣದೋಷಲಕ್ಷಣ । ಸಾಂಗತಾ ಅಪರಿಮಿತ ಜಾಣ । ಯಾಲಾಗೀ ಧರಾವೇ ಗಾ ಮೌನ । ಪರಮ ಕಠಿಣ ಗುಣದೋಷ ।೫೭೧॥ ಗುಣದೋಷ ನಾಯಕಾವೇ ಕಾನೀ । ಗುಣದೋಷ ನ ದೇಖಾವೇ ನಯನೀ । ಗುಣದೋಷ ನ ಬೋಲಾವೇ ವದನೀ । ಗುಣದೋಷ ಮನೀ ನ ಧರಾವೇ ।೫೭೨॥ ಬ್ರಹ್ಮಜ್ಞಾನಾಚೇ ಮುಖ್ಯ ಲಕ್ಷಣ । ತೇಹೀ ಬಹುತ ನಾಹೀ ನಿರೂಪಣ । ಶ್ಲೋಕಾರ್ಧೇ ಶ್ರೀಕೃಷ್ಣ । ಸ್ವಮುಖೇ ಆಪಣ ಸಾಂಗತ ।೫೭೩॥

ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ।೪೬॥

ಇತಿ ಶ್ರೀಮದ್ಭಾಗವತೇಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವಸಂವಾದೇ ಏಕೋನವಿಂಶೋಽಧ್ಯಾಯಃ ।೧೯॥

ಅರ್ಥ:- ಒಟ್ಟಿನಲ್ಲಿ ಸಾರಾಂಶವೇನೆಂದರೆ, ಗುಣ ಮತ್ತು ದೋಷಗಳಲ್ಲಿ ದೃಷ್ಟಿ ಇಡುವಿಕೆಯೇ ಮಹಾದೋಷವಾಗಿರುವುದು. ಗುಣದೋಷಗಳಲ್ಲಿ ದೃಷ್ಟಿಯನ್ನಿಡದೇ ತನ್ನ ಶಾಂತ ನಿಃಸಂಕಲ್ಪ ಸ್ವರೂಪದಲ್ಲಿ ಸ್ಥಿತವಾಗುವಿಕೆಯೇ ಎಲ್ಲಕ್ಕಿಂತಲೂ ದೊಡ್ಡ ಗುಣವಾಗಿರುವುದು.

ಬ್ರಹ್ಮ ಏಕ ಪರಿಪೂರ್ಣ । ತೇಥೇ ಕೈಚೇ ದೋಷ ಕೈಚೇ ಗುಣ । ಅವಿದ್ಯಾ ಕ್ಷೋಭಲೀ ತೇ ಜಾಣ । ಗುಣದೋಷಲಕ್ಷಣ ವಾಢವೀ ।೫೭೪॥ ಜೋ ದೇಖೋ ಲಾಗೇ ದೋಷಗುಣ । ತ್ಯಾಚೇ ಅವಿದ್ಯಾ ಕ್ಷೋಭಲೀ

ವಾಸ್ತವಿಕವಾಗಿ ನೋಡಲು ಮನವು ಆತನ ಆಜ್ಞಾಧಾರಕವಾಗಿರುವುದು. ಇಂದ್ರಿಯಗಳು ಮನಸ್ಸಿನ ದಾಸರಾಗಿರುವುವು. ಹೀಗಿದ್ದರೂ ಕೂಡ ಆತನು ಅವುಗಳಿಗಿಂತ ದೀನನಾಗಿ ಒಬ್ಬ ಬಾಲಕನಂತೆ ಪರಾಧೀನನಾಗುವನು. ಇಂದ್ರಿಯಗಳಿಗೆ ಸ್ವಾಧೀನವಾಗಿ ಇಟ್ಟುಕೊಳ್ಳದೇ ಆತನು ಕೃಪಣನಾಗುವನು ।೫೬೩॥ ತನ್ನ ದಾಸನ ದಾಸರಾಗಿರುವ ಇಂದ್ರಿಯಗಳ ಬಾಗಿಲಲ್ಲಿ ಇವನು ಮುಖಸ್ತುತಿ ಮಾಡುತ್ತಿರುವನು. ಈ ಪ್ರಕಾರವಾಗಿ ಇಂದ್ರಿಯಗಳು ಪ್ರಬಲವಾಗಲು ಶರೀರದಲ್ಲಿ ನಿಜವಾಗಿಯೂ ಕೃಪಣತ್ವವು ಒದಗುವುದು ।೫೬೪॥ ಇದಕ್ಕೇನೇ ಕೃಪಣತ್ವ ಎಂದು ಹೇಳುವರು. ಅದರ ಲಕ್ಷಣವನ್ನು ಈಗಾಗಲೇ ಹೇಳಿರುವೆನು. ಹೇ ಉದ್ಧವನೇ, ಈಶ್ವರನ ಸುಲಕ್ಷಣವನ್ನು ಸವಿಸ್ತಾರವಾಗಿ ಹೇಳುವೆನು, ಅದನ್ನು ಈಗ ಸರಿಯಾಗಿ ಕೇಳು ।೫೬೫॥ ಯಾರಿಗೆ ಕನಕ ಮತ್ತು ಕಾಮಿನಿ ಇವು ಮನಸಾ ಪ್ರಿಯವಾಗುವುದಿಲ್ಲವೋ, ಆತನೇ ಈ ಮೂರು ಲೋಕಗಳಲ್ಲಿ ನಿಜವಾದ ಈಶ್ವರನಾಗಿರುವನು. ಈ ನನ್ನ ವಾಣಿಯು ತ್ರಿವಾರ ಸತ್ಯವಾಗಿರುವುದು ।೫೬೬॥ ಹೇ ಉದ್ಧವಾ, ನೀನು ಗುಣಗಳ ವಿಷಯದಲ್ಲಿ ಎಷ್ಟು ಪ್ರಶ್ನೆಗಳನ್ನು ಮಾಡಿರುವಿಯೋ, ಆ ಎಲ್ಲ ಗುಣಗಳು ಅಂಗದಲ್ಲಿ ಇದ್ದರೂ ಕೂಡ ಇವುಗಳಿಂದ ಯಾವನು ಅಲಿಪ್ತನಾಗಿರುವನೋ, ಆತನಿಗೆ ಮಾತ್ರ ಪರಿಪೂರ್ಣ ಈಶ್ವರನು ಎಂದು ತಿಳಿಯಬೇಕು ।೫೬೭॥ ಆದರೆ ಉದ್ಧವಾ, ಯಾರಿಗೆ ಕನಕ ಮತ್ತು ಕಾಮಿನಿಯ ಆಸಕ್ತಿ ಇರುವುದೋ, ಆತನು ಜಗತ್ತಿನಲ್ಲಿ ಅನೀಶ್ವರನು ಎಂದು ತಿಳಿಯಬೇಕು ।೫೬೮॥ ಈ ಪ್ರಕಾರವಾಗಿ ಶಮಾದಿ ಪ್ರಶ್ನೆಗಳ ಎಲ್ಲ ಉತ್ತರವನ್ನು ನಾನು ನಿನಗೆ ಕೊಟ್ಟಿರುವೆನು. ಆ ವಿಷಯದಲ್ಲಿ ಯಾವ ಲಕ್ಷಣ ಅಂದರೆ ಅಶಮಾದಿ ಗುಣಗಳು ಅಂಗದಲ್ಲಿರಲು ಇದೇ ಅನೀಶ್ವರತ್ವ ಎಂದು ಹೀಗೆ ತಿಳಿಯಬೇಕು ।೫೬೯॥

ಹೇ ಉದ್ಧವನೇ, ನಿನ್ನ ಎಲ್ಲ ಪ್ರಶ್ನೆಗಳ ಉತ್ತರವನ್ನು ನಾನು ಸ್ಪಷ್ಟಮಾಡಿ ಹೇಳಿರುವೆನು. ಯಾವುದರಿಂದ ಬ್ರಹ್ಮಸ್ವರೂಪವು ಪ್ರಾಪ್ತವಾಗಬೇಕೋ ಆ ರೀತಿಯಲ್ಲಿ ನಾನು ವರ್ಣನೆಯನ್ನು ಮಾಡಿ ನಿನಗೆ ತಿಳಿಸಿ ಹೇಳಿರುವೆನು ।೫೭೦॥ ಸಂಸಾರದಲ್ಲಿ ಗುಣದೋಷಗಳನ್ನು ವರ್ಣಿಸಲು ಹೋದರೆ ಅವು ಅಸಂಖ್ಯವಾಗಿರುವುವು. ಎಷ್ಟೇ ಹೇಳಿದರೂ ಕೂಡ ಅವು ಮುಗಿಯುವುದೇ ಇಲ್ಲ. ಗುಣದೋಷಗಳ ವರ್ಣನೆಯನ್ನು ಮಾಡುವುದು ಬಹು ಕಠಿಣವಾಗಿರುವುದು. ಆದ್ದರಿಂದ ಮೌನನಾಗಿರುವುದೇ ಲೇಸು ।೫೭೧॥ ಗುಣದೋಷಗಳನ್ನು ಕಿವಿಯಿಂದ ಎಂದಿಗೂ ಕೇಳಬಾರದು, ಗುಣದೋಷಗಳನ್ನು ಕಣ್ಣಿನಿಂದ ಎಂದಿಗೂ ಕಾಣಬಾರದು, ಗುಣದೋಷಗಳನ್ನು ಮುಖದಿಂದ ಎಂದಿಗೂ ನುಡಿಯ ಬಾರದು, ಹೆಚ್ಚಿಗೇನು ಹೇಳಬೇಕು? ಗುಣದೋಷಗಳನ್ನು ಮನದಲ್ಲಿಯೂ ಸಹ ಚಿಂತಿಸಬಾರದು ।೫೭೨॥ ಈಗ ಬ್ರಹ್ಮಜ್ಞಾನದ ಮುಖ್ಯ ಲಕ್ಷಣವು ಅದು ಬಹಳಾಗಿರುವುದಿಲ್ಲ. ಇದನ್ನು ಕೇವಲ ಅರ್ಧ ಶ್ಲೋಕದಲ್ಲಿ ಶ್ರೀಕೃಷ್ಣನು ಸ್ವತಃ ಹೇಳುವನು ।೫೭೩॥

ಜಾಣ । ಜೋ ನ ದೇಖೇ ಗುಣದೋಷಭಾನ । ತೋ ''ಬ್ರಹ್ಮಸಂಪನ್ನ'' ಉದ್ಧವಾ ।॥೫೭೫॥ ಪರಾಚಾ ದೇಖಾವಾ ದೋಷಗುಣ । ಹಾಚಿ ದೋಷಾಮಾಜೀ ಮಹಾದೋಷ ಜಾಣ । ಗುಣದೋಷ ನ ದೇಖಾವಾ ಆಪಣ । ಹಾ ಉತ್ತಮ ಗುಣ ಸರ್ವಾರ್ಥೀ ।॥೫೭೬॥ ಬ್ರಹ್ಮೀ ನಾಹೀತ ದೋಷಗುಣ । ಹೇ ಸರ್ವಾರ್ಥೀ ಸತ್ಯ ಜಾಣ । ತೋ ದೇಖೇ ಗಾ ದೋಷಗುಣ । ಬ್ರಹ್ಮತ್ವ ಜಾಣ ತೇಥೇ ನಾಹೀ ।॥೫೭೭॥ ಜೇಗುಣದೋಷ ದೇಖೋ ಲಾಗಲೇ । ತ್ಯಾಂಚೇ ಬ್ರಹ್ಮತ್ವ ಕೈಸೇನಿ ಗೇಲೇ । ತ್ಯಾಪಾಶೀ ತೇ ವೋಸ ಜಾಹಲೇ । ಕೀ ರುಸೂನಿ ಗೇಲೇ ತೇಥೂನೀ ।॥೫೭೮॥ ಜೇವೀ ರವಿಬಿಂಬಾ ರಾಹುಗ್ರಾಸೀ । ತೈ ದಿವಸಾ ದೇಖಿಜೇ ನಕ್ಷತ್ರಾಂಸೀ । ತೇವೀ ಅವಿದ್ಯಾ ಬ್ರಹ್ಮತ್ವ ಜೈ ಪ್ರಾಶೀ । ತೈ ಗುಣದೋಷಾಂಸೀ ದೇಖಿಜೇ ।॥೫೭೯॥ ಆದರೇ ಸಾಂಗೇ ಶ್ರೀಕೃಷ್ಣ । ಉದ್ಧವಾ ನ ದೇಖಾವೇ ದೋಷಗುಣ । ಹೇ ಮಾಝೀ ಜೀವೀಂಚೀ ನಿಜಖೂಣ । ತುಜ ಮ್ಯಾ ಸಂಪೂರ್ಣ ಸಾಂಗಿತಲೀ ।॥೫೮೦॥ ಜನೀ ಚೌರ್‍ಯಾಂಶೀ ಲಕ್ಷ ಯೋನೀ । ತ್ಯಾಂತ ಗುಣದೋಷ ಏಕೇ ಸ್ಥಾನೀ । ನ ದೇಖಾವೇ ಮನುಷ್ಯಯೋನೀ । ತೂ ಇತುಕೇನೀ ನಿತ್ಯಮುಕ್ತ ।॥೫೮೧॥ ಮ್ಹಣಸೀ ಸ್ವಾಚಾರಪರಿಪಾಠೀ । ಗುಣದೋಷ ದೇಖಾವೇ ದೃಷ್ಟೀ । ಉದ್ಧವಾ ಹೇ ಗೋಷ್ಟೀ ಖೋಟೀ । ಸ್ವಧರ್ಮರಾಹಾಟೀ ತೇ ಭಿನ್ನ ।॥೫೮೨॥ ನಿಜದೋಷ ನಿರಸಾವಯಾಕಾರಣೇ । ಸ್ವಧರ್ಮಕರ್ಮ ಆಚರಣೇ । ತೇಣೇ ಗುಣದೋಷ ದೇಖಣೇ । ತೈ ನಾಗವೀ ಧಾಂವಣೇ ತೈಸೇ ಜಾಹಲೇ ।॥೫೮೩॥ ಸಾಳೀ ಪಿಕಾವಯಾ ಶೇತೀ । ತೃಣ ಜಾಳೂನಿ ದಾಢ ಕರಿತೀ । ತೇಥ ಪಿಕಲೀ ಸಾಳೀ ಜೈ ಜಾಳಿತೀ । ತೈ ತೋಂಡೀ ಮಾತೀ ಪಡಲೀ ಕೀ ।॥೫೮೪॥ ವ್ಹಾವಯಾ ದೋಷನಿವೃತ್ತೀ । ವೇದೇ ದ್ಯೋತಿಲೀ ಧರ್ಮಪ್ರವೃತ್ತೀ । ತೇಣೇ ಸ್ವಧರ್ಮೇ ಜೈ ದೋಷ ದೇಖತೀ । ತೈ ನಿಜಪ್ರಾಪ್ತೀ ನಾಗವಲೇ ।॥೫೮೫॥ ಜೇವೀ ಕಾ ಸೋಂಗೇ ನಟನಟೀ । ದಾವಿತೀ ಹಾವಭಾವ ನಾನಾ ಗೋಠೀ । ಪರೀ ತೋ ಭಾವ ನಾಹೀ ತ್ಯಾಂಚೇ ಪೋಟೀ । ಸ್ವಧರ್ಮ ತ್ಯಾ ದೃಷ್ಟೀ ಕರಾವಾ ।॥೫೮೬॥

ನ ದೇಖೋನಿ ದೋಷಗುಣ । ಸ್ವಧರ್ಮ-ಮರ್ಯಾದಾ ನೋಸಂಡೂನ । ಕರಾವೇ ಗಾ ಸ್ವಧರ್ಮಾಚರಣ । ಹೇ ಮುಖ್ಯ ಲಕ್ಷಣ ಕರ್ಮಾಚೇ ।॥೫೮೭॥ ಐಶಿಯಾ ಸ್ವಧರ್ಮಗತೀ । ಕರ್ಮಮಳ ನಿಃಶೇಷ ಜಾತೀ । ಸಾಧಕಾ

ಸರ್ವತ್ರವೂ ಒಂದೇ ಪರಿಪೂರ್ಣವಾಗಿ ಬ್ರಹ್ಮವಿರುವುದು. ಅಲ್ಲಿ ಎಲ್ಲಿಯ ಗುಣ ಮತ್ತು ಎಲ್ಲಿಯ ದೋಷ? ಅವಿದ್ಯೆ ಎಂದರೆ ಮಾಯೆಯು ಕ್ಷೋಭಗೊಂಡಾಗ ಗುಣದೋಷಗಳ ವೃದ್ಧಿಯಾಗುವುದು ।॥೫೭೪॥ ಹೇ ಉದ್ಧವಾ, ಯಾವನು ಗುಣದೋಷಗಳನ್ನು ಕಾಣುವನೋ, ಆತನ ಅವಿದ್ಯೆಯು ಕ್ಷುಬ್ಧವಾಗಿದೆ ಎಂದು ತಿಳಿಯಬೇಕು. ಯಾವನು ಗುಣದೋಷಗಳನ್ನು ನೋಡುವುದೇ ಇಲ್ಲವೋ ಆತನು ಬ್ರಹ್ಮಸಂಪನ್ನನಾಗಿರುವನೆಂದು ತಿಳಿಯಬೇಕು ।॥೫೭೫॥ ಬೇರೆಯವರ ಗುಣದೋಷಗಳನ್ನು ಕಾಣುವುದು ಇದು ಸರ್ವ ದೋಷಗಳಲ್ಲಿ ಮಹಾದೋಷವಾಗಿರುವುದು. ಗುಣದೋಷಗಳನ್ನು ನೋಡದೆ ಇರುವುದೇ ಇದೇ ಎಲ್ಲಕ್ಕಿಂತಲೂ ದೊಡ್ಡ ಗುಣವಾಗಿರುವುದು ।॥೫೭೬॥ ಬ್ರಹ್ಮನಲ್ಲಿ ಯಾವ ಗುಣದೋಷವೂ ಇಲ್ಲ. ಇದು ಸರ್ವತಃ ಸತ್ಯವಾಗಿರುವುದು. ಆದ್ದರಿಂದ ಯಾವನು ಗುಣದೋಷಗಳನ್ನು ಕಾಣುವನೋ, ಆತನ ಅಂಗದಲ್ಲಿ ಬ್ರಹ್ಮತ್ವವು ಇಲ್ಲವೆಂದು ತಿಳಿಯಬೇಕು ।॥೫೭೭॥ ಗುಣದೋಷ ಗಳನ್ನು ನೋಡುವವರ ಬ್ರಹ್ಮತ್ವವು ಹೇಗೆ ಹಾರಿ ಹೋಗುವುದೆಂಬುದನ್ನು ಲಕ್ಷಪೂರ್ವಕವಾಗಿ ಕೇಳು. ಅವರಲ್ಲಿ ಅದು ಶೂನ್ಯವಾಗುವುದೋ ಅಥವಾ ಆತನನ್ನು ಬಿಟ್ಟು ಹೋಗುವುದೋ? ।॥೫೭೮॥ ರಾಹೂ ಗ್ರಹವು ಸೂರ್ಯನಿಗೆ ಪೂರ್ಣವಾಗಿ ಹಿಡಿದುಕೊಂಡಾಗ ಹಗಲಿನಲ್ಲಿಯೇ ನಕ್ಷತ್ರಗಳು ಕಾಣುತ್ತಿರುವುವು. ಅದರಂತೆ ಅವಿದ್ಯೆಯು ಬ್ರಹ್ಮತ್ವಕ್ಕೆ ಆಚ್ಛಾದಿಸಿಕೊಂಡಾಗ ಗುಣದೋಷಗಳು ಕಾಣುತ್ತಿರುವುವು ।॥೫೭೯॥ ಶ್ರೀಕೃಷ್ಣನು ಬಹು ಆದರದಿಂದ ಹೀಗೆ ಹೇಳಿದನು; ಹೇ ಉದ್ಧವಾ, ಗುಣದೋಷಗಳನ್ನು ಎಂದಿಗೂ ನೋಡಬಾರದು. ಈ ಯಾವ ನನ್ನ ಅಂತಃಕರಣದಲ್ಲಿನ ನಿಜ ರಹಸ್ಯವನ್ನು ನಿನಗಾಗಿ ಸಂಪೂರ್ಣ ಹೇಳಿರುವೆನು ।॥೫೮೦॥ ಈ ಸೃಷ್ಟಿಯಲ್ಲಿ ಎಂಬತ್ನಾಲ್ಕು ಲಕ್ಷ ಯೋನಿಗಳಿರುವುವು. ಇವುಗಳಲ್ಲಿ ಒಂದೇ ಮನುಷ್ಯ ಯೋನಿಯಲ್ಲಿ ಗುಣದೋಷಗಳನ್ನು ನೋಡದಿದ್ದರೆ, ಇಷ್ಟರಿಂದಲೇ ಆ ಯಾವ ಮನುಷ್ಯನು ನಿತ್ಯಮುಕ್ತನಾಗುವನು ।॥೫೮೧॥ ಈಗ ನೀನು ಒಂದುವೇಳೆ ಹೀಗೆ ಹೇಳಬಹುದು. ಅದೇನೆಂದರೆ ಸ್ವಧರ್ಮದಿಂದ ಆಚರಣೆಯನ್ನು ಮಾಡುತ್ತಿರಲು ಆಗ ಗುಣದೋಷಗಳನ್ನು ನೋಡಲೇಬೇಕಾಗುವುದು. ಆದರೆ ಹೀಗೆ ಹೇಳುವುದೇ ಶುದ್ಧ ಸುಳ್ಳಾಗಿರುವುದು. ಕಾರಣ ಸ್ವಧರ್ಮದ ಕ್ರಮವು ಇದರಿಂದ ಬಹಳ ಭಿನ್ನವಾಗಿರುವುದು. ।॥೫೮೨॥ ತನ್ನ ಗುಣದೋಷಗಳನ್ನು ಇಲ್ಲದಾಗಿ ಮಾಡಲು ಮೂಲದಲ್ಲಿ ಸ್ವಧರ್ಮಕರ್ಮದ ಆಚರಣೆ ಯನ್ನು ಮಾಡಲೇಬೇಕಾಗುವುದು. ಆತನೇ ಒಂದು ವೇಳೆ ಗುಣದೋಷಗಳನ್ನು ನೋಡುತ್ತ ಕುಳಿತರೆ ಸಹಾಯ ಮಾಡಲು ಬಂದವನೇ ಮೋಸಗೈದಂತಾಗುವುದು ।॥೫೮೩॥ ಭತ್ತವನ್ನು ಬೆಳೆಯುವುದಕ್ಕಾಗಿ ಗದ್ದೆಯಲ್ಲಿ ಕಸಕಡ್ಡಿ ಹುಲ್ಲು ಇತ್ಯಾದಿ ಸುಟ್ಟು ಭೂಮಿಯನ್ನು ಸುಟ್ಟು ಸರಿಯಾಗಿ ಸಿದ್ಧಗೊಳಿಸುತ್ತಿರುವರು. ಇದನ್ನು ಬಿಟ್ಟು ಬೆಳೆದಿರುವ ಪೈರನ್ನೇ ಸುಟ್ಟು ಹಾಕಿದರೆ ಆಗ ಒಕ್ಕಲಿಗನ ಬಾಯಿಯಲ್ಲಿ ಮಣ್ಣು ಬೀಳಬೇಕಾಗುವುದು ।॥೫೮೪॥ ದೋಷಗಳ ಕ್ಷಾಲನೆ ಮಾಡುವುದಕ್ಕಾಗಿಯೇ ವೇದವು ಧರ್ಮದ ಪ್ರವೃತ್ತಿಯನ್ನು ತೋರಿಸಿಕೊಟ್ಟಿರುವುದು. ಆ ಯಾವ ಸ್ವಧರ್ಮದಿಂದ ದೋಷಗಳನ್ನೇ ಕಾಣುತ್ತ ಹೋದರೆ ತನ್ನ ಹಿತದಿಂದ ದೂರ ಸರಿದಂತೆ ಎಂದು ತಿಳಿಯಬೇಕು ।॥೫೮೫॥ ನಾಟಕದ ನಟನಟಿಯರು ತಮ್ಮ ತಮ್ಮ ಅನೇಕ ಪ್ರಕಾರದ ಹಾವಭಾವಗಳನ್ನು ತೋರಿಸುವರು. ಅನೇಕ ಪ್ರಕಾರದ ಶೃಂಗಾರದ ಮಾತುಗಳನ್ನಾಡುವರು. ಆದರೆ ಅವೆಲ್ಲವೂ ಅವರ ಮನದಲ್ಲಿರುವುದಿಲ್ಲ: ಇದೇ ದೃಷ್ಟಿಯಿಂದ ನಾವು ಸ್ವಧರ್ಮದ ಆಚರಣೆಯನ್ನು ಮಾಡಬೇಕು ।॥೫೮೬॥

ನಿಜಪದಪ್ರಾಪ್ತೀ । ಗುಣದೋಷಸ್ಥಿತೀ ಸಾಂಡಿತಾ ॥೫೮೮॥ ಗುಣದೋಷ ದೇಹಾಚೇ ಠಾಯೀ । ಆತ್ಮಾ ನಿತ್ಯ ವಿದೇಹೀ । ಗುಣದೋಷ ತ್ಯಾಚ್ಯಾ ಠಾಯೀ । ಸರ್ವಥಾ ನಾಹೀ ಉದ್ಧವಾ ॥೫೮೯॥ ಸಾಧಕೇ ನ ದೇಖಾವೇ ದೋಷಗುಣ। ಸಿದ್ಧಾಸೀ ಸಹಜಚಿ ನಾಹೀ ಜಾಣ । ಜರೀ ದಿಸೋ ಲಾಗಲೇ ದೋಷಗುಣ। ತರೀ ಆಲೀ ನಾಗವಣ ದೋಘಾಸೀ ॥೫೯೦॥ ಸಾಧಕಾಚೀ ಪ್ರಾಪ್ತೀ ಬುಡೇ। ಸಿದ್ಧಾಚೀ ಸಿದ್ಧೀ ತತ್ಕಾಳ ಉಡೇ । ಏವಂ ಗುಣದೋಷಾಂಚೇ ಸಾಂಕಡೇ । ದೋಹೀಕಡೇ ಉದ್ಧವಾ ॥೫೯೧॥ ಗುಣದೋಷೀ ಭರಲೀ ಸೃಷ್ಟೀ । ತೇಥ ನ ಠೇವಾವೀ ನಿಜದೃಷ್ಟೀ । ಹೇ ಕಳವಳೋನಿಯಾ ಪೋಟೀ । ಶ್ರೀಕೃಷ್ಣೇ ಗೋಷ್ಟೀ ಸಾಂಗಿತಲೀ ॥೫೯೨॥ ಗುಣದೋಷ ವಿವಿಧಭೇದ । ಐಸೇ ಆಹೇತ ನಿಷಿದ್ಧ । ತರೀ ಕಾ ಪಾ ಸ್ವಮುಖೇ ಶ್ರೀಗೋವಿಂದ । ಬೋಲಿಲಾ ಪ್ರಸಿದ್ಧಿ ವೇದಾನುವಾದೇ ॥೫೯೩॥ ಯೇಚಿ ಅರ್ಥೀಚಾ ಪ್ರಶ್ನ । ಪುಢೇ ಉದ್ಧವ ಕರೀಲ ಜಾಣ । ತೇಚಿ ವ್ಯಾಸಾಚೇ ನಿರೂಪಣ । ವಿಸಾವಾ ಜಾಣ ಜೀವಶಿವಾ ॥೫೯೪॥ ತೇಥ ಸಕಾಮ ಆಣಿ ನಿಷ್ಕಾಮ ಭಕ್ತ । ಯಾಂಚೇ ಅಧಿಕಾರ ಅಭಿವ್ಯಕ್ತ । ಸ್ವಯೇ ಸಾಂಗೇಲ ಭಗವಂತ । ಕಥಾ ಅದ್ಭುತ ತೇ ಆಹೇ ॥೫೯೫॥ ಸಂತೀ ದ್ಯಾವೇ ಅವಧಾನ। ಶ್ರೋತಾ ವ್ಹಾವೇ ಸಾವಧಾನ । ಏಕಾ ವಿನವೀ ಜನಾರ್ದನ । ರಸಾಳ ನಿರೂಪಣ ಪುಢೇ ಆಹೇ ॥೫೯೬॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವಸಂವಾದೇ
ಏಕಾಕಾರಟೀಕಾಯಾಂ ಏಕೋನವಿಂಶೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಗುಣದೋಷಗಳನ್ನು ನೋಡದೇ, ಸ್ವಧರ್ಮ ಮರ್ಯಾದೆಯನ್ನು ಬಿಡದೇ, ಸ್ವಧರ್ಮದ ಆಚರಣೆಯನ್ನು ಮಾಡಬೇಕು. ಇದೇ ಸ್ವಧರ್ಮ ಆಚರಣೆಯು ಮುಖ್ಯ ಲಕ್ಷಣವಾಗಿರುವುದು ॥೫೮೭॥ ಈ ಪ್ರಕಾರದ ಸ್ವಧರ್ಮ ಆಚರಣೆಯಿಂದ ಕರ್ಮದ ಮಲವು ಸಂಪೂರ್ಣವಾಗಿ ತೊಳೆದುಹೋಗುವುದು. ಗುಣದೋಷಗಳ ಮಾತನ್ನು ಬಿಟ್ಟುಬಿಟ್ಟರೆ ಸಾಧಕರಿಗೆ ಆತ್ಮಪದದ ಪ್ರಾಪ್ತಿಯಾಗುವುದು ॥೫೮೮॥ ಗುಣದೋಷಗಳು ಈ ಯಾವ ದೇಹದ ಸ್ಥಾನದಲ್ಲಿರುವುವು. ಆತ್ಮವು ಮಾತ್ರ ನಿತ್ಯ ವಿದೇಹಿಯಾಗಿರುವುದು. ಅರ್ಥಾತ್ ಅದರಲ್ಲಿ ಗುಣದೋಷಗಳು ಎಂದಿಗೂ ಇರುವುದೇ ಇಲ್ಲ ॥೫೮೯॥ ಆದಕಾರಣ ಸಾಧಕನು ಗುಣದೋಷಗಳನ್ನು ನೋಡಲೇ ಕೂಡದು. ಸಿದ್ಧಪುರುಷನಿಗೆ ಮಾತ್ರ ಗುಣದೋಷಗಳು ಕಾಣುವುದೇ ಇಲ್ಲ. ಒಂದು ವೇಳೆ ಇಬ್ಬರಿಗೂ ಕೂಡ ಗುಣದೋಷಗಳು ಕಾಣಿಸಿಕೊಂಡರೆ, ಆಗ ಇಬ್ಬರೂ ಮೋಸಹೋದರು ಎಂದು ಹೀಗೆ ತಿಳಿಯಬೇಕು ॥೫೯೦॥ ಸಾಧಕನಿಗಾಗುವ ಪ್ರಾಪ್ತಿಯು ಮುಳುಗುವುದು. ಸಿದ್ಧನ ಸಿದ್ಧಿಯೂ ಕೂಡ ಕೂಡಲೇ ಇಲ್ಲದಾಗುವುದು. ಹೇ ಉದ್ಧವಾ, ಈ ಪ್ರಕಾರವಾಗಿ ಗುಣದೋಷಗಳ ಸಂಕಟವು ಸಾಧಕ ಮತ್ತು ಸಿದ್ಧ ಈ ಈರ್ವರಿಗೂ ಸಮಾನವಾಗಿರುವುದು ॥೫೯೧॥ ಸಂಪೂರ್ಣ ಜಗತ್ತು ಗುಣದೋಷಗಳಿಂದ ತುಂಬಿರುವುದು. ಆದರೆ ನಾವು ಅದರಲ್ಲಿಯೇ ಲಕ್ಷವನ್ನು ಕೊಡಬಾರದು. ಈ ಮಾತನ್ನು ಶ್ರೀಕೃಷ್ಣನು ಉದ್ಧವನಿಗೆ ಅತ್ಯಂತ ಕಳಕಳಿಯಿಂದ ಹೇಳಿದನು ॥೫೯೨॥ ಗುಣದೋಷಗಳ ವಿವಿಧ ಭೇದಗಳು ಇಷ್ಟೊಂದು ನಿಷಿದ್ಧವಾಗಿದ್ದರೆ ಶ್ರೀಕೃಷ್ಣನು ವೇದಮುಖದಿಂದ ಸ್ಪಷ್ಟ ಮಾಡಿ ಏಕೆ ಹೇಳಿದನು? ॥೫೯೩॥ ಇಂತಹ ಅರ್ಥದ ಪ್ರಶ್ನೆಯನ್ನು ಉದ್ಧವನು ಮುಂದೆ ಕೇಳುವವನಾಗಿರುವನು. ಇದಕ್ಕಾಗಿ ವ್ಯಾಸರ ನಿರೂಪಣೆಯನ್ನು ಕೇಳಿ, ಜೀವ ಶಿವಕ್ಕೆ ವಿಶ್ರಾಂತಿಯು ದೊರೆಯುವುದು ॥೫೯೪॥ ಅದರಲ್ಲಿ ಸಕಾಮ ಭಕ್ತ ಮತ್ತು ನಿಷ್ಕಾಮ ಭಕ್ತ ಇವರ ಅಧಿಕಾರವನ್ನು ಶ್ರೀಕೃಷ್ಣನು ಸ್ವತಃ ಸ್ಪಷ್ಟಮಾಡಿ ಹೇಳುವನು. ಯಾವ ಈ ಕಥೆಯು ಅದ್ಭುತವಾಗಿರುವುದು ॥೫೯೫॥ ಆದ್ದರಿಂದ ಸಂತರು ಲಕ್ಷವನ್ನು ಕೊಡಬೇಕು ಮತ್ತು ಶ್ರೋತೃಗಳು ಜಾಗರೂಕರಾಗಿರಬೇಕು ಎಂದು ಏಕಾಜನಾರ್ದನರ ವಿನಂತಿ ಇರುವುದು. ಮುಂದಿನ ನಿರೂಪಣೆಯು ಅತ್ಯಂತ ರಸಾಳವಾಗಿರುವುದು ॥೫೯೬॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಭಗವಂತ ಉದ್ಧವ ಸಂವಾದದ ಏಕನಾಥ ಮಹಾರಾಜರ ಭಾಷ್ಯೆಯ
ಹತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ॥ ಶ್ರೀಕೃಷ್ಣಾಯ ನಮಃ॥ ಓಂ ನಮೋ ಸದ್ಗುರು ಚಿತ್ಸಮುದ್ರಾ । ಮುಕ್ತಮೋತಿ ಯಾಂಚಾ ತುಜಮಾಜೀ ಥಾರಾ । ಜ್ಞಾನವೈರಾಗ್ಯಶುಕ್ತಿದ್ವಾರಾ । ಸಭಾಗ್ಯ ನರಾ ತೂ ದೇಶೀ ।೧॥ ತುಝೀ ಖೋಲೀ ಅಮರ್ಯಾದ । ಮಾಜೀ ಚಿದ್ರತ್ನೇ ಅತಿವಿವಿಧ । ದೇಖೋನಿ ನಿಜಪ್ರಬೋಧಚಾಂದ । ಭರತೇ ಅಗಾಧ ತುಜ ದಾಟೇ ।೨॥ ಉಲಥಲ್ಯಾ ಸ್ವಾನಂದಭರತ್ಯಾಸೀ । ಗುರು ಆಜ್ಞಾ-ಮರ್ಯಾದಾ ನುಲ್ಲಂಘಿಸೀ । ಸ್ವಾನಂದಲಹರೀ ಚಢೋವಢೀಸೀ । ತುಜಮಾಜೀ ಅಹರ್ನಿಶೀ ಉಸಳತೀ ।೩॥ ಬ್ರಹ್ಮವಿದ್ಯಾ ಮಹಾಬಂದರ । ತೇಥ ನಿಜಭಕ್ತೀ ಹೇ ತಾರೂ ಥೋರ । ತ್ಯಾಸೀ ವಾಗವಿತಾ ತೂ ಕರ್ಣಧಾರ । ಪ್ರೇಮಾಚೇ ಸಾಚಾರ ಚಢವಿಶೀ ಶೀಡ ।೪॥ ತೇಥ ಭಕ್ತ ಸಂತ ಸಜ್ಞಾನ ನರ । ಸ್ವಯೇ ಪಾವವಿಶೀ ಪರಪಾರ । ತ್ಯಾಂಚೀ ಮಾಗುತೀ ಯೇರಝಾರ । ಸತ್ಯ ಸಾಚಾರ ಖುಂಟಲೀ ।೫॥ ಏಕ ಲಾವೂನಿ ಕಾಸೇಸೀ । ಭವಸಾಗರೀ ವಾಗವಿಶೀ । ಬುಡಣ್ಯಾಚೇ ಭಯ ತ್ಯಾಸೀ । ಮಹಾಕಲ್ಪೇಸೀ ಬಾಧೀನಾ ।೬॥ ಏಕ ಬುಡಾಲೇ ಭಕ್ತಿಸಮರಸೀ । ತೇ ಘಾತಲೇ ಶೇಷಶಯನಾಪಾಶೀ । ಏಕ ಬೈಸವಿಲೇ ಅಢಳತೇಸೀ । ತೇ ಬ್ರಹ್ಮಾದಿಕಾಂಸೀ ನ ಢಳತೀ ।೭॥ ತುಝ್ಯಾ ಸಾಗರತ್ವಾಚೀ ಪರೀ । ವಿಜಾತೀಯ ತಿಳಭರೀ । ರಾಹೋ ನೇದಿಸೀ ಭೀತರೀ । ಹೇ ಅಗಾಧ ಥೋರೀ ಪೈ ತುಝೀ ।೮॥ ಅತ್ಯಂತ ಪ್ರಳಯೀ ಜೈ ಹಾ ಚಢೇ । ತೈ "ಸಂಸಾರ" ಹೇ ನಾಂವಹಿ ಬುಡೇ । ವೈಕುಂಠಕೈಲಾಸಾವರತಾ ವಾಢೇ । ಮಾಗೇ ಪುಢೇ ಹಾಚಿ ಹಾ ।೯॥ ಐಶಿಯಾ ಸದ್ಗುರು ಸಮುದ್ರೋದಕೀ । ಏಕಾ ಏಕಪಣೇ ಹರೀತ ಕೀ । ಭೀತರೀ ಪಡತಾ ಆವಶ್ಯಕೀ । ಅಂಗೀಕಾರೀ ಕೀ ಜನಾರ್ದನ ।೧೦॥ ತೋ ಜನಾರ್ದನ ಸ್ವಯೇ ದೇಖಾ । ಏಕಾದಶಾಚೀ ಕರೀ ಟೀಕಾ । ತೇಣೇ ಅಭಂಗೀ ಘಾಲೂನಿ ಏಕಾ । ಕವಿತ್ವ ಲೋಕಾ ಐಕವೀ ।೧೧॥

ಹೇ ಓಂಕಾರರೂಪ, ಚೈತನ್ಯಸಾಗರ, ಸದ್ಗುರುರಾಯನೇ, ನಿನಗೆ ನನ್ನ ನಮಸ್ಕಾರಗಳು. ಮುಕ್ತಿರೂಪ ಮುತ್ತುಗಳಿಗೆ ನಿನ್ನಲ್ಲಿ ಆಶ್ರಯವು ದೊರೆಯುವುದು. ಮತ್ತು ಜ್ಞಾನವೈರಾಗ್ಯರೂಪ ಸಿಂಪಿನ ಮುಖಾಂತರವಾಗಿ ಭಾಗ್ಯವಂತ ಪುರುಷರಿಗೆ ಮುತ್ತುಗಳನ್ನು ನೀನು ಕೊಡುತ್ತಿರುವೆ ।೧॥ ನಿನ್ನ ಆಳವು ಮಾತ್ರ ಅಮರ್ಯಾದಿತವಾಗಿದೆ. ಅದರಲ್ಲಿ ಅನೇಕ ಪ್ರಕಾರದ ಜ್ಞಾನರತ್ನಗಳು ತುಂಬಿರುವುವು. ನಿಜಬೋಧ ರೂಪ ಚಂದ್ರನನ್ನು ನೋಡಿದರೆ ಸಾಕು, ನಿನಗೆ ಪೂರವು ಬರುವುದು ।೨॥ ಶುದ್ಧ ಆನಂದದ ಪೂರದ ತೆರೆಗಳು ಏರುತ್ತಿದ್ದರೂ ಕೂಡ ನೀನು ಗುರುಗಳ ಆಜ್ಞಾರೂಪ ಮರ್ಯಾದೆಯನ್ನು ಉಲ್ಲಂಘಿಸುವುದಿಲ್ಲ. ಸ್ವಾನಂದದ ತೆರೆಗಳು ನಿನ್ನಲ್ಲಿ ಒಂದೇ ಸವನೆ ಹಗಲು ರಾತ್ರಿ ಉಕ್ಕೇರುತ್ತಿರುವುವು ।೩॥ ಬ್ರಹ್ಮವಿದ್ಯೆಯು ಇದು ದೊಡ್ಡ ಬಂದರವಾಗಿದೆ. ಅಲ್ಲಿ ನಿಜಭಕ್ತಿ ಎಂಬ ದೊಡ್ಡ ಹಡಗವು ಇದೆ. ಅದನ್ನು ನಡೆಸುವ ಅಂಬಿಗನು ನೀನಾಗಿರುವೆ. ನೀನು ಪ್ರೇಮದ ಪಟವನ್ನು ಹಡಗಕ್ಕೆ ಕಟ್ಟಿರುವೆ ।೪॥ ಭಕ್ತರಿಗೆ, ಸಂತರಿಗೆ ಹಾಗೂ ಜ್ಞಾನಸಂಪನ್ನ ಜನರಿಗೆ ನೀನು ಆಚೆ ದಂಡೆಗೆ ಒಯ್ದು ಮುಟ್ಟಿಸುವೆ. ಅವರಿಗೆ ಪುನಃ ಇಲ್ಲಿಗೆ ಬರುವ- ಹೋಗುವ ಕಾರ್ಯವು ಮುಗಿದು ಹೋಗುವುದು ।೫॥ ಕೆಲವರಿಗೆ ಹಗ್ಗದಿಂದ ಕಟ್ಟಿ ಭವಸಾಗರದಲ್ಲಿ ವರ್ತಿಸಲು ಹಚ್ಚುವೆ. ಇದರಿಂದ ಅವರಿಗೆ ಕಲ್ಪಾಂತಕ್ಕೂ ಮುಳುಗುವ ಭಯವೇ ಇರುವುದಿಲ್ಲ ।೬॥ ಕೆಲವರು ಭಕ್ತಿ ಪ್ರೇಮದಲ್ಲಿ ಮುಳುಗಿಬಿಟ್ಟಿರುವರು. ಅವರನ್ನು ನೀನು ಶೇಷಶಯನನ ಹತ್ತಿರ ಇಡುವೆ. ಕೆಲವರಿಗೆ ನೀನು ಅಢಳ ಪದವಿಯನ್ನು ಕೊಡುವೆ. ಅವರನ್ನು ಅಲ್ಲಿಂದ ಬ್ರಹ್ಮಾದಿಕರೂ ಕೂಡ ಸರಿಸಲಾರರು ।೭॥ ನಿನ್ನ ಸಾಗರತ್ವದ ಗುಣವು ಹೇಗಿದೆ ಎಂದರೆ ನೀನು ಅಂತಃಕರಣದಲ್ಲಿ ವಿಜಾತಿಯನ್ನು ತಿಲಮಾತ್ರವೂ ಇಟ್ಟುಕೊಡಲಾರೆ. ಹೀಗೆ ನಿನ್ನ ಅಗಾಧವಾದ ಲೀಲೆಯಾಗಿರುವುದು ।೮॥ ಮಹಾಪ್ರಳಯದ ಸಮಯದಲ್ಲಿ ಸಮುದ್ರವು ಕ್ಷೋಭೆಗೊಳ್ಳಲು ಆಗ ಸಂಸಾರರೂಪ ಹಡಗವೂ ಕೂಡ ಮುಳುಗಿ ಹೋಗುವುದು. ಇದು ವೈಕುಂಠ ಮತ್ತು ಕೈಲಾಸಗಳ ಮೇಲೆ ಏರುತ್ತ ಬೆಳೆಯುವುದು. ಹಿಂದೆ ಮುಂದೆ ಇದೇ ಇರುವುದು ।೯॥ ಹೀಗಿರುವ ಸದ್ಗುರುರೂಪ ಮಹಾಸಾಗರದಲ್ಲಿ ಏಕನಾಥನು ಏಕಾಏಕೀ ಲೀನನಾಗಿ ಬಿದ್ದುಕೊಂಡಿರಲು ಆಗ ಶ್ರೀಜನಾರ್ದನಸ್ವಾಮಿಯವರು ಈತನ ಸ್ವೀಕಾರವನ್ನು ಮಾಡಿದರು ।೧೦॥ ಆ ಜನಾರ್ದರು ಸ್ವತಃ ಈ ಹನ್ನೊಂದನೆಯ ಸ್ಕಂಧಕ್ಕೆ ಟೀಕೆಯನ್ನು ಮಾಡಿದರು. ಏಕನಾಥನ ನಾಮದಿಂದ ಕವಿತ್ವವನ್ನು ರಚಿಸಿ ಅದನ್ನು ಜನರಿಗೆ ಕೇಳಲು ಹಚ್ಚಿರುವರು ।೧೧॥

ಜನಾರ್ದನಾ ಆವಡೇ ಏಕ । ತೋ ಮೀ ಏಕಾ ಭೇಟತಾಂಚಿ ದೇಖ । ನಿಜಾತ್ಮ ಭಾವೇ ಪಡಿಲೇ ಐಕ್ಯ । ಆಪುಲೇ ನಿಜಸುಖ ಭೋಗವೀ ।।೧೨।। ಬೋಲವೀ ನಿಜಸುಖಾಚೀ ಕಥಾ । ತ್ಯಾಸೀ ಆಪಣಚಿ ಹೋಯ ಶ್ರೋತಾ । ಮಗ ಅರ್ಥಾಚ್ಯಾ ಯಥಾರ್ಥತಾ । ಸಮಾಧಾನತಾ ದೇತಸೇ ।।೧೩।। ಯಾಪರೀ ಗಾ ಜನಾರ್ದನೇ । ಏಕಾದಶ ಮರ್ಹಾಟಾ ಕರಣೇ । ನವ್ಹೇ ಮಾಝೇ ಯುಕ್ತೀಚೇ ಬೋಲಣೇ । ಹೇ ಸ್ವಯೇ ಸಜ್ಞಾನೇ ಜಾಣಿಜೇಲ ।।೧೪।। ತ್ಯಾ ಏಕಾದಶಾಚೀ ಗತಕಥಾ । ಏಕೋಣಿಸಾವಾ ಸಂಪತಾ । ಗುಣದೋಷಾಂಚೀ ಕಾಂಹೀ ವಾರ್ತಾ । ಉದ್ಧವಾಸೀ ತತ್ತ್ವತಾ ಸಾಂಗೀತಲೀ ।।೧೫।। ಗುಣದೋಷ ಜೋ ದೇಖಣೇ । ತೋಚಿ ಮಹಾದೋಷ ಜಾಣಣೇ । ಗುಣದೋಷ ಸ್ವಯೇ ನ ದೇಖಣೇ । ತೋ ಗುಣ ಮ್ಯಾ ಶ್ರೀಕೃಷ್ಣೇ ಮಾನಿಜೇ ।।೧೬।। ಹೇ ಐಕೋನಿ ದೇವಾಚೇ ಉತ್ತರ । ಉದ್ಧವ ಚಮತ್ಕಾರಲಾ ಥೋರ । ಕಾಯ ಗುಣದೋಷಾಂಚಾ ವಿಚಾರ । ಘರೋಘರ ಲೋಕೀ ಕೇಲಾ ।।೧೭।। ತುಮ್ಹೀಂಚ ವೇದಮುಖೇ ಆಪಣ । ಪ್ರಕಟಿಲೇ ಗುಣದೋಷಲಕ್ಷಣ । ತೇ ತುಮಚೇ ವೇದವಚನ । ಕೇವಿ ಅಮಾನ್ಯ ಕರಾವೇ ।।೧೮।। ಐಸೇ ವಿಧಿನಿಷೇಧಲಕ್ಷಣ । ವಿಚಾರಿತಾ ತೇ ವೇದವಚನ । ಕಾ ಪಾ ನಿಷೇಧೀ ಶ್ರೀಕೃಷ್ಣ । ಉದ್ಧವ ತೋ ಪ್ರಶ್ನ ಸ್ವಯೇ ಪುಸೇ ।।೧೯।। ವಿಸಾವೇ ಅಧ್ಯಾಯೀ ನಿರೂಪಣ । ಸಾಂಗಾವಯಾ ಗುಣದೋಷಲಕ್ಷಣ । ಭಕ್ತಿ ಜ್ಞಾನ ಕರ್ಮ ಜಾಣ । ತಿನ್ಹೀ ಅಧಿಕಾರ ಭಿನ್ನ ಸಾಂಗೇಲ ।।೨೦।। ಉದ್ಧವ ಮ್ಹಣೇ ಹೇ ಶ್ರೀಕೃಷ್ಣ । ತೂ ವೇದರೂಪೇ ಆಪಣ । ಬೋಲಿಲಾಸೀ ದೋಷಗುಣ । ತೇ ಪರಮ ಪ್ರಮಾಣ ಆಮ್ಹೀ ಮಾನೂ ।।೨೧।। ಹಾ ವಿಧೀ ಹಾ ನಿಷೇಧ । ಹೇ ದಾವಿತಾಹೇ ತುಝಾ ವೇದ । ತೋ ವೇದಾನುವಾದ ವಿಶದ । ಐಕ ಪ್ರಸಿದ್ಧ ಸಾಂಗೇನ ।।೨೨।।

ಉದ್ಧವ ಉವಾಚ :-

ವಿಧಿಶ್ಚ ಪ್ರತಿಷೇಧಶ್ಚ ನಿಗಮೋ ಹೀಶ್ವರಸ್ಯ ತೇ । ಅವೇಕ್ಷತೇಽರವಿಂದಾಕ್ಷ ಗುಣದೋಷಂ ಚ ಕರ್ಮಣಾಮ್ ।।೧।।

ಅರ್ಥ:- ಉದ್ಧವನು ಹೇಳಿದನು; ಹೇ ಕಮಲ ನಯನ ಶ್ರೀಕೃಷ್ಣನೇ, ನೀವು ಸರ್ವ ಶಕ್ತಿಮಾನನಾಗಿರುವಿರಿ. ನಿಮ್ಮ ಆಜ್ಞೆ ವೇದವಾಗಿರುವುದು. ಅದರಲ್ಲಿ ಕೆಲವು ಕರ್ಮ ಮಾಡುವ ವಿಧಿಗಳಿವೆ. ಮತ್ತು ಕೆಲವು ಕರ್ಮಗಳ ನಿಷೇಧವೂ ಇವೆ. ಈ ಯಾವ ವಿಧಿನಿಷೇಧ ಕರ್ಮಗಳು ಗುಣ ಮತ್ತು ದೋಷ ಇವುಗಳ ಮೇಲೆ ಬೆಳಕು ಚೆಲ್ಲುವುವು.

ಕಮಲನಯನಾ ಶ್ರೀಕೃಷ್ಣಾ । ವಿಧಿನಿಷೇಧ ಲಕ್ಷಣಾ । ದಾಖವೀತಸೇ ದೋಷಗುಣಾ । ತುಝೀ ವೇದಾಜ್ಞಾ ಪ್ರಸಿದ್ಧ ।।೨೩।।

ಜನಾರ್ದನರಿಗೆ ಏಕತ್ವವು ಪ್ರಿಯವಾಗಿರುವುದು. ಏಕನಾಗಿರುವ ನಾನು ಅವರಿಗೆ ಸಿಕ್ಕ ಕಾರಣವಾಗಿ ನಿಜಾತ್ಮ ಭಾವದಿಂದ ಇಬ್ಬರ ಐಕ್ಯವಾಯಿತು. ಅವರು ತಮ್ಮ ನಿಜಸುಖವನ್ನು ನನಗೆ ಉಣಿಸಿದರು ।।೧೨।। ಆ ಯಾವ ನಿಜಸುಖದ ಕಥೆಯನ್ನು ಹೇಳಿಸುವರು ಮತ್ತು ಕೇಳಲು ತಾವೇ ಶ್ರೋತೃವೂ ಕೂಡ ಆಗುವರು. ತದನಂತರ ಅದರಲ್ಲಿನ ಅರ್ಥದ ಯಥಾರ್ಥದಿಂದ ಸಮಾಧಾನವನ್ನೂ ಕೂಡ ಅವರೇ ಕೊಡುತ್ತಿರುವರು ।।೧೩।। ಈ ಪ್ರಕಾರವಾಗಿ ಜನಾರ್ದನಸ್ವಾಮಿಗಳವರು ಈ ಯಾವ ಹನ್ನೊಂದನೆಯ ಸ್ಕಂಧದ ಸುಲಭವಾದ ಮರಾಠೀ ಭಾಷೆಯಲ್ಲಿ ಪ್ರತಿಪಾದನೆಯನ್ನು ಮಾಡಿದರು. ಇದು ನನ್ನ ಸ್ವಂತವಾದ ಹೇಳಿಕೆಯಲ್ಲ. ವಿದ್ವಾನ ಜನರು ಇದನ್ನು ಸಹಜವಾಗಿ ತಿಳಿದುಕೊಳ್ಳುವರು ।।೧೪।। ಈ ಹನ್ನೊಂದನೆಯ ಸ್ಕಂಧದ ಹಿಂದಿನ ಕಥೆಯ ಸಂದರ್ಭವು ಹೀಗಿದೆ; ಹತ್ತೊಂಬತ್ತನೆಯ ಅಧ್ಯಾಯವು ಮುಗಿಯುತ್ತಲೇ ಶ್ರೀಕೃಷ್ಣನು ಗುಣದೋಷಸಂಬಧವಾಗಿ ಕೆಲವೊಂದು ಪ್ರಶ್ನೆಗಳನ್ನು ಹೇಳಿದನು ।।೧೫।। ಅದರಲ್ಲಿ ಗುಣದೋಷವೇ ಮಹಾದೋಷವಾಗಿರುವುದು. ಗುಣದೋಷಗಳನ್ನು ನೋಡದಿರುವಿಕೆಯೇ ಇದು ದೊಡ್ಡ ಗುಣವಾಗಿರುವುದು. ಇದು ಶ್ರೀಕೃಷ್ಣನಾದ ನನಗೆ ಮಾನ್ಯವಾಗಿರುವುದು ।।೧೬।। ದೇವರ ಈ ವಚನವನ್ನು ಕೇಳಿ ಉದ್ಧವನಿಗೆ ಮಹಾ ಚಮತ್ಕಾರವೆನಿಸಿತು. ಗುಣದೋಷಗಳ ವಿಚಾರವನ್ನು ಮನೆ ಮನೆಯಲ್ಲಿ ಜನರು ಏಕೆ ಮಾಡುವರೆಂದು ಉದ್ಧವನಿಗೆ ಹೀಗೆ ಅನಿಸಿತು ।।೧೭।। ಹೇ ದೇವರೇ, ನೀವೇ ವೇದಮುಖದಿಂದ ಗುಣದೋಷಗಳ ಲಕ್ಷಣಗಳನ್ನು ಹೇಳಿರುವಿರಿ. ಈ ಯಾವ ನಿಮ್ಮ ವೇದವಚನಗಳನ್ನು ನಾವು ಹೇಗೆ ಅಮಾನ್ಯವನ್ನಾಗಿ ಮಾಡಬೇಕು? ।।೧೮।। ವಿಧಿನಿಷೇಧಗಳ ಯಾವ ಲಕ್ಷಣಗಳು ಅವು ವೇದವಚನಗಳಾಗಿರುವುವು. ಹೀಗಿದ್ದರೂ ಕೂಡ ಶ್ರೀಕೃಷ್ಣನು ಇದರ ನಿಷೇಧವನ್ನು ಏಕೆ ಮಾಡುತ್ತಿರಬಹುದು? ಇದೇ ಪ್ರಶ್ನೆಯನ್ನು ಸ್ವತಃ ಉದ್ಧವನು ಕೇಳುತ್ತಿರುವನು ।।೧೯।। ಈ ಇಪ್ಪತ್ತನೆಯ ಅಧ್ಯಾಯದಲ್ಲಿ ಗುಣದೋಷಗಳ ಲಕ್ಷಣಗಳನ್ನು ಹೇಳುವುದಕ್ಕಾಗಿ ಭಕ್ತಿ, ಜ್ಞಾನ ಮತ್ತು ಕರ್ಮ ಈ ಮೂರರ ಭಿನ್ನ ಭಿನ್ನ ಅಧಿಕಾರವನ್ನು ಹೇಳುವನು ।।೨೦।। ಉದ್ಧವನು ಹೇಳಿದನು, ಹೇ ಶ್ರೀಕೃಷ್ಣಾ, ನೀನೇ ಸ್ವತಃ ವೇದರೂಪದಿಂದ ಗುಣದೋಷಗಳ ವರ್ಣನೆಯನ್ನು ಮಾಡಿರುವೆ. ಇದನ್ನೇ ನಾವು ಪರಮ ಪ್ರಮಾಣವೆಂದು ನಡೆಯುತ್ತಿದ್ದೇವೆ ।।೨೧।। ನಿನ್ನ ವೇದವು ಇದು ವಿಧಿಃ ಇದು ನಿಷೇಧ ಎಂದು ಸ್ಪಷ್ಟವಾಗಿ ತೋರಿಸುತ್ತಿರುವುದು. ಅದೇ ವೇದಾನುವಾದವನ್ನು ನಾನು ನಿನಗೆ ಸ್ಪಷ್ಟಮಾಡಿ ಹೇಳುವೆನು, ಅದನ್ನು ನೀನು ಲಕ್ಷಕೊಟ್ಟು ಕೇಳು ।।೨೨।।

ಉದ್ಧವನು ಹೇಳಿದನು, ಹೇ ಕಮಲನಯನ ಶ್ರೀಕೃಷ್ಣನೇ, ವೇದದ ಆಜ್ಞೆವೆಂದರೆ ನಿನ್ನ ಆಜ್ಞೆಯೇ ಇದ್ದಂತೆ ಎಂದು ಪ್ರಸಿದ್ಧವಾಗಿರುವುದು. ಆ ಆಜ್ಞೆಯು ವಿಧಿನಿಷೇಧ ಲಕ್ಷಣ ಅಂದರೆ ಗುಣದೋಷಗಳನ್ನು ತೋರಿಸುವುದು ।।೨೩।।

ತುಝಿಯಾ ವೇದಾಚೇ ವೇದವಿಧೀ । ಗುಣದೋಷೀ ಜಡಲೀ ಬುದ್ಧೀ । ತೇ ಮೀ ಸಾಂಗೇನ ಪ್ರಸಿದ್ಧೀ । ಕೃಪಾನಿಧೀ ಅವಧಾರೀ ।೨೪॥

ವರ್ಣಾಶ್ರಮವಿಕಲ್ಪಂ ಚ ಪ್ರತಿಲೋಮಾನುಲೋಮಜಮ್ । ದ್ರವ್ಯದೇಶವಯಃಕಾಲನ್ ಸ್ವರ್ಗ ನರಕಮೇವ ಚ ।೨॥

ಅರ್ಥ:- ವರ್ಣಾಶ್ರಮ ಭೇದ, ಪ್ರತಿಲೋಮ ಮತ್ತು ಅನುಲೋಮರೂಪ ವರ್ಣಸಂಕರ ಕರ್ಮಗಳಿಗೆ ಉಪಯುಕ್ತ ಮತ್ತು ಅನುಪಯುಕ್ತ ದ್ರವ್ಯ, ದೇಶ, ವಯಸ್ಸು ಮತ್ತು ಕಾಲ ಹಾಗೆಯೇ ಸ್ವರ್ಗ ಮತ್ತು ನರಕ ಇವುಗಳ ಭೇದದ ಬೋಧವು ವೇದಗಳಿಂದ ಆಗುವುದು.

ತುಝೀ ಜೇ ಕಾ ವೇದವಾಣೀ । ಉಘಡೀ ಗುಣದೋಷಾಂಚೀ ಖಾಣೀ । ಅಧಮಮಧ್ಯಮೋತ್ತಮ ಮಾಂಡಣೀ । ವರ್ಣಾಶ್ರಮಪಣೀ ಭೇದ ದಾವೀ ।೨೫॥ ದ್ರವ್ಯ ವಿಹಿತ ಅವಿಹಿತ । ಹೇಹೀ ವೇದ ಅಸೇ ದಾವಿತ । ದೇಶ ಪುನಿತ ಅಪುನೀತ । ಕಾಳಹೀ ದಾವೀತ ಸುಷ್ಟದುಷ್ಟತ್ವೇ ।೨೬॥ ಪೂರ್ವವಯೀ ಚಿತ್ತ ನಿಶ್ಚಿಂತ । ತಾರುಣ್ಯೇ ತೇಚಿ ಕಾಮಾಸಕ್ತ । ವಾರ್ಧಕ್ಯೀ ತೇ ಅತಿಕುಶ್ಚಿತ । ತೇವೀ ಶುದ್ಧೀ ಉಪಜವಿತ ಗುಣದೋಷ ವೇದು ।೨೭॥ ತುಝಾಚಿ ಗಾ ವೇದ ದೇಖ । ಸೂಚಿತಾಹೇ ಸ್ವರ್ಗ ನರಕ । ತೇಣೇ ಕರ್ಮಾಚೇ ಆವಶ್ಯಕ । ಸಾಧಕ ಬಾಧಕ ತೋ ದಾವೀ ।೨೮॥ ವರ್ಣಾಶ್ರಮಮ್ಮಾ ಜೇಲ ಗುಜ । ಪ್ರತಿಲೋಮಾನುಲೋಮಜ । ಐಸೇ ನಾನಾ ಭೇದೇ ಭೋಜ । ವೇದೇಂಚಿ ಸಹಜ ನಾಚವಿಜೇ ।೨೯॥ ಉತ್ತಮ ವರ್ಣಾಚೀ ಜೇ ನಾರೀ । ಹೀನ ವರ್ಣಾಚಾ ಗರ್ಭ ಧರೀ । ತೇಚಿ ಸಂತತೀ ಸಂಸಾರೀ । ಅಭಿಧಾನ ಧರೀ ''ಪ್ರತಿಲೋಮಜ'' ।೩೦॥ ತೇಚಿ ಸಂತತೀ ಪ್ರಸಿದ್ಧ । ಸೂತ ವೈದೇಹ ಮಾಗಧ । ಐಶಿಯಾ ನಾಮಾಚೇ ಜೇ ಪದ । ತೇ ಜಾಣ ಶುದ್ಧ ಪ್ರತಿಲೋಮಜ ।೩೧॥ ಹೀನ ವರ್ಣಾಚೀ ಜೇ ನಾರೀ । ಉತ್ತಮ ಪುರುಷಾಚಾ ಗರ್ಭ ಧರೀ । ತೇ ''ಅನುಲೋಮಜ'' ಸಂಸಾರೀ । ಶಾಸ್ತ್ರಕಾರೀ ಬೋಲಿಜೇ ।೩೨॥ ಅಂಬಷ್ಟ ಆಣಿ ಮೂರ್ಧಾವಸಿಕ್ತ । ಪಾರಶವ ಆಣಿ ಸಾತ್ವತ । ಇತ್ಯಾದಿ ನಾವೇ ಜೇ ವರ್ತತ । ತೇ ಜಾಣ ಸಮಸ್ತ ಅನುಲೋಮಜ ।೩೩॥ ನಾನಾ ಭೇದಪ್ರಕಾರ ಅವಿಧಿವಿಧೀಂಚಾ ವಿಚಾರ । ವೇದ ಪ್ರಕಾಶಿತೋ ಸಾಚಾರ । ಗುಣದೋಷಾ ಮಾಹೇರ ವೇದ ತುಝಾ ।೩೪॥

ಗುಣದೋಷಭಿದಾದೃಷ್ಟಿಮಂತರೇಣ ವಚಸ್ತವ । ನಿಃಶ್ರೇಯಸಂ ಕಥಂ ನೃಣಾಂ ನಿಷೇಧವಿಧಿಲಕ್ಷಣಮ್ ।೩॥

ಅರ್ಥ:- ಸಾಹಿತ್ಯವೆಂದರೆ ವೇದವಾಗಿರುವುದು. ಇದರಲ್ಲಿ ಯಾವ ಸಂದೇಹವೇ ಇಲ್ಲ. ಆದರೆ ಇದರಲ್ಲಿ ವಿಧಿನಿಷೇಧಗಳು ತುಂಬಿರುವುವು. ಒಂದು ವೇಳೆ ಅದರಲ್ಲಿ ಗುಣದೋಷಗಳ ಭೇದ ಮಾಡುವ ದೃಷ್ಟಿ ಇರದಿದ್ದರೆ ಪ್ರಾಣಿಮಾತ್ರರ ಕಲ್ಯಾಣವನ್ನು ಮಾಡಲು ಅದು ಹೇಗೆ ಸಮರ್ಥವಾದೀತು?

ನಿನ್ನದೇ ಆಗಿರುವ ವೇದಗಳಲ್ಲಿ ವಿಧಿನಿಷೇಧಗಳಿರುವುವು. ಆದ್ದರಿಂದಲೇ ಗುಣದೋಷಗಳಲ್ಲಿ ನಮ್ಮ ಬುದ್ಧಿಯು ನಟ್ಟಿಕೊಂಡಿರುವುದು. ಹೇ ಕೃಪಾಸಾಗರನೇ, ಅದನ್ನೇ ನಾನೀಗ ಸ್ಪಷ್ಟಮಾಡಿ ಹೇಳುವೆನು ।೨೪॥

ಹೇ ದೇವನೇ, ನಿನ್ನ ವೇದವಾಣಿಯೇ ಮೂಲತಃ ಗುಣದೋಷಗಳ ಗಣಿಯಾಗಿದೆ. ವೇದವೇ ಉತ್ತಮ, ಮಧ್ಯಮ ಮತ್ತು ಅಧಮ ಹೀಗೆ ವಿಭಾಗವನ್ನು ತಯಾರಿಸಿ ವರ್ಣಾಶ್ರಮಗಳ ಭೇದವನ್ನು ತೋರಿಸಿರುವುದು ।೨೫॥ ಯೋಗ್ಯ ಮತ್ತು ಅಯೋಗ್ಯ ದ್ರವ್ಯ, ಪವಿತ್ರ ಮತ್ತು ಅಪವಿತ್ರ ದೇಶ, ಶುಭ ಮತ್ತು ಅಶುಭ ಕಾಲ, ಇವುಗಳನ್ನೂ ಕೂಡ ವೇದವೇ ತೋರಿಸಿರುವುದು ।೨೬॥ ಬಾಲ್ಯಾವಸ್ಥೆಯಲ್ಲಿ ಚಿತ್ತವು ನಿಶ್ಚಿಂತವಾಗಿರುವುದು. ತಾರುಣ್ಯಾವಸ್ಥೆಯಲ್ಲಿ ಚಿತ್ತವು ವಿಷಯಾಸಕ್ತವಾಗುವುದು. ವಾರ್ಧಕ್ಯಾವಸ್ಥೆಯಲ್ಲಿ ಅದೇ ಚಿತ್ತವು ಅತಿಶಯವಾಗಿ ಕುಶ್ಚಿತವಾಗುವುದು. ಅದರಂತೆ ಶುದ್ಧದಲ್ಲಿಯೂ ಸಹ ವೇದವು ಗುಣದೋಷವನ್ನು ನಿರ್ಮಾಣ ಮಾಡುವುದು ।೨೭॥ ಹೇ ದೇವನೇ, ನಿನ್ನ ವೇದವೇ ಸ್ವರ್ಗ ಮತ್ತು ನರಕ ಇವುಗಳ ವರ್ಣನೆಯನ್ನು ಮಾಡಿರುವುದು. ಅದಕ್ಕಾಗಿ ಸಾಧಕ, ಬಾಧಕ ಕರ್ಮಗಳನ್ನು ಮಾಡಲು ಹೇಳಿರುವುದು ।೨೮॥ ವರ್ಣಾಶ್ರಮದಲ್ಲಿಯೂ ಕೂಡ ಪ್ರತಿಲೋಮಜ ಮತ್ತು ಅನುಲೋಮಜ ಎಂಬ ಭೇದವನ್ನು ವೇದವೇ ನಿರ್ಮಾಣವನ್ನು ಮಾಡಿ ಇಟ್ಟಿರುವುದು ।೨೯॥ ಉಚ್ಚ ವರ್ಣದ ಸ್ತ್ರೀಗೆ ಹೀನ ವರ್ಣದ ಪುರುಷನಿಂದ ಸಂತತಿಯು ಪ್ರಾಪ್ತವಾದರೆ ಲೌಕಿಕದಲ್ಲಿ ಅದಕ್ಕೆ ಪ್ರತಿಲೋಮಜ ಎಂದು ಹೇಳಲ್ಪಡುವುದು ।೩೦॥ ಇದರಲ್ಲಿನ ಸಂತತಿ ಸೂತ, ವೈದೇಹ ಮತ್ತು ಮಾಗಧ ಎಂದು ಪ್ರಸಿದ್ಧವಾದ ಜಾತಿಗಳಿರುವುವು. ಅವು ಶುದ್ಧವಾದ ಪ್ರತಿಲೋಮಜ ಎಂದು ತಿಳಿಯಬೇಕು ।೩೧॥ ಹೀನ ವರ್ಣದ ಸ್ತ್ರೀಯಗಳಿಗೆ ವರಿಷ್ಠ ವರ್ಣದ ಪುರುಷನಿಂದ ಆಗಿರುವ ಸಂತತಿಗೆ ಶಾಸ್ತ್ರಕಾರ ಜನರು ಅನುಲೋಮಜ ಎಂದು ಹೇಳುವರು ।೩೨॥ ಅಂಬಷ್ಟ, ಪ್ರವೃತ್ತ, ಕಾಯಸ್ಥ, ಸಾರಸ್ವತ ಇತ್ಯಾದಿಯಾಗಿ ಇರುವ ಸರ್ವಜಾತಿಗಳು ಅನುಲೋಮಜ ಪ್ರಜೆ ಎಂದು ತಿಳಿಯಬೇಕು ।೩೩॥ ಹೀಗೆ ನಾನಾ ಪ್ರಕಾರಗಳ ಭೇದಾಭೇದಗಳನ್ನು, ಅವುಗಳಲ್ಲಿನ ವಿಧಿ-ನಿಷೇಧಗಳ ಪ್ರಕಾರಗಳನ್ನು ವೇದವೇ ನಿರ್ಮಾಣಮಾಡಿರುವುದು. ಆದ್ದರಿಂದ ನಿನ್ನ ವೇದವೆಂದರೆ ಗುಣದೋಷಗಳ ತವರುಮನೆಯಾಗಿರುವುದು ।೩೪॥

ಹೇ ಗುಣ ಆಣಿ ಹೇ ದೋಷ । ಉಭಯತಾ ವೈರ ಲಾವೀ ದೇಖ । ತುಝಾ ವೇದ ಗಾ ಆವಶ್ಯಕ । ಹೋಯ ಪ್ರಕಾಶಕ ಗುಣದೋಷಾ ।।೩೫।। ವೈರ ಲಾವೂನಿ ವೇದವಾಣೀ । ವಾಢವೀ ಗುಣದೋಷಮಾಂಡಣೀ । ತೇಥ ಮೋಕ್ಷ ಪಾವಿಜೇ ಪ್ರಾಣೀ । ವೇದವಚನೀ ಘಡೇ ಕೇವೀ ।।೩೬।। ರಾಊಳ ಬೋಲಿಲೇ ಆಪಣ । ಜೇ ನ ದೇಖಾವೇ ದೋಷಗಣ । ತೂಂಚಿ ಮ್ಹಣಸೀ ವೇದ ಪ್ರಮಾಣ । ತೈ ದೋಷಗುಣ ದೇಖಾವೇ ।।೩೭।। ಏವಂ ಐಕತಾ ತುಝೀ ವಚನ । ಉಭಯತಾ ಆಲೀ ನಾಗವಣ । ವೇದ ಪ್ರಮಾಣ ಕೀ ಅಪ್ರಮಾಣ । ಹೇ ಸಮೂಳ ಜಾಣ ಕಳೇನಾ ।।೩೮।। ತುಝಾ ವಚನಾ ವಿಶ್ವಾಸಾವೇ । ತೈ ಗುಣದೋಷ ನ ದೇಖಾವೇ । ತುಝೀ ವೇದವಚನ ಮಾನಾವೇ । ತೈ ದೇಖಾವೇ ಗುಣದೋಷಾ ।।೩೯।। ಐಸೇ ತುಝೇನಿ ಬೋಲೇ ಜಾಣ । ಸಂಶಯೀ ಪಡಲೇ ಸಜ್ಞಾನ । ಮಾ ಇತರ ಸಾಧಾರಣ ಜನ । ತ್ಯಾಂಚಿ ಕಥಾ ಕೋಣ ಯೇ ಠಾಯೀ ।।೪೦।। (ಆಶಂಕಾ) ಮಾಝೀ ವಚನ ವೇದವಚನ । ದೋನೀ ಏಕರೂಪೇ ಮ್ಹಣಸೀ ಪ್ರಮಾಣ । ತರೀ ಗುಣದೋಷದರ್ಶನ । ಕಾ ಪಾ ವಿಲಕ್ಷಣ ಪರಸ್ಪರೇ ।।೪೧।। ಮಾಝೇ ವೇದಾಚೇ ವಿಧಿವಿಧಾನ । ನವ್ಹತಾ ವೇದಾರ್ಥಾಚೇ ಜ್ಞಾನ । ಮ್ಹಣಶೀ ಮೋಕ್ಷ ನ ಘಡೇ ಜಾಣ । ವೇದ ಪ್ರಮಾಣ ಯಾ ಹೇತೂ ।।೪೨।। ತ್ಯಾ ಮೋಕ್ಷಾ ಮಾಜೀ ಕಾಯ ಕಠಿಣ । ಸಕಳ ಕರ್ಮೇ ಸಾಂಡಿತಾ ಜಾಣ । ಘರಾ ಮೋಕ್ಷ ಯೇ ಆಪಣ । ಸಹಜಚಿ ಜಾಣ ನ ಪ್ರಾರ್ಥಿತಾ ।।೪೩।। ಮ್ಹಣಸೀ ವೇದಾರ್ಥ ನ ಕಳತಾ । ಕರ್ಮ ಕರಿತಾ ಕಾ ತ್ಯಾಗಿತಾ । ಕದಾ ಮೋಕ್ಷ ನ ಯೇ ಹಾತಾ । ಜಾಣ ತತ್ತ್ವತಾ ನಿಶ್ಚಿತ ।।೪೪।। ಭಾಸಲಾ ದೋರಾಚಾ ಸರ್ಪ ಥೋರ । ತೇಥ ಜಪತಾ ನಾನಾ ಮಂತ್ರಭಾರ । ಕರಿತಾ ವಾಜಂತ್ರ್ಯಾಂಚಾ ಗಜರ । ಮಾರಿತಾ ತಿಳಭರ ಢಳೇನಾ ।।೪೫।। ತೋ ಸಾದರೇ ನಿರೀಕ್ಷಿತಾ ಜಾಣ । ಹೋಯ ತ್ಯಾ ಸರ್ಪಾಚೇ ನಿರಸನ । ತೇವೀ ನಿರ್ಧಾರಿತಾ ವೇದವಚನ । ಭವಭಯ ಜಾಣ ನಿರಸೇ ।।೪೬।। ಭಯಭಯಾಚೀ ನಿರ್ಮುಕ್ತತಾ । ತ್ಯಾ ನಾಂವ ''ಮೋಕ್ಷ'' ಜಾಣ ತತ್ತ್ವತಾ । ತೋ ವೇದಾರ್ಥಾವೀಣ ಹಾತಾ । ನ ಯೇ ಸರ್ವಥಾ ಆಣಿಕೇ ।।೪೭।। ವೇದ ವಿಧಾನ ನ ಕರಿತಾ । ಕರ್ಮ ತ್ಯಾಗಿಲೇ ಉದ್ಧತತಾ । ತೇಣೇ ನಿಜಮೋಕ್ಷ ನ ಯೇ ಹಾತಾ । ಪರೀ ಪಾಖಂಡತಾ ಅಂಗೀ ವಾಜೇ ।।೪೮।।

ಇದು ಗುಣ ಮತ್ತು ಇದು ದೋಷ ಹೀಗೆ ನಿನ್ನ ವೇದವು ಸ್ಪಷ್ಟವಾಗಿ ತೋರಿಸಿ ಅವುಗಳಲ್ಲಿ ವೈರ ಭಾವವನ್ನು ಉತ್ಪನ್ನ ಮಾಡುತ್ತಿರುವುದು. ಮತ್ತು ಗುಣದೋಷಗಳನ್ನು ಬಿಚ್ಚಿ ತೋರಿಸುವುದು ।।೩೫।। ವೇದವಾಣಿಯು ವೈರವನ್ನು ಹುಟ್ಟಿಸಿ ಗುಣದೋಷಭಾವದ ವೃದ್ಧಿಯನ್ನು ಮಾಡುವುದು. ಆಗ ಆ ವೇದವಾಣಿಯಿಂದ ಮನುಷ್ಯರು ಮೋಕ್ಷಕ್ಕೆ ಹೇಗೆ ಪ್ರಾಪ್ತರಾಗಬೇಕು? ।।೩೬।। ಗುಣದೋಷಗಳತ್ತ ಮೂಲತಃ ನೋಡಲೇಬಾರದು ಎಂದು ಭಗವಂತನಾದ ನೀನು ಹೀಗೆ ಸ್ಪಷ್ಟವಾಗಿ ಹೇಳಿರುವೆ ಮತ್ತು ವೇದವು ಪ್ರಮಾಣವು ಎಂದು ಅದನ್ನೂ ಕೂಡ ನೀನೇ ಹೇಳಿರುವೆ ಇದು ನಿಜವೆಂದು ತಿಳಿಯಬೇಕೆಂದರೆ ಆಗ ಮಾತ್ರ ಗುಣದೋಷಗಳನ್ನು ನೋಡುತ್ತಲೇ ಇರಬೇಕಾಗುವುದು ।।೩೭।। ಆದ್ದರಿಂದಲೇ ನಿನ್ನ ವಚನಗಳನ್ನು ಕೇಳಿ ಮನವು ಎರಡು ಪ್ರಕಾರವಾಗುವುದು. ವಿಚಾರಗಳ ಗೊಂದಲ ಉಂಟಾಗುವುದು. ಅದಕ್ಕಾಗಿ ವೇದಕ್ಕೆ ಪ್ರಮಾಣ ಎಂದು ಮನ್ನಿಸಬೇಕೋ ಅಥವಾ ಮನ್ನಿಸಬಾರದೋ? ಇದು ಯಾವುದೂ ನಮಗೆ ತಿಳಿಯದಾಗಿದೆ ।।೩೮।। ನಿನ್ನ ವಚನದಲ್ಲಿ ವಿಶ್ವಾಸವನ್ನಿಟ್ಟರೆ ಗುಣದೋಷ ನೋಡುವುದು ಯೋಗ್ಯವಲ್ಲ. ನಿನ್ನ ವೇದವಚನವನ್ನು ಮನ್ನಿಸಿದರೆ ಯಾವಾಗಲೂ ಗುಣದೋಷವನ್ನು ನೋಡುತ್ತಲೇ ಇರಬೇಕಾಗುವುದು ।।೩೯।। ಇಂತಹ ಪ್ರಕಾರದ ನಿನ್ನ ಭಾಷಣದಿಂದ ಮಹಾಜ್ಞಾನಿ ಪುರುಷರ ಮನಸ್ಸಿಗೂ ಕೂಡ ಸಂಶಯವು ನಿರ್ಮಾಣವಾಗುವುದು. ಅಂದಮೇಲೆ ಸಾಮಾನ್ಯ ಜನರ ಕಥೆ ಯಾವ ಅವಸ್ಥೆಯಾದೀತು? ।।೪೦।। (ಸಂಶಯ) ನನ್ನ ವಚನ ಮತ್ತು ವೇದಗಳ ವಚನ ಒಂದೇಯಾಗಿದೆ ಎಂದು ನೀನು ಹೇಳುತ್ತಿರುವೆ. ಅಂದಮೇಲೆ ಗುಣದೋಷಗಳ ದರ್ಶನದಲ್ಲಿ ಪರಸ್ಪರವಾಗಿ ವಿರೋಧ ಮತವನ್ನು ಏಕೆ ಮಂಡಿಸುವೆ? ।।೪೧।। ನನ್ನ ವೇದದ ವಿಧಾನವು ಕೈಯಿಂದ ಸಾಧಿಸದಿದ್ದರೆ ಮತ್ತು ವೇದಾರ್ಥದ ಜ್ಞಾನವೂ ಕೂಡ ಆಗದಿದ್ದರೆ ಮೋಕ್ಷವು ದೊರೆಯುವುದಿಲ್ಲ. ಆದ್ದರಿಂದ ವೇದವು ಪ್ರಮಾಣವಾಗಿದೆ ಎಂದು ನೀನು ಹೇಳುತ್ತಿರುವೆ ।।೪೨।। ಆದರೆ ಮೋಕ್ಷವನ್ನು ಪಡೆಯಲು ಯಾವ ಕಠಿಣವಿದೆ? ಸರ್ವಕರ್ಮಗಳ ತ್ಯಾಗವನ್ನು ಮಾಡಿದರೆ ಆಗ ಮೋಕ್ಷವು ಕರೆಯದೇ ಮನೆಗೆ ಸಹಜವಾಗಿ ನಡೆದು ಬರುವುದು ।।೪೩।। ಈಗ ಕದಾಚಿತ್ ನಿನ್ನ ಮನದಲ್ಲಿ ಹೀಗೆ ವಿಚಾರವು ಬರಬಹುದು, ವೇದಗಳ ಅರ್ಥವು ತಿಳಿಯದಿದ್ದರೆ, ಕರ್ಮಗಳನ್ನು ಮಾಡಲಿ ಅಥವಾ ಬಿಡಲಿ, ನಿಜವಾಗಿಯೂ ಮೋಕ್ಷವು ಎಂದಿಗೂ ಕೈಸೇರುವುದಿಲ್ಲ ।।೪೪।। ಒಂದು ದೊಡ್ಡದಾದ ಹಗ್ಗದಲ್ಲಿ ಸರ್ಪದ ಭಾಸವಾಗಲು, ಆಗ ಅಲ್ಲಿ ದೊಡ್ಡ ದೊಡ್ಡ ಮಂತ್ರಗಳ ಜಪ ಮಾಡಿದರೆ ಅಥವಾ ಜೋರಾಗಿ ಬಜಂತ್ರಿಗಳನ್ನು ಬಾರಿಸಿದರೆ ಇಲ್ಲವೇ ಅದಕ್ಕೆ ಹೊಡೆದರೆ ಅದು ತನ್ನ ಸ್ಥಳದಿಂದ ಸ್ವಲ್ಪವೂ ಕೂಡ ಕದಲುವುದಿಲ್ಲ ।।೪೫।। ಆದರೆ ಒಂದೇ ಕ್ಷಣವಾದರೂ ಏಕಾಗ್ರತೆಯಿಂದ ಅದರತ್ತ ನೋಡಲು ಆಗ ಅದು ಸರ್ಪವಿರದೇ ಹಗ್ಗ ಎದೆ ಎಂದು ಅದರ ನಿಶ್ಚಯವಾದ ಖಾತ್ರಿಯಾಗುವುದು, ಅದರಂತೆ ವೇದರಚನೆಗಳ ನಿಶ್ಚಯಪೂರ್ವಕವಾಗಿ ವಿಚಾರವನ್ನು ಮಾಡಲು ಕೂಡಲೇ ಸಂಸಾರ ಭಯದ ನಿರಸನೆಯಾಗುವುದು ।।೪೬।। ಸಂಸಾರಭಯದ ನಾಶವಾಗುವುದೇ ನಿಜವಾದ ಮೋಕ್ಷವಾಗಿರುವುದು. ಆ ಮೋಕ್ಷವು ವೇದಗಳ ಅರ್ಥವನ್ನು ಸರಿಯಾಗಿ ತಿಳಿಯದೇ ಪ್ರಾಪ್ತವಾಗುವುದಿಲ್ಲ ।।೪೭।। ವೇದವಿಧಾನಗಳತ್ತ ಲಕ್ಷವನ್ನು ಕೊಡದೇ ಕೇವಲ ಉನ್ಮತ್ತದಿಂದ, ಅಜ್ಞಾನದಿಂದ ಕರ್ಮಗಳ ತ್ಯಾಗವನ್ನು ಮಾಡಿದರೆ ಮೋಕ್ಷವು ಮಾತ್ರ ಸಿಗುವುದೇ ಇಲ್ಲ. ಬದಲಾಗಿ ಪಾಖಂಡೀತನವು ಪ್ರಾಪ್ತವಾಗುವುದು ।।೪೮।।

ವಿಧಿಯುಕ್ತ ಜೋ ಕರ್ಮತ್ಯಾಗು । ಕರೂನಿ ಸನ್ಯಾಸ ಘೇತಲ್ಯಾ ಸಾಂಗು । ತೈ ಮ್ಹಣಸೀ ನ ಪಡೇ ವೇದಪಾಂಗು । ಹಾಹೀ ವ್ಯಂಗು ವಿಚಾರು ।೪೯॥ ಶ್ರವಣಾಂಗ ಸನ್ಯಾಸಗ್ರಹಣ । ತೇಥಹೀ ಅಸೇ ವಿಧಿವಿಧಾನ । ಗುರುಮುಖೇ ಜೇ ಮಹಾವಾಕ್ಯ-ಶ್ರವಣ । ತೋಹೀ ಜಾಣ ವೇದಾರ್ಥ ।೫೦॥ (ಆಶಂಕಾ) ಕರಿತಾ ದೇವಾಪಿತರಾಂಚೇ ಯಜನ । ತೇ ಹೋಊನಿಯಾ ಪ್ರಸನ್ನ । ಮೋಕ್ಷ ದೇತೀಲ ಆಪಣ । ಹೇಹೀ ವೇದೇವೀಣ ಘಡೇನಾ ।೫೧॥ ಸ್ವಾಹಾಕಾರೇ ತೃಪ್ತ ಸುರ । ಸ್ವಾಧಾಕಾರೇ ತೃಪ್ತ ಪಿತರ । ವೇದವಿನಿಯೋಗೇವೀಣ ದೇವಪಿತರ । ಪ್ರಸನ್ನಾಕಾರ ಕದಾ ನವ್ಹತೀ ।೫೨॥

ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಸ್ತವೇಶ್ವರ ।
ಶ್ರೇಯಸ್ತ್ವನುಪಲಬ್ಧೇಽರ್ಥೇ ಸಾಧ್ಯಸಾಧನಯೋರಪಿ ।೪॥

ಅರ್ಥ:- ಸರ್ವಶಕ್ತಿಮಾನ ಪರಮೇಶ್ವರನು ನಮ್ಮ ವಾಣೀ, ವೇದವು ಪಿತಾ, ದೇವತೆ ಮತ್ತು ಮಾನವರಿಗಾಗಿ ಶ್ರೇಷ್ಠವಾದ ಮಾರ್ಗದರ್ಶನದ ಕಾರ್ಯವನ್ನು ಮಾಡುವುದು. ಕಾರಣ ಈ ಮುಖಾಂತರವಾಗಿ ಸ್ವರ್ಗಮೋಕ್ಷ ಇತ್ಯಾದಿ ಅದೃಶ್ಯ ವಸ್ತುಗಳ ಬೋಧೆಯಾಗುವುದು. ಮತ್ತು ಈ ಲೋಕದಲ್ಲಿ ಯಾರ ಸಾಧ್ಯ ಯಾವುದು? ಮತ್ತು ಸಾಧನೆ ಯಾವುದು? ಇವುಗಳ ನಿರ್ಣಯವು ಇವುಗಳ ಮುಖಾಂತರ ಆಗುವುದು.

ನಾಥಿಲೇಚಿ ಚರಾಚರ । ದೇವ ಮನುಷ್ಯ ಆಣಿ ಪಿತರ । ವೇದೇ ಪ್ರಕಾಶೂನಿ ಸಾಚಾರ । ಪೂಜ್ಯತ್ವೇ ಥೋರ ಪ್ರತಿಪಾದೀ ।೫೩॥ ತ್ಯಾಹೀಮಾಜೀ ಅತಿವಿಷಮ । ಉತ್ತಮ ಮಧ್ಯಮ ಆಣಿ ಅಧಮ । ಹಾ ತ್ರಿವಿಧ ಭೇದಸಂಭ್ರಮ । ವೇದ ಉಪಕ್ರಮ ಕರೂನಿ ದಾವೀ ।೫೪॥ ಯಾಪರೀ ಗುಣದೋಷಲಕ್ಷಣ । ತುವಾಂಚಿ ವಾಢವಿಲೇ ಆಪಣ । ಯಾ ನಾಂವ ಮ್ಹಣಸೀ ಮೋಕ್ಷಸಾಧನ । ತರೀ ಕಾ ಗುಣದೋಷ ನಿವಾರಿಸೀ ।೫೫॥ ಐಶಿಯಾ ನಿರೂಪಣ ಘಡಾಮೋಡೀ । ತುಝೇನಿ ಬೋಲೇ ಪಡೇ ಆಡೀ । ತೇಣೇ ಗುಣದೋಷಾಂಚೀ ಪರವಡೀ । ಬಾಧಾ ರೋಕಡೀ ಅಂಗೀ ವಾಜೇ ।೫೬॥ ಅವಘಾ ಸಂಸಾರ ಕಾಲ್ಪನಿಕ । ತೇಥ ಏಕ ಸ್ವರ್ಗ ಏಕ ನರಕ । ಹಾ ಮೋಕ್ಷ ಹಾ ಅತಿಬಂಧಕ । ಯೇಣೇ ವೇದವಾದೇ ಲೋಕ ಭ್ರಮವಿಲೇ ತುವಾ ।೫೭॥ ಪೂರ್ವೀ ಪುರುಷಾಚೇ ಪೋಟೀ । ನವ್ಹತೀ ಗುಣದೋಷಾಂಚೀ ಗೋಠೀ । ತುಝ್ಯಾ ವೇದಾನುವಾದ ಪರಿಪಾಠೀ । ಗುಣದೋಷೀ ದೃಷ್ಟೀ ದೃಢ ಝಾಲೀ ।೫೮॥ ಏವಂ ತುಝೇನಿ ಬೋಲೇ ಜಾಣ । ಲೋಕಾಂಸೀ ಆಲೀ ನಾಗವಣ । ಭೋಗಾವಯಾ ನರಕ ದಾರುಣ । ಭ್ರಾಮಕ ಜಾಣ ವೇದೋಕ್ತಿ ತುಝೀ ।೫೯॥

ಆದಕ್ಕಾಗಿಯೇ ವೇದವಿಧಾನ ಪ್ರಮಾಣದಂತೆ ಕರ್ಮದ ತ್ಯಾಗವನ್ನು ಮಾಡಿ ಶಾಸ್ತ್ರಪ್ರಮಾಣದಂತೆ ಸನ್ಯಾಸ ಗ್ರಹಣವನ್ನು ಮಾಡಿದರೆ ಯಾವ ಬಾಧೆಯಾಗುವುದಿಲ್ಲ. ಹೀಗೆಂದು ಹೇಳಿದರೂ ಅದೂ ಕೂಡ ಗೌಣವೇ ಆಗುವುದು ।೪೯॥ ಗುರುವಾಕ್ಯಗಳನ್ನು ಶ್ರವಣ ಮಾಡುವುದಕ್ಕಾಗಿ ಸನ್ಯಾಸವನ್ನು ಸ್ವೀಕರಿಸಬೇಕಾಗುವುದು. ಆ ಶ್ರವಣಕ್ಕೂ ಕೂಡ ವಿಧಿವಿಧಾನಗಳಿರುವುವು. ಗುರುಮುಖದಿಂದ ಶ್ರವಣ ಮಾಡುವುದೂ ಸಹ ಇದು ವೇದಾರ್ಥವೇ ಆಗಿರುವುದು ।೫೦॥ ದೇವ ಪಿತೃಗಳ ಯಜ್ಞತರ್ಪಣವನ್ನು ಮಾಡುವುದರಿಂದ ಅವರು ಪ್ರಸನ್ನರಾಗುವರು ಮತ್ತು ಅವರು ತಾವಾಗಿಯೇ ಮೋಕ್ಷವನ್ನು ಕೊಡುವರು. ಹೀಗೆಂದು ಹೇಳಿದರೂ ಅದೂ ಸಹ ವೇದಹೊರತಾಗಿ ಸಾಧಿಸುವುದಿಲ್ಲ ।೫೧॥ ಕಾರಣ ಸ್ವಾಹಾ ಕಾರ್ಯದಿಂದ ದೇವತೆಗಳು ಪ್ರಸನ್ನರಾಗುವರು, ತೃಪ್ತರಾಗುವರು, ಸ್ವಾಧಾಕಾರದಿಂದ ಪಿತೃಗಳು ತೃಪ್ತರಾಗುವರು. ಸಾರಾಂಶವೇನೆಂದರೆ, ವೇದವಿಧಿ ಇಲ್ಲದೇ ದೇವತೆಗಳು ಅಥವಾ ಪಿತೃಗಳು ಎಂದಿಗೂ ಪ್ರಸನ್ನರಾಗುವುದಿಲ್ಲ ।೫೨॥

ಮಿಥ್ಯೆಯಾಗಿರುವ ಈ ಎಲ್ಲ ಚರಾಚರ ವಿಶ್ವವನ್ನು, ದೇವ, ಮನುಷ್ಯ ಮತ್ತು ಪಿತೃಗಳು, ಇವರನ್ನು ವೇದವೇ ತೋರಿಸಿಕೊಡುವುದು. ಮತ್ತು ಪೂಜ್ಯ ಭಾವನೆಯಿಂದ ಅವರ ಶ್ರೇಷ್ಠತ್ವದ ವರ್ಣನೆಯನ್ನು ಮಾಡುವುದು ।೫೩॥ ಅವುಗಳಲ್ಲಿಯೂ ಕೂಡ ಪರಸ್ಪರರ ವಿರುದ್ಧವಾಗಿ ಉತ್ತಮ, ಮಧ್ಯಮ ಮತ್ತು ಅಧಮ ಹೀಗೆ ಮೂರು ಪ್ರಕಾರದ ಭೇದವನ್ನು ವೇದವೇ ಮಾಡಿರುವುದು ।೫೪॥ ಈ ಪ್ರಕಾರವಾಗಿ ನೀನೇ ಸ್ವತಃ ಗುಣದೋಷಗಳ ಲಕ್ಷಣದ ವಿಸ್ತಾರವನ್ನು ಮಾಡಿರುವೆ. ಇದಕ್ಕೇನೇ ಮೋಕ್ಷದ ಸಾಧನೆ ಎಂದು ಹೇಳಿರುವುದು. ಅಂದಮೇಲೆ ಈಗ ನೀನು ಗುಣದೋಷಗಳ ನಿವಾರಣೆಯನ್ನು ಏಕೆ ಮಾಡುತ್ತಿರುವೆ? ।೫೫॥ ನಿನ್ನ ವಚನಗಳು ಮನಬಂದಂತೆ ಅಸಂಬದ್ಧ ವಿಚಾರಗಳಿಂದ ತುಂಬಿರುವುವು. ಆದರಲ್ಲಿ ನಿನ್ನ ಹೇಳಿಕೆಯಲ್ಲಿಯೇ ವಿರೋಧವು ಹುಟ್ಟಿಕೊಳ್ಳುವುದು. ಇದರಿಂದ ಗುಣದೋಷಗಳ ಪ್ರಕಾರಗಳು ಬೆಳೆಯುವುವು ಮತ್ತು ಅವುಗಳ ಬಾಧೆಗಳು ಬಹುಬೇಗ ತಿಳಿಯಲ್ಪಡುವುವು ।೫೬॥ ಈ ಎಲ್ಲ ಸಂಸಾರವೇ ಕಾಲ್ಪನಿಕವಾಗಿರುತ್ತಿರಲು ಇದು ನರಕ ಮತ್ತು ಇದು ಸ್ವರ್ಗ ಎಂಬ ಈ ವೇದವಚನದಿಂದ ನೀನು ಜನರ ಮನದಲ್ಲಿ ಭ್ರಮೆಯನ್ನು ಹುಟ್ಟಿಸಿರುವೆ ।೫೭॥ ವೇದಕಾಲಕ್ಕಿಂತಲೂ ಪೂರ್ವದಲ್ಲಿ ಪುರುಷರ ಮನದಲ್ಲಿ ಗುಣದೋಷಗಳ ವಿಚಾರವೂ ಕೂಡ ಇರಲಿಲ್ಲ. ಆದರೆ ನಿನ್ನ ವೇದ ವಚನಗಳ ಪರಂಪರೆಯಿಂದ ಜನರ ಗುಣದೋಷ ದೃಷ್ಟಿಯು ದೃಢವಾಗಿರುವುದು ।೫೮॥ ಈ ಪ್ರಕಾರವಾಗಿ ನಿನ್ನ ವಚನಗಳಿಂದ ಜನರು ಮೋಸಹೋಗಿರುವರು.ಅವರಿಗೆ ದಾರುಣವಾದ ನರಕವನ್ನು ಭೋಗಿಸಲು ನಿನ್ನ ಭ್ರಾಮಕ ವೇದವಚನಗಳು ಕಾರಣೀಭೂತವಾಗಿರುವುವು ।೫೯॥

ಗುಣದೋಷಭಿದಾದೃಷ್ಟಿರ್ನಿಗಮಾತ್ತೇ ನ ಹಿ ಸ್ವತಃ । ನಿಗಮೇನಾಪವಾದಶ್ಚ ಭಿದಾಯಾ ಇತಿ ಹ ಭ್ರಮಃ ।೫॥

ಅರ್ಥ:- ಹೇ ಪ್ರಭೋ, ಗುಣ ಮತ್ತು ದೋಷಗಳ ಭೇದದೃಷ್ಟಿಯು ನಿನ್ನ ವಾಣೀ ವೇದದ ಅನುಸಾರದಿಂದ ಇರುವುದು. ಅದು ಯಾರ ಕಲ್ಪನೆಯೂ ಅಲ್ಲ. ಪ್ರಶ್ನೆ ಯಾವುದೆಂದರೆ ನಿನ್ನ ವಚನವು ವೇದದ ನಿಷೇಧವನ್ನೂ ಕೂಡ ಮಾಡುತ್ತಿದೆ. ಈ ವಿರೋಧವನ್ನು ಕಂಡು ನನಗೆ ನಿಃಸಂದೇಹವಾಗಿ ಭ್ರಮೆಯಾಗುತ್ತಿದೆ. ಕೃಪೆ ಮಾಡಿ ತಾವು ಈ ನನ್ನ ಭ್ರಮೆಯನ್ನು ನಷ್ಟ ಮಾಡಬೇಕೆಂದು ವಿನಂತಿಸುತ್ತೇನೆ.

ಏವಂ ನಾನಾಗುಣದೋಷದೃಷ್ಟೀ । ತುಝೇನಿ ವೇದೇ ವಾಢವಿಲೀ ಸೃಷ್ಟೀ । ಸ್ವತಾಂ ಪುರುಷಾಚೇ ಪೋಟೀ । ಗುಣದೋಷದೃಷ್ಟೀ ಅಸೇನಾ ।೬೦॥ ತುಝ್ಯಾ ವೇದಾನುವಾದವಿಸ್ತಾರೇ । ಗುಣದೋಷ ಝಾಲೇ ಖರೇ । ತೇ ತುಝೇನಿಹೀ ಬಲಾತ್ಕಾರೇ । ಚಿತ್ತ ಬಾಹೇರೇ ನ ನಿಘತೀ ।೬೧॥ ಅನಾದಿ ವೇದ ಪ್ರಮಾಣ । ಹೇ ತುಝೇ ಮುಖ್ಯ ವೇದವಚನ । ಆತಾ ನ ದೇಖಾವೇ ದೋಷಗುಣ । ಹೇ ನವೇ ವಚನ ಮಾನೇನಾ ।೬೨॥ ಪಹಿಲೇ ಪ್ರಕಾಶಿಲೇ ದೋಷಗುಣ । ಆತಾ ನಿವಾರಾವಯಾ ಕಾಯ ಕಾರಣ । ಹೇ ನ ಕಳತಾ ಸಂಪೂರ್ಣ । ಭ್ರಮಿತ ಮನ ಹೋತಸೇ ।೬೩॥ ಯಾ ಭ್ರಮಾಚೀ ಭ್ರಮನಿವೃತ್ತೀ । ಕೃಪೇನೇ ಕರಾವೀ ಕೃಪಾಮೂರ್ತೀ । ಐಕೋನಿ ಉದ್ಧವಾಚೀ ವಚನೋಕ್ತೀ । ಕಾಯ ಶ್ರೀಪತೀ ಬೋಲಿಲಾ ।೬೪॥ ಐಕೋನಿ ಉದ್ಧವಾಚೀ ವಿನಂತೀ । ಯೋಗತ್ರಯಾಚೀ ಉಪಪತ್ತೀ । ಅಧಿಕಾರಭೇದೇ ವೇದಾರ್ಥಪ್ರಾಪ್ತೀ । ಸ್ವಯೇ ಶ್ರೀಪತೀ ಸಾಂಗತ ।೬೫॥

ಶ್ರೀಭಗವಾನುವಾಚ :-

ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।
ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್ ।೬॥

ಅರ್ಥ:- ಶ್ರೀಕೃಷ್ಣನು ಹೇಳಿದನು; ಹೇ ಪ್ರಿಯ ಉದ್ಧವಾ, ವೇದಗಳಲ್ಲಿ ಮತ್ತು ಅನ್ಯ ಸ್ಥಳದಲ್ಲಿ ಮನುಷ್ಯನ ಕಲ್ಯಾಣಕ್ಕಾಗಿ ಅಧಿಕಾರ ಭೇದ ಪ್ರಕಾರ ಮೂರು ತರಹದ ಯೋಗಗಳ ಉಪದೇಶವನ್ನು ಮಾಡಿದ್ದೇನೆ. ಅವು ಜ್ಞಾನ, ಕರ್ಮ ಮತ್ತು ಭಕ್ತಿಯಾಗಿರುವುವು. ಮನುಷ್ಯನ ಕಲ್ಯಾಣಕ್ಕಾಗಿ ಇವುಗಳ ಹೊರತಾಗಿ ಅನ್ಯ ಯಾವ ಉಪಾಯವೂ ಇರುವುದಿಲ್ಲ.

ತೇಥ ಮೇಘಗಂಭೀರಾ ವಾಣೀ । ಗರ್ಜೋನಿ ಬೋಲೇ ಶಾರಂಗಪಾಣೀ । ಮಾಝೇ ಪರಮ ಕೃಪೇವಾಂಚೂನೀ । ಮಾಝೀ ವೇದವಾಣೀ ಕಳೇನಾ ।೬೬॥ ವೇದಶಾಸ್ತ್ರಾರ್ಥೇ ಅತಿಸಂಪನ್ನ । ಜರೀ ಝಾಲೇ ಅತಿಸಜ್ಞಾನ । ಪರೀ ಮಾಝ್ಯಾ ಅನುಗ್ರಹೇವೀಣ । ಮಾಝಾ ವೇದಾರ್ಥ ಜಾಣ ಕಳೇನಾ ।೬೭॥ ಬ್ರಹ್ಮಾ ಚಹೂ ಮುಖೀ ವೇದ ಪಢೇ । ತ್ಯಾಸಿಹೀ ವೇದಾರ್ಥಾಚೇ ಚೋಖಡೇ । ವರ್ಮ ನಾತುಡೇಚಿ ಧಡಪುಡೇ । ಮಾ ಇತರ ಬಾಪುಡೇ ತೇ ಕಿತೀ ।೬೮॥ ಬ್ರಹ್ಮಾ ವೇದಾರ್ಥ ಆಕಳಿತಾ । ತ್ರೈ ಶಂಖಾಸುರ ವೇದ ಕಾ ನೇತಾ । ಬ್ರಹ್ಮಾ ವೇದಾರ್ಥೀ ಲೀನ ಹೋತಾ । ತ್ರೈ ನಾಭಿಲಾಷಿತಾ ಸರಸ್ವತೀ ।೬೯॥

ಸಾರಾಂಶವೇನೆಂದರೆ, ಅನೇಕ ಗುಣದೋಷಗಳದೃಷ್ಟಿಯ ಸೃಷ್ಟಿಯನ್ನು ಈ ಯಾವ ವೇದವೇ ಬೆಳೆಸಿರುವುದು. ಸಾಮಾನ್ಯವಾಗಿ ಆದಿಯಲ್ಲಿ ಪುರುಷರ ಮನದಲ್ಲಿ ಗುಣದೋಷಗಳ ಯಾವ ಕಲ್ಪನೆಯೂ ಕೂಡ ಇರಲಿಲ್ಲ ।೬೦॥ ನಿನ್ನ ಆಜ್ಞೆ ಪ್ರಮಾಣದಿಂದಲೇ ಗುಣದೋಷಗಳು ದೃಢವಾಗಿರುವುವು. ಇವುಗಳನ್ನು ನೀನು ತೆಗೆದು ಹಾಕಲು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಕೂಡ ಅವು ಚಿತ್ತದಿಂದ ಹೊರಬರಲು ಸಾಧ್ಯವಾಗುವುದಿಲ್ಲ ।೬೧॥ ವೇದವು ಅನಾದಿಯಾಗಿರುವುದರಿಂದ ಅದು ಪ್ರಮಾಣಭೂತವಾಗಿರುವುದು. ಇದು ನಿನ್ನ ಮುಖ್ಯವಾದ ವೇದವಚನವಾಗಿರುವುದು. ಅಂದಮೇಲೆ ಈಗ ಅದರ ವಿರುದ್ಧವಾಗಿ ಗುಣದೋಷಗಳನ್ನು ನೋಡಕೂಡದು ಎಂಬ ನಿನ್ನ ವಚನವು ಮನಸ್ಸಿಗೆ ಒಪ್ಪುವುದಿಲ್ಲ ।೬೨॥ ಪ್ರಾರಂಭದಲ್ಲಿ ಎಲ್ಲ ದೋಷಗುಣಗಳನ್ನು ಬಹಿರಂಗವಾಗಿ ತೋರಿಸಿಕೊಟ್ಟಿರುವೆ. ಈಗ ಅವುಗಳ ನಿವಾರಣೆಯನ್ನು ಮಾಡಲು ಯಾವ ಕಾರಣವಿದೆ? ಇದಾವುದೂ ತಿಳಿಯಲಾರದ್ದಕ್ಕೆ ಮನವು ಭ್ರಮದಲ್ಲಿ ಬಿದ್ದುಕೊಂಡಿರುವುದು ।೬೩॥ ಅದಕ್ಕಾಗಿ ಹೇ ಕೃಪಾಮೂರ್ತಿ ಶ್ರೀಕೃಷ್ಣನೇ, ಈ ಯಾವ ನನ್ನ ಭ್ರಮೆಯನ್ನು ಕೃಪೆ ಮಾಡಿ ನಿವೃತ್ತಿಗೊಳಿಸು. ಈ ಯಾವ ಉದ್ಧವನ ಭಾಷಣವನ್ನು ಕೇಳಿ ಶ್ರೀಕೃಷ್ಣನು ಏನೆಂದನು ಎಂಬುವುದನ್ನು ಈಗ ಕೇಳಿರಿ ।೬೪॥ ಉದ್ಧವನ ವಿನಂತಿಯನ್ನು ಕೇಳಿ ಶ್ರೀಪತಿಯು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಈ ಮೂರು ಯೋಗಗಳ ಉಪಪತ್ತಿಯನ್ನು ಮತ್ತು ಅಧಿಕಾರ ಭೇದದಂತೆ ವೇದಾರ್ಥಪ್ರಾಪ್ತಿಯನ್ನು ಹೇಳುತ್ತಿದ್ದಾನೆ ।೬೫॥

ಮೇಘಗರ್ಜನೆಯಂತೆ ಗಂಭೀರ ವಾಣಿಯಿಂದ ಶ್ರೀಕೃಷ್ಣನು ಹೇಳಿದನು, ನನ್ನ ಪರಮ ಕೃಪೆವಿಲ್ಲದೇ ನನ್ನ ವೇದಗಳ ಅರ್ಥವು ತಿಳಿಯಲಾರದು ।೬೬॥ ವೇದಶಾಸ್ತ್ರಾರ್ಥದಿಂದ ಅತಿಸಂಪನ್ನನಾಗಿ ಮಹಾ ಪಂಡಿತನಾದರೂ ಕೂಡ ಆತನಿಗೆ ನನ್ನ ಅನುಗ್ರಹವಿಲ್ಲದೇ ವೇದದ ನಿಜವಾದ ಅರ್ಥವು ತಿಳಿಯುವುದಿಲ್ಲ ।೬೭॥ ಬ್ರಹ್ಮದೇವನು ತನ್ನ ನಾಲ್ಕು ಮುಖಗಳಿಂದ ವೇದಾಧ್ಯಯನವನ್ನು ಮಾಡಿದನು. ಆದರೆ ಆತನಿಗೂ ಸಹ ವೇದದ ಯಥಾರ್ಥ ಜ್ಞಾನವು ಆಗಲಿಲ್ಲ. ಅಂದಮೇಲೆ ಇತರ ಸಾಮಾನ್ಯ ಜನರ ಯಾವ ಕಥೆ? ।೬೮॥ ಬ್ರಹ್ಮದೇವನಿಗೆ ವೇದದ ಅರ್ಥವು ತಿಳಿದಿದ್ದರೆ, ಆತನು ಆ ವೇದಗಳನ್ನು ಸಂಭಾಳಿಸುತ್ತಿದ್ದನು. ಆದರೆ ಶಂಖಾಸುರನು ಆ ವೇದಗಳನ್ನು ಕದ್ದೊಯ್ದನು. ವೇದಗಳಲ್ಲಿನ ಮರ್ಮವು ಬ್ರಹ್ಮದೇವನಿಗೆ ತಿಳಿದಿದ್ದರೆ ಆತನು ಸರಸ್ವತಿಯ ಅಭಿಲಾಷೆಯನ್ನು ಹಿಡಿಯುತ್ತಿದ್ದಿಲ್ಲ ।೬೯॥

ಮಾಝೀ ವೇದಾಚಾ ವೇದ್ಯ ನಿರ್ಧಾರ । ತುಜ ಮೀ ಸಾಂಗೇನ ಸಾಚಾರ । ಐಕ ಉದ್ಧವಾ ಸಾದರ । ವೇದವಿಚಾರ ತೋ ಐಸಾ ॥೨೦॥ ಮಾಝ್ಯಾ ವೇದಾಸೀ ನಾಹೀ ಬಹು ಬಂಡ । ವೃಥಾ ನ ಬೋಲೇ ಉದಂಡ । ಜ್ಞಾನ - ಭಕ್ತಿ - ಕರ್ಮಕಾಂಡ । ವೇದ ತ್ರಿಕಾಂಡ ನೇಮಸ್ತ ॥೨೧॥ ಮಾಝಿಯಾ ವೇದಾಂಚೀ ವೇದೋಕ್ತೀ । ಯಾ ತಿಂಹೀ ಯೋಗಾಂತೇ ಪ್ರತಿಪಾದಿತೀ । ಯಾವೇಗಳೀ ಉಪಾಯಸ್ಥಿತೀ। ನಾಹೀ ನಿಶ್ಚಿತೀ ಉದ್ಧವಾ ॥೨೨॥ ಕೋಣ ತೇ ತಿನೀ ಯೋಗ । ಕೈಸೇ ಅಧಿಕಾರಾಚೇ ಭಾಗ । ತೇಹೀ ಪುಸಶೀ ಜರೀ ಚಾಂಗ । ತರೀ ಐಕ ಸಾಂಗ ಸಾಂಗೇನ ॥೨೩॥

ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು । ತ್ವೇಷನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ॥೭॥

ಅರ್ಥ:- ಉದ್ಧವಾ, ಯಾವ ಜನರು ಕರ್ಮ ಹಾಗೂ ಫಲಗಳಿಂದ ವಿರಕ್ತರಾಗಿರುವರೋ ಮತ್ತು ಅವುಗಳ ತ್ಯಾಗವನ್ನು ಮಾಡಿರುವರೋ, ಅವರು ಜ್ಞಾನಯೋಗದ ಅಧಿಕಾರಿಯಾಗಿರುವರು. ಇದರ ವಿರುದ್ಧವಾಗಿ ಯಾರ ಚಿತ್ತದಲ್ಲಿ ಕರ್ಮ ಮತ್ತು ಅದರ ಫಲದ ವೈರಾಗ್ಯವು ಉತ್ಪನ್ನವಾಗಿಲ್ಲವೋ, ಆದರಲ್ಲಿ ದುಃಖಬುದ್ಧಿಯುಂಟಾಗಿಲ್ಲವೋ, ಆ ಸಕಾಮ ವ್ಯಕ್ತಿಯು ಕರ್ಮಯೋಗದ ಅಧಿಕಾರಿಯಾಗಿರುವನು.

ಜೇ ಕಾ ಬ್ರಹ್ಮ ಭುವನಪರ್ಯಂತ । ಸಾಚಾರ ಜೇವೀಹೂನಿ ವಿರಕ್ತ । ಜೇ ವಿಧಿಪೂರ್ವಕ ಸಂಕಲ್ಪಯುಕ್ತ । ಕರ್ಮ ತ್ಯಾಗಿತ ಸನ್ಯಾಸೀ ॥೨೪॥ ಐಶಿಯಾ ಅಧಿಕಾರ್ಯಾಕಾರಣೇ । ಮ್ಯಾ ''ಜ್ಞಾನಯೋಗ'' ಪ್ರಕಟ ಕರಣೇ । ಜೇಣೇ ಕಾ ನಿಜಜ್ಞಾನಸಾಧನೇ । ಮಾಝೀ ಪಾವಣೇ ಸಾಯುಜ್ಯತಾ ॥೨೫॥ ಆತಾ ಜೇ ಕಾ ಕೇವಳ ಅವಿರಕ್ತ । ವಿಷಯಾಲಾಗೀ ಕಾಮಾಸಕ್ತ । ತ್ಯಾಲಾಗೀ ಮ್ಯಾ ಪ್ರಸ್ತುತ । ''ಕರ್ಮಯೋಗ'' ಯೇಥ ಪ್ರಕಾಶಿಲಾ ॥೨೬॥ ಉಂಚ ನೀಚ ಅಧಿಕಾರೀ ದೇಖ । ದೋನೀ ಸಾಂಗಿತಲೇ ಸವಿಶೇಖ । ಆತಾ ತಿಸರಾ ಅತಿಚೋಖ । ಅಲೋಕಿಕ ಅವಧಾರೀ ॥೨೭॥

ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ । ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋऽಸ್ಯ ಸಿದ್ಧಿದಃ ॥೮॥

ಅರ್ಥ:- ಯಾವ ಪುರುಷನು ಅತ್ಯಂತ ವಿರಕ್ತನಾಗಿರದೇ ಅಥವಾ ಅತ್ಯಂತ ಆಸಕ್ತನಾಗಿರದೇ, ಪೂರ್ವ ಜನ್ಮದ ಪುಣ್ಯಫಲದಿಂದ ನನ್ನಲೀಲಾ ಕಥೆ ಇತ್ಯಾದಿಗಳಲ್ಲಿ ಆತನ ಶ್ರದ್ಧೆಯು ನಿರ್ಮಾಣವಾಗಿರುವುದರಿಂದ, ಈ ಭಕ್ತಿಯೋಗದ ಮುಖಾಂತರವಾಗಿಯೇ ಸಿದ್ಧಿಯು ಪ್ರಾಪ್ತವಾಗುವುದು.

ಹರಿಕಥಾ ಅವಘೇಚಿ ಐಕತೀ। ಪರೀ ಮಾಝೀ ಶ್ರದ್ಧಾ ನುಪಜೇ ಚಿತ್ತೀ । ಕೋಣ್ಹಾ ಏಕಾ ಅಭಿನವಗತೀ । ಶ್ರದ್ಧಾ ಉತ್ಪತ್ತೀ ಶ್ರವಣೇಚಿ ಹೋಯ ॥೨೮॥ ಆಈಕ ಶ್ರದ್ಧೇಚೇ ಲಕ್ಷಣ । ಜೇ ಜೇ ಕರೀ ಕಥಾಶ್ರವಣ। ತೇ ಹೃದಯೀ ವಾಢೇ ಅನುಸಂಧಾನ । ಸಪ್ರೇಮ ಮನನ ಉಲ್ಹಾಸೇ ॥೨೯॥ ನವಲ ಕಥೇಚಿ ಆವಡೀ । ದಾಟತೀ ಹರಿ ಖಾಚಿಯಾ ಕೋಡೀ । ಹೃದಯೀ ಸ್ವಾನಂದಾಚೀ ಉಭವವೀ ಗುಢೀ । ಏವಢೀ ಗೋಡೀ ಶ್ರವಣಾರ್ಥೀ ॥೩೦॥

ಈಗ ನಿಜವಾಗಿ ವೇದದ ನಿಶ್ಚಯವನ್ನು ನಿನಗೆ ಹೇಳುವೆನು, ಸರಿಯಾಗಿ ಲಕ್ಷಕೊಟ್ಟು ಕೇಳು. ವೇದದ ವಿಚಾರವು ಹೀಗಿದೆ ॥೨೦॥ ನನ್ನ ವೇದಗಳಿಗೆ ಅತಿಯಾಗಿ ಬಡಬಡಿಸುವಿಕೆಯು ಗೊತ್ತೇ ಇಲ್ಲ. ಅವು ವ್ಯರ್ಥವಾಗಿ ಏನೂ ಹೇಳುವುದಿಲ್ಲ. ಜ್ಞಾನ, ಭಕ್ತಿ ಮತ್ತು ಕರ್ಮ ಈ ಮೂರು ಕಾಂಡಗಳನ್ನು ಮಾತ್ರ ವೇದಗಳು ಹೇಳಿರುವುವು ॥೨೧॥ ನನ್ನ ವೇದಗಳ ಯಾವ ವಾಣಿಯು ಮೂರು ಯೋಗಗಳಿಂದ ಪ್ರತಿಪಾದನೆಯನ್ನು ಮಾಡುವುದು. ಆದ್ದರಿಂದ ಹೇ ಉದ್ಧವನೇ, ಮೋಕ್ಷವನ್ನು ಪಡೆಯಲು ಇದನ್ನು ಬಿಟ್ಟು ಅನ್ಯ ಮಾರ್ಗವೇ ಇಲ್ಲ. ಇದನ್ನು ನೀನು ದೃಢವಾಗಿ ಲಕ್ಷದಲ್ಲಿಡು ॥೨೨॥ ಈ ಮೂರು ಯೋಗಗಳು ಯಾವುವು? ಅವುಗಳ ಅಧಿಕಾರದ ವಿಭಾಗಗಳನ್ನು ಹೇಗೆ ಮಾಡಲ್ಪಟ್ಟಿವೆ? ಹೀಗೆಂದು ನೀನು ವಿಚಾರ ಮಾಡಬಹುದು. ಅದನ್ನೂ ಕೂಡ ಈಗ ನಿನಗೆ ಸವಿಸ್ತಾರವಾಗಿ ಹೇಳುವೆನು, ಕೇಳು ॥೨೩॥

ಯಾರು ನಿಜವಾಗಿಯೂ ಬ್ರಹ್ಮಭುವನದವರೆಗೂ ಅಂತಃಕರಣದಿಂದ ಭೋಗಕ್ಕಾಗಿ ವಿರಕ್ತನಾಗಿರುವನೋ ಮತ್ತು ಯಾರು ವಿಧಿಪೂರ್ವಕವಾಗಿ ಹಾಗೂ ಸಂಕಲ್ಪಯುಕ್ತ ಸನ್ಯಾಸವನ್ನು ಸ್ವೀಕರಿಸಿ ಕರ್ಮದ ತ್ಯಾಗವನ್ನು ಮಾಡುವನೋ ॥೨೪॥ ಅಂತಹ ಅಧಿಕಾರಿಯವರಿಗೆ ನಾನು ಜ್ಞಾನಯೋಗವನ್ನು ಪ್ರಕಟಿಸಿದೆನು. ಇದರಿಂದ ಆತನಿಗೆ ಆತ್ಮಜ್ಞಾನವು ಪ್ರಾಪ್ತವಾಗಿ ಸಾಯುಜ್ಯ ಮುಕ್ತಿಯು ಲಭಿಸುವುದು ॥೨೫॥ ಈಗ ಈ ಲೋಕದಲ್ಲಿ ಯಾರು ಕೇವಲ ಅವಿರಕ್ತರಾಗಿ ವಿಷಯಗಳಿಗಾಗಿ ಕಾಮಾಸಕ್ತರಾಗಿರುವರೋ, ಅವರಿಗಾಗಿ ನಾನು ಕರ್ಮಯೋಗವನ್ನು ಪ್ರಕಟಿಸಿರುವೆನು ॥೨೬॥ ಈ ಪ್ರಕಾರವಾಗಿ ಉಚ್ಚ ಮತ್ತು ನೀಚ ಅಂದರೆ ಶ್ರೇಷ್ಠ ಮತ್ತು ಕನಿಷ್ಠ ಹೀಗೆ ಎರಡೂ ಅಧಿಕಾರಗಳನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳಿದೆನು. ಈಗ ಉತ್ಕೃಷ್ಟ ಮತ್ತು ಅಲೌಕಿವಾದ ಮೂರನೆಯ ಅಧಿಕಾರವನ್ನು ನಾನು ನಿನಗೆ ಹೇಳುವೆನು ॥೨೭॥

ಶ್ರೀಹರಿಯ ಕಥೆಯನ್ನು ಎಲ್ಲರೂ ಕೇಳುವರು. ಆದರೆ ಎಲ್ಲರ ಹೃದಯದಲ್ಲಿ ನನ್ನ ವಿಷಯಕ್ಕೆ ಶ್ರದ್ಧೆಯು ಹುಟ್ಟುವುದಿಲ್ಲ. ಯಾರೋ ಒಬ್ಬರಿಗೆ ದೈವಯೋಗದಿಂದ ಕಥಾಶ್ರವಣದಿಂದ ವಿಲಕ್ಷಣವಾದ ಶ್ರದ್ಧೆಯು ಹುಟ್ಟುವುದು ॥೨೮॥ ಈಗ ಆ ಶ್ರದ್ಧೆಯ ಲಕ್ಷಣವನ್ನು ಕೇಳು. ಆತನು ಯಾವ ಯಾವುದನ್ನು ಪ್ರೇಮದಿಂದ ಶ್ರವಣವನ್ನು ಮಾಡುತ್ತಿರುವನೋ, ಅದರ ಅನುಸಂಧಾನವು ಆತನ ಹೃದಯದಲ್ಲಿ ಸದಾ ಇರುವುದು. ಆತನ ಮನವು ಪ್ರೇಮದಿಂದ ಉಲ್ಹಾಸಿತ, ವಿಕಸಿತವಾಗುವುದು ॥೨೯॥ ಕಥೆ ಕೇಳುವ ಪ್ರೀತಿಯು ನಿಜವಾಗಿಯೂ ಹೀಗೆ ವಿಲಕ್ಷಣವಾಗಿದೆ. ಇದರಿಂದ ಮನಕ್ಕೆ ಆನಂದದ ಪೂರವು ಬರುವುದು. ಹೃದಯದಲ್ಲಿ ಸ್ವಾನಂದದ ಧ್ವಜವನ್ನು ಏರಿಸಲ್ಪಡುವುದು. ಇಷ್ಟೊಂದು ಸುಖವು ಶ್ರವಣಾರ್ಥಿಗೆ ಒದಗುವುದು ॥೩೦॥

ವಿಷಯಾಂಚೇ ದೋಷದರ್ಶನ । ಮುಖ್ಯತ್ವೇ ಬಾಧಕ ಸ್ತ್ರೀ ಆಣಿ ಧನ । ಆವರಾವೀ ರಸನಾ - ಶಿಶ್ನ । ಹೇ ಆಠವಣ
ಅಹರ್ನಿಶೀ ॥೮೧॥ ಘಾಯೀ ಆಡಕಲೇ ಫಳೇ । ತೇ ಪಾನಪೇನಾ ಉಪಚಾರಬಳೇ । ತೇವಿ ವಿಷಯದೋಷ
ಭೋಗಮೇಳೇ। ಕದಾಕಾಳೇ ಶಮೇನಾ ॥೮೨॥ ಯೇತಾ ದೇಖೋನಿಯಾ ಮರಣ । ಸ್ವಯೇ ಹೋಯ
ಕಂಪಾಯಮಾನ । ತೇವೀ ವಿಷಯಭೋಗದರ್ಶನ । ದೇಖೋನಿ ಆಪಣ ಚಳೀ ಕಾಂಪೇ ॥೮೩॥ ಏವಂ ವಿಷಯೀ
ದೋಷದರ್ಶನ । ಸರ್ವದಾ ದೇಖೇ ಆಪಣ । ಪರೀ ತ್ಯಾಗಲಾಗೀ ಜಾಣ । ಸಾಮರ್ಥ್ಯ ಪೂರ್ಣ ಆಧೀನಾ ॥೮೪॥
ಸೇವಕೀ ರಾಜಾ ಬಂದೀ ಧರಿಲಾ । ತಯಾ ಸ್ತ್ರೀಚಂದಾನಾದಿ ಭೋಗ ದೀಧಲಾ । ಪರೀ ತೋ ತ್ಯಾಸೀ ವಿಷಪ್ರಾಯ
ಜಾಹಲಾ । ಭೋಗೀ ಉಬಗಲಾ ಅಗತ್ಯತಾ ॥೮೫॥ ಏವಂ ಭೋಗಿತಾ ತ್ಯಾ ಭೋಗಾಸೀ । ನಿತ್ಯ ಪಾಹೇ
ನಿಜನಿರ್ಗಮಾಸೀ । ತೇವೀ ಭೋಗಿತಾ ಹಾ ವಿಷಯಾಸೀ । ಅಹರ್ನಿಶೀ ಅನುತಾಪೀ ॥೮೬॥ ಯಾಪರೀ ಜೋ
ನವ್ಹೇ ವಿಷಯಾಸಕ್ತ । ನಾ ನಿಧಡಾ ನವ್ಹೇ ವಿರಕ್ತ । ತ್ಯಾಲಾಗೀ ಮಾಝಾ ಭಕ್ತಿಪಂಥ । ಮೀ ಬೋಲಿಲೋ ನಿಶ್ಚಿತ
ವೇದವಾಕ್ಯೇ ॥೮೭॥ ಯೇಹೀಕರಿತಾ ಮಾಝೀ ಭಕ್ತೀ । ಮಝ್ಯಾ ಸ್ವರೂಪೀ ಲಾಗೇ ಪ್ರೀತೀ । ಸಹಜೇ ಹೋಯ
ವಿಷಯವಿರಕ್ತೀ । ಏವಂ ಸಿದ್ಧ ದಾತೀ ಭಕ್ತಿ ಹೇ ಮಾಝೀ ॥೮೮॥ ಮೀ ವೇದೋಕ್ತ ಬೋಲಿಲೊ ಆಪಣ । ತೇ ಹೇ
ತ್ರಿವಿಧ ಯೋಗ ಸಂಪೂರ್ಣ । ಜ್ಞಾನ-ಕರ್ಮ- ಉಪಾಸನ । ವೇದೋಕ್ತ ಲಕ್ಷಣ-ವಿಭಾಗ ॥೮೯॥ ತೇಥ ಕೋಣ
ದೇಖೇ ದೋಷಗುಣ । ಕೋಣಾಸೀ ದೋಹಿಂಚೇ ಅದರ್ಶನ ॥ ಮಧ್ಯಮ ಭಾಗೇ ವರ್ತೇ ಕೋಣ । ತೇಹೀ
ಲಕ್ಷಣ ಅವಧಾರೀ ॥೯೦॥ ಜೋ ಆಸಕ್ತ ವಿಷಯಾವರೀ । ತೋ ಕರ್ಮಮಾರ್ಗೀಚಾ ಅಧಿಕಾರೀ । ತ್ಯಾಸೀ
ಗುಣದೋಷಾಹಾತೀ ನಾಹೀ ಉರೀ । ಹೇ ಸಾಂಗೇಲ ಶ್ರೀಹರೀ ಪುಢಿಲೇ ಅಧ್ಯಾಯೀ ॥೯೧॥ ಜೋ ಕಾ ವಿರಕ್ತ
ಜ್ಞಾನಾಧಿಕಾರೀ । ತೋ ಗುಣದೋಷಾಹೂನಿ ಬಾಹೇರೀ । ತೋ ಪಾಹತಾ ಅವಘೇ ಸಂಸಾರೀ । ನ ದೇಖೇ
ತಿಳಭರೀ ಗುಣದೋಷ ॥೯೨॥ಜಗ ಅವಘೇ ಬ್ರಹ್ಮ ಪೂರ್ಣ । ತೇಥ ಕೈಚೇ ದೋಷಗುಣ । ಐಸೇ ಕಾ ಜೇ
ಜ್ಞಾನಸಂಪನ್ನ । ತ್ಯಾ ದೋಷದರ್ಶನ ಅಸೇನಾ ॥೯೩॥

ಇದರಿಂದ ವಿಷಯಗಳು ದೋಷಯುಕ್ತವಾಗಿವೆ ಎಂಬುದು ಆತನಿಗೆ ಗೋಚರಿಸುವುದು. ಅದರಲ್ಲಿ ಮುಖ್ಯವಾಗಿ ಸ್ತ್ರೀ ಮತ್ತು ಧನ ಇವೇ ಅತ್ಯಂತ ಬಾಧಕವಾಗಿರುವುವು. ಅದಕ್ಕಾಗಿ ನಾಲಿಗೆಯನ್ನು ಮತ್ತು ಜನನೇಂದ್ರಿಯವನ್ನು ಬಿಗಿಹಿಡಿಯಬೇಕೆಂಬ ಸ್ಮರಣೆಯನ್ನು ಮನದಲ್ಲಿ ಹಗಲು ರಾತ್ರಿ ಜಾಗೃತೆಯಲ್ಲಿಡಬೇಕು ॥೮೧॥ ಶರೀರದಲ್ಲಿ ಬಾಣದ ತುದಿಯು ನಟ್ಟಿಕೊಳ್ಳಲು ಅದನ್ನು ಕೀಳದೇ ಕೇವಲ ಉಪಚಾರದಿಂದ ಅದು ಗುಣವಾಗುವುದಿಲ್ಲ. ಅದರಂತೆ ವಿಷಯಗಳಲ್ಲಿನ ದೋಷವು ವಿಷಯಗಳ ಉಪಭೋಗವನ್ನು ಸೇವಿಸುತ್ತ ಇರಲು ಅದು ಎಂದಿಗೂ ನಷ್ಟವಾಗಲು ಸಾಧ್ಯವಿಲ್ಲ ॥೮೨॥ ಮರಣ ಕಾಲವು ಎದುರಿನಲ್ಲಿ ಕಾಣುತ್ತಿರಲು ಆಗ ಆ ಭಯದಿಂದ ಮನುಷ್ಯನು ಗಡಗಡನೇ ನಡುಗುತ್ತಿರುವನು. ಅದರಂತೆ ವಿಷಯ ಭೋಗಗಳು ಕಂಡರೆ ಭಕ್ತನು ಗಡಗಡನೇ ನಡುಗುವನು ॥೮೩॥ ಈ ಪ್ರಕಾರವಾಗಿ ವಿಷಯಗಳಲ್ಲಿರುವ ದೋಷವನ್ನು ಆತನು ನಿರಂತರವಾಗಿ ನೋಡುತ್ತಿರುವನು. ಆದರೆ ಅದನ್ನು ಸಂಪೂರ್ಣವಾಗಿ ಕಿತ್ತೊಗೆಯುವ ಸಾಮರ್ಥ್ಯವು ಆತನಲ್ಲಿರುವುದಿಲ್ಲ ॥೮೪॥ ಸೇವಕರು ರಾಜನಿಗೆ ಕಟ್ಟಿಹಾಕಿ ಕಾರಾಗೃಹದಲ್ಲಿ ಒಗೆಯಲು ಆಗ ಅಲ್ಲಿ ಆತನಿಗೆ ಸ್ತ್ರೀ ಚಂದನ ಇತ್ಯಾದಿ ಅನೇಕ ಪ್ರಕಾರಗಳ ವಿಲಾಸಗಳನ್ನು ಭೋಗಿಸಲು ಕೊಟ್ಟರೆ ಆತನಿಗೆ ಅವುಗಳೆಲ್ಲವೂ ವಿಷಸಮಾನವಾಗುವುವು ॥೮೫॥ ತಾತ್ಪರ್ಯವೇನೆಂದರೆ, ಅಲ್ಲಿ ಭೋಗಗಳನ್ನು ಭೋಗಿಸುತ್ತಿದ್ದರೂ ಬಂಧನದಿಂದ ಬಿಡುಗಡೆಯಾಗುವುದತ್ತ ಆತನ ಲಕ್ಷವಿರುವುದು. ಅದರಂತೆ ಭಕ್ತನು ವಿಷಯಗಳನ್ನು ಭೋಗಿಸುತ್ತಿದ್ದರೂ ಆತನಿಗೆ ಅದರ ಹೇಸಿಗೆಯುಂಟಾಗಿ ಅಹೋರಾತ್ರಿ ಅನುತಾಪ ಪಡುತ್ತಿರುವನು ॥೮೬॥ ಈ ಪ್ರಕಾರವಾಗಿ ಯಾರಿಗೆ ವಿಷಯಗಳಲ್ಲಿ ಆಸಕ್ತಿಯೂ ಇಲ್ಲ ಮತ್ತು ನಿಜವಾದ ವಿರಕ್ತಿಯೂ ಇಲ್ಲ, ಹೀಗಿರುವ ಮಧ್ಯ ಅವಸ್ಥೆಯಲ್ಲಿ ಇರುವ ಆತನಿಗಾಗಿ ಭಕ್ತಿಮಾರ್ಗವನ್ನು ವೇದದಲ್ಲಿ ತೋರಿಸಿಕೊಟ್ಟಿರುವುದು ॥೮೭॥ ಇಂತಹ ಸ್ಥಿತಿಯಲ್ಲಿ ಆತನು ನನ್ನ ಭಕ್ತಿಯನ್ನು ಮಾಡುತ್ತಿರಲು, ನನ್ನ ಸ್ವರೂಪದಲ್ಲಿ ಆತನ ಪ್ರೇಮವು ನಟ್ಟಿಕೊಳ್ಳುವುದು. ಮತ್ತು ಆತನಿಗೆ ಸಹಜವಾಗಿಯೇ ವಿಷಯ ವಿರಕ್ತಿಯು ಬರುವುದು. ನನ್ನ ಈ ಭಕ್ತಿಯು ಹೀಗೆ ಸಿದ್ಧಿಯನ್ನು ಕೊಡುವುದು ॥೮೮॥ ನಾನು ಯಾವ ವೇದಗಳಲ್ಲಿ ಹೇಳಿರುವುದರಲ್ಲಿ ಮೂರು ಯೋಗಗಳಿರುವುವು. ಈ ಮೂರು ಯೋಗದಿಂದಲೇ ಜ್ಞಾನ, ಕರ್ಮ ಮತ್ತು ಉಪಾಸನೆ ಎಂಬ ಮೂರು ವಿಭಾಗಗಳಾಗಿರುವುವು ॥೮೯॥ ಅದರಲ್ಲಿ ಕೆಲವರು ಗುಣದೋಷಗಳನ್ನು ನೋಡುವರು, ಕೆಲವರಿಗೆ ಈ ಎರಡೂ ಕಾಣಿಸುವುದಿಲ್ಲ. ಅದರಲ್ಲಿ ಮಧ್ಯಮ ಮಾರ್ಗದಿಂದ ಯಾರು ನಡೆಯುವರೋ, ಅವರ ಲಕ್ಷಣವನ್ನು ನಾನು ನಿನಗೆ ಹೇಳುವೆನು, ಅದನ್ನು ಕೇಳು ॥೯೦॥ ಯಾವನು ವಿಷಯಗಳಲ್ಲಿ ಆಸಕ್ತನಾಗಿರುವನೋ, ಆತನೇ ಕರ್ಮಮಾರ್ಗದ ಅಧಿಕಾರಿಯಾಗಿರುವನು. ಗುಣದೋಷಗಳಿಂದ ಆತನ ಬಿಡುಗಡೆಯಾಗುವುದಿಲ್ಲ. ಇದನ್ನು ಮುಂದಿನ ಅಧ್ಯಾಯದಲ್ಲಿ ಶ್ರೀಕೃಷ್ಣನು ಹೇಳುವನು ॥೯೧॥ ಆದರೆ ಯಾವನು ನಿಜವಾಗಿಯೂ ವಿರಕ್ತನಾಗಿರುವನೋ ಮತ್ತು ಜ್ಞಾನದ ಅಧಿಕಾರಿಯಾಗಿರುವನೋ, ಆತನು ಗುಣದೋಷಗಳಿಂದ ದೂರ ಇರುವನು. ಜಗತ್ತಿನಲ್ಲಿ ಆತನಿಗೆ ಎಲ್ಲಿಯೂ ಗುಣದೋಷಗಳು ಕಾಣಿಸುವುದೇ ಇಲ್ಲ ॥೯೨॥ ಸಂಪೂರ್ಣ ಜಗತ್ತು ಸತ್‌ಚಿತ್ ಆನಂದಸ್ವರೂಪ ಬ್ರಹ್ಮವಾಗಿದೆ ಅದರಲ್ಲಿ ಎಲ್ಲಿಯ ಗುಣ? ಮತ್ತು ಎಲ್ಲಿಯ ದೋಷ? ಈ ಪ್ರಕಾರದ ಜ್ಞಾನಸಂಪನ್ನ ಜನರಿಗೆ ಯಾವ ದೋಷವೂ ತೋರುವುದಿಲ್ಲ ॥೯೩॥

ಅತಿ ಆಸಕ್ತಿ ನಾ ವಿರಕ್ತ । ಐಸೇ ಕಾ ಜೇ ಮಾಝೇ ಭಕ್ತ । ತೇ ಪೂರ್ವೀ ಗುಣದೋಷ ದೇಖತ । ಪರೀ ಸಾಂಡಿತ ವಿವೇಕೇ ॥೯೪॥ ಭೂತೀ ಭೂತಾತ್ಮಾ ಮೀ ಪರೇಶ । ತೇಥ ದೇಖೋ ನಯೇ ಗುಣದೋಷ । ಐಸೇ ಭಜನನಿಷ್ಠ ರಾಜಹಂಸ । ತೇ ಗುಣದೋಷ ಸಾಂಡಿತೀ ॥೯೫॥ ಮೀ ವೇದಾರ್ಥೀ ಬೋಲಿಲೋ ದೋಷಗುಣ । ತೇ ದೋಷ ತ್ಯಾಗಾಲಾಗೀ ಜಾಣ । ಪರಾಚೇ ದೇಖಾವೇ ದೋಷಗುಣ । ಹೇ ವೇದವಚನ ಅಸೇನಾ ॥೯೬॥ ಐಸೇ ಕರಾವೇ ವೇದಾರ್ಥಶ್ರವಣ । ದೋಷ ತ್ಯಜೂನಿ ಘ್ಯಾವಾ ಗುಣ । ಪರೀ ಪುಢಿಲಾಂಚೇ ದೋಷಗುಣ। ಸರ್ವಥಾ ಆಪಣ ನ ದೇಖಾವೇ ॥೯೭॥ ಜೋ ಜ್ಯಾಚಾ ಗುಣದೋಷ ಪಾಹೇ । ತೋ ತ್ಯಾಚಾ ಪಾಪವಿಭಾಗೀ ಹೋಯೇ । ಪುಢಿಲಾಂಚೇ ಗುಣದೋಷ ಗಾಯೇ । ತೋ ನಿರಯಾ ಜಾಯೇ ತೇಣೇ ದೋಷೇ ॥೯೮॥ ಆತಾ ಕರ್ಮಾಚಾ ಅಧಿಕಾರು । ಸಾಂಗತಾಹೇ ಶಾರಂಗಧರು । ತೋ ಜಾಣೋನಿಯಾ ವಿಚಾರು ಕರ್ಮಾದರು ಕರಾವಾ ॥೯೯॥

ತಾವತ್ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ । ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ ॥೯॥

ಅರ್ಥ:- ಎಲ್ಲಿಯವರೆಗೆ ಕರ್ಮಮಯ ಜಗತ್ತು ಮತ್ತು ಅದಕ್ಕೆ ಪ್ರಾಪ್ತವಾಗುವ ಸ್ವರ್ಗಾದಿ ಸುಖದ ವೈರಾಗ್ಯವು ಹುಟ್ಟುವುದಿಲ್ಲವೋ ಮತ್ತು ಎಲ್ಲಿಯವರೆಗೆ ನನ್ನ ಲೀಲಾ ಕಥೆ, ಕೀರ್ತನ, ಶ್ರವಣದಲ್ಲಿ ಶ್ರದ್ಧೆಯು ಉತ್ಪನ್ನವಾಗುವುದಿಲ್ಲವೋ, ಅಲ್ಲಿಯವರೆಗೆ ಕರ್ಮ ಸಂಬಂಧವಾಗಿ ಇರುವ ಎಲ್ಲ ವಿಧಿ ನಿಷೇಧಗಳ ಅನುಸಾರವಾಗಿ ಕರ್ಮಗಳನ್ನು ಮಾಡಲೇಬೇಕು.

ತಂವಚಿ ಕರಾವಾ ಕರ್ಮಾದರ । ಜಂವ ವಿರಕ್ತಿ ನುಪಜೇ ಸಾಚಾರ । ಥಾಕಲ್ಯಾ ವಿರಕ್ತೀಚೇ ಘರ । ಸ್ವರ್ಗ ಸಂಸಾರ ಮಳಪ್ರಾಯ ॥೧೦೦॥ ಹೋ ಕಾ ವಮಿಲಿಯಾ ಮಿಷ್ಟಾನ್ನಾ । ಪರತೋನಿ ಶ್ರದ್ಧಾ ನ ಧರೀ ರಸನಾ । ತೇವೀ ವಿಷಯಭೋಗೀ ಜಾಣಾ । ಸಾಚಾರ ಮನಾ ಚಿಳಶೀ ಉಪಜೇ ॥೧೦೧॥ ತೇಥ ಕರ್ಮಾಚೀ ಪರಿಪಾಠೀ । ಸಮೂಳ ಖುಂಟಲೀ ಗಾ ಗೋಠೀ । ಕಾ ದೈವಯೋಗೇ ಉಲ್ಹಾಸು ಪೋಟೀ । ಮಾಝ್ಯಾಕಥೇಚಾ ಉಠೀ ಶ್ರವಣಾದರು ॥೧೦೨॥ ಕರಿತಾ ಮಾಝೀ ಕಥಾ ಶ್ರವಣ । ಪ್ರೇಮೇ ವೋಸಂಡೇ ಅಂತಃಕರಣ । ವಿಸರೇ ದೇಹಗೇಹಾಂಚೀ ಆಠವಣ । ತೇಥೇ ಪ್ರತ್ಯವಾಯ ಜಾಣ ಬಾಧೀನಾ ॥೧೦೩॥ ಜೈಸೇ ಮಾಝೇ ಕಥೇಚೇ ಶ್ರವಣ । ತೈಸೇಚಿ ಮಾಝೇ ಹೃದಯೀ ಸ್ಮರಣ । ತೇಥೇ ಪ್ರತ್ಯವಾಯ ನ ರಿಘೇ ಜಾಣ । ಯೇಥೂನ ಬೋಳವಣ ತ್ಯಾಚೀ ಝಾಲೀ ॥೧೦೪॥ ಕರಿತಾ ಮತ್ಕಥಾಶ್ರವಣ । ಲೋಪಲ್ಯಾ ಕೋಟಿಕರ್ಮಾಚರಣ । ಪ್ರತ್ಯವಾಯ ನ ಬಾಧೀ ಜಾಣ । ಹಾ ಪ್ರತಾಪ ಪೂರ್ಣ ಮತ್ಕಥೇಚಾ ॥೧೦೫॥

ಯಾರು ಅತಿಯಾಗಿ ಆಸಕ್ತರೂ ಅಲ್ಲ ಮತ್ತು ಅತಿಯಾಗಿ ವಿರಕ್ತರೂ ಅಲ್ಲ ಹೀಗಿರುವ ನನ್ನ ಭಕ್ತರಾದವರು ಅವರು ಪ್ರಾರಂಭದಲ್ಲಿ ದೋಷಗಳನ್ನು ಕಾಣುತ್ತಿರುವರು. ತದನಂತರ ಕೂಡಲೇ ವಿವೇಕದಿಂದ ಆ ಗುಣದೋಷಗಳ ತ್ಯಾಗವನ್ನು ಮಾಡುವರು ॥೯೪॥ ಪರಮಾತ್ಮನಾದ ನಾನು ಪ್ರತಿಯೊಂದು ಪ್ರಾಣಿಮಾತ್ರರಲ್ಲಿ ಆತ್ಮ ರೂಪದಿಂದ ಇರುವೆನು. ಅಲ್ಲಿ ಗುಣದೋಷಗಳನ್ನು ನೋಡಬಾರದೆಂದು ತಿಳಿದುಕೊಂಡಿರುವ ಯಾವ ಭಜನನಿಷ್ಠ ರಾಜಹಂಸರಾದವರು ಗುಣದೋಷಗಳನ್ನು ಬಿಟ್ಟುಕೊಟ್ಟಿರುವರು ॥೯೫॥ ವೇದಗಳಲ್ಲಿ ನಾನು ಗುಣದೋಷಗಳ ವರ್ಣನೆಯನ್ನು ಮಾಡಿರುವ ಕಾರಣವೇನೆಂದರೆ ಅವುಗಳ ತ್ಯಾಗ ಮಾಡುವುದಕ್ಕಾಗಿರುವುದು. ಬೇರೆಯವರ ಗುಣದೋಷಗಳನ್ನು ನೋಡಬೇಕೆಂದು ವೇದವಚನವು ಇರುವುದಿಲ್ಲ ॥೯೬॥ ವೇದದ ಅರ್ಥದ ಶ್ರವಣವನ್ನು ಯಾವ ರೀತಿಯಲ್ಲಿ ಮಾಡಬೇಕೆಂದರೆ ದೋಷಗಳನ್ನು ಬಿಟ್ಟುಕೊಟ್ಟು ಗುಣಗಳ ಸ್ವೀಕಾರವನ್ನು ಮಾಡಬೇಕು. ಆದರೆ ಬೇರೆಯವರ ಗುಣದೋಷಗಳನ್ನು ನೋಡಬಾರದು ॥೯೭॥ ಬೇರೆಯವರ ಗುಣದೋಷಗಳನ್ನು ನೋಡುವವನು ಆತನ ಪಾಪದ ಭಾಗೀದಾರನಾಗುವನು. ಬೇರೆಯವರ ಗುಣದೋಷಗಳ ವರ್ಣನೆಯನ್ನು ಮಾಡುವವನು ಆ ದೋಷದಿಂದ ನರಕದಲ್ಲಿ ಬೀಳುವನು ॥೯೮॥ ಈಗ ಶ್ರೀಕೃಷ್ಣನು ಕರ್ಮದ ಅಧಿಕಾರವನ್ನು ಹೇಳುವನು. ಅದನ್ನು ಕೇಳಿ ಕರ್ಮದ ಆದರವನ್ನು ಮಾಡಬೇಕು ॥೯೯॥

ಎಲ್ಲಿಯವರೆಗೆ ಅಂಗದಲ್ಲಿ ತೀವ್ರವಾದ ವೈರಾಗ್ಯವು ನಿರ್ಮಾಣವಾಗುವುದಿಲ್ಲವೋ, ಅಲ್ಲಿಯವರೆಗೆ ಕರ್ಮಗಳನ್ನು ಮಾಡುತ್ತಿರಬೇಕು. ವಿರಕ್ತಿಯ ಮನೆಯು ಸಿಕ್ಕಕೂಡಲೇ ಸ್ವರ್ಗ ಮತ್ತು ಸಂಸಾರ ಈ ಎರಡೂ ಕೂಡ ತ್ಯಾಜ್ಯವಾಗುವುವು ॥೧೦೦॥ ವಾಂತಿಯನ್ನು ಮಾಡಿಕೊಂಡ ಮೃಷ್ಟಾನ್ನದ ಮೇಲೆ ನಾಲಿಗೆಯು ಪುನಃ ಅದರಲ್ಲಿ ವಾಸನೆಯನ್ನು ಇಡುವುದಿಲ್ಲ. ಅದರಂತೆ ವಿಷಯಗಳ ಉಪಭೋಗವನ್ನು ಪಡೆಯಲು ಮನಸ್ಸಿನಲ್ಲಿ ಹೇಸಿಗೆಯು ಉಂಟಾಗುವುದು ॥೧೦೧ ॥ ಆ ಸಮಯದಲ್ಲಿ ಕರ್ಮದ ಮಾರ್ಗವು ಅಂದರೆ ಆ ವಿಷಯದಲ್ಲಿ ವಿಚಾರವು ಸಂಪೂರ್ಣವಾಗಿ ನಿಂತುಹೋಗುವುದು. ದೈವಯೋಗದಿಂದ ಅಂತಃಕರಣದಲ್ಲಿ ಉಲ್ಹಾಸವು ನಿರ್ಮಾಣವಾಗಿ ನನ್ನ ಕಥೆಗಳನ್ನುಕೇಳುವ ವಿಷಯಕ್ಕೆ ಆದರವು ನಿರ್ಮಾಣವಾಗುತ್ತಿರುವುದು ॥೧೦೨॥ ನನ್ನ ಕಥೆಗಳನ್ನು ಕೇಳುತ್ತಿದ್ದಂತೆ ಅಂತಃಕರಣದಲ್ಲಿ ಪ್ರೇಮದ ಲಹರಿಗಳು ನಿರ್ಮಾಣವಾಗುವುವು. ಮನೆಮಾರಿನ ನೆನಪು ನಂದಿ ಹೋಗುವುದು ಮತ್ತು ಆತನಿಗೆ ವಿಧಿನಿಷೇಧಗಳ ತಾಪವು ಬಾಧಿಸುವುದಿಲ್ಲ ॥೧೦೩॥ ನನ್ನ ಕಥೆಯ ಶ್ರವಣದಂತೆ ನನ್ನ ಸ್ಮರಣೆಯೂ ಕೂಡ ನಡೆಯುತ್ತಿರುತ್ತದೆ. ಇಂತಹ ಅವಸ್ಥೆಯಲ್ಲಿ ಕರ್ಮತ್ಯಾಗದ ಪ್ರತ್ಯವಾಯ ದೋಷವು ಸೇರಿಕೊಳ್ಳುವುದಿಲ್ಲ. ಅದು ದೂರ ಸರಿಯುತ್ತಿರುತ್ತದೆ ॥೧೦೪॥ ನನ್ನ ಕಥೆಯನ್ನು ಶ್ರವಣ ಮಾಡುತ್ತಿರಲು ಕೋಟ್ಯಾವಧಿ ಕರ್ಮಾಚರಣೆಗಳು ಲೋಪವಾಗುವುವು. ವಿಧಿನಿಷೇಧಗಳು ಎಂದಿಗೂ ಬಾಧಿಸುವುದಿಲ್ಲ. ಇಷ್ಟೊಂದು ನನ್ನ ಕಥೆಯ ದೊಡ್ಡ ಪ್ರಭಾವವಿರುವುದು ॥೧೦೫॥

(ಸಮಂತಿ ಶ್ಲೋಕ) ಮತ್ಕರ್ಮ ಕುರ್ವತಾ ಪುಸಾಂ ಕರ್ಮಲೋಪೋ ಭವೇದ್ಯದಿ ।
ತತ್ಕರ್ಮ ತೇಷಾಂ ಕುರ್ವಂತಿ ತಿಸ್ರ: ಕೋಟ್ಯೋ ಮಹರ್ಷಯ: ॥೧॥

ಅರ್ಥ:- ನನಗಾಗಿ ಕರ್ಮ ಮಾಡುವ ಪುರಷನ ವಿಹಿತ ಕರ್ಮವು ಲೋಪವಾದರೆ ಆತನ ಆ ಕರ್ಮವನ್ನು ಮೂವತ್ಮೂರು ಕೋಟಿ ಮಹರ್ಷಿಗಳವರು ಮಾಡುವರು.

ಮಾಝೀ ಕರಿತಾ ಸಪ್ರೇಮ ಭಕ್ತೀ । ಭಕ್ತಾಂಚೀ ನಿತ್ಯಕರ್ಮೇ ಜೈ ರಾಹತೀ । ತೆತೀಸ ಕೋಟೀ ಋಷಿಮಹಂತೀ । ಸಂಪೂರ್ಣ ಕರಿತೀ ಕರ್ಮೇ ತ್ಯಾಂಚೀ ॥೧೦೬॥ ಏವಢೇ ಮತ್ಕಥೇಚೇ ಮಹಿಮಾನ । ಮಾಝೇ ಕರಿತಾ ಕೀರ್ತನ ಪೂಜನ । ತೇಥೇ ಪ್ರತ್ಯವಾಯಾಚೇ ತೋಂಡ ಕೋಣ । ಸಂಮುಖ ವದನ ದಾವೂ ನ ಶಕೇ ॥೧೦೭॥ ಹೋ ಕಾ ಪೂರ್ಣ ವಿರಕ್ತ ನರ । ಕಾ ಮಾಝೇ ಸೇವೇಸೀ ಜೋ ತತ್ಪರ । ತೇಥ ಕರ್ಮ ಬಾಪುಡೇ ಕಿಂಕರ । ಹೇ ಸ್ವಯೇ ಶ್ರೀಧರ ಬೋಲಿಲಾ ॥೧೦೮॥ ಕರ್ಮೇ ಕರಿತಾ ಸ್ವಧರ್ಮಸ್ಥಿತೀ । ಉದ್ಧವಾ ಆಹೇ ಮಾಝೀ ಪ್ರಾಪ್ತೀ । ತೇ ಮೀ ಸಾಂಗೇನ ತುಜಪ್ರತೀ । ಯಥಾನಿಗುತೀ ಅವಧಾರೀ ॥೧೦೯॥

ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀ: ಕಾಮ ಉದ್ಧವ । ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್ ॥೧೦॥

ಅರ್ಥ:- ಉದ್ಧವಾ, ಈ ಪ್ರಕಾರವಾಗಿ ತನ್ನ ವರ್ಣ ಮತ್ತು ಆಶ್ರಮದ ಅನುಕೂಲ ಧರ್ಮದಲ್ಲಿ ಸ್ಥಿತನಾಗಿ ಯಜ್ಞದ ಮುಖಾಂತರದಿಂದ ಯಾವುದೇ ಆಶೆಯನ್ನು ಹಿಡಿಯದೇ ಆರಾಧನೆಯನ್ನು ಮಾಡುವವನಿಗೆ ಮತ್ತು ನಿಷಿದ್ಧ ಕರ್ಮಗಳನ್ನು ದೂರವಿಟ್ಟು ಕೇವಲ ವಿಹಿತ ಕರ್ಮಗಳನ್ನು ಆಚರಿಸುವವನಿಗೆ ಸ್ವರ್ಗ ಅಥವಾ ನರಕಕ್ಕೆ ಹೋಗಬೇಕಾಗುವುದಿಲ್ಲ.

ಗೃಹಸ್ಥಾಶ್ರಮೀ ಸ್ವಧರ್ಮಸ್ಥಿತೀ । ಜರೀ ವಿಚರೇನಾ ''ಅನ್ಯಗತೀ'' । ತರೀ ಯೇಥೇಚೀ ಲಾಹೇ ವಿರಕ್ತೀ । ಸುನಿಶ್ಚಿತೀ ಉದ್ಧವಾ ॥೧೧೦॥ ಅನ್ಯಗತೀಂಚೇ ವಿಚರಣ । ತೇ ತೂ ಮ್ಹಣಶೀಲ ಕೋಣ । ಐಕ ತ್ಯಾಚೇಹೀ ಲಕ್ಷಣ । ಸಮೂಳ ಖೂಣ ಸಾಂಗೇನ ॥೧೧೧॥ ಪರದ್ರವ್ಯ - ಪರದಾರಾ - ರತೀ । ಪರಾಪವಾದಾಚೀ ವದಂತೀ । ಹೀ ನಾಂವ ಗಾ ''ನಾರಕೀ ಗತೀ'' । ಜಾಣ ನಿಶ್ಚಿತೀ ಉದ್ಧವಾ ॥೧೧೨॥ ದಿವಿಭೋಗಾಚೇನಿ ಶ್ರವಣೇ । ಜ್ಯಾಚ್ಯಾ ಮನಾಚೇ ಬೈಸೇ ಧರಣೇ । ಕರ್ಮೇ ತದನುಕೂಲ ಕರಣೇ । ತೈ ಸ್ವರ್ಗಭೋಗಣೇ ಅಲೋಟ ॥೧೧೩॥ ಯಾ ಜಾಣ ದೋನ್ಹೀ ''ಅನ್ಯಗತೀ'' । ಯಾಂತೂನಿ ಕಾಢೂನಿಯಾ ವೃತ್ತೀ । ಯಜ್ಞಾದಿಕೀ ಮಜ ಯಜಿತೀ । ತೈ ನೈರಾಶ್ಯಸ್ಥಿತೀ ನಿತ್ಯ ನೈಮಿತ್ಯೇ ॥೧೧೪॥ ತೈ ನ ಪಡೇ ಸ್ವರ್ಗೀಚೇ ಪೇಣೇ । ನ ಘಡೇ ನರಕಾಸೀ ಜಾಣೇ । ಯೇಚಿ ಲೋಕೀ ವಿರಕ್ತ ಹೋಣೇ । ತೇಚಿ ಬೋಲಣೇ ಹರಿ ಬೋಲೇ ॥೧೧೫॥

ಅಸ್ಮಿಂಲ್ಲೋಕೇ ವರ್ತಮಾನ: ಸ್ವಧರ್ಮಸ್ಥೋಽನಘ: ಶುಚಿ: । ಜ್ಞಾನ ವಿಶುದ್ಧಮಾಪ್ನೋತಿ ಮದ್‌ಭಕ್ತಿಂ ವಾ ಯದೃಚ್ಛಯಾ ॥೧೧॥

ಅರ್ಥ:- ತನ್ನ ಧರ್ಮದಲ್ಲಿ ನಿಷ್ಠೆಯನ್ನಿಟ್ಟ ಪುರುಷನು ಈ ಶರೀರದಲ್ಲಿದ್ದಾಗಲೇ ನಿಷಿದ್ಧ ಕರ್ಮಗಳ ಪರಿತ್ಯಾಗವನ್ನು ಮಾಡುವನು. ಮತ್ತು ರಾಗಾದಿ ಮಲದಿಂದ ಮುಕ್ತನಾಗುವನು, ಪವಿತ್ರನಾಗಿ ತನ್ನಿಚ್ಛೆಯಂತೆ ನನ್ನ ಭಕ್ತಿಯನ್ನು ಪ್ರಾಪ್ತಮಾಡಿಕೊಳ್ಳುವನು.

ನನ್ನ ಭಕ್ತಿಯನ್ನು ಮಾಡುತ್ತಿರಲು, ಭಕ್ತನ ನಿತ್ಯಕರ್ಮಗಳು ಉಳಿದುಕೊಂಡರೆ, ಆ ಎಲ್ಲ ಕರ್ಮಗಳನ್ನು ಮೂವತ್ಮೂರು ಕೋಟಿ ಋಷಿ, ಮಹಂತರು ಪೂರ್ಣ ಮಾಡುವರು ॥೧೦೬॥ ಇಷ್ಟೊಂದು ನನ್ನ ಕಥೆಯ ಅಗಾಧವಾದ ಮಹಿಮೆಯಾಗಿರುವುದು. ನನ್ನ ಪೂಜೆಯು ಮತ್ತು ಕೀರ್ತನೆಯು ನಡೆಯುತ್ತಿರಲು ಅಲ್ಲಿ ವಿಘ್ನಗಳು ಹೇಗೆ ಬರುವುವು? ಎದುರಿಗೆ ಬಂದ ತಮ್ಮ ಮುಖವನ್ನು ತೋರಿಸುವ ಸಾಮರ್ಥ್ಯವೂ ಅವುಗಳಲ್ಲಿರುವುದಿಲ್ಲ ॥೧೦೭॥ ಒಬ್ಬ ಪುರುಷನು ಪೂರ್ಣ ವಿರಕ್ತನಾದರೆ ಅಥವಾ ನನ್ನ ಸೇವೆಯಲ್ಲಿ ತತ್ಪರನಾದರೆ ಆತನಲ್ಲಿ ಪಾಪ! ಕರ್ಮಗಳು ಸೇವಕರಾಗಿ ಇರುವುವು. ಹೀಗೆಂದು ಸ್ವತ: ಶ್ರೀಧರನು ಹೇಳಿದನು ॥೧೦೮॥ ಹೇ ಉದ್ಧವಾ, ಸ್ವಧರ್ಮದಲ್ಲಿದ್ದುಕೊಂಡು ಕರ್ಮಗಳನ್ನು ಮಾಡುತ್ತಿದ್ದರೆ ನನ್ನ ಪ್ರಾಪ್ತಿಯಾಗುವುದು. ಇದನ್ನೂ ಕೂಡ ನಾನು ನಿನಗೆ ಯಥಾರ್ಥ ಪದ್ಧತಿಯಲ್ಲಿ ಹೇಳುವೆನು, ಲಕ್ಷಕೊಟ್ಟು ಕೇಳು ॥೧೦೯॥

ಹೇ ಉದ್ಧವನೇ, ಗೃಹಸ್ಥಾಶ್ರಮದಲ್ಲಿ ಸ್ವಧರ್ಮದಂತೆ ನಡೆಯುತ್ತ ಅದರ ವಿರುದ್ಧವಾದ ಆಚರಣೆಗಳನ್ನು ಮಾಡದಿದ್ದಲ್ಲಿ ಆ ಆಶ್ರಮದಲ್ಲಿಯೇ ವಿರಕ್ತಿಯು ಪ್ರಾಪ್ತವಾಗುವುದು ॥೧೧೦॥ ವಿರುದ್ಧ ಆಚರಣೆಗಳು ಹೇಗಿರುವುವು? ಎಂದು ಈಗ ನೀನು ಕೇಳಬಹುದು, ಅದಕ್ಕಾಗಿ ಅದರ ಲಕ್ಷಣಗಳನ್ನೂ ಕೂಡ ಸವಿಸ್ತಾರವಾಗಿ ಹೇಳುವೆನು, ಅದನ್ನು ಶ್ರವಣ ಮಾಡು ॥೧೧೧॥ ಪರದ್ರವ್ಯ ಮತ್ತು ಪರಸ್ತ್ರೀ ಇವುಗಳ ಅಪಹರಿಸುವಿಕೆ ಹಾಗೂ ಪರನಿಂದೆ ಇವು ನರಕದಲ್ಲಿ ನೂಕಿಸುವ ವಸ್ತುಗಳಾಗಿವೆ. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೧೧೨॥ ಸ್ವರ್ಗದಲ್ಲಿನ ಸುಖಗಳ ವರ್ಣನೆಯನ್ನು ಕೇಳಿ ಅವುಗಳನ್ನು ಪಡೆಯಬೇಕೆಂಬ ಬಯಕೆಯಿಂದ ಮನಸ್ಸಿನಲ್ಲಿ ಲೋಭವು ಉಂಟಾಗುವುದು. ಆದ್ದರಿಂದ ಯಾವನು ತದನುಕೂಲ ಕರ್ಮಗಳನ್ನು ಮಾಡುವನೋ, ಆತನಿಗೆ ತಪ್ಪದೇ ಸ್ವರ್ಗಭೋಗವು ಲಭ್ಯವಾಗುವುದು ॥೧೧೩॥ ಈ ಎರಡೂ ಕೂಡ ಅನ್ಯಗತಿ ಎಂದರೆ ವಿಪರೀತ ಸ್ಥಿತಿಯಾಗಿರುವುದು. ಇವುಗಳಿಂದ ವೃತ್ತಿಯನ್ನು ಬಿಟ್ಟು ಯಜ್ಞಾದಿಕಗಳ ಯೋಗದಿಂದ ನನ್ನ ಪೂಜನೆಯನ್ನು ಮಾಡಿದರೆ ಅಥವಾ ಸ್ವಧರ್ಮಾಚರಣೆಯನ್ನು ಮಾಡುವವನು ಫಲದ ಆಶೆಯನ್ನು ಬಿಟ್ಟು ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಲು ॥೧೧೪॥ ಆಗ ಆತನಿಗೆ ಸ್ವರ್ಗದಲ್ಲಿ ಇರಬೇಕಾಗುವುದಿಲ್ಲ ಅಥವಾ ನರಕವೂ ಕೂಡ ಪ್ರಾಪ್ತವಾಗುವುದಿಲ್ಲ. ಆತನು ಇದೇ ಲೋಕದಲ್ಲಿ ವಿರಕ್ತನಾಗುವನು. ಇದೇ ಮಾತನ್ನು ಈಗ ಭಗವಾನ ಶ್ರೀಕೃಷ್ಣನು ಹೇಳುವನು ॥೧೧೫॥

ಅಸತಾ ಯೇ ಲೋಕೀ ವರ್ತಮಾನ । ಐಸೇ ಕರಿತಾ ಸ್ವಧರ್ಮಾಚರಣ । ಹೋಯ ಪುಣ್ಯಪಾಪಾಂಚೇ ನಿರ್ದಳಣ । ನಿರ್ಮಳತ್ವೇ ಜಾಣ ತೋ ಅತಿಪವಿತ್ರ ॥೧೧೬॥ ತೇಥ ನಿರಸೋನಿ ಭವಭಾನ । ಪ್ರಕಾಶೇ ಮಾಝೇ ಶುದ್ಧ ಜ್ಞಾನ । ಕಾ ಸಪ್ರೇಮ ಮಾಝೇ ಭಜನ । "ಪರಾಭಕ್ತಿ" ಜಾಣ ತೋ ಲಾಹೇ ॥೧೧೭॥ ಜೇ ಭಕ್ತೀ ಮಾಜೀ ಮೀ ಆಪಣ । ಸದಾ ಹೋಯ ಭಕ್ತಾ ಅಧೀನ । ತೇಥ ಮೋಕ್ಷಾ ಸಹಿತ ಜ್ಞಾನ । ಯೇಊನಿ ಆಪಣ ಪಾಯಾ ಲಾಗೇ ॥೧೧೮॥ ಐಕ ಜ್ಞಾನಾಚಾ ಪರಿಪಾಕ । ಸಂಸಾರ ನಾಂವ "ಮಹಾದುಃಖ" । ಮೋಕ್ಷ ತೋ ಮ್ಹಣೇ "ಪರಮಸುಖ" । ಮದ್ಭಕ್ತ ದೋನೀ ನ ಮನೀ ॥೧೧೯॥ ಸಪ್ರೇಮ ಕರಿತಾ ಮಾಝೇ ಭಜನ । ನಾಠವೇ ಭವಭಯಬಂಧನ । ತೇಥ ಮೋಕ್ಷಾಸೀ ಪುಸೇ ಕೋಣ । ಮದ್ಭಕ್ತಾ ಭಕ್ತೀಚಾ ಪೂರ್ಣ ಉಲ್ಹಾಸ ॥೧೨೦॥ ಜ್ಯಾತೇ ಮ್ಹಣತೀ "ಮಹಾ ದುಃಖ" । ತೇ ಭಕ್ತಾಂಸೀ ಭಗವದ್ರೂಪ ದೇಖ । ಜ್ಯಾತೇ ಮ್ಹಣತೀ "ಪರಮಸುಖ" । ತೇಹೀ ಆವಶ್ಯಕ ಭಗವಂತ ॥೧೨೧॥ ಯಾಪರೀ ಭಕ್ತ ಮಾಝ್ಯಾ ಭಜನೀ । ವಿಸರಲಾ ಸುಖದುಃಖೇ ದೋನೀ । ಮೀ ಏಕು ಭಗವಂತಾವಾಂಚೂನೀ । ಆನ ತ್ರಿಭುವನೀ ದೇಖೇನಾ ॥೧೨೨॥ ಐಶೀ ಮಾಝೀ ಭಕ್ತಿ ಪೂರ್ಣ । ಸಾಧೂನಿ ಆಣಿತಾ ನ ಯೇ ಜಾಣ । ಜೈ ಮೀ ಭಗವಂತ ಹೋಯ ಪ್ರಸನ್ನ । ತೇ ಯದೃಚ್ಛಾ ಜಾಣ ಹೇ ಭಕ್ತಿ ಲಾಭೇ ॥೧೨೩॥ ಮೀ ಕೈಸೇನಿ ಹೋಯ ಪ್ರಸನ್ನ । ಐಸೇ ಕಲ್ಪೀಲ ತುಝೇ ಮನ । ತೇಥ ನರದೇಹ ಗಾ ಕಾರಣ । ಮಾಝೇ ಪ್ರಸನ್ನಪಣ ವ್ಹಾವಯಾ ॥೧೨೪॥

ಸ್ವರ್ಗಿಣೋಽಪ್ಯೇತಮಿಚ್ಛಂತಿ ಲೋಕಂ ನಿರಯಿಣಸ್ತಥಾ । ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್ ॥೧೨॥

ಅರ್ಥ:- ಈ ವಿಧಿನಿಷೇಧರೂಪ ಕರ್ಮಗಳ ಅಧಿಕಾರೀ ಮನುಷ್ಯ ಶರೀರವು ಬಹಳ ದುರ್ಲಭವಾಗಿರುವುದು. ಸ್ವರ್ಗ ಮತ್ತು ನರಕದಲ್ಲಿರುವ ಜೀವಿಗಳು ಈ ದೇಹದ ಅಭಿಲಾಷೆಯನ್ನು ಹಿಡಿಯುವರು. ಕಾರಣ ಈ ಶರೀರದಲ್ಲಿ ಅಂತಃಕರಣದ ಶುದ್ಧಿಯಾದನಂತರ ಜ್ಞಾನ ಅಥವಾ ಭಕ್ತಿಯು ಪ್ರಾಪ್ತಿಯಾಗುವುದು. ಸ್ವರ್ಗ ಅಥವಾ ನರಕದಲ್ಲಿರುವ ಶರೀರಗಳು ಯಾವ ಸಾಧನೆಗಳಿಗೂ ಉಪಯುಕ್ತವಲ್ಲ.

ಜ್ಯಾಂಸೀ ಸ್ವರ್ಗಭೋಗಾಚೀ ಅತಿ ಗೋಡೀ । ಜಿಂಹೀ ಅಮರತ್ವಾಚೀ ಉಭವಿಲೀ ಗುಢೀ । ಜೇ ಪಡಲೇ ಸ್ವರ್ಗಾಚೇ ಬಾಂದವಡೀ । ತೇ ವಾಂಛಿತೀ ಆವಡೀ ನರದೇಹಾತೇ ॥೧೨೫॥ ನರಕಯಾತನಾ ಮಹಾಘೋರ । ಜಿಂಹೀ ಭೋಗಿಲಾ ಭೋಗ ಥೋರ । ತೇ ಮನುಷ್ಯದೇಹಾತೇ ನರ । ಅತಿಸಾದರ ವಾಂಛಿತೀ ॥೧೨೬॥ ನರದೇಹ ಪರಮ ಪಾವನ । ಜೋ ಭಕ್ತೀಜ್ಞಾನಾಚೇ ಆಯತನ । ಜೇಣೇ ಸಾಧೇ ಬ್ರಹ್ಮಜ್ಞಾನ । ತೋ ಧನ್ಯ ಧನ್ಯ ನರದೇಹ ॥೧೨೭॥

ಇಹಲೋಕದಲ್ಲಿ ಆಚರಣೆಯನ್ನು ಮಾಡುತ್ತಿರಲು ಈ ಪ್ರಕಾರವಾಗಿ ಸ್ವಧರ್ಮದಿಂದ ವರ್ತಿಸುತ್ತಿದ್ದರೆ ಆಗ ಪುಣ್ಯ ಮತ್ತು ಪಾಪಗಳು ಇಲ್ಲದಾಗುವುವು. ಮತ್ತು ತಾನು ನಿರ್ಮಲನಾಗಿ ಅತ್ಯಂತ ಪವಿತ್ರನಾಗುವನು ॥೧೧೬॥ ಆಗ ಆತನಿಗೆ ಸಂಸಾರದ ಸ್ಮರಣೆಯು ಇಲ್ಲದಾಗಿ ನನ್ನ ಶುದ್ಧ ಸ್ವರೂಪದ ಜ್ಞಾನವು ಪ್ರಾಪ್ತವಾಗುವುದು ಅಥವಾ ಪ್ರೇಮದಿಂದ ನನ್ನ ಭಜನೆಯನ್ನು ಮಾಡುವುದರಿಂದ ಆತನಿಗೆ ಪರಾಭಕ್ತಿಯು ಪ್ರಾಪ್ತವಾಗುವುದು ॥೧೧೭॥ ಇಂತಹ ಭಕ್ತಿಯಲ್ಲಿ ನಾನು ಸ್ವತಃ ಯಾವಾಗಲೂ ಭಕ್ತನ ಆಧೀನನಾಗಿರುವೆನು. ಅಥವಾ ಮೋಕ್ಷಸಹಿತ ಜ್ಞಾನವು ಸ್ವತಃ ಬಂದು ಭಕ್ತನ ಕಾಲಿಗೆ ಬೀಳುವುದು ॥೧೧೮॥ ಇಂತಹ ಪ್ರಕಾರದ ಜ್ಞಾನದ ಫಲವನ್ನು ಕೇಳು, ಏನೆಂದರೆ ಅವರು ಸಂಸಾರಕ್ಕೆ ಮಹಾದುಃಖವೆನ್ನುವರು ಮತ್ತು ಮೋಕ್ಷ ಎಂದರೆ ಪರಮ ಸುಖವೆಂದು ತಿಳಿಯುವರು. ಆದರೆ ನನ್ನ ಭಕ್ತನು ಮಾತ್ರ ಸುಖ ಮತ್ತು ದುಃಖ ಈ ಎರಡನ್ನೂ ಮನ್ನಿಸುವುದಿಲ್ಲ ॥೧೧೯॥ ಪ್ರೇಮದಿಂದ ನನ್ನ ಭಜನೆಯನ್ನು ಮಾಡಹತ್ತಲು ಆಗ ಅವರಿಗೆ ಸಂಸಾರಭಯ ಬಂಧನದ ಪರವೆಯೂ ಕೂಡ ಇರುವುದಿಲ್ಲ. ಆಗ ಅಲ್ಲಿ ಮೋಕ್ಷಕ್ಕೆ ಯಾರು ಕೇಳಬೇಕು? ಕಾರಣ ನನ್ನ ಭಕ್ತರು ಭಕ್ತಿಯಲ್ಲಿಯೇ ಪೂರ್ಣ ಪ್ರೇಮ ಮತ್ತು ಉಲ್ಹಾಸಭರಿತವಾಗಿರುವರು ॥೧೨೦॥ ಯಾವುದಕ್ಕೆ ಮಹಾದುಃಖವೆನ್ನುವರೋ ಅದು ನನ್ನ ಭಕ್ತನಿಗೆ ಭಗವದ್ರೂಪವಾಗಿಯೇ ಕಾಣುವುದು. ಹಾಗೆಯೇ ಯಾವುದಕ್ಕೆ ಮಹಾಸುಖವೆಂದು ಹೇಳುವರೋ, ಅದನ್ನೂ ಕೂಡ ಆತನು ಭಗವದ್ರೂಪವೆಂದೇ ತಿಳಿಯುವನು ॥೧೨೧॥ ಈ ಪ್ರಕಾರವಾಗಿ ನನ್ನ ಭಕ್ತನು ಭಜನೆಯ ಪ್ರೇಮದಲ್ಲಿ ಸುಖದುಃಖ ಎರಡನ್ನೂ ಮರೆಯುವನು. ಭಗವಂತನಾದ ನಾನೊಬ್ಬನನ್ನು ಬಿಟ್ಟು ಈ ಮೂರು ಲೋಕಗಳಲ್ಲಿ ಆತನಿಗೆ ಬೇರೆ ಯಾವುದೂ ಕಾಣಿಸುವುದಿಲ್ಲ ॥೧೨೨॥ ಇಂತಹ ನನ್ನ ಪರಿಪೂರ್ಣ ಭಕ್ತಿಯು ಯಾವ ಪ್ರಯತ್ನದಿಂದಲೂ ಸಾಧ್ಯವಾಗುವುದಿಲ್ಲ. ನಾನು ಯಾವ ಸಮಯಕ್ಕೆ ಪ್ರಸನ್ನನಾಗುವೆನೋ ಆಗ ಮಾತ್ರ ದೈವಯೋಗದಿಂದ ಸಹಜವಾಗಿ ಪ್ರಾಪ್ತವಾಗುವುದು ॥೧೨೩॥ ಈಗ ನಾನು ಯಾವುದರಿಂದ ಪ್ರಸನ್ನನಾಗುವೆ ಎನ್ನುವ ವಿಷಯಕ್ಕೆ ನಿನ್ನ ಮನದಲ್ಲಿ ವಿಚಾರವು ಮೂಡಬಹುದು. ಅದಕ್ಕಾಗಿ ನನ್ನನ್ನು ಪ್ರಸನ್ನ ಮಾಡಿಕೊಳ್ಳಲು ಈ ಮನುಷ್ಯ ದೇಹವೇ ಕಾರಣೀಭೂತವಾಗಿರುವುದು. ಇದನ್ನು ಲಕ್ಷದಲ್ಲಿಡು ॥೧೨೪॥

ಯಾರಿಗೆ ಸ್ವರ್ಗಭೋಗದಲ್ಲಿ ಅತಿಶಯವಾಗಿ ಪ್ರೀತಿವಿರುವುದೋ, ಯಾರು ಅಮರಾವತಿಯ ಧ್ವಜವನ್ನು ಹಾರಿಸಿರುವರೋ, ಯಾರು ಸ್ವರ್ಗದ ಬಂದಿಖಾನೆಯಲ್ಲಿ ಸಿಕ್ಕಿಕೊಂಡಿರುವರೋ, ಅವರೂ ಕೂಡ ಬಹಳ ಪ್ರೀತಿಯೊಂದಿಗೆ ನರದೇಹದ ಇಚ್ಛೆಯನ್ನು ಮಾಡುವರು ॥೧೨೫॥ ಹಾಗೆಯೇ ಯಾರು ಅತಿಶಯವಾಗಿ ನರಕ ಯಾತನೆಯನ್ನು ಭೋಗಿಸಿರುವರೋ, ಅವರೂ ಕೂಡ ಬಹು ಪ್ರೀತಿಯಿಂದ ನರದೇಹದ ಇಚ್ಛೆಯನ್ನು ಮಾಡುವರು ॥೧೨೬॥ ನರದೇಹವು ಅತ್ಯಂತ ಪವಿತ್ರವಾಗಿದ್ದು ಭಕ್ತಿ ಮತ್ತು ಜ್ಞಾನದ ಆಶ್ರಯಸ್ಥಾನವಾಗಿರುವುದು. ಯಾವುದರಿಂದ ಬ್ರಹ್ಮಜ್ಞಾನವಾಗುವುದೋ, ಆ ದೇಹವು ನಿಜವಾಗಿಯೂ ಧನ್ಯ ಧನ್ಯವಾಗಿದೆ ॥೧೨೭॥

ಜೇಣೇ ನರದೇಹೇ ಜಾಣ । ನಿಃಶೇಷ ಖುಂಟೇ ಜನ್ಮ ಮರಣ । ಜೇಣೇ ಜೀವ ಪಾವೇ ಸಮಾಧಾನ । ಸ್ವಾನಂದಘನ ಸ್ವಯೇ ಹೋಯ ॥೧೨೮॥ ಜ್ಯಾ ನರದೇಹಾಚೇ ಸಂಗತೀ । ಹೋಯ ಅವಿದ್ಯೇಚೀ ನಿವೃತ್ತೀ । ಲಾಭೇ ಭಗವತ್ಪದ ಪ್ರಾಪ್ತೀ । ಹೇ ವಿಖ್ಯಾತ ಖ್ಯಾತೀ ನರದೇಹೀ ॥೧೨೯॥ ಜ್ಯಾ ನರದೇಹಾಚೇ ಪ್ರಾಪ್ತೀ । ಪ್ರಾಣಿಮಾತ್ರ ವಾಂಛಿತೀ । ಪ್ರಾಣೇ ಬಾಪುಡೇ ತೇ ಕಿತೀ । ಸ್ವಯೇ ಪ್ರಜಾಪತೀ ನರದೇಹ ವಾಂಛೀ ॥೧೩೦॥ ಐಸೇ ನರದೇಹಾಚೇ ಶ್ರೇಷ್ಠಪಣ । ಯೇಥ ಸಾಧೇ ಭಕ್ತಿವಿಜ್ಞಾನ । ಪರೀ ಭಕ್ತಿಜ್ಞಾನಾಸ್ತವ ಜಾಣ । ಮನುಷ್ಯಪಣ ಸಾಧೇನಾ ॥೧೩೧॥

ನ ನರಃ ಸ್ವರ್ಗತಿಂ ಕಾಂಕ್ಷೇನ್ನಾರಕೀಂ ವಾ ವಿಚಕ್ಷಣಃ ।
ನೇಮಂ ಲೋಕಂ ಚ ಕಾಂಕ್ಷೇತ ದೇಹಾವೇಶಾತ್ಪ್ರಮಾದ್ಯತಿ ॥೧೩॥

ಅರ್ಥ:- ಬುದ್ಧಿವಂತ ಪುರುಷನು ಸ್ವರ್ಗದ ಮತ್ತು ನರಕದ ಅಭಿಲಾಷೆಯನ್ನು ಮಾಡಬಾರದು. ಹಾಗೆಯೇ ಮನುಷ್ಯ ದೇಹದ ಇಚ್ಛೆಯನ್ನೂ ಕೂಡ ಮಾಡಬಾರದು. ಏಕೆಂದರೆ ಯಾವುದೇ ಶರೀರದಲ್ಲಿ ಗುಣ, ಬುದ್ಧಿ ಮತ್ತು ಅಭಿಮಾನ ನಿರ್ಮಾಣವಾಗುತ್ತಲೇ ತನ್ನ ನಿಜವಾದ ಸ್ವರೂಪದ ಸಾಧನೆಯಲ್ಲಿ ಪ್ರಮಾದವು ನಿರ್ಮಾಣವಾಗಬಲ್ಲದು.

ಝಾಲಿಯಾ ನರದೇಹಾಚೇ ಪ್ರಾಪ್ತೀ । ಅಧರ್ಮೇ ಹೋಯ ನರಕಗತೀ । ಕಾ ಸಂಚಿತಾ ಪುಣ್ಯಸಂಪತ್ತೀ । ತೇಣೇ ಸ್ವರ್ಗಪ್ರಾಪ್ತೀ ಅನಿವಾರ ॥೧೩೨॥ ಸ್ವರ್ಗೇ ಹೋಯ ಪುನರಾವೃತ್ತೀ । ನರಕೀ ಘೋರ ದುಃಖಪ್ರಾಪ್ತೀ । ಮ್ಹಣೂನಿ ಸಾಂಡೋನಿ ದೋಹೀಂಚೀಹೀ ಪ್ರೀತೀ । ನರದೇಹೀ ಆಸಕ್ತೀ ಧರೂ ಮ್ಹಣತೀ ॥೧೩೩॥ ಮನುಷ್ಯ ದೇಹಾಚೀ ಆವಡೀ । ತೇಚಿ ದೇಹಬುದ್ಧಿ ರೋಕಡೀ । ಜೇಥ ಕಾಮಕ್ರೋಧಾಂಚಿಹೀ ಜೋಡೀ । ಪ್ರಮಾದ ಕೋಡೀ ಕ್ಷಣಾಕ್ಷಣಾ ॥೧೩೪॥ ಸ್ವರ್ಗ ನರಕ ಇಹಲೋಕ । ಯಾಂಚೀ ಪ್ರೀತೀ ಸಾಂಡೂನಿ ದೇಖ । ಸಾಧಾವೇ ಗಾ ಆವಶ್ಯಕ । ಜ್ಞಾನ ಚೋಖ ಕಾ ನಿಜಭಕ್ತೀ ॥೧೩೫॥ ಜ್ಞಾನ ಸಾಧಾವಯಾಲಾಗೀ ಜಾಣ । ಕಷ್ಟಾವೇ ನ ಲಗೇ ಗಾ ಆಪಣ । ಸಪ್ರೇಮ ಕರಿತಾ ಮಾಝೇ ಭಜನ । ದವಡಿತಾ ಜ್ಞಾನ ಘರ ರಿಘೇ ॥೧೩೬॥ ಗವ್ಹಾಂಚೀ ರಾಶೀ ಜೋಡಲ್ಯಾ ಹಾತೀ । ಸಕಳ ಪಕ್ವಾನ್ನೇ ತ್ಯಾಂಚೀ ಹೋತೀ । ತೇವೀ ಆತುಡಲ್ಯಾ ಮಾಝೀ ಭಕ್ತೀ । ಜ್ಞಾನಸಂಪತ್ತೀ ಘರ ರಿಘೇ ॥೧೩೭॥ ದ್ರವ್ಯ ಝಾಲಿಯಾ ಆಪುಲೇ ಹಾತೀ । ಸಕಳ ಪದಾರ್ಥ ಘರಾಸ ಯೇತೀ । ತೇವೀ ಜೋಡಲ್ಯಾ ಮಾಝೀ ಭಕ್ತೀ । ಭುಕ್ತಿಮುಕ್ತಿ ಹೋತೀ ದಾಸೀ ॥೧೩೮॥ ಮ್ಹಣತೀ ಕರಿತಾ ಭಗವದ್ಭಕ್ತೀ । ವಿಘ್ನೇ ಛಳಾವಯಾ ಆಡ ಯೇತೀ । ತೇಥೇ ಮೀ ಸುದರ್ಶನ ಘೇಊನ ಹಾತೀ । ರಾಖೇ ಅಹೋರಾತೀ ನಿಜಭಕ್ತಾ ॥೧೩೯॥

ಈ ಯಾವ ನರದೇಹದಿಂದಲೇ ಜನ್ಮಮರಣಗಳು ಪೂರ್ಣವಾಗಿ ನಿಂತುಬಿಡುವುವು. ಜೀವವು ಸಮಾಧಾನವನ್ನು ಹೊಂದುವುದು ಮತ್ತು ಅದು ಸ್ವತಃ ಸ್ವಾನಂದಘನವಾಗುವುದು ॥೧೨೮॥ ಈ ಯಾವ ನರದೇಹದ ಸಂಗತಿಯಿಂದ ಅವಿದ್ಯೆಯು ಸಂಪೂರ್ಣವಾಗಿ ಇಲ್ಲದಾಗುವುದು. ಭಗವತ್ಪದದ ಪ್ರಾಪ್ತಿಯಾಗುವುದು. ಇಂತಹ ನರದೇಹದ ಕೀರ್ತಿಯು ಅತ್ಯಂತ ಪ್ರಸಿದ್ಧವಾಗಿರುವುದು ॥೧೨೯॥ ಸರ್ವ ಜೀವ ಜಂತುಗಳು ಈ ಮನುಷ್ಯ ದೇಹದ ಇಚ್ಛೆಯನ್ನು ಮಾಡುವುವು. ಇದರಲ್ಲೇನು ಆಶ್ಚರ್ಯವಿದೆ? ಪ್ರತ್ಯಕ್ಷ ಬ್ರಹ್ಮದೇವನೂ ಕೂಡ ಮನುಷ್ಯ ಜನ್ಮದ ಇಚ್ಛೆಯನ್ನು ಮಾಡುವನು. ಅಂದ ಮೇಲೆ ಇತರ ಪ್ರಾಣಿಗಳ ಯಾವ ಬೆಲೆ? ॥೧೩೦॥ ಹೀಗೆ ನರದೇಹದ ಶ್ರೇಷ್ಠ ಮಹಿಮೆಯಾಗಿದೆ. ಈ ದೇಹದಲ್ಲಿಯೇ ಭಕ್ತಿ ಮತ್ತು ಜ್ಞಾನವು ಪ್ರಾಪ್ತವಾಗುವುದು. ಆದರೆ ಭಕ್ತಿಜ್ಞಾನದಿಂದ ಮಾತ್ರ ಮನುಷ್ಯದೇಹವು ಪ್ರಾಪ್ತವಾಗಲಾರದು ॥೧೩೧॥

ನರದೇಹವು ಪ್ರಾಪ್ತವಾದಾಗ, ಅಧರ್ಮದಿಂದ ನಡೆದರೆ ನರಕಕ್ಕೆ ಹೋಗಬೇಕಾಗುವುದು. ಹಾಗೆಯೇ ಪುಣ್ಯಕರ್ಮಗಳನ್ನು ಬೆಳೆಯಿಸಿದರೆ ಸ್ವರ್ಗದ ಪ್ರಾಪ್ತಿಯಾಗುವುದು ॥೧೩೨॥ ಸ್ವರ್ಗದ ಪ್ರಾಪ್ತಿಯಾದರೆ ಪುನರ್ಜನ್ಮದ ಚಕ್ರದಲ್ಲಿ ತಿರುಗಬೇಕಾಗುವುದು ಮತ್ತು ನರಕದ ಪ್ರಾಪ್ತಿಯಾದರೆ ಘೋರವಾದ ದುಃಖಪ್ರಾಪ್ತಿಯಾಗುವುದು. ಆದ್ದರಿಂದ ಈ ಎರಡರ ಪ್ರೀತಿಯನ್ನು ಬಿಟ್ಟುಕೊಟ್ಟು ನರದೇಹದ ಆಸಕ್ತಿಯನ್ನು ಹಿಡಿಯಬೇಕೆನ್ನುವರು ॥೧೩೩॥ ಮನುಷ್ಯ ದೇಹದ ಪ್ರೀತಿಯಾದರೆ ಅದು ಕೂಡ ದೇಹಬುದ್ಧಿಯೇ ಆಗಿರುವುದು. ಇದರಿಂದಲೇ ಕಾಮ - ಕ್ರೋಧಗಳು ನಿರ್ಮಾಣವಾಗುವುವು ಮತ್ತು ಕ್ಷಣಕ್ಷಣಕ್ಕೂ ಅಸಂಖ್ಯ ಪ್ರಕಾರಗಳ ದೋಷಗಳಾಗುತ್ತಿರುವುವು ॥೧೩೪॥ ಆದಕಾರಣ ಸ್ವರ್ಗ - ನರಕ ಅಥವಾ ಮೃತ್ಯುಲೋಕ ಇವುಗಳಲ್ಲಿಯ ಪ್ರೀತಿಯನ್ನು ಬಿಟ್ಟುಬಿಡಬೇಕು ಮತ್ತು ಉತ್ತಮವಾದ ಜ್ಞಾನ ಮತ್ತು ನಿಜಭಕ್ತಿಯನ್ನು ಪಡೆಯಬೇಕು ॥೧೩೫॥ ಜ್ಞಾನ ಸಂಪಾದನೆಯನ್ನು ಮಾಡಲು ನಮಗೆ ವಿಶೇಷವಾದ ಕಷ್ಟವನ್ನು ಭೋಗಿಸಬೇಕಾಗುವುದಿಲ್ಲ. ಪ್ರೇಮದಿಂದ ಭಜನೆಯನ್ನು ಮಾಡಹತ್ತಿದರೆ ಜ್ಞಾನವು ಲಗುಬಗೆಯಿಂದ ನಮ್ಮ ಮನೆ ಸೇರುವುದು ॥೧೩೬॥ ಗೋದಿಯ ರಾಶಿಯು ನಮ್ಮ ಕೈಗೆ ಸೇರಲು ಆಗ ಅದರಿಂದ ಬೇಕಾದ ಪಕ್ವಾನ್ನಗಳನ್ನು ತಯಾರಿಸಲು ಬರುವುದು. ಅದರಂತೆ ನನ್ನ ಭಕ್ತಿಯು ಕೈ ಸೇರಲು ಜ್ಞಾನಸಂಪತ್ತು ಮನೆಯೊಳಗೆ ನುಗ್ಗಿ ಬರುವುದು ॥೧೩೭॥ ತನ್ನ ಕೈಯಲ್ಲಿ ದ್ರವ್ಯಸಂಪತ್ತು ಇದ್ದರೆ ತಾನು ಕುಳಿತಲ್ಲೇ ಸರ್ವ ಪದಾರ್ಥಗಳು ಮನೆಗೆ ಬರುವುವು. ಅದರಂತೆ ನನ್ನ ಭಕ್ತಿಯನ್ನು ಸಂಪಾದಿಸಿದರೆ ಭುಕ್ತಿ ಮುಕ್ತಿಗಳು ದಾಸಿಯಾಗಿ ಇರುವುವು ॥೧೩೮॥ ನನ್ನ ಭಕ್ತಿಯನ್ನು ಮಾಡುತ್ತಿರಲು ಅದಕ್ಕೆ ಅಡ್ಡವಾಗಿ ಅನೇಕ ವಿಘ್ನಗಳು ಬಂದೊದಗುವುವು. ಹೀಗೆಂದು ನೀನು ಹೇಳಬಹುದು. ಅದಕ್ಕಾಗಿ ನಾನು ಸುದರ್ಶನ ಚಕ್ರವನ್ನು ಧರಿಸಿ ಹಗಲು ರಾತ್ರಿ ನನ್ನ ಭಕ್ತರ ಸಂರಕ್ಷಣೆಯನ್ನು ಮಾಡುತ್ತಿರುವೆನು ॥೧೩೯॥

ಪಕ್ಷ್ಯಾಚೇನಿ ನಾಮೋಚ್ಚಾರೇ । ಮ್ಯಾ ವೇಶ್ಯಾ ತಾರಿಲೀ ಚಮತ್ಕಾರೇ । ಪಾಡೂನಿ ವಿಘ್ನಾಂಚೇ ದಾತೌರೇ । ಮ್ಯಾ ವ್ಯಭಿಚಾರೇ ಉದ್ಧರಿಲೀ ।।೧೪೦।। ಯಾಲಾಗೀ ನರದೇಹ ಪಾವೋನ । ಜೋ ಕರೀ ಮಾಝೇ ಭಜನ । ತೋಚಿ ಸಂಸಾರೀ ಧನ್ಯ ಧನ್ಯ । ಉದ್ಧವಾ ಜಾಣ ತ್ರಿಶುದ್ಧೀ ।।೧೪೧।। ಭಾವೇ ಕರಿತಾ ಮಾಝೇ ಭಕ್ತೀಸೀ। ಭಾವಿಕಾ ಉದ್ಧರೀ ಮೀ ಹೃಷೀಕೇಶೀ । ಜೇ ಚಢಲೇ ಜ್ಞಾನಾಭಿಮಾನಾಸೀ । ತೇ ಮ್ಯಾ ಯಮಾಸೀ ನಿರವಿಲೇ ।।೧೪೨।। ಸಾಧಿತಾ ಮಾಝೀ ಭಕ್ತಿ ಕಾ ಜ್ಞಾನ । ಜ್ಯಾಸೀ ಚಢೇ ಜ್ಞಾನಾಭಿಮಾನ । ತೋ ಮ್ಯಾ ಆಪುಲೇನಿ ಹಾತೇ ಜಾಣ । ದೀಧಲಾ ಆಂದಣ ಮಹಾದೋಷಾ ।।೧೪೩।। ಉದ್ಧವಾ ತೂ ಐಸೇ ಮ್ಹಣಶೀ ।। ''ತೇ ಕಾ ದೀಧಲೇ ಯಮಹಾತೇಶೀ'' । ತೋ ಜಾಚೂನಿಯಾ ಮಹಾದೋಷಿಯಾಂಸೀ । ಜ್ಞಾನಾಭಿಮಾನಾಸೀ ಸಾಂಡವೀ ।।೧೪೪।। ಯಾಲಾಗೀ ಸಾಂಡೂನಿ ದೇಹಾಭಿಮಾನ । ಭಾವೇ ಕರಿತಾ ಮಾಝೇ ಭಜನ । ಪೂರ್ವೀಲ ಸಾಧುಸಜ್ಞಾನ । ನರದೇಹೇ ಜಾಣ ಮಜ ಪಾವಲೇ ।।೧೪೫।।

ಏತದ್ವಿದ್ವಾನ್ಪುರಾ ಮೃತ್ಯೋರಭವಾಯ ಘಟೇತ ಸಃ । ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್ ।।೧೪।।

ಅರ್ಥ:- ಈ ಯಾವ ಮನುಷ್ಯ, ಶರೀರವು ಮೃತ್ಯುಗ್ರಸ್ತವಾಗಿದ್ದರೂ ಕೂಡ ಇದರ ಮುಖಾಂತರವಾಗಿ ಸತ್ಯವಸ್ತುವಿನ ಪ್ರಾಪ್ತಿಯಾಗಬಲ್ಲದು. ಬುದ್ಧಿವಂತ ಪುರುಷನು ಇದನ್ನು ತಿಳಿದುಕೊಳ್ಳಬೇಕು ಏನೆಂದರೆ ಮೃತ್ಯು ಬರುವುದಕ್ಕಿಂತ ಮುಂಚಿತವಾಗಿಯೇ ಜಾಗೃತನಾಗಿ ಜನ್ಮಮೃತ್ಯುವಿನ ಚಕ್ರದಿಂದ ಪಾರಾಗುವಂತಹ ಸಾಧನೆಯನ್ನು ಮಾಡಬೇಕು, ಮತ್ತು ಮುಕ್ತಿಯನ್ನು ಪಡೆಯಬೇಕು.

ಕೇವಳ ಅಸ್ಥಿ ಚರ್ಮ ಮೂತ್ರ ಮಳ । ಪಾಹತಾ ದೇಹೋ ಅತಿಕಶ್ಮಳ । ಪರೀ ಬ್ರಹ್ಮ ಪರಿಪೂರ್ಣ ನಿಶ್ಚಳ । ಹೇ ನಿರ್ಮಳ ಫಳ ಯೇಣೇ ಸಾಧೇ ।।೧೪೬।। ಐಸೇ ನರದೇಹಾಚೇ ಕಾರಣ । ಜಾಣೋನಿ ಪೂರ್ವೀಲ ಸಜ್ಞಾನ । ಸಾಂಡೋನಿಯಾ ದೇಹಾಭಿಮಾನ । ಬ್ರಹ್ಮಸಮಾಧಾನ ಪಾವಲೇ ।।೧೪೭।। ದೇಹ ನಿಂದ್ಯ ಮ್ಹಣೋನಿ ಸಾಂಡಾವಾ । ತರೀ ಏವಢಾ ಲಾಭ ಹಾರವಾವಾ । ವಂದ್ಯ ಮ್ಹಣೋನಿ ಪ್ರತಿಪಾಳಾವಾ । ತೈ ನೇಈಲ ರೌರವಾ ನಿಶ್ಚಿತ ।।೧೪೮।। ದೇಹ ಸಾಂಡಾವಾ ನಾ ಮಾಂಡಾವಾ । ಯೇಣೇ ಪರಮಾರ್ಥಚಿ ಸಾಧಾವಾ । ತೇ ಸಾವಧಾನ ಐಕ ಉದ್ಧವಾ । ಗುಪ್ತ ನಿಜಠೇವಾ ಸಾಂಗೇನ ।।೧೪೯।। ಜೇಣೇ ದೇಹೇ ವಾಢೇ ಭಾವಭಾವೋ । ತೇಣೇಂಚಿ ದೇಹೇಕರೀ ಪಹಾ ಹೋ । ಹೋಯ ಸಂಸಾರಾಚಾ ಅಭಾವೋ । ಅಹಂಭಾವೋ ಸಾಂಡಿತಾ ।।೧೫೦।। ಸಾಂಡಾವಯಾ ದೇಹಾಭಿಮಾನ । ಪೂರ್ವೀಲ ಸಾಧು ಸಜ್ಞಾನ । ಹೋಊನಿ ನಿತ್ಯ ಸಾವಧಾನ। ಬ್ರಹ್ಮಸಂಪನ್ನ ಮದ್ರೂಪೇ ।।೧೫೧।।

ಕೇವಲ ಪಕ್ಷಿಗೆ ಕಲಿಸುವುದಕ್ಕಾಗಿ ವೇಶ್ಯೆಯು ರಾಮನಾಮದ ಉಚ್ಚಾರವನ್ನು ಮಾಡಿದಳು. ಆದರೂ ಕೂಡ ನಾನು ಆ ವೇಶ್ಯೆಯ ಉದ್ಧಾರವನ್ನು ಮಾಡಿದೆನು. ವಿಘ್ನಗಳ ಹಲ್ಲುಗಳನ್ನು ಮುರಿದು ಆ ಜಾರಿಣೀ ಸ್ತ್ರೀಯಳ ಉದ್ಧಾರವನ್ನು ಮಾಡಿದೆನು ।।೧೪೦।। ಆದಕಾರಣವಾಗಿ ನರದೇಹವು ಪ್ರಾಪ್ತವಾಯಿತೆಂದರೆ ಯಾವನು ನನ್ನ ಭಜನೆಯನ್ನು ಪ್ರೇಮದಿಂದ ಮಾಡುವನೋ, ಹೇ ಉದ್ಧವಾ ಆತನೇ ನಿಜವಾಗಿಯೂ ಈ ಸಂಸಾರದಲ್ಲಿ ಧನ್ಯ ಧನ್ಯನಾಗಿರುವನು, ಇದನ್ನು ಧ್ಯಾನದಲ್ಲಿಡು ।।೧೪೧।। ಪರಮ ಶ್ರದ್ಧೆಯಿಂದ ನನ್ನ ಭಕ್ತಿಯನ್ನು ಮಾಡಿದರೆ ಪರಮಾತ್ಮನಾದ ನಾನು ಆತನ ಉದ್ಧಾರವನ್ನು ಮಾಡುವೆನು ಮತ್ತು ಯಾವನು ಜ್ಞಾನದಿಂದ ಅಭಿಮಾನಿಯಾಗಿರುವನೋ, ಆತನಿಗೆ ನಾನು ಯಮನ ಸ್ವಾಧೀನ ಪಡಿಸುವೆನು ।।೧೪೨।। ನನ್ನ ಭಕ್ತಿಯಾಗಲಿ ಅಥವಾ ಜ್ಞಾನವಾಗಲಿ ಸಾಧಿಸುತ್ತಿರಲು ಆಗ ಅವರಿಗೆ ಜ್ಞಾನಾಭಿಮಾನವು ಬೆಳೆದರೆ ನಾನೇ ಸ್ವತಃ ಅವರನ್ನು ಮಹಾದೋಷಗಳ ಸ್ವಾಧೀನಪಡಿಸುವೆನು ।।೧೪೩।। ಹೇ ಉದ್ಧವಾ, ಒಂದು ವೇಳೆ ನೀನು ಹೀಗೆ ಕೇಳಬಹುದು; ಅವರನ್ನು ಯಮನ ಕೈಯಲ್ಲಿ ಏಕೆ ಕೊಡುವೆ? ಇದರ ಉತ್ತರವನ್ನು ಸರಿಯಾಗಿ ಕೇಳು. ಯಮನು ಮಹಾದೋಷಿ ಜನರನ್ನು ಪೀಡಿಸಿ ದುಃಖಕೊಟ್ಟು ಅವರ ಅಭಿಮಾನವನ್ನು ಇಲ್ಲದಂತೆ ಮಾಡುವನು ।।೧೪೪।। ಆದ್ದರಿಂದ ಜ್ಞಾನದ ಅಭಿಮಾನವನ್ನು ಒಗೆದು ಭಕ್ತಿಯಿಂದ ನನ್ನ ಭಜನೆಯನ್ನುಮಾಡಿ ಪೂರ್ವದ ಜ್ಞಾನಸಂಪನ್ನ ಸಾಧು ಜನರು ಮನುಷ್ಯ ಜನ್ಮದಿಂದ ನನಗೆ ಪ್ರಾಪ್ತರಾದರು ।।೧೪೫।।

ನಿಜವಾಗಿ ನೋಡಲು ದೇಹವು ಕೇವಲ ಅಸ್ಥಿ, ಚರ್ಮ, ಮಲ, ಮೂತ್ರಗಳಿಂದ ಸಿದ್ಧಗೊಂಡಿರುವುದು. ಇದು ಅತ್ಯಂತ ಅಮಂಗಲವಾಗಿದೆ ಆದರೆ ಈ ದೇಹದಿಂದಲೇ ಪರಿಪೂರ್ಣ ನಿರ್ಮಲ, ನಿಶ್ಚಲ ಬ್ರಹ್ಮವು ಪ್ರಾಪ್ತವಾಗುತ್ತದೆ ।।೧೪೬।। ಪೂರ್ವದ ಜ್ಞಾನ ಸಂಪನ್ನ ಜನರು ನರದೇಹದ ಕಾರಣವನ್ನು ಅರಿತು ದೇಹದ ಅಭಿಮಾನವನ್ನು ಬಿಟ್ಟು ಬ್ರಹ್ಮಸುಖದ ಪ್ರಾಪ್ತಿಯನ್ನುಮಾಡಿಕೊಂಡರು ।।೧೪೭।। ಈ ದೇಹವು ಅಪವಿತ್ರವೆಂದು ತ್ಯಜಿಸಿದರೆ ಆತನಿಗೆ ಆಗುವ ಇಷ್ಟೊಂದು ಲಾಭವು ಇಲ್ಲದಾಗುವುದು. ಪೂಜ್ಯವೆಂದು ಪ್ರತಿಪಾಲನೆ ಮಾಡಲು ಅದು ನಿಶ್ಚಿತವಾಗಿ ರೌರವ ನರಕಕ್ಕೆ ಒಯ್ಯುವುದು ।।೧೪೮।। ಅದಕ್ಕಾಗಿ ದೇಹದ ತಿರಸ್ಕಾರವನ್ನು ಮಾಡಕೂಡದು ಮತ್ತು ಅತಿ ಆದರವನ್ನೂ ಕೂಡ ಮಾಡಕೂಡದು. ಈ ಎರಡರ ಮಧ್ಯದಿಂದ ಪರಮಾರ್ಥವನ್ನು ಸಾಧಿಸಬೇಕು. ಅದನ್ನು ಹೇಗೆ ಸಾಧಿಸಬೇಕೆಂಬ ಗುಪ್ತ ರಹಸ್ಯವನ್ನು ನಾನು ನಿನಗೆ ಹೇಳುವೆನು, ನೀನೀಗ ಅದನ್ನು ಸರಿಯಾಗಿ ಶ್ರವಣವನ್ನು ಮಾಡು ।।೧೪೯।। ಯಾವ ದೇಹವು ಸಂಸಾರದಲ್ಲಿ ಅತಿಶಯವಾಗಿ ಆಸಕ್ತವಾಗುವುದೋ, ಅದೇ ದೇಹವು ಅಹಂಭಾವದಿಂದ ಬಿಡುಗಡೆಯಾದರೆ ಸಂಸಾರವನ್ನು ಅಪ್ರಿಯವಾಗಿ ಕಾಣುವುದು ।।೧೫೦।। ಪೂರ್ವದ ಜ್ಞಾನಸಂಪನ್ನ ಸಾಧು ಪುರುಷನು ದೇಹಾಭಿಮಾನವನ್ನು ತ್ಯಜಿಸುವುದಕ್ಕಾಗಿ ನಿತ್ಯ ಜಾಗೃತನಾಗಿ ನನ್ನ ಸ್ವರೂಪಕ್ಕೆ ಪ್ರಾಪ್ತನಾದನು ।।೧೫೧।।

ನರದೇಹೇ ಬ್ರಹ್ಮಪ್ರಾಪ್ತೀ । ಐಸೇ ಮಾನೂನಿ ನಿಶ್ಚಿತೀ । ಮ್ಹಣಸೀ ವಿಷಯಭೋಗಾಂಚೇ ಅಂತೀ । ಬ್ರಹ್ಮಸ್ಥಿತೀ ಸಾಧೀನ ।।೧೫೨।। ಐಸೇ ವಿಶ್ವಾಸತಾ ಆಪಣ । ರೋಕಡೀ ಆಲೀ ನಾಗವಣ । ದೇಹಾಸವೇ ಲಾಗಲೇ ಮರಣ। ಹರಿಹರಾ ಜಾಣ ಟಳೇನಾ ।।೧೫೩।। ಏವಂ ದೇಹಾಚೇ ಅನಿವಾರ್ಯ ಮರಣ। ತೇ ಕೇವ್ಹಾ ಯೇಈಲ ನ ಕಳೇ ಜಾಣ । ಯಾಲಾಗೀ ಪೂರ್ವೀಚ ಆಪಣ । ನಿಜಸ್ವಾರ್ಥ ಜಾಣ ಸಾಧಾವಾ ।।೧೫೪।। ಧರಿತಾ ನಿಜದೇಹಾಚೀ ಗೋಡೀ । ಅವಚಿತಾ ಆದಳೇ ಯಮಧಾಡೀ । ಬುಡೇ ನಿಜಸ್ವಾರ್ಥಾಚೀ ಜೋಡೀ । ತೇ ನಿಜನಿವಾಡೀ ಹರಿ ಸಾಂಗೇ ।।೧೫೫।।

ಛಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್ । ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಾಲಂಪಟ ।।೧೫।।

ಅರ್ಥ:- ಈ ಶರೀರವು ಒಂದು ಪ್ರಕಾರದ ವೃಕ್ಷವೇ ಆಗಿರುವುದು. ಈ ವೃಕ್ಷದಲ್ಲಿ ಗೂಡು ಕಟ್ಟಿಕೊಂಡು ಜೀವರೂಪ ಪಕ್ಷಿಯು ವಾಸಮಾಡಿಕೊಂಡಿರುವುದು. ಈ ಶರೀರಕ್ಕೆ ಯಮನ ದೂತರು ಪ್ರತಿಯೊಂದು ಕ್ಷಣಕ್ಷಣಕ್ಕೆ ಮುರಿಯುತ್ತಿರುವರು. ತುಂಡು ಮಾಡಿದ ವೃಕ್ಷವನ್ನು ಬಿಟ್ಟು ಪಕ್ಷಿಯು ಯಾವ ಪ್ರಕಾರವಾಗಿ ಹಾರಿಹೋಗುವುದೋ, ಅದರಂತೆ ಅನಾಸಕ್ತ ಜೀವವೂ ಕೂಡ ಈ ಶರೀರವನ್ನು ಬಿಟ್ಟು ಮೋಕ್ಷದ ಭಾಗೀದಾರವಾಗುವುದು. ಆದರೆ ಆಸಕ್ತ ಜೀವವು ಮಾತ್ರ ದುಃಖವನ್ನು ಭೋಗಿಸುವುದು.

ಜೇವೀ ಕಾ ವೃಕ್ಷಾಚೇ ಅಗ್ರೀ ನೀಡ । ಪಕ್ಷೀ ಕರೂನಿ ವಸೇ ಅತಿಗೂಢ । ತಳೀ ತ್ಯಾಚಿ ವೃಕ್ಷಾಚೇ ಬೂಡ । ಛೇದಿತೀ ಸದೃಢ ನಿರ್ದಯ ನರ ।।೧೫೬।। ತೇ ದೇಖೋನಿ ವೃಕ್ಷಚ್ಛೇದನ । ಪಕ್ಷೀ ಸಾಂಡೋನಿ ಗೃಹಾಭಿಮಾನ। ಪಳಾಲ್ಯಾ ಪಾವಿಜೇ ಕಲ್ಯಾಣ। ರಾಹತಾ ಮರಣ ಅಚೂಕ ।।೧೫೭।। ತ್ಯಾ ವೃಕ್ಷಾಚಿಯಾ ಐಸೇ ಜಾಣ । ದೇಹಾಸವೇ ಲಾಗಲೇ ಮರಣ । ತೇಥೇ ಜೀವಾಸೀ ರಾಹತಾ ಜಾಣ । ದುಃಖ ದಾರುಣ ಅನಿವಾರ ।।೧೫೮।।

ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾಯುರ್ಭಯವೇ ಪಥುಃ । ಮುಕ್ತಸಂಗ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ ।।೧೬।।

ಅರ್ಥ:- ಹೇ ಪ್ರಿಯ ಉದ್ಧವಾ, ಈ ಶರೀರದ ಆಯುಷ್ಯವು ಹಗಲು ರಾತ್ರಿ ಕ್ಷಣಕ್ಷಣಕ್ಕೂ ಕ್ಷೀಣವಾಗುತ್ತಿರುತ್ತದೆ. ಇದನ್ನು ತಿಳಿದು ಯಾವನು ಭಯದಿಂದ ನಡುಗುವನೋ, ಆ ವ್ಯಕ್ತಿಯು ಆಸಕ್ತಿಯನ್ನು ತೊರೆದು ಪರಮತತ್ವದ ಜ್ಞಾನವನ್ನು ಸಂಪಾದಿಸುವನು ಮತ್ತು ತನ್ನ ಜೀವನ ಮರಣದಿಂದ ನಿರಪೇಕ್ಷನಾಗಿ ತನ್ನ ಆತ್ಮನಲ್ಲಿ ಶಾಂತನಾಗುವನು.

ಅಹೋರಾತ್ರ ಆಯುಷ್ಯಭಂಗ । ಕಳಿಕಾಳಾಚಾ ಸವೇಗ ವೇಗ । ಹಾ ಜಾಣ ನೀಚ ನವಾ ರೋಗ । ಅಂಗೀ ಸಾಂಗ ಲಾಗಲಾ ।।೧೫೯।। ಕಾಳೇ ಕಾಳ ವಯಸಾ ಖಾತು । ಹಾ ದೇಖೋನಿ ಆಯುಷ್ಯಾಚಾ ಘಾತು । ಜಾಣೋನಿ ನರದೇಹಾಚಾ ಪಾತು । ಹೋಯ ಅನಾಸಕ್ತು ದೇಹಗೇಹಾ ।।೧೬೦।। ಜಾಣೋನಿ ದೇಹಾಚೇ ಕ್ಷಣಿಕಪಣ । ತ್ಯಾಗಾವಯಾ ದೇಹಾಭಿಮಾನ। ಸಾಧಾವಯಾ ಭಕ್ತಿಜ್ಞಾನ । ಅತಿಸಾವಧಾನ ಜೋ ಹೋಯ ।।೧೬೧।।

ನರದೇಹದಿಂದ ಪರಬ್ರಹ್ಮದ ಪ್ರಾಪ್ತಿಯಾಗುವುದು. ಇದು ನಿಶ್ಚಿತವಾಗಿದ್ದರೆ ಆರಂಭದಲ್ಲಿ ವಿಷಯ ಭೋಗಗಳನ್ನು ಭೋಗಿಸಿ ತದನಂತರ ಬ್ರಹ್ಮಸ್ಥಿತಿಯನ್ನು ಸಾಧಿಸಬೇಕು ಎಂದು ನೀನು ಕದಾಚಿತ್ ಹೇಳಬಹುದು ।।೧೫೨।। ಆದರೆ ಹೀಗೆ ಭರವಸೆಯನ್ನು ಇಟ್ಟರೆ ನೀನು ನಿಶ್ಚಿತವಾಗಿ ಮೋಸ ಹೋಗುವೆ. ಕಾರಣ ಮರಣವು ದೇಹದ ಬೆನ್ನು ಹತ್ತಿರುವುದು ಇದನ್ನು ಹರಿಹರರಿಗೂ ತಪ್ಪಿಸಲು ಬರುವುದಿಲ್ಲ ।।೧೫೩।। ತಾತ್ಪರ್ಯ ವೇನೆಂದರೆ, ದೇಹಕ್ಕೆ ಮರಣವು ಅನಿವಾರ್ಯವಾಗಿರುವುದು. ಇದು ಯಾವ ಸಮಯಕ್ಕೆ ಬರುವುದೋ ಅದು ತಿಳಿಯುವುದಿಲ್ಲ. ಅದಕ್ಕಾಗಿಯೇ ಮರಣವು ಬರುವ ಪೂರ್ವದಲ್ಲಿಯೇ ನಾವು ನಮ್ಮ ಸ್ವಾರ್ಥವನ್ನು ಸಾಧಿಸಬೇಕು ।।೧೫೪।। ನಮ್ಮ ಶರೀರದ ಮೇಲೆ ನಾವು ಲುಬ್ಧರಾದರೆ ಆಗ ಯಮನು ಆಕಸ್ಮಾತ್ತಾಗಿ ಬಂದು ಪಾಶವನ್ನು ಹಾಕುವನು ಆಗ ನಮ್ಮ ಯಾವ ಸ್ವಾರ್ಥವು ಮುಳುಗಿಬಿಡುವುದು. ಈ ವಿಷಯದ ನಿರ್ಣಯವನ್ನು ಭಗವಂತನಾದ ಶ್ರೀಕೃಷ್ಣನು ಹೇಳುವನು ।।೧೫೫।।

ಒಂದು ದೊಡ್ಡ ವೃಕ್ಷದ ತುದಿಯಲ್ಲಿ ಒಂದು ಪಕ್ಷಿಯು ಒಂದು ಸಣ್ಣ ಗೂಡನ್ನು ಕಟ್ಟಿಕೊಂಡು ಅದರಲ್ಲಿ ಅಡಗಿಕೊಂಡಿರುವುದು, ಆದರೆ ಆ ವೃಕ್ಷದ ಬಡ್ಡೆಯನ್ನು ನಿರ್ದಯ ಜನರು ಕತ್ತರಿಸಿ ತುಂಡು ಮಾಡುವರು ।।೧೫೬।। ಆ ವೃಕ್ಷವು ಮುರಿದು ಬೀಳುವುದನ್ನು ಕಾಣುತ್ತಲೇ, ಆಗ ಆ ಪಕ್ಷಿಯು ತನ್ನ ಗೂಡಿನ ಅಭಿಮಾನವನ್ನು ಬಿಟ್ಟುಕೊಟ್ಟು ದೂರ ಹಾರಿ ಹೋದರೆ ಮಾತ್ರ ಅದರ ಕಲ್ಯಾಣವಾಗುವುದು. ಆದರೆ ಆಗ ಹಾಗೆಯೇ ಅಲ್ಲಿಯೇ ಇದ್ದರೆ ಮಾತ್ರ ಅದಕ್ಕೆ ತಪ್ಪದೇ ಮರಣವು ಒದಗುವುದು ।।೧೫೭।। ಆ ವೃಕ್ಷದಂತೆಯೇ ದೇಹದ ಬೆನ್ನಿಗೆ ಮೃತ್ಯು ಹತ್ತಿಕೊಂಡಿರುವುದು. ಆದಕಾರಣ ಈ ದೇಹದಲ್ಲಿ ಇರುವುದರಿಂದ ಜೀವಕ್ಕೆ ಅನಿವಾರ್ಯವಾಗಿ ದಾರುಣವಾದ ದುಃಖಗಳನ್ನು ಭೋಗಿಸಬೇಕಾಗುವುದು. ಅದು ಎಂದಿಗೂ ತಪ್ಪಲಾರದು ।।೧೫೮।।

ಯಾವ ಈ ದೇಹದ ಆಯುಷ್ಯವು ಹಗಲು ರಾತ್ರಿ ಕ್ಷೀಣವಾಗುತ್ತಲೇ ನಡೆದಿರುತ್ತದೆ. ಕಲಿಕಾಲನ ವೇಗವು ಅತ್ಯಂತ ತೀವ್ರಗತಿಯಲ್ಲಿ ಇರುವುದು. ಇದು ಒಂದು ನಿತ್ಯ ನೂತನವಾದ ರೋಗವೇ ಶರೀರಕ್ಕೆ ಬಡೆದುಕೊಂಡಿರುವುದು ।।೧೫೯।। ಯಾವ ಈ ಕಾಲನು ಕ್ಷಣಕ್ಷಣಕ್ಕೂ ಆಯುಷ್ಯದ ಘಾತವನ್ನು ಮಾಡುತ್ತಿರುವನು. ಇದನ್ನು ಲಕ್ಷದಲ್ಲಿಡಬೇಕು. ಹಾಗೆಯೇ ಈ ಯಾವ ನರದೇಹವು ಪತನವಾಗುವುದಾಗಿದೆ ಎಂದು ತಿಳಿದು ಮನೆಮಾರಿನ ವಿಷಯದಲ್ಲಿ ಉದಾಸೀನನಾಗಿರಬೇಕು ।।೧೬೦।। ದೇಹದ ಕ್ಷಣಭಂಗುರತ್ವವನ್ನು ತಿಳಿದುಕೊಂಡು ದೇಹದ ಅಭಿಮಾನವನ್ನು ಬಿಟ್ಟುಕೊಟ್ಟವನು ಭಕ್ತಿಜ್ಞಾನ ಸಂಪಾದನೆಯ ವಿಷಯದಲ್ಲಿ ಅತಿಶಯವಾಗಿ ಜಾಗರೂಕನಾಗಿರಬೇಕು ।।೧೬೧।।

ನ ಸಾಂಡಿತಾ ದೇಹಾಭಿಮಾನ। ಅಂಗೀ ಆದಳೇ ಮರಣ। ತೇಣೇ ಭಯೇ ಕಂಪಾಯಮಾನ। ವೈರಾಗ್ಯ ಪೂರ್ಣ ಸ್ವಯೇ ಧರೀ ।।೧೬೨।। ವೈರಾಗ್ಯಯುಕ್ತ ಕರಿತಾ ಭಕ್ತೀ । ಹೋಯ ದೇಹಾಭಿಮಾನಾಚೀ ನಿವೃತ್ತೀ । ತೈ ಘರ ರಿಘೇ ಜ್ಞಾನ ಸಂಪತ್ತೀ । ಪಾಯಾ ಲಾಗತೀ ಮುಕ್ತೀ ಚಾರೀ ।।೧೬೩।। ಐಶೀ ಝಾಲಿಯಾ ನಿಜಾತ್ಮಪ್ರಾಪ್ತೀ । ಸಹಜೇಚಿ ರಾಹೇ ಪ್ರವೃತ್ತೀ । ನಿವೃತ್ತೀಸೀ ಹೋಯ ನಿವೃತ್ತೀ । ಸಂಸಾರಾಚೀ ಶಾಂತೀ ಸ್ವಯೇ ಹೋಯ ।।೧೬೪।। ಐಸೇ ನರದೇಹಾ ಯೇಊನೀ ದೇಖ । ಪುರುಷ ಪಾವಲೇ ''ಪರಮಸುಖ'' । ಹೇ ನ ಸಾಧಿತೀ ಜೇ ಮೂರ್ಖ । ತ್ಯಾಂಸೀ ದೇವೋ ದೇಖ ನಿಂದಿತ ।।೧೬೫।।

ನೃದೇಹಮಾದ್ಯಂ ಸುಲಭಂ ಸುದುರ್ಲಭಂ ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।
ಮಯಾನುಕಲೇನ ನಭಸ್ವತೇರಿತಂ ಪುಮಾನ್ ಭವಾಬ್ಧಿಂ ನ ತರೇತ್ಸ ಆತ್ಮಹಾ ।।೧೭।।

ಅರ್ಥ:- ಈ ಮನುಷ್ಯ ದೇಹವು ಸರ್ವಶುಭ ಫಲಗಳ ಪ್ರಾಪ್ತಿಯ ಮೂಲವಾಗಿರುವುದು. ಅತ್ಯಂತ ದುರ್ಲಭವಾಗಿದ್ದು, ಅನಾಯಾಸವಾಗಿ ಸುಲಭವಾಗಿರುವುದು. ಈ ಸಂಸಾರಸಾಗರದಿಂದ ಆಚೆ ದಂಡೆಗೆ ಪಾರಾಗಿ ಹೋಗವುದಕ್ಕಾಗಿ ಇದು ಒಂದು ಸದೃಢವಾದ ಹಡಗವಾಗಿದೆ. ಶರಣ ಮಾತ್ರದಿಂದ ಗುರುದೇವನು ಕಾವಡೀ ಅಂದರೆ ಈಜುಕುಂಬಳಕಾಯೀಯಾಗುವನು. ಕೇವಲ ಸ್ಮರಣದಿಂದ ಅನುಕೂಲನಾದ ನಾನು ಆ ಹಡಗಕ್ಕೆ ಅನುಕೂಲ ವಾಯುವಾಗುವೆನು. ಇಂತಹ ನರದೇಹದ ಹಡಗವು ಪ್ರಾಪ್ತವಾಗಿದ್ದರೂ ಸಂಸಾರಸಾಗರದಿಂದ ಪಾರಾಗದವನು ಆತ್ಮಘಾತಕಿಯು.

ಚೌರ್‍ಯಾಂಶೀ ಲಕ್ಷ ಜೀವಯೋನೀ । ತ್ಯಾಂತ ಮನಷ್ಯ ದೇಹಾವಾಂಚೂನೀ । ಅಧಿಕಾರೀ ಬ್ರಹ್ಮಜ್ಞಾನೀ । ಆನ ಕೋಣೀ ಅಸೇನಾ ।।೧೬೬।। ಜೇಣೇ ದೇಹೇ ಹೋಯ ಮಾಝೀ ಪ್ರಾಪ್ತೀ । ಯಾಲಾಗೀ ''ಆದ್ಯ ದೇಹೋ'' ಯಾತೇ ಮ್ಹಣತೀ । ಯಾಚೀ ದುರ್ಲಭ ಗಾ ಅವಾಪ್ತೀ । ಭಾಗ್ಯೇ ಪಾವತೀ ನರದೇಹ ।।೧೬೭।। ''ಸದೃಢ'' ಮ್ಹಣಜೇ ಅವ್ಯಂಗ । ''ಅವಿಕಳ'' ಮ್ಹಣಜೇ ಸಕಳ ಭಾಗ । ನವ್ಹೇ ಬಹಿರೇ ಮುಕೇ ಅಂಧ ಪಂಗ । ಸರ್ವಾಂಗೇ ಸಾಂಗ ಸಂಪೂರ್ಣ ।।೧೬೮।। ಭರತಖಂಡೀ ನರದೇಹಪ್ರಾಪ್ತೀ । ಹೇ ಪರಮ ಭಾಗ್ಯಾಚೀ ಸಂಪತ್ತೀ । ತೇಥಹೀ ವಿವೇಕು ಪರಮಾರ್ಥೀ । ತ್ಯಾಚಾ ವಶವರ್ತೀ । ಮೀ ಪರಮಾತ್ಮಾ ।।೧೬೯।। ಮೀ ಪರಮಾತ್ಮಾ ಜೇಥ ವಶವರ್ತೀ । ತೇಥ ಸುರನರಾಂಚಾ ಕೇವಾ ಕಿತೀ । ಪರೀ ಹಾ ದೇಹ ನ ಲಭೇ ಪುಢತೀ । ದುರ್ಲಭ ಪ್ರಾಪ್ತೀ ನರದೇಹಾ ।।೧೭೦।। ಜೋಖಿತಾ ಪುಣ್ಯಪಾಪ ಸಮಾನ । ತೈ ನರದೇಹಾಚೀ ಪ್ರಾಪ್ತೀ ಜಾಣ । ತೇ ಪುಢತೀ ಪಾವಾವಯಾ ಆಪಣ । ಜೋಖೂನಿ ಕರ್ಮಾಚರಣ ಕೋಣೀ ನ ಕರೀ ।।೧೭೧।। ಪುಣ್ಯ ಝಾಲಿಯಾ ಅಧಿಕ । ಸ್ವರ್ಗ ಭೋಗಣೇ ಆವಶ್ಯಕ । ಪಾಪಾಚೇ ವಾಢಲ್ಯಾ ತುಕ । ಭೋಗಾವೇ ನರಕ ಅನಿವಾರ ।।೧೭೨।।

ದೇಹದ ಅಭಿಮಾನವನ್ನು ಬಿಟ್ಟುಕೊಡದಿದ್ದರೆ ಜನ್ಮ ಮರಣಗಳು ಸತತವಾಗಿ ಶರೀರಕ್ಕೆ ಬಡೆದುಕೊಳ್ಳುವುವು. ಇದರ ಭಯದಿಂದ ಗಡಗಡನೇ ನಡುಗುತ್ತ ತಾನು ಸ್ವತ: ಸಂಪೂರ್ಣವಾಗಿ ವೈರಾಗ್ಯವನ್ನು ಧರಿಸಬೇಕು ।।೧೬೨।। ವೈರಾಗ್ಯಯುಕ್ತವಾದ ಭಕ್ತಿಯನ್ನು ಮಾಡಿದರೆ ದೇಹದ ಅಭಿಮಾನವು ಇಲ್ಲದಾಗುವುದು. ಆತನ ಮನೆಗೆ ಜ್ಞಾನಸಂಪತ್ತು ನಡೆಯುತ್ತ ಬರುವುದು ಮತ್ತು ನಾಲ್ಕೂ ಮುಕ್ತಿಗಳು ಆತನ ಕಾಲಿಗೆ ಬಂದು ಬೀಳುವುವು ।।೧೬೩।। ಈ ಪ್ರಕಾರವಾಗಿ ಆತ್ಮಸ್ವರೂಪವು ಪ್ರಾಪ್ತವಾಗಲು ಪ್ರವೃತ್ತಿಯು ಸಹಜವಾಗಿಯೇ ಇಲ್ಲದಾಗುವುದು. ನಿವೃತ್ತಿಯೂ ಕೂಡ ನಿವೃತ್ತಿಯಾಗುವುದು. ಅಂದರೆ ಇಲ್ಲದಾಗುವುದು. ಈ ಕಾರಣ ದಿಂದ ಸಂಸಾರವು ತಾನಾಗಿಯೇ ಶಾಂತವಾಗುವುದು ।।೧೬೪।। ಇಂತಹ ನರದೇಹಕ್ಕೆ ಬಂದು ಅನೇಕ ಜನರು ಆತ್ಮಸುಖಕ್ಕೆ ಪ್ರಾಪ್ತರಾಗಿರುವರು. ಹೀಗಿದ್ದರೂ ಯಾವ ಮೂರ್ಖ ಜನರು ಈಸುಖವನ್ನು ಪ್ರಾಪ್ತಮಾಡಿ ಕೊಳ್ಳುವುದಿಲ್ಲ. ಇವರ ನಿಂದನೆಯನ್ನು ದೇವನು ಮುಂದಿನ ಶ್ಲೋಕದಲ್ಲಿ ಮಾಡುತ್ತಿರುವನು ।।೧೬೫।।

ಜೀವ ಯೋನಿಗಳು ಎಂಬತ್ನಾಲ್ಕು ಲಕ್ಷಗಳಾಗಿರುವುವು. ಇವುಗಳಲ್ಲಿ ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಲು ಮನುಷ್ಯದೇಹ ಒಂದು ಬಿಟ್ಟು ಯಾರಿಗೂ ಅಧಿಕಾರವು ಇರುವುದಿಲ್ಲ ।।೧೬೬।। ಈ ದೇಹದಲ್ಲಿ ನನ್ನ ಪ್ರಾಪ್ತಿಯು ಆಗುತ್ತದೆ. ಆದ್ದರಿಂದ ಈ ನರದೇಹಕ್ಕೆ ಆದ್ಯ ಎಂದು ಹೇಳಲ್ಪಟ್ಟಿರುವುದು. ಇದರ ಪ್ರಾಪ್ತಿಯು ಅತಿಶಯವಾಗಿ ದುರ್ಲಭವಾಗಿರುವುದು. ಮಹಾಭಾಗ್ಯದಿಂದ ಮಾತ್ರ ನರದೇಹವು ಲಭಿಸುವುದು ।।೧೬೭।। ಸುದೃಢವೆಂದರೆ ಸರ್ವ ಅವಯವಗಳಿಂದ ಯುಕ್ತವಾದ ಎಲ್ಲಿಯೂ ವ್ಯಂಗವಿಲ್ಲದ, ಅಂದರೆ ಕಿವುಡನಲ್ಲದ, ಕುರುಡನಲ್ಲದ, ಕುಂಟನಲ್ಲದ ಮತ್ತು ಮೂಕನಲ್ಲದ ಈ ಪ್ರಕಾರವಾಗಿ ಸರ್ವಾಂಗ ಸುಂದರ ಈ ಮನುಷ್ಯ ಜನ್ಮವಾಗಿದೆ ।।೧೬೮।। ಈ ಮನುಷ್ಯ ಜನ್ಮವು ಭರತಖಂಡದಲ್ಲಿ ಸಿಗುವುದು ಎಂದರೆ ಪರಮ ಭಾಗ್ಯದ ಸಂಪತ್ತಾಗಿದೆ. ಅದರಲ್ಲಿಯೂ ಯಾರ ಅಂತ:ಕರಣದಲ್ಲಿ ಪರಮಾರ್ಥ ವಿಷಯದ ವಿವೇಕವಿರುವುದೋ, ಪರಮಾತ್ಮನಾದ ನಾನು ಆತನ ಆಜ್ಞಾಧಾರಕನಾಗಿರುವೆನು ।।೧೬೯।। ಅಲ್ಲಿ ನಾನೇ ಆಜ್ಞಾಧಾರಕನಾಗಿದ್ದಾಗ ಇತರ ದೇವ, ಮಾನವರ ಯಾವ ಕಥೆ? ಆದರೆ ಈ ದೇಹವು ಪುನ: ಪ್ರಾಪ್ತವಾಗುವುದಿಲ್ಲ. ಕಾರಣ ನರದೇಹವು ಸಿಗುವುದು ಅತ್ಯಂತ ದುರ್ಲಭವಾಗಿರುವುದು ।।೧೭೦।। ಪಾಪ ಮತ್ತು ಪುಣ್ಯವು ಸರಿಸಮಾನವಾಗಿ ಆಚರಿಸಿದರೆ ಮಾತ್ರ ಆಗ ಮನುಷ್ಯ ಜನ್ಮವು ಪ್ರಾಪ್ತವಾಗುವುದು. ಪುನ: ನಮಗೆ ಮನುಷ್ಯ ಜನ್ಮವು ಬೇಕೆಂದು ಯಾರೂ ಪಾಪಪುಣ್ಯಗಳನ್ನು ಅಳತೆ ಮಾಡಿ ಕರ್ಮಾಚರಣೆಯನ್ನು ಮಾಡುವುದಿಲ್ಲ ।।೧೭೧।। ಪುಣ್ಯವು ಹೆಚ್ಚಾದರೆ ಸ್ವರ್ಗಭೋಗವನ್ನು ಭೋಗಿಸುವುದು ಆವಶ್ಯಕವಾಗಿರುವುದು ಮತ್ತು ಪಾಪಗಳು ಹೆಚ್ಚಾದರೆ ಅನಿವಾರ್ಯವಾಗಿ ನರಕವನ್ನು ಭೋಗಿಸಬೇಕಾಗುವುದು ।।೧೭೨।।

ಐಶೀ ಕರ್ಮಾಚೀ ಗತಿ ಗಹನ । ಏಥ ಕಾಕತಾಲೀಯನ್ಯಾಯೇ ಜಾಣ । ಅವಚಟೇ ಲಾಭೇ ಮಾಣುಸಪಣ । ಭವಾಬ್ಧಿತಾರಣ ಮಹಾತಾರೂ ।।೧೭೩।। ''ಸುಲಭ'' ಮ್ಹಣಿಜೇ ಅವಿಕಳ । ''ಸುಕಲ್ಪ'' ಮ್ಹಣಿಜೇ ವಿವೇಕಶೀಳ । ಯಾಸೀ ವಾಗವಿತಾ ಕೇವಳ । ನಾವಾಡಾ ಅತಿ ಕುಶಳ ಗುರು ಕರ್ಣಧಾರ ।।೧೭೪।। ಕಾನೀ ನಿಜಗುಜ ಉಪದೇಶಿತಾ । ಯಾಲಾಗೀ ಗುರು ''ಕರ್ಣಧಾರ'' ಮ್ಹಣತೀ ತತ್ತ್ವತಾ । ಕಾನೀ ಧರಿತಾಂಚಿ ಉದ್ಧರೀ ಭಕ್ತಾ । ಯಾಲಾಗೀ ಸರ್ವಥಾ ಗುರು ಕರ್ಣಧಾರ ।।೧೭೫।। ಭವಾಬ್ಧೀಮಾಜೀ ನರದೇಹ ತಾರು । ತೇಥ ಸದ್ಗುರು ತೋಚಿ ಕರ್ಣಧಾರು । ತ್ಯಾಸೀ ಅನುಕೂಲ ವಾಯು ಮೀ ಶ್ರೀಧರು । ಭವಾಬ್ಧಿ ಪರಪಾರು ಪಾವಾವಯಾ ।।೧೭೬।। ಕೈಸಾ ಗುರು ಕರ್ಣಧಾರ ಕುಶಳ । ಆವರ್ತ ಖಳಾಳ ಆಂದೋಳ । ಚುಕವೂನಿ ವಿಕಲ್ಪಾಚೇ ಕಲ್ಲೋಳ । ಸಾಮ್ಯೇ ಪಾಣಿಢಾಳ ಸವೇಗ ಕಾಢೀ ।।೧೭೭।। ಲಾವೂನಿ ವಿವೇಕಾಚೇ ಆವಲೇ । ತೋಡಿತ ಕರ್ಮಾಕರ್ಮಾಚೀ ಜಳೇ । ಭಜನಶಿಡಾಚೇನಿ ಬಳೇ । ನಾವ ಚಾಲೇ ಸವೇಗ ।।೧೭೮।। ಕಾಮಕ್ರೋಧಾದಿ ಮಹಾಮಾಸೇ । ತಳಪತೀ ಘ್ಯಾವಯಾ ಆಮಿಷೇ । ತ್ಯಾ ಘಾಲೂನಿ ಶಾಂತಿಚೇನಿ ಪಾಶೇ । ತಾರೂ ಉಲ್ಹಾಸೇ ಚಾಲವೀ ।।೧೭೯।। ಠಾಕತಾ ಸಾರುಪ್ಯಾದಿ ಬಂದರೇ । ತಾರುವಾಮಾಜೀ ಅತಿಗಜರೇ । ಲಾಗಲೀ ಅನುಹಾತಾಚೀ ತುರೇ । ಜಯಜಯಕಾರೇ ಗರ್ಜತೀ ।।೧೮೦।। ನೇತಾ ಸಲೋಕತೇಚೇ ಪೇಠೇ । ತಾರೂ ಉಲಥೇಲ ಅವಚಟೇ । ಲಾವಿತಾ ಸಮೀಪತೇಚೇ ವಾಟೇ । ತಾರೂ ದಾಟೇ ದೋಂಹೀ ಸವಾ ।।೧೮೧।। ಕರಾವೇ ಸರೂಪತೇಮಾಜೀ ಸ್ಥಿರೂ । ತಂವ ತೋ ದಾಟಣೇಚಾ ಉತಾರು । ಐಸಾ ಜಾಣೋನಿಯಾ ನಿರ್ಧಾರೂ । ಲೋಡಿಲೇ ತಾರೂ ಸಾಯುಜ್ಯಾಮಾಜೀ ।।೧೮೨।। ತೇ ಧಾರ್ಮಿಕಾಚೀ ಧರ್ಮಪೇಠ । ನಾಹೀ ಸುಖಸಾರಾ ಖಟಪಟ । ವಸ್ತು ಅವಘೀಚ ಚೋಖಟ । ಘ್ಯಾವೀ ಏಕವಟ ಸಂವಸಾಟೀ ।।೧೮೩।। ಐಸೇ ದುರ್ಲಭ ನರದೇಹಾಚೇ ತಾರೂ । ಜೇಥ ಮೀ ಶ್ರೀಗುರುರೂಪೇ ಕರ್ಣಧಾರು । ಯೇಣೇ ನ ತರೇಚ ಜೋ ಸಂಸಾರು । ತೋ ಜಾಣಾವಾ ನರು ಆತ್ಮಹಂತಾ ।।೧೮೪।। ನರದೇಹ ವೇಂಚಿಲೇ ವಿಷಯಾಸಾಠೀ । ಪುಢೇ ನರಕ ಭೋಗಾವಯಾ ಕಲ್ಪಕೋಟೀ । ತರೀ ಆಪುಲೇನಿ ಹಾತೇ ನಿಜಪೋಟೀ । ಶಸ್ತ್ರ ದಾಟೀ ಸ್ವಯೇ ಜೇವೀ ।।೧೮೫।।

ಹೀಗೆ ಕರ್ಮದ ಗತಿಯು ಗರಿಷ್ಠ ಗಹನವಾಗಿರುವುದು. ಕಾಕತಾಳೀಯ ನ್ಯಾಯದಂತೆ ಅಂದರೆ ಗಿಡದ ಮೇಲೆ ಕಾಗೆ ಕೂಡತ್ತಲೇ ಟೊಂಗೆ ಮುರಿದುಬಿದ್ದಂತೆ ಹೀಗೆ ಅಕಸ್ಮಿಕವಾಗಿ ಸಂಸಾರಸಾಗರದಿಂದ ಪಾರು ಮಾಡುವ, ದೊಡ್ಡ ಹಡಗದಂತಹ ಈ ಮನುಷ್ಯ ಜನ್ಮವು ಒಂದು ಸಾರೆ ಪ್ರಾಪ್ತವಾಗುತ್ತಿರುವುದು ।।೧೭೩।। ಸುಲಭವೆಂದರೆ ಅವ್ಯಂಗ ಮತ್ತು ಸಂಕಲ್ಪವೆಂದರೆ ವಿವೇಕಿ ಇಂತಹ ಭಕ್ತರಿಗೆ ಆಚೆ ದಂಡೆಗೆ ಒಯ್ಯುವ ಚತುರ ಅಂಬಿಗನೆಂದರೆ ಸದ್ಗುರುನಾಗಿರುವನು ।।೧೭೪।। ಗುರು ತನ್ನ ಶಿಷ್ಯನ ಕಿವಿಯಲ್ಲಿ ಸ್ವತಃದ ಹಿತಗುಜವನ್ನು ಹೇಳುವನು. ಆದ್ದರಿಂದ ಆತನಿಗೆ ಕರ್ಣಧಾರನು ಎಂದು ಹೇಳುತ್ತಿರುವರು. ಕಿವಿಯಲ್ಲಿ ಮಹಾವಾಕ್ಯದ ಉಪದೇಶವನ್ನು ಮಾಡುವನು. ಭಕ್ತರ ಉದ್ಧಾರವನ್ನು ಮಾಡುತ್ತಿರುವುದರಿಂದ ಗುರುಕರ್ಣಧಾರನಾಗಿರುವನು ।।೧೭೫।। ಈಭವಸಾಗರದಲ್ಲಿ ನರದೇಹವೇ ಹಡಗವಾಗಿರುವುದು. ಅದರ ಕರ್ಣಧಾರ ಅಂದರೆ ಅಂಬಿಗನು ಸದ್ಗುರುವಾಗಿರುವನು ಮತ್ತು ಭವಸಾಗರದ ಆಚೆ ದಂಡೆಗೆ ಹೋಗುವುದಕ್ಕಾಗಿ ಅನುಕೂಲವಾಗಿರುವ ವಾಯುವು ನಾನು ಶ್ರೀಧರನಾಗಿರುವೆನು ।।೧೭೬।। ಈ ಸದ್ಗುರುರೂಪ ಕರ್ಣಧಾರನು ಎಂತಹ ಕುಶಲನೆಂದರೆ, ಆತನು ಸಾಗರದಲ್ಲಿನ ಅನೇಕ ಪ್ರಕಾರದ ತಿರುಗಣೆಗಳನ್ನು, ಏರಿಳಿತಗಳನ್ನು, ವಿಕಲ್ಪದ ತೆರೆಗಳನ್ನು ಮತ್ತು ನೀರಿನ ದೊಡ್ಡ ದೊಡ್ಡ ಪ್ರವಾಹಗಳನ್ನು ತಪ್ಪಿಸುತ್ತ ಆತನು ತನ್ನ ಹಡಗವನ್ನು ಮುಂದಕ್ಕೆ ಒಯ್ಯುತ್ತಿರುವನು ।।೧೭೭।। ವಿವೇಕದ ಹುಟ್ಟುಗಳನ್ನು ತೆಗೆದುಕೊಂಡು ಆತನು ಕರ್ಮ-ಅಕರ್ಮದ ನೀರನ್ನು ಸರಿಸುತ್ತ ಮತ್ತು ಭಜನರೂಪ ಬಲದಿಂದ ಹಡಗವನ್ನು ಬಹು ವೇಗವಾಗಿ ಚಲಿಸುತ್ತಿರುವನು ।।೧೭೮।। ಕಾಮ ಕ್ರೋಧಾದಿ ದೊಡ್ಡ ದೊಡ್ಡ ಮೀನುಗಳು ಆಮಿಷದ ಆಸೆಯಿಂದ ಜಪ್ಪಿಸಿ ಕುಳಿತಿರುವುವು. ಅವುಗಳ ಮೇಲೆ ಶಾಂತಿಯ ಬಲೆಗಳನ್ನು ಒಗೆದು ಆತನು ತನ್ನ ಹಡಗವನ್ನು ಅತಿ ಚಾತುರ್ಯದಿಂದ ಚಲಿಸುತ್ತಿರುವನು ।।೧೭೯।। ದಾರಿಯಲ್ಲಿ ಸಾರುಪ್ಯಾದಿ ಮುಕ್ತಿಗಳ ಬಂದರುಗಳು ಹತ್ತುತ್ತಿರುವುವು. ಹಡಗದಲ್ಲಿ ದೊಡ್ಡ ಗರ್ಜನೆಯಾಗುತ್ತಿರುವುದು, ಅನಾಹತ ಶಬ್ದದ ತುತೂರಿ ಬಾರಿಸುತ್ತಿರುವುದು, ಜಯಜಯಕಾರದ ಮಹಾಗರ್ಜನೆಯಾಗುತ್ತಿರುವುದು ।।೧೮೦।। ಸಲೋಕತೆಯ ಸ್ಥಾನಕ್ಕೆ ಹಡಗವು ಹತ್ತಿಕೊಂಡರೆ ಕದಾಚಿತ್ ಹಡಗವು ಉರುಳಬಹುದು. ಅಥವಾ ಸಮೀಪತಾ ಮಾರ್ಗಕ್ಕೆ ಹಚ್ಚಿದರೆ ಎರಡೂ ಕಡೆಗಳಲ್ಲಿಯೂ ಕೆಳಗಿನ ಚಕ್ರಗಳು ಹತ್ತಬಹುದು ।।೧೮೧।। ಆದಕಾರಣ ಸ್ವರೂಪತಾದಲ್ಲಿಯೇ ಹಡಗವನ್ನು ಸ್ಥಿರಗೊಳಿಸಬೇಕು. ಅಲ್ಲಿ ಜನದಟ್ಟಣೆಯು ಬಹಳಿರುವುದು. ಇದನ್ನು ಲಕ್ಷದಲ್ಲಿಟ್ಟುಕೊಂಡೇ ಹಡಗವನ್ನು ಸಾಯುಜ್ಯ ಬಂದರುದತ್ತ ನೂಕುವನು ।।೧೮೨।। ಅಲ್ಲಿ ಧಾರ್ಮಿಕ ಜನರ ಒಂದು ಧರ್ಮದ ಬಜಾರವೇ ಇರುವುದು. ಅಲ್ಲಿ ಯಾವುದೇ ಶ್ರಮವಾಗುವುದಿಲ್ಲ. ಸರ್ವ ಪದಾರ್ಥಗಳು ಅತ್ಯಂತ ಶುದ್ಧವಾಗಿ ಸಿಗುವುವು. ಬೇಕಾದ ರೀತಿಯಲ್ಲಿ ಕೊಡುತೆಗೆದುಕೊಳ್ಳುವುದು ದೊರೆಯುವುದು ।।೧೮೩।। ಇಂತಹ ನರದೇಹದ ಹಡಗವು ಬಹಳ ದುರ್ಲಭವಾಗಿರುವುದು. ಯಾವ ಮನುಷ್ಯನು ಕರ್ಣಧಾರ ಸದ್ಗುರುವಿನ ಕೃಪೆಯಿಂದ ಈ ಸಂಸಾರದಿಂದ ಪಾರಾಗುವುದಿಲ್ಲವೋ, ಆತನು ಸ್ವತಃ ಆತ್ಮಘಾತವನ್ನು ಮಾಡಿಕೊಂಡಂತಾಗುವುದು ।।೧೮೪।। ಮುಂದೆ ಕೋಟಿ ಕಲ್ಪದವರಗೆ ನರಕಯಾತನೆಯನ್ನು ಭೋಗಿಸುವುದಕ್ಕಾಗಿ ಈ ಯಾವ ಮನುಷ್ಯಜನ್ಮವನ್ನು ವಿಷಯಗಳ ಭೋಗದಲ್ಲಿ ಹಚ್ಚಿದರೆ ಅವನು ತನ್ನ ಕೈಯಿಂದಲೇ ತನ್ನ ಹೊಟ್ಟೆಯಲ್ಲಿ ಶಸ್ತ್ರವನ್ನು ತಿವಿದುಕೊಂಡಂತಾಗುವುದು ।।೧೮೫।।

ಪರಪಾರಾ ಆವಶ್ಯ ಆಹೇ ಜಾಣೇ । ತೇಣೇ ನಾವ ಫೊಡೂನಿ ಭಾಜಿಜೇ ಚಣೇ । ಕಾ ಪಾಂಘರುಣೇ ಜಾಳೂನಿ ತಾಪಣೇ । ಹಿಂವಾಭೇಣೇ ಸೂಜ್ಞಾನೀ ॥೧೮೬॥ ತೈಸೇ ಯೇಥ ಝಾಲೇ ಗಾ ಸಾಚಾರ । ಥಿತ್ಯಾ ನರದೇಹಾ ನಾಗವಲೇ ನರ । ಪುಢಾ ದುಃಖಾಚೇ ಡೋಂಗರ । ಅತಿದುಸ್ತರ ವಾಢವಿಲೇ ॥೧೮೭॥ ಸಕಳ ಯೋನೀ ವಿಷಯಾಸಕ್ತೀ । ಸರ್ವಾಸೀ ಆಹೇ ನಿಶ್ಚಿತೀ । ನರದೇಹೀ ತೈಶೀಚ ವಿಷಯಸ್ಥಿತೀ । ತೈ ತೊಂಡೀ ಮಾತೀ ಪಡಲೀ ಕೀ ॥೧೮೮॥ ಪಾವೋನಿ ಶ್ರೇಷ್ಠ ನರಶರೀರ । ಜೋ ನುತರೇಚಿ ಸಂಸಾರಪಾರ । ತೋ ಆತ್ಮಹತ್ಯಾರಾ ನರ । ಸತ್ಯಸಾಚಾರ ಉದ್ಧವಾ ॥೧೮೯॥ ಕೋಟೀ ಬ್ರಹ್ಮಹತ್ಯಾ-ಗೋಹತ್ಯಾಸೀ । ಪ್ರಾಯಶ್ಚಿತ್ತ ಆಹೇ ಶಾಸ್ತ್ರಾರ್ಥೇಸೀ । ಪರೀ ಆತ್ಮಹತ್ಯಾ ಘಡೇ ಜ್ಯಾಸೀ । ಪ್ರಾಯಶ್ಚಿತ್ತ ತ್ಯಾಸೀ ಅಸೇನಾ ॥೧೯೦॥ ಜೋ ಆತ್ಮಹತ್ಯಾ ಕರೂನಿ ನಿಮಾಲಾ । ತೋ ಮರತಾಂಚಿ ನರಕಾಸೀ ಗೇಲಾ । ಪ್ರಾಯಶ್ಚಿತ್ತಾಸೀ ಕೋಣ ಆಹೇ ಉರಲಾ । ಮಾ ಶಾಸ್ತ್ರಾರ್ಥೇ ಬೋಲಾ ಬೋಲಾವೇ ॥೧೯೧॥ ಅಮೃತ ವಿಕೂನಿ ಕಾಂಜೀ ಪ್ಯಾಲಾ । ತೈಸಾ ನರದೇಹೀ ಭೋಗು ಭೋಗವಿಲಾ। ಹಾ ಥೋರ ನಾಡ ಜೀವಾಸೀ ಝಾಲಾ । ವಿಸರೋನಿ ಆಪುಲಾ ನಿಜಸ್ವಾರ್ಥ ॥೧೯೨॥ ಲಾಹೋನಿ ಉತ್ತಮ ಶರೀರ । ವ್ಯರ್ಥ ವಿಷಯಾಸಕ್ತೀ ನರ । ನರಕೀ ಬುಡಾಲೇ ಅಪಾರ । ಹೇ ಶಾರ್ಙ್ಗಧರ ಬೋಲಿಲಾ ॥೧೯೩॥ ಅಸೋತ ಯಾ ಮೂರ್ಖಾಚಿಯಾ ಗೋಠೀ । ಐಕ ಉತ್ತಮಾಂಚೀ ಹಾತವಟೀ । ಜೇ ವೇದಾರ್ಥಪರಿಪಾಠೀ । ನಿಜಹಿತದೃಷ್ಟೀ ಸಾವಧ ॥೧೯೪॥ ಅತಿವಿರಕ್ತ ಜೇ ಸ್ವಭಾವೇ । ತಿಹೀ ಕಾಯ ಕರ್ತವ್ಯ ಕರಾವೇ । ಕೋಣಾ ಅರ್ಥಾತೇ ತ್ಯಜಾವೇ । ತೇಚಿ ದೇವೇ ಸಾಂಗಿಜೇ ॥೧೯೫॥

ಯದಾರಂಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇಂದ್ರಿಯಃ । ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ ॥೧೮॥

ಅರ್ಥ:- ಹೇ ಪ್ರಿಯ ಉದ್ಧವಾ, ಯಾವ ಪುರುಷನು ದೋಷದರ್ಶನ ಕಾರಣದಿಂದ ಎಂದಿಗೆ ಕರ್ಮಗಳಿಂದ ಉದ್ವಿಗ್ನನಾಗಿ ಮತ್ತು ವಿರಕ್ತನಾಗುವನೋ, ಆಗ ಆತನು ಜಿತೇಂದ್ರಿಯನಾಗಿ ಯೋಗದಲ್ಲಿ ಸ್ಥಿತನಾಗಿ ಮತ್ತು ಅಭ್ಯಾಸ, ಆತ್ಮಾನುಸಂಧಾನ ಮುಖಾಂತರ ತನ್ನ ಮನವನ್ನು ನನ್ನ ಪರಮಾತ್ಮನಲ್ಲಿ ನಿಶ್ಚಿತರೂಪದಿಂದ ಧರಿಸುವನು.

ಜೋ ಕರ್ಮಾರಂಭೀಚ ವಿರಕ್ತ । ಫಳಾಶಾ ನಾತಳೇ ಜ್ಯಾಚೇ ಚಿತ್ತ । ಮಜ ನಿಜಮೋಕ್ಷ ವ್ಹಾವಾ ಯೇಥ । ಹೇಹೀ ಪೋಟಾಂತ ಸ್ಮರೇನಾ ॥೧೯೬॥ ಖಡತರ ವೈರಾಗ್ಯಾಚೀ ದೃಷ್ಟೀ । ಇಂದ್ರಿಯಾಂಸೀ ವಿಷಯಾಂಚೀ ಗೋಷ್ಟೀ । ಕರೂಂಚಿ ನೇದೀ ಮಹಾಹಟೀ । ಧಾರಣಾ ನೇಹಟೀ ದೃಢ ರಾಖೇ ॥೧೯೭॥

ಹಡಗದಲ್ಲಿ ಕುಳಿತು ಆಚೆದಂಡೆಯನ್ನು ಸೇರಬೇಕೆಂದು ಬಯಸಿದ ಆ ಮನುಷ್ಯನು ಆ ಹಡಗವನ್ನೇ ಹೊಡೆದು ಕಡಲೆಯನ್ನು ಸುಟ್ಟು ಪುಠಾಣಿ ಮಾಡಲು ಬಳಿಸಿದಂತೆ ಅಥವಾ ಚಳಿಯಾಗುವುದೆಂದು ತಿಳಿದು ತನ್ನ ಹೊದಿಕೆಯನ್ನೇ ಸುಟ್ಟು ಕಾಯಿಸಿಕೊಳ್ಳುತ್ತಾ ಕುಳಿತಂತೆ ॥೧೮೬॥ ಈ ಪ್ರಕಾರದ ಅವನ ಸ್ಥಿತಿಯಾಗುವುದು. ಇಂತಹವರು ಪ್ರಾಪ್ತವಾಗಿರುವ ಮನುಷ್ಯ ಜನ್ಮವನ್ನು ಸುಮ್ಮನೇ ಕಳೆದುಕೊಳ್ಳುವರು ಮತ್ತು ಮುಂದೆ ಕೇವಲ ದುಃಖದ ಪರ್ವತವನ್ನೇ ಹೊರುವರು ॥೧೮೭॥ ಎಲ್ಲ ಯೋನಿಗಳಲ್ಲಿಯೂ ವಿಷಯಗಳ ಆಸಕ್ತಿಯು ಎಲ್ಲ ಪ್ರಾಣಿಗಳಿಗೂ ಹತ್ತಿರುವುದು. ಹೀಗಿದ್ದರೂ ಮನುಷ್ಯ ಜನ್ಮದಲ್ಲಿಯೂ ಕೂಡ ವಿಷಯಗಳ ಬೆನ್ನು ಹತ್ತಿದರೆ ನಿಶ್ಚಿತವಾಗಿ ಬಾಯಿಯಲ್ಲಿ ಮಣ್ಣು ಬೀಳುವುದು ॥೧೮೮॥ ಹೇ ಉದ್ಧವಾ, ಶ್ರೇಷ್ಠವಾದ ಮನುಷ್ಯ ಜನ್ಮವು ಪ್ರಾಪ್ತವಾಗಿದ್ದರೂ ಕೂಡ ಯಾವನು ಸಂಸಾರದ ಆಚೆ ದಂಡೆಗೆ ಪಾರಾಗುವುದಿಲ್ಲವೋ ಆ ಮನುಷ್ಯನು ಸ್ವತಃ ತಾನೇ ತನ್ನ ಆತ್ಮಘಾತವನ್ನು ಮಾಡಿಕೊಳ್ಳುತ್ತಿರುವನು ॥೧೮೯॥ ಕೋಟಿ ಕೋಟಿ ಬ್ರಹ್ಮಹತ್ಯೆಗಳನ್ನು ಅಥವಾ ಗೋಹತ್ಯೆಗಳನ್ನು ಮಾಡಿದರೆ ಅದಕ್ಕೆ ಶಾಸ್ತ್ರವು ಪ್ರಾಯಶ್ಚಿತ್ತವನ್ನು ಹೇಳಿರುವುದು. ಆದರೆ ಆತ್ಮಹತ್ಯೆಯನ್ನು ಮಾಡಿಕೊಂಡವರಿಗೆ ಯಾವ ಪ್ರಾಯಶ್ಚಿತ್ತವೂ ಇರುವುದಿಲ್ಲ ॥೧೯೦॥ ಯಾವನು ಆತ್ಮಹತ್ಯೆಯನ್ನು ಮಾಡಿಕೊಂಡು ಮರಣನಾಗುವನೋ, ಅವನು ತಕ್ಷಣವಾಗಿ ನರಕದಲ್ಲಿ ಹೋಗಿ ಬೀಳುವನು. ಅಂದಮೇಲೆ ಪ್ರಾಯಶ್ಚಿತ್ತಕ್ಕಾಗಿ ಯಾರು ಅಲ್ಲಿ ಉಳಿದಿರುವರು? ಶಾಸ್ತ್ರಾರ್ಥವನ್ನಾದರೂ ಯಾರಿಗೆ ಹೇಳಬೇಕು? ॥೧೯೧॥ ಅಮೃತವನ್ನು ಮಾರಿಕೊಂಡು ಗಂಜಿಯನ್ನು ಕುಡಿದಂತೆ, ನರದೇಹವು ಪ್ರಾಪ್ತವಾದರೂ ಕೂಡ ವಿಷಯಗಳ ಉಪಭೋಗಗಳನ್ನು ಪಡೆಯುತ್ತಿದ್ದರೆ ತಮ್ಮ ನಿಜವಾದ ಸ್ವಾರ್ಥವನ್ನು ಅವರು ಮರೆತುಬಿಡುವರು ॥೧೯೨॥ ಉತ್ತಮವಾದ ಈ ಜನ್ಮವು ಸಿಕ್ಕರೂ ಕೂಡ ವಿಷಯಗಳ ಆಸಕ್ತಿಯಿಂದ ಅಸಂಖ್ಯ ಜನರು ನರಕದಲ್ಲಿ ಮುಳುಗುತ್ತಿರುವರು ಎಂದು ಶಾರಂಗಧರನು ಹೇಳಿದನು ॥೧೯೩॥ ಈಗ ಈ ಮೂರ್ಖರ ಮಾತು ಇರಲಿ. ವೇದಕ್ಕೆ ಅನುಗುಣವಾಗಿ ತಮ್ಮ ಕಲ್ಯಾಣದತ್ತ ಲಕ್ಷವಿಟ್ಟು ಜಾಗ್ರತದಿಂದಿರುವ ಉತ್ತಮ ಜನರ ಪದ್ಧತಿಯನ್ನು ಈಗ ಹೇಳುವೆನು, ಅದನ್ನು ಕೇಳು ॥೧೯೪॥ ಯಾರು ಸ್ವಭಾವತವಾಗಿಯೇ ಅತ್ಯಂತ ವಿರಕ್ತರಾಗಿರುವರೋ, ಅವರು ಯಾವ ಕರ್ತವ್ಯ ಕರ್ಮಗಳನ್ನು ಮಾಡಬೇಕು? ಯಾವುದನ್ನು ಹೇಗೆ ತ್ಯಜಿಸಬೇಕು? ಇವುಗಳನ್ನು ಈಗ ದೇವನೇ ಹೇಳುತ್ತಿರುವನು ॥೧೯೫॥

ಯಾರು ಕರ್ಮದ ಆರಂಭದಲ್ಲಿಯೇ ವಿರಕ್ತನಾಗಿರುವನೋ, ಆತನ ಚಿತ್ತವು ಫಲದ ಆಶೆಯನ್ನು ಮುಟ್ಟಲೂ ಕೂಡ ಸಿದ್ಧವಿಲ್ಲ. ನನಗೆ ಮೋಕ್ಷವು ದೊರಕಬೇಕೆಂಬ ಹೀಗೆ ಆತನ ಮನದಲ್ಲಿ ಸ್ಮರಣೆಯೂ ಇರುವುದಿಲ್ಲ ॥೧೯೬॥ ಯಾರ ದೃಷ್ಟಿಯಲ್ಲಿ ತೀವ್ರ ವೈರಾಗ್ಯವು ತುಂಬಿರುವುದೋ, ಯಾರು ಇಂದ್ರಿಯಗಳನ್ನು ವಿಷಯಗಳ ಜೊತೆಯಲ್ಲಿ ಎಂದಿಗೂ ಕೂಡಿಸುವುದಿಲ್ಲವೋ, ಅಂತಹ ಯಾವ ದೃಢವಾದ ಮನೋನಿಗ್ರಹಿಯಾಗಿರುವವನು, ತನ್ನ ಸ್ವರೂಪದ ಧಾರಣೆಯನ್ನು ದೃಢವಾಗಿ ರಕ್ಷಿಸುವನು ॥೧೯೭॥

ಕರೂನಿಯಾ ಶ್ರವಣ ಮನನ । ಮಾರ್ಝ್ಯಾ ಸ್ವರೂಪಾಚೇ ಅನುಸಂಧಾನ । ಅಖಂಡ ಕರೀ ನಿಧಿಧ್ಯಾಸನ । ತಿಳಭರೀ ಮನ ಢಳೋ ನೇದೀ ।।೧೯೮।। ಧರೋನಿ ಧಾರಣೇಚೇ ಬಳ । ಸ್ವರೂಪೀ ಮನ ಅಚಂಚಳ । ಅಣುಭರೀ ಹೋಊ ನೇದೀ ವಿಕಳ । ರಾಖೇ ನಿಶ್ಚಳ ನಿಜಬೋಧೇ ।।೧೯೯।। ಏಕಾಕೀ ಮನ ಪಾಹೇ । ಸ್ವರೂಪೀ ಕೈಸೇ ನಿಶ್ಚಳ ಹೋಯೇ । ತ್ಯಾ ಅಭ್ಯಾಸಾಚೇ ಉಪಾಯೇ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ ।।೨೦೦।।

ಧಾರ್ಯಮಾಣಂ ಮನೋಯರ್ಹಿ ಭ್ರಾಮ್ಯದಾಶ್ವನವಸ್ಥಿತಮ್ ।
ಅತೇಂದ್ರಿತೋಽನುರೋಧೇನ ಮಾರ್ಗೇಣಾತ್ಮ ವಶಂ ನಯೇತ್ ।।೧೯।।

ಅರ್ಥ:- ಸ್ಥಿರಗೊಳಿಸಬೇಕೆಂದಾಗ ಮನವು ಚಂಚಲವಾಗಿ ಅತ್ತಿತ್ತ ಓಡಾಡುವುದು. ಆ ಸಮಯಕ್ಕೆ ಕೂಡಲೇ ಅದನ್ನು ನಮ್ಮತ್ತ ವಶಮಾಡಿಕೊಳ್ಳಬೇಕು.

ಸ್ವರೂಪೀ ಲಾವಿತಾ ಅನುಸಂಧಾನ । ಜರೀ ನಿಶ್ಚಳ ನವ್ಹೇ ಮನ । ನ ಸಾಂಡೀ ಆಪುಲಾ ಗುಣ । ಚಂಚಳಪಣ ಸ್ವಭಾವೇ ।।೨೦೧।। ಸಾಧಕ ಆಳಸೇ ವಿಕಳೇ । ಕಾ ಆಠವೀ ವಿಷಯಸೋಹಳೇ । ತೈ ಸ್ವರೂಪೀಹೂನಿ ಮನ ಪಳೇ । ನಿಜ ಚಂಚಳೇ ಸ್ವಭಾವೇ ।।೨೦೨।। ತೇಥೇ ನೇಹಟೂನಿ ಆಸನ । ಸ್ವಯೇ ಹೋಊನಿ ಸಾವಧಾನ । ಸ್ಮರೋನಿ ಸದ್ಗುರುಚೇ ಚರಣ । ಸ್ವರೂಪೀ ಮನ ರಾಖಾವೇ ।।೨೦೩।। ನೇದಿತಾ ವಿಷಯದಾನ । ಹಟಾವಲೇ ಕ್ಷೋಭೇ ಮನ । ತರೀ ನ ಸಂಡೋನಿ ಅನುಸಂಧಾನ । ದ್ಯಾವೇ ಅನ್ನಪಾನ ವಿಧಾನೋಕ್ತ ।।೨೦೪।। (ಆಶಂಕಾ)।। "ಸರ್ಪಾ ಪಾಜಿತೀ ಪೀಯೂಷ । ತೇಚಿ ಪರತೋನಿ ಹೋಯ ವಿಷ । ತೇವೀ ಮನಾಸೀ ದೇತಾ ವಿಷಯಸುಖ । ಅಧಿಕ ದೇಖ ಖವಳೇಲ" ।।೨೦೫।। ತರೀ ಐಸೇ ದ್ಯಾವೇ ವಿಷಯದಾನ । ಜೇಣೇ ಆಕಳಲೇ ರಾಹೇ ಮನ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ನಾರಾಯಣ ಸಾಂಗತ ।।೨೦೬।।

ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇಂದ್ರಿಯಃ । ಸತ್ವಸಂಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್ ।।೨೦।।

ಅರ್ಥ:- ಇಂದ್ರಿಯಗಳನ್ನು ಪ್ರಾಣದಿಂದ ತಮ್ಮ ಆಧೀನದಲ್ಲಿಟ್ಟು, ಮನಕ್ಕೆ ಒಂದು ಕ್ಷಣ ಕೂಡ ಸ್ವತಂತ್ರವಾಗಿ ಬಿಡಕೂಡದು. ಅದರ ಪ್ರತಿಯೊಂದನ್ನೂ ನೋಡುತ್ತಿರಬೇಕು. ಈ ಪ್ರಕಾರದ ಸತ್ವಸಂಪನ್ನ ಬುದ್ಧಿದ್ವಾರಾ ಮನವನ್ನು ಸ್ವಾಧೀನಪಡಿಸಬೇಕು.

ಮೋಕಳೇ ನ ಸೋಡೂನ ಮನ । ನ ಸೋಡೂನಿ ಅನುಸಂಧಾನ । ಕರಾವೇ ಅನ್ನಪ್ರಾನಶಯನ । ಹೇ ವಿಷಯದಾನ ನಿಜಹಿತಾ ।।೨೦೭।। ಸಾಧಕೇ ಸಾಧೂನಿ ಆಪಣ । ಜರೀ ಜಿಂತಿಲೇ ಇಂದ್ರಿಯಪ್ರಾಣ । ತರೀ ಮೋಕಳೇ ಸೋಡೂ ನಯೇ ಮನ । ಸ್ವರೂಪೀ ನೇಹಟೂನ ರಾಖಾವೇ ।।೨೦೮।।

ಶ್ರವಣ ಮತ್ತು ಮನನವನ್ನು ಮಾಡಿ ನನ್ನ ಸ್ವರೂಪವನ್ನು ಯಾವಾಗಲೂ ಅನುಸಂಧಾನದಲ್ಲಿಡುವನು. ಅಖಂಡವಾಗಿ ನನ್ನದೇ ನಿಧಿಧ್ಯಾಸವನ್ನು ಮಾಡುತ್ತಿರುವನು. ಅಲ್ಲಿಂದ ತನ್ನ ಮನಸ್ಸನ್ನು ತಿಲಮಾತ್ರಕ್ಕೂ ಕದಲಿಸಿಕೊಡಲಾರನು ।।೧೯೮।। ಧಾರಣೆಯ ಬಲದಿಂದ ಆತ್ಮಸ್ವರೂಪದಲ್ಲಿ ತನ್ನ ಮನಸ್ಸನ್ನು ಸ್ಥಿರಗೊಳಿಸುವನು. ಯತ್ಕಿಂಚಿತವನ್ನೂ ಕೂಡ ಚಂಚಲಿಸಿ ಕೊಡಲಾರನು. ಆತ್ಮಬೋಧೆಯಿಂದ ಅದನ್ನು ನಿಶ್ಚಲವನ್ನಾಗಿ ಕಾಯ್ದುಕೊಳ್ಳುವನು ।।೧೯೯।। ಆದರೆ ಮನವು ಒಂದೇವೇಳೆಗೆ ಆತ್ಮಸ್ವರೂಪದಲ್ಲಿ ನಿಶ್ಚಲವಾಗಿ ಹೇಗೆ ಇರುವುದೆಂಬ ಅದರ ಅಭ್ಯಾಸದ ಉಪಾಯವನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।।೨೦೦।।

ನನ್ನ ಆತ್ಮಸ್ವರೂಪದ ಚಿಂತನೆಯನ್ನು ಮಾಡುತ್ತಿರಲು ಆಗ ಮನಸ್ಸಿನ ಏಕಾಗ್ರತೆಯು ಆಗದಿದ್ದರೆ, ಅದು ತನ್ನ ಚಂಚಲ ಸ್ವಭಾವದಂತೆ ಸ್ಥಿರವಾಗದಿದ್ದರೆ ।।೨೦೧।। ಆಗ ಸಾಧಕನು ವೇಧನೆಗೆ ಒಳಗಾಗುವನು ಅಥವಾ ವಿಷಯಗಳಲ್ಲಿನ ಸುಖದ ವಿಚಾರಗಳನ್ನು ಮಾಡಲಾರಂಭಿಸುವನು. ಇದರಿಂದ ಮನವು ತನ್ನ ಚಂಚಲಮಯವಾದ ಸ್ವಭಾವದಿಂದ ಆತ್ಮಸ್ವರೂಪದಿಂದ ದೂರ ಓಡಿ ಹೋಗುವುದು ।।೨೦೨।। ಇಂತಹ ಸಮಯದಲ್ಲಿ ಸಾಧಕನು ಆಸನವನ್ನು ಸ್ಥಿರಗೊಳಿಸಬೇಕು. ಚಿತ್ತವನ್ನು ಜಾಗೃತೆಯಲ್ಲಿಡಬೇಕು. ಸದ್ಗುರು ಚರಣಗಳ ಸ್ಮರಣೆಯನ್ನು ಮಾಡಬೇಕು ಮತ್ತು ಆತ್ಮಸ್ವರೂಪದಲ್ಲಿ ಮನವನ್ನು ಹಚ್ಚಬೇಕು ।।೨೦೩।। ಮನಕ್ಕೆ ವಿಷಯಭೋಗವು ದೊರೆಯದಿದ್ದಕ್ಕೆ ಹಠವಾದಿ ಮನವು ಕ್ಷುಬ್ಧಗೊಳ್ಳುವುದು. ಹೀಗಿದ್ದರೂ ಅನುಸಂಧಾನವನ್ನು ಬಿಡದೇ ವಿಧಿಯುಕ್ತವಾಗಿ ಅನ್ನಪಾನವನ್ನು ಕೊಡಬೇಕು ।।೨೦೪।। ಸರ್ಪಕ್ಕೆ ಅಮೃತವನ್ನು ಕುಡಿಸಿದರೂ ಅದರ ರೂಪಾಂತರವು ವಿಷವೇ ಆಗುವುದು. ಅದರಂತೆ ಮನಕ್ಕೆ ವಿಷಯ ಸುಖವನ್ನು ಕೊಟ್ಟರೆ ಅದು ಮೊದಲಿನಕ್ಕಿಂತಲೂ ಅಧಿಕವಾಗಿಯೇ ಉಗ್ರವಾಗುವುದು ।।೨೦೫।। ಮನಕ್ಕೆ ಯಾವ ಪ್ರಕಾರವಾಗಿ ವಿಷಯಗಳನ್ನು ಕೊಡಬೇಕೆಂದರೆ ಅದರಿಂದ ಅದು ನಮ್ಮ ಸ್ವಾಧೀನದಲ್ಲಿರಬೇಕು. ಇದೇ ಅರ್ಥದಲ್ಲಿ ಸ್ವತಃ ಶ್ರೀಕೃಷ್ಣನು ಮುಂದಿನ ನಿರೂಪಣೆಯಲ್ಲಿ ಹೇಳುವನು ।।೨೦೬।।

ಮನಸ್ಸಿಗೆ ಸಡಿಲಾಗಿ ಬಿಡದೇ ಮತ್ತು ಅನುಸಂಧಾನವನ್ನು ದೂರ ಮಾಡದೇ ಆಹಾರ, ನಿದ್ರಾ, ಇತ್ಯಾದಿ ವ್ಯವಹಾರಗಳನ್ನು ಮಾಡುವುದಕ್ಕೆ ಹಿತಕಾರಕ ವಿಷಯದಾನವೆನ್ನುವರು ।।೨೦೭।। ಸಾಧಕನು ಸಾಧನೆಯನ್ನು ಮಾಡಿ ಇಂದ್ರಿಯಗಳನ್ನು, ಪ್ರಾಣವನ್ನು ಜಯಿಸಿದರೂ ಕೂಡ ಮನದ ಮೇಲೆ ವಿಶ್ವಾಸವಿಟ್ಟು ಅದನ್ನು ಮುಕ್ತವಾಗಿ ಬಿಡಬಾರದು. ಅದರ ನಿಗ್ರಹವನ್ನು ಮಾಡಬೇಕು ।।೨೦೮।।

ಜೋ ಮನಾಸೀ ವಿಶ್ವಾಸಲಾ । ತೋ ಕಾಮಕ್ರೋಧೀ ನಾಗವಲಾ । ಸಂಕಲ್ಪವಿಕಲ್ಪೀ ಲುಟಿಲಾ । ವಿಸಂಚಿಲಾ ಮಹಾಮೋಹೇ ।೨೦೯॥ ಜಾಣೋನಿ ಮನಾಚೇ ಮಹಾಬಳ । ತ್ಯಾಸೀ ವಿವೇಕ ದ್ಯಾವಾ ಮೋಕಳ । ತೋ ಹಾಲೋನೇದೀ ಕೇವಳ । ಕರೀ ನಿಶ್ಚಳ ನಿಜಾಂಗೇ ।೨೧೦॥ ಮನಾವಿವೇಕಾಚೇ ಉಭಯಸಂಧೀ । ಸತ್ವಸಂಪನ್ನ ಹೋಯ ಬುದ್ಧೀ । ತೇ ವಿಷಯಾಂಚೇ ಕಂದ ಛೇದೀ । ತೋಡೀ ಉಪಾಧೀ ಸವಿಕಾರ ।೨೧೧॥ ಮನ ಜೇಥ ಜೇಥ ಪಳೋನಿ ಜಾಯೇ । ತೇಥ ತೇಥ ವಿವೇಕ ಉಭಾ ರಾಹೇ । ಮಗ ಸತ್ತ್ವಬುದ್ಧೀಚೇನಿ ಸಾಹ್ಯೇ । ಮೋಡೀ ಪಾಯೇ ಮನಾಚೇ ।೨೧೨॥ ಐಸೇ ಮನಾಚೇ ಖುಂಟಲಿಯಾ ಬಳ । ಮಗ ಸ್ವರೂಪೀ ಹೋಯ ನಿಶ್ಚಳ । ಜೇವೀ ಜಳಗಾರ ಕೇವಳ । ಠಾಕೇ ಗಂಗಾಜಳ ವಸ್ತೀಸೀ ।೨೧೩॥ ಯಾಪರೀ ಸ್ವರೂಪೀ ಮನ । ಸ್ವಯೇ ಪಾವೇ ಸಮಾಧಾನ । ತೋಚಿ ಯೋಗ ಪರಮ ಪಾವನ । ಸಮಾಧಾನ ಜೀವಶಿವಾ ।೨೧೪॥ ಜೀವ ಪರಮಾತ್ಮ್ಯಾಚೀ ಏಕಾತ್ಮತಾ । ತೋಚ "ಪರಮಯೋಗ" ತತ್ತ್ವತಾ । ಯೇಚಿವಿಖೀಚೀ ಕಥಾ । ಅಶ್ವದೃಷ್ಟಾಂಚ್ಯಾ ಹರಿ ಸಾಂಗೇ ।೨೧೫॥

ಏಷ ವೈ ಪರಮೋ ಯೋಗೋ ಮನಸಃ ಸಂಗ್ರಹಃ ಸ್ಮೃತಃ । ಹೃದಯಜ್ಞತ್ವಮನ್ವಿಚ್ಛನ್ ದಮ್ಯಸ್ಯೇವಾರ್ವತೋ ಮುಹುಃ ।೨೧॥

ಅರ್ಥ:- ಕುದುರೆ ಸವಾರನು ಯಾವ ಪ್ರಕಾರವಾಗಿ ತನ್ನ ಕುದುರೆಯನ್ನು ವಶ ಮಾಡಿಕೊಂಡು ತನ್ನ ಇಚ್ಛೆಯಂತೆ ನಡೆಯಬೇಕೆಂಬ ಇಚ್ಛೆಯಿಟ್ಟು ಅನೇಕ ಪ್ರಯತ್ನಗಳಿಂದ ಅದನ್ನು ವಶಪಡಿಸಿಕೊಳ್ಳುವನು. ಅದರಂತೆಯೇ ಮನಸ್ಸಿಗೂ ಕೂಡ ಅನೇಕ ಪ್ರಯತ್ನಗಳ ಮೂಲಕ ಹಿತಯುಕ್ತ ಮಾತುಗಳಿಂದ ಅದನ್ನು ವಶಪಡಿಸುವುದು, ಇದು ಪರಮಯೋಗವಾಗಿರುವುದು.

ಜೈಸಾ ವಾರೂ ಉಪಲಾಣೀ । ವಶ್ಯ ಕರೀ ಅಶ್ವಸಾಹಣೀ । ಮಾಗೇ ತರಟಾಂಚಾ ಕರ ಝುಣಾಣೀ । ಪುಢೇ ರಾಖೇ ನೆಹಟೂನೀ ರಾಗಬಾಗಾ ।೨೧೬॥ ತೇಥ ಜೇ ಜೇ ಪಾಊಲ ವೋಜಾ ಕರೀ । ತೇಥ ಮಾನ ದೇ ಜೇಜೇಕಾರೀ । ಜೇಥ ಫುಟೋನಿ ಪಡೇ ಬಾಹೇರೀ । ತೇಥ ತರಟ ಮಾರೀ ಸವರ್ಮ ।೨೧೭॥ ಜೇಥ ಹಟಾವಲಾ ನ ಸಾಂಡೀ ಖೋಡೀ । ತೇ ಠಾಯೀ ದೇ ಮೋಕಳವಾಡೀ । ಪರೀ ನಿಃಶೇಷ ಪೀಡೀ ನಾ ಸೋಡೀ । ಐಸಾ ಪಡಿಪಾಡೀ ರಾಖತ ।೨೧೮॥ ದಮನೀ ದೇಖೋನಿ ಅತ್ಯಾದರು । ಸ್ವಾಮೀಹೃದಯ ಜಾಣೇ ವಾರು । ಆಣಿ ವಾರುವಾಚೇ ಅಭ್ಯಂತರು । ಕಳೇ ಸಾಚಾರು ಸ್ವಾಮೀಸೀ ।೨೧೯॥ ಐಸೇ ಉಭಯಹೃದಯ-ಐಕ್ಯಯೋಗೇ । ವಾರೂ ನ ಧರಿತಾ ರಾಗಬಾಗೇ । ಅಡಣೇ ಉಡಣೇ ಸಾಂಡೀ ವೇಗೇ । ಮಗ ನಾಚೋ ಲಾಗೇ ಮೋಕಳಾ ।೨೨೦॥

ಮನದ ಮೇಲೆ ಯಾವನು ವಿಶ್ವಾಸವಿಡುವನೋ ಅವನಿಗೆ ಕಾಮಕ್ರೋಧಗಳು ನಿಶ್ಚಯವಾಗಿ ಮೋಸಗೊಳಿಸುವುವು. ಸಂಕಲ್ಪ ವಿಕಲ್ಪಗಳು ಅವನನ್ನು ಲೂಟ ಮಾಡುವುವು ಮತ್ತು ಮಹಾಮೋಹವು ಆತನನ್ನು ಪೂರ್ಣವಾಗಿ ನುಂಗಿಬಿಡುವುದು ।೨೦೯॥ ಮನದ ಬಲವು ಬಹಳ ದೊಡ್ಡದಾಗಿರುವುದು. ಇದನ್ನು ಲಕ್ಷದಲ್ಲಿಟ್ಟುಕೊಂಡು ವಿವೇಕದಿಂದ ಅದಕ್ಕೆ ಬಂಧಿಸಿ ಇಡಬೇಕು. ಅಂದರೆ ಅದು ತನ್ನ ಸ್ಥಳದಿಂದ ಅಲುಗಾಡದೇ ತಾನಾಗಿಯೇ ಸ್ಥಿರವಾಗುವುದು ।೨೧೦॥ ಮನಸ್ಸು ಮತ್ತು ವಿವೇಕವು ಇವು ಎರಡು ಐಕ್ಯವಾದರೆ ಬುದ್ಧಿಯು ಸತ್ವಗುಣದಿಂದ ಸಂಪನ್ನವಾಗುವುದು. ಅದು ವಿಷಯಗಳ ಬೇರನ್ನೇ ಇಲ್ಲದಾಗಿ ಮಾಡುವುದು. ಹಾಗೆಯೇ ವಿಕಾರಸಹ ಉಪಾಧಿಯನ್ನು ಮುರಿದು ಒಗೆಯುವುದು ।೨೧೧॥ ಮನವು ಎಲ್ಲೆಲ್ಲಿ ಧಾವಿಸುವುದೋ, ಅಲ್ಲಲ್ಲಿ ವಿವೇಕವು ಅದರ ಮುಂದೆ ಹೋಗಿ ನಿಲ್ಲುವುದು. ತದನಂತರ ಸತ್ವಬುದ್ಧಿಯ ಸಹಾಯದಿಂದ ಮನಸ್ಸಿನ ಕಾಲುಗಳನ್ನೇ ಮುರಿದು ಹಾಕಲ್ಪಡುವುದು ।೨೧೨॥ ಈ ರೀತಿಯಲ್ಲಿ ಮನದ ಬಲವು ಕುಂದಲು ನೀರಿನಲ್ಲಿಯ ತಂಪು ಯಾವ ಪ್ರಕಾರವಾಗಿ ನೀರಿನಲ್ಲಿಯೇ ಇರುವುದೋ, ಅದರಂತೆ ಮನವು ಸ್ವರೂಪದಲ್ಲಿ ಸ್ಥಿರವಾಗುವುದು ।೨೧೩॥ ಈ ಪ್ರಕಾರವಾಗಿ ಮನವು ಸ್ವರೂಪದಲ್ಲಿ ಸ್ವತಃ ಶಾಂತವಾಗಿ ಸಮಾಧಾನದಿಂದ ವಾಸ್ತವ್ಯ ಮಾಡುತ್ತಿರಲು ಆಗ ಅದು ಪರಮ ಪವಿತ್ರಯೋಗವೆಂದು ತಿಳಿಯಬೇಕು. ಇದರಿಂದ ಜೀವಶಿವರ ಏಕರೂಪತೆಯು ಆಗುವುದು ।೨೧೪॥ ಜೀವ ಮತ್ತು ಪರಮಾತ್ಮನ ಐಕ್ಯವಾಗುವುದೇ ನಿಜವಾದ ಶ್ರೇಷ್ಠ ಯೋಗವಾಗಿರುವುದು. ಈ ವಿಷಯದ ನಿರೂಪಣೆಯನ್ನು ಕುದುರೆಯ ದೃಷ್ಟಾಂತದಿಂದ ಭಗವಾನ ಶ್ರೀಕೃಷ್ಣನು ಈಗ ಹೇಳುವನು ।೨೧೫॥

ಜೀನು ಹಾಕದಿರುವ ಕುದುರೆಗೆ ಸವಾರನು ಯಾವ ಪ್ರಕಾರವಾಗಿ ತನ್ನ ಹೇಳಿಕೆಯಂತೆ ನಡೆಸುತ್ತಿರುವನು, ಆತನು ಅದರ ಹಿಂದಿನ ಭಾಗಕ್ಕೆ ಚಾಬುಕದಿಂದ ಹೊಡೆಯುತ್ತ ಮುಂದಿನ ನಡಿಗೆಯು ವ್ಯವಸ್ಥಿತವಾಗಿ ನಡೆಯುವಂತೆ ಲಗಾಮವನ್ನು ಎಳೆಯುತ್ತಿರುವನು ।೨೧೬॥ ಕುದುರೆಯು ಸರಳವಾಗಿ ನಡೆಯಲು ಅದರ ತಲೆಯ ಮೇಲೆ ಕೈಯಾಡಿಸಿ ಹೊಗಳುವನು. ಸರಿಯಾಗಿ ನಡೆಯದಿದ್ದರೆ ಚಾಬುಕದಿಂದ ಮರ್ಮಸ್ಥಾನಕ್ಕೆ ಹೊಡೆಯುವನು ।೨೧೭॥ ಯಾವ ಈ ಕುದುರೆಯು ಅಡ್ಡತಿಡ್ಡ ಸಾಗುತ್ತ ತನ್ನ ಕೆಟ್ಟ ಚಾಳಿ ಬಿಡದಿದ್ದರೆ, ಆಗ ಅದಕ್ಕೆ ಸ್ವತಂತ್ರವಾಗಿ ಬಿಟ್ಟು ಅದಕ್ಕೆ ಹೊಡೆಯುವುದು, ಬಿಡುವುದು ಮಾಡುತ್ತ ಯುಕ್ತಿ ಪ್ರಯುಕ್ತಿಗಳಿಂದ ಆ ಕುದುರೆಯನ್ನು ತನ್ನ ಸ್ವಾಧೀನ ಮಾಡಿಕೊಳ್ಳುವನು ।೨೧೮॥ ತನ್ನನ್ನು ಸ್ವಾಧೀನಮಾಡಿಕೊಳ್ಳುವ ತನ್ನ ಧಣಿಯ ಪ್ರಯತ್ನವನ್ನು ಆ ಕುದುರೆಯು ತಿಳಿದುಕೊಳ್ಳುತ್ತಿರುವುದು ಮತ್ತು ಕುದುರೆಯ ಮನವನ್ನೂ ಸಹ ಅದರ ಧಣಿಯು ತಿಳಿದುಕೊಳ್ಳುತ್ತಿರುವನು ।೨೧೯॥ ಹೀಗೆ ಇಬ್ಬರೂ ಒಬ್ಬರಿಗೊಬ್ಬರು ಮನದ ಇಂಗಿತವನ್ನು ತಿಳಿದುಕೊಂಡು ಕುದುರೆಯು ಕೆಟ್ಟ ಚಾಳಿ ಬಿಟ್ಟು ಧಣಿಯು ಹೇಳಿದಂತೆ ಆಜ್ಞೆಯನ್ನು ಪಾಲಿಸುವುದು. ಅಡ್ಡತಿಡ್ಡ ಹೋಗುವುದು, ಹಠತನ ಮಾಡುವುದು ಬಿಟ್ಟುಬಿಡುವುದು ತದನಂತರ ಸ್ವತಂತ್ರವಾಗಿ ಬಿಟ್ಟರೂ ಅದು ಸಂತೋಷದಿಂದ ಕುಣಿಯುವುದು ।೨೨೦॥

ಐಸೇ ವಶ್ಯ ಕೇಲಿಯಾ ಅಶ್ವಾತೇ । ಮಗ ಕರ್ತ್ಯಾಚಿಯಾ ಮನೋಗತೇ । ವಾರೂ ನಾಚೇ ಕಾಚೇನಿ ಸುತೇ । ಯಾಪರೀ ಮನಾತೇ ದಮಾವೇ ।೨೨೧॥ ಮನೋಜಯೋ ಕೀಜೇ ಆಪಣ । ತೋಚಿ ''ಪರಮಯೋಗ''-ಕಾರಣ । ಹೇಚಿ ಮಾಗಿಲೇ ಶ್ಲೋಕೀ ನಿರೂಪಣ । ತುಜ ಮ್ಯಾ ಸಂಪೂರ್ಣ ಸಾಂಗಿತಲೇ ।೨೨೨॥ ''ನೃದೇಹಮಾದ್ಯಂ'' ಯಾ ಶ್ಲೋಕಾಚೇ ಅಂತೀ । ಕರ್ಮವೈರಾಗ್ಯದ್ವಾರಾ ಮುಕ್ತೀ । ಆತಾ ಸಾಂಗಿತಲೀ ಹೇ ಸ್ಥಿತೀ । ಉತ್ತಮಗತೀ ಅಭ್ಯಾಸೇ ।೨೨೩॥ ಮುಖ್ಯತಃ ಸಾಂಖ್ಯಯೋಗೇ ಮಾಝೀ ಪ್ರಾಪ್ತೀ । ತೇ ಮೀ ಸಾಂಗೇನ ತುಜಪ್ರತೀ । ಮಿಥ್ಯಾ ಸಂಸಾರಾಚೀ ಸ್ಫೂರ್ತೀ । ಬ್ರಹ್ಮಸಂವಿತೀ ಸಾಚಾರ ।೨೨೪॥ ಹೇ ಜ್ಞಾನಗಹನ ನಿರೂಪಣ । ತುಜ ಮೀ ಸಾಂಗೇನ ಗುಹ್ಯ ಜ್ಞಾನ । ಜೇ ಅಸೋನಿ ತ್ರಿಗುಣೀ ವರ್ತಮಾನ । ಅಲಿಪ್ತ ಜಾಣ ಗುಣಕಾರ್ಯಾ ।೨೨೫॥ ''ತುಜ ಮೀ ಸಾಂಗೇನ ಗುಹ್ಯ ಜ್ಞಾನ'' । ಹೇ ಐಕೋನಿ ದೇವಾಚೇ ವಚನ । ಉದ್ಧವ ಸ್ವಯೇಚಿ ಝಾಲಾ ಕಾನ । ಅತಿಸಾವಧಾನ ಶ್ರವಣಾರ್ಥೀ ।೨೨೬॥ ದೇಖೋನಿ ಉದ್ಧವಾಚಾ ಅತ್ಯಾದರು । ಆರ್ತಚಿತ್ತಚಕೋರಚಂದ್ರು । ನಿಜಜ್ಞಾನಗುಣಸಮುದ್ರು । ಕಾಯ ಯಾದವೇಂದ್ರು ಬೋಲಿಲಾ ।೨೨೭॥

ಸಾಂಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ । ಭವಾಪ್ಯಯಾವನುಧ್ಯಾಯನ್ಮನೋ ಯಾವತ್ಪ್ರಸೀದತೀ ।೨೨॥

ಅರ್ಥ:- ಸಾಂಖ್ಯ ಶಾಸ್ತ್ರದಲ್ಲಿ ಪ್ರಕೃತಿಯಿಂದ ಹಿಡಿದು ಶರೀರದವರೆಗೆ ಹೇಳಿರುವ ಯಾವ ಕ್ರಮದ ಅನುಸಾರವಾಗಿ ಸೃಷ್ಟಿಯ ಚಿಂತನೆಯನ್ನು ಮಾಡಬೇಕು ಮತ್ತು ಅದರಂತೆ ಶರೀರ ಇಂದ್ರಿಯಗಳ ಪ್ರಕೃತಿಯಲ್ಲಿ ಲಯವಾಗುವಿಕೆಯನ್ನು ಹೇಳಿರುವುದು. ಈ ಪ್ರಕಾರವಾಗಿ ಲಯ ಚಿಂತನೆ ಮಾಡಬೇಕು. ಎಲ್ಲಿಯವರೆಗೆ ಮನವು ಶಾಂತ, ಸ್ಥಿರವಾಗುವುದಿಲ್ಲವೋ ಅಲ್ಲಿಯವರೆಗೂ ಪ್ರಯತ್ನವನ್ನು ಮಾಡುತ್ತಲೇ ಇರಬೇಕು.

ಜೇ ಸೃಷ್ಟಿಪೂರ್ವೀ ಅಲಿಪ್ತ । ತೇಚಿ ಸೃಷ್ಟಿ ಉದಯೀ ಸೃಷ್ಟಿ ಆಂತ । ಮಹತ್ತತ್ತ್ವಾದಿ ದೇಹಪರ್ಯಂತ । ತತ್ತ್ವೀ ಅನುಗತ ತೇಚಿ ವಸ್ತು ।೨೨೮॥ ಆಣಿ ಸೃಷ್ಟೀಚ್ಯಾ ಸ್ಥಿತಿವಿಶೇಷೀ । ಗುಣಕಾರ್ಯಾತೇ ತೇಚಿ ಪ್ರಕಾಶೀ । ಶೇಖೀ ಗುಣಕಾರ್ಯಾತ ತೇಚಿ ಗ್ರಾಸೀ । ಉರೇ ಅವಶೇಷೀ ತೇ ವಸ್ತು ।೨೨೯॥ ನಗ ನ ಘಡತಾ ಸೋನೇಚಿ ಸಾಚೇ । ನಗ ಘಡವಿತಾ ಸೋನೇಪಣ ನ ವಚೇ । ನಗ ಮೋಡಿತಾ ಸೋನ್ಯಾಚೇ । ಘಡಾಮೋಡೀಚೇ ಭಯ ನಾಹೀ ।೨೩೦॥ ಮೇಘಾಪೂರ್ವೀ ಶುದ್ಧ ಗಗನ । ಮೇಘ್ಯಾ ಸಭಾಹ್ಯ ಗಗನ ಜಾಣ। ಮೇಘ ವಿರಾಲ್ಯಾ ಗಗನೀ ಗಗನ । ಅಲಿಪ್ತ ಜಾಣ ಸಂಚಲೇ ।೨೩೧॥

ಈ ಪ್ರಕಾರವಾಗಿ ಕುದುರೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಆಗ ಆ ಕುದುರೆಯು ತನ್ನ ಧಣಿಯ ಇಚ್ಛೆಯ ಪ್ರಕಾರ ಸಾಧಾರಣ ನೂಲಿನಿಂದಲೂ ಕೂಡ ಮನಬಂದಂತೆ ಕುಣಿಯುತ್ತಿರುವುದು. ನಾವೂ ಕೂಡ ಈ ಪ್ರಕಾರವಾಗಿ ಮನಸ್ಸಿನ ದಮನವನ್ನು ಮಾಡಬೇಕು ।೨೨೧॥ ತನ್ನ ಸ್ವಂತ ಮನವನ್ನು ಜಯಿಸುವುದೇ ಶ್ರೇಷ್ಠವಾದ ಒಂದು ಯೋಗವಾಗಿರುವುದು. ಈ ವಿಷಯಕ್ಕಾಗಿ ಹಿಂದಿನ ಶ್ಲೋಕದಲ್ಲಿ ಸವಿಸ್ತಾರವಾಗಿ ನಿರೂಪಣೆಯನ್ನು ಮಾಡಲಾಗಿರುವುದು ।೨೨೨॥''ನೃದೇಹಮಾದ್ಯಂ'' ಈ ಶಬ್ದದಿಂದ ಹದಿನೇಳನೆಯ ಶ್ಲೋಕದ ಕೊನೆಯಲ್ಲಿ ಕರ್ಮ ವೈರಾಗ್ಯದಿಂದ ಮುಕ್ತಿಯು ದೊರೆಯುವುದು ಎಂದು ಹೇಳಿರುವುದು. ಉತ್ತಮ ಸ್ಥಿತೀ ಅಂದರೆ ಅಭ್ಯಾಸದ ವರ್ಣನೆಯನ್ನು ಈಗ ಮಾಡಲಾಗುತ್ತಿರುವುದು ।೨೨೩॥ ಮುಖ್ಯವಾಗಿ ಸಾಂಖ್ಯಯೋಗದಿಂದ ನನ್ನ ಪ್ರಾಪ್ತಿಯಾಗುವುದು. ಇದನ್ನೂ ಕೂಡ ಈಗ ನಿನಗೆ ಹೇಳುವೆನು. ಕಾರಣ ಬ್ರಹ್ಮಸಾಕ್ಷಾತ್ಕಾರವಾಯಿತೆಂದರೆ ಸಂಸಾರದ ಸ್ಫೂರ್ತಿಯೇ ಮಿಥ್ಯೆಯಾಗಿ ನಿರ್ಣಯಿಸಲ್ಪಡುವುದು ।೨೨೪॥ ಈ ಜ್ಞಾನಗಹನ ನಿರೂಪಣೆಯಲ್ಲಿ ನಿನಗೆ ನಾನು ಗುಹ್ಯವಾದ ಜ್ಞಾನವನ್ನು ಹೇಳುವೆನು. ಈ ಜ್ಞಾನವು ತ್ರಿಗುಣದಲ್ಲಿ ಇರುತ್ತಿದ್ದು ಗುಣಕರ್ಮದಿಂದ ಅಲಿಪ್ತವಾಗಿರುವುದು ।೨೨೫॥ ನಿನಗೆ ನಾನು ಗುಹ್ಯವಾದ ಜ್ಞಾನವನ್ನು ಹೇಳುವೆನು ಎಂಬ ಶ್ರೀಕೃಷ್ಣನ ವಚನವನ್ನು ಕೇಳಿ ಉದ್ಧವನು ಶ್ರವಣಸುಖಕ್ಕಾಗಿ ಅತ್ಯಂತ ಉತ್ಸುಕನಾದನು. ಸರ್ವಾಂಗದಿಂದ ಕಿವಿಯಾದನು. ಏಕಾಗ್ರ ಚಿತ್ತದಿಂದ ಕೇಳಲಾರಂಭಿಸಿದನು ।೨೨೬॥ ಉದ್ಧವನ ಅತ್ಯಂತ ಕೇಳುವ ಆದರವನ್ನು ಕಂಡು ಆರ್ತಚಿತ್ತರೂಪ ಚಕೋರಕ್ಕೆ ತೃಪ್ತಿಯನ್ನು ಕೊಡುವ ಚಂದ್ರನಾಗಿರುವ ಅಥವಾ ಆತ್ಮಜ್ಞಾನರೂಪ ಗುಣದ ಸಾಗರನಾಗಿರುವ, ಯಾದವರಲ್ಲಿ ಶ್ರೇಷ್ಠನಾಗಿರುವ ಶ್ರೀಕೃಷ್ಣನು ಏನು ಹೇಳಿದೆನೆಂಬುದನ್ನು ಈಗ ಕೇಳಿರಿ ।೨೨೭॥

ಯಾವುದು ಸೃಷ್ಟಿಯ ಪೂರ್ವದಲ್ಲಿ ಅಲಿಪ್ತವಾಗಿರುವುದೋ, ಅದು ಸೃಷ್ಟಿಯ ಉತ್ಪನ್ನವಾದ ನಂತರ ಸೃಷ್ಟಿಯಲ್ಲಿ ಮಹತತ್ವದಿಂದ ದೇಹದವರೆಗೆ ವ್ಯಾಪಿಸಿಕೊಂಡಿರುವ ಯಾವ ಒಂದು ತತ್ವವೆಂದರೆ ಅದೇ ಪರಬ್ರಹ್ಮವಾಗಿರುವುದು ।೨೨೮॥ ಸೃಷ್ಟಿಯ ವಿಶೇಷ ಸ್ಥಿತಿಯಲ್ಲಿ ಗುಣಕಾರ್ಯದಲ್ಲಿ ಅದೇ ಪ್ರಕಾಶಗೊಳಿಸುವುದು ಮತ್ತು ಕೊನೆಯಲ್ಲಿ ಗುಣಕಾರ್ಯಕ್ಕೆ ನುಂಗಿ ಬಿಡುವುದು ಅವಶೇಷವಾಗಿ ಅದೇ ಇರುವುದು ।೨೨೯॥ ಬಂಗಾರವು ಅಲಂಕಾರ ಮಾಡದೇ ಇದ್ದಾಗ ಬಂಗಾರವೇ ಆಗಿರುವುದು. ಮತ್ತು ಅಲಂಕಾರಗಳನ್ನು ತಯಾರಿಸಲು ಆಗಲೂ ಕೂಡ ಬಂಗಾರತ್ವವು ಕಡಿಮೆಯಾಗದು. ಅಥವಾ ಅಲಂಕಾರಗಳನ್ನು ಮುರಿದರೂ ಕೂಡ ಅದರ ಯಾವ ಭಯವೂ ಇರುವುದಿಲ್ಲ ।೨೩೦॥ ಮೋಡಗಳು ಬರುವುದಕ್ಕಿಂತ ಮುಂಚಿತವಾಗಿ ಆಕಾಶವು ಸ್ವಚ್ಛವಾಗಿರುವುದು. ಮೋಡಗಳ ಒಳಹೊರಗೆ ಆಕಾಶವು ವ್ಯಾಪಿಸಿಕೊಂಡಿರುವುದು. ಮೋಡಗಳು ಹೋದನಂತರವೂ ಕೂಡ ಆಕಾಶವು ಅಲಿಪ್ತದಿಂದ ತಾನು ಇದ್ದಂತೆಯೇ ಇರುವುದು ।೨೩೧॥

ತೇವೀ ಉತ್ಪಿತ್ತಿಸ್ಥತಿ ಪ್ರಳಯಾಂತೀ । ವಸ್ತು ಸಂಚಲೀ ಅಲಿಪ್ತಸ್ಥಿತೀ । ತೇಹೀ ವಿಖೀಂಚೀ ಉಪಪತ್ತೀ । ಉದ್ಧವಾ ತುಜಪ್ರತೀ ಸಾಂಗೇನ ॥೨೩೨॥ ಕುಲಾಲ ಜೇ ಜೇ ಭಾಂಡೇ ಘಡಿತ । ತ್ಯಾಸೀ ಮೃತ್ತಿಕಾ ನಿತ್ಯ ವ್ಯಾಪ್ತ । ತೇವೀ ಜೇ ಜೇ ತತ್ತ್ವ ಉಪಜತ । ತೇ ತೇ ವ್ಯಾಪಿಜೇತ ವಸ್ತೂನೇ ॥೨೩೩॥ ಸಾಗರೀ ಜೇಜೇ ಉಪಜೇ ಲಹರೀ । ತಿಸೀ ಜಳಚಿ ಸಬಾಹ್ಯಾಂತರೀ । ತೇವಿ ಮಹತತ್ತ್ವಾದಿ ದೇಹವರೀ । ಸಬಾಹ್ಯಭ್ಯಂತರೀ ಚಿನ್ಮಾತ್ರ ॥೨೩೪॥ ಹೋ ಕಾ ಜೋ ಜೋ ಪದಾರ್ಥ ನಿಫಜೇ । ತೋ ಆಕಾಶೇ ವ್ಯಾಪಿಜೇ ಸಹಜೇ । ತೇವೀ ಜೇ ಜೇ ತತ್ತ್ವ ಉಪಜೇ । ತೇ ತೇ ವ್ಯಾಪಿಜೇ ಚೈತನ್ಯೇ ॥೨೩೫॥ ಅನುಲೋಮೇ ಪಾಹತಾ ಯಾಪರೀ । ವಸ್ತೂವೇಗಳೇ ತಿಳಭರೀ । ಕಾಂಹೀ ನ ದಿಸೇ ಬಾಹೇರೀ । ನಿಜನಿರ್ಧಾರೀ ವಿಚಾರಿತಾ ॥೨೩೬॥ ಪೃಥ್ವೀಪಾಸೂನಿ ಪ್ರಕೃತೀವರೀ । ಲಯೋ ಪಾಹತಾ ಪ್ರತಿಲೋಮೇಕರೀ । ಜೇವೀ ಜಳಗಾರಾ ಜಳಾಭೀತರೀ । ತೇವೀ ಲಯೋ ಚಿನ್ಮಾತ್ರೀ ತತ್ತ್ವಾಂಚಾ ॥೨೩೭॥ ಪ್ರಕೃತ್ಯಾದಿ ತತ್ತ್ವೇ ಪ್ರಬಳಲೀ । ವಿಕಾರೋನಿ ಲಯಾ ಗೇಲೀ । ವಸ್ತು ಅಲಿಪ್ತಪಣೇ ಸಂಚಲೀ । ನಾಹೀ ಮಾಖಲೀ ಅಣುಮಾತ್ರ ॥೨೩೮॥ ಏವಂ ಉತ್ಪತ್ತಿಸ್ಥಿತಿ ಪ್ರಳಯಾಂತ । ವಸ್ತು ಅವಿನಾಶೀ ಅಲಿಪ್ತ । ನಿತ್ಯ ಶುದ್ಧ ಬುದ್ಧ ಮುಕ್ತ । ಜಾಣ ನಿಶ್ಚಿತ ಉದ್ಧವಾ ॥೨೩೯॥ ಐಶಾ ವಸ್ತೂಚ್ಯಾ ಭವಜಲ್ಪ । ತೋ ಜಾಣ ಪಾ ಮಿಥ್ಯಾ ಆರೋಪ । ಜೇವೀ ದೋರಾಅಂಗೀ ಸರ್ಪ । ವೃಥಾ ಭಯಕಂಪ ಭ್ರಾಂತಾಸೀ ॥೨೪೦॥ ಸರ್ಪ ದವಡೋನಿ ದೋರ ಶುದ್ಧ । ಕರಾವಾ ಐಸಾ ನಾಹೀ ಬಾಧ । ಏಕಲಾ ಏಕ ಪರಮಾನಂದ । ಐಸೇ ಗೋವಿಂದ ಬೋಲಿಲಾ ॥೨೪೧॥ ಐಶಿಯೇ ವಸ್ತೂಚ್ಯಾ ಠಾಯೀ ಜಾಣ । ಮನ ವಿಸರೇ ಮನಪಣ । ಯೇಣೇ ಸಾಧನೇ ಪೈ ಜಾಣ । ಹೋಯ ಬ್ರಹ್ಮ ಪೂರ್ಣ ಸಾಧಕು ॥೨೪೨॥ ಹೇ ಪರಮ ಅಗಾಧ ಸಾಧನ । ಜ್ಯಾಸಿ ನಾಟೋಪೇ ಗಾ ಜಾಣ । ತ್ಯಾಚೇ ನಿಶ್ಚಳ ವ್ಹಾವಯಾ ಮನ । ಸುಗಮ ಸಾಧನ ದೇವೋ ಸಾಂಗೇ ॥೨೪೩॥

ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ । ಮನಸ್ತ್ಯಜತಿ ದೌರಾತ್ಮ್ಯಂ ಚಿಂತಿತಸ್ಯಾನುಚಿಂತಯಾ ॥೨೩॥

ಅರ್ಥ:- ಯಾವ ಪುರುಷನು ವಿರಕ್ತನಾಗಿರುವನೋ, ಯಾರಿಗೆ ಸಂಸಾರ ಪದಾರ್ಥಗಳಲ್ಲಿ ದುಃಖ ತೋರವುದೋ, ಆತನು ತನ್ನ ಗುರುಗಳ ಉಪದೇಶವನ್ನು ತಿಳಿದುಕೊಂಡು ಪುನಃ ಪುನಃ ತನ್ನ ಸ್ವರೂಪದ ಚಿಂತನೆಯನ್ನು ಮಾಡುವನು. ಈ ಅಭ್ಯಾಸದಿಂದ ತೀವ್ರವಾಗಿ ಆತನ ಮನವು ಚಂಚಲತೆಯನ್ನು ಅನಾತ್ಮ ಶರೀರದಲ್ಲಿ ಮಾಡಿದ ಅಲ್ಪಬುದ್ಧಿಯನ್ನು ಬಿಟ್ಟುಬಿಡುವುದು.

ಅದರಂತೆಯೇ ಉತ್ಪತ್ತೀ, ಸ್ಥಿತೀ ಮತ್ತು ಪ್ರಳಯ ಇವುಗಳ ಕೊನೆಯಲ್ಲಿ ಪರಬ್ರಹ್ಮವು ಅಲಿಪ್ತತೆಯಿಂದ ಖಾಯಮ್ ಇರುವುದು. ಹೇ ಉದ್ಧವಾ ಈ ವಿಷಯದ ಚಿಂತನೆಯನ್ನು ನಾನೀಗ ನಿನ್ನ ಮುಂದೆ ಪ್ರಕಟ ಮಾಡುವೆನು ॥೨೩೨॥ ಕುಂಬಾರನು ತಯಾರಿಸುತ್ತಿರುವ ಪಾತ್ರೆಗಳೆಲ್ಲವೂ ಯಾವಾಗಲೂ ಮಣ್ಣಿನಿಂದಲೇ ವ್ಯಾಪಿಸಿರುವುವು. ಅದರಂತೆ ಉತ್ಪನ್ನವಾಗುತ್ತಿರುವ ಸರ್ವತತ್ವಗಳು ಪರಬ್ರಹ್ಮದಿಂದಲೇ ವ್ಯಾಪಿಸಿರುವುವು ॥೨೩೩॥ ಸಮುದ್ರದಲ್ಲಿ ಬರುವ ಎಲ್ಲ ತೆರೆಗಳ ಒಳಹೊರಗೆ ಕೇವಲ ನೀರೇ ಇರುವುದು. ಅದರಂತೆ ಮಹತ್‌ತತ್ವದಿಂದ ಹಿಡಿದು ದೇಹದವರೆಗೆ ಒಳಹೊರಗೆ ಕೇವಲ ಚಿತ್‌ಸ್ವರೂಪವೇ ಇರುವುದು ॥೨೩೪॥ ಅಥವಾ ಉತ್ಪನ್ನವಾಗುತ್ತಿರುವ ಸರ್ವ ಪದಾರ್ಥಗಳ ಒಳಹೊರಗೆ ಆಕಾಶವು ವ್ಯಾಪಿಸಿಕೊಂಡಿರುವುದು. ಅದರಂತೆ ಯಾವ ಯಾವ ತತ್ವಗಳು ಉತ್ಪನ್ನವಾಗುತ್ತಿರುವುವೋ ಅವೆಲ್ಲವೂ ಚೈತನ್ಯ ಸ್ವರೂಪದಿಂದಲೇ ವ್ಯಾಪಿಸಿರುವುವು ॥೨೩೫॥ ಈ ಪ್ರಕಾರವಾಗಿ ಅನುಲೋಮರೀತಿಯಲ್ಲಿ ನೋಡಿದರೆ ವಿಚಾರದ ಕೊನೆಯಲ್ಲಿ ಪರಬ್ರಹ್ಮಕ್ಕಿಂತ ಭಿನ್ನವಾಗಿ ತಿಲಮಾತ್ರವೂ ಏನೊಂದೂ ಕಾಣುವುದಿಲ್ಲ ॥೨೩೬॥ ಇದರ ಉಲಟಾ ಕ್ರಮದಿಂದ ಪೃಥ್ವಿಯಿಂದ ಪ್ರಕೃತಿವರೆಗೆ ಆಗುತ್ತಿರುವ ಲಯವನ್ನು ನೋಡುತ್ತಿದ್ದರೆ ಯಾವ ಪ್ರಕಾರವಾಗಿ ನೀರಿನಿಂದ ಸಿದ್ಧಗೊಂಡ ಮಂಜುಗಡ್ಡೆಯ ಲಯವು ನೀರಿನಲ್ಲಿಯೇ ಆಗುವುದು. ಅದರಂತೆ ಸರ್ವ ತತ್ವಗಳ ಲಯವೂ ಕೂಡ ಚಿತ್‌ಸ್ವರೂಪದಲ್ಲಿ ಆಗುತ್ತಿರುವುದು ॥೨೩೭॥ ಪ್ರಕೃತಿಯಿಂದ ಸರ್ವ ತತ್ವಗಳು ಪ್ರಬಲವಾಗುವುವು ಮತ್ತು ವಿಕಾರಗಳಿಂದ ಅವುಗಳ ಲಯವಾಗುವುದು. ಆದರೆ ಅವುಗಳಲ್ಲಿರುವ ಬ್ರಹ್ಮತತ್ವವು ಮಾತ್ರ ಅಲಿಪ್ತತನದಿಂದಲೇ ಖಾಯಮ್‌ವಾಗಿ ಇರುವುದು. ಅದು ಸ್ವಲ್ಪವೂ ಕೂಡ ಲಿಪ್ತವಾಗುವುದಿಲ್ಲ ॥೨೩೮॥ ಹೇ ಉದ್ಧವಾ, ಈ ಪ್ರಕಾರವಾಗಿ ಬ್ರಹ್ಮತತ್ವವು ಉತ್ಪತ್ತೀ ಸ್ಥಿತೀ ಮತ್ತು ಪ್ರಳಯಗಳಾದರೂ ಸಹ ತಾನು ಅವಿನಾಶಿಯಾಗಿ ಅಲಿಪ್ತವಾಗಿಯೇ ಇರುವುದು. ಇದು ನಿತ್ಯ, ಶುದ್ಧ, ಬುದ್ಧ, ಮುಕ್ತ ಸ್ವಭಾವದ್ದಾಗಿರುವುದು. ಇದರ ತಿಳುವಳಿಕೆಯನ್ನಿಡು ॥೨೩೯॥ ಇಂತಹ ಪರಬ್ರಹ್ಮನಲ್ಲಿ ಸಂಸಾರದ ಕಲ್ಪನೆಯು ಇದು ಕೇವಲ ಮಿಥ್ಯಾ ಆರೋಪವಾಗಿರುವುದು. ಯಾವ ಪ್ರಕಾರವಾಗಿ ಭ್ರಾಂತನಾದ ಮನುಷ್ಯನು ಹಗ್ಗಕ್ಕೆ ಸರ್ಪವೆಂದು ತಿಳಿದು ಗಡಗಡನೇ ನಡುಗುತ್ತಿರುವನು ॥೨೪೦॥ ಈ ಯಾವ ಸರ್ಪಕ್ಕೆ ಹೊರಗೆ ಹಾಕಿ ಹಗ್ಗವನ್ನು ಶುದ್ಧ ಮಾಡುವುದಕ್ಕೆ ಯಾವ ಬಾಧೆ ಇರುವುದಿಲ್ಲ. (ಬ್ರಹ್ಮರೂಪ ಹಗ್ಗದಲ್ಲಿ ಜಗದ್ರೂಪ ಸರ್ಪವು ಎಂದಿಗೂ ಆಗಿಯೇ ಇಲ್ಲವೆಂಬ ತಾತ್ಪರ್ಯವು) ಅದರಂತೆ ಎಲ್ಲಿ ನೋಡಿದೆಲ್ಲ ಅಲ್ಲಿ ಒಂದೇ ಪರಮಾನಂದವು ತುಂಬಿರುವುದು. ಹೀಗೆಂದು ಶ್ರೀಕೃಷ್ಣನು ಹೇಳಿದನು ॥೨೪೧॥ ಇಂತಹ ಪರಬ್ರಹ್ಮಸ್ವರೂಪದಲ್ಲಿ ಮನವೂ ಕೂಡ ಮನವನ್ನು ಮರೆಯುವುದು. ಮತ್ತು ಈ ಸಾಧನೆಯಿಂದ ಸಾಧಕನೂ ಕೂಡ ಪೂರ್ಣ ಬ್ರಹ್ಮಸ್ವರೂಪನಾಗುವನು ॥೨೪೨॥ ಈ ಪರಮ ಶ್ರೇಷ್ಠ ಸಾಧನೆಯು ದುರ್ಗಮವಾಗಿರುವುದು. ಇದನ್ನು ಯಾರಿಗೆ ಸಾಧ್ಯ ಮಾಡುವುದಾಗುವುದಿಲ್ಲವೋ, ಆತನ ಮನವನ್ನು ಸ್ಥಿರಗೊಳಿಸಲು ಸುಲಭ ಉಪಾಯವನ್ನು ಶ್ರೀಹರಿಯು ಹೇಳುವನು ॥೨೪೩॥

ಜನ್ಮ ಮರಣಾಂಚೇ ಮಹಾ ಆವರ್ತ । ಭೋಗಿತಾ ವೈರಾಗ್ಯೇ ಅತಿಸಂತಪ್ತ । ಅತಏವ ವಿಷಯೀ ವಿರಕ್ತ । ಜೈಸೇ ವಿಷಯುಕ್ತ ಪರಮಾನ್ನ ।।೨೪೪।। ಮಘಮಘೀತ ಅಮೃತಫಳ । ತ್ಯಾವರೀ ಸರ್ಪೇ ಘಾತಲೀ ಗರಳ । ತೇವೀ ವಿಷಯಮಾತ್ರೀ ಸಕಳ । ದೇಖೇ ಕೇವಳ ಮಹಾಬಾಧಾ ।।೨೪೫।। ಐಸೇನಿ ವಿವೇಕೇ ವಿವೇಕವಂತ । ಶ್ರದ್ಧಾ ಪೂರ್ವಕ ಗುರುಭಕ್ತ । ಗುರೂನೇ ಸಾಂಗಿತಲಾ ಜೋ ಅರ್ಥ । ತೋ ಹೃದಯಾತ ವಿಸರೇನಾ ।।೨೪೬।। ಗುರೂನೇ ಬೋಧಿಲಾ ಜೋ ಅರ್ಥ । ತೋ ಸದಾ ಹೃದಯೀ ಅಸೇ ಧ್ಯಾತ । ಚಿತ್ತೀ ಚಿಂತಿಲಾಚಿ ಜೋ ಅರ್ಥ । ತೋಚಿ ಅಸೇ ಚಿಂತಿತ ಪುನಃ ಪುನಃ ।।೨೪೭।। ಕರಿತಾ ಪ್ರತ್ಯಗ್‌ವೃತ್ತೀ ಚಿಂತನ । ಸಂಕಲ್ಪ ವಿಕಲ್ಪ ಸಾಂಡೀ ಮನ । ತ್ಯಜೋನಿಯಾ ದೇಹಾಭಿಮಾನ । ಬ್ರಹ್ಮಸಂಪನ್ನ ಸ್ವಯೇ ಹೋಯ ।।೨೪೮।। ಝಾಲಿಯಾ ಬ್ರಹ್ಮಸಂಪನ್ನ । ಸ್ವರೂಪೀ ಲೀನ ಹೋಯ ಮನ । ಹಾಹೀ ಏಕ ಉಪಾವೋ ಜಾಣ । ನ ಠಾಕೇ ತರೀ ಆನ ಅವಧಾರೀ ।।೨೪೯।।

ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ । ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗ್ಯಂ ಸ್ಮರೇನ್ಮನಃ ।।೨೪।।

ಅರ್ಥ:- ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧೀ ಹೀಗೆ ಯೋಗ ಮಾರ್ಗದಿಂದ ವಸ್ತುತ್ವದ ನಿರೀಕ್ಷಣೆ-ಪರಿವೀಕ್ಷಿಣೆ ಮಾಡುವ ಆತ್ಮವಿದ್ಯೆ, ಹಾಗೆಯೇ ನನ್ನ ಪ್ರತಿಮೆಯ ಉಪಾಸನೆ, ಅರ್ಥಾತ್ ಕರ್ಮಯೋಗ, ಜ್ಞಾನಯೋಗದಿಂದ ಮನವು ಪರಮೇಶ್ವರನ ಚಿಂತನೆಯನ್ನು ಮಾಡಲಾರಂಭಿಸುವುದು. ಇನ್ನು ಬೇರೆ ಯಾವ ಉಪಾಯವಿಲ್ಲ.

ತ್ಯಜೋನಿಯಾ ಸಕಳ ಭೋಗ । ಯಮನಿಯಮೇಸೀ ಯೋಗಮಾರ್ಗ । ಆಸನಸ್ಥ ಹೋಊನಿ ಚಾಂಗ । ದೇ ಮುದ್ರಾ ಸಾಂಜ್ಗ ''ಆಧಾರೀ'' ।।೨೫೦।। ತೇವ್ಹಾ ಅಪಾನ ಊರ್ಧ್ವಮುಖೇ ವಾಢೇ । ಜೋ ವರತಾ ''ಸ್ವಾಧೀಷ್ಠಾನಾ'' ಚಢೇ । ಪ್ರಾಣ ಪ್ರಾಣಾಯಾಮೇ ಅಡೇ । ತೋ ಮಾಗುತಾ ಮುರಡೇ ನಾಭಿಸ್ಥಾನಾ ।।೨೫೧।। ಸಮ ಹೋತಾ ಪ್ರಾಣಾಪಾನ । ಪಿಂಡಬ್ರಹ್ಮಾಂಡಾಚೇ ಶೋಧನ । ಸ್ವಯೇ ವಾಯು ಕರೀ ಗಾ ಆಪಣ। ಮಲಕ್ಷಾಲನ ಶರೀರೀ ।।೨೫೨।। ಕಫ ಪಿತ್ತ ದೋನ್ಹೀ ಖಾಯೇ । ನಾಡೀತೇ ಶೋಧಿತ ಜಾಯೇ । ಜುನೇ ಸಂಚಿತ ಮಲ ಪಾಹೇ । ತೇಹೀ ಲವಲಾಹೇ ನಿರ್ದಳೀ ।।೨೫೩।। ನವಲ ವಾಯೂಚೇ ಪ್ರಬಳ ಬಳ । ಪಿಂಡಬ್ರಹ್ಮಾಂಡೀಚೇ ಸಕಳ ಮಳ । ಧೋಊನಿ ಕರೀ ಗಾ ನಿರ್ಮಳ । ಪವಿತ್ರತಾ ಕೇವಳ ಮಹಾಯೋಗೇ ।।೨೫೪।।

ಜನ್ಮ ಮರಣದ ಭಯಂಕರವಾದ ತಿರುಗಣೆಯಲ್ಲಿ ಅನೇಕ ಪ್ರಕಾರದ ಕ್ಲೇಶಗಳನ್ನು ಭೋಗಿಸಿದ ನಂತರ ಜೀವವು ವೈರಾಗ್ಯದಿಂದ ಸಂತಪ್ತವಾಗುವುದು. ಮತ್ತು ಅದಕ್ಕೆ ವಿಷ ಹಾಕಿದ ಪಕ್ವಾನ್ನದಂತೆ ವಿಷಯಗಳಲ್ಲಿ ವಿರಕ್ತಿಯು ಪ್ರಾಪ್ತವಾಗುವುದು ।।೨೪೪।। ಉತ್ತಮ ಪ್ರಕಾರದ ಮಧುರವಾಗಿರುವ ಅಮೃತಫಲಕ್ಕೆ ಒಂದು ಸರ್ಪವು ಸುತ್ತಿಕೊಂಡಿರಲು ಆಗ ಆ ಫಲವನ್ನು ಸೇವಿಸಲು ಅಯೋಗ್ಯವಾಗುವುದು. ಅದರಂತೆ ಆತನು ವಿಷಯಗಳಿಂದ ಬಾಧೆಯಾಗುವುದು ಎಂದು ತಿಳಿಯುವನು ।।೨೪೫।। ಇಂತಹ ವಿವೇಕದಿಂದ ಆತನು ವಿವೇಕಿಯಾಗುವನು. ಗುರುಗಳ ಮೇಲೆ ಆತನ ಶ್ರದ್ಧೆ ವಿರುವುದು. ಗುರುಗಳು ಹೇಳಿರುವ ಜ್ಞಾನವು ಆತನ ಹೃದಯದಲ್ಲಿ ಬಿಂಬಿಸಿರುವುದು ।।೨೪೬।। ಗುರುಗಳು ಉಪದೇಶ ಮಾಡಿರುವುದನ್ನು ಆತನು ಅದರ ಧ್ಯಾನವನ್ನು ಯಾವಾಗಲೂ ತನ್ನ ಹೃದಯದಲ್ಲಿ ಮಾಡುತ್ತಿರುವನು. ಮತ್ತು ಮನಸ್ಸಿನಿಂದ ಮಾಡುತ್ತಿರುವ ಚಿಂತನೆಯ ಅರ್ಥವನ್ನು ಪುನಃ ಪುನಃ ಅದನ್ನು ಆತನು ಚಿಂತಿಸುತ್ತಿರುವನು ।।೨೪೭।। ಸತತವಾಗಿ ಪರಮಾತ್ಮನ ಚಿಂತನೆಯನ್ನು ಮಾಡುತ್ತಿರುವುದರಿಂದ ಮನವು ಸಂಕಲ್ಪ ವಿಕಲ್ಪಗಳನ್ನು ಬಿಟ್ಟುಬಿಡುವುದು. ತದನಂತರ ಆತನು ದೇಹಾಭಿಮಾನವನ್ನು ಬಿಟ್ಟು ಬ್ರಹ್ಮಸಂಪನ್ನನಾಗುವನು ।।೨೪೮।। ಈ ಪ್ರಕಾರವಾಗಿ ಆತನು ಬ್ರಹ್ಮಸಂಪನ್ನನಾಗುವುದರಿಂದ ಆತನ ಮನವು ಆತ್ಮಸ್ವರೂಪದಲ್ಲಿ ಲೀನವಾಗುವುದು. ಹೀಗೆ ಇದೊಂದು ಉಪಾಯವಾಗಿರುವುದು. ಒಂದು ವೇಳೆ ಇದನ್ನೂ ಕೂಡ ಸಾಧ್ಯ ಮಾಡಿಕೊಳ್ಳಲು ಕಠಿಣವೆನಿಸಿದರೆ ಪುನಃ ಬೇರೆ ಉಪಾಯವನ್ನು ಹೇಳುವೆನು, ಅದನ್ನು ಕೇಳು ।।೨೪೯।।

ಸರ್ವಪ್ರಕಾರಗಳ ವಿಷಯ ಭೋಗಗಳನ್ನು ತ್ಯಜಿಸಿ ಯಮ-ನಿಯಮಸಹ ಆಸನವನ್ನು ಹಾಕಿಕೊಂಡು ಯೋಗಮಾರ್ಗವನ್ನು ಹೇಗೆ ಸಾಧಿಸಬೇಕೆಂಬುವ ಇದರ ಸವಿಸ್ತಾರವನ್ನು ಕೇಳು. ಉತ್ತಮ ಆಸನದಲ್ಲಿ ಕುಳಿತುಕೊಂಡು ಮೂಲಾಧಾರ ಚಕ್ರದ ಮೇಲೆ ಲಕ್ಷವನ್ನಿಟ್ಟು ಮುದ್ರೆಯನ್ನು ಹಚ್ಚಬೇಕು ।।೨೫೦।। ಆ ಸಮಯದಲ್ಲಿ ಅಪಾನ ವಾಯುವು ಊರ್ಧ್ವಮುಖದಿಂದ ಸ್ವಾಧಿಷ್ಠಾನ ಚಕ್ರಕ್ಕೆ ಮುಟ್ಟುವವರೆಗೆ ಬೆಳೆಯುತ್ತಿರುವುದು. ಆದರೆ ಪ್ರಾಣಾಯಾಮದಿಂದ ಅದು ತಡೆಹಿಡಿದು ನಾಭಿಸ್ಥಾನದತ್ತ ಪುನಃ ಮರಳಿ ಬರುವುದು ।।೨೫೧।। ಆಗ ಪ್ರಾಣ ಮತ್ತು ಅಪಾನ ಇವು ಎರಡು ಸಮವಾದವೆಂದರೆ ಸ್ವತಃ ವಾಯುವು ಶರೀರದಲ್ಲಿನ ಮಲವನ್ನು ಇಲ್ಲದಂತೆ ಮಾಡಿ ಪಿಂಡ ಬ್ರಹ್ಮಾಂಡದ ಶೋಧನೆ ಅಂದರೆ ಶುದ್ಧಿಯನ್ನು ಮಾಡುತ್ತಿರುವುದು ।।೨೫೨।। ಕಫ ಮತ್ತು ಪಿತ್ತ ಇವುಗಳನ್ನು ತಿಂದುಬಿಡುವುದು ಮತ್ತು ಶರೀರದಲ್ಲಿ ನಾಡಿಗಳನ್ನು ಶುದ್ಧಮಾಡಲಾರಂಭಿಸುವುದು. ಬಹಳ ದಿನಗಳಿಂದ ಕೂಡಿರುವ ಮಲವನ್ನೂ ಸಹ ತೀವ್ರವಾಗಿ ಸ್ವಚ್ಛಮಾಡಿಬಿಡುವುದು ।।೨೫೩।। ವಾಯುವಿನ ಸಾಮರ್ಥ್ಯವು ಮಹತ್ತರವಾಗಿರುವುದು, ವಿಲಕ್ಷಣವಾಗಿರುವುದು ಅದು ಪಿಂಡ ಬ್ರಹ್ಮಾಂಡದಲ್ಲಿನ ಸಮಸ್ತ ಹೊಲಸನ್ನು ಒಗೆದು ನಿರ್ಮಲವನ್ನಾಗಿ ಮಾಡುವುದು. ಇಷ್ಟೊಂದು ಪವಿತ್ರತೆಯು ಕೇವಲ ಈ ಮಹಾಯೋಗದಿಂದ ಮಾತ್ರ ಆಗುವುದು ।।೨೫೪।।

ತೇಥೇ ಪ್ರಗಟೇ ರೋಗಾಚೀ ಪರವಡೀ । ಮಹಾವಿಘ್ನಾಂಚೀ ಪಡೇ ಉಡೀ । ಧಾಂವತೀ ವಿಕಲ್ಪಾಚ್ಯಾ ಕೋಡೀ । ಸಿದ್ಧೀಂಚೀ ರೋಕಡೀ ನಾಗವಣ ಪಾಹೇ ।೨೫೫॥ ಇತುಕೀ ಅಂಗೀ ಆದಳತಾ ಜಾಣ । ಸಾಧಕ ನ ಸಾಂಡೀ ಜೈ ಆಂಗವಣ । ತೈ ಸಮ ಹೋತೀ ಪ್ರಾಣಾಪಾನ । ಸತ್ಯ ಜಾಣ ಉದ್ಧವಾ ।೨೫೬॥ ಪ್ರಾಣಾಪಾನ್ಯಾಂಚ್ಯಾ ಮಿಳಣೀ । ಶಕ್ತಿ ಚೇತವೇ ಕುಂಡಲಿನೀ । ತೇ ಪ್ರಾಣಾಪಾನಾಂತೇ ಘೇಊನಿ । ಸುಷುಮ್ನಾಸ್ಥಾನೀ ಪ್ರವೇಶೇ ।೨೫೭॥ ತೇ ಆದ್ಯಶಕ್ತಿ ಅಚಾಟ । ಚಢೇ ಪಶ್ಚಿಮೇಚಾ ಮಹಾಘಾಟ । ತೇಥೇ ಷಡ್‌ಚಕ್ರಾಂಚಾ ಕಡಕಡಾಟ । ಪೂರ್ವೀಚ ಸಪಾಟ ಪವನೇ ಕೇಲಾ ।೨೫೮॥ ಕುಂಡಲೀನೀ ಚಾಲತಾ ವಾಟಾ । ಚುಕಲ್ಯಾ ಆಧಿವ್ಯಾಧೀಂಚ್ಯಾ ಲಾಟಾ । ಬುಜಾಲ್ಯಾ ವಿಕಲ್ಪಾಂಚ್ಯಾ ವಾಟಾ । ಮಹಾವಿಘ್ನಾಂಚ್ಯಾ ಝುಟಾ ಬಾಧೂ ನ ಶಕತೀ ।೨೫೯॥ ಸಾಧಿತಾ ಉಲ್ಥಾಟಶಕ್ತೀಚೇ ಉಲಟ । ಉಘಡೇ ಬ್ರಹ್ಮರಂಧ್ರೀಂಚೇ ಕಪಾಟ । ತಂವ ಲೋಟಲೇ ಸಹಸ್ರ ದಳಾಚೇ ಪಾಟ । ಅತಿಚೋಖಟ ಚಂದ್ರಾಮೃತ ।೨೬೦॥ ತೇ ಪ್ರಾಶೂನಿ ಕುಂಡಲಿನೀ ಬಾಳಾ । ಸಂತೋಷೇ ಸಾಂಡೀ ಗರಳಾ । ತೇ ಶರೀರೀ ವೋತಿಲೀ ಕಳಾ । ತೇಣೇ ಪಾಲಟಲಾ ದೇಹಭಾವ ।೨೬೧॥ ಶರೀರಾಕಾರೇ ವೋತಿಲೀ ಕಳಾ । ತೇಣೇ ದೇಹೋದಿಸೇ ಅತಿಸೋಜ್ಜ್ವಳಾ । ನಾ ತೋ ಬ್ರಹ್ಮರಸಾಚಾ ಪುತಳಾ । ಕೀ ಉಮಲಲಾ ಕಳಾ ಶಾಂತಿಸುಖಾಚಾ ।೨೬೨॥ ಜೀವಾಚೇ ಜೀವನ ಮುಸಾವಲೇ । ಕೀ ಬ್ರಹ್ಮವಿದ್ಯೇಸೀ ಫಳ ಆಲೇ । ನಾ ತೇ ಚೈತನ್ಯಾ ಕೋಂಬ ನಿಘಾಲೇ । ತೈಸೇ ಶೋಭಲೇ ಅವಯವ ।೨೬೩॥ ತ್ಯಾ ದೇಹಾಚೇನಿ ಲಾಘವೇ । ಜಗಾಚ್ಯಾ ಡೋಳಾ ಸಾಮಾವೇ । ಜೀವಾಮಾಜೀ ವಾವರೋ ಪಾವೇ । ನಿಜಸ್ವಭಾವೇ ಸಬಾಹ್ಯ ।೨೬೪॥ ತೋ ಪವನಾಚೀ ಕರೋನಿ ಪಾಯರೀ । ಸುಖೇ ಚಾಲೇ ಗಗನಾವರೀ । ಯಾ ನಾಂವ ಪರಮ ''ಖೇಚರೀ'' । ಸಿದ್ಧೇಶ್ವರೀ ಬೋಲಿಜೇ ।೨೬೫॥ ತ್ಯಾಚಿಯಾ ಅಂಗೀಚಿಯಾ ದೀಪ್ತೀ । ಖದ್ಯೋತಪ್ರಾಯ ಗಭಸ್ತೀ । ತ್ಯಾಚೇ ಚರಣಾಮೃತ ವಾಂಛಿತೀ । ಅಮರಪತಿ ಇಂದ್ರಚಂದ್ರ ।೨೬೬॥ ಕ್ರಮೂನಿ ಔಟಪೀಠ ಗೋಲ್ಹಾಟ । ಭ್ರಮರಗುಂಪಾದಿ ಶೇವಟ । ಭೇದೂನಿ ಸೋಹಂಹಂಸಾಚೇ ಪೀಠ । ಪರಮಾತ್ಮಾ ಪ್ರಕಟ ಹೋಊನಿ ಠಾಕೇ ।೨೬೭॥ ಹಾ ಯೋಗಾಭ್ಯಾಸೇ ಯೋಗ ಗಹನ । ಅವಚಟೇ ಕೋಣಾ ಸಾಧೇ ಜಾಣ । ಹಾ ಮಾರ್ಗ ಗಾ ಅತಿಕಠಿಣ । ಸ್ವಯೇ ಶ್ರೀಕೃಷ್ಣ ಬೋಲಿಲಾ ।೨೬೮॥

ಆದರೆ ಆ ಸಮಯಕ್ಕೆ ಅನೇಕ ರೋಗಗಳು ಪ್ರಕಟವಾಗುವುವು. ಮಹಾ ವಿಘ್ನಗಳು ನಿರ್ಮಾಣವಾಗುವುವು. ಅಸಂಖ್ಯ ಪ್ರಕಾರದ ವಿಕಲ್ಪಗಳು ಧಾವಿಸಿ ಬರುತ್ತಿರುವುವು ಮತ್ತು ಸಿದ್ಧಿಗಳ ಶೋಷಣೆಯೂ ಕೂಡ ತಪ್ಪದೇ ಒದಗುವುದು ।೨೫೫॥ ಹೇ ಉದ್ಧವನೇ, ಇಷ್ಟೊಂದು ಸರ್ವ ವಿಘ್ನಗಳು ಬಂದು ಮೈಮೇಲೆ ಬಿದ್ದರೂ ಕೂಡ ಸಾಧಕನು ತನ್ನ ಧೈರ್ಯವನ್ನು ಬಿಡುವುದಿಲ್ಲ. ಆಗ ಪ್ರಾಣ ಅಪಾನಗಳು ಸರಿಸಮಾನವಾಗುವುವು. ಇದು ಪೂರ್ಣ ಸತ್ಯವಾಗಿರುವುದು ।೨೫೬॥ ಪ್ರಾಣ ಅಪಾನಗಳು ಸಮಾನವಾಗುತ್ತಲೇ ಕುಂಡಲನೀ ನಾಮದ ಶಕ್ತಿಯು ಜಾಗೃತವಾಗುವುದು. ಅದು ಪ್ರಾಣಾಪಾನವನ್ನು ತೆಗೆದುಕೊಂಡು ಸುಷುಮ್ನಾ ನಾಡಿಯಲ್ಲಿ ಪ್ರವೇಶವನ್ನು ಮಾಡುವುದು ।೨೫೭॥ ಈ ಆದ್ಯಶಕ್ತಿಯು ಅತಿಶಯವಾಗಿ ಪ್ರಬಲವಾಗಿರುವುದು. ಅದು ಪಶ್ಚಿಮದ ಕಠಿಣವಾದ ಘಟ್ಟವನ್ನು ಏರುತ್ತಿರುವುದು. ಆ ಸಮಯದಲ್ಲಿ ವಾಯುವು ಷಡ್‌ಚಕ್ರಗಳ ಕಡಕಡಾಟ ಮುರಿದು ಅದರ ಮಾರ್ಗವನ್ನು ಸರಿಯಾಗಿ ಇಡುವುದು ।೨೫೮॥ ಆ ಮಾರ್ಗದಿಂದ ಕುಂಡಲಿನಿಯು ಮೇಲಕ್ಕೆ ಹೋಗುತ್ತಿರುವುದು. ಆ ಮಾರ್ಗದಲ್ಲಿನ ಆದಿವ್ಯಾಧಿಯ ಮಾರ್ಗಗಳು ಮುಚ್ಚಲ್ಪಡುವುವು ವಿಕಲ್ಪಗಳ ಮಾರ್ಗವು ಪರಿಪೂರ್ಣವಾಗಿ ಮುರಿದು ಬೀಳುವುದು. ಆಗ ಮಹಾ ಮಹಾ ವಿಘ್ನಗಳ ಹಾವಳಿಯು ಬಾಧಿಸಲು ಸಾಧ್ಯವಾಗುವುದಿಲ್ಲ ।೨೫೯॥ ಉಲ್ಥಾಟ ಶಕ್ತಿಯ ಉಲ್ಲಂಘನೆಯಾಗುತ್ತಲೇ ಬ್ರಹ್ಮರಂಧ್ರದ ದ್ವಾರವು ತೆರೆಯುವುದು. ತದನಂತರ ಸಹಸ್ರದಳ ಕಮಲದಿಂದ ಚಂದ್ರಾಮೃತದ ಮಧುರವಾದ ಝರೀಗಳು ಹರಿಯಲಾರಂಭಿಸುವುವು ।೨೬೦॥ ಆ ಅಮೃತವನ್ನು ಸುಕುಮಾರೀ ಕುಂಡಲಿನಿಯು ಪ್ರಾಶನ ಮಾಡುವುದು ಮತ್ತು ಸಂತೋಷದಿಂದ ತೇಗಿಬಿಡುವುದು. ಇದರಿಂದ ಶರೀರದಲ್ಲಿ ಕಾಂತಿಯು ವೃದ್ಧಿಯಾಗುವುದು. ಮತ್ತು ದೇಹಭಾವವು ಸಂಪೂರ್ಣವಾಗಿ ಬದಲಾಗಿಬಿಡುವುದು ।೨೬೧॥ ಶರೀರದ ಆಕಾರದಿಂದ ತೇಜವೇ ತುಂಬಿಕೊಂಡಂತೆ ಆತನ ದೇಹವು ಅತಿ ಸೋಜ್ವಳವಾಗಿ ತೋರುತ್ತಿರುವುದು. ಆತನು ಬ್ರಹ್ಮರಸದ ಮೂರ್ತಿಯಂತೆ ಅಥವಾ ಶಾಂತಿಸುಖದ ಅರಳಿದ ಮೊಗ್ಗೆಯಂತೆ ಕಾಣುತ್ತಿರುವನು ।೨೬೨॥ ಆತನ ಅವಯಗಳ ವರ್ಣನೆಯನ್ನು ಹೇಗೆ ಮಾಡಬೇಕು? ಜೀವದ ಜೀವನವೇ ತುಂಬಿಕೊಂಡಂತೆ, ಅಥವಾ ಬ್ರಹ್ಮವಿದ್ಯೆಗೆ ಫಲ ಬಂದಂತೆ, ಚೈತನ್ಯಕ್ಕೆ ಅಂಕುರಗಳು ಚಿಗುರಿದಂತೆ ಆತನ ಅವಯುವಗಳು ಶೋಭಿಸುತ್ತಿರುವುವು ।೨೬೩॥ ಆತನ ದೇಹದ ಮೋಹಕವು ನೋಡುವವರ ಕಣ್ಣುಗಳಿಗೆ ತಕ್ಷಣ ನಟ್ಟಿಕೊಳ್ಳುವುದು. ಸ್ವಭಾವದಂತೆ ಆತನು ಜೀವಿಗಳಲ್ಲಿ ಸಬಾಹ್ಯವಾಗಿ ವರ್ತಿಸುತ್ತಿರುವನು ।೨೬೪॥ ಆತನು ವಾಯುವನ್ನೇ ಪಾವುಟಣಗಿಯನ್ನಾಗಿ ಮಾಡುವನು ಮತ್ತು ಸಹಜವಾಗಿಯೇ ಆಕಾಶದಲ್ಲಿ ನಡೆಯುತ್ತಿರುವನು. ಇದಕ್ಕೇನೇ ಶ್ರೇಷ್ಠವಾದ ಖೇಚರೀ ಮುದ್ರೆ, ಎಂದು ಸಿದ್ಧಪುರುಷರು ಹೇಳುವರು ।೨೬೫॥ ಆತನ ಅಂಗದ ತೇಜದ ಎದುರಿನಲ್ಲಿ ಪ್ರಕಾಶಮಾನವಾಗಿರುವ ಸೂರ್ಯಚಂದ್ರರು ಒಂದು ಮಿಂಚುಹುಳುವಿನಂತೆ ಕಾಣಿಸುವರು. ನಿತ್ಯವೂ ಅಮೃತದ ಪಾನವನ್ನು ಮಾಡುವವರಾದ ಇಂದ್ರಚಂದ್ರಾದಿ ದೇವತೆಗಳೂ ಕೂಡ ಆತನ ಚರಣಾಮೃತದ ಇಚ್ಛೆಯನ್ನು ಮಾಡುವರು ।೨೬೬॥ ಆತನು ಔಟಪೀಠ ಮತ್ತು ಗೋಲ್ಹಾಟಗಳನ್ನು ದಾಟಿ ಭ್ರಮರ ಗುಹೆದ ತುದಿಗೆ ಹೋಗಿ ಸೋಹಂ ಹಂಸದ ಪೀಠವನ್ನು ಭೇದಿಸಿ ಪರಮಾತ್ಮ ಸ್ವರೂಪನಾಗಿ ಪ್ರಕಟನಾಗಿಬಿಡುವನು ।೨೬೭॥ ಹೀಗೆ ಈ ಅಭ್ಯಾಸದಿಂದ ಪ್ರಾಪ್ತವಾಗುವ ಯೋಗವು ಅತಿಶಯವಾಗಿ ಕಠಿಣವಾಗಿರುವುದು. ಇದು ಯಾರೋ ಒಬ್ಬನಿಗೆ ಮಾತ್ರ ಲಭ್ಯವಾಗುವುದು. ಹೀಗೆ ಈ ಮಾರ್ಗವು ಕಠಿಣವಾಗಿದೆ ಎಂದು ಶ್ರೀಕೃಷ್ಣನು ಹೇಳುತ್ತಿರುವನು ।೨೬೮॥

ಹೇಚಿ ಮಾನತೇ ಶ್ರೀಕೃಷ್ಣನಾಥಾ । ತರೀ ಆನ ಸಾಧನ ನ ಸಾಂಗತಾ । ಹಾ ಮೂಳಶ್ಲೋಕಾರ್ಥ ಪಾಹಾತಾ । ಕಳೇಲ ತತ್ತ್ವತಾ ಸಾಧೂಂಸೀ ॥೨೭೯॥ ಹಾ ಐಕತಾ ಅತಿ ಗೋಡ ವಾಟೇ । ಪರೀ ಕರಿತಾ ಕಾಳೀಜ ಫಾಟೇ । ತರೀ ನ ಸಾಧೇಚಿ ಮಹಾಹಟೇ । ಯೇಥ ಠಕಲೇ ಲಾಠೇ ಸುರನರ ॥೨೮೦॥ ಅಸೋ ಹೇ ಅತ್ಯಂತ ಕಠಿಣ । ತುಜ ಮೀ ಸಾಂಗೇನ ಗಾ ಆನ । "ಆನ್ವೀಕ್ಷಿಕೀ" ವಿದ್ಯಾ ಜಾಣ । ತ್ವಂಪದಶೋಧನವಿವೇಕು ॥೨೮೧॥ ತತ್ತ್ವದಾಹೂನಿ ವೇಗಳಾ । ಪಾಂಚಭೌತಿಕ ತತ್ತ್ವಾಂಚಾ ಗೋಳಾ । ಚುಕೋನಿ ವ್ಯಾಪಕಾ ಸಕಳಾ । ಕೋಠೇ ನಿಪಜಲಾ ಏಕದೇಶೀ ॥೨೮೨॥ ಅನಾದಿ ಮಾಯಾಪ್ರವಾಹಯೋಗೇ । ತನ್ಮಾತ್ರವಿಷಯಸಂಗೇ । ಮನಾಚೇನಿ ಸಂಕಲ್ಪಸಾಂಗೇ । ವೇಗಳೇ ಸವೇಗೇ ಮಾನಲೇ ॥೨೮೩॥ ಮನೇ ಮಾನಿಲಾ ಜೋ ಭೇದು । ತ್ಯಾಸೀ ಕರಾವಾ ಅಭೇದಬೋಧು । ಯೇಚಿ ಅರ್ಥೀ ಸ್ವಯೇ ಗೋವಿಂದು । ವಿವೇಕ ವಿಶದು ದಾಖವೀ ॥೨೮೪॥ ಪಾಂಚಭೌತಿಕ ಶರೀರ ಖರೇ । ತೇಥ ಪೃಥ್ವೀ ಪ್ರತ್ಯಕ್ಷ ಜಳೀ ವಿರೇ । ಪೃಥ್ವೀಚಾ ಗಂಧ ಜಳೀ ಭರೇ । ತೈ ಪೃಥ್ವೀ ಸರೇ ನಿಃಶೇಷ ॥೨೮೫॥ ತ್ಯಾ ಜಳಾಚಾ ಜಳರಸು । ಶೋಧುನಿ ಜೈಫೇ ಹತಾಶು । ತೈ ಜಳಾಚಾ ಹೋಯ ಹ್ರಾಸು । ವಿರೇ ನಿಜನಿಃಶೇಷು ತೇಜತತ್ತ್ವೀ ॥೨೮೬॥ ತ್ಯಾ ತೇಜಾಚೇ ಕಾರಣರೂಪ । ಗಿಳೀ ವಾಯುಚಾ ಪೂರ್ಣ ಪ್ರತಾಪ । ತೇವ್ಹಾ ತೇಜಾಚೇ ಮಾವಳೇ ಸ್ವರೂಪ । ವಾಯೂಚೇ ಝುಡಪ ಲಾಗತಾ ॥೨೮೭॥ ತ್ಯಾ ವಾಯೂಚಾ ಸ್ಪರ್ಶ ಗುಣ । ನೇತಾ ಗಗನೇ ಹಿರೂನ । ತೇವ್ಹಾ ವಾಯೂಚೇ ನುರೇ ಭಾನ । ರಾಹೇ ಮುಸಾವೋನ ಗಗನಚಿ ॥೨೮೮॥ ಕೇವಳ ಗಗನಾ ನುರೇ ಉರೀ । ತೇ ಗುಣಕಾರ್ಯೇಸೀ ರಿಘೇ ಅಹಂಕಾರೀ । ಅಹಂಕಾರು ರಿಘೇ ಮಾಯೇಮಾಝಾರೀ । ಮಾಯಾ ಪರಮೇಶ್ವರೀ ಮಿಥ್ಯಾ ಹೋಯ ॥೨೮೯॥ ರಾತ್ರಿ ಆಪುಲಿಯಾ ಪ್ರೌಢೀ । ಅಂಧಾರಾತೇ ವಾಢವೀ ವಾಢೀ । ತೇಥ ನಕ್ಷತ್ರೇ ಖದ್ಯೋತ ಕೋಡೀ । ಮಿರವತೀ ಗಾಡಿ ನಿಜತೇಜೇ ॥೨೯೦॥ ತೇ ರಾತ್ರಿ ಯೇತಾ ಸೂರ್ಯಾಪುಢೇ । ಸ್ವಕಾರ್ಯೇಸೀ ಸಗಳೀ ಉಡೇ । ಪಾಹೋ ಜಾತಾ ಮಾಗೇಪುಢೇ । ಕೋಣೇಕಡೇ ಅಸೇನಾ ॥೨೯೧॥ ತೇವೀ ಪರಮೇಶ್ವರೀ ಮಾಯಾ । ಕಾರ್ಯಕಾರಣೇಸೀ ಗೇಲಿ ವಾಯಾ । ಮಿಥ್ಯಾತ್ವೇಚಿ ನ ಯೇ ಆಯಾ । ನುರೇಚಿ ದಿಸಾವಯಾ ಮಾಗಮೋಸು ॥೨೯೨॥

ಈ ಯೋಗ ಸಾಧನೆಯು ಶ್ರೀಕೃಷ್ಣನಿಗೆ ಮಾನ್ಯವಾಗಿದ್ದರೆ ಆತನು ಬೇರೆ ಸಾಧನೆಗಳನ್ನು ಹೇಳುತ್ತಲೇ ಇರಲಿಲ್ಲ. ಇದನ್ನು ಮೂಲ ಶ್ಲೋಕದ ಆಧಾರದಿಂದ ಸಜ್ಜನರಿಗೆ ಸಹಜವಾಗಿಯೇ ತಿಳಿಯುವುದು ॥೨೭೯॥ ಈ ಯೋಗವು ಕೇಳಲು ಅತಿಶಯವಾಗಿ ಆನಂದವಾಗುವುದು. ಆದರೆ ಅದರ ಆಚರಣೆಯನ್ನು ಮಾಡಲು ಹೋದರೆ ಎದೆಯು ಒಡೆದು ಹೋಗುವುದು. ಅದು ಅತ್ಯಂತ ಕ್ಲಿಷ್ಟವಿರುವುದರಿಂದ ಸಾಧ್ಯವಾಗುವುದಿಲ್ಲ. ಮಹಾ ಮಹಾ ಸುರನರರು ಈ ಯೋಗವನ್ನು ಸಾಧ್ಯಗೊಳಿಸಲು ಬಹುವಾಗಿ ದಣಿದುಕೊಂಡಿರುವರು ॥೨೮೦॥ ಈ ಕಠಿಣವಾದ ಸಾಧನೆಯ ಮಾತು ಈಗ ಇರಲಿ, ನಾನು ನಿನಗೆ ಬೇರೆ ಉಪಾಯವನ್ನು ಈಗ ಹೇಳುವೆನು, ಅದನ್ನು ಕೇಳು. ಅದು ಆನ್ವೀಕ್ಷಿಕೀ ವಿದ್ಯೆಯಾಗಿರುವುದು. ಇದರಲ್ಲಿ ತ್ವಂ ಪದವನ್ನು ಶೋಧಿಸುವ ವಿವೇಕವಿರುವುದು ॥೨೮೧॥ ಪಂಚಮಹಾಭೂತಾತ್ಮಕ ತತ್ತ್ವದ ಸಮೂಹವು ತತ್ ಪದದಿಂದ ಭಿನ್ನವಾಗಿರುವುದು. ಅದು ಸರ್ವವ್ಯಾಪಕತ್ವವನ್ನು ತಪ್ಪಿಸಿ ಎಲ್ಲಿಯೋ ಒಂದು ದೇಶದಲ್ಲಿ ಉಳಿದುಕೊಂಡಿರುವುದು ॥೨೮೨॥ ಅನಾದಿ ಮಾಯೆಯ ಪ್ರವಾಹದಿಂದ ಶಬ್ದ ಸ್ಪರ್ಶಾದಿ ವಿಷಯಗಳ ಸಂಗತಿಯನ್ನು ಅಂಟಿಕೊಂಡು ಮತ್ತು ಮನದ ಸಂಕಲ್ಪದಿಂದ ಅದರ ಅಂಗದಲ್ಲಿ ಭಿನ್ನತ್ವವು ಮಾಡಿಕೊಂಡಿರುವುದು ॥೨೮೩॥ ಭೇದ ಎಂಬುದು ನಿಜವಾಗಿಯೂ ಮನವೇ ಮನ್ನಿಸುತ್ತಿರುವುದು. ಆದ್ದರಿಂದ ಅದಕ್ಕೆ ಅಭೇದದ ಉಪದೇಶವನ್ನು ಮಾಡಬೇಕು. ಇದೇ ಅರ್ಥದ ವಿವೇಕವನ್ನು ಸ್ವತಃ ಶ್ರೀಕೃಷ್ಣನು ಸ್ಪಷ್ಟಮಾಡಿ ಹೇಳುತ್ತಿರುವನು ॥೨೮೪॥ ಶರೀರವು ಪಂಚಮಹಾಭೂತಾತ್ಮಕವಾಗಿ ಇದ್ದರೂ ಕೂಡ ಪೃಥ್ವಿಯು ಜಲದಲ್ಲಿ ಕರಗಿ ಹೋಗುವುದು. ಇದು ಪ್ರತ್ಯಕ್ಷವಾಗಿ ತೋರುವುದು. ಪೃಥ್ವಿಯ ಸ್ವಾಭಾವಿಕ ಗುಣವಾದ ಸುಗಂಧವು ಜಲದಲ್ಲಿ ತುಂಬಿರುವುದು ಮತ್ತು ಪೃಥ್ವಿಯು ಮೂಲತಃ ಇಲ್ಲದಾಗಿಬಿಡುವುದು ॥೨೮೫॥ ಜಲದಲ್ಲಿನ ಜಲರಸವನ್ನು ಅಗ್ನಿಯು ನುಂಗಿಬಿಡುವುದು. ಆಗ ಜಲವೂ ಕೂಡ ಹ್ರಾಸವಾಗುವುದು. ಆ ಜಲವು ತೇಜತತ್ತ್ವದಲ್ಲಿ ಕರಗಿ ಹೋಗುವುದು ॥೨೮೬॥ ಆ ತೇಜದ ಸ್ವಾಭಾವಿಕ ಗುಣವು ಹೀಗಿರುವುದನ್ನು ವಾಯುವಿನ ಪೂರ್ಣ ಪ್ರತಾಪವು ಅದನ್ನು ಪೂರ್ಣವಾಗಿ ನುಂಗಿಬಿಡುವುದು. ಹೀಗೆ ವಾಯುವಿನ ಹೊಡೆತವು ಬೀಳಲು ತೇಜದ ಪ್ರಖರ ಸ್ವರೂಪವು ಅಸ್ತಂಗತವಾಗುವುದು ॥೨೮೭॥ ಈ ಯಾವ ವಾಯುವಿನ ಸ್ವಾಭಾವಿಕ ಗುಣವಾಗಿರುವ ಸ್ಪರ್ಶವನ್ನು ಆಕಾಶವು ಕಸಿದುಕೊಳ್ಳುತ್ತಲೇ ವಾಯುವಿನ ಎಚ್ಚರವೇ ತಪ್ಪಿಹೋಗುವುದು. ಆಗ ಅದು ಆಕಾಶದಲ್ಲಿ ಲೀನವಾಗುವುದು ॥೨೮೮॥ ಒಂಟಿಯಾಗಿರುವ ಆಕಾಶದಲ್ಲಿ ಯಾವ ಸ್ವರೂಪವು ಇರುವುದಿಲ್ಲ. ಆದ್ದರಿಂದ ಅದು ಗುಣಕಾರ್ಯದಿಂದ ಅಹಂಕಾರದಲ್ಲಿ ಪ್ರವೇಶವನ್ನು ಮಾಡುವುದು. ಆ ಅಹಂಕಾರವು ಮಾಯೆಯಲ್ಲಿ ಸೇರಿಕೊಳ್ಳುವುದು. ಆ ಮಾಯೆಯ ಪರಮೇಶ್ವರನಲ್ಲಿ ಲೀನವಾಗುತ್ತಲೇ ಅದು ಮಿಥ್ಯೆಯಾಗಿಬಿಡುವುದು ॥೨೮೯॥ ರಾತ್ರಿ ಸಮಯವು ತನ್ನ ಪ್ರೌಢತ್ವದಿಂದ ಕತ್ತಲೇ ಕತ್ತಲಾಗಿ ಹಬ್ಬಿಸುತ್ತಿರುವುದು. ಆಗ ಕೋಟ್ಯಾವಧೀ ನಕ್ಷತ್ರಗಳು ಹಾಗೂ ಮಿಂಚು ಹುಳಗಳು ದೊಡ್ಡ ಡೌಲಿನೊಂದಿಗೆ ಮೆರೆಯುತ್ತಿರುವುವು ॥೨೯೦॥ ಆದರೆ ಇದೇ ರಾತ್ರಿಯು ಸೂರ್ಯನ ಎದುರಿಗೆ ಬರುತ್ತಲೇ ತನ್ನ ಕಾರ್ಯ ಸಹ ಸಂಪೂರ್ಣವಾಗಿ ಇಲ್ಲದಾಗಿಬಿಡುವುದು. ಹಿಂದೆ ಮುಂದೆ ಹುಡುಕಿ ನೋಡಿದರೂ ಅದು ಎಲ್ಲಿಯೂ ಕಾಣಸುವುದಿಲ್ಲ ॥೨೯೧॥ ಅದರಂತೆ ಈ ಮಾಯೆಯು ಪರಮೇಶ್ವರನಲ್ಲಿ ತನ್ನ ಕಾರ್ಯಕಾರಣ ಸಮೇತವಾಗಿ ಲೋಪವಾಗಿಬಿಡುವುದು. ಇದು ಮಿಥ್ಯೆಯಾಗಿರುವುದರಿಂದ ಅದರ ಸ್ವರೂಪದ ಯಾವ ಪತ್ತೆಯೂ ಹತ್ತುವುದಿಲ್ಲ ॥೨೯೨॥

ಮಾಯಾಪ್ರತಿಬಿಂಬಿತ ಚೈತನ್ಯಾ । ಆಣೀ ''ಜೀವ'' ಯಾ ಅಭಿಧಾನಾ । ತೇ ಮಾಯಾ ಗೇಲಿಯಾ ಜಾಣಾ । ಹೋಯ ಜೀವಪಣಾ ಹ್ರಾಸು ।೨೮೩॥ ಬುಡಾಲೇ ಜೀವ ಶಿವಾಂಚೇ ಭಾನ । ಉಡಾಲೇ ಮನಾಚೇ ಮನಪಣ । ಕೋಂದಲೇ ಚೈತನ್ಯಘನ । ಪರಮ ಸಮಾಧಾನ ಸಾಧಕಾ ।೨೮೪॥ ಕರಿತಾ ತ್ವಂಪದಾಚೇ ಶೋಧನ । ಹೋಯ ತತ್ಪದೀ ಸಮಾಧಾನ । ಹೇ ''ಆನ್ವೀಕ್ಷಿಕೀ ವಿದ್ಯಾ'' ಜಾಣ । ವಿವೇಕ ಸಂಪನ್ನ ಪಾವತೀ ।೨೮೫॥ ನ ಕರಿತಾ ಯೋಗಸಾಧನ । ನ ಲಗೇ ತ್ವಂಪದಾಚೇ ಶೋಧನ । ಯಾಹೋನಿ ಸುಲಭ ಸಾಧನ । ತುಜ ಮೀ ಆನ ಸಾಂಗೇನ ।೨೮೬॥ ಜೇಥ ಕಷ್ಟ ಕರಿತಾ ತರೀ ಥೋಡೇ । ಪರೀ ಯೋಗಾಚೇ ಸಕಳ ಫಳ ಜೋಡೇ । ತ್ವಂಪದಶೋಧನ ತ್ಯಾಪುಢೇ। ಹೋಯ ಬಾಪುಡೇ ಲಾಜೋನಿ ।೨೮೭॥ ತೇ ಮಾಝೀ ಗಾ ನಿಜಭಕ್ತಿ । ಮಾಝ್ಯಾ ರಾಮಕೃಷ್ಣಾದಿ ಜ್ಯಾ ಮೂರ್ತೀ । ಪೂಜಿತಾ ತ್ಯಾ ಅತಿಪ್ರೀತೀ । ಮೀ ಶ್ರೀಪತೀ ಸಂತೋಷೀ ।೨೮೮॥ ತೇಥೆ ಮಾಝೀ ಶ್ರವಣ ಮಾಝೀ ಕೀರ್ತನ । ಮಾಝೀ ನಾಮ ಮಾಝೀ ಸ್ಮರಣ । ಮಾಝೀ ಧ್ಯಾನ ಮಾಝೀ ಭಜನ । ಮಾಝೀ ಚಿಂತನ ಸರ್ವದಾ ।೨೮೯॥ ಹೃದಯೀ ಮಾಝೀ ಸದಾ ಧ್ಯಾನ। ಮುಖೀ ಮಾಝೀ ನಾಮ ಮಾಝೀ ಸ್ತವನ । ಶ್ರವಣೀ ಮಾಝೀ ಕಥಾ ಮಾಝೀ ಕೀರ್ತನ । ಕರೀ ಮಾಝೀ ಪೂಜನ ಸರ್ವದಾ ।೨೯೦॥ ಚರಣೀ ಪ್ರದಕ್ಷಿಣಾ ಯಾತ್ರಾಗಮನ । ಅಷ್ಟಾಂಗೀ ಸರ್ವದಾ ಮಾಝೀ ನಮನ । ಐಸೇ ಅನನ್ಯ ಮಾಝೀ ಭಜನ । ವಿನಟಲೇಪಣ ಮದ್ಭಕ್ತೀ ।೨೯೧॥ ಐಸೇ ವಿನಟಲೇ ಜೇ ಮಾಝೀ ಭಜನೀ । ತ್ಯಾಂಸೀ ಮೀ ವಿಕಲೋ ಚಕ್ರಪಾಣೀ । ತ್ಯಾವೇಗಳೇ ಪಢಿಯಂತೇ ಕೋಣೀ । ಆನ ತ್ರಿಭುವನೀ ಮಜ ನಾಹೀ ।೨೯೨॥ ಯಾಪರೀ ಕರಿತಾ ಮಾಝೀ ಭಜನ । ನ ಲಗೇ ಯೋಗಾಧಿಕಾಂಚೇ ಸ್ಮರಣ । ಮೀ ಭಕ್ತಿವೇಗಳಾ ಶ್ರೀಕೃಷ್ಣ । ನಾತುಡೇ ಜಾಣ ಉದ್ಧವಾ ।೨೯೩॥ ಅವಚಟೇ ದೈವಗತೀ ಯೇಥ । ಯೋಗಿಯಾಸೀ ಜೈ ಘಡೇ ದುರಿತ । ತೈ ತ್ಯಾಸೀ ನ ಲಗೇ ಕರ್ಮಪ್ರಾಯಶ್ಚಿತ್ತ । ತೇಚಿ ಸಾಂಗತ ಶ್ರೀಕೃಷ್ಣ ।೨೯೪॥

ಯದಿ ಕುರ್ಯಾತ್ ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್ ।
ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ ।೨೫॥

ಅರ್ಥ:- ಉದ್ಧವಾ, ಯೋಗಿಯು ಎಂದಿಗೂ ನಿಂದ್ಯ ಕರ್ಮವನ್ನು ಮಾಡಲಾರನು. ಆದರೆ ಆತನ ಕೈಯಿಂದ ಎಂದಾದರೂ ಅಪರಾಧವಾದರೆ ಆತನು ತನ್ನ ಯೋಗದ್ವಾರಾ ಪಾಪವನ್ನು ಕಳೆದುಕೊಳ್ಳಬೇಕು. ಕೃಚ್ಛ್ರ ಚಾಂದ್ರಾಯಣ ಇತ್ಯಾದಿ ಬೇರೆ ಪ್ರಾಯಶ್ಚಿತ್ತಗಳನ್ನು ಮಾಡಕೂಡದು.

ಮಾಯೆಯಲ್ಲಿ ಪ್ರತಿಬಿಂಬಿತವಾಗಿರುವ ಚೈತನ್ಯಕ್ಕೆ ಜೀವ ಎಂಬ ನಾಮವು ಪ್ರಾಪ್ತವಾಗಿರುವುದು. ಈ ಮಾಯೆಯೇ ಮೂಲತಃ ಇಲ್ಲದಾಗಲು ಆಗ ಜೀವತ್ವವು ಮುಗಿದುಹೋಗುವುದು ।೨೮೩॥ ಜೀವಶಿವರ ಭಾನವು ಇಲ್ಲದಾಗುವುದು. ಮನಸ್ಸಿನ ಮನತ್ವವು ಹೋಗಿಬಿಡುವುದು. ಸರ್ವವೂ ಚೈತನ್ಯ ಘನವಾಗಿ ತುಂಬಿಕೊಂಡಿರುವುದು. ಇದರಿಂದ ಸಾಧಕನಿಗೆ ಪರಮ ಸಮಾಧಾನವು ಲಭಿಸುತ್ತಿರುವುದು ।೨೮೪॥ ಈ ಪ್ರಕಾರವಾಗಿ ತ್ವಂಪದದ ಶೋಧನೆಯನ್ನು ಮಾಡಲು ಅದು ಸತ್‌ಪದದಲ್ಲಿ ಐಕ್ಯವಾಗುವುದು. ಇದಕ್ಕೇನೇ ಆನ್ವೀಕ್ಷಿಕೀ ವಿದ್ಯಾ ಎಂದು ಹೇಳುವರು. ಇದು ವಿವೇಕವಂತರಿಗೆ ಮಾತ್ರ ಸಾಧ್ಯವಾಗುತ್ತಿರುವುದು ।೨೮೫॥ ಯೋಗ ಸಾಧನೆಯ ಹೊರತಾಗಿ ಮತ್ತು ತ್ವಂಪದದ ಶೋಧನೆಯನ್ನು ಮಾಡದೇ ಸಾಧ್ಯವಾಗುವ ಬೇರೆ ಒಂದು ಸಾಧನೆವಿರುವುದು. ಈ ಸಾಧನೆಯು ಬಹುಸುಲಭವಾಗಿರುವುದು. ನಾನೀಗ ಅದನ್ನು ನಿನಗೆ ಹೇಳುವೆನು ।೨೮೬॥ ಯಾವುದರಲ್ಲಿ ಕಷ್ಟವು ಬಹಳ ಕಡಿಮೆ ಇರುವುದು ಮತ್ತು ಯೋಗದಷ್ಟೇ ಫಲವು ದೊರಕುವುದು. ಇದನ್ನು ಕಂಡು ತ್ವಂಪದದ ಶೋಧನೆಯು ಪಾಪ! ನಾಚಿಕೊಂಡು ದೀನವಾಗಿ ಮೂಲೆಗುಂಪಾಗುವುದು ।೨೮೭॥ ಇಂತಹ ಸಾಧನೆಯು ಯಾವುದೆಂದರೆ, ನನ್ನ ಶ್ರೇಷ್ಠವಾದ ಭಕ್ತಿಯಾಗಿರುವುದು! ನನ್ನ ರಾಮಕೃಷ್ಣಾದಿ ಮೂರ್ತಿಯ ಪೂಜೆಯನ್ನು ಅಂತಃಕರಣವಾಗಿ ಪ್ರೇಮದಿಂದ ಪೂಜಿಸಿದರೆ ಶ್ರೀಪತಿಯಾದ ನಾನು ಸಂತೋಷಪಡುವೆನು ।೨೮೮॥ ನನ್ನ ಶ್ರವಣ, ಕೀರ್ತನೆ, ನಾಮ ಮತ್ತು ಸ್ಮರಣೆ, ನನ್ನ ಧ್ಯಾನ ಮತ್ತು ಭಜನ-ಚಿಂತನೆಗಳನ್ನು ಸತತವಾಗಿ ಮಾಡುತ್ತಿರಬೇಕು ।೨೮೯॥ ಹೃದಯದಲ್ಲಿ ನಿರಂತರವಾಗಿ ನನ್ನ ಧ್ಯಾನವಿರಬೇಕು. ನನ್ನ ನಾಮದೊಂದಿಗೆ ನನ್ನನ್ನು ಸ್ತುತಿಸಬೇಕು. ನನ್ನ ಕಥೆ ಕೀರ್ತನೆಗಳ ಶ್ರವಣವನ್ನು ಮಾಡಬೇಕು. ಹೀಗೆ ಯಾವಾಗಲೂ ನನ್ನನ್ನು ಪೂಜಿಸಬೇಕು ।೨೯೦॥ ಎರಡು ಕೈಗಳು, ಎರಡು ಪಾದಗಳು, ಎರಡು ಮೊಣಕಾಲುಗಳು, ಹೃದಯ ಮತ್ತು ಮಸ್ತಕ ಇವುಗಳೊಂದಿಗೆ ಕೂಡಿದ ಎಂಟು ಅಂಗದಿಂದ ನನಗೆ ನಮಸ್ಕರಿಸಬೇಕು. ಈ ಪ್ರಕಾರವಾಗಿ ಏಕನಿಷ್ಠೆಯಿಂದ ನನ್ನ ಭಜನೆಯನ್ನು ಮಾಡುತ್ತ ನನ್ನ ಭಕ್ತಿಯಲ್ಲಿ ತಲ್ಲೀನರಾಗಬೇಕು ।೨೯೧॥ ಹೀಗೆ ನನ್ನ ಭಕ್ತರು ನನ್ನ ಭಜನೆಯಲ್ಲಿ ತನ್ಮಯರಾಗುವರು. ಚಕ್ರಪಾಣಿಯಾದ ನಾನು ನನ್ನನ್ನು ಅವರಿಗೆ ಮಾರಿಕೊಳ್ಳುವೆನು. ಸಂಪೂರ್ಣ ತ್ರಿಭುವನದಲ್ಲಿ ಅವರ ಹೊರತಾಗಿ ಬೇರೆ ಯಾರೂ ನನಗೆ ಅಧಿಕವಾಗಿ ಪ್ರಿಯರಾಗಿರುವುದಿಲ್ಲ ।೨೯೨॥ ಈ ಪ್ರಕಾರವಾಗಿ ನನ್ನ ಭಜನೆಯನ್ನು ಮಾಡಲು ಯೋಗಾದಿಕಗಳ ಸ್ಮರಣೆಯೂ ಕೂಡ ಉಳಿಯುವುದಿಲ್ಲ. ಹೇ ಉದ್ಧವಾ, ಶ್ರೀಕೃಷ್ಣನಾದ ನಾನು ಭಕ್ತಿವಿಲ್ಲದೇ ಎಂದಿಗೂ ಪ್ರಾಪ್ತನಾಗುವುದಿಲ್ಲ ।೨೯೩॥ ಯೋಗಿಗಳ ಕೈಯಿಂದ ದೈವಗತಿಯಿಂದ ಒಂದು ವೇಳೆ ಏನಾದರೂ ಪಾಪವು ಉಂಟಾದರೆ ಆತನಿಗೆ ಕರ್ಮ ಪ್ರಾಯಶ್ಚಿತ್ತವು ಬೇಕಾಗುವುದಿಲ್ಲವೆಂದು ಶ್ರೀಕೃಷ್ಣನು ಹೇಳುವನು ।೨೯೪॥

ಭಕ್ತಾಸೀ ನಿಂದ್ಯ ಕರ್ಮ ನ ಘಡೇ । ತ್ಯಾಸೀ ಮೀ ರಾಖಿತಾ ಮಾಗೇ ಪುಢೇ । ಹೇ ಆಲೇ ಗಾ ಯೋಗ್ಯಾಕಡೇ । ತೇಥಹೀ ಘಡೇ ಪ್ರಮಾದೇ ।।೯೫।। ಪ್ರಮಾದೇ ಘಡಲೇ ಜೇ ಪಾಪ । ತ್ಯಾಚಾ ತೀವ್ರ ಅನುತಾಪ । ಜೇವೀ ದಾವಾಗ್ನೀ ಪೋಳಲ್ಯಾ ಸರ್ಪ । ತೈಸಾ ಸಂಕಲ್ಪ ಪಾಪಾಸೀ ।।೯೬।। ಗೋಮಾಶೀ ಲಾಗತಾ ಸಿಂಹಾಸೀ । ತೋ ಜೇವಿ ಝಾಡೀ ಸರ್ವಾಂಗಾಸೀ । ತೇವೀ ಯೋಗೀ ದೇಖೋನಿ ಪಾಪಾಸೀ । ಜೋ ಅಹರ್ನಿಶೀ ಅನುತಾಪೀ ।।೯೭।। ತೇಣೇ ಹೋಊನಿ ಸಾವಚಿತ್ತ । ಯೋಗಬಳೇ ನಿಜಯೋಗಯುಕ್ತ । ಪಾಪ ನಿರ್ದಾಳಾವೇ ಸಮಸ್ತ । ಹೇಚಿ ಪ್ರಾಯಶ್ಚಿತ್ತ ಯೋಗಿಯಾಸೀ ।।೯೮।। ಹೇ ಸಾಂಡೋನಿಯಾ ಯೋಗಸ್ಥಿತೀ । ಜೈ ಲಾವೂ ಧಾಂವೇ ಶೇಣಮಾತೀ । ತೈ ನಾಗವಲಾ ಗಾ ನಿಶ್ಚಿತೀ । ನವ್ಹೇಚಿ ನಿಷ್ಕೃತೀ ಪಾಪಾಚೀ ।।೯೯।। ಹೃದಯೀ ನಾಹೀ ಅನುತಾಪವೃತ್ತೀ । ವರೀವರೀ ಗಾ ಶಾಸ್ತ್ರೋಕ್ತೀ । ಲಾವೂ ಜಾತಾ ಶೇಣಮಾತೀ । ನವ್ಹೇ ನಿವೃತ್ತೀ ಪಾಪಾಚೀ ।।೧೦೦।। ಮಾಝೇ ಕ್ಷಣಾರ್ಧ ಅನುಸಂಧಾನ । ಕೋಟಿ ಕಲ್ಮಷಾ ಕರೀ ದಹನ । ತೇಥ ಇತರಾಂಚಾ ಕೇವಾ ಕೋಣ । ಹೇ ಸ್ವಯೇ ಶ್ರೀಕೃಷ್ಣ ಬೋಲಿಲಾ ।।೧೦೧।। ಜ್ಯಾಚೇ ಅಧಿಕಾರೀ ಮಾಝೇ ಧ್ಯಾನ । ಸಾಂಡೋನಿಯಾ ಜಾಣ । ಪ್ರಾಯಶ್ಚಿತ್ತ ಸಾಂಗತಾ ಆನ । ಲಾಗೇ ದೂಷಣ ಸಾಂಗತ್ಯಾಸೀ ।।೧೦೨।। ಯಾಲಾಗೀ ಮುಖ್ಯತ್ವೇ ಜಾಣ । ಯೇಥ ಅಧಿಕಾರಚಿ ಪ್ರಮಾಣ । ಯೇಚಿವಿಖೀಚೇ ನಿರೂಪಣ । ಶ್ರೀನಾರಾಯಣ ಸಾಂಗತ ।।೧೦೩।।

ಸ್ವೇಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ । ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ ।
ಗುಣದೋಷವಿಧಾನೇನ ಸಂಗಾನಾಂ ತ್ಯಾಜನೇಚ್ಛಯಾ ।।೨೬।।

ಅರ್ಥ:- ತಮ್ಮ ತಮ್ಮ ಅಧಿಕಾರದಲ್ಲಿ ಇರುವ ನಿಷ್ಠೆಯ ಗುಣವನ್ನು ಹೇಳಲಾಗಿದೆ. ಈ ಗುಣದೋಷ ಮತ್ತು ವಿಧಿನಿಷೇಧ ವಿಧಾನಗಳಿಂದ ಯಾವುದೇ ಪ್ರಕಾರದ ವಿಷಯ ಆಸಕ್ತಿಯ ಪರಿತ್ಯಾಗವಾಗಬೇಕೆನ್ನುವ ತಾತ್ಪರ್ಯವಾಗಿದೆ. ಕಾರಣ ಕರ್ಮಮಾತ್ರ ಜನ್ಮತಃ ಅಶುದ್ಧವಾಗಿರುವುದು. ಅನರ್ಥದ ಮೂಲವಾಗಿರುವುದು. ಶಾಸ್ತ್ರದ ತಾತ್ಪರ್ಯವು ಅವುಗಳ ನಿಯಂತ್ರಣ, ನಿಯಮವಾಗಿರುವುದು. ಸಾಧ್ಯವಾದಷ್ಟು ವೃತ್ತಿಯ ಸಂಕೋಚವನ್ನು ಮಾಡಬೇಕಾಗುವುದು.

ನ ಪ್ರೇರಿತಾ ಶಾಸ್ತ್ರೇ ಶ್ರುತೀ । ವಿಷಯೀ ಸ್ವಾಭಾವಿಕ ಪ್ರವೃತ್ತೀ । ತಿಚೀ ಕರಾವಯಾ ನಿವೃತ್ತೀ । ಮಾಝೀ ವೇದೋಕ್ತೀ ಪ್ರವರ್ತಲೀ ।।೧೦೪।। ಏಕಾಏಕೀ ವಿಷಯತ್ಯಜನ । ಕರಾವಯಾ ಅಶಕ್ತ ಜನ। ತ್ಯಾಸೀ ವೇದ ದಾವೀ ದೋಷಗುಣ । ತ್ಯಾಗಾವಯಾ ಜಾಣ ವಿಷಯಾಂಸೀ ।।೧೦೫।। ಹೇ ಮಾತಾ ಹೇ ಸಹೋದರ । ಯೇಥ ಕರೂನಯೇ ವ್ಯಭಿಚಾರ । ಹೇ ವೇದ ನ ಬೋಲತಾ ಅಧಿಕಾರ । ತೈ ಯಥೇಷ್ಟಾಚಾರ ವಿಷಯಾಂಚಾ ।।೧೦೬।।

ನನ್ನ ಭಕ್ತನ ಕೈಯಿಂದ ನಿಂದ್ಯ ಕರ್ಮಗಳು ಎಂದಿಗೂ ಆಗುವುದಿಲ್ಲ. ಕಾರಣ ನಾನು ಆತನ ಹಿಂದೆ ಮುಂದೆ ನಿಂತುಕೊಂಡು ಭಕ್ತನ ರಕ್ಷಣೆಯನ್ನು ಮಾಡುತ್ತಿರುವೆನು. ಯೋಗಿಗಳಿಂದ ಮಾತ್ರ ಅಪ್ಪಿತಪ್ಪಿ ಒಂದು ವೇಳೆ ಪಾಪವು ಒದಗುವುದು ।।೯೫।। ತಪ್ಪಾಗಿ ಒದಗಿದ ಪಾಪದ ವಿಷಯದಲ್ಲಿ ಆತನಿಗೆ ಅತಿಶಯವಾಗಿ ಪಶ್ಚಾತಾಪವು ಉಂಟಾಗುವುದು. ಅಗ್ನಿಯಿಂದ ಸುಟ್ಟುಕೊಂಡಿರುವ ಸರ್ಪವು ಬೆಂಕಿಯನ್ನು ಕಂಡು ಭಯಪಡುತ್ತಿರುವುದು. ಅದರಂತೆ ಪಾಪಗಳನ್ನು ಕಂಡಾಕ್ಷಣವೇ ಯೋಗಿಗಳಿಗೆ ಮೈ ನಡುಗುತ್ತಿರುವುದು ।।೯೬।। ಸಿಂಹದ ಶರೀರದ ಮೇಲೆ ತೊಣಚಿ ಹುಳಗಳು ಕುಳಿತುಕೊಳ್ಳುತ್ತಲೇ ಅದು ತನ್ನ ಸರ್ವಾಂಗವನ್ನು ಝಾಡಿಸುತ್ತಿರುವುದು. ಅದರಂತೆ ಯೋಗಿಯು ಪಾಪಗಳನ್ನು ಕಂಡು ಹಗಲು ರಾತ್ರಿ ಪಶ್ಚಾತ್ತಾಪ ಪಡುತ್ತಿರುವನು ।।೯೭।। ಇಂತಹ ಸಮಯದಲ್ಲಿ ಆತನು ತನ್ನ ಯೋಗಬಲದಿಂದ ಯುಕ್ತನಾಗಿ ಸರ್ವ ಪಾಪಗಳ ಕ್ಷಾಲನೆಯನ್ನು ಮಾಡಬೇಕು. ಇದೇ ಯೋಗಿಗಳ ಪ್ರಾಯಶ್ಚಿತ್ತವಾಗಿರುವುದು ।।೯೮।। ಈ ಯೋಗಸ್ಥಿತಿಯನ್ನು ಬಿಟ್ಟುಕೊಟ್ಟು ಯಾರು ತನ್ನ ಶರೀರಕ್ಕೆ ಸೆಗಣಿ ಮಣ್ಣನ್ನು ಹಚ್ಚಿಕೊಳ್ಳಲು ಧಾವಿಸುವನೋ, ಅವನು ಖಾತ್ರಿಯಾಗಿ ಮುಳುಗುವನು ಎಂದು ತಿಳಿಯಬೇಕು. ಕಾರಣ ಆತನ ಪಾಪಗಳ ನಾಶವು ಇದರಿಂದ ಎಂದಿಗೂ ಆಗುವುದಿಲ್ಲ ।।೯೯।। ಹೃದಯದಲ್ಲಿ ಪಶ್ಚಾತ್ತಾಪವಾಗದೇ ಮೇಲ್ನೋಟಕ್ಕೆ ಸಗಣಿ ಮಣ್ಣು ಹಚ್ಚಿಕೊಳ್ಳುವುದರಿಂದ ಪಾಪಗಳ ನಿವೃತ್ತಿಯಾಗುವುದಿಲ್ಲ ।।೧೦೦।। ಏಕಾಗ್ರತೆಯಿಂದ, ಪ್ರೇಮದಿಂದ ಅರ್ಧ ಕ್ಷಣವನ್ನಾದರೂ ನನ್ನ ಚಿಂತನೆಯನ್ನು ಮಾಡಿದರೆ ಕೋಟಿ ಪಾತಕಗಳು ಭಸ್ಮವಾಗಿಬಿಡುವುವು. ಅಂದಮೇಲೆ ಇತರ ಕಥೆ ಎಲ್ಲಿಯದು? ಹೀಗೆಂದು ಶ್ರೀಕೃಷ್ಣನು ಸ್ವತಃ ಹೇಳಿದನು ।।೧೦೧।। ನನ್ನ ಧ್ಯಾನ ಒಂದೇ ಯಾರ ಅಧಿಕಾರವಾಗಿದೆಯೋ, ಆತನಿಗೆ ನನ್ನನ್ನು ಬಿಟ್ಟು ಬೇರೆ ಪ್ರಾಯಶ್ಚಿತ್ತವನ್ನು ಹೇಳುವವನಿಗೆ ಮಾತ್ರ ಮರಳಿ ದೋಷವು ಹತ್ತಿಕೊಳ್ಳುವುದು ।।೧೦೨।। ಆದ್ದರಿಂದ ಇಲ್ಲಿ ಅಧಿಕಾರವೇ ಮುಖ್ಯತ್ವದಿಂದ ನಿಜವಾದ ಪ್ರಮಾಣವಾಗಿರುವುದು. ಇದರ ನಿರೂಪಣೆಯನ್ನು ಈಗ ನಾರಾಯಣನು ಮಾಡುತ್ತಿರುವನು ।।೧೦೩।।

ವೇದಗಳು ಅಥವಾ ಶಾಸ್ತ್ರಗಳು ಪ್ರೇರಣೆಯನ್ನು ಮಾಡದಿದ್ದರೂ ಮಾನವರ ಪ್ರವೃತ್ತಿಯು ವಿಷಯಗಳತ್ತ ಇರುವುದು. ಆ ವಿಷಯ ಪ್ರವೃತ್ತಿಯಿಂದ ನಿವೃತ್ತಿ ಮಾಡುವುದಕ್ಕಾಗಿಯೇ ನನ್ನ ವೇದದ ಆಜ್ಞೆಗಳಾಗಿರುವುವು ।।೧೦೪।। ಯಾವ ಜನರಿಗೆ ವಿಷಯಗಳ ತ್ಯಾಗವನ್ನು ತಕ್ಷಣ ಮಾಡಲು ಸಾಧ್ಯವಾಗುವುದಿಲ್ಲವೋ, ಅವರಿಗೆ ವಿಷಯಗಳನ್ನು ಬಿಡಿಸುವುದಕ್ಕಾಗಿ ವೇದವು ಅವುಗಳಲ್ಲಿನ ಗುಣದೋಷಗಳನ್ನು ತೋರಿಸಿಕೊಡುತ್ತಿರುವುದು ।।೧೦೫।। ಈಕೆ ತಾಯಿಯು, ಈಕೆಯು ತಂಗಿಯಾಗಿರುವಳು ಇವರಲ್ಲಿ ವ್ಯಭಿಚಾರವನ್ನು ಮಾಡಕೂಡದು. ಹೀಗೆಂದು ವೇದವು ಆಜ್ಞೆಯನ್ನು ಮಾಡದಿದ್ದರೆ ಮಾನವಕುಲಗಳು ವಿಷಯಗಳ ಆಸಕ್ತಿಯಿಂದ ಮನಬಂದಂತೆ ವರ್ತಿಸುತ್ತಿತ್ತು ।।೧೦೬।।

ಜೇಥವರೀ ಸ್ತ್ರೀ ಪುರುಷವ್ಯಕ್ತೀ । ತೇಥವರೀ ಕಾಮಾಸಕ್ತೀ । ಮೀ ನೇಮಿತೋ ನಾ ವೇದೋಕ್ತೀ । ತ್ರೈ ವ್ಯಭಿಚಾರ ಪ್ರಾಪ್ತೀ ಅನಿವಾರ ॥೩೦೭॥ ಸಕಳ ಸ್ತ್ರೀಯಾ ಸಾಂಡೂನ । ತ್ಯಜೂನಿಯಾ ಇತರ ವರ್ಣ । ಸವರ್ಣ ಸ್ತ್ರೀ ಕರಾವೀ ಆಪಣ । ಅಷ್ಟವರ್ಷಾ ಜಾಣ ನೇಮಸ್ತ ॥೩೦೮॥ ತಿಚೇ ವೇದೋಕ್ತ ಪಾಣಿಗ್ರಹಣ । ತೇಥ ಸಾಕ್ಷೀ ಅಗ್ನಿ ಆಣಿ ಬ್ರಾಹ್ಮಣ । ಇತರ ಸ್ತ್ರೀಯಾಂಚೀ ವಾಹೂನಿ ಆಣ । ಸ್ವದಾರಾಗಮನ ವಿಧ್ಯುಕ್ತ ॥೩೦೯॥ ಯಾಪರೀ ಮ್ಯಾ ಸಕಳ ಲೋಕ । ಸ್ತ್ರೀಕಾಮೇ ಅತಿಕಾಮುಕ । ಸ್ವದಾರಾಗಮನೇ ದೇಖ । ಕೇಲೇ ಏಕಮುಖ ವೇದೋಕ್ತೀ ॥೩೧೦॥ ಯಾಚಿ ಪರೀ ಮ್ಯಾ ಅನ್ನಸಂಪರ್ಕ । ವೇದವಾದೇ ನೇಮಿಲೇ ಲೋಕ । ಯೇರವೀ ವರ್ಣಸಂಕರ ದೇಖ । ಹೋತಾ ಆವಶ್ಯಕ ವೇದೇವೀಣ ॥೩೧೧॥ ತೋ ಚುಕವಾವಯಾ ವರ್ಣಸಂಕರ । ವರ್ಣಾಶ್ರಮಾಚಾ ಪ್ರಕಾರ । ವೇದ ಬೋಲಿಲಾ ಸಾಚಾರ । ವಿಷಯಸಂಚಾರ ತ್ಯಾಗಾವಯಾ ॥೩೧೨॥ ವಿಷಯಾಂಚೀ ಜೇ ಪ್ರವೃತ್ತೀ । ತೇಚಿ ''ಅವಿದ್ಯಾ'' ಬಾಧಾ ನಿಶ್ಚಿತೀ । ಜೇ ವಿಷಯಾಂಚೀ ಅತಿನಿವೃತ್ತೀ । ತೀ ನಾಂವ ''ಮುಕ್ತಿ'' ಉದ್ಧವಾ ॥೩೧೩॥ ಕರಾವಯಾ ವಿಷಯ ನಿವೃತ್ತೀ । ವೇದೇ ದ್ಯೋತಿಲೀ ಕರ್ಮಪ್ರವೃತ್ತೀ । ವರ್ಣಾಶ್ರಮಾಚಾರಸ್ಥಿತೀ । ವಿಷಯಾಸಕ್ತೀಚ್ಛೇದಕ ॥೩೧೪॥ ನಿತ್ಯ ನೈಮಿತ್ತಿಕ ಕರ್ಮತಂತ್ರ । ನಾನಾ ಗುಣದೋಷಪ್ರಕಾರ । ವೇದೇ ದ್ಯೋತಿಲೇ ಸ್ವಾಧಿಕಾರ । ವಿರಕ್ತ ನರ ವ್ಹಾವಯಾ ॥೩೧೫॥ ಸ್ವಕರ್ಮೇ ಹೋಯ ಚಿತ್ತಶುದ್ಧೀ । ತೇಣೇ ವೈರಾಗ್ಯ ಉಪಜೇ ತ್ರಿಶುದ್ಧೀ । ವೈರಾಗ್ಯ ವಿಷಯಾವಸ್ಥಾ ಛೇದೀ । ಗುಣಕಾರ್ಯ ಉಪಾಧೀ ರಜತಮ ಹೇ ॥೩೧೬॥ ತೇವ್ಹಾ ಉರೇ ಶುದ್ಧ ಸತ್ತ್ವಗುಣ । ತೇಥೇ ಪ್ರಕಟೇ ಗುರುಭಜನ । ಗುರುಭಜನಾಸ್ತವ ಜಾಣ । ಜ್ಞಾನವಿಜ್ಞಾನ ಘರ ರಿಘೇ ॥೩೧೭॥ ಪೂರ್ಣ ಕರಿತಾ ಭಗವದ್ಭಕ್ತೀ । ತೈ ಗುರುಭಜನೀ ಅಧಿಕಾರಪ್ರಾಪ್ತೀ । ಸದ್ಗುರುಮಹಿಮಾ ಸಾಂಗೋ ಕಿತೀ । ಮೀ ಆಜ್ಞಾವರ್ತೀ ಗುರೂಚಾ ॥೩೧೮॥ ಗುರೂ ಜ್ಯಾವರೀ ಅನುಗ್ರಹೋ ಕರೀ । ತ್ಯಾಸೀ ಮೀ ಭಗವಂತ ಉದ್ಧರೀ । ಆದರೇ ವಾಊನಿಯಾ ಶಿರೀ । ನಿಜಐಶ್ವರ್ಯಾವರೀ ಬೈಸವೀ ॥೩೧೯॥ ಗುರೂ ಪರಮಾತ್ಮಾ ಪರೇಶು । ಐಸಾ ಜಯಾಚಾ ವಿಶ್ವಾಸು । ತ್ಯಾಚಾ ಅಂಕಿಲಾ ಮೀ ಹೃಷೀಕೇಶು । ಜೋ ಜಗದೀಶು ಜಗಾಚಾ ॥೩೨೦॥ ಜೇಥ ಮೀ ಅಂಕಿತ ಝಾಲೋ ಆಪಣ । ತೇಥ ಸಮಾಧೀಸೀ ಜ್ಞಾನವಿಜ್ಞಾನ । ವೋಳಂಗೇ ಗುರುಭಕ್ತಾಚೇ ಅಂಗಣ । ತೇಥ ಕೇವಾ ಕೋಣ ಸಿದ್ಧೀಂಚಾ ॥೩೨೧॥

ಏಕೆಂದರೆ ಎಲ್ಲಿಯವರೆಗೆ ಸಮಾಜದಲ್ಲಿ ಸ್ತ್ರೀ-ಪುರುಷರು ಇರುವರೋ ಅಲ್ಲಿಯವರೆಗೆ ಕಾಮಾಸಕ್ತಿಯು ಇದ್ದೇ ಇರುವುದು. ಆದ್ದರಿಂದ ನಾನು ವೇದಾಜ್ಞೆಯನ್ನು ನಿರ್ಮಿಸದಿದ್ದರೆ ವ್ಯಭಿಚಾರವು ಬೆಳೆಯುತ್ತಿತ್ತು ॥೩೦೭॥ ಈ ಕಾರಣವಾಗಿ ಸರ್ವ ಸ್ತ್ರೀಯರನ್ನು ಬಿಟ್ಟುಕೊಟ್ಟು, ಇತರ ವರ್ಣಗಳ ಸ್ತ್ರೀಯರ ವರ್ಜ್ಯಮಾಡಿ ಎಂಟು ವರ್ಷದ ತನ್ನ ಜಾತಿಯ ಸ್ತ್ರೀ ಇದ್ದರೆ ಮಾತ್ರ ಆಕೆಯು ವಿವಾಹಕ್ಕೆ ಯೋಗ್ಯಳಾಗಿರುವಳು ॥೩೦೮॥ ಇಂತಹ ಸ್ತ್ರೀಯಳೊಡನೆ ಅಗ್ನೀ ಮತ್ತು ಬ್ರಾಹ್ಮಣರ ಸಾಕ್ಷಿ ಇಟ್ಟು ವೇದೋಕ್ತ ರೀತಿಯಲ್ಲಿ ಆಕೆಯ ಪಾಣಿಗ್ರಹಣವನ್ನು ಮಾಡಬೇಕು. ತದನಂತರ ಇತರ ಸ್ತ್ರೀಯರಲ್ಲಿ ಪ್ರತಿಜ್ಞೆಪೂರ್ವಕವಾಗಿ ಗಮನ ಮಾಡದೇ ಸ್ವಪತ್ನಿಯಲ್ಲಿ ಯಥಾವಿಧಿಯಲ್ಲಿ ಗಮನವನ್ನು ಮಾಡಬೇಕು ॥೩೦೯॥ ಈ ಪ್ರಕಾರವಾಗಿ ಸ್ತ್ರೀಲಂಪಟ ಮತ್ತು ವಾಸನಾಸಕ್ತರಾಗಿರುವ ಜನರಿಗೆ ನಾನು ವಿವಾಹದ ಪವಿತ್ರ ವಿಧಿಯಿಂದ ಕಟ್ಟಿರುವೆನು. ಮತ್ತು ಸ್ವಸ್ತ್ರೀಗಮನವನ್ನು ನೇಮಿಸಿಕೊಟ್ಟಿರುವೆನು ॥೩೧೦॥ ಇದೇ ರೀತಿಯಲ್ಲಿ ನಾನು ಅನ್ನಸಂಪರ್ಕ ವಿಷಯದಲ್ಲಿಯೂ ಕೂಡ ವೇದಮುಖದಿಂದ ನೇಮಗಳನ್ನು ಹಾಕಿಕೊಡದಿದ್ದರೆ ವೇದದ ಆಜ್ಞೆಯ ಅಭಾವದಿಂದ ಸರ್ವತ್ರವೂ ವರ್ಣಸಂಕರವಾಗುತ್ತಿತ್ತು ॥೩೧೧॥ ಈ ಯಾವ ವರ್ಣಸಂಕರವನ್ನು ತಪ್ಪಿಸುವುದಕ್ಕಾಗಿ ಮತ್ತು ವಿಷಯ ಪ್ರವೃತ್ತಿಯನ್ನು ಬಿಡಿಸುವುದಕ್ಕಾಗಿ ನಿಜವಾಗಿಯೂ ವೇದವು ವರ್ಣಾಶ್ರಮದ ಪ್ರಕಾರವನ್ನು ಹೇಳಿರುವುದು ॥೩೧೨॥ ಉದ್ಧವಾ, ವಿಷಯ ಪ್ರವೃತ್ತಿಯೇ ನಿಜವಾಗಿ ಅವಿದ್ಯೆಯ ಬಾಧೆಯಾಗಿರುವುದು. ಮತ್ತು ವಿಷಯಗಳ ನಿಃಶೇಷ ನಿವೃತ್ತಿಯೇ ಮುಕ್ತಿಯಾಗಿರುವುದು ॥೩೧೩॥ ಮಾನವರು ವಿಷಯಗಳಿಂದ ನಿವೃತ್ತರಾಗಬೇಕೆಂದು ವಿಷಯ ಆಸಕ್ತಿಯ ಛೇದವನ್ನು ಮಾಡುವ ವರ್ಣಾಶ್ರಮದ ಸ್ಥಿತಿ ಮತ್ತು ಕಾರ್ಯಪ್ರವೃತ್ತಿಯನ್ನು ಹೇಳಲಾಗಿದೆ ॥೩೧೪॥ ಮಾನವರು ವಿರಕ್ತರಾಗಬೇಕೆಂದು ವೇದವು ನಿತ್ಯ - ನೈಮಿತ್ತಿಕ ಕರ್ಮತಂತ್ರಗಳನ್ನು ಮತ್ತು ಗುಣದೋಷಗಳ ಪ್ರಕಾರವನ್ನು ಅಧಿಕಾರ ತಕ್ಕಂತೆ ಹೇಳಲ್ಪಟ್ಟಿರುವುದು ॥೩೧೫॥ ಸ್ವಕರ್ಮದಿಂದ ಚಿತ್ತಶುದ್ಧಿಯಾಗುವುದು ಮತ್ತು ಅದರಿಂದ ನಿಜವಾದ ವೈರಾಗ್ಯವು ಪ್ರಾಪ್ತವಾಗುವುದು. ವೈರಾಗ್ಯವು ವಿಷಯಾಸಕ್ತಿಯ ನಾಶ ಮಾಡಿ, ಗುಣ ಕಾರ್ಯಗಳ ಉಪಾಧಿಯಾಗಿರುವ ರಜ, ತಮಗಳಿಗೆ ಬಂಧನವನ್ನು ಹಾಕುವುದು ॥೩೧೬॥ ಆಗ ಶುದ್ಧ ಸತ್ವಗುಣವು ಉಳಿದುಕೊಳ್ಳುವುದು. ಅದರಿಂದ ಗುರುಭಜನೆಯಲ್ಲಿ ಪ್ರೀತಿಯಾಗಿ ಜ್ಞಾನ - ವಿಜ್ಞಾನ ಮನೆಯಲ್ಲಿ ಪ್ರವೇಶ ಮಾಡುವುದು ॥೩೧೭॥ ಪೂರ್ಣವಾಗಿ ಭಗವದ್ಭಕ್ತಿಯನ್ನು ಮಾಡಲು ಗುರುಭಜನೆಯ ಅಧಿಕಾರವು ದೊರೆಯುವುದು. ಈ ಗುರು ಮಹಿಮೆಯನ್ನು ಎಷ್ಟೆಂದು ವರ್ಣಿಸಬೇಕು? ನಾನು ಗುರುವಿನ ಆಜ್ಞಾಧಾರಕನಾಗಿರುವೆನು ॥೩೧೮॥ ಗುರುಗಳು ಯಾರಲ್ಲಿ ಅನುಗ್ರಹಿಸುವರೋ, ಅವರನ್ನು ನಾನು ಉದ್ಧರಿಸುವೆನು. ಆತನನ್ನು ಬಹುಪ್ರೀತಿಯಿಂದ ಮಸ್ತಕದ ಮೇಲೆ ಹೊತ್ತು ನನ್ನ ಐಶ್ವರ್ಯದಲ್ಲಿ ಕುಳ್ಳಿರಿಸುವೆನು ॥೩೧೯॥ ಸದ್ಗುರುಗಳು ಪರಮಾತ್ಮಾ ಪರೇಶವಾಗಿರುವರು. ಹೀಗೆಂದು ಯಾರ ದೃಢ ವಿಶ್ವಾಸವಿರುವುದೋ ವಿಶ್ವಚಾಲಕನಾದ ಹೃಷೀಕೇಶೀ ನಾನು ಅವರ ಅಂಕಿತನಾಗುವೆನು ॥೩೨೦॥ ನಾನೇ ಸ್ವತಃ ಎಲ್ಲಿ ಅಂಕಿತನಾಗುವೆನೋ, ಆಗ ಸಮಾಧೀ ಸಹ ಜ್ಞಾನ - ವಿಜ್ಞಾನಗಳೂ ಕೂಡ ಗುರುಭಕ್ತನ ಮನೆಯಲ್ಲಿ ಬರುವುವು. ಇವುಗಳ ಎದುರಿನಲ್ಲಿ ಸಿದ್ಧಿಗಳ ಯಾವ ಪಾಡು? ॥೩೨೧॥

ತ್ಯಾ ಗುರೂಚೇ ಕರೂನಿ ಹೇಳಣ । ಜೋ ಕರೀ ಮಾಝೇ ಭಜನ । ತೇಣೇ ವಿಖೇಸೀ ಮಿಷ್ಟಾನ್ನ । ಮಜ ಭೋಜನ ಘಾತಲೇ ।೩೨೨॥ ತೋಂಡೀ ಘಾಸ ಡೋಈ ಟೋಲಾ । ಐಸಾ ಭಜನಾರ್ಥ ತೋ ಝಾಲಾ । ತೋ ಜಾಣ ಸರ್ವಸ್ವೇ ನಾಗವಲಾ । ವೈರೀ ಆಪಲಾ ಆಪಣಚಿ ।೩೨೩॥ ಯೇಥವರೀ ಗುರೂಚೇ ಮಹಿಮಾನ । ಮಾಝೇನಿ ವೇದೇ ದ್ಯೋತಿಲೇ ಜಾಣ । ಕರೂನಿ ವಿಷಯನಿರ್ದಳಣ । ಸ್ವಾಧಿಕಾರೇ ಜನ-ತರಾವಯಾ ।೩೨೪॥ ಯಾಲಾಗೀ ಜ್ಯಾಸೀ ಜೋ ಅಧಿಕಾರ । ತೋ ತೇಣೇ ನುಲ್ಲಂಘಾವಾ ಅಣುಮಾತ್ರ । ಹಾ ವೇದೇ ಕೇಲಾ ನಿಜನಿರ್ಧಾರ । ಸ್ವಕರ್ಮೇ ನರ ತರಾವಯಾ ।೩೨೫॥ ತರೀ ಮ್ಹಣಶೀ ಕರ್ಮಚಿ ಪಾವನ । ಹೇ ಹೀ ಸರ್ವಥಾ ನ ಘಡೇ ಜಾಣ । ಸ್ವಾಧಿಕಾರೇವೀಣ ಕರ್ಮಾಚರಣ । ತೇ ಅತಿದಾರುಣ ಬಾಧಕ ।೩೨೬॥ ಸನ್ಯಾಸೀ ಕರೀ ಗೃಹಸ್ಥಧರ್ಮ । ತೇ ತ್ಯಾಸಿ ವೋಡವಲೇ ಅಕರ್ಮ । ಗೃಹಸ್ಥ ಕರೀ ಕರಪಾತ್ರಕರ್ಮ । ತೋಚಿ ಅಧರ್ಮ ತಯಾಸೀ ।೩೨೭॥ ಹಿತಾಸೀ ವೋಖದ ಘೇತಾ ಜಾಣ । ತ್ಯಾಚೇ ಚುಕಲಿಯಾ ಅನುಪಾನ । ತೇಚಿ ಅನ್ಯಥಾ ಹೋಯ ಆಪಣ । ಪೀಡೀ ದಾರುಣ ಮರಣಾಂತ ।೩೨೮॥ ತೈಸೇ ಅನಧಿಕಾರೇ ಕರಿತಾ ಕರ್ಮ । ತೇಚಿ ಬಾಧಕ ಹೋಯ ಪರಮ । ಹೇ ವೇದೇ ಜಾಣೋನಿಯಾ ವರ್ಮ । ಸ್ವಧರ್ಮ ಸುಗಮ ನೇಮಿಲೇ ।೩೨೯॥ ಸ್ವಾಧಿಕಾರೇ ಸ್ವಧರ್ಮನಿಷ್ಠಾ । ಹಾಚಿ ಪುರುಷಾಚಾ ಗುಣ ಮೋಠಾ । ತೇಣೇ ಫಿಟೇ ಗುಣಕರ್ಮ-ಮಳಕಟಾ । ಪ್ರಿಯ ವೈಕುಂಠಾ ತೋ ಹೋಯ ।೩೩೦॥ ವೇದೇ ಬೋಲಿಲಾ ಜೋ ಗುಣ । ತೋ ಅಂಗೀಕಾರಾವಾ ಆಪಣ । ವೇದೇ ಠೇವಿಲೇ ಜ್ಯಾಸೀ ದೂಷಣ । ತೇ ಸರ್ವಥಾ ಜಾಣ ತ್ಯಜಾವೇ ।೩೩೧॥ ಹೇಚಿ ಗುಣದೋಷಲಕ್ಷಣ । ಕರಿತಾ ವೇದವಿವಂಚನ । ಗುಂತಲೇ ಗಾ ಅತಿಸಜ್ಞಾನ । ಮಾಝೇ ಕೃಪೇವಿಣ ವೇದಾರ್ಥ ನ ಕಳೇ ।೩೩೨॥ ನಿಷೇಧ ಮುಖೇಕರಿತಾ ತ್ಯಾಗು । ವೇದ ತ್ಯಾಗವೀ ವಿಷಯಸಂಗು । ಹೇ ವರ್ಮ ಜಾಣೋನಿ ಜೋ ಚಾಂಗು । ತೋ ಹೋಯ ನಿಃಸಂಗು ಮಹಾಯೋಗೀ ।೩೩೩॥ ಉದ್ಧವಾ ಹೇ ವೇದ ತತ್ತ್ವಸಾರ । ತುಜ ಮ್ಯಾ ಸಾಂಗಿತಲೇ ಸಾಚಾರ । ಜ್ಯಾಲಾಗೀ ಶಿಣತಾತಿ ಸುರನರ । ಋಷೀಶ್ವರ ತಪಸ್ವೀ ।೩೩೪॥ ಪರೀ ಮಾಝೇ ಕೃಪೇವೀಣ ಸರ್ವಥಾ । ಹೇ ನ ಯೇ ಕೋಣಾಚಿಯೇ ಹಾತಾ । ತೇ ತುಜ ಮ್ಯಾ ಸಾಂಗಿತಲೇ ಆತಾ । ತುಝೇ ಹಿತಾರ್ಥ ನಿಜಗುಹ್ಯ ।೩೩೫॥

ಇಂತಹ ಸದ್ಗುರುಗಳ ಅವಹೇಳನ ಮಾಡಿ ಯಾರು ನನ್ನ ಭಜನೆಯನ್ನು ಮಾಡುವನೋ, ಆತನು ವಿಷಯುಕ್ತ ಮೃಷ್ಟಾನ್ನದ ಭೋಜನವನ್ನು ನನಗೆ ಹಾಕಿದಂತಾಗುವುದು ।೩೨೨॥ ಮುಖದಲ್ಲಿ ತುತ್ತನ್ನು ಹಾಕುತ್ತ ಕಪಾಳಕ್ಕೆ ಹೊಡೆತ ಹಾಕುವಂತೆ ಈ ಪ್ರಕಾರದ ಆ ಭಜನೆಯಾಗಿರುವುದು. ಅವನು ಸಂಪೂರ್ಣವಾಗಿ ಹಾಳಾಗಿ ತಾನೇ ತನ್ನ ವೈರಿಯಾಗುವನೆಂದು ನಿಶ್ಚಯವಾಗಿ ತಿಳಿದುಕೊಳ್ಳಬೇಕು ।೩೨೩॥ ವಿಷಯಗಳ ತ್ಯಾಗವನ್ನು ಮಾಡಬೇಕು ಮತ್ತು ತನ್ನ ಅಧಿಕಾರ ಬಲ ಆಧಾರದಿಂದ ಜನರು ಉದ್ಧಾರರಾಗಬೇಕೆಂಬ ಇಷ್ಟೊಂದು ಮಹಿಮೆಯನ್ನು ವೇದವು ಪ್ರತಿಪಾದನೆಯನ್ನು ಮಾಡಿರುವುದು ।೩೨೪॥ ಆದ್ದರಿಂದ ಯಾರ ಅಧಿಕಾರವು ಹೇಗೆ ಇರುವುದೋ, ಅವರು ಅದರ ಉಲ್ಲಂಘನೆಯನ್ನು ಸ್ವಲ್ಪವೂ ಕೂಡ ಮಾಡಬಾರದು. ಜನರಿಗೆ ಉದ್ಧಾರವಾಗುವುದಕ್ಕಾಗಿ ವೇದವು ಇದೇ ನಿಶ್ಚಯವನ್ನು ಹೇಳಿರುವುದು ।೩೨೫॥ ಹೀಗೆಂದ ಮೇಲೆ ಕರ್ಮವು ಪಾವನಗೊಳಿಸುವುದಾಗಿದೆ ಎಂದು ನೀನು ಹೀಗೆ ಹೇಳಬಹುದು. ಆದರೆ ಅದೂ ಕೂಡ ಸರ್ವಥಾ ಸರಿ ಅಲ್ಲ. ಇದನ್ನು ನೀನು ಲಕ್ಷದಲ್ಲಿಡು. ತನ್ನ ಅಧಿಕಾರವಿಲ್ಲದೇ ಕರ್ಮಗಳನ್ನು ಮಾಡುವುದು ಅತಿಶಯವಾಗಿ ಬಾಧಕವಾಗಿರುವುವು ।೩೨೬॥ ಸನ್ಯಾಸಿಯು ಗೃಹಸ್ಥಾಶ್ರಮವನ್ನು ಸ್ವೀಕರಿಸಿದರೆ ಅದು ಹೇಗೆ ಪಾತಕವಾಗುವುದೋ, ಹಾಗೆಯೇ ಗೃಹಸ್ಥಾಶ್ರಮದಲ್ಲಿ ಇರುವ ಮನುಷ್ಯನು ಕರತಲ ಭಿಕ್ಷೆಯನ್ನು ಬೇಡಿದರೆ ಅದೂ ಕೂಡ ಅಧರ್ಮವೇ ಆಗುವುದು ।೩೨೭॥ ರೋಗವನ್ನು ಕಳೆದುಕೊಳ್ಳುವುದಕ್ಕಾಗಿ ಔಷಧವನ್ನು ಸ್ವೀಕರಿಸುತ್ತಿರುವಾಗ್ಗೆ ಅದರ ಅನುಪಾನವು ತಪ್ಪಾಯಿತೆಂದರೆ, ಆಗ ಅದರ ವಿಪರೀತ ಪರಿಣಾಮವಾಗುವುದು ಮತ್ತು ದಾರುಣ ದುಃಖ ಉಂಟಾಗಿ ಮರಣಾಂತಿಕ ಸ್ಥಿತಿಯು ಒದಗಿ ಬರುವುದು ।೩೨೮॥ ಅದರಂತೆಯೇ ಅಧಿಕಾರವು ಇಲ್ಲದಿರಲು ಕರ್ಮಗಳನ್ನು ಮಾಡಿದರೆ ಅದೇ ಕರ್ಮಗಳು ಅತಿಶಯವಾಗಿ ಬಾಧಕವಾಗುವುವು. ವೇದವು ಈ ಮರ್ಮವನ್ನು ತಿಳಿದುಕೊಂಡೇ ಸುಲಭವಾಗಿರುವ ಸ್ವಧರ್ಮವನ್ನು ನೇಮಿಸಿರುವುದು ।೩೨೯॥ ತನ್ನ ಅಧಿಕಾರ ಪ್ರಕಾರ ತನ್ನ ಸ್ವಧರ್ಮದಲ್ಲಿ ನಿಷ್ಠೆಯನ್ನಿಡುವುದು ಇದು ಪುರುಷನ ದೊಡ್ಡ ಗುಣವಾಗಿರುವುದು. ಇದರಿಂದ ಗುಣಕರ್ಮಗಳ ದೋಷಗಳು ತೊಳೆದುಕೊಂಡು ಹೋಗಿ ಆತನು ಶ್ರೀ ವಿಷ್ಣುವಿಗೆ ಪ್ರಿಯನಾಗುವನು ।೩೩೦॥ ಅದಕ್ಕಾಗಿ ವೇದವು ಯಾವ ಗುಣವನ್ನು ಹೇಳಿರುವುದೋ, ಅದನ್ನು ನಾವು ಸ್ವೀಕಾರವನ್ನು ಮಾಡಬೇಕು ಮತ್ತು ವೇದವು ಯಾವುದನ್ನು ನಿಷೇಧವನ್ನಾಗಿ ಮಾಡಿರುವುದೋ, ಅದನ್ನೇ ನಾವು ಸರ್ವತಃ ತ್ಯಾಗವನ್ನು ಮಾಡಬೇಕು ।೩೩೧॥ ವೇದಗಳ ಬಗ್ಗೆ ವಿಚಾರಿಸಿ ನೋಡಲು ಅದು ಗುಣದೋಷದ ಲಕ್ಷಣವನ್ನಾಗಿ ತೋರಿಬರುವುದು. ಆದರೆ ಜ್ಞಾನೀ ಪಂಡಿತರೂ ಕೂಡ ಈ ವಿಷಯವಾಗಿ ಸಂಶಯದಲ್ಲಿ ಬಿದ್ದಿರುವರು. ನಿಜವಾಗಿ ನೋಡಿದರೆ ನನ್ನ ಕೃಪೆಯ ಹೊರತಾಗಿ ವೇದದ ನಿಜವಾದ ಅರ್ಥವು ತಿಳಿಯಲಾರದು ।೩೩೨॥ ನಿಷೇಧ ಮುಖದಿಂದ ತ್ಯಾಗವನ್ನು ಹೇಳುತ್ತ ಯಾವ ವೇದವು ವಿಷಯಗಳ ತ್ಯಾಗವನ್ನು ಮಾಡಿಸುವುದು. ಹೀಗಿರುವ ವೇದದ ಮರ್ಮವನ್ನು ಯಾರು ತಿಳಿದುಕೊಳ್ಳುವರೋ, ಆತನೇ ಸರ್ವಸಂಗ ಪರಿತ್ಯಾಗವನ್ನು ಮಾಡಿ ಮಹಾಯೋಗಿಯಾಗಬಲ್ಲನು ।೩೩೩॥ ಹೇ ಉದ್ಧವನೇ, ಯಾವುದಕ್ಕಾಗಿ ದೇವದಾನವ ತಪಸ್ವೀಗಳು, ಶ್ರೇಷ್ಠ ಋಷಿಗಳು ಪ್ರಯತ್ನವನ್ನು ಮಾಡುತ್ತಿರುವರೋ, ಆ ವೇದದಲ್ಲಿನ ಸಾರವನ್ನು ನಾನು ನಿನಗೆ ಯೋಗ್ಯ ಪದ್ಧತಿಯಲ್ಲಿ ಹೇಳಿದೆನು ।೩೩೪॥ ಆದರೆ ನನ್ನ ಕೃಪೆವಿಲ್ಲದೇ ಇದು ಯಾರಿಗೂ ಕೈಗೆ ಸಿಗುವುದಿಲ್ಲ. ನಾನಿದನ್ನು ಕೇವಲ ನಿನ್ನ ಹಿತಕ್ಕಾಗಿ ನನ್ನ ಗುಹ್ಯವನ್ನು ನಿನ್ನಲ್ಲಿ ಪ್ರಕಟಿಸಿರುವೆನು ।೩೩೫॥

ಮಾಗೇ ಮ್ಯಾ ಕೇಲೇ ನಿರೂಪಣ । ಗುಣದೋಷ ದೇಖಣೇ ತೋ ದೋಷ ಜಾಣ । ತ್ಯಾಚೇಹೀ ವಿಶದ ವಿವೇಚನ । ತುಜ ಮೀ ಸಂಪೂರ್ಣ ಸಾಂಗಿತಲೇ ।೩೩೬॥ ಪರಾಚಾ ದೇಖಾವಾ ದೋಷಗುಣ । ಹೇ ನಾಹೀ ನಾಹೀ ಮಾಝೇ ವೇದವಚನ । ದೋಷ ತ್ಯಜೋನಿಯಾ ಆಪಣ । ಘ್ಯಾವಾ ಗುಣ ಹಾ ವೇದಾರ್ಥ ।೩೩೭॥ ತ್ಯಜೋನಿ ಪರಾಚೇ ದೋಷಗುಣ । ಸ್ವಯೇ ಗುಣ ಘ್ಯಾವಾ ಆಪಣ । ಹೇಹೀ ಮಾಝೇ ಕೃಪೇವೀಣ । ನಘ್ಡೇ ಜಾಣ ಉದ್ಧವಾ ।೩೩೮॥ ನ ದೇಖೋನಿ ಪರಾಚೇ ದೋಷಗುಣ । ಸ್ವಯೇ ಹೋಈಜೇ ಬ್ರಹ್ಮಸಂಪನ್ನ । ಮ್ಹಣಶೀ ಐಶೀ ಕೃಪಾ ಪರಿಪೂರ್ಣ । ಕೇವೀ ಆಪಣ ಲಾಹಿಜೇ ।೩೩೯॥ ತೇಚಿವಿಖೀಚೇ ನಿರೂಪಣ । ಕೃಪೇನೇ ಸಾಂಗತಾಹೇ ಶ್ರೀಕೃಷ್ಣ । ಮಾಝೇ ಕೃಪೇಚೇ ಆಯತನ । ಉದ್ಧವಾ ಜಾಣ ಮದ್ಭಕ್ತೀ ।೩೪೦॥

ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು ।
ವೇದ ದುಃಖಾತ್ಮಕಾನ್ ಕಾಮಾನ್ ಪರಿತ್ಯಾಗೇಽಪ್ಯನೀಶ್ವರಃ ।೨೭॥

ಅರ್ಥ:- ಯಾವ ಸಾಧಕನು ಸರ್ವ ಕರ್ಮಗಳಿಂದ ವಿರಕ್ತನಾಗುವನು. ಅದರಲ್ಲಿ ದುಃಖಬುದ್ಧಿ ಯನ್ನಿಡುವನು. ನನ್ನ ಲೀಲಾಕಥೆಗಳಲ್ಲಿ ಶ್ರದ್ಧೆಯನ್ನಿಡುವನು. ಆದರೆ ಸರ್ವ ಭೋಗಗಳನ್ನು ಮತ್ತು ಭೋಗ ವಾಸನೆಗಳು ದುಃಖರೂಪವಾಗಿವೆ ಎಂಬುದನ್ನು ತಿಳಿದರೂ ಕೂಡ ಅವುಗಳನ್ನು ತ್ಯಜಿಸಲು ಅಸಮರ್ಥನಾಗಿರುವನು.

ಮಾಝೇ ಕಥೇಚೇನಿ ಶ್ರವಣೇ । ಉಠೀ ಸಂಸಾರಚೇ ಧರಣೇ । ಐಸಾ ವಿಶ್ವಾಸು ಧರಿಲಾ ಜ್ಯಾಣೇ । ಜೀವೇಪ್ರಾಣೇ ನಿಶ್ಚಿತೀ ।೩೪೧॥ ಮ್ಹಣೇ ಅರ್ಧೋದಕೀ ಪ್ರಾಣಾಂತೀ । ಜೈ ಹರಿಕಥಾ ಆಠವೇ ಚಿತ್ತೀ । ತ್ಯೆ ಉಠೇ ಜನ್ಮಮರಣಪಂಕ್ತೀ । ಯೇಥವರೀ ಭಕ್ತೀ ಮತ್ಕಥೇಚೀ ।೩೪೨॥ ಐಶಿಯಾ ಭಾವಾರ್ಥಾಚೇ ಸ್ಥಿತೀ । ಅನಿವಾರ ಉಪಜೇ ವಿರಕ್ತೀ । ನಾವಡೇ ಕರ್ಮಾಚೀ ಪ್ರವೃತ್ತೀ । ವಿಷಯಾಸಕ್ತೀ ನಾವಡೇ ।೩೪೩॥ ನಾವಡೇ ಇತರ ಕಥಾವದಂತೀ । ನಾವಡೇ ಲೌಕಿಕಾಚೀ ಪ್ರಿತೀ । ಪರೀ ನಿಃಶೇಷ ತ್ಯಾಗಾಪ್ರತೀ । ಸಾಮರ್ಥ್ಯಶಕ್ತೀ ಜ್ಯಾ ನಾಹೀ ।೩೪೪॥ ತೇಣೇ ಅನನ್ಯಭಾವೇ ಜಾಣ । ಅತ್ಯಾದರೇ ಕರಾವೇ ಭಜನ । ಯೇಚಿವಿಖೀಂಚೇ ನಿರೂಪಣ । ಸ್ವಮುಖೇ ಶ್ರೀಕೃಷ್ಣ ಸಾಂಗತ ।೩೪೫॥

ತತೋ ಭಜೇತ ಮಾಂ ಪ್ರೀತಃ ಶ್ರದ್ಧಲುರ್ದೃಢನಿಶ್ಚಯಃ ।
ಜುಷಮಾಣಶ್ಚ ತಾನ್ಕಾಮಾಂದುಃಖೋದರ್ಕಾಂಶ್ಚ ಗರ್ಹಯನ್ ।೨೮॥

ಅರ್ಥ:- ಆತನು ಉಪಭೋಗವನ್ನು ಭೋಗಿಸಬೇಕು. ಆದರೆ ಅಂತಃಕರಣದಲ್ಲಿ ಇವು ದುಃಖಜನಿತವಾಗಿವೆ ಎಂದು ತಿಳಿದುಕೊಳ್ಳುತ್ತಿರಬೇಕು. ತನ್ನ ಮನದಲ್ಲಿಯೇ ಮನದಿಂದ ಅವುಗಳನ್ನು ನಿಂದಿಸಬೇಕು. ಹಾಗೆಯೇ ಇದಕ್ಕೆ ನನ್ನ ದುರ್ಭಾಗ್ಯ ಎಂದು ತಿಳಿಯಬೇಕು. ಈ ಭೋಗಗಳಿಂದ ಬಿಡುಗಡೆಯಾಗಲು ಶ್ರದ್ಧೆ, ದೃಢನಿಶ್ಚಯ ಮತ್ತು ಪ್ರೇಮದಿಂದ ನನ್ನ ಭಜನೆಯನ್ನು ಮಾಡಬೇಕು.

ಇತರರ ಗುಣದೋಷಗಳನ್ನು ಎಣಿಸುವುದು ಇದೊಂದು ದೊಡ್ಡ ದೋಷವೆಂದು ಈ ಹಿಂದೆ ನಿನಗೆ ಹೇಳಿದ್ದೆನು. ಈಗ ಅದನ್ನು ಸ್ಪಷ್ಟವಾಗಿ ವಿವೇಚನೆಯನ್ನು ಮಾಡಿ ಹೇಳಿರುವೆನು ।೩೩೬॥ ಬೇರೆಯವರ ಗುಣದೋಷಗಳನ್ನು ನೋಡಬೇಕೆಂದು ನನ್ನ ವೇದವಚನವು ಹೇಳಿಯೇ ಇಲ್ಲ. ದೋಷಗಳನ್ನು ಒಗೆದು ಗುಣಗಳನ್ನು ಗ್ರಹಣ ಮಾಡಬೇಕೆಂಬುವುದೇ ವೇದದ ಅರ್ಥ ಅಂದರೆ ಪ್ರಧಾನ ಉದ್ದೇಶವಾಗಿರುವುದು ।೩೩೭॥ ಇತರರ ದೋಷಗಳನ್ನು ತ್ಯಜಿಸಿ ತಾನು ಸ್ವತಃ ಅವರ ಗುಣಗಳನ್ನು ಗ್ರಹಿಸಬೇಕಾದರೆ ಇದೂ ಕೂಡ ನನ್ನ ಕೃಪೆವಿಲ್ಲದೇ ಸಾಧ್ಯವಾಗಲು ಶಕ್ಯವಿಲ್ಲ ।೩೩೮॥ ಬೇರೆಯವರ ಗುಣದೋಷಗಳನ್ನು ನೋಡದೇ ತಾನು ಸ್ವತಃವೇ ಬ್ರಹ್ಮಸಂಪನ್ನನಾಗುವ ಪೂರ್ಣ ಕೃಪೆಯನ್ನು ಹೇಗೆ ಸಂಪಾದಿಸಬೇಕೆಂದು ನೀನು ಕೇಳಬಹುದು ।೩೩೯॥ ಇದೇ ವಿಷಯದ ನಿರೂಪಣೆಯನ್ನು ಶ್ರೀಕೃಷ್ಣನು ಕೃಪೆ ಮಾಡಿ ಹೇಳುತ್ತಿರುವನು. ಹೇ ಉದ್ಧವನೇ, ನನ್ನ ಕೃಪೆಯ ಆಶ್ರಯ ಸ್ಥಾನವು ನನ್ನ ಭಕ್ತಿಯಾಗಿರುವುದು ।೩೪೦॥

ನನ್ನ ಕಥೆಯನ್ನು ಕೇಳುವುದರಿಂದ ಸಂಸಾರದ ಬಂಧನೆಯು ಎದ್ದು ಓಡಿ ಹೋಗುವುದು. ಹೀಗೆ ಜೀವಭಾವದಿಂದ ವಿಶ್ವಾಸವಿರುವಿಕೆ ।೩೪೧॥ ನೀರಿನಲ್ಲಿ ಅರ್ಧಮರ್ಧ ಮುಳುಗುತ್ತ ಪ್ರಾಣಹೋಗುವ ಸಮಯವು ಒದಗಲು, ಆಗ ಯಾವನು ತನ್ನ ಮನದಲ್ಲಿ ಹರಿಕಥೆಯ ಸ್ಮರಣೆಯನ್ನು ಮಾಡಿದರೆ ಜನ್ಮ ಮರಣದ ತಿರುಗಾಟವು ತಪ್ಪುವುದು ಎಂದು ಹೇಳುವನು. ಇಷ್ಟೊಂದು ಹರಿಕಥೆಯ ಮೇಲೆ ಆತನ ಭಕ್ತಿ ವಿರುವುದು ।೩೪೨॥ ಇಂತಹ ದೃಢವಾದ ವಿಶ್ವಾಸ ಶ್ರದ್ಧೆ ಇರುವುದರಿಂದ, ಆತನ ಹೃದಯದಲ್ಲಿ ತೀವ್ರ ವೈರಾಗ್ಯವು ಉದಯವಾಗುವುದು. ಆತನಿಗೆ ಕರ್ಮದ ಪ್ರವೃತ್ತಿಯು ರುಚಿಸುವುದಿಲ್ಲ. ಮತ್ತು ವಿಷಯದ ಆಸಕ್ತಿಯೂ ಕೂಡ ಪ್ರಿಯವಾಗುವುದಿಲ್ಲ ।೩೪೩॥ ಆತನಿಗೆ ಪ್ರಪಂಚದಲ್ಲಿನ ವ್ಯರ್ಥವಾಗಿರುವ ಕಥೆಗಳು ರುಚಿಸುವುದಿಲ್ಲ. ಆತನಿಗೆ ಲೌಕಿಕದ ಯಾವ ಪ್ರೀತಿಯು ಇರುವುದಿಲ್ಲ. ಹೀಗಿದ್ದರೂ ಆತನ ಅಂಗದಲ್ಲಿ ಸರ್ವತಃ ತ್ಯಾಗ ಮಾಡುವ ಸಾಮರ್ಥ್ಯವೂ ಕೂಡ ಇರುವುದಿಲ್ಲ ।೩೪೪॥ ಹೀಗಿದ್ದಾಗ ಆತನು ಅನನ್ಯ ಭಾವದಿಂದ ನನ್ನ ಭಜನೆಯನ್ನು ಮಾಡಬೇಕು. ಈ ವಿಷಯವಾಗಿ ಸ್ವತಃ ಶ್ರೀಕೃಷ್ಣನು ಈಗ ನಿರೂಪಣೆಯನ್ನು ಮಾಡುತ್ತಿರುವನು ।೩೪೫॥

ತ್ಯಾಗಾವಯಾ ನಾಹೀ ಸಾಮರ್ಥ್ಯಶಕ್ತೀ । ತ್ಯಾಸೀ ವಿಷಯಭೋಗ ಜೇವ್ಹಾ ಯೇತೀ । ತೇ ಭೋಗೀ ಐಶಿಯಾ ರೀತೀ । ಜೇವೀ ಶೃಂಗಾರಿತೀ ಸುಳೀ ದ್ಯಾವಯಾ ।।೩೪೬।। ತ್ಯಾಂಸೀ ಕೇಳೇ ಸಾಖರ । ಚೋಖಟೀ । ದೂಧತೂಪ ಲಾವಿತಾ ವೋಠೀ । ಶೂಳ ಭರೇಲ ಯಾ ಭೋಗಾಪಾಠೀ । ತೋ ಧಾಕ ಪೋಟೀ ಧುಕಧುಕೀ ।।೩೪೭।। ತೇವೀ ವಿಷಯ ಭೋಗಿತಾ ಜಾಣ । ಪುಢೇ ನಿರಯ ಅತಿದಾರುಣ । ಮಜ ಕಾ ವಿಸರಲಾ ನಾರಾಯಣ । ಮಧುಸೂದನ ಮಾಧವ ।।೩೪೮।। ಮೀ ಪಡಿಲೋ ವಿಷಯಬಂದಿಖಾನೀ । ವೇಗೀ ಪಾವೇ ಗರುಡಾ ವಳಂಘೋನೀ । ಕೃಪಾಳುವಾ ಚಕ್ರಪಾಣೀ । ಮಜಲಾಗೋನಿ ಸೋಡವೀ ।।೩೪೯।। ವಿಷಯಮಹಾಗ್ರಹಾಚೇ ತೋಂಡೀ । ಮೀ ಸಾಂಪಡಲೋ ಬಿಡಿಶಪಿಂಡೀ । ಗಜೇಂದ್ರಾಚೇಪರೀ ತಾಂತಡೀ । ಘಾಲೀ ಉಡೀ ಮಜಲಾಗೀ ।।೩೫೦।। ಧಾಂವ ಪಾವ ಗಾ ಗೋವಿಂದಾ । ನಿವಾರೀ ಮಾಝೀ ವಿಷಯಬಾಧಾ । ಉಪೇಕ್ಷೂ ನಕೋ ಮುಕುಂದಾ । ಘೇಊನಿ ಗದಾ ಧಾಂವ ವೇಗೀ ।।೩೫೧।। ತೂ ಅಡಲಿಯಾಂಚಾ ಸಹಾಕಾರೀ । ಭಕ್ತಕಾಜಕೈವಾರೀ । ಮಜ ಬುಡತಾ ವಿಷಯಸಾಗರೀ । ವೇಗೇ ಉದ್ಧರೀ ಗೋವಿಂದಾ ।।೩೫೨।। ಮೀ ಪಡಿಲೋ ವಿಷಯಸಾಗರೀ । ಬುಡವಿಲೋ ಕಾಮಲೋಭಲಹರೀ । ಕ್ರೋಧೇ ವಿಸಂಚಿಲೋ ಭಾರೀ । ಅಭಿಮಾನಸುಸರೀ ಗಿಳಿಯೇಲೋ ।।೩೫೩।। ತೂ ದೀನದಯಾಳ ಶ್ರೀಹರೀ । ಹೇ ಆಪುಲೇ ಬಿರುದ ಸಾಚ ಕರೀ । ಮಜ ದೀನಾತೇ ಉದ್ಧರೀ । ನಿಜಬೋಧಕರೀ ಧರೋನಿಯಾ ।।೩೫೪।। ಹೇ ವಿಷಯಬಾಧಾ ಅತಿಗಹನ । ಕಾ ಪಾ ನ ಪವೇ ಜನಾರ್ದನ । ಯೇಣೇ ಅಟ್ಟಾಹಾಸೇ ಜಾಣ । ಕರೀ ಸ್ಮರಣ ಹರೀಚೇ ।।೩೫೫।। ನ ಸುಟೇ ವಿಷಯವಜ್ರಮಿಠೀ । ಪಡಿಲೋ ಕಾಮದ್ರಷ್ಟಾಂಚಿಯೇ ಪೋಟೀ । ಕಾಂಹೀ ಕೇಲಿಯಾ ನ ಸುಟೇ ಮಿಠೀ । ಆತಾ ಜಗಜೇಠೀ ಧಾಂವ ವೇಗೀ ।।೩೫೬।। ಐಸಾ ನಿಜಭಕ್ತಾಂಚಾ ಧಾಂವಾ । ಕ್ಷಣಹೀ ಮನ ನ ಸಾಹವೇ ಉದ್ಧವಾ । ಮಾಝೀ ಕೃಪಾ ಹೋಯ ತೇವ್ಹಾ । ಪೂರ್ಣ ಸ್ವಭಾವಾ ಅನುತಾಪೇ ।।೩೫೭।। ಉದ್ಧವಾ ಜೇಥ ಅನುತಾಪ ನಾಹೀ । ತೇಥ ಮಾಝೀ ಕೃಪಾ ನವ್ಹೇ ಕಹೀ । ಕೃಪೇಚೇ ವರ್ಮ ಹೇಚ ಪಾಹೀ । ಜೈ ಅನುತಾಪ ದೇಹೀ ಅನಿವಾರ ।।೩೫೮।।

ಯಾರ ಅಂಗದಲ್ಲಿ ತ್ಯಾಗವನ್ನು ಮಾಡುವ ಸಾಮರ್ಥ್ಯವು ಇರುವುದಿಲ್ಲವೋ, ಆತನು ವಿಷಯಗಳ ಭೋಗವನ್ನು ಭೋಗಿಸುವ ಕಾಲಕ್ಕೆ ಶೂಲಕ್ಕೆ ಏರಿಸುವುದಕ್ಕಾಗಿ ಶೃಂಗಾರಗೊಂಡ ಮನುಷ್ಯನಂತೆ ವರ್ತಿಸುವನು ।।೩೪೬।। ಶೂಲಕ್ಕೆ ಏರಿಸುವ ಮನುಷ್ಯನಿಗೆ ರಸಬಾಳೆಹಣ್ಣು, ಸಕ್ಕರೆ ತಂದು ಕೊಟ್ಟರೆ, ಹಾಲು ತುಪ್ಪದ ಬಟ್ಟಲುಗಳನ್ನು ಆತನ ಮುಖಕ್ಕೆ ಹಚ್ಚಿದರೂ ಕೂಡ ಮುಂದಾಗುವ ಶೂಲದ ಭಯದಿಂದ ಭೋಗದ ಸುಖಬಿಟ್ಟು ಆತನ ಜೀವವು ಡಬಡಬ ಬಡೆದುಕೊಳ್ಳುವುದು ।।೩೪೭।। ಅದರಂತೆ ನನ್ನ ಭಕ್ತನು ವಿಷಯಗಳನ್ನು ಭೋಗಿಸುವ ವೇಳೆಯಲ್ಲಿ ಮುಂದಾಗುವ ಭಯಂಕರ ನರಕವನ್ನು ನೋಡುತ್ತಿರುವನು ಆಗ ಅವನು ಹೇ ನಾರಾಯಣ! ಮಾಧವಾ, ಮಧುಸೂದನಾ ನೀನೇಕೆ ನನ್ನನ್ನು ಮರೆತೆ? ಎಂದು ಪ್ರಾರ್ಥಿಸುವನು ।।೩೪೮।। ಹೇ ಕೃಪಾಮೂರ್ತಿ ಚಕ್ರಪಾಣಿಯೇ, ನಾನು ವಿಷಯರೂಪ ಬಂದಿಖಾನೆಯಲ್ಲಿ ಬಿದ್ದಿರುವೆನು, ನನಗೆ ಇದರಿಂದ ಈಗ ಬಿಡಿಸು. ನೀನು ಗರುಡನ ಮೇಲೆ ಆರೂಢನಾಗಿ ಬುಲುಬೇಗ ಧಾವಿಸಿ ಬಾ ।।೩೪೯।। ನಾನು ವಿಷಯ ರೂಪ ಬಲಾಢ್ಯವಾಗಿರುವ ಮೊಸಳೆಯ ದವಡೆಯಲ್ಲಿ ಸಿಲುಕಿಕೊಂಡಿರುವೆನು. ಅದಕ್ಕಾಗಿ ಗಜೇಂದ್ರನಿಗಾಗಿ ಯಾವರೀತಿಯಲ್ಲಿ ಬಹು ತ್ವರಿತವಾಗಿ ಧಾವಿಸುತ್ತ ಬಂದೆಯೋ, ಅದರಂತೆಯೇ ನನಗಾಗಿಯೂ ಜಿಗಿದೋಡಿ ಬಾ ।।೩೫೦।। ಹೇ ಗೋವಿಂದಾ, ಈಗ ಧಾವಿಸು, ನನ್ನನ್ನು ಅಂಗೀಕರಿಸು. ನನ್ನ ಈ ವಿಷಯ ಬಾಧೆಯು ನಿವಾರಣೆಯನ್ನು ನೀನೇ ಮಾಡು. ಹೇ ಮುಕುಂದನೇ, ಗದೆಯನ್ನು ಧರಿಸಿ ಬೇಗ ಬಾ. ನನ್ನನ್ನು ಉಪೇಕ್ಷೆ ಮಾಡಬೇಡ ।।೩೫೧।। ಹೇ ಗೋವಿಂದನೇ, ಸಂಕಟದಲ್ಲಿ ಬಿದ್ದಿರುವ ಜೀವಿಗಳಿಗೆ ನೀನು ಸಹಾಯ ಮಾಡುವವನಾಗಿರುವೆ. ನಿಜವಾಗಿಯೂ ನೀನು ಭಕ್ತರ ಕೈವಾರಿಯಾಗಿರುವೆ. ಆದ್ದರಿಂದ ವಿಷಯ ಸಮುದ್ರದಲ್ಲಿ ಮುಳುಗುತ್ತಿರುವ ನನ್ನನ್ನು ಬೇಗ ಉದ್ಧರಿಸು ।।೩೫೨।। ನಾನು ವಿಷಯ ಸಾಗರದಲ್ಲಿ ಬಿದ್ದಿರುವೆನು. ಕಾಮಲೋಭಗಳ ತೆರೆಗಳಲ್ಲಿ ಮುಳುಗುತ್ತಿರುವೆನು. ಕ್ರೋಧವು ನನ್ನನ್ನು ಈ ದುರ್ದಶೆಗೆ ಗುರಿ ಮಾಡಿರುವುದು. ಅಭಿಮಾನವೆಂಬ ಮೊಸಳೆಯು ನನ್ನನ್ನು ನುಂಗಿಬಿಟ್ಟಿರುವುದು ।।೩೫೩।। ಹೇ ಶ್ರೀಹರಿಯೇ ನಿಜವಾಗಿಯೂ ನೀನು ದೀನದಯಾಳುವಾಗಿರುವೆ. ಈ ನಿನ್ನ ಬಿರುದಾವಳಿಯನ್ನು ಈಗ ರಕ್ಷಿಸು. ನಾನು ದೀನನಾಗಿರುವೆನು. ನಿಜಬೋಧೆಯ ಹಸ್ತದಿಂದ ನನ್ನ ಉದ್ಧಾರವನ್ನು ಮಾಡು ।।೩೫೪।। ಈ ಯಾವ ವಿಷಯಗಳ ಬಾಧೆಯು ಅತ್ಯಂತ ಗಹನವಾಗಿರುವುದು. ಹೇ ಶ್ರೀಹರಿಯೇ, ನೀನು ನನಗೇಕೆ ಪ್ರಸನ್ನನಾಗಲಾರೆ? ಹೀಗೆ ಆತನು ಆಕ್ರೋಶಗೊಳ್ಳುತ್ತ ನನ್ನನ್ನು ಸ್ಮರಿಸುತ್ತಿರುವನು ।।೩೫೫।। ವಿಷಯಗಳ ಮೊಸಳೆಯ ಕಪಿಮುಷ್ಠಿಯಿಂದ ಏನು ಮಾಡಿದರೂ ಬಿಡಿಸಿಕೊಳ್ಳುವುದಾಗುವುದಿಲ್ಲ. ನಾನು ಕಾಮದ ಭಯಂಕರ ದವಡೆಯಲ್ಲಿ ಸಿಕ್ಕಿಕೊಂಡಿರುವೆನು. ಎಷ್ಟು ಪ್ರಯತ್ನಿಸಿದರೂ ಅದರಿಂದ ಬಿಡಿಸಿಕೊಳ್ಳುವುದಾಗುವುದಿಲ್ಲ. ಅದಕ್ಕಾಗಿ ಹೇ ಜಗಜೇಠಿಯೇ, ಈಗ ಬೇಗನೇ ಧಾವಿಸಿ ಬಾ ।।೩೫೬।। ಹೇ ಉದ್ಧವಾ, ಈ ಪ್ರಕಾರವಾಗಿ ಭಕ್ತನು ನನ್ನನ್ನು ಮೊರೆಯಿಡುತ್ತಲೇ ನನಗೆ ಒಂದು ಕ್ಷಣವೂ ಕೂಡ ಸಹಿಸುವುದಾಗುವುದಿಲ್ಲ. ಸ್ವಭಾವತಃವಾಗಿಯೇ ಎಂದಿಗೆ ಹೀಗೆ ಭಕ್ತನಿಗೆ ಪಶ್ಚಾತ್ತಾಪವಾಗುತ್ತದೆಯೋ, ಅಂದು ಆತನ ಮೇಲೆ ನನ್ನ ಕೃಪೆಯ ಮಳೆಗರೆಯುವುದು ।।೩೫೭।। ಹೇ ಉದ್ಧವನೇ, ಎಲ್ಲಿ ನಿಜವಾಗಿಯೂ ಹೀಗೆ ಪಶ್ಚಾತ್ತಾಪವಾಗುವುದಿಲ್ಲವೋ, ಅಲ್ಲಿ ನನ್ನ ಕೃಪೆಯ ಮಳೆಯಾಗುವುದಿಲ್ಲ. ಅನಿವಾರ್ಯ ಪಶ್ಚಾತ್ತಾಪವಾಗುವಿಕೆಯೇ ನನ್ನ ಕೃಪೆಯ ನಿಜವಾದ ಮರ್ಮವಾಗಿರುವುದು. ಹೀಗೆಂದು ನೀನು ತಿಳಿ ।।೩೫೮।।

ಮಾಝೀ ಕೃಪೇವೀಣ ನಿಶ್ಚಿತೀ । ಕದಾ ನುಪಜೇ ಮಾಝೀ ಭಕ್ತೀ । ಮಾಝೀ ಝಾಲಿಯಾ ಕೃಪಾಪ್ರಾಪ್ತೀ । ಅನನ್ಯಭಕ್ತೀ ತೋ ಕರೀ ।೩೫೯॥ ಮಾಝೇ ಕೃಪೇಚೇ ಲಕ್ಷಣ । ಪ್ರಾಪ್ತ ವಿಷಯ ಭೋಗಿತಾ ಜಾಣ । ನ ತುಟೇ ಮಾಝೇ ಅನನ್ಯ ಭಜನ । ''ಪೂರ್ಣಕೃಪಾ'' ಜಾಣ ಯಾ ನಾಂವ ।೩೬೦॥ ಮಗ ಚಢತ್ಯಾ ವಾಢತ್ಯಾ ಪ್ರೀತಿ । ನೀಚ ನವೀ ಕರೀ ಮಾಝೀ ಭಕ್ತೀ । ದೇಹ ಗೇಹ ಸ್ತ್ರೀ ಪುತ್ರ ಸಂಪತ್ತೀ । ವೇಚೀ ಮಾಝೇ ಪ್ರೀತೀ ಧನಧಾನ್ಯ ।೩೬೧॥ ಮಾಝೇ ಭಕ್ತೀಲಾಗೀ ಆಪಣ । ಸರ್ವಸ್ವ ವೇಚೀ ಹೇ ನವಲ ಕೋಣ । ಸ್ವಯೇ ವಂಚೀನಾ ಜೀವಪ್ರಾಣ । ಐಸೇ ಅನನ್ಯಭಜನ ಸರ್ವದಾ ।೩೬೨॥ ಮಾಝ್ಯಾ ಭಜನಾಚೀ ಅತಿಪ್ರೀತೀ । ಸ್ಮರಣ ನ ಸಾಂಡೀ ಅಹೋರಾತೀ । ಮಾಝಾ ವಿಸರ ನ ಪಡೇ ಚಿತ್ತೀ । ತ್ಯಾಚೀ ಫಳಪ್ರಾಪ್ತೀ ಹರಿ ಸಾಂಗೇ ।೩೬೩॥

ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಽಸಕೃನ್ಮುನೇಃ । ಕಾಮಾ ಹೃದಯ್ಯಾ ನಶ್ಯಂತಿ ಸರ್ವೇ ಮಯಿ ಹೃದಿ ಸ್ಥಿತೇ ।೨೯॥

ಅರ್ಥ:- ಈ ಪ್ರಕಾರವಾಗಿ ನಾನು ಹೇಳಿರುವ ಭಕ್ತಿಯೋಗದ ಮುಖಾಂತರವಾಗಿ ನಿರಂತರ ನನ್ನ ಭಜನೆಯನ್ನು ಮಾಡುವುದರಿಂದ ನಾನು ಆ ಸಾಧಕನ ಹೃದಯದಲ್ಲಿ ಬಂದು ಕುಳಿತುಕೊಳ್ಳುವೆನು. ಇದರಿಂದ ಆತನ ಹೃದಯದಲ್ಲಿನ ಸರ್ವ ವಾಸನೆಗಳು ಮತ್ತು ಸಂಸ್ಕಾರಗಳು ನಷ್ಟವಾಗಿಬಿಡುವುವು.

ಮಾಝೀ ಜೇ ಕಾ ನಿಜಭಕ್ತೀ । ಮಾಗಾ ಸಾಂಗಿತಲೀ ತುಜಪ್ರತೀ । ತ್ಯಾ ಹಾತವಟಿಯಾ ಮೀ ಶ್ರೀಪತೀ । ಯಜಿಲೋ ಅತಿಪ್ರೀತೀ ವಾರಂವಾರ ।೩೬೪॥ ಪಳಪಳ ಕ್ಷಣಕ್ಷಣ । ಮಾಝೇ ನ ವಿಸರತ ಸ್ಮರಣ । ಕರಿತೀ ಅನನ್ಯ ಭಜನ । ಮದರ್ಪಣ ತೇ ಮೀಚಿ ।೩೬೫॥ ದಿವಸೇದಿವಸಾ ಚಢೋವಢೀ । ಅನಿವಾರ ಪ್ರೀತಿ ವಾಢೇ ಗಾಢೀ । ಲಾಗತಾ ನೀಚ ನವೀ ಗೋಡೀ । ಭಜೆನೇ ಆವಡೀ ಪುನಃ ಪುನಃ ।೩೬೬॥ ಕೇಲೀಚಿ ಭಕ್ತೀ ಕರಿತಾ । ಉಬಗು ನ ಯೇ ಸರ್ವಥಾ । ಅಧಿಕ ಹರ್ಷ ವಾಟೇ ಚಿತ್ತಾ । ಉಲ್ಹಾಸತಾ ಮದ್ಭಜನೀ ।೩೬೭॥ ಮಜ ಆಕಳೂನಿ ಆಪಲೇ ಮನೀ । ಮನೀಹೋನಿ ಪ್ರೀತಿ ಭಜನೀ । ತೇಥ ಸಕಳ ಕಾಮ ಜಾತೀ ನಾಸೋನಿ । ಜೇವೀ ಕಾ ತರಣೀ ಖದ್ಯೋತ ।೩೬೮॥ ಜೇವೀ ಕಾ ಕೇಸರೀ ದೇಖೋನೀ । ಮದಗಜಾ ಹೋಯ ಭಂಗಣೇ । ತೇವೀ ಕಾಮ ಜಾತೀ ಹೃದಯೀ ಹೂನೀ । ಮೀ ಚಕ್ರಪಾಣೀ ಪ್ರಕಟಲ್ಯಾ ।೩೬೯॥ ''ಮೀ ಪ್ರಕಟಲೋ'' ಐಸೇ ಮ್ಹಣತಾ । ಲಾಜ ಲಾಗೇಲ ಯಾ ವಚನಾರ್ಥಾ । ಮಜವೀಣ ಠಾವೋ ನಾಹೀ ರಿತಾ । (''ಪ್ರಕಟಲೋ'') ಆತಾ ಮ್ಹಣೇ ಕೋಣ ।೩೭೦॥

ನಿಜವಾಗಿಯೂ ನನ್ನ ಕೃಪೆವಿಲ್ಲದೇ ನನ್ನ ಭಕ್ತಿಯು ನಿರ್ಮಾಣವಾಗುವುದಿಲ್ಲ. ನನ್ನ ಕೃಪೆಯು ಯಾರಿಗೆ ಪ್ರಾಪ್ತವಾಗುವುದೋ, ಆತನೇ ನನ್ನ ಅನನ್ಯ ಭಕ್ತಿಯನ್ನು ಮಾಡುವನು ।೩೫೯॥ ನನ್ನ ಕೃಪೆಯ ಲಕ್ಷಣವೇನೆಂದರೆ, ಪ್ರಾಪ್ತವಾಗಿರುವ ವಿಷಯಗಳನ್ನು ಭೋಗಿಸುತ್ತಿದ್ದರೂ ನನ್ನ ಅನನ್ಯವಾದ ಭಜನೆಯಲ್ಲಿ ಅಗಲಿಕೆಯಾಗುವುದಿಲ್ಲ. ಇದಕ್ಕೆ ಮಾತ್ರ ನನ್ನ ಪೂರ್ಣ ಕೃಪೆ ಎಂದು ಹೇಳುವರು ।೩೬೦॥ ಹೀಗಿರುವ ನನ್ನ ಕೃಪಾಂಕಿತ ಭಕ್ತನು ಪ್ರತಿನಿತ್ಯವೂ ಬೆಳೆಯುತ್ತಿರುವ ಪ್ರೇಮದಿಂದ ನನ್ನ ನಿತ್ಯಭಕ್ತಿಯನ್ನು ಮಾಡುತ್ತಿರುವನು. ನನ್ನ ಭಕ್ತಿಗಾಗಿ ಆತನು ಮನೆಮಾರು, ಸ್ತ್ರೀಪುತ್ರ, ಧನಧಾನ್ಯ, ಸಂಪತ್ತು ಮತ್ತು ಪ್ರಸಂಗಾನುಸಾರವಾಗಿ ತನ್ನ ಸ್ವತಃ ದೇಹವನ್ನೇ ಖರ್ಚುಸುತ್ತಿರುವನು ।೩೬೧॥ ನನ್ನ ಭಕ್ತಿಗಾಗಿ ಆತನು ತನ್ನ ಸರ್ವಸ್ವವನ್ನು ಖರ್ಚಿಸುತ್ತಿರುವುದರಲ್ಲಿ ಯಾವ ಆಶ್ಚರ್ಯವಿದೆ? ತನ್ನ ಸ್ವತಃ ಜೀವ ಪ್ರಾಣವನ್ನು ಅರ್ಪಿಸಲು ಸಿದ್ಧನಾಗಿರುವನು. ಹೀಗೆ ಆತನ ಅನನ್ಯ ಭಜನೆಯು ನಡೆಯುತ್ತಿರುವುದು ।೩೬೨॥ ನನ್ನ ಭಜನೆಯಲ್ಲಿ ಆತನಿಗೆ ಅತಿಶಯವಾದ ಪ್ರೇಮವಿರುವುದು. ಹಗಲು ರಾತ್ರಿ ಆತನು ನನ್ನನ್ನು ಸ್ಮರಿಸುತ್ತಿರುವನು. ಆತನ ಚಿತ್ತಕ್ಕೆ ನನ್ನ ಮರುವು ಆಗುವುದೇ ಇಲ್ಲ. ಇದರಿಂದ ಯಾವ ಫಲವು ದೊರಕುವುದೆಂಬುದನ್ನು ಈಗ ಶ್ರೀಕೃಷ್ಣನು ಹೇಳತ್ತಿರುವನು ।೩೬೩॥

ನಾನು ಈ ಪೂರ್ವದಲ್ಲಿ ನನ್ನ ಯಾವ ಶ್ರೇಷ್ಠ ಭಕ್ತಿಯನ್ನು ಹೇಳಿರುವೆನು. ಅದೇ ಪದ್ಧತಿಯಿಂದ ನನ್ನ ಭಕ್ತರು ಅತ್ಯಂತ ಪ್ರೇಮದಿಂದ ಪುನಃ ಪುನಃ ನನ್ನ ಪೂಜೆಯನ್ನು ಮಾಡುತ್ತಿರುವರು ।೩೬೪॥ ಅವರು ಒಂದು ಕ್ಷಣ, ಪಲವೂ ಕೂಡ ಮರೆಯದೇ ನನ್ನ ಸ್ಮರಣೆಯನ್ನು ಮಾಡುತ್ತಿರುವರು. ಮತ್ತು ಅನನ್ಯನಿಷ್ಠೆಯಿಂದ ನನ್ನ ಸ್ಮರಣೆಯನ್ನು ಮಾಡುತ್ತ ದೃಢವಾದ ಭಕ್ತಿಯಿಂದ ತಮ್ಮನ್ನು ಮದರ್ಪಣವನ್ನಾಗಿ ಮಾಡಿ ಕೊನೆಗೆ ನಾನೇ ಆಗಿ ಬಿಡುವರು ।೩೬೫॥ ದಿನದಿನಕ್ಕೆ ಮುಂದುಮುಂದಾಗಿ ಅವರ ಪ್ರೇಮವು ಅತಿಶಯವಾಗಿ ಬೆಳೆಯುತ್ತಿರುವುದು. ನಿತ್ಯ ನೂತನವಾದ ಅಪೇಕ್ಷೆಯೊಂದಿಗೆ ಪ್ರೇಮದಿಂದ ಮೇಲಿಂದಮೇಲೆ ನನ್ನ ಭಜನೆಯನ್ನು ಮಾಡುವರು ।೩೬೬॥ ಮಾಡಿದ್ದೇ ಮಾಡುವ ಭಕ್ತಿಯಲ್ಲಿ ಅವರಿಗೆ ಬೇಸರವು ಉಂಟಾಗುವುದಿಲ್ಲ. ಬದಲಾಗಿ ಅವರ ಆನಂದವು ಬೆಳೆಯುತ್ತಿರುವುದು. ನನ್ನ ಭಜನೆಯಲ್ಲಿ ಉಲ್ಹಾಸವಾಗುತ್ತಿರುವುದು ।೩೬೭॥ ನನ್ನನ್ನು ತಮ್ಮ ಹೃದಯದಲ್ಲಿ ಧರಿಸಿಕೊಂಡು ಮನಃಪೂರ್ವಕ ಪ್ರೇಮವು ಭಜನೆಯಲ್ಲಿರಲು, ಆಗ ಸೂರ್ಯನಿಂದ ಮಿಂಚಿನ ಹುಳವು ನಿಸ್ತೇಜವಾಗುವಂತೆ ಎಲ್ಲ ಇಚ್ಛೆಗಳು ನಿಸ್ತೇಜವಾಗಿ ಇಲ್ಲದಾಗುವುವು ।೩೬೮॥ ಸಿಂಹವನ್ನು ಕಂಡಾಕ್ಷಣವೇ ಆನೆಯು ದಿಕ್ಕೆಟ್ಟು ಓಡುವಂತೆ ನಾನು ಹೃದಯಸ್ಥ ಪರಮಾತ್ಮನು ಪ್ರಕಟನಾಗುತ್ತಲೇ ಎಲ್ಲ ವಿಷಯ ಇಚ್ಛೆಗಳು ದೂರ ಓಡಿ ಹೋಗುವುವು ।೩೬೯॥ ನಾನು ಪ್ರಕಟನಾದೆನು ಎಂದು ಹೇಳಿದರೆ ಈ ವಚನಕ್ಕೆ ಕುಂದು ಬರುವುದು. ಏಕೆಂದರೆ ನನ್ನ ಹೊರತಾದ ಖಾಲೀ ಸ್ಥಳವು ಎಲ್ಲಿಯೂ ಇಲ್ಲ. ಹೀಗಿರಲು ನಾನು ಪ್ರಕಟನಾದೆನು ಎಂದು ಯಾರು ಹೇಳಬೇಕು? ।೩೭೦॥

ಉದ್ಧವಾ ಜಾಣ ತತ್ತ್ವತಾ । ಮೀ ಸದಾ ಹೃದಯೀ ವಸತಾ । ಭಕ್ತಾಂಚೀ ಭ್ರಾಂತಿ ಜಾತಾ । ಮೀ ಸ್ವಭಾವತಾ ಪ್ರಕಟಚಿ ।೩೭೧॥ ಭಕ್ತೀ ಕರೂನಿ ಮಾಝೀ ಭಕ್ತೀ । ನಾಶಿಲೀ ಗಾ ನಿಜಭ್ರಾಂತೀ । ತೇಥ ಸ್ವಯಂಭ ಮೀ ಶ್ರೀಪತೀ । ಸಹಜಸ್ಥಿತೀ ಪ್ರಕಟಚೀ ।೩೭೨॥ ಮೀ ಹೃದಯೀ ಪ್ರಕಟಲ್ಯಾ ಪುಢೇ । ಭಕ್ತಾಂಸೀ ಅಲಭ್ಯ ಲಾಭ ಜೋಡೇ । ಫಿಟೇ ಸಂಸಾರಾಚೇ ಸಾಕಡೇ । ಐಕ ಪಾ ಫಾಡೋವಾಡೇ ಸಾಂಗೇನ ।೩೭೩॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇಽಖಿಲಾತ್ಮನಿ ।೩೦॥

ಅರ್ಥ:- ಈ ಪ್ರಕಾರವಾಗಿ ಆತನಿಗೆ ನನ್ನ ಸರ್ವಾತ್ಮಕದ ಸಾಕ್ಷಾತ್ಕಾರವು ಎಂದಾಗುವುದೋ, ಆಗ ಹೃದಯದ ಗಂಟು ಬಿಚ್ಚುವುದು. ಆತನ ಸರ್ವ ಸಂಶಯಗಳು ಇಲ್ಲದಾಗುವುವು ಮತ್ತು ಕರ್ಮವಾಸನೆಗಳು ಕ್ಷೀಣವಾಗುವುವು.

ಉದ್ಧವಾ ಮೀ ಜ್ಯಾಸೀ ಹೃದಯೀ ಭೇಟೇ । ತೋ ಮೀ ಹೃದಯಾಮಾಜೀ ನ ಸಂಠೇ । ಸರ್ವಾತ್ಮಾ ಸರ್ವರೂಪೇ ಪ್ರಕಟೇ । ನವ್ಹೇ ಧಾಕುಟೇ ಸ್ವರೂಪ ಮಾಝೇ ।೩೭೪॥ ಐಸಾ ಮೀ ಪ್ರಕಟಲಿಯಾಪಾಠೀ । ಸಂಸಾರುಚಿ ನ ಪಡೇ ದಿಠೀ । ಮಾವಳೇ ಗುಣೇಸೀ ಭೇದತ್ರಿಪುಟೀ । ಪಳೇ ಉಠಾಉಠೀ ಭವಭಯ ।೩೭೫॥ ಲಾಗತಾ ಸೂರ್ಯಾಚೇ ಕಿರಣ । ಘೃತಾಂಚೇ ನಾಸೇ ಕಠಿಣಪಣ । ತೇವಿ ಮೀ ಪ್ರಕಟಲ್ಯಾ ನಾರಾಯಣ । ನ ಫೋಡಿತಾ ಜಾಣ ಲಿಂಗದೇಹ ನಾಶೇ ।೩೭೬॥ ಧುಳೀ ದಾಟಲೀ ಚಹೂಕಡೇ ತೇ ಚಂಡವಾತೇ ತತ್ಕಾಳ ಉಡೇ । ತೇವೀ ಮಾಝ್ಯಾ ಸ್ವಪ್ರಕಾಶಪುಢೇ । ವಾಸನೇಚೇ ಉಪಡೇ ಸಮೂಳ ಜಾಳ ।೩೭೭॥ ಸಮೂಳ ಉಪಡಿತಾ ವಾಸನೇಸೀ । ಸಂಶಯ ನಿಮೇ ಜೀವೇಭಾವೇಸೀ । ತೇಥ ಕ್ಷಯೋ ಝಾಲಾ ಕರ್ಮಾಸೀ । ಜೇವೀ ರವೀಪಾಶೀ ಅಂಧಾರೇ ।೩೭೮॥ ತೇವೀ ಗುಣ ನಾಸತೀ ಸ್ವಕಾರ್ಯೇಸೀ । ಅವಿದ್ಯಾ ನಾಸೇ ಅಜ್ಞಾನೇಸೀ । ಜೀವ ನಾಸೇ ಶಿವಪಣೇಸೀ । ಚಿದಚಿದ್ ಗ್ರಂಥೀಸೀ ಅಹಂಕಾರು ।೩೭೯॥ ತೇಥ ಸೋಹಂಹಂಸಾಚೀ ಬೋಳವಣ । ನ ಕರಿತಾಂಚಿ ಜಾಹಲೀ ಜಾಣ । ಭೇಣೇ ಪಳಾಲೇ ಜನ್ಮ ಮರಣ । ಪಡಲೇ ಶೂನ್ಯ ಸಂಸಾರಾ ।೩೮೦॥ ಯಾಪರೀ ಭಕ್ತಿಯೋಗೇ ಗಹನ । ಮಾಝೇ ಕರೂನಿಯಾ ಭಜನ । ಭಕ್ತ ಪಾವಲೇ ಸಮಾಧಾನ । ಐಸೇನಿ ಜಾಣ ನಿಜಭಜನೇ ।೩೮೧॥ ಏವಂ ಭಕ್ತಿ - ಜ್ಞಾನ - ಕರ್ಮಯೋಗ । ಯಾ ತಿಹೀ ಯೋಗಾಂಚಾ ವಿಭಾಗ । ತುಜ ಮ್ಯಾ ಸಾಂಗಿತಲಾ ಸಾಂಗ । ಹೇ ವರ್ಮ ಚಾಂಗ ಸುತ್ಪ್ರಾಪ್ತೀ ।೩೮೨॥

ಹೇ ಉದ್ಧವಾ, ನಿಜವಾಗಿಯೂ ನಾನು ಯಾವಾಗಲೂ ಹೃದಯದಲ್ಲಿಯೇ ಇರುವೆನು. ಭಕ್ತರ ಭ್ರಾಂತಿಯು ದೂರವಾಗುತ್ತಲೇ ನಾನು ಸ್ವಭಾವತಃವೇ ಪ್ರಕಟನಾಗಿರುವೆನು. ಇದನ್ನು ಲಕ್ಷದಲ್ಲಿಡು ।೩೭೧॥ ಭಕ್ತರು ನನ್ನ ಭಕ್ತಿಯನ್ನು ಮಾಡಿ ತಮ್ಮ ಭ್ರಾಂತಿಯನ್ನು ಕಳೆದುಕೊಂಡಿರುವರು. ಆಗ ಸ್ವಯಂಭೂನಾದ ನಾನು ಶ್ರೀಪತಿಯು ಸಹಜವಾಗಿಯೇ ಪ್ರಕಟನಾಗುವೆನು ।೩೭೨॥ ನಾನು ಹೃದಯದಲ್ಲಿ ಪ್ರಕಟನಾಗುತ್ತಲೇ ಭಕ್ತರಿಗೆ ಅಲಭ್ಯವಾದ ಲಾಭವಾಗುವುದು. ಸಂಸಾರರೂಪ ಸಂಕಟಗಳು ದೂರಾಗುವುವು. ಇದನ್ನೇ ನಾನೀಗ ಸವಿಸ್ತಾರವಾಗಿ ಹೇಳುವೆನು. ಅದನ್ನು ನೀನು ಸರಿಯಾಗಿ ಆಲಿಸು ।೩೭೩॥

ಹೇ ಉದ್ಧವಾ, ನಾನು ಯಾರ ಹೃದಯದಲ್ಲಿ ಪ್ರಕಟನಾಗುವೆನೋ, ಆತನ ಹೃದಯದಲ್ಲಿ ನಾನು ಹಿಡಿಸುವುದಿಲ್ಲ. ಸರ್ವಾತ್ಮನಾದ ನಾನು ಸರ್ವರ ರೂಪದಲ್ಲಿ ಪ್ರಕಟನಾಗುವೆನು. ನನ್ನ ಸ್ವರೂಪವು ಚಿಕ್ಕದ್ದಲ್ಲ ।೩೭೪॥ ಹೀಗೆನಾನು ಪ್ರಕಟನಾದೆನೆಂದರೆ ಸಂಸಾರ ಎನ್ನುವುದು ಕಣ್ಣಿಗೆ ಯಾವುದೂ ಕಾಣಿಸುವುದಿಲ್ಲ. ಭೇದದ ತ್ರಿಪುಟಿಯು ಗುಣಗಳ ಸಮೇತವಾಗಿ ಮಾಯವಾಗಿ ಭವಭಯವು ತತ್ಕಾಲದಲ್ಲಿ ಓಡಿ ಹೋಗುವುದು ।೩೭೫॥ ತುಪ್ಪಕ್ಕೆ ಸೂರ್ಯನ ಕಿರಣಗಳು ತಾಗುತ್ತಲೇ ಅದರ ಕಠಿಣತ್ವವು ಇಲ್ಲದಾಗುವಂತೆ ನಾರಾಯಣನಾದ ನಾನು ಪ್ರಕಟನಾಗುತ್ತಲೇ ಲಿಂಗದೇಹವು ಒಡೆಯದೇ ನಾಶವಾಗುವುದು ।೩೭೬॥ ನಾಲ್ಕೂ ಕಡೆಗಳಲ್ಲಿ ಹಬ್ಬಿರುವ ಧೂಳು ಬಿರುಗಾಳಿಯಿಂದ ಹಾರಿಹೋಗುವಂತೆ ನನ್ನ ಪ್ರಕಾಶದಿಂದ ವಾಸನೆಗಳ ಸರ್ವ ಜಾಲಗಳು ಬೇರು ಸಮೇತವಾಗಿ ಕಿತ್ತಿಬೀಳುವುವು ।೩೭೭॥ ವಾಸನೆಗಳನ್ನು ಬೇರು ಸಮೇತವಾಗಿ ಕಿತ್ತೊಗೆಯಲು ಆಗ ಜೀವಭಾವದೊಂದಿಗೆ ಸಂಶಯವು ಇಲ್ಲದಾಗುವುದು. ಇದರಿಂದ ಸೂರ್ಯನೆದುರಿನಲ್ಲಿ ಕತ್ತಲು ಇಲ್ಲದಾಗುವಂತೆ ಕರ್ಮಗಳ ಕ್ಷಯವಾಗುವುದು ।೩೭೮॥ ತನ್ನ ಕಾರ್ಯಗಳ ಸಹ ಗುಣಗಳ ನಾಶವಾಗುವುದು. ಅಜ್ಞಾನ ಸಹ ಅವಿದ್ಯೆಯೂ ಕೂಡ ಇಲ್ಲದಾಗುವುದು. ಶಿವತ್ವದೊಂದಿಗೆ ಜೀವತ್ವವು ಲಯಗೊಳ್ಳುವುದು ಮತ್ತು ಚಿದ್‌ಗ್ರಂಥೀ ಸಹ ಅಹಂಕಾರವು ನಾಶವಾಗುವುದು ।೩೭೯॥ ಆಗ ಸೋಹಂ ಹಂಸವು ಹೇಳದೇ ಕೇಳದೇ ಹೋಗಿಬಿಡುವುದು. ಇದನ್ನು ಲಕ್ಷದಲ್ಲಿಡು. ಜನ್ಮಮರಣವು ಭಯದಿಂದ ಓಡಿ ಹೋಗುವುದು ಮತ್ತು ಸಂಸಾರದ ಮೇಲೆ ನೀರು ಬೀಳುವುದು. ಅಂದರೆ ಶೂನ್ಯವಾಗುವುದು ।೩೮೦॥ ಇಂತಹ ಗಹನವಾದ ಭಕ್ತಿಯೋಗದಿಂದ ನನ್ನ ಭಜನೆಯನ್ನು ಮಾಡಿ ಭಕ್ತರು ಆತ್ಮಭಜನೆಯಿಂದ ಸಂಪೂರ್ಣವಾಗಿ ಸಮಾಧಾನವನ್ನು ಪಡೆಯುವರು ।೩೮೧॥ ಈ ಪ್ರಕಾರವಾಗಿ ಭಕ್ತಿ ಜ್ಞಾನ ಮತ್ತು ಕರ್ಮ ಈ ಮೂರನ್ನೂ ಕೂಡ ಯೋಗಗಳಲ್ಲಿನ ಭೇದವನ್ನು ನಾನು ನಿನಗೆ ಸ್ಪಷ್ಟಮಾಡಿ ತೋರಿಸಿಕೊಟ್ಟಿರುವೆನು. ಇದು ನನ್ನ ಪ್ರಾಪ್ತಿಯ ನಿಜವಾದ ಮರ್ಮವಾಗಿರುವುದು ।೩೮೨॥

ಯೇಥ ವಿಶೇಷ ಮಾಝೀ ಭಕ್ತೀ । ನ ಪಾಹೇ ಸಾಹ್ಯ ಸಾಂಗಾತೀ । ನವ್ಹೇ ಆಣಿಕಾಂಚೀ ಪಂಗಿಸ್ತೀ । ಸಾಧೀ ಮತ್ಪ್ರಾಪ್ತೀ ಅಂಗೋವಾಂಗೀ ।೩೮೩॥ ನ ಕರಿತಾ ಮಾಝೇ ಭಜನ । ಸರ್ವಥಾ ನುಪಜೇ ಮಾಝೇ ಜ್ಞಾನ । ಕರ್ಮ ನ ಕರಿತಾ ಮದರ್ಪಣ । ತೇಚಿ ಜಾಣ ಅಕರ್ಮ ।೩೮೪॥ ಯಾಲಾಗೀ ಮುಖ್ಯ ಜೇ ನಿಜಜ್ಞಾನ । ತೇ ಅಪೇಕ್ಷೀ ಮಾಝೇ ಭಜನ । ತೇಥ ಕರ್ಮ ಬಾಪುಡೇ ರಂಕ ಜಾಣ । ಭಜನೇವೀಣ ಸರೇನಾ ।೩೮೫॥ ಏವಂ ಜ್ಞಾನ ಕರ್ಮೇ ಪರಮಾರ್ಥೀ । ಮಾಝೇ ಭಕ್ತೀಸ್ತವ ಹೋತಿ ಸರತೀ । ತೇ ಭಕ್ತೀಚೀ ನಿಜಖ್ಯಾತೀ । ಐಕ ತುಜಪ್ರತೀ ಸಾಂಗೇನ ।೩೮೬॥

ತಸ್ಮಾನ್ಮದ್ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ ।೩೧॥

ಅರ್ಥ:- ಯಾವ ಯೋಗಿಯು ನನ್ನ ಭಕ್ತಿಯಿಂದ ಯುಕ್ತನಾಗಿ ಮತ್ತು ನನ್ನ ಚಿಂತನೆಯಲ್ಲಿ ಮಗ್ನನಾಗಿರುವನೋ, ಆತನಿಗೆ ಜ್ಞಾನ, ವೈರಾಗ್ಯದ ಆವಶ್ಯಕತೆ ಇರುವುದಿಲ್ಲ. ನನ್ನ ಭಕ್ತಿಯ ಮುಖಾಂತರವಾಗಿ ಆತನ ಕಲ್ಯಾಣವಾಗುವುದು.

ಕರೂ ನೇಣೇ ಕರ್ಮಾಚರಣ । ನ ಸಾಧಿತಾ ವೈರಾಗ್ಯ ಜ್ಞಾನ । ಭಾವೇ ಕರಿತಾ ಮಾಝೇ ಭಜನ । ಮಾಝ್ಯಾ ಸ್ವರೂಪೀ ಮನ ಠೇವೂನಿ ।೩೮೭॥ ತೇಥ ಜ್ಞಾನಕರ್ಮಾದಿಕೇ ಜಾಣ । ಮುಖ್ಯ ವೈರಾಗ್ಯಹೀ ಆಪಣ । ಮದ್ಭಕ್ತೀಸೀ ಯೇತೀ ಲೋಟಾಂಗಣ । ಚರಣಾ ಶರಣ ಪೈ ಯೇತೀ ।೩೮೮॥ ಶರಣ ಯೇಣೇ ಹೇ ಕಾಯಶೀ ಗೋಠೀ । ಕೇವಳ ಜನ್ಮತೀ ಭಕ್ತೀಚ್ಯಾ ಪೋಟೀ । ಮಗ ಲಡೇವಾಳೇ ಘಾಲೂನಿ ಮಿಠೀ । ಸ್ವಾನಂದಾಚೀ ಗೋಮಟೀ ಮಾಗತೀ ಗೋಡೀ ।೩೮೯॥ ಏವಂ ಭಕ್ತಿ ಆಪುಲೇ ಅಂಕೀ ಜಾಣ। ಕರೀ ಜ್ಞಾನಾದಿಕಾಂಚೇ ಲಾಲನ । ಪರಮಾನಂದ ಪಾಜೂನಿ ಪೂರ್ಣ । ಕರೀ ಪಾಲನ ನಿಜಾಂಗೇ ।೩೯೦॥ ತೇ ಆತುಡಲ್ಯಾ ಮಾಝೀ ಭಕ್ತೀ । ಜ್ಞಾನಾದಿಕೇ ಕಾಮಾರೀ ಹೋತೀ । ತೇಚಿ ವಿಖೀಂಚೀ ಉಪಪತ್ತೀ । ಸ್ವಯೇ ಶ್ರೀಪತೀ ಸಾಂಗತ ।೩೯೧॥

ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ ।೩೨॥

ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಂಜಸಾ ।
ಸ್ವರ್ಗಾಪವರ್ಗಂ ಮದ್ಧಾಮ ಕಥಂಚಿದ್ ಯದಿ ವಾಂಛತಿ ।೩೩॥

ಅರ್ಥ:- ಕಾಮ್ಯ ಕರ್ಮ, ತಪಸ್ಸು, ಜ್ಞಾನ, ವಿರಕ್ತಿ, ಹಠಯೋಗ, ದಾನ, ಧಾರ್ಮಿಕ ಕರ್ತವ್ಯ ಹಾಗೂ ಜೀವನವನ್ನು ಪರಿಪೂರ್ಣಗೊಳಿಸುವ ಎಲ್ಲ ಇತರ ಮಾರ್ಗಗಳಿಂದ ಸಾಧಿಸಬಹುದಾದ್ದೆಲ್ಲವನ್ನೂ ನನ್ನ ಭಕ್ತನು ನನಗೆ ಸಲ್ಲಿಸುವ ಪ್ರೇಮಸೇವೆಯ ಮೂಲಕ ಸುಲಭವಾಗಿ ಸಾಧಿಸುತ್ತಾನೆ. ಹೇಗೋ ನನ್ನ ಭಕ್ತನು ಸ್ವರ್ಗ,ಮೋಕ್ಷ ಅಥವಾ ನನ್ನ ಧಾಮದಲ್ಲಿ ನಿವಾಸವನ್ನು ಬಯಸಿದರೆ, ಆತನು ಅಂತಹ ಅನುಗ್ರಹವನ್ನು ಸುಲಭವಾಗಿ ಪಡೆಯುವನು.

ಇವುಗಳಲ್ಲಿ ನನ್ನ ಭಕ್ತಿಯೊಂದೇ ವಿಶೇಷವಾಗಿ, ನಿಜವಾಗಿಯೂ ಶ್ರೇಷ್ಠವಾಗಿರುವುದು. ಈ ಭಕ್ತಿಯು ಇನ್ನೊಂದರ ಸಹಾಯ ಅಥವಾ ಇನ್ನೊಂದರ ಸಂಗತಿಯನ್ನು ಸ್ವಲ್ಪವೂ ಕೂಡ ಅಪೇಕ್ಷೆಯನ್ನು ಮಾಡುವುದಿಲ್ಲ. ಅದು ತತ್ಕಾಲದಲ್ಲಿ ನನ್ನ ಪ್ರಾಪ್ತಿಯನ್ನು ಮಾಡಿಕೊಡುವುದು ।೩೮೩॥ ನನ್ನ ಭಜನೆಯನ್ನು ಮಾಡದಿದ್ದರೆ ಜ್ಞಾನವು ಎಂದಿಗೂ ಉತ್ಪನ್ನವಾಗಲಾರದು. ಕರ್ಮಗಳನ್ನು ನನಗೆ ಅರ್ಪಿಸದಿದ್ದರೆ ಅದುವೇ ಅಕರ್ಮವಾಗುವುದು ।೩೮೪॥ ಅದಕ್ಕಾಗಿ ಮುಖ್ಯವಾಗಿರುವ ಆತ್ಮಜ್ಞಾನವು ಈ ಯಾವ ಭಜನೆಯ ಅಪೇಕ್ಷೆಯನ್ನು ಮಾಡುವುದು. ಅಂದಮೇಲೆ ಅದರ ಮುಂದೆ ಪಾಪಕರ್ಮಗಳು ದೀನರಂಕವಾಗುವುವು. ಅವುಗಳನ್ನು ಯಾರು ಕೇಳಬೇಕು ? ಅವು ನನ್ನ ಭಜನೆಯ ಹೊರತಾಗಿ ಮುಂದೆ ಬರಲು ಶಕ್ಯವೇ ಇಲ್ಲ ।೩೮೫॥ ತಾತ್ಪರ್ಯವೇನೆಂದರೆ ಜ್ಞಾನ ಮತ್ತು ಕರ್ಮ ಇವು ಪರಮಾರ್ಥದಲ್ಲಿ ಭಕ್ತಿಯಿಂದಲೇ ಶ್ರೇಷ್ಠತ್ವಕ್ಕೆ ಮುಟ್ಟಿಕೊಳ್ಳುವುವು. ಆ ಭಕ್ತಿಯ ನಿಜವಾದ ಮಹಾತ್ಮ್ಯೆಯನ್ನು ನಾನೀಗ ನಿನಗೆ ಹೇಳುವೆನು, ಅದನ್ನು ಸರಿಯಾಗಿ ಕೇಳು ।೩೮೬॥

ಯಾರಿಗೆ ಕರ್ಮಾಚರಣೆಗಳನ್ನು ಮಾಡುವುದು ತಿಳಿಯುವುದಿಲ್ಲ. ಯಾರು ವೈರಾಗ್ಯ, ಜ್ಞಾನವನ್ನು ಸಂಪಾದಿಸಿರುವುದಿಲ್ಲ. ಹೀಗಿದ್ದರೂ ಕೂಡ ನನ್ನ ಸ್ವರೂಪದಲ್ಲಿ ಲಕ್ಷವನ್ನಿಟ್ಟು ಭಕ್ತಿಭಾವದಿಂದ ನನ್ನ ಭಜನೆಯನ್ನು ಮಾಡುವುದರಿಂದ ।೩೮೭॥ ಜ್ಞಾನಕರ್ಮಾದಿಗಳು ಅಲ್ಲದೇ ಸ್ವತಃ ವೈರಾಗ್ಯವೂ ಕೂಡ ನನ್ನ ಭಕ್ತಿಯ ಚರಣಗಳಲ್ಲಿ ಲೋಟಾಂಗಣವನ್ನು ಹಾಕುತ್ತ ಶರಣಾಂಗತವಾಗುವುದು ।೩೮೮॥ ಶರಣಾಂಗತವಾಗುವುದು ಅದೇನು ದೊಡ್ಡ ಮಾತು? ಆ ಭಕ್ತಿಯ ಹೊಟ್ಟೆಯಲ್ಲಿ ಅವು ಜನ್ಮಕ್ಕೆ ಬರುವುವು ಮತ್ತು ಪ್ರೇಮದಿಂದ ಅದಕ್ಕೆ ತೆಕ್ಕೆಬಿದ್ದು ಆತ್ಮಾನಂದದ ರುಚಿಯನ್ನು ಬೇಡುವುವು ।೩೮೯॥ ಸಾರಾಂಶವೇನೆಂದರೆ, ಭಕ್ತಿ ಎಂಬುದು ಜ್ಞಾನ,ವೈರಾಗ್ಯ, ಕರ್ಮ ಇವುಗಳನ್ನು ತನ್ನ ತೊಡೆಯ ಮೇಲೆ ಆಡಿಸುವುದು ಮತ್ತು ಪರಮಾನಂದವನ್ನು ಪೂರ್ಣವಾಗಿ ಕುಡಿಸಿ ಅವರನ್ನು ಜೋಪಾನ ಮಾಡುವುದು ।೩೯೦॥ ಹೀಗೆ ನನ್ನ ಭಕ್ತಿಯು ಸಾಧ್ಯವಾಗುತ್ತಲೇ ಜ್ಞಾನಾದಿಕಗಳು ಆ ಭಕ್ತಿಯ ದಾಸರಾಗುವುವು. ಈ ವಿಷಯದ ನಿರೂಪಣೆಯನ್ನು ಸ್ವತಃ ಶ್ರೀಪತಿಯು ಈಗ ಹೇಳುವನು ।೩೯೧॥

ಜೇ ಪಾವಿಜೇ ಸ್ವಧರ್ಮಕರ್ಮಾದರೇ । ಜೇ ಪಾವಿಜೇ ನಿರ್ಬಂಧ ತಪಾಚಾರೇ । ಜೇ ಸಾಂಖ್ಯಜ್ಞಾನವಿಚಾರೇ । ಪಾವಿಜೇ ನಿರ್ಧಾರೇ ಜೇ ವಸ್ತು ।।೯೨।। ಜೇ ಪಾವಿಜೇ ವಿಷಯತ್ಯಾಗೇ । ಜೇ ಪಾವಿಜೇ ಅಷ್ಟಾಂಗಯೋಗೇ । ಜೇ ವಾತಾಂಬುಪರ್ಣಾಶನಭೋಗೇ । ಜೇ ದಾನಪ್ರಸಂಗೇ ಪಾವಿಜೇ ।।೯೩।। ಜೇ ಸಾಧೇ ವೇದಾಧ್ಯಯನೇ । ಜೇ ಸಾಧ್ಯೇ ಸತ್ಯವಚನೇ । ಜೇ ಸಾಧೇ ಅನೇಕೀ ಸಾಧನೇ । ತೇ ಮದ್ ಭಜನೇ ಪಾವಿಜೇ ।।೯೪।। ಹೇ ನ ಸೋಶಿತಾ ಸಾಧನಸಾಂಕಡೇ । ನುಲ್ಲಂಘಿತಾ ಗಿರಿ ಕಪಾಟಕಡೇ ।ಹೀ ಸಕಳ ಫಳೇ ಯೇತೀ ದಾರಾಪುಢೇ । ಜೈ ಮಾಝೀ ಆತುಡೇ ನಿಜಭಕ್ತೀ ।।೯೫।। ಉದ್ಧವಾ ತೂ ಮ್ಹಣಸೀ ಜಾಣ । ಐಶೀ ತೇ ತುಝೀ ಭಕ್ತಿ ಕೋಣ । ಬ್ರಹ್ಮಭಾವೇ ಜೇ ಗುರುಭಜನ । ತೇ ಭಕ್ತೀಚಾ ಪೂರ್ಣ ಹಾ ಪ್ರತಾಪು ।।೯೬।। ಸದ್ಗುರುಭಜನಾಪರತೀ । ಸಾಧಕಾಂಸೀ ನಾಹೀ ಪ್ರಾಪ್ತೀ । ಮೀ ಭಗವಂತ ಕರೀ ಗುರುಭಕ್ತೀ । ಇತರಾಂಚಾ ಕಿತೀ ಪವಾಡು ।।೯೭।। ಮೀಹೀ ಸದ್ಗುರುಚೇನಿ ಧರ್ಮೇ । ಪಾವಲೋ ಏವಢಿಯೇ ಮಹಿಮೇ । ತ್ಯಾ ಸದ್ಗುರೂಚೇ ಗುರು ಗರಿಮೇ । ಕೋಣ್ಹೇ ಉಪಮೇ ಉಪಮಾವೇ ।।೯೮।। ಜೇ ಗುರುಬ್ರಹ್ಮ - ಅಭೇದಭಕ್ತ । ಅವಚಟೇ ಅಣುಮಾತ್ರ ವಾಂಛಿತ । ತೈ ವೈಕುಂಠಾದಿ ಸಮಸ್ತ । ಮೀ ತ್ಯಾಂಸೀ ದೇತ ಸ್ವರ್ಗಾಪವರ್ಗ ।।೯೯।। ಹೇ ಹೀ ಬೋಲತಾ ಅತ್ಯಂತ ಥೋಡೇ । ಮೀ ತ್ಯಾಂಚ್ಯಾ ಭಜನಸುರವಾಡೇ । ಭುಲಲೋ ಗಾ ವಾಡೇಕೋಡೇ । ತ್ಯಾ ಮಾಗೇಪುಢೇ ಸದಾ ತಿಷ್ಠೇ ।।೧೦೦।। ಮದ್ಭಕ್ತ ನೈರಾಶ್ಯೇ ಅತಿಗಾಢೇ । ತೇ ಮಾಗತೀಲ ಹೇ ಕದಾ ನ ಘಡೇ । ತೇಹೀ ಲಕ್ಷಣ ತುಜಪುಢೇ । ಅತಿನಿವಾಡೇ ಸಾಂಗೇನ ।।೧೦೧।।

ನ ಕಿಂಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾಂತಿನೋ ಮಮ । ವಾಂಛಂತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್ ।।೩೪।।

ಅರ್ಥ:- ನನ್ನ ಅನನ್ಯಪ್ರೇಮೀ ಮತ್ತು ಧೈರ್ಯವಂತ ಭಕ್ತನು ಸ್ವತಃ ಯಾವ ಇಚ್ಛೆಯನ್ನೂ ಇಡಲಾರನು. ನಾನು ಕೊಟ್ಟಿರುವ ನಿತ್ಯ ಕೈವಲ್ಯವನ್ನೂ ಕೂಡ ಆತನು ಸ್ವೀಕರಿಸಲಾರನು.

ಜ್ಯಾಸೀ ನಘೇಣೇಪಣಾಚಾ ಪ್ರಬೋಧು । ಸಾಚಾರ ಝಾಲಾ ಅತಿವಿಶದು । ಐಸಾ ನಿರಪೇಕ್ಷ ಜೋ ಶುದ್ಧು । ತೋ ಸತ್ಯ ಸಾಧು ಮಜಮಾನ್ಯ ।।೧೦೨।। ಜ್ಯಾಚ್ಯಾ ಠಾಯೀ ನಿರಪೇಕ್ಷತಾ । ಧೈರ್ಯ ತ್ಯಾಚೇ ಚರಣ ವಂದೀ ಮಾಥಾ । ಜ್ಯಾಚ್ಯಾ ಠಾಯೀ ಅಧೀರತಾ । ತೇಥ ನಿರಪೇಕ್ಷತಾ ಅಸೇನಾ ।।೧೦೩।। ಕೋಟಿಜನ್ಮೇ ಬೋಧು ಜೋಡೇ । ತೈ ಹೇ ನಿರಪೇಕ್ಷತಾ ಆತುಡೇ । ನಿರಪೇಕ್ಷ ತೇವರುತೇ ಚಢೇ । ಐಸೇ ನಾಹೀ ಪುಡೇ ಸಾಧನ ।।೧೦೪।।

ಉತ್ತಮ ರೀತಿಯಲ್ಲಿ ಸ್ವಧರ್ಮ ಆಚರಣೆಯಿಂದ ಯಾವುದು ಪ್ರಾಪ್ತವಾಗುವುದೋ, ಘೋರ ತಪಶ್ಚರ್ಯದಿಂದ ಯಾವುದು ಸಾಧ್ಯವಾಗುವುದೋ, ಸಾಂಖ್ಯಜ್ಞಾನದ ವಿಚಾರದಿಂದ ಯಾವುದು ದೊರಕುವುದೋ ।।೯೨।। ವಿಷಯತ್ಯಾಗದಿಂದ ಯಾವುದು ಪ್ರಾಪ್ತವಾಗುವುದೋ ಅಷ್ಟಾಂಗಯೋಗದಿಂದ ಯಾವುದು ಸಾಧ್ಯವಾಗುವುದೋ, ಎಲೆ, ನೀರು, ವಾಯು ಸೇವನೆಯಿಂದ ಯಾವುದು ದೊರಕುವುದೋ, ದಾನದಿಂದ ಯಾವುದು ಸಿಗುವುದೋ ।।೯೩।। ವೇದಾಧ್ಯಯನದಿಂದ ಯಾವುದು ಸಾಧಿಸುವುದೋ, ಸತ್ಯ ಭಾಷಣದಿಂದ ಯಾವುದು ದೊರಕುವುದೋ, ಅನೇಕ ಪ್ರಕಾರದ ಸಾಧನೆಗಳಿಂದ ಯಾವುದು ಪ್ರಾಪ್ತವಾಗುವುದೋ, ಇವುಗಳೆಲ್ಲವೂ ಒಂದೇ ನನ್ನ ಪ್ರೇಮಯುಕ್ತ ಭಜನೆಯಿಂದ ದೊರಕುವುದು ।।೯೪।। ಇಷ್ಟೊಂದು ಕಷ್ಟಗಳ ಸರ್ವಸಾಧನೆಗಳ ಬೆನ್ನು ಹತ್ತದೇ ಪರ್ವತದ ಗುಹೆಗಳನ್ನು ಶೋಧಿಸದೇ ನನ್ನ ಭಕ್ತಿಯನ್ನು ಸಾಧ್ಯಮಾಡಿಕೊಂಡರೆ ಸರ್ವ ಫಲಗಳು ಬಂದು ನಮ್ರದಿಂದ ಎದುರಿನಲ್ಲಿ ನಿಂತುಕೊಳ್ಳುವುವು ।।೯೫।। ಹೇ ಉದ್ಧವಾ, ಇಂತಹ ನಿನ್ನ ಭಕ್ತಿಯು ಯಾವುದು? ಎಂದು ನೀನು ಕೇಳಬಹುದು. ಅದೇನೆಂದರೆ, ಬ್ರಹ್ಮ ಭಾವನೆಯಿಂದ ಗುರುಗಳ ಭಜನೆ ಭಕ್ತಿಯ, ಇದು ಪೂರ್ಣ ಪ್ರತಾಪವಾಗಿರುವುದು ।।೯೬।। ಸಾಧಕರಿಗೆ ಗುರುಭಜನೆಯ ಹೊರತಾಗಿ ಅನ್ಯ ಶ್ರೇಷ್ಠವಾದ ಲಾಭವಿರುವುದಿಲ್ಲ. ಸಾಕ್ಷಾತ್ ಭಗವಂತನಾದ ನಾನೂ ಕೂಡ ಗುರುಗಳ ಭಕ್ತಿಯನ್ನು ಮಾಡುವೆನು. ಅಂದಮೇಲೆ ಇತರರ ಯಾವ ಕಥೆ? ।।೯೭।। ನಾನಾದರೂ ಸದ್ಗುರುಗಳ ಕೃಪೆಯಿಂದಲೇ ಇಷ್ಟೊಂದು ಶ್ರೇಷ್ಠ ಪದಕ್ಕೆ ಮುಟ್ಟಿರುವೆನು. ಅಂದಮೇಲೆ ಈ ಸದ್ಗುರುಗಳ ಕೃಪೆಗೆ ಯಾವ ಉಪಮೆಯನ್ನು ಕೊಡಬೇಕು? ।।೯೮।। ಯಾರೇ ಆಗಲಿ ಗುರುಗಳಿಗೆ ಪರಬ್ರಹ್ಮನೆಂದು ತಿಳಿದು ಅಭೇದ ಭಾವನೆಯಿಂದ ಭಕ್ತಿಯನ್ನು ಮಾಡುತ್ತಿದ್ದರೆ, ಅವರಿಗೆ ಏನಾದರೂ ಇಚ್ಛೆಯಾದರೆ, ಅದನ್ನು ನಾನು ಪೂರ್ಣಗೊಳಿಸುವೆನು.ವೈಕುಂಠ, ಸ್ವರ್ಗ, ಮೋಕ್ಷ ಇತ್ಯಾದಿ ಯಾವುದೇ ಕೇಳಲಿ, ಅದನ್ನು ನಾನು ಕೊಡುವೆನು।।೯೯।। ಇದೂ ಕೂಡ ಏನೂ ಅಲ್ಲ. ಅವರ ಭಜನೆಗೆ ನಾನು ಎಷ್ಟೊಂದು ಭುಲಾಯಿಸಿರುವೆನೆಂದರೆ ಅವರ ಹಿಂದೆ ಮುಂದೆ ನಾನು ಯಾವಾಗಲೂ ನಿಂತುಕೊಂಡಿರುವೆನು ।।೧೦೦।। ನನ್ನ ಭಕ್ತರು ಅತ್ಯಂತ ನೈರಾಶ್ಯವಾಗಿರುವರು. ಅವರು ಏನಾದರೂ ಕೇಳುವುದು ಇದು ಸಾಧಿಸುವುದೇ ಇಲ್ಲ. ಇದರ ನಿರೂಪಣೆಯನ್ನು ನಾನು ಬಹಳ ಆನಂದದಿಂದ ಮಾಡುವೆನು, ಅದನ್ನು ನೀನು ಆಲಿಸು ।।೧೦೧।।

ಯಾವುದನ್ನೂ ತೆಗೆದುಕೊಳ್ಳಬಾರದೆಂಬ ಜ್ಞಾನವು ಅವರ ಹೃದಯದಲ್ಲಿ ನಟ್ಟಿಕೊಂಡಿರುವುದು. ಹೀಗೆ ನಿರಪೇಕ್ಷ, ಶುದ್ಧರಾದವರೇ ನಿಜವಾದ ಸಾಧುಗಳು, ನನಗೆ ಮಾನ್ಯರು ।।೧೦೨।। ಯಾರು ನಿರಪೇಕ್ಷ ಧೈರ್ಯವಂತರಾಗಿರುವರೋ ಅವರ ಚರಣಗಳಿಗೆ ನಾನು ಶಿರಸಾ ವಂದಿಸುವೆನು. ಯಾರಲ್ಲಿ ಧೈರ್ಯವು ಇರುವುದಿಲ್ಲವೋ ಅಲ್ಲಿ ನಿರಪೇಕ್ಷೆಯು ಇರುವುದಿಲ್ಲ ।।೧೦೩।। ಕೋಟ್ಯಾವಧೀ ಜನ್ಮಗಳ ನಂತರ ಈ ಜ್ಞಾನವು ಪ್ರಾಪ್ತವಾಗುವುದು. ನಂತರ ನಿರಪೇಕ್ಷತೆಯು ಕೈ ಸೇರುವುದು. ನಿರಪೇಕ್ಷೆಯ ಭಾವಕ್ಕಿಂತಲೂ ಅನ್ಯ ಯಾವುದೂ ಕೂಡ ಶ್ರೇಷ್ಠವಾದ ಸಾಧನೆಯು ಇಲ್ಲ ।।೧೦೪।।

ಐಶಿಯೇ ನಿರಪೇಕ್ಷತಾಪ್ರಾಪ್ತೀ । ಮಾಝ್ಯಾ ಭಜನೀ ಅತಿಪ್ರೀತೀ । ತೀ ಲಾಭೇ ಮಾಝೀ ಚೌಥೀ ಭಕ್ತೀ । ಜೇಸೀ 'ಏಕಾಂತೀ' ಮ್ಹಣೇ ವೇದು ॥೪೦೫॥ ಐಕ ಏಕಾಂತಭಕ್ತೀಚೀ ಮಾತು । ದೇವಾಭಕ್ತಾಂಸೀ ಹೋಯ ಏಕಾಂತು । ಭಕ್ತ ರಿಘೇ ದೇವಾ ಆಂತು । ದೇವ ಭಕ್ತಾಂತು ಸಬಾಹ್ಯ ॥೪೦೬॥ ಐಸೇ ಅಭೇದ ಮಾಝೇ ಭಜನ । ಯಾ ನಾಂವ 'ಏಕಾಂತಭಕ್ತೀ' ಜಾಣ । ಮಜವೇಗಳೇ ಕಾಂಹೀ ಭಿನ್ನ । ನ ದೇಖೇ ಆನ ಜಗಾಮಾಜೇ ॥೪೦೭॥ ತ್ಯಾಂಸೀ ಚಹೂ ಪುರುಷಾರ್ಥೇಸೀ ಮುಕ್ತೀ । ಮೀ ಸ್ವಯೇ ದೇತಾಹೇ ಶ್ರೀಪತೀ । ತೇ ದುರೋನಿ ದೃಷ್ಟೀ ನ ಪಾಹತೀ । ಮಾ ಧರಿತೀ ಹಾತೂ ಹೇ ಕದಾ ನ ಘಡೇ ॥೪೦೮॥ ತೇ ಸ್ವಮುಖೇ ಕಾಂಹೀ ಮಾಗತೀ । ಹೇ ನ ಘಡೇ ಕದಾ ಕಲ್ಪಾಂತೀ । ಸಾಂಡೂನಿ ಮಾಝೀ ಏಕಾಂತಭಕ್ತೀ । ಕೈವಲ್ಯ ನ ಘೇತೀ ತೇ ನಿಜಭಕ್ತ ॥೪೦೯॥ ಮೋಕ್ಷ ಹೀ ನ ಘ್ಯಾವಯಾ ಕೋಣ ಭಾವೋ । ತ್ಯಾಚಾಹೀ ಮಥಿತ ಅಭಿಪ್ರಾವೋ । ಸ್ವಯೇ ಸಾಂಗೇ ದೇವಾಧಿದೇವೋ । ಅಗಮ್ಯ ಮಹಾ ಹೋ ಶ್ರುತಿಶಾಸ್ತ್ರಾ ॥೪೧೦॥

ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಕಲ್ಪಕಮ್ । ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್ ॥೩೫॥

ಅರ್ಥ:- ಹೇ ಉದ್ಧವಾ, ಸರ್ವಕ್ಕೂ ಶ್ರೇಷ್ಠವಾದ ಮತ್ತು ಮಹಾನ ನಿಃಶ್ರೇಯಸ ಪರಮ ಕಲ್ಯಾಣಕಾರಕ ಇದು ನಿರಪೇಕ್ಷತೆಯ ಎರಡನೆಯ ನಾಮವಾಗಿರುವುದು. ಯಾವನು ನಿರಪೇಕ್ಷ ಮತ್ತು ನಿಷ್ಕಾಮನಾಗಿರುವನೋ, ಆತನಿಗೆ ನನ್ನ ಭಕ್ತಿಯು ಪ್ರಾಪ್ತವಾಗುವುದು.

ಜೋ ನಿರಪೇಕ್ಷ ನಿರ್ವಿಶೇಷ । ತೋ ಮಜ ಪೂಜ್ಯ ಮಹಾಪುರುಷ । ಮೋಕ್ಷ ತ್ಯಾಚೇ ದೃಷ್ಟಿ ಭೂಸ । ಧನ್ಯ ನೈರಾಶ್ಯ ತಿಹೀ ಲೋಕೀ ॥೪೧೧। ಐಕ ನಿರಪೇಕ್ಷತೇಚಾ ಉತ್ಕೃಷ್ಟ । ತೇಥ ಚಾರೀ ಪುರುಷಾರ್ಥ ಫಳಕಟ । ವೈಕುಂಠಕೈಲಾಸಾದಿ ಶೇಷ್ಠ । ತೇ ಪಾಯವಾಟ ನಿರಪೇಕ್ಷಾ ॥೪೧೨॥ ನಿರಪೇಕ್ಷಾ ಪಾಶೀ ಜಾಣ । ವೋಳಂಗೇ ಯೇತಿ ಸುರಗಣ । ತೇಥ ಋದ್ಧಿಸಿದ್ಧಿಂಚಾ ಪಾಡ ಕೋಣ । ವೋಳಂಗೇ ಅಂಗಣ ಕಳಿಕಾಳ ॥೪೧೩॥ ಸ್ವಯೇ ಮಹಾದೇವ ಆಪಣ । ಸರ್ವಸ್ವೇ ಕರೀ ನಿಂಬಲೋಣ । ಶ್ರಿಯೇಸಹಿತ ಮೀ ಆಪಣ । ಅಂಕಿತ ಜಾಣ ತಯಾಚಾ ॥೪೧೪॥ ನಿರಪೇಕ್ಷ ಜೋ ಮಾಝಾ ಭಕ್ತ । ತೋ ಮಜಸಮಾನ ಸಮರ್ಥ । ಹೇಹೀ ಬೋಲಣೇ ಅಹಾಚ ಯೇಥ । ತೋ ಮೀಚಿ ನಿಶ್ಚಿತ ಚಿದ್ರೂಪೇ ॥೪೧೫॥ ಮೀ ಪರಮಾತ್ಮಾ ಪರಮಾನಂದ । ಭಕ್ತ ಮದ್ಭಜನೇ ಶುದ್ಧ ಸ್ವಾನಂದ । ದೋಘೇ ಅಭೇದೇ ಸ್ವಾನಂದಕಂದ । ಸಚ್ಚಿದಾನಂದ ನಿಜರೂಪೇ ॥೪೧೬॥ ಐಸೇ ಮದ್ಭಾವೇ ಭಕ್ತ ಸಂಪನ್ನ । ತೇ ನ ದೇಖತೀ ದೋಷಗುಣ । ತೇಚಿವಿಖೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೪೧೭॥

ಈ ಪ್ರಕಾರದ ನಿರಪೇಕ್ಷೆಯು ಪ್ರಾಪ್ತವಾಯಿತೆಂದರೆ ನನ್ನ ಭಜನೆಯ ಪ್ರೇಮವು ಸಹಜವಾಗಿಯೇ ಪ್ರಾಪ್ತವಾಗುವುದು. ವೇದಾಂತದಲ್ಲಿ ಯಾವುದಕ್ಕೆ ಏಕಾಂತಭಕ್ತಿ ಎಂದು ಹೇಳಿದೆಯೋ ಅದು ನನ್ನ ನಾಲ್ಕನೆಯ ಭಕ್ತಿಯಾಗಿರುವುದು ॥೪೦೫॥ ಈ ಯ... ಏಕಾಂತ ಭಕ್ತಿಯ ಕೌತುಕವನ್ನು ಹೇಳುವೆನು, ಅದನ್ನು ಕೇಳು. ದೇವ ಮತ್ತು ಭಕ್ತ ಇವರ ಏಕಾಂತವಾದಾಗ ಭಕ್ತನು ದೇವನಲ್ಲಿ ಪ್ರವೇಶ ಮಾಡುವನು ಮತ್ತು ದೇವನೂ ಕೂಡ ಭಕ್ತನಿಗೆ ಅಂತರ್ಬಾಹ್ಯ ವ್ಯಾಪಿಸಿಕೊಂಡಿರುವನು ॥೪೦೬॥ ಈ ಪ್ರಕಾರವಾಗಿ ಅಭೇದತ್ವದಿಂದ ನನ್ನ ಭಜನೆ ಇರುವುದು. ಇದಕ್ಕೆ ಏಕಾಂತಭಕ್ತಿ ಎಂದು ಹೇಳುವರು. ಆ ಭಕ್ತನು ಪರಿಪೂರ್ಣವಾಗಿ ವಿಶ್ವದಲ್ಲಿ ನನ್ನ ಹೊರತಾಗಿ ಬೇರೆ ಏನನ್ನೂ ಕಾಣಲಾರನು ॥೪೦೭॥ ಶ್ರೀಪತಿಯಾದ ನಾನು ಆತನಿಗೆ ನಾಲ್ಕೂ ಪುರುಷಾರ್ಥ ಸಹ ಮುಕ್ತಿಯನ್ನು ಕೊಡುವವನಾಗಿರುವೆನು. ಆದರೆ ಆತನು ಅವುಗಳತ್ತ ದೂರಿನಿಂದಲೂ ನೋಡುವುದಿಲ್ಲ. ಅಂದಮೇಲೆ ಕೈಯಿಂದ ಸ್ವೀಕರಿಸುವ ಮಾತು ಎಲ್ಲಿಯದು? ॥೪೦೮॥ ಆತನು ತನ್ನ ಮುಖದಿಂದ ಏನಾದರೂ ಕೇಳುವುದು ಇದು ಕೂಡ ಕಲ್ಪಾಂತಕ್ಕೂ ಸಾಧ್ಯವಾಗುವುದಿಲ್ಲ. ನನ್ನ ಏಕಾಂತಭಕ್ತಿಯನ್ನು ಬಿಟ್ಟು ನನ್ನ ಭಕ್ತನು ಮೋಕ್ಷವನ್ನೂ ಕೂಡ ಸ್ವೀಕರಿಸಲಾರನು ॥೪೦೯॥ ಮೋಕ್ಷವನ್ನು ಸ್ವೀಕರಿಸದ ಕಾರಣವಾದರೂ ಯಾವುದು? ಇದು ಶ್ರುತಿಶಾಸ್ತ್ರಗಳಿಗೂ ತಿಳಿಯಲಾರದ ಭಾವವನ್ನು ದೇವಾಧಿದೇವ ಶ್ರೀಕೃಷ್ಣನು ಈಗ ಸ್ವತಃ ಹೇಳುತ್ತಿರುವನು ॥೪೧೦॥

ಯಾರು ಅತ್ಯಂತ ನಿರಪೇಕ್ಷನಾಗಿರುವನೋ, ಆ ಮಹಾಪುರುಷನು ನನಗೆ ಪ್ರಿಯನಾಗಿರುವನು. ಆತನ ದೃಷ್ಟಿಯಲ್ಲಿ ಮೋಕ್ಷವು ಇದು ತೌಡಿಗೆ ಸಮಾನವಾಗಿರುವುದು. ಇಂತಹ ನೈರಾಶ್ಯವು ಸಂಪೂರ್ಣ ತ್ರೈಲೋಕ್ಯದಲ್ಲಿ ಧನ್ಯ ಧನ್ಯವಾಗಿರುವುದು ॥೪೧೧॥ ಈಗ ನಿರಪೇಕ್ಷೆಯ ಶ್ರೇಷ್ಠತ್ವವನ್ನು ಹೇಳುವೆನು, ಅದನ್ನು ಕೇಳು. ನಿರಪೇಕ್ಷ ಪುರುಷನಿಗೆ ನಾಲ್ಕೂ ಪುರುಷಾರ್ಥಗಳು ತುಚ್ಛವಾಗಿ ಕಾಣುವುವು. ವೈಕುಂಠ, ಕೈಲಾಸ ಇತ್ಯಾದಿ ಸ್ಥಾನಗಳಿಗೆ ಶ್ರೇಷ್ಠತೆಯು ದೊರಕಿರುವುದು ಆದರೆ ಇವು ಆತನಿಗೆ ಕಾಲುದಾರಿಯಾಗಿರುವುದು ॥೪೧೨॥ ನಿರಪೇಕ್ಷ ಮನುಷ್ಯನ ಹತ್ತಿರ ದೇವನೂ ಕೂಡ ನಡೆದು ಬರುತ್ತಿರುವನು. ಅಂದಮೇಲೆ ಋದ್ಧಿಸಿದ್ಧಿಗಳ ಯಾವ ಕಥೆ? ಕಲಿಕಾಲನು ಮಾತ್ರ ಆತನ ಅಂಗಳದ ಕಸ ಹೊಡೆಯುತ್ತಿರುವನು ॥೪೧೩॥ ಸ್ವತಃ ಮಹಾದೇವನು ಅವರ ಮೇಲೆ ನಿವಾಳಿಯನ್ನು ತೆಗೆದು ಒಗೆಯುವನು ಮತ್ತು ನಾನು ಸ್ವತಃ ಲಕ್ಷ್ಮೀ ಸಮೇತನಾಗಿ ಆತನ ಅಂಕಿತನಾಗಿರುವೆನು ॥೪೧೪॥ ನನ್ನ ನಿರಪೇಕ್ಷ ಭಕ್ತನು ನನ್ನಂತೆಯೇ ಸಮರ್ಥನಾಗುವನು. ಹೀಗೆ ಹೇಳುವುದೂ ಕೂಡ ಔಪಚಾರಿಕವಾಗಿರುವುದು. ಕಾರಣ ಆತನು ಚಿದ್ರೂಪದಿಂದ ನಿಜವಾಗಿಯೂ ನಾನೇ ಆಗಿರುವನು ॥೪೧೫॥ ನಾನು ಪರಮಾತ್ಮನು ಪರಮಾನಂದ ಸ್ವರೂಪನಾಗಿರುವೆನು, ಭಜನೆಯಿಂದ ನನ್ನ ಭಕ್ತನೂ ಕೂಡ ಶುದ್ಧವಾದ ಸ್ವಾನಂದಸ್ವರೂಪನಾಗುವನು, ನಾವಿಬ್ಬರೂ ಅಭೇದತ್ವದಿಂದ ಸ್ವಾನಂದ ಮತ್ತು ಸಚ್ಚಿದಾನಂದರೂಪರಾಗುವೆವು ॥೪೧೬॥ ನನ್ನ ಭಕ್ತಿಯಿಂದ ಸಂಪನ್ನರಾಗಿರುವ ಭಕ್ತರು ಯಾವ ಗುಣದೋಷಗಳನ್ನು ನೋಡುವುದಿಲ್ಲ. ಇದೇ ನಿರೂಪಣೆಯನ್ನು ಭಗವಾನ ಶ್ರೀಕೃಷ್ಣನು ಈಗ ಸ್ವತಃ ಹೇಳುತ್ತಿರುವನು ॥೪೧೭॥

ನ ಮಯ್ಯೇಕಾಂತಭಕ್ತಾನಾಂ ಗುಣದೋಷೋದ್ಭವಾ ಗುಣಾಃ ।
ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್ ॥೩೬॥

ಅರ್ಥ:- ನನ್ನಲ್ಲಿ ನಿತ್ಯ ಭಕ್ತಿಯುಕ್ತ, ಸಮಚಿತ್ತದಿಂದ ಬುದ್ಧಿಯ ಆಚೆಗಿರುವ ಭಗವಂತನನ್ನು ಪ್ರಾಪ್ತಮಾಡಿಕೊಂಡಿರುವ ರಾಗದ್ವೇಷರಹಿತ ಭಕ್ತನಿಗೆ ವಿಧಿ,ನಿಷೇಧಗಳಿಂದ ನಿರ್ಮಾಣವಾಗುವ ಪಾಪ-ಪುಣ್ಯಗಳ ಯಾವ ಸಂಬಂಧವಿರುವುದಿಲ್ಲ.

ಜೋ ನ ದೇಖೇ ವಿಷಯಭೇದು । ಜ್ಯಾಸೀ ಸಮತ್ವಾಚಾ ನಿಜಬೋಧು । ತೋಚಿ ಬೋಲಿಜೇ ''ಶುದ್ಧ ಸಾಧು'' । ಪರಮಾನಂದು ಮದ್ಭಜನೇ ॥೫೧೮॥ ಮೀ ಏಕ ಪರಮಾತ್ಮಾ ಸರ್ವ ಭೂತೀ । ನ ದೇಖೇ ದ್ವೈತಾಚೀ ಪ್ರತೀತೀ । ಐಶೀ ಜ್ಯಾಚೀ ಭಜನಸ್ಥಿತೀ । ''ಏಕಾಂತಭಕ್ತೀ'' ತ್ಯಾ ನಾಂವ ॥೫೧೯॥ ಸದಾ ಸಮಭಾವೇ ಏಕಾಗ್ರ । ಮಾಝ್ಯಾ ಭಜನೀ ಅತಿತತ್ಪರ । ತೇ ಪ್ರಕೃತೀಚೇ ಪರಪಾರ । ಪಾವಲೇ ಸಾಚಾರ ಮದ್ರೂಪೀ ॥೫೨೦॥ ಐಸೇ ಮದ್ಭಾವೇ ಭಕ್ತ ಪರಿಪೂರ್ಣ । ತೇ ನ ದೇಖತೀ ದೋಷಗುಣ । ಉದ್ಧವಾ ಮ್ಯಾ ಹೇ ನಿಜಖೂಣ । ಪೂರ್ವೀ ತುಜ ಜಾಣ ಸಾಂಗಿತಲೀ ॥೫೨೧॥ ಸಾಕರೇಚೀ ಸಾಲೀ ಫೇಡಣೇ । ಕೀ ಕಾಪುರಾಚಾ ಕೋಂಡಾ ಕಾಢಣೇ । ರತ್ನದೀಪಾಚೀ ಕಾಜಳೀ ಫೇಡಣೇ । ತೇವೀ ಗುಣದೋಷ ದೇಖಣೇ ಸೃಷ್ಟಿಮಾಜೀ ॥೫೨೨॥ ಜ್ಯಾಚ್ಯಾ ಘ್ಯಾವಾ ಅವಗುಣ । ಮುಖ್ಯ ಅವಗುಣೇ ಮೀ ಆಪಣ । ಜ್ಯಾಚಾ ಘ್ಯಾವಾ ಉತ್ತಮ ಗುಣ । ತೋಹೀ ಜಾಣ ಮದ್ರೂಪ ॥೫೨೩॥ ಯಾಪರೀ ಭಕ್ತ ಜಗಜೇಠೀ । ಮದ್ರೂಪೇ ದೇಖೇ ಸಕಳ ಸೃಷ್ಟೀ । ತ್ಯಾಸೀ ಗುಣದೋಷಾಂಚೀ ಗೋಷ್ಟೀ । ನ ಪಡೇ ದೃಷ್ಟೀ ಸರ್ವಥಾ ॥೫೨೪॥ ಗುಣದೋಷ ನ ದೇಖಾವೇ ಜಾಣ । ಹೇಚಿ ಸಾಧನೀ ಮುಖ್ಯ ಸಾಧನ । ಯೇಚಿ ಅರ್ಥೀಚೇ ನಿರೂಪಣ । ಆದರೇ ಶ್ರೀಕೃಷ್ಣ ಸಾಂಗತ ॥೫೨೫॥

ಏವಮೇತಾನ್ಮಯಾದಿಷ್ಟಾನನುತಿಷ್ಠಂತಿ ಮೇ ಪಥಃ । ಕ್ಷೇಮಂ ವಿದಂತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ ॥೩೭॥
ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ವಿಶಂತಿತಮೋಽಧ್ಯಾಯಃ

ಅರ್ಥ:- ಈ ಪ್ರಕಾರವಾಗಿ ಯಾವ ಜನರು ನಾನು ಹೇಳಿರುವ ಜ್ಞಾನ, ಕರ್ಮ ಮತ್ತು ಭಕ್ತಿ ಈ ಮಾರ್ಗಗಳ ಆಚರಣೆಯನ್ನು ಮಾಡುವರೋ, ಅವರು ನನ್ನ ಪರಮ ಕಲ್ಯಾಣ ಸ್ವರೂಪ ಧಾಮಕ್ಕೆ ಪ್ರಾಪ್ತರಾಗುವರು. ಕಾರಣ ಇವರು ಪರಬ್ರಹ್ಮವನ್ನು ತಿಳಿದಿರುವರು.

ಉದ್ಧವಾ ಯಾಪರೀ ಜಾಣ । ಮ್ಯಾ ವೇದವಾದೇ ಆಪಣ । ಉಪದೇಶಿಲೇ ಗಾ ಜನ । ಭಕ್ತಿಜ್ಞಾನಕರ್ಮಯೋಗೇ ॥೫೨೬॥ ಕರ್ಮೇಚಿ ಕರ್ಮೇ ಛೇದಿಜೇತೀ । ಐಶೀ ''ಕರ್ಮಯೋಗಾಚೀ'' ಗತೀ । ಸ್ವಧರ್ಮಕರ್ಮೇ ಮಾಝೀ ಪ್ರಾಪ್ತೀ । ತೇ ಮ್ಯಾ ತುಜಪ್ರತೀ ಸಾಂಗಿತಲೀ ॥೫೨೭॥ ನಿತ್ಯಾನಿತ್ಯವಿವಂಚನ । ಕರೂನಿ ಅನಿತ್ಯನಿರ್ದಳಣ । ಹೇ ''ಜ್ಞಾನಯೋಗಾಚೇ'' ಲಕ್ಷಣ । ತುಜ ಮ್ಯಾ ಸಂಪೂರ್ಣ ಸಾಂಗಿತಲೇ ॥೫೨೮॥

ಯಾವಾತನು ವಿಷಯಗಳಲ್ಲಿನ ಭೇದವನ್ನು ಸ್ವಲ್ಪವೂ ಕೂಡ ಕಾಣಲಾರನು, ಯಾರಿಗೆ ಸಮತ್ವ ಬ್ರಹ್ಮದ ಭಾವದಿಂದ ಆತ್ಮಜ್ಞಾನವು ಪ್ರಾಪ್ತವಾಗಿರುವುದು, ಯಾರಿಗೆ ನನ್ನ ಭಜನೆಯಿಂದ ಪರಮಾನಂದವು ಪ್ರಾಪ್ತವಾಗುವುದು. ಇವರಿಗೆ ಶುದ್ಧ ಸಾಧು ಎಂದು ಹೇಳುವರು ॥೫೧೮॥ ಸರ್ವ ಭೂತಮಾತ್ರರಲ್ಲಿ ನಾನೇ ಒಬ್ಬ ಪರಮಾತ್ಮನು ತುಂಬಿರುವನು ಎಂದು ಆತನ ದೃಷ್ಟಿಯು ವಿಶಾಲವಾಗಿರುವುದರಿಂದ ಆತನಿಗೆ ದ್ವೈತದ ಪ್ರಚೀತಿಯು ಬರುವುದಿಲ್ಲ. ಹೀಗಿರುವ ಭಕ್ತಿಗೆ ಏಕಾಂತ ಭಕ್ತಿ ಎಂದು ಹೇಳುವರು ॥೫೧೯॥ ಯಾವಾಗಲೂ ಎಲ್ಲ ಸ್ಥಾನಗಳಲ್ಲಿಯೂ ಸಮಭಾವವನ್ನಿಟ್ಟು ಯಾವನು ಏಕಾಗ್ರ ಮನದಿಂದ ನನ್ನ ಭಜನೆಯಲ್ಲಿ ತತ್ಪರನಾಗಿರುವನೋ, ಆತನು ಪ್ರಕೃತಿಯನ್ನು ದಾಟಿ ನಿಜವಾಗಿಯೂ ಆತ್ಮರೂಪನಾಗುವನು ॥೫೨೦॥ ಹೀಗೆ ಯಾವ ನನ್ನ ಪರಿಪೂರ್ಣ ಭಕ್ತಿಯಿಂದ ಸಂಪನ್ನರಾದವರು, ಆ ಭಕ್ತರು ಗುಣದೋಷಗಳನ್ನು ನೋಡುವುದಿಲ್ಲ. ಹೇ ಉದ್ಧವಾ, ಈ ನನ್ನ ನಿಜ ಚಿನ್ಹೆಯನ್ನು ನಿನಗೆ ನಾನು ಈ ಪೂರ್ವದಲ್ಲಿ ಹೇಳಿರುವೆನು ॥೫೨೧॥ ಸಕ್ಕರೆಯ ಸಿಪ್ಪೆಯನ್ನು ತೆಗೆಯಲು ಬಂದರೆ, ಕರ್ಪೂರದಲ್ಲಿ ತೌಡನ್ನು ತೆಗೆದರೆ, ರತ್ನದ ತೇಜದಲ್ಲಿ ಕಾಡಿಗೆಯು ಹೊರಟರೆ, ಆಗ ಮಾತ್ರ ನನ್ನ ಭಕ್ತರು ಈ ವಿಶಾಲವಾದ ಸೃಷ್ಟಿಯಲ್ಲಿ ಗುಣದೋಷವನ್ನು ನೋಡಬಹುದು ॥೫೨೨॥ ಯಾರೊಬ್ಬರ ಅವಗುಣವನ್ನು ತೆಗೆದುಕೊಳ್ಳಬೇಕೆಂದರೆ ಆ ಅವಗುಣೆಯು ಮುಖ್ಯವಾಗಿ ನಾನೇ ಇರುವೆನು ಮತ್ತು ಉತ್ತಮ ಗುಣವನ್ನು ಸ್ವೀಕರಿಸಬೇಕೆಂದರೆ ಆತನೂ ಕೂಡ ನನ್ನದೇ ಸ್ವರೂಪನಾಗಿರುವನು ॥೫೨೩॥ ಇದರ ಕಾರಣವೇನೆಂದರೆ ನನ್ನ ಶ್ರೇಷ್ಠನಾದ ಭಕ್ತನು ಸಂಪೂರ್ಣ ಸೃಷ್ಟಿಯನ್ನು ಮದ್ರೂಪದಿಂದ ಕಾಣುತ್ತಿರುವನು. ಆತನು ಎಂದಿಗೂ ಗುಣದೋಷಗಳತ್ತ ನೋಡುವುದೇ ಇಲ್ಲ ॥೫೨೪॥ ಗುಣದೋಷಗಳನ್ನು ನೋಡದೇ ಇರುವುದೇ ಸರ್ವ ಸಾಧನೆಗಳಲ್ಲಿ ಮುಖ್ಯ ಸಾರವಾಗಿರುವುದು. ಈ ವಿಷಯದ ನಿರೂಪಣೆಯನ್ನು ಶ್ರೀಕೃಷ್ಣನು ಆದರದಿಂದ ಹೇಳುತ್ತಿರುವನು ॥೫೨೫॥

ಹೇ ಉದ್ಧವಾ, ಈ ರೀತಿಯಿಂದ ನಾನು ಸ್ವತಃ ವೇದವಾಣಿಯಿಂದ ಭಕ್ತಿ, ಜ್ಞಾನ ಮತ್ತು ಕರ್ಮಯೋಗ ಇವುಗಳ ಆಧಾರದಿಂದ ಜನರಿಗೆ ಉಪದೇಶವನ್ನು ಮಾಡಿರುವೆನು ॥೫೨೬॥ ಕರ್ಮದಿಂದಲೇ ಕರ್ಮವನ್ನು ಇಲ್ಲದಂತೆ ಮಾಡಬೇಕು. ಇದು ಕರ್ಮ ಯೋಗದಲ್ಲಿನ ರಹಸ್ಯವಾಗಿರುವುದು ಮತ್ತು ಸ್ವಕರ್ಮದಿಂದ ನನ್ನ ಪ್ರಾಪ್ತಿಯಾಗುವುದು. ಇದನ್ನು ನಿನಗೆ ನಾನು ಹೇಳಿಯೇಬಿಟ್ಟಿರುವೆನು ॥೫೨೭॥ ಹಾಗೆಯೇ ನಿತ್ಯಾನಿತ್ಯದ ವಿಚಾರವನ್ನು ಮಾಡಿ ಅನಿತ್ಯವನ್ನು ಇಲ್ಲದಾಗಿ ಮಾಡಬೇಕು. ಇದು ಜ್ಞಾನಯೋಗದ ಲಕ್ಷಣವಾಗಿರುವುದು. ಇದನ್ನೂ ಕೂಡ ನಾನು ನಿನಗೆ ಹೇಳಿರುವೆನು ॥೫೨೮॥

ತೈಶೀಚ ಕರಿತಾ ''ಮಾಝೀ ಭಕ್ತೀ'' । ಸಕಳ ಫಳೇ ಪಾಯಾ ಲಾಗತೀ । ಭಕ್ತಾಂಸೀ ಅನಾಯಾಸೇ ಮಾಝೀ ಪ್ರಾಪ್ತೀ । ಹೇಹೀ ತುಜಪ್ರತೀ ಸಾಂಗಿತಲೇ ॥೪೨೯॥ ಅಧಿಕಾರಭೇದೇಸೀ ಸಾಂಗ । ತ್ರಿಕಾಂಡ ತ್ರಿವಿಧ ವೇದಮಾರ್ಗ । ಮಾಝೇ ಪ್ರಾಪ್ತೀಲಾಗೀ ಚಾಂಗ । ವಿಶದ ವಿಭಾಗ ಮ್ಯಾ ಕೇಲೇ ॥೪೩೦॥ ಮ್ಯಾ ಸಾಂಗಿತಲ್ಯಾ ಐಸೇ ಜಾಣ। ಜೋ ವೇದಮಾರ್ಗೇ ಕರೀ ಅನುಷ್ಠಾನ । ತೋ ಮಾಝೀ ಪ್ರಾಪ್ತೀ ಪಾವೇ ಸಂಪೂರ್ಣ । ಸಗುಣ ನಿರ್ಗುಣ ಯಥಾರುಚಿ ॥೪೩೧॥ ಸಗುಣ ಸಾಕ್ಷಾತ್ಕಾರ ಜೋ ಯೇಥ । ತೇ ಪಂಚರಾತ್ರಾಗಮ - ಮತ । ವೈಕುಂಠಚಿ ಮುಖ್ಯ ಮ್ಹಣತ । ಹೇ ಮತ ನಿಶ್ಚಿತ ತಯಾಂಚೇ ॥೪೩೨॥ ಸಪ್ತಾವರಣಾಬಾಹೇರೀ । ಮಾಯಾವರಣಾಭೀತರೀ । ವೈಕುಂಠ ರಚಿಲೇ ಶ್ರೀಹರೀ । ಹೇ ಬೋಲಿಜೇ ನಿರ್ಧಾರೀ ವೇದಾಂತೀ ॥೪೩೩॥ ತೇಥ ಆಗಮಾಚೇ ಮನೋಗತ । ಮಾಯಾ ತೇ ''ಭಗವಲ್ಲೀಲಾ'' ಮ್ಹಣತ । ಸ್ವಲೀಲಾ ವೈಕುಂಠ ರಚೀ ಭಗವಂತ । ಕ್ಷಯೋ ತೇಥ ಅಸೇನಾ ॥೪೩೪॥ ಜೇಥ ಲೀಲಾವಿಗ್ರಹೀ ಮೇಘಶ್ಯಾಮ । ಸ್ವಯೇ ವಸೇ ಪುರುಷೋತ್ತಮ । ತೇಥ ನಾಹೀ ಗುಣಕಾಳ ಕರ್ಮ । ಮಾಯಾದಿ ಭ್ರಮ ರಿಘೇನಾ ॥೪೩೫॥ ಏವಂ ಜನ್ಮಕ್ಷಯಾತೀತ । ವೈಕುಂಠ ಅಕ್ಷಯೀ ನಿಜ ನಿತ್ಯ । ತೇಥ ಪಾವಲೇ ತೇ ನಿತ್ಯಮುಕ್ತ । ಹೇ ''ಆಗಮ - ಮತ'' ಉದ್ಧವಾ ॥೪೩೬॥ ಮಂತ್ರೇ ಆರಾಧ್ಯದೈವತೇ ಪ್ರಸನ್ನೇ । ಹೇ ವೇದಾರ್ಥೀಯಾಂಚೇ ಬೋಲಣೇ । ತೇ ವ್ಯಾ ತುಜಪ್ರತೀ ಅನುಸಂಧಾನೇ । ಬೋಲಿಲೋ ಜಾಣೇ ಉದ್ಧವಾ ॥೪೩೭॥ ಭಾವಾರ್ಥಭಕ್ತೀಚೇ ಲಕ್ಷಣ । ತೇ ಪ್ರಸನ್ನತೇಚೇ ಖೂಣ । ಹೇ ಪೂರ್ವಿ ಕೇಲೇ ನಿರೂಪಣ । ನಿರುತೇ ಜಾಣ ಉದ್ಧವಾ ॥೪೩೮॥ ಯೇ ಅರ್ಥೀ ವೇದಾಂತೀ ಮ್ಹಣತ । ಅತ್ಯಂತ ಪ್ರಳಯೀಂಚಾ ಜೋ ಆಘಾತ । ತೋ ವೈಕುಂಠಕೈಲಾಸಾದಿ ಸಮಸ್ತ । ಸಾಕಾರವಂತ ನಿರ್ದಾಳೀ ॥೪೩೯॥ ತೇ ಕಾಳಾಚೇ ಉರ್ವರಿತ । ಕೇವಳ ಜೇ ಗುಣಾತೀತ । ತೇ ಪೂರ್ಣ ಬ್ರಹ್ಮ ಸದೋದಿತ । ಜಾಣ ನಿಶ್ಚಿತ ಉದ್ಧವಾ ॥೪೪೦॥ ಜೇಥ ಕಾಳ ನಾ ಕರ್ಮ । ಜೇಥ ಗುಣ ನಾ ಧರ್ಮ । ಜೇಥೇ ಮಾಯಾ ಪಾವೇ ಉಪರಮ । ತೇ ಪರಬ್ರಹ್ಮ ಉದ್ಧವಾ ॥೪೪೧॥ ಮಾಝೇ ಸ್ಥಾನ ವೈಕುಂಠ ಜಾಣ । ತೇಥೀಲ ಪ್ರಾಪ್ತಿ ''ಸಾಯುಜ್ಯ - ಸಗುಣ।'' ''ಪೂರ್ಣ-ಸಾಯುಜ್ಯತಾ'' ಸಂಪೂರ್ಣ । ಬ್ರಹ್ಮ ಪರಿಪೂರ್ಣ ಸದೋದಿತ ॥೪೪೨॥ ಪಾವಾವಯಾ ಪೂರ್ಣ ಪರಬ್ರಹ್ಮ । ಸಾಧಕಾಂಸೀ ಕೋಣೇ ಮಾರ್ಗೀ ಕ್ಷೇಮ । ವೇದೋಕ್ತ ಮದ್ಭಕ್ತಿ ಸುಗಮ । ಉತ್ತಮೋತ್ತಮ ಹಾ ಮಾರ್ಗ ॥೪೪೩॥

ನನ್ನ ಭಕ್ತಿಯನ್ನು ಮಾಡಲು ಸರ್ವ ಫಲಗಳು ತಮ್ಮ ಪಾದಗಳಲ್ಲಿ ಬರುವುವು ಮತ್ತು ಭಕ್ತನಿಗೆ ಸಹಜವಾಗಿಯೇ ನನ್ನ ಪ್ರಾಪ್ತಿಯಾಗುವುದು, ಇದನ್ನು ನಾನು ನಿನಗೆ ಹೇಳಿರುವೆನು ॥೪೨೯॥ ಅಧಿಕಾರ ಭೇದ ಪ್ರಮಾಣದಂತೆ ತ್ರಿಕಾಂಡದಲ್ಲಿನ ಮೂರು ಪ್ರಕಾರಗಳ ವೇದಮಾರ್ಗವು ನನ್ನ ಪ್ರಾಪ್ತಿಗಾಗಿ ಉತ್ತಮ ಸಾಧನೆಗಳಾಗಿವೆ. ಆದ್ದರಿಂದ ಆ ಭಾಗವನ್ನೂ ಕೂಡ ನಾನು ನಿನಗೆ ಸ್ಪಷ್ಟವಾಗಿ ಹೇಳಿರುವೆನು ॥೪೩೦॥ ನಾನು ಹೇಳಿರುವ ರೀತಿಯಲ್ಲಿ ಯಾರು ತನ್ನ ಇಷ್ಟದಂತೆ ವೇದಮಾರ್ಗವನ್ನು ಅನುಸರಿಸಿ ಸಗುಣವಾಗಲೀ ಅಥವಾ ನಿರ್ಗುಣವಾಗಲೀ ಉಪಾಸನೆಯನ್ನು ಮಾಡಿದರೆ, ಆತನಿಗೆ ತನ್ನ ಪ್ರಾಪ್ತಿಯು ನಿಶ್ಚಿತವಾಗಿ ಆಗುವುದು ॥೪೩೧॥ ಇಲ್ಲಿ ಯಾವ ಸಗುಣ ಸಾಕ್ಷಾತ್ಕಾರವನ್ನು ಹೇಳಿರುವುದು, ಅದು ಪಂಚರಾತ್ರಾಗಮನದ ಮತವಾಗಿರುವುದು. ಈ ಜನರು ವೈಕುಂಠಕ್ಕೆ ಮಾತ್ರ ಮುಖ್ಯವೆಂದು ತಿಳಿಯುವರು. ಇದು ಅವರ ನಿಶ್ಚಿತವಾದ ಮತವಾಗಿರುವುದು ॥೪೩೨॥ ಏಳು ಆವರಣಗಳ ಹೊರಗೆ ಮತ್ತು ಮಾಯಾ ಆವರಣದ ಒಳಗೆ ಶ್ರೀಹರಿಯು ವೈಕುಂಠದ ರಚನೆಯನ್ನು ಮಾಡಿರುವನು ಎಂದು ವೇದಾಂತದಲ್ಲಿ ಹೇಳಿರುವುದು ॥೪೩೩॥ ಅದರಲ್ಲಿ ಆಗಮ ಶಾಸ್ತ್ರದ ಮತದಂತೆ ಯಾವ ಈ ಮಾಯೆಯು ಭಗವಂತನ ಲೀಲೆಯಾಗಿದೆ ಎಂದು ಹೇಳಿರುವುದು. ಭಗವಂತನು ತನ್ನ ಲೀಲೆಯಿಂದ ವೈಕುಂಠವನ್ನು ರಚಿಸಿರುವುದರಿಂದ ಅದಕ್ಕೆ ನಾಶವಿರುವುದಿಲ್ಲ ॥೪೩೪॥ ಆ ವೈಕುಂಠದಲ್ಲಿಯೇ ಮಾಯಾ ಲೀಲೆಯಿಂದ ಧಾರಣ ಮಾಡುವ ಘನಶ್ಯಾಮ ಪುರುಷೋತ್ತಮನು ಇರುತ್ತಿರುವನು. ಇಲ್ಲಿ ಕಾಲ, ಕರ್ಮ, ಗುಣ, ಮಾಯಾ ಇತ್ಯಾದಿ ಭ್ರಮದ ಹೆಸರೂ ಕೂಡ ಇರುವುದಿಲ್ಲ ॥೪೩೫॥ ಈ ಪ್ರಕಾರವಾಗಿ ಉತ್ಪತ್ತಿ ಮತ್ತು ನಾಶರಹಿತ ಹೀಗಿರುವ ಅಕ್ಷಯ ಹಾಗೂ ನಿತ್ಯ ವೈಕುಂಠಕ್ಕೆ ಹೋಗುವವರು ನಿತ್ಯ ಮುಕ್ತರೇ ಆಗುವರು. ಹೀಗೆ ಯಾವ ಆಗಮದ ಮತವಾಗಿರುವುದು ॥೪೩೬॥ ಹೇ ಉದ್ಧವಾ, ಅಲ್ಲಿ ಮಂತ್ರಗಳ ಸಾಮರ್ಥ್ಯದಿಂದ ತಮ್ಮ ಇಷ್ಟದೇವತೆಯನ್ನು ಪ್ರಸನ್ನ ಮಾಡಿಕೊಳ್ಳಲು ಬರುವುದು, ಹೀಗೆಂದು ವೇದವೇತ್ತೆಯವರು ಹೇಳುವರು. ಇದನ್ನು ನಾನು ಈ ಅನುಸಂಧಾನದಿಂದ ನಿನಗೆ ಹೇಳಿದೆನು ॥೪೩೭॥ ಏಕನಿಷ್ಠ ಭಕ್ತಿಯೇ ಅದರ ಪ್ರಸನ್ನತೆಯ ಚಿನ್ಹೆಯಾಗಿದೆ ಎಂದು ಇದರ ನಿರೂಪಣೆಯನ್ನು ಸ್ಪಷ್ಟವಾಗಿ ನಾನು ಈ ಪೂರ್ವದಲ್ಲಿ ಮಾಡಿರುವೆನು ॥೪೩೮॥ ಆದರೆ ವೇದಾಂತಿಗಳು ಈ ವಿಷಯಕ್ಕೆ ಏನು ಹೇಳುವರು ಎಂದರೆ ಕಾಲನ ಆಘಾತದಿಂದ ವೈಕುಂಠ ಕೈಲಾಸಾದಿ ಸಾಕಾರವಾಗಿರುವ ಸರ್ವ ಲೋಕಗಳ ಲಯವಾಗುವುದು ॥೪೩೯॥ ಆ ಸಮಯದಲ್ಲಿ ಯಾವ ಗುಣಾತೀತ ಅಂದರೆ ಪೂರ್ಣಬ್ರಹ್ಮವು ಅದು ಮಾತ್ರ ಉಳಿದುಕೊಳ್ಳುವುದು. ಇದೇ ಸರ್ವಕಾಲದಲ್ಲಿ ನಿತ್ಯವಾಗಿ ನಿಜವಾಗಿ ಇರುವುದು ॥೪೪೦॥ ಹೇ ಉದ್ಧವಾ, ಅಲ್ಲಿ ಕಾಲ, ಕರ್ಮ, ಗುಣಧರ್ಮ ಯಾವುದೂ ಇರುವುದಿಲ್ಲ. ಮತ್ತು ಮಾಯೆಯು ಅಲ್ಲಿ ಉಪರಮೆ ಹೊಂದುವುದು. ಇದುವೇ ಪರಬ್ರಹ್ಮವಾಗಿರುವುದು ॥೪೪೧॥ ನನ್ನ ಸ್ಥಾನವು ವೈಕುಂಠವಾಗಿರುವುದು. ಅಲ್ಲಿ ಸಗುಣ ಸಾಯುಜ್ಯತೆಯು ಲಾಭವಾಗುವುದು. ಆದರೆ ನಿರಂತರ ಪರಿಪೂರ್ಣ ಬ್ರಹ್ಮವೇ ಪೂರ್ಣ ಸಾಯುಜ್ಯವೆಂದು ತಿಳಿಯಬೇಕು ॥೪೪೨॥ ಸಾಧಕನಿಗೆ ಪೂರ್ಣ ಬ್ರಹ್ಮ ಸ್ವರೂಪನಾಗುವ ಮಾರ್ಗ ಯಾವುದು? ಎಂದು ಈಗ ನೀನು ಕೇಳಬಹುದು, ಅದಕ್ಕಾಗಿ ನನ್ನ ಭಕ್ತಿಯೇ ವೇದೋಕ್ತವಾದ ಸುಲಭ ಮತ್ತು ಉತ್ತಮೋತ್ತಮ ಮಾರ್ಗವಾಗಿರುವುದು ॥೪೪೩॥

ಆಣಿಕೇ ಮಾರ್ಗೀ ಜಾತಾ ಜಾಣ । ಕಾಮಲೋಭಾದಿ ಉಠೇ ವಿಘ್ನ । ಕಾ ಬುಡವೀ ಜ್ಞಾನಾಭಿಮಾನ । ಹೇ ನಾಗವಣ ಪ್ರತ್ಯವಾಯಾಚೀ ।।೪೪೪।। ತೈಸೇ ನಾಹೀ ಭಕ್ತಿಪಂಥೀ । ಸವೇ ನವವಿಧ ಸಾಂಗಾತೀ । ಚಢತಾ ಪಾಉಲೀ ಅತಿ ವಿಶ್ರಾಂತೀ । ಭಜನಯುಕ್ತೀ ಮದ್ಭಾವೇ ।।೪೪೫।। ಯೇಥೀಲ ಮುಖ್ಯತ್ವೇ ಸಾಧನ । ಗೇಲೀಯಾಹೀ ಜೀವಪ್ರಾಣ । ಕದಾ ನ ದೇಖಾವೇ ದೋಷಗುಣ । ತೈ ಬ್ರಹ್ಮ ಪರಿಪೂರ್ಣ ಪಾವಿಜೇ ।।೪೪೬।। ಜೇಥ ನಾಹೀ ಭಯಭ್ರಾಂತೀ । ಜೇಥ ನಾಹೀ ದಿವಸರಾತೀ । ಜೇಥ ನಾಹೀ ಜೀವಶಿವಸ್ಥಿತೀ । ತೇ ಬ್ರಹ್ಮ ಪಾವತೀ ಮದ್ಭಕ್ತ ।।೪೪೭।। ಜೇಥ ನಾಹೀ ರೂಪನಾಮ । ಜೇಥ ನಾಹೀ ಕಾಳಕರ್ಮ । ಜೇಥ ನಾಹೀ ಮರಣಜನ್ಮ । ತೇ ಪರಬ್ರಹ್ಮ ಪಾವತೀ ।।೪೪೮।। ಜೇಥ ನಾಹೀ ಧ್ಯೇಯಧ್ಯಾನ । ಜೇಥ ನಾಹೀ ಜ್ಞೇಯಜ್ಞಾನ । ಜೇಥ ನಾಹೀ ಮೀತೂಪಣ । ತೇ ಬ್ರಹ್ಮ ಪರಿಪೂರ್ಣ ಪಾವತೀ ।।೪೪೯।। ಜ್ಯಾಸೀ ನಾಹೀ ಮಾತಾಪಿತಾ । ಜೇ ನವ್ಹೇ ದೇವೋದೇವತಾ । ಜೇ ಬಹು ನಾ ಏಕುಲತಾ । ತೇ ಬ್ರಹ್ಮ ತತ್ತ್ವತಾ ಪಾವತೀ ।।೪೫೦।। ಜೇಥ ನಾಹೀ ವರ್ಣಾಶ್ರಮ । ಜೇಥ ನಾಹೀ ಕ್ರಿಯಾಕರ್ಮ । ಜೇಥ ನಾಹೀ ಮಾಯಾಭ್ರಮ । ತೇ ಪರಬ್ರಹ್ಮ ಪಾವತೀ ।।೪೫೧।। ಜೇ ಗುಣಾಗುಣೀ ಅತೀತ । ಜೇ ಲಕ್ಷ್ಯಲಕ್ಷಣಾಚಾ ರಹಿತ । ಜೇ ಸ್ವಾನಂದೇ ಸದೋದಿತ । ತೇ ಬ್ರಹ್ಮ ಪ್ರಾಪ್ತ ಮದ್ಭಕ್ತಾ ।।೪೫೨।। ಪೂರ್ಣಕೃಪೇಚಾ ಹೇಲಾವಾ । ನ ಸಂಠೇಚಿ ದೇವಾಧಿದೇವಾ । ತೋ ಹಾ ಏಕಾದಶೀಂಚಾ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೩।। ಜೇಥ ಠಾವೋ ನಾಹೀ ದೇಹಭಾವಾ । ಜೇಥ ಸಾಮರಸ್ಯ ಜೀವಶಿವಾ । ತೋ ಹಾ ಏಕಾದಶೀಂಚಾ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೪।। ಜೇಥ ಉಗಾಣಾ ಹೋಯ ಅಹಂಭಾವಾ । ಜೇಥ ಶೂನ್ಯ ಪಡೇ ಮಾಯೇಚ್ಯಾ ನಾಂವಾ । ತೋ ಹಾ ಏಕಾದಶೀಂಚಾ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೫।। ಜೇಥ ದೇವಭಕ್ತಾಂಚಾ ಕಾಲೋವಾ । ಏಕತ್ರ ಹೋಯ ಆಘವಾ । ತೋ ಹಾ ಏಕಾದಶೀ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೬।। ಕಷ್ಟೀ ಸ್ವಾನಂದ ಸ್ವಯೇ ಜೋಡಾವಾ । ತ್ಯಾ ಸ್ವಾನಂದಾಚಾ ಆಇತಾ ಠೇವಾ । ತೋ ಹಾ ಏಕಾದಶೀ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೭।। ಕರೋನಿ ಭೇದಾಚಾ ನಾಗೋವಾ । ಹೋಯ ಅಭೇದಾಚಾ ರಿಗಾವಾ । ತೋ ಹಾ ಏಕಾದಶೀಂಚಾ ವಿಸಾವಾ । ತುಜ ಮ್ಯಾ ಉದ್ಧವಾ ದೀಧಲಾ ।।೪೫೮।।

ಇತರ ಮಾರ್ಗಗಳಲ್ಲಿ ಕಾಮ, ಲೋಭಾದಿ ವಿಘ್ನಗಳು ನಿರ್ಮಾಣವಾಗುತ್ತಿರುವುವು. ಅಥವಾ ಜ್ಞಾನದ ಅಭಿಮಾನವು ಸರ್ವಸ್ವವನ್ನು ಮುಳುಗಿಸಿಬಿಡುವುದು. ಅಲ್ಲದೇ ವೇದೋಕ್ತ ಕರ್ಮಗಳನ್ನು ಮಾಡದೇ ಇರುವ ದೋಷವೂ ಕೂಡ ತಟ್ಟುವುದು ।।೪೪೪।। ಆದರೆ ಹೀಗೆ ಭಕ್ತಿ ಮಾರ್ಗದಲ್ಲಿರುವುದಿಲ್ಲ. ಅದರಲ್ಲಿ ನಮಗೆ ನವವಿಧ ಭಕ್ತಿ ಎಂಬ ಒಂಬತ್ತು ಜನರು ನಮ್ಮ ಜೊತೆಯಲ್ಲಿರುವರು. ಮದ್ಭಾವಯುಕ್ತ ಭಕ್ತಿಯ ಯುಕ್ತಿಯಿಂದ ಹೆಜ್ಜೆ ಹೆಜ್ಜೆಗೂ ಅತಿಶಯವಾದ ವಿಶ್ರಾಂತಿಯು ದೊರೆಯುತ್ತಿರುವುದು ।।೪೪೫।। ಇದರಲ್ಲಿನ ಮುಖ್ಯ ಸಾಧನೆ ಯಾವುದೆಂದರೆ ಜೀವ ಪ್ರಾಣ ಹೋದರೂ ಕೂಡ ಗುಣದೋಷಗಳನ್ನು ಎಂದಿಗೂ ನೋಡುವಂತಿಲ್ಲ. ಹೀಗಾದಲ್ಲಿ ತಕ್ಷಣ ಪರಿಪೂರ್ಣ ಪರಬ್ರಹ್ಮದ ಪ್ರಾಪ್ತಿಯಾಗುವುದು ।।೪೪೬।। ಅಲ್ಲಿ ಭಯ ಭ್ರಾಂತಿ ಯಾವುದೂ ಇರುವುದಿಲ್ಲ, ಅಲ್ಲಿ ಹಗಲು ರಾತ್ರಿಗಳಿಲ್ಲ, ಅಲ್ಲಿ ಜೀವ ಶಿವ ಎಂಬ ಭೇದವೂ ಇಲ್ಲ. ಅಂತಹ ಬ್ರಹ್ಮನದಲ್ಲಿ ನನ್ನ ಭಕ್ತರು ಏಕರೂಪರಾಗುವರು ।।೪೪೭।। ಅಲ್ಲಿ ರೂಪವಿಲ್ಲ, ನಾಮವಿಲ್ಲ, ಕಾಲವಿಲ್ಲ ಮತ್ತು ಕರ್ಮವಿಲ್ಲ, ಅಲ್ಲಿ ಜನ್ಮ ಮರಣ ಯಾವುದೂ ಇಲ್ಲ, ಅಂತಹ ಪರಬ್ರಹ್ಮನಲ್ಲಿ ಅವರು ಒಂದಾಗುವರು ।।೪೪೮।। ಅಲ್ಲಿ ಧ್ಯೇಯವಿಲ್ಲ, ಧ್ಯಾನವಿಲ್ಲ, ಅಲ್ಲಿ ಜ್ಞೇಯ ಇಲ್ಲ, ಜ್ಞಾನ ಇಲ್ಲ, ಅಲ್ಲಿ ನಾನೆಂಬುದು ಇಲ್ಲ ಮತ್ತು ನೀನೆಂಬುವುದು ಏನೂ ಇಲ್ಲ. ಅಂತಹ ಸಂಪೂರ್ಣ ಬ್ರಹ್ಮಕ್ಕೆ ಬ್ರಹ್ಮ ಪದಕ್ಕೆ ಮುಟ್ಟುವರು ।।೪೪೯।। ಯಾರಿಗೆ ತಾಯೀ ಇಲ್ಲ, ತಂದೆಯೂ ಇಲ್ಲ. ಅದು ದೇವನಲ್ಲ, ದೇವತೆಯೂ ಅಲ್ಲ, ಅಲ್ಲಿ ಒಂದೂ ಇಲ್ಲ, ಅನೇಕವೂ ಕೂಡ ಇಲ್ಲ. ಅಂತಹ ಪರಬ್ರಹ್ಮಸ್ವರೂಪದಲ್ಲಿ ಏಕರೂಪರಾಗುವರು ।।೪೫೦।। ಅದರಲ್ಲಿ ಯಾವುದೇ ಪ್ರಕಾರದ ವರ್ಣವಿಲ್ಲ, ಆಶ್ರಮಗಳಿಲ್ಲ, ಅದರಲ್ಲಿ ಕ್ರಿಯೆ ಇಲ್ಲ, ಕರ್ಮವೂ ಇಲ್ಲ, ಅದರಲ್ಲಿ ಯಾವುದೇ ಪ್ರಕಾರದ ಮಾಯೆಯ ಭ್ರಮೆವಿಲ್ಲ. ಆ ಯಾವ ಪರಬ್ರಹ್ಮನಲ್ಲಿ ಏಕರೂಪವಾಗುವರು ।।೪೫೧।। ಯಾವುದು ಸರ್ವ ಪ್ರಕಾರದ ಗುಣದೋಷಗಳ ಆಚೆಗಿರುವುದು, ಯಾವುದು ಲಕ್ಷಲಕ್ಷಣಾರಹಿತವಾಗಿರುವುದು, ಯಾವುದು ಸದೋದಿತ ಸ್ವಾನಂದಯುಕ್ತವಾಗಿರುವುದು, ಅಂತಹ ಬ್ರಹ್ಮವು ನನ್ನ ಭಕ್ತನಿಗೆ ಪ್ರಾಪ್ತವಾಗುವುದು ।।೪೫೨।। ಹೇ ಉದ್ಧವಾ, ಪೂರ್ಣ ಕೃಪೆಯ ಬಂದಿರುವ ಪೂರವು ದೇವಾಧಿದೇವನಾದ ನನಗೆ ತಡೆಯಲಾರದಾಗಿದೆ. ಇದನ್ನು ನಾನು ನಿನಗೆ ಏಕಾದಶಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ಕೊಟ್ಟಿರುವೆನು ।।೪೫೩।। ಹೇ ಉದ್ಧವಾ, ಎಲ್ಲಿ ದೇಹಭಾವವು ಉಳಿಯುವುದಿಲ್ಲವೋ, ಜೀವಶಿವರ ಸಾಮ್ಯವಾಗುವುದೋ ಅಂತಹದ್ದನ್ನು ಈ ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧಾಯ್ಯದಲ್ಲಿ ನಿನಗೆ ನಾನು ಕೊಟ್ಟಿರುವೆನು ।।೪೫೪।। ಹೇ ಉದ್ಧವಾ, ಎಲ್ಲಿ ಅಹಂಭಾವದ ನಾಶವಾಗುವುದೋ, ಮಾಯೆಯ ಹೆಸರಿನ ಮೇಲೆ ಶೂನ್ಯ ಬೀಳುವುದೋ ಅದನ್ನು ಹನ್ನೊಂದನೆಯ ಸ್ಕಂಧದಲ್ಲಿನ ಇಪ್ಪತ್ತನೆಯ ಅಧ್ಯಾಯದಲ್ಲಿ ನಿನಗೆ ನಾನು ಕೊಟ್ಟಿರುವೆನು ।।೪೫೫।। ಎಲ್ಲಿ ದೇವಭಕ್ತರ ಐಕ್ಯವಾಗುವುದೋ, ಅದನ್ನು ನಾನು ನಿನಗೆ ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ಕೊಟ್ಟಿರುವೆನು ।।೪೫೬।। ಸ್ವಾನಂದವನ್ನು ಪಡೆಯಬೇಕಾದರೆ ಅದನ್ನು ಕಷ್ಟದಿಂದ ಪ್ರಾಪ್ತ ಮಾಡಿಕೊಳ್ಳಬೇಕಾಗುವುದು. ಆ ಯಾವ ಸ್ವಾನಂದದ ವಿಧಿಯನ್ನು ಸುಲಭವನ್ನಾಗಿ ಮಾಡಿ ಈ ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ನಾನು ನಿನಗೆ ಕೊಟ್ಟಿರುವೆನು ।।೪೫೭।। ಭೇದದ ನಾಶ ಮಾಡಿ ಅಭೇದದಿಂದ ಪ್ರವೇಶ ಮಾಡಿರುವುದನ್ನು ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ಹೇ ಉದ್ಧವನೇ, ನಾನು ನಿನಗೆ ಕೊಟ್ಟಿರುವೆನು ।।೪೫೮।।

ಕಾಢೋನಿ ಭಾವಾರ್ಥಾಚಾ ಭಾವೋ । ಸೋಲೀವ ಸೋಲಿವಾಂಚಾ ಸೋಲಾವೋ । ಗಾಳುಣೀ ಗಾಳಿಂವಾಂಚಾ ಭಕ್ತಿಭಾವೋ । ಉದ್ಧವಾಸೀ ದೇವೋ ದೇತಸೇ ॥೪೫೯॥ ಯಾಪರೀ ಶ್ರೀಕೃಷ್ಣನಾಥ । ಹೋಊನಿಯಾ ಸ್ವಾನಂದಭರಿತ । ವಿಸಾವ್ಯಾ ಅಧ್ಯಾಯೀಂಚೀ ಮಾತ । ಹರಿಖೇ ಸಾಂಗತ ಉದ್ಧವಾ ॥೪೬೦॥ ಆತಾ ವಿಸಾವ್ಯಾಚಾ ವಿಸಾವಾ । ಸ್ವಾನಂದಸುಖಾಚಾ ಹೇಲಾವಾ । ತೋ ಮೀ ಸಾಂಗೇನ ಏಕವಿಸಾವಾ । ಐಕ ಉದ್ಧವಾ ಸಾದರ ॥೪೬೧॥ ವೇದೀ ಶುದ್ಧಾಶುದ್ಧಲಕ್ಷಣ । ಹೇ ಪುಢೀಲ ಅಧ್ಯಾಯೀ ನಿರೂಪಣ । ಏಕಾ ವಿನವೀ ಜನಾರ್ದನ । ಶ್ರೋತಾ ಅವಧಾನ ಮಜ ದ್ಯಾವೇ ॥೪೬೨॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವಸಂವಾದೇ
ಏಕಾಕಾರ-ಟೀಕಾಯಾಂ ವೇದತ್ರಯೀವಿಭಾಗಯೋಗೋ ನಾಮ ವಿಶಂತಿತಮೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಪ್ರಕಾರವಾಗಿ ಭಾವಾರ್ಥದ ಭಾವವನ್ನು ತೆಗೆದು ಸಿಪ್ಪೆಯನ್ನು ತೆಗೆದ ವಸ್ತುವಿನ ತಿರುಳನ್ನು ಸೋಸಿ ತೆಗೆದ ಭಕ್ತಿಭಾವವನ್ನು ಶ್ರೀಹರಿಯು ಉದ್ಧವನಿಗೆ ಕೊಟ್ಟಿರುವನು ॥೪೫೯॥ ಈ ಪ್ರಕಾರವಾಗಿ ಶ್ರೀಕೃಷ್ಣನಾಥನು ಸ್ವಾನಂದಭರಿತನಾಗಿ ಇಪ್ಪತ್ತನೆಯ ಅಧ್ಯಾಯದಲ್ಲಿನ ಕಥೆಯನ್ನು ಆನಂದದಿಂದ ತನ್ನ ಪ್ರಿಯ ಉದ್ಧವನಿಗೆ ಹೇಳಿದನು ॥೪೬೦॥ ಹೇ ಉದ್ಧವಾ, ಈಗ ವಿಶ್ರಾಂತಿಗೆ ವಿಶ್ರಾಂತಿಯಾಗಿರುವ, ಸ್ವಾನಂದ ಸುಖದ ಪೂರವಾಗಿರುವ ಇಪ್ಪತ್ತೊಂದನೆಯ ಅಧ್ಯಾಯವನ್ನು ನಾನು ನಿನಗೆ ಹೇಳುವೆನು, ಅದನ್ನೂ ನೀನು ಕೇಳು ॥೪೬೧॥ ವೇದದಲ್ಲಿನ ಶುದ್ಧಾಶುದ್ಧದ ಲಕ್ಷಣವೇ ಮುಂದಿನ ಅಧ್ಯಾಯದ ನಿರೂಪಣೆಯಾಗಿದೆ. ಆದ್ದರಿಂದ ಶ್ರೋತೃಗಳು ನನ್ನತ್ತ ಲಕ್ಷವನ್ನು ಕೊಡಬೇಕೆಂದು ಏಕಾಜನಾರ್ದನನು ವಿನಂತಿಸಿಕೊಳ್ಳುವನು ॥೪೬೨॥

ಇತಿ ಶ್ರೀಭಾಗವತ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಭಗವದುದ್ಧವ ಸಂವಾದದ
ಏಕನಾಥಮಹಾರಾಜರ ಭಾಷ್ಯೆಯ ''ವೇದತ್ರಯಿ-ವಿಭಾಗಯೋಗ'' ನಾಮದ ಇಪ್ಪತ್ತನೆಯ ಅಧ್ಯಾಯವು ಸಂಪೂರ್ಣವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೊಂದನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ವೈಕುಂಠನಾಥಾ । ಸ್ವಾನಂದ
ವೈಕುಂಠೀ ಸದಾ ವಸತಾ । ತುಝೇ ಐಶ್ವರ್ಯ ಸ್ವಭಾವತಾ । ನ ಕಳೇ ಅನಂತಾ ಅವ್ಯಯಾ ॥೧॥ ತುಝ್ಯಾ
ನಿಜಬೋಧಚಾ ಗರುಡ । ಕರ ಜೋಡೂನಿ ಉಭಾ ದೃಢ । ಜ್ಯಾಚ್ಯಾ ಪಾಖಾಂಚಾ ಝಡಾಡ । ಉನ್ಮಳೀ ಭವವೃಕ್ಷಾ
॥೨॥ ತುಝೇ ಸ್ವಾನುಭವೈಕಚಕ್ರ । ಲಖಲಖಿತ ತೇಜಾಕಾರ । ದ್ವೈತದಳಣೀ ಸತೇಜಧಾರ । ಅತಿದುರ್ಧರ
ಮಹಾಮಾರೀ ॥೩॥ ಕೈಸಾ ಪಾಂಚಜನ್ಯ ಅಗಾಧ । ನಿಃಶಬ್ದೀ ಉಠವೀ ಮಹಾಶಬ್ದ । ವೇದಾನುವಾದೇ ಗರ್ಜೇ
ಶುದ್ಧ । ತೋಚಿ ಪ್ರಸಿದ್ಧ ಶಂಖ ತುಝಾ ॥೪॥ ಝಳಫಳಿತ ಸರ್ವದಾ । ನಿಜತೇಜೇ ಮಿರವೇ ಸದಾ । ಕರೀ
ಮಾನಾಭಿಮಾನಾಂಚಾ ಚೇಂದಾ । ತೇ ತುಝೀ ಗದಾ ಗಂಭೀರ ॥೫॥ ಅತಿ ಮನೋಹರ ಕೇವಳ । ದೇಖತಾ
ಉಪಜತೀ ಸುಖಕಲ್ಲೋಳ । ಪರಮಾನಂದೇ ಆಮೋದ ಬಹಳ । ತೇ ಲೀಲಾಕಮಳ ಝೇಲಿಸೀ ॥೬॥ ಜೀವ ಶಿವ
ಸಮಸಮಾನೀ । ಜಯ ವಿಜಯ ನಾಂವೇ ದೇಊನೀ । ತೇಚಿ ದ್ವಾರಪಾಳ ದೋನೀ । ಆಜ್ಞಾಪೂನೀ ಸ್ಥಾಪಿಲೇ
॥೭॥ ತುಝೀ ನಿಜಶಕ್ತಿ ಸಾಜಿರೀ । ರಾಮರೂಪೇ ಅತಿಸುಂದರೀ । ಅಖಂಡ ಚರಣಸೇವಾ ಕರೀ । ಅತ್ಯಾದರೀ
ಸಾದರ ॥೮॥ ತುಝೇ ಲೋಕೀಂಚೇ ನಿವಾಸೀ ಜಾಣ । ಅವಘೇ ತುಜಚಿಸಮಾನ । ತೇಥ ನಾಹೀ ಮಾನಾಪಮಾನ
ದೇಹಾಭಿಮಾನ ಅಸೇನಾ ॥೯॥ ತೇಥ ಕಾಳಾಚಾ ರಿಗಮು ನಾಹೀ । ಕರ್ಮಾಚೇ ನ ಚಲೇ ಕಾಹೀ । ಜನ್ಮ ಮರಣಾಚೇ
ಭಯ ನಾಹೀ । ಐಶಿಯಾ ಠಾಯೀ ತೂ ಸ್ವಾಮೀ ॥೧೦॥ ಜೇಥ ಕಾಮಕ್ರೋಧಾಂಚಾ ಘಾತ । ಕ್ಷುಧೇ ತೃಷೇಚಾ
ಪ್ರಾಂತ । ನಿಜಾನಂದೇ ನಿತ್ಯತೃಪ್ತ । ನಿಜಭಕ್ತಿ ತುಝೇನಿ ॥೧೧॥

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಹೇ ಓಂಕಾರರೂಪ ಸದ್ಗುರುರಾಯನೇ, ವೈಕುಂಠನಾಥನೇ, ನಿನಗೆ ನನ್ನ
ನಮಸ್ಕಾರಗಳು. ನೀನು ನಿರಂತರವಾಗಿ ಸ್ವಾನಂದ ರೂಪ ವೈಕುಂಠದಲ್ಲಿ ವಾಸಿಸುವೆ. ಹೇ ಅನಂತನೇ, ಅವ್ಯಯನೇ, ನಿನ್ನ ಸ್ವಾಭಾವಿಕವಾಗಿರುವ
ಐಶ್ವರ್ಯದ ಅಂತವು ಯಾರಿಗೂ ಹತ್ತುವುದಿಲ್ಲ ॥೧॥ ನಿನ್ನೆದುರಿನಲ್ಲಿ ಆತ್ಮಜ್ಞಾನರೂಪ ಗರುಡನು ಕೈ ಜೋಡಿಸಿ ನಿಂತಿರುವನು. ಆತನ
ರೆಕ್ಕೆಗಳು ಕೇವಲ ಬಡೆದುಕೊಂಡರೆ ಸಾಕು, ಪ್ರಚಂಡವಾಗಿರುವ ಭವವೃಕ್ಷವು ಉರುಳಿಬೀಳುವುದು ॥೨॥ ನಿನ್ನ ಕೈಯಲ್ಲಿನ ಸ್ವಾನುಭವದ
ಚಕ್ರವು ಅತಿಶಯವಾಗಿ ತೇಜೋಮಯವಾಗಿದ್ದು ಲಖಲಖಿಸುತ್ತಿರುವುದು. ಆ ಚಕ್ರಕ್ಕೆ ಅಭೇದ ಭಾವನೆಯ ತೀಕ್ಷ್ಣವಾದ ಧಾರೆಯ ಹಿಡಿದಿರು
ವುದು. ಆದ್ದರಿಂದ ಅದರ ಆಘಾತವು ಬಹು ಭಯಂಕರವಾಗಿರುವುದು ॥೩॥ ನಿನ್ನ ಕೈಯಲ್ಲಿನ ಪಾಂಚಜನ್ಯ ಶಂಖವು ಮಾತ್ರ ಅಗಾಧವಾಗಿ
ರುವುದು. ಅದು ನಿಃಶಬ್ದದಲ್ಲಿಯೂ ಕೂಡ ಶಬ್ದವನ್ನು ಉತ್ಪನ್ನಗೊಳಿಸುವುದು. ವೇದವಾಣಿಯಿಂದ ಶುದ್ಧ ಗರ್ಜನೆಯನ್ನು ಮಾಡುವ ಯಾವ
ನಿನ್ನ ಶಂಖವು ಪ್ರಸಿದ್ಧವಾಗಿರುವುದು ॥೪॥ ನಿನ್ನ ಗದೆಯು ಆತ್ಮತೇಜದಿಂದ ಯಾವಾಗಲೂ ಹೊಳೆಯುತ್ತಿರುವುದು. ನಿನ್ನ ಈ ಗದೆಯು
ಎಷ್ಟೊಂದು ಗಂಭೀರವಾಗಿದೆ ಎಂದರೆ ಅದು ಸರ್ವ ಪ್ರಕಾರದ ಅಹಿತದ ನಾಶ ಮಾಡುವುದು ॥೫॥ ಅತ್ಯಂತ ಮನೋಹರವಾಗಿರುವ,
ಕಂಡಾಕ್ಷಣವೇ ಆನಂದದ ಲಹರಿಗಳು ಹೃದಯದಿಂದ ಪ್ರಕಟವಾಗುವ ಮತ್ತು ಯಾವುದಕ್ಕೆ ಪರಮಾನಂದರೂಪ ಸುಗಂಧ ಬೀರುವ ಯಾವ
ಲೀಲಾಕಮಲವು ನಿನ್ನ ಕೈಯಲ್ಲಿರುವುದು ॥೬॥ ಸಮ - ಸಮಾನಾಗಿರುವ ಜೀವ ಮತ್ತು ಶಿವ ಇವರನ್ನು ನೀನು ಜಯ ವಿಜಯ ಎಂಬ ನಾಮವನ್ನು
ಕೊಟ್ಟಿರುವೆ ಹಾಗೆಯೇ ಅವರಿಗೆ ದ್ವಾರಪಾಲಕರಾಗಿರಲು ಆಜ್ಞಾಪಿಸಿರುವೆ ॥೭॥ ನಿನ್ನ ಆತ್ಮಶಕ್ತಿಯು ಸುಂದರ ಹಾಗೂ ಸುಕುಮಾರ
ಲಕ್ಷ್ಮಿಯಾಗಿರುವಳು. ಈ ಲಕ್ಷ್ಮಿಯು ಅತ್ಯಂತ ಆದರದಿಂದ ನಿನ್ನ ಸೇವೆಯನ್ನು ಮಾಡುತ್ತಿರುವಳು ॥೮॥ ನಿನ್ನ ಲೋಕದಲ್ಲಿ ಇರುವವರಾದ
ಸರ್ವ ಜನರೂ ನಿನ್ನ ಹಾಗೆಯೇ ಇರುವರು. ಅಲ್ಲಿ ಮಾನ, ಅಪಮಾನ ಅಥವಾ ದೇಹದ ಅಭಿಮಾನ ಯಾವುದೂ ಇರುವುದಿಲ್ಲ ॥೯॥ ಅಲ್ಲಿ
ಕಾಲನು ಪ್ರವೇಶವನ್ನೇ ಮಾಡಲು ಶಕ್ಯವಿಲ್ಲ. ಕರ್ಮದ ಯಾವ ಸಾಮರ್ಥ್ಯವೂ ಅಲ್ಲಿ ನಡೆಯುವುದಿಲ್ಲ. ಅಲ್ಲಿ ಜನ್ಮಮರಣದ ಯಾವ
ಭಯವೂ ಇರುವುದಿಲ್ಲ. ಅಂತಹ ಸ್ಥಾನದ ನೀನು ಸ್ವಾಮಿಯಾಗಿರುವೆ ॥೧೦॥ ಅಲ್ಲಿ ಕಾಮ, ಕ್ರೋಧಗಳು ನಷ್ಟವಾಗುವುವು. ಕ್ಷುಧೆ, ತೃಷೆಗಳ
ಅಂತ್ಯವಾಗುವುದು. ಅಲ್ಲಿ ನಿನ್ನ ಭಕ್ತರು ನಿನ್ನ ಆತ್ಮಾನಂದದಿಂದ ತೃಪ್ತರಾಗುತ್ತಿರುವರು ॥೧೧॥

ತುಝೇನಿ ಕೃಪಾಕಟಾಕ್ಷೇ । ಅಲಕ್ಷ ನ ಲಕ್ಷಿತಾ ಲಕ್ಷೇ । ತುಝೇ ಚರಣಸೇವಾಪಕ್ಷೇ । ನಿತ್ಯ ನಿರಪೇಕ್ಷೆ ನಾಂದವಿಸೀ ।।೧೨।। ಸಾಮ್ಯತೇಚೇ ಸಿಂಹಾಸನ । ಐಕ್ಯತೇಚೀ ಗಾದೀ ಜಾಣ । ತ್ಯಾವರೀ ತುಝೇ ಸಹಜಾಸನ । ಪರಿಪೂರ್ಣ ಸ್ವಭಾವೇ ।।೧೩।। ತನ್ಮಯತೇಚೇ ನಿಜಛತ್ರ । ಸಂತೋಷಾಚೇ ಆತಪತ್ರ । ಜ್ಞಾನವಿಜ್ಞಾನಯುಗ್ಮ ಚಾಮರ । ಸಹಜೇ ನಿರಂತರ ಢಳತಾತೀ ।।೧೪।। ತೇಥ ಚಾರೀ ವೇದ ತುಝೇ ಭಾಟ । ಕೀರ್ತಿ ವರ್ಣಿತೀ ಉದ್ಭಟ । ಅಠರಾ ಮಾಗಧ ಅತಿಶ್ರೇಷ್ಠ । ವರ್ಣಿತೀ ಚೋಖಟ ವಂಶಾವಳೀ ।।೧೫।। ತೇಥ ಸಾಹೀ ಜಣ ವೇವಾದ । ನಾನಾಕುಸರೀ ಬೋಲತೀ ಶಬ್ದ । ಯುಕ್ತಿಪ್ರಯುಕ್ತೀ ದೇತೀ ಬಾಧ । ದಾವಿತೀ ವಿನೋದ ಜಾಣೀವ ।।೧೬।। ಏಕ ಭಾವಾರ್ಥೀ ತುಜಲಾಗುನೀ । ಸ್ತುತಿ ಕರಿತೀ ನ ಬೋಲುನೀ । ತೇಣೇ ಸ್ತವನೇ ಸಂತೋಷೋನೀ । ನಿಜಾಸನೀ ಬೈಸವಿಸೀ ।।೧೭।। ಐಸಾ ಸದ್ಗುರು ಮಹಾವಿಷ್ಣು । ಜೋ ಚಿದ್ರೂಪೇ ಸಮ ಸಹಿಷ್ಣು । ಜೋ ಭ್ರಾಜಮಾನೇ ಭ್ರಾಜಿಷ್ಣು । ಜನೀ ಜನಾರ್ದನು ತೋ ಏಕ ।।೧೮।। ಜನೀ ಜನಾರ್ದನುಚಿ ಏಕಲಾ । ತೇಥ ಏಕಪಣೇ ಏಕಾ ಮೀನಲಾ । ತೇಣೇ ಏಕಪಣಾಚಾಹೀ ಗ್ರಾಸ ಕೇಲಾ । ಐಸಾ ಝಾಲಾ ಮಹಾಬೋಧ ।।೧೯।। ಯಾ ಮಹಾಬೋಧಾಚೇ ಬೋಧಾಂಜನ । ಹಾತೇವೀಣ ಲೇವವೀ ಜನಾರ್ದನ । ತೇಣೇ ಸರ್ವಾಂಗೀ ನಿಘಾಲೇ ನಯನ । ದೇಖಣೇಪಣ ಸರ್ವತ್ರ ।।೨೦।। ಪರೀ ಸರ್ವತ್ರ ದೇಖತಾ ಜನ । ದೇಖಣೇನಿ ದಿಸೇ ಜನಾರ್ದನ । ಐಶೀ ಪೂರ್ಣ ಕೃಪಾ ಕರೂನ । ಏಕಪಣ ಸಾಂಡವಿಲೇ ।।೨೧।। ಐಸಾ ತುಷ್ಟೋನಿ ಭಗವಂತ । ಮಾಝೇನಿ ಹಾತೇ ಶ್ರೀಭಾಗವತ । ಅರ್ಥವಿಲೇ ಜೇ ಯಥಾರ್ಥ । ಶೇಖೀ ಪ್ರಾಕೃತ ದೇಶಭಾಷಾ ।।೨೨।। ಶ್ರೀ ಭಾಗವತೀ ಸಂಸ್ಕೃತ । ಉಪಾಯ ಅಸತಾಂಹೀ ಬಹುತ । ಕಾಯ ನೇಣೋ ಆವಡಲೇ ಯೇಥ । ಕರವೀ ಪ್ರಾಕೃತ ಪ್ರಬೋಧೇ ।।೨೩।। ಮ್ಯಾ ಕರಣೇ ಕಾ ನ ಕರಣೇ । ಹೇಹೀ ಹಿರೂನಿ ನೇಲೇ ಜನಾರ್ದನೇ । ಆತಾ ಗ್ರಂಥಾರ್ಥ ನಿರೂಪಣೇ । ಮಾಝೇ ಬೋಲಣೇ ತೋ ಬೋಲೇ ।।೨೪।। ತೇಣೇ ಬೋಲೋನಿ ನಿಜಗೌರವಾ । ವೇದವಿಭಾಗ ಸದ್ಭಾವಾ। ತೋ ಏಕಾದಶೀ ವಿಸಾವಾ । ಉದ್ಧವಾಸೀ ಬರವಾ ನಿರೂಪಿಲಾ ।।೨೫।। ತೇಥ ಭಕ್ತ ಆಣಿ ಸಜ್ಞಾನ । ತ್ಯಾಸೀ ಪಾವಲೀ ವೇದಾರ್ಥಖೂಣ । ಕರ್ಮಠೀ ದೇಖತಾ ದೋಷಗುಣ । ಸಂಶಯೀ ಜಾಣ ತೇ ಪಡಿಲೇ ।।೨೬।।

ಅದರತ್ತ ಯಾವುದೇ ಲಕ್ಷವು ಮುಟ್ಟುವುದಾಗುವುದಿಲ್ಲ. ಆ ಯಾವ ಬ್ರಹ್ಮವು ನಿನ್ನ ಕೃಪೆಯಿಂದ ಸ್ಪಷ್ಟವಾಗಿ ತೋರಹತ್ತುವುದು. ನಿನ್ನ ಚರಣಸೇವೆಯ ಅಪೇಕ್ಷೆಯ ಮೇರೆಗೆ ನೀನು ಭಕ್ತರಿಗೆ ನಿರಪೇಕ್ಷತೆಯಿಂದ ವರ್ತಿಸಲು ಹಚ್ಚುವೆ ।।೧೨।। ಸಾಮ್ಯತೆಯ ಸಿಂಹಾಸನದ ಮೇಲೆ ಐಕ್ಯತೆಯ ಗಾದಿ ಇರುವುದು. ಆ ಗಾದಿಯ ಮೇಲೆ ಸ್ವಾಭಾವಿಕವಾಗಿ ನಿನ್ನ ಸಹಜಾಸನವು ಇರುವುದು ।।೧೩।। ನಿನ್ನ ಮಸ್ತಕದ ಮೇಲೆ ತನ್ಮಯತೆಯ ಛತ್ರವಿರುವುದು. ಸಂತೋಷದ ಆತಪತ್ರವಿರುವುದು. ಜ್ಞಾನ-ವಿಜ್ಞಾನ ಎಂಬ ಎರಡು ಚವರಿಗಳು ನಿನ್ನ ಮೇಲೆ ಯಾವಾಗಲೂ ಬೀಸುತ್ತಿರುವುವು ।।೧೪।। ನಾಲ್ಕೂ ವೇದಗಳು ನಿನ್ನ ಸ್ತುತಿಪಾಠಕರಾಗಿರುವರು. ಉಚ್ಚ ಸ್ವರದಲ್ಲಿ ಅವು ನಿನ್ನ ಕೀರ್ತಿಯನ್ನು ಹಾಡುತ್ತಿರುವುವು. ಹದಿನೆಂಟು ಪುರಾಣಗಳು ಇವು ಗಾನ ನಿಪುಣರಾದ ಗಂಧರ್ವರು ನಿನ್ನ ಅತಿ ಶ್ರೇಷ್ಠವಾದ ವಂಶಾವಳಿಯ ವರ್ಣನೆಯನ್ನು ಮಾಡುತ್ತಿರುವರು ।।೧೫।। ಹಾಗೆಯೇ ಆರು ಶಾಸ್ತ್ರಗಳು ಚಾತುರ್ಯದಿಂದ ವಾದ - ವಿವಾದಗಳನ್ನು ಮಾಡುತ್ತಿರುವುವು. ಮತ್ತು ಯುಕ್ತಿ-ಪ್ರಯುಕ್ತಿಗಳಿಂದ ಪರಸ್ಪರರು ಖಂಡನೆ-ಮಂಡನೆಯನ್ನು ಮಾಡುವರು. ಈ ಪ್ರಕಾರವಾಗಿ ತಮ್ಮ ಜ್ಞಾನದ ಕೌತುಕವನ್ನು ತೋರಿಸುವುವು ।।೧೬।। ಒಬ್ಬ ಭಾವಾರ್ಥ ಭಕ್ತನು ಹೇಳದೇ ಅದರ ಸ್ತುತಿಯನ್ನು ಮಾಡುತ್ತಿರುವನು. ಆ ಸ್ತುತಿಯಿಂದ ನೀನು ಸಂತೋಷಪಡುವೆ. ಆತನನ್ನು ನಿಜಾಸನದ ಮೇಲೆ ಕೂಡ್ರಿಸುವೆ ।।೧೭।। ಯಾವುದು ಚಿದ್ರೂಪದಿಂದ ಸಮವಾಗಿದ್ದು ಸಹಿಷ್ಣುವಾಗಿದೆಯೋ, ಯಾವುದು ತೇಜದಿಂದ ದೇದಿಪ್ಯಮಾನವಾಗಿರುವುದೋ, ಅಂತಹ ನೀನು ಸದ್ಗುರು ಮಹಾವಿಷ್ಣು ಆಗಿರುವೆ. ಆತನೇ ಜನರಲ್ಲಿ ಏಕರೂಪನಾಗಿರುವ ಜನಾರ್ದನನಾಗಿರುವನು ।।೧೮।। ಸರ್ವ ಜನರಲ್ಲಿ ಏಕರೂಪನಾಗಿಬಿಟ್ಟನು ಮತ್ತು ಆತನು ಐಕ್ಯದ ಎಲ್ಲವನ್ನೂ ಒಂದೇ ತುತ್ತು ಮಾಡಿ ನುಂಗಿಬಿಟ್ಟನು. ಹೀಗೆ ಆತ್ಮಬೋಧವು ಆತನಿಗೆ ಪ್ರಾಪ್ತವಾಯಿತು ।।೧೯।। ಆ ಯಾವ ಮಹಾಬೋಧೆಯ ಅಂಜನವನ್ನು ಕೈಗೆ ಹಚ್ಚದೇ ಜನಾರ್ದನರು ಕಣ್ಣುಗಳಲ್ಲಿ ಹಾಕುವರು. ಆದ್ದರಿಂದ ಸರ್ವಾಂಗದಲ್ಲಿ ಕಣ್ಣುಗಳು ಹುಟ್ಟಿಕೊಳ್ಳುವುವು ಮತ್ತು ಅದರಿಂದಲೇ ದೃಷ್ಟಿಯು ಸರ್ವವ್ಯಾಪಕವಾಗುವುದು ।।೨೦।। ಎಲ್ಲ ಕಡೆಯಲ್ಲಿಯೂ ಜನರತ್ತ ನೋಡಲು ಅವರೆಲ್ಲರೂ ಒಂದೇ ಜನಾರ್ದನರಾಗಿ ಕಾಣುವರು. ಹೀಗೆ ಪರಿಪೂರ್ಣವಾಗಿ ಕೃಪೆ ಮಾಡಿ ಆತನು ಕೊನೆಗೆ ಒಂದನ್ನೂ ಕೂಡ ಇಲ್ಲದಾಗಿ ಮಾಡಲ್ಪಡುವನು ।।೨೧।। ಈ ಪ್ರಕಾರವಾಗಿ ಭಗವಂತನು ಪ್ರಸನ್ನನಾಗಿ ನನ್ನ ಕೈಯಿಂದ ಶ್ರೀಮತ್ ಭಾಗವತದ ಅರ್ಥವನ್ನು ಪ್ರಕಟಗೊಳಿಸಿದನು. ಅದೂ ಕೂಡ ಪ್ರಾಕೃತವಾದ ದೇಶಭಾಷೆಯಲ್ಲಿ ಬರೆಯಿಸಿದನು ।।೨೨।। ಶ್ರೀಮತ್ ಭಾಗವತದ ಮೇಲೇ ಅನೇಕ ಉತ್ತಮೋತ್ತಮ ಸಂಸ್ಕೃತ ಟೀಕೆಗಳು ಇರುತ್ತಿದ್ದರೂ ಅವರಿಗೆ ಏಕೆ ಪ್ರಿಯವಾಯಿತೋ ಏನೋ ಯಾರು ಬಲ್ಲರು? ಅವರು ಪ್ರಾಕೃತದಲ್ಲಿ ಸುಲಭವಾದ ಅರ್ಥವನ್ನು ಮಾಡಿಸಿದರು ।।೨೩।। ನನ್ನ ಕರ್ತೃತ್ವ ಅಥವಾ ಅಕರ್ತೃತ್ವ ಇದನ್ನು ಜನಾರ್ದನರು ಕಸಿದುಕೊಂಡು ಹೋಗಿರುವರು. ಆದ್ದರಿಂದ ಈಗ ಗ್ರಂಥದ ನಿರೂಪಣೆಯನ್ನು ಮಾಡುತ್ತಿರುವುದು, ವಾಸ್ತವಿಕವಾಗಿ ಅವರೇ ಹೇಳುತ್ತಿರುವರು ।।೨೪।। ಅವರು ತಮ್ಮ ಗೌರವಕ್ಕಾಗಿ ಪ್ರೇಮದಿಂದ ವೇದದ ವಿಭಾಗಗಳನ್ನು ಮಾಡಿ ಹನ್ನೊಂದನೆಯ ಸ್ಕಂಧದ ಇಪ್ಪತ್ತನೆಯ ಅಧ್ಯಾಯದಲ್ಲಿ ಉದ್ಧವನಿಗೆ ಹೇಳಿದರು ।।೨೫।। ಆ ಸಮಯದಲ್ಲಿ ಜ್ಞಾನೀ ಮತ್ತು ಭಕ್ತರಿಗೆ ವೇದಾರ್ಥದ ರಹಸ್ಯವು ಸರಿಯಾಗಿ ತಿಳಿಯಿತು. ಆದರೆ ಕರ್ಮಠರಿಗೆ ಗುಣದೋಷಗಳತ್ತ ನೋಡುತ್ತಿರುವುದರಿಂದ ಅವರು ಸಂಶಯದ ಚಕ್ರದಲ್ಲಿ ಬಿದ್ದುಕೊಂಡರು ।।೨೬।।

ತ್ಯಾ ಸಂಶಯಾಚೇ ನಿರಸನ । ಕರಾವಯಾ ಶ್ರೀಕೃಷ್ಣ । ಏಕವಿಸಾವಾ ನಿರೂಪಣ । ಗುಣದೋಷಲಕ್ಷಣ ಸ್ವಯೇ ಸಾಂಗೇ ।೨೭॥ ತ್ಯಾ ಗುಣದೋಷಾಂಚಾ ವಿಭಾಗ । ಸಾಂಗೋನಿಯಾ ವಿಷಯತ್ಯಾಗ । ಕರಾವಯಾ ಶ್ರೀರಂಗ । ನಿರೂಪಣ ಸಾಂಗ ಸಾಂಗತ ।೨೮॥

ಶ್ರೀ ಭಗವಾನುವಾಚ :-

ಯ ಏತಾನ್ ಮತ್ಪಥೋ ಹಿತ್ವಾ ಭಕ್ತಿಜ್ಞಾನಕ್ರಿಯಾತ್ಮಕಾನ್ ।
ಕ್ಷುದ್ರಾನ್ ಕಮಾಂಶ್ಚಲೈಃ ಪ್ರಾಣೈರ್ಜುಷಂತಃ ಸಂಸರಂತಿ ತೇ ।೧॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು ; ಹೇ ಪ್ರಿಯ ಉದ್ಧವಾ, ನನ್ನ ಪ್ರಾಪ್ತಿಯ ಮೂರು ಮಾರ್ಗಗಳಿರುವುವು. ಒಂದನೆಯದು ಭಕ್ತಿಯೋಗ, ಎರಡನೆಯದು ಜ್ಞಾನಯೋಗ, ಮೂರನೆಯದು ಕರ್ಮಯೋಗ ಯಾವ ಜನರು ಈ ಮಾರ್ಗವನ್ನು ಬಿಟ್ಟುಕೊಟ್ಟು ಚಂಚಲವಾಗಿರುವ ಇಂದ್ರಿಯಗಳ ಮುಖಾಂತರ ಕ್ಷುದ್ರವಾದ ಭೋಗಗಳನ್ನು ಭೋಗಿಸುತ್ತ ಜನ್ಮಮರಣದ ಚಕ್ರದಲ್ಲಿ ತಿರುಗುತ್ತಿರುವರು.

ಮ್ಯಾ ಸಾಂಗಿತಲೇ ಜೇ ವಿಭಾಗ । ಭಕ್ತಿಜ್ಞಾನಕ್ರಿಯಾಯೋಗ । ಹಾ ಸಾಂಡೂನಿ ಶುದ್ಧ ವೇದಮಾರ್ಗ । ಸಕಾಮ ಭೋಗ ಜೇ ವಾಂಛ್ಛಿತೀ ।೨೯॥ ಕ್ಷಣಭಂಗುರ ದೇಹಾಚಾ ಯೋಗ । ಹೇ ವಿಸರೋನಿಯಾ ಚಾಂಗ ।ಸಕಾಮ ಕರ್ಮಾಚಿ ಲಗಬಗ । ಭವಸ್ವರ್ಗಭೋಗ ಭೋಗಾವಯಾ।೩೦॥ ಚಳತೇನಿ ಪ್ರಾಣಸಂಗೇ । ದೇಹಾತೇ ಕಾಳ ಗ್ರಾಸೂ ಲಾಗೇ । ಯೇಥ ನಾನಾಕಾಮ ಸಂಭೋಗೇ । ಮೂರ್ಖ ತದ್ಯೋಗೇ ಮಾನಿತೀ ಸುಖ।೩೧॥ ಭೋಗಿತಾ ಕಾಮ ಭೋಗಸೋಹಳೇ । ನೇಣೇ ಆಯುಷ್ಯ ಗ್ರಾಸಿಲೇ ಕಾಳೇ । ಮಗ ಜನ್ಮ ಮರಣಮಾಳೇ । ದುಃಖ ಉಮಾಳೇ ಭೋಗಿತೀ ।೩೨॥ ಕಾಮ್ಯ ಆಣಿ ನಿತ್ಯಕರ್ಮ । ಆಚರತಾ ದಿಸೇ ಸಮ । ತರೀ ಫಳೀ ಕಾ ಪಾ ವಿಷಮ । ಸುಗಮ ದುರ್ಗಮ ಪರಿಪಾಕು ।೩೩॥ ತೇ ಕರ್ಮವೈಚಿತ್ರ್ಯ ವಿಂದಾನ । ಸಂಕಲ್ಪಾಸ್ತವ ಘಡೇ ಜಾಣ । ತೇಚಿ ಅರ್ಥೀಚೇ ನಿರೂಪಣ। ಜಾಣೋನಿ ಶ್ರೀಕೃಷ್ಣ ಸಾಂಗತ ।೩೪॥

ಸ್ವೇ ಸ್ವೇಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ।
ವಿಪರ್ಯಯಸ್ತು ದೋಷಃ ಸ್ಯಾದುಭಯೋರೇಷ ನಿಶ್ಚಯಃ ।೨॥

ಅರ್ಥ:- ವ್ಯಕ್ತಿಯು ತನ್ನ ಸ್ಥಿತಿಯಲ್ಲಿ ಸ್ಥಿರತೆಯನ್ನು ತಾಳಿರುವುದನ್ನು ಗುಣವೆಂದು ಘೋಷಿಸಲಾಗಿದೆ. ತನ್ನ ಸ್ಥಿತಿಯಿಂದ ಚಲನೆಗೊಂಡಿರುವುದನ್ನು ದೋಷವೆಂದು ಪರಿಗಣಿಸಲಾಗಿದೆ. ಹೀಗೆ ಎರಡನ್ನೂ ಸ್ಪಷ್ಟವಾಗಿ ನಿಶ್ಚಯಿಸಲಾಗಿದೆ.

ಕರ್ಮ ವಿಚಾರಿತಾ ಅವಘೇ ಏಕ । ತರೀ ಅಧಿಕಾರ ಭಿನ್ನ ಭಿನ್ನ ದೇಖ । ತೇ ಮೀ ಸಾಂಗೇನ ಆವಶ್ಯಕ । ಜೇಣೇ ಸುಖದುಃಖ ಭೋಗಣೇ ಘಡೇ ।೩೫॥

ಈ ಸಂಶಯದ ನಿವಾರಣೆಗಾಗಿ ಇಪ್ಪತ್ತೊಂದನೆಯ ಅಧ್ಯಾಯದ ನಿರೂಪಣೆಯನ್ನು ಮಾಡಿ ಗುಣದೋಷಗಳ ಲಕ್ಷಣವನ್ನು ಸ್ವತಃ ಶ್ರೀಕೃಷ್ಣನೇ ಹೇಳುತ್ತಿರುವನು ।೨೭॥ ಆ ಗುಣದೋಷಗಳ ಪ್ರಕಾರವನ್ನು ಹೇಳಿ ಭಗವಾನ ಶ್ರೀಕೃಷ್ಣನು ವಿಷಯಗಳ ತ್ಯಾಗವನ್ನು ಮಾಡುವುದಕ್ಕಾಗಿಯೇ ಸವಿಸ್ತಾರವಾಗಿ ನಿರೂಪಣೆಯನ್ನು ಮಾಡುತ್ತಿರುವನು ।೨೮॥

ಭಕ್ತಿಯೋಗ, ಜ್ಞಾನಯೋಗ ಮತ್ತು ಕರ್ಮಯೋಗ ಹೀಗೆ ಮೂರು ವಿಭಾಗಗಳನ್ನು ನಾನು ನಿನಗೆ ಹೇಳಿದೆನು. ಇವು ಶುದ್ಧವಾದ ವೇದಮಾರ್ಗವಾಗಿರುವುವು. ಇದನ್ನು ಬಿಟ್ಟು ಕಾಮುಕರು ವಿಷಯ ಸುಖದ ಇಚ್ಛೆಯನ್ನು ಮಾಡುತ್ತಿರುವರು ।೨೯॥ ಈ ಯಾವ ದೇಹದ ಸಂಬಂಧವು ಕೇವಲ ಕ್ಷಣಭಂಗುರವಾಗಿರುವುದು. ಆದರೆ ಈ ವಿಚಾರವನ್ನು ಸಂಪೂರ್ಣವಾಗಿ ಮರೆತುಬಿಡುವರು ಮತ್ತು ಸಂಸಾರದಲ್ಲಿನ ಹಾಗೂ ಸ್ವರ್ಗದಲ್ಲಿನ ವಿಷಯ ಭೋಗಕ್ಕಾಗಿ ಸಕಾಮ ಕರ್ಮಗಳಲ್ಲಿ ವ್ಯರ್ಥವಾಗಿ ಖಟಾಟೋಪವನ್ನು ಮಾಡುತ್ತಿರುವರು ।೩೦॥ ಚಂಚಲವಾಗಿರುವ ಪ್ರಾಣದ ಸಂಗತಿಯಿಂದ ಕಾಲನು ಕ್ಷಣಕ್ಷಣಕ್ಕೂ ದೇಹವನ್ನು ಗ್ರಾಸಿಸುತ್ತಿರುವನು. ಹೀಗಿದ್ದರೂ ಕೂಡ ಇಹಲೋಕದಲ್ಲಿನ ಅನೇಕ ಪ್ರಕಾರದ ವಿಷಯಗಳ ಉಪಭೋಗಗಳಲ್ಲಿ ಮತ್ತು ಅದಕ್ಕಾಗಿ ಪ್ರಯತ್ನಗಳಲ್ಲಿ ಅನೇಕ ಮೂರ್ಖ ಜನರು ಸುಖವೆಂದು ಭಾವಿಸುತ್ತಿರುವರು ।೩೧॥ ಕಾಮಭೋಗಗಳ ವೈಭವವನ್ನು ಭೋಗಿಸುತ್ತಿದ್ದಾಗ ಕಾಲನು ಆಯುಷ್ಯವನ್ನು ನುಂಗುತ್ತಲೇ ಇರುವನು. ಇದು ಅವರಿಗೆ ತಿಳಿಯುವುದೇ ಇಲ್ಲ. ಆದ್ದರಿಂದ ಇವರು ಜನ್ಮ ಮರಣದ ಚಕ್ರದಲ್ಲಿ ದುಃಖದ ವೇದನೆಯನ್ನು ಭೋಗಿಸುತ್ತಿರುವರು ।೩೨॥ ಕಾಮ್ಯ ಕರ್ಮ ಮತ್ತು ನಿತ್ಯ ಕರ್ಮ ಇವುಗಳನ್ನು ಆಚರಿಸುತ್ತಿರಲು ಸಮವಾಗಿ ತೋರುವುವು. ಆದರೆ ಫಲಗಳಲ್ಲಿನ ವಿಷಮ ಇರುವುದರಿಂದ ಪರಿಣಾಮಗಳೂ ಕೂಡ ಒಳ್ಳೆಯ ಮತ್ತು ಕೆಟ್ಟದ್ದಾಗುತ್ತಿರುವುವು ।೩೩॥ ಸಂಕಲ್ಪಗಳಿಂದ ಈ ಕರ್ಮವೈಚಿತ್ರ್ಯವು ಆಗುತ್ತಿರುವುದು. ಈಗ ಇದರ ನಿರೂಪಣೆಯನ್ನು ಶ್ರೀಕೃಷ್ಣನು ಮಾಡುವನು ।೩೪॥

ವಿಚಾರಿಸಿ ನೋಡಲು ಕರ್ಮಗಳೆಲ್ಲವೂ ಸಮವಾಗಿಯೇ ತೋರುವುವು. ಆದರೆ ಅಧಿಕಾರ ಮಾತ್ರ ಭಿನ್ನ ಭಿನ್ನವಾಗಿರುವುದು. ಇದರಿಂದ ಸುಖ ದುಃಖಗಳನ್ನು ಭೋಗಿಸಬೇಕಾಗುವುದು. ಇದನ್ನು ನಾನು ನಿನಗೆ ಅವಶ್ಯವಾಗಿ ಹೇಳುವೆನು ।೩೫॥

ಮುಖಾಚಾ ವ್ಯಾಪಾರ ಭೋಜನ । ತೋ ನಾಕೇ ಕರೂ ಜಾತಾ ಜಾಣ । ಸುಖ ಬುಡವೂನಿ ದಾರುಣ । ದುಃಖ ಆಪಣ ಸ್ವಯೇ ಭೋಗೀ ।।೩೬।। ಕಾ ಪಾಯಾಂಚೇ ಚಾಲಣೇ । ಪಡೇ ಜೈ ಡೋಈ ಕರಣೇ । ತೈ ಮಾರ್ಗ ನ ಕಂಠೇ ತೇಣೇ । ಪರೀ ಕಷ್ಟಣೇ ಅನಿವಾರ ।।೩೭।। ತೇವೀ ಜೇ ಕರ್ಮ ಸ್ವಾಧಿಕಾರೇ । ಸುಖಾತೇ ದೇ ಅತ್ಯಾದರೇ । ತೇಚಿ ಕರ್ಮ ಅನಧಿಕಾರೇ । ದುಃಖೇ ದುರ್ಧರೇ ಭೋಗವೀ ।।೩೮।। ಗಜಾಚೇ ಆಭರಣ । ಗಾಢವಾಸೀ ನವ್ಹೇ ಭೂಷಣ । ಪರೀ ಭಾರೇ ಆಣೇ ಮರಣ । ತೇವಿ ಕರ್ಮ ಜಾಣ ಅನಧಿಕಾರೀ ।।೩೯।। ಮೇಘ ವರ್ಷೇ ನಿರ್ಮಳ ಜಳ । ಪರೀ ಜೈಸೇ ಬೀಜ ತೈಸೇ ಫಳ । ಏಕಾ ಭಾಂಗೀ ಪಿಕೇ ಸಬಳ । ಏಕಾ ಪ್ರಬಳ ಸಾಳೀ ಕೇಳೇ ।।೪೦।। ಪಾಹೇ ಪಾ ಜೈಸೇ ದುಗ್ಧ ಚೋಖ । ಜ್ವರಿತಾಮುಖೀ ಕಡೂ ವಿಖ । ತೇಚಿ ನಿರುಜಾ ಗೋಡ ದೇಖ । ಪುಷ್ಟಿದಾಯಕ ಸೇವನೀ ।।೪೧।। ತೇವೀ ಸಕಾಮೀ ಕರ್ಮ ಘಡೇ । ತೇ ಬಾಧಕ ಹೋಯ ಗಾಢೇ । ತೇಚಿ ಕರ್ಮ ನಿಷ್ಕಾಮಾಕಡೇ । ಮೋಕ್ಷ ಸುರವಾಡೇ ಸುಖಾವೀ ।।೪೨।। ಸ್ವಾಧಿಕಾರೇ ಸ್ವಕರ್ಮಾಚರಣ । ತೋಚಿ ಯೇಥೇ ಮುಖ್ಯತ್ವೇ ಗುಣ । ಅನಧಿಕಾರೀ ಕರ್ಮ ಜಾಣ । ತೋಚಿ ಅವಗುಣ ಮಹಾದೋಷ ।।೪೩।। ಯಾ ರೀತೀ ಗಾ ಕರ್ಮಾಚರಣ । ಉಪಜವೀ ದೋಷ ಆಣಿ ಗುಣ । ಹೇಚಿ ಗುಣದೋಷಲಕ್ಷಣ । ಶಾಸ್ತ್ರಜ್ಞ ಜಾಣ ಬೋಲತೀ ।।೪೪।। ತೇಚಿ ಗುಣದೋಷಲಕ್ಷಣ । ಶುದ್ಧಾಶುದ್ಧೀಚೇ ಕಾರಣ । ತೇಚಿ ಅರ್ಥೀಚೇ ವಿವಂಚನ । ದೇವೋ ಆಪಣ ಸಾಂಗತ ।।೪೫।।

ಶುದ್ಧ್ಯಶುದ್ಧೀ ವಿಧಿಯೇತೇ ಸಮಾನೇಷ್ವಪಿ ವಸ್ತುಷು । ದ್ರವ್ಯಸ್ಯ ವಿಚಿಕಿತ್ಸಾರ್ಥಂ ಗುಣದೋಷೌ ಶುಭಾಶುಭೌ ।।೩।।

ಅರ್ಥ:- ಯೋಗ್ಯ, ಅಯೋಗ್ಯಕ್ಕಾಗಿ ಸಂಶಯವು ಹುಟ್ಟಲು ಇದಕ್ಕಾಗಿ ವಿಚಾರ ಮಾಡಿ ಸ್ವಾಭಾವಿಕ ಪ್ರವತ್ತಿಗೆ ಪ್ರತಿಬಂಧವನ್ನು ಮಾಡಲು ಸಮಾನವಾದ ಒಂದೇ ವಸ್ತುವಿನ ಯೋಗ್ಯ ಮತ್ತು ಅಯೋಗ್ಯದ ಅನುರೋಧದಿಂದ ಶುದ್ಧ, ಅಶುದ್ಧದ ವಿಧಾನ ಮಾಡಲ್ಪಡುವುದು. ಯೋಗ್ಯ ಗ್ರಹಿಸುವುದು ಅಯೋಗ್ಯ ತ್ಯಜಿಸುವುದು ಇದು ಗುಣದೋಷಗಳ ವಿಧಾನವಾಗಿರುವುದು. ಶುಭಾಶುಭ ನಿಮಿತ್ತದಿಂದ ಅರ್ಥ,ಅನರ್ಥಗಳ ನಿಶ್ಚಯವನ್ನು ಮಾಡಲ್ಪಡುವುದು.

ಪಂಚಭೂತೇ ಸಮಾನ ಜಾಣ । ವಸ್ತು ಸರ್ವತ್ರ ಸಮಸಮಾನ । ತೇಥ ಗುಣದೋಷ ಅಪ್ರಮಾಣ । ಪರೀ ಕೇಲೇ ಪ್ರಮಾಣ ಯಾ ಹೇತೂ ।।೪೬।। ನ ಪ್ರೇರಿತಾ ಶ್ರುತಿಸ್ಮೃತೀ । ಆವಿದ್ಯಕ ವಿಷಯಪ್ರವೃತ್ತೀ । ಅನಿವಾರ ಸಕಳ ಭೂತೀ । ಸಹಜಸ್ಥಿತೀ ಸ್ವಭಾವೇ ।।೪೭।। ಐಸೀ ಸ್ವಾಭಾವಿಕ ವಿಷಯಸ್ಥಿತೀ । ತೀಚಿ ಕರಾವಯಾ ಉಪರತೀ ।ನಾನಾ ಗುಣದೋಷ ಬೋಲೇ ಶ್ರುತೀ । ವಿಷಯನಿವೃತ್ತೀಲಾಗುನೀ ।।೪೮।।

ಮುಖದ ಕೆಲಸವು ಊಟ ಮಾಡುವುದಾಗಿದೆ. ಈ ಊಟವನ್ನು ಮೂಗಿನಿಂದ ಮಾಡಲು ಹೋದರೆ ಸುಖವು ದೊರೆಯದೇ ಅತ್ಯಂತ ದುಃಖಮಾತ್ರ ಭೋಗಿಸಬೇಕಾಗುವುದು ।।೩೬।। ಕಾಲುಗಳಿಂದ ನಡೆಯುವುದನ್ನುಬಿಟ್ಟು ತಲೆಯಿಂದ ನಡೆಯಲು ಹತ್ತಿದರೆ ಮಾರ್ಗವು ಸಾಗುವುದೇ ಇಲ್ಲ. ಪ್ರತಿಯಾಗಿ ಕಷ್ಟಮಾತ್ರ ಸೋಸಬೇಕಾಗುವುದು ।।೩೭।। ಅದರಂತೆ ಅಧಿಕಾರದಂತೆ ಕರ್ಮಗಳನ್ನು ಮಾಡಲು ಅತಿಶಯ ಸುಖದ ಲಾಭವಾಗುವುದು. ಅದೇ ಕರ್ಮಗಳನ್ನು ಅಧಿಕಾರವಿಲ್ಲದೇ ಮಾಡಲು ಅಸಹ್ಯ ದುಃಖವನ್ನು ಭೋಗಿಸಬೇಕಾಗುವುದು ।।೩೮।। ಆನೆಯ ಮೇಲೆ ಹಾಕುವ ಆಭರಣಗಳನ್ನು (ಅಂಬಾರಿ ಇತ್ಯಾದಿ) ಕತ್ತೆಯ ಮೇಲೆ ಹೇರಲು ಅದಕ್ಕೆ ಶೋಭೆ ಬರುವ ಬದಲು ಭಾರದಿಂದ ಮರಣವು ಬರುವುದು. ಅದರಂತೆ ಅನಧಿಕಾರಿಯ ಕರ್ಮದ ಅವಸ್ಥೆಯಾಗುವುದು ।।೩೯।। ಮೇಘವು ನಿರ್ಮಲವಾದ ಜಲದ ವೃಷ್ಟಿ ಮಾಡುತ್ತಿರುವುದು. ಆದರೆ ಬೀಜಗಳ ತಕ್ಕಂತೆ ಫಲಪ್ರಾಪ್ತಿಯಾಗುವುದು. ಒಂದು ಪ್ರದೇಶದಲ್ಲಿ ಕೇವಲ ಭಾಂಗವು ಬೆಳೆದರೆ ಇನ್ನೊಂದೆಡೆ ಭರಪೂರವಾಗಿ ಭತ್ತ, ಬಾಳೆ ಬೆಳೆಯುವುದು ।।೪೦।। ಹಾಲು ಎಷ್ಟೇ ಉತ್ತಮವಾಗಿರಲಿ ಜ್ವರಪೀಡಿತ ಮನುಷ್ಯನಿಗೆ ವಿಷವಾಗುವುದು. ಆರೋಗ್ಯವಂತನಿಗೆ ರುಚಿಯಾಗಿರುವುದು, ಕುಡಿಯುವುದರಿಂದ ಶಕ್ತಿ ಬರುವುದು ।।೪೧।। ಅದರಂತೆ ಸಕಾಮ ಕರ್ಮ ಮಾಡುವುದರಿಂದ ಅದು ಬಂಧನಕಾರಕವಾಗುವುದು. ಮತ್ತು ನಿಷ್ಕಾಮ ಬುದ್ಧಿಯಿಂದ ಕರ್ಮ ಮಾಡಲು ಅದು ಸರ್ವ ಬಂಧನದಿಂದ ಮುಕ್ತಗೊಳಿಸುವುದು ।।೪೨।। ತನ್ನ ಅಧಿಕಾರದಂತೆ ಕರ್ಮ ಮಾಡುವುದು ಇದೇ ಮುಖ್ಯ ಗುಣವಾಗಿರುವುದು. ಮತ್ತು ತನ್ನ ಅಧಿಕಾರವಿಲ್ಲದೇ ಕರ್ಮ ಮಾಡುವುದು ಇದೇ ದೊಡ್ಡ ಅವಗುಣವಾಗಿರುವುದು ।।೪೩।। ಈ ಪ್ರಕಾರವಾಗಿ ಕರ್ಮದ ಆಚರಣೆಯು ಗುಣ ಮತ್ತು ದೋಷಗಳನ್ನು ನಿರ್ಮಾಣಗೊಳಿಸುವುದು ಮತ್ತು ಶಾಸ್ತ್ರಜ್ಞರು ಇವೇ ಗುಣ ದೋಷಗಳ ಲಕ್ಷಣವನ್ನು ಹೇಳುತ್ತಿರುವರು ।।೪೪।। ಇದೇ ಗುಣದೋಷ ಲಕ್ಷಣವನ್ನು ಮತ್ತು ಶುದ್ಧೀ - ಅಶುದ್ಧೀಗಳ ಕಾರಣವನ್ನು ದೇವನು ಸ್ವತಃ ವಿವೇಚನೆಯನ್ನು ಮಾಡಿ ಹೇಳುತ್ತಿರುವನು ।।೪೫।।

ಪಂಚಮಹಾಭೂತಗಳು ಸಮಸಮಾನವಾಗಿರುವುವು. ಬ್ರಹ್ಮವೂ ಕೂಡ ಸರ್ವತ್ರವೂ ಸರಿಸಮಾನವಾಗಿರುವುದು. ಹೀಗಿರುವುದರಿಂದ ಗುಣದೋಷಗಳು ಅಪ್ರಮಾಣ ಅಂದರೆ ಮಿಥ್ಯೆಯಾಗಿರುವುವು. ಆದರೆ ಮುಂದೆ ಹೇಳಿರುವ ಕಾರಣಗಳಿಂದ ಪ್ರಮಾಣಭೂತವಾಗಿರುವುವು ।।೪೬।। ಶ್ರುತಿಗಳು ಅಥವಾ ಸ್ಮೃತಿಗಳು ಹೇಳುವ ತನಕ ಸರ್ವಪ್ರಾಣಿಗಳವರಲ್ಲಿ ಅವಿದ್ಯಕ ವಿಷಯ ಪ್ರವೃತ್ತಿಯು ಸ್ವಾಭಾವಿಕವಾಗಿಯೇ ಇರುವುದು ।।೪೭।। ಈ ಪ್ರಕಾರವಾಗಿ ವಿಷಯವಾಸನೆಯು ನೈಸರ್ಗಿಕವಾಗಿರುವುದರಿಂದ ಇದರ ನಿವೃತ್ತಿಯನ್ನು ಮಾಡಲು ಶ್ರುತಿಯು ಅನೇಕ ಪ್ರಕಾರದ ಗುಣದೋಷಗಳನ್ನು ಹೇಳಿರುವುದು ।।೪೮।।

ಹೇ ಏಕ ಶುದ್ಧ ಏಕ ಅಶುದ್ಧ । ಪೈಲ ಶುಭ ಹೇ ವಿರುದ್ಧ । ಮೀಚಿ ಬೋಲಿಲೋ ವೇದಾನುವಾದ । ವಿಷಯ ಬೋಧ ಭೇದಾವಯಾ ।೮೯॥ ವಿಷಯಾಂಚೀ ಜೇ ನಿವೃತ್ತೀ । ತೀಚೀ ವೇದರೂಪೇ ಮ್ಯಾ ಕೇಲೀ ಸ್ತುತೀ । ನಿಂದಿಲೀ ವಿಷಯಪ್ರವೃತ್ತೀ । ಚಿಳಸೀ ಚಿತ್ತೀ ಉಪಜಾವಯಾ ।೯೦॥ ಚಾಲತಾ ಕರ್ಮಪ್ರವತ್ತೀ । ಹೋ ವಿಷಯಾಂಚೀ ನಿವೃತ್ತೀ । ಐಶೀ ವೇದದ್ವಾರೇ ಕೇಲೀ ಯುಕ್ತೀ । ಐಕ ತುಜಪ್ರತೀ ಸಾಂಗೇನ ।೯೧॥

ಧರ್ಮಾರ್ಥ ವ್ಯವಹಾರಾರ್ಥ ಯಾತ್ರಾರ್ಥಮಿತಿ ಚಾನಘ ।
ದರ್ಶಿತೋಽಯಂ ಮಯಾಽಽಚಾರೋ ಧರ್ಮ ಮುದ್ವಹತಾಂ ಧುರಮ್ ।೪॥

ಅರ್ಥ:- ಯಾವುದರಿಂದ ಧರ್ಮವನ್ನು ಸಂಪಾದಿಸಲು ಸಾಧ್ಯವಾಗುವುದೋ, ಸಮಾಜದಲ್ಲಿ ವ್ಯವಹಾರವು ಉತ್ತಮ ರೀತಿಯಲ್ಲಿ ನಡೆಯಲು ಸಾಧ್ಯವಾಗುವುದೋ, ಮತ್ತು ತನ್ನ ವ್ಯಕ್ತಿಗತ ಜೀವನದಲ್ಲಿ ಉತ್ತಮಸ್ಥಿತಿ ನಿರ್ಮಾಣವಾಗಬಲ್ಲದೋ, ಅಂತಹ ಲಾಭವಾಗುತ್ತಲೇ ಮನುಷ್ಯನು ವಾಸನೆಯ ಮೂಲಕ ಸಹಜ ಪ್ರವೃತ್ತಿಯಿಂದ ಅದರ ಬಲೆಯಲ್ಲಿ ಬೀಳದೇ ಶಾಸ್ತ್ರಾನುಸಾರವಾಗಿ ತನ್ನ ಜೀವನಕ್ಕೆ ನಿಯಂತ್ರಣಗೊಳಿಸಲು ತನ್ನ ಮನವನ್ನು ಸ್ವಾಧೀನಪಡಿಸುವನು. ಹೇ ನಿಷ್ಪಾಪ ಉದ್ಧವನೇ, ಈ ಆಚಾರವನ್ನು ನಾನು ಮನು ಇತ್ಯಾದಿ ರೂಪ ಧರಿಸಿ ಧರ್ಮದ ಭಾರವನ್ನು ಹೊರುವ ಕರ್ಮಕಾಂಡದ ಉಪದೇಶವನ್ನು ಕರ್ಮಜನರಿಗೆ ಉಪದೇಶ ಮಾಡಿದ್ದೇನೆ.

ಉದ್ಧವಾ ತೂ ನಿಷ್ಪಾಪ ತ್ರಿಶುದ್ಧೀ । ಯಾಲಾಗೀ ತುಝೀ ಶುದ್ಧ ಬುದ್ಧೀ । ಧರ್ಮಾದಿ ವ್ಯವಹಾರಸಿದ್ಧೀ । ಐಕ ತೋ ವಿಧಿ ಸಾಂಗೇನ ।೯೨॥ ಕರಿತಾಂಹೀ ಧರ್ಮಾಚರಣ । ಪ್ರವೃತ್ತಿ ನಿಜಧರ್ಮ ತೋ ಅಪ್ರಮಾಣ । ನಿವೃತ್ತಿಧರ್ಮ ತೋ ಅತಿಶುದ್ಧ ಜಾಣ । ಹೇ ದೋಷಗುಣ ಸ್ವಧರ್ಮೀ ।೯೩॥ ಜೋ ವ್ಯವಹಾರ ವಿಷಯಾಸಕ್ತೀ । ತೇ ಅಶುದ್ಧ ವ್ಯವಹಾರ ಸ್ಥಿತೀ । ಜೇ ಪರೋಪಕಾರವೃತ್ತೀ । ತೋ ವ್ಯವಹಾರ ವಂದಿತೀ ಸುರನರ ।೯೪॥ ಅದೃಷ್ಟ ದಾತಾ ಈಶ್ವರ । ಹೇ ವಿಸರೋನಿ ಉತ್ತಮ ನರ । ದ್ರವ್ಯಲೋಭೇ ನೀಚಾಂಚೇ ದಾರೋದರ । ಹಿಂಡಣೇ ಅಪವಿತ್ರ ತೇ ಯಾತ್ರಾ ।೯೫॥ ಆಳಸ ಸಾಂಡೋನಿ ಆಪಣ । ಕರೂ ಜಾತಾ ಶ್ರವಣ ಕೀರ್ತನ । ಕಾ ತೀರ್ಥಯಾತ್ರಾ ಸಾಧು ದರ್ಶನ । ಪೂಜಾರ್ಥ ಗಮನ ದೇವಾಲಯೀ ।೯೬॥ ಕಾ ಅನಾಥಪ್ರೇತಸಂಸ್ಕಾರ । ಕರಿತಾ ಪುಣ್ಯ ಜೋಡೇ ಅಪಾರ । ಪದೀ ಕೋಟಿಯಜ್ಞ ಫಳಸಂಭಾರ । ಜೇಣೇ ಸಾಚಾರ ಉಪಜತೀ ।೯೭॥ ಜೇಣೇ ಪಾವಿಜೇ ಪರಪಾರ । ತಿಯೇ ನಾಂವ ಯಾತ್ರಾ ಪವಿತ್ರ । ಹಾ ಯಾತ್ರಾರ್ಥ ಸಂಚಾರ । ಗುಣದೋಷವಿಚಾರ ವೇದೋಕ್ತ ।೯೮॥ ರಾಜಾ ನಿಜ ಪಾದುಕಾ ಹಟೇಸೀ । ವಾಹವೀ ಬ್ರಾಹ್ಮಣಾಚೇ ಶಿರೀ । ತೋ ದೋಷ ನ ಪವೇ ದ್ವಿಜಾಸೀ । ಸ್ವಯೇ ಸದೋಷೀ ಹೋಯ ರಾಜಾ ।೯೯॥

ಇದು ಶುದ್ಧ, ಅದು ಅಶುದ್ಧ, ಇದು ವಿಹಿತವಾಗಿದೆ ಅದು ನಿಷಿದ್ಧವಾಗಿದೆ ಈ ಪ್ರಕಾರವಾಗಿ ವಿಷಯಗಳ ಬಾಧೆಯನ್ನು ಇಲ್ಲದಾಗಿ ಮಾಡಲು ನಾನೇ ವೇದವಾಣಿಯ ರೂಪದಲ್ಲಿ ಹೇಳಿರುವೆನು ।೮೯॥ ವಿಷಯಗಳ ನಿವೃತ್ತಿಯ ಸ್ತುತಿಯನ್ನು ನಾನು ವೇದರೂಪದಲ್ಲಿ ಹೇಳಿರುವೆನು ಮತ್ತು ಮನದಲ್ಲಿ ವಿಷಯಗಳಲ್ಲಿ ಹೇಸಿಕೆಯಾಗುವುದಕ್ಕಾಗಿ ವಿಷಯ ಪ್ರವೃತ್ತಿಯ ನಿಂದೆಯನ್ನೂ ಕೂಡ ನಾನು ಮಾಡಿರುವೆನು ।೯೦॥ ವಿಹಿತ ಕರ್ಮಗಳನ್ನು ಮಾಡುತ್ತಿರಲು ಮನವು ವಿಷಯಗಳಿಂದ ಸಹಜವಾಗಿಯೇ ನಿವೃತ್ತವಾಗುವಂತೆ ನಾನು ವೇದದ ಮುಖಾಂತರವಾಗಿ ಯುಕ್ತಿಗಳನ್ನು ಯೋಜಿಸಿಟ್ಟಿರುವೆನು. ಅದನ್ನೇ ನಾನು ನಿನಗೆ ಹೇಳುವೆನು, ಕೇಳು ।೯೧॥

ಹೇ ಉದ್ಧವಾ, ನೀನು ನಿಜವಾಗಿಯೂ ನಿಷ್ಪಾಪನಾಗಿರುವೆ. ಆದ್ದರಿಂದ ನಿನ್ನ ಬುದ್ಧಿಯು ಶುದ್ಧವಾಗಿರುವುದು. ಅದಕ್ಕಾಗಿ ಧರ್ಮಾದಿ ವ್ಯವಹಾರ ಸಿದ್ಧಿಯ ವಿಧಿಯನ್ನು ಈಗ ನಾನು ನಿನಗೆ ಹೇಳುವೆನು. ಅದನ್ನು ನೀನು ಸರಿಯಾಗಿ ಲಕ್ಷ ಕೊಟ್ಟು ಕೇಳು ।೯೨॥ ಧರ್ಮದ ಆಚರಣೆಯನ್ನು ಮಾಡುತ್ತಿದ್ದಾಗ ಪ್ರವೃತ್ತಿ ಧರ್ಮವು ಅಪ್ರಮಾಣವಾಗಿರುವುದು. ನಿವೃತ್ತಿ ಧರ್ಮವು ಅತಿಶಯವಾಗಿ ಶುದ್ಧವಾಗಿರುವುದು. ಇದೇ ಸ್ವಧರ್ಮದಲ್ಲಿನ ಗುಣದೋಷವಾಗಿರುವುದು ।೯೩॥ ವಿಷಯಗಳ ಅತ್ಯಂತ ಆಸಕ್ತಿಯಿಂದ ಮಾಡುವ ವ್ಯವಹಾರಗಳೆಲ್ಲವೂ ಅಶುದ್ಧವಾಗಿರುವುವು. ಅಂತಃಕರಣದಲ್ಲಿ ಪರೋಪಕಾರ ವೃತ್ತಿಯನ್ನಿಟ್ಟುಕೊಂಡು ಮಾಡುವ ಯಾವ ವ್ಯವಹಾರವು ಅದು ದೇವನಿಗೂ ಮತ್ತು ಮನುಷ್ಯರಿಗೂ ವಂದ್ಯವಾಗುವುದು ।೯೪॥ ಅದೃಷ್ಟ ದಾತಾ ಈಶ್ವರನಾಗಿರುವನು. ಇದರ ತಿಳುವಳಿಕೆಯನ್ನು ಮಹಾ ಮಹಾ ಪುರುಷರು ಮರೆತುಬಿಡುವರು. ದ್ರವ್ಯದ ಲೋಭವನ್ನು ಮನದಲ್ಲಿಟ್ಟುಕೊಂಡು ನೀಚ ಜನರ ಮನೆಗೆ ತಿರುಗುತ್ತಿರುವರು. ಇದೊಂದು ಅಮಂಗಲ ಯಾತ್ರೆಯಾಗಿರುವುದು ।೯೫॥ ನಾವು ಮಾತ್ರ ಆಲಸ್ಯವನ್ನು ಬಿಟ್ಟು ಶಾಂತ ಚಿತ್ತದಿಂದ ಕೀರ್ತನಾದಿ ಶ್ರವಣನ್ನು ಮಾಡಬೇಕು. ಹಾಗೆಯೇ ತೀರ್ಥಯಾತ್ರೆಯನ್ನೂ ಮಾಡಬೇಕು. ಸಾಧುಜನರ ದರ್ಶನ ಪಡೆಯಬೇಕು. ಮನಃ ಪೂರ್ವಕ ಪೂಜೆ ಮಾಡಲು ದೇವಾಲಯಕ್ಕೆ ಹೋಗಬೇಕು ।೯೬॥ ಅನಾಥ ಪ್ರೇತಕ್ಕೆ ಅಗ್ನಿ ಸಂಸ್ಕಾರವನ್ನು ಮಾಡಬೇಕು. ಇದರಿಂದ ಅಗಣಿತ ಪುಣ್ಯವು ಪ್ರಾಪ್ತವಾಗುವುದು. ಪ್ರತಿ ಹೆಜ್ಜೆಗೂ ಕೋಟಿ ಯಜ್ಞಗಳ ಫಲವು ಪ್ರಾಪ್ತವಾಗುವುದು ।೯೭॥ ಯಾವುದರಿಂದ ಸಂಸಾರದಿಂದ ಪಾರಾಗುವೆವೋ, ಅದುವೇ ನಿಜವಾದ ಯಾತ್ರೆಯಾಗಿರುವುದು. ಈ ಯಾತ್ರೆಯು ವೇದೋಕ್ತ ಗುಣದೋಷವಿಚಾರವಾಗಿರುವುದು ।೯೮॥ ಒಬ್ಬ ರಾಜನು ತನ್ನ ಪಾದುಕೆಗಳನ್ನು ಬ್ರಾಹ್ಮಣನ ತಲೆಯ ಮೇಲೆ ಕೊಟ್ಟರೆ, ಆ ದೋಷವು ಬ್ರಾಹ್ಮಣನಿಗೆ ತಗಲುವುದಿಲ್ಲ. ಆದರೆ ರಾಜನು ಮಾತ್ರ ಸ್ವತಃ ದೋಷಿಯಾಗುವನು ।೯೯॥

ಜೇವೀ ಆಪತ್ಕಾಳಬಳೇ ಜಾಣ । ಪಡತಾ ಲಂಘನೀ ಲಂಘನ । ತೈ ಘೇಊನಿ ನೀಚಾಚೇ ಧಾನ್ಯ । ವಾಂಚವಿತಾ ಪ್ರಾಣ ದೋಷ ನಾಹೀ ॥೬೦॥ ತೇಚಿ ನೀಚಾಚೇ ದಾನ । ಅನಾಪದೀ ಘೇತಾ ಜಾಣ । ಜನೀ ಮಹಾದೋಷ ದಾರುಣ । ಹೇಹೀ ಜಾಣ ವೇದೋಕ್ತ ॥೬೧॥ ಜೇ ಕರ್ಮಧರ್ಮಪ್ರವರ್ತಕ ಶುದ್ಧ । ಮನುಪರಾಶರಾದಿ ಪ್ರಸಿದ್ಧ । ತಿಹೀ ಗುಣದೋಷ ವಿವಿಧ । ಶುದ್ಧಾಶುದ್ಧ ಬೋಲಿಲೇ ॥೬೨॥ ತೇಚಿ ಶುದ್ಧಾಶುದ್ಧನಿರೂಪಣ । ತೀ ಶ್ಲೋಕೀ ನಾರಾಯಣ । ಸ್ವಯೇ ಸಾಂಗತಾಹೇ ಆಪಣ । ಗುಣದೋಷಲಕ್ಷಣವಿಭಾಗ ॥೬೩॥

ಭೂಮ್ಯಂಬ್ವಗ್ನ್ಯನೀಲಾಕಾಶಾ ಭೂತಾನಾಂ ಪಂಚ ಧಾತವಃ । ಆಬ್ರಹ್ಮಸ್ಥಾವರಾದೀನಾಂ ಶಾರೀರಾ ಆತ್ಮ ಸಂಯುತಾಃ ॥೪॥
ವೇದೇನ ನಾಮರೂಪಾಣಿ ವಿಷಮಾಣಿ ಸಮೇಷ್ವಪಿ । ಧಾತುಷೂದ್ಧವ ಕಲ್ಪ್ಯಂತ ಏತೇಷಾಂ ಸ್ವಾರ್ಥಸಿದ್ಧಯೇ ॥೫॥

ಅರ್ಥ:- ಪೃಥ್ವಿ, ಆಪ, ತೇಜ, ವಾಯು ಮತ್ತು ಆಕಾಶ ಈ ಪಂಚ ಮಹಾಭೂತಗಳು ಬ್ರಹ್ಮನಿಂದ ಹಿಡಿದು ಪರ್ವತದವರೆಗೆ, ವೃಕ್ಷದವರೆಗೆ ಸರ್ವ ಪ್ರಾಣಿಮಾತ್ರರ ಶರೀರದಲ್ಲಿ ಮೂಲಕಾರಣವಾಗಿರುವುವು. ಈ ಪ್ರಕಾರವಾಗಿ ಅವು ಸರ್ವ ಶರೀರಗಳಲ್ಲಿ ಸಮಾನವಾಗಿರುವುವು. ಸರ್ವರ ಆತ್ಮವು ಒಂದೇ ಇರುವುದು. ಪ್ರಿಯ ಉದ್ಧವಾ, ಸರ್ವರ ಶರೀರಗಳಲ್ಲಿ ಪಂಚಮಹಾಭೂತಗಳು ಸಮಾನವಾಗಿದ್ದರೂ ವೇದವು ಅವುಗಳಿಗೆ ವರ್ಣಾಶ್ರಮ ಇತ್ಯಾದಿ ಭಿನ್ನ ಭಿನ್ನ ನಾಮರೂಪಗಳನ್ನು ತಮ್ಮ ವಾಸನೆಗಳನ್ನು ಸಂಕುಚಿತ ಮಾಡಿ, ನಿಯಂತ್ರಿಸಿ, ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕೂ ಪುರುಷಾರ್ಥಗಳನ್ನು ಸಿದ್ಧಮಾಡಲಿಕ್ಕೆ ಕೊಟ್ಟಿರುವುದು.

ಪೃಥ್ವೀ ಆಪ ತೇಜ ವಾಯು ಗಗನ । ಬ್ರಹ್ಮಾದಿ ಸ್ಥಾವರಾಂತ ಜಾಣ । ಭೂತೀ ಪಂಚಭೂತೇ ಸಮಾನ । ವಸ್ತುಹೀ ಆಪಣ ಸಮ ಸರ್ವೀ ॥೬೪॥ ನಾಹೀ ನಾಮ ರೂಪ ಗುಣ ಕರ್ಮ । ಐಸೇ ಜೇ ಕೇವಳ ಸಮ । ತೇಥ ಮಾರ್ಝೇನಿ ವೇದೇ ವಿಷಮ । ಕೇಲೇ ರೂಪ ನಾಮ ಹಿತಾರ್ಥ ॥೬೫॥ ತಳೀ ಪೃಥ್ವೀ ವರೀ ಗಗನ । ಪಾಹತಾ ದೋನೀಹೀ ಸಮಾನ । ತೇಥ ದಶ ದಿಶಾ ಕಲ್ಪಿಲ್ಯಾ ಜಾಣ । ದೇಶಾಂತರಗಮನಸಿದ್ಧ್ಯರ್ಥ ॥೬೬॥ ತೇವಿ ನಾಮರೂಪ ವರ್ಣಾಶ್ರಮ । ಸಮಾಚ್ಯಾ ಠಾಯೀ ಜೇ ವಿಷಮ । ಹಾ ಮಾರ್ಝೇನಿ ವೇದೇ ಕೇಲಾ ನೇಮ । ಸ್ವಧರ್ಮಕರ್ಮ ಸಿದ್ಧ್ಯರ್ಥ ॥೬೭॥ ಯೇಣೇಚಿ ದ್ವಾರೇ ಸುಲಕ್ಷಣ । ಧರ್ಮಾರ್ಥಕಾಮಮೋಕ್ಷಸಾಧನ । ಪುರುಷಾಂಚ್ಯಾ ಹಿತಾಲಾಗೀ ಜಾಣ । ಮ್ಯಾ ಕೇಲೇ ನಿಯಮನ ವೇದಾಜ್ಞಾ ॥೬೮॥ ರೂಪ ನಾಮ ಆಶ್ರಮ ವರ್ಣ । ವೇದು ನೇಮಿತಾ ನಾ ಆಪಣ । ತೈ ವ್ಯವಹಾರು ನ ಘಡತಾ ಜಾಣ । ಮೋಕ್ಷಸಾಧನ ತೈ ಕೈಚೇ ॥೬೯॥ ಏವಂ ವೇದೇ ಚಾಲವೂನಿ ವ್ಯವಹಾರು । ತೇಥೇಂಚಿ ಪರಮಾರ್ಥವಿಚಾರೂ । ದಾವಿಲಾ ಅಸೇ ಚಮತ್ಕಾರೂ । ಸಭಾಗ್ಯ ನರೂ ತೋಚಿ ಜಾಣೇ ॥೭೦॥ ಅತ್ಯಂತ ಕರಿತಾ ಕರ್ಮಾದರು । ತೇಣೇ ಕರ್ಮಠಚಿ ಹೋಯ ನರೂ । ತೇಥ ಪರಮಾರ್ಥ ನಾಹೀ ಸಾಚಾರು । ವಿಧಿನಿಷೇಧೀ ಥೋರು ಪೀಡಿಜೇ ॥೭೧॥

ಅದರಂತೆ ಸಂಕಟ ಕಾಲದಲ್ಲಿ ಹಸಿವೆಯಿಂದ ಸಾಯುವಬದಲು ಮನುಷ್ಯನು ನೀಚನಿಂದ ಧಾನ್ಯವನ್ನು ಸ್ವೀಕರಿಸಿ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು, ಅದಕ್ಕೆ ದೋಷವು ತಟ್ಟುವುದಿಲ್ಲ ॥೬೦॥ ಆದರೆ ಅದನ್ನೇ ಉತ್ತಮ ಸ್ಥಿತಿಯಲ್ಲಿರುವ ಮನುಷ್ಯನು ನೀಚನಿಂದ ದಾನವನ್ನು ಸ್ವೀಕರಿಸಲು, ಆಗ ಮಹಾದೋಷವು ತಟ್ಟುವುದು. ಇದನ್ನು ವೇದವೇ ಸಾರಿ ಹೇಳಿರುವುದು ॥೬೧॥ ಪ್ರಸಿದ್ಧರಾದ ಮನು-ಪರಾಶರಾದಿಕರು ಮಹಾ ಧರ್ಮಪ್ರವರ್ತಕರಾಗಿ ಹೋಗಿರುವರು. ಅವರು ಅನೇಕ ಪ್ರಕಾರಗಳ ಶುದ್ಧ-ಅಶುದ್ಧ ಗುಣದೋಷಗಳನ್ನು ಹೇಳಿಟ್ಟಿರುವರು ॥೬೨॥ ಅದೇ ಗುಣದೋಷಗಳ ವಿಭಾಗವನ್ನು ಮತ್ತು ಶುದ್ಧ, ಅಶುದ್ಧ ವಿಷಯಗಳ ನಿರೂಪಣೆಯನ್ನು ಮೂರು ಶ್ಲೋಕಗಳಲ್ಲಿ ಸ್ವತಃ ನಾರಾಯಣನು ತಾನಾಗಿಯೇ ಹೇಳುತ್ತಿರುವನು ॥೬೩॥

ಬ್ರಹ್ಮದೇವನಿಂದ ಕೀಟದವರೆಗೆ, ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ ಪಂಚಮಹಾಭೂತಗಳು ಸಮವಾಗಿರುವುವು. ಬ್ರಹ್ಮತತ್ವವೂ ಕೂಡ ಸರ್ವತ್ರ ಸಮಾನರೂಪದಿಂದ ತುಂಬಿರುವುದು ॥೬೪॥ ಸರ್ವ ಜನರ ಹಿತಕ್ಕಾಗಿ ನಾಮರೂಪ, ಗುಣ, ಕರ್ಮರಹಿತವಾಗಿರುವ ಬ್ರಹ್ಮದ ಭೇದವನ್ನು ನನ್ನಿಂದಲೇ ವೇದವು ಕಲ್ಪಿಸಿರುವುದು ॥೬೫॥ ವಾಸ್ತವಿಕವಾಗಿ ನೋಡಲು ಕೆಳಗೆ ಪೃಥ್ವೀ ಮತ್ತು ಮೇಲಕ್ಕೆ ಆಕಾಶವು ಸಮಾನವಾಗಿ ಕಾಣಿಸುವುವು. ದೇಶಾಂತರ ಗಮನಕ್ಕೆ ಸುಲಭವಾಗಲು ದಶದಿಕ್ಕುಗಳ ಕಲ್ಪನೆ ಮಾಡಲಾಗಿದೆ ॥೬೬॥ ಅದರಂತೆಯೇ ನಾಮರೂಪ, ವರ್ಣಾಶ್ರಮ ಇವು ಸಮವಾಗಿದ್ದರೂ ಸ್ವಧರ್ಮಕರ್ಮವನ್ನು ಯೋಗ್ಯ ರೀತಿಯಲ್ಲಿ ನಡೆಸಲು ನನ್ನ ವೇದವು ವಿಷಮವನ್ನಾಗಿ ಹೇಳಿರುವುದು ॥೬೭॥ ಇದರಿಂದ ಸರ್ವರ ಹಿತಕ್ಕಾಗಿ ಉತ್ತಮ ಲಕ್ಷಣಗಳ ಧರ್ಮ, ಅರ್ಥ, ಕಾಮ, ಮೋಕ್ಷ ಸಾಧನೆಗಳ ನಿಯಮಗಳನ್ನು ನಾನು ವೇದಾಜ್ಞೆಯ ರೂಪದಿಂದ ಮಾಡಿರುವೆನು ॥೬೮॥ ವೇದವು ನಾಮ, ರೂಪ, ಆಶ್ರಮ, ವರ್ಣ ಇವುಗಳನ್ನು ನಿಯಮಿಸದಿದ್ದರೆ, ಜನರ ವ್ಯವಹಾರವು ಯೋಗ್ಯ ರೀತಿಯಲ್ಲಿ ನಡೆಯುತ್ತಲೇ ಇದ್ದಿಲ್ಲ. ಅಂದ ಮೇಲೆ ಮೋಕ್ಷ ಸಾಧನೆಯನ್ನು ಹೇಗೆ ಸಾಧಿಸಬೇಕು ॥೬೯॥ ಒಟ್ಟಿನಲ್ಲಿ ವೇದವು ಲೌಕಿಕ ವ್ಯವಹಾರವನ್ನು ನಡೆಸಿರುವುದು. ಹಾಗೆಯೇ ಅದರಲ್ಲಿರುವ ಪರಮಾರ್ಥದ ವಿಚಾರವನ್ನು ಮಾಡಿಟ್ಟಿರುವುದು. ಹೀಗೆ ಅದು ಚಮತ್ಕಾರವನ್ನೇ ಮಾಡಿಟ್ಟಿರುವುದು. ಆದರೆ, ಇದನ್ನು ಭಾಗ್ಯವಾನನು ಮಾತ್ರ ತಿಳಿಯುವನು ॥೭೦॥ ಕರ್ಮದಲ್ಲಿ ಅತಿಶಯವಾಗಿ ನಿಷ್ಠೆಯನ್ನಿಟ್ಟ ಪುರುಷನು ಕರ್ಮಠನಾಗುವನು. ಆತನಿಗೆ ನಿಜವಾದ ಪುರುಷಾರ್ಥವು ದೊರೆಯುವುದಿಲ್ಲ. ಆತನು ವಿಧಿನಿಷೇಧಗಳಿಂದ ಅತಿಶಯವಾಗಿ ಪೀಡಿತನಾಗುವನು ॥೭೧॥

ಕೇವಳ ಸ್ವಧರ್ಮಕರ್ಮ ಸಾಂಡಿತಾ । ಅಂಗೀ ಆದಳೇ ಪಾಷಂಡತಾ । ತೇಣೇಹೀ ಮೋಕ್ಷ ನ ಯೇ ಹಾತಾ । ನಿಜಸ್ವಾರ್ಥಾ ನಾಗವಲೇ ॥೭೨॥ ಯಾಲಾಗೀ ಸ್ವಧರ್ಮ ಆಚರತಾ । ನಿಜಮೋಕ್ಷ ಲಾಭೇ ಆಇತಾ । ಹೇ ವೇದಾರ್ಥಾಚೀ ಯೋಗ್ಯತಾ । ಜಾಣೇ ತೋ ಜ್ಞಾತಾ ಸಜ್ಞಾನ ॥೭೩॥ ಹೇ ವೇದಾರ್ಥನಿಜಯೋಗ್ಯತಾ । ಸಹಸಾ ನ ಯೇ ಕವಣಾಚೇ ಹಾತಾ । ಯಾಚಿಲಾಗೀ ಗಾ ಪರಮಾರ್ಥಾ । ಗುರು ತತ್ತ್ವತಾ ಕರಾವಾ ॥೭೪॥ ತ್ಯಾ ಸದ್ಗುರುಚೀ ಪೂರ್ಣ ಕೃಪಾ ಹೋಯ । ತರೀಚ ಆತುಡೇ ವೇದಗುಹ್ಯ । ಗುರುಕೃಪೇವೀಣ ಜೇ ಉಪಾಯ । ತೇ ಅಪಾಯ ಸಾಧಕಾ ॥೭೫॥ ಯಾಲಾಗೀ ಮಾಝಾ ವೇದ ಜಗದ್ಗುರು । ದಾವೀ ಆಪಾತತಾ ವ್ಯವಹಾರು । ನೇಮೀ ಸ್ವಧರ್ಮ ಕರ್ಮಾದರು । ಜನಾಚಾ ಉದ್ಧಾರು ಕರಾವಯಾ ॥೭೬॥ ಐಸಾ ಮಾಝಾ ವೇದು ಹಿತಕಾರೀ । ದಾವೂನಿ ಗುಣ ದೋಷ ನಾನಾಪರೀ । ಜನ ಕಾಢೀ ವಿಷಯಾಬಾಹೇರೀ । ವೇದ ಉಪಕಾರೀ ಜಗಾಚಾ ॥೭೭॥

ದೇಶಕಾಲಾದಿಭಾವಾನಾಂ ವಸ್ತೂನಾಂ ಮಮ ಸತ್ತಮ । ಗುಣದೋಷೌ ವಿಧಿಯೇತೇ ನಿಜಮಾರ್ಥ ಹಿ ಕರ್ಮಣಾಮ್ ॥೭॥

ಅರ್ಥ:- ಹೇ ಸಾಧು ಉದ್ಧವನೇ, ದೇಶ, ಕಾಲ, ನಿರ್ಮಿತ ಅಧಿಕಾರೀ ಮತ್ತು ಧಾನ್ಯ ಇತ್ಯಾದಿ ವಸ್ತುಗಳ ಗುಣದೋಷಗಳ ವಿಧಾನಗಳನ್ನು ಜನರ ಉಚ್ಛೃಂಖಲ ಪ್ರವೃತ್ತಿ ಆಗಬಾರದೆಂದು ಮತ್ತು ಮರ್ಯಾದೆಯ ಭಂಗವಾಗಬಾರದೆಂದು ಈ ಕಾರಣವಾಗಿ ಮಾಡಲಾಗಿದೆ.

ಭಕ್ತಾ ಮಾಜೇ ಭಕ್ತೋತ್ತಮ । ಸಾಧುಲಕ್ಷಣೇ ಸಾಧುಸಮ । ಯಾಲಾಗೀ ಉದ್ಧವಾಸೀ ''ಸತ್ತಮ'' । ಮ್ಹಣೇ ಪುರುಷೋತ್ತಮ ಅತಿಪ್ರೀತೀ ॥೭೮॥ ಉದ್ಧವಾ ಯೇಥ ಭಲತಾ ನರ । ಭಲತಾ ಕರೀಲ ಕರ್ಮಾದರ । ಯಾಲಾಗೀ ವರ್ಣಾಶ್ರಮವಿಚಾರ । ನೇಮಿಲಾ ಸಾಚಾರ ವೇದಾನೀ ॥೭೯॥ ಜೇಥ ಕರೂ ನಯೇ ಕರ್ಮತಂತ್ರ । ಐಸಾ ದೇಶ ಜೋ ಅಪವಿತ್ರ । ಆಣಿ ಕಾಳಾದಿ ದ್ರವ್ಯ ವಿಚಿತ್ರ । ಪವಿತ್ರಾಪವಿತ್ರ ಸಾಂಗೇನ ॥೮೦॥

ಅಕೃಷ್ಣಸಾರೋ ದೇಶಾನಾಮಬ್ರಹ್ಮಣ್ಯೋಽಶುಚಿರ್ಭವೇತ್ । ಕೃಷ್ಣಸಾರೋಽಪ್ಯಸೌವೀರಕೀಕಟಾಸಂಸ್ಕೃತೇರಿಣಮ್ ॥೮॥

ಅರ್ಥ:- ಕಪ್ಪು ಕಲೆಗಳ ಜಿಂಕೆಗಳಿಲ್ಲದ, ಬ್ರಾಹ್ಮಣರಲ್ಲಿ ಭಕ್ತಿಯಿಲ್ಲದ, ಕಪ್ಪು ಕಲೆಗಳ ಜಿಂಕೆಗಳಿದ್ದರೂ ಗೌರವಾರ್ಹರಾದ ಜನರಿಲ್ಲದ ಸ್ಥಳಗಳು, ಕೀಕಟದಂತಹ ಸಂಸ್ಥಾನಗಳು, ನೈರ್ಮಲ್ಯವಿರದ ಪ್ರದೇಶಗಳು, ಮಾಂಸಾಹಾರಿಗಳು ಪ್ರಮುಖರಾಗಿರುವ ಅಥವಾ ಭೂಮಿಯೇ ಬಂಜರಾಗಿರುವ ಸ್ಥಳಗಳೆಲ್ಲವೂ ಕಲುಷಿತ ಪ್ರದೇಶಗಳೆಂದು ಪರಿಗಣಿಸಲಾಗಿದೆ.

ಕೋಣೇ ಏಕೇ ಪೃಥ್ವೀತಳೀ । ಮೇಘ ನ ವರ್ಷತಾ ಜಳೀ । ಪೇರಿಲೀ ಧಾನ್ಯೇ ಸದಾ ನೀಳೀ । ವಸುಧಾ - ಜಿವ್ಹಾಳೀ ತೇ ಮ್ಹಣತೀ ॥೮೧॥

ಒಂದುವೇಳೆ ಸ್ವಧರ್ಮ ಕರ್ಮಗಳನ್ನು ಬಿಟ್ಟುಕೊಡಬೇಕೆಂದರೆ, ಅಲ್ಲಿ ನಾಸ್ತಿಕತ್ವವು ಬರುವುದು. ಆದ್ದರಿಂದ ಮೋಕ್ಷದ ಪ್ರಾಪ್ತಿಯು ಆಗುವುದೇ ಇಲ್ಲ. ಈ ಪ್ರಕಾರವಾಗಿ ಮನುಷ್ಯನು ತನ್ನ ಸ್ವಾರ್ಥವನ್ನು ಕಳೆದುಕೊಳ್ಳುವನು ॥೭೨॥ ಅದಕ್ಕಾಗಿ ಧರ್ಮದ ಆಚರಣೆಯನ್ನು ಮಾಡುವುದರಿಂದ ಅನಾಯಾಸವಾಗಿ ಮೋಕವು ಪ್ರಾಪ್ತವಾಗುತ್ತಿರುವುದು. ಈ ಯಾವ ವೇದದ ಗೂಡಾರ್ಥವನ್ನು ಬಲ್ಲವನೇ ನಿಜವಾದ ಜ್ಞಾನಸಂಪನ್ನನಾಗಿರುವನು ॥೭೩॥ ಆದರೆ ವೇದದ ನಿಗೂಢ ರಹಸ್ಯವು ಸಹಸಾ ಯಾರಿಗೂ ತಿಳಿಯಲಾರದು. ಅದಕ್ಕಾಗಿ ಪರಮಾರ್ಥ ಮಾರ್ಗದ ಯೋಗ್ಯ ರೀತಿಯಲ್ಲಿ ದಿಗ್ದರ್ಶನ ಮಾಡುವ ಗುರು ಇರಬೇಕಾಗುವುದು ॥೭೪॥ ಆ ಯಾವ ಸದ್ಗುರುವಿನ ಯಾವ ಸಮಯದಲ್ಲಿ ಪೂರ್ಣ ಕೃಪೆಯಾಗುವುದೋ ಆಗಲೇ ವೇದದೊಳಗಿನ ಶಬ್ದಗಳ ಹೃದಯವು ತಿಳಿಯುವುದು. ಗುರುಕೃಪೆ ಇಲ್ಲದೇ ಇರುವ ಇತರ ಸಾಧನೆಗಳು ಅಪಾಯಕರ ಮಾತ್ರ ಆಗಿರುವುವು ॥೭೫॥ ಅದಕ್ಕಾಗಿಯೇ ನನ್ನ ವೇದವು ಜಗತ್ತಿನ ಗುರುವಾಗಿರುವುದು. ಅದು ಜನರ ಉದ್ಧಾರವನ್ನು ಮಾಡುವುದಕ್ಕಾಗಿಯೇ ಮೇಲ್ನೋಟಕ್ಕೆ ಸರ್ವ ವ್ಯವಹಾರಗಳನ್ನು ತೋರಿಸುತ್ತಿರುವುದು ॥೭೬॥ ಹೀಗೆ ನನ್ನ ವೇದವು ಜನರ ಹಿತವನ್ನು ಮಾಡುವಂತಹದ್ದಾಗಿರುವುದು. ಅದು ಅನೇಕಪ್ರಕಾರದ ಗುಣದೋಷಗಳನ್ನು ತೋರಿಸಿಕೊಟ್ಟು ಜನರನ್ನು ವಿಷಯಗಳಿಂದ ಹೊರಗೆ ತೆಗೆಯುವುದು. ಈ ಪ್ರಕಾರವಾಗಿ ವೇದವು ಜಗತ್ತಿಗೆ ಸಹಜವಾಗಿ ಉಪಕಾರವನ್ನು ಮಾಡುತ್ತಿರುವುದು ॥೭೭॥

ಉದ್ಧವನು ಭಕ್ತರಲ್ಲಿ ಅತಿ ಉತ್ತಮ ಭಕ್ತನು ಮತ್ತು ಸಾಧುಗಳವರಲ್ಲಿ ಶ್ರೇಷ್ಠ ಸಾಧು ಗುಣಗಳಿಂದ ಯುಕ್ತನಾಗಿರುವುದರಿಂದ ಶ್ರೀಕೃಷ್ಣನು ಅತ್ಯಂತ ಪ್ರೇಮದಿಂದ ಆತನಿಗೆ ''ಸತ್ತಮ'' ಅಂದರೆ ಸಾಧುಶ್ರೇಷ್ಠನೆಂದು ಹೇಳಿರುವನು ॥೭೮॥ ಉದ್ಧವಾ, ಯಾವುದೇ ಮನುಷ್ಯನು ಯಾವುದೇ ಕರ್ಮದ ಆಚರಣೆಯನ್ನು ಮಾಡಬಹುದು. ಅದಕ್ಕಾಗಿ ವೇದವು ವರ್ಣಾಶ್ರಮದ ವಿಚಾರವನ್ನು ನಿಶ್ಚಯಿಸಿರುವುದು ॥೭೯॥ ಈಗ ಕರ್ಮ ಆಚರಣೆಗೆ ಅಪವಿತ್ರ ದೇಶ ಮತ್ತು ಅಮಂಗಲ ಸ್ವರೂಪದ ಕಾಲ, ಅಶುದ್ಧ ದ್ರವ್ಯಾದಿಗಳ ಪವಿತ್ರ ಅಪವಿತ್ರತೆಯನ್ನು ಹೇಳುತ್ತಿರುವೆನು, ಅದನ್ನು ಕೇಳು ॥೮೦॥

ಪೃಥ್ವಿಯ ಮೇಲೆ ಕೆಲವು ಸ್ಥಳಗಳಲ್ಲಿ ಮಳೆಯಾಗುವುದಿಲ್ಲ. ಆದ್ದರಿಂದ ಅಲ್ಲಿ ಹನಿ ನೀರು ಸಹ ಇರುವುದಿಲ್ಲ. ಆದರೆ ಅಲ್ಲಿ ಬಿತ್ತಿದ ಹೊಲದಲ್ಲಿ ಹಸಿರು ಕಾಣಿಸುವುದು. ಅಲ್ಲಿಯ ನೆಲವು ನೀರುಭೂಮಿಯಾಗಿರುವುದು ॥೮೧॥

ತೇಚಿ ಪಾಹತಾ ಪೃಥ್ವೀವರೀ । ಏಕೇ ಭಾಗೀ ಗಾ ಉಖರೀ । ಮೇಘ ವರ್ಷತಾ ಶರಧಾರೀ । ಅಂಕುರೇನಾ ಡಿರೀ ಉಖರತ್ವೇ ॥೮೨॥ ತೇವೀ ದೇಶಾಚೀ ಶುದ್ಧ್ಯಶುದ್ಧೀ । ತುಜ ಮೀ ಸಾಂಗೇನ ಯಥಾವಿಧೀ । ಜೇಥ ಕರ್ಮೀ ನೋಹೇ ಕಾರ್ಯಸಿದ್ಧೀ । ತೇಥ ಕರ್ಮ ತ್ರಿಶುದ್ಧೀ ನ ಕರಾವೇ ॥೮೩॥ ಕೃಷ್ಣಮೃಗ ಜೇಥ ನಾಹೀ । ತೇ ಜಾಣ ಪಾ ಅಪವಿತ್ರ ಭುಯೀ । ಕರ್ಮಾದರು ತಿಯೇ ಠಾಯೀ ನಕರಾವಾ ಪಾಹೀ ಸರ್ವಥಾ ॥೮೪॥ ಜೇಥ ಬ್ರಾಹ್ಮಣಚಿ ನಾಹೀ । ತೋ ದೇಶ ಅಪವಿತ್ರ ಪಾಹೀ । ಬ್ರಾಹ್ಮಣ ಅಕರ್ಮೀ ಜೇ ಠಾಯೀ । ಭೂಮೀ ತೇಹೀ ಅಪವಿತ್ರ ॥೮೫॥ ಜೇಥ ಬ್ರಾಹ್ಮಣಾಚೀ ಅಭಕ್ತೀ । ಶೇಖೀ ಹೇಳೂನಿ ನಿಂದಿತೀ । ತೋ ದೇಶ ಗಾ ಕರ್ಮಾಪ್ರತೀ । ಜಾಣ ನಿಶ್ಚಿತೀ ಅಪವಿತ್ರ ॥೮೬॥ ಜೇ ದೇಶೀ ಕೃಷ್ಣಮೃಗ ಅಸತೀ। ಪರೀ ನಾಹೀ ಭಗವದ್ಭಕ್ತಿ । ತೋ ದೇಶ ಕರ್ಮಾಪ್ರತೀ । ಜಾಣ ನಿಶ್ಚಿತೀ ಅಪವಿತ್ರ ॥೮೭॥ ಭಕ್ತಿಹೀನ ದೇಶ ಪ್ರಸಿದ್ಧ । ಕೀಕಟ ಕಲಿಂಗ ಮಾಗಧ । ತೇಥ ಸ್ವಧರ್ಮ ನವ್ಹತೀ ಶುದ್ಧ । ಜಾಣ ಅಶುದ್ಧ ತೇ ದೇಶ ॥೮೮॥ ನಾಹೀ ಉಪಲೇಪ ಸಂಮಾರ್ಜನ । ತೇ ಸ್ವಗೃಹೀ ಭೂಮೀ ಅಶುದ್ಧ ಜಾಣ । ಕಾ ಜೇಥ ವೇದಬಾಹ್ಯ ಅಸಜ್ಜನ । ತೇಹೀ ಸ್ಥಾನ ಅಪವಿತ್ರ ॥೮೯॥ ಜೇ ಭೂಮೀ ಕೇವಳ ಉಖರ । ತೇ ಜಾಣ ಸದಾ ಅಪವಿತ್ರ । ಆತಾ ಕಾಳಾಚೇ ಕಾಳ ತಂತ್ರ । ಪವಿತ್ರಾ ಪವಿತ್ರ ಸಾಂಗೇನ ॥೯೦॥

ಕರ್ಮಣ್ಯೋ ಗುಣವಾನ್ಕಾಲೋ ದ್ರವಯತಃ ಸ್ವತ ಏವ ವಾ । ಯತೋ ನಿವರ್ತತೇ ಕರ್ಮ ಸದೋಷೋಽಕರ್ಮಕಃ ಸ್ಮೃತಃ ॥೯॥

ಅರ್ಥ:- ಪರ್ವ ಕಾಲವಿದ್ದರೆ ಅಥವಾ ಕರ್ಮಸಾಮಗ್ರಿಗಳಿಂದ ಯುಕ್ತವಾಗಿದ್ದರೆ ಕರ್ಮ ಮಾಡಲು ಆ ಕಾಲವು ಶುದ್ಧವಾಗಿರುವುದು. ಸಾಮಗ್ರಿಗಳಿಂದ ಯುಕ್ತವಿಲ್ಲದ ಅವರ್ಷಣಾದಿ ದೈವೀ ದೋಷಗಳಿಂದ ಯುಕ್ತವಾಗಿದ್ದರೆ ಇಂತಹ ಮಧ್ಯರಾತ್ರ್ಯಾದಿ ಕಾಲವು ಕರ್ಮ ಮಾಡಲು ಅಶುದ್ಧವೆಂದು ತಿಳಿಯಬೇಕು.

ದೇಶ ಕಾಳ ದ್ರವ್ಯ ಪಾತ್ರ । ಹೇ ಸಾಮಗ್ರೀ ಸ್ವತಂತ್ರ । ತೋಚಿ ಕಾಳ ಪವಿತ್ರ । ವೇದಶಾಸ್ತ್ರಸಂಮತ ॥೯೧॥ ಗ್ರಹಣಕಪಿಲಾಷಷ್ಠ್ಯಾದಿದ್ವಾರಾ । ತೋ ಕಾಳ ಪರಮ ಪವಿತ್ರ ಖರಾ । ಕಾ ಸಂತಸಜ್ಜನ ಆಲಿಯಾ ಘರಾ । ಕಾಳಾಚಾ ಉಭಾರಾ ಅತಿಪವಿತ್ರ ॥೯೨॥ ಹೋ ಕಾ ಸಂಪತ್ತಿ ಆಲಿಯಾ ಹಾತಾ । ಕಾ ಧರ್ಮೀ ಉಲ್ಹಾಸ ಜೇವ್ಹಾ ಚಿತ್ತಾ । ತೋ ''ಪುಣ್ಯಕಾಳ'' ತತ್ತ್ವತಾ । ವೇದಶಾಸ್ತ್ರಾರ್ಥಾ ಅನುಕೂಲ ॥೯೩॥ ಪುರುಷಾಸೀ ಪರ್ವಕಾಳ । ಜನ್ಮಾಂತ ಜೋಡೇ ಏಕವೇಳ । ಮಾತಾಪಿತ್ಯಾಂಚಾ ಅಂತಕಾಳ । ತೇ ಧರ್ಮಾಚೇ ವೇಳ ಅತಿಪವಿತ್ರ ॥೯೪॥

ಆದರೆ ಇದರ ಬದಲಾಗಿ ಇದೇ ಪೃಥ್ವಿಯ ಮೇಲೆ ಕೆಲವು ಸ್ಥಳಗಳಲ್ಲಿ ಕಲ್ಲುಗಳಿಂದ ತುಂಬಿಕೊಂಡ ಬರುಸಾದ ಭೂಮಿವಿರುವುದು. ಅಲ್ಲಿ ಎಷ್ಟೇ ಬಿರುಸಾದ ಮಳೆಯಾದರೂ ಕೂಡ ಒಂದು ಹುಲ್ಲಿನ ಅಂಕುರವೂ ಕೂಡ ಕಾಣಸುವುದಿಲ್ಲ ॥೮೨॥ ಅಂದರಂತೆಯೇ ದೇಶದ ಶುದ್ಧ, ಅಶುದ್ಧತೆಯು ಇರುವುದು. ಅದನ್ನೀಗ ನಿನಗೆ ಸವಿಸ್ತಾರವಾಗಿ ಹೇಳುವೆನು. ಎಲ್ಲಿ ಕರ್ಮದಿಂದ ಕಾರ್ಯಸಿದ್ಧಿಯಾಗುವುದಿಲ್ಲವೋ ಅಲ್ಲಿ ಕರ್ಮವನ್ನು ಮಾಡಲೇಬಾರದು ॥೮೩॥ ಯಾವ ಸ್ಥಾನದಲ್ಲಿ ಕಪ್ಪು ಕಲೆಗಳಿರುವ ಜಿಂಕೆಗಳು ಇರುವುದಿಲ್ಲವೋ, ಆ ಸ್ಥಾನವು ಅಪವಿತ್ರವೆಂದು ತಿಳಿಯಬೇಕು. ಅಲ್ಲಿ ಯಾವ ಕರ್ಮಗಳನ್ನೂ ಮಾಡುವ ಪ್ರಯತ್ನ ಮಾಡಬಾರದು ॥೮೪॥ ಯಾವ ದೇಶದಲ್ಲಿ ಬ್ರಾಹ್ಮಣರೇ ಇರದಿರಲು ಆ ದೇಶವು ಅಪವಿತ್ರವೆಂದು ತಿಳಿಯಬೇಕು. ಅದರಂತೆಯೇ ನಿಷಿದ್ಧ ಕರ್ಮವನ್ನು ಮಾಡುವ ಬ್ರಾಹ್ಮಣರು ಇದ್ದರೆ ಆ ದೇಶವೂ ಕೂಡ ಅಶುದ್ಧವೆಂದು ತಿಳಿಯಬೇಕು ॥೮೫॥ ಎಲ್ಲಿ ಬ್ರಾಹ್ಮಣರ ಮೇಲೆ ಭಕ್ತಿ ಇಲ್ಲದೇ ಅವರನ್ನು ಕುರಿತು ಅವಹೇಳನವಾಗುತ್ತಿರುವುದೋ, ಆ ದೇಶವು ಕರ್ಮ ಮಾಡಲು ಅಶುದ್ಧವೆಂದು ತಿಳಿಯಬೇಕು ॥೮೬॥ ಯಾವುದಾದರು ದೇಶದಲ್ಲಿ ಕಪ್ಪುಕಲೆಗಳಿರುವ ಜಿಂಕೆಗಳಿದ್ದು ಅಲ್ಲಿ ಭಗವದ್ಭಕ್ತಿಯು ಇಲ್ಲದಿರಲು, ಆ ದೇಶವು ಅಶುದ್ಧವಾದ್ದರಿಂದ ಅಲ್ಲಿಯೂ ಕೂಡ ಸ್ವಧರ್ಮವು ಶುದ್ಧವಾಗುವುದಿಲ್ಲ ॥೮೭॥ ಕೀಕಟ, ಕಲಿಂಗ ಮತ್ತು ಮಾಗಧ ಈ ದೇಶಗಳು ಭಕ್ತಿಹೀನವಾಗಿರುವ ವಿಷಯಕ್ಕೆ ಪ್ರಸಿದ್ಧವಾಗಿವೆ. ಈ ದೇಶಗಳು ಅಶುದ್ಧವಾಗಿರುವುದರಿಂದ ಅಲ್ಲಿಯೂ ಕೂಡ ಸ್ವಧರ್ಮವು ಶುದ್ಧವಾಗುವುದಿಲ್ಲ ॥೮೮॥ ಕಸ ಹೊಡೆದು ಸಾರಿಸದಿರುವ ನಮ್ಮ ಮನೆಯ ಭೂಮಿಯೂ ಕೂಡ ಅಪವಿತ್ರವೆಂದು ತಿಳಿಯಬೇಕು. ವೇದಬಾಹ್ಯ ಆಚರಣೆಯನ್ನು ಮಾಡುವ ದುರ್ಜನರು ಎಲ್ಲಿ ಇರುವರೋ ಆ ಸ್ಥಾನವೂ ಕೂಡ ಅಪವಿತ್ರವೆಂದು ಭಾವಿಸಬೇಕು ॥೮೯॥ ಯಾವ ಭೂಮಿಯು ಸತತವಾಗಿ ಹಾಳುಬಿದ್ದಿರುವುದೋ, ಆ ಸ್ಥಳವು ಅಪವಿತ್ರ ಎಂದು ತಿಳಿಯಬೇಕು. ಈಗ ಕಾಲದಿಂದ ಆಗುವ ಪವಿತ್ರ – ಅಪವಿತ್ರತೆಯನ್ನು ಹೇಳುವೆನು, ಅದನ್ನು ಕೇಳು ॥೯೦॥

ಯಾವ ಕಾಲದಲ್ಲಿ ದೇಶ, ಕಾಲ, ದ್ರವ್ಯ ಮತ್ತು ಪಾತ್ರ, ಈ ಸಾಮಗ್ರಿಗಳು ಸ್ವತಂತ್ರವಾಗಿ ಸಿಗುವುವೋ, ಅದೇ ಕಾಲವು ಅತಿಶಯವಾಗಿ ಪವಿತ್ರವೆಂದು ತಿಳಿಯಬೇಕು. ಇದು ವೇದಶಾಸ್ತ್ರಗಳಿಗೆ ಸಂಮತವಾಗಿರುವುದು ॥೯೧॥ ಗ್ರಹಣ, ಕಪಿಲಾಷಷ್ಠೀ ಇತ್ಯಾದಿ ಪರ್ವಗಳ ಮುಖಾಂತರವಾಗಿ ಯಾವ ಕಾಲವು ಬರುವುದೋ, ಅದು ಪರಮ ಪವಿತ್ರವಾಗಿರುವುದು. ಹಾಗೆಯೇ ಸಾಧು, ಸಂತರು, ಸಜ್ಜನರು ಯಾವ ಸಮಯಕ್ಕೆ ಮನೆಗೆ ಆಗಮಿಸುವರೋ, ಆ ಕಾಲವು ಅತ್ಯಂತ ಪವಿತ್ರವೆಂದು ತಿಳಿಯಬೇಕು ॥೯೨॥ ಅಕಸ್ಮಾತಾಗಿ ಧನವು ಪ್ರಾಪ್ತವಾಯಿತೆಂದರೆ ಅಥವಾ ಧರ್ಮ ಮಾಡಲು ಮನವು ಉತ್ಸುಕವಾದರೆ, ಆ ಕಾಲವು ಪುಣ್ಯಕಾಲವಾಗಿದ್ದು ಇದು ವೇದಶಾಸ್ತ್ರಕ್ಕೆ ಮಾನ್ಯವಾಗಿರುವುದು ॥೯೩॥ ಮಾನವನ ಆಯುಷ್ಯದಲ್ಲಿ ಒಂದು ಸಾರೆ ಮಾತ್ರ ಇಂತಹ ಪರ್ವಕಾಳವು ಒದಗುವುದು. ಅದು ಯಾವುದೆಂದರೆ ತಂದೆ ತಾಯಿಯಗಳ ಅಂತ್ಯಸಮಯವು. ಇದು ಧರ್ಮಕ್ಕೆ ಅತ್ಯಂತ ಪವಿತ್ರವೆಂದು ತಿಳಿಯಬೇಕು ॥೯೪॥

ಹಾ ಪರ್ವಕಾಳ ಮಾಗುತಾ । ಪುರುಷಾಸೀ ನಾತುಡೇ ಸರ್ವಥಾ । ತೇಥ ಶ್ರದ್ಧೇನೇ ಧರ್ಮ ಕರಿತಾ । ಪವಿತ್ರತಾ ಅಕ್ಷಯ ॥೯೫॥ ಸ್ವಭಾವೇ ಕಾಳಾಚೀ ಪವಿತ್ರತಾ । ತುಜ ಮೀ ಸಾಂಗೇನ ಆತಾ । ಜೋ ಉಪಕಾರೀ ಸರ್ವಥಾ । ನಿಜಸ್ವಾರ್ಥಾ ಸಾಧಕ ॥೯೬॥ ಬ್ರಾಹ್ಮ ಮುಹೂರ್ತ ತತ್ತ್ವತಾ । ಪವಿತ್ರ ಜಾಣ ಸ್ವಭಾವತಾ । ಜೋ ಸಾಧಕಾಂಚ್ಯಾ ನಿಜಸ್ವಾರ್ಥಾ । ಹೋಯ ಪಥ್ಯಿಯಂತಾ ಅನುದಿನೀ ॥೯೭॥ ಕಾಳಾಚೀ ಅಕರ್ಮಕತಾ । ಐಕ ಸಾಂಗೇನ ಮೀ ಆತಾ । ಕರ್ಮ ಕರೂ ನಯೇ ಸ್ವಭಾವತಾ । ನಿಷಿದ್ಧತಾ ಮಹಾದೋಷು ॥೯೮॥ ಜೇಥ ಜಳಸ್ಥಳಾದಿ ಸರ್ವಥಾ । ವಿಹಿತ ದ್ರವ್ಯೇ ನ ಯೇ ಹಾತಾ । ತೋ ಕಾಳ ಅಕರ್ಮಕತಾ । ಜಾಣ ತತ್ತ್ವತಾ ನಿಶ್ಚಿತ ॥೯೯॥ ಜೋ ಕಾಳ ಸೂತಕೇ ವ್ಯಾಪಿಲಾ । ಕಾ ರಾಷ್ಟ್ರ- ಉಪಪ್ಲವೇ ಜೋ ಆಲಾ । ಜೇ ಕಾಳೀ ದೇಹ ಪರತಂತ್ರ ಝಾಲಾ । ತೋ ಕಾಳ ಬೋಲಿಲಾ ಅಕರ್ಮಕ ॥೧೦೦॥ ಜೋ ಕಾಳ ದುರ್ಭಿಕ್ಷಾಸೀ ಆಲಾ । ಜೋ ಕಾ ಜ್ವರಾದಿದೋಷೀ ದೂಷಿಲಾ । ಜೋ ಕಾಳ ಚೋರಾಕುಲಿತ ಝಾಲಾ । ತೋ ಕಾಳ ಬೋಲಿಲಾ ಅಕರ್ಮಕ ॥೧೦೧॥ ಜೇ ಕಾಳೀ ಕ್ರೋಧ ಸಂಚರಲಾ । ಜೇಥ ತಮೋಗುಣ ಕ್ಷೋಭಲಾ । ನಿದ್ರಾ ಆಲಸ್ಯೇ ವ್ಯಾಪಿಲಾ । ತೋ ಕಾಳ ಬೋಲಿಲಾ ಅಕರ್ಮಕ ॥೧೦೨॥ ಅಕಸ್ಮಾತ ಸುಖಸಂಪದಾ । ಕಾ ಅಭಿನವ ವಾರ್ತಾ ಏಕದಾ । ಕಾ ಲಂಘಿಜೇ ಭಲ್ಯಾಚೀ ಮರ್ಯಾದಾ । ತೋ ಕಾಳ ಸರ್ವದಾ ಅಕರ್ಮಕ ॥೧೦೩॥ ಕಾ ಮಾರ್ಗೀ ವಿಷಮತಾ । ಪಂಥ ಕ್ರಮಿಜೇ ಚಾಲತಾ । ತೇಥ ಪಡೇ ದುರ್ಘರ್ಷತಾ । ತೋ ಕಾಳ ತತ್ತ್ವತಾ ಅಕರ್ಮಕ ॥೧೦೪॥ ಜೇ ಕಾಳೀ ದ್ರವ್ಯಲೋಭ ದಾರುಣ । ಜೇ ಕಾಳೀ ಚಿಂತಾ ಗಹನ । ಕೇವ್ಹಾ ವಿಕಲ್ಪೇ ಭರೇ ಮನ । ತೋ ಕಾಳ ಜಾಣ ಅಕರ್ಮಕ ॥೧೦೫॥ ಐಶೀ ಕಾಳಾಚೀ ಅಕರ್ಮಕತಾ । ತುಜ ಮ್ಯಾ ಸಾಂಗಿತಲೀ ತತ್ತ್ವತಾ । ಆತಾ ದ್ರವ್ಯಾಚೀ ಶುದ್ಧಾಶುದ್ಧತಾ । ಐಕ ಸರ್ವಥಾ ಸಾಂಗೇನ ॥೧೦೬॥

ದ್ರವ್ಯಸ್ಯ ಶುದ್ಧ್ಯಶುದ್ಧೀ ಚ ದ್ರವ್ಯೇಣ ವಚನೇನ ಚ । ಸಂಸ್ಕಾರೇಣಾಥ ಕಾಲೇನ ಮಹತ್ತ್ವಾಲ್ಪತಯಾಥವಾ ॥೧೦॥

ಅರ್ಥ:- ಒಂದು ವಸ್ತುವಿನ ಶುದ್ಧಿ ಅಥವಾ ಅಶುದ್ಧಿಯು ಇನ್ನೊಂದು ವಸ್ತುವಿನ ಅನ್ವಯದಿಂದ, ವಚನಗಳಿಂದ, ಸಂಸ್ಕಾರಗಳಿಂದ, ಕಾಲ ಪರಿಣಾಮಗಳಿಂದ ಅಥವಾ ಸಾಪೇಕ್ಷವಾದ ಪರಿಣಾಮಕ್ಕೆ ಅನುಸಾರವಾಗಿ ಸ್ಥಾಪಿತವಾಗುವುದು.

ಪುರುಷೇ ಗೋಮೂತ್ರ ಸೇವಿತಾ । ತತ್ಕಾಳ ಪಾವೇ ಪವಿತ್ರತಾ । ತೇಚಿ ತಾಮ್ರಪಾತ್ರೇ ಘೇತಾ । ಯೇ ಅಪವಿತ್ರತಾ ತತ್ಕಾಳ ॥೧೦೭॥

ಇಂತಹ ಪರ್ವ ಕಾಲವು ಪುರುಷನಿಗೆ ಪುನಃ ಲಭಿಸುವುದಿಲ್ಲ. ಈ ಸಮಯದಲ್ಲಿ ಶ್ರದ್ಧಾಪೂರ್ವಕವಾಗಿ ಕರ್ಮವನ್ನು ಮಾಡಿದರೆ ಅಕ್ಷಯವಾದ ಪವಿತ್ರತೆಯು ಪ್ರಾಪ್ತವಾಗುವುದು ॥೯೫॥ ಈಗ ಕಾಲದ ಸ್ವಾಭಾವಿಕವಾದ ಪವಿತ್ರತೆಯು ಯಾವ ಪ್ರಕಾರವಾಗಿರುವುದೆಂಬುದನ್ನೂ ಕೂಡ ನಾನು ನಿನಗೆ ಹೇಳುವೆನು. ಆ ಕಾಲವು ಸರ್ವತೋಪರಿ ಉಪಕಾರಕ ಹಾಗೂ ಸಾಧಕರ ನಿಜಸ್ವಾರ್ಥವನ್ನು ಸಾಧಿಸಿಕೊಡುವಂತಹದ್ದಾಗಿರುವುದು ॥೯೬॥ ಬ್ರಾಹ್ಮೀ ಮುಹೂರ್ತ ಅಂದರೆ ಸೂರ್ಯೋದಯಕ್ಕಿಂತ ಐದು ಘಳಿಗೆ ಮುಂಚಿತ ಕಾಲ. ಇದು ಸ್ವಭಾವತಃವೇ ಪವಿತ್ರಕಾಲವಾಗಿರುವುದು. ಈ ಸಮಯವು ಸಾಧಕರ ಹಿತಕಾರಕವಾಗಿದ್ದು ಈ ಹಿತವು ಪ್ರತಿನಿತ್ಯ ಬೆಳೆಯುತ್ತಲೇ ಸಾಗುವುದು ॥೯೭॥ ಈಗ ಕರ್ಮಕ್ಕೆ ಅಯೋಗ್ಯ ಕಾಲ ಯಾವುದೆಂಬುದನ್ನು ಹೇಳುವೆನು, ಅದನ್ನು ಕೇಳು. ನಿಷಿದ್ಧ ಕಾಲದಲ್ಲಿ ಕರ್ಮವನ್ನು ಮಾಡಿದರೆ ಮಹಾದೋಷವು ತಟ್ಟುವುದು. ಕಾರಣ ಇದನ್ನು ತಿಳಿದೂ ತಿಳಿದೂ ಕರ್ಮವನ್ನು ಮಾಡಕೂಡದು ॥೯೮॥ ಯಾವ ಸ್ಥಳದಲ್ಲಿ ಜಲ, ಸ್ಥಾನ, ವಿಹಿತ ದ್ರವ್ಯ ದೊರೆಯುವುದಿಲ್ಲವೋ, ಆ ಕಾಲವು ನಿಜವಾಗಿಯೂ ಕರ್ಮ ಮಾಡಲು ಯೋಗ್ಯವಲ್ಲ. ಇದನ್ನು ಲಕ್ಷದಲ್ಲಿಡು ॥೯೯॥ ಯಾವ ಸಮಯದದಲ್ಲಿ ಮೈಲಿಗೆ ಬಂದಿದ್ದರೆ, ಅಥವಾ ರಾಷ್ಟ್ರದ ಮೇಲೆ ಯಾವುದಾದರೂ ಸಂಕಟ ಒದಗಿದ್ದರೆ, ಮತ್ತು ತನ್ನ ಶರೀರವು ರೋಗದಿಂದ ಪರತಂತ್ರವಾಗಿದ್ದರೆ, ಆ ವೇಳೆಯು ಕರ್ಮವನ್ನು ಮಾಡಲು ಅಯೋಗ್ಯವು ॥೧೦೦॥ ಯಾವ ಸಮಯದಲ್ಲಿ ಬರಗಾಲವು ಬಡೆದಿದ್ದರೆ, ಜ್ವರಬಾಧೆಯು ಹಬ್ಬಿಕೊಂಡು ಅತಿಶಯವಾಗಿ ದೂಷಿತವಾಗಿದ್ದರೆ, ಕಳ್ಳರ ಹಾವಳಿಯು ಬೆಳೆದಿದ್ದರೆ, ಆ ಕಾಲವು ಕರ್ಮ ಮಾಡಲು ಯೋಗ್ಯವಲ್ಲ ॥೧೦೧॥ ಯಾವ ಸಮಯದಲ್ಲಿ ತನ್ನ ಕ್ರೋಧವು ನೆತ್ತಿಗೇರಿದ್ದರೆ, ತಮೋಗುಣವು ವೃದ್ಧಿಗೊಂಡು ತನ್ನನ್ನು ನಿದ್ರೆ ಆಲಸ್ಯದಿಂದ ವ್ಯಾಪಿಸಿಕೊಂಡಿದ್ದರೆ, ಆ ಕಾಲವು ಕರ್ಮ ಮಾಡಲು ಅಯೋಗ್ಯವಾಗಿರುವುದು ॥೧೦೨॥ ಅಕಸ್ಮಾತಾಗಿ ಸುಖಸಂಪತ್ತು ದೊರೆತರೆ ಅಥವಾ ಎಂದೂ ಕೇಳದೇ ಇದ್ದ ಸುದ್ದಿಯು ತಿಳಿದರೆ ಇಲ್ಲವೇ ಸಜ್ಜನರ ಮರ್ಯಾದೆಯು ಭಂಗವಾದರೆ, ಆ ಸಮಯವು ಕರ್ಮ ಮಾಡಲು ಯೋಗ್ಯವಾಗಿರುವುದಿಲ್ಲ ॥೧೦೩॥ ದಾರಿ ನಡೆಯುವಾಗ ಮಾರ್ಗದಲ್ಲಿ ಏನಾದರೂ ಸಂಕಟ ಒದಗಿ ಜೀವದ ಮೇಲೆ ಬಂದರೆ, ಆ ಕಾಲವು ಕರ್ಮ ಮಾಡಲು ಯೋಗ್ಯವಲ್ಲ ॥೧೦೪॥ ಯಾವ ವೇಳೆಯಲ್ಲಿ ಸಂಪತ್ತಿಗಾಗಿ ಅತಿಶಯವಾದ ಲೋಭವು ನಿರ್ಮಾಣವಾದರೆ, ಯಾವ ಸಮಯದಲ್ಲಿ ಜೀವಕ್ಕೆ ಅತಿಶಯವಾದ ಚಿಂತೆಯು ಹತ್ತಿದ್ದರೆ, ವಿಕಲ್ಪಗಳಿಂದ ಮನಸ್ಸು ತುಂಬಿಕೊಂಡಿದ್ದರೆ, ಆಗ ಕರ್ಮ ಮಾಡುವುದು ಉಚಿತವಲ್ಲ ॥೧೦೫॥ ಈ ಪ್ರಕಾರವಾಗಿ ಕರ್ಮಕ್ಕೆ ಅನುಕೂಲ ಪ್ರತಿಕೂಲಗಳನ್ನು ನಾನು ನಿನಗೆ ಹೇಳಿದೆನು. ಈಗ ಶುದ್ಧ, ಅಶುದ್ಧ ದ್ರವ್ಯ ವಿಷಯಕ್ಕೆ ಹೇಳುವೆನು, ಅದನ್ನು ಕೇಳು ॥೧೦೬॥

ಮನುಷ್ಯನು ಗೋಮೂತ್ರವನ್ನು ಸೇವಿಸಿದರೆ, ಕೂಡಲೇ ಆತನಿಗೆ ಪವಿತ್ರತೆಯು ಪ್ರಾಪ್ತವಾಗುವುದು. ಆದರೆ ಅದನ್ನೇ ತಾಮ್ರದ ಪಾತ್ರೆಯಲ್ಲಿ ಸೇವಿಸಿದರೆ ಬಹುಬೇಗ ಅಪವಿತ್ರತೆಯು ಒದಗುವುದು ॥೧೦೭॥

ಪುರುಷೇ ಜಳ ಪ್ರೋಕ್ಷಿತಾ । ಪುಷ್ಪಾಂಸೀ ಯೇ ಪವಿತ್ರತಾ । ತೇಚಿ ಪುರುಷೇ ಅವಘ್ರಾಣಿತಾ । ಅಪವಿತ್ರತಾ ಪುಷ್ಪಾಸೀ ।।೧೦೮।। ಅಗ್ನೀಚೀ ಸೇವಾ ಕರಿತಾ । ದ್ವಿಜಾಸೀ ಪರಮ ಪವಿತ್ರತಾ । ತೋಚಿ ದ್ವಿಜ ಅಗ್ನಿಹೋತ್ರೇ ಜಾಳಿತಾ । ಯೇ ಅಪವಿತ್ರತಾ ಅಗ್ನೀಸೀ ।।೧೦೯।। ದರ್ಭೀ ಪಿಂಡ ಠೇವಿತಾ ಪವಿತ್ರ । ಪಿಂಡಸ್ಪರ್ಶೇ ದರ್ಭ ಅಪವಿತ್ರ । ಐಸೀ ಶುದ್ಧ್ಯ ಶುದ್ಧೀ ವಿಚಿತ್ರ । ಬೋಲೇ ಧರ್ಮಶಾಸ್ತ್ರ ಶ್ರುತ್ಯರ್ಥೇ ।।೧೧೦।। ಜೇ ವಸ್ತು ಸಂಶಯಾಪನ್ನ । ತ್ಯಾಚ್ಯಾ ಶುದ್ಧೀಸೀ ಬ್ರಾಹ್ಮಣವಚನ । ಜ್ಯಾಚೇ ವಚನ ಪ್ರಮಾಣ । ಹರಿಹರ ಜಾಣ ಮಾನಿತೀ ।।೧೧೧।। ಘೃತಸಂಸ್ಕಾರೇ ಶುದ್ಧ ಅನ್ನ । ಹೋಮಸಂಸ್ಕಾರೇ ನವಧಾನ್ಯ । ಅಗ್ನಿಸಂಸ್ಕಾರೇ ಲವಣ । ಪವಿತ್ರ ಜಾಣ ಶಾಸ್ತ್ರಾರ್ಥೇ ।।೧೧೨।। ರಾಕಾರಾಪುಢೇ ಮಕಾರ । ಮಾಂಡೂನಿ ಕರಿತಾ ಉಚ್ಚಾರ । ಜಿಣೋನಿ ಪಾಪಾಂಚಾ ಸಂಭಾರ । ಹೋಯ ತೋ ನರ ಶುದ್ಧಾತ್ಮಾ ।।೧೧೩।। ತ್ಯಾಚಿ ಮಕಾರಾಪುಢೇ ದ್ಯಕರಾ । ಠೇವೂನಿ ಕರಿತಾ ಉಚ್ಚಾರ । ಅಂಗೀ ಆದಳೇ ಪಾಪ ಘೋರ । ತೇಣೇ ಹೋಯ ನರ ಅತಿಬದ್ಧ ।।೧೧೪।। ರಜಸ್ವಲಾ ಶುದ್ಧ ಚತುರ್ಥಾಹನೀ । ಮೇಘೋದಕ ಶುದ್ಧ ತಿಸರೇ ದಿನೀ । ವೃದ್ಧಿಸೂತಕ ದಹಾವೇ ದಿನೀ । ಕಾಳ ಶುದ್ಧಪಣೇ ಯಾ ಹೇತೂ ।।೧೧೫।। ಪೂರ್ವ ದಿವಶಿಂಚೇ ಜೇ ಅನ್ನ । ತೇ ಕಾಳೇಚೀ ಪಾವೇ ಗಾ ದೂಷಣ । ಜ್ಯಾಸೀ ಆಲೇ ಶಿಳೇಪಣ । ತೇ ಅನ್ನ ಜಾಣ ಅಶುದ್ಧ ।।೧೧೬।। ತೈಸೇ ನವ್ಹೇ ಘೃತಾ ಪಾಚಿತ । ತೇ ಬಹುತ ಕಾಳೇ ತರೀ ಪುನೀತ । ಜೇ ವಿಟೋನಿ ವಿಕಾರೀ ಹೋತ । ತೇ ಅಪುನೀತ ಕಾಳೇಚಿ ।।೧೧೭।। ಜೇ ಸಾಂಚವಣೇ ಅಲ್ಪ ಜಳ । ತ್ಯಾಸೀ ಸ್ಪರ್ಶಲ್ಯಾ ಚಾಂಡಾಳ । ತೇ ಅಪವಿತ್ರ ಗಾ ಸಕಳ । ನಯೇ ಅಳುಮಾಳ ಸ್ಪರ್ಶ ಕರೂ ।।೧೧೮।। ತೇಚಿ ನಿರ್ಝರ ಕಾ ಅಕ್ಷೋಭ ಜಳ । ತೇಥ ಸ್ಪರ್ಶಲ್ಯಾಹೀ ಚಾಂಡಾಳ । ತ್ಯಾಸೀ ಲಾಗೇನಾ ತೋ ವಿಟಾಳ । ತೇ ನಿತ್ಯ ನಿರ್ಮಳ ಪವಿತ್ರ ।।೧೧೯।। ಅಲ್ಪ ಕೇಲಿಯಾ ಸ್ವಯಂಪಾಕ । ತ್ಯಾಸೀ ಜೈ ಆತಳೇ ಶ್ವಾನ ಕಾಕ । ತೈ ತೇ ಸಾಂಡಾವೇ ನಿಃಶೇಖ । ಅಪವಿತ್ರ ದೇಖ ತೇ ಅನ್ನ ।।೧೨೦।। ತೋಚಿ ಸಹಸ್ರಭೋಜನಾಚಾ ಪಾಕ । ತ್ಯಾಸೀ ಆತಳಲ್ಯಾ ಶ್ವಾನ ಕಾ ಕಾಕ । ಸಾಂಡಾವೇ ಜೇಥ ಲಾಗಲೇ ಮುಖ । ಯೇರ ಅನ್ನ ನಿರ್ದೋಖ ಭೋಜನೀ ।।೧೨೧।।

ಶಕ್ತ್ಯಾಽಶಕ್ತ್ಯಾಽಥವಾ ಬುದ್ಧ್ಯಾ ಸಮೃಧ್ಯಾ ಚ ಯದಾತ್ಮನೇ । ಅಘಂ ಕುರ್ವಂತಿ ಹಿ ಯಥಾ ದೇಶಾವಸ್ಥಾನುಸಾರತಃ ।।೧೧।।

ಅರ್ಥ:- ಅಶುದ್ಧವಾದ ವಿಷಯಗಳು, ಆಯಾ ವ್ಯಕ್ತಿಯನ್ನು ಅವಲಂಬಿಸಿವೆ. ಶಕ್ತಿಯನ್ನು ಅಥವಾ ಅಶಕ್ತಿಯನ್ನು, ಬುದ್ಧಿಯನ್ನು, ಸಮೃದ್ಧಿಯನ್ನು, ಸ್ಥಳವನ್ನು ಮತ್ತು ಶಾರೀರಿಕ ಸ್ಥಿತಿಗತಿಯನ್ನು ಅವಲಂಬಿಸಿ, ಒಬ್ಬ ವ್ಯಕ್ತಿಯ ಮೇಲೆ ಪಾಪಕರ ಪ್ರತಿಕ್ರಿಯೆಗಳನ್ನು ಹೊರಿಸಬಹುದು ಅಥವಾ ಹೊರಿಸದೆಯೂ ಇರಬಹುದು.

ಮನುಷ್ಯನು ಹೂವುಗಳ ಮೇಲೆ ನೀರನ್ನು ಸಿಂಪಡಿಸಿದರೆ ಅವು ಪವಿತ್ರವಾಗುವುವು. ಆದರೆ ಅವುಗಳ ವಾಸನೆಯನ್ನು ಸ್ವೀಕರಿಸಿದರೆ ಅವು ಅಪವಿತ್ರವಾಗುವುವು ।।೧೦೮।। ಬ್ರಾಹ್ಮಣನು ಅಗ್ನಿಯ ಸೇವೆಯನ್ನು ಮಾಡಲು ಆತನಿಗೆ ಪವಿತ್ರತೆಯು ಬರುವುದು. ಆದರೆ, ಅದೇ ಬ್ರಾಹ್ಮಣನು ಅಗ್ನಿಹೋತ್ರದಿಂದ ಏನಾದರೂ ಸುಟ್ಟರೆ, ಆ ಅಗ್ನಿಗೆ ಅಪವಿತ್ರತೆ ಒದಗುವುದು ।।೧೦೯।। ದರ್ಭದ ಮೇಲೆ ಪಿಂಡವನ್ನಿಡಲು ಅದು ಪವಿತ್ರವಾಗುವುದು. ಆದರೆ ಪಿಂಡದ ಸ್ಪರ್ಶದಿಂದ ದರ್ಭವು ಅಪವಿತ್ರವಾಗುವುದು ।।೧೧೦।। ಯಾವುದಾದರೂ ವಸ್ತು ಸಂಶಯವನ್ನು ಹುಟ್ಟಿಸಿದರೆ, ಆ ವಸ್ತುವನ್ನು ಶುದ್ಧವನ್ನಾಗಿ ಮಾಡಲು ಕೇವಲ ಬ್ರಾಹ್ಮಣರ ವಚನವು ಸಾಕಾಗುವುದು. ಕಾರಣ ಬ್ರಾಹ್ಮಣರ ವಚನವು ಹರಿಹರರಿಗೂ ಕೂಡ ಮಾನ್ಯವಾಗುವುದು ।।೧೧೧।। ತುಪ್ಪದ ಸಂಸ್ಕಾರದಿಂದ ಅನ್ನವು ಶುದ್ಧವಾಗುವುದು, ಹೋಮದ ಸಂಸ್ಕಾರದಿಂದ ನವಧಾನ್ಯಗಳು ಶುದ್ಧವಾಗುವುವು ಮತ್ತು ಅಗ್ನಿಯ ಸಂಸ್ಕಾರದಿಂದ ಉಪ್ಪು ಶುದ್ಧವಾಗುವುದು. ಹೀಗೆ ಶಾಸ್ತ್ರಾರ್ಥವಿರುವುದು ।।೧೧೨।। ರಾ ಅಕ್ಷರದ ಮುಂದೆ ಮ ಅಕ್ಷರವನ್ನು ಬರೆದು ಅದರ ಉಚ್ಚಾರವನ್ನು ಮಾಡಲು ರಾಮ ಎಂಬ ಶಬ್ದವು ಸಿದ್ಧವಾಗುವುದು. ಇದರ ಉಚ್ಚಾರದಿಂದ ಮನುಷ್ಯನು ಸರ್ವ ಪ್ರಕಾರದ ಪಾಪಗಳ ರಾಶಿಯನ್ನು ಜಯಿಸಿ ತನ್ನ ಚಿತ್ತವನ್ನು ಶುದ್ಧಗೊಳಿಸುವನು ।।೧೧೩।। ಆದರೆ ಅದೇ ಮ ಅಕ್ಷರದ ಮುಂದೆ ದ್ಯ ಬರೆದು ಉಚ್ಚಾರವನ್ನು ಮಾಡುತ್ತಲೇ ಮನುಷ್ಯನು ಘೋರ ಪಾಪಕ್ಕೆ ಗುರಿಯಾಗುವನು ।।೧೧೪।। ಮುಟ್ಟಾದ ಸ್ತ್ರೀಯಳು ನಾಲ್ಕನೆಯ ದಿನ ಶುದ್ಧವಾಗುವಳು. ಮಳೆಯ ನೀರು ಮೂರು ದಿನಕ್ಕೆ ಶುದ್ಧವಾಗುವುದು. ವೃದ್ಧಿ ಅಥವಾ ಸೂತಕವು ಹತ್ತನೆಯ ದಿವಸದ ನಂತರ ನಿವೃತ್ತವಾಗುವುದು. ಈ ರೀತಿಯಲ್ಲಿ ಕಾಲದ ಶುದ್ಧತೆ ಇರುವುದು ।।೧೧೫।। ಹಿಂದಿನ ದಿನದ ಅನ್ನವು ಕಾಲದಿಂದಲೇ ದೂಷಿತವಾಗುವುದು. ಅದಕ್ಕೆ ತಂಗಳವೆಂದು ಅಶುದ್ಧವಾಗಿ ತಿಳಿಯಲ್ಪಡುವುದು ।।೧೧೬।। ಆದರೆ ತುಪ್ಪದಿಂದ ಪಾಕಮಾಡಿದ ಅನ್ನಕ್ಕೆ ದೋಷವಿರುವುದಿಲ್ಲ. ಅದು ಅನೇಕ ದಿನಗಳವರೆಗೆ ಪವಿತ್ರವಾಗಿರುವುದು. ಯಾವುದು ಹಳಸುವುದೋ, ಅದು ತತ್ಕಾಲದಲ್ಲಿ ಅಪವಿತ್ರವಾಗುವುದು ।।೧೧೭।। ಸ್ವಲ್ಪ ಕೂಡಿಸಿದ ನೀರಿಗೆ ಚಾಂಡಾಲನು ಸ್ಪರ್ಶ ಮಾಡಿದರೆ ಅದು ಕೂಡಲೇ ಅಪವಿತ್ರವಾಗುವುದು. ಅದಕ್ಕೆ ಸರ್ವಥಾ ಸ್ಪರ್ಶವನ್ನು ಮಾಡಕೂಡದು ।।೧೧೮।। ಆದರೆ ಅದೇ ನೀರು ಹರಿಯುತ್ತಿದ್ದರೆ ಅಥವಾ ಆಳವಾದ ಮಡುವಿನಲ್ಲಿದ್ದರೆ ಚಾಂಡಾಲನು ಸ್ಪರ್ಶ ಮಾಡಿದರೂ ಆ ನೀರಿಗೆ ಯಾವುದೇ ಮೈಲಿಗೆ ಒದಗುವುದಿಲ್ಲ. ಅದು ನಿತ್ಯ ನಿರ್ಮಲ ಮತ್ತು ಪವಿತ್ರವಾಗಿರುವುದು ।।೧೧೯।। ಸ್ವಲ್ಪ ಅಡುಗೆಗೆ ನಾಯಿ ಅಥವಾ ಕಾಗೆಯು ಮುಟ್ಟಲು ಮಾಡಿರುವ ಸರ್ವ ಅಡುಗೆಯನ್ನು ಒಗೆದುಬಿಡಬೇಕು ।।೧೨೦।। ಅದೇ ಅಡುಗೆಯು ಸಹಸ್ರ ಭೋಜನದ್ದಾಗಿದ್ದರೆ ಆಗ ಅದಕ್ಕೆ ನಾಯಿ ಅಥವಾ ಕಾಗೆಯು ಸ್ಪರ್ಶ ಮಾಡಲು ಅದರ ಮುಖ ಹತ್ತಿದ ಆ ಅನ್ನ ಮಾತ್ರ ಒಗೆಯಬೇಕು. ಉಳಿದ ಅನ್ನದ ಭೋಜನಕ್ಕೆ ಯಾವ ದೋಷವೂ ಒದಗುವುದಿಲ್ಲ ।।೧೨೧।।

ಝಾಲಿಯಾ ಚಂದ್ರಸೂರ್ಯಗ್ರಹಣ। ಶಕ್ತೇ ಸ್ನಾನ ನ ಕರಿತಾ ದೂಷಣ । ಬಾಳಕ ವೃದ್ಧ ಆತುರ ಜನ । ನ ಕರಿತಾ ಸ್ನಾನ ದೋಷ ನಾಹೀ ।।೧೨೨।। ಪುತ್ರ ಜನ್ಮಲಿಯಾ ದೇಖ । ಸ್ವಗೋತ್ರಜ ಜೇ ಸಕಳಿಕ । ತ್ಯಾಂಸೀ ಜಾಣ ಆವಶ್ಯಕ । ಬಾಧೀ ಸೂತಕ ದಹಾ ದಿವಸ ।।೧೨೩।। ತೇಚಿ ಸ್ಥಳಾಂತರೀ ಪುತ್ರಶ್ರವಣ । ಸೂತಕಾ ಅಂತೀ ಝಾಲ್ಯಾ ಜಾಣ । ತ್ಯಾ ಸೂತಕಾಂಚೇ ಬಂಧನ । ನ ಬಾಧೀ ಜಾಣ ಸರ್ವಥಾ ।।೧೨೪।। ಪೂರ್ವದಿನೀ ಗೋತ್ರಜ ಮರೇ । ತೇ ಸ್ವಗೋತ್ರೀ ಸೂತಕ ಭರೇ । ಯೇರೇ ದಿವಶೀ ದುಸರಾ ಜೈ ಮರೇ । ತೈ ಸೂತಕೇ ಸೂತಕ ಉತರೇ ದೋಹೀಂಚೇಹೀ ।।೧೨೫।। ಜೇಣೇ ಘೇತಲೇ ಹೋಯ ವಿಖ । ತ್ಯಾಸೀ ಸರ್ಪು ಲಾವಿಲಿಯಾ ದೇಖ । ತೇಣೇ ವಿಖೇ ಉತರೇ ವಿಖ । ತೇವೀ ಸೂತಕೇ ಸೂತಕ ನಿವಾರೇ ।।೧೨೬।। ಜೇ ಬುದ್ಧಿಪೂರ್ವಕ ಕೇಲೇ ಆಪಣ । ತೇ ಅವಶ್ಯ ಭೋಗಾವೇ ಪಾಪಪುಣ್ಯ । ಜೇ ಬುದ್ಧೀಸೀ ನಾಹೀ ವಿದ್ಯಮಾನ । ತೇ ಹೇತುಕಪಣೇ ಬಾಧೀನಾ ।।೧೨೭।। ಆಪುಲೇ ಜೇ ಅಂತಃಕರಣ । ತ್ಯಾಸೀ ಪವಿತ್ರ ಕರೀ ನಿಜಜ್ಞಾನ । ಹೇ ''ಬುದ್ಧೀಚೀ ಶುದ್ಧೀ'' ಜಾಣ । ವಿವೇಕಸಂಪನ್ನ ವೈರಾಗ್ಯೇ ।।೧೨೮।। ಜೋ ಧನವಂತ ಅತಿಸಂಪನ್ನ । ತ್ಯಾಸೀ ಜುನೇ ವಸ್ತ್ರ ಅಪಾವನ । ಶಿವಿಲೇ ದಂಡಿಲೇ ತೇಹೀ ಜಾಣ । ನವ್ಹೇ ಪಾವನ ಸಮರ್ಥಾ ।।೧೨೯।। ತೇಚಿ ದುರ್ಬಳಾಪ್ರತಿ ಜಾಣ । ಅತಿಶಯೇ ಪರಮ ಪಾವನ । ಹೇ ವೇದವಾದ ಅತಿಗಹನ । ಸ್ಮೃತಿಕಾರೀ ಜಾಣ ಪ್ರಕಾಶಿಲೇ ।।೧೩೦।। ಸಮರ್ಥಾಸೀ ಅಸಾಕ್ಷಿ ಭೋಜನ । ಹೇ ಜಾಣಾವೇ ಅಶುದ್ಧಾನ್ನ । ದುರ್ಬಳಾಸೀ ಏಕಲ್ಯಾ ಅಶನ । ಪರಮ ಪಾವನ ಶ್ರುತ್ಯರ್ಥೇ ।।೧೩೧।। ಸ್ವಯೇ ನ ಕರಿತಾ ಪಂಚಯಜ್ಞ । ಭೋಜನ ತೇ ಪಾಪಭಕ್ಷಣ । ಸಕಳ ಸುಕೃತಾಸೀ ನಾಗವಣ । ಜೈ ಪರಾಂಗ್ಮುಖಪಣ ಅತಿಥೀಸೀ ।।೧೩೨।। ಸ್ವಗ್ರಾಮೀ ಸರ್ವಹೀ ಸ್ವಾಚಾರ । ಗ್ರಾಮಾಂತರೀ ಅರ್ಧ ಆಚಾರ । ಪುರೀ ಪಟ್ಟಣೀ ಪಾದಮಾತ್ರ । ಮಾರ್ಗೀ ಕರ್ಮಾದರ ಸಂಗಾನುಸಾರೇ ।।೧೩೩।। ವಿಚಾರೋನಿ ದೇಶಾವಸ್ಥಾ । ಹೇ ಧರ್ಮಮರ್ಯಾದಾ ತತ್ತ್ವತಾ । ಯಾಹೂನಿ ಅನ್ಯಥಾ । ಕರಿತಾ ದೋಷ ಸರ್ವಥಾ ಕರ್ತ್ಯಾಸೀ ।।೧೩೪।। ಪಾಟವ್ಯಾ ಅಸತಾ ಸ್ವದೇಹಾಸೀ । ಕರ್ಮ ನಕರೀ ತೋ ಮಹಾದೋಷೀ । ರೋಗೇ ವ್ಯಾಪಿಲ್ಯಾ ಶರೀರಾಸೀ । ಕರ್ಮಕರ್ತ್ಯಾಸೀ ಅತಿದೋಷ ।।೧೩೫।।

ಚಂದ್ರಗ್ರಹಣ ಅಥವಾ ಸೂರ್ಯಗ್ರಣ ಬರಲು ಆ ಸಮಯದಲ್ಲಿ ಆರೋಗ್ಯ ಮನುಷ್ಯರು ಸ್ನಾನವನ್ನು ಮಾಡದಿದ್ದರೆ ಅವರಿಗೆ ದೋಷವು ತಗಲುವುದು. ಆದರೆ ಬಾಲಕ, ವೃದ್ಧ, ರೋಗಿಗಳು ಸ್ನಾನವನ್ನು ಮಾಡದಿದ್ದರೆ ಅವರಿಗೆ ದೋಷವು ತಟ್ಟುವುದಿಲ್ಲ ।।೧೨೨।। ಒಂದು ಕುಲದಲ್ಲಿ ಪುತ್ರನು ಜನಿಸಿದರೆ ಆ ಕುಲದ ಸರ್ವ ಗೋತ್ರಜರಿಗೆ ಹತ್ತು ದಿನಗಳವರೆಗೆ ಸೂತಕದ ಬಾಧೆವಿರುವುದು ।।೧೨೩।। ಆದರೆ ದೂರದೇಶದಲ್ಲಿ ಪುತ್ರ ಜನ್ಮವಾಗಿ ಆ ಸಮಾಚಾರವು ಹತ್ತು ದಿನಗಳ ನಂತರ ತಲುಪಲು ಆಗ ಸೂತಕದ ಬಾಧೆಯಾಗಲಾರದು ।।೧೨೪।। ಮೊದಲನೆಯ ದಿನದಂದು ಒಬ್ಬ ಬಳಗದವನು ಮರಣನಾದರೆ ಆತನ ಗೋತ್ರಜರಿಗೆ ಸೂತಕವು ಒದಗುವುದು. ಆದರೆ ಮರುದಿನ ಇನ್ನೊಬ್ಬ ಬಳಗದವನು ಮರಣನಾಗಲು ಮೊದಲನೆಯ ಸೂತಕದಲ್ಲಿ ಎರಡನೆಯ ಸೂತಕವು ಕೂಡಿ ಸೂತಕವನ್ನು ಇಲ್ಲದಂತೆ ಮಾಡುವುದು ।।೧೨೫।। ಒಬ್ಬನು ವಿಷವನ್ನು ಕುಡಿದಾಗ ಆತನಿಗೆ ವಿಷಸರ್ಪವು ದಂಶ ಮಾಡಲು, ಆಗ ಆ ವಿಷದಿಂದ ಕುಡಿದ ವಿಷವು ಇಳಿಯುವುದು. ಅದರಂತೆ ಒಂದು ಸೂತಕದಲ್ಲಿ ಇನ್ನೊಂದು ಸೂತಕವು ನಷ್ಟವಾಗಿಬಿಡುವುದು ।।೧೨೬।। ತಾನು ತಿಳಿದು ಮಾಡಿದ ಯಾವುದೇ ಕರ್ಮವಾಗಲಿ ಅದರಿಂದ ಪಾಪಪುಣ್ಯಗಳ ಫಲವನ್ನು ಅವಶ್ಯವಾಗಿ ಭೋಗಿಸಬೇಕಾಗುವುದು. ಆದರೆ ಅದೇ ಕರ್ಮವನ್ನು ತಿಳಿಯದೇ ಮಾಡಿದರೆ ಅದರ ಯಾವ ಬಾಧೆಯು ಹತ್ತುವುದಿಲ್ಲ ।।೧೨೭।। ತನ್ನ ಅಂತಃಕರಣಕ್ಕೆ ಆತ್ಮಜ್ಞಾನವು ಪವಿತ್ರ ಮಾಡುವುದು ಮತ್ತು ವಿವೇಕಯುಕ್ತ ವೈರಾಗ್ಯದಿಂದ ಚಿತ್ತದ ಶುದ್ಧಿಯಾಗುವುದು ।।೧೨೮।। ಶ್ರೀಮಂತ ಮನುಷ್ಯನು ಹಳೆಯ ವಸ್ತ್ರಗಳನ್ನು ಉಪಯೋಗಿಸಿದರೆ ಅಪವಿತ್ರವಾಗುವುದು. ಆತನು ಶಿಕ್ಷೆಗೆ ಗುರಿಯಾದ ಅಥವಾ ಹರಿದು ಹೊಲೆದ ವಸ್ತ್ರವನ್ನು ಧರಿಸುವುದು ಪವಿತ್ರವಲ್ಲ ।।೧೨೯।। ಇದೇ ವಸ್ತ್ರಗಳು ಬಡವನಿಗೆ ಅತಿಶಯ ಪವಿತ್ರವಾಗುವುದು. ವೇದದಲ್ಲಿನ ಈ ರಹಸ್ಯವು ಅತಿ ಗಹನವಾಗಿರುವುದು. ಇದನ್ನು ಸ್ಮೃತಿಕಾರರು ಸ್ಪಷ್ಟಮಾಡಿ ಹೇಳಿರುವರು ।।೧೩೦।। ಶ್ರೀಮಂತನು ಯಾರಿಗೂ ತನ್ನ ಪಂಕ್ತಿಯಲ್ಲಿ ಕೂಡಿಸದೇ ಭೋಜನವನ್ನು ಮಾಡುವುದು ಇದಕ್ಕೆ ವೇದವು ದೋಷವೆಂದು ಹೇಳಿರುವುದು. ಆದರೆ ಬಡವನು ಒಬ್ಬನೇ ಭೋಜನವನ್ನು ಮಾಡಿದರೆ ಅದು ಅತ್ಯಂತ ಪವಿತ್ರವೆಂದು ವೇದವು ಹೇಳಿರುವುದು ।।೧೩೧।। ಪಂಚಯಜ್ಞಗಳನ್ನು ಮಾಡದೇ ಭೋಜನವನ್ನು ಮಾಡುವುದು, ಇದು ಪಾಪವನ್ನು ಭಕ್ಷಿಸಿದಂತಾಗುವುದು. ಅತಿಥಿಯನ್ನು ಹೊರಗೆ ಅಟ್ಟಿದರೆ ಇದು ಸರ್ವಪ್ರಕಾರದ ಪುಣ್ಯಕ್ಕೆ ನೀರು ಹಣಿಸಿದಂತಾಗುವುದು ।।೧೩೨।। ತನ್ನ ಊರಿನಲ್ಲಿದ್ದಾಗ ಸರ್ವ ಆಚಾರಗಳನ್ನು ಪಾಲಿಸಬೇಕು. ಪರಸ್ಥಳಕ್ಕೆ ಹೋದಲ್ಲಿ ಅರ್ಧ ಆಚಾರಗಳನ್ನು ಪಾಲಿಸಬೇಕು. ಯಾವುದೇ ದೊಡ್ಡ ನಗರಕ್ಕೆ ಹೋದರೆ, ಅಲ್ಲಿ ನಾಲ್ಕನೆಯ ಒಂದು ಭಾಗದ ಆಚಾರವನ್ನು ಪಾಲಿಸಬೇಕು ಮತ್ತು ಪ್ರವಾಸದಲ್ಲಿ ಮಾರ್ಗದಲ್ಲಿನ ಜನರ ಸಂಗತಿಯಂತೆ ವ್ಯವಹರಿಸಬೇಕು ।।೧೩೩।। ದೇಶಕಾಲಕ್ಕೆ ಮತ್ತು ಪರಿಸ್ಥಿತಿಗೆ ತಕ್ಕಂತೆ ವಿಚಾರವನ್ನು ಮಾಡಿ ಈ ಮರ್ಯಾದೆಯನ್ನು ಧರ್ಮಶಾಸ್ತ್ರವನ್ನು ಹಚ್ಚಿಕೊಟ್ಟಿರುವುದು. ಇದರ ವಿರುದ್ಧವಾಗಿ ಆಚರಣೆಯನ್ನು ಮಾಡಿದರೆ ಅವರಿಗೆ ದೋಷವು ಬಡೆದುಕೊಳ್ಳುವುದು ।।೧೩೪।। ಕರ್ಮ ಮಾಡುವ ಶಕ್ತಿಯು ಶರೀರದಲ್ಲಿದ್ದರೂ ಕೂಡ ಯಾರು ಕರ್ಮವನ್ನು ಮಾಡುವುದಿಲ್ಲವೋ, ಆತನಿಗೆ ದೋಷವು ತಟ್ಟುವುದು. ಆದರೆ ಶರೀರವು ರೋಗದಿಂದ ವ್ಯಾಪಿಸಿಕೊಂಡಿರಲು, ಆಗ ಕರ್ಮವನ್ನು ಮಾಡುವವನು ಅತಿಶಯವಾಗಿ ದೋಷಿಯಾಗುವನು ।।೧೩೫।।

ಪೂರ್ವೀ ದ್ರವ್ಯಾದ್ರವ್ಯಶುದ್ಧೀ । ಸಾಂಗಿತಲೀ ಯಥಾವಿಧೀ । ತೇಚಿ ಮಾಗುತೇನಿ ಪ್ರತಿಪಾದೀ । ಕರ್ಮಶಾಸ್ತ್ರಸಿದ್ಧೀ ವೇದೋಕ್ತ ॥೧೩೬॥

ಧಾನ್ಯದಾರ್ವಸ್ಥಿತಂತೂನಾಂ ರಸತೈಜಸಚರ್ಮಣಾಮ್ । ಕಾಲವಾಯ್ವಗ್ನಿಮೃತ್ತೋಯೈಃ ಪಾರ್ಥಿವಾನಾಂ ಯುತಾಯುತೈಃ ॥೧೨॥

ಅರ್ಥ:- ಧಾನ್ಯಗಳು, ಮರದ ಪಾತ್ರೆಗಳು, ಎಲುಬು, ದಾರ, ದ್ರವಗಳು, ತೈಜಸ ವಸ್ತುಗಳು, ಚರ್ಮ ವಸ್ತುಗಳು, ಮಣ್ಣಿನ ವಸ್ತುಗಳಂತಹ ಬೇರೆ ಬೇರೆಯಾಗಿ ಅಥವಾ ಸಂಯುಕ್ತವಾಗಿ ಶುದ್ಧಿಗೊಳ್ಳುತ್ತವೆ.

ಶೂದ್ರಪ್ರತಿಗ್ರಹಾಚೇ ಧಾನ್ಯ । ಏಕರಾತ್ರೀ ಶುದ್ಧ ಜಾಣ । ಸ್ರುಕ್‌ಸ್ರುವಾದಿಕಾಷ್ಠಭಾಜನ । ಜಲಪ್ರಕ್ಷಾಲನೇ ಶುದ್ಧತ್ವ ॥೧೩೭॥ ವ್ಯಾಘ್ರನಖ ಗಜದಂತ । ಅಪವಿತ್ರ ಜಂವ ಸ್ನೇಹಯುಕ್ತ । ಜೇವ್ಹಾ ಹೋತೀ ಸ್ನೇಹಾತೀತ । ಅತಿಪುನೀತ ತೇ ಕಾಳೀ ॥೧೩೮॥ ಪಟ್ಟತಂತು ಸ್ವಯೇ ಪುನೀತು । ವಾಯುನೇ ಶುದ್ಧ ಊರ್ಣಾತಂತು । ವಸ್ತ್ರತಂತು ಜಳಾ ಆಂತು । ಹೋಯ ಪುನೀತು ಪ್ರಕ್ಷಾಳಿಲ್ಯಾ ॥೧೩೯। ಗೋಕ್ಷೀರ ಪವಿತ್ರ ಕಾಂಸ್ಯ ಮೃತ್ಪಾತ್ರೀ । ತೇಚಿ ಅಪವಿತ್ರ ತ್ರಾಮಪಾತ್ರೀ । ತಾಮ್ರ ಪವಿತ್ರ ಆಮ್ಲೇಕರೀ । ಆಮ್ಲ ಲವಣಾಂತರೀ ಪವಿತ್ರ ॥೧೪೦॥ ಘೃತ ಪವಿತ್ರ ಅಗ್ನಿಸಂಸ್ಕಾರೀ । ಅಗ್ನಿ ಪವಿತ್ರ ಬ್ರಾಹ್ಮಣಮಂತ್ರೀ। ಬ್ರಾಹ್ಮಣ ಪವಿತ್ರ ಸ್ವಾಚಾರೀ। ಪವಿತ್ರತಾ ಆಚಾರೀ ವೇದವಿಧೀ॥೧೪೧॥ ವೇದ ಪವಿತ್ರ ಗುರುಮುಖೇ । ಗುರು ಪವಿತ್ರ ನಿಜಾತ್ಮಸುಖೇ । ಆತ್ಮಾ ಪವಿತ್ರ ಗುರುಚರಣೋದಕೇ । ಪವಿತ್ರ ಉದಕೇ ದ್ವಿಜಚರಣೀ ॥೧೪೨॥ ಪೃಥ್ವೀ ಪವಿತ್ರ ಜಳಸಂಸ್ಕಾರೀ । ಜಳ ಪವಿತ್ರ ಪೃಥ್ವೀವರೀ । ಚರ್ಮ ಪವಿತ್ರ ತೈಲೇಕರೀ । ತೈಲ ಚರ್ಮಪಾತ್ರೀ ಪವಿತ್ರ ॥೧೪೩॥ ವ್ಯಾಘ್ರ್ಯಾದಿ ಜೇ ಮೃಗಾಜಿನ । ಇಯೇ ಸ್ವಭಾವೇ ಪವಿತ್ರ ಜಾಣ । ಅಗ್ನಿ ಸಂಸ್ಕಾರೇ ಸುವರ್ಣ। ಪವಿತ್ರಪಣ ಸ್ವಭಾವೇ ॥೧೪೪॥ ಏವಂ ಇತ್ಯಾದಿ ಪರಸ್ಪರೀ । ಶುಚಿತ್ವ ಬೋಲಿಲೇ ಸ್ಮೃತಿಶಾಸ್ತ್ರೀ । ಆತಾ ಮಳಲಿಪ್ತ ಝಾಲಿಯಾವರೀ । ತ್ಯಾಚೇಹೀ ಅವಧಾರೀ ಶುಚಿತ್ವ ॥೧೪೫॥

ಅಮೇಧ್ಯಲಿಪ್ತಂ ಯದ್ಯೇನ ಗಂಧಂ ಲೇಪಂ ವ್ಯಪೋಹತಿ । ಭಜತೇ ಪ್ರಕೃತಿಂ ತಸ್ಯ ತಚ್ಛೌಚಂ ತಾವದಿಷ್ಯತೇ ॥೧೩॥

ಅರ್ಥ:- ಯಾವುದೇ ವಸ್ತುವಿಗೆ ಅಶುದ್ಧ ಪದಾರ್ಥವು ಹತ್ತಿದರೆ, ಅದನ್ನು ತಿಕ್ಕಿ ತೊಳೆಯಲು ಆಗ ಆ ವಸ್ತುವಿನ ದುರ್ಗಂಧ ಲೇಪ ಇಲ್ಲದಂತಾದಾಗ ಅದಕ್ಕೆ ಶುದ್ಧವೆಂದು ತಿಳಿಯಬೇಕು.

ಪಾತ್ರ ಪೀಠ ಕಾ ಆಸನ । ಅಮೇಧ್ಯಲಿಪ್ತ ಝಾಲ್ಯಾ ಜಾಣ । ತ್ಯಾ ಗಂಧಾಚೇ ನಿಃಶೇಷ ಕ್ಷಾಲನ । ತೇಣೇ ಪವಿತ್ರಪಣ ತಯಾಸೀ ॥೧೪೬॥

ಇಲ್ಲಿಯವರೆಗೆ ವಸ್ತುಗಳ ಶುದ್ಧ ಅಶುದ್ಧತೆಗಳನ್ನು ವಿಧಿಪೂರ್ವಕವಾಗಿ ಹೇಳಿದೆನು. ಈಗ ಅದೇ ವೇದೋಕ್ತ ಧರ್ಮಶಾಸ್ತ್ರಕ್ಕೆ ಅನುಸರಿಸಿ ಪುನಃ ಹೇಳುವೆನು ॥೧೩೬॥

ಶೂದ್ರನು ದಾನ ಕೊಟ್ಟ ಧಾನ್ಯವು ಒಂದು ರಾತ್ರಿಯಲ್ಲಿ ಶುದ್ಧವಾಗುವುದು. ಸ್ರುಕ್, ಸುವಾ ಇತ್ಯಾದಿ ಕಾಷ್ಠ ಪಾತ್ರೆಗಳು ನೀರಿನಿಂದ ತೊಳೆಯಲು ಶುದ್ಧವಾಗುವುವು ॥೧೩೭॥ ಹುಲಿಯ ಉಗುರು, ಆನೆಯ ದಂತ ಇವು ಹಸಿಯಾಗಿ ಇರುವವರೆಗೆ ಅಶುದ್ಧವಾಗಿರುವುವು. ಇವೇ ಒಣಗಲು ಶುದ್ಧವಾಗುವುವು ॥೧೩೮॥ ರೇಷ್ಮೇಯ ನೂಲುಗಳು ಮೂಲತಃ ಶುದ್ಧವಾಗಿರುವುವು. ಉಣ್ಣೆಯ ಎಳೆಗಳು ಗಾಳಿಯಿಂದ ಶುದ್ಧವಾಗುವುವು. ಅರಳೆಯ ನೂಲುಗಳು ನೀರಿನಿಂದ ತೊಳೆಯಲು ಶುದ್ಧವಾಗುವುವು ॥೧೩೯॥ ಕಂಚಿನ ಅಥವಾ ಮಣ್ಣಿನ ಪಾತ್ರೆಗಳಲ್ಲಿ ಆಕಳ ಹಾಲನ್ನು ಇಟ್ಟರೆ ಅದು ಶುದ್ಧವಾಗಿರುವುದು. ಅದೇ ಹಾಲನ್ನು ತಾಮ್ರದ ಪಾತ್ರೆಯಲ್ಲಿಡಲು ಅದು ಅಶುದ್ಧವಾಗುವುದು. ಹುಳಿ ಪದಾರ್ಥಗಳಿಂದ ತಾಮ್ರವು ಸ್ವಚ್ಛವಾಗುವುದು. ಉಪ್ಪಿನಿಂದ ಹುಳಿ ಪದಾರ್ಥವು ಶುದ್ಧವಾಗುವುದು ॥೧೪೦॥ ತುಪ್ಪವು ಅಗ್ನಿಸಂಸ್ಕಾರದಿಂದ ಶುದ್ಧವಾಗುವುದು. ಅಗ್ನಿಯು ಬ್ರಾಹ್ಮಣರ ಮಂತ್ರದಿಂದ ಶುದ್ಧವಾಗುವುದು. ಬ್ರಾಹ್ಮಣನು ಸ್ವಧರ್ಮದ ಆಚರಣೆಯಿಂದ ಶುದ್ಧನಾಗುವನು ಮತ್ತು ಆಚಾರವು ವೇದ ವಿಧಿಯಿಂದ ಪವಿತ್ರವಾಗುವುದು ॥೧೪೧॥ ವೇದವು ಗುರುಮುಖದಿಂದ ಪವಿತ್ರವಾಗುವುದು. ಗುರು ಆತ್ಮಜ್ಞಾನದಿಂದ ಪವಿತ್ರನಾಗುವನು. ಜೀವವು ಗುರುಗಳ ಪಾದತೀರ್ಥದಿಂದ ಪಾವನವಾಗುವುದು. ಜಲವು ಬ್ರಾಹ್ಮಣರ ಚರಣದಿಂದ ಪವಿತ್ರವಾಗುವುದು ॥೧೪೨॥ ಜಲ ಸಂಸ್ಕಾರದಿಂದ ಪೃಥ್ವಿಯು ಪವಿತ್ರವಾಗುವುದು. ಜಲವು ಮಣ್ಣಿನಿಂದ ಶುದ್ಧವಾಗುವುದು. ತೈಲದಿಂದ ಚರ್ಮವು ಶುದ್ಧವಾಗುವುದು. ಚರ್ಮದ ಚೀಲದಲ್ಲಿ ತೈಲವು ಶುದ್ಧವಾಗುವುದು ॥೧೪೩॥ ವ್ಯಾಘ್ರಾಂಬರ, ಕೃಷ್ಣಾಜಿನ ಇವು ಮೂಲತಃ ಪವಿತ್ರವಾಗಿರುವುವು. ಅಗ್ನಿ ಸಂಸ್ಕಾರದಿಂದ ಸುವರ್ಣವು ಸಹಜವಾಗಿ ಪವಿತ್ರವಾಗುವುದು ॥೧೪೪॥ ಈ ಪ್ರಕಾರವಾಗಿ ಪರಸ್ಪರ ಪದಾರ್ಥಗಳಿಂದ ಪರಸ್ಪರರಲ್ಲಿ ಪವಿತ್ರತೆಯು ಬರುವ ವಿಚಾರಕ್ಕೆ ಸ್ಮೃತಿ ಶಾಸ್ತ್ರಗಳಲ್ಲಿ ಹೇಳಿಟ್ಟಿರುವುದು. ಈಗ ಮಲದಿಂದ ಲೇಪಿತವಾದ ಮೇಲೆ ಆ ವಸ್ತುವನ್ನು ಶುದ್ಧ ಮಾಡುವ ಪ್ರಕಾರವನ್ನು ಹೇಳುವೆನು, ಅದನ್ನು ಕೇಳು ॥೧೪೫॥

ಭಾಂಡೆಗಳು, ಅಡುಗೆಯ ಕಟ್ಟೆ, ಆಸನ ಇವುಗಳಿಗೆ ಅಮಂಗಲ ಪದಾರ್ಥಗಳು ಲೇಪವಾದರೆ, ಅವುಗಳನ್ನು ಸ್ವಚ್ಛವಾಗಿ ತೊಳೆಯುವುದರಿಂದ ಅದರ ದುರ್ಗಂಧವು ನಾಶವಾಗುವುದು ॥೧೪೬॥

ನಾಭೀಖಾಲತಾ ಜ್ಯಾಚ್ಯಾ ಶರೀರಾ । ಅಮೇಧ್ಯಲೇಪ ಲಾಗಲ್ಯಾ ಖರಾ । ತೇ ಠಾಯೀಂಚಾ ಗಂಧು ಜಾಯ ಪುರಾ । ಐಸೇ ಧುತಲ್ಯಾ ತ್ಯಾ ನರಾ । ಶುಚಿತ್ವ ಲಾಭೇ ॥೧೪೭॥ ನಾಭೀವರತೇ ಅಮೇಧ್ಯಲೇಪನ । ಅವಚಟೇ ಝಾಲಿಯಾ ಜಾಣ । ತೈ ಕರಾವೇ ಮೃತ್ತಿಕಾಸ್ನಾನ । ತೇಣೇ ಪಾವನ ತೋ ಪುರುಷ ॥೧೪೮॥ ಮಳ ಧುತಲ್ಯಾ ತತ್ಕಾಳ ಜಾತೀ । ಪರೀ ತ್ಯಾ ಗಂಧಾಚೀ ಹೋಯ ನಿವೃತ್ತೀ । ಪ್ರಕೃತಿ ಪಾವೇ ಜೈ ನಿಜಸ್ಥಿತೀ । ''ಮಳನಿಷ್ಕೃತಿ'' ತ್ಯಾ ನಾಂವ ॥೧೪೯॥ ಬಾಹ್ಯ ಪದಾರ್ಥ ನಿವೃತ್ತಿನಿಷ್ಠೇ । ವೇದ ಬೋಲಿಲಾ ಯಾ ಖಟಪಟೇ । ಆತಾ ಕಾರ್ಯಾಚೇ ಶುಚಿತ್ವ ಪ್ರಕಟೇ । ತೈ ಐಕ ಗೋಮಟೇ ಉಪಾಯ ॥೧೫೦॥

ಸ್ನಾನದಾನತಪೋಽವಸ್ಥಾವೀರ್ಯಸಂಸ್ಕಾರಕರ್ಮಭಿಃ । ಮತ್ಸ್ಮೃತ್ಯಾ ಚಾತ್ಮನಃ ಶೌಚಂ ಶುದ್ಧಃ ಕರ್ಮಾಚರೇದ್ದ್ವಿಜಃ ॥೧೪॥

ಅರ್ಥ:- ಸ್ನಾನ, ದಾನ, ತಪಸ್ಸು, ಕೌಮಾರಾದಿ ಅವಸ್ಥೆ, ಸಸಾಮರ್ಥ್ಯ, ಸಂಸ್ಕಾರ, ಕರ್ಮ ಮತ್ತು ನನ್ನ ಸ್ಮರಣೆಯಿಂದ ಚಿತ್ತಶುದ್ಧಿಯಾಗುವುದು. ಆದ್ದರಿಂದ ಇವುಗಳ ಮುಖಾಂತರ ಶುದ್ಧವಾಗಿ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯ ಇವರು ವಿಹಿತ ಕರ್ಮಗಳ ಆಚರಣೆಯನ್ನು ಮಾಡಬೇಕು.

ಗರ್ಭಾಧಾನಾದಿ ಅನ್ನಪ್ರಾಶನ । ತೇ ಬಾಲ್ಯಾವಸ್ಥಾ ಸಂಪೂರ್ಣ । ಚೌಲ ತೇ ಕುಮಾರಾವಸ್ಥಾ ಜಾಣ । ಬ್ರಾಹ್ಮಣಪಣ ಉಪನಯನೇ ॥೧೫೧॥ ಕರ್ಮಭೂಮಿಕೇಲಾಗೀ ಸ್ನಾನ । ದ್ರವ್ಯಶುದ್ಧೀಲಾಗೀ ಕೀಜೇ ದಾನ । ವೈರಾಗ್ಯಾಲಾಗೀ ತಪ ಜಾಣ । ಕರ್ಮಾಚರಣ ಜಡತ್ವತ್ಯಾಗ ॥೧೫೨॥ ಮಾಝಿಯಾ ಭಜನೀ ದೃಢಬುದ್ಧಿ । ತ್ಯಾ ನಾಂವ ಜಾಣ ''ವೀರ್ಯಶುದ್ಧಿ''। ಮಾಝೇನಿ ಸ್ಮರಣೇ ''ಚಿತ್ತಶುದ್ಧಿ'' । ಜಾಣ ತ್ರಿಶುದ್ಧೀ ಉದ್ಧವಾ ॥೧೫೩॥ ಐಸೇಸಿಯಾ ವಿಧೀ । ಬ್ರಾಹ್ಮಣ ಜೇ ಕಾ ಸುಬುದ್ಧೀ । ಸಬಾಹ್ಯ ಪಾವಾವಯಾ ಶುದ್ಧೀ । ವೇದ ಉಪಪಾದೀ ಸ್ವಕರ್ಮೇ ॥೧೫೪॥

ಮಂತ್ರಸ್ಯ ಚ ಪರಿಜ್ಞಾನಂ ಕರ್ಮಶುದ್ಧಿರ್ಮದರ್ಪಣಮ್ । ಧರ್ಮಃ ಸಂಪದ್ಯತೇ ಷಡ್ಭಿರಧರ್ಮಸ್ತು ವಿಪರ್ಯಯ ॥೧೫॥

ಅರ್ಥ:- ಗುರುಮುಖದಿಂದ ಮಂತ್ರವನ್ನು ಕೇಳಿ ಹೃದಯವನ್ನು ಮಂಗಲಮಯ ಮಾಡಲು ಮಂತ್ರದ ಮತ್ತು ನನಗೆ ಅರ್ಪಿತ ಮಾಡಿದ ಕರ್ಮಗಳ ಶುದ್ಧಿಯಾಗುವುದು. ಹೇ ಉದ್ಧವಾ, ಈ ಪ್ರಕಾರವಾಗಿ ದೇಶ, ಕಾಲ, ಪದಾರ್ಥ, ಕರ್ತಾ, ಮಂತ್ರ ಮತ್ತು ಕರ್ಮ ಇವು ಆರು ಶುದ್ಧವಾಗುತ್ತಲೇ ಅದು ಧರ್ಮವೆನಿಸುವುದು. ಆದರೆ ಇವು ಆರು ಅಶುದ್ಧವಾದರೆ ಅಧರ್ಮವಾಗುವುದು.

ಮಂತ್ರಶುದ್ಧಿ ಮಂತ್ರಾರ್ಥಜ್ಞಾನೇ । ಕರ್ಮಶುದ್ಧಿ ಬ್ರಹ್ಮಾರ್ಪಣೇ । ಇಯೇ ಕರ್ತ್ಯಾಚೇ ಶುದ್ಧೀಕಾರಣೇ । ಸಾಹೀ ಲಕ್ಷಣೇ ವೇದು ಬೋಲೇ ॥೧೫೫॥ ದೇಶ - ಕಾಲ - ದ್ರವ್ಯಸಂಪನ್ನತಾ । ಮಂತ್ರ - ಕರ್ಮ - ನಿರುಜ ಕರ್ತಾ । ಯಾ ಸಾಹೀಂಚ್ಯಾ ಶುದ್ಧಾವಸ್ಥಾ । ಸ್ವಧರ್ಮತಾ ಫಲೋನ್ಮುಖ ॥೧೫೬॥ ಜೇ ದ್ರವ್ಯ ಪಾವೇ ದೀನಾಂಚೇ ಆರ್ತಾ । ಕಾ ಮಾಝಿಯಾ ನಿಜಭಕ್ತಾ । ಯಾ ನಾಂವ ''ದ್ರವ್ಯಪವಿತ್ರತಾ'' । ಜಾಣ ತತ್ತ್ವತಾ ನಿಶ್ಚಿತ ॥೧೫೭॥

ಒಬ್ಬ ಮನುಷ್ಯನ ಶರೀರದ ಹೊಕ್ಕಳ ಕೆಳಗಿನ ಭಾಗದಲ್ಲಿ ಅಮಂಗಳ ಪದಾರ್ಥದ ಲೇಪವು ಹತ್ತಲು, ಆಗ ಅಷ್ಟೇ ಭಾಗವನ್ನು ಸ್ವಚ್ಛವಾಗಿ ತೊಳೆಯುವುದರಿಂದ ಆ ಮನುಷ್ಯನಿಗೆ ಶುಚಿತ್ವವು ಲಭಿಸುವುದು ॥೧೪೭॥ ಆದರೆ ಹೊಕ್ಕಳದ ಮೇಲಿನ ಭಾಗದಲ್ಲಿ ಅಮಂಗಳ ಪದಾರ್ಥವು ಹತ್ತಿಕೊಂಡರೆ ಆಗ ಅದಕ್ಕೆ ಮಣ್ಣನ್ನು ಹಚ್ಚಿ ಸ್ವಚ್ಛವಾಗಿ ಸ್ನಾನವನ್ನು ಮಾಡುವುದರಿಂದ ಆ ಮನುಷ್ಯನು ಪಾವನನಾಗುವನು ॥೧೪೮॥ ಮಲವನ್ನು ತೊಳೆಯಲು ಅದು ತತ್ಕಾಲದಲ್ಲಿ ಹೋಗುವುದು. ಆದರೆ ಅದರ ದುರ್ಗಂಧವು ನಾಶವಾಗುವವರೆಗೂ ಸ್ವಾಭಾವಿಕ ಶುದ್ಧತೆಯು ಪ್ರಾಪ್ತವಾಗುವುದಿಲ್ಲ. ಇದಕ್ಕೆ ಮಲಕ್ಷಾಲನೆ ಎಂದು ಹೇಳುವರು ॥೧೪೯॥ ಬಾಹ್ಯ ಪದಾರ್ಥದ ಅಪವಿತ್ರತೆಯಿಂದ ನಿವೃತ್ತನಾಗಲು ವೇದವು ಇಷ್ಟೊಂದು ಪ್ರಯತ್ನವನ್ನು ಮಾಡಿರುವುದು. ಈಗ ಕರ್ತನ ಶುಚಿರ್ಭೂತತದ ಉಪಾಯವನ್ನು ಹೇಳುವೆನು, ಅದನ್ನು ಕೇಳು ॥೧೫೦॥

ಗರ್ಭಧಾರಣೆಯಿಂದ ಅನ್ನಪ್ರಾಶನದವರೆಗೆ ಸರ್ವ ಸಂಸ್ಕಾರವು ಬಾಲ್ಯಾವಸ್ಥೆಯಲ್ಲಿ ಆಗುವುದು. ಚೌಲ ಸಂಸ್ಕಾರವು ಕುಮಾರಾವಸ್ಥೆಯಲ್ಲಿ ಆಗುವುದು. ಉಪನಯನ ಸಂಸ್ಕಾರದಿಂದ ಬ್ರಾಹ್ಮಣತ್ವವು ಪ್ರಾಪ್ತವಾಗುವುದು ॥೧೫೧॥ ಕರ್ಮದ ಅಧಿಕಾರವು ಬರುವುದಕ್ಕಾಗಿ ಸ್ನಾನವನ್ನು ಮಾಡಬೇಕು. ದ್ರವ್ಯಶುದ್ಧಿಗಾಗಿ ದಾನವನ್ನು ಮಾಡುತ್ತಿರಬೇಕು. ವೈರಾಗ್ಯದ ಪ್ರಾಪ್ತಿಗಾಗಿ ತಪವನ್ನಾಚರಿಸಬೇಕು. ಆಲಸ್ಯವನ್ನು ಹೋಗಲಾಡಿಸಲು ಕೆಲಸಗಳನ್ನು ಮಾಡುತ್ತಿರಬೇಕು ॥೧೫೨॥ ನನ್ನ ಭಜನೆಯಲ್ಲಿ ದೃಢವಾದ ಬುದ್ಧಿಯನ್ನು ಇಡುವಿಕೆಗೆ ''ವೀರ್ಯಶುದ್ಧಿ'' ಎಂದು ಹೇಳುವರು. ನನ್ನ ಸತತ ಚಿಂತನೆಯಿಂದ ಚಿತ್ತದ ಶುದ್ಧಿಯಾಗುವುದು ॥೧೫೩॥ ಬುದ್ಧಿವಂತ ಬ್ರಾಹ್ಮಣರು ಈ ರೀತಿಯಿಂದ ಅಂತರ್ಬಾಹ್ಯ ಶುದ್ಧರಾಗಬೇಕು. ಅದಕ್ಕಾಗಿ ವೇದವು ಪ್ರತಿಯೊಬ್ಬರಿಗೆ ಅವರವರ ಕರ್ಮಗಳನ್ನು ನೇಮಿಸಿಕೊಟ್ಟಿರುವುದು ॥೧೫೪॥

ಮಂತ್ರಗಳ ಅರ್ಥಜ್ಞಾನದಿಂದ ಮಂತ್ರಶುದ್ಧಿಯಾಗುವುದು. ಬ್ರಹ್ಮಾರ್ಪಣೆಯನ್ನು ಮಾಡುವುದರಿಂದ ಕರ್ಮಶುದ್ಧಿಯಾಗುವುದು. ಕರ್ಮಗಳ ಶುದ್ಧಿಗಾಗಿ ವೇದವು ಆರು ಲಕ್ಷಣಗಳನ್ನು ಹೇಳಿಟ್ಟಿರುವುದು ॥೧೫೫॥ ದೇಶ, ಕಾಲ, ದ್ರವ್ಯ, ಮಂತ್ರ, ಕರ್ಮ ಮತ್ತು ನಿರೋಗಿ ಕರ್ತಾ ಈ ಆರು ಮುಖ್ಯಸಾಧನೆಗಳು ಶುದ್ಧವಾಗಿದ್ದರೆ ಮಾತ್ರ ಸ್ವಧರ್ಮದ ಫಲವು ಲಭಿಸುವುದು ॥೧೫೬॥ ಯಾವ ದ್ರವ್ಯದ ಉಪಯೋಗವು ಅನಾಥ, ದೀನ ಜನರ ಸಂಕಟಕಾಲದಲ್ಲಿ ಆಗುತ್ತಿದ್ದರೆ ಅಥವಾ ದ್ರವ್ಯದ ವಿನಿಯೋಗವು ನನ್ನ ಭಕ್ತಿಯತ್ತ ನಡೆಯುತ್ತಿದ್ದರೆ ಇದೇ ದ್ರವ್ಯದ ನಿಜವಾದ ಪವಿತ್ರತೆಯಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೫೭॥

ಧರ್ಮಶಾಸ್ತ್ರಾರ್ಥೇ ಶುದ್ಧ ಧನ । ಕಷ್ಟೇ ಮಿಳವೂನಿಯಾ ಆಪಣ । ಧನಲೋಭೀ ಠೇವಿಲ್ಯಾ ಪ್ರಾಣ । ಅವಘೇಚಿ ಜಾಣ ಅಶುದ್ಧ ।।೧೫೮।। ಯಾ ನಾಂವ ''ದ್ರವ್ಯಶುದ್ಧತಾ'' । ಐಕ ಮಂತ್ರಾಚೀ ಪವಿತ್ರತಾ । ತೇಣೇ ಮಂತ್ರೇ ಪಾವಿಜೇ ಮಂತ್ರಾರ್ಥಾ । ಶುದ್ಧ ಸರ್ವಥಾ ತೋ ಮಂತ್ರ ।।೧೫೯।। ಜೇಥ ಕೇಲಿಯಾ ಮಂತ್ರಗ್ರಹಣ । ಅಂಗೀ ಚಢತಾ ವಾಢೇ ಅಭಿಮಾನ । ಕಾ ಜೇಥ ಜಾರಣ - ಮಾರಣ - ಉಚ್ಚಾಟಣ । ತೇ ಮಂತ್ರ ಜಾಣ ಅಪವಿತ್ರ ।।೧೬೦।। ಯಾ ನಾಂವ ''ಮಂತ್ರಶುದ್ಧಿ'' ಜಾಣ । ಐಕ ಕರ್ಮಾಚೇ ಲಕ್ಷಣ । ಜೇಣೇ ಕರ್ಮೇ ತುಟೇ ಕರ್ಮಬಂಧನ । ತೇ ಕರ್ಮಾಚರಣ ಅತಿಶುದ್ಧ ।।೧೬೧।। ಸ್ವಯೇ ಕರಿತಾ ಕರ್ಮಾಚರಣ । ಜೇಣೇ ಖವಳೇ ದೇಹಾಭಿಮಾನ । ಕರ್ತ್ಯಾಸೀ ಲಾಗೇ ದೃಢ ಬಂಧನ । ತೇ ಕರ್ಮ ಜಾಣ ಅಪವಿತ್ರ ।।೧೬೨।। ಜೇಣೇ ಕರ್ಮೇ ಹೋಯ ಕರ್ಮಾಚಾ ನಿರಾಸ । ತೇ ಶುದ್ಧ ಕರ್ಮ ಸಾವಕಾಶ । ಜೇಥ ಸಮಬುದ್ಧಿ ಸದಾ ಅವಿನಾಶ । ತೋ ''ಪುಣ್ಯದೇಶ'' ಉದ್ಧವಾ ।।೧೬೩।। ಜರೀ ಸುಕ್ಷೇತ್ರೀ ಕೇಲಾ ವಾಸ । ಆಣಿ ಪರಾಚೇ ದೇಖೇ ಗುಣದೋಷ । ತೋ ದೇಶ ಜಾಣಾವಾ ತಾಮಸ । ಅಚುಕ ನಾಶ ಕರ್ತ್ಯಾಸೀ ।।೧೬೪।। ಅನ್ಯ ಕ್ಷೇತ್ರೀ ದೇಖಿಲ್ಯಾ ದೋಷ । ತ್ಯಾಚಾ ಸುಕ್ಷೇತ್ರೀ ಹೋಯ ನಾಶ । ಸುಕ್ಷೇತ್ರೀ ದೇಖಿಲ್ಯಾ ದೋಷ । ತೋ ನ ಸೋಡೀ ಜೀವಾಸ ಕಲ್ಪಾಂತೀ ।।೧೬೫।। ಜೇಥ ಉಪಜೇ ಸಾಮ್ಯಶೀಳ । ತೋ ದೇಶ ಜಾಣಾವಾ ನಿರ್ಮಳ । ಚಿತ್ತ ಸುಪ್ರಸನ್ನ ಜೇ ವೇಳ । ತೋ ''ಪುಣ್ಯಕಾಳ'' ಸಾಧಕಾ ।।೧೬೬।। ಸ್ವಭಾವೇ ಶುದ್ಧ ಬ್ರಾಹ್ಮಮುಹೂರ್ತ । ತೇಥ ಹೀ ಕ್ಷೋಭಲ್ಯಾ ಚಿತ್ತ । ತೋಹೀ ಕಾಳ ಅಪುನೀತ । ಜಾಣ ನಿಶ್ಚಿತ ವೇದಾರ್ಥ ।।೧೬೭।। ಯೇಥ ಜೋ ಕಾ ಕರ್ಮಕರ್ತಾ । ತ್ಯಾಚೀ ಗೇಲಿಯಾ ಕರ್ಮಅಹಂತಾ । ಪುಢೇ ಕರ್ಮ ಚಾಲೇ ಸ್ವಭಾವತಾ । ಹೇ ''ಪವಿತ್ರತಾ ಕರ್ತ್ಯಾಚೀ'' ।।೧೬೮।। ಯೇಥ ಜೋ ಮ್ಹಣೇ ''ಅಹಂ ಕರ್ತಾ'' । ತೋ ಪಾವೇ ಅತಿಬದ್ಧತಾ । ಹೇ ಕರ್ತ್ಯಾಚೀ ಅಪವಿತ್ರತಾ । ದೇಹಅಹಂತಾ ಅಭಿಮಾನೇ ।।೧೬೯।। ಧರ್ಮಕರ್ಮಾಚೇ ಸಾಹೀ ಪ್ರಕಾರ । ಹೇ ವೇದಾರ್ಥಾಚೇ ತತ್ತ್ವಸಾರ । ಯೇಹೀ ಧರ್ಮೀ ಮುಕ್ತ ಹೋಯ ನರ । ಅಧರ್ಮೀ ಅಪವಿತ್ರ ಅತಿಬದ್ಧ ।।೧೭೦।। ಗುಣದೋಷಾಂಚೇ ಲಕ್ಷಣ । ಸಾಂಗತಾ ಅತಿಗಹನ । ಯೇಥ ಗುಂತಲೇ ಸಜ್ಞಾನ । ಅತಿವಿಚಕ್ಷಣ ಪಂಡಿತ ।।೧೭೧।।

ಸ್ವತಃ ಕಷ್ಟಪಟ್ಟು ಪಡೆದ ಹಣವು ಧರ್ಮದ ಅನುಸಾರವಾಗಿ ಶುದ್ಧವಾಗಿರುವುದು. ಆದರೆ ಧನಲೋಭದಲ್ಲಿ ಆತನ ಜೀವವು ಸಿಲುಕಿಕೊಂಡಿದ್ದರೆ, ಆತನ ಸರ್ವ ದ್ರವ್ಯವು ಅಶುದ್ಧವಾಗುವುದು ।।೧೫೮।। ಹೀಗಿರುವುದಕ್ಕೆ ದ್ರವ್ಯದ ಶುದ್ಧತೆ ಎಂದು ಹೇಳುವರು. ಈಗ ಮಂತ್ರದ ಶುದ್ಧತೆಯನ್ನು ಹೇಳುವೆನು, ಅದನ್ನು ಈಗ ಕೇಳು. ಯಾವ ಮಂತ್ರದಿಂದ ಮಂತ್ರದ ಅರ್ಥವು ಸಾಧ್ಯವಾಗುವುದೋ, ಅದೇ ಶುದ್ಧ ಮಂತ್ರವಾಗಿರುವುದು ।।೧೫೯।। ಯಾವ ಮಂತ್ರದ ಗ್ರಹಣದಿಂದ ಅಂಗದಲ್ಲಿ ಅಭಿಮಾನವು ಬೆಳೆಯುವುದೋ ಅಥವಾಯಾವ ಮಂತ್ರದ ಸಹಾಯದಿಂದ ಜಾರಣ - ಮರಣ - ಉಚ್ಚಾಟಣ ಮಾಡಲ್ಪಡುವುದೋ, ಆ ಮಂತ್ರಗಳು ಅಪವಿತ್ರ ಎಂದು ತಿಳಿಯಬೇಕು ।।೧೬೦।। ಈ ಪ್ರಕಾರವಾಗಿ ಮಂತ್ರಶುದ್ಧಿಯ ಲಕ್ಷಣವಾಗಿರುವುದು. ಈಗ ಕರ್ಮದ ಲಕ್ಷಣವನ್ನು ಕೇಳು. ಯಾವ ಕರ್ಮಗಳಿಂದ ಕರ್ಮಬಂಧನವು ಮುರಿದು ಬೀಳುವುದೋ, ಆ ಕರ್ಮದ ಆಚರಣೆಯು ಅತ್ಯಂತ ಶುದ್ಧವಾಗಿರುವುದು ।।೧೬೧।। ಆದರೆ ಸ್ವತಃ ಕರ್ಮಗಳ ಆಚರಣೆಯನ್ನು ಮಾಡುತ್ತಿರುವಾಗ್ಗೆ ದೇಹಾಭಿಮಾನವು ನಿರ್ಮಾಣವಾಗುತ್ತಿರುವುದು. ಆದ್ದರಿಂದ ಕರ್ತನಿಗೆ ದೃಢವಾದ ಬಂಧನವಾಗುವುದು. ಮತ್ತು ಆ ಕರ್ಮಗಳು ಅಪವಿತ್ರವಾಗುವುವು ।।೧೬೨।। ಯಾವ ಕರ್ಮಗಳಿಂದ ಸರ್ವ ಪ್ರಕಾರದ ಬಂಧನಗಳ ನಾಶವಾಗುವುದೋ ಅವೇ ಶುದ್ಧ ಕರ್ಮಗಳಾಗಿರುವುವು ಹೇ ಉದ್ಧವಾ, ಎಲ್ಲಿ ಯಾವಾಗಲೂ ಸಮಬುದ್ಧಿಯು ಇರುವುದೋ, ಅದು ಪುಣ್ಯ ದೇಶವೆಂದು ತಿಳಿಯಬೇಕು ।।೧೬೩।। ಉತ್ತಮ ಕ್ಷೇತ್ರದಲ್ಲಿದ್ದುಕೊಂಡು, ಅಲ್ಲಿ ಬೇರೆಯವರ ಗುಣದೋಷಗಳನ್ನು ನೋಡಹತ್ತಿದರೆ ಆ ದೇಶವು ತಾಮಸವೆಂದು ತಿಳಿಯಬೇಕು. ಆ ಸ್ಥಳದಲ್ಲಿ ಕರ್ಮಗಳನ್ನು ಮಾಡಿದರೆ ಕರ್ತನ ನಾಶವು ನಿಶ್ಚಿತವಾಗಿ ಆಗುವುದು ।।೧೬೪।। ಯಾವಾಗಲೂ ಬೇರೆ ದೇಶದ ಗುಣದೋಷಗಳನ್ನು ನೋಡುತ್ತ ಕುಳಿತರೆ ತಾನಿದ್ದ ಆ ಪುಣ್ಯ ಕ್ಷೇತ್ರದಲ್ಲಿಯೇ ತನ್ನ ನಾಶವಾಗುವುದು. ಉತ್ತಮ ಕ್ಷೇತ್ರದಲ್ಲಿ ದೋಷದೃಷ್ಟಿಯನ್ನಿಡಲು ಆ ಜೀವನಿಗೆ ಅದರ ದೋಷವು ಕಲ್ಪಾಂತಕ್ಕೂ ಬಿಡಲಾರದು ।।೧೬೫।। ಯಾವ ಸ್ಥಾನದಲ್ಲಿ ಮನದಲ್ಲಿ ಐಕ್ಯ ಭಾವವು ನಿರ್ಮಾಣವಾಗುವುದೋ ಆ ದೇಶವು ಪವಿತ್ರವೆಂದು ತಿಳಿಯಬೇಕು. ಯಾವ ಸಮಯದಲ್ಲಿ ಚಿತ್ತಕ್ಕೆ ಪ್ರಸನ್ನವಾಗುವುದೋ ಆಗಲೇ ಸಾಧಕನು ಪುಣ್ಯಕಾಲವೆಂದು ತಿಳಿಯಬೇಕು ।।೧೬೬।। ಬ್ರಾಹ್ಮೀ ಮುಹೂರ್ತಕ್ಕೆ ಸ್ವಾಭಾವಿಕವಾಗಿಯೇ ಶುದ್ಧವೆಂದು ಪರಿಗಣಿಸಲಾಗಿರುವುದು. ಆದರೆ ಆ ವೇಳೆಯಲ್ಲಿ ಚಿತ್ತಕ್ಷೋಭೆಯಾದರೆ ಅದು ಅಪವಿತ್ರ ಕಾಲವೆಂದು ವೇದದ ಮತವಾಗಿರುವುದು ।।೧೬೭।। ಕರ್ಮಗಳನ್ನು ಆಚರಿಸುತ್ತಿರಲು ಕರ್ತನು ನಾನು ಕರ್ಮಕರ್ತನು ಎಂಬ ಅಭಿಮಾನವು ಇಲ್ಲವಾಗಿ ಸ್ವಾಭಾವಿಕವಾಗಿಯೇ ಕರ್ಮಗಳು ನಡೆಯುತ್ತಿದ್ದರೆ, ಅದು ಆತನ ಪವಿತ್ರತೆ ಎಂದು ತಿಳಿಯಬೇಕು ।।೧೬೮।। ಆದರೆ ನಾನು ಕರ್ಮಕರ್ತನು ಎಂದು ಹೇಳುವವನು ಅತಿಶಯವಾಗಿ ಬದ್ಧನಾಗುವನು. ದೇಹದ ಅಭಿಮಾನವನ್ನು ಇಡುವ ಕರ್ತನು ನಿಜವಾಗಿಯೂ ಅಪವಿತ್ರನಾಗಿರುವನು ।।೧೬೯।। ಈ ಪ್ರಕಾರವಾಗಿ ಧರ್ಮ-ಅಧರ್ಮದ ಆರು ಪ್ರಕಾರಗಳಿರುವುವು. ಇದೇ ವೇದಾರ್ಥ ತತ್ವ ಸಾರವಾಗಿರುವುದು. ಈ ಧರ್ಮದಿಂದ ಮಾನವನು ಮುಕ್ತನಾಗುವನು ಅಧರ್ಮದಿಂದ ಬಂಧನದಲ್ಲಿ ಬೀಳುವನು ।।೧೭೦।। ಹೀಗೆಯೇ ಗುಣದೋಷಗಳ ಲಕ್ಷಣಗಳನ್ನು ಹೇಳುತ್ತ ನಡೆದರೆ ಅದು ಬಹಳ ಗಹನವಾಗಿರುವುದು. ಇದರಲ್ಲಿ ಮಹಾ ಮಹಾ ಸಜ್ಞಾನ ಪಂಡಿತರೂ ಕೂಡ ಗೊಂದಲದಲ್ಲಿ ಬೀಳುತ್ತಿರುವರು।।೧೭೧।।

ಕ್ವಚಿದ್ಗುಣೋಽಪಿ ದೋಷಃ ಸ್ಯಾದ್ದೋಷೋಽಪಿವಿಧಿನಾಗುಣಃ । ಗುಣದೋಷಾರ್ಥನಿಯಮಸ್ತದ್ಭಿದಾಮೇವ ಬಾಧತೇ ।೧೬॥

ಅರ್ಥ:- ಒಂದೊಂದು ಸಾರೆ ಶಾಸ್ತ್ರವಿಧಿಯಿಂದ ಗುಣವು ದೋಷವಾಗುವುದು ಮತ್ತು ದೋಷವು ಗುಣವಾಗುವುದು. ಒಂದೇ ವಸ್ತುವಿನ ವಿಷಯದಲ್ಲಿ ದೋಷ-ಗುಣ ಆಗುವುದಕ್ಕಾಗಿ, ದೋಷಗಳ ವಿಧಾನ, ಗುಣದೋಷಗಳ ಖಂಡನೆ ಮಾಡುತ್ತೇವೆ. ಇದರಿಂದ ಗುಣದೋಷಗಳ ಈ ಭಾಗವು ಕಲ್ಪಿತವೆಂದು ನಿಶ್ಚಯವಾಗುವುದು.

ಜ್ಯಾಚಾ ಮಾನಿಜೇ ಉತ್ತಮ ಗುಣ । ತೋಚಿ ದೋಷ ಹೋಯ ಪರತೋನ । ಏವಂ ಕರ್ಮಚಿ ಕರ್ಮಾಸೀ ಜಾಣ । ದೋಷ ದಾರುಣ ಉಪಜವೀ ।೧೭೨॥ ಕರ್ಮೀ ಮುಖ್ಯತ್ವೇ ಗಾ ಆಚಮನ । ಹೇ ಕರ್ಮಶುದ್ಧೀಚೇ ನಿಜ ಕಾರಣ । ತೇಚಿ ದಕ್ಷಿಣಾಭಿಮುಖೇ ಕೇಲ್ಯಾ ಜಾಣ । ದೋಷ ದಾರುಣ ಉಪಜವೀ ।೧೭೩॥ ಕಾನೀಚೀ ಜೇಣೇ ಜಾಯ ತಿಡಿಕ । ತೇಚಿ ಮುಖೀ ಘಾಲಿತಾ ದೇಖ । ಹೋಯ ಅತ್ಯಂತ ಬಾಧಕ । ಪ್ರಾಣಾಂತಿಕ ಅತಿಬಾಧಾ ।೧೭೪॥ ಆಚಮನೀ ಮಾಷಮಾತ್ರ ಜೀವನ । ಘೇತಲ್ಯಾ ಹೋಈಜೇ ಪಾವನ । ತೇಚಿ ಅಧಿಕ ಘೇತಾ ಜಾಣ । ಸುರಾಪಾನಸಮ ದೋಷ ।೧೭೫॥ ಫಣಸ ಖಾತಾ ಲಾಗೇ ಗೋಡ । ತೇ ಜೈ ಅಧಿಕ ಖಾಯ ತೋಂಡ । ತೈ ಶೂಳ ಉಠೇ ಪ್ರಚಂಡ । ಫುಟೇ ಬ್ರಹ್ಮಾಂಡ ಅತಿವ್ಯಥಾ ।೧೭೬॥ ಸೂರ್ಯಪೂಜನೀ ಪುಣ್ಯ ಘಡೇ । ತೇಥ ಜೈ ಬೇಲಪತ್ರ ಚಢೇ । ತೈ ಪುಣ್ಯ ರಾಹೇ ಮಾಗಿಲೀಕಡೇ । ದೋಷ ರೋಕಡೇ ಪೂಜಕಾ ।೧೭೭॥ ಐಸಾ ಕರ್ಮೀ ಕರ್ಮವಿನ್ಯಾಸ । ಗುಣ ತೋಚಿ ಕರೀ ದೋಷ । ಕೋಠೇ ದೋಷಾಂಚಾಹೀ ವಿಲಾಸ । ಪುಣ್ಯ ಬಹುವಸ ಉಪಜವೀ ।೧೭೮॥ ಚೋರಾಕುಲಿತ ಮಾರ್ಗೀ ಜಾಣ । ಬ್ರಾಹ್ಮಣ ಕರಿತಾ ಪ್ರಾತಃಸ್ನಾನ । ತೋ ನೇತಾ ಕರ್ಮ ತ್ಯಾಗೂನ । ದೋಷಚಿ ಪರೀ ಗುಣ ಗಂಭೀರ ಹೋಯ ।೧೭೯॥ ಸರ್ಪಗರಳೇಚೇ ಜೀವನ । ಬ್ರಾಹ್ಮಣೇ ಕರಿತಾ ಪ್ರಾಶನ । ತೇ ಪಾತ್ರ ಘೇತಾ ಹಿರೋನ । ದೋಷಚಿ ಪರೀ ಗುಣ ಗಂಭೀರ ಹೋಯ ।೧೮೦॥ ಗೃಹಸ್ಥಾಸೀ ಅಗ್ನಿಹೋತ್ರ ಗುಣ । ತೋಚಿ ಸನ್ಯಾಶಾಸೀ ಅವಗುಣ । ಬ್ರಾಹ್ಮಣೀ ವಿಹಿತ ವೇದಮಂತ್ರಪಠಣ । ಶೂದ್ರಾಸೀ ಜಾಣ ತೋ ದೋಷ ।೧೮೧॥ ವಿಷಯ ನಿವೃತ್ತೀಲಾಗೀ ಸುಗಮ । ಗುಣದೋಷಾಂಚಾ ಕೇಲಾ ನೇಮ । ಹೇ ನೇಣೋನಿ ವೇದಾಚೇ ವರ್ಮ । ವಿಷಯಭ್ರಮ ಭ್ರಾಂತಾಸೀ ।೧೮೨॥ ಜಂವ ಭ್ರಾಂತಿ ತಂವ ಕರ್ಮಪ್ರವೃತ್ತೀ । ತೇಥ ಗುಣದೋಷಾಂಚೀ ಥೋರ ಖ್ಯಾತೀ । ಜೇವೀ ಕಾ ಖದ್ಯೋತ ಲಖಲಖಿತೀ । ಅಂಧಾರೇ ರಾತೀ ಸತೇಜ ।೧೮೩॥ ತೇವೀ ಗುಣದೋಷಾಮಾಜೀ ಜಾಣ । ಅವಶ್ಯ ಅಂಗೀ ಆದಳೇ ಪತನ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ।೧೮೪॥

ಒಂದು ಗುಣವು ಉತ್ತಮವೆಂದು ತಿಳಿದುಕೊಂಡರೆ ಅದೇ ಗುಣವು ಪುನಃ ತಿರುಗಿ ದೋಷವಾಗುವುದು. ಅದರಂತೆ ಕರ್ಮವೇ ಕರ್ಮದಲ್ಲಿ ಅತಿಶಯವಾಗಿ ದೋಷವನ್ನು ನಿರ್ಮಾಣ ಮಾಡುತ್ತಿರುವುದು ।೧೭೨॥ ಕರ್ಮದಲ್ಲಿ ಆಚಮನವನ್ನು ಮಾಡುವುದು ಬಹು ಮುಖ್ಯವಾಗಿರುವುದು. ಕಾರಣ ಇದು ಕರ್ಮಶುದ್ಧಿಯ ಮೂಲವಾಗಿರುವುದು. ಆದರೆ ಅದೇ ಆಚಮನವನ್ನು ದಕ್ಷಿಣಕ್ಕೆ ಮುಖಮಾಡಿ ಮಾಡಿದರೆ ದೊಡ್ಡ ದೋಷವು ನಿರ್ಮಾಣವಾಗುವುದು ।೧೭೩॥ ಯಾವ ಔಷಧದಿಂದ ಕಿವಿಯ ಬೇನೆಯು ಗುಣವಾಗುವುದೋ, ಅದೇ ಔಷಧವನ್ನು ಮುಖದಲ್ಲಿ ಹಾಕಿದರೆ ಅತಿಶಯವಾಗಿ ಅಸಹ್ಯ ವೇದನೆಯಾಗುವುದು ಮತ್ತು ಪ್ರಣಾಂತಿಕ ಅತಿ ಬಾಧೆಯುಂಟಾಗುವುದು ।೧೭೪॥ ಆಚಮನವನ್ನು ಮಾಡುವಾಗ್ಗೆ ಉದ್ದಿನ ಬೇಳೆ ಮುಳುಗುವಷ್ಟು ಮಾತ್ರ ಜಲವನ್ನು ಸ್ವೀಕರಿಸಿದರೆ ಆ ಪುರುಷನು ಪವಿತ್ರನಾಗುವನು. ಆದರೆ ಆಗ ಆತನು ಅಧಿಕ ಜಲವನ್ನು ಸೇವಿಸಿದರೆ ಮದ್ಯಪಾನದ ದೋಷ ಉಂಟಾಗುವುದು ।೧೭೫॥ ಹಲಸಿನ ಹಣ್ಣು ತಿನ್ನಲು ರುಚಿಯಾಗಿರುವುದು. ಆದರೆ ಅದನ್ನೇ ಹೆಚ್ಚಾಗಿ ತಿಂದರೆ ಅತಿಶಯವಾಗಿ ಹೊಟ್ಟೆಯಲ್ಲಿ ನೋವು ನಿರ್ಮಾಣವಾಗುವುದು. ಬ್ರಹ್ಮಾಂಡವೇ ಒಡೆದಂತೆ ಯಾತನೆಯಾಗುವುದು ।೧೭೬॥ ಸೂರ್ಯನನ್ನು ನಿತ್ಯ ನೇಮದಿಂದ ಪೂಜಿಸಲು ಪುಣ್ಯವು ಬೆಳೆಯುವುದು. ಆದರೆ ಆ ಪೂಜೆಯಲ್ಲಿ ಬಿಲ್ವದಳಗಳನ್ನು ಅರ್ಪಿಸಿದರೆ ಅದರಿಂದ ಪುಣ್ಯವು ಬಾರದೇ ಪಾಪವು ನಿಶ್ಚಯವಾಗಿ ಹತ್ತುವುದು ।೧೭೭॥ ಹೀಗೆ ಕರ್ಮದಲ್ಲಿಯೇ ಕರ್ಮದ ವಿಧಿನಿಷೇಧಗಳಿರುವುವು. ಆಗಾಗ ಗುಣವಾಗಿರುವುದೇ ದೋಷವಾಗುತ್ತಿರುವುದು. ಕೆಲವೊಮ್ಮೆ ದೋಷಗಳಿಂದಲೇ ಪುಣ್ಯವು ಲಭಿಸುವುದು ।೧೭೮॥ ಕಳ್ಳರಿಂದ ತುಂಬಿದ ಮಾರ್ಗದಲ್ಲಿ ಬ್ರಾಹ್ಮಣನಿಗೆ ಪ್ರಾತಃಸ್ನಾನವನ್ನು ಬಿಡಿಸಿ ಒಯ್ಯಲು ಆತನ ಕರ್ಮಕ್ಕೆ ಇದು ಅಡ್ಡಿಯಾದರೂ ಅದರಿಂದ ದೋಷವಾಗದೇ ಮಹಾಪುಣ್ಯವೇ ದೊರಕುವುದು ।೧೭೯॥ ಸರ್ಪದ ವಿಷ ಬಿದ್ದ ನೀರನ್ನು ಬ್ರಾಹ್ಮಣನು ಸೇವಿಸುತ್ತಿದ್ದಾಗ, ಕೂಡಲೇ ಆತನ ಪಾತ್ರೆಯನ್ನು ಕಸಿದುಕೊಂಡರೆ ಅದು ದೋಷವಾಗಿದ್ದರೂ ಕೂಡ ಮಹಾಪುಣ್ಯವೇ ದೊರಕುವುದು ।೧೮೦॥ ಅಗ್ನಿಹೋತ್ರ ಮಾಡುವುದು ಗೃಹಸ್ಥನ ಗುಣವಾಗಿರುವುದು. ಆದರೆ ಅದನ್ನೇ ಸನ್ಯಾಸಿಯು ಮಾಡಿದರೆ ಆತನಿಗೆ ದೋಷವು ತಟ್ಟುವುದು. ವೇದಮಂತ್ರ ಪಠಣೆಯು ಬ್ರಾಹ್ಮಣನ ಗುಣವಾಗಿರುವುದು. ಆದರೆ ಅದು ಶೂದ್ರನಿಗೆ ದೋಷಕಾರಕವಾಗಿರುವುದು ।೧೮೧॥ ವಿಷಯಗಳಿಂದ ನಿವೃತ್ತಿಯಾಗಲು ವೇದವು ಗುಣದೋಷಗಳ ನೇಮವನ್ನು ಹಾಕಿಕೊಟ್ಟಿರುವುದು. ಆದರೆ ಈ ವೇದದ ಮರ್ಮವು ತಿಳಿಯಲಾರದ್ದಕ್ಕೆ ಭ್ರಾಂತ ಜನರಿಗೆ ವಿಷಯಗಳ ಭ್ರಮೆಯುಂಟಾಗುವುದು ।೧೮೨॥ ಭ್ರಾಂತಿಯು ಇರುವವರೆಗೂ ಕರ್ಮ ಪ್ರವೃತ್ತಿ ಇರುವುದು, ಕತ್ತಲು ಕವಿದ ರಾತ್ರಿಯಲ್ಲಿ ಮಿಂಚುಹುಳಗಳ ಪ್ರಕಾಶದಂತೆ ಅಜ್ಞಾನ ಸ್ಥಿತಿಯಲ್ಲಿ ಗುಣದೋಷಗಳ ಖ್ಯಾತಿಯು ದೊಡ್ಡ ಪ್ರಮಾಣದಲ್ಲಿರುವುದು ।೧೮೩॥ ಹೀಗೆ ಗುಣದೋಷಗಳಲ್ಲಿ ಪತನವು ನಿಶ್ಚಯ ಪೂರ್ವಕವಾಗಿ ತಲೆಯ ಮೇಲೆ ಬಂದು ಅಪ್ಪಳಿಸುವುದು. ಈಗ ಇದೇ ಅರ್ಥದ ನಿರೂಪಣೆಯನ್ನು ಸ್ವತಃ ಶ್ರೀಕೃಷ್ಣನು ಹೇಳುವನು ।೧೮೪॥

ಸಮಾನಕರ್ಮಾಚರಣಂ ಪತಿತಾನಾಂ ನ ಪಾತಕಮ್ । ಔತ್ಪತ್ತಿಕೋ ಗುಣಃ ಸಂಗೋ ನ ಶಯಾನಃ ಪತತ್ಯಧಃ ।।೧೭।।

ಅರ್ಥ:- ಪತಿತರಾಗಿರುವವರು, ಪಾಪದ ಕೆಲಸ ಮಾಡಿದರೂ ಅವರಿಗೆ ಪಾಪವು ತಟ್ಟುವುದಿಲ್ಲ. ಆದರೆ ಅದೇ ಶ್ರೇಷ್ಠ ಪುರುಷನಿಗೆ ತ್ಯಾಜ್ಯವಾಗಿರುವುದು. ಗೃಹಸ್ಥನಿಗೆ ತನ್ನ ಪತ್ನಿಯ ಸಂಗದಿಂದ ಪಾಪವಿಲ್ಲ. ಆದರೆ ಸನ್ಯಾಸಿಗೆ ಅದು ಘೋರಪಾಪವಾಗುವುದು. ನೆಲದ ಮೇಲೆ ಮಲಗಿದವನು ಕೆಳಗೆ ಬೀಳಬಹುದೇ? ಅದರಂತೆ ಪತಿತನಿಗೆ ಇನ್ನಾವ ಪಾಪವು ಬರಬೇಕು ?

ಸ್ವಕರ್ಮೇ ಪತಿತ ಜಾಹಲೇ ಜಾಣ । ಡೋಂಬ ಭಿಲ್ಲ ಕೈವರ್ತಕ ಜನ । ತ್ಯಾಂಸೀ ಮದ್ಯಪಾನಾದಿ ದೋಷೀ ಜಾಣ । ನಾಹೀ ಪತನ ಪತಿತಾಂಸೀ ।।೧೮೫।। ಜೇ ನೀಳೀಮಾಜೀ ಕಾಳೇ ಕೇಲೇ । ತ್ಯಾಸೀ ಕಾಯ ಬಾಧಾವೇ ಕಾಜಳೇ । ಕಾ ಅಂಧಾರಾಸೀ ಮಸೀ ಮಾಖಿಲೇ । ತೇಣೇ ಕಾಯ ಮಳಲೇ ತಯಾಚೇ ।।೧೮೬।। ಜೋ ಸ್ವಭಾವೇ ಚಾಂಡಾಳ । ತ್ಯಾಸೀ ಕೋಣಾಚಾ ಬಾಧೀ ವಿಟಾಳ । ಹೋ ಕಾ ಕಾಳೇ ಕರವೇ ಕಾಜಳ । ಐಸೇ ನಾಹೀ ಬಳ ಕೀಟಾಸೀ ।।೧೮೭।। ನಿರ್ಜೀವಾ ದೀಧಲೇ ವಿಖ । ತೇಣೇ ಕೋಣಾಸೀ ದ್ಯಾವೇ ದುಃಖ । ತೇವೀ ಪತಿತಾಸೀ ಪಾತಕ । ನವ್ಹೇ ಬಾಧಕ ಸರ್ವಥಾ ।।೧೮೮।। ಜೋ ಕೇವಳ ಖಾಲೇ ನಿಜೇಲಾ । ತ್ಯಾಸೀ ಪಡಣ್ಯಾಚಾ ಭೇವೋ ಗೇಲಾ । ತೇವೀ ದೇಹಾಭಿಮಾನಾ ಜೋ ಆಲಾ । ತೋ ನೀಚಾಚಾ ಝಾಲಾ ಅತಿನೀಚ ।।೧೮೯।। ರಜತಮಾದಿ ಗುಣಸಂಗೀ । ಜೋ ಲೋಲಂಗತ ವಿಷಯಾಲಾಗೀ । ತ್ಯಾಸೀ ತಿಳಗುಳಾದಿ ಕಾಮಭೋಗೀ । ನವ್ಹೇ ನವೀ ಆಂಗೀ ದೇಹಬುದ್ಧೀ ।।೧೯೦।। ಜೋ ಕನಕಬೀಜೇ ಭುಲಲಾ । ತೋ ಗಾಯೇ ನಾಚೇ ಹರಿಖಲಾ । ಪರೀ ಸಂಚಿತಾರ್ಥ ಚೋರೀ ನೇಲಾ । ಹಾ ನೇಣೇಚಿ ಆಪುಲಾ ನಿಜಸ್ವಾರ್ಥ ।।೧೯೧।। ತೇವೀ ದೇಹಾಭಿಮಾನೇ ಉನ್ಮತ್ತ । ಅತಿಕಾಮೇ ಕಾಮಾಸಕ್ತ । ತೋ ನೇಣೇ ಬುಡಾಲಾ ನಿಜಸ್ವಾರ್ಥ । ಆಪುಲಾ ಅಪಘಾತ ದೇಖೇನಾ ।।೧೯೨।। ಜ್ಯಾಸೀ ಚಢಲಾ ವಿಖಾಚಾ ಬಾಸಟಾ । ತ್ಯಾಸೀ ಪಾಜಾವೀ ಸೂಕರವಿಷ್ಠಾ । ತೇವೀ ಅತಿಕಾಮೀ ಪಾಪಿಷ್ಠಾ । ಮ್ಯಾ ಸ್ವದಾರಾನಿಷ್ಠಾ ನೇಮಿಲೀ ।।೧೯೩।। ಜ್ಯಾಸೀ ವಿಖ ಚಢಲೇ ಗಹನ । ತ್ಯಾಸೀ ಸೂಕರವಿಷ್ಠೇಚೇ ಪಾನ । ಹೇ ತೇ ಕಾಳೀಚೇ ವಿಧಾನ । ಸ್ವಯೇ ಸಜ್ಞಾನ ಬೋಲತೀ ।।೧೯೪।। ತೇವೀ ಜೇಥವರೀ ಸ್ತ್ರೀಪುರುಷವ್ಯಕ್ತೀ । ತೇಥವರೀ ಸ್ವೇಚ್ಛಾ-ಕಾಮಾಸಕ್ತೀ । ತ್ಯಾಚೇ ಕರಾವಯಾ ನಿವೃತ್ತಿ । ಸ್ವದಾರಾಸ್ಥಿತಿ । ನೇಮಿಲೀ ವೇದೇ ।।೧೯೫।। ವೇದೇ ನಿರೋಪ ದಿಧಲಾ ಆಪಣ । ತೈ ದಿವಾರಾತೀ ದಾರಾಗಮನ । ಹೇಹೀ ವೇದೇ ನೇಮಿಲೇ ಜಾಣ। ಸ್ವದಾರಾಗಮನ ಋತುಕಾಳೀ ।।೧೯೬।। ತೇಥ ಜನ್ಮಲಿಯಾ ಪುತ್ರಾಸೀ । ''ಆತ್ಮಾ ವೈ ಪುತ್ರನಾಮಾsಸೀ''। ಯೇಣೇ ವೇದವಚನೇ ಪುರುಷಾಸೀ । ಸ್ತ್ರೀಕಾಮಾಸೀ ನಿವರ್ತವೀ ।।೧೯೭।।

ಮಾದಿಗರು, ಭಿಲ್ಲರು, ಮೀನುಗಾರರು ಇವರು ತಮ್ಮ ಕರ್ಮಗಳಿಂದಲೇ ಪತಿತರಾಗಿರುವರು. ಈ ಪತಿತರಿಗೆ ಮದ್ಯಪಾನದ ಪಾಪವು ತಟ್ಟುವುದಿಲ್ಲ. ಈ ಪತಿತರಿಗೆ ಪುನಃ ಪತನವಿರುವುದಿಲ್ಲ ।।೧೮೫।। ಬಿಳಿ ವಸ್ತ್ರವನ್ನು ಕಡುನೀಲಿ ಬಣ್ಣದಲ್ಲಿ ಮುಳುಗಿಸಿ ಕಪ್ಪು ಮಾಡಿದಾಗ ಕಾಡಿಗೆಯು ಅದಕ್ಕೆ ಕಪ್ಪಾಗಿ ಮಾಡಬಹುದೆ? ಅಥವಾ ಕತ್ತಲೆಗೆ ಕಾಡಿಗೆಯಿಂದ ಲೇಪಿಸಿದರೆ ಅದೇನಾದರೂ ಹೆಚ್ಚಾಗಿ ಕಪ್ಪಾಗಬಹುದೆ? ।।೧೮೬।। ಅದರಂತೆ ಜನ್ಮತಃ ತಾಮಸಿಯಾದವನಿಗೆ ಯಾವ ಮೈಲಿಗೆ ಆತನಿಗೆ ಹತ್ತಬೇಕು? ಕಾಡಿಗೆಗೆ ಹೆಚ್ಚಾಗಿ ಕಪ್ಪು ಮಾಡಲು ಯಾವ ಕೀಟಕ್ಕೆ ಸಾಮರ್ಥ್ಯವಿರುವುದು? ।।೧೮೭।। ಮೃತನಾಗಿರುವ ಮನುಷ್ಯನಿಗೆ ವಿಷವನ್ನುಕುಡಿಸಿದರೆ ಆತನಿಗೆ ಯಾವ ದುಃಖವಾಗಲು ಸಾಧ್ಯ? ಅದರಂತೆ ಪಾಪೀ ಮನುಷ್ಯನಿಗೆ ಪಾಪವು ಬಾಧಿಸುವುದಿಲ್ಲ ।।೧೮೮।। ಯಾವ ಮನುಷ್ಯನು ನೆಲದ ಮೇಲೆ ಮಲಗಿಕೊಂಡಿರುವನೋ, ಆತನಿಗೆ ಕೆಳಗೆ ಬೀಳುವ ಭಯವೇ ಇರುವುದಿಲ್ಲ. ಅದರಂತೆ ಯಾವನಿಗೆ ದೇಹದ ಅಭಿಮಾನವು ಬೆಳೆಯುತ್ತಿರುವುದೋ, ಆತನು ನೀಚರಲ್ಲಿ ನೀಚನಾಗಿರುವನು ।।೧೮೯।। ರಜ, ತಮಾದಿ, ಗುಣಗಳಿಂದ ಯಾವನು ವಿಷಯಾಸಕ್ತನಾಗುವನೋ, ಆತನಿಗೆ ಎಳ್ಳು,ಬೆಲ್ಲದಂತಹ ಸುಖೋಪಭೋಗದಿಂದ ಹೊಸದಾಗಿ ದೇಹಬುದ್ಧಿಯು ಬೆಳೆಯುವುದಿಲ್ಲ ।।೧೯೦।। ಒಬ್ಬ ಮನುಷ್ಯನು ಧತ್ತೂರೀ ಬೀಜಗಳನ್ನು ತಿಂದು ಅದರ ನಿಶೆಯಲ್ಲಿ ಹಾಡುವನು, ಕುಣಿಯುವನು, ಕೇಕೇ ಹೊಡೆಯುತ್ತ ತಮಾಷೆ ಮಾಡುವನು ಆದರೆ, ಅಲ್ಲಿ ತಾನು ಕೂಡಿಸಿಟ್ಟ ಹಣವನ್ನು ಕದ್ದುಕೊಂಡರೂ ಆತನಿಗೆ ಅದರ ಎಚ್ಚರವಿರುವುದಿಲ್ಲ ।।೧೯೧।। ಅದರಂತೆ ದೇಹದ ಅಭಿಮಾನದಿಂದ ಯಾವನು ಉನ್ಮತ್ತನಾಗಿರುವನೋ, ವಿಷಯಗಳ ಆಸೆಯಿಂದ ಯಾವನು ಕಾಮಾಸಕ್ತನಾಗಿರುವನೋ ಆತನಿಗೆ ತನ್ನ ಸ್ವಾರ್ಥದ ಹಾನಿಯಾದದ್ದು ತಿಳಿಯುವುದಿಲ್ಲ. ಹಾಗೆಯೇ ತನ್ನ ಘಾತವೂ ಕೂಡ ಆತನು ತಿಳಿಯಲಾರನು ।।೧೯೨।। ವಿಷವು ಏರಿದ ಮನುಷ್ಯನಿಗೆ ಯಾವ ಪ್ರಕಾರವಾಗಿ ಹಂದಿಯ ಮಲವನ್ನುರಾಡಿಮಾಡಿ ಕುಡಿಸುವರೋ, ಅದರಂತೆ ಕಾಮದಿಂದ ಆಸಕ್ತರಾಗಿರುವ ಪಾತಕ ಜನರಿಗಾಗಿ ವೇದವು ಸ್ವದಾರಾ ಮರ್ಯಾದೆಯನ್ನು ಮಾಡಿಟ್ಟಿರುವುದು ।।೧೯೩।। ಕಾರಣ ಯಾವನಿಗೆ ವಿಷವು ಅತಿಯಾಗಿ ಏರಿರುವುದೋ ಆತನಿಗೆ ಹಂದಿ ಮಲದ ಔಷಧವನ್ನು ಆ ಸಮಯಕ್ಕೆ ಮಾತ್ರ ಕೊಡಬೇಕಾಗುವುದು. ಹೀಗೆಂದು ಸಜ್ಞಾನಿಗಳು ಹೇಳುವರು ।।೧೯೪।। ಅದರಂತೆ ಎಲ್ಲಿಯವರೆಗೆ ಸ್ತ್ರೀ ಮತ್ತು ಪುರುಷ ಈ ಎರಡು ಜಾತಿ ಇರುವುವೋ, ಅಲ್ಲಿಯವರೆಗೆ ವಿಷಯಲಂಪಟದ ಸ್ವೇಚ್ಛಾಚಾರವು ನಡೆಯುತ್ತಲೇ ಇರುವುದು. ಅದನ್ನು ನಿವೃತ್ತಗೊಳಿಸುವುದಕ್ಕಾಗಿಯೇ ವೇದವು ಸ್ವಪತ್ನಿನಿಷ್ಠೆಯನ್ನು ಹಚ್ಚಿಕೊಟ್ಟಿರುವುದು ।।೧೯೫।। ಹಾಗೆಯೇ ವೇದವು ಆಜ್ಞೆಯನ್ನು ಕೊಟ್ಟಿರುವುದೆಂದು ತಿಳಿದು ಹಗಲು ರಾತ್ರಿ ತನ್ನ ಸ್ತ್ರೀಯಳಲ್ಲಿ ಗಮನ ಮಾಡಬಹುದೆಂದು ವೇದವೇ ಕೇವಲ ಋತುಕಾಲದಲ್ಲಿ ಮಾತ್ರ ಸ್ತ್ರೀಗಮನ ಮಾಡಬೇಕೆಂದು ಹೇಳಿರುವುದು ।।೧೯೬।। ಅದರಲ್ಲಿ ಪುತ್ರನು ಜನ್ಮಕ್ಕೆ ಬಂದರೆ ''ಆತ್ಮಾ ವೈ ಪುತ್ರನಾಮಾಸಿ'' ಎಂಬ ಈ ವಾಕ್ಯದಿಂದ ವೇದವು ಸ್ತ್ರೀಕಾಮದಿಂದ ದೂರಾಗಬೇಕೆಂದು ಹೇಳಿರುವುದು ।।೧೯೭।।

ನಿಃಶೇಷ ವಿಷ ಉತರಲ್ಯಾವರೀ । ತೋ ಸೂಕರವಿಷ್ಠಾ ಹಾತೀ ನ ಧರೀ । ತೇವೀ ವಿರಕ್ತಿ ಉಪಜಲ್ಯಾ ಅಂತರೀ । ಸ್ವದಾರಾ ದೂರೀ ತ್ಯಾಗಿತೀ ।।೧೯೮।। ಯಾಪರೀ ವಿಷಯ ನಿವೃತ್ತೀ । ಮಾಝ್ಯಾ ವೇದಾಚೀ ವೇದೋಕ್ತೀ । ದಾವೂನಿ ಗುಣದೋಷಾಂಚೀ ಉಕ್ತೀ । ವಿಷಯಾಸಕ್ತೀ ಸಾಂಡಾವೀ ।।೧೯೯।।

ಯತೋ ಯತೋ ನಿವರ್ತೇತ ವಿಮುಚ್ಯೇತ ತತಸ್ತತಃ । ಏಷ ಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ ।।೧೮।।

ಅರ್ಥ:- ಯಾವ ಯಾವ ದೋಷಗಳಿಂದ ಮತ್ತು ಗುಣಗಳಿಂದ ಮನುಷ್ಯನ ಚಿತ್ತವು ವೈರಾಗ್ಯಮಯವಾಗುವುದೋ, ಆ ವಸ್ತುವಿನ ಬಂಧನದಿಂದ ಆತನು ಮುಕ್ತನಾಗುವನು. ಮನುಷ್ಯನಿಗಾಗಿ ಯಾವ ನಿವೃತ್ತಿರೂಪ ಧರ್ಮವು ಪರಮ ಕಲ್ಯಾಣಕರ ಸಾಧನೆಯಾಗಿರುವುದು. ಏಕೆಂದರೆ ಇದು ಶೋಕ, ಮೋಹ ಮತ್ತು ಭಯವನ್ನು ನಾಶಮಾಡುವುದು.

ಮಾಝಿಯಾ ವೇದಾಚೇ ಮನೋಗತ । ವಿಷಯೀ ವ್ಹಾವೇ ನಿವೃತ್ತ । ಯಾಲಾಗೀ ಗುಣದೋಷ ದಾವಿತ । ವಿಷಯ ತ್ಯಾಗಾರ್ಥ ಉಪಾವೋ ।।೨೦೦।। ಏಕಾಏಕೀ ಸಕಳ ವಿಷಯಾಂಸೀ । ತ್ಯಾಗ ನ ಕರವೇ ಪ್ರಾಣ್ಯಾಸೀ । ಯಾಲಾಗೀ ನಿಷೇಧೇ ನಿಂದೂನಿ ತ್ಯಾಂಸೀ । ಶನೈಃಶನೈಃ ವಿಷಯಾಂಸೀ ತ್ಯಾಗವೀ ।।೨೦೧।। ಜೋ ಜೋ ವಿಷಯಾಂಚೀ ನಿವೃತ್ತೀ । ತೋ ತೋ ನಿಜಸುಖಾಚೀ ಪ್ರಾಪ್ತೀ । ಪೂರ್ಣ ಬಾಣಲ್ಯಾ ವಿರಕ್ತೀ । ಸಾಧಕ ಹೋತೀ ಮದ್ರೂಪ ।।೨೦೨।। ಮದ್ರೂಪತೇಚಿಯೇ ಪ್ರಾಪ್ತೀ । ಆಡವೀ ಅಸೇ ವಿಷಯಾಸಕ್ತೀ । ತೇ ಝಾಲಿಯಾ ವಿಷಯನಿವೃತ್ತೀ । ಸಾಧಕ ಹೋತೀ ಮದ್ರೂಪ ।।೨೦೩।। ಜೇಥ ಮಾಝಿಯಾ ಸ್ವರೂಪಾಚೀ ಪ್ರಾಪ್ತೀ । ತೇಥ ನಿಃಶೇಷ ನಿಮೇ ಅಹಂಕೃತೀ । ತೇವ್ಹಾ ಶೋಕಮೋಹಾಚೀ ಹೋಯ ಶಾಂತೀ । ಜಾಯ ನಿಶ್ಚಿತೀ ಅವಿದ್ಯಾ ।।೨೦೪।। ಅವಿದ್ಯಾನಾಶಾ ಸವೇ ಜಾಣ । ನಾಶತೀ ಜನ್ಮ ಭಾವ ದಾರುಣ । ತೇವ್ಹಾ ಮರಣಾಸೀಚ ಯೇ ಮರಣ । ಹಾರಪೇ ಜೀವಪಣ ಜೀವಾಚೇ ।।೨೦೫।। ಅವಿದ್ಯಾ ನಿಮಾಲ್ಯಾ ಜೇವೇಸೀ । ಠಾವೋ ನಾಹೀ ಭವಭಯಾಸೀ । ಜೇವೀ ಸಬಳಬಳೇ ಅಂಧಾರೇಸೀ । ನುರೇಚಿ ನಿಶೀ ದಿನೋದಯೀ ।।೨೦೬।। ಜೇವೀ ಕಾ ಮೃಗಜಳಾಚಾ ಪೂರ । ನ ಸಾಹೇ ದೃಷ್ಟೀಚಾ ನಿರ್ಧಾರ । ತೇವೀ ಭವಭಯೇಸೀ ಸಂಸಾರ । ಝಾಲಾ ಸಾಚಾರ ವಾಉಗಾ ।।೨೦೭।। ಪ್ರಾಣೇ ಪಾವಾವಯಾ ಕಲ್ಯಾಣ । ಹೇ ವೇದೋಕ್ತ ಸ್ವಧರ್ಮಾಚರಣ । ವಿಷಯತ್ಯಾಗಾಲಾಗೀ ಜಾಣ । ಕೇಲೇ ನಿರೂಪಣ ಗುಣದೋಷಾ ।।೨೦೮।। ಜೇ ಸಾಚ ವೇದಾರ್ಥಾತೇ ನೇಣತೀ । ತೇ ವೇದಾ ಪ್ರವೃತ್ತಿಪರ ಮ್ಹಣತೀ । ಪರೀ ವೇದೇ ದ್ಯೋತಿಲೀ ವಿರಕ್ತೀ । ವಿಷಯಾಸಕ್ತಿಚ್ಛೇದಕ ।।೨೦೯।।

ವಿಷದ ಅಮಲವು ಸಂಪೂರ್ಣವಾಗಿ ಇಳಿದ ನಂತರ ಆ ಮನುಷ್ಯನು ಹಂದಿಯ ಮಲಕ್ಕೆ ಕೈಯಿಂದಲೂ ಸಹ ಮುಟ್ಟಲಾರನು. ಅದರಂತೆ ಮನುಷ್ಯನ ಮನದಲ್ಲಿ ವಿರಕ್ತಿಯು ಉತ್ಪನ್ನವಾದರೆ ಆತನು ಸ್ವಪತ್ನಿಯಿಂದಲೂ ನಿವೃತ್ತನಾಗುವನು ।।೧೯೮।। ಈ ಪ್ರಕಾರವಾಗಿ ವಿಷಯಗಳ ನಿವೃತ್ತಿಯನ್ನು ಹೇಳಲಾಗಿದೆ. ಈ ವೇದೋಕ್ತಿಯು ಗುಣದೋಷಗಳನ್ನು ತೋರಿಸಿ ವಿಷಯಗಳ ಮೇಲಿನ ಆಸಕ್ತಿಯನ್ನು ಬಿಡಲು ಹೇಳುತ್ತಿರುವುದು ।।೧೯೯।।

ವಿಷಯಗಳಿಂದ ಮಾನವರು ನಿವೃತ್ತರಾಗಬೇಕೆಂಬುವುದೇ ನನ್ನ ವೇದದ ಉದ್ದೇಶವಾಗಿರುವುದು. ಅದಕ್ಕಾಗಿ ವಿಷಯಗಳನ್ನು ಬಿಡುವುದಕ್ಕಾಗಿ ಗುಣದೋಷಗಳನ್ನು ತೋರಿಸುವ ಉಪಾಯವನ್ನು ಹೂಡಿರುವುದು ।।೨೦೦।। ಮನುಷ್ಯನಿಗೆ ಸರ್ವ ವಿಷಯಗಳನ್ನು ಒಮ್ಮಿಂದೊಮ್ಮೆಲೆ ಬಿಡಲು ಬರುವುದಿಲ್ಲ. ಆದ್ದರಿಂದ ವೇದವು ಅವುಗಳ ದೋಷಗಳನ್ನು ತೋರಿಸುತ್ತ, ಅವುಗಳನ್ನು ನಿಂದಿಸುತ್ತ ಮೆಲ್ಲಮೆಲ್ಲನೇ ವಿಷಯಗಳ ತ್ಯಾಗವನ್ನು ಮಾಡಿಸುತ್ತಿರುವುದು ।।೨೦೧।। ಯಾವ ಪ್ರಮಾಣದಲ್ಲಿ ವಿಷಯಗಳ ನಿವೃತ್ತಿಯಾಗುತ್ತಿರುವುದೋ, ಅದೇ ಪ್ರಮಾಣದಲ್ಲಿ ಆತ್ಮಸುಖವು ಬೆಳೆಯುತ್ತಿರುವುದು. ಪೂರ್ಣವಾಗಿ ವಿರಕ್ತಿಯು ನಿರ್ಮಾಣವಾಯಿತೆಂದರೆ ಸಾಧಕನು ನನ್ನಲ್ಲಿ ಏಕರೂಪನಾಗುವನು ।।೨೦೨।। ವಿಷಯಾಸಕ್ತಿಯು ನನ್ನ ಪ್ರಾಪ್ತಿಗೆ ಅಡ್ಡ ಬರುತ್ತಿರುವುದು. ಅದಕ್ಕಾಗಿ ವಿಷಯನಿವೃತ್ತಿಯಾಯಿತೆಂದರೆ ಸಾಧಕನು ಕೂಡಲೇ ನನ್ನಲ್ಲಿ ಏಕರೂಪನಾಗುವನು ।।೨೦೩।। ನನ್ನ ಸ್ವರೂಪ ಪ್ರಾಪ್ತಿಯು ಒಮ್ಮೆ ಆಯಿತೆಂದರೆ ಅಹಂಕಾರವು ಪೂರ್ಣವಾಗಿ ಇಲ್ಲದಾಗುವುದು. ಶೋಕ ಮೋಹದ ಶಾಂತಿಯಾಗುವುದು ಮತ್ತು ಅವಿದ್ಯೆಯು ನಷ್ಟವಾಗುವುದು ।।೨೦೪।। ಅವಿದ್ಯೆಯು ನಾಶವಾಯಿತೆಂದರೆ ದಾರುಣವಾದ ಜನ್ಮ ಭಾವವು ಇಲ್ಲದಾಗುವುದು. ಮರಣಕ್ಕೆ ಮರಣ ಉಂಟಾಗುವುದು. ಜೀವಕ್ಕೆ ಜೀವತ್ವವು ಹೊರಟು ಹೋಗುವುದು ।।೨೦೫।। ಸೂರ್ಯನ ಉದಯವಾಗುತ್ತಲೇ ಗಾಡಾಂಧಕಾರ ಸಮೇತವಾಗಿ ರಾತ್ರಿಯು ಯಾವ ರೀತಿಯಲ್ಲಿ ಹೊರಟು ಹೋಗುವುದೋ ಅದರಂತೆಯೇ ಅವಿದ್ಯೆಯ ನಾಶವಾಗುತ್ತಲೇ ಸಂಸಾರಭಯದ ಸ್ಥಾನವು ಎಲ್ಲಿಯೂ ಉಳಿಯುವುದಿಲ್ಲ ।।೨೦೬।। ದೃಷ್ಟಿಯ ನಿರ್ಧಾರವಾಯಿತೆಂದರೆ ಮೃಗಜಲದ ಪೂರವು ಇರಲು ಸಾಧ್ಯವಾಗುವುದಿಲ್ಲ. ಅದರಂತೆ ಅವಿದ್ಯೆಯ ನಾಶವಾಗುತ್ತಲೇ ಭವಭಯ ಸಹ ಸಂಸಾರವು ಮಿಥ್ಯೆಯಾಗಿಬಿಡುವುದು ।।೨೦೭।। ವೇದದಲ್ಲಿನ ಸ್ವಧರ್ಮಾಚರಣೆಯು ಇದು ಪ್ರಾಣಿಮಾತ್ರರ ಕಲ್ಯಾಣವಾಗುವುದಕ್ಕಾಗಿಯೇ ಇರುವುದು ಮತ್ತು ವಿಷಯಗಳ ತ್ಯಾಗಕ್ಕಾಗಿಯೇ ಗುಣದೋಷಗಳ ನಿರೂಪಣೆಯನ್ನು ಮಾಡಲಾಗಿರುವುದು ।।೨೦೮।। ಯಾರಿಗೆ ವೇದದ ನಿಜವಾದ ಅರ್ಥವು ತಿಳಿಯುವುದಿಲ್ಲವೋ ಅವರಿಗೆ ಯಾವ ಈ ವೇದವು ಪ್ರವೃತ್ತಿಪರವೆಂದು ತಿಳಿಯಲ್ಪಡುವುದು. ಆದರೆ ವೇದವು ವಿಷಯಗಳ ಮೇಲಿನ ಆಸಕ್ತಿಯನ್ನು ನಷ್ಟ ಮಾಡುವುದಕ್ಕಾಗಿಯೇ ಪ್ರಾಮುಖ್ಯವಾಗಿ ವಿರಕ್ತಿಯನ್ನೇ ಹೇಳಿರುವುದು ।।೨೦೯।।

ವೇದೋಕ್ತ ಸ್ವಧರ್ಮಸ್ಥಿತೀ । ಹೋಯ ವಿಷಯಾಂಚೀ ವಿರಕ್ತೀ । ಪ್ರಾಣೀ ನಿಜಮೋಕ್ಷ ಪಾವತೀ । ಹೇ ವೇದೋಕ್ತೀ ಪೈ ಮಾಝೀ ॥೨೧೦॥ ಹೇ ಸಾಂಡೋನಿಯಾ ವೇದಸ್ಥಿತೀ । ಕೇವಳ ವಿಷಯಾಂಚೀ ಆಸಕ್ತೀ । ಪ್ರಾಣೀ ಅತಿದುಃಖ ಪಾವತೀ । ಐಕ ತುಜಪ್ರತೀ ಸಾಂಗೇನ ॥೨೧೧॥ ಪ್ರವೃತ್ತೀ ತಿತುಕೀ ಅನರ್ಥಹೇತು । ಯೇಚಿ ಅರ್ಥೀಚಾ ವೃತ್ತಾಂತು । ಚೌ ಶ್ಲೋಕೀ ಶ್ರೀ ಭಗವಂತು । ಅಸೇ ಸಾಂಗತು ಉದ್ಧವಾ ॥೨೧೨॥

ವಿಷಯೇಷು ಗುಣಾಧ್ಯಾಸಾತ್ಪುಂಸಃ ಸಂಗಸ್ತತೋ ಭವೇತ್ । ಸಂಗಾತ್ತತ್ರ ಭವೇತ್ಕಾಮಃ ಕಾಮಾದೇವ ಕಲಿರ್ನೃಣಾಮ್ ॥೧೯॥
ಕಲೇರ್ದುರ್ವಿಷಹಃ ಕ್ರೋಧಸ್ತಮಸ್ತಮನುವರ್ತತೇ । ತಮಸಾ ಗ್ರಸ್ಯತೇ ಪುಂಸಶ್ಚೇತನಾ ವ್ಯಾಪಿನೀ ದ್ರುತಮ್ ॥೨೦॥

ಅರ್ಥ:- ಹೇ ಉದ್ಧವಾ, ವಿಷಯಗಳಲ್ಲಿ ಕೆಲವು ಗುಣಗಳ ಆರೋಪ ಮಾಡಿದ್ದಕ್ಕೆ ಅವುಗಳನ್ನು ತನ್ನಲ್ಲಿಟ್ಟುಕೊಳ್ಳುವ ಆಸಕ್ತಿಯು ಅಂಟಿಕೊಳ್ಳುವುದು. ಆಸಕ್ತಿಯು ನಿರ್ಮಾಣವಾದ್ದರಿಂದ ಸ್ಫೂರ್ತಿಗಾಗಿ ಸಂಕಟಗಳು ಒದಗಲು ಪರಂಪರೆಯಾಗಿ ಕಲಹವಾಗುತ್ತಿರುವುದು. ಕಲಹದಿಂದ ಅಸಹ್ಯ ಕ್ರೋಧದ ಉತ್ಪತ್ತಿಯಾಗುವುದು. ಕ್ರೋಧದ ಸಮಯದಲ್ಲಿ ಹಿತ-ಅಹಿತದ ವಿಚಾರವು ಉಳಿಯುವುದಿಲ್ಲ, ಅಜ್ಞಾನವು ಹರಡುವುದು. ಅಜ್ಞಾನದಿಂದ ಪುರುಷನ ಕಾರ್ಯ ಮತ್ತು ಅಕಾರ್ಯ ವಿಷಯದ ಸ್ಫೂರ್ತಿಯು ಕೂಡಲೇ ಗ್ರಾಸವಾಗುವುದು.

ವಿಷಯಾಂಚೇ ಗೋಡಪಣ । ಸದಾ ಧ್ಯಾಯ ಜ್ಯಾಚೇ ಮನ । ತ್ಯಾಸೀ ವಿಷಯಾಸಕ್ತೀ ಜಾಣ । ಅತಿಗಹನ ಉಲ್ಹಾಸೇ ॥೨೧೩॥ ವಿಷಯಾಸಕ್ತೀಚಾ ಸಂಭ್ರಮ । ತೇಣೇ ನಿರ್ಲಜ್ಜ ಖವಳೇ ಕಾಮ । ಕಾಮಾಸ್ತವ ಅತಿವಿಷಮ । ಸೋಶೀ ದುರ್ಗಮ ಉಪಾಯ ॥೨೧೪॥ ವಿಷಯಕಾಮಾರ್ಥ ಜೇ ಉಪಾಯ । ತ್ಯಾಸೀ ಪ್ರತಿಪದೀ ಅಪಾಯ । ಜೇವ್ಹಾ ವಿಷಯಕಾಮಸಿದ್ಧಿ ನ ಹೋಯ । ತೇವ್ಹಾ ಮಹಾಕಲಹ ವಿವಾದು ॥೨೧೫॥ ಜೇಥ ಅತಿಜಲ್ಪಾಚಾ ವಿವಾದ । ತೇಥ ಖಟಾಟೋಪೇಸೀ ಸನ್ನದ್ಧ । ಖವಳಲಾ ಉಠೀ ಕ್ರೋಧ । ಅತಿವಿರುದ್ಧ ದುರ್ಧರ ॥೨೧೬॥ ಕ್ರೋಧ ಖವಳಲ್ಯಾ ದಾರುಣ । ಬುದ್ಧೀಚೇ ತತ್ಕಾಳ ನಾಸೇ ಜ್ಞಾನ । ತೇವ್ಹಾ ವಿವೇಕಾಚೇ ಪ್ರಾಶನ । ಕರೀ ಜಾಣ ಮಹಾಮೋಹ ॥೨೧೭॥ ವಿವೇಕಾಚೇ ಲೋಪಲ್ಯಾ ಭಾನ । ಸ್ತಬ್ಧ ಚೇತನಾ ಹೋಯ ಜಾಣ । ತೇವ್ಹಾ ಕಾರ್ಯಾಕಾರ್ಯ ಆಠವಣ । ಹೇಹೀ ಸ್ಮರಣ ಬುಡಾಲೇ ॥೨೧೮॥

ತಯಾ ವಿರಹಿತಃ ಸಾಧೋ ಜಂತುಃ ಶೂನ್ಯಾಯ ಕಲ್ಪತೇ । ತತೋಽಸ್ಯ ಸ್ವಾರ್ಥವಿಭ್ರಂಶೋ ಮೂರ್ಛಿತಸ್ಯ ಮೃತಸ್ಯ ಚ ॥೨೧॥

ಅರ್ಥ:- ಹೇ ಸಾಧು ಉದ್ಧವನೇ, ನಿಜವಾದ ಬುದ್ಧಿಯಿಲ್ಲದವನು ಎಲ್ಲವನ್ನೂ ಕಳೆದುಕೊಂಡ ವ್ಯಕ್ತಿಯೆಂದು ಪರಿಗಣಿತನಾಗುವನು. ಅವನು ತನ್ನ ನಿಜವಾದ ಜೀವನೋದ್ದೇಶದಿಂದ ಅಡ್ಡ ದಾರಿ ಹಿಡಿದವನಾಗಿ ಸತ್ತವನಂತೆ ಜಡನಾಗುವನು.

ವಿವೇಕಶೂನ್ಯ ಸ್ತಬ್ಧವತ । ತೇಥ ವಿಷಯೋ ನಾ ಪರಮಾರ್ಥ । ನ ಕಳೇ ಸನ್ಮಾರ್ಗಪಂಥ । ಆತ್ಮಘಾತ ಪದೋಪದೀ ॥೨೧೯॥

ವೇದಾಜ್ಞೆಯಂತೆ ಸ್ವಧರ್ಮಾಚರಣೆಯನ್ನು ಮಾಡಿದರೆ ವಿಷಯಗಳ ವಿರಕ್ತಿಯಾಗುವುದು ಮತ್ತು ಜೀವವು ಮೋಕ್ಷಕ್ಕೆ ಪ್ರಾಪ್ತವಾಗುವುದು. ಇದೇ ನನ್ನ ವೇದೋಕ್ತಿಯಾಗಿರುವುದು ॥೨೧೦॥ ವೇದಾಜ್ಞೆಯನ್ನು ತಿರಸ್ಕರಿಸಿ ಕೇವಲ ವಿಷಯಗಳ ಆಸಕ್ತಿಯನ್ನೇ ಹಿಡಿದರೆ, ಆ ಪ್ರಾಣಿಯು ಅತ್ಯಂತ ದುಃಖಿಯಾಗುವನು. ಅದನ್ನೀಗ ನಿನಗೆ ಹೇಳುವೆನು, ಕೇಳು ॥೨೧೧॥ ಇರುವ ಎಲ್ಲ ಪ್ರವೃತ್ತಿಗಳು ಅನರ್ಥಕಾರಕವಾಗಿರುವುವು. ಇದೇ ಅರ್ಥದ ನಿರೂಪಣೆಯನ್ನು ನಾಲ್ಕು ಶ್ಲೋಕಗಳಲ್ಲಿ ಶ್ರೀಭಗವಂತನು ಉದ್ಧವನಿಗೆ ಹೇಳುತ್ತಿರುವನು ॥೨೧೨॥

ಯಾರ ಮನದಲ್ಲಿ ಯಾವಾಗಲೂ ವಿಷಯಗಳ ಮಧುರ ಧ್ಯಾನವು ನಡೆಯುತ್ತಿದ್ದರೆ ಆತನ ಮನದಲ್ಲಿ ತೀವ್ರಸ್ವರೂಪದ ವಿಷಯದ ಆಸಕ್ತಿಯು ಉತ್ಪನ್ನವಾಗುತ್ತಿರುವುದು ॥೨೧೩॥ ವಿಷಯಗಳ ಆಸಕ್ತಿಯು ಅತಿಶಯವಾಗಿ ಬೆಳೆಯಿತೆಂದರೆ ನಿರ್ಲಜ್ಜ ಕಾಮವು ಉದ್ರೇಕಗೊಳ್ಳುವುದು ಮತ್ತು ಆ ಕಾಮದಿಂದ ಅತಿಶಯ ಸಂಕಟದ ದುರ್ಗಮ ಪ್ರಸಂಗಗಳನ್ನು ಸಹಿಸಬೇಕಾಗುವುದು ॥೨೧೪॥ ಪುನಃ ಅದರಲ್ಲಿಯೂ ಕ್ಷಣಕ್ಷಣಕ್ಕೆ ವಿಘ್ನಗಳು ಬಂದೊದಗುವುವು. ವಿಷಯ ವಾಸನೆಯು ಪೂರ್ಣವಾಗದಿದ್ದರೆ ಆಗ ಗಹನವಾದ ಕಲಹಗಳು ನಿರ್ಮಾಣವಾಗುವುವು. ವಿಷಯತೃಪ್ತಿಗಾಗಿ ಭೋಗಿಸುವ ವಿಷಯಗಳು ಅಪಾರಸ್ವರೂಪ ಹೊಂದುವುವು ॥೨೧೫॥ ಅಲ್ಲಿ ವಿತಂಡವಾದಗಳು ಕಳಸಪ್ರಾಯವಾಗುವುವು. ಅಲ್ಲಿ ಆ ಯಾವ ಖಟಾಟೋಪಗಳಲ್ಲಿ ಸಹಾಯ ಮಾಡುವ ಅತ್ಯಂತ ವಿರುದ್ಧವಾಗಿರುವ ಮತ್ತು ದುರ್ಧರವಾದ ಕ್ರೋಧವು ಉದ್ರೇಕಗೊಂಡು ಪ್ರಕಟವಾಗುವುದು ॥೨೧೬॥ ಹೀಗೆ ಭಯಂಕರವಾದ ಕ್ರೋಧವು ಒಮ್ಮೆ ಉದ್ರೇಕಗೊಂಡಾಗ ಬುದ್ಧಿಯ ಜ್ಞಾನವು ತತ್ಕಾಲದಲ್ಲಿ ಇಲ್ಲದಾಗಿಬಿಡುವುದು. ಆಗ ಮಹಾಮೋಹವು ವಿವೇಕವನ್ನು ಗಬಕ್ಕನೇ ನುಂಗಿಬಿಡುವುದು ॥೨೧೭॥ ವಿವೇಕದ ಎಚ್ಚರವು ಮುಗಿದುಹೋಯಿತೆಂದರೆ ಆಗ ಬುದ್ಧಿಯು ಕುಂಠಿತವಾಗುವುದು. ಆಗ ಅದಕ್ಕೆ ಕರ್ತವ್ಯ ಯಾವುದು ಮತ್ತು ಅಕರ್ತವ್ಯ ಯಾವುದು ಇವುಗಳ ಯಾವ ಸ್ಮರಣೆಯೇ ಉಳಿಯುವುದಿಲ್ಲ ॥೨೧೮॥

ಈ ಪ್ರಕಾರವಾಗಿ ಮನುಷ್ಯನು ವಿಚಾರಶೂನ್ಯನಾದನೆಂದರೆ ಅವನು ಮೂಢನಾಗುವನು. ಆತನಿಗೆ ಪ್ರಪಂಚ ಮತ್ತು ಪರಮಾರ್ಥದ ಯಾವುದೂ ತಿಳಿಯುವುದಿಲ್ಲ. ಸನ್ಮಾರ್ಗದ ರಸ್ತೆಯು ತೋರುವುದಿಲ್ಲ. ಅವನು ಹೆಜ್ಜೆ ಹೆಜ್ಜೆಗೆ ಸ್ವತಃದ ಆತ್ಮಘಾತವನ್ನು ಮಾಡಿಕೊಳ್ಳುತ್ತಿರುವನು ॥೨೧೯॥

ಕೇವಳ ಜಡ ಮೂಢ ಹೋಊನೀ । ಜೇವೀ ಕಾ ಮೂರ್ಚ್ಛಿತ ಪ್ರಾಣೀ । ತೈಸೇ ಪರೀ ಸ್ತಬ್ಧ ಹೋಊನೀ । ಅಜ್ಞಾನಪಣೇ ಶ್ರಮಲಾ ।೨೨೦॥ ಯಾಪರೀ ನಾ ಮೇಲಾ । ಜಡ ಮೂಢ ಹೋಊನಿ ಠೇಲಾ । ಥಿತ್ಯಾ ನಿಜ ಸ್ವಾರ್ಥಾ ಮುಕಲಾ । ಅಂಗೀ ವಾಜಲಾ ಅನರ್ಥು ।೨೨೧॥

ವಿಷಯಾಭಿನಿವೇಶೇನ ನಾತ್ಮಾನಂ ವೇದ ನಾಪರಮ್ । ವೃಕ್ಷಜೀವಿಕಯಾ ಜೀವನ್ ವ್ಯರ್ಥ ಭಸ್ತ್ರೇವ ಯಃ ಶ್ವಸನ್ ।೨೨॥

ಅರ್ಥ:- ಇಂದ್ರಿಯ ತೃಪ್ತಿಯಲ್ಲಿ ಅತಿಯಾಗಿ ಮಗ್ನನಾದುದರಿಂದ ವ್ಯಕ್ತಿಯು ತನ್ನನ್ನಾಗಲಿ, ಇತರರನ್ನಾಗಲಿ ತಿಳಿದುಕೊಳ್ಳಲಾರನು. ವೃಕ್ಷದ ಹಾಗೆ ಅಜ್ಞಾನದಲ್ಲಿ ವ್ಯರ್ಥವಾಗಿ ಜೀವಿಸುತ್ತ ವ್ಯಕ್ತಿಯು ಕೇವಲ ಕಮ್ಮಾರರ ತಿದಿಯಂತೆ ಉಸಿರಾಡುತ್ತಿರುವನು.

ಏವಂ ವಿಷಯಾಂಚೇ ಆಸಕ್ತೀ । ತಮೋಗುಣೇ ಗ್ರಾಸಿಲೀ ವೃತ್ತೀ । ತೇವ್ಹಾ ಏಕೀ ಹೀ ಸ್ಫುರೇನಾ ಸ್ಫೂರ್ತೀ । ಮೀ ಕೋಣ ಹೇ ಚಿತ್ತೀ ಸ್ಫುರೇನಾ ।೨೨೨॥ ಐಸಾ ಭ್ರಮೇ ಭುಲಲಾ ಪ್ರಾಣೀ । ಜೈಸಾ ಉನ್ಮತ್ತ ಮದಿರಾಪಾನೀ । ತ್ಯಾಸೀ ಸ್ಮರಣಾಚೀ ವಿಸ್ಮರಣೀ । ಭ್ರಮಿಷ್ಟ ಮನೀ ಪಡಿಲಾ ।೨೨೩॥ ಕಾ ವಿಷಮ ಸಂಧೀಜ್ವರೂ । ತೇಣೇ ಜ್ವರೇ ಹುಂಬರೇ ಥೋರು । ತ್ಯಾಸೀ ನಾವಡೇ ಆಪಪರು । ವೃಥಾ ವಿಕಾರು ಬಡಬಡ ಕರೀ ।೨೨೪॥ ಫಾಂಟಾ ಫುಟಲಿಯಾವರೀ । ಭಲತೇಚಿ ಸ್ಮರಣ ಕರೀ । ತಯಾ ನಾಠವೇ ಕಾಂಹೀ ತೇ ಪರೀ । ಪ್ರಾಣೇ ಅಘೋರೀ ಪಡಲೇ ಜಾಣ ।೨೨೫॥ ಕಾ ಝಾಲಿಯಾ ಭೂತಸಂಚಾರ । ಪ್ರಾಣಿ ಹುಂಬರೇ ಹುಂಹುಂಕಾರ । ಪಡಿಲಾ ಚಿತ್ತಾಸೀ ವಿಸರ । ಮ್ಹಣೇ ಮೀ ಸೂಕರ ಮ್ಹಣೋನಿ ಭುಂಕೇ ।೨೨೬॥ ಐಸೇ ಜೇವಿಕೇ ನೇಣೋನಿ ಪ್ರಾಣೀ । ಘಾಬರೇ ಜೈಸಾ ಸ್ವಪ್ನೀ । ಮ್ಹಣೇ ಮೀ ಪಡಲೋ ರಣೀ । ಐಸೇ ಪ್ರಾಣೀ ಸ್ವಪ್ನೀ ಭುಲಲೇ ।೨೨೭॥ ತೈಸೀ ಭುಲೀ ಲಟಕೀ ಭುಲವಣೀ । ಕಾಮಮೋಹೇ ವ್ಯಾಪಿಲೇ ಪ್ರಾಣೀ । ಜಡಮೂಢಪಣ ಠಾಕೂನೀ । ಅಂತಃಕರಣೀ ವೇಡಾವಲೇ ।೨೨೮॥ ಮುಕ್ಯಾ ನಾಕೀ ಭರೇ ಮುರಕುಟ । ತೇ ಫೇ ಫೇ ಬೇಬೇ ಕರೀ ನಿಕೃಷ್ಟ । ನ ಕಳೇ ರಡೇ ಕರೀ ಹಾಹಾಟ । ತೇ ಖಟಪಟ ವಾಉಗೀ ।೨೨೯॥ ತೈಸೇ ದುಃಖಬಳೇ ಪ್ರಾಣೀ । ಪರೀ ನ ಕಳೇ ಉಂಚ ಕರಣೀ । ಪಡಿಲೇ ಮೋಹಮದೇ ಭುಲೋನೀ । ಮುಕೇಪಣೇ ಬೇಂಬಾತ ।೨೩೦॥ ಅಹಂಕೃತೀಚಾ ಉಭಾರಾ । ಶರೀರೀ ಭರಲಾಸೇ ವಾರಾ । ತೋ ಹೋಊನಿ ಬಾಧಕ ನರಾ । ಪಡಲೇ ಆಡದ್ವಾರಾ ಅಂಧಕೂಪೀ ।೨೩೧॥ ಕಾ ತೇಲಿಯಾಚಾ ಢೋರ್‌ ಪಾಹೀ । ಠೋಳಾ ಝಾಂಪಡೀ ಸ್ವದೇಹೀ । ಅವಘಾ ವೇಳ ಚಾಲೇ ಪರೀ ಪಾಹೀ । ಪಂಥಕಾಂಹೀ ನ ಠಕೇಚಿ ।೨೩೨॥

ಇವನು ಕೇವಲ ಜಡ-ಮೂಢನಾಗಿ ಒಬ್ಬ ಮೂರ್ಚ್ಛಿತ ಮನುಷ್ಯನಂತೆ ಸ್ತಬ್ಧನಾಗಿಬಿಡುವನು ಮತ್ತು ಅಜ್ಞಾನತನದಲ್ಲಿ ಒದ್ದಾಡುತ್ತಿರುವನು ।೨೨೦॥ ಈ ಪ್ರಕಾರವಾಗಿ ಇವನು ಸಜೀವನೂ ಅಲ್ಲ ನಿರ್ಜೀವನೂ ಅಲ್ಲ, ಹೀಗೆ ಮೂಢನಾಗಿಬಿಡುವನು. ತನ್ನ ನಿಜವಾದ ಸ್ವಾರ್ಥವನ್ನು ಇವನು ಕಳೆದುಕೊಳ್ಳುವನು ಮತ್ತು ಅನರ್ಥವನ್ನು ಸ್ವತಃ ತನ್ನ ಮೈಮೇಲೆ ಹಾಕಿಕೊಳ್ಳುವನು ।೨೨೧॥

ಒಟ್ಟಿನಲ್ಲಿ ಈ ಪ್ರಕಾರವಾಗಿ ವಿಷಯಗಳ ಆಸಕ್ತಿಯಿಂದ ತಮೋಗುಣವು ವೃತ್ತಿಯನ್ನು ನುಂಗಿಬಿಡುವುದು. ಆತನಿಗೆ ಯಾವುದೊಂದು ಸ್ಮರಣೆಯಲ್ಲಿರುವುದಿಲ್ಲ. ನಾನು ಯಾರು ಎಂಬುವುದೂ ಸಹ ಆತನಿಗೆ ನೆನಪಿನಲ್ಲಿರುವುದಿಲ್ಲ ।೨೨೨॥ ಸೆರೆ ಕುಡಿದ ಮನುಷ್ಯನು ನಿಶೆ ಏರಿ ಉನ್ಮತ್ತನಾಗುವನು. ಆಗ ತನ್ನನ್ನು ತಾನೇ ಮರೆತುಬಿಡುವನು. ಆತನ ಮನದಲ್ಲಿ ಭ್ರಮೆಯುಂಟಾಗುವುದು. ಅದರಂತೆ ಈ ಮನುಷ್ಯ ಪ್ರಾಣಿಯು ಭ್ರಮೆಯಿಂದ ತುಂಬಿಕೊಂಡಿರುವನು ।೨೨೩॥ ಅಥವಾ ವಿಷಮ ಜ್ವರ ಹೆಚ್ಚಾಗಲು ರೋಗಿಯು ಅತಿಶಯವಾಗಿ ಬಡಬಡಿಸಲಾರಂಭಿಸುವನು. ಆತನಿಗೆ ತನ್ನ ಮತ್ತು ಇತರರ ಯಾವುದೂ ಏನೂ ತಿಳಿಯುವುದಿಲ್ಲ. ಅವನು ನಿರರ್ಥಕವಾದ ಮಾತುಗಳನ್ನು ಆಡುತ್ತಿರುವನು।೨೨೪॥ ಚಿತ್ತಕ್ಕೆ ಭ್ರಮೆಯುಂಟಾಗಲು ಸಿಕ್ಕ ಸಿಕ್ಕ ಹಾಗೆ ಏನೇನೋ ನೆನಪಾಗುತ್ತಿರುವುದು. ಮತ್ತು ಆತನಿಗೆ ಸರಿಯಾಗಿ ಯಾವ ಸ್ಮರಣೆಯೂ ಇರುವುದಿಲ್ಲ. ಈ ಪ್ರಕಾರವಾಗಿ ಮನುಷ್ಯ ಪ್ರಾಣಿಯು ಚಡಪಡಿಸುತ್ತಿರುವನು ।೨೨೫॥ ಅಥವಾ ಅಂಗದಲ್ಲಿ ಭೂತ ಸಂಚಾರವಾಯಿತೆಂದರೆ, ಆಗ ಅವನು ಹುಂಹುಹುಂಹು ಎಂದು ಹುಂಕಾರವನ್ನು ಕೊಡುತ್ತಿರುವನು. ಮತ್ತು ಚಿತ್ತಕ್ಕೆ ವಿಸ್ಮರಣೆಯುಂಟಾಗಿ ತಾನೇ ಸ್ವತಃ ನಾನು ನಾಯಿ ಎಂದು ಅನ್ನುತ್ತ ಬೊಗಳುತ್ತಿರುವನು ।೨೨೬॥ ಅಥವಾ ಮಲಗಿರುವ ಒಬ್ಬ ಮನುಷ್ಯನು ಸ್ವಪ್ನದಲ್ಲಿ ತನ್ನ ಭಾನವು ಇಲ್ಲದಾಗಿರುವುದರಿಂದ ಗಾಬರಿಯಾಗುವನು ಮತ್ತು ನಾನು ಯುದ್ಧದಲ್ಲಿ ಸಿಲುಕಿಕೊಂಡೆ ಎಂದು ಹೇಳುತ್ತಿರುವನು. ಅದರಂತೆ ಈ ಎಲ್ಲ ಮನುಷ್ಯ ಪ್ರಾಣಿಗಳು ಭ್ರಾಂತರಾಗಿ ಬಿಟ್ಟಿರುವುವು ।೨೨೭॥ ಈ ಪ್ರಕಾರವಾಗಿ ಸುಳ್ಳಾಗಿರುವ ಮರುವೆಯಿಂದ ಭ್ರಮಿಷ್ಠರಾಗಿ ಕಾಮದ ಮೋಹದಿಂದ ಪ್ರಾಣಿಗಳು ವ್ಯಾಪಿಸಿರುವುವು. ಮತ್ತು ಜಡಮೂಢರಾಗಿ ಅಂತಃಕರಣದಲ್ಲಿ ಹುಚ್ಚರಾಗಿರುವವು ।೨೨೮॥ ಒಬ್ಬ ಮೂಕ ಮನುಷ್ಯನ ಮೂಗಿನಲ್ಲಿ ಒಂದು ಸೊಳ್ಳೆ ಸೇರಲು ಆಗ ಆತನು ಗಾಬರಿಯಾಗಿ ಬೇಬೇ ಫೇಫೇ ಮಾಡಹತ್ತುವನು, ಅಳುವನು, ಒದರುವನು, ಆದರೆ ಏನಾಯಿತೆಂದು ಅನ್ಯರಿಗೆ ತಿಳಿಯುವುದಿಲ್ಲ. ಆತನ ಈ ಖಟಪಟಿಯು ವ್ಯರ್ಥವಾಗುವುದು ।೨೨೯॥ ಅದರಂತೆ ದುಃಖದ ಆವೇಶದಿಂದ ಮನುಷ್ಯ ಪ್ರಾಣಿಯು ತಾಪಕ್ಕೀಡಾಗಿ ಮತ್ತು ಸನ್ಮಾರ್ಗದ ದಿಶೆಯು ಕಾಣದೇ ಮೋಹರೂಪ ಮದದಿಂದ ಮೂಕನಂತೆ ಪೇಚಾಡುತ್ತಿರುವುದು ।೨೩೦॥ ಅಹಂಕಾರದ ಆವೇಶದಿಂದ ಶರೀರದಲ್ಲಿ ಗಾಳಿಯು ತಂಬಿಕೊಳ್ಳುವುದು. ಅದೇ ಬಾಧಕವಾಗುವುದು. ಇದರಿಂದ ಅಡ್ಡಮಾರ್ಗದಿಂದ ನಡೆಯುತ್ತ ಆಳವಾದ ಹಾಳುಬಾವಿಯಲ್ಲಿ ಬೀಳುವರು ।೨೩೧॥ ಗಾಣಿಗನ ಕೋಣವು ತನಗೆ ಕಟ್ಟಿದ ಕಣ್ಣುಗಳಿಂದ ಹಗಲೆಲ್ಲ ನಡೆಯುತ್ತಲೇ ಇರುವುದು. ಆದರೆ ಅದರ ರಸ್ತೆಯು ಮಾತ್ರ ಮುಗಿಯುವುದೇ ಇಲ್ಲ ।೨೩೨॥

ಭವಂತಾ ಫಿರೇ ಲಾಗವೇಗೀ । ಪರೀ ಪಾಹತಾ ನ ಲಗೇ ಆಗೀ । ಘಾಣಿಯಾಚಿ ಭೋವಂತೇ ವೇಗೀ । ಭೋವಂಡೀ ಅಂಗೀ ಜಿರಾಲೀ ।೨೩೩॥ ತೈಸೇ ವಿಷಯ ಭವಂಡಿತ ಭವು । ಪರೀ ನ ಕಳೇಚಿ ವಿಧಿಮಾವು । ಜೈಸಾ ಸರ್ಪ ಭ್ರಮಲಾ ಲಾಗೇ ಧಾಂವೂ । ತೈಸೇ ವಿಷಯ ಆಘವೇ ಧಾಂವತೀ ।೨೩೪॥ ಅಂವಸೇಚೇ ಕಾಳೇ ಗಡದ । ತೈಸಾ ಜಡ ಮೂಢ ಝಾಲಾ ಸ್ತಬ್ಧ । ಸ್ಫುರೇನಾ ಆಪ ಪರ ಹಾ ಬೋಧ । ಜಗದಾಂಧ್ಯ ವೋಢವಲೇ ।೨೩೫॥ ಜೇವೀ ಲೋಹಕಾರಾಚೀ ಭಾತೀ । ತೇವೀ ವೃಥಾ ಶ್ವಾಸೋಚ್ಛ್ವಾಸ ಹೋತೀ । ವೃಕ್ಷಾಚೀ ಜೈಸೀ ತಟಸ್ಥ ಸ್ಥಿತೀ । ಯಾಪರೀ ಜೀತೀ ಜೀತ ನಾ ಮೇಲೀ ।೨೩೬॥ ಸಕಾಮಾಸೀ ಸ್ವರ್ಗಪ್ರಾಪ್ತೀ । ಮ್ಹಣಸೀ ಬೋಲಿಲೀ ಅಸೇ ವೇದೋಕ್ತೀ । ತೇಹೀ ಲೋಭಾಚೀ ವದಂತೀ । ಐಕ ತುಜಪ್ರತೀ ಸಾಂಗೇನ ।೨೩೭॥

ಫಲಶ್ರುತಿರಿಯಂ ನೃಣಾಂ ನ ಶ್ರೇಯೋ ರೋಚನಂ ಪರಮ್ ।
ಶ್ರೇಯೋವಿವಕ್ಷಯಾ ಪ್ರೋಕ್ತಂ ಯಥಾ ಭೈಷಜ್ಯರೋಚನಮ್ ।೨೩॥

ಅರ್ಥ:- ಕಾಮ್ಯ ಫಲಗಳ ಭರವಸೆಯನ್ನು ಕೊಡತಕ್ಕ ಶಾಸ್ತ್ರ ವಚನಗಳು ಮನುಷ್ಯರಿಗೆ ಶ್ರೇಯಸ್ಸನ್ನು ನಿಗದಿಪಡಿಸುವುದಿಲ್ಲ. ಅವು ಒಂದು ಮಗುವಿಗೆ ಪ್ರಯೋಜಕಾರಕವಾದ ಔಷಧವನ್ನು ಕುಡಿಯಲು ಕಲ್ಲು ಸಕ್ಕರೆಯ ಭರವಸೆಯನ್ನು ಹೇಳಿದಂತೆ ಪ್ರಯೋಜನಕವಾದ ಧಾರ್ಮಿಕ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿರುವ ಕೇವಲ ಪ್ರಚೋದನೆಗಳಾಗಿರುತ್ತವೆ.

ನಿಷ್ಕಾಮ ಜೇ ಕಾ ಕರ್ಮಸ್ಥಿತೀ । ತೇ ಮೂರ್ಖ ಸರ್ವಥಾ ನ ಕರಿತೀ । ತ್ಯಾಂಸೀ ದಾವೂನಿಯಾ ಫಲಶ್ರುತೀ । ಸ್ವಕರ್ಮಪ್ರವತ್ತೀ ಲಾವಿಲೇ ।೨೩೮॥ ಸಕಾಮ ಅಥವಾ ನಿಷ್ಕಾಮ । ಕರ್ಮಕ್ರಿಯಾ ದೋಹೀಂಚೀ ಸಮ । ಯೇಥ ವಾಸನಾಚಿ ವಿಷಮ । ಸಕಾಮನಿಷ್ಕಾಮಫಲಹೇತೂ ।೨೩೯॥ ಜೇವೀ ಕಾ ಸ್ವಾತೀಚೇ ಜಳ । ಶಿಂಪೀಮಾಜೇ ಹೋಯ ಮುಕ್ತಾಫಳ । ತೇಚಿ ಸೇವೀ ಜೈ ಮಹಾವ್ಯಾಳ । ತೈ ಹಳಾಹಳ ಹೋಊನಿ ಠಾಕೇ ।೨೪೦॥ ತೇವೀ ಆಪುಲೀ ಜೇ ಕಾ ಕಲ್ಪನಾ । ನಿಷ್ಕಾಮೇ ಆಣಿ ಮುಕ್ತಪಣಾ । ತೇಚಿ ಸಕಾಮತ್ವೇ ಜಾಣಾ । ದೃಢಬಂಧನಾ ಉಪಜವೀ ।೨೪೧॥ ವೇದು ಬೋಲಿಲಾ ಜೇ ಸ್ವರ್ಗಫಳ । ತೇ ಮುಖ್ಯತ್ವೇ ನವ್ಹೇ ಕೇವಳ । ಜೇವೀ ಭೇಷಜ ಘ್ಯಾವಯಾ ಬಾಳ । ದೇಊನಿ ಗೂಳ ಚಾಳವಿಜೇ ।೨೪೨॥ ಓಖದ ಘೇತಲಿಯಾಪಾಠೀ । ಕ್ಷಯರೋಗಾಚೀ ಹೋಯ ತುಟೀ । ಪರೀ ಬಾಳ ಹಾತೀಂಚಾ ಗೂಳ ಚಾಟೀ । ತೇ ನವ್ಹೇ ಫಳದೃಷ್ಟೀ ಭೇಷಜೇ ।೨೪೩॥ ತೇವೀ ವೇದಾಚೇ ಮನೋಗತೀ । ಸ್ವರ್ಗಫಳಾಚೀ ಅಭಿವ್ಯಕ್ತೀ । ಮೂರ್ಖಾಸೀ ದ್ಯಾವಯಾ ಮುಕ್ತೀ । ಸ್ವಧರ್ಮಸ್ಥಿತೀ ಲಾವಿತು ।೨೪೪॥

ಬೇಗ ಬೇಗನೇ ಅದು ತನ್ನ ಸುತ್ತ ತಿರುಗುತ್ತಲೇ ಇರುವುದು. ವಿಚಾರ ಮಾಡಿ ನೋಡಿದರೆ ಅದರ ನಡೆಯುವುದಕ್ಕೆ ಕೊನೆಯೇ ಇರುವುದಿಲ್ಲ. ಇದಕ್ಕೆ ಗಾಣದ ಸುತ್ತ ತಿರುಗುತ್ತ ತಿರುಗುತ್ತ ಮೈಯಲ್ಲಿನ ಅದರ ಎಲ್ಲ ಸೊಕ್ಕು ಮುರಿದು ಹೋಗಿರುವುದು ।೨೩೩॥ ಅದರಂತೆಯೇ ವಿಷಯಗಳು ತಿರುಗುತ್ತಿರುವ ಸಂಸಾರದ ಚಕ್ರವಾಗಿರುವುದು. ಆದರೆ ವಿಧಿಯ ಯಾವ ಮಾಯೆಯು ಏನೂ ತಿಳಿಯುವುದಿಲ್ಲ. ಸರ್ಪವು ಬರುವುದನ್ನು ಕಂಡು ಮನುಷ್ಯನು ಧಾವಿಸಲು ಆರಂಭಿಸುವನು. ಅದರಂತೆ ಈ ಎಲ್ಲ ವಿಷಯಗಳು ಧಾವಿಸುತ್ತಿರುವುವು ।೨೩೪॥ ಅಮವಾಸ್ಯೆ ಕತ್ತಲು ಗಾಡಾಂಧಕಾರವಾಗಿರುವುದು. ಅದರಂತೆ ಜಡಮೂಢರು ಸ್ತಬ್ಧರಾಗಿರುವರು. ಇವರಿಗೆ ಆಪ ಪರ ವೆಂಬ ಅರಿವೆಯೇ ಇರುವುದಿಲ್ಲ. ಸಂಪೂರ್ಣ ಜಗತ್ತಿನಲ್ಲಿ ಅಂಧತ್ವವು ಹರಡುವುದು ।೨೩೫॥ ಕಮ್ಮಾರನ ತಿದಿಯಂತೆ ಇವರ ಶ್ವಾಸವು ನಡೆಯುತ್ತಿರುವುದು. ವೃಕ್ಷಗಳು ತಟಸ್ಥವಾಗಿರುವಂತೆ ಇವರು ಜೀವಂತರೂ ಅಲ್ಲ, ಮೃತರೂ ಅಲ್ಲದ ತಟಸ್ಥಾವಸ್ಥೆಯಲ್ಲಿರುವರು ।೨೩೬॥ ಸಕಾಮ ಕರ್ಮ ಮಾಡುವವನಿಗೆ ಸ್ವರ್ಗ ಪ್ರಾಪ್ತಿಯಾಗುವುದೆಂದು ವೇದೋಕ್ತಿವಿರುವುದು. ಹೀಗೆ ಹೇಳಿರುವುದೂ ಕೂಡ ಲೋಭಪೂರಕವಾಗಿರುವುದು. ಇದನ್ನೇ ಈಗ ನಿನಗೆ ಹೇಳುವೆನು, ಲಕ್ಷ ಕೊಟ್ಟು ಕೇಳು ।೨೩೭॥

ಮೂರ್ಖ ಜನರು ನಿಷ್ಕಾಮ ಕರ್ಮಗಳನ್ನು ಎಂದಿಗೂ ಮಾಡುವುದಿಲ್ಲ. ಆದ್ದರಿಂದ ವೇದವು ಅವರಿಗೆ ಫಲಶ್ರುತಿಯನ್ನು ಹೇಳುತ್ತ ಸ್ವಕರ್ಮದಲ್ಲಿ ಪ್ರವೃತ್ತರನ್ನಾಗಿ ಮಾಡಿರುವುದು ।೨೩೮॥ ಸಕಾಮ ಮತ್ತು ನಿಷ್ಕಾಮ ಕರ್ಮಗಳ ಕ್ರಿಯೆಗಳು ಸಮಾನವಾಗಿ ನಡೆಯುವುವು. ಆದರೆ ಅವುಗಳ ಉದ್ದೇಶ ಮಾತ್ರ ಭಿನ್ನ ಭಿನ್ನವಾಗಿರುವುದು. ಸಕಾಮ ಕರ್ಮಗಳು ಕಾಮನಾಯುಕ್ತವಾಗಿರುವುವು ಮತ್ತು ನಿಷ್ಕಾಮ ಕರ್ಮಗಳು ಹೇತುರಹಿತವಾಗಿರುವುವು ।೨೩೯॥ ಸ್ವಾತಿ ನಕ್ಷತ್ರದ ಮಳೆಹನಿಗಳು ಶಿಂಪಿಯಲ್ಲಿ ಬೀಳಲು ಅವು ಮುತ್ತುಗಳಾಗುವುವು. ಆದರೆ ಅವೇ ಹನಿಗಳನ್ನು ಸರ್ಪವು ಪ್ರಾಶನಮಾಡಿತೆಂದರೆ ಅದರಿಂದ ಭಯಾನಕ ವಿಷವು ಉತ್ಪನ್ನವಾಗುವುದು ।೨೪೦॥ ಅದರಂತೆಯೇ ನಮ್ಮ ಕಲ್ಪನೆಯು ನಿಷ್ಕಾಮ ಕರ್ಮದಿಂದ ಮುಕ್ತನನ್ನಾಗಿ ಮಾಡುವುದು ಮತ್ತು ಸಕಾಮ ಕರ್ಮದಿಂದ ಬದ್ಧನನ್ನಾಗಿ ಮಾಡುವುದು ।೨೪೧॥ ವೇದವು ಹೇಳಿರುವ ಯಾವ ಕರ್ಮಫಲಗಳು ಮುಖ್ಯವಲ್ಲ. ತಂದೆಯು ತನ್ನ ಬಾಲಕನಿಗೆ ಔಷಧವನ್ನು ಕುಡಿಸುವುದಕ್ಕಾಗಿಬೆಲ್ಲದ ತುಂಡನ್ನು ತೋರಿಸುವಂತೆ ಅದು ಲೋಭದಿಂದ ಕೂಡಿರುವುದು ।೨೪೨॥ ಆ ಬಾಲಕನು ಔಷಧವನ್ನು ಸೇವಿಸಿದರೆ ತನ್ನ ಕ್ಷಯರೋಗವು ನಾಶವಾಗುವುದು. ಆದರೆ ಅವನು ಅದನ್ನು ಬಿಟ್ಟು ಬೆಲ್ಲವನ್ನೇ ನೆಕ್ಕುತ್ತಿರುವನು. ಬೆಲ್ಲವು ಸಿಕ್ಕಿರುವುದು ನಿಜವಾಗಿ ಅದು ಔಷಧದ ಫಲವಲ್ಲ. ರೋಗವು ಇಲ್ಲದಾಗಿ ವೇದವು ಸ್ವರ್ಗಫಲದ ಆಶೆಯನ್ನು ತೋರಿಸಿ ಅವರಿಗೆ ಸ್ವಧರ್ಮದಲ್ಲಿ ಪ್ರವೃತ್ತನನ್ನಾಗಿ ಮಾಡಿರುವುದು ।೨೪೩॥ ಇದರಂತೆ ವೇದವು ಸ್ವರ್ಗಫಲದ ಆಶೆಯನ್ನು ತೋರಿಸಿ ಅವರಿಗೆ ಸ್ವಧರ್ಮದಲ್ಲಿ ಪ್ರವೃತ್ತರನ್ನಾಗಿ ಮಾಡಿರುವುದು ।೨೪೪॥

ಮ್ಹಣಸೀ ಕರ್ಮವಾದೀ ಜೇ ನರ । ವೇದ ಸಾಂಗತೀ ಪ್ರವತ್ತಿಪರ । ತೋ ವೇದಾರ್ಥ ನಿವೃತ್ತಿತತ್ಪರ । ಕೇವೀ ಸಾಚಾರ ಮಾನಾವಾ ॥೨೪೫॥ ಶ್ರುತ್ಯರ್ಥ ಜೈ ಪ್ರವತ್ತಿ ಧರೀ । ತೈ ವೇದು ಝಾಲಾ ಅನರ್ಥಕಾರೀ । ತೇ ಪ್ರವತ್ತಿ ದೂಷೂನಿ ಶ್ರೀಹರೀ । ದಾವೀ ನಿವೃತ್ತಿ ವರೀ ವೇದಾರ್ಥ ॥೨೪೬॥

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ । ಆಸಕ್ತ ಮನಸೋ ಮರ್ತ್ಯಾ ಆತ್ಮನೋಽನರ್ಥಹೇತುಷು ॥೨೪॥
ನ ತಾನವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜಿನಾಧ್ವನಿ । ಕಥಂ ಯುಂಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ ॥೨೫॥

ಅರ್ಥ:- ಜಗತ್ತಿನ ವಿಷಯ ಭೋಗಗಳಲ್ಲಿ, ಪ್ರಾಣದಲ್ಲಿ, ಬಂಧುಬಳಗದಲ್ಲಿ ಎಲ್ಲ ಮನುಷ್ಯರು ಹುಟ್ಟಿದಾಗಿನಿಂದಲೂ ಆಸಕ್ತರಾಗಿರುವರು. ಈ ವಸ್ತುಗಳ ಆಸಕ್ತಿಯು ಆತ್ಮ ಉನ್ನತಿಗೆ ಬಾಧಕವಾಗಿರುವುದು. ಅನರ್ಥದ ಕಾರಣವಾಗಿರುವುದು. ಇವರು ತಮ್ಮ ಪರಮಪುರುಷಾರ್ಥವನ್ನು ತಿಳಿಯಲಾರರು. ಆದ್ದರಿಂದ ಸ್ವರ್ಗದ ವರ್ಣನೆಯನ್ನು ಓದಿದವರು ಅದನ್ನೆಲ್ಲವನ್ನು ನಿಜವೆಂದು ತಿಳಿಯುವರು. ಇವರು ದೇವಾದಿ ಯೋನಿಗಳಲ್ಲಿ ತಿರುಗತ್ತ ಇರುವರು ಮತ್ತು ವೃಕ್ಷಾದಿ ಯೋನಿಗಳಲ್ಲಿ ಬಂದು ಸುತ್ತುತ್ತಿರುವರು. ಇಂತಹ ಅವಸ್ಥೆಯಲ್ಲಿ ಯಾವ ವಿದ್ವಾನನು ಅಥವಾ ವೇದವು ಇವರಿಗೆ ಆ ವಿಷಯಗಳಲ್ಲಿ ಹೇಗೆ ಪ್ರವೃತ್ತರನ್ನಾಗಿ ಮಾಡಲು ಸಾಧ್ಯ ?

ಉಪಜತಾಂಚಿ ಪ್ರಾಣಿಮಾತ್ರಾಸೀ । ದೇಹ ಆವಡೇ ಸರ್ವಸ್ವೇಸೀ । ದೇಹಾತ್ಮವಾದೇ ವಿಷಯಾಂಸೀ । ಜೀವೇಪ್ರಾಣೇಸೀ ಲೋಲುಪ ॥೨೪೭॥ ವಿಷಯಕಾಮಾಚ್ಯಾ ಆಸಕ್ತೀ । ಸ್ತ್ರೀಪುತ್ರಾಂಚೀ ಗೋಡೀ ಚಿತ್ತೀ । ಸ್ವಜನ ಧನಾಂಚೀ ಅತಿಪ್ರೀತೀ । ಸ್ವಭಾವಸ್ಥಿತೀ ಅನಿವಾರ ॥೨೪೮॥ ಜೇಣೇ ಜಾಇಜೇ ಅಧೋಗತೀ । ಐಶೀ ಜೇ ಕಾ ಕಾಮಾಸಕ್ತೀ । ತೇ ಪ್ರಾಣ್ಯಾಸೀ ಸಹಜಗತೀ । ವಿಷಯಾಸಕ್ತೀ ಸ್ವಭಾವೇ ॥೨೪೯॥ ತೇಚಿ ವಿಷಯಾಂಚೀ ಪ್ರವೃತ್ತೀ । ವೇದ ಬೋಲೇ ಜೈ ವಿಧ್ಯುಕ್ತೀ । ತೈ ಸರ್ವಾಂಚಾ ಸ್ವಾರ್ಥಘಾತೀ । ಝಾಲಾ ಅನರ್ಥೀ ವೇದವಾದು ॥೨೫೦॥ ಮರತಯಾ ತರಟಮಾರು ಕೇಲಾ । ಬುಡತ್ಯಾಚೇ ಡೋಯಿೀ ದಗಡ ದೀಧಲಾ । ಆಂಧಳಾ ಅಂಧಕೂಪೀ ಘಾತಲಾ । ತೈಸಾ ವೇದು ಝಾಲಾ ಅನರ್ಥೀ ॥೨೫೧॥ ವೇದು ಜೈ ವಿಷಯೀ ಗೋವೀ । ತೈ ಪ್ರಾಣ್ಯಾತೇ ಕೋಣ ಉಗವೀ । ರಾಜಾ ಸರ್ವಸ್ವೇ ನಾಗವೀ । ತೈ ಕೋಣ ಸೋಡವೀ ದೀನಾತೇ ॥೨೫೨॥ ನೇಣೋನಿ ವೇದೀಂಚಾ ಮಥಿತಾರ್ಥು । ಸ್ವಯೇ ಜೋ ಕಾ ವಿಷಯಾಸಕ್ತು । ತೋ ಮಾನೀ ಪ್ರವೃತ್ತಿಪರ ಶ್ರುತ್ಯರ್ಥು ಅನರ್ಥಹೇತು ಬಾಲಿಷಾ ॥೨೫೩॥ ಪುತ್ರ ಪಿತ್ಯಾಸ ಪುಸೇ ಜಾಣ। ಗ್ರಹಣೀ ಜೇವೂ ಪರಮಾನ್ನ । ಯೇರೂ ಮ್ಹಣೇ ಸುಟಲ್ಯಾ ಗ್ರಹಣ । ಉಷ್ಣ ಭೋಜನ ಸ್ವಗೃಹೀ ಕರೂ ॥೨೫೪॥ ತೈಶೀ ಮಾಝ್ಯಾ ವೇದಾಚೀ ಉಕ್ತೀ । ನಿಷೇಧಮುಖೇ ದಾವೀ ಪ್ರವೃತ್ತೀ । ಯೇಣೇ ವೇದಾಚ್ಯಾ ಮನೋಗತೀ ವಿಷಯನಿವೃತ್ತೀ ಮುಖ್ಯತ್ವೇ ॥೨೫೫॥

ಹೀಗೆಂದ ಮೇಲೆ ಎಲ್ಲ ಕರ್ಮವಾದಿಗಳು ವೇದಕ್ಕೆ ಪ್ರವೃತ್ತಿಪರವೆಂದು ಹೇಳುವರು ಅಂದ ಮೇಲೆ ಇದಕ್ಕೆ ನಿವೃತ್ತಿಪರ ಎಂದು ಹೇಗೆ ಮನ್ನಿಸಬೇಕು? ಎಂದು ನೀನು ಕೇಳಬಹುದು ॥೨೪೫॥ ಶ್ರುತಿಯ ಅರ್ಥವು ಪ್ರವೃತ್ತಿಪರವಾಗಿದ್ದರೆ ವೇದವು ಅನರ್ಥಕಾರಕವಾಗುತ್ತಿತ್ತು. ಅದಕ್ಕಾಗಿ ಆ ಪ್ರವೃತ್ತಿಗೆ ದೋಷವನ್ನು ಕೊಟ್ಟು ನಿವೃತ್ತಿಪರವು ಹೇಗಿದೆ ಎಂಬುದನ್ನು ಶ್ರೀಹರಿಯು ತಿಳಿಸಿ ಹೇಳುತ್ತಿರುವನು ॥೨೪೬॥

ಪ್ರತಿಯೊಂದು ಪ್ರಾಣಿಮಾತ್ರರಿಗೆ ತನ್ನ ದೇಹವು ಜನ್ಮವಾಗುತ್ತಲೇ ಪ್ರಿಯವಾಗುವುದು. ದೇಹವೇ ಆತ್ಮಾ ಎಂದು ತಿಳಿದು ಆತನು ಜೀವಭಾವದಿಂದ ವಿಷಯಗಳಲ್ಲಿ ಮೋಹಿತನಾಗುವನು ॥೨೪೭॥ ವಿಷಯಗಳ ಆಸಕ್ತಿಯಿಂದಲೇ ಸ್ತ್ರೀಪುತ್ರ ವಿಷಯದಲ್ಲಿ ಪ್ರೇಮವು ನಿರ್ಮಾಣವಾಗುವುದು. ತನ್ನ ಬಂಧುಬಳಗ, ಮಿತ್ರರಲ್ಲಿ ಮತ್ತು ದ್ರವ್ಯದಲ್ಲಿ ಅತ್ಯಂತ ಪ್ರೀತಿಯು ಹುಟ್ಟಿಕೊಳ್ಳುವುದು. ಇದು ಸ್ವಾಭಾವಿಕ ವಾಗಿಯೇ ಅನಿವಾರ್ಯವಾಗಿರುವುದು ॥೨೪೮॥ ಯಾವುದರಿಂದ ಮನುಷ್ಯನು ಅಧೋಗತಿಗೆ ಹೋಗುವನೋ, ಆ ಕಾಮದ ಆಸಕ್ತಿಯು ಪ್ರಾಣಿಗಳ ಹೃದಯದಲ್ಲಿ ಹುಟ್ಟುತ್ತಿರುವುದು ॥೨೪೯॥ ಇಂತಹ ವಿಷಯಗಳ ಪ್ರವೃತ್ತಿಯನ್ನು ವೇದವು ವಿಧಿಯುಕ್ತವಾಗಿ ಹೇಳಿತೆಂದರೆ, ಯಾವ ಈ ವೇದವಚನಗಳು ಎಲ್ಲ ಜನರ ಘಾತ ಮಾಡುವ ಅನರ್ಥಕಾರಕವಾದೀತು ॥೨೫೦॥ ಸಾಯುವ ಸ್ಥಿತಿಯಲ್ಲಿರುವವನಿಗೆ ಬಾರಕೋಲಿನಿಂದ ಬಾರಿಸುವುದು ಅಥವಾ ನೀರಿನಲ್ಲಿ ಮುಳುಗುವವನಿಗೆ ತಲೆಗೆ ಕಲ್ಲನ್ನು ಹಾಕುವುದು ಇಲ್ಲವೇ ಕುರುಡ ಮನುಷ್ಯನಿಗೆ ಹಾಳು ಬಾವಿಯಲ್ಲಿ ನೂಕಿಬಿಡುವುದು. ಇದರಂತೆಯೇ ವೇದವೂ ಕೂಡ ಅನರ್ಥಕಾರಕವಾದೀತು ॥೨೫೧॥ ವೇದವೇ ಮನಷ್ಯರನ್ನು ವಿಷಯಗಳಲ್ಲಿ ಸಿಲುಕಿಸಿದರೆ ಈ ಮನುಷ್ಯ ಪ್ರಾಣಿಗಳವರಿಗೆ ಇನ್ನಾರು ಬಿಡಿಸಿಕೊಳ್ಳುವವರಿದ್ದಾರೆ? ರಾಜನೇ ಪ್ರಜೆಗಳಿಗೆ ವಂಚನೆ ಮಾಡಿದರೆ, ಆ ಬಡವರಿಗೆ ಇನ್ನಾರು ಬಿಡಿಸಿಕೊಳ್ಳುವವರಿದ್ದಾರೆ? ॥೨೫೨॥ ವಿಷಯಾಸಕ್ತ ಜನರು ಈ ಯಾವ ವೇದದ ನಿಜವಾದ ಅರ್ಥವನ್ನು ಅರಿಯದೇ ಸ್ಮೃತಿಯ ಅರ್ಥವು ಪ್ರವೃತ್ತಿಪರ ಎಂದು ತಿಳಿದುಕೊಂಡಿರುವರು. ಆದ್ದರಿಂದ ಮೂರ್ಖ ಜನರಿಗೆ ಇದು ಅನರ್ಥಕಾರಕವಾಗುವುದು ॥೨೫೩॥ ಪುತ್ರನು ತನ್ನ ಪಿತನಿಗೆ ಗ್ರಹಣಕಾಲದಲ್ಲಿ ಭೋಜನಾಲಯಕ್ಕೆ ಹೋಗಿ ಮೃಷ್ಟಾನ್ನವನ್ನು ಭುಂಜಿಸೋಣ ಎಂದಾಗ ಪಿತನು ಗ್ರಹಣವು ಬಿಟ್ಟನಂತರ ನಮ್ಮ ಮನೆಯಲ್ಲಿಯೇ ಬಿಸಿ ಬಿಸಿ ಊಟ ಮಾಡೋಣ ಎಂದನು ॥೨೫೪॥ ಇದನ್ನು ಹೇಗೆ ಚಾತುರ್ಯದಿಂದ ಉತ್ತರಕೊಟ್ಟಂತೆಯೇ ವೇದವೂ ಕೂಡ ನಿಷೇಧ ಮುಖದಿಂದ ಪ್ರವೃತ್ತಿಯನ್ನು ತೋರಿಸಿರುವುದು. ನಿಜವಾಗಿಯೂ ವಿಷಯಗಳ ನಿವೃತ್ತಿಯೇ ವೇದದ ಮನೋಗತವಾಗಿರುವುದು ॥೨೫೫॥

ವಿಷಯೀ ಬುಡತೇ ಜೇ ಜನ । ತ್ಯಾಂಚೇ ಕರಾವಯಾ ಉದ್ಧರಣ । ಮಾಝೀ ವೇದವಾದು ಜಾಣ । ಸಕಾಮಪಣ ತ್ಯಾ ನಾಹೀ ॥೨೫೬॥ ಕೋಣೀ ಏಕ ಮಂದಬುದ್ಧೀ । ಕೇವಳ ವಿಷಯಾಂಧ ತ್ರಿಶುದ್ಧೀ । ತೇ ಸಕಾಮ ಜಲ್ಪತೀ ವೇದವಿಧೀ । ತ್ಯಾಂಚೀ ಕುಬುದ್ಧೀ ಹರಿ ಸಾಂಗೇ ॥೨೫೭॥

ಏವಂ ವ್ಯವಸಿತಂ ಕೇಚಿದವಿಜ್ಞಾಯ ಕುಬುದ್ಧಯಃ । ಫಲಶ್ರುತಿಂ ಕುಸುಮಿತಾಂ ನ ವೇದಜ್ಞಾ ವದಂತಿ ಹಿ ॥೨೬॥

ಅರ್ಥ:- ದುರ್ಬುದ್ಧಿಯ ಜನರು ವೇದದ ಈ ಅಭಿಪ್ರಾಯವನ್ನು ತಿಳಿದುಕೊಳ್ಳದೇ ಕರ್ಮ ಆಸಕ್ತಿಯಿಂದ ವಶರಾಗಿ ರಮಣೀಯವಾಗುವಂತಹ ಪರಮ ಶ್ರುತಿಯನ್ನು ಹೇಳುವರು. ಆದರೆ ವೇದವನ್ನು ತಿಳಿದಿರುವ ಜನರು ಶ್ರುತಿಯಿಂದ ಇಂತಹ ಅಭಿಪ್ರಾಯವನ್ನು ತೆಗೆಯುವುದಿಲ್ಲ.

ಫಲತ್ಯಾಗೇ ಸ್ವಧರ್ಮಸ್ಥಿತೀ । ಸರ್ವಥಾ ಸಕಾಮ ನ ಕರಿತೀ । ಯಾಲಾಗೀ ವೇದ ಬೋಲೇ ಫಲಶ್ರುತೀ । ಸ್ವಧರ್ಮಪ್ರವೃತ್ತೀಲಾಗುನೀ ॥೨೫೮॥ ಸೈಂಧವ ಸಾಗರಾ ಭೇಟೂ ಜಾತಾ । ಜೇವೀ ಕಾ ಹಾರಪೇ ಸೈಂಧವತಾ । ತೇವೀ ಸ್ವಧರ್ಮೀ ಪ್ರವರ್ತತಾ । ಸಕಾಮತಾ ಉರೇನಾ ॥೨೫೯॥ ಜೈಶೀ ದೋ ದಿವ್ಯಾಂಚೀ ವಾತೀ । ಏಕವಟ ಕೇಲಿಯಾ ಜ್ಯೋತೀ । ತೇಥ ನ ದಿಸೇ ಭೇದಗತೀ । ಪಾಹತಾ ಜ್ಯೋತೀ ಏಕಚಿ ॥೨೬೦॥ ಜೇವೀ ಅಗ್ನೀ ಕಾಪುರ ಮಿಳತಾ । ತೋ ಅಗ್ನೀಚೀ ಹೋಯ ತತ್ತ್ವತಾ । ತೇವೀ ಸ್ವಧರ್ಮಕರ್ಮೀ ಪ್ರವರ್ತತಾ । ಕರ್ಮೀ ನಿಷ್ಕರ್ಮತಾ ಸ್ವಯೇ ಪ್ರಕಟೇ ॥೨೬೧॥ ಕರ್ಮಾಕರ್ಮಾಚೀ ವೇಳುಜಾಳೀ । ತೇ ಸ್ವಧರ್ಮಾಚೇ ಕಾಂಚಣೀ ಮೇಳೀ । ಪಡೇ ಚಿತ್ತಶುದ್ಧೀಚೀ ಇಂಗಳೀ । ತೇ ಕರೀ ಹೋಳೀ ಕರ್ಮಾಕರ್ಮಾಚೀ ॥೨೬೨॥ ಸಕಾಮತಾ ಕರಿತಾ ಕರ್ಮ । ಸ್ವಧರ್ಮ ನಾಶೀ ಫಳಕಾಮ । ತೇವ್ಹಾ ಸಕಾಮ ಆಣಿ ನಿಷ್ಕಾಮ । ದೋಹೀಚೇ ಭಸ್ಮ ಸ್ವಧರ್ಮ ಕರೀ ॥೨೬೩॥ ಜೇವೀ ದೋ ಕಾಷ್ಠಾಂಚ್ಯಾ ಘಸಣೀ । ಮಾಜೀ ಪ್ರಕಟೇ ಜೋ ಕಾ ವನ್ಹೀ । ತೋ ದೋಹೀತೇಹೀ ಜಾಳೂನೀ । ಸ್ವತೇಜಪಣೀ ಪ್ರಕಾಶೇ ॥೨೬೪॥ ತೇವೀ ಮಾಝೀ ವೇದವಾದು । ಸ್ವಕರ್ಮೇ ಛೇದೀ ಕರ್ಮಬಾಧು । ಹೇ ನೇಣೋನಿ ಜೋ ವಿಷಯಾಂಧು । ಜಡಲಾ ಸುಬದ್ಧು ಫಳಾಶೇ ॥೨೬೫॥ ವೇದೇ ಪ್ರವೃತ್ತಿರೋಚನೇಕಾರಣೇ । ಸ್ವರ್ಗಾದಿ ನಾನಾ ಫಲೇಂ ಬೋಲಣೇ । ತ್ಯಾಲಾಗೀ ಜ್ಯಾಚೇ ಬೈಸೇ ಧರಣೇ । ತೇಣೇ ನಾಗವಣೇ ನಿಜಸ್ವಾರ್ಥಾ ॥೨೬೬॥ ಕಷ್ಟೋನಿ ಶೇತೀ ಪೇರಿಲೇ ಚಣೇ । ತ್ಯಾಂಚೀ ಉಪಡೋನಿ ಭಾಜೀ ಕರಣೇ । ತೋ ಲಾಭ ಕೀ ತೇಣೇ ನಾಡಣೇ । ತೈಸೇ ಫಳಭೋಗಣೇ ಸಕಾಮೀ ॥೨೬೭॥

ವಿಷಯಗಳಲ್ಲಿ ಮುಳುಗಿಹೋಗಿರುವ ಜನರಿಗಾಗಿ, ಅವರ ಉದ್ಧಾರವನ್ನು ಮಾಡುವುದಕ್ಕಾಗಿಯೇ ನನ್ನ ವೇದವಾಣಿಯು ಇರುವುದು. ಅದರಲ್ಲಿ ಸಕಾಮತ್ವವು ಇರುವುದಿಲ್ಲ ॥೨೫೬॥ ಆದರೆ ಮಂದಬುದ್ಧಿಯ ಅನೇಕ ಜನರು ವಿಷಯಾಂಧರಾಗಿರುವರು. ಇವರು ಲೋಭದಿಂದ ವೇದವು ಪ್ರವತ್ತಿಪರ ಎಂದು ಹೇಳುವರು. ಇವರ ಈ ಕುಬುದ್ಧಿಯನ್ನು ಶ್ರೀಹರಿಯು ಹೇಳುವನು ॥೨೫೭॥

ಸಕಾಮ ಜನರು ಫಲದ ಆಸಕ್ತಿಯನ್ನು ಬಿಟ್ಟು ಸ್ವಧರ್ಮದ ಆಚರಣೆಯನ್ನು ಮಾಡುವುದಿಲ್ಲ. ಆದ್ದರಿಂದ ಸ್ವಧರ್ಮದತ್ತ ಅವರ ಪ್ರವೃತ್ತಿಯುಂಟಾಗಲು ವೇದವು ಫಲಶ್ರುತಿಯನ್ನು ಹೇಳಿಟ್ಟಿರುವುದು ॥೨೫೮॥ ಉಪ್ಪು ಸಮುದ್ರಕ್ಕೆ ಭೇಟಿಯಾಗಲು ಆಗ ಅದರ ಉಪ್ಪುತನವು ಉಳಿಯುವುದೇ ಇಲ್ಲ. ಅದರಂತೆ ಸ್ವಧರ್ಮದ ಆಚರಣೆಯನ್ನು ಮಾಡುತ್ತಿರಲು ಆಗ ಸಕಾಮ ಬುದ್ಧಿಯು ಉಳಿಯುವುದಿಲ್ಲ ॥೨೫೯॥ ಎರಡೂ ಜ್ಯೋತಿಗಳನ್ನು ಒಂದುಗೂಡಿಸಲು ಆಗ ಅವುಗಳಲ್ಲಿ ಭೇದವೇ ಕಾಣುವುದಿಲ್ಲ. ಎರಡೂ ಜ್ಯೋತಿಗಳು ಒಂದೇ ರೂಪದಿಂದ ತೋರುವುವು ॥೨೬೦॥ ಕರ್ಪೂರವು ಅಗ್ನಿಯಲ್ಲಿ ಹೋಗಿ ಕೂಡಲು ಆಗ ಅದು ಅಗ್ನಿರೂಪವೇ ಆಗುವುದು. ಅದರಲ್ಲಿ ಯಾವ ಭೇದವು ಕಾಣಿಸುವುದಿಲ್ಲ. ಅದರಂತೆ ಸ್ವಧರ್ಮಾಚರಣೆಯನ್ನು ಮಾಡುತ್ತಿರಲು ಆಗ ನಿಷ್ಕಾಮತ್ವವು ಸಹಜವಾಗಿಯೇ ಪ್ರಾಪ್ತವಾಗುವುದು ॥೨೬೧॥ ಕರ್ಮ, ಅಕರ್ಮ ಎಂಬ ಈ ಗಳಗಳ ಸಮೂಹದ ತಿಕ್ಕಾಟದಲ್ಲಿ ಉತ್ಪನ್ನವಾಗುವ ಚಿತ್ತಶುದ್ಧಿಯ ಬೆಂಕಿ ಕಿಡಿಯಿಂದ ಕರ್ಮ-ಅಕರ್ಮಗಳು ಸುಟ್ಟು ಭಸ್ಮವಾಗುವುವು ॥೨೬೨॥ ಅಪೇಕ್ಷೆಯನ್ನಿಟ್ಟುಕೊಂಡು ಕರ್ಮಗಳನ್ನು ಮಾಡಲು, ಆಗ ಸ್ವಧರ್ಮವು ಫಲದ ಇಚ್ಛೆಯನ್ನು ನಾಶ ಮಾಡುವುದು. ಆಗ ಸಕಾಮ ಮತ್ತು ನಿಷ್ಕಾಮ ಎಂಬ ಈ ಎರಡನ್ನೂ ಕೂಡ ಸ್ವಧರ್ಮವು ನಾಶಮಾಡಿಬಿಡುವುದು ॥೨೬೩॥ ಎರಡು ಕಾಷ್ಠಗಳನ್ನು ಒಂದರಮೇಲೊಂದು ತಿಕ್ಕಿದರೆ, ಅದರಿಂದ ಅಗ್ನಿಯು ಉತ್ಪನ್ನವಾಗುವುದು. ಆ ಅಗ್ನಿಯು ಯಾವ ಪ್ರಕಾರವಾಗಿ ಎರಡನ್ನೂ ಕೂಡ ಸುಟ್ಟು ತನ್ನ ತೇಜದಿಂದ ಪ್ರಕಾಶಿಸುವುದೋ ॥೨೬೪॥ ಅದರಂತೆಯೇ ನನ್ನ ವೇದವಾಣಿಯು ಸ್ವಕರ್ಮದಿಂದ ಕರ್ಮಬಂಧನವಿಲ್ಲದಂತೆ ಮಾಡುವುದು. ಆದರೆ ಇದನ್ನರಿಯದೇ ವಿಷಯಾಂಧನಾದ ಮನುಷ್ಯನು ಫಲದ ಆಶೆಯಲ್ಲಿ ಸಿಲುಕಿಕೊಂಡಿರುವನು ॥೨೬೫॥ ವೇದವು ಪ್ರವೃತ್ತಿಯ ರುಚಿಯು ಉತ್ಪನ್ನವಾಗಬೇಕೆಂದು ಸ್ವರ್ಗಾದಿ ಅನೇಕ ಫಲಗಳನ್ನು ಹೇಳಿರುವುದು. ಆದರೆ ಯಾರು ಇದನ್ನೇ ಹಿಡಿದುಕೊಂಡು ಕುಳಿತರೆ ತಮಗಾಗುವ ಲಾಭವನ್ನು ಕಳೆದುಕೊಳ್ಳುವರು ॥೨೬೬॥ ಒಕ್ಕಲಿಗನು ಬಹಳ ಕಷ್ಟಪಟ್ಟು ಕಡಲೆ ಬೀಜಗಳನ್ನು ಬಿತ್ತಿದನು. ಅವು ಮೊಳಕೆ ಹೊಡೆದು ಗಿಡಗಳಾಗುವುದೊಂದೇ ತಡ. ಅವುಗಳನ್ನು ಕಿತ್ತಿ ಪಲ್ಲೆ ಮಾಡಿಕೊಂಡರೆ ಅದು ಹಾನಿಯೋ, ಲಾಭದಾಯಕವೋ? ಇದರಂತೆಯೇ ಸಕಾಮ ಮನುಷ್ಯನಿಗೆ ಫಲವು ದೊರೆಯುವುದು ॥೨೬೭॥

ವೋಲೀ ಜೋಂಧಳಿಯಾಚೀ ಕರಬಾಡೇ । ಖಾತಾ ಅತ್ಯಂತ ಲಾಗತೀ ಗೋಡೇ । ತ್ಯಾಲಾಗೀ ಶೇತ ಜೈ ಉಪಡೇ । ತೈ ಲಾಭು ಕೀ ನಾಡೇ ನಿಜಸ್ವಾರ್ಥಾ ।೨೬೮॥ ತೈಶೀ ಸಕಾಮ ಕಾಮನಾ ಉನ್ಮತ್ತೇ । ಜೇ ಫಳೀ ಫಳಾಶಾ ಲೋಲಿಂಗತೇ । ತೇ ನಾಡಲೀ ಸ್ವಧರ್ಮ ಲಾಭಾತೇ । ಐಕ ತೂತೇ ಸಾಂಗೇನ ।೨೬೯॥ ಶೇತೀ ಪೇರಾವಯಾ ಆಣಿಲೇ ಚಣೇ । ತ್ಯಾಂಚೇ ಆದರೇ ಕರೀ ಫುಟಾಣೇ । ತೋ ಶಾಹಣಾ ಕೀ ಮೂರ್ಖ ಮ್ಹಣಣೇ । ತೈಸೇ ಫಳ ಭೋಗಣೇ ಸಕಾಮೀ ।೨೭೦॥ ಘೋಡಾ ವಿಕೋನಿ ಪಲಾಣ ಘೇಣೇ । ಲೋಣೀ ದೇಊನಿ ತಾಕ ಮಾಗಣೇ । ಭಾತ ಸಾಂಡೂನಿ ವೇಳಣ ಪಿಣೇ । ತೈಸೇ ಫಳ ಭೋಗಣೇ ಸಕಾಮೀ ।೨೭೧॥ ಐಸೇ ಸಕಾಮ ಅತಿದುರ್ಬುದ್ಧೀ । ಜೇ ನಾಡಲೇ ಸ್ವಧರ್ಮಸಿದ್ಧೀ । ಯಾಲಾಗೀ ದೇವೋ ಮ್ಹಣೇ ''ಕುಬುದ್ಧೀ'' । ತೇ ಕುಬುದ್ಧೀಚೀ ವಿಧಿ ಹರಿ ಸಾಂಗೇ ।೨೭೨॥

ಕಾಮಿನಃ ಕೃಪಣಾ ಲುಬ್ಧಾಃ ಪುಷ್ಪೇಷು ಫಲಬುದ್ಧಯಃ । ಅಗ್ನಿಮುಗ್ಧಾ ಧೂಮತಾಂತಾಃ ಸ್ವಂ ಲೋಕಂ ನ ವಿದಂತಿ ತೇ ।೨೭॥

ಅರ್ಥ:- ಕಾಮವಾಸನೆಯಿಂದ ಯುಕ್ತರಾದವರು, ದೀನರಾದವರು, ಲೋಭಿಗಳು, ಹೂವಿಗೆ ಫಲವೆನ್ನುವವರು (ಭ್ರಾಂತರು) ಯಜ್ಞಯಾಗಾದಿ ಅಗ್ನಿಕರ್ಮದಿಂದ ಮೂಢರಾದವರು, ದೂಮ್ರಮಾರ್ಗವೇ ಕೊನೆಯದು ಎಂದು ತಿಳಿಯುವವರು, ಈ ಎಲ್ಲ ಜನರಿಗೆ ನಿಜವಾದ ಆತ್ಮಯೋಗವು ತಿಳಿಯುವುದಿಲ್ಲ.

ಸಕಾಮಾಚೀ ತೃಷ್ಣಾ ಪೂರ್ಣ । ಕದಾಕಾಳೀ ನವ್ಹೇ ಜಾಣ । ಕಾಮೇಚ್ಛಾ ತೋ ಸದಾ ದೀಣ । ''ಕೃಪಣಪಣ'' ಯಾ ಹೇತೂ ।೨೭೩॥ ಜಳೀ ಬಕ ಧರೋನಿ ಧ್ಯಾನ । ಜೇವೀ ಕಾ ಟಪತ ರಾಹೇ ಮೀನ । ತೇವೀ ಸಕಾಮಾ ಅನುಷ್ಠಾನ । ಲುಬ್ಧೋನಿ ಜಾಣ ಕಾಮಾಸೀ ।೨೭೪॥ ಜಾವಯಾ ಪರಪುರುಷಾಪಾಸೀ । ಲವೋಠವೋ ದಾವೀ ನಿಜಪತೀಸೀ । ತೇವೀ ಕಾಮ ಧರೋನಿ ಮಾನಸೀ । ಸ್ವಧರ್ಮಕರ್ಮಾಸೀ ಆಚರೇ ।೨೭೫॥ ಜೇವೀ ಕಾ ಅಜ್ಞಾನ ಬಾಳ । ಫೂಲ ತೇಚಿ ಮ್ಹಣೇ ಫಳ । ತೇವೀ ಸ್ವರ್ಗಭೋಗ ಕೇವಳ । ಮಾನೀ ಅಢಳ ಮೂರ್ಖತ್ವೇ ।೨೭೬॥ ತ್ಯಾಹೀ ಸ್ವರ್ಗಭೋಗಾಸೀ ಪಾಹೇ । ಕರ್ಮಕೈವಲ್ಯ ಹೋಯ ಕೀ ನೋಹೇ । ಹಾಹೀ ಸಂದೇಹ ವರ್ತತಾಹೇ । ತೇಣೇಹೀ ಹೋಯ ಅತಿದೀನ ।೨೭೭॥ ಸಕಾಮ ತೋ ಸದಾದೀನ । ದೀನತ್ವೇ ಅತಿಕೃಪಣ । ಕೃಪಣತ್ವೇ ಸಲೋಭಪಣ । ಲೋಭಾಸ್ತವ ಜ್ಞಾನ ಮಹಾಮೋಹ ಗ್ರಾಸೀ ।೨೭೮॥ ಮೋಹಾಚೇ ಖವಳಲ್ಯಾ ಭಾನ । ಸವಿವೇಕ ಗ್ರಾಸೀ ಜ್ಞಾನ । ತೆವ್ಹಾ ಬುದ್ಧೀಮಾಜೀ ತಮೋಗುಣ । ಸಬಾಹ್ಯ ಪರಿಪೂರ್ಣ ಉಲ್ಹಾಸೇ ।೨೭೯॥

ಜೋಳದ ಹಸಿತೆನೆಗಳು ತಿನ್ನಲು ರುಚಿಯಾಗುವುವು. ಹೀಗೆಂದು ಬೆಳೆದ ಎಲ್ಲ ಬೆಳೆಯನ್ನು ಕಿತ್ತಿ ತಂದರೆ ಅದರಿಂದ ಲಾಭವಾಗುವುದೆ ? ಅಥವಾ ನಿಜಸ್ವಾರ್ಥದ ಹಾನಿಯೇ ।೨೬೮॥ ಅದರಂತೆ ಯಾವ ಜನರು ಸಕಾಮ ಬುದ್ಧಿಯಿಂದ ಉನ್ಮತ್ತರಾಗಿರುವರೋ, ಅವರು ಫಲದ ಆಶೆಯಲ್ಲಿ ಮೋಹಿತರಾಗುವರು. ಅವರು ಸ್ವಧರ್ಮದ ಲಾಭವನ್ನು ಹೇಗೆ ಕಳೆದುಕೊಳ್ಳುವರೆಂಬುದನ್ನು ನಾನು ನಿನಗೆ ಹೇಳುವೆನು, ಅದನ್ನು ಕೇಳು ।೨೬೯॥ ಹೊಲದಲ್ಲಿ ಬಿತ್ತುವುದಕ್ಕಾಗಿ ಕಡಲೆ ಬೀಜಗಳನ್ನು ತಂದು, ಅವುಗಳನ್ನು ಬಲು ಪ್ರೀತಿಯಿಂದ ಸುಟ್ಟು ಹುರಕಡ್ಲಿ ಮಾಡಿದರೆ ಅವನಿಗೆ ಶಾಣ್ಯಾ ಎನ್ನಬೇಕೋ? ಅಥವಾ ಮೂರ್ಖನೆನ್ನಬೇಕೋ? ಅದರಂತೆ ಸಕಾಮದ ಭೋಗವಾಗಿರುವುದು ।೨೭೦॥ ಕುದುರೆಯನ್ನು ಮಾರಾಟ ಮಾಡಿ ಕುದುರೆಯ ಜೀನು ಖರೀದಿಸಿದಂತೆ ಅಥವಾ ಬೆಣ್ಣೆಯನ್ನು ಕೊಟ್ಟು ಮಜ್ಜಿಗೆಯನ್ನು ಕೇಳಿದಂತೆ ಅನ್ನವನ್ನು ಒಗೆದು ಅದರ ಗಂಜಿ ಕುಡಿಯುವಂತೆ, ಹೀಗೆ ಸಕಾಮದ ಫಲದ ಭೋಗವಾಗಿರುವುದು ।೨೭೧॥ ಹೀಗೆ ಸಕಾಮ ಮತ್ತು ಅತ್ಯಂತ ದುರ್ಬುದ್ಧಿಯಾದವರು ಸ್ವಧರ್ಮದ ಸಿದ್ಧಿಯನ್ನು ಕಳೆದುಕೊಳ್ಳುವರು. ಆದ್ದರಿಂದ ದೇವನು ಅವರಿಗೆ ಕುಬುದ್ಧಿ ಎಂದು ಹೇಳುವನು. ಅವರ ಕುಬುದ್ಧಿಯ ಲಕ್ಷಣಗಳನ್ನು ಶ್ರೀಕೃಷ್ಣನು ಹೇಳುವನು ।೨೭೨॥

ಸಕಾಮ ಮನುಷ್ಯರ ಇಚ್ಛೆಗಳು ಎಂದಿಗೂ ಪೂರ್ಣವಾಗುವುದಿಲ್ಲ. ಕಾಮದ ಇಚ್ಛೆಯಿಂದ ಇವರು ಯಾವಾಗಲೂ ದೀನರಾಗಿರುವರು. ಆದ್ದರಿಂದ ಅವರಿಗೆ ಕೃಪಣರು ಎಂದು ಹೇಳುವರು ।೨೭೩॥ ನೀರಿನಲ್ಲಿ ಬಕಪಕ್ಷಿಯು ಮೀನಿಗಾಗಿ ಧ್ಯಾನವನ್ನು ಮಾಡುತ್ತ ನಿಂತುಕೊಂಡಿರುವುದು. ಅದರಂತೆಯೇ ಸಕಾಮ ಮನುಷ್ಯನ ಯಾವಾಗಲೂ ಫಲದ ಇಚ್ಛೆಯಿಂದ ಕರ್ಮದ ಅನುಷ್ಠಾನವನ್ನು ಮಾಡುತ್ತಿರುವನು ।೨೭೪॥ ವ್ಯಭಿಚಾರಿಸ್ತ್ರೀಯಳು ಪರಪುರುಷನಲ್ಲಿ ಹೋಗಲು ಸುಲಭವಾಗಲು ತನ್ನ ಪತಿಯ ಮುಂದೆ ಸುಮ್ಮನೇ ಕುಣಿಯುತ್ತಿರುವಳು. ಅದರಂತೆ ಸಕಾಮ ಮನುಷ್ಯನು ಮನದಲ್ಲಿ ಇಚ್ಛೆಯನ್ನಿಟ್ಟು ಸ್ವಧರ್ಮಾಚರಣೆ ಮಾಡುವನು ।೨೭೫॥ ಒಬ್ಬ ಬಾಲಕನು ಹೂವಿಗೆ ಫಲವೆನ್ನುವನು. ಅದರಂತೆ ಸಕಾಮ ಮನುಷ್ಯನು ತನ್ನ ಮೂರ್ಖತನದಿಂದ ಸ್ವರ್ಗಸುಖವೇ ಶಾಶ್ವತವೆನ್ನುವನು ।೨೭೬॥ ಆ ಸ್ವರ್ಗಸುಖದ ಪ್ರಾಪ್ತಿಗಾಗಿ ಕರ್ಮವು ಯಥಾಸಾಂಗ ಆಗುವುದೋ ಇಲ್ಲವೋ, ಎಂಬ ಸಂಶಯವು ಆತನಿಗಿರುವುದು. ಆದ್ದರಿಂದ ಅವನು ಅತ್ಯಂತ ದೀನನಾಗುವನು ।೨೭೭॥ ಸಕಾಮ ಮನುಷ್ಯನು ಸದಾ ದೀನನಾಗಿರುವನು. ಈ ದೀನತೆಯಿಂದ ಅವನು ಅತಿಶಯವಾಗಿ ಕೃಪಣನಾಗುವನು. ಕೃಪಣತೆಯಿಂದ ಬಲು ಲೋಭಿಯಾಗುವನು ಮತ್ತು ಆ ಲೋಭದಿಂದ ಅವನ ಜ್ಞಾನವನ್ನು ಮಹಾಮೋಹವು ನುಂಗಿಬಿಡುವುದು ।೨೭೮॥ ಒಮ್ಮೆ ಯಾವ ಮಹಾಮೋಹವು ಉಗ್ರವಾಯಿತೆಂದರೆ ಅದು ವಿವೇಕದೊಂದಿಗೆ ಜ್ಞಾನವನ್ನು ನುಂಗುವುದು. ಇದರಿಂದ ಬುದ್ಧಿಯಲ್ಲಿ ಅಂತರ್ಬಾಹ್ಯ ತಮೋಗುಣವು ತುಂಬಿಕೊಳ್ಳುವುದು ಮತ್ತು ಅದರ ಸ್ಥಿತಿಯು ಬೆಳೆಯುತ್ತ ಸಾಗುವುದು ।೨೭೯॥

ತಮೇ ಕೋಂದಾಟಲ್ಯಾ ವೃತ್ತೀ । ಧೂಮಾಂಕಿತ ಹೋಯ ಸ್ಥಿತೀ । ಜೇವೀ ಕಾ ಆಂಧಳ್ಯಾಚಾ ಸಾಂಗಾತೀ । ಆಂಧಾರೇ ರಾತೀ ಆಡವೀ ಚುಕೇ ।೨೮೦॥ ತ್ಯಾ ಆಂಧಳ್ಯಾಚೀ ಜೈಸೀ ಸ್ಥಿತೀ । ತೈಸೀ ಸಕಾಮಾಚೀ ಗತೀ । ಚುಕಲಾ ವಿವೇಕಾಚಾ ಸಾಂಗಾತೀ । ಆಂಧಳೀ ವೃತ್ತೀ ಅತಿಮುಗ್ಧ ।೨೮೧॥ ಜೈಸೇ ಕಾ ಅಜ್ಞಾನ ಬಾಳ । ತೈಸಾ ಮುಗ್ಧ ಹೋಯ ಕೇವಳ । ಕೋಣ ಕರ್ಮ ಕಾಯ ತೇ ಫಳ । ನೇಣೇ ವಿವಳ ಮುಗ್ಧತ್ವೇ ।೨೮೨॥ ಮಾಝ್ರಿ ಕೋಣೇ ಲೋಕೀ ಸ್ಥಿತೀ । ಪುಢೇ ಕೋಣ ಆಪುಲೀ ಗತೀ । ಹೇ ಕಾಹೀಂಚ ನ ಸ್ಮರೇ ಚಿತ್ತೀ । ಧೂಮ್ರವೃತ್ತೀ ದೇಹಾಂತು ।೨೮೩॥

ನ ತೇ ಮಾಮಂಗ ಜಾನಂತಿ ಹೃದಿಸ್ಥಂ ಯ ಇದಂ ಯತಃ । ಉಕ್ತಶಸ್ತ್ರಾ ಹ್ಯಸುತೃಪೋ ಯಥಾ ನೀಹಾರಚಕ್ಷುಷಃ ।೨೮॥

ಅರ್ಥ:- ಪ್ರಿಯ ಉದ್ಧವನೇ, ಇವರಲ್ಲಿ ಕರ್ಮವೇ ಸಾಧನೆಯಾಗಿರವುದು. ಮತ್ತು ಇಂದ್ರಿಯಗಳ ತೃಪ್ತಿಯೇ ಫಲವಾಗಿರುವುದು. ಅವರ ಕಣ್ಣುಗಳು ಮಸಕಾಗಿರುವುವು. ಆದ್ದರಿಂದ ಪರಮಾತ್ಮನು ಜಗತ್ತಿನ ಉತ್ಪತ್ತಿ ಮಾಡಿರುವನು, ಆತನು ಈ ಜಗತ್ತಿನ ರೂಪದಲ್ಲಿದ್ದಾನೆ, ನಮ್ಮ ಹೃದಯಸ್ಥದಲ್ಲಿದ್ದಾನೆ ಎಂಬುದು ಅವರಿಗೆ ತಿಳಿಯುವುದಿಲ್ಲ.

ವೇದತಾತ್ಪರ್ಯಾಚೇ ನಿಜಖುಣೇ । ತುವಾ ಪುಸಿಲೇ ಮಜಕಾರಣೇ । ತೀ ವೇದಾಚೀ ಗುಹ್ಯ ನಿರೂಪಣೇ । ತುಜಕಾರಣೇ ಮ್ಯಾ ನಿರೂಪಿಲೀ ।೨೮೪॥ ಪರಿಸೋನಿ ವೇದಾಚೇ ವಿಭಾಗ । ಉದ್ಧವ ಸುಖಾವಲಾ ಚಾಂಗ । ತೇಣೇ ಸಂತೋಷೇ ಶ್ರೀರಂಗ । ಸಂಬೋಖೋನಿ ''ಅಂಗ'' ಉದ್ಧವಾಸೀ ಮ್ಹಣೇ ।೨೮೫॥ ಜೋ ಮೀ ಹೃದಯಾಮಾಜಿಲೇ ವಸ್ತೀ । ಪರಮಾತ್ಮಾ ನಿಕಟವರ್ತೀ । ತ್ಯಾ ಮಾತೇ ಸಕಾಮ ನೇಣತೀ । ಕಾಮಾಸಕ್ತೀ ನಾಡಲೇ ।೨೮೬॥ ತೋ ಮೀ ಹೃದಯಾಮಾಜೀ ಅಸೇ । ಹೇ ಏಕಾದೇಶಿತ್ವ ಮಜ ನಸೇ । ಜಗದಾಕಾರೇ ಮೀಚಿ ಭಾಸೇ । ಜೇವೀ ಕಲ್ಲೋಳವಿಲಾಸೇ ಸಾಗರು ।೨೮೭॥ ಅಲಂಕಾರ ಝಾಲೇಪಣೇ । ಜೇವೀ ಅಸೇ ನಿಖಳಸೋನೇ । ತೇವೀ ಜಗದಾಕಾರೇ ಮ್ಯಾ ಶ್ರೀಕೃಷ್ಣೇ । ಪರಿಪೂರ್ಣ ಅಸಣೇ ಪೂರ್ಣತ್ವೇ ।೨೮೮॥ ನಾಮ ರೂಪ ವರ್ಣ ವಿವಿಧ । ಮಾಝೇನ ಪ್ರಕಾಶೇ ಜಗದ್‌ಬೋಧ । ಪರೀ ನಾಮರೂಪಜಾತಿ ಭೇದ । ಮಜಸೀ ಸಂಬಂಧ ಅಸೇನಾ ।೨೮೯॥ ಆಕಾಶ ಜಳೀ ಬುಡಾಲೇ ದಿಸೇ । ಪರೀ ತೇ ನ ಮಾಖೇ ಜಳರಸೇ । ತೇವೀ ಮೀ ಜಗದಾಕಾರೇ ಅಸೇ । ಜಗದಾದೀ ದೋಷೇ ಅಲಿಪ್ತ ।೨೯೦॥ ಐಸಾ ಮೀ ವಿಶ್ವಾತ್ಮಾ ವಿಶ್ವಂಭರು । ವಿಶ್ವಮೂರ್ತಿ ವಿಶ್ವೇಶ್ವರು । ತ್ಯಾ ಮಜ ನೇಣತೀ ಅಜ್ಞಾನ ನರು। ಜೇ ಕಾ ಶಿಶ್ನೋದರುಪೋಷಕ ।೨೯೧॥

ತಮೋಗುಣದ ವೃತ್ತಿಯು ಬೆಳೆಯಿತೆಂದರೆ ಹೊಗೆಯಲ್ಲಿ ಸಿಕ್ಕಿಕೊಂಡ ಅವಸ್ಥೆಯು ಉಂಟಾಗುವುದು. ಒಬ್ಬ ಕುರುಡನ ಸಂಗತಿಯಿಂದ ರಾತ್ರಿ ಅಡ್ಡದಾರಿಯಲ್ಲಿ ತಪ್ಪಿಸಿಕೊಂಡಂತೆ ಸ್ಥಿತಿಗತಿಯಾಗುವುದು ।೨೮೦॥ ಆ ಕುರುಡನ ಸ್ಥಿತಿಯು ಹೇಗಾಗುವುದೋ, ಅದೇ ಪ್ರಕಾರವಾಗಿ ಸಕಾಮ ಪುರುಷನ ಅವಸ್ಥೆಯಾಗುವುದು. ಒಮ್ಮೆ ವಿವೇಕದ ಸಂಗತಿಯು ತಪ್ಪಿದರೆ ಆಗ ಕುರುಡ ವ್ಯಕ್ತಿಯು ಅತ್ಯಂತ ಮುಗ್ಧವಾಗುವನು ।೨೮೧॥ ಸಕಾಮ ಪುರುಷನು ಅಜ್ಞಾನಿ ಬಾಲಕನಂತೆ ಅತ್ಯಂತ ಮುಗ್ಧನಾಗುವನು. ಈ ಮುಗ್ಧತೆಯಿಂದಲೇ ಆತನಿಗೆ ಕರ್ಮ ಯಾವುದು ಮತ್ತು ಫಲ ಯಾವುದು ಎಂಬುವುದು ಯಾವುದೂ ತಿಳಿಯುವುದಿಲ್ಲ ।೨೮೨॥ ನಾನು ಯಾವ ಲೋಕದಲ್ಲಿರುವೆ, ಮುಂದೆ ನನ್ನ ಗತಿಯು ಏನಾದೀತು? ಎಂಬುವುದು ಆತನಿಗೆ ತಿಳಿಯುವುದಿಲ್ಲ ಮತ್ತು ಮರಣದ ನಂತರ ಆತನಿಗೆ ಧೂಮ್ರಮಾರ್ಗವು ಪ್ರಾಪ್ತವಾಗುವುದು ।೨೮೩॥

ವೇದದ ಗೂಢವಾದ ಸಾರವನ್ನು ನೀನು ನನಗೆ ಕೇಳಿದ್ದಕ್ಕೆ ನಾನು ನಿನಗಾಗಿ ಈ ವೇದದ ರಹಸ್ಯವನ್ನು ನಿರೂಪಣೆಯೊಂದಿಗೆ ಸ್ಪಷ್ಟ ಮಾಡಿ ಹೇಳಿರುವೆನು ।೨೮೪॥ ಈ ಯಾವ ವೇದದ ವಿಭಾಗವನ್ನು ಕೇಳಿ ಉದ್ಧವನಿಗೆ ಬಹಳ ಸಂತೋಷವಾಯಿತು. ಇದರಿಂದ ಶ್ರೀಕೃಷ್ಣನಿಗೂ ಕೂಡ ಅತಿಶಯವಾಗಿ ಆನಂದ ಉಂಟಾಯಿತು. ಆಗ ಆತನು ಉದ್ಧವನಿಗೆ ''ಹೇ ಅಂಗ'' ಎಂದು ಸಂಬೋಧಿಸಿ ಹೇಳಹತ್ತಿದನು ।೨೮೫॥ ನಾನು ಸರ್ವರ ಹೃದಯಲ್ಲಿರುವೆನು,ವಿರಾಜಮಾನನಾಗಿರುವೆನು. ಅತ್ಯಂತ ಸಮೀಪನಾಗಿರುವ ನಾನು ಪರಮಾತ್ಮನು, ಹೀಗಿರುವ ನನಗೆ ಆ ಸಕಾಮ ಜನರು ತಿಳಿಯುವುದಿಲ್ಲ. ಇಷ್ಟೊಂದು ಕಾಮದ ಆಸಕ್ತಿಯಲ್ಲಿ ಅವರು ಸಿಲುಕಿಕೊಂಡಿರುವರು ।೨೮೬॥ ನಾನು ಹೃದಯಲ್ಲಿರುವೆ ಎಂಬುವುದು ನಿಜವಾಗಿದ್ದರೂ ಅಷ್ಟೇ ನನ್ನ ಏಕದೇಶೀ ಆಗುವುದಿಲ್ಲ. ಸಮುದ್ರವು ಯಾವ ಪ್ರಕಾರವಾಗಿ ತೆರೆಗಳ ರೂಪದಿಂದ ಭಾಸವಾಗುವುದೋ ಅದೇ ಪ್ರಕಾರವಾಗಿ ನಾನು ಜಗದಾಕಾರದಿಂದ ಭಾಸನಾಗುತ್ತಿರುವೆನು ।೨೮೭॥ ಅಲಂಕಾರರೂಪವನ್ನು ಧರಿಸಿದರೂ ಬಂಗಾರವು ಹೇಗೆ ಶುದ್ಧವಾಗಿ ಇರುವುದೋ ಅದೇ ಪ್ರಕಾರವಾಗಿ ಶ್ರೀಕೃಷ್ಣನಾದ ನಾನು ಜಗದಾಕಾರದಿಂದ ಪರಿಪೂರ್ಣನಾಗಿರುವೆನು ।೨೮೮॥ ನಾಮ, ರೂಪ ಮತ್ತು ಅನೇಕ ಪ್ರಕಾರದ ವರ್ಣಗಳು ಇತ್ಯಾದಿ ಸರ್ವ ಪ್ರಕಾರಗಳ ಭಾಸವು ನನ್ನಿಂದಲೇ ಅನುಭವಕ್ಕೆ ಬರುತ್ತಿರುವುವು. ಆದರೆ ನಿಜವಾಗಿ ನೋಡಿದರೆ ನಾಮ, ರೂಪ ಮತ್ತು ವರ್ಣ ಈ ಭೇದದಲ್ಲಿ ನನ್ನ ಯಾವ ಸಂಬಂಧವಿರುವುದಿಲ್ಲ ।೨೮೯॥ ಆಕಾಶವು ಯಾವ ಪ್ರಕಾರವಾಗಿ ಸಮುದ್ರದಲ್ಲಿ ಮುಳುಗಿರುವಂತೆ ತೋರಿದರೂ ಕೂಡ ಅದು ಎಂದಿಗೂ ನೀರಿನಿಂದ ತೋಯ್ದಿರುವಂತೆ ಕಾಣುವುದಿಲ್ಲವೋ, ಅದೇ ಪ್ರಕಾರವಾಗಿ ನಾನು ಜಗದಾಕಾರದಿಂದ ತೋರುತ್ತಿದ್ದರೂ ಕೂಡ ಜಗತ್ತಿನ ದೋಷಗಳಿಂದ ನಾನು ಪರಿಪೂರ್ಣವಾಗಿ ಅಲಿಪ್ತನಾಗಿರುವೆನು ।೨೯೦॥ ಹೀಗೆ ನಾನು ವಿಶ್ವಾತ್ಮಾ, ವಿಶ್ವಂಭರ, ವಿಶ್ವಮೂರ್ತಿ, ವಿಶ್ವೇಶ್ವರನಾಗಿರುತ್ತಿರಲು ವಿಷಯಗಳಿಂದ ಆಸಕ್ತನಾಗಿರುವ ಶಿಶ್ನೋದರ ಪರಾಯಣರಾದ ಅಜ್ಞಾನಿ ಜನರು ನನ್ನನ್ನು ತಿಳಿಯಲಾರರು ।೨೯೧॥

ಜ್ಯಾಸೀ ಆಂಧಾರೇ ದಾಟೇ ಗಾಢೇ । ಕಾ ಮಹಾಕುಹರೀ ಜೋ ಸಾಂಪಡೇ । ತೋ ಕಾಂಹೀ ನ ದೇಖೇ ಪುಢೇ । ಅವಚಿತಾ ಪಡೇ ಮಹಾಗರ್ತೀ ।।೯೨।। ತೇವೀ ಅತಿಮೋಹಮಮತಾಭ್ರಾಂತೇ । ಅಜ್ಞಾನನಿದ್ರಾ ಸಬಾಹ್ಯ ವ್ಯಾಪ್ತೇ । ಜವಳಿಲ್ಯಾ ನ ದೇಖೋನಿ ಮಾತೇ । ಪಡಿಲೇ ಮಹಾಗರ್ತೇ ತಮಾಮಾಜೀ ।।೯೩।। ನ ಕಳೋನಿ ಮಾಝ್ಯಾ ವೇದಾರ್ಥಾತೇ । ಕೇವಳ ಜೇ ಕಾ ಕಾಮಾಸಕ್ತೇ । ತೀ ಪಾವಲೀ ಅಧಃಪಾತಾತೇ । ಜವಳಿಲ್ಯಾ ಮಾತೇ ನೇಣೋನಿ ।।೯೪।। ತೋ ಮೀ ಜವಳೀ ಕೈಸಾ ಮ್ಹಣಸೀ । ತರೀ ಸರ್ವಾಂಚ್ಯಾ ಹೃದಯದೇಶೀ । ವಸತಸೇ ಅಹರ್ನಿಶೀ । ಚೇತನೇಸೀ ಚೇತವಿತಾ ।।೯೫।। ತ್ಯಾ ಮಾಝ್ಯೇ ವೇದಾರ್ಥಮತ । ನೇಣತೀಚಿ ಕಾಮಾಸಕ್ತ । ತೇಚಿವಿಖೀ ಶ್ರೀಕೃಷ್ಣನಾಥ । ವಿಶದಾರ್ಥ ಸ್ವಯೇ ಸಾಂಗೇ ।।೯೬।।

ತೇ ಮೇ ಮತಮವಿಜ್ಞಾಯ ಪರೋಕ್ಷಂ ವಿಷಯಾತ್ಮಕಾಃ । ಹಿಂಸಾಯಾಂ ಯದಿ ರಾಗಃ ಸ್ಯಾದ್ ಯಜ್ಞ ಏವ ನ ಚೋದನಾ ।।೯।।

ಅರ್ಥ:- ಯಾರ ಚಿತ್ತವು ವಿಷಯಗಳಲ್ಲಿ ಅತಿಶಯ ಆಸಕ್ತಿಯಾಗಿರುವುದೋ, ಅವರು ನನ್ನ ಅಸ್ಪಷ್ಟ ಮತವನ್ನು ಸರಿಯಾಗಿ ತಿಳಿಯದೇ ಅಭಕ್ಷ್ಯ ಭಕ್ಷಣೆ ಅಥವಾ ಫಲದ ವಿಷಯಕ್ಕೆ ಕಾಮನೆಯಾದರೆ ಯಜ್ಞದಲ್ಲಿಯೇ ತೃಪ್ತಿ ಪಡೆಯಬೇಕು. ಹೀಗೆ ಆಜ್ಞೆಯ ಮುಖಾಂತರ ಈ ವಿಧಿವಿರುವುದು. ಆದರೆ ಆ ಹಿಂಸೆಯ ವಿಷಯಕ್ಕೆ ಅತ್ಯಂತ ಅವಶ್ಯಕ ವಿಧಿವಿರುವುದಿಲ್ಲ.

ಮಾಝ್ಯಾ ವೇದಾಚಾ ಅಗಮ್ಯ ಭಾವೋ । ನ ಕಳೋನಿ ಗೂಢ ಅಭಿಪ್ರಾವೋ । ತೇಣೇ ಸಕಾಮಾಸೀ ಉತ್ಸಾಹೋ । ಸ್ವರ್ಗಾತೇ ಪಹಾ ಹೋ ಮಾನಿತೀ ಸತ್ಯ ।।೯೭।। ''ರೋಚನಾರ್ಥ'' ಸ್ವರ್ಗ ಬೋಲೇ ವೇದ । ತೋ ಪ್ರಗಟಾರ್ಥ ಮಾನೂನಿ ಶುದ್ಧ । ಮಗ ಸ್ವರ್ಗ ಸಾಧನೇ ವಿವಿಧ । ಕಾಮಲುಬ್ಧ ಆದರತೀ ।।೯೮।। ತೇಥ ಯಜ್ಞ ಹೇ ಮಿಷಮಾತ್ರ ಜಾಣ । ಸ್ವಯೇ ಕರಾವಯಾ ಮಾಂಸಭಕ್ಷಣ । ಅವಿಧೀ ಕರಿತೀ ಪಶುಹನನ । ಅತಿದೃಪ್ತ ಜಾಣ ಕಾಮಾರ್ಥೀ ।।೯೯।। ತ್ಯಾಂಸೀ ಪೈ ಗಾ ದೇಹಾಂತೀ । ಮಾರಿಲೇ ಪಶು ಮಾರಾವಯಾ ಯೇತೀ । ಹಾತೀ ಘೇಊನಿ ಖಡ್ಗ ಕಾತೀ । ಸೂಡ ಘೇತೀ ಯಮದ್ವಾರೀ ।।೧೦೦।। ತೇಥ ಕೈಚೇ ಸ್ವರ್ಗಸುಖ । ಅವಿಧಿ-ಸಾಧನೇ ಮಹಾಮೂರ್ಖ । ಪಾವಲೇ ಗಾ ಅಘೋರ ನರಕ । ಸಕಾಮೇ ದೇಖ ನಾಡಳೇ ।।೧೦೧।। ಯಥೇಷ್ಟ ಕರಾವಯಾ ಮಾಂಸಭಕ್ಷಣ । ಸ್ವೇಚ್ಛಾ ಜೇ ಕಾ ಪಶುಹನನ । ತ್ಯಾಂಸೀ ವೇದೇ ಕೇಲೇ ನಿರ್ಬಂಧನ । ಪಶುಹನನ ಯಜ್ಞಾರ್ಥ ।।೧೦೨।। ತೇಥಹೀ ಅರ್ಗಳಾ ಘಾತಲೀ ಜಾಣ । ದೇಶ ಕಾಳ ಆಣಿ ವರ್ತಮಾನ । ಮಂತ್ರ ತಂತ್ರ ವಿಧಿ ವಿಧಾನ । ಧನ ಸಂಪೂರ್ಣ ಅತಿಶುದ್ಧ ।।೧೦೩।।

ಯಾರ ಕಣ್ಣುಗಳಿಗೆ ಕತ್ತಲು ಕವಿಯುವುದೋ ಅಥವಾ ಯಾವನು ಭಯಂಕರ ಆಳವಾಗಿರುವ ಗುಹೆಯಲ್ಲಿ ಸಿಕ್ಕಿಕೊಳ್ಳುವನೋ, ಆತನಿಗೆ ಮುಂದಿನ ಮಾರ್ಗವು ಏನೂ ಕಾಣುವುದಿಲ್ಲ. ಅವನು ಅಕಸ್ಮಾತ ದೊಡ್ಡ ತೆಗ್ಗಿನಲ್ಲಿ ಬೀಳುವನು ।।೯೨।। ಅದರಂತೆ ಅತ್ಯಂತ ಮೋಹಮಾಯೆಯ ಭ್ರಾಂತಿಯಲ್ಲಿ ಮತ್ತು ಅಜ್ಞಾನರೂಪ ನಿದ್ರೆಯಲ್ಲಿ ಒಳಹೊರಗೆ ವ್ಯಾಪ್ತನಾಗಿ ಸಮೀಪವಾಗಿರುವ ಹೃದಯದಲ್ಲಿನ ನನಗೆ ನೋಡಲಾರರು. ಅಜ್ಞಾನದ ವಿಷಯಗಳ ಮಡುವಿನಲ್ಲಿ ಹೋಗಿ ಜಾರಿ ಬೀಳುವರು ।।೯೩।। ನನ್ನ ವೇದದ ಅರ್ಥವು ತಿಳಿಯಲಾರದ್ದಕ್ಕೆ ಅವರು ಅತಿಶಯವಾಗಿ ಕಾಮದಿಂದ ಆಸಕ್ತರಾಗುವರು. ಈ ಜನರು ನಾನು ಸಮೀಪನಾಗಿದ್ದರೂ ಕೂಡ ನನ್ನನ್ನು ಅರಿಯಲಾರರು. ಇದರಿಂದ ಅವರು ಅಧಃಪಾತರಾಗುವರು ।।೯೪।। ನಾನು ಸಮೀಪ ಹೇಗಿರುವೆ ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು ಅಜ್ಞಾನಕ್ಕೆ ಪ್ರಕಾಶವನ್ನು ಕೊಡುವವನಾದ ನಾನು ಸರ್ವರ ಹೃದಯದಲ್ಲಿ ಅಹೋರಾತ್ರಿ ಇರುವೆನು ।।೯೫।। ಈ ಯಾವ ನಿಜವಾದ ವೇದದ ಅರ್ಥವು ಕಾಮದಿಂದ ಆಸಕ್ತನಾದ ಮನುಷ್ಯನಿಗೆ ತಿಳಿಯುವುದಿಲ್ಲ. ಈ ವಿಷಯಕ್ಕಾಗಿ ಭಗವಾನ ಶ್ರೀಕೃಷ್ಣನು ಮುಂದೆ ಹೇಳುವನು ।।೯೬।।

ನನ್ನ ವೇದಾರ್ಥವು ಅತ್ಯಂತ ಅಗಮ್ಯವಾಗಿರುವುದು ಅದರಲ್ಲಿನ ಗೂಢಾರ್ಥವು ತಿಳಿಯಲಾರದ್ದಕ್ಕೆ ಸಕಾಮ ಜನರು ಯಾವ ಸ್ವರ್ಗಕ್ಕೇನೇ ಸತ್ಯವೆಂದು ತಿಳಿದಿರುವರು ।।೯೭।। ಕೇವಲ ರುಚಿಯನ್ನು ನಿರ್ಮಾಣವಾಗುವುದಕ್ಕಾಗಿ ವೇದವು ಸ್ವರ್ಗದ ವರ್ಣನೆಯನ್ನು ಮಾಡಿರುವುದು. ಆದರೆ ಈ ವರ್ಣನೆಯು ನಿಜವೆಂದು ತಿಳಿದು ಕಾಮದಿಂದ ಆಸಕ್ತರಾದ ಜನರು ಸ್ವರ್ಗಪ್ರಾಪ್ತಿಯ ಇಚ್ಛೆಯಿಂದ ಬಹಳ ಆದರದಿಂದ ಅನೇಕ ಪ್ರಕಾರದ ಸಾಧನೆಗಳ ಅನುಷ್ಠಾನಗಳನ್ನು ಮಾಡುವರು ।।೯೮।। ಸ್ವತಃಕ್ಕೆ ಅಭಕ್ಷ್ಯಭಕ್ಷಣವನ್ನು ಮಾಡಬೇಕೆಂದು ತಿಳಿದು ಅವರು ಯಜ್ಞದ ನಿಮಿತ್ತವನ್ನು ಮುಂದುಮಾಡುವರು. ತಮ್ಮ ಇಚ್ಛೆಯು ಪೂರ್ಣವಾಗುವುದಕ್ಕಾಗಿ ಅವರ ಪ್ರವೃತ್ತಿಯು ದೃಢವಾಗಿರುವುದರಿಂದ ಅವಿಧಿಯಿಂದ ಪಶುಗಳನ್ನುಕೊಲ್ಲುವರು ।।೯೯।। ಇಂತಹ ಜನರು ಮರಣವಾದಮೇಲೆ ಅವೇ ಪಶುಗಳು ಇವರನ್ನು ಕೊಲ್ಲಲು ಬರುವುವು. ಕೈಯಲ್ಲಿ ಝಳಪಿಸುತ್ತಿರುವ ಖಡ್ಗಗಳನ್ನು ತೆಗೆದುಕೊಂಡು ಸೇಡು ತೀರಿಸಿಕೊಳ್ಳಲು ಅವು ಯಮನ ಬಾಗಿಲಲ್ಲಿ ನಿಂತಿರುವುವು ।।೧೦೦।। ಅಂದಮೇಲೆ ಸತ್ತ ನಂತರ ಇವರಿಗೆ ಸ್ವರ್ಗಸುಖವು ಹೇಗೆ ಸಿಗಬೇಕು? ಶಾಸ್ತ್ರವಿರುದ್ಧ ಕರ್ಮಗಳನ್ನು ಮಾಡಿ ಆ ಮೂರ್ಖ ಜನರು ಘೋರವಾದ ನರಕದಲ್ಲಿ ಬೀಳುವರು. ಸಕಾಮ ಜನರ ಇಂತಹ ಅವಸ್ಥೆಯಾಗುತ್ತಿರುವುದು ।।೧೦೧।। ಯಥೇಚ್ಛೆಯಾಗಿ ಮಾಂಸ ಭಕ್ಷಣೆಗಾಗಿ ತಮ್ಮ ಮನಬಂದಂತೆ ಪಶುಗಳನ್ನು ಕೊಲ್ಲುವುದನ್ನು ನಿಲ್ಲಿಸುವುದಕ್ಕಾಗಿ ವೇದವು ಕೇವಲ ಯಜ್ಞಕ್ಕಾಗಿ ಪಶುವಿನ ಹನನ ಮಾಡಬೇಕೆಂದು ತನ್ನ ವಿಚಾರವನ್ನು ಮಂಡಿಸಿರುವುದು ।।೧೦೨।। ಅದರಲ್ಲಿಯೂ ಅನೇಕ ಪ್ರಕಾರದ ಪ್ರತಿಬಂಧನೆಯಿಟ್ಟಿರುವುದು. ಕಾಲ, ವರ್ತಮಾನ, ತಂತ್ರ - ಮಂತ್ರ, ವಿಧಿ - ವಿಧಾನ ಮತ್ತು ದ್ರವ್ಯ ಇವೆಲ್ಲವೂ ಕೂಡ ಪವಿತ್ರವಾಗಿರಬೇಕು ।।೧೦೩।।

ಶಕ್ತ ಸಜ್ಞಾನ ಧನವಂತ । ಐಸಾ ಕರ್ತಾ ಪಾಹಿಜೇ ಯೇಥ । ಮುಷ್ಟಿಘಾತೇ ಕರಾವಯಾ ಪಶುಘಾತ । ಪಡೇ ಪ್ರಾಯಶ್ಚಿತ್ತ ''ಮೇ'' ಮ್ಹಣತಾ ।೩೦೪॥ ಐಶೀ ವೇದಾಜ್ಞಾ ನಾನಾ ಅವಘಡ । ಘಾತಲೀ ಪ್ರಾಯಶ್ಚಿತ್ತೇ ಅತಿಗೂಢ । ತರೀ ಸಕಾಮ ಜೇ ಮಹಾಮೂಢ । ತೇ ಧಾಂವತೀ ದೃಢ ಪಶುಹನನಾ ।೩೦೫॥ ಐಸೇ ಝಾಲ್ಯಾ ಪಶುಹನನ । ವಿಭಾಗಾ ಯೇಈಲ ಕವಳ ಪ್ರಮಾಣ । ತೇಚಿ ಕರಾವೇ ಭಕ್ಷಣ । ದಾತಾಂಸೀ ಜಾಣ ನ ಲಾಗತಾ ।೩೦೬॥ ವಿಭಾಗ ಭಕ್ಷಿತಾ ಆಪಣ । ಜೋ ಕರೀ ರಸಸ್ವಾದನ । ತ್ಯಾಸೀಹೀ ಪ್ರಾಯಶ್ಚಿತ್ತ ಜಾಣ। ಹೇಹೀ ನಿರ್ಬಂಧನ ವೇದೇ ಕೇಲೇ ।೩೦೭॥ ಕರಾವೇ ಮಾಂಸಭಕ್ಷಣ । ಹೇ ವೇದಾಜ್ಞಾ ನಾಹೀ ಜಾಣ । ತ್ಯಾಚೇ ಕರಾವಯಾ ನಿರಾಕಾರಣ । ಲಾವಿಲೇ ವಿಧಾನ ಯಜ್ಞಾಚೇ ।೩೦೮॥ ಸ್ವೇಚ್ಛಾ ಪಶು ನ ಮಾರಾವಯಾ ಜಾಣ । ಯಜ್ಞೀ ನೇಮಿಲೇ ಪಶುಹನನ । ನ ಕರಾವಯಾ ಮಾಂಸಭಕ್ಷಣ । ನೇಮಿಲಾ ಪ್ರಮಾಣ ತಜ್ಞಭಾಗ ।೩೦೯॥ ಹೇಹೀ ವೇದಾಚೇ ಬೋಲಣೇ । ಮೂರ್ಖಪ್ರಲೋಭಾಕಾರಣೇ । ಯೇರ್ಥ್ವೀ ಪಶುಹಿಂಸಾ ನ ಕರಣೇ । ಮಾಂಸ ನ ಭಕ್ಷಣೇ ಹೇ ವೇದಗುಹ್ಯ ।೩೧೦॥

ಹಿಂಸಾವಿಹಾರಾ ಹ್ಯಾಲಬ್ಧೈ: ಪಶುಭಿ: ಸ್ವಸುಖೇಚ್ಛಯಾ । ಯಜಂತೇ ದೇವತಾ ಯಜ್ಞೈ: ಪಿತೃಭೂತಪತೀನ್ ಖಲಾ: ।೩೦॥

ಅರ್ಥ:- ಅಜ್ಞಾನದಿಂದ ಹಿಂಸೆಯ ಕ್ರೀಡೆ ನಡೆಯುವ ಅಂತಹ ದುಷ್ಟ ಜನರು ತಮ್ಮ ಸುಖದ ಇಚ್ಛೆಯಿಂದ ಹಿಂಸೆ ಮಾಡಿದ ಪಶುವಿನಿಂದ ಹಿಂಸೆ ಪ್ರಚುರ ಅಜ್ಞಾನಿ ದೇವತೆಗಳ, ಪಿತೃಗಳ ಮತ್ತು ಭೂತಾದಿಗಳ ಯಜನವನ್ನು ಮಾಡುತ್ತಿರುವರು.

ನ ಮಾನೂನಿ ವೇದವಿಧಾನಾಸೀ । ಪಶುಹನನೀ ಕ್ರೀಡಾ ಜ್ಯಾಂಸೀ । ಅವಿಧಿ ಮಾರುನಿ ಪಶೂಂಸೀ । ಮಿರವಿತೀ ಶ್ಲಾಘೇಸೀ ಯಾಜ್ಞಿಕತ್ವೇ ।೩೧೧॥ ಅವಿಧೀ ಕರೂನಿ ಜೀವಹನನ । ತೇಣೇ ಪಶೂನೇ ಕರಿತೀ ಯಜ್ಞ । ಪಿತೃದೇವಭೂತಗಣ । ಕರಿತೀ ಯಜನ ಸುಖೇಚ್ಛಾ ।೩೧೨॥ ಬಾಬಡೇ ಬೀಜ ಪೇರಿಲ್ಯಾ ಶೇತೀ । ಪಿಕಾಸ ನಾಡಲೇ ನಿಶ್ಚಿತೀ । ಶೇಖೀ ನಿಜಬೀಜಾ ನಾಗವತೀ । ರಾಜೇ ದಂಡೂನಿ ಘೇತಿ ಕರಭಾರ ।೩೧೩॥ ತೈಶೀ ಅವಿಧೀ ಯಾಜ್ಞಿಕಾಂಚೀ ಗತೀ । ಸ್ವರ್ಗ ಸ್ವಪ್ನೀಹೀ ನ ದೇಖತೀ । ಥಿತ್ಯಾ ನರದೇಹಾ ನಾಗವತೀ । ಶೇಖೀ ದುಃಖ ಭೋಗೀತೀ ಯಮದಂಡೇ ।೩೧೪॥ ವೃಥಾ ಪುಶೂಂಸ ದೇಖ ದೇತೀ । ತೇಣೇ ದುಃಖೇ ಸ್ವಯೇ ದುಃಖೀ ಹೋತೀ । ಐಶೀ ಯಾಜ್ಞಿಕಾಂಚೀ ಗತೀ । ಆಶ್ಚರ್ಯ ಶ್ರೀಪತೀ ಸಾಂಗತ ।೩೧೫॥

ಕರ್ತನು ಶಕ್ತಿಮಾನ, ಜ್ಞಾನಸಂಪನ್ನ ಮತ್ತು ಶ್ರೀಮಂತನಾಗಿರಬೇಕು. ಕಾರಣ ಒಂದೇ ಮುಷ್ಟಿಯ ಹೊಡೆತಕ್ಕೆ ಪಶುಪ್ರಾಣಬಿಡಬೇಕು. ಒಂದು ವೇಳೆ ಅದು ಮೇ, ಮೇ ಎಂದು ಒದರಲು ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುವುದು ।೩೦೪॥ ವೇದಾಜ್ಞೆಯು ಬಹು ಕಠಿಣವಾಗಿರುವುದು. ಅದರಲ್ಲಿ ಅನೇಕ ಪ್ರಕಾರದ ಪ್ರಾಯಶ್ಚಿತ್ತಗಳನ್ನು ಹೇಳಲಾಗಿರುವುದು. ಹೀಗಿದ್ದರೂ ಸಕಾಮ ಮಹಾಮೂರ್ಖರು ಪಶುಗಳನ್ನು ವಧಿಸಲು ಧಾವಿಸುತ್ತಿರುವರು ।೩೦೫॥ ಹೀಗೆ ಪಶುವಧೆಯನ್ನು ಮಾಡಿದ ನಂತರವೂ ಮಾಂಸದ ಭಾಗ ಎಷ್ಟು ತೆಗೆದುಕೊಳ್ಳಬೇಕೆಂಬುವ ಪ್ರಮಾಣವನ್ನೂ ಕೂಡ ಹೇಳಿರುವುದು. ಹಲ್ಲಿಗೆ ಹತ್ತಲಾದಷ್ಟು ಮಾಂಸ ಮಾತ್ರ ಭಕ್ಷಣೆ ಮಾಡಬೇಕು ।೩೦೬॥ ತಮ್ಮ ಭಾಗವನ್ನು ಬಹು ಪ್ರೀತಿಯಿಂದ ರುಚಿ ಸವಿಯುತ್ತ ತಿನ್ನುವವರಿಗೂ ಕೂಡ ವೇದವು ಪ್ರಾಯಶ್ಚಿತ್ತವನ್ನು ಹೇಳಿರುವುದು. ಹೀಗೆ ವೇದದಲ್ಲಿ ಅನೇಕ ಪ್ರಕಾರದ ನಿರ್ಬಂಧನೆಗಳಿರುವುವು ।೩೦೭॥ ಇದರಿಂದ ತಿಳಿಯುವುದೇನೆಂದರೆ ಮಾಂಸ ಭಕ್ಷಣೆ ಮಾಡಬೇಕೆಂಬ ವೇದದ ಆಜ್ಞೆಯು ಇರದೇ, ಇದರಿಂದ ನಿವೃತ್ತವಾಗುವ ವಿಧಾನವಾಗಿದೆ ಎಂದು ನೀನು ತಿಳಿ ।೩೦೮॥ ತನ್ನ ಇಚ್ಛಾನುಸಾರವಾಗಿ ಪಶುಗಳ ವಧೆಯನ್ನು ಮಾಡಬಾರದೆಂದು ಯಜ್ಞದಲ್ಲಿ ಪಶುವನ್ನು ಕೊಲ್ಲುವ ನಿಯಮವನ್ನು ಹಾಕಿ ಕೊಟ್ಟಿರುವುದು ಮತ್ತು ಮಾಂಸ ಭಕ್ಷಣೆಯನ್ನು ಮಾಡಲೇಬಾರದೆಂದು ಯಜ್ಞದಲ್ಲಿನ ಭಾಗಕ್ಕೆ ಪ್ರಮಾಣವನ್ನು ಹೇಳಿಟ್ಟಿರುವುದು ।೩೦೯॥ ಆದರೆ ಇದನ್ನೂ ಕೂಡ ಹೇಳುವಿಕೆಯು ಕಾಮದಿಂದ ಆಸಕ್ತರಾಗಿರುವ ಮೂರ್ಖ ಜನರಿಗಾಗಿ ಇರುವುದು. ವಾಸ್ತವಿಕವಾಗಿ ನೋಡಲು ಪಶುಹಿಂಸೆಯನ್ನು ಮಾಡಬಾರದು, ಮಾಂಸ ಭಕ್ಷಣೆಯನ್ನು ವರ್ಜಿಸಬೇಕೆಂಬುವುದೇ ನಿಜವಾದ ವೇದದ ಗುಟ್ಟಾಗಿರುವುದು ।೩೧೦॥

ವೇದದ ಈ ವಿಧಿಯನ್ನು ಮನ್ನಿಸದೇ ಅಭಿರುಚಿಯಿಂದ ಪಶುಹತ್ಯೆಯನ್ನು ಮಾಡುವರು. ಪಶುವಿನ ಜೀವ ತೆಗೆದು ಯಜ್ಞತ್ವದ ಪ್ರೌಢತ್ವವನ್ನು ಮೆರೆಯಿಸುವರು ।೩೧೧॥ ಅವಿಧಿಯಿಂದ ಜೀವ ಹಿಂಸೆಯನ್ನು ಮಾಡಿ ಪಶುವಿನಿಂದ ಯಜ್ಞವನ್ನು ಮಾಡುವುದು ಮತ್ತು ಪಿತೃಗಣ, ಭೂತಗಣಗಳಿಗೆ ಹವಿರ್ಭಾಗವನ್ನು ಅರ್ಪಿಸುವರು ।೩೧೨॥ ಪೊಳ್ಳಾದ ಬೀಜಗಳನ್ನು ಹೊಲದಲ್ಲಿ ಬಿತ್ತಿದರೆ ಅವುಗಳಿಗೆ ಯಾವ ಅಂಕುರವೂ ಹುಟ್ಟುವುದಿಲ್ಲ. ಆ ಎಲ್ಲ ಬೀಜಗಳು ವ್ಯರ್ಥವಾಗುವುವು. ಸರಕಾರಕ್ಕೆ ಕರ ಮಾತ್ರ ತುಂಬಬೇಕಾಗುವುದು ।೩೧೩॥ ಯಾರು ಅವಿಧಿಯಿಂದ ಯಜ್ಞ ಮಾಡುವರೋ, ಅವರ ಗತಿಯು ಹೀಗೆಯೇ ಆಗುವುದು. ಸ್ವರ್ಗ ಮಾತ್ರ ಅವರ ಸ್ವಪ್ನದಲ್ಲಿಯೂ ಕಾಣುವುದಿಲ್ಲ ಮತ್ತು ಅಮೌಲ್ಯವಾದ ನರದೇಹವು ವ್ಯರ್ಥವಾಗಿ ಕಳೆದುಕೊಂಡು, ಕೊನೆಗೆ ಭಯಂಕರವಾದ ಯಮಯಾತನೆಗಳನ್ನು ಭೋಗಿಸುತ್ತಾ ಇರುವರು ।೩೧೪॥ ಪಶುವಿಗೆ ವ್ಯರ್ಥವಾಗಿ ಕ್ಲೇಶಕೊಟ್ಟು ತಾವು ಸ್ವತಃ ದುಃಖಿಯಾಗುವರು. ಈ ರೀತಿ ಯಾಜ್ಞಿಕರ ಸ್ಥಿತಿಯಾಗುವುದು. ಇದನ್ನೇ ಈಗ ಭಗವಾನ ಶ್ರೀಕೃಷ್ಣನು ಹೇಳುವನು ।೩೧೫॥

ಸ್ವಪ್ನೋಪಮಮಮುಂ ಲೋಕಮಸಂತಂ ಶ್ರವಣ ಪ್ರಿಯಮ್ । ಆಶಿಷೋ ಹೃದಿ ಸಂಕಲ್ಪ್ಯ ತ್ಯಜಂತ್ಯರ್ಥಾನ್ ಯಥಾ ವಣಿಕ್ ।೩೧॥

ಅರ್ಥ:- ಹೇ ಉದ್ಧವಾ, ಸ್ವರ್ಗಾದಿ ಪರಲೋಕಗಳು ಸ್ವಪ್ನಸಮಾನವಾಗಿರುವುವು. ವಾಸ್ತವಿಕವಾಗಿ ಅವು ಅಸತ್ಯವಾಗಿರುವುವು. ಕೇವಲ ಅವರ ಬಗ್ಗೆ ಮಾತುಗಳನ್ನು ಕೇಳಲು ರುಚಿ ಎನಿಸುವುವು. ಸಕಾಮ ಪುರುಷರು ಅಲ್ಲಿನ ಭೋಗಗಳನ್ನು ಭೋಗಿಸುವುದಕ್ಕಾಗಿ ಮನದಲ್ಲಿಯೇ ಅನೇಕ ಪ್ರಕಾರದ ಸಂಕಲ್ಪಗಳನ್ನು ಮಾಡುವರು. ಕೆಲವು ವ್ಯಾಪಾರಿಗಳು ಹೆಚ್ಚಿನ ಲಾಭದ ಆಶೆಯಿಂದ ತಮ್ಮ ಮೂಲ ಧನವನ್ನೇ ಕಳೆದುಕೊಳ್ಳುವಂತೆ ಸಕಾಮಿ ಜನರು ಯಜ್ಞಕ್ಕಾಗಿ ತಮ್ಮ ಹಣವನ್ನು ನಾಶಗೊಳಿಸುವರು.

ಸ್ವಪ್ನೀ ದಿಸೇ ಸವೇಂಚಿ ನಾಸೇ । ತೇವೀ ವಿಕಲ್ಪೇನಿ ಜಗ ಭಾಸೇ । ಯೇಥ ಸಕಾಮ ಕಾಮನಾಪಿಸೇ । ಸ್ವರ್ಗ ವಿಶ್ವಾಸೇ ಮಾನಿತೀ ಸತ್ಯ ।೩೧೬॥ ಮುಳೀಂಚ ಮಿಥ್ಯಾ ಮೃಗಜಳ । ತ್ಯಾಮಾಜೀ ಶೀತಳ ಜಳ । ಧಾಯಾ ಘೇಊನಿ ಮಾಗೇ ಬಾಳ । ತೈಸೇ ಸಕಾಮ ಕೇವಳ ಸ್ವರ್ಗಾಲಾಗೀ ।೩೧೭॥ 'ಪಿಂಪಳಾವರೂನ ಮಾರ್ಗ ಆಹೇ' । ಐಕೋನಿ ರುಖಾವರೀ ವೇಘೋ ಜಾಯೇ । ತೋ ಜೇವೀ ಭ್ರಮೇ ಗುಂತೋನಿ ರಾಹೇ । ತೇವೀ ಸ್ವರ್ಗಶ್ರವಣೇ ಹೋಯ ಸಕಾಮ ।೩೧೮॥ ಸ್ವಧರ್ಮ ಮಾರ್ಗೀ ಚಾಲಾವಯಾ ನರ । ವೇದು ಸ್ವರ್ಗ ಬೋಲೇ ಅವಾಂತರ । ತೇ ಘಾಂಟಾ ಭರಲೇ ಅಪಾರ । ಸ್ವರ್ಗತತ್ಪರ ಸಕಾಮ ।೩೧೯॥ ವಾಟ ಪಿಂಪಳಾವರೀ ಐಕೋನಿ । ಶಹಾಣಾ ಚಾಲೇ ಮಾರ್ಗ ಲಕ್ಷೋನಿ । ಅಶ್ವತ್ಥ ಸಾಂಡೀ ಡಾವಲೋನೀ । ತೋ ಪಾವೇ ಸ್ವಸ್ಥಾನೀ ಸಂತೋಷೇ ।೩೨೦॥ ತೇವೀ ಸ್ವಧರ್ಮಾಚ್ಯಾ ಅನುಷ್ಠಾನೀ । ಜೋ ಸಾಂಡೀ ಸ್ವರ್ಗಫಳೇ ಉಪೇಕ್ಷೂನೀ । ತೋ ಚಿತ್ತಶುದ್ಧೀ ತೇ ಪಾವೋನೀ । ಬ್ರಹ್ಮ ಸಮಾಧಾನೀ ಸ್ವಯೇ ಪಾವೇ ।೩೨೧॥ ಯಾ ಸಾಂಡೂನಿ ಸ್ವಧರ್ಮ ಮಾರ್ಗಾಸೀ । ಶ್ರವಣಪ್ರಿಯ ಸ್ವರ್ಗಸುಖಾಸೀ । ಸಕಾಮ ಭುಲಲೇ ತ್ಯಾಸೀ । ಜೇವೀ ಘಂಟಾನಾದಾಸೀ ಮೃಗ ಲೋಧೇ ।೩೨೨॥ ತೇವೀ ಜನ್ಮೋನಿ ಕರ್ಮಭೂಮೀಸೀ । ವೇಂಚೂನಿ ಧನಧಾನ್ಯಸಮೃದ್ಧೀಸೀ । ಥಿತ್ಯಾ ನಾಡಲೇ ನರದೇಹಾಸೀ । ಸ್ವರ್ಗಸುಖಾಸೀ ಭಾಳೋನೀ ।೩೨೩॥ ಜೈಸಾ ಕೋಣೀ ಏಕ ವಾಣೀ । ಜುನೀ ನಾವ ಆಶ್ರಯೋನೀ । ದ್ವೀಪಾಂತರೀಂಚಾ ಲಾಭ ಐಕೋನೀ । ನ ವಿಚಾರಿತಾ ಮನೀ ಸಮುದ್ರೀ ರಿಘೇ ।೩೨೪॥ ಉನ್ಮತ್ತ ಕರ್ಣಧಾರಾಚೇ ಸಂಗತೀ । ಫುಟಕೀ ನಾವ ಧರೋನಿ ಹಾತೀ । ಘೇಊನಿಯಾ ಸಕಳ ಸಂಪತ್ತೀ । ರಿಘೇ ಕುಮತೀ ಮಹಾರ್ಣವೀ ।೩೨೫॥ ತೋ ಜೇವೀ ಸಮುದ್ರೀ ಬುಡೇ । ತೈಸೇಚಿ ಸಕಾ ಮಾಂಸೀ ಘಡೇ । ಸ್ವರ್ಗ ವಾಂಛಿತಾ ಬಾಪುಡೇ । ಬುಡಾಲೇ ರೋಕಡೇ ಭವಾರ್ಣವೀ ।೩೨೬॥ ವಾಂಛಿತಾ ಸ್ವರ್ಗ ಸುಖಫಳ । ಬುಡಾಲೇ ಸ್ವಧರ್ಮವಿತ್ತ ಸಕಳ । ಬುಡಾಲೇ ಚಿತ್ತಶುದ್ಧೀಚೇ ಮೂಳ । ಬುಡಾಲೇ ಮುದ್ದಲ ನರದೇಹ ।೩೨೭॥ ಏವ್ಢ ಡೇ ಹಾನೀಚೇ ಕಾರಣ । ದೇವೋ ಸಾಂಗತ ಆಹೇ ಆಪಣ । ಸಕಾಮತೇಸೀ ಮೂಳ ಗುಣ । ತೇಹೀ ಲಕ್ಷಣ ಸ್ವಯೇ ಸಾಂಗೇ ।೩೨೮॥

ಸ್ವಪ್ನ ಕಾಣುವುದು, ಕೂಡಲೇ ಇಲ್ಲದಾಗುವುದು, ಅದರಂತೆ ಈ ಜಗತ್ತು ಕಾಲ್ಪನಿಕವಾಗಿದೆ. ಅಲ್ಲಿ ಕಾಮಾಸಕ್ತ, ವಿಷಯಾಸಕ್ತ ಜನರಿಗೆ ಸ್ವರ್ಗವು ಸತ್ಯವಾಗಿ ಕಾಣುವುದು ।೩೧೬॥ ಮೃಗಜಲವು ಮೂಲತ: ಮಿಥ್ಯೆಯಾಗಿರುವುದು. ಅದರಲ್ಲಿನ ತಣ್ಣೀರು ಕೊಡಿರೆಂದು ಬಾಲಕನು ಹಟ ಹಿಡಿದರೆ ಯಾವ ಉಪಯೋಗವೂ ಆಗುವುದಿಲ್ಲ. ಅದರಂತೆ ಸಕಾಮ ಜನರು ಸ್ವರ್ಗಕ್ಕಾಗಿ ಹಟ ಹಿಡಿಯುವರು ।೩೧೭॥ ಅಶ್ವತ್ಥವೃಕ್ಷದ ಮೇಲೆ ಮಾರ್ಗವಿದೆ ಎಂದು ಕೇಳಿ ಒಬ್ಬ ಮೂರ್ಖನು ಅಲ್ಲಿ ಧಾವಿಸಿ ಹೋದರೆ ಅಲ್ಲಿ ಭ್ರಮೆಯಿಂದ ಗೊಂದಲಕ್ಕೆ ಸಿಕ್ಕಿಕೊಳ್ಳುವನು. ಅದರಂತೆ ಸ್ವರ್ಗಶ್ರವಣದಿಂದ ಸಕಾಮರ ಸ್ಥಿತಿಯಾಗಿರುವುದು ।೩೧೮॥ ಮನುಷ್ಯನು ಸ್ವಧರ್ಮದಿಂದ ನಡೆಯಬೇಕೆಂಬ ಉದ್ದೇಶದಿಂದ ವೇದವು ಸ್ವರ್ಗಸುಖದ ಆಮಿಷವನ್ನು ತೋರಿಸಿರುವುದು. ಆದರೆ ಸಕಾಮ ಜನರು ಇದನ್ನೇ ಮೆಚ್ಚಿಕೊಂಡು ಸ್ವರ್ಗಪ್ರಾಪ್ತಿಯ ಬೆನ್ನು ಹತ್ತುವರು ।೩೧೯॥ ಅಶ್ವತ್ಥ ವೃಕ್ಷದ ಮೇಲೆ ರಸ್ತೆ ಇರುವುದು ಎಂದು ಕೇಳಿದ ಜಾಣ ಮನುಷ್ಯನು ಆ ಮಾರ್ಗದತ್ತ ಲಕ್ಷವಿಟ್ಟು ನಡೆಯುವನು. ನಡೆಯುತ್ತ ಆ ಅಶ್ವತ್ಥವೃಕ್ಷವನ್ನು ಮಗ್ಗಲು ಮಾಡಿ ಸುಖವಾಗಿ ತನ್ನ ಸ್ಥಾನವನ್ನು ಸೇರುವನು ।೩೨೦॥ ಅದರಂತೆಯೇ ಸ್ವಧರ್ಮದ ಆಚರಣೆಯನ್ನು ಮಾಡುವ ಮನುಷ್ಯನು ಸ್ವರ್ಗಸುಖವನ್ನು ತ್ಯಜಿಸಿಬಿಡುವನು. ಆತನ ಚಿತ್ತಶುದ್ಧಿಯಾಗಿ ಸ್ವತ: ಆತ್ಮ ಸಮಾಧಾನವನ್ನು ಪಡೆಯುವನು ।೩೨೧॥ ಇಂತಹ ಸರಳವಾದ ಸ್ವಧರ್ಮದ ಮಾರ್ಗವನ್ನು ಬಿಟ್ಟುಕೊಟ್ಟು ಯಾವ ಸಕಾಮ ಮನುಷ್ಯನು ಕೇಳಲು ಮಧುರವಾಗಿರುವ ಸ್ವರ್ಗ ಸುಖಕ್ಕೆ ಮೆಚ್ಚಿಕೊಳ್ಳುವನು, ಘಂಟಾನಾದಕ್ಕೆ ಚಿಗರೆಯು ಮೆಚ್ಚಿಕೊಂಡಂತಹ ಸ್ಥಿತಿಯು ಈತನಿಗಾಗುವುದು ।೩೨೨॥ ಹೀಗೆ ಸಕಾಮ ಪುರುಷನು ಪೃಥ್ವಿಯಲ್ಲಿ ಜನ್ಮಧರಿಸಿ ತನ್ನ ಧನಧಾನ್ಯದ ಸಂಗ್ರಹವನ್ನು ಖರ್ಚಿಸಿ ಸ್ವರ್ಗ ಸುಖಕ್ಕೆ ಮೆಚ್ಚಿಕೊಳ್ಳುವನು, ಇದರಿಂದ ಅನಾಯಾಸವಾಗಿ ಲಭಿಸಿರುವ ಯಾವ ಈ ನರದೇಹವನ್ನು ವ್ಯರ್ಥವಾಗಿ ಕಳೆದುಕೊಳ್ಳುವನು ।೩೨೩॥ ಒಬ್ಬ ವ್ಯಾಪಾರಿಯು ಪರದ್ವೀಪಕ್ಕೆ ಹೋದರೆ ಅತಿಶಯವಾಗಿ ದೊಡ್ಡ ಲಾಭವಾಗುವುದು ಎಂದು ಕೇಳಿ ಹಳೆಯ ಮುರುಕ ಹಡಗದಲ್ಲಿ ವಿಚಾರವನ್ನು ಮಾಡದೇ ಜಲಪ್ರವಾಸಕ್ಕೆ ಹೊರಡುವನು ।೩೨೪॥ ಉನ್ಮತ್ತ ಹಡಗ ಚಾಲಕನ ಸಂಗತಿಯಿಂದ ಮುರುಕ ಹಡಗಿನಲ್ಲಿ ತನ್ನ ಸರ್ವ ಸಂಪತ್ತನ್ನು ತುಂಬಿ ಯಾವ ಈ ಮೂರ್ಖ ಮನುಷ್ಯನು ಸಮುದ್ರದಲ್ಲಿ ಸಾಗುವನು ।೩೨೫॥ ಆಗ ಆ ಹಡಗವು ಹೇಗೆ ಸಮುದ್ರದಲ್ಲಿ ಮುಳುಗಿ ಹೋಗುವುದೋ, ಅದೇ ಪ್ರಕಾರವಾಗಿ ಸಕಾಮ ಪುರುಷನ ಸ್ಥಿತಿಯಾಗುವುದು. ಪಾಪ! ಇವರು ಸ್ವರ್ಗಸುಖದ ಇಚ್ಛೆಯನ್ನು ಹಿಡಿದು ಸಂಸಾರ ಸಾಗರದಲ್ಲಿ ಮುಳುಗಿಹೋಗುವರು ।೩೨೬॥ ಸ್ವರ್ಗ ಸುಖದ ಇಚ್ಛೆ ಮಾಡಿದರೆ, ಸ್ವಧರ್ಮರೂಪ ಸರ್ವಸಂಪತ್ತು ಮುಳುಗಿಹೋಗುವುದು. ಚಿತ್ತಶುದ್ಧಿಯ ಮೂಲವೇ ಇಲ್ಲದಾಗಿ ನರದೇಹರೂಪ ಮುದ್ದಲು ಇಲ್ಲದಾಗುವುದು ।೩೨೭॥ ಇಷ್ಟೊಂದು ಹಾನಿಯಾಗಲು ಕಾರಣ ದೇವನು ಏನು ಹೇಳುವನೆಂದರೆ ಸಕಾಮತೆಗೆ ಮೂಲವು ತ್ರಿಗುಣವಾಗಿರುವುದು. ಈ ಯಾವ ಅವುಗಳ ಲಕ್ಷಣಗಳನ್ನು ಸ್ವತ: ಹೇಳುವನು ।೩೨೮॥

ರಜಃಸತ್ತ್ವತಮೋನಿಷ್ಠಾ ರಜಃಸತ್ತ್ವತಮೋಜುಷಃ । ಉಪಾಸತೇ ಇಂದ್ರಮುಖ್ಯಾನ್ ದೇವಾದೀನ್ ನ ಯಥೈವ ಮಾಮ್ ।೩೨॥

ಅರ್ಥ:- ಇವರು ಸ್ವತಃ ರಜೋಗುಣ , ತಮೋಗುಣ ಮತ್ತು ಸತ್ವಗುಣ ಇವುಗಳಲ್ಲಿ ಸ್ಥಿರವಾಗುವರು. ರಜೋಗುಣೀ, ತಮೋಗುಣಿ ಮತ್ತು ಸತ್ವಗುಣೀ ಇವರು ಇಂದ್ರಾದಿ ದೇವತೆಗಳ ಉಪಾಸನೆಯನ್ನು ಮಾಡುವರು. ಆದರೆ ಅದೇ ಸಾಮಗ್ರಿಗಳಿಂದ ಅದೇ ಪರಿಶ್ರಮದಿಂದ ನನ್ನ ಪೂಜೆಯನ್ನು ಮಾಡುವುದಿಲ್ಲ.

ರಜತಮಾಚೇನಿ ಉನ್ಮತ್ತೇ । ಸತ್ತ್ವ ಸಂಕೀರ್ಣ ಹೋಯ ತೇಥೇ । ತೇವ್ಹಾ ರಜಾಚೇನಿ ಸಂಮತೇ । ಕಾಮ ಚಿತ್ತಾತೇ ವ್ಯಾಪೂನಿ ಖವಳೇ ।೩೨೯॥ ಅತಿಕಾಮ ಖವಳಲ್ಯಾ ಚಿತ್ತೀ । ಗುಣಾನುಸಾರೇ ವಿಷಯೀ ಪ್ರೀತೀ । ತೇವ್ಹಾ ಸಕಾಮಾಚೀ ಸಂಗತೀ । ಧರೀ ನಿಶ್ಚಿತೀ ಭಾವಾರ್ಥೇ ।೩೩೦॥ ಸಕಾಮಸಂಗತೀ ಸಾಚಾರ । ಕಾಮ್ಯಕರ್ಮೀ ಅತ್ಯಾದರ । ಸ್ವರ್ಗಭೋಗೀ ಮಹಾತತ್ಪರ । ಜಯೀ ದೇವಪಿತರ ಪ್ರಥಮಾದಿಕ ।೩೩೧॥ ಮೀ ಸರ್ವಾತ್ಮಾ ಸರ್ವೇಶ್ವರ । ತ್ಯಾ ಮಾಝ್ಯಾ ಠಾಯೀ ಅನಾದರ । ಕಾಮಲಂಪಟತ್ವೇ ನರ । ದೇವತಾಂತರ ಉಪಾಸಿತೀ ।೩೩೨॥ ಮ್ಹಣಸೀ ದೇವತಾಂತರ ಜೇ ಕಾಂಹೀ । ತೇ ತೂಂಚಿ ಪೈಗಾ ಸರ್ವಹೀ । ಹಾಹೀ ಐಕ್ಯಭಾವೋ ನಾಹೀ । ಭೇದಬುದ್ಧೀ ಪಾಹೀ ವಿನಿಯೋಗ ।೩೩೩॥ ಇಂದ್ರಾದಿ ದೇವದ್ವಾರಾ ಜಾಣ । ಮೀಚಿ ಹೋಯ ಗಾ ಪ್ರಸನ್ನ । ತ್ಯಾ ಮಾಝ್ಯಾ ಠಾಯೀ ನಾಹೀ ಭಜನ । ಸಕಾಮ ಮನ ಸ್ವರ್ಗಾರ್ಥೀ ।೩೩೪॥ ದೃಢ ಕಾಮನಾ ಜಡಲೀ ಚಿತ್ತೀ । ಸಾಂಗತಾ ಸ್ವರ್ಗೀ ಪುನರಾವೃತ್ತೀ । ತೇಹೀ ಹಿತತ್ವೇಚಿ ಮಾನಿತೀ । ಐಕ ನಿಶ್ಚಿತೀ ಅಭಿಪ್ರಾವೋ ।೩೩೫॥

ಇಷ್ಟ್ವೇಹ ದೇವತಾ ಯಜ್ಞೈರ್ಗತ್ವಾ ರಂಸ್ಯಾಮಹೇ ದಿವಿ । ತಸ್ಯಾಂತ ಇಹ ಭೂಯಾಸ್ಮ ಮಹಾಶಾಲಾ ಮಹಾಕುಲಾಃ ।೩೩॥

ಅರ್ಥ:- ಈ ಲೋಕದಲ್ಲಿ ಯಜ್ಞದ ಆಧಾರದಿಂದ ಯಜನವನ್ನು ಮಾಡಿ, ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಭೋಗಗಳಲ್ಲಿ ರಮಮಾಣರಾಗಿ, ಕೊನೆಗೆ ಈ ಲೋಕದಲ್ಲಿ ಪುನಃ ಮಹಾಗೃಹಸ್ಥ ಮತ್ತು ಮಹಾಕುಲೋತ್ಪನ್ನರಾಗೋಣ ... ಎಂದು ಇವರು ಸಂಕಲ್ಪವನ್ನು ಮಾಡುವರು.

ಜೇ ಕರ್ಮಭೂಮೀಸೀ ಮನುಷ್ಯ ಝಾಲೇ । ತೇ ಸಹಜೇ ಮೋಕ್ಷಾಧಿಕಾರಾ ಆಲೇ । ತೇಥಹೀ ಕಾಮನಾ ನಾಗವಿಲೇ । ಸ್ವರ್ಗಾರ್ಥ ಭಜಲೇ ದೇವತಾಂತರಾ ।೩೩೬॥ ಸ್ವರ್ಗಭೋಗೀ ಠೇವೂನಿ ಮನ । ನಾನಾ ಯಾಗೀ ಕರಿತೀ ಯಜನ । ತೇಣೇ ದಿವಿಭೋಗ ಪಾವೇನ । ಹಾ ನಿಶ್ಚಯ ಜಾಣ ಯಾಜ್ಞಿಕಾ ।೩೩೭॥ ಕಾಳೇ ಭೋಗಕ್ಷಯಾಚ್ಯಾ ಪತನೀ । ತೇಹೀ ಘೇತೀ ಹಿತತ್ವೇ ಮಾನೋನೀ । ಸವೇಂಚಿ ಇಹಲೋಕೀ ಜನ್ಮೋನೀ । ಬ್ರಾಹ್ಮಣಪಣೇ ಸುಶೀಲ ।೩೩೮॥

ರಜೋಗುಣ ಮತ್ತು ತಮೋಗುಣವು ಅತ್ಯಂತ ಬೆಳೆಯಿತೆಂದರೆ ಸತ್ವಗುಣವು ಅದರಲ್ಲಿ ಕೂಡಿಕೊಳ್ಳುವುದು. ಆ ಸಮಯದಲ್ಲಿ ರಜತಮದ ಸಂಗತಿಯಿಂದ ಕಾಮವು ಚಿತ್ತಕ್ಕೆ ವ್ಯಾಪಿಸಿಕೊಂಡು ಉಗ್ರವಾಗಿ ಜಾಗೃತವಾಗುವುದು ।೩೨೯॥ ಚಿತ್ತದಲ್ಲಿ ಕಾಮವು ಅತಿಶಯವಾಗಿ ಬೆಳೆಯಿತೆಂದರೆ ಗುಣಗಳ ಅನುಸಾರವಾಗಿ ವಿಷಯಗಳ ಮೇಲೆ ಪ್ರೇಮವು ನಿರ್ಮಾಣವಾಗುವುದು. ಆಗ ಪ್ರೀತಿಯಿಂದ, ನಿಶ್ಚಯಪೂರ್ವಕವಾಗಿ ಅದು ಸಕಾಮನ ಸಂಗತಿಯನ್ನು ಹಿಡಿಯುವುದು ।೩೩೦॥ ನಿಜವಾಗಿಯೂ ಸಕಾಮ ಪುರುಷನ ಸಂಗತಿಯಿಂದ ಕಾಮ್ಯ ಕರ್ಮ ವಿಷಯದಲ್ಲಿ ಅತಿಶಯವಾಗಿ ಆದರವು ಉಂಟಾಗುವುದು. ಹಾಗೆಯೇ ಸ್ವರ್ಗಭೋಗ ವಿಷಯದಲ್ಲಿ ಅತ್ಯಂತ ತತ್ಪರನಾಗಿ ದೇವ, ಪಿತೃ, ಭೂತ, ಪಿಶಾಚ ಇತ್ಯಾದಿಗಳ ಯಜನವನ್ನು ಮಾಡುವನು ।೩೩೧॥ ಈ ರೀತಿಯಾಗಿ ಕಾಮಲಂಪಟದಿಂದ ತುಂಬಿಕೊಂಡಿರುವ ನರರು, ಸರ್ವಾತ್ಮ, ಸರ್ವೇಶ್ವರನಾದ ನಾನು ಸಮೀಪದಲ್ಲಿದ್ದರೂ ಕೂಡ ನನ್ನನ್ನು ಅನಾದರಗೊಳಿಸಿ ಇತರ ದೇವತೆಗಳನ್ನು ಪೂಜಿಸುವರು ।೩೩೨॥ ಕದಾಚಿತ್ ನೀನು ಸರ್ವ ದೇವತೆಗಳಾಗಿ ನೀನೇ ಇರುವೆ ಎಂದು ಹೇಳಬಹುದು. ಆದರೆ ಉಪಾಸಕರಲ್ಲಿ ಈ ಐಕ್ಯಭಾವವು ಇರುವುದಿಲ್ಲ. ಅವರು ಭೇದ ಬುದ್ಧಿಯಿಂದಲೇ ತಮ್ಮ ಎಲ್ಲ ಅನುಷ್ಠಾನಗಳನ್ನು ಮಾಡುತ್ತಿರುವರು ।೩೩೩॥ ಇಂದ್ರಾದಿ ದೇವತೆಗಳ ಮುಖಾಂತರವಾಗಿ ನಾನೇ ಪ್ರಸನ್ನನಾಗುತ್ತಿರುವೆನು ಆದರೆ ಅವರ ಮನವು ನನ್ನತ್ತ ಇರುವುದಿಲ್ಲ. ಅವರು ಸ್ವರ್ಗಕ್ಕಾಗಿ ಲೋಭಿಷ್ಠರಾಗಿರುವರು ।೩೩೪॥ ಸ್ವರ್ಗಪ್ರಾಪ್ತಿಯಿಂದ ಜನ್ಮ ಮರಣದ ಪುನರಾವೃತ್ತಿಯಾಗುವುದೆಂದು ಹೇಳಿದರೂ ಕೂಡ ಅವರಿಗೆ ಹಿತಕಾರಕವಾಗಿಯೇ ತೋರುವುದು. ಇಷ್ಟೊಂದು ದೃಢವಾದ ಕಾಮನೆಗಳು ಅವರ ಹೃದಯದಲ್ಲಿ ಬಿಂಬಿಸಿರುವುವು. ಇದರ ಕಾರಣವನ್ನೂ ನಿನಗೆ ಹೇಳುವೆನು, ಲಕ್ಷ ಕೊಟ್ಟು ಕೇಳು ।೩೩೫॥

ಯಾವ ಮನುಷ್ಯರು ಈ ಕರ್ಮಭೂಮಿಯಲ್ಲಿ ಬರುವರೋ, ಅವರು ಸ್ವಭಾವತಃವೇ ಮೋಕ್ಷದ ಅಧಿಕಾರಿಯಾಗಿರುವರು. ಆದರೆ ಅವರು ಅನೇಕ ಪ್ರಕಾರದ ಕಾಮನೆಗಳಿಂದ ಪೇಚಿನಲ್ಲಿ ಸಿಲುಕಿಕೊಳ್ಳುವರು. ಅವರ ಮನದಲ್ಲಿ ಸ್ವರ್ಗದ ಲೋಭವಿರುವುದು. ಆದ್ದರಿಂದ ಅವರು ಇತರ ದೇವತೆಗಳ ಉಪಾಸನೆಯನ್ನು ಮಾಡುತ್ತಿರುವರು ।೩೩೬॥ ಸ್ವರ್ಗದ ಉಪಭೋಗದ ಮೇಲೆ ಲಕ್ಷವಿಟ್ಟು ಅವರು ಅನೇಕ ಪ್ರಕಾರದ ಯಜ್ಞ ಯಾಗಗಳನ್ನು ಮಾಡುವರು. ಇಷ್ಟರಿಂದಲೇ ಸ್ವರ್ಗದ ಸುಖೋಪಭೋಗ ಸಿಗುವುದೆಂದು ಆ ಯಾಜ್ಞಿಕರಿಗೆ ಖಾತ್ರಿಯಾಗುತ್ತಿರುವುದು ।೩೩೭॥ ಕಾಲಾಂತರದಲ್ಲಿ ಪುಣ್ಯದ ಕ್ಷಯವಾಗುತ್ತಲೇ ಸ್ವರ್ಗದಿಂದ ಅವರ ಪತನವಾಗುವುದು. ಇದು ಅವರಿಗೆ ಹಿತಕಾರಕವೆನಿಸುತ್ತಿರುವುದು. ನಾವು ಪುಣ್ಯವಾನರು, ಸ್ವರ್ಗವೇ ಜೀವವೆಂದು ತಿಳಿದು ಉತ್ತಮ ಬ್ರಾಹ್ಮಣಕುಲದಲ್ಲಿ ಜನ್ಮಕ್ಕೆ ಬಂದಿರುವೆವು ಎಂದು ಹೇಳುವರು ।೩೩೮॥

ವೇದವೇದಾಂಗಅಧ್ಯಯನ । ಧನಧ್ಯಾನೇ ಅತಿಸಂಪನ್ನ । ಆಮ್ಹೀ ವಿಖ್ಯಾತ ಗೃಹಸ್ಥ ಹೋಊನ । ಕ್ಷೀಣಪುಣ್ಯ ಸ್ವರ್ಗಸ್ಥ ।।೨೩೯।। ನೇಣೋನಿ ವೇದಾರ್ಥನಿಜಸ್ಥಿತೀ । ಐಸಐಶಿಯಾ ಉಪಪತ್ತೀ । ಸಕಾಮೀ ಮಾನಿಲೀ ನಿಶ್ಚಿತೀ । ಊಂಸ ಸಾಂಡೋನಿ ಮಾಗತೀ ಕಣೀಸ ತ್ಯಾಚೇ ।।೨೪೦।।

ಏವಂ ಪುಷ್ಪಿತಯಾ ವಾಚಾ ವ್ಯಾಕ್ಷಿಪ್ತಮನಸಾಂ ನೃಣಾಮ್ । ಮಾನಿನಾಂ ಚಾತಿಲುಬ್ಧಾನಾಂ ಮದ್ವಾರ್ತಾಪಿ ನ ರೋಚತೇ ।।೨೪।।

ಅರ್ಥ:- ಈ ಪ್ರಕಾರವಾಗಿ ಪುಷ್ಪದಿಂದ ಕೂಡಿದ ವೃಕ್ಷದಂತೆ ರಮಣೀಯವಾಗುವಂತಹ ವಾಣಿಯಿಂದ ಯಾರ ಚಿತ್ತವು ವಿಕ್ಷಿಪ್ತವಾಗಿರುವುದೋ, ಅವರು ಅತಿಶಯವಾಗಿ ಮಾನವಂತ ಮತ್ತು ನಮ್ರವಲ್ಲದ ಸ್ವಭಾವದವರಾಗಿರುವ ಇಂತಹ ಕರ್ಮಠರಿಗೆ ನನ್ನ ವಾರ್ತೆಯೂ ಕೂಡ ರುಚಿಸದು.

ಫಲ ಸಾಂಡೂನಿ ಫೂಲ ಖಾಯೇ । ತೈಸಾ ಪರಿಪಾಕ ಯಾಜ್ಞಿಕಾ ಹೋಯೇ । ಸ್ವರ್ಗಕಾಮಾಚೇನಿ ಉಪಾಯೇ । ಅಪಾಯೀ ಸ್ವಯೇ ಪಡತಾತೀ ।।೨೪೧।। ಅವಘಾ ಸಂಸಾರ ಕಾಲ್ಪನಿಕ । ತೇಥ ಸತ್ಯ ಕೈಚೇ ಸ್ವರ್ಗಸುಖ । ಪರೀ ಶ್ರವಣ ಮಾತ್ರೇ ದೇಖ । ಭುಲಲೇ ಮೂರ್ಖ ಸ್ವರ್ಗಸುಖಾ ।।೨೪೨।। ಜೈಸಾ ನಪುಂಸಕ ವಾಂಛೀ ಸ್ತ್ರೀಸುಖ । ಪರೀ ಸಂಗ ತಯಾ ಕೈಚಾ ದೇಖ । ಮುಳೀಂಚ ನಾಹೀ ಬೀಜಾರೋಪ । ಮಾ ಕೈಚಾ ಕಾಮಸಾಟೋಪ ತಯಾಸೀ ।।೨೪೩।। ಪರೀ ಲಟಿಕಾಚೀ ತಡತಡಾ ಉಡೇ । ಕಷ್ಟೋನಿ ವ್ಯರ್ಥಚಿ ಪಹುಡೇ । ಪರೀ ತಯಾ ನಸೇ ಭಗಭೋಗ ರೋಕಡೇ । ತೈಸೇ ಸ್ವರ್ಗ ಪುಡೇ ಪ್ರಾಣಿಯಾ ।।೨೪೪।। ಗವ್ಹಾಂಚಾ ಜೋ ಪ್ರಥಮ ಮೋಡ । ತೋಂಡೀ ಘಾಲಿತಾ ಲಾಗೇ ಗೋಡ । ಪರೀ ಜೋ ಜಾಣೇ ಪಿಕಾಚಾ ನಿವಾಡ । ತೋ ಮೋಡ ಜಾಣ ಉಪಡೀನಾ ।।೨೪೫।। ಪಾಲೇಯಾಚೀ ಚವೀ ಘೇತಾ । ಗವ್ಹಾಂಚೀ ಗೋಡೀ ನ ಲಗೇ ತತ್ತ್ವತಾ । ಮಗ ಪಾಲಾ ಪಾಳೂನಿ ಸ್ವಭಾವತಾ । ಶೇವಟೀ ರಡತಾ ಗವ್ಹಾಂಚಿಕಾರಣೇ ।।೨೪೬।। ತೇವೀ ವೇದು ಬೋಲಿಲಾ ಸ್ವರ್ಗಫಳ । ತೇ ಸ್ವಧರ್ಮಾಚೇ ಕೋವಳೇ ಮೂಳ । ತೇ ಉಪಡೂನಿ ಖಾತಾ ತತ್ಕಾಳ । ಮೋಕ್ಷಫಳ ಅಂತರೇ ।।೨೪೭।। ಹೇ ಜಾಣತೀ ಜೇ ಸಜ್ಞಾನ । ತೇ ಸ್ವರ್ಗಾಸೀ ನಾತಳತೀ ಆಪಣ । ಪರೀ ಮೂರ್ಖಾಚೇ ಸಕಾಮಪಣ । ಅನಿವಾರ ಜಾಣ ಅತಿಶಯೇ ।।೨೪೮।। ಕಾಮಾಚಿಯಾ ಲೋಲಂಗತೀ । ಸದಾ ಸಕಾಮ ಕರ್ಮೇ ಕರಿತೀ । ತೇಣೇ ಜನ್ಮ ಮರಣಾಂಚೇ ಆವರ್ತೀ । ಪಡಲೇ ನುಗಂಡತೀ ಆಕಲ್ಪ ।।೨೪೯।। ತ್ಯಾಂಸೀ ಹಿತ ಸಾಂಗತೀ ಸಾಧುಜನ। ತೇ ನ ಮಾನಿತೀ ಸಂತವಚನ । ಆಮ್ಹೀ ವೇದಾರ್ಥೀ ಸಜ್ಞಾನ । ಹಾ ಜ್ಞಾನಾಭಿಮಾನ ಅತಿಗರ್ವೇ ।।೨೫೦।।

ಸ್ವರ್ಗದಲ್ಲಿ ಪುಣ್ಯವು ತೀರಿದರೂ ಕೂಡ ನಾವು ವೇದವೇದಾಂಗಗಳ ಅಧ್ಯಯನವನ್ನು ಮಾಡಿ ಧನಧಾನ್ಯಗಳ ಸಮೃದ್ಧಿ ಮಾಡಿ ಪ್ರಸಿದ್ಧ ಗೃಹಸ್ಥಾರಾಗಿರೋಣ ಎಂದು ಅವರು ಹೀಗೆ ಇಚ್ಛೆಯನ್ನು ಮಾಡುವರು ।।೨೩೯।। ವೇದದ ನಿಜವಾದ ಅರ್ಥವು ತಿಳಿಯಲಾರದ್ದಕ್ಕೆ ಮೇಲಿನ ಉಪಪತ್ತಿಯಿಂದ ಈ ಜನರು ಹೀಗೆ ಮನಬಂದಂತೆ ಕಲ್ಪನೆಗಳನ್ನು ಮಾಡುತ್ತಿರುವರು. ಇವರು ಕಬ್ಬನ್ನು ಒಗೆದು ಅದರ ತುರಾಯಿಯನ್ನು ಬೇಡುತ್ತಿರುವರು ।।೨೪೦।।

ಫಲವನ್ನು ಒಗೆದು ಹೂವನ್ನು ತಿನ್ನುವ ಈ ಪ್ರಕಾರವೇ ಯಾಜ್ಞಿಕರ ಸ್ಥಿತಿಯಾಗಿರುವುದು. ಇವರು ಸ್ವರ್ಗಸುಖದ ಇಚ್ಛೆಯಿಂದ ಯಾವ ಯಾವ ಉಪಾಯಗಳನ್ನು ಮಾಡುವರೋ, ಅವೆಲ್ಲವೂ ಅವರಿಗೆ ಅಪಾಯವೇ ಆಗುವುದು ।।೨೪೧।। ಸರ್ವ ಸಂಸಾರವೇ ಕಾಲ್ಪನಿಕವಾಗಿರಲು ಸ್ವರ್ಗಸುಖವಾದರೂ ಹೇಗೆ ಸತ್ಯವಾಗಿರಬೇಕು? ಕೇವಲ ಕೇಳಿದ ಮಾತುಗಳಲ್ಲಿ ವಿಶ್ವಾಸವನ್ನಿಟ್ಟು ಮೂರ್ಖರಾದ ಅನೇಕರು ಸ್ವರ್ಗಸುಖಕ್ಕೆ ಭುಲಾಯಿಸುವರು ।।೨೪೨।। ಒಬ್ಬ ನಪುಂಸಕನು ಸ್ತ್ರೀಸುಖದ ಇಚ್ಛೆಯನ್ನು ಮಾಡಿದರೆ ಅದು ವ್ಯರ್ಥವಾಗುವುದು. ಎಲ್ಲಿ ಬೀಜದ ಉತ್ಪತ್ತಿ ಇಲ್ಲವೋ ಅಲ್ಲಿ ಕಾಮದ ಖಟಾಟೋಪವು ಯಾವ ಉಪಯೋಗ? ।।೨೪೩।। ಆದರೆ, ಸುಮ್ಮನೇ ಚಡಪಡಿಸುತ್ತ ಹಾರುವನು, ವ್ಯರ್ಥವಾಗಿ ಮಲಗಿ ಸುಮ್ಮನೇ ಕಷ್ಟಪಡುವನು. ಆದರೆ ಆತನಿಗೆ ನಿಜವಾದ ಸ್ತ್ರೀಸುಖವು ಸಿಗುವುದೇ ಇಲ್ಲ. ಅದರಂತೆಯೇ ಈ ಪ್ರಾಣಿಗಳ ಸ್ವರ್ಗಸುಖವೂ ಸಹ ವ್ಯರ್ಥವಾಗಿರುವುದು ।।೨೪೪।। ಗೋದಿ ಬೆಳೆಯ ಮೊದಲನೆಯ ಅಂಕುರವನ್ನು ಮುಖದಲ್ಲಿ ಹಾಕಲು ಅದು ಅತಿಶಯವಾಗಿ ರುಚಿ ಹತ್ತುವುದು. ಆದರೆ ಪೀಕಿನ ಮಹತ್ವವು ಯಾರಿಗೆ ತಿಳಿದಿರುವುದೋ, ಆತನು ಅಂಕುರವನ್ನು ಕಿತ್ತಿ ತಿನ್ನುವ ಪ್ರಯತ್ನವನ್ನು ಎಂದಿಗೂ ಮಾಡಲಾರನು ।।೨೪೫।। ಗೋದಿ ಬೆಳೆಯ ಎಲೆಗಳನ್ನು ರುಚಿಗಾಗಿ ಅಲ್ಲಲ್ಲಿ ಕಿತ್ತಲು ಬೆಳೆದ ಗೋದಿಯ ರುಚಿಯು ಹೊರಟು ಹೋಗುವುದು. ಅಂದ ಮೇಲೆ ಇದನ್ನು ತಿಳಿದೂ ಕೂಡ ಎಲ್ಲ ಎಲೆಗಳನ್ನು ಸಂಗ್ರಹಿಸಿದರೆ, ಆತನಿಗೆ ಗೋದಿಗಾಗಿ ಅಳುತ್ತ ಕುಳಿತುಕೊಳ್ಳ ಬೇಕಾಗುವುದು ।।೨೪೬।। ಅದರಂತೆ ವೇದವು ಹೇಳಿರುವ ಯಾವ ಸ್ವರ್ಗಫಲವು ಅದು ಸ್ವಧರ್ಮದ ಎಳೆ ಅಂಕುರವಾಗಿರುವುದು. ಅದನ್ನೇ ಕಿತ್ತಿ ತಿಂದರೆ ಮೋಕ್ಷಫಲವು ಇಲ್ಲದಾಗುವುದು ।।೨೪೭।। ಯಾವ ಜ್ಞಾನೀಪುರುಷರು ಇದನ್ನು ತಿಳಿದಿರುವರು. ಇವರು ಸ್ವರ್ಗಸುಖಕ್ಕೆ ಸ್ಪರ್ಶ ಕೂಡ ಮಾಡುವುದಿಲ್ಲ. ಆದರೆ ಮೂರ್ಖ ಜನರ ವಿಷಯವಾಸನೆಯು ಅನಿವಾರ್ಯವಾಗಿರುವುದು ।।೨೪೮।। ಈ ಜನರು ಯಾವಾಗಲೂ ಕಾಮದ ಆಸಕ್ತಿಯಿಂದ ಸಕಾಮ ಕರ್ಮಗಳನ್ನು ಮಾಡುತ್ತಿರುವರು. ಇದರಿಂದ ಇವರು ಜನ್ಮಮರಣದ ತಿರುಗುಣಿಯಲ್ಲಿ ಸಿಕ್ಕಿಕೊಳ್ಳುವರು ಮತ್ತು ಕಲ್ಪದವರೆಗೂ ಅದರಿಂದ ಎಂದಿಗೂ ಹೊರಗೆ ಬೀಳಲಾರರು ।।೨೪೯।। ಸಾಧು ಸಂತರು ಇವರಿಗೆ ಎಷ್ಟೇ ಹಿತಕಾರಕ ಮಾತುಗಳನ್ನು ಹೇಳಿದರೂ ಕೂಡ ಅವರು ಸಂತವಚನಗಳನ್ನು ಮನ್ನಿಸುವುದಿಲ್ಲ. ಕಾರಣ ನಾವು ವೇದದ ಅರ್ಥವನ್ನು ತಿಳಿದಿರುವ ಪಂಡಿತರಾಗಿರುವೆವು ಎಂಬ ಈ ಪ್ರಕಾರದ ಜ್ಞಾನದ ಅಭಿಮಾನದಿಂದ ಇವರು ಅತಿಶಯವಾಗಿ ಗರ್ವಿಷ್ಠರಾಗಿರುವರು ।।೨೫೦।।

ಮೀ ಭಗವಂತ ನಿಯಂತಾ ಸೃಷ್ಟೀ । ಹೇ ವೇದೇ ದಾವಿಲ್ಯಾ ನಾವಡೇಗೊಷ್ಟೀ । ನಿಷ್ಕಾಮತಾ ಕಪಾಳ ಉಠೀ । ಸಕಾಮ ಪೋಟೀ ಸುಬುದ್ಧ ॥೪೫೧॥ ಏವಂ ವೇದ ಮಾನೂನಿ ಪ್ರವೃತ್ತಿ ಪರ । ಠಕಲೇ ಸಕಳ ಸಕಾಮ ನರ । ತೋಚಿ ವೇದಾರ್ಥ ಬ್ರಹ್ಮ ಪರ । ಸ್ವಯೇ ಶ್ರೀಧರ ಸಾಂಗತ ॥೪೫೨॥

ವೇದಾ ಬ್ರಹ್ಮಾತ್ಮವಿಷಯಾಸ್ತ್ರಿಕಾಂಡವಿಷಯಾ ಇಮೇ । ಪರೋಕ್ಷವಾದಾ ಋಷಯಃ ಪರೋಕ್ಷಂ ಮನು ಚ ಪ್ರಿಯಮ್ ॥೪೫॥

ಅರ್ಥ:- ಮೂರು ವಿಭಾಗಗಳಾಗಿ ವಿಭಜಿತವಾದ ವೇದಗಳು ಅಂತಿಮವಾಗಿ ಜೀವಿಯು ಶುದ್ಧ ಚೇತನಾತ್ಮನೆಂದು ಪ್ರಕಟಪಡಿಸುತ್ತವೆ. ಆದರೆ ವೈದಿಕ ದ್ರಷ್ಟಾರರು ಮತ್ತು ಮಂತ್ರಗಳು ಹೇಗಾದರೂ ರಹಸ್ಯ ಪರಿಭಾಷೆಯಲ್ಲಿ ವ್ಯವಹರಿಸುತ್ತವೆ. ಅಂತಹ ರಹಸ್ಯ ವರ್ಣನೆಗಳಿಂದ ನಾನೂ ಕೂಡ ಸಂತುಷ್ಟನಾಗಿದ್ದೇನೆ.

ಕರ್ಮಕಾಂಡ ಉಪಾಸನಾ ಜ್ಞಾನ । ಇಂಹೀ ತ್ರಿಕಾಂಡೀ ವೇದು ಆಪಣ । ಚಿತ್ತಶುದ್ಧಿದ್ವಾರಾ ಜಾಣ। ಬ್ರಹ್ಮಸಂಪನ್ನ ಜೀವ ಕರೀ ॥೪೫೩॥ ಪರಾಧೀ ಲಾವೂನ ಬಡಿಶಪಿಂಡೀ । ಮೀನಾಂಸೀ ಜಳಾಬಾಹೇರೀ ಕಾಢೀ । ತೇವೀ ದಾವೂನ ಸ್ವರ್ಗಸುಖಗೋಡೀ । ವೇದ ಜೀವಾಸ ವೋಢೀ ಪರಮಾರ್ಥೀ ॥೪೫೪॥ ಪರೋಕ್ಷವಾದ ವೇದ ವ್ಯುತ್ಪತ್ತೀ । ತ್ಯಾಗಮುಖೇ ಗಾ ಅನ್ಯೋಕ್ತೀ । ಸಾಂಡವಿಲೀ ವಿಷಯಾಸಕ್ತೀ । ಬ್ರಹ್ಮಪ್ರಾಪ್ತೀಲಾಗೂನಿ ॥೪೫೫॥ ಹೇ ಜಾಣೋನಿ ವೇದಾರ್ಥಗುಹ್ಯಜ್ಞಾನ । ಜೋ ಜೀವ ಝಾಲಾ ಬ್ರಹ್ಮಸಂಪನ್ನ । ತೇಥ ಕರ್ಮ - ಕರ್ತಾ ಮಿಥ್ಯಾ ಜಾಣ । ಆಶ್ರಮ-ವರ್ಣ ಮಗ ಕೈಚೇ ॥೪೫೬॥ ತೇಥ ಕೈಚೇ ಧ್ಯೇಯ-ಧ್ಯಾತಾ-ಧ್ಯಾನ । ಕೈಚೇ ಜ್ಞೇಯ-ಜ್ಞಾತಾ -ಜ್ಞಾನ । ನಾಹೀ ಭಜ್ಯ-ಭಜಕ-ಭಜನ । ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೪೫೭॥ ತೇಥ ಕೈಚೇ ಕರ್ಮ- ಕರ್ಮಾಚರಣ । ಕೈಚಾ ವೇದ-ವೇದಾಧ್ಯಯನ । ಕೈಚೇ ಸಾಧ್ಯ ಆಣಿ ಸಾಧನ । ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೪೫೮॥ ತೇಥ ಕೈಚೇ ದೋಷ ಕೈಚೇ ಗುಣ । ಕೈಚೇ ಪಾಪ ಕೈಚೇ ಪುಣ್ಯ । ಕೈಚೇ ಜನ್ಮ ಕೈಚೇ ಮರಣ । ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೪೫೯॥ ತೇಥ ಕೈಚಾ ಭೇದು ಕೈಚಾ ಬೋಧು । ಕೈಚಾ ಮೋಕ್ಷ ಕೈಚಾ ಬಂಧು । ಸದೋದಿತ ಪರಮಾನಂದು । ಹಾ ವೇದಾರ್ಥ ಶುದ್ಧ ಉದ್ಧವಾ ॥೪೬೦॥ ಯಾ ವೇದಾರ್ಥಾಚೇ ನಿರೂಪಣ । ಪ್ರಕಟ ಕರವಿತಾ ಆಪಣ । ನಿಜಸ್ವಾರ್ಥಾ ನಾಡತೀ ಜನ । ಯಾಲಾಗೀ ಜಾಣ ಮ್ಯಾ ಗುಪ್ತ ಕೇಲೇ ॥೪೬೧॥ ವೇದಾರ್ಥಾಚೇ ಗುಹ್ಯ ಸಾರ । ಮಜ ಗುಪ್ತಾಚೇ ಗುಪ್ತ ಭಾಂಡಾರ । ತುಝಾ ದೇಖೋನಿ ಅಧಿಕಾರ । ಮ್ಯಾ ಸಾಚಾರ ಸಾಂಗಿತಲೇ ॥೪೬೨॥

ಭಗವಂತನಾದ ನಾನು ಸೃಷ್ಟಿಯ ನಿಯಂತನಾಗಿರುವೆನು. ಹೀಗೆಂದು ವೇದವು ಸ್ಪಷ್ಟವಾಗಿ ತೋರಿಸಿಕೊಟ್ಟಿರುವುದು. ಆದರೂಕೂಡ ಈ ಮಾತು ಅವರಿಗೆ ಮಾನ್ಯವಿಲ್ಲ. ನಿಷ್ಕಾಮ ಕರ್ಮ ಎಂದಾಕ್ಷಣವೇ ಅವರಿಗೆ ತಲೆಶೂಲೆ ಏಳುವುದು. ಈ ಪ್ರಕಾರವಾಗಿ ಅವರ ಮನದಲ್ಲಿ ಕಾಮನೆಗಳು ಅತಿಶಯವಾಗಿ ದೃಢವಾಗಿರುವುವು ॥೪೫೧॥ ಈ ರೀತಿಯಾಗಿ ವೇದಕ್ಕೆ ಪ್ರವೃತ್ತಿಪರವೆಂದು ತಿಳಿದು ಸಕಾಮ ಜನರು ಮೋಸ ಹೋಗಿರುವರು. ಇದಕ್ಕಾಗಿ ಈ ವೇದದ ಬ್ರಹ್ಮಪರ ಅರ್ಥವನ್ನು ಸ್ವತಃ ಶ್ರೀಧರನು ಹೇಳುತ್ತಿರುವನು ॥೪೫೨॥

ವೇದವು ಯಾವ ಕರ್ಮಕಾಂಡ, ಉಪಾಸನಾಕಾಂಡ ಮತ್ತು ಜ್ಞಾನಕಾಂಡ ಈ ಮೂರು ಕಾಂಡಗಳಿಂದ ತಾನಾಗಿಯೇ ಚಿತ್ತಶುದ್ಧಿಯ ಮುಖಾಂತರವಾಗಿ ಜೀವಕ್ಕೆ ಬ್ರಹ್ಮನಲ್ಲಿ ಏಕರೂಪವನ್ನಾಗಿ ಮಾಡುತ್ತಿರುವುದು ॥೪೫೩॥ ಮೀನುಗಾರನು ತನ್ನ ಬಲೆಗೆ ಮಾಂಸದ ತುಂಡನ್ನು ಹಚ್ಚಿ ಮೀನುಗಳನ್ನು ಹಿಡಿದು ನೀರಿನಿಂದ ಹೊರಗೆ ತೆಗೆಯುತ್ತಿರುವನು. ಅದರಂತೆ ವೇದವೂ ಕೂಡ ಸ್ವರ್ಗಸುಖದ ರುಚಿಯನ್ನು ತೋರಿಸಿ ಜೀವಕ್ಕೆ ಪರಮಾತ್ಮನ ಮಾರ್ಗದತ್ತ ಎಳೆಯುತ್ತಿರುವುದು ॥೪೫೪॥ ವೇದ ವಿಭಾಗವು ಪರೋಕ್ಷವಾದವಾಗಿರುವುದು. ಅದು ತ್ಯಾಗದ ಮುಖಾಂತರವಾಗಿ ಅನ್ಯೋಕ್ತಿಯಿಂದ ಬ್ರಹ್ಮನ ಪ್ರಾಪ್ತಿಯಾಗುವುದಕ್ಕಾಗಿ ವಿಷಯಗಳ ಆಸಕ್ತಿಯನ್ನು ಬಿಡಿಸಿರುವುದು ॥೪೫೫॥ ಈ ಯಾವ ವೇದದ ಗುಪ್ತವಾಗಿರುವ ಅರ್ಥವನ್ನು ತಿಳಿದು ಯಾವ ಜೀವವು ಬ್ರಹ್ಮರೂಪವಾಗುವುದೋ, ಆಗ ಕರ್ಮ ಮತ್ತು ಕರ್ತಾ ಇವು ತಮ್ಮಷ್ಟಕ್ಕೆ ತಾವೇ ಮಿಥ್ಯೆಯಾಗಿಬಿಡುವುವು. ಆಗ ಅಲ್ಲಿ ಆಶ್ರಮ,ವರ್ಣಗಳು ಏಕೆ ಇರುವುವು? ॥೪೫೬॥ ಧ್ಯೇಯ, ಧ್ಯಾತಾ ಮತ್ತು ಧ್ಯಾನ ಇವು ಎಲ್ಲಿಯವು? ಜ್ಞೇಯ, ಜ್ಞಾತಾ ಮತ್ತು ಜ್ಞಾನ ಎಂತಹದ್ದು? ಆತನು ಪರಿಪೂರ್ಣವಾಗಿ ಭಗವಂತನಲ್ಲಿ ಏಕರೂಪನಾದ್ದರಿಂದ ಭಜ್ಯ, ಭಜಕ ಮತ್ತು ಭಜನ ಇವೂ ಕೂಡ ಉಳಿಯಲಾರವು ॥೪೫೭॥ ಅಲ್ಲಿ ಕರ್ಮಾಚರಣೆಯಾದರೂ ಎಂತಹದ್ದು? ವೇದವು ಎಲ್ಲಿಯದು? ವೇದಾಧ್ಯಯನ ಎಂತಹದ್ದು ? ಹಾಗೆಯೇ ಸಾಧನೆಯಾದರೂ ಯಾವುದು? ಆತನು ಪೂರ್ಣರೂಪದಲ್ಲಿ ಬ್ರಹ್ಮನೇ ಆಗಿರುವನು ॥೪೫೮॥ ಅಲ್ಲಿ ಗುಣ ಮತ್ತು ದೋಷ, ಪಾಪ ಮತ್ತು ಪುಣ್ಯ, ಜನ್ಮ ಮತ್ತು ಮೃತ್ಯು ಇವು ಹೇಗೆ ಇರುವುವು? ಪೂರ್ಣತ್ವದಿಂದ ಎಲ್ಲೆಲ್ಲಿಯೂ ಬ್ರಹ್ಮವೇ ತುಂಬಿರುವುದು ॥೪೫೯॥ ಅಲ್ಲಿ ಭೇದವಾದರೂ ಯಾವುದು ? ಮತ್ತು ಐಕ್ಯಜ್ಞಾನವಾದರೂ ಎಂತಹದ್ದು? ಅಲ್ಲಿ ಬಂಧ ಮತ್ತು ಮೋಕ್ಷವಾದರೂ ಹೇಗೆ ಇರುವುವು ? ಹೇ ಉದ್ಧವನೇ, ಸದಾ ಸರ್ವದಾ ಪರಮಾನಂದವು ತುಂಬಿಕೊಂಡಿರುವುದು. ಇದೇ ವೇದದ ನಿಜವಾದ ಅರ್ಥವಾಗಿರುವುದು ॥೪೬೦॥ ಆದರೆ ಈ ವೇದಾರ್ಥದ ನಿರೂಪಣೆಯನ್ನು ನಾನೇ ಮುಂದಾಗಿ ಹೇಳಿ ಪ್ರಕಟಿಸಿದರೆ ಜನರು ತಮ್ಮ ಸ್ವಾರ್ಥಕ್ಕಾಗಿ ಇದನ್ನು ಕೇಳಲಾರರು. ಆದ್ದರಿಂದ ನಾನು ಈ ಅರ್ಥವನ್ನು ಗುಪ್ತವಾಗಿ ಇಟ್ಟಿರುವೆನು ॥೪೬೧॥ ಇಲ್ಲಿಯವರೆಗೆ ಹೇಳಿರುವುದು ಇದು ನಿಜವಾದ ವೇದಗಳಲ್ಲಿನ ರಹಸ್ಯದ ಸಾರವಾಗಿರುವುದು. ಗುಪ್ತವಾದ ಜ್ಞಾನಭಾಂಡಾರವಾಗಿರುವುದು. ನಿನ್ನ ಅಧಿಕಾರವನ್ನು ಕಂಡು ಇದನ್ನು ನಾನು ನಿನಗೆ ಹೇಳಿರುವೆನು ॥೪೬೨॥

ಹಾ ಗುಹ್ಯಾರ್ಥ ಕರಿತಾ ಪ್ರಕಟ । ಸಾಂಡೋನಿ ಕರ್ಮಮಾರ್ಗಾಚಿ ವಾಟ । ಕರ್ಮ ಬ್ರಹ್ಮ ಉಭಯಭ್ರಷ್ಟ । ಹೋತೀಲ ನಷ್ಟ ಅನಧಿಕಾರೀ ॥೩೬೩॥ ಹೇ ಜಾಣೋನಿ ಜ್ಞಾತೇ ಋಷೀಶ್ವರೀ । ವೇದಾರ್ಥನಿರೂಪಣಕುಸರೀ । ಹಾ ಮುಖ್ಯಾರ್ಥ ಝಾಂಕೋನಿ ನಿರ್ಧಾರೀ । ಪರೋಕ್ಷವಾದಾವರೀ ವ್ಯಾಖ್ಯಾನ ಕೇಲೇ ॥೩೬೪॥ ಸಕಳಲೋಕ ಹಿತಾರ್ಥ । ಮಾಝೇಹೀ ಹೇಚಿ ಮನೋಗತ । ಪರೋಕ್ಷವಾದ ಗೋಡಲಾಗತ । ಲೋಕಸಂಗ್ರಹಾರ್ಥ ಉದ್ಧವಾ ॥೩೬೫॥ ಮೀಹೀ ಲೋಕಸಂಗ್ರಹಾರ್ಥ । ಅಕರ್ತಾ ಕರ್ಮೇ ಆಚರತ । ವೇದಾಚೇ ಜೇ ಪರೋಕ್ಷ ಮತ । ಮೀ ಸ್ವಯೇ ರಾಖಿತ ಲೋಕಹಿತಾ ॥೩೬೬॥ ವೇದಾಚೇ ಸ್ವರೂಪ ಗಹನ । ಅತರ್ಕ್ಯ ಅಲಕ್ಷ್ಯ ಅಗಮ್ಯ ಜಾಣ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೩೬೭॥

ಶಬ್ದಬ್ರಹ್ಮ ಸುದರ್ಬೋಧಂ ಪ್ರಾಣೇಂದ್ರಿಯ ಮನೋಮಯಮ್ । ಅನಂತಪಾರಂ ಗಂಭೀರಂ ದುರ್ವಿಗಾಹ್ಯಂ ಸಮುದ್ರವತ್ ॥೩೬॥

ಅರ್ಥ:- ವೇದದ ನಾಮವು ಶಬ್ದಬ್ರಹ್ಮ, ವೇದವು ನನ್ನ ಮೂರ್ತಿಯಾಗಿರುವುದು. ಇದರ ರಹಸ್ಯವನ್ನು ತಿಳಿಯುವುದು ಅತ್ಯಂತ ಕಠಿಣವಾಗಿರುವುದು. ಈ ಶಬ್ದಬ್ರಹ್ಮವು ಪರಾ, ಪಶ್ಯಂತಿ ಮತ್ತು ಮಧ್ಯಮಾ ವಾಣಿಯ ರೂಪದಲ್ಲಿ ಪ್ರಾಣ, ಮನ ಮತ್ತು ಇಂದ್ರಿಯ ಮಯವಾಗಿರುವುದು. ಸಮುದ್ರದಂತೆ ಸೀಮಾರಹಿತ ಆಳವಾಗಿರುವುದು. ಇದರ ಶೋಧ ಮಾಡುವುದು ಅತಿಶಯ ಕಠಿಣವಾಗಿರುವುದು. ಜೈಮಿನಿ ಇತ್ಯಾದಿ ಮಹಾಮಹಾ ವಿದ್ವಾನರಿಗೆ ಇದರಲ್ಲಿನ ತಾತ್ಪರ್ಯವನ್ನು ಸರಿಯಾಗಿ ತಿಳಿಯಲು ಸಾಧ್ಯವಾಗಲಿಲ್ಲ.

ಮಾಝೀ ವೇದರೂಪ ಜೇ ಬೋಲೀ । ಶಬ್ದತಃ ಅರ್ಥತಃ ಅಗಾಧ ಖೋಲೀ । ಬ್ರಹ್ಮಾದಿಕಾ ಭುಲೀ ಪಡಲೀ । ಮರ್ಯಾದಾ ಕೇಲೀ ನ ವಚೇನಿ ॥೩೬೮॥ ಬಾಹೀ ನ ತರವೇ ಸಮುದ್ರ । ತೇವೀ ಸ್ವಮತೀ ನ ಕಳೇ ವೇದಪಾರ । ಯೇಚಿ ಅರ್ಥೀ ನಾನಾ ಋಷೀಶ್ವರ । ಯುಕ್ತೀಚೇ ಸಂಭಾರ ವೇಚಿಲೇ ॥೩೬೯॥ ಪರೀ ಏವಂವಿಧ ತತ್ತ್ವತಾ । ಹೇ ವೇದವಾದಾಚೀ ಕಥಾ । ನ ಯೇಚಿ ಕೋಣಾಚೇಹೀ ಹಾತಾ । ಅರ್ಥತಃ । ಶಬ್ದತಃ ದುರ್ಜೇಯ ॥೩೭೦॥ ಜ್ಯಾಚೀ ಶಬ್ದವಾಚಕತಾ । ಸ್ವರವರ್ಣೇ ಶುದ್ಧ ನ ಯೇ ಹಾತಾ । ತ್ಯಾಚೀ ಅರ್ಥ ಬೋಧಕತಾ । ಅಗಮ್ಯ ಸರ್ವಥಾ ಸುರನರಾ ॥೩೭೧॥ ಪೂರ್ವೀ ಹಾಚಿ ವೇದ ಅನುಚ್ಛಿಷ್ಟ । ಮ್ಯಾ ಬ್ರಹ್ಮ್ಯಾಹಾತೇ ಕರವಿಲಾ ಪಾಠ । ತೇಣೇಹೀ ನೇಣೋನಿಯಾ ಸ್ಪಷ್ಟ । ಕರ್ಮೀ ಕರ್ಮಠ ಹೋಊನಿ ಠೇಲಾ ॥೩೭೨॥ ಕರ್ಮಕ್ರಿಯಾ ಅತಿಗೋಮಟೀ । ಶಂಖೇ ಹರಿಲೀ ಉಠಾಉಠೀ । ಬ್ರಹ್ಮಾ ವಿಸರಲಾ ವೇದಗೋಠೀ । ಪಡಲೇ ಸೃಷ್ಟೀ ಕರ್ಮಾಂಧ್ಯ ॥೩೭೩॥ ತೋ ಕರಾವಯಾ ವೇದೋದ್ಧಾರ । ಮ್ಯಾ ಮರ್ದಿಲಾ ಶಂಖಾಸುರ । ಸಕಳ ಶ್ರುತೀಂಚಾ ಸಂಭಾರ । ಬ್ರಹ್ಮಾಸೀ ಸಾಚಾರ ದೀಧಲಾ ॥೩೭೪॥

ಈ ಗೂಢವಾದ ಅರ್ಥವನ್ನು ಬಹಿರಂಗವಾಗಿ ಹೇಳಿದ್ದರೆ, ಜನರು ಕರ್ಮಮಾರ್ಗವನ್ನು ಬಿಟ್ಟುಬಿಡುವರು. ತದನಂತರ ಕರ್ಮವಿಲ್ಲ, ಬ್ರಹ್ಮವಿಲ್ಲ, ಹೀಗೆ ಉಭಯ ಭ್ರಷ್ಟರಾಗುವರು, ಕೊನೆಗೆ ನಾಶಹೊಂದುವರು ॥೩೬೩॥ ಇದನ್ನು ಅರಿತುಕೊಂಡು ಜ್ಞಾನೀ ಋಷೀಶ್ವರರು ವೇದಾರ್ಥದ ನಿರೂಪಣೆಯನ್ನು ಕೌಶಲ್ಯದಿಂದ ಮುಖ್ಯಾರ್ಥವನ್ನು ಮುಚ್ಚಿಟ್ಟು ಪರೋಕ್ಷವಾದದಿಂದ ಮಾಡಿರುವರು ॥೩೬೪॥ ಹೇ ಉದ್ಧವಾ, ಇದು ಸರ್ವ ಜನರ ಹಿತಕ್ಕಾಗಿ ಇರುವುದು. ನನ್ನ ಮತವೂ ಕೂಡ ಇದೇ ಆಗಿರುವುದು. ಕಾರಣ ಪ್ರವೃತ್ತಿ ಮಾರ್ಗವು ಎಲ್ಲರಿಗೂ ಹಿಡಿಸುವುದು ॥೩೬೫॥ ಜನರಿಗೆ ಮಾದರಿಯಾಗುವುದಕ್ಕಾಗಿ ನಾನು ಅಕರ್ತನಾಗಿದ್ದರೂ ಕೂಡ ಕರ್ಮವನ್ನು ಮಾಡುತ್ತಿರುತ್ತೇನೆ. ಮತ್ತು ಲೋಕ ಕಲ್ಯಾಣಕ್ಕಾಗಿ ಇರುವ ವೇದದ ಪ್ರವೃತ್ತಿಪರ ಮತವನ್ನು ನಾನು ಸ್ವತಃ ಪಾಲಿಸುತ್ತೇನೆ ॥೩೬೬॥ ಈ ಯಾವ ವೇದಗಳ ಸ್ವರೂಪವು ಅತಿಶಯವಾಗಿ ಸಖೋಲ, ಅತರ್ಕ್ಯ, ಅಲಕ್ಷ್ಯ ಮತ್ತು ಅಗಮ್ಯವಾಗಿರುವುದು. ಹೀಗೆ ನೀನು ತಿಳಿ. ಇದೇ ಅರ್ಥದ ನಿರೂಪಣೆಯನ್ನು ಮುಂದಿನ ಶ್ಲೋಕದಲ್ಲಿ ಸ್ವತಃ ಶ್ರೀಕೃಷ್ಣನು ಮಾಡುತ್ತಿರುವನು ॥೩೬೭॥

ನನ್ನ ವೇದರೂಪ ವಚನಗಳು ಶಬ್ದಶಃ ಮತ್ತು ಅರ್ಥಶಃ ಅತಿಶಯವಾಗಿ ಆಳವಾಗಿರುವುವು. ಇದರ ವಿಷಯಕ್ಕೆ ಬ್ರಹ್ಮದೇವಾದಿಕರಿಗೂ ಕೂಡ ಭ್ರಮೆಯಾಗುತ್ತಿರುವುದು. ಕಾರಣ ಇವರಿಂದಲೂ ಸಹ ವೇದ ಮರ್ಯಾದೆಯ ಹೊರಗೆ ಹೋಗಲಾಗುವುದಿಲ್ಲ ॥೩೬೮॥ ಸಮುದ್ರವನ್ನು ಬಾಹುಗಳಿಂದ ಈಸೀ ಹೇಗೆ ಪಾರಾಗಲು ಬರುವುದಿಲ್ಲವೋ, ಅದರಂತೆ ತನ್ನ ಸ್ವಂತ ಬುದ್ಧಿಯಿಂದ ವೇದದ ಅರ್ಥವನ್ನು ತಿಳಿಯಲು ಶಕ್ಯವಿಲ್ಲ. ಆದ್ದರಿಂದ ಅನೇಕ ಋಷಿವರ್ಯರು ಅನೇಕ ಯುಕ್ತಿಗಳನ್ನು ರಚಿಸಿರುವರು ॥೩೬೯॥ ಆದರೆ ಇದರಿಂದಲೂ ಕೂಡ ನಿಜವಾದ ವೇದದ ಅರ್ಥವು ಯಾರಿಗೂ ತಿಳಿಯಲಾರದು. ಕಾರಣ ಅದು ಶಬ್ದಶಃ, ಅರ್ಥಶಃ ದುರ್ಬೋಧವೇ ಆಗಿರುವುದು ॥೩೭೦॥ ಅದರ ಶಬ್ದಗಳ ತಿರುವು ಸ್ವರವರ್ಣಗಳು ಯಾರ ಲಕ್ಷಕ್ಕೂ ಬರುವುದಿಲ್ಲ. ಇದರ ಅರ್ಥವು ಮಾನವರಿಗೆ ಏಕೆ ದೇವಾದಿಕರಿಗೂ ಕೂಡ ಅಗಮ್ಯವಾಗಿರುವುದು ॥೩೭೧॥ ಪೂರ್ವದಲ್ಲಿ ಇದೇ ವೇದವು ಅನುಚ್ಛಿಷ್ಟವೆಂದರೆ ಇತರರು ಯಾರೂ ನೋಡಿದ್ದಿಲ್ಲ. ಆಗ ನಾನು ಬ್ರಹ್ಮದೇವನಿಗೆ ಇದನ್ನು ಪಾಠ ಮಾಡಿಸಿದೆನು. ಆದರೆ ಆತನಿಗೂ ಕೂಡ ಇದು ಸರಿಯಾಗಿ ತಿಳಿಯಲಾರದ್ದಕ್ಕೆ ಆತನು ಕರ್ಮಗಳಿಂದ ಕರ್ಮಠನಾಗಿಬಿಟ್ಟನು ॥೩೭೨॥ ಈ ಯಾವ ಅತಿಶಯವಾಗಿ ಸುಂದರವಾಗಿರುವ ಕರ್ಮಕ್ರಿಯೆಯ ವೇದಗಳನ್ನು ಶಂಖಾಸುರನು ಕದ್ದೊಯ್ದನು. ಆಗ ಬ್ರಹ್ಮದೇವನು ವೇದಗಳನ್ನು ಮರೆತನು. ಇದರಿಂದ ಸೃಷ್ಟಿ ಉತ್ಪನ್ನ ಮಾಡುವ ಕಾರ್ಯವೇ ನಿಂತುಹೋಯಿತು ॥೩೭೩॥ ಈ ವೇದಗಳ ಉದ್ಧಾರ ಮಾಡುವುದಕ್ಕಾಗಿ ನಾನು ಶಂಖಾಸುರನನ್ನು ಕೊಂದೆನು ಮತ್ತು ವೇದದ ಸರ್ವ ಸಂಗ್ರಹವನ್ನು ಬ್ರಹ್ಮದೇವನಲ್ಲಿ ತಂದುಕೊಟ್ಟೆನು ॥೩೭೪॥

ಮ್ಯಾ ವೇದ ಠೇವಿಲೇ ಬ್ರಹ್ಮಾ ಪುಢೇ । ತೋ ಪೂರ್ವ ಸ್ಮರೇನಾ ಧಡಪುಡೇ । ತೇವ್ಹಾ ಚಾಕಾಟಲೇ ಬಾಪುಡೇ । ಕೇವಳ ವೇಡೇ ಹೋಊನಿ ಠೇಲೇ ।೩೭೪॥ ತ್ಯಾ ವೇದಭಾಗಾಲಾಗೀ ಜಾಣ । ಋಷೀ ವೇಚಿಲೇ ನಿಜಜ್ಞಾನ । ಶಾಖೋಪಶಾಖೀ ರಾವಣ । ವೇದವಿಭಾಗ ನ ಕರೂ ಆಲಾ ।೩೭೫॥ ಪರೀ ಇತ್ಥಂಭೂತ ತತ್ತ್ವತಾ । ಮಾಝ್ಯಾ ವೇದವಿಭಾಗಾಚೀ ವಾರ್ತಾ । ನ ಯೇಚಿ ಕೋಣಾಚಿಯಾ ಹಾತಾ । ಜಾಣ ತತ್ತ್ವತಾ ಉದ್ಧವಾ ।೩೭೬॥ ತೋ ಮೀ ವೇದಸ್ಥಾಪಕ ಶ್ರೀಹರೀ । ಲೋಕ ರಾಖಾವಯಾ ಮರ್ಯಾದೇವರೀ । ಸ್ವಯೇ ಸತ್ಯವತೀಚ್ಯಾ ಉದರೀ । ಝಾಲೋ ಅವತಾರಧಾರೀ ಶ್ರೀವ್ಯಾಸ ।೩೭೭॥ ವೇದಿವಿಭಾಗೀ ರಾಜಹಂಸು । ಯಾಲಾಗೀ ನಾಮೇ ''ವೇದವ್ಯಾಸು'' । ತೇಣೇ ಮ್ಯಾ ಕೇಲಾ ಶ್ರುತಿವಿಲಾಸು । ವೇದವಿಶೇಷು ಚತುರ್ಧಾ ।೩೭೮॥ ವೇದ ಅರ್ಥತ್ವೇ ಅತಿದುರ್ಘಟ । ಪರೀ ವಾಚಕತ್ವೇ ಝಾಲಾ ಪ್ರಗಟ । ತ್ಯಾ ಚಾರೀ ವಾಚಾ ಅತಿಶ್ರೇಷ್ಠ । ಐಕ ಸ್ಪಷ್ಟ ಸಾಂಗೇನ ।೩೭೯॥ ನಾದಾಚೇ ಪ್ರಥಮ ಸ್ಫುರಣ । ಘೋಷಮಾತ್ರ ಸೂಕ್ಷ್ಮ ಪ್ರಾಣ। ತೀ ನಾಂವ ''ಪರಾ'' ವಾಚಾ ಜಾಣ । ಪ್ರಥಮ ಲಕ್ಷಣ ಓಂಕಾರೀ ।೩೮೦॥ ತೋಚಿ ನಾದಯುಕ್ತ ಪ್ರಾಣ । ಅಂತಃಕರಣೀ ಹೋಯ ಸ್ಫುರಣ । ತೇ ''ಪಶ್ಯಂತೀ'' ವಾಚಾ ಜಾಣ । ವಿವೇಕಲಕ್ಷಣ ತೀಮಾಜೀ ।೩೮೧॥ ನಾಭೀಪಾಸೋನಿ ನಾಭೀಸ್ವರೀ । ಜೇ ಘುಮಘುಮೂ ಕಂಠವರೀ । ತೇ ''ಮಧ್ಯಮಾ'' ವಾಚಾ ಖರೀ । ಸ್ವಯೇ ಶ್ರೀಹರೀ ಸಾಂಗತ ।೩೮೨॥ ಅಕಾರ- ಉಕಾರ-ಮಕಾರ । ಸ್ವರವರ್ಣ ಯುಕ್ತ ಉಚ್ಚಾರ । ಜೇಥ ಪ್ರಗಟ ಹೋಯ ಓಂಕಾರ । ತೇ ವಾಚಾ ಸಾಚಾರ ''ವೈಖರೀ'' ।೩೮೩॥ ತೇ ವೈಖರೀಚ್ಯಾ ಠಾಯೀ । ಶಾಖೋಪಶಾಖೀ ಜೋ ಕಾಂಹೀ । ವೇದ ಅನಂತರೂಪ ಪಾಹೀ। ತ್ಯಾಸಹೀ ನಾಹೀ ಮರ್ಯಾದಾ ।೩೮೪॥ ಯಾಪರೀ ವೇದ ಅಮರ್ಯಾದ । ಜರೀ ಚತುರ್ಧಾ ಕೇಲಾ ವಿಶದ । ತರೀ ಜನಾಸೀ ಅತಿದುರ್ಬೋಧ । ಯಾಲಾಗೀ ಉಪವೇದ ವಿಭಾಗಿಲೇ ।೩೮೫॥ ಐಸೇನಿಹೀ ಜನಾಸೀ ನ ಕಳೇ ವೇದ । ಯಾಲಾಗೀ ವೇದಾವರೀ ಪದ । ಶ್ರೀವ್ಯಾಸೇ ಕೇಲೇ ವಿಶದ । ತರೀ ವೇದಾರ್ಥ ಶುದ್ಧ ಕಳೇನಾ ।೩೮೬॥ ಯೇಚಿ ಅರ್ಥೀ ಋಷೀಶ್ವರ ಬಹುತ । ಸಂಮತು ಜೈಮಿನೀ ಭಾಷ್ಯ ಭಾರತ । ಪೈಲ ಸೂತ್ರಾದಿ ಜೇ ಸಮಸ್ತ । ಶಿಣತಾ ವೇದಾರ್ಥ ನ ಕಳೇಚಿ ।೩೮೭॥ ಏವಂ ವಾಚ್ಯಾತಾ ಆಣಿ ಲಕ್ಷ್ಯತಾ । ಸ್ಥೂಲಸೂಕ್ಷ್ಮತ್ವೇ ವೇದಾರ್ಥಜ್ಞಾತಾ । ಮಜವಾಂಚೂನಿ ತತ್ತ್ವತಾ । ಆಣಿಕ ಸರ್ವಥಾ ಅಸೇನಾ ।೩೮೮॥

ಈ ಪ್ರಕಾರವಾಗಿ ನಾನು ಆ ಎಲ್ಲ ವೇದಗಳನ್ನು ಬ್ರಹ್ಮದೇವನಲ್ಲಿ ತಂದು ಕೊಟ್ಟರೂ ಸಹ ಆತನಿಗೆ ಮೊದಲಿನಂತೆ ಸ್ಮರಣಕ್ಕೆ ಬಾರದಾಯಿತು. ಆಗ ಪಾಪ! ಆತನು ಬಹಳ ಗಾಬರಿಯಾಗಿ ಆತನಿಗೆ ಯಾವುದೂ ತಿಳಿಯದಾಯಿತು ।೩೭೪॥ ಆ ವೇದಗಳ ವಿಭಾಗಕ್ಕಾಗಿ ಋಷಿಗಳು ತಮ್ಮ ಜ್ಞಾನವನ್ನು ಖರ್ಚಿಸಿದರು. ಅವುಗಳ ಶಾಖೋಪಶಾಖಗಳ ಪದಚ್ಛೇದ ಮಾಡಲು ರಾವಣನು ಮುಂದೆ ಬಂದನು ।೩೭೫॥ ಹೇ ಉದ್ಧವಾ, ಇಷ್ಟಾದರೂ ಕೂಡ ನನ್ನ ವೇದಗಳ ನಿಜವಾದ ಅರ್ಥವು ಯಾರ ಕೈಗೂ ಹತ್ತಲಿಲ್ಲ ।೩೭೬॥ ಆಗ ವೇದ ಸಂಸ್ಥಾಪಕ ಶ್ರೀಹರಿಯಾದ ನಾನು ಜನರನ್ನು ಮರ್ಯಾದೆಯಲ್ಲಿಡುವುದಕ್ಕಾಗಿ ಶ್ರೀವ್ಯಾಸರ ಅವತಾರವನ್ನು ಧರಿಸಿ ಸತ್ಯವತಿಯ ಗರ್ಭದಲ್ಲಿ ಹುಟ್ಟಿ ಬಂದೆನು ।೩೭೭॥ ವೇದ ವಿಭಾಗಗಳನ್ನು ಮಾಡಲು ಆತನು ಕೇವಲ ರಾಜಹಂಸನಾಗಿದ್ದನು. ಅದಕ್ಕಾಗಿ ಆತನಿಗೆ ವೇದವ್ಯಾಸನೆಂದು ಕರೆಯುವರು. ಆತನು ವೇದಾರ್ಥವನ್ನು ಪ್ರಕಟಗೊಳಿಸಿ ವೇದಗಳನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿದನು ।೩೭೮॥ ಯಾವ ಈ ವೇದಗಳು ಅರ್ಥದ ದೃಷ್ಟಿಯಿಂದ ಅತ್ಯಂತ ಗೂಢವಾಗಿರುವುವು. ಆದರೂ ಶಬ್ದಗಳ ದೃಷ್ಟಿಯಿಂದ ಪ್ರಗಟವಾಗಿ ಇವೆ. ಆ ಶಬ್ದಗಳೆಂದರೆ ವಾಣಿಯಾಗಿರುವುದು. ಇವು ನಾಲ್ಕು ಪ್ರಕಾರಗಳಾಗಿವೆ. ಅವುಗಳನ್ನು ನಾನೀಗ ನಿನಗೆ ಸ್ಪಷ್ಟಮಾಡಿ ಹೇಳುವೆನು, ಅದನ್ನು ಕೇಳು ।೩೭೯॥ ನಾದದ ಯಾವ ಪ್ರಥಮ ಸ್ಫುರಣವೆಂದರೆ ಅದು ಘೋಷಯುಕ್ತ ಸೂಕ್ಷ್ಮ ಪ್ರಮಾಣದಲ್ಲಿದ್ದು ಅದರ ನಾಮವು ಪರಾವಣಿ ಎಂದಾಗಿರುವುದು. ಇದೇ ಓಂಕಾರದ ಪ್ರಥಮ ಸ್ಫುರಣವಾಗಿರುವುದು ।೩೮೦॥ ಇದೇ ನಾದಯುಕ್ತವಾಗಿ ಪ್ರಾಣ ಅಂತಃಕರಣದಲ್ಲಿ ಸ್ಫುರಣವಾಗಲು ಅದಕ್ಕೆ ಪಶ್ಯಂತೀ ವಾಣಿ ಎಂದು ಕರೆಯುವರು. ಇದರಲ್ಲಿ ವಿವೇಕ ಸ್ವರೂಪವು ಸ್ಫುರಣಗೊಳ್ಳುತ್ತಿರುವುದು ।೩೮೧॥ ನಾಭಿಯಿಂದ ಕಂಠದವರೆಗೆ ಧ್ವನಿಯಾಗುತ್ತಿರುವ ಈ ವಾಣಿಯು ಮಧ್ಯಮವಾಗಿರುವುದು. ಹೀಗೆ ಸ್ವತಃ ಶ್ರೀಕೃಷ್ಣನು ಹೇಳಿದನು ।೩೮೨॥ ತದನಂತರ ಅಕಾರ, ಉಕಾರ, ಮಕಾರ ಹೀಗೆ ಸ್ವರವರ್ಣಯುಕ್ತ ಉಚ್ಚಾರದಿಂದ ಓಂಕಾರವು ಪ್ರಕಟವಾಗುವುದು. ಇದು ವೈಖರೀ ವಾಣಿಯಾಗಿರುವುದು ।೩೮೩॥ ಆ ವೈಖರೀ ವಾಣಿಯ ಶಾಖೋಪಶಾಖಗಳಲ್ಲಿ ಅನಂತ ರೂಪಗಳಿಂದ ವೇದವು ತುಂಬಿಕೊಂಡಿರುವುದು. ಅದಕ್ಕೆ ಸೀಮೆಯೇ ಇಲ್ಲ ।೩೮೪॥ ಈ ಪ್ರಕಾರವಾಗಿ ವೇದವು ಅನಾದಿಯಾಗಿರುವುದು. ಇದನ್ನು ನಾಲ್ಕು ವಿಭಾಗಗಳನ್ನು ಮಾಡಿ ಅದರ ಸ್ಪಷ್ಟೀಕರಣೆಯನ್ನು ಮಾಡಿದರೂ ಕೂಡ ಅದು ಜನರಿಗೆ ತಿಳಿಯಲಾರದ್ದಕ್ಕೆ ಪುನಃ ಅವುಗಳ ಉಪವೇದಗಳೆಂದು ವಿಭಾಗಗಳನ್ನು ಮಾಡಿರುವುದು ।೩೮೫॥ ಇಷ್ಟೊಂದು ಸುಲಭವನ್ನಾಗಿ ಮಾಡಿದರೂ ಕೂಡ ಜನರಿಗೆ ವೇದವು ಏನೂ ತಿಳಿಯಲಾರದಾಯಿತು. ಅದಕ್ಕಾಗಿ ಶ್ರೀ ವೇದವ್ಯಾಸರು ವೇದಗಳನ್ನು ಪದ್ಯರೂಪದಲ್ಲಿ ಅವುಗಳ ಅರ್ಥವನ್ನು ಸ್ಪಷ್ಟಗೊಳಿಸಿದರು. ಇಷ್ಟೊಂದು ಮಾಡಿದರೂ ಕೂಡ ವೇದದ ನಿಜವಾದ ಅರ್ಥವು ತಿಳಿಯುವುದೇ ಇಲ್ಲ ।೩೮೬॥ ಈ ಯಾವ ವೇದದ ಅರ್ಥ ಮಾಡಲು ಸುಮಂತು, ಜೈಮಿನೀ ಭಾಷ್ಯಭಾರತ, ಪೈಲಸೂತ್ರ ಇತ್ಯಾದಿ ಮಹಾ ಮಹಾ ಋಷಿಗಳು ಪ್ರಯತ್ನವನ್ನು ಮಾಡಿದರು. ಇವರೆಲ್ಲರೂ ದಣಿದುಕೊಂಡರು, ಆದರೆ ವೇದದ ಅರ್ಥವು ತಿಳಿಯಲಿಲ್ಲ ।೩೮೭॥ ತಾತ್ಪರ್ಯವೇನೆಂದರೆ, ವೇದದ ಸ್ಥೂಲ ಮತ್ತು ಸೂಕ್ಷ್ಮ ವಾಚ್ಯಾರ್ಥವನ್ನು ಮತ್ತು ಲಕ್ಷ್ಯಾರ್ಥವನ್ನು ತಿಳಿಯುವವನು ನನ್ನ ಹೊರತಾಗಿ ಅನ್ಯರಾರೂ ಇರುವುದಿಲ್ಲ ।೩೮೮॥

ಮಯೋಪಬೃಂಹಿತಂ ಭೂಮ್ನಾ ಬ್ರಹ್ಮಣಾನಂತಶಕ್ತಿನಾ । ಭೂತೇಷು ಘೋಷರೂಪೇಣ ಬಿಸೇಷೂರ್ಣೇವ ಲಕ್ಷ್ಯತೇ ।೩೭॥

ಅರ್ಥ:- ಹೇ ಉದ್ಧವಾ, ನಾನು ಅನಂತಶಕ್ತಿ ಸಂಪನ್ನನು, ಅನಂತನು, ಮತ್ತು ಬ್ರಹ್ಮನಾಗಿರುವೆನು. ನಾನೇ ವೇದವಾಣಿಯ ವಿಸ್ತಾರವನ್ನು ಮಾಡಿರುವೆನು. ಕಮಲದಲ್ಲಿನ ಒಂದು ಎಳೆಯಂತೆ ಸೂಕ್ಷ್ಮವಾಗಿ ಆ ವೇದವಾಣಿಯು ಪ್ರಾಣಿಗಳ ಅಂತಃಕರಣದಲ್ಲಿ ಅನಾಹತದ ನಾದರೂಪದಿಂದ ಪ್ರಕಟವಾಗುವುದು.

ಜೋ ಮೀ ಅಂತರ್ಯಾಮೀ ಆಪಣ । ''ಭೂಮಾ'' ಮ್ಹಣಿಜೇ ಅಪರಿಚ್ಛಿನ್ನ । ಸಬಾಹ್ಯ ವ್ಯಾಪಕತ್ವೇ ಸಂಪೂರ್ಣ । ಬ್ರಹ್ಮ ಪರಿಪೂರ್ಣ ಜೋ ಕಾ ಮೀ ।೯೦॥ ತೇಣೇ ಮ್ಯಾ ವೇದ ಅಧಿಷ್ಠಿತ । ಯಾ ನಾಂವ ಬೋಲಿಜೇ '' ಉಪಬ್ರಂಹಿತ'' । ಅಧಿಷ್ಠಾತಾ ವಿಕಾರೀ ಹೋತ । ಜೇವೀ ಅಭ್ರಾಂತ ಚಂದ್ರಮಾ ।೯೧॥ ಕಾ ಅಗ್ನಿ ಕಾಷ್ಠೀ ಅಧಿಷ್ಠಿತಾ । ತ್ಯಾಸೀ ತತ್ಕಾಳ ಯೇ ಸಾಕಾರತಾ । ಮಗ ಪ್ರಬಳ ಆಣಿ ಶಾಂತತಾ । ಯಾ ವಿಕಾರಾವಸ್ಥಾ ಅಗ್ನೀಸೀ ।೯೨॥ ಯಾಪರೀ ವಿಕಾರೀ ನವ್ಹೇ ಜಾಣ । ಮೀ ಅಂತರ್ಯಾಮೀ ನಾರಾಯಣ । ಬ್ರಹ್ಮಸ್ವರೂಪೇ ಪರಿಪೂರ್ಣ । ವಿಕಾರನಿರ್ದಳಣ ಸ್ವಯೇ ಕರ್ತಾ ।೯೩॥ ಮೀಚಿ ವಿಕಾರಾಂಚಾ ಕರ್ತಾ । ಕರೂನಿ ಮೀಚಿ ಅಕರ್ತಾ । ತ್ಯಾ ಮಜ ನ ಯೇ ವಿಕಾರತಾ। ಬ್ರಹ್ಮಸ್ವರೂಪತಾಸ್ವಭಾವೇ।೯೪॥ ಬ್ರಹ್ಮ ಕೇವಳ ನಿರ್ಧರ್ಮ। ತೇ ಕೇವೀ ಕರೀ ವಿಕಾರೀ ಕರ್ಮ । ಐಸಾ ಕಾಂಹೀ ಕಲ್ಪಿಸೀ ಭ್ರಮ । ತೇಹೀ ಸುಗಮ ಸಾಂಗೇನ ।೯೫॥ ಮಾಝೀ ಯೋಗಮಾಯಾ ಅನಂತ ಶಕ್ತೀ । ಜೇ ಶಂಭುಸ್ವಯಂಭೂಸೀ ನ ಯೇ ವ್ಯಕ್ತೀ । ತಿಚೇನಿ ಯೋಗೇ ಮೀ ಚಿನ್ಮೂರ್ತೀ । ಉತ್ಪತ್ತಿಸ್ಥಿತಿಸಂಹರ್ತಾ ।೯೬॥ ಏವಂ ಯೋಗಮಾಯಾ ಸ್ವಭಾವತಾ । ಮೀ ಸಕಳ ಕರೂನಿ ಅಕರ್ತಾ । ತ್ಯಾ ಮಜ ದೇಶತಾ ಕಾಳತಾ । ವಿಕಾರಿತಾ ಸ್ಪರ್ಶೇನಾ ।೯೭॥ ಜರೀ ಸತ್ಯ ಅಸತೀ ಭೇದತಾ । ತರೀ ಮಜ ಯೇತೀ ವಿಕಾರಿತಾ । ಮಾಝೇ ನಿಜಸ್ವರೂಪೀ ಪಾಹತಾ । ಭೇದಾಚೀ ವಾರ್ತಾ ಅಸೇನಾ।೯೮॥ ಜೇವೀ ಭ್ರಮೇ ಸರ್ಪತ್ವ ದೋರಾವರೀ । ಪರೀ ದೋರ ಸರ್ಪತ್ವ ಕದಾ ನ ಧರೀ । ತೇವೀ ಮೀ ಪರಮಾತ್ಮಾ ಶ್ರೀಹರೀ । ಕರೂನಿ ಅವಿಕಾರೀ ನಿಜರೂಪೇ ।೯೯॥ ಘೋಷರೂಪೇ ಅತಿಸೂಕ್ಷ್ಮ ನಾದು । ತೋ ಮೀ ಪ್ರಣವರೂಪೇ ನಿಜವೇದು । ಪ್ರಾಣಿಮಾತ್ರೀ ಅಸೇ ಸ್ವತಃಸಿದ್ಧು । ಪರೀ ನೇಣತೀ ಬೋಧು ಸಕಾಮತ್ವೇ ।೧೦೦॥ ಜೇವೀ ಕಾ ವಿಷ್ಠಾ ಭಕ್ಷೀ ಸೂಕರ । ಉಪೇಕ್ಷೀ ಕಸ್ತೂರಿ ಕಾಪುರ । ತೇವೀ ಸೂಕ್ಷ್ಮ ವೇದಾಚೇ ನಿಜಸಾರ । ಸಕಾಮ ನರ ಉಪೇಕ್ಷಿತೀ ।೧೦೧॥

ನಾನು ಸ್ವತಃ ಸರ್ವರ ಅಂತಃಕರಣದಲ್ಲಿ ''ಭೂಮಾ'' ಎಂದರೆ ಅಪರಿಚ್ಛಿನ್ನದಿಂದ ಅಂತರ್ಬಾಹ್ಯ ವ್ಯಾಪಿಸಿ ಪರಿಪೂರ್ಣನಾಗಿರುವ ಪೂರ್ಣಬ್ರಹ್ಮನಾಗಿರುವೆನು ।೯೦॥ ನನ್ನಿಂದ ಈ ವೇದವು ಅಧಿಷ್ಠಿತವಾಗಿರುವುದು. ಇದಕ್ಕೆ ''ಉಪಬೃಂಹಿತ'' ಎಂದು ಹೇಳುವರು. ಆದರೆ ಅಧಿಷ್ಠತೆಯು ಮೋಡದಲ್ಲಿನ ಚಂದ್ರನಂತೆ ವಿಕೃತವಾದಂತೆ ತೋರುವುದು ।೯೧॥ ಅಥವಾ ಕಾಷ್ಠದಲ್ಲಿ ಅಗ್ನಿಯು ಅಧಿಷ್ಠಿತವಾಗುತ್ತಲೇ ಬಹುಬೇಗ ಅದಕ್ಕೆ ಆಕಾರವು ಪ್ರಾಪ್ತವಾಗುವುದು. ಆಗ ಆ ಅಗ್ನಿಗೂ ಕೂಡ ಪ್ರಬಲತೆ ಹಾಗೂ ಶಾಂತತೆ ಈ ಎರಡು ವಿಕಾರ ಅವಸ್ಥೆಗಳು ಪ್ರಾಪ್ತವಾಗುವುವು ।೯೨॥ ಅದರಂತೆ ಅಂತರ್ಯಾಮಿ ನಾರಾಯಣನು ಅದರಂತೆ ವಿಕಾರಿಯಾಗಲಾರನು. ನಾನು ಬ್ರಹ್ಮರೂಪದಿಂದ ಪರಿಪೂರ್ಣನಾಗಿರುವೆನು ಮತ್ತು ಸ್ವತಃ ವಿಕಾರಗಳ ನಿವಾರಣೆಯನ್ನು ಮಾಡುವವನಾಗಿರುವೆನು ।೯೩॥ ವಿಕಾರಗಳ ಕರ್ತನು ನಾನೇ ಆಗಿರುವೆನು. ಹೀಗೆ ಮಾಡಿಯೂ ಕೂಡ ಅಕರ್ತನು ನಾನೇ ಆಗಿರುವೆನು. ನಾನು ಸ್ವಯಂಭೂ ಬ್ರಹ್ಮಸ್ವರೂಪನಾಗಿರುವೆನು. ಆದ್ದರಿಂದ ನನಗೆ ವಿಕಾರವಾಗುವುದಿಲ್ಲ ।೯೪॥ ಬ್ರಹ್ಮವು ಕೇವಲ ಧರ್ಮರಹಿತವಾಗಿರುವುದು. ಆದ್ದರಿಂದ ಅದು ವಿಕಾರೀ ಕರ್ಮಗಳನ್ನು ಮಾಡಲು ಹೇಗೆ ಸಾಧ್ಯ ? ಹೀಗೆ ನಿನ್ನ ಮನದಲ್ಲಿ ಅನುಮಾನ ಉಂಟಾಗಬಹುದು. ಅದರ ಉತ್ತರವನ್ನು ನಾನು ನಿನಗೆ ವ್ಯವಸ್ಥಿತವಾಗಿ ಹೇಳುವೆನು, ಅದನ್ನು ಕೇಳು ।೯೫॥ ನನ್ನ ಅನಂತಶಕ್ತಿಯು ಯೋಗಮಾಯಾವಾಗಿರುವುದು. ಇದು ಬ್ರಹ್ಮನಿಗೂ ಮತ್ತು ಶಂಕರನಿಗೂ ಕೂಡ ತಿಳಿಯಲು ಸಾಧ್ಯವಿಲ್ಲ. ಇದರ ಯೋಗದಿಂದ ನಾನು ಚಿನ್ಮೂರ್ತಿಯಾಗಿದ್ದರೂ ಸಹ ಉತ್ಪತ್ತೀ, ಸ್ಥಿತೀ ಮತ್ತು ಸಂಹಾರಕರ್ತನಾಗುವೆನು ।೯೬॥ ಈ ಪ್ರಕಾರವಾಗಿ ಯೋಗಮಾಯೆಯ ಸ್ವಭಾವವಾಗಿರುವುದು. ನಾನು ಏನೆಲ್ಲವನ್ನೂ ಮಾಡಿಯೂ ಕೂಡ ಅಕರ್ತನಾಗಿರುವೆನು. ಆದ್ದರಿಂದ ನನಗೆ ದೇಶ ಮತ್ತು ಕಾಲಗಳ ವಿಚಾರವು ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ ।೯೭॥ ಕಾರಣ ಭೇದಭಾವವು ಒಂದುವೇಳೆ ನಿಜವಾಗಿಯೂ ಸತ್ಯವಾಗಿದ್ದರೆ ನನ್ನದೂ ಕೂಡ ವಿಕಾರವಾಗುತ್ತಿತ್ತು. ಆದರೆ ನನ್ನ ನಿಜಸ್ವರೂಪದಲ್ಲಿ ಭೇದದ ವಾರ್ತೆಯೂ ಕೂಡ ಇರಲು ಸಾಧ್ಯವಿಲ್ಲ ।೯೮॥ ಯಾವ ಪ್ರಕಾರವಾಗಿ ಭ್ರಮೆಯಿಂದ ಹಗ್ಗದಲ್ಲಿ ಸರ್ಪದ ಭಾಸವಾಗುವುದು, ಆದರೆ ಆ ಹಗ್ಗವು ಎಂದಿಗೂ ಸರ್ಪವಾಗಲು ಶಕ್ಯವೇ ಇಲ್ಲ. ಅದರಂತೆ ಶ್ರೀಹರಿ ಪರಮಾತ್ಮನಾದ ನಾನು ಸರ್ವವನ್ನು ಮಾಡಿಯೂ ಕೂಡ ನಿಜರೂಪದಿಂದ ಅವಿಕಾರಿಯಾಗಿಯೇ ಇರುವೆನು ।೯೯॥ ಘೋಷರೂಪದಿಂದ ಮತ್ತು ಅತಿಶಯ ಸೂಕ್ಷ್ಮದಿಂದ ಯಾವ ನಾದವಾಗಿರುವ ಪ್ರಣವರೂಪದಿಂದ ನಾನಾಗಿರುವ ನಿಜವಾದ ವೇದವು ಪ್ರತಿಯೊಂದು ಪ್ರಾಣಿಮಾತ್ರರಲ್ಲಿ ಸ್ವತಃ ಇರುವುದು. ಆದರೆ ಜನರ ಸಕಾಮ ಬುದ್ಧಿಯು ಇರುವುದರಿಂದ ಅವರಿಗೆ ಈ ಮರ್ಮವು ತಿಳಿಯುವುದಿಲ್ಲ ।೧೦೦॥ ಹಂದಿಯು ಕರ್ಪೂರ, ಕಸ್ತೂರೀಗಳ ಉಪೇಕ್ಷೆಯನ್ನು ಮಾಡಿ ಅತಿಶಯ ಪ್ರೀತಿಯಿಂದ ಮಲವನ್ನು ಭಕ್ಷಿಸುತ್ತಿರುವುದು. ಅದರಂತೆ ನಾದರೂಪದಿಂದ ಇರುವ ಪರಮಾತ್ಮನನ್ನು ಸಕಾಮ ಜನರು ಉಪೇಕ್ಷೆಯನ್ನು ಮಾಡುವರು ।೧೦೧॥

ಮೀ ನಿಜಾನಂದ ಹೃದಯಾ ಆಂತ । ತ್ಯಾ ಮಜ ಉಪೇಕ್ಷೂನಿ ಭ್ರಾಂತ । ಕಾಮಾಸಕ್ತೀ ಲೋಲಂಗತ । ದ್ವಾರೇ ವ್ಹೋಳಂಗತ ನೀಚಾಂಚೀ ॥೪೦೨॥ ತಯಾ ಹೃದಯಸ್ಥ ದೇವಾಚೇ ಧ್ಯಾನ । ನಿತ್ಯ ಯೋಗ್ಯಾಸೀ ನಿದಿಧ್ಯಾಸನ । ಸಮ ಕರೋನಿ ಪ್ರಾಣಾಪಾನ । ಸದಾ ಅನುಸಂಧಾನ ನಾದಾಚೇ ॥೪೦೩॥ ಮಾಝೇ ವೇದತತ್ತ್ವ ಜೇ ಕಾ ಗುಪ್ತ । ಪ್ರಣವರೂಪೇ ಹೃದಯಾ ಆಂತ । ಯೋಗೀ ಸದಾ ಅನುಭವಿತ । ತ್ಯಾಚೇ ಸ್ವರೂಪ ನಿಶ್ಚಿತ ಅವಧಾರೀ ॥೪೦೪॥ ಜೈಸಾ ಕಮಳ ಮೃಣಾಳಬಿಸತಂತ । ತೈಸಾ ಸೂಕ್ಷ್ಮ ನಾದ ಅತ್ಯಂತ । ನಾಭೀ ಪಾಸೋನಿ ಬ್ರಹ್ಮರಂಧ್ರಾಂತ । ಓಂಕಾರ ಸ್ವರಾಂತ ಲಕ್ಷಿತೀ ॥೪೦೫॥ ಐಸಾ ಓಂಕಾರಾಚ್ಯಾ ಸ್ವರಾ ಆಂತ । ನಾಭೀಪಾಸೋನಿ ಬ್ರಹ್ಮರಂಧ್ರಾಂತ । ಸೂಕ್ಷ್ಮ ನಾದಾಚಾ ನಿಜತಂತ । ಯೋಗಧಾರಣಾ ರಾಖಿತ ಮಹಾಯೋಗೀ ॥೪೦೬॥ ಹಾಚಿ ನಾದ ಪೈ ಪ್ರಸ್ತುತ । ಲೌಕಿಕೀ ಅಸೇ ಭಾಸತ । ದೋಹೀ ಕರ್ಣೀ ದೇತಾ ಹಾತ । ತೋಚಿ ಘುಮಘುಮೀತ ನಿಜನಾದು ॥೪೦೭॥ ಯೋಗೀ ಮ್ಹಣತೀ ''ಅನಾಹತ ಶಬ್ದ'' । ವೇದಾಂತೀ ಮ್ಹಣತೀ ''ಸೂಕ್ಷ್ಮ ನಾದ'' । ಆಮ್ಹೀ ಮ್ಹಣೋ ಹಾ ''ಶುದ್ಧ ವೇದ'' । ಅಸೋ ಅನುವಾದ ಹಾ ನಾಂವಾಂಚಾ ॥೪೦೮॥ ಐಸಿಯಾ ಸ್ವತಃಸಿದ್ಧ ವೇದಾಪಾಶೀ । ಶ್ರದ್ಧಾ ನುಪಜೇಚಿ ಪ್ರಾಣಿಯಾಂಸೀ । ಯಾಲಾಗೀ ಸೂಕ್ಷ್ಮ ವೇದ ಸ್ಥೂಲತೇಸೀ । ಮ್ಯಾ ಜನಹಿತಾಸೀ ಆಣಿಲಾ ॥೪೦೯॥ ತೋಚಿ ಸ್ಥೂಲತ್ವೇ ಝಾಲಾ ಪ್ರಗಟ । ತೇ ಪ್ರಕಟ ಹೋತೀ ವೇದವಾಟ । ದೃಷ್ಟಾಂತೇಕರೂನಿ ಸ್ಪಷ್ಟ । ತುಜ ಮೀ ಚೋಖಟ ಸಾಂಗೇನ ॥೪೧೦॥ ಐಸೇ ಬೋಲಿಲಾ ಶ್ರೀನಿವಾಸ । ತೇಣೇ ಉಲ್ಹಾಸಲಾ ಹೃದಯಹಂಸ । ಮ್ಹಣೇ ಮಜಕಾರಣೇ ಹೃಷೀಕೇಶ । ಅತ್ಯಂತ ಸೌರಸ ನಿರೂಪಣೇ ॥೪೧೧॥ ಮಜವರೀ ಬಹುತ ಸ್ನೇಹಾಳ । ಮಜ ಉದ್ಧಾರಾವಯಾ ಗೋಪಾಳ । ನಿರೂಪಣೇ ಸುಕಾಳ । ಅತಿರಸಾಳ ಅಮೃತರಸು ॥೪೧೨॥ ಐಸೇ ಉದ್ಧವಾಚೇ ಬೋಲಣೇ ಐಕೋನಿ । ಕಾಯ ಬೋಲಿಲಾ ಸಾರಂಗಪಾಣೀ । ಮ್ಹಣೇ ಮೀ ತೋಚಿ ನಿರೂಪಣೀ । ಸಾಂಗೇನ ತುಜಲಾಗೋನಿ ಉದ್ಧವಾ ॥೪೧೩॥

ಯಥೋರ್ಣನಾಭಿರ್ಹೃದಯಾದೂರ್ಣಾಮುದ್ವಮತೇ ಮುಖಾತ್ ।
ಆಕಾಶಾದ್ಘೋಷವಾನ್ಪ್ರಾಣೋ ಮನಸಾ ಸ್ಪರ್ಶರೂಪಿಣಾ ॥೩೮॥
ಛಂದೋಮಯೋಽಮೃತಮಯಃ ಸಹಸ್ರಪದವೀಂ ಪ್ರಭುಃ ।

ಅರ್ಥ:- ಭಗವಾನ ಹಿರಣ್ಯಗರ್ಭನು ಸ್ವತಃ ವೇದಮೂರ್ತಿ ಮತ್ತು ಅಮೃತಮಯನಾಗಿರುವನು. ಆತನ ''ಪ್ರಾಣ'' ವು ಉಪಾಧಿಯಾಗಿರುವುದು ಮತ್ತು ಸ್ವತಃ ಅನಾಹತ ಶಬ್ದಗಳ ಮುಖಾಂತರವಾಗಿ ಅವರ ಅಭಿವ್ಯಕ್ತಿಯಾಗಿರುವುದು. ಜಾಡ ಹುಳವು ತನ್ನ ಮುಖದಿಂದ ಎಳೆಯನ್ನು ಹೊರಗೆ ತೆಗೆಯುವಂತೆ ಇದಾಗಿರುವುದು.

ಯಾವ ಭ್ರಾಂತ ಜನರು ತಮ್ಮ ಹೃದಯದಲ್ಲಿರುವ ನನ್ನ ಆತ್ಮಾನಂದದ ಉಪೇಕ್ಷೆಯನ್ನು ಮಾಡುವರು ಮತ್ತು ಕಾಮದ ಆಸಕ್ತಿಯಿಂದ ಲುಬ್ಧರಾಗಿ ನೀಚ ಜನರ ಬಾಗಿಲಲ್ಲಿ ಉರುಳಾಡುತ್ತ ಬೀಳುವರು ॥೪೦೨॥ ಯೋಗಿ ಜನರು ಮಾತ್ರ ಹೃದಯಸ್ಥ ದೇವರ ಧ್ಯಾನವನ್ನು ಮಾಡುತ್ತಿರುವರು. ಅವರಿಗೆ ಇದರ ನಿಧಿಧ್ಯಾಸವು ಹತ್ತಿರುವುದು. ಪ್ರಾಣ, ಅಪಾನವನ್ನು ಸಮಾನ ಮಾಡಿ ಅವರು ನಾದದ ಅನುಸಂಧಾನವನ್ನು ಇಡುವರು ॥೪೦೩॥ ಗುಪ್ತರೂಪದಲ್ಲಿರುವ ನನ್ನ ವೇದ ರಹಸ್ಯವು ಪ್ರಣವ ರೂಪದಿಂದ ಒಳಗಡೆಯಲ್ಲಿಯೇ ಇರುವುದು. ಯೋಗಿ ಪುರುಷರು ಸರ್ವಕಾಲದಲ್ಲಿ ಅದರ ಅನುಭವವನ್ನು ಪಡೆಯುತ್ತಿರುವರು. ಇದರ ನಿಶ್ಚಿತ ಸ್ವರೂಪವನ್ನು ಹೇಳುವೆನು, ಅದನ್ನು ನೀನು ಕೇಳು ॥೪೦೪॥ ಕಮಲದ ದೇಟಿನಲ್ಲಿನ ಅತ್ಯಂತ ಕೋಮಲವಾದ ತಂತುವಿನಂತೆ ಸೂಕ್ಷ್ಮವಾದ ಈ ನಾದವು ನಾಭಿಯಿಂದ ಬ್ರಹ್ಮರಂಧ್ರದವರೆಗೆ ಇರುವ ಓಂಕಾರರೂಪದಿಂದ ಇರುವುದು. ಯೋಗಿ ಪುರುಷರು ಇದನ್ನು ಅರಿತುಕೊಳ್ಳುವರು ॥೪೦೫॥ ಈ ಪ್ರಕಾರದ ನಾಭಿಯಿಂದ ಬ್ರಹ್ಮರಂಧ್ರದವರೆಗೆ ಓಂಕಾರರೂಪದಿಂದ ನಡೆಯುವ ಯಾವ ಸೂಕ್ಷ್ಮನಾದರೂಪ ತಂತುವನ್ನು ಮಹಾಯೋಗಿಗಳು ತಮ್ಮ ಯೋಗಧಾರಣೆಯಿಂದ ಅನುಸಂಧಾನವನ್ನು ಕಾಪಾಡಿಕೊಳ್ಳುವರು ॥೪೦೬॥ ಇದೇ ನಾದವು ಜನರಿಗೆ ತಮ್ಮ ಎರಡೂ ಕಿವಿಗಳಲ್ಲಿ ಎರಡು ಬೊಟ್ಟುಗಳನ್ನಿಡಲು ಆಗ ಗುರುಗುರು ಎಂಬ ನಾದವು ಕೇಳಬರುವುದು ॥೪೦೭॥ ಯೋಗಿಗಳು ಇದಕ್ಕೇನೇ ''ಅನಾಹತ'' ಶಬ್ದವೆಂದು ಹೇಳುವರು. ವೇದಾಂತಿ ಜನರು ಇದಕ್ಕೆ ಸೂಕ್ಷ್ಮನಾದವೆಂದು ಹೇಳುವರು. ನಾವು ಅದಕ್ಕೆ ಶುದ್ಧವೇದವೆಂದು ಹೇಳುವೆವು. ಹೀಗಿರುವ ನಾಮಗಳ ಪ್ರಕಾರಗಳು ಈಗ ಇರಲಿ ॥೪೦೮॥ ಈ ಪ್ರಕಾರದ ಸ್ವತಃಸಿದ್ಧವಾದ ವೇದದಲ್ಲಿ ಮನುಷ್ಯನ ಶ್ರದ್ಧೆಯು ಕುಳಿತುಕೊಳ್ಳುವುದಿಲ್ಲ. ಆದ್ದರಿಂದ ಆ ಸೂಕ್ಷ್ಮವೇದವನ್ನೇ ನಾನು ಲೋಕಕಲ್ಯಾಣಕ್ಕಾಗಿ ಸ್ಥೂಲ ರೂಪಕ್ಕೆ ತಂದಿರುವೆನು ॥೪೦೯॥ ಈ ಯಾವ ಸ್ಥೂಲರೂಪದಿಂದ ಪ್ರಕಟವಾಗಿರುವ ವೇದವು, ಇದೇ ವೇದದ ಪ್ರಸಿದ್ಧವಾಗಿರುವ ಮಾರ್ಗವಾಯಿತು. ಈಗ ಅದನ್ನೇ ದೃಷ್ಟಾಂತದಿಂದ ನಿನಗೆ ಸ್ಪಷ್ಟಮಾಡಿ ಹೇಳುವೆನು, ಅದನ್ನು ಕೇಳು ॥೪೧೦॥ ಶ್ರೀಕೃಷ್ಣನು ಹೀಗೆ ಹೇಳುತ್ತಲೇ ಉದ್ಧವನಿಗೆ ಪರಮ ಸಂತೋಷವಾಯಿತು ಮತ್ತು ಶ್ರೀಕೃಷ್ಣನು ನನಗಾಗಿ ಅತಿಶಯಸುರಸವಾದ ನಿರೂಪಣೆಯನ್ನು ಮಾಡುವನು ಎಂದು ಹೇಳಿದನು ॥೪೧೧॥ ಈ ಗೋಪಾಲನು ನನ್ನ ಮೇಲೆ ಅತ್ಯಂತ ಪ್ರೇಮ ಇರುವುದರಿಂದ ನನ್ನ ಉದ್ಧಾರವನ್ನು ಮಾಡುವುದಕ್ಕಾಗಿ ಆತನು ಬಹಳ ಉತ್ಸಾಹದಿಂದ ಅಮೃತಸಮಾನ ಅತಿಶಯ ರಸಾಳ ಹಾಗೂ ಭಾವಪೂರ್ಣ ನಿರೂಪಣೆಯನ್ನು ಮಾಡುತ್ತಿರುವನು ॥೪೧೨॥ ಉದ್ಧವನ ಈ ಹೇಳುವಿಕೆಯನ್ನು ಕೇಳಿ ಸಾರಂಗಪಾಣಿಯು ಅದೇ ವೇದವನ್ನು ಈಗ ನಾನು ನಿನಗೆ ನಿರೂಪಣೆಯಲ್ಲಿ ಹೇಳುವೆನು ಎಂದು ಹೇಳಿದನು ॥೪೧೩॥

ಊರ್ಣನಾಭೀ ಮ್ಹಣಿಜೇ ಕಾಂತಣೀ । ತೇ ಜೇವೀ ನಿಜಮುಖಾಪಾಸೂನೀ । ತಂತು ಕಾಢೀ ಅತಿಸೂಕ್ಷ್ಮಪಣೀ । ತೇವೀ ನಿರ್ಗುಣೀ ಓಂಕಾರ ॥೪೧೪॥ ತೋ ಓಂಕಾರ ಹೋತಾ ಸಪ್ರಾಣ । ಸಹಜಸ್ವಭಾವೇ ಗಾ ಜಾಣ । ಝಾಲಾ ''ಹಿರಣ್ಯಗರ್ಭ'' ಅಭಿದಾನ। ಆಪಣಿಯಾ ಆಪಣ ವೇದಾಜ್ಞಾ ॥೪೧೫॥ ''ಪ್ರಭು'' ಮ್ಹಣಜೇ ಐಶ್ವರ್ಯಖ್ಯಾತಿ । ಅಚಿಂತ್ಯಾನಂತ ತ್ಯಾಚೀ ಶಕ್ತಿ । ತೋ ಛಂದೋಮಯ ವೇದಮೂರ್ತೀ । ಜಾಣ ನಿಶ್ಚಿತೀ ಉದ್ಧವಾ ॥೪೧೬॥ ಅವಿನಾಶೀ ವಾಸ್ತವಸ್ಥಿತೀ । ನಿತ್ಯ ಸುಖಮಯ ಸುಖಮೂರ್ತೀ । ತೇಣೇ ಸಪ್ರಾಣ ನಾದಾಭಿವ್ಯಕ್ತಿ । ಮನಃಶಕ್ತೀ ಚೇತವೀ ॥೪೧೭॥ ಚೇತವಿಲೀ ಜೇ ಮನಃಶಕ್ತೀ । ಹೋಯ ಸಪರ್ಶಸ್ವರ - ವರ್ಣಕಲ್ಪಿತೀ । ವೇದಜ್ಞ ''ಬೃಹತೀ'' ಮ್ಹಣತೀ । ಜಿಚಾ ಅಪರಿಮಿತೀ ವಿಸ್ತಾರ ॥೪೧೮॥ ತೇ ಸ್ವರವರ್ಣಸಂವಲಿತ ಮಂತ್ರ । ಹೃದಯಾಕಾಶೀ ವಿಚಿತ್ರ । ಸಹಸ್ರಶಾಖೀ ವಿಸ್ತಾರ । ವಾಢಲೀ ಅಪಾರ ವೈಖರೀ ॥೪೧೯॥ ಸ್ವರವರ್ಣಾದಿ ಉಚ್ಚಾರೀ । ವೇದಾಧಿಷ್ಠಾನ ವೈಖರೀ । ತೇ ಉಪಜಲೀ ಜೇಣೇಕರೀ । ತೇಹೀ ಪರೀ ಸಾಂಗೇನ ॥೪೨೦॥

ಓಂಕಾರಾದ್ವ್ಯಂಜಿತಸ್ಪರ್ಶಸ್ವರೋಷ್ಮಾಂತಃ ಸ್ಥಭೂಷಿತಾಮ್ ॥೧೯॥
ವಿಚಿತ್ರಭಾಷಾವಿತತಾಂ ಛಂದೋಭಿಶ್ಚತುರುತ್ತರೈಃ । ಅನಂತಪಾರಾಂ ಬೃಹತೀಂ ಸೃಜತ್ಯಾಕ್ಷಿಪತೇ ಸ್ವಯಮ್ ॥೨೦॥

ಅರ್ಥ:- ವೇದದ ಶಬ್ದವು ಓಂ ಎಂಬ ಅಕ್ಷರದಿಂದ ವಿಸ್ತಾರಗೊಂಡಂತಹ ವ್ಯಂಜನಗಳು, ಸ್ವರಗಳು, ಊಷ್ಮಗಳು, ಅಂತಸ್ಥಗಳು ಮುಂತಾದ ವಿವಿಧ ಅಕ್ಷರಗಳಿಂದ ಅಲಂಕೃತವಾಗಿ ಸಾವಿರಾರು ದಿಕ್ಕುಗಳಲ್ಲಿ ಗೆಲ್ಲೊಡೆಯುತ್ತದೆ. ವೇದವು ಆಮೇಲೆ ವಿವಿಧ ಛಂದಸ್ಸುಗಳಲ್ಲಿ ಪ್ರತಿಯೊಂದೂ ಹಿಂದಿನದಕ್ಕಿಂತ ನಾಲ್ಕು ಅಕ್ಷರಗಳು ಹೆಚ್ಚಾಗಿರುವುವುಗಳಲ್ಲಿ ಅಭಿವ್ಯಕ್ತವಾಗಿ ಅನೇಕ ಭಾಷಾ ವೈವಿಧ್ಯಗಳಿಂದ ವಿಸ್ತಾರಗೊಂಡಿದೆ. ಅಂತಿಮವಾಗಿ, ಭಗವಂತನು ವೇದ ಶಬ್ದದ ಅಭಿವ್ಯಕ್ತಿಯನ್ನು ತನ್ನಲ್ಲಿ ಸೇರುವಂತೆ ಹಿಂದಕ್ಕೆ ಸೆಳೆದುಕೊಳ್ಳುತ್ತಾನೆ.

ಮಾತ್ರಾತ್ರಯಾಮಿಳಣೀ ಲೋಕ । ಓಂಕಾರ ಬೋಲತೀ ಆವಶ್ಯಕ । ಹಾ ಓಂಕಾರ ಅಲೋಕಿಕ । ಅತಿಸೂಕ್ಷ್ಮ ದೇಖ ದೇಹಸ್ಥ ॥೪೨೧॥ ತ್ಯಾಚಿ ಓಂಕಾರಾಸೀ ಪ್ರಾಣಸಂಗತೀ । ಆಧಾರಾದಿ ಚಕ್ರೀ ಊರ್ಧ್ವಗತೀ । ತೇಥ ವಾಚಾಂಚೀ ಹೋಯ ಅಭಿವ್ಯಕ್ತೀ । ಪರಾ-ಪಶ್ಯಂತೀ-ಮಧ್ಯಮಾ ॥೪೨೨॥ ಪರಾವಾಚೇಚ್ಯಾ ಅಭ್ಯಂತರೀ । ಜನ್ಮೇ ಪಶ್ಯಂತೀ ಜೇಷ್ಠಕಾರೀ । ಮಧ್ಯಮಾ ಜನ್ಮೇ ತಿಚ್ಯಾ ಉದರೀ । ಏವಂ ಪರಸ್ಪರೀ ಜನ್ಮತೀ ॥೪೨೩॥ ತೈಶಾಚಿ ಯೇರೀತೇ ಯೇರೀ । ನೋ ಸಂಡೋನಿ ಕ್ಷಣಭರೀ । ಚಾಲತೀ ಉಪರಾಂಉಪರೀ । ಚಕ್ರೀಂಚ್ಯಾ ಚಕ್ರಾಂತರೀ ಸಮವೇತ ॥೪೨೪॥ ''ಆಧಾರಚಕ್ರೀ'' ಪರಾ ವಾಚಾ । ''ಸ್ವಾಧಿಷ್ಠಾನೀ'' ಜನ್ಮ ಪಶ್ಯಂತೀಚಾ । ''ಮಣಿಪೂರೀ'' ಹೂನಿ 'ವಿಶುದ್ಧೀ'' ಚಾ । ಠಾಯೀ ಮಧ್ಯಮೇಚಾ ರಿಗುನಿಗೂ ॥೪೨೫॥

ಊರ್ಣನಾಭಿ ಎಂದರೆ ಜೇಡರಹುಳವು. ಅದು ಯಾವ ಪ್ರಕಾರವಾಗಿ ತನ್ನ ಮುಖದಿಂದ ಅತಿಸೂಕ್ಷ್ಮವಾದ ಎಳೆಯನ್ನು ತೆಗೆಯುವುದೋ, ಅದೇಪ್ರಕಾರವಾಗಿ ನಿರ್ಗುಣದಿಂದ ಓಂಕಾರದ ಎಳೆಯು ಹೊರಡುತ್ತಿರುವುದು ॥೪೧೪॥ ಆ ಓಂಕಾರವು ತನ್ನ ಸ್ವಭಾವದ ಅನುಸಾರವಾಗಿ ಚೈತನ್ಯಯುಕ್ತವಾಗುತ್ತಲೇ ತಾನೇ ವೇದದ ಆಜ್ಞೆಯಿಂದ ಹಿರಣ್ಯಗರ್ಭ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು ॥೪೧೫॥ ಹೇ ಉದ್ಧವಾ, ಪ್ರಭು ಎಂದರೆ ಸರ್ವರ ಐಶ್ವರ್ಯಯುಕ್ತ ಸ್ವಾಮಿಯು. ಆತನು ಅನಂತ ಮತ್ತು ಅಚಿಂತ್ಯ ಶಕ್ತಿಯಿಂದ ಯುಕ್ತನಾಗಿರುವನು. ಹಾಗೆಯೇ ಆತನು ಛಂದೋಮಯ ಮೂರ್ತಿಯಾಗಿರುವನು. ಹೀಗೆ ನೀನು ನಿಶ್ಚಿತವಾಗಿ ತಿಳಿ ॥೪೧೬॥ ಆತನು ವಸ್ತುತಃ ಅವಿನಾಶೀ, ಅಸೂತ್ರ, ಸುಖಮಯ ಹಾಗೂ ಸುಖಮೂರ್ತಿಯಾಗಿರುವನು. ಆತನು ಪ್ರಾಣದ ಉಪಾಧಿಯನ್ನು ತೆಗೆದುಕೊಂಡು ನಾದರೂಪದಿಂದ ಮನಃಶಕ್ತಿಯನ್ನು ಜಾಗೃತಗೊಳಿಸುತ್ತಿರುವನು ॥೪೧೭॥ ಈ ಯಾವ ಜಾಗೃತಗೊಂಡ ಮನಃಶಕ್ತಿಯು ಅದು ಸ್ಪರ್ಶ, ಸ್ವರ ಮತ್ತು ವರ್ಣ ಇವುಗಳನ್ನು ನಿರ್ಮಾಣಗೊಳಿಸುವುದು. ಅದಕ್ಕೆ ವೇದವೇತ್ತಾ ಪುರುಷರು ''ಬೃಹತೀ'' ಎಂದು ಹೇಳುವರು. ಕಾರಣ ಇದರ ವಿಸ್ತಾರವು ಅಪರಿಮಿತವಾಗಿರುವುದು ॥೪೧೮॥ ಸ್ವರ ಹಾಗೂ ವರ್ಣಗಳಿಂದ ಕೂಡಿದ ಮಂತ್ರವು ಹೃದಯಾಕಾಶದಲ್ಲಿ ಸಾವಿರಾರು ಶಾಖೆಗಳಿಂದ ವಿಚಿತ್ರ ಪ್ರಕಾರಗಳಿಂದ ವಿಸ್ತಾರಗೊಳ್ಳುತ್ತಿರುವುದು. ಹೀಗೆ ಈ ವೈಖರಿಯು ಅಪಾರವಾಗಿ ಬೆಳೆಯುತ್ತಿರುವುದು ॥೪೧೯॥ ಸ್ವರ ಮತ್ತು ವರ್ಣ ಇವುಗಳ ಉಚ್ಚಾರದಿಂದ ವೇದದ ಅಧಿಷ್ಠಾನವಾಗಿರುವ ವೈಖರೀ ವಾಣಿಯು ಹೇಗೆ ಉತ್ಪನ್ನವಾಯಿತೆಂಬ ಪ್ರಕಾರವನ್ನು ಈಗ ಹೇಳುವೆನು, ಅದನ್ನು ಕೇಳು ॥೪೨೦॥

ಅ, ಊ, ಮ್, ಈ ಮೂರು ಮಾತ್ರೆಗಳು ಕೂಡಿ ಓಂಕಾರವಾಗುವುದು. ಈ ಓಂಕಾರವು ಅಲೌಕಿಕವಾಗಿರುವುದು. ಇದು ಸೂಕ್ಷ್ಮರೂಪದಿಂದ ದೇಹದಲ್ಲಿರುವುದು ॥೪೨೧॥ ಈ ಓಂಕಾರಕ್ಕೆ ಪ್ರಾಣದ ಸಂಗತಿಯಿಂದ ಮೂಲಾಧಾರಾದಿ ಚಕ್ರಗಳಲ್ಲಿ ಪೂರ್ವಗತಿಯು ಪ್ರಾರಂಭವಾಗುವುದು. ತದನಂತರ ಪರಾ, ಪಶ್ಯಂತಿ ಮತ್ತು ಮಧ್ಯಮಾ ಈ ವಾಣಿಗಳು ಅಭಿವ್ಯಕ್ತವಾಗುವುವು ॥೪೨೨॥ ಪರಾ ವಾಣಿಯ ಒಳಗೆ ಪಶ್ಯಂತಿಯು ಶ್ರೇಷ್ಠತ್ವದಿಂದ ಜನ್ಮಕ್ಕೆ ಬರುವುದು. ಇದರ ಹೊಟ್ಟೆಯಲ್ಲಿ ಮಧ್ಯಮಾ ವಾಣಿಯು ಜನ್ಮಕ್ಕೆ ಬರುವುದು. ಹೀಗೆ ಈ ವಾಣಿಗಳು ಒಬ್ಬರಿಂದೊಬ್ಬರು ಹೀಗೆ ಜನ್ಮಕ್ಕೆ ಬರುವುವು ॥೪೨೩॥ ಇವು ಒಂದಕ್ಕೊಂದು ಬಿಟ್ಟು ಒಂದು ಕ್ಷಣಕೂಡ ಎಂದಿಗೂ ದೂರವಿರುವುದಿಲ್ಲ. ಒಂದು ಚಕ್ರದಿಂದ ಇನ್ನೊಂದು ಚಕ್ರದಲ್ಲಿ ಈ ಮೂರೂ ಕೂಡ ವಾಣಿಯ ಜೊತೆಯಲ್ಲಿಯೇ ಮೇಲಮೇಲಕ್ಕೆ ಹೋಗುತ್ತಿರುವುವು ॥೪೨೪॥ ಮಣಿಪೂರ ಚಕ್ರದಿಂದ ವಿಶುದ್ಧ ಚಕ್ರದವರೆಗೆ ಮಧ್ಯಮದ ಬರ-ಹೋಗುವಿಕೆಯು ಸತತವಾಗಿ ಇದ್ದೇ ಇರುತ್ತದೆ ॥೪೨೫॥

ತೇಥೋನಿಯಾ ಮುಖದ್ವಾರೀ । ವಾಚಾ ಪ್ರಕಾಶೇ ವೈಖರೀ । ತೈ ಸ್ವರವರ್ಣ ಉಚ್ಚಾರೀ । ನಾನಾಮಂತ್ರೀ ಗರ್ಜತ
॥೪೨೬॥ ತೇಚಿ ಸ್ವರ ಆಣಿ ವರ್ಣ । ಸಾಂಗೇನ ''ಸ್ಪರ್ಶ'' ವ್ಯಕ್ತಿಲಕ್ಷಣ । ''ಅಂತಸ್ಥ'' ''ಊಷ್ಮ'' ಕೋಣ ಕೋಣ
। ವಿಭಾಗಲಕ್ಷಣ ಅವಧಾರೀ ।೪೨೭॥ ಕೇವಳ ''ಅ ಕ ಚ ಟ ತ ಪ '' ದೇಖ । ಹೇ ಕಕಾರಾದಿ ಪಂಚ ಪಂಚಕ ।
ಸ್ಪರ್ಶವರ್ಣಾಚೇ ರೂಪಕ । ಅಕ್ಷರೇ ನಿಷ್ಟಂಕ ಪಂಚವೀಸ ।೪೨೮॥ ಸವರ್ಣೇ ಗರ್ಜತಾ ಉಚ್ಚಾರ । ತೇ ಅಕಾರಾದಿ
ಸೋಳಾಹೀ ಸ್ವರ । ''ಯ ರ ಲ ವ'' ಯಾಂಚಾ ವಿಚಾರ । ಜಾಣ ಸಾಚಾರ ''ಅಂತಸ್ಥ''।೪೨೯॥ ''ಶ ಷ ಸ ಹ''
ವರ್ಣ ಚಾರೀ । ''ಊಷ್ಮ'' ಬೋಲಿಜೇ ಶಾಸ್ತ್ರಕಾರೀ । ವಿಸರ್ಗಾದಿ ಅನುಸ್ವಾರೀ । ''ಅಂ ಅಃ'' ವರೀ ವಿಭಾಗು
॥೪೩೦॥ ಯೇಥ ಬಾವನ್ನಾವೀ ಮಾತೃಕಾ ಏಕ । ಕೇವಳ ''ಕ್ಷ'' ಕಾರು ಗಾ ದೇಖ । ಯಾಂತು ಸಾನುನಾಸೀ
ನಿರನುನಾಸಿಕ । ಜಾಣತೀ ಲೋಕ ಶಾಸ್ತ್ರಜ್ಞ ।೪೩೧॥ ಏವಂ ಸ್ವರವರ್ಣವಿಧಿ ಉಚ್ಚಾರೀ । ಲೌಕಿಕೀ ವೈದಿಕೀ
ಭಾಷಾವರೀ । ವೇದಶಾಸ್ತ್ರಾರ್ಥಪ್ರಕಾರೀ । ವಾಢಲೀ ವೈಖರೀ ಶಬ್ದಚಾತುರ್ಯೇ ।೪೩೨॥ ಬೋಲೇಚಿ ಗಾ
ಬೋಲಾಪ್ರತೀ । ಚಾಳೂನಿ ನಾನಾ ಉಪಪತ್ತೀ । ಬೋಲೇ ಬೋಲ ನಿಗ್ರಹಿತೀ । ಯುಕ್ತಿಪ್ರಯುಕ್ತೀ ಸಾಧುನೀ
॥೪೩೩॥ ಐಶಿಯಾ ನಾನಾಶಬ್ದಕುಸರೀ । ಅತ್ಯಂತ ವಿಸ್ತಾರಿಲೀ ವೈಖರೀ । ತೇಚಿ ಚೌ ಚೌ ಅಕ್ಷರೀ । ವಾಢವೂನಿ
ಧರೀ ನಾನಾ ಛಂದೇ ।೪೩೪॥ ವಾಢತಾ ಚತುರ ಕ್ಷರಭೇದೇ । ಉತ್ತರೋತ್ತರ ನಾನಾ ಛಂದೇ । ವಾಢವಿಲೀ
ಸ್ವಯೇ ವೇದೇ । ನಿಜಜ್ಞಾನ ಬೋಧೇ ಬೋಲೂನಿ ।೪೩೫॥ ಅತಏವ ಅನಂತ ಅಪಾರ । ಅರ್ಥತಾ ಶಬ್ದತಾ
ಅತಿದುಸ್ತರ । ಮಾಝ್ಯಾ ಶಬ್ದಜ್ಞಾನಾಚಾ ಪಾರ । ಸುರನರ ನೇಣತೀ ।೪೩೬॥ ಐಶೀ ವೈಖರೀಚೀ ಅನಂತಶಕ್ತೀ ।
ಯಾಲಾಗೀ ಮ್ಹಣಿಜೇ ತೇ ''ಬೃಹತೀ'' । ಇಚ್ಯಾ ವಿಸ್ತಾರಾಚೀ ಗತೀ । ಸ್ವಯೇ ನೇಣತೀ ಶಿವಸ್ರಷ್ಟಾ ।೪೩೭॥
ಹಿರಣ್ಯಗರ್ಭತ್ವೇ ಸ್ವಯೇ ಜಾಣ । ಜೀವ - ಶಿವ - ಅಂತರ್ಯಾಮೀ ಲಕ್ಷಣ । ಮಾಝೀ ವೇದಾಜ್ಞಾ ಪ್ರಕಾಶೀ
ಆಪಣ । ಜಿಚೇ ನಾಮಾಭಿಧಾನ ''ವೈಖರೀ''।೪೩೮॥ ಜೋ ಮೀ ವೇದಾತ್ಮಾ ಶ್ರೀಹರೀ । ತೋ ವೇದು ಯಾ
ರೀತೀ ವಿಸ್ತಾರೀ । ಸ್ವಯೇ ವಿಸ್ತಾರೋನಿ ಸಂಹಾರೀ । ಮರ್ಯಾದೇವರೀ ಸ್ವಕಾಳೇ ।೪೩೯॥ ಮಾಗಾ ಬೋಲಿಲೀ
ಛಂದೇ ಜಾಣ । ತ್ಯಾ ಛಂದಾಚೇ ನಿಜಲಕ್ಷಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಜೋ ವೇದಾಚೇ ಕಾರಣ
ನಿಜಸ್ವರೂಪ ।೪೪೦॥

ಅಲ್ಲಿಂದ ಮುಖದ ಮುಖಾಂತರವಾಗಿ ವೈಖರೀ ವಾಣಿಯು ಪ್ರಕಟವಾಗುವುದು. ಆಗ ಅದು ಸ್ವರ ವರ್ಣ ಇವುಗಳ ಉಚ್ಚಾರದಿಂದ ಅನೇಕ
ಮಂತ್ರಗಳ ರೂಪದಿಂದ ಗರ್ಜಿಸುತ್ತಿರುವುದು ।೪೨೬॥ ಅದೇ ಸ್ವರದಲ್ಲಿ ಮತ್ತು ವರ್ಣಗಳಲ್ಲಿ ಸ್ಪರ್ಶವರ್ಣ ಯಾವುದು, ಅಂತಸ್ಥ ವರ್ಣವು
ಯಾವುದು ಮತ್ತು ಉಷ್ಣ ವರ್ಣ ಯಾವುದು, ಇವುಗಳ ವಿಭಾಗಗಳನ್ನು ನೀನು ಕೇಳು ।೪೨೭॥ ಅ ವರ್ಗ, ಕ ವರ್ಗ, ಚ ವರ್ಗ, ಟ ವರ್ಗ, ತ
ವರ್ಗ ಮತ್ತು ಪ ವರ್ಗ ಹೀಗೆ ಐದು, ಐದು ವರ್ಣಗಳ ಐದು ಪಂಚಕಗಳಿರುವುವು. ಇವು ಪಂಚವಾಣಿಯ ಸ್ವರೂಪವಾಗಿರುವುವು. ಅಕಾರದಿಂದ
ಪಕಾರದವರೆಗೆ ಇರುವ ಯಾವ ೨೫ ಅಕ್ಷರಗಳು ಇವು ಸ್ಪರ್ಶವರ್ಣಗಳಾಗಿರುವುವು ।೪೨೮॥ ಇವುಗಳ ಉಚ್ಚಾರವನ್ನು ಮಾಡುತ್ತಿರಲು
ಅವುಗಳಲ್ಲಿ ಅಕಾರಾದಿ ಹದಿನಾರು ಸ್ವರಗಳು ವ್ಯಕ್ತವಾಗುವುವು. ಯ,ರ,ಲ,ವ, ಇವುಗಳಿಗೆ ಅಂತಸ್ಥವೆನ್ನುವರು ।೪೨೯॥ ಶ,ಷ,ಸ,ಹ, ಇವುಗಳಿಗೆ
ಉಷ್ಮವೆನ್ನುವರು. ಅಂ, ಅಃ ಇವು ಸ್ವರಯುಕ್ತ ಅನುಸ್ವಾರ ಮತ್ತು ವಿಸರ್ಗವಾಗಿರುವುವು ।೪೩೦॥ ಇವುಗಳಲ್ಲಿಯೇ ಕ್ಷಕಾರವು ಇದು ಕೇವಲ
ಐವತ್ತೆರಡನೆಯ ಮಾತ್ರಿಕಾವಾಗಿರುವುದು. ಅದರಲ್ಲಿಯೇ ಅನುನಾಸಿಕ ಮತ್ತು ನಿರನುನಾಸಿಕ ಹೀಗೆ ಎರಡು ವರ್ಣಭೇದವನ್ನು ಶಾಸ್ತ್ರಜ್ಞರು
ತಿಳಿದಿರುವರು ।೪೩೧॥ ಈ ಪ್ರಕಾರವಾಗಿ ಸ್ವರವರ್ಣಗಳ ಯಥಾಶಾಸ್ತ್ರ ಉಚ್ಚಾರಗಳಿಂದ ಹಾಗೂ ವೇದಶಾಸ್ತ್ರಗಳ ಅರ್ಥಪ್ರಕಾರಗಳಿಂದ
ಲೌಕಿಕ ಮತ್ತು ವೈದಿಕ ಭಾಷೆಗಳ ವೃದ್ಧಿಯಾಗಿರುವುದು ।೪೩೨॥ ಶಬ್ದಗಳ ಅನೇಕ ಪ್ರಕಾರಗಳಲ್ಲಿ ಉತ್ಪತ್ತಿಗಳನ್ನು ಹಚ್ಚಿ ಅನೇಕ ಶಬ್ದಗಳ
ಉಚ್ಚಾರವನ್ನು ಮಾಡಿ ಜನರು ಈ ವಾಣಿಯ ಉಪಯೋಗವನ್ನು ವ್ಯವಹಾರದಲ್ಲಿ ತೊಡಗಿಸಿರುವರು ।೪೩೩॥ ಹೀಗೆ ಬಹುವಿಧ ಶಬ್ದ
ಕೌಶಲ್ಯದಿಂದ ಈ ವೈಖರೀ ವಾಣಿಯು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿರುವುದು. ಇದು ನಾಲ್ಕು ನಾಲ್ಕು ಅಕ್ಷರಗಳಿಂದ ಬೆಳೆದು ಅದರ
ಅನೇಕ ಛಂದಗಳು ನಿರ್ಮಾಣವಾಗಿರುವುವು ।೪೩೪॥ ಈ ಪ್ರಕಾರವಾಗಿ ಉತ್ತರೋತ್ತರವಾಗಿ ನಾಲ್ಕು ನಾಲ್ಕು ಅಕ್ಷರಗಳ ವೃದ್ಧಿಯಿಂದ
ಹೊಸ ಹೊಸ ಅನೇಕ ಛಂದಗಳನ್ನು ನಿರ್ಮಾಣ ಮಾಡಿ ವೇದವು ತನ್ನ ಜ್ಞಾನದ ಬೋಧವನ್ನು ಹೇಳಿ ತೋರಿಸಿರುವುದು ।೪೩೫॥ ಆದ್ದರಿಂದ
ಈ ವೈಖರೀ ವಾಣಿಯು ಅನಂತ ಮತ್ತು ಅಪಾರ ಸ್ವರೂಪದ್ದಾಗಿರುವುದು. ಶಬ್ದಶಃ ಮತ್ತು ಅರ್ಥಶಃ ಇದು ಅತಿಶಯವಾಗಿ ಕಠಿಣವಾಗಿರುವುದು.
ನನ್ನ ಶಬ್ದಜ್ಞಾನದ ಅಂತವು ಸುರ-ನರರಿಗೂ ಹತ್ತುವುದಿಲ್ಲ ।೪೩೬॥ ವೈಖರೀಯ ಇಂತಹ ಅನಂತ ಶಕ್ತಿಯಾಗಿರುವುದು. ಅದಕ್ಕಾಗಿ ಅದಕ್ಕೆ
''ಬೃಹತೀ'' ಎಂದು ಹೇಳುವರು. ಇದರ ವಿಸ್ತಾರದ ಮರ್ಯಾದೆಯು ಬ್ರಹ್ಮದೇವ, ಮಹಾದೇವರಿಗೂ ತಿಳಿಯಲು ಶಕ್ಯವಿಲ್ಲ ।೪೩೭॥ ಸ್ವತಃ
ಹಿರಣ್ಯಗರ್ಭದ ರೂಪದಿಂದ ಜೀವ, ಶಿವ ಮತ್ತು ಅಂತರ್ಯಾಮೀ ಇವುಗಳನ್ನು ನನ್ನ ವೇದಾಜ್ಞೆಯು ಪ್ರಕಟಗೊಳಿಸುವುದು. ಇದಕ್ಕೇನೇ
ವೈಖರೀ ಎಂದು ಹೇಳುವರು ।೪೩೮॥ ಯಾವ ವೇದದ ಶ್ರೀಹರಿಯು ಆತನೇ ನಾನು ಈ ಪ್ರಕಾರವಾಗಿ ವೇದದ ವಿಸ್ತಾರವನ್ನು ಮಾಡುವೆನು
ಮತ್ತು ಯೋಗ್ಯ ಕಾಲವು ಬರಲು ಆಗ ಅದರ ಸಂಹಾರವನ್ನೂ ಕೂಡ ನಾನೇ ಮಾಡುವೆನು ।೪೩೯॥ ಮೇಲೆ ಹೇಳಿರುವ ಯಾವ ಛಂದಗಳು,
ಆ ಛಂದಗಳ ಲಕ್ಷಣಗಳನ್ನು ವೇದದ ಕಾರಣನಾದ, ಆತ್ಮಸ್ವರೂಪನಾದ ಶ್ರೀಕೃಷ್ಣನು ಸ್ವತಃ ಹೇಳುವನು ।೪೪೦॥

ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಂಕ್ತಿರೇವ ಚ ।
ತ್ರಿಷ್ಟುಬ್ಜಗತ್ಯತಿಚ್ಛಂದೋ ಹ್ಯತ್ಯಷ್ಟ್ಯತಿಜಗದ್ವಿರಾಟ್ ।।೪೧।।

ಅರ್ಥ:- ಗಾಯತ್ರೀ, ಉಷ್ಣಿಕ, ಅನುಷ್ಟುಪ, ಬೃಹತೀ, ಪಂಕ್ತೀ, ತ್ರಿಷ್ಟುಪ, ಜಗತೀ, ಅತಿಛಂದ, ಅತ್ಯಷ್ಟಿ, ಅತಿಜಗತೀ ಮತ್ತು ವಿರಾಟ ಈ ಎಲ್ಲ ಮುಂದಿನ ಛಂದಗಳು ಉತ್ತರೋತ್ತರವಾಗಿ ನಾಲ್ಕು ಅಕ್ಷರಗಳಿಂದ ಅಧಿಕವಾಗಿರುವುವು.

ಸಕಳ ಛಂದಾಂಚೇ ಅಧಿಷ್ಠಾನ । ಮುಖ್ಯ ಗಾಯತ್ರೀ ಛಂದ ಜಾಣ । ತ್ಯಾ ಗಾಯತ್ರೀ ಛಂದಾಚೇ ಲಕ್ಷಣ। ಏಕ ಸಂಪೂರ್ಣ ಸಾಂಗೇನ ।।೪೪೧।। ಆಠ ಆಠಾ ಅಕ್ಷರೀ ತ್ರಿಪದ । ಗಣಿತಾ ಯೇಥ ಯತೀ ಶುದ್ಧ । ತ್ಯಾ ನಾಂವ ''ಗಾಯತ್ರೀ'' ಛಂದ । ಹೇ ವೇದಾನುವಾದ ನಿಜಬೀಜ ।।೪೪೨।। ಹೇ ವೇದಾಚೇ ನಿಜಜಿವ್ಹಾರ । ಬ್ರಹ್ಮಜ್ಞಾನಾಚೇ ಪರಪಾರ । ಪರಮಾನಂದಾಚೇ ಸೋಲೀವ ಸಾರ । ಜಾಣ ಸಾಚಾರ ಗಾಯತ್ರೀ ।।೪೪೩।। ಹೇ ಚೈತನ್ಯಾಚೇ ಜೀವನ । ಮಜ ಗೋಪ್ಯಾಚೇ ಗುಪ್ತಧನ । ಜೇಥ ಜೀವಶಿವಾ ಸಮಾಧಾನ । ತೇ ಹೇ ಛಂದ ಜಾಣ ಗಾಯತ್ರೀ ।।೪೪೪।। ಯೇ ಛಂದೀಚೇ ಏಕ ಏಕ ಅಕ್ಷರ । ಅಕ್ಷರಾಚೇ ನಿಜಸಾರ । ಸಚ್ಚಿದಾನಂದಾಚೇ ನಿಜಭಾಂಡಾರ । ಜಾಣ ಸಾಚಾರ ಗಾಯತ್ರೀ ।।೪೪೫।। ಕರಿತಾ ಗಾಯತ್ರೀಚೇ ಅನುಷ್ಠಾನ । ವಿಶ್ವಾಮಿತ್ರ ಝಾಲಾ ಬ್ರಾಹ್ಮಣ । ಮೀ ಕೃಷ್ಣ ವಂದೀ ತ್ಯಾಚೇಚರಣ । ಮಾಝಾ ಹೀ ತೋ ಗುರು ಜಾಣ ರಾಮಾವತಾರೀ ।।೪೪೬।। ಯಾಲಾಗೀ ಸಕಳ ಛಂದೀ ಪ್ರಧಾನ್ಯ। ಮುಖ್ಯತ್ವೇ ಗಾಯತ್ರೀ ಛಂದ ಜಾಣ। ಇತರ ಛಂದ ಹೋತೀ ಪಾವನ। ಕಾಸೇ ಲಾಗೋನ ಪೈ ಇಚ್ಛ್ಯಾ ।।೪೪೭।। ಗಾಯತ್ರೀ ಛಂದಾಚೇ ಅಂಗೀಕಾರೀ । ತ್ಯಾಸೀ ಮಿಳಾಲ್ಯಾ ಅಕ್ಷರೇ ಚಾರೀ । ''ಉಷ್ಣಿಕ್'' ಛಂದಾಚೇ ಥೋರೀ । ತ್ಯಾಚಿವರೀ ಠಸಾವೇ ।।೪೪೮।। ಉಷ್ಣಿಕ್ ಛಂದಾಚೇ ಅಂಗೀಕಾರೀ । ತ್ಯಾಸೀ ಮಿಳಾಲ್ಯಾ ಅಕ್ಷರೇ ಚಾರೀ । ''ಅನುಷ್ಟುಪ್'' ಛಂದಾಚೇ ಥೋರೀ । ತ್ಯಾಚಿವರೀ ಠಸಾವೇ ।।೪೪೯।। ಅನುಷ್ಟುಪ ಛಂದಾಚೇ ಅಂಗೀಕಾರೀ । ಆಣಿಕ ಮಿಳಾಲ್ಯಾ ಅಕ್ಷರೇ ಚಾರೀ । ''ಬೃಹತೀ'' ಛಂದಾಚೇ ಥೋರೀ । ತ್ಯಾಚಿವರೀ ಠಸಾವೇ ।।೪೫೦।। ಏವಂ ''ಪಂಕ್ತಿ'' ''ತ್ರಿಪುಷ್ಟುಪ್'' ''ಜಗತೀ''। ''ಅತ್ಯಷ್ಟಿ'' ''ಅತಿಜಗತೀ'' । ಚೌ ಚೌ ಅಕ್ಷರಾಂಚೇ ಅಧಿಕಪ್ರಾಪ್ತೀ । ಛಂದೇ ವೇದೋಕ್ತೀವಿಭಾಗ ।।೪೫೧।। ಐಶಿಯಾ ಚತುರಾಕ್ಷರ ಮಿಳಣೀ । ನಾನಾ ಛಂದಾಚಿಯಾ ಶ್ರೇಣೀ । ವೇದರಾಯಾಚೀ ರಾಜಧಾನೀ । ಮಂತ್ರಧ್ವನೀ ಗರ್ಜತೀ ।।೪೫೨।। ತೇಥ ಅಕ್ಷರಮರ್ಯಾದಾ ನ ಕರವೇ । ಶಾಖಾಂಚೀ ಮರ್ಯಾದಾ ನ ಧರವೇ । ಅರ್ಥತಾ ವಾಚ್ಯತಾ ನೇಣವೇ । ವೇದ ವೈಭವೇ ದುರ್ಜೇಯ ।।೪೫೩।।

ಗಾಯತ್ರೀ ಛಂದವು ಇದು ಸರ್ವ ಛಂದಗಳ ಮುಖ್ಯ ಅಧಿಷ್ಠಾನವಾಗಿರುವ ಛಂದವಾಗಿದೆ. ಈ ಗಾಯತ್ರೀ ಛಂದದ ಲಕ್ಷಣವನ್ನು ನಾನು ನಿನಗೆ ಸವಿಸ್ತಾರವಾಗಿ ಹೇಳುವೆನು. ಅದಕ್ಕಾಗಿ ನೀನು ಕೇಳು ।।೪೪೧।। ಎಂಟು ಎಂಟು ಅಕ್ಷರಗಳ ಮೂರು ಚರಣಗಳು ಮತ್ತು ಈ ಛಂದದಲ್ಲಿ ಇಪ್ಪತ್ನಾಲ್ಕು ಅಕ್ಷರಗಳು ಇರುವುವು. ವೇದವಾಣಿಯ ಇದೇ ಮುಖ್ಯಬೀಜವಾಗಿರುವುದು ।।೪೪೨।। ಈ ಗಾಯತ್ರೀಯು ವೇದದ ಸಾರವು, ಬ್ರಹ್ಮಜ್ಞಾನದ ಆಚೆದಂಡೆಯು ಮತ್ತು ಪರಮಾನಂದದ ಶುದ್ಧ ಸಾರವೇ ಆಗಿರುವುದು. ಹೀಗೆ ನಿಶ್ಚಿತವಾಗಿ ತಿಳಿ ।।೪೪೩।। ಅದು ಚೈತನ್ಯದ ಜೀವನವು ಮತ್ತು ನನ್ನ ಗುಪ್ತದಲ್ಲಿನ ಗುಪ್ತಧನವು. ಜೀವ-ಶಿವರ ಸಮಾಧಾನವಾಗುವ ಇದೇ ಗಾಯತ್ರೀ ಛಂದವಾಗಿರುವುದು ।।೪೪೪।। ಗಾಯತ್ರೀ ಛಂದದ ಒಂದೊಂದು ಅಕ್ಷರಗಳು ಇವು ಪರಬ್ರಹ್ಮದ ಸಾರವಾಗಿವೆ. ಮತ್ತು ಗಾಯತ್ರೀ ಇದು ನಿಜವಾಗಿಯೂ ಸಚ್ಚಿದಾನಂದದ ಭಾಂಡಾರವಾಗಿದೆ ।।೪೪೫।। ಗಾಯತ್ರಿಯ ಅನುಷ್ಠಾನವನ್ನು ಮಾಡಿ ವಿಶ್ವಾಮಿತ್ರನು ಕ್ಷತ್ರಿಯನಾದ ತಾನು ಬ್ರಾಹ್ಮಣನಾದನು. ಶ್ರೀಕೃಷ್ಣನಾದ ನಾನೂ ಕೂಡ ಆತನ ಚರಣಗಳಿಗೆ ವಂದಿಸುವೆನು. ನನ್ನ ರಾಮ ಅವತಾರದಲ್ಲಿ ಆತನು ನನ್ನ ಗುರುವಾಗಿದ್ದನು ।।೪೪೬।। ಆದ್ದರಿಂದ ಸರ್ವ ಛಂದಗಳಲ್ಲಿ ಮುಖ್ಯವಾಗಿ ಗಾಯತ್ರೀ ಛಂದವು ಶ್ರೇಷ್ಠವಾಗಿರುವುದು. ಈ ಗಾಯತ್ರೀ ಛಂದದ ಆಶ್ರಯದಿಂದ ಇತರ ಛಂದಗಳು ಪಾವನವಾಗುತ್ತಿರುವುವು ಇದನ್ನು ನೀನು ತಿಳಿ ।।೪೪೭।। ಗಾಯತ್ರೀ ಛಂದದಲ್ಲಿನ ಅಕ್ಷರಗಳನ್ನು ಕೂಡಿಸಿ ಅದರಲ್ಲಿ ಪುನಃ ನಾಲ್ಕು ಅಕ್ಷರಗಳನ್ನು ಕೂಡಿಸಿದರೆ ಅದಕ್ಕಿಂತ ದೊಡ್ಡದಾದ ಉಷ್ಣಿಕ ಛಂದವು ನಿರ್ಮಾಣವಾಗುವುದು ।।೪೪೮।। ಉಷ್ಣಿಕ ಛಂದದಲ್ಲಿನ ಅಕ್ಷರಗಳನ್ನು ಒಟ್ಟುಗೂಡಿಸಿ ಅದರಲ್ಲಿ ಪುನಃ ನಾಲ್ಕು ಅಕ್ಷರಗಳನ್ನು ಕೂಡಿಸಲು ಆಗ ಅನುಷ್ಟುಪ ಛಂದವು ಉತ್ಪನ್ನವಾಗುವುದು ।।೪೪೯।। ಅನುಷ್ಟುಪ ಛಂದದಲ್ಲಿನ ಅಕ್ಷರಗಳನ್ನು ಒಂದು ಮಾಡಿ ಅದರಲ್ಲಿ ಪುನಃ ನಾಲ್ಕು ಅಕ್ಷರಗಳನ್ನು ಕೂಡಿಸುತ್ತಲೇ ಬೃಹತೀ ಛಂದವು ತಯಾರಾಗುವುದು ।।೪೫೦।। ಈ ಪ್ರಕಾರವಾಗಿ ಪ್ರತ್ಯೇಕವಾಗಿ ನಾಲ್ಕು ನಾಲ್ಕು ಅಕ್ಷರಗಳನ್ನು ಕೂಡಿಸಲು ಆಗ ಪಂಕ್ತಿ, ತ್ರಿಷ್ಟುಪ, ಜಗತೀ, ಅತ್ಯಷ್ಟಿ, ಅತಿಜಗತೀ ಇತ್ಯಾದಿ ವೇದವಾಣಿಯ ವಿಭಾಗದ ಛಂದಗಳು ಸಿದ್ಧವಾಗುವುವು ।।೪೫೧।। ಹೀಗೆ ನಾಲ್ಕು ನಾಲ್ಕು ಅಕ್ಷರಗಳನ್ನು ಕೂಡಿಸುತ್ತ ಅನೇಕ ಛಂದಗಳ ಪಂಕ್ತಿಯು ನಿರ್ಮಾಣವಾಗುವುದು ಮತ್ತು ವೇದರಾಜನ ರಾಜಧಾನಿಯಲ್ಲಿ ಈ ಮಂತ್ರಧ್ವನಿಗಳು ಜೋರಾಗಿ ಗರ್ಜಿಸುತ್ತಿರುವುವು ।।೪೫೨।। ಅವುಗಳಲ್ಲಿನ ಅಕ್ಷರಗಳನ್ನು ಎಣಿಸಲಿಕ್ಕೆ ಬರುವುದಿಲ್ಲ ಶಾಖೆಯ ಪತ್ತೆಯೂ ಕೂಡ ಹತ್ತುವುದಿಲ್ಲ. ಅರ್ಥಜ್ಞಾನ ಮತ್ತು ಶಬ್ದಜ್ಞಾನ ಕೂಡ ತಿಳಿಯುವುದಿಲ್ಲ. ಈ ಪ್ರಕಾರದ ವೇದದ ವೈಭವವು ಅಗಮ್ಯವಾಗಿರುವುದು ।।೪೫೩।।

ಕಿಂ ವಿಧತ್ತೇ ಕಿಮಾಚಷ್ಟೇ ಕಿಮನೂದ್ಯ ವಿಕಲ್ಪಯೇತ್ । ಇತಸ್ಯಾ ಹೃದಯಂ ಲೋಕೇ ನಾನ್ಯೋ ಮದ್ವೇದ ಕಶ್ಚನ ॥೪೨॥

ಅರ್ಥ:- ಈ ವೇದವಾಣಿಯು ಕರ್ಮಕಾಂಡದ ಯಾವ ವಿಧಾನ ಮಾಡುವುದು, ಉಪಾಸನಾ ಕಾಂಡದಲ್ಲಿ ಯಾವ ದೇವತೆಗಳ ವರ್ಣನೆ ಮಾಡುವುದು ಮತ್ತು ಜ್ಞಾನಕಾಂಡದಲ್ಲಿ ಯಾವ ಪ್ರತಿತಿಗಳ ಅನುವಾದ ಮಾಡುವುದು ಮತ್ತು ಅವುಗಳಲ್ಲಿ ಅನೇಕ ಪ್ರಕಾರದ ವಿಕಲ್ಪಗಳನ್ನು ಮಾಡುವುದು. ಈ ವಿಷಯಗಳ ಸಂಬಂಧವಾಗಿ ಶ್ರುತಿಯ ರಹಸ್ಯವನ್ನು ನನ್ನ ಹೊರತಾಗಿ ಯಾರೂ ತಿಳಿಯಲು ಶಕ್ಯವಿಲ್ಲ.

ಕರ್ಮಕಾಂಡವಿಧಿನಿಷೇಧೀ । ಕೋಣ ಅರ್ಥ ತ್ಯಾಗಾರ್ಥ ನಿಂದೀ । ಕೋಣ ತೋ ಅರ್ಥ ಪ್ರತಿಪಾದೀ । ಸ್ವಹಿತಬುದ್ಧೀ ಸಾಧಕಾ ॥೪೫೪॥ ಮಂತ್ರಕಾಂಡೇ ಮಂತ್ರಮೂರ್ತೀ । ಸಾಂಗೋಪಾಂಗ ಸಾಯುಧಸ್ಥಿತೀ । ಉಪಾಸನಾ ಉಪಾಸ್ಯಯುಕ್ತೀ । ಕಿಮರ್ಥ ಭಕ್ತೀ ಕರವಿಲೀ ॥೪೫೫॥ ಜ್ಞಾನಕಾಂಡ ತ್ರಿಶುದ್ಧೀ । ಕೋಣ ಪದಾರ್ಥ ನಿಷೇಧೀ । ಕೋಣ್ಯಾ ಅರ್ಥಾತೇ ಪ್ರತಿಪಾದೀ । ನಿಜಬುದ್ಧೀ ಬೋಧುನಿ ॥೪೫೬॥ ಏವಂ ವೇದಾಚೇ ಅಚಳ ಮೂಳ । ವಿಧಿವಿಧಾನೇಸೀ ಮುಖ್ಯ ಫಳ । ಜಾಣಾವಯಾ ಗಾ ಕೇವಳ । ನಾಹೀ ಜ್ಞಾನಬಳ ಸುರನರಾ ॥೪೫೭॥ ಯಾ ವೇದಾರ್ಥಾತೇ ತತ್ತ್ವತಾ । ಮೀಚಿ ಏಕ ಸರ್ವಜ್ಞ ಜ್ಞಾತಾ । ಮಾಝೇ ಕೃಪೇವೀಣ ಸರ್ವಥಾ । ಹೇ ನ ಯೇಚಿ ಹಾತಾ ಬ್ರಹ್ಮಾದಿಕಾ ॥೪೫೮॥ ತೇಥ ಉದ್ಧವಾಚೇ ಮನೋಗತ । ದೇವೋ ಜಾಣೇ ವೇದೀಂಚಾ ಇತ್ಯರ್ಥ । ತರೀ ಭಕ್ತಕೃಪಾಳೂ ಶ್ರೀಕೃಷ್ಣನಾಥ । ಮಜಹೀ ತೋ ಅರ್ಥ ದಯೇನೇ ಸಾಂಗೋ ॥೪೫೯॥ ಹಾ ಉದ್ಧವಾಚಾ ನಿಜಭಾವೋ । ಜಾಣೋ ಸರಲಾ ದೇವಾಧಿದೇವೋ । ತೋ ವೇದಾರ್ಥಾಚಾ ಅಭಿಪ್ರಾವೋ । ಶ್ಲೋಕಾನ್ವಯೋ ಪಹಾ ಹೋ ಸಾಂಗತ ॥೪೬೦॥

ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಪೋಹ್ಯತೇ ತ್ವಹಮ್ । ಏತಾವಾನ್ ಸರ್ವವೇದಾರ್ಥಃ ಶಬ್ದ ಆಸ್ಥಾಯ ಮಾಂ ಭಿದಾಮ್ ।
ಮಾಯಾಮಾತ್ರಮನೂದ್ಯಾಂತೇ ಪ್ರತಿಷಿಧ್ಯ ಪ್ರಸೀದತಿ ॥೪೩॥
ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಏಕವಿಂಶೋಽಧ್ಯಾಯಃ ॥೨೧॥

ಅರ್ಥ:- ಸರ್ವ ಶ್ರುತಿ ಕರ್ಮಕಾಂಡದಲ್ಲಿ ನನ್ನ ವಿಧಾನವನ್ನು, ಉಪಾಸನಾ ಕಾಂಡದಲ್ಲಿ ಉಪಾಸ್ಯ ದೇವತೆಗಳ ಸ್ವರೂಪದಿಂದ ನನ್ನದೇ ವರ್ಣನೆಯನ್ನು ಮಾಡುವುವು ಮತ್ತು ಜ್ಞಾನಕಾಂಡದಲ್ಲಿ ಆಕಾಶಾದಿ ರೂಪದಿಂದ ನನಗೆ ಅನ್ಯವಸ್ತುಗಳ ಆರೋಪ ಮಾಡಿ ಅದರ ನಿಷೇಧ ಮಾಡುವುವು. ಸಂಪೂರ್ಣ ಶ್ರುತಿಗಳ ತಾತ್ಪರ್ಯವೇನೆಂದರೆ ನನ್ನ ಆಶ್ರಯವನ್ನು ಪಡೆದು ನನ್ನಲ್ಲಿ ಭೇದದ ಆರೋಪ ಮಾಡುವುವು. ಮಾಯಾ ಮಾತ್ರ ಹೇಳುತ್ತ ಅದರ ಅನುವಾದವನ್ನು ಮಾಡುವರು. ಮತ್ತು ಕೊನೆಗೆ ಎಲ್ಲವನ್ನೂ ನಿಷೇಧಿಸಿ ನನ್ನಲ್ಲಿ ಶಾಂತವಾಗುವುವು. ಅಧಿಷ್ಠಾನರೂಪದಿಂದ ನಾನೇ ಒಬ್ಬನು ಉಳಿದುಕೊಳ್ಳುವೆನು. ಇದನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಮಾಝೀ ಪಾವಾವಯಾ ಸ್ವರೂಪಸಿದ್ಧೀ । ಮಲಿನಾಚಿಯಾ ಚಿತ್ತಶುದ್ಧೀ । ವೇದ ಸ್ವಧರ್ಮ ಪ್ರದಿಪಾದೀ । ತ್ಯಾಗವೀ ನಿಷೇಧೀ ವಿಷಯಾತೇ ॥೪೬೧॥ ತೇಥ ಅಗ್ನಿಹೋತ್ರಾದಿ ವಿಧಾನ । ಯಜ್ಞಾಂತ ಕರ್ಮಾಚರಣ । ತೇ ಚಿತ್ತಶುದ್ಧೀಚೇ ಕಾರಣ । ವೈರಾಗ್ಯ ದಾರುಣ ಉಪಜವೀ ॥೪೬೨॥

ಕರ್ಮಕಾಂಡದಲ್ಲಿ ವಿಧಿನಿಷೇಧಗಳನ್ನು ಹೇಳುತ್ತಿರಲು ಆಗ ವೇದವು ಯಾವ ಅರ್ಥದಿಂದ ತ್ಯಾಗಕ್ಕಾಗಿ ನಿಂದೆಯನ್ನು ಮಾಡುವುದು? ಹಾಗೂ ಸಾಧಕರ ಹಿತಬುದ್ಧಿಯಿಂದ ಯಾವ ಅರ್ಥದ ಪ್ರತಿಪಾದನೆಯನ್ನು ಮಾಡುವುದು? ॥೪೫೪॥ ಮಂತ್ರಕಾಂಡದ ಎಲ್ಲ ಮಂತ್ರಮೂರ್ತಿಗಳನ್ನು ಹೇಳಿ ಅವರ ಸಾಂಗೋಪಾಂಗ ಆಯುಧಗಳು, ಉಪಾಸ್ಯ, ಉಪಾಸನೆ ಇತ್ಯಾದಿಗಳನ್ನು ಹೇಳಿ ಭಕ್ತಿಯನ್ನು ಏತಕ್ಕಾಗಿ ಮಾಡಿಸಿರುವುದು? ॥೪೫೫॥ ಜ್ಞಾನಕಾಂಡದಲ್ಲಿ ಯಾವ ಪದಾರ್ಥದ ನಿಷೇಧವನ್ನು ಮಾಡಿರುವುದು ಮತ್ತು ಯಾವ ಜ್ಞಾನದ ಪ್ರತಿಪಾದನೆಯನ್ನು ಮಾಡಿ ಆತ್ಮಜ್ಞಾನದ ಉಪದೇಶವನ್ನು ಮಾಡಿರುವುದು? ॥೪೫೬॥ ಈ ಪ್ರಕಾರವಾಗಿ ವೇದದ ನಿಶ್ಚಿತ ಮೂಲವು ಯಾವುದು? ಅಥವಾ ವಿಧಿವಿಧಾನಗಳ ಸಹ ಸಧ್ಯದ ಮುಖ್ಯ ಫಲವು ಯಾವುದು? ಇವುಗಳನ್ನು ತಿಳಿಯುವ ಜ್ಞಾನವು ಮನುಷ್ಯನಿಗೆ ಇಲ್ಲವೇ ಇಲ್ಲ, ಇಷ್ಟೇ ಏಕೆ? ದೇವತೆಗಳಿಗೂ ಕೂಡ ಇರುವುದಿಲ್ಲ ॥೪೫೭॥ ನಿಜವಾಗಿಯೂ ಈ ವೇದಾರ್ಥವನ್ನು ನಿಜವಾದ ರೀತಿಯಲ್ಲಿ ತಿಳಿಯುವವ ನಾನೊಬ್ಬನೇ ಸರ್ವಜ್ಞ ಜ್ಞಾತಾನಾಗಿರುವೆನು. ನನ್ನ ಕೃಪೆಯ ಹೊರತಾಗಿ ಈ ಅರ್ಥವು ಬ್ರಹ್ಮಾದಿಕ ದೇವತೆಗಳಿಗೂ ಕೂಡ ಪ್ರಾಪ್ತವಾಗುವುದಿಲ್ಲ ॥೪೫೮॥ ಇದನ್ನು ಕೇಳಿ ಉದ್ಧವನ ಮನದಲ್ಲಿ ಹೀಗೆ ವಿಚಾರ ಮೂಡಿತು, ವೇದದಲ್ಲಿನ ಪರಿಪೂರ್ಣ ನಿಜವಾದ ಅರ್ಥಸ್ವಾರಸ್ಯವು ಒಬ್ಬ ದೇವನಿಗೆ ಮಾತ್ರ ತಿಳಿದಿರುವುದು. ಶ್ರೀಕೃಷ್ಣನು ಭಕ್ತರ ವಿಷಯದಲ್ಲಿ ಕೃಪಾವಂತನಾಗಿರುವುದರಿಂದ ನನ್ನ ಮೇಲೆಯೂ ದಯೆತೋರಿ ಆ ಅರ್ಥವನ್ನು ಹೇಳುತ್ತಿರುವನು ॥೪೫೯॥ ಉದ್ಧವನ ಮನದಲ್ಲಿನ ಈ ಉದ್ದೇಶವನ್ನರಿತು ದೇವಾಧಿದೇವನು ಅದನ್ನು ಹೇಳಲು ಮುಂದಾದನು ಮತ್ತು ಆ ವೇದದ ಸಾರಾಂಶವನ್ನು ಶ್ಲೋಕರೂಪದಿಂದ ಹೇಳಹತ್ತಿದನು ॥೪೬೦॥

ನನ್ನ ಸ್ವರೂಪದ ಪ್ರಾಪ್ತಿಯಾಗುವುದಕ್ಕಾಗಿ ಮತ್ತು ಪಾಪೀ ಜನರ ಅಂತಃಕರಣವು ಶುದ್ಧವಾಗುವುದಕ್ಕಾಗಿ ವೇದವು ಸ್ವಧರ್ಮದ ಪ್ರತಿಪಾದನೆಯನ್ನು ಮಾಡಿರುವುದು. ನಿಷೇಧವನ್ನು ಹೇಳಿ ವಿಷಯಗಳ ತ್ಯಾಗವನ್ನು ಮಾಡಿಸಿರುವುದು ॥೪೬೧॥ ಅದರಲ್ಲಿ ಅಗ್ನಿಹೋತ್ರಾದಿ ವಿಧಾನಗಳು ಮತ್ತು ಯಜ್ಞನದಲ್ಲಿನ ಕರ್ಮಾಚರಣೆಗಳು ಚಿತ್ತಶುದ್ಧಿಗೆ ಹೆಚ್ಚಿನ ಕಾರಣಭೂತವಾಗಿರುವುವು. ಇವುಗಳಿಂದ ದೃಢವಾದ ವೈರಾಗ್ಯವು ಉತ್ಪನ್ನವಾಗುವುದು ॥೪೬೨॥

ದಾರುಣ ವೈರಾಗ್ಯ ಉತ್ಪತ್ತೀ । ಇಹಾಮುತ್ರವಿಷಯನಿವೃತ್ತೀ । ತೆವ್ಹಾ ಸಾಧಕಾಸ ಮಾಝೀ ಪ್ರಾಪ್ತೀ । ಸಹಜಸ್ಥಿತೀ ಸ್ವಭಾವೇ ॥೪೬೩॥ ಏವಂ ಕರ್ಮಕಾಂಡಾಚಿಯೇ ಸ್ಥಿತೀ । ವಿಧಿನಿಷೇಧ ವೇದೋಕ್ತೀ । ಸಾಧಕಾಂಸೀ ಮಾಝೀ ಪ್ರಾಪ್ತೀ । ಜಾಣ ನಿಶ್ಚಿತೀ ಯಾ ಹೇತೂ ॥೪೬೪॥ ವಿಷಯೀ ಪರಮ ಬಾಧಾ ದೇಖತೀ । ಪರೀ ತ್ಯಾಗೀ ನಾಹೀ ಸಾಮರ್ಥ್ಯಶಕ್ತೀ । ಐಶಿಯಾ ಸಾಧಕಾಪ್ರತೀ । ವೇದೇ ಮದ್ಭಕ್ತೀ ಧ್ಯೋತಿಲೀ ॥೪೬೫॥ ಯೇಥ ಮಂತ್ರಮೂರ್ತಿ ಉಪಾಸನ । ಮಾಝೀ ಸಗುಣ ಅನುಷ್ಠಾನ । ತೇಥ ಕರಿತಾ ಅನನ್ಯ ಭಜನ । ರಜತಮ ಜಾಣ ನಾಸತೀ ॥೪೬೬॥ ಮಗ ಕೇವಳಾ ಸತ್ತ್ವವೃತ್ತೀ । ಶ್ರವಣಕೀರ್ತನೀ ಅತಿಪ್ರೀತೀ । ತೇಣೇ ಮದ್ಭಾವೋ ಸರ್ವಾಭೂತೀ । ಮಾಝೀ ಚೌಥೀ ಭಕ್ತೀ ತೇಣೇ ಹೋಯ ॥೪೬೭॥ ಆತುಡಲ್ಯಾ ಮಾಝೀ ಚೌಥೀ ಭಕ್ತೀ । ಮದ್ಭಕ್ತಾ ನಾವಡೇ ಮುಕ್ತೀ । ಅದ್ವೈತ ಭಜನಾಚಿಯಾ ಪ್ರೀತೀ । ಧಿಕ್ಕಾರಿತೀ ಕೈವಲ್ಯ ॥೪೬೮॥ ಅದ್ವೈತಬೋಧೇ ಕರಿತಾ ಭಜನ । ಮೀ ಅನಂತ ಅಪಾರ ಚಿದ್‌ಘನ । ಭಕ್ತೀಮಾಜೀ ಆಕಳೇ ಜಾಣ । ಯೇ ಮದ್ರೂಪಪಣ ಮದ್ಭಕ್ತಾ ॥೪೬೯॥ ತೇವ್ಹಾ ಭಾಜ್ಯ - ಭಜಕ- ಭಜನ । ಪೂಜ್ಯ - ಪೂಜಕ - ಪೂಜನ । ಸಾಧ್ಯ - ಸಾಧಕ - ಸಾಧನ । ಅವಘೇ ಆಪಣ ಸ್ವಯೇ ಹೋಯ ॥೪೭೦॥ ಮಾಝೀ ಐಶ್ವರ್ಯಸಾಮರ್ಥ್ಯಶಕ್ತೀ । ತೇಹೀ ಯೇ ನಿಜಭಕ್ತಾಂಚ್ಯಾ ಹಾತೀ । ಅದ್ವೈತಭಜನಾಚಿಯಾ ಪ್ರೀತೀ । ಮದ್ಪದಪ್ರಾಪ್ತೀ ಮದ್ಭಕ್ತಾ ॥೪೭೧॥ ಮೀ ದೇವ ತೋ ಭಕ್ತ ಶುದ್ಧ । ಹಾ ಬಾಹೇರೀ ನಾಂವಾಚಾಚೀ ಭೇದ । ಆಂತುವಟ ಪಾಹತಾ ಬೋಧ । ಸಚ್ಚಿದಾನಂದ ನಿಜಐಕ್ಯೇ ॥೪೭೨॥ ಹೇ ಉಪಾಸನಾಕಾಂಡಸ್ಥಿತೀ । ಸಾಧಕೀ ಕರೂನಿ ಮಾಝೀ ಭಕ್ತೀ । ಯಾಪರೀ ಪಾವಲೇ ಮಾಝೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೪೭೩॥ ''ಮಾಯಾಪ್ರತಿಬಿಂಬಿತ'' ಚೈತನ್ಯ । ತ್ವಂಪದಾರ್ಥೇ ವಾಚ್ಯ ಜಾಣ । ಜ್ಯಾಚ್ಯಾ ಅಂಗೀ ಜೇವಾಭಿಧಾನ । ಅವಿದ್ಯಾ ಜಾಣ ಉಪಜವೀ ॥೪೭೪॥ ಜೇವೀ ಸ್ವಪ್ನಾಮಾಜೀ ಆಪಣ । ಆನ ಅಸೋನಿ ದೇಖೇ ಆನ । ತೇವೀ ಅವಿದ್ಯಾಕರ್ತ್ವೇ ಜಾಣ । ''ಜೀವಪಣ'' ಏಕದೇಶೀ ॥೪೭೫॥ ಜೇ ''ಮಾಯಾಸಂವಲಿತ'' ಚೈತನ್ಯ । ಜೋ ಯೋಗಜನ್ಯ ಜಗತ್ಕಾರಣ । ಜೋ ಸರ್ವದ್ರಷ್ಟಾ ಸರ್ವಜ್ಞ । ಸದಾ ಸಂಪನ್ನ ಐಶ್ವರ್ಯೇ ॥೪೭೬॥

ಒಮ್ಮೆ ಈ ದೃಢವಾದ ವೈರಾಗ್ಯವು ಉತ್ಪನ್ನವಾಯಿತೆಂದರೆ ಇಹಪರ ವಿಷಯಗಳ ನಿವೃತ್ತಿಯಾಗುವುದು ಮತ್ತು ಸಾಧಕನಿಗೆ ಸಹಜವಾಗಿ ನನ್ನ ಪ್ರಾಪ್ತಿಯಾಗುವುದು ॥೪೬೩॥ ಈ ಪ್ರಕಾರವಾಗಿ ಕರ್ಮಕಾಂಡದಲ್ಲಿ ವೇದವಾಣಿಯು ನೇಮಿಸಿ ಕೊಟ್ಟಿರುವ ವಿಧಿನಿಷೇಧಗಳನ್ನು ಪಾಲಿಸಿದರೆ, ಚಿತ್ತಶುದ್ಧಿಯಾಗುವುದು ಮತ್ತು ನನ್ನ ಪ್ರಾಪ್ತಿಯಾಗುವುದು ॥೪೬೪॥ ವಿಷಯಗಳು ಅತಿಶಯ ವಾಗಿ ಬಾಧಕಗಳಾಗಿವೆ ಎಂಬುದು ಯಾರಿಗೆ ತಿಳಿಯುವುದೋ, ಅವರಿಗೆ ಅವುಗಳನ್ನು ತ್ಯಾಗ ಮಾಡುವ ಸಾಮರ್ಥ್ಯವು ಇರುವುದಿಲ್ಲ. ಇಂತಹ ಸಾಧಕರಿಗಾಗಿ ವೇದವು ನನ್ನ ಭಕ್ತಿಯನ್ನು ಪ್ರಕಟ ಮಾಡಿರುವುದು ॥೪೬೫॥ ಯಾವ ಈ ಮಂತ್ರಯುಕ್ತ ಮೂರ್ತಿಯ ಉಪಾಸನೆಯನ್ನು ಹೇಳಿರುವುದು. ನನ್ನ ಸಗುಣ ಮೂರ್ತಿಯ ಅನುಷ್ಠಾನವನ್ನು ಮತ್ತು ಅನನ್ಯಭಾವದಿಂದ ನನ್ನ ಭಜನೆಯನ್ನು ಮಾಡುವುದರಿಂದ ರಜೋಗುಣವು ಹಾಗೂ ತಮೋಗುಣವು ನಾಶವಾಗುವುದು ॥೪೬೬॥ ಆದ್ದರಿಂದ ಸತ್ವಗುಣವು ಹಾಗೆಯೇ ಉಳಿದುಕೊಳ್ಳುವುದು. ಇದರಿಂದ ಕೀರ್ತನ ಶ್ರವಣದಲ್ಲಿ ಅತ್ಯಂತ ಆನಂದವು ಉಂಟಾಗುವುದು. ಹಾಗೂ ಸರ್ವಪ್ರಾಣಿಮಾತ್ರರಲ್ಲಿ ಸರ್ವತ್ರವೂ ನಾನೇ ತೋರುತ್ತಿರುವೆನು. ಈ ಯೋಗದಿಂದ ನನ್ನ ನಾಲ್ಕನೆಯ ಭಕ್ತಿಯ ಲಾಭವಾಗುವುದು ॥೪೬೭॥ ಈ ಯಾವ ನನ್ನ ನಾಲ್ಕನೆಯ ಭಕ್ತಿಯು ಪ್ರಾಪ್ತವಾಗುತ್ತಲೇ ಅವರಿಗೆ ಮುಕ್ತಿಯೂ ಕೂಡ ಪ್ರಿಯವೆನಿಸುವುದಿಲ್ಲ. ಅದ್ವೈತ ಭಜನೆಯ ಕಾರಣವಾಗಿ ಅವರು ಮೋಕ್ಷವನ್ನೂ ಕೂಡ ತುಚ್ಛವೆನ್ನುವರು ॥೪೬೮॥ ಅದ್ವೈತ ಬೋಧೆಯಿಂದ ನನ್ನ ಭಜನೆಯನ್ನು ಮಾಡಲು ಆಗ ಅನಂತನು, ಅಪಾರನು ಹಾಗೂ ಚಿದ್‌ಘನ ಸ್ವರೂಪನಾಗಿರುವ ನಾನು ಭಕ್ತರಿಗೆ ಸಹಜವಾಗಿ ವಶನಾಗುವೆನು. ಆಗ ಭಕ್ತರಿಗೆ ಮದ್ರೂಪವು ಪ್ರಾಪ್ತವಾಗುವುದು ॥೪೬೯॥ ಆ ಸ್ಥಿತಿಯಲ್ಲಿ ಭಜ್ಯ, ಭಾಜಕ ಮತ್ತು ಭಜನೆ, ಪೂಜ್ಯ, ಪೂಜಕ ಮತ್ತು ಪೂಜನೆ ಹಾಗೂ ಸಾಧ್ಯ, ಸಾಧಕ ಮತ್ತು ಸಾಧನೆ ಈ ಎಲ್ಲವೂ ಆತನು ತಾನು ಸ್ವತಃವೇ ಆಗಿಬಿಡುವನು ॥೪೭೦॥ ನನ್ನ ಐಶ್ವರ್ಯ, ಸಾಮರ್ಥ್ಯ ಮತ್ತು ಶಕ್ತಿ ಇವು ನನ್ನ ಭಕ್ತರ ಕೈಗೆ ಬರುವುವು. ಅದ್ವೈತ ಭಜನೆಯ ನಿಃಸ್ವಾರ್ಥ ಭಜನೆಯಿಂದ ನನ್ನ ಭಕ್ತರಿಗೆ ನನ್ನ ಪದವಿಯ ಪ್ರಾಪ್ತಿಯಾಗುವುದು ॥೪೭೧॥ ನಾನು ದೇವನು ಆತನು ಭಕ್ತನು ಎಂಬ ಈ ಹೆಸರಿನ ಭೇದಮಾತ್ರ ಹೊರಗೆ ತೋರುವುದು. ಆದರೆ ಒಳಗಡೆ ನೋಡಿದರೆ ನಾನು ಮತ್ತು ಭಕ್ತ ಇಬ್ಬರೂ ಸಚ್ಚಿದಾನಂದರೂಪದಿಂದ ಒಂದೇ ಆಗಿರುವೆವು ॥೪೭೨॥ ಹೇ ಉದ್ಧವಾ, ಈ ಯಾವ ಉಪಾಸನಾಕಾಂಡದಲ್ಲಿ ವರ್ಣನೆಯನ್ನು ಮಾಡಿದ ಪ್ರಕಾರವಾಗಿ ನನ್ನ ಭಕ್ತಿಯನ್ನು ಪ್ರಾಪ್ತಮಾಡಿಕೊಂಡು ಸಾಧಕನು ನನ್ನ ಪದಕ್ಕೆ ಪ್ರಾಪ್ತನಾಗಿರುವನು. ಇದನ್ನು ನೀನು ನಿಶ್ಚಿತವಾಗಿ ತಿಳಿ ॥೪೭೩॥ ಈಗ ಜ್ಞಾನಕಾಂಡದ ಉಪಪತ್ತಿಯನ್ನು ಹೇಳುವೆನು. ಮಾಯೆಯಲ್ಲಿ ಪ್ರತಿಬಿಂಬಿತವಾಗಿರುವ ಚೈತನ್ಯವೇ ''ತ್ವಂ'' ಪದದ ಅರ್ಥದಿಂದ ತಿಳಿಯಲ್ಪಡುವುದು. ಅವಿದ್ಯೆಯಿಂದ ಅದಕ್ಕೆ ಜೀವತ್ವವು ಪ್ರಾಪ್ತವಾಗುವುದು ॥೪೭೪॥ ಸ್ವಪ್ನದಲ್ಲಿ ತಾನೊಬ್ಬನೇ ಇದ್ದರೂ ಕೂಡ ಅಲ್ಲಿ ಅನೇಕತ್ವದಿಂದ ತೋರುವನು. ಅದರಂತೆಯೇ ಅವಿದ್ಯೆಯಿಂದ ಬಂದ ಈ ಜೀವವು ಏಕದೇಶೀಯಾಗಿರುವುದು ॥೪೭೫॥ ಮಾಯಾಯುಕ್ತ ಯಾವ ಚೈತನ್ಯವು ಇದು ಯೋಗದಿಂದ ಉತ್ಪನ್ನವಾಗಿ ಜಗತ್ತಿನ ಉತ್ಪತ್ತಿಗೆ ಕಾರಣವಾಗುತ್ತಿರುವುದು. ಯಾರು ಸರ್ವದ್ರಷ್ಟಾ, ಸರ್ವಜ್ಞ, ಸದಾ ಸರ್ವಕಾಳ ಐಶ್ವರ್ಯಸಂಪನ್ನನು ॥೪೭೬॥

ಜೋ ಸಕಳ ಕರ್ಮಾಚಾ ಕರ್ತಾ । ಜೋ ಕರ್ತಾಚಿ ಪರೀ ಅಕರ್ತಾ । ಜ್ಯಾಚೇ ಅಂಗೀ ಸ್ವಭಾವತಾ । ನಿತ್ಯಮುಕ್ತತಾ ಸ್ವಯಂಭ ।೪೭೭॥ ಜ್ಯಾಚೀ ಅಕುಂಠಿತ ಸಹಜಸತ್ತಾ । ಜೋ ಪರಮಾನಂದೇ ಸದಾ ಪುರತಾ । ಜ್ಯಾಸೀ ಈಶ್ವರತ್ವೇ ಸಮರ್ಥತಾ । ಹೇ ಜಾಣ ವಾಚಕತಾ ತತ್ಪದಾರ್ಥಾಚೀ ।೪೭೮॥ ಜೀವಾಚೇ ಸಾಂಡೋನಿಯಾ ಅಜ್ಞಾನತ್ವ । ಶಿವಾಚೇ ಸಾಂಡೂನಿ ಸರ್ವಜ್ಞತ್ವ । ದೋಹೀಂಚೇ ಶೋಧಿತ ಜೇ ಲಕ್ಷ್ಯತ್ವ । ಐಕ್ಯೇ ನಿಜತತ್ತ್ವ ಸಾಧಿತೀ ।೪೭೯॥ ಲಗ್ನೀ ನೋವರಾ ನಿಮಾಸುರಾ । ತೋಚಿ ಗೇಲಿಯಾ ದೇಶಾವರಾ । ವಿದೇಶೀ ದೇಖಿಲಾ ಏಕಸರಾ । ತಾರುಣ್ಯ ಮದಭರಾ ಸಂಪನ್ನ ।೪೮೦॥ ತೇ ಕಾಳೀಂಚೀ ತ್ಯಜೂನಿ ಬಾಲ್ಯಾವಸ್ಥಾ । ಆಜಿಚಿ ನೇಘೂನಿ ತಾರುಣ್ಯತಾ । ಪತ್ನೀ ಅನುಸರೇ ನಿಜಕಾಂತಾ । ನಿಜಸ್ವರೂಪತಾಸ್ವಭಾವೇ ।೪೮೧॥ ತೇವೀ ತ್ವಂಪದತತ್ಪದವಾಚ್ಯಾರ್ಥ । ದೋಹೀಂಚಾ ಸಾಂಡಾವಾ ನಿಶ್ಚಿತಾರ್ಥ । ಐಕ್ಯ ಅಂಗೀಕಾರಾವಾ ಲಕ್ಷ್ಯಾರ್ಥ । ಹಾ ಜ್ಞಾನಕಾಂಡಾರ್ಥ ಉದ್ಧವಾ ।೪೮೨॥ ಜೀವಶಿವಾಂಚೇನಿ ಐಕ್ಯೇ ಜಾಣ । ಮಾಝೇ ಚಿತ್ಸ್ವರೂಪೇ ಸಮಾಧಾನ । ಸ್ವಯೇ ಪಾವಿಜೇ ಆಪಣ । ಹೇ ಜ್ಞಾನಕಾಂಡ ಸಂಪೂರ್ಣ ಬೋಲಿಲೇ ವೇದೇ ।೪೮೩॥ ವೇದಾ ಆದಿ - ಮಧ್ಯ - ಅವಸಾನೀ । ಮಾತೇ ಲಕ್ಷಿತೀ ಕಾಂಡೇ ತೀನೀ । ತೋಚಿ ಅರ್ಥ ಉಪಸಂಹಾರೂನೀ । ಗ್ರಂಥಾವಸಾನೀ ಹರಿ ಬೋಲೇ ।೪೮೪॥ ಉದ್ಧವಾ ವೇದಾಚೇ ವಚನ । ಅರ್ಥಗಂಭೀರ ಅತಿಗಹನ । ತೇಥ ಶಿಣತಾ ಋಷಿಜನ। ಅರ್ಥಾವಸಾನ ಅಲಕ್ಷ್ಯ ।೪೮೫॥ ತೇ ವೇದಾರ್ಥಾಚೇ ನಿಜಸಾರ । ಮಾಝೇ ಗುಹ್ಯ ಜ್ಞಾನಭಾಂಡಾರ । ತುಜ ಮ್ಯಾ ಸಾಂಗಿತಲೇ ಸಾಚಾರ । ಪೂರ್ವಾಪರಅವಿರೋಧೇ ।೪೮೬॥ ತೇ ಐಕೋನಿ ದೇವಾಚೇ ಉತ್ತರ । ಉದ್ಧವ ಚಮತ್ಕಾರಲಾ ಥೋರ । ತೇಚಿ ವೇದಾಚೇ ನಿಜಸಾರ । ಪುಢತೀ ಶ್ರೀಧರ ಸಾಂಗೋ ಕಾ ।೪೮೭॥ ಪಾನ್ಹಾ ಲಾಗತಾಂಚಿ ತೋಂಡೀ । ದೋಹಕ ವಾಂಸರೂ ಆಂಖುಡೀ । ತ್ಯಾಪರೀ ಅತಿ ಆವಡೀ । ಸ್ವಯೇ ಚಡಫಡೀ ಉದ್ಧವ ।೪೮೮॥ ಜೇವೀ ಕಾ ಪಕ್ಷಿಣೀಪುಢೇ । ಚಾರಾ ಘ್ಯಾವಯಾಚೇ ಚಾಡೇ । ಪಿಲೇ ಪಸರೀ ಚಾಂಚುವಡೇ । ತೇವೀ ಕೃಷ್ಣಾಕಡೇ ಉದ್ಧವು ।೪೮೯॥ ತೇ ಉದ್ಧವಾಚೇ ಮನೋಗತ । ಜಾಣೋನಿಯಾ ಶ್ರೀಅನಂತ । ಸಕಳ ವೇದಾರ್ಥ ಸಂಕಳಿತ । ಗ್ರಂಥಾಂತೀ ಸಾಂಗತ ನಿಜಸಾರಾಂಶ ।೪೯೦॥

ಯಾರು ಸ್ವಕರ್ಮದ ಕರ್ತನಾಗಿದ್ದರೂ ಕೂಡ ಅಕರ್ತನು ಮತ್ತು ಯಾರ ಅಂಗದಲ್ಲಿ ಸ್ವಭಾವತವೇ ಸ್ವಯಂಭೂ ನಿತ್ಯ ಮುಕ್ತತೆ ಇರುವುದು ।೪೭೭॥ ಯಾರ ಸತ್ತೆಯು ನೈಸರ್ಗಿಕ, ಅಕುಂಠಿತವಾಗಿರುವುದೋ, ಯಾರು ಪರಮಾನಂದದಿಂದ ಪರಿಪೂರ್ಣನಾಗಿರುವನೋ, ಯಾರು ಈಶ್ವರನಾಗಿರುವುದರಿಂದ ಸರ್ವಸಮರ್ಥನಾಗಿರುವನು ಆತನು ''ತತ್''ಪದ ಅರ್ಥದ ವಾಚ್ಯಾರ್ಥನಾಗಿರುವನು ।೪೭೮॥ ಆ ಯಾವ ಜೀವದ ಅಜ್ಞಾನತನವನ್ನು ಬಿಟ್ಟು ಹಾಗೂ ಶಿವತ್ವದ ಶಿವತನವನ್ನೂ ಕೂಡ ತ್ಯಜಿಸಿ ಆತನಲ್ಲಿ ಏಕರೂಪನಾಗಿ ಸ್ವಸ್ವರೂಪವನ್ನು ಸಾಧಿಸುವರು ।೪೭೯॥ ಲಗ್ನದಲ್ಲಿ ವಯಸ್ಸಿನಿಂದ ಚಿಕ್ಕವನಾದ, ಸುಂದರವುಳ್ಳ ವರನು ದೇಶಾಂತರಕ್ಕೆ ಹೋಗಿ ಕೆಲವು ಕಾಲದ ನಂತರ ತಾನು ತರುಣನಾಗಿ ಬಂದದ್ದು ಅಕಸ್ಮಾತ್ತಾಗಿ ದೃಷ್ಟಿಗೆ ಬಿದ್ದನು ।೪೮೦॥ ಆಗ ಆ ಸಮಯದ ಬಾಲ್ಯದಶೆಯನ್ನು ಒಗೆದು ತಾರುಣ್ಯ ದಶೆಯನ್ನೂ ಕೂಡ ಬಿಟ್ಟು ಆತನ ಮೂಲ ಸ್ವರೂಪಕ್ಕೆ ಅನುಲಕ್ಷಿಸಿ ಆತನ ಪತ್ನಿಯು ಯಾವ ಪ್ರಕಾರವಾಗಿ ಆತನ ಅಂಗೀಕಾರವನ್ನು ಮಾಡುವಳೋ ।೪೮೧॥ ಅದೇ ಪ್ರಕಾರವಾಗಿ ಹೇ ಉದ್ಧವಾ ''ತ್ವಂಪದ'' ಮತ್ತು ''ತತ್‌ಪದ'' ಈ ಎರಡರ ಲೌಕಿಕಾರ್ಥ ಅಂದರೆ ವಾಚ್ಯಾರ್ಥವನ್ನು ಬಿಟ್ಟುಬಿಡಬೇಕು ಮತ್ತು ಐಕ್ಯಭಾವದಿಂದ ಕಂಡು ಬರುವ ಅಂದರೆ ಲಕ್ಷಾರ್ಥದ ಸ್ವೀಕಾರವನ್ನು ಮಾಡಬೇಕು. ಇದು ಜ್ಞಾನಕಾಂಡದಲ್ಲಿನ ಅರ್ಥವಾಗಿರುವುದು ।೪೮೨॥ ಜೀವದ ಮತ್ತು ಶಿವದ ಐಕ್ಯವನ್ನು ಮಾಡಿ ನನ್ನ ಚಿತ್ಸ್ವರೂಪದಲ್ಲಿ ತಾನು ಸಮಾಧಾನವನ್ನು ಅನುಭವಿಸಬೇಕು. ಇದನ್ನೇ ವೇದವು ಸರ್ವ ಜ್ಞಾನಕಾಂಡವನ್ನು ಹೇಳಿರುವುದು ।೪೮೩॥ ವೇದದಲ್ಲಿನ ಮೂರೂ ಕಾಂಡಗಳ ಆದಿ, ಮಧ್ಯ, ಅಂತ್ಯಗಳು ನನಗೆ ಮಾತ್ರ ಲಕ್ಷಿತವು. ಈ ಅರ್ಥವನ್ನೇ ಗ್ರಂಥದ ಕೊನೆಯಲ್ಲಿ ಉಪಸಂಹಾರ ಮಾಡುತ್ತ ಶ್ರೀಕೃಷ್ಣನು ಹೇಳುವನು ।೪೮೪॥ ಉದ್ಧವಾ, ವೇದದ ವಚನಗಳು ಅರ್ಥದ ದೃಷ್ಟಿಯಿಂದ ಬಹಳ ಸಖೋಲವಾಗಿರುವುವು, ಅತಿ ಗಹನವಾಗಿರುವುವು. ಈ ವಿಷಯಕ್ಕೆ ಅನೇಕ ಋಷಿಗಳು ಸಾಕಷ್ಟು ಪರಿಶ್ರಮಪಟ್ಟರೂ ಕೂಡ ಅವರಿಗೂ ವೇದದ ಅರ್ಥವು ತಿಳಿಯಲಿಲ್ಲ ।೪೮೫॥ ಇದೇ ವೇದಾರ್ಥದ ಸಾರವಾದ ಈ ಗುಪ್ತ ಭಾಂಡಾರವನ್ನು ನಾನು ನಿನಗೆ ಪೂರ್ವಾಪರ ವಿರೋಧವಾಗದಂತೆ ವಿಸ್ತಾರ ಸ್ವರೂಪದಲ್ಲಿ ಹೇಳಿರುವೆನು ।೪೮೬॥ ಶ್ರೀಕೃಷ್ಣನ ವಚನಗಳನ್ನು ಕೇಳಿ ಉದ್ಧವನಿಗೆ ಅತಿಶಯವಾಗಿ ಆನಂದವಾಯಿತು. ಆತನು ತನ್ನ ಮನದಲ್ಲಿಯೇ ಹೀಗೆ ವಿಚಾರ ಮಾಡಹತ್ತಿದನು, ವೇದದ ಸಾರವನ್ನು ದೇವನು ಮುಂದೆ ಏಕೆ ಹೇಳುತ್ತಿಲ್ಲ? ।೪೮೭॥ ಆಕಳ ಕೆಚ್ಚಲಿಗೆ ಕರುವಿನ ಮುಖ ಹತ್ತಿದಾಗ ಹಾಲಿನ ನೊರೆ ಬಿಡುತ್ತಿದ್ದಂತೆಯೇ ಹಾಲು ಹಿಂಡುವವನು ಆ ಕರುವಿಗೆ ಎಳೆದು ಕಟ್ಟುವನು. ಅದರಂತೆ ಈ ಯಾವ ಅತ್ಯಂತ ಪ್ರೀತಿಯ ವಿಷಯವನ್ನು ದೇವನು ಮಧ್ಯದಲ್ಲಿಯೇ ಏಕೆ ನಿಲ್ಲಿಸಿದನು ಎಂದು ಉದ್ಧವನು ಮನದಲ್ಲಿಯೇ ಚಡಪಡಿಸುತ್ತಿದ್ದನು ।೪೮೮॥ ಪಕ್ಷಿಣಿಯು ತಂದ ಆಹಾರವನ್ನು ಸ್ವೀಕರಿಸಲು ಅದರ ಮರಿಗಳು ಹೇಗೆ ತಮ್ಮ ಚುಂಚುಗಳನ್ನು ಪಸರಿಸುತ್ತವೆಯೋ, ಅದರಂತೆ ಉದ್ಧವನೂ ಕೂಡ ಕೃಷ್ಣನತ್ತ ಮುಖ ಪಸರಿಸಿಕೊಂಡು ಕುಳಿತುಬಿಟ್ಟನು ।೪೮೯॥ ಶ್ರೀಕೃಷ್ಣನು ಈ ಯಾವ ಉದ್ಧವನ ಉದ್ದೇಶವನ್ನರಿತುಕೊಂಡು ವೇದಗಳ ಅರ್ಥವನ್ನು ಸಂಕ್ಷಿಪ್ತವಾಗಿ ಗ್ರಂಥದ ಕೊನೆಯಲ್ಲಿ ಸಾರಾಂಶದೊಂದಿಗೆ ಹೇಳುತ್ತಿರುವನು ।೪೯೦॥

ನಾನಾಶಾಖೀ ಅತಿಪ್ರಸಿದ್ಧ । ತ್ರಿಕಾಂಡೀ ವಾಢಲಾ ಜೋ ವೇದ । ತೇಥೀಲ ನಾನಾ ಶಬ್ದೀ ಹಾಚಿ ಬೋಧ । ಜೋ ಮೀ ಅಭೇದ ಪರಮಾತ್ಮಾ ॥೨೯೧॥ ತ್ಯಾ ಮಾತೇ ಧರೋನಿ ಹಾತೀ । ತ್ರಿಕಾಂಡೀ ಚಾಲಿಲ್ಯಾ ಶ್ರುತೀ । ತ್ಯಾ ಶ್ರುತ್ಯರ್ಥಾಚೀ ಉಪಪತ್ತೀ । ಯಥಾಸ್ಥಿತೀ ಸಾಂಗೇನ ॥೨೯೨॥ ಮೀ ಕರ್ಮಾದಿಮಧ್ಯಅಂತೀ । ಮೀ ಕರ್ಮಕರ್ತಾ ಕ್ರಿಯಾಶಕ್ತೀ । ಕರ್ಮಫಳದಾತಾ ಮೀ ಶ್ರೀಪತೀ । ಹಾ ಇತ್ಯರ್ಥ ನಿಶ್ಚಿತೀ ''ಕರ್ಮಾದಿಕಾಂಡೀಂಚಾ''॥೨೯೩॥ ಮಂತ್ರಮೂರ್ತಿ ಆಣಿ ಮಂತ್ರಾರ್ಥ । ತೇಹೀ ಮೀಚಿ ಗಾ ನಿಶ್ಚಿತ । ಪೂಜ್ಯ ಪೂಜಕ ಪೂಜಾ ಸಮಸ್ತ । ಮಜವ್ಯತಿರಿಕ್ತ ಆನ ನಾಹೀ ॥೨೯೪॥ (''ಶಿವೋ ಭೂತ್ವಾ ಶಿವಂ ಯಜೇತ್'' ಶ್ರುತಿ) ದೇವೇ ದೇವೋಚಿ ಪೂಜಿಜೇ । ದೇವ ಹೋಊನಿ ದೇವಾ ಭಜಿಜೇ । ಹೇ ವೇದೀಂಚೇ ನಿಜಬೀಜ ಮಾಝೇ । ಹೇಚಿ ಆಗಮೀ ಬೋಲಿಜೇ ಮುಖ್ಯತ್ವೇ ॥೨೯೫॥ ಮೀಚ ದೇವೋ ಮೀಚ ಭಕ್ತ । ಪೂಜೋಪಚಾರ ಮೀ ಸಮಸ್ತ । ಮೀಚಿ ಮಾತೇ ಪೂಜಿತ । ಹೇ ಇತ್ಥಂಭೂತ ''ಉಪಾಸನಾ'' ॥೨೯೬॥ ಹೇ ಉಪಾಸನಾಕಾಂಡೀಂಚೇ ನಿಜಸಾರ । ಆಗಮಶಾಸ್ತ್ರೀಂಚೇ ಗುಹ್ಯ ಭಾಂಡಾರ । ಮಾಝ್ಯಾ ನಿಜಭಕ್ತಾಂಚೇ ವಸ್ತೀಚೇ ಘರ । ತೇ ಹೇ ಸಾಚಾರ ಉಪಾಸನಾ ॥೨೯೭॥ ''ಜ್ಞಾನಕಾಂಡ'' ತೇ ಅಲೌಕಿಕ । ವೇದ ಆಪಲಾ ಆಪಣ ದ್ಯೋತಕ । ಅವಘಾ ಸಂಸಾರಚಿ ಕಾಲ್ಪನಿಕ । ತೇಥ ವೇದ ನಿಯಾಮಕ ಕೋಣೇ ಅರ್ಥೇ ॥೨೯೮॥ ವೋಸ ಘರಾಸ ವಸ್ತೀಸ ಪಹಾ ಹೋ । ನಿರ್ಜೀವ ಪಾಹುಣಾ ಆಲಾ ರಾಹೋ । ತ್ಯಾಚಾ ಕೋಣ ಕರೀಲ ವೋಳವೋ । ತೈಸಾ ಭಾವೋ ವೇದಾಜ್ಞೆ ॥೨೯೯॥ (ಶ್ರುತಿ :- ''ಏಕಮೇವಾದ್ವಿತೀಯಂ ಬ್ರಹ್ಮ, ನೇಹ ನಾನಾಸ್ತಿ ಕಿಂಚನ'') ಖಾಂಬಸೂತ್ರಾವರೀಲ ಪುತಳೀಸೀ । ತೀತೇ ಬೋಡಿಲೇ ಜೇವೀ ಶಿಸೀ । ತೇಥೇ ನಾಹೀ ನಿಘಣೇ ಪುಢಾರೇಕೇಂಸೀ । ತೇವೀ ಶುದ್ಧೀ ವೇದಾಸೀ ಠಾವ ನಾಹೀ ॥೩೦೦॥ ಮೂಳ ಸಂಸಾರಚಿ ಮಾಯಿಕ । ತೇಥ ವೇದ ತೋಹೀ ತದ್ರೂಪ ದೇಖ । ಮೃಗಜಳೀ ನಾಹೀ ಉದಕ । ಪರೀ ವೋಲಾವಾಹೀ ದೇಖ ಅಸೇನಾ ॥೩೦೧॥ ಜೇಥ ಮುಳೀ ಮುಖ್ಯ ಅದ್ವೈತತಾ । ತೇಥ ಕೈಚಾ ವಕ್ತಾ ಕೈಚಾ ಶ್ರೋತಾ । ಕೈಚೇ ಕರ್ಮ ಕೈಚಾ ಕರ್ತಾ । ವೇದವಾರ್ತಾ ತೇ ಕೈಚೀ ॥೩೦೨॥ ನಾಹೀ ದೃಶ್ಯ-ದ್ರಷ್ಟಾ-ದರ್ಶನ । ನಾಹೀ ಧ್ಯೇಯ-ಧ್ಯಾತಾ-ಧ್ಯಾನ । ನಾಹೀ ಜ್ಞೇಯ - ಜ್ಞಾತಾ - ಜ್ಞಾನ । ವೇದವಚನ ತೇಥೇ ಕೈಚೇ ॥೩೦೩॥

ಅನೇಕ ಶಾಖೆಗಳಲ್ಲಿ ಪ್ರಸಿದ್ಧವಾಗಿರುವ ಯಾವ ತ್ರಿಕಾಂಡದಲ್ಲಿ ಬೆಳೆದಿರುವ ವೇದದ ಸರ್ವ ಶಬ್ದಗಳಲ್ಲಿನ ಬೋಧೆಯು ಯಾವುದೆಂದರೆ, ಅಭಿನ್ನವಾಗಿರುವ ಯಾವ ಪರಮಾತ್ಮನು ನಾನೇ ಆಗಿರುವೆನು ॥೨೯೧॥ ಹೀಗಿರುವ ನನ್ನನ್ನು ಕೈ ಹಿಡಿದು ಶ್ರುತಿಯು ಈ ಮೂರು ಕಾಂಡಗಳಲ್ಲಿ ನಡೆಯುತ್ತಿರುವುದು. ಆ ಶ್ರುತಿಯಲ್ಲಿನ ಸಾರಾಂಶವನ್ನು ನಾನು ನಿನಗೀಗ ವ್ಯವಸ್ಥಿತವಾಗಿ ಹೇಳುವೆನು ಆದ್ದರಿಂದ ಲಕ್ಷಪೂರ್ವಕವಾಗಿ ಶ್ರವಣ ಮಾಡು ॥೨೯೨॥ ಕರ್ಮದ ಆದಿ, ಮಧ್ಯ ಮತ್ತು ಅಂತ್ಯದಲ್ಲಿ ನಾನೇ ಇರುವೆನು. ಕರ್ಮಕರ್ತನು ಮತ್ತು ಕ್ರಿಯಾಶಕ್ತಿಯು ನಾನೇ ಆಗಿರುವೆನು. ಕರ್ಮದ ಫಲವನ್ನು ಕೊಡುವ ಶ್ರೀಪತಿಯು ನಾನೇ ಆಗಿರುವೆನು. ಇದು ಕರ್ಮಕಾಂಡದಲ್ಲಿನ ನಿಶ್ಚಿತವಾದ ಅರ್ಥವಾಗಿರುವುದು ॥೨೯೩॥ ಮಂತ್ರಮೂರ್ತಿ ಮತ್ತು ಮಂತ್ರಾರ್ಥ ಅವು ಕೂಡ ನಾನೇ ಆಗಿರುವೆನು. ಪೂಜ್ಯ, ಪೂಜಕ ಮತ್ತು ಪೂಜಾ ಸಮಸ್ತವೂ ನನ್ನ ಹೊರತಾಗಿ ಅನ್ಯ ಯಾವುದೂ ಒಂದೂ ಇರುವುದಿಲ್ಲ ॥೨೯೪॥ ದೇವನು ದೇವರದ್ದೇ ಪೂಜೆಯನ್ನು ಮಾಡಬೇಕು. ದೇವನಾಗಿಯೇ ದೇವರನ್ನು ಭಜಿಸಬೇಕು. ಇದೇ ವೇದದಲ್ಲಿನ ನನ್ನ ರಹಸ್ಯವಾಗಿರುವುದು. ಇದನ್ನೇ ಆಗಮವೂ ಕೂಡ ಮುಖ್ಯತ್ವದಿಂದ ಹೇಳಿರುವುದು ॥೨೯೫॥ ನಾನೇ ದೇವನು, ನಾನೇ ಭಕ್ತನು ಮತ್ತು ಸರ್ವ ಪೂಜೆಯ ಸಾಹಿತ್ಯಗಳೂ ಕೂಡ ನಾನೇ ಆಗಿರುವೆನು. ನಾನೇ ನನ್ನ ಪೂಜೆಯನ್ನು ಮಾಡುವೆನು. ಇದುವೇ ನನ್ನ ಪರಿಪೂರ್ಣವಾದ ಉಪಾಸನೆಯಾಗಿರುವುದು ॥೨೯೬॥ ವೇದದ ಉಪಾಸನಾ ಕಾಂಡದಲ್ಲಿನ ಸರ್ವಮಹತ್ವದ ಸಾರವು ಇದೇ ಆಗಿರುವುದು. ಆಗಮ ಶಾಸ್ತ್ರದಲ್ಲಿನ ಗುಪ್ತ ಭಾಂಡಾರವು ಇದೇ ಆಗಿರುವುದು. ನನ್ನ ಭಕ್ತಿಯ ನಿಜವಾದ ತವರು ಮನೆ ಹೀಗಿರುವ ಈ ಉಪಾಸನೆಯಾಗಿರುವುದು ॥೨೯೭॥ ಜ್ಞಾನಕಾಂಡವು ಮಾತ್ರ ಅತಿಶಯವಾಗಿ ವಿಲಕ್ಷಣವಾಗಿರುವುದು. ವೇದವು ಸ್ವತಃವೇ ಸ್ವತಃಕ್ಕೆ ಪ್ರಕಾಶಿತಗೊಳಿಸುವುದು. ಸರ್ವ ಸಂಸಾರವು ಕಾಲ್ಪನಿಕವಾಗಿರಲು, ಅಲ್ಲಿ ವೇದವು ಯಾರಿಗೆ ನಿಯಮಗಳನ್ನು ಸಾರಬೇಕು? ॥೨೯೮॥ ಒಂದು ಹಾಳು ಮನೆಯಲ್ಲಿ ಸತ್ತ ಮನುಷ್ಯನು ಬೀಗನಾಗಿ ಇರಲು ಬಂದನು ಎಂದರೆ ಈತನ ಸ್ವಾಗತವನ್ನು ಆದಾರಾತಿಥ್ಯವನ್ನು ಯಾರು ಮಾಡಬೇಕು? ಇದೇ ದಶೆಯು ವೇದಾಜ್ಞಾದ್ದಾಗಿರುವುದು ॥೨೯೯॥ ಆಟದ ಗೊಂಬೆಯ ತಲೆಯ ಮೇಲಿನ ಕೂದಲುಗಳನ್ನು ಕತ್ತರಿಸಲು ಪುನಃ ಆ ಗೊಂಬೆಯ ತಲೆಯ ಮೇಲೆ ಕೂದಲುಗಳು ಬರಲಾರವು. ಅದರಂತೆ ಶುದ್ಧ ಬ್ರಹ್ಮನಲ್ಲಿ ವೇದಕ್ಕೆ ಸ್ಥಾನವೇ ಇಲ್ಲ ॥೩೦೦॥ ಮೂಲವಾಗಿ ಸಂಸಾರವೇ ಮಾಯೆಯಾಗಿರಲು ಅದರಲ್ಲಿನ ಆ ವೇದಗಳಿಗೂ ಹಾಗೆಯೇ ಎಂದು ನಿಶ್ಚಯವಾಗುವುದು. ಮೃಗಜಲದಲ್ಲಿ ನೀರು ಮಾತ್ರ ಇರುವುದಿಲ್ಲ ಅಲ್ಲಿ ತೇವವೂ ಕೂಡ ಇರುವುದಿಲ್ಲ ॥೩೦೧॥ ಅಲ್ಲಿ ಮೂಲತಃ ಮುಖ್ಯವಾಗಿ ಅದ್ವೈತ ತತ್ವವಿರುವುದು. ಈ ಅದ್ವೈತದ ಹೊರತಾಗಿ ಬೇರೆ ಯಾವುದೂ ಕೂಡ ಇರುವುದಿಲ್ಲ. ಅಂದ ಮೇಲೆ ಅಲ್ಲಿ ಶ್ರೋತಾ, ವಕ್ತಾ, ಕರ್ಮ, ಕರ್ತಾ, ವೇದವಾರ್ತಾ ಇವು ಎಲ್ಲಿಂದ ಬರಬೇಕು ? ॥೩೦೨॥ ಅಲ್ಲಿ ದೃಶ್ಯ, ದ್ರಷ್ಟಾ ಮತ್ತು ದರ್ಶನವಿಲ್ಲ, ಅಲ್ಲಿ ಧ್ಯೇಯ, ಧ್ಯಾತಾ ಮತ್ತು ಧ್ಯಾನವಿಲ್ಲ. ಅಲ್ಲಿ ಜ್ಞೇಯ, ಜ್ಞಾತಾ ಮತ್ತು ಜ್ಞಾನವಿಲ್ಲ ಅಂದಮೇಲೆ ಅಲ್ಲಿ ವೇದವಚನಗಳಾದರೂ ಎಲ್ಲಿಂದ ಉಳಿಯಬೇಕು? ॥೩೦೩॥

ಜೇಥೇ ಭ್ರಮಾಚೇ ರಾಣೀವ । ಜೇಥ ಭೇದಾಚೇ ಜಾಣೀವ । ತೇಥ ವೇದಾಚೇ ಶಹಾಣೀವ । ಗೋಡ ಗಾಣೀವ ಉಪನಿಷದಾಂಚೇ ॥೬೦೪॥ ಜಂವ ಭೇದಾಚೇ ಸಬಲ ಸ್ಥಿತೀ । ತಂವ ವೇದಾಚೇ ಥೋರ ಖ್ಯಾತೀ । ಭೇದು ಆಲಿಯಾ ಅದ್ವೈತೀ । ವೇದ ವಿರಾಲಾ "ನೇತಿ ಮ್ಹಣೋನಿ ॥೬೦೫॥ ಜಳಗಾರ ಜಳೀ ವಿರೇ । ತೇವೀ ವೇದು ಅದ್ವೈತೀ ಮುರೇ । ಹೇ "ಜ್ಞಾನಕಾಂಡ" ಸಾಚೋಕಾರೇ । ತುಜ ಮ್ಯಾ ಖರೇ ಸಾಂಗಿತಲೇ ॥೬೦೬॥ ಜೇಥ ಉಪಜಲಾ ಸ್ವಯೇ ಅಗ್ನೀ । ತ್ಯಾ ಅರಣೀ ಜಾಳೂನಿ ಶಮೇ ವನ್ಹೀ । ತೇವೀ ಜ್ಞಾನಕಾಂಡನಿರೂಪಣೀ । ವೇದು ನಿಜನಿರ್ದಳಣೀ ಪ್ರವರ್ತಲಾ ॥೬೦೭॥ ಏಕ ಬ್ರಹ್ಮ ಜೇ ಅದ್ವೈತ । ಯೇಣೇ ಶ್ರುತಿವಾಕ್ಯೇ ಮಿಥ್ಯಾ ದ್ವೈತ । ಹೇ ಬೋಲೂನಿ ವೇದ ಹಾರಪೇ ತೇಥ । ಬ್ರಹ್ಮ ಸದೋದಿತ ಸಂಪೂರ್ಣ ॥೬೦೮॥ "ಮೀ ಬ್ರಹ್ಮ" ಹೇ ಶುದ್ಧೀ ಸ್ಫುರೇ ಸ್ಫೂರ್ತೀ । ತೇಥಚಿ ಓಂಕಾರಾಚೀ ಉತ್ಪತ್ತೀ । ತೋಹೀ ಬ್ರಹ್ಮರೂಪ ನಿಶ್ಚಿತೀ । ತ್ಯಾಸೀ "ಬ್ರಹ್ಮ" ಮ್ಹಣತೀ ಏಕಾಕ್ಷರ ॥೬೦೯॥ ತ್ಯಾ ಓಂಕಾರಾಪಾಸೋನಿ ಗಹನ । ಶ್ರುತಿ ಶಾಖಾ ಸ್ವರ ವರ್ಣ । ಝಾಲೇ ತೇ ಬ್ರಹ್ಮರೂಪ ಜಾಣ । ಏವಂ ವೇದ ಪೂರ್ಣ ಪರಬ್ರಹ್ಮ ॥೬೧೦॥ ಜೇವಿ ೯ ಸೋನ್ಯಾಚೇ ಅಳಂಕಾರ । ಪಾಹತಾ ಸೋನೇಚಿ ಸಾಚಾರ । ತೇವೀ ಶ್ರುತಿಶಾಖಾವೇದವಿಸ್ತಾರ । ತೋ ಅವಘಾ ಓಂಕಾರ ಮದ್ರೂಪೇ ॥೬೧೧॥ ಜೋ ವೇದಪ್ರತಿಪಾದ್ಯ ಪುರುಷೋತ್ತಮ । ಜೋ ಭಕ್ತಕಾಮಕಲ್ಪದ್ರುಮ । ತೋ ಹೇ ಬೋಲಿಲಾ ಮೇಘಶ್ಯಾಮ । ಆತ್ಮಾರಾಮ ಶ್ರೀಕೃಷ್ಣ ॥೬೧೨॥ ತಿಹೀ ಕಾಂಡೀ ನಿಜಸಂಬಂಧ । ಪೂರ್ವಾಪಾರ ಅವಿರುದ್ಧ । ಹಾ ವೇದಾರ್ಥ ಪರಮ ಶುದ್ಧ । ತುಜ ಮ್ಯಾ ವಿಶದ ಬೋಧಿಲಾ ॥೬೧೩॥ ಯಾಹೋನಿಯಾ ಪರತಾ । ವೇದಾರ್ಥ ನಾಹೀ ಗಾ ಸರ್ವಥಾ । ತೋ ತುಜ ಮ್ಯಾ ಸಾಂಗಿತಲಾ ಆತಾ । ಜಾಣ ತತ್ತ್ವತಾ ಉದ್ಧವಾ ॥೬೧೪॥ ಯಾ ವೇದಾರ್ಥಾಚೀ ನಿಜಖೂಣ । ಹೃದಯೀ ಭೋಗಿತಾ ಆಪಣ । ಹೋಯ ಜೀವಶಿವಾ ಸಮಾಧಾನ । ಐಸೇ ಶ್ರೀಕೃಷ್ಣ ಬೋಲಿಲಾ ॥೬೧೫॥ ಹೇ ಐಕೋನಿ ಉದ್ಧವ ಜಾಣ । ಝಾಲಾ ವೇದಾರ್ಥೀ ನಿಮಗ್ನ । ದೋನೀ ಟಂವಕಾರಲೇ ನಯನ । ಸ್ವಾನಂದೀ ಮನ ಬುಡಾಲೇ ॥೬೧೬॥ ಚಿತ್ತ ಚೈತನ್ಯಾ ಮಿಳಣೀ ಪಾಡೀ । ಕಂಠೀ ಬಾಷ್ಪ ದೃಢ ಅಡೀ । ಲಾಗತಾ ಸ್ವಾನಂದಾಚೀ ಗೋಡೀ । ಉಭಿಲೀ ಗುಢೀ ರೋಮಾಂಚೀ ॥೬೧೭॥

ಎಲ್ಲಿ ಭ್ರಮೆಯ ರಾಜ್ಯ ಮತ್ತು ಭೇದದ ತಿಳಿವಳಿಕೆ ಇರುವುದೋ, ಅಲ್ಲಿ ವೇದದ ಜಾಣತನ ಮತ್ತು ಉಪನಿಷದ್‌ಗಳ ಮಧುರಗಾಯನವು ನಡೆಯುತ್ತಿರುವುದು ॥೬೦೪॥ ಎಲ್ಲಿಯವರೆಗೆ ಭೇದವು ಪ್ರಬಲವಾಗಿರುವುದೋ, ಅಲ್ಲಿಯವರೆಗೆ ವೇದದ ಮಹಾತ್ಮ್ಯವಿರುವುದು. ಭೇದವು ಅದ್ವೈತದಲ್ಲಿ ಹೋಯಿತೆಂದರೆ, ಆಗ ವೇದವೂ ಕೂಡ "ನೇತಿನೇತಿ" ಎನ್ನುತ್ತ ಕರಗಿ ಹೋಗುವುದು ॥೬೦೫॥ ಆಣೆಕಲ್ಲು ಯಾವ ಪ್ರಕಾರವಾಗಿ ನೀರಿನಲ್ಲಿ ಕರಗಿಹೋಗುವುದೋ, ಅದೇ ಪ್ರಕಾರವಾಗಿ ವೇದವೂ ಕೂಡ ಅದ್ವೈತದಲ್ಲಿ ಕರಗಿಬಿಡುವುದು. ಇದೇ ನಿಜವಾದ ಜ್ಞಾನಕಾಂಡವಾಗಿರುವುದು. ಇದನ್ನು ನಾನು ನಿನಗೆ ಪ್ರೇಮದಿಂದ ಹೇಳಿರುವೆನು ॥೬೦೬॥ ಯಾವ ಅರಣೀಕಾಷ್ಠದಿಂದ ಸ್ವತಃ ಹುಟ್ಟಿದ ಅಗ್ನಿಯು, ಆ ಅರಣಿಯನ್ನು ಸುಟ್ಟುಬಿಟ್ಟು ಕೊನೆಗೆ ಶಾಂತವಾಗುವುದು. ಅದರಂತೆ ಜ್ಞಾನಕಾಂಡ ನಿರೂಪಣೆಯಲ್ಲಿ ವೇದವು ತನ್ನನ್ನು ತಾನೇ ಇಲ್ಲದಂತೆ ಮಾಡಿಕೊಂಡಿರುವುದು ॥೬೦೭॥ ಅದ್ವೈತರೂಪ ಬ್ರಹ್ಮಮಾತ್ರ ಒಂದೇ ಇರುವುದು ಎಂಬ ಈ ಶ್ರುತಿವಾಕ್ಯದಿಂದ ದ್ವೈತವೂ ಕೂಡ ಮಿಥ್ಯೆಯಾಗಿಬಿಡುವುದು. ಇಷ್ಟನ್ನು ಹೇಳಿ ವೇದವು ಇಲ್ಲದಾಗುವುದು. ಬ್ರಹ್ಮವು ಸದೋದಿತವಾಗಿ ಪರಿಪೂರ್ಣವಾಗಿ ಇರುವುದು ॥೬೦೮॥ ನಿರ್ವಿಕಾರವಾದ ಶುದ್ಧ ಬ್ರಹ್ಮನಲ್ಲಿ "ನಾನು ಬ್ರಹ್ಮನು" ಹೀಗೆ ಸ್ಫೂರ್ತಿಯು ಸ್ಫುರಣವಾಗುತ್ತಿರುತ್ತದೆ. ಅಲ್ಲಿಯೇ ಓಂಕಾರದ ಉತ್ಪತ್ತಿಯಾಗುತ್ತದೆ. ಆ ಓಂಕಾರವು ಬ್ರಹ್ಮರೂಪವೇ ಆಗಿರುತ್ತದೆ. ಇದಕ್ಕೆ ಏಕಾಕ್ಷರ ಬ್ರಹ್ಮವೆಂದು ಹೇಳುತ್ತಾರೆ ॥೬೦೯॥ ಆ ಓಂಕಾರದಿಂದ ಸ್ವರ,ವರ್ಣ ಮತ್ತು ಗೂಢ ಶ್ರುತಿಯ ಶಾಖೆಗಳು ನಿರ್ಮಾಣವಾದವು. ಅವು ಎಲ್ಲವೂ ಬ್ರಹ್ಮಸ್ವರೂಪವೇ ಆಗಿರುವುದರಿಂದ ವೇದವು ಪೂರ್ಣ ಪರಬ್ರಹ್ಮವಾಗಿರುವುದು ॥೬೧೦॥ ಬಂಗಾರದ ಅಲಂಕಾರಗಳಲ್ಲಿ ಎಲ್ಲವೂ ಬಂಗಾರ ಒಂದೇ ಆಗಿರುವುದು. ಅದರಂತೆ ಶ್ರುತಿಶಾಸ್ತ್ರಗಳಿಂದ ವೇದದ ಯಾವ ವಿಸ್ತಾರವಾಯಿತೋ, ಅವೆಲ್ಲವೂ ಓಂಕಾರ ಸ್ವರೂಪದಿಂದ ಮದ್ರೂಪವೇ ಆಗಿರುವವು ॥೬೧೧॥ ವೇದವು ವರ್ಣಿಸಿರುವ ಯಾವ ಪುರುಷೋತ್ತಮನು ಭಕ್ತರ ಇಚ್ಛೆಯನ್ನು ಪೂರ್ಣ ಮಾಡುವ ಕಲ್ಪವೃಕ್ಷವೇ ಆಗಿರುವ, ಆ ಯಾವ ಮೇಘಃಶ್ಯಾಮನಾದ ಆತ್ಮಾರಾಮ ಶ್ರೀಕೃಷ್ಣನು ಈ ಪ್ರಕಾರವಾಗಿ ಹೇಳಿದನು ॥೬೧೨॥ ಮೂರೂ ಕಾಂಡಗಳ ಸಂಬಂಧವು ಪೂರ್ವಾಪರ ವಿರೋಧವಿಲ್ಲದ್ದಾಗಿರುವುವು. ಇದೇ ಅತ್ಯಂತ ಶುದ್ಧವಾದ ವೇದದ ಅರ್ಥವಾಗಿರುವುದು. ಇದನ್ನು ನಾನು ಸ್ಪಷ್ಟ ಮಾಡಿ ಹೇಳಿರುವೆನು ॥೬೧೩॥ ಹೇ ಉದ್ಧವನೇ, ಇದನ್ನು ಬಿಟ್ಟು ವೇದದ ನಿಶ್ಚಿತ ಅರ್ಥವು ಬೇರೆ ಯಾವುದೂ ಇರುವು ದಿಲ್ಲ. ಇದನ್ನು ನೀನು ತಿಳಿ. ಈಗ ನಿನಗೆ ನಾನು ಹೇಳಿರುವ ಅರ್ಥವು, ಇದೇ ತತ್ವತಾ ಸತ್ಯವಾಗಿರುವುದು ॥೬೧೪॥ ಈ ಯಾವ ವೇದದಲ್ಲಿನ ನಿಜವಾದ ಅರ್ಥದ ಗುಟ್ಟನ್ನು ಹೃದಯದಲ್ಲಿ ಧರಿಸಿ ಅದರ ಅನುಭವವನ್ನು ಪಡೆಯುತ್ತಿದ್ದರೆ ಜೀವ ಶಿವರಿಗೆ ಸಮಾಧಾನವು ಪ್ರಾಪ್ತವಾಗುವು ದೆಂದು ಹೀಗೆ ಶ್ರೀಕೃಷ್ಣನು ಹೇಳಿದನು ॥೬೧೫॥ ಇದನ್ನು ಕೇಳಿ ಉದ್ಧವನೂ ಕೂಡ ವೇದಾರ್ಥದಲ್ಲಿ ನಿಮಗ್ನನಾದನು. ಆತನ ಎರಡೂ ನೇತ್ರಗಳು ಪ್ರೇಮಾಶ್ರುಗಳಿಂದ ತುಂಬಿಕೊಂಡವು ಮತ್ತು ಮನವು ಪರಮಾನಂದದಲ್ಲಿ ಮುಳುಗಿಹೋಯಿತು ॥೬೧೬॥ ಚಿತ್ತವು ಚೈತನ್ಯದಲ್ಲಿ ಲಯವಾಯಿತು. ಆತನ ಕಂಠವು ಬಿಗಿಯಿತು. ಆತನಿಗೆ ಆತ್ಮಾನಂದದ ಸುಖವು ತೋರಹತ್ತುತ್ತಲೇ ಶರೀರದಲ್ಲಿ ರೋಮಾಂಚನವಾಯಿತು ॥೬೧೭॥

ಶರೀರೀ ಸ್ವೇದ ಸಕಂಪತಾ । ನಯನೀ ಸ್ವಾನಂದಜಳ ಯೇತಾ । ಬೋಲ ಬುಡಾಲಾ ಸರ್ವಥಾ । ಮೂರ್ಚ್ಛಾ ಯೇತಯೇತಾ ಸಾಂವರೀ ।।೫೧೮।। ತಂವ ಹೃದಯಾ ಆಲೀ ಆಠವಣ । ಹೇ ಭಲೇ ನವ್ಹೇ ದುಶ್ಚಿತಪಣ । ಝಣೀ ನಿಜಧಾಮಾ ಜಾಈಲ ಶ್ರೀಕೃಷ್ಣ । ಯೇಣೇ ಧಾಕೇ ನಯನ ಉಘಡಿಲೇ ।।೫೧೯।। ತಂವ ಘವಘವೀತ ಘನಸಾಂವಳಾ । ಮುಕುಟ ಕುಂಡಲೇ ಮೇಖಳಾ । ಕಾಂಸೇ ಝಳಕೇ ಸೋನಸಳಾ । ಆಪಾದ ವನಮಾಳಾ ಶೋಭತ ।।೫೨೦।। ಅಂತರೀ ಭೋಗೀ ಚೈತನ್ಯಘನ । ಬಾಹೇರೀ ಉಘಡಿತಾ ನಯನ । ಆನಂದವಿಗ್ರಹೀ ಶ್ರೀಕೃಷ್ಣ । ಮೂರ್ತಿ ಸಂಪೂರ್ಣ ಸಂಮುಖ ದೇಖೇ ।।೫೨೧।। ಮ್ಹಣೇ ಶ್ರೀಕೃಷ್ಣ ಚೈತನ್ಯಘನ । ಚೈತನ್ಯವಿಗ್ರಹೀ ಶ್ರೀಕೃಷ್ಣ । ಸಗುಣನಿರ್ಗುಣರೂಪೇ ಜಾಣ । ಬ್ರಹ್ಮ ಪರಿಪೂರ್ಣ ಶ್ರೀಕೃಷ್ಣ ।।೫೨೨।। ಬಾಪ ಭಾಗ್ಯ ಉದ್ಧವಾಚೇ । ಸಗುಣನಿರ್ಗುಣ ದೋಹೀಂಚೇ । ಸುಖ ಭೋಗೀತಸೇ ಸಾಚೇ । ಹೇ ಶ್ರೀಕೃಷ್ಣಕೃಪೇಚೇ ಮಹಿಮಾನ ।।೫೨೩।। ಜೇಥ ಸದ್ಗುರುಕೃಪಾ ಸಂಪೂರ್ಣ । ತೇಥ ಶಿಷ್ಯಾಚಿ ಆವಡೀ ಪ್ರಮಾಣ । ತೋ ಜೈ ಮಾಗೇ ಮೂರ್ತಿ ಸಗುಣ । ತೈ ತೇಚಿ ಜಾಣ ಗುರು ದೇತೀ ।।೫೨೪।। ಪಾಹಿಜೇ ನಿರ್ಗುಣ ನಿಜಪ್ರಾಪ್ತೀ । ಐಶೀ ಆವಡೀ ಜ್ಯಾಚೇ ಚಿತ್ತೀ । ತೈ ನಿರ್ಗುಣಾಚಿಯೇ ನಿಜಸ್ಥಿತೀ । ಗುರುಕೃಪಾ ನಿಶ್ಚಿತೀ ನಾಂದವೀ ।।೫೨೫।। ಸಗುಣ ನಿರ್ಗುಣ ಸ್ವರೂಪೇ ದೋನೀ । ಭೋಗಾವಯಾ ಆವಡೀ ಜ್ಯಾಚೇ ಮನೀ । ತೇಹೀ ಸ್ಥಿತೀಚ್ಯಾ ಗುರೂ ದಾನೀ । ಕೃಪಾಳುಪಣೇ ಸಮರ್ಥ ।।೫೨೬।। ಸದ್ಗುರೂಚೇ ಅಗಾಧ ಮಹಿಮಾನ । ಜೇ ವೇದಾ ನ ಬೋಲವೇಚಿ ಜಾಣ। ತ್ಯಾಚೀ ಕೃಪಾ ಝಾಲಿಯಾ ಪೂರ್ಣ । ದುರ್ಲಭ ಕೋಣ ಪದಾರ್ಥ ।।೫೨೭।। ತೇ ಕೃಷ್ಣ ಕೃಪೇಸ್ತವ ಜಾಣ । ಫಿಟಲೇ ಉದ್ಧವಾಚೇ ದುರ್ಲಭಪಣ । ಸಗುಣ ನಿರ್ಗುಣ ಏಕ ಕೃಷ್ಣ । ಹೇ ಖೂಣ ಸಂಪೂರ್ಣ ಬಾಣಲೀ ।।೫೨೮।। ಜಾಣೋನಿ ಕೃಷ್ಣಾಚೇ ಪೂರ್ಣಪಣ। ತ್ಯಾಚೇ ಲಕ್ಷೋನಿ ಶ್ರೀಚರಣ । ಧಾಂವೋನಿ ಉದ್ಧವ ಆಪಣ । ಘಾಲೀ ಲೋಟಾಂಗಣ ಹರಿಚರಣೀ ।।೫೨೯।। ತೇವ್ಹಾ ಸಾಂವಳಾ ಸಕಂಕಣ । ಚಾರೀ ಬಾಹ್ಯಾ ಪಸರೀ ಶ್ರೀಕೃಷ್ಣ । ಉದ್ಧವಾಸೀ ಪ್ರೇಮೇ ಉಚಲೂನ । ದೀಧಲೇ ಆಲಿಂಗನ ಸ್ವಾನಂದೇ ।।೫೩೦।। ತ್ಯಾ ಆಲಿಂಗನಾಚೇ ಸುಖ । ಅನುಭವೀ ಜಾಣತೀ ದೇಖ । ಜೋ ಉದ್ಧವಾಸೀ ಝಾಲಾ ಹರಿಖ । ತ್ಯಾಚಾ ಜಾಣತಾ ಏಕ ಶ್ರೀಕೃಷ್ಣ ।।೫೩೧।।

ಶರೀರದಲ್ಲಿ ಬೆವರು ಬಂದು ಆತನು ಥರಥರನೇ ನಡುಗಹತ್ತಿದನು. ನೇತ್ರಗಳಿಂದ ಆನಂದಭಾಷ್ಪಗಳು ಹರಿಯಹತ್ತಿದವು. ಆತನ ಮುಖದಿಂದ ಯಾವ ಶಬ್ದಗಳೂ ಹೊರಬರದಾದವು. ಕೊನೆಗೆ ಮೂರ್ಛೆಯು ಬರುತ್ತಿರಲು ಆಗ ಅದನ್ನು ಆತನು ಆವರಿಸಿಕೊಂಡನು ।।೫೧೮।। ಆತನ ಮನದಲ್ಲಿ ಹೀಗೆ ವಿಚಾರವು ಮೂಡಿತು, ಈಗ ಹೀಗೆ ಎಚ್ಚರ ತಪ್ಪುವಿಕೆಯು ಯೋಗ್ಯವಲ್ಲ ಕಾರಣ ಇಷ್ಟರಲ್ಲಿಯೇ ಈ ಶ್ರೀಕೃಷ್ಣನು ನಿಜಧಾಮಕ್ಕೆ ಹೋದಾನು. ಈ ಭಯದಿಂದ ಆತನು ಕಣ್ಣುಗಳನ್ನು ತೆರೆದನು ।।೫೧೯।। ಪ್ರಫುಲ್ಲಿತನಾಗಿರುವ ಘನಸಾಂವಳಾ, ಶ್ಯಾಮಸುಂದರನು, ಕಿರೀಟ ಕುಂಡಲಗಳನ್ನು ಧರಿಸಿದವನು, ಭರ್ಜರೀ ಜರತಾರದ ಪೀತಾಂಬರವನ್ನು ತೊಟ್ಟವನು, ಪಾದದವರೆಗೆ ಲೋಲಾಡುತ್ತಿರುವ ವನಮಾಲೆ ಧಾರಿಯು, ಹೀಗಿರುವ ಶ್ರೀಕೃಷ್ಣನು ಆತನಿಗೆ ಕಂಡನು ।।೫೨೦।। ಆತನು ಅಂತಃಕರಣದಲ್ಲಿ ಚೈತನ್ಯಘನದ ಅನುಭವವನ್ನು ಪಡೆದಿದ್ದನು, ಈಗ ಕಣ್ಣುಗಳನ್ನು ತೆರೆಯುತ್ತಲೇ ಆನಂದದ ಮೂರ್ತಿಮಂತ ಪುತ್ಥಳಿಯಾಗಿರುವ ಶ್ರೀಕೃಷ್ಣನು ಆತನ ಎದುರಿನಲ್ಲಿ ತೋರಿದನು ।।೫೨೧।। ಶ್ರೀಕೃಷ್ಣನು ಚೈತನ್ಯಘನನಾಗಿ ಜ್ಞಾನರೂಪ, ಜ್ಞಾನದಾತಾ ಹಾಗೂ ಸಗುಣ ನಿರ್ಗುಣರೂಪದಿಂದ ಪರಿಪೂರ್ಣನಾದ ಪರಬ್ರಹ್ಮನೇ ಆಗಿರುವನು ಎಂದು ಹೇಳಹತ್ತಿದನು ।।೫೨೨।। ಉದ್ಧವನ ಭಾಗ್ಯವು ಮಹತ್ತರವಾದದ್ದು, ಆದ್ದರಿಂದಲೇ ಆತನು ಸಗುಣ ನಿರ್ಗುಣಮೂರ್ತಿಯ ಈ ಎರಡರ ಸುಖವನ್ನೂ ಅನುಭವಿಸಿದನು. ಇದು ಶ್ರೀಕೃಷ್ಣಕೃಪೆಯ ಮಹಿಮೆಯಾಗಿರುವುದು ।।೫೨೩।। ಸದ್ಗುರುಗಳ ಕೃಪೆಯು ಎಂದು ಪರಿಪೂರ್ಣವಾಗಿ ಆಗುವುದೋ, ಆಗ ಶಿಷ್ಯನ ಅಪೇಕ್ಷೆಯು ಇದೇ ಪ್ರಮಾಣವಾಗಿ ನೆರವೇರುವುದು. ಆತನು ಸಗುಣ ಮೂರ್ತಿಯನ್ನು ಕೇಳಿದರೆ ಗುರುಗಳು ಅದನ್ನೇ ಕೊಡುವರು ।।೫೨೪।। ನಿರ್ಗುಣ ಸ್ವರೂಪದ ಪ್ರಾಪ್ತಿಯಾಗಬೇಕೆಂಬ ಬಯಕೆಯಾಗಲು ಆಗ ಶ್ರೀಗುರುಗಳ ಕೃಪೆಯು ಆತನಿಗೆ ನಿರ್ಗುಣ ಸ್ವರೂಪದ ಸ್ಥಿತಿಯನ್ನು ನಿಶ್ಚಿತವಾಗಿ ದೊರಕಿಸಿಕೊಡುವುದು ।।೫೨೫।। ಅಥವಾ ಒಂದುವೇಳೆ ಸಗುಣ ಮತ್ತು ನಿರ್ಗುಣ ಈ ಎರಡೂ ಸ್ವರೂಪದ ಉಪಭೋಗಪಡೆಯಬೇಕೆಂಬ ಅಪೇಕ್ಷೆಯಾದರೆ ಆತನ ಈ ಎರಡೂ ಇಚ್ಛೆಯನ್ನು ಪೂರೈಸುವ ಕೃಪೆಯು ಶ್ರೀಗುರುಗಳಲ್ಲಿರುವುದು ।।೫೨೬।। ನಿಜವಾಗಿಯೂ ಸದ್ಗುರುಗಳ ಮಹಿಮೆಯು ಅಗಾಧವಾಗಿರುವುದು. ಈ ಮಹಿಮೆಯನ್ನು ವೇದಕ್ಕೂ ಕೂಡ ವರ್ಣಿಸಲಿಕ್ಕೆ ಬರುವುದಿಲ್ಲ. ಈತನ ಪರಿಪೂರ್ಣ ಕೃಪೆಯಾಯಿತೆಂದರೆ, ಈ ಜಗತ್ತಿನಲ್ಲಿ ದುರ್ಲಭವಾದ ಯಾವ ಪದಾರ್ಥವಿದೆ? ।।೫೨೭।। ಈ ಶ್ರೀಕೃಷ್ಣನ ನಿಸ್ಸೀಮವಾದ ಕೃಪೆಯಿಂದ ಉದ್ಧವನ ಈ ದುರ್ಲಭತ್ವವು ಇಲ್ಲದಾಯಿತು. ಸಗುಣ ಮತ್ತು ನಿರ್ಗುಣ ಈ ಎರಡೂ ಒಬ್ಬ ಶ್ರೀಕೃಷ್ಣನಾಗಿರುವನು ಎಂಬ ದೃಢವಾದ ಚಿನ್ಹೆಯು ಹೃದಯದಲ್ಲಿ ನಟ್ಟಿಕೊಂಡಿತು ।।೫೨೮।। ಉದ್ಧವನು ಶ್ರೀಕೃಷ್ಣನ ಪರಿಪೂರ್ಣತೆಯನ್ನು ಅರಿತುಕೊಂಡನು. ಆತನು ಶ್ರೀಕೃಷ್ಣನ ಚರಣಕಮಲಗಳಲ್ಲಿ ಲಕ್ಷವನ್ನಿಟ್ಟು ಧಾವಿಸುತ್ತ ಹೋಗಿ ಆ ಚರಣಕಮಲಗಳ ಮೇಲೆ ಲೋಟಾಂಗಣವನ್ನು ಹಾಕಿದನು ।।೫೨೯।। ಆಗ ಮೇಘಶ್ಯಾಮ ಶ್ರೀಕೃಷ್ಣನು ತನ್ನ ಕಂಕಣ ಉಳ್ಳ ನಾಲ್ಕೂ ಭುಜಗಳಿಂದ ಉದ್ಧವನನ್ನು ಎತ್ತಿ ಹಿಡಿದು, ಅತ್ಯಂತ ಪ್ರೇಮದಿಂದ ಆಲಿಂಗನವನ್ನು ಕೊಟ್ಟನು ।।೫೩೦।। ಈ ಯಾವ ಆಲಿಂಗನದ ಸುಖವು ಅನುಭವಿಗಳಿಗೆ ಮಾತ್ರ ತಿಳಿಯಲ್ಪಡುವುದು. ಆಗ ಉದ್ಧವನಿಗೆ ಅಲೌಕಿಕ ಆನಂದವು ಪ್ರಾಪ್ತವಾದದ್ದು ಒಬ್ಬ ಶ್ರೀಕೃಷ್ಣನು ಮಾತ್ರ ತಿಳಿದುಕೊಂಡನು ।।೫೩೧।।

ತೋ ಕೃಷ್ಣ ಮ್ಹಣೇ ಉದ್ಧವಾ । ಹಾ ವಿಸಾವ್ಯಾಚಾ ವಿಸಾವಾ । ಮಾಝ್ಯಾ ವೇದಾಚಾ ನಿಜಗುಹ್ಯತೇವಾ । ತೋ ಹಾ ಏಕವಿಸಾವಾ ತುಜ ಸಾಂಗಿತಲಾ ।೫೩೨॥ ಜೇಣೇ ಮೋಡೇ ಲಿಂಗದೇಹಾಚಾ ಯಾವಾ । ಜೇಣೇ ಜೇವತ್ವ ನಾಠವೇ ಜೇವಾ । ತೋ ಹಾ ವಿಸಾವ್ಯಾಚಾ ವಿಸಾವಾ । ತುಜ ಏಕವಿಸಾವಾ ನಿರೂಪಿಲಾ ।೫೩೩॥ ಜೇಣೇ ಮಿಥ್ಯಾತ್ವ ಯೇ ದೇಹಭಾವಾ । ಜೇಣೇ ಶೂನ್ಯ ಪಡೇ ರೂಪನಾಂವಾ । ತೋ ಹಾ ವಿಸಾವ್ಯಾಚಾ ವಿಸಾವಾ । ಏಕವಿಸಾವಾ ನಿರೂಪಿಲಾ ।೫೩೪॥ ಜೇಥ ಅಜ್ಞಾನಾ ಹೋಯ ನಾಗೋವಾ । ಜೇಥ ಜ್ಞಾನ ಯೇ ಅಭಾವಾ । ತೋ ವಿಸವ್ಯಾಚಾ ವಿಸಾವಾ । ಏಕವಿಸಾವಾ ನಿರೂಪಿಲಾ ।೫೩೫॥ ಜೇಥ ವೇದುಹೀ ವೇಡಾವಲಾ । ಬೋಧಹೀ ಲಾಜೋನಿ ಬುಡಾಲಾ । ಅನುಭವೋ ಸ್ವಯೇ ಥೋಂಟಾವಲಾ । ತೋ ಹಾ ನಿರೂಪಿಲಾ ವೇದಾರ್ಥ ।೫೩೬॥ ಹೇ ವೇದಾರ್ಥಸಾರ ನಿರೂಪಣ । ಮಜ ವಿಶ್ವಾತ್ಮ್ಯಾಚೇ ನಿಜನಿಧಾನ । ತುಜ ಮ್ಯಾ ಸಾಂಗೀತಲೇ ಸಂಪೂರ್ಣ । ಹೇ ಜೇವೀಂಚೀ ಖೂಣ ಉದ್ಧವಾ ।೫೩೭॥ ಕೋಟಿಕೋಟಿ ಸಾಧನೇ ಕರಿತಾ । ಗುರುಕೃಪೇವೀಣ ಸರ್ವಥಾ । ಹೇ ನಯೇ ಕೋಣಾಚೇ ಹಾತಾ । ಜಾಣ ತತ್ತ್ವತಾ ಉದ್ಧವಾ ।೫೩೮॥ ತೇ ಗುರುಕೃಪೇಲಾಗೀ ಜಾಣ । ಆಚರಾವೇ ಸ್ವಧರ್ಮ ಪೂರ್ಣ । ಕರಾವೇ ಗಾ ಶಾಸ್ತ್ರ-ಶ್ರವಣ । ವೇದಪಠಣ ತದರ್ಥ ।೫೩೯॥ ತೇ ಕೃಪೇಲಾಗೀ ಆಪಣ । ವ್ಹಾವೇ ದೀನಾಚೇಹೀ ದೀನ । ಧರಿತಾ ಸಂತಾಂಚೇ ಚರಣ । ಸ್ವಾಮೀ ಜನಾರ್ದನ ಸಂತುಷ್ಟೇ ।೫೪೦॥ ಗುರೂ ಸಂತುಷ್ಟೋನಿ ಆಪಣ । ಕರವೀ ಭಾಗವತನಿರೂಪಣ । ಏಕಾ ವಿನವೀ ಜನಾರ್ದನ । ಕೃಪಾ ನಿತ್ಯ ನೂತನ ಕರಾವೀ ।೫೪೧॥ ಪುಢೀಲ ಅಧ್ಯಾಯೀ ಗೋಡ ಪ್ರಶ್ನ । ಉದ್ಧವ ಪುಸೇಲ ಆಪಣ । ಪ್ರಕೃತಿಪುರುಷಾಂಚೇ ಲಕ್ಷಣ । ತತ್ತ್ವಸಂಖ್ಯಾ ಪೂರ್ಣ ವಿಭಾಗ ।೫೪೨॥ ತ್ಯಾಚೇ ಸಾಂಗತಾ ಉತ್ತರ । ಜನ್ಮಮರಣಾಚಾ ಪ್ರಕಾರ । ಸ್ವಯೇ ಸಾಂಗೇಲ ಶಾರ್ಙ್ಗಧರ । ಕಥಾ ಗಂಭೀರ ಪರಮಾರ್ಥೀ ।೫೪೩॥ ಜೇ ಕಥೇಚೇ ಕರಿತಾ ಶ್ರವಣ । ವೈರಾಗ್ಯ ಉಡೇ ಕಡಕಡೂನ । ಯೇಣೇ ವಿನ್ಯಾಸೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗೇಲ ।೫೪೪॥ ಘಟಾಕಾಶೇ ಠಾಕಿಜೇ ಗಗನ । ತೇವೀ ಏಕಾ ಜನಾರ್ದನಾ ಶರಣ । ತ್ಯಾಚೇ ವಂದಿತಾ ಶ್ರೀಚರಣ । ರಸಾಳ ನಿರೂಪಣ ಸ್ವಯೇ ಸ್ಮರೇ ।೫೪೫॥

ಶ್ರೀಕೃಷ್ಣನು ಹೀಗೆ ಹೇಳಿದನು; ಹೇ ಉದ್ಧವಾ! ವಿಶ್ರಾಂತಿಯ ವಿಶ್ರಾಂತಿಯಾಗಿರುವ, ನನ್ನ ವೇದರಹಸ್ಯದ ಗುಪ್ತ ನಿಧಿಯಾಗಿರುವ ಈ ಇಪ್ಪತ್ತೊಂದನೆಯ ಅಧ್ಯಾಯವನ್ನು ನಾನು ನಿನಗೆ ಸ್ಪಷ್ಟಮಾಡಿ ಹೇಳಿದೆನು ।೫೩೨॥ ಯಾವುದರಿಂದ ಲಿಂಗದೇಹದ ಬಲವು ಕಡಿಮೆಯಾಗುವುದು, ಜೇವಕ್ಕೆ ಜೇವತ್ವದ ಸ್ಮರಣೆಯು ಇರುವುದಿಲ್ಲ. ಅಂತಹ ಈ ವಿಶ್ರಾಂತಿಯ ವಿಶ್ರಾಂತಿಯಾಗಿರುವ ಇಪ್ಪತ್ತೊಂದನೆಯ ಅಧ್ಯಾಯವನ್ನು ನಿನಗೆ ನಾನು ಹೇಳಿದೆನು ।೫೩೩॥ ಯಾವುದರಿಂದ ದೇಹಭಾವವು ಮಿಥ್ಯೆಯಾಗುವುದು. ನಾಮರೂಪವು ಶೂನ್ಯವಾಗಿಬಿಡುವುದು. ಅಂತಹ ಈ ವಿಶ್ರಾಂತಿಯ ವಿಶ್ರಾಂತಿಯಾಗಿರುವ ಇಪ್ಪತ್ತೊಂದನೆಯ ಅಧ್ಯಾಯವನ್ನು ನಾನು ನಿನಗೆ ಹೇಳಿದೆನು ।೫೩೪॥ ಯಾವುದರಿಂದ ಅಜ್ಞಾನದ ನಾಶವು ಮತ್ತು ಜ್ಞಾನದ ಅಭಾವವು ಉಂಟಾಗುವುದೋ, ಅಂತಹ ಈ ವಿಶ್ರಾಂತಿಯ ವಿಶ್ರಾಂತಿಯಾಗಿರುವ ಇಪ್ಪತ್ತೊಂದನೆಯ ಅಧ್ಯಾಯವನ್ನು ನಾನು ನಿನಗೆ ಹೇಳಿದೆನು ।೫೩೫॥ ಯಾವುದಕ್ಕಾಗಿ ವೇದವೂ ಕೂಡ ಹುಚ್ಚಾಗುವುದೋ, ಜ್ಞಾನವೂ ಕೂಡ ನಾಚಿಕೆಯಿಂದ ಇಲ್ಲದಾಗುವುದೋ, ಅನುಭವವೂ ಕೂಡ ಮುಳುಗಿ ಹೋಗುವುದೋ, ಅಂತಹ ವೇದದ ಅರ್ಥವನ್ನು ನಾನು ನಿನಗೆ ಹೇಳಿದೆನು ।೫೩೬॥ ಈ ಯಾವ ವೇದಾರ್ಥಸಾರದ ನಿರೂಪಣೆ ಎಂದರೆ ನನ್ನ ವಿಶ್ವಾತ್ಮದ ಗುಪ್ತವಾಗಿರುವ ನಿಧಿಯೇ ಆಗಿರುವುದು. ಹೇ ಉದ್ಧವಾ, ನಾನು ನಿನಗೆಂದೇ ನನ್ನ ಜೇವದ ಸಂಪೂರ್ಣ ಗುಟ್ಟನ್ನು ಹೇಳಿರುವೆನು ।೫೩೭॥ ಹೇ ಉದ್ಧವನೇ, ಕೋಟಿಕೋಟಿ ಸಾಧನೆಗಳನ್ನು ಮಾಡಿದರೂ ಕೂಡ ಗುರುಕೃಪೆಯ ಹೊರತಾಗಿ ಇದು ಯಾರಿಗೂ ಪ್ರಾಪ್ತವಾಗುವುದಿಲ್ಲ. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು ।೫೩೮॥ ಈ ಗುರುಕೃಪೆಯನ್ನು ನಿಶ್ಚಿತವಾಗಿ ಪ್ರಾಪ್ತ ಮಾಡಿಕೊಳ್ಳುವುದಕ್ಕಾಗಿ ನಾವು ಪರಿಪೂರ್ಣವಾಗಿ ಸ್ವಧರ್ಮದಂತೆ ಶುದ್ಧವಾದ ಆಚರಣೆಯನ್ನಿಟ್ಟುಕೊಳ್ಳಬೇಕು. ಅದಕ್ಕಾಗಿ ಶಾಸ್ತ್ರ ಶ್ರವಣ ಮತ್ತು ವೇದಪಠಣೆಯನ್ನು ಮಾಡಬೇಕು ।೫೩೯॥ ಈ ಯಾವ ಗುರುಕೃಪೆಗಾಗಿ ನಾವು ದೀನರಿಗಿಂತಲೂ ದೀನರಾಗಬೇಕು. ಸಂತರ ಚರಣಗಳಲ್ಲಿ ಲೋಟಾಂಗಣವನ್ನು ಹಾಕಬೇಕು. ಹಾಗಾದರೆ ಜನಾರ್ದನ ಸ್ವಾಮಿಯವರು ಪ್ರಸನ್ನರಾಗುವರು ।೫೪೦॥ ಶ್ರೀಗುರುಗಳು ಪ್ರಸನ್ನರಾಗಿ ಸ್ವತಃ ತಾವೇ ಈ ಭಾಗವತದ ನಿರೂಪಣೆಯನ್ನು ಮಾಡಿಸುತ್ತಿರುವರು. ಆದ್ದರಿಂದ ಏಕನಾಥನು ಜನಾರ್ದನ ಸ್ವಾಮಿಗಳವರಿಗೆ, ನಿತ್ಯ ನೂತನವಾಗಿ ಕೃಪೆಯ ಮಳೆಗರೆಯಬೇಕೆಂದು ವಿನಂತಿಸುತ್ತಿರುವನು ।೫೪೧॥ ಮುಂದಿನ ಅಧ್ಯಾಯದಲ್ಲಿ ಉದ್ಧವನು ಪ್ರಕೃತಿ ಪುರುಷರ ಲಕ್ಷಣವನ್ನು ಮತ್ತು ತತ್ತ್ವಗಳ ಸಂಖ್ಯೆಯ ಸಂಪೂರ್ಣ ವಿಭಾಗಗಳನ್ನು ಭಾವಪೂರ್ಣವಾಗಿ ಪ್ರಶ್ನೆಯನ್ನು ಕೇಳುವನು ।೫೪೨॥ ಈ ಪ್ರಶ್ನೆಯ ಉತ್ತರವನ್ನು ಹೇಳುತ್ತ ಜನ್ಮಮರಣದ ಪ್ರಕಾರವನ್ನೂ ಕೂಡ ಶ್ರೀಕೃಷ್ಣನು ಹೇಳುವನು. ಆ ಕಥೆಯಲ್ಲಿ ಗಹನವಾದ ಪರಮಾರ್ಥವು ತುಂಬಿಕೊಂಡಿರುವುದು ಕಾಣುವುದು ।೫೪೩॥ ಈ ಕಥೆಯನ್ನು ಶ್ರವಣ ಮಾಡುತ್ತಿದ್ದರೆ ದೃಢವಾದ ವೈರಾಗ್ಯವು ಜಾಗೃತವಾಗುವುದು. ಇಂತಹ ಪದ್ಧತಿಯಿಂದ ಶ್ರೀಕೃಷ್ಣನು ನಿರೂಪಣೆಯನ್ನು ಮಾಡುವನು ।೫೪೪॥ ಘಟಾಕಾಶವು ಮಹದಾಕಾಶದಲ್ಲಿ ಕೂಡಿಕೊಳ್ಳುವಂತೆ ಏಕನಾಥನು ಜನಾರ್ದನ ಸ್ವಾಮಿಯವರಲ್ಲಿ ಅನನ್ಯ ಶರಣಾಗಿರುವನು. ಅವರ ಚರಣ ಕಮಲಗಳಿಗೆ ವಂದಿಸಲು ರಸಾಳವಾದ ನಿರೂಪಣೆಯ ಸ್ಫೂರ್ತಿಯು ಸಹಜವಾಗಿ ಪ್ರಕಟವಾಗುವುದು ।೫೪೫॥

ಇತಿ ಶ್ರೀಭಾಗವತೇ ಮಹಾಪುರಾಣೇ ಭಗವದುದ್ಧವಸಂವಾದೇ ಏಕಾದಶಸ್ಕಂಧೇ ಏಕಾಕಾರಟೀಕಾಯಾಂ ವೇದತ್ರಯವಿಭಾಗ ನಿರೂಪಣಂ ನಾಮ ಏಕವಿಶಂತಿತಮೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಪ್ರಕಾರವಾಗಿ ಶ್ರೀಭಾಗವತಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜ ಭಾಷ್ಯೆಯ "ವೇದತ್ರಯ ವಿಭಾಗ ನಿರೂಪಣೆ" ನಾಮದ ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೆರಡನೆಯ ಅಧ್ಯಾಯ

॥ಶ್ರೀ ಗಣೇಶಾಯ ನಮಃ॥ ಶ್ರೀಕೃಷ್ಣಾಯ ನಮಃ॥ ಓಂ ನಮೋ ಸದ್ಗುರು ಖಾಂಬಸೂತ್ರೀ। ಚೌರ್‍ಯಾಂಶೀ ಲಕ್ಷ ಪುತಳ್ಯಾ ಯಂತ್ರೀ। ನಾಚವಿಶೀ ನಿಜತಂತ್ರೀ। ಪ್ರಾಚೀನದೋರೀಸ್ವಭಾವೇ ।೧॥ ದೋರೀ ಧರಿಲೀ ದಿಸೋ ನ ದೇಶೀ। ಪರೀ ಪುತಳ್ಯಾ ಸ್ವಯೇ ನಾಚವಿಶೀ। ನವಲ ಲಾಘವೀ ಕೈಸಾ ಹೋಶೀ। ಅಲಿಪ್ತತೇಸೀ ಸರ್ವದಾ ।೨॥ ತೇಥ ಜೈಶೀ ಜ್ಯಾಚೀ ಪೂರ್ವಗತೀ। ತೇ ಭೂತ ನಾಚೇ ತೈಶಾ ರೀತೀ। ತೇ ನಾಚವಿತೀ ಚೇತನಾಶಕ್ತೀ। ತುರ್ಝ್ಯಾಹಾತೀ ವೀಣಹಸ್ತೇ ।೩॥ ಜೇವೀ ಕಾ ಅಚೇತನ ಲೋಹಾತೇ। ಚುಂಬಕ ಖೇಳವೀ ನಿಜಸಾಮರ್ಥ್ಯೇ। ತೇವೀ ತೂ ಸಕಳ ಭೂತಾಂತೇ। ನಿಜಸತ್ತೇ ನಾಚವಿಶೀ ।೪॥ ಐಶೀ ಸದಾ ನಾಚತೀ ಪರತಂತ್ರ। ತರೀ ಅಭಿಮಾನಾಚೇ ಬಳ ಥೋರ। ಸತ್ಯ ಮಾನೋನಿ ದೇಹಾಕಾರ। ಆಮ್ಹೀ ಸ್ವತಂತ್ರ ಮ್ಹಣವಿತೀ ।೫॥ ಆಮ್ಹೀ ಸಜ್ಞಾನ ಅತಿಜ್ಞಾತೇ। ಆಮ್ಹೀ ಕರ್ಮಕುಶಲ ಕರ್ಮಕರ್ತೇ। ಇತರ ಮೂರ್ಖೇ ಸಮಸ್ತೇ। ಐಶಾ ಅಭಿಮಾನಾತೇ ವಾಢವಿತೀ ।೬॥ ಏವಂ ದೇಹಾಭಿಮಾನಾಚೇನಿ ಹಾತೇ। ವಿಸರೋನಿ ಆಪುಲ್ಯಾ ಅಕರ್ತೃತ್ವಾತೇ। ಸ್ವಯೇ ಪಾವಲೇ ಕರ್ಮಬಂಧಾತೇ। ಜೇವೀ ಸ್ವಪ್ನಾವಸ್ಥೆ ವಿಷಯಬಾಧಾ ।೭॥ ಸ್ವಪ್ನೀ ಅತಿಶಯ ಚಢಲೇ ವಿಖ। ಆತಾ ಉತರಲೇ ನಿಃಶೇಖ। ತೇವೀ ಬಂಧಮೋಕ್ಷ ದೇಖ। ಸತ್ಯತ್ವೇ ಮೂರ್ಖ ಮಾನಿತೀ ।೮॥ ಹೇ ತುರ್ಝೇ ಖಾಂಬಸೂತ್ರೀಂಚೇ ಕಳಾ। ಮಿಥ್ಯಾ ಸತ್ಯತ್ವೇ ದಾವಿಶೀ ಡೋಳಾ। ಹಾ ಅತಿಶಯೇ ಅಗಾಧ ಸೋಹಳಾ। ತುರ್ಝೀ ಅತರ್ಕ್ಯ ಲೀಳಾ ತರ್ಕೇನಾ ।೯॥ ಅಚೇತನೀ ಚೇತನಧರ್ಮ। ಪ್ರತ್ಯಕ್ಷ ದಾವಿಶೀ ತೂ ಸುಗಮ। ಹೇಚಿ ತುರ್ಝೇ ನ ಕಳೇ ವರ್ಮ। ಕರೋನಿ ಕರ್ಮ ಅಕರ್ತಾ ।೧೦॥ ಅಕರ್ತಾಚಿ ತೂ ಹೋಶೀ ಕರ್ತಾ। ಕರ್ತಾ ಹೋತ್ಸಾತಾ ಅಕರ್ತಾ। ಹೇ ತುರ್ಝೀ ಖಾಂಬಸೂತ್ರತಾ। ನ ಕಳೇ ಸರ್ವಥಾ ಕೋಣಾತೇ ।೧೧॥

ಹೇ ಓಂಕಾರರೂಪ ಸದ್ಗುರುವೇ, ನಿನಗೆ ನನ್ನ ಅನೇಕ ನಮಸ್ಕಾರಗಳು. ನೀನು ಸೂತ್ರ ಗೊಂಬೆಯ ಆಟವನ್ನು ಆಡುವವನಾಗಿರುವೆ. ನೀನು ಎಂಬತ್ನಾಲ್ಕು ಲಕ್ಷ ಗೊಂಬೆಗಳನ್ನು ನಿನ್ನ ಇಚ್ಛೆಯಂತೆ ಸೂತ್ರಗಳಿಂದ ಕುಣಿಸುತ್ತಿರುವೆ ।೧॥ ನೀನು ಕೈಗಳಲ್ಲಿ ಹಿಡಿದ ಸೂತ್ರವನ್ನು ಕಾಣಿಸಿಕೊಡುವುದಿಲ್ಲ. ಆದರೆ ಗೊಂಬೆಗಳನ್ನು ಮಾತ್ರ ಸ್ವತಃ ಕುಣಿಸುತ್ತಿರುವೆ. ನೀನು ಅಲಿಪ್ತನಾಗಿದ್ದು ಕಾರ್ಯ ಮಾಡುವ ನಿನ್ನ ಕೌಶಲ್ಯವು ಅತಿಶಯವಾಗಿ ಅಲೌಕಿಕವಾಗಿರುವುದು ।೨॥ ಯಾರ ಪೂರ್ವಕರ್ಮವು ಹೇಗಿರುವುದೋ ಅದರಂತೆಯೇ ನೀನು ಪ್ರತಿಯೊಂದು ಭೂತಕ್ಕೆ ಚೇತನಾ ಶಕ್ತಿಯನ್ನು ಕೊಟ್ಟು ಕುಣಿಸುತ್ತಿರುವೆ. ನಿನಗೆ ಕೈಗಳಿಲ್ಲದಿದ್ದರೂ ಕೂಡ ಭೂತಗಳಿಗೆ ಕುಣಿಸುವ ಚೇತನಾಶಕ್ತಿಯು ನಿನ್ನ ಕೈಯಲ್ಲಿಯೇ ಇರುವುದು ।೩॥ ಲೋಹ ಚುಂಬಕವು ತನ್ನ ಶಕ್ತಿಯಿಂದ ಜಡವಾದ ಕಬ್ಬಿಣವನ್ನು ಹೇಗೆ ಆಡಿಸುತ್ತದೆಯೋ ಅದರಂತೆ ನೀನು ನಿನ್ನ ಶಕ್ತಿಯಿಂದ ಪ್ರಾಣಿಮಾತ್ರರನ್ನು ಆಡಿಸುತ್ತಿರುವೆ ।೪॥ ಈ ಪ್ರಕಾರವಾಗಿ ಸರ್ವ ಪ್ರಾಣಿಗಳು ಪರತಂತ್ರರಾಗಿ ಕುಣಿಯುತ್ತಿರುವುವು. ಹೀಗಿದ್ದರೂ ಕೂಡ ಅಭಿಮಾನದಿಂದ ದೇಹದ ಆಕಾರವು ಸತ್ಯವೆಂದು ತಿಳಿದು ತಾವು ಸ್ವತಂತ್ರರಾಗಿಯೇ ಇದ್ದೇವೆ ಎಂದು ಹೇಳುತ್ತಿರುವರು ।೫॥ ನಾವು ಅತಿಶಯವಾಗಿ ಜ್ಞಾನಸಂಪನ್ನರು, ಕರ್ಮಗಳನ್ನು ಮಾಡುವುದರಲ್ಲಿ ಮಹಾ ಪ್ರವೀಣರು ಮತ್ತು ಇತರ ಸರ್ವ ಜನರು ಮೂರ್ಖರು ಹೀಗೆನ್ನುತ್ತ ಇವರು ತಮ್ಮ ಅಭಿಮಾನವನ್ನು ಬೆಳೆಸುತ್ತಿರುವರು ।೬॥ ಈ ಪ್ರಕಾರವಾಗಿ ಸ್ವಪ್ನದಲ್ಲಿನ ವಿಷಯ ಬಾಧೆಗಳಂತೆ ಅವರ ದೇಹದ ಅಭಿಮಾನ ಬೆಳೆಯುತ್ತಲೇ ಸಾಗುವುದು. ಇವರು ತಮ್ಮಲ್ಲಿ ಕರ್ಮದ ಕರ್ತೃತ್ವವಿಲ್ಲ ಎಂಬುವುದನ್ನು ಪರಿಪೂರ್ಣವಾಗಿ ಮರೆತು ಬಿಡುವರು. ಆದ್ದರಿಂದ ತಾವೇ ಸ್ವತಃ ಕರ್ಮಬಂಧನಗಳಲ್ಲಿ ಸಿಕ್ಕಿಕೊಳ್ಳುವರು ।೭॥ ಸ್ವಪ್ನದಲ್ಲಿ ಅತಿಶಯವಾಗಿ ವಿಷವು ಏರಿತ್ತು, ಈಗ ಎಚ್ಚರಾದಾಗ ಇಳಿಯಿತು ಎಂಬ ಈ ಹೇಳಿಕೆಯ ಪ್ರಮಾಣದಂತೆ ಮೂರ್ಖ ಜನರು ಬಂಧಮೋಕ್ಷಕ್ಕೆ ಸತ್ಯವೆಂದು ತಿಳಿಯುವರು ।೮॥ ಈ ನಿನ್ನ ಸೂತ್ರ ಗೊಂಬೆಯ ಆಟವು ನಿಜವಾಗಿಯೂ ಸುಳ್ಳಾಗಿರುವುದು. ಆದರೆ ನಮ್ಮ ಕಣ್ಣುಗಳಿಗೆ ಮಾತ್ರ ಅವು ನಿಜವಾದಂತೆ ತೋರಿಸುತ್ತಿರುವೆ. ಇದು ಎಂತಹ ಮಹದಾಶ್ಚರ್ಯವು ! ನಿನ್ನ ಲೀಲೆಯೇ ಅತರ್ಕ್ಯವಾಗಿರುವುದು ।೯॥ ಅಚೇತನದಲ್ಲಿ ಪ್ರತ್ಯಕ್ಷವಾಗಿ ಚೇತನೆಯನ್ನು ತೋರಿಸುವವನಾಗಿರುವೆ. ಈ ನಿನ್ನ ರಹಸ್ಯವು ಯಾರಿಗೂ ತಿಳಿಯಲಾರದು. ಅಂತಹ ಅಕರ್ತನು ನೀನಾಗಿರುವೆ ।೧೦॥ ನಿಜವಾಗಿ ನೋಡಿದರೆ, ನೀನು ಅಕರ್ತನಾಗಿದ್ದು ಕರ್ತನಾಗುವೆ. ಮತ್ತು ಕರ್ತನಾಗಿದ್ದರೂ ಅಕರ್ತನಾಗುವೆ. ಈ ನಿನ್ನ ಸೂತ್ರಗೊಂಬೆಯ ಆಟವು ಯಾರಿಗೂ ತಿಳಿಯಲು ಶಕ್ಯವಿಲ್ಲ ।೧೧॥

ತುಝೀ ಮಾಯಾ ಪಾಹೋ ಜಾತಾ । ತೋಚಿ ಮಾಯೇನೇ ಗ್ರಾಸಿಲಾ ತತ್ತ್ವತಾ । ಅಸೋ ತುಜಚಿ ಪಾಹೋ ಮ್ಹಣತಾ । ತೇಹೀ ಸತ್ತ್ವಾವಸ್ಥಾ ಮಾಯೇಚೀ ॥೧೨॥ ಐಸೇ ತುಝೇ ಖಾಂಬಸೂತ್ರ । ಅಕಳ ನ ಕಳೇ ಗಾ ತುಝೇ ಚರಿತ್ರ । ದೇಖೋ ನೇದಿತಾ ನಿಜಸೂತ್ರ । ಭೂತೇ ವಿಚಿತ್ರ ನಾಚವಿಶೀ ॥೧೩॥ ತುಝೇನಿ ಜಗ ಹೋಯ ಜಾಯೇ । ಪರೀ ಮ್ಯಾ ಕೇಲೇ ಹೇ ಠಾವೇ ನೋಹೇ । ಐಸಾ ತುಝಾ ಖೇಳ ಪಾಹೇ । ಕೋಣೇ ಕಾಯೇ ಲಕ್ಷಾವಾ ॥೧೪॥ ಯಾಪರೀ ಖೇಳ ವಾಢವಿಶೀ । ಸವೇಂಚಿ ವಿಕಲ್ಪೇನಿ ಮೋಡಿಶೀ । ವಿಕಾರ ಮಹತ್ತತ್ತ್ವೀ ಸಾಂಠವಿಶೀ । ಹೇಹೀ ಕರ್ತೃತ್ವ ಅಂಗಾಸೀ ನ ಲಗತ ಗೇಲೇ ॥೧೫॥ ಯಾಚೇ ಮುಖ್ಯತ್ವೇ ಮೂಳ ಲಕ್ಷಣ । ತುಝೇ ಕೃಪೇವೀಣ ನ ಕಳೇ ಜಾಣ । ತುಝೀ ಕೃಪಾ ಝಾಲಿಯಾ ಪೂರ್ಣ । ಜನೀ ಜನಾರ್ದನ ಪ್ರಕಟೇ ಪೈ ॥೧೬॥ ಜನಿ ಪ್ರಕಟಲ್ಯಾ ಜನಾರ್ದನ । ತದ್ರೂಪ ಹೋಈಜೇ ಆಪಣ । ಹೇ ಮೂಳೀಂಚೇ ನಿಜಖೂಣ । ತೇಥ ಮೀತೂಪಣ ರಿಗೇನಾ ॥೧೭॥ ಮೀತೂಪಣೇವೀಣ ಪ್ರಸಿದ್ಧ । ಜನೀ ಜನಾರ್ದನ ನಿಜಾನಂದ । ತ್ಯಾಚೇ ಕೃಪೇಸ್ತವ ವಿಶದ । ಶ್ರೀಭಾಗವತ ಶುದ್ಧ ವಾಖಾಣಿಲೇ ॥೧೮॥ ತೇಥ ಏಕವೀಸಾವ್ಯಾಚೇ ಅಂತೀ । ವೇದ ತ್ರಿಕಾಂಡ ಲಕ್ಷ್ಯಾರ್ಥಸ್ಥಿತೀ । ಬ್ರಹ್ಮ ಏಕಚಿ ನಿಶ್ಚಿತೀ । ಅದ್ವಯಸ್ಥಿತೀ ಅವಿನಾಶೀ ॥೧೯॥ ಹೇ ವೇದಾರ್ಥಸಾರ ನಿರೂಪಣ । ಐಕತಾ ಉದ್ಧವಾ ಬಾಣಲೀ ಖೂಣ । ಬ್ರಹ್ಮ ಏಕಾಕೀ ಪರಿಪೂರ್ಣ । ದುಜೇನವೀಣ ಸಂಚಲೇ ॥೨೦॥ ವೇದವಾದೇ ಬ್ರಹ್ಮ ಏಕ । ಸ್ವಾನುಭವೇ ತೈಸೇಚಿ ದೇಖ । ತರೀ ಜ್ಞಾತೇ ಋಷಿಜನ ಲೋಕ । ಕೇವೀ ತತ್ತ್ವೇ ಅನೇಕ ಬೋಲತೀ ॥೨೧॥ ಯೇಚಿ ಆಶಂಕೇಲಾಗೀ ಜಾಣ। ಉದ್ಧವೇ ಸ್ವಯೇ ಮಾಂಡಿಲಾ ಪ್ರಶ್ನ। ಪರೀ ಪೋಟಾಂತೀಲ ಭಿನ್ನ ಖೂಣ । ಉಗಾ ಶ್ರೀಕೃಷ್ಣಾ ನ ರಹಾವಾ ॥೨೨॥ ಮೀ ಝಾಲೋ ಜೇ ಬ್ರಹ್ಮಸಂಪನ್ನ । ಹೇ ಐಕತಾ ಮಾಝೇ ವಚನ । ನಿಜಧಾಮಾ ನಿಘೇಲ ಶ್ರೀಕೃಷ್ಣ । ಮಗ ಹೇ ದರ್ಶನ ಮಜ ಕೈಚೇ ॥೨೩॥ ಐಶಿಯಾ ಕಾಕುಳತೀ ಜಾಣ । ಸಂಶಯೇವೀಣ ಕರೀ ಪ್ರಶ್ನ। ತೇ ಆಯಕೋನಿ ಶ್ರೀಕೃಷ್ಣ । ಸುಖಸಮಾಧಾನ ಭೋಗಿತ ॥೨೪॥ ತಂವ ಕೃಷ್ಣಾಚೇ ಮನೀ ಆಣಿಕ । ಉದ್ಧವ ಮೀ ದೋಘೇ ಏಕ । ಮಿಥ್ಯಾ ವಿಯೋಗಾಚೇ ದುಃಖ । ಹೇ ಕಳೇ ತಂವ ದೇಖ ಪ್ರಶ್ನ ಸಾಂಗೋ ॥೨೫॥

ಯಾರು ನಿನ್ನ ಮಾಯೆಯನ್ನು ನೋಡಲು ಪ್ರಯತ್ನ ಮಾಡುವರೋ, ಅವರು ಆ ಮಾಯೆಯಲ್ಲಿಯೇ ಸಿಕ್ಕಿಬೀಳುವರು. ನಿನ್ನನ್ನು ನೋಡಲು ಹೋಗಬೇಕೆಂದರೆ ಆ ಸತ್ವ ಅವಸ್ಥೆಯೂ ಕೂಡ ಮಾಯೆದ್ದೇ ಆಗಿರುವುದು ॥೧೨॥ ಹೀಗೆ ನಿನ್ನ ಸೂತ್ರ ಗೊಂಬೆಯ ಆಟವಾಗಿರುವುದು. ನಿನ್ನ ಚರಿತ್ರೆಯು ಅಗಮ್ಯವಾಗಿರುವುದು. ಇದು ಯಾರಿಗೂ ತಿಳಿಯಲು ಶಕ್ಯವಿಲ್ಲ. ನಿನ್ನ ಸೂತ್ರವನ್ನು ದೃಷ್ಟಿಗೆ ತೋರದಂತೆ ಪ್ರಾಣಿಮಾತ್ರರನ್ನು ನೀನು ವಿಲಕ್ಷಣವಾದ ರೀತಿಯಲ್ಲಿ ಕುಣಿಸುತ್ತಿರುವೆ ॥೧೩॥ ನಿನ್ನಿಂದಲೇ ಈ ವಿಶ್ವವು ನಿರ್ಮಾಣವಾಗುವುದು ಮತ್ತು ನಿನ್ನಲ್ಲಿಯೇ ಲಯವಾಗುವುದು. ಆದರೆ ಇದೆಲ್ಲವೂ ನನ್ನಿಂದಲೇ ಎಂದು ಹೀಗೆ ನಿನಗೆ ಎಂದಿಗೂ ಅನಿಸುವುದಿಲ್ಲ. ಇಂತಹ ಆಟವು ನಿನ್ನದಾಗಿದೆ ಇದನ್ನು ಯಾರು ಹೇಗೆ ನೋಡಲು ಸಾಧ್ಯ ? ॥೧೪॥ ಈ ಪ್ರಕಾರವಾಗಿ ನೀನು ಈ ಆಟವನ್ನು ಬೆಳೆಸುತ್ತಲೇ ಇರುವೆ. ಮತ್ತು ಕೂಡಲೇ ವಿಕಲ್ಪದಿಂದ ಮುರಿದು ಒಗೆಯುವೆ. ನೀನು ಮಹತ್ತತ್ವದಲ್ಲಿ ಈ ವಿಕಾಸವನ್ನು ಅಡಗಿಸಿ ಇಡುವೆ. ಆದರೆ ಈ ಕರ್ತೃತ್ವವೂ ಕೂಡ ನಿನ್ನ ಅಂಗಕ್ಕೆ ಸ್ವಲ್ಪವೂ ಹತ್ತಿಕೊಳ್ಳುವುದಿಲ್ಲ ॥೧೫॥ ಮುಖ್ಯವಾಗಿರುವ ಇದರ ಮೂಲ ಲಕ್ಷಣವು ನಿನ್ನ ಕೃಪೆಯಿಂದ ತಿಳಿಯುವುದು. ನಿನ್ನ ಪೂರ್ಣ ಕೃಪೆಯು ಪ್ರಾಪ್ತವಾಗುತ್ತಲೇ ಜನರಲ್ಲಿ ಜನಾರ್ದನನು ಪ್ರಕಟನಾಗುವನು ॥೧೬॥ ಜನೀಜನಾರ್ದನನು ಪ್ರಕಟನಾಗುತ್ತಲೇ ನಾವು ಆತನಲ್ಲಿ ಏಕರೂಪವಾಗುವೆವು. ಇದೇ ಅದರಲ್ಲಿನ ಮುಖ್ಯ ಬೀಜವಾಗಿರುವುದು. ಅಲ್ಲಿ ನಾನು-ನೀನು ಎಂಬುವುದು ಏನೂ ಇರುವುದಿಲ್ಲ ॥೧೭॥ ನಾನು-ನೀನೆಂಬುವ ಹೊರತಾಗಿ ನಿಜಾನಂದರೂಪ ಜನಾರ್ದನನು ಜಗತ್ತಿನಲ್ಲಿ ಪ್ರಸಿದ್ಧನಾಗಿರುವನು. ಆತನ ಕೃಪೆಯಿಂದಲೇ ಶ್ರೀಮದ್‌ಭಾಗವತವನ್ನು ಭಾವಪೂರ್ಣ ಪದ್ಧತಿಯೊಂದಿಗೆ ವರ್ಣನೆಯನ್ನು ಮಾಡಲ್ಪಟ್ಟಿರುವುದು ॥೧೮॥ ಇಪ್ಪತ್ತೊಂದನೆಯ ಅಧ್ಯಾಯದ ಕೊನೆಯಲ್ಲಿ ವೇದಗಳ ಮೂರುಕಾಂಡಗಳಲ್ಲಿ ಲಕ್ಷ್ಯಾರ್ಥ ಅಂದರೆ ಸರ್ವತ್ರವೂ ಒಂದೇ ಬ್ರಹ್ಮವು ಇದ್ದು ಅದು ಅದ್ವೈತ ಮತ್ತು ಅವಿನಾಶಿಯಾಗಿರುವುದು ಎಂದು ಹೇಳಿರುವುದು ॥೧೯॥ ಈ ಯಾವ ವೇದದಲ್ಲಿನ ಸಾರಾಂಶದ ನಿರೂಪಣೆಯನ್ನು ಕೇಳಿ ಒಂದೇ ಆದ ಅದ್ವಿತೀಯ ಬ್ರಹ್ಮವು ಪರಿಪೂರ್ಣ ರೂಪದಿಂದ ಸ್ಥಿತವಾಗಿದೆ. ಈ ಚಿನ್ಹೆಯು ಉದ್ಧವನಿಗೆ ಸಂಪೂರ್ಣವಾಗಿ ತಿಳಿಯಿತು॥೨೦॥ ವೇದವಾಣಿಯಲ್ಲಿ ಬ್ರಹ್ಮವು ಒಂದೇ ಎಂದು ವರ್ಣಿಸಿರುವುದು. ಸ್ವಾನುಭವದಿಂದ ಅದು ನಿಜವೆಂದು ತಿಳಿಯುವುದು. ಆದರೆ ಮಹಾ ಮಹಾ ಋಷಿಗಳು ಅನೇಕ ತತ್ವಗಳಿರುವುವು ಎಂದು ಏಕೆ ಹೇಳುವರು ? ॥೨೧॥ ಈ ಶಂಕೆಯು ಉದ್ಧವನ ಮನದಲ್ಲಿ ಹುಟ್ಟಿಕೊಂಡಿತು. ಉದ್ಧವನು ಅದಕ್ಕಾಗಿ ಪ್ರಶ್ನೆಯನ್ನು ಕೇಳಲಾರಂಭಿಸಿದನು. ಏಕೆಂದರೆ ಶ್ರೀಕೃಷ್ಣನು ಹೇಳುವುದನ್ನು ನಿಲ್ಲಿಸಬಾರದೆಂಬ ಉತ್ಕಟ ಇಚ್ಛೆಯು ಆತನ ಮನದಲ್ಲಿತ್ತು ॥೨೨॥ ನಾನು ಬ್ರಹ್ಮಸ್ವರೂಪನಾದೆನು ಎಂದು ಹೀಗೆ ಹೇಳಿದರೆ, ಇದನ್ನು ಕೇಳಿ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗಲು ಸಿದ್ಧನಾದರೆ, ಮುಂದೆ ಆತನ ದರ್ಶನವು ನನಗೆ ಹೇಗಾಗಬೇಕು? ॥೨೩॥ ಇಂತಹ ಕಕ್ಕುಲತೆಯಿಂದ ಮನದಲ್ಲಿ ಈ ಯಾವ ವಿಷಯವು ಇಲ್ಲದಿದ್ದರೂ ಉದ್ಧವನು ಪ್ರಶ್ನೆಯನ್ನು ಕೇಳಿದನು. ಇದನ್ನು ಕೇಳಿ ಶ್ರೀಕೃಷ್ಣನಿಗೆ ಸುಖ, ಸಮಾಧಾನವಾಯಿತು ॥೨೪॥ ಆಗ ಶ್ರೀಕೃಷ್ಣನ ಮನದಲ್ಲಿ ಬೇರೆಯೇ ಭಾವವು ಮೂಡಿತು. ನಾನು ಉದ್ಧವನು ಒಂದೇ ಆಗಿರುವೆವು. ಈಗ ಈತನಿಗೆ ವಿಯೋಗ ದುಃಖವು ಸುಮ್ಮನೆ ಕಾಡುತ್ತಿದೆ. ಅದಕ್ಕಾಗಿ ಇದನ್ನು ಸರಿ ಪಡಿಸುವವರೆಗೂ ಆತನ ಪ್ರಶ್ನೆಗೆ ಉತ್ತರ ಕೊಡೋಣ ॥೨೫॥

ಬಾವಿಸಾವೇ ಅಧ್ಯಾಯೀ ದೇಖ । ತತ್ತ್ವಸಂಖ್ಯಾ ಸಾಂಗೇಲ ಆವಶ್ಯಕ । ಪ್ರಕೃತಿಪುರುಷವಿವೇಕ । ಜನ್ಮ ಮರಣದ್ಯೋತಕ ಪ್ರಕಾರೂ ।೨೬।। ಆತ್ಮಾ ಏಕ ಕೀ ಅನೇಕ । ಆಣಿ ತತ್ತ್ವಸಂಖ್ಯಾ ವಿವೇಕ । ಹೇ ಕಳಾವಯಾ ನಿಷ್ಟಂಕ । ಉದ್ಧವ ದೇಖ ಪೂಸತ ।೨೭।।

ಉದ್ಧವ ಉವಾಚ :-

ಕತಿ ತತ್ತ್ವಾನಿ ವಿಶ್ವೇಶ ಸಂಖ್ಯಾತಾನ್ಯೃಷಿಭಿಃ ಪ್ರಭೋ । ನವೈಕಾದಶ ಪಂಚತ್ರೀಣ್ಯಾತ್ಥ ತ್ವಮಿಹ ಶುಶ್ರುಮ।೧।।

ಅರ್ಥ: - ಉದ್ಧವನು ಹೇಳಿದನು, ಹೇ ವಿಶ್ವೇಶ್ವರನೇ, ಋಷಿಗಳು ತತ್ವಗಳ ಸಂಖ್ಯೆಯನ್ನು ಎಷ್ಟೆಂದು ಹೇಳಿರುವರು? ನೀವು ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಒಂಬತ್ತು ಹನ್ನೊಂದು, ಐದು ಮತ್ತು ಮೂರು ಅಂದರೆ ಒಟ್ಟಿನಲ್ಲಿ ಇಪ್ಪತ್ತೆಂಟು ತತ್ವಗಳನ್ನು ಹೇಳಿರುವುದನ್ನು ನಾವು ಕೇಳಿದ್ದೇವೆ.

ವಿಶ್ವಾತ್ಮಕಾ ವಿಶ್ವೇಶ್ವರಾ । ವಿಶ್ವಧಾರಕಾ ವಿಶ್ವಂಭರಾ । ವಿಶ್ವಸಾಕ್ಷೀ ವಿಶ್ವಾಕಾರಾ । ವಿಶ್ವೈಕಸುಂದರಾ ಶ್ರೀಕೃಷ್ಣಾ ।೨೮।। ತುಜ ವಿಶ್ವಾತ್ಮಕ ಮ್ಹಣತಾ । ಜಡ ಮಲಿನ ಏಕದೇಶಿತಾ । ಆಲೀ ಮ್ಹಣಶೀ ಅಜ್ಞಾನತಾ । ಯಾಲಾಗೀ ಪ್ರಭುತಾ ಉಪಪಾದೀ ।೨೯।। ಜಡ ಮಲಿನ ಅಜ್ಞಾನತಾ। ಹೇ ಮಾಯೇಸ್ತವ ಹೋತೀ ತತ್ತ್ವತಾ। ತೇ ಮಾಯೇಚಾ ತೂ ನಿಯಂತಾ । ಹೇ ಅಗಾಧ ಪ್ರಭುತಾ ಪೈ ತುಝೀ ।೩೦।। ಐಶಿಯಾ ಸಂಬೋಧನದ್ವಾರಾ । ವಿನವೂನಿ ಸ್ವಾಮೀ ಶಾರಂಗಧರಾ । ತತ್ತ್ವಸಂಖ್ಯೇಚ್ಯಾ ವಿಚಾರಾ । ನಿಜನಿರ್ಧಾರಾ ಪುಸತ ।೩೧।। ಜೇ ತಪಃಸಾಮರ್ಥ್ಯೇ ಸಮರ್ಥ ಥೋರ । ಅನಾಗತದ್ರಷ್ಟೇ ಋಷೀಶ್ವರ । ತ್ಯಾಂಚೀ ತತ್ತ್ವಸಂಖ್ಯಾ ವಿಚಿತ್ರ । ಪೃಥಕ್‌ಪೃಥಗಾಕಾರೇ ಬೋಲತೀ ।೩೨।। ತತ್ತ್ವಸಂಖ್ಯಾ ಇತ್ಥಂಭೂತ । ಏಕುಣೆಸಾವ್ಯಾ ಅಧ್ಯಾಯಾಂತ । ತುಮ್ಹೀಂಚ ನಿರೂಪಿಲಾ ತತ್ತ್ವಾರ್ಥ । ತೋಚಿ ವೃತ್ತಾಂತ ಸಾಂಗತ ।೩೩।। (ಪೂರ್ವಶ್ಲೋಕಾರ್ಥ:- ''ನವೈಕಾದಶಪಂಚತ್ರೀನ್'') ಚೌದಾವೇ ಶ್ಲೋಕೀಂಚ್ಯಾ ನಿರೂಪಣೀ । ಹೇ ಅಠ್ಠಾವೀಸ ತತ್ತ್ವಗಣನೀ । ಸಾಂಗಿತಲೀ ಶಾರ್ಙ್ಗಪಾಣೀ । ಮಜಲಾಗೋನಿ ನಿಶ್ಚಿತ ।೩೪।। ಯೇ ತತ್ತ್ವಸಂಖ್ಯೇಚ್ಯಾ ವಿಚಾರ । ಪ್ರಕೃತಿ ಪುರುಷ ಮಹದಹಂಕಾರ । ಪಂಚ ಮಹಾಭೂತೇ ಥೋರ । ಹಾ ಸಂಖ್ಯಾಪ್ರಕಾರ ನಾವಾಂಚಾ ।೩೫।। ದಾಹೀ ಇಂದ್ರಿಯೇ ಅಕರಾವೇ ಮನ । ಪಂಚ ವಿಷಯ ತೀನ್ಹೀ ಗುಣ। ಹೇ ಅಠ್ಠಾವೀಸ ಸಂಖ್ಯಾಗಣನ । ಸ್ವಮುಖೇ ಆಪಣ ನಿರೂಪಿಲೇ ।೩೬।। ಯಾಪರೀ ಗಾ ಲಕ್ಷ್ಮೀಪತೀ । ಹೇ ಮುಖ್ಯತ್ವೇ ತುಝೀ ತತ್ತ್ವೋಕ್ತೀ । ಆತಾ ಋಷೀಶ್ವರಾಂಚ್ಯಾ ಯುಕ್ತೀ । ಐಕ ತುಜಪ್ರತೀ ಸಾಂಗೇನ ।೩೭।।

ಈ ಯಾವ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ತತ್ವಗಳ ಒಟ್ಟು ಸಂಖ್ಯೆಗಳು ಎಷ್ಟು ಇರುವುವು. ಇದನ್ನು ನಿಶ್ಚಿತವಾಗಿ ತೋರಿಸಲಾಗುವುದು. ಅದರಲ್ಲಿಯೇ ಪ್ರಕೃತಿ ಪುರುಷರ ವಿಚಾರವನ್ನು ಹಾಗೂ ಜನ್ಮಮರಣದ ಸಂಗತಿಯನ್ನು ಹೇಳಲಾಗುವುದು ।೨೬।। ಆತ್ಮವು ಒಂದೇಯಾಗಿರುವುದೋ? ಅಥವಾ ಅನೇಕವೋ? ಮತ್ತು ತತ್ವಗಳ ಸಂಖ್ಯೆಯು ಎಷ್ಟು? ಇವುಗಳನ್ನು ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳುವ ಉದ್ದೇಶದಿಂದ ಉದ್ಧವನು ಪ್ರಶ್ನೆಯನ್ನು ಕೇಳುತ್ತಿರುವನು ।೨೭।।

ಹೇ ವಿಶ್ವಾತ್ಮಕನೇ, ವಿಶ್ವೇಶ್ವರನೇ, ಸಂಪೂರ್ಣ ವಿಶ್ವವನ್ನು ಧರಿಸಿರುವ ವಿಶ್ವಂಭರನೇ, ವಿಶ್ವಾಕಾರನೇ, ವಿಶ್ವೈಕ ಸುಂದರನಾಗಿರುವ ಶ್ರೀಕೃಷ್ಣನೇ ।೨೮।। ನಿನಗೆ ವಿಶ್ವಾತ್ಮಕನು ಎಂದು ಹೇಳಿದರೆ, ಜಡ ಮಲಿನ ಏಕದೇಶಿಯತೆ, ಮತ್ತು ಅಜ್ಞಾನತ್ವವು ಬರುವುದೆಂದು ನೀನು ಹೇಳಬಹುದು. ಆದ್ದರಿಂದ ನಿನ್ನ ಪ್ರಭುತ್ವವನ್ನು ಹೇಳುವೆನು ।೨೯।। ಜಡ, ಮಲಿನ ಮತ್ತು ಅಜ್ಞಾನ ಇವು ಮಾಯೆಯಿಂದ ನಿರ್ಮಾಣವಾಗುವುವು. ಈ ಮಾಯೆಯ ನಿಯಂತಕನು ನಿಜವಾಗಿಯೂ ನೀನೇ ಆಗಿರುವೆ. ಇದು ನಿನ್ನ ಅಗಾಧವಾಗಿರುವ ಪ್ರಭುತ್ವವಾಗಿದೆ ।೩೦।। ಈ ಪ್ರಕಾರವಾಗಿ ಸ್ವಾಮಿಯಾಗಿರುವ ಸಾರಂಗಧರನ ಗೌರವವನ್ನು ಉದ್ಧವನು ಮಾಡಿದನು. ತದನಂತರ ಆತನಿಗೆ ತತ್ವಗಳ ಸಂಖ್ಯೆಯ ನಿಶ್ಚಯಕ್ಕಾಗಿ ವಿಚಾರವನ್ನು ಕೇಳಿದನು ।೩೧।। ಯಾರು ತಪಶ್ಚರ್ಯಗಳಿಂದ ಸಮರ್ಥಶಾಲಿಯರೋ ಹಾಗೂ ಭವಿಷ್ಯವನ್ನು ತಿಳಿದಿರುವರೋ, ಅಂತಹ ಶ್ರೇಷ್ಠರಾದ ಋಷಿಗಳವರು ಭಿನ್ನ ಭಿನ್ನ ಪ್ರಕಾರವಾಗಿ ತತ್ವ ಸಂಖ್ಯೆಗಳನ್ನು ಹೇಳಿರುವರು ।೩೨।। ಹತ್ತೊಂಬತ್ತನೆಯ ಅಧ್ಯಾಯದಲ್ಲಿ ತಾವು ತತ್ವಗಳ ವಿಚಾರವನ್ನು ಸ್ಪಷ್ಟವಾಗಿ ಹೇಳಿರುವಿರಿ. ಅವುಗಳಲ್ಲಿನ ತತ್ವಗಳ ಸಂಖ್ಯೆಯನ್ನು ನೀವು ನನಗೆ ಹೇಳಿರುವಿರಿ. ಅದನ್ನೇ ನಾನೀಗ ಹೇಳುವೆನು ।೩೩।। ಹದಿನಾಲ್ಕನೆಯ ಶ್ಲೋಕದ ನಿರೂಪಣೆಯಲ್ಲಿ ಹೇ ಶ್ರೀಕೃಷ್ಣನೇ, ತತ್ವಗಳ ಗಣನೆಯನ್ನು ಮಾಡಿ ಎಲ್ಲವನ್ನೂ ಕೂಡಿಸಿ ನಿಶ್ಚಯವಾಗಿ ಇಪ್ಪತ್ತೆಂಟು ತತ್ವಗಳೆಂದು ನೀವು ಹೇಳಿರುವಿರಿ ।೩೪।। ಆ ಯಾವ ತತ್ವ ಸಂಖ್ಯೆಗಳ ವಿಚಾರದಲ್ಲಿ ಪ್ರಕೃತಿ, ಪುರುಷ, ಮಹತ್ತತ್ವ ಹಾಗೂ ಅಹಂಕಾರ ಮತ್ತು ಮಹಾನವಾಗಿರುವ ಪಂಚಮಹಾಭೂತಗಳನ್ನು ಹಿಡಿದು ಒಂಬತ್ತು ತತ್ವಗಳಾದವು ।೩೫।। ತದನಂತರ ಹತ್ತು ಇಂದ್ರಿಯಗಳು ಮತ್ತು ಹನ್ನೊಂದನೆಯ ಮನಸ್ಸು, ಐದು ವಿಷಯಗಳು ಮತ್ತು ಸತ್ವ, ರಜ, ತಮ ಈ ಮೂರು ಗುಣಗಳನ್ನು ಕೂಡಿಸಲು ಒಟ್ಟಿಗೆ ಇಪ್ಪತ್ತೆಂಟು ಸಂಖ್ಯೆಗಳಾಗುವುವು ಎಂದು ನೀವೇ ನಿರೂಪಣೆ ಮಾಡಿ ತಿಳಿಸಿರುವಿರಿ ।೩೬।। ಹೇ ಲಕ್ಷ್ಮೀಪತಿಯೇ, ಮುಖ್ಯವಾಗಿ ಇದೇ ನಿನ್ನ ಮತವಾಗಿರುವುದು. ಈಗ ಶ್ರೇಷ್ಠರಾಗಿರುವ ಋಷೀಶ್ವರಗಳವರ ವಿಚಾರವನ್ನು ನಾನು ನಿನಗೆ ಹೇಳುವೆನು ।೩೭।।

ತೇ ತೂ ಐಕ ಗಾ ನಿಶ್ಚಿತ । ತುಜ ಸಾಂಗೇನ ತಯಾಚಾ ಅರ್ಥ । ಮ್ಹಣೋನಿಯಾ ನಿರೂಪಿತ । ಸ್ವಯೇ ಮನೋಗತ ಉದ್ಧವ ॥೩೮॥ ಮ್ಹಣೇ ತತ್ತ್ವತಾ ಅವಧಾರೀ । ಮೀ ಸಾಂಗೇನ ಐಕ ಕುಸರೀ । ಪ್ರಕೃತಿಪುರುಷಾಂಮಾಝಾರೀ । ವಿಚಿತ್ರ ಪರೀ ಸಾಂಗತ ॥೩೯॥

ಕೇಚಿತ್ ಷಡ್ವಿಂಶತಿಂ ಪ್ರಾಹುರಪರೇ ಪಂಚವಿಂಶತಿಮ್ । ಸಪ್ತೈಕೇ ನವ ಷಟ್ ಕೇಚಿಚ್ಚತ್ವಾರ್ಯೇಕಾದಶಾಪರೇ ॥೭॥

ಕೇಚಿತ್ ಸಪ್ತದಶ ಪ್ರಾಹುಃ ಷೋಡಶೈಕೇ ತ್ರಯೋದಶ । ಏತಾವತ್ತ್ವಂ ಹಿ ಸಂಖ್ಯಾನಾಮೃಷಯೋ ಯದ್ವಿವಕ್ಷಯಾ ॥೮॥

ಅರ್ಥ:- ಆದರೆ ಕೆಲವು ಜನರು ಇಪ್ಪತ್ತಾರು ತತ್ತ್ವಗಳನ್ನು ಹೇಳುತ್ತಾರೆ. ಕೆಲವರು ಇಪ್ಪತ್ತೈದು, ಕೆಲವರು ಏಳು, ಒಂಬತ್ತು ಅಥವಾ ಆರು ಹೇಳುವರು. ಕೆಲವರು ನಾಲ್ಕು ಹೇಳಿದರೆ ಕೆಲವರು ಹನ್ನೊಂದು ಎಂದು ಹೇಳುವರು. ಈ ಪ್ರಕಾರವಾಗಿ ಕೆಲವು ಋಷಿಮುನಿಗಳ ವಿಚಾರದಂತೆ ಅವರ ಸಂಖ್ಯೆಯು ಹದಿನೇಳು, ಕೆಲವರು ಹದಿಮೂರು ಹೇಳುವರು. ಹೇ ಶ್ರೀಕೃಷ್ಣನೇ, ಹೀಗೆ ಭಿನ್ನ ಭಿನ್ನ ಸಂಖ್ಯೆಗಳನ್ನು ಹೇಳುವರು. ಕೃಪೆ ಮಾಡಿ ತಾವು ಇದಕ್ಕೆ ಉತ್ತರವನ್ನು ನೀಡಬೇಕು.

ಯೇಥ ತತ್ತ್ವಸಂಖ್ಯಾ ಮತವಾದ । ಋಷೀಶ್ವರಾಮಾಜೀ ವಿವಾದ । ತ್ಯಾವಿವಾದಾಚೇ ಶಬ್ದ । ಐಕ ವಿಶದ ಸಾಂಗೇನ ॥೪೦॥ ಏಕ ಮ್ಹಣೇ ತತ್ತ್ವೇ ''ಸವ್ವಿಸ'' । ದುಜಾ ಮ್ಹಣೇ ಉಗಾಬೈಸ । ಬಹು ಬೋಲಾವಯಾ ನಾಹೀ ಪೈಸ । ತತ್ತ್ವೇ ''ಪಂಚವೀಸ'' ನೇಮಸ್ತ ॥೪೧॥ ತಿಜಾ ಮ್ಹಣೇ ತುಮ್ಹೀ ಯೇಥ । ಕೈಸೇನಿ ವಾಢವಿಲೇ ಸ್ವಮತ । ತತ್ತ್ವೇ ನೇಮಸ್ತ ಚಿ ''ಸಾತ'' । ಕೈಚೀ ಬಹುತ ಬೋಲತಾ ॥೪೨॥ ಏಕ ಮ್ಹಣೇ ಹೇ ಅಭಿನವ । ಬೋಲತಾ ನ ಲಾಜತೀ ಮಾನವ । ವೃಥಾ ಬೋಲಾಚೀ ಲವಲವ । ತತ್ತ್ವೇ ''ನವ'' ನೇಮಸ್ತ ॥೪೩॥ ತಂವ ಹಾಂಸೋನಿ ಬೋಲೇ ಏಕ । ಸಾಂಪೇ ಸಜ್ಞಾನ ಝಾಲೇ ಲೋಕ । ಮಿಥ್ಯಾ ಬಹು ತತ್ತ್ವಜಲ್ಪಕ । ''ತತ್ತ್ವಷಟ್ಕ'' ನೇಮಸ್ತ ॥೪೪॥ ಏಕ ಮ್ಹಣತೀ ಪರತೇ ಸರಾ । ನೇಣಾ ತತ್ತ್ವಸಂಖ್ಯಾ ವಿಚಾರಾ । ತತ್ತ್ವೇ ನೇಮಿಲೀಂಚ ''ಅಕರಾ'' । ಬಡಬಡ ಸೈರಾ ನ ಕರಾವೀ ॥೪೫॥ ದುಜಾ ಮ್ಹಣೇ ತತ್ತ್ವವಿಚಾರಾ । ನೇಣೋನಿ ಧರಿಸೀ ಅಹಂಕಾರಾ । ಪುಸೋನಿಯಾ ಥೋರಥೋರಾ । ತತ್ತ್ವೇ ''ಸತರಾ'' ನೇಮಸ್ತ ॥೪೬॥ ಏಕ ಮ್ಹಣೇ ವ್ಯುತ್ಪತ್ತಿ ಬಳಾ । ಕಾ ವ್ಯರ್ಥ ಪಿಟಾಲ ಕಪಾಳಾ । ನ ಕಳೇ ಭಗವಂತಾಚೀ ಲೀಳಾ । ತತ್ತ್ವೇ ''ಸೋಳಾ'' ನೇಮಸ್ತ ॥೪೭॥ ಏಕ ಮ್ಹಣೇ ಯಾ ಗರ್ವಿತಾ ಪೋರಾ । ಕೋಣ ಪುಸೇ ತತ್ತ್ವವಿಚಾರಾ । ತತ್ತ್ವೇ ನೇಮಸ್ತ ಚಿ ''ತೇರಾ'' । ನಿಜನಿರ್ಧಾರಾ ಮ್ಯಾ ಕೇಲೇ ॥೪೮॥

ಅವುಗಳ ಅರ್ಥವನ್ನೂ ಕೂಡ ನಿಮಗೆ ಹೇಳುವೆನು. ಅದನ್ನು ತಾವು ಲಕ್ಷಕೊಟ್ಟು ಕೇಳಿರಿ. ಹೀಗೆ ಹೇಳುತ್ತ ಉದ್ಧವನು ಸ್ವತಃ ಅವುಗಳ ವಿಚಾರಕ್ಕೆ ಹೇಳಹತ್ತಿದನು ॥೩೮॥ ನೀವು ಲಕ್ಷಕೊಟ್ಟು ಕೇಳಿರಿ. ನಾನು ಒಂದು ಚಮತ್ಕಾರವನ್ನು ಹೇಳುವೆನು. ಪ್ರಕೃತಿ ಪುರುಷರಲ್ಲಿ ವಿಚಿತ್ರವಾದ ಒಂದು ಪ್ರಕಾರವಿರುವುದು ॥೩೯॥

ಈ ತತ್ತ್ವಗಳ ಸಂಖ್ಯೆಯ ವಿಚಾರದಲ್ಲಿ ಅನೇಕ ಪ್ರಕಾರದ ಮತಭೇದಗಳಿರುವುವು. ಅನೇಕ ಋಷಿಮುನಿಗಳವರಲ್ಲಿ ವಾದವಿರುವುದು. ಆ ಯಾವ ವಾದದಲ್ಲಿನ ಸಾರಾಂಶವನ್ನು ಸ್ಪಷ್ಟಮಾಡಿ ಹೇಳುವೆನು ॥೪೦॥ ಒಬ್ಬಾತನು ಈ ತತ್ತ್ವಗಳು ಒಟ್ಟಿನಲ್ಲಿ ಇಪ್ಪತ್ತಾರು ಎಂದು ಹೇಳುವನು. ನಂತರ ಇನ್ನೊಬ್ಬನು ಯೇ, ಸುಮ್ಮನಿರು, ಹೆಚ್ಚಿಗೆ ಮಾತನಾಡಬೇಡ, ಈ ಯಾವ ತತ್ತ್ವಗಳು ಇಪ್ಪತ್ತೈದು ಇರುವುವು ಎಂದು ಹೇಳುವನು ॥೪೧॥ ಆಗ ಮೂರನೆಯವನು. ಸುಮ್ಮನೇ ಏಕೆ ವಾದವನ್ನು ಬೆಳೆಸುತ್ತಿರುವಿರಿ? ತತ್ತ್ವಗಳು ಎಲ್ಲವನ್ನೂ ಕೂಡಿ ಏಳು ಮಾತ್ರ ಇರುವುವು ಹೆಚ್ಚಿಗೆ ಹೀಗೇಕೆ ಹೇಳುವಿರಿ? ॥೪೨॥ ಇದಾದಮೇಲೆ ಮತ್ತೊಬ್ಬನು ಎಂತಹ ಆಶ್ಚರ್ಯವಿದು? ಈ ಜನರು ಏನಾದರೂ ಮಾತನಾಡುವರು, ಕೆಲಸಕ್ಕೆ ಬಾರದ ವ್ಯರ್ಥವಾಗಿ ಬಡಬಡಿಸುತ್ತಿರುವರು. ನಿಜವಾಗಿ ವಿಚಾರಿಸಿ ನೋಡಿದರೆ ತತ್ತ್ವಗಳು ಮಾತ್ರ ಒಂಬತ್ತೇ ಇರುವುವು ॥೪೩॥ ಅದೇ ಸಮಯದಲ್ಲಿ ಇನ್ನೊಬ್ಬನು ನಗುತ್ತ ಹೇಳಹತ್ತಿದನು. ಇಂದಿನ ಜನರು ಬಹಳ ಜಾಣರಾಗಿಬಿಟ್ಟಿರುವರು. ಇವರು ಸುಳ್ಳಾಗಿರುವ ಕಲ್ಪನೆಗಳನ್ನು ಮಾಡುತ್ತಿರುವರು. ನಿಜವಾಗಿ ಗುಣಿಸಿ ನೋಡಿದರೆ ತತ್ತ್ವಗಳು ಕೇವಲ ಆರು ಮಾತ್ರ ಇರುವುವು ॥೪೪॥ ಪುನಃ ಇನ್ನೊಬ್ಬನು, ನೀವೆಲ್ಲರೂ ಹಿಂದಕ್ಕೆ ಸರಿಯಿರಿ. ತತ್ತ್ವಗಳು ಏನೆಂಬುವುದು ನಿಮಗೆ ಸರ್ವಥಾ ತಿಳಿಯುವುದಿಲ್ಲ. ನಿಜವಾದ ತತ್ತ್ವಗಳು ಹನ್ನೊಂದು ಮಾತ್ರ ಇರುವುವು. ಇದಕ್ಕಾಗಿ ಸುಮ್ಮನೇ ಏಕೆ ಬಡಬಡಿಸುವಿರಿ? ಎಂದು ಹೇಳಹತ್ತಿದನು ॥೪೫॥ ಇಷ್ಟಾದ ಮೇಲೆ ಇನ್ನೊಬ್ಬನು, ನಿಮಗೆ ತತ್ತ್ವಗಳ ವಿಚಾರದಲ್ಲಿ ಏನೊಂದೂ ತಿಳಿಯುವುದಿಲ್ಲ. ಹೀಗಿದ್ದರೂ ಅಭಿಮಾನದಿಂದ ವ್ಯರ್ಥವಾಗಿ ಏಕೆ ಹೀಗೆ ಹೇಳುತ್ತಿರುವಿರಿ? ಹಿರಿಯರಾದ ದೊಡ್ಡವರು ತತ್ತ್ವಗಳ ಸಂಖ್ಯೆಯನ್ನು ಹದಿನೇಳು ಎಂದು ತಿಳಿಸಿ ಹೇಳಿದ್ದಾರೆ ಎಂದು ಹೇಳಿದನು ॥೪೬॥ ಆಗ ಒಬ್ಬನು ಹೀಗೆ ಹೇಳಹತ್ತಿದನು, ನೀವು ವಿದ್ವತ್ತೆಯ ಆಧಾರದಿಂದ ಹೀಗೆ ವ್ಯರ್ಥವಾಗಿ ಗೊಂದಲ ಮಾಡುತ್ತಿರುವಿರಿ. ಭಗವಂತನ ಲೀಲೆಯು ಯಾರಿಗೂ ತಿಳಿಯುವುದಿಲ್ಲ. ತತ್ತ್ವಗಳು ಒಟ್ಟಿನಲ್ಲಿ ಹದಿನಾರು ಇರುವುವು ॥೪೭॥ ಇದಕ್ಕೆ ಇನ್ನೊಬ್ಬನು ಈ ಪ್ರಕಾರ ಹೇಳಹತ್ತಿದನು, ಇದೆಲ್ಲವೂ ಗರ್ವಿಷ್ಠ ಹುಡುಗಾಟದ ತತ್ತ್ವವಿಚಾರಗಳಾಗಿವೆ. ಇದಕ್ಕೆ ಯಾವ ಮಹತ್ವವೂ ಇರುವುದಿಲ್ಲ. ನಾನು ಸ್ವತಃ ವಿಚಾರವನ್ನುಮಾಡಿ ಹದಿಮೂರು ತತ್ತ್ವಗಳನ್ನು ನಿಶ್ಚಿತಗೊಳಿಸಿರುವೆನು ॥೪೮॥

ಏಕ ಮ್ಹಣೇ ಸಾಂಡಾ ಚಾತುರೀ । ತತ್ತ್ವೇ ನೇಮಸ್ತಚಿ ''ಚಾರೀ''। ದುಜಾ ಮ್ಹಣೇ ಹೇ ಕಾಯಶಾ ಕುಸರೀ। ತತ್ತ್ವೇ ನಿರ್ಧಾರೀ ''ದೋನಚಿ''।೯॥ ತಿಜಾ ಮ್ಹಣೇ ವಾಚಾಟ ಲೋಕ । ಕೋಣೇ ಧರಾವೇ ಯಾಂಚೇ ಮುಖ । ನಿಜನಿರ್ಧಾರೀ ತತ್ತ್ವ ''ಏಕ''। ಏಕಾಚಾ ಅನೇಕ ವಿಸ್ತಾರ ।೧೦॥ ಏವಂ ಮತಪರಂಪರಾ ನಾನಾ ಮತೀ । ಋಷೀಶ್ವರೀ ವೇಂಚಿತಾ ಯುಕ್ತೀ । ತುರ್ಝ್ಯಾ ತತ್ತ್ವವಾದಾಚೀ ನಿಶ್ಚಿತೀ । ಕೋಣೇ ಇತ್ಥಂಭೂತೀ ಮಾನಾವೀ ।೧೧॥

ಗಾಯಂತಿ ಪೃಥಗಾಯುಷ್ಮನ್ನಿದಂ ನೋ ವಕ್ತುಮರ್ಹಸೀ ।೩॥

ತೂ ನಿಜಾತ್ಮಾ ಪರಮೇಶ್ವರ । ತುಜ ಜಾಣಾವಯಾ ಋಷೀಶ್ವರ । ವೇಂಚೂನಿ ಯುಕ್ತೀಚೇ ಸಂಭಾರ । ತತ್ತ್ವವಿಚಾರ ಬೋಲತೀ ।೧೨॥ ಸ್ವಾಮೀನೇ ಸಾಂಗಿತಲೇ ತತ್ತ್ವ ಏಕ । ಋಷೀಶ್ವರ ಬೋಲತೀ ಅನೇಕ । ಯೇಚಿವಿಷಯೀಂಚೇ ನಿಷ್ಟಂಕ । ಮಜ ಆವಶ್ಯಕ ಸಾಂಗಾವೇ ।೧೩॥ ಏವಂ ಯಾ ತತ್ತ್ವನಿಶ್ಚಯಾಸೀ । ಮಜ ಸಾಂಗಾವಯಾ ಯೋಗ್ಯ ಹೋಸೀ । ಐಸಾ ವಿನವಿಲಾ ಹೃಷೀಕೇಶೀ । ತೋ ಉದ್ಧವಾಸೀ ತುಷ್ಟಲಾ ।೧೪॥ ಜೇ ಜೇ ಋಷೀಶ್ವರ ಬೋಲತೀ । ತೀ ತೀ ತತ್ತ್ವೇ ಸತ್ಯ ಹೋತೀ । ಹೇ ಸರ್ವಜ್ಞ ಜ್ಞಾತೇ ಜಾಣತೀ । ತೇಚಿ ಅರ್ಥೀ ಹರಿ ಬೋಲೇ ।೧೫॥

ಶ್ರೀಭಗವಾನುವಾಚ:-

ಯುಕ್ತಯಃ ಸಂತಿ ಸರ್ವತ್ರ ಭಾಷಂತೇ ಬ್ರಾಹ್ಮಣಾ ಯಥಾ ।
ಮಾಯಾಂ ಮದೀಯಾ ಮುದ್ಗೃಹ್ಯ ವದತಾಂ ಕಿಂ ನು ದುರ್ಘಟಮ್ ।೪॥

ಅರ್ಥ:- ಶ್ರೀ ಭಗವಾನನು ಹೇಳಿದನು; ಹೇ ಉದ್ಧವಾ, ವೇದಜ್ಞ ಬ್ರಾಹ್ಮಣರು ಈ ವಿಷಯಕ್ಕೆ ಏನೇನು ಹೇಳಿರುವರೋ, ಅದೆಲ್ಲವೂ ಸರಿಯಾಗಿದೆ. ಕಾರಣ ಸರ್ವ ತತ್ವಗಳು ಎಲ್ಲದರಲ್ಲಿಯೂ ಇರುವುವು. ನನ್ನ ಮಾಯೆಯನ್ನು ಸ್ವೀಕರಿಸಿ ಹೇಳುವವನಿಗೆ ಯಾವ ಕಠಿಣವಿರುವುದು? ಮಾಯೆಯಿಂದ ಮಿಥ್ಯೆಯಾಗಿರುವ ಪದಾರ್ಥಗಳು ಸತ್ಯವಾಗಿ ತೋರುವುವು.

ಜ್ಯಾಚೇನಿ ಮತೇ ಜೈಸೇ ಜ್ಞಾನ । ತೋ ತೈಸೇ ಕರೀ ತತ್ತ್ವವ್ಯಾಖ್ಯಾನ । ಯಾ ಹೇತೂ ಬೋಲತೀ ಬ್ರಾಹ್ಮಣ । ತೇ ಸತ್ಯ ಜಾಣ ಉದ್ಧವಾ ।೧೬॥ ಜರೀ ಅವಘೀ ಮತೇ ಪ್ರಮಾಣ । ತರೀ ಕಾ ಕರಾವೇ ಮತಖಂಡಣ । ಉದ್ಧವಾ ತೂ ಐಸೇ ನ ಮ್ಹಣ । ತೇ ಮೀ ನಿಜಖೂಣ ಸಾಂಗೇನ ।೧೭॥ ಅಘಟಘಟಿತ ಮಾಝೀ ಮಾಯಾ । ಜೇ ಹರಿಹರಾ ನ ಯೇ ಆಯಾ । ಜೇ ನಾಥಿಲೇ ವಾಢವೂನಿಯಾ । ಲೋಕತ್ರಯಾ ಭುಲವೀತ ।೧೮॥

ಆಗ ಪುನಃ ಇನ್ನೊಬ್ಬನು ಏನೆಂದು ಹೇಳಿದನೆಂದರೆ, ಈಗ ನಿಮ್ಮ ಪಾಂಡಿತ್ಯವನ್ನು ಕಡಿಮೆ ಮಾಡಿರಿ. ತತ್ವಗಳನ್ನು ಎಲ್ಲವನ್ನೂ ಕೂಡಿಸಿದರೆ ನಾಲ್ಕು ಮಾತ್ರ ಇರುವುವು. ಆಗ ಬೇರೆಯವನು ಹೀಗೆ ಹೇಳಹತ್ತಿದನು; ಈ ಮಾತಿಗೆ ಯಾವ ಅರ್ಥವಿದೆ? ನಿಜವಾದ ತತ್ವಗಳು ಎರಡು ಮಾತ್ರ ಇರುವುವು ।೯॥ ಆಗ ಮೂರನೆಯವನು ಇದೆಲ್ಲವೂ ವಾಚಾಳತನದಿಂದ ಕೂಡಿದೆ. ಇವರ ಬಾಯಿಯನ್ನು ಯಾರು ಮುಚ್ಚಬೇಕು? ನಿಜವಾಗಿಯೂ ಎಲ್ಲ ತತ್ವಗಳೂ ಇವು ಒಂದೇಯಾಗಿರುವುದು. ಒಂದರಿಂದಲೇ ವಿಸ್ತಾರವಾಗಿ ಸರ್ವ ತತ್ವಗಳು ನಿರ್ಮಾಣವಾಗಿರುವುವು ।೧೦॥ ಈ ಪ್ರಕಾರವಾಗಿ ಅನೇಕ ಮಹಾ ಮಹಾ ಋಷಿಗಳವರು ಅನೇಕ ಯುಕ್ತಿಗಳನ್ನು ಯೋಜಿಸಿ ಭಿನ್ನ ಭಿನ್ನ ಮತಗಳನ್ನು ಮಂಡಿಸಿರುವರು. ಅಂದ ಮೇಲೆ ನೀನು ಹೇಳಿರುವ ತತ್ವನಿರ್ಣಯವನ್ನು ನಿಶ್ಚಿತವಾಗಿ ಹೇಗೆ ಒಪ್ಪಿಕೊಳ್ಳಬೇಕು ?।೧೧॥

ನೀನು ನಿಜಾತ್ಮರೂಪ ಪರಮೇಶ್ವರನು, ನಿನ್ನನ್ನು ತಿಳಿಯುವುದಕ್ಕಾಗಿಯೇ ಮಹಾನ ಋಷಿಗಳು ನಾನಾ ಪ್ರಕಾರದ ಯುಕ್ತಿಗಳನ್ನು ಹೂಡಿ ತತ್ವವಿಚಾರವನ್ನು ಹೇಳಿರುವರು ।೧೨॥ ಪ್ರಭುವೇ, ಒಂದೇ ತತ್ವವಿರುವುದು ಎಂದು ನೀನು ಹೇಳುತ್ತಿರುವೆ. ಆದರೆ ಮಹಾ ಮಹಾ ಋಷೀಶ್ವರರು ತತ್ವಗಳು ಅನೇಕವೆಂದು ಹೇಳುತ್ತಿರುವರು. ಅದಕ್ಕಾಗಿ ಕೃಪೆ ಮಾಡಿ ನಿಶ್ಚಿತವಾದ ಮತವನ್ನು ಹೇಳಿರಿ ।೧೩॥ ಈ ತತ್ವಗಳ ನಿಶ್ಚಯವನ್ನು ಹೇಳಲು ನೀನೇ ಯೋಗ್ಯನಾಗಿರುವೆ. ಈ ಪ್ರಕಾರವಾಗಿ ಉದ್ಧವನು ವಿನಂತಿಸಿಕೊಂಡನು, ಆಗ ದೇವನು ಉದ್ಧವನಿಗಾಗಿ ಪ್ರಸನ್ನನಾದನು ।೧೪॥ ಮಹಾನ ಋಷಿಗಳವರು ಹೇಳಿದ ತತ್ವಗಳು ಅವು ಎಲ್ಲವೂ ನಿಜವಾಗಿರುವುವು. ಇದೆಲ್ಲವೂ ವಿದ್ವಾನರಿಗೆ ತಿಳಿದಿರುವುದು. ಈಗ ಇದೇ ವಿಷಯಕ್ಕಾಗಿ ಶ್ರೀಹರಿಯು ಹೇಳುವನು ।೧೫॥

ಯಾರ ಜ್ಞಾನವು ಹೇಗಿರುವುದೋ ಅದರಂತೆ ಆತನು ತತ್ವಗಳ ಪ್ರತಿಪಾದನೆಯನ್ನು ಮಾಡುವನು. ಹೇ ಉದ್ಧವನೇ, ಯಾವ ಈ ಉದ್ದೇಶದಿಂದ ವಿಚಾರಿಸಿದರೆ ಬ್ರಾಹ್ಮಣರು ಹೇಳುವುದು ನಿಜವೆಂದೇ ತಿಳಿಯಬೇಕು ।೧೬॥ ಈಗ ಎಲ್ಲ ಮತಗಳು ನಿಜವೆಂದಾಗ ಇತರ ಮತಗಳ ಖಂಡನೆಯನ್ನು ಮಾಡುವ ಯಾವ ಅವಶ್ಯಕತೆ ಇರುವುದು? ಹೀಗೆ ಮಾತ್ರ ನೀನು ಹೇಳಬೇಡ. ಕಾರಣ ಅವುಗಳಲ್ಲಿನ ಗೂಢಾರ್ಥವನ್ನು ಹೇಳುವೆ, ಅದನ್ನು ಕೇಳು ।೧೭॥ ನನ್ನ ಮಾಯೆಯು ಅಘಟಿತ ಘಟನೆಗಳನ್ನು ನಿರ್ಮಾಣ ಮಾಡುವುದು. ಹರಿಹರರಿಗೂ ಕೂಡ ಈ ಮಾಯೆಯು ಕಲ್ಪನೆಗೆ ನಿಲುಕುವುದಿಲ್ಲ. ಕಾರಣ ಅದು ಇಲ್ಲದ ಸೃಷ್ಟಿಯನ್ನು ಬೆಳೆಯಿಸುವುದು ಮತ್ತು ತ್ರಿಭುವನಕ್ಕೆ ಭುಲಾಯಿಸುವುದು ।೧೮॥

ತೇ ಮಾಯಾ ಧರೋನಿಯಾ ಹಾತೇ । ಋಷೀಶ್ವರ ನಿಜಮತೇ । ಜೋ ಜೋ ಜೇ ಜೇ ಬೋಲೇಲ ಜೇಥೇ। ತೇ ತೇ ತೇಥೇ ಘಡೇ ಸತ್ಯ ॥೮೯॥ ಕೇವಳ ದೋರಾಚಾ ಸರ್ಪಾಕಾರ । ಹಾ ಶ್ವೇತ ಕೃಷ್ಣಕೀ ರಕ್ತಾಂಬರ । ಜ್ಯಾಸೀ ಜೈಸಾ ಭ್ರಮಾಕಾರ । ತ್ಯಾಸೀ ಸಾಚಾರ ತೋ ತೈಸಾ ॥೯೦॥ ತೇವೀ ಆತ್ಮ ತತ್ತ್ವ ಏಕಚಿ ಜಾಣ । ಅವಿಕಾರೀ ನಿಜನಿರ್ಗುಣ । ತೇಥ ನಾನಾ ತತ್ತ್ವಾಂಚೇ ವ್ಯಾಖ್ಯಾನ । ಬೋಲತೀ ಬ್ರಾಹ್ಮಣ ಮಾಯಾಯೋಗೇ ॥೯೧॥ ತ್ಯಾ ಮಾಯೇಚ್ಯಾ ಮಾಯಿಕಾ ವ್ಯುತ್ಪತ್ತೀ । ನಾನಾ ವಾಗ್ವಾದ ಸ್ವಮತೀ । ತ್ಯಾಚ ವಾದಾಚೀ ವಾದಸ್ಥಿತೀ । ಏಕ ತುಜಪ್ರತೀ ಸಾಂಗೇನ ॥೯೨॥ ಐಸೇ ಬೋಲೋನಿ ಶ್ರೀಕೃಷ್ಣನಾಥ । ಉದ್ಧವಾಪ್ರತಿ ಸಾಂಜ್ಗ ನಿರೂಪಿತ । ತತ್ತ್ವ ವಿಚಾರಣಾ ಯಥಾರ್ಥ । ಸ್ವಯೇ ಸಾಂಗತ ಆಪಣ ॥೯೩॥ ಹೇ ಪಾಂಚವೇ ಶ್ಲೋಕೀಂಚೇ ನಿರೂಪಣ। ಶ್ರೀಕೃಷ್ಣ ಉದ್ಧವ ವಿವರಣ। ಸಾಂಗಿತಲೇ ತತ್ತ್ವವ್ಯಾಖ್ಯಾನ । ಉದ್ಧವಾ ಜಾಣ ಯಥಾರ್ಥ ॥೯೪॥

ನೈತದೇವಂ ಯಥಾಸ್ಥ ತ್ವಂ ಯದಹಂ ವಚ್ಮಿ ತತ್ತಥಾ । ಏವಂ ವಿವದತಾಂ ಹೇತುಂ ಶಕ್ತಯೋ ಮೇ ದುರತ್ಯಯೋ : ॥೮॥

ಅರ್ಥ:- ನಿನ್ನ ಹೇಳುವಿಕೆಯು ಸರಿಯಲ್ಲ, ನಾನು ಹೇಳುವುದು ಯಥಾರ್ಥವಾಗಿರುವುದು ಎಂದು ಈ ಪ್ರಕಾರವಾಗಿ ಜಗತ್ತಿನ ಕಾರಣ ಸಂಬಂಧವಾಗಿ ವಿವಾದವು ಏಕೆ ಆಗುತ್ತವೆ ಎಂದರೆ ನನ್ನ ಶಕ್ತಿಯಲ್ಲಿ ಸತ್ವ, ರಜ ಇತ್ಯಾದಿ ಗುಣಗಳು ಮತ್ತು ಅವುಗಳ ವೃತ್ತಿಯ ರಹಸ್ಯವನ್ನು ಜನರು ತಿಳಿದುಕೊಂಡಿರುವುದಿಲ್ಲ. ಆದ್ದರಿಂದ ಇವರು ತಮ್ಮ ಮನೋವೃತ್ತಿಯ ಆಗ್ರಹವನ್ನು ಹಿಡಿದುಕೊಳ್ಳುವರು.

ಮಾಝೀ ಮಾಯೇಚೇ ಪ್ರಬಳ ಬಳ । ತೇಣೇ ಅಭಿಮಾನ ಅತಿಸಬಳ । ವಾಢವೂನಿ ಯುಕ್ತೀಚೇ ವಾಗ್ಜಾಳ । ಕರಿತೀ ಕೋಲ್ಹಾಳ ವಾಗ್ವಾದೀ ॥೯೫॥ ಪ್ರಬಳ ಶಾಸ್ತ್ರಶ್ರವಣಾಭಿಮಾನ । ತುಝೇ ವಚನ ತೇ ಅಪ್ರಮಾಣ । ಮೀ ಬೋಲತೋ ಹೇಚಿ ಪ್ರಮಾಣ । ಪತ್ರಾವಲಂಬನ ಕೇಲೇ ಅಸೇ ॥೯೬॥ ಸತ್ತ್ವರಜಾದಿ ಗುಣೋತ್ಪತ್ತೀ। ಮಾಝೀ ಮಾಯೇಚ್ಯಾ ಅನಂತ ಶಕ್ತೀ । ತೇಣೇ ಗುಣಕ್ಷೋಭೇ ವಿವಾದತೀ। ಸ್ವಮತವ್ಯಾಪ್ತೀ ಅಭಿಮಾನೇ ॥೯೭॥

ಯಾಸಾಂ ವ್ಯತಿಕರಾದಾಸೀದ್ವಿಕಲ್ಪೋ ವದತಾಂ ಪದಮ್ । ಪ್ರಾಪ್ತೇ ಶಮದಮೇಽಪ್ಯೇತಿ ವಾದಸ್ತಮನುಶಾಮ್ಯತಿ ॥೯॥

ಅರ್ಥ:- ಸತ್ವ ಇತ್ಯಾದಿ ಗುಣಗಳ ಕ್ಷೋಭೆಯಿಂದ ಈ ಯಾವ ವಿವಿಧ ಕಲ್ಪನಾರೂಪ ಪ್ರಪಂಚವು ಇದು ವಸ್ತುವಾಗಿರದೇ ಕೇವಲ ನಾಮ ಮಾತ್ರವಾಗಿರುವುದು. ಇದು ವಾದವಿವಾದಗಳನ್ನು ಮಾಡುವವರ ವಿಷಯವಾಗಿರುವುದು. ಇಂದ್ರಿಯಗಳು ತಮ್ಮ ಸ್ವಾಧೀನವಾಗಲು, ಆಗ ಚಿತ್ತವು ಶಾಂತವಾಗುವುದು. ಆಗ ಪ್ರಪಂಚವು ನಿವೃತ್ತವಾಗುವುದು. ನಿವೃತ್ತಿಯೊಂದಿಗೆ ಸರ್ವಪ್ರಕಾರದ ವಾದಗಳು ಅಳಿಹೋಗುವುವು.

ಕಾ ಗುಣಕ್ಷೋಭೇ ಅಭಿಮಾನ। ವಿಕಲ್ಪ ಉಪಜವೀ ಗಹನ । ವಿಕಲ್ಪೇ ಯುಕ್ತೀಚೇ ಛಳಣ । ಕರೀ ಆಪಣ ಅತಿವಾದೇ।॥೯೮॥

ಈ ಮಾಯೆಯನ್ನು ಕೈಯಲ್ಲಿ ಹಿಡಿದು ಋಷೀಶ್ವರರು ಏನೇನು ಹೇಳುತ್ತಿರುವರೋ, ಅವು ನಿಜವಾಗಿಯೂ ಹಾಗೆಯೇ ಆಗುತ್ತಿರುವುವು ॥೮೯॥ ಎಲ್ಲಿ ಕೇವಲ ಹಗ್ಗವು ಸರ್ಪದ ಆಕಾರದಿಂದ ಭಾಸವಾಗುತ್ತಿದ್ದಾಗ, ಅಲ್ಲಿ ಸರ್ಪವು ಬಿಳಿಯದು, ಕೆಂಪಾಗಿರುವುದು, ಕಪ್ಪಾಗಿರುವುದು ಎಂದು ಹೇಳುವಿಕೆಯಂತೆ ಯಾರಿಗೆ ಹೇಗೆ ಭ್ರಮೆಯಾಗಿದೆಯೋ, ಆತನಿಗೆ ಆ ಪ್ರಕಾರವಾಗಿ ತೋರುತ್ತಿರುವುದು ॥೯೦॥ ಅದರಂತೆ ನಿಜವಾಗಿಯೂ ಆತ್ಮ ತತ್ವವು ಇದು ಒಂದೇ ಆಗಿರುವುದು. ಅದು ನಿರ್ಗುಣ, ನಿರಾಕಾರವಾಗಿರುವುದು. ಆದರೆ ಮಾಯೆಯ ಕಾರಣದಿಂದ ಬ್ರಾಹ್ಮಣರು ಅನೇಕ ತತ್ವಗಳನ್ನು ವರ್ಣಿಸುವರು ॥೯೧॥ ಅವರ ಈ ಮಾಯಾತ್ಮಕ ಭಾಷಣವು ಮಾಯಾಜಾಲವಾಗಿರುವುದು. ತಮ್ಮ ಮತದ ಪ್ರತಿಪಾದನೆಗಾಗಿ ಅವರು ನಾನಾ ಪ್ರಕಾರದ ವಾದ ಮಾಡುವರು. ಅವರು ವಾದವನ್ನು ಹೇಗೆ ಮಾಡುವರೆಂಬುದನ್ನು ನಾನು ನಿನಗೆ ಹೇಳುವೆನು ॥೯೨॥ ಹೀಗೆ ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ತತ್ವಗಳ ವಿಚಾರವನ್ನು ಹೇಳಲಾರಂಭಿಸಿದನು ॥೯೩॥ ಮುಂದಿನ ಐದನೇಯ ಶ್ಲೋಕದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ವಿಸ್ತಾರ ಸ್ವರೂಪದಲ್ಲಿ ತತ್ವಗಳ ಯಥಾರ್ಥ ವಿವರಣೆಯನ್ನು ಮಾಡಿರುವನು ॥೯೪॥

ನನ್ನ ಮಾಯೆಯ ಬಲವು ಪ್ರಚಂಡವಾಗಿರುವುದು. ಇದರಿಂದ ಅತಿಶಯವಾಗಿ ಅಬಿಮಾನ ಉಂಟಾಗುವುದು. ಆದ್ದರಿಂದ ವಿದ್ವಾನ ಜನರು ಯುಕ್ತಿ ಪ್ರಯುಕ್ತಿಗಳಿಂದ ಶಬ್ದಗಳನ್ನು ಜೋಡಿಸಿ ವಾದವಿವಾದಗಳನ್ನು ಹುಟ್ಟಿಸುವರು ॥೯೫॥ ಅವರಿಗೆ ಶಾಸ್ತ್ರ ಶ್ರವಣದ ಅತಿಯಾದ ದೊಡ್ಡ ಅಭಿಮಾನವಿರುವುದು. ಆದ್ದರಿಂದ ಅವರು ನಿನ್ನ ಹೇಳಿಕೆಯು ನಿಜವಾಗಿಯೂ ಮಿಥ್ಯೆಯಾಗಿದೆ. ಅದಕ್ಕೆಯಾವ ಪ್ರಮಾಣವಿಲ್ಲ. ನಾನು ಹೇಳುವುದು ಪ್ರಮಾಣಭೂತವಾಗಿದೆ ಇವುಗಳಿಗೆ ನನ್ನಲ್ಲಿ ಧರ್ಮಗ್ರಂಥಗಳ ಪಕ್ಕಾ ಆಧಾರವಿದೆ ಎಂದು ಹೇಳುತ್ತ ತಮ್ಮ ಮತವನ್ನು ಸಮರ್ಥಿಸಿಕೊಳ್ಳುವರು ॥೯೬॥ ಸತ್ವ, ರಜ ಮತ್ತು ತಮ ಈ ಗುಣಗಳ ಉತ್ಪತ್ತಿಯಿಂದ ನನ್ನ ಮಾಯೆಯ ಶಕ್ತಿಯು ಅನಂತವಾಗಿರುವುದು. ಆ ಯಾವ ಗುಣಗಳು ಕ್ಷುಬ್ಧವಾಗಲು ನನ್ನ ಮತ ಮಾತ್ರ ನಿಜವಾಗಿರುವುದು ಎಂದು ಇವರು ಅಭಿಮಾನದಿಂದ ಜಗಳವಾಡುತ್ತಿರುವರು ॥೯೭॥

ಸತ್ವಾದಿ ಗುಣಗಳು ಉಗ್ರಗೊಂಡಾಗ ಅಭಿಮಾನವು ನಿರ್ಮಾಣವಾಗುವುದು. ಇದರಿಂದ ಭಯಂಕರವಾದ ವಿಕಲ್ಪಗಳು ಹುಟ್ಟಿಕೊಳ್ಳುವುವು. ನಂತರ ಅತಿವಾದವನ್ನು ಮಾಡಿ ಆ ವಿಕಲ್ಪದ ಯುಕ್ತಿಯಿಂದ ಖಂಡನೆಯನ್ನು ಮಾಡುವನು ॥೯೮॥

ಸಾಂಡಿತಾ ಗುಣಕ್ಷೋಭವಿಲಾಸ । ರಜತಮಾಂಚಾ ಹೋಯ ಹ್ರಾಸ । ಸತ್ತ್ವವೃತ್ತೀಚಾ ನಿಜಪ್ರಕಾಶ । ಅತಿ ಉಲ್ಹಾಸ ಶಮದಮಾಂಚಾ ॥೯॥ ಶಮದಮಾಂಚೇ ನಿಜವೃತ್ತೀ । ಸಂಕಲ್ಪ-ವಿಕಲ್ಪೇಸೀ ಜಾತೀ । ವಾದ ಅತಿವಾದ ಉಪರಮತೀ । ಜೇವೀ ಸೂರ್ಯಾಪ್ರತೀ ಆಂಧಾರೇ ॥೧೦॥ ಸರ್ವಜ್ಞ ಜ್ಞಾತೇ ಜೇ ಗಾ ಹೋತೀ । ತೇ ನಾನಾ ತತ್ತ್ವಾಂಚ್ಯಾ ತತ್ತ್ವೋಕ್ತೀ । ಸ್ವಯೇ ವಿವಂಚೂ ಜಾಣತೀ । ಐಕ ತುಜಪ್ರತೀ ಸಾಂಗೇನ ॥೧೧॥

ಪರಸ್ಪರಾನುಪ್ರವೇಶಾತ್ತತ್ತ್ವಾನಾಂ ಪುರುಷರ್ಷಭ । ಪೌರ್ವಾಪರ್ಯಪ್ರಸಂಖ್ಯಾನಂ ಯಥಾ ವಕ್ತುರ್ವಿವಕ್ಷಿತಮ್ ॥೭॥

ಅರ್ಥ:- ಹೇ ಪುರುಷ ಶಿರೋಮಣಿಯೇ, ಸ್ಥೂಲ ಮತ್ತು ಸೂಕ್ಷ್ಮ ವಸ್ತುಗಳು ಪರಸ್ಪರ ಒಂದರೊಳಗೊಂದು ಸೇರಿಕೊಳ್ಳುವುವು. ಆದ್ದರಿಂದ ವಕ್ತಾನು ತಾನು ಎಷ್ಟು ಸಂಖ್ಯೆಗಳನ್ನು ಹೇಳಲು ಇಚ್ಛಿಸುವನೋ, ಅದರಂತೆಯೇ ಕಾರಣಕ್ಕೆ ಕಾರ್ಯದಲ್ಲಿ ಅಥವಾ ಕಾರ್ಯಕ್ಕೆ ಕಾರಣದಲ್ಲಿ ಕೂಡಿಸಿ ತನ್ನ ಇಚ್ಛಿತ ಸಂಖ್ಯೆಯನ್ನು ಸಿದ್ಧಗೊಳಿಸುವನು.

ಗುರುಪಾಶೀ ಶಾಸ್ತ್ರಪಾಠಾ । ಕರೂನಿ ಸಾಧಿಲೀ ನಿಜನಿಷ್ಠಾ । ಐಕ ಉದ್ಧವಾ ಪುರುಷಶ್ರೇಷ್ಠಾ । ಪ್ರಿಯವರಿಷ್ಠಾ ಪ್ರಿಯೋತ್ತಮಾ ॥೧೨॥ ತತ್ತ್ವಗಣನೇಚೇ ಜೇಜೇ ಲೇಖ । ಏಕಾಚೇ ಥೋಡೇ ಏಕಾಚೇ ಅಧಿಕ । ಹಾ ''ಅನುಪ್ರವೇಶ'' ವೋಳಖ । ಏಕಾಮಾಜೀ ಏಕ ಉಪಜತೀ ॥೧೩॥ ತತ್ತ್ವಾಪಾಸೂನಿ ತತ್ತ್ವೇ ಹೋತೀ । ಕಾರಣರೂಪೇ ಕಾರ್ಯಾಚೀ ಸ್ಥಿತೀ । ಅಂತಿ ಜೇಥಿಲ ತೇಥೇ ಪ್ರವೇಶತೀ । ಹೇ ತತ್ತ್ವೋಪಪತ್ತೀ ಉದ್ಧವಾ ॥೧೪॥ ಪೂರ್ವಸ್ಥಿತೀ ಜೇ ತೇ ಕಾರಣ । ತ್ಯಾಪಾಸೋನಿ ಉಪಜೇ ತೇ ಕಾರ್ಯ ಜಾಣ । ಹೇ ಕಾರ್ಯಕಾರಣಾಂಚೇ ಲಕ್ಷಣ । ತತ್ತ್ವವಿಚಕ್ಷಣ ಬೋಲತೀ ॥೧೫॥ ಯೇಥ ವಕ್ತ್ಯಾಂಚೇ ಜೈಸೇ ಮನೋಗತ । ತೈಶೀ ತತ್ತ್ವಸಂಖ್ಯಾ ಹೋತ । ಕಾರ್ಯ - ಕಾರಣ ಏಕತ್ವ ಗಣಿತ । ತತ್ತ್ವಸಂಖ್ಯಾ ತೇಥ ಥೋಡೀಚ ॥೧೬॥ ಏಕಚಿ ಕಾರ್ಯ ಆಣಿ ಕಾರಣ । ಗಣಿತಾ ಆಣಿತೀ ಭಿನ್ನ ಭಿನ್ನ । ತೇಥ ತತ್ತ್ವಸಂಖ್ಯಾ ಅಧಿಕ ಜಾಣ । ಹೋಯ ಗಣನ ಉದ್ಧವಾ ॥೧೭॥ ಏವಂ ಕಾರ್ಯಕಾರಣೇ ಭಿನ್ನಭಿನ್ನೇ । ತತ್ತ್ವಸಂಖ್ಯಾ ಥೋಡೀಬಹುತ ಹೋಣೇ । ಹೀ ತತ್ತ್ವವಕ್ತ್ಯಾಂಚೀ ಲಕ್ಷಣೇ । ತುಜ ಸುಲಕ್ಷಣೇ ಸಾಂಗಿತಲೀ ॥೧೮॥ ಯೇಚಿ ವಿಷಯೀಂಚೀ ಉಪಪತ್ತೀ । ಸ್ವಯೇ ಸಾಂಗತಾಹೇ ಶ್ರೀಪತೀ । ಕಾರ್ಯಕಾರಣನಿಜಯುಕ್ತೀ । ಉದ್ಧವಾಪ್ರತೀ ನಿವಾಡೇ ॥೧೯॥

ಏಕಸ್ಮಿನ್ನಪಿ ದೃಶ್ಯಂತೇ ಪ್ರವಿಷ್ಟಾನೀತರಾಣಿ ಚ । ಪೂರ್ವಸ್ಮಿನ್ವಾ ಪರಸ್ಮಿನ್ವಾ ತತ್ತ್ವೇ ತತ್ತ್ವಾನಿ ಸರ್ವಶಃ ॥೮॥

ಅರ್ಥ:- ಒಂದು ತತ್ತ್ವದಲ್ಲಿ ಇತರ ಅನೇಕ ತತ್ತ್ವಗಳು ಅಂತರ್ಭಾವವಾಗುವುವು. ಯಾವ ತತ್ತ್ವದ ಅಂತರ್ಭಾವವಾಗುವುದೋ, ಅದಕ್ಕೆ ಯಾವ ಬಂಧನವಿರುವುದಿಲ್ಲ. ಕೆಲವೊಮ್ಮೆ ಘಟ, ಪಟ, ಕಾರ್ಯವು, ಅದರ ಕಾರಣ ಮಣ್ಣು, ನೂಲು ಆಗಿರುವುದು. ಘಟ, ಪಟ ಕಾರ್ಯದಲ್ಲಿ ಮಣ್ಣು, ನೂಲು ಅಂತರ್ಭಾವವಾಗಿರುವುವು.

ಈ ಗುಣಕ್ಷೋಭದ ತ್ಯಾಗವನ್ನು ಮಾಡಿದರೆ ರಜ-ತಮಗಳ ನಾಶವಾಗಿ ಸತ್ತ್ವಗುಣವು ಪ್ರಕಾಶಿಸುವುದು. ಆಗ ಶಮ ಮತ್ತು ದಮಗಳು ಅತಿ ಉಲ್ಹಾಸಿತವಾಗುವುವು ॥೯॥ ಈ ಶಮ ದಮೆಯ ಪ್ರಭಾವವು ಹೇಗಿದೆ ಎಂದರೆ ಸೂರ್ಯೋದಯವಾಗುತ್ತಲೇ ಅಂಧಃಕಾರವು ನಾಶವಾಗುವಂತೆ ವಿಕಲ್ಪಸಮೇತವಾಗಿ ಸಂಕಲ್ಪ ಮತ್ತು ವಾದವಿವಾದಗಳು ತಮ್ಮಷ್ಟಕ್ಕೆ ತಾವೇ ಶಾಂತವಾಗುವುವು ॥೧೦॥ ಈ ಕಾರಣವಾಗಿ ಸರ್ವಜ್ಞರಾದ ಜ್ಞಾನೀ ಪುರುಷರು ಅನೇಕ ಪ್ರಕಾರದ ತತ್ತ್ವಸಂಬಂಧಿತ ವಿವಿಧ ಮತಗಳ ವಿಚಾರವನ್ನು ಮಾಡಿ ಅವುಗಳಲ್ಲಿನ ಮರ್ಮವನ್ನು ತಿಳಿದುಕೊಳ್ಳುವರು. ಇದನ್ನೂ ಕೂಡ ನಿನಗೀಗ ಹೇಳುವೆನು ॥೧೧॥

ಹೇ ಪುರುಷಶ್ರೇಷ್ಠ, ಪ್ರಿಯವರಿಷ್ಠ, ಪ್ರಿಯೋತ್ತಮನಾದ ಉದ್ಧವನೇ, ಯೋಗ್ಯ ಪದ್ಧತಿಯಿಂದ ಗುರುಗಳಲ್ಲಿ ಶಾಸ್ತ್ರಪಾಠವನ್ನು ಪಡೆದು ಆತ್ಮನಿಷ್ಠೆಯನ್ನು ಸಾಧ್ಯಮಾಡುತ್ತಿರುವರು. ಇದರ ಪ್ರಕಾರವನ್ನು ಹೇಳುವೆನು, ಕೇಳು ॥೧೨॥ ತತ್ತ್ವಗಳ ಸಂಖ್ಯಾಸಂಬಂಧವಾಗಿ ಇರುವ ಸರ್ವರ ತತ್ತ್ವಗಳು, ಕೆಲವರ ಕಡಿಮೆಯಾಗಿದ್ದರೆ ಇನ್ನು ಕೆಲವರ ತತ್ತ್ವಗಳು ಹೆಚ್ಚಾಗಿರುವುವು. ಅವು ಒಂದರಲ್ಲಿ ಇನ್ನೊಂದು ಸಿಕ್ಕಿಕೊಂಡಿರುವುವು. ಆದ್ದರಿಂದ ಒಂದರಿಂದ ಇನ್ನೊಂದು ಉತ್ಪನ್ನವಾಗುವುದು ॥೧೩॥ ಹೇ ಉದ್ಧವಾ, ತತ್ತ್ವಗಳಿಂದ ತತ್ತ್ವಗಳು ಹುಟ್ಟುತ್ತಿರುವುವು. ಕಾರಣರೂಪದಿಂದ ಕಾರ್ಯದ ಸ್ಥಿತಿಯಾಗುವುದು. ಕೊನೆಗೆ ಇರುವ ಸರ್ವ ತತ್ತ್ವಗಳು ಅಲ್ಲಿ ಪ್ರವೇಶ ಮಾಡಿ ಲೀನವಾಗುವುವು. ಹೀಗೆ ಈ ತತ್ತ್ವಗಳ ಉಪಪತ್ತಿಯಾಗಿರುವುದು ॥೧೪॥ ತತ್ತ್ವಗಳ ಯಾವ ಪೂರ್ವಸ್ಥಿತಿಯು ಕಾರಣವಾಗಿರುವುದು. ಕಾರಣ ಅವುಗಳಿಂದ ಯಾವುದು ಉತ್ಪನ್ನವಾಗುವುದೋ, ಅದು ಕಾರ್ಯವಾಗುವುದು. ತತ್ತ್ವವಿಚಾರದ ಪುರುಷರು ಕಾರ್ಯ ಕಾರಣದ ಲಕ್ಷಣವನ್ನು ಹೀಗೆ ಹೇಳುವರು ॥೧೫॥ ಇವುಗಳಲ್ಲಿ ವಕ್ತಾಗಳವರ ಇಚ್ಛೆಯಂತೆ ತತ್ತ್ವಗಳ ಸಂಖ್ಯೆಗಳು ಆಗುತ್ತಿರುವುವು. ಕಾರ್ಯ ಮತ್ತು ಕಾರಣ ಇವು ಒಂದೇ ಎಂದು ತಿಳಿದವರ ತತ್ತ್ವಗಳ ಸಂಖ್ಯೆಯು ಕಡಿಮೆಯಾಗಿರುವುದು ॥೧೬॥ ಉದ್ಧವಾ, ಕಾರ್ಯ ಮತ್ತು ಕಾರಣ ಇವು ಒಂದೇಯಾಗಿದ್ದರೂ ಅವರು ಎಣಿಸುವಾಗ ಭಿನ್ನ ಭಿನ್ನ ಮಾಡುವರು. ಇದರಿಂದ ತತ್ತ್ವಗಳ ಸಂಖ್ಯೆಯು ಸಹಜವಾಗಿಯೇ ಬೆಳೆಯುವುದು ॥೧೭॥ ಈ ಪ್ರಕಾರವಾಗಿ ಕಾರ್ಯ ಮತ್ತು ಕಾರಣ ಇವುಗಳ ಭಿನ್ನ ಭಿನ್ನಪ್ರಕಾರದಿಂದ ಗಣಿತ ಮಾಡುವುದರಿಂದ ತತ್ತ್ವಗಳ ಸಂಖ್ಯೆಯು ಹೆಚ್ಚು ಕಡಿಮೆಯಾಗುತ್ತಿರುವುವು. ಇದು ತತ್ತ್ವ ಹೇಳುವ ವಿದ್ವಾನರ ಪ್ರಕಾರವನ್ನು ನಾನು ನಿನಗೆ ಹೇಳಿರುವೆನು ॥೧೮॥ ಈ ವಿಷಯವನ್ನು ಕುರಿತು ಅಧಿಕವಾದ ಸ್ಪಷ್ಟೀಕರಣವನ್ನು ಮತ್ತು ಕಾರ್ಯ ಕಾರಣ ವಿಷಯಕ್ಕೆ ತನ್ನದೇ ಆದ ಮತವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೧೯॥

ಆಕಾಶಾಪಾಸೂನಿ ವಾಯು ಝಾಲಾ । ತೋ ಗಗನಾವೇಗಳಾ ನಾಹೀ ಗೇಲಾ । ವಾಯೂಪಾಸೂನಿ ಅಗ್ನಿ ಝಾಲಾ । ತೇಥ ಪ್ರವೇಶು ಆಲಾ ದೋಹೀಂಚಾ ॥೮೦॥ ಅಗ್ನೀಪಾಸೂನ ಆಲಾ ಜಳರಸ । ತ್ಯಾಮಾಜೀ ತಿಹೀಂಚಾ ರಹಿವಾಸ । ಜಳಾಪಾಸೂನ ಪೃಥ್ವೀಚಾ ಪ್ರಕಾಶ । ತೀಮಾಜೀ ಪ್ರವೇಶ ಚಹೂಂಚಾ ॥೮೧॥ ತೈಸೇ ಕಾರ್ಯ ಆಣಿ ಕಾರಣ । ಪರಸ್ಪರೇ ಅಭಿನ್ನ ಜಾಣ । ಜೇವೀ ಲೇಣೇ ಆಣಿ ಸುವರ್ಣ । ವೇಗಳೇಪಣ ಏಕತ್ವೇ ॥೮೨॥ ಜೇವೀ ತಂತು ಆಣಿ ಪಟ । ದೋನೀ ದಿಸತೀ ಏಕವಟ । ತೇವೀ ಕಾರ್ಯಕಾರಣ ಸಗಟ । ದಿಸೇ ಸ್ಪಷ್ಟ ಅಭಿನ್ನ ॥೮೩॥ ಸಾಕರೇಚೀ ನಾರಳೇ ಕೇಳೀ । ಪರೀ ತೀ ಸಾಕರತ್ವಾ ನಾಹೀ ಮುಕಲೀ । ತೇವೀ ಕಾರಣಾಂಚೀ ಕಾರ್ಯೇ ಝಾಲೀ । ಅಸತಾ ಸಂಚಲೀ ಕಾರಣತ್ವೇ ॥೮೪॥ ಜೇವೀ ಕಾ ಪೃಥ್ವೀಚಾ ಮೃತ್ಪಿಂಡ । ಮೃತ್ಪಿಂಡೀ ಅನೇಕ ಭಾಂಡ । ಹೋತಾ ಗಾಡಗೀ ಉದಂಡ । ಮೃತ್ತಿಕಾ ಅಖಂಡ ಸರ್ವಾಮಾಜೀ ॥೮೫॥ ತೇವೀ ಕಾರಣೀ ಕಾರ್ಯವಿಶೇಷು । ಕಾರ್ಯಾಸೀ ಕಾರಣತ್ವೇ ಪ್ರಕಾಶು । ಹಾ ಪರಸ್ಪರಾನುಪ್ರವೇಶು । ಅನನ್ಯ ವಿಲಾಸು ಅಖಂಡತ್ವೇ ॥೮೬॥ ಏಕ ಕಾರ್ಯ ಆಣಿಕಾರಣ । ಹೋಯ ಭಿನ್ನ ಆಣಿ ಅಭಿನ್ನ । ತೇಣೇ ತತ್ತ್ವ ಸಂಖ್ಯಾಲಕ್ಷಣ । ಘಡೇ ಜಾಣ ನ್ಯೂನಾಧಿಕ ॥೮೭॥

ಪೌರ್ವಾಪರ್ಯಮತೋಽಮೀಷಾಂ ಪ್ರಸಂಖ್ಯಾನಮಭೀಪ್ಸತಾಮ್ ।
ಯಥಾ ವಿವಿಕ್ತಂ ಯದ್ವಕ್ತ್ರಂ ಗೃಹ್ಣೀಮೋ ಯುಕ್ತಿಸಂಭವಾತ್ ॥೯॥

ಅರ್ಥ:- ಆದ್ದರಿಂದ ಹೇಳುವವನ ಯಾವ ಪ್ರಕಾರದ ಇಚ್ಛೆ ಇರುವುದೋ, ಅದರಂತೆ ಈ ತತ್ವಗಳ ಕಾರ್ಯಕಾರಣ ಸಂಬಂಧ ಹಾಗೂ ಅವುಗಳ ಗಣನೆಗಳನ್ನು ಯುಕ್ತಿಯಿಂದ ಸಿದ್ಧ ಮಾಡಲು ಬರುವುವು. ಆದ್ದರಿಂದ ಅವುಗಳನ್ನು ನಾವು ಮನ್ನಿಸುತ್ತೇವೆ.

ಮ್ಯಾ ಸಾಂಗಿತಲೀ ತೈಶೀ ಜಾಣ । ತತ್ತ್ವಸಂಖ್ಯಾ ಅಧಿಕನ್ಯೂನ । ವ್ಹಾವಯಾ ಹೇಚಿ ಕಾರಣ । ವಕ್ಯಾಚಿ ಜ್ಞಾನವಿವಕ್ಷಾ ॥೮೮॥ ಜೈಸೇ ಜ್ಯಾಸೀ ಅಸೇ ಜ್ಞಾನ । ಜೈಸಾ ಈಪ್ಸಿತ ಮತಾಭಿಮಾನ । ತೈಸತೈಸೇ ತತ್ತ್ವವ್ಯಾಖ್ಯಾನ । ಋಷೀಶ್ವರ ಜಾಣ ಬೋಲತೀ ॥೮೯॥ ಜೋ ಬೋಲೇ ಜ್ಯಾ ಮತಯುಕ್ತೀ । ತೇ ತೇ ಘಡೇ ತ್ಯಾ ಮತಸಂಮತೀ । ಹೇ ಮೀ ಜಾಣೇ ಸರ್ವಜ್ಞ ಶ್ರೀಪತೀ । ಯಾಲಾಗೀ ತ್ಯಾ ಮೀಹೀ ಮಾನೀ ॥೯೦॥ ಜೇ ಬೋಲಿಲೇ ಋಷಿಜನ । ಸವ್ವೀಸ ತತ್ತ್ವೇವಿವಂಚೂನ । ಉದ್ಧವಾ ತುಜ ಮೀ ಸಾಂಗೇನ । ಸಾವಧಾನ ಅವಧಾರೀ ॥೯೧॥

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಮ್ । ಸ್ವತೋ ನ ಸಂಭವಾದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್ ॥೧೦॥

ಅರ್ಥ:- ಉದ್ಧವಾ, ಇಪ್ಪತ್ತಾರು ಸಂಖ್ಯೆಯನ್ನು ಸ್ವೀಕರಿಸಿದವರು ಹೀಗೆ ಹೇಳುವರು; ಜೀವವು ಅನಾದಿ ಕಾಲದಿಂದ ಅವಿದ್ಯೆಯಿಂದ ತ್ರಸ್ತವಾಗಿರುವುದು. ಅದು ಸ್ವತಃ ತನ್ನನ್ನು ತಾನು ತಿಳಿಯುವುದಿಲ್ಲ. ಅವನಿಗೆ ಆತ್ಮಜ್ಞಾನ ಕೊಡುವುದಕ್ಕಾಗಿ ಅನ್ಯ ಸರ್ವಜ್ಞರ ಅವಶ್ಯವಿರುವುದು ಆದ್ದರಿಂದ ಪ್ರಕೃತಿಯ ಕಾರ್ಯಕಾರಣರೂಪ ಇಪ್ಪತ್ನಾಲ್ಕು ತತ್ವಗಳು ಇಪ್ಪತ್ತೈದನೆಯ ಪುರುಷ ಮತ್ತು ಇಪ್ಪತ್ತಾರನೆಯ ಈಶ್ವರ, ಈ ಪ್ರಕಾರವಾಗಿ ಒಟ್ಟಿನಲ್ಲಿ ಇಪ್ಪತ್ತಾರು ತತ್ವಗಳನ್ನು ಸ್ವೀಕರಿಸಬೇಕಾಗುವುದು.

ಆಕಾಶದಿಂದ ವಾಯು ಉತ್ಪನ್ನವಾಯಿತು. ಆದರೆ ಆ ವಾಯು ಆಕಾಶವನ್ನು ಬಿಟ್ಟು ಬೇರೆ ಕಡೆ ಹೋಗುವುದಿಲ್ಲ. ವಾಯುವಿನಿಂದ ಅಗ್ನಿಯು ಉತ್ಪನ್ನವಾಯಿತು. ಅದರಲ್ಲಿ ಆಕಾಶ ಮತ್ತು ವಾಯು ಸಮಾವೇಶವಾಯಿತು ॥೮೦॥ ಅಗ್ನಿಯಿಂದ ಜಲವು ಉತ್ಪನ್ನವಾಯಿತು. ಇದರಲ್ಲಿ ಮೂರೂ ಕೂಡ ಕೂಡಿರುವುವು. ಜಲದಿಂದ ಪೃಥ್ವಿಯು ಉತ್ಪನ್ನವಾಯಿತು. ಇದರಲ್ಲಿ ನಾಲ್ಕೂ ತತ್ವಗಳು ಸಮಾವೇಶವಾಗಿರುವುವು ॥೮೧॥ ಬಂಗಾರ ಮತ್ತು ಅದರ ಅಲಂಕಾರ ಇವು ಹೇಗೆ ಏಕರೂಪವಾಗಿ ಇರುವುವೋ, ಅದರಂತೆ ಕಾರ್ಯ ಮತ್ತು ಕಾರಣ ಇವು ಪರಸ್ಪರವಾಗಿ ನಿಜವಾಗಿಯೂ ಭಿನ್ನವಾಗಿರುವುದಿಲ್ಲ ॥೮೨॥ ನೂಲು ಮತ್ತು ವಸ್ತ್ರ ಇವು ಒಂದೇ ರೂಪದಲ್ಲಿ ತೋರುವುವು. ಅದರಂತೆ ಕಾರ್ಯ ಮತ್ತು ಕಾರಣ ಇವು ಸ್ಪಷ್ಟವಾಗಿ ಒಂದೇ ರೂಪದಲ್ಲಿರುವುವು ॥೮೩॥ ಸಕ್ಕರೆಯಿಂದ ತೆಂಗಿನಕಾಯಿ ಮತ್ತು ಬಾಳೆಯ ಹಣ್ಣನ್ನು ತಯಾರಿಸಲು ಅವು ಸಕ್ಕರೆಯ ಮೂಲ ಸ್ವರೂಪದಿಂದ ಅಂತರವಾಗುವುದಿಲ್ಲ. ಅದರಂತೆ ಕಾರಣಗಳ ಕಾರ್ಯಗಳಾಗಲು ಅವರು ಕಾರಣರೂಪದಿಂದ ವ್ಯಾಪ್ತವಾಗಿರುವುವು ॥೮೪॥ ಮಣ್ಣಿನ ಒಂದು ದೊಡ್ಡ ಉಂಡೆಯನ್ನು ತೆಗೆದುಕೊಂಡು ಅದರಿಂದ ಅನೇಕ ಆಕಾರಗಳ ಪಾತ್ರೆಗಳನ್ನು ಮಾಡಲು, ಆಗ ಅವುಗಳೆಲ್ಲದರಲ್ಲಿಯೂ ಮಣ್ಣು ಅಖಂಡರೂಪದಿಂದ ಇದ್ದೇ ಇರುವುದು ॥೮೫॥ ಅದರಂತೆ ಕಾರಣದಲ್ಲಿ ಕಾರ್ಯವಿರುವುದು, ಕಾರಣದಿಂದಲೇ ಕಾರ್ಯವು ಪ್ರಕಟವಾಗುವುದು. ಈ ಪರಸ್ಪರರ ಅಣುಪ್ರವೇಶವಾಗಿದ್ದು ಅಖಂಡ ಐಕ್ಯವಾಗಿರುವುದು ॥೮೬॥ ಒಂದು ಕಾರ್ಯ ಮತ್ತು ಅದರ ಕಾರಣ ಇವುಗಳನ್ನು ಭಿನ್ನ ಭಿನ್ನವಾಗಿ ತಿಳಿದುಕೊಂಡರೇ, ಆಗ ತತ್ವಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯು ಉಂಟಾಗುವುದು ॥೮೭॥

ತತ್ವಗಳ ಸಂಖ್ಯೆಯನ್ನು ನಾನು ಹೇಳಿದ ಪ್ರಕಾರ ಹೆಚ್ಚು ಕಡಿಮೆಯಾಗಲಿಕ್ಕೆ ಇದನ್ನು ಹೇಳುವವನ ಜ್ಞಾನವಿವಕ್ಷೆ ಅಂದರೆ ಇಚ್ಛೆಯೇ ಕಾರಣೀಭೂತವಾಗುತ್ತಿರುವುದು ॥೮೮॥ ಯಾರಿಗೆ ಯಾವ ಪ್ರಕಾರದ ಜ್ಞಾನವಿರುವುದೋ, ಯಾರಿಗೆ ಹೇಗೆ ಇಷ್ಟಮತದ ಅಭಿಮಾನವಿರುವುದೋ, ಅದರಂತೆಯೇ ಮಹಾಮಹಾ ಋಷಿಗಳವರು ಹೇಳುತ್ತಿರುವರು ॥೮೯॥ ಅದಕ್ಕಾಗಿ ಯಾರು ಯಾವ ಮತಕ್ಕೆ ಅನುಸರಿಸಿ ಹೇಳುತ್ತಿರುವರೋ, ಅದು ಅವರ ಮತಪ್ರಕಾರವಾಗಿ ಪರಿಪೂರ್ಣ ಸರಿಯಾಗಿರುವುದು. ಇದನ್ನು ಸರ್ವಜ್ಞ ಶ್ರೀಹರಿಯಾದ ನಾನು ತಿಳಿಯುವೆನು. ಆದ್ದರಿಂದಲೇ ನಾನು ಇವರ ಹೇಳಿಕೆಗಳನ್ನು ಮಾನ್ಯ ಮಾಡುವೆನು ॥೯೦॥ ಹೇ ಉದ್ಧವಾ, ಮಹರ್ಷಿಯರು ಆರಿಸಿ ತೆಗೆದಿರುವ ಇಪ್ಪತ್ತಾರು ತತ್ವಗಳ ಬಗ್ಗೆ ಹೇಳಿದ್ದನ್ನು ನಾನು ಅದನ್ನೂ ಕೂಡ ನಿನಗೆ ಹೇಳುವೆನು, ಲಕ್ಷ ಕೊಟ್ಟು ಈಗ ಕೇಳು ॥೯೧॥

ಪ್ರಕೃತಿಪುರುಷಮಹತ್ತತ್ತ್ವ ಯೇಥೇ । ಅಹಂಕಾರ ಆಣಿ ಮಹಾಭೂತೇ । ಇಂದ್ರಿಯೇ ವಿಷಯಸಮೇತೇ । ಯೇ ತತ್ತ್ವೇ ನಿಶ್ಚಿತೇ ಪಂಚವೀಸ ॥೯೨॥ ಯೇಥ ಪುರುಷಾಹೋನಿಯಾ ಭಿನ್ನ । ಜೀವ ವೇಗಳಾ ಕರೂನಿ ಜಾಣ । ತತ್ತ್ವಸಂಖ್ಯಾಲಕ್ಷಣ । ಕೇಲೀ ಸಂಪೂರ್ಣ ಸವ್ವೀಸ ॥೯೩॥ ಜೀವಾಚ್ಯಾ ಭಿನ್ನತ್ವಾಚೇ ಕಾರಣ । ಅನಾದಿ ಅವಿದ್ಯೇಸ್ತವ ಜಾಣ । ಘೇಊನಿ ಠೇಲಾ ದೇಹಾಭಿಮಾನ । ಕರ್ಮಬಂಧನ ದೃಢತರಝಾಲೇ ॥೯೪॥ ಅಹಂಕರ್ತೇಪಣಾಚಾ ಖಟಾಟೋಪ । ತೇಣೇ ಅಂಗೀ ಆದಳೇ ಪುಣ್ಯಪಾಪ । ವಿಸರಲಾ ನಿಜರೂಪ । ವಿಷಯಲೋಲುಪ್ಯ ವಾಢವಿತಾ ॥೯೫॥ ಲಾಗಲೇ ಬದ್ಧತೇಚೇ ಬಂಧನ । ನ ಕರವೇ ಕರ್ಮಪಾಶಚ್ಛೇದನ । ತ್ಯಾಚ್ಯಾ ಉದ್ಧಾರಾಲಾಗೀ ಜಾಣ । ಜ್ಞಾನದಾತಾ ಸರ್ವಜ್ಞ ಈಶ್ವರ ॥೯೬॥ ಗುರುದ್ವಾರಾ ಪಾವಿಜೇ ಜ್ಞಾನ । ತೇಥೇ ಈಶ್ವರಾಚಾ ಆಭಾರ ಕೋಣ । ಯೇಥ ಈಶ್ವರಕೃಪೇವೀಣ । ಸದ್ಗುರು ಜಾಣ ಭೇಟೇನಾ ॥೯೭॥ ಝಾಲಿಯಾ ಸದ್ಗುರುಪ್ರಾಪ್ತೀ । ಈಶ್ವರಕೃಪೇವೀಣ ನ ಘಡೇ ಭಕ್ತೀ । ಸದ್ಗುರೂ ತೋಚಿ ಈಶ್ವರಮೂರ್ತೀ । ವೇದಶಾಸ್ತ್ರಾರ್ಥೀ ಸಂಮತ ॥೯೮॥ ಗುರು- ಈಶ್ವರಾ ಭಿನ್ನಪಣ । ಐಸೇ ದೇಖೇ ತೋ ನಾಗವಲಾ ಆಪಣ । ಏವಂ ಈಶ್ವರಾನುಗ್ರಹೇ ಜಾಣ । ಜ್ಞಾನಸಂಪನ್ನ ಹೋಯ ಜೀವು ॥೯೯॥ ಗುರೂನೀ ಸಾಂಗಿತಲೀ ಜ್ಞಾನಸ್ಥಿತೀ । ತೇ ಈಶ್ವರಕೃಪೇವೀಣ ಚಿತ್ತೀ । ಠಸಾವೇನಾ ಸಾಧಕಾಂಪ್ರತೀ । ಜಾಣ ನಿಶ್ಚಿತೀ ಉದ್ಧವಾ ॥೧೦೦॥ ಜೀವ ನಿಯಮ್ಯ ಈಶ್ವರ ನಿಯಂತಾ । ಜೀವ ಅಜ್ಞಾನ ಈಶ್ವರ ಜ್ಞಾನದಾತಾ । ಜೀವಪರಿಚ್ಛಿನ್ನ ಏಕದೇಶಿತಾ । ಈಶ್ವರ ಸರ್ವಥಾ ಸರ್ವಗತ ॥೧೦೧॥ ಜೀವ ಹೀನ ದೀನ ಅಜ್ಞಾನ । ಈಶ್ವರ ಸಮರ್ಥ ಸರ್ವಜ್ಞ । ಜೀವಾಸ ದೃಢ ಕರ್ಮಬಂಧನ । ಈಶ್ವರ ತೋ ಜಾಣ ನಿಷ್ಕರ್ಮ ॥೧೦೨॥ ಏವಂ ಈಶ್ವರಕೃಪೇ ಜಾಣ । ಜೀವಾಸೀ ಪ್ರಾಪ್ತ ಹೋಯ ಜ್ಞಾನ । ಯಾಲಾಗೀ ಈಶ್ವರಾಹೂನ । ಜೀವ ಭಿನ್ನ ಯಾ ಹೇತೂ ॥೧೦೩॥ ಮ್ಹಣಶೀ ಕರಿತಾ ಕರ್ಮಾಚರಣ । ಜೀವಾಸೀ ಪ್ರಾಪ್ತ ಹೋಈಲ ಜ್ಞಾನ । ಹೇ ಸರ್ವಥಾ ನ ಘಡೇ ಜಾಣ । ಜಡತ್ವಪಣ ಕರ್ಮಾಸೀ ॥೧೦೪॥ ಕರ್ಮಾ ಜಡತ್ವ ಜಾಣ । ತ್ಯಾಸೀ ಬಹುತ ಅಜ್ಞಾನ । ತ್ಯಾ ಕರ್ಮಾಸೀ ಅತ್ಯಂತ ಬದ್ಧಪಣ । ಹೇ ಸಜ್ಞಾನ ಜಾಣತೀ ॥೧೦೫॥ ಕರ್ಮ ಸ್ವರೂಪೇ ಜಡ ಅಚೇತನ । ತ್ಯಾಸೀ ಚೇತವಿತಾ ಈಶ್ವರ ಜಾಣ । ತೇ ನ ಕರಿತಾ ಈಶ್ವರಾರ್ಪಣ । ಜ್ಞಾನದಾತಾ ಕೋಣ ಕರ್ಮಾಸೀ ॥೧೦೬॥

ಪ್ರಕೃತಿ, ಪುರುಷ, ಮಹತ್ತತ್ತ್ವ ಹಾಗೂ ಅಹಂಕಾರ ಮತ್ತು ಪಂಚಮಹಾಭೂತಗಳು, ಐದು ವಿಷಯಗಳು ಹಾಗೂ ಮನಸ್ಸು ಸಮೇತ ಹನ್ನೊಂದು ಇಂದ್ರಿಯಗಳನ್ನು ಕೂಡಿ ಇಪ್ಪತ್ತೈದು ತತ್ತ್ವಗಳಾಗುವುವು ॥೯೨॥ ಇದರಲ್ಲಿ ಜೀವಕ್ಕೆ ಈಶ್ವರನಿಂದ ಭಿನ್ನವಾಗಿ ಕಲ್ಪಿಸಿರುವುದು. ಆದ್ದರಿಂದ ತತ್ತ್ವಗಳ ಸಂಖ್ಯೆಯು ಇಪ್ಪತ್ತಾರು ಆಗುವುದು ॥೯೩॥ ಅನಾದಿ ಕಾಲದಿಂದ ಅವಿದ್ಯೆಯು ನಡೆದು ಬಂದಿರುವುದು. ಇದೇ ಜೀವದ ಭಿನ್ನತ್ವದ ಕಾರಣವಾಗಿರುವುದು. ಆದ್ದರಿಂದ ಅವರಿಗೆ ದೇಹಾಭಿಮಾನವಾಗುತ್ತಿರುವುದು ಮತ್ತು ಕಾರ್ಯದ ಬಂಧನವು ದೃಢವಾಗುತ್ತಿರುವುದು ॥೯೪॥ ನಾನು ಕರ್ಮಗಳನ್ನು ಮಾಡುವವನು ಎಂಬ ಈ ಅಹಂಕಾರದಿಂದ ಆತನಿಗೆ ಪಾಪಪುಣ್ಯಗಳು ಬಂದೊದಗುವುವು. ಮತ್ತು ವಿಷಯಗಳ ಆಸಕ್ತಿಯು ಸತತವಾಗಿ ಬೆಳೆಯುತ್ತಿರುವುದರಿಂದ ಆತನು ತನ್ನ ಸ್ವರೂಪವನ್ನು ಮರೆತುಬಿಡುವನು ॥೯೫॥ ಇದರಿಂದ ಆತನಿಗೆ ಬದ್ಧತೆಯ ಬಂಧನವು ಹತ್ತಿಕೊಳ್ಳುವುದು. ಆದ್ದರಿಂದ ಆತನಿಗೆ ಕರ್ಮಪಾಶವನ್ನು ಮುರಿಯಲು ಸಾಧ್ಯವಾಗುವುದಿಲ್ಲ. ಇಂತಹ ಜೀವಕ್ಕೆ ಉದ್ಧಾರಕ್ಕಾಗಿ ಜ್ಞಾನದಾತಾ ಸರ್ವಜ್ಞ ಈಶ್ವರನ ಅವಶ್ಯಕತೆವಿರುವುದು ॥೯೬॥ ಗುರುಗಳಿಂದ ಜ್ಞಾನಪ್ರಾಪ್ತಿಯಾಗುತ್ತಿರಲು, ಆಗ ಈಶ್ವರನ ಯಾವ ಅವಶ್ಯಕತೆವಿರುವುದು? ಎಂದು ನೀನು ಹೀಗೆ ಹೇಳಬಹುದು, ಆದರೆ ಈಶ್ವರನ ಕೃಪೆವಿಲ್ಲದೇ ಸದ್ಗುರುಗಳು ಭೇಟಿಯಾಗುವುದೇ ಇಲ್ಲ. ಇದನ್ನು ಲಕ್ಷದಲ್ಲಿಡು ॥೯೭॥ ಹೀಗೆ ಸದ್ಗುರುಗಳು ಪ್ರಾಪ್ತರಾದರೂ ಈಶ್ವರನ ಕೃಪೆವಿಲ್ಲದೇ ಭಕ್ತಿಯು ಸಾಧಿಸುವುದಿಲ್ಲ. ಸದ್ಗುರುಗಳು ಇವರು ಈಶ್ವರರೂಪರಾಗಿರುವರು ಎಂದು ವೇದಶಾಸ್ತ್ರಗಳೂ ಕೂಡ ಮಾನ್ಯ ಮಾಡುವುವು ॥೯೮॥ ಗುರು ಮತ್ತು ಈಶ್ವರ ಇವರು ಭಿನ್ನರು ಎಂದು ಹೇಳುವವನು ಭ್ರಮೆಯಲ್ಲಿ ಬಿದ್ದಿರುವನು. ತಾತ್ಪರ್ಯವೇನೆಂದರೆ ಈಶ್ವರನ ಕೃಪೆಯಿಂದಲೇ ಜೀವನು ಜ್ಞಾನಸಂಪನ್ನನಾಗುವನು ॥೯೯॥ ಹೇ ಪ್ರಿಯ ಉದ್ಧವನೇ, ಗುರುಗಳು ಜ್ಞಾನದ ಸ್ವರೂಪವನ್ನು ತಿಳಿಸಿ ಹೇಳಿದರೂ ಸಹ ಈಶ್ವರನ ಕೃಪೆಯ ಹೊರತಾಗಿ ಅದು ಅಂತಃಕರಣದಲ್ಲಿ ಮೂಡುವುದಿಲ್ಲ. ಇದನ್ನು ನೀನು ಸರಿಯಾಗಿ ಧ್ಯಾನದಲ್ಲಿಡು ॥೧೦೦॥ ಜೀವವು ಇದು ನಿಯಮದಿಂದ ಬದ್ಧವಾಗಿರುವುದು. ಈಶ್ವರನು ಅದರ ನಿಯಂತಕನು. ಜೀವವು ಅಜ್ಞಾನವುಳ್ಳದ್ದು, ಈಶ್ವರನು ಜ್ಞಾನವನ್ನು ಕೊಡುವವನು. ಜೀವನು ಮರ್ಯಾದಿತನಾಗಿರುವನು, ಈಶ್ವರನು ಸರ್ವವ್ಯಾಪಿಯಾಗಿರುವನು ॥೧೦೧॥ ಜೀವನು ಹೀನ, ದೀನ ಅಜ್ಞಾನಿಯಾಗಿರುವನು. ಈಶ್ವರನು ಸರ್ವಸಮರ್ಥನು ಮತ್ತು ಸರ್ವಜ್ಞನಾಗಿರುವನು. ಜೀವಕ್ಕೆ ದೃಢವಾದ ಬಂಧನವಿರುವುದು, ಈಶ್ವರನು ಸರ್ವಕರ್ಮಗಳನ್ನು ದಾಟಿ ಇರುವನು ॥೧೦೨॥ ಈ ರೀತಿಯಿಂದಾಗಿ ಈಶ್ವರನ ಕೃಪೆಯಿಂದ ಜೀವಕ್ಕೆ ಜ್ಞಾನವು ಪ್ರಾಪ್ತವಾಗುತ್ತಿರುವುದು. ಆದ್ದರಿಂದ ಜೀವವು ಈಶ್ವರನಿಂದ ಭಿನ್ನವಾಗಿರುವುದು ॥೧೦೩॥ ಕರ್ಮಾಚರಣೆಯನ್ನು ಮಾಡುವುದರಿಂದ ಜೀವಕ್ಕೆ ಜ್ಞಾನವು ಪ್ರಾಪ್ತವಾಗುತ್ತದೆ ಎಂದು ಹೇಳಿದರೆ ಇದು ಎಂದಿಗೂ ಆಗುವುದಿಲ್ಲ. ಕಾರಣ ಕರ್ಮಕ್ಕೆ ಜಡತ್ವವು ಇರುವುದು ಎಂದು ಹೀಗೆ ನೀನು ಕದಾಚಿತ್ ಹೇಳಬಹುದು ॥೧೦೪॥ ಕರ್ಮಕ್ಕೆ ಜಡತ್ವವು ಇರುವುದರಿಂದ ಅದಕ್ಕೆ ಬಂಧನ ಮತ್ತು ಅಜ್ಞಾನವಿದೆ. ಕರ್ಮಕ್ಕೆ ಅತಿಯಾದ ಬದ್ಧತ್ವವಿರುವುದರಿಂದ ಸಜ್ಞಾನ ಜನರು ತಿಳಿದಿರುವರು ॥೧೦೫॥ ಕರ್ಮವು ಸ್ವಭಾವತವೇ ಜಡವಾಗಿರುವುದು. ಅಂದರೆ ಅಚೇತನವಾಗಿರುವುದು. ಅದಕ್ಕೆ ಚೇತನವನ್ನು ಈಶ್ವರನು ಕೊಡುವನು. ಅದನ್ನು ಈಶ್ವರಾರ್ಪಣವನ್ನು ಮಾಡದಿದ್ದರೆ, ಜ್ಞಾನವನ್ನು ಯಾರು ಕೊಡಬೇಕು? ॥೧೦೬॥

ಕರ್ಮಾಸೀ ಜಡತ್ವೇ ನಾಹೀ ಸತ್ತಾ । ಕರ್ಮಕ್ರಿಯೇಚಾ ಈಶ್ವರ ಜ್ಞಾತಾ । ಈಶ್ವರಚಿ ಕರ್ಮಫಳದಾತಾ । ಕರ್ಮಚೇತವಿತಾ ಈಶ್ವರೂ ॥೧೦೭॥ ಜ್ಞಾನ ತೋಚಿ ಈಶ್ವರ । ತೇಣೇ ರಚಿಲಾ ಹಾ ವಿಸ್ತಾರ । ಸಂಹಾರಿತಾ ತೋಚಿ ನಿರ್ಧಾರ । ಸತ್ತಾಮಾತ್ರ ಈಶ್ವರ ಜಾಣಾವಾ ॥೧೦೮॥ ಜೀವಾಸೀ ಜ್ಞಾನಸಾಯುಜ್ಯತಾ । ಕಾ ಸ್ವರ್ಗ ಭೋಗಫಳದಾತಾ । ಅಥವಾ ಇಹಲೋಕೀ ವರ್ತವಿತಾ । ಜೀವಾಸೀ ತತ್ತ್ವತಾ ಈಶ್ವರು ॥೧೦೯॥ ಯಾಪರೀ ಅವಶ್ಯ ಜಾಣ । ಜೀವ ಈಶ್ವರ ಕರಿತಾ ಭಿನ್ನ । ತತ್ತ್ವೇ ಸವ್ವೀಸ ಸಂಪೂರ್ಣ । ಬೋಲಿಲೇ ಬ್ರಾಹ್ಮಣ ಯಾ ಹೇತೂ ॥೧೧೦॥ ಪಂಚವೀಸ ತತ್ತ್ವಾಂಚೀ ಕಥಾ । ತೇ ಜೀವೇಶ್ವರಾಂಚೀ ಐಕ್ಯತಾ । ತೇಹೀ ಸಾಂಗೇನ ಮೀ ಆತಾ । ತ್ಯಾಂಚ್ಯಾ ಮತಾ ಸಂಮತ ॥೧೧೧॥

ಪುರುಷೇಶ್ವರಯೋರತ್ರ ನ ವೈಲಕ್ಷಣ್ಯಮಣ್ವಪಿ । ತದನ್ಯಕಲ್ಪನಾಽಪಾರ್ಥಾ ಜ್ಞಾನಂ ಚ ಪ್ರಕೃತೇರ್ಗುಣಃ ॥೧೧॥

ಅರ್ಥ:- ಇಪ್ಪತ್ತೈದು ತತ್ವಗಳನ್ನು ಮನ್ನಿಸುವವರು ಹೀಗೆ ಹೇಳುವರು ; ಶರೀರದಲ್ಲಿ ಜೀವ ಮತ್ತು ಈಶ್ವರನಲ್ಲಿ ಸ್ವಲ್ಪವೂ ಕೂಡ ಭೇದವಿರುವುದಿಲ್ಲ. ಆದ್ದರಿಂದ ಅವರ ಭೇದದ ಕಲ್ಪನೆಯು ವ್ಯರ್ಥವಾಗಿರುವುದು. ಜ್ಞಾನವು ಪ್ರಕೃತಿಯಗುಣವಾಗಿರುವುದು.

ಜೀವೇಶ್ವರಾಂಚೀ ಐಕ್ಯತಾ । ಸಹಜಚಿ ಅಸೇ ಸ್ವಭಾವತಾ । ತೇಥ ಅಣುಮಾತ್ರ ಭೇದವಾರ್ತಾ । ನ ರಿಘೇ ಸರ್ವಥಾ ನಿಶ್ಚಿತ ॥೧೧೨॥ ಸ್ವಭಾವೇ ಪಾಹತಾ ದರ್ಪಣ । ಏಕಾಚೇ ದೇಖಿಜೇ ದೋನ್ಹೀಪಣ । ಪರೀ ದ್ವಿಧಾ ನವ್ಹೇಚಿ ಆಪಣ । ಯಾಪರೀ ಜಾಣ ಜೀವಶಿವ ॥೧೧೩॥ ಅಜ್ಞಾನಪ್ರತಿಬಿಂಬ ತೇ ಜೀವ । ತ್ಯಾಚಾ ದ್ರಷ್ಟಾ ತೋ ಸದಾಶಿವ । ತರೀ ಐಕ್ಯತೇಚೇ ಜೇ ವೈಭವ । ತೋ ನಿಜಸ್ವಭಾವ ಮೋಡೇನಾ ॥೧೧೪॥ ಜೇವೀ ದರ್ಪಣಾಮಾಜೀ ಆಪಣ । ತೇವೀ ಜೀವರೂಪೇ ಶಿವುಚಿ ಜಾಣ । ದೋನೀ ಚೇತನತ್ವೇ ಸಮಾನ । ತೇಹೀ ಲಕ್ಷಣ ಅವಧಾರೀ ॥೧೧೫॥ ಜೈಸೀ ಚೇಷ್ಟಾ ಕೀಜೇ ಆಪಣ। ತೇಚಿ ಪ್ರತಿಬಿಂಬೀ ದಿಸೇ ಜಾಣ । ತೇವೀ ಈಶ್ವರಸತ್ತಾ ಸಚೇತನ । ಗಮನಾಗಮನ ಜೀವಾಸೀ ॥೧೧೬॥ ಜೇಣೇ ಸ್ವರೂಪೇ ಅಸೇ ಆಪಣ । ತದ್ರೂಪ ಪ್ರತಿಬಿಂಬೀ ದಿಸೇ ಜಾಣ । ತೇವೀ ಈಶ್ವರತ್ವ ಸಂಪೂರ್ಣ । ಅಸೇ ಅವಿಚ್ಛಿನ್ನ ಜೀವಾಮಾಜೀ ॥೧೧೭॥ ಜೈಸಾ ಅಗ್ನಿ ರಾಖಾ ಝಾಂಕೋಳಿಲಾ । ತರೀ ಅಗ್ನಿ ಅಗ್ನಿಪಣೇ ಅಸೇ ಸಂಚಲಾ । ತೇವೀ ಶಿವಾಸೀ ಜೀವಭಾವೋ ಆಲಾ । ಪರೀ ನಾಹೀ ಮುಕಲಾ ನಿಜತ್ವಾ ॥೧೧೮॥

ಕರ್ಮವು ಜಡವಾಗಿರುವುದರಿಂದ ನಿಜವಾಗಿಯೂ ಅದಕ್ಕೆ ಸತ್ತೆ ಇರುವುದಿಲ್ಲ. ಕರ್ಮಕ್ರಿಯೆಗಳನ್ನು ತಿಳಿಯುವವ ಒಬ್ಬ ಈಶ್ವರನಿರುವನು. ಆದ್ದರಿಂದ ಕರ್ಮದ ಫಲವನ್ನು ಕೊಡುವವನೂ ಕೂಡ ಈಶ್ವರನೇ, ಕರ್ಮಕ್ಕೆ ಚೇತನವನ್ನು ಕೊಡುವವನು ಈಶ್ವರನೇ ಆಗಿರುವನು ॥೧೦೭॥ ಜೀವಕ್ಕೆ ಜ್ಞಾನದಿಂದ ಮೋಕ್ಷವನ್ನು ಕೊಡುವವನು ಅದೇ ಈಶ್ವರನಾಗಿರುವನು. ಆತನು ಇದೇ ಸೃಷ್ಟಿಯ ವಿಸ್ತಾರವನ್ನು ರಚಿಸಿರುವನು ಇದರ ಸಂಹಾರವನ್ನು ಮಾಡುವ ಸತ್ತೆಯು ಮಾತ್ರ ಸರ್ವಶಕ್ತಿಮಾನನಾದ ಈಶ್ವರನೇ ಆಗಿರುವನು ॥೧೦೮॥ ಜೀವಕ್ಕೆ ಜ್ಞಾನ, ಸಾಯುಜ್ಯತೆ, ಅಂದರೆ ಮೋಕ್ಷ ಅಥವಾ ಸ್ವರ್ಗಫಲ ಕೊಡುವವನು ಹಾಗೆಯೇ ಇಹಲೋಕದಲ್ಲಿ ವರ್ತಿಸಲು ಹಚ್ಚುವವನು ನಿಜವಾಗಿ ಈಶ್ವರನೇ ಆಗಿರುವನು ॥೧೦೯॥ ಈ ಕಾರಣವಾಗಿ ಜೀವ ಮತ್ತು ಈಶ್ವರ ಇವರು ಭಿನ್ನ ಭಿನ್ನರಾಗಿರುವರೆಂದು ಮನ್ನಿಸುವುದು ಅವಶ್ಯಕವಾಗಿರುವುದು. ಈ ಉದ್ದೇಶದಿಂದ ಬ್ರಾಹ್ಮಣರು ಇಪ್ಪತ್ತಾರು ತತ್ವಗಳನ್ನು ಮಂಡಿಸಿರುವರು ॥೧೧೦॥ ಈಗ ಇಪ್ಪತ್ತೈದು ತತ್ವಗಳ ಕಥೆ ಅಂದರೆ ಜೀವ ಮತ್ತು ಈಶ್ವರ ಇವರ ಐಕ್ಯವಾಗಿರುವುದು. ಅವರಿಗೆ ಸಂಮತವಾಗಿರುವ ಈ ಮತವನ್ನೂ ಕೂಡ ನಿನಗೆ ನಾನು ಹೇಳುವೆನು, ಅದಕ್ಕಾಗಿ ಕೇಳು ॥೧೧೧॥

ಜೀವ ಮತ್ತು ಈಶ್ವರ ಇವರ ಐಕ್ಯವು ಸ್ವಭಾವತವೇ ಇರುವುದು. ಅವರಲ್ಲಿ ಸ್ವಲ್ಪವೂ ಕೂಡ ಭೇದವೆನ್ನಲು ಕಾರಣವಿಲ್ಲ. ಇದು ನಿಕ್ಕಿ ನಿಶ್ಚಿತವಾಗಿರುವುದು ॥೧೧೨॥ ಸಹಜವಾಗಿ ಕನ್ನಡಿಯಲ್ಲಿ ನೋಡಲು ಒಬ್ಬ ವ್ಯಕ್ತಿಯ ಎರಡು ರೂಪಗಳು ತೋರುವುವು. ಆದರೆ ವಾಸ್ತವಿಕವಾಗಿ ನೋಡಿದರೆ ಇಬ್ಬರು ವ್ಯಕ್ತಿಗಳು ಇರುವುದಿಲ್ಲ. ಅದರಂತೆಯೇ ಜೀವ ಹಾಗೂ ಶಿವರಾಗಿರುವರು. ಹೀಗೆಂದು ನೀನು ತಿಳಿ ॥೧೧೩॥ ಜೀವವು ಅವಿದ್ಯೆಯಲ್ಲಿ ಪ್ರತಿಬಿಂಬಿತವಾಗುವುದು ಮತ್ತು ಅದರ ದ್ರಷ್ಟಾ ಸದಾಶಿವನಾಗಿರುವನು. ಇವರು ಎರಡಾಗಿ ಕಂಡರೂ ಅವರ ಸ್ವಾಭಾವಿಕವಾದ ಐಕ್ಯವು ಮುರಿಯುವುದಿಲ್ಲ. ಹಾಗೆಯೇ ಅವರ ಮೂಲ ಸ್ವಭಾವಧರ್ಮವು ಯಾವ ಬದಲಾವಣೆಯಾಗುವುದಿಲ್ಲ ॥೧೧೪॥ ಯಾವ ಪ್ರಕಾರವಾಗಿ ನಾವು ಕನ್ನಡಿಯಲ್ಲಿ ಇರುವೆವೋ, ಅದರಂತೆ ಜೀವತ್ವರೂಪದಿಂದ ಶಿವನೇ ಇರುವನು. ಇಬ್ಬರಲ್ಲಿನ ಯಾವ ಚೈತನ್ಯ ಧರ್ಮವು ಒಂದೇಯಾಗಿರುವುದು. ಈಗ ಅದರ ಲಕ್ಷಣವನ್ನು ಹೇಳುವೆನು, ಅದಕ್ಕಾಗಿ ಕೇಳು ॥೧೧೫॥ ನೀವು ಯಾವ ಪ್ರಕಾರವಾಗಿ ವರ್ತಿಸುವಿರೋ, ಅದೇ ಪ್ರಕಾರದ ವರ್ತನೆಯು ಕನ್ನಡಿಯಲ್ಲಿ ಪ್ರತಿಬಿಂಬಿತವಾಗಿ ತೋರುತ್ತಿರುವುದು. ಅದರಂತೆಯೇ ಈಶ್ವರೀ ಸತ್ತೆಯು ಜೀವಕ್ಕೆ ಬರು ಹೋಗುವುದಕ್ಕೆ ಕಾರಣವಾಗುತ್ತಿರುವುದು ॥೧೧೬॥ ನಮ್ಮ ಸ್ವರೂಪವು ಹೇಗೆ ಇರುವುದೋ, ಅದರಂತೆಯೇ ಪ್ರತಿಬಿಂಬದಲ್ಲಿಯೂ ಕೂಡ ತೋರುತ್ತಿರುವುದು. ಅದರಂತೆ ಜೀವದಲ್ಲಿ ಪರಿಪೂರ್ಣವಾಗಿ ಈಶ್ವರತ್ವವೇ ಇರುವುದು ॥೧೧೭॥ ಅಗ್ನಿಯನ್ನು ಬೂದಿಯಿಂದ ಮುಚ್ಚಿದರೂ ಕೂಡ ಒಳಗೆ ಉಷ್ಣತೆವಿರುವುದು. ಅದರಂತೆ ಶಿವನು ಜೀವತ್ವಕ್ಕೆ ಪ್ರಾಪ್ತನಾಗಿದ್ದರೂ ಕೂಡ ಆತನು ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುವುದಿಲ್ಲ ॥೧೧೮॥

ಆಶಂಕಾ ''ಹೋ ಕಾ ಜೀವ ಶಿವ ದೋನೀಏಕ । ತರೀ ಏಕ ಮಲಿನ ಏಕ ಚೋಖ । ತೈಸೇ ಸದೋಖ ಆಣಿ ನಿರ್ದೋಖ । ಹೇ ವಿಶೇಖ ಕಾ ದಿಸತೀ '' ॥೧೧೯॥ ಥಿಲ್ಲರೀ ಪ್ರತಿಬಿಂಬಲಾ ಸವಿತಾ । ತ್ಯಾ ಪ್ರತಿಬಿಂಬಾ ಅಂಗೀ ಸರ್ವಥಾ । ಥಿಲ್ಲರೀಂಚೇ ಮಳ ಪಾಹತಾ । ದಿಸತೀ ತತ್ತ್ವತಾ ಲಾಗಲೇಸೇ॥೧೨೦॥ ತೇಚಿ ನಿರ್ವಾಳೂನಿ ಪಾಹತಾ ವೇಗೀ । ಬಿಂಬಪ್ರತಿಬಿಂಬ ನಿಯೋಗೀ । ಸರ್ವಥಾ ಮಳ ನ ಲಗೇ ಅಂಗೀ । ಉಭಯಭಾಗೀ ವಿಶುದ್ಧ ॥೧೨೧॥ ಆರಶಾಅಂಗೀ ಟಿಕಲೇ ಮಳ । ಸುಬದ್ಧ ಬೈಸಲೇ ಬಹುಕಾಳ । ತೇ ಪ್ರತಿಬಿಂಬಾ ಅಂಗೀ ಕೇವಳ । ದಿಸತೀ ಪ್ರಬಳ ಜಡಲೇಸೇ ॥೧೨೨॥ ತೋ ಮಳ ಜೈ ಪಡೇ ಫೇಡಾವಾ । ತೈ ಆರಿಸಾ ಸಾಹಣೇ ತೋಡಾವಾ । ಪರೀ ಪ್ರತಿಬಿಂಬ ಕೆವ್ಹಾ । ಸಾಹಣೇ ಧರಾವಾ ಹೇ ಬೋಲೂ ನಯೇ ॥೧೨೩॥ ತೇವೀ ಸದೋಷ ಆಣಿ ನಿರ್ದೋಷ । ಕೇವಳ ಅವಿದ್ಯಾಚಿ ಹೇ ದೇಖ । ಜೀವ ಶಿವ ಉಭಯತಾ ಚೋಖ । ನಿತ್ಯ ನಿರ್ದೋಖ ನಿಜರೂಪೇ ॥೧೨೪॥ ಪಾಹತಾ ಶುದ್ಧತ್ವೇ ಸ್ಫಟಿಕ ಜೈಸಾ । ಜೇ ರಂಗೀ ಠೇವಾವಾ ದಿಸೇ ತ್ಯಾ ಐಸಾ । ಸ್ವಯೇ ಅಲಿಪ್ತ ಜೈಸಾತೈಸಾ । ಜೀವ ಸ್ವಭಾವತಾ ತೈಸಾಚಿ ॥೧೨೫॥ ಜೀವ ಸ್ವಯೇ ಚಿತ್ಸ್ವರೂಪ । ಜೇ ಗುಣೇ ಮಿಳೇ ದಿಸೇ ತದ್ರೂಪ । ಪರೀ ಗುಣದೋಷ ಪುಣ್ಯಪಾಪ । ಜೀವಾಸೀ ಅಲ್ಪ ಲಾಗೇನಾ ॥೧೨೬॥ ಪ್ರತ್ಯಕ್ಷ ಪ್ರತಿಬಿಂಬೀ ಮಿಥ್ಯತಾ । ದಿಸೇ ನಿಜಬಿಂಬಾಚಿಯಾ ಸತ್ತಾ । ತೇವೀ ಜೀವಶಿವಾಂಸೀ ಅಭಿನ್ನತಾ । ಜಾಣ ತತ್ತ್ವತಾ ನಿಶ್ಚಿತ ॥೧೨೭॥ ಜೀವಶಿವಾಂಚೇ ಏಕಪಣ । ತೇಣೇ ಸವ್ವಿಸಾಂಮಾಜೀ ಜಾಣ । ಏಕ ತತ್ತ್ವ ಹೋತಾ ನ್ಯೂನ । ಶೇಷ ತೇಚಿ ಪೂರ್ಣ ಪಂಚವೀಸ ॥೧೨೮॥ ಆಶಂಕಾ ''ಜೀವಶಿವಾಂಚೇ ಏಕಪಣ । ಐಸೇ ಜೇ ಜಾಣಣೇ ತೇ ''ಜ್ಞಾನ'' । ತೇ ಏಕ ತತ್ತ್ವ ಯೇಥೇ ಆನ । ತ್ಯಾಂಮಾಜೀ ಜಾಣ ಉಪಜಲೇ ॥೧೨೯॥ ತೇ ಜ್ಞಾನತತ್ತ್ವ ಅಂಗೀಕರಿತಾ । ಪಂಚವೀಸ ಸವ್ವಿಸ ತತ್ತ್ವಕಥಾ । ದೋನೀ ಮತೇ ಹೋತೀ ವೃಥಾ '' । ಐಸೇ ಸರ್ವಥಾ ನ ಮ್ಹಣಾವೇ ॥೧೩೦॥ ಯೇಥ ಮೂಳೀಂಚೇ ನಿರೂಪಣ । ಶ್ಲೋಕಾಚೇ ಅಂತೀಚಾ ಚರಣ। ಜ್ಞಾನ ತೇ ಪ್ರಕೃತೀಚಾ ಗುಣ। ತ್ಯಾಸೀ ವೇಗಳೇಪಣ ಅಸೇನಾ ॥೧೩೧॥ ಗುಣಕರ್ಮಾಂಚ್ಯಾ ಖಟಪಟಾ । ಪ್ರಪಂಚ ಅಜ್ಞಾನೇ ಅತಿಲಾಠಾ । ಜ್ಞಾನ ಅಜ್ಞಾನಾಚಾ ಸತ್ತ್ವಾಂಟಾ । ಜೇವೀ ಕಾಂಟೇನಿ ಕಾಂಟಾ ಫೇಡಿಜೇ ॥೧೩೨॥ ಶೋಧಿತ ಜೋ ಸತ್ತ್ವಗುಣ । ತ್ಯಾ ನಾಂವ ಬೋಲಿಜೇ ಮುಖ್ಯ ''ಜ್ಞಾನ'' । ತೇಹೀ ಗುಣಾಂಮಾಜೀ ಪಡೇ ಜಾಣ। ವೇಗಳೇಪಣ ನವ್ಹೇಚಿ ತತ್ತ್ವ ॥೧೩೩॥

ಜೀವ ಮತ್ತು ಶಿವ ಈ ಇಬ್ಬರೂ ಒಂದೇಯಾಗಿದ್ದರೆ ಒಬ್ಬರು ಮಲಿನರು ಇನ್ನೊಬ್ಬರು ಶುದ್ಧರು, ಒಬ್ಬರು ಸದೋಷಿ ಇನ್ನೊಬ್ಬರು ನಿರ್ದೋಷಿ, ಹೀಗೆ ಭಿನ್ನ ಭಿನ್ನವಾಗಿ ಏಕೆ ತೋರುತ್ತಿರುವರು? ॥೧೧೯॥ ನಿಂತನೀರಿನಲ್ಲಿ ಬಿದ್ದಿರುವ ಸೂರ್ಯನ ಪ್ರತಿಬಿಂಬವನ್ನು ನೋಡಿದರೆ ಆ ನೀರಿನ ಮಡುವಿನ ಎಲ್ಲ ಹೊಲಸು ಪ್ರತಿಬಿಂಬಕ್ಕೆ ಹತ್ತಿರುವುದು ನಮಗೆ ತೋರುವುದು ॥೧೨೦॥ ಆದರೆ ಸರಿಯಾಗಿ ವಿಚಾರ ಮಾಡಿ ನೋಡಿದಾಗ ಆ ಪ್ರತಿಬಿಂಬಕ್ಕೆ ಅಥವಾ ಬಿಂಬಕ್ಕೆ ಆ ಯಾವ ಹೊಲಸು ಮೂಲತಃ ಸ್ವಲ್ಪವೂ ಕೂಡ ಹತ್ತಿರುವುದಿಲ್ಲ. ಅವೆರಡೂ ಕೂಡ ನಿರ್ಮಲವಾಗಿಯೇ ಇರುವುವು ॥೧೨೧॥ ಕನ್ನಡಿಯ ಮೇಲೆ ಹೊಲಸು ಬಿದ್ದು ಅದರ ಮೇಲೆ ಬಹಳ ದಿವಸಗಳಿಂದ ಕಿಲುಬುಕಟ್ಟಿಲು ಅದೆಲ್ಲವೂ ಪ್ರತಿಬಿಂಬದಲ್ಲಿಯೂ ಇರುವಂತೆ ತೋರುತ್ತಿರುವುದು ॥೧೨೨॥ ಆ ಹೊಲಸೆಲ್ಲವನ್ನು ಇಲ್ಲದಂತೆ ಮಾಡಬೇಕಾದರೆ ನಮಗೆ ಆ ಕನ್ನಡಿಯನ್ನು ಸಾಣೇಕಲ್ಲಿನಿಂದ ತಿಕ್ಕಿ ಸ್ವಚ್ಛ ಮಾಡಬೇಕಾಗುವುದು. ಪ್ರತಿಬಿಂಬವನ್ನು ಸಾಣೇಕಲ್ಲಿನಿಂದ ತಿಕ್ಕಿ ಸ್ವಚ್ಛ ಮಾಡಲು ಬರುವುದಿಲ್ಲ ॥೧೨೩॥ ಅದರಂತೆ ಸದೋಷ ಹಾಗೂ ನಿರ್ದೋಷ ಇವು ಕೇವಲ ಅವಿದ್ಯೆಯಾಗಿರುವುವು. ನಿಜವಾಗಿ ನೋಡಿದರೆ ಜೀವ ಹಾಗೂ ಶಿವ ಈ ಎರಡೂ ಯಾವಾಗಲೂ ಆತ್ಮಸ್ವರೂಪದಿಂದ ನಿರ್ದೋಷವಾಗಿರುವುವು ॥೧೨೪॥ ಸ್ಫಟಿಕವು ಇದು ಸ್ವಚ್ಛವಾಗಿರುವುದು. ಆದರೆ ಅದನ್ನು ಯಾವ ಬಣ್ಣದ ಮೇಲೆ ಇಡುವೆವೋ, ಅದೇ ಬಣ್ಣವಾಗಿ ಅದು ತೋರುವುದು. ಆದರೆ ಅದು ಆ ಬಣ್ಣದಿಂದ ಅಲಿಪ್ತವಾಗಿರುವುದು. ಅದರಂತೆ ಈ ಜೀವವು ಸ್ವಭಾವತವೇ ಅದರಂತಾಗಿರುವುದು ॥೧೨೫॥ ಜೀವವು ಸ್ವಭಾವತವಾಗಿಯೇ ಚೈತನ್ಯರೂಪವಾಗಿರುವುದು. ಆದರೆ ಅದು ಯಾವ ಗುಣದಲ್ಲಿ ಕೂಡಿಕೊಳ್ಳುವುದೋ, ಅದರಂತೆಯೇ ಕಾಣುತ್ತಿರುವುದು. ಆದ್ದರಿಂದ ಪಾಪಪುಣ್ಯಗಳು, ಗುಣದೋಷಗಳು ಇವು ಜೀವಕ್ಕೆ ಸ್ವಲ್ಪವೂ ಹತ್ತುವುದಿಲ್ಲ ॥೧೨೬॥ ಮೂಲ ಬಿಂಬದ ಸಾಮರ್ಥ್ಯದಿಂದ ಪ್ರತ್ಯಕ್ಷ ಪ್ರತಿಬಿಂಬದಲ್ಲಿ ಗುಣಗಳ ಮಿಥ್ಯತ್ವವು ತೋರುತ್ತಿರುವುದು. ಅದರಂತೆ ಜೀವ, ಶಿವರಲ್ಲಿ ಅಭಿನ್ನತ್ವವು ಇರುವುದು ॥೧೨೭॥ ಈ ಪ್ರಕಾರವಾಗಿ ಜೀವಶಿವರ ಐಕ್ಯವನ್ನು ಮಾನ್ಯ ಮಾಡಿದರೆ ಇಪ್ಪತ್ತಾರು ತತ್ತ್ವಗಳಲ್ಲಿ ಒಂದು ತತ್ತ್ವವು ಕಡಿಮೆಯಾಗಿ ಇಪ್ಪತ್ತೈದು ತತ್ತ್ವಗಳು ಉಳಿದುಕೊಳ್ಳುವುವು ॥೧೨೮॥ ಹೀಗಾದರೆ ಜೀವದ ಮತ್ತು ಶಿವದ ಐಕ್ಯವನ್ನು ತಿಳಿದುಕೊಳ್ಳುವಿಕೆಯು ಇದೊಂದು ಜ್ಞಾನವೇ ಆಯಿತು. ಅಂದಮೇಲೆ ಪುನಃ ಒಂದು ಹೊಸದಾದ ತತ್ತ್ವವು ಉತ್ಪನ್ನವಾಯಿತು ॥೧೨೯॥ ಈ ಯಾವ ಜ್ಞಾನತತ್ತ್ವವನ್ನು ಸ್ವೀಕಾರ ಮಾಡಿದರೆ ಆಗ ಇಪ್ಪತ್ತೈದು ಮತ್ತು ಇಪ್ಪತ್ತಾರು ತತ್ತ್ವಗಳು ಇವು ಎರಡೂ ಕೂಡ ವ್ಯರ್ಥವಾಗಿಬಿಡುವುವು. ಆದರೆ ಇಂತಹ ಅನುಮಾನವನ್ನು ಎಂದಿಗೂ ಮಾಡಬಾರದು ॥೧೩೦॥ ಕಾರಣ ಮೂಲ ಶ್ಲೋಕದಲ್ಲಿನ ಕೊನೆಯ ಚರಣದಲ್ಲಿ ಜ್ಞಾನವಿದು ಪ್ರಕೃತಿಯ ಗುಣವಾಗಿದೆ. ಅದಕ್ಕೆ ಭಿನ್ನತ್ವವಿಲ್ಲವೆಂದು ನಿರೂಪಣೆಯನ್ನು ಮಾಡಿರುವುದು ॥೧೩೧॥ ಗುಣಗಳು ಕರ್ಮಗಳಿಂದ ಪ್ರಪಂಚ ಅಜ್ಞಾನದಿಂದ ಬೆಳೆದಿರುವುದು. ಜ್ಞಾನವು ಅಜ್ಞಾನದ ಸತ್ತ್ವಾಂಶವಾಗಿರುವುದು. ಮುಳ್ಳಿನಿಂದ ಮುಳ್ಳನ್ನು ತೆಗೆಯುವಂತೆ ಜ್ಞಾನದಿಂದ ಅಜ್ಞಾನವನ್ನು ನಾಶಮಾಡಬೇಕಾಗುವುದು ॥೧೩೨॥ ಶುದ್ಧವಾಗಿರುವ ಸತ್ತ್ವಗುಣವಿರುವುದು. ಅದಕ್ಕೆ ಮುಖ್ಯ ಜ್ಞಾನವೆಂದು ಹೇಳುವರು. ಅದು ಗುಣದಲ್ಲಿಯೇ ಇಲ್ಲದಾಗುವುದು. ಅದಕ್ಕೆ ಬೇರೆಯಾಗಿರುವ ಒಂದು ತತ್ತ್ವವೆಂದು ಹೇಳಲು ಬರುವುದಿಲ್ಲ ॥೧೩೩॥

ಜ್ಞಾನ ಸ್ವತಂತ್ರ ತತ್ತ್ವ ಹೋತೇ । ತರೀ ನಾಸತೀ ದೋನೀ ಮತೇ । ತೇ ಪಡೇ ಗುಣಾ ಆಂತೌತೇ । ಯಾಲಾಗೀ ದೋನ್ಹೀ ಮತೇ ನಿರ್ದುಷ್ಟ ॥೧೩೪॥ ತೇಚಿ ತ್ರಿಗುಣಾಂಚೀ ವ್ಯವಸ್ಥಾ । ತುಜ ಮೀ ಸಾಂಗೇನ ಆತಾ । ಐಕ ಉದ್ಧವಾ ತತ್ತ್ವತಾ । ಗುಣ ಸರ್ವಥಾ ಆವಿದ್ಯಕ

ಪ್ರಕೃತಿರ್ಗುಣಸಾಮ್ಯಂ ವೈ ಪ್ರಕೃತೇರ್ನಾತ್ಮನೋ ಗುಣಾಃ । ಸತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ ॥೧೨॥

ಅರ್ಥ:- ಮೂರೂ ಗುಣಗಳ ಸಾಮ್ಯಾವಸ್ಥೆಯು ಪ್ರಕೃತಿಯಾಗಿರುವುದು. ಆದ್ದರಿಂದ ಸತ್ವ, ರಜ ಇತ್ಯಾದಿ ಗುಣಗಳು ಆತ್ಮನದ್ದಾಗಿರುವುದಿಲ್ಲ, ಪ್ರಕೃತಿಯದ್ದಾಗಿರುವುವು. ಇವುಗಳಿಂದ ಜಗತ್ತಿನ ಉತ್ಪತ್ತೀ, ಸ್ಥಿತೀ ಮತ್ತು ಪ್ರಳಯಗಳು ಆಗುತ್ತಿರುತ್ತವೆ. ಆದ್ದರಿಂದ ಜ್ಞಾನವು ಆತ್ಮದ್ದಲ್ಲ. ಪ್ರಕೃತಿಯ ಗುಣವಾಗಿದೆ.

ಉತ್ಪತ್ತಿಸ್ಥಿತಿನಿರ್ದಳಣ । ಹೇ ತ್ರಿಗುಣಾಂಚೇ ಕಾರ್ಯಪೂರ್ಣ । ''ಗುಣಸಾಮ್ಯ'' ತೇ ಪ್ರಕೃತಿ ಜಾಣ । ಆತ್ಮಾ ''ನಿರ್ಗುಣ'' ಗುಣಾತೀತ ॥೧೩೬॥ ಮ್ಹಣಶೀ ಪರಮಾತ್ಮಾ ಗುಣಾತೀತ । ಪರೀ ಜೀವಾತ್ಮಾ ಗುಣಗ್ರಸ್ತ । ಹೇಹೀ ಗಾ ಮಿಥ್ಯಾ ಮಾತ । ಐಕ ವೃತ್ತಾಂತ ಸಾಂಗೇನ ॥೧೩೭॥ ಚಂದ್ರ ನಿಶ್ಚಳ ನಿಜಸ್ವಭಾವೇ । ತೋ ಚಾಲೇ ತ್ಯಾ ಅಭ್ರಾಸವೇ । ದಿಸೇ ಜೇವೀ ಸವೇಗ ಧಾಂವೇ । ತೇವೀ ಗುಣಸ್ವಭಾವೇ ಜೀವಾತ್ಮಾ ॥೧೩೮॥ ಘಟಾಮಾಜೀ ಉದಕ ಭರಿತಾ । ಘಟಾಕಾಶ ಭಿಜೇನಾ ಸರ್ವಥಾ । ತೇವೀ ಜೀವಾತ್ಮಾ ಗುಣೀ ವರ್ತತಾ । ಅಲಿಪ್ತತಾ ಗುಣಕರ್ಮೀ ॥೧೩೯॥ ಜೀವ ಅಹಂಕರ್ತೇಪಣೇ ವಿಖ್ಯಾತ । ತೋ ಕೇವೀ ಮ್ಹಣಾವಾ ಕರ್ಮಾತೀತ । ಯೇಚಿ ಅರ್ಥೀ ಕೃಷ್ಣನಾಥ । ವಿಶದಾರ್ಥ ಸಾಂಗತ ॥೧೪೦॥

ಸತ್ತ್ವಂ ಜ್ಞಾನಂ ರಜಃ ಕರ್ಮ ತಮೋಽಜ್ಞಾನಮಿಹೋಚ್ಯತೇ । ಗುಣವ್ಯತಿಕರಃ ಕಾಲಃ ಸ್ವಭಾವಃ ಸೂತ್ರಮೇವ ಚ ॥೧೩॥

ಅರ್ಥ:- ಈ ಪ್ರಸಂಗದಲ್ಲಿ ಸತ್ವಗುಣವು ಜ್ಞಾನವಾಗಿದೆ. ರಜೋಗುಣವಿದು ಕರ್ಮವಾಗಿದೆ. ಮತ್ತು ತಮೋಗುಣವು ಅಜ್ಞಾನವಾಗಿದೆ. ಗುಣಗಳಲ್ಲಿ ಕ್ಷೋಭೆಯನ್ನುಂಟು ಮಾಡುವ ಈಶ್ವರನು ಕಾಲನಾಗಿರುವನು. ಸೂತ್ರ ಅರ್ಥಾತ ಮಹತ್ತತ್ವ ಇದು ಸ್ವಭಾವವಾಗಿದೆ.

ಸತ್ತ್ವಗುಣಾಸ್ತವ ''ಜ್ಞಾನ'' । ರಜೋಗುಣೇ ''ಕರ್ಮ'' ಜಾಣ । ಮೋಹ ಆಲಸ್ಯಯುಕ್ತ ಗಹನ । ತಮೀ ''ಅಜ್ಞಾನ'' ನಾಂದತ ॥೧೪೧॥ ಸತ್ತ್ವಾದಿ ಜೇ ತಿನ್ಹೀ ಗುಣ । ಕೇವಳ ಪ್ರಕೃತೀಚೇ ಹೇ ಜಾಣ । ಯಾಂಸೀ ಸ್ವತಂತ್ರಪಣ । ನವ್ಹೇಚಿ ಜಾಣ ಯಾ ಹೇತೂ ॥೧೪೨॥ ಗುಣಕ್ಷೋಭಕ ''ಕಾಳ'' ದೇಖ । ತೋ ಪುರುಷಾಚಾ ಅವಲೋಕ । ಪುರುಷ ಕಾಳ ಹಾ ನಾಮವಿಶೇಖ । ಸ್ವರೂಪೇ ಏಕ ಹೇ ದೋನ್ಹೀ ॥೧೪೩॥ ಸ್ವಾಭಾವಿಕ ಮಾಯೇಚೇ ಸ್ಫುರಣ । ಪ್ರಥಮ ಕಾರ್ಯ ಜೇ ನಿರ್ಮಾಣ । ತ್ಯಾ ನಾಂವ ''ಮಹತ್ತತ್ವ'' ಜಾಣ । ''ಸೂತ್ರ'' ''ಪ್ರಧಾನ'' ಜ್ಯಾಸೀ ಮ್ಹಣತೀ ॥೧೪೪॥

ಜ್ಞಾನವು ಇದೊಂದು ಬೇರೆಯಾದ ತತ್ವವಾಗಿದ್ದರೆ, ಆಗ ಈ ಎರಡೂ ಮತಗಳು ವ್ಯರ್ಥವೆಂದು ಹೇಳಲಿಕ್ಕೆ ಬರುತ್ತಿತ್ತು. ಆದರೆ ಜ್ಞಾನವು ಗುಣಗಳಲ್ಲಿ ಅಂತರ್ಭೂತವಾಗುತ್ತಿರುವುದರಿಂದ ಈ ಎರಡೂ ಮತಗಳು ನಿರ್ದೋಷಗಳಾಗಿರುವುವು ॥೧೩೪॥ ಹೇ ಉದ್ಧವಾ, ಈಗ ನಾನು ನಿನಗೆ ಮೂರು ಗುಣಗಳ ವ್ಯವಸ್ಥೆಯನ್ನು ಹೇಳುವೆನು. ಈ ಯಾವ ಮೂರು ಗುಣಗಳು ಅವಿದ್ಯಾಮಯವಾಗಿರುವುವು ॥೧೩೫॥

ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಕಾರ್ಯಗಳು ತ್ರಿಗುಣಗಳದ್ದಾಗಿರುವುವು. ಈ ಮೂರು ಗೂಣಗಳ ಯಾವ ಸಾಮ್ಯಾವಸ್ಥೆಯು ಪ್ರಕೃತಿಯಾಗಿರುವುದು. ಆತ್ಮವು ನಿರ್ಗುಣವಾಗಿದೆ. ಅಂದರೆ ಗುಣಾತೀತವಾಗಿದೆ ॥೧೩೬॥ ಪರಮಾತ್ಮನು ಗುಣಾತೀತನಾಗಿದ್ದರೆ ಜೀವಾತ್ಮನು ಗುಣಗಳಿಂದ ಯುಕ್ತನಾಗಿರುವನು ಎಂದು ಈಗ ನೀನು ಹೀಗೆ ಹೇಳಬಹುದು. ಆದರೆ ಈ ಮಾತೂ ಕೂಡ ಸುಳ್ಳಾಗಿರುವುದು. ಇದು ಹೇಗೆ ಎಂಬುವುದನ್ನು ಈಗ ಹೇಳುವನು ॥೧೩೭॥ ಚಂದ್ರನು ಸ್ಥಿರನಾಗಿರುವನು. ಆದರೆ ಮೋಡದಲ್ಲಿ ಆತನು ಓಡುತ್ತಿರುವಂತೆ ತೋರುತ್ತಿರುವನು. ಅದರಂತೆ ಗುಣಸ್ವಭಾವದಿಂದ ಜೀವಾತ್ಮನು ಹಾಗೆ ತೋರುತ್ತಿರುವನು ॥೧೩೮॥ ಘಟದಲ್ಲಿ ಜಲವು ತುಂಬಿರಲು ಆಗ ಅಲ್ಲಿನ ಘಟಾಕಾಶವು ತೋಯುವುದಿಲ್ಲ. ಅದರಂತೆ ಜೀವಾತ್ಮನು ಗುಣಗಳಲ್ಲಿ ವರ್ತಿಸುತ್ತಿದ್ದರೂ ಆತನು ಗುಣಕಾರ್ಯಗಳಿಂದ ಅಲಿಪ್ತನಾಗಿರುವನು ॥೧೩೯॥ ಜೀವವು ನಾನು ಕರ್ತನು ಎಂಬ ಅಹಂಕಾರದಿಂದ ಯುಕ್ತವಾಗಿರುವುದು ಪ್ರಸಿದ್ಧವಾಗಿದ್ದರೆ ಇದು ಕರ್ಮದಿಂದ ಬಂದಿದೆ ಎಂದು ಹೇಗೆ ಹೇಳಬೇಕು ? ಶ್ರೀಕೃಷ್ಣನು ಇದರ ಸ್ಪಷ್ಟೀಕರಣೆಯನ್ನು ಈಗ ಮಾಡುವನು ॥೧೪೦॥

ಸತ್ವಗುಣದಿಂದ ಜ್ಞಾನದ ವೃದ್ಧಿಯಾಗುವುದು. ರಜೋಗುಣದಿಂದ ಕರ್ಮವು ಬೆಳೆಯುವುದು ಮತ್ತು ತಮೋಗುಣದಿಂದ ಆಲಸ್ಯಯುಕ್ತ ಮೋಹ ಮತ್ತು ಅಜ್ಞಾನವು ಹರಡುತ್ತಿರುವುದು ॥೧೪೧॥ ಸತ್ವ, ರಜ, ತಮ ಈ ಮೂರು ಗುಣಗಳು ಪ್ರಕೃತಿಯದ್ದಾಗಿರುವುವು. ಆದ್ದರಿಂದ ಅವುಗಳಿಗೆ ಸ್ವಾತಂತ್ರತೆಯು ಇರುವುದಿಲ್ಲ ॥೧೪೨॥ ಕಾಲವು ಇದು ಗುಣಗಳಿಗೆ ಕ್ಷೋಭಿಸುವುದು. ಪುರುಷನ ಅವಲೋಕನೆಯು ಈ ಕಾಲವಾಗಿರುವುದು. ಪುರುಷ ಮತ್ತು ಕಾಲ ಈ ಹೆಸರುಗಳು ಭಿನ್ನ ಭಿನ್ನವಾಗಿರುವುವು. ಸ್ವರೂಪದಲ್ಲಿ ಈ ಎರಡೂ ಒಂದೇಯಾಗಿರುವುವು ॥೧೪೩॥ ಮಾಯೆಯ ಯಾವ ಸ್ವಭಾವಸಿದ್ಧ ಸ್ಫುರಣವಾಗಿ ಮೊದಲನೆಯ ಕಾರ್ಯವು ನಿರ್ಮಾಣವಾಗುವುದು. ಅದಕ್ಕೆ ಮಹತ್ತತ್ವ ಎಂದು ನಾಮವಿರುವುದು ಮತ್ತು ಅದಕ್ಕೆ ಪ್ರಧಾನ ಸೂತ್ರವೆಂದು ಹೀಗೂ ಹೇಳುವರು ॥೧೪೪॥

ಯಾಲಾಗೀ ಪ್ರಕೃತೀ ಹೂನ ಭಿನ್ನ । ಯಾಸೀ ನ ಯೇ ವೇಗಳೇಪಣ । ಹೇ ಪ್ರಕೃತಿ ಕಾರ್ಯಕಾರಣೇ ಅಭಿನ್ನ । ತತ್ತ್ವವಿಚಕ್ಷಣ ಮಾನಿತೀ॥೧೪೫॥ ಅಠ್ಠಾವೀಸ ತತ್ತ್ವೇ ಪೂರ್ವೋಕ್ತ । ಹೇ ಭಗವಂತಾಚೇ ನಿಜ ಮತ । ತೇಚಿ ಅಡೀಚಾ ಶ್ಲೋಕೀ ಸಾಂಗತ । ಸಂಖ್ಯಾತತ್ತ್ವಾರ್ಥ ನಿಜಬೋಧೇ ॥೧೪೬॥

ಪುರುಷಃ ಪ್ರಕೃತಿರ್ವ್ಯಕ್ತಮಹಂಕಾರೋ ನಭೋಽನಿಲಃ । ಜ್ಯೋತಿರಾಪಃ ಕ್ಷಿತಿರಿತಿ ತತ್ತ್ವಾನ್ಯುಕ್ತಾನಿ ಮೇ ನವ ॥೧೪॥

ಅರ್ಥ:- ಪುರುಷ, ಪ್ರಕೃತೀ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ತೇಜ, ಜಲ ಮತ್ತು ಪೃಥ್ವೀ ಈ ಒಂಬತ್ತು ತತ್ವಗಳನ್ನು ನಾನು ಹೇಳಿರುವೆನು.

ಪ್ರಕೃತಿ ಪುರುಷ ಮಹತ್ತತ್ವ । ಮಹಾಭೂತೇ ಅಹಂಭಾವ । ಅಠ್ಠಾವಿಸಾಂತ ಹೀ ತತ್ತ್ವೇ ನವ । ಇತರ ವೈಭವ ತೇ ಐಕ ॥೧೪೭॥

ಶ್ರೋತ್ರಂ ತ್ವಗ್ದರ್ಶನಂ ಘ್ರಾಣೋ ಜಿಹ್ವೇತಿ ಜ್ಞಾನಶಕ್ತಯಃ ।
ವಾಕ್ಪಾಣ್ಯುಪಸ್ಥಪಾಯ್ವಂಘ್ರಿಃ ಕರ್ಮಾಣ್ಯಂಗೋಭಯಂ ಮನಃ ॥೧೫॥

ಅರ್ಥ:- ಕಿವಿ, ಚರ್ಮ, ಕಣ್ಣು, ಮೂಗು ಹಾಗೂ ನಾಲಿಗೆ ಇವು ಐದು ಜ್ಞಾನೇಂದ್ರಿಯಗಳಾಗಿವೆ. ವಾಕ್, ಹಸ್ತ, ಉಪಸ್ಥ, ಪಾಯು, ಪಾದ ಇವು ಐದು ಕರ್ಮೇಂದ್ರಿಯಗಳಾಗಿವೆ. ಈ ಎರಡೂ ಇಂದ್ರಿಯಗಳಿಗೆ ಸಾಧಾರಣವಾಗಿ ಒಂದು ಮನವಿರುವುದು. ಹೇ ಉದ್ಧವಾ, ಹೀಗೆ ಇವುಗಳ ಹನ್ನೊಂದು ತತ್ವಗಳಿರುವುವು.

ಮುಖ್ಯ ''ಜ್ಞಾನೇಂದ್ರಿಯೇ'' ಪಾಂಚ ಜಾಣ । ಪಾಂಚ ''ಕರ್ಮೇಂದ್ರಿಯೇ'' ಆನ । ಕರ್ಮೇದ್ರಿಯೇ ಜ್ಞಾನೇಂದ್ರಿಯಾ ಆಧೀನ । ಸ್ವತಃ ಗಮನ ತ್ಯಾ ನಾಹೀ ॥೧೪೮॥ ಆಂಧಳೇ ಪಾಯೀ ಚಾಲೋ ಜಾಣೇ । ಪಾಂಗುಳ ಕೇವಳ ದೇಖಣೇ । ಅಂಧೇ ಪಂಗೂ ಖಾಂದೀ ಘೇಣೇ । ಪರೀ ಬೋಲೇ ವರ್ತಣೇ ದೇಖಣ್ಯಾಚೇನಿ ॥೧೪೯॥ ತೇವೀ ಜ್ಞಾನೇಂದ್ರಿಯಾ ಕರ್ಮೇಂದ್ರಿಯಾಂಸೀ । ಸಂಗತೀ ಘಡಲೀ ಅಸೇ ತೈಶೀ । ಯಾಲಾಗೀ ಮುಖ್ಯತ್ವೇ ಜ್ಞಾನೇಂದ್ರಿಯಾಂಸೀ । ಹೃಷೀಕೇಶೀ ಬೋಲಿಲಾ ॥೧೫೦॥ ಉಭಯ ಇಂದ್ರಿಯಾ ಚಾಳಕ । ತೇ ಮನಚಿ ಗಾ ಏಕಲೇ ಏಕ । ಯೇಣೇಂಚಿ ಅಕರಾ ಇಂದ್ರಿಯೇ ದೇಖ । ಯದುನಾಯಕ ಸಾಂಗತ ॥೧೫೧॥ ಇಂದ್ರಿಯವಿಷಯನಿರೂಪಣ । ಸ್ವಯೇ ಸಾಂಗತಾಹೇ ನಾರಾಯಣ । ಮುಖ್ಯತ್ವೇ ವಿಷಯ ಪಾಂಚ ಜಾಣ । ತಯಾಚೇ ಸಾಧನ ಗತ್ಯಾದಿಕ ॥೧೫೨॥

ಶಬ್ದಃ ಸ್ಪರ್ಶೋ ರಸೋ ಗಂಧೋ ರೂಪಂ ಚೇತ್ಯರ್ಥಜಾತಯಃ ।
ಗತ್ಯುಕ್ತ್ಯುತ್ಸರ್ಗಶಿಲ್ಪಾನಿ ಕರ್ಮಾಯತನಸಿದ್ಧಯಃ ॥೧೬॥

ಅರ್ಥ:- ಶಬ್ದ, ಸ್ಪರ್ಶ, ರೂಪ, ಗಂಧ ಮತ್ತು ರಸ ಇವು ಜ್ಞಾನೇಂದ್ರಿಯಗಳ ಕಾರ್ಯ, ಮಾತು, ಚಲನೆ, ಸೃಷ್ಟಿ ಮತ್ತು ಮಲವಿಸರ್ಜನೆ ಇವು ಕರ್ಮೇಂದ್ರಿಯಗಳ ಕಾರ್ಯ.

ಆದ್ದರಿಂದ ಅದಕ್ಕೆ ಪ್ರಕೃತಿಗಿಂತ ಭಿನ್ನತ್ವವು ಬರುವುದಿಲ್ಲ. ಈ ಪ್ರಕೃತಿಯು ಕಾರ್ಯಕಾರಣಗಳಿಂದ ಭಿನ್ನವಿಲ್ಲ ಎಂದು ತತ್ವಜ್ಞರು ಮಾನ್ಯಮಾಡುವರು ॥೧೪೫॥ ಪೂರ್ವದಲ್ಲಿ ಒಟ್ಟನಲ್ಲಿ ಇಪ್ಪತ್ತೆಂಟು ತತ್ವಗಳು ಇರುವುವು ಎಂದು ಇದು ಭಗವಂತನ ಮತವಾಗಿರುವುದು. ಇದನ್ನೇ ಮುಂದಿನ ಎರಡುವರೆ ಶ್ಲೋಕದಲ್ಲಿ ಪ್ರತಿಪಾದನೆಯನ್ನು ಮಾಡುವನು ॥೧೪೬॥

ಪ್ರಕೃತಿ,ಪುರುಷ, ಮಹತ್ತತ್ವ, ಪಂಚಮಹಾಭೂತಗಳು, ಅಹಂಕಾರ ಇವು ಇಪ್ಪತ್ತೆಂಟರಲ್ಲಿ ಒಂಬತ್ತು ತತ್ವಗಳಾಗಿರುವುವು. ಈಗ ಇತರ ತತ್ವಗಳ ವೈಭವವನ್ನು ಹೇಳುವೆನು, ಅದನ್ನು ಕೇಳು ॥೧೪೭॥

ಮುಖ್ಯವಾಗಿ ಐದು ಜ್ಞಾನೇಂದ್ರಿಯಗಳಿರುವುವು. ಎರಡನೇಯದಾಗಿ ಐದು ಕರ್ಮೇಂದ್ರಿಯಗಳಿರುವುವು. ಕರ್ಮೇಂದ್ರಿಯಗಳು ಇವು ಜ್ಞಾನೇಂದ್ರಿಯಗಳ ಆಧೀನವಾಗಿರುವುವು. ಇವುಗಳಿಗೆ ಸ್ವತಂತ್ರವಾದ ಚಾಲನೆ ಇರುವುದಿಲ್ಲ ॥೧೪೮॥ ಕುರುಡ ಮನುಷ್ಯನು ಕಾಲಿನಿಂದ ನಡೆಯಬಲ್ಲನು. ಕುಂಟನು ಕೇವಲ ಕಣ್ಣುಗಳಿಂದ ಕಾಣಬಲ್ಲನು. ಹೀಗಿರಲು ಕುರುಡನು ಕುಂಟನನ್ನು ತನ್ನ ಹೆಗಲಮೇಲೆ ಹೊತ್ತುಕೊಂಡರೆ, ಆಗ ಕುರುಡನಿಗೆ ಕುಂಟನು ಹೇಳಿಕೊಟ್ಟಂತೆ ನಡೆಯಲು ಸಾಧ್ಯವಾಗುವುದು ॥೧೪೯॥ ಇದರಂತೆಯೇ ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ಸಂಗತಿಯಾಗಿರುವುದು. ಆದ್ದರಿಂದ ಭಗವಂತನು ಜ್ಞಾನೇಂದ್ರಿಯಗಳಿಗೆ ಮುಖ್ಯತ್ವವನ್ನು ಕೊಟ್ಟಿರುವನು ॥೧೫೦॥ ಈಗ ಜ್ಞಾನೇಂದ್ರಿಯಗಳಿಗೆ ಮತ್ತು ಕರ್ಮೇಂದ್ರಿಯಗಳಿಗೆ ಚಾಲಕನಾಗಿ ಮನಸ್ಸು ಇರುವುದು. ಆದ್ದರಿಂದ ಯದುನಾಯಕನು ಹನ್ನೊಂದು ಇಂದ್ರಿಯಗಳೆಂದು ಹೇಳಿರುವನು ॥೧೫೧॥ ಈ ಇಂದ್ರಿಯಗಳನ್ನು ಕುರಿತು ಈಗ ಶ್ರೀಕೃಷ್ಣನು ಸ್ವತಃ ಹೇಳುವನು. ಮುಖ್ಯ ವಿಷಯಗಳು ಐದು ಇರುವುವು. ಗತಿ ಇತ್ಯಾದಿಗಳು ಈ ಯಾವ ವಿಷಯಗಳ ಸಾಧನೆಗಳಿರುವುವು ॥೧೫೨॥

ರಸಸ್ಪರ್ಶಾದಿ ಲಕ್ಷಣ । ಪಾಂಚಹೀ ವಿಷಯ ಹೇ ಜಾಣ । ಗತ್ಯಾದಿ ಕ್ರಿಯಾಚರಣ । ತೇ ಜಾಣ ಸಾಧನ ಯಾ ವಿಷಯಾಂಚೇ ॥೧೫೩॥ ದೃಷ್ಟಿ ರೂಪಾತೇ ಪ್ರಕಾಶೀ । ಚರಣ ಧಾಂವತೀ ತಯಾಪಾಶೀ । ಹಸ್ತ ಉದ್ಯತ ಘ್ಯಾವಯಾಸೀ । ರಸಸ್ಪರ್ಶಸಿದ್ಧೀಸೀ ವಿಷಯಾಂಚೇ ॥೧೫೪॥ ಏವಂ ಉಭಯ ಇಂದ್ರಿಯೀ ಜಾಣ। ವಿಷಯಪಾಂಚಚಿ ಪ್ರಮಾಣ । ನವ್ಹೇ ಅಧಿಕ ತತ್ತ್ವಗಣನ । ಸ್ವಯೇ ಶ್ರೀಕೃಷ್ಣ ಸಾಂಗತ ॥೧೫೫॥ ನವ ಏಕಾದಶ ತತ್ತ್ವ ಲಕ್ಷಣ । ಮಾಗಾ ದೋ ಶ್ಲೋಕೀ ಕೇಲೇ ನಿರೂಪಣ । ಯೇಣೇ ಶ್ಲೋಕೇ ಪರಮ ಪ್ರಮಾಣ। ವಿಷಯ ಜಾಣ ಪಾಂಚಚಿ ॥೧೫೬॥ ಕೇವಳ ಜ್ಞಾನೇಂದ್ರಿಯೀ ಭೋಗು ನವ್ಹೇ । ಕರ್ಮೇಂದ್ರಿಯೀಹೀ ಭೋಗ ನ ಘಾವೇ । ಉಭಯ ಸಂಯೋಗೇ ಭೋಗ ಪಾವೇ । ಪರೀ ವಿಷಯ ಆಘವೇ ಪಾಂಚಚಿ ॥೧೫೭॥ ಇಹೀ ಪಾಂಚ ವಿಷಯೀ ಆಪಣ । ವ್ಯಾಪಿಲೇ ಚತುರ್ದಶ ಭುವನ । ಸುರಾಸುರ ಭುಲವಿಲೇ ಜಾಣ । ಯಾಂಚೇ ಗೋಡಪಣ ಮಾರಕ ॥೧೫೮॥ ಜೇವೀ ಕಾ ಮೈಂದ ಗೋಡಪಣೇ । ಸಂಗತೀ ಲಾಗೋನಿ ಜೀವ ಘೇಣೇ । ತೇವೀ ವಿಷಯ ಸಂಗಾಚೇ ಸಾಜಣೇ । ಬಾಂಧೋನಿ ನೇಣೇ ನರಕಾಸೀ ॥೧೫೯॥ ನರಕೀ ನಿರಯ ಭೋಗಿತೀ । ತೇಥಹೀ ನ ಸೋಡೀ ವಿಷಯಾಸಕ್ತೀ । ಯಾ ವಿಷಯಾಐಸಾ ವಿಶ್ವಾಸಘಾತೀ। ಆನ ತ್ರಿಜಗತೀ ಅಸೇನಾ ॥೧೬೦॥ ತೇಹೇ ಪಂಚ ವಿಷಯ ಪ್ರಮಾಣ । ಪಾಂಚಚಿ ಪರೀ ಅತಿದಾರುಣ । ಬ್ರಹ್ಮಾದಿಕ ನಾಡಲೇ ಜಾಣ । ಇತರಾಂಚಾ ಕೋಣ ಪರಿಪಾಡು ॥೧೬೧॥ ವಿಷಯಾಂಚೇ ಜೇ ಗೋಡಪಣ। ತೇ ವಿಖಾಹೂನಿ ದಾರುಣ । ವಿಷ ಏಕದಾ ಆಣೇ ಮರಣ। ಪುನಃ ಪುನಃ ಮಾರಣ ವಿಷಯಾಂಚೇ ॥೧೬೨॥ ಪುಢತೀ ಜನ್ಮ ಪುಢತೀ ಮರಣ। ಹೇ ವಿಷಯಾಸ್ತವ ಘಡೇ ಜಾಣ । ಸಂಸಾರಾಚೇ ಸಬಳಪಣ । ವಿಷಯಾಧೀನ ಉದ್ಧವಾ ॥೧೬೩॥ ಜೇಥ ವಿಷಯಾಂಚಾ ವಿಷಯತ್ಯಾಗು । ತೇಥೇ ಉನ್ಮಳೇ ಭವರೋಗು । ತ್ಯಾಚಾ ಆಂದಣಾ ಮೀ ಶ್ರೀರಂಗು । ಜ್ಯಾಸೀ ವಿಷಯಭೋಗು ನಾವಡೇ ॥೧೬೪॥ ತೇ ಹೇ ಪಂಚ ವಿಷಯ ಗಾ ಜಾಣ । ತುಜ ಮ್ಯಾ ಕೇಲೇ ನಿರೂಪಣ । ಆತಾ ತ್ರಿಗುಣಾಂಚೇ ಲಕ್ಷಣ । ಐಕ ಸಾವಧಾನ ಸಾಂಗತೋ ॥೧೬೫॥ ಉತ್ಪತ್ತಿ ಸ್ಥಿತಿ ನಿರ್ದಳಣ। ತ್ರಿಗುಣಾಂಸ್ತವ ಘಡೇ ಜಾಣ । ಯಾಲಾಗೀ ಸ್ವಯೇ ಶ್ರೀಕೃಷ್ಣ । ತಿನ್ಹೀ ಗುಣ ಅಂಗೀಕಾರೀ ॥೧೬೬॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಹೀಗೆ ಐದು ವಿಷಯಗಳಿರುವುವು. ಅವುಗಳಿಗೆ ಬರುವಿಕೆ, ಹೋಗುವಿಕೆ ಇತ್ಯಾದಿ ಇರುವ ಯಾವ ಕ್ರಿಯೆಗಳು ಅವು ಈ ವಿಷಯಗಳ ಸಾಧನೆಯಾಗಿರುವುವು ॥೧೫೩॥ ದೃಷ್ಟಿಯು ರೂಪವನ್ನು ತೋರಿಸುತ್ತಲೇ ಚರಣಗಳು ಆ ವಿಷಯಗಳತ್ತ ಧಾವಿಸುವುವು. ರಸ ವಿಷಯ ಹಾಗೂ ಸ್ಪರ್ಶ ಸುಖ ಇತ್ಯಾದಿ ಭೋಗಿಸಲು ಹಸ್ತಗಳು ಮುಂದಾಗುವುವು ॥೧೫೪॥ ಈ ಪ್ರಕಾರವಾಗಿ ಜ್ಞಾನ ಮತ್ತು ಕರ್ಮ ಈ ಎರಡೂ ಪ್ರಕಾರದ ಇಂದ್ರಿಯಗಳ ಐದು ಮಾತ್ರ ಪ್ರಮಾಣಭೂತವಾದ ವಿಷಯಗಳಿರುವುವು. ಇದಕ್ಕಿಂತಲೂ ಇವುಗಳ ಸಂಖ್ಯೆಯು ಹೆಚ್ಚಿಗೆ ಇರುವುದಿಲ್ಲ. ಹೀಗೆ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೧೫೫॥ ಒಂಬತ್ತು ಮತ್ತು ಹನ್ನೊಂದು ತತ್ವಗಳ ಲಕ್ಷಣಗಳನ್ನು ಈ ಹಿಂದಿನ ಎರಡು ಶ್ಲೋಕಗಳಲ್ಲಿ ಪ್ರತಿಪಾದನೆಯನ್ನು ಮಾಡಲ್ಪಟ್ಟಿರುವುದು. ಈ ಎರಡು ಶ್ಲೋಕಗಳ ಆಧಾರದಿಂದ ಐದು ವಿಷಯಗಳು ಸಿದ್ಧವಾಗುವುವು ॥೧೫೬॥ ಕೇವಲ ಜ್ಞಾನೇಂದ್ರಿಯಗಳಿಗೆ ವಿಷಯಗಳ ಉಪಭೋಗವನ್ನು ಪಡೆಯಲು ಆಗುವುದಿಲ್ಲ. ಅಥವಾ ಕೇವಲ ಕರ್ಮೇಂದ್ರಿಯಗಳಿಗೆ ಅವುಗಳನ್ನು ಪ್ರಾಪ್ತ ಮಾಡಿಕೊಳ್ಳಲು ಆಗುವುದಿಲ್ಲ. ಇವು ಎರಡರ ಸಂಯೋಗವಾದಾಗ ಮಾತ್ರ ಆಗ ವಿಷಯಗಳ ಉಪಭೋಗವನ್ನು ಪಡೆಯಲು ಬರುವುದು. ವಿಷಯಗಳು ಇವು ಕೇವಲ ಐದು ಮಾತ್ರ ಇರುವುವು ॥೧೫೭॥ ಈ ಐದು ವಿಷಯಗಳು ಹದಿನಾಲ್ಕು ಲೋಕಗಳಲ್ಲಿಯೂ ವ್ಯಾಪಿಸಿಕೊಂಡಿರುವುವು. ಇವುಗಳ ಮಧುರತ್ವವು ನಿಜವಾಗಿಯೂ ಮಾರಕವಾಗಿರುವುದು. ಈ ವಿಷಯಗಳು ಸುರನರರಿಗೆ ಮೋಹಿಸಿಬಿಟ್ಟಿರುವುವು ॥೧೫೮॥ ಠಕ್ಕ ಜನರು ವಿಶ್ವಾಸವನ್ನು ಮೂಡಿಸಿ ನಮ್ಮ ಸಂಗತಿಯನ್ನು ಮಾಡುವರು. ಸಮಯ ಸಿಕ್ಕಾಗ ಪ್ರಾಣವನ್ನೇ ತೆಗೆದುಕೊಳ್ಳುವರು. ಅದರಂತೆ ವಿಷಯಗಳ ಸಂಗವು ಈ ಜೀವವನ್ನು ಕಟ್ಟಿ ಹಾಕಿ ನರಕಕ್ಕೆ ನೂಕಿ ಬಿಡುವುದು ॥೧೫೯॥ ಜೀವವು ಇದು ನರಕದಲ್ಲಿ ಅನೇಕ ಪ್ರಕಾರದ ಭಯಂಕರವಾದ ಯಾತನೆಗಳನ್ನು ಭೋಗಿಸುತ್ತಿದ್ದರೂ ಕೂಡ ಅಲ್ಲಿಯೂ ವಿಷಯಗಳ ಆಸಕ್ತಿಯನ್ನು ಬಿಟ್ಟುಕೊಡುವುದಿಲ್ಲ. ವಿಷಯಗಳಂತಹ ವಿಶ್ವಾಸಘಾತಕಿಯು ಈ ಮೂರು ಲೋಕಗಳಲ್ಲಿ ಬೇರೆ ಯಾರೂ ದೊರೆಯವುದಿಲ್ಲ ॥೧೬೦॥ ಹೀಗೆ ವಿಷಯಗಳು ಗಣತಕ್ಕೆ ಮಾತ್ರ ಐದೇ ಇರುವುವು. ಆದರೆ ಇವು ಮಹಾಭಯಂಕರವಾಗಿರುವುವು. ಈ ವಿಷಯಗಳಿಂದ ಬ್ರಹ್ಮದೇವರಂತಹವರು ಸಂಕಟದಲ್ಲಿ ಬೀಳುತ್ತಿರುವರು. ಅಂದ ಮೇಲೆ ಇತರರ ಯಾವ ಕಥೆ? ॥೧೬೧॥ ವಿಷಯಗಳ ಸೇವನೆಯು ವಿಷ ಸೇವನೆಕ್ಕಿಂತಲೂ ಮಹಾ ಘಾತಕವಾಗಿರುವುದು. ಏಕೆಂದರೆ ವಿಷದಿಂದ ಒಮ್ಮೆ ಮಾತ್ರ ಮರಣವಾಗುವುದು. ಆದರೆ ಈ ವಿಷಯಗಳು ಪುನಃ ಪುನಃ ಜನ್ಮ ಮರಣಗಳನ್ನು ಭೋಗಿಸಲು ಹಚ್ಚುವುವು ॥೧೬೨॥ ಜನ್ಮ ಮರಣದ ಚಕ್ರವು ಇದು ವಿಷಯಗಳಿಂದಲೇ ಪ್ರಾಪ್ತವಾಗುವುದು. ಹೇ ಉದ್ಧವನೇ, ವಿಷಯಗಳಿಂದಲೇ ಈ ಯಾವ ಸಂಸಾರವು ಪ್ರಬಲವಾಗುತ್ತಿರುವುದು ॥೧೬೩॥ ಈ ವಿಷಯಗಳ ತ್ಯಾಗವಾದಾಗ ಮಾತ್ರ ಸಂಸಾರರೂಪ ರೋಗದ ಪೂರ್ಣ ನಾಶವಾಗುವುದು. ಯಾರಿಗೆ ವಿಷಯ ಭೋಗವು ಪ್ರಿಯವಾಗುವುದಿಲ್ಲವೋ, ಅವರಲ್ಲಿ ಶ್ರೀಕೃಷ್ಣನಾದ ನಾನು ದಾಸನಾಗಿ ಇರುವೆನು ॥೧೬೪॥ ಈ ಪ್ರಕಾರವಾಗಿ ಐದು ವಿಷಯಗಳನ್ನು ನಾನು ನಿನಗೆ ಹೇಳಿದೆನು. ಈಗ ಮೂರು ಗುಣಗಳ ಲಕ್ಷಣಗಳನ್ನು ಹೇಳುವೆನು. ಅದನ್ನು ಏಕಾಗ್ರ ಚಿತ್ತದಿಂದ ಶ್ರವಣವನ್ನು ಮಾಡು ॥೧೬೫॥ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವು ತ್ರಿಗುಣಗಳಿಂದಾಗುವುವು. ಆದ್ದರಿಂದ ಶ್ರೀಕೃಷ್ಣನು ಮೂರೂ ಗುಣಗಳ ಸ್ವೀಕಾರ ಮಾಡುವನು ॥೧೬೬॥

ಅಂಗಿಕಾರೂನಿ ತಿನ್ಹೀ ಗುಣ । ಅಠ್ಠಾವೀಸ ತತ್ತ್ವೇ ಕೇಲೀ ಪೂರ್ಣ । ಹೇ ಕೃಷ್ಣಸಂಮತ ಲಕ್ಷಣ । ಉದ್ಧವಾ ಜಾಣ ನಿಶ್ಚಿತ ॥೧೬೭॥ ತ್ರಿಗುಣಗುಣೇವೀಣ ಪ್ರಕೃತೀ । ಸೃಷ್ಟಿಸರ್ಜನೀ ನಾಹೀ ಶಕ್ತೀ । ಗುಣದ್ವಾರಾ ಉತ್ಪತ್ತಿಸ್ಥಿತೀ । ಸಂಹಾರೀ ಅಂತೀ ಸ್ವಕಾರ್ಯೇ ॥೧೬೮॥ ತೇಚಿ ಅರ್ಥೀಂಚೇ ನಿರೂಪಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಕಾರ್ಯಕಾರಣಲಕ್ಷಣ । ಯಥಾರ್ಥ ಜಾಣ ವಿಭಾಗ ॥೧೬೯॥

ಸರ್ಗಾದೌ ಪ್ರಕೃತಿರ್ಹ್ಯಸ್ಯ ಕಾರ್ಯಕಾರಣರೂಪಿಣೀ । ಸತ್ತ್ವಾದಿಭಿರ್ಗುಣೈರ್ಧತ್ತೆ ಪುರುಷೋಽವ್ಯಕ್ತ ಈಕ್ಷತೆ ॥೧೭॥

ಅರ್ಥ:- ಸೃಷ್ಟಿಯ ಆರಂಭದಲ್ಲಿ ಹನ್ನೊಂದು ಇಂದ್ರಿಯಗಳು, ಪಂಚಮಹಾಭೂತಗಳು ಮತ್ತು ಕಾರಣ ಮಹತ್ತತ್ತ್ವ ಈ ರೂಪದಿಂದ ಪ್ರಕೃತಿಯು ಇರುವುದು. ಅದು ಸತ್ವಗುಣ, ರಜೋಗುಣ ಮತ್ತು ತಮೋಗುಣ ಇವುಗಳ ಸಹಾಯದಿಂದ ಜಗತ್ತಿನ ಉತ್ಪತ್ತಿ ಸ್ಥಿತೀ ಮತ್ತು ಸಂಹಾರ ಸಂಬಂಧವಾದ ಅವಸ್ಥೆಯನ್ನು ಧರಿಸುವುದು. ಅವ್ಯಕ್ತ ಪುರುಷನು ಪ್ರಕೃತಿ ಮತ್ತು ಅದರ ಅವಸ್ಥೆಗೆ ಕೇವಲಸಾಕ್ಷಿಮಾತ್ರನಾಗಿ ಇರುವನು.

ಪ್ರಕೃತೀ ಪಾಸಾವ ವಿಕಾರಮೇಳಾ । ತ್ರಿಗುಣಾಂಚಿಯಾ ಗುಣಲೀಳಾ । ಸಾತಕಾರಣೇ ಕಾರ್ಯೇ ಸೋಳಾ । ಐಕ ವೇಗಳಾ ವಿಭಾಗ ॥೧೭೦॥ ಮಹದಹಂಕಾರಮಹಾಭೂತೇ । ಸಾತಹೀ ''ಕಾರಣೇ'' ನಿಶ್ಚಿತೇ । ಅಕರಾ ಇಂದ್ರಿಯೇ ವಿಷಯಯುಕ್ತೇ । ಜಾಣಾವೀ ಯೇಥೇ ''ಕಾರ್ಯೇ'' ಸೋಳಾ ॥೧೭೧॥ ಯಾಪರೀ ನಿಜಪ್ರಕೃತೀ ।ರಜೋಗುಣಾತೇ ಧರೋನಿ ಹಾತೀ । ಕಾರ್ಯಕಾರಣಾಂಚಿಯಾ ಯುಕ್ತೀ । ಕರೀ ಉತ್ಪತ್ತೀ ಸೃಷ್ಟೀಚೀ ॥೧೭೨॥ ಸೃಜಿಲಿಯೇ ಸೃಷ್ಟೀಸೀ ಜಾಣ। ಸತ್ತ್ವಗುಣೇ ಕರೀ ಪಾಲನ । ತಮೋಗುಣ ನಿರ್ದಳಣ । ಪ್ರಕೃತೀ ಆಪಣ ಸ್ವಯೇ ಕರೀ ॥೧೭೩॥ ಪುರುಷೇ ನ ಕರಿತಾ ''ಈಕ್ಷಣ'' । ಉತ್ಪತ್ತೀ ಸ್ಥಿತೀ ನಿರ್ದಳಣ । ಪ್ರಕೃತೀಚೇನಿ ನವ್ಹೇ ಜಾಣ । ತೇಹೀ ಉಪಲಕ್ಷಣ ಅವಧಾರೀ ॥೧೭೪॥ ಹಾತ ಪಾಯ ನ ಲಾವಿತಾ ಜಾಣ । ಕೇವಳ ಕೂರ್ಮೀಚೇ ಅವಲೋಕನ । ಕರೀ ಪಿಲಿಯಾಂಚೇ ಪಾಲನ । ತೈಸೇ ಈಕ್ಷಣ ಪುರುಷಾಚೇ ॥೧೭೫॥ ಕಾ ಸೂರ್ಯಾಚಿಯಾ ನಿಜಕಿರಣೇ । ಜೇವೀ ಅಗ್ನಿ ತೇ ಸ್ರವೇ ಮಣೀ । ತೇಣೇ ಸ್ವಧರ್ಮಕರ್ಮೇ ಬ್ರಾಹ್ಮಣೇ । ಕೀಜೇ ಯಜ್ಞಾಚರಣೇ ಮಹಾಯಾಗು ॥೧೭೬॥ ತೈಸೇ ಹೇ ಜಾಣ ಚಿನ್ಹ । ಯೇಣೇ ಹೋಯ ಕಾರ್ಯಕಾರಣ । ಚಾಲೇ ಸ್ವಧರ್ಮ ಆಚರಣ। ಯಾಪರೀ ಜಾಣ ಉದ್ಧವಾ ॥೧೭೭॥ ಐಸೇ ಚಾಲತಾ ಪ್ರಕೃತಿ ಪರ । ಬ್ರಾಹ್ಮಣ ಕರಿತೀ ಸ್ವಾಚಾರ । ತೇಣೇ ವೃದ್ಧಿ ಕರ್ಮಾಚಾರ । ಪರಾಪರ ಉದ್ಧವಾ ॥೧೭೮॥ ತೇವೀ ಪುರುಷಾಚೇ ಈಕ್ಷಣ । ಪ್ರಕೃತಿ ಲಾಹೋನಿ ಆಪಣ । ಉತ್ಪತ್ತಿಸ್ಥಿತೀನಿರ್ದಳಣ । ಕರಾವಯಾ ಪೂರ್ಣ ಸಾಮರ್ಥ್ಯ ಪಾವೇ ॥೧೭೯॥

ಹೇ ಉದ್ಧವಾ, ಈ ಮೂರು ಗುಣಗಳನ್ನು ಸ್ವೀಕರಿಸಿ ಇಪ್ಪತ್ತೆಂಟು ತತ್ವಗಳು ಪೂರ್ಣವಾದವು. ಇದು ಶ್ರೀಕೃಷ್ಣನಿಗೆ ಮಾನ್ಯವಾಗಿರುವ ಲಕ್ಷಣಗಳಾಗಿರುವುವು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೬೭॥ ತ್ರಿಗುಣರಹಿತ ಪ್ರಕೃತಿಗೆ ಸೃಷ್ಟಿಯನ್ನು ಮಾಡುವ ಸಾಮರ್ಥ್ಯವು ಇರುವುದಿಲ್ಲ. ಗುಣಗಳ ಆಧಾರದಿಂದ ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಕಾರ್ಯಗಳನ್ನು ಅದು ಮಾಡುತ್ತಿರುವುದು ॥೧೬೮॥ ಇದೇ ಅರ್ಥದಿಂದ ಕಾರ್ಯಕಾರಣಗಳ ಲಕ್ಷಣಗಳನ್ನು ಯಥಾರ್ಥ ರೀತಿಯಲ್ಲಿ ಶ್ರೀಕೃಷ್ಣನು ಸ್ವತಃ ನಿರೂಪಣೆಯನ್ನು ಮಾಡುವನು ॥೧೬೯॥

ಪ್ರಕೃತಿಯಿಂದ ಸರ್ವ ವಿಕಾರಗಳು, ತ್ರಿಗುಣಗಳ ನಾನಾ ವಿಧವಾದ ಲೀಲೆಗಳು ಮತ್ತು ಹದಿನಾರು ಕಾರ್ಯಗಳು ಉತ್ಪನ್ನವಾಗುವುವು. ಇವುಗಳ ಭಿನ್ನ ಭಿನ್ನ ವಿಭಾಗಗಳನ್ನು ಹೇಳುವೆನು, ಅದನ್ನೀಗ ಕೇಳು ॥೧೭೦॥ ಮಹತ್ತತ್ತ್ವ, ಅಹಂಕಾರ ಮತ್ತು ಪಂಚಮಹಾಭೂತಗಳು ಇವು ಏಳು ಕಾರಣಗಳಿರುವುವು. ಮನವನ್ನು ಕೂಡಿಸಿ ಹನ್ನೊಂದು ಇಂದ್ರಿಯಗಳು ಹಾಗೂ ಐದು ವಿಷಯಗಳು ಕೂಡಿ ಹದಿನಾರು ಕಾರ್ಯಗಳಾದವು ॥೧೭೧॥ ಈ ಪ್ರಕಾರದ ಈ ಪ್ರಕೃತಿಯು ರಜೋಗುಣದ ಕೈಯನ್ನು ಹಿಡಿದು ಕಾರ್ಯ ಕಾರಣರೂಪದಿಂದ ಸೃಷ್ಟಿಯ ಉತ್ಪತ್ತಿಯನ್ನು ಮಾಡುವುದು ॥೧೭೨॥ ಸೃಷ್ಟಿಯ ಉತ್ಪನ್ನವನ್ನು ಮಾಡಿದ ನಂತರ ಪ್ರಕೃತಿಯು ಸ್ವತಃವೇ ಸತ್ವಗುಣದಿಂದ ಅದರ ಪಾಲನೆಯನ್ನು ಮಾಡುವುದು ಮತ್ತು ತಮೋಗುಣದಿಂದ ಸಂಹಾರವನ್ನು ಮಾಡುವುದು ॥೧೭೩॥ ಆದರೆ ಪುರುಷನು ಈಕ್ಷಣೆಯನ್ನು ಮಾಡದಿದ್ದರೆ, ಆಗ ಪ್ರಕೃತಿಗೆ ಉತ್ಪತ್ತೀ,ಸ್ಥಿತೀ ಮತ್ತು ಲಯ ಇವುಗಳನ್ನು ಮಾಡಲು ಬರುವುದಿಲ್ಲ. ಇದಕ್ಕಾಗಿ ಕಾರಣವನ್ನು ಕೇಳು ॥೧೭೪॥ ಆಮೆಯು ತನ್ನ ಕೈಕಾಲುಗಳನ್ನು ಅಲ್ಲಾಡಿಸುವುದಿಲ್ಲ. ಕೇವಲ ಅವಲೋಕನವನ್ನು ಮಾಡಿ ತನ್ನ ಮರಿಗಳ ಪಾಲನೆಯನ್ನು ಮಾಡುತ್ತಿರುತ್ತದೆ.ಅದರಂತೆ ಪುರುಷನು ಕೇವಲ ಅವಲೋಕನೆಯಿಂದ ಪ್ರಕೃತಿಗೆ ಚೈತನ್ಯಮಯವನ್ನಾಗಿ ಮಾಡುವನು ॥೧೭೫॥ ಸೂರ್ಯನ ಕಿರಣಗಳಿಂದ ಸೂರ್ಯಕಾಂತ ಮಣಿಯಲ್ಲಿ ಅಗ್ನಿಯು ಉತ್ಪನ್ನವಾಗುವುದು ಮತ್ತು ಇದರ ಆಧಾರದಿಂದ ಬ್ರಾಹ್ಮಣರು ತಮ್ಮ ಸ್ವಧರ್ಮದಿಂದ ಯಜ್ಞಯಾಗಗಳನ್ನು ಅಥವಾ ದೊಡ್ಡ ದೊಡ್ಡ ಹೋಮಗಳನ್ನು ಮಾಡುತ್ತಿರುವರು ॥೧೭೬॥ ಉದ್ಧವಾ, ಇದೂ ಕೂಡ ಇದೇ ಪ್ರಕಾರದ ಲಕ್ಷಣವಾಗಿದೆ. ಈ ರೀತಿಯಲ್ಲಿ ಕಾರ್ಯ ಮತ್ತು ಕಾರಣ ಉತ್ಪನ್ನವಾಗಿ ಸ್ವಧರ್ಮಗಳ ಆಚರಣೆಗಳು ನಡೆಯುತ್ತಿರುವುವು ॥೧೭೭॥ ಹೇ ಉದ್ಧವಾ, ಈ ಪ್ರಕಾರವಾಗಿ ಪ್ರಕೃತಿಯ ಆಧೀನರಾಗಿ ಬ್ರಾಹ್ಮಣರು ಸ್ವಧರ್ಮಾಚರಣೆಗಳನ್ನು ಮಾಡುವರು. ಇದರಿಂದ ಉಚ್ಚ ನೀಚ ಕರ್ಮಗಳ ವೃದ್ಧಿಯಾಗುತ್ತಿರುವುದು ॥೧೭೮॥ ಈ ಪ್ರಕಾರವಾಗಿ ಪ್ರಕೃತಿಗೆ ಪುರುಷನ ಈಕ್ಷಣೆಯಿಂದ ಉತ್ಪತ್ತೀ, ಸ್ಥಿತೀ ಮತ್ತು ಲಯ ಮಾಡುವ ಸಾಮ್ಯರ್ಥ್ಯವು ಪ್ರಾಪ್ತವಾಗುವುದು ॥೧೭೯॥

ಛಾಯಾಮಂಡಪೀಚೇ ವಿಚಿತ್ರ ಸೈನ್ಯ । ದಿಸಾವಯಾ ದೀಪಚಿ ಕಾರಣ । ತೇವೀ ಪ್ರಕೃತಿಕಾರ್ಯಾಸೀ ಜಾಣ । ಕೇವಳ ಈಕ್ಷಣ ಪುರುಷಾಚೇ ।।೧೮೦।। ಜಗಾಚೇ ಆದಿಕಾರಣ । ಪ್ರಕೃತಿ ಹೋಯ ಗಾ ಆಪಣ। ಪ್ರಕೃತಿ ಪ್ರಕಾಶೀ ಪುರುಷ ಜಾಣ । ತೋ ಮಹಾಕಾರಣ ಯಾ ಹೇತು ।।೧೮೧।। ಪ್ರಕೃತಿ ವ್ಯಕ್ತ ಪುರುಷ ಅವ್ಯಕ್ತ । ಹೇ ವಿಕಾರೀ ತೋ ವಿಕಾರರಹಿತ । ಹೇ ಗುಣಮಯೀ ಗುಣಭರಿತ । ತೋ ಗುಣಾತೀತ ನಿಜಾಂಗೇ ।।೧೮೨।। ಪ್ರಕೃತಿ ಸ್ವಭಾವೇ ಚಂಚಳ । ಪುರುಷ ಅವ್ಯಯತ್ವೇ ಅಚಳ । ಪ್ರಕೃತಿ ಬದ್ಧತ್ವೇ ಶಬಳ । ಪುರುಷ ಕೇವಳ ಬಂಧಾತೀತ ।।೧೮೩।। ಪ್ರಕೃತಿ ಸ್ವಭಾವೇ ಸದಾ ಶೂನ್ಯ । ಪುರುಷ ಕೇವಳ ಚೈತನ್ಯಘನ । ಪ್ರಕೃತೀಸ ಹೋಯ ಅವಸಾನ । ಪುರುಷ ತೋ ಜಾಣ ಅನಂತ ।।೧೮೪।। ಪ್ರಕೃತಿ ಕೇವಳ ನಿರಾನಂದ । ಯಾಲಾಗೀ ತೇಥ ವಿಷಯಚ್ಛಂದ । ಪುರುಷ ಪೂರ್ಣ ಪರಮಾನಂದ । ವಿಷಯಕಂದಚ್ಛೇದಕ ।।೧೮೫।। ಪ್ರಕೃತಿಪುರುಷಾಂಚೇ ವೇಗಳೇಪಣ । ತುಜ ಮ್ಯಾ ಸಾಂಗಿತಲೇ ಸಂಪೂರ್ಣ । ಹೇಚಿ ಪರಮಾರ್ಥಾಚೇ ನಿಜಖೂಣ । ಪುರುಷ ತೋ ಭಿನ್ನ ಪ್ರಕೃತೀಸೀ ।।೧೮೬।। ತೇಚಿ ಜಾಣಾವಯಾ ವಿಶದ । ನಾನಾ ಮತಾಂಚೇ ಮತವಾದ । ತ್ಯಾ ಮತಾಂಚಾ ಮತಪ್ರಬೋಧ । ತುಜ ಮೀ ಶುದ್ಧ ಸಾಂಗೇನ ।।೧೮೭।।

ವ್ಯಕ್ತಾದಯೋ ವಿಕುರ್ವಾಣಾ ಧಾತವಃ ಪುರುಷೇಕ್ಷಯಾ । ಲಬ್ಧಾವೀರ್ಯಾಃ ಸೃಜಂತ್ಯಂಡಂಸಹಂತಾಃ ಪ್ರಕೃತೇರ್ಬಲಾತ್ ।।೧೮।।

ಅರ್ಥ:- ಪ್ರಕೃತಿಯಿಂದ ಉತ್ಪನ್ನವಾಗಿರುವ ಯಾವ ಮಹದಾದಿ ಧಾತೂ ವಿಕಾರವಾಗುತ್ತಿರಲು ಪುರುಷನ ಈಕ್ಷಣೆಯಿಂದ ಸಮರ್ಥ ಹಾಗೂ ಪರಸ್ಪರ ಸಂಹತವಾಗಿ ಪ್ರಕೃತಿಯ ಆಶ್ರಯವನ್ನು ಪಡೆದು ಬ್ರಹ್ಮಾಂಡಗಳ ಉತ್ಪನ್ನವಾಗುವುವು.

ಪುರುಷೇಕ್ಷಣ ಝಾಲಿಯಾ ಪ್ರಾಪ್ತ । ಮಹದಹಂಕಾರಾದಿ ಪದಾರ್ಥ । ಪ್ರಕೃತಿಬಳೇ ಸಮಸ್ತ । ಏಕತ್ರ ಹೋತಬ್ರಹ್ಮಾಂಡೇ ।।೧೮೮।। ಪುರುಷಾವಲೋಕೇ ವೀರ್ಯಪ್ರಾಪ್ತೀ । ಲಾಹೋನಿ ಬ್ರಹ್ಮಾಂಡಾಂತೇ ಧರಿತೀ । ಯಾಲಾಗೀ ಯಾತೇ ''ಧಾತೂ'' ಮ್ಹಣತೀ । ಜಾಣ ನಿಶ್ಚಿತೀ ಉದ್ಧವಾ ।।೧೮೯।। ಹೇ ಸಾಮಾನ್ಯತಾ ನಿರೂಪಣ । ತುಜ ಮ್ಯಾ ಸಾಂಗಿತಲೇ ಆಪಣ । ಜೇ ನಾನಾ ಮತವಾದೀ ಜಾಣ । ವಿಶೇಷ ಲಕ್ಷಣ ಬೋಲತೀ ।।೧೯೦।।

ಸಪ್ತೈವ ಧಾತವ ಇತಿ ತತ್ರಾರ್ಥಾಃ ಪಂಚ ಖಾದಯಃ । ಜ್ಞಾನಮಾತ್ಮೋಭಯಾಧಾರಸ್ತತೋ ದೇಹೇಂದ್ರಿಯಾಸವಃ ।।೧೯।।

ಅರ್ಥ:- ಕೆಲವು ಜನರು ತತ್ವಗಳ ಸಂಖ್ಯೆಯನ್ನು ಏಳು ಎಂದು ಸ್ವೀಕರಿಸುವರು. ಅವರ ವಿಚಾರದಂತೆ ಆಕಾಶ,ವಾಯು, ತೇಜ, :ಲ ಮತ್ತು ಪೃಥ್ವೀ ಇವು ಐದು ಭೂತಗಳು, ಜೀವವು ಆರನೆಯದು, ಏಳನೆಯವನು ಪರಮಾತ್ಮನು. ಈ ಏಳು ತತ್ವಗಳಿಂದ ದೇಹ, ಇಂದ್ರಿಯಗಳು, ಪ್ರಾಣ ಇತ್ಯಾದಿ ಸರ್ವಕಾರ್ಯಗಳು ಉತ್ಪನ್ನವಾಗುವುವು.

ಪರದೆಯ ಮೇಲೆ ದೀಪದ ಪ್ರಕಾಶದಿಂದ ತೋರಿಸಲ್ಪಡುವ ಚಿತ್ರಗಳಿಂದ ವಿವಿಧ ಸೈನ್ಯಗಳು ಕಾಣುವುದಕ್ಕೆ ದೀಪವೇ ಕಾರಣೀಭೂತವಾಗಿರುವುದು. ಅದರಂತೆ ಪ್ರಕೃತಿಯ ಕಾರ್ಯಗಳಿಗೆ ಪುರುಷನ ಈಕ್ಷಣೆಯೇ ಕಾರಣೀಭೂತವಾಗಿರುವುದು ।।೧೮೦।। ಜಗತ್ತಿನ ಆದಿಕಾರಣ ಈ ಪ್ರಕೃತಿಯಾಗಿರುವುದು ಆದರೆ ಈ ಪ್ರಕೃತಿಯು ಪುರುಷನಿಂದ ಪ್ರಕಾಶಿಸಲ್ಪಡುವುದು. ಆದ್ದರಿಂದ ಪುರುಷನು ಮಹತ್ತತ್ವ ಕಾರಣನಾಗಿರುವನು ।।೧೮೧।। ಪ್ರಕೃತಿಯು ದೃಶ್ಯವಾಗಿರುವುದು ಆದರೆ ಪುರುಷನು ಅದೃಶ್ಯನಾಗಿರುವನು. ಪ್ರಕೃತಿಯು ಇದು ವಿಕಾರಿಯಾಗಿರುವುದು. ಆದರೆ ಪುರುಷನು ಅವಿಕಾರಿಯಾಗಿರುವನು ಪ್ರಕೃತಿಯು ಗುಣಯುಕ್ತವಾಗಿರುವುದು ಆದರೆ ಪುರುಷನು ಸ್ವತಃ ಸಿದ್ಧ ಗುಣಾತೀತನಾಗಿರುವನು ।।೧೮೨।। ಪ್ರಕೃತೀ ಇದು ಸ್ವಭಾವದಿಂದ ಚಂಚಲವಾಗಿರುವುದು. ಆದರೆ ಪುರುಷನು ಅವ್ಯಯನಾಗಿರುವುದರಿಂದ ಅಚಲನಾಗಿರುವನು. ಪ್ರಕೃತಿಯು ಇದು ಮಾಯೆಯ ಉಪಾಧಿಯಿಂದ ಬದ್ಧವಾಗಿರುವುದು. ಆದರೆ ಪುರುಷನು ಬಂಧಾತೀತನಾಗಿರುವನು ।।೧೮೩।। ಪ್ರಕೃತಿಯ ಸ್ವಭಾವವು ಶೂನ್ಯ ಅಂದರೆ ಜಡವಾಗಿರುವುದು. ಆದರೆ ಪುರುಷನು ಕೇವಲ ಚೈತನ್ಯಘನನಾಗಿರುವನು. ಪ್ರಕೃತಿಗೆ ಅಂತವಿರುವುದು. ಆದರೆ ಪುರುಷನು ಅನಂತನಾಗರಿವನು ।।೧೮೪।। ಪ್ರಕೃತಿಯು ಇದು ಆನಂದರಹಿತವಾಗಿರುವುದರಿಂದ ಅದರಲ್ಲಿಯೇ ವಿಷಯಗಳ ಛಂದವಿರುವುದು. ಪುರುಷನು ಪರಿಪೂರ್ಣ ಪರಮಾನಂದರೂಪನು. ಆದ್ದರಿಂದ ಈತನು ವಿಷಯಗಳ ಛೇದಕನಾಗಿರುವನು ।।೧೮೫।। ಈ ಪ್ರಕಾರವಾಗಿ ಪ್ರಕೃತಿ ಮತ್ತು ಪುರುಷರ ಭಿನ್ನ ಭಿನ್ನಸ್ವರೂಪದಿಂದ ನಾನು ನಿನಗೆ ಹೇಳಿರುವೆನು. ಪುರುಷನು ಪ್ರಕೃತಿಯಿಂದ ಭಿನ್ನನಾಗಿರುವನು. ಇದೇ ಪರಮಾರ್ಥದ ಮುಖ್ಯಲಕ್ಷಣವಾಗಿರುವುದು ।।೧೮೬।। ಇದನ್ನೇ ಸ್ಪಷ್ಟವಾಗಿ ತಿಳಿಯುವುದಕ್ಕಾಗಿ ನಾನಾ ಪ್ರಕಾರಗಳ ಮತಗಳು ನಿರ್ಮಾಣವಾಗುವುವು. ಆ ಮತಗಳ ಶುದ್ಧವಾದ ಬೋಧೆಯನ್ನು ನಾನು ನಿನಗೆ ಹೇಳುವೆನು ।।೧೮೭।।

ಪುರುಷನ ಈಕ್ಷಣೆಯು ಪ್ರಾಪ್ತವಾಗಲು ಆಗ ಪ್ರಕೃತಿಯ ಸಾಮರ್ಥ್ಯದಿಂದ ಮಹತ್ತತ್ತ್ವ ಅಹಂಕಾರಾದಿ ಪದಾರ್ಥಗಳು ಒಂದೆಡೆ ಸೇರುವುವು. ಇದರಿಂದ ಬ್ರಹ್ಮಾಂಡಗಳ ನಿರ್ಮಾಣವಾಗುವುವು ।।೧೮೮।। ಪುರುಷನ ಕೇವಲ ಅವಲೋಕನೆಯಿಂದ ಪ್ರಕೃತಿಗೆ ವೀರ್ಯಪ್ರಾಪ್ತಿಯಾಗುವುದು. ಆಗ ಪ್ರಕೃತಿಯು ಬ್ರಹ್ಮಾಂಡಗಳನ್ನು ಧರಿಸುವುದು. ಹೇ ಉದ್ಧವನೇ, ಅದಕ್ಕಾಗಿಯೇ ಇದಕ್ಕೆ ಧಾತೂ ಎಂದು ಹೇಳುವರು ।।೧೮೯।। ನಾನು ನಿನಗೆ ಈ ಸಾಮಾನ್ಯ ಲಕ್ಷಣವನ್ನು ಹೇಳಿರುವೆನು. ಆದರೆ ಅನೇಕ ಪ್ರಕಾರದ ಮತವಾದಿ ಜನರು ಇದರ ವಿಶೇಷ ಲಕ್ಷಣಗಳನ್ನು ಹೇಳುವರು ।।೧೯೦।।

ಪಂಚವೀಸ ಸವ್ವೀಸ ತತ್ತ್ವಗಣನ । ಮಾಗಾ ಸಾಂಗಿತಲೇ ನಿರೂಪಣ । ಆತಾ ಸಾತಾ ತತ್ತ್ವಾಂಚೇ ಲಕ್ಷಣ । ಐಕ ಸುಲಕ್ಷಣ ಸಾಂಗೇನ ।।೧೯೧।। ಮಹಾಭೂತೇ ಜೀವ ಶಿವ । ಹಾ ಸಾತಾ ತತ್ತ್ವಾಂಚಾ ಜಾಣ ಭಾವ । ಪ್ರಾಣೇಂದ್ರಿಯಸಮುದಾವ । ಯಾಚಿಪಾಸವ ಪೈ ಹೋತ ।।೧೯೨।। ಮಹಾಭೂತೇ ಅಚೇತನ । ಯಾಂಸೀ ಚೇತವಿತಾ ಜೀವ ಜಾಣ । ತ್ಯಾಚಾಹೀ ದ್ರಷ್ಟಾ ಪರಿಪೂರ್ಣ । ಈಶ್ವರ ಜಾಣ ಸಾತವಾ ।।೧೯೩।। ಮಾಯಾ ಮಹತ್ತತ್ತ್ವ ಅಹಂ ಜೇ ಯೇಥ । ಹೇ ಸೂಕ್ಷ್ಮ ಕಾರಣೇ ನಿಶ್ಚಿತ । ಯಾಂಪಾಸೋನಿ ಸ್ಥೂಳ ಭೂತೇ ಹೋತ । ಕಾರಣೇ ಕಾರ್ಯಾಂತ ಸಬಾಹ್ಯ ।।೧೯೪।। ಮನ ಇಂದ್ರಿಯಾದಿ ಜೇ ಕಾ ಯೇಥೇ । ತೇಹೀ ಯಾಂತ ಅಂತರ್ಭೂತೇ । ಏವಂ ಜಾಣ ಯೇಣೇ ಮತೇ । ಪಾಂಚ ಮಹಾಭೂತೇ ನೇಮಿಲೀ ।।೧೯೫।। ಯಾಂಸೀ ಚೇತವಿತಾ ಜೀವ । ಸರ್ವನಿಯಂತಾ ಸದಾಶಿವ । ಏವಂ ಸಪ್ತತತ್ತ್ವಸಮುದಾವ । ತೋ ಹಾ ಉಗವ ಉದ್ಧವಾ ।।೧೯೬।। ಆತಾ ಸಹಾ ತತ್ತ್ವೀ ಯೇ ಪಕ್ಷೀ ಜಾಣ । ತುಜ ಮೀ ಸಾಂಗೇನ ನಿರೂಪಣ । ಜೇ ಬೋಲಿಲೇ ಋಷಿಜನ । ತೇ ವಿವಂಚನ ಅವಧಾರೀ ।।೧೯೭।।

ಷಡಿತ್ಯತ್ರಾಪಿ ಭೂತಾನಿ ಪಂಚ ಷಷ್ಠಃ ಪರಃ ಪುಮಾನ್ । ತೈರ್ಯುಕ್ತ ಆತ್ಮಸಂಭೂತೈಃ ಸೃಷ್ಟ್ವೇವಂ ಸಮುಪಾವಿಶತ್ ।।೨೦।।

ಅರ್ಥ:- ಕೆಲವರು ಕೇವಲ ಆರು ತತ್ತ್ವಗಳನ್ನು ಸ್ವೀಕರಿಸುವರು. ಇವರು ಹೀಗೆ ಹೇಳುವರು. ಐದು ಮಹಾಭೂತಗಳು ಮತ್ತು ಆರನೆಯ ಪರಮ ಪುರುಷನಾದ ಪರಮಾತ್ಮನು. ಆ ಪರಮಾತ್ಮನು ತಾನು ಮಾಡಿರುವ ಐದು ಭೂತಗಳಿಂದ ಯುಕ್ತನಾಗಿ ದೇಹ ಇತ್ಯಾದಿಗಳನ್ನು ಸೃಷ್ಟಿಸುವನು ಮತ್ತು ಅವುಗಳಲ್ಲಿ ಜೀವರೂಪದಿಂದ ಪ್ರವೇಶನಾಗುವನು.

ಪಾಹೇ ಪಾ ಪಂಚ ಮಹಾಭೂತೇ । ಪುರುಷೇ ಸೃಜಿಲಿಯಾ ಯೇಥೇ । ಸ್ವಯೇ ಪ್ರವೇಶಲಾ ತೇಥೇ । ಯಾಲಾಗೀ ತ್ಯಾತೇ "ಷಟ್" ಮ್ಹಣತೀ ।।೧೯೮।। ಜ್ಯಾಂಚೇನಿ ಮತೇ ತತ್ತ್ವೀ ಚಾರೀ । ತಯಾಂಚೀ ಐಕ ನವಲಪರೀ । ಜೋ ದೇಖೇ ಪ್ರತ್ಯಕ್ಷಾಕಾರೀ । ತೋಚಿ ಧರೀ ತತ್ತ್ವಾರ್ಥ ।।೧೯೯।।

ಚತ್ವಾರ್ಯೇವೇತಿ ತತ್ರಾಪಿ ತೇಜ ಆಪೋಽನ್ನಮಾತ್ಮನಃ । ಜಾತಾನಿ ತೈರಿದಂಜಾತಾಂ ಜನ್ಮಾವಯವಿನಃ ಖಲು ।।೨೧।।

ಅರ್ಥ:- ಕೆಲವರು ಕಾರಣಗಳ ರೂಪದಿಂದ ತತ್ತ್ವಗಳನ್ನು ಸ್ವೀಕರಿಸುವರು. ಅವರು ಹೀಗೆ ಹೇಳುವರು ; ಆತ್ಮದಿಂದ ತೇಜ, ಜಲ, ಪೃಥ್ವೀ ಇವುಗಳ ಉತ್ಪತ್ತಿಯಾಯಿತು ಮತ್ತು ಜಗತ್ತಿನಲ್ಲಿರುವ ಎಲ್ಲ ಪದಾರ್ಥಗಳೂ ಅವುಗಳಿಂದಲೇ ಉತ್ಪನ್ನವಾಗಿರುವುವು. ಅವರು ಎಲ್ಲ ಕಾರ್ಯಗಳ ಸಮಾವೇಶವನ್ನು ಇದರಲ್ಲಿ ಮಾಡುವರು.

ಪ್ರತ್ಯಕ್ಷ ದೇಖಿಜೇತೀ ನಯನೀ । ಅಗ್ನಿ ಆಪ ಆಣಿ ಅವನೀ । ತೀಚಿ ಸತ್ಯತ್ವೇ ಮಾನೀ । ಮತಜ್ಞಾನೀ ಮತವಾದೀ ।।೨೦೦।।

ಇಪ್ಪತ್ತೈದು ಮತ್ತು ಇಪ್ಪತ್ತಾರು ತತ್ತ್ವಗಳ ಸಂಖ್ಯೆಯ ನಿರೂಪಣೆಯನ್ನು ನಾನು ನಿನಗೆ ಈ ಪೂರ್ವದಲ್ಲಿ ಹೇಳಿರುವೆನು. ಈಗ ಏಳು ತತ್ತ್ವಗಳ ಲಕ್ಷಣವನ್ನು ಸವಿಸ್ತಾರವಾಗಿ ಹೇಳುವೆನು. ಅದಕ್ಕಾಗಿ ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡು ।।೧೯೧।। ಪಂಚಮಹಾಭೂತಗಳು, ಅವುಗಳಿಗೆ ಚೇತನೆಯನ್ನು ಕೊಡುವ ಜೀವವಾಗಿರುವುವು ಮತ್ತು ದೃಶ್ಯ ಹಾಗೂ ದ್ರಷ್ಟಾ ಇವುಗಳಿಗೆ ಆಧಾರನಾಗಿರುವ ಶಿವನು, ಹೀಗೆ ಏಳು ತತ್ತ್ವಗಳಿರುವುವು. ಪಂಚಪ್ರಾಣಗಳು ಮತ್ತು ಇಂದ್ರಿಯಗಳು ಇವುಗಳ ಸಮುದಾಯವೂ ಕೂಡ ಈ ಏಳು ತತ್ತ್ವಗಳಿಂದ ಆಗುವುವು ।।೧೯೨।। ಪಂಚಮಹಾಭೂತಗಳು ಇವು ಅಚೇತನವಾಗಿರುವುವು ಇವುಗಳಿಗೆ ಜೀವವು ಚೇತನೆಯನ್ನು ಕೊಡುವುದು. ಈ ಜೀವಕ್ಕೂ ಕೂಡ ಪೂರ್ಣ ದ್ರಷ್ಟಾ ಈಶ್ವರನು ಸಾಕ್ಷಿಯಾಗಿರುವನು. ಈತನು ಏಳನೆಯವನಾಗಿರುವನು ।।೧೯೩।। ಮಾಯಾ, ಮಹತ್ತತ್ತ್ವ ಮತ್ತು ಅಹಂಕಾರ ಇವು ಎಲ್ಲಿ ಇರುವುವೋ, ಅಲ್ಲಿ ಸೂಕ್ಷ್ಮ ಕಾರಣಗಳು ಉತ್ಪನ್ನವಾಗುವುವು ಮತ್ತು ಇವುಗಳಿಂದ ಸ್ಥೂಲ ಭೂತಗಳು ಉತ್ಪನ್ನವಾಗುವುವು. ಕಾರ್ಯಗಳಲ್ಲಿ ಕಾರಣಗಳು ಒಳಹೊರಗೆ ವ್ಯಾಪಿಸಿಕೊಂಡಿರುವುವು ।।೧೯೪।। ಹಾಗೆಯೇ ಮನ ಇಂದ್ರಿಯಾದಿಕಗಳೂ ಸಹ ಇವುಗಳಲ್ಲಿಯೇ ಅಂತರ್ಭಾವವಾಗುತ್ತಿರುವುವು. ಈ ಪ್ರಕಾರವಾಗಿ ಈ ಪಂಚಭೂತಗಳನ್ನು ನಿಯಮಿಸಲ್ಪಟ್ಟಿರುವುವು ।।೧೯೫।। ಈ ಎಲ್ಲಕ್ಕೂ ಚೇತನವನ್ನು ಕೊಡುವವನು ಜೀವನಾಗಿರುವನು ಮತ್ತು ಎಲ್ಲಕ್ಕೂ ನಿಯಂತಕನು ಸದಾಶಿವನಾಗಿರುವನು. ಹೇ ಉದ್ಧವಾ, ಈ ಪ್ರಕಾರವಾಗಿ ಏಳು ತತ್ತ್ವಗಳ ಸಮುದಾಯವು ಸ್ಪಷ್ಟವಾಗಿರುವುದು ।।೧೯೬।। ಈಗ ಆರು ತತ್ತ್ವಗಳೆಂದು ಒಂದು ಪಕ್ಷವು ಹೇಳುವುದು. ಅದರ ನಿರೂಪಣೆಯನ್ನು ನಾನು ನಿನಗೆ ಹೇಳುವೆನು. ಈ ವಿಷಯಕ್ಕೆ ಋಷಿಗಳ ಮತವೇನೆಂಬುದನ್ನು ಅದನ್ನು ವಿಂಗಡಿಸಿ ನಾನು ನಿನಗೆ ಹೇಳುವೆನು, ಲಕ್ಷ ಕೊಟ್ಟು ಕೇಳು ।।೧೯೭।।

ಪುರುಷನು ಪಂಚಮಹಾಭೂತಗಳನ್ನು ನಿರ್ಮಿಸಿ ಅದರಲ್ಲಿ ತಾನು ಪ್ರವೇಶವನ್ನು ಮಾಡುವನು. ಆತನಿಗೆ ಆರನೆಯ ತತ್ತ್ವವೆಂದು ಹೇಳುವರು ।।೧೯೮।। ಈಗ ಕೆಲವರ ಮತವು ಕೇವಲ ನಾಲ್ಕು ತತ್ತ್ವಗಳಾಗಿರುವುವು. ಅದರ ಚಮತ್ಕಾರವನ್ನು ಕೇಳು. ಕಾಣುತ್ತಿರುವ ಸಾಕಾರ ಪದಾರ್ಥಗಳು ಮಾತ್ರ ತತ್ತ್ವಗಳೆಂದು ಅವರು ಮಾನ್ಯ ಮಾಡುವರು ।।೧೯೯।।

ಅಗ್ನೀ, ಜಲ ಮತ್ತು ಪೃಥ್ವಿ ಇವು ಪ್ರತ್ಯಕ್ಷವಾಗಿ ನಮ್ಮ ಕಣ್ಣಿಗೆ ಕಾಣಿಸುವುವು. ಇವೇ ನಿಜವಾದ ತತ್ತ್ವಗಳೆಂದು ಹೇಳುವ ಕೆಲವು ಮತವಾದಿಗಳಿರುವರು ।।೨೦೦।।

ಯಾ ಸ್ಥೂಳಾತೇ ಚೇತವಿತಾ । ತೋ ಆತ್ಮಾ ಘೇತಲಾ ಚೌಥಾ। ಯಾ ತಿಹೀವೀಣ ಸಾಕಾರತಾ । ನ ಘಡೇ ಸರ್ವಥಾ ಸೃಷ್ಟಿಸೀ॥೨೧೧॥ ನಾಮ ರೂಪ ಕ್ರಿಯಾ ಕಾರಣ । ಸೃಷ್ಟಿಸೀ ಮುಖ್ಯತ್ವೇ ಯಾಂಚೇನಿ ಜಾಣ। ಯಾಲಾಗೀ ಭೂತೇ ತೀನಚಿ ಪ್ರಮಾಣ। ಬೋಲತೇ ಲಕ್ಷಣ ತೇ ಐಸೇ ।।೨೧೨।। ಏವಂ ಭೂತೇ ತೀನ ಆತ್ಮಾ ಚೌಥಾ । ಹೇ ಚೌತತ್ತ್ವಾಂಚೀ ವ್ಯವಸ್ಥಾ । ಆತಾ ಸತರಾ ತತ್ತ್ವಾಂಚೀ ಕಥಾ । ಐಕ ತತ್ತ್ವತಾ ಸಾಂಗೇನ ।।೨೧೩।।

ಸಂಖ್ಯಾನೇ ಸಪ್ತಪದಶಕೇ ಭೂತಮಾತ್ರೇಂದ್ರಿಯಾಣಿ ಚ । ಪಂಚಪಂಚೈಕಮನಸಾ ಆತ್ಮಾ ಸಪ್ತದಶ: ಸ್ಮೃತಿ: ।।೨೨।।

ಅರ್ಥ:- ಕೆಲವರು ತತ್ವಗಳ ಸಂಖ್ಯೆ ಹದಿನೇಳು ಎನ್ನುವರು. ಅವರು ಹೀಗೆ ಗಣನೆಯನ್ನು ಮಾಡುವರು, ಐದು ಮಹಾಭೂತಗಳು, ಐದು ತನ್ಮಾತ್ರಗಳು, ಐದು ಜ್ಞಾನೇಂದ್ರಿಯಗಳು ಒಂದು ಮನಸ್ಸು ಮತ್ತು ಒಂದು ಆತ್ಮಾ.

ಪಂಚ ವಿಷಯ ಪಂಚ ಭೂತೇ । ಪಾಂಚ ಇಂದ್ರಿಯೇ ಘೇತಲೀ ಯೇಥೇ । ಮನ ಆತ್ಮಾ ಮೇಳವೂನಿ ತೇಥೇ । ಕೇಲೀ ನಿಶ್ಚಿತೇ ಸತರಾ ಹೀ ।।೨೧೪।। ಯಾಪರೀ ತೂ ಗಾ ಜಾಣ । ಸೋಳಾ ತತ್ತ್ವಾಂಚೇ ನಿರೂಪಣ । ತೇಥೇಚಿ ತ್ರಯೋದಶಲಕ್ಷಣ । ಸ್ವಯೇ ನಾರಾಯಣ ಸಾಂಗತ ।।೨೧೫।।

ತದ್ವತ್ ಷೋಡಶಸಂಖ್ಯಾನೇ ಆತ್ಮೈವ ಮನ ಉಚ್ಯತೇ । ಭೂತೇಂದ್ರಿಯಾಣಿ ಪಂಚೇ ವ ಮನ ಆತ್ಮಾ ತ್ರಯೋದಶ ।।೨೩।।

ಅರ್ಥ:- ಕೆಲವರು ತತ್ವಗಳ ಸಂಖ್ಯೆ ಹದಿನಾರು ಎಂದು ಹೇಳುವರು. ಅವುಗಳ ಗಣನೆ ಹೀಗಿದೆ, ಅವರು ಆತ್ಮತತ್ವದಲ್ಲಿ ಮನವನ್ನು ಸಮಾವೇಶ ಮಾಡುವರು. ಆದ್ದರಿಂದ ಅವರ ತತ್ವ ಸಂಖ್ಯೆಯು ಹದಿನಾರು ಆಗುವುದು. ಕೆಲವರು ಹದಿಮೂರು ತತ್ವಗಳೆಂದು ಹೇಳುವರು. ಆಕಾಶಾದಿ ಐದು ಭೂತಗಳು, ಶ್ರೋತ್ರಾದಿ ಐದು ಜ್ಞಾನೇಂದ್ರಿಯಗಳು, ಒಂದು ಮನಸ್ಸು, ಒಂದು ಜೀವಾತ್ಮಾ ಮತ್ತು ಪರಮಾತ್ಮಾ ಇವು ಹದಿಮೂರು ತತ್ವಗಳೆಂದು ಹೀಗೆ ಹೇಳುವರು.

ಸತರಾ ತತ್ತ್ವಾಂಚೇ ನಿರೂಪಣ । ತುಜ ಸಾಂಗಿತಲೇ ಸಂಪೂರ್ಣ । ತ್ಯಾಂತ ಮನ ಆತ್ಮಾ ಏಕ ಜಾಣ । ಕೇಹೀ ಲಕ್ಷಣ ಅವಧಾರೀ ।।೨೧೬।। ಜೇವೀ ಕಾ ಕಥಾ ಸಾಂಗತಾ ಆಪಣ । ಸ್ವಭಾವೇ ಹಾತ ಹಾಲೇ ಜಾಣ । ತೇವೀ ಮನಾಚೇ ಚಂಚಳಪಣ । ಸ್ವಭಾವೇ ಜಾಣ ಹೋತಸೇ ।।೨೧೭।। ರಾಜಾ ಸಿಂಹಾಸನೀ ಬೈಸಲಾ । ತೋ ರಾಜತ್ವೇ ಪೂಜ್ಯ ಝಾಲಾ । ವಸಂತ ಖೇಳತಾ ಧಾಂವಿನ್ನಲಾ । ತರೀಕಾಯ ಮುಕಲಾ ರಾಜ್ಯಪದಾ ।।೨೧೮।। ಜೇವೀ ಕಾಳೇ ಕ್ಷೋಭಲಾ ಅತಿಘೋರ । ತರಿ ತೋ ಬೋಲಿಜೇ ಸಾಗರ । ಕಾ ನಿಶ್ಚಳ ರಾಹಿಲಿಯಾ ನೀರ । ತರೀ ಸಮುದ್ರ ಸಮುದ್ರತ್ವೇ ।।೨೧೯।। ತೇವೀ ಮನಪಣೇ ಅತಿಚಂಚಳ । ಕಾ ಆತ್ಮತ್ವೇ ನಿಜನಿಶ್ಚಳ । ದೋಹೀ ಪರೀ ಅವಿಕಳ । ಜಾಣ ಕೇವಳ ಪರಮಾತ್ಮಾ ।।೨೨೦।।

ಈ ಯಾವ ಸ್ಥಿರ ತತ್ವಗಳಿಗೆ ಚೇತನೆಯನ್ನು ಕೊಡುವ ಆತ್ಮಕ್ಕೆ ನಾಲ್ಕನೆಯ ತತ್ವವೆಂದು ತಿಳಿಯುವರು. ಈ ಮೂರರ ಹೊರತಾಗಿ ಸೃಷ್ಟಿಯು ಎಂದಿಗೂ ಆಕಾರಕ್ಕೆ ಬರಲು ಸಾಧ್ಯವಿಲ್ಲ ।।೨೧೧।। ಸೃಷ್ಟಿಗೆ ಇವುಗಳಿಂದಲೇ ನಾಮ ರೂಪ ಕ್ರಿಯಾಕಾರಣಗಳು ಪ್ರಾಪ್ತವಾಗುವುವು. ಆದ್ದರಿಂದ ಮೂರೇ ತತ್ವಗಳು ಪ್ರಮಾಣಭೂತವಾಗುವುವು. ಹೀಗೆ ಇವರ ಹೇಳಿಕೆಯಾಗಿರುವುದು ।।೨೧೨।। ಈ ಪ್ರಕಾರವಾಗಿ ಮೂರು ಭೂತಗಳು ಮತ್ತು ನಾಲ್ಕನೆಯ ಆತ್ಮಾ ಹೀಗೆ ನಾಲ್ಕು ತತ್ವಗಳ ವ್ಯವಸ್ಥೆಯಾಗಿರುವುದು. ಈಗ ಹದಿನೇಳು ತತ್ವಗಳ ಪ್ರಕಾರವನ್ನು ನಾನು ನಿನಗೆ ಹೇಳುವೆನು, ಕಾರಣ ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡು ।।೨೧೩।।

ಐದು ವಿಷಯಗಳು, ಐದು ಮಹಾಭೂತಗಳು, ಐದು ಇಂದ್ರಿಯಗಳು, ಇವುಗಳಲ್ಲಿ ಮನಸ್ಸು ಮತ್ತು ಆತ್ಮಾ ಈ ಎರಡು ಕೂಡಿಸಿ ಹದಿನೇಳು ತತ್ವಗಳು ನಿಶ್ಚಿತವಾದವು ।।೨೧೪।। ಈ ಪ್ರಕಾರವಾಗಿ ಮುಂದೆ ಹದಿನಾರು ತತ್ವಗಳ ನಿರೂಪಣೆಯನ್ನು ಮಾಡಿ ಹದಿಮೂರನೆಯ ತತ್ವಗಳ ಲಕ್ಷಣವನ್ನೂ ಕೂಡ ಸ್ವತ: ನಾರಾಯಣನು ಹೇಳುವನು ।।೨೧೫।।

ಹದಿನೇಳು ತತ್ವಗಳ ನಿರೂಪಣೆಯನ್ನು ನಿನಗೆ ಹೇಳಿದೆನು. ಅವುಗಳಲ್ಲಿ ಮನಸ್ಸು ಮತ್ತು ಆತ್ಮಾ ಏಕರೂಪವಾಗಿರುವುವು. ಇದರ ಲಕ್ಷಣವನ್ನೂ ಕೂಡ ಈಗ ಹೇಳುವೆನು, ಅದನ್ನು ಕೇಳು ।।೨೧೬।। ನಾವು ಯಾವುದಾದರೂ ಒಂದು ಕಥೆಯನ್ನು ಹೇಳುತ್ತಿರಲು ಆಗ ಕೈಗಳು ಸಹಜವಾಗಿ ಅದರಂತೆ ವರ್ತಿಸುತ್ತಿರುವುವು. ಅದರಂತೆಯೇ ಮನಸ್ಸಿನ ಚಂಚಲತೆಯು ಸಹಜವಾಗಿಯೇ ಆಗುತ್ತಿರುವುದು. ಇದನ್ನು ಲಕ್ಷದಲ್ಲಿಡು ।।೨೧೭।। ರಾಜನು ಸಿಂಹಾಸನದ ಮೇಲೆ ಕುಳಿತುಕೊಂಡಾಗ ತನ್ನ ರಾಜತ್ವದ ಗೌರವಕ್ಕೆ ಪಾತ್ರನಾಗುವನು. ಅದೇ ರಾಜನು ವಸಂತ ಋತುವಿನಲ್ಲಿ ಕ್ರೀಡೆಗಳಲ್ಲಿ ಧಾವಿಸುತ್ತಿರಲು ಆಗ ಆತನು ತನ್ನ ರಾಜ್ಯ ಪದವಿಯನ್ನು ಕಳೆದುಕೊಳ್ಳುವನೆ? ।।೨೧೮।। ಭಯಂಕರವಾದ ಬಿರುಗಾಳಿಯಿಂದ ಸಮುದ್ರವು ಉಕ್ಕೇರುತ್ತಿದ್ದರೂ ಆಗ ಅದಕ್ಕೆ ಸಮುದ್ರವೆಂದೇ ಹೇಳುವರು. ಮುಂದೆ ಅದು ಶಾಂತತೆಯನ್ನು ಧರಿಸಲು ಆಗ ಕೂಡ ಸಮುದ್ರವಾಗಿಯೇ ಇರುವುದು ।।೨೧೯।। ಅದರಂತೆ ಮನಸ್ಸಿನ ರೂಪದಿಂದ ಅತ್ಯಂತ ಚಂಚಲತ್ವವು ಪ್ರಾಪ್ತವಾಗಲಿ ಅಥವಾ ಆತ್ಮಸ್ವರೂಪದಿಂದ ನಿಶ್ಚಲತ್ವವು ಪ್ರಾಪ್ತವಾದರೂ ಕೂಡ ಈ ಎರಡೂ ಅವಸ್ಥೆಯಲ್ಲಿನ ಪೂರ್ಣನಾಗಿರುವ ಪರಮಾತ್ಮನು ಒಂದೇ ಆಗಿರುವನು ।।೨೨೦।।

ಯಾಲಾಗೀ ಮನಾಚೇ ಜೇ ಮನಪಣ । ಆತ್ಮಸಾಕ್ಷಾತ್ಕಾರೇ ವೀಣ । ಕೋಣಾಸೀ ನ ಕಳೇಚಿ ಗಾ ಜಾಣ । ಹೇ ಮುಖ್ಯ ಲಕ್ಷಣ ಮನಾಚೇ ।೨೧೧॥ ಮನ ಆತ್ಮ್ಯಾಂಚೇ ಉಭಯ ಐಕ್ಯ । ತೇಚಿ ಸತರಾಂಮಾಜೀ ಉಣೇ ಏಕ । ಉರಲೀ ತೀ ಆವಶ್ಯಕ । ಸೋಳಾ ಹೀ ದೇಖ ನಿಜತತ್ತ್ವೇ ।೨೧೨॥ ಪಾಂಚ ಇಂದ್ರಿಯೇ ಪಂಚಮಹಾಭೂತೇ । ಅಕರಾವೇ ಮನ ಠೇವೂನಿ ತೇಥೇ । ಜೀವ ಶಿವ ದೋನೀ ಘೇ ಊನಿ ಯೇಥೇ । ಕೇಲೀ ನಿಶ್ಚಿತೇ ತೇರಾಚಿ ।೨೧೩॥ ಆಣಿಕಹೀ ನಾನಾ ತತ್ತ್ವಮತೇ । ಮಾಗಾ ಪುಶಿಲೀ ತುವಾ ಮಾತೇ । ತೀಹೀ ಸಾಂಗೇನ ಮೀ ತೂತೇ । ಸುನಿಶ್ಚಿತೇ ಉದ್ಧವಾ ।೨೧೪॥

ಏಕಾದಶತ್ವ ಆತ್ಮಾ ಸೌ ಮಹಾಭೂತೇಂದ್ರಿಯಾಣಿ ಚ । ಅಷ್ಟೌ ಪ್ರಕೃತಯಶ್ಚೈವ ಪುರುಷಶ್ಚ ನವೇತ್ಯಥ ।೨೪॥

ಅರ್ಥ:- ಹನ್ನೊಂದು ತತ್ವಸಂಖ್ಯೆಯನ್ನು ಮಾನ್ಯ ಮಾಡುವರು ಐದು ಭೂತಗಳು, ಐದು ಜ್ಞಾನೇಂದ್ರಿಯಗಳು ಒಂದು ಆತ್ಮತತ್ವದ ಅಸ್ತಿತ್ವವನ್ನು ಸ್ವೀಕರಿಸಿರುವರು ಮತ್ತು ಒಂಬತ್ತು ತತ್ವಗಳನ್ನು ಮಾನ್ಯ ಮಾಡುವವರು ಆಕಾಶಾದಿ ಐದು ಭೂತಗಳು, ಮನ, ಬುದ್ಧಿ, ಅಹಂಕಾರ ಇವು ಎಂಟು ಪ್ರಕೃತಿ ಮತ್ತು ಒಂಬತ್ತನೇಯ ಪುರುಷನು ಎಂದು ತಿಳಿದಿರುವರು.

ಅಕರಾ ತತ್ತ್ವೇ ಬೋಲಿಲೀ ಯೇಥೇ । ಪಾಂಚ ಇಂದ್ರಿಯೇ ಪಂಚ ಮಹಾಭೂತೇ । ಜೀವ ಶಿವ ಆಣಿ ಮನಾತೇ । ಏಕತ್ವೇ ಯೇಥೇ ಗಣಿಲೀ ದೇಖ ।೨೧೫॥ ದೃತಿ ಮೃದು ಆಣಿ ಪಿಂವಳಾ । ಏಕತ್ವೇ ಜೇವೀ ಚಾಂಪೇಕಳಾ । ಸುವಾಸ ಸುಸ್ವಾದ ಸುನೀಳಾ । ಏಕತ್ರ ಮೇಳಾ ಆಮ್ರಫಳೀ ।೨೧೬॥ ತೇವೀ ಜೀವ ಶಿವ ಆಣಿ ಮನ । ತಿನ್ಹೀ ಏಕರೂಪಚಿ ಜಾಣ। ಜೇವೀ ಹೇಮಮಣೀ ಸಂಪೂರ್ಣ । ಹೇಮಸೂತ್ರೀ ಸಜ್ಞಾನ ಓವಿತೀ ।೨೧೭॥ ಪಂಚ ಇಂದ್ರಿಯೇ ಪಂಚ ಮಹಾಭೂತೇ । ಜೀವ ಶಿವ ಮನ ಏಕಾತ್ಮತೇ । ಏಕಾದಶ ತತ್ತ್ವೇ ಯೇಥೇ । ಜಾಣ ನಿಶ್ಚಿತೇ ಯಾ ಹೇತೂ ।೨೧೮॥ ಪ್ರಕೃತಿ ಪುರುಷ ಮಹದಹಂಕಾರ । ಪಂಚ ಮಹಾಭೂತೇ ಅವಿಕಾರ । ಸಕಳ ವಿಕಾರಸಂಭಾರ ।ಯಾಮಾಜೀ ಸಾಚಾರ ಅಂತರ್ಭೂತ ।೨೧೯॥ ಏವಂ ಋಷೀಶ್ವರಾಂಚ್ಯಾ ವ್ಯುತ್ಪತ್ತೀ । ತತ್ತ್ವವಿವಕ್ಷಾ ಉಪಪತ್ತೀ ।ನವ ತತ್ತ್ವಸಂಖ್ಯಾಯುಕ್ತೀ । ಜಾಣ ಯಾ ರೀತೀ ಉದ್ಧವಾ ।೨೨೦॥ ಏಕ ಬೋಲತೀ ನಿಜಜ್ಞಾನೀ । ಪ್ರಕೃತಿ ಪುರುಷ ತತ್ತ್ವೇ ದೋನೀ । ಆನ ಪಾಹತಾ ಜನೀವನೀ । ತಿಸರೇ ನಯನೀ ದಿಸೇನಾ ।೨೨೧॥ ಜೇ ನಿಶ್ಚಯೇ ಅತಿನಿಷ್ಟಂಕ । ತೇ ಮ್ಹಣತೀ ತತ್ತ್ವ ಏಕ । ಏಕ ತೇಚಿ ಅನೇಕ । ಅನೇಕೀ ಏಕ ನಿಶ್ಚಿತ ।೨೨೨॥ ಜೇವೀ ಸುವರ್ಣಾಚೇ ಭೂಷಣ । ಭೂಷಣೇ ಸ್ವಯೇ ಸುವರ್ಣ । ತೇವೀ ಅನೇಕೀ ಏಕಪಣ । ಏಕತ್ವೇ ಜಾಣ ನಿಶ್ಚಿತ ।೨೨೩॥

ಆದ ಕಾರಣ ಮನಸ್ಸಿನ ಈ ಯಾವ ಸ್ವರೂಪವು ಆತ್ಮಸಾಕ್ಷಾತ್ಕಾರವಾಗದ ಹೊರತಾಗಿ ಯಾರಿಗೂ ಇದು ತಿಳಿಯಲು ಸಾಧ್ಯವಿರುವುದಿಲ್ಲ. ಇದೇ ಮನಸ್ಸಿನ ಮುಖ್ಯ ಲಕ್ಷಣವಾಗಿರುವುದು ।೨೧೧॥ ಈ ಪ್ರಕಾರವಾಗಿ ಮನಸ್ಸು ಮತ್ತು ಆತ್ಮಾ ಈ ಎರಡನ್ನು ಒಂದಾಗಿ ಮಾಡಲು ಆಗ ಹದಿನೇಳರಲ್ಲಿ ಒಂದು ತತ್ವವು ಕಡಿಮೆಯಾಗುವುದು. ಆಗ ಉಳಿದ ತತ್ವಗಳು ಹದಿನಾರು ಆಗುವುವು ।೨೧೨॥ ಇದರಂತೆಯೇ ಐದು ಇಂದ್ರಿಯಗಳು, ಐದು ಮಹಾಭೂತಗಳು ಮತ್ತು ಅದರಲ್ಲಿಯೇ ಮನಸ್ಸನ್ನು ಹನ್ನೊಂದನೆಯದಾಗಿ ಹಿಡಿದು ಹಾಗೂ ಜೀವ ಮತ್ತು ಶಿವ ಈ ಎರಡನ್ನು ಕೂಡಿಸಿ ಕೆಲವರು ಹದಿಮೂರು ತತ್ವಗಳೆಂದು ನಿಶ್ಚಯಿಸಿರುವರು ।೨೧೩॥ ಹೇ ಉದ್ಧವಾ, ನೀನು ಈ ಹಿಂದೆ ನನಗೆ ನಾನಾ ಪ್ರಕಾರಗಳ ಮತಗಳ ವಿಷಯಕ್ಕಾಗಿ ಕೇಳಿರುವೆ. ಅವುಗಳನ್ನೂ ಕೂಡ ನಾನು ನಿನಗೀಗ ಸವಿಸ್ತಾರವಾಗಿ ತಿಳಿಸುವೆ, ಅದಕ್ಕಾಗಿ ಕೇಳು ।೨೧೪॥

ಹನ್ನೊಂದು ತತ್ವಗಳು ಎಂದು ಯಾರು ತಿಳಿದಿರುವರೋ, ಅವರು ಐದು ಇಂದ್ರಿಯಗಳು, ಐದು ಮಹಾಭೂತಗಳು ಮತ್ತು ಜೀವ, ಶಿವ ಮತ್ತು ಮನಸ್ಸು ಈ ಮೂರನ್ನೂ ಒಂದೇ ರೂಪವೆಂದು ನಿಶ್ಚಯಿಸಿ, ಹೀಗೆ ಹನ್ನೊಂದು ತತ್ವಸಂಖ್ಯೆಯನ್ನು ತಿಳಿದಿರುವರು ।೨೧೫॥ ಸುಗಂಧತ್ವ ಮೃದುತ್ವ ಮತ್ತು ಪೀತತ್ವ ಇವು ಮೂರೂ ಸಹ ಸಂಪಿಗೆ ಹೂವಿನಲ್ಲಿ ಸಮಾವೇಶವಾಗಿರುವುವು. ಅಥವಾ ಉತ್ತಮ ವಾಸನೆ, ಉತ್ತಮ ರುಚಿ ಮತ್ತು ಉತ್ತಮ ಬಣ್ಣ ಇವು ಮೂರು ಒಂದು ಮಾವಿನ ಹಣ್ಣಿನಲ್ಲಿ ಏಕತ್ರವಾಗಿರುವುವು ।೨೧೬॥ ಹಾಗೆಯೇ ಬಂಗಾರದ ಮಣಿಗಳನ್ನು ಬಂಗಾರದ ಎಳೆಯಲ್ಲಿಯೇ ಪೋಣಿಸಲ್ಪಟ್ಟಿರುವುದು. ಅದರಂತೆ ಜೀವ, ಶಿವ ಮತ್ತು ಮನಸ್ಸು ಇವು ಒಂದೇಯಾಗಿರುವುವು ।೨೧೭॥ ಐದು ಇಂದ್ರಿಯಗಳು, ಐದು ಮಹಾಭೂತಗಳು ಮತ್ತು ಜೀವ, ಶಿವ ಹಾಗೂ ಮನಸ್ಸು ಇವು ಮೂರು ಕೂಡಿ ಒಂದು ಎಂದಾಗಿ ಹಿಡಿದು ಹನ್ನೊಂದು ತತ್ವವೆಂದು ತಿಳಿಯುವರು ।೨೧೮॥ ಪುನಃ ಪ್ರಕೃತಿ, ಪುರುಷ, ಮಹದಹಂಕಾರ ಹಾಗೂ ಅವಿಕೃತಿ ಇವು ನಾಲ್ಕು ಪಂಚ ಮಹಾಭೂತಗಳು ಈ ಒಂಬತ್ತರಲ್ಲಿ ಸರ್ವ ವಿಕಾರ ಸಮುದಾಯವು ಅಂತರ್ಭಾವವಾಗುವುದು ।೨೧೯॥ ಈ ಪ್ರಕಾರವಾಗಿ ಹೇ ಉದ್ಧವಾ, ಋಷಿಗಳವರ ಉತ್ಪತ್ತಿ ತತ್ವಸಂಬಂಧವಾಗಿ ಹೀಗೆ ವಿಚಾರವಿರುವುದರಿಂದ ಅವರು ತತ್ವಗಳ ಸಂಖ್ಯೆಯನ್ನು ಒಂಬತ್ತು ಎಂದು ಹೇಳುವರು ।೨೨೦॥ ಇದಲ್ಲದೇ ಕೆಲವು ಆತ್ಮಜ್ಞಾನಿಗಳವರು ಪ್ರಕೃತೀ ಮತ್ತು ಪುರುಷ ಈ ಎರಡೇ ತತ್ವಗಳಿರುವುವು ಎಂದು ತಿಳಿದಿರುವರು. ಏಕೆಂದರೆ ಇವುಗಳ ಹೊರತಾಗಿ ಮೂರನೆಯ ತತ್ವವು ಜನರಲ್ಲಿ, ವನದಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ ।೨೨೧॥ ಇದಕ್ಕಿಂತಲೂ ಅದ್ವೈತಿಗಳು ಅತ್ಯಂತ ದೃಢವಾಗಿ ಹೀಗೆ ಹೇಳುವರು, ತತ್ವವು ಒಂದೇ ಇರುವುದು. ಒಂದೇ ತತ್ತ್ವವು ಅನೇಕ ರೂಪದಿಂದ ತೋರುವುವು. ನಿಜವಾಗಿಯೂ ಒಂದೇ ತತ್ವವು ಎಲ್ಲದರಲ್ಲಿಯೂ ತುಂಬಿರುವುದು ।೨೨೨॥ ಬಂಗಾರದ ಅಲಂಕಾರಗಳಲ್ಲಿನ ಬಂಗಾರ, ಅಲಂಕಾರ ಒಂದೇಯಾಗಿರುವುದು. ಅದರಂತೆ ಅನೇಕದಲ್ಲಿ ಐಕ್ಯರೂಪದಿಂದ ಒಂದೇ ತತ್ವವು ಇರುವುದು ।೨೨೩॥

ಜೇವೀ ಉಂಸಾಚೀ ನಿಜಗೋಡೀ । ಗೂಳಸಾಖರೇಚ್ಯಾ ಮೋಡೀ । ತೇಚಿ ದಿಸೇ ಚಢೋವಢೀ । ತೇವೀ ತತ್ತ್ವಪರವಡೀ ನಿಜತತ್ತ್ವೀ ।೨೨೪॥ ತ್ಯಾ ಜಾಣಾವಯಾ ನಿಜತತ್ತ್ವಾತೇ । ಋಷೀಶ್ವರಾಂಚೀ ಬಹುತ ಮತೇ । ಮೀ ಸ್ವಲ್ಪಚಿ ಬೋಲಿಲೋ ಯೇಥೇ । ಯೇರವೀ ಅಗಣಿತೇ ಗ್ರಂಥಾಂತರೀ ।೨೨೫॥

ಇತಿ ನಾನಾ ಪ್ರಸಂಖ್ಯಾನಂ ತತ್ತ್ವಾನಾಮೃಷಿಭಿಃ ಕೃತಮ್ । ಸರ್ವ ನ್ಯಾಯ್ಯಂ ಯುಕ್ತಮತ್ತ್ವಾದ್ವಿದುಷಾಂ ಕಿಮಶೋಭನಮ್ ।೨೫॥

ಅರ್ಥ:- ಉದ್ಧವಾ, ಈ ಪ್ರಕಾರವಾಗಿ ಋಷಿಮುನಿಗಳು ಭಿನ್ನ ಭಿನ್ನ ಪ್ರಕಾರಗಳಿಂದ ತತ್ತ್ವಗಳ ಗಣನೆಯನ್ನು ಮಾಡಿರುವರು. ಸರ್ವರ ಹೇಳಿಕೆಯು ಯೋಗ್ಯವಾಗಿರುವುದು. ಸರ್ವರ ತತ್ತ್ವಸಂಖ್ಯೆಗಳು ಯಕ್ತಿಯುಕ್ತವಾಗಿರುವುವು. ತತ್ತ್ವಜ್ಞಾನಿಗಳವರಿಗೆ ಇವುಗಳಲ್ಲಿ ಯಾವುದೇ ಮತವು ವಿಸಂಗತಿಯಾಗಿ ತೋರುವುದಿಲ್ಲ. ಅವರಿಗೆ ಎಲ್ಲವೂ ಯೋಗ್ಯವಾಗಿ ತೋರುವುದು.

ಯೇಥ ಸರ್ವಜ್ಞ ಜ್ಞಾತೇ ಹೋತೀ । ತೇ ನಾನಾ ಮತೇ ತತ್ತ್ವಯುಕ್ತೀ । ವಿವಂಚೋನಿಯಾ ಉಪಪತ್ತೀ । ವಿಭಾಗೂ ಜಾಣತೀ ಯಥಾರ್ಥೇ ।೨೨೬॥ ನಿಜತತ್ತ್ವ ಜಾಣಾವಯಾ ಜಾಣ । ಕರಿತಾ ತತ್ತ್ವವಿವಂಚನ । ಸರ್ವಥಾ ನ ಲಗೇ ದೂಷಣ । ತತ್ತ್ವೀ ಅಧಿಕನ್ಯೂನ ಬೋಲತಾ ।೨೨೭॥ ವಸ್ತುತಾ ವಿಕಾರಾಂಚ್ಯಾ ಠಾಯೀ । ಜ್ಞಾತ್ಯಾಸೀ ಬೋಲಾವಯಾ ವಿಶೇಷ ನಾಹೀ । ವಿಕಾರ ತೇ ಪ್ರಕೃತೀಚ್ಯಾ ಠಾಯೀ । ಆತ್ಮಾ ಶುದ್ಧ ಪಾಹೀ ಅವಿಕಾರೀ ।೨೨೮॥ ಪ್ರಕೃತೀಹೂನಿ ಆತ್ಮಾ ಭಿನ್ನ । ಯಾಲಾಗೀ ತೋ ಅವಿಕಾರೀ ಜಾಣ । ವಿಕಾರ ಪ್ರಕೃತೀ ಮಾಜೀ ಪೂರ್ಣ । ಹೇ ಮುಖ್ಯ ಲಕ್ಷಣ ತತ್ತ್ವಾಂಚೇ ।೨೨೯॥ ಪ್ರಕೃತೀಹೂನಿ ವೇಗಳೇಪಣ । ಪುರುಷಾಂಚೇ ಜಾಣಾವಯಾ ಆಪಣ । ಯಾಲಾಗೀ ಉದ್ಧವಾ ಜಾಣ । ತತ್ತ್ವ ವಿವಂಚನ ಸಾಧಾವೇ ।೨೩೦॥ ಹೇ ಐಕೋನಿ ಕೃಷ್ಣವಚನ । ಉದ್ಧವ ಚಮತ್ಕಾರಲಾ ಜಾಣ । ಪ್ರಕೃತಿ ಪುರುಷಾಂಚೇ ಭಿನ್ನಪಣ । ದೇವಾಸೀ ಆಪಣ ಪುಸೋ ಪಾ ।೨೩೧॥

ಉದ್ಧವ ಉವಾಚ:-

ಪ್ರಕೃತಿಃ ಪುರುಷಶ್ಚೋಭೌ ಯದ್ಯಪ್ಯಾತ್ಮಾ ವಿಲಕ್ಷಣಾ । ಅನ್ಯೋನ್ಯಾಪಾಶ್ರಯಾತ್ಕೃಷ್ಣ ದೃಶ್ಯತೇ ನ ಭಿದಾ ತಯೋಃ ।
ಪ್ರಕೃತೌ ಲಕ್ಷ್ಯತೇ ಹ್ಯಾತ್ಮಾ ಪ್ರಕೃತಿಶ್ಚ ತಥಾತ್ಮನಿ ।೨೬॥

ಅರ್ಥ:- ಉದ್ಧವನು ಹೇಳಿದನು; ಹೇ ಶ್ಯಾಮಸುಂದರನೇ, ಸ್ವರೂಪದಲ್ಲಿ ಪ್ರಕೃತೀ ಮತ್ತು ಪುರುಷ ಈ ಎರಡೂ ಪರಸ್ಪರ ಭಿನ್ನವಾಗಿರುವುವು. ಆದರೆ ಒಂದು ಇನ್ನೊಂದರಲ್ಲಿ ಕೂಡಿರುವುದು. ಸಾಧಾರಣವಾಗಿ ಇವುಗಳ ಭೇದವು ತಿಳಿಯುವುದಿಲ್ಲ. ಪುರುಷನಲ್ಲಿ ಪ್ರಕೃತಿಯು ಹಾಗೂ ಪ್ರಕೃತಿಯಲ್ಲಿ ಪುರುಷನು ಹೀಗೆ ಅಭಿನ್ನವಾಗಿ ಕಾಣುವುದು. ಇವುಗಳ ಭಿನ್ನತೆಯು ಸ್ಪಷ್ಟವಾಗಿ ಹೇಗಾಗುವುದು?

ಪ್ರಕೃತಿ ಪುರುಷ ಭಿನ್ನ ಭಿನ್ನ । ಯೇಚಿ ಅರ್ಥೀ ಉದ್ಧವೇ ಜಾಣ । ಸಾಡೇತೀನ ಶ್ಲೋಕೀ ಅಗಾಧ ಪ್ರಶ್ನ । ದೇವಾಸೀ ಆಪಣ ಪುಸತ ।೨೩೨॥ ಪ್ರಕೃತಿಹೂನೀ ಪುರುಷ ಭಿನ್ನ । ಹೇ ಐಕೋನಿ ದೇವಾಚೇ ವಚನ । ಪ್ರಕೃತಿಪುರುಷಾವೇಗಳಾ ಶ್ರೀಕೃಷ್ಣ । ಹಾ ದ್ರಷ್ಟಾ ಸಂಪೂರ್ಣ ದೋಹೀಂಚಾ ।೨೩೩॥

ಕಬ್ಬಿನ ನಿಜವಾದ ಸಿಹಿಯು ಬೆಲ್ಲ ಸಕ್ಕರೆಗಳಲ್ಲಿ ಹೆಚ್ಚಾಗಿ ಇರುವುದು. ಅದರಂತೆಯೇ ಆತ್ಮತತ್ತ್ವದಿಂದ ಸರ್ವ ತತ್ತ್ವಪ್ರಕಾರಗಳಾಗಿರುವುವು ।೨೨೪॥ ಯಾವ ಈ ತತ್ತ್ವವನ್ನು ತಿಳಿಯುವುದಕ್ಕಾಗಿ ಅನೇಕ ಮಹಾ ಋಷಿಗಳು ಅನೇಕ ಪ್ರಕಾರಗಳ ಮತಗಳನ್ನು ಮಂಡಿಸಿರುವರು. ಅವುಗಳಲ್ಲಿ ಆರಿಸಿ ಸ್ವಲ್ಪೇ ಮತಗಳನ್ನು ನಾನು ನಿನಗೆ ಹೇಳಿರುವೆನು. ಆದರೆ ಇತರ ಗ್ರಂಥಗಳಲ್ಲಿ ತತ್ತ್ವಗಳನ್ನು ಅಸಂಖ್ಯವಾಗಿ ವರ್ಣಿಸಿರುವುವು ।೨೨೫॥

ಸರ್ವಜ್ಞ ಜ್ಞಾನಿಗಳವರು ಅನೇಕ ಪ್ರಕಾರದ ಮತಗಳ ವಿಚಾರವನ್ನು ಮಾಡಿ ತತ್ತ್ವಗಳ ನಿಜವಾದ ಸ್ವರೂಪವನ್ನು ಅರಿತು ಅವುಗಳ ಯಥಾರ್ಥ ವಿಭಾಗವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದಿರುವರು ।೨೨೬॥ ಆತ್ಮತತ್ತ್ವ ಒಂದನ್ನು ತಿಳಿಯುವುದಕ್ಕಾಗಿ ತತ್ತ್ವಗಳ ವಿಚಾರ ಮಾಡುತ್ತಿರಲು, ಆಗ ಹೆಚ್ಚು ಕಡಿಮೆ ತತ್ತ್ವಗಳನ್ನು ಹೇಳಿರುವುದಕ್ಕೆ ಯಾವ ದೋಷವೂ ಆಗಲಾರದು ।೨೨೭॥ ನಿಜವಾಗಿ ನೋಡಿದರೆ ವಿಕಾರದಲ್ಲಿ ಜ್ಞಾನಕ್ಕೆ ವಿಶೇಷವಾಗಿ ಏನೂ ಹೇಳಲು ಬರುವಂತಿಲ್ಲ. ಕಾರಣ ವಿಕಾರವೆಲ್ಲವೂ ಪ್ರಕೃತಿಯಲ್ಲಿರುವುವು. ಆತ್ಮನು ಮಾತ್ರ ಶುದ್ಧ ಅವಿಕಾರಿಯಾಗಿರುವನು ।೨೨೮॥ ಆತ್ಮನು ಪ್ರಕೃತಿಯಿಂದ ಪರಿಪೂರ್ಣವಾಗಿ ಭಿನ್ನನಾಗಿರುವನು. ಆದ್ದರಿಂದ ಆತನು ಅವಿಕಾರಿಯು. ಪ್ರಕೃತಿಯು ಪರಿಪೂರ್ಣವಾಗಿ ವಿಕಾರಯುಕ್ತವಾಗಿದೆ. ಇದೇ ತತ್ತ್ವಗಳ ಮುಖ್ಯ ಲಕ್ಷಣವಾಗಿದೆ ।೨೨೯॥ ಹೇ ಉದ್ಧವಾ ಪ್ರಕೃತಿಗಿಂತ ಪುರುಷನು ಭಿನ್ನನಾಗಿರುವನು. ಆತನ ಭಿನ್ನತ್ವವನ್ನು ತಿಳಿದುಕೊಳ್ಳುವುದಕ್ಕಾಗಿಯೇ ತತ್ತ್ವಗಳ ವಿಚಾರವನ್ನು ಮಾಡಬೇಕಾಗುವುದು ।೨೩೦॥ ಈ ಯಾವ ಶ್ರೀಕೃಷ್ಣನ ವಚನವನ್ನು ಕೇಳಿ ಉದ್ಧವನಿಗೆ ಬಹಳ ಚಮತ್ಕಾರವೆನಿಸಿತು. ಆದ್ದರಿಂದ ಆತನು ತಾನಾಗಿಯೇ ದೇವರಲ್ಲಿ ಪ್ರಕೃತಿ ಪುರುಷರ ಭಿನ್ನತ್ವವನ್ನು ಕುರಿತು ಕೇಳಿದನು ।೨೩೧॥

ಪ್ರಕೃತೀ ಮತ್ತು ಪುರುಷ ಇವು ಭಿನ್ನವಾಗಿ ಹೇಗೆ ಇರುವುವು ಎಂಬ ಈ ಸಂಬಂಧವಾಗಿ ಗೂಢವಾದ ಪ್ರಶ್ನೆಯನ್ನು ಮುಂದಿನ ಮೂರುವರೆ ಶ್ಲೋಕಗಳಲ್ಲಿ ಉದ್ಧವನು ದೇವನಿಗೆ ಕೇಳುವನು ।೨೩೨॥ ಪ್ರಕೃತಿಗಿಂತಲೂ ಪುರುಷನು ಭಿನ್ನನು ಎಂಬ ದೇವನ ವಚನವನ್ನು ಕೇಳಿ ಉದ್ಧವನು ಮನದಲ್ಲಿ ಹೀಗೆ ವಿಚಾರಿಸಿದನು; ಪ್ರಕೃತಿ ಪುರುಷರಿಗಿಂತ ಭಿನ್ನವಾಗಿರುವ ಭಗವಾನ ಶ್ರೀಕೃಷ್ಣನು ಈ ಎರಡರ ಸಾಕ್ಷೀರೂಪನಾದಂತಾಯಿತು ।೨೩೩॥

ಮ್ಹಣೇ ಐಕ ಶ್ರೀಕೃಷ್ಣ ಶ್ರೇಷ್ಠಾ । ಹೇ ಪ್ರಕೃತಿ ಪುರುಷಾಂಚೀ ಚೇಷ್ಟಾ । ತೂ ವೇಗಳೇಪಣೇ ದೇಖಣಾ ದ್ರಷ್ಟಾ । ಸುರವರಿಷ್ಠಾ ಶ್ರೀಪತೀ ॥೨೩೪॥ ಪ್ರಕೃತಿ ಪುರುಷ ದೋನಿ ಭಿನ್ನ । ಏಕ ಜಡ ಏಕ ಚೇತನ । ಹೇ ಮಜಹೀ ಕಳತಸೇ ಜಾಣ । ಪರೀ ವೇಗಳೇಪಣ ಲಕ್ಷೇನಾ ॥೨೩೫॥ ಜೈಸಾ ತಪ್ತ ಲೋಹಾಚಾ ಗೋಳ । ದಿಸೇ ಅಗ್ನೀಚಿ ಕೇವಳ । ತೇವೀ ಪ್ರಕೃತಿಪುರುಷಾಂಚಾ ಮೇಳ । ದಿಸೇ ಸಬಳ ಏಕತ್ವೇ ॥೨೩೬॥ ಜೇವೀ ಬೀಜ ಧರೋನಿಯಾ ಪೋಟೇಸೀ । ನಿಕಣೂ ಕೋಂಡಾ ವಾಢೇ ಕಣೇಸೀ । ತೇವೀ ಪ್ರಕೃತಿ ಜಾಣ ಪುರುಷೇಸೀ । ಅಭಿನ್ನತೇಸೀ ಜಡಲೀಸೇ ॥೨೩೭॥ ಕಾ ನಾರಳ ಚೋಖ ಧರೋನಿ ಪೋಟೀ । ನಿರಸ ಕಠಿಣ ವಾಢೇ ನರೋಟೀ । ತೇವೀ ಪುರುಷಯೋಗೇ ಪ್ರಕೃತಿ ಲಾಠೀ । ಝಾಲೀ ಸೃಷ್ಟೀ ಅನಿವಾರ ॥೨೩೮॥ ಕಣಾವೇಗಳಾ ಕೋಂಡಾ ನ ವಾಢೇ । ತೇವೀ ಪುರುಷಾವೇಗಳೀ ಪ್ರಕೃತಿ ನಾತುಡೇ । ಹೇ ಪ್ರಕೃತಿಪುರುಷಾಂಚೇ ಬಿರಡೇ । ತುಜವೇಗಳೇ ನಿವಾಡೇ ನಿವಡೇನಾ ॥೨೩೯॥ ಜೇವೀ ಕಾ ಶಿಂಪೀಚೇ ಅಂಗೀ । ಜಡಲೀ ರೂಪೇಪಣಾಚೀ ಝಗೀ । ತೇವೀ ಪುರುಷಾಚ್ಯಾ ಸಂಯೋಗೀ । ಪ್ರಕೃತಿ ಜಗೀ ಭಾಸತ ॥೨೪೦॥ ತೀಕ್ಷ್ಣ ರವಿಕರ ಸಂಬಂಧೀ । ಭಾಸೇ ಮೃಗಜಳಾಚೀ ಮಹಾನದೀ । ತೇವೀ ಪುರುಷಾಚ್ಯಾ ಸಂಬಂಧೀ । ಪ್ರಕೃತಿ ತ್ರಿಶುದ್ಧೀ ಆಭಾಸೇ ॥೨೪೧॥ ಜೇವೀ ಕಾ ನಭೀ ನೀಲಿಮಾ । ವೇಗಳೀ ನ ದಿಸೇ ಸಾಂಡೂನಿ ವ್ಯೋಮಾ । ತೇವೀ ಪ್ರಕೃತಿ-ಪುರುಷೋತ್ತಮಾ । ವೇಗಳೀಕ ಆಮ್ಹಾ ದಿಸೇನಾ ॥೨೪೨॥ ಮುಖ್ಯ ದೇಹಾಚೇ ಜೇ ದೇಹಪಣ । ತೇಚಿ ಪ್ರಕೃತೀಚೇ ಬಾಧಕತ್ವ ಜಾಣ। ಯಾ ದೇಹಾಹೋನಿಯಾ ಭಿನ್ನ । ಪುರುಷಾಚೇ ಭಾನ ದಿಸೇನಾ ॥೨೪೩॥ ಅಹಂಪ್ರತ್ಯಯೇ ಆತ್ಮಾ ಮ್ಹಣತೀ । ತೇಹೀ ದೇಹಾಕಾರೇ ಸ್ಫುರೇ ಸ್ಫೂರ್ತೀ । ದೇಹಾವೇಗಳೀ ಆತ್ಮಪ್ರತೀತೀ । ನ ದಿಸೇ ನಿಶ್ಚಿತೀ ಗೋವಿಂದಾ ॥೨೪೪॥ ಡೋಳಾ ಸೋಡೂನಿ ದೃಷ್ಟಿ ಉರೇ । ವಾತೀವೇಗಳಾ ದೀಪ ಥಾರೇ । ತೈ ದೇಹಾವೇಗಳಾ ಆತ್ಮಾ ಸ್ಫುರೇ । ಸಾಚೋಕಾರೇ ಗೋವಿಂದಾ ॥೨೪೫॥ ಜಿವ್ಹೇವೀಣ ರಸಸ್ವಾದೂ । ಶ್ರೋತ್ರೇವೀಣ ಐಕವೇ ಶಬ್ದೂ । ತೈ ದೇಹಾವೇಗಳಾ ಆತ್ಮಬೋಧೂ । ಹೋಯ ವಿಶದೂ ಗೋವಿಂದಾ ॥೨೪೬॥ ಕಾಂಟೇವೀಣ ಫಣಸ ಆತುಡೇ । ಕಾ ಸೋಪಟೇವೀಣ ಊಂಸ ವಾಢೇ । ತೈ ದೇಹಾವೇಗಳಾ ಆತ್ಮಾ ಜೋಡೇ । ವಾಡೇಕೋಡೇ ಗೋವಿಂದಾ ॥೨೪೭॥

ಆದ್ದರಿಂದ ಉದ್ಧವನು ಹೀಗೆ ಹೇಳಿದನು ; ಹೇ ಪ್ರಿಯ ಶ್ರೀಕೃಷ್ಣಾ, ದೇವಾಧಿದೇವಾ, ಲಕ್ಷ್ಮೀಪತೇ, ವಿಚಾರಿಸಿ ನೋಡಿದರೆ ಪ್ರಕೃತೀ ಮತ್ತು ಪುರುಷ ಇವುಗಳ ಭಿನ್ನ ಭಿನ್ನ ವ್ಯವಹಾರಗಳನ್ನು ನೋಡುವವನಾದ ನೀನೊಬ್ಬನು ಸಾಕ್ಷಿರೂಪನಾಗಿರುವೆ ಎಂದು ಸಿದ್ಧವಾಗುವುದು ॥೨೩೪॥ ಪ್ರಕೃತೀ ಮತ್ತು ಪುರುಷ ಈ ಎರಡೂ ಭಿನ್ನ ಭಿನ್ನವಾಗಿವೆ. ಒಂದು ಜಡವಾಗಿರುವುದು, ಇನ್ನೊಂದು ಚೇತನರೂಪವಾಗಿರುವುದು. ಇದು ನನಗೂ ಕೂಡ ತಿಳಿಯುವುದು. ಆದರೆ ಇವು ಪರಸ್ಪರವಾಗಿ ಹೇಗೆ ಭಿನ್ನವಾಗಿವೆ ಎಂಬ ರಹಸ್ಯವು ನನಗೆ ಹೊಳೆಯುತ್ತಿಲ್ಲ ॥೨೩೫॥ ಪೂರ್ಣವಾಗಿ ಕಾಸಿದ ಕಬ್ಬಿಣದ ಉಂಡೆಯು ಅದು ಕೇವಲ ಅಗ್ನಿಸಮಾನವಾಗಿ ಕಾಣಿಸುತ್ತಿರುವುದು. ಅದರಂತೆ ಪ್ರಕೃತೀ ಮತ್ತು ಪುರುಷನ ಸಮುದಾಯವು ನನಗೆ ಒಂದೇಯಾಗಿ ತೋರುವುದು ॥೨೩೬॥ ಅಥವಾ ಹೊಟ್ಟೆಯಲ್ಲಿ ಬೀಜವನ್ನಿಟ್ಟುಕೊಂಡು ಕಾಳಿಲ್ಲದ ತೌಡು ಬೆಳೆಯುತ್ತಿರುವುದು. ಅದರಂತೆಯೇ ಪ್ರಕೃತಿಯೂ ಕೂಡ ಪುರುಷನ ಜೊತೆಯಲ್ಲಿ ಪರಿಪೂರ್ಣವಾಗಿ ಒಂದೇ ಜೀವವಾಗಿರುವುದು ॥೨೩೭॥ ಅಥವಾ ಉತ್ತಮ ಜಾತಿಯ ಕೊಬ್ಬರಿಯನ್ನು ಹೊಟ್ಟೆಯಲ್ಲಿ ಧರಿಸಿ, ನೀರಸವಾದ ಮತ್ತು ಕಠಿಣ ಸ್ವರೂಪದ ಕರಟವು ಬೆಳೆಯುತ್ತಿರುವುದು. ಅದರಂತೆ ಪುರುಷನ ಬಲದಿಂದ ಈ ಯಾವ ಪ್ರಕೃತಿಯು ದೊಡ್ಡದಾಗಿ ಅನಿವಾರ್ಯವಾಗಿ ಸೃಷ್ಟಿಯು ಉತ್ಪನ್ನವಾಗಿರುವುದು ॥೨೩೮॥ ಕಾಳಿನ ಹೊರತಾಗಿ ತೌಡು ಬೆಳೆಯಲು ಸಾಧ್ಯವೇ ಇಲ್ಲ. ಅದರಂತೆ ಈ ಪ್ರಕೃತಿಯು ಪುರುಷನಿಲ್ಲದೇ ವ್ಯಕ್ತವಾಗಲು ಶಕ್ಯವೇ ಇಲ್ಲ. ಈ ಪ್ರಕೃತಿ ಪುರುಷರ ಯಾವ ಈ ಕಗ್ಗಂಟು ನಿನ್ನ ಹೊರತಾಗಿ ಬೇರೆ ಯಾರಿಗೂ ಬಿಡಿಸಲು ಬರುವುದಿಲ್ಲ ॥೨೩೯॥ ಶಿಂಪಿಯಲ್ಲಿ ಬೆಳ್ಳಿಯ ಕಾಂತಿಯು ಯಾವ ಪ್ರಕಾರವಾಗಿ ಮೂಡಿಕೊಂಡಿರುವುದೋ ಅದರಂತೆಯೇ ಜಗತ್ತಿನಲ್ಲಿ ಪುರುಷನ ಸಂಗತಿಯಿಂದ ಪ್ರಕೃತಿಯ ಭಾಸವಾಗುತ್ತಿರುವುದು ॥೨೪೦॥ ತೇಜಸ್ವಿಯಾಗಿರುವ ಸೂರ್ಯನ ಕಿರಣಗಳಿಂದ ಮೃಗಜಲದ ದೊಡ್ಡ ನದಿಯು ಭಾಸಮಾನವಾಗುತ್ತಿರುವುದು. ಅದರಂತೆ ಪುರುಷನ ಸಂಯೋಗದಿಂದ ಈ ಯಾವ ಪ್ರಕೃತಿಯು ಭಾಸಮಾನವಾಗುತ್ತಿರುವುದು ॥೨೪೧॥ ಹೇ ಪುರುಷೋತ್ತಮನೇ, ಆಕಾಶದಲ್ಲಿನ ನೀಲಿಬಣ್ಣವು ಅದು ಆಕಾಶವನ್ನು ಬಿಟ್ಟು ಬೇರೆಯಾಗಿ ಇರುವದಿಲ್ಲ. ಅದರಂತೆ ಈ ಪ್ರಕೃತಿಯು ಪುರುಷನನ್ನು ಬಿಟ್ಟು ಬೇರೆಯಾಗಿ ಇರುವುದು ನಮಗೆ ಕಾಣಿಸುವುದಿಲ್ಲ ॥೨೪೨॥ ಮುಖ್ಯವಾಗಿ ಹೀಗೆ ದೇಹದ ದೇಹತ್ವವು, ಇದೇ ಪ್ರಕೃತಿಯ ಬಾಧಕವಾಗಿರುವುದು. ಆದರೆ ಈ ದೇಹದಿಂದ ಭಿನ್ನನು ಎಂಬ ಪುರುಷನ ಭಾನವು ಕಾಣುವುದೇ ಇಲ್ಲ ॥೨೪೩॥ ಒಳಗಿರುವ ನಾನು ಎಂಬ ಈ ಅನುಭವಕ್ಕೆ ಆತ್ಮನು ಎಂದು ಹೀಗೆ ಹೇಳುವರು. ಆದರೆ ಈ ಸ್ಫೂರ್ತಿಯೂ ಸಹ ದೇಹದ ಆಕಾರದಿಂದಲೇ ಆಗುತ್ತಿರುವುದು. ಹೇ ಗೋವಿಂದನೇ, ದೇಹದ ಹೊರತಾಗಿ ಆತ್ಮದ ಪ್ರತೀತಿಯು ಎಂದಿಗೂ ಆಗಲಾರದು ॥೨೪೪॥ ಹೇ ಗೋವಿಂದನೇ, ನೇತ್ರಗಳಿಲ್ಲದೇ ದೃಷ್ಟಿಯು ಕಾಣಿಸುತ್ತಿದ್ದರೆ, ಬತ್ತಿವಿಲ್ಲದೇ ದೀಪವು ಉರಿಯುತ್ತಿದ್ದರೆ, ಆಗ ಮಾತ್ರ ದೇಹದ ಹೊರತಾಗಿ ಆತ್ಮನ ಪ್ರತೀತಿಯಾಗಬಲ್ಲದು ॥೨೪೫॥ ಹೇ ಗೋವಿಂದನೇ, ನಾಲಿಗೆವಿಲ್ಲದೇ ರುಚಿಯು ತೋರುತ್ತಿದ್ದರೆ, ಕಿವಿಗಳಿಲ್ಲದೇ ಶಬ್ದಗಳು ಕೇಳಿಸುತ್ತಿದ್ದರೆ, ಆಗ ಮಾತ್ರ ದೇಹದ ಹೊರತಾಗಿ ಆತ್ಮತತ್ವದ ಬೋಧೆಯು ಸ್ಪಷ್ಟರೂಪದಲ್ಲಿ ಆಗಲು ಸಾಧ್ಯವಾಗುವುದು ॥೨೪೬॥ ಹೇ ಗೋವಿಂದನೇ, ಮುಳ್ಳುಗಳಿಲ್ಲದೇ, ಹಲಸಿನ ಹಣ್ಣು ದೊರಕುವದ್ದಾದರೆ, ಅಥವಾ ಸಿಪ್ಪೆಗಳಿಲ್ಲದೇ ಕಬ್ಬು ಬೆಳೆಯುತ್ತಿದ್ದರೆ, ಆಗ ಮಾತ್ರ ದೇಹವಿಲ್ಲದೇ ಆತ್ಮದ ಸ್ಫುರಣವಾಗಬಲ್ಲದು ॥೨೪೭॥

ತುಮ್ಹಿಂಚಿ ಸಾಂಗೀತಲೀ ನಿಜಾತ್ಮಖೂಣ । ನರದೇಹ ಬ್ರಹ್ಮಪ್ರಾಪ್ತೀಚೇ ಕಾರಣ । ಶೇಖೀ ದೇಹಾವೇಗಳೇ ಆತ್ಮದರ್ಶನ । ಕೇವೀ ಆಪಣ ಪ್ರತಿಪಾದಾ ॥೨೪೮॥ ಆಣಿ ಆತ್ಮಾವೇಗಳೀ ಪ್ರಕೃತೀ । ಸರ್ವ ಪ್ರಕಾರೇ ನ ಯೇ ವ್ಯಕ್ತೀ । ರೂಪಾವೇಗಳೀ ಛಾಯಾ ಕೇಉತೀ । ಕೈಶಾ ರೀತೀ ಆಭಾಸೇ ॥೨೪೯॥ ಗೋಡೀವೇಗಳೀ ಸಾಕರ ಹೋಯೇ । ಪರಿಮಳಾವೇಗಳಾ ಕಾಪೂರ ರಾಹೇ । ತೈ ಆತ್ಮ್ಯಾವೇಗಳೀ ಪಾಹೇ । ಪ್ರಕೃತಿ ಲಾಹೇ ಅಭಿವ್ಯಕ್ತೀ ॥೨೫೦॥ ಗಗನಾವೇಗಳಾ ಘಟ ರಾಹೇ । ತಂತೂವೇಗಳಾ ಪಟ ಹೋಯೇ । ತೈ ಆತ್ಮ್ಯಾವೇಗಳೀ ಪಾಹೇ । ಪ್ರಕೃತಿ ಲಾಹೇ ಅಭಿವ್ಯಕ್ತೀ ॥೨೫೧॥ ಗೋಡೀವೇಗಳಾ ವಾಢೇ ಊಂಸ । ಕಣೇವೀಣ ಜೈ ವಾಢೇ ಭೂಸ । ತೈ ಆತ್ಮ್ಯಾವೇಗಳೀ ರೂಪಸ । ಮಾಯಾ ಸಾವಕಾಶ ವ್ಯಕ್ತೀಸೀ ಯೇ ॥೨೫೨॥ ಪ್ರಕೃತಿಲಕ್ಷಣೀ ಆತ್ಮಾ ಲಕ್ಷಿಜೇ । ಆತ್ಮೇನಿ ಪ್ರಕೃತೀಸೀ ಪ್ರಕಾಶಿಜೇ । ಅನಾದಿ ದೋನೀ ಇಯೇ ಯೋಗ ಜೇ । ವೇಗಳಾ ಲಾಹಿಜೇ ಬೋಧ ಕೇವೀ ? ॥೨೫೩॥ ಪ್ರಕೃತಿ ಹೂನ ಆತ್ಮಾ ಭಿನ್ನ । ಸರ್ವಥಾ ಆಮ್ಹಾ ನ ದಿಸೇ ಜಾಣ। ಯೇಚಿ ಅರ್ಥೀಚೇ ವಿನವಣ । ಉದ್ಧವ ಆಪಣ ಕರೀತಸೇ ॥೨೫೪॥

ಏವಂ ಮೇ ಪುಂಡರೀಕಾಕ್ಷ ಮಹಾಂತ ಸಂಶಯಂ ಹೃದಿ ।
ಛೇತ್ತುಮರ್ಹಸಿ ಸರ್ವಜ್ಞ ವಚೋಭಿರ್ನಯನೈಪುಣ್ಯೈಃ ॥೨೮॥

ಅರ್ಥ:- ಕಮಲ ನಯನನೇ ಹೇ ಶ್ರೀಕೃಷ್ಣನೇ, ನನ್ನ ಹೃದಯದಲ್ಲಿ ಇವುಗಳ ಭಿನ್ನತೆ ಮತ್ತು ಅಭಿನ್ನತೆಗಳಿಂದ ದೊಡ್ಡ ಊಂದಲವೇ ನಿರ್ಮಾಣವಾಗಿದೆ. ನೀವು ಸರ್ವಜ್ಞರು, ತಮ್ಮ ಯುಕ್ತಿಯುಕ್ತವಾದ ವಾಣಿಯಿಂದ ನನ್ನ ಸಂಶಯವನ್ನು ನಿವಾರಣೆ ಮಾಡಿರಿ.

ಕಮಲನಾಭಾ ಕಮಲಾನನಾ । ಕಮಲಾಲಯಾ ಕಮಲಧಾರಣಾ । ಕಮಲಿನೀ ನಿವಾಸಸ್ಥಾನಾ । ಕಮಲನಯನಾ ಶ್ರೀಕೃಷ್ಣಾ ॥೨೫೫॥ ಪ್ರಕೃತಿ ಪುರುಷಯೋಗ ಅವಘಡ । ಯೋಗ್ಯಾ ನ ಕಳೇ ಭಿನ್ನ ನಿವಾಡ । ಯಾ ಸಂಶಯಾಚೇ ಅತಿಜಾಡ । ಹೃದಯೀ ಝಾಡ ವಾಢಲೇ ॥೨೫೬॥ ಹೃದಯೀ ಸಂದೇಹಾಚೀ ಮುಳೇ । ಪ್ರಕೃತಿಭೂಮೀ ವಿಕಲ್ಪಜಳೇ । ಸಂಶಯವೃಕ್ಷ ತೇಣೇ ಬಳೇ । ವಾಢಲಾ ಅಹಂಫಳೇ ಸದಾ ಫಳಿತ ॥೨೫೭॥ ಜ್ಯಾ ವೃಕ್ಷಾಚಿ ಸದಾ ಫಳೇ ಖಾತಾ । ಜೀವ ನ ರಾಹೇ ಸರ್ವಥಾ । ತೇಣೇ ಸಂಶಯಾಚೀ ಅಧಿಕತಾ । ಉಸಂತೂ ಚಿತ್ತಾ ಪೈ ನಾಹೀ ॥೨೫೮॥ ಐಶಿಯಾ ವೃಕ್ಷಾಚೇ ಛೇದನ । ಕೃಪೇನೇ ಕರಾವೇ ಆಪಣ । ಸೋಡೂನಿ ಜ್ಞಾನತಿಖವಾಗ್ಬಾಣ । ಕರೀ ನಿರ್ದಳಣ ನಿಜಾಂಗೇ ॥೨೫೯॥

ಬ್ರಹ್ಮಪ್ರಾಪ್ತಿಗಾಗಿ ನರದೇಹವು ಕಾರಣವಾಗಿರುವುದು. ಈ ಯಾವ ಆತ್ಮಜ್ಞಾನದಲ್ಲಿನ ಮರ್ಮವನ್ನು ನೀವೇ ನನಗೆ ಹೇಳಿರುವಿರಿ. ಅಂದಮೇಲೆ ಈಗ ದೇಹವಿಲ್ಲದೇ ಆತ್ಮದರ್ಶನವು ಆಗಲು ಸಾಧ್ಯವೆಂದು ಹೇಗೆ ಹೇಳುವಿರಿ? ॥೨೪೮॥ ಆತ್ಮನ ಹೊರತಾಗಿ ಪ್ರಕೃತಿಯು ಎಂದಿಗೂ ನಿದರ್ಶನಕ್ಕೆ ಬರುವುದಿಲ್ಲ. ಪದಾರ್ಥಗಳಿಲ್ಲದೇ ನೆರಳು ಕಾಣಲು ಶಕ್ಯವಿಲ್ಲ. ಅದರಂತೆಯೇ ಪುರುಷನಿಲ್ಲದೇ ಪ್ರಕೃತಿಯು ತೋರುವುದು ಶಕ್ಯವೇ ಇಲ್ಲ ॥೨೪೯॥ ಸಿಹಿಯನ್ನು ಬಿಟ್ಟು ಸಕ್ಕರೆಯು ಇರಲು ಸಾಧ್ಯವಾದರೆ ಅಥವಾ ಸುವಾಸನೆಯ ಹೊರತಾಗಿ ಕರ್ಪೂರವು ಇರಲು ಶಕ್ಯವಾದರೆ, ಆಗ ಮಾತ್ರ ಆತ್ಮ ಹೊರತಾಗಿ ಪ್ರಕೃತಿಯು ವ್ಯಕ್ತವಾಗಲು ಸಾಧ್ಯವಾದೀತು ॥೨೫೦॥ ಆಕಾಶವನ್ನು ಬಿಟ್ಟು ಕೊಡವು ಇದ್ದರೆ, ಅಥವಾ ನೂಲಿನ ಹೊರತಾಗಿ ವಸ್ತ್ರವು ಸಿದ್ಧವಾದರೆ ಆಗ ಮಾತ್ರ ಆತ್ಮನಿಲ್ಲದೇ ಪ್ರಕೃತಿಯು ವ್ಯಕ್ತವಾಗಬಹುದು ॥೨೫೧॥ ಸಿಹಿಯನ್ನು ಬಿಟ್ಟುಕೊಟ್ಟು ಕಬ್ಬು ಬೆಳೆಯುತ್ತಿದ್ದರೆ, ಕಾಳುಗಳಿಲ್ಲದೇ ಕೇವಲ ತೌಡು ಬೆಳೆಯುತ್ತಿದ್ದರೆ ಆಗ ಮಾತ್ರ ಆತ್ಮನಿಲ್ಲದೇ ಮೂರ್ತಿಮಂತವಾದ ಮಾಯೆಯು ಪ್ರಕಟವಾದದ್ದು ತೋರಬಹುದು ॥೨೫೨॥ ಆತ್ಮದ ಸ್ವರೂಪವು ಇದು ಪ್ರಕೃತಿಯ ಲಕ್ಷಣಗಳಿಂದ ಗೋಚರಿಸುವುದು ಮತ್ತು ಆತ್ಮವು ಪ್ರಕೃತಿಯನ್ನು ಪ್ರಕಾಶಿತವನ್ನಾಗಿ ಮಾಡುವುದು. ಹೀಗೆ ಇದು ಅನಾದಿಕಾಲದಿಂದ ಪರಸ್ಪರವಾದ ಸಂಬಂಧವಾಗಿರುವುದು. ಅದನ್ನು ಭಿನ್ನವೆಂದು ಹೇಗೆ ತಿಳಿದುಕೊಳ್ಳಬೇಕು ? ॥೨೫೩॥ ಆದ್ದರಿಂದ ಪ್ರಕೃತಿಗಿಂತಲೂ ಆತ್ಮವು ಭಿನ್ನವಾಗಿದೆ ಎಂದು ನಮಗೆ ಸರ್ವಥಾ ಕಾಣಿಸುವುದಿಲ್ಲ. ಇದೇ ಅರ್ಥದ ವಿನಂತಿಯನ್ನು ಉದ್ಧವನು ತಾನಾಗಿಯೇ ಮಾಡುತ್ತಿರುವನು ॥೨೫೪॥

ಹೇ, ಕಮಲನಾಭಾ, ಕಮಲವದನಾ, ಕಮಲಧಾಮಾ,ಕಮಲಧರಾ, ಕಮಲನೀನಿವಾಸಾ, ಕಮಲನಯನಾ ಶ್ರೀಕೃಷ್ಣಾ ॥೨೫೫॥ ಪ್ರಕೃತೀ ಮತ್ತು ಪುರುಷರ ಈ ಸಂಬಂಧವು ಅತ್ಯಂತ ಗಹನವಾಗಿರುವುದು. ಇದರ ಸ್ಪಷ್ಟ ನಿರ್ಣಯವನ್ನು ಯೋಗಿಗಳಿಗೂ ಕೂಡ ಹೇಳಲು ಬರುವುದಿಲ್ಲ. ಇದೇ ಸಂಶಯದ ಪ್ರಚಂಡ ವೃಕ್ಷವು ಹೃದಯದಲ್ಲಿ ಹಬ್ಬಿಕೊಂಡಿರುವುದು ॥೨೫೬॥ ಹೃದಯದಲ್ಲಿ ಸಂಶಯರೂಪ ಬೇರುಗಳು ಉತ್ಪನ್ನವಾದವು. ಅವು ಪ್ರಕೃತಿರೂಪ ಭೂಮಿಯಲ್ಲಿ ಬಿದ್ದು ಅದರ ಮೇಲೆ ವಿಕಲ್ಪವೆಂಬ ನೀರು ಹಣಿಸಲಾಯಿತು. ಇವುಗಳ ಆಧಾರದಿಂದ ಈ ಯಾವ ಸಂಶಯರೂಪ ವೃಕ್ಷವು ಬೆಳೆದು ಮತ್ತು ಅಹಂಕಾರರೂಪ ಫಲದಿಂದ ತುಂಬಿಕೊಂಡಿತು ॥೨೫೭॥ ಈ ವೃಕ್ಷದ ಫಲಗಳನ್ನು ನಿತ್ಯವೂ ಸೇವಿಸದ ಹೊರತು ಜೀವಕ್ಕೆ ಸಮಾಧಾನವಾಗುವುದಿಲ್ಲ. ಇದರಿಂದ ಸಂಶಯವು ಬೆಳೆದು ನಿಂತಿದೆ. ವಿಶ್ರಾಂತಿಯು ಮುಗಿದು ಹೋಗಿದೆ ॥೨೫೮॥ ಹೀಗಿರುವ ಈ ವೃಕ್ಷವನ್ನು ನೀನು ಕೃಪೆಮಾಡಿ ಮುರಿದು ಒಗೆ, ಜ್ಞಾನದ ತೀವ್ರವಾದ ವಾಕ್ ಬಾಣಗಳನ್ನು ಬಿಟ್ಟು ಸ್ವತಃ ನೀನು ಇದರ ಬೇರು ಸಮೇತವಾಗಿ ನಾಶ ಮಾಡು ॥೨೫೯॥

ಯೋಗಯಾಗಶಾಸ್ತ್ರಪಾಠೇ । ಕರಿತಾ ಧರ್ಮಕರ್ಮಕಚಾಟೇ । ಯಾ ವೃಕ್ಷಾಚೇ ಪಾನಹೀ ನ ತುಟೇ । ಹೇ ಕಠಿಣತ್ವ ಮೋಠೇ ಗೋವಿಂದಾ ॥೨೬೦॥ ಯಾ ವೃಕ್ಷಾಚೇ ಕರಿತಾ ಭೇದನ । ಬ್ರಹ್ಮಾ ಝಾಲಾ ಸಂದೇಹಾಪನ್ನ । ತುವಾ ಹಂಸಗೀತ ಸಾಂಗೋನ । ಉದ್ಧರಿಲಾ ಜಾಣ ಸುಪುತ್ರ ॥೨೬೧॥ ಮುಖ್ಯ ಬ್ರಹ್ಮಯಾಚೀ ಐಶೀ ಅವಸ್ಥಾ । ತೇಥ ಇಂತರಾಂಚೀ ಕೋಣ ಕಥಾ । ಯಾ ವೃಕ್ಷಾಚಾ ಭೇದಿತಾ । ತುಜವೀಣ ಸರ್ವಥಾ ಆನ ನಾಹೀ ॥೨೬೨॥ ಭೇದ ಕರಿತಾ ವರೀವರೀ । ವಾಸನಾ ಮುಳ್ಯಾ ಉರಲ್ಯಾ ಉರೀ । ಫಾಂಫಾಈಲ ಚೌಗುಣ್ಯಾಪರೀ । ಅತಿಶಯೇ ಭಾರೀ ಬಾಂಬಳೇ ॥೨೬೩॥ ಯಾಚಾ ಸಮೂಳ ಮೂಳೇಸೀ ಕಂದೂ । ಭೇದಿತಾ ಭೇದಕ ತೂ ಗೋವಿಂದೂ । ತುಜವೇಗಳಾ ಸಂಶಯಚ್ಛೇದೂ । ಭಲತಾ ಪ್ರಬುದ್ಧ ಕರೂ ನ ಶಕೇ ॥೨೬೪॥ ಮ್ಹಣಶೀ ಸಂಶಯ ಹೃದಯಾಚ್ಯಾ ಠಾಯೀ । ತೇಥ ಶಸ್ತ್ರಾಂಚಾ ರಿಗಮೂ ನಾಹೀ । ಮ್ಯಾ ಭೇದಾವೇ ಕೈಸೇಕಾಯೀ । ತೇ ಅರ್ಥೀಚೇ ಮೀ ಪಾಹೀ ಸಾಂಗೇನ ॥೨೬೫॥ ತುಝೇ ಜ್ಞಾನಚಕ್ರ ಅಲೋಲಿಕ । ತುಝೇನಿ ಶಬ್ದತೇಜೇ ಅತಿತಿಖ। ಸಮೂಳ ಸಂಶಯಾಚೇ ಭೇದಕ । ತುಝೇ ವಚನ ಏಕ ಗೋವಿಂದಾ ॥೨೬೬॥ ಐಸೇ ತುಝೇ ಜ್ಞಾನವಚನ । ತುಂವಾ ಕೇಲಿಯಾ ಕೃಪಾವಲೋಕನ । ಸಮೂಳ ಸಂಶಯಾಚೇ ನಿರ್ದಳಣ । ಸಹಜೇಚಿ ಜಾಣ ಹೋತಾಹೇ ॥೨೬೭॥ ತರೀ ತುಂವಾ ಶ್ರೀಮುಕುಂದಾ । ಫೇಡಾವೀ ಮಾಝೀ ಸಂಶಯಬಾಧಾ । ತಯಾ ಉದ್ಧವಾಚಿಯಾ ಶಬ್ದಾ । ಗೋಪೀರಾದ್ಧಾ ಸಾಂಗೇನ ಮ್ಹಣೇ ॥೨೬೮॥ ಅಸತಾ ಬಹುಸಾಲ ಸಜ್ಞಾನ । ಸಕಳ ಸಂಶಯಾಚೇ ನಿರ್ದಳಣ । ಮೀಚಿ ಕರ್ತಾ ಹೇ ಕಾಯ ಕಾರಣ । ತೇಹೀ ಲಕ್ಷಣ ಅವಧಾರೀ ॥೨೬೯॥

ತ್ವತ್ತೋ ಜ್ಞಾನಂ ಹಿ ಜೀವಾನಾಂ ಪ್ರಮೋಷಸ್ತೇಽತ್ರ ಶಕ್ತಿತಃ ।
ತ್ವಮೇವ ಹ್ಯಾತ್ಮಮಾಯಾಯಾ ಗತಿಂ ವೇತ್ಥ ನ ಚಾಪರಃ ॥೨೮॥

ಅರ್ಥ:- ಹೇ ಭಗವಂತಾ, ನಿನ್ನ ಕೃಪೆಯಿಂದ ಜೀವಕ್ಕೆ ಜ್ಞಾನವು ಪ್ರಾಪ್ತವಾಗುವುದು. ಮತ್ತು ನಿನ್ನ ಮಾಯಾಶಕ್ತಿಯಿಂದ ಜ್ಞಾನದ ನಾಶವಾಗುವುದು. ನಿಮ್ಮ ಆತ್ಮಸ್ವರೂಪಿಣೀ ಮಾಯೆಯ ವಿಚಿತ್ರ ಗತಿಯನ್ನು ನೀವೇ ತಿಳಿಯುವಿರಿ. ಆದ್ದರಿಂದ ನೀವೇ ನನ್ನ ಸಂದೇಹವನ್ನು ಅಳಿಸಬಲ್ಲಿರಿ.

ಅತರ್ಕ್ಯ ತುಝೀ ಮಾಯಾಶಕ್ತೀ । ತ್ಯಾ ಆವರೂನಿ ಆನಂದಸ್ಫೂರ್ತೀ । ದೃಢ ಲಾವೂನಿ ವಿಷಯಾಸಕ್ತೀ । ತೇಣೇ ಜೀವ ಹೋತೀ ಅಜ್ಞಾನ ॥೨೭೦॥

ಹೇ ಗೋವಿಂದನೇ, ಇದಕ್ಕಾಗಿ ಎಷ್ಟೇ ಮಹಾ ಮಹಾ ಯಜ್ಞಗಳನ್ನು ಮಾಡಲಿ, ಎಷ್ಟೇ ಶಾಸ್ತ್ರಗಳ ಪಠಣ ಮಾಡಲಿ ಅಥವಾ ಧರ್ಮಕರ್ಮಗಳ ಅನುಷ್ಠಾನವನ್ನು ಮಾಡಲಿ ಆದರೂ ಈ ವೃಕ್ಷದ ಒಂದು ಎಲೆಯನ್ನೂ ಕೂಡ ಮುರಿಯಲಾರದು. ಹೀಗೆ ಈ ವೃಕ್ಷವು ಅತ್ಯಂತ ಕಠಿಣವಾಗಿರುವುದು ॥೨೬೦॥ ಈ ವೃಕ್ಷವನ್ನು ಮುರಿಯಲು ಹೋಗಿ ಬ್ರಹ್ಮದೇವನೂ ಸಹ ಸಂಶಯದಲ್ಲಿ ಬಿದ್ದನು. ಆಗ ನೀನು ಹಂಸಗೀತವನ್ನು ಹೇಳಿ ಸನಕಾದಿಕ ಸುಪುತ್ರರ ಉದ್ಧಾರವನ್ನು ಮಾಡಿದೆ ॥೨೬೧॥ ಪ್ರತ್ಯಕ್ಷ ಬ್ರಹ್ಮದೇವನ ಅವಸ್ಥೆಯೂ ಕೂಡ ಹೀಗಾದ ಮೇಲೆ ಇತರರ ಯಾವ ಕಥೆ? ಹೇ ಪ್ರಭುವೇ, ಈ ವೃಕ್ಷವನ್ನು ಭೇದಿಸಲು ನಿನ್ನ ಹೊರತಾಗಿ ಅನ್ಯರು ಯಾರೂ ಇರುವುದಿಲ್ಲ ॥೨೬೨॥ ಈ ವೃಕ್ಷವನ್ನು ಮೇಲ್ಭಾಗವನ್ನಷ್ಟೇ ಮುರಿಯಲು ಆಗ ಅದರ ವಾಸನೆಯ ಬೇರುಗಳು ಹಾಗೆಯೇ ಉಳಿದುಕೊಳ್ಳುವುವು. ಆಗ ವೃಕ್ಷವು ಮೊದಲಿನಕ್ಕಿಂತಲೂ ಹೆಚ್ಚು ಜೋರಾಗಿ ಬೆಳೆದು ಅದರ ವಿಸ್ತಾರವು ಹಬ್ಬಿಕೊಳ್ಳುವುದು ॥೨೬೩॥ ಅದಕ್ಕಾಗಿ ಹೇ ಗೋವಿಂದನೇ, ಇದರ ಸಮೂಲವಾಗಿ ಭೇದಗೊಳಿಸಲು ನೀನೊಬ್ಬನೇ ಸಮರ್ಥನಾಗಿರುವೆ. ನಿನ್ನನ್ನು ಬಿಟ್ಟರೆ ಬೇರೆ ಯಾವ ಬುದ್ಧಿಮಾನ ಪುರುಷನಿಗೂ ಕೂಡ ಈ ಸಂಶಯವನ್ನು ಭೇದಿಸಲು ಸಾಧ್ಯವಾಗುವುದಿಲ್ಲ ॥೨೬೪॥ ಸಂಶಯವು ಹೃದಯದಲ್ಲಿ ನಿರ್ಮಾಣವಾಗುವುದು. ಅಲ್ಲಿ ಶಸ್ತ್ರಪ್ರಯೋಗ ಮಾಡಲು ಬರುವುದಿಲ್ಲ. ಅಂದಮೇಲೆ ಸಂಶಯದ ವೃಕ್ಷವನ್ನು ಹೇಗೆ ಭೇದಿಸಬೇಕು? ಎಂದು ನೀನು ಹೇಳಬಹುದು ಅದಕ್ಕಾಗಿಯೂ ನಾನೇ ಹೇಳುವೆನು ॥೨೬೫॥ ನಿನ್ನ ಶಬ್ದರೂಪ ತೇಜದಿಂದ ದೇದಿಪ್ಯಮಾನವಾದ ನಿನ್ನ ಜ್ಞಾನರೂಪ ಚಕ್ರವು ಅತಿಶಯವಾಗಿ ಮಹತ್ತರವಾಗಿರುವುದು. ಹೇ ಶ್ರೀಕೃಷ್ಣನೇ ಸಂಶಯವನ್ನು ಪೂರ್ಣವಾಗಿ ಭೇದನೆಯನ್ನು ಮಾಡುವ ನಿನ್ನ ವಚನ ಒಂದೇ ಸಮರ್ಥವಾಗಿರುವುದು ॥೨೬೬॥ ನಿನ್ನ ಜ್ಞಾನರೂಪ ವಚನಗಳ ಪ್ರಭಾವವು ಬಹು ದೊಡ್ಡದಾಗಿರುವುದು. ಕೇವಲ ನಿನ್ನ ಕೃಪಾದೃಷ್ಟಿಯಾಗುತ್ತಲೇ ಸರ್ವ ಪ್ರಕಾರದ ಸಂಶಯಗಳು ಸಹಜವಾಗಿ ನಾಶವಾಗುವುವು ॥೨೬೭॥ ಹೇ ಮುಕುಂದನೇ, ದಯವಿಟ್ಟು ನನ್ನ ಮನದಲ್ಲಿನ ಸಂಶಯವನ್ನು ದೂರ ಮಾಡು, ಉದ್ಧವನ ಈ ವಿನಂತಿಯನ್ನು ಆಲಿಸಿ ಗೋಪಿಯರ ಆರಾಧ್ಯನಾದ ಯಾವ ಶ್ರೀಕೃಷ್ಣನು ಹಾಗೇ ಆಗಲಿ, ಹೇಳುವೆನು ಎಂದು ಅಂದನು ॥೨೬೮॥ ಅನೇಕ ಸಜ್ಞಾನ ಪುರುಷರು ಇದ್ದರೂ ಕೂಡ ಸರ್ವ ಸಂಶಯಗಳ ನಾಶವನ್ನು ಮಾಡುವವ ನಾನೊಬ್ಬನೇ ಎಂದು ಹೇಳುವ ಕಾರಣವೇನೆಂಬುದನ್ನೂ ಸಹ ಈಗ ಉದ್ಧವನು ಹೇಳುವನು ॥೨೬೯॥

ಹೇ ಶ್ರೀಕೃಷ್ಣನೇ, ನಿನ್ನ ಮಾಯಾಶಕ್ತಿಯು ಅತರ್ಕ್ಯವಾಗಿದೆ, ಅಗಾಧವಾಗಿದೆ. ಇದು ಆತ್ಮಾನಂದದ ಸ್ಫೂರ್ತಿಯನ್ನು ಜಗ್ಗಿ ಹಿಡಿಯುತ್ತಿರುವುದು ಮತ್ತು ವಿಷಯಗಳ ಆಸಕ್ತಿಯನ್ನು ಬೆಳೆಯಿಸುವುದು. ಆದ್ದರಿಂದ ಜೀವವು ಅಜ್ಞಾನಿಯಾಗುವುದು ॥೨೭೦॥

ಕರಿತಾ ವಿಷಯಾಂಚೇ ಧ್ಯಾನ । ಜೀವ ಹೋಯ ಮನಾ ಅಧೀನ । ತ್ಯಾಸ ಮನ ಕರೀ ಹೀನದೀನ । ಅತಿಕೃಪಣ ಜಡ ಮೂಢ ।೨೭೧।। ಐಸೇ ಕೇವಳ ಜೀವ ಜೇ ಅಜ್ಞಾನ । ತೇ ತುಝ್ಯಾ ಕೃಪಾಕಟಾಕ್ಷೇ ಜಾಣ । ಝಾಲೇ ಗಾ ಜ್ಞಾನಸಂಪನ್ನ । ಹೇ ಕೃಪಾ ಪೂರ್ಣ ಪೈ ತುಝೀ ।।೨೭೨।। ತುಝೀ ಕೃಪಾ ಝಾಲಿಯಾ ಪರಿಪೂರ್ಣ । ಕರೂನಿ ಮಾಯೇಚೇ ನಿರ್ದಳಣ । ಜೀವ ಹೋತೀ ಬ್ರಹ್ಮ ಪೂರ್ಣ । ತುಝೇನಿ ಜಾಣ ಶ್ರೀಕೃಷ್ಣಾ ।೨೭೩।। ಮ್ಹಣಶೀ ಮಾಝೇ ಗಾಂಠೀ ಜಾಣ । ನಾಹೀ ಜ್ಞಾನ ನಾ ಅಜ್ಞಾನ । ತರೀ ತೂ ಜ್ಞಾನದಾತಾ ಆಪಣ । ಝಾಲಾಸೀ ಪೂರ್ಣ ತೇ ಐಕ ।೨೭೪।। ಧಾತಾಸವಿತಾಸನತ್ಕುಮಾರಾಂಸೀ । ನಾರದ ಪ್ರಹ್ಲಾದ ಅಂಬರೀಷಾಂಸೀ । ಕಾಲೀ ಉಪದೇಶಿಲೇ ಅರ್ಜುನಾಸೀ । ಐಸಾ ತೂ ಹೋಸೀ ಜ್ಞಾನದಾತಾ ।೨೭೫।। ಮ್ಹಣಸೀ ಬಹುತ ಅಸತೀ ಸಜ್ಞಾನ । ತ್ಯಾಂಸೀ ಪುಸೋನಿ ಸಾಧಾವೇ ಜ್ಞಾನ । ತುಜವೇಗಳೇ ಮಾಯೇಚೇ ನಿಯಮನ । ತ್ಯಾಂಚೇನಿ ಜಾಣ ಕದಾ ನೋಹೇ ।।೨೭೬।। ಮಾಯೇಚೀ ಉತ್ಪತ್ತಿಸ್ಥಿತೀ । ಮಾಯಾನಿರ್ದಳಣೇ ಗತೀ । ತೂ ಏಕ ಜಾಣತಾ ತ್ರಿಜಗತೀ । ಯಾಲಾಗೀ ಶ್ರೀಪತೀ ಕೃಪಾ ಕರೀ ।೨೭೭।। ಯಾಪರೀ ಉದ್ಧವೇ ವಿನಂತೀ । ಕರೂನಿ ಪ್ರಾರ್ಥಿಲಾ ಶ್ರೀಪತೀ । ತೋ ಪ್ರಕೃತಿಪುರುಷವಿಭಾಗ ಯುಕ್ತೀ । ಉದ್ಧವಾಪ್ರತೀ ಸಾಂಗೇಲ ।೨೭೮।। ಜೇವೀ ಸೂರ್ಯಾಪಾಶೀ ಮೃಗಜಳ । ಕಾ ಗಗನೀ ಉಪಜೇ ಆಭಾಳ । ಕಾಚಭೂಮಿಕೇ ದಿಸೇ ಜಳ । ತೈಶೀ ಪ್ರಕೃತಿ ಸಬಳ ಪುರುಷಾಪಾಶೀ ।೨೭೯।। ಯಾಪರೀ ಸ್ವಯೇ ಶ್ರೀಕೃಷ್ಣ । ಪ್ರಕೃತಿಪುರುಷನಿರೂಪಣ । ಸಮೂಳ ಸಾಂಗತಾಹೇ ಆಪಣ । ತೋ ಮ್ಹಣೇ ಸಾವಧಾನ ಉದ್ಧವಾ ।೨೮೦।।

ಶ್ರೀಭಗವಾನುವಾಚ:-

ಪ್ರಕೃತಿಃ ಪುರುಷಶ್ಚೇತಿ ವಿಕಲ್ಪಃ ಪುರುಷರ್ಷಭ । ಏಷ ವೈಕಾರಿಕಃ ಸರ್ಗೋ ಗುಣವ್ಯತಿಕರಾತ್ಮಕಃ ।೨೯।।

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು; ಉದ್ಧವಾ , ಪ್ರಕೃತಿ ಮತ್ತು ಪುರುಷ, ಶರೀರ ಮತ್ತು ಆತ್ಮಾ ಈ ಎರಡರಲ್ಲಿ ಅತ್ಯಂತ ಭೇದವಿರುವುದು. ಈ ಪ್ರಾಕೃತ ಜಗತ್ತಿನಲ್ಲಿ ಜನ್ಮ, ಮರಣ ಮತ್ತು ವೃದ್ಧಿ ಹ್ರಾಸ ಇತ್ಯಾದಿ ವಿಕಾರಗಳಿರುವುವು. ಇದರ ಕಾರಣವು ಗುಣಗಳ ಕ್ಷೋಭೆಯಾಗಿರುವುದು.

ಪ್ರಕೃತಿ ಪುರುಷ ಹೇ ದೋನೀ । ಸದಾ ಅತ್ಯಂತ ವೇಗಳೇಪಣೀ । ಜೈಸಾ ದಿವಸ ಆಣಿ ರಜನೀ । ಏಕ ಲೋಪೋನೀ ಏಕ ಪ್ರಬಳೇ ।೨೮೧।। ದಿವಸ ಲೋಪತಾಂಚಿ ಜಾಣ । ಅಂಧಕಾರೇಸೀ ಪರಿಪೂರ್ಣ । ಘೇಊನಿಯಾ ತಾರಾಗ್ರಹಗಣ । ರಾತ್ರೀ ಆಪಣ ಉಲ್ಹಾಸೇ ।೨೮೨।।

ವಿಷಯಗಳನ್ನು ಸತತವಾಗಿ ಚಿಂತನೆ ಮಾಡುವುದರಿಂದ ಜೀವವು ಇದು ಮನಸ್ಸಿನ ಆಧೀನವಾಗುವುದು. ಈ ಮನಸ್ಸು ಇದಕ್ಕೆ ಹೀನದೀನನ್ನಾಗಿ ಮಾಡಿ ಅತ್ಯಂತ ಕೃಪಣ, ಜಡ, ಮೂಢನನ್ನಾಗಿ ಮಾಡುವುದು ।೨೭೧।। ಹೀಗೆ ಕೇವಲ ಅಜ್ಞಾನಿಯಾಗಿರುವ ಜೀವವು ನಿನ್ನ ಪೂರ್ಣ ಕೃಪಾದೃಷ್ಟಿ ಮಾತ್ರದಿಂದ ಜ್ಞಾನಸಂಪನ್ನವಾಗುವುದು. ಇದೇ ನಿನ್ನ ಪರಿಪೂರ್ಣವಾದ ಕೃಪೆಯಾಗಿರುವುದು ।೨೭೨।। ಹೇ ಶ್ರೀಕೃಷ್ಣನೇ, ನಿನ್ನ ಪೂರ್ಣಕೃಪೆಯಾಯಿತೆಂದರೆ ಜೀವವು ಇದು ಮಾಯೆಯನ್ನು ಪರಾಭವಗೊಳಿಸುವುದು. ಮತ್ತು ನಿನ್ನ ಸಾಮರ್ಥ್ಯದಿಂದ ಪರಬ್ರಹ್ಮನನ್ನು ಪ್ರಾಪ್ತಮಾಡಿಕೊಳ್ಳುವುದು ।೨೭೩।। ಈಗ ನೀನು ಹೀಗೆಯೂ ಹೇಳಬಹುದು, ನನ್ನಲ್ಲಿ ಜ್ಞಾನವೂ ಇಲ್ಲ, ಅಜ್ಞಾನವೂ ಇಲ್ಲ. ಆದರೆ ನೀನು ಜ್ಞಾನದಾತಾನಾಗಿ ಹೇಗಿರುವೆ ಎಂಬುದನ್ನು ನಾನು ಹೇಳುವೆನು, ಅದನ್ನು ಕೇಳು ।೨೭೪।। ಈ ಹಿಂದೆ ಬ್ರಹ್ಮದೇವ, ಸೂರ್ಯ, ಸನತ್ಕುಮಾರರು, ನಾರದ, ಪ್ರಹ್ಲಾದ, ಅಂಬರೀಷ ಇವರಿಗೆಲ್ಲ ನೀನೇ ಜ್ಞಾನಿಯರನ್ನಾಗಿ ಮಾಡಿರುವೆ. ಅರ್ಜುನನಿಗೆ ಗೀತಾರೂಪದಿಂದ ಉಪದೇಶವನ್ನು ಮಾಡಿರುವೆ. ಆದ್ದರಿಂದ ನೀನು ಜ್ಞಾನದಾತಾನಾಗಿರುವೆ ।೨೭೫।। ಅನೇಕ ಸಜ್ಞಾನ ಬ್ರಹ್ಮವೇತ್ತೆಗಳಿರುವರು. ಅವರಲ್ಲಿ ವಿಚಾರಿಸಿ ನೀನು ಜ್ಞಾನಸಂಪನ್ನನಾಗು ಎಂದು ನೀನು ನನಗೆ ಹೇಳಬಹುದು. ಆದರೆ ನಿನ್ನ ಹೊರತಾಗಿ ಮಾಯೆಯ ನಿರಸನೆಯನ್ನು ಮಾಡುವುದು ಅವರಿಂದ ಎಂದಿಗೂ ಆಗಲು ಶಕ್ಯವಿಲ್ಲ ।೨೭೬।। ಮಾಯೆಯ ಉತ್ಪತ್ತೀ, ಸ್ಥಿತೀ, ಲಯ ಇವುಗಳನ್ನು ತಿಳಿಯುವವ ಸರ್ವ ತ್ರಿಭುವನದಲ್ಲಿ ನೀನೊಬ್ಬನೇ ಇರುವೆ. ಆದ್ದರಿಂದ ಹೇ ಶ್ರೀಪತಿಯೇ, ನನ್ನ ಮೇಲೆ ಕೃಪೆ ದೋರು ।೨೭೭।। ಈ ಪ್ರಕಾರವಾಗಿ ಅಂತಃಕರಣಪೂರ್ವಕವಾಗಿ ಉದ್ಧವನು ವಿನಂತಿಯನ್ನು ಮಾಡಿ ಶ್ರೀಕೃಷ್ಣನನ್ನು ಪ್ರಸನ್ನಗೊಳಿಸಿದನು. ಈಗ ಆತನು ಪ್ರಕೃತಿಪುರುಷರ ವಿಭಾಗವನ್ನು ಸವಿಸ್ತಾರವಾಗಿ ಹೇಳುವನು ।೨೭೮।। ಸೂರ್ಯನಿಂದ ಮೃಗಜಲವು ಹೇಗೆ ಹುಟ್ಟಿಕೊಳ್ಳುವುದೋ, ಆಕಾಶದಲ್ಲಿ ಮೋಡಗಳು ಹೇಗೆ ನಿರ್ಮಾಣವಾಗುವುವೋ, ಅಥವಾ ಗಾಜು ಕೂಡ್ರಿಸಿರುವ ಭೂಮಿಯಲ್ಲಿ ಹೇಗೆ ನೀರಿನ ಭಾಸವಾಗುವುದೋ, ಅದರಂತೆ ಪುರುಷನಿಂದ ಅತ್ಯಂತ ಪ್ರಬಲವಾದ ಈ ಪ್ರಕೃತಿಯು ನಿರ್ಮಾಣವಾಗಿರುವುದು ।೨೭೯।। ಈ ಪ್ರಕಾರವಾಗಿ ಶ್ರೀಕೃಷ್ಣನು ಸ್ವತಃ ಪ್ರಕೃತಿಪುರುಷರ ಸ್ಪಷ್ಟ ನಿರೂಪಣೆಯನ್ನು ಮಾಡುವ ಇಚ್ಛೆಯಿಂದ ಹೀಗೆ ಹೇಳಿದನು. ಉದ್ಧವಾ ಲಕ್ಷಕೊಟ್ಟು ಕೇಳು ।೨೮೦।।

ಪ್ರಕೃತೀ ಮತ್ತು ಪುರುಷ ಇವು ಯಾವಾಗಲೂ ಭಿನ್ನವಾಗಿರುವುವು. ಇವು ಹಗಲು ರಾತ್ರಿಯಂತಾಗಿರುವುವು. ಇದರಲ್ಲಿ ಒಂದು ಲೋಪವಾಗಲು ಇನ್ನೊಂದು ಪ್ರಕಟವಾಗುವುದು ।೨೮೧।। ಹಗಲು ಮುಗಿಯುತ್ತಲೇ, ಎಲ್ಲ ನಕ್ಷತ್ರಗ್ರಹಗಳ ಸಮುದಾಯ ಸಹ ಸಂಪೂರ್ಣ ಕತ್ತಲೆಯನ್ನು ಜೊತೆಯಲ್ಲಿ ತೆಗೆದುಕೊಂಡು ರಾತ್ರಿಯು ಬಹು ಉಲ್ಹಾಸದಿಂದ ಪ್ರಕಟವಾಗುವುದು ।೨೮೨।।

ತೇವೀ ಲೋಪತಾ ಪುರುಷಾಚೇ ಭಾನ । ಘೇಊನಿ ಕಾರ್ಯೇಸೀ ಕಾರಣಗುಣ । ಜ್ಞಾನಾಜ್ಞಾನೇಸೀ ಪರಿಪೂರ್ಣ । ಪ್ರಕೃತಿ ಜಾಣ ಥೋರಾವೇ ॥೨೮೩॥ ಯೇಥ ಮುಖ್ಯತ್ವೇ ಜೋ ದೇಹಾಕಾರ । ತೇಚಿ ಪ್ರಕೃತಿಚೇದುರ್ಗ ಥೋರ । ತೇಥೇ ಠೇವಿಲಾ ಠಾಣೇದಾರ । ದೇಹಅಹಂಕಾರ ಮಹಾಯೋದ್ಧಾ ॥೨೮೪॥ ಜೋ ಜೀವಲಗ ವಿಶ್ವಾಸಾಚಾ । ಪ್ರಕೃತೀಸ ವಿಶ್ವಾಸ ತ್ಯಾಚಾ । ತೋ ನೇಟಕಾ ಝುಂಝಾರ ದುರ್ಗೀಚಾ । ಭರಭಾರೂ ತೇಥೀಂಚಾ ತೋ ವಾಹೇ ॥೨೮೫॥ ತೇಥ ಅಭಿಮಾನೇ ಆಪಣ । ಪ್ರಕೃತೀಸ ನಿರ್ಭಯ ದೇ ಊನಿ ಜಾಣ । ಘಾಲೂನಿ ಸಾಮಗ್ರೀ ವಿಕಾರಭರಣ । ದುರ್ಗ ದಾರುಣ ಬಳಕಾವಿಲೇ ॥೨೮೬॥ ಐಕ ಉದ್ಧವಾ ಪುರುಷಶ್ರೇಷ್ಠಾ । ನಿಜಪ್ರಕೃತೀಚಿಯಾ ನಿಷ್ಠಾ । ದೇಹದುರ್ಗೀ ಅಭಿಮಾನ ಲಾಠಾ । ಜಾಹಲಾ ವರಿಷ್ಠಾ ಯಾ ಹೇತೂ ॥೨೮೭॥ ದೇಹದುರ್ಗೀ ಗುಣ ಅಹಂಕಾರ । ದುರ್ಗಸಾಮಗ್ರೀವಿಕಾರ । ಅವಘೀ ಪ್ರಕೃತೀಚ ಸಾಚಾರ । ತದಾಕಾರ ಭಾಸತ ॥೨೮೮॥ ಗಗನೀ ಗಂಧರ್ವನಗರ ಜಾಣ । ಮಾಡ್ಯಾ ಗೋಪುರೇ ವನ ಉಪವನ । ತೈಶೀ ಪ್ರಕತಿ ಆಪಣ । ನಾನಾಕಾರೇ ಜಾಣ ಭಾಸತ ॥೨೮೯॥ ಜೈಶೀ ಮೃಗಜಳಾಚಿ ಸರಿತಾ । ದುರೋನಿ ದಿಸೇ ಪ್ರವಾಹತಾ । ತೇವೀ ಪ್ರಕೃತೀಚೀ ಸರ್ವಥಾ । ನಾನಾಕಾರತಾ ಆಭಾಸೇ ॥೨೯೦॥ ಐಸೇ ಪ್ರಕೃತಿದುರ್ಗ ಮಹಾಥೋರ । ತೇಥೇ ನಾನಾ ಸಾಮಗ್ರೀ ವಿಕಾರ । ಜೇ ಜೇ ಘಾಲೀ ಅಹಂಕಾರ । ತೇ ಐಕ ಸಾಚಾರ ಸಾಂಗೇನ ॥೨೯೧॥

ಮಮಾಂಗ ಮಾಯಾ ಗುಣಮಯ್ಯನೇಕಧಾ ವಿಕಲ್ಪಬುದ್ಧಿಶ್ಚ ಗುಣೈರ್ವಿಧತ್ತೇ ।
ವೈಕಾರಿಕಸ್ತ್ರಿವಿಧೋಽಧ್ಯಾತ್ಮಮೇಕಮಥಾಧಿದೈವಮಧಿಭೂತಮನ್ಯತ್ ॥೩೦॥

ಅರ್ಥ:- ಪ್ರಿಯ ಮಿತ್ರನೇ, ನನ್ನ ಮಾಯೆಯು ತ್ರಿಗುಣಾತ್ಮಕವಾಗಿದೆ. ಅದು ತನ್ನ ಸತ್ವ, ರಜ, ತಮ ಗುಣಗಳಿಂದ ಅನೇಕ ಪ್ರಕಾರದ ಭೇದಕಾರಕ ವೃತ್ತಿಯನ್ನು ನಿರ್ಮಾಣ ಮಾಡುವುದು. ಇದರ ವಿಸ್ತಾರವು ವಿಪರೀತವಾಗಿರುವುದು. ಆದರೆ ವಿಕಾರಾತ್ಮಕ ಸೃಷ್ಟಿಗೆ ಆಧ್ಯಾತ್ಮ, ಆಧಿದೈವ ಮತ್ತು ಆದಿಭೂತ ಈ ಮೂರು ಭಾಗಗಳಲ್ಲಿ ವಿಭಾಗಿಸಿದೆ.

ಮಾಝೀ ಮಾಯಾ ಗಾ ಆಪಣ । ಸರ್ವಾಂಗೇ ಜಾಹಲೀ ತಿನೀ ಗುಣ । ತೇಹೀ ಅಭಿಮಾನೇ ಆಪಣ । ನಿಜಸತ್ತಾ ಜಾಣ ಆವರಿಲೇ ॥೨೯೨॥ ತೇಚಿ ದೇಹದುರ್ಗಾಭಂವತೀ ಜಾಣ । ತ್ರಿಗುಣಾಂಚೇ ಆಗಡ ಪೂರ್ಣ । ತೇಥೇ ಮಾಂಡೂನಿ ತ್ರಿಪುಟೀ ವಿಂದಾಣ ಜಾಣ । ಮಾರಾ ದಾರುಣ ಅಭಿಮಾನ ಕರೀ ॥೨೯೩॥

ಅದರಂತೆ ಪುರುಷನ ಎಚ್ಚರ ಇಲ್ಲದಾಗಲು ಪ್ರಕೃತಿಯು ಕಾರ್ಯಸಹ ಸತ್ವಾದಿ ಗುಣಗಳನ್ನು ಹಾಗೂ ಜ್ಞಾನ, ಅಜ್ಞಾನಗಳನ್ನು ತೆಗೆದುಕೊಂಡು ಪ್ರಬಲವಾಗುವುದು. ಇದನ್ನು ಲಕ್ಷದಲ್ಲಿಡು ॥೨೮೩॥ ಇದರ ಪ್ರಾಮುಖ್ಯವಾಗಿ ದೇಹದ ಯಾವ ಆಕಾರವು ಅದೇ ಪ್ರಕೃತಿಯ ದೊಡ್ಡದಾದ ಕೋಟೆಯಾಗಿರುವುದು. ಅದರಲ್ಲಿ ಅದು ದೇಹಾಭಿಮಾನನೆಂಬ ಅತ್ಯಂತ ಶೂರ ಪರಾಕ್ರಮಿಯಾದ ಕೋಟೆಯ ರಕ್ಷಕನನ್ನು ನೇಮಿಸಿರುವುದು ॥೨೮೪॥ ಆತನೇ ಈ ಪ್ರಕೃತಿಯ ಅತಿಶಯ ಪ್ರೀತಿಯ, ವಿಶ್ವಾಸಿಕ ಮತ್ತು ಏಕನಿಷ್ಠ ಸೇವಕನಾಗಿರುವನು. ದೇಹರೂಪ ಕೋಟೆಯಲ್ಲಿನ ಪರಾಕ್ರಮಿಯೋದ್ಧನು ಈತನೇ ಆಗಿರುವನು. ಆ ಕೋಟೆಯ ಸರ್ವ ಜವಾಬ್ದಾರಿಯು ಆತನ ಮೇಲೆಯೇ ಇರುವುದು ॥೨೮೫॥ ಆ ಯಾವ ಅಹಂಕಾರರೂಪ ವೀರನು ತಾನಾಗಿಯೇ ಪ್ರಕೃತಿಗೆ ಅಭಯವನ್ನು ಕೊಡುತ್ತಿರುವನು. ವಿಕಾರಗಳ ಸರ್ವ ಯುದ್ಧ ಸಾಮಗ್ರಿಗಳನ್ನು ಕೂಡಿಸಿ ಆತನು ದುರ್ಗಮವಾದ ಕೋಟೆಯನ್ನು ಹಸ್ತಗತ ಮಾಡಿಕೊಂಡಿರುವನು ॥೨೮೬॥ ಹೇ ಪುರುಷಶ್ರೇಷ್ಠ ಉದ್ಧವನೇ, ಕೇಳು. ಪ್ರಕೃತಿಯಲ್ಲಿ ನಿಷ್ಠೆಯನ್ನಿಟ್ಟು ಈ ಯಾವ ಅಹಂಕಾರವು ದೇಹರೂಪ ಕೋಟೆಯಲ್ಲಿದ್ದು ಬಲಾಢ್ಯವಾಗಿರುವುದು. ಆದ್ದರಿಂದ ಅದು ದುರ್ಗಮವಾಗುವುದು ॥೨೮೭॥ ಈ ದೇಹರೂಪ ಕೋಟೆಯಲ್ಲಿ ಸಾತ್ವಿಕ, ರಾಜಸ, ತಾಮಸ ಈ ಮೂರು ಗುಣಗಳು ಮತ್ತು ಅಹಂಕಾರಾದಿ ವಿಕಾರಗಳ ಸಾಮಗ್ರಿಗಳು ತುಂಬಿರುವುವು. ಇವು ವಾಸ್ತವಿಕವಾಗಿ ನೋಡಲು ಪ್ರಕೃತಿಯದ್ದಾಗಿದ್ದು ದೇಹದ್ದಾಗಿಯೇ ತೋರುವುವು ॥೨೮೮॥ ಆಕಾಶದ ಗಂಧರ್ವ ನಗರದಲ್ಲಿ, ಮಹಡೀ, ಗೋಪುರ, ವನಗಳು, ಉಪವನಗಳು ಇತ್ಯಾದಿ ಯಾವ ಪ್ರಕಾರವಾಗಿ ಭ್ರಮೆಯಿಂದ ಭಾಸವಾಗುತ್ತಿರುವುವೋ, ಅದರಂತೆಯೇ ಪ್ರಕೃತಿಯು ನಾನಾ ಪ್ರಕಾರವಾಗಿ ಭಾಸವಾಗುವುದು ॥೨೮೯॥ ಮೃಗಜಲದ ನದಿಯ ಪ್ರವಾಹವು ದೂರದಿಂದ ಬಹುದೂರ ಹಬ್ಬಿಕೊಂಡಿದೆ ಎಂಬಂತೆ ಭಾಸವಾಗುತ್ತಿರುವುದು ಅದರಂತೆ ಪ್ರಕೃತಿಯ ಅನೇಕ ಆಕಾರಗಳು ಭಾಸವಾಗುತ್ತಿರುವುದು ॥೨೯೦॥ ಹೀಗಿರುವ ಈ ಪ್ರಕೃತಿಯ ಕೋಟೆಯ ಅತ್ಯಂತ ದುರ್ಘಟವಾಗಿರುವುದು. ಅದರಲ್ಲಿ ಅಹಂಕಾರವು ನಾನಾಪ್ರಕಾರದ ವಿಕಾರಗಳ ಸಾಮಗ್ರಿಗಳನ್ನು ಭರಪೂರ ಪ್ರಮಾಣದಲ್ಲಿ ತುಂಬಿಸುತ್ತಿರುವುದು. ಅದನ್ನು ಈಗ ಸವಿಸ್ತಾರವಾಗಿ ಹೇಳುವೆನು, ಏಕಾಗ್ರತೆಯಿಂದ ಕೇಳು ॥೨೯೧॥

ನನ್ನ ಮಾಯೆಯು ತನ್ನ ಸ್ವಭಾವದಿಂದಲೇ ತ್ರಿಗುಣಾತ್ಮಕವಾಗಿರುವುದು. ಅದು ಸ್ವತ: ಅಭಿಮಾನಿಯಾಗಿರುವುದು. ತನ್ನ ಸತ್ತೆಯಿಂದಲೇ ಈ ಮಾಯೆಯು ಎಲ್ಲರನ್ನೂ ತನ್ನ ಅಂಕಿತವನ್ನಾಗಿ ಮಾಡಿರುವುದು ॥೨೯೨॥ ಈ ಯಾವ ದೇಹರೂಪ ಕೋಟೆಯ ಸುತ್ತಲೂ ಮೂರು ಗುಣಗಳೆಂಬ ಕಂದಕವನ್ನು ಅಗೆದಿರುವುದು. ಹಾಗೆಯೇ ತ್ರಿಪುಟಿಯ ವ್ಯವಸ್ಥಿತವಾದ ರಚನೆಯನ್ನು ಮಾಡಿ ಈ ಯಾವ ಅಭಿಮಾನವು ಜೋರಾಗಿ ಹಲ್ಲೆ ನಡೆಸುವುದು ॥೨೯೩॥

ತ್ಯಾ ದುರ್ಗಾಚೇ ದೃಢರಕ್ಷಣ । ಮುಖ್ಯತ್ವೇ ತ್ರಿಪುಟೀಚೇ ಜಾಣ । ತೇ ತ್ರಿಪುಟೀಚೇ ಮೂಳ ಲಕ್ಷಣ । ತುಜ ಮೀ ಆಪಣ ಸಾಂಗೇನ ।೯೪॥ ಅಗಾ ಉದ್ಧವಾ ಬುದ್ಧಿಮಂತಾ । ತುಜ ಮೀ ಸಾಂಗೇನ ಐಕ ಆತಾ । ತೇಥ ಅಸತೀ ತಿನೀ ವಾಟಾ । ದೋನೀ ಅಪ್ಡಾಂಟಾ ಏಕೀ ನೀಟ ।೯೫॥ ತ್ಯಾ ಮಾರ್ಗೀಚೀ ಉಭಾರಣೀ । ಸೈನ್ಯ ರಚಿಲೇ ದಾಹೀ ಆರಣೀ । ಯುದ್ಧಕಾರ ಜೋ ನಿರ್ವಾಣೀ । ತೋ ತೇಥೂನಿ ನಿರೀಕ್ಷೀ ।೯೬॥ ತೇಹೀ ಮಾರ್ಗ ಧರಿಲೇ ಚೌಪಾಶೀ । ರಾಖಿಣ ಬೈಸಲೇ ತಿನೀ ವಾಟೇಶೀ । ತೇಥ ರಿಘಾವಯಾ ಸಾಯಾಸೀ । ಜ್ಞಾನೀಯಾಸೀ ಕಾಯ ಕಾಜ ।೯೭॥ ಆತಾ ಅಸೋ ಇತುಲೀ ಪರೀ । ದೇಹದುರ್ಗಾಚೇ ಥೋರ ಭರೋಭರೀ । ಮ್ಹಣೇ ಐಕೇ ಗಾ ಯಯಾ ಥೋರೀ । ಉದ್ಧವಾತೇ ಹರೀ ಸಾಂಗತ ।೯೮॥ ಕಾರ್ಯ ಕಾರಣ ಕರ್ತವ್ಯತಾ । ಕರ್ಮ ಕ್ರಿಯಾ ಅಹಂಕರ್ತಾ । ಧ್ಯೇಯ ಧ್ಯಾನ ವಿಷಯ ಧ್ಯಾತಾ । ದುರ್ಗ ಸರ್ವಥಾ ದೃಢ ಕೇಲೇ ।೯೯॥ ತೇಥ ಭೋಗ್ಯ ಭೋಗ ಭೋಕ್ತಾ । ಕರ್ಮ ಕಾರ್ಯ ಆಣಿ ಕರ್ತಾ । ಅಭಿಮಾನ ಜಾಹಲಾ ವಸತಾ । ಪ್ರಕೃತಿಸಂವಮತಾಸಂಯೋಗೇ ।೧೦೦॥ ತೇಥ ಚೋರದ್ವಾರಾಚಿಯಾ ಲಕ್ಷೀ । ಉಘಡೂನಿ ಕಾಮಕ್ರೋಧಖಿಡಕೀ । ಘಾಲಾ ಘಾಲಿತಾ ಏಕಾಏಕೀ । ಸಕಳ ಲೋಕೀ ಕಾಂಪಿಜೇ ।೧೦೧॥ ತ್ಯಾಂಚಾ ಘೇಊನಿಯಾ ಭೇದರಾ । ತಾಪಸ ಪಳಲೇ ಸೈರಾ । ಲಂಗೋಟೀ ಸಾಂಡಿಲ್ಯಾಹೀ ದಿಗಂಬರಾ । ಕ್ರೋಧ ಥರಥರಾ ಕಾಂಪತೀ ।೧೦೨॥ ಲೋಭಯಂತ್ರಾಚೇ ಕಡಾಡೇ । ತಮಧೂಮ ದಾಟೇ ಚಹೂಕಡೇ । ಮಹಾಮೋಹಾಚೇ ಗಡದ ಪಡೇ । ಮಾಗೇಪುಢೇ ದಿಸೇನಾ ।೧೦೩॥ ದುರ್ಗಾಸಭೋವಂತೀ ನವದ್ವಾರೇ । ನವದ್ವಾರೀ ನವಹೀ ಯಂತ್ರೇ । ತೇಣೇ ತೇಣೇ ಯಂತ್ರದ್ವಾರೇ । ವಿಷಯ ಮಹಾಮಾರೇ ಮಾರಿತೀ ।೧೦೪॥ ದೇಹಾಭಿಮಾನಾಚೇ ಚಾಳಕ । ಮುಖ್ಯತ್ವೇ ಮನಚಿ ಏಕ । ತೇ ದುರ್ಧರ ಮಹಾಮಾರಕ । ದುರ್ಗ ಅಟಕ ತೇಣೇ ಕೇಲೇ ।೧೦೫॥ ಮಾಳ ಚಢೋನಿ ಅವಚಟ । ಪಾರಕೇ ರಿಘತೀ ಘಡಘಡಾಟ । ತೇ ದಶಮದ್ವಾರಾಚೀ ವಾಟ । ದೇಊನಿ ಕಪಾಟ ದೃಢ ಬುಡಿಲೇ ।೧೦೬॥ ಯಾಪರೀ ಸ್ವಯೇ ಮನ । ದುರ್ಗ ಪನ್ಹಾಸೀ ಆಪಣ । ತ್ಯಾಸೀ ಸಬಾಹ್ಯ ರಾಖಿಣ । ಘರಟೀ ಜಾಣ ಸ್ವಯೇ ಕರೀ ।೧೦೭॥

ಈ ಕೋಟೆಯ ರಕ್ಷಣೆಯನ್ನು ನಿಜವಾಗಿಯೂ ತ್ರಿಪುಟಿಯೇ ಮಾಡುತ್ತಿರುವುದು. ಈ ಯಾವ ತ್ರಿಪುಟಿಯ ಮೂಲ ಸ್ವರೂಪವನ್ನು ನಾನು ನಿನಗೀಗ ಹೇಳುವೆನು ।೯೪॥ ಹೇ ಬುದ್ಧಿಮಾನನಾದ ಉದ್ಧವನೇ, ಈ ಕೋಟೆಗೆ ಮೂರು ಮಾರ್ಗಗಳಿರುವುವು. ಇವುಗಳ ಪೈಕಿ ಎರಡು ಅಡ್ಡಮಾರ್ಗಗಳಿರುವುವು. ಒಂದು ಮಾತ್ರ ರಾಜಮಾರ್ಗವಿರುವುದು. ಈ ಎಲ್ಲ ಮಾರ್ಗಗಳನ್ನು ನಾನೀಗ ನಿನಗೆ ಹೇಳುವೆನು, ಆದಕ್ಕಾಗಿ ಕೇಳು ।೯೫॥ ಹತ್ತು ಸ್ಥಳಗಳಲ್ಲಿ ಸೈನ್ಯವನ್ನು ನಿಲ್ಲಿಸಿ, ಮುಖ್ಯವಾಗಿ ಯುದ್ಧಮಾಡುವ ವೀರನು ಅಲ್ಲಿಂದ ಕಾಣುವಂತೆ ಆ ಮಾರ್ಗದ ರಚನೆವಿರುವುದು ।೯೬॥ ಈ ಮಾರ್ಗಗಳು ನಾಲ್ಕೂ ಕಡೆಯಿಂದಲೂ ತಡೆಹಿಡಿಯಲಾಗಿದೆ. ಮೂರೂ ಮಾರ್ಗಗಳಲ್ಲಿ ದಾರಿರಕ್ಷಕರಿರುವರು. ಇಂತಹ ಕಠಿಣ ಮಾರ್ಗದಲ್ಲಿ ಬಹು ಕಷ್ಟದಿಂದ ಜ್ಞಾನೀ ಪುರುಷರಿಗೆ ಹೋಗುವ ಕಾರಣವಾದರೂ ಏನು ? ।೯೭॥ ಈಗ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸೋಣ. ದೇಹರೂಪ ಕೋಟೆಯ ಮೇಲೆ ಮೊದಲೇ ಭಯಂಕರ ಸಾಮುಗ್ರಿಗಳನ್ನು ತುಂಬಿರುವುದು. ಇದರ ಮಹಿಮೆಯನ್ನು ಈಗ ಹೇಳುವೆನು ಎಂದು ಶ್ರೀಹರಿಯು ಉದ್ಧವನಿಗೆ ಹೇಳಿದನು ।೯೮॥ ಕಾರ್ಯ-ಕಾರಣ-ಕರ್ತವ್ಯ, ಕರ್ಮ-ಕ್ರಿಯಾ-ಕರ್ತಾ, ಧ್ಯೇಯ-ಧ್ಯಾತಾ-ಧ್ಯಾನ ಈ ತ್ರಿಪುಟಿಗಳು ಸಂಪೂರ್ಣ ಕೋಟೆಯನ್ನು ವ್ಯಾಪಿಸಿರುವುವು ।೯೯॥ ಅವುಗಳಲ್ಲಿ ಭೋಗ್ಯ, ಭೋಗ ಮತ್ತು ಭೋಕ್ತಾ, ಕರ್ಮ, ಕಾರ್ಯ ಮತ್ತು ಕರ್ತಾ ಈ ಅಭಿಮಾನವು ಪ್ರಕೃತಿಯ ಸಂಗತಿಯಿಂದ ಸ್ಥಿರವಾಗಿ ನೆತುಕೊಂಡಿರುವುದು ।೧೦೦॥ ಇವನು ಕಳ್ಳ ಬಾಗಿಲಗಳಿಂದ ನೋಡುತ್ತಿರುವನು ಮತ್ತು ಕಾಮ, ಕ್ರೋಧಗಳ ಖಿಡಕಿಗಳನ್ನು ಮೆಲ್ಲನೇ ದು ಒಮ್ಮೆಲೇ ಹಲ್ಲೆ ಮಾಡುವನು. ಆಗ ಸರ್ವ ಜನರು ಇದರಿಂದ ಗಡಗಡನೇ ನಡುಗ ಹತ್ತುವರು ।೧೦೧॥ ಇವುಗಳ ಭಯಂಕರವಾದ ಶುದಿಂದ ತಪಸ್ವಿಗಳು ಸಿಕ್ಕ ಸಿಕ್ಕಕಡೆ ಓಡಲಾರಂಭಿಸುವರು. ಲಂಗೋಟಿಯನ್ನು ತೆಗೆದೊಗೆದ ದಿಗಂಬರರನ್ನೂ ಕೂಡ ಈ ಕಾಮಕ್ರೋಧಗಳು ರಥರನೇ ನಡುಗಲು ಹಚ್ಚುವುವು ।೧೦೨॥ ಲೋಭರೂಪ ತೋಫುಗಳು ಹಾರಲು ಹತ್ತಲು ಮೇಲಿಂದ ಮೇಲೆ ಧಡ್‌ಂಧಡ್‌ಂ ಎಂಬ ಧ್ವನಿಯು ಕೇಳಿಸುತ್ತಿರುವುದು. ಆಗ ನಾಲ್ಕು ದಿಕ್ಕುಗಳಲ್ಲಿಯೂ ಅಜ್ಞಾನರೂಪ ಹೊಗೆಯು ವ್ಯಾಪಿಸಿಕೊಳ್ಳುವುದು. ಮಹಾಮೋಹದಿಂದ ಎಲ್ಲ ದಿಕ್ಕುಗಳು ಅಸ್ತವ್ಯಸ್ತವಾಗಿಬಿಡುವುವು. ಆದ್ದರಿಂದ ಅಲ್ಲಿ ಹಿಂದೆ ಮುಂದೆ ಏನೂ ಕಾಣಿಸದಂತಾಗುವುದು ।೧೦೩॥ ಈ ಕೋಟೆಯ ಸುತ್ತಲೂ ಒಂಬತ್ತು ಕೊತ್ತಲೆಗಳಿರುವುವು. ಆ ಯಾವ ಪ್ರತಿಯೊಂದು ಕೊತ್ತಲೆಯ ಮೇಲೆ ಒಂದೊಂದು ತೋಫುಗಳನ್ನು ಸಿದ್ಧಗೊಳಿಸಿ ಇಡಲಾಗಿರುವುದು. ವಿಷಯಗಳು ಈ ಒಂಬತ್ತೂ ಬಾಗಿಲಗಳಿಂದಲೂ ತೋಫುಗಳನ್ನು ಹೊಡೆಯುತ್ತಲೇ ಇರುವುವು ।೧೦೪॥ ದೇಹದ ಅಭಿಮಾನದ ಮುಖ್ಯ ಚಾಲಕನೆಂದರೆ ಮನಸ್ಸಾಗಿರುವುದು. ಈ ಮನಸ್ಸಿನ ಹೊಡೆತವು ಮಹಾಭಯಂಕರವಾಗಿರುವುದು. ಇದು ಯಾವುದರಿಂದಲೂ ಹಿಂದಕ್ಕೆ ಸರಿಯುವುದೇ ಇಲ್ಲ. ಈ ಮನವು ಸಂಪೂರ್ಣ ಕೋಟೆಯನ್ನು ತನ್ನ ವಶದಲ್ಲಿಟ್ಟುಕೊಂಡಿರುವುದು ।೧೦೫॥ ಆದ್ದರಿಂದ ಶತ್ರು ಒಮ್ಮೆಲೆ ಮಾಳಿಗೆಯನ್ನು ಏರಿ ಹೋಗಿ ಮುಂದೆ ಮುಂದೆ ಹೋಗುತ್ತಿರುವನು. ಅವನು ಆ ಹತ್ತನೆಯ ದ್ವಾರದ ಮಾರ್ಗವನ್ನು ಮುಚ್ಚಿಹಾಕಿ ಸಂಪೂರ್ಣವಾಗಿ ಬಂದ ಮಾಡಿಬಿಡುವನು ।೧೦೬॥ ಈ ಪ್ರಕಾರವಾಗಿ ಈ ಪ್ರಬಲವಾದ ಮನವು ಸ್ವತಃ ಕೋಟೆಯ ಸರ್ವರೀತಿಯಲ್ಲಿ ರಕ್ಷಣೆಯನ್ನು ಮಾಡುವುದು. ಅದರ ಒಳಹೊರಗೆ ರಕ್ಷಣೆಯನ್ನು ಮಾಡುವುದಕ್ಕಾಗಿ ತಾನು ಸ್ವತಃ ಒಂದು ಮನೆಯನ್ನೂ ಕೂಡ ಕಟ್ಟುವುದು. ಇದನ್ನು ಲಕ್ಷದಲ್ಲಿಡು ।೧೦೭॥

ಧರೋನಿ ಕಾಮಾಚಾ ಹಾತ । ಮನ ರಿಗೇ ಪಾರಕ್ಯಾಂತ । ಮುಖ್ಯ ಧುರಾಂಸೀ ಲೋಳವೀತ । ಇತರಾಂಚಾ ತೇಥ ಕೋಣ ಪಾಡೂ ।೩೦೮॥ ಐಸೇ ಮನಾಚೇ ಮಾರಕಪಣ । ಅನಿವಾರ ಅತಿಕಠಿಣ। ತ್ರಿವಿಧತಾಪೇ ಖೋಂಚೂನಿ ಜನ । ಹುಂಬತ ಜಾಣ ಪಾಡಿಲೇ ।೩೦೯॥ ದೇವಾಪಾಸೂನಿ ಆಧಿದೈವಿಕ । ಮಾನಸ ತಾಪ ಆಧ್ಯಾತ್ಮಿಕ । ಭೂತಾಪಾಸಾವ ತೋ ಭೌತಿಕ । ಯಾ ನಾಂವ ದೇಖ ತ್ರಿವಿಧ ತಾಪ ।೩೧೦॥ ಸತ್ತ್ವಗುಣೇ ದೇಖ ಅಂತಃಕರಣ । ರಜೋಗುಣೇ ಇಂದ್ರಿಯೇ ಜಾಣ । ಮಹಾಭೂತೇ ವಿಷಯಭಾನ । ತಮೋಗುಣೇ ಜಾಣ ಪ್ರಸವತ ।೩೧೧॥ ತ್ರಿವಿಧ ವಿಕಾರೀ ವಿಕಾರಬಹುಳ । ತೇ ಹೇ ಪ್ರಕೃತೀಚ ಯೇಥೇ ಕೇವಳ । ಹೇಚಿ ದುರ್ಗಸಾಮಗ್ರೀ ಪ್ರಬಳ । ಪ್ರಪಂಚ ಸಬಳ ಯೇಣೇ ಜಾಹಲಾ ।೩೧೨॥ ಸಂಕಲ್ಪ ಮಹಾಪರ್ಜನ್ಯೋದಕೀ । ವಾಸನಾಜೀವನೇ ಭರಲೀ ಟಾಂಕೀ । ತೇಣೇ ಜೀವನೇ ದುರ್ಗಾಚ್ಯಾ ಲೋಕೀ । ಸಂಸಾರಸುಖದುಃಖೀ ವಿಚಾರಿಜೇ ।೩೧೩॥ ದುರ್ಗನವದ್ವಾರೀ ಸಮಸ್ತೇ । ಆಧಿದೈವ ಆಣಿ ಆಧಿಭೂತೇ । ಅಧ್ಯಾತ್ಮ ತೇ ಕೋಣ ಯೇಥೇ । ಐಕ ನಿಶ್ಚಿತೇ ಸಾಂಗೇನ ।೩೧೪॥ ಕೋಣೇ ದ್ವಾರೀ ಕೋಣ ಯಂತ್ರ । ಕೋಣ ಚೇತವಿತಾ ಕೈಸೇ ಸೂತ್ರ । ಕೈಸಾ ಹೋತಸೇ ವಿಷಯಮಾರ । ತೋಹೀ ನಿರ್ಧಾರ ತೂ ಐಕ ।೩೧೫॥

ದೃಗ್‌ರೂಪಮಾರ್ಕಂ ವಪುರತ್ರ ರಂಧ್ರೇ ಪರಸ್ಪರಂ ಸಿಧ್ಯತಿ ಯಃ ಸ್ವತಃ ಖೇ ।
ಆತ್ಮಾ ಯದೇಷಾಮಪರೋ ಯ ಆದ್ಯಃ ಸ್ವಯಾನುಭೂತ್ಯಾಽಖಿಲ ಸಿದ್ಧ ಸಿದ್ಧಿಃ ।೩೧॥

ಅರ್ಥ:- ನೇತ್ರೇಂದ್ರಿಯವು ಅಧ್ಯಾತ್ಮ, ಅದರ ವಿಷಯ ರೂಪವು ಅಧಿಭೂತವಾಗಿದೆ ಮತ್ತು ನೇತ್ರಗೋಲದಲ್ಲಿ ಸೂರ್ಯದೇವತೆಯ ಅಂಶವು ಸ್ಥಿತವಾಗಿರುವುದು ಆಧಿದೈವವಾಗಿದೆ. ಆದ್ದರಿಂದ ಆಧ್ಯಾತ್ಮ, ಆದಿದೈವ ಮತ್ತು ಅಧಿಭೂತ ಈ ಮೂರು ಪರಸ್ಪರ ಸಾಕ್ಷೇಪವಾಗಿರುವುವು. ಆದರೆ ಆಕಾಶದಲ್ಲಿನ ಸ್ಥಿತವಾಗಿರುವ ಸೂರ್ಯಮಂಡಲವು ಈ ಮೂರೂ ಅಪೇಕ್ಷೆಯಿಂದ ಮುಕ್ತವಾಗಿರುವುದು. ಕಾರಣ ಅದು ಸ್ವತಃ ಸಿದ್ಧವಾಗಿರುವುದು. ಈ ಪ್ರಕಾರವಾಗಿ ಆತ್ಮವು ಮೂರೂ ಭೇದಗಳ ಮೂಲಕಾರಣನು, ಅವುಗಳ ಸಾಕ್ಷಿಯು ಮತ್ತು ಅದರ ಆಚೆ ಇರುವನು. ಆತನು ತನ್ನ ಸ್ವಯಂಪ್ರಕಾಶದಿಂದ ಸಮಸ್ತ ಸಿದ್ಧ ಪದಾರ್ಥಗಳ ಮೂಲಸಿದ್ಧನು.

ಚಕ್ಷು ಇಂದ್ರಿಯ ಯಂತ್ರ ಥೋರ । ತೇಥ ಕಾಮಿನೀರೂಪಾಚಾ ಮಹಾಮಾರ । ಘಾಯೇ ಭೇದಿತೀ ಜಿವ್ಹಾರ । ಪಡಲೇ ಸುರವರ ಕೋಟ್ಯಾನುಕೋಟೀ ।೩೧೬॥ ಚಕ್ಷುಗೋಲ ಇಂದ್ರಿಯ ಶರೀರೀ । ತೇಥ ಆಧಿದೇವ ಸೂರ್ಯ ಅಧಿಷ್ಠಾತ್ರೀ । ದೇಖಿಲ್ಯಾ ರೂಪಾಚೀ ಧಾರಣಾ ಧರೀ । ತೇಚಿ ನಿಜನಿರ್ಧಾರೀ ಅಧ್ಯಾತ್ಮ ।೩೧೭॥ ನೀಲಪೀತರೂಪಾಭರಣ । ದೃಷ್ಟೀ ದೇಖಿಜೇ ದರ್ಶನ । ತೇಚಿ ಅಧಿಭೂತ ಸತ್ಯ ಜಾಣ । ದೃಶ್ಯಾಚೇ ಭಾನ ದೃಷ್ಟೀಸೀ ।೩೧೮॥

ಈ ಮನವು ಕಾಮದ ಕೈಯನ್ನು ಹಿಡಿದು ಶತ್ರುಗಳಲ್ಲಿ ರಭಸದಿಂದ ನುಗ್ಗಿ ಪ್ರಮುಖರಾದ ಬಲಾಢ್ಯ ವೀರರನ್ನು ಉರುಳಿಸುವುದು. ಆಂದಮೇಲೆ ಅದರ ಮುಂದೆ ಸಾಮಾನ್ಯರ ಯಾವ ಪಾಡು? ।೩೦೮॥ ಹೀಗೆ ಈ ಮನದ ಹೊಡೆತವು ಅತ್ಯಂತಿಕ ಹಾಗೂ ಮಹಾಭಯಂಕರವಾಗಿರುವುದು. ಇದು ತ್ರಿವಿಧ ತಾಪಗಳಿಂದ ಜನರನ್ನು ಜರ್ಜರಿತರನ್ನಾಗಿ ಮಾಡಿ ಅತಿಶಯ ದುಃಖಿಗಳನ್ನಾಗಿ ಮಾಡಿದೆ ।೩೦೯॥ ದೈವದಿಂದ ಆಗುವ ತಾಪಕ್ಕೆ ಆಧಿದೈವಿಕವೆನ್ನುವರು. ಮನಸ್ಸಿನಿಂದ ಆಗುವ ತಾಪಕ್ಕೆ ಆಧ್ಯಾತ್ಮಿಕವೆನ್ನುವರು ಮತ್ತು ಪಂಚ ಮಹಾಭೂತಗಳಿಂದ ಆಗುವ ತಾಪಕ್ಕೆ ಆಧಿಭೌತಿಕವೆನ್ನುವರು. ಹೀಗೆ ತಾಪಗಳ ಮೂರು ಪ್ರಕಾರಗಳಿರುವುವು ।೩೧೦॥ ಮಹಾಭೂತಗಳು ಸತ್ವಗುಣದಿಂದ ಅಂತಃಕರಣಗಳನ್ನು ರಜೋಗುಣದಿಂದ ಇಂದ್ರಿಯಗಳನ್ನು ಮತ್ತು ತಮೋಗುಣದಿಂದ ವಿಷಯಗಳ ಭಾವನೆಯನ್ನು ಪ್ರಕಟಿಸುವುವು. ಇದನ್ನು ನೀನು ಲಕ್ಷದಲ್ಲಿಡು ।೩೧೧॥ ಈ ಮೂರು ಗುಣಗಳಿಂದ ಇನ್ನೂ ಕೆಲವು ಭಿನ್ನ ಭಿನ್ನ ವಿಕಾರಗಳು ನಿರ್ಮಾಣವಾಗುತ್ತಿರುವುವು. ಅದೂ ಕೂಡ ಪ್ರಕೃತಿಯೇ ಆಗಿರುವುದು. ಹೀಗೆ ಕೋಟೆಯಲ್ಲಿ ಬೇಕಾಗುವ ಸಾಮಗ್ರಿಗಳನ್ನು ಸಿದ್ಧಗೊಳಿಸಿರುವುದು. ಇದರಿಂದ ಪ್ರಪಂಚದ ಅತಿವಿಸ್ತಾರವಾಗಿರುವುದು ।೩೧೨॥ ಸಂಕಲ್ಪರೂಪ ಮಳೆಯ ನೀರಿನಿಂದ ಮತ್ತು ವಾಸನಾರೂಪ ಉದಕದಿಂದ ಅಲ್ಲಿ ನೀರಿನ ಹೌಜು ತುಂಬಿರುವುದು. ಆದ್ದರಿಂದ ಸಂಸಾರಿಕ ಜನರು ಅದೇ ನೀರನ್ನು ಕುಡಿಯುತ್ತಿರುವರು ಮತ್ತು ಸಂಸಾರರೂಪ ಸುಖದುಃಖಗಳಲ್ಲಿ ವಿಹಾರವನ್ನು ಮಾಡುತ್ತಿರುವರು ।೩೧೩॥ ಈ ಯಾವ ಕೋಟೆಯ ಎಲ್ಲ ಒಂಬತ್ತು ದ್ವಾರಗಳಲ್ಲಿ ಆಧಿದೈವ, ಆಧಿಭೂತ ಮತ್ತು ಆಧ್ಯಾತ್ಮ ಇವು ಯಾವುವು ಎಂಬುವುದನ್ನು ಈಗ ನಿಶ್ಚಯಪೂರ್ವಕವಾಗಿ ಹೇಳುವೆನು ।೩೧೪॥ ಯಾವ ದ್ವಾರದಲ್ಲಿ ಯಾವ ಯಂತ್ರವನ್ನು ಇಡಲಾಗಿದೆ ? ಅದರ ಚಾಲಕನು ಯಾರು ? ಅದರ ರಚನೆಯು ಎಂತಹದ್ದು? ವಿಷಯಗಳ ಹೊಡೆತವು ಹೇಗಾಗುವುದು? ಇವುಗಳನ್ನೆಲ್ಲವನ್ನೂ ಹೇಳುವೆನು; ಅವುಗಳ ಪ್ರಕಾರವನ್ನು ಈಗ ಕೇಳು ।೩೧೫॥

ಚಕ್ಷು ಈ ಇಂದ್ರಿಯವು ಬಹುದೊಡ್ಡ ತೋಫು ಆಗಿರುವುದು. ಇದು ಸ್ತ್ರೀಸ್ವರೂಪದ ಉತ್ಕಟೇಚ್ಛೆಯನ್ನು ಮಾಡುವುದು. ಇದರ ಭಾರೀ ಪ್ರಹಾರದಿಂದ ಮರ್ಮಭೇದಕ ಗಾಯಗಳಾಗುವುವು. ಇದರ ನೇತ್ರಕಟಾಕ್ಷದಿಂದ ಕೋಟ್ಯಾವಧಿ ಸುರನರರು ಗಾಯಾಳುಗಳಾಗಿ ಬೀಳುವರು ।೩೧೬॥ ಕಣ್ಣಿನ ಗುಡ್ಡೆಗಳು ಶರೀರದಲ್ಲಿರುವುವು. ಸೂರ್ಯನು ಅವುಗಳ ಅಧಿಷ್ಠಾತ್ರಿ ದೈವತನಾಗಿರುವನು. ಆದ್ದರಿಂದ ಅವುಗಳ ಮೇಲೆ ಬಿದ್ದ ರೂಪದ ಗ್ರಹಣವನ್ನು ಮಾಡುತ್ತಿರುವುದು. ಇದೇ ನಿಜವಾದ ಅಧ್ಯಾತ್ಮವಾಗಿರುವುದು ।೩೧೭॥ ದೃಷ್ಟಿಗೆ ನೀಲಿ, ಹಳದಿ ಇತ್ಯಾದಿ ರೂಪಗಳ ಯಾವ ಭಾಸವಾಗುವುದೋ, ಆ ದೃಶ್ಯದ ತೋರಿಕೆಯಾಗುವುದಕ್ಕೆ ಇದೇ ನಿಜವಾದ ಅಧಿಭೂತವಾಗಿರುವುದು ।೩೧೮॥

ಸೂರ್ಯ ಅಧಿದೈವ ಸಿದ್ಧ ಆಹೇ । ಅಧಿಭೂತ ದೃಷ್ಟೀ ಭರಲೇ ಪಾಹೇ । ಶರೀರೀ ಚಕ್ಷು ಗೋಳಹೀ ಹೋಯೇ । ಪರೀ ಆಧ್ಯಾತ್ಮ ತೇಜೇವೀಣ ರಾಹೇ ಅಂಧತ್ವ ॥೩೧೯॥ ಅಧಿದೈವ ಅಧಿಭೂತ ಅಸತಾ ಪಾಹೀ । ಆಧ್ಯಾತ್ಮಾ ತೇಜ ಜಂವ ದೃಷ್ಟೀಸೀ ನಾಹೀ । ತಂವ ದೇಖಣೇ ನ ಘಡೇ ಕಾಂಹೀ । ಅಂಧತ್ವ ತೇ ಠಾಯೀ ಠಸಾವೋನಿ ಠಾಕೇ ॥೩೨೦॥ ಅಧ್ಯಾತ್ಮ ಅಧಿಭೂತ ದೋನೀ ಆಹೇ । ಜೈ ಅಧಿದೈವ ಸೂರ್ಯ ಅಸ್ತಾ ಜಾಯೇ । ತೈ ದೃಷ್ಟೀಚೇ ದೇಖಣೇ ಠಾಯೇ । ಸ್ತಬ್ಧತ್ವೇ ರಾಹೇ ತಮಾಮಾಜೀ ॥೩೨೧॥ ತೇ ಕಾಳೀ ದೃಷ್ಟೀಸೀ ಪಾಹೇ । ಸ್ನೇಹಸೂತ್ರ ಮೇಳವೂನ ಲಾಹೇ । ಅಗ್ನಿ ಜರೀ ಕೇಲಾ ಸಾಹ್ಯೇ । ತರೀ ಪ್ರಕಾಶೂ ನೋಹೇ ರವೀಐಸಾ ॥೩೨೨॥ ತೇಥ ಚಂದ್ರೋದಯೋ ಜರೀ ಜಾಹಲಾ । ತೋ ಸೂರ್ಯಸಮಾನ ನಾಹೀ ಆಲಾ । ನಿಶಾ ನಿರಸೂನಿ ದೃಷ್ಟೀ ಸಾಹ್ಯ ಜಾಹಲಾ । ಯಾಲಾಗೀ ಸೂರ್ಯ ಬೋಲಿಲಾ ಅಧಿದೈವ ॥೩೨೩॥ ಆಧ್ಯಾತ್ಮ ಅಧಿಭೂತ ಅಸತಾ ಪಾಹೀ । ಅಧಿದೈವ ಸೂರ್ಯ ಜೇಥ ನಾಹೀ । ತೇಥ ದೃಷ್ಟೀಚೇ ನ ಚಲೇ ಕಾಹೀ । ತುಜ ಮ್ಯಾ ತೇಹೀ ಸಾಂಗೀತಲೇ ॥೩೨೪॥ ಅಧ್ಯಾತ್ಮ ಅಧಿದೈವ ದೋನೀ ಆಹೇ । ಅಧಿಭೂತೇ ದೃಶ್ಯದರ್ಶನ ರಾಹೇ । ತೈ ಸತ್ಯ ಬ್ರಹ್ಮಜ್ಞಾನ ಹೋಯೇ । ಜೈ ಗುರುಕೃಪಾ ಪಾಹೇ ಪೂರ್ಣಾಂಶೇ ॥೩೨೫॥ ಯೇಥ ಜೇ ದೃಶ್ಯಾಚೇ ದರ್ಶನ । ತೇಣೇ ದೇಹಬುದ್ಧಿ ದೃಢ ಜಾಣ । ತೇ ದೃಶ್ಯಾಚೇ ಪುಶಿಲ್ಯಾ ಭಾನ । ಹೋಯ ದೇಹೇಶೀ ಶೂನ್ಯ ಸಂಸಾರ ॥೩೨೬॥ ಅಧಿದೈವ ಅಧ್ಯಾತ್ಮ ಅಧಿಭೂತ । ತ್ರಿಪುಟೀ ಬೋಲಿಜೇ ಹೇ ಯೇಥ । ತುಜ ಮ್ಯಾ ಸಾಂಗೀತಲೀ ಸಾದ್ಯಂತ । ಜಾಣ ನಿಶ್ಚಿತ ವಿಭಾಗ ॥೩೨೭॥ ಯೇಥೂನಿ ತ್ರಿಪುಟೀಚೇ ವಿಂದಾನ । ದೃಶ್ಯ ದೃಷ್ಟಾ ಆಣಿ ದರ್ಶನ । ಕರ್ಮ ಕರ್ತಾ ಕ್ರಿಯಾಚರಣ । ಧ್ಯೇಯ ಧ್ಯಾನ ಧ್ಯಾತೃತ್ವ ॥೩೨೮॥ ತ್ರಿಪುಟೀ ಮ್ಹಣಾವಯಾಚೇ ಕಾರಣ । ಪರಸ್ಪರೇ ಸಾಪೇಕ್ಷಪಣ । ತೇ ಅಪೇಕ್ಷೇಚೇ ಲಕ್ಷಣ । ಐಕ ಸಂಪೂರ್ಣ ಸಾಂಗೇನ ॥೩೨೯॥ ನಾನಾಕಾರೇ ಅತಿವಿಲಾಸ । ಯೇಥ ದೇಖಣೇ ದೃಷ್ಟಿ ಡೋಳಸ । ತೇಹೀ ಸೂರ್ಯೇವೀಣ ವೋಸ । ಹಾ ಅನುಪ್ರವೇಶ ಪರಸ್ಪರೇ ॥೩೩೦॥ ಸೂರ್ಯ ಆಹೇ ಡೋಳಾನಾಹೀ । ತೇಥ ಪಾಹಣೇ ನ ಚಲೇ ಪಾಹೀ । ಹೋ ಕಾ ಡೋಳಾ ಆಹೇ ಸೂರ್ಯ ನಾಹೀ । ತೇಥೇ ದೃಷ್ಟೀಚೇ ಕಾಂಹೀ ಚಾಲೇನಾ ॥೩೩೧॥

ಅಧಿದೈವ ಸೂರ್ಯನು ಸಿದ್ಧನಾಗಿರುವನು. ದೃಷ್ಟಿಯ ಎದುರಿನಲ್ಲಿ ಅಧಿಭೂತವನ್ನಿಟ್ಟಿರುವುದು, ಮತ್ತು ದೇಹದಲ್ಲಿ ನೇತ್ರಗಳ ಗುಡ್ಡೆಗಳೂ ಕೂಡ ಇರುವುವು. ಆದರೆ ಅವುಗಳಲ್ಲಿ ಆಧ್ಯಾತ್ಮದ ತೇಜವು ಇಲ್ಲದಿದ್ದರೆ ಆ ದೃಷ್ಟಿಗಳಿಗೆ ಅಂಧತ್ವವು ಬರುವುದು ॥೩೧೯॥ ಅಧಿದೈವ ಮತ್ತು ಅಧಿಭೂತ ಇವು ಇದ್ದರೂ ಕೂಡ ದೃಷ್ಟಿಗೆ ಎಲ್ಲಿಯವರೆಗೆ ಆತ್ಮತೇಜವಿರುವುದಿಲ್ಲವೋ ಅಲ್ಲಿಯವರೆಗೆ ಏನ್ನನೂ ನೋಡಲು ಸಾಧ್ಯವಾಗುವುದಿಲ್ಲ. ಅಲ್ಲಿ ಅಂಧತ್ವವು ಸ್ಥಿರವಾಗಿ ಉಳಿದುಕೊಳ್ಳುವುದು ॥೩೨೦॥ ಅಧ್ಯಾತ್ಮಾ ಮತ್ತು ಅಧಿಭೂತ ಇವು ಎರಡೂ ಇದ್ದು ಅಧಿದೈವನಾದ ಸೂರ್ಯನು ಅಸ್ತನಾದನೆಂದರೆ ದೃಷ್ಟಿಗಳ ನೋಟವು, ಆಗಿರುವ ಅಂಧಕಾರದಲ್ಲಿ ಇದ್ದೂ ಇಲ್ಲದಂತಾಗುವುದು ॥೩೨೧॥ ಆ ಸಮಯದಲ್ಲಿ ಪದಾರ್ಥಗಳು ಕಾಣಬೇಕೆಂದು ಎಣ್ಣೆ ಬತ್ತಿಗಳಿಂದ ಅಗ್ನಿ ಹಚ್ಚಿ ದೀಪವನ್ನು ಪ್ರಜ್ವಲಿತವನ್ನಾಗಿ ಮಾಡಿದರೂ ಕೂಡ ಆ ದೀಪದ ಪ್ರಕಾಶವು ಸೂರ್ಯನ ಪ್ರಕಾಶದಂತೆ ಆಗುವುದಿಲ್ಲ ॥೩೨೨॥ ಅಥವಾ ಚಂದ್ರೋದಯವಾದರೂ ಸಹ ಅದೂ ಕೂಡ ಸೂರ್ಯಪ್ರಕಾಶದ ಸರಿಸಮ ಆಗಲು ಶಕ್ಯವಿಲ್ಲ. ಸೂರ್ಯನು ರಾತ್ರಿಯ ಅಂಧಕಾರವನ್ನು ಇಲ್ಲದಂತೆ ಮಾಡಿ ದೃಷ್ಟಿಗೆ ಸಹಾಯವನ್ನು ಮಾಡುವನು. ಆದ್ದರಿಂದ ಆತನಿಗೆ ಅಧಿದೈವವೆನ್ನುವರು ॥೩೨೩॥ ಅಧ್ಯಾತ್ಮ ಮತ್ತು ಅಧಿಭೂತ ಇವು ಎರಡು ಇದ್ದೂ ಕೂಡ ಅಲ್ಲಿ ಅಧಿದೈವನಾಗಿರುವ ಸೂರ್ಯನು ಇಲ್ಲದಾದರೆ ಕಣ್ಣುಗಳ ಯಾವ ಕಾರ್ಯವೂ ನಡೆಯುವುದಿಲ್ಲ ಇದನ್ನು ನಾನು ನಿನಗೆ ಹೇಳಿದೆನು ॥೩೨೪॥ ಅಧ್ಯಾತ್ಮ ಮತ್ತು ಅಧಿದೈವ ಇವು ಎರಡೂ ಇದ್ದು ಆಗ ಸದ್ಗುರುವಿನ ಪೂರ್ಣಕೃಪೆಯಾದರೆ ಮತ್ತು ಅಧಿಭೂತಗಳ ದೃಶ್ಯ ದರ್ಶನ ನಿಂತುಹೋದರೆ, ಆಗ ನಿಜವಾದ ಬ್ರಹ್ಮಜ್ಞಾನವು ಪ್ರಾಪ್ತವಾಗುವುದು ॥೩೨೫॥ ಇಲ್ಲಿ ಯಾವ ತನ್ನ ದೃಶ್ಯದ ದರ್ಶನವಾಗುವುದು. ಆದ್ದರಿಂದ ದೇಹವೇ ನಾನು ಎಂಬ ಈ ದೇಹಬುದ್ಧಿಯು ದೃಢವಾಗುವುದು. ಆ ದೃಶ್ಯದ ಭಾನವೇ ಇಲ್ಲದಂತಾಗಲು ಆಗ ದೇಹಸಹಿತವಾಗಿ ಸರ್ವ ಸಂಸಾರವು ಶೂನ್ಯವಾಗಿ ತೋರುವುದು ॥೩೨೬॥ ಈ ಪ್ರಕಾರವಾಗಿ ಅಧಿದೈವಿಕ, ಅಧ್ಯಾತ್ಮ ಮತ್ತು ಅಧಿಭೂತ ಅಂದರೆ ಏನೆಂಬುವುದನ್ನು ನಾನು ನಿನಗೆ ವಿಭಾಗ ಸಹ ಸವಿಸ್ತಾರವಾಗಿ ತಿಳಿಸಿ ಹೇಳಿದೆನು ॥೩೨೭॥ ಇನ್ನು ಮೇಲೆ ತ್ರಿಪುಟಿಯ ಸ್ವರೂಪವೆಂದರೆ ದೃಶ್ಯ, ದ್ರಷ್ಟಾ ಮತ್ತು ದರ್ಶನ, ಕಾರ್ಯ, ಕರ್ತಾ ಮತ್ತು ಕ್ರಿಯಾ ಹಾಗೂ ಧ್ಯೇಯ, ಧ್ಯಾನ ಮತ್ತು ಧ್ಯಾತೃತ್ವ ॥೩೨೮॥ ಇವುಗಳಿಗೆ ತ್ರಿಪುಟಿ ಎಂದು ಕರೆಯುವರು. ಇದಕ್ಕೆ ಕಾರಣವೇನೆಂದರೆ, ಇವು ಪರಸ್ಪರರಲ್ಲಿ ಸಾಪೇಕ್ಷವಿರುವುದು. ಆದ್ದರಿಂದ ಅವುಗಳ ಪರಸ್ಪರರಲ್ಲಿನ ಸಾಪೇಕ್ಷದ ಲಕ್ಷಣವನ್ನು ನಾನು ನಿನಗೀಗ ಸವಿಸ್ತಾರವಾಗಿ ಹೇಳುವೆನು, ಕೇಳು ॥೩೨೯॥ ಅನೇಕ ಪ್ರಕಾರಗಳ ಸುಖದ ಉಪಭೋಗಗಳು ಇರುವುವು. ಅವುಗಳನ್ನು ನೋಡಲು ದೃಷ್ಟಿಯೂ ಕೂಡ ಕಾಣುವಂತೆ ಇರುವುದು. ಆದರೆ ಆ ದೃಷ್ಟಿಯು ಸೂರ್ಯನ ಹೊರತಾಗಿ ವ್ಯರ್ಥವಾಗಿರುವುದು. ಹೀಗೆ ಇವರಲ್ಲಿ ಪರಸ್ಪರವಾದ ಸಂಬಂಧವಿರುವುದು ॥೩೩೦॥ ಸೂರ್ಯನಿದ್ದರೂ ಕಣ್ಣಾಗಳು ಇಲ್ಲದಿದ್ದರೆ ಅಲ್ಲಿಯೂ ಕೂಡ ನೋಡುವುದು ಆಗುವುದಿಲ್ಲ. ಅದರಂತೆ ಸೂರ್ಯನು ಇಲ್ಲದೇ ಕೇವಲ ಕಣ್ಣಾಗಳು ಇದ್ದರೂ ಕೂಡ ಅಲ್ಲಿ ಏನೆಂದೂ ಕಾಣಿಸುವುದಿಲ್ಲ ॥೩೩೧॥

ಸೂರ್ಯ ಆಣಿ ದೃಷ್ಟೀ ದೋನೀ ಆಹೇ । ಪರೀ ದೃಶ್ಯ ಜೈ ನಾಹೀ ಹೋಯೇ । ತೈ ದೋಹೀಂಚೇ ಸಾಮರ್ಥ್ಯ ರಾಹೇ । ದೇಖಾವೇ ಕಾಯೇ ದೃಷ್ಟೀನೇ ॥೩೩೨॥ ಸೂರ್ಯ ಪ್ರಕಾಶೀ ರೂಪಾಸೀ । ದೃಷ್ಟೀಸೀ ರಿಘೋನಿಯಾ ಸ್ವಾಂಶೇಸೀ । ದಾಖವೀ ನಾನಾ ಆಕಾರಾಂಸೀ । ಪರಸ್ಪರಾನುಪ್ರವೇಶೀ ಬೋಲಿಜೇ ಸಿದ್ಧೀ ॥೩೩೩॥ ಇತುಕೇ ಕರೋನಿಯಾ ಸವಿತಾ । ನಭೋಮಂಡಳೀ ಅಲಿಪ್ತತಾ । ತೇವೀ ಜಗದಾಕಾರೇ ಚೇತವಿತಾ । ಅಲಿಪ್ತ ತತ್ತ್ವತಾ ಚಿದಾತ್ಮಾ ॥೩೩೪॥ ಜೋ ಜಗಾಮಾಜೀ ಭರಲಾ ರಾಹೇ । ಜಗಾಚಾ ಹೃದಯಸ್ಥಹೀ ಹೋಯೇ । ಜಗ ಜರೀ ಹೋಯೇ ಜಾಯೇ । ಪರೀ ತೋ ಆಹೇ ಜೈಸಾತೈಸಾ ॥೩೩೫॥ ಜೇವೀ ಆಕಾಶ ಅಭ್ಯಂತರೀ । ಹೋತಾ ಘಟಾಕಾಶ ಸಹಸ್ರವರೀ । ಆಕಾಶ ತ್ಯಾ ಘಟಾಭೀತರೀ । ಪ್ರತ್ಯಕ್ಷಾಕಾರೀ ಭರಲೇ ದಿಸೇ ॥೩೩೬॥ ತೇ ಘಟಚಿ ಹೋತೀ ಜಾತೀ । ಪರೀ ಆಕಾಶ ಸಹಜಸ್ಥಿತೀ । ತೇವೀ ಉತ್ಪತ್ತಿಸ್ಥಿತಿಅಂತೀ। ಅಲಿಪ್ತ ಶ್ರೀಪತೀ ಚಿದಾತ್ಮಾ ॥೩೩೭॥ ತೋ ಆದೀಚೀ ಅನಾದಿ ಆದಿ । ತೋ ಬುದ್ಧೀಚೀ ಅನಾದಿ ಬುದ್ಧೀ । ತೋ ಸಿದ್ಧೀಚೀ ಅನಾದಿ ಸಿದ್ಧೀ । ಜಾಣ ತ್ರಿಶುದ್ಧೀ ಪರಮಾತ್ಮಾ ॥೩೩೮॥ ಹಾ ಪ್ರಕಾಶಾ ಪ್ರಕಾಶಕ । ಅರ್ಕಾಚಾಹೀ ಆದಿ ಅರ್ಕ । ಸ್ವಯೇ ತ್ರಿಪುಟೀಚಾ ದ್ಯೋತಕ । ಅಲಿಪ್ತ ಏಕ ಪರಮಾತ್ಮಾ ॥೩೩೯॥ ಹಾ ವಿವೇಕಾಚಾಹೀ ವಿವೇಕ । ಹಾ ಸುಖಾಚಾ ಸುಖದಾಯಕ । ಬುದ್ಧೀಚಾ ಜೋ ಬೋಧಕ । ಪ್ರಕಾಶಾ ಪ್ರಕಾಶಕ ಪರಮಾತ್ಮಾ ॥೩೪೦॥ ತ್ಯಾಸೀ ಜಾಣೋ ಜಾತಾ ಜಾಣಪಣೇ । ವೇದಾಂಸೀ ಜಾಹಲೇ ಲಾಜಿರವಾಣೇ । ವೇಡಾವಲೀ ಸ್ಮೃತಿಪುರಾಣೇ । ನ ಕಳೇ ಶಾಸ್ತ್ರಪಠಣೇ ಭಾಂಡತಾ ॥೩೪೧॥ ದೇವೋ ದೇವೀ ಆಣಿ ದೇವತಾ । ಭೋಗ್ಯ ಭೋಗ ಆಣಿ ಭೋಕ್ತಾ । ನಾನಾ ತ್ರಿಪುಟೀಂಚೀ ತ್ರಿಗುಣತಾ । ಜಾಣ ಸರ್ವಥಾ ಪ್ರಕೃತೀಚೀ ಹೇ ॥೩೪೨॥ ಹಾ ಆದ್ಯ ಅವ್ಯಕ್ತ ಅತರ್ಕ್ಯ । ಪ್ರಕೃತಿಪರ ಪರಮಾತ್ಮಾ ಏಕ । ಯಾಸೀ ಜಾಣಾವಯಾ ವಿವೇಕ । ನ ಚಲೇ ದೇಖ ಆಣಿಕಾಂಚಾ ॥೩೪೩॥ ಯಾಚೇನಿ ಹಾ ಹೃದಯೀ ದೇಖಿಜೇ । ಯಾಚೇನಿ ಹಾ ಇತ್ಥಂಭೂತ ಜಾಣಿಜೇ । ಯಾತೇ ಧರೋನಿ ಹಾ ಪಾವಿಜೇ । ಹೇಹೀ ಲಾಹಿಜೇ ಕೃಪೇ ಯಾಚೇನಿ ॥೩೪೪॥

ಅಥವಾ ಸೂರ್ಯನು ಮತ್ತು ದೃಷ್ಟಿಯು ಇವು ಎರಡೂ ಇದ್ದು ಅಲ್ಲಿ ನೋಡಲು ಏನೂ ಇರದಿದ್ದರೆ ಆಗ ಆ ಇಬ್ಬರ ಸಾಮರ್ಥ್ಯವೂ ವ್ಯರ್ಥವಾಗುವುದು. ಏಕೆಂದರೆ ದೃಶ್ಯವಿಲ್ಲದಿದ್ದರೆ ದೃಷ್ಟಿಯಿಂದ ಯಾವುದನ್ನು ಕಾಣಬೇಕು ॥೩೩೨॥ ಸೂರ್ಯನು ರೂಪದ ಮೇಲೆ ಪ್ರಕಾಶವನ್ನು ಬೀರುತ್ತಿರುವನು ಮತ್ತು ತನ್ನ ಕಿರಣಗಳಿಂದ ಕಣ್ಣುಗಳಲ್ಲಿ ಪ್ರವೇಶಿಸಿ ಬಹುವಿಧ ಪದಾರ್ಥಗಳ ಆಕಾರಗಳನ್ನು ತೋರಿಸುತ್ತಿರುವನು. ಆದ್ದರಿಂದ ಈ ತ್ರಿಪುಟಿಯು ಪರಸ್ಪರರ ಅವಲಂಬಿತವಾಗಿರುವುದು ॥೩೩೩॥ ಆದರೆ ಇಷ್ಟೊಂದು ಕಾರ್ಯಗಳನ್ನು ಮಾಡಿಯೂ ಕೂಡ ಸೂರ್ಯನು ಆಕಾಶ ಮಂಡಲದಲ್ಲಿ ಅಲಿಪ್ತತನದಿಂದ ಇರುವನು. ಅದರಂತೆ ಈ ಯಾವ ಸಂಪೂರ್ಣ ವಿಶ್ವರೂಪಕ್ಕೆ ವ್ಯಕ್ತ ಮಾಡುವ ಚಿದಾತ್ಮನು ನಿಜವಾಗಿಯೂ ಅಲಿಪ್ತನಾಗಿಯೇ ಇರುವನು ॥೩೩೪॥ ಈಪ್ರಕಾರವಾಗಿ ಈ ಯಾವ ಚಿದಾತ್ಮನು ಸರ್ವ ವಿಶ್ವಕ್ಕೆ ವ್ಯಾಪಿಸಿಕೊಂಡಿರುವವನು, ಸರ್ವರ ಹೃದಯದಲ್ಲಿ ವಿರಾಜಮಾನನಾಗಿರುವವನು, ಜಗತ್ತಿನ ಉತ್ಪತ್ತೀ, ನಾಶವಾದರೂ ಕೂಡ ನಿರ್ವಿಕಾರ ಸ್ವರೂಪದಲ್ಲಿರುವ ಯಾವ ಈ ಪರಮಾತ್ಮನು ಸರ್ವ ಸೃಷ್ಟಿಗೆ ಚೇತನೆಯನ್ನು ಕೊಟ್ಟು ಪರಿಪೂರ್ಣವಾಗಿ ಅಲಿಪ್ತನಾಗಿರುವನು ॥೩೩೫॥ ಆಕಾಶದಲ್ಲಿ ಅನೇಕ ಘಟಾಕಾಶಗಳು ನಿರ್ಮಾಣವಾಗಲು ಆಗ ಆ ಘಟಗಳಲ್ಲಿ ಆಕಾಶವು ಪ್ರತ್ಯಕ್ಷ ರೂಪದಿಂದ ತುಂಬಿಕೊಂಡಿರುವುದು ತೋರುವುದು ॥೩೩೬॥ ಈ ಘಟಗಳು ಸಿದ್ಧಗೊಳ್ಳುವುವು ಮತ್ತು ನಾಶವಾಗುವುವು. ಆದರೆ ಆಕಾಶವು ಮಾತ್ರ ತಾನಿದ್ದಂತೆ ಸಹಜಸ್ಥಿತಿಯಲ್ಲಿರುವುದು. ಅದರಂತೆ ಸತ್ ಚಿತ್ ಆನಂದರೂಪ ಪರಮಾತ್ಮನು ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಅವಸ್ಥೆಗಳಲ್ಲಿಯೂ ಕೂಡ ಅಲಿಪ್ತ ರೂಪದಿಂದ ಇರುವನು ॥೩೩೭॥ ಈ ಯಾವ ಪರಮಾತ್ಮನು ಆದಿಗಿಂತಲೂ ಅನಾದಿ ಆದಿಯಾಗಿರುವನು. ಬುದ್ಧಿಯ ಅನಾದಿ ಬುದ್ಧಿ ಹಾಗೂ ಸಿದ್ಧಿಯ ಅನಾದಿ ಸಿದ್ಧಿಯಾಗಿರುವನು ॥೩೩೮॥ ಪ್ರಕಾಶಕ್ಕೆ ಪ್ರಕಾಶವನ್ನು ಕೊಡುವವ, ಸೂರ್ಯನಕ್ಕಿಂತಲೂ ಆದಿ ಸೂರ್ಯನು, ತ್ರಿಪುಟಿಗಳಿಗೆ ಪ್ರಕಾಶಿತಗೊಳಿಸುವವನು, ಯಾವ ಈ ಪರಮಾತ್ಮನು ಒಬ್ಬನೇಯಾಗಿದ್ದು ಆತನು ಈ ಸರ್ವರಿಂದಲೂ ಅಲಿಪ್ತನಾಗಿರುವನು ॥೩೩೯॥ ಈ ಯಾವ ಪರಮಾತ್ಮನು ಜ್ಞಾನಕ್ಕೂ ಕೂಡ ಜ್ಞಾನನಾಗಿರುವನು. ಸುಖಕ್ಕೂ ಕೂಡ ಆತನು ಸುಖದಾತನಾಗಿರುವನು. ಬುದ್ಧಿಯ ಬೋಧಕನಾಗಿರುವನು ಮತ್ತು ಆತನು ಪ್ರಕಾಶಕ್ಕೂ ಪ್ರಕಾಶಕನಾಗಿರುವನು ॥೩೪೦॥ ಆತನನ್ನು ಜ್ಞಾನದ ಅಭಿಮಾನದಿಂದ ತಿಳಿಯಲು ಹೋಗಿರುವ ವೇದವೂ ಕೂಡ ಲಜ್ಜಿತವಾಯಿತು. ಸ್ಮೃತಿ, ಪುರಾಣಗಳು ಹುಚ್ಚಾಗಿಬಿಟ್ಟವು. ಶಾಸ್ತ್ರಪಠಣಗಳಿಂದ ವಾದವಿವಾದಗಳನ್ನು ಮಾಡಿದರೂ ಕೂಡ ಆ ಯಾವ ಈಶ್ವರನು ತಿಳಿಯಲಾರನು ॥೩೪೧॥ ದೇವ, ದೇವೀ ಮತ್ತು ದೇವತಾ ಭೋಗ್ಯ, ಭೋಗ ಮತ್ತು ಭೋಕ್ತಾ ಹೀಗೆ ಅನೇಕ ಪ್ರಕಾರಗಳ ತ್ರಿಪುಟಿಗಳು ಹುಟ್ಟಿಕೊಳ್ಳುವುವು. ಇವು ಪ್ರಕೃತಿಯಾಗಿರುವುವು ॥೩೪೨॥ ಈ ಯಾವ ಪರಮಾತ್ಮನು ಆದ್ಯ, ಅವ್ಯಕ್ತ ಮತ್ತು ಅತರ್ಕ್ಯನಾಗಿರುವನು ಮತ್ತು ಆತನು ಪ್ರಕೃತಿಗಿಂತಲೂ ಭಿನ್ನನಾಗಿರುವನು. ಆತನನ್ನು ತಿಳಿದುಕೊಳ್ಳುವುದಕ್ಕಾಗಿ ಇತರ ಯಾರ ಬುದ್ಧಿಯೂ ಕೂಡ ನಡೆಯಲಾರದು ॥೩೪೩॥ ಈಶ್ವರನನ್ನು ಆತನ ಸಾಮರ್ಥ್ಯದಿಂದಲೇ ಹೃದಯದಲ್ಲಿ ಕಾಣಬೇಕು. ಈತನ ಯೋಗದಿಂದಲೇ ಈತನನ್ನು ಪರಿಪೂರ್ಣತೆಯಿಂದ ತಿಳಿದುಕೊಳ್ಳಬೇಕು. ಈತನ ಸಹಾಯದಿಂದಲೇ ಈತನನ್ನು ಪ್ರಸನ್ನನನ್ನಾಗಿ ಮಾಡಬೇಕು ಈ ಪ್ರಸನ್ನತೆಯನ್ನು ಈತನ ಕೃಪೆಯಿಂದಲೇ ಪ್ರಾಪ್ತಮಾಡಿಕೊಳ್ಳಬೇಕು ॥೩೪೪॥

ಹಾ ಸ್ವಪ್ರಕಾಶ ಸಹಜ ನಿಜೇ । ಯಾಸೀ ಪ್ರಕಾಶೀ ಐಸೇ ನಾಹೀ ದುಜೇ । ಯಾಚೇನಿ ಪ್ರಕಾಶೇ ಹಾ ದೇಖಿಜೇ । ಯಾಚೇನಿ ಹೋಇಜೇ ಯಾಐಸೇ ।೩೪೫॥ ಅಧಿದೈವ ಅಧ್ಯಾತ್ಮ ಅಧಿಭೂತ । ನೇತ್ರದ್ವಾರಾ ಸಾಂಗಿತಲೇ ತೇಥ । ತೈಸೇಚ ಅನ್ಯ ಇಂದ್ರಿಯೀ ವ್ಯಾವೃತ್ತ । ದೇವ ಸಾಂಗತ ಸಂಕಲಿತೇ ।೩೪೬॥

ಏವಂ ತ್ವಗಾದಿ ಶ್ರವಣಾದಿ ಚಕ್ಷುರ್ಜಿಹ್ವಾದಿ ನಾಸಾದಿ ಚ ಚಿತ್ತಯುಕ್ತಮ್ ।೩೧॥
ಯೋಽಸೌ ಗುಣಕ್ಷೋಭಕೃತೋ ವಿಕಾರಃ ಪ್ರಧಾನ ಮೂಲಾನ್ಮಹತಃ ಪ್ರಸೂತಃ ।

ಅರ್ಥ:- ಈತನಿಂದಲೇ ಸರ್ವ ಪ್ರಕಾಶವಿರುವುದು. ಯಾವ ಪ್ರಕಾರವಾಗಿ ಕಣ್ಣುಗಳ ಮೂರು ಪ್ರಕಾರದ ಭೇದವನ್ನು ಹೇಳಿದೆಯೋ, ಅದರಂತೆ ತ್ವಚಾ, ಶ್ರೋತ್ರ, ಜಿಹ್ವಾ, ನಾಸಿಕ ಹಾಗೂ ಚಿತ್ತ ಇವುಗಳೂ ಕೂಡ ಮೂರು ಭೇದಗಳಾಗಿರುವುವು. ಪ್ರಕೃತಿಯಿಂದ ಮಹತ್ತತ್ವವು ಹುಟ್ಟುವುದು. ಮಹತ್ತತ್ವದಿಂದ ಅಹಂಕಾರವು. ಈ ಪ್ರಕಾರವಾಗಿ ಈ ಅಹಂಕಾರವು ಗುಣಗಳ ಕ್ಷೋಭೆಯಿಂದ ಉತ್ಪನ್ನವಾದ ಪ್ರಕೃತಿಯ ಒಂದು ವಿಕಾರವಾಗಿರುವದು.

ಪ್ರಧಾನಾಪಾಸಾವ ಮಹದಾದಿದ್ವಾರಾ । ನಾನಾ ವಿಕಾರಾಂಚಾ ಪಸಾರಾ । ಗುಣಕ್ಷೋಭೇ ಕ್ಷೋಭೋನಿ ಪುರಾ । ಉಠಿಲಾ ಉಭಾರಾ ತ್ರಿಪುಟೀರೂಪೇ ।೩೪೭॥ ಜೇವೀ ಸೂರ್ಯೇ ಚಕ್ಷುರಾದಿ ವಿಂಧಾನ । ತೈಸೇಚಿ ಶ್ರೋತ್ರ ತ್ವಚಾ ರಸನಾ ಘ್ರಾಣ । ಹೇ ಜ್ಞಾನೇಂದ್ರಿಯಪಂಚಕ ಜಾಣ । ಯಾಚೇ ಕರ್ಮ ಸಮಾನ ತ್ರಿಪುಟೀರೂಪೇ ।೩೪೮॥ ಯೇಥ ಕರ್ಮೇಂದ್ರಿಯೇ ಪಾಂಚ ಆಣ । ತೀ ಜ್ಞಾನೇದ್ರಿಯಾ ಅಧೀನ । ಹಸ್ತಪಾದ ಗುದ ಶಿಶ್ನ । ವಾಚಾ ಜಾಣ ಪಾಂಚವೀ ।೩೪೯॥ ತ್ಯಾಂಸೀ ಜ್ಞಾನೇಂದ್ರಿಯೇ ಪ್ರೇರಿತೀ । ತೈ ಕರ್ಮೇಂದ್ರಿಯೇ ಕರ್ಮೀ ವರ್ತತೀ । ಏವಂ ಉಭಯಪಂಚಕಸ್ಥಿತೀ । ಜಾಣ ನಿಶ್ಚಿತೀ ದಶೇಂದ್ರಿಯೇ ।೩೫೦॥ ಚಿತ್ತಚತುಷ್ಟಯಚಮತ್ಕಾರ । ಮನ ಬುದ್ಧಿ ಚಿತ್ತ ಅಹಂಕಾರ । ಹೀ ಏಕಚಿ ಪರೀ ಭಿನ್ನ ಪ್ರಕಾರ । ಜೈಸಾ ವ್ಯಾಪಾರ ತೈಸೇ ನಾಂವ ।೩೫೧॥ ಕೇವಳ ದೇಹಾಕಾರೇ ಮೀಪಣ । ತೋ ಸಬಳ ಅಹಂಕಾರ ಜಾಣ । ಸಂಕಲ್ಪವಿಕಲ್ಪ ಜೇ ಗಹನ । ತೇಚಿ ಮನ ಉದ್ಧವಾ ।೩೫೨॥ ಗತಭೋಗಾಚೇ ಜೇ ಚಿಂತನ । ತೇ ಚಿತ್ತಾಚೇ ಲಕ್ಷಣ । ಕೇವಳ ನಿಶ್ಚಯಾತ್ಮಕ ಜಾಣ । ಬುದ್ಧಿ ಸಂಪೂರ್ಣ ತೀ ನಾಂವ ।೩೫೩॥ ಹೇ ಗುಣಕ್ಷೋಭಾಚೇ ಲಕ್ಷಣ । ಭೋಗಸಾಧನೇ ಭೋಗ್ಯ ಜಾಣ । ತ್ಯಾಹೂನಿ ಭೋಕ್ತಾ ತೋ ಭಿನ್ನ । ತೇಹೀ ಉಪಲಕ್ಷಣ ಅವಧಾರೀ ।೩೫೪॥ ತ್ವಗಿಂದ್ರಿಯೀ ವಿಷಯಸ್ಪರ್ಶನ । ತೇಥೇ ಅಧಿದೈವ ವಾಯೂ ಜಾಣ । ತ್ಯಾಹೂನಿ ಪರಮಾತ್ಮಾ ಭಿನ್ನ । ಚಿತ್ಸ್ವರೂಪೇ ಜಾಣ ಅವಿಕಾರೀ ।೩೫೫॥

ಈತನು ಸ್ವಾಭಾವಿಕವಾಗಿಯೇ ಸ್ವಯಂ ಪ್ರಕಾಶಕನಾಗಿರುವನು. ಈತನನ್ನು ಇತರರು ಯಾರೂ ಕೂಡ ಪ್ರಕಾಶಿತವನ್ನಾಗಿ ಮಾಡಲು ಸಾಧ್ಯವಿಲ್ಲ. ಈತನ ಪ್ರಕಾಶದಿಂದಲೇ ಈತನನ್ನು ನೋಡಬೇಕು. ಮತ್ತು ಈತನ ಯೋಗದಿಂದಲೇ ಈತನ ಸ್ವರೂಪದಲ್ಲಿ ಏಕರೂಪನಾಗಬೇಕು ।೩೪೫॥ ಈ ಪ್ರಕಾರವಾಗಿ ಅಧಿದೈವ, ಅಧ್ಯಾತ್ಮ ಮತ್ತು ಅಧಿಭೂತ ಇವುಗಳ ವರ್ಣನೆಯನ್ನು ನೇತ್ರಗಳ ಮುಖಾಂತರವಾಗಿ ಇಲ್ಲಿ ಹೇಳಲಾಯಿತು. ಇದರಂತೆಯೇ ಇತರ ಇಂದ್ರಿಯಗಳಲ್ಲಿಯೂ ಕೂಡ ಅವುಗಳ ವ್ಯಾಪ್ತಿಯು ಹೇಗೆ ಇರುವುದು ಎಂಬುವುದನ್ನೂ ಕೂಡ ಶ್ರೀಕೃಷ್ಣನು ಈಗ ಸಂಕ್ಷಿಪ್ತವಾಗಿ ಹೇಳುತ್ತಿರುವನು ।೩೪೬॥

ಪ್ರಕೃತಿಯಿಂದ ಮಹತ್ತಾದಿ ಮುಖಾಂತರವಾಗಿ ವಿವಿಧ ಪ್ರಕಾರಗಳ ವಿಕಾರಗಳು ಹರಡುತ್ತಿರುವುವು ಮತ್ತು ಗುಣಗಳ ಕ್ಷೋಭೆಯಾಗುವುದರಿಂದ ಆ ವಿಕಾರಗಳು ಪರಿಪೂರ್ಣವಾಗಿ ಉಗ್ರಗೊಂಡು ತ್ರಿಪುಟೀ ರೂಪದಿಂದ ಪ್ರಬಲವಾಗುವುವು ।೩೪೭॥ ಯಾವ ಪ್ರಕಾರವಾಗಿ ಸೂರ್ಯನ ಯೋಗದಿಂದ ನೇತ್ರಾದಿ ಇಂದ್ರಿಯಗಳ ವ್ಯಾಪಾರವು ನಡೆಯುತ್ತಿರುವುದೋ, ಅದೇ ಪ್ರಕಾರವಾಗಿ ಕಿವಿ, ಕಣ್ಣು, ಚರ್ಮ, ನಾಲಿಗೆ ಮತ್ತು ಮೂಗು ಯಾವ ಈ ಜ್ಞಾನೇಂದ್ರಿಯ ಪಂಚಕಗಳ ತ್ರಿಪುಟರೂಪದಿಂದ ಸಮಾನ ಕಾರ್ಯವು ನಡೆಯುತ್ತಿವೆ ।೩೪೮॥ ಇವುಗಳಲ್ಲಿ ಐದು ಕರ್ಮೇಂದ್ರಿಗಳು ಇವು ಜ್ಞಾನೇಂದ್ರಿಯಗಳ ಆಧೀನವಾಗಿರುವುವು. ಇವು ಕೈಕಾಲು, ಗುದ, ಶಿಶ್ನ ಮತ್ತು ವಾಣಿಯಾಗಿರುವುವು ।೩೪೯॥ ಈ ಕರ್ಮೇಂದ್ರಿಯಗಳಿಗೆ ಜ್ಞಾನೇಂದ್ರಿಯಗಳು ಪ್ರೇರಣೆಯನ್ನು ಕೊಟ್ಟಾಗ ಮಾತ್ರ ಅವು ಕಾರ್ಯಪ್ರವೃತ್ತವಾಗುವುವು. ಐದು ಜ್ಞಾನೇಂದ್ರಿಯಗಳು ಮತ್ತು ಐದು ಕರ್ಮೇಂದ್ರಿಯಗಳು ಹೀಗೆ ಈ ಪಂಚಕಗಳು ಕೂಡಿ ಹತ್ತು ಇಂದ್ರಿಯಗಳಾಗುವುವು. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು ।೩೫೦॥ ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ ಈ ಎಲ್ಲವೂ ಒಂದೇಯಾಗಿದ್ದರೂ ಅವುಗಳ ಕಾರ್ಯದಂತೆ ಭಿನ್ನ ಭಿನ್ನ ಹೆಸರುಗಳು ಉಂಟಾಗಿರುವುವು. ಆದ್ದರಿಂದ ಅದಕ್ಕೆ ''ಚಿತ್ತಚತುಷ್ಟಯಚಮತ್ಕಾರ'' ಎಂದು ಕರೆಯುವರು ।೩೫೧॥ ಹೇ ಉದ್ಧವಾ, ಕೇವಲ ದೇಹದ ಆಕಾರದಿಂದಲೇ ಯಾವ ನಾನು ಎಂಬುವುದು ಪ್ರಾಪ್ತವಾಗುವುದೋ, ಅದೇ ಪ್ರಬಲವಾದ ಅಹಂಕಾರವಾಗಿರುವುದು. ಗಹನ ಸ್ವರೂಪದ ಸಂಕಲ್ಪವಿಕಲ್ಪ ಮಾಡುವಿಕೆಗೆ ಮನಸ್ಸು ಎಂದು ಹೇಳುವರು ।೩೫೨॥ ಪೂರ್ವದ ಉಪಭೋಗಗಳ ಸ್ಮರಣೆಯನ್ನು ಮಾಡುವಿಕೆಗೆ ಇದು ಚಿತ್ತದ ಸ್ವರೂಪವಾಗಿರುವುದು ಮತ್ತು ದೃಢವಾದ ನಿಶ್ಚಯವನ್ನು ಮಾಡುವುದು ಇದು ಬುದ್ಧಿಯಾಗಿರುವುದು ।೩೫೩॥ ಈ ಗುಣಕ್ಷೋಭೆಯ ಲಕ್ಷಣಗಳು ಭೋಗದ ಸಾಧನೆಗಳಿಂದ ಯೋಗ್ಯವಾಗುವುವು. ಆದರೆ ಭಕ್ತನು ಇವುಗಳಿಂದ ಮಾತ್ರ ಭಿನ್ನನಾಗಿರುವನು. ಅದರ ಲಕ್ಷಣವನ್ನೂ ಕೂಡ ಹೇಳುವೆನು, ಅದನ್ನು ಕೇಳು ।೩೫೪॥ ತ್ವಚಕ್ಕೆ ಯಾವ ವಿಷಯದ ಸ್ಪರ್ಶವಾಗುವುದೋ, ಅಲ್ಲಿ ವಾಯುವು ಅಧಿದೈವವಾಗಿರುವುದು. ಆದರೆ ಪರಮಾತ್ಮನು ಅದಕ್ಕಿಂತಲೂ ಭಿನ್ನನಾಗಿರುವನು. ಆತನು ಜ್ಞಾನರೂಪನಾಗಿರುವುದರಿಂದ ಅವಿಕಾರಿಯಾಗಿರುವನು ।೩೫೫॥

ಗಂಧವಿಷಯೋ ಘ್ರಾಣೇಂದ್ರಿಯೇ । ತೇಥ अಧಿದೈವ ಅಶ್ವಿನೌದೇವ ಹೋಯೇ । ಆತ್ಮಾ ತ್ಯಾಹೂನಿ ವೇಗಳಾ ಪಾಹೇ । ಚಿತ್ಸ್ವರೂಪೇ ರಾಹೇ ಅವಿಕಾರೀ ।೩೫೬।। ರಸನೇಂದ್ರಿಯ ಅತಿಗಹನ । ರಸವಿಷಯೋ ತೇಥೀಲ ಜಾಣ । ವರುಣ ಅಧಿದೈವತ ಆಪಣ । ಆತ್ಮಾ ಸ್ವಾನಂದಪೂರ್ಣ ರಸಾತೀತ ।೩೫೭।। ಶ್ರವಣೇಂದ್ರಿಯೀ ವಿಷಯೋ ಶಬ್ದ । ತೇಥ ದಿಶಾ ಅಧಿದೈವ ಪ್ರಸಿದ್ಧ । ಶಬ್ದೀ ನಿಜಾತ್ಮ ನಿಃಶಬ್ದ । ಚಿದತ್ವೇ ಶುದ್ಧ ಅವಿಕಾರೀ ।೩೫೮।। ಚಕ್ಷುರಿಂದ್ರಿಯ ಲಕ್ಷಣ । ಪೂರ್ವೀ ನಿರೂಪಿಲೇ ಜಾಣ । ಹೇ ಜ್ಞಾನೇಂದ್ರಿಯವಿಂದಾನ । ತ್ರಿಪುಟೀ ಸಂಪೂರ್ಣ ಐಶಾ ರೀತೀ ।೩೫೯।। ಚಿತ್ತ ಇಂದ್ರಿಯ ಜೇ ಕಾ ಯೇಥ । ಚಿಂತನ ವಿಷಯೋ ತ್ಯಾಸೀ ಪ್ರಾಪ್ತ । ವಾಸುದೇವ ಅಧಿದೈವತ । ಆತ್ಮಾ ಅಲಿಪ್ತ ಚಿತ್ತೇಸೀ ।೩೬೦।। ಮನೇಂದ್ರಿಯ ಅತಿಚಪಳ । ಸಂಕಲ್ಪ ವಿಷಯೋ ತ್ಯಾಚಾ ಪ್ರಬಳ । ತೇಥ ಅಧಿದೈವ ಚಂದ್ರ ನಿರ್ಮಳ । ಆತ್ಮಾ ಕೇವಳ ಮನಾತೀತ ।೩೬೧।। ಅಹಂಕಾರ ಇಂದ್ರಿಯ ಕಠಿಣ । ತೇಥೀಲ ವಿಷಯೋ ಮೀಪಣ । ರುದ್ರ ಅಧಿದೈವತ ಜಾಣ । ಪರಮಾತ್ಮ ಭಿನ್ನ ಅಹಂಕಾರೇಸೀ ।೩೬೨।। ಬುದ್ಧೀಂದ್ರಿಯ ಅತಿಸಜ್ಞಾನ । ಬೋಧವ್ಯ ತೇಥೀಂಚಾ ವಿಷಯೋ ಜಾಣ । ಬ್ರಹ್ಮಾ ಅಧಿದೈವತ ಆಪಣ । ಆತ್ಮಾ ಚಿದ್ಘನ ಬುದ್ಧ್ಯತೀತ ।೩೬೩।। ಚಿತ್ತ ಚತುಷ್ಟ್ಯ ಸಕಾರಣ । ತ್ರಿಪುಟೀ ಸಾಂಗೀತಲೀ ಹೇ ಸಂಪೂರ್ಣ ಜಾಣ । ಆತಾ ಕರ್ಮೇಂದ್ರಿಯಾಚೇ ಲಕ್ಷಣ । ಐಕ ಸಂಪೂರ್ಣ ಸಾಂಗೇನ ।೩೬೪।। ವಾಗೀಂದ್ರಿಯೀ ವಾಚ್ಯ ವಿಷಯೋ । ಅಗ್ನಿ ಅಧಿದೈವತ ತೇಥೀಲ ಪಹಾ ಹೋ । ತೇಥ ಸರಸ್ವತೀಶಕ್ತೀಚಾ ನಿರ್ವಾಹೋ । ಯಾಸೀ ಅಲಿಪ್ತ ದೇವೋ ಮಹಾಮೌನೇ ।೩೬೫।। ಪಾಣೇಂದ್ರಿಯೀ ಗ್ರಹಣ ವಿಷಯೋ । ಇಂದ್ರ ಅಧಿದೈವತ ತೇಥೀಲ ಪಹಾ ಹೋ । ತೇಥ ಕ್ರಿಯಾಶಕ್ತೀಚಾ ನಿರ್ವಾಹೋ । ಯಾಸೀ ಅಲಿಪ್ತ ದೇವೋ ಅಕ್ರಿಯತ್ವೇ ।೩೬೬।। ಪಾದೇಂದ್ರಿಯೇ ಗತಿ ವಿಷಯೋ । ತೇಥೇ ಉಪೇಂದ್ರ ಅಧಿದೈವೋ । ತೇಥೇ ಗಮನಶಕ್ತೀಚಾ ನಿರ್ವಾಹೋ । ಯಾಸೀ ಅಲಿಪ್ತ ದೇವೋ ನಿಶ್ಚಲತ್ವೇ ।೩೬೭।। ಗುದೇಂದ್ರಿಯೇ ವಿಸರ್ಗ ವಿಷಯೋ । ನಿರ್ಋತಿ ಅಧಿದೈವತ ತೇಥೀಲ ಪಹಾ ಹೋ । ಕ್ಷರಶಕ್ತೀಚಾ ತೇಥ ನಿರ್ವಾಹೋ । ತ್ಯಾಸೀ ಅಲಿಪ್ತ ದೇವೋ ಅಕ್ಷರತ್ವೇ ।೩೬೮।।

ಘ್ರಾಣೇಂದ್ರಿಯದಿಂದ ಗಂಧದ ವಿಷಯವನ್ನು ತಿಳಿಯಲು ಸಾಧ್ಯವಾಗುವುದು. ಅಲ್ಲಿ ಅಶ್ವಿನೀ ದೇವನು ಅಧಿದೈವನಾಗಿರುವನು. ಆದರೆ ಆತ್ಮವು ಅದಕ್ಕಿಂತಲೂ ಭಿನ್ನವಾಗಿರುವುದು. ಅದು ಜ್ಞಾನಸ್ವರೂಪದಿಂದ ಅವಿಕಾರಿಯಾಗಿರುವುದು ।೩೫೬।। ರಸನೇಂದ್ರಿಯವು ಅತಿಶಯವಾಗಿ ಶ್ರೇಷ್ಠವಾಗಿರುವುದು. ರಸವು ಇದರ ವಿಷಯವಾಗಿರುವುದು. ಅಲ್ಲಿನ ಅಧಿದೈವವು ವರುಣದೇವನಾಗಿರುವನು. ಆದರೆ ಆನಂದದಿಂದ ಪರಿಪೂರ್ಣನಾಗಿರುವ ಯಾವ ಈ ಪರಮಾತ್ಮನು ಆ ರಸದ ಆಚೆಗೆ ಇರುವನು ।೩೫೭।। ಶ್ರವಣೇಂದ್ರಿಯದ ವಿಷಯವು ''ಶಬ್ದ''ವಾಗಿರುವುದು. ಅದರ ಅಧಿದೈವತವು ದಿಕ್ಕುಗಳೆಂದು ಪ್ರಸಿದ್ಧವಾಗಿರುವುದು. ಆದರೆ ಶಬ್ದಗಳಲ್ಲಿ ಮೂಲನಾದ ಆತ್ಮನು ನಿಃಶಬ್ದನೇ ಆಗಿದ್ದು ಆತನು ಜ್ಞಾನರೂಪದಿಂದ ಶುದ್ಧ ಅವಿಕೃತನಾಗಿರುವನು ।೩೫೮।। ನೇತ್ರೇಂದ್ರಿಯಗಳ ಲಕ್ಷಣವನ್ನು ಈ ಪೂರ್ವದಲ್ಲಿಯೇ ಹೇಳಲಾಗಿರುವುದು. ಜ್ಞಾನೇಂದ್ರಿಯಗಳ ಪ್ರಕಾರವು ಹೀಗೆ ಇರುವುದು. ಈ ಪ್ರಕಾರವಾಗಿ ಸರ್ವ ತ್ರಿಪುಟಿಗಳು ನಿರ್ಮಾಣವಾಗುತ್ತಿರುವುವು ।೩೫೯।। ಇವುಗಳಲ್ಲಿ ಚಿತ್ತವೆಂಬ ಇಂದ್ರಿಯಕ್ಕೆ ಚಿಂತನೆಯನ್ನು ಮಾಡುವ ವಿಷಯವು ಪ್ರಾಪ್ತವಾಗಿರುವುದು. ಅಲ್ಲಿ ವಾಸುದೇವನು ಅಧಿದೈವನಾಗಿರುವನು. ಆದರೆ ಆತ್ಮನು ಚಿತ್ತದಿಂದ ಭಿನ್ನನಾಗಿರುವನು ।೩೬೦।। ಮನಸ್ಸು ಎಂಬ ಇಂದ್ರಿಯವು ಅತಿಶಯವಾಗಿ ಚಂಚಲವಾಗಿರುವುದು. ಸಂಕಲ್ಪವೆಂಬ ಇದರ ವಿಷಯವು ಅತ್ಯಂತ ಪ್ರಬಲವಾಗಿರುವುದು. ನಿರ್ಮಲನಾಗಿರುವ ಚಂದ್ರನು ಇದರ ಅಧಿದೈವನಾಗಿರುವನು. ಆದರೆ ಆತ್ಮನು ಈ ಯಾವ ಮನಸ್ಸಿನ ಈಚೆಗೆ ಇರುವನು ।೩೬೧।। ಅಹಂಕಾರವೆಂಬ ಈ ಇಂದ್ರಿಯವು ಅತಿಶಯವಾಗಿ ಬಲಿಷ್ಠವಾಗಿರುವುದು. ನಾನು ಎಂಬುವುದು ಇದು ಅದರ ವಿಷಯವಾಗಿದೆ. ತಮೋಗುಣದ ರುದ್ರದೇವನು ಅದರ ಅಧಿದೈವನಾಗಿರುವನು. ಆದರೆ ಪರಮಾತ್ಮನು ಅಹಂಕಾರದಿಂದ ಭಿನ್ನನಾಗಿರುವನು ।೩೬೨।। ಬುದ್ಧಿರೂಪ ಯಾವ ಈ ಇಂದ್ರಿಯವು ಅತ್ಯಂತ ಜ್ಞಾನಸಂಪನ್ನವಾಗಿರುವುದು. ತಿಳಿಯುವಿಕೆಯು ಇದರ ವಿಷಯವಾಗಿರುವುದು. ಅದಕ್ಕೆ ಬ್ರಹ್ಮದೇವನು ಅಧಿದೈವನಾಗಿರುವನು. ಆದರೆ ಜ್ಞಾನರೂಪನಾಗಿರುವ ಆತ್ಮನು ಬುದ್ಧಿಗಿಂತಲೂ ಭಿನ್ನನಾಗಿರುವನು ।೩೬೩।। ಈ ಪ್ರಕಾರವಾಗಿ ಕಾರಣಗಳು ಸಹ ನಾನು ನಿನಗೆ ಚಿತ್ತ ಚತುಷ್ಟಯ ಮತ್ತು ತ್ರಿಪುಟಿಗಳ ಲಕ್ಷಣಗಳನ್ನು ತಿಳಿಸಿ ಹೇಳಿದೆನು. ಈಗ ಕರ್ಮೇಂದ್ರಿಯಗಳ ಲಕ್ಷಣಗಳನ್ನು ಸವಿಸ್ತಾರಪೂರ್ವಕವಾಗಿ ಹೇಳುವೆನು, ಅದನ್ನು ಕೇಳು ।೩೬೪।। ವಾಣಿಯ ಇಂದ್ರಿಯಕ್ಕೆ ಭಾಷಣವು ಅದರ ವಿಷಯವಾಗಿರುವುದು. ಅಲ್ಲಿ ಅಗ್ನಿಯು ಅಧಿದೈವವಾಗಿರುವುದು. ಅದರಲ್ಲಿ ಸರಸ್ವತಿಯ ವಾಸ್ತವ್ಯವಿರುವುದು. ಆದರೆ ಆತ್ಮವು ಮಹಾಮೌನದಿಂದ ಅದರಿಂದ ಅಲಿಪ್ತವಾಗಿರುವುದು ।೩೬೫।। ಹಸ್ತ ಈ ಇಂದ್ರಿಯದ ವಸ್ತುಗಳನ್ನು ಹಿಡಿಯುವಿಕೆಯು ಇದರ ವಿಷಯವಾಗಿರುವುದು. ಇಂದ್ರನು ಇದರ ಅಧಿದೈವತನಾಗಿರುವನು. ಅಲ್ಲಿ ಕ್ರಿಯಾಶಕ್ತಿ ವಿರುವುದು. ಆದರೆ ಆತ್ಮವು ಅದರಿಂದ ಅಕ್ರಿಯತ್ವದಿಂದ ಅಲಿಪ್ತವಾಗಿರುವುದು ।೩೬೬।। ಪಾದ ಈ ಇಂದ್ರಿಯದ ವಿಷಯವು ಗತಿಯಾಗಿರುವುದು. ಅಲ್ಲಿ ಉಪೇಂದ್ರನು ಅಧಿದೈವತನಾಗಿರುವನು. ಅಲ್ಲಿ ಗಮನಶಕ್ತಿಯ ವಾಸ್ತವ್ಯವಿರುವುದು. ದೇವನು ನಿಶ್ಚಲನಾಗಿರುವುದರಿಂದ ಅದರಿಂದ ಭಿನ್ನನಾಗಿರುವನು ।೩೬೭।। ಗುದ ಇಂದ್ರಿಯದ ವಿಷಯವು ಮಲವಿಸರ್ಜನೆಯಾಗಿರುವುದು. ಅಲ್ಲಿ ನಿರ್ಋತ್ತಿಯು ಅಧಿದೈವವಾಗಿರುವುದು. ಅಲ್ಲಿ ಕ್ಷಾರಶಕ್ತಿಯನಿವಾಸವಿರುವುದು. ಆದರೆ ಅಲ್ಲಿಯೂ ಕೂಡ ಅಕ್ಷರರೂಪದಿಂದ ಆತ್ಮವು ಅಲಿಪ್ತವೇ ಆಗಿರುವುದು ।೩೬೮।।

ಶಿಶ್ನೇಂದ್ರಿಯೀ ರತಿ ವಿಷಯೋ । ಪ್ರಜಾಪತಿ ತೇಥೇ ಅಧಿದೇವೋ । ಆನಂದಶಕ್ತೀಚಾ ತೇಥೇ ನಿರ್ವಾಹೋ । ತ್ಯಾಸೀ ಅಲಿಪ್ತ ದೇವೋ ಪರಮಾನಂದೇ ।೩೧೯॥ ಜ್ಞಾನಕರ್ಮೇಂದ್ರಿಯೇ ಕರ್ಮಾಚರಣ । ಚಿತ್ತಚತುಷ್ಟಯಾಚೇ ಲಕ್ಷಣ । ಹೇ ಗುಣಕ್ಷೋಭಾಚೇ ಕಾರಣ । ಸಮೂಳ ಜಾಣ ಮಾಯಿಕ ।೩೨೦॥ ತೇಚಿ ಗುಣಕ್ಷೋಭಾಚೇ ಪ್ರಧಾನ ಮೂಳ । ಪ್ರಕೃತಿವಿಕಾರೇ ಹೋಯ ಸ್ಥೂಳ । ಆತ್ಮಾ ಅವಿಕಾರೀ ನಿರ್ಮಳ । ಅಲಿಪ್ತ ಕೇವಳ ಪ್ರಕೃತೀಸೀ ।೩೨೧॥ ಜೇವೀ ವೃತ್ತಿಭೂಮೀಸಮವೇತ । ಗೃಹೀ ಗೃಹಸಾಮಗ್ರೀ ಸಮಸ್ತ । ಅಭಿಮಾನೇ ಉಪಾರ್ಜೀ ಗೃಹಸ್ಥ । ಪರೀ ತೋ ತ್ಯಾ ಅತೀತ ಆಪಣ ಜೈಸಾ ।೩೨೨॥ ತೇವೀ ತ್ರಿಗುಣ ಕ್ಷೋಭೇ ಅಭಿಮಾನ । ವಾಢವೀ ನಾನಾ ವಿಕಾರವನ । ಆತ್ಮಾ ವಸಂತ ತೋ ಭಿನ್ನ । ತೇಚಿ ನಿರೂಪಣ ಹರಿ ಬೋಲೇ ।೩೨೩॥

ಅಹಂ ತ್ರಿವನ್ಮೋಹವಿಕಲ್ಪಹೇತುರ್ವೈಕಾರಿಕಸ್ತಾಮಸ ಐಂದ್ರಿಯಶ್ಚ ।೩೨॥
ಆತ್ಮಾ ಪರಿಜ್ಞಾನಮಯೋ ವಿವಾದೋ ಹ್ಯಸ್ತೀತಿ ನಾಸ್ತೀತಿ ಭಿದಾರ್ಥನಿಷ್ಠಃ ॥

ಅರ್ಥ:- ಅಹಂಕಾರದ ಮೂರು ಭೇದಗಳಾಗಿರುವುವು. ಸಾತ್ವಿಕ, ರಾಜಸ, ತಾಮಸ ಈ ಅಹಂಕಾರವೇ ಅಜ್ಞಾನವಾಗಿರುವುದು ಮತ್ತು ಸೃಷ್ಟಿಯ ವಿವಿಧತೆಯ ಮೂಲ ಕಾರಣವಾಗಿರುವುದು. ಆತ್ಮವು ಜ್ಞಾನಸ್ವರೂಪವಾಗಿದೆ. ಪದಾರ್ಥಗಳಲ್ಲಿ ಇದರ ಯಾವ ಸಂಬಂಧವಿರುವುದಿಲ್ಲ. ಹಾಗೂ ಯಾವ ವಿವಾದದ ಮಾತಿಲ್ಲ. ಅಸ್ತಿ-ನಾಸ್ತಿ, ಸಗುಣ-ನಿರ್ಗುಣ, ಭಾವ-ಅಭಾವ, ಸತ್ಯ-ಮಿಥ್ಯ ಇತ್ಯಾದಿ ರೂಪದಿಂದ ಇರುವ ಎಲ್ಲಕ್ಕೂ ಮೂಲಕಾರಣವು ಭೇದದೃಷ್ಟಿಯಾಗಿರುವುದು.

ಅಹಂಅಧ್ಯಾಸೇ ಸಂಸಾರಪ್ರಾಪ್ತೀ । ಜೇವಾಸೀ ಲಾಗಲೀ ನಿಶ್ಚಿತೀ । ತ್ಯಾ ಅಹಂಕಾರಾಚೇ ನಿವೃತ್ತೀ । ಭವನಿರ್ಮುಕ್ತೀ ಜೇವಾಸೀ ।೩೨೪॥ ಐಸಾ ಬಾಧಕತ್ವೇ ದುರ್ಧರ । ಕೈಚಾ ಉಠಿಲಾ ಅಹಂಕಾರ । ಹಾಹೀ ಪುಸೋ ಪಾಹಸೀ ವಿಚಾರ । ಐಕ ಸಾಚಾರ ಸಾಂಗೇನ ।೩೨೫॥ ಸ್ವಸ್ವರೂಪಾತೇ ವಿಸರೂನ । ದೃಢ ಜೇ ಸ್ಫುರೇ ಮೀ ಪಣ । ತೋಚಿ ಅಹಂಕಾರ ಜಾಣ। ವಿಕಾರೇ ತ್ರಿಗುಣಕ್ಷೋಭಕ ।೩೨೬॥ ಜಾಗೃತೀಚಾ ಜೋ ವಿಸರೂ । ತೋಚಿ ಸ್ವಪ್ನಸೃಷ್ಟೀಚಾ ವಿಸ್ತಾರೂ । ವಸ್ತುವಿಮುಖ ಜೋ ಅಹಂಕಾರೂ । ತೋಚಿ ಸಂಸಾರೂ ತ್ರಿಗುಣಾತ್ಮಕ ।೩೨೭॥ ವಿಕಾರೇ ಕ್ಷೋಭತೀ ತಿನ್ಹೀ ಗುಣ। ಹೇ ವಿಸ್ಮರಣ ಮೋಹಾಚೇ ಲಕ್ಷಣ । ತೇಣೇ ವಿಕಾರಲೇ ತೀನ ಗುಣ । ತೇ ವಿಭಾಗ ಭಿನ್ನ ಅವಧಾರೀ ।೩೨೮॥ ಮೂಳೀ ಬೋಲಿಲಾ ವೈಕಾರಿಕೂ । ತೋ ಅಹಂಕಾರ ಜಾಣ ಸಾತ್ತ್ವಿಕೂ । ಹೋ ಚಿತ್ತಚತುಷ್ಟಯ ದ್ಯೋತಕೂ । ಹೋಯ ಪ್ರಕಾಶಕೂ ಅಧಿದೈವೇ ।೩೨೯॥

ಶಿಶ್ನ ಇಂದ್ರಿಯದ ರತಿ ವಿಷಯವಾಗಿರುವುದು. ಅಲ್ಲಿ ಪ್ರಜಾಪತಿಯು ಅಧಿದೈವನಾಗಿರುವನು. ಆನಂದಶಕ್ತಿಯ ವಾಸ್ತವ್ಯವು ಅಲ್ಲಿರುವುದು. ಆದರೆ ಪರಮಾನಂದದ ಯೋಗದಿಂದ ಪರಮಾತ್ಮನು ಅಲ್ಲಿಯೂ ಕೂಡ ಅಲಿಪ್ತನಾಗಿಯೇ ಇರುವನು ।೩೧೯॥ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಇವುಗಳ ಯೋಗದಿಂದ ಕರ್ಮಗಳ ಆಚರಣೆಯಾಗುತ್ತಿರುವುದು. ಇದೇ ಚಿತ್ತಚತುಷ್ಟಯದ ಲಕ್ಷಣವಾಗಿರುವುದು. ಗುಣಕ್ಷೋಭೆಯ ಕಾರಣವು ಇದೇ ಆಗಿರುವುದು. ಆದ್ದರಿಂದ ಇದೆಲ್ಲವೂ ಕೂಡ ಮಾಯಿಕವಾಗಿರುವುದು ।೩೨೦॥ ಗುಣಕ್ಷೋಭೆಯ ಮುಖ್ಯ ಮೂಲವೇ ಪ್ರಕೃತಿಯ ವಿಕಾರದಿಂದ ಜಡರೂಪವಾಗುವುದು. ಆದರೆ ಆತ್ಮವು ಅವಿಕಾರೀ ನಿರ್ಮಲವಾಗಿರುವುದರಿಂದ ಅದು ಪ್ರಕೃತಿಗಿಂತಲೂ ಭಿನ್ನವಾಗಿ ಅಲಿಪ್ತವಾಗಿರುವುದು ।೩೨೧॥ ಒಬ್ಬ ಗೃಹಸ್ಥನು ತನ್ನ ಯಜಮಾನರು ದುಡಿದಿಟ್ಟಿರುವ ಜಮೀನಿನಿಂದ ಸರ್ವವನ್ನು ಬಹಳ ಅಭಿಮಾನದಿಂದ ಮನೆಯಲ್ಲಿ ಸಂಪಾದಿಸುತ್ತಿರುವನು. ಆದರೆ ತಾನು ಆ ಎಲ್ಲ ವಸ್ತುಗಳಿಂದ ಭಿನ್ನವಾಗಿಯೇ ಇರುವನು ।೩೨೨॥ ಅದರಂತೆ ಈ ಯಾವ ಮೂರು ಗುಣಗಳ ಕ್ಷೋಭೆಯಿಂದಲೇ ಅಭಿಮಾನವು ನಾನಾ ಪ್ರಕಾರಗಳ ವಿಕಾರದ ವನವನ್ನು ಬೆಳೆಯಿಸಿರುವುದು. ಆದರೆ ಆತ್ಮರೂಪ ವಸಂತವು ಇದು ಭಿನ್ನವಾಗಿಯೇ ಇರುವುದು. ಇದೇ ನಿರೂಪಣೆಯನ್ನು ಶ್ರೀಕೃಷ್ಣನು ಹೇಳುತ್ತಿರುವನು ।೩೨೩॥

ಈ ದೇಹವೇ ನಾನು, ಮತ್ತು ಇವರೆಲ್ಲರೂ ನನ್ನವರು, ಇದೆಲ್ಲವೂ ನನ್ನದು ಈ ಪ್ರಕಾರದ ನಿತ್ಯ ಚಿಂತನೆಯಿಂದ ಜೀವದ ಹಿಂದೆ ಸಂಸಾರವು ಹತ್ತಿಕೊಂಡಿರುವುದು. ಈ ಯಾವ ಜೀವವು ಅಹಂಕಾರದಿಂದ ಮುಕ್ತವಾಯಿತೆಂದರೆ ಸಂಸಾರದಿಂದಲೂ ಕೂಡ ಸಹಜವಾಗಿಯೇ ಬಿಡುಗಡೆಯಾಗುವುದು ।೩೨೪॥ ಹೀಗೆ ಭಯಂಕರವಾಗಿ ಪೀಡೆಯನ್ನು ಕೊಡುತ್ತಿರುವ ಈ ಯಾವ ಅಹಂಕಾರವು ಎಲ್ಲಿಂದ ನಿರ್ಮಾಣವಾಯಿತೆಂದು ಹೀಗೆ ಪ್ರಶ್ನೆಯನ್ನು ಕೇಳಿದರೆ ಅದರ ಸ್ಪಷ್ಟೀಕರಣೆಯನ್ನು ಮಾಡುವೆನು, ಅದನ್ನು ಕೇಳು ।೩೨೫॥ ಸ್ವಸ್ವರೂಪದ ವಿಸ್ಮರಣೆಯಾಗಿ ಯಾವ ದೃಢವಾಗಿರುವ ನಾನು ಎಂಬುವುದು ಸ್ಫುರಣವಾಗುವುದೋ, ಅದೇ ಅಹಂಕಾರವಾಗಿರುವುದು. ಇದೇ ವಿಕಾರದಿಂದ ಮೂರು ಗುಣಗಳ ಕ್ಷೋಭೆಯನ್ನು ಮಾಡುತ್ತಿರುವುದು ।೩೨೬॥ ಜಾಗೃತಿಯ ವಿಸ್ಮರಣೆಯೇ ಸ್ವಪ್ನ ಸೃಷ್ಟಿಯ ವಿಸ್ತಾರವಾಗಿರುವುದು. ಅದರಂತೆ ಸ್ವಸ್ವರೂಪದ ವಿಸ್ಮರಣೆಯೇ ಅಹಂಕಾರವಾಗಿರುವುದು. ಇದೇ ತ್ರಿಗುಣಾತ್ಮಕ ಸಂಸಾರವಾಗಿರುವುದು ।೩೨೭॥ ವಿಕಾರಗಳ ಗುಣದಿಂದ ಮೂರು ಗುಣಗಳ ಕ್ಷೋಭೆಯಾಗುವುದು. ವಿಸ್ಮರಣೆಯು ಇದು ಮೋಹದ ಲಕ್ಷಣವಾಗಿದೆ. ಯಾವುದರಿಂದ ತ್ರಿಗುಣಗಳು ವಿಕಾರಯುಕ್ತವಾಗುವುದೆಂಬುದನ್ನು ಅವುಗಳ ಭಿನ್ನ ವಿಭಾಗ ಕುರಿತು ನಾನೀಗ ನಿನಗೆ ತಿಳಿಸಿ ಹೇಳುವೆನು, ಸರಿಯಾಗಿ ಕೇಳು ।೩೨೮॥ ಮೂಲದಲ್ಲಿ ವೈಕಾರೀ ಅಂದರೆ ವಿಕೃತವೆಂದು ಹೇಳಿರುವುದು. ಅದುವೇ ಸಾತ್ವಿಕ ಅಹಂಕಾರವಾಗಿರುವುದು. ಅದುವೇ ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ ಈ ಚತುಷ್ಟಯದ ಹಾಗೂ ಅಧಿದೈವತೆಗಳ ಪ್ರಕಾಶಕವಾಗಿರುವುದು ।೩೨೯॥

ಸತ್ತ್ವಾಪಾಸೋನಿ ಉಪಜೇ ಮನ । ಮನಾಪಾಸಾವ ವಿಕಾರ ಗಹನ । ಯಾಲಾಗೀ ವೈಕಾರಿಕ ಜಾಣ । ಸತ್ತ್ವಗುಣ ಬೋಲಿಜೇ ।।೩೮೦।। ಜ್ಞಾನ ಕರ್ಮ ಉಭಯ ಪಂಚಕ । ಹಾ ಇಂದ್ರಿಯಾಂಚಾ ದಶಕ । ಜಾಹಲಾ ರಜೋಗುಣ ದ್ಯೋತಕ । ಯಾಲಾಗೀ ಐಂದ್ರಿಯಕ ಮ್ಹಣಿಪೇ ತ್ಯಾಸೀ ।।೩೮೧।। ತಾಮಸ ಗುಣ ಜೋ ಕಾ ಯೇಥೇ । ಆಕಾಶಾದಿ ಪಂಚಿಕೃತೇ । ಆವರಣರೂಪೇ ಮಹಾಭೂತೇ । ವಿಷಯಸಮವೇತೇ ಉಪಜವೀ ।।೩೮೨।। ಮಹಾಭೂತೇ ವಿಷಯಪಂಚಕ । ಝಾಲಾ ತಮೋಗುಣ ಪ್ರಕಾಶಕ । ಯಾಲಾಗೀ ಭೂತಾದಿ ದೇಖ । ಯಾಸೀ ಆವಶ್ಯಕ ಬೋಲಿಜೇ ।।೩೮೩।। ಏವಂ ತ್ರಿಗುಣಗುಣವಿಕಾರೇ । ಕಾಮ್ಯಕರ್ಮಸಂಸ್ಕಾರೇ । ಸಬಳ ಹೋಊನಿ ಅಹಂಕಾರೇ । ಸಂಸಾರೀ ಸಂಚರೇ ನಾನಾ ಹೇತು ।।೩೮೪।। ಯಾ ಪ್ರಕೃತಿವಿಕಾರಾಪಾಸೂನ । ಆತ್ಮಾ ಅತಿಶಯೇ ಭಿನ್ನ । ಜೇವೀ ಮೃಗಜಳಾತೇ ಭರೂನ । ಅಲಿಪ್ತ ಭಾನೂ ನಭಾಮಾಜೀ ।।೩೮೫।। ಜೈಸಾ ಪ್ರಕಾಶೋನಿ ಸರ್ಪಾಕಾರ । ಸರ್ಪಾಸೀ ನಾತಳೇ ಸ್ವಯೇ ದೋರ । ತೇವೀ ಪ್ರಕಾಶೋನಿ ಸಂಸಾರ । ನಿಃಸಂಗ ನಿರ್ವಿಕಾರ ನಿಜಾತ್ಮಾ ।।೩೮೬।। ಜೇವೀ ಕೃಷ್ಣ ಪೀತ ರಕ್ತ ಶ್ವೇತ । ಸ್ಫಟಿಕ ಠೇವಿತಾ ತೇಥ ತೇಥ । ಜರೀ ತದಾಕಾರ ಭಾಸತ । ತರೀ ತೋ ಅಲಿಪ್ತ ಶುದ್ಧತ್ವೇ ।।೩೮೭।। ತೈಸಾ ಗುಣಸಂಗೇ ಜೀವಾತ್ಮಾ ಬದ್ಧ । ದಿಸೇ ತರೀ ತೋ ಅತಿಶುದ್ಧ । ಹಾ ನೇಣೋನಿಯಾ ನಿಜಬೋಧ । ಕರಿತೀ ವಿವಾದ ಮತವಾದೀ ।।೩೮೮।। ಏಕ ಮ್ಹಣತೀ ಆತ್ಮಾ ದೇಹೀ । ಏಕ ಮ್ಹಣತೀ ತೋ ವಿದೇಹೀ । ಏಕ ಮ್ಹಣತೀ ಆತ್ಮ್ಯಾಚ್ಯಾ ಠಾಯೀ। ಹೇ ದೋನ್ಹೀ ನಾಹೀ ಸರ್ವಥಾ ।।೩೮೯।। ಏಕ ಮ್ಹಣತೀ ಆತ್ಮಾ ಸಗುಣ । ಏಕ ಮ್ಹಣತೀ ತೋ ಗುಣವಿಹೀನ । ಏಕ ಮ್ಹಣತೀ ತೇ ವೇಗಳೀ ಖೂಣ । ಸಗುಣ ನಿರ್ಗುಣ ಪರಮಾತ್ಮಾ ।।೩೯೦।। ಏಕ ಪ್ರತಿಪಾದಿತೀ ಭೇದ । ಏಕ ಪ್ರತಿಪಾದಿತೀ ಅಭೇದ । ಏಕ ಮ್ಹಣತೀ ದೋನ್ಹೀ ಅಬದ್ಧ । ಆಮುಚೇ ಮತ ಶುದ್ಧ ದೇಹಾತ್ಮವಾದೂ ।।೩೯೧।। ಏಕ ಮ್ಹಣತೀ ಹೇ ಮಿಥ್ಯಾಭೂತ । ಪ್ರತ್ಯಕ್ಷ ದಿಸತಾಹೇ ಜೋ ಯೇಥ । ತೋ ಪ್ರಪಂಚ ಮಾನಿತೀ ಸತ್ಯ । ಹೇಚಿ ಮತ ಏಕಾಚೇ ।।೩೯೨।। ಐಸೇ ಭೇದವಾದ ಸಕಳ । ವಿಚಾರಿತಾ ಅಜ್ಞಾನಮೂಳ । ಆತ್ಮಾ ಚಿನ್ಮಾತ್ರ ಕೇವಳ । ಭೇದಾತೇ ಸಮೂಳ ಛೇದಕ ।।೩೯೩।।

ಸತ್ವಗುಣದಿಂದ ಮನಸ್ಸು ನಿರ್ಮಾಣವಾಗುವುದು ಮತ್ತು ಮನಸ್ಸಿನಿಂದ ಅನಂತ ಪ್ರಕಾರಗಳ ನಾನಾ ವಿಕಾರಗಳು ಉತ್ಪನ್ನವಾಗುವುವು. ಆದ್ದರಿಂದ ಸತ್ವಗುಣಕ್ಕೂ ಕೂಡ ವಿಕೃತಗುಣವೆಂದು ಸಂಭೋದಿಸಿರುವುದು ।।೩೮೦।। ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಈ ಎರಡು ಪಂಚಕಗಳು ದಶೇಂದ್ರಿಯಗಳಾಗುವುವು. ಇವುಗಳಿಗೆ ರಜೋಗುಣವು ಪ್ರಕಾಶಿತವನ್ನಾಗಿ ಮಾಡುತ್ತಿರುವುದು. ಆದ್ದರಿಂದ ಆ ರಜೋಗುಣಕ್ಕೆ ಇಂದ್ರಿಯಸಂಬಂಧಿ ಎಂದು ಹೇಳುವರು ।।೩೮೧।। ಇವುಗಳಲ್ಲಿರುವ ತಾಮಸ ಗುಣವು ಅದು ಆಕಾಶಾದಿ ಸೂಕ್ಷ್ಮ ಪಂಚಮಹಾತತ್ವ ಮಹಾಭೂತಗಳಿಗೆ ಆಚ್ಛಾದಿಸಿಕೊಂಡಿರುವುದು. ಅದು ಭೂತಗಳ ಪಂಚಮಹಾಕಿರಣಗಳಿಂದ ಉತ್ಪನ್ನವಾಗುವುದು ।।೩೮೨।। ಈ ಪ್ರಕಾರವಾಗಿ ಮಹಾಭೂತಗಳು ಮತ್ತು ಐದು ವಿಷಯಗಳು, ಇವುಗಳಿಗೆ ತಮೋಗುಣವು ಪ್ರಕಾಶಗೊಳಿಸುವುದು. ಆದ್ದರಿಂದ ಅದಕ್ಕೆ ಭೂತಗಳ ಪೂರ್ವದ ಅಂದರೆ ಭೂತಾದಿ ಎಂದು ಆಗ್ರಹದಿಂದ ಹೇಳುವರು ।।೩೮೩।। ಈ ಪ್ರಕಾರವಾಗಿ ಮೂರು ಗುಣಗಳ ವಿಕಾರದಿಂದ ಮತ್ತು ಕಾಮ್ಯಕರ್ಮಗಳ ಸಂಸಾರದಿಂದ ಅಹಂಕಾರವು ಬಲಿಷ್ಠವಾಗಿ ಅದು ಅನೇಕ ಉದ್ದೇಶಗಳಿಂದ ಸಂಸಾರದಲ್ಲಿ ಪರಿಭ್ರಮಣವನ್ನು ಮಾಡುತ್ತಿರುವುದು ।।೩೮೪।। ಆದರೆ ಆತ್ಮವು ಈ ಪ್ರಕೃತಿಯ ಸರ್ವ ವಿಕಾರಗಳಿಂದ ಅತಿಶಯವಾಗಿ ಭಿನ್ನವಾಗಿರುವುದು. ಮೃಗಜಲವನ್ನು ನಿರ್ಮಾಣವನ್ನಾಗಿ ಮಾಡಿ ಸೂರ್ಯನು ಆಕಾಶದಲ್ಲಿ ಹೇಗೆ ಅಲಿಪ್ತನಾಗಿರುವನೋ ।।೩೮೫।। ಸರ್ಪದ ಆಕಾರವನ್ನು ನಿರ್ಮಾಣಗೊಳಿಸಿ ಹಗ್ಗವು ಸರ್ಪಕ್ಕೆ ಹೇಗೆ ಸ್ಪರ್ಶಮಾಡುವುದಿಲ್ಲವೋ, ಅದರಂತೆ ಪರಮೇಶ್ವರನೂ ಕೂಡ ಸಂಸಾರವನ್ನು ನಿರ್ಮಾಣ ಮಾಡಿಯೂ ಕೂಡ ತಾನು ನಿಃಸಂಗ ಹಾಗೂ ನಿರ್ವಿಕಾರನಾಗಿಯೇ ಇರುವನು ।।೩೮೬।। ಸ್ಫಟಿಕ ಮಣಿಯನ್ನು ಕಪ್ಪು, ಕೆಂಪು, ಹಳದಿ , ಬಿಳುಪು ಪದಾರ್ಥಗಳ ಮೇಲಿಡಲು ಆಗ ಅದು ಆಯಾ ಬಣ್ಣಗಳ ಆಯಾ ಆಕಾರವಾಗಿ ತೋರುವುದು. ಆದರೆ ಅದು ಆ ಬಣ್ಣಗಳಿಂದ ಭಿನ್ನವಾಗಿದ್ದು ಅತಿಶಯ ಶುಭ್ರ, ಬಿಳುಪಾಗಿಯೇ ಇರುವುದು ।।೩೮೭।। ಅದರಂತೆ ಗುಣಗಳ ಸಂಗದಿಂದ ಜೀವಾತ್ಮನು ಬದ್ಧನಾಗಿರುವುದಾಗಿ ತೋರುತ್ತಿದ್ದರೂ ಕೂಡ ಇದನ್ನು ತಿಳಿದುಕೊಳ್ಳದೇ ಭಿನ್ನ ಭಿನ್ನ ಮತಗಳ ಅಭಿಮಾನಿ ಜನರು ನಿಷ್ಕಾರಣವಾಗಿ ವಾದವಿವಾದಗಳಲ್ಲಿ ಸಮಯವನ್ನು ಕಳೆಯುವರು ।।೩೮೮।। ಕೆಲವರು ಆತ್ಮವು ದೇಹಧಾರೀ ಎಂದು ಹೇಳುವರು, ಕೆಲವರು ಆತನು ದೇಹರಹಿತನೆಂದು ಹೇಳುವರು. ಇನ್ನೊಬ್ಬನು ದೇಹಿ-ವಿದೇಹೀ ಇವು ಎರಡೂ ಆತನಾಗಿರುವುದಿಲ್ಲವೆಂದು ಹೇಳುವನು ।।೩೮೯।। ಕೆಲವರ ಮತವು ಆತ್ಮವು ಸಗುಣವಾಗಿದೆ ಎಂದಾಗಿದ್ದರೆ ಕೆಲವರ ಮತವು ಆತ್ಮವು ನಿರ್ಗುಣ ಎಂದಾಗಿದೆ. ಇನ್ನು ಕೆಲವರು ಆತ್ಮದ ಚಿನ್ಹೆಯು ಬೇರೆಯೇ ಇರುವುದು. ಪರಮಾತ್ಮನು ಸಗುಣ, ನಿರ್ಗುಣ ಎರಡೂ ಆಗಿರುವನು ಎಂದು ಹೇಳುವರು ।।೩೯೦।। ಕೆಲವರು ದ್ವೈತವನ್ನು ಪ್ರತಿಪಾದಿಸಿದರೆ, ಕೆಲವರು ಅದ್ವೈತವನ್ನು ಸಿದ್ಧಮಾಡಿ ಪ್ರತಿಪಾದಿಸುವ ಪ್ರಯತ್ನ ಮಾಡುವರು. ಮೂರನೆಯವನು ಇವು ಎರಡೂ ಸುಳ್ಳೆಂದು ದೇಹಾತ್ಮವಾದವು ನಿಜವೆನ್ನುವನು ।।೩೯೧।। ಕೆಲವರು ಇದೆಲ್ಲವೂ ಮಿಥ್ಯೆಯಾಗಿದೆ. ಪ್ರತ್ಯಕ್ಷವಾಗಿ ಕಾಣುವ ಪ್ರಪಂಚವೇ ಸತ್ಯವೆನ್ನುವರು ।।೩೯೨।। ಹೀಗೆ ವಿವಿಧ ಪ್ರಕಾರಗಳ ಮತಗಳ ವಿಚಾರ ಮಾಡಲು ಅವು ಅಜ್ಞಾನದ ಮೂಲವಾಗಿರುವುವು. ಆತ್ಮವು ಜ್ಞಾನಸ್ವರೂಪವಾಗಿದ್ದು ಸರ್ವ ಪ್ರಕಾರದ ಭೇದಗಳ ನಿರಸನೆ ಮಾಡುವದ್ದಾಗಿದೆ ।।೩೯೩।।

''ಆತ್ಮಾ ಪರಿಜ್ಞಾನಮಯ'' ಶುದ್ಧ । ಹೇ ಶ್ಲೋಕಿಚೇ ಮೂಳ ಪದ । ತೇಣೇ ನಿರಸೇ ಅಜ್ಞಾನಭೇಧ । ಆತ್ಮಾ ಶುದ್ಧ ಬುದ್ಧ ಚಿದಾತ್ಮಾ ।।೯೪।। ಜೇವೀ ಸನಕ್ಷತ್ರ ರಜನೀ । ನಿವಡೀತ ಪ್ರಕಟೇ ತರಣೀ । ತೇವೀ ಸಭೇದ ಕಾರ್ಯ ನಿರಸೂನೀ । ಪ್ರಕಟ ಚಿತ್ಕಿರಣೀ ಚಿದ್ಭಾನೂ ।।೯೫।। ತೇಥ ಗುಣೇಸೀ ಮಾಯಾ ಉಡೇ । ಭೇದಾಸಹಿತ ವಾದ ಬುಡೇ । ಮೂಳಾಸಹ ಅಜ್ಞಾನ ಖುಡೇ । ಚಹೂಕಡೇ ಸಚ್ಚಿದಾನಂದ ।।೯೬।। ಆತ್ಮಾ ಸಚ್ಚಿದಾನಂದ ಪೂರ್ಣ । ತೇಥ ಸಕಳ ಮಿಥ್ಯಾ ಅಜ್ಞಾನ । ತೇ ಅಜ್ಞಾನನಿರಾಸೀ ಸಾಧನ । ವಿವೇಕ ಸಾಂಖ್ಯಜ್ಞಾನ ವ್ಯರ್ಥ ದಿಸೇ ।।೯೭।। ತೇಚಿ ವಿಷಯಿಂಚೇ ನಿರೂಪಣ । ಶ್ಲೋಕಾರ್ಧೇ ಸುಲಕ್ಷಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಸಾಧ್ಯಸಾಧನ ವಿಭಾಗ ।।೯೮।।

ವ್ಯರ್ಥೋಽಪಿ ನೈವೋ ಪರಮೇತ ಪುಂಸಾಂ ಮತ್ತಃ । ಪರಾವೃತ್ತಧಿಯಾಂ ಸ್ವಲೋಕಾತ್ ।।೩।।

ಅರ್ಥ:- ವಿವಾದಗಳಲ್ಲಿ ಯಾವ ಪ್ರಯೋಜನವೂ ಇಲ್ಲ ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ಅದು ಸರ್ವಶಃ ವ್ಯರ್ಥವಾಗಿರುವುದು. ಯಾವ ಜನರು ನನ್ನಸ್ವರೂಪವನ್ನು ತಿಳಿದಿರುವುದಿಲ್ಲವೋ, ಅವರು ಈ ವಿವಾದಗಳಿಂದ ಮುಕ್ತರಾಗುವುದಿಲ್ಲ.

ಮೂಳೀ ಸಮೂಳ ಮಿಥ್ಯಾ ಅಜ್ಞಾನ । ಅಜ್ಞಾನಜನ್ಯ ವಿಷಯಭಾನ । ತೇ ದೇಖೋನಿ ಭುಲಲೇ ಜನ । ಪಡಿಲೇ ವಿಸ್ಮರಣ ಸ್ವಸ್ವರೂಪೀ ।।೯೯।। ಮೀ ಪರಮಾತ್ಮಾ ಹೃದಯಸ್ಥ ಸನ್ನಿಧೀ । ತ್ಯಾ ಮಜಪಾಸೋನಿ ಉಪರಮೇ ಬುದ್ಧೀ । ಮಗ ವಿಷಯಾಸಕ್ತೀ ತ್ರಿಶುದ್ಧೀ । ಆವಡೇ ಉಪಾಧಿ ದೇಹ ಗೇಹ ದಾರಾ ।।೧೦೦।। ಜೇ ಸ್ವಸ್ವರೂಪಾಚೇ ವಿಸ್ಮರಣ । ತೇ ವಾಢವೀ ತೀವ್ರ ವಿಷಯಧ್ಯಾನ । ತೇಣೇ ಜೇವಾಸೀ ಜನ್ಮ ಮರಣ । ಅನಿವಾರ ಜಾಣ ದೇಹಾಭಿಮಾನೇ ।।೧೦೧।। ತೋ ನಾಸಾವಯಾ ದೇಹಾಭಿಮಾನ । ವೈರಾಗ್ಯಯುಕ್ತ ಜ್ಞಾನಧ್ಯಾನ । ಮೀಚಿ ಬೋಲಿಲೋ ಸಾಧನ । ಸಮೂಳ ಅಜ್ಞಾನಭೇದಕ ।।೧೦೨।। ಜಂವವರೀ ಅಂಗೀ ದೇಹಾಭಿಮಾನ । ತಂವ ಅವಶ್ಯ ಪಾಹಿಜೇಸಾಧನ । ನಿಃಶೇಷ ನಿರಸಲ್ಯಾ ಅಜ್ಞಾನ । ವೃಥಾ ಸಾಧನ ಮೀಹೀ ಮಾನೀ ।।೧೦೩।। ಮ್ಹಣಶೀ ತೇ ಕೋಣ ಪಾ ಅಜ್ಞಾನ । ಜೇ ಶುದ್ಧಾಸೀ ಲಾವೀ ಜೇವಪಣ। ತ್ಯಾ ಜೇವಾ ಅಂಗೀ ಜನ್ಮ ಮರಣ । ಅನಿವಾರ ಜಾಣ ವಾಢವೀ ।।೧೦೪।। ಸ್ವಸ್ವರೂಪ ವಿಸರೋನಿ ಜಾಣ। ದೇಹೀ ಸ್ಫುರೇ ಜೇ ಮೀಪಣ । ಅತ್ಯಂತ ದೃಢತರ ಅಜ್ಞಾನ । ತೋ ದೇಹಾಭಿಮಾನ ಉದ್ಧವಾ ।।೧೦೫।।

ಯಾವ ಈ ಆತ್ಮವು ''ಪರಿಜ್ಞಾನಮಯ'' ಅಂದರೆ ಜ್ಞಾನಸ್ವರೂಪವಾಗಿರುವುದು. ಇದೇ ಮೂಲ ಶ್ಲೋಕದಲ್ಲಿನ ಶುದ್ಧ ಶಬ್ದವಾಗಿದೆ. ದರಿಂದ ಅಜ್ಞಾನದ ಭೇದವೇ ಉಳಿಯುವುದಿಲ್ಲ. ಈ ಆತ್ಮವು ಶುದ್ಧ, ಬುದ್ಧ, ಹಾಗೂ ಜ್ಞಾನರೂಪವಾಗಿರುವುದು ಎಂದು ಸಿದ್ಧವಾಗುವುದು ।।೯೪।। ಯಾವ ಪ್ರಕಾರವಾಗಿ ಸರ್ವ ನಕ್ಷತ್ರಗಳೊಂದಿಗೆ ರಾತ್ರಿಯನ್ನು ಕಳೆಯುತ್ತ ಸೂರ್ಯನು ಪ್ರಕಟನಾಗುವನೋ, ಅದರಂತೆ ಭೇದಗಳ ಹೇಳಹೆಸರಿಲ್ಲದಂತೆ ಕಾರ್ಯಗಳ ಲೋಪ ಮಾಡಿ ಜ್ಞಾನರೂಪ ಕಿರಣಗಳಿಂದ ಯಾವ ಜ್ಞಾನಸೂರ್ಯನು ಪ್ರಕಟನಾಗುವನು ।।೯೫।। ಆಗ ಮಾಯೆಯೂ ಸಹ ತನ್ನ ಗುಣಗಳೊಂದಿಗೆ ಇಲ್ಲದಾಗುವುದು. ವಾದವೂ ಕೂಡ ಭೇದಗಳೊಂದಿಗೆ ಮಾಯವಾಗುವುದು. ಅಜ್ಞಾನವು ಸಮೂಲವಾಗಿ ಕುಂಠಿತವಾಗುವುದು ಮತ್ತು ನಾಲ್ಕೂ ಕಡೆಯಿಂದಲೂ ಸಚ್ಚಿದಾನಂದಘನನು ತುಂಬಿಕೊಂಡಿರುವನು ।।೯೬।। ಆತ್ಮನು ಸಚ್ಚಿದಾನಂದರೂಪನಾಗಿರುವುದರಿಂದ ಆತನಲ್ಲಿ ಸರ್ವಪ್ರಕಾರದ ಅಜ್ಞಾನವು ಮಿಥ್ಯೆಯಾಗುವುದು. ಅಜ್ಞಾನದ ನಾಶವನ್ನು ಮಾಡುವ ನಿಜವಾದ ಸಾಧನವೆಂದರೆ ವಿವೇಕವಾಗಿರುವುದು. ಇತರ ಸಾಂಖ್ಯಾತತ್ವಜ್ಞಾನಾದಿಗಳು ವ್ಯರ್ಥವಾಗಿರುವುವು ।।೯೭।। ಇದೇ ವಿಷಯದ ನಿರೂಪಣೆಯನ್ನು ಈಗ ಮುಂದಿನ ಅರ್ಧಶ್ಲೋಕದಲ್ಲಿ ಉತ್ಕೃಷ್ಟ ರೀತಿಯಲ್ಲಿ ಸಾಧ್ಯ ಮತ್ತು ಸಾಧನೆಗಳ ವಿಭಾಗವನ್ನು ಮಾಡಿ ಶ್ರೀಕೃಷ್ಣನು ಸ್ವತಃ ಹೇಳುವನು, ಅದಕ್ಕಾಗಿ ಕೇಳು ।।೯೮।।

ಮೂಲದಲ್ಲಿಯೇ ಈ ಯಾವ ಅಜ್ಞಾನವು ಪರಿಪೂರ್ಣವಾಗಿ ಮಿಥ್ಯೆಯಾಗಿರುವುದು. ಆದ್ದರಿಂದ ವಿಷಯಗಳ ಧ್ಯಾನವೂ ಕೂಡ ಅಜ್ಞಾನ ಜನಕವೇ ಆಗಿರುವುದು. ಇದನ್ನು ಕಂಡು ಜನರು ಭ್ರಮದಲ್ಲಿ ಬೀಳುವುದರಿಂದ ಅವರಿಗೆ ಸ್ವಸ್ವರೂಪವಾದ ವಿಸ್ಮರಣೆಯಾಗಿರುವುದು ।।೯೯।। ಪರಮಾತ್ಮನಾದ ನಾನು ಅವರ ಹೃದಯದಲ್ಲಿ ಅತ್ಯಂತ ಸಮೀಪವಾಗಿದ್ದರೂ ಕೂಡ ಅದರಿಂದ ಅವರ ಬುದ್ಧಿಯು ವಿಮುಖವಾಗಿರುವುದು. ಈ ಕಾರಣವಾಗಿ ವಿಷಯಗಳ ಆಸಕ್ತಿಯು ಉತ್ಪನ್ನವಾಗಿ ಸ್ತ್ರೀ, ಪುತ್ರ, ಮನೆ, ಮಾರು ಇತ್ಯಾದಿ ಉಪಾಧಿಗಳು ಇವರಿಗೆ ಪ್ರಿಯವಾಗುವುವು ।।೧೦೦।। ಆತ್ಮಸ್ವರೂಪದ ವಿಸ್ಮರಣೆಯಾಗುತ್ತಲೇ ವಿಷಯಗಳ ತೀವ್ರ ಧ್ಯಾನವು ಬೆಳೆಯುತ್ತದೆ. ಆದ್ದರಿಂದ ಅನಿವಾರ್ಯವಾಗಿ ದೇಹದ ಅಭಿಮಾನವು ಉತ್ಪನ್ನವಾಗುವುದು. ಇದರಿಂದ ಜೀವಕ್ಕೆ ಜನ್ಮಮರಣಗಳು ಪ್ರಾಪ್ತವಾಗುವುದು ।।೧೦೧।। ಈ ಯಾವ ದೇಹಾಭಿಮಾನದ ನಾಶ ಮಾಡುವುದಕ್ಕಾಗಿ ಅಜ್ಞಾನದ ಸಮೂಲ ಭೇದಗೊಳಿಸುವುದಕ್ಕಾಗಿ ವೈರಾಗ್ಯಯುಕ್ತ ಜ್ಞಾನಧ್ಯಾನಾದಿ ಸಾಧನೆಗಳನ್ನು ನಾನು ಹೇಳಿರುವೆನು ।।೧೦೨।। ಎಲ್ಲಿಯವರೆಗೆ ದೇಹದ ಅಭಿಮಾನವು ಇರುವುದೋ, ಅಲ್ಲಿಯವರೆಗೆ ಸಾಧನೆಗಳನ್ನು ಅವಶ್ಯವಾಗಿ ಮಾಡಲೇಬೇಕಾಗುವುದು. ಅಜ್ಞಾನವು ಪರಿಪೂರ್ಣವಾಗಿ ಇಲ್ಲದಾಗಲು, ಆಗ ಸರ್ವಸಾಧನೆಗಳು ವ್ಯರ್ಥವೆಂದೆನಿಸುವುವು. ಇದು ನನಗೂ ಕೂಡ ಮಾನ್ಯವಾಗಿರುವುದು ।।೧೦೩।। ಈಗ ಅಜ್ಞಾನವೆಂದರೆ ಯಾವುದು? ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು, ಮೂಲದಲ್ಲಿರುವ ಶುದ್ಧಸ್ವರೂಪವಾದ ಆತ್ಮತತ್ವಕ್ಕೆ ಜೀವತ್ವವನ್ನು ಹಚ್ಚಿಕೊಡುವ ಇದರಿಂದ ಜನ್ಮಮರಣಗಳನ್ನು ಭೋಗಿಸಲು ಹಚ್ಚಿರುವ ಸ್ಥಿತಿಯಾಗಿರುವುದು ।।೧೦೪।। ಹೇ ಉದ್ಧವಾ, ಆತ್ಮಸ್ವರೂಪದ ವಿಸ್ಮರಣೆಯಾಗಿ ದೇಹದಲ್ಲಿ ನಾನೆಂಬ ಅಹಂಕಾರ ಸ್ಫುರಣವಾಗುವ ಸ್ಥಿತಿಯೇ ಅದು ದೃಢವಾದ ಅಜ್ಞಾನವಾಗಿರುವುದು. ವಾಸ್ತವಿಕವಾಗಿ ನೋಡಲು ಇದೇ ದೇಹಾಭಿಮಾನವಾಗಿರುವುದು ।।೧೦೫।।

ಗೌಣ ನಾಂವ ತ್ಯಾಚೇ ಅಜ್ಞಾನ । ಯೇರ್ಹವೀ ಮುಖ್ಯತ್ವೇ ದೇಹಾಭಿಮಾನ । ಹೇ ಐಕೋನಿ ದೇವಾಚೇ ವಚನ । ದಚಕಲೇ ಮನ ಉದ್ಧವಾಚೇ ।।೯೦೬।। ತೇಚಿ ಅರ್ಥೀಚಾ ಪ್ರಶ್ನ । ದೇವಾಸೀ ಪುಸೇ ಆಪಣ । ಕೋಣ್ಯಾ ಯುಕ್ತೀ ದೇಹಾಭಿಮಾನ । ಜನ್ಮ ಮರಣ ಭೋಗವೀ ।।೯೦೭।।

ಉದ್ಧವ ಉವಾಚ :-

ತ್ವತ್ತ : ಪರಾವೃತ್ತಧಿಯಃ ಸ್ವಕೃತೈಃ ಕರ್ಮಭಿಃ ಪ್ರಭೋ । ಉಚ್ಚಾವಚಾನ್ ಯಥಾ ದೇಹಾನ್ ಗೃಹ್ಣಂತಿ ವಿಸೃಂಜತಿ ಚ ।।೩೪।।

ಅರ್ಥ:- ಉದ್ಧವನು ಕೇಳಿದನು, ಹೇ ಪರಮಾತ್ಮನೇ, ನಿನ್ನಿಂದ ಪರಾವೃತ್ತ ಬುದ್ಧಿಯ ಜನರು ತಾವು ಮಾಡಿರುವ ಪಾಪಪುಣ್ಯಗಳ ಫಲಸ್ವರೂಪವಾಗಿ ಉಚ್ಚ,ನೀಚ ಯೋನಿಗಳಲ್ಲಿ ಬರುವರು, ಹೋಗುವರು. ನನ್ನ ಪ್ರಶ್ನೆಯು ಏನೆಂದರೆ, ವ್ಯಾಪಕನಾಗಿರುವ ಆತ್ಮವು ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೋಗುವುದು. ಅಕರ್ತನು ಕರ್ಮ ಮಾಡುವುದು ಮತ್ತು ನಿತ್ಯ ವಸ್ತುವಿಗೆ ಜನ್ಮ ಮರಣಗಳು ಇವು ಹೇಗೆ ಸಂಭವಿಸುವುವು ?

ಸರ್ವತ್ರ ಸದಾ ಸಂಮುಖ ಗಗನ । ತ್ಯಾಸೀ ಕದಾ ನ ಘಡೇ ವಿಮುಖಪಣ । ತೇವೀ ಆತ್ಮಾ ಸಬಾಹ್ಯ ಪರಿಪೂರ್ಣ । ವೃತ್ತಿ ವಿಮುಖ ಜಾಣ ಹೋಯ ಕೈಸೀ ।।೯೦೮।। ಜೈ ಜಾಳೀ ಬಾಂಧವೇ ಗಗನ । ತೈ ಅಕ್ರಿಯಾ ಲಾಗೇ ಕರ್ಮಬಂಧನ । ವಂಧ್ಯಾಗರ್ಭ ಸಟವೇ ಜಾಣ । ತೈಸೇ ಜನ್ಮ ಮರಣ ಮುಕ್ತಾಸೀ ।।೯೦೯।। ಆತ್ಮ್ಯಾವೇಗಳೇ ಕಾಂಹೀ । ರಿತೇ ತಂವ ಉರಲೇ ನಾಹೀ । ತರೀ ಯೇ ದೇಹಿಂಚಾ ತೇ ದೇಹೀ । ಗಮನಸಿದ್ಧೀ ಪಾಹೀ ಕೈಸೇನೀ ।।೯೧೦।। ಪೃಥ್ವಿ ರುಸೋನಿ ವೋಸರಾ ರಾಹೇ । ಆಕಾಶ ಪಳೋನಿ ಪರ್ಹಾ ಜಾಯೇ । ತೈ ದೇಹೀಂಚಾ ದೇಹಾಂತರಾ ಪಾಹೇ । ಆತ್ಮಾ ಲಾಹೇ ಸಂಸರಣ ।।೯೧೧।। ಸಾತ ಸಮುದ್ರ ಗಿಳೀ ಮುಂಗೀ । ತೈ ಆತ್ಮಾ ಉಂಚನೀಚ ಯೋನೀ ಭೋಗೀ । ಹೇ ಅತರ್ಕ್ಯ ತರ್ಕೇನಾ ಯೋಗೀ । ಭುಲಲೇ ಯೋಗೀ ಯೇ ಅರ್ಥೀ ।।೯೧೨।।

ತನ್ಮಮಾಖ್ಯಾಹಿ ಗೋವಿಂದ ದುರ್ವಿಭಾವ್ಯಮನಾತ್ಮಭಿಃ । ನಹ್ಯೇತತ್ಪ್ರಾಯಶೋ ಲೋಕೇ ವಿದ್ವಾಂಸಃ ಸಂತಿ ವಂಚಿತಾ : ।।೩೫।।

ಅರ್ಥ:- ಹೇ ಗೋವಿಂದಾ, ಆತ್ಮಜ್ಞಾನರಹಿತ ಜನರು ಈ ವಿಷಯದ ವಿಚಾರವನ್ನೇ ಮಾಡುವುದಿಲ್ಲ. ಈ ವಿಷಯದ ಚಿಂತನೆ ಮಾಡುವವರು ಬಹಳ ಜನರಿರುವುದಿಲ್ಲ. ಕಾರಣ ಸರ್ವ ಜನರು ಚಕ್ರದಲ್ಲಿ ಸಿಲುಕಿಕೊಂಡಿರುವರು. ಆದ ಕಾರಣ ನೀವೇ ನನಗೆ ಈ ವಿಷಯದಲ್ಲಿನ ರಹಸ್ಯವನ್ನು ತಿಳಿಸಿರಿ.

ಅಭಿನವ ಹೇ ತುಝೀ ಗತೀ । ಸರ್ವಥಾ ನ ಕಳೇ ಶ್ರೀಪತೀ । ಮಾಯಾಮೋಹಿತ ಜೇ ಚಿತ್ತೀ । ತ್ಯಾ ತುಝೀ ಸ್ಥಿತೀ ನೇಣವೇ ।।೯೧೩।। ತೂ ಆತ್ಮಾ ಅದ್ವಿತೀಯ ಅವಿನಾಶ । ತೇಥ ಉತ್ಪತ್ತಿ ಸ್ಥಿತೀ ವಿನಾಶ । ನಾಥಿಲಾ ದಾವಿಸೀ ಭವಭಾಸ । ಹಾ ಅತರ್ಕ್ಯ ವಿಲಾಸ ತರ್ಕೇನಾ ।।೯೧೪।।

ಆದರೆ ಅದರ ಗೌಣವಾದ ನಾಮವು ಅಜ್ಞಾನ ಎಂದಾಗಿದೆ. ಇದರ ಹೊರತಾಗಿ ನೋಡಿದರೆ, ದೇಹದ ಅಭಿಮಾನವೆಂಬುವುದೇ ಮುಖ್ಯವಾಗಿರುವುದು. ಈ ಯಾವ ಶ್ರೀಕೃಷ್ಣನ ವಿಚಾರವನ್ನು ಕೇಳಿ ಉದ್ಧವನು ಮನದಲ್ಲಿ ದಚಕಿದನು ।।೯೦೬।। ಆಗ ಉದ್ಧವನು ಈ ವಿಷಯವನ್ನು ಕುರಿತು ದೇವನಿಗೆ ಪ್ರಶ್ನೆಯನ್ನು ಹೀಗೆ ಮಾಡಿದನು. ಯಾವ ಈ ದೇಹಾಭಿಮಾನವು ಯಾವ ಪ್ರಕಾರವಾಗಿ ಜನ್ಮ ಮರಣಗಳನ್ನು ಭೋಗಿಸಲು ಹಚ್ಚುವುದು? ।।೯೦೭।।

ಆಕಾಶವು ಯಾವಾಗಲೂ ನಮ್ಮ ಎದುರಿನಲ್ಲಿಯೇ ಇರುವುದು. ಅದು ಎಂದಿಗೂ ವಿಮುಖವಾಗುವುದಿಲ್ಲ. ಅದರಂತೆ ಆತ್ಮವು ಒಳಹೊರಗೆ ಪರಿಪೂರ್ಣ ರೂಪದಿಂದ ತುಂಬಿಕೊಂಡಿರುವುದು. ಅಂದಮೇಲೆ ಅದರಿಂದ ವೃತ್ತಿಯು ವಿಮುಖ ಹೇಗಾಗುವುದು? ।।೯೦೮।। ಒಂದು ವೇಳೆ ಆಕಾಶವನ್ನು ಬಲೆಯಲ್ಲಿ ಬಂಧಿಸಲು ಬರುತ್ತಿದ್ದರೆ, ಆಗ ಅಕರ್ತನಿಗೆ ಕರ್ಮದ ಬಂಧನವು ಬಡೆಯಬಹುದು. ಬಂಜೆ ಸ್ತ್ರೀಯಳಿಗೆ ಗರ್ಭಪತನವಾದರೆ ಮಾತ್ರ ಮುಕ್ತನಿಗೆ ಜನ್ಮಮರಣಗಳು ಲಭಿಸಬಹುದು ।।೯೦೯।। ಆತ್ಮದ ಹೊರತಾಗಿ ಒಂದು ಅಣುವಿನಷ್ಟೂ ಕೂಡ ಸ್ಥಳವು ಖಾಲಿ ಇಲ್ಲದಿರುವಾಗ ಈ ದೇಹದಿಂದ ಆ ದೇಹಕ್ಕೆ ಹೋಗುವಿಕೆಯು ಹೇಗೆ ಸಾಧಿಸುವುದು ? ।।೯೧೦।। ಪೃಥ್ವಿಯು ಮುನಿಸಿಕೊಂಡು ಎಲ್ಲರಿಗೂ ಆಶ್ರಯವನ್ನು ಕೊಡುವುದು ನಿಲ್ಲಿಸಿಬಿಟ್ಟರೆ ಅಥವಾ ಆಕಾಶವು ಓಡಿಹೋಗಿ ದೂರ ಕುಳಿತುಕೊಂಡರೆ ಆಗ ಮಾತ್ರ ಆತ್ಮಕ್ಕೆ ಒಂದರಿಂದೊಂದು ದೇಹದಲ್ಲಿ ಪ್ರವೇಶಿಸಿ ಜನ್ಮಮರಣಗಳು ಪ್ರಾಪ್ತವಾಗಬಹುದು ।।೯೧೧।। ಇರುವೆಯು ಏಳು ಸಮುದ್ರಗಳ ನೀರನ್ನು ಕುಡಿದುಬಿಟ್ಟರೆ ಆಗ ಮಾತ್ರ ಆತ್ಮಕ್ಕೆ ಉಚ್ಚ ನೀಚ ಅವಸ್ಥೆಗಳನ್ನು ಭೋಗಿಸಬೇಕಾಗಬಹುದು. ನಿಜವಾಗಿಯೂ ಈ ಅವಸ್ಥೆಯು ಅತರ್ಕ್ಯವಾಗಿದೆ. ಇದರ ಸೂಕ್ಷ್ಮ ವಿಚಾರ ಮಾಡುತ್ತ ಯೋಗಿಗಳೂ ಕೂಡ ಭ್ರಮದಲ್ಲಿ ಬಿದ್ದಿರುವರು ।।೯೧೨।।

ಹೇ ಶ್ರೀಕೃಷ್ಣನೇ, ನಿನ್ನ ಲೀಲೆಯು ಅಲೌಕಿಕವಾಗಿರುವುದು. ನಿನ್ನ ಸ್ಥಿತಿಗತಿಗಳನ್ನು ಸರ್ವಥಾ ತಿಳಿಯಲು ಸಾಧ್ಯವಿರುವುದಿಲ್ಲ. ಯಾರನ್ನು ಮಾಯೆಯು ಬದ್ಧವನ್ನಾಗಿ ಮಾಡಿದೆಯೋ, ಅವರಿಗೆ ನಿನ್ನ ಸ್ವರೂಪವು ತಿಳಿಯಲು ಸಾಧ್ಯವಾಗುವುದಿಲ್ಲ ।।೯೧೩।। ಆತ್ಮವು ಅವಿನಾಶೀ. ಅದ್ವಿತೀಯವಾಗಿರುವುದು. ನೀನು ಅದರಲ್ಲಿ ಉತ್ಪತ್ತೀ, ಸ್ಥಿತೀ ಮತ್ತು ಲಯಗಳನ್ನು ತೋರಿಸುತ್ತಿರುವೆ. ಮಿಥ್ಯೆಯಾಗಿರುವ ಸಂಸಾರದ ಭಾಸವನ್ನು ನೀನೇ ನಿರ್ಮಾಣಗೊಳಿಸುವೆ. ಈ ನಿನ್ನ ಲೀಲೆಯು ಅತರ್ಕ್ಯವಾಗಿದೆ. ಈ ವಿಷಯಕ್ಕೆ ಯಾವ ತರ್ಕವೂ ನಡೆಯುವುದಿಲ್ಲ ।।೯೧೪।।

ಯೇಥ ದೇವಾಚೀ ಯುಕ್ತೀ ಶೇಲೀ । ಉಪನಿಷದೇ ವೇಡಾವಲೀ । ಪುರಾಣೇ ಮುಕೀ ಝಾಲೀ । ಅತಿಯತ್ನೇ ಲಕ್ಷಿಲೀ ನ ವಚೇಚಿ ಯೋಗೀ ।೪೧೫॥ ತುಝೀ ಕೇವಳ ಕೃಪೇವಿಣ । ತುಝೀ ಇತ್ಥಂಭೂತ ನವ್ಹೇ ಜ್ಞಾನ । ಐಸೇ ಜಡ ಮೂಢ ಹರಿಕೃಪಾಹೀನ । ತ್ಯಾಂಸೀ ಭವಬಂಧನ ತುಟೇನಾ ।೪೧೬॥ ತುಝೀ ಯೋಗಮಾಯೇಚೀ ಅತರ್ಕ್ಯತಾ । ಬ್ರಹ್ಮಾ ಭುಲವಿಲಾ ವತ್ಸೇನೇತಾ । ಶಿವೂ ಭುಲವಿಲಾ ಮೋಹಿನೀ ದೇಖತಾ । ಇತರಾಂಚಿ ಕಥಾ ತೇ ಕೋಣ ।೪೧೭॥ ಪ್ರಪಂಚೀ ಅಥವಾ ಪರಮಾರ್ಥೀ । ತುಝೇನಿ ಚಾಲತೀ ಇಂದ್ರಿಯವೃತ್ತೀ । ಯಾಲಾಗೀ ಗೋವಿಂದನಾಮಾಚೀ ಖ್ಯಾತೀ । ತ್ರಿಜಗತೀ ವಾಖಾಣಿಲೀ ।೪೧೮॥ ಸಾದರ ಕೃಪಾಪೂರ್ವಕ ಆಪಣ । ಮಾಝಾ ಸಾಂಗಾವಾ ಅತರ್ಕ್ಯ ಪ್ರಶ್ನ । ದೇಹೀ ದೇಹಾಂತರಾ ಸಂಚರಣ । ಜೀವಾಸ ಜನ್ಮ ಮರಣ ತೇ ಕೈಸೇ ।೪೧೯॥ ಐಕೋನಿ ಉದ್ಧವಾಚಾ ಪ್ರಶ್ನ । ಹಾಂಸಿನ್ನಲಾ ಮಧುಸೂದನ । ಹೇ ಅವಘೇ ಮಾಯಿಕ ಜಾಣ । ಕಲ್ಪನಾವಿಂದಾನ ಮನೋಮಯ ।೪೨೦॥

ಶ್ರೀಭಗವಾನುವಾಚ :-

ಮನಃ ಕರ್ಮಮಯಂ ನೃಣಾಮಿಂದ್ರಿಯೈಃ ಪಂಚಭಿರ್ಯುತಮ್ ।
ಲೋಕಾಲ್ಲೋಕಂ ಪ್ರಯಾತ್ಯನ್ಯ ಆತ್ಮಾ ತದನುವರ್ತತೇ ।೩೬॥

ಅರ್ಥ:-ಶ್ರೀಕೃಷ್ಣನುಹೇಳಿದನು ; ಪ್ರಿಯ ಉದ್ಧವನೇ, ಮಾನವನ ಮನವು ಕರ್ಮಸಂಸ್ಕಾರದ ರಾಶಿಯಾಗಿದೆ. ಆ ಸಂಸ್ಕಾರದ ಅನುಸಾರವಾಗಿ ಭೋಗ ಪ್ರಾಪ್ತ ಮಾಡಿಕೊಳ್ಳುವುದಕ್ಕೆ ಆದರ ಐದು ಇಂದ್ರಿಯಗಳು ಕಾರ್ಯಗತವಾಗುವುವು. ಇದಕ್ಕೆ ಲಿಂಗಶರೀರವೆಂದು ಹೇಳುವರು. ಇದು ಕರ್ಮಾನುಸಾರವಾಗಿ ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೋಗುವುದು, ಬರುವುದು ಮಾಡುವುದು. ಆತ್ಮವು ಈ ಲಿಂಗ ಶರೀರದಿಂದ ಭಿನ್ನವಾಗಿರುವುದು. ಆತ್ಮನು ಬರುವುದೂ ಇಲ್ಲ, ಹೋಗುವುದೂ ಇಲ್ಲ. ಆದರೂ ಕೂಡ ಅದು ಮನದ ಜೊತೆಯಲ್ಲಿ ಹೋಗುವುದು ಬರುವುದು ಮಾಡಿದಂತೆ ತೋರುವುದು.

ಅಕರಾ ಇಂದ್ರಿಯೇ ಪಂಚ ಮಹಾಭೂತೇ । ಹೇ ಸೋಳಾ ಕಳಾಂಚೇ ಲಿಂಗದೇಹ ಯೇಥೇ । ಮುಖ್ಯತ್ವೇ ಪ್ರಾಧಾನ್ಯ ಮನಾಚೇ ತೇಥೇ । ನಾನಾ ವಿಷಯಾಂತೇ ಕಲ್ಪಕ ।೪೨೧॥ ಯೇಥ ಲಿಂಗದೇಹ ತೇಚಿ ಮನ । ಮನಾ ಆಧೀನ ಇಂದ್ರಿಯೇ ಜಾಣ । ಮನಾಚೇನಿ ದೇಹಾಸೀ ಗಮನ । ತೇಥ ದೇಹಾಭಿಮಾನ ಮನಾಸವೇ ।೪೨೨॥ ಮನ ಜ್ಯಾತೇ ಸೋಡೂನಿ ಜಾಯೇ । ತೇಥ ಅಭಿಮಾನ ಉಭಾ ನ ರಾಹೇ । ಮನೋಯೋಗೇ ಅಭಿಮಾನ ಪಾಹೇ । ದೇಹಾಚಾ ವಾಹೇ ಖಟಾಟೋಪ ।೪೨೩॥ ಜೇಥ ವಿಷಯಾಸಕ್ತ ಮನ । ಕರೀ ಶುಭಾಶುಭ ಕರ್ಮಾಚರಣ । ತೇವ್ಹಾ ಹೋಊನಿ ಕರ್ಮಾಧೀನ । ದೇಹೀ ಕರೀ ಗಮನ ದೇಹಾಂತರಾ ।೪೨೪॥

ಇದಕ್ಕಾಗಿ ವೇದಗಳ ಮತಿಯು ಕುಂಠಿತವಾಯಿತು. ಉಪನಿಷತ್‌ಗಳು ಹುಚ್ಚಾದವು. ಪುರಾಣಗಳು ಮೂಕಾದವು. ಇವು ಎಲ್ಲವೂ ಬಹಳ ಪ್ರಯತ್ನಪಟ್ಟರೂ ಕೂಡ ನಿನ್ನ ಶೋಧವಾಗಲಿಲ್ಲ ।೪೧೫॥ ನಿನ್ನ ಕೃಪೆ ಇಲ್ಲದೇ ನಿನ್ನ ಜ್ಞಾನವು ಯಾರಿಗೂ ಪ್ರಾಪ್ತವಾಗಲು ಶಕ್ಯವಿಲ್ಲ. ಆದ್ದರಿಂದ ಹರಿಕೃಪೆಯಾಗದ ಜಡ, ಮೂಢರಿಗೆ ಭವಬಂಧವು ಎಂದಿಗೂ ಬಿಡುಗಡೆಯಾಗಲು ಸಾಧ್ಯವಿಲ್ಲ ।೪೧೬॥ ನಿನ್ನ ಯೋಗ ಮಾಯೆಯು ಅತರ್ಕ್ಯವಾಗಿದೆ. ಅದು ಬ್ರಹ್ಮದೇವನಿಗೂ ಆಕಳು, ಕರುಗಳನ್ನು ಕದ್ದು ಒಯ್ಯುವಾಗ ಭುಲಾಯಿಸಿರುವುದು. ಶಿವನಿಗೂ ಕೂಡ ಮೋಹಿನಿಯನ್ನು ಕಾಣುತ್ತಲೇ ಮೋಹ ಉಂಟಾಯಿತು. ಅಂದ ಮೇಲೆ ಇತರರ ಯಾವ ಕಥೆ? ।೪೧೭॥ ಪ್ರಪಂಚದಲ್ಲಿ ಅಥವಾ ಪರಮಾರ್ಥದಲ್ಲಿ ನಿನ್ನಿಂದಲೇ ಇಂದ್ರಿಯಗಳ ವೃತ್ತಿ ಪ್ರವೃತ್ತವಾಗುವುವು. ಆದ್ದರಿಂದ ಗೋವಿಂದನ ನಾಮವು ತ್ರೈಲೋಕ್ಯದಲ್ಲಿ ಗುಣಗಾನವಾಗುತ್ತಿರುವುದು ।೪೧೮॥ ಆದ್ದರಿಂದ ತಾವು ನನ್ನ ಮೇಲೆ ಕೃಪೆದೋರಿ ನನ್ನ ಪ್ರಶ್ನೆಯ ಉತ್ತರವನ್ನು ಹೇಳಿರಿ. ಒಂದು ದೇಹದಿಂದ ಜೀವವು ಇನ್ನೊಂದು ದೇಹಕ್ಕೆ ಹೇಗೆ ಹೋಗುವುದು? ಮತ್ತು ಜೀವಕ್ಕೆ ಜನ್ಮ ಮರಣಗಳು ಹೇಗೆ ಉಂಟಾಗುವುವು? ।೪೧೯॥ ಈ ಯಾವ ಉದ್ಧವನ ಪ್ರಶ್ನೆಯನ್ನು ಕೇಳಿ ಶ್ರೀಕೃಷ್ಣನಿಗೆ ನಗು ಬಂದಿತು. ಇದೆಲ್ಲವೂ ಮಾಯಿಕ ಕಲ್ಪನೆಯಿಂದ ನಿರ್ಮಿಸಲ್ಪಟ್ಟಿರುವುದು. ಕೇವಲ ಮನೋಮಯವಾಗಿದೆ ಎಂದು ಹೇಳಿದನು ।೪೨೦॥

ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಹಾಗೂ ಮನಸ್ಸು ಕೂಡಿ ಹನ್ನೊಂದು ಇಂದ್ರಿಯಗಳು ಮತ್ತು ಪೃಥ್ವೀ ಆಪ, ತೇಜ, ವಾಯು ಹಾಗೂ ಆಕಾಶ ಇವು ಪಂಚ ಮಹಾಭೂತಗಳು. ಹೀಗೆ ಇವು ಹದಿನಾರು ಕಲೆಗಳು ಕೂಡಿ ಲಿಂಗದೇಹವಾಗಿರುವುದು. ಇದರಲ್ಲಿ ಅನೇಕ ವಿಷಯಗಳ ಕಲ್ಪನೆಗಳನ್ನು ಮಾಡುವ ಮನಸ್ಸಿನ ಪ್ರಾಬಲ್ಯವು ಅಧಿಕವಾಗಿರುವುದು ।೪೨೧॥ ಹೀಗೆ ಇರುವ ಯಾವ ಲಿಂಗದೇಹವೇ ಮನಸ್ಸಾಗಿರುವುದು. ಸರ್ವ ಇಂದ್ರಿಯಗಳು ಈ ಮನಸ್ಸಿನ ಆಧೀನವಾಗಿರುವುವು. ಮನಸ್ಸಿನಿಂದಲೇ ದೇಹಕ್ಕೆ ಗತಿಯು ಪ್ರಾಪ್ತವಾಗುವುದು. ದೇಹದ ಅಭಿಮಾನವು ಕೂಡ ಮನಸ್ಸಿನ ಜೊತೆಯಲ್ಲಿಯೇ ಇರುವುದು ।೪೨೨॥ ಮನಸ್ಸು ಯಾರನ್ನು ಬಿಟ್ಟು ಹೋಗುವುದೋ, ಅಲ್ಲಿ ದೇಹದ ಅಭಿಮಾನವು ಉಳಿಯುವುದೇ ಇಲ್ಲ. ಮನಸ್ಸಿನ ಯೋಗದಿಂದ ಅಭಿಮಾನವು ದೇಹದ ಕಾಮಗಾರಿಗಳನ್ನು ಹೊರುತ್ತಿರುವುದು ।೪೨೩॥ ಮನಸ್ಸು ವಿಷಯಾಸಕ್ತವಾದ ಸಮಯದಲ್ಲಿ ಅಭಿಮಾನವು ಶುಭ, ಅಶುಭ ಕಾರ್ಯಗಳನ್ನು ಮಾಡುವುದು. ಆದ್ದರಿಂದ ದೇಹವು ಕರ್ಮಗಳ ಆಧೀನವಾಗುವುದು. ಹಾಗೆಯೇ ಬೇರೆ ದೇಹಕ್ಕೆ ಪ್ರಾಪ್ತವಾಗುವದು ।೪೨೪॥

ಆತ್ಮಾ ಯಾಸೀ ಅಲಿಪ್ತ ಭಿನ್ನ। ಪರೀ ದೇಹಾಸವೇ ದಾವೀ ಗಮನ । ಹೇ ಅತಿಅತರ್ಕ್ಯ ವಿಂದಾನ । ಐಕ ಲಕ್ಷಣ ತಯಾಚೇ ॥೪೨೫॥ ಘಟ ಜೇಥ ಜೇಥ ಹಿಂಡೋಬೈಸೇ । ಆಕಾಶ ತ್ಯಾಸವೇ ಜಾತ ದಿಸೇ । ಪರೀ ಢಳಣೇ ನಾಹೀ ಆಕಾಶೇ । ಆತ್ಮ್ಯಾಚೇ ತೈಸೇ ಗಮನ ಯೇಥೇ ॥೪೨೬॥ ಘಟಾಮಾಜೀ ಭರಿಜೇ ಅಮೃತ । ಅಥವಾ ಘಾಲಿಜೇ ಖಾತಮೂತ । ಆಕಾಶ ದೋಹೀಂಸೀ ಅಲಿಪ್ತ । ತೇವೀ ಸುಖದುಃಖಾತೀತ ದೇಹಸ್ಥ ಆತ್ಮಾ ॥೪೨೭॥ ಘಟಘಾಯೇ ಕೀಜೇ ಶತಚೂರ । ಪರೀ ಆಕಾಶೀ ನ ರಿಘೇ ಚೀರ । ತೇವೀ ನಶ್ವರೀ ಅನಶ್ವರ । ಜಾಣ ಸಾಚಾರ ನಿಜಾತ್ಮಾ ॥೪೨೮॥ ಘಟ ಫುಟೋನಿ ಜೇಥ ನಾಶೇ । ತೇಥ ಆಕಾತ ಆಕಾಶೀ ಸಹಜ ಅಸೇ । ನವಾ ಘಟ ಜೇಥ ಉಪಜೋ ಬೈಸೇ । ತೋ ತೇಥ ಆಕಾಶೇ ವ್ಯಾಪಿಜೇ ॥೪೨೯॥ ತೇವೀ ದೇಹಾಚೇ ನಶ್ವರಪಣ । ಆತ್ಮಾ ಅಖಂಡತ್ವೇ ಪರಿಪೂರ್ಣ । ಆತ್ಮ್ಯಾಸೀ ದೇಹಾಂತರಗಮನ । ಜನ್ಮ ಮರಣ ಅಸೇನಾ ॥೪೩೦॥ ದೇಹೀಂಚೇ ದೇಹಾಂತರಗಮನ । ವಾಸನಾಯೋಗೇ ಕರೀ ಮನ । ತೇ ಮನೋಗಮನಾಚೇ ಲಕ್ಷಣ । ಐಕ ಸಂಪೂರ್ಣ ಸಾಂಗೇನ ॥೪೩೧॥

ಧ್ಯಾಯನ್ಮನೋಽನುವಿಷಯಾನ್ ದೃಷ್ಟಾನ್ವಾಽನುಶ್ರುತಾನಥ । ಉದ್ಯತ್ಸೀದತ್ ಕರ್ಮತಂತ್ರಂ ಸ್ಮೃತಿಸ್ತದನುಶಾಮ್ಯತಿ ॥೩೮॥

ಅರ್ಥ:- ಮನವು ಕರ್ಮದ ಆಧೀನವಾಗಿರುವುದು. ಅದು ನೋಡಿದ, ಕೇಳಿದ ವಿಷಯಗಳ ಚಿಂತನೆಯನ್ನು ಮಾಡುತ್ತಿರುವುದು ಮತ್ತು ಅದರೊಂದಿಗೆ ಪ್ರತ್ಯಕ್ಷವಾಗಿ ಏಕರೂಪವಾಗುವುದು ಹಾಗೆಯೇ ಪೂರ್ವದಲ್ಲಿ ಚಿಂತಿಸಿದ ವಿಷಯಗಳಲ್ಲಿ ಲೀನವಾಗುವುದು. ತದನಂತರ ಅದರ ಸ್ಮೃತಿಯು ಅಂದರೆ ಪೂರ್ವಾಪರ ಅನುಸಂಧಾನವು ನಾಶ ಹೊಂದುವುದು.

ಶ್ರುತದೃಷ್ಟ ವಿಷಯಾಂಚೇ ಧ್ಯಾನ । ನಿರಂತರ ವಾಢವೀ ಮನ । ತೀವ್ರ ಧಾರಣ ದಾರುಣ । ಅನ್ಯ ಸ್ಫುರಣ ಸ್ಫುರೇನಾ ॥೪೩೨॥ ಆವಡತ್ಯಾ ವಿಷಯಾಂಚೇ ಧ್ಯಾನ । ಅಂತಕಾಲೀ ಠಸಾವೇ ಜಾಣ । ತೇವ್ಹಾ ತದಾಕಾರ ಹೋಯ ಮನ । ಸರ್ವಭಾವೇ ಆಪಣ ತನ್ನಿಷ್ಠಾ ॥೪೩೩॥ ತೇವ್ಹಾ ಭೋಗಕ್ಷಯೇ ಜಾಣ । ಮಾಗಲ್ಯಾ ದೇಹಾಚಾ ಅಭಿಮಾನ । ಸಹಜೇಚಿ ವಿಸರೇ ಮನ । ಪುಢೀಲ ಧ್ಯಾನ ಏಕಾಗ್ರತಾ ॥೪೩೪॥ ವಿಷಯವಾಸನಾರೂಢ ಮನ । ನಿಜಕರ್ಮತಂತ್ರೇ ಜಾಣ । ದೇಹಾಂತರೀ ಕರೀ ಗಮನ । ತೇಥ ಸಪ್ರಾಣ ಸಂಚರೇ ॥೪೩೫॥ ಮಾಗೀಲ ಸಾಂಡಿಲ್ಯಾ ದೇಹಾತೇ । ಸರ್ವಥಾ ಸ್ಮರೇನಾ ಚಿತ್ತೇ । ಪುಢೇ ಧರಿಲೇ ಆಣಿಕಾತೇ । ಹೇಹೀ ಮನಾತೇ ಸ್ಮರೇನಾ ॥೪೩೬॥

ಆತ್ಮವು ಇದರಿಂದ ಅತ್ಯಂತ ಅಲಿಪ್ತವಾಗಿರುವುದು. ಆತನು ಭಿನ್ನನಾಗಿದ್ದರೂ ಕೂಡ ದೇಹದ ಜೊತೆಯಲ್ಲಿ ಹೋಗಿ ಬರುವಂತೆ ಕಾಣಿಸುತ್ತಿರುವನು. ಈ ಯಾವ ಇದರ ಕೌಶಲ್ಯವು ಅದ್ಭುತವಾಗಿರುವುದು. ಈಗ ಅದರ ಸ್ಪಷ್ಟೀಕರಣೆಯನ್ನು ಮಾಡುವೆನು ॥೪೨೫॥ ಮಣ್ಣಿನ ಮಡಿಕೆಯನ್ನು ಎಲ್ಲಿ ಇಡುವೆವೋ ಅಲ್ಲಿ ಅದರ ಜೊತೆಯಲ್ಲಿ ಘಟಾಕಾಶವು ಹೋಗುತ್ತಿರುವುದು. ಆದರೆ ನಿಜವಾಗಿ ನೋಡಿದರೆ ಆಕಾಶವು ತನ್ನ ಸ್ಥಾನವನ್ನು ಬಿಟ್ಟು ಎಲ್ಲಿಯೂ ಕದಲಿರುವುದಿಲ್ಲ. ಅದರಂತೆ ಈ ಆತ್ಮನ ಹೋಗಬರುವಿಕೆಯಾಗಿರುವುದು ॥೪೨೬॥ ಆ ಮಡಿಕೆಯಲ್ಲಿ ಅಮೃತವು ತುಂಬಿರಲಿ ಅಥವಾ ಹೊಲಸಾದ ಪದಾರ್ಥಗಳಿರಲಿ, ಈ ಎರಡರಿಂದಲೂ ಆಕಾಶವು ಅಲಿಪ್ತವಾಗಿಯೇ ಇರುವುದು. ಅದರಂತೆ ದೇಹದಲ್ಲಿರುವ ಆತ್ಮನು ಸುಖದುಃಖಗಳಿಂದ ಅಲಿಪ್ತನಾಗಿರುವನು ॥೪೨೭॥ ಮಡಿಕೆಯನ್ನು ಹೊಡೆದು ನೂರು ಚೂರುಗಳನ್ನಾಗಿ ಮಾಡಿದರೂ ಇದರಿಂದ ಆಕಾಶಕ್ಕೆ ಯಾವ ಹೊಡೆತವೂ ಬೀಳುವುದಿಲ್ಲ. ತೂತು ಬೀಳುವದಿಲ್ಲ. ಅದರಂತೆ ನಾಶಿವಂತ ದೇಹದಲ್ಲಿ ಅವಿನಾಶಿಯಾದ ಆತ್ಮನಿರುವನು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೪೨೮॥ ಮಡಿಕೆಯು ಒಡೆದು ಅದರ ನಾಶವಾದರೂ ಅದರಲ್ಲಿನ ಆಕಾಶವು ಆಕಾಶದಲ್ಲಿ ಸ್ಥಿರವಾಗಿಯೇ ಇರುವುದು. ಪುನಃ ಹೊಸ ಮಡಿಕೆಯು ನಿರ್ಮಾಣವಾಗಲು ಆಗ ಅದನ್ನು ವ್ಯಾಪಿಸಿಕೊಳ್ಳುವುದು ॥೪೨೯॥ ಅದರಂತೆ ಈ ದೇಹವು ನಶ್ವರವಾಗಿರುವುದು. ಆತ್ಮವು ಅಖಂಡತ್ವದಿಂದ ಪರಿಪೂರ್ಣನಾಗಿರುವುದು. ಆತ್ಮನಿಗೆ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುವುದು ಇರುವುದಿಲ್ಲ. ಜನ್ಮ ಮರಣಗಳೂ ಕೂಡ ಇರುವುದಿಲ್ಲ ॥೪೩೦॥ ಮನಸ್ಸೇ ವಾಸನೆಗಳ ಸಹಾಯದಿಂದ ದೇಹಧಾರೀ ಜೀವಕ್ಕೆ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಒಯ್ಯುತ್ತಿರುತ್ತದೆ. ಈ ಮನಸ್ಸು ಹೇಗೆ ಪ್ರವೇಶವನ್ನು ಮಾಡುವುದು ಎಂಬುವ ಅದರ ಲಕ್ಷಣವನ್ನು ಹೇಳುವೆನು, ಅದಕ್ಕಾಗಿ ಕೇಳು ॥೪೩೧॥

ಯಾವ ಈ ಮನಸ್ಸು ನೋಡಿರುವ, ಕೇಳಿರುವ ವಿಷಯಗಳ ಚಿಂತನೆಯನ್ನು ಸತತವಾಗಿ ಮಾಡುತ್ತಿರುವದು. ಮನಸ್ಸಿನ ಈ ಚಿಂತನೆಯು ಎಷ್ಟು ದೃಢವಾಗಿರುವದೆಂದರೆ ಅದಕ್ಕೆ ಬೇರೆ ಯಾವುದೂ ಲಕ್ಷಕ್ಕೆ ಬರುವದಿಲ್ಲ. ಅನ್ಯ ಮಾತಿನ ಸ್ಫೂರ್ತಿಯಾಗುವದಿಲ್ಲ ॥೪೩೨॥ ಅಂತ್ಯಕಾಲದ ಸಮಯದಲ್ಲಿ ತನಗೆ ಪ್ರಿಯವಾಗಿರುವ ವಿಷಯದ ಧ್ಯಾನವು ಅಂಟಿಕೊಂಡಿರುವದು. ಆಗ ಮನಸ್ಸು ತದಾಕಾರವಾಗುವದು. ಸರ್ವಭಾವದಿಂದ ಅದರಲ್ಲಿ ಕೂಡಿಕೊಂಡುಬಿಡುವದು ॥೪೩೩॥ ಆಗ ಆ ಭೋಗವು ಮುಗಿಯುತ್ತಲೇ ಮನವು ಪೂರ್ವದೇಹದ ಅಭಿಮಾನವನ್ನು ಸಹಜವಾಗಿಯೇ ಮರೆತುಬಿಡುವದು. ಮತ್ತು ಮುಂದಿನ ದೇಹದ ಏಕಾಗ್ರತೆಯಾಗಿ ಅದನ್ನೇ ಧ್ಯಾನಿಸುತ್ತಿರುವದು ॥೪೩೪॥ ಹೀಗೆ ವಿಷಯ ವಾಸನೆಗಳಲ್ಲಿ ಮೋಹಿತವಾದ ಮನಸ್ಸು ತನ್ನ ಕರ್ಮಾನುಸಾರವಾಗಿ ಪ್ರಾಣವನ್ನು ಜೊತೆಯಲ್ಲಿ ಸೇರಿಸಿಕೊಂಡು ಬೇರೆ ದೇಹದಲ್ಲಿ ಸಂಚರಿಸುತ್ತಿರುವದು ॥೪೩೫॥ ಪೂರ್ವದಲ್ಲಿ ಬಿಟ್ಟಿರುವ ದೇಹದ ಯಾವತ್ತೂ ವಿಷಯಗಳನ್ನು ಕುರಿತು ಅದರ ಚಿತ್ತಕ್ಕೆ ಸ್ವಲ್ಪವೂ ಕೂಡ ಸ್ಮರಣೆಯಾಗುವುದಿಲ್ಲ. ಪುನಃ ನಾನೀಗ ಇನ್ನೊಂದು ಬೇರೆ ದೇಹವನ್ನು ಧರಿಸಿರುವೆನು ಎಂಬುವುದನ್ನೂ ಕೂಡ ಈ ಮನಸ್ಸಿಗೆ ನೆನಪಾಗುವುದಿಲ್ಲ ॥೪೩೬॥

ವಿಷಯಾಭಿನಿವೇಶೇನ ನಾತ್ಮಾನಂ ಯತ್ಸ್ಮರೇತ್ ಪುನಃ ।
ಜಂತೋರ್ವೈ ಕಸ್ಯಚಿದ್ಧೇರ್ಮೃತ್ಯುರತ್ಯಂತವಿಸ್ಮೃತೀ ।।೩೮।।
ಜನ್ಮ ತ್ವಾತ್ಮತಯಾ ಪುಂಸಃ ಸರ್ವಭಾವೇನ ಭೂರಿದ ।
ವಿಷಯಸ್ವೀಕೃತಿಂ ಪ್ರಾಹುರ್ಯಥಾ ಸ್ವಪ್ನಮನೋರಥಃ ।।೩೯।।

ಅರ್ಥ:- ಭೋಗ್ಯ ವಿಷಯಗಳ ಅಭಿಮಾನವು ಇರುವುದರಿಂದ ಮತ್ತು ಇತರ ಕಾರಣಗಳಿಂದ ಅದಕ್ಕೆ ಪೂರ್ವದೇಹದ ಸ್ಮರಣೆಯಾಗುವುದಿಲ್ಲ. ಈ ಯಾವ ಅತ್ಯಂತ ವಿಸ್ಮೃತಿಯೇ ಮೃತ್ಯುವಾಗಿರುವುದು. ಉದಾರ ಉದ್ಧವನೇ, ಕೇವಲ ತಾದಾತ್ಮ್ಯ ಭಾವದಿಂದ ತನ್ನ ಸ್ವರೂಪ ವಿಷಯಗಳ ಸ್ವೀಕಾರ (ದೇಹದ ಸ್ವೀಕಾರ) ಮಾಡುವಿಕೆಯು ಇದು ಜೀವದ ಜನ್ಮವಾಗಿರುವುದು. ಹೀಗೆ ಜ್ಞಾನಿಗಳು ಹೇಳುವರು. ಅರ್ಥಾತ್ ಸ್ವಪ್ನ ಮತ್ತು ಅದರಲ್ಲಿನ ಮನೋರಥ ಹೇಗೆ ಕಾಲ್ಪನಿಕವೋ ಅದರಂತೆ ಜೀವಕ್ಕೆ ಈ ಜನ್ಮ ಮೃತ್ಯುಗಳು ಕಾಲ್ಪನಿಕವೇ ಆಗಿರುವುವು.

ವಿಷಯಾಭಿನಿವೇಶೇ ಮನ । ಜ್ಯಾ ಸ್ವರೂಪಾಚೇ ಕರೀ ಧ್ಯಾನ । ತದ್ರೂಪ ಹೋಯ ಆಪಣ । ಪೂರ್ವದೇಹಾಚೇ ಸ್ಮರಣ ವಿಸರೋನಿಯಾ ।।೪೩೭।। ತೇಚಿ ವಿಸ್ಮರಣ ಕೈಸೇ । ನಿಜಬಾಲತ್ವ ಪ್ರೌಢವಯಸೇ । ನಿಃಶೇಖ ನಾಠವೇ ಮಾನಸೇ। ಪೂರ್ವದೇಹ ತೈಸೇ ವಿಸರೋನಿ ಜಾಯ ।।೪೩೮।। ಐಸೇ ಅತ್ಯಂತ ವಿಸ್ಮರಣ । ತ್ಯಾ ನಾಂವ ದೇಹಾಚೇ ಮರಣ । ತ್ಯಾ ವಿಸರಾಸವೇ ಜಾಣ। ಚೇತನಾ ಸಪ್ರಮಾಣ ರಿಘೋನಿ ಜಾಯೇ ।।೪೩೯।। ಜೇವ್ಹಾ ಚೇತನಾ ಜಾಯ ಸಪ್ರಾಣ । ತೇವ್ಹಾ ದೇಹಾಸೀ ಯೇ ಪ್ರೇತಪಣ । ತ್ಯಾ ನಾಂವ ಉದ್ಧವಾ ಮರಣ । ಜನ್ಮ ಕಥನ ತೇ ಐಕ ।।೪೪೦।। ಸ್ನೇಹೇ ದ್ವೇಷೇ ಅಥವಾ ಭಯೇ । ಅಂತಕಾಳೀ ಜೇ ಧ್ಯಾನ ರಾಹೇ । ಪುರುಷ ತದ್ರೂಪಚಿ ಹೋಯೇ । ಜನ್ಮ ಹೀ ಲಾಹೇ ತೈಸೇಚಿ ।।೪೪೧।। ಭರತ ಕರಿತಾ ಅನುಷ್ಠಾನ । ಅಂತೀ ಲಾಗಲೇ ಮೃಗಾಚೇ ಧ್ಯಾನ । ತೋ ಮೃಗಚಿ ಝಾಲಾ ಆಪಣ । ಧ್ಯಾನಾನುರೂಪೇ ಮನ ಜನ್ಮ ಪಾವೇ ।।೪೪೨।। ಭಯಾಸ್ತವ ಭೃಂಗಾಚೇ ಧ್ಯಾನ । ಕೀಟಕೀ ಕರಿತಾ ಜಾಣ । ತೇ ತದ್ರೂಪ ಹೋಯ ಆಪಣ । ಧ್ಯಾನಾನುರೂಪೇ ಮನ ಜನ್ಮ ಪಾವೇ ।।೪೪೩।। ದ್ವೇಷೇ ಧ್ಯಾತಾ ಶ್ರೀಕೃಷ್ಣಾಸೀ । ತದ್ರೂಪತಾ ಝಾಲೀ ಪೌಂಡ್ರಕಾಸೀ । ಜೈಸೇ ದೃಢ ಧ್ಯಾನ ಮಾನಸೀ । ತೇ ಗತಿ ಪುರುಷಾಸೀ ತ್ರಿಶುದ್ಧೀ ।।೪೪೪।। ವಾಢವೂನಿಯಾ ಸಂಭ್ರಮ। ಅಂತಕಾಳೀ ಆವಡೇ ಸಪ್ರೇಮ । ಜೇಥೇ ಧ್ಯಾನ ಠಸಾವೇ ಮನೋರಮ । ತೇಚಿ ಜನ್ಮ ಪುರುಷಾಸೀ ।।೪೪೫।। ಮಗ ತೇಣೇ ಧ್ಯಾನಾನುಭವೇ । ಜೈಸಾ ಕಾಂಹೀ ಆಕಾರೂ ಸಂಭವೇ । ತೇಥ ದೇಹಾಭಿಮಾನ ಪಾವೇ । ''ಹೇ ಮೀ ಆಘವೇ'' ಮ್ಹಣೋನಿ ।।೪೪೬।। ಯೇಥ ಮನ ಆಣಿ ಅಭಿಮಾನ । ಸ್ವರೂಪ ಏಕ ಕಾರ್ಯೇ ಭಿನ್ನ । ಹೇ ಚಿತ್ತ ಚತುಷ್ಟಯಲಕ್ಷಣ । ಜಾಣತೀ ಸಜ್ಞಾನ ಏಕಾತ್ಮತಾ ।।೪೪೭।।

ವಿಷಯಗಳಿಂದ ಮೋಹಿತಗೊಂಡಿರುವ ಮನಸ್ಸು ವಿಷಯಗಳ ಚಿಂತನೆಯನ್ನೇ ಮಾಡುತ್ತಿರುವುದು. ಅದು ಪೂರ್ವ ದೇಹವನ್ನು ಮರೆತು ಈಗ ಇರುವ ದೇಹದ ತದ್ರೂಪವಾಗಿರುವುದು ।।೪೩೭।। ಇದು ಹೇಗೆ ಮರೆಯುವುದೆಂಬುದನ್ನು ಈಗ ಕೇಳು. ನಾವು ಪ್ರೌಢ ಅವಸ್ಥೆಗೆ ಬಂದಾಗ ನಮ್ಮ ಬಾಲ್ಯಾವಸ್ಥೆಯು ನಮಗೆ ನೆನಪಾಗುವುದಿಲ್ಲ. ಅದರಂತೆಯೇ ಈ ಮನಸ್ಸು ಪೂರ್ವ ದೇಹವನ್ನು ಮರೆತುಬಿಡುವುದು ।।೪೩೮।। ಈ ಪ್ರಕಾರದ ಪರಿಪೂರ್ಣವಾದ ವಿಸ್ಮರಣೆಗೆ ದೇಹದ ಮರಣ ಎಂದು ಹೇಳುವರು. ಈ ವಿಸ್ಮರಣೆಯ ಜೊತೆಯಲ್ಲಿ ಚೇತನೆಯು ಪ್ರಾಣಸಮೇತವಾಗಿ ಹೊರಟುಹೋಗುವುದು ।।೪೩೯।। ಯಾವ ಸಮಯದಲ್ಲಿ ಯಾವ ಚೇತನೆಯು ಪ್ರಾಣ ಸಮೇತವಾಗಿ ಹೊರಟು ಹೋಗುವುದೋ, ಆ ಸಮಯದಲ್ಲಿ ಈ ದೇಹಕ್ಕೆ ಪ್ರೇತರೂಪವು ಪ್ರಾಪ್ತವಾಗುವುದು. ಹೇ ಉದ್ಧವಾ, ಇದರ ನಾಮವೇ ಮರಣವಾಗಿರುವುದು. ಈಗ ಜನ್ಮದ ಕಥೆಯನ್ನು ಹೇಳುವೆನು, ಅದನ್ನು ಕೇಳು ।।೪೪೦।। ಮರಣಕಾಲದಲ್ಲಿ ಸ್ನೇಹ, ದ್ವೇಷ, ಭಯದ ಯಾವ ನಿಧಿಧ್ಯಾಸವಿರುವುದೋ, ಅದರಲ್ಲಿಯೇ ಏಕರೂಪವಾಗುತ್ತಿರುವುದು. ಧ್ಯಾನದಂತೆಯೇ ಅದಕ್ಕೆ ಜನ್ಮವು ಸಿಗುವುದು ।।೪೪೧।। ಜಡಭರತನ ಪ್ರೇಮವು ಜಿಗರೆಯ ಮೇಲಿದ್ದು ಅಂತ್ಯಕಾಲದಲ್ಲಿ ಅದರ ಸ್ಮರಣೆಯನ್ನು ಮಾಡಿದ್ದಕ್ಕಾಗಿ ಆತನಿಗೆ ಅದೇ ಜಿಗರೆಯ ಜನ್ಮವು ಪ್ರಾಪ್ತವಾಯಿತು ।।೪೪೨।। ಹುಳವು ಭಯದಿಂದ ಭೃಂಗದ ಸ್ಮರಣೆ ಮಾಡುತ್ತಿರುವುದರಿಂದ ಅದು ಸ್ವತಃ ತದ್ರೂಪವಾಗುವುದು. ಕಾರಣ ನಾವು ಧ್ಯಾನಿಸಿದಂತೆಯೇ ಜನ್ಮವು ದೊರಕುವುದು ।।೪೪೩।। ಪೌಂಡ್ರಕನು ದ್ವೇಷದಿಂದ ಶ್ರೀಕೃಷ್ಣನ ಧ್ಯಾನವನ್ನು ಮಾಡಿದನು. ಆದ್ದರಿಂದ ಆತನಿಗೆ ತದ್ರೂಪವು ಪ್ರಾಪ್ತವಾಯಿತು. ಈ ಕಾರಣವಾಗಿ ಮನಸ್ಸಿಗೆ ಯಾವ ವಿಷಯದ ದೃಢಧ್ಯಾನವು ಹತ್ತುವುದೋ, ಅದೇ ಪ್ರಕಾರದ ಜನ್ಮವು ಅದಕ್ಕೆ ನಿಶ್ಚಿತವಾಗಿ ಲಭಿಸುತ್ತಿರುವುದು ।।೪೪೪।। ಪ್ರಪಂಚದ ಸಂಭ್ರಮವನ್ನು ನಾವು ಅತ್ಯಂತ ಪ್ರೀತಿಯಿಂದ ಬೆಳೆಸಿರುವೆವು. ಆದ್ದರಿಂದ ಅಂತ್ಯಕಾಲದಲ್ಲಿ ಸತತವಾಗಿ ಅದೇ ಸ್ಮರಣೆಯಾಗುತ್ತಿರುವುದು. ಈ ಪದ್ಧತಿಯಿಂದ ಮುಂದಿನ ಜನ್ಮವು ಲಭಿಸುತ್ತಿರುವುದು ।।೪೪೫।। ತದನಂತರ ಯಾವ ಚಿಂತನೆಯ ಸಾಮರ್ಥ್ಯದಿಂದ ಯಾವ ಆಕಾರದ ದೇಹವು ಪ್ರಾಪ್ತವಾಗುವುದೋ, ಅದೇ ದೇಹದ ಅಭಿಮಾನವು ಉತ್ಪನ್ನವಾಗುವುದು. ಆಗ ಇಂದ್ರಿಯ ಸಮೇತವಾಗಿ ಯಾವತ್ತೂ ದೇಹವು ನಾನೇ ಆಗಿರುವೆನು ಎಂದು ಈತನು ತಿಳಿಯುವನು ।।೪೪೬।। ಇಲ್ಲಿ ಮನಸ್ಸು, ಮತ್ತು ಅಭಿಮಾನದ ಸ್ವರೂಪವು ನಿಜವಾಗಿ ಒಂದೇಯಾಗಿರುವುದು. ಆದರೆ ಅವುಗಳ ಕಾರ್ಯ ಮಾತ್ರ ಭಿನ್ನ ಭಿನ್ನವಾಗಿರುವುವು. ಈ ಯಾವ ಚಿತ್ತ ಚತುಷ್ಟಯದ ಸ್ವರೂಪವನ್ನು ಜ್ಞಾನೀ ಪುರುಷರು ಏಕಾಗ್ರತೆಯಿಂದ ತಿಳಿಯುವರು ।।೪೪೭।।

ದೈವಯೋಗೇ ತ್ಯಾ ದೇಹಾಚೇ । ಬರವೇ ವೋಖಟೇ ಘಡೇ ಸಾಚೇ । ತೈ ಅಭಿಮಾನ ಘೇಊನಿ ನಾಚೇ । ಜನ್ಮ ಪುರುಷಾಚೇ ಯಾ ನಾಂವ ॥೪೪೮॥ ಪರೀ ಹೇ ದೇಹ ನವ್ಹೇ ಆನ । ಹೇಹೀ ಸ್ಮರೇನಾ ತೇ ಮನ । ಪೂರ್ವಿಲ ಜೋ ದೇಹಾಭಿಮಾನ । ತೋಚಿ ಯೇಥ ಜಾಣ ಆರೋಪೀ ॥೪೪೯॥ ಯೇಚಿ ಅರ್ಥೀಚಾ ದೃಷ್ಟಾಂತ । ಸ್ವಯೇ ಸಾಂಗತಾಹೇ ಶ್ರೀಕೃಷ್ಣನಾಥ । ಜೇವಿ ಸ್ವಪ್ನ ಆಣಿ ಮನೋರಥ । ವಿಸರವಿತ ನಿಜದೇಹಾ ॥೪೫೦॥ ಸ್ವಗೃಹೀ ದರಿದ್ರೀ ನಿದ್ರಿತ । ತೋ ಸ್ವಪ್ನೀ ಹೋಯ ಅಮರನಾಥ । ಮಗ ಉರ್ವಶೀಪ್ರಮುಖ ಅಪ್ಸರಾಂತ । ಅಸೇ ಮಿರವತ ಐರಾವತೀ ॥೪೫೧॥ ತೇ ದರಿದ್ರದೇಹ ಮಾಝೇ ಗೇಲೇ । ಹೇ ಅಮರದೇಹ ಪ್ರಾಪ್ತ ಝಾಲೇ । ಐಸೇ ಸ್ವಪ್ನೀ ನಾಹೀ ಆಠವಲೇ । ತೈಸೇ ಜನ್ಮ ಝಾಲೇ ಜನಾಸೀ ॥೪೫೨॥ ಮಜೂರ ರಾಉಳೀಚೇ ಘೃತ ನೇತಾ । ತೋ ತುರುಂಗೀ ಚಢೇ ಮನೋರಥಾ । ಮನ ನಾಚೂ ಲಾಗೇ ಉಲ್ಹಾಸತಾ । ಸ್ವಕಲ್ಪಿತಾ ಕಲ್ಪನಾ ॥೪೫೩॥ ಸಬಳ ವಾರೂಚೇ ಉಡ್ಡಾಣ । ಮ್ಹಣೂನಿ ಉಡೂ ಜಾತಾ ಆಪಣ । ಪಡೋನಿ ಘೃತಕುಂಭ ಹೋಯ ಭಗ್ನ । ಪುಸತೀ ಜನ ಕಾಯ ಝಾಲೇ ॥೪೫೪॥ ಬಳೇ ಉಡಾಲಾ ಮಾಝಾ ಘೋಡಾ । ಪರೀ ಸ್ಮರೇನಾ ತೋ ಫುಟಲಾ ಘಡಾ । ಬಂದೀ ಪಡಲಾ ರೋಕಡಾ । ನೇಣೇ ಬಾಪುಡಾ ಮನೋರಥೇ ॥೪೫೫॥ ಯೇಥವರೀ ತೀವ್ರ ಜೇ ವಿಸ್ಮರಣ । ತ್ಯಾ ನಾಂವ ದೇಹಾಚೇ ಮರಣ । ಅತಿ ಉದ್ಧತ ಜೇ ಮನಾಚೇ ಧ್ಯಾನ । ತೇಚಿ ಜನ್ಮ ಪ್ರಾಣ್ಯಾಸೀ ॥೪೫೬॥ ಏವಂ ಆತ್ಮ್ಯಾಸೀ ಜನ್ಮಮರಣ । ತೇ ಕೇವಳ ಭ್ರಮಾಚೇ ಲಕ್ಷಣ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೪೫೭॥

ಸ್ವಪ್ನಂ ಮನೋರಥಂ ಚೇತ್ಥಂ ಪ್ರಾಕ್ತನಂ ನ ಸ್ಮರತ್ಯಸೌ । ತತ್ರ ಪೂರ್ವಮಿವಾತ್ಮನಮಪೂರ್ವಂ ಚಾನುಪಶ್ಯತಿ ॥೯೦॥

ಅರ್ಥ:- ಈ ವರ್ತಮಾನ ದೇಹದಲ್ಲಿ ಸ್ಥಿತವಾಗಿರುವ ಜೀವವು ಪೂರ್ವ ದೇಹದ ಸ್ಮರಣೆ ಮಾಡುವುದಿಲ್ಲ. ಹಾಗೆಯೇ ಸ್ವಪ್ನ ಅಥವಾ ಮನೋರಥಗಳಲ್ಲಿ ಸ್ಥಿತ ಪ್ರಾರಂಭದ ಸ್ವಪ್ನ ಮನೋರಥಗಳ ಸ್ಮರಣೆಯನ್ನು ಮಾಡುವುದಿಲ್ಲ. ಪ್ರಸ್ತುತವಾಗಿರುವ ವರ್ತಮಾನ ಸ್ವಪ್ನ ಮತ್ತು ಮನೋರಥದಲ್ಲಿ ಪೂರ್ವ ಸಿದ್ಧವಾದಾಗ ತನ್ನನ್ನು ಹೊಸತಾಗಿ ತಿಳಿಯುವನು.

ಸ್ವಪ್ನ ದೇಖತ್ಯಾ ಪುರುಷಾಸೀ । ವಿಸರೋನಿ ನಿಜದೇಹಾಸೀ । ಸ್ವಪ್ನೀಂಚ್ಯಾ ದೇಹಗೇಹಾಂಸೀ । ಸಾಭಿಮಾನೇಸೀ ವಾಢವೀ ॥೪೫೮॥ ಜಾಗೃತಿದೇಹೋ ರಾಹಿಲಾ ತೇಥೇ । ಸ್ವಪ್ನದೇಹೋ ಪಾವಲೋ ಯೇಥೇ । ಏವಂ ಪೂರ್ವ ಅಪೂರ್ವ ದೋಹಿತೇ । ನ ಸ್ಮರೇ ಚಿತ್ತೇ ಪುರುಷ ಜೈಸಾ ॥೪೫೯॥

ದೈವಯೋಗದಂತೆ ಈ ದೇಹದ ಒಳ್ಳೆಯ, ಕೆಟ್ಟ ಸ್ಥಿತಿಗಳು ಉಂಟಾಗುತ್ತಿರುವುವು. ಆದರೆ ಆತನು ದೇಹದ ಅಭಿಮಾನವನ್ನೇ ಹಿಡಿದುಕೊಂಡು ಕುಣಿಯುತ್ತಿರುವನು. ಇದಕ್ಕೆ ಪುರುಷನ ಜನ್ಮವೆಂದು ಹೇಳುವರು ॥೪೪೮॥ ಇದು ಪೂರ್ವ ದೇಹವಲ್ಲ, ಬೇರೆಯಾಗಿರುವುದೆಂಬುದೂ ಕೂಡ ಆ ಯಾವ ಮನಸ್ಸಿಗೆ ಎಚ್ಚರಿಕೆ ಇರುವುದಿಲ್ಲ. ಆದ್ದರಿಂದ ಪೂರ್ವದೇಹದಲ್ಲಿದ್ದ ಅಭಿಮಾನವನ್ನೇ ಈಗೀತನು ಗಟ್ಟಿಯಾಗಿ ಹಿಡಿದುಕೊಂಡಿರುವನು ॥೪೪೯॥ ಇದೇ ಅರ್ಥದ ದೃಷ್ಟಾಂತವನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು. ಸ್ವಪ್ನದಲ್ಲಿ ಅಥವಾ ದೀರ್ಘಚಿಂತನೆಯ ಮನೋರಾಜ್ಯದಲ್ಲಿ ದೇಹದ ಯಾವ ಎಚ್ಚರಿಕೆಯೂ ಇರುವುದಿಲ್ಲ ॥೪೫೦॥ ಒಬ್ಬ ದರಿದ್ರ ಮನುಷ್ಯನು ತಾನು ತನ್ನ ಮನೆಯಲ್ಲಿಯೇ ಮಲಗಿಕೊಂಡಿರುವನು. ಆದರೆ ಅವನು ಸ್ವಪ್ನದಲ್ಲಿ ಇಂದ್ರನಾಗುವನು. ಆಗ ಅಲ್ಲಿ ಆತನು ಐರಾವತ ಆನೆಯ ಮೇಲೆ ಕುಳಿತು ಉರ್ವಶಿಯಂತಹ ಮಹಾ ಮಹಾ ಅಪ್ಸರೆಯರ ಜೊತೆಯಲ್ಲಿ ಮೆರೆಯುತ್ತಿರುವನು ॥೪೫೧॥ ನನ್ನ ಪೂರ್ವದ ದರಿದ್ರ ದೇಹವು ಹೋಯಿತು. ಈಗ ನನಗೆ ಇಂತಹ ಹೊಸ ದೇಹವು ದೊರೆಯಿತು, ಎಂಬುವುದು ಆತನಿಗೆ ತನ್ನ ಸ್ವಪ್ನದಲ್ಲಿ ಯಾವುದೂ ಸ್ಮರಣೆಗೆ ಬರುವುದಿಲ್ಲ. ಅದರಂತೆಯೇ ಜನರ ಜನ್ಮ ಸ್ಥಿತಿಯಾಗಿರುವುದು ॥೪೫೨॥ ಒಬ್ಬ ಕೂಲಿಕಾರನು ದೇವಸ್ಥಾನದ ಒಂದು ತುಪ್ಪದ ಗಡಿಗೆಯನ್ನು ಹೊತ್ತು ಹೊರಗೆ ಹೊರಟಿದ್ದನು. ಆತನು ದೀರ್ಘಾಲೋಚನೆಯ ಮನೋರಾಜ್ಯದಲ್ಲಿ ತಾನು ಕುದುರೆಯ ಮೇಲೆ ಕುಳಿತಿರುವೆನು ಎಂದು ತಿಳಿಯುತ್ತ ತನ್ನ ಕಾಲ್ಪನಿಕ ಮನೋರಥದಿಂದ ಅತ್ಯಂತ ಉಲ್ಹಾಸಭರಿತನಾಗುತ್ತಿರುವನು ॥೪೫೩॥ ಆಗ ಆ ಮನೋರಾಜ್ಯದಲ್ಲಿಯೇ ಅವನ ಕುದುರೆಯು ಎತ್ತರಕ್ಕೆ ಜಿಗಿಯಿತೆಂದು ಆತನಿಗೆ ಭಾಸವಾಯಿತು. ಆಗ ಅವನು ತಾನು ಸ್ವತಃ ಎತ್ತರಕ್ಕೆ ಜಿಗಿದುಬಿಡುವನು. ಆಗ ಆ ತುಪ್ಪದ ಗಡಿಗೆಯು ಕೆಳಗೆ ಬಿದ್ದು ಚೂರುಗಳಾಯಿತು. ಹೀಗೇಕಾಯಿತು ? ಎಂದು ಜನರು ಪ್ರಶ್ನಿಸಿದರು ॥೪೫೪॥ ಅವನು ಅದೇ ಮನೋರಾಜ್ಯದಲ್ಲಿ ಇರುವುದರಿಂದ ನನ್ನ ಕುದುರೆಯು ಎತ್ತರಕ್ಕೆ ಜಿಗಿಯಿತು. ಆದ್ದರಿಂದ ಹೀಗಾಯಿತೆಂದನು. ಇಷ್ಟೊಂದು ಆತನು ಮನೋರಾಜ್ಯದಲ್ಲಿ ತಲ್ಲೀನನಾಗಿದ್ದನು. ನನ್ನ ತಲೆಯ ಮೇಲಿನ ತುಪ್ಪದ ಗಡಿಗೆಯು ಒಡೆಯಿತು. ಇದರಿಂದ ನಾನು ಬಂಧಿಸಲ್ಪಟ್ಟೆನು ಎಂಬ ಎಚ್ಚರಿಕೆಯೂ ಇರುವುದಿಲ್ಲ ॥೪೫೫॥ ಹೀಗಿರುವ ದೃಢವಾದ ವಿಸ್ಮರಣೆಗೆ ದೇಹದ ಮರಣವೆನ್ನುವರು ಮತ್ತು ಮನಸ್ಸಿನ ತೀವ್ರ ನಿಧಿಧ್ಯಾಸವು ಪ್ರಾಣಿಗಳ ಜನ್ಮವಾಗಿರುವುದು ॥೪೫೬॥ ತಾತ್ಪರ್ಯವೇನೆಂದರೆ ಆತ್ಮನಿಗೆ ಜನ್ಮ, ಮರಣಗಳು ಭ್ರಮದ ಲಕ್ಷಣವಾಗಿರುವುದು. ಇದರ ಅಧಿಕವಾದ ಸ್ಪಷ್ಟೀಕರಣೆಯನ್ನು ಸ್ವತಃ ಶ್ರೀಕೃಷ್ಣನು ಮಾಡುವನು ॥೪೫೭॥

ಸ್ವಪ್ನವನ್ನು ಕಾಣುತ್ತಿರುವ ಮನುಷ್ಯನು ತನ್ನ ನಿಜದೇಹವನ್ನು ಮರೆತಿರುವನು ಮತ್ತು ಸ್ವಪ್ನದಲ್ಲಿನ ಮಿಥ್ಯಾ ದೇಹದ ಮೇಲೆ ಮತ್ತು ಮನೆ ಮಾರಿನ ಮೇಲೆ ಅಭಿಮಾನವನ್ನು ಇಡುವನು ॥೪೫೮॥ ಈಗ ಈ ದೇಹವು ಜಾಗೃತಿಯವಾಗಿರದೇ ಇದು ಸ್ವಪ್ನದಲ್ಲಿನ ದೇಹವಾಗಿದೆ ಎಂಬ ಪೂರ್ವದ ಅಥವಾ ಈಗಿನ ದೇಹದ ಸ್ಮರಣೆಯು ಮಾನವನಿಗೆ ಇರುವುದಿಲ್ಲ ॥೪೫೯॥

ಜಾಗೃತಿ ಆಣಿ ದೇಖಿಲೇ ಸ್ವಪ್ನ । ಯಾ ದೋಹೀ ದೇಹಾಂಸೀ ದೇಖತಾ ಭಿನ್ನ । ತೇವೀ ಜನ್ಮ ಆಣಿ ಮರಣ। ಜೀವಾಸೀ ಜಾಣ ಅಸೇನಾ ॥೪೬೦॥ ಏವಂ ದೇಹಾಸೀ ಜನ್ಮ ನಾಶ । ಆತ್ಮಾ ನಿತ್ಯಮುಕ್ತ ಅವಿನಾಶ । ಸ್ವಪ್ನ ಮನೋರಥವಿಲಾಸ । ತೈಸಾ ಬಹುವಸ ಸಂಸಾರ ॥೪೬೧॥ ದೇಹಾಸೀ ಜನ್ಮ ಸ್ಥಿತೀ ಮರಣ । ಯಾಂಸೀ ಮನಚಿ ಗಾ ಕಾರಣ । ಮನಃಕಲ್ಪಿತ ಸಂಸಾರ ಜಾಣ । ತೇಚಿ ಶ್ರೀಕೃಷ್ಣ ಸಾಂಗತ ॥೪೬೨॥

ಇಂದ್ರಿಯಾಯನಸೃಷ್ಟ್ಯೇದಂ ತ್ರೈವಿಧ್ಯಂ ಭಾತಿ ವಸ್ತುನಿ । ಬಹಿರಂತರ್ಭಿದಾಹೇತುರ್ಜನೋಽಸಜ್ಜನಕೃದ್ಯಥಾ ॥೯೧॥

ಅರ್ಥ:- ಇಂದ್ರಿಯಗಳ ಆಶ್ರಯವು ಮನಸ್ಸಾಗಿರುವುದು. ಇದು ಮಾಡಿರುವ ಸೃಷ್ಟಿಯಿಂದ ಆತ್ಮಸ್ವರೂಪದಲ್ಲಿ ಉತ್ತಮತ್ವ, ಮಧ್ಯಮತ್ವ ಮತ್ತು ನೀಚತ್ವ ಇವು ಸುಳ್ಳಾಗಿ ಭಾಸವಾಗುವುವು. ಇದೇ ಮನವು ಒಳಹೊರಗೆ ಭೇದ ಮಾಡುವುದು. ಜೀವವು ಸ್ವಪ್ನದಲ್ಲಿ ಅನೇಕ ಸುಳ್ಳಾದ ಪದಾರ್ಥಗಳ ನಿರ್ಮಾಣ ಮಾಡುವುದು ಬಹುರೂಪನಾಗಿ ತೋರುವುದು. ಅದರಂತೆ ಆತ್ಮವು ಅಭೇದರೂಪವಾಗಿದ್ದರೂ ಭೇದಬುದ್ಧಿಯಿಂದ ಬಹುರೂಪ ಕಾಣುವುದು.

ಮನೇ ಕಲ್ಪಿಲೀ ಸಕಳ ಸೃಷ್ಟೀ । ಮನಃಕೃತ ಇಂದ್ರಿಯಕಾಮಾಠೀ । ಮನೇ ವಾಢವಿಲೀ ತ್ರಿಪುಟೀ । ಕರ್ಮಕಸವಟೀ ವಿಭಾಗ ॥೪೬೩॥ ಅಧಿದೇವ ಅಧ್ಯಾತ್ಮ ಅಧಿಭೂತ । ಹೇ ತ್ರೈವಿಧ್ಯ ಮನಃಕೃತ । ವಸ್ತು ಅಖಂಡಚಿ ತೇಥ । ತ್ರಿಧಾ ಭಾಸತ ಕಲ್ಪನಾ ॥೪೬೪॥ ಜೈಸೇ ಭಾಂಡೇ ಕುಂಭಾರ ಕರೀ । ತೇಥ ನಭ ದಿಸೇ ತದಾಕಾರೀ । ಗಗನ ಸರ್ವಥಾ ಅವಿಕಾರೀ । ತೇ ದಿಸೇ ವಿಕಾರೀ ಭಾಂಡಯೋಗೇ ॥೪೬೫॥ ತೇವೀ ಆತ್ಮಾ ಅವಿಕಾರೀ ನಿತ್ಯ ಶುದ್ಧ । ತೇಥ ಮನಃಕಲ್ಪಿತ ತ್ರಿವಿಧ । ನಾನಾಪರೀಂಚ್ಯಾ ತ್ರಿಪುಟೀ ವಿವಿಧ । ವಾಢವಿಲಾ ಭೇದ ತೋ ಐಕ ॥೪೬೬॥ ಕಾರ್ಯ ಕರ್ಮ ಆಣಿ ಕರ್ತಾ । ಧ್ಯೇಯ ಧ್ಯಾನ ಆಣಿ ಧ್ಯಾತಾ । ಜ್ಞೇಯ ಜ್ಞಾನ ಆಣಿ ಜ್ಞಾತಾ । ಯಾ ಮನಃಕಲ್ಪಿತಾ ತ್ರಿವಿಧ ॥೪೬೭॥ ಅಹಂ ಕೋಹಂ ಸೋಹಂ ಭೇದ । ತ್ವಂಪದ ತತ್ಪದ ಅಸಿಪದ । ಸತ್‌ಚಿತ್ ಆಣಿ ಆನಂದ । ಹೇಹೀ ಸಂಬಂಧ ಮಾಯಿಕ ॥೪೬೮॥ ಅಸಂತಾಚಿಯೇ ನಿವೃತ್ತೀ । ಸಂತತ್ವ ಪ್ರತಿಪಾದೀ ವೇದೋಕ್ತೀ । ಜಡಾಚಿಯೇ ಸಮಾಪ್ತೀ । ಚಿದತ್ವ ಬೋಲತೀ ವಸ್ತೂಸೀ ॥೪೬೯॥ ಕರಿತಾ ದುಃಖಾಚಾ ಭೇದ । ವಸ್ತೂಸೀ ಮ್ಹಣತೀ ಪರಮಾನಂದ । ಏವಂ ಸಚ್ಚಿದಾನಂದ । ಜಾಣ ಪ್ರಸಿದ್ಧ ಮಾಯಿಕ ॥೪೭೦॥

ಜಾಗೃತ ಮತ್ತು ಪ್ರತ್ಯಕ್ಷವಾಗಿ ಕಾಣುವ ಸ್ವಪ್ನ ಹೀಗೆ ಎರಡೂ ಸ್ಥಿತಿಗಳಲ್ಲಿನ ದೇಹಗಳನ್ನು ನೋಡುವವನು ಅವುಗಳಿಗಿಂತ ಭಿನ್ನವಾಗಿರುವನು. ಅದರಂತೆ ಈ ಯಾವ ಜೀವವು ಜನ್ಮ ಮರಣ ಅವಸ್ಥೆಗಳಿಗಿಂತ ಭಿನ್ನವಾಗಿರುವುದು. ಆದ್ದರಿಂದಲೇ ಜೀವಕ್ಕೆ ಜನ್ಮ ಮರಣಗಳು ಇರಲು ಶಕ್ಯವೇ ಇಲ್ಲ ॥೪೬೦॥ ಈ ಪ್ರಕಾರವಾಗಿ ಜನ್ಮ ಮತ್ತು ಮರಣ ಕೇವಲ ದೇಹಕ್ಕೆ ಮಾತ್ರ ಇರುವುದು. ಆತ್ಮವು ನಿತ್ಯಮುಕ್ತ ಮತ್ತು ಅವಿನಾಶಿಯಾಗಿರುವುದು. ಸ್ವಪ್ನದಲ್ಲಿನ ವಿವಿಧ ಮನೋರಥವಿಲಾಸದಂತೆ ಈ ಯಾವ ಸಂಸಾರವು ಅನೇಕ ಪ್ರಕಾರಗಳಿಂದ ಬೆಳೆದು ನಿಂತಿರುವುದು ॥೪೬೧॥ ದೇಹದ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವುಗಳಿಗೆ ಮನಸ್ಸೇ ಕಾರಣೀಭೂತವಾಗಿರುವುದು. ಆದ್ದರಿಂದ ಈ ಸಂಸಾರವು ಮನಃಕಲ್ಪಿತವಾಗಿರುವುದು. ಇದರ ಸ್ಪಷ್ಟೀಕರಣೆಯನ್ನು ಶ್ರೀಕೃಷ್ಣನು ಈಗ ಮಾಡುತ್ತಿರುವನು ॥೪೬೨॥

ಈ ಯಾವ ಸರ್ವ ಸೃಷ್ಟಿಯನ್ನು ಮನಸ್ಸೇ ಕಲ್ಪಿಸಿರುವುದು. ಇಂದ್ರಿಯಗಳ ಸರ್ವ ಪ್ರಕಾರದ ವ್ಯವಹಾರಗಳು ಮನಸ್ಸಿನಿಂದಲೇ ಆಗುತ್ತಿರುವುವು. ಹಾಗೆಯೇ ಕರ್ಮಗಳ ನಿಶ್ಚಯದ ವಿಭಾಗದಂತೆ ಮನಸ್ಸೇ ಈ ತ್ರಿಪುಟಿಗಳನ್ನು ಬೆಳೆಸಿರುವುದು ॥೪೬೩॥ ಅಧಿದೈವ, ಅಧ್ಯಾತ್ಮ ಮತ್ತು ಅಧಿಭೂತ ಈ ಮೂರು ಪ್ರಕಾರಗಳನ್ನೂ ಕೂಡ ಮನಸ್ಸೇ ಮಾಡಿರುವುದು. ನಿಜವಾಗಿ ನೋಡಿದರೆ ಆತ್ಮವಸ್ತು ಇದು ಅಖಂಡವಾಗಿ ಒಂದೇಯಾಗಿರುವುದು. ಆದರೆ ಇದು ಕಲ್ಪನೆಯಿಂದ ಮಾತ್ರ ಮೂರು ಪ್ರಕಾರಗಳಾಗಿ ತೋರುವುದು ॥೪೬೪॥ ಕುಂಬಾರನು ಮಣ್ಣಿನ ಗಡಿಗೆಗಳನ್ನು ಯಾವ ಆಕಾರಗಳಿಂದ ಸಿದ್ಧಗೊಳಿಸುವನೋ ಆಗ ಆಕಾಶವು ಕೂಡ ಅವುಗಳಲ್ಲಿ ಅದೇ ಆಕಾರಗಳಲ್ಲಿ ತೋರುತ್ತಿರುವುದು. ನಿಜವಾಗಿ ನೋಡಿದರೆ ಈ ಯಾವ ಆಕಾಶವು ಪರಿಪೂರ್ಣವಾಗಿ ನಿರ್ವಿಕಾರವಾಗಿರುವುದು. ಆದರೆ ಆ ಯಾವ ಮಣ್ಣಿನ ಗಡಿಗೆಗಳಿಂದ ಅದು ತದಾಕಾರವಾಗಿ ತೋರುವುದು ॥೪೬೫॥ ಅದರಂತೆ ಈ ಯಾವ ಆತ್ಮವು ವಿಕಾರರಹಿತವಾಗಿ ನಿತ್ಯ ಮತ್ತು ಶುದ್ಧವಾಗಿರುವುದು. ಮನಸ್ಸು ಅದಕ್ಕೆ ಮೂರು ಪ್ರಕಾರಗಳಾಗಿ ಕಲ್ಪಿಸಿ ಮತ್ತು ನಾನಾ ಪ್ರಕಾರಗಳ ತ್ರಿಪುಟಿಗಳಿಂದ ಭೇದಗಳನ್ನು ಬೆಳೆಸುತ್ತಿರುವುದು. ಇದು ಹೇಗೆ ಬೆಳೆಯಿಸುವುದೆಂಬುದನ್ನು ಈಗ ಕೇಳು ॥೪೬೬॥ ಕಾರ್ಯ, ಕರ್ಮ, ಮತ್ತು ಕರ್ತಾ, ಧ್ಯೇಯ, ಧ್ಯಾನ ಮತ್ತು ಧ್ಯಾತಾ, ಜ್ಞೇಯ, ಜ್ಞಾನ ಮತ್ತು ಜ್ಞಾತಾ ಈ ಎಲ್ಲ ತ್ರಿಪುಟಿಗಳನ್ನು ಈ ಮನಸ್ಸೇ ಕಲ್ಪಿಸಿರುವುದು ॥೪೬೭॥ ಅಹಂ ಅಂದರೆ ನಾನು, ಕೋಽಹಂ ಅಂದರೆ ನಾನು ಯಾರು ? ಸೋಽಹಂ ಅಂದರೆ ಅದುವೇ ನಾನು. ಹೀಗೆ ಈ ಭೇದಗಳನ್ನು ಅಥವಾ ತ್ವಂ ಅಂದರೆ ಜೀವವು, ತತ್ ಅಂದರೆ ಬ್ರಹ್ಮವು, ಅಸಿ ಅಂದರೆ ಇರುವೆ. ಅಥವಾ ಸತ್, ಚಿತ್, ಆನಂದ ಈ ಸಂಬಂಧವೂ ಕೂಡ ಮಾಯಿಕವಾಗಿರುವುದು ॥೪೬೮॥ ಅಸತ್ ಅಂದರೆ ಮಿಥ್ಯಾ ಹೀಗೆ ಮಾಯೆಯಾಗಿರುವುದು. ಈ ಮಾಯೆಯ ನಿರಸನೆಯನ್ನು ಮಾಡುವುದಕ್ಕಾಗಿ ವೇದವಾಣಿಯು ಸತ್ ಪದದ ಪ್ರತಿಪಾದನೆಯನ್ನು ಮಾಡಿರುವುದು. ಹಾಗೆಯೇ ಜಡದ ಲಯ ಮಾಡುವುದಕ್ಕಾಗಿ ಚೈತನ್ಯ ತತ್ವವು ಎಂದಾಗಿ ಹೀಗೆ ಹೇಳುವರು ॥೪೬೯॥ ದುಃಖದ ನಿವಾರಣೆಯನ್ನು ಮಾಡುವುದಕ್ಕಾಗಿ ಪರಬ್ರಹ್ಮವು ಆನಂದರೂಪವಾಗಿದೆ ಎಂದು ಹೇಳುವರು. ಈ ಪ್ರಕಾರವಾಗಿ ಸಚ್ಚಿದಾನಂದ ಎಂಬ ನಾಮವು ಇದು ನಿಜವಾಗಿಯೂ ಮಾಯಿಕ ಅಂದರೆ ಮಿಥ್ಯೆಯಾಗಿರುವುದು ॥೪೭೦॥

ಅಸಂತ ಮಿಥ್ಯಾ ಮಾಯಿಕ ಪಾಹೀ । ತೈಸೇ ತತ್ತ್ವ ಕೋಣ ಠೇವೀ ಠಾಯೀ । ಜಡಾಸೀಚಿ ಠಾವ ನಾಹೀ । ತೇಥ ಚಿದತ್ವ ಕಾಯೀ ಸಂಪಾದೇ ॥೪೭೧॥ ಜೇಥ ನಾಹೀ ದುಃಖ ಸಂಬಂಧ । ತೇಥ ಕೋಣ ಮ್ಹಣೇ ಆನಂದ । ಏವಂ ವಸ್ತೂಚ್ಯಾ ಠಾಯೀ ಸಚ್ಚಿದಾನಂದ । ಮಾಯಿಕ ಸಂಬಂಧ ಯಾ ಹೇತೂ ॥೪೭೨॥ ಜೇಥ ಜೇ ಭಾಸೇ ಸಂಸಾರಭಾನ । ತ್ರಿಗುಣತ್ರಿಪುಟೀ ವಿಂದಾನ । ತೇ ಸರ್ವ ಮಾಯಿಕ ಮನಃಕೃತ ಜಾಣ । ಆತ್ಮಾ ತೋ ಭಿನ್ನ ಗುಣಾತೀತ ॥೪೭೩॥ ಆತ್ಮಾ ನಿತ್ಯ ಮುಕ್ತ ಶುದ್ಧ ಬುದ್ಧ । ತೇಥ ಭಾಸೇ ಜೋ ತ್ರಿವಿಧ ಭೇದ । ತೋ ಮನಃಕೃತ ಗುಣಸಂಬಂಧ । ಜಾಣ । ಪ್ರಸಿದ್ಧ ಮಾಯಿಕ ॥೪೭೪॥ ಪುರುಷ ಶ್ರೋತ್ರಿಯ ಸದಾಚಾರ । ತ್ಯಾಚೀ ಸ್ತ್ರೀ ಕರೀ ವ್ಯಭಿಚಾರ । ತೇಣೇ ದೋಷೀ ಮ್ಹಣತೀ ಭ್ರತಾರ । ತೈಸಾ ಭೇದ ಪ್ರಕಾರ ಆತ್ಮ್ಯಾಸೀ ॥೪೭೫॥ ಜೇವೀ ಸ್ವಪ್ನಾಮಾಜೀ ನರ । ಏಕಲಾ ಹೋಯ ಸಂಸಾರ । ತೋ ನಿದ್ರಾಯೋಗೇ ಚಮತ್ಕಾರ । ತೈಸಾ ಭೇದಪ್ರಕಾರ ಮಾಯಿಕ ಬ್ರಹ್ಮೀ ॥೪೭೬॥ ಜಾಡಾಜಡ ದೇಹಭೇದ । ಪರಿಚ್ಛಿನ್ನತ್ವೇ ಜೀವಭೇದ । ಹಾ ಸ್ವಪ್ನಪ್ರಾಯ ಮಾಯಿಕ ಬೋಧ । ಆತ್ಮಾ ನಿತ್ಯ ಶುದ್ಧ ಅದ್ವಿತೀಯ ॥೪೭೭॥ ಐಸೇ ಮಾಯಾವಿಭೇಧನಿಷ್ಠ ಜನ । ತ್ಯಾಂಸೀ ವೈರಾಗ್ಯಸಿದ್ಧ್ಯರ್ಥ ಜಾಣ । ಕಾಳಕೃತ ಜನ್ಮ ಮರಣ । ತೇಚಿ ನಿರೂಪಣ ಹರಿ ಬೋಲೇ ॥೪೭೮॥

ನಿತ್ಯದಾ ಹ್ಯಂಗ ಭೂತಾನಿ ಭವಂತಿ ನ ಭವಂತಿ ಚ । ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ ॥೨॥

ಅರ್ಥ:- ಪ್ರಿಯ ಉದ್ಧವಾ, ಕಾಲದ ಗತಿಯು ಅತ್ಯಂತ ಸೂಕ್ಷ್ಮವಾಗಿರುವುದು. ಸಾಧಾರಣವಾಗಿ ಅದನ್ನು ಕಾಣಲಾಗುವುದಿಲ್ಲ. ಈ ಕಾಲದ ಮುಖಾಂತರವಾಗಿ ಪ್ರತಿಕ್ಷಣ ಶರೀರಗಳ ಉತ್ಪತ್ತಿಯಾಗುವುದು ಹಾಗೂ ನಾಶವಾಗುವುದು. ಸೂಕ್ಷ್ಮವಾಗಿರುವುದರಿಂದ ಪ್ರತಿಕ್ಷಣವಾಗುತ್ತಿರುವ ಜನ್ಮಮೃತ್ಯು ಕಾಣಿಸುವುದಿಲ್ಲ.

ಮ್ಹಣೇ ಐಕ ಬಾಪಾ ಉದ್ಧವಾ । ಸ್ಥಾವರಜಂಗಮಾದಿ ದೇಹಭಾವಾ । ಕಾಳಾಚಿಯಾ ಕಾಳಪ್ರಭಾವಾ । ಲಾಗಲಾ ನೀಚ ನವಾ ಜನ್ಮಮೃತ್ಯೂ ॥೪೭೯॥ ಅತಿಸೂಕ್ಷ್ಮ ಕಾಳಗತೀಸೀ । ಕಾಳ ಗ್ರಾಸೀತಸೇ ಜಗಾಸೀ । ಯಾ ಅಂಗೀಂಚ್ಯಾ ಜನ್ಮಮೃತ್ಯೂಸೀ । ನೇಣವೇ ಜೀವಾಸೀ ಮಾಯಾಮೋಹೇ ॥೪೮೦॥ ನಿಜಮಾತಾ ಬಾಳವಯಾಸೀ । ಪ್ರಕಟಾವಯವೀ ಲಾಡವೀ ಪುತ್ರಾಸೀ । ತೇಚಿ ಮಾತಾ ಪ್ರೌಢವಯಸೇಸೀ । ಹೋಯ ತ್ಯಾ ಪುತ್ರಾಸೀ ಸಲಜ್ಜ ॥೪೮೧॥

ಅಸತ್ ಇದು ಮಿಥ್ಯೆಯಾಗಿರುವುದರಿಂದ ಮಾಯಿಕವಾಗಿದೆ. ಅಲ್ಲಿ ತತ್ವವು ಎಲ್ಲಿಂದ ಇರಬೇಕು ? ಜಡ ತತ್ವವು ಮೂಲತಃ ಇಲ್ಲವೇ ಇಲ್ಲ. ಅಂದ ಮೇಲೆ ಚೈತನ್ಯವಾದರೂ ಹೇಗೆ ಸಿದ್ಧವಾಗುವುದು? ॥೪೭೧॥ ಎಲ್ಲಿ ಸುಖದುಃಖಗಳ ಸಂಬಂಧವು ಸರ್ವಥಾ ಇಲ್ಲದಿರಲು ಅಲ್ಲಿ ಆನಂದ ಎಂದು ಯಾರು ಹೇಳಬೇಕು? ಆದ್ದರಿಂದ ಆತ್ಮಸ್ವರೂಪಕ್ಕೆ ಸತ್, ಚಿತ್, ಆನಂದವೆನ್ನುವುದು ಕೇವಲ ಮಾಯಿಕವಾಗಿರುವುದು ॥೪೭೨॥ ಎಲ್ಲಿ ಸಂಸಾರದ ಭಾಸವಾಗುತ್ತಿರುವುದೋ ಅಲ್ಲಿ ತ್ರಿಗುಣಗಳ ತ್ರಿಪುಟಿಯ ಆಟವು ನಡೆಯುತ್ತಿರುವುದು. ಆದ್ದರಿಂದ ಅವುಗಳೆಲ್ಲವೂ ಮಾಯಿಕ ಮತ್ತು ಮನಸ್ಸಿನ ಕಲ್ಪಿತವಾಗಿರುವುವು. ಆತ್ಮವು ಈ ಮೂರು ಗುಣಗಳಿಂದ ಭಿನ್ನವಾಗಿರುವುದು ॥೪೭೩॥ ಆತ್ಮವು ನಿತ್ಯ ಮುಕ್ತ, ಶುದ್ಧ ಮತ್ತು ಜ್ಞಾನಸ್ವರೂಪವಾಗಿರುವುದು. ಅದರಲ್ಲಿರುವ ಯಾವ ಈ ತ್ರಿವಿಧ ಭೇದವು ಗುಣಸಂಬಂಧದಿಂದ ಮನವು ಮಾಡಿರುವ ಮಾಯಿಕವಾಗಿರುವುದು. ಹೀಗೆಂದು ನೀನು ನಿಶ್ಚಯವಾಗಿ ತಿಳಿ ॥೪೭೪॥ ಒಬ್ಬ ಸದಾಚಾರ ಸಂಪನ್ನನಾದ ಪುರುಷನಿರುತ್ತಿರಲು ಆಗ ಆತನ ಹೆಂಡತಿಯು ವ್ಯಭಿಚಾರವೆಸಗಿದರೆ ಜನರು ಆ ಸದಾಚಾರೀ ಪುರುಷನಿಗೆ ದೋಷಿಯಾದನೆಂದು ಹೇಳುವರು. ಅದರಂತೆಯೇ ಈ ಯಾವ ಆತ್ಮದ ಭೇದದ ಪ್ರಕಾರವಾಗಿರುವುದು. ಒಟ್ಟಿನಲ್ಲಿ ಆತ್ಮವು ಅಲಿಪ್ತವಾಗಿದ್ದು ಗುಣಗಳ ದೋಷವನ್ನು ಅದರ ಮೇಲೆ ಆರೋಪ ಮಾಡಲ್ಪಟ್ಟಿರುವುದು ॥೪೭೫॥ ಸ್ವಪ್ನದಲ್ಲಿ ಒಬ್ಬ ಪುರುಷನೇ ಸರ್ವಸಂಸಾರವಾಗಿರುವನು. ನಿಜವಾಗಿ ನೋಡಿದರೆ ಈ ಎಲ್ಲ ಚಮತ್ಕಾರವು ನಿದ್ರೆಕಾರಣದಿಂದ ಆಗುತ್ತಿರುವುದು. ಅದರಂತೆಯೇ ಬ್ರಹ್ಮನಲ್ಲಿನ ಭೇದಗಳ ಪ್ರಕಾರವು ಮಾಯಿಕವಾಗಿರುವುದು ॥೪೭೬॥ ಜಡ ಮತ್ತು ಅಜಡ ಇವು ದೇಹದಲ್ಲಿನ ಭೇದವು ಅಥವಾ ಭಿನ್ನ ಮಾಡಿರುವ ಜೀವದ ಭೇದವು ಸ್ವಪ್ನದಂತೆ ಮಾಯೆಯ ಭಾಸವಾಗಿರುವುದು. ಈ ಯಾವ ಆತ್ಮವು ನಿತ್ಯ, ಶುದ್ಧ ಮತ್ತು ಅದ್ವಿತೀಯವಾಗಿಯೇ ಇರುವುದು ॥೪೭೭॥ ಹೀಗೆ ಮಾಯೆಯು ಮಾಡಿರುವ ಭೇದದಲ್ಲಿ ನಿಷ್ಠೆಯನ್ನಿಟ್ಟುಕೊಂಡ ಜನರಿಗೆ ವೈರಾಗ್ಯದ ಪ್ರಾಪ್ತಿಯಾಗಬೇಕೆಂದು ಕಾಲವು ಜನ್ಮಮರಣವನ್ನು ಹಚ್ಚಿಟ್ಟಿರುವುದು. ಇದೇ ಅರ್ಥದ ನಿರೂಪಣೆಯನ್ನು ಶ್ರೀಕೃಷ್ಣನು ಈಗ ಮಾಡುತ್ತಿರುವನು ॥೪೭೮॥

ಹೇ ಉದ್ಧವ ಅಪ್ಪಾಜಿಯೇ, ಸ್ಥಾವರ ಮತ್ತು ಜಂಗಮ ದೇಹಭಾವಗಳು ಎಷ್ಟೊಂದು ಇರುವುವೋ, ಅವುಗಳಿಗೆಲ್ಲ ಕಾಲನ ಪ್ರಭಾವದಿಂದ ನಿತ್ಯ ಜನ್ಮಮರಣಗಳು ಹತ್ತಿಕೊಂಡಿರುವುವು ॥೪೭೯॥ ಕಾಲನ ಗತಿಯು ಅತ್ಯಂತ ಸೂಕ್ಷ್ಮವಾಗಿರುವುದು. ಈ ಗತಿಯಿಂದ ಆತನು ಸರ್ವ ಜಗತ್ತನ್ನು ನುಂಗುತ್ತಿರುವನು. ಮಾಯೆಯ ಮೋಹದಿಂದ ಅಂಟಿಕೊಂಡಿರುವ ಈ ಜನ್ಮಮರಣಗಳು ಜನರಿಗೆ ತಿಳಿಯುವುದಿಲ್ಲ ॥೪೮೦॥ ಚಿಕ್ಕ ಬಾಲಕನ ಮೈಮೇಲೆ ವಸ್ತ್ರವಿಲ್ಲದಿದ್ದರೂ ತಾಯಿಯು ಆತನನ್ನು ತನ್ನ ಮೈಮೇಲೆ ಎತ್ತಿಕೊಂಡು ಆಡಿಸುವಳು. ಆದರೆ ಅದೇ ಬಾಲಕನು ಪ್ರೌಢನಾಗಲು ಆಗ ಅದೇ ತಾಯಿಯು ಆತನನ್ನು ಬತ್ತಲು ಕಾಣಲು ನಾಚುವಳು ॥೪೮೧॥

ತೇ ಬಾಲ್ಯಾವಸ್ಥಾ ಕಾಳೇ ನೇಲೀ । ಹೇ ಪ್ರೌಢವಯಸಾ ನವೀ ಆಲೀ । ಯಾಲಾಗೀ ಮಾತಾ ಸಲಜ್ಜ ಝಾಲೀ । ಹೇ ಕಾಳೇ ಕೇಲೀ ಘಡಾಮೋಡೀ ॥೫೮೨॥ ಐಸಾ ನಿತ್ಯ ನಾಶ ನಿತ್ಯ ಜನ್ಮ । ಭೂತಾಂಸೀ ಕರೀ ಕಾಳ ಸೂಕ್ಷ್ಮ । ಯಾ ಜನ್ಮಮೃತ್ಯೂಂಚೇ ವರ್ಮ । ನೇಣತೀ ಸಂಭ್ರಮ ಭ್ರಾಂತ ಪ್ರಾಣೀ ॥೫೮೩॥ ಜೋ ಅವಸ್ಥಾ ಭಾಗ ಕಾಳೇ ನೇಲಾ । ತ್ಯಾಸವೇ ತೋ ದೇಹಚಿ ಗೇಲಾ । ಪುಢೇ ವಯಸಾ ನವೀ ಪಾವಲಾ । ತೋ ಕಾಳೇ ಆಣಿಲಾ ನವಾ ದೇಹೋ ॥೫೮೪॥ ಐಸಾ ಸಂಭವ ಆಣಿ ಅಸಂಭವೋ । ನೀಚ ನವಾ ಕಾಳಕೃತ ಪಹಾ ವೋ । ಯಾಲಾಗೀ ತ್ರಿವಿಧವಿಕಾರೀ ದೇಹೋ । ಸ್ವಯೇ ಸ್ವಯಮೇವೋ ದೇಖಿಜೇ ॥೫೮೫॥ ಅತರ್ಕ್ಯ ಕಾಳಾಚೀ ಕಾಳಗತೀ । ಭೂತೇ ಜನ್ಮಮೃತ್ಯು ಪಾವತೀ । ತೇ ಅಲಕ್ಷ್ಯ ಗತೀಚೇ ಅರ್ಥೀ । ದೃಷ್ಟಾಂತ ಶ್ರೀಪತಿ ದಾವೀತ ॥೫೮೬॥

ಯಥಾರ್ಚಿಷಾಂ ಸ್ರೋತಸಾಂ ಚ ಫಲಾನಾಂ ವಾ ವನಸ್ಪತೇಃ । ತಥೈವ ಸರ್ವಭೂತಾನಾಂ ವಯೋಽವಸ್ಥಾದಯಃ ಕೃತಾಃ ॥೫೩॥

ಅರ್ಥ:- ದೀಪದ ಜ್ಯೋತಿಯು,ನದಿಯ ಪ್ರವಾಹವು, ವೃಕ್ಷಗಳ ಫಲಗಳ ವಿಶೇಷ ಅವಸ್ಥೆ ಇವು ಕಾಲನ ಪ್ರಭಾವದಿಂದ ಬದಲಾಗುತ್ತಿರುವುವು. ಅದರಂತೆ ಸಮಸ್ತ ಪ್ರಾಣಿಗಳ ಆಯುಷ್ಯವು ಬದಲಾಗುತ್ತಿರುವುದು.

ನಿತ್ಯ ನೂತನ ದೀಪಜ್ವಾಳಾ । ಹೋತಾ ಜಾತಾ ನ ದಿಸತೀ ಡೋಳಾ । ಸವೇಗ ವಾಹತಾ ಜಲಕಲ್ಲೋಳಾ । ಯಮುನಾಜಳಾ ನ ದೇಖಿಜೇ ॥೫೮೭॥ ಫಳ ನ ಸಾಂಡಿತಾ ವೃಕ್ಷ ದೇಠ । ಕಡವಟ ತುರಟ ಆಂಬಟ । ತೇಚಿ ಗೋಡ ಹೋಯ ಚೋಖಟ । ಐಶೀ ಅತರ್ಕ್ಯ ಅದೃಷ್ಟ ಕಾಲಸತ್ತಾ ॥೫೮೮॥ ತೋಚಿ ಕಾಳ ದೇಹಾಸರಿಸಾ । ನಿತ್ಯ ನೂತನ ಲಾಗಲಾ ಕೈಸಾ । ಬಾಲ್ಯ ತಾರುಣ್ಯ ವೃದ್ಧಾವಯಸಾ । ದೇಹದಶಾ ಪಾಲಟೀ ॥೫೮೯॥ ಮೂಢ ಕುಶಳ ಅಶಕ್ತತಾ । ಅವಸ್ಥಾ ನಾಶೀತ ಯೇ ಅವಸ್ಥಾ । ತೇಥ ''ಮೀ ತೋಚಿ'' ಹೇ ತತ್ತ್ವತಾ । ಸ್ಫುರೇ ಸರ್ವಥಾ ಕೈಸೇನೀ ॥೫೯೦॥ ಐಸೇ ಕಲ್ಪೀಲ ತುಝೇ ಮನ । ತೇ ಅರ್ಥೀಚೇ ನಿರೂಪಣ । ಅಖಂಡ ಸ್ಫೂರ್ತೀಚೇ ಕಾರಣ। ಸ್ವಯೇ ಶ್ರೀಕೃಷ್ಣ ಸಾಂಗತ ॥೫೯೧॥

ಸೋಽಯಂ ದೀಪೋಽರ್ಚಿಷಾಂ ಯದ್ವತ್ ಸ್ರೋತಸಾಂ ತದಿದಂ ಜಲಮ್ ।
ಸೋಽಯಂ ಪುಮಾನಿತಿ ನೃಣಾಂ ಮೃಷಾ ಗೀರ್ಧೀರ್ಮೃಷಾಯುಷಾಮ್ ॥೫೪॥

ಅರ್ಥ:- ದೀಪದ ಜ್ಯೋತಿಯು, ನದಿಯ ನೀರು, ಪುರುಷನ ಸ್ಥಿತಿಯು ಪ್ರತಿಕ್ಷಣಕ್ಕೂ ಬದಲಾಗುತ್ತಿರುವುದು. ಆದರೆ ಇದನ್ನು ತಿಳಿಯದೇ ಅದೇ ದೀಪ, ಅದೇ ಜಲ, ಅದೇ ಪುರುಷ ಎನ್ನುವರು. ವ್ಯರ್ಥವಾಗಿ ಕಳೆಯುತ್ತಿರುವ ಇಂತಹ ಪುರುಷನ ವಾಣಿಯು ಮಿಥ್ಯೆಯಾಗಿದ್ದು, ಅವನ ಬುದ್ಧಿಯೂ ಕೂಡ ಮಿಥ್ಯೆಯಾಗಿರುವುದೆಂದು ತಿಳಿಯಬೇಕು.

ಆ ಬಾಲಕನ ಬಾಲ್ಯತ್ವವನ್ನು ಕಾಲನು ಒಯ್ದುಬಿಟ್ಟಿರುವನು. ಹೊಸದಾದ ಪ್ರೌಢ ಅವಸ್ಥೆಯನ್ನು ಪ್ರಾಪ್ತಮಾಡಿಕೊಂಡಿರುವನು. ಆದ್ದರಿಂದ ತಾಯಿಗೆ ಸ್ಪರ್ಶ ಮಾಡಲು ನಾಚಿಗೆಯು ಉಂಟಾಗುವುದು. ಈ ಎಲ್ಲ ಆಗುಹೋಗುಗಳ ಖಟಾಟೋಪವನ್ನು ಒಬ್ಬ ಕಾಲನು ಮಾಡುತ್ತಿರುವನು ॥೫೮೨॥ ಈ ಪ್ರಕಾರದ ಇಂತಹ ಸೂಕ್ಷ್ಮವಾದ ಕಾಲವು ಮಾನವನ ಜನ್ಮ ಮತ್ತು ಮರಣವನ್ನು ಪ್ರತಿನಿತ್ಯ ಮಾಡುತ್ತಿರುವುದು. ಆದ್ದರಿಂದ ಜನರು ಅನೇಕ ಪ್ರಕಾರದ ಭ್ರಮೆಯಿಂದ ಭ್ರಾಂತರಾಗಿರುವರು. ಇವರಿಗೆ ಜನ್ಮಮರಣಗಳ ಮರ್ಮವು ತಿಳಿಯುವುದಿಲ್ಲ ॥೫೮೩॥ ಆಯುಷ್ಯದಲ್ಲಿನ ಆಯಾ ಅವಸ್ಥೆಯ ಭಾಗವನ್ನು ಕಾಲನು ಒಯ್ಯುತ್ತಲೇ ಇರುವನು. ಅದರೊಂದಿಗೆ ದೇಹವೂ ಕೂಡ ಹೋಗುತ್ತಿರುವುದು. ಮುಂದೆ ಬೆಳೆಯುತ್ತಿದ್ದಂತೆಯೇ ಹೊಸ ದೇಹವು ಪ್ರಾಪ್ತವಾಗುತ್ತಿರುವುದು ॥೫೮೪॥ ಹೀಗೆ ಈ ಕಾಲನು ಮಾಡುತ್ತಿರುವ ಜನ್ಮ ಮರಣಗಳು ನಿತ್ಯ ನೂತನವಾಗಿರುವುವು. ಆದ್ದರಿಂದಲೇ ಈ ಯಾವ ದೇಹವು ಮೂರು ಪ್ರಕಾರಗಳಿಂದ ಯುಕ್ತವಾಗಿರುವುದು. ಇದನ್ನು ತಮ್ಮನ್ನು ತಾವೇ ನೋಡಿಕೊಳ್ಳಬೇಕು ॥೫೮೫॥ ನಿಜವಾಗಿಯೂ ಕಾಲನ ಈ ಗತಿಯು ಅತರ್ಕ್ಯವಾಗಿರುವುದು. ಇದರಿಂದಲೇ ಪ್ರಾಣಿಗಳಿಗೆ ಜನ್ಮ-ಮರಣಗಳು ಪ್ರಾಪ್ತವಾಗುವುವು. ಕಾಲನ ಈ ಯಾವ ಅತರ್ಕ್ಯವಾದ ಗತಿಯ ವಿಷಯವನ್ನು ಕುರಿತು ಶ್ರೀಕೃಷ್ಣನು ದೃಷ್ಟಾಂತಪೂರ್ವಕವಾಗಿ ಹೇಳುತ್ತಿರುವನು ॥೫೮೬॥

ದೀಪದ ಜ್ಯೋತಿಯು ಪ್ರತಿಕ್ಷಣಕ್ಕೂ ನೂತನವಾಗುತ್ತಿರುವುದು ಹಾಗೂ ಹೋಗುತ್ತಿರುವುದು. ಆದರೆ ನಮ್ಮ ಕಣ್ಣಿಗೆ ಅದು ಒಂದೇ ಸಮವಾಗಿದೆ ಎಂಬಂತೆ ತೋರುತ್ತಿರುವುದು. ಅಥವಾ ಪ್ರಚಂಡವಾಗಿ ಹರಿಯುತ್ತಿರುವ ಯಮುನಾ ನದಿಯ ನೀರು ಪ್ರತಿಕ್ಷಣಕ್ಕೂ ನೂತನವಾಗಿಯೇ ಇರುವುದು. ಆದರೆ ಇದು ನಮ್ಮ ಲಕ್ಷಕ್ಕೆ ಬರುವುದೇ ಇಲ್ಲ ॥೫೮೭॥ ಇದಲ್ಲದೇ ವೃಕ್ಷದ ಫಲಗಳು ದೇಟನ್ನು ಬಿಡುವ ಪೂರ್ವದಲ್ಲಿ ಕಹೀ, ಒಗರು, ಹುಳಿಯಾಗಿರುವುವು. ಅವೇ ಫಲಗಳು ಮುಂದೆ ಅತಿಶಯವಾಗಿ ಮಧುರವಾಗಿರುವುವು. ಹೀಗೆ ಈ ಕಾಲನ ಸತ್ತೆಯು ಅತರ್ಕ್ಯ ಮತ್ತು ಅದೃಶ್ಯವಾಗಿರುವುದು ॥೫೮೮॥ ಅದೇ ಕಾಲವು ದೇಹದ ಜೊತೆಯಲ್ಲಿ ನಿತ್ಯ ನೂತನ ಹೇಗಾಗುವುದೆಂಬುವ ಉತ್ತರವನ್ನು ಈಗ ಕೇಳು.ಅದು ಬಾಲ್ಯ, ತಾರುಣ್ಯ ಮತ್ತು ವಾರ್ಧಕ್ಯ ಹೀಗೆ ಅವಸ್ಥೆಗಳಲ್ಲಿ ಬದಲಾಗುತ್ತಿರುವುದು ॥೫೮೯॥ ಮೂಢತ್ವ, ಚತುರತೆ, ಅಶಕ್ತತೆ ಈ ಅವಸ್ಥೆಗಳು ನಾಶವಾಗುತ್ತಿರುವುವು. ಅಂದಮೇಲೆ ಪೂರ್ವದಲ್ಲಿದ್ದ ಅದು ನಾನೇ ಎಂಬುವುದು ಹೇಗೆ ಲಕ್ಷಕ್ಕೆ ಬರುವುದು? ॥೫೯೦॥ ಹೀಗೆ ನಿನ್ನ ಮನದಲ್ಲಿ ಕಲ್ಪನೆ ಮೂಡಬಹುದು. ಅದಕ್ಕಾಗಿ ಅದರ ಅಖಂಡ ಸ್ಫೂರ್ತಿಯ ಕಾರಣವನ್ನು ಹೇಳುವುದಕ್ಕಾಗಿಯೇ ಈಗ ಶ್ರೀಕೃಷ್ಣನು ನಿರೂಪಣೆಯನ್ನು ಮಾಡುತ್ತಿರುವನು ॥೫೯೧॥

ದೀಪಜ್ವಾಳಾ ಹೋತಿ ಜಾತೀ । ಅಗ್ನಿ ಜೈಸಾ ಪೂರ್ವಸ್ಥಿತೀ । ಯಾಲಾಗೀ ತೋಚಿ ದೀಪೂ ಮ್ಹಣತೀ । ಐಶಾ ಯುಕ್ತೀ ಉದ್ಧವಾ ॥೨೯೨॥ ಪ್ರವಾಹ ವಾಹತೀ ಕಲ್ಲೋಳ । ಪರೀ ಅಖಂಡ ಏಕಚಿ ಜಳ । ಯಾಲಾಗೀ ಮ್ಹಣತೀ ಸಕಳ । ತೇಚಿ ಜಳ ಯಾ ಹೇತೂ ॥೨೯೩॥ ತೇವಿ ದೇಹೀ ವಯಸಾ ಹೋತೀ ಜಾತೀ । ಆತ್ಮಾ ಅಖಂಡ ಅನುಸ್ಯೂತೀ । ತೋಚಿ ಮೀ ಹೇ ಸ್ಫುರೇ ಸ್ಫೂರ್ತೀ । ಯಾ ಉಪಪತ್ತೀ ಉದ್ಧವಾ ॥೨೯೪॥ ಮ್ಹಣಸೀ ಮೀಪಣೇ ಅಹಂಕಾರ ರೂಢ । ತೋಹೀ ಅಜ್ಞಾನತ್ವೇ ಜಡಮೂಢ । ತ್ಯಾಸೀ ಪ್ರಕಾಶಕ ಆತ್ಮಾ ದೃಢ । ಮೀಪಣೇ ಅಖಂಡ ವಸ್ತುತ್ವೇ ಸ್ಫುರೇ ॥೨೯೫॥ ಯೇಥ ದೇಹಾಸೀಚಿ ಜನ್ಮ ಮರಣ । ಆತ್ಮಾ ಅಖಂಡತ್ವೇ ಪರಿಪೂರ್ಣ । ಯೇಥ ದೇಹಾತ್ಮಬುದ್ಧೀಚೇ ಜೇ ಮೀಪಣ । ತೇ ವಾಚಾ ಜಾಣ ಅತಿಮಿಥ್ಯಾ ॥೨೯೬॥ ವಿಷಯಾಂಚೀ ವಿಷಯಸಿದ್ಧೀ । ದೇಹೀ ಜೇ ಕಾಂಹೀ ದೇಹಬುದ್ಧೀ । ತೇಹೀ ಮಿಥ್ಯಾ ಜಾಣ ತ್ರಿಶುದ್ಧೀ । ಭವಬಂಧೀ ಸ್ಥಾಪಕ ॥೨೯೭॥ ಕರ್ಮಭೂಮೀ ನರದೇಹಾ ಐಸೇ । ನಿಧಾನ ಲಾಧಲೇ ಅನಾಯಾಸೇ । ತೇಥೀಂಚೇನಿಹೀ ಆಯುಷ್ಯೇ । ಜೇ ವಿಷಯವಿಲಾಸೇ ವಿಗುಂತಲೇ ॥೨೯೮॥ ತೋ ಅಮೃತ ವಿಕೂನಿ ಕಾಂಜೀ ಪ್ಯಾಲಾ । ರತ್ನೇ ದೇಊನಿ ಕೋಂಡಾ ಘೇತಲಾ । ಪರ್ವತ ಫೋಡೂನಿ ಟೋಳ ಧರಿಲಾ । ಗಜ ವಿಕಿಲಾ ಇಟೇಸಾಠೀ ॥೨೯೯॥ ಡೋಳೇ ಫೋಡೋನಿ ಕಾಜಳ ಲ್ಯಾಲಾ । ನಾಕ ಕಾಪೂನಿ ಶಿಮಗಾ ಖೇಳಲಾ । ತೈಸಾ ನರದೇಹಾ ನಾಡಲಾ । ನಾಶ ಕೇಲಾ ಆಯುಷ್ಯಾಚಾ ॥೩೦೦॥ ವೇಚಿತಾ ಧನಲಕ್ಷಕೋಟೀ । ಆಯುಷ್ಯಕ್ಷಣಾಚೀ ನವ್ಹೇ ಭೇಟೀ । ತೇಹೀ ವೇಚಿಲೇ ವಿಷಯಾಸಾಠೀ । ಹತಾಯು ಕರಂಟೇ ಅತಿಮೂಢೇ ॥೩೦೧॥ ಮುಖ್ಯ ದೇಹೋಚಿ ಕಾಲ್ಪನಿಕ ಜಾಣ । ತೇಥೀಲ ಕಾಲ್ಪನಿಕ ಅಭಿಮಾನ । ತೇ ಹೇ ದೇಹಬುದ್ಧೀಚೇ ಮೀಪಣ । ಲಾವೀ ದೃಢ ಬಂಧನ ಜಗಾಸೀ ॥೩೦೨॥ ತೇ ಸಾಂಡಿತಾ ದೇಹಾಚೇ ಮೀಪಣ । ಕೈಚೇ ಜನ್ಮ ಕೈಚೇ ಮರಣ । ತೇವ್ಹಾ ಸಂಸಾರುಚಿ ನಾಹೀ ಜಾಣ । ಭವಬಂಧನ ಮಗ ಕೈಚೇ ॥೩೦೩॥ ಜೈಸಾ ಮಿಥ್ಯಾ ಬಾಗುಲಾಚಾ ಭೇವೋ । ಬಾಳಕೇ ಸತ್ಯ ಮಾನಿಲಾ ಪಹಾ ಹೋ । ತೈಸಾ ಮೃಷಾ ಕಾಲ್ಪನಿಕ ದೇಹೋ । ಸತ್ಯತ್ವೇ ಪಹಾ ಹೋ ಮಾನಿಲಾ ॥೩೦೪॥

ದೀಪದ ಜ್ಯೋತಿಯು ಪ್ರತಿಕ್ಷಣದಲ್ಲಿಯೂ ಆಗುಹೋಗುತ್ತಿರುವುದು. ಆದರೆ ಅದರಲ್ಲಿನ ಅಗ್ನಿಯು ತನ್ನ ಪೂರ್ವಸ್ಥಿತಿಯಲ್ಲಿಯೇ ಇರುವುದು. ಹೇ ಉದ್ಧವಾ, ಆದ್ದರಿಂದಲೇ ಅದೇ ಈ ದೀಪವೆಂದು ಹೇಳಬೇಕಾಗುವುದು ॥೨೯೨॥ ನದಿಯ ಪ್ರವಾಹದಲ್ಲಿ ಎಷ್ಟೇ ದೊಡ್ಡ ದೊಡ್ಡ ತೆರೆಗಳು ಹರಿಯುತ್ತಲೇ ಇರಲಿ, ಆದರೆ ಅದರಲ್ಲಿನ ಜಲವು ಅಖಂಡವಾಗಿ ಏಕರೂಪವಾಗಿಯೇ ಇರುವುವು. ಆದ್ದರಿಂದಲೇ ಅದೇ ಜಲವು ಎಂದು ಹೇಳುವರು ॥೨೯೩॥ ಹೇ ಉದ್ಧವಾ, ಈ ದೇಹಕ್ಕೂ ಕೂಡ ಅನೇಕ ಅವಸ್ಥೆಗಳು ಬರುವುವು, ಹೋಗುವುವು. ಆದರೆ ಅದರಲ್ಲಿನ ಆತ್ಮವು ಅಖಂಡವಾಗಿ ಸರ್ವತ್ರವೂ ತುಂಬಿಕೊಂಡಿರುವುದು. ಆದ್ದರಿಂದಲೇ ಅದೇ ನಾನು ಎಂಬ ಅನುಭವವು ಬರುವುದು ॥೨೯೪॥ ಈಗ ನೀನು ಹೀಗೆ ವಿಚಾರ ಮಾಡಬಹುದು ; ಈ ಯಾವ ನಾನು ಎಂಬ ಅಹಂಕಾರವು ರೂಢಿಯಾಗಿರುವುದು. ಆದರೆ ಅದರ ಉತ್ತರವು ಹೀಗಿರುವುದು, ಇದೂ ಕೂಡ ಅಜ್ಞಾನದಿಂದ ಜಡಮೂಢವೇ ಆಗಿರುವುದು. ಅದರ ಪ್ರಕಾಶಕನು ಆತ್ಮವೇ ಆಗಿರುವುದು. ಆತನೂ ಕೂಡ ಯಾವಾಗಲೂ ಪರಬ್ರಹ್ಮರೂಪದಿಂದ ಸ್ಫುರಣವಾಗುತ್ತಿರುವನು ॥೨೯೫॥ ಆದ್ದರಿಂದ ಜನ್ಮಮರಣಗಳು ದೇಹಕ್ಕೆ ಮಾತ್ರ ಇರುವುದು. ಆತ್ಮವು ಸರ್ವವ್ಯಾಪಕತ್ವದಿಂದ ಪರಿಪೂರ್ಣವಾಗಿರುವುದು. ದೇಹವೆಂದರೆ ನಾನೇ ಎಂಬ ಈ ಅಭಿಮಾನವು ಮಿಥ್ಯೆಯಾಗಿರುವುದು ॥೨೯೬॥ ವಿಷಯಗಳ ಕಾರ್ಯಸಿದ್ಧಿಯಾಗುವಿಕೆಯು ಮತ್ತು ದೇಹದಲ್ಲಿ ನಾನೆಂಬ ಭಾವನೆ ಇರುವಿಕೆಯು ಇವು ನಿಜವಾಗಿಯೂ ಮಿಥ್ಯೆಯಾಗಿರುವುವು. ಇವುಗಳ ಕಾರಣವಾಗಿ ಸಂಸಾರ ಬಂಧನದಲ್ಲಿ ಸಿಲುಕಲ್ಪಡಬೇಕಾಗುವುದು ॥೨೯೭॥ ಈ ಯಾವ ಕರ್ಮಭೂಮಿಯಲ್ಲಿ ಮನುಷ್ಯ ದೇಹದಂತಹ ಅಮೌಲ್ಯ ನಿಧಿಯು ಲಭ್ಯವಾಗಿದ್ದರೂ ಕೂಡ ಅದರಲ್ಲಿನ ಆಯುಷ್ಯವನ್ನು ವಿಷಯ ಭೋಗಗಳಲ್ಲಿ ಕಳೆದುಕೊಳ್ಳುವರು ॥೨೯೮॥ ಇವರ ಈ ಕೃತ್ಯವು ಹೇಗಾಗಿದೆ ಎಂದರೆ ಅಮೃತವನ್ನು ಮಾರಿ ಗಂಜಿಯನ್ನು ಕುಡಿದಂತೆ ಅಥವಾ ರತ್ನಗಳನ್ನು ಕೊಟ್ಟು ತೌಡು ಪಡೆದಂತೆ ಇಲ್ಲವೇ ಗುಡ್ಡವನ್ನು ಅಗೆದು ಜಿಟ್ಟೆಯನ್ನು ಹಿಡಿದಂತೆ ಹಾಗೂ ಆನೆಯನ್ನು ಕೊಟ್ಟು ಇಟ್ಟಿಗೆ ತೆಗೆದುಕೊಂಡಂತಾಗಿರುವುದು ॥೨೯೯॥ ಕಣ್ಣುಗಳನ್ನು ಒಡೆದುಕೊಂಡು ಅವುಗಳಲ್ಲಿ ಕಾಡಿಗೆ ತುಂಬಿಕೊಂಡಂತೆ, ಅಥವಾ ಮೂಗನ್ನೇ ಕೊಯ್ದುಕೊಂಡು ಹೋಳಿಯ ಹಬ್ಬವನ್ನು ಆಡಿದಂತೆ. ಈ ಪ್ರಕಾರವಾಗಿ ಆತನು ತನ್ನ ನರದೇಹದ ಅವಹೇಳನೆಯನ್ನು ಮಾಡಿದ್ದಲ್ಲದೇ ತನ್ನ ಅಮೌಲ್ಯವಾದ ಮಾನವ ಆಯುಷ್ಯವನ್ನು ನಾಶಮಾಡಿಕೊಂಡನೆಂದು ತಿಳಿಯಬೇಕು ॥೩೦೦॥ ಕೋಟ್ಯಾವಧಿ ಹಣವನ್ನು ಖರ್ಚು ಮಾಡಿದರೂ ಕೂಡ ಇವರಿಗೆ ಈ ನರದೇಹದ ಒಂದು ಕ್ಷಣದಷ್ಟು ಆಯುಷ್ಯವು ಸಿಗುವುದಿಲ್ಲ. ಇಷ್ಟೊಂದು ಅಮೌಲ್ಯವಾಗಿರುವ ಈ ಯಾವ ನರದೇಹದ ಆಯುಷ್ಯವನ್ನು ಆತ್ಮಘಾತಕಿ, ಅಭಾಗ್ಯ ಜನರು ಮೂರ್ಖತನದಿಂದ ವಿಷಯಗಳಿಗಾಗಿ ಖರ್ಚಿಸುತ್ತಿರುವರು ॥೩೦೧॥ ದೇಹವೇ ಇದು ಮೂಲತಃ ಕಾಲ್ಪನಿಕವಾಗಿರುವುದು. ಅಂದಮೇಲೆ ಈ ದೇಹದಲ್ಲಿನ ಅಭಿಮಾನವೂ ಕೂಡ ಕಾಲ್ಪನಿಕವಾಗಿಯೇ ಇರುವುದು. ಇದೇ ಈ ದೇಹಬುದ್ಧಿಯ ಅಹಂಕಾರವಾಗಿರುವುದು ಮತ್ತು ಇದೇ ಜಗತ್ತಿನ ಜನರಿಗೆ ದೃಢವಾದ ಬಂಧನಕ್ಕೆ ಕಾರಣವಾಗಿರುವುದು ॥೩೦೨॥ ಈ ಯಾವ ದೇಹದ ಮೇಲಿರುವ ಅಭಿಮಾನವನ್ನು ಬಿಡಲು ಆಗ ಜನ್ಮ ಎಲ್ಲಿಯದು? ಮತ್ತು ಮರಣವು ಎಲ್ಲಿಯದು ? ಹೀಗೆ ಸಂಸಾರವೇ ಇಲ್ಲದಾಗಲು ಆಗ ಭವಬಂಧನವಾದರೂ ಹೇಗಾಗುವುದು? ॥೩೦೩॥ ಸಣ್ಣ ಮಕ್ಕಳಿಗೆ ತೋರಿಸುವ ಅಂಜಿಕೆಯು ಅವರಿಗೆ ಸತ್ಯವೆಂದು ತೋರುವಂತೆ ಮಿಥ್ಯೆಯಾಗಿರುವ ಈ ದೇಹವನ್ನು ಎಲ್ಲ ಜನರು ಸತ್ಯವೆಂದೇ ತಿಳಿದಿರುವರು ॥೩೦೪॥

ಮಿಥ್ಯಾ ದೇಹೋ ಆಣಿ ದೇಹಬುದ್ಧೀ । ತ್ಯಾಸೀ ಪುಢೇ ಕೈಸೀ ಜನ್ಮಸಿದ್ಧೀ । ಮಿಥ್ಯಾ ಭೂತಾಸೀ ನವ್ಹೇ ವೃದ್ಧೀ । ತೇವಿಖೀಂಚೀ ವಿಧಿ ಹರಿ ಬೋಲೇ ॥೫೦೫॥

ಮಾ ಸ್ವಸ್ಯ ಕರ್ಮಬೀಜೇನ ಜಾಯತೇ ಸೋಽಪ್ಯಂ ಪುನಾಮ್ ।
ಬ್ರಿಯತ ವಾಽಮರೋ ಭ್ರಾಂತ್ಯಾ ಯಥಾಗ್ನಿರ್ದಾರುಸಂಯುತಃ ॥೫೫॥

ಅರ್ಥ:- ಯಾವ ಈ ಭ್ರಾಂತ ಪುರುಷನು ತನ್ನ ಕರ್ಮದ ಬೀಜಮುಖಾಂತರವಾಗಿ ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಆತನು ಅಜನ್ಮ ಮತ್ತು ಅಮರನಾಗಿರುವನು. ಹೀಗಿದ್ದರೂ ಆತನ ಭ್ರಾಂತಿಯಿಂದ ಹುಟ್ಟುವನು ಮತ್ತು ಸಾಯುವನು. ಕಾಷ್ಠದಲ್ಲಿನ ಅಗ್ನಿಯು ಹುಟ್ಟುವುದು ಮತ್ತು ನಾಶವಾಗುವಂತೆ ಇದಾಗಿರುವುದು.

ದೇಹಾತ್ಮವಾದೇ ದೇಹಾಭಿಮಾನ । ಜನೀ ವಾಸನಾಬೀಜ ಗಹನ । ತೇಣೇ ಸ್ವಸಂಕಲ್ಪೇ ಆಪಣ । ಮಾನೀ ಜನ್ಮ ಮರಣ ನಸತೇಚಿ ॥೫೦೬॥ ತೇಣೇ ದೇಹಾಭಿಮಾನೇ ಆಪಣ । ಅಹಂ ಕರ್ಮ ಕರ್ತಾ ಕ್ರಿಯಾಚರಣ । ನಿಷ್ಕರ್ಮಾ ಕರ್ಮಬಂಧನ । ಅಮರಾ ಜನ್ಮ ಮರಣ ಆರೋಪೀ ॥೫೦೭॥ ಥಿಲ್ಲರಾಚೇನಿ ಜಾಹಲೇಪಣೇ । ತ್ಯಾಂತ ಸೂರ್ಯಾಚೇ ಜನ್ಮ ಮಾನಣೇ । ಥಿಲ್ಲರನಾಶೇ ಸೂರ್ಯಾಚೇ ಜಿಣೇ । ನಾಸಲೇ ಮ್ಹಣೇ ಬಾಳಕ ॥೫೦೮॥ ತೇವೀ ಅಜನ್ಮ್ಯಾಸೀ ಜನ್ಮಕರ್ಮ । ಮಾನಿತೀ ತೋ ಮಾಯಿಕ ಭ್ರಮ । ಯೇಚಿವಿಷಯೀ ಪುರುಷೋತ್ತಮ । ದೃಷ್ಟಾಂತ ಸುಗಮ ಸಾಂಗತ ॥೫೦೯॥ ಜೈಸಾ ಅಗ್ನಿ ಅಜನ್ಮಾ ಅವ್ಯಕ್ತ । ತ್ಯಾಸೀ ಕಾಷ್ಠೀ ಜನ್ಮಲಾ ಮ್ಹಣತ । ದಿಸೇ ಕಾಷ್ಠಾಕಾರೇ ಆಕಾರವಂತ । ಕಾಷ್ಠನಾಶೇ ಮಾನೀತ ನಾಶ ತ್ಯಾಸೀ ॥೫೧೦॥ ಯೇಥ ದೇಹಾಸೀಚ ಜನ್ಮ ನಾಶ । ಆತ್ಮಾ ನಿತ್ಯ ಅವಿನಾಶ । ದೇಹಾಅವಸ್ಥಾ ನವವಿಲಾಸ । ಸ್ವಯೇ ಹೃಷೀಕೇಶ ಸಾಂಗತ ॥೫೧೧॥

ನಿಕ್ಷೇಕಗರ್ಭಜನ್ಮಾನಿ ಬಾಲ್ಯಕೌಮಾರಯೌವನಮ್ । ವಯೋಮಧ್ಯಂ ಜರಾ ಮೃತ್ಯುರಿತ್ಯವಸ್ಥಾಸ್ತನೋರ್ನವ ॥೫೬॥

ಅರ್ಥ:- ಉದ್ಧವಾ, ಗರ್ಭದಾನ, ಗರ್ಭವೃದ್ಧೀ, ಜನ್ಮ, ಬಾಲ್ಯಾವಸ್ಥೆ, ಕುಮಾರಾವಸ್ಥೆ, ಯೌವನ, ಪ್ರೌಢಾವಸ್ಥೆ, ವೃದ್ಧಾವಸ್ಥೆ ಮತ್ತು ಮರಣ ಇವು ಒಂಬತ್ತು ಅವಸ್ಥೆಗಳು ಶರೀರದಲ್ಲಿರುವುವು.

ದೇಹೀಂಚ್ಯಾ ಅವಸ್ಥಾ ತ್ಯಾ ನವ । ಐಕ ತಯಾಂಚಾಹೀ ಸ್ವಭಾವ । ಭಿನ್ನ ವಿಭಾಗವೈಭವ । ಯಥಾಗೌರವ ಸಾಂಗೇನ ॥೫೧೨॥ ಪಿತೃದೇಹೀ ಪಾವೋನಿ ಶುಕ್ರತ್ವ । ತೇಥೂನಿ ಜನನೀಜಠರ ಪ್ರಾಪ್ತ । ತ್ಯಾ ನಾಂವ ನಿಷೇಕ ಬೋಲಿಜೇತ । ದೇಹೀಂಚೇ ಹೇ ಯೇಥ ಪ್ರಥಮಾವಸ್ಥಾ ॥೫೧೩॥ ಜನನೀಜಠರೀ ರುಧಿರಯುಕ್ತ । ಮುಸಾವೋನಿ ಖೋಟೀ ಹೋತ । ಕ್ಷಣಾಕ್ಷಣಾ ವೃದ್ಧಿ ಪ್ರಾಪ್ತ । ಗರ್ಭ ತೇ ಯೇಥ ದುಜೀ ಅವಸ್ಥಾ ॥೫೧೪॥

ದೇಹವು ಮತ್ತು ದೇಹಾಭಿಮಾನವು ಮಿಥ್ಯೆಯಾಗಿರಲು ಅದಕ್ಕೆ ಜನ್ಮವು ಹೇಗೆ ಸಂಭವಿಸುವುದು? ಏಕೆಂದರೆ ಮಿಥ್ಯೆಯಾಗಿರುವ ಪದಾರ್ಥಗಳ ಬೆಳವಣಿಗೆಯು ಎಂದಿಗೂ ಆಗಲಾರದು. ಈ ಸಂಬಂಧವಾಗಿ ಈಗ ಸ್ಪಷ್ಟೀಕರಣೆಯನ್ನು ಕೇಳು ॥೫೦೫॥

ದೇಹವೇ ಆತ್ಮವು ಎಂಬ ದೇಹಾತ್ಮವಾದದಿಂದ ಅಭಿಮಾನವು ನಿರ್ಮಾಣವಾಗುವುದು. ಇದರಿಂದ ಜನರಲ್ಲಿ ಗಹನವಾದ ವಾಸನಾ ಬೀಜವು ಹುಟ್ಟಿಕೊಳ್ಳುವುದು. ಮತ್ತು ತನ್ನ ಯಾವ ವಾಸನೆಯ ಸಂಕಲ್ಪದಿಂದಲೇ ಮನುಷ್ಯನು ಇಲ್ಲದ ಜನ್ಮ ಮರಣಕ್ಕೆ ಸತ್ಯವೆನ್ನುವನು ॥೫೦೬॥ ಈ ಯಾವ ದೇಹದ ಅಭಿಮಾನದಿಂದಲೇ ನಾನು ಕರ್ಮ ಕರ್ತನು, ನಿಷ್ಕರ್ಮಕ್ಕೆ ಕರ್ಮ ಬಂಧನವಿದೆ, ಅಮರನಿಗೆ ಜನ್ಮ ಮರಣಗಳಿವೆ ಹೀಗೆಂದು ತಿಳಿಯುವನು ॥೫೦೭॥ ಚಿಕ್ಕ ಮಡುವಿನಲ್ಲಿ ಕೂಡಿರುವ ನೀರಿನಲ್ಲಿ ಸೂರ್ಯನ ಪ್ರತಿಬಿಂಬವು ಕಾಣಿಸುವುದು. ಆಗ ಸೂರ್ಯನು ಜನ್ಮಕ್ಕೆ ಬಂದನು ಮತ್ತು ಮಡುವಿನಲ್ಲಿಯ ನೀರು ಇಲ್ಲದಾಗಲು ಆಗ ಸೂರ್ಯನ ಆಯುಷ್ಯವು ನಾಶವಾಯಿತೆಂದು ಚಿಕ್ಕ ಬಾಲಕನು ಹೇಳುತ್ತಿರುವನು ॥೫೦೮॥ ಈ ಪ್ರಕಾರವಾಗಿ ಅಜನ್ಮನಿಗೆ ಜನ್ಮ ಕರ್ಮವಿದೆ ಎಂದು ತಿಳಿಯುವಿಕೆಯು ಇದು ಮಾಯೆಯ ಭ್ರಮೆಯಾಗಿರುವುದು. ಈ ವಿಷಯವನ್ನು ಕುರಿತು ಶ್ರೀಕೃಷ್ಣನು ಸುಲಭವಾದ ದೃಷ್ಟಾಂತವನ್ನು ಹೇಳುವನು ॥೫೦೯॥ ವಸ್ತುತಃ ಅಗ್ನಿಯು ಅಜನ್ಮವಾಗಿದ್ದು ಅವ್ಯಕ್ತವಾಗಿರುವುದು. ಆದರೆ ಕಾಷ್ಠದಲ್ಲಿ ಹುಟ್ಟಿತೆನ್ನುವರು. ಅಗ್ನಿಯು ಕಾಷ್ಠದ ಆಕಾರದಂತೆ ತೋರುತ್ತಿರುವುದು. ಆದ್ದರಿಂದ ಕಾಷ್ಠವು ಆರಿದಾಕ್ಷಣ ಅಗ್ನಿಯೂ ನಾಶವಾಯಿತೆನ್ನುವರು ॥೫೧೦॥ ಈ ಪ್ರಕಾರವಾಗಿ ದೇಹದ ಜನ್ಮ ಮತ್ತು ಮರಣವಾಗಿರುವುದು. ಆತ್ಮವು ಅವಿನಾಶಿಯಾಗಿರುವುದು. ಈಗ ದೇಹದ ಒಂಬತ್ತು ಅವಸ್ಥೆಗಳನ್ನು ಶ್ರೀಕೃಷ್ಣನು ಹೇಳುತ್ತಿರುವನು ॥೫೧೧॥

ದೇಹದ ಒಟ್ಟು ಒಂಬತ್ತು ಅವಸ್ಥೆಗಳಿರುವುವು. ಅವುಗಳ ಪ್ರಕಾರವನ್ನು ಹೇಳುವೆನು, ಕೇಳು. ಆ ಯಾವ ಭಿನ್ನ ಭಿನ್ನ ವಿಭಾಗಗಳ ವಿಸ್ತಾರವನ್ನೂ ಕೂಡ ಯಥಾಯೋಗ್ಯ ಪದ್ಧತಿಯಲ್ಲಿ ಹೇಳುವೆನು ॥೫೧೨॥ ತಂದೆಯ ಶರೀರದಲ್ಲಿ ವೀರ್ಯರೂಪಕ್ಕೆ ಪ್ರಾಪ್ತನಾಗಿ ತಾಯಿಯ ಗರ್ಭದಲ್ಲಿ ಪ್ರವೇಶ ಮಾಡುವುದಕ್ಕೆ ನಿಷೇಕವೆಂದು ಕರೆಯುವರು. ಇದು ದೇಹದ ಮೊದಲನೆಯ ಅವಸ್ಥೆಯಾಗಿರುವುದು ॥೫೧೩॥ ತದನಂತರ ತಾಯಿಯ ಗರ್ಭದಲ್ಲಿ ರಕ್ತದಿಂದ ಕೂಡಿಕೊಂಡು ಪಿಂಡರೂಪ ತಾಳಿ ಪ್ರತಿಕ್ಷಣ ಬೆಳೆಯುತ್ತಿರುವುದು. ಹೀಗೆ ಗರ್ಭದಲ್ಲಿರುವಿಕೆಗೆ ದೇಹದ ಎರಡನೆಯ ಅವಸ್ಥೆಯಾಗಿರುವುದು ॥೫೧೪॥

ಪ್ರಸೂತಿವಾತಾಚ್ಯಾ ಆಘಾತೀ । ಉದರಾಬಾಹೇರ ಉತ್ಪತ್ತೀ । ತ್ಯಾ ನಾಂವ ಜನ್ಮ ಬೋಲತೀ । ಜಾಣ ನಿಶ್ಚಿತೀ ತಿಜೀ ಅವಸ್ಥಾ ॥೫೧೫॥ ಅತಿಶಯೇ ಆವಡೇ ಸ್ತನಪಾನ । ಮುಖ್ಯತ್ವೇ ಮಾತಾಚಿ ಪ್ರಾಧಾನ್ಯ । ರುದನಾಚೇ ಬಳ ಸಂಪೂರ್ಣ । ತೇ ಚೌಥೀ ಜಾಣ ಬಾಲ್ಯಾವಸ್ಥಾ ॥೫೧೬॥ ಮಳಮೂತ್ರೀ ಲೋಳೇ ಅಜ್ಞಾನ । ಗೂಢೇಂದ್ರಿಯ ವಿವೇಕಶೂನ್ಯ । ಗೋಡ ಗೋಜಿರೇ ಕಲಭಾಷಣ । ಪಂಚಹಾಯನ ಬಾಲ್ಯಾವಸ್ಥಾ ॥೫೧೭॥ ಇಂದ್ರಿಯೀ ಚೇತನಾ ವಾಢತ । ಪರೀ ಪೋಟೀ ನಾಹೀ ವಿಷಯಸ್ವಾರ್ಥ । ಖೇಳಾವರೀ ಆಸಕ್ತ ಚಿತ್ತ । ತೇ ಪಾಂಚವೀ ಯೇಥ ಕುಮಾರಾವಸ್ಥಾ ॥೫೧೮॥ ಯಾ ಉಪರೀ ತರುಣಪಣ । ಇಂದ್ರಿಯಸಾಮರ್ಥ್ಯ ಸಂಪೂರ್ಣ । ಮೀ ಶಹಾಣಾ ಮೀ ಸಜ್ಞಾನ । ದೇಹೀ ದೇಹಾಭಿಮಾನ ಮುಸಮುಶೀ ॥೫೧೯॥ ತೇಥ ಸ್ತ್ರೀಕಾಮ ಆವಡೇ ಚಿತ್ತೀ । ಧನಕಾಮಾಚೀ ಅತಿಪ್ರೀತೀ । ದೇಹಗೇಹಾಂಚೀ ಆಸಕ್ತೀ । ನಾಮರೂಪಾಚೀ ಖ್ಯಾತೀ ಲೌಕಿಕೀ ಮಿರವೀ ॥೫೨೦॥ ಶ್ರೀಮದೇ ಗರ್ವಿತಮಾನಸ । ಸ್ತ್ರೀಪುತಾಂಚಾ ಅತಿ ಉಲ್ಹಾಸ । ತೃಷ್ಣಾ ದುರ್ಧರ ಅತಿಸೋಸ । ಕಾಮಕ್ರೋಧಾಂಚಾ ಬಹುವಸ ವಳಸಾ ಭೋವೇ ॥೫೨೧॥ ನ ಸಾಹೇ ನೋಕಿಲೇಪಣ । ''ತೂ'' ಮ್ಹಣತಾ ಟಾಕೀ ಪ್ರಾಣ । ತೇ ಸಹಾವೀ ಅವಸ್ಥಾ ಜಾಣ । ತರುಣಪಣ ಅನರ್ಥ ॥೫೨೨॥ ಪಂಧರಾಪಾಸೋನಿ ಪಂಚವೀಸ । ಪೂರ್ಣ ತರುಣಪಣಾಚಾ ಪೈಸ । ತೇಥ ನಾನಾವಿಕಾರೀ ಮಾನಸ । ನಾಂದವೀ ಸಾವಕಾಶ ದೇಹಾಭಿಮಾನ ॥೫೨೩॥ ಚಾಳಿಸಾಪಾಸೋನಿ ಸಾಠೀವರೀ । ದೇಹೀ ಉತ್ತರವಯಾಸಾ ಪುರೀ । ಝುರಡೀ ಪಡೋ ಲಾಗೇ ಶರೀರೀ । ಇಂದ್ರಿಯಶಕ್ತೀ ಕರೀ ಪ್ರಾಶನ ಕಾಳ ॥೫೨೪॥ ಕ್ಷೀಣಪಣಾಚಾ ಸುಮುಹೂರ್ತ । ಕಾಳ ಆರಂಭ ಕರೀ ಜೇಥ । ತೇ ಹೇ ಉತ್ತರಾವಸ್ಥಾ ಯೇಥ । ಜಾಣ ನಿಶ್ಚಿತ ಸಾತವೀ ॥೫೨೫॥ ತಿಚೀ ಹಾತಧರಣೀ ಜರಾ । ಕಾಂಪವೀತಸೇ ಸುಭಟಾ ನರಾ । ಭೋಗ ನ ಸಾಹೇ ಶರೀರಾ । ಇಂದ್ರಿಯವ್ಯಾಪಾರಾಹಾರಾಸೀ ॥೫೨೬॥ ಅಸ್ತವ್ಯಸ್ತ ಕೇಲಾ ಶರೀರವೇಶ । ದಾಂತಾಳೀ ಪಾಡಿಲೀ ವೋಸ । ಭೇಣೇ ಪಾಲಟೇ ಕೇಶ । ಧಾಕೇ ಸೀಸ ಕಾಂಪತ ॥೫೨೭॥

ಆ ಮೇಲೆ ಪ್ರಸೂತಿಯ ವಾಯುಯೋಗದಿಂದ ತಾಯಿಯ ಗರ್ಭದಿಂದ ಹೊರಬರುವಿಕೆಗೆ ಜನ್ಮವೆಂದು ಕರೆಯುವರು. ಇದು ದೇಹದ ಮೂರನೆಯ ಅವಸ್ಥೆಯಾಗಿರುವುದು ॥೫೧೫॥ ಸ್ತನಪಾನದಲ್ಲಿ ಅತಿಯಾದ ಪ್ರೀತಿ, ತಾಯಿಯ ಪ್ರೇಮದ ಅತಿಶಯ ಪ್ರಾಧಾನ್ಯ, ಅಳುವಿಕೆಯ ಪೂರ್ಣ ಬಲ, ಈ ಪ್ರಕಾರದ ಯಾವ ಈ ಬಾಲ್ಯವು ದೇಹದ ನಾಲ್ಕನೆಯ ಅವಸ್ಥೆಯಾಗಿರುವುದು ॥೫೧೬॥ ಕೇವಲ ಅಜ್ಞಾನದಿಂದ ಮಲಮೂತ್ರಗಳಲ್ಲಿ ಉರುಳಾಡುತ್ತಿರುವುದು, ಸರ್ವ ಇಂದ್ರಿಯಗಳ ಶಕ್ತಿಯು ಗುಪ್ತವಾಗಿರುವುದು, ವಿಚಾರ, ವಿವೇಕವು ತಿಳಿಯದೇ ಇರುವುದು, ಮಧುರ, ಕೋಮಲವಾದ ತೊದಲು ಮಾತು ನುಡಿಯುವುದು. ಇದು ಐದು ವರ್ಷದ ಬಾಲ್ಯಾವಸ್ಥೆಯಾಗಿರುವುದು ॥೫೧೭॥ ತದನಂತರ ಇಂದ್ರಿಯಗಳ ಶಕ್ತಿಯು ಬೆಳೆಯುತ್ತಿರುವುದು. ಆದರೆ ಚಿತ್ತದಲ್ಲಿ ವಿಷಯಗಳ ಸ್ವಾರ್ಥವಿರುವುದಿಲ್ಲ. ಕಾರಣ ಆಟಗಳಲ್ಲಿ ಚಿತ್ತವು ಆಸಕ್ತಗೊಂಡಿರುವುದು. ಇದು ಯಾವ ಈ ದೇಹದ ಐದನೆಯ ಕುಮಾರಾವಸ್ಥೆಯಾಗಿರುವುದು ॥೫೧೮॥ ತದನಂತರ ಇಂದ್ರಿಯಗಳಲ್ಲಿ ಶಕ್ತಿಯು ಬೆಳೆಯುತ್ತ ಸಾಗುವುದು. ತಾರುಣ್ಯದಲ್ಲಿ ಇಂದ್ರಿಯಗಳು ಪ್ರಬಲವಾಗುವುವು. ನಾನು ಎಲ್ಲ ಬಲ್ಲವನು, ನಾನು ಜ್ಞಾನಿಯು ಹೀಗೆ ಹೇಳುತ್ತ ದೇಹಾಭಿಮಾನವು ನಿರ್ಮಾಣವಾಗುವುದು ॥೫೧೯॥ ಈ ವಯಸ್ಸಿನಲ್ಲಿ ಮನಸ್ಸಿಗೆ ಸ್ತ್ರೀಪ್ರೇಮವು ನಿರ್ಮಾಣವಾಗುವುದು. ಹಣದ ಅತಿಶಯ ಲೋಭವು ಬೆಳೆಯುತ್ತಿರುವುದು. ದೇಹ, ಮನೆಮಾರು ಇತ್ಯಾದಿಕಗಳಲ್ಲಿ ಆಸಕ್ತಿಯು ವೃದ್ಧಿಯಾಗುವುದು. ಲೌಕಿಕದಲ್ಲಿ, ವ್ಯವಹಾರಗಳಲ್ಲಿ ನಾಮರೂಪಗಳು, ಕೀರ್ತಿ ಹೊಂದುವ ಆಶೆಯುಂಟಾಗುವುದು ॥೫೨೦॥ ಐಶ್ವರ್ಯದ ಮದದಿಂದ ಗರ್ವವು ಬೆಳೆಯುತ್ತಿರುವುದು. ಹೆಂಡತಿ, ಮಕ್ಕಳಲ್ಲಿ ಅತ್ಯಂತ ಪ್ರೇಮವು ಹೆಚ್ಚಾಗುತ್ತಿರುವುದು. ಆಶೆ-ತೃಷ್ಣೆಗಳು ಅಧಿಕಗೊಳ್ಳುವುವು. ಕಾಮ ಕ್ರೋಧಗಳ ಸುತ್ತು ಸುತ್ತುತ್ತಿರುವುವು ॥೫೨೧॥ ಯಾರಾದರೂ ಸ್ವಲ್ಪ ಮಾತ್ರ ಅಪಮಾನ ಮಾಡಿದರೆ ಅದನ್ನು ಸಹಿಸುವುದಾಗುವುದಿಲ್ಲ. ''ನೀನು'' ಇಂತಹವನು ಎಂದು ಹೇಳಿದರೆ ಅವರ ಜೀವವನ್ನೇ ತೆಗೆದುಕೊಳ್ಳಲು ಹೊರಡುವನು. ಇಂತಹ ಅನರ್ಥಕಾರಕ ತಾರುಣ್ಯಾವಸ್ಥೆಯು ಇದು ದೇಹದ ಆರನೆಯ ಅವಸ್ಥೆಯಾಗಿರುವುದು ॥೫೨೨॥ ಹದಿನೈದನೆಯ ವರ್ಷದಿಂದ ಇಪ್ಪತ್ತೈದು ವರ್ಷಗಳವರೆಗೆ ತಾರುಣ್ಯದ ಪೂರ್ವಸ್ಥಿತಿಯು ಇರುವುದು. ಈ ಅವಧಿಯಲ್ಲಿ ದೇಹದ ಅಭಿಮಾನವು ಮನದಲ್ಲಿ ನಾನಾ ಪ್ರಕಾರವಾಗಿ ವಿಕಾರವಾಗುತ್ತಿರುವುದು ॥೫೨೩॥ ತದನಂತರ ವಯಸ್ಸಿನ ನಲವತ್ತು ವರ್ಷಗಳಿಂದ ದೇಹದ ಶಕ್ತಿಯು ಇಳಿಮುಖವಾಗುವುದು. ಶರೀರದಮೇಲೆ ಮಡಿಕೆಗಳು ಬೀಳುವುವು, ಶರೀರವು ಕ್ಷೀಣವಾಗುತ್ತಿರುವುದು. ಇಂದ್ರಿಯಗಳ ಶಕ್ತಿಯನ್ನು ಈ ಯಾವ ಕಾಲನು ತಿಂದುಬಿಡುವನು ॥೫೨೪॥ ಆಗ ಕಾಲನು ಯೋಗ್ಯ ವೇಳೆಯಲ್ಲಿ ಶರೀರವನ್ನು ಕ್ಷೀಣಮಾಡಲು ಆರಂಭಿಸುವನು. ಇದು ದೇಹದ ನಿಜವಾಗಿಯೂ ಏಳನೆಯ ಉತ್ತರಾವಸ್ಥೆಯಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು ॥೫೨೫॥ ಈ ಅವಸ್ಥೆಯ ಕೈ ಹಿಡಿದು ಮುಂದೆ ಬರುವ ವಾರ್ಧಕ್ಯ ಅವಸ್ಥೆಯು ಇದು ಮಹಾ ಮಹಾ ಶೂರವೀರರನ್ನು ನಡುಗಿಸುವುದು. ಇಂದ್ರಿಯಗಳ ವ್ಯಾಪಾರವು ಶಿಥಿಲಗೊಳ್ಳುವುದು. ಈ ಕಾರಣವಾಗಿ ಶರೀರಕ್ಕೆ ಸುಖೋಪಭೋಗಗಳನ್ನು ಭೋಗಿಸಲು ಬಾರದಂತಾಗುವುದು ॥೫೨೬॥ ಈ ಯಾವ ವೃದ್ಧಾವಸ್ಥೆಯು ಶರೀರದ ರಚನೆಯನ್ನು ಅಸ್ತವ್ಯಸ್ತವನ್ನಾಗಿ ಮಾಡುವುದು. ಹಲ್ಲುಗಳ ಮಧ್ಯ ಖಿಂಡಿಗಳು ಉಂಟಾಗುವುವು. ಭಯದಿಂದ ಕೂದಲುಗಳು ಬೆಳ್ಳಗಾಗುವುವು. ಹೆದರಿಕೆಯಿಂದ ತಲೆಯು ನಡುಗುತ್ತಿರುವುದು ॥೫೨೭॥

ಶರೀರಜರಾ ಕರೀ ಕ್ಷೀಣ । ತರೀ ವಿಷಯಾವಸ್ಥಾ ಅತಿಗಹನ । ಚಿಂತಾ ಅನಿವಾರ ದಾರುಣ । ತೃಷ್ಣಾ ಅಪೂರ್ಣ ಸರ್ವದಾ ।।೩೨೮।। ತೇಜ ಸಾಂಡೂನಿ ಜಾಯ ನಯನಾ । ಟಾಳೀ ಪಡೋನಿ ಠಾತೀ ಕಾನಾ । ಮುಖೀ ಲಾಗೇ ಚೋರಪಾನ್ಹಾ । ತರೀ ದೇಹಾಭಿಮಾನಾ ವಾಢವೀ ।।೩೨೯।। ಜರಾ ಪಾವಲಿಯಾ ನಿಜಸಂಧೀ । ಅನಿವಾರ ಯೇತೀ ಆಧಿವ್ಯಾಧೀ । ಮಹಾಮೋಹೇ ವ್ಯಾಪಿಜೇ ಬುದ್ಧೀ । ವಿವೇಕ ತ್ರಿಶುದ್ಧೀ ಬುಡಾಲಾ ।।೩೩೦।। ಪಾಯಾ ಪಡೇ ವೇಂಗಡೀ । ಆಧಾರ ಟೇಂಕಣ ಲಾಂಕುಡೀ । ವಾಚಾ ಲಫಲಫೀ ಜಡತ್ವೇ ಗಾಢೀ । ಹಾಲೇ ಹೋಂಟಾಚಿ ಜೋಡೀ ಉಂದಿರಪ್ರಾಯ ।।೩೩೧।। ಡೋಳಾ ಚಿಪಡೀ ತೋಂಡ ಭರೇ । ನಾಕೀಂಚೀ ಲೋಳೀ ವೋರೀ ಉತರೇ । ಮುಖೀಂಚೇ ಲಾಳೇಚಿಯಾ ಧಾರೇ । ಥಿಬಥಿಬಿಜೇ ಉರೇ ಚಿಕಟೋನೀ ।।೩೩೨।। ಚುಂಬನ ಮಾಗೇನಾ ತೋಂಡಾಪ್ರತೀ । ತೀ ಥುಂಕಾ ಮ್ಹಣೋನಿ ದೂರ ಪಳತೀ । ಉಸಂತ ನಾಹೀ ಖೋಕಲ್ಯಾಹಾತೀ । ಶ್ವಾಸ ಕಾಸ ಉಠತೀ ಅನಿವಾರ ।।೩೩೩।। ಶರೀರೀ ಥರಕಂಪ ಉಠೀ । ತರೀ ದೇಹಾಭಿಮಾನ ದೃಢ ಪೋಟೀ । ಅವಘ್ಯಾಂತೇ ಮ್ಹಣೇ ಧಾಕುಟೀ । ಸಾಂಗೇ ಜುನಾಟ ಗೋಷ್ಟೀ ಮೋಠಮೋಠ್ಯಾ ।।೩೩೪।। ಅಧೋವಾತಾಚೇ ವಾವಧಾನ । ಅನಿವಾರ ಸುಟೇ ಜಾಣ । ಜೀವೇ ಜಿತಾ ವಿಟಂಬಣ । ಹೇ ಜರಾ ಜಾಣ ಆಠವೀ ಅವಸ್ಥಾ ।।೩೩೫।। ಜೇವೀ ಸುಈಮಾಗೇ ದೋರಾ ಜಾಣ । ತೇವೀ ಜರೇಸವೇ ಅಸೇ ಮರಣ । ಜರಾ ಶರೀರ ಪಾಡೀ ಕ್ಷೀಣ । ತಂವ ವಾಜೇ ನಿಶಾಣ ಮೃತ್ಯೂಚೇ ।।೩೩೬।। ದೇಹಿಂಚ್ಯಾ ತುಟಲ್ಯಾ ನಾಡೀ । ವಾಚಾ ಹೋ ಲಾಗೇ ಬೋಬಡೀ । ತರೀ ದೇಹಾಚೀ ಧರೀ ಗೋಡೀ । ಅಧಿಕ ಆವಡೀ ಸ್ತ್ರೀಪುತ್ರಾಂಚೀ ।।೩೩೭।। ಮಜಮಾಗೇ ಹೇ ಅನಾಥೇ । ಕೋಣ ಸಾಂಭಾಳೀಲ ಯಾಂತೇ । ಪೋಟಾಸೀ ಧರೋನಿ ತ್ಯಾಂತೇ । ರಡೇ ಬಹುತೇ ಆಕ್ರೋಶೇ ।।೩೩೮।। ದ್ರವ್ಯಲೋಭ ಅತಿಕಠಿಣ । ಅಂತೀ ನ ವೇಚೀ ಆಪಣ । ದೂರೀ ಕರೂನಿ ಇತರ ಜನ । ಸಾಂಗೇ ಉಣಖೂಣ ಠೇವ್ಯಾಚೀ ।।೩೩೯।। ನವಲ ವಾಸನಾವಿಂದಾನ । ವಿಸರೋನ ದೇಹಾಚೇ ಸ್ಮರಣ । ಸರ್ವಸ್ವೇ ಜೇ ಧರಿಜೇ ಆಠವಣ । ತೇಚಿ ಆಪಣ ದೃಢ ಹೋಯ ।।೩೪೦।।

ವಾರ್ಧಕ್ಯವು ಶರೀರವನ್ನು ಕ್ಷೀಣಿಸಿಬಿಡುವುದು. ಹೀಗಾದರೂ ಕೂಡ ವಿಷಯಗಳ ಅಪೇಕ್ಷೆಯು ಅತಿಯಾಗಿ ಬೆಳೆಯುತ್ತಿರುವುದು. ಚಿಂತೆಗಳು ಅನಿವಾರ್ಯವಾಗಿ ಭಯಂಕರ ಸ್ವರೂಪವಾಗುವುವು. ಆಸೆಯು ಮಾತ್ರ ಎಂದಿಗೂ ತೃಪ್ತವಾಗುವುದೇ ಇಲ್ಲ ।।೩೨೮।। ಕಣ್ಣುಗಳಲ್ಲಿನ ತೇಜವು ಹೊರಟು ಹೋಗುವುದು. ಕಿವಿಗಳು ಮಂದಾಗುವುವು. ಮುಖದಿಂದ ಜೊಲ್ಲು ಸೋರುತ್ತಿರುವುದು. ಇಂತಹ ಅವಸ್ಥೆಯು ಪ್ರಾಪ್ತವಾದರೂ ಕೂಡ ಇವನು ತನ್ನ ದೇಹಾಭಿಮಾನವನ್ನು ಬೆಳೆಸುತ್ತಲೇ ಇರುವನು ।।೩೨೯।। ಈ ಮುಪ್ಪು ಶರೀರಕ್ಕೆ ಆವರಿಸುತ್ತಲೇ ಅನೇಕ ಪ್ರಕಾರದ ಶಾರೀರಿಕ, ಮಾನಸಿಕ ದುಃಖಗಳು ಉದ್ಭವವಾಗುವುವು. ಮೋಹದಿಂದ ಬುದ್ಧಿಯು ಸಿಲುಕಿಕೊಳ್ಳುವುದು. ವಿಚಾರಗಳು ಮಾತ್ರ ಎಲ್ಲವೂ ಶೂನ್ಯವಾಗಿಬಿಡುವುವು ।।೩೩೦।। ನಡೆಯುತ್ತಿರಲು ಝೋಲಿ ಹೋಗುತ್ತ ಕಾಲಿನಲ್ಲಿ ಕಾಲು ತೊಡರಾಗುವುದು. ಆದ್ದರಿಂದ ಆಧಾರಕ್ಕಾಗಿ ಕೋಲನ್ನು ಹಿಡಿಯಬೇಕಾಗುವುದು. ನಾಲಿಗೆಯು ಜಡವಾಗುವುದು. ಆದ್ದರಿಂದ ಮುಖದಲ್ಲಿ ಶಬ್ದಗಳು ಸರಿಯಾಗಿ ಹೊರಡುವುದಿಲ್ಲ. ಎರಡೂ ತುಟಿಗಳು ಇಲಿಯಂತೆ ಅಲುಗಾಡುತ್ತಿರುವುವು ।।೩೩೧।। ಕಣ್ಣುಗಳಲ್ಲಿ ಪಿಚ್ಚು ತುಂಬುವುದು. ಮುಖದಿಂದ ಜೊಲ್ಲು ಸೋರುತ್ತಿರುವುದು. ಮೂಗಿನಿಂದ ಬರುವ ತಿಳಿ ಸಿಂಬಳ ತುಟಿಗಳ ಮೇಲೆ ಹರಿಯುತ್ತಿರುವುದು. ಮುಖದಿಂದ ಆಗಾಗ ಸೋರುತ್ತಿರುವ ಜೊಲ್ಲು ಎದೆಗೆ ಅಂಟಿಕೊಳ್ಳುತ್ತಿರುವುದು ।।೩೩೨।। ಇವನು ಚುಂಬಿಸಬೇಕೆಂದು ಕರೆಯಲು ಆಗ ಸ್ತ್ರೀ ಪುತ್ರರು ಹೊಲಸಾದ ಜೊಲ್ಲಿಗೆ ಹೇಸಿಗೆ ಮಾಡುತ್ತ ದೂರ ದೂರ ಓಡಿ ಹೋಗುವರು. ಮೇಲಿಂದ ಮೇಲೆ ಕೆಮ್ಮುತ್ತ ಅದಕ್ಕೆ ವಿಶ್ರಾಂತಿಯೇ ದೊರೆಯದಂತಾಗುವುದು. ದಮ್ಮಿನಿಂದ ಗೋಳಾಡುತ್ತ ಕೆಮ್ಮುತ್ತಲೇ ಇರುವನು ।।೩೩೩।। ಶರೀರವು ಥರಥರ ನಡುಗುತ್ತಿರುತ್ತದೆ. ಇಷ್ಟಾದರೂ ಕೂಡ ಅವನ ಮನದಲ್ಲಿ ದೇಹಾಭಿಮಾನವು ಬೆಳೆಯುತ್ತಲೇ ಇರುವುದು. ಎಲ್ಲರನ್ನೂ ಇವನು ''ಇವರು ನನ್ನ ಮುಂದಿನ ಕೂಸುಗಳು'' ಎಂದು ಹೇಳುತ್ತ ತನ್ನ ಹಿಂದಿನ ಹಳೆಯ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಿರುವನು ।।೩೩೪।। ಅಪಾನ ವಾಯುವಿನ ವಾದ್ಯವು ಸದಾ ಬಾರಿಸುತ್ತಲೇ ಇರುವುದು. ಈ ಪ್ರಕಾರವಾಗಿ ಜೀವಂತನಾಗಿರುವಾಗಲೇ ಅವಹೇಳನ ಮಾಡುತ್ತಿರುವ ಈ ಮುಪ್ಪುತನದ ವೃದ್ಧಾವಸ್ಥೆಯು ಶರೀರದ ಎಂಟನೆಯ ಅವಸ್ಥೆಯಾಗಿರುವುದು. ಹೀಗೆಂದು ತಿಳಿ ।।೩೩೫।। ಸೂಜಿಯ ಹಿಂದೆ ದಾರವು ಪೋಣಿಸಿದಂತೆ ಈ ವೃದ್ಧಾವಸ್ಥೆಯ ಹಿಂದೆ ಮರಣವು ಬಾಯಿತೆರೆದು ನಿಂತಿರುವುದು. ಈ ಮುಪ್ಪು ಶರೀರವನ್ನು ದುರ್ಬಲಗೊಳಿಸುವುದು. ಮೃತ್ಯುವಿನ ನಗಾರೆಯು ಬಾರಿಸುತ್ತಿರುವುದು ।।೩೩೬।। ಶರೀರದಲ್ಲಿನ ನಾಡಿಗಳು ತೊಡರಾಗುವುವು, ನಾಲಿಗೆಯು ತೊದಲಾಗುವುದು, ಹೀಗಾದರೂ ಕೂಡ ಇವನಲ್ಲಿ ಶರೀರದ ಮೇಲೆ ಬಲು ಪ್ರೀತಿ ಇರುವುದು. ಅವನ ಸ್ತ್ರೀ ಪುತ್ರರ ಪ್ರೇಮವು ಬೆಳೆಯುತ್ತಲೇ ಸಾಗಿರುವುದು ।।೩೩೭।। ನಾನು ಹೋದ ಮೇಲೆ ಇವರನ್ನು ಯಾರು ಸಂಭಾಳಿಸಬೇಕು ? ಇವರೆಲ್ಲರೂ ಅನಾಥರಾಗುವರಲ್ಲಾ? ಎಂದು ಅವರನ್ನು ಅಪ್ಪಿಕೊಂಡು ದೊಡ್ಡ ಧ್ವನಿಯಿಂದ ಬಿಕ್ಕಿ ಬಿಕ್ಕಿ ಅಳಲಾರಂಭಿಸುವನು ।।೩೩೮।। ಇವನ ಧನಲೋಭವೂ ಕೂಡ ಹೆಚ್ಚಾಗಿರುವುದು. ಮರಣ ಸಮಯ ಬಂದರೂ ಸಹ ಅದರಲ್ಲಿನ ಪೈಸೆಯನ್ನೂ ಖರ್ಚಿಸಲಾರನು. ಇತರ ಪರಕೀಯರನ್ನು ದೂರ ಸರಿಸಿ, ತನ್ನ ವರೆದುರಿನಲ್ಲಿ ತನ್ನ ಸಂಪತ್ತಿನ ಗುರ್ತು ಮಾಡಿ ಹೇಳುತ್ತಿರುವನು ।।೩೩೯।। ವಾಸನೆಯ ಚಮತ್ಕಾರವು ಮಾತ್ರ ಅತಿಶಯವಾಗಿ ವಿಲಕ್ಷಣವಾಗಿರುವುದು. ದೇಹವನ್ನು ಮರೆತು ಸರ್ವಭಾವದಿಂದ ಆತನು ಯಾವುದರಲ್ಲಿ ಆಸಕ್ತಿಯನ್ನಿಡುವನೋ, ಅದೇ ತಾನು ಸ್ವತಃ ಆಗುವನು ।।೩೪೦।।

ಯಾ ದೇಹಾಚೀ ನಿಃಶೇಷ ಆಠವಣ । ತೇ ನಾಠವಣೇ ಸವೇಚಿ ಜಾಣ । ಚೇತನಾಸಹಿತ ಜಾಯ ಪ್ರಾಣ । ಯಾ ನಾಂವ ಮರಣ ದೇಹಾಚೇ ।।೫೪೧।। ಏವಂ ಗರ್ಭಾದಿ ಮರಣಾಂತಾ । ಯಾ ದೇಹೀಂಚ್ಯಾ ನವ ಅವಸ್ಥಾ । ಯೇಥ ಆತ್ಮ್ಯಾಚೀ ಅಲಿಪ್ತತಾ । ಸ್ವಭಾವತಾ ದೇಹಾಸೀ ।।೫೪೨।। ದೇಹಅವಸ್ಥಾ ವಿಕಾರವಂತಾ । ಆತ್ಮಾ ಅಲಿಪ್ತ ಅವಿಕಾರತಾ । ಮ್ಹಣಸೀ ದೇಹವಿಕಾರಾ ಜಡತಾ । ಯಾಸೀ ವಿಕಾರತಾ ಘಡೇ ಕೇವೀ ।।೫೪೩।। ಸೂರ್ಯ ಥಾಪಟೂನಿ ಜನ । ಕದಾ ನುಠವೀ ಆಪಣ । ತೋ ಪ್ರಕಾಶತಾಂಚಿ ಜಾಣ । ಸಹಜೇ ಜನ ಚೇವತೀ ।।೫೪೪।। ತ್ಯಾ ಜನಾಚೀ ಕರ್ಮಕರ್ತವ್ಯತಾ । ಸೂರ್ಯಾಅಂಗೀ ನ ಲಗೇ ಸರ್ವಥಾ । ತೇವೀ ಪ್ರಕಾಶೋನಿ ವಿಕಾರತಾ । ಅಲಿಪ್ತ ತತ್ತ್ವತಾ ನಿಜಾತ್ಮಾ ।।೫೪೫।। ಝಾಲಿಯಾ ಸೂರ್ಯಕಿರಣ ಪ್ರಾಪ್ತ । ಜೇವೀ ಅಗ್ನಿ ಸ್ರವೇ ಸೂರ್ಯಕಾಂತ । ತೇಣೇ ಯಾಗ ಕಾ ದಾಘ ಹೋತ । ತ್ಯಾ ಕರ್ಮಾತೀತ ಸೂರ್ಯ ಜೈಸಾ ।।೫೪೬।। ತೇವೀ ಚಿತ್ಪ್ರಕಾಶೇ ಮನ । ಶುಭಾಶುಭ ಕರ್ಮೇ ಕರೀ ಜಾಣ । ತ್ಯಾ ಮನೋವಿಕಾರಾ ಚಿದ್ಘನ । ಅಲಿಪ್ತ ಜಾಣ ನಿಜಾತ್ಮಾ ।।೫೪೭।। ಯೇಥ ಮನಃ ಕೃತ ವಿಕಾರ ಪೂರ್ಣ । ಮನಃಕೃತ ಕರ್ಮಾಕರ್ಮ ಜಾಣ । ಮನಃಕೃತ ಜನ್ಮ ಮರಣ। ಸ್ವರ್ಗ ನರಕಗಮನ ಮನಃಕೃತ ।।೫೪೮।। ಮನಃಕೃತ ಲಕ್ಷ್ಯಾಲಕ್ಷ್ಯ । ಮನಃಕೃತ ಬಂಧಮೋಕ್ಷ । ತೇಚಿ ನಿರೂಪಣ ಪ್ರತ್ಯಕ್ಷ । ಶ್ರೀಕೃಷ್ಣ ಅಧ್ಯಕ್ಷ ಸಾಂಗತ ।।೫೪೯।।

ಏಕಾ ಮನೋರಥಮರ್ಯಾರ್ಹ್ಯನ್ಯಸ್ಯೋಚ್ಚಾವಚಾಸ್ತನೂಃ । ಗುಣಸಂಗದುಪಾದತ್ತೇ ಕ್ವಚಿತ್ಕಶ್ಚಿಜ್ಜಹಾತಿ ಚ ।೪೭।।

ಅರ್ಥ:- ಈ ಶರೀರವು ಜೀವಕ್ಕಿಂತ ಭಿನ್ನವಾಗಿರುವುದು ಮತ್ತು ಅದರ ಉಚ್ಚ ನೀಚ ಅವಸ್ಥೆಗಳು ಮನೋರಥದ ಅನುಸಾರವಾಗಿರುವುವು. ಆದರೆ ಅಜ್ಞಾನದಿಂದ ಗುಣಗಳ ಸಂಗದಿಂದ ಜೀವವು ಈ ಎಲ್ಲವೂ ನನ್ನದೇ ಎಂದು ತಿಳಿದು ಓಡಾಡುತ್ತಿರುವುದು. ಆದರೆ ಎಂದಾದರೂ ಅದಕ್ಕೆ ವಿವೇಕವು ಉತ್ಪನ್ನವಾಗಲು ಅವುಗಳನ್ನು ಬಿಟ್ಟುಬಿಡುವುದು.

ಸಂಸಾರವಿಕಾರಾಚೇ ಭಾನ । ಅಭಿಮಾನಯುಕ್ತ ಕರೀ ಮನ । ಸ್ವರ್ಗನರಕ ಗಮನಾಗಮನ । ದೇಹಾಭಿಮಾನ ಭೋಗವೀ ।।೫೫೦।। ಆತ್ಮಾ ಯಾಹೂನಿ ಸಹಜೇ ಭಿನ್ನ । ಚಿನ್ಮಾತ್ರೈಕ ಚಿದ್ಘನ । ತೇಥ ಆತಳೋ ನ ಶಕೇ ಮನ । ಶುದ್ಧೀ ಅಭಿಮಾನ ಅಸೇನಾ ।।೫೫೧।।

ಯಾವ ದೇಹದ ಪೂರ್ಣ ಸ್ಮರಣೆಯಾಗುವುದೋ, ಅಕಸ್ಮಾತಾಗಿ ಅದರ ವಿಸ್ಮರಣೆಯಾಗಲು ಇದಕ್ಕೇನೇ ದೇಹದ ಮರಣವೆಂದು ಹೇಳುವರು ।೫೪೧।। ಈ ಪ್ರಕಾರವಾಗಿ ಗರ್ಭದಿಂದ ಹಿಡಿದು ಮರಣದವರೆಗೆ ದೇಹದ ನಿಷೇಕ, ಗರ್ಭ, ಜನ್ಮ, ಬಾಲ್ಯ, ಕೌಮಾರ, ಯೌವನ, ತಾರುಣ್ಯ, ಜರಾ ಮತ್ತು ಮೃತ್ಯು ಹೀಗೆ ಒಂಬತ್ತು ಅವಸ್ಥೆಗಳಿರುವುವು. ಈ ದೇಹದಿಂದ ಆತ್ಮವು ಸ್ವಭಾವತವೇ ಅಲಿಪ್ತವಾಗಿರುವುದು ।೫೪೨।। ಯಾವುದು ವಿಕಾರಿಯೋ ಅದಕ್ಕೆ ಮಾತ್ರ ದೇಹದ ಅವಸ್ಥೆಗಳಿರುವುವು. ಆತ್ಮವು ಅವಿಕಾರಿಯಾಗಿರುವುದರಿಂದ ಅದು ಈ ಅವಸ್ಥೆಗಳಿಂದ ಅಲಿಪ್ತವಾಗಿರುವುದು. ಅಂದಮೇಲೆ ಜಡವಾಗಿರುವ ದೇಹಕ್ಕೆ ವಿಕಾರತ್ವವು ಹೇಗೆ ಸಂಭವಿಸುವುದು? ಎಂದು ನೀನು ಕೇಳಬಹುದು. ಅದಕ್ಕಾಗಿ ನಾನು ಈ ವಿಷಯವನ್ನು ಕುರಿತು ಸವಿಸ್ತಾರವಾಗಿ ನಿನಗೆ ತಿಳಿಸುವೆನು ।೫೪೩।। ಸೂರ್ಯನು ಉದಯಕ್ಕೆ ಬಂದಾಗ ಆತನು ಜನರನ್ನು ಬಡೆದು ಎಬ್ಬಿಸುವುದಿಲ್ಲ. ಆತನು ಉದಯಕ್ಕೆ ಬರುತ್ತಲೇ ಜನರು ತಮ್ಮಷ್ಟಕ್ಕೆ ತಾವೇ ಎಚ್ಚರಾಗುತ್ತಿರುವರು. ಇದನ್ನು ನೀನು ಲಕ್ಷದಲ್ಲಿಡು ।೫೪೪।। ಆ ಯಾವ ಜನರ ಕರ್ಮ ವ್ಯವಹಾರಗಳು ಸೂರ್ಯನಿಗೆ ಎಂದಿಗೂ ತಟ್ಟುವುದಿಲ್ಲ. ಅದರಂತೆ ವಿಕಾರೀ ಪದಾರ್ಥಗಳನ್ನು ಪ್ರಕಾಶಿತವನ್ನಾಗಿ ಮಾಡಿ ಆತ್ಮವು ತಾನು ಸ್ವತಃ ಅಲಿಪ್ತವಾಗಿರುವುದು ।೫೪೫।। ಸೂರ್ಯನ ಕಿರಣಗಳು ಬೀಳುತಿದ್ದಂತೆಯೇ ಸೂರ್ಯಕಾಂತ ಮಣಿಯು ತನ್ನ ಅಂಗದಿಂದ ಅಗ್ನಿಯನ್ನು ಉತ್ಪನ್ನಮಾಡುವುದು. ಹಾಗೂ ಆ ಅಗ್ನಿಯಿಂದ ಯಜ್ಞಕರ್ಮಗಳು ಅಥವಾ ಅಗ್ನಿಯನ್ನು ಪ್ರಜ್ವಲಿತ ಮಾಡುವಿಕೆಯು ಈ ಎರಡೂ ಕಾರ್ಯಗಳು ನಡೆಯುತ್ತಿರುವುದು. ಆದರೆ ಆ ಕರ್ಮಗಳಿಂದ ನಿಜವಾಗಿಯೂ ಸೂರ್ಯನು ಭಿನ್ನವಾಗಿಯೇ ಇರುವನು, ಕರ್ಮಾತೀತನಾಗಿರುವನು ।೫೪೬।। ಅದರಂತೆಯೇ ಚೈತನ್ಯದ ಪ್ರಕಾಶದಿಂದ ಮನಸ್ಸು ಇದು ಶುಭಾಶುಭ ಕರ್ಮಗಳನ್ನು ಮಾಡುತ್ತಿರುವುದು. ಇದನ್ನು ನೀನು ಲಕ್ಷದಲ್ಲಿಡು. ಆದರೆ ಚೈತನ್ಯ ಸೂರ್ಯನಾಗಿರುವ ಯಾವ ನಮ್ಮ ಆತ್ಮವು ಅದು ಈ ಸರ್ವ ಪ್ರಕಾರದ ಮನೋವಿಕಾರಗಳಿಂದ ದೂರವಾಗಿರುವುದು, ಅಲಿಪ್ತವಾಗಿರುವುದು ।೫೪೭।। ಇಲ್ಲಿರುವ ಸರ್ವ ವಿಕಾರಗಳ ಕಾರ್ಯಗಳೆಲ್ಲವನ್ನೂ ಮನಸ್ಸೇ ಮಾಡಿರುವುದು. ಕರ್ಮಾಕರ್ಮಗಳನ್ನೂ ಕೂಡ ಈ ಮನಸ್ಸೇ ಮಾಡಿರುವುದು. ಜನ್ಮ ಮರಣಗಳನ್ನೂ ಸಹ ಈ ಯಾವ ಮನಸ್ಸೇ ಮಾಡಿರುವುದು. ಜನ್ಮ ಮರಣಗಳನ್ನೂ ಸಹ ಈ ಯಾವ ಮನಸ್ಸೇ ಮಾಡಿರುವುದು ಮತ್ತು ಸ್ವರ್ಗ ನರಕಗಳೂ ಕೂಡ ಮನೋಕಲ್ಪಿತವಾಗಿರುವುವು ।೫೪೮।। ಲಕ್ಷ್ಯ ಅಲಕ್ಷ್ಯ, ಬಂಧಮೋಕ್ಷ, ಈ ಸರ್ವವನ್ನೂ ಮನಸ್ಸೇ ಮಾಡಿರುವುದು. ಇದರ ನಿರೂಪಣೆಯನ್ನು ಪ್ರತ್ಯಕ್ಷ ದ್ವಾರಕಾಧೀಶನಾದ ಶ್ರೀಕೃಷ್ಣನು ಈಗ ಸರ್ವರಿಗೂ ಹೇಳುತ್ತಿರುವನು ।೫೪೯।।

ಅಭಿಮಾನದಿಂದ ತುಂಬಿಕೊಂಡಿರುವ ಈ ಯಾವ ಮನಸ್ಸು ಈ ಸಂಸಾರ ವಿಕಾರದ ಭಾಸವನ್ನು ನಿರ್ಮಾಣ ಮಾಡುತ್ತಿರುವುದು. ಹಾಗೆಯೇ ಸ್ವರ್ಗ ನರಕಗಳಲ್ಲಿ ಬರುವ ಹೋಗುವುದನ್ನೂ ಕೂಡ ಇದು ದೇಹಾಭಿಮಾನದಿಂದ ಆಗುತ್ತಿರುವುದು ।೫೫೦।। ಸ್ವಾಭಾವಿಕವಾಗಿಯೇ ಆತ್ಮವು ಇವುಗಳಿಂದ ಭಿನ್ನವಾಗಿರುವುದು. ಆತ್ಮವು ಜ್ಞಾನಸ್ವರೂಪವಾಗಿದೆ, ಈ ಯಾವ ಆತ್ಮತತ್ವಕ್ಕೆ ಮನಸ್ಸು ಸ್ಪರ್ಶವನ್ನು ಮಾಡಲು ಸಾಧ್ಯವಿಲ್ಲ. ಶುದ್ಧವಾದ ತತ್ವದಲ್ಲಿ ಅಭಿಮಾನವು ಇರಲು ಶಕ್ಯವೇ ಇಲ್ಲ ।೫೫೧।।

ಮನ ಅಭಿಮಾನ ಪ್ರಸವೇ ಮಾಯಾ । ಅಭಿಮಾನೇ ಗುಣ ಆಣಿಲೇ ಆಯಾ । ಗುಣೇ ಮಾಯಿಕ ಕೇಲೀ ಕಾಯಾ । ವಿಕಾರಸಾಮಗ್ರಿಯಾಸಮವೇತ ।೫೫೨॥ ಜೈಶೀ ದೇಹಾಪಾಶೀ ಛಾಯಾ । ತೈಶೀ ಸ್ವರೂಪೀ ಮಿಥ್ಯಾ ಮಾಯಾ । ಜೇಥ ಜನ್ಮ ಮರಣೇಸೀ ಕಾಯಾ । ರಿಘಾವಯಾ ಠಾವೋ ನಾಹೀ ।೫೫೩॥ ಆತ್ಮಾ ಶುದ್ಧ ಕಾಯಾ ಮಲಿನ । ಕಾಯಾ ಜಡ ಆತ್ಮಾ ಚಿದ್ಘನ । ಅಜ ಅವ್ಯಯ ಆತ್ಮಾ ಪರಿಪೂರ್ಣ । ಜನ್ಮ ಮರಣ ದೇಹಾಸೀ ।೫೫೪॥ ತಿನೀ ಗುಣ ತಿನೀ ಅವಸ್ಥಾ । ಕಾರ್ಯ ಕರ್ಮ ಅಹಂಕರ್ತಾ । ಹೇ ದೇಹಾಭಿಮಾನಾಚೇ ಮಾಥಾ । ಆತ್ಮಾ ಸರ್ವಥಾ ಅಲಿಪ್ತ ।೫೫೫॥ ಯಾಪರೀ ವಿಕಾರಾಹೂನ । ಆತ್ಮಾ ಚಿದ್ರೂಪೇ ಸಹಜ ಭಿನ್ನ । ಮ್ಹಣಶೀ ಜೀವಾಸ ದೇಹಾಭಿಮಾನ । ತೇಹೀ ಕಥನ ಅವಧಾರೀ ।೫೫೬॥ ಜೀವ ಅಲಿಪ್ತ ಮಾಯಾಗುಣೀ । ಐಕ ಸಾಂಗೇನ ತೇ ಕಹಾಣೀ । ಸ್ಫಟಿಕ ಠೇವಿಜೇ ಜೈಸಾ ವರ್ಣೀ । ತದ್ರೂಪಪಣೇ ತೋ ಭಾಸೇ ।೫೫೭॥ ಹೋ ಕಾ ತದ್ರೂಪಪಣೇಹೀ ದಿಸತಾ । ಸ್ಫಟಿಕ ಅಲಿಪ್ತ ನಿಜಶುದ್ಧತಾ । ತೇವೀ ಸತ್ತ್ವಾದಿಗುಣೀ ಕ್ರೀಡತಾ । ಜೀವನತತ್ತ್ವತಾ ಅಲಿಪ್ತ ।೫೫೮॥ ಸ್ಫಟಿಕ ಕಾಜಳೀ ದಿಸೇ ಕಾಳಾ । ಪರೀ ತೋ ಕಾಳೇಪಣಾವೇಗಳಾ । ತೇವೀ ತಮೋಗುಣೇ ಜೀವೂ ಮೈಳಾ । ದಿಸೋನೀ ನಿರಾಳಾ ತಮೇಸೀ ।೫೫೯॥ ಸ್ಫಟಿಕ ಆರಕ್ತೀ ಆರಕ್ತಕಿಳಾ । ದಿಸೋನ ಆರಕ್ತತೇ ವೇಗಳಾ । ತೇವೀ ರಜೋಗುಣೇ ರಾಜಸಲೀಳಾ । ಭೋಗೂನೀ ವೇಗಳಾ ಜೀವಾತ್ಮಾ ।೫೬೦॥ ಸ್ಫಟಿಕ ಶ್ವೇತವರ್ಣೀ ದಿಸೇ ಶ್ವೇತ । ಪರೀ ತೋ ಶ್ವೇತಪಣಾ ಅಲಿಪ್ತ । ತೇವೀ ಸತ್ತ್ವೀ ದಿಸೇ ಜ್ಞಾನವಂತ । ಗುಣಾಜ್ಞಾನಾತೀತ ಜೀವಾತ್ಮಾ ।೫೬೧॥ ತ್ರಿಗುಣ ಗುಣೇಸೀ ಅಲಿಪ್ತತಾ । ದಾವಿಲೀ ಜೀವಶಿವಾಂಚೀ ತತ್ತ್ವತಾ । ದೇಹೀ ಅಸೋನಿ ನಿಃಸಂಗತಾ । ಐಕ ಆತಾ ಸಾಂಗೇನ ।೫೬೨॥ ಜೇವೀ ಘಟಾಮಾಜೀಲ ಜೀವನ । ಘಟೀ ಚಂದ್ರಬಿಂಬ ಆಣೀ ಜಾಣ । ತೇವೀ ಶುದ್ಧಾಸೀ ಜೀವಪಣ। ದೇಹಾಭಿಮಾನ ದೇಹೀ ದೇಖೇ ।೫೬೩॥ ಘಟನಿಶ್ಚಳತ್ವೇ ಬಿಂಬ ನಿಶ್ಚಳ । ಘಟಚಂಚಲತ್ವೇ ತೇ ಚಂಚಳ । ತೇವೀ ದೇಹಾಚ್ಯಾ ಅವಸ್ಥಾ ಸಕಳ । ಮಾನೀ ಕೇವಳ ಜೀವಾತ್ಮಾ ।೫೬೪॥

ಮಾಯೆಯು ಮನಸ್ಸನ್ನು ಮತ್ತು ಅಭಿಮಾನವನ್ನು ಉತ್ಪನ್ನಗೊಳಿಸುವುದು. ಅಭಿಮಾನದಿಂದಲೇ ಗುಣಗಳು ಉದಯಕ್ಕೆ ಬರುವುವು. ಈ ಯಾವ ಗುಣಗಳು ಮಾಯಾತ್ಮಕ ವಿಕಾರ ಸಾಮಗ್ರಿ ಸಹ ಈ ಯಾವ ದೇಹವನ್ನು ಸಿದ್ಧಗೊಳಿಸಿರುವುದು ।೫೫೨॥ ದೇಹದ ಜೊತೆಯಲ್ಲಿ ಅದರ ನೆರಳು ಇರುವಂತೆ ಆತ್ಮಸ್ವರೂಪದಲ್ಲಿ ಮಿಥ್ಯೆಯಾದ ಮಾಯೆವಿರುವುದು. ಈ ಆತ್ಮಸ್ವರೂಪದಲ್ಲಿ ಜನ್ಮಮರಣ ಸಹ ದೇಹದ ಪ್ರವೇಶವಾಗಲು ಶಕ್ಯವಿಲ್ಲ ।೫೫೩॥ ಆತ್ಮವು ಶುದ್ಧವಾಗಿರುವುದು. ದೇಹವು ಮಲಿನವಾಗಿರುವುದು. ದೇಹವು ಜಡವಾಗಿರುವುದು, ಆತ್ಮವು ಚೈತನ್ಯಸ್ವರೂಪವಾಗಿರುವುದು. ಆತ್ಮವು ಅಜನ್ಮಾ, ಅವ್ಯಯ ಮತ್ತು ಪರಿಪೂರ್ಣವಾಗಿರುವುದು. ಯಾವ ಈ ಜನ್ಮ ಮರಣಗಳು ದೇಹಕ್ಕೆ ಮಾತ್ರ ಇರುವುವು ।೫೫೪॥ ಮೂರು ಗುಣಗಳು, ಮೂರು ಅವಸ್ಥೆಗಳು, ಕಾರ್ಯ, ಕರ್ಮ ಮತ್ತು ನಾನು ಕರ್ತನು ಎಂಬ ಅಭಿಮಾನವು ಇವೆಲ್ಲವೂ ದೇಹಾಭಿಮಾನದ ವಿಕಾರಗಳಾಗಿರುವುವು. ಆತ್ಮವು ಸರ್ವಥಾ ಅಲಿಪ್ತವಾಗಿರುವುದು ।೫೫೫॥ ಈ ಪ್ರಕಾರವಾಗಿ ಆತ್ಮವು ಸ್ವಭಾವಸಿದ್ಧವಾಗಿಯೇ ಚೈತನ್ಯಸ್ವರೂಪವಾಗಿರುವುದರಿಂದ ಅದು ಸರ್ವ ವಿಕಾರಗಳಿಂದಲೂ ಭಿನ್ನವೇ ಆಗಿರುವುದು. ಈಗ ನೀನು ಹೀಗೆ ಹೇಳಬಹುದು ; ಜೀವಕ್ಕೇನೇ ದೇಹಾಭಿಮಾನವಿದೆ. ಅದಕ್ಕಾಗಿ ಈ ವಿಷಯವನ್ನು ಕುರಿತು ಹೇಳುವೆನು, ಸರಿಯಾಗಿ ಕೇಳು ।೫೫೬॥ ಜೀವವು ಯಾವ ಈ ಮಾಯೆಯ ಮೂರು ಗುಣಗಳಿಂದ ಅಲಿಪ್ತವಾಗಿರುವುದು. ಅದರ ಪ್ರಕಾರವನ್ನೂ ಕೂಡ ಹೇಳುವೆನು, ಕೇಳು. ಸ್ಫಟಿಕವನ್ನು ಯಾವ ಬಣ್ಣದ ಮೇಲೆ ಇಡುವೆವೋ ಅದೇ ಬಣ್ಣದಂತೆ ಅದು ತೋರುವುದು ।೫೫೭॥ ಆದರೆ ಅದು ಆ ಬಣ್ಣದಂತೆ ಕಂಡರೂ ಕೂಡ ಸ್ಫಟಿಕವು ಮೂಲದಲ್ಲಿಯೇ ಶುದ್ಧವಾಗಿರುವುದರಿಂದ ಆ ಬಣ್ಣದಿಂದ ಅಲಿಪ್ತವಾಗಿಯೇ ಇರುವುದು. ಅದರಂತೆಯೇ ಜೀವವು ಸತ್ವಾದಿ ಗುಣಗಳಲ್ಲಿ ಆಡುತ್ತಿದ್ದರೂ ಕೂಡ ಅದು ಅಲಿಪ್ತವಾಗಿಯೇ ಇರುವುದು।೫೫೮॥ ಸ್ಫಟಿಕವನ್ನು ಕಪ್ಪಾದ ಕಾಡಿಗೆಯ ಮೇಲೆ ಇಡಲು ಆಗ ಅದು ಕಪ್ಪಾಗಿ ತೋರುವುದು. ಆದರೆ ಸ್ಫಟಿಕವು ಆ ಕಪ್ಪುತನದಿಂದ ಅಲಿಪ್ತವಾಗಿಯೇ ಇರುವುದು. ಅದರಂತೆ ತಮೋಗುಣದಿಂದ ಜೀವವು ಮಲಿನವಾಗಿರುವಂತೆ ಕಂಡರೂ ಕೂಡ ಅದು ತಮೋಗುಣದಿಂದ ನಿಜವಾಗಿಯೂ ಅಲಿಪ್ತವಾಗಿಯೇ ಇರುವುದು ।೫೫೯॥ ಸ್ಫಟಿಕವನ್ನು ಕೆಂಪು ಬಣ್ಣದ ಮೇಲೆ ಇಡಲು ಆಗ ಅದರ ಪ್ರಭೆಯು ಕೆಂಪಾಗಿ ತೋರುವುದು. ಆದರೆ ಅದು ಆ ಕೆಂಪು ಬಣ್ಣದಿಂದ ಅಲಿಪ್ತವಾಗಿರುವುದು. ಅದರಂತೆ ರಜೋಗುಣದಿಂದ ಏಕರೂಪವಾಗಿ ಜೀವವು ಅನೇಕ ಪ್ರಕಾರದ ವಿಲಾಸಗಳನ್ನು ಭೋಗಿಸುತ್ತಿದ್ದರೂ ಕೂಡ ಆ ಜೀವಾತ್ಮವು ಅವುಗಳಿಂದ ಭಿನ್ನವಾಗಿರುವುದು ।೫೬೦॥ ಸ್ಫಟಿಕವನ್ನು ಬಿಳಿಯ ಬಣ್ಣದ ಮೇಲಿಡಲು ಅದು ಬೆಳ್ಳಗೆ ಕಾಣಿಸುವುದು. ಆದರೆ ಅದು ಆ ಬಣ್ಣದಿಂದ ಅಲಿಪ್ತವಾಗಿರುವುದು. ಅದರಂತೆ ಜೀವಾತ್ಮವು ಸತ್ವಗುಣದಲ್ಲಿ ಕೂಡಿಕೊಂಡರೆ ದೊಡ್ಡ ಗುಣ ಸಂಪನ್ನನಾಗಿ ಕಾಣುವನು. ಹೀಗಾದರೂ ಕೂಡ ಆತನು ಗುಣಗಳಿಂದ ಜ್ಞಾನದಿಂದ ಬೇರೆಯೇ ಇರುವನು ।೫೬೧॥ ಈ ಪ್ರಕಾರವಾಗಿ ಜೀವಾತ್ಮವು ಮೂರು ಗುಣಗಳಿಂದ ಹೇಗೆ ಅಲಿಪ್ತವಾಗಿದೆ ಎಂಬುದನ್ನು ತೋರಿಸಿದೆನು. ಈಗ ಅದು ದೇಹದಲ್ಲಿದ್ದರೂ ಹೇಗೆ ಮುಕ್ತವಾಗಿದೆ ಎಂಬುದನ್ನು ಕೇಳು ।೫೬೨॥ ಪಾತ್ರೆಯಲ್ಲಿನ ಜಲವು ಚಂದ್ರನ ಪ್ರತಿಬಿಂಬವನ್ನು ಪಾತ್ರೆಯಲ್ಲಿ ತರುವುದು. ಅದರಂತೆ ಶುದ್ಧ ಆತ್ಮನಿಗೆ ದೇಹದ ಅಭಿಮಾನದಿಂದ ದೇಹದಲ್ಲಿ ಜೀವತ್ವವು ಪ್ರಾಪ್ತವಾಗುವುದು ।೫೬೩॥ ಪಾತ್ರೆಯು ಸ್ಥಿರವಾಗಿರಲು ಆಗ ಅದರಲ್ಲಿನ ಪ್ರತಿಬಿಂಬವು ಸ್ಥಿರವಾಗಿದ್ದಂತೆ ತೋರುವುದು. ಪಾತ್ರೆಯು ಚಂಚಲವಾಗಲು ಆಗ ಅದರಲ್ಲಿನ ಪ್ರತಿಬಿಂಬವೂ ಕೂಡ ಚಂಚಲವಾಗುವುದು. ಅದರಂತೆ ಈ ದೇಹದ ಸರ್ವ ಅವಸ್ಥೆಗಳು ಜೀವಕ್ಕೆ ಇವೆ ಎಂದು ಭಾಸವಾಗುವುದು ।೫೬೪॥

ಘಟೀ ಕಾಲವಿಲ್ಯಾ ಅಂಜನ । ತರೀ ತೇ ಕಾಳೇ ಹೋಯ ಜೀವನ । ಪರೀ ಬಿಂಬಪ್ರತಿಬಿಂಬಾ ಜಾಣ । ಕಾಳೇಪಣ ಲಾಗೇನಾ ॥೫೬೫॥ ತೇವೀ ದೇಹಾಚೀ ಸುಖದುಃಖಕಥಾ । ಕಾ ಪಾಪಪುಣ್ಯಾದಿ ಜೇ ವಾರ್ತಾ । ನಾಹೀ ಜೀವಶಿವಾಂಚ್ಯಾ ಮಾಥಾ । ದೇಹ ಅಹಂತಾ ತೇ ಭೋಗೀ ॥೫೬೬॥ ಯೇ ಘಟೀಚೇ ಜಳ ತೇ ಘಟೀ ಭರಿತ । ಚಂದ್ರಬಿಂಬ ಅಸೇ ತ್ಯಾಹೀ ಆಂತ । ತೇವೀ ಯಾ ದೇಹೀಂಚ್ಯಾ ತ್ಯಾ ದೇಹೀ ಜಾತ । ಜೀವಾತ್ಮಾ ಮ್ಹಣತ ಯಾ ಹೇತೂ ॥೫೬೭॥ ಚಂದ್ರ ಗಗನೀ ಅಲಿಪ್ತ ಅಸೇ । ತೋ ಮಿಥ್ಯಾ ಪ್ರತಿಬಿಂಬೇ ಘಟೀ ಭಾಸೇ । ತೇವೀ ವಸ್ತು ವಸ್ತುತ್ವೇ ಸಾವಕಾಶೇ । ಜೀವ್ಹಹೇ ಪಿಸೇ ದೇಹಾತ್ಮತಾ ॥೫೬೮॥ ತ್ರಿಗುಣಗುಣೇ ಗುಣಾತೀತ । ದೇಹೀ ದೇಹಸಂಗಾ ಅಲಿಪ್ತ । ಜೀವ ಶಿವ ದೋನೀ ಯೇಥ । ತುಜ ಮ್ಯಾ ಸಾದ್ಯಂತ ದಾಖವಿಲೇ ॥೫೬೯॥ ಹೇ ನೇಣೋನಿಯಾ ಸಮಸ್ತ । ದೇಹಾತ್ಮವಾದೇ ಜಾಹಲೇ ಭ್ರಾಂತ । ಸ್ವರ್ಗನರಕಾದಿ ಆವರ್ತ । ಯೋನೀ ಭೋಗವೀತ ಅಭಿಮಾನ ॥೫೭೦॥ ದ್ವಿಜದೇಹ ಆರಂಭೂನಿ ಯೇಥ । ಪರಮೇಷ್ಠಿದೇಹ ಪರ್ಯಂತ । ಸ್ವರ್ಗಸುಖ ದೇಹೇ ಸಮಸ್ತ । ಭೋಗವೀ ನಿಶ್ಚಿತ ಪುಣ್ಯಾಭಿಮಾನ ॥೫೭೧॥ ಯಾಹೂನಿಯಾ ಅಧೋಮುಖ ಯೇಥ । ದ್ವಿಜತ್ವಾಹೂನಿ ಖಾಲತೇಜಾತ । ನಾನಾ ದುಃಖಯೋನೀ ಭೋಗವಿತ । ಜಾಣ ನಿಶ್ಚಿತ ಪಾಪಾಭಿಮಾನ ॥೫೭೨॥ ಯೇಥ ಪಾಪಪುಣ್ಯಕರ್ಮಾಚರಣ । ತೇ ವಾಢವಿತಾಹೇ ಜನ್ಮಮರಣ । ಯಾಂತ ವಿರಳಾ ಸಭಾಗ್ಯ ಜಾಣ । ಜನ್ಮಮರಣಭೇದಕ ॥೫೭೩॥ ಜ್ಯಾಂಸೀ ನಿಷ್ಕಾಮ ಪುಣ್ಯಾಚಿಯಾ ಕೋಡೀ । ಜಿಂಹೀ ಸ್ವಧರ್ಮ ಜೋಡಿಲಾ ಜೋಡೀ । ಜ್ಯಾಂಸೀ ಭೂತದಯಾ ಗಾಢೀ । ಜ್ಯಾಂಚೀ ಆವಡೀ ದ್ವಿಜಭಜನೀ ॥೫೭೪॥ ಜೇ ಅಹಿಂಸೇಸೀ ಅಧಿವಾಸ । ಜ್ಯಾಂಚೇ ಅದ್ವೈತಪರ ಮಾನಸ । ಜೇ ಸಾರಾಸಾರರಾಜ ಹಂಸ । ಜನ್ಮಮರಣಾಂಚಾ ತ್ರಾಸ ಘೇತಲಾ ಜಿಂಹೀ ॥೫೭೫॥ ಜೇ ಉಪನಿಷದರ್ಥಚಾತಕ । ಜೇ ಜೀವಜನಕಾಚೇ ಶೋಧಕ । ಜೇ ನಿಜಾತ್ಮತತ್ತ್ವಸಾಧಕ । ಜೇ ವಿಶ್ವಾಸುಕ ಭಾವಾರ್ಥೀ ॥೫೭೬॥ ಜ್ಯಾಂಸೀ ಸಂತಚರಣೀ ಸದ್ಭಾವೋ । ಜೇ ಗುರುವಚನೀ ವಿಕಲೇ ಪಹಾ ಹೋ । ತ್ಯಾಂಸೀ ದೇಹೀ ವಿದೇಹಭಾವೋ । ಮತ್ಕೃಪೇ ಪಹಾ ಹೋ ಪಾವತೀ ॥೫೭೭॥

ಪಾತ್ರೆಯ ಜಲದಲ್ಲಿ ಕಾಡಿಗೆಯನ್ನು ಕೂಡಿಸಲು ಆಗ ಎಲ್ಲ ಜಲವು ಕಪ್ಪಾಗುವುದು. ಆದರೆ ಅದರಲ್ಲಿನ ಪ್ರತಿಬಿಂಬಕ್ಕೆ ಸ್ವಲ್ಪವೂ ಕೂಡ ಕಪ್ಪು ತಟ್ಟುವುದಿಲ್ಲ ॥೫೬೫॥ ಅದರಂತೆ ದೇಹದಲ್ಲಿನ ಸುಖದುಃಖಗಳು ಮತ್ತು ಪಾಪಪುಣ್ಯಗಳು ಇತ್ಯಾದಿ ಕರ್ಮಗಳು ಜೀವಾತ್ಮಾ ಅಥವಾ ಆತ್ಮದ ತಲೆಯ ಮೇಲೆ ಬರಲು ಸಾಧ್ಯವಿಲ್ಲ. ಅಹಂಕಾರದಿಂದ ದೇಹವೇ ಈ ಎಲ್ಲವನ್ನೂ ಭೋಗಿಸುತ್ತಿರುವುದು ॥೫೬೬॥ ಈ ಪಾತ್ರೆಯ ಜಲವನ್ನು ಇನ್ನೊಂದು ಪಾತ್ರೆಯಲ್ಲಿ ಹಾಕಲು ಅಲ್ಲಿಯೂ ಕೂಡ ಚಂದ್ರಬಿಂಬವು ಕಾಣುತ್ತಿರುವುದು. ಅದರಂತೆ ಈ ದೇಹದಲ್ಲಿನ ಜೀವವು ಇನ್ನೊಂದು ದೇಹದಲ್ಲಿ ಹೋಗುತ್ತಿರುವುದು. ಆದ್ದರಿಂದ ಅದಕ್ಕೆ ಜೀವಾತ್ಮಾ ಎಂದು ಹೇಳುವರು ॥೫೬೭॥ ಆ ಯಾವ ಚಂದ್ರನು ಆಕಾಶದಲ್ಲಿ ಅಲಿಪ್ತವಾಗಿ ಇರುವನು. ಆತನು ಮಿಥ್ಯೆಯಾಗಿಯೇ ಪಾತ್ರೆಯಲ್ಲಿ ಪ್ರತಿಬಿಂಬರೂಪದಿಂದ ತೋರುತ್ತಿರುವನು. ಅದರಂತೆ ಆತ್ಮತತ್ವವು ಪರಬ್ರಹ್ಮ ಸ್ವರೂಪದಿಂದ ಸ್ಥಿರವಾಗಿದ್ದು ದೇಹಾತ್ಮ ಸಂಯೋಗದಿಂದ ಈ ಜೀವದ ಹುಚ್ಚು ಅದಕ್ಕೆ ಹತ್ತಿರುವುದು ॥೫೬೮॥ ಈ ಪ್ರಕಾರವಾಗಿ ದೇಹಧಾರಿಯಾಗಿರುವ ಜೀವವು ಈ ಯಾವ ಮೂರು ಗುಣಗಳ ಆಚೆ ಮತ್ತು ದೇಹಸಂಗದಿಂದ ಅಲಿಪ್ತವಾಗಿರುವುದು. ಈ ಪ್ರಕಾರವಾಗಿ ನಾನು ನಿನಗೆ ಜೀವ ಮತ್ತು ಶಿವ ಇವುಗಳ ಸವಿಸ್ತಾರವಾಗಿ ವರ್ಣಿಸಿರುವೆನು. ॥೫೬೯॥ ಆದರೆ ಈ ಎಲ್ಲ ಜನರು ಇದು ತಿಳಿಯಲಾರದ್ದಕ್ಕೆ ದೇಹಾತ್ಮವಾದದಿಂದ ಭ್ರಮೆಯಲ್ಲಿ ಬಿದ್ದಿರುವುರು. ಅಭಿಮಾನವು ಇದು ಅವರನ್ನು ಸ್ವರ್ಗ ನರಕಾದಿ ಯೋನಿಗಳಲ್ಲಿ ತಿರುಗಿಸುತ್ತಿರುವುದು ॥೫೭೦॥ ಪುಣ್ಯಾಭಿಮಾನವು ಬ್ರಾಹ್ಮಣರ ಜನ್ಮದಿಂದ ಆರಂಭ ಮಾಡಿ ಬ್ರಹ್ಮದೇವನ ದೇಹದವರೆಗೂ ಸರ್ವ ಪ್ರಕಾರದ ಸ್ವರ್ಗಸುಖವನ್ನು ನಿಶ್ಚಯವಾಗಿ ಭೋಗಿಸಲು ಹಚ್ಚುವುದು ॥೫೭೧॥ ಪಾಪದ ಅಭಿಮಾನವು ಇವುಗಳಿಂದ ಅಧೋಮುಖವಾಗಿ ಕೆಳಗಿನ ಜಾತಿಗಳಲ್ಲಿ ಅನೇಕ ಜನ್ಮಗಳನ್ನು ಪಡೆಯುತ್ತ ಅನೇಕ ಪ್ರಕಾರಗಳ ದುಃಖ ಯೋನಿಗಳಲ್ಲಿ ಭೋಗಿಸಲು ಹಚ್ಚುವುದು. ॥೫೭೨॥ ಪಾಪ ಮತ್ತು ಪುಣ್ಯ ಇವುಗಳ ಕರ್ಮಾಚರಣೆಗಳಿಂದ ಜನ್ಮಮರಣಗಳು ಬೆಳೆಯುತ್ತಿರುವುವು. ಇದರಲ್ಲಿ ಜನ್ಮಮರಣಗಳಿಗೆ ಭೇದಿಸಿ ಒಗೆಯುವ ಭಾಗ್ಯವಂತನು ಬಹಳ ವಿರಳನಾಗಿರುವನು. ॥೫೭೩॥ ಯಾರು ನಿಷ್ಕಾಮ ಪುಣ್ಯಕರ್ಮಗಳ ರಾಶಿಯನ್ನು ಬೆಳೆಸಿರುವರೋ, ಯಾರು ಸ್ವಧರ್ಮಗಳನ್ನು ಸಾಧಿಸಿರುವರೋ, ಯಾರ ಅಂತಃಕರಣದಲ್ಲಿ ಭೂತದಯೆಯು ತುಂಬಿಕೊಂಡಿರುವುದೋ, ಯಾರ ಮನದಲ್ಲಿ ಬ್ರಾಹ್ಮಣರ ಸೇವೆಯಲ್ಲಿ ಪ್ರೀತಿಯಿರುವುದೋ ॥೫೭೪॥ ಯಾರು ಅಹಿಂಸೆಯ ತವರುಮನೆಯಾಗಿರುವರೋ, ಯಾರ ಮನದಲ್ಲಿ ಯಾವುದೇ ಪ್ರಕಾರದ ದ್ವೈತಭಾವವಿರುವುದಿಲ್ಲವೋ, ಯಾರು ರಾಜಹಂಸದಂತೆ ಅಸಾರದಲ್ಲಿನ ಸಾರವನ್ನು ತೆಗೆಯುವವರಾಗಿರುವರೋ, ಯಾರಿಗೆ ಜನ್ಮ ಮರಣದ ಹೇಸಿಗೆಯುಂಟಾಗಿರುವುದೋ ॥೫೭೫॥ ಯಾರು ಉಪನಿಷದಗಳ ಅರ್ಥವನ್ನು ಚಾತಕದಂತೆ ಉತ್ಸುಕತೆಯಿಂದ ತಿಳಿದುಕೊಳ್ಳುವವರಾಗಿರುವರೋ, ಜೀವ ಜನಕನ ಶೋಧಕರಾಗಿರುವರೋ, ಯಾರು ಆತ್ಮತತ್ವದ ಸಾಧಕರೋ ಮತ್ತು ನಿಜವಾದ ಭಾವಾರ್ಥಿಗಳೋ, ॥೫೭೬॥ ಸಂತ ಚರಣಗಳಲ್ಲಿ ಯಾರ ಭಕ್ತಿಯಿರುವುದೋ, ಯಾರು ಗುರುವಚನಗಳಿಗಾಗಿ ತಮ್ಮನ್ನು ಮಾರಿಕೊಂಡಿರುವರೋ, ಇವರು ನನ್ನ ಕೃಪೆಯಿಂದ ಇದೇ ದೇಹದಲ್ಲಿ ವಿದೇಹತೆಯನ್ನು ಪ್ರಾಪ್ತಮಾಡಿಕೊಳ್ಳುವರು ॥೫೭೭॥

ನಿಜಬೋಧೇ ದೇಹಾಚೀ ಬೇಡೀ । ತೋಡೂನಿ ಜನ್ಮ ಮರಣಾಚೀ ಕೋಡೀ । ಉಭವೂನಿ ಸಾಯುಜ್ಯಾಚೀ ಗುಢೀ । ಪರಾ ಪರಥಡೀ ಪಾವಲೇ ॥ ೫೭೮॥ ತ್ಯಾಂಸೀ ಸಂಸಾರಾಚೇ ಆವರ್ತ । ಸರ್ವಥಾ ಗೇಲೇ ನ ಲಗತ । ಜೇವೀ ಬುಡಣ್ಯಾಚಾ ಸಂಕೇತ । ಮೃಗಜಳಾಆಂತ ಅಸೇನಾ ।೫೭೯॥ ಐಸೇ ಪ್ರಾಪ್ತ ಪುರುಷ ಯೇಥ । ಸಂಸಾರೀ ನಾಹೀತ ಗಾ ಬಹುತ । ಹಿಂಡತಾ ಆವಘ್ಯಾ ಜಗಾಂತ । ಏಕದಾ ಕದಾಚಿತ ದೇಖಿಜೇ ॥ ೫೮೦॥ ಅಸೋ ದೇಖಿಲ್ಯಾಹೀ ತ್ಯಾತೇ । ಕೋಣ ಆಹೇ ಓಳಖಿತೇ । ಉದ್ಧವಾ ಜಾಣ ನಿಶ್ಚಿತೇ । ಆತ್ಮಾ ಯೇಥೇ ದಿಸೇನಾ ।೫೮೧॥ ಜರೀ ನಿಕಟ ಭೇಟಲಾ ಜ್ಞಾತಾ । ತ್ಯಾಚಾ ದೇಹ ದೇಖಿಜೇ ವರ್ತತಾ । ಪರೀ ಭೀತರೀಲ ನಿಜಾತ್ಮತಾ । ನ ದಿಸೇ ಸರ್ವಥಾ ಕೋಣಾಸೀ ।೫೮೨॥ ಆತ್ಮಾ ಗೇಲಾ ಆಲಾ ಮ್ಹಣತೀ । ಶೇಖೀ ಯೇಣೇಜಾಣೇ ನ ದೇಖತೀ । ತೇಚ ವಿಷಯೀಂಚೀ ಉಪಪತ್ತೀ । ಸ್ವಯೇ ಶ್ರೀಪತೀ ಸಾಂಗತ ॥ ೫೮೩॥

ಆತ್ಮನಃ ಪಿತೃಪುತ್ರಾಭ್ಯಾಮನುಮೇಯೌ ಭವಾಪ್ಯಯೌ ।
ನ ಭವಾಪ್ಯಯವಸ್ತೂನಾಮಭಿಜ್ಞೋಽದ್ವಯಲಕ್ಷಣಃ ।೪೮॥

ಅರ್ಥ:- ತಂದೆ ತಾತನ ಮರಣವನ್ನು ಕಂಡು ತನ್ನ ಮರಣವನ್ನು ಊಹಿಸಿಕೊಳ್ಳಬೇಕು. ಮಗನ ಜನ್ಮವನ್ನು ಕಂಡು ತನ್ನ ಜನ್ಮವನ್ನು ಅರ್ಥಿಸಬೇಕು. ದೇಹದ ದೃಷ್ಟನು ಜನ್ಮಮರಣಗಳಿಂದ ಮುಕ್ತನು. ದೇಹವು ಜನ್ಮಮರಣಗಳಿಂದ ಮುಕ್ತವಿಲ್ಲ .

ಮ್ಹಣತೀ ಪಿತ್ಯಾಚಾ ಆತ್ಮಾ ಗೇಲಾ । ಯಾಲಾಗೀ ಪಿತೃದೇಹ ನಾಸಲಾ । ಪರೀ ಪೈಲ ತೋ ಆತ್ಮಾ ಗೇಲಾ । ಐಸಾ ನಾಹೀದೇಖಿಲಾ ಕೋಣೇಂಹೀ ।೫೮೪॥ ಮ್ಹಣತೀ ಪುತ್ರಜನ್ಮೇ ಆತ್ಮ್ಯಾಸೀ ಜನ್ಮ । ಕರಿತಾ ಪುತ್ರಾಚೇ ಜಾತಕಕರ್ಮ । ದೇಖಿಜೇ ದೇಹಾಚಾ ಸಂಭ್ರಮ । ಆತ್ಮಾ ದುರ್ಗಮ ದಿಸೇನಾ ।೫೮೫॥ ಯೇಥ ಆತ್ಮ್ಯಾಸೀ ಯೇಣೇಜಾಣೇ । ಸರ್ವಥಾ ನಾಹೀ ಪೂರ್ಣಪಣೇ । ದೇಹಾಸೀಚಿ ಜನ್ಮ ಮರಣೇ । ಯೇಣೇಜಾಣೇ ದೃಷ್ಟಾಂತೇ ।೫೮೬॥ ಪ್ರತ್ಯಕ್ಷ ದೇಹಾಸೀ ಜನ್ಮ ನಾಶ । ಆತ್ಮಾ ಸಾಕ್ಷಿತ್ವೇ ಅದಿನಾಶ । ಯೇಚಿ ಅರ್ಥೀ ವಿಶದ ವಿಲಾಸ । ಸ್ವಯೇ ಹೃಷೀಕೇಶ ಸಾಂಗತ ।೫೮೭॥

ತರೋರ್ಬೀಜವಿಪಾಕಾಭ್ಯಾಂ ಯೋ ವಿದ್ವಾನ್ ಜನ್ಮಸಂಯಮೌ ।
ತರೋರ್ವಿಲಕ್ಷಣೋ ದ್ರಷ್ಟಾ ಏವಂ ದ್ರಷ್ಟಾ ತನೋಃ ಪೃಥಕ್ ।೪೯॥

ಅರ್ಥ:- ಬೀಜದಿಂದ ಮೊಳೆತದ್ದು ಮರವಾಗಿ, ಪಕ್ವವಾಗಿ ಕೊನೆಗೆ ನಾಶವಾಗುವುದನ್ನು ಕಂಡ ಮನುಷ್ಯನು ಆ ಮರದಿಂದ ಪ್ರತ್ಯೇಕವಾಗಿರುವ ವೀಕ್ಷಕ ಎಂಬುದು ಖಂಡಿತ. ಅದರಂತೆಯೇ ದೇಹದ ಹುಟ್ಟು ಸಾವುಗಳನ್ನು ಕಂಡವನೂ ಕೂಡ ಅದರಿಂದ ಪ್ರತ್ಯೇಕವಾಗಿಯೇ ಉಳಿಯುವನು.

ಇವರೇ ಆತ್ಮಜ್ಞಾನದ ಯೋಗದಿಂದ ದೇಹದ ಬೇಡಿಯನ್ನು ಬಿಡಿಸಿಕೊಂಡು ಜನ್ಮಮರಣಗಳ ಕೋಟ್ಯಾವಧಿ ಸುತ್ತುಗಳನ್ನು ತಪ್ಪಿಸಿಕೊಳ್ಳುವರು. ಇವರು ಸಾಯುಜ್ಯದ ಧ್ವಜವನ್ನು ಹಾರಿಸುವರು. ಸಹಜವಾಗಿಯೇ ಆಚೆದಂಡೆಯನ್ನು ಸೇರುವರು ।೫೭೮॥ ಮೃಗಜಲದಲ್ಲಿ ಮುಳುಗುವ ಭಯವಿಲ್ಲದಂತೆ ಸಂಸಾರದ ತಿರುಗಣೆಗಳು ಇವರನ್ನು ಸ್ಪರ್ಶಮಾಡದೇ ಓಡಿ ಹೋಗುವುವು ।೫೭೯॥ ಇಂತಹ ಮುಕ್ತ ಜನರು ಈ ಸಂಸಾರದಲ್ಲಿ ಸಿಗುವುದೇ ಇಲ್ಲ. ಸರ್ವ ಜಗತ್ತನ್ನು ಸುತ್ತಿ ಹುಡುಕಿದರೆ ಯಾರೋ ಒಬ್ಬರು ಸಿಗಬಹುದು ॥ ೫೮೦॥ ಆದರೆ ಇಂತಹ ಮುಕ್ತ ಪುರುಷನು ಕಂಡರೂ ಕೂಡ ಆತನನ್ನು ತಿಳಿಯುವವರು ಯಾರಿರುವರು? ಅಲ್ಲಿಯೂ ಕೂಡ ಆತ್ಮವು ನಿಜವಾಗಿಯೂ ಕಾಣಿಸುವುದಿಲ್ಲ ।೫೮೧॥ ಜ್ಞಾನಸಂಪನ್ನನಾದ ಮನುಷ್ಯನು ಸಮೀಪ ಬಂದು ಭೇಟಿಯಾದರೂ, ಆತನ ದೇಹವು ಪ್ರಪಂಚದಲ್ಲಿ ವರ್ತಿಸುವಂತೆ ತೋರುತ್ತಿರುವುದು. ಆತನ ಒಳಗಿನ ಆತ್ಮವು ಯಾರಿಗೂ ಕಾಣಿಸುವುದಿಲ್ಲ ।೫೮೨॥ ಆತ್ಮನು ಬಂದನು, ಹೋದನು ಎಂದು ಹೇಳುವರು. ಆದರೆ ಕೊನೆಯವರೆಗೂ ಆತನ ಬರುವಿಕೆ, ಹೋಗುವಿಕೆಯನ್ನು ಯಾರೂ ಕಾಣಲಾರರು. ಈ ವಿಷಯವನ್ನು ಕುರಿತು ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ಪ್ರತಿಪಾದನೆಯನ್ನು ಮಾಡುವನು ।೫೮೩॥

ತಂದೆಯ ಆತ್ಮವು ಹೋಯಿತೆಂದರೆ ಆಗ ಆತನ ದೇಹವು ನಷ್ಟವಾಯಿತೆಂದು ಹೇಳುವರು. ಆದರೆ ಆತ್ಮವು ಶರೀರದಿಂದ ಬಿಟ್ಟು ಹೋಗುವುದನ್ನು ಯಾರೂ ನೋಡಿದವರಾಗುವುದಿಲ್ಲ. ।೫೮೪॥ ಅಥವಾ ಪುತ್ರನ ಜನ್ಮವಾಗುತ್ತಲೇ ಆತ್ಮನ ಜನ್ಮವಾಯಿತೆಂದು ಹೇಳುವರು. ಪುತ್ರನ ಜಾತಕಕರ್ಮವನ್ನು ಮಾಡುತ್ತಿರಲು ಆಗ ದೇಹದ ವಿಲಾಸವೇ ಕಾಣುತ್ತಿರುವುದು. ಆಗ ದುರ್ಗಮವಾಗಿರುವ ಯಾವ ಆತ್ಮವು ಕಾಣಲು ಯಾರಿಗೂ ಶಕ್ಯವಿಲ್ಲ ।೫೮೫॥ ಆದ್ದರಿಂದ ಆತ್ಮಕ್ಕೆ ಬರುವುದು, ಹೋಗುವುದು ಇದು ಇರುವುದಿಲ್ಲ. ಜನ್ಮ ಮತ್ತು ಮರಣ ಇವು ದೇಹದ ಧರ್ಮವಾಗಿರುವುದು. ಅದಕ್ಕೆ ಅದೃಷ್ಟದಂತೆ ಹೋಗುವಿಕೆ, ಬರುವಿಕೆ ಪ್ರಾಪ್ತವಾಗುವುದು ।೫೮೬॥ ದೇಹದ ನಾಶವು ಇದು ಪ್ರತ್ಯಕ್ಷವಾಗಿ ಆಗುತ್ತಿರುವುದು. ಆತ್ಮವು ಸಾಕ್ಷೀ ರೂಪದಿಂದ ಅವಿನಾಶಿಯಾಗಿರುವುದು. ಅದರ ಸ್ಪಷ್ಟವಾದ ಲಕ್ಷಣವನ್ನು ಸ್ವತಃ ಶ್ರೀಕೃಷ್ಣನು ಈಗ ಹೇಳುತ್ತಿರುವನು ।೫೮೭॥

ಬೀಜಪರಿಪಾಕೇ ವಾಢಲೇ ವೃಕ್ಷೀ । ಪರ್ವತ ತ್ಯಾ ವೃಕ್ಷಾಚಾ ಸಾಕ್ಷೀ । ತೋ ಪರ್ವತ ವೃಪಚ್ಛೇದನೇ ನವ್ಹೇ ದುಃಖೀ । ತೇವೀ ದೃಷ್ಟಾ ಸಾಕ್ಷೀ ದೇಹಾಚಾ ।೪೮೮॥ ದೃಷ್ಟಾ ಸಾಕ್ಷೀ ದೇಹಮಾತ್ರಾಸೀ । ತೇ ದೇಹಧರ್ಮ ನ ಲಗತೀ ದೃಷ್ಟ್ಯಾಸೀ । ತೋ ದೇಹೀ ಅಸೋನಿ ವಿದೇಹವಾಸೀ । ಭವಬಂಧ ತ್ಯಾಸೀ ಸ್ಪರ್ಶೇನಾ ।೪೮೯॥ ಹಾ ಅರ್ಥ ನೇಣೋನಿ ಅವಿವೇಕೀ । ಅತಿಬದ್ಧ ಜಾಹಲೇ ಯೇ ಲೋಕೀ । ತೋಚಿ ಅರ್ಥ ಪಾಂಚ ಶ್ಲೋಕೀ । ಶ್ರೀಕೃಷ್ಣ ಸ್ವಮುಖೀ ಸಾಂಗತ ।೪೯೦॥

ಪ್ರಕೃತೇರೇವಮಾತ್ಮಾನಮವಿವಿಚ್ಯಾಬುಧಃ ಪುಮಾನ್ । ತತ್ತ್ವೇನ ಸ್ಪರ್ಶಸಂಮೂಢಃ ಸಂಸಾರಂ ಪ್ರತಿಪದ್ಯತೇ ।೨೦॥

ಅರ್ಥ:- ಅಜ್ಞಾನಿ ಮನುಷ್ಯರು ಹೀಗಿರುವ ಪ್ರಕೃತೀ ಮತ್ತು ಶರೀರದಿಂದ ಆತ್ಮದ ವಿವೇಚನೆಯನ್ನು ಮಾಡುವುದಿಲ್ಲ. ಇದು ಅವರ ಅನುಭವಕ್ಕೆ ಬರುವುದೇ ಇಲ್ಲ. ವಿಷಯ ಭೋಗಗಳಲ್ಲಿ ನಿಜಸುಖವಿದೆ ಎಂದು ತಿಳಿದು ಅದರಲ್ಲಿಯೇ ಮೋಹಿತರಾಗುವರು. ಹೀಗಾಗಿ ಅವರಿಗೆ ಜನ್ಮಮರಣಗಳ ಚಕ್ರದಲ್ಲಿ ತಿರುಗಬೇಕಾಗುವುದು.

ಕರ್ಮಾಕರ್ಮಕರ್ತೇಪಣ । ಆತ್ಮ್ಯಾಸೀ ಸರ್ವಥಾ ನಾಹೀ ಜಾಣ । ಯೇಚಿ ಅರ್ಥೀಚೇ ನಿರೂಪಣ । ಮಾಗಾ ಸಂಪೂರ್ಣ ಸಾಂಗೀತಲೇ ।೪೯೧॥ ಆತ್ಮಾ ನಾತಳೇ ತಿನ್ಹೀ ಗುಣ । ದೇಹೀ ದೇಹಾತೀತ ಜಾಣ । ಪ್ರಕೃತೀಹೂನ ಪುರುಷ ಭಿನ್ನ । ಹೇ ನಿಜಾತ್ಮಜ್ಞಾನ ಜೋ ನೇಣೇ ।೪೯೨॥ ತೋಚಿ ಸಂಸಾರಾಚಾ ಆಪಣ। ಘರಜಾಂವಈ ರಘಾಲಾ ಜಾಣ । ದೇಹಾಭಿಮಾನಾಸೀ ಸಂಪೂರ್ಣ । ಏಕಾತ್ಮಪಣ ಮಾಂಡಿಲೇ ।೪೯೩॥ ವಿಷಯಭೋಗ ತೋಚಿ ಪುರುಷಾರ್ಥ । ಐಸೇ ಮಾನೂನಿಯಾ ನಿಶ್ಚಿತ । ಶುಭಾಶುಭ ಕರ್ಮೀ ಯೇಥ । ಭೋಗವೀತ ನಾನಾ ಯೋನೀ ।೪೯೪॥ ವಿಷಯಭೋಗ ಅಭಿಮಾನೇ ಜಾಣ । ಪುಢತೀ ಜನ್ಮ ಪುಢತೀ ಮರಣ । ನಾನಾ ಯೋನೀ ಆವರ್ತನ । ದೇಹಾಭಿಮಾನ ಭೋಗವೀ ।೪೯೫॥ ತೇ ನಾನಾ ಯೋನೀ ಗರ್ಭದುಃಖ । ದೇಹಾಭಿಮಾನೇ ಭೋಗಿತೀ ಮೂರ್ಖ । ತೇಚಿ ನಾನಾ ತತ್ತ್ವಾಂಚೇ ರೂಪಕ । ಯದುನಾಯಕ ಸಾಂಗತ ।೪೯೬॥

ಸತ್ತ್ವಸಂಗಾದೃಷೀನ್ ದೇವಾನ್ ರಜಸಾऽಸುರಮಾನುಷಾನ್ ।
ತಮಸಾ ಭೂತತಿರ್ಯಕ್ತ್ವಂ ಭ್ರಾಮಿತೋ ಯಾತಿ ಕರ್ಮಭಿಃ ।೨೧॥

ಅರ್ಥ:- ಬದ್ಧಾತ್ಮನು ತನ್ನ ಫಲಾಪೇಕ್ಷೆ ಕರ್ಮಗಳಿಂದ ಭ್ರಮಿತನಾಗಿ ಸಾತ್ತ್ವಿಕ ಗುಣದ ಸಹಯೋಗವಿದ್ದರೆ ಋಷಿ ಅಥವಾ ದೇವತೆಯಾಗಿಯೂ ರಜೋಗುಣದ ಸಂಪರ್ಕವಿದ್ದರೆ ಮನುಷ್ಯ ಅಥವಾ ರಾಕ್ಷಸನಾಗಿಯೂ ತಮೋಗುಣದ ಸಂಬಂಧವಿದ್ದರೆ ಪ್ರಾಣಿ ಅಥವಾ ಭೂತವಾಗಿಯೂ ಹುಟ್ಟುತ್ತಾನೆ .

ಪರ್ವತದಲ್ಲಿ ಬೀಜವು ಬೀಳುವುದು ಮತ್ತು ಅದರ ಉತ್ಪತ್ತಿಯಾಗಿ, ಬೆಳೆದು ದೊಡ್ಡ ವೃಕ್ಷವಾಗುವುದು. ಪರ್ವತವು ಆ ಯಾವ ವೃಕ್ಷಕ್ಕೆ ಸಾಕ್ಷಿಯಾಗಿರುವುದು. ಆ ವೃಕ್ಷವನ್ನು ಹೊಡೆದು ಕೆಡವಲು ಪರ್ವತವು ದುಃಖಿಯಾಗುವುದಿಲ್ಲ. ಅದರಂತೆ ಆತ್ಮವು ದೇಹದ ದ್ರಷ್ಟಾ-ಸಾಕ್ಷಿಯಾಗಿರುವುದು ।೪೮೮॥ ಪ್ರತಿಯೊಂದು ದೇಹಕ್ಕೆ ದ್ರಷ್ಟಾ ಈತನು ಸಾಕ್ಷಿಭೂತನಾಗಿರುವನು. ಆದರೆ ಆ ದೇಹದ ಧರ್ಮವು ದ್ರಷ್ಟಾನಿಗೆ ಯಾವುದೂ ಹತ್ತಿಕೊಳ್ಳುವುದಿಲ್ಲ. ಆತನು ದೇಹದಲ್ಲಿದ್ದರೂ ವಿದೇಹಿಯಾಗಿರುವನು. ಈ ಕಾರಣದಿಂದ ಆತನಿಗೆ ಸಂಸಾರ ಬಂಧನದ ಸ್ಪರ್ಶವೂ ಕೂಡ ಆಗುವುದಿಲ್ಲ ।೪೮೯॥ ಹೀಗಿದ್ದರೂ ಇದರ ಮರ್ಮವನ್ನರಿಯದೇ ಅವಿವೇಕ ಜನರು ಈ ಜಗತ್ತಿನಲ್ಲಿ ಅತಿಶಯವಾಗಿ ಬದ್ಧರು ಹೇಗಾಗುವರೆಂಬ ವಿಷಯವನ್ನು ಕುರಿತು ಮುಂದಿನ ಐದು ಶ್ಲೋಕಗಳಲ್ಲಿ ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ।೪೯೦॥

ಆತ್ಮನಿಗೆ ಕರ್ಮ, ಅಕರ್ಮ ಅಥವಾ ಕರ್ತೃತ್ವ ಇವು ಮೂಲತಃ ಇರುವುದೇ ಇಲ್ಲ. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು. ಈ ಅರ್ಥವನ್ನು ಮುಂದಿಟ್ಟುಕೊಂಡು ಸರ್ವ ನಿರೂಪಣೆಯನ್ನು ಈ ಹಿಂದೆ ಹೇಳಲಾಗಿರುವುದು ।೪೯೧॥ ಆತ್ಮವು ಸತ್ವ, ರಜ, ತಮ ಈ ಮೂರೂ ಗುಣಗಳಿಗೆ ಸ್ಪರ್ಶವನ್ನೂ ಕೂಡ ಮಾಡುವುದಿಲ್ಲ. ದೇಹದಲ್ಲಿ ವಾಸಿಸುವ ಆತ್ಮವು ದೇಹದಿಂದ ಭಿನ್ನವಾಗಿಯೇ ಇರುವುದು. ಈ ಕಾರಣವಾಗಿ ಪುರುಷನು ಪ್ರಕೃತಿಗಿಂತ ಭಿನ್ನನಾಗಿರುವನೆಂಬುದನ್ನು ಯಾರು ತಿಳಿಯುವುದಿಲ್ಲವೋ ।೪೯೨॥ ಅವನು ಸ್ವತಃ ಸಂಸಾರದ ಮನೆ ಅಳಿಯನಾದನೆಂದು ತಿಳಿಯಬೇಕು. ಆತನ ದೇಹವು ಅಭಿಮಾನದೊಂದಿಗೆ ಪೂರ್ಣವಾಗಿ ಐಕ್ಯವಾಗಿರುವುದು. ಹೀಗೆಂದು ತಿಳಿ ।೪೯೩॥ ವಿಷಯಗಳ ಭೋಗವೇ ನಿಜವಾದ ಪುರುಷಾರ್ಥವಾಗಿದೆ ಎಂದು ನಿಶ್ಚಿತವಾಗಿ ತಿಳಿದು, ಅದಕ್ಕಾಗಿ ಶುಭ, ಅಶುಭ ಕರ್ಮಗಳನ್ನು ಮಾಡುತ್ತ ಅನೇಕ ಪ್ರಕಾರದ ಯೋನಿಗಳಲ್ಲಿ ಸುಖದುಃಖಗಳನ್ನು ಭೋಗಿಸುತ್ತಿರುವರು ।೪೯೪॥ ವಿಷಯಭೋಗದ ಅಭಿಮಾನದಿಂದ ಜನ್ಮಮರಣಗಳ ಚಕ್ರದಲ್ಲಿ ತಿರುಗುತ್ತಿರಬೇಕಾಗುವುದು. ದೇಹದ ಅಭಿಮಾನವು ನಾನಾ ಪ್ರಕಾರಗಳ ಯೋನಿಗಳಲ್ಲಿ ತಿರುಗಿಸಲು ಹಚ್ಚುವುದು. ।೪೯೫॥ ಮೂರ್ಖರಾದ ಜನರು ದೇಹಾಭಿಮಾನದಿಂದ ನಾನಾ ಪ್ರಕಾರಗಳ ಯೋನಿಗಳಲ್ಲಿ ಗರ್ಭವಾಸದ ದುಃಖವನ್ನು ಭೋಗಿಸುತ್ತಿರುವರು. ಆ ಯಾವ ಅನೇಕ ಪ್ರಕಾರದ ಯೋನಿಗಳ ರೂಪಕವನ್ನು ಈಗ ಯದುನಾಯಕನಾದ ಶ್ರೀಕೃಷ್ಣನು ಹೇಳುವನು ।೪೯೬॥

ದೇಹಾಭಿಮಾನಾಚಿಯೇ ಸ್ಥಿತೀ । ತ್ರಿಗುಣ ಗುಣಾಂಚೀ ಕರ್ಮೇ ಹೋತೀ । ತೇಣೇ ತ್ರಿವಿಧ ಸಂಸಾರಪ್ರಾಪ್ತೀ । ಐಕ ನಿಶ್ಚತೀ ಉದ್ಧವಾ ।೯೭॥ ನ ಕರಿತಾ ಕೃಷ್ಣಾರ್ಪಣ । ಸಾತ್ವಿಕ ಕರ್ಮ ಕೀಜೇ ಆಪಣ । ತೇಣೇ ಕ್ಷೋಭೇ ಸತ್ತ್ವಗುಣ । ಉತ್ತಮ ದೇಹ ಜಾಣ ಉಪಜವೀ ।೯೮॥ ಸತ್ತ್ವಾಚ್ಯಾ ಅತಿಉತ್ಕರ್ಷಗತೀ । ದೇವ ಋಷಿ ಬ್ರಹ್ಮಋಷಿ ಹೋತೀ । ಸತ್ತ್ವಾಚ್ಯಾ ಸಮಸಾಮ್ಯಸ್ಥಿತೀ । ಕಲ್ಪಾಯು ಜನ್ಮತೀ ಆಜಾನುಬಾಹೋ ।೯೯॥ ಸತ್ತ್ವಗುಣೇ ಕ್ರಿಯಾಯುಕ್ತ । ಸ್ವರ್ಗೀ ದೇವ ಹೋತೀ ಸ್ವರ್ಗಸ್ಥ । ಭೋಗಕ್ಷಯೇ ಅಧಃಪಾತ । ಯಾ ಯೋನೀ ಜನಿತ ಸತ್ತ್ವಗುಣೇ ॥ ೧೦೦॥ ಆಶ್ರಯೂನಿ ರಾಜಸ ಗುಣ । ಕರಿತಾ ರಾಜಸ ಕರ್ಮಾಚರಣ । ತೇಣೇ ಕ್ಷೋಭಲಾ ರಜೋಗುಣ । ಯೋನಿ ಕೋಣ ಉಪಜವೀ ।೧೦೧॥ ರಾಜಸ ಕರ್ಮ ಬ್ರಹ್ಮೀ ಅರ್ಪಿತೀ । ತೇ ದೈತ್ಯಹೀ ಭಗವದ್ಭಕ್ತ ಹೋತೀ । ತೇ ರಜ ಉತ್ಕರ್ಷೇ ಭೋಗ ವಾಂಛಿತೀ । ತೇ ಅಸುರ ಹೋತೀ ಮಹಾಯೋದ್ಧೇ ।೧೦೨॥ ರಜೋಗುಣೇ ಸ್ವಕರ್ಮಾಚರಣ । ತೇಣೇ ಕರ್ಮೇ ಜನ್ಮತೀ ಬ್ರಾಹ್ಮಣ । ರಜತಾರತಮ್ಯೇ ಜಾಣ । ಚಾರೀ ವರ್ಣ ಜನ್ಮತೀ ।೧೦೩॥ ತಾಮಸಾಚೇ ಸಂಗತೀ ಜಾಣ । ಕರಿತಾ ತಮಿಷ್ಠ ಕರ್ಮಾಚರಣ । ತೇಣೇ ಕ್ಷೋಭಲಾ ಜೋ ತಮೋಗುಣ । ತೋ ನೀಚ ಯೋನೀ ದಾರುಣ ಉಪಜವೀ ।೧೦೪॥ ಭೂತ ಪ್ರೇತ ಪಿಶಾಚಕ । ತಿರ್ಯಗ್ಯೋನಿ ಅಸಂಖ್ಯ । ವೃಕ್ಷ ಪರ್ವತ ಪಾಷಾಣ ದೇಖ । ಯಾ ಯೋನೀ ಅನೇಕ ಭೋಗವೀ ।೧೦೫॥ ಆಶಂಕಾ ॥ ಕರ್ಮ ತ್ರಿಗುಣಾತ್ಮಕ ಸಾಚಾರ । ಪರೀ ಕರ್ಮಫಳಭೋಕ್ತಾ ಈಶ್ವರ । ಹಾ ವೇದಶಾಸ್ತ್ರೀ ವಿಚಾರ । ಕೇಲಾ ನಿರ್ಧಾರ ತುಮ್ಹೀಹೀ ।೧೦೬॥ ದೇಹಸಾಕ್ಷಿತ್ವೇ ಆತ್ಮಾ ನಿರಾಳಾ । ಐಸಾ ಗತಶ್ಲೋಕೀ ಕೇಲಾ ನಿವಾಳಾ । ಜೈ ಕರ್ಮಫಳಭೋಕ್ತಾ ಕರ್ಮಾವೇಗಳಾ । ತ್ಯೈ ಕರ್ಮಫಳಾ ಕೇವೀ ಭೋಗೀ ।೧೦೭॥ ಐಸೇ ಆಶಂಕೇಚೇ ಅಂತರ । ಜಾಣೋನಿಯಾ ಶಾರ್ಙ್ಗಧರ । ತೇಚಿ ಅರ್ಥಾಚೇ ಉತ್ತರ । ವಿಶದ ಸಾಚಾರ ಸಾಂಗತ ।೧೦೮॥

ನೃತ್ಯತೋ ಗಾಯತಃ ಪಶ್ಯನ್ ಯಥೈವಾನುಕರೋತಿ ತಾನ್ ।
ಏವಂ ಬುದ್ಧಿಗುಣಾನ್ಪಶ್ಯನ್ನಿಹೋಽಪ್ಯನು ಕಾರ್ಯತೇ ।೫೨॥

ಅರ್ಥ:- ನರ್ತನ, ಗಾಯನವನ್ನು ಕಂಡು ಕೇಳಿದವನು ತಾನೂ ಅದನ್ನು ಅನುಕರಿಸುವಂತೆ ಆತ್ಮನು ತಾನು ದೇಹಾದಿ ಚಟುವಟಿಕೆಗಳಲ್ಲಿ ಕ್ರಿಯಾತ್ಮಕನಲ್ಲವಾದರೂ ಕೂಡ ಭೌತಿಕ ಬುದ್ಧಿಗೆ ವಶನಾಗಿ ತಾನೂ ಅದರ ಗುಣಗಳನ್ನು ಬಲವಂತವಾಗಿ ಅನುಕರಿಸುತ್ತಾನೆ.

ಹೇ ಉದ್ಧವನೇ, ದೇಹಾಭಿಮಾನವಿರುವುದರಿಂದ ಮೂರು ಗುಣಗಳ ಕರ್ಮಗಳು ಆಗುತ್ತಿರುವುವು. ಇದರಿಂದ ಮೂರು ಪ್ರಕಾರದ ಸಂಸಾರವು ಬೆನ್ನು ಹತ್ತುವುದು ।೯೭॥ ಯಾವುದೇ ಸಾತ್ವಿಕ ಕರ್ಮಗಳನ್ನು ಕೃಷ್ಣಾರ್ಪಣೆ ಮಾಡದೇ ಆಚರಿಸಿದರೆ ಸತ್ವಗುಣವು ಉಗ್ರಗೊಂಡು ಆಗ ಅದರಿಂದ ಉತ್ತಮ ದೇಹವು ಪ್ರಾಪ್ತವಾಗುವುದು ।೯೮॥ ಸತ್ವಗುಣದ ಅತ್ಯಂತ ಉತ್ಕರ್ಷ ಸ್ಥಿತಿಯುಂಟಾಗಲು ಆಗ ದೇವರ್ಷೀ ಅಥವಾ ಬ್ರಹ್ಮರ್ಷೀಯಾಗಿ ಆ ಯಾವ ಸತ್ವಗುಣದ ಸಮಸಾಮ್ಯ ಸ್ಥಿತಿಯಿಂದ ಅವರು ಅಜಾನುಬಾಹು ಹಾಗೂ ಕಲ್ಪಪರ್ಯಂತ ಬದುಕುವಷ್ಟು ಧೀರ್ಘಾಯುಷೀಯಾಗುವರು ।೯೯॥ ಸತ್ವಗುಣಯುಕ್ತ ಕರ್ಮಗಳು ಸಾಧಿಸಿದರೆ ಸ್ವರ್ಗದಲ್ಲಿ ದೇವತೆಗಳಾಗುವರು ಮತ್ತು ಅಲ್ಲಿನ ಭೋಗಗಳನ್ನು ಭೋಗಿಸುತ್ತ ಪುಣ್ಯವು ತೀರಿತೆಂದರೆ ಆಗ ಅವರ ಅಧಃಪಾತವಾಗಿ ಪುನಃ ಮನುಷ್ಯ ಯೋನಿಯಲ್ಲಿ ಜನ್ಮವನ್ನು ಪಡೆದು ಸತ್ವಗುಣ ಸಂಪನ್ನರಾಗಿಯೇ ಇರುವರು. ।೧೦೦॥ ರಾಜಸ ಜನರು ರಜೋಗುಣದ ಸ್ವೀಕಾರವನ್ನು ಮಾಡಿ ರಾಜಸ ಕಾರ್ಯಗಳ ಆಚರಣೆಯನ್ನು ಮಾಡಲು ಆಗ ರಾಜಸ ಗುಣವು ಕ್ಷೋಭಗೊಳ್ಳುವುದು. ಇದರಿಂದ ಅವರಿಗೆ ಯಾವ ಜನ್ಮವು ಪ್ರಾಪ್ತವಾಗುವುದೆಂಬುದನ್ನು ಈಗ ಕೇಳಿರಿ. ।೧೦೧॥ ಯಾವ ಜನರು ರಾಜಸ ಕರ್ಮಗಳನ್ನು ಮಾಡಿ ಬ್ರಹ್ಮಾರ್ಪಣೆಯನ್ನು ಮಾಡಲು, ಆಗ ಅವರು ದೈತ್ಯರಾಗಿ ಹುಟ್ಟಿದರೂ ಕೂಡ ಭಗವದ್ಭಕ್ತರಾಗುವರು ಮತ್ತು ರಜೋಗುಣದ ಬುದ್ಧಿಯಿಂದ ಅವರು ವಿಷಯ ಭೋಗಗಳ ಇಚ್ಛೆಯನ್ನು ಮಾಡುವರು. ಅವರು ಮಹಾಯೋದ್ಧರಾದ ಅಸುರರಾಗುವರು ।೧೦೨॥ ಯಾರು ರಜೋಗುಣದ ಸ್ವಕರ್ಮಾಚರಣೆಯನ್ನು ಮಾಡುವರೋ ಅವರು ಆ ಕರ್ಮದಿಂದ ಬ್ರಾಹ್ಮಣರ ಜನ್ಮವನ್ನು ಪ್ರಾಪ್ತಮಾಡಿಕೊಳ್ಳುವರು. ರಜೋಗುಣದ ಹೆಚ್ಚುಕಡಿಮೆಯ ಅಂತರ ಪ್ರಕಾರವಾಗಿ ನಾಲ್ಕೂ ವರ್ಣಗಳಲ್ಲಿ ಜನ್ಮಕ್ಕೆ ಬರುತ್ತಿರುವರು ।೧೦೩॥ ತಾಮಸ ಜನರ ಸಂಗತಿಯಿಂದ ತಾಮಸ ಕಾರ್ಯಗಳ ಆಚರಣೆಯನ್ನು ಮಾಡಲು, ಆಗ ತಮೋಗುಣವು ಕ್ಷುಬ್ಧವಾಗುವುದು. ಇದರಿಂದ ನೀಚವಾದ ದುಃಖಯುಕ್ತ ಜನ್ಮವು ಪ್ರಾಪ್ತವಾಗುವುದು. ।೧೦೪॥ ಭೂತ, ಪ್ರೇತ, ಪಿಶಾಚ್ಚ, ಪಶು, ಪಕ್ಷೀ, ಪಾಷಾಣ ಇತ್ಯಾದಿ ಅನೇಕ ಪ್ರಕಾರಗಳ ಯೋನಿಗಳನ್ನು ಭೋಗಿಸಬೇಕಾಗುವುದು. ।೧೦೫॥ ಕರ್ಮವು ಇದು ನಿಜವಾಗಿಯೂ ತ್ರಿಗುಣಾತ್ಮಕವಾಗಿರುವುದು. ಆದರೆ ಕರ್ಮಫಲದ ಭೋಕ್ತನು ಈಶ್ವರನಾಗಿರುವನು. ಹೀಗೆ ವೇದಶಾಸ್ತ್ರಗಳ ಆಧಾರದಿಂದ ನೀನೇ ನಿಶ್ಚಯಗೊಳಿಸಿರುವೆ ।೧೦೬॥ ದೇಹದ ಸಾಕ್ಷೀಭೂತನಾಗಿರುವ ಆತ್ಮವು ಭಿನ್ನವಾಗಿಯೇ ಇರುವುದು. ಹೀಗೆಂದು ಹಿಂದಿನ ಶ್ಲೋಕದಲ್ಲಿ ನೀವು ಈ ಸಿದ್ಧಾಂತವನ್ನು ನಿಶ್ಚಯಿಸಿರುವಿರಿ. ಅಂದಮೇಲೆ ಕರ್ಮಫಲದ ಭೋಕ್ತಾನು ಕರ್ಮದಿಂದ ಭಿನ್ನವಾಗಿದ್ದರೆ ಆತನು ಕರ್ಮಫಲವನ್ನು ಹೇಗೆ ಭೋಗಿಸುವನು? ।೧೦೭॥ ಈ ಪ್ರಕಾರದ ಅನುಮಾನವನ್ನು ಉದ್ಧವನ ಮನದಲ್ಲಿದ್ದದ್ದು ದೇವನು ತಿಳಿದುಕೊಂಡು, ಈಗ ಅದರ ಉತ್ತರವನ್ನು ಸ್ವತಃಕೊಡುತ್ತಿರುವನು ।೧೦೮॥

ಕಲಾಕುತಲ ಸಭಾನಾಯಕ । ತ್ಯಾಪುಢೇ ರಂಗ ಹೋತಾ ಕೌತುಕ । ಗಾತ್ಯಾ ನಾಚತ್ಯಾಚೇ ತಾಲಥಾಕ । ಸ್ವಯೇ ದೇಖ ಅನುಕರೇ ॥೬೦೯॥ ತೇಚಿ ಅನುಕಾರ ಮ್ಹಣಶೀ ಕೈಸೇ । ಪ್ರಕೃತಿ ಕೇವಳ ಜಡಾಂಶೇ । ಜಾಣಪಣ ಆತ್ಮ್ಯಾಸೀ ಅಸೇ । ಯೇಣೇ ವಿನ್ಯಾಸೇ ಭೋಕ್ತಾ ಮ್ಹಣತೀ ॥೬೧೦॥ ಸಭೇಸೀ ಬೈಸಲ್ಯಾ ನಿಶ್ಚಳಾ । ರಂಗೀಚ್ಯಾ ಅನುಕರೇ ಥಾಕತಾಳಾ । ತೇವೀ ಪ್ರಕೃತಿ ಪುರುಷ ವೇಗಳಾ । ತೋ ಪ್ರಕೃತೀಚೀ ಲೀಳಾ ಅನುಕರೇ ॥೬೧೧॥ ಆಶಂಕಾ ॥ ಪ್ರಕೃತಿಚ್ಛಂದೇ ಅನುಕಾರತಾ । ಗುಣಕರ್ಮಾಚಾ ಫಳಭೋಕ್ತಾ । ಆತ್ಮಾ ಝಾಲಾ ಜೈ ತತ್ತ್ವತಾ । ತೈ ನಿತ್ಯಮುಕ್ತತಾ ಭಂಗಲೀ ॥೬೧೨॥ ಜೋ ಕರೀ ಕರ್ಮಫಳಸ್ವಾದನ । ತ್ಯಾಸೀ ಲಾಗೇ ಕರ್ಮಬಂಧನ । ಕರ್ಮಾಸ್ತವ ಜನ್ಮ ಮರಣ । ಆತ್ಮ್ಯಾಸೀ ಜಾಣ ಲಾಗಲೇ ॥೬೧೩॥ ನಿತ್ಯಮುಕ್ತ ಅವಿಕಾರೀ । ಯಾ ಗೋಷ್ಟೀ ರಾಹಿಲ್ಯಾ ದೂರೀ । ಆತ್ಮಾ ಜಾಹಲಾ ಸಂಸಾರೀ । ಗುಣವಿಕಾರೀ ಅತಿಬದ್ಧ ॥೬೧೪॥ ಉದ್ಧವಾ ತೂ ಐಸಐಶೀ । ಆಶಂಕಾ ಝಣೇ ಧರಿಶೀ । ಆತ್ಮಾ ಅಲಿಪ್ತ ಗುಣಕರ್ಮಾಸೀ । ದೃಷ್ಟಾಂತೇಸೀ ಹರಿ ಸಾಂಗೇ ॥೬೧೫॥

ಯಥಾಽಂಭಸಾ ಪ್ರಚಲತಾ ತರವೋಽಪಿ ಚಲಾ ಇವ । ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ ॥೫೩॥

ಅರ್ಥ:- ನದೀ, ಕೆರೆಗಳ ನೀರು ಅಲುಗಾಡಲು ಅದರಲ್ಲಿನ ಪ್ರತಿಬಿಂಬಿತವಾದ ದಂಡೆಯ ವೃಕ್ಷಗಳು ಅಲುಗಾಡಿದಂತೆ ಕಾಣುವುವು. ಕಣ್ಣು ತಿರುಗ ಹತ್ತಲು ಆಗ ಪೃಥ್ವಿಯೂ ಕೂಡ ತಿರುಗುತ್ತಿರುವಂತೆ ತೋರುವುದು.

ಜೇವೀ ಗಂಗಾತೀರೀಂಚಾ ತರೂ । ಜಳೀ ವಾಹತಾ ದೇಖೇ ನರೂ । ತೇವೀ ಮಾಯಾಗುಣ ಅನುಕಾರೂ । ಭಾಸೇ ವಿಕಾರೂ ಆತ್ಮತ್ವೀ ॥೬೧೬॥ ಜ್ಯಾಚೇ ಡೋಳಾ ಭವಂಡೀ ಸಬಳ । ತೋ ಭಂವತಾ ದೇಖೇ ಭೂಮಂಡಳ । ತೇವೀ ಮಾಯಿಕ ವಿಕಾರಮೇಳ । ಮಿಥ್ಯಾ ಕೇವಳ ಆತ್ಮ್ಯಾಸೀ ॥೬೧೭॥ ಜೋ ಅಶ್ವರೂಢ ಹೋಊನಿ ಪಾಹೇ । ಜಳೀ ಪ್ರವಾಹಾಸಂಮುಖ ರಾಹೇ । ತೋ ದೇಖೇ ಮೀ ಜಳೀ ಪ್ರವಾಹೇ । ಐಸಾ ಮಿಥ್ಯಾ ಹೋಯೇ ಅನುಭವೂ ॥೬೧೮॥ ತೇವೀ ಆತ್ಮಾ ನಿತ್ಯ ನಿರ್ವಿಕಾರ । ತೇಥ ಮಾಯಾವೀ ಗುಣಸಂಭಾರ । ಕಲ್ಪನಾ ಯೋಗೇಸಾಚಾರ । ಮಾನಿತೀ ನರ ಮನೋಮಯ ॥೬೧೯॥ ಆಬ್ರಹ್ಮಸ್ತಂಬಪರ್ಯಂತ । ನಾನಾ ಯೋನೀ ವಿಕಾರವಂತ । ಕರ್ಮ ಕ್ರಿಯಾ ಫಳಭೋಗ ಯೇಥ । ಜಾಣ ನಿಶ್ಚಿತ ಮನೋಜನ್ಯ ॥೬೨೦॥

ಕಲಾಕುಶಲತೆಯಲ್ಲಿ ನಿಪುಣನಾಗಿರುವ ಸಭಾಪತಿಯ ಎದುರಿನಲ್ಲಿ ಆನಂದಯುಕ್ತವಾಗಿ ಗಾಯನ, ನರ್ತನವು ನಡೆಯುತ್ತಿರಲು ಆಗ ಆತನೂ ಕೂಡ ಶೃತಿ ತಾಳ ತಕ್ಕಂತೆ ಅದರಲ್ಲಿ ಮೈಗೂಡುವನು ॥೬೦೯॥ ಈಗ ಆತನು ಹೇಗೆ ಏಕರೂಪನಾಗುವನು ಎಂದು ನೀನು ಕೇಳಬಹುದು. ಹಾಗಾದರೆ ಕೇಳು, ಪ್ರಕೃತಿಯು ಇದು ಕೇವಲ ಜಡವಾಗಿರುವುದು. ಆತ್ಮವು ಜ್ಞಾನಸಂಪನ್ನವಾಗಿರುವುದು. ಆದ್ದರಿಂದ ಆತ್ಮಕ್ಕೆ ಭೋಕ್ತಾ ಎಂದು ಹೇಳುವರು. ॥೬೧೦॥ ಸಭೆಯಲ್ಲಿ ಸ್ವಸ್ಥನಾಗಿ ಕುಳಿತಿರುವ ಸಂಗೀತ ಕಲೆಯ ತಜ್ಞನು ಆಗ ಸಂಗೀತಸೂರು ತಾಳತಕ್ಕಂತೆ ಸ್ವತಃತಾಳವನ್ನು ಹಿಡಿದು ಅದರಲ್ಲಿ ಕೂಡಿಕೊಳ್ಳುವನು. ಅದರಂತೆ ಆತ್ಮನು ಪ್ರಕೃತಿಗಿಂತ ಭಿನ್ನನಾಗಿದ್ದರೂ ಕೂಡ ಪ್ರಕೃತಿಯ ಲೀಲೆಯ ಅನುಕರಣೆಯನ್ನು ಮಾಡುತ್ತಿರುವನು ॥೬೧೧॥ ಪ್ರಕೃತಿಯ ನಾದದಿಂದ ಅದರ ಅನುಕರಣೆಯನ್ನು ಮಾಡುವ ಆತ್ಮವು ನಿಜವಾಗಿಯೂ ಗುಣಕರ್ಮಗಳ ಭೋಕ್ತಾನಾದರೆ ಆಗ ಆತನ ನಿತ್ಯ ಮುಕ್ತತೆಯು ಇಲ್ಲದಂತಾಗುವುದಿಲ್ಲವೇ? ॥೬೧೨॥ ಕಾರಣವೇನೆಂದರೆ ಯಾವನು ಕರ್ಮಫಲದ ಉಪಭೋಗವನ್ನು ಪಡೆಯುವನೋ, ಆತನಿಗೆ ಕರ್ಮದ ಬಂಧನೆಯು ಹತ್ತುವುದು. ಈ ಯಾವ ಕರ್ಮಗಳಿಂದ ಆತ್ಮನಿಗೂ ಜನ್ಮ ಮರಣ ಹತ್ತಿತು ಎಂದು ಹೇಳಬೇಕಾಗುವುದು ॥೬೧೩॥ ಅಂದಮೇಲೆ ಆತ್ಮವು ನಿತ್ಯಮುಕ್ತ, ನಿರ್ವಿಕಾರವಾಗಿದೆ ಎಂಬ ಈ ವಿಚಾರವು ದೂರ ಉಳಿದುಕೊಂಡು ಗುಣವಿಕಾರಗಳಿಂದ ಆತ್ಮವು ಬದ್ಧವಾಗಿ ಸಂಸಾರೀಯಾಗಬೇಕಾದೀತು ॥೬೧೪॥ ಹೇ ಉದ್ಧವನೇ, ಈ ಪ್ರಕಾರದ ಶಂಕೆಯನ್ನು ನೀನು ಮನದಲ್ಲಿಯೂ ಕೂಡ ತರಬೇಡ. ಏಕೆಂದರೆ ಆತ್ಮವು ಗುಣಕರ್ಮಗಳಿಂದ ಅತ್ಯಂತ ಅಲಿಪ್ತವಾಗಿರುವುದು. ಈ ವಿಷಯವನ್ನು ಕುರಿತು ಈಗ ಶ್ರೀಹರಿಯು ದೃಷ್ಟಾಂತಪೂರ್ವಕವಾಗಿ ಹೇಳುತ್ತಿರುವನು. ॥೬೧೫॥

ಒಬ್ಬ ಮನುಷ್ಯನು ಗಂಗಾನದಿ ದಂಡೆಯ ಮೇಲೆ ನಿಂತುಕೊಂಡು ದಂಡೆಯ ಮೇಲಿರುವ ಗಿಡಗಂಟೆಗಳು ನೀರಿನಲ್ಲಿ ಹರಿಯುತ್ತಿದ್ದಂತೆ ಕಾಣುತ್ತಿರುವನು. ಅದರಂತೆಯೇ ಮಾಯೆಯ ಗುಣವಿಕಾರಗಳು ಆತ್ಮಕ್ಕೂ ಇರುವುವು ಎಂಬಂತೆ ಭಾಸವಾಗುತ್ತಿರುವುದು ॥೬೧೬॥ ತಲೆಗೆ ಚಕ್ರವು ಉಂಟಾಗಲು ಆಗ ಆತನಿಗೆ ಎಲ್ಲ ಭೂಮಿಯು ತಿರುಗುತ್ತಿದ್ದಂತೆ ಭಾಸವಾಗುತ್ತಿರುವುದು. ಅದರಂತೆ ಮಾಯೆಯ ವಿಕಾರಗಳ ಸಮೂಹವು ಆತ್ಮನಲ್ಲಿ ಮಿಥ್ಯಾ ಆರೋಪವನ್ನು ಮಾಡಲ್ಪಡುವುದು ॥೬೧೭॥ ಕುದುರೆಯ ಮೇಲೆ ಕುಳಿತುಕೊಂಡ ಮನುಷ್ಯನು ನದಿಯ ಪ್ರವಾಹದ ಎದುರಿನಲ್ಲಿ ನಿಂತುಕೊಳ್ಳಲು ಆಗ ತಾನೂ ಕೂಡ ಪ್ರವಾಹದಲ್ಲಿ ಸಾಗುತ್ತಿರುವೆನು ಎಂಬ ಭಾಸವಾಗುವುದು ॥೬೧೮॥ ಅದರಂತೆ ಆತ್ಮವು ನಿತ್ಯ ನಿರ್ವಿಕಾರವಾಗಿದ್ದರೂ ಕೂಡ ಮಾಯೆಯ ಗುಣವಿಕಾರಗಳನ್ನು ಕಲ್ಪಿಸಲ್ಪಡುವುವು. ಜನರೂ ಕೂಡ ಮನೋಮಯವಾದ ಆ ಎಲ್ಲ ಕಲ್ಪನೆಗಳನ್ನು ನಿಜವೆಂದೇ ತಿಳಿಯುತ್ತಿರುವರು ॥೬೧೯॥ ಬ್ರಹ್ಮದೇವನಿಂದ ಹಿಡಿದು ಕ್ಷುದ್ರ ಕೀಟದವರೆಗೆ ಅಸಂಖ್ಯ ಯೋನಿಗಳು ವಿಕಾರಗಳಿಂದಲೇ ಉತ್ಪನ್ನವಾಗಿರುವುವು. ಅವುಗಳಲ್ಲಿನ ಕ್ರಿಯೆ, ಕರ್ಮ, ಫಲ, ಭೋಗ ಈ ಎಲ್ಲವೂ ಮನೋಕಲ್ಪಿತವಾಗಿರುವುವು ॥೬೨೦॥

ಐಸೇ ಸಾಂಗತಾ ಹರಿ ಸಾಂವಳಾ । ತೇಣೇ ಉಲ್ಹಾಸ ಉದ್ಧವ ಜೀವಾಲಾ । ತಯಾ ಆನಂದಾಚ್ಯಾ ಕಲ್ಲೋಳಾ । ಉದ್ಧವಚಿ ಲೀಲಾ ಪೋಖಿತ ॥೬೨೧॥ ನಿವಾವಯಾ ಉದ್ಧವಾಚಾ ತಾಪ । ಸ್ವಯೇ ಸಾಂಗೇ ತೋ ವಿಶ್ವತೋಮುಖ । ಜೇಣೇ ಉದ್ಧವಾ ಬಹು ಹರಿಖ । ತೇಚಿ ಶ್ರೀಕೃಷ್ಣ ದೇಖ ಸಾಂಗತಸೇ ॥೬೨೨॥

ಯಥಾ ಮನೋರಥಧಿಯೋ ವಿಷಯಾನುಭವೋ ಮೃಷಾ॥ ಸ್ವಪ್ನದೃಷ್ಟಾಶ್ಚ ದಾಶಾರ್ಹ ತಥಾ ಸಂಸಾರ ಆತ್ಮನಃ ॥೮೪॥

ಅರ್ಥ:- ಹೇ ದಾಶಾರ್ಹ ವಂಶಜನೇ, ಈ ಯಾವ ಪ್ರಸಿದ್ಧ ಮನೋರಥ ಬುದ್ಧಿಯು ಮತ್ತು ಸ್ವಪ್ನದಲ್ಲಿ ಅನುಭವಿಸಿದ ಬುದ್ಧಿಯು ಯಾವ ಪ್ರಕಾರವಾಗಿ ಮಿಥ್ಯೆಯಾಗಿರುವುದೋ, ಅದರಂತೆಯೇ ಈ ಯಾವ ಆತ್ಮನ ವಿಷಯಾನುರೂಪವಾದ ಸಂಸಾರವೂ ಕೂಡ ಮಿಥ್ಯೆಯಾಗಿರುವುದು.

ಆತ್ಮಾ ನಿಜಮುಕ್ತ ಅವಿಕಾರೀ । ತೋ ಸಂಕಲ್ಪೇ ಕೀಜೇ ವಿಕಾರೀ । ಅಸಂಸಾರೀ ಪರೀ ಸಂಸಾರೀ । ಮನೋವಿಕಾರೀ ಮಾನಿಜೇ ॥೬೨೩॥ ಐಸೇ ದುಜಯಾವೀಣ ಕಾಂಹೀ । ಕಥಾ ವಾರ್ತಾ ಸಾಂಗತಾ ನಾಹೀ । ಏಕ ಶ್ರೋತಾ ದುಸರಾ ವಕ್ತಾ ಪಾಹೀ । ಯಾಲಾಗೀ ಯೇಹೀ ಉಪಾಯೇ ॥೬೨೪॥ ಜೇವೀ ಏಕಟಾ ಕ್ರಮೇನಾ ಪಂಥ । ಮೀ ರಾಜಾ ಕರೀ ಮನೋರಥ । ಪರಚಕ್ರ ಕಲ್ಪೂನಿ ತೇಥ । ಹೋಯ ಉದ್ಯತ ಯುದ್ಧಾಸೀ ॥೬೨೫॥ ತೋ ಯುದ್ಧ ಆವೇಶ ಕಡಕಡಾಟ । ತೇಣೇ ಸತ್ರಾಣೇ ಉಡೇ ಉದ್ಭಟ । ಅಡಖಳೂನಿ ಆದಳೇ ಪೋಟ । ಮ್ಹಣೇ ಮೀ ಘಾಯವಟ ಪಡಿಲೋ ಕೀ ॥೬೨೬॥ ಮಿಥ್ಯಾ ಭ್ರಮೇ ಪಡಲಾ ಭುಲೀ । ಚಾಲತಾ ಚಾಲತಾ ಮೃಗಜಳೀ । ಉತರಾವಯಾ ಪೈಲತೀರೀ । ಬುಡೀ ವಹಿಲೀ ದೇತಸೇ ॥೬೨೭॥ ಗಂಧರ್ವನಗರೀ ಪ್ರಚಂಡ । ಮಾಡ್ಯಾ ಸೋಪೇ ಉದಂಡ । ಕ್ಷಣಾಮಾಜೀ ವಿರಸ ಚಂಡ । ವಿತಂಡ ಕರೀ ನಿರ್ವಾಳಾ ॥೬೨೮॥ ತೇವೀ ಸಂಸಾರ ಹಾ ಕಾಲ್ಪನಿಕ । ತೇಥೀಲ ಸುಖ ಆಣಿ ದುಃಖ । ಮಿಥ್ಯಾ ಕೇವಳ ಮಾಯಿಕ । ಜಾಣ ನಿಷ್ಟಂಕ ನಿಜಭಕ್ತಾ ॥೬೨೯॥ ದಾಶಾರ್ಹವಂಶೀ ಜನ್ಮಲಾಸೀ । ತೂ ಉತ್ತಮ ದಶಾ ಪಾವಲಾಸೀ । ಯಾಲಾಗೀಮ್ಹಣೇ ಹೃಷೀಕೇಶೀ । ಉದ್ಧವಾಸೀ ದಾಶಾರ್ಹ ॥೬೩೦॥ ಜೇವೀ ಕಾ ಸ್ವಪ್ನ ಭೋಗ ಜಾಣ । ಸ್ವಪ್ನೀ ಸತ್ಯ ಮಾನೀ ಆಪಣ । ತೇವೀ ಸಂಸಾರ ಹಾ ದೀರ್ಘ ಸ್ವಪ್ನ । ಮಾಯಿಕ ಜಾಣ ಮಿಥ್ಯಾತ್ವೇ ॥೬೩೧॥

ಘನಃಶ್ಯಾಮನಾದ ಶ್ರೀಕೃಷ್ಣನು ಹೀಗೆ ಹೇಳಿದಾಗ ಉದ್ಧವನ ಅಂತಃಕರಣದಲ್ಲಿ ಆನಂದವು ಉದಯವಾಯಿತು. ಆಗ ಆ ಆನಂದದಲ್ಲಿ ಉದ್ಧವನೂ ಕೂಡ ಅದರಂತೆಯೇ ಲೀಲೆಯನ್ನು ಮಾಡಲಾರಂಭಿಸಿದನು ॥೬೨೧॥ ಉದ್ಧವನ ಮನದಲ್ಲಿ ನಿರ್ಮಾಣವಾಗಿರುವ ತಾಪವನ್ನು ಕಳೆಯುವುದಕ್ಕಾಗಿ ಸರ್ವಜ್ಞನಾದ ಶ್ರೀ ಕೃಷ್ಣನು ಉಪದೇಶವನ್ನು ಮಾಡುತ್ತಿರುವನು. ಯಾವ ರೀತಿಯಲ್ಲಿ ಉದ್ಧವನಿಗೆ ಆನಂದವಾಗುವುದೋ, ಅದೇ ಪ್ರಕಾರವಾಗಿ ಶ್ರೀಕೃಷ್ಣನು ನಿರೂಪಣೆಯನ್ನು ಮಾಡುತ್ತಿರುವನು ॥೬೨೨॥

ವಾಸ್ತವಿಕವಾಗಿ ನೋಡಲು ಆತ್ಮವು ನಿತ್ಯಮುಕ್ತ, ನಿರ್ವಿಕಾರವಾಗಿರುವುದು. ಅದು ಸಂಕಲ್ಪಗಳಿಂದ ವಿಕಾರೀಯಾದಂತೆ ಭಾಸವಾಗುವುದು. ಅದು ಅಸಂಸಾರೀಯಾಗಿರುವುದು. ಮನೋವಿಕಾರವೇ ಅದನ್ನು ಸಂಸಾರೀಯನ್ನಾಗಿ ಮಾಡಿರುವುದು ॥೬೨೩॥ ಒಂಟಿಯಾಗಿರುವ ಮನುಷ್ಯನು ಕೇಳಲು ಬೇರೆಯವರು ಯಾರೂ ಇಲ್ಲದಿರಲು ಆಗ ಆತನು ಹರಟೆ ಮಾತುಗಳನ್ನು ಆಡುವುದಿಲ್ಲ. ಒಬ್ಬನು ಹೇಳುವವನು, ಇನ್ನೊಬ್ಬನು ಕೇಳುವವನು ಹೀಗೆ ಇಬ್ಬರ ಅವಶ್ಯಕತೆವಿರುವುದು. ಹೀಗಾದರೆ ಮಾತ್ರ ಕಥೆ ವಾರ್ತೆ ಮಾಡಲು ಬರುವುದು ॥೬೨೪॥ ಒಬ್ಬ ಮನುಷ್ಯನು ತಾನೊಬ್ಬನೇ ಹಾದಿ ನಡೆಯುತ್ತಿರಲು ಆಗ ಆತನಿಗೆ ಹಾದಿಯು ಸಾಗುವುದಿಲ್ಲ. ಆದ್ದರಿಂದ ಆತನು ಮನಸ್ಸಿನಲ್ಲಿ ವಿಚಾರಗಳನ್ನು ಆರಂಭಿಸಿದನು. ನಾನು ರಾಜನು, ನನ್ನ ಮೇಲೆ ಪರಕೀಯರು ದಾಳಿ ಮಾಡಲು ಯುದ್ಧವು ನಿರ್ಮಾಣಗೊಳ್ಳುವುದು ॥೬೨೫॥ ಈ ಯಾವ ಕಲ್ಪನಾ ರಾಜ್ಯದಲ್ಲಿ ಆತನು ಬಹು ಆವೇಶದಿಂದ ಜಗಿಯಲು ಆರಂಭಿಸುವನು. ಕಾಲುಗಳು ತೊಡರಾಗಿ ಹೊಟ್ಟೆಯಮೇಲೆ ಬೀಳುವನು. ಇಷ್ಟಾದರೂ ಆತನಿಗೆ ಎಚ್ಚರವಾಗುವುದಿಲ್ಲ. ಯುದ್ಧದಲ್ಲಿ ಗಾಯಗೊಂಡು ಬಿದ್ದಿರುವೆನು ಎಂದು ಹೀಗೆ ತಿಳಿಯುವನು ॥೬೨೬॥ ಹೀಗೆ ಕಲ್ಪನೆಗಳನ್ನು ಮಾಡುತ್ತ ಅವನು ಮುಂದೆ ನಡೆಯುತ್ತಿರುವನು. ಕಲ್ಪನಾ ಮಿಥ್ಯಾ ಭ್ರಮದಲ್ಲಿ ಬಿದ್ದಿರುವನು. ನಡೆಯುತ್ತ ನಡೆಯುತ್ತ ಮುಂದೆ ಆತನಿಗೆ ಮೃಗಜಲವು ತೋರುವುದು. ಆ ಪ್ರವಾಹದಿಂದ ಈಸೀ ಪಾರಾಗಬೇಕೆಂದು ಅದರಲ್ಲಿ ಜಗಿದು ಬೀಳುವನು ॥೬೨೭॥ ಅಥವಾ ಆಕಾಶದಲ್ಲಿ ಮೋಡಗಳ ಗಂಧರ್ವನಗರವು ಉತ್ಪನ್ನವಾದವು. ಅದರಲ್ಲಿ ದೊಡ್ಡ ದೊಡ್ಡ ಮಹಡಿಗಳು, ಶಿಖರಗಳು ತೋರುತ್ತಿರುವುವು. ಆಗ ತೀವ್ರವಾದ ಗಾಳಿಯು ಬೀಸಲು ಕ್ಷಣಾರ್ಧದಲ್ಲಿ ಈ ಎಲ್ಲವೂ ಇಲ್ಲದಾಗುವುವು ॥೬೨೮॥ ಅದರಂತೆ ಯಾವ ಈ ಸಂಸಾರವು ಕಾಲ್ಪನಿಕವಾಗಿರುವುದು. ಇದರಲ್ಲಿನ ಯಾವತ್ತೂ ಸುಖದುಃಖಗಳು ನನ್ನ ಭಕ್ತರಿಗೆ ಕೇವಲ ಮಾಯಿಕವಾಗಿ ತೋರುವುವು. ॥೬೨೯॥ ಹೇ ಉದ್ಧವಾ ನೀನು ಯದುವಂಶದಲ್ಲಿ ಪ್ರಮುಖವಾದ ದಾಶಾರ್ಹ ಕುಲದಲ್ಲಿ ಜನ್ಮವನ್ನು ಪಡೆದಿರುವೆ ಮತ್ತು ನೀನು ಉತ್ತಮ ಸ್ಥಿತಿಗೆ ಪ್ರಾಪ್ತವಾಗಿರುವೆ ॥೬೩೦॥ ಸ್ವಪ್ನದಲ್ಲಿ ಪಡೆಯುವ ಸುಖೋಪಭೋಗಗಳು ಅವು ಯಾವ ಪ್ರಕಾರವಾಗಿ ಸ್ವಪ್ನದಲ್ಲಿ ಮಾತ್ರ ನಿಜವಾಗಿರುವುವೋ, ಅದೇ ಪ್ರಕಾರವಾಗಿ ಯಾವ ಈ ಸಂಸಾರವು ದೀರ್ಘವಾದ ಸ್ವಪ್ನವಾಗಿರುವುದು. ಆದ್ದರಿಂದ ಅದು ಮಿಥ್ಯೆಯಾಗಿದ್ದು ಕೇವಲ ಮಾಯಿಕವಾಗಿರುವುದು ॥೬೩೧॥

ಜಾಗಾ ಝಾಲಿಯಾ ಸ್ವಪ್ನ ವೃಥಾ । ನಿರಹಂಕಾರೀ ಸಂಸಾರ ಮಿಥ್ಯಾ । ಹೇ ಬ್ರಹ್ಮಜ್ಞಾನಾಚೀ ಮುಖ್ಯ ಕಥಾ । ಜಾಣ ತತ್ತ್ವತಾ ಉದ್ಧವಾ ।।೬೩೨।। ಸಂಸಾರ ತೋ ಕಲ್ಪನಾಮಾತ್ರ । ಆತ್ಮಾ ನಿರ್ವಿಕಾರ ಚಿನ್ಮಾತ್ರ । ಜೇವೀ ಮೃಗಜಳ ಭರೀ ಭಾಸ್ಕರ । ತೇವೀ ಸಂಸಾರ ಕರೀ ಆತ್ಮಾ ।।೬೩೩।। ಉದ್ಧವಾ ತೂ ಮ್ಹಣಶೀ ಆತಾ । ಐಕತಾ ತುಝೀ ಮುಖೀಂಚೀ ಕಥಾ । ಸಂಸಾರ ಮಿಥ್ಯಾ ತತ್ತ್ವತಾ । ತರೀ ಸಾಧನಾ ವಸ್ಥಾ ಕಾ ಸೋಸಾವೀ ।।೬೩೪।। ಜೇವೀ ವಂಧ್ಯಾಪುತ್ರಾಚೇ ಲಗ್ನ । ಕರಾವಯಾ ಕೋಣೀ ನ ಕರೀ ಯತ್ನ । ಕಾ ಮೃಗಜಳೀ ಬಾಂಧೋನಿ ಧರಣ । ಪಾಟ ಜಾಣ ಕೋಣೀ ಕಾಢೀನಾ ।।೬೩೫।। ತೇವೀ ಮಿಥ್ಯಾ ಸಂಸಾರಬಂಧನ । ತೇಥ ಶ್ರವಣ ಮನನ ಚಿಂತನ । ವಿವೇಕ ವೈರಾಗ್ಯ ಜ್ಞಾನಧ್ಯಾನ । ವೃಥಾ ಕಾ ಜನ ಸೋಶಿತೀ ।।೬೩೬।। ಉದ್ಧವಾ ಬಾಗುಲಾಚೇ ಭಯ ಖೋಟೇ । ಪರೀ ಬಾಳಕಾಸೀ ಸತ್ಯ ವಾಟೇ । ತೇವೀ ಮಿಥ್ಯಾ ಸಂಸಾರಕಚಾಟೇ । ಜೇವೀ ಪ್ರಕಟೇ ಬದ್ಧತಾ ।।೬೩೭।। ತೇಚಿ ಅರ್ಥೀಚಾ ದೃಷ್ಟಾಂತ । ಸ್ವಯೇ ಶ್ರೀಕೃಷ್ಣ ಸಾಂಗತ । ಮಿಥ್ಯಾ ಸಾಂಸಾರಿಕ ಯೇಥ । ಭ್ರಮೇ ಬಾಧೀತ ಭ್ರಾಂತಾಸೀ ।।೬೩೮।।

ಅರ್ಥೇ ಹ್ಯವಿದ್ಯಮಾನೇಽ ಪಿ ಸಂಸೃತಿರ್ನ ನಿವರ್ತತೇ । ಧ್ಯಾಯತೋ ವಿಷಯನಸ್ಯ ಸ್ವಪ್ನೇಽನರ್ಥಾಗಮೋ ಯಥಾ ।।೫೩।।

ಅರ್ಥ:- ವಿಷಯಗಳು ಸತ್ಯವಲ್ಲದಿದ್ದರೂ ಕೂಡ ಜೀವವು ಸದಾ ವಿಷಯಗಳ ಚಿಂತನೆಯನ್ನು ಮಾಡುತ್ತಿರುವುದು. ಇದರಿಂದ ಆದರ ಜನ್ಮ ಮರಣರೂಪ ಸಂಸಾರಚಕ್ರವು ಎಂದಿಗೂ ಮುಗಿಯುವುದಿಲ್ಲ. ಸ್ವಪ್ನದಲ್ಲಿನ ಪ್ರಾಪ್ತ ಅನರ್ಥಗಳು ಎಚ್ಚರಾಗುವರೆಗೂ ಇರುವುವು.

ವಿಚಾರೇ ಪಾಹತಾ ಮಿಥ್ಯಾಸ್ವಪ್ನ । ತೇಥೀಲ ವಿಷಯಸೇವನ । ಸುಖದುಃಖೇ ಬಾಧಿತೀ ಗಹನ । ಐಕ ಲಕ್ಷಣ ತಯಾಚೇ ।।೬೩೯।। ಸ್ವಪ್ನೀ ಪುತ್ರಲಾಭ ರಾಜಸನ್ಮಾನ । ತೇಣೇ ಸುಖೇ ಓಸಂಡೇ ಆಪಣ । ಕಾ ಝಾಲಿಯಾ ಧನಹರಣ । ತೇಣೇ ದುಃಖೇ ದಾರುಣ ಆಕ್ರಂದೇ ।।೬೪೦।। ತ್ಯಾಸೀ ಜಾಗೇ ನ ಕರಿತಾ । ಸ್ವಪ್ನಸುಖದುಃಖಬಾಧಕತಾ । ನಿವರ್ತೇನಾ ಸರ್ವಥಾ । ಜಾಣ ತತ್ತ್ವತಾ ಉದ್ಧವಾ ।।೬೪೧।। ತೇವೀ ವಿಷಯಾಸಕ್ತ ಜನ । ಜ್ಯಾಂಸೀ ಅಖಂಡ ವಿಷಯಧ್ಯಾನ । ಜ್ಯಾಂಚೇ ವಿಷಯೀ ಸದಾ ಮನ । ದೇಹಾಭಿಮಾನ ಗೋಂವೀತ ।।೬೪೨।। ತ್ಯಾಂಸೀ ದೇಖಾವಯಾ ಉಪಾವೋ । ಜಯಾ ವಿಷಯಾಸಕ್ತಿ ಹೋಯ ವಾವೋ । ಯೇಚಿ ಅರ್ಥೀಚಾ ದೃಷ್ಟಾಂತ ಪಹಾವೋ । ಸ್ವಯೇ ಸಾಂಗೆ ದೇವೋ ಉದ್ಧವಾಸೀ ।।೬೪೩।।

ಎಚ್ಚರಾದ ಕೂಡಲೇ ಸ್ವಪ್ನವು ಸುಳ್ಳಾಗಿ ಬಿಡುವುದು, ಅದರಂತೆ ಅಹಂಕಾರವು ನಾಶವಾಗಲು ಕೂಡಲೇ ಸಂಸಾರವೂ ಕೂಡ ಮಿಥ್ಯೆಯಾಗಿ ಬಿಡುವುದು. ಉದ್ಧವಾ, ಇದುವೇ ಬ್ರಹ್ಮಜ್ಞಾನದಲ್ಲಿನ ಮುಖ್ಯವಾದ ಮಾತಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು. ।।೬೩೨।। ಸೂರ್ಯನು ಯಾವ ಪ್ರಕಾರವಾಗಿ ಮೃಗಜಲವನ್ನು ನಿರ್ಮಾಣಗೊಳಿಸುವನೋ, ಅದೇ ಪ್ರಕಾರವಾಗಿ ಆತ್ಮವು ಸಂಸಾರವನ್ನು ನಿರ್ಮಾಣ ಗೊಳಿಸುತ್ತಿರುವುದು. ಇದರಿಂದ ಯಾವ ಈ ಸಂಸಾರವು ಕೇವಲ ಕಲ್ಪನಾಮಯವಾಗಿ ಆತ್ಮವು ನಿರ್ವಿಕಾರ ಮತ್ತು ಜ್ಞಾನರೂಪವಾಗಿರುವುದು. ।।೬೩೩।। ಉದ್ಧವಾ, ಈಗ ನೀನು ಹೀಗೆ ಹೇಳಬಹುದು, ನಿನ್ನ ಮುಖದಿಂದ ಬಂದ ಈ ಕಥೆಯನ್ನು ಕೇಳಿ ಸಂಸಾರವು ನಿಜವಾಗಿಯೂ ಮಿಥ್ಯೆಯಾಗಿದೆ ಎಂದು ನಿಶ್ಚಯವಾಯಿತು. ಅಂದಮೇಲೆ ಸಾಧನೆಗಳ ಸಾಹಸವನ್ನು ಸುಮ್ಮನೇ ಏಕೆ ಸಾಧಿಸಬೇಕು? ವ್ಯರ್ಥವಲ್ಲವೇ? ।।೬೩೪।। ಬಂಜೆ ಮಗನ ಲಗ್ನವನ್ನು ಮಾಡಲು ಯಾರು ಪ್ರಯತ್ನಿಸಬೇಕು? ಅಥವಾ ಮೃಗಜಲದ ನದಿಗೆ ಆಣೆಕಟ್ಟನ್ನು ಕಟ್ಟಿ ಯಾರೂ ಕಾಲುವೆಗಳನ್ನು ತೋಡಲಾರರು ।।೬೩೫।। ಅದರಂತೆ ಸಂಸಾರಬಂಧನವೇ ಮೂಲತಃ ಮಿಥ್ಯೆಯಾಗಿರಲು ಅದಕ್ಕಾಗಿ ಶ್ರವಣ, ಮನನ, ಚಿಂತನ, ವಿವೇಕ, ವೈರಾಗ್ಯ, ಜ್ಞಾನ, ಧ್ಯಾನಗಳ ಸಾಧನೆಗಳ ಕಷ್ಟವನ್ನು ಜನರು ಏಕೆ ಸೋಸುತ್ತಿರುವರು? ।।೬೩೬।। ಹೇ ಉದ್ಧವಾ, ಬೆದರುಗೊಂಬೆಯ ಬೆದರಿಕೆಯು ನಿಜವಾಗಿಯೂ ಸುಳ್ಳಾಗಿರುವುದು. ಆದರೆ ಅಜ್ಞಾನಿ ಬಾಲಕನು ಇದನ್ನು ನಿಜವೆಂದು ತಿಳಿಯುವನು. ಅದರಂತೆ ಸಂಸಾರದ ಸುಳ್ಳಾಗಿರುವ ಸಂಕಟಗಳಿಂದ ಜೀವಕ್ಕೆ ಬಂಧನವು ಪ್ರಾಪ್ತವಾಗುವುದು ।।೬೩೭।। ಇದೇ ಅರ್ಥದ ದೃಷ್ಟಾಂತವನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು. ಸಂಸಾರದಲ್ಲಿನ ಯಾವತ್ತೂ ದುಃಖಗಳು ಭ್ರಮಿಷ್ಠ ಜನರಿಗೆ ಭ್ರಮೆಯಿಂದಲೇ ಬಾಧಕವಾಗುತ್ತಿರುವುವು ।।೬೩೮।।

ಸ್ವಪ್ನಗಳನ್ನು ಕುರಿತು ವಿಚಾರ ಮಾಡಿ ನೋಡಲು ಅವುಗಳೆಲ್ಲವೂ ಮಿಥ್ಯೆಯಾಗಿವೆ ಎಂದು ತೋರುವುದು. ಆದರೆ ಆ ಸ್ವಪ್ನದಲ್ಲಿನ ವಿಷಯಭೋಗಗಳ ಅತಿಶಯವಾದ ಸುಖದುಃಖಗಳನ್ನು ಭೋಗಿಸುತ್ತಿರುವರು. ಅದರ ಲಕ್ಷಣವನ್ನು ಹೇಳುವೆನು. ಈಗದನ್ನು ಕೇಳು ।।೬೩೯।। ಸ್ವಪ್ನದಲ್ಲಿ ಪುತ್ರಲಾಭವಾದರೆ ಅಥವಾ ರಾಜನಿಂದ ಸತ್ಕಾರವಾಯಿತೆಂದರೆ ಆಗ ಆ ಮನುಷ್ಯನು ಆನಂದದಿಂದ ತನ್ನ ದೇಹಭಾವವನ್ನು ಮರೆತು ಬಿಡುವನು. ಆದರೆ ಸ್ವಪ್ನದಲ್ಲಿ ತನ್ನ ದ್ರವ್ಯವು ನಾಶವಾದರೆ ಆಗ ಅವನು ಬಹಳ ದುಃಖಿಯಾಗಿ ಜೋರಾಗಿ ಆಕ್ರೋಶವನ್ನು ಮಾಡಲಾರಂಭಿಸುವನು ।।೬೪೦।। ಹೇ, ಉದ್ಧವಾ, ಇದಕ್ಕಾಗಿಯೇ ಆತನನ್ನು ನಾವು ಎಚ್ಚರಿಸದಿದ್ದರೆ ಆತನ ಸ್ವಪ್ನದಲ್ಲಿ ಸುಖದುಃಖಗಳ ಪೀಡೆಯು ಮುಗಿಯುವುದೇ ಇಲ್ಲ. ಇದನ್ನು ನೀನು ಲಕ್ಷದಲ್ಲಿಡು ।।೬೪೧।। ಅದರಂತೆಯೇ ವಿಷಯಗಳಿಂದ ಆಸಕ್ತರಾಗಿರುವ ಜನರು ಯಾವಾಗಲೂ ವಿಷಯಗಳ ಚಿಂತನೆಯನ್ನು ಮಾಡುತ್ತಿರುವರು. ಅವರ ಮನವು ಸತತವಾಗಿ ದೇಹದ ಅಭಿಮಾನದಿಂದ ವಿಷಯಗಳಲ್ಲಿ ಸಿಲುಕಿಕೊಂಡಿರುವುದು. ।।೬೪೨।। ಇವರು ವಿಷಯಗಳ ಆಸಕ್ತಿಯು ಯಾವ ಉಪಾಯದಿಂದ ಹೋಗಲಾಡಿಸಬೇಕೋ, ಅಂತಹ ಯುಕ್ತಿಯನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ।।೬೪೩।।

ನ ಕರಿತಾ ಶ್ರವಣಮನನ । ನ ಸಾಧಿತಾ ವಿವೇಕಜ್ಞಾನ । ನ ಧರಿತಾ ವೈರಾಗ್ಯ ಪೂರ್ಣ । ಭವಭಯ ಜಾಣ ತುಟೇನಾ ॥೬೪೪॥ ಸಂಸಾರ ಮಿಥ್ಯಾ ತೊಂಡೇ ಮ್ಹಣತಾ । ನ ತುಟೇ ಸುಖಃದುಖಸ್ವಭಯವ್ಯಥಾ । ಜನ್ಮ ಮರಣಾದಿ ಅವಸ್ಥಾ । ಅಹಂಮಮತಾ ಸುಟೇನಾ ॥೬೪೫॥ ಐಸೇ ಜೇ ಅಜ್ಞಾನ ಜನ । ತಿಂಹೀ ಅವಶ್ಯ ಕರಾವೇ ಸಾಧನ । ವಿವೇಕೇ ವೈರಾಗ್ಯ ಧರಿತಾ ಪೂರ್ಣ । ಭವಬಂಧನ ನಿವಾರೇ ॥೬೪೬॥ ಯಾಲಾಗೀ ಉದ್ಧವಾಜಾಣ । ಸಕಳ ಸಾಧನಾಂಚೇ ಕಾರಣ । ಜೇಣೇ ಹಾತಾ ಚಢೇ ಬ್ರಹ್ಮಜ್ಞಾನ । ತೇ ವೈರಾಗ್ಯ ಪೂರ್ಣ ಸಾಧಾವೇ ॥೬೪೭॥ ಐಕ ವಿರಕ್ತೀಚೀ ಮಾಗೀ । ಜೈಶೀ ಧಡಧಡೀತ ಆಗೀ । ತೈಸೇ ವೈರಾಗ್ಯ ವ್ಹಾವೇ ಅಂಗೀ । ತೈ ಪ್ರಾಪ್ತೀಲಾಗೀ ಅಧಿಕಾರೂ ॥೬೪೮॥ ಐಸೇ ಮುಮುಕ್ಷು ಜೇ ಪುರತೇ । ಪರಮ ಕೃಪೇಚೇನಿ ಹಾತೇ । ಸದ್ಗುರೂ ಥಾಪಟೋನಿ ಜ್ಯಾಂತೇ । ಕರೀ ಅದ್ವೈತೇ ಜಾಗೃತ ॥೬೪೯॥ ಜ್ಯಾಸೀ ದೇಹಾದಿಭೇದಪುಷ್ಟೀ । ಮಿಥ್ಯಾ ಮಾಯಾ ಗುಣತ್ರಿಪುಟೀ । ಬ್ರಹ್ಮಾನಂದೇ ಕೋಂದಲೀ ಸೃಷ್ಟೀ । ಸ್ವಪ್ನವತ್ ದೃಷ್ಟೀ ಸಂಸಾರೂ ॥೬೫೦॥ ಯೇವಡೀ ಹೀ ಪರಮ ಪ್ರಾಪ್ತೀ । ವೈರಾಗ್ಯವಿವೇಕೇ ಚಢೇ ಹಾತೀ । ತೇಚಿ ವೈರಾಗ್ಯ ಉದ್ಧವಾ ಪ್ರತೀ । ಸ್ವಯೇ ಶ್ರೀಪತೀ ಸಾಂಗತ ॥೬೫೧॥

ತಸ್ಮಾದುದ್ಧವ ಮಾ ಭುಂಕ್ಷ್ವ ವಿಷಯಾನಸದಿಂದ್ರಿಯೈಃ । ಆತ್ಮಾ ಗ್ರಹಣನಿರ್ಭಾತಂ ಪಶ್ಯ ವೈಕಲ್ಪಿಕಂ ಭ್ರಮಮ್ ॥೫೬॥

ಅರ್ಥ :- ಪ್ರಿಯ ಉದ್ಧವಾ, ಈ ಕಾರಣವಾಗಿ ಈ ದುಷ್ಟ ಇಂದ್ರಿಯಗಳಿಂದ ವಿಷಯಗಳ ಭೋಗವನ್ನು ಪಡೆಯಬೇಡ. ಆತ್ಮವಿಷಯದ ಅಜ್ಞಾನದಿಂದ ಪ್ರತೀತವಾಗುತ್ತಿರುವ ಸಂಸಾರಿಕ ಭೇದಭಾವವು ಭ್ರಮ ಮೂಲಕವಾಗಿದೆ ಎಂದು ತಿಳಿ.

ವಿಷಯಾಂಚೀ ಜೇ ಆಸಕ್ತೀ । ತೇ ಬಾಧಕ ಪರಮಾರ್ಥಪ್ರಾಪ್ತೀ । ವಿಷಯ ಸಾಂಡೀ ಸಾಂಡೀ ನಿಶ್ಚಿತೀ । ಪರತೋನಿ ಹಾತೀ ನಾತಳೇ ॥೬೫೨॥ ಆಸಕ್ತ ವೃತ್ತಿ ಇಂದ್ರಿಯಯೋಗ । ಅತಿಲೋಲುಪ್ಯೇ ವಿಷಯಭೋಗ । ತೋಚಿ ಮುಖ್ಯತ್ವೇ ಭವರೋಗ । ಯಾಲಾಗೀ ತ್ಯಾಗ ಕರಾವಾ ॥೬೫೩॥ ವಿಖೇ ರಾಂಧಿಲೇ ಪರಮಾನ್ನ । ತೇ ಗ್ರಾಸಮಾತ್ರ ಹರೀ ಪ್ರಾಣ । ವಿಷ ಏಕದಾ ಮಾರಕ ಜಾಣ । ವಿಷಯ ಪುನಃಪುನಃ ಮಾರಕ ॥೬೫೪॥ ಮ್ಹಣಸೀ ಪ್ರಾರಬ್ಧೇ ಭೋಗ ಯೇತೀ । ತೇ ತ್ಯಾಗಿಲೇ ಕೇವೀ ಜಾತೀ । ವಿಷಯತ್ಯಾಗಾಚೀ ಯುಕ್ತೀ । ವೈರಾಗ್ಯಸ್ಥಿತೀ ಘಡೇ ಕೇವೀ ॥೬೫೫॥

ಶ್ರವಣ ಮನನಗಳನ್ನು ಮಾಡದಿದ್ದರೆ, ವಿಚಾರಗಳಿಂದ ಜ್ಞಾನವನ್ನು ಸಾಧಿಸದಿದ್ದರೆ, ಅಥವಾ ಪರಿಪೂರ್ಣವಾದ ವೈರಾಗ್ಯವು ಪ್ರಾಪ್ತವಾಗದಿದ್ದರೆ, ಸಂಸಾರದ ಭಯವು ಬಿಡುವುದಿಲ್ಲ ॥೬೪೪॥ ಆದರೆ ಸಂಸಾರವು ಇದು ಮಿಥ್ಯೆಯಾಗಿದೆ ಎಂದು ಹೀಗೆ ಕೇವಲ ಮಾತಿನಿಂದ ಹೇಳಿದರೆ ಇದರಿಂದ ಸಂಸಾರದ ಭಯವು ಬಿಡುವುದಿಲ್ಲ. ಜನ್ಮ ಮರಣಗಳ ತಿರುಗಾಟವು ಮತ್ತು ಅಹಂ ಮಮತೆಗಳು ಏನು ಮಾಡಿದರೂ ಕೂಡ ನಮ್ಮನ್ನು ಬಿಟ್ಟು ಹೋಗಲಾರವು ॥೬೪೫॥ ಈ ಕಾರಣವಾಗಿ ಅಜ್ಞಾನಿಗಳಾಗಿರುವ ಜನರು ಅವಶ್ಯವಾಗಿ ಸಾಧನೆಗಳನ್ನು ಮಾಡಬೇಕು. ವಿವೇಕದಿಂದ ಪರಿಪೂರ್ಣವಾದ ವೈರಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳಬೇಕು. ಅಂದರೇನೇ ಸಂಸಾರದ ಬಂಧನವು ಇಲ್ಲದಾಗುವುದು ॥೬೪೬॥ ಹೇ ಉದ್ಧವಾ ಬ್ರಹ್ಮಜ್ಞಾನವು ಸಹಜವಾಗಿ ಕೈಸೇರುವುದಕ್ಕಾಗಿಯೇ ಸರ್ವ ಸಾಧನೆಗಳ ಮೂಲ ಕಾರಣವಾಗಿರುವುದು ಅಂತಹ ವೈರಾಗ್ಯವನ್ನು ಪರಿಪೂರ್ಣವಾಗಿ ಸಾಧಿಸಬೇಕು ॥೬೪೭॥ ಈಗ ವಿರಕ್ತಿಯ ಮಾರ್ಗವು ಹೇಗೆ ಇರುವುದೆಂಬುದನ್ನು ಹೇಳುವೆನು ಅದನ್ನು ಕೇಳು. ಅಗ್ನಿಯು ಹೇಗೆ ಧಗಧಗಿಸುತ್ತಿರುವುದೋ ಅದರಂತೆಯೇ ಶರೀರದಲ್ಲಿ ಝಗಝಗಿಸುವ ವೈರಾಗ್ಯವು ತುಂಬಿಕೊಂಡಿರಬೇಕು. ಆಗ ಮಾತ್ರವೇ ಬ್ರಹ್ಮಪ್ರಾಪ್ತಿಯ ಅಧಿಕಾರವು ಪ್ರಾಪ್ತವಾಗುವುದು ॥೬೪೮॥ ಹೀಗೆ ಯಾರು ಪರಿಪೂರ್ಣವಾಗಿ ಮುಮುಕ್ಷುಗಳಾಗುವರೋ , ಅವರಿಗೆ ಸದ್ಗುರುಗಳು ಆಶೀರ್ವಾದವನ್ನು ಕೊಡುತ್ತಿರುವರು ಮತ್ತು ಅವರಲ್ಲಿ ಕೃಪೆದೋರಿ ಅದ್ವೈತದಿಂದ ಅವರನ್ನು ಎಚ್ಚರಗೊಳಿಸುವರು ॥೬೪೯॥ ಆಗ ದೇಹಾದಿಕ ವಿಷಯಗಳ ಪುಷ್ಟೀ ಮತ್ತು ಮಾಯೆಯ ಗುಣಗಳ ತ್ರಿಪುಟೀ ಇವು ಎರಡೂ ಮಿಥ್ಯೆಯಾಗಿ ಬಿಡುವುವು. ಬ್ರಹ್ಮಾನಂದದಿಂದ ಸೃಷ್ಟಿಯು ತುಂಬಿ ಹೋಗುವುದು. ಸಂಸಾರವಿದು ಸ್ವಪ್ನದಂತೆ ತೋರುತ್ತಿರುವುದು ॥೬೫೦॥ ಇಂತಹ ಅಲೌಕಿಕ ಅಪ್ರತಿಮ ಲಾಭವು ಯಾವ ವೈರಾಗ್ಯ ವಿವೇಕದಿಂದ ಪ್ರಾಪ್ತವಾಗುವುದೋ, ಆ ವೈರಾಗ್ಯದ ವಿಷಯವನ್ನು ಕುರಿತು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೬೫೧॥

ವಿಷಯಗಳ ಆಸಕ್ತಿಯೇ ಇದು ಪರಮಾರ್ಥಕ್ಕೆ ಬಾಧಕವಾಗುವುದು. ಆದ್ದರಿಂದ ವಿಷಯಗಳನ್ನು ಪೂರ್ಣವಾಗಿ ಬಿಟ್ಟುಬಿಡು ಮತ್ತು ಪುನಃ ಅವುಗಳನ್ನು ಸ್ಪರ್ಶಕೂಡ ಮಾಡಬೇಡ ॥೬೫೨॥ ವೃತ್ತಿಯು ಆಸಕ್ತಗೊಂಡರೆ ಆಗ ಅದು ಇಂದ್ರಿಯಗಳಿಗೆ ಅಂಟಿಕೊಂಡೇ ಇರುವುದು ಮತ್ತು ಅವುಗಳಲ್ಲಿ ಅತಿಶಯವಾಗಿ ಲುಬ್ಧವಾಗಲು, ಕೇವಲ ವಿಷಯಗಳನ್ನೇ ಭೋಗಿಸುತ್ತ ಇರಬೇಕೆಂದು ಅನಿಸುವುದು. ಇದುವೇ ನಿಜವಾದ ಭವರೋಗವಾಗಿರುವುದು. ಆದ್ದರಿಂದ ಇದನ್ನು ಅವಶ್ಯವಾಗಿ ತ್ಯಜಿಸಬೇಕು ॥೬೫೩॥ ಉತ್ತಮ ಪ್ರಕಾರದ ಮೃಷ್ಟಾನ್ನವನ್ನು ಸಿದ್ಧಗೊಳಿಸಿ ಅದರಲ್ಲಿ ವಿಷವನ್ನು ಕೂಡಿಸಿ ಅದನ್ನು ಭುಂಜಿಸಲು, ಆಗ ಪ್ರಾಣವು ನಾಶವಾಗುವುದು. ವಿಷವು ಒಂದೇ ಸಲ ಪ್ರಾಣವನ್ನು ತೆಗೆದುಕೊಳ್ಳುವುದು. ಆದರೆ ವಿಷಯವು ಪುನಃಪುನಃ ಪ್ರಾಣವನ್ನು ತೆಗೆದುಕೊಳ್ಳುತ್ತಿರುವುದು ॥೬೫೪॥ ಈಗ ನೀನು ಹೀಗೆ ಹೇಳಬಹುದು, ಪ್ರಾರಬ್ಧದ ಅನುಸಾರವಾಗಿ ಸುಖ ದುಃಖಗಳನ್ನು ಭೋಗಿಸಬೇಕಾಗುವುದು. ಅಂದಮೇಲೆ ಅದರ ತ್ಯಾಗವನ್ನು ಹೇಗೆ ಮಾಡಬೇಕು? ವಿಷಯತ್ಯಾಗದ ಉಪಾಯವು ದೊರೆತು ವೈರಾಗ್ಯವು ಹೇಗೆ ಸಾಧಿಸುವುದು? ॥೬೫೫॥

ಪ್ರಾರಬ್ಧೇ ವಿಷಯಭೋಗ ಯೇತೀ । ತೇ ಸಾಧಕಾ ದುಃಖರೂಪ ಹೋತೀ । ವಣವಾ ಮೃಗೇ ಆಹಾಳತೀ । ತೈಶೀ ಸ್ಥಿತೀ ಭೋಗಣೇ ॥೬೫೬॥ ವ್ಯಾಘ್ರಮುಖೀ ಸಾಂಪಡೇ ಗಾಯೇ । ತೈಸಾ ಭೋಗೀ ಚರಫಡೀತ ಜಾಯೇ । ಐಸೇನಿ ಅನುತಾಪೇ ಪಾಹೇ । ವೈರಾಗ್ಯ ಹೋಯೇ ಅನಿವಾರ ॥೬೫೭॥ ವೈರಾಗ್ಯ ಜಾಹಲಿಯಾ ಧಡಪುಡೇ । ಸದ್ಗುರುಕೃಪಾ ಹೋತಾ ಚಢೇ । ತೇಣೇ ಗುರುಕೃಪಾ ಉಜಿಯೇಡೇ । ಸಂಸಾರ ಉಡೇ ದ್ವಂದ್ವೇಸಿ ॥೬೫೮॥ ಝಾಲಿಯಾ ಗುರುಕೃಪಾ ಸುಗಮು । ಸರ್ವತ್ರ ಠಸಾವೇ ಪರಬ್ರಹ್ಮ । ತೇಥ ಜನ್ಮಮರಣ ಕೈಚೇ ಕರ್ಮ । ಭವಭ್ರಮ ಅಸೇನಾ ॥೬೫೯॥ ತೇಥ ವಾತೀ ಲಾವೂನಿ ಪಾಹತಾ । ಸಂಸಾರ ದಿಸೇನಾ ಮಾಗುತಾ । ಜೇವೀ ನಿಭ್ರಮೇ ಪಾಹೋ ಜಾತಾ । ನ ಲಗೇ ಹಾತಾ ರಜ್ಜುಸರ್ಪ ॥೬೬೦॥ ಭವಂಡೀಚೇನಿ ವೇಗವೇಶೇ । ಭಿಂಗೋರೀ ನೀಟ ಉಭೀ ದಿಸೇ । ತೇವೀ ಭ್ರಮಾಚೇನಿ ಆವೇಶೇ । ಸಂಸಾರ ಭಾಸೇ ಸತ್ಯತ್ವೇ ॥೬೬೧॥ ಕೇವಳ ಜೋ ನಿಬಿಡ ಭ್ರಮ । ಸಂಸಾರ ಹೇ ತ್ಯಾಚೇ ನಾಮ । ಯೆರ್ಹವೀ ನಿಖಿಲ ಪರಬ್ರಹ್ಮ । ತೇಥ ಜನ್ಮಕರ್ಮ ಅಸೇನಾ ॥೬೬೨॥ ಐಸೇ ಜರೀ ಝಾಲೇ ಬ್ರಹ್ಮಜ್ಞಾನ । ತರೀ ಪ್ರಾರಬ್ಧ ಭೋಗಾವೇ ಗಾ ಜಾಣ । ಜೇವೀ ಕುಲಾಲ ಭಾಂಡೇ ನೇ ಆಪಣ । ಪರೀ ಚಕ್ರಭ್ರಮಣ ರಾಹೇನಾ ॥೬೬೩॥ ವೃಕ್ಷ ಸಮೂಳ ಉಪಡಲ್ಯಾ ಜಾಣ । ಉಪಡಿತಾ ನ ವಚೇ ಸಾರ್ದಪಣ । ತೇವೀ ಹೋತಾಂಚಿ ಬ್ರಹ್ಮಜ್ಞಾನ । ಪ್ರಾರಬ್ಧ ಜಾಣ ಸೋಡೀನಾ ॥೬೬೪॥ ತ್ಯಾ ಪ್ರಾರಬ್ಧಾಚಿಯೇ ಗತೀ । ವಿಷಯಭೋಗ ಜರೀ ಯೇತೀ । ತೇಥ ಉಪಾವೋ ನ ಕರವಾ ನಿವೃತ್ತೀ । ನಿಜಶಾಂತೀ ಸಾಹಾವೇ ॥೬೬೫॥ ವಿಷಯಭೋಗ ಆಲಿಯಾಹೀ ಜಾಣ । ನಿಜಶಾಂತಿ ಧರೋನಿ ಸಂಪೂರ್ಣ । ಸುಖೇ ವರ್ತತೀ ಸಾಧುಜನ । ವಿವೇಕ ಸಂಪನ್ನ ಕ್ಷಮಾವಂತ ॥೬೬೬॥ ಹಾತಾ ಆಲಿಯಾ ನಿಜಶಾಂತೀ । ಸಂಸಾರ ಬಾಪುಡಾ ತೋ ಕಿತೀ । ತೇಚಿ ಶಾಂತೀಚೇ ಸ್ಥಿತೀ । ಸ್ವಯೇ ಶ್ರೀಪತೀ ಸಾಂಗತ ॥೬೬೭॥ ಜೇ ನಿಜಶಾಂತೀಜೇ ಕಲ್ಯಾಣ । ಜೇಣೇ ಜೀವ ಪಾವೇ ಸಮಾಧಾನ । ತೇ ಅತಿಗೋಡ ನಿರೂಪಣ । ದೋ ಶ್ಲೋಕೀ ಶ್ರೀಕೃಷ್ಣ ಸಾಂಗತ ॥೬೬೮॥

ಪ್ರಾರಬ್ಧದಿಂದ ವಿಷಯಭೋಗಗಳು ಪ್ರಾಪ್ತವಾಗುತ್ತಿರುವುವು. ಇದುವೇ ಸಾಧಕನಿಗೆ ದುಃಖಿಯನ್ನಾಗಿ ಮಾಡುವುದು. ಕಾಡಬೆಂಕಿಯಲ್ಲಿ ಸಿಕ್ಕಿಕೊಂಡಿರುವ ಚಿಗರೆಗಳು ಮೈಸುಟ್ಟುಕೊಂಡು ಹೊರಬರಬೇಕಾಗುವುದು. ಅದರಂತೆ ಇವರಿಗೂ ಕೂಡ ಇಂತಹ ಪರಸ್ಥಿತಿಯನ್ನು ಭೋಗಿಸಬೇಕಾಗುವುದು ॥೬೫೬॥ ಹುಲಿಯ ಮುಖದಲ್ಲಿ ಸಿಕ್ಕಿಕೊಂಡ ಆಕಳವು ಚಡಪಡಿಸುವಂತೆ ಸಾಧಕನು ವಿಷಯಗಳನ್ನು ಭೋಗಿಸುತ್ತಿರಲು ಆತನಿಗೂ ಇದೇ ಸ್ಥಿತಿಯಾಗುತ್ತಿರುವುದು. ಹೀಗೆ ಪಶ್ಚಾತ್ತಾಪದಿಂದ ಆತನ ಮನದಲ್ಲಿ ಅವಿಕಾರ ವೈರಾಗ್ಯವು ನಿರ್ಮಾಣವಾಗುವುದು ॥೬೫೭॥ ಅಂತಃಕರಣದಲ್ಲಿ ತೀವ್ರ ವೈರಾಗ್ಯವು ಉದಯಕ್ಕೆ ಬರುತ್ತಲೇ ಸದ್ಗುರುಗಳ ಕೃಪೆಯು ಪ್ರಾಪ್ತವಾಗುವುದು. ಸದ್ಗುರುಗಳ ಕೃಪಾಪ್ರಸಾದದಿಂದ ಸುಖದುಃಖ ದ್ವಂದ್ವಸಮೇತವಾಗಿ ಸಂಸಾರರೂಪ ಅಂಧಕಾರವು ಕೂಡಲೇ ಇಲ್ಲದಾಗುವುದು ॥೬೫೮॥ ಸದ್ಗುರು ಕೃಪೆಯು ಸಾಧ್ಯವಾಗುತ್ತಲೇ ಸರ್ವತ್ರವೂ ಪರಬ್ರಹ್ಮದ ದರ್ಶನವು ಆಗಲಾರಂಭಿಸುವುದು. ಆಗ ಅಲ್ಲಿ ಕರ್ಮ ಎಲ್ಲಿಯದು? ಜನ್ಮಮರಣಗಳಾದರೂ ಎಲ್ಲಿಯವು? ಸಂಸಾರ ಭ್ರಮವು ಇರುವುದೇ ಇಲ್ಲ ॥೬೫೯॥ ಆ ವೇಳೆಯಲ್ಲಿ ದೀಪಹಿಡಿದು ಹುಡುಕಿದರೂ ಈ ಯಾವ ಸಂಸಾರವು ಆತನಿಗೆ ಕಾಣಿಸುವುದಿಲ್ಲ. ಭ್ರಮದ ನಿರಸನೆಯಾಗುತ್ತಲೇ ರಜ್ಜುವಿನಲ್ಲಿನ ಸರ್ಪವು ಕೈಗೆ ಹತ್ತುವುದಿಲ್ಲ ॥೬೬೦॥ ಬೊಗರೆಯು ಅತಿ ಜೋರಾಗಿ ತಿರುಗುತ್ತಿರಲು ಅದು ಒಂದೆಡೆ ಸರಳವಾಗಿ ನಿಂತುಕೊಂಡಂತೆ ತೋರುವುದು. ಅದರಂತೆ ಭ್ರಮದ ಆವೇಶದಿಂದ ಸಂಸಾರವು ಸತ್ಯವಾಗಿ ಭಾಸವಾಗುವುದು ॥೬೬೧॥ ಕೇವಲ ಗಡಚಾದ ಭ್ರಮಕ್ಕೇನೇ ಸಂಸಾರ ಎಂದು ಕರೆಯುವರು. ಸರ್ವೇ ಸಾಮಾನ್ಯವಾಗಿ ಸರ್ವತ್ರವೂ ಪರಬ್ರಹ್ಮವೇ ತುಂಬಿಕೊಂಡಿರುವುದು. ಅದರಲ್ಲಿ ಜನ್ಮಕರ್ಮ ಯಾವುದೂ ಇರುವುದಿಲ್ಲ ॥೬೬೨॥ ಈ ಪ್ರಕಾರದ ಬ್ರಹ್ಮಜ್ಞಾನವು ಪ್ರಾಪ್ತವಾದರೂ ಕೂಡ ಕುಂಬಾರನು ತಯಾರಾದ ಗಡಿಗೆಯನ್ನು ತೆಗೆದುಕೊಂಡರೂ ಚಕ್ರವು ತನ್ನ ಗತಿಯು ಮುಗಿಯುವವರೆಗೆ ತಿರುಗುತ್ತಲೇ ಇರುವುದು. ಅದರಂತೆ ಪ್ರಾರಬ್ಧಯೋಗವನ್ನು ಭೋಗಿಸಲೇಬೇಕಾಗುವುದು ॥೬೬೩॥ ವೃಕ್ಷವನ್ನು ಅದರ ಬೇರುಸಮೇತವಾಗಿ ಕಿತ್ತೊಗೆದರೂ ಕೂಡ ಅದರ ಹಸಿಯು ಕೂಡಲೇ ಇಲ್ಲದಾಗುವುದಿಲ್ಲ. ಅದರಂತೆ ಬ್ರಹ್ಮಜ್ಞಾನವು ಪ್ರಾಪ್ತವಾದರೂ ಸಹ ಪ್ರಾರಬ್ಧವು ಆತನನ್ನು ಬಿಡಲಾರದು ॥೬೬೪॥ ಆದ್ದರಿಂದ ಆ ಯಾವ ಪ್ರಾರಬ್ಧಗತಿಯ ಅನುಸಾರವಾಗಿ ವಿಷಯ ಭೋಗಗಳು ಪ್ರಾಪ್ತವಾದಲ್ಲಿ ಆಗ ಅದರ ನಿವಾರಣೆಗಾಗಿ ಯಾವ ಪ್ರಯತ್ನವನ್ನೂ ಮಾಡದೇ ಶಾಂತಚಿತ್ತದಿಂದ ಅವುಗಳನ್ನು ಸಹಿಸಿಕೊಳ್ಳಬೇಕು ॥೬೬೫॥ ಹೀಗೆ ವಿಷಯ ಭೋಗಗಳು ಪ್ರಾಪ್ತವಾದಾಗ ವಿವೇಕೀ, ಕ್ಷಮಾಶೀಲ, ಸಾಧುಸಂತರು ಮನದಲ್ಲಿ ಪೂರ್ಣವಾದ ಶಾಂತಿಯನ್ನು ಧರಿಸಿ ಸುಖ ಸಮಾಧಾನವಾಗಿ ಇರುವರು ॥೬೬೬॥ ಅಖಂಡವಾದ ಶಾಂತಿಯು ಪ್ರಾಪ್ತವಾಯಿತೆಂದರೆ ಅದರ ಮುಂದೆ ಸಂಸಾರವು ಏನು ಮಾಡುವುದು? ಈಗ ಶ್ರೀಹರಿಯು ಅವರ ಶಾಂತಿಯ ಲಕ್ಷಣವನ್ನು ಸ್ವತಃ ಹೇಳುತ್ತಿರುವನು ॥೬೬೭॥ ಯಾವ ಆತ್ಮಶಾಂತಿಯ ಕಲ್ಯಾಣವನ್ನು ಮತ್ತು ಯಾವುದರಿಂದ ಜೀವಕ್ಕೆ ಸಮಾಧಾನವಾಗುವುದೋ, ಅಂತಹ ಮಧುರವಾದ ನಿರೂಪಣೆಯನ್ನು ಮುಂದಿನ ಎರಡು ಶ್ಲೋಕಗಳಿಂದ ಶ್ರೀಕೃಷ್ಣನು ಹೇಳುತ್ತಿರುವನು ॥೬೬೮॥

ಕ್ಷಿಪ್ತೋಽವಮಾನಿತೋಽಸದ್ಭಿಃ ಪ್ರಲಬ್ಧೋಽ ಸೂಯಿತೋಽಥವಾ । ತಾಡಿತಃ ಸನ್ನಿಬದ್ಧೋ ವಾ ವೃತ್ತ್ಯಾವಾ ಪರಿಹಾಪಿತಃ ।೫೭॥
ನಿಷ್ಠ್ಯುತಃ ಮೂತ್ರಿತೋ ವಾಽಜ್ಞೈರ್ಬಹುಧೈವಂ ಪ್ರಕಂಪಿತಃ । ಶ್ರೇಯಸ್ಕಾಮಃ ಕೃಚ್ಛ್ರಗತ ಆತ್ಮಾನಾತ್ಮಾನ ಮುದ್ಧರೇತ್ ।೫೮॥

ಅರ್ಥ:- ದುಷ್ಟ ಮನುಷ್ಯನು ಚೆಂಡ್ಡಿಡಿದು ಹೊರದಬ್ಬಲಿ, ಮಾತಿನಿಂದ ಅಪಮಾನಗೊಳಿಸಲಿ, ಅಪಹಾಸ್ಯ, ನಿಂದೆ ಮಾಡಲಿ, ಹೊಡೆಯುವುದನ್ನು ಮಾಡಲಿ, ಅನ್ಯ ಯಾವುದೇ ಪ್ರಕಾರಗಳಿಂದ ವಿಚಲಿತ ಮಾಡುವ ಪ್ರಯತ್ನ ಮಾಡಲಿ, ಆದರೆ ಆತನ ಯಾವುದೇ ಉಪದ್ರವಗಳಿಂದ ವಿಚಲಿತಗೊಳ್ಳಬಾರದು. ಕಾರಣ ಅವರು ಅಜ್ಞಾನಿಗಳಾಗಿರುವರು. ಅವರಿಗೆ ಪರಮಾರ್ಥವು ತಿಳಿದಿರುವುದಿಲ್ಲ. ಆದ್ದರಿಂದ ಯಾರು ತಮ್ಮ ಕಲ್ಯಾಣವನ್ನು ಬಯಸುವರೋ, ಅವರು ಇಂತಹ ಸರ್ವ ಸಂಕಟಗಳಿಗೆ ತಮ್ಮ ವಿವೇಕ ಬುದ್ಧಿಯಿಂದ ಸಹಿಸಿಕೊಳ್ಳಬೇಕು. ವಾಸ್ತವಿಕವಾಗಿ ಆತ್ಮದೃಷ್ಟಿಯು ಇದು ಸರ್ವ ವಿಪತ್ತುಗಳಿಂದ ಪಾರುಮಾಡುವ ಸಾಧನೆಯಾಗಿದೆ.

ದೇಹಾಭಿಮಾನೀ ತಾಮಸ ಜನ । ಅತಿದುಷ್ಟ ಜೇ ದುರ್ಜನ । ತಿಹೀ ಸಾಧೂಂಸೀ ಕರಿತಾ ಛಳಣ । ಶಾಂತೀಸ್ತವ ಸಜ್ಜನ ಕ್ರೋಧೀ ನವ್ಹತೀ ॥೬೯॥ ಅಲ್ಪ ಉಪದ್ರವೀ ಜಾಣ । ನ ಯೇತೀ ಕ್ರೋಧಾ ಸಜ್ಞಾನ । ತೈಸೇ ನವ್ಹೇ ಅತಿನಿರ್ವಾಣ । ಪೀಡಾ ದಾರುಣ ಕರಿತಾಂಹೀ ॥೭೦॥ ಕಾಯಿಕ ವಾಚಿಕ ಮಾನಸಿಕ । ತ್ರಿವಿಧ ಪೀಡಾ ದೇತಾ ದೇಖ । ಸಾಧು ನಿಜಶಾಂತೀ ನೇಟಕ । ಜಾಣೋನಿ ವಿವೇಕ ತೇ ಸಾಹತೀ ॥೭೧॥ ಉಜೂ ಬೋಲತಾ ಶುದ್ಧ ಯುಕ್ತೀ । ಆಕ್ಷೇಪೂನಿ ಹೇಡಾವಿತೀ । ಝಿಡ ಕಾವೂನಿಯಾ ನಿರ್ಭಿಸ್ತಿತೀ । ಅಪಮಾನಿತೀ ಸಭೇಸೀ ॥೭೨॥ ಶಬ್ದೀ ಶಬ್ದಾಚೇ ಕರೂನಿ ಛಳ । ಮ್ಹಣತೀ ದುಷ್ಟ ದುರ್ಜನ ದುಃಶೀಳ । ಅಪವಿತ್ರ ಅಮಂಗಳ । ನಷ್ಟ ಚಾಂಡಾಳ ಹಾ ಏಕ ॥೭೩॥ ಐಶಾ ದುರ್ಜನಾಂಚ್ಯಾ ದುಷ್ಟೋಕ್ತೀ । ಸಾಧು ಸಾಹೇ ನಿಜಶಾಂತೀ । ತೇ ಶಾಂತೀಚೀ ಉಪಪತ್ತೀ । ವಿವೇಕಸ್ಥಿತೀ ಅವಧಾರೀ ॥೭೪॥ ಪರಾಚೀ ಜಿವ್ಹಾ ಪೋಠ ಹಾಲತೀ । ಮಾಝ್ಯಾ ಅಂಗೀ ತೇ ನ ರುಪತೀ । ಯಾಲಾಗೀ ಕ್ರೋಧ ನ ಯೇ ಚಿತ್ತೀ । ನಿಜಶಾಂತೀ ಢಳೇನಾ ॥೭೫॥ ಸಭೇಸೀ ಸನ್ಮಾನೇ ಪೂಜಿತಾ । ಲೋಟೂನಿ ಘಾತಲಾ ಖಾಲಿತಾ । ಹಾಣೋನಿಯಾ ಚರಣಘಾತಾ । ನೇಲಾ ಪರತಾ ಅಪಮಾನೇ ॥೭೬॥ ಸನ್ಮಾನೇ ಜೇಥ ಪೂಜೂ ನೇತೀ । ತೇಥ ಕೇವಳ ಅಸೇ ಕ್ಷಿತೀ । ಅಪಮಾನೇ ಜೇಥ ಲೋಟಿತೀ । ತೇಥಹೀ ಕ್ಷಿತೀ ತೇಚಿ ಪೈ ॥೭೭॥ ಯೇಥ ಮಾನ ಅಪಮಾನ । ಕಲ್ಪನಾ ಮನಾಚೀ ಜಾಣ । ಐಸೇನಿ ವಿವೇಕೇ ಸಜ್ಜನ । ದ್ವೇಷೀನಾ ಜನ ನಿಜಶಾಂತೀ ॥೭೮॥ ಪ್ರಲೋಭೂನಿ ನಾನಾ ಯುಕ್ತೀ । ಧನೇ ಠಕವೂನಿಯಾ ನಿರ್ಭರ್ತ್ಸಿತೀ । ಧನಲೋಭ ಕೇವಳ ಅಧಃಪಾತೀ । ತ್ಯಾಚೀ ನಿವೃತ್ತಿ ಜೆಂಹೀ ಕೇಲೀ ॥೭೯॥

ದೇಹಾಭಿಮಾನದಿಂದ ವರ್ತಿಸುತ್ತಿರುವ ತಾಮಸೀ ದುಷ್ಟ ದುರ್ಜನರು ಇವರು ಸಾಧುಗಳಿಗೆ ಪೀಡೆಯನ್ನು ಕೊಟ್ಟರೂ ಅವರು ಶಾಂತರಾಗಿರುವರು. ಇವರು ಎಂದಿಗೂ ಕ್ರೋಧದ ಆಧೀನರಾಗುವುದಿಲ್ಲ ॥೬೯॥ ಸಾಮಾನ್ಯವಾಗಿ ತಿಳಿದ ಸೂಜ್ಞರಿಗೆ ಸ್ವಲ್ಪ ಉಪದ್ರವವಾದರೆ ಅವರು ಕ್ರೋಧವನ್ನು ಮಾಡಿಕೊಳ್ಳುವುದಿಲ್ಲ. ಅದರಂತೆ ಸಾಧುಸಂತರು ಭಯಂಕರವಾದ ಪೀಡೆಗಳನ್ನು ಕೊಟ್ಟರೂ ಇವರು ಎಂದಿಗೂ ಸಂತಾಪಗೊಳ್ಳುವುದಿಲ್ಲ ॥೭೦॥ ಕಾಯಿಕ, ವಾಚಿಕ ಮತ್ತು ಮಾನಸಿಕ ಹೀಗೆ ಮೂರು ಪ್ರಕಾರಗಳ ಪೀಡೆಗಳಿರುವುವು. ಈ ಮೂರೂ ಪೀಡೆಗಳನ್ನು ಸಂತರು ಶಾಂತಚಿತ್ತದಿಂದ ದೃಢವಾಗಿ ಸಹನೆಯನ್ನು ಮಾಡಿಕೊಳ್ಳುವರು ॥೭೧॥ ಸಾಧುಸಂತರು ಕೇವಲ ಯುಕ್ತಿಯಿಂದ ಸರಳವಾಗಿ ಮಾತನಾಡಿದರೂ ಕೂಡ ದುಷ್ಟ ಜನರು ಅವರಮೇಲೆ ಭಿನ್ನ ಭಿನ್ನ ರೀತಿಯಲ್ಲಿ ಆಕ್ಷೇಪವನ್ನು ಮಾಡುತ್ತ ಅವರಿಗೆ ಅಪಹಾಸ್ಯವನ್ನು ಮಾಡುವರು. ಅವರನ್ನು ಧಿಕ್ಕರಿಸುತ್ತ ದೂರುಕ್ತ ನಿಂದಿಸುವರು, ಅವಾಚ್ಯ ಶಬ್ದಗಳಿಂದ ತುಂಬಿದ ಸಭೆಯಲ್ಲಿ ಅವರನ್ನು ಅಪಮಾನಗೊಳಿಸುವರು ॥೭೨॥ ಕೆಟ್ಟ ಕೆಟ್ಟ ಶಬ್ದಗಳಿಂದ ಇವನು ದುಷ್ಟನು, ದುರ್ಜನನು, ದುಃಶೀಲನು, ಅಪವಿತ್ರನು, ಅಮಂಗಲನು ಚಾಂಡಾಲನಾಗಿರುವನು ಎಂದು ಛೇಡಿಸುವರು ॥೭೩॥ ಈ ಪ್ರಕಾರವಾಗಿ ದುರ್ಜನರು ಎಷ್ಟೇ ದುಷ್ಟ ಶಬ್ದಗಳನ್ನು ಬಳಿಸಿದರೂ ಕೂಡ ಸಾಧುಸಂತರು ತನ್ನ ಶಾಂತ ವೃತ್ತಿಯಿಂದ ಎಲ್ಲವನ್ನೂ ಸಹಿಸುತ್ತಿರುವರು. ಹೀಗೆ ಶಾಂತಿಯು ಉತ್ಪನ್ನವಾಗುವ ಕಾರಣವನ್ನು ಮತ್ತು ವಿವೇಕದ ಸ್ವರೂಪವನ್ನು ಕೇಳು ॥೭೪॥ ಬಯ್ಯುವವನ ನಾಲಿಗೆ ಮತ್ತು ತುಟಿಗಳು ಅಲುಗಾಡುತ್ತಿರುವುವು. ಇದರಿಂದ ಅವರ ಶಬ್ದಗಳು ನನ್ನ ಶರೀರಕ್ಕೆ ಬಂದು ಚುಚ್ಚಲಾರವು. ಹೀಗೆ ಇವರ ವಿವೇಕವಿರುವುದರಿಂದ ಅವರ ಮನದಲ್ಲಿ ಕ್ರೋಧ ಉಂಟಾಗುವುದಿಲ್ಲ. ಇದರಿಂದ ಅವರ ಶಾಂತಿಯು ಕದಲುವುದಿಲ್ಲ ॥೭೫॥ ತುಂಬಿದ ಸಭೆಯಲ್ಲಿ ಆತನನ್ನು ಪೂಜಿಸುತ್ತಿರಲಿ ಅಥವಾ ಅಲ್ಲಿ ಕುಳಿತಿರುವ ಆಸನದಿಂದ ಕೆಳಗೆ ಉರುಳಿಸಲಿ, ಇಲ್ಲವೇ ಕಾಲಿನಿಂದ ಒದ್ದು ಅಪಮಾನವನ್ನು ಮಾಡಿ ಆತನನ್ನು ಆಚೆಗೆ ತಳ್ಳಿಬಿಡಲಿ ॥೭೬॥ ಹೀಗಾದರೂ ಸಾಧು ಏನು ಹೇಳುತ್ತಾನೆಂದರೆ, ನನ್ನನ್ನು ಪೂಜಿಸಿ ಸನ್ಮಾನ ಮಾಡಿದ ಸ್ಥಳದಲ್ಲಿ ಪೃಥ್ವಿಯೇ ಇರುವುದು ಮತ್ತು ಅಪಮಾನಗೊಳಿಸಿ ಕೆಳಗೆ ನೂಕಿದರೂ ಅಲ್ಲಿಯೂ ಪೃಥ್ವಿಯೇ ಇರುವುದು ॥೭೭॥ ಅಲ್ಲಿ ಮಾನವಾದರೇನು? ಅಪಮಾನವಾದರೇನು? ಇವೆಲ್ಲವೂ ಕೇವಲ ಮನಸ್ಸಿನ ಕಲ್ಪನೆಯಾಗಿರುವುದು. ಇಂತಹ ವಿಚಾರವನ್ನು ಸಜ್ಜನನು ಮಾಡುವನು. ಆತನು ಶಾಂತತೆಯಿಂದ ಇರುವನು. ಯಾರ ದ್ವೇಷವನ್ನೂ ಮಾಡಲಾರನು ॥೭೮॥ ಅನೇಕ ಪ್ರಕಾರದ ಯುಕ್ತಿಗಳಿಂದ ಸಂತನನ್ನು ವಶಮಾಡಿಕೊಂಡು, ಆತನಲ್ಲಿದ್ದ ಎಲ್ಲ ಹಣವನ್ನು ದೋಚಿಕೊಂಡು ಆತನ ಅವಹೇಳನ ಮಾಡುವರು. ಆಗ ಆ ಸಂತನು ಮನದಲ್ಲಿ ಹೀಗೆ ತಿಳಿಯುವನು, ಧನಲೋಭವು ಅಧಃಪತನಕ್ಕೆ ಕಾರಣೀಭೂತವಾಗಿರುವುದು. ಆದ್ದರಿಂದ ಅವರು ಅದನ್ನು ಒಯ್ದರು ॥೭೯॥

ತ್ಯಾಂಸೀ ನಿಂದಿತಾಂಚಿ ಜಾಣ । ದೋಷೀ ಹೋ ಈಜೇ ಆಪಣ । ಯಾಲಾಗೀ ಕ್ರೋಧಾ ನ ಯೇ ಮನ । ಶಾಂತೀ ಸಂಪೂರ್ಣ ಢಳೇನಾ ॥೭೮೦॥ ಶುದ್ಧ ಬೋಲತೀ ಶಾಸ್ತ್ರಾರ್ಥ । ಅರ್ಥ ತಿತುಕಾ ಅನರ್ಥ । ತ್ಯಾ ಅನರ್ಥಾ ಜೋ ಕರೀ ನಿವೃತ್ತ । ತ್ಯಾತೇ ದ್ವೇಷಿತ ತೇ ಮೂರ್ಖ ॥೭೮೧॥ ಸದ್ಗುಣೀ ದೋಷ ಆರೋಪಿತೀ । ನಾನಾಪರೀ ನಿಂದಾ ಕರಿತೀ । ತೇಣೇ ಹಿತ ಮಾನಿತೀ ಚಿತ್ತೀ । ತಾರಕ ನಿಶ್ಚಿತೀ ಹೇ ಮಾಝೇ ॥೭೮೨॥ ಮಾತೇಚೇ ಜೇ ಕರತಳ । ತೇ ವರಿ ವರಿ ಕ್ಷಾಳಿತೀ ಬಾಹ್ಯ ಮಳ । ಹೇ ಜನಕ ಮಾಝೇ ಕೇವಳ । ಸಬಾಹ್ಯ ಮಳ ಸಕಳ ಜಿವ್ಹಾಗ್ರೇ ಧುತೀ ॥೭೮೩॥ ಐಶಿಯಾಂಚೇ ಕರಿತಾ ಛಳಣ । ಹಿತಾಸ ನಾಡಿಜೇ ಆಪಣ । ಕೋಣಾಚೇ ನ ಬೋಲೇ ದೋಷಗುಣ । ತೇಣೇ ಶಾಂತಿ ಜಾಣ ಥೋರಾವೇ ॥೭೮೪॥ ಚಾಲೇ ಜೇಣೇ ಜೀವಿಕಾಸ್ಥಿತೀ । ಧನ ಧಾನ್ಯ ಕ್ಷೇತ್ರ ವೃತ್ತೀ । ಛಳೇ ಬಳೇ ಹಿರೋನಿ ನೇತೀ । ತೇಣೇಹೀ ಚಿತ್ತೀ ಕ್ಷೋಭ ನುಪಜೇ ॥೭೮೫॥ ಯೇಥ ಲಾಭಾಲಾಭ ದೈವಾಧೀನ । ತ್ಯಾಸೀ ದೇತೇಘೇತೇ ತೇಚಿ ಜಾಣ । ಯಾಲಾಗೀ ದ್ವೇಷೀನಾ ಜನ । ಶಾಂತೀಚಾ ಗುಣ ನ ಸಾಂಡೀ ॥೭೮೬॥ ವೃತ್ತಿ ಘೇಊನಿ ಉಗೇ ನಸತೀ । ಅನ್ಯಾಯೀ ಮ್ಹಣೋನಿ ಬಾಂಧಿತೀ । ಏಕ ತೋಂಡಾವರೀ ಥುಂಕಿತೀ । ಏಕ ಮಾಥಾಮುತತೀ ಅತಿದುಷ್ಟ ॥೭೮೭॥ ಏಕ ತಾಡಿತೀ ಪಾಡಿತೀ । ಏಕ ನಾನಾ ಪರೀ ಗಾಂಜಿತೀ । ತರೀ ಅಂಗೀಚೀ ಢಳೇನಾ ಶಾಂತೀ । ವಿವೇಕ ಸಾಂಗಾತೀ ಸಜ್ಜನಾ ॥೭೮೮॥ ಥುಂಕಾ ಆಣಿ ಜೇ ಮೂತ । ತೇ ದೇಹಾಚಿಮಾಜೀ ಉಪಜತ । ದೇಹೀಂಚೇ ದೇಹಾಸ ಲಾಗತ । ಕ್ಷೋಭ ತೇಥ ಕೋಣ ಮಾನೀ ॥೭೮೯॥ ಥುಂಕಾ ಆಣಿ ಜೇ ಮೂತ । ಜೈಸೇ ದೇಹೀ ಉಪಜೇ ದೇಹಾಚೇ ಅಪತ್ಯ । ದೇಹಾಚೇ ದೇಹಾವರೀ ಖೇಳತ । ದುಃಖ ತೇಥ ಕೋಣಾಚೇ ॥೭೯೦॥ ಧರಿತಾ ಮಾರಿತಾ ಮ್ಹಣೇ ದೇಖ । ದೇಹೋ ತಿತುಕಾ ಪಾಂಚಭೌತಿಕ । ಮಾರಿತಾ ಮಾರಿಜತಾ ದೋನೀ ಏಕ । ಕೋಣಾಚೇ ದುಃಖ ಕೋಣಾಸೀ ॥೭೯೧॥ ಐಶೀ ಸವಿವೇಕೇ ಜ್ಯಾಸೀ ಶಾಂತೀ । ಚಾರೀ ಮುಕ್ತೀ ತ್ಯಾಚ್ಯಾ ದಾಸೀ ಹೋತೀ । ತ್ಯಾಚಾ ಅಂಕಿಲಾ ಮೀ ಶ್ರೀಪತೀ । ಯಾವರೀ ಪ್ರಾಪ್ತೀ ತೇ ಕಾಯೀ ॥೭೯೨॥

ಅವರನ್ನು ನಿಂದಿಸಿದರೆ ನಾನು ದೋಷಿಯಾಗುವೆನು. ಹೀಗೆ ವಿಚಾರಿಸುತ್ತ ಆತನ ಮನದಲ್ಲಿ ಕ್ರೋಧವು ಬರುವುದಿಲ್ಲ. ಆತನ ಶಾಂತಿಯಲ್ಲಿ ಎಂದಿಗೂ ಬಾಧಕತೆ ಬರುವುದೇ ಇಲ್ಲ ॥೭೮೦॥ ಸಾಧು ಈ ರೀತಿಯಲ್ಲಿ ಸ್ವತಃ ತಿಳಿದುಕೊಳ್ಳುವನು. ಏನೆಂದರೆ, ಅರ್ಥವು ಅನರ್ಥಕ್ಕೆ ಕಾರಣವಾಗಿರುವುದು. ಹೀಗೆಂದು ಸ್ಪಷ್ಟವಾದ ಶಾಸ್ತ್ರಾರ್ಥವಿರುವುದು. ಅಂದಮೇಲೆ ಈ ಯಾವ ಅನರ್ಥದಿಂದ ನನ್ನನ್ನು ನಿವೃತ್ತಗೊಳಿಸಿದ ಮೇಲೆ ಆತನ ದ್ವೇಷವನ್ನು ಮಾಡುವವರು ಮೂರ್ಖರಾಗುವರು ॥೭೮೧॥ ಅಜ್ಞಾನಿ ಜನರು, ಇವರು ಸದ್ಗುಣಗಳಲ್ಲಿ ದೋಷವನ್ನು ಹೊರೆಸುತ್ತಿರುವರು. ಅನೇಕ ಪ್ರಕಾರದ ನಿಂದೆಯನ್ನು ಮಾಡುವರು. ಇದರಲ್ಲಿ ತಮ್ಮ ಹಿತವಿದೆ ಎಂದು ಹೀಗೆ ತಿಳಿಯುವರು. ನಿಜವಾಗಿ ನೋಡಿದರೆ ಇವರೇ ನನ್ನ ತಾರಕರಾಗಿರುವರು ॥೭೮೨॥ ತಾಯಿಯಾದವಳು ತನ್ನ ಕೈಗಳಿಂದ ನನ್ನ ಶರೀರದ ಮೇಲಿನ ಹೊಲಸನ್ನು ತೊಳೆಯುವಳು. ಆದರೆ ಇವರು ನನ್ನ ತಂದೆಯ ಸ್ವರೂಪರಾಗಿರುವರು. ಕಾರಣವೇನಂದರೆ, ಇವರು ನನ್ನ ಒಳಗಿನ ಮತ್ತು ಹೊರಗಿನ ಹೊಲಸನ್ನು ತಮ್ಮ ನಾಲಿಗೆಯಿಂದ ತೊಳೆಯುವರು ॥೭೮೩॥ ಇಂತಹವರನ್ನು ನಾನು ಪೀಡಿಸಿದರೆ ತನ್ನ ಅಹಿತವನ್ನು ತಾನೇ ಮಾಡಿಕೊಂಡಂತಾಗುವುದು. ಹೀಗೆ ವಿಚಾರವನ್ನು ಮಾಡಿ ಆ ಯಾವ ಸಾಧು ಯಾರ ದೋಷವನ್ನೂ, ಗುಣವನ್ನೂ ಉಚ್ಚರಿಸುವುದಿಲ್ಲ. ಆದ್ದರಿಂದ ಸತತವಾಗಿ ಆತನ ಅಂತರಂಗದಲ್ಲಿ ಶಾಂತಿಯು ನೆಲೆಸಿಕೊಂಡಿರುವುದು ॥೭೮೪॥ ಯಾವುದರಿಂದ ತನ್ನ ಜೀವನವು ನಡೆಯುತ್ತಿರುವುದೋ ಅಂತಹ ಧನಧಾನ್ಯವನ್ನು ಅಥವಾ ಹೊಲಮನೆಗಳನ್ನು ಪೀಡಿಸಿ ಕಸೆದುಕೊಂಡರೂ ಕೂಡ ಸಾಧುವಿನ ಮನದಲ್ಲಿ ಕ್ರೋಧ ಹುಟ್ಟುವುದಿಲ್ಲ ॥೭೮೫॥ ಇಹಲೋಕದಲ್ಲಿ ಲಾಭವಾಗುವಿಕೆಯೂ ಅಥವಾ ಹಾನಿಯಾಗುವಿಕೆಯೂ ಇದು ದೈವಾಧೀನವಾಗಿರುವುದು ದೈವವೇ ಕೊಡುವುದು ತೆಗೆದುಕೊಳ್ಳುವುದಾಗಿರುವುದು. ಹೀಗೆ ವಿಚಾರವನ್ನು ಮಾಡಿ ಸಾಧು ಯಾರ ದ್ವೇಷವನ್ನು ಮಾಡುವುದಿಲ್ಲ ಮತ್ತು ತನ್ನ ಶಾಂತಿಯನ್ನು ಬಿಟ್ಟುಕೊಡುವುದಿಲ್ಲ ॥೭೮೬॥ ದುಷ್ಟ ಜನರು ಸಾಧುವಿನ ಹೊಲಮನೆಗಳನ್ನು ತೆಗೆದುಕೊಂಡು ಅಷ್ಟಕ್ಕೆ ಸುಮ್ಮನಾಗದೇ ಇವನು ಮಹಾ ಅನ್ಯಾಯಿಯಾಗಿರುವನು ಎಂದು ಹೇಳುತ್ತ ಆತನನ್ನು ಹಿಡಿದು ಕಟ್ಟಿ ಹಾಕುವರು. ಕೆಲವರು ಆತನ ಮುಖದ ಮೇಲೆ ಉಗುಳುವರು. ಇನ್ನೂ ಕೆಲವರು ಆತನ ತಲೆಯ ಮೇಲೆ ತಮ್ಮ ಮೂತ್ರ ಬಿಡುವರು ॥೭೮೭॥ ಕೆಲವರು ಹೊಡೆಯುವರು, ಕೆಲವರು ಬಡೆದು ಕೆಳಗೆ ಬೀಳಿಸುವರು. ಇನ್ನೂ ಕೆಲವರು ಭಿನ್ನ ಭಿನ್ನ ಪ್ರಕಾರಗಳ ಪೀಡೆಗಳನ್ನು ಕೊಡುವರು, ಆದರೆ ಸಜ್ಜನರಲ್ಲಿ ವಿವೇಕವು ಸದಾ ಇರುತ್ತಿರಲು ಅವರ ಅಂತರಂಗದ ಶಾಂತಿಯು ಭಂಗವಾಗುವುದಿಲ್ಲ ॥೭೮೮॥ ಈತನು ಹೀಗೆ ವಿಚಾರಿಸುವನು ; ಉಗುಳು ಮತ್ತು ಮೂತ್ರವು ಈ ಎರಡು ದೇಹದಿಂದ ಉತ್ಪನ್ನವಾಗುವುವು, ಅವುಗಳ ಲೇಪವು ದೇಹಕ್ಕೆ ಆದರೆ ಕೋಪಿಸುವ ಕಾರಣವಾದರೂ ಯಾವುದು? ॥೭೮೯॥ ಈ ಎರಡೂ ದೇಹದಲ್ಲಿ ಹುಟ್ಟಿಕೊಂಡ ಮಕ್ಕಳಾಗಿರುವುವು. ಮಕ್ಕಳು ಮೈಮೇಲೆ ಆಡುತ್ತಿರಲು ಅದರಿಂದ ದುಃಖ ಪಡುವ ಕಾರಣವಾದರೂ ಏನು? ॥೭೯೦॥ ಯಾರೇ ಆಗಲಿ ಆತನನ್ನು ಹಿಡಿದು ಹೊಡೆದು ಕೆಡವಿದರೂ ಆಗ ಆತನು ಹೀಗೆ ಹೇಳುವನು, ಇರುವ ಎಲ್ಲಾ ಶರೀರಗಳು ಪಂಚಮಹಾಭೂತಗಳಿಂದ ನಿರ್ಮಾಣವಾಗಿರುವುವು. ಅಂದಮೇಲೆ ಹೊಡೆಯುವವನೂ, ಹೊಡೆತ ತಿನ್ನುವವನೂ ಈ ಇಬ್ಬರೂ ಒಂದೇ ಆಗಿರುವರು, ಯಾರ ದುಃಖವು ಯಾರಿಗಾಗುವುದು? ॥೭೯೧॥ ಈ ಪ್ರಕಾರವಾದ ವಿಚಾರದಿಂದ ಆತನಿಗೆ ಶಾಂತಿಯು ಪ್ರಾಪ್ತವಾಗುವುದು. ನಾಲ್ಕು ಮುಕ್ತಿಗಳು ಆತನ ದಾಸರಾಗುವುವು. ಪ್ರತ್ಯಕ್ಷ ಶ್ರೀಕೃಷ್ಣನಾದ ನಾನು ಆತನ ಅಧೀನನಾಗುವೆನು. ಇದಕ್ಕಿಂತಲೂ ಹೆಚ್ಚಿನ ಲಾಭವು ಯಾವುದಿರುವುದು? ॥೭೯೨॥

ತೇಥ ಕೇವಳ ಜೋ ಮೋಕ್ಷಾರ್ಥೀ । ತೇಣೇ ಸರ್ವಸ್ವೇ ಪಾಳಾವೀ ಶಾಂತೀ । ತೇ ದುಃಖಸಾಗರಾವರ್ತೀ । ಹೋಯ ತಾರಿತೀ ಸುಖರೂಪ ॥೯೩॥ ವೈರಾಗ್ಯ ಯೋಗ ಜ್ಞಾನ ಧ್ಯಾನ । ತ್ಯಾಚೇ ಫಳ ತೇ ಶಾಂತಿ ಜಾಣ । ತೇ ಶಾಂತಿ ಸಾಧೂನಿ ಸಂಪೂರ್ಣ । ಆಪಣಿಯಾ ಆಪಣ ಉದ್ಧರತೀ ॥೯೪॥ ಯಾಲಾಗೀ ಉದ್ಧವಾ ಜಾಣ । ಸಾಹೋನಿ ದ್ವಂದ್ವಾಂಚೇ ಕಾಠಿಣ್ಯ । ಶಾಂತಿ ಸಾಧೂನಿ ಸಂಪೂರ್ಣ । ಬ್ರಹ್ಮ ಪರಿಪೂರ್ಣ ಪಾವಾವೇ ॥೯೫॥ ಪೂರ್ಣ ಬ್ರಹ್ಮ ಪಾವಲ್ಯಾಪಾಠೀ । ಜನ್ಮ ಮರಣಾಚೀ ಖುಂಟೇ ಗೋಠೀ । ಪರಮಾನಂದೇ ಪಡೇಮಿಠೀ । ಭವಭಯಾಚೀ ತುಟೀ ತೈ ಹೋಯ ॥೯೬॥ ಐಕೋನಿ ಶ್ರೀಕೃಷ್ಣಾಚೇ ಬೋಲಾ । ಉದ್ಧವ ಅತ್ಯಂತ ಚಾಕಾಟಲಾ । ದ್ವಂದ್ವಬಾಧ ಜೋ ಐಕಿಲಾ । ತೋ ನ ವಚೇ ಸಾಹಿಲಾ ಆಮ್ಹಾಸೀ ॥೯೭॥ ಐಕಿಲ್ಯಾ ನಾಹೀ ಯೇ ಶಾಂತೀಚ್ಯಾ ಗೋಷ್ಟೀ । ಮಾ ಕೇವೀ ದೇಖಿಜೇಲ ದೃಷ್ಟೀ । ಐಶೀ ಶಾಂತಿ ಜ್ಯಾಜ್ಯಾ ಪೋಟೀ । ತೋ ಪುರುಷ ಸೃಷ್ಟೀ ನಸೇಲ ॥೯೮॥ ಮಾಗೇ ಐಕಿಲೀ ನಾ ದೇಖಿಲೀ । ಐಶೀ ಶಾಂತಿ ತ್ವಾಂ ಕೈಚೀ ಕಾಢಿಲೀ । ಹೇ ಐಕತಾ ತುಝೀ ಬೋಲೀ । ಭಯೇ ದಚಕಲೀ ಬುದ್ಧಿ ಮಾಝೀ ॥೯೯॥ ಐಶೀ ಶಾಂತೀ ಜ್ಯಾಸೀ ಸುಖೀ ಆಹೇ । ತೋ ಮಾಗೇ ಝಾಲಾ ನ ಪುಢೇ ಹೋಯೇ । ದೇವೋ ಬೋಲಿಲಾ ನಿಜನಿರ್ವಾಹೇ । ತೇ ದುಃಸಹ ಹೋಯೇ ಆಮ್ಹಾಸೀ ॥೨೦೦॥ ಜ್ಯಾ ಸಾಂಗಿತಲೇ ದ್ವಂದ್ವಾಸೀ । ತೇ ಅತಿದುಃಸಹ ಯೋಗಿಯಾಂಸೀ । ಕೇವೀ ಸಾಹವೇ ಆಮ್ಹಾಸೀ । ತೇಚಿ ದೇವಾಸೀ ಪೂಸತ ॥೨೦೧॥

ಉದ್ಧವ ಉವಾಚ :-

ಯಥೈವಮನುಬುಧ್ಯೇಯಂ ವದ ನೋ ವದತಾಂ ವರ । ಸುದುಃ ಸಹಮಿಮಂ ಮನ್ಯೇ ಆತ್ಮನ್ಯಸದತಿಕ್ರಮಮ್ ॥೫೯॥
ವಿದುಷಾಮಪಿ ವಿಶ್ವಾತ್ಮನ್ ಪ್ರಕೃತಿರ್ಹಿ ಬಲೀಯಸೀ । ಋತೇ ತದ್ಧರ್ಮನಿರತಾನ್ ಶಾಂತಾಂಸ್ತೇ ಚರಣಾಲಿಯಾನ್ ॥೬೦॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವ ಸಂವಾದೇ ದ್ವಾವಿಂಶೋಽಧ್ಯಾಯಃ ॥೨೨॥

ಉದ್ಧವನು ನುಡಿದನು : ಹೇ ವಿಶ್ವಾತ್ಮನೇ, ಈ ಸಂಸಾರ ಜೀವನದಲ್ಲಿ ವ್ಯಕ್ತಿಯ ಅಜ್ಞಾನವು ಬಹಳ ಪ್ರಬಲವಾಗಿರುವುದು. ಅಜ್ಞಾನಿಗಳು ಮಾಡುವ ದುಷ್ಕೃತ್ಯಗಳನ್ನು ತಡೆದುಕೊಳ್ಳುವುದು ಮಹಾ ವಿದ್ವಾಂಸರಿಗೂ ಕೂಡಾ ಬಹಳ ಕಷ್ಟಕರವಾಗಿರುವುದು. ನಿನ್ನ ಚರಣ ಕಮಲಗಳಲ್ಲಿ ವಿಶ್ರಾಂತಿಯನ್ನು ಪಡೆದು ನಿನ್ನ ಪ್ರೀತಿ ಸೇವೆಯಲ್ಲಿ ನೆಲೆಸಿರುವ ನಿನ್ನ ಭಕ್ತರು ಮಾತ್ರ ಇಂತಹ ಅಸಹ್ಯಕೃತ್ಯಗಳನ್ನು ಸಹಿಸಬಲ್ಲರು.

ಜೇ ಸಾಂಗೋ ಜಾಣತೀ ವೇದಶಾಸ್ತ್ರಾರ್ಥಾ । ತೇ ವಕ್ತೇ ಮ್ಹಣೇಪತೀ ತತ್ತ್ವತಾ । ತ್ಯಾ ವಕ್ತ್ಯಾಮಾಜೀ ತುಝೀ ಶ್ರೇಷ್ಠತಾ । ಮುಖ್ಯ ವೇದಾಂಚಾ ವಕ್ತಾ ತೂ ಹೋಸೀ ॥೨೦೨॥

ಆದಕ್ಕಾಗಿ ಕೇವಲ ಮೋಕ್ಷಾರ್ಥಿಯಾದವನು ಆತನು ಸರ್ವಭಾವದಿಂದ ಶಾಂತಿಯನ್ನು ಪಾಲಿಸಬೇಕು. ಇದರಿಂದ ದುಃಖರೂಪ ಸಮುದ್ರದಿಂದ ಆತನು ಸುಖರೂಪವಾಗಿ ಉದ್ಧರಿಸುವನು ॥೯೩॥ ವೈರಾಗ್ಯ, ಯೋಗ, ಜ್ಞಾನ ಅಥವಾ ಧ್ಯಾನ ಇವುಗಳ ಫಲವೇ ಶಾಂತಿಯಾಗಿರುವುದು. ಈ ಶಾಂತಿಯನ್ನು ಸಾಧುಗಳು ಪರಿಪೂರ್ಣವಾಗಿ ಪ್ರಾಪ್ತಮಾಡಿಕೊಳ್ಳುವರು ಮತ್ತು ಇದರಿಂದ ತಮ್ಮನ್ನು ತಾವೇ ಉದ್ಧರಿಸಿಕೊಳ್ಳುವರು ॥೯೪॥ ಹೇ ಉದ್ಧವಾ, ಆದ್ದರಿಂದ ಶೀತ - ಉಷ್ಣ, ಸುಖ - ದುಃಖ ಇತ್ಯಾದಿ ದ್ವಂದ್ವಗಳ ಕಠಿಣತ್ವವನ್ನು ಸಹಿಸಿಕೊಂಡು ಅಚಲವಾದ, ಅಖಂಡವಾದ ಶಾಂತಿಯನ್ನು ಪ್ರಾಪ್ತ ಮಾಡಿಕೊಳ್ಳಬೇಕು, ಪರಿಪೂರ್ಣ ಬ್ರಹ್ಮನನ್ನು ಪಡೆದುಕೊಳ್ಳಬೇಕು ॥೯೫॥ ಪೂರ್ಣ ಬ್ರಹ್ಮನಲ್ಲಿ ಏಕರೂಪತೆಯು ಪ್ರಾಪ್ತವಾಗುತ್ತಲೇ ಜನ್ಮ ಮರಣಗಳ ಚಕ್ರವು ನಿಂತುಬಿಡುವುದು. ಪರಮಾನಂದ ಜೊತೆಗೂಡಲು ಆಗ ಸಂಸಾರದ ಭಯವು ನಷ್ಟವಾಗುವುದು ॥೯೬॥ ಈ ಯಾವ ಶ್ರೀಕೃಷ್ಣನ ವಿಚಾರವನ್ನು ಕೇಳಿ ಉದ್ಧವನು ಆಶ್ಚರ್ಯಚಕಿತನಾದನು. ಇಲ್ಲಿಯವರೆಗೆ ಕೇಳಿದ ಈ ಯಾವ ದ್ವಂದ್ವ ನಿವೃತ್ತಿಯು ನಮ್ಮಿಂದ ಸಹಿಸುವುದಾಗುವುದಿಲ್ಲ ॥೯೭॥ ಈ ಪ್ರಕಾರದ ಅಖಂಡ ಶಾಂತಿಯ ಮಾತುಗಳನ್ನು ನಾವು ಇಲ್ಲಿಯವರೆಗೂ ಎಂದೂ ಕೇಳಿಯೇ ಇಲ್ಲ. ಅಂದಮೇಲೆ ಕಣ್ಣುಗಳಿಂದ ಎಲ್ಲಿಂದ ನೋಡಬೇಕು? ಇಂತಹ ಅಖಂಡ ಶಾಂತಿ ಪುರುಷನು ಈ ಪೃಥ್ವಿಯಲ್ಲಿಯೇ ಇರಲಿಕ್ಕಿಲ್ಲ ॥೯೮॥ ಹೇ ಕೃಷ್ಣಾ, ಪೂರ್ವದಲ್ಲಿ ಎಂದೂ ಕೇಳದ ಹಾಗೂ ಕಾಣದ ಇಂತಹ ಶಾಂತಿ ಸ್ವರೂಪವನ್ನು ನೀನು ಎಲ್ಲಿಂದ ಶೋಧಮಾಡಿ ತೆಗೆದಿರುವೇ? ಈ ನಿನ್ನ ವಚನಗಳನ್ನು ಕೇಳಿ ನನ್ನ ಮನವು ಭಯದಿಂದ ತತ್ತರಿಸಿಹೋಗಿದೆ ॥೯೯॥ ಇಂತಹ ಶಾಂತಿಯ ಲಾಭ ಪಡೆದವನು ಈ ಹಿಂದೆ ಯಾರೂ ಆಗಿಲ್ಲ ಹಾಗೂ ಮುಂದೆಯೂ ಯಾರೂ ಆಗುವುದಿಲ್ಲ. ಶ್ರೀಕೃಷ್ಣನು ತನ್ನ ನಿಜ ನಿರ್ಧಾರದ ಮತವನ್ನು ಹೇಳುತ್ತಿರುವುದು ನಮಗಿದು ದುಃಸಹವಾಗಿದೆ ॥೨೦೦॥ ಈ ಯಾವ ದ್ವಂದ್ವವನ್ನು ವರ್ಣಿಸಿರುವ ವಿಷಯವು ಯೋಗಿಗಳಿಗೂ ಕೂಡ ಸಹಿಸುವುದು ಕಠಿಣವಾಗಿದೆ. ಅಂದಮೇಲೆ ನಮ್ಮಂತಹವರಿಗೆ ಹೇಗೆ ಸಹಿಸಲು ಸಾಧ್ಯ? ಇದನ್ನೇ ಈಗ ದೇವನಿಗೆ ಕೇಳುತ್ತಿರುವನು ॥೨೦೧॥

ಯಾರು ವೇದಗಳ ಅರ್ಥ, ಕರ್ಮಗಳನ್ನು ಪೂರ್ಣವಾಗಿ ತಿಳಿದು ಉತ್ತಮ ರೀತಿಯಲ್ಲಿ ಹೇಳುವರೋ, ಅವರೇ ವಕ್ತಾ ಎಂದೆನಿಸಿಕೊಳ್ಳುವರು. ಆ ವಕ್ತಾರಲ್ಲಿ ನೀನೇ ಶ್ರೇಷ್ಠನು, ವೇದದ ವಕ್ತಾನೂ ಕೂಡ ನೀನೇ ಆಗಿರುವೆ ॥೨೦೨॥

ಶಾಸ್ತ್ರೇ ಲಾಹೋನಿ ತುಝೀ ಯುಕ್ತೀ । ತುಝೀ ತುಜ ಪ್ರತಿಪಾದಿತೀ । ತೇ ಪರೋಕ್ಷವಾದೇ ಥೋಂಟಾವತೀ । ಶ್ರುತಿ "ನೇತಿ ನೇತಿ " ಪರತಲ್ಯಾ ॥೨೦೩॥ ತ್ಯಾ ತುಝ್ಯೋ ಮುಖೀಂಚ್ಯಾ ಜ್ಞಾನೋಕ್ತೀ । ಕೃಪೇನೇ ಐಕೋನಿ ಕೃಪಾಮೂರ್ತೀ । ಶ್ರವಣಾಚೇ ಭಾಗ್ಯ ವಾನೂ ಕಿತೀ । ಜೇ ಐಕತೀ ತೇ ಧನ್ಯ ॥೨೦೪॥ ಐಸಐಶಿಯಾ ಅತಿಯುಕ್ತೀ । ಉದ್ಧವೇ ಪ್ರಾರ್ಥಿಲಾ ಶ್ರೀಪತೀ । ಜೋಡೂನಿ ಪರಮ ಪ್ರೀತೀ । ಮ್ಹಣೇ ವಿನಂತೀ ಅವಧಾರೀ ॥೨೦೫॥ ಸ್ವಾಮೀ ಬೋಲತೀ ಅತಿಅಗಾಧ । ಹೇ ಬೋಲಣೇ ಪರಮ ಶುದ್ಧ । ಮಾಝೇ ಬುದ್ಧೀಸೀ ನವ್ಹೇ ಬೋಧ । ಪರಾಚೇ ಅಪರಾಧ ಕೋಣ ಸಾಹೇ ॥೨೦೬॥ ಸೋಸಾವೇ ಪರಾಚೇ ಅಪರಾಧ । ತೇಹೀ ಕಠಿಣತ್ವೇ ಅತಿವಿರುದ್ಧ । ಹಾ ದುಃಸಹ ಮಹಾಬೋಧ । ಕೈಸೇನಿ ದ್ವಂದ್ವ ಸಾಹವೇ ॥೨೦೭॥ ಉತ್ತಮೇ ಕೇಲಿಯಾ ಅಪರಾಧಾ । ಕೋಟೀಮಾಜೀ ಸಾಹೇ ಏಕಾದಾ । ಪರೀ ನೀಚಾಚೀ ವಿರುದ್ಧ ಬಾಧಾ । ಕೋಣೇಹೀ ಕದಾ ನ ಸಾಹೇ ॥೨೦೮॥ ಜ್ಯಾಚೇ ನ ವ್ಹಾವೇ ದರ್ಶನ । ಜ್ಯಾಸೀ ಕರೂ ನಯೇ ನಮನ । ತ್ಯಾಚೇ ಮಸ್ತಕೀ ವಾಜತಾ ಚರಣ । ಸಾಹೇಲ ಕೋಣ ಗೋವಿಂದಾ ॥೨೦೯॥ ಜ್ಯಾಚಾ ನಿಃಶೇಷ ಜಾಯ ಪ್ರಾಣ । ತೋಚಿ ಸಾಹೇ ಹೇ ಕಠಿಣ । ಜೋ ಹೋಯ ಸಚೇತನ । ತ್ಯಾಸೀ ಸರ್ವಥಾ ಜಾಣ ನ ಸಾಹವೇ ॥೨೧೦॥ ಇತರಾಂಚೀ ಕಾಯಸೀ ಕಥಾ । ಸಜ್ಞಾನ ಜೇ ಕಾ ತತ್ತ್ವತಾ । ತೇಹೀ ಅತಿಕ್ರಮೂ ನ ಸಾಹತೀ ಅಲ್ಪತಾ । ಮಾ ಅಪಮಾನತಾ ಕೋಣ ಸಾಹೇ ॥೨೧೧॥ ಕ್ರೋಧ ಜಾಹಲಾ ಕಪಿಲಮಹಾಮುನೀಸೀ । ತೇಣೇ ಭಸ್ಮ ಕೇಲೇ ಸಗರಾಂಸೀ । ನಾರದೇ ಕುಬೇರಪುತ್ರಾಂಸೀ । ವೃಕ್ಷತ್ವಾಸೀ. ಆಣಿಲೇ ॥೨೧೨॥ ದುರ್ವಾಸಾಸೀ ಸಾಂಗತಾ ಗೋಠೀ । ತ್ಯಾಚಿ ಕಥಾ ಆಹೇ ಮೋಠೀ । ಕೋಪ ಆಲಾ ಶೃಂಗೀಚೇ ಪೋಟೀ । ಮೇಲ್ಯಾ ಸರ್ಪಾಸಾಠೀ ಶಾಪಿಲೇ ॥೨೧೩॥ ಮುಖ್ಯತ್ವೇ ಶಾಂತಿ ಸನಕಾದಿಕಾಂಸೀ । ದ್ವಾರೀ ಆಡಕಾಠೀ ಕೇಲೀ ತ್ಯಾಂಸೀ । ವೈಕುಂಠೀ ಕ್ಷೋಭೂನಿ ಆವೇಶೀ । ಜಯವಿಜಯಾಂಸೀ ಶಾಪಿಲೇ ॥೨೧೪॥ ಸಜ್ಞಾನಾಚೀ ಐಶೀ ಸ್ಥಿತೀ । ಮಾ ಇತರಾಂಚೀ ಕೋಣ ಗಣತೀ । ಪರಾಪರಾಧಸಹನಶಾಂತೀ । ದುರ್ಲಭ ತ್ರಿಜಗತೀ ಗೋವಿಂದಾ ॥೨೧೫॥

ಶಾಸ್ತ್ರಗಳೂ ಕೂಡ ನಿನ್ನದೇ ಯುಕ್ತಿಯಿಂದ ವರ್ಣಿಸುತ್ತಿರುವುವು. ಅವು ಕೂಡ ಪರೋಕ್ಷವಾದದಿಂದ ಕುಂಠಿತವಾಗಿರುವುವು. ಶ್ರುತಿಗಳು "ನೇತಿ ನೇತಿ " ಎನ್ನುತ್ತ ಹಿಂದೆಕ್ಕೆ ತಿರುಗಿದವು ॥೨೦೩॥ ಹೇ ಕೃಪಾಮೂರ್ತಿಯೇ, ನಿನ್ನ ಮುಖದಿಂದ ಹೊರಡುವ ಅತ್ಯಂತ ಶ್ರೇಷ್ಠವಾದ ಜ್ಞಾನ ವಚನಗಳನ್ನು ನಿನ್ನ ಕೃಪೆಯಿಂದಲೇ ಶ್ರವಣ ಮಾಡಿದೆನು. ಈ ಯಾವ ನನ್ನ ಕಿವಿಗಳ ಭಾಗ್ಯವನ್ನು ಏನೆಂದು ವರ್ಣಿಸಬೇಕು? ಇದನ್ನು ಕೇಳಿದವರೆಲ್ಲರೂ ನಿಜವಾಗಿಯೂ ಧನ್ಯರು ॥೨೦೪॥ ಈ ಪ್ರಕಾರವಾಗಿ ಉದ್ಧವನು ಭಗವಂತನ ಸ್ತುತಿಯನ್ನು ಮಾಡಿದನು. ನಮ್ರ ಭಾವನೆಯಿಂದ ಕೈಗಳನ್ನು ಜೋಡಿಸಿ ಶ್ರೀಹರಿಯನ್ನು ಪ್ರಾರ್ಥಿಸಿ ನನ್ನದೊಂದು ವಿನಂತಿಯನ್ನು ಕೇಳಿರೆಂದನು ॥೨೦೫॥ ಹೇ ಸ್ವಾಮಿಯೇ, ನಿನ್ನ ಹೇಳಿಕೆಯು ಅತಿಶಯ ಅಗಾಧವಾಗಿರುವುದು ಹಾಗೂ ನಿಜವಾಗಿಯೂ ಸತ್ಯವಾಗಿಯೇ ಇರುವುದು. ಆದರೆ ನನ್ನ ಮನಸ್ಸಿಗೆ ಮಾತ್ರ ಅದು ಬೋಧೆಯಾಗುತ್ತಿಲ್ಲ. ಏಕೆಂದರೆ ಬೇರೆಯವರ ಅಪರಾಧವನ್ನು ಯಾರು ಸಹಿಸಿಕೊಳ್ಳುವರು? ॥೨೦೬॥ ಬೇರೆಯವರ ಅಪರಾಧವನ್ನು ಸಹನೆ ಮಾಡಿಕೊಳ್ಳುವುದು ಮಹಾಕಠಿಣವಾದ ಕರ್ಮವಾಗಿದೆ. ಇದು ಮಾನವೀ ಸ್ವಭಾವಕ್ಕೆ ಅತಿವಿರುದ್ಧವಾಗಿದೆ. ಅಂದಮೇಲೆ ಈ ನಿನ್ನ ಉಪದೇಶವು ಅತ್ಯಂತ ಉದಾರವಾಗಿದ್ದರೂ ಇಷ್ಟೊಂದು ಸಹನಶೀಲತೆಯು ಅಂಗದಲ್ಲಿ ಅಳವಡಿಸಿಕೊಳ್ಳುವಿಕೆಯು ಬಹಳ ಕಠಿಣ ಕಾರ್ಯವಾಗಿರುವುದು. ದ್ವಂದ್ವವನ್ನು ಸಹಿಸಬೇಕಾದರೂ ಹೇಗೆ? ॥೨೦೭॥ ಒಬ್ಬ ಉತ್ತಮನಾಗಿರುವ ಮನುಷ್ಯನು ಯಾವುದಾದರೂ ಒಂದು ಅಪರಾಧವನ್ನು ಮಾಡಿದರೆ ಕೋಟ್ಯಾವಧಿ ಜನರಲ್ಲಿ ಒಬ್ಬನು ಮಾತ್ರ ಅದನ್ನು ಸಹಿಸಿಕೊಳ್ಳಬಹುದು. ಆದರೆ ಕೆಟ್ಟ ಮನುಷ್ಯನು ನಿಷ್ಕಾರಣವಾಗಿ ಮಾಡುವ ಪೀಡೆಯನ್ನು ಯಾರಿಂದಲೂ ಸಹಿಸಲು ಸಾಧ್ಯವಾಗುವುದಿಲ್ಲ ॥೨೦೮॥ ಯಾರ ಮುಖವನ್ನು ಯಾರೂ ಎಂದಿಗೂ ನೋಡಲಾರದಂಥವರ, ಯಾರಿಗೆ ಎಂದೂ ನಮಸ್ಕರಿಸಲು ಯೋಗ್ಯರಾಗಿಲ್ಲದವರ, ಅವರು ನಮ್ಮ ತಲೆಗೆ ಒದೆಯಲು, ಹೇ ಗೋವಿಂದನೇ, ಅದನ್ನು ಯಾರು ಹೇಗೆ ಸಹಿಸಲು ಸಾಧ್ಯ? ॥೨೦೯॥ ಯಾವನ ಶರೀರದಿಂದ ಪ್ರಾಣವು ಹೋಗಿರುವುದೋ ಅವನು ಮಾತ್ರ ಇಂತಹ ಅಸಹ್ಯ ಅಪಮಾನವನ್ನು ಸಹಿಸಿಕೊಳ್ಳಲುಸಾಧ್ಯವು. ಆದರೆ ಜೀವಂತವಿರುವವನಿಗೆ ಇದು ಎಂದಿಗೂ ಸಹಿಸಲು ಶಕ್ಯವೇ ಇಲ್ಲ ॥೨೧೦॥ ಇತರರ ಮಾತುಗಳು ಏತಕ್ಕೆ ಬೇಕು? ಯಾವ ಮಹಾ ಮಹಾ ಜ್ಞಾನಿಗಳವರಿಗೂ ಕೂಡ ಸ್ವಲ್ಪವೂ ಮಾತ್ರ ಅಪಮಾನವು ಸಹಿಸುವುದಾಗುವುದಿಲ್ಲ ॥೨೧೧॥ ಕಪಿಲ ಮಹಾಮುನಿಗಳಿಗೆ ಕ್ರೋಧವು ಹುಟ್ಟಿ ಆಗ ಆತನು ಸಗರ ಪುತ್ರರಿಗೆ ಶಾಪವನ್ನು ಕೊಟ್ಟು ಎಲ್ಲರನ್ನೂ ಭಸ್ಮ ಮಾಡಿಬಿಟ್ಟನು. ನಾರದಮುನಿಯೂ ಕೂಡ ಕುಬೇರನ ಪುತ್ರರಿಗೆ ಶಾಪವನ್ನು ಕೊಟ್ಟು ಅವರನ್ನು ವೃಕ್ಷಗಳನ್ನಾಗಿ ಮಾಡಿಬಿಟ್ಟನು ॥೨೧೨॥ ದುರ್ವಾಸಋಷಿಯವರ ವಿಷಯವನ್ನು ಏನೆಂದು ಹೇಳಬೇಕು? ಅವರ ಕಥೆಯು ಬಹಳ ದೊಡ್ಡದಾಗಿರುವುದು. ಪರೀಕ್ಷಿತ ರಾಜನು ಶೃಂಗೀಋಷಿಯ ತಂದೆಯ ಕೊರಳಿಗೆ ಮೃತ ಸರ್ಪವನ್ನು ಹಾಕಿದ ಅಪರಾಧಕ್ಕಾಗಿ ಆ ಯಾವ ಋಷಿಯು ರಾಜನಿಗೆ ಸರ್ಪಕಚ್ಚಿ ಸಾಯುವೆ ಎಂದು ಶಾಪವನ್ನು ಕೊಟ್ಟನು ॥೨೧೩॥ ಸನಕಾದಿಕರ ಅಂತಃಕರಣದಲ್ಲಿ ಅಪಾರವಾದ ಶಾಂತಿ ಇರುವುದು. ಆದರೆ ಅವರಿಗೂ ಕೂಡ ವೈಕುಂಠದ ಪ್ರವೇಶ ದ್ವಾರದಲ್ಲಿ ಅಡೆತಡೆಯುಂಟಾಗುತ್ತಲೇ ಅವರಿಗೆ ಅತ್ಯಂತ ಸಂತಾಪವಾಗಿ ಅದೇ ಆವೇಶದಲ್ಲಿ ಅಲ್ಲಿಯ ಜಯ - ವಿಜಯ ದ್ವಾರಪಾಲಕರಿಗೆ ಶಾಪವನ್ನು ಕೊಟ್ಟರು ॥೨೧೪॥ ಜ್ಞಾನಸಂಪನ್ನರಾದ ಇಂತಹ ಶ್ರೇಷ್ಠ ಪುರುಷರ ಈ ಅವಸ್ಥೆಯಾಗಿರಲು ಪಾಪ! ಸಾಮಾನ್ಯ ಜನರ ಯಾವ ಕಥೆ? ಹೇ ಗೋವಿಂದನೇ, ಬೇರೆಯವರ ಅಪರಾಧವನ್ನು ಸಹಿಸಿಕೊಳ್ಳುವಂತಹ ಶಾಂತ ವೃತ್ತಿಯು ಈ ಮೂರು ಲೋಕಗಳಲ್ಲಿಯೂ ನೋಡಲು ಸಿಗುವುದು ಬಹಳ ಕಠಿಣವಾಗಿರುವುದು ॥೨೧೫॥

ಪ್ರಕೃತಿ ನಿಜಗುಣೇ ಸಬಳ । ತೇ ಅಲ್ಪೇ ಕ್ಷೋಭವೀ ತತ್ಕಾಳ । ಸಾಧು ಸಜ್ಜನ ಕೇವಳ । ಕರೀ ವಿಕಳ ಅಶಾಂತೀ ॥೭೧೬॥ ಜ್ಯಾಸೀ ತುರ್ಝೀ ಪೂರ್ಣ ಭಕ್ತಿ ಘಡೇ । ಜ್ಯಾಸೀ ತುರ್ಝೀ ಪೂರ್ಣ ಕೃಪಾ ಜೋಡೇ । ಜೋ ತುರ್ಝೇ ಚರಣೇ ಅಖಂಡ ಜಡೇ । ತ್ಯಾಸೀ ಘಡೇ ಹೇ ಶಾಂತೀ ॥೭೧೭॥ ತೂ ವಿಶ್ವಾತ್ಮಾ ತ್ರಿಜಗತೀ । ಚೋರೀ ನ ಚಲೇ ತುಜಪ್ರತೀ । ಮಜ ಹೀ ದ್ವಂದೇ ನ ಸಾಹವಿತೀ । ತೂಂಹೀ ಶ್ರೀಪತೀ ಜಾಣಸೀ ॥೭೧೮॥ ಪರಮ ಪಾವನ ನಿಜಶಾಂತೀ । ಅತಿನಿಂದ್ಯ ತೇ ಅಶಾಂತೀ । ಐಸೇ ವ್ಯಾಖ್ಯಾನ ಜೇ ಜ್ಞಾತೇ ಕರಿತೀ । ತೇಹಿ ನ ಸಾಹತೀ ದ್ವಂದ್ವಾತೇ ॥೭೧೯॥ ದ್ವಂದ್ವ ದುಃಸಹ ಸರ್ವಾರ್ಥೀ । ತೇಥೇ ಮಾರ್ಝಾ ಪಾಡ ಕಿತೀ । ಏವಂ ದ್ವಂದ್ವಸಹಿಷ್ಣು ತೇಚೀ ಯುಕ್ತೀ । ಮಜ ಕೃಪಾಮೂರ್ತಿ ಸಾಂಗಾವೀ ॥೭೨೦॥ ಸಕಳ ಸಾಧನೇ ವಶ್ಯ ಹೋತೀ । ಪರೀ ಹೇ ಸಹಿಷ್ಣುತಾ ನ ಯೇ ಚಿತ್ತೀ । ತೇ ಮೀ ಲಾಭೇ ನಿಜಶಾಂತೀ । ಐಶೀ ಕೃಪಾ ನಿಶ್ಚಿತೀ ಕರಾವೀ ॥೭೨೧॥ ಮೀ ಶಾಂತೀಚೇ ಲಾಭೇ ಕಲ್ಯಾಣ । ಐಸೀ ಕೃಪಾ ಕರಾವೀ ಪರಿಪೂರ್ಣ । ಮ್ಹಣೋನಿ ಧರಿಲೇ ಶ್ರೀಚರಣ । ಉದ್ಧವೇ ಆಪಣ ನಿಜಭಾವೇ ॥೭೨೨॥ ಐಕೋನಿ ಉದ್ಧವಾಚೀ ವಿನಂತೀ । ಸಂತೋಷಲಾ ಕೃಪಾಮೂರ್ತೀ । ಜೇವೀ ಚಾತಕಾಚಿಯಾ ತೃಷಾರ್ತೀ । ಗರ್ಜೋನಿ ತ್ರಿಜಗತೀ ನಿವವೀ ಮೇಘು ॥೭೨೩॥ ತೇವೀ ಭಕ್ತವಚನಾಸರಿಸಾ । ಉಲ್ಹಾಸಲಾ ಕೃಷ್ಣ ಕೈಸಾ । ಉದ್ಧವಾಚಿಯಾ ನಿಜಮಾನಸಾ । ಶಾಂತೀಚಾ ಠಸಾ ಘಾಲೀಲ ॥೭೨೪॥ ಉದ್ಧವ ಪ್ರಶ್ನಾಚೇ ಪ್ರತ್ಯುತ್ತರ । ಉದಾರ ಸುಂದರ ಗುಣಗಂಭೀರ । ಉಘುಡೋನಿ ಶಾಂತೀಚೇ ಭಾಂಡಾರ । ಸ್ವಯೇ ಶಾರ್ಙ್ಗಧರ ಸಾಂಗೇಲ ॥೭೨೫॥ ನವಲ ಸಾಂಗತೀ ತೇ ಠೇವ । ಯುಕ್ತಿ ಚಾತುರ್ಯವೈಭವ । ನಿಜಶಾಂತೀಸ ಪಡೇ ಖೇಂವ । ಐಸೇ ಅಪೂರ್ವ ಸಾಂಗೇಲ ॥೭೨೬॥ ಶ್ರೀಕೃಷ್ಣಮುಖೀಂಚ್ಯಾ ಜ್ಞಾನೋಕ್ತೀ । ಐಕತಾ ಸ್ವಯಂಭ ಶಾಂತೀ । ತೇ ಐಕಾವಯಾ ಉದ್ಧವ ಚಿತ್ತೀ । ಜಾಹಲಾ ನಿಶ್ಚಿತೀ ಸಾವಧ ॥೭೨೭॥ ಜೇವೀ ಗಜಗ್ರಹಣವಿಖೀ ಪಂಚಾನನ । ಸಾಟೋಪ ಧರೀ ಆಪಣ । ತೇವೀ ಶಾಂತಿ ಸಾಧಾವಯಾ ಜಾಣ । ಸಾವಧಾನ ಉದ್ಧವ ॥೭೨೮॥ ಜಳೀ ತಳಪತಾಂಚಿ ಮಾಸಾ । ಕವಡಾ ಝೇಲೂನಿ ನೇ ಆಕಾಶಾ । ತೇವೀ ಶಾಂತೀಚಿಯಾ ಆಮಿಷಾ । ಉದ್ಧವ ತೈಸಾ ತಳಪತ ॥೭೨೯॥

ಪ್ರಕೃತಿಯು ತನ್ನ ಗುಣಗಳಿಂದ ಅತ್ಯಂತ ಬಲಿಷ್ಠವಾಗಿರುವುದು. ಇದು ಅಲ್ಪಕಾರಣಕ್ಕೂ ಗುಣಗಳಿಗೆ ತತ್ಕಾಲದಲ್ಲಿ ಕ್ಷುಬ್ಧಗೊಳಿಸುವುದು. ಸಾಧು, ಸಜ್ಜನರಿಗೂ ಕೂಡ ಈ ಕ್ರೋಧವು ಕೆಡಿಸಿಬಿಡುವುದು ॥೭೧೬॥ ಯಾರಿಗೆ ನಿನ್ನ ಪೂರ್ಣ ಭಕ್ತಿಯು ಸಾಧಿಸುವುದೋ, ಯಾರಿಗೆ ನಿನ್ನ ಕೃಪೆಯ ಲಾಭವಾಗಿರುವುದೋ, ಯಾರು ನಿನ್ನ ಚರಣಗಳಲ್ಲಿ ಅನನ್ಯ ಭಾವದಿಂದ ಲೀನರಾಗಿರುವರೋ, ಅವರಿಗೆ ಮಾತ್ರ ಈ ಅಖಂಡವಾದ ಶಾಂತಿಯು ಮತ್ತು ಸಮಾಧಾನವು ಪ್ರಾಪ್ತವಾಗುವುದು ॥೭೧೭॥

ನೀನು ತ್ರಿಭುವನ ವಿಶ್ವಾತ್ಮನಾಗಿರುವೆ, ನಿನ್ನಲ್ಲಿ ನನ್ನದೇನೂ ಕದ್ದಿಡಲು ಬರುವಂತಿಲ್ಲ. ಆದ್ದರಿಂದ ನನಗೆ ಈ ದ್ವಂದ್ವವನ್ನು ಸಹಿಸುವುದು ಅಶಕ್ಯವೆಂದು ನಿನ್ನಲ್ಲಿ ಮನಸಾ ಒಪ್ಪಿಕೊಳ್ಳುವೆನು. ಶ್ರೀಹರಿಯೇ, ಇದನ್ನೂ ಕೂಡ ನೀನು ತಿಳಿದಿರುವೆ ॥೭೧೮॥ ಶಾಂತಿಯು ಪರಮ ಪವಿತ್ರವಾಗಿರುವುದು. ಕ್ರೋಧವು ಅತ್ಯಂತ ನಿಂದ್ಯವಾಗಿರುವುದು. ಹೀಗೆಂದು ಹೇಳುತ್ತಿರುವ ಸೂಜ್ಞ ಜನರಿಗೂ ಕೂಡ ಈ ದ್ವಂದ್ವವನ್ನು ಸಹಿಸಲು ಸಾಧ್ಯವಿಲ್ಲ ॥೭೧೯॥ ದ್ವಂದ್ವಗಳು ಸರ್ವಸ್ವದಿಂದ ಕೇವಲ ದುಃಖರೂಪವಾಗಿವೆ. ಅಲ್ಲಿ ನನ್ನದಾದರೂ ಏನು ನಡೆಯುವುದು ? ಆದ್ದರಿಂದ ಘನಕೃಪಾಸಾಗರನೇ, ದ್ವಂದ್ವಗಳನ್ನು ಸಹಿಸುವಂತಹ ಉಪಾಯವನ್ನು ನೀವು ನನಗೆ ತಿಳಿಸಿ ಹೇಳಿರಿ॥೭೨೦॥ ಬೇರೆ ಯಾವುದೇ ಸಾಧನೆಗಳು ಸಾಧಿಸಲು ಸುಲಭವಾಗಿರುವುವು. ಆದರೆ ಈ ಸಹಿಷ್ಣುತೆಯು ಮಾತ್ರ ಬಹಳ ಕಠಿಣವಾಗಿರುವುದು. ಈ ಶಾಂತಿಯು ನನಗೆ ದೊರಕುವಂತೆ ನನ್ನ ಮೇಲೆ ತಾವು ಕೃಪೆ ಮಾಡಿರಿ ॥೭೨೧॥ ನನಗೆ ಈ ಶಾಂತಿಯ ಭಾಗ್ಯವು ಲಭಿಸುವಂತಹ ಕೃಪೆಯನ್ನು ನನ್ನ ಮೇಲೆ ಮಾಡಿರಿ. ಹೀಗೆ ವಿನಂತಿಸುತ್ತ ಉದ್ಧವನು ಪ್ರೇಮಭಾವದಿಂದ ಶ್ರೀಹರಿಯ ಚರಣಗಳನ್ನು ಹಿಡಿದನು ॥೭೨೨॥ ಈ ಯಾವ ಉದ್ಧವನ ವಿನಂತಿಯನ್ನು ಆಲಿಸಿ ಕೃಪಾಮೂರ್ತಿಯಾದ ಶ್ರೀಕೃಷ್ಣನು ಅತ್ಯಂತ ಸಂತುಷ್ಟನಾದನು ಮತ್ತು ಚಾತಕಪಕ್ಷಿಯ ತೃಷೆಗಾಗಿ ಹೇಗೆ ಮೇಘವು ಗರ್ಜಿಸಿ ಮೂರು ಲೋಕಗಳಿಗೂ ಮಳೆಗೆರೆದು ತೃಪ್ತಿ ಪಡಿಸುವುದೋ ॥೭೨೩॥ ಅದರಂತೆ ಭಕ್ತನ ವಿನಂತಿಯನ್ನು ಕೇಳುತ್ತಲೇ ಆನಂದಿತನಾದ ಶ್ರೀಕೃಷ್ಣನು ಈಗ ಉದ್ಧವನ ಮನಸ್ಸಿಗೆ ಅಖಂಡವಾದ ಶಾಂತಿಯ ಅನುಭವವನ್ನು ಕೊಟ್ಟು ತೃಪ್ತಗೊಳಿಸುವನು ॥೭೨೪॥ ಉದಾರ, ಸುಂದರ ಮತ್ತು ಗುಣಗಂಭೀರನಾಗಿರುವ ಶಾರಂಗಧರನು ಶಾಂತಿಯ ಭಾಂಡಾರವನ್ನು ತೆರೆದು ಉದ್ಧವನ ಪ್ರಶ್ನೆಗೆ ಉತ್ತರವನ್ನು ಕೊಡುವನು ॥೭೨೫॥ ಶ್ರೀಕೃಷ್ಣ ಪರಮಾತ್ಮನ ಹೇಳತಕ್ಕಂತಹ ಶೈಲಿಯು ಅತ್ಯಂತ ಆಶ್ಚರ್ಯಕಾರಕವಾಗಿರುವುದು. ಯುಕ್ತಿ, ಚಾತುರ್ಯಗಳ ವೈಭವವೇ ಆಗಿರುವುದು. ಯಾವುದರಿಂದ ಶಾಂತಿಯು ಹೇಗೆ ಸಾಧಿಸುವುದೆಂಬ ಅಪೂರ್ವ ಯುಕ್ತಿಯನ್ನು ಆತನು ಹೇಳುವನು ॥೭೨೬॥ ಶ್ರೀಕೃಷ್ಣನ ಮುಖದಿಂದ ಜ್ಞಾನವಚನಗಳನ್ನು ಕೇಳುತ್ತಲೇ ಸ್ವತಃಸಿದ್ಧ ಶಾಂತಿಯು ಪ್ರಕಟವಾಗುವುದು. ಆದ್ದರಿಂದ ಅದನ್ನು ಕೇಳುವುದಕ್ಕಾಗಿ ಉದ್ಧವನು ಏಕಾಗ್ರಚಿತ್ತದಿಂದ ಕುಳಿತುಕೊಂಡನು ॥೭೨೭॥ ಆನೆಯ ಬೇಟೆಗಾಗಿ ಸಿಂಹವು ಸ್ವತಃ ಜಪ್ಪಿಸಿ ಕುಳಿತುಕೊಳ್ಳುವಂತೆ ಉದ್ಧವನು ಶಾಂತಿಯನ್ನು ಸಾಧಿಸುವುದಕ್ಕಾಗಿ ಶ್ರವಣದತ್ತ ಜಪ್ಪಿಸಿ ಕುಳಿತುಕೊಂಡನು ॥೭೨೮॥ ನೀರಿನಲ್ಲಿ ಮೀನವು ಮಿಂಚುತ್ತ ಕಾಣುವುದೊಂದೇ ತಡ, ಕೂಡಲೇ ತಿತಿರ ಪಕ್ಷಿಯು ಅದನ್ನು ಎತ್ತಿಕೊಂಡು ಆಕಾಶಕ್ಕೆ ಹಾರುವುದು. ಅದರಂತೆಯೇ ಶಾಂತಿಯ ಆಮಿಷಕ್ಕಾಗಿ ಉದ್ಧವನೂ ಕೂಡ ಹಾಗೆಯೇ ಜಪ್ಪಿಸುತ್ತಿರುವನು ॥೭೨೯॥

ತೇ ಭಿಕ್ಷುಗೀತನಿರೂಪಣ । ಪುಢೀಲ ಅಧ್ಯಾಯೀ ಶ್ರೀಕೃಷ್ಣ । ನಿಜಶಾಂತೀ ಬಾಣೇ ಸಂಪೂರ್ಣ । ತೇಚಿ ಲಕ್ಷಣ ಸಾಂಗೇಲ ॥೭೩೦॥ ಜ್ಯಾಂಸೀ ಪರಮಾರ್ಥಾಚೀ ಚಾಡ । ತಿಂಹೀ ಸಾಂಡೂನಿ ಸಾಧನಕವಾಡ । ಶಾಂತಿ ಸಾಧನೀ ಶ್ರದ್ಧಾ ವಾಡ । ಅತಿದೃಢ ರಾಖಾವೀ ॥೭೩೧॥ ಶ್ರೀಕೃಷ್ಣ ಸಾಂಗೇಲ ಶಾಂತಿ ಪೂರ್ಣ । ಉದ್ಧವ ತಯಾ ಅರ್ಥೀ ಸಾವಧಾನ । ಏಕಾ ವಿನವೀ ಜನಾರ್ದನ । ಶ್ರೋತಾ ಸಾವಧಾನ ಮಜ ದ್ಯಾವೇ ॥೭೩೨॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣ ಉದ್ಧವಸಂವಾದೇ
ಏಕಾಕಾರಟೀಕಾಯಾಂ ದ್ವಾವಿಂಶತಿ ತಮೋऽಧ್ಯಾಯಃ

॥ ಶ್ರೀ ಕೃಷ್ಣಾರ್ಪಣಮಸ್ತು ॥

ಯಾವ ಭಿಕ್ಷು ಗೀತೆಯ ನಿರೂಪಣೆಯನ್ನು ಶ್ರೀಕೃಷ್ಣನು ಮುಂದಿನ ಅಧ್ಯಾಯದಲ್ಲಿ ಮಾಡುವನು. ಯಾವುದರಿಂದ ಅಂತಃಕರಣದಲ್ಲಿ ಪರಿಪೂರ್ಣವಾದ ಶಾಂತಿಯು ಬಿಂಬಿಸುವುದೋ ಅಂತಹ ಲಕ್ಷಣಗಳನ್ನು ಹೇಳುವನು ॥೭೩೦॥ ಯಾರಿಗೆ ನಿಜವಾಗಿ ಪರಮಾರ್ಥವನ್ನು ಸಾಧಿಸಬೇಕಾಗಿರುವುದೋ, ಅವರು ಇತರ ಸಾಧನೆಗಳ ಬಾಗಿಲವನ್ನು ಬಿಟ್ಟುಕೊಟ್ಟು ಶಾಂತಿಯ ಸಾಧನೆಯತ್ತ ಪರಿಪೂರ್ಣವಾದ ಶ್ರದ್ಧೆಯನ್ನಿಡಬೇಕು ॥೭೩೧॥ ಈಗ ಶ್ರೀಕೃಷ್ಣನು ಶಾಂತಿಯ ಸವಿಸ್ತಾರ ವರ್ಣನೆಯನ್ನು ಮಾಡುವನು, ಅದಕ್ಕಾಗಿ ಉದ್ಧವನು ಏಕಾಗ್ರಚಿತ್ತದಿಂದ ಕುಳಿತಿರುವನು. ಆದ್ದರಿಂದ ಜನಾರ್ದನರೂಪ ಏಕನಾಥನೂ ಕೂಡ ಶ್ರೋತೃಗಳವರಿಗೆ ನನ್ನತ್ತ ಪೂರ್ಣ ಲಕ್ಷ ಕೊಡಿರೆಂದು ವಿನಂತಿಸುವನು ॥೭೩೨॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜರ ಭಾಷ್ಯೆಯ
ಇಪ್ಪತ್ತೆರಡನೆಯ ಅಧ್ಯಾಯವು ಸಂಪೂರ್ಣ.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೊಂಭತ್ತನೆಯ ಅಧ್ಯಾಯವು

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ವಿಶ್ವರೂಪ । ವಿಶ್ವಾ ಸಬಾಹ್ಯ ತೂ ಚಿತ್ಸ್ವರೂಪ । ತುಝೇ ನಿರ್ಧಾರಿತಾ ರೂಪ । ತೂ ಅರೂಪ ಅವ್ಯಯ ।೧॥ ಚರಾಚರ ಜೇ ಸಾವೇವ । ತೇ ತುಜ ಅರೂಪಾಚೇ ಅವೇವ । ಜೀವಶಿವ ಹೇ ತುಝೀ ಮಾವ । ಅದ್ವಯವೈಭವ ಪೈ ತುಝೇ ।೨॥ ಘೃತಪುತಳೀ ದಿಸೇ ಸಾಕಾರ । ಘೃತಪಣೇ ತೇ ನಿರಾಕಾರ । ತೈಸಾ ತೂ ಅವ್ಯಯ ಅಕ್ಷರ । ಜಗದಾಕಾರ ಭಾಸಸೀ ।೩॥ ಠಸಾವಲೇ ಜೇ ದಿಸೇ ಜಗ । ನಿರ್ಧಾರಿತಾ ತುಝೇ ಅಂಗ । ಅಂಗ ಪಾಹತಾ ತೂ ಅನಂಗ । ಅನಂಗಾಚಾ ಮಾಗ ತುಜಮಾಜೀ ನಾಹೀ ।೪॥ ದೇಖಿಜೇ ತೇ ತೂ ನವ್ಹಸೀ । ನವ್ಹೇ ತೇ ತೂಚಿ ಹೋಸೀ । ಹೋಣೇ ನ ಹೋಣೇ ನಾಹೀ ತುಜಪಾಶೀ । ಐಸಾ ತೂ ಜಗಾಸೀ ಜಗದ್ಗುರು ।೫॥ ಶಬ್ದ ತುಜಹೋನಿಯಾ ದೂರೀ । ತೂ ಶಬ್ದಾ ಸಬಾಹ್ಯ ಅಂತರೀ । ಬೋಲಕಾ ತೂ ಚರಾಚರೀ । ವೇದಶಾಸ್ತ್ರೀ ತೂ ವಕ್ತಾ ।೬॥ ಉಂಸಾಪಾಸೂನ ಗೋಡೀ ದಿಸೇ । ಉಂಸ ಸಬಾಹ್ಯ ಗೋಡೀಚಿ ಅಸೇ । ಗೋಡಿಯೇ ಮಾಜೀ ಊಂಸ ನಸೇ । ವೇದಾಂಸೀ ತುಜ ತೈಸೇ ಸೌಜನ್ಯ ।೭॥ ವೇದಾಂಚಾ ವಕ್ತಾ ತೂಚಿ ಹೋಸೀ । ವೇದೀ ಪ್ರತಿಪಾದಿಜೇ ತುಮ್ಹಾಸೀ । ಶೇಖೀ ವೇದಾಂಸೀ ನಾಕಳಸೀ । ನಿಃಶಬ್ದವಾಸೀ ಗುರುರಾಯಾ ।೮॥ ಜೇವೀ ಕಾ ನಿಃಶಬ್ದ ಅನಾಹತಧ್ವನೀ । ಅಸೇ ಧ್ವನಿಮಾತ್ರೀ ಮಿಳೂನೀ । ತೋ ಅನಾಹತ ವಾಜವಿಜೇ ಜನೀ । ಐಸೇ ನಾಹೀ ಕೋಣೇ ವಾಜಂತ್ರ ।೯॥ ತೇವೀ ತೂ ವೇದಾಂಚಾ ವಕ್ತಾ । ಸಕಳ ಶಾಸ್ತ್ರಾ ಯುಕ್ತಿದಾತಾ । ಪರೀ ವೇದಶಾಸ್ತ್ರಾರ್ಥಸಂಮತಾ । ತುಜ ತತ್ತ್ವತಾ ನ ಬೋಲವೇ ।೧೦॥ ಮ್ಹಣೋ ತೂ ಕೇವಳ ನಿಃಶಬ್ದ । ತಂವ ನಿಶಬ್ದ ಆಣಿ ಸಶಬ್ದ । ಹಾಹೀ ಮಾಯಿಕ ಅನುವಾದ । ತೂ ಏವಂವಿಧ ನ ಕಳಸೀ ।೧೧॥

ಹೇ ಓಂಕಾರರೂಪನೇ, ವಿಶ್ವರೂಪನೇ, ಸದ್ಗುರುರಾಯನೇ, ನಿನಗೆ ನನ್ನ ನಮಸ್ಕಾರಗಳು. ನೀನು ಜ್ಞಾನಸ್ವರೂಪನಾಗಿ ಸಂಪೂರ್ಣ ಶ್ವದಲ್ಲಿ ಒಳಹೊರಗೆ ತುಂಬಿರುವೆ. ನಿನ್ನ ಸ್ವರೂಪದ ವಿಚಾರವನ್ನು ಮಾಡಲು ನೀನು ನಿರ್ಗುಣನಾಗಿ ಅವ್ಯಯನಾಗಿರುವೆ ।೧॥ ಈ ಯಾವ ಮೂರ್ತಿಮಂತ ಚರಾಚರವೆಲ್ಲವೂ ನಿನ್ನ ನಿರ್ಗುಣ ಸ್ವರೂಪದ ಅವಯವಗಳಾಗಿವೆ. ಜೀವ ಮತ್ತು ಶಿವ ಇವು ನಿನ್ನ ಮಾಯೆಯು ಮತ್ತು ಅದ್ವೈತವು ಇದು ನಿನ್ನ ನಿಜವಾದ ವೈಭವವಾಗಿರುವುದು ।೨॥ ತುಪ್ಪದಿಂದ ತಯಾರಿಸಿದ ಗೊಂಬೆಯು ಇದು ಸಾಕಾರವಾಗಿ ತೋರುವುದು. ಆದರೆ ತುಪ್ಪದ ದೃಷ್ಟಿಯಿಂದ ನೋಡಿದರೆ ಅದು ನಿರಾಕಾರವೇ ಆಗಿರುವುದು. ಅದರಂತೆ ನೀನು ಅವಿಕಾರಿ, ಅವಿನಾಶಿಯಾಗಿರುವೆ. ಆದರೂ ಜಗತ್ತಿನ ಆಕಾರದಿಂದ ಭಾಸಮಾನನಾಗುವೆ ।೩॥ ಜಗತ್ತಿನ ಮುದ್ರೆಯು ಮೂಡಿದಂತೆ ತೋರುವುದು. ಅದರ ಸೂಕ್ಷ್ಮ ವಿಚಾರವನ್ನು ಮಾಡಲು ಅದು ನಿಜವಾಗಿಯೂ ನಿನ್ನ ಸ್ವರೂಪವಾಗಿರುವುದು. ನಿನ್ನ ಅಂಗವನ್ನು ಕಾಣಬೇಕೆಂದರೆ ನೀನು ಅನಂಗನಾಗಿರುವೆ. ಅನಂಗನೆಂದರೆ ಕಾಮನ ಲವಲೇಶವೂ ನಿನ್ನಲ್ಲಿರುವುದಿಲ್ಲ ।೪॥ ಯಾವ ಯಾವ ಪದಾರ್ಥಗಳು ಕಣ್ಣಿಗೆ ಗೋಚರಿಸುವುವೋ, ಅವು ನೀನಲ್ಲ. ಆದರೆ ಯಾವುದು ತೋರುವುದಿಲ್ಲವೋ, ಅದು ನೀನಾಗಿರುವೆ. ಆಗುವಿಕೆ ಮತ್ತು ಆಗದಿರುವಿಕೆ ಇದು ನಿನ್ನ ಹತ್ತಿರ ಇಲ್ಲ. ಹೀಗೆ ನೀನು ಜಗತ್ತಿನ ಜಗದ್ಗುರುವಾಗಿರುವೆ ।೫॥ ಶಬ್ದವು ಇದು ನಿನ್ನಿಂದ ಬಹು ದೂರವಿರುವುದು. ಆದರೆ ಶಬ್ದದ ಒಳಹೊರಗೆ ನೀನೇ ಸಮಾವೇಶಗೊಂಡಿರುವೆ. ಚರಾಚರಗಳಲ್ಲಿ ಹೇಳುವವನು ನೀನೇ ಆಗಿರುವೆ. ವೇದಶಾಸ್ತ್ರಗಳ ವಕ್ತಾನೂ ಸಹ ನೀನೇ ಆಗಿರುವೆ ।೬॥ ಕಬ್ಬಿನಿಂದ ಸಿಹಿಯು ಹೊರಡಿದಂತೆ ಕಾಣುವುದು. ಕಬ್ಬಿನ ಒಳಹೊರಗೆ ಸಿಹಿಯೇ ತುಂಬಿರುವುದು. ಆದರೆ ಸಿಹಿಯಲ್ಲಿ ಕಬ್ಬು ಇರುವುದಿಲ್ಲ. ನಿನ್ನ ಮತ್ತು ವೇದದ ಸಂಬಂಧವು ಹೀಗೆಯೇ ಇರುವುದು ।೭॥ ನಿಜವಾಗಿಯೂ ವೇದಗಳ ವಕ್ತಾ ನೀನೇ ಇರುವೆ. ವೇದಗಳಲ್ಲಿ ನಿನ್ನದೇ ವರ್ಣನೆಯು ಇರುವುದು. ಆದರೆ ಹೇ ಗುರುರಾಯನೇ, ನೀನು ನಿಃಶಬ್ದದಲ್ಲಿ ಇರುವೆ. ಆದ್ದರಿಂದ ವೇದಗಳಿಗೂ ನಿನ್ನನ್ನು ತಿಳಿದುಕೊಳ್ಳಲು ಆಗುವುದಿಲ್ಲ ।೮॥ ಅನಾಹತ ಧ್ವನಿಯು ಇದು ನಿಃಶಬ್ದವಾಗಿರುವುದು ಮತ್ತು ಪ್ರತಿಯೊಂದು ಧ್ವನಿಯಲ್ಲಿ ಕೂಡಿಕೊಂಡಿರುವುದು. ಆದರೆ ಆ ಅನಾಹತ ಧ್ವನಿಯನ್ನು ವ್ಯಕ್ತ ಮಾಡುವಂತಹ ಯಾವ ಸಾಧನವು ಜಗತ್ತಿನಲ್ಲಿ ಒಂದೂ ಕೂಡ ಇರುವುದಿಲ್ಲ ।೯॥ ಅದರಂತೆ ನೀನೇ ಸರ್ವ ವೇದಗಳ ವಕ್ತಾನಾಗಿರುವೆ. ಸರ್ವ ಶಾಸ್ತ್ರಗಳಿಗೆ ನೀನು ಯುಕ್ತಿಯನ್ನು ಕಲಿಸುವವನಾಗಿರುವೆ. ಆದರೆ ವೇದಶಾಸ್ತ್ರಗಳಿಗೆ ಸಂಮತವಾಗುವಂತೆ ನಿನ್ನ ವರ್ಣನೆಯನ್ನು ನಿಜವಾಗಿಯೂ ಮಾಡಲು ಬರುವುದಿಲ್ಲ ।೧೦॥ ನೀನು ಕೇವಲ ನಿಃಶಬ್ದನು ಎಂದು ಹೀಗೆ ಹೇಳಬೇಕೆಂದರೆ ನಿಃಶಬ್ದ ಮತ್ತು ಸಶಬ್ದ ಇವೂ ಕೂಡ ಮಿಥ್ಯೆಯಾದ ಅನುವಾದವಾಗಿದೆ. ನಿಜವಾಗಿಯೂ ನಿನ್ನ ಸ್ವರೂಪವು ಯಾವುದೂ ತಿಳಿಯುವುದಿಲ್ಲ ।೧೧॥

ತೂ ನ ಕಳಸೀಚಿ ತತ್ತ್ವತಾ । ಐಶಿಯಾ ಯುಕ್ತೀಂಚಾ ತೂಚಿ ವಿಜ್ಞಾತಾ । ಜ್ಞಾತಾಚಿ ಹೇ ಜಂವ ಸ್ಥಾಪೂ ಜಾತಾ । ತಂವ ಅಜ್ಞಾನತಾ ಅಸೇನಾ ॥೧೨॥ ಜೇಥ ಅಜ್ಞಾನತಾ ನಾಂಹೀ । ತೇಥ ಜ್ಞಾತೇಪಣಾ ಕೈಚೇ ಕಾಯೀ । ಹೋ ಕಾ ಮುಖ್ಯತ್ವೇ ನೋವರೀ ನಾಹೀ । ತೈ ನೋವರೀ ಪಾಹೀ ಮ್ಹಣೇ ಕೋಣ ॥೧೩॥ ಜ್ಞಾತಾ ನಾ ಅಜ್ಞಾತಾ । ತೂ ಬೋಲತಾ ನಾ ನಬೋಲತಾ । ತೂ ಬಹು ನಾ ಏಕುಲತಾ । ತುಝೀ ಅಲಕ್ಷ್ಯತಾ ಲಕ್ಷೇನಾ ॥೧೪॥ ತೂ ನಿಃಶಬ್ದ ನಿರ್ವಿಕಾರ । ತೂ ನಿರ್ಗುಣ ನಿರಹಂಕಾರ । ಹೇಹೀ ಮ್ಹಣತಾ ಪಡೇ ವಿಚಾರ । ತೂ ಜಗದಾಕಾರ ಜಗದಾತ್ಮಾ ॥೧೫॥ ಜಗದಾಕಾರೇ ತೂ ಪ್ರಸಿದ್ಧ । ತೇಥ ಕೋಣಾಚೇ ಕೋಣಾ ಬಾಧೇ ದ್ವಂದ್ವ । ಪರ ನಾಹೀ ಮಾ ಪರಾಪರಾಧ । ಅತಿವಿರುದ್ಧ ಕೋಣಾಸೀ ॥೧೬॥ ಯಾಪರೀ ಸದ್ಗುರುನಾಥಾ । ತುಝೇ ಚರಣೇ ದ್ವಂದ್ವಸಮತಾ । ತೇಣೇ ಸಮಸಾಮ್ಯೇ ನಿಜಕಥಾ । ಶ್ರೀಭಾಗವತಾ ಚಾಲವಿಸೀ ॥೧೭॥ ತೇಚಿ ಶ್ರೀಭಾಗವತೀ । ಬಾವಿಸಾವೇ ಅಧ್ಯಾಯಾ ಅಂತೀ । ಉದ್ಧವೇ ಪುಶಿಲೇ ನಿಜಶಾಂತೀ । ದ್ವಂದ್ವಸಮಾಪ್ತಿ ಉಪಾವೋ ॥೧೮॥ ಉದ್ಧವೇ ಪ್ರಶ್ನ ಕೇಲಾ ವಾಡ । ಜೇಣೇ ಬ್ರಹ್ಮಜ್ಞಾನಾಚೇ ಪುರೇ ಚಾಡ । ತೋ ಶ್ರೀಶುಕಾಸೀ ಲಾಗಲಾ ಗೋಡ । ತೇಣೇ ಪುರೇ ಕೋಡ ಪರೀಕ್ಷಿತೀಚೇ ॥೧೯॥ ಐಕೋನಿ ಉದ್ಧವಾಚೇ ಪ್ರಶ್ನೋಕ್ತಿ । ಶುಕ ಸುಖಾವಲಾ ಆನಂದಸ್ಫೂರ್ತೀ । ತೋ ಮ್ಹಣೇ ಸಾವಧ ಪರೀಕ್ಷಿತೀ । ತುಷ್ಟಲಾ ಶ್ರೀಪತೀ ಉದ್ಧವಾಸೀ ॥೨೦॥ ಬ್ರಹ್ಮಜ್ಞಾನಾಚೇ ನಿರ್ವಾಣಸ್ಥಿತೀ । ತೇ ಜಾಣ ಪಾ ಮುಖ್ಯತ್ವೇ ಶಾಂತೀ । ತೇ ಉದ್ಧವೇ ಪುಶಿಲೀ ಅತಿಪ್ರೀತೀ । ತೇಣೇ ಶ್ರೀಪತೀ ಸಂತೋಷಲಾ ॥೨೧॥ ತೋ ಶಾಂತಿ ಆಣಿ ನಿವೃತ್ತೀ । ಸಾಂಗೇಲ ಚೌ ಅಧ್ಯಾಯೋಕ್ತೀ । ಐಕ ರಾಯಾ ಪರೀಕ್ಷಿತೀ । ತೇ ಮೀ ತುಜಪ್ರತೀ ಸಾಂಗೇನ ॥೨೨॥ ಐಕೇ ಪಾಂಡವಕುಲದೀಪಕಾ । ಕೌರವಕುಳೀ ಕುಲತಿಲಕಾ । ತೂ ಶಾಂತೀಸೀ ಅಧಿಕಾರೀ ನಿಕಾ । ನಿಜಾತ್ಮಸುಖಾ ಸಾಧಕೂ ॥೨೩॥ ಸಾಧಾವಯಾ ಬ್ರಹ್ಮಪ್ರಾಪ್ತೀ । ತೂ ತ್ಯಕ್ತೋದಕ ಶ್ರವಣಾರ್ಥೀ । ಯಾಲಾಗೀ ಶಾಂತಿ ಆಣಿ ನಿವೃತ್ತೀ । ಐಕ ನೃಪತೀ ಹರಿ ಸಾಂಗೇ ॥೨೪॥ ತೇವಿಸಾವೇ ಅಧ್ಯಾಯೀ ನಿರೂಪಣ । ದುರ್ಜನೀ ಕ್ಷೋಭವಿಲೇ ಮನ । ತ್ಯಾ ಮನಾಸೀ ಯೇ ಕ್ಷಮಾ ಪೂರ್ಣ । ತೇಚಿ ಶ್ರೀಕೃಷ್ಣ ಸಾಂಗೇಲ ॥೨೫॥

ನೀನು ಹೇಗಿರುವೆ ಎನ್ನುವುದು ತಿಳಿಯುವುದೇ ಇಲ್ಲ. ಈ ಜ್ಞಾನದ ಜ್ಞಾತಾ ನೀನೇ ಆಗಿರುವೆ. ಇದನ್ನು ಸಿದ್ಧಮಾಡಲು ಹೋದರೆ ಅಜ್ಞಾನವೆನ್ನುವುದು ಉಳಿಯುವುದೇ ಇಲ್ಲ ॥೧೨॥ ಅಜ್ಞಾನವೇ ಇಲ್ಲದಿರಲು, ಅಲ್ಲಿ ಜ್ಞಾನದ ಪ್ರಕಾರ ಎಲ್ಲಿಯದು? ಎಂತಹದ್ದು? ಎಲ್ಲಿ ವಧುವೇ ಇಲ್ಲದಿರಲು ಅಲ್ಲಿ ವರನನ್ನು ನೋಡಿರಿ ಎಂದು ಯಾರು ಕೇಳಬೇಕು? ॥೧೩॥ ನೀನು ಜ್ಞಾತಾನೂ ಅಲ್ಲ, ಅಜ್ಞಾತಾನೂ ಅಲ್ಲ. ನೀನು ಹೇಳುವವನೂ ಅಲ್ಲ ಮತ್ತು ಹೇಳಲಾರದವನೂ ಅಲ್ಲ. ನೀನು ಅನೇಕನಲ್ಲ ಮತ್ತು ಏಕನೂ ಅಲ್ಲ. ನಿನ್ನ ಸ್ವರೂಪವು ಅತರ್ಕ್ಯವಾಗಿರುವುದು. ನಿನ್ನ ವಿಷಯಕ್ಕೆ ಯಾವ ಪ್ರಕಾರದ ತರ್ಕವು ನಡೆಯುವುದೇ ಇಲ್ಲ ॥೧೪॥ ನೀನು ನಿಜವಾಗಿಯೂ ಶಬ್ದಾತೀತನಾಗಿರುವೆ ವಿಕಾರತೀತನಾಗಿರುವೆ. ನೀನು ನಿರ್ಗುಣನಾಗಿರುವೆ. ನಿನ್ನಲ್ಲಿ ಅಹಂಕಾರವು ಇರುವುದಿಲ್ಲ, ಹೀಗೆಂದರೂ ಕೂಡ ವಿಚಾರದಲ್ಲಿ ಬೀಳಬೇಕಾಗುವುದು. ಕಾರಣ ಜಗದಾತ್ಮನು, ಜಗದಾಕಾರನು ನೀನೇ ಇರುವೆ ॥೧೫॥ ಸರ್ವ ಜಗತ್ತಿನ ಆಕಾರದಿಂದ ಪ್ರಸಿದ್ಧನಾಗಿ ನೀನೇ ಇರುವೆ. ಅಂದಮೇಲೆ ಯಾರ ದ್ವಂದ್ವವು ಯಾರನ್ನು ಬಾಧಿಸಬೇಕು? ಇನ್ನೊಂದು ಇಲ್ಲದೇ ಇರುತಿರಲು, ಇನ್ನೊಬ್ಬರ ಅಪರಾಧವು ವಿರುದ್ಧವಾಗಿದೆ ಎಂದು ಯಾರಿಗೆ ತಿಳಿಯಬೇಕು? ॥೧೬॥ ಹೇ ಸದ್ಗುರುರಾಯನೇ, ಈ ಪ್ರಕಾರವಾಗಿ ನಿನ್ನ ಚರಣಗಳಲ್ಲಿ ದ್ವಂದ್ವದ ಐಕ್ಯವಿರುತ್ತಿರಲು ನೀನು ಸಮತ್ವ ಭಾವದಿಂದ ಭಾಗವತದ ಕಥೆಯನ್ನು ನಡೆಯಿಸುತ್ತಿರುವೆ ॥೧೭॥ ಈ ಯಾವ ಶ್ರೀಮದ್ ಭಾಗವತದ ಇಪ್ಪತ್ತೆರಡನೆಯ ಅಧ್ಯಾಯದ ಕೊನೆಯಲ್ಲಿ ಉದ್ಧವನು ತನಗೆ ಶಾಂತಿಯು ಹೇಗೆ ಲಭಿಸುವುದು? ಮತ್ತು ದ್ವಂದ್ವಗಳು ಹೇಗೆ ನಷ್ಟವಾಗುವುವು? ಇವುಗಳ ಉಪಾಯವನ್ನು ಕೇಳಿದನು ॥೧೮॥ ಯಾವುದರಿಂದ ಬ್ರಹ್ಮಜ್ಞಾನದ ಇಚ್ಛೆಯು ಪೂರ್ಣವಾಗುವುದೋ, ಅಂತಹ ಅತ್ಯಂತ ಮಹತ್ವದ ಪ್ರಶ್ನೆಯನ್ನು ಉದ್ಧವನು ಕೇಳಿದನು ॥೧೯॥ ಶ್ರೀ ಶುಕಾಚಾರ್ಯರಿಗೆ ಈ ಪ್ರಶ್ನೆಯು ಅತಿಶಯವಾಗಿ ಪ್ರಿಯವಾಯಿತು. ಆಗ ಅವರು ಪರೀಕ್ಷಿತನಿಗೆ ಹೀಗೆ ಹೇಳಿದರು. ಹೇ ರಾಜನೇ, ಈಗ ನೀನು ಇತ್ತ ಲಕ್ಷ ಕೊಡು, ಭಗವಂತನು ಉದ್ಧವನ ಮೇಲೆ ಪ್ರಸನ್ನನಾಗಿರುವನು ॥೨೦॥ ಬ್ರಹ್ಮಜ್ಞಾನದ ಅಂತಿಮ ಸ್ಥಿತಿ ಎಂದರೆ ಮುಖ್ಯವಾಗಿ ಶಾಂತಿಯಾಗಿರುವುದು. ಉದ್ಧವನು ಅತ್ಯಂತ ಪ್ರೇಮದಿಂದ ಈ ಶಾಂತಿ ವಿಷಯವನ್ನು ಕುರಿತು ಪ್ರಶ್ನೆಯನ್ನು ಕೇಳಿರುವನು. ಇದರಿಂದ ಶ್ರೀಕೃಷ್ಣನೂ ಪರಮ ಸಂತೋಷಪಟ್ಟಿರುವನು ॥೨೧॥ ಈ ಕಾರಣವಾಗಿ ಶಾಂತಿ ಮತ್ತು ನಿವೃತ್ತಿ ಇವುಗಳ ನಿರೂಪಣೆಯನ್ನು ಶ್ರೀಕೃಷ್ಣನು ನಾಲ್ಕು ಅಧ್ಯಾಯಗಳಲ್ಲಿ ಹೇಳುವನು. ಹೇ ಪರೀಕ್ಷಿತಿ ರಾಜನೇ ಈಗ ಇದನ್ನೇ ನಾನು ನಿನಗೆ ಹೇಳುವೆನು ॥೨೨॥ ಹೇ ಪಾಂಡವಕುಲದೀಪಕನೇ, ಕೌರವಕುಲತಿಲಕನೇ, ಕೇಳು, ನೀನು ನಿಶ್ಚಯವಾಗಿ ಶಾಂತಿಯ ಅಧಿಕಾರಿಯಾಗಿರುವೆ. ಆತ್ಮಸುಖದ ಸಾಧಕನು ನೀನೇ ಆಗಿರುವೆ ॥೨೩॥ ಬ್ರಹ್ಮಪ್ರಾಪ್ತಿಯನ್ನು ಸಾಧಿಸುವುದಕ್ಕಾಗಿ ನೀನು ನೀರನ್ನೂ ಕೂಡ ಸೇವಿಸದೇ ಶ್ರವಣವನ್ನು ಮಾಡುತ್ತಿರುವೆ. ಈಗ ಶ್ರೀಹರಿಯು ಶಾಂತಿ ಮತ್ತು ನಿವೃತ್ತಿಯನ್ನು ಹೇಳಲಾರಂಭಿಸುವನು, ಅದನ್ನು ನೀನು ಕೇಳು ॥೨೪॥ ದುರ್ಜನರು ಮನಸ್ಸಿಗೆ ಎಷ್ಟೇ ಪೀಡೆಯನ್ನು ಕೊಡುವ ಪ್ರಯತ್ನ ಮಾಡಿದರೂ ಕೂಡ ಮನಸ್ಸು ಕ್ಷಮಾಯುಕ್ತವಾಗಿ ಹೇಗೆ ಇರಲು ಸಾಧ್ಯ ಎಂಬುವ ವಿಷಯದ ನಿರೂಪಣೆಯನ್ನು ಈ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಮಾಡುತ್ತಿರುವನು ॥೨೫॥

ಭಿಕ್ಷುಗೀತಸಂರಕ್ಷಣ । ತೇ ಮನೋಜಯಾಚೇ ಲಕ್ಷಣ । ಪ್ರಕೃತಿಜಯಾಚೇ ನಿರೂಪಣ । ಸಾಂಗೇಲ ಸಂಪೂರ್ಣ ಚೋವಿಸಾವಾ ।।೨೬।। ಸಾಂಗೋನಿ ತ್ರಿವಿಧ ತ್ರಿಗುಣ । ಪರೀ ಲಕ್ಷವಿಲೇ ನಿಜನಿರ್ಗುಣ । ಹೇ ಗುಣಜಯಾಚೇ ನಿರೂಪಣ । ಸುಲಕ್ಷಣ ಪಂಚವಿಸಾವಾ ।।೨೭।। ಸವ್ವಿಸಾವಾ ಅಧ್ಯಾವೋ ಯೇಥ । ತೋ ಧಡಧಡೀತ ವಿರಕ್ತ । ಸಾಂಗೋನಿಯಾ ಐಲಗೀತ । ಸ್ತ್ರಿಯಾದಿ ಸಮಸ್ತ ವಿಷಯತ್ಯಾಗೂ ।।೨೮।। ಗುಣ ವಿಷಯ ಪ್ರಕೃತಿ ಮನ । ಯಾ ಚಹೂಂಚೇ ಸಮಾಧಾನ । ಚಹೂ ಅಧ್ಯಾಯೀ ವಿಶದ ಜಾಣ । ಸ್ವಮುಖೇ ಶ್ರೀಕೃಷ್ಣ ಸಾಂಗೇಲ ।।೨೯।। ಯಾಪರೀ ಪರೀಕ್ಷಿತೀಸ ಜಾಣ । ಕರೋನಿಯಾ ಸಾವಧಾನ । ಶ್ರೀಶುಕಯೋಗೀಂದ್ರ ಆಪಣ । ಕಥಾಲಕ್ಷಣ ನಿರೂಪೀ ।।೩೦।।

ಬಾದರಾಯಣಿರುವಾಚ :-

ಸ ಏವಮಾಶಂಸಿತ ಉದ್ಧವೇನ ಭಾಗವತಮುಖ್ಯೇನ ದಶಾರ್ಹಮುಖ್ಯಃ ।
ಸಭಾಜಯನ್ ಭೃತ್ಯವಚೋ ಮುಕುಂದಸ್ತಮಾಬಭಾಷೇ ಶ್ರವಣೀಯವೀರ್ಯ ।।೧।।

ಅರ್ಥ:- ಶುಕ ದೇವನು ಹೇಳಿದನು :- ಹೇ ಪರೀಕ್ಷಿತನೇ, ಭಗವಂತನ ಲೀಲೆಯ ಕಥೆಯನ್ನು ಕೇಳಲು ನಿಜವಾಗಿಯೂ ಯೋಗ್ಯವಾಗಿರುವುದು. ಆತನು ಪ್ರೇಮ ಮತ್ತು ಮುಕ್ತಿಯ ದಾನಿಯಾಗಿರುವನು. ಪರಮ ಪವಿತ್ರ ಭಕ್ತನಾದ ಉದ್ಧವನು ಈ ಪ್ರಕಾರವಾಗಿ ಪ್ರಾರ್ಥನೆಯನ್ನು ಮಾಡಲು, ಆಗ ಯದುವಂಶಭೂಷಣನಾದ ಶ್ರೀಭಗವಂತನು ಆತನ ಪ್ರಶ್ನೆಯನ್ನು ಹೊಗಳಿದನು ಹಾಗೂ ಹೀಗೆ ಹೇಳಹತ್ತಿದನು.

ಶುಕ ಮ್ಹಣೇ ಪರೀಕ್ಷಿತೀ । ಐಕೋನಿ ಉದ್ಧವಾಚೀ ವಿನಂತೀ । ವಚನೇ ಸಂತೋಷಲಾ ಶ್ರೀಪತೀ । ತೋ ಉದ್ಧವಾಪ್ರತೀ ಸಂಬೋಧೀ ।।೩೧।। ಕೋಟಿ ಜನ್ಮಾಂತೀ ಕೇವಳ । ದ್ವಿಜತ್ವೇ ಪಾವಿಜೇ ಸತ್ಕುಳ । ಹೇ ಮಹಾಪುಣ್ಯಾಚೇ ನಿಜಫಳ । ತೇಚಿ ನಿಷ್ಫಳ ಹರಿಭಕ್ತಿವಿಣೇ ।।೩೨।। ಸದಾ ಸಫಳ ಆಂಬ್ಯಾಚಾ ರುಖ । ತ್ಯಾವರೀ ಉಪಜೇ ಕಾಂವರುಖ । ತೋ ಸಫಳೀಂಹೀ ನಿಷ್ಫಳ ದೇಖ । ತೈಸೇ ಉತ್ತಮ ಲೋಕ ಭಜನೇ ವೀಣ ।।೩೩।। ತೇ ಸ್ಥಿತಿ ನಾಹೀ ಉದ್ಧವಾ ಪಾಸೀ । ಉತ್ತಮ ಜನ್ಮ ಯಾದವ ವಂಶೀ । ಸಭಾಸದತಾ ಆಲ್ಯಾಹೀ ಹಾತಾಸೀ । ಶ್ರೀಮದಾಸೀ ಭುಲೇಚಿನಾ ।।೩೪।। ಝಾಲಿಯಾಹೀ ರಾಜಸಂಪತ್ತೀ । ಜೋ ವಿಸಂಬೇನಾ ಭಗವದ್‌ಭಕ್ತೀ । ಭಾಗವತಮುಖ್ಯತ್ವಾಚೀ ಪ್ರಾಪ್ತೀ । ತ್ಯಾಸೀಚ ನಿಶ್ಚಿತೀ ಮಹಾರಾಜಾ ।।೩೫।। ಸಗುಣ ಸುಂದರ ಪತಿವ್ರತಾ । ಅನುಕೂಳ ಮಿಳಾಲಿಯಾ ಕಾಂತಾ । ಜೋ ವಿಸಂಬೇನಾ ಭಗವದ್ವಥಾ । ಭಾಗವತಮುಖ್ಯತಾ ತ್ಯಾನಾಂವ ।।೩೬।। ಇಂಹೀ ಗುಣೀ ಅತಿಯುಕ್ತ । ವಿವೇಕೇ ಸೀ ಅತಿವಿರಕ್ತ । ಶ್ರೀಕೃಷ್ಣಚರಣೀ ಅನುರಕ್ತ । ಮುಖ್ಯ ಭಾಗವತ ಉದ್ಧವೂ ।।೩೭।।

ಪ್ಪತ್ನಾಲ್ಕನೆಯ ಅಧ್ಯಾಯದಲ್ಲಿ ಭಿಕ್ಷುಗೀತ ಸಂರಕ್ಷಣ ಅಂದರೆ ಮನೋಜಯದ ಲಕ್ಷಣ ಮತ್ತು ಪ್ರಕೃತಿಜಯದ ನಿರೂಪಣೆಯನ್ನು ಸವಿಸ್ತಾರವಾಗಿ ಹೇಳುವನು ।।೨೬।। ಇಪ್ಪತ್ತೈದನೆಯ ಅಧ್ಯಾಯದಲ್ಲಿ ತ್ರಿಗುಣಗಳ ತ್ರಿವಿಧತ್ವವನ್ನು ಹೇಳಿ ಸ್ವತಃ ನಿರ್ಗುಣವಾಗಿರುವುದನ್ನು ತೋರಿಸಲ್ಪಡುವುದು ಮತ್ತು ಗುಣಜಯದ ಸುಂದರ ನಿರೂಪಣೆಯನ್ನು ಮಾಡಲ್ಪಡುವುದು ।।೨೭।। ಇಪ್ಪತ್ತಾರನೆಯ ಅಧ್ಯಾಯವು ಅತಿ ಸ್ಪಷ್ಟವಾದ ವಿರಕ್ತಿಪರವೇ ಆಗಿರುವುದು. ಐಲಗೀತವೆಂದರೆ ಬುಧ ಮತ್ತು ಇಲಾ ಇವರ ಪುತ್ರ ಪುರುಖಾ ಈತನ ಗೀತವು ಸ್ತ್ರಿಯಾದಿ ಸರ್ವ ವಿಷಯಗಳ ತ್ಯಾಗವನ್ನು ಹೇಳಿರುವುದು. ।।೨೮।। ಈ ಪ್ರಕಾರವಾಗಿ ಗುಣ, ವಿಷಯ, ಪ್ರಕೃತೀ ಮತ್ತು ಮನಸ್ಸು ಈ ನಾಲ್ಕರ ಸಮಾಧಾನವನ್ನು ಶ್ರೀಕೃಷ್ಣನು ಸ್ವಮುಖದಿಂದ ಸ್ಪಷ್ಟಮಾಡಿ ಹೇಳುವನು ।।೨೯।। ಈ ರೀತಿಯಾಗಿ ಪರೀಕ್ಷಿತ ರಾಜನಿಗೆ ಚಿತ್ತವನ್ನು ಏಕಾಗ್ರಗೊಳಿಸಲು ಹೇಳಿ ಶ್ರೀ ಶುಕಾಚಾರ್ಯರು ಕಥೆಯ ನಿರೂಪಣೆಯನ್ನು ಮಾಡಲು ಪ್ರಾರಂಭಿಸಿದರು ।।೩೦।।

ಶುಕಾಚಾರ್ಯರು ಹೇಳಿದರು : ಹೇ ಪರೀಕ್ಷಿತನೇ, ಈ ಯಾವ ಉದ್ಧವನ ವಿನಂತಿಯನ್ನು ಕೇಳಿ ಶ್ರೀಕೃಷ್ಣನಿಗೆ ಸಂತೋಷವಾಯಿತು. ಆತನು ಉದ್ಧವನಿಗೆ ಉಪದೇಶವನ್ನು ಮಾಡಲಾರಂಭಿಸಿದನು ।।೩೧।। ಕೋಟ್ಯಾವಧೀ ಜನ್ಮಗಳನ್ನು ಧರಿಸಿದನಂತರ ಉತ್ತಮವಾಗಿರುವ ಬ್ರಾಹ್ಮಣ ಕುಲದಲ್ಲಿ ಜನ್ಮವು ಪ್ರಾಪ್ತವಾಗುವುದು. ಇದು ಮಹಾ ಪುಣ್ಯಗಳ ಫಲವಾಗಿರುವುದು. ಆದರೆ ಅಲ್ಲಿ ಹರಿಭಕ್ತಿಯು ಇಲ್ಲದಿದ್ದರೆ ಅದು ವ್ಯರ್ಥವಾಗಿರುವುದು ।।೩೨।। ಮಾವಿನ ಮರವು ಯಾವಾಗಲೂ ಫಲಗಳನ್ನು ಕೊಡುತ್ತಿರುವುದು. ಆದರೆ ಅದರ ಮೇಲೆ ಪರಪಿಂಡಿಯು ಬೆಳೆಯಿತೆಂದರೆ ಫಲಗಳಿಂದ ತುಂಬಿದ ಈ ವೃಕ್ಷವೂ ಸಹ ನಿರುಪಯೋಗಿಯಾಗುವುದು. ಅದರಂತೆಯೇ ಭಜನೆವಿಲ್ಲದ ಉತ್ತಮ ಜನ್ಮವೂ ಕೂಡ ವ್ಯರ್ಥವಾಗಿ ಹೋಗುವುದು ।।೩೩।। ಆದರೆ ಉದ್ಧವನ ಸ್ಥಿತಿಯು ಹೀಗೆ ಇದ್ದಿಲ್ಲ. ಆತನು ಯಾದವರ ಉತ್ತಮ ವಂಶದಲ್ಲಿ ಜನ್ಮ ಪಡೆದಿದ್ದನು. ಆತನಿಗೆ ರಾಜಸಭೆಯಲ್ಲಿ ಕುಳಿತುಕೊಳ್ಳುವ ಅಧಿಕಾರವು ಪ್ರಾಪ್ತವಾಗಿದ್ದರೂ ಕೂಡ ಆತನು ಸಂಪತ್ತಿನ ಮದದಿಂದ ಮತ್ತನಾಗಿದ್ದಿಲ್ಲ ।।೩೪।। ಶ್ರೇಷ್ಠವಾದ ರಾಜವೈಭವವು ಪ್ರಾಪ್ತವಾಗಿರುವಾಗ ಯಾರು ಕ್ಷಣಹೊತ್ತೂ ಸಹ ಭಗವದ್ಭಕ್ತಿಯನ್ನು ಬಿಡಲಾರನೋ, ಆತನಿಗೆ ಮಾತ್ರ ಶ್ರೇಷ್ಠವಾಗಿರುವ ಭಕ್ತನ ಮಾನವು ಲಭಿಸುವುದು ।।೩೫।। ಗುಣವತಿಯೂ, ರೂಪವತಿಯೂ, ಪತಿವ್ರತೆಯೂ ಮತ್ತು ಸರ್ವಪ್ರಕಾರಗಳಿಂದ ಅನುಕೂಲಳಾಗಿರುವ ಹೆಂಡತಿಯು ದೊರಕಿದರೂ ಕೂಡ ಯಾವನು ಭಕ್ತಿಮಾರ್ಗವನ್ನು ಬಿಡಲಾರನೋ, ಆತನೇ ಶ್ರೇಷ್ಠವಾದ ಭಕ್ತನಾಗಿರುವನು ।।೩೬।। ಇಂತಹ ಗುಣಗಳಿಂದ ಉದ್ಧವನು ಪರಿಪೂರ್ಣನಾಗಿದ್ದನು. ಈತನು ಅತಿಶಯವಾಗಿ ವಿರಕ್ತನಾಗಿದ್ದನು. ಶ್ರೀಕೃಷ್ಣನ ಚರಣಗಳಲ್ಲಿ ಅನುರಕ್ತನಾಗಿದ್ದನು. ಆದ್ದರಿಂದ ಉದ್ಧವನು ಸರ್ವಶ್ರೇಷ್ಠ ಭಕ್ತನಾದನು ।।೩೭।।

ವಯೇ ಧನೇ ಜೇ ಶ್ರೇಷ್ಠಪಣ । ತೇ ಶ್ರೇಷ್ಠತ್ವ ಅತಿಗೌಣ । ಭಗವತ್ಪ್ರಾಪ್ತೀ ತೇ ಶ್ರೇಷ್ಠ ಜಾಣ । ತೇಣೇ ಭಾಗ್ಯೇ ಪರಿಪೂರ್ಣ ಉದ್ಧವೂ ।।೩೮।। ಜೋ ಶ್ರೀಕೃಷ್ಣಾಚಾ ವಿಶ್ವಾಸೀ । ಶ್ರೀಕೃಷ್ಣ ಏಕಾಂತ ಕರೀ ಜ್ಯಾಸೀ । ಗುಣ ಜ್ಞಾನ ಸಾಂಗೇ ಜ್ಯಾ ಪಾಶೀ । ತ್ಯಾಚ್ಯಾ ಭಾಗ್ಯಾಸೀ ಕೇವೀ ವಾನು ।।೩೯।। ಪರಬ್ರಹ್ಮ ಜೇ ಕಾ ಸಾಕ್ಷಾತ । ಜೇ ಉದ್ಧವಾಸೀ ಝಾಲೇ ಹಸ್ತಗತ । ತ್ಯಾಚ್ಯಾ ಬೋಲಾಮಾಜೀ ವರ್ತತ । ಭಾಗ್ಯೇ ಭಾಗ್ಯವಂತ ತೋ ಏಕ ।।೪೦।। ಉದ್ಧವಭಾಗ್ಯ ವಾನಿತ ವಾನಿತ । ಶುಕ ಝಾಲಾ ಸದ್ಗದಿತ । ಸ್ವಾನಂದೇ ವೋಸಂಡಲಾ ತೇಥ । ಠೇಲಾ ತಟಸ್ಥ ಮಹಾಸುಖೇ ।।೪೧।। ಉದ್ಧವಭಾಗ್ಯಾಚಾ ಉದ್ರೇಕ । ಸಾಂಗತಾ ವೋಸಂಡಲಾ ಶ್ರೀಶುಕ । ತೇ ದೇಖೋನಿ ಕುರುನಾಯಕ । ಜಾಹಲಾ ಆತ್ಯಂತಿಕ ವಿಸ್ಮಿತ ।।೪೨।। ಜ್ಯಾಚೇ ನಿಜಭಾಗ್ಯ ಸಾಂಗತಾ । ಶ್ರೀಶುಕಾಸೀ ಹೋತಸೇ ಅವಸ್ಥಾ । ಉದ್ಧವ ಭಾಗ್ಯಾಚಾ ತತ್ತ್ವತಾ । ಮಜಹೀ ಸರ್ವಥಾ ಮಾನಲಾ ।।೪೩।। ತಂವ ಶುಕ ಮ್ಹಣೇ ರಾಯಾಸೀ । ಪರಮ ಭಾಗ್ಯ ತೇ ಉದ್ಧವಾಸೀ । ತೇಣೇ ವಿನವಿತಾ ಹೃಷೀಕೇಶೀ । ವಚನಮಾತ್ರೇಸೀ ತುಷ್ಟಲಾ ।।೪೪।। ಉದ್ಧವಾಸೀ ಶಾಂತೀಚೀ ಚಾಡ । ತೋ ಪ್ರಶ್ನ ಶ್ರೀಕೃಷ್ಣಾಂಸೀ ಝಾಲಾ ಗೋಡ । ತ್ಯಾಚೇ ಪುರವಾವಯಾ ಕೋಡ । ನಿರೂಪಣ ವಾಡ ಸಾಂಗೇಲ ।।೪೫।। ಪರಮ ಶಾಂತೀಚಾ ಅಧಿಕಾರೀ । ತೂಚಿ ಏಕ ನಿಜನಿರ್ಧಾರೀ । ಐಸೇ ಉದ್ಧವಪ್ರೇಮಪುರಸ್ಕರೀ । ಶಾಂತಿ ಶ್ರೀಹರಿ ಸಾಂಗತ ।।೪೬।।

ಶ್ರೀಭಗವಾನುವಾಚ :-

ಬಾರ್ಹಸ್ಪತ್ಯ ಸ ವೈ ನಾತ್ರ ಸಾಧುರ್ವೈ ದುರ್ಜನೇರಿತೈಃ । ದುರುಕ್ತೈರ್ಭಿನ್ನಮಾತ್ಮಾನಂ ಯಃ ಸಮಾಧಾತುಮೀಶ್ವರಃ ।।೨।।

ಅರ್ಥ:- ಶ್ರೀಕೃಷ್ಣನು ನುಡಿದನು, ಹೇ ಬೃಹಸ್ಪತಿ ಶಿಷ್ಯನೇ, ದುರ್ಜನರು ಆಡುವ ಕೆಟ್ಟ ಶಬ್ದಗಳನ್ನು ಕೇಳಿ ನೊಂದ ಮನಸ್ಸನ್ನು ಪುನಃ ಸಮಾಧಾನಕ್ಕೆ ತಂದುಕೊಳ್ಳಬಲ್ಲ ಸಾಧು ಪುರುಷನು ನಿಜವಾಗಿಯೂ ಈ ಜಗತ್ತಿನಲ್ಲಿ ಸಿಗುವುದಿಲ್ಲ.

ಉದ್ಧವಾ ತೂ ಜೇ ಬೋಲಿಲಾಸೀ । ಮೀಹೀ ಸತ್ಯ ಮಾನೀ ತ್ಯಾಸೀ । ದುರ್ಜನೀ ಕೇಲ್ಯಾ ಅಪಮಾನಾಸೀ । ಸಹಾವಯಾ ಕೋಣಾಸೀ ಶಾಂತಿ ನಾಹೀ ।।೪೭।। ದೇವ ಪಾದುಕಾ ವಾಹತೀ ಶಿರಸೀ । ಮುಖ್ಯ ಇಂದ್ರ ಲಗೇ ಜ್ಯಾಚ್ಯಾ ಪಾಯಾಂಸೀ । ಅಷ್ಟಮಹಾಸಿದ್ಧಿ ಜ್ಯಾಚ್ಯಾ ದಾಸೀ । ಬ್ರಹ್ಮಜ್ಞಾನ ಜ್ಯಾಪಾಶೀ ವಚನಾಂಕಿತ ।।೪೮।। ಐಸಾ ದೇವಗುರು ಬೃಹಸ್ಪತೀ । ತ್ಯಾಚಾ ಶಿಷ್ಯ ತೂ ವಿವೇಕಮೂರ್ತೀ । ಯಾಲಾಗೀ ಶಾಂತೀಚ್ಯಾ ಸಾಧಕ ಯುಕ್ತೀ । ತೂಚಿ ನಿಶ್ಚಿತೀ ಜಾಣಸೀ ।।೪೯।।

ವಯಸ್ಸಿಯಿಂದ ಅಥವಾ ದ್ರವ್ಯದಿಂದ ದೊಡ್ಡಸ್ತಿಕೆಯು ಪ್ರಾಪ್ತವಾಗುವುದು, ಆದರೆ ಅದು ಗೌಣವಾದ ಶ್ರೇಷ್ಠತ್ವವಾಗಿರುವುದು. ನಿಜವಾದ ದೊಡ್ಡಸ್ತಿಕೆಯಂದರೆ ಅದು ಭಗದ್ಭಕ್ತಿಯಲ್ಲಿ ಸಮಾವೇಶಗೊಳ್ಳುವಿಕೆಯಾಗಿರುವುದು. ಇಂತಹ ವೈಭವದಿಂದ ಉದ್ಧವನು ಪರಿಪೂರ್ಣನಾಗಿದ್ದನು ।।೩೮।। ಉದ್ಧವನು ಶ್ರೀಕೃಷ್ಣನ ಅತ್ಯಂತ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಶ್ರೀಕೃಷ್ಣನು ಈತನಲ್ಲಿ ಏಕಾಂತದಲ್ಲಿ ಕುಳಿತು ಗುಹ್ಯಜ್ಞಾನವನ್ನು ಹೇಳುತ್ತಿದ್ದನು. ಈ ಉದ್ಧವನ ಭಾಗ್ಯದ ವರ್ಣನೆಯನ್ನು ಹೇಗೆ ಮಾಡಬೇಕು? ।।೩೯।। ಸಾಕ್ಷಾತ ಪರಬ್ರಹ್ಮನಾದ ಶ್ರೀಕೃಷ್ಣನು ಈತನಿಗೆ ಹಸ್ತಗತನಾಗಿದ್ದನು ಮತ್ತು ಈತನ ವಚನದಂತೆ ವರ್ತಿಸುತ್ತಿದ್ದನು. ಆದ್ದರಿಂದ ನಿಜವಾದ ಭಾಗ್ಯವಂತನೆಂದರೆ ಉದ್ಧವನು ಮಾತ್ರ ಆಗಿರುವನು ।।೪೦।। ಈ ಪ್ರಕಾರವಾಗಿ ಉದ್ಧವನ ಭಾಗ್ಯದ ವರ್ಣನೆಯನ್ನು ಮಾಡುತ್ತಿರಲು ಶುಕಾಚಾರ್ಯರು ಸದ್ಗದಿತರಾದರು. ಆ ಸಂತೋಷದ ಭರದಲ್ಲಿ ಅವರು ತಟಸ್ಥರಾಗಿ ಕುಳಿತುಕೊಂಡರು ।।೪೧।। ಈ ಪ್ರಕಾರವಾಗಿ ಉದ್ಧವನ ಭಾಗ್ಯದ ಉತ್ಕರ್ಷ ವರ್ಣನೆಯನ್ನು ಮಾಡುತ್ತ ಶ್ರೀಶುಕಾಚಾರ್ಯರು ಶುದ್ಧಭಾವನೆಯಿಂದ ಉದ್ರೇಕಗೊಳ್ಳಲು ಅವರ ಕಂಠವು ಬಿಗಿಯಿತು. ಇದನ್ನು ಕಂಡು ಪರೀಕ್ಷಿತರಾಜನಿಗೂ ಪರಮಾಶ್ಚರ್ಯವಾಯಿತು ।।೪೨।। ಈತನು ತನ್ನ ಮನದಲ್ಲಿ ಹೀಗೆ ವಿಚಾರಿಸಿದನು; ಯಾರ ಭಾಗ್ಯದ ವರ್ಣನೆ ಮಾಡುತ್ತಿರಲು ಶುಕಚಾರ್ಯರಿಗೆ ಕಂಠವು ಬಿಗಿಯಬೇಕಾದರೆ ಉದ್ಧವನು ನಿಜವಾಗಿಯೂ ಭಾಗ್ಯವಂತನಾಗಿರಲೇಬೇಕು. ನನಗೂ ಕೂಡ ಈತನು ಪೂಜ್ಯನು ।।೪೩।। ಶುಕಚಾರ್ಯರು ರಾಜನಿಗೆ ಹೇಳಿದರು ಈ ಯಾವ ಉದ್ಧವನ ಭಾಗ್ಯವು ಅತಿಶಯವಾಗಿ ಅಲೌಕಿಕವಾಗಿರುವುದು. ಏಕೆಂದರೆ ಈತನು ವಿನಂತಿಸಿಕೊಳ್ಳುತ್ತಲೇ ಶ್ರೀಕೃಷ್ಣನು ವಚನಮಾತ್ರದಿಂದ ಸಂತೋಷ ಪಟ್ಟನು ।।೪೪।। ಉದ್ಧವನಿಗೆ ಶಾಂತಿಯ ಇಚ್ಛೆ ಇದೆ ಎಂಬುದನ್ನು ಕೇಳುತ್ತಲೇ ಶ್ರೀಕೃಷ್ಣನಿಗೆ ಈ ಪ್ರಶ್ನೆಯೂ ಬಹು ಪ್ರಿಯವಾಯಿತು. ಆದ್ದರಿಂದ ಆತನ ಪ್ರಶ್ನೆಯನ್ನು ಸಫಲಗೊಳಿಸಲು ಈಗ ಕೃಷ್ಣನು ಅದರ ಸವಿಸ್ತಾರ ವರ್ಣನೆಯನ್ನು ಮಾಡುವನು ।।೪೫।। ಹೇ ಉದ್ಧವಾ, ಪರಮಶಾಂತಿಯ ಅಧಿಕಾರಿಯು ನಿರ್ಧಾರವಾಗಿ ನೀನೇ ಆಗಿರುವೆ. ಹೀಗೆ ಉದ್ಧವನಿಗೆ ಪ್ರೇಮ ಪುರಸ್ಕಾರವನ್ನು ಮಾಡುತ್ತ ಶ್ರೀಹರಿಯು ಶಾಂತಿ ವಿಷಯವನ್ನು ಕುರಿತು ಹೇಳಲು ಪ್ರಾರಂಭಿಸಿದನು ।।೪೬।।

ಹೇ ಉದ್ಧವನೇ, ನೀನು ಹೇಳಿರುವುದು ಅದು ಸತ್ಯವೆಂದು ನಾನೂ ಕೂಡ ಮನ್ನಿಸುವೆನು. ದುರ್ಜನರು ಅಪಮಾನವನ್ನು ಮಾಡಲು ಅದನ್ನು ಸಹಿಸುವಂತಹ ಶಾಂತಿಯು ಯಾರಿಗೂ ಇರುವುದಿಲ್ಲ ।।೪೭।। ಯಾರ ಪಾದುಕೆಗಳನ್ನು ದೇವತೆಗಳು ಮಸ್ತಕದ ಮೇಲೆ ಧರಿಸುವರೋ, ಅಂತಹ ದೇವತೆಗಳಲ್ಲಿ ಶ್ರೇಷ್ಠನಾಗಿರುವ ಇಂದ್ರನು ಯಾರ ಚರಣವನ್ನು ಹಿಡಿಯುವನೋ ಅಷ್ಟಮಹಾಸಿದ್ಧಿಗಳು ಯಾರ ದಾಸರಾಗಿರುವುವೋ, ಯಾರಿಗೆ ಬ್ರಹ್ಮಜ್ಞಾನವು ಅಂಕಿತವಾಗಿರುವುದೋ ।।೪೮।। ಅಂತಹ ಯಾವ ದೇವತೆಗಳ ಗುರು ಬೃಹಸ್ಪತಿಯ ನೀನು ಶಿಷ್ಯನಾಗಿ ಸಾಕ್ಷಾತ ವಿವೇಕದ ಮೂರ್ತಿಯಾಗಿರುವೆ. ಆದ್ದರಿಂದ ಶಾಂತಿಯನ್ನು ಸಾಧ್ಯಮಾಡಿಕೊಳ್ಳುವ ಉಪಾಯವು ನಿನಗೆ ಮಾತ್ರ ತಿಳಿಯಬಲ್ಲದು ।।೪೯।।

ಶಾಂತಿ ಆಕಳಾವಯಾ ಉದ್ಧವಾಸೀ । ಆದರೇ ಸತ್ಕಾರೀ ಹೃಷೀಕೇಶೀ । ಅನುಮೋದೂನಿ ತ್ಯಾಚೇ ಬೋಲಾಸೀ । ಶುದ್ಧ ಶಾಂತೀಸೀ ಹರಿ ಸಾಂಗೇ ।।೪೦।। ನಿಂದಾ ಅವಜ್ಞಾ ಹೇಳಣ । ದುರ್ಜನೀ ಕೇಲಿಯಾ ಅಪಮಾನ । ಹೇ ಸಾಹೇ ತೋ ಈಶ್ವರ ಜಾಣ । ನಿಜಬೋಧೇ ಪೂರ್ಣ ತೋ ಮದ್ರೂಪ ।।೪೧।। ಜ್ಯಾಸೀ ಸರ್ವಭೂತೀ ನಿಜಾತ್ಮತಾ । ದೃಢ ಬಾಣಲೀಸೇ ತತ್ತ್ವತಾ । ತೋ ದುರ್ಜನಾಚಿಯಾ ಆಘಾತಾ। ಸಾಹೇ ಸರ್ವಥಾ ಯಥಾಸುಖೇ ।।೪೨।। ಜೋ ಸ್ವಯೇ ಹೋಯ ಅವಘೇ ಜಗ । ತ್ಯಾಸೀ ಲಾಗತಾ ಉಪದ್ರವ ಅನೇಗ । ಉಠೇನಾ ಕ್ರೋಧಾಚೇ ಲಗಬಗ । ಸಾಹೇ ಅನುದ್ವೇಗ ಯಥಾಸುಖೇ ।।೪೩।। ನಿಜಾಂಗೀ ಲಾಗತಾ ನಿಜಕರ । ನುಠೀ ಕ್ರೋಧದ್ವೇಷಾಂಚಾ ಉದ್‌ಗಾರ । ನಿಜಾತ್ಮತಾ ಜೋ ದೇಖೇ ಚರಾಚರ । ಶಾಂತಿ ತ್ಯಾಚೇ ಘರ ಸ್ವಯೇ ರಿಘೇ ।।೪೪।। ಉದ್ಧವಾ ಐಸಾ ಜ್ಯಾಸೀ ನಿಜಬೋಧೂ । ತ್ಯಾಸೀ ಮ್ಹಣಿಜೇ ಸತ್ಯ ಸಾಧೂ । ತೋಚಿ ಸಾಹೇ ಪರಾಚಾ ಅಪರಾಧೂ । ಶಾಂತಿಶುದ್ಧ ತೋ ಏಕ ।।೪೫।। ನೇಣೋನಿಯಾ ನಿಜಬೋಧಾತೇ । ಇತರ ಜೇ ಸಜ್ಞಾನ ಜ್ಞಾತೇ । ತೇ ನ ಸಾಹತೀ ದ್ವಂದ್ವಾತೇ । ಏಕ ತೂತೇ ಸಾಂಗೇನ ।।೪೬।।।।

ನ ತಥಾ ತಪ್ಯತೇ ವಿದ್ಧ: ಪುಮಾನ್ಬಾಣೈ: ಸುಮರ್ಮಗೈ: । ಯಥಾ ತುದಂತಿ ಮರ್ಮಸ್ಥಾ ಹ್ಯಸತಾಂ ಪುರುಷೇಷವ: ।।೩।।

ಅರ್ಥ:- ಮನುಷ್ಯನ ಹೃದಯದ ಮರ್ಮಸ್ಥಾನಕ್ಕೆ ಮೊನಚಾದ ಬಾಣವು ನಟ್ಟಿದರೂ ಕೂಡ ದುರ್ಜನರ ಕಠೋರ ಶಬ್ದಗಳಿಂದ ಆಗುವಷ್ಟು ಪೀಡೆಯು ಆಗುವುದಿಲ್ಲ.

ತಿಖ್ಯಾಚೇ ಅತಿತಿಖ ಬಾಣ । ಜೇಣೇ ಘಾಯೇ ಹೋತೀ ವಿಕಳ ಪ್ರಾಣ । ತ್ಯಾಹೂನಿ ದುರ್ಜನಾಚೇ ವಾಗ್ಬಾಣ । ಅಧಿಕ ಜಾಣ ರುಪತೀ ।।೪೭।। ಲೋಹಾಚೇ ಬಾಣ ಜೇಥ ಲಾಗತೀ । ತೇಚಿ ಅಂಗೇ ವ್ಯಥಿತ ಹೋತೀ । ಪರೀ ವಾಗ್ಬಾಣಾಂಚೀ ಅಧಿಕ ಶಕ್ತೀ । ಘಾಯೇ ಭೇದಿತೀ ಪೂರ್ವಜ ।।೪೮।। ಲೋಹಬಾಣಾಚೇ ಲಾಗಲಿಯಾ ಘಾಯೇ । ತೇ ಪಾನಪಾಲ್ಯಾ ವ್ಯಥಾ ಜಾಯೇ । ಪರೀ ವಾಗ್ಬಾಣ ರುಪಲ್ಯಾ ಪಾಹೇ । ತೇ ಶಲ್ಯ ರಾಹೇ ಜನ್ಮಾಂತ ।।೪೯।। ವರ್ಮಸ್ಪರ್ಶಾಚೇ ಬಾಸಟೇ ಜಾಣ । ವಿಂಧಿತಾ ನಿಂದೇಚೇ ವಾಗ್ಬಾಣ । ತೇಣೇ ಭೇದಿತಾಂಚಿ ಅಂತಃಕರಣ । ಸರ್ವಾಂಗೀ ಪೂರ್ಣ ಭಡಕಾ ಉಠೀ ।।೫೦।। ದುರ್ಜನಾಚಿಯಾ ದುರುಕ್ತೀ । ಅಪಮಾನಾಚೇ ಉದ್ಧತೀ । ಸಾಹಾವಯಾಲಾಗೀ ಶಾಂತೀ । ನವ್ಹೇ ನಿಶ್ಚಿತೀ ಪ್ರಾಕೃತಾ ।।೫೧।।

ಉದ್ಧವನಿಗೆ ಶಾಂತಿಯ ರಹಸ್ಯವು ತಿಳಿಯಬೇಕೆಂಬ ಬಯಕೆಯಿಂದ ಶ್ರೀಕೃಷ್ಣನು ಆದರದಿಂದ ಆತನನ್ನು ಗೌರವಿಸಿದನು ಮತ್ತು ಆತನ ವಚನಗಳಿಗೆ ಅನುಮೋದನೆಯನ್ನು ಕೊಟ್ಟು ಶ್ರೀಕೃಷ್ಣನು ಶುದ್ಧ ಶಾಂತಿಯ ಸ್ವರೂಪವನ್ನು ಹೇಳಲಾರಂಭಿಸಿದನು ।।೪೦।। ನಿಂದೆ, ಅವಜ್ಞೆ ಮತ್ತು ಅಪಹಾಸ್ಯ ಇತ್ಯಾದಿ ಮಾರ್ಗದಿಂದ ದುರ್ಜನರು ಅಪಮಾನವನ್ನು ಮಾಡುತ್ತಿರುವರು. ಈ ಅಪಮಾನವನ್ನು ಯಾರು ಸಹಿಸಿಕೊಳ್ಳುವನೋ ಆತನು ಸಾಕ್ಷಾತ್ ಈಶ್ವರನೇ ಆಗಿರುವನು. ಇದನ್ನು ನಿಶ್ಚಯವಾಗಿ ಲಕ್ಷದಲ್ಲಿಡು. ಆತನು ಆತ್ಮಜ್ಞಾನದಿಂದ ಪೂರ್ಣವಾಗಿ ಮದ್ರೂಪನಾಗಿರುವನು ।।೪೧।। ಪ್ರಾಣಿಮಾತ್ರರಲ್ಲಿ ಯಾವನು ಆತ್ಮಸ್ವರೂಪವನ್ನು ಕಾಣುವನೋ, ಇದು ಯಾವ ವೃತ್ತಿಯಾಗಿರುವುದೋ, ಆತನು ದುರ್ಜನರ ಯಾವುದೇ ಪ್ರಕಾರದ ಆಘಾತಗಳನ್ನು ಆನಂದದಿಂದ ಸ್ವೀಕರಿಸುವನು ।।೪೨।। ಯಾರು ತಾನೇ ಸರ್ವ ಜಗತ್ತಾಗಿರುವನೋ, ಆತನಿಗೆ ಎಷ್ಟೇ ಉಪದ್ರವಗಳನ್ನು ಕೊಟ್ಟರೂ ಕೂಡ ಆತನ ಹೃದಯದಲ್ಲಿ ಕ್ರೋಧವು ಹುಟ್ಟಲಾರದು ।।೪೩।। ತನ್ನ ಹಸ್ತವು ತನ್ನ ಶರೀರಕ್ಕೆ ಬಡೆಯಲು ಆಗ ಕ್ರೋಧ, ದ್ವೇಷಗಳ ಶಬ್ದಗಳು ಮುಖದಿಂದ ಬರಲಾರವು. ಅದರಂತೆ ಚರಾಚರಕ್ಕೆ ಯಾವನು ಆತ್ಮ ಸ್ವರೂಪದಿಂದ ಕಾಣುವನೋ, ಆತನ ಮನೆಗೆ ಶಾಂತಿಯು ತಾನಾಗಿಯೇ ಬಂದು ವಾಸಮಾಡುವುದು ।।೪೪।। ಉದ್ಧವಾ, ಹೀಗೆ ಯಾರಿಗೆ ಆತ್ಮಜ್ಞಾನವಾಗಿರುವುದೋ, ಆತನಿಗೆ ಮಾತ್ರ ನಿಜವಾದ ಸಾಧು ಎಂದು ಕರೆಯಬೇಕು. ಆತನು ಬೇರೆಯವರ ಅಪರಾಧವನ್ನು ಸಹಿಸುವನು. ಆತನು ಶಾಂತಿಯ ಮಾರ್ಗದಿಂದ ಪರಮಪವಿತ್ರನಾಗಿರುವನು ।।೪೫।। ಇಂತಹ ನಿಜಬೋಧೆಯನ್ನರಿಯದ ಇತರ ಜ್ಞಾನಸಂಪನ್ನ ವಿದ್ವಾನರು, ಇವರೂ ಕೂಡ ದ್ವಂದ್ವಗಳನ್ನು ಸಹನೆ ಮಾಡಿಕೊಳ್ಳುವುದಿಲ್ಲ. ಇದನ್ನೂ ಕೂಡ ನಾನು ನಿನಗೆ ಹೇಳುವೆನು ಅದನ್ನು ಕೇಳು ।।೪೬।।

ಉಕ್ಕಿನ ತೀಕ್ಷ್ಣವಾದ ಬಾಣವು ನಟ್ಟಿಕೊಳ್ಳಲು ಆಗ ಪ್ರಾಣವು ತೀವ್ರ ಸಂಕಟಕ್ಕೆ ಗುರಿಯಾಗುವುದು. ಆದರೆ ದುರ್ಜನರ ವಾಗ್ಬಾಣವು ಶರೀರದಲ್ಲಿ ಇದಕ್ಕಿಂತಲೂ ಹೆಚ್ಚಾಗಿ ಒಳನುಗ್ಗಿ ಪೀಡಿಸುವುದು ।।೪೭।। ಕಬ್ಬಿಣದ ಬಾಣವು ಶರೀರದ ಯಾವ ಭಾಗಕ್ಕೆ ನಟ್ಟಿಕೊಳ್ಳುವುದೋ, ಅಷ್ಟೇ ಭಾಗವು ಗಾಯವಾಗಿ ಮನುಷ್ಯನಿಗೆ ನೋವನ್ನು ಉಂಟುಮಾಡುವುದು. ಆದರೆ ವಾಗ್ಬಾಣದ ಸಾಮರ್ಥ್ಯವು ಭಯಂಕರವಾಗಿರುವುದು. ಇದರ ಪ್ರಹಾರದಿಂದ ಇವರಲ್ಲದೇ ಇವರ ಪೂರ್ವಜರೂ ಕೂಡ ಗಾಯಾಳುಗಳಾಗುವರು ।।೪೮।। ಕಬ್ಬಿಣದ ಬಾಣದಿಂದ ಆದ ಗಾಯವು ಎಲೆತೊಗಟೆಗಳನ್ನು ಹಚ್ಚುವುದರಿಂದ ಶಮನವಾಗುವುದು. ಆದರೆ ವಾಗ್ಬಾಣವು ಒಮ್ಮೆ ಶರೀರದಲ್ಲಿ ನಟ್ಟಿ ಕುಳಿತರೆ ಅದರ ಚುಚ್ಚು ಮಾತುಗಳು ಸಾಯುವವರೆಗೂ ಚುಚ್ಚುತ್ತಲೇ ಇರುವುವು ।।೪೯।। ಮನಸ್ಸಿಗೆ ನಟ್ಟಿಕೊಳ್ಳುವಂತಹ ವಿಷಯುಕ್ತ ನಿಂದೆಯ ವಾಗ್ಬಾಣವು ಒಮ್ಮೆ ಅಂತಃಕರಣದಲ್ಲಿ ಹೊಕ್ಕಿಕೊಂಡರೆ ಸಾಕು, ಅದು ಸರ್ವ ಶರೀರದಲ್ಲಿ ಅಗ್ನಿಯಂತೆ ಉರಿಯುತ್ತಿರುವುದು ।।೫೦।। ಹೀಗೆ ದುರ್ಜನರ ಕೆಟ್ಟ ಶಬ್ದಗಳು ಅಪಮಾನದಿಂದ ಪರಿಪೂರ್ಣವಾಗಿ ತುಂಬಿರುವುವು. ಇದನ್ನು ಸಹನೆ ಮಾಡಿಕೊಳ್ಳುವಂತಹ ಶಾಂತತೆಯು ಸಾಮಾನ್ಯ ಮನುಷ್ಯನ ಅಂಗದಲ್ಲಿ ಇರುವುದಿಲ್ಲ ।।೫೧।।

ಐಶಿಯಾ ರೀತೀ ಯಥೋಚಿತ । ಉದ್ಧವಾಚೇ ಮನೋಗತ । ಸಂಲಕ್ಷೂನಿ ಶ್ರೀಕೃಷ್ಣನಾಥ । ಶಾಂತೀಚಾ ನಿಶ್ಚಿತಾರ್ಥ ಸಾಂಗೋ ಪಾಹೇ ॥೬೨॥ ಪೂರ್ವೀ ಸಾಂಗೀತಲೇ ನಿಜಶಾಂತೀ ಸೀ । ವೇಗೀ ಸಾಧೀ ಮ್ಹಣೇ ಉದ್ಧವಾಸೀ । ತೇ ಅಟಕ ವಾಟೇಲ ತಯಾಸೀ । ಅತಿ ಸಂಕೋಚಾಸೀ ಪಾವೇಲ ॥೬೩॥ ಹೋತೇ ಉದ್ಧವಾಚೇ ಮಾನಸೀ । ಹೇ ಶಾಂತಿ ಅಸಾಧ್ಯ ಸರ್ವಾಸೀ । ಜಾಣೋನಿಯಾ ಹೃಷೀಕೇಶೀ । ಸಾಂಗೇ ಇತಿಹಾಸೇಸಿ ಭಿಕ್ಷುಗೀತ ॥೬೪॥

ಕಥಯಂತಿ ಮಹತ್ಪುಣ್ಯಮಿತಿಹಾಸಮಿಹೋದ್ಧವ । ತಮಹಂ ವರ್ಣಯಿಷ್ಯಾಮಿ ನಿಬೋಧ ಸುಸಮಾಹಿತಃ ॥೪॥

ಅರ್ಥ:- ಹೇ ಉದ್ಧವನೇ, ಈ ವಿಷಯಕ್ಕಾಗಿ ಮಹಾತ್ಮರು ಒಂದು ಅತ್ಯಂತ ಪುಣ್ಯಕಾರಕ ಪ್ರಾಚೀನ ಕಥೆಯನ್ನು ಹೇಳುವರು. ಆದನ್ನು ನಾನು ನಿನಗೆ ಹೇಳುವೆನು. ನೀನು ಮನಸ್ಸು ಕೊಟ್ಟು ಕೇಳು.

ಅಶಾಂತಿಕ್ಷೋಭಾಚೇ ಚಿತ್ತಮಳ । ಕ್ಷಾಳಾವಯಾ ಜೇ ತತ್ಕಾಳ । ಇತಿಹಾಸಗಂಗಾ ಕೇವಳ । ಅತಿನಿರ್ಮಳ ಕೃಷ್ಣೋಕ್ತಿ ॥೬೫॥ ಶ್ರೀಕೃಷ್ಣವದನಬ್ರಹ್ಮಾದ್ರೀ । ಶ್ರೀಭಾಗವತಔದುಂಬರೀ । ಜನ್ಮಲೀ ಶಾಂತಿ ಗೋದಾವರೀ । ನಿಜಮೂಳಾಕಾರೀ ನಿರ್ಮಳ ॥೬೬॥ ತೇ ಗುಪ್ತ ಓಘೇ ನಾರದಗತೀ । ಉದ್ಧವಗಂಗಾದ್ವಾರೀ ವ್ಯಾಸೋಕ್ತಿ । ತೇಚಿ ಶುಕಮುಖಿಕುಶಾವರ್ತೀ । ಪ್ರಕಟೇ ಅವಚಿತೀ ಪವಿತ್ರಪಣೇ ॥೬೭॥ ತಯಾ ಪವಿತ್ರ ಓಘಾಚಿಯೇ ಗತೀ । ಶ್ರದ್ಧಾಧೃತೀ ಸಮರಸೇ ಭಕ್ತೀ । ತ್ಯಾಚಿ ಅರುಣಾ ವರುಣಾ ಸರಸ್ವತೀ । ಹೇ ಸಂಗಮಪ್ರಾಪ್ತೀ ಜೇಥ ಹೋಯ ॥೬೮॥ ತೇಣೇ ಶಾಂತಿಗಂಗೇಚೀ ಸ್ಥಿತೀ । ಭರೂನಿ ಉಥಳೇ ಅತಿಉನ್ನತೀ । ತೇಥ ಶ್ರವಣಾರ್ಥೀ ಬುಡೀ ದೇತೀ । ತೇ ಪವಿತ್ರ ಹೋತೀ ನಿಜಕ್ಷಮಾ ॥೬೯॥ ತೇ ಶಾಂತಿಗಂಗಾ ಅತಿವಿಖ್ಯಾತ । ಉದ್ಧವ ಕರಾವಯಾ ಪುನೀತ । ಪ್ರಕಟ ಕರೀ ಶ್ರೀಕೃಷ್ಣನಾಥ । ಭಿಕ್ಷುಗೀತವಿನ್ಯಾಸೇ ॥೭೦॥

ಕೇನಚಿದ್ ಭಿಕ್ಷುಣಾ ಗೀತಂ ಪರಿಭೂತೇನ ದುರ್ಜನೈಃ । ಸ್ಮರತಾ ಧೃತಿಯುಕ್ತೇನ ವಿಪಾಕಂ ನಿಜಕರ್ಮಣಾಮ್ ॥೫॥

ಅರ್ಥ:- ಒಬ್ಬ ಭಿಕ್ಷುಕ ಸನ್ಯಾಸಿಗೆ ಆನೇಕ ದುಷ್ಟರು ಬಹಳಷ್ಟು ಪೀಡೆಯನ್ನು ಕೊಟ್ಟರು. ಆದರೆ ಆತನು ತನ್ನ ಧೈರ್ಯವನ್ನು ಬಿಡಲಿಲ್ಲ. ಇದೆಲ್ಲವೂ ನನ್ನ ಪೂರ್ವಜನ್ಮದ ಫಲವಾಗಿದೆ ಎಂದು ತಿಳಿದು ಮನಸ್ಸಿನ ಉದ್ಗಾರವನ್ನು ಪ್ರಕಟಿಸಿದನು. ಈ ಇತಿಹಾಸದಲ್ಲಿ ಆತನ ವರ್ಣನೆಯು ಇದೆ.

ಉದ್ಧವಾ ಕೋಣೇ ಏಕ ಸನ್ಯಾಸೀ । ದುರ್ಜನೀ ಉಪದ್ರವಿತಾ ತ್ಯಾಸೀ । ಮ್ಹಣೇ ಕ್ಷಯೋ ಹೋಯ ದುಷ್ಟಕರ್ಮಾಸೀ । ಯೇಣೇ ಸಂತೋಷೇ ಮಾನಸೀ ಕ್ಷಮಾವಂತ ॥೭೧॥

ಈ ಪ್ರಕಾರದ ಉದ್ಧವನ ಮನೋಗತವನ್ನು ಯಥಾಯೋಗ್ಯ ತಿಳಿದುಕೊಂಡು ಶ್ರೀಕೃಷ್ಣನು ಶಾಂತಿಯ ನಿರ್ಣಯವನ್ನು ಹೇಳುತ್ತಿರುವನು ॥೬೨॥ ಈತನು ಈ ಹಿಂದೆ ಒಂದು ಸಾರೆ ಆತ್ಮಶಾಂತಿಯನ್ನು ಹೇಳಿದ್ದನು. ಹಾಗೂ ಅದನ್ನು ಕೂಡಲೇ ನೀನದನ್ನು ಸಂಪಾದಿಸು ಎಂದೂ ಕೂಡ ಹೇಳಿದ್ದನು. ಆದರೆ ಅದು ಉದ್ಧವನಿಗೆ ಬಹು ಅಡಚಣೆಯಾಗಿ ಪರಿಣಮಿಸಿತು. ಆದ್ದರಿಂದ ಆತನ ಮನದಲ್ಲಿ ಸಂಕೋಚವು ಉತ್ಪನ್ನವಾಯಿತು ॥೬೩॥ ಕಾರಣವೇನೆಂದರೆ, ಶಾಂತಿಯು ಸರ್ವರಿಗೂ ಅಸಾಧ್ಯವಾಗಿರುವುದು ಎಂದು ಉದ್ಧವನ ಮನದಲ್ಲಿತ್ತು. ಇದನ್ನು ತಿಳಿದುಕೊಂಡೇ ಶ್ರೀಕೃಷ್ಣನು ಭಿಕ್ಷುಗೀತೆಯ ವೃತ್ತಾಂತವನ್ನು ಹೇಳಲಿಕ್ಕೆ ಪ್ರಾರಂಭಿಸಿದನು ॥೬೪॥

ಕಾಮ - ಕ್ರೋಧಗಳಿಂದ ಮಲಿನವಾಗಿರುವ ಚಿತ್ತವೃತ್ತಿಯನ್ನು ಶುದ್ಧ, ಪರಮ ಪವಿತ್ರವನ್ನಾಗಿ ಮಾಡುವುದಕ್ಕಾಗಿ ಶ್ರೀಕೃಷ್ಣನು ಹೇಳುತ್ತಿರುವ ಇತಿಹಾಸವು ನಿರ್ಮಲವಾದ ಗಂಗಾನದಿಯೇ ಆಗಿರುವುದು ॥೬೫॥ ಶ್ರೀಕೃಷ್ಣರೂಪ ಬ್ರಹ್ಮಗಿರಿಯ ಮೇಲೆ ಭಾಗವತರೂಪ ಔದುಂಬರ ವೃಕ್ಷದಡಿಯಲ್ಲಿ ಶಾಂತಿರೂಪ ಗೋದಾವರಿಯು ಉಗಮವಾಯಿತು. ಆದ್ದರಿಂದ ಅದು ಮೂಲದಿಂದಲೇ ಅತ್ಯಂತ ಪವಿತ್ರವಾಗಿರುವುದು ॥೬೬॥ ಇದು ಗುಪ್ತವಾದ ಓಘದಿಂದ ನಾರದರವರೆಗೆ ಬಂದು ಮುಟ್ಟಿಕೊಂಡಿತು. ಹೇ ಉದ್ಧವನೇ, ಇದೇ ವ್ಯಾಸರ ವಚನಗಳಿಂದ ಪ್ರಕಟವಾಯಿತು. ಇದೇ ಶುಕಾಚಾರ್ಯರ ಮುಖರೂಪ ಕುಶಾವರ್ತಿಯಲ್ಲಿ ಪವಿತ್ರತೆಯಿಂದ ಆಕಸ್ಮಾತಾಗಿ ಪ್ರಕಟವಾಯಿತು ॥೬೭॥ ಇದರ ಪವಿತ್ರ ಓಘದ ಜೊತೆಯಲ್ಲಿ ಶ್ರದ್ಧೆ, ಧೃತಿ, ಭಕ್ತೀ ಈ ಅನುಕ್ರಮದಿಂದ ಅರುಣಾ, ವರುಣಾ ಮತ್ತು ಸರಸ್ವತಿ ಈ ನದಿಗಳು ಬಂದು ಅಲ್ಲಿ ಇವರ ಸಂಗಮವಾಗಿರುವುದು ॥೬೮॥ ಹೀಗಾಗಿ ಶಾಂತಿರೂಪ ಗಂಗಾನದಿಗೆ ಮಹಾಪೂರವು ಬಂದಿರುವುದು. ಇದು ಎರಡೂ ದಂಡೆಯಲ್ಲಿ ತುಂಬಿ ಹರಿಯುತ್ತಿರುವುದು. ಇದರಲ್ಲಿ ಶ್ರವಣಾರ್ಥಿಗಳು ಯಾರು ಜಿಗಿಯುವರೋ, ಅವರು ತಮ್ಮ ಅಂಗದ ಕ್ಷಮತ್ವದಿಂದ ಪರಮ ಪವಿತ್ರರಾಗುವರು ॥೬೯॥ ಈಗ ಉದ್ಧವನಿಗೆ ಪಾವನ ಮಾಡುವುದಕ್ಕಾಗಿ ಶ್ರೀಕೃಷ್ಣನು ಭಿಕ್ಷುಗೀತೆಯ ವರ್ಣನೆಯಿಂದ ಆ ಯಾವ ಅತಿಶಯ ಪ್ರಸಿದ್ಧವಾಗಿರುವ ಶಾಂತಿರೂಪ ಗಂಗೆಯನ್ನೇ ಪ್ರಕಟ ಮಾಡುವನು ॥೭೦॥

ಹೇ ಉದ್ಧವನೇ, ಪೂರ್ವದಲ್ಲಿ ಒಬ್ಬ ಸನ್ಯಾಸಿಯು ಇದ್ದನು. ಆತನಿಗೆ ದುರ್ಜನರು ಅತಿಶಯವಾಗಿ ಪೀಡೆಯನ್ನು ಕೊಟ್ಟರು. ಆಗ ಆ ಕ್ಷಮಾಶೀಲನಾಗಿರುವ ಸನ್ಯಾಸಿಯು ಅತಿಶಯವಾಗಿ ಸಂತೋಷಪಟ್ಟನು ಮತ್ತು ಮನದಲ್ಲಿ ಈ ದುರ್ಜನರ ಕೃಪೆಯಿಂದ ನನ್ನ ದುಷ್ಟ ಕರ್ಮಗಳು ಕ್ಷಯವಾದವು ಎಂದು ತಿಳಿದನು ॥೭೧॥

ಆಪುಲೇ ಅಂಗೀಚೇ ಮಳ । ಪುಢಿಲೀ ಕ್ಷಾಳಿತಾ ಸಕಳ । ಜೋ ಕ್ರೋಧೇಸೀ ಕರೀ ತಳಮಳ । ತೋ ಮೂರ್ಖ ಕೇವಳ ಆತ್ಮಘಾತೀ ॥೭೨॥ ಲೋಕ ಮ್ಹಣತೀ ಜ್ಯಾಸೀ ದುರ್ಜನ । ಸನ್ಯಾಸೀ ಮ್ಹಣೇ ತೇ ಮಾಝೇ ಸ್ವಜನ । ಮಾಝೇ ದೋಷಾಂಚೇ ನಿರ್ದಳಣ । ಯಾಂಚೇನಿ ಧರ್ಮೇ ಜಾಣ ಹೋತಸೇ ॥೭೩॥ ಸಂಮುಖ ಕೋಣೀ ನಿಂದಾ ಕರಿತೀ । ತೇಣೇ ಅತ್ಯಂತ ಸುಖಾವೇ ಚಿತ್ತೀ । ಮ್ಹಣೇ ಮಜ ತುಷ್ಟಲಾ ಶ್ರೀಪತೀ । ಪಾಪಾಚೀ ನಿಷ್ಕೃತೀ ಸಹಜೇ ಹೋಯ ॥೭೪॥ ಐಸೇನಿ ವಿವೇಕೇ ತತ್ತ್ವತಾ । ಶಾಂತೀಸೀ ಢಳೋ ನೇದೀ ಸರ್ವಥಾ । ಚಢೋನಿ ನಿಜ ಧೈರ್ಯಾಚೇ ಮಾಥಾ । ಗಾಯಿಲೀ ಗಾಥಾ ತೇ ಐಕ ॥೭೫॥ ಉದ್ಧವಾಸೀ ಮ್ಹಣೇ ಶ್ರೀಕೃಷ್ಣನಾಥ । ಯೇ ಅರ್ಥೀ ಹೋಈ ಸಾವಚಿತ್ತ । ಅತಿಲೋಭೀ ತೋ ಅತಿವಿರಕ್ತ । ಝಾಲಾ ತೋ ವೃತ್ತಾಂತ ಸಾಂಗೇನ ॥೭೬॥

ಅವಂತಿಷು ದ್ವಿಜಃ ಕಶ್ಚಿದಾಸೀದಾಢ್ಯತಮಃ ಶ್ರಿಯಾ । ವಾರ್ತಾವೃತ್ತಿಃ ಕದರ್ಯಸ್ತು ಕಾಮೀ ಲುಬ್ಧೋಽತಿಕೋಪನಃ ॥೬॥

ಅರ್ಥ:- ಒಂದಾನೊಂದು ಕಾಲದಲ್ಲಿ ಆವಂತೀನಗರದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆವನು ಶ್ರೀಮಂತನೂ ಸಕಲೈಶ್ವರ್ಯ ಸಂಪನ್ನನೂ ಆಗಿದ್ದು ಕೃಷಿ ವ್ಯಾಪಾರ ವೃತ್ತಿಯಲ್ಲಿ ತೊಡಗಿದ್ದನು. ಆದರೆ ಆ ಬ್ರಾಹ್ಮಣನು ಕೃಪಣನೂ, ಕಾಮಿಯೂ, ದುರಾಶಾಪೀಡಿತನೂ ಶ್ರೀಘ್ರಕೋಪಿಯೂ ಆಗಿದ್ದನು.

ಮಾಲವದೇಶೀ ಅವಂತಿನಗರೀ । ತೇಥ ಬ್ರಾಹ್ಮಣ ವಸೇ ಗೃಹದ್ವಾರೀ । ಕೃಷಿವಾಣಿಜ್ಯವೃತ್ತೀವರೀ । ಜೀವಿಕಾ ಕರೀ ನಿರಂತರ ॥೭೭॥ ಗಾಂಠೀ ಧನಧಾನ್ಯಸಮೃದ್ಧೀ । ಅಮರ್ಯಾದ ದ್ರವ್ಯಸಿದ್ಧೀ । ಪರೀ ಅತಿಶಯೇ ಕೃಪಣಬುದ್ಧೀ । ಪೋಟಾಹೀ ತ್ರಿಶುದ್ಧೀ ನ ಖಾಯ ॥೭೮॥ ಪೋಟಾ ಸದಾ ಖಾಯ ಕದನ್ನ । ತೇಹೀ ನಾಹೀ ಉದರಪೂರ್ಣ । ತೇಥ ಸ್ತ್ರೀಪುತ್ರಾದಿ ದಾಸೀಜನ । ಜಠರತರ್ಪಣ ನ ಪಾವತೀ ॥೭೯॥ ನ ಕರೀ ನಿತ್ಯನೈಮಿತ್ಯ । ಸ್ವಪ್ನೀ ನೇಣೇ ಧರ್ಮಕೃತ್ಯ । ದೇವ ಬ್ರಾಹ್ಮಣ ಅತಿಥೀ ತೇಥ । ಸದಾ ಜಾತ ಪರಾಂಗ್ಮುಖ ॥೮೦॥ ಕವಡೀ ಏಕ ಲಾಭೂ ಪಾಹೇ । ತೈ ಮಾತಾಪಿತ್ಯಾಂಚೇ ಶ್ರಾದ್ಧ ಆಹೇ । ತೇ ಸಾಂಡೂನಿ ಅಂತ್ಯಜಗೃಹಾ ಜಾಯೇ । ನ ಮನಿ ಭಯೇ ಸ್ಪರ್ಶಾಚೇ ॥೮೧॥ ಮೀ ಉತ್ತಮ ಹಾ ಹೀನವರ್ಣ । ಹೇ ಧನಲೋಭೇ ಗಿಳೀ ಆಠವಣ । ಹಾತಾ ಯೇತಾ ದೇಖೋನಿ ಧನ । ಸ್ವೀಕಾರೀ ಅನ್ನ ಪತಿತಾಂಚೇ ॥೮೨॥ ಧನಕಾಮಾಸಾಠೀ ದೇಖ । ನ ಮನೀ ಪಾಪ ಮಹಾದೋಖ । ಕವಡೀಚ್ಯಾ ಲೋಭೇ ಕೇಲಾ ಮೂರ್ಖ । ನಾಠವೇ ನರಕಮಹಾಪಾತೂ ॥೮೩॥

ತನ್ನ ಶರೀರದಲ್ಲಿನ ಮಲಿನವನ್ನು ಬೇರೆಯವರು ತೊಳೆಯುತ್ತಿರಲು ಇದರಿಂದ ತನ್ನ ಶರೀರವು ಅನಾಯಾಸವಾಗಿ ಪರಮ ಪವಿತ್ರವಾಗುವುದು. ಇದನ್ನು ತಿಳಿಯದೇ ಕ್ರೋಧದಿಂದ ತಳಮಳಿಸಿದರೆ ಅವರು ಮೂರ್ಖರಾಗುವರು. ತಮ್ಮ ಆತ್ಮಘಾತವನ್ನು ತಾವೇ ಮಾಡಿಕೊಂಡಂತಾಗುವುದು ॥೭೨॥ ಜನರು ಯಾರಿಗೆ ದುರ್ಜನರೆನ್ನುವರೋ, ಅವರಿಗೆ ಸನ್ಯಾಸಿಯು ನನ್ನ ಸ್ವಜನರು ಎಂದು ಹೇಳುವನು. ಏಕೆಂದರೆ ಇವರ ಕೃತ್ಯಗಳಿಂದ ಸಹಜವಾಗಿ ತನ್ನ ದೋಷಗಳ ನಾಶವು ಆಗುತ್ತಿರುವುದು. ॥೭೩॥ ಯಾರದರೂ ಆತನ ಎದುರಿನಲ್ಲಿಯೇ ನಿಂದಿಸುತ್ತಿದ್ದರೆ ಆಗ ಆತನು ಮನದಲ್ಲಿ ಅತಿಶಯವಾಗಿ ಆನಂದಿತನಾಗುವನು. ಶ್ರೀಪತಿಯು ನನ್ನ ಮೇಲೆ ಪ್ರಸನ್ನನಾಗಿರುವನು. ಆದ್ದರಿಂದ ಸಹಜವಾಗಿಯೇ ನನ್ನ ಪಾಪದ ಕ್ಷಾಲನೆಯಾಗುತ್ತಿರುವುದೆಂದು ತಿಳಿಯುವನು ॥೭೪॥ ಇಂತಹ ವಿಚಾರದಿಂದ ಆತನು ನಿಜವಾಗಿಯೂ ತನ್ನ ಶಾಂತಿಯನ್ನು ಎಂದಿಗೂ ಭಂಗಗೊಳಿಸುತಿದ್ದಿಲ್ಲ. ತನ್ನ ಧೈರ್ಯದ ಶಿಖರದ ಮೇಲೆ ಕುಳಿತುಕೊಂಡು ಹಾಡಿದ ಗೀತವನ್ನು ನೀನೀಗ ಶ್ರವಣವನ್ನು ಮಾಡು ॥೭೫॥ ಈಗ ಏಕಾಗ್ರತೆಯಿಂದ ಲಕ್ಷವನ್ನು ಕೊಡು. ಪೂರ್ವದಲ್ಲಿ ಅತ್ಯಂತ ಲೋಭಿಯಾದವನು ಈಗ ಅತ್ಯಂತ ವಿರಕ್ತನು ಹೇಗಾದನೆಂಬುದನ್ನು ನಾನು ನಿನಗೆ ಈಗ ಹೇಳುವೆನು ಎಂದು ಶ್ರೀಕೃಷ್ಣನು ನುಡಿದನು ॥೭೬॥

ಪೂರ್ವದಲ್ಲಿ ಮಾಲವದೇಶದ ಅವಂತೀ ನಗರದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಮನೆಯ ಪಡಸಾಲೆಯಲ್ಲಿ ಕುಳಿತುಕೊಳ್ಳುತ್ತಿದ್ದನು. ಕೃಷಿವಾಣಿಜ್ಯದಿಂದ ತನ್ನ ಉದರ ಪೋಷಣೆ ಮಾಡುತ್ತಿದ್ದನು ॥೭೭॥ ಆತನ ಮನೆಯಲ್ಲಿ ಧನಧಾನ್ಯ ಸಮೃದ್ಧಿಯಾಗಿತ್ತು. ಅಗಣಿತ ಸಂಪತ್ತು ಇತ್ತು. ಆದರೂ ಆತನು ಅತಿ ಕೃಪಣನಾಗಿ ಹೊಟ್ಟೆ ತುಂಬ ಊಟವನ್ನು ಮಾಡುತ್ತಿದ್ದಿಲ್ಲ ॥೭೮॥ ಇವನು ಯಾವಾಗಲೂ ತಂಗಳ ಅನ್ನವನ್ನು ತಿನ್ನುತ್ತಿದ್ದನು. ಅದೂ ಕೂಡ ಯಾರಿಗೂ ಹೊಟ್ಟೆ ತುಂಬ ಕೊಡುತ್ತಿದ್ದಿಲ್ಲ. ಇದರಿಂದ ಆತನ ಹೆಂಡತಿ, ಮಕ್ಕಳು ಆಳುಗಳು ಅರೆಹೊಟ್ಟೆಯಿಂದ ಬದುಕುತ್ತಿದ್ದರು ॥೭೯॥ ಇವನು ಎಂದಿಗೂ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡುತ್ತಿರಲಿಲ್ಲ. ಧರ್ಮಕಾರ್ಯಗಳನ್ನು ಸ್ವಪ್ನದಲ್ಲಿಯೂ ನಡೆಸುತ್ತಿದ್ದಿಲ್ಲ. ದೇವ, ಬ್ರಾಹ್ಮಣ, ಅತಿಥಿಗಳು ಇವರನ್ನು ಏನೂ ಕೊಡದೇ ಕಳಿಸುತ್ತಿದ್ದನು ॥೮೦॥ ಮನೆಯಲ್ಲಿ ತಂದೆತಾಯಿಯವರ ಶ್ರಾದ್ಧ ಬಂದರೂ ಅದನ್ನು ಬಿಟ್ಟು ಒಂದು ಕವಡಿಯ ಲಾಭಕ್ಕಾಗಿ ಅಂತ್ಯಜನ ಮನೆಗೆ ಹೋಗುತ್ತಿದ್ದನು. ಆತನಿಗೆ ಮಲಿನತ್ವದ ಭಯವಿದ್ದಿಲ್ಲ ॥೮೧॥ ನಾನು ಉಚ್ಚಕುಲದ ಬ್ರಾಹ್ಮಣನು, ಇವರು ನೀಚಕುಲದವರು ಎಂಬ ಸ್ಮರಣೆಯೇ ಧನಲೋಭಿಯಾದ ಆತನಿಗೆ ಇರುತ್ತಿದ್ದಿಲ್ಲ. ಕೈಯಲ್ಲಿ ಕಾಸು ಬೀಳುವಂತೆ ಕಂಡರೆ ಹೀನಕುಲದ ಅನ್ನವನ್ನೂ ಕೂಡ ಸ್ವೀಕರಿಸುತ್ತಿದ್ದನು ॥೮೨॥ ದ್ರವ್ಯಲೋಭದಿಂದ ಪಾತಕ ಅಥವಾ ಮಹಾದೋಷಗಳನ್ನು ಈತನು ಮನದಲ್ಲಿ ತರುತ್ತಿದ್ದಿಲ್ಲ. ಈತನ ದೃಷ್ಟಿಯಲ್ಲಿ ದ್ರವ್ಯ ಸಂಪಾದನೆಯೇ ಮಹತ್ವದ್ದಾಗಿತ್ತು. ದಮಡಿಯ ಲೋಭವು ಈತನನ್ನು ಎಷ್ಟು ಮೂರ್ಖನನ್ನಾಗಿ ಮಾಡಿತ್ತೆಂದರೆ ಈತನಿಗೆ ಮಹಾಪಾಪ, ನರಕಗಳ ನೆನಪೂ ಕೂಡ ಆಗುತ್ತಿರಲಿಲ್ಲ ॥೮೩॥

ಯಾಪರೀ ತೋ ಕರ್ಮಭ್ರಷ್ಟ । ಅಕರ್ಮ ಕರೀ ಕ್ರಿಯಾನಷ್ಟ । ಅತಿವಂಚಕ ಮಹಾಶಠ । ಕೇವಳ ನಷ್ಟ ಧನಲೋಭೀ ।।೮೪।। ತ್ಯಾ ಧನ ಲೋಭಾಚಾ ಅವರೋಧೂ । ಹೋತಾ ದೇಖೋನಿ ಖವಳೇ ಕ್ರೋಧೂ । ಗೋಹತ್ಯಾದಿ ಬ್ರಹ್ಮವಧೂ । ಕರಾವಯಾ ಸಿದ್ಧೂ ಸ್ವಯೇ ಹೋಯ ।।೮೫।। ಧನಕಾಮೀ ಕ್ರೋಧಾಚೀ ವಸತೀ । ಧನಾಪಾಶೀ ಪಾಪೇ ಅಸತೀ । ಧನಲೋಭೀ ಜ್ಯಾಚೀ ಸ್ಥಿತೀ । ಕದರ್ಯವೃತ್ತಿ ತ್ಯಾ ನಾಂವ ।।೮೬।। ಐಸೇ ಧನ ಸಾಂಚಿಲೇ ಘಾಡೋವಾಡೇ । ತ್ಯಾಚಾಹೀ ವ್ಯಯ ಜೈ ಕರಣೇ ಪಡೇ । ತೈ ಪ್ರಾಣಾಂತಚಿ ಯೇಊನಿ ಘಡೇ । ವಿಚಾರ ಪುಢೇ ಅಸೇನಾ ।।೮೭।। ವಾನರಾಚೇ ಗಾಲೀಂಚೇ ಚಣೇ । ಹಾತಾತ ನ ಯೇತೀ ಜಿತಾ ಪ್ರಾಣೇ । ತೈಸಾ ದ್ರವ್ಯಾಚಾ ವ್ಯಯೋ ಕರಣೇ । ತೇಚಿ ಮರಣೇ ಕದರ್ಯಾ ।।೮೮।।

ಜ್ಞಾತಯೋಽತಿಥಯಸ್ತಸ್ಯ ವಾಙ್ಮಾತ್ರೇಣಾಪಿ ನಾರ್ಚಿತಾಃ । ಶೂನ್ಯಾವಸಥ ಆತ್ಮಾಽಪಿ ಕಾಲೇ ಕಾಮ್ಯೈರನರ್ಚಿತಃ ।।೭।।

ಅರ್ಥ:- ತನ್ನ ಕುಲಬಾಂಧವರಲ್ಲಿ ಮತ್ತು ಅತಿಥಿಗಳವರಲ್ಲಿ ಎಂದಿಗೂ ಒಳ್ಳೆಯ ಮಾತುಗಳನ್ನಾಡಿ ಪ್ರಸನ್ನಗೊಳಿಸಲಿಲ್ಲ. ತಿನ್ನಿಸುವ-ಕುಡಿಸುವ ಮಾತು ದೂರೇ ಇರಲಿ. ಧರ್ಮವನ್ನು ಇವನ್ನು ಪಾಲಿಸುತ್ತಿದ್ದಿಲ್ಲ. ತನ್ನ ಸಂಪತ್ತಿನಿಂದ ತನ್ನ ಶರೀರಕ್ಕೂ ಕೂಡ ಸುಖ ಕೊಡಲಿಲ್ಲ.

ಘರೀಂಚಾ ಭಾತ ವೇಂಚೇಲ ಕಾಂಹೀ । ಯಾಲಾಗೀ ವೈಶ್ವದೇವ ಕರಣೇ ನಾಹೀ । ತೇಥ ಅತಿಥಿ ಆಲಿಯಾ ಪಾಹೀ । ಕೋಣೇ ಸಮಯೀ ಕೋಣ ಪೂಜೀ ।।೮೯।। ಅತಿಥಿ ಆಲಿಯಾ ಜಾಣ । ಐಸೇ ಬೋಲ ಬೋಲೇ ಆಪಣ । ಜೇ ವಚನಮಾತ್ರೇ ಜಾತೀ ಪ್ರಾಣ । ತ್ಯಾಸೀ ಮಾಗೇ ಕೋಣ ಅನ್ನೋದಕ ।।೯೦।। ದೇಖೋನಿ ತ್ಯಾಚಿಯಾ ಘರಾಸೀ । ಬ್ರಹ್ಮಚಾರೀ ನಿತ್ಯ ಉದಾಸೀ । ಆಶಾ ತ್ಯಜಿಲೀ ಸನ್ಯಾಸೀ । ಜೇವೀ ರಾಜಹಂಸೀ ಗೋಮಯ ।।೯೧।। ಭಿಕಾರೀ ಸಾಂಡಿಲೇ ತ್ಯಾಚೇ ದ್ವಾರ । ಅತಿಥೀ ಡಾವಲಿಲೇ ನಿರಂತರ । ಪಾಹುಣಾ ದೂರೀ ಪಾಹೇ ಬಿಢಾರ। ನಿರಾಶೀಪಿತರ ಸರ್ವದಾ ।।೯೨।। ದಾರಾ ನ ಯೇ ಕೋರಾನ್ನಕರ । ಘರ ಸಾಂಡೂನಿ ಗೇಲೇ ಉಂದಿರ । ಕಾಉಳೀ ವೋಸಂಡಿಲೇ ತೇ ಘರ । ಚಿಡಿಯಾ ಸಾಚಾರ ನ ಮಿಳೇ ದಾಣಾ ।।೯೩।। ಮುಂಗ್ಯಾಸೀ ಪಡೇ ನಿತ್ಯ ಲಂಘನ । ತಿಂಹೀ ಧರಿಲೇ ಬಿಢಾರ ಆನ । ಪೋಟಾ ನಾ ಖಾಯ ಜೋ ಆಪಣ । ತೇಥ ಕಥಾ ಕೋಣ ಇತರಾಂಚೀ ।।೯೪।। ಅತ್ಯಂತ ಭೂಕ ಲಾಗಲ್ಯಾ ಪೋಟೀ । ಚಣೇಹೀ ನ ಖಾಯ ಜಗಜೇಠೀ । ತೇಥ ಕಾಯಸೀ ಸೇವಕಾಂಚೀ ಗೋಠೀ । ಕಾವಲೀ ಪೋಟೀ ಸ್ತ್ರೀಪುತ್ರೇ।।೯೫।।

ಈ ಪ್ರಕಾರವಾಗಿ ಈತನು ಕರ್ಮಭ್ರಷ್ಟ ಮತ್ತು ಕ್ರಿಯಾನಷ್ಟ ಬ್ರಾಹ್ಮಣನಾಗಿ ಕೆಟ್ಟ ಕರ್ಮಗಳನ್ನು ಮಾಡುತ್ತಿದ್ದನು. ಇವನು ಮಹಾ ಠಕ್ಕ ಕಪಟೀಯಾಗಿ ಧನಲೋಭದಿಂದ ನಷ್ಟನಾಗಿದ್ದನು ।೮೪।। ಈತನಿಗೆ ಧನಲೋಭದಲ್ಲಿ ಏನಾದರೂ ಅಡತಡೆಗಳು ಒದಗಲು ಆಗ ಕ್ರೋಧವು ಉಕ್ಕೇರಿ ಪ್ರಕಟವಾಗುತ್ತಿತ್ತು. ಇಂತಹ ಸಮಯದಲ್ಲಿ ಇವನು ಗೋಹತ್ಯಾ, ಬ್ರಾಹ್ಮಣ ಹತ್ಯಾ ಇತ್ಯಾದಿ ಮಾಡಲು ಸ್ವತಃ ಸಿದ್ಧನಾಗುತ್ತಿದ್ದನು ।೮೫।। ಧನಲೋಭವಿದ್ದಲ್ಲಿ ಕ್ರೋಧದ ವಸತಿ ಇರುವುದು ಮತ್ತು ಧನದಹತ್ತಿರ ಪಾಪಗಳೂ ಕೂಡ ಇರುವುವು. ಈ ಪ್ರಕಾರವಾಗಿ ಯಾರ ಧನಲೋಭದ ವೃತ್ತಿ ವಿರುವುದೋ, ಆತನಿಗೆ ''ಕೃಪಣ'' ಎಂದು ಕರೆಯುವರು ।೮೬।। ಈ ಕೃಪಣತನದಿಂದ ಈತನು ದೊಡ್ಡ ಪ್ರಮಾಣದಲ್ಲಿ ದ್ರವ್ಯವನ್ನು ಕೂಡಿಸಿಟ್ಟಿದ್ದನು. ಕೂಡಿಟ್ಟ ಧನದಲ್ಲಿ ಖರ್ಚು ಮಾಡುವ ಪ್ರಸಂಗವು ಬಂದರೆ ಈತನಿಗೆ ಪ್ರಾಣವು ಹೋಗುವಷ್ಟು ತ್ರಾಸಾಗುತ್ತಿತ್ತು. ಅನ್ಯ ಯಾವ ವಿಚಾರವೂ ಈತನ ಮನದಲ್ಲಿ ಬರುತ್ತಿದ್ದಿಲ್ಲ ।೮೭।। ಕೋತಿಯ ಮುಖದಲ್ಲಿನ ಕಡಲೆಯನ್ನು ಅದು ಜೀವಂತವಿರುವ ವರೆಗೂ ಯಾರ ಕೈಗೂ ಹತ್ತಲು ಸಾಧ್ಯವಿಲ್ಲ. ಅದರಂತೆ ಹಣವನ್ನು ಖರ್ಚು ಮಾಡಬೇಕೆಂದರೆ ಕೃಪಣನ ಮರಣವೇ ಆಗಿರುವುದು ।೮೮।।

ಮನೆಯಲ್ಲಿನ ಅನ್ನವು ಸ್ವಲ್ಪವೂ ಕಡಿಮೆಯಾಗಬಾರದೆಂದು ಈ ಕೃಪಣನು ವೈಶ್ವದೇವವನ್ನೂ ಕೂಡ ಮಾಡುತ್ತಿದ್ದಿಲ್ಲ. ಇಂತಹ ಪ್ರಸಂಗದಲ್ಲಿ ಯಾರಾದರೂ ಅತಿಥಿಯು ಆಗಮಿಸಲು ಆತನಿಗೆ ಯಾರು ಏನೆಂದು ಪೂಜಿಸಬೇಕು? ।೮೯।। ಹೀಗಿರುತ್ತಿರಲು ಒಬ್ಬ ಅತಿಥಿಯು ಬಂದುಬಿಡಲು ಆಗ ಆತನಿಗೆ ಕಟುವಾಗಿ ಮಾತನಾಡುತ್ತಿದ್ದನು. ಈ ಮಾತುಗಳನ್ನು ಕೇಳಿ ಆತನು ಪ್ರಾಣವನ್ನೇ ಬಿಡಬೇಕಾಗುವ ಪ್ರಸಂಗ ಒದಗಲು, ಆತನ ಮನೆಗೆ ಅನ್ನ ನೀರುಗಳನ್ನು ಯಾರು ಕೇಳಬೇಕು? ।೯೦।। ರಾಜಹಂಸ ಪಕ್ಷಿಯು ಸೆಗಣಿಯತ್ತ ಹೊರಳಿಯೂ ನೋಡುವುದಿಲ್ಲ. ಅದರಂತೆ ಬ್ರಹ್ಮಚಾರಿಗಳು ಈ ಕೃಪಣನ ಮನೆಯತ್ತ ಭಿಕ್ಷೆಗಾಗಿ ಹೋಗುತ್ತಿದ್ದಿಲ್ಲ, ಮತ್ತು ಸನ್ಯಾಸಿಗಳವರು ಈತನಿಂದ ಏನಾದರೂ ಪಡೆಯುವ ಆಶೆಯನ್ನೇ ಮಾಡುತ್ತಿದ್ದಿಲ್ಲ ।೯೧।। ಭಿಕ್ಷುಕರು ಆತನ ಮನೆಯನ್ನು ಬಿಟ್ಟುಬಿಡುತ್ತಿದ್ದರು. ಅತಿಥಿಗಳವರು ಯಾವಾಗಲೂ ಆತನ ಮನೆಯನ್ನು ವರ್ಜಿಸುತ್ತಿದ್ದರು. ಬೀಗರು ಬಂದರೆ ಆತನಿಂದ ದೂರ ಇಳಿದುಕೊಳ್ಳುತ್ತಿದ್ದರು. ಪಿತೃಗಳು ಸದಾವಕಾಲ ನಿರಾಶರಾಗಿಯೇ ಇರುತ್ತಿದ್ದರು।೯೨।। ಕೊರಾನ್ನ ಬೇಡುವವರು ಆತನ ಮನೆಯ ಮುಂದೆ ಯಾರೂ ನಿಲ್ಲುತ್ತಿರಲಿಲ್ಲ. ಇಲಿಗಳೂ ಕೂಡ ಆತನ ಮನೆಬಿಟ್ಟು ಹೊರಟು ಹೋಗಿದ್ದವು. ಕಾಗೆಗಳು ಆತನ ಮನೆಯನ್ನು ವರ್ಜಿಸಿದ್ದವು. ಗುಬ್ಬಿಗಳಿಗೂ ಕೂಡ ಅಲ್ಲಿ ಯಾವ ಕಾಳುಗಳು ಸಿಗುತ್ತಿದ್ದಿಲ್ಲ ।೯೩।। ಇರುವೆಗಳಿಗೆ ದಿನಾಲೂ ಉಪವಾಸ ಬೀಳಬೇಕಾಗುತ್ತಿತ್ತು. ಆದ್ದರಿಂದ ಅವುಗಳೂ ಕೂಡ ಮನೆಯನ್ನು ಬಿಟ್ಟು ಬೇರೆ ಮನೆ ಸೇರಿದವು. ಇವನು ತನ್ನ ಹೊಟ್ಟೆಗೆ ತಿನ್ನುತ್ತಿದ್ದಿಲ್ಲ. ಅಂದಮೇಲೆ ಇತರರ ಯಾವ ಕಥೆ? ।೯೪।। ಇವನು ಇಷ್ಟೊಂದು ಶ್ರೀಮಂತನಾಗಿದ್ದರೂ ಕೂಡ ಹೊಟ್ಟೆ ಹಸಿದರೆ ಪುಟಾಣಿಯನ್ನೂ ತಿನ್ನುತ್ತಿದ್ದಿಲ್ಲ. ಅಲ್ಲಿ ಆಳುಹೋಳುಗಳ ಪರಿವೆ ಯಾರು ಮಾಡಬೇಕು? ಅವನ ಹೆಂಡತಿ ಮಕ್ಕಳ ಹೊಟ್ಟೆಯಲ್ಲಿ ಹಸಿವೆಯು ಚಡಪಡಿಸುತ್ತ ಒದರುತ್ತಿತ್ತು ।೯೫।।

ಜೈ ವಮನ ಘಡೇ ತ್ಯಾಸೀ। ತೈನ ಕರೀ ಫಳಾಹಾರಾಸೀ। ಅಧಿಕ ವೇಂಚೂ ಕೋಣ ಸೋಶೀ। ಯಾಲಾಗೀ ಉಪವಾಸೀ ಸ್ವಯೇ ಪಡೇ॥೯೬॥ ತೇಥ ಕುಳಗುರೂಚಾ ಸನ್ಮಾನ। ಕುಳಧರ್ಮ ಗೋತ್ರ ಭೋಜನ। ವ್ಯಾಹೀ ಜಾಂವಈ ಯಾಂಚಾ ಮಾನ। ಧನಲೋಭೀ ಜಾಣ ಕದಾ ನ ಕರೀ ॥೯೭॥ ಋತುಕಾಳೀ ಫಳೇ ಯೇತೀ ಪೂರ್ಣ। ತ್ಯಾಸೀ ದೃಷ್ಟಿ ಭೇಟೀ ಹಾಟೀ ಜಾಣ। ಪರೀ ಜಿವ್ಹೇಸೀ ಆಲಿಂಗನ। ಪ್ರಾಣಾಂತೀ ಆಪಣ ಹೋ ನೇದೀ ॥೯೮॥ ಮಾತೇಚೇ ಸ್ತನಪಾನ ಸೇವಿಲೇ। ತೇಚಿ ಕ್ಷೀರ ರಸನಾ ಚಾಖಿಲೇ। ಪುಢೇ ದೂಧಚಿ ವರ್ಜಿಲೇ। ವ್ರತ ಧರಿಲೇ ಧನಲೋಭೇ ॥೯೯॥ ರಸ ರಸನೇಚೇ ಮಾಹೇರ। ತೇಣೇ ವೀಣ ತೇ ಗಾದಲೀ ಥೋರ। ಧನಲೋಭ ಅತಿನಿಷ್ಠುರ। ಕರಿತಾ ಕರಕರ ಭೇಟೋ ನೇದೀ ॥೧೦೦॥ ವಸ್ತ್ರೇ ಮಳಕೀ ಅತಿಜೀರ್ಣ। ಮಸ್ತಕ ಸದಾ ಮಲಿನ। ಮುಖೀ ವಾಸ ನಿಘತೀ ಜಾಣ। ಸ್ವಪ್ನೀಹೀ ಪಾನ ನ ಖಾಯ ॥೧೦೧॥ ಸಣ ವಾರ ದಿವಾಳೀ ದಸರಾ। ತೈ ಜುನೇ ಜೋಂಧಳೇ ಧಾಡೀ ಘರಾ। ಅನ್ನೇವಿಣ ಪೀಡೀ ಲೇಕುರಾ। ಕದರ್ಯು ಖರಾ ಯಾ ನಾಂವ ॥೧೦೨॥ ಧನಲೋಭೀ ಧರ್ಮಹೀನ। ದೇಖೋನಿ ಕದರ್ಯುವರ್ತನ। ವಿಮುಖ ಝಾಲೇ ಸ್ವಜನ। ತೇಚಿ ನಿರೂಪಣ ಹರಿ ಸಾಂಗೇ ॥೧೦೩॥

ದುಃಶೀಲಸ್ಯ ಕದರ್ಯಸ್ಯ ದ್ರುಹ್ಯಂತೇ ಪುತ್ರಬಾಂಧವಾಃ। ದಾರಾ ದುಹಿತರೋ ಭೃತ್ಯಾ ವಿಷಣ್ಣಾ ನಾಚರನ್ ಪ್ರಿಯಮ್ ॥೮॥

ಅರ್ಥ:- ಈತನ ಕೃಪಣತನವನ್ನು ಕಂಡು ಮತ್ತು ಈತನ ಕೆಟ್ಟವರ್ತನೆಯಿಂದ ಬೇಸತ್ತ ಈತನ ಹೆಂಡತಿ, ಮಕ್ಕಳು, ಬಂಧು ಬಳಗ ಆಳುಗಳು ಇತ್ಯಾದಿ ಸರ್ವರೂ ದುಃಖಿಗಳಾಗಿದ್ದರು. ಇವರೆಲ್ಲರೂ ಈತನ ವಿಷಯಕ್ಕೆ ಅನಿಷ್ಟ ಚಿಂತನೆ ಮಾಡುತ್ತಿದ್ದರು. ಯಾರೊಬ್ಬರೂ ಇವನನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದಿಲ್ಲ.

ನಾಹೀ ಸ್ವಧರ್ಮೀ ನಿಜಶೀಳ। ದಾನಧರ್ಮ ಖುಡೀ ಸಕಳ। ಅತ್ಯಂತ ಧನಲೋಭೀ ಕೇವಳ। ತ್ಯಾಸೀ ದುಃಶೀಳ ಬೋಲಿಜೇ ॥೧೦೪॥ ಅನ್ನಾಆಚ್ಛಾದನೇವೀಣ। ಕುಟುಂಬೇಸಹಿತ ಆಪಣ। ಜೋ ಕದರ್ಥವೀ ನಿಜಪ್ರಾಣ। ಕದರ್ಯು ಪೂರ್ಣ ತ್ಯಾ ನಾಂವ ॥೧೦೫॥ ಕದರ್ಯು ನರಾಸೀ ತಂವ ದೇಖ। ಮುಖ್ಯ ಸ್ತ್ರೀ ಹೋಯ ವಿಮುಖ। ಸ್ವಜನ ಆಣಿ ಸೇವಕ। ಪುತ್ರಹೀ ಪಾರಾಂಗ್‌ಮುಖ ಹೋತೀ ತ್ಯಾಸೀ ॥೧೦೬॥ ಆಪಲೇ ಜೇ ಕಾ ಸಖೇ ಬಂಧೂ। ತೇಹೀ ಕರೂ ಲಾಗತೀ ವಿರೋಧೂ। ದ್ರವ್ಯವಿಭಾಗಾಚಾ ಸಂಬಂಧೂ। ಕಲಹ ಸುಬದ್ಧೂ ಆರಂಭೇ ॥೧೦೭॥ ಗಾಠೀ ಅಸೋನಿ ಅಮಿತ ಧನ। ನ ಕರೀ ಮಾಹೇರ ಸಣ ಬೋಳವಣ। ಕನ್ಯಾ ಕ್ಷೋಭೋನಿಯಾ ಜಾಣ। ಶಾಪ ದಾರುಣ ತ್ಯಾ ದೇತೀ ॥೧೦೮॥

ಎಂದುವೇಳೆ ಆತನಿಗೆ ವಾಂತಿಯಾದರೆ ಖಾಲೀ ಹೊಟ್ಟೆಗಾಗಿ ಫಳಾರವನ್ನೂ ಕೂಡ ಸೇವಿಸುತ್ತಿದ್ದಿಲ್ಲ. ಫಳಾರಕ್ಕಾಗಿ ಹೆಚ್ಚು ಖರ್ಚು ಯಾರು ಮಾಡಬೇಕೆಂದು ತಿಳಿದು ಆತನು ಆಗ ಸ್ವತಃ ಉಪವಾಸವಿರುತ್ತಿದ್ದನು ॥೯೬॥ ಇಂತಹ ಸ್ಥಿತಿಯಲ್ಲಿ ಕುಲಗುರುಗಳ ಸನ್ಮಾನ, ಕುಲಧರ್ಮ, ಆಚಾರ, ಗೋತ್ರಜರಿಗೆ ಭೋಜನ, ಅಳಿಯ, ಅಳಿಯನ ಅಪ್ಪ, ಇವರಿಗೆ ಸತ್ಕಾರ, ಹೀಗೆ ಈ ಧನಲೋಭಿಯೂ ಏನೂ ಮಾಡುತ್ತಿದ್ದಿಲ್ಲ॥೯೭॥ ಋತುಕಾಲದಲ್ಲಿ ಸಾಕಷ್ಟು ಹಣ್ಣು ಹಂಪಲಗಳು ಬೆಳೆದು ಅವು ಮಾರಲು ಬಜಾರಕ್ಕೆ ಬಂದಾಗ ಆಗ ಅವು ಆತನ ಕಣ್ಣುಗಳಿಗೆ ಬೀಳುತ್ತಿದ್ದವು. ಆದರೆ ಅವು ಒಂದೂ ಕೂಡ ನಾಲಿಗೆಯನ್ನು ಮುಟ್ಟುತ್ತಿದ್ದಿಲ್ಲ ॥೯೮॥ ಇವನು ಕೂಸಾಗಿದ್ದಾಗ ತಾಯಿಯ ಸ್ತನಪಾನದಿಂದ ಹಾಲನ್ನು ಕುಡಿದದ್ದೇ ಕೊನೆಯದು. ಮುಂದೆ ಇವನು ಹಾಲನ್ನೇ ವರ್ಜ್ಯಮಾಡಿಬಿಟ್ಟನು. ಧನಲೋಭಿಯ ಇದೊಂದು ವ್ರತವಾಗಿದೆ ಎನ್ನುವಂತೆ ಎದ್ದು ಕಾಣುತ್ತಿತ್ತು ॥೯೯॥ ರಸ ಎನ್ನುವುದು ಇದು ರಸನೇಂದ್ರಿಯದ ತವರು ಮನೆಯಾಗಿರುವುದು. ಆದರೆ ಯಾವ ರಸ ಕಾಣದೇ ಆತನ ನಾಲಿಗೆಯು ಅತಿಶಯವಾಗಿ ಕಂಗಾಲವಾಗಿತ್ತು. ಈ ಧನಲೋಭಿಯು ಎಷ್ಟು ನಿರ್ದಯನಾಗಿದ್ದನೆಂದರೆ ಆತನ ನಾಲಿಗೆಯು ಎಷ್ಟೇ ಇಚ್ಛೆಪಟ್ಟು ಬೇಡುತ್ತಿರಲಿ ಅದಕ್ಕೆ ಯಾವ ರಸದ ಭೇಟಿಯನ್ನು ಮಾಡಿಕೊಡುತ್ತಿದ್ದಿಲ್ಲ ॥೧೦೦॥ ಇವನು ಮಲಿನ ಹರಕ ವಸ್ತ್ರಗಳನ್ನು ತೊಡುತ್ತಿದ್ದನು. ಆತನ ತಲೆಯು ಸದಾ ಧೂಳಿನಿಂದ ತುಂಬಿರುತ್ತಿತ್ತು. ಆತನ ಮುಖದಲ್ಲಿ ಕೆಟ್ಟವಾಸನೆ ಬರುತ್ತಿತ್ತು. ಸ್ವಪ್ನದಲ್ಲಿಯೂ ಕೂಡ ಆತನು ತಾಂಬೂಲವನ್ನು ಸೇವಿಸುತ್ತಿದ್ದಿಲ್ಲ ॥೧೦೧॥ ದಸರಾ, ದೀಪಾವಳೀ ಹೀಗೆ ಹಬ್ಬ ಹುಣ್ಣಿವೆ ಬರಲು ಆಗ ಆತನು ಮಾರದ, ಜೇಡಿಟ್ಟ ಜೋಳವನ್ನು ಮನೆಗೆ ಕಳುಹಿಸುತ್ತಿದ್ದನು. ಪಾಪ! ಹುಡುಗರೆಲ್ಲರೂ ಅನ್ನವಿಲ್ಲದೇ ತಳಮಳಿಸುತ್ತಿದ್ದರು. ಇಂತಹವರಿಗೆ ಮಾತ್ರ ನಿಜವಾದ ಕೃಪಣನು ಎಂದು ಹೇಳುವರು ॥೧೦೨॥ ಈ ಪ್ರಕಾರದ ದ್ರವ್ಯಲೋಭಿ ಮತ್ತು ಧರ್ಮಹೀನ ಮನುಷ್ಯನ ಕೃಪಣತ್ವವನ್ನು ಕಂಡು ಅವನ ಆಪ್ತಮಿತ್ರರು ಅವನಿಂದ ದೂರ ಸರೆದುಬಿಟ್ಟರು. ಅದರ ವರ್ಣನೆಯನ್ನು ಈಗ ಶ್ರೀಕೃಷ್ಣನು ಮಾಡುತ್ತಿರುವನು ॥೧೦೩॥

ಯಾವ ಧರ್ಮಾಚರಣೆಯನ್ನು ಮಾಡದೇ ದಾನಧರ್ಮಗಳನ್ನು ತ್ಯಜಿಸಿ, ಕೇವಲ ದ್ರವ್ಯಲೋಭವನ್ನು ಧರಿಸಿದವನಿಗೆ ದುಃಶೀಲ ಎಂದು ಹೇಳುವರು. ॥೧೦೪॥ ಯಾವನು ಅನ್ನವಸ್ತ್ರಕ್ಕೆ ಕೊರತೆ ಮಾಡಿ ತನ್ನ ಸರ್ವ ಕುಟುಂಬ ಸಮೇತ ಸ್ವತಃ ತನ್ನ ಜೀವಕ್ಕೆ ಕ್ಲೇಶವನ್ನು ಕೊಡುವವನಿಗೆ ನಿಜವಾದ ಕೃಪಣನೆಂದು ಹೇಳುವರು ॥೧೦೫॥ ಇಂಥ ಕೃಪಣ ಮನುಷ್ಯನನ್ನು ಪ್ರಾರಂಭದಲ್ಲಿ ಹೆಂಡತಿಯು ಬಿಟ್ಟುಹೋದಳು. ತದನಂತರ ಆಪ್ತೇಷ್ಟರು, ಆಳುಗಳು, ಪುತ್ರರೂ ಕೂಡ ಈತನ ವಿರುದ್ಧರಾದರು ॥೧೦೬॥ ಆತನ ಸ್ವತಃ ತಮ್ಮನು ಆತನಲ್ಲಿ ವಿರೋಧ ಮಾಡಹತ್ತಿದನು. ಆಸ್ತಿಯ ಭಾಗ ಮಾಡಲು ಕಲಹಗಳು ಆರಂಭವಾಗುತ್ತಿದ್ದವು ॥೧೦೭॥ ಮನೆಯಲ್ಲಿ ಬೇಕಾದಷ್ಟು ಸಂಪತ್ತು ಇದ್ದರೂ ಕೂಡ ತನ್ನ ಹೆಣ್ಣುಮಕ್ಕಳಿಗೆ ನಾಲ್ಕು ದಿನ ತವರು ಮನೆಯಲ್ಲಿರಲು ಕರೆಯುತ್ತಿದ್ದಿಲ್ಲ. ಸನ್ಮಾನಗಳಿಂದ ಅತ್ತೆಮನೆಗೆ ಕಳುಹಿಸುತ್ತಿದ್ದಿಲ್ಲ. ಆದ್ದರಿಂದ ಇವರು ಅತಿಶಯ ಸಂತಾಪಗೊಂಡು ತಂದೆಗೆ ಶಾಪವನ್ನು ಕೊಟ್ಟುಬಿಟ್ಟರು ॥೧೦೮॥

ಗೋತ್ರಜ ಸದಾ ಚಿಂತಿತ । ಹಾ ಮರೇ ತ್ವೈ ಜೇವೂ ದೂಧಭಾತ । ಆಪ್ತೆ ತೇ ಝಾಲೇ ಅನಾಪ್ತ । ಅವಘೇ ಅನಹಿತ ವಾಂಛಿತೀ ।।೧೯।। ಜಯಾಚಿಯಾ ದ್ರವ್ಯಾಸಿ ಜಾಣ । ನಾಹೀ ಧರ್ಮಾಚೇ ಸಂರಕ್ಷಣ । ತೇ ಕಾಳೇಚಿ ಹೋಯ ಕ್ಷೀಣ । ತೇಚಿ ಲಕ್ಷಣ ಹರಿ ಸಾಂಗೇ ।।೧೧೦।।

ತಸ್ಯೈವಂ ಯಕ್ಷವಿತ್ತಸ್ಯ ಚ್ಯುತಸ್ಯೋಭಯ ಲೋಕತಃ ।
ಧರ್ಮಕಾಮವಿಹೀನಸ್ಯ ಚುಕ್ರುಧುಃ ಪಂಚಭಾಗಿನಃ ।।೯।।

ಅರ್ಥ:- ಹೀಗೆ ಯಕ್ಷನಂತೆ ತನ್ನ ಐಶ್ವರ್ಯಕ್ಕೆ ಕಾವಲು ಕೂತು, ಇಹಕ್ಕಾಗಲಿ ಪರಕ್ಕಾಗಲಿ ಆಗುವಂತಹ ಉತ್ತಮ ಧ್ಯೇಯರಹಿತನಾಗಿ ಹಾಗೂ ಧರ್ಮಕಾಮಗಳಿಂದ ಸಂಪೂರ್ಣವಾಗಿ ವಂಚಿತನಾದ ಆ ಬ್ರಾಹ್ಮಣನ ಬಗೆಗೆ ಪಂಚಗೃಹ ಹೋಮಾಗ್ನಿ ದೇವತೆಗಳು ಕುಪಿತರಾದರು.

ಖಾಯ ನಾ ಜೇವೀ ನಾ ಲಾವೀ ಹಾತ । ಶೇವ್ಯಾಪಾಶೀ ಜೈಸೇ ಭೂತ । ತೈಸೇ ಯಾಚೇ ಯಕ್ಷವಿತ್ತ । ಅಸೇ ರಾಖಿತ ಗ್ರಹೋ ಜೈಸಾ ।।೧೧೧।। ಕೇವಳ ಧರ್ಮಕಾಮರಹಿತ । ಧನಲೋಭೀ ಜೈಸೇ ಭೂತ । ತ್ಯಾ ನಾಂವ ಬೋಲಿಜೇ ಯಕ್ಷವಿತ್ತ । ಜೀವಾಹೂನ ಆಪ್ತ ಅರ್ಥ ಮಾನೀ ।।೧೧೨।। ಸ್ವಶರೀರೀ ಭೋಗ ನಾಹೀ ಜಾಣ । ತೇಣೇ ಇಹಲೋಕ ಝಾಲಾ ಶೂನ್ಯ । ನಾಹೀ ಸ್ವಧರ್ಮಕರ್ಮ ಪಂಚಯಜ್ಞ । ಪರಲೋಕ ಶೂನ್ಯ ತೇಣೇ ಝಾಲಾ ।।೧೧೩।। ಯಜ್ಞಾಚೇ ಪಂಚ ವಿಭಾಗೀ । ಯಜ್ಞಭಾಗ ನ ಪವೇ ತ್ಯಾಲಾಗೀ । ತೇ ಕೋಪೋನಿಯಾ ಪಂಚವಿಭಾಗೀ । ವಿತ್ತನಾಶಾಲಾಗೀ ಉದ್ಯತ ।।೧೧೪।। ಪಾವೋನಿ ಬ್ರಾಹ್ಮಣಜನ್ಮ ವರಿಷ್ಠ । ಧನಲೋಭೇ ಸ್ವಧರ್ಮನಷ್ಟ । ತೋ ಹೋಯ ಉಭಯ ಲೋಕೀ ಭ್ರಷ್ಟ । ಪಾವೇ ಕಷ್ಟ ಕೃಪಣತ್ವೇ ।।೧೧೫।। ಕರಿತಾ ಅತಿಆಯಾಸ । ಜೋಡಲಾ ಅರ್ಥ ಬಹುವಸ । ತ್ಯಾಸೀ ಅಧರ್ಮೇ ಆಲಾ ನಾಶ । ತೋಹೀ ವಿಲಾಸ ಹರಿ ಸಾಂಗೇ ।।೧೧೬।।

ತದವಧ್ಯಾನವಿಸ್ರಸ್ತಪುಣ್ಯಸ್ಕಂಧಸ್ಯ ಭೂರಿದ ।
ಅರ್ಥೋಽಪ್ಯಗಚ್ಛನ್ನಿಧನಂ ಬಹ್ವಾಯಾಸ ಪರಿಶ್ರಮಃ ।।೧೦।।

ಅರ್ಥ:- ಹೇ ಮಹಾನುಭಾವನಾದ ಉದ್ಧವನೇ, ಈ ದೇವತೆಗಳು ಮುನಿಸಿಕೊಂಡ ಕಾರಣವಾಗಿ ಆ ಬ್ರಾಹ್ಮಣನ ಸಂಚಯಿತ ಪುಣ್ಯವೂ, ಸಕಲೈಶ್ವರ್ಯವೂ ಕ್ಷಯಿಸುತ್ತ ನಡೆಯಿತು. ಮೇಲಿಂದ ಮೇಲೆ ಸಾಹಸ ಮಾಡಿ ಪರಿಶ್ರಮದಿಂದ ಕೂಡಿ ಹಾಕಿದ ಎಲ್ಲವೂ ಸಂಪೂರ್ಣವಾಗಿ ನಷ್ಟವಾಯಿತು.

ಪಂಚಯಜ್ಞದೇವತಾ ಸಕಳ । ಯೇಣೇ ಉಪೇಕ್ಷಿಲ್ಯಾ ಕೇವಳ । ತಿಹೀ ದ್ರವ್ಯಲೋಭಾಚೇ ಮೂಳ । ಪುಣ್ಯಕ್ಷಯೇ ತತ್ಕಾಳ ಛೇದಿಲೇ ।।೧೧೭।। ದ್ರವ್ಯಪ್ರಾಪ್ತಿಪುಣ್ಯದಿವಾಕರ । ಅಸ್ತಮಾನಾ ಗೇಲಾ ತೋ ಭಾಸ್ಕರ । ಮಗ ದ್ರವ್ಯಲೋಭಾಚಾ ಅಂಧಕಾರ । ಅಧರ್ಮೇ ಥೋರ ದಾಟಲಾ ।।೧೧೮।।

ಇತರ ಸರ್ವಗೋತ್ರಜರು ಈತನ ಮರಣದ ದಾರಿ ಕಾಯುತ್ತಿದ್ದರು. ಇವನು ಎಂದು ಸತ್ತಾನು ? ನಮಗೆಂದು ಹಾಲು ಅನ್ನ ಸಿಕ್ಕೀತು? ಎನ್ನುತ್ತಿದ್ದರು. ಆಪ್ತರೆಲ್ಲರೂ ಶತ್ರುಗಳಾಗಿ ಅವನ ಅನಿಷ್ಟವನ್ನು ಬಗೆಯುತ್ತಿದ್ದರು. ।।೧೯।। ಯಾರ ದ್ರವ್ಯವು ಧರ್ಮದಿಂದ ಸಂರಕ್ಷಣೆಗೊಳ್ಳುವುದಿಲ್ಲವೋ, ಅದು ಅಲ್ಪಕಾಲದಲ್ಲಿಯೇ ಲಯವಾಗುವುದು. ಅದರ ಲಕ್ಷಣವನ್ನು ಈಗ ಶ್ರೀಕೃಷ್ಣನು ಹೇಳುವನು ।।೧೧೦।।

ಭೂತವು ಕೂಡಿಸಿಟ್ಟ ನಿಧಿಯನ್ನು ಕೈಯಿಂದ ಮುಟ್ಟದೇ, ಮುಖದಿಂದ ಏನನ್ನೂ ಅದರಿಂದ ತಿನ್ನದೇ, ಆ ನಿಧಿಯ ಹತ್ತಿರವಿದ್ದು ಸದಾ ಕಾಯುತ್ತಿರುವುದು. ಅದರಂತೆ ಇವನು ತನ್ನ ಯಕ್ಷಧನವನ್ನು ಗ್ರಹನಂತೆ ರಕ್ಷಿಸುತ್ತಿರುವನು ।।೧೧೧।। ಧರ್ಮಕಾರ್ಯರಹಿತ ಧನಲೋಭಿಯು ಒಂದು ಪ್ರಕಾರದ ಭೂತವೇ ಆಗಿರುವನು. ಆದ್ದರಿಂದ ಅದಕ್ಕೆ ಯಕ್ಷವಿತ್ತವೆಂದು ಕರೆಯುವರು. ಅವನು ತನ್ನ ದ್ರವ್ಯಕ್ಕೆ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವನು ।।೧೧೨।। ಯಾರು ತನ್ನ ಶರೀರಕ್ಕಾಗಿ ಸುಖಭೋಗಗಳನ್ನು ಪಡೆಯುವುದಿಲ್ಲವೋ, ಆತನಿಗೆ ಇಹ ಲೋಕವು ಶೂನ್ಯವಾದಂತಾಗುವುದು ಮತ್ತು ಯಾವನು ಸ್ವಧರ್ಮಕರ್ಮ ಪಂಚಮಹಾಯಜ್ಞ ಮಾಡುವುದಿಲ್ಲವೋ, ಅವನಿಗೆ ಪರ ಲೋಕವೂ ಕೂಡ ಶೂನ್ಯವಾಗಿಬಿಡುವುದು ।।೧೧೩।। ಯಜ್ಞಭಾಗವನ್ನು ಸ್ವೀಕರಿಸುವ ಐದು ದೇವತೆಗಳಿರುವುವು. ಅವರಿಗೆ ತಮ್ಮ ಭಾಗವು ದೊರೆಯದಿದ್ದರೆ ಕ್ರೋಧಾಯಮಾನರಾಗುವರು ಮತ್ತು ಅವನ ದ್ರವ್ಯದ ನಾಶವನ್ನು ಮಾಡಲು ಪ್ರವತ್ತರಾಗುವರು. ।।೧೧೪।। ಶ್ರೇಷ್ಠವಾಗಿರುವ ಬ್ರಾಹ್ಮಣ ಜನ್ಮವನ್ನು ದ್ರವ್ಯಲೋಭದಿಂದ ತನ್ನ ಸ್ವಧರ್ಮದಿಂದ ಭ್ರಷ್ಟನಾದರೆ ಅವನು ಎರಡೂ ಲೋಕಗಳಿಂದ ಚ್ಯುತನಾಗುವನು. ಕೃಪಣತನದ ದುಃಖಮಾತ್ರ ಭೋಗಿಸುತ್ತಿರುವನು. ।।೧೧೫।। ಅತ್ಯಂತ ಕಷ್ಟಪಟ್ಟು ಧನವನ್ನು ಗಳಿಸಿದರೂ ಕೂಡ ಧರ್ಮವನ್ನು ಕಳೆದುಕೊಂಡರೆ, ಅಧರ್ಮದಿಂದ ಅವನ ನಾಶವಾಗುವುದು. ಇದರ ಪ್ರಕಾರವನ್ನೂ ಕೂಡ ಶ್ರೀಕೃಷ್ಣನು ಹೇಳುವನು ।।೧೧೬।।

ಪಂಚಮಹಾಯಜ್ಞಗಳ ದೇವತೆಗಳಿಗೆ ಪೂರ್ಣವಾಗಿ ಉಪೇಕ್ಷೆ ಮಾಡಲು ಆಗ ದ್ರವ್ಯಲಾಭದ ಮೂಲ ಕಾರಣವಾದ ಆ ಪುಣ್ಯದ ನಾಶವನ್ನೇ ದೇವತೆಗಳು ಮಾಡುವುವು. ಹೀಗೆಂದು ತಿಳಿ ।।೧೧೭।। ದ್ರವ್ಯಪ್ರಾಪ್ತಿಮಾಡಿಕೊಡುವಂತಹ ಪುಣ್ಯಪುರುಷಸೂರ್ಯನು ಮುಳುಗುತ್ತಲೇ ಅಧರ್ಮದಿಂದ ದ್ರವ್ಯಲೋಭದ ಪೂರ್ಣ ಅಂಧಕಾರವು ಸರ್ವತ್ರವೂ ಹರಡುವುದು ।।೧೧೮।।

ಪ್ರಯಾಸೇ ಸಂಚಿಲೀ ಸಂಪತ್ತೀ । ತಿಸೀ ಅಧರ್ಮ ಅಂಧಾರಾಚೀ ಯೇ ರಾತೀ । ಕ್ರೋಧಭಲ್ಯಾ ಪಂಚಧಾ ಯಜ್ಞಮೂರ್ತೀ । ಪಂಚಧಾ ಪಾವತೀ ಮಹಾನಾಶ ॥೧೯॥ ಜೋ ಸುಖೀ ನ ಕರೀ ಕುಟುಂಬಾಲಾಗೀ । ಜೋ ನಿಜಾತ್ಮಾ ನಿವವೀನಾ ನಾನಾ ಭೋಗೀ । ಜೋ ದ್ರವ್ಯ ನ ವೇಚೀ ಧರ್ಮಾಲಾಗೀ । ತ್ಯಾಸೀ ಪಂಚವಿಭಾಗೀ ಊಠತೀ ॥೨೦॥ ದಾಯಾದ ಚೋರ ರಾಜಾ ಆಗೀ । ಅಧರ್ಮೇರೋಗ ಸಂಚರೇ ಅಂಗೀ । ಹೇ ಪಾಂಚಜಣ ವಿಭಾಗೀ । ದ್ರವ್ಯನಾಶಾಲಾಗೀ ಪಾವತೀ ॥೨೧॥ ನಾಹೀ ದ್ವಿಜಪೂಜಾ ಶ್ರದ್ಧಾಯುಕ್ತ । ನಾಹೀ ಲೌಕಿಕಕ್ರಿಯಾ ಉಚಿತ । ನಾಹೀ ದಾನಾದಿ ಧರ್ಮ ವೇದೋಕ್ತ । ದ್ರವ್ಯಕ್ಷಯೋ ತೇಥ ಆವಶ್ಯಕ ॥೨೨॥ ಜೇಥ ನಾಹೀ ವಡಿಲಾಂಸೀ ಸನ್ಮಾನ । ಜೇಥ ನಾಹೀ ಪಂಚಮಹಾಯಜ್ಞ । ಜೇಥ ಗುರೂಸೀ ಕರೀ ಅಭಿಮಾನ । ತೇಥ ಕ್ಷಯೋ ಜಾಣ ಉದ್ಧವಾ ॥೨೩॥ ಜ್ಯಾಂಸೀ ಪರಾಂಚಾ ದ್ವೇಷ ಸದಾ । ಜೇ ಬೋಲತೀ ಪರಾಪವಾದಾ । ಜೇ ಚಢತೀ ಧನಗರ್ವಮದಾ । ತೇಥ ಕ್ಷಯೋ ಸದಾ ಉದ್ಧವಾ ॥೨೪॥ ತ್ಯಾಚ ದ್ರವ್ಯಕ್ಷಯಾಚೇ ಲಕ್ಷಣ । ಗ್ರಂಥಾಧಾರೀ ನಿರೂಪಣ । ಸ್ವಯೇಸಾಂಗತಾಹೇ ಶ್ರೀಕೃಷ್ಣ । ದಯಾಳೂ ಪೂರ್ಣ ನಿಜಭಕ್ತಾ ॥೨೫॥

ಜ್ಞಾತಯೋ ಜಗೃಹುಃ ಕಿಂಚಿತ್ ಕಿಂಚಿದ್ದಸ್ಯವ ಉದ್ಧವ ।
ದೈವತಃ ಕಾಲತಃ ಕಿಂಚಿದ್ ಬ್ರಹ್ಮಬಂಧೋರ್ನೃಪಾರ್ಥಿವಾತ್ ॥೧೧॥

ಅರ್ಥ:- ಹೇ ಉದ್ಧವನೇ, ಈ ಯಾವ ಹೀನ ಬ್ರಾಹ್ಮಣನ ಕೆಲವು ಭಾಗ ಧನವನ್ನು ಕುಟುಂಬದ ಜನರು ದೋಚಿದರು. ಕೆಲವು ಭಾಗ ಕಳ್ಳರು ಕದ್ದೊಯ್ದರು, ಕೆಲವು ಭಾಗವು ಬೆಂಕಿಹತ್ತಿ ಸುಟ್ಟುಹೋಯಿತು. ಕೆಲವು ಭಾಗದ ಧನವು ದೈವೀ ಕೋಪದಿಂದ ನಷ್ಟವಾಯಿತು. ಒಂದಿಷ್ಟು ಕಾಲನ ಪ್ರಭಾವದಿಂದ ಹಾಳಾಯಿತು. ಒಂದಿಷ್ಟು ಆವರಿವರ ಪಾಲಾಯಿತು. ಒಂದಿಷ್ಟು ಸರಕಾರಕ್ಕೆ ಸೇರಿತು.

ಸ್ತ್ರೀ ಪುತ್ರ ಹೋಊನಿ ಏಕ । ತಿಂಹೀ ಠೇವಾ ನೇಲಾ ಕಿತ್ಯೇಕ । ಗೋತ್ರಜ ಮಿಳೋನಿ ಸಕಳಿಕ । ಬಲತ್ಕಾರೇ ದೇಖ ವಾಂಟಾ ನೇಲಾ ॥೨೬॥ ಚೋರೀ ಫೋಡೋನಿಯಾ ಘರ । ಕಾಢೂನಿ ನೇಲೇ ಭಾಂಡಾರ । ಆಗೀಲಾ ಗೋನಿಯಾ ಘರ । ವಸ್ತು ಅಪಾರ ಜಳಾಲ್ಯಾ ॥೨೭॥ ಹಿಂಸಾಳ್ಯಾನೇ ಗೇಲೇ ಶೇತ । ಪ್ರವರ್ತ ಬುಡಾಲಾ ಜೇಥಿಂಚಾ ತೇಥ । ವಿಶ್ವಾಸೂ ಠೇವಾ ಘೇಊನಿ ಜಾತ । ಖತಖೋತ ಹಾರಪಲೇ ॥೨೮॥ ಭಾಂಡೀ ಠೇವಿಲಾ ಕಾಪೂರ ಉಡೇ । ಸಮುದ್ರಾಮಾಜೀ ತಾರೂ ಬುಡೇ । ಪಾತಿಕರಾವರೀ ಘಾಲಾ ಪಡೇ । ಚಹೂಕಡೇ ಅಪಾವೋ ॥೨೯॥

ತ್ಯಂತ ಪ್ರಯತ್ನ ಮಾಡಿ ಸಂಪತ್ತನ್ನು ಕೂಡಿಸಬೇಕಾಗುವುದು. ಅಲ್ಲಿ ಅಧರ್ಮರೂಪ ಅಂಧಕಾರದ ರಾತ್ರಿಯು ಪ್ರಕಟವಾಗುವುದು. ಆದ್ದರಿಂದ ಐದು ಯಜ್ಞಮೂರ್ತಿಗಳೂ ಕೂಡ ಕ್ರೋಧಯುಕ್ತರಾಗುವರು. ಆದ್ದರಿಂದ ಐದು ಪ್ರಕಾರಗಳಿಂದ ಮಹಾನಾಶವಾಗುವುದು ॥೧೯॥ ಯಾವನು ದ್ರವ್ಯದ ಸಹಾಯದಿಂದ ಕುಟುಂಬ ವರ್ಗಕ್ಕೆ ಸುಖವನ್ನು ಕೊಡಲಾರನೋ, ತನ್ನ ಜೀವಕ್ಕೂ ಕೂಡ ಅನೇಕ ಪ್ರಕಾರದ ಸುಖೋಪಭೋಗವನ್ನು ಭೋಗಿಸಲಾರನೋ, ಯಾವನು ಧರ್ಮಕಾರ್ಯಕ್ಕಾಗಿ ಧನವನ್ನು ಖರ್ಚಿಸಲಾರನೋ, ಅವನಮೇಲೆ ಈ ಯಜ್ಞಗಳ ಐದು ಭಾಗೀದಾರರು ಅತಿಶಯವಾಗಿ ಕೋಪಿಸಿಕೊಳ್ಳುವರು ॥೨೦॥ ಅಣ್ಣತಮ್ಮಂದಿರು, ಕಳ್ಳರು ಮತ್ತು ರಾಜನು ಇವನ ದ್ರವ್ಯವನ್ನು ಹರಣ ಮಾಡುವರು. ಅಗ್ನಿಯು ಆತನ ಸಂಪತ್ತಿನ ಸರ್ವನಾಶ ಮಾಡುವುದು. ರೋಗಪೀಡೆಯೂ ಒದಗುವುದು. ಹೀಗೆ ಐದು ಭಾಗೀದಾರರಿಂದ ಇವನ ನಾಶವಾಗುತ್ತಿರುವುದು ॥೨೧॥ ಯಾವನು ಶ್ರದ್ಧೆಯಿಂದ ದ್ವಿಜರ ಪೂಜೆಯನ್ನು ಮಾಡಲಾರನೋ, ಯಾವನು ಉಚಿತವಾದ ಲೌಕಿಕ ಕರ್ಮಗಳನ್ನು ವೇದದಲ್ಲಿ ಹೇಳಿದಂತೆ ದಾನಧರ್ಮವನ್ನೂ ಮಾಡುವುದಿಲ್ಲವೋ, ಆತನ ದ್ರವ್ಯದ ಹಾನಿಯು ನಿಶ್ಚಿತವಾಗಿ ಆಗುವುದು ॥೨೨॥ ಹೇ ಉದ್ಧವಾ, ಎಲ್ಲಿ ಹಿರಿಯರಿಗೆ ಆದರವಿಲ್ಲ, ಪಂಚಮಹಾಯಜ್ಞಗಳಿಲ್ಲ, ಗುರುವಿನಲ್ಲಿಯೇ ಸ್ಪರ್ಧೆಗೆ ಇಳಿದು ಗೌರವವಿಲ್ಲ. ಅಲ್ಲಿ ಮಾತ್ರ ನಿಶ್ಚಿತವಾಗಿ ದ್ರವ್ಯನಾಶವಾಗುವುದು. ಇದನ್ನು ಲಕ್ಷದಲ್ಲಿಡು ॥೨೩॥ ಯಾವನು ನಿರಂತರವಾಗಿ ಇತರರ ದ್ವೇಷವನ್ನು ಮಾಡುತ್ತಿರುವನೋ, ಯಾವನು ಬೇರೆಯವರನ್ನು ಸದಾ ನಿಂದಿಸುತ್ತಿರುವನೋ, ಯಾವನು ತನ್ನ ಸಂಪತ್ತಿನ ಗರ್ವದಿಂದ ಅಹಂಕಾರಿಯಾಗುವನೋ, ಹೇ ಉದ್ಧವಾ, ಅಲ್ಲಿ ಸಂಪತ್ತಿನ ನಾಶವು ನಿಶ್ಚಿತವಾಗಿ ಆಗುವುದು. ॥೨೪॥ ತನ್ನ ಭಕ್ತನ ವಿಷಯಕ್ಕೆ ಶ್ರೀಕೃಷ್ಣನು ಪೂರ್ಣ ದಯಾಳೂ ಆಗಿರುವುದರಿಂದ ದ್ರವ್ಯಕ್ಷಯದ ಪ್ರಕಾರವನ್ನು ಗ್ರಂಥಾಧಾರದಿಂದ ಹೇಳುತ್ತಿರುವನು. ॥೨೫॥

ಹೇ ಉದ್ಧವನೇ, ಆ ಯಾವ ಕೃಪಣ ಬ್ರಾಹ್ಮಣನ ಧನವನ್ನು ಅವನ ಹೆಂಡತಿ, ಮಕ್ಕಳು ಒಂದಾಗಿ ದೋಚಿಕೊಂಡು ಒಯ್ದರು. ಸರ್ವ ಗೋತ್ರಜರು, ಆಪ್ತೇಷ್ಟರೆಲ್ಲರೂ ಕೂಡಿ ತಮ್ಮ ಪಾಲಿನ ಭಾಗವನ್ನು ತೆಗೆದುಕೊಂಡು ಹೋದರು ॥೨೬॥ ಕಳ್ಳರು ಆತನ ಮನೆಗೆ ಕನ್ನವನು ಹಾಕಿ ಧನದ ಭಾಂಡಾರವನ್ನು ಲೂಟಿಸಿಕೊಂಡು ಹೋದರು. ಮನೆಗೆ ಬೆಂಕಿ ಹತ್ತಿ ಹೇರಳವಾಗಿ ವಸ್ತುಗಳು ಸುಟ್ಟುಹೋದವು. ॥೨೭॥ ಹೊಲದಲ್ಲಿ ಬೆಳೆಗಳಿಗೆ ಕೀಟಗಳ ಬಾಧೆಯಾಗಿ ಸರ್ವನಾಶವಾಯಿತು. ಉದ್ಯೋಗ ಧಂದೆಯು ನಿಂತುಕೊಂಡುಬಿಟ್ಟಿತು. ವಿಶ್ವಾಸಿಕರು ಅವನು ಕೊಟ್ಟ ಧನವನ್ನು ಮುಳುಗಿಸಿಬಿಟ್ಟರು. ಬರೆಸಿಕೊಂಡಿರುವ ಕಾಗದ ಪತ್ರಗಳು ಕಳೆದು ಹೋದವು. ॥೨೮॥ ಪಾತ್ರೆಯಲ್ಲಿಟ್ಟ ಕರ್ಪುರವು ಕರಗಿ ಹೋಗುವಂತೆ, ಸಮುದ್ರದಲ್ಲಿ ಹಡಗವು ಮುಳುಗಿ ಹೋಗುವಂತೆ ತನ್ನ ಭಾಗೀದಾರರಲ್ಲಿ ತೊಡುಕುಗಳುಂಟಾದವು. ಹೀಗೆ ನಾಲ್ಕೂ ಕಡೆಗಳಿಂದ ಆತನ ಮೇಲೆ ವಿಪತ್ತುಗಳು ಉಂಟಾದವು ॥೨೯॥

ಠಕ ಯೇಊನಿ ಏಕಾಂತೀ । ಮುಲಾಮ್ಯಾಚೀ ನಾಣೇ ದೇತೀ । ಧನಲೋಭಾಚೇ ಕಾಕುಳತೀ । ಹಾತೀಂಚೀ ಸಂಪತ್ತೀ ತ್ಯಾಂಸೀ ದೇ ॥೧೩೦॥ ಸ್ವಚಕ್ರಪರಚಕ್ರವಿರೋಧಧಾಡೀ । ಖಣತೀ ಲಾವೂನಿ ಘರ ಫೋಡೀ । ತಳಘರೀಂಚೇ ಠೇವೇ ಕಾಢೀ । ಭರೋನಿ ಕಾವಡೀ ಧನ ನೇತೀ ॥೧೩೧॥ ಪಾಣೀ ರಿಘೇ ಪೇವಾ ಆಂತ । ತೇಣೇ ಧಾನ್ಯ ನಾಸೇ ಸಮಸ್ತ । ಧಟೂ ಝೋಂಬೋನಿ ಹರೀ ಶೇತ । ದೈವಹತ ತೋ ಝಾಲಾ ॥೧೩೨॥ ಗೋಠಣೇ ಸೇಣಯಾ ರೋಗೂಪಡೇ । ನಿಮಾಲೇ ಗಾಯೀಮ್ಹಶೀಂಚೇ ವಾಡೇ । ಉಧಾರೇ ನೇಲೇ ಠಾಣಬಂದೀ ಘೋಡೇ । ತೋ ರಣೀ ಪಡೇ ಮಹಾಯುದ್ಧೀ ॥೧೩೩॥ ಭೂಮಿನಿಕ್ಷೇಪ ಜೇ ಕರೂ ಜಾತೀ । ತೇ ಆಪಣೆಯಾಕಡೇಧೂಳೀ ಓಢಿತೀ । ತೇಥ ಘಾಲೂನಿ ನಿಜಸಂಪತ್ತೀ । ತೋಂಡೀ ಮಾತೀ ಸ್ವಯೇಘಾಲೀ ॥೧೩೪॥ ಬುದ್ಧಿ ಸಾಂಗತೀ ವಾಡ ವಾಡ । ಯೇಥೂನಿ ತೋಂಡೀ ಘಾಲಾ ದಗಡ । ಐಸೇ ಠೇವೇ ಬುಜಿಲೇ ದೃಢ । ತ್ಯಾಚೇ ಚಾಡ ಧರೂ ಗೇಲಾ ॥೧೩೫॥ ಠೇವೇ ಠೇವಿಲೇ ಜೇ ಅನೇಕ । ತೇ ಪೃಥ್ವೀನೇ ಗಿಳಿಲೇ ನಿಃಶೇಖ । ಭಾಗ್ಯ ಝಾಲೇ ಜೈ ವಿಮುಖ । ಝಾಲೇ ಅನೋಳಖ ತೇ ಠಾಯ ॥೧೩೬॥ ಅಧರ್ಮೇ ಅದೃಷ್ಟ ಝಾಲೇ ಕ್ಷೀಣ । ವಿಪರೀತ ಭಾಸೇ ದೇಹೀಂಚೇ ಚಿನ್ಹ । ಪಾಲಟಲಾ ನಿಜವರ್ಣ । ಬ್ರಾಹ್ಮಣಪಣ ಲಕ್ಷೇನಾ ॥೧೩೭॥ ದೇಖೇ ತೋ ಪುಸೇ ಜ್ಞಾತಿ ಕೋಣ । ತೋ ಸಾಂಗೇ ಜರೀ ಮೀ ಬ್ರಾಹ್ಮಣ । ಐಕ ತ್ಯಾಚೇ ನ ಮನೀ ಮನ । ವರ್ಣಾಗ್ರಪಣ ಮಾವಳಲೇ ॥೧೩೮॥ ಏವಂ ನಿಃಶೇಷ ನಾಸಲೇ ಧನ । ಬ್ರಹ್ಮವರ್ಚಸ್ವಗೇಲೇ ಜಾಣ । ಮ್ಲಾನವದನ ಹೀನದೀನ । ಖೇದಖಿನ್ನ ಅತಿದುಃಖೀ ॥೧೩೯॥

ಸ ಏವಂ ದ್ರವಿಣೇ ನಷ್ಟೇ ಧರ್ಮಕಾಮವಿವರ್ಜಿತಃ ।
ಉಪೇಕ್ಷಿತಶ್ಚ ಸ್ವಜನೈಶ್ಚಿಂತಾಮಾಪ ದುರತ್ಯಯಾಮ್ ॥೧೨॥

ಅರ್ಥ:- ಕೊನೆಗೆ ಆ ಬ್ರಾಹ್ಮಣನ ಎಲ್ಲ ಐಶ್ವರ್ಯವೂ ಸಂಪೂರ್ಣವಾಗಿ ನಾಶವಾಗಲು, ಆಗ ಎಂದೂ ಧರ್ಮಶ್ರದ್ಧೆ ಹಾಗೂ ಇಂದ್ರಿಯ ಸಂತೋಷಗಳಲ್ಲಿ ಮಗ್ನನಾಗದ ಅವನನ್ನು ಅವನ ಕುಟುಂಬದವರು ತೊರೆದುಬಿಟ್ಟರು. ಈ ಕಾರಣವಾಗಿ ಅವನು ಸಹಿಸಲಸಾಧ್ಯವಾದ ದುಃಖವನ್ನು ಅನುಭವಿಸಲಾರಂಭಿಸಿದನು.

ಗೇಲೇ ಶೇತ ನಿಮಾಲೀ ಕುಳವಾಡೀ । ಘರ ಪಾಡಿಲೇ ಪರಚಕ್ರಧಾಡೀ । ಧನ ನಾಸಲೇ ನಾಹೀ ಕವಡೀ । ಅಧರ್ಮಾಚೇ ಜೋಡೀ ಹೇ ದಶಾ ॥೧೪೦॥ ನಾಹೀ ಸ್ವಧರ್ಮಕರ್ಮ ನಾ ದಾನ । ವಿಹಿತ ಭೋಗ ನ ಕರೀ ಆಪಣ । ತ್ಯಾ ಧನಲೋಭ್ಯಾಚೇ ನಾಸಲೇ ಧನ । ಜೇವೀ ಕಾ ಸ್ವಪ್ನ ರಂಕಾಚೇ ॥೧೪೧॥

ಠಕ್ಕರು ಇವನಲ್ಲಿ ಬಂದು ಖೊಟ್ಟಿ ಹಣವನ್ನು ಕೊಟ್ಟು ಏಕಾಂತದಲ್ಲಿ ಮೋಸಗೊಳಿಸಲು, ಲಾಭದ ಲೋಭದಿಂದ ಮತ್ತು ಬಡ್ಡಿಯ ಆಶೆಯಿಂದ ತನ್ನಲ್ಲಿರುವ ಸಂಪತ್ತನ್ನು ಅವರನ್ನು ನಂಬಿಕೊಂಡು ಕೊಟ್ಟುಬಿಟ್ಟನು ॥೧೩೦॥ ಯುದ್ಧದಲ್ಲಿ ತೊಡಗಿರುವ ಸೈನ್ಯವು ಆತನ ಮನೆಯನ್ನು ಮುರಿದು ಹೂತಿಟ್ಟ ಧನವನ್ನೆಲ್ಲ ಅಗೆದು ತೆಗೆದುಕೊಂಡು ಪಾತ್ರೆಗಳಲ್ಲಿ ತುಂಬಿ ಹೊತ್ತುಕೊಂಡು ಹೋದರು ॥೧೩೧॥ ಹಗೆಗಳಲ್ಲಿ ನೀರು ಸೇರಿಕೊಂಡು ಸರ್ವ ಧಾನ್ಯಗಳು ಕೊಳೆತು ನಾಶಗೊಂಡವು. ಕೆಲವು ಅಡ್ಡತಿಡ್ಡ ಕೆಟ್ಟ ಜನರು ಅವನ ಹೊಲಗಳನ್ನು ಕಸಿದುಕೊಂಡರು. ಹೀಗೆ ಇವನು ದೈವಹತನಾಗಿಬಿಟ್ಟನು ॥೧೩೨॥ ದನಕರುಗಳಿಗೆ ರೋಗ ಬಡೆದು ಎಲ್ಲವೂ ಸತ್ತುಹೋಗಿ ದನಗಳ ಮನೆಯು ಖಾಲಿಯಾಯಿತು. ಬಾಡಿಗೆಯಿಂದ ಒಯ್ದ ಕುದುರೆಗಳು ಅವು ಯುದ್ಧದಲ್ಲಿ ಮರಣ ಹೊಂದಿದವು ॥೧೩೩॥ ಈ ಪ್ರಕಾರವಾಗಿ ಯಾರು ಭೂಮಿಯಲ್ಲಿ ದ್ರವ್ಯವನ್ನು ಹುಗಿದಿಡುವರೋ, ಅವರು ಸ್ವತಃ ತಮ್ಮ ಮೈಮೇಲೆ ಧೂಳನ್ನು ಹಾಕಿಕೊಳ್ಳುವರು. ತೆಗ್ಗಿನಲ್ಲಿ ದ್ರವ್ಯವನ್ನು ಹಾಕಿದವರು ಕೊನೆಯಲ್ಲಿ ತಮ್ಮ ಕೈಗಳಿಂದಲೇ ತಮ್ಮ ಬಾಯಿಗೆ ಮಣ್ಣನ್ನು ಹಾಕಿಕೊಳ್ಳುವರು ॥೧೩೪॥ ದ್ರವ್ಯವನ್ನು ಹುಗಿದು ಇಡುವ ಕಾಲಕ್ಕೆ ದೊಡ್ಡ ದೊಡ್ಡ ಮಾತುಗಳನ್ನಾಡುವರು. ಇಂಥಲ್ಲಿಯೇ ತೆಗ್ಗನ್ನು ತೆಗೆಯಿರಿ, ಹೀಗೆಯೇ ಬಂಡೆಯನ್ನು ಇಡಿರಿ, ಹೀಗೆಲ್ಲ ಹೇಳಿ ನಿಧಿಯನ್ನು ಬಂದೋಬಸ್ತ ಮಾಡಿ ಇದೆಲ್ಲವೂ ನನ್ನದೇ ಎಂದು ತಿಳಿಯುವರು. ॥೧೩೫॥ ಆದರೆ ಆ ಎಲ್ಲ ನಿಧಿಗಳನ್ನು ಭೂಮಿಯು ನುಂಗಿಬಿಟ್ಟಿತು. ಭಾಗ್ಯವು ವಿಮುಖವಾಯಿತು. ಹುಗಿದಿಟ್ಟ ಸ್ಥಳಗಳೂ ಕೂಡ ಮರೆತು ಹೋದವು. ॥೧೩೬॥ ಅಧರ್ಮದಿಂದ ಪ್ರಾರಬ್ಧದ ಕ್ಷಯವಾಗಹತ್ತಿತು. ಶರೀರದಲ್ಲಿ ಕೆಟ್ಟ ಲಕ್ಷಣಗಳು ಮೂಡಿಕೊಂಡವು. ಅವನ ಬಣ್ಣವೂ ಕೂಡ ಬದಲಾಯಿತು. ಅವನ ಬ್ರಾಹ್ಮಣತ್ವವು ಎಲ್ಲವೂ ಲೋಪಗೊಂಡಿತು ॥೧೩೭॥ ಯಾರೇ ಭೇಟಿಯಾಗಲಿ ಆತನಿಗೆ ನೀವು ಯಾರು? ಎಂದು ಕೇಳಹತ್ತಿದರು. ನಾನು ಬ್ರಾಹ್ಮಣನು ಎಂದು ಹೇಳಿದರೆ ಅದನ್ನು ಕೇಳಲು ಸಹ ಇವರಿಗೆ ಯೋಗ್ಯವೆನಿಸುತ್ತಿದ್ದಿಲ್ಲ. ಆತನ ಬ್ರಹ್ಮತೇಜವು ಮುಳುಗಿ ಹೋಗಿತ್ತು ॥೧೩೮॥ ಈ ಪ್ರಕಾರವಾಗಿ ಆತನ ಬ್ರಾಹ್ಮಣಕಳೆಯು ಕುಂದು ಹೋಯಿತು, ಸರ್ವ ದ್ರವ್ಯವೂ ಪೂರ್ಣವಾಗಿ ನಷ್ಟವಾಯಿತು. ಆಗ ಆತನ ಮುಖಮುದ್ರೆಯು ನಿಸ್ತೇಜವಾಗಿ ಕಾಣುತ್ತಿತ್ತು. ಹೀನ-ದೀನ ಅವಸ್ಥೆಯಲ್ಲಿ ಖಿನ್ನನಾಗಿ ಆತನು ಕೇವಲ ದುಃಖವನ್ನು ಭೋಗಿಸುತ್ತಿದ್ದನು ॥೧೩೯॥

ಹೊಲಗಳು ಹೋದವು, ಮನೆಮಾರಿನ ಹಕ್ಕು ಹಾರಿಹೋಯಿತು. ಪರಚಕ್ರದ ಸೈನಿಕರು ಮನೆಯನ್ನು ಕೊಳ್ಳೇ ಹೊಡೆದರು. ಸರ್ವದ್ರವ್ಯವು ಹಾಳಾಯಿತು. ತನ್ನಲ್ಲಿ ಒಂದು ಕಾಸು ಕೂಡ ಉಳಿಯಲಿಲ್ಲ. ಅಧರ್ಮದಿಂದ ವರ್ತನೆ ಮಾಡಿದಕ್ಕಾಗಿ ಇಂತಹ ದಶೆಯು ಪ್ರಾಪ್ತವಾಯಿತು ॥೧೪೦॥ ಸ್ವಧರ್ಮ ಕರ್ಮಗಳನ್ನು ಒಂದೂ ಮಾಡಲಿಲ್ಲ. ಧಾನಧರ್ಮ ಮಾಡಲಿಲ್ಲ. ಹಣದ ಯೋಗ್ಯ ಉಪಯೋಗ ಮಾಡಿಕೊಳ್ಳಲಿಲ್ಲ. ಆದ್ದರಿಂದ ಧನಲೋಭಿಯ ದ್ರವ್ಯವು ದರಿದ್ರ ಮನುಷ್ಯನ ಸ್ವಪ್ನದಂತೆ ಇಲ್ಲದಾಗಿಬಿಟ್ಟಿತು ॥೧೪೧॥

ದೈವ ಝಾಲೇ ಪರಾಂಗ್ ಮುಖ । ತ್ಯಾ ಹತಭಾಗ್ಯಾ ಚೀ ದಶಾ ದೇಖ । ಸ್ತ್ರೀಪುತ್ರೇ ಝಾಲೀ ವಿಮುಖ । ತಿಂಹೀ ನಿಃಶೇಖ ದವಡಿಲಾ ॥೧೪೨॥ ಏಕ ಧನಲೋಭಾಚ್ಯಾ ಠಾಯೀ । ಇಷ್ಟಮಿತ್ರ ಪೂರ್ವಿಚೇ ನಾಹೀ । ಗೋತ್ರಜಾಂಸೀ ತ್ಯಾಚೇ ಸುಖ ಕಾಯೀ । ದವಡಿಲಾ ಪಾಹೀ ಉಪೇಕ್ಷಿತೂ ॥೧೪೩॥ ನಿಂದಾ ಪ್ರತ್ಯಕ್ಷ ಕರಿತೀ ಲೋಕ । ರಾಂಡಾ ಪೋರೇ ಥುಂಕತೀ ದೇಖ । ಖಾವಯಾ ನಾಹೀ ನಿಃಶೇಖ । ಮಾಗತಾ ಭೀಕ ಮಿಳೇನಾ ॥೧೪೪॥ ಭಿಕೇಲಾಗೀ ಜೇಥ ತೇಥ ಗೇಲಾ । ಮ್ಹಣತೀ ಕಾಳಮುಖಾ ಯೇಥೇ ಕಾ ಆಲಾ । ಹೋತಾ ಧನಲೋಭೇ ಭುಲಲಾ । ಭಲಾ ನಾಗವಿಲಾ ಈಶ್ವರೇ ॥೧೪೫॥ ಯಾಪರೀ ಧಿಕ್ಕಾರಿತೀ ಲೋಕ । ಧನ ಜಾಊನಿ ಝಾಲಾ ರಂಕ । ಚಿಂತಾವರ್ತೀ ಪಡಲಾ ದೇಖ । ದುಃಖೇ ಮಹಾದುಃಖ ಪಾವಲಾ ॥೧೪೬॥

ತಸ್ಯೈವಂ ಧ್ಯಾಯತೋ ದೀರ್ಘಂ ನಷ್ಟರಾಯಸ್ತಪಸ್ವಿನಃ ।
ಖಿದ್ಯತೋ ಬಾಷ್ಪಕಂಠಸ್ಯ ನಿರ್ವೇದಃ ಸುಮಹಾನಭೂತ್ ॥೧೩॥

ಅರ್ಥ:- ಧನದ ನಾಶದಿಂದ ಅವನ ಹೃದಯದಲ್ಲಿ ಸಂಕಟವು ನಿರ್ಮಾಣವಾಗಹತ್ತಿತು. ಅವನ ಮನದಲ್ಲಿ ಖೇದವು ಹುಟ್ಟಿಕೊಂಡಿತು. ಕಂಠವು ಬಿಗಿಯಹತ್ತಿತು. ಹೀಗೆ ಚಿಂತೆಯನ್ನು ಮಾಡುತ್ತಿರಲು ಆತನ ಮನದಲ್ಲಿ ಸಂಸಾರ ವಿಷಯಕ್ಕೆ ಅತ್ಯಂತ ದುಃಖಬುದ್ಧಿಯುಂಟಾಗಿ ಉತ್ಕಟ ವೈರಾಗ್ಯದ ಉದಯವಾಯಿತು.

ಧನಲೋಭ್ಯಾಚೇ ಗೇಲೇ ಧನ । ಧನಸವೇ ನ ವಚೇಚಿ ಆಠವಣ । ತೇ ಆಠವತಾ ಫುಟತಾಹೇ ಮನ । ತಳಮಳೀ ಜಾಣ ಅತಿದುಃಖೇ ॥೧೪೭॥ ಕಾಂಟಾ ರುತಲ್ಯಾ ಭುಜಂಗ ಕಪಾಳೀ । ಪುಚ್ಛ ತುಟಲ್ಯಾ ಸಾಪಸುರಳೀ । ಹೋ ಕಾ ಜಳಾವೇಗಳೀ ಮಾಸೋಳೀ। ತೈಸಾ ತಳಮಳೀ ಅತಿದುಃಖೇ ॥೧೪೮॥ ಮನೇ ಆಠವಿತಾಂಚಿ ಧನ । ಹೃದಯೀ ಚಾಲಿಲೇ ಸ್ಫುಂದನ । ಅಶ್ರುಧಾರಾ ಸ್ರವತೀ ನಯನ । ಮೂರ್ಚ್ಛಾಪನ್ನ ಕ್ಷಣಕ್ಷಣಾ ॥೧೪೯॥ಪೋಟೀ ದುಃಖೇ ಅತಿ ಚರಫಡೇ । ಧಾಯ ಮೋಕಲೂನಿಯಾ ರಡೇ । ಉಠೇ ಬೈಸೇ ಪಾಹೇ ಪಡೇ । ಲೋಳೇ ಗಡಬಡೇ ಆರಡತ ॥೧೫೦॥ ಮಗ ಮ್ಹಣೇ ರೇ ಕಟಕಟಾ । ಝಾಲೋ ಏಕ ವೇಳ ಕರಂಟಾ । ಅಹಾ ವಿಧಾತಯಾ ದುಷ್ಟಾ । ಕಾಯ ಅದೃಷ್ಟಾ ಲಿಹಿಲೇಸಿ ॥೧೫೧॥ ಮಜ ಠಾವೋ ನಾಹೀ ಕೋಣೀಕಡೇ । ವಿಚಾರ ಸಂಭವೇನಾ ಪುಢೇ । ಅತಿದುಃಖ ಆಲೇ ಜೇ ರೋಕಡೇ । ತೇಣೇ ವಿಚಾರೇ ರಡೇ ಮಹಾದುಃಖೀ ॥೧೫೨॥ ಹೇ ಅಲ್ಪ ದುಃಖ ಪಾವಲೋ ಯೇಥೇ । ಪುಢೇ ಘೋರ ದುಃಖ ಆಹೇ ಮಾತೇ । ಯಮ ದಂಡೀಲ ನಿಷ್ಠುರ ಘಾತೇ । ಕೋಣ ತೇಥೇ ಸೋಡವೀ ॥೧೫೩॥

ದೈವವು ಬದಲಾಗಿದ್ದಕ್ಕೆ ಆ ದುರ್ದೈವೀ ಪುರುಷನ ಇಂತಹ ಕೆಟ್ಟ ದಶೆಯಾಯಿತು. ಹೆಂಡರು ಮಕ್ಕಳು ವಿಮುಖರಾಗಿ ಆತನನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟರು. ॥೧೪೨॥ ಅವನು ದ್ರವ್ಯಲೋಭಿಯಾಗಿದ್ದಕ್ಕೆ ಮೊದಲೇ ಯಾವ ಮಿತ್ರರಿರಲಿಲ್ಲ. ಈತನ ಆಪ್ತಗೋತ್ರಜರಿಗೆ ಇವನಿಂದ ಯಾವ ಲಾಭವೂ ಇಲ್ಲದ್ದಕ್ಕೆ ಅವರು ಈತನ ಉಪೇಕ್ಷೆಯನ್ನು ಮಾಡಿದರು ॥೧೪೩॥ ಈತನ ಮುಖದಮೇಲೆಯೇ ಈತನ ನಿಂದೆಯನ್ನು ಮಾಡಹತ್ತಿದರು. ಹುಡುಗರು ಈತನನ್ನು ಪೀಡಿಸಹತ್ತಿದರು. ಭಿಕ್ಷೆ ಬೇಡಲು ಹೊರಟರೆ ಯಾರೊಬ್ಬರೂ ಭಿಕ್ಷೆಯನ್ನು ನೀಡುತ್ತಿದ್ದಿಲ್ಲ. ॥೧೪೪॥ ಈತನು ಯಾವ ಯಾವ ಮನೆಗೆ ಭಿಕ್ಷೆ ಬೇಡಲು ಹೋಗುವನೋ, ಅವರೆಲ್ಲರೂ ಹೀಗೆ ಹೇಳುತ್ತಿದ್ದರು. ಈ ಕಪ್ಪು ಮುಖವನಿಟ್ಟು ಕೊಂಡು ಇವನು ಇಲ್ಲಿಗೇಕೆ ಬರುವನು ? ದ್ರವ್ಯವನ್ನೇ ನಂಬಿಕೊಂಡು ಆಯುಷ್ಯವೆಲ್ಲ ಕಳೆದುಕೊಂಡನು. ಈಗ ಈಶ್ವರನು ಹೀಗೆ ಬತ್ತಲು ಮಾಡಿದ್ದು ಒಳ್ಳೆಯದೇ ಆಯಿತು. ॥೧೪೫॥ ಈ ಪ್ರಕಾರವಾಗಿ ಜನರು ಇವನ ಧಿಕ್ಕಾರವನ್ನು ಮಾಡಹತ್ತಿದರು. ಇವನ ಸರ್ವದ್ರವ್ಯವು ಹಾಳಾಗಿ ಭಿಕಾರಿಯಾದನು. ಚಿಂತೆಯ ತಿರುಗಣಿಯಲ್ಲಿ ಸಿಕ್ಕಿಕೊಂಡು ಈತನು ಅತಿಶಯ ದುಃಖಿಯಾದನು ॥೧೪೬॥

ಈ ಧನಲೋಭಿಯ ದ್ರವ್ಯವು ನಾಶವಾಗಿದ್ದರೂ ಅದರ ಪೂರ್ವಸ್ಮರಣೆಯು ನಾಶವಾಗಿದ್ದಿಲ್ಲ. ಮೊದಲಿನ ಸಂಪನ್ನ ಸ್ಥಿತಿಯು ಇವನಿಗೆ ಸತತವಾಗಿ ಸ್ಮರಣೆಯಾಗುತ್ತಿತ್ತು. ಇದರಿಂದ ಹೃದಯದಲ್ಲಿ ಬಹಳಷ್ಟು ವೇದನೆಯಾಗುತ್ತಿತ್ತು. ಅಸಹ್ಯ ದುಃಖದಿಂದ ಇವನು ತಳಮಳಿಸುತ್ತಿದ್ದನು ॥೧೪೭॥ ಸರ್ಪದ ಹೆಡೆಯಲ್ಲಿ ಮುಳ್ಳುನಟ್ಟರೆ ಅಥವಾ ಹಾವಿನ ಸುರಳಿಯಲ್ಲಿನ ಬಾಲವು ಕತ್ತರಿಸಿದರೆ, ಇಲ್ಲವೇ ಮೀನನ್ನು ನೀರಿನಿಂದ ಹೊರಗೆ ತೆಗೆದರೆ, ಆಗ ಆಗುವಂತೆ ತಳಮಳ ದುಃಖವು ಈತನಿಗಾಗುತ್ತಿತ್ತು. ॥೧೪೮॥ ಮನಸ್ಸಿನಲ್ಲಿ ತನ್ನ ಧನವನ್ನು ಸ್ಮರಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಕಣ್ಣುಗಳಿಂದ ಗಳಗಳನೇ ನೀರು ಸುರಿಯುತ್ತಿತ್ತು. ಕ್ಷಣಕ್ಷಣಕ್ಕೆ ಮೂರ್ಛಿತನಾಗುತ್ತಿದ್ದನು. ॥೧೪೯॥ ಮನದಲ್ಲಿನ ದುಃಖದಿಂದ ಈತನು ಅತಿಶಯವಾಗಿ ಚಡಪಡಿಸುತ್ತಿದ್ದನು. ಉಚ್ಚಸ್ವರದಲ್ಲಿ ಜೋರಾಗಿ ಆಕ್ರೋಶಮಾಡಿ ಅಳುತ್ತಿದನು. ಕೆಲವೊಮ್ಮೆ ಹುಚ್ಚನಂತೆ ಬಿದ್ದು ಬಿಡುತ್ತಿದ್ದನು. ಕೆಲವೊಮ್ಮೆ ನೆಲದ ಮೇಲೆ ಗಡಬಡಿಸಿ ಉರುಳುತ್ತ, ಒದರುತ್ತ ಕುಳಿತುಕೊಳ್ಳುತ್ತಿದ್ದನು. ॥೧೫೦॥

ಹೇ, ಅಕಟಕಟಾ, ನಾನೆಂತಹ ದುರ್ಭಾಗ್ಯನಾದೆನಲ್ಲ! ಹೇ ಬ್ರಹ್ಮದೇವನೇ, ನನ್ನ ಹಣೆಯ ಬರಹವನ್ನು ನೀನು ಏನೆಂದು ಬರೆದಿರುವೆ... ॥೧೫೧॥ ನನಗೆ ಈಗ ಎಲ್ಲಿಯೂ ಸ್ಥಾನ ಉಳಿಯಲಿಲ್ಲ. ಮುಂದೇನು ಮಾಡಬೇಕೆಂಬುದೂ ಕೂಡ ಏನೂ ತಿಳಿಯುತ್ತಿಲ್ಲ. ನನಗೀಗ ಅತ್ಯಂತ ಕಠಿಣ ಪ್ರಸಂಗವು ಒದಗಿಬಂತಲ್ಲಾ! ಹೀಗೆಲ್ಲಾ ವಿಚಾರಿಸುತ್ತ ಅವನು ದುಃಖದಿಂದ ಅಳಹತ್ತಿದನು ॥೧೫೨॥ ಈಗ ನಾನು ಇಲ್ಲಿ ಭೋಗಿಸುತ್ತಿರುವ ದುಃಖವು ಅಲ್ಪವಾಗಿದೆ. ಆದರೆ ಮುಂದೆ ನನಗೆ ಮಹಾದುಃಖ ಭೋಗಿಸಬೇಕಾಗುವುದು. ಯಮಲೋಕದಲ್ಲಿ ನಿರ್ದಯವಾಗಿ ಯಮನು ನನಗೆ ದಂಡಿಸುತ್ತಿರಲು ಆಗ ನನ್ನನ್ನು ಅಲ್ಲಿ ಯಾರು ಬಿಡಿಸಿಕೊಳ್ಳುವರು? ॥೧೫೩॥

ಮ್ಯಾ ನಾಹೀ ದೀಧಲೇ ದಾನ । ಮೀ ನಾಹೀ ಸ್ಮರಲೋ ನಾರಾಯಣ । ಮಜ ಯೇತೀ ನರಕ ದಾರುಣ । ತೇಥ ಕೋಣ ಸೋಡವೀ ॥೧೫೪॥ ಮ್ಯಾ ನಾಹೀ ಕೇಲೇ ಪಂಚಮಹಾಯಜ್ಞ । ನಾಹೀ ದೀಧಲೇ ಅತಿಥೀಸೀ ಅನ್ನ । ನಾಹೀ ಕೇಲೇ ಪಿತೃತರ್ಪಣ । ಮಾಝೇ ದುಃಖ ಕೋಣ ನಿವಾರೀ ॥೧೫೫॥ ಮ್ಯಾ ನಾಹೀ ಕೇಲೀ ದ್ವಿಜಪೂಜಾ । ನಾಹೀಭಜಲೋ ಅಧೋಕ್ಷಜಾ । ನಾಹಿ ವಂದಿಲೇ ವೈಷ್ಣವರಜಾ । ಮಾಝೇ ದುಃಖಸಮಾಜಾ ಕೋಣ ನಾಶೀ ॥೧೫೬॥ ಮೀ ಸರ್ವಥಾ ಅಕರ್ಮಕಾರೀ । ಬುಡಾಲೋ ಬುಡಾಲೋ ಅಘೋರೀ । ಧಾಂವ ಪಾವ ಗಾ ಶ್ರೀಹರಿ । ಮಜ ಉದ್ಧರೀ ದೀನಾತೇ ॥೧೫೭॥ ಕೃಷ್ಣಾ ಮಾಧವಾ ಮುರಾರೀ । ಅಚ್ಯುತಾ ಅನಂತಾ ಶ್ರೀಹರೀ । ಗರುಡಧ್ವಜಾ ಗೋವರ್ಧನಧಾರೀ । ಮಜ ಉದ್ಧರೀ ದೀನಾತೇ ॥೧೫೮॥ ತುವಾ ರಕ್ಷಿಲೇ ಪ್ರಹ್ಲಾದಾಸೀ । ಅಂಬರೀಷಾಸೀ ಗರ್ಭವಾಸೀ । ಉದರೀ ರಾಖಿಲೇ ಪರೀಕ್ಷಿತೀಸೀ ತೈಸೇ ಮಜ ದೀನಾಸೀ ಉದ್ಧರೀ ॥೧೫೯॥ ತುವಾ ತಾರಿಲೇ ಅಹಲ್ಯೇ ಸೀ । ಉದ್ಧರಿಲೇ ನಷ್ಟಾ ಅಜಾಮಿಳಾಸೀ । ಉಡೀ ಘಾತಲೀ ಗಜೇಂದ್ರಾಸೀ । ತೇಣೇ ವೇಗೇಸೀ ಮಜ ತಾರೀ ॥೧೬೦॥ ಮಹಾದೋಷಾಂಚೀ ಶ್ರೇಣೀ । ನಾಮೇ ತಾರಿಲೀ ಕುಂಟಣೀ । ತೇಣೇ ಲಾಘವೇ ಚಕ್ರಪಾಣೀ । ಮಜ ದುಷ್ಟಾಲಾಗೋನೀ ಉದ್ಧರೀ ॥೧೬೧॥ ಜಳೋ ಜಳೋ ಹಾ ಧನಕಾಮ । ಗೇಲೇ ವೃಥಾ ಮಾಝೇ ಜನ್ಮ । ಫುಕಾಚೇ ಜೇ ರಾಮನಾಮ । ತೇ ಮೀ ಅಧಮ ನ ಮ್ಹಣೇಚಿ ॥೧೬೨॥ ರಾಮನಾಮಾಚ್ಯಾ ಪ್ರತಾಪಾಸಾರೀ । ಜಳತೀ ಮಹಾಪಾಪಾಂಚ್ಯಾ ಕೋಟೀ । ಘೋರ ಅಧಮ ಮೀ ಏಕ ಸೃಷ್ಟೀ । ನಾಮ ವಾಕ್ಪುಟೀ ನ ಮ್ಹಣೇಚಿ ॥೧೬೩॥ ಐಸಾ ಮಾನೋನಿ ಅಪರಾಧ । ಅನುತಾಪೇ ಕರಿತಾ ಖೇದ । ಉಪಜಲಾ ಅತಿನಿರ್ವೇದ । ತೇಚಿ ಗೋವಿಂದ ಸ್ವಯೇ ಸಾಂಗೇ ॥೧೬೪॥

ಸ ಚಾಹೇದಮಿದಂ ಕಷ್ಟಂ ವೃಥಾಽಽತ್ಮಾ ಮೇಽನುತಾಪಿತಃ ।
ನ ಧರ್ಮಾಯ ನ ಕಾಮಾಯ ಯಸ್ಯಾರ್ಥಾಯಾಸ ಈದೃಶಃ ॥೧೪॥

ಅರ್ಥ:- ಬ್ರಾಹ್ಮಣನು ಹೀಗೆಂದು ನುಡಿದನು : ಹಾ ! ಇದೆಂತಹ ದುರ್ವಿಧಿ ! ಧರ್ಮಾವಲಂಬನೆಗಾಗಲಿ, ಇಂದ್ರಿಯ ತೃಪ್ತಿಗಾಗಲಿ ಉದ್ದೇಶಿತವಲ್ಲದ ಹಣಕ್ಕಾಗಿ ಶ್ರಮಪಟ್ಟು ನನ್ನನ್ನು ನಾನು ನಿರರ್ಥಕವಾಗಿ ಹಿಂಸಿಸಿಕೊಂಡೆನಲ್ಲಾ.

ಹಾತ ಚುರೂನಿ ಮ್ಹಣೇ ಕಟಕಟಾ । ಬ್ರಾಹ್ಮಣದೇಹೋ ಮೋಕ್ಷಾಚಾ ವಾಂಟಾ । ತೋ ಲಾಹೋನಿ ಮೀ ಅತಿಕರಂಟಾ । ಧನಲೋಭಚೇಷ್ಟಾ ನಾಡಲೋ ॥೧೬೫॥

ನಾನು ಎಂದೂ ದಾನ ಧರ್ಮವನ್ನು ಮಾಡಲಿಲ್ಲ, ಎಂದೂ ನಾರಾಯಣನನ್ನು ಅಂತಃಕರಣದಿಂದ ಸ್ಮರಿಸಲಿಲ್ಲ. ನನಗೆ ಮರಣದನಂತರ ದಾರುಣವಾದ ನರಕಯಾತನೆಯನ್ನು ಸೋಸಬೇಕಾಗುವುದು. ಆ ಸಮಯದಲ್ಲಿ ನನಗೆ ಯಾರು ಬಿಡಿಸಿಕೊಳ್ಳಬೇಕು? ॥೧೫೪॥ ನಾನು ಪಂಚ ಮಹಾಯಜ್ಞವನ್ನು ಮಾಡಲಿಲ್ಲ, ಅತಿಥಿಗಳವರಿಗೆ ಎಂದೂ ಅನ್ನ ನೀರು ಕೊಡಲಿಲ್ಲ. ಪಿತೃಗಳ ತರ್ಪಣೆಯನ್ನೂ ಮಾಡಲಿಲ್ಲ. ಈಗ ನನಗಾಗಿರುವ ದುಃಖದ ನಿವಾರಣೆಯನ್ನು ಯಾರು ಮಾಡುವರು? ॥೧೫೫॥ ನಾನು ಎಂದೆಂದಿಗೂ ಬ್ರಾಹ್ಮಣರ ಪೂಜೆಯನ್ನು ಮಾಡಲಿಲ್ಲ. ಭಗವಂತನ ಭಕ್ತಿಯನ್ನೂ ಮಾಡಲಿಲ್ಲ ಭಗವದ್ಭಕ್ತರ ಚರಣರಜಕ್ಕೆ ಎಂದೂ ವಂದಿಸಲಿಲ್ಲ. ಈಗ ನನ್ನ ದುಃಖದ ರಾಶಿಯ ನಾಶವನ್ನು ಯಾರು ಮಾಡಬೇಕು ? ॥೧೫೬॥ ನಾನು ಯಾವಾಗಲೂ ಮಾಡಬಾರದ ಕೆಟ್ಟ ಕರ್ಮಗಳನ್ನು ಮಾಡಿದೆ. ಆದ್ದರಿಂದ ನಾನು ಅಘೋರ ಪಾಪಗಳಲ್ಲಿ ಮುಳುಗಿ ಹೋಗಿರುವೆನು. ಹೇ ಶ್ರೀ ಹರಿಯೇ, ಈಗ ಧಾವಿಸಿಬಂದು ದೀನನಾದ ನನ್ನನ್ನು ರಕ್ಷಿಸು ತಂದೆಯೇ ॥೧೫೭॥ ಹೇ ಶ್ರೀಕೃಷ್ಣಾ, ಮಾಧವಾ, ಮುರಾರಿಯೇ, ಅಚ್ಯುತಾ, ಅನಂತಾ, ಶ್ರೀಹರಿಯೇ, ಗೋವರ್ಧನಾ, ಗರುಡಧ್ವಜನೇ, ದೀನನಾದ ನನ್ನನ್ನು ಉದ್ಧರಿಸು ॥೧೫೮॥ ನೀನು ಪ್ರಹ್ಲಾದನಿಗೆ ಅನೇಕ ಸಂಕಟಗಳಿಂದ ರಕ್ಷಿಸಿದೆ, ಅಂಬರೀಷನ ಗರ್ಭವಾಸವನ್ನು ತಪ್ಪಿಸಿದೆ, ಪರೀಕ್ಷಿತ ರಾಜನನ್ನು ಗರ್ಭದಲ್ಲಿಯೇ ಸುದರ್ಶನದಿಂದ ರಕ್ಷಿಸಿದೆ, ಅದರಂತೆಯೇ ದೀನನಾದ ನನ್ನನ್ನು ಉದ್ಧರಿಸಿ ಕಾಪಾಡು. ॥೧೫೯॥ ನೀನು ಅಹಲ್ಯೆಯ ಉದ್ಧಾರವನ್ನು ಮಾಡಿದೆ, ಮಹಾಪಾಪಿ ಚಾಂಡಾಲನಾದ ಅಜಾಮಿಳನ ಉದ್ಧಾರವನ್ನು ಮಾಡಿರುವೆ, ಗಜೇಂದ್ರನು ಕೂಗುತ್ತಲೇ ಧಾವಿಸಿ ಓಡಿ ಬಂದು ರಕ್ಷಿಸಿದೆ, ಅದರಂತೆಯೇ ನನಗೂ ಕೂಡ ತ್ವರೆಯಾಗಿ ಉದ್ಧರಿಸು ॥೧೬೦॥ ಸರ್ವ ಪಾಪಗಳ ಕೇವಲ ಖಣಿಯೇ ಆಗಿರುವ ಪಿಂಗಳೆಯನ್ನು ನೀನು ಸಹಜವಾಗಿ ಉದ್ಧಾರವನ್ನು ಮಾಡಿರುವೆ, ಹೇ ಚಕ್ರಪಾಣಿಯೇ, ಅದರಂತೆಯೇ ನನ್ನನ್ನೂ ಕೂಡ ಉದ್ಧರಿಸು ॥೧೬೧॥ ನನ್ನ ಧನಲೋಭತನಕ್ಕೆ ಬೆಂಕಿಹಚ್ಚಿ ಸುಡಲಿ, ಧನದ ಲಾಲಸೆಯಿಂದ ನನ್ನ ಜನ್ಮವು ವ್ಯರ್ಥವಾಯಿತು. ಅಧಮನಾದ ನಾನು ಪುಕ್ಕಟ್ಟೆಯಾಗಿ ದೊರೆಯುವ ರಾಮನಾಮದ ಉಚ್ಚಾರವನ್ನು ಮಾಡಲಿಲ್ಲ ॥೧೬೨॥ ರಾಮನಾಮದ ಉಚ್ಚಾರದಿಂದ ಕೋಟ್ಯಾವಧೀ ಮಹಾಪಾಪಗಳ ರಾಶಿಯು ಸುಟ್ಟು ಭಸ್ಮವಾಗುವುದು. ಆದರೆ ಈ ಸೃಷ್ಟಿಯಲ್ಲಿ ಅಧಮನಾದ ನಾನೊಬ್ಬನೇ ಪವಿತ್ರವಾದ ರಾಮನಾಮವನ್ನು ಉಚ್ಚರಿಸಲಿಲ್ಲ ॥೧೬೩॥ ಈ ಪ್ರಕಾರವಾಗಿ ತನ್ನ ಅಪರಾಧಗಳನ್ನು ಸ್ಮರಿಸುತ್ತ ಪಶ್ಚಾತ್ತಾಪಪಟ್ಟು ಖೇದಗೊಳ್ಳುತ್ತಿರಲು ಆಗ ಆತನಿಗೆ ತೀವ್ರ ಸ್ವರೂಪದ ವೈರಾಗ್ಯವು ನಿರ್ಮಾಣವಾಯಿತು. ಇದನ್ನೇ ಈಗ ಗೋವಿಂದನು ಹೇಳುತ್ತಿರುವನು ॥೧೬೪॥

ಕೈಗಳನ್ನು ಹಿಚುಕಿಕೊಳ್ಳುತ್ತ ಹೀಗೆ, ಹೇಳಹತ್ತಿದನು. ಮೋಕ್ಷದ ಮಾರ್ಗವಾಗಿರುವ ಇಂತಹ ಬ್ರಾಹ್ಮಣ ಜನ್ಮವನ್ನು ಪಡೆದು ನಾನು ದುರ್ದೈವಿಯಾದೆನಲ್ಲಾ! ನಾನು ಧನಲೋಭದ ಭ್ರಾಂತಿಯಿಂದ ಮೋಸಹೋದೆನಲ್ಲಾ ॥೧೬೫॥

ಜೇಣೇ ದೇಹೇ ಲಾಭೇ ಮೋಕ್ಷಸುಖ । ತ್ಯಾ ದೇಹಾಸೀ ಮ್ಯಾ ದೀಧಲೇ ದುಃಖ । ಧನಲೋಭೀ ಮೀ ಪರಮ ಮೂರ್ಖ । ಮಜಐಸಾ ಆಣಿಕ ಅಸೇನಾ ॥೧೭೬॥ ನ ವೇಚಿತಾ ಧರ್ಮಕಾಮಾಸೀ । ಅರ್ಥ ಜೋಡಿಲಾ ಸಾಯಾಸೀ । ತ್ಯಾ ಅರ್ಥಾಚೀ ದಶಾ ಐಸೀ । ಅತಿದುಃಖೇಸೀ ಮಜ ಫಳಲಾ ॥೧೭೭॥ ಬಾಪ ಧನಲೋಭಾಚೇ ಕವತಿಕ । ನಾಹೀ ಇಹಲೋಕ ನಾ ಪರಲೋಕ । ಥಿತೇ ಅಂತರಲೇ ಮೋಕ್ಷಸುಖ । ಭೋಗವೀ ನರಕ ಅನಿವಾರ ॥೧೭೮॥ ದೇಖೇ ಜ್ಯಾ ನರಕಾಚೇ ಠಾಯೀ । ಆಕಲ್ಪ ಬುಡತಾ ಠಾವೋ ನಾಹೀ । ಧನಲೋಭ ಘಾಲೀ ತೈಸೇ ಠಾಯೀ । ತೇ ಮ್ಯಾ ನರದೇಹೀ ಜೋಡಿಲೇ ॥೧೭೯॥ ಜೋ ಜನ್ಮಲಾ ಬ್ರಾಹ್ಮಣದೇಹೀ । ತೋ ಪೂಜ್ಯ ಹೋಯ ಲೋಕೀ ತಿಹೀ । ಮೋಕ್ಷ ಲಾಗೇ ತ್ಯಾಚ್ಯಾ ಪಾಯೀ । ಮ್ಯಾ ಅಭಾಗ್ಯೇ ತೋಹೀ ನಾಶಿಲಾ ॥೧೮೦॥ ಲೋಭೇ ಜೇ ಧನ ಸಂಚಿಲೇ । ತೇ ನಿಃಶೇಷ ನಾಸೋನಿ ಗೇಲೇ । ಪರೀ ಮಜಲಾಗೀ ಅತಿದುಃಖೀ ಕೇಲೇ । ಬಾಂಧೋನಿ ದೀಧಲೇ ಮಹಾನರಕಾ ॥೧೮೧॥ ಉತ್ತಮ ದೇಹೋ ಝಾಲಾ ಪ್ರಾಪ್ತ । ತೋ ಧನಲೋಭೇ ಕೇಲಾ ವ್ಯರ್ಥ । ಆಯುಷ್ಯ ಗೇಲೇ ಹಾತೋಹಾತ । ಅತಿಸಂತಪ್ತ ಅನುತಾಪೇ ॥೧೮೨॥ ಧನಲೋಭಿಂಚೇ ಅಚಾಟ । ವೃಥಾ ಗೇಲೇ ಮಾಝೇ ಕಷ್ಟ । ವೈರಾಗ್ಯ ಉಪಜಲೇ ಉದ್ಭಟ । ಅತಿಚೋಖಟ ಸವಿವೇಕ ॥೧೮೩॥ ಧನಲೋಭೀ ಜೋ ಕಾ ನರ । ತೋ ಸಕಳ ದುಃಖಾಚೇ ಭಾಂಡಾರ । ಧನಬದ್ಧಕ ತೋ ಪಾಮರ । ಸ್ವಮುಖೇ ಸಾಚಾರ ನಿಂದೀತ ॥೧೮೪॥

ಪ್ರಾಯೇಣಾರ್ಥ ಕದರ್ಯಾಣಾಂ ನ ಸುಖಾಯ ಕದಾಚನ ।
ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ ॥೧೫॥

ಅರ್ಥ:- ಕೃಪಣ ಮನುಷ್ಯನಿಗೆ ಧನದಿಂದ ಎಂದಿಗೂ ಶಾಂತಿಯು ಲಭಿಸುವುದಿಲ್ಲ. ಈ ಲೋಕದಲ್ಲಿ ಧನ ಗಳಿಸುವುದು ಮತ್ತು ಅದರ ರಕ್ಷಣೆಯನ್ನು ಮಾಡುವ ಚಿಂತೆಯನ್ನು ಮಾಡಲ್ಪಡುವುದು. ಧರ್ಮಕಾರ್ಯ ಮಾಡಲಾರದ್ದಕ್ಕೆ ಮರಣದ ನಂತರ ನರಕ ಪ್ರಾಪ್ತವಾಗುವುದು.

ಪ್ರಾಯಶಾ ಜೇ ಧನಬದ್ಧಕ । ತ್ಯಾಂಸೀ ಇಹಲೋಕೀ ನಾಹೀ ಸುಖ । ಧನರಕ್ಷಣೇ ಅತಿದುಃಖ । ತೇ ಜಾತಾ ದೇಖ ಪ್ರಾಣಾಂತ ॥೧೮೫॥ ಧನಾಗಮನೀ ಅತಿಕಷ್ಟ । ಧನರಕ್ಷಣೇ ಕಲಹ ಶ್ರೇಷ್ಠ । ಧನನಾಶೇ ಹೋಯ ಹೃದಯಸ್ಫೋಟ । ಇಹಲೋಕೀ ಕಷ್ಟ ಧನಲೋಭ್ಯಾ ॥೧೮೬॥

ಯಾವ ಮನುಷ್ಯದೇಹದಿಂದ ಮೋಕ್ಷಸುಖವು ಲಾಭವಾಗುವುದು. ಅಂತಹ ಈ ದೇಹಕ್ಕೆ ನಾನು ಕೇವಲ ದುಃಖವನ್ನು ಕೊಟ್ಟೆನು. ನನ್ನಂತಹ ಪರಮ ಮೂರ್ಖ ಧನಲೋಭಿಯು ಅನ್ಯರಾರೂ ಇರಲಿಕ್ಕಿಲ್ಲ ॥೧೭೬॥ ನಾನು ಧರ್ಮಕಾರ್ಯಕ್ಕಾಗಿ ಒಂದು ಕಾಸನ್ನೂ ಕೂಡ ಖರ್ಚಿಸಲಿಲ್ಲ. ಬಹು ಸಾಯಾಸಪಟ್ಟು ದ್ರವ್ಯದ ಸಂಚಯ ಮಾಡಿದೆನು. ಆದರೆ ಈ ಹಣದ ದಶೆಯು ಹೀಗಾಗಿಬಿಟ್ಟಿತು. ಇದು ನನಗೆ ಅತ್ಯಂತ ದುಃಖದ ಫಲವನ್ನು ಕೊಟ್ಟಿತು ॥೧೭೭॥ ದ್ರವ್ಯಲೋಭದ ಮಾತು ಬಹಳ ಆಶ್ಚರ್ಯವಾಗಿರುವುದು. ಇದರಿಂದ ಇಹಲೋಕವೂ ಇಲ್ಲ ಮತ್ತು ಪರಲೋಕವೂ ಇಲ್ಲ. ಸುಲಭವಾಗಿರುವ ಮೋಕ್ಷಸುಖವು ಇದರಿಂದ ದೂರ ಸರೆಯಿತು. ಅತಿಲೋಭದಿಂದ ಅನಿವಾರ್ಯವಾಗಿ ನರಕದ ಪ್ರಾಪ್ತಿಯಾಯಿತು ॥೧೭೮॥ ಯಾವ ನರಕದಲ್ಲಿ ಒಮ್ಮೆ ಬಿದ್ದೆನೆಂದರೆ ಪ್ರಳಯಕಾಲವು ಬರುವವರೆಗೂ ಅಲ್ಲಿಂದ ಹೊರಗೆ ಬರುವುದಾಗುವುದಿಲ್ಲ. ಇದನ್ನು ನಾನು ಪ್ರತ್ಯಕ್ಷವಾಗಿ ಕಂಡುಕೇಳಿದ್ದರೂ ನಾನು ಈ ಅಮೌಲ್ಯವಾದ ಮನುಷ್ಯ ಜನ್ಮಕ್ಕೆ ಬಂದು ಧನಲೋಭದಿಂದ ನರಕವನ್ನು ಪ್ರಾಪ್ತ ಮಾಡಿಕೊಂಡೆನು ॥೧೭೯॥ ಯಾರು ಬ್ರಾಹ್ಮಣ ಜನ್ಮಕ್ಕೆ ಬರುವರೋ, ಅವರು ಮೂರು ಲೋಕಗಳಲ್ಲಿ ಪೂಜ್ಯರಾಗುವರು. ಮೋಕ್ಷವು ಅವರ ಚರಣಕಮಲಗಳ ಹತ್ತಿರ ಬರುವುದು. ಇಂತಹ ಪರಮ ಭಾಗ್ಯದ ಬ್ರಾಹ್ಮಣ ದೇಹದ ನಾಶವನ್ನು ನಾನು ದುರ್ದೈವದಿಂದ ಮಾಡಿಕೊಂಡೆನು ॥೧೮೦॥ ಲೋಭದಿಂದ ಯಾವ ದ್ರವ್ಯದ ಸಂಗ್ರಹವನ್ನು ಮಾಡಿದೆನೋ, ಅದು ಮಾತ್ರ ಸರ್ವವೂ ನಾಶವಾಯಿತು. ಆದರೆ ನನಗೆ ಮಾತ್ರ ಅದು ಅತಿಶಯವಾಗಿ ದುಃಖವನ್ನು ಕೊಟ್ಟಿತು. ಕೊನೆಗೆ ನನ್ನನ್ನು ಕಟ್ಟಿ ನರಕಕ್ಕೆ ನೂಕಿಬಿಟ್ಟಿತು ॥೧೮೧॥ ನನಗೆ ಉತ್ತಮವಾದ ದೇಹವು ಪ್ರಾಪ್ತವಾದರೂ ಕೂಡ ನಾನು ಅದನ್ನು ದ್ರವ್ಯದ ಲೋಭದಿಂದ ಪುಕ್ಕಟ್ಟೆಯಾಗಿ ಕಳೆದುಕೊಂಡೆನು. ನೋಡು ನೋಡುತ್ತಲೇ ಆಯುಷ್ಯವು ಹೊರಟು ಹೋಯಿತು. ಈಗ ಪಶ್ಚಾತ್ತಾಪಪಟ್ಟು ಅತ್ಯಂತ ಸಂತಾಪಗೊಂಡಿರುವೆನು ॥೧೮೨॥ ಧನಲೋಭದಿಂದ ನಾನು ಪಟ್ಟ ಕಷ್ಟಗಳೆಲ್ಲವೂ ವ್ಯರ್ಥವಾದವು. ಈಗ ನನಗೆ ಉತ್ತಮವಾದ ವಿವೇಕ ಸಹ ತೀವ್ರ ವೈರಾಗ್ಯವು ಪ್ರಾಪ್ತವಾಗಿರುವುದು ॥೧೮೩॥ ಯಾವ ಮನುಷ್ಯನು ಧನಲೋಭಿಯೋ, ಅವನು ಸರ್ವ ದುಃಖಗಳ ಭಾಂಡಾರವೇ ಆಗಿರುವನು. ಧನದಿಂದ ಬದ್ಧನಾಗಿರುವವನು ನಿಜವಾಗಿಯೂ ಅವನು ಪಾಮರನೇ ಆಗಿರುವನು. ಈ ಪ್ರಕಾರವಾಗಿ ಆತನು ತನ್ನ ಮುಖದಿಂದಲೇ ತನ್ನ ನಿಂದೆಯನ್ನು ಮಾಡಲಾರಂಭಿಸಿದನು ॥೧೮೪॥

ಬಹುತೇಕವಾಗಿ ಧನಲೋಭಿಯವರಿಗೆ ಈ ಲೋಕದಲ್ಲಿ ಯಾವ ಸುಖವೂ ದೊರೆಯುವುದಿಲ್ಲ. ದ್ರವ್ಯದ ರಕ್ಷಣೆ ಮಾಡುವುದಕ್ಕಾಗಿ ಅವರಿಗೆ ಅತಿಶಯವಾಗಿ ಕಷ್ಟಪಡಬೇಕಾಗುವುದು. ಧನವು ಹಾಳಾಯಿತೆಂದರೆ ಆಗ ಅವರಿಗೆ ಪ್ರಾಣಾಂತಿಕ ಸಮಯ ಬಂದಂತಾಗುತ್ತಿರುವುದು. ॥೧೮೫॥ ಧನ ಕೂಡಿಸಲು ಅತ್ಯಂತ ಕಷ್ಟ ಸೋಸಬೇಕಾಗುವುದು. ಧನದ ರಕ್ಷಣೆಯನ್ನು ಮಾಡಲು ಅತಿಶಯ ಸಂಘರ್ಷವು ನಿರ್ಮಾಣವಾಗುತ್ತಿರುವುದು ಮತ್ತು ಈ ಧನವು ನಾಶವಾಗುತ್ತಲೇ ದುಃಖದಿಂದ ಎದೆಯು ಒಡೆದುಹೋಗುವುದು. ಈ ಪ್ರಕಾರವಾಗಿ ಈ ಜಗತ್ತಿನಲ್ಲಿ ಧನಲೋಭಿಯು ಅನೇಕ ರೀತಿಯಲ್ಲಿ ಕಷ್ಟಗಳನ್ನು ಭೋಗಿಸಬೇಕಾಗುವುದು ॥೧೮೬॥

ಯಾಪರೀ ಇಹಲೋಕೀ ದುಃಖ । ಅಧರ್ಮೇ ಖುಂಟಲಾ ಪರಲೋಕ । ಮರತಾ ಉರೀ ಆದಳೇ ನರಕ । ಆವಶ್ಯಕ ಧನಲೋಭ್ಯಾ ।।೧೭೭।। ಜೋ ಧರ್ಮ ಕರೀನಾ ಸ್ವಯೇ ನ ಖಾಯೇ । ಜೋ ಮಜಸಾರೀಖಾ ಕದರ್ಯು ಹೋಯೇ । ತ್ಯಾಸೀ ಚಢತೇ ವಾಢತೇ ದುಃಖ ಪಾಹೇ । ನಾಹೀ ಸುಖಸೋಯೇ ಕದರ್ಯಾ ।।೧೭೮।। ಲೋಭಾಚೀ ವಸ್ತೀ ಜಿಯೇ ಠಾಯೀ । ತೇಥ ಸ್ವಪ್ನೀಹೀ ಸುಖ ನಾಹೀ । ಲೋಭ ಅತಿಶಯೇ ನಿಂದ್ಯ ಪಾಹೀ । ತೇ ಆಪಣ ಸ್ವಮುಖೇಹೀ ಸಾಂಗತ ।।೧೭೯।।

ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾಯೇ ಗುಣಿನಾಂ ಗುಣಾಃ ।
ಲೋಭಃ ಸ್ವಲ್ಪೋಽಪಿ ತಾನ್ ಹಂತಿ ಶ್ವಿತ್ರೋ ರೂಪಮಿವೇಪ್ಸಿತಮ್ ।।೧೬।।

ಅರ್ಥ:- ಮನುಷ್ಯನ ಸರ್ವಸುಂದರ ಶರೀರಕ್ಕೆ ಬಿಳಿ ಕುಷ್ಠದ ಒಂದು ಚುಕ್ಕೆಯು ಸೌಂದರ್ಯವನ್ನು ಹಾಳುಮಾಡುವುದು. ಆದರಂತೆ ಅಲ್ಪ ಲೋಭವು ನಿರ್ಮಾಣವಾದರೆ ಯಶಸ್ವೀ ಮನುಷ್ಯನ ಯಶ ಮತ್ತು ಗುಣವಂತರ ಪ್ರಶಂಸನೀಯ ಗುಣ ಇವು ಹಾಳಾಗಿಬಿಡುವುವು.

ರಣೀಪಡತಾ ಮುಖ್ಯ ಧುರೇಸೀ । ಜೋ ಅಂಗೇ ವಿಭಾಂಡೀ ತ್ಯಾ ರಣಾಸೀ । ಖಾಂದೀ ವಾಊನಿ ಆಣಿ ರಾಯಾಸೀ । ಯೇವಢೀ ಕೀರ್ತಿ ಜ್ಯಾಸೀ ಜೋಡಲೀ ।।೧೮೦।। ಲೋಭ ಸಂಚರೋನಿ ತ್ಯಾಪಾಶೀ । ಏಕ ಶ್ವೇತ ಮಾಗವೀ ರಾಯಾಸೀ । ತೇಚಿ ಅಪಕೀರ್ತಿ ಹೋಯ ತ್ಯಾಸೀ । ಜಗ ಉಪಹಾಸೀ ಮೂರ್ಖತ್ವಾ ।।೧೮೧।। ತ್ಯಾಸೀ ನ ಮಾಗತಾ ರಾಜಾ ಜಾಣ । ಕರೂ ಪಾಹೇ ಆಪಣಾಸಮಾನ । ತ್ಯಾಸೀ ಲೋಭೇ ಆಣೋನಿ ನಾಗವಣ । ಮೂರ್ಖಪಣ ಸ್ಥಾಪಿಲೇ ।।೧೮೨।। ಸ್ವಯೇ ಕರಿತಾ ಕನ್ಯಾದಾನ । ಸಕಳ ಕುಳ ಹೋಯ ಪಾವನ । ತೇಥೇಹೀ ಲೋಭೇ ಘೇತಾ ಧನ । ಅಧಃಪತನ ಧನಲೋಭಿಯಾ ।।೧೮೩।। ದಾತಾ ದೇಊನಿಯಾ ದಾನ । ದಾನ ಪ್ರಸಂಗೇ ಉಪಾರ್ಜೀ ಧನ । ತೇಚಿ ದಾತ್ಯಾಸೀ ದೂಷಣ । ಲೋಭ ಲಾಂಛನ ದಾನಾಸೀ ।।೧೮೪।। ವೇದಶಾಸ್ತ್ರೇ ಕರೂನಿ ಪಠಣ । ಪಂಡಿತ ಝಾಲೇ ಅತಿಸಜ್ಞಾನ । ತೇಹೀ ಧನಲೋಭೇ ಛಳಿಲೇ ಜಾಣ । ಜ್ಞಾನಾಭಿಮಾನ ಪ್ರತಿಷ್ಠೇ ।।೧೮೫।। ದೇಹಪ್ರತಿಷ್ಠೇಚಿಯೇ ಸಿದ್ಧೀ । ಪಂಡಿತ-ಪಂಡಿತಾ ವಾದವಿಧೀ । ನಾನಾ ಛಳಣೋಕ್ತೀ ವಿರೋಧೀ । ಠಕಿಲೇ ತ್ರಿಶುದ್ಧೀ ಜ್ಞಾತೇ ಲೋಭೇ ।।೧೮೬।। ಸವಿವೇಕ ಸಜ್ಞಾನ ಜ್ಞಾತ್ಯಾಸೀ । ಲೋಭ ಆಣೀ ನಿಂದಾಸ್ಪದಾಸೀ । ಇತರಾಂಚಿ ಗತಿ ಕಾಯಸೀ । ತೇ ಲೋಭಾಚೀ ದಾಸೀ ಹೋಊನಿ ಠಾತೀ ।।೧೮೭।।

ಇಹಲೋಕದಲ್ಲಿ ಇಂತಹ ದುಃಖಗಳು ಆಗುತ್ತವೆ, ಅದರಲ್ಲಿ ಅಧರ್ಮವಾಗಲು ಪರಲೋಕವೂ ಇಲ್ಲದಾಗುವುದು. ಸಾಯುತ್ತಲೇ ಧನಲೋಭಿಯ ದೇಹದ ಮೇಲೆ ನರಕವು ಬಂದು ಬೀಳುವುದು ।೧೭೭।। ಯಾವನು ನನ್ನ ಹಾಗೆ ಕೃಪಣನಾಗಿರುವನೋ, ಆತನಿಗೆ ಮಾತ್ರ ಎಲ್ಲಕ್ಕಿಂತಲೂ ಹೆಚ್ಚಿಗೆ ದುಃಖವಾಗುತ್ತಿರುವುದು. ಕೃಪಣ ಮನುಷ್ಯನಿಗೆ ಸುಖವು ಎಂದಿಗೂ ದೊರೆಯುವುದಿಲ್ಲ ।೧೭೮।। ಎಲ್ಲಿ ಲೋಭದ ವಸತಿ ಇರುವುದೋ, ಅಲ್ಲಿ ಸ್ವಪ್ನದಲ್ಲಿಯೂ ಕೂಡ ಸುಖವು ಪ್ರಾಪ್ತವಾಗುವುದಿಲ್ಲ. ಹೀಗೆ ಲೋಭ ಎಂಬುವುದು ಅತಿಶಯ ನಿಂದಾತ್ಮಕವಾಗಿದೆ. ಅದನ್ನು ಈಗ ಆ ಯಾವ ಕೃಪಣನು ತನ್ನ ಮುಖದಿಂದಲೇ ಹೇಳುತ್ತಿರುವನು ।೧೭೯।। ಮುಖ್ಯನಾಗಿರುವ ಸೇನಾಪತಿಯು ಮೃತ್ಯುಮುಖವಾಗಿ ಬೀಳಲು ಆಗ ಒಬ್ಬ ಸೈನಿಕನು ಬಹಳ ಶೌರ್ಯತನದಿಂದ ಮುಂದೆ ನುಗ್ಗಿ ಶತ್ರುಗಳನ್ನು ಹೊಡೆದು, ಜಯಿಸಿ ಅಲ್ಲಿ ಸಿಕ್ಕಿಕೊಂಡಿರುವ ರಾಜನನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ಬಂದು ರಕ್ಷಿಸುವನು. ಇಂತಹ ಮಹಾಕೀರ್ತಿಗೆ ಪಾತ್ರನಾಗಿರುವನು ।೧೮೦।। ಆದರೆ ಆತನ ಮನದಲ್ಲಿ ಲೋಭದ ಸಂಚಾರವಾಗಿ ಆತನು ರಾಜನಲ್ಲಿ ಒಂದು ಹೊಲವನ್ನು ಕೇಳಿದನು. ಇದರಿಂದ ಆತನ ಅಪಕೀರ್ತಿವಾಯಿತು. ಸರ್ವರೂ ಆತನ ಮೂರ್ಖತನಕ್ಕೆ ಅಪಹಾಸ್ಯ ಮಾಡಹತ್ತಿದರು ।೧೮೧।। ಕಾರಣವೇನೆಂದರೆ, ಈತನು ರಾಜನಲ್ಲಿ ಏನೂ ಬೇಡದೇ ನಿರ್ಲೋಭಿಯಾಗಿದ್ದರೆ, ರಾಜನು ಈತನಿಗೆ ತನ್ನಂತೆ ಸುಖಸಂಪನ್ನನ್ನಾಗಿ ಮಾಡುವ ವಿಚಾರ ಮಾಡಿದ್ದನು. ಆದರೆ ಆ ರಾಜನ ಮನೋರಥಕ್ಕೆ ಅವನ ಲೋಭತನವು ಅಡ್ಡಾಗಿಬಿಟ್ಟಿತು. ಇದರಿಂದ ಅವನ ಮೂರ್ಖತನವು ಮಾತ್ರ ನಿಶ್ಚಯವಾಗಿ ಪ್ರದರ್ಶಿಸಲ್ಪಟ್ಟಿತು ।೧೮೨।। ಸ್ವತಃ ಕನ್ಯಾದಾನವನ್ನು ಮಾಡಲು ಅದರಿಂದ ಆತನ ಸರ್ವ ಕುಲವು ಪಾವನವಾಗುವುದು. ಆದರೆ ಅಲ್ಲಿಯೂ ಕೂಡ ಲೋಭದಿಂದ ಕನ್ಯಾವಿಷಯಕ್ಕೆ ದ್ರವ್ಯವನ್ನು ತೆಗೆದುಕೊಂಡರೆ ಆ ಧನಲೋಭಿಯ ಅಧಃಪತವಾಗುವುದು ।೧೮೩।। ದಾತಾನಾದವನು ದಾನವನ್ನು ಕೊಟ್ಟರೂ ಸಹ ಆ ದಾನದ ಪ್ರಸಂಗದಿಂದ ಏನಾದರೂ ಪ್ರತಿಫಲ ಬಯಸಿ ಪಡೆದರೆ ಆ ದಾತಾನಿಗೆ ದೋಷವು ಬಡೆಯುವುದು. ಈ ಪ್ರಕಾರವಾಗಿ ಲೋಭವು ದಾನಿಗೂ ಕೂಡ ಲಾಂಛನಾಸ್ಪದನನ್ನಾಗಿ ಮಾಡುವುದು ।೧೮೪।। ವೇದಶಾಸ್ತ್ರಗಳ ಸಾಕಷ್ಟು ಅಭ್ಯಾಸವನ್ನು ಮಾಡಿ ದೊಡ್ಡ ಪಂಡಿತ, ಜ್ಞಾನಸಂಪನ್ನರಾಗುವರು. ಅವರಿಗೂ ಕೂಡ ಜ್ಞಾನದ ಅಭಿಮಾನದಿಂದ ಧನಲೋಭದ ತೊಂದರೆಯಾಗುತ್ತಿರುವುದು ।೧೮೫।। ದೇಹದ ಸತ್ಯತ್ವ ಸಿದ್ಧ ಮಾಡುವುದಕ್ಕಾಗಿ ಪಂಡಿತರಲ್ಲಿ ವಾದವಿವಾದಗಳು ಆರಂಭವಾಗುವುವು. ಅದರಲ್ಲಿ ವಿರೋಧವಾಗಲು ಪರಸ್ಪರರಲ್ಲಿ ಅಪಶಬ್ದಗಳು ಬಳಸಲ್ಪಡುವುವು ? ಈ ಪ್ರಕಾರವಾಗಿ ಪಂಡಿತರೂ ಕೂಡ ಲೋಭದಲ್ಲಿ ಮೋಸಹೋಗುವರು ।೧೮೬।। ವಿಚಾರವಂತರಾದ ವಿದ್ವಾನರೂ ಕೂಡ ಲೋಭಕಾರಣದಿಂದ ನಿಂದೆಗೆ ಪಾತ್ರರಾಗುತ್ತಿರಲು, ಸಾಮಾನ್ಯರಾದ ಇತರ ಜನರ ಯಾವ ಕಥೆ? ಪಾಪ ಇವರೆಲ್ಲರೂ ಲೋಭದ ದಾಸರಾಗಿರುವರು ।೧೮೭।।

ಲೋಭ ಶುದ್ಧಿಸೀ ಕರೀ ಅಶುದ್ಧ । ಲೋಭ ತೇಥ ನಿಂದಾಸ್ಪದ । ತೋಚಿ ದೃಷ್ಟಾಂತ ವಿಶದ । ಐಕ ಪ್ರಸಿದ್ಧ ಸಾಂಗತ ।೧೮೮॥ ಕುಲಶೀಲ ಅತಿಸುಕುಮಾರ । ರೂಪೇ ಸರ್ವಾಂಗ ಮನೋಹರ । ನಾಕೀ ಶ್ವೇತತಾ ಅಣುಮಾತ್ರ । ನಿಂದ್ಯ ಸುಂದರ ತೇಣೇ ಹೋಯ ।೧೮೯॥ ತೇವೀ ಅಲ್ಪ ಹೀ ಲೋಭಾಚೀ ಜೇ ವಸ್ತೀ । ನಾಶೀ ಗುಣೌದಾರ್ಯಯಶಃ ಕೀರ್ತೀ । ಲೋಭಾಐಸಾ ತ್ರಿಜಗತೀ । ಕರ್ತಾ ಅಪಕೀರ್ತೀ ಆನ ನಾಹೀ ।೧೯೦॥ ಧನಲೋಭೀ ಸದಾ ವಿರೋಧೂ । ಧನಲೋಭ ತೋಡೀ ಸಖೇ ಬಂಧೂ । ಧನಲೋಭಾ ಐಸಾ ನಾಹೀ ಬಾಧೂ । ಅತಿಅಶುದ್ಧೂ ಆಣಿಕ ಅಸೇನಾ ।೧೯೧॥

ಅರ್ಥಸ್ಯ ಸಾಧನೇ ಸಿದ್ಧ ಉತ್ಕರ್ಷ ರಕ್ಷಣೇ ವ್ಯಯೇ ।
ನಾಶೋಪಭೋಗ ಆಯಾಸಸ್ತ್ರಾಸಶ್ಚಿಂತಾ ಭ್ರಮೋ ನೃಣಾಮ್ ।೧೭॥

ಅರ್ಥ:- ಧನ ಕೂಡಿಸಲು, ಧನವನ್ನು ಬೆಳೆಯಿಸಲು, ಕೂಡಿದ ಧನ ರಕ್ಷಿಸಲು, ಮತ್ತು ಖರ್ಚಿಸಲು ಹಾಗೆಯೇ ಅದು ನಾಶವಾಗಲು, ಅದರ ಉಪಭೋಗ ಪಡೆಯುತ್ತಿರಲು, ಈ ಎಲ್ಲದರಲ್ಲಿಯೂ ಪರಿಶ್ರಮ, ಭಯ, ಚಿಂತೆ ಮತ್ತು ಭ್ರಮೆ ಇವುಗಳೊಂದಿಗೆ ಹೋರಾಡಬೇಕಾಗುವುದು.

ಪ್ರಥಮ ಶಿಣಾವೇ ದ್ರವ್ಯ ಜೋಡಿತಾ । ದುಸರೇ ಶಿಣಾವೇ ತೇ ವಾಢವಿತಾ । ದ್ರವ್ಯ ಜರೀ ಝಾಲೇ ಉತ್ಕರ್ಷತಾ । ತರೀ ಲೋಭ ಸರ್ವಥಾ ಪುರೇ ನ ಮ್ಹಣೇ ।೧೯೨॥ ದ್ರವ್ಯಾಲಾಗೀ ಭಾವಾರ್ಥತಾ । ಜೈಸೇ ಕಷ್ಟತೀ ಸರ್ವಥಾ । ತೈಸಾ ಜರೀ ಕಷ್ಟೇ ಪರಮಾರ್ಥಾ । ತೈ ಬ್ರಹ್ಮ ತತ್ತ್ವತಾ ಖೇಳಣೇ ಹೋಯ ।೧೯೩॥ ಏವಂ ಕಷ್ಟೀ ಜೋಡಲ್ಯಾ ದ್ರವ್ಯಾಸೀ । ರಕ್ಷಣೇ ಅತಿಚಿಂತಾ ಮಾನಸೀ । ಅತಿಶಯ ಲಾಗಲೀ ಜೀವಾಸೀ । ಅಹರ್ನಿಶೀ ಧುಕಧುಕೀ ।೧೯೪॥ ಸ್ತ್ರೀ ಪುತ್ರ ಹೋ ಮಾತಾ ಪಿತಾ । ತ್ಯಾಂಸೀ ಪಾತಿಜೇನಾ ಸರ್ವಥಾ । ಆಪಣಾಹೂನಿ ಪರತಾ । ವಿಶ್ವಾಸೂ ಅರ್ಥಾ ಮಾನೇನಾ ।೧೯೫॥ ವಿಸರೋನಿಯಾ ನಿಜಘಾತಾ । ಚೋರಾ ಪಾಸೋನಿ ರಾಖೇ ವಿತ್ತಾ । ವಿತ್ತ ರಕ್ಷಣೇ ನಿಜಚಿಂತಾ । ತಿನ್ಹೀ ಅವಸ್ಥಾ ಏಕಾಗ್ರ ।೧೯೬॥ ಐಸೀ ಏಕಾಗ್ರತಾ ಕರೂನೀ । ಜರೀ ಲಾಗತಾ ಭಗವದ್ಭಜನೀ । ತರೀ ವಶ್ಯ ಹೋತಾ ಚಕ್ರಪಾಣೀ । ಅರ್ಥರಕ್ಷಣೇ ಸಾಧಕಾ ।೧೯೭॥ ಉಚಿತಾನುಚಿತ ವಿವಾಹಾಸೀ । ದ್ರವ್ಯ ವೇಂಚಿತಾ ಉದರಾಸೀ । ಅತಿಶಯ ಹೋಯ ಕಾಸಾವಿಸೀ । ಧನವ್ಯಯೋ ತ್ರಾಸಾಸೀ ಉಪಜವೀ ।೧೯೮॥

ನೇ ಈ ಲೋಭವು ಪವಿತ್ರ ಮನುಷ್ಯರಿಗೂ ಕೂಡ ಅಪವಿತ್ರರನ್ನಾಗಿ ಮಾಡಿಬಿಡುವುದು. ಎಲ್ಲಿ ಲೋಭವಿರುವುದೋ, ಅಲ್ಲಿ ನಿಂದೆಯು ಾತ್ರ ನಿಶ್ಚಿತವಾಗಿ ತಪ್ಪದೇ ವಸತಿಯಾಗಿರುವುದು. ಇದೇ ವಿಷಯಕ್ಕೆ ಒಂದು ಪ್ರಸಿದ್ಧವಾದ ದೃಷ್ಟಾಂತವನ್ನು ಸವಿಸ್ತಾರವಾಗಿ ಹೇಳುವೆನು, ಅದನ್ನು ಕೇಳು ।೧೮೮॥ ಕುಲವತೀ, ಸುಶೀಲಳು, ಸುಕುಮಾರಳಾಗಿ ಸರ್ವಾಂಗ ಸುಂದರಳಾಗಿದ್ದರೂ ಕೂಡ ಆ ಕನ್ಯೆಯ ಮೂಗಿನ ಮೇಲೆ ಬಿಳಿಕುಷ್ಟದ ಒಂದು ಚುಕ್ಕೆಯು ಇದ್ದರೆ ಆಗ ಆಕೆಯ ಸರ್ವ ಸೌಂದರ್ಯವು ನಿಂದಾಸ್ಪದವೇ ಆಗುವುದು ।೧೮೯॥ ಅದರಂತೆ ಮನದಲ್ಲಿ ಅಲ್ಪ ಪ್ರಮಾಣದ ಲೋಭವು ಇದ್ದರೆ, ಆ ಲೋಭವು ಸರ್ವ ಗುಣ, ಔದಾರ್ಯ, ಯಶ, ಕೀರ್ತಿ ಈ ಎಲ್ಲವನ್ನೂ ನಾಶಗೊಳಿಸುವುದು. ಆದ್ದರಿಂದ ಲೋಭದಂತಹ ಅಪಕೀರ್ತಿ ಗುರಿಮಾಡುವ ಬೇರೆ ಯಾವುದೂ ಈ ಮೂರು ಲೋಕಗಳಲ್ಲಿಯೂ ಇರುವುದಿಲ್ಲ ।೧೯೦॥ ಧನಲೋಭಿ ಮನುಷ್ಯನು ಎಲ್ಲರ ವಿರುದ್ಧನಾಗಿರುವನು. ಲೋಭವು ಇಷ್ಟಮಿತ್ರರನ್ನು ದೂರಮಾಡುವುದು. ಧನಲೋಭದಂತಹ ಬಾಧಕ, ಅಪವಿತ್ರತೆಯು ಬೇರೆ ಯಾವೂದೂ ಇರುವುದಿಲ್ಲ ।೧೯೧॥

ಪ್ರಾರಂಭದಲ್ಲಿ ದ್ರವ್ಯ ಜೋಡಿಸಲು ಅತಿಶಯವಾಗಿ ಕಷ್ಟಪಡಬೇಕಾಗುವುದು. ತದನಂತರ ಅದನ್ನು ಬೆಳೆಸುವುದಕ್ಕಾಗಿ ಶ್ರಮವಹಿಸಬೇಕಾಗುವುದು. ಅಗಣಿತ ದ್ರವ್ಯವು ಪ್ರಾಪ್ತವಾದರೂ ಕೂಡ ಲೋಭವು ಎಂದಿಗೂ ಸಾಕು ಎನ್ನುವುದಿಲ್ಲ ।೧೯೨॥ ಜನರು ದ್ರವ್ಯವನ್ನು ಕೂಡಿಸಲು ಮನಸ್ಸಿನಿಂದ ಕಷ್ಟವನ್ನು ಸೋಸುತ್ತಿರುವರು. ಹೀಗೆ ಕಷ್ಟವನ್ನು ಪರಮಾರ್ಥಕ್ಕಾಗಿ ಸೊಸಿದರೆ ಅವರಿಗೆ ಪರಬ್ರಹ್ಮದ ಪ್ರಾಪ್ತಿಯು ಆಗಿಬಿಡುವುದು ।೧೯೩॥ ಅತಿಶಯ ಕಷ್ಟದಿಂದ ಧನವನ್ನು ಕೂಡಿಸಿದರೂ ಕೂಡ ಅದನ್ನು ಸಂರಕ್ಷಿಸುವುದಕ್ಕಾಗಿ ಮನಸ್ಸಿಗೆ ಅತ್ಯಂತ ಚಿಂತೆಯು ಹತ್ತಿಕೊಳ್ಳುವುದು. ಅದರಿಂದ ಜೀವಕ್ಕೆ ಹಗಲು ರಾತ್ರಿ ಭಯದ ವಾತಾವರಣವು ಬಡೆದುಕೊಳ್ಳುವುದು ।೧೯೪॥ ಹೆಂಡತಿಯಾಗಿರಲಿ, ಮಕ್ಕಳಾಗಿರಲಿ ಅಥವಾ ತಂದೆ ತಾಯಿಗಳಾಗಿರಲಿ ಅವರಲ್ಲಿ ವಿಶ್ವಾಸವನ್ನು ಎಂದಿಗೂ ಇಡಿಸಿಕೊಳ್ಳುವುದಿಲ್ಲ. ದ್ರವ್ಯದ ವಿಷಯಕ್ಕಾಗಿ ತನ್ನಂತೆ ಬೇರೆಯವರು ಯಾರಾದರೂ ವಿಶ್ವಾಸಿಕರು ಇದ್ದಾರೆ ಎಂಬುದು ಆತನ ಮನಸ್ಸಿಗೆ ಮೂಡುವುದೇ ಇಲ್ಲ ।೧೯೫॥ ತನಗೆ ಜೀವದ ಘಾತವಾದೀತೆಂಬುದನ್ನು ಮರೆತು ಇವನು ಕಳ್ಳರಿಂದ ದ್ರವ್ಯದ ರಕ್ಷಣೆಯನ್ನು ಮಾಡುತ್ತಿರುವನು. ಜಾಗೃತೀ, ಸ್ವಪ್ನ ಮತ್ತು ಸುಷುಪ್ತಿ ಈ ಮೂರೂ ಅವಸ್ಥೆಗಳಲ್ಲಿ ಅವನು ಏಕಾಗ್ರ ಚಿತ್ತದಿಂದ ಧನದ ರಕ್ಷಣೆಯ ಕಾಳಜಿಯನ್ನು ಮಾಡುತ್ತಿರುವನು ।೧೯೬॥ ಈ ಪ್ರಕಾರದ ಏಕಾಗ್ರಚಿತ್ತದಿಂದ ಅವನು ಭಗವಂತನ ಭಜನೆಯನ್ನು ಮಾಡಿದರೆ ಸ್ವಲ್ಪೇ ಸಮಯದಲ್ಲಿ ಅವನಿಗೆ ನಿಶ್ಚಿತವಾಗಿ ಶ್ರೀಹರಿಯು ವಶನಾಗುತ್ತಿದ್ದನು ।೧೯೭॥ ಲಗ್ನ ಕಾರ್ಯಗಳಲ್ಲಿ ಎಲ್ಲಿಯಾದರೂ ಹೆಚ್ಚು ಕಡಿಮೆ ಹಣವು ಖರ್ಚು ಆದರೆ ಅಥವಾ ಹೊಟ್ಟೆಗೆ ತಿನ್ನಲು ಎಲ್ಲಿಯಾದರೂ ನಾಲ್ಕಾರು ರೂಪಾಯಿಗಳು ಹೆಚ್ಚಾಗಿ ಖರ್ಚಾದರೆ ಆಗ ಅವನು ಭಯಪಟ್ಟು, ತಳಮಳಿಸುವನು. ಹಣವನ್ನು ಖರ್ಚುಮಾಡುವ ಹೆಸರು ಎತ್ತಿದರೆ ಸಾಕು, ಆತನ ತಲೆಗೆ ಬಹಳಷ್ಟು ನೋವು ಉಂಟಾಗುವುದು ।೧೯೮॥

ಏವಂ ಜೋಡೂನಿ ರಕ್ಷಿತಾ ದ್ರವ್ಯಾಸೀ । ಅವಚಟೇ ನಾಶ ಹೋಯ ಜೈ ತ್ಯಾಸೀ । ತೈ ಅತಿಭ್ರಮ ಚಢೇ ಮಾನಸೀ । ಹೋತೀ ಧನಪಿಶೀ ಬದ್ಧಕ ॥೧೯೯॥ ದ್ರವ್ಯಾರ್ಜನೀ ವಸೇ ಪ್ರಯಾಸ । ದ್ರವ್ಯರಕ್ಷಣೀ ಚಿಂತೇಚಾ ವಾಸ । ದ್ರವ್ಯವ್ಯಯೀ ವಳಸಾ ತ್ರಾಸ । ಭ್ರಮಾಚಾ ರಹಿವಾಸ ಧನನಾಶೀ ॥೨೦೦॥ ಆದಿಮಧ್ಯಾವಸಾನೀ ಪಾಹೀ । ದ್ರವ್ಯ ತೇ ಸಮೂಳ ಅಪಾಯೀ । ತೇಥ ಸುಖಾಚಾ ಲೇಶ ನಾಹೀ । ಹೇ ಐಸೇ ಪಾಹೀ ಮಜ ಜಾಹಲೇ ॥೨೦೧॥ ಆಯಾಸ-ತ್ರಾಸಿ-ಚಿಂತೇಸಹಿತ । ಧನಾಪಾಶೀ ಭ್ರಮ ನಾಂದತ । ಅರ್ಥತಿತುಕಾ ಅನರ್ಥಯುಕ್ತ । ತೋಚಿ ಅರ್ಥಸ್ವಯೇ ಸಾಂಗೇ ॥೨೦೨॥

ಸ್ತೇಯ ಹಿಂಸಾಽನೃತಂ ದಂಭಃ ಕಾಮಃ ಕ್ರೋಧಃ ಸ್ಮಯೋ ಮದಃ । ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ ॥೧೮॥

ಅರ್ಥ:- ಕಳ್ಳತನ, ಕೊಲೆ, ಅಸತ್ಯ, ದಂಭ, ಕಾಮ, ಕ್ರೋಧ, ಗರ್ವ, ಅಹಂಕಾರ, ಭೇದಬುದ್ಧೀ, ವೈರತ್ವ, ಅವಿಶ್ವಾಸ, ಸ್ಪರ್ಧೇ, ವಿಷಯಲಂಪಟತನ, ಜೂಜು ಮತ್ತು ಮದ್ಯಸೇವನೆ ಇವು ಅನಪೇಕ್ಷಿತ ೧೫ ದುರ್ಗುಣಗಳು ಅರ್ಥದಲ್ಲಿವೆ.

ಅರ್ಥ ಸರ್ವಾಂಗೇ ಅನರ್ಥಭೂತ । ಹೇ ಮಾಝೇ ವಚನ ತ್ರಿಸತ್ಯ । ಪೃಥ್ವೀಮಾಜೀ ಜೇ ಜೇ ಅನರ್ಥ । ತೇ ತೇ ಅರ್ಥಾತ ಉಪಜತೀ ॥೨೦೩॥ ಪುಸಾಲ ಅರ್ಥೀಂಚೇ ಅನರ್ಥ । ತೇ ಸಾಂಗತಾ ಅಸಂಖ್ಯ ಅನಂತ । ಸಂಕ್ಷೇಪೇ ಸಾಂಗೇನ ಯೇಥ। ಪಂಧರಾ ಅನರ್ಥ ಅರ್ಥಾಸೀ॥೨೦೪॥ ಪ್ರಥಮ ಅನರ್ಥ ಅರ್ಥಾಸೀ । ಚೋರೀ ವಸೇ ಅರ್ಥಾಪಾಶೀ। ಅರ್ಥು ನಾಹೀ ಗಾ ಜಯಾಪಾಶೀ। ಚೋರಾಪಾಸೂನ ತ್ಯಾಸೀ ಭಯ ನಾಹೀ॥೨೦೫॥ ದ್ರವ್ಯ ನಾಹೀ ಜ್ಯಾಚ್ಯಾ ಹಾತೀ। ತ್ಯಾತೇ ದೇಖೋನಿ ಚೋರ ಭೀತೀ । ಕಾಂಹೀ ಮಾಗೇಲ ಆಮ್ಹಾ ಪ್ರತೀ । ಮ್ಹಣೋನಿ ಲಪತೀ ತ್ಯಾಭೇಣೇ॥೨೦೬॥ ಅತರ್ಕ್ಯ ನೇತ್ರಾಂತರೇನೇಣೇ । ಕಾ ಧಾತುವಾದೇ ಸರ್ವಸ್ವ ಘೇಣೇ । ಪರಸ್ವ ಭೋಳ್ಯಾನಿ ಬುಡವಣೇ । ಕಾ ವಿಜನೀ ಹರಣೇ ಸರ್ವಸ್ವ ॥೨೦೭॥ ಮಾರ್ಗೀ ಪಡಲೇ ಧನ ಪರಾಚೇ । ಸ್ವಯೇ ಜಾಣೋನಿ ಅಮಕಿಯಾಚೇ । ನಾಹೀ ದೇಣೇ ತ್ಯಾಸೀ ಸಾಚೇ । ಹೇಹೀ ಚೋರೀಚೇ ಲಕ್ಷಣ ॥೨೦೮॥ ಸ್ವರ್ಣಸ್ತೇಯೇ ನರಕ ಪ್ರಾಪ್ತೀ । ಐಸೇ ವಿವೇಕೀಹೀ ಚೋರೀ ಕರಿತೀ । ಮಾ ಇತರಾಂಚೀ ಕಾಯಶೀ ಗತೀ । ಚೋರೀಚೀ ವಸ್ತೀ ಧನಾ ಪಾಶೀ ॥೨೦೯॥ ಜಗೀ ಮಹಾಪಾಪಿಣೀ ಚೋರೀ । ತೀಸ ಕೋಣೀ ಬೈಸೇ ನೇದೀ ದ್ವಾರೀ । ತೇ ರಾಹಿಲೀ ಸುವರ್ಣಾ ಮಾಝಾರೀ । ಧನ ತೇಥ ಚೋರೀ ನಿಶ್ಚಿತ ॥೨೧೦॥

ಈ ಪ್ರಕಾರವಾಗಿ ಹಣವನ್ನು ಕೂಡಿಸುತ್ತ ಮತ್ತು ಕೂಡಿಸಿದ ಹಣವನ್ನು ರಕ್ಷಣೆಯನ್ನು ಮಾಡುತ್ತಿರಲು ಅಕಸ್ಮಾತಾಗಿ ಆ ಹಣದ ನಾಶವಾಗಲು ಆತನಿಗೆ ತಡೆಯಲಾರದಷ್ಟು ಅತಿಶಯ ವೇದನೆಯುಂಟಾಗುವುದು ॥೧೯೯॥ ಹಣಗಳಿಸುವಾಗ್ಗೆ ತ್ರಾಸನ್ನು ಸೋಸಬೇಕಾಗುವುದು. ಆ ಹಣದ ರಕ್ಷಣೆಗಾಗಿ ಯಾವಾಗಲೂ ಚಿಂತೆಯು ಅಂಟಿಕೊಂಡಿರುವುದು. ಹಣವನ್ನು ಖರ್ಚಿಸುವಾಗ್ಗೆ ಜೀವಕ್ಕೆ ಇಲ್ಲದ ತೊಂದರೆಯು ಉಂಟಾಗುವುದು. ಈ ಹಣದ ನಾಶವಾದರೆ ಮನಸ್ಸಿಗೆ ನಿಶ್ಚಿತವಾಗಿ ಭ್ರಮೆಯು ಅಂಟಿಕೊಳ್ಳುವುದು ॥೨೦೦॥ ಇದರಿಂದ ತಿಳಿಯುವುದೇನೆಂದರೆ ಆರಂಭದಲ್ಲಿ, ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಈ ಮೂರೂ ಅವಸ್ಥೆಗಳಲ್ಲಿ ದ್ರವ್ಯವು ಇದು ಅಪಾಯಕಾರಿಯಾಗಿರುವುದು ಎಂದು ಸಿದ್ಧವಾಗುವುದು. ಅದರಲ್ಲಿ ಸುಖದ ಲವಲೇಶವು ದೊರೆಯುವುದಿಲ್ಲ.ಇದು ಕೊನೆಯಲ್ಲಿ ನನ್ನ ಅನುಭವಕ್ಕೆ ಬಂದಿತು ॥೨೦೧॥ ದ್ರವ್ಯದ ಹತ್ತಿರ ಶ್ರಮ, ತೊಂದರೆ, ಕಾಳಜೀ, ಇವುಗಳೊಂದಿಗೆ ಭ್ರಮೆಯು ವರ್ತಿಸುತ್ತಿರುವುದು. ಅರ್ಥವು ಎಷ್ಟೊಂದು ಅನರ್ಥಕಾರವಾಗಿದೆ ಎಂಬುವ ವಿಷಯವನ್ನೇ ಕುರಿತು ಈಗ ಕೃಪಣನು ತಾನೇ ತನ್ನ ಮುಖದಿಂದ ಹೇಳುತ್ತಿರುವನು ॥೨೦೨॥

ದ್ರವ್ಯವು ಅಂದರೆ ಅರ್ಥವು ಸರ್ವದೃಷ್ಟಿಯಿಂದಲೂ ಅನರ್ಥಕಾರಕವಾಗಿದೆ. ಈ ನನ್ನ ಹೇಳಿಕೆಯು ತ್ರಿವಾರ ಸತ್ಯವಾಗಿರುವುದು. ಭೂಮಿಯಮೇಲೆ ಆಗುತ್ತಿರುವ ಅನರ್ಥಗಳೆಲ್ಲವೂ ಕೇವಲ ಧನದಿಂದಲೇ ಆಗುತ್ತಿರುವುವು. ॥೨೦೩॥ಧನದಿಂದ ಆಗತಕ್ಕ ಅನರ್ಥಗಳು ಅಸಂಖ್ಯವಾಗಿವೆ. ಅವುಗಳಲ್ಲಿನ ಮುಖ್ಯವಾಗಿರುವ ಹದಿನೈದು ಅನರ್ಥಗಳನ್ನು ಸಂಕ್ಷಿಪ್ತವಾಗಿ ಹೇಳುವೆನು, ಅದನ್ನು ಕೇಳು ॥೨೦೪॥ ಧನದಿಂದ ಆಗುವ ಮೊದಲನೆಯ ಅನರ್ಥವು ಕಳ್ಳತನವಾಗಿರುವುದು. ಎಲ್ಲಿ ಧನವಿರುವುದೋ, ಅಲ್ಲಿ ಕಳ್ಳರ ಭಯವಿರುವುದು. ಯಾರಲ್ಲಿ ಹಣವಿರುವುದಿಲ್ಲವೋ, ಅವರಿಗೆ ಕಳ್ಳರಿಂದ ಯಾವ ಭಯವಿರುವುದಿಲ್ಲ ॥೨೦೫॥ ಯಾರಲ್ಲಿ ರೊಕ್ಕವಿರುವುದಿಲ್ಲವೋ, ಅವನನ್ನು ಕಂಡು ಕಳ್ಳರು ಭಯಪಡುವರು. ಈ ಬಡವನು ನಮ್ಮಲ್ಲಿ ಏನಾದರೂ ಬೇಡಬಹುದೆಂದು ತಿಳಿದು ಅವನ ಭಯದಿಂದ ಅಡಗಿಕೊಳ್ಳುವರು ॥೨೦೬॥ ಒಬ್ಬನ ಯಾವುದೇ ಹಣವಾಗಲಿ, ವಸ್ತುವಾಗಲಿ, ಆತನ ಕಣ್ಣು ತಪ್ಪಿಸಿ ಅಕಸ್ಮಾತ ತೆಗೆದುಕೊಂಡು ಹೋಗುವುದು ಅಥವಾ ಮಾಟ, ಮಂತ್ರಗಳಿಂದ ಧನವಂತರ ಹಣವನ್ನು ಲೂಟಿ ಮಾಡುವುದು ಹಾಗೆಯೇ ಒಬ್ಬ ಸಂಭಾವಿತ ಮನುಷ್ಯನ ಲಾಭವನ್ನು ಪಡೆದು ಆತನನ್ನು ಮೋಸಗೊಳಿಸುವುದು, ಅರಣ್ಯದಲ್ಲಿ ಒಬ್ಬನೇ ಇದ್ದಾಗ ಅವನಲ್ಲಿಯ ಎಲ್ಲವನ್ನೂ ಕಸಿದು ಕೊಳ್ಳುವುದು ॥೨೦೭॥ ಅಥವಾ ಬೇರೆಯವರ ಧನವು ದಾರಿಯಲ್ಲಿ ಬಿದ್ದಿರಲು ಅದು ಯಾರದೆಂಬುದು ತಿಳಿದೂ ಕೂಡ ಅದನ್ನು ಆತನಿಗೆ ಮುಟ್ಟಿಸದಿದ್ದರೆ, ಅದು ನಿಜವಾಗಿಯೂ ಕಳ್ಳತನದ ಲಕ್ಷಣವಾಗಿರುವುದು ॥೨೦೮॥ ಬಂಗಾರವನ್ನು ಕದೆಯುವುದರಿಂದ ನರಕದ ಪ್ರಾಪ್ತಿಯಾಗುವುದೆಂಬುದು ತಿಳಿದೂ ಕೂಡ ವಿವೇಕಿ ಜನರೂ ಸಹ ಕಳ್ಳತನ ಮಾಡುವರು. ಅಂದಮೇಲೆ ಇತರರ ಯಾವ ಕಥೆ? ಧನದ ಹತ್ತಿರ ಕಳ್ಳತನದ ವಸತಿವಿರುವುದು ॥೨೦೯॥ ಜಗತ್ತಿನಲ್ಲಿ ಕಳ್ಳತನವು ಇದು ಮಹಾಪಾಪಿಣಿಯಾಗಿರುವಳು. ಈಕೆಗೆ ಯಾರೂ ತಮ್ಮ ಬಾಗಿಲಲ್ಲಿಯೂ ಕೂಡ ಕುಳಿತುಕೊಳ್ಳಲು ಬಿಡುವುದಿಲ್ಲ. ಕಾರಣ ಆಕೆಯು ಬಂಗಾರದಲ್ಲಿ ಬಂದು ಕುಳಿತುಕೊಂಡಿರುವಳು. ಆದ್ದರಿಂದ ಧನವಿದ್ದಲ್ಲಿ ಕಳ್ಳತನವು ನಿಶ್ಚಿತವಾಗಿ ಆಗುತ್ತಿರುವುದು ॥೨೧೦॥

ದೇಖತಾಂಚಿ ತ್ಯಾ ಧನಾಸೀ । ವಿಕಲ್ಪಿ ಹೋತೀ ಸನ್ಯಾಸೀ । ಇತರಾಂಚೀ ಕಥಾ ಕಾಇಸೀ । ಚೋರೀ ಧನಾಪಾಶೀ ಸ್ವಯೇ ನಾಂದೇ ॥೨೧೧॥ ಪ್ರಥಮ ಅನರ್ಥಲಕ್ಷಣ । ಧನಾಪಾಶೀ ಚೋರೀ ಜಾಣ । ಧನ ಹಿಂಸೇಚೇ ಆಯತನ । ತೇಹೀ ನಿರೂಪಣ ಅವಧಾರೀ ॥೨೧೨॥ ಧನಾಲಾಗೀ ದ್ವಂದ್ವ ದಾರುಣ । ಪುತ್ರಪೌತ್ರ ಮಾರಿತೀ ಜಾಣ । ಧನಾಲಾಗೀ ಘೇತೀ ಪ್ರಾಣ । ಹೃದಯಪಣ ಸಾಂಡೋನಿ ॥೨೧೩॥ ಧನಲೋಭಾಚೀ ಕವತಿಕ । ಕನ್ಯಾ ಬಾಪಾಸೀ ದೇತಸೇ ವಿಖ । ಪಿತೃಘಾತಾಚೇ ನ ಮಾನೀ ದುಃಖ । ನಿಷ್ಠುರ ದೇಖ ಧನಲೋಭ ॥೨೧೪॥ ಧನಲೋಭೀ ಸಾಂಡೀ ಬಾಪಮಾಯೇ । ಸ್ತ್ರೀ ಘೇಊನಿ ವೇಗಳಾ ರಾಹೇ । ತೇಥ ಹೀ ಧನಲೋಭ ಪಾಹೇ । ವೈರ ಹೋಯೇ ಸ್ತ್ರೀಪುರುಷಾ ॥೨೧೫॥ ಧನಲೋಭಾಚೀ ನವಲಪರೀ । ಪುತ್ರ ಪಿತ್ಯಾತೇ ಜೀವೇ ಮಾರೀ । ಪಿತಾ ಪುತ್ರಾತೇ ಸಂಹಾರೀ । ಕಠಿಣ ಭಾರೀ ಧನಲೋಭ ॥೨೧೬॥ ಜೇ ನವಮಾಸ ವಾಹೇ ಉದರಾಂತ । ಜೇ ಸದಾ ಸೋಶೀ ನರಕಮೂತ । ತೇ ಮಾತೇಚಾ ಕರೀ ಘಾತ । ದ್ರವ್ಯಾನಿಮಿತ್ತ ನಿಜಪುತ್ರ ॥೨೧೭॥ ಅಭಿನವ ಧನಲೋಭಾಚೀ ತ್ರಾಯ । ನವಲ ತೇ ಮೀ ಸಾಂಗೋ ಕಾಯ । ಪೋಟೀಂಚಾ ಪುತ್ರ ಮಾರೀ ಮಾಯ । ಐಸಾ ಅನರ್ಥ ಹೋಯ ಧನಾಸಾಠೀ ॥೨೧೮॥ ಏವಂ ಹಿಂಸಾ ತೇ ಹೇ ಸಂಪೂರ್ಣ । ದುಸರೇ ಅನರ್ಥಲಕ್ಷಣ । ಆತಾ ಅಸತ್ಯಾಚೇ ವಿಂದಾನ । ತೇಹೀ ನಿರೂಪಣ ಸ್ವಯೇ ಸಾಂಗೇ ॥೨೧೯॥ ಅಸತ್ಯ ಜನ್ಮಲೇ ಅರ್ಥಾಚ್ಯಾ ಪೋಟೀ । ಅರ್ಥಬಳೇ ತೇ ದಾಟುಗೇ ಸೃಷ್ಟೀ । ಅರ್ಥಾಸವೇ ಅಸತ್ಯ ಉಠೀ । ಅಸತ್ಯಾಚೀ ಗಾಂಠೀ ಅರ್ಥೇಸೀ ॥೨೨೦॥ ತೋ ಅರ್ಥ ಅಸೇ ಜಯಾಪಾಶೀ । ಕಾ ಅರ್ಥ ಅಪೇಕ್ಷಾ ಜಯಾಸೀ । ತೇಥ ಅಸತ್ಯ ವಸೇ ಕುಟುಂಬೇಸೀ । ಧನ ತೇ ಮಿರಾಸೀ ಮಿಥ್ಯಾತ್ವೀ ॥೨೨೧॥ ಅರ್ಥಬಳ ಥೋರ ಅಸತ್ಯಾಸೀ । ಮಿಥ್ಯಾ ಬೋಲವೀ ಬಾಪಾಸೀ । ಧನಲೋಭೇ ಠಕವೀ ಮಾತೇಸೀ । ಸತ್ಯತ್ವ ಧನಪಾಶೀ ಅಸೇನಾ ॥೨೨೨॥ ಕ್ರಯವಿಕ್ರಯೀ ಧನಲೋಭೇ ಜಾಣ । ಮಿಥ್ಯಾ ಬೋಲತೀ ಸಾಧಾರಣ । ಪರೀ ವೇದಶಾಸ್ತ್ರ ಸಂಪನ್ನ । ಧನಾರ್ಥ ಸಜ್ಞಾನ ಬೋಲತೀ ಮಿಥ್ಯಾ ॥೨೨೩॥ ವೇದೀಂಚಾ ಆಠವ ನ ಯೇ ಪೂರ್ಣ । ತೋ ಸಂಭಾವನೇಲಾಗೀ ಜಾಣ । ಮ್ಹಣವೀ ಮೀ ವೇದಸಂಪನ್ನ । ಕರಾವಯಾ ಯಜನ ನೀಚಾಚೇ ॥೨೨೪॥

ಧನವನ್ನು ಕಂಡಕೂಡಲೇ ಸನ್ಯಾಸಿಯ ಬುದ್ಧಿಯು ಭ್ರಷ್ಟವಾಗುವುದು. ಅಂದಮೇಲೆ ಇತರ ಸಾಮಾನ್ಯರ ಯಾವ ಕಥೆ ? ಕಳ್ಳತನವು ಇದು ಧನದ ಹತ್ತಿರ ವಾಸ್ತವ್ಯ ಹೂಡುವುದು ॥೨೧೧॥ ತಾತ್ಪರ್ಯವೇನೆಂದರೆ ದ್ರವ್ಯದ ಹೊಟ್ಟೆಯಲ್ಲಿ ಕಳ್ಳತನವು ವಸತಿ ಮಾಡಿರುವುದು. ಧನದಿಂದ ಆಗುವ ಮೊದಲನೆಯ ಅನರ್ಥವು ಕಳ್ಳತನವಾಗಿದೆ. ಇದನ್ನು ಲಕ್ಷದಲ್ಲಿಡು. ಈಗ ದ್ರವ್ಯವೇ ಹಿಂಸೆಯ ಆಶ್ರಯಸ್ಥಾನವಾಗಿದೆ. ಈ ವಿಷಯನ್ನು ಕುರಿತಾದ ನಿರೂಪಣೆಯನ್ನು ಈಗ ಕೇಳು ॥೨೧೨॥ ದ್ರವ್ಯಕ್ಕಾಗಿ ಭಯಂಕರ ಸಂಘರ್ಷಗಳಾಗುವುವು. ಪುತ್ರಪೌತ್ರರು ತಮ್ಮ ತಂದೆಯವರಿಗೆ ಕೊಲ್ಲುವರು. ಬಂಧುತ್ವವನ್ನು ಬಿಟ್ಟು ಜನರು ಧನದ ಲೋಭದಿಂದ ಒಬ್ಬರಿಗೊಬ್ಬರು ಪ್ರಾಣವನ್ನು ತೆಗೆದುಕೊಳ್ಳುವರು ॥೨೧೩॥ ಧನಲೋಭದ ಚಮತ್ಕಾರವು ಮಹಾ ಭಯಂಕರವಾಗಿರುವುದು. ಈ ಲೋಭವು ಮಗಳಿಂದ ತಂದೆಗೆ ವಿಷವನ್ನು ಹಾಕಲ್ಪಡುವುದು. ತಂದೆಯ ಮರಣವು ಈಕೆಗೆ ದುಃಖಬಾಧೆಯಾಗುವುದಿಲ್ಲ. ಈ ಪ್ರಕಾರ ಧನಲೋಭವು ಅತ್ಯಂತ ನಿಷ್ಠುರವಾಗಿದೆ ॥೨೧೪॥ ಧನಲೋಭಿಯು ತನ್ನ ತಂದೆ ತಾಯಿಯವರನ್ನು ಬಿಟ್ಟುಬಿಡುವನು. ತನ್ನ ಹೆಂಡತಿಯೊಂದಿಗೆ ಬೇರೆಯಾಗುವನು. ಅಲ್ಲಿಯೂ ಧನಲೋಭವು ಗಂಡ ಹೆಂಡರಲ್ಲಿ ವೈರವನ್ನು ಹುಟ್ಟಿಸುವುದು ॥೨೧೫॥ ಧನಲೋಭದ ಪ್ರಭಾವವು ಅತಿ ವಿಚಿತ್ರವಾಗಿದೆ. ಮಗನು ತಂದೆಯನ್ನು ಕೊಂದುಬಿಡುವನು. ತಂದೆಯೂ ಕೂಡ ಮಗನನ್ನು ವಧಿಸುವನು. ಇಷ್ಟೊಂದು ಧನಲೋಭವು ಮಹಾಕಠಿಣವಾಗಿರುವುದು ॥೨೧೬॥ ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತಿರುವ, ಬಾಲ್ಯದಲ್ಲಿ ಅವನ ಮಲಮೂತ್ರ ಬಳೆದು ಕಷ್ಟಸೋಸಿದ, ತಾಯಿಯನ್ನೇ ಮಗನು ಹಣಕ್ಕಾಗಿ ಕೊಲ್ಲುವನು ॥೨೧೭॥ ಧನಲೋಭದ ಸಾಮರ್ಥ್ಯವು ಅತ್ಯಂತ ವಿಲಕ್ಷಣವಾಗಿದೆ. ಪ್ರತ್ಯಕ್ಷ ತಾಯಿಯು ತನ್ನ ಹೊಟ್ಟೆಯ ಮಗನ ಪ್ರಾಣವನ್ನು ತೆಗೆದುಕೊಳ್ಳುವಳು. ಇಂತಹ ಅನರ್ಥವು ಧನದಲ್ಲಿರುವುದು ॥೨೧೮॥ ತಾತ್ಪರ್ಯವೇನೆಂದರೆ, ಇಂತಹ ಹಿಂಸೆಯ ಪ್ರಕರಣಗಳು ಧನದಿಂದ ಆಗುವ ಎರಡನೆಯ ಅನರ್ಥದ ಲಕ್ಷಣವಾಗಿದೆ ಈಗ ಧನವು ಅಸತ್ಯದ ಕಾರಣ ಹೇಗಾಗುವುದೆಂಬುದನ್ನು ಅವನು ಸ್ವತಃ ನಿರೂಪಣೆ ಮಾಡುವನು ॥೨೧೯॥ ಅಸತ್ಯದ ಜನ್ಮವು ಧನದ ಹೊಟ್ಟೆಯಲ್ಲಿ ಆಗಿರುವುದು. ಅಸತ್ಯವು ಇದು ಧನದ ಬಲದಿಂದ ಜಗತ್ತಿನಲ್ಲಿ ಪ್ರಬಲವಾಗಿರುವುದು. ಹಣದ ಜೊತೆಯಲ್ಲಿಯೇ ಅಸತ್ಯವು ಹುಟ್ಟುತ್ತಿರುವುದು. ದ್ರವ್ಯವಿದ್ದಲ್ಲಿ ಅಸತ್ಯವು ಇದ್ದೇ ಇರುವುದು. ಇವರಿಬ್ಬರ ಸ್ನೇಹವು ಬಹು ಗಟ್ಟಿಯಾಗಿರುವುದು ॥೨೨೦॥ ಯಾರಲ್ಲಿ ಧನವಿರುವುದೋ ಅಥವಾ ಯಾರಿಗೆ ಧನಗಳಿಸುವ ಹವ್ಯಾಸವಿರುವುದೋ, ಅವರಲ್ಲಿ ಅಸತ್ಯವು ಸಹಕುಟುಂಬವಾಗಿ ಇರುವುದು. ಧನವು ಅಸತ್ಯದ ಧಣಿಯಾಗಿರುವುದು ॥೨೨೧॥ ಅಸತ್ಯಕ್ಕೆ ಧನದ ದೊಡ್ಡ ಆಧಾರವಿರುವುದು. ಅದು ತಂದೆಯವರಲ್ಲಿ ಸುಳ್ಳು ಮಾತನಾಡಲು ಹಚ್ಚುವುದು. ಧನಲೋಭವು ತಾಯಿಯನ್ನೂ ಕೂಡ ಮೋಸ ಮಾಡಲು ಹಚ್ಚುವುದು. ಕಾರಣ ಸತ್ಯವು ಧನದ ಹತ್ತಿರ ಎಂದಿಗೂ ಇರುವುದಿಲ್ಲ ॥೨೨೨॥ ಕ್ರಯ ವಿಕ್ರಯ ಮಾಡುತ್ತಿರಲು ಆಗ ಧನದ ಲೋಭದಿಂದ ಜನರು ಸರ್ವ ಸಾಮಾನ್ಯವಾಗಿ ಸುಳ್ಳನ್ನು ಹೇಳುತ್ತಿರುವರು. ಅದರಂತೆಯೇ ವೇದಶಾಸ್ತ್ರಸಂಪನ್ನರು ವಿದ್ವಾನರು ಇವರೂ ಕೂಡ ಸುಳ್ಳು ನುಡಿಯುವರು. ॥೨೨೩॥ ವೇದಗಳನ್ನು ಪೂರ್ಣವಾಗಿ ನೋಡದವನು, ಸರಿಯಾಗಿ ಅಭ್ಯಾಸವನ್ನು ಮಾಡದವನು ಧನದ ಸಂಭಾವನೆಗಾಗಿ ಸ್ವತಃಕ್ಕೆ ವೇದಶಾಸ್ತ್ರ ಸಂಪನ್ನನು ನಾನು ಎಂದು ಹೇಳಿಕೊಳ್ಳುವನು ಮತ್ತು ಹಣದ ಲೋಭದಿಂದ ನೀಚ ಜನರ ಮನೆಯಲ್ಲಿ ಯಜ್ಞವನ್ನು ಮಾಡುವನು ॥೨೨೪॥

ಭಾಗ ದೇಊನಿ ಮಧ್ಯಸ್ಥಾ । ಮೀ ಚತುಃಶಾಸ್ತ್ರೀ ವಿಖ್ಯಾತಾ । ಐಸೇ ಮಿಥ್ಯಾತ್ವೇ ಭಳೀ ಪಂಡಿತಾ । ರಾಜದ್ರವ್ಯಾರ್ಥಾ ಲಾಗುನೀ ।।೨೨೫।। ವಿರಕ್ತ ಮ್ಹಣವಿತೀ ಪರಮಾರ್ಥೀ । ತೇಥಹೀ ಅಸತ್ಯೇ ಘಾತಲೀ ವಸ್ತೀ । ನಾಥಿಲ್ಯಾ ಸಿದ್ಧಿ ದಾವಿತೀ । ಅರ್ಥಪ್ರಾಪ್ತಿಲಾಗೋನೀ ।।೨೨೬।। ಅರ್ಥೀ ಅಸತ್ಯಾಚಾ ಬಡಿವಾರು । ಸದ್ಭಾವೇ ಕೇಲಾ ಜೋ ಸದ್ಗುರು । ತ್ಯಾಸೀ ಮಿಥ್ಯಾ ನಾಸ್ತಿಕ ವಿಚಾರು । ಏಕಾಂತೀ ನರು ಪ್ರತಿಪಾದೀ ।।೨೨೭।। ಅರ್ಥನಾಹೀ ಜಯಾಪಾಶೀ । ನಾ ಅರ್ಥ ಕಲ್ಪನಾ ಜಯಾಸೀ । ಅಸತ್ಯ ಸ್ಪರ್ಶೇನಾ ತಯಾಸೀ । ಕದಾಕಾಳೇಸೀ ಕಲ್ಪಾಂತೀ ।।೨೨೮।। ಅರ್ಥಾಪಾಶೀ ಅಸತ್ಯ ಜಾಣ । ತ್ಯಾಚೇ ಸಾಂಗೀತಲೇ ಲಕ್ಷಣ । ಆತಾ ಅರ್ಥಾಪಾಶೀ ದಂಭ ಸಂಪೂರ್ಣ । ತೇಹೀ ವೋಳಖಣ ಅವಧಾರೀ ।।೨೨೯।। ಪೋಟೀ ನಾಹೀ ಪರಮಾರ್ಥ । ಧರೋನಿಯಾ ಅರ್ಥಸ್ವಾರ್ಥ । ಸ್ವಯೇ ಮ್ಹಣವಿತೀ ಹರಿಭಕ್ತ । ಯಾನಾಂವ ನಿಶ್ಚಿತ ಭಜನದಂಭೂ ।।೨೩೦।। ಧನ ಜೋಡಾವಯಾಕಾರಣೇ । ಟಿಳೇ ಮಾಳಾ ಮುದ್ರಾ ಧಾರಣೇ । ಧನೇಚ್ಛಾ ಉಪದೇಶ ದೇಣೇ । ಯಾ ನಾಂವ ಜಾಣಣೇ ದೀಕ್ಷಾ ದಂಭೂ ।।೨೩೧।। ದೇಖೋನಿ ಧನವಂತ ಥೋರು । ತ್ಯಾಚೇ ಉಪದೇಶೀ ಅತ್ಯಾದರು । ನೇಮೂನಿ ಗುರುಪೂಜಾಕರಭಾರು । ಸಾಂಗೇ ಮಂತ್ರೂ ತೋ ದಾಂಭಿಕ ।।೨೩೨।। ಜಯಾಪಾಸೋನಿ ಹೋಯ ಅರ್ಥಪ್ರಾಪ್ತೀ । ತೇ ಸಮರ್ಥ ಶಿಷ್ಯ ಆವಡತೀ । ದೀನ ಶಿಷ್ಯಾತೇ ಉಪೇಕ್ಷಿತೀ । ಹೇ ದಾಂಭಿಕಸ್ಥಿತೀ ಗುರುತ್ವಾ ।।೨೩೩।। ಗುರುಸೀ ದ್ಯಾವೇ ತನು ಮನ ಧನ । ಐಸೇ ಉಪದೇಶೂನಿ ಜಾಣ । ಜೋ ದ್ರವ್ಯ ಸಂಗ್ರಹೀ ಆಪಣ । ತೇ ದಾಂಭಿಕಪಣ ಗುರುತ್ವಾ ।।೨೩೪।। ಜೇಥ ಧನಲೋಭ ಗುರೂಪಾಶೀ । ತೋ ಕಾಯ ತಾರೀಲ ಶಿಷ್ಯಾಸೀ । ಧನಲೋಭಾಚೀ ಜಾತೀ ಐಸೀ । ಕರೀ ಗುರುವಾಸೀ ದಾಂಭಿಕ ।।೨೩೫।। ಆಖಾಡಭೂತೀ ಐಸಾ ಜಾಣ । ಗುರುಪಾಶೀಲ ನ್ಯಾವಯಾ ಧನ । ಉಪದೇಶ ಘೇ ಹೋಊನಿ ದೀನ । ತೋ ದಾಂಭಿಕ ಜಾಣ ಶಠ ಶಿಷ್ಯ ।।೨೩೬।। ಗುರೂಪದೇಶೇ ಶಿಕೋನಿ ಯುಕ್ತಿ । ಸ್ವಯೇ ಜ್ಞಾನಾಭಿಮಾನಾ ಯೇತೀ । ಗುರೂತೇ ಮಾನೀ ಪ್ರಾಕೃತಸ್ಥಿತೀ । ತೋಹೀ ನಿಶ್ಚಿತೀ ದಾಂಭಿಕೂ ।।೨೩೭।। ಮೀ ಏಕ ಸಧನ ಸಜ್ಞಾನ । ಐಸಾ ಸೂಕ್ಷ್ಮರೂಪ ಜ್ಞಾನಾಭಿಮಾನ । ಕರೀ ಗುರು ಆಜ್ಞೇಚೇ ಹೇಳಣ । ಹೇಹೀ ಲಕ್ಷಣ ದಂಭಾಚೇ ।।೨೩೮।।

ಮಧ್ಯಸ್ಥ ಮನುಷ್ಯನಿಗೆ ಲಂಚವನ್ನು ಕೊಟ್ಟು ತಾನು ನಾಲ್ಕು ವೇದಗಳ ಪಾರಾಂಗತನು, ಪಂಡಿತನು ಹೀಗೆಂದು ಸುಳ್ಳು ಪ್ರಚಾರವನ್ನು ಮಾಡಿಸುವನು. ರಾಜದ್ರವ್ಯವು ತನಗೆ ದೊರಕಬೇಕೆಂದು ನಿಜವಾದ ಪಂಡಿತರನ್ನು ಪೀಡಿಸುತ್ತಿರುವನು ।।೨೨೫।। ವಿರಕ್ತರು, ಪರಮಾರ್ಥ ಮಾಡುವವರು, ಇವರಲ್ಲಿಯೂ ಕೂಡ ಅಸತ್ಯವು ವಸತಿ ಮಾಡಿರುವುದು. ಕಾರಣ ಇವರು ಹಣಕ್ಕಾಗಿ ಸುಳ್ಳಾಗಿರುವ ಡಾಂಭಿಕತನದ ಸಿದ್ಧಿಯನ್ನು ತೋರಿಸುತ್ತಿರುವರು ।।೨೨೬।। ಧನದಲ್ಲಿ ಅಸತ್ಯದ ಬಹು ದೊಡ್ಡ ದೊಡ್ಡಸ್ಥಿಕೆವಿರುವುದು. ಸದ್ ಭಾವನೆಯಿಂದ ಮಾಡಿಕೊಂಡ ಗುರುಗಳಲ್ಲಿ ಶಿಷ್ಯನಾದ ಇವನು ಏಕಾಂತದಲ್ಲಿ ಸುಳ್ಳಾಗಿರುವ ನಾಸ್ತಿಕ ವಿಚಾರಗಳನ್ನು ಪ್ರಕಟ ಮಾಡುತ್ತಿರುವನು. ।।೨೨೭।। ಆದರೆ ಯಾರಲ್ಲಿ ಹಣವು ಇರುವುದೇ ಇಲ್ಲವೋ, ಅಥವಾ ಯಾರ ಮನನಲ್ಲಿ ಧನಲೋಭದ ಕಲ್ಪನೆಯೇ ಇರುವುದಿಲ್ಲವೋ, ಆತನಿಗೆ ಅಸತ್ಯವು ಎಂದಿಗೂ ಸ್ಪರ್ಶವನ್ನು ಮಾಡುವುದಿಲ್ಲ. ।।೨೨೮।। ಧನದ ಹತ್ತಿರ ಅಸತ್ಯದ ಪೂರ್ಣ ವಸತಿಯು ಹೇಗೆ ಇರುವ ವಿಷಯವನ್ನು ಕುರಿತು ಅದರ ಸರ್ವ ಲಕ್ಷಣಗಳನ್ನು ಹೇಳಲಾಯಿತು. ಈಗ ಹಣದ ಹತ್ತಿರ ದಂಭವೂ ಕೂಡ ಹೇಗೆ ಇರುವುದು ಎಂಬ ವಿಚಾರದ ವರ್ಣನೆಯನ್ನು ಕೇಳು ।।೨೨೯।। ಅಂತಃಕರಣದಲ್ಲಿ ಪರಮಾರ್ಥದ ಯಾವ ವಿಚಾರವೂ ಇರುವುದಿಲ್ಲ. ಕೇವಲ ಧನದ ಲೋಭವನ್ನು ಮನದಲ್ಲಿ ಧರಿಸಿ ಸ್ವತಃ ತಾನು ನಾನು ಹರಿಭಕ್ತನು ಎಂದು ಕರೆಯಿಸಿಕೊಳ್ಳುವನು. ಇದರ ನಾಮವೇ ಭಜನದಂಭ ಎಂದು ಹೇಳುವರು. ।।೨೩೦।। ಧನವನ್ನು ಕೂಡಿಸುವುದಕ್ಕಾಗಿ ಹಣೆಗೆ ಗಂಧ ಲೇಪಿಸಿಕೊಂಡು, ಕೊರಳಲ್ಲಿ ಮಾಲೆಯನ್ನು ಧರಿಸಿ, ಮುದ್ರೆಯನ್ನು ಬಡೆದುಕೊಂಡು ಧನದ ಲೋಭದಿಂದ ಉಪದೇಶವನ್ನು ಕೊಡುವನು, ಇದಕ್ಕೆ ದೀಕ್ಷೆಯ ಢೋಂಗೀತನ ಎಂದು ಹೇಳುವರು. ಇದನ್ನು ಲಕ್ಷದಲ್ಲಿಡು ।।೨೩೧।। ಇವನು ಒಬ್ಬ ಶ್ರೀಮಂತ ಗೃಹಸ್ಥನನ್ನು ನೋಡಿದರೆ ಸಾಕು, ಆತನನ್ನು ಉಪದೇಶ ಮಾಡಲು ಸಿದ್ಧನಾಗುವನು. ಗುರುಪೂಜೆಗಾಗಿ ಇಷ್ಟೊಂದು ದ್ರವ್ಯ, ಹಣ ಕೊಡಬೇಕಾಗುವುದೆಂದು ಕರಾರಿಸುವನು. ತದನಂತರ ಉಪದೇಶದ ಮಂತ್ರವನ್ನು ಕೊಡುವನು. ಇದು ನಿಜವಾಗಿಯೂ ಕೇವಲ ಡಾಂಭಿಕತನವಾಗಿರುವುದು ।।೨೩೨।। ಯಾರಿಂದ ಧನದ ಪ್ರಾಪ್ತಿಯಾಗುವುದೋ, ಅಂತಹ ಶ್ರೀಮಂತ ಶಿಷ್ಯನನ್ನು ಪ್ರೀತಿಸುತ್ತಿರುವನು ಮತ್ತು ಬಡವ ಶಿಷ್ಯನಿಗೆ ಧಿಕ್ಕರಿಸುತ್ತಿರುವನು. ಇವನು ಢೋಂಗಿ ಗುರುವಾಗಿರುವನು ।।೨೩೩।। ತನ, ಮನ, ಧನವನ್ನು ಗುರುಗಳಿಗೆ ಅರ್ಪಿಸಬೇಕಾಗುವುದು ಎಂದು ಉಪದೇಶವನ್ನು ಮಾಡಿ ಶಿಷ್ಯನಿಂದ ಹಣ ಕೂಡಿಸುವ ಗುರುವು ನಿಜವಾಗಿಯೂ ಡಾಂಭಿಕನಾಗಿರುವನು ।।೨೩೪।। ಗುರುವಿನ ಮನದಲ್ಲಿನ ಧನಲೋಭವು ಹೋಗದಿದ್ದರೆ ಆತನು ತನ್ನ ಶಿಷ್ಯರನ್ನು ಹೇಗೆ ಉದ್ಧರಿಸುವನು? ಧನಲೋಭದ ಜಾತಿಯು ಹೇಗಿದೆ ಎಂದರೆ ಅದು ಗುರುಗಳನ್ನೇ ಢೋಂಗಿಯನ್ನಾಗಿ ಮಾಡುವುದು ।।೨೩೫।। ಯಾವನೋ ಒಬ್ಬ ಸುಳ್ಳು ಮನುಷ್ಯನು ಗುರುಗಳಲ್ಲಿರುವ ಧನವನ್ನು ದೋಚಿಕೊಳ್ಳುವುದಕ್ಕಾಗಿ ಅವನು ತನ್ನ ಬಡತನವನ್ನು ತೋರಿಸಿ ಅವರಲ್ಲಿ ಉಪದೇಶವನ್ನು ಪಡೆಯುವನು. ಆ ಯಾವ ಶಿಷ್ಯನೂ ಕೂಡ ದಾಂಭಿಕ, ಠಕ್ಕನಾಗಿರುವನು ।।೨೩೬।। ಗುರುವಿನಲ್ಲಿ ಜ್ಞಾನದ ಉಪದೇಶ, ಬೋಧೆಯನ್ನು ಕಲಿತುಕೊಂಡು ಜ್ಞಾನದ ಗರ್ವದಿಂದ ಮತ್ತನಾಗುವನು. ಮತ್ತು ತನ್ನ ಗುರುಗಳಿಗೆ ತನಗಿಂತಲೂ ಕೆಳದೃಷ್ಟಿಯಿಂದ ಕಾಣುವನು. ಹೀಗಿರುವ ಇವನೂ ಕೂಡ ನಿಜವಾಗಿಯೂ ಢೋಂಗಿಯಾಗಿರುವನು ।।೨೩೭।। ನಾನೇ ಧನಿಕನಾಗಿರುವೆ, ನಾನೇ ಜ್ಞಾನಿಯಾಗಿರುವೆ, ಹೀಗೆ ಯಾರ ಮನದಲ್ಲಿ ಅಭಿಮಾನವು ನಿರ್ಮಾಣವಾಗುವುದೋ, ಮತ್ತು ಯಾರು ಗುರುಗಳ ಆಜ್ಞೆಯನ್ನು ಪರಿಪಾಲಿಸುವುದಿಲ್ಲವೋ, ಆ ಶಿಷ್ಯನು ಢೋಂಗಿಯಾಗಿರುವನು ।।೨೩೮।।

ಅಹಂ ಬ್ರಹ್ಮ ಹೇಹೀ ಸ್ಫೂರ್ತೀ । ನ ಸಾಹೇ ಜೇಥ ಸ್ವರೂಪಸ್ಥಿತೀ । ತೇಥ ಮೀ ಜ್ಞಾತಾ ಹೇ ಘೋಂಗಡೀ ಯುಕ್ತಿ । ಸ್ಫುರೇ ನಿಶ್ಚಿತೀ ಸೂಕ್ಷ್ಮ ದಂಭೇ ॥೨೪೯॥ ಜೀವಾಸೀ ದೇಹಾಚೇ ಮಧ್ಯಸ್ಥಾನ । ತೇಥ ದಂಭಾಚೇ ಅಧಿಷ್ಠಾನ । ತ್ಯಾಸೀ ಮಿಳೋನಿಯಾ ಮನ । ಜ್ಞಾನಾಭಿಮಾನ ಉಪಜವೀ ॥೨೫೦॥ ನವಲ ದಂಭಾಚೇ ಕವತಿಕ । ಆಮ್ಹೀ ಅಗ್ನಿಹೋತ್ರೀ ಯಾಜ್ಞಿಕ । ತೇಚಿ ಜೀವಿಕಾ ಕರೂನಿ ದೇಖ । ನಾಡಲೇ ವೇದಪಾಠಕ ಧನಲೋಭೇ ॥೨೫೧॥ ಸೋಡೋನಿ ಪರಮಾರ್ಥಾಚೀ ಪೋಥೀ । ಬ್ರಹ್ಮಜ್ಞಾನ ಸಾಂಗೇ ನಾನಾ ಯುಕ್ತೀ । ತೇಹೀ ಜ್ಞಾತೇ ದಂಭೇ ನಾಡಿಜೇತೀ । ದ್ರವ್ಯಾಸಕ್ತೀ ಧನಲೋಭೇ ॥೨೫೨॥ ಮಂತ್ರತಂತ್ರಾಂಚೀ ಕಥಾ ಕೋಣ । ಮುಖ್ಯ ಗಾಯತ್ರೀ ವೇಚಿತೀ ಬ್ರಾಹ್ಮಣ । ಆಮ್ಹೀ ಸ್ವಧರ್ಮನಿಷ್ಠ ಪಾವನ । ಮ್ಹಣತೀ ಜಾಣ ದಾಂಭಿಕ ॥೨೫೩॥ ದಂಭೇ ನಾಡಿಲೇ ಸನ್ಯಾಸೀ । ಲೌಕಿಕ ರಾಖಣೇ ಪಡೇ ತ್ಯಾಂಸೀ । ಜ್ಯಾಲಾಗೀ ಮುಂಡಿಲೇ ಶಿಸೀ । ತ್ಯಾ ಅರ್ಥಾಸೀ ವಿಸರಲೇ ॥೨೫೪॥ ದೃಷ್ಟಿ ಸೂನಿ ಅನ್ನಸನ್ಮಾನ । ಸನ್ಯಾಸೀ ಕರಿತೀ ಶೌಚಸ್ನಾನ । ಶುದ್ಧ ನ ಕರವೇಚಿ ನಿಜಮನ । ವಾದವ್ಯಾಖ್ಯಾನ ಅತಿದಂಭೇ ॥೨೫೫॥ ಘ್ಯಾವಯಾ ಪರದ್ರವ್ಯಪರಾನ್ನ । ಕಾ ದೇಹಪ್ರತಿಷ್ಠೇಲಾಗೀ ಜಾಣ । ಮಿಥ್ಯಾ ದಾಖವೀ ಸಾತ್ತ್ವಿಕಪಣ । ಹೇ ದಂಭಲಕ್ಷಣ ಪೈ ಚೌಥೇ ॥೨೫೬॥ ದ್ರವ್ಯಾಪಾಶೀ ವಸೇ ಕಾಮ । ಅತಿಶಯೇ ಅತಿದುರ್ಗಮ । ದ್ರವ್ಯ ತೇಥ ಕಾಮಸಂಭ್ರಮ । ಅತಿವಿಷಮ ಸಾಂಗತ ॥೨೫೭॥ ದ್ರವ್ಯ ನಸತಾ ಅಪೇಕ್ಷಾ ಕಾಮ । ತೋ ಸಬಾಹ್ಯ ಕರವೀ ಅತಿಶ್ರಮ । ಅನೇಕ ಕಷ್ಟಾಂಚೇ ವಿಷಮ । ಅತಿದುರ್ಗಮ ಭೋಗವೀ ॥೨೫೮॥ ಧನ ಝಾಲಿಯಾ ಉನ್ಮಾದಕಾಮ । ಕರೂ ಲಾಗೇ ಅಗಮ್ಯಾಗಮ । ಉಪಜವೀ ನಾನಾ ಅಧರ್ಮ । ನಿಂದ್ಯ ಕರ್ಮ ಧನವಂತಾ ॥೨೫೯॥ ಕಾಮು ಜಡಲಾಸೇ ಧನೇಸೀ । ತೋ ಸದಾ ಛಳೀ ಧನವಂತಾಸೀ । ಕಾಮ ಖವಳೇ ಧನಾಪಾಶೀ । ಅಹರ್ನಿಶೀ ಮುಸಮುಶಿತ ॥೨೬೦॥

ಒಂದು ವೇಳೆ ಬ್ರಹ್ಮಸ್ವರೂಪದ ಪ್ರಾಪ್ತಿಯಾಯಿತೆಂದರೆ ಆಗ ಆತನು ನಾನು ಬ್ರಹ್ಮಸ್ವರೂಪನು ಎನ್ನುವ ಸ್ಫೂರ್ತಿಯೂ ಕೂಡ ಸಹಿಸಲು ಸಾಧ್ಯವಾಗುವುದಿಲ್ಲ. ಅಂದಮೇಲೆ ನಾನು ಜ್ಞಾನಿಯು ಎಂದು ಹೇಳುವುದೂ ಕೂಡ ಕಪಟವೇ ಆಗಿರುವುದು. ಇಂತಹ ವೃತ್ತಿಯು ಅಂತಃಕರಣದಲ್ಲಿನ ಸೂಕ್ಷ್ಮ ದಂಭದಿಂದಲೇ ಪ್ರಕಟವಾಗುತ್ತಿರುವುದು ॥೨೪೯॥ ಜೀವಕ್ಕೆ ದೇಹದ ಮಧ್ಯಭಾಗದಲ್ಲಿ ಸ್ಥಾನವಿರುವುದು. ಅಲ್ಲಿ ದಂಭದ ಅಧಿಷ್ಠಾನವಿರುವುದು. ಅದಕ್ಕೆ ಮನವು ಸಹಾಯವನ್ನು ಮಾಡುವುದು. ಇದರಿಂದ ಜ್ಞಾನದ ಅಭಿಮಾನವು ನಿರ್ಮಾಣವಾಗುವುದು ॥೨೫೦॥ ಈ ದಂಭದ ಲೀಲೆಯು ನಿಜವಾಗಿಯೂ ವಿಲಕ್ಷಣವಾಗಿರುವುದು. ಯಾವ ಜನರು ತಾವು ಅಗ್ನಿಹೋತ್ರೀ ಮತ್ತು ಯಾಜ್ಞಿಕರು ಎಂದು ಹೇಳುತ್ತ ಮೆರೆಯುತ್ತಿರುವರು. ಇವರೇ ಭಿಕ್ಷೆಯನ್ನು ಬೇಡುತ್ತ ತಮ್ಮ ಜೀವನವನ್ನು ನಡೆಸುತ್ತಿರುವರು. ವೇದಪಠಣೆ ಮಾಡುವವರೂ ಕೂಡ ಈ ಪ್ರಕಾರವಾಗಿಯೇ ಧನಲೋಭದಿಂದ ಮೋಸಹೋಗಿ ಬಿಡುವರು ॥೨೫೧॥ ಯಾರು ಪರಮಾರ್ಥದ ಶುದ್ಧ ವಿಚಾರವನ್ನು ಬಿಟ್ಟುಕೊಟ್ಟು ನಾನಾ ಪ್ರಕಾರದ ಜ್ಞಾನವನ್ನು ಹೇಳುತ್ತಿರುವರು. ಈ ಜ್ಞಾನೀ ಜನರೂ ಕೂಡ ದಂಭದಿಂದ ದ್ರವ್ಯದ ಆಸಕ್ತಿಯಿಂದ ಹಾಗೂ ಧನಲೋಭದಿಂದ ಮೋಸಕ್ಕೆ ಹೋಗುವರು ॥೨೫೨॥ ಮಂತ್ರ ತಂತ್ರಗಳ ಮಾತುಗಳ ವರ್ಣನೆಯನ್ನು ಏನೆಂದು ಮಾಡಬೇಕು? ಬ್ರಾಹ್ಮಣರು ಪ್ರಮುಖವಾಗಿರುವ ಗಾಯತ್ರೀ ಮಂತ್ರದ ಮಾರಾಟವನ್ನು ಮಾಡುತ್ತಿರುವರು ಮತ್ತು ಸ್ವತಃ ತಾವೇ ನಾವು ಸ್ವಧರ್ಮನಿಷ್ಠರು, ಪವಿತ್ರರು ಎಂದು ಹೇಳುವರು. ಇವರು ನಿಜವಾಗಿಯೂ ಢೋಂಗೀಯಾಗಿರುವರೆಂದು ಹೀಗೆ ತಿಳಿ ॥೨೫೩॥ ದಂಭದಿಂದ ಸನ್ಯಾಸಿಯೂ ಸಹ, ಯಾವ ಪ್ರಮುಖ ಉದ್ದೇಶಕ್ಕಾಗಿ ತಾನು ಸನ್ಯಾಸವನ್ನು ಸ್ವೀಕರಿಸಿರುವನೋ, ಆ ಬ್ರಹ್ಮ ಚಿಂತನೆಯನ್ನು ಮರೆತುಬಿಡುವನು ॥೨೫೪॥ ಕೇವಲ ರುಚಿರುಚಿಯಾದ ಮೃಷ್ಟಾನ್ನ ಭೋಜನ ಮತ್ತು ಮಾನ ಸನ್ಮಾನಗಳಲ್ಲಿ ದೃಷ್ಟಿಯನ್ನಿಟ್ಟು ಸನ್ಯಾಸಿಯು ಸ್ನಾನ ಇತ್ಯಾದಿ ಪವಿತ್ರತೆಯನ್ನು ಮಾಡುತ್ತಿರುವನು. ಆದರೆ ತನ್ನ ಸ್ವತಃದ ಮನಸ್ಸನ್ನು ಪವಿತ್ರ ಮಾಡಲು ಬರುವುದಿಲ್ಲ. ಢೋಂಗೀತನದಿಂದ ವಾದವಿವಾದಗಳ ಮಾತುಗಳನ್ನು ಆಡುತ್ತಿರುವನು ॥೨೫೫॥ ಇನ್ನೊಬ್ಬರು ಕೂಡಿಸಿರುವ ಧನವನ್ನು ಮತ್ತು ಬೇರೆಯವರ ಅನ್ನವನ್ನು ಸ್ವೀಕರಿಸುವ ಅಥವಾ ತನ್ನ ದೇಹದ ಪ್ರತಿಷ್ಠೆಯನ್ನು ಬೆಳೆಸುವುದಕ್ಕಾಗಿ ಮೇಲ್ನೋಟಕ್ಕೆ ಸಾತ್ತ್ವಿಕತನವನ್ನು ತೋರಿಸುತ್ತಿರುವರು. ಇದು ಅರ್ಥದಿಂದ ಅಂದರೆ ಧನದಿಂದ ಆಗುತ್ತಿರುವ ನಾಲ್ಕನೆಯ ಅನರ್ಥವು ಹೀಗೆ ದಂಭವಾಗಿದೆ. ಇದೇ ಇದರ ಲಕ್ಷಣವೆಂದು ತಿಳಿ ॥೨೫೬॥ ಧನದಲ್ಲಿ ಕಾಮದ ವಾಸ್ತವ್ಯವೂ ಕೂಡ ಇರುವುದು. ಕಾಮವು ಇದು ಅತಿಶಯವಾಗಿ ಪ್ರಬಲವಾಗಿರುವುದು. ಇದನ್ನು ಗೆಲ್ಲುವುದು ಅತಿಶಯವಾಗಿ ಕಠಿಣವಾಗಿರುವುದು. ಎಲ್ಲಿ ಹಣವಿರುವುದೋ ಅದರ ಜೊತೆಯಲ್ಲಿ ಅತ್ಯಂತ ಪೀಡಾಕಾರಕ ಕಾಮವು ಇರುವುದು ॥೨೫೭॥ ಧನವಿಲ್ಲದವನಿಗೂ ಕೂಡ ಈ ಕಾಮವು ಪೀಡಿಸುವುದು. ಆತನಿಗೂ ಒಳಹೊರಗೆ ಕಷ್ಟವನ್ನು ಕೊಡುತ್ತಿರುವುದು. ಅನೇಕ ಪ್ರಕಾರದ ಕ್ಲೇಶಗಳನ್ನು ಭೋಗಿಸಲು ಹಚ್ಚುವುದು ॥೨೫೮॥

ಅಂದಮೇಲೆ ಶ್ರೀಮಂತನ ಮಾತನ್ನು ಏನೆಂದು ಹೇಳಬೇಕು? ದ್ರವ್ಯದ ಮದದಿಂದ ಅವನು ಕಾಮಾಂಧನಾಗಿ ಅನೇಕ ಸ್ತ್ರೀಯರಲ್ಲಿ ವ್ಯಭಿಚಾರ ಮಾಡುತ್ತಿರುವನು ಮತ್ತು ಅಧರ್ಮವನ್ನು ಬೆಳೆಸುತ್ತಿರುವನು. ಧನಿಕನು ಮನಬಂದಂತೆ ನಿಂದ್ಯ ಕರ್ಮಗಳನ್ನು ಮಾಡುವನು. ॥೨೫೯॥ ಕಾಮವು ಇದು ಹಣಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವುದು. ಆದ್ದರಿಂದ ಹಣವಿದ್ದವರಲ್ಲಿ ಅದು ಪೀಡೆಯನ್ನು ಕೊಡುತ್ತಿರುವುದು. ಎಲ್ಲಿ ಹಣವಿರುವುದೋ, ಅಲ್ಲಿ ಕಾಮವು ನಿಶ್ಚಿತವಾಗಿ ಉಗ್ರಗೊಳ್ಳುವುದು. ಹಗಲು ರಾತ್ರಿ ವಿಷಯಗಳ ಇಚ್ಛೆಯು ಸೊಕ್ಕಿನಿಂದ ತುಂಬಿಕೊಂಡಿರುವುದು ॥೨೬೦॥

ಧನಾಪಾಶೀ ಅತಿ ಉದ್ಧತೂ । ಕಾಮ ಪಾಂಚವಾ ಅನರ್ಥೂ । ಕಾಮ ತೇಥ ನಿಶ್ಚಿತೂ । ಕ್ರೋಧ ನಾಂದತೂ ಸೈನ್ಯೇಸೀ ।।೭೫೧।। ಕಾಮಪ್ರಾಪ್ತೀಸೀ ಆಡವೀ ಕಾಡೀ । ಹೋತಾ ಕ್ರೋಧಾಚೀ ಪಡೇ ಉಡೀ । ಖವಳಲಾ ಅತಿ ಕಡಾಡೀ । ತಪಾಚ್ಯಾ ಕೋಡೀ ನಿರ್ದಾಳಿತ ।।೭೫೨।। ಜಪ ತಪ ನಿಷ್ಠಾ ನೇಮ । ಶಿಣೋನಿ ಸಾಧಲೇ ದುರ್ಗಮ । ಕ್ರೋಧ ಅತಿ ಖವಳಲ್ಯಾ ಪರಮ । ತೇ ಕರೀ ಭಸ್ಮ ಕ್ಷಣಾರ್ಧೇ ।।೭೫೩।। ಧನಾಕಡೇ ಕೋಣೇ ದಾವೀ ಬೋಟ । ತೇಥ ಕ್ರೋಧ ಉಠೀ ಅಚಾಟ । ವಾಢವೀ ಪ್ರಾಣಾಂತ ಕಚಾಟ । ಕ್ರೋಧ ಅತಿದುಷ್ಟ ಧನೇಸೀ ।।೭೫೪।। ಧನಾಗಮನೀ ಅವರೋಧೂ । ಕಾ ಧನವ್ಯಯಾಚಾ ಸಂಬಂಧೂ । ತೇ ಸಂಧೀ ಖವಳೇ ಕ್ರೋಧೂ । ಅತಿವಿರೋಧೂ ಉನ್ಮತ್ತ ।।೭೫೫।। ಧನಾಪಾಶೀ ಕ್ರೋಧ ಸಮರ್ಥೂ । ಹಾ ಸಹಾವಾ ಅತಿಅನರ್ಥೂ । ಧನಾಪಾಶೀ ಗರ್ವ ಅದ್ಭುತೂ । ತೇಚಿ ನಿಶ್ಚಿತೂ ಸಾಂಗತ ।।೭೫೬।। ಧನ ಗರ್ವಾಚಿಯೇ ಪುಷ್ಟೀ । ಸಖಾ ಬಾಪ ನಾಣೇ ದೃಷ್ಟೀ । ಮಾತೇತೇ ಮ್ಹಣೇ ಕರಂಟೀ । ಇತರಾಂಚ್ಯಾ ಗೋಷ್ಟೀ ತ್ಯಾ ಕಾಯ ।।೭೫೭।। ಸಿದ್ಧ ಸಾಧಕ ತಾಪಸೀ । ತ್ಯಾಂತೇ ದೇಖೋನಿ ಉಪಹಾಸೀ । ಮ್ಹಣೇ ಕರಂಟೇ ತೇ ಹೋತೀ ಸನ್ಯಾಸೀ । ಹರಿದಾಸಾಸೀ ವಿಟಾವೀ ।।೭೫೮।। ಅಂಗೀ ಧನಾಚೇ ಸಮರ್ಥಪಣ । ತ್ಯಾಹೀವರೀ ಜೈ ಝಾಲೇ ಜ್ಞಾನ । ತೈ ಗರ್ವಾಚಾ ತಾತಾ ಚಡೇ ಪೂರ್ಣ । ಜೇವೀ ಆರೇ ಧಾರಣೂ ಗಿಳಿಲಾ ।।೭೫೯।। ಧನಜ್ಞಾನಗರ್ವಾಚೀ ಜಾತೀ ಕೈಸೀ । ಗರ್ವ ಕರೀ ಸದ್ಗುರೂಸೀ । ತ್ಯಾಚ್ಯಾ ವಚನಾತೇ ಹೇಳಸೀ । ತೇಖೀ ಧಿಕ್ಕಾರೇಸೀ ನಿರ್ಭರ್ತ್ಸಿತೀ ।।೭೬೦।। ಧನಜ್ಞಾನಗರ್ವಾಚೇ ಲಕ್ಷಣ । ದೇಖೇ ಸದ್ಗುರೂಚೇ ಅವಗುಣ । ಗುರೂಸಿ ಠೇವೀ ಮೂರ್ಖಪಣ । ಮೀ ಏಕ ಸಜ್ಞಾನ ಹೇ ಮಾನೀ ।।೭೬೧।। ಜೋ ಭ್ರಾಂತ ಮ್ಹಣೇ ಸದ್ಗುರೂಸೀ । ಗುರು ಮಾನೀ ತ್ಯಾತೇ ದ್ವೇಷೀ । ಬಾಪ ಗರ್ವಾಚೀ ಜಾತೀ ಕೈಶೀ । ದೇಖೇ ಗುಣದೋಷಾಂಸೀ ಸರ್ವಾಂಚ್ಯಾ ।।೭೬೨।। ನವಲ ಗರ್ವಾಚೀ ಪೈ ಕಾಹಣೀ । ಗುಣೂ ಸರ್ವಥಾ ಸತ್ಯ ನ ಮಾನೀ । ದೋಷ ಪಡತಾಂಚಿ ಕಾನೀ । ಸತ್ಯ ಮಾನೀ ನಿಶ್ಚಿತ ।।೭೬೩।। ಸಾತ್ತ್ವಿಕ ಯೇ ಗರ್ವಿತಾಪುಢೇ । ತ್ಯಾಸೀ ಸರ್ವಥಾ ಮಾನೀ ಕುಡೇ । ಅತಿಸಾತ್ತ್ವಿಕತಾ ದೃಷ್ಟೀ ಪಡೇ । ತರೀ ಮಾನೀ ವೇಡೇ ಅರ್ಬುಜ ।।೭೬೪।।

ಹೀಗಿರುವ ಈ ಯಾವ ಐದನೆಯ ಅನರ್ಥವು ಅತ್ಯಂತ ಉನ್ಮತ್ತ ಕಾಮವಾಗಿದ್ದು ಇದು ಹಣವಿದ್ದಲ್ಲಿ ನಿಶ್ಚಿತವಾಗಿ ಇರುವುದು. ಎಲ್ಲಿ ಕಾಮವು ಇರುವುದೋ, ಅಲ್ಲಿ ಕ್ರೋಧವು ತನ್ನ ಸೈನ್ಯಸಹ ವಸತಿ ಮಾಡುವುದು ।।೭೫೧।। ತನ್ನ ಇಚ್ಛಿತ ವಸ್ತುಗಳನ್ನು ಪ್ರಾಪ್ತಮಾಡಿಕೊಳ್ಳುವಲ್ಲಿ ಒಂದು ಹುಲ್ಲುಕಡ್ಡಿ ಅಡ್ಡಿಯಾದರೆ ಸಾಕು ಅವನಿಗೆ ಕ್ರೋಧವು ಕೂಡಲೇ ಜಿಗಿದು ಓಡಿಬಂದು ಅಲ್ಲಿ ಪ್ರಕಟವಾಗುವುದು. ಈ ಕ್ರೋಧವು ಒಮ್ಮೆ ಉಗ್ರಗೊಂಡಿತೆಂದರೆ ಕೋಟ್ಯಾವಧೀ ತಪಗಳ ರಾಶಿಯು ಇಲ್ಲದಾಗಿ ನಾಶವಾಗುವುದು ।।೭೫೨।। ಈ ಕ್ರೋಧವು ಉಗ್ರವಾದರೆ ಜಪ, ತಪ, ನಿಷ್ಠೆ, ನೇಮ ಇವುಗಳನ್ನು ಕಷ್ಟದಿಂದ ಪ್ರಾಪ್ತ ಮಾಡಿಕೊಂಡಿರುವ ಈ ಎಲ್ಲವೂ ಒಂದು ಕ್ಷಣದಲ್ಲಿಯೇ ಭಸ್ಮವಾಗಿಬಿಡುವುವು ।।೭೫೩।। ಇವನ ಹಣದತ್ತ ಯಾರಾದರೂ ಕೇವಲ ಬಟ್ಟು ಮಾಡಿ ತೋರಿಸಿದರೆ ಸಾಕು ಅತಿಶಯವಾಗಿ ಕ್ರೋಧವು ಹುಟ್ಟಿಕೊಳ್ಳುವುದು. ಆದ್ದರಿಂದ ಪ್ರಾಣಾಂತಿಕ ಸಂಕಟಗಳು ಒದಗಿ ಬರುವುವು. ಇಂತಹ ಪ್ರಕಾರದ ಈ ದುಷ್ಟ ಕ್ರೋಧವು ಹಣದಲ್ಲಿ ವಸತಿ ಮಾಡಿಕೊಂಡಿರುವುದು ।।೭೫೪।। ಹಣವನ್ನು ಕೂಡಿಸುವಾಗ್ಗೆ ಏನಾದರೂ ಅಡೆತಡೆಗಳಾಗಲು ಅಥವಾ ಹಣವನ್ನು ಖರ್ಚು ಮಾಡುವ ಪ್ರಸಂಗವು ಒದಗಿಬರಲು, ಆಗ ಕ್ರೋಧವು ಕೂಡಲೇ ಉಗ್ರರೂಪ ತಾಳುವುದು ಮತ್ತು ಅದು ಉನ್ಮತ್ತತನದಿಂದ ಅತ್ಯಂತ ವೈರವನ್ನು ಧರಿಸುವುದು ।।೭೫೫।। ಧನದ ಹತ್ತಿರ ಇಂತಹ ದಾರುಣವಾದ ಕ್ರೋಧವು ಇದು ಆರನೆಯ ಅನರ್ಥಕಾರಕವಾಗಿರುವುದು. ಧನದ ಹತ್ತಿರ ಅತಿಶಯವಾದ ಗರ್ವವು ಇರುವುದು. ಈಗ ಈ ವಿಷಯವನ್ನು ಕುರಿತು ವರ್ಣನೆಯನ್ನು ಮಾಡುವೆನು. ಅದಕ್ಕಾಗಿ ಕೇಳು ।।೭೫೬।। ಒಮ್ಮೆ ಈ ಗರ್ವದ ಮದವು ಕಣ್ಣಿಗೇರಲು, ಆ ವ್ಯಕ್ತಿಗೆ ತನ್ನ ಸ್ವತಃ ತಂದೆ ತಾಯಿಗಳು ಕಾಣುವುದಿಲ್ಲ. ತನ್ನ ಹಡೆದ ತಾಯಿಗೆ ನೀನೊಬ್ಬ ದರಿದ್ರ ದುರ್ದೈವಿ ಹೆಂಗಸು ಎಂದು ಕರೆಯುವಾಗ ಇನ್ನಿತರರ ಯಾವ ಕಥೆ? ।।೭೫೭।। ಸಿದ್ಧರು, ಸಾಧಕರು, ಅಥವಾ ತಪಸ್ವಿಗಳು ಇವರನ್ನು ಕಂಡು ಇವನು ಅವರನ್ನು ಅಪಹಾಸ್ಯ ಮಾಡುವನು. ದುಡಿಯದ ದರಿದ್ರ ಬಡವರೇ ಸನ್ಯಾಸಿಗಳಾಗುವರು ಎಂದು ಹೇಳುವನು. ಇದರಂತೆಯೇ ಹರಿದಾಸರನ್ನು ನಿಂದಿಸುತ್ತಿರುವನು ।।೭೫೮।। ಮೊದಲೇ ಧನದ ಮದದಿಂದ ಉನ್ಮತ್ತನಾಗಿರುವನು. ಇಂತಹ ಅವಸ್ಥೆಯಲ್ಲಿ ಏನಾದರೂ ಜ್ಞಾನವು ಪ್ರಾಪ್ತವಾದರೆ, ಆಗ ಅವನು ಗರ್ವದಿಂದ ಎಷ್ಟೊಂದು ಉಬ್ಬಿಕೊಳ್ಳುವನೆಂದರೆ ಹೆಬ್ಬಾವು ಒಣಕೆಯನ್ನು ನುಂಗಿದಂತೆ ಇವನ ಅವಸ್ಥೆಯಾಗುವುದು ।।೭೫೯।। ಧನ ಮತ್ತು ಜ್ಞಾನ ಇವುಗಳ ಗರ್ವದ ಲಕ್ಷಣವನ್ನು ಕೇಳು, ಇವನು ಸದ್ಗುರುಗಳಲ್ಲಿ ಅಹಂಕಾರದಿಂದ ವರ್ತಿಸುತ್ತಿರುವನು. ಅವರ ಶಬ್ದಗಳಿಗೆ ಇವನು ಅವಹೇಳನ ಮಾಡುತ್ತಿರುವನು. ಮತ್ತು ಗುರುಗಳಿಗೆ ಬಯ್ಯುತ್ತ, ದೂರುತ್ತ ಅವರನ್ನು ಧಿಕ್ಕಾರ ಮಾಡುವನು ।।೭೬೦।। ಇವನು ಸದ್ಗುರುಗಳ ದೋಷಗಳನ್ನು ಎಣಿಸುವನು ಮತ್ತು ಅವರನ್ನು ಅಜ್ಞಾನಿ ಎಂದು ನಿಶ್ಚಯಿಸುವನು. ತಾನು ಸ್ವತಃ ಮಹಾಜ್ಞಾನಿ ಎಂದುಕೊಳ್ಳುವನು. ಇದೇ ದ್ರವ್ಯ ಮತ್ತು ಜ್ಞಾನ ಇವುಗಳ ಗರ್ವದ ಲಕ್ಷಣವಾಗಿದೆ ।।೭೬೧।। ಇವನು ಸದ್ಗುರುಗಳಿಗೆ ಭ್ರಾಂತರು ಎನ್ನುವನು. ಈ ಗುರುಗಳಿಗೆ ಮನ್ನಿಸುವವರ ದ್ವೇಷ ಮಾಡುವನು. ಗರ್ವದ ಸ್ವಭಾವವೇ ಇದು ಸರ್ವರ ಗುಣದೋಷಗಳನ್ನು ನೋಡುತ್ತಿರುವದ್ದಾಗಿರುವುದು ।।೭೬೨।। ಗರ್ವದ ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಅವನು ಯಾರ ಗುಣಗಳಿಗೂ ನಿಜವೆನ್ನುವುದಿಲ್ಲ. ಆದರೆ ದೋಷಗಳಿಗೆ ಮಾತ್ರ ನಿಜವೆನ್ನುತ್ತಿರುವನು ।।೭೬೩।। ಗರ್ವಿಷ್ಟ ಮನುಷ್ಯನ ಎದುರಿನಲ್ಲಿ ಯಾರಾದರೊಬ್ಬ ಸಾತ್ವಿಕ ವ್ಯಕ್ತಿಯು ಬಂದರೆ ಆತನಿಗೆ ಇವನು ಇವನೊಬ್ಬ ಕೆಟ್ಟವನು ಎನ್ನುವನು. ಅತ್ಯಂತ ಸಾತ್ವಿಕ ಮನುಷ್ಯನಿಗೆ ಇವನು ಇವನೊಬ್ಬ ವ್ಯವಹಾರಶೂನ್ಯ ಮೂರ್ಖ ಎಂದು ತಿಳಿಯುವನು ।।೭೬೪।।

ಅಂಗೀ ಭವಂಡೀ ಭರೇ ಲಾಠೀ । ತೈ ಭೂಮೀ ಲಾಗೇ ಲಲಾಟೀ । ಸಾಷ್ಟಾಂಗ ನಮಾವಯಾ ಸೃಷ್ಟೀ । ಪಾತ್ರ ಗರ್ವ ದೃಷ್ಟೀ ದಿಸೇನಾ ॥೧೯೫॥ ತೇಥೇ ಕೋಣ ದೇ ಸನ್ಮಾನ ಶ್ರೇಷ್ಠಾ । ಕಾಯಸೀ ವೃದ್ಧಾಚೀ ಪ್ರತಿಷ್ಠಾ । ಧನಗರ್ವೇ ಚಡಲಾ ತಾಠಾ । ಮೀ ಏಕ ಮೋಠಾ ಬ್ರಹ್ಮಾಂಡೀ ॥೧೯೬॥ ಏಕ ಗುರುಸೇವಾವಿಶ್ವಾಸಕೂ । ನಿಜಸೇವಾ ಝಾಲಾ ವಶ್ಯಕೂ । ತ್ಯಾಸೀ ಗರ್ವ ಚಢೇ ಮೀ ಸೇವಕೂ । ತೋ ಅತಿಬಾಧಕೂ ಸೇವಕಾ ॥೧೯೭॥ ಐಸಾ ಅತಿಗರ್ವೇ ಉನ್ಮದ್ಧ । ಹಾ ಸಾತವಾ ಗರ್ವಬಾಧ । ಆತಾ ಧನಾಪಾಶೀ ಮಹಾಮದ । ತೋಹೀ ಸಂಬಂಧ ದ್ವಿಜ ಸಾಂಗೇ ॥೧೯೮॥ ಜ್ಯಾಸೀ ಚಢೇ ಧನಮದೂ । ತೋ ಉಘಡೇ ಡೋಳಾ ಹೋಯ ಅಂಧೂ । ಕಾನೀ ನಾಯಕೇ ಶಬ್ದ ಬೋಧೂ । ಧನಮದೇ ಸ್ತಬ್ಧೂ ಸರ್ವದಾ ॥೧೯೯॥ ಧನಮದೇ ಅತಿ ಅಹಂತಾ । ಧನ ಮದೇ ಉದ್ಧತತಾ । ಧನಮದೇ ಅದ್ವಾತದ್ವತಾ । ಕರೀ ಸರ್ವಥಾ ಅಧರ್ಮ ॥೨೦೦॥ ಧನಮದ ಅತಿ ಅಪವಿತ್ರ । ತೋ ಚಢಲ್ಯಾ ಹೋಯ ಅತಿದುಸ್ತರ । ನ ಮ್ಹಣೇ ಪಾತ್ರ ಅಪಾತ್ರ । ವಿಚರೇ ವಿಚಿತ್ರ ಯೋನೀಸೀ ॥೨೦೧॥ ಜೋ ಧನಮದಾ ವಶ ಹೋಯ । ತೋ ನ ಮಾನೀ ಕೋಣಾಚೇಹೀ ಭಯ । ನ ಜಾವೇ ತೇಥ ಸ್ವಯೇ ಜಾಯ । ನ ಖಾವೇ ತೇಖಾಯ ಯಥೇಷ್ಟ ॥೨೦೨॥ ನ ಧರಾವಾ ತೋ ಸಂಗ ಧರೀ । ನ ಕರಾವೇ ತೇ ಕರ್ಮಕರೀ । ನ ಬೋಲವೇ ತೇ ಉಚ್ಚಾರೀ । ಜನಾಭೀತರೀ ಉದ್ಧತೂ ॥೨೦೩॥ ನ ದೇಖೇ ಆಪುಲೇ ಕೇಲೇ । ಪರಾಪವಾದ ಸ್ವಯೇ ಬೋಲೇ । ನಾಯಕೇ ಬಾಪಾಚೇ ಶಿಕವಿಲೇ । ವೇಡೇ ಕೇಲೇ ಧನಮದೇ ॥೨೦೪॥ ಶಿಕವಿಲೇ ತೇ ನಾಯಕೇ । ವಾರಿಲೇ ತೇ ಕರೀ ಆವಶ್ಯಕೇ । ಸಾಧುನಿಂದಾ ನಿಜಮುಖೇ । ಯಥಾಸುಖೇ ಜಲ್ಪತ ॥೨೦೫॥ ನ ಮಾನೀ ಸ್ವಯಾತೀ ಸಾಚಾರೂ । ನ ಮಾನೀ ದೋಷ ಅನಾಚಾರೂ । ನ ಮಾನೀ ವಡೀಲಾಂಚಾ ವಿಚಾರೂ । ಧನಮದೇ ಥೋರೂ ಮಾತಲಾ ॥೨೦೬॥ ಆಧೀಂಚ ತಾರುಣ್ಯೇ ಅತಿಲಾಠಾ । ವರೀ ಧನಮದೇ ಚಢಲಾ ತಾಠಾ । ಯಾಪರೀ ಮಾತಲಾ ಮೋಠಾ । ನ ಚಾಲೇ ವಾಟಾ ಸುಪಂಥೀ ॥೨೦೭॥ ಸ್ತ್ರೀಕಾಮೇ ಅತಿವಿವ್ಹಳ । ನ ವಿಚಾರೀ ಕುಳಶೀಳ । ನ ಮ್ಹಣೇ ಸಕಾಳ ಸಾಂಜ ವೇಳ । ವಿಚರೇ ಕೇವಳ ಖರೂ ಜೈಸಾ ॥೨೦೮॥

ಗರ್ವಿಷ್ಟ ಮನುಷ್ಯನಿಗೆ ಏಕಾಏಕೀ ತಲೆಸುತ್ತು ಬರಲು ಅವನು ಕೆಳಗೆ ಬಿದ್ದು ಅವನ ತಲೆಯು ನೆಲಕ್ಕೆ ಬೀಳುವುದು. ಆದರೆ ಸಾಷ್ಟಾಂಗ ನಮಸ್ಕಾರವನ್ನು ಮಾಡಲು ಈ ಜಗತ್ತಿನಲ್ಲಿ ಆತನಿಗೆ ಯೋಗ್ಯರಾದ ಯಾರೂ ಕಾಣಿಸುವುದಿಲ್ಲ ॥೧೯೫॥ ಇವನಿಗೆ ಧನದ ಗರ್ವದಿಂದ ಎಷ್ಟೊಂದು ಅಹಂಕಾರವು ಬೆಳೆದಿದೆ ಎಂದರೆ ಸರ್ವ ಬ್ರಹ್ಮಾಂಡದಲ್ಲಿ ನಾನೊಬ್ಬನೇ ಶ್ರೇಷ್ಠನೆಂದು ತಾನು ತಿಳಿದಿರುವನು. ಅಂದಮೇಲೆ ವರಿಷ್ಠರ ಸನ್ಮಾನ, ಹಿರಿಯರ ಪ್ರತಿಷ್ಠೆ ಯಾರು ಮಾಡಬೇಕು? ॥೧೯೬॥ ಒಬ್ಬ ಶಿಷ್ಯನು ಗುರುವಿನ ಸೇವೆಯಲ್ಲಿ ನಿಷ್ಠೆಯನ್ನಿಡುವನು. ಗುರುವಿನ ಮನೋಭಾವದಂತೆ ಸೇವೆಯನ್ನು ಮಾಡುವನು. ಆದರೆ ನಾನೇ ಒಬ್ಬ ಸೇವಕನು ಎಂಬ ಗರ್ವವು ಆತನಿಗೆ ಉಂಟಾಗಿ ಅದೇ ಗರ್ವವು ಇವನಿಗೆ ಬಾಧಕವಾಗುವುದು ॥೧೯೭॥ ಈ ಪ್ರಕಾರವಾಗಿ ಅತಿಗರ್ವದಿಂದ ಉನ್ಮತ್ತನಾಗುವಿಕೆಯು ಇದು ಧನದಿಂದ ಆಗುವ ಗರ್ವಪೀಡೆ ನಾಮದ ಏಳನೆಯ ಅನರ್ಥವಾಗಿದೆ. ಧನದ ಹತ್ತಿರ ಮದವೂ ಕೂಡ ಇರುವುದು. ಅದರ ವಿಷಯವನ್ನು ಕುರಿತು ಬ್ರಾಹ್ಮಣನು ಸ್ಪಷ್ಟವಾಗಿ ಹೇಳುತ್ತಿರುವನು ॥೧೯೮॥ ಯಾವ ಮನುಷ್ಯನಿಗೆ ಹಣದ ಮದವು ಉಕ್ಕೇರುವುದೋ, ಅವನು ಕಣ್ಣಿದ್ದೂ ಕುರುಡನಾಗುವನು. ಅವನಿಗೆ ಉಪದೇಶದ ಹಿತನುಡಿಗಳು ಕೇಳಿಸುವುದಿಲ್ಲ. ಅವನು ಯಾವಾಗಲೂ ಧನದ ಗುಂಗಿನಲ್ಲಿಯೇ ವರ್ತಿಸುತ್ತಿರುವನು ॥೧೯೯॥ ಧನದ ಮದದಿಂದ ಅತಿಶಯವಾಗಿ ಅಹಂಕಾರವು ಬೆಳೆಯುತ್ತಿರುವುದು. ಇವನು ಇದರಿಂದ ಉನ್ಮತ್ತನಾಗುವನು. ಮತ್ತು ಇವನ ಕೈಗಳಿಂದ ಅಧರ್ಮಗಳೇ ಆಗುತ್ತಿರುವುವು ॥೨೦೦॥ ಧನದ ಈ ಮದವು ಅತ್ಯಂತ ಅಪವಿತ್ರವಾಗಿರುವುದು. ಈ ಮದವು ಒಮ್ಮೆ ಬೆಳೆದುನಿಂತರೆ ಅದನ್ನು ನಿವಾರಿಸಲು ಬರುವುದಿಲ್ಲ. ಇಂತಹ ಮನುಷ್ಯನು ಯೋಗ್ಯ ಯಾವುದು? ಅಯೋಗ್ಯ ಯಾವುದು? ಇದರ ವಿಚಾರವನ್ನೇ ಮಾಡಲಾರನು. ವಿಚಿತ್ರ ಯೋನಿಗಳಲ್ಲಿ ವಿಹರಿಸುತ್ತಿರುವನು ॥೨೦೧॥ ದ್ರವ್ಯಮದಕ್ಕೆ ವಶನಾದವನು ಯಾವುದೇ ವಿಷಯಕ್ಕೆ ಭಯಪಡುವುದಿಲ್ಲ. ಹೋಗಬಾರದಲ್ಲಿ ಹೋಗುವನು. ತಿನ್ನಬಾರದ್ದನು ತಿನ್ನುವನು ॥೨೦೨॥ ಅಯೋಗ್ಯರ ಸಂಗತಿಯನ್ನು ಹಿಡಿಯುವನು. ಅಯೋಗ್ಯ ಕರ್ಮಗಳನ್ನು ಮಾಡುವನು. ಹೇಳಬಾರದ್ದನ್ನೆಲ್ಲ ಹೇಳುವನು ಇವನ ವರ್ತನೆಯು ಸೊಕ್ಕಿನಿಂದ ಕೂಡಿರುವುದು ॥೨೦೩॥ ತನ್ನ ಸ್ವತಃದ ದೋಷವನ್ನು ಎಂದಿಗೂ ನೋಡುವುದಿಲ್ಲ. ಆದರೆ ಇನ್ನೊಬ್ಬರ ದೋಷಗಳನ್ನು ಸದಾ ಎಣಿಸುತ್ತಿರುವನು. ದೊಡ್ಡವರು ಒಳ್ಳೆಯದನ್ನು ತಿಳಿಸಿ ಹೇಳಿದರೂ ಇವನು ಕೇಳುವುದಿಲ್ಲ. ಇಷ್ಟೊಂದು ಇವನು ಧನಮದದಿಂದ ಹುಚ್ಚನಾಗಿರುವನು ॥೨೦೪॥ ಹೀಗೆ ಉತ್ತಮ ವಿಚಾರಗಳನ್ನು ತಿಳಿಸಿ ಹೇಳಬೇಕೆಂದರೆ ಇವನು ಕೇಳಲು ಸಿದ್ಧನಾಗುವುದಿಲ್ಲ. ಇವನು ಸಾಧುಗಳ ನಿಂದೆಯನ್ನು ಮಾಡುತ್ತಿರುವನು ॥೨೦೫॥ ತನ್ನ ಜಾತಿ, ತನ್ನ ಆಚಾರ ಇವುಗಳ ವಿಚಾರವನ್ನೇ ಮಾಡುವುದಿಲ್ಲ. ದೋಷ ಉಳ್ಳ ಕಾರ್ಯಗಳನ್ನು ಮತ್ತು ಅನಾಚಾರಗಳನ್ನು ಬಿಡುವುದೇ ಇಲ್ಲ. ದೊಡ್ಡವರ ವಿಚಾರಗಳನ್ನು ಮನ್ನಿಸುವುದಿಲ್ಲ. ಇಷ್ಟೊಂದು ಇವನು ಧನಮದದಿಂದ ಕೊಬ್ಬಿಕೊಂಡಿರುವನು ॥೨೦೬॥ ಮೊದಲೇ ತಾರುಣ್ಯವು ಶರೀರದಲ್ಲಿ ಸಂಚರಿಸುತ್ತಿರುವುದು. ಅದರಲ್ಲಿ ಈ ಧನಮದವು ಸೇರಿಕೊಳ್ಳಲು ಇವನು ಉನ್ಮತ್ತನಾಗಿ ಸರಿಯಾದ ಮಾರ್ಗದಿಂದ ನಡೆಯಲಾರನು ॥೨೦೭॥ ಇವನು ಸ್ತ್ರೀಯರ ಇಚ್ಛೆಯಿಂದ ಚಿಂತಾಗ್ರಸ್ತನಾಗುವನು. ತನ್ನ ಜಾತಿಯ, ಶೀಲದ ವಿಚಾರ ಮಾಡಲಾರನು. ಮುಂಜಾನೆ ಸಂಜೆ ಎಂಬ ಯಾವ ವೇಳೆಯನ್ನು ಲಕ್ಷಿಸಲಾರನು. ಅವನ ವರ್ತನೆಯು ಕತ್ತೆ ಸಮಾನವಾಗಿರುವುದು ॥೨೦೮॥

ಅಭಿಲಾಷೂನಿ ಪರನಾರೀ । ದಿವಸಾ ವಿಚರೇ ದುಪಾರೀ । ಗತಾಲಕಾಹೀ ಅಂಗೀಕಾರೀ । ಭಯ ನ ಧರೀ ಪಾಪಾಚೇ ।೭೯೯॥ ಜೋ ಮಾತಲಾ ಕರೂನಿ ಮಧ್ಯಪಾನ । ತೋ ಮದ ತತ್ಕಾಳ ಉತರೇ ಜಾಣ । ತ್ಯಾಹೂನಿ ಧನಮದ ದಾರುಣ । ಆಲ್ಯಾಹೀ ಮರಣ ಉತರೇನಾ ।೭೮೦॥ ಅಕರ್ಮ ಕರಿತಾ ಆಪಣ । ತೇಚಿ ನಿಜಘಾತೇ ಘೇಈಲ ಪ್ರಾಣ । ಹೇಹೀ ನಾಠವೇ ಆಠವಣ । ಧನಮದೇ ಜಾಣ ಭುಲಲಾ ।೭೮೧॥ ಮಹಾ ಅನರ್ಥೀ ಧನಮದ ಜಾಣ । ಹೇ ಆಠವ್ಯಾ ಅನರ್ಥಾಚೇ ಲಕ್ಷಣ । ಆತಾ ಧನಾಪಾಶೀ ಭೇದ ಪೂರ್ಣ । ತೇಚಿ ನಿರೂಪಣ ದ್ವಿಜ ಸಾಂಗೇ ।೭೮೨॥ ಭೇದ ಜನ್ಮಲಾ ಧನಾಚೇ ಕುಶೀ । ಧನ ತೇಥ ಭೇದಾಚೀ ಮಿರಾಶೀ । ಭೇದ ಸಪರಿವಾರ ಧನಾಪಾಶೀ । ಅಹರ್ನಿಶೀ ಜಾಗತ ।೭೮೩॥ ಹಾತಾ ಆಲಿಯಾ ಬಹು ಧನ । ಮಾತೇಹೂನಿ ರಾಖೇ ಭಿನ್ನ । ಪಿತ್ಯಾಸೀ ಕರೀ ವಂಚನ । ಸ್ತ್ರಿಯೇಸೀಹೀ ಜಾಣ ಕಳೋ ನೇದೀ ।೭೮೪॥ ಅರ್ಥ ಪುತ್ರಾಸೀ ಅತರ್ಕ್ಯ ತಾ । ತೇಥ ಇತರಾಂಚೀ ಕೋಣ ಕಥಾ । ಭೇದ ತೋ ಅರ್ಥಾಪರತಾ । ಜಗೀ ಸರ್ವಥಾ ಅಸೇನಾ ।೭೮೫॥ ಮಾಥಾ ಸಾಹೋನಿ ಶಸ್ತ್ರಘಾತ । ಬಂಧು ಬಂಧೂಸೀ ರಣೇ ಸಾಹ್ಯ ಹೋತ । ತೇಚಿ ಬಂಧೂ ಅನಾಪ್ತ ಹೋತ । ವಾಂಟಿತಾ ಅರ್ಥವಿಭಾಗ ।೭೮೬॥ ಮಿತ್ರ ಮಿತ್ರಾಂಸೀ ವೇಂಚಿತೀ ಪ್ರಾಣ । ತೇಥೇ ಪ್ರವೇಶೋನಿಯಾ ಧನ । ವಿಕಲ್ಪಾ ಆಣೀ ಮಿತ್ರಪಣ । ಭೇದ ದಾರುಣ ಧನಾಪಾಶೀ ।೭೮೭॥ ಆಪಣಾಚೇ ಗಾಂಠೀ ಬಾಂಧಿಲೇ ಧನ । ತೇ ಕ್ಷಣಕ್ಷಣಾ ಪಾಹೇ ಆಪಣ । ಯೇಥವರೀ ಧನಾಪಾಶೀ ಜಾಣ । ವಿಕಲ್ಪ ಪೂರ್ಣ ನಾಂದತ ।೭೮೮॥ ಐಸಾ ಧನಾಪಾಶೀ ಭೇದೂ ಜಾಣ । ಹೇ ನವವೇ ಅನರ್ಥಲಕ್ಷಣ । ಅತಿಶಯೇ ಅತಿನಿರ್ವಾಣ । ವೈರ ದಾರುಣ ಧನೇಸೀ ।೭೯೯॥ ಧನಾಪಾಶೀ ವೈರ ಪೂರ್ಣ ಜಾಣ । ಹೇ ಅಂಗೇ ಭೋಗೂನಿ ಆಪಣ । ಸಾಂಗೇ ಕದರ್ಯು ಬ್ರಾಹ್ಮಣ । ವೈರಲಕ್ಷಣ ಧನಾಚೇ ।೭೯೦॥ ಪಿತ್ಯಾಪುತ್ರಾ ಮಾಜೀ ವಿರೋಧೂ । ಪಾಡಿತೋ ಹಾ ದ್ರವ್ಯ ಸಂಬಂಧೂ । ವೈರೀ ಕರೀ ಸಖೇ ಬಂಧೂ । ತೋ ಹಾ ಪ್ರಸಿದ್ಧೂ ಧನಲೋಭ ।೭೯೧॥ ಆಪುಲ್ಯಾ ಕಳವಳ್ಯಾಚೇ ಸುಹೃದ । ತ್ಯಾಂಸೀ ಧನಲೋಭ ಪಾಡೀ ದ್ವಂದ್ವ । ಧನಾಸ್ತವ ಅತಿಸುಬದ್ಧ । ವೈರ ವಿರುದ್ಧ ಸರ್ವಾಸೀ ।೭೯೨॥

ಇವನು ಮನದಲ್ಲಿ ಪರಸ್ತ್ರೀಯರ ಅಭಿಲಾಷೆ ಧರಿಸುವನು, ಹಗಲು, ಮಧ್ಯಾಹ್ನದಲ್ಲಿಯೇ ಆಕೆಯಲ್ಲಿ ರಮಮಾಣನಾಗುವನು. ತಲೆಬೋಳಿಸಿರುವ ವಿಧವೆಯನ್ನೂ ಕೂಡ ಕೂಡಿಕೊಳ್ಳುವನು. ಇಷ್ಟೊಂದು ಅನಾಚಾರಿ ಇವನಾಗುವನು. ಇವನಿಗೆ ಪಾಪದ ಭಯವೇ ಇರುವುದಿಲ್ಲ ।೭೯೯॥ ಮದ್ಯಪಾನದ ನಿಶೆಯು ಸ್ವಲ್ಪ ಹೊತ್ತಾದನಂತರ ಇಳಿಯುವುದು. ಆದರೆ ಧನಮದದ ನಿಶೆಯು ಇದಕ್ಕಿಂತಲೂ ಬಲು ಭಯಂಕರವಾಗಿದೆ. ಮರಣ ಸಮೀಪ ಬಂದರೂ ಕೂಡ ಆ ನಿಶೆಯು ಇಳುವುದೇ ಇಲ್ಲ ।೭೮೦॥ ತಾನು ಅಧರ್ಮದಿಂದ ನಡೆದುಕೊಂಡರೆ ಕೊನೆಯಲ್ಲಿ ತನ್ನ ನಾಶವಾದೀತು, ಪ್ರಾಣವೂ ಕೂಡ ಹೋದೀತು, ಎಂಬ ಈ ಸ್ಮರಣೆಯೇ ಇರುವುದಿಲ್ಲ. ಇಷ್ಟೊಂದು ಅವನು ಧನಮದದಲ್ಲಿ ಗುಂಗ್ ಆಗಿರುವನು ।೭೮೧॥ ಹೀಗೆ ಈ ಧನದ ಮದವು ಮಹಾ ಅನರ್ಥಕಾರಕವಾಗಿರುವುದು. ಇದು ಎಂಟನೆಯ ಅನರ್ಥದ ಲಕ್ಷಣವಾಗಿದೆ. ಈಗ ಧನದಲ್ಲಿ ಭೇದವೂ ಕೂಡ ಹೇಗೆ ಇರುವ ವಿಷಯವನ್ನು ಕುರಿತಾದ ನಿರೂಪಣೆಯನ್ನು ಕೇಳು ।೭೮೨॥ ಯಾವ ಈ ಭೇದವು ಧನದ ಹೊಟ್ಟೆಯಲ್ಲಿ ಹುಟ್ಟಿರುವುದು. ಎಲ್ಲಿ ಧನವಿರುವುದೋ, ಅಲ್ಲಿ ಭೇದದ ಸರ್ವ ಅಧಿಕಾರಿಗಳಿರುವರು. ಈ ಯಾವ ಭೇದವು ತನ್ನ ಯಾವತ್ತೂ ಪರಿವಾರದೊಂದಿಗೆ ಹಕ್ಕಿನಿಂದ ಹಗಲು ರಾತ್ರಿ ಧನದ ಹತ್ತಿರ ಕಾಯುತ್ತ ಕುಳಿತುಕೊಳ್ಳುವುದು ।೭೮೩॥ ಯಾರೋ ಒಬ್ಬನಿಗೆ ಅಕಸ್ಮಾತಾಗಿ ವಿಪುಲವಾದ ಹಣವು ಪ್ರಾಪ್ತವಾಯಿತೆಂದರೆ, ಅವನು ಇದನ್ನು ತನ್ನ ತಾಯಿಗೂ ಕೂಡ ತಿಳಿಸುವುದಿಲ್ಲ. ತನ್ನ ತಂದೆಯಲ್ಲಿ ಎಷ್ಟು ಹಣವಿದೆ ಎಂಬ ವಿಚಾರವನ್ನು ಮಗನಿಗೂ ತಿಳಿಯಲು ಆಗುವುದಿಲ್ಲ ।೭೮೪॥ ಹೀಗಿದ್ದಮೇಲೆ ಇತರ ಜನರಿಗೆ ಹೇಗೆ ತಿಳಿಯಬೇಕು ? ಧನದ ಹತ್ತಿರ ಎಷ್ಟೊಂದು ಭೇದವಿರುವುದೋ, ಅದಕ್ಕಿಂತಲೂ ಅಧಿಕವಾದ ಭೇದವು ಈ ಜಗತ್ತಿನಲ್ಲಿ ಮೂಲತಃ ಇರಲು ಶಕ್ಯವೇ ಇಲ್ಲ ।೭೮೫॥ ರಣರಂಗದಲ್ಲಿ ತನ್ನ ಅಣ್ಣನಿಗಾಗಿ ಸಹಾಯಮಾಡುಲು ತಮ್ಮನು ತನ್ನ ತಲೆಯಮೇಲೆ ಶಸ್ತ್ರಗಳ ಹೊಡೆತದ ಬಾಧೆಯನ್ನು ಸಹಿಸಿಕೊಳ್ಳುವನು. ಆದರೆ ಇದೇ ಅಣ್ಣ ತಮ್ಮಂದಿರು ತಮ್ಮ ಆಸ್ತಿಯನ್ನು ಪಾಲು ಮಾಡಿಕೊಳ್ಳುವ ಪ್ರಸಂಗದಲ್ಲಿ ಅಣ್ಣನು ಯಾರೋ ? ತಮ್ಮನು ಯಾರೋ ? ಎನ್ನುವ ರೀತಿಯಲ್ಲಿ ಒಬ್ಬರಿಗೊಬ್ಬರು ಜಗಳವಾಡುವರು ।೭೮೬॥ ಒಬ್ಬ ಮಿತ್ರನು ತನ್ನ ಮಿತ್ರನಿಗಾಗಿ ಪ್ರಾಣವನ್ನು ಕೊಡುವಂತೆ ಇರುವನು. ಆದರೆ ಅಲ್ಲಿ ಹಣದ ಪ್ರಶ್ನೆಯು ಉದ್ಭವವಾಗಲು ಮಿತ್ರಮಿತ್ರರಲ್ಲಿ ವಿಕಲ್ಪವು ಉಂಟಾಗುವುದು. ಈ ಪ್ರಕಾರವಾಗಿ ಧನದ ಹತ್ತಿರ ಭಯಂಕರವಾದ ಭೇದವು ತುಂಬಿಕೊಂಡಿರುವುದು ।೭೮೭॥ ತನ್ನ ಸೆರಗಿನಲ್ಲಿ ಕಟ್ಟಿಕೊಂಡಿರುವ ಧನದತ್ತ, ಅದು ಸುರಕ್ಷಿತವಾಗಿ ಇದೆಯೋ, ಇಲ್ಲವೋ ಎಂದುಕೊಂಡು ಸತತವಾಗಿ ನೋಡುತ್ತಿರುವನು. ಇಷ್ಟೊಂದು ಪೂರ್ಣವಾದ ವಿಕಲ್ಪವು ಧನದ ಹತ್ತಿರ ವರ್ತಿಸುತ್ತಿರುವುದು ।೭೮೮॥ ಈ ಪ್ರಕಾರದ ಭೇದವು ಇದು ಒಂಬತ್ತನೆಯ ಅನರ್ಥವಾಗಿರುವುದು. ಧನದ ಜೊತೆಯಲ್ಲಿ ಅತ್ಯಂತ ಮಹಾಭಯಂಕರವಾದ ವೈರತ್ವವೂ ಕೂಡ ಇರುವುದು ।೭೯೯॥ ಧನದ ಹತ್ತಿರ ವೈರತ್ವವು ಪರಿಪೂರ್ಣವಾಗಿ ಇದೆ ಎಂಬುವುದು ತನ್ನ ಸ್ವತಃ ಅನುಭವದೊಂದಿಗೆ ಯಾವ ಕೃಪಣ ಬ್ರಾಹ್ಮಣನು ಈಗ ವೈರತ್ವದ ಲಕ್ಷಣವನ್ನು ಹೇಳುತ್ತಿರುವನು ।೭೯೦॥ ಈ ಯಾವ ಹಣದ ಸಂಬಂಧವು ತಂದೆ ಮಕ್ಕಳಲ್ಲಿ ವಿರೋಧವನ್ನು ನಿರ್ಮಾಣ ಮಾಡುವುದು. ಒಡಹುಟ್ಟಿದ ಅಣ್ಣನಿಗೂ ಕೂಡ ಇದು ವೈರಿಯನ್ನಾಗಿ ಮಾಡಿಬಿಡುವುದು. ಹೀಗೆ ಈ ಧನ ಲೋಭವು ಪ್ರಸಿದ್ಧವಾಗಿರುವುದು ।೭೯೧॥ ಅತ್ಯಂತ ಪ್ರೇಮದ ತನ್ನ ಆಪ್ತವರ್ಗಗಳಲ್ಲಿ ಈ ಯಾವ ಧನಲೋಭವು ಕಲಹವನ್ನು ಉತ್ಪನ್ನಗೊಳಿಸುವುದು. ಹಣಕ್ಕಾಗಿ ಉತ್ತಮ ವಿಚಾರವಂತ ಜನರಲ್ಲಿಯೂ ಅನಿವಾರ್ಯವಾಗಿ ವೈರತ್ವವು ಉತ್ಪನ್ನವಾಗುತ್ತಿರುವುದು ।೭೯೨॥

ಪ್ರಾಣಾಹೂನಿ ಪಢಿಯೇ ಮಿತ್ರೂ । ತ್ಯಾಂಸೀ ಧನಲೋಭ ಕರೀ ಶತ್ರೂ । ಧನಲೋಭ ಅತಿಅಪವಿತ್ರೂ । ವೈರೀ ದುಸ್ತರೂ ಜಗೀ ಹಾ ।೯೩॥ ಬಂಧುಕಲಹೇ ಧನ ವಾಂಟಿತಾ । ಅಧಿಕ ನ ಯೇ ಆಪುಲ್ಯಾ ಹಾತಾ । ತೇ ವಾಂಟಾ ಕರಿತೀ ಜೇ ಧರ್ಮತಾ । ತ್ಯಾ ಸಾಧೂಂಸೀ ತತ್ತ್ವತಾ ವೈರ ಚಾಳೀ ।೯೪॥ ಜಿಚೇ ಉದರೀ ಜನ್ಮಲಾ ಆಪಣ । ಜಿಚೇ ಸದಾ ಕೇಲೇ ಸ್ತನಪಾನ । ತೇ ಮಾತೇಸೀ ಧನಲೋಭೇ ಜಾಣ । ವೈರ ಸಂಪೂರ್ಣ ಚಾಲವೀ ।೯೫॥ ಆಪಲೀ ಜೇ ಕಾ ನಿಜಜನನೀ । ಅರ್ಥ ತೀತೇ ಕರೀ ವೈರಿಣೀ । ಬಾಹೇರ ಘಾಲೀ ಘರಾಂತೂನೀ । ಮುಖ ಪರತೋನೀ ಪಾಹೇನಾ ॥೯೬॥ ಜ್ಯಾಚೇನಿ ತುಟೇ ಭವಬಂಧನ । ಜ್ಯಾಚೇನಿ ಬೋಲೇ ಹೋಈಜೇ ಪಾವನ । ತ್ಯಾ ಸದ್ಗುರೂಸೀ ಅಬೋಲಾ ಜಾಣ । ಧನಾಭಿಮಾನ ಧರವಿತ ।೯೭॥ ಧನಾಭಿಮಾನಾಚಾ ಬಡಿವಾರ । ಸದ್ಗುರೂಮಾಜೀ ಪಾಡೀ ವೈರ । ಧನಾಭಿಮಾನೀ ಅಣುಮಾತ್ರ । ನವ್ಹೇ ನಿರ್ವೈರ ಕೋಣಾಸೀ ।೯೮॥ ಜೇ ಹೇ ಸಾಂಗೀತಲೇ ನಿರೂಪಣ । ತ್ಯಾ ನಾಂವ ವೈರ ಸಂಪೂರ್ಣ । ಹೇ ದಹಾವೇ ಅನರ್ಥಲಕ್ಷಣ । ಅವಿಶ್ವಾಸೀ ಧನ ತೇ ಐಕ ।೯೯॥ ಧನಾಭಿಮಾನಾಚಾ ವಿಲಾಸ । ನ ಮಾನೀ ಪಿತ್ಯಾಚಾ ವಿಶ್ವಾಸ । ಪೂರ್ಣ ಬಂಧೂಚಾ ಅವಿಶ್ವಾಸ । ಕೇವೀ ಸುಹೃದಾಂಸ ಪಾತೇಜೇ ।೧೦೦॥ ''ಆತ್ಮಾ ವೈ ಪುತ್ರನಾಮಾಸಿ'' । ಜೋ ಸಾಚಾರ ಧಣೀ ಸರ್ವಸ್ವಾಸೀ । ತ್ಯಾ ಪಾತೇಜೇನಾ ನಿಜಪುತ್ರಾಸೀ । ಅತಿಅವಿಶ್ವಾಸೀ ಧನಲೋಭ ।೧೦೧॥ ಧರ್ಮ ಅರ್ಥಕಾಮ ಸಂಪೂರ್ಣ । ತ್ರಿಸತ್ಯ ಸತ್ಯ ಹೇ ವಚನ । ಪೂರ್ವಜಾಂಚೀ ಭಾಕ ನಿರ್ವಾಣ । ದೇಊನಿ ಆಪಣ ಜೇ ಪರಣೀ ।೧೦೨॥ ಜಿಣೇ ಜೀವೂ ಪ್ರಾಣ ಸರ್ವಸ್ವೇಸೀ । ಸಾಚಾರ ಅರ್ಪಿಲಾ ಭ್ರಾತಾರಾಸೀ । ಐಶಿಯೇಹೀ ಧರ್ಮಪತ್ನೀಸೀ । ಅವಿಶ್ವಾಸೀ ಧನಲೋಭ ।೧೦೩॥ ಜೇ ಉದರೀ ವಾಹೇ ನವಮಾಸೀ । ಜೇ ಸರ್ವದಾ ವಿಷ್ಠಾಮೂತ್ರ ಸೋಶೀ । ಧನಲೋಭಾಚೀ ಜಾತೀ ಕೈಶೀ । ತೇಹೀ ಮಾತೇಸೀ ನ ವಿಶ್ವಾಸೇ ।೧೦೪॥

ಯಾವನು ತನ್ನ ಪ್ರಾಣಕ್ಕಿಂತಲೂ ಪ್ರಿಯನಾಗಿರುವ ಮಿತ್ರನಿದ್ದು, ಅವನೂ ಕೂಡ ಧನಲೋಭದಿಂದ ಶತ್ರೂ ಆಗುವನು. ಈ ಧನಲೋಭವು ಅತ್ಯಂತ ಅಮಂಗಲಕರ ಮತ್ತು ದುಸ್ತರವಾದ ವೈರಿಯಾಗಿರುವುದು ।೯೩॥ ಅಣ್ಣತಮ್ಮಂದಿರಲ್ಲಿ ತಮ್ಮ ಆಸ್ತಿಯ ಪಾಲು ಮಾಡುತ್ತಿರಲು ಆಗ ಕಲಹವು ನಿರ್ಮಾಣವಾಗುವುದು. ಆಗ ಈ ದ್ರವ್ಯದ ವಿಭಾಗವನ್ನು ನ್ಯಾಯಸಮ್ಮತವಾಗಿ ಮಾಡಿಕೊಡುವ ಧರ್ಮಿಷ್ಠ ಮನುಷ್ಯನಿಗೆ ಒಂದು ಕಾಸೂ ಕೂಡ ಲಾಭವಾಗುವುದಿಲ್ಲ. ಆದರೆ ಆ ಸಜ್ಜನ ಸಾಧು ಮನುಷ್ಯನು ಹೀಗೆ ನಿಃಪ್ಪಕ್ಷಪಾತವಾಗಿ ವಿಭಾಗ ಮಾಡಿದ್ದಕ್ಕಾಗಿ ಆತನಲ್ಲಿಯೂ ವೈರವನ್ನು ಧನಲೋಭಿಯು ಮಾಡುವನು ।೯೪॥

ಯಾರ ಹೊಟ್ಟೆಯಲ್ಲಿ ಹುಟ್ಟಿಬಂದು ಯಾರ ಸ್ತನಪಾನದಿಂದ ಪೋಷಣೆಯಾದನೋ, ಅಂತಹ ತಾಯಿಯಲ್ಲಿ ಧನಲೋಭದಿಂದ ಇವನು ವೈರವನ್ನು ಮಾಡುವನು ।೯೫॥ ತನಗೆ ಜನ್ಮವನ್ನು ಕೊಟ್ಟ ಪ್ರತ್ಯಕ್ಷ ತಾಯಿಯನ್ನೇ ಈ ಧನವು ವೈರಿಣಿಯನ್ನಾಗಿ ಮಾಡುವುದು. ಆಕೆಯನ್ನು ತನ್ನ ಮನೆಯಿಂದ ಹೊರದಬ್ಬುವನು. ಪುನಃ ತನ್ನ ತಾಯಿಯ ಮುಖವನ್ನೂ ಕೂಡ ನೋಡಲಾರನು ।೯೬॥ ಯಾರ ಪ್ರಭಾವದಿಂದ ಈ ಸಂಸಾರದ ಬಂಧನವು ಬಿಡುಗಡೆಯಾಗುವುದೋ, ಯಾರಿಂದ ನಾವು ಪಾವನರಾಗುವೆವೋ, ಅಂತಹ ಸದ್ಗುರುವಿನ ಜೊತೆಯಲ್ಲಿ ಈ ಯಾವ ಧನಲೋಭವು ಮಾತನಾಡಿಸದಂತೆ ಮಾಡಿಬಿಡುವುದು ।೯೭॥ ಧನದ ಅಭಿಮಾನವು ಎಷ್ಟೊಂದು ಪ್ರಬಲವಾಗಿದೆಯೆಂದರೆ, ಅದು ಸದ್ಗುರುಗಳ ಜೊತೆಯಲ್ಲಿ ವೈರತ್ವವನ್ನು ನಿರ್ಮಾಣಗೊಳಿಸುವುದು. ಧನದ ಅಭಿಮಾನವು ಯಾರನ್ನೂ ನಿರ್ವೈರನ್ನಾಗಿ ಇಡುವುದಿಲ್ಲ. ।೯೮॥ ಈಗ ಇಲ್ಲಿಯವರೆಗೆ ನಿರೂಪಣೆಯನ್ನು ಮಾಡಿದ ನಾಮವೇ ಪೂರ್ಣವಾಗಿರುವ ವೈರತ್ವವಾಗಿದೆ. ಇದು ಹತ್ತನೆಯ ಅನರ್ಥದ ಲಕ್ಷಣವಾಗಿದೆ ಈಗ ಧನವು ಅವಿಶ್ವಾಸೀಯಾಗಿ ಹೇಗೆ ಇರುವ ವಿಷಯವನ್ನು ಕುರಿತು, ಕೇಳು ।೯೯॥ ಧನದ ಅಭಿಮಾನವು ಎಷ್ಟೊಂದು ಹೀನಾವಸ್ಥೆಯಾಗಿದೆ ಎಂದರೆ ಅದು ತನ್ನ ತಂದೆಯಲ್ಲಿಯೂ ಕೂಡ ವಿಶ್ವಾಸವನ್ನು ಇಟ್ಟುಕೊಡುವುದಿಲ್ಲ. ತನ್ನ ಅಣ್ಣತಮ್ಮಂದಿರಲ್ಲಿಯೂ ಪರಿಪೂರ್ಣವಾಗಿ ಅವಿಶ್ವಾಸವನ್ನು ಮಾಡುವನು. ಅಂದಮೇಲೆ ಇತರಬಂಧುಬಳಗದವರ ಮೇಲೆ ಇವನು ಹೇಗೆ ಭರವಸೆಯನ್ನಿಡುವನು ? ।೧೦೦॥ ''ಆತ್ಮಾ ವೈ ಪುತ್ರನಾಮಾಸೀ'' ಅಂದರೆ ಪುತ್ರನು ಪ್ರತ್ಯಕ್ಷವಾಗಿ ತನ್ನ ಆತ್ಮವೇ ಆಗಿರುವನು ಎಂದು ಶ್ರುತಿಯು ಸಾರೀ ಹೇಳಿರುವುದು. ಹೀಗಿರುವ ಯಾವ ಪುತ್ರನು ನಿಜವಾಗಿಯೂ ತನ್ನ ಸರ್ವಸ್ವದ ಧಣೀಯಾಗಿರುವನು. ಇಂತಹ ತನ್ನ ಪುತ್ರನಮೇಲೆ ವಿಶ್ವಾಸವನ್ನಿಡುವುದಿಲ್ಲ. ಧನಲೋಭವು ಹೀಗೆ ಅತ್ಯಂತ ಅವಿಶ್ವಾಸಿಯಾಗಿರುವುದು ।೧೦೧॥ ಧರ್ಮೇಚ, ಅರ್ಥೇಚ, ಕಾಮೇಚ ಹೀಗೆ ಪರಿಪೂರ್ಣವಾಗಿ ನನ್ನ ಸ್ವಾಧೀನಳು ಎಂದು ವಿವಾಹಸಮಯದಲ್ಲಿ ಇದು ತ್ರಿವಾರ ಸತ್ಯವು ಎಂದು ಶಪಥ ಮಾಡಿರುವನು ಮತ್ತು ಇದರ ವಿಶ್ವಾಸಕ್ಕಾಗಿ ಪೂರ್ವಜರ ಸಾಕ್ಷಿಯನ್ನು ಕೊಟ್ಟು ತಾನು ಆಕೆಯಲ್ಲಿ ಲಗ್ನವನ್ನು ಮಾಡಿಕೊಂಡಿರುವನು ।೧೦೨॥ ಈಕೆಯಾದರೂ ಎಲ್ಲದೃಷ್ಟಿಯಿಂದ ತನ್ನ ಜೀವ ಪ್ರಾಣವನ್ನು ತನ್ನ ಪತಿಗೆ ಅರ್ಪಣೆಯನ್ನು ಮಾಡಿರುವಳು. ಇಂತಹ ಧರ್ಮಪತ್ನಿಯಲ್ಲಿಯೂ ಕೂಡ ಧನಲೋಭವು ಅವಿಶ್ವಾಸವನ್ನು ಪ್ರಕಟಗೊಳಿಸುತ್ತಿರುವುದು ।೧೦೩॥ ಈ ಧನಲೋಭದ ಜಾತಿಯು ಹೇಗೆ ಇದೆ ಎಂಬುವುದನ್ನು ಕೇಳಿರಿ, ಯಾರು ಒಂಬತ್ತು ತಿಂಗಳ ತನ್ನ ಹೊಟ್ಟೆಯಲ್ಲಿ ಹೊತ್ತುಕೊಂಡಿರುವ, ಸತತವಾಗಿ ಮಲಮೂತ್ರಗಳನ್ನು ಬಳಿಯುವ ಕಷ್ಟವನ್ನು ಸೋಸಿರುವ, ಅಂತಹ ತನ್ನ ತಾಯಿಯಲ್ಲಿಯೂ ಕೂಡ ಇವನು ಅವಿಶ್ವಾಸವನ್ನು ಇಡುವನು ।೧೦೪॥

ಧನಾಭಿಮಾನ ಯೇ ಜಯಾಪಾಶೀ । ತೋ ವಿಶ್ವಾಸೇನಾ ಸದ್ಗುರೂಸೀ । ಇತರಾಂಚಿ ಕಥಾ ಕಾಯಸೀ । ಪೂರ್ಣ ಅವಿಶ್ವಾಸೀ ಧನಮಾನೀ ।೩೦೫॥ ಅವಿಶ್ವಾಸಾಚೇ ಮುಖ್ಯ ಕಾರಣ । ಧನ ಆಣಿ ದುಸರೀ ಸ್ತ್ರೀ ಜಾಣ । ತೇಥ ಮೋಹಾವಲೇ ಜ್ಯಾಚೇ ಮನ । ತೋ ಅತಿಸಂಪನ್ನ ಅವಿಶ್ವಾಸೇ ।೩೦೬॥ ಜೋ ಧನಮಾನೀ ಆಣಿ ಸ್ತ್ರೀಜಿತ । ತ್ಯಾಸೀ ವಿಮುಖ ಹೋಯ ಹೃದಯಸ್ಥ । ತ್ಯಾತೇ ಸದ್ಗುರೂಹೀ ಉಪೇಕ್ಷಿತ । ಪರಮ ಅನರ್ಥ ಅವಿಶ್ವಾಸೇ ।೩೦೭॥ ಸಕಳ ದೋಷಾ ಮುಕುಟಮಣೀ । ಅವಿಶ್ವಾಸ ಬೋಲಿಲಾ ಪುರಾಣೀ । ಜೋ ಪ್ರಕಟತಾ ಅರ್ಧಕ್ಷಣೀ । ಕರೀ ಧುಳದಾಣೀ ವೃತ್ತೀಚೀ ।೩೦೮॥ ಅವಿಶ್ವಾಸಾ ಅಭಿಮಾನ ಭೇಟೇ । ತೈ ಮುಕ್ತಾಚೀ ಮುಕ್ತತಾ ತುಟೇ । ಮಗ ವಿಕಲ್ಪಾಚೇನಿ ನೇಟೇ । ಘಾಲೀ ಉಫರಾಟೇ ದೇಹಬಂದೀ ।೩೦೯॥ ಅವಿಶ್ವಾಸೇ ಕವಳಿಲ್ಯಾ ಚಿತ್ತಾ । ಅಭಿಮಾನೇ ಮ್ಹಣೇ ಮೀ ಜ್ಞಾತಾ । ತೇವ್ಹಾ ಉಭಉಭ್ಯಾ ಪಳೇ ಆಸ್ತಿಕತಾ । ದೇಖೇ ನಾಸ್ತಿಕತಾ ಸರ್ವತ್ರ ।೩೧೦॥ ಅವಿಶ್ವಾಸ ಯೇತಾ ಪಹಾ ಹೋ । ಸಕುಟುಂಬ ಪಳೇ ಸದ್ಭಾವೋ । ಮಗ ಲೋಕತ್ರಯೀ ಅಭಾವೋ । ನಾಂದವೀ ನಿರ್ವಾಹೋ ವಿಕಲ್ಪೇಕರೂನೀ ।೩೧೧॥ ವಾಡೇಕೋಡೇ ಅವಿಶ್ವಾಸೀ । ವಿಕಲ್ಪೂ ನಾಂದೇ ಅಹರ್ನಿಶೀ । ಜೇಥ ರಿಗಾವ ಅವಿಶ್ವಾಸಾಸೀ । ವಿಕಲ್ಪ ತ್ಯಾಸೀ ನಾಗವೀ ।೩೧೨॥ ಅಂಗೋವಾಂಗೀ ಅವಿಶ್ವಾಸ । ಪರಮಾರ್ಥ ರಾಷ್ಟ್ರ ಪಾಡೀ ವೋಸ । ಸದ್ಗುರೂಚೇಹೀ ದಾವೀ ದೋಷ । ನ ಮನೀ ವಿಶ್ವಾಸ ಬ್ರಹ್ಮಾಚಾ ।೩೧೩॥ ಯಾಲಾಗೀ ಸಕಳ ದೋಷಾಂಚಾ ರಾಜಾ । ಅವಿಶ್ವಾಸಾಹೂನಿ ನಾಹೀ ದುಜಾ । ತೋ ರಿಗೋನಿಯಾ ನಿಜಪೈಜಾ । ವಿಭಾಂಡೀ ವೋಜಾ ಮಹಾಸಿದ್ಧಿ ।೩೧೪॥ ಜಿಕಡೇ ಅವಿಶ್ವಾಸೇ ಚಾಲೀ ಕೇಲೀ । ತಿಕಡೇ ಪರಮಾರ್ಥ ಪಳಣೇ ಝಾಲೀ । ವಿಕಲ್ಪಾಚೀ ಧಾಡೀ ಆಲೀ । ತೇ ಸಂಧೀ ನಾಗವಲೀ ಬಹುತೇಕೇ ।೩೧೫॥ ಸಿದ್ಧಾಂಚೇ ಗೇಲೇ ಸಿದ್ಧಿ ಭೂಷಣ । ಸಾಧಕೇ ಸಪಾಈ ನಾಗವಲೀ ಜಾಣ । ರಾನಭರೀ ಝಾಲೇ ಸಾಧಾರಣ । ಶ್ರದ್ಧೇಚೇ ಉದ್ಯಾನ ಭೇದಿಲೇ ।೩೧೬॥ ಯಮನಿಯಮಾಂಚೀ ನಗರೇ ಜಾಳೀ । ಕ್ರೋಧೂ ತಾಪಸಾ ಕರೀ ಹೋಳೀ । ಮೋಕ್ಷ ಫಳೇ ಸಫಳಿತಾ ಕೇಳೀ । ಸಮೂಳ ಉನ್ಮಳೀ ಮೋಹಗಜೂ ।೩೧೭॥ ಶಮದಮಾಚೇ ಘರಟೇ । ಖಾಣೋನಿ ಸಾಂಡಿಲೇ ಆವ್ಹಾಂಟೇ । ವೋಸ ವಿವೇಕಾಚೇ ಚೋಹಟೇ । ಕೋಣೀ ತೇ ವಾಟೇ ವಾಗೇನಾ ।೩೧೮॥

ಯಾವನಿಗೆ ದ್ರವ್ಯದ ಅಭಿಮಾನವು ಅತಿಶಯವಾಗಿ ಬೆಳೆದಿರುವುದೋ, ಅವನು ಸದ್ಗುರುವಿನಲ್ಲಿಯೂ ವಿಶ್ವಾಸವನ್ನಿಡುವುದಿಲ್ಲ. ಅಂದಮೇಲೆ ಇತರರ ಯಾವ ಕಥೆ ? ।೩೦೫॥ ಅವಿಶ್ವಾಸದ ಮುಖ್ಯ ಕಾರಣವೇ ಒಂದು ಧನವಾಗಿರುವುದು. ಇನ್ನೊಂದು ಸ್ತ್ರೀಯಾಗಿರುವುದು. ಇದನ್ನು ಲಕ್ಷದಲ್ಲಿಡು. ಅಲ್ಲಿ ಮೋಹಿಸಿರುವ ಮನಕ್ಕೆ ಅವಿಶ್ವಾಸವು ನಿರ್ಮಾಣವಾಗುವುದು ।೩೦೬॥ ಧನದ ಗರ್ವಿಷ್ಠನು, ಸ್ತ್ರೀಲಂಪಟನು ಇವನು ತನ್ನ ಹೃದಯಸ್ಥ ಪರಮಾತ್ಮನಿಂದ ದೂರಾಗುವನು. ಸದ್ಗುರುಗಳು ಇವನ ಉಪೇಕ್ಷೆ ಮಾಡುವರು. ಅವಿಶ್ವಾಸದಿಂದ ಇಂತಹ ಅನರ್ಥವಾಗುವುದು ।೩೦೭॥ ಪುರಾಣದಲ್ಲಿಯೂ ಕೂಡ ಅವಿಶ್ವಾಸವು ಸರ್ವ ದೋಷಗಳ ಮುಕುಟಮಣಿ ಎಂದು ವರ್ಣಿಸಿರುವುದು. ಅವಿಶ್ವಾಸ ಹುಟ್ಟುತ್ತಲೇ ಅರ್ಧಕ್ಷಣದಲ್ಲಿ ವೃತ್ತಿಯು ಹಾಳಾಗಿಬಿಡುವುದು ।೩೦೮॥ ಅವಿಶ್ವಾಸಕ್ಕೆ ಅಭಿಮಾನವು ಜೊತೆಯಾಗಲು ಮುಕ್ತನ ಮುಕ್ತತೆಯು ಮುರಿದು ಹೋಗುವುದು. ಅದು ತನ್ನ ವಿಕಲ್ಪದ ಬಲದಿಂದ ಅವನಿಗೆ ದೇಹದ ಬಂಧನದಲ್ಲಿ ಒಗೆಯುವುದು ।೩೦೯॥

ಚಿತ್ತದಲ್ಲಿ ಅವಿಶ್ವಾಸವು ಹರಡಲು, ಆಗ ಅವನು ನಾನೊಬ್ಬ ಜ್ಞಾನಿಯಾಗಿರುವೆ ಎಂದು ದೊಡ್ಡ ಅಭಿಮಾನದಿಂದ ಹೇಳುತ್ತಿರುವನು. ಆಗ ಆಸ್ತಿಕಭಾವವು ಇಲ್ಲದಾಗುವುದು ಮತ್ತು ನಾಸ್ತಿಕಭಾವವು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತ ಸಾಗುವುದು ।೩೧೦॥ ಅವಿಶ್ವಾಸವು ನಿರ್ಮಾಣವಾಗುತ್ತಲೇ ಸದ್‌ಭಾವವು ಇದು ತನ್ನ ಕುಟುಂಬಸಮೇತವಾಗಿ ಓಡಿಹೋಗುವುದು. ಹಾಗೆಯೇ ಸಂಪೂರ್ಣ ತ್ರಿಭುವನದಲ್ಲಿ ಸದ್ಭಾವದ ಕೊರತೆಯಾಗುವುದು. ಅವಿಶ್ವಾಸವು ವಿಕಲ್ಪದಯೋಗದಿಂದ ಸರ್ವ ವ್ಯವಹಾರವನ್ನು ಮಾಡುತ್ತಿರುವುದು ।೩೧೧॥ ಅವಿಶ್ವಾಸದ ಸ್ಥಾನದಲ್ಲಿ ವಿಕಲ್ಪವು ಹಗಲು ರಾತ್ರಿ ಬಹಳ ಸುಖದಿಂದ ಇರುವುದು. ಎಲ್ಲಿ ಅವಿಶ್ವಾಸದ ಪ್ರವೇಶವಾಗುವುದೋ ಅಲ್ಲಿ ವಿಕಲ್ಪದಿಂದ ಮೋಸವಾಗುತ್ತಿರುವುದು ।೩೧೨॥ ಶರೀರದ ರೋಮರೋಮಗಳಲ್ಲಿ ಅವಿಶ್ವಾಸವು ತುಂಬಿಕೊಳ್ಳಲು ಆಗ ಪರಮಾರ್ಥದ ರಾಜ್ಯವು ಹಾಳುಬೀಳುವುದು. ಇವನು ಸದ್ಗುರುಗಳಿಗೂ ದೋಷ ಹಚ್ಚುವನು. ಪ್ರತ್ಯಕ್ಷ ಬ್ರಹ್ಮದೇವನಲ್ಲಿಯೂ ಕೂಡ ವಿಶ್ವಾಸವನ್ನು ಇಡಲಾರನು. ।೩೧೩॥ ಆದ್ದರಿಂದ ಸರ್ವ ದೋಷಗಳ ರಾಜನು ಅವಿಶ್ವಾಸವಾಗಿರುವುದು. ಇವನಂತೆ ಅನ್ಯರು ಯಾರೂ ಇರುವುದಿಲ್ಲ. ಇವನು ಸ್ವತಃ ಜಿದ್ದಿನಿಂದ ಸಿದ್ಧಿಗಳ ಪರಿಪೂರ್ಣವಾಗಿ ನಾಶಮಾಡಿಬಿಡುವನು ।೩೧೪॥ ಅವಿಶ್ವಾಸವು ಎಲ್ಲಿ ಹಲ್ಲೆ ಮಾಡುವುದೋ ಅಲ್ಲಿನ ಪರಮಾರ್ಥವು ನಾಶವಾಗಿಬಿಡುವುದು. ವಿಕಲ್ಪವು ಮುತ್ತಿಗೆ ಹಾಕಲು, ಆಗ ಆ ಸಮಯ ಸಂಧಿಯು ವ್ಯರ್ಥವಾಗಿ ಹೋಗುವುದೆಂದು ತಿಳಿ ।೩೧೫॥ ಸಿದ್ಧಪುರುಷರ ಸಿದ್ಧಿರೂಪ ಭೂಷಣವು ಮಾಯವಾಗಿಬಿಡುವುದು. ಪಾಪ! ಸಾಧಕರು ಮುಳುಗಿ ಹೋಗುವರು. ಸಾಮಾನ್ಯ ಜನರು ಮಾತ್ರ ದಿಕ್ಕೆಟ್ಟು ಅರಣ್ಯದತ್ತ ಓಡಿಹೋಗುವರು. ಶ್ರದ್ಧೆಯ ಸರ್ವ ಉಪಾಯಗಳು ಭೇದಿಸಲ್ಪಡುವುವು ।೩೧೬॥ ಯಾವ ಈ ಕ್ರೋಧವು ಯಮನಿಯಮಗಳ ಪಟ್ಟಣಗಳನ್ನು ಸುಟ್ಟು ಭಸ್ಮ ಮಾಡಿಬಿಡುವುದು. ಮತ್ತು ತಪಸ್ವೀ ಜನರನ್ನು ಹೋಳೀ ಮಾಡುವುದು. ಮೋಹರೂಪ ಆನೆಯು ಮೋಕ್ಷರೂಪ ಫಲಗಳಿಂದ ತುಂಬಿರುವ ಬಾಳೆಯ ಗಿಡವನ್ನು ಬೇರು ಸಮೇತವಾಗಿ ಕಿತ್ತೊಗೆಯುವುದು ।೩೧೭॥ ಶಮದಮಗಳ ಗೂಡುಗಳನ್ನು ಮುರಿದು ಬಿಡುವುದು ಮತ್ತು ಅಡ್ಡ ದಾರಿಯಲ್ಲಿ ಅದನ್ನು ಒಗೆದುಬಿಡುವುದು. ವಿವೇಕದ ನಾಲ್ಕು ದಾರಿಯಲ್ಲಿನ ಚಾವಡಿಯು ಖಾಲೀ ಬೀಳುವುದು. ಆ ಮಾರ್ಗದತ್ತ ಯಾರೂ ಹೆಜ್ಜೆಯನ್ನಿಡುವುದಿಲ್ಲ ।೩೧೮॥

ವ್ರತೋಪವಾಸ ಯಾಂಚೀ ಸಾಜಿರೀ । ನಿಷ್ಕಾಮ ಉಪವನೇ ಚೌಫೇರೀ । ತೀ ಜಾಳಿಲೀ ಉಪರಾಉಪರೀ । ನಾನಾಪರೀ ವಿಕಲ್ಪೇ ॥೩೧೯॥ ಐಶಿಯಾ ಅವಿಶ್ವಾಸೀ । ಜ್ಞಾನಾಭಿಮಾನೀ ಆಲೇ ಭೇಟೀಸಿ । ವಿಕಲ್ಪೇ ಅಭಯ ದೇಊನಿ ತ್ಯಾಂಸೀ । ಆಪಣೆಯಾಪಾಶೀ ರಾಹವಿಲೇ ॥೩೨೦॥ ಐಶಿಯಾ ಅವಿಶ್ವಾಸಾಪುಢೇ । ಪರಮಾರ್ಥ ಕಾಯಿಸೇ ಬಾಪುಡೇ । ವಿಕಲ್ಪಾಚೇ ಬಳ ಗಾಢೇ । ತೋ ಕರೀ ಕುಡೇ ತತ್ಕಾಳ ॥೩೨೧॥ ಪೋಟಾಂತೂನ ಜೋ ಅವಿಶ್ವಾಸೀ । ತೋ ಸದಾ ದೇಖೇ ಗುಣದೋಷಾಂಸೀ । ಅಖಂಡ ದ್ವೇಷೀ ಪರಮಾರ್ಥಾಸೀ । ಹಾ ತ್ಯಾಪಾಶೀ ಸ್ವಭಾವೋ ॥೩೨೨॥ ಯಾಪರೀ ಅವಿಶ್ವಾಸೀ । ಬದ್ಧವೈರ ಪಡೇ ಪರಮಾರ್ಥಾಸೀ । ಯಾಲಾಗೀ ಜೋ ಪೋಟೀಂಚಾ ಅವಿಶ್ವಾಸೀ । ಹಾಂಸಲ್ಯಾಹೀ ತ್ಯಾಪಾಶೀ ನ ವಚಾವೇ ದೀನೀ ॥೩೨೩॥ ಸಕಳ ದೋಷಾಮಾಜೀ ಸಮರ್ಥ । ಸಕಳ ದೋಷಾಂಚೇ ರಾಜತ್ವ ಪ್ರಾಪ್ತ । ತೋ ಹಾ ಅಕರಾವಾ ಅನರ್ಥ। ಅಸೇ ನಾಂದತ ಧನಾಮಾಜೀ ॥೩೨೪॥ ಅಕರಾಹೀ ಇಂದ್ರಿಯಾಂಸೀ । ಪೂರ್ಣ ಕರೀ ಅವಿಶ್ವಾಸೇಸೀ । ಯಾಲಾಗೀ ಅಕರಾವೇ ಸ್ಥಾನ ಯಾಸೀ । ವಸ್ತಿ ಅವಿಶ್ವಾಸಾಸೀ । ಮನಾಮಾಜೀ ॥೩೨೫॥ ಮುಖ್ಯತ್ವೇ ಸ್ಪರ್ಧೇಚೇ ಆಯತನ । ಬಹುವಿದ್ಯಾ ಕಾ ಬಹುಧನ । ಹೇಚಿಸ್ಪರ್ಧೆಚೇ ಜನ್ಮಸ್ಥಾನ । ಯೇಥೂನಿ ಜಾಣ ತೇ ವಾಢೇ ॥೩೨೬॥ ವಿದ್ಯಾ ಝಾಲಿಯಾ ಸಂಪನ್ನ । ಪಂಡಿತಪಂಡಿತಾ ಹೇಳಣ । ಮುಖ್ಯ ಗುರೂಶೀ ಸ್ಪರ್ಧಾ ಕರೀ ಜಾಣ । ಹೇ ಸ್ಪರ್ಧಾಲಕ್ಷಣ ವಿದ್ಯೇಚೇ ॥೩೨೭॥ ಗಾಂಠೀ ಝಾಲಿಯಾ ಧನ । ಸ್ಪರ್ಧಾ ಖವಳೇ ದಾರುಣ । ಕುಬೇರಪರಧನೇ ಸಂಪನ್ನ । ಮೀ ಸ್ವಸತ್ತಾ ಜಾಣ ಧನಾಢ್ಯ ॥೩೨೮॥ ಮಾಝಿಯಾ ನಿಜಧನಾಪುಢೇ । ಗಣಿತಾ ಅಲ್ಪ ಗಂಗೇಚೇ ಖಡೇ । ಮಾಝಿಯೇ ಧನಾಚೇನಿ ಪಡಿಪಾಡೇ । ಕೋಣ ಬಾಪುಡೇ ಉಭೇ ರಾಹೇ ॥೩೨೯॥ ಮಗ ಜೇ ಜೇ ದೇಖೇ ಧನವಂತ । ತೇ ತೇ ಹೇಳೂನಿ ಸಾಂಡೀ ತೇಥ । ಯಾಪರೀ ಸ್ಪರ್ಧಾ ಅದ್ಭುತ । ಧರೂನಿ ಅರ್ಥ ಉಲ್ಹಾಸೇ ॥೩೩೦॥ ಏವಂ ಧರೂನಿಯಾ ಅರ್ಥ । ಸ್ಪರ್ಧಾ ಬಾರಾವಾ ಅನರ್ಥ । ಸದಾ ನಾಂದೇ ಧನಾ ಆಂತ । ತೋ ಹಾ ವೃತ್ತಾಂತ ಸಾಂಗೀತಲಾ ॥೩೩೧॥ ಆತಾ ತೀನ ಅರ್ಥಚಾ ಮೇಳಾ । ಏಕೇ ಪದೀ ಝಾಲಾ ಗೋಳಾ । ತೋಹೀ ನಾಂದೇ ಧನಾ ಜವಳಾ । ಐಕ ವೇಗಳಾ ವಿಭಾಗ ॥೩೩೨॥

ಎಲ್ಲಾ ಕಡೆಯಲ್ಲಿ ವ್ರತ, ಉಪವಾಸಗಳ ಸುಂದರ ಉಪವನಗಳಿದ್ದವು. ಇವುಗಳನ್ನು ವಿಕಲ್ಪವು ನೋಡುನೋಡುತ್ತಲೇ ನಾನಾ ಪ್ರಕಾರಗಳಿಂದ ಸುಟ್ಟು ಹಾಕಿತು ॥೩೧೯॥ ಇಂತಹ ಅವಿಶ್ವಾಸಕ್ಕೆ ಜ್ಞಾನಾಭಿಮಾನವು ಭೇಟಿಯಾಗಲು ಆಗ ವಿಕಲ್ಪವು ಅದಕ್ಕೆ ಅಭಯವನ್ನು ಕೊಟ್ಟು ತನ್ನ ಹತ್ತಿರ ಇಟ್ಟುಕೊಳ್ಳುವುದು ॥೩೨೦॥ ಇಂತಹ ವಿಕಲ್ಪದ ಮುಂದೆ ಪರಮಾರ್ಥವು ಎಲ್ಲಿಯದು? ವಿಕಲ್ಪದ ಬಲವು ಬಲು ಭಯಂಕರವಾಗಿರುವುದು. ಅದು ಬಹುಬೇಗ ಅನರ್ಥವನ್ನು ಉಂಟುಮಾಡುವುದು ॥೩೨೧॥ ಯಾರ ಅಂತಃಕರಣದಲ್ಲಿ ಅವಿಶ್ವಾಸವಿರುವುದೋ ಅವನು ಯಾವಾಗಲೂ ಇನ್ನೊಬ್ಬರ ಗುಣದೋಷಗಳನ್ನೇ ನೋಡುತ್ತಿರುವನು. ಪರಮಾರ್ಥದ ಅಖಂಡವಾಗಿ ದ್ವೇಷವನ್ನು ಸಾಧಿಸುವುದೇ ಅವನ ಸ್ವಭಾವವಾಗಿರುವುದು ॥೩೨೨॥ ಈ ಪ್ರಕಾರವಾಗಿ ಅವಿಶ್ವಾಸಿ ಮನುಷ್ಯನು ಪರಮಾರ್ಥದೊಂದಿಗೆ ದೃಢವಾದ ವೈರತ್ವವನ್ನು ಹಿಡಿದುಕೊಂಡಿರುವನು. ಯಾರ ಮನದಲ್ಲಿ ಅವಿಶ್ವಾಸವು ಇರುವುದೋ, ಅವನು ಮೆಲ್ನೋಟಕ್ಕೆ ಎಷ್ಟೇ ಉತ್ತಮ ಮಾತುಗಳನ್ನಾಡುತ್ತ ನಗುನಗುತ್ತ ಬರುತ್ತಿರಲಿ, ಆತನಲ್ಲಿ ಎಂದಿಗೂ ದೀನನಾಗಿ ನಡೆದುಕೊಳ್ಳಬಾರದು ॥೩೨೩॥ ಈ ಪ್ರಕಾರವಾಗಿ ಸರ್ವ ದೋಷಗಳಲ್ಲಿ ಅತ್ಯಂತ ಪ್ರಬಲವಾದ, ಸರ್ವ ದೋಷಗಳ ರಾಜನಾಗಿರುವ, ಇದು ಹನ್ನೊಂದನೆಯ ಅನರ್ಥವು ಧನದ ಹತ್ತಿರ ನಿಶ್ಚಿತವಾಗಿ ವರ್ತಿಸುತ್ತಿರುವುದು ॥೩೨೪॥

ಅವಿಶ್ವಾಸೀ ಮನುಷ್ಯನು ಹನ್ನೊಂದು ಇಂದ್ರಿಯಗಳಿಗೂ ಅವಿಶ್ವಾಸಿಯನ್ನಾಗಿ ಮಾಡುವನು. ಆದ್ದರಿಂದ ಆತನಿಗೆ ಹನ್ನೊಂದನೆಯ ಸ್ಥಾನವನ್ನು ಕೊಟ್ಟಿರುವುದು. ಹನ್ನೊಂದನೆಯವಾದ ಮನವು ಅದರಲ್ಲಿಯೇ ವಸತಿಯಾಗಿರುವುದು ॥೩೨೫॥ ಮುಖ್ಯವಾಗಿ ವಿಪುಲ ಧನ ಮತ್ತು ವಿಪುಲ ವಿದ್ಯೆ ಇವು ಸ್ಪರ್ಧೆಯ ಸ್ಥಾನವಾಗಿರುವುವು. ಈ ಸ್ಪರ್ಧೆಯ ಜನ್ಮಸ್ಥಾನವೂ ಕೂಡ ಇವೇ ಆಗಿರುವುವು. ಇಲ್ಲಿಂದಲೇ ಈ ಸ್ಪರ್ಧೆಯು ಮುನ್ನಡೆಯುವುದು ॥೩೨೬॥ ವಿದ್ಯಾಸಂಪನ್ನತೆಯು ಪ್ರಾಪ್ತವಾಗಲು ಪಂಡಿತ ಪಂಡಿತರಲ್ಲಿ ಪರಸ್ಪರವಾಗಿ ಸ್ಪರ್ಧೆಯು ಆರಂಭವಾಗುವುದು. ಮುಖ್ಯವಾಗಿ ಗುರುಗಳಲ್ಲಿಯೇ ಸ್ಪರ್ಧೆಗೆ ಇಳಿಯುವನು. ಇದುವೇ ವಿದ್ಯೆಯ ಸ್ಪರ್ಧಾಲಕ್ಷಣವಾಗಿದೆ ॥೩೨೭॥ ಒಂದು ವೇಳೆ ಧನಸಂಪನ್ನತೆಯು ಪ್ರಾಪ್ತಿವಾಗಲು ಸ್ಪರ್ಧೆಯು ಭಯಂಕರವಾಗಿ ಉಗ್ರಗೊಳ್ಳುವುದು. ಆಗ ಅವನು ಹೀಗೆ ಹೇಳುವನು, ಕುಬೇರನು ಬೇರೆಯವರ ಧನದಿಂದ ಶ್ರೀಮಂತನಾಗಿರುವನು. ಆದರೆ ನಾನು ನನ್ನ ಸ್ವತಃದ ಧನದಿಂದ ಧನಾಢ್ಯ ಶ್ರೀಮಂತನಾಗಿರುವೆನು ॥೩೨೮॥ ಗಂಗಾನದಿ ದಂಡೆಯು ಮೇಲಿನ ಹರಳುಗಳನ್ನು ಎಣಿಸಿದರೆ ಅವು ನನ್ನ ಸ್ವಂತ ಧನಕ್ಕಿಂತಲೂ ಕಡಿಮೆಯಾಗುವುವು. ನನ್ನ ಸಂಪತ್ತಿನ ಎದುರಿನಲ್ಲಿ ನಿಲ್ಲುವವರು ಬೇರೆ ಯಾರು ಇದ್ದಾರೆ? ॥೩೨೯॥ ಶ್ರೀಮಂತರಾದ ಬೇರೆ ಯಾರನ್ನೇ ಕಾಣಲಿ ಅವರನ್ನು ಇವನು ಅಲ್ಲಿಯೇ ಅವಹೇಳನ ಮಾಡಿಬಿಡುವನು. ಈ ಪ್ರಕಾರವಾಗಿ ಧನದ ಆಶ್ರಯವನ್ನು ಪಡೆದು ಅದ್ಭುತವಾದ ಸ್ಪರ್ಧೆಗಳನ್ನು ಉಲ್ಹಾಸಭರಿತನಾಗಿ ಮಾಡುತ್ತಿರುವನು ॥೩೩೦॥ ಈ ಪ್ರಕಾರವಾಗಿ ಧನವನ್ನು ಕೂಡಿಸಿ ಇಡಲು ಸ್ಪರ್ಧೆಯು ಹನ್ನೆರಡನೆಯ ಅನರ್ಥವಾಗಿ ಅರ್ಥದ ಹತ್ತಿರ ಸತತವಾಗಿ ಇರುವುದು. ಇದರ ಎಲ್ಲ ವೃತ್ತಾಂತವನ್ನು ನಾನು ನಿನಗೆ ಹೇಳಿದೆನು ॥೩೩೧॥ ಈಗ ಒಂದೇ ಶಬ್ದದಲ್ಲಿ ಅಂದರೆ ''ವ್ಯಸನಾನೀ'' ಎಂಬ ಈ ಪದದಲ್ಲಿ ಮೂರು ಅನರ್ಥಗಳ ಸಮೂಹವು ಒಂದಾಗಿ ಸೇರಿಕೊಂಡಿರುವುದು. ಇದು ಧನದ ಹತ್ತಿರ ವರ್ತಿಸುತ್ತಿರುವುದು. ಇದರ ಭಿನ್ನ ಭಿನ್ನವಾದ ಪ್ರಕಾರಗಳನ್ನು ಹೇಳುವೆನು, ಅದನ್ನು ಕೇಳು ॥೩೩೨॥

ಸ್ತ್ರೀ ದ್ಯೂತ ಆಣಿ ಮದ್ಯಪಾನ । ಯಾ ತಿಹೀತೇ ವಾಢವೀ ಧನ । ಹೇ ತೀನ ಅನರ್ಥ ದಾರುಣ । ಧನವಂತಾ ಪೂರ್ಣ ಆದಳತೀ ।೩೩೩॥ ಜೋ ಕಾ ಪುರುಷ ನಿರ್ಧನ । ತೋ ಸ್ತ್ರಿಯೇಸ ಜಡಿಸಾಸಮಾನ । ದೇಖೋನಿ ನಿರ್ಧನಾಚೇ ವದನ । ಪ್ರತ್ಯಕ್ಷ ಜಾಣ ಸ್ತ್ರೀ ಥುಂಕೀ ।೩೩೪॥ ಧನಹೀನ ಪುರುಷಾಚೇ ಘರೀ । ಕಲಹೋ ಸ್ತ್ರೀ ಪುರುಷಾಮಾಝಾರೀ । ನಿರ್ಭರ್ಸ್ತೂನಿ ನಾನಾಪರೀ । ದವಡೀ ಘರಾ ಬಾಹೇರೀ ಪುರುಷಾತೇ ।೩೩೫॥ ಧನವಂತಾ ಪುರಷಾಸೀ । ಸ್ತ್ರೀ ಲವ್ಹೋಟವ್ಹೋ ಕರೀ ಕೈಸೀ । ಕುಟಕಾ ದೇಖೋನಿ ಶುನೀ ಜೈಸೀ । ಹಾಲವೀ ಪುಚ್ಛಾಸೀ ಕುಕಾಂತ ।೩೩೬॥ ತ್ಯಾ ಧನಾಚಿ ಝಾಲಿಯಾ ತುಟೀ । ಸ್ತ್ರೀ ವಸವಸೋನಿ ಲಾಗೇ ಪಾಠೀ । ಆತಾ ನಾವಡತೀ ತುಮಚ್ಯಾ ಗೋಠೀ । ರಾಗೇ ಉಠೀ ಫಡಫಡೋನೀ ।೩೩೭॥ ದಿವಸಾ ಪೋರಾಂಚೀ ತಡಾತೋಡೀ । ರಾತ್ರೀ ನ ಸೋಸೇ ತುಮಚೀ ವ್ಹೋಢೀ । ಹಾತೀ ನಾಹೀ ಫುಟಕೀ ಕವಡೀ । ಜಳೋ ಗೋಡೀ ಜಿಣ್ಯಾಚೀ ।೩೩೮॥ ಐಶಾಪರೀ ಕಡೋವಿಕಡೀ । ನಿರ್ಭರ್ಸ್ತೂನಿ ದೂರೀ ದವಡೀ । ನಿರ್ಧನ ಪುರುಷಾಚೀ ಆವಡೀ । ನ ಧರೀ ಗೋಡೀ ಸ್ವದಾರಾ ।೩೩೯॥ ಯಾಪರೀ ನಿರ್ಧನ ಪುರಷಾಸೀ । ಸ್ವಸ್ತ್ರೀ ವಶ್ಯ ನವ್ಹೇ ತ್ಯಾಸೀ । ಸ್ತ್ರೀಬಾಧಾ ಧನವಂತಾಸೀ । ಅಹರ್ನಿಶೀ ಅನಿವಾರ ।೩೪೦॥ ಲಕ್ಷೂನಿ ಧನವಂತ ನರ । ವೇಶ್ಯಾ ಮಿರವೀ ಶೃಂಗಾರ । ಹಾವಭಾವ ಚಮತ್ಕಾರ । ತ್ಯಾಂಸೀ ಧನಾಢ್ಯ ಥೋರ ಭಾಳಲೇ ।೩೪೧॥ ವೇಶ್ಯಾಕಾಮಸಂಗೇ ಜಾಣ । ಅಖಂಡ ಲಾಂಚಾವಲೇ ಮನ । ತದ್ಯೋಗೇ ಮದ್ಯಪಾನ । ಕರಿತೀ ಸಧನ ಧನಮದೇ ।೩೪೨॥ ಮದ್ಯಪಾನೇ ಜೋ ಉನ್ಮತ್ತ । ತೋ ಸ್ವೇಚ್ಛಾ ಖೇಳೇ ದ್ಯೂತ । ಏವಂ ಹೇಹೀ ತಿನ್ಹೀ ಅನರ್ಥ । ಜಾಣ ನಿಶ್ಚಿತ ಅರ್ಥಾಸೀ ।೩೪೩॥ ಅರ್ಥಾಪಾಶೀ ಪಂಧರಾ ಅನರ್ಥ । ತೇ ಸಾಂಗೀತಲೇ ಇತ್ಥಂಭೂತ । ಸುಖಾಚಾ ಲೇಶು ಯೇಥ । ನಾಹೀ ನಿಶ್ಚಿತ ಧನವಂತಾ ।೩೪೪॥

ಏತೇ ಪಂಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್ ।
ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋರ್ಥೀ ದೂರತಸ್ತ್ಯಜೇತ್ ।೧೯॥

ಅರ್ಥ:- ಈ ಹದಿನೈದು ಅನರ್ಥಗಳು ಮನುಷ್ಯರಲ್ಲಿ ಧನದಿಂದ ನಿರ್ಮಾಣವಾಗುವುವು. ಆದ್ದರಿಂದ ತನ್ನ ಕಲ್ಯಾಣವನ್ನು ಸಾಧಿಸಬೇಕೆನ್ನುವ ಪುರುಷರು ಸ್ವಾರ್ಥ ಮತ್ತು ಪರಮಾರ್ಥಗಳಿಗೆ ವಿರೋಧವಾಗಿರುವ ಈ ಅನರ್ಥಗಳಿಂದ ದೂರವಿರಬೇಕು.

ಸ್ತ್ರೀ, ಜೂಜು, ಮದ್ಯಪಾನ ಈ ಮೂರು ವ್ಯಸನಗಳಿಗೆ ಉತ್ತೇಜನವನ್ನು ಕೊಟ್ಟು ಯಾವ ಧನವು ಅವುಗಳನ್ನು ಬೆಳೆಸುತ್ತಿರುವುದು. ಈ ಮೂರು ಅನರ್ಥಗಳು ಧನವಂತನ ಮೇಲೆ ಬಂದು ಬೀಳುವುವು ।೩೩೩॥ ನಿರ್ಧನ ಮನುಷ್ಯನು ತನ್ನ ಹೆಂಡತಿಗೆ ಜಡನಾಗಿ ಬಹುಭಾರನಾಗುವನು. ಈ ನಿರ್ಧನ ಗಂಡನ ಮುಖದಮೇಲೆ ಅವನ ಹೆಂಡತಿಯು ಉಗುಳಿಬಿಡುವಳು ।೩೩೪॥ ಯಾವನ ಹತ್ತಿರ ಹಣವಿರುವುದಿಲ್ಲವೋ, ಅವನ ಮನೆಯಲ್ಲಿ ಗಂಡ-ಹೆಂಡರ ಜಗಳವು ನಿತ್ಯದಲ್ಲಿಯೂ ನಡೆಯುತ್ತಿರುವುದು. ಹೆಂಡತಿಯಾಗಿರುವಳು ತನ್ನ ಗಂಡನಿಗೆ ಅವಹೇಳನಮಾಡುತ್ತ, ನಿಂದಿಸುತ್ತ ಕೊನೆಗೆ ಮನೆಯಿಂದ ಹೊರಗೆ ದಬ್ಬುವಳು ।೩೩೫॥ ಆದರೆ ತನ್ನ ಪತಿಯು ಧನವಂತ, ಶ್ರೀಮಂತನಾಗಿದ್ದರೆ ರೊಟ್ಟಿಯ ತುಂಡನ್ನು ಕಂಡ ನಾಯಿಯು ತನ್ನ ಬಾಲವನ್ನು ಅಲುಗಾಡಿಸುವಂತೆ ಆಕೆಯು ಆತನಲ್ಲಿ ತನ್ನ ವಯ್ಯಾರತನದಿಂದ ಹರುಷವನ್ನು ವ್ಯಕ್ತಮಾಡುವಳು ।೩೩೬॥ ಇಂತಹ ಹೆಂಡತಿಯು ತನ್ನ ಧನವಂತ ಗಂಡನಲ್ಲಿ ಅನೇಕ ಪ್ರಕಾರದ ಗೌರವಗಳನ್ನು ವ್ಯಕ್ತಮಾಡುವಳು. ಆದರೆ ಅವನಲ್ಲಿಯ ಧನವು ತೀರಿತೆಂದರೆ ಆಗ ಆ ಹೆಂಡತಿಯು ತುಟಿಯನ್ನು ಹಲ್ಲಿನಿಂದ ಕಡೆಯುತ್ತ ಗಂಡನಮೇಲೆ ಹರಿದು ಬೀಳುವಳು. ''ಈಗ ನಿನ್ನ ಮಾತುಗಳು ನನಗೆ ಎಳ್ಳಷ್ಟೂ ಹಿಡಿಸುವುದಿಲ್ಲ'' ಎಂದು ಸಿಟ್ಟಿನಿಂದ ಚಡಪಡಿಸುತ್ತ ಅಲ್ಲಿಂದ ಎದ್ದು ಹೋಗುವಳು ।೩೩೭॥ ಪುನಃ ಈಕೆ ಗಂಡನಿಗೆ ಹೀಗೆ ಹೇಳುವಳು; ಹಗಲು ಹುಡುಗರ ಕಾಟವು ಸುರುವಾಗುವುದು, ರಾತ್ರಿ ನಿಮ್ಮ ಎಳೆದಾಡುವ ಕಾಟ ಆರಂಭವಾಗುವುದು. ಈಗ ನನಗೆ ಇದು ಸಹಿಸುವುದಾಗುವುದಿಲ್ಲ. ನಿಮ್ಮ ಕೈಯಲ್ಲಿ ಒಡಕು ಕವಡೆಯೂ ಇಲ್ಲ. ನಿಮ್ಮ ಜೀವನಕ್ಕೆ ಧಿಕ್ಕಾರವು ।೩೩೮॥ ಈ ಪ್ರಕಾರವಾಗಿ ತನ್ನ ಗಂಡನ ಅನೇಕ ರೀತಿಯಲ್ಲಿ ಅವಹೇಳನಮಾಡಿ ಅವನನ್ನು ದೂರ ಹೊರಗೆ ಅಟ್ಟುವಳು. ಹೀಗೆ ತನ್ನ ಸ್ವಂತ ಹೆಂಡತಿಯೂ ಕೂಡ ಹಣವಿಲ್ಲದ ಗಂಡನನ್ನು ಪ್ರೇಮವನ್ನು ಮಾಡಲು ಶಕ್ಯವಿಲ್ಲ ।೩೩೯॥ ಈ ರೀತಿಯಲ್ಲಿ ನಿರ್ಧನ ಮನುಷ್ಯನಿಗೆ ತನ್ನ ಸ್ವಂತ ಹೆಂಡತಿಯೂ ಕೂಡ ಅನುಕೂಲವಾಗುವುದಿಲ್ಲ. ಆದರೆ ಧನವಂತ ಮನುಷ್ಯನಿಗೆ ಮಾತ್ರ ಸ್ತ್ರೀಯಳ ಪೀಡೆಯು ಹಗಲು ರಾತ್ರಿ ಆಗುತ್ತಿರುವುದು ।೩೪೦॥ ಒಬ್ಬ ಶ್ರೀಮಂತ ಪುರುಷನು ಕಣ್ಣಿಗೆ ಬೀಳುತ್ತಲೇ ವೇಶ್ಯಾ ಸ್ತ್ರೀಯಳು ಬಹು ಶೃಂಗಾರದಿಂದ ತನ್ನ ಹಾವಭಾವದೊಂದಿಗೆ ಆತನನ್ನು ಮೋಹಗೊಳಿಸುವಳು. ಶ್ರೀಮಂತ ಜನರು ಇವರಿಗೆ ತತ್ಕಾಲದಲ್ಲಿ ಮೋಹಿತರಾಗುವರು ।೩೪೧॥ ಒಂದು ಸಲ ಈ ಯಾವ ವೇಶ್ಯಾಸ್ತ್ರೀಯಳ ಕಾಮಸಂಬಂಧವು ಹತ್ತಿದರೆ ಸಾಕು, ಆಗ ಮನವು ಆಕೆಯಲ್ಲಿಯೇ ಮೋಹಿಸಿಕೊಂಡಿರುವುದು, ಇದರ ಗುಂಗಿನಲ್ಲಿಯೇ ಧನದ ಧುಂದತ್ವದಿಂದ ಜನರು ಮದ್ಯಪಾನವನ್ನು ಮಾಡಲು ಆರಂಭಿಸುವರು ।೩೪೨॥ ಮದ್ಯಪಾನದಿಂದ ಉನ್ಮತ್ತನಾದವನು ಸ್ವೆಚ್ಛೆಯಿಂದ ಜೂಜನ್ನು ಆಡಲಾರಂಭಿಸುವನು. ಹೀಗೆ ಈ ಮೂರೂ ಮಹಾ ಅನರ್ಥಗಳು ಧನದ ಹತ್ತಿರ ನಿಶ್ಚಿತವಾಗಿ ಇರುವುವು ।೩೪೩॥ ಈ ಪ್ರಕಾರವಾಗಿ ಧನದಲ್ಲಿ ಹದಿನೈದು ಅನರ್ಥಗಳು ಇರುವುವು. ಇದನ್ನು ನಿನಗೆ ಸವಿಸ್ತಾರವಾಗಿ ಹೇಳಲಾಯಿತು. ಹೇ ಉದ್ಧವನೇ ಧನವಂತನಾದ ಮನುಷ್ಯನಿಗೆ ಸುಖದ ಲವಲೇಶವೂ ಕೂಡ ಇರುವುದಿಲ್ಲ. ಇದನ್ನು ನೀನು ನಿಶ್ಚಿತವಾಗಿ ತಿಳಿದುಕೊಂಡಿರು ।೩೪೪॥

ಏವಂ ಹೇ ಪಂಧರಾಹೀ ಅನರ್ಥ । ಮೂರ್ಖ ಅಥವಾ ಪಂಡಿತ । ಜೇ ಅರ್ಥಸಂಗ್ರಹ ಕರಿತ । ಅವಶ್ಯ ಹೇ ತೇಥ ಉಠತೀ ।೩೪೫॥ ತ್ಯಾಸೀ ನಾಮ ಮಾತ್ರ ಹಾ ಅರ್ಥ । ಯೇರ್ಹವೀ ಮೂರ್ತಿಮಂತ ಅನರ್ಥ । ಯಾಲಾಗೀ ಶ್ರೇಯಾರ್ಥೀ ಜೇ ಹರಿಭಕ್ತ । ತಿಹೀ ನಿಶ್ಚಿತ ತ್ಯಾಗಾವಾ ।೩೪೬॥ ಜೇವೀ ಕಾ ಬೋಳ ಹುಂಗೇನಾ ಮಾಶೀ । ಢೇಂಕುಣ ನ ಯೇ ತೇಲಾಪಾಶೀ । ಪೋಳಂಬಾ ನ ಲಗೇ ಅಗ್ನಿಸೀ । ತೇವೀ ಜೋ ಅರ್ಥಾಸೀ ನಾತಳೇ ।೩೪೭॥ ಜೇವೀ ಕಾ ಅಗ್ನಿಮಾಜೀ ಲವಣ ಪಡೇ । ತೇ ತಡಫಡೋನಿ ಬಾಹೇರ ಉಡೇ । ತೇವೀ ಮೋಕ್ಷಾಚಿಯೇ ಚಾಡೇ । ಜೋ ತ್ಯಾಗೀ ರೋಕಡೇ ನಿಜಧನ ।೩೪೮॥ ಬಚನಾಗ ಮುಖೀ ಘಾಲಿತಾ ಆಪಣ । ಕ್ಷಣಾರ್ಧ ದಾವೀ ಗೋಡಪಣ । ತೋಚಿ ಪರಿಪಾಕೀ ಆಣೀ ಮರಣ । ತೈಸಾ ಅರ್ಥ ಜಾಣ ಅನರ್ಥೀ ।೩೪೯॥ ಯಾಲಾಗೀ ಜೋ ಮೋಕ್ಷಾರ್ಥೀ । ತೇಣೇ ಅರ್ಥ ನ ಧರಾವಾ ಹಾತೀ । ಕಾಯಾ ವಾಚಾ ಚಿತ್ತವೃತ್ತೀ । ಅರ್ಥ ನಿಶ್ಚಿತೀ ತ್ಯಾಗಾವಾ ।೩೫೦॥ ಅರ್ಥಮೂಳ ಸಕಳ ಭೇದ । ಪೂರ್ವೀ ಬೋಲಿಲಾ ಏವಂವಿಧ । ತೋಚಿ ಪುನಃಪುನಃ ಗೋವಿಂದ । ಕರೂನಿ ವಿಶದ ಸಾಂಗತ ।೩೫೧॥

ಭಿದ್ಯಂತೇ ಭ್ರಾತರೋ ದಾರಾಃ ಪಿತರಃ ಸುಹೃದಸ್ತಥಾ ।
ಏಕಾಸ್ನಿಗ್ಧಾಃ ಕಾಕಿಣಿನಾ ಸದ್ಯಃ ಸರ್ವೇಽರಯಃ ಕೃತಾ ।೭೦॥

ಅರ್ಥ:- ಬಂಧು, ಸ್ತ್ರೀಪುರಷ, ತಂದೆ-ತಾಯೀ, ಸಮೀಪದ ಬಂದುಬಳಗದವರು ಇವರೆಲ್ಲರೂ ಕೂಡಿಯೇ ಜೀವನವನ್ನು ನಡೆಸುತ್ತಿರುವರು. ಆದರೆ ಇವರು ಹಣಕ್ಕಾಗಿ ಒಂದೇ ಕ್ಷಣದಲ್ಲಿ ಒಬ್ಬರಿಗೊಬ್ಬರು ಶತ್ರುಗಳಾಗುವರು.

ಇಷ್ಟಮಿತ್ರಾಂಚೇ ಮಿತ್ರತ್ವ ಮೋಡೀ । ಬಂಧುಬಂಧೂಚಾ ಸ್ನೇಹ ವಿಘಡೀ । ಸುಹೃದಾಂಚೇ ಸೌಜನ್ಯ ತೋಡೀ । ಪುಟಕೀ ಕವಡೀ ಅರ್ಥಾಚೀ ।೩೫೨॥ ಪಿತ್ಯಾಪುತ್ರಾಮಾಜೀ ವಿರೋಧ । ಸ್ತ್ರೀಪುತ್ರಾಮಾಜೀ ದ್ವಂದ್ವ । ತೋ ಹಾ ಜಾಣ ಅರ್ಥಸಂಬಂಧ । ವಿಭಾಂಡೀ ಹಾರ್ದ ಸುಹೃದಾಂಚೇ ।೩೫೩॥ ಕಾಕಿಣೀ ಮ್ಹಣಜೇ ವೀಸಕವಡೀ । ತೇ ಆಪ್ತಾಂಚಾ ಸ್ನೇಹ ತೋಡೀ । ತ್ಯಾಂತೀಲ ಏಕ ಫುಟಕೀ ಕವಡೀ । ಭೇದೂ ಪಾಡೀ ಸುಹೃದಾಂಸೀ ।೩೫೪॥

ಅರ್ಥೇನಾಲ್ಪೀಯಸಾ ಹ್ಯೇತೇ ಸರಂಬ್ಧಾ ದೀಪ್ತಮನ್ಯವಃ ।
ತ್ಯಜಂತ್ಯಾಶು ಸ್ಪೃಧೋ ಘ್ನಂತಿ ಸಹಸೋತ್ಸೃಜ್ಯ ಸೌಹೃದಮ್ ।೭೧॥

ಅರ್ಥ:- ಈ ಜನರು ಸ್ವಲ್ಪ ಧನಕ್ಕಾಗಿ ಕ್ಷುಬ್ಧರಾಗುವರು, ಕೋಪಿಸಿಕೊಳ್ಳುವರು, ನೋಡುನೋಡುತ್ತಿದ್ದಂತೆ ಸೌಹಾರ್ದ ಸಂಬಂಧವು ಸರ್ವನಾಶವಾಗುವುದು. ಒಬ್ಬರಿಗೊಬ್ಬರು ಒದರಾಡುವರು, ಕೊನೆಗೆ ಪ್ರಾಣ ತೆಗೆದುಕೊಳ್ಳಲು ಸಿದ್ಧರಾಗುವರು. ಹೀಗೆ ಒಬ್ಬರಿಗೊಬ್ಬರು ಸರ್ವನಾಶಮಾಡುವರು.

ಇದರ ತತ್ಪಾರ್ಯವೇನಂದರೆ, ಮೂರ್ಖನಾಗಿರಲಿ ಅಥವಾ ಪಂಡಿತನಾಗಿರಲಿ, ಹೀಗೆ ಯಾರೇ ಆಗಲಿ ಧನದ ಸಂಚಯವನ್ನು ಮಾಡುವವರಲ್ಲಿ ಈ ಯಾವ ಹದಿನೈದು ಅನರ್ಥಗಳು ನಿಶ್ಚಿತವಾಗಿ ನಿರ್ಮಾಣಗೊಳ್ಳುವುವು ।೩೪೫॥ ಈ ಧನದ ಹೆಸರು ಅರ್ಥವೆಂದಾಗಿರುವುದು. ಆದರೆ ನಿಜವಾಗಿ ವಿಚಾರ ಮಾಡಿ ನೋಡಿದರೆ ಇದು ಕೇವಲ ಅನರ್ಥಕಾರಕವೇ ಆಗಿರುವುದು. ಯಾರಿಗೆ ಸ್ವಹಿತವನ್ನು ಸಾಧಿಸಬೇಕಾಗಿದೆಯೋ, ಅಂತಹ ಹರಿಭಕ್ತರು ನಿಶ್ಚಯಪೂರ್ವಕವಾಗಿ ಧನದ ತ್ಯಾಗವನ್ನು ಮಾಡಬೇಕು ।೩೪೬॥ ನೊಣವು ಯಾವ ಪ್ರಕಾರವಾಗಿ ಕಾದ ಪದಾರ್ಥಗಳನ್ನು ಮೂಸಿಸುವುದಿಲ್ಲವೋ, ತಗಣೆಯು ಎಣ್ಣೆಯ ಹತ್ತಿರ ಬರುವುದಿಲ್ಲವೋ ಅಥವಾ ಬೆಂಕಿ ಕೆಂಡಕ್ಕೆ ಇರುವೆಗಳು ಮುತ್ತುವುದಿಲ್ಲವೋ ಅದರಂತೆ ಹರಿಭಕ್ತನಾದವನು ಧನವನ್ನು ಮುಟ್ಟಲಾರನು ।೩೪೭॥ ಅಗ್ನಿಯಲ್ಲಿ ಬಿದ್ದ ಉಪ್ಪು ಅದು ಯಾವ ಪ್ರಕಾರವಾಗಿ ಚಡಪಡಿಸುತ್ತ ಹೊರಗೆ ಬೀಳುವುದೋ, ಅದರಂತೆಯೇ ಮೋಕ್ಷದ ಇಚ್ಛೆಯಿಂದ ಯಾವನು ತನ್ನ ಧನವನ್ನು ತೀವ್ರವಾಗಿ ತ್ಯಜಿಸಿಬಿಡುವನೋ, ಅವನೇ ಸ್ವಹಿತವನ್ನು ಸಾಧಿಸುವ ಹರಿಭಕ್ತನಾಗಿರುವನು ।೩೪೮॥ ಬಚನಾಗ ವಿಷವನ್ನು ಮುಖದಲ್ಲಿ ಇಟ್ಟುಕೊಳ್ಳಲು ಆಗ ಅದು ಒಂದು ಕ್ಷಣಹೊತ್ತು ಸಿಹಿಯಾಗಿ ಕಾಣುವುದು. ತದನಂತರ ಅದರ ಪರಿಣಾಮವು ಮರಣವನ್ನು ತಂದು ಒಡ್ಡುವುದು. ಈ ಪ್ರಕಾರವಾಗಿ ಈ ಅರ್ಥವು ಅನರ್ಥಕಾರಕವಾಗಿರುವುದು ।೩೪೯॥ ಈ ಕಾರಣವಾಗಿ ಯಾರು ಮೋಕ್ಷದ ಅಪೇಕ್ಷೆಯನ್ನು ಮಾಡುವರೋ, ಅವರು ಧನವನ್ನು ಕೈಯಿಂದ ಮುಟ್ಟಕೂಡದು. ಕಾಯಾ, ವಾಚಾ, ಮನದಿಂದ ಧನದ ತ್ಯಾಗವನ್ನು ಮಾಡಬೇಕು ।೩೫೦॥ ಸರ್ವ ಪ್ರಕಾರದ ಭೇದವು ಧನದಿಂದಲೇ ಉತ್ಪನ್ನವಾಗುವುದು. ಹೀಗೆ ಈ ಮೊದಲೇ ಹೇಳಿರುವುದು. ಇದೇ ಅರ್ಥದಲ್ಲಿ ಶ್ರೀಕೃಷ್ಣನು ಪುನಃಪುನಃ ಪ್ರಕಟಮಾಡಿ ಹೇಳುತ್ತಿರುವನು ।೩೫೧॥

ಹಣದ ಒಂದು ಒಡಕು ಕವಡಿಗಾಗಿ ಇಷ್ಟಮಿತ್ರರ ಮಿತ್ರತ್ವವು ಮಾಯವಾಗುವುದು. ಅಣ್ಣತಮ್ಮಂದಿರ ಸ್ನೇಹವು ಸೋರಿಹೋಗುವುದು ಮತ್ತು ಬಂಧುಬಳಗದವರ ಸೌಜನ್ಯವು ಸರಿದುಹೋಗುವುದು ।೩೫೨॥ ತಂದೆ ಮಕ್ಕಳಲ್ಲಿ ವಿರೋಧ, ಕಲಹ ಹುಟ್ಟಿಕೊಳ್ಳುವುದು. ಹೆಂಡತಿಮಕ್ಕಳಲ್ಲಿಯೂ ಕೂಡ ಜಗಳವು ನಿರ್ಮಾಣಗೊಳ್ಳುವುದು. ಈ ಪ್ರಕಾರವಾಗಿ ಈ ಯಾವ ಧನದ ಸಂಬಂಧವಾಗಿ ಸುಹೃದಗಳವರ ಅಂತಃಕರಣದಲ್ಲಿನ ಪ್ರೇಮವು ಇಲ್ಲವಾಗಿಬಿಡುವುದು ।೩೫೩॥ ಕಾಕಿಣಿ ಅಂದರೆ ಇಪ್ಪತ್ತು ಕವಡಿಗಳಾಗುವುವು. ಇದರಲ್ಲಿ ಒಂದು ಒಡಕು ಕವಡಿಯೂ ಕೂಡ ಬಂಧುವರ್ಗಗಳಲ್ಲಿ ಭೇದವು ಉತ್ಪನ್ನವಾಗಿ ಕಲಹವು ಆರಂಭಗೊಳ್ಳುವುದು ।೩೫೪॥

ಅತಿಅಲ್ಪ ಅರ್ಥಾಸಾಠೀ । ಸುಹೃದತಾ ಸಾಂಡೋನಿ ಪೋಟೀ । ಕೋಪೇ ಖವಳಲಾ ಉಠೀ । ಶಸ್ತ್ರಮುಠೀ ಉದ್ಯತ ।।೩೫೫।। ತೇಥೇ ಆಪ್ತ ಹೋಊನಿ ಅನಾಪ್ತ । ಪರಸ್ಪರೇ ಕರಿತೀ ಘಾತ । ಅರ್ಥ ಅನರ್ಥೀ ಪ್ರಾಣಾಂತ । ನಿಜಸ್ವಾರ್ಥಘಾತಕೂ ।।೩೫೬।। ಜಿತಾ ಅರ್ಥ ಅನರ್ಥ ಕರೀ । ಮೇಲ್ಯಾ ನೇ ನರಕದ್ವಾರೀ । ಉತ್ತಮ ದೇಹಾಚೀ ಬೋಹರೀ । ಅರ್ಥ ಕರೀ ತೇ ಐಕ ।।೩೫೭।।

ಲಬ್ಧ್ವಾ ಜನ್ಮಾಮರಪ್ರಾರ್ಥ್ಯಂ ಮಾನುಷಂ ತದ್ದ್ವಿಜಾಗ್ರ್ಯತಾಮ್ ।
ತದನಾದೃತ್ಯ ಯೇ ಸ್ವಾರ್ಥಂ ಘ್ನಂತಿ ಯಾಂತ್ಯಶುಭಾಂ ಗತಿಮ್ ।।೨೨।।

ಅರ್ಥ:- ದೇವತೆಗಳೂ ಕೂಡ ಬೇಡಿ ಬಯಸುವ ಮನುಷ್ಯ ಜನ್ಮವನ್ನು ಅದರಲ್ಲಿಯೂ ಉತ್ತಮ ಬ್ರಾಹ್ಮಣ ಜನ್ಮವನ್ನು ಪಡೆದವರು ಅತ್ಯಂತ ಭಾಗ್ಯಶಾಲಿಗಳು. ಈ ಸದಾವಕಾಶವನ್ನು ಕಳೆದುಕೊಂಡರೆ ಮುಂದೆ ಅವರು ಅಶುಭ ಗತಿಯನ್ನು ಹೊಂದುವರು.

ಕೋಟಿ ಜನ್ಮಾಂಚೇ ಶುದ್ಧ ಸುಕೃತ । ತೇಣೇ ಕರ್ಮಭೂಮೀ ನರದೇಹ ಪ್ರಾಪ್ತ । ತೇಥೇಹೀ ವರ್ಣಾಗ್ರ್ಯ ಸಮರ್ಥ । ಸತ್ಕುಳಪ್ರಸೂತ ಬ್ರಾಹ್ಮಣತ್ವೇ ।।೩೫೮।। ಐಸೇ ಜನ್ಮ ಪಾವಾವಯಾ ಯೇಥ । ಅಮರಹೀ ಮರಣ ಮಾಗತ । ಇಂದ್ರಾದಿ ದೇವ ಜೇ ಸ್ವರ್ಗಸ್ಥ । ತೇಹೀ ವಾಂಛಿತ ಹೇ ಜನ್ಮ ।।೩೫೯।। ಜೇ ಸತ್ಯಲೋಕಪರ್ಯಂತ । ಐಶ್ವರ್ಯ ಪಾವಲೇ ಅದ್ಭುತ । ತೇಹೀ ಹೇ ಜನ್ಮ ವಾಂಛಿತ । ಉತ್ಕಂಠಿತ ಅಹರ್ನಿಶೀ ।।೩೬೦।। ಯೇಥ ಕರಿತಾ ಭಗವದ್ಭಕ್ತೀ । ಪಾಯಾ ಲಾಗತೀ ಚಾರೀ ಮುಕ್ತೀ । ಯಾಲಾಗೀ ಹೇ ಜನ್ಮಪ್ರಾಪ್ತೀ । ಅಮರ ಮಾಗತೀ ಅಹರ್ನಿಶೀ ।।೩೬೧।। ಐಸೇ ಉತ್ತಮ ಜನ್ಮ ಪಾವೋನೀ । ಅತಿಅಭಾಗ್ಯ ಮೀ ತ್ರಿಭುವನೀ । ನಿಜಸ್ವಾರ್ಥಾತೇ ಉಪೇಕ್ಷೂನೀ । ಭುಲಲೋ ಧನೀ ಧನಲೋಭೇ ।।೩೬೨।। ಧನಲೋಭಾಚಿಯಾ ಭ್ರಾಂತೀ । ಕಾ ಲೋಕೇಷಣಾ ಲೌಕಿಕಸ್ಥಿತೀ । ಜೋ ಉಪೇಕ್ಷೀ ಭಗವದ್ಭಕ್ತೀ । ಅಶುಭಗತೀ ತಯಾಸೀ ।।೩೬೩।। ತೇಚಿ ಕೈಶೀ ಅಶುಭ ಗತೀ । ಧನಲೋಭ್ಯಾ ನರಕಪ್ರಾಪ್ತೀ । ಚೌರ್‍ಯಾಯಂಶೀ ಲಕ್ಷ ಯೋನೀ ಪ್ರತೀ । ಗರ್ಭ ಭೋಗಿತೀ ಅತಿದುಃಖೇ ।।೩೬೪।। ಜಯಾ ಬ್ರಾಹ್ಮಣಜನ್ಮಾ ಆಂತ । ಸ್ವರ್ಗಮೋಕ್ಷ ಸಹಜೇ ಪ್ರಾಪ್ತ । ತೇಚಿ ಅರ್ಥೀಚಾ ಇತ್ಯರ್ಥ । ಸ್ವಯೇ ಸಾಂಗತ ಧನಲೋಭೀ ।।೩೬೫।।

ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।
ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ ।।೨೩।।

ಅರ್ಥ:- ಈ ಮನುಷ್ಯ ಶರೀರವು ಸ್ವರ್ಗ ಮತ್ತು ಮೋಕ್ಷದ ದ್ವಾರವಾಗಿರುವುದು. ಇಂತಹ ಮನುಷ್ಯ ದೇಹವನ್ನು ಪ್ರಾಪ್ತಮಾಡಿಕೊಂಡು ಅಧರ್ಮದ ಸ್ಥಾನವಾದ ಈ ಧನದಲ್ಲಿ ಏಕೆ ಆಸಕ್ತರಾಗಬೇಕು.

ದ್ರವ್ಯಲೋಭಿಯು ಅಲ್ಪಧನಕ್ಕಾಗಿಯೂ ಅಂತಃಕರಣದಲ್ಲಿನ ಸ್ನೇಹಭಾವವನ್ನು ಬಿಟ್ಟುಕೊಟ್ಟು ಸಿಟ್ಟಿನಿಂದ ಉಗ್ರನಾಗಿ ಕೈಯಲ್ಲಿ ಶಸ್ತ್ರವನ್ನು ಹಿಡಿದು ಕೊಲ್ಲಲು ಉದ್ಯತನಾಗುವನು ।।೩೫೫।। ಆಪ್ತರೆಲ್ಲರೂ ಶತ್ರುಗಳಾಗಿ ಬಿಡುವರು. ಪರಸ್ಪರರು ಹೊಡೆದಾಡಿ ಸಾಯುವರು. ಹೀಗೆ ಈ ಧನವು ತನ್ನ ನಿಜವಾದ ಸ್ವಾರ್ಥದ ಘಾತವನ್ನು ಮತ್ತು ಪ್ರಾಣಘಾತವನ್ನು ಮಾಡುವುದು ।।೩೫೬।। ತನ್ನ ಜೀವಮಾನ ಇರುವವರೆಗೂ ಈ ಧನವು ಅನರ್ಥಗಳನ್ನು ಮಾಡುತ್ತಲೇ ಇರುವುದು. ಮರಣದನಂತರ ನರಕಕ್ಕೆ ಒಯ್ದು ನೂಕುವುದು. ಉತ್ತಮ ಮನುಷ್ಯನೂ ಕೂಡ ಇದೇ ಧನದ ಕಾರಣದಿಂದ ಹೇಗೆ ನಾಶನಾಗುವನೆಂಬುದನ್ನು ಈಗ ಹೇಳುವೆನು, ಅದನ್ನು ಕೇಳು ।।೩೫೭।।

ಕೋಟ್ಯಾವಧೀ ಜನ್ಮಗಳ ಪುಣ್ಯವು ಯಾವ ಸಮಯಕ್ಕೆ ಏಕತ್ರವಾಗುವುದೋ, ಆ ವೇಳೆಯಲ್ಲಿ ಈ ಕರ್ಮಭೂಮಿಯಲ್ಲಿ ಮನುಷ್ಯ ದೇಹದ ಪ್ರಾಪ್ತಿಯಾಗುವುದು. ಅದರಲ್ಲಿಯೂ ಕೂಡ ಸಮರ್ಥವಾದ ಬ್ರಾಹ್ಮಣ ಜನ್ಮವು ಮತ್ತು ಬ್ರಾಹ್ಮಣರಲ್ಲಿಯೂ ಉತ್ತಮ ವರ್ಗದಲ್ಲಿ ಜನ್ಮವಾಗುವುದು ।।೩೫೮।। ಈ ಪ್ರಕಾರದ ಯಾವ ಬ್ರಾಹ್ಮಣ ಜನ್ಮವನ್ನು ಮೃತ್ಯುಲೋಕದಲ್ಲಿ ಪ್ರಾಪ್ತವಾಗುವುದಕ್ಕಾಗಿ ದೇವತೆಗಳು ಸ್ವರ್ಗದಲ್ಲಿ ಮರಣವನ್ನು ಬಯಸುವರು. ಇಂದ್ರಾದಿಕ ದೇವತೆಗಳೂ ಕೂಡ ಈ ಜನ್ಮಕ್ಕಾಗಿ ಇಚ್ಛೆ ಪಡುವರು ।।೩೫೯।। ಸತ್ಯಲೋಕದವರೆಗೆ ಅದ್ಭುತ ಐಶ್ವರ್ಯ ಪ್ರಾಪ್ತಮಾಡಿಕೊಂಡವರೂ ಸಹ ಈ ಜನ್ಮದ ಇಚ್ಛೆ ಮಾಡುವರು. ಹಗಲು ರಾತ್ರಿ ಈ ಜನ್ಮಕ್ಕಾಗಿ ಉತ್ಕಂಠಿತರಾಗಿರುವರು ।।೩೬೦।। ಇಂತಹ ಈ ಯಾವ ಮಾನವ ಜನ್ಮದಲ್ಲಿ ಭಗವಂತನ ಭಕ್ತಿಯನ್ನು ಮಾಡಿದರೆ ನಾಲ್ಕು ಮುಕ್ತಿಗಳು ಕಾಲಿಗೆ ಬೀಳುವುವು. ಆದ್ದರಿಂದಲೇ ನರದೇಹದ ಇಚ್ಛೆಯನ್ನು ದೇವತೆಗಳು ಹಗಲು ರಾತ್ರಿ ಮಾಡುತ್ತಿರುವರು. ।।೩೬೧।। ಇಂತಹ ಈ ಯಾವ ಉತ್ತಮವಾಗಿರುವ ಮಾನವ ಶರೀರವು ನನಗೆ ಪ್ರಾಪ್ತವಾಗಿದ್ದರೂ ಕೂಡ ನಾನು ಈ ತ್ರಿಭುವನದಲ್ಲಿ ಅತ್ಯಂತ ದುರ್ಭಾಗ್ಯನಾದೆನು ಮತ್ತು ನಿಜವಾದ ಸ್ವಾರ್ಥವನ್ನು ದ್ರವ್ಯಲೋಭದ ಭ್ರಾಂತಿಯಿಂದ ಹಾಗೂ ಧನದಲ್ಲಿಯೇ ಭುಲಾಯಿಸಿ ಕಳೆದುಕೊಂಡೆನು. ।।೩೬೨।। ಈ ಯಾವ ಧನಲೋಭದ ಭ್ರಾಂತಿಯಿಂದ ಅಥವಾ ಲೌಕಿಕದ ಪ್ರತಿಷ್ಠೆಯ ಆಶೆಯಿಂದ ಯಾವನು ಭಗವಂತನ ಭಕ್ತಿಯನ್ನು ತಿರಸ್ಕರಿಸುವನೋ, ಅದರಿಂದ ಏನಾಗುವುದೆಂಬುದನ್ನು ಕೇಳು ।।೩೬೩।। ಧನಲೋಭದಿಂದ ನರಕದ ಪ್ರಾಪ್ತಿಯಾಗುವುದು ಮತ್ತು ಎಂಬತ್ನಾಲ್ಕು ಲಕ್ಷ ಜೀವ ಯೋನಿಗಳಲ್ಲಿ ಅತ್ಯಂತ ದುಃಖ ಜನ್ಮಗಳನ್ನು ಭೋಗಿಸಬೇಕಾಗುವುದು ।।೩೬೪।। ಈ ಯಾವ ಬ್ರಾಹ್ಮಣ ಜನ್ಮದಲ್ಲಿ ಸ್ವರ್ಗವು ಮತ್ತು ಮೋಕ್ಷವು ಸಹಜವಾಗಿಯೇ ಪ್ರಾಪ್ತವಾಗುತ್ತಿರುವುದು. ಈ ವಿಷಯವನ್ನು ಕುರಿತು ಈಗ ಸ್ವತಃ ಈ ಧನಲೋಭಿಯು ಹೇಳುತ್ತಿರುವನು ।।೩೬೫।।

ಬ್ರಾಹ್ಮಣೇ ಕರಿತಾ ಸ್ವಧರ್ಮ । ವಾಸನಾ ಝುಳಂಬೇ ಸ್ವರ್ಗಕಾಮ । ತೈ ಇಂದ್ರಚಂದ್ರಾದಿಕಾಂಚೇ ಧಾಮ । ಪಾವೇ ದ್ವಿಜೋತ್ತಮ ಸಹಜಚಿ ।೩೬೬॥ ಜ್ಯಾಚಿಯಾ ಯಜನಸ್ಥಿತೀ । ಇತರಾಂಸೀ ಹೋಯ ಸ್ವರ್ಗಪ್ರಾಪ್ತೀ । ಏವಂ ಸ್ವರ್ಗ ತೋ ಬ್ರಾಹ್ಮಣಾಂಚ್ಯಾ ಹಾತೀ । ತ್ಯಾಂಸೀ ತೇ ಗತೀ ಸಹಜಚಿ ।೩೬೭॥ ಸಾಂಡೂನಿ ಈಷಣಾತ್ರಯಾಸೀ । ನಿಷ್ಕಾಮ ಸ್ವಧರ್ಮ ಜ್ಯಾ ದ್ವಿಜಾಸೀ । ಮೋಕ್ಷ ಲಾಗೇ ತ್ಯಾಚ್ಯಾ ಪಾಯಾಂಸೀ । ತಿಷ್ಠೇ ಅಹರ್ನಿಶೀ ಆಜ್ಞಾಧಾರೀ ।೩೬೮॥ ತೋ ಅನುಗ್ರಹೀ ಜಯಾಂಸೀ । ತೇ ಪಾವತೀ ನಿಜಮೋಕ್ಷಾಸೀ । ಏವಢೇ ಸಾಮರ್ಥ್ಯ ಬ್ರಾಹ್ಮಣಾಪಾಶೀ । ಅನಾಯಾಸೀ ಸಹಜಚಿ ।೩೬೯॥ ಸ್ವರ್ಗ ಜಯಾಚೀ ಪಾಯರೀ । ಮೋಕ್ಷ ಜ್ಯಾಚಾ ಆಜ್ಞಾಧಾರೀ । ಏವಢೀ ಬ್ರಾಹ್ಮಣತ್ವಾಚೀ ಥೋರೀ । ಧನಲೋಭಾವಾರೀ ನಾಶಿತೀ ।೩೭೦॥ ಬ್ರಾಹ್ಮಣಜನ್ಮ ಪಾವಲ್ಯಾ ಜಾಣ । ನಿಃಶೇಷ ಖುಂಟೇ ಜನ್ಮಮರಣ । ತೇಥ ಮೀ ನಾಡಲೋ ಜಾಣ । ಜೋಡೂನಿ ಧನ ಧನಲೋಭೇ ।೩೭೧॥ ದುರ್ಲಭ ಯೇಥೇ ಮಾಣುಸಪಣ । ತ್ಯಾಮಾಜೀ ಅತಿದುರ್ಲಭ ಬ್ರಾಹ್ಮಣ್ಯ । ತೇಹೀ ಪಾವೋನಿ ಮೀ ಆಪಣ । ಧನಲೋಭೇ ಪೂರ್ಣ ನಾಗವಲೋ ।೩೭೨॥ ಪಾವೋನಿ ಬ್ರಾಹ್ಮಣ ಶರೀರ । ಧನೇ ನಾಡಲೇ ಥೋರ ಥೋರ । ಅರ್ಥ ಅನರ್ಥಾಚೇ ಮುಖ್ಯ ಘರ । ದುಃಖ ದುರ್ಧರ ವಾಢವೀ ।೩೭೩॥ ಅರ್ಥ ಅನರ್ಥಾಚೇ ಭಾಜನ । ತೇ ನಿಃಶೇಷ ತ್ಯಾಗಾವೇ ಧನ । ವೈರಾಗ್ಯೇ ತಾಪಲಾ ಪೂರ್ಣ । ಸ್ವಯೇ ಬ್ರಾಹ್ಮಣ ಬೋಲತ ।೩೭೪॥ ಆಶಂಕಾ॥ ದೈವೇ ಜೋಡಿಲೇ ಸಂಪತ್ತೀಸೀ । ನೇಊನಿ ಸಾಂಡಾವೇ ಬಿದೀಸೀ । ಕಾ ಘಾಲಾವೇ ಜಳಪ್ರವಾಹೇಸೀ । ತ್ಯಾಗ ಅರ್ಥಾಸೀ ತೋ ಕೈಸಾ ।೩೭೫॥ ತೇ ಅರ್ಥತ್ಯಾಗನಿರೂಪಣ । ಸ್ವಯೇ ಸಾಂಗತಾಹೇ ಬ್ರಾಹ್ಮಣ । ಜೇ ಅಸತೀಲ ಸಧನ । ತಿಂಹೀ ಸಾವಧಾನ ಪರಿಸಾವೇ ।೩೭೬॥

ದೇವರ್ಷಿಪಿತೃಭೂತಾನಿ ಜ್ಞಾತೀನ್ಬಂಧೂಂಶ್ಚ ಭಾಗಿನಃ । ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ ।೨೪॥

ಅರ್ಥ:- ಯಾವ ಧನಿಕ ಮನುಷ್ಯನು ದೇವತಾ, ಋಷೀ, ಪಿತರರು, ಪ್ರಾಣಿಗಳು, ಜಾತಿಬಂಧುಗಳು, ಕುಟುಂಬ ಸದಸ್ಯರು ಮತ್ತು ಧನಕ್ಕೆ ಸಂಬಂಧಿತ ಇತರ ಭಾಗೀದಾರರು ಇವರಿಗೆಲ್ಲರಿಗೂ ಅವರವರ ಭಾಗಗಳನ್ನು ಕೊಟ್ಟು ಸಂತೋಷವಾಗಿರದೇ ಮತ್ತು ತಾನು ಸ್ವತಃ ಧನದ ಉಪಯೋಗವನ್ನು ಪಡೆಯದೇ ಯಕ್ಷರಾಕ್ಷಸನಂತೆ ಧನದ ರಕ್ಷಣೆಯನ್ನು ಮಾಡುವ ಕೃಪಣನು ಅವಶ್ಯವಾಗಿ ಅಧೋಗತಿಯನ್ನು ಹೊಂದುವನು.

ದೈವೇ ಜೋಡಿಲಿಯಾ ಧನ । ಆಚಾರಾವೇ ಪಂಚಮಹಾಯಜ್ಞ । ಕರಾವೇ ಭಗವತ್ಪೂಜನ । ಉಲ್ಹಾಸೇ ಜಾಣ ಮಹೋತ್ಸಾಹೇ ।೩೭೭॥

ಬ್ರಾಹ್ಮಣನು ತನ್ನ ಸ್ವಧರ್ಮದ ಪಾಲನೆಯನ್ನು ಮಾಡಿದರೆ ಆತನಿಗೆ ಸ್ವರ್ಗಪ್ರಾಪ್ತಿಯ ಇಚ್ಛೆಯಾಗುವುದು ಮತ್ತು ಆ ಯಾವ ಶ್ರೇಷ್ಠ ಬ್ರಾಹ್ಮಣನು ಇಂದ್ರಚಂದ್ರಾದಿಕರ ಧಾಮಗಳನ್ನು ಸಹಜವಾಗಿ ಪಡೆಯಬಲ್ಲನು ।೩೬೬॥ ಈತನು ಯಜ್ಞಕರ್ಮಗಳನ್ನು ಮಾಡಿಸುತ್ತಿರುವುದರಿಂದ ಇತರರಿಗೂ ಸ್ವರ್ಗಪ್ರಾಪ್ತಿಯಾಗುವುದು. ಈ ಪ್ರಕಾರವಾಗಿ ಸ್ವರ್ಗವು ಬ್ರಾಹ್ಮಣರ ಕೈಯಲ್ಲಿರುವುದರಿಂದ ಅವರು ಸಹಜವಾಗಿಯೇ ಅಲ್ಲಿ ಹೋಗಿ ಮುಟ್ಟಿಕೊಳ್ಳುವರು ।೩೬೭॥ ಲೋಕೇಷಣಾ, ಪುತ್ರೇಷಣಾ ಮತ್ತು ವಿತ್ತೇಷಣಾ ಈ ಮೂರು ಈ ಷಣಾತ್ರಯವನ್ನು ತ್ಯಜಿಸಿ ಯಾವ ಬ್ರಾಹ್ಮಣನು ನಿಷ್ಕಾಮನಾಗಿ ತನ್ನ ಸ್ವಧರ್ಮದ ಆಚರಣೆಯನ್ನು ಮಾಡುವನೋ, ಆತನ ಚರಣಗಳ ಹತ್ತಿರ ಮೋಕ್ಷವು ಆಗಮಿಸುವುದು ಮತ್ತು ಆತನಲ್ಲಿ ಹಗಲುರಾತ್ರಿ ಆಜ್ಞಾಧಾರಕವಾಗಿ ಇರುವುದು ।೩೬೮॥ ಈತನು ಯಾರಲ್ಲಿ ಕೃಪೆಯನ್ನು ಮಾಡುವನೋ, ಆತನೂ ಕೂಡ ಮೋಕ್ಷಪದವನ್ನು ಪ್ರಾಪ್ತಮಾಡಿಕೊಳ್ಳಲು ಶಕ್ತನಾಗುವನು. ಇಷ್ಟೊಂದು ಸಾಮರ್ಥ್ಯವು ಬ್ರಾಹ್ಮಣನ ಹತ್ತಿರವಿರುವುದು ।೩೬೯॥ ಸ್ವರ್ಗವು ಈತನ ಪಾವುಟಣಿಗೆಯಾಗಿರುವುದು. ಮೋಕ್ಷವು ಈತನ ಆಜ್ಞಾಧಾರಕವಾಗಿರುವುದು. ಇಷ್ಟೊಂದು ಬ್ರಾಹ್ಮಣಪದವಿಯ ಸಾಮರ್ಥ್ಯವಿರುವುದು. ಆದರೆ ನಾನು ಧನಲೋಭಕ್ಕೆ ತುತ್ತಾಗಿ ಈ ನನ್ನ ಜನ್ಮವನ್ನು ವ್ಯರ್ಥವಾಗಿ ಕಳೆದುಕೊಂಡೆನು. ।೩೭೦॥ ಬ್ರಾಹ್ಮಣ ಜನ್ಮವು ಪ್ರಾಪ್ತವಾಯಿತೆಂದರೆ ಜನ್ಮಮರಣಗಳು ಇವು ಸಮೂಲವಾಗಿ ಇಲ್ಲದಾಗುವುವು. ಹೀಗಿದ್ದರೂ ಕೂಡ ನಾನು ಧನಲೋಭಕ್ಕೆ ಬಲಿಯಾಗಿ ಅದರಲ್ಲಿಯೇ ಸಿಕ್ಕಿಬಿದ್ದುಕೊಂಡೆನು ।೩೭೧॥ ಮೊದಲೇ ಈ ಕರ್ಮಭೂಮಿಯಲ್ಲಿ ಮನುಷ್ಯ ಶರೀರವು ಸಿಗುವುದು ಅತಿಶಯವಾಗಿ ದುರ್ಲಭವಾಗಿರುವುದು. ನನಗೆ ಉತ್ತಮವಾಗಿರುವ ಬ್ರಾಹ್ಮಣ ಜನ್ಮವು ಪ್ರಾಪ್ತವಾಗಿದ್ದರೂ ಕೂಡ ನಾನು ಧನಲೋಭಕ್ಕೆ ಮೋಸ ಹೋದೆನು ।೩೭೨॥ ಬ್ರಾಹ್ಮಣ ದೇಹವು ಲಭಿಸಿದರೂ ದೊಡ್ಡ ದೊಡ್ಡ ಜನರೂ ಕೂಡ ಧನಲೋಭದಿಂದ ಕೆಟ್ಟುಹೋಗುವರು. ಅರ್ಥವು ಇದು ನಿಜವಾಗಿಯೂ ಅನರ್ಥದ ಮೂಲವಾಗಿರುವುದು. ಇದು ದುರ್ಧರವಾದ ದುಃಖವನ್ನು ಬೆಳೆಸುತ್ತಲೇ ಇರುವುದು ।೩೭೩॥ ಈ ಹಣವು ಅನರ್ಥದ ಕಾರಣವಾಗಿರುವುದರಿಂದ ಇದನ್ನು ಸಂಪೂರ್ಣವಾಗಿ ತ್ಯಜಿಸಬೇಕು. ವೈರಾಗ್ಯದಿಂದ ಪಶ್ಚಾತ್ತಾಪಪಟ್ಟಿರುವ ಈ ಬ್ರಾಹ್ಮಣನು ಸ್ವತಃ ಹೇಳುತ್ತಿರುವನು ।೩೭೪॥ ಪ್ರಶ್ನೆ॥ ನಮ್ಮ ಭಾಗ್ಯದಿಂದ ಧನಸಂಪತ್ತು ಪ್ರಾಪ್ತವಾದರೆ ಅದನ್ನು ಬೀದಿಗೆ ಚೆಲ್ಲಬೇಕೆ? ಅಥವಾ ನದಿಯಲ್ಲಿ ಒಗೆದುಬಿಡಬೇಕೇ? ದ್ರವ್ಯದ ತ್ಯಾಗವನ್ನು ಯಾವ ಪ್ರಕಾರವಾಗಿ ಮಾಡಬೇಕು? ।೩೭೫॥ ಈಗ ಆ ಧನತ್ಯಾಗದ ವರ್ಣನೆಯನ್ನು ಸ್ವತಃ ಕೃಪಣ ಬ್ರಾಹ್ಮಣನು ಮಾಡುತ್ತಿರುವನು. ಧನವಂತ ಪುರುಷರು ಈಗ ಸರಿಯಾಗಿ ಲಕ್ಷಕೊಟ್ಟು ಕೇಳಬೇಕು ।೩೭೬॥

ತಮ್ಮ ಭಾಗ್ಯದಿಂದ ಧನಸಂಪತ್ತು ಪ್ರಾಪ್ತವಾದರೆ ಭೂತಯಜ್ಞ, ಪಿತೃಯಜ್ಞ, ವೇದಯಜ್ಞ, ಬ್ರಹ್ಮಯಜ್ಞ, ಮತ್ತು ಮನುಷ್ಯಯಜ್ಞ ಹೀಗೆ ಐದು ಮಹಾಯಜ್ಞಗಳನ್ನು ಮಾಡಬೇಕು. ಬಹು ಉತ್ಸಾಹದಿಂದ ಭಗವಂತನ ಪೂಜೆ, ಉತ್ಸವಗಳನ್ನು ಮಾಡಬೇಕು ।೩೭೭॥

ಸ್ವಯೇ ಕರಾವೇ ಪಿತೃತರ್ಪಣ। ಷಣ್ಣವತಿ ಶ್ರಾದ್ಧೇ ಜಾಣ। ಪಿತರ ಉದ್ಧರಾವೇ ಆಪಣ। ಗಯಾವರ್ಜನ ಕರೋನಿಯಾ ॥೩೭೮॥ ಜಿತ್ಯಾ ಪಿತರಾ ತ್ರಿಕಾಳೀ ನಮನ। ಕದಾ ನ ಕರಾವೇ ಹೇಳಣ। ತ್ಯಾಂಚೀ ಅವಜ್ಞಾ ಆಪಣ। ಪ್ರಾಣಾಂತೀ ಜಾಣ ನ ಕರಾವೀ ॥೩೭೯॥ ತ್ಯಾಂಸೀ ಗೌರವೂನಿ ಆಪಣ। ಯಥಾರುಚಿ ದ್ಯಾವೇ ಅನ್ನ। ಯಥಾಶಕ್ತಿ ದ್ಯಾವೇ ಧನ। ಸೇವೇನೇ ಸಂಪೂರ್ಣ ಸುಖೀ ಕರಾವೀ ॥೩೮೦॥ ಪಿತಾ ಸ್ವಯಮೇವ ನಾರಾಯಣ। ಮಾತಾ ಪ್ರತ್ಯಕ್ಷ ಲಕ್ಷ್ಮೀ ಆಪಣ। ಐಸೇ ಭಾವೇ ಜ್ಯಾಚೇ ಭಜನ। ಸುಪುತ್ರ ಜಾಣ ತೋ ಏಕ ॥೩೮೧॥ ಜ್ಯಾಚೇ ಸೇವೇನೇ ಸುಖೀ ಪಿತರ। ತೇಚಿ ಪಿತೃತರ್ಪಣ ಸಾಚಾರ। ಜಿತಾ ಅವಜ್ಞಾ ತೋ ಅನಾಚಾರ। ಮೇಲ್ಯಾ ಶ್ರಾದ್ಧ ವಿಚಾರ ತೋ ಲೌಕಿಕ ॥೩೮೨॥ ಜೋ ಪಿತೃವಚನ ಅವಿಶ್ವಾಸೀ। ತೇಣೇ ಕೇಲ್ಯಾ ಪಾಪರಾಶೀ। ಜೋ ಪಿತೃವಚನ ವಿಶ್ವಾಸೀ। ಮೋಕ್ಷ ತ್ಯಾಪಾಶೀ ವೋಳಂಗಣಾ ॥೩೮೩॥ ಜಿತ ಮೃತಪಿತೃತರ್ಪಣ। ತೇ ಸಾಂಗೀತಲೀ ಉಣಖೂಣ। ಯಾ ನಾಂವ ಗಾ ಪಿತೃಭಜನ। ಋಷಿಪೂಜನ ತೇ ಐಕ ॥೩೮೪॥ ಸನ್ಮಾನೇ ಆಣೂನಿ ಬ್ರಾಹ್ಮಣ। ಶ್ರದ್ಧಾ ಕೀಜೇ ಚರಣಕ್ಷಾಳಣ। ಚರಣತೀರ್ಥಾಭಿವಂದನ। ಸಬಾಹ್ಯ ಜಾಣ ಸ್ವಯೇ ಕೀಜೇ ॥೩೮೫॥ ಧೂಪೇ ದೀಪೇ ಯಥೋಕ್ತ ಪೂಜನ। ಯಥಾರುಚಿ ತೃಪ್ತಿ ಸದನ್ನ। ಯಥಾಶಕ್ತಿ ದ್ಯಾವೇ ಧನ। ಋಷಿಪೂಜನ ಯಾ ನಾಂವ ॥೩೮೬॥ ಬ್ರಾಹ್ಮಣ ತೇಚಿ ಋಷೀಶ್ವರ। ಬ್ರಾಹ್ಮಣೇ ತೃಪ್ತ ಸನತ್ಕುಮಾರ। ಬ್ರಾಹ್ಮಣಮುಖೇ ಶಾಂಙ್ಗ್ರಧರ। ಧಾಲಾ ಢೇಂಕರ ದೇತಸೇ ॥೩೮೭॥ ಬಂಧು ಸ್ವಗೋತ್ರ ಸ್ವಜನ। ತ್ಯಾಂಚೀ ದರಿದ್ರಪೀಡಾ ದಾರುಣ। ನಿರಸಾವೀ ದೇಊನಿ ಧನ। ಹಾ ಮುಖ್ಯ ಧರ್ಮ ಜಾಣ ಶ್ರೇಷ್ಠತ್ವೇ ॥೩೮೮॥ ಕುಟುಂಬ ಪೀಡೂನಿ ಆಪಣ। ಅನ್ಯತ್ರಾ ದ್ಯಾವೇ ಅನ್ನಧನ। ತೋಚಿ ಅಧರ್ಮ ಪರಿಪೂರ್ಣ। ಶುದ್ಧ ಪುಣ್ಯ ತೇ ನವ್ಹೇ ॥೩೮೯॥ ಕುಟುಂಬಾಸೀ ಯಥೋಚಿತ। ಸುಖೀ ಕರೂನಿ ಸಮಸ್ತ। ಯಾಹೂನಿ ಉರಲಾ ಜೋ ಅರ್ಥ। ತೋ ಶ್ರೇಯಾರ್ಥ ವೇಂಚಾವಾ ॥೩೯೦॥ ಅತಿಥಿ ಆಲಿಯಾ ದೇಖ। ಅನ್ನ ದ್ಯಾವೇ ಆವಶ್ಯಕ। ತೋ ಝಾಲಿಯಾ ಪರಾಂಙ್ಮುಖ। ಪುಣ್ಯ ನಿಃಶೇಷ ಹರಾಸೇ ॥೩೯೧॥

ಸ್ವತಃ ಪಿತೃತರ್ಪಣೆಯನ್ನು ಮಾಡಬೇಕು. ಹನ್ನೆರಡು ಅಮವಾಸ್ಯಗಳು, ನಾಲ್ಕು ಯುಗಾದಿಸ್ಥಿತಿ, ಹದಿನಾಲ್ಕು ಮನ್ವಾದಿತಿಥೀ, ಹನ್ನೆರಡು ಸೂರ್ಯಸಂಕ್ರಾಂತೀ, ಹನ್ನೆರಡು ವೈಧೃತಿ, ಹನ್ನೆರಡು ವ್ಯತಿಪಾತ, ಹದಿನೈದು ಮಹಾಲಯ, ಐದು ಅಷ್ಟಕಾ, ಐದು ಅನ್ವಷ್ಟಕಾ ಮತ್ತು ಐದು ಪೂರ್ವೇಪಃ ಹೀಗೆ ತೊಂಬತ್ತಾರು ಶ್ರಾದ್ಧಗಳನ್ನು ಮಾಡಬೇಕು. ಸ್ವತಃ ತಾನು ಗಯಾವರ್ಜನ ಮಾಡಬೇಕು ॥೩೭೮॥ ಬದುಕಿರುವ ತಂದೆ ತಾಯಿಗಳವರಿಗೆ ತ್ರಿಕಾಲ ವಂದನೆಯನ್ನು ಮಾಡಬೇಕು. ಅವರ ಅಪಮಾನವನ್ನು ಎಂದಿಗೂ ಮಾಡಬಾರದು. ತಮ್ಮ ಪ್ರಾಣವಿರುವವರೆಗೂ ಅವರಿಗೆ ಅವಹೇಳನೆಯನ್ನು ಮಾಡಕೂಡದು ॥೩೭೯॥ ಅವರನ್ನು ಗೌರವದಿಂದ ಕಾಣುತ್ತ ಅವರಿಗೆ ಯಥಾಶಕ್ತಿ ಅನ್ನವನ್ನು ಕೊಡಬೇಕು. ಹಾಗೆಯೇ ಯಥಾಶಕ್ತಿ ಅವರಿಗೆ ಧನವನ್ನು ಕೊಟ್ಟು, ಸೇವೆಯನ್ನು ಮಾಡುತ್ತ ಅವರನ್ನು ಪೂರ್ಣವಾಗಿ ಸುಖಿ-ಸಮಾಧಾನವನ್ನಾಗಿ ಮಾಡಬೇಕು ॥೩೮೦॥ ತಂದೆಯು ಪ್ರತ್ಯಕ್ಷವಾಗಿ ನಾರಾಯಣ ಸ್ವರೂಪನು ಮತ್ತು ತಾಯಿಯು ಪ್ರತ್ಯಕ್ಷ ಲಕ್ಷ್ಮೀ ಸ್ವರೂಪಳು ಎಂಬ ಭಾವನೆಯಿಂದ ಯಾರು ಅವರ ಸೇವೆಯನ್ನು ಮಾಡುವನೋ, ಅವನೇ ನಿಜವಾದ ಸುಪುತ್ರನಾಗಿರುವನು ॥೩೮೧॥ ಯಾರ ಸೇವೆಯಿಂದ ತಂದೆತಾಯಂದಿರು ಸುಖೀಯಾಗುವರೋ, ಅದೇ ನಿಜವಾದ ಪಿತೃತರ್ಪಣವಾಗಿದೆ. ಜೀವಂತವಿದ್ದಾಗ ಅವರ ಅವಜ್ಞೆಯನ್ನು ಮಾಡುವುದು ಮತ್ತು ಅನಾದರವನ್ನು ಮಾಡುವುದು, ಅವರ ಮರಣದನಂತರ ಅವರ ಶ್ರಾದ್ಧವನ್ನು ಮಾಡುವುದು ಇದು ಕೇವಲ ಲೌಕಿಕವಾಗಿರುವುದು ॥೩೮೨॥ ಯಾರು ತನ್ನ ತಂದೆಯ ವಚನದಲ್ಲಿ ವಿಶ್ವಾಸವನ್ನು ಇಡುವುದಿಲ್ಲವೋ, ಅವನು ತನ್ನ ಪಾಪದ ರಾಶಿಯನ್ನು ಬೆಳೆಸುತ್ತಿರುವನು. ಯಾರು ತನ್ನ ತಂದೆಯ ವಚನದಲ್ಲಿ ವಿಶ್ವಾಸವನ್ನು ಇಡುವನೋ, ಅವನಲ್ಲಿ ಮೋಕ್ಷವು ಸೇವಕನಾಗಿರುವುದು ॥೩೮೩॥ ಬದುಕಿರುವ ತಂದೆತಾಯಿಗಳ ಮತ್ತು ಮರಣ ಹೊಂದಿದ ತಂದೆತಾಯಿಗಳ ತೃಪ್ತಿಯನ್ನು ಹೇಗೆ ಮಾಡಬೇಕೆಂಬ ರಹಸ್ಯವನ್ನು ಪ್ರಕಟ ಮಾಡಲಾಯಿತು. ಇದಕ್ಕೇನೇ ಪಿತೃಭಜನವೆಂದು ಹೇಳುವರು. ಋಷೀ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ಈಗ ಹೇಳುವೆನು, ಕೇಳು. ॥೩೮೪॥ ಬ್ರಾಹ್ಮಣನನ್ನು ಸನ್ಮಾನಪೂರ್ವಕವಾಗಿ ಕರೆದು ತರಬೇಕು. ಶ್ರದ್ಧೆಯಿಂದ ಅವರ ಪಾದಪೂಜೆಯನ್ನು ಮಾಡಬೇಕು. ಅವರ ಚರಣ ತೀರ್ಥವನ್ನು ವಂದಿಸಬೇಕು ॥೩೮೫॥ ಧೂಪ, ದೀಪಗಳಿಂದ ಅವರ ಯಥಾಸಾಂಗ ಪೂಜೆಯನ್ನು ಮಾಡಬೇಕು. ಅವರಿಗೆ ಪ್ರಿಯವಾಗಿರುವ ಮೃಷ್ಟಾನ್ನವನ್ನು ಮಾಡಿ ಅವರನ್ನು ತೃಪ್ತಗೊಳಿಸಬೇಕು. ಅವರಿಗೆ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು. ಇದಕ್ಕೆ ಋಷಿಪೂಜೆ ಎಂದು ಹೇಳುವರು ॥೩೮೬॥ ಬ್ರಾಹ್ಮಣನೇ ಶ್ರೇಷ್ಠನಾದ ಋಷಿಯಾಗಿರುವನು. ಬ್ರಾಹ್ಮಣರ ತೃಪ್ತಿಯಿಂದ ಸನತ್ಕುಮಾರರು ತೃಪ್ತರಾಗುವರು. ಬ್ರಾಹ್ಮಣನ ಮುಖ ಮುಖಾಂತರವಾಗಿ ಶ್ರೀಕೃಷ್ಣನು ತೃಪ್ತನಾಗಿ ತೇಗಿಬಿಡುವನು ॥೩೮೭॥ ಆಪ್ತರಿಗೆ, ಇಷ್ಟಮಿತ್ರರಿಗೆ, ಬಂಧುಬಳಗ ಸ್ವಜನರಿಗೆ ಹೀಗೆ ಸರ್ವರಿಗೂ ಧನವನ್ನು ಕೊಟ್ಟು ಅವರ ದಾರಿದ್ರ್ಯವನ್ನು ದೂರ ಮಾಡಬೇಕು, ದುಃಖವನ್ನು ನಿರಸನೆ ಮಾಡಬೇಕು, ಇದೇ ನಿಜವಾದ ಶ್ರೇಷ್ಠ ಧರ್ಮವಾಗಿದೆ ॥೩೮೮॥ ತನ್ನ ಕುಟುಂಬ ವರ್ಗಕ್ಕೆ ತಾನೇ ಪೀಡೆಯನ್ನು ಕೊಡುತ್ತ ಇತರರಿಗೆ ಧನಧಾನ್ಯವನ್ನು ಕೊಡುವುದು ಇದು ಪರಿಪೂರ್ಣವಾಗಿ ಅಧರ್ಮವಾಗುವುದು. ಇದು ಶುದ್ಧ ಪುಣ್ಯವಾಗಲಾರದು ॥೩೮೯॥ ತನ್ನ ಕುಟುಂಬದಲ್ಲಿನ ಸರ್ವ ಜನರನ್ನು ಸುಖಿಯರನ್ನಾಗಿ ಮಾಡಿ, ತದನಂತರ ಯಾವ ಉಳಿದ ದ್ರವ್ಯವನ್ನು ಪರೋಪಕಾರಕ್ಕಾಗಿ ಖರ್ಚು ಮಾಡಬೇಕು ॥೩೯೦॥ ಮನೆಗೆ ಯಾರೇ ಅತಿಥಿಯು ಬಂದರೆ ಆತನಿಗೆ ಅನ್ನವನ್ನು ಕೊಡಬೇಕು. ಆತನು ವಿಮುಖನಾದರೆ ನಮ್ಮಲ್ಲಿದ್ದ ಪುಣ್ಯವು ಲಯವಾಗುವುದು ॥೩೯೧॥

ಸಕಳ ದಾನಾಮಾಜೀ ಜಾಣ । ಅತಿಶ್ರೇಷ್ಠ ಅನ್ನದಾನ । ದೀನಾಸ ದೇಊನಿ ಸನ್ಮಾನ । ದ್ಯಾವೇ ಸದನ್ನ ಅತಿಶ್ರದ್ಧಾ ।।೯೨।। ಕುಟಂಬ ಸುಖೀ ಕರೀ ಆಪಣ । ಸ್ವೇಚ್ಛಾ ದೇ ದೀನಭೋಜನ । ಪರೀ ಕದರ್ಥವೀ ಜೋ ನಿಜಪ್ರಾಣ । ತೋಹೀ ದಾರುಣ ಅಧರ್ಮ ।।೯೩।। ಜೈಸೇ ಕೀಜೇ ದೀನತರ್ಪಣ । ತ್ಯಾಂತ ಆಪಣಹೀ ಏಕ ದೀನ । ತೇಥ ನ ಕರೂನಿ ಅಧಿಕನ್ಯೂನ । ಕರಾವೇ ಭೋಜನ ಸಮಭಾಗೇ ।।೯೪।।

ಪಂಕ್ತೀಮಾಜೀ ಪ್ರಪಂಚಪಣ । ತೇ ಅನ್ನದಾನೀ ಅತಿವಿಘ್ನ । ಯಾಲಾಗೀ ಕರಾವೇ ಭೋಜನ । ಸಮಭಾಗೀ ಆಪಣ ಸಕಳಾಂಸೀ ।।೯೫।। ಧನಾಚಾ ಸದ್ವ್ಯಯೋ ಖರಾ । ದ್ಯಾವೇ ಅನಾಥಪ್ರೇತಸಂಸ್ಕಾರಾ । ಅರ್ಪಾವೇ ದೀನಾಂಚ್ಯಾ ಉದ್ಧಾರಾ । ಧಾಡಾವೇ ಘರಾ ಅಯಾಚಿತಾಂಚ್ಯಾ ।।೯೬।। ಅಂಧ ಪಂಗು ಮುಕೇ ದೀನ । ಯಾಂಸೀ ಸಂರಕ್ಷೀ ಜೋ ಆಪಣ । ತ್ಯಾಚೇಚಿ ಸಾರ್ಥಕ ಧನ । ಶುದ್ಧ ಪುಣ್ಯ ತಯಾಚೇ ।।೯೭।। ಸಾಧುಸಜ್ಜನಾ ವಿಚಂಬೂ ಅಡೀ । ತೋ ವಿಚಂಬೂ ಜೋ ಸಧನ ತೋಡೀ । ತ್ಯಾಚ್ಯಾ ನಿಜಧರ್ಮಾಚೀ ಗುಡೀ । ಉಭಾರೇ ರೋಕಡೀ ವೈಕುಂಠೀ ।।೯೮।। ದುರ್ಬಳ ಜೋ ಕಾ ಭಗವದ್ಭಕ್ತ । ತ್ಯಾಂಸೀ ಸಂರಕ್ಷೀ ಜೋ ಧನವಂತ । ತೇಣೇ ತುಷ್ಟಲಾ ಭಗವಂತ । ತ್ಯಾತೇ ಉದ್ಧರೀತ ಭಕ್ತಾ ಆಧೀ ।।೯೯।। ಸಕಳಮಂಗಳಾ ಮಂಗಳ ಪೂರ್ಣ । ಸಕಳ ಕಲ್ಯಾಣಾಂಚೇ ಕಲ್ಯಾಣ । ತೇ ಹೇ ಸದ್ಗುರೂಶ್ರೀಚರಣ । ತೇಥ ನಿಜಧನ ಜಯಾಂಚೇ ಅರ್ಪೇ ।।೧೦೦।। ತಯಾಂಚ್ಯಾ ನಿಜಧರ್ಮಾಚೇ ನಿಶಾಣ । ಸತ್ಯಲೋಕೀ ಲಾಗಲೇ ಜಾಣ । ವೈಕುಂಠೀ ಕೈಲಾಸೀ ಸಂಪೂರ್ಣ । ಭೇರಿನಿಶಾಣ ತ್ರಾಹಾಟಿಲೇ ।।೧೦೧।। ಸ್ವಧರ್ಮೇ ಜೋಡಲೇ ನಿಜಧನ । ಜೋ ಕರೀ ಸದ್ಗುರೂಸೀ ಅರ್ಪಣ । ತೋಚಿ ಕರ್ಮೀ ನಿಷ್ಕರ್ಮ ಜಾಣ । ಪರಮ ಪಾವನ ತೋ ಏಕ ।।೧೦೨।। ಜೋ ಚಢತ್ಯಾವಾಢತ್ಯಾ ಭಗವದ್ಭಕ್ತೀ । ಗುರೂಸೀ ಅರ್ಪೀ ನಿಜಸಂಪತ್ತೀ । ತ್ಯಾತೇ ಅಂಗೀಕಾರೂನಿ ಲಕ್ಷ್ಮೀಪತೀ । ಆಪುಲೀ ನಿಜಭಕ್ತೀ ತ್ಯಾಸೀ ದೇ ।।೧೦೩।। ಜ್ಯಾಸೀ ಅನನ್ಯ ಗುರುಭಕ್ತೀ । ತ್ಯಾಚ್ಯಾ ದ್ವಾರೀ ಚಾರೀ ಮುಕ್ತೀ । ದಾಸೀತ್ವೇ ಉಭ್ಯಾ ಅಸತೀ । ತ್ಯಾಪಾಸೋನಿ ಶ್ರೀಪತೀ ಪರತಾ ನವ್ಹೇ ।।೧೦೪।। ಜ್ಯಾಚೇ ತನು ಮನ ಧನ । ಗುರುಚರಣೀ ಅರ್ಪೇಪೂರ್ಣ । ತ್ಯಾಸೀ ಭವಭಯಾಚೇ ಭಾನ । ಕಲ್ಪಾಂತೀ ಜಾಣ ದಿಸೇನಾ ।।೧೦೫।।

ನೇಕ ಪ್ರಕಾರದ ದಾನಗಳಲ್ಲಿ ಅನ್ನದಾನವು ಇದು ಶ್ರೇಷ್ಠದಾನವಾಗಿರುವುದು. ಬಡಬಗ್ಗರನ್ನು ಮನಃಪೂರ್ವಕವಾಗಿ ಸತ್ಕಾರವನ್ನು ಾಡಬೇಕು. ಅವರನ್ನು ಅತ್ಯಂತ ಶ್ರದ್ಧೆಯಿಂದ ಸುಗ್ರಾಸವಾದ ಅನ್ನವನ್ನು ಕೊಡಬೇಕು ।।೯೨।। ಯಾರು ತನ್ನ ಸ್ವತಃ ಕುಟಂಬಕ್ಕೆ ಸುಖಿಯನ್ನಾಗಿ ಮಾಡಿ ದೀನ ದಲಿತ ಜನರಿಗೆ ಭೋಜನವನ್ನು ಹಾಕುವನು. ಆದರೆ ತಾನು ಮಾತ್ರ ಉಪವಾಸನಾಗಿರುವನು. ಹೀಗೆ ಮಾಡಿದರೆ ಅದೂ ಕೂಡ ಅಧರ್ಮವಾಗುವುದು ।।೯೩।। ತಾನು ಬಡಬಗ್ಗರಿಗೆ ಹೇಗೆ ಊಟವನ್ನು ಕೊಡುವನೋ, ಅದರಲ್ಲಿ ತಾನೂ ಕೂಡ ಒಬ್ಬ ಬಡವನೆಂಬ ಭಾವನೆಯಿಂದ ಅದರಲ್ಲಿ ತನ್ನ ಕಡಿಮೆತನ ತಿಳಿಯದೇ ಅವರೆಲ್ಲರ ಜೊತೆಯಲ್ಲಿ ಕುಳಿತು ಊಟವನ್ನು ಮಾಡಬೇಕು ।।೯೪।।

ಪಂಕ್ತಿಪ್ರಪಂಚ ಅಂದರೆ ಪಂಕ್ತಿಯಲ್ಲಿ ಪರಪಂಕ್ತಿಯನ್ನು ಮಾಡುವುದು. ಇದು ಅನ್ನದಾನದಲ್ಲಿ ದೊಡ್ಡ ವಿಘ್ನವಾಗಿರುವುದು. ಎಲ್ಲರಿಗೂ ಸರಿಸಮಾನವಾಗಿ ಬಡಿಸುವುದು ಅವಶ್ಯವಾಗಿರುವುದು. ಅದಕ್ಕಾಗಿ ತಾನು ಎಲ್ಲರ ಜೊತೆಯಲ್ಲಿ ಊಟವನ್ನು ಮಾಡಬೇಕು. ।।೯೫।। ಅನಾಥ ಪ್ರೇತಕ್ಕೆ ಅಗ್ನಿಸಂಸ್ಕಾರವನ್ನು ಮಾಡುವುದು ಇದು ಧನದ ನಿಜವಾದ ಉಪಯೋಗವಾಗಿರುವುದು. ದೀನರಿಗೆ ಹಣದ ಸಹಾಯವನ್ನು ಮಾಡುವುದು ಅಥವಾ ಅಯಾಚಿತ ವೃತ್ತಿಯನ್ನು ಪರಿಪಾಲಿಸುವವರ ಮನೆಗೆ ದ್ರವ್ಯವನ್ನು ಕಳಿಸುವುದು ಇದು ಧನದ ಉತ್ತಮವಾದ ಉಪಯೋಗವಾಗಿರುವುದು ।।೯೬।। ಯಾರು ತಾನಾಗಿಯೇ ಮುಂದಾಗಿ ಕುರುಡ, ಕುಂಟ, ಮೂಕ, ದೀನಬಡವ ಇವರ ರಕ್ಷಣೆಯನ್ನು ಮಾಡುವುದರಿಂದ ಅವನ ಧನವು ಸಾರ್ಥಕವಾಗುವುದು. ಇದು ಅವನ ಶುದ್ಧ ಪುಣ್ಯವಾಗುವುದು ।।೯೭।। ಯಾರು ಸಾಧುಸಂತರ, ಸಜ್ಜನರ ಸಂಕಟಗಳನ್ನು ದೂರ ಮಾಡುವನೋ, ಆ ಶ್ರೀಮಂತ ಮನುಷ್ಯನ ಧರ್ಮಧ್ವಜವು ಸಾಕ್ಷಾತ ವೈಕುಂಠದಲ್ಲಿ ಏರಿಸಲ್ಪಡುವುದು ।।೯೮।। ಭಗವದ್ಭಕ್ತನು ಬಡವನಾಗಿದ್ದರೆ ಆತನನ್ನು ಶ್ರೀಮಂತ ಮನುಷ್ಯನು ರಕ್ಷಣೆಯನ್ನು ನೀಡಿದರೆ ಆತನಲ್ಲಿ ಪ್ರಭು ಪರಮಾತ್ಮನು ಸಂತುಷ್ಟನಾಗಿ ಆ ಭಕ್ತನಿಗಿಂತಲೂ ಮುಂಚಿತವಾಗಿ ಆತನನ್ನು ಉದ್ಧರಿಸುವನು ।।೯೯।। ಸರ್ವ ಮಂಗಳಗಳಲ್ಲಿ ಪರಿಪೂರ್ಣ ಮಂಗಳಕಾರಕವಾದ, ಸರ್ವ ಕಲ್ಯಾಣಗಳಲ್ಲಿ ಪರಿಪೂರ್ಣ ಕಲ್ಯಾಣಕಾರಕವಾದ, ಇಂತಹ ಸದ್ಗುರುಗಳ ಚರಣಗಳಲ್ಲಿ ಯಾರ ನಿಜಧನವು ಅರ್ಪಿತವಾಗುವುದೋ ।।೧೦೦।। ಅಂಥವರ ನಿಜಧರ್ಮದ ಪತಾಕೆಯು ಸತ್ಯಲೋಕದಲ್ಲಿ ಏರಿಸಲ್ಪಡುವುದು. ವೈಕುಂಠ, ಕೈಲಾಸಗಳಲ್ಲಿ ನಗಾರೀ ನೌಬತ್ತುಗಳು ಬಾರಿಸುವುವು ।।೧೦೧।। ಯಾವ ಸ್ವಧರ್ಮದಿಂದ ಕೂಡಿಸಿರುವ ಧನವನ್ನು ಸದ್ಗುರುಗಳಿಗೆ ಅರ್ಪಣೆಯನ್ನು ಮಾಡಿದರೆ, ಆತನು ಕರ್ಮಗಳನ್ನು ಮಾಡಿದರೂ ಕೂಡ ನಿಷ್ಕರ್ಮಿಯಾಗುವನು. ಹಾಗೂ ಆತನು ಪರಮ ಪಾವನನಾಗುವನು ।।೧೦೨।। ಯಾರು ಅಧಿಕಾಧಿಕವಾದ ಭಕ್ತಿಯಿಂದ ತನ್ನ ಸಂಪತ್ತನ್ನು ಪ್ರೇಮಭಾವದಿಂದ ಸದ್ಗುರುಗಳಿಗೆ ಅರ್ಪಣೆಯನ್ನು ಮಾಡಲು, ಆಗ ಶ್ರೀಹರಿಯು ಅದನ್ನು ತಾನು ಸ್ವೀಕಾರವನ್ನು ಮಾಡಿ ಆತನಿಗೆ ತನ್ನ ಭಕ್ತಿಯನ್ನು ಕೊಡುವನು ।।೧೦೩।। ಯಾರು ಏಕನಿಷ್ಠೆಯಿಂದ ಗುರುಗಳ ಆರಾಧನೆಯನ್ನು ಮಾಡುವನೋ, ಆತನ ಬಾಗಿಲಲ್ಲಿ ನಾಲ್ಕೂ ಮುಕ್ತಿಗಳು ದಾಸರಾಗಿ ನಿಂತುಕೊಳ್ಳುವುವು. ಶ್ರೀಹರಿಯು ಈ ಯಾವ ಭಕ್ತನಿಂದ ಎಂದಿಗೂ ದೂರಾಗಿರುವುದಿಲ್ಲ ।।೧೦೪।। ಯಾರು ತನ್ನ ತನ, ಮನ, ಧನವನ್ನು ಗುರುಚರಣಗಳಲ್ಲಿ ಅರ್ಪಿಸಿಬಿಡುವನೋ, ಆತನಿಗೆ ಸಂಸಾರಭಯದ ಭಾವವು ಕಲ್ಪಾಂತಕ್ಕೂ ಆಗಲು ಸಾಧ್ಯವಿಲ್ಲ ।।೧೦೫।।

ದೈವೇ ಜೋಡಲೀ ಜೇ ಸಂಪತ್ತೀ । ತೇ ವೆಂಚೋನಿ ಐಶಾ ನಿಗುತೀ। ಅರ್ಥೇ ಪರಮಾರ್ಥಪ್ರಾಪ್ತೀ । ಸಭಾಗ್ಯ ಲಾಹತೀ ನಿಜನಿಷ್ಠಾ ।೪೦೬।। ಐಸೇ ನ ವೇಂಚೋನಿ ಧನ । ಸ್ವಯಾತಿ ಕುಟುಂಬ ಪೀಡೀ ಪೂರ್ಣ । ಜೋ ಪೋಟಾ ನ ಖಾಯ ಆಪಣ । ತೇ ಯಕ್ಷಧನ ಸಂಚಿತ ।೪೦೭।। ಏವಂ ಕದ ರ್ಥೂನಿ ನಿಜಪ್ರಾಣ । ಜೇ ಸಂಚಿಲೇ ಯಕ್ಷಧನ । ತೇ ಅಧಃ ಪಾತಾಸೀ ಕಾರಣ। ದುಃಖ ದಾರುಣ ಧನಲೋಭ್ಯಾ ।೪೦೮।। ಮ್ಹಣೇ ಮೀಹೀ ಯಾಚ ನಿಷ್ಠಾ। ಯಕ್ಷವಿತ್ತೇ ಝಾಲೋ ಕರಂಟಾ । ಹಾತೀಂಚಾ ಸ್ವಾರ್ಥ ಗೇಲಾ ಮೋಟಾ । ವಂಚಲೋ ಕಟಕಟಾ ನಿಜಮೋಕ್ಷಾ ।೪೦೯।। ಸಾಂಚೋನಿಯಾ ಯಕ್ಷವಿತ್ತ । ಮ್ಯಾ ಮಾಝೇ ಕೇಲೇ ಅನಹಿತ । ಐಸಾ ತೋ ಖೇದಯುಕ್ತ । ಕಷ್ಟೇ ಬೋಲತ ನಿಜದುಃಖ ।೪೧೦।।

ವ್ಯರ್ಥಯಾಽರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ । ಕುಶಲಾ ಯೇನ ಸಿಧ್ಯಂತಿ ಜರಠಃ ಕಿಂ ನು ಸಾಧಯೇ ।೨೫।।

ಅರ್ಥ:- ನಾನು ಕರ್ತವ್ಯದಿಂದ ಚ್ಯುತನಾದೆನು. ನಾನು ಅಭಿಮಾನದಿಂದ ನನ್ನ ಆಯುಷ್ಯ, ಧನ, ಬಲ , ಪೌರುಷ ಎಲ್ಲವನ್ನೂ ಕಳೆದುಕೊಂಡುಬಿಟ್ಟೆನು. ವಿವೇಕೀ ಪುರುಷರು ಯಾವ ಸಾಧನೆಯಿಂದ ಮೋಕ್ಷ ಪ್ರಾಪ್ತಿ ಮಾಡಿಕೊಳ್ಳುವರೋ, ಆ ಸಾಧನೆಯನ್ನು ನಾನು ಮಾಡದೇ ವ್ಯರ್ಥವಾಗಿ ಧನಕ್ಕೆ ಬೆನ್ನುಹತ್ತಿದೆನು.

ನಿಜಭೋಗವಿವರ್ಜಿತ । ಶಿಣೋನಿ ಕಾಯಾ ವಾಚಾ ಚಿತ್ತ । ಕಷ್ಟೇ ಮಿಳವಾವಯಾವಿತ್ತ । ಝಾಲೋ ಉನ್ಮತ್ತ ಅವಿವೇಕೀ ।೪೧೧।। ಕರಿತಾ ವಿತ್ತಾಚೇ ಆಯಾಸ । ಗೇಲೇ ತಾರುಣ್ಯ ಬಳ ಆಯುಷ್ಯ । ಶರೀರ ಕ್ಷೀಣ ಝಾಲೇ ನಿಃಶೇಷ । ತರೀ ವಿತ್ತಾಚಾ ಶೋಷ ಶಮೇನಾ ।೪೧೨।। ಅರ್ಥೇ ಅರ್ಥ ವಾಢವಿತಾ । ಅನಿವಾರ ವಾಢಲೀ ಚಿಂತಾ । ತೇಥೇ ವಿಸರಲೋ ನಿಜಸ್ವಾರ್ಥಾ । ಅರ್ಥಲೋಭತಾ ಕದರ್ಯೂ ।೪೧೩।। ಜೇಣೇ ವಿತ್ತೇ ಜೇವಿತೇ ಸಾಚಾರ । ಭೂತದಯಾ ಪರೋಪಕಾರ । ಕರೂನಿಯಾ ವಿವೇಕೀ ನರ । ಭವಾಬ್ಧಿ ಪರಪಾರ ಪಾವಲೇ ।೪೧೪।। ಮಜ ನಿರ್ದೈವಾಚೇ ಯೇಥ । ವೃಥಾ ವಿತ್ತ ವೃಥಾ ಜೀವಿತ । ಆಯುಷ್ಯಹೀ ಗೇಲೇ ವ್ಯರ್ಥ । ನಿಜಸ್ವಾರ್ಥ ಬುಡಾಲಾ ।೪೧೫।। ಮ್ಹಣಾಲ ಅಸತಾ ಜೀವೇ ಜೀತ । ಸಾಧುನಿ ಘೇಊ ನಿಜಸ್ವಾರ್ಥ । ತೇ ಆತಾ ನ ಚಲೇ ಏಥ । ಅರ್ಥ ಸಾಮರ್ಥ್ಯ ದೋನೀ ಗೇಲೀ ।೪೧೬।। ಅಧರ್ಮಾಸ್ತವ ಗೇಲೇ ವಿತ್ತ । ಜರೇನೇ ಗಿಳಿಲೇ ಸಾಮರ್ಥ್ಯ । ಕೇವಳ ಮೀ ಜರಠ ಯೇಥ । ದೈವಹತ ಉರಲೋ ಅಸೇ ।೪೧೭।। ಕಟಕಟಾ ಜೋಡಿತಾ ಅರ್ಥ । ಲೋಕ ನಾಡಲೇ ಸಮಸ್ತ । ಐಸೇ ಜಾಣೋನಿ ಪ್ರಸ್ತುತ । ಸ್ವಯೇ ಸಾಂಗತ ಕದರ್ಯು ।೪೧೮।।

ದೈವಯೋಗದಿಂದ ಪ್ರಾಪ್ತವಾಗಿರುವ ಧನ ಸಂಪತ್ತನ್ನು ಈ ಪ್ರಕಾರವಾಗಿ ವಿನಿಯೋಗಿಸಿ ಭಾಗ್ಯವಾನ ಪುರುಷನು ಆ ಯಾವ ದ್ರವ್ಯದಿಂದ ನಿಷ್ಠಾಪೂರ್ವಕ ಪರಮಾರ್ಥದ ಪ್ರಾಪ್ತಿಯನ್ನು ಮಾಡಿಕೊಳ್ಳುವನು ।೪೦೬।। ಆದರೆ ಈ ಪ್ರಕಾರವಾಗಿ ಧನದ ಉಪಯೋಗವನ್ನು ಮಾಡದೇ, ತನ್ನ ಸ್ವಜನರಿಗೆ ಪೀಡೆಯನ್ನು ಕೊಟ್ಟು ಸ್ವತಃದ ಹೊಟ್ಟೆಗೂ ತಿನ್ನಲಾರದವನ ಧನವು ಯಕ್ಷಧನವಾಗಿರುವುದು ।೪೦೭।। ಈ ರೀತಿಯಲ್ಲಿ ತನ್ನ ಜೀವಕ್ಕೂ ಕೂಡ ಕಷ್ಟವನ್ನು ಕೊಟ್ಟು ಯಾವ ಯಕ್ಷಧನವನ್ನು ಕೂಡಿಸಿಡುವನು. ಆದರಿಂದ ಅಧಃಪಾತವಾಗುವುದು ಮತ್ತು ಆ ದ್ರವ್ಯಲೋಭಿ ಮನುಷ್ಯನಿಗೆ ದಾರುಣವಾದ ದುಃಖವನ್ನು ಭೋಗಿಸಬೇಕಾಗುವುದು ।೪೦೮।। ನಾನೂ ಕೂಡ ಇದೇ ರೀತಿಯಲ್ಲಿ ಯಕ್ಷಧನದಿಂದ ದುರ್ಭಾಗ್ಯ ನಾದೆನು. ಕೈಗೆ ಹತ್ತಿದ್ದ ದೊಡ್ಡ ಸ್ವಾರ್ಥವು ವ್ಯರ್ಥ್ಯವಾಗಿ ಹೋಗಿಬಿಟ್ಟಿತು. ನಾನು ಮೋಕ್ಷವನ್ನು ಕಳೆದುಕೊಂಡೆನು ।೪೦೯।। ಯಕ್ಷಧನವನ್ನು ಸಂಗ್ರಹಿಸಿ ನಾನು ನನ್ನ ಅಕಲ್ಯಾಣವನ್ನು ಮಾಡಿಕೊಂಡೆನು. ಹೀಗೆನ್ನುತ್ತ ಆ ಯಾವ ಕೃಪಣ ಬ್ರಾಹ್ಮಣನು ಬಹಳ ಖೇದದಿಂದ ತನ್ನ ದುಃಖವನ್ನು ಹೇಳಹತ್ತಿದನು ।೪೧೦।।

ಸ್ವತಃ ನನಗಾಗಿ ಯಾವ ಉಪಭೋಗವನ್ನು ಪಡೆಯದೇ ಕಾಯಾ, ವಾಚಾ, ಮನದಿಂದ ಶ್ರಮಪಟ್ಟು ಬಹಳಷ್ಟು ಕಷ್ಟಗಳನ್ನು ಸೋಸಿ ನಾನು ಧನವನ್ನು ಕೂಡಿಸಿದೆನು ಮತ್ತು ಈ ಧನದಿಂದ ಉನ್ಮತ್ತನಾಗಿ ಅವಿವೇಕಿಯಾದೆನು ।೪೧೧।। ಧನ ಕೂಡಿಸುವುದಕ್ಕಾಗಿ ಕಷ್ಟಪಡುವುದರಲ್ಲಿ ನನ್ನ ತಾರುಣ್ಯ, ಬಲ ಮತ್ತು ಆಯುಷ್ಯ ಇವು ಹೊರಟು ಹೋದವು. ಶರೀರವು ಮಾತ್ರ ಪರಿಪೂರ್ಣವಾಗಿ ಕ್ಷೀಣವಾಯಿತು. ಇಷ್ಟಾದರೂ ಕೂಡ ಧನದ ಆಶೆಯು ಏನೂ ಕಡಿಮೆಯಾಗಲಿಲ್ಲ ।೪೧೨।। ಹಣದಿಂದ ಹಣ ಗಳಿಸುತ್ತಿರಲು ಅನಿವಾರ್ಯವಾಗಿ ಚಿಂತೆಯು ಬೆಳೆಯಲಾರಂಭಿಸಿತು. ಆದ್ದರಿಂದ ನಾನು ಜೀವನದ ನಿಜವಾದ ಸ್ವಾರ್ಥವನ್ನು ಮರೆತುಬಿಟ್ಟೆನು. ಧನದ ಲೋಭದಿಂದ ಕೃಪಣನಾಗಿಬಿಟ್ಟೆನು ।೪೧೩।। ಯಾವ ಧನದ ಸಹಾಯದಿಂದ ವಿವೇಕಉಳ್ಳ ಜನರು ಭೂತದಯೆ, ಪರೋಪಕಾರ ಇತ್ಯಾದಿ ಸಾಧನೆಗಳಿಂದ ಭವಸಾಗರವನ್ನು ದಾಟಿ ಆಚೆ ದಂಡೆಯನ್ನು ಮುಟ್ಟಿಕೊಂಡರು ।೪೧೪।। ಇಂತಹ ಸ್ಥಿತಿಯಲ್ಲಿ ದುರ್ದೈವಿಯಾದ ನನ್ನ ಧನವು ವ್ಯರ್ಥ ಹೋಯಿತು, ಜೀವನವು ವ್ಯರ್ಥವಾಯಿತು, ಮತ್ತು ಆಯುಷ್ಯವು ವ್ಯರ್ಥವಾಗಿಕಳೆಯಿತು. ಇದರಿಂದ ನನ್ನ ಎಲ್ಲ ಸ್ವಾರ್ಥವು ಮುಳುಗಿ ಹೋಯಿತು ।೪೧೫।। ಅಕಸ್ಮಾತಾಗಿ ನೀವು ನನಗೆ ಹೀಗೆ ಹೇಳಬಹುದು; ಈಗೇನಾಗಿದೆ? ಇನ್ನೂ ಜೀವಂತನಾಗಿರುವೆಯಲ್ಲಾ? ಇನ್ನು ಮುಂದಾದರೂ ನೀನು ನಿನ್ನ ಸ್ವಾರ್ಥವನ್ನು ಸಾಧಿಸು. ಆದರೆ ಈಗ ಇದು ಈ ಸ್ಥಿತಿಯಲ್ಲಿ ಸಾಧಿಸಲು ಸಾಧ್ಯವಿಲ್ಲ. ಕಾರಣವೇನಂದರೆ, ಧನ ಮತ್ತು ಶಕ್ತಿ ಇವು ಎರಡೂ ನನ್ನಲ್ಲಿಲ್ಲವಾಗಿವೆ ।೪೧೬।। ಅಧರ್ಮ ಕರ್ಮದಿಂದ ನನ್ನ ಸರ್ವ ಸಂಪತ್ತು ನಾಶವಾಯಿತು. ಮುಪ್ಪಾವಸ್ಥೆಯು ನನ್ನ ಸರ್ವ ಶಕ್ತಿಯನ್ನು ನುಂಗಿಬಿಟ್ಟಿತು. ನಾನೀಗ ಕೇವಲ ದುರ್ದೈವಿಯಾಗಿ ಮುದುಕನಾಗಿ ಉಳಿದುಕೊಂಡಿರುವೆನು ।೪೧೭।। ಹಣಕೂಡಿಸುವ ಲೋಭದಲ್ಲಿ ನಾನು ಸರ್ವ ಜನರಿಂದ ತಿರಸ್ಕಾರನಾದೆ. ಹೀಗೆ ತಿಳವಳಿಕೆ ಬಂದು ಕೃಪಣನು ಸ್ವತಃ ವೃತ್ತಾಂತವನ್ನು ಹೇಳುತ್ತಿರುವನು ।೪೧೮।।

ಕಸ್ಮಾತ್ಸಂಕ್ಲಿಶ್ಯತೇ ವಿದ್ವಾನ್ ವ್ಯರ್ಥಯಾಽರ್ಥೇಹಯಾಸಕೃತ್ । ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ ॥೭೬॥

ಅರ್ಥ:- ಮಹಾ ಮಹಾ ವಿದ್ವಾನರೂ ಕೂಡ ವ್ಯರ್ಥವಾದ ಧನಲೋಭದಿಂದ ಯಾವಾಗಲೂ ದುಃಖದಿಂದ ಏಕೆ ಇರುವುದೆಂಬುದು ನನಗೆ ತಿಳಿದಿರಲಿಲ್ಲ. ಈ ಯಾವ ಜನರು ನಿಜವಾಗಿಯೂ ಯಾವುದೋ ಮಾಯೆಯಿಂದ ಮೋಹಿತರಾಗಿರುವರು.

ಯೇಥ ಅಜ್ಞಾನಾಚೀ ಕೋಣಗತೀ । ಜೇ ಅರ್ಥ ಅನರ್ಥೀ ಮ್ಹಣತೀ । ತೇಹೀ ಅರ್ಥಾರ್ಥೀ ಹೋತೀ । ಜ್ಞಾತೇ ಭ್ರಮತೀ ಅರ್ಥಾಸೀ ॥೪೧೯॥ ಐಸೇ ಭ್ರಮಲೇ ಜೇ ಸಜ್ಞಾನ । ತೇಹೀ ಅರ್ಜಾವಯಾ ಧನ । ಯುಕ್ತಾಯುಕ್ತ ಪ್ರಯತ್ನ । ಅನುದಿನೀ ಜಾಣ ಸ್ವಯೇ ಕರಿತೀ ॥೪೨೦॥ ಸಜ್ಞಾನ ಭ್ರಮಾವಯಾ ಕಾರಣ । ಈಶ್ವರಾಚೀ ಮಾಯಾ ಪೂರ್ಣ । ಅಘಟಘಟೀ ಜೀಚೇ ಲಕ್ಷಣ । ತ್ಯಾ ಧನೀ ಸಜ್ಞಾನ ಮೋಹಿಲೇ ॥೪೨೧॥ ಕೃಷ್ಣಮಾಯಾ ಮೋಹಿಲೇ ಪಂಡಿತ । ನವ್ಹೇ ಮ್ಹಣಾಲ ಹಾ ಇತ್ಯರ್ಥ । ತೇ ಜೋಡಿತಾತಿ ಅರ್ಥ । ನಿಜಸುಖಾರ್ಥ ಭೋಗೇಚ್ಛಾ ॥೪೨೨॥ ಭೋಗಾಮಾಜೀ ಜೇ ಮ್ಹಣತೀ ಸುಖ । ತೇ ಜಾಣವೇ ಕೇವಳ ಮೂರ್ಖ । ಯೇಚ ಅರ್ಥೀಚಾ ವಿವೇಕ । ಕದರ್ಯು ದೇಖ ಬೋಲತ ॥೪೨೩॥

ಕಿಂ ಧನೈರ್ಧನದೈರ್ವಾ ಕಿಂ ಕಾಮೈರ್ವಾ ಕಾಮದೈರುತ । ಮೃತ್ಯುನಾ ಗ್ರಸ್ಯಮಾನಸ್ಯ ಕರ್ಮಭಿರ್ವೋತ ಜನ್ಮದೈಃ ॥೭೭॥

ಅರ್ಥ:- ಈ ಮನುಷ್ಯ ಶರೀರವು ಕಾಲಚಕ್ರದಲ್ಲಿ ಸಿಲುಕಿಕೊಂಡಿರುವುದು. ಇದಕ್ಕೆ ಧನದಿಂದ, ಧನಕೊಡುವ ದೇವತೆಯಿಂದ, ಜನರಿಂದ ಭೋಗವಾಸನೆ ಪೂರ್ಣಮಾಡುವುದರಿಂದ, ಪುನಃಪುನಃ ಜನ್ಮ-ಮರಣದ ಚಕ್ರದಲ್ಲಿ ತಿರುಗಲು ಹಚ್ಚುವ ಸಕಾಮ ಕಾರ್ಯಗಳಿಂದ ಯಾವ ಲಾಭವಿದೆ?

ಕಟಕಟಾ ವರ್ಣಾಗ್ರ್ಯೇ ಪೂಜ್ಯ ಪಹಾ ಹೋ । ತ್ಯಾ ದ್ವಿಜಾಸೀ ಭುಲವೀ ಮಾಯಾಮೋಹೋ । ಭೋಗೀ ವಾಢವಿಜೇ ಜೋ ದೇಹೋ । ತೋಚಿ ಪಹಾ ಹೋ ನಶ್ವರ ॥೪೨೪॥ ತ್ಯಾ ದೇಹಾಸೀ ಜೇ ನಾನಾ ಭೋಗ । ತೋಚ ತ್ಯಾಸೀ ಕ್ಷಯರೋಗ । ಧನ ಜೋಡಣೇ ಅನೇಗ । ತೋಚಿ ಮಾರ್ಗ ನಿರ್ಧನತ್ವಾ ॥೪೨೫॥ ತೇ ಧನ ಮಿಳೇ ಅನಾಯಾಸೀ । ಯಾಲಾಗೀ ಧನವಂತ ಉಪಾಸೀ । ಅರ್ಥ ಜೋಡೋನಿಯಾ ಪ್ರಯಾಸೀ । ಭೋಗಿತಾ ಕಾಮಾಸೀ ಸುಖ ಕಾಯ ॥೪೨೬॥ ಕಾಮಸುಖ ಕಾಮಿನೀಮೇಳೀ । ಸುಖಾರ್ಥ ಸ್ತ್ರಿಯೇತೇ ಪ್ರತಿಪಾಳೀ । ತೇಚಿ ನಾನಾ ಪರೀ ಸಳೀ । ದೇತಾ ಕಿಂಕಳೀ ಸುಟೇನಾ ॥೪೨೭॥ ಸ್ತ್ರೀಪುತ್ರಕಾಮಭೋಗಾದಿಕ । ತೇಣೇ ದೇಹಾಸೀ ದ್ಯಾವೇ ಸುಖ । ಕೋ ದೇಹೋಚಿ ಮರಣೋನ್ಮುಖ । ನಿತ್ಯ ಅಂತಕ ಲಾಗಲಾ ॥೪೨೮॥ ಜೇ ಜೇ ಅತಿಕ್ರಮೇ ಘಡೀ । ತೇ ತೇ ಕಾಳ ಯಸಾ ತೋಡೀ । ಯೇಥ ಕೋಣ ಭೋಗಾಚೀ ಗೋಡೀ । ಧನಕಾಮೇ ವೇಡೀ ಸಜ್ಞಾನೇ ಕೇಲೀ ॥೪೨೯॥

ಧನಲೋಭದ ಬಾಬತ್ತಿನಲ್ಲಿ ಅಜ್ಞಾನಿ ಜನರ ಅವಸ್ಥೆಯನ್ನು ಏನೆಂದು ವರ್ಣಿಸಬೇಕು? ಅರ್ಥವು ಅನರ್ಥಕಾರಕವು ಎಂದು ತಿಳಿದು ಹೇಳುವ ಜನರೂ ಕೂಡ ಧನಲೋಭಿಯಾಗಿರುವರು. ಜ್ಞಾನಿ ಪುರುಷರೂ ಕೂಡ ಧನಕ್ಕೆ ಭುಲಾಯಿಸುವರು ॥೪೧೯॥ ಹೀಗೆ ಈ ಜ್ಞಾನೀ ಜನರು ಭ್ರಮದಲ್ಲಿ ಬಿದ್ದು ಹಣ ಸಂಪಾದಿಸಲು ತಾವು ಸ್ವತಃ ಯುಕ್ತಾಯುಕ್ತ ಪ್ರಯತ್ನಗಳನ್ನು ದಿನಾಲೂ ಮಾಡುತ್ತಲೇ ಇರುವರು. ಇದನ್ನು ಲಕ್ಷದಲ್ಲಿಡು ॥೪೨೦॥ ಹೀಗೆ ಜ್ಞಾನೀ ಪುರುಷರು ಭ್ರಮದಲ್ಲಿ ಬೀಳಲು ಈಶ್ವರನ ಮಾಯವೇ ಕಾರಣೀಭೂತವಾಗಿರುವುದು. ಅಘಟಿತ ಘಟನೆಗಳನ್ನು ಮಾಡುವ ಅದರ ಸ್ವಭಾವಕಾರಣವಾಗಿ ಸಜ್ಞಾನಿ ಜನರೂ ಕೂಡ ಮೋಹದಲ್ಲಿ ಬೀಳುತ್ತಿರುವರು ॥೪೨೧॥ ಶ್ರೀಕೃಷ್ಣನ ಮಾಯೆಯಿಂದ ಈ ಯಾವ ಪಂಡಿತರು ಮೋಹಿತರಾಗುವರು ಎಂದು ಹೇಳಿಕೊಂಡರೆ ಅದೂ ಕೂಡ ನಿಜವಾಗಿರುವುದಿಲ್ಲ. ಇವರು ತಮ್ಮ ಸುಖಕ್ಕಾಗಿ, ವಿಕಾಸಕ್ಕಾಗಿ ಹಣವನ್ನು ಕೂಡಿಸುತ್ತಿರುವರು ॥೪೨೨॥ ಆದರೆ ವಿಷಯಗಳ ಉಪಭೋಗದಲ್ಲಿ ಸುಖವಿದೆ ಎಂದು ಯಾರು ಹೇಳುವರೋ, ಆ ಜನರು ಕೇವಲ ಮೂರ್ಖರಾಗಿರುವರು ಎಂದು ತಿಳಿಯಬೇಕು. ಈಗ ಆ ವಿವೇಕವನ್ನೂ ಕೃಪಣನು ಹೇಳುತ್ತಿರುವನು ॥೪೨೩॥

ಹೇ ಅಕಟಕಟಾ, ಸರ್ವ ವರ್ಣಗಳಲ್ಲಿ ಅಗ್ರಗಣ್ಯವಾಗಿರುವ ಪೂಜ್ಯ ಬ್ರಾಹ್ಮಣರಿಗೂ ಕೂಡ ಈ ಮಾಯಾ ಮೋಹವು ಭ್ರಮೆಯಲ್ಲಿ ಬೀಳಿಸುವುದು. ಯಾವ ದೇಹವನ್ನು ಅನೇಕ ಭೋಗಗಳಿಂದ ಬೆಳೆಯಿಸುತ್ತಿರುತ್ತಿರುವರೋ, ಅದೇ ಮೂಲತಃ ನಶ್ವರವಾಗಿದೆ ॥೪೨೪॥ ಈ ಯಾವ ದೇಹಕ್ಕೆ ಅನೇಕ ಪ್ರಕಾರದ ಭೋಗಗಳನ್ನು ಕೊಡಲ್ಪಡುವುದು. ಅದೇ ಇದಕ್ಕೆ ಕ್ಷಯರೋಗವಾಗಿ ಪರಿಣಮಿಸುವುದು. ಅನೇಕ ಪ್ರಕಾರಗಳಿಂದ ಸಂಚಯಿಸಿದ ಧನವು ದುಃಖಕ್ಕೆ ಮಾರ್ಗವಾಗಿರುವುದು ॥೪೨೫॥ ಧನವು ಅನಾಯಾಸವಾಗಿ ದೊರಕಿದೆ ಎಂದು ತಿಳಿದು ಶ್ರೀಮಂತ ಮನುಷ್ಯನು ಆ ಧನದ ಹಿಂದೆ ಬೆನ್ನುಹತ್ತುವನು. ಕಷ್ಟದಿಂದ ಕೂಡಿಸಿ ವಾಸನೆಗಳಲ್ಲಿ ಸಿಲುಕಿಕೊಂಡು ಇರುವುದರಲ್ಲಿ ಯಾವ ಸುಖವು ಇರುವುದು? ॥೪೨೬॥ ಸ್ತ್ರೀಯಳಿಂದ ಕಾಮ ಸುಖವಿದೆ ಎಂದು ತಿಳಿದು ಪುರುಷನು ಆ ಸುಖಕ್ಕಾಗಿ ಸ್ತ್ರೀಯಳ ಪ್ರತಿಪಾಲನೆಯನ್ನು ಮಾಡುವನು. ಆದರೆ ಅದೇ ಸ್ತ್ರೀಯಳು ಮುಂದೆ ಅನೇಕ ಪ್ರಕಾರಗಳ ಪೀಡೆಯನ್ನು ಕೊಡುವಳು. ನಂತರ ಎಷ್ಟು ಬಡಕೊಂಡು ಅತ್ತರೂ ಅದರಿಂದ ಬಿಡುಗಡೆಯಾಗಲಾರದು ॥೪೨೭॥ ಸ್ತ್ರೀ, ಪುತ್ರ, ಕಾಮಾದಿಗಳಿಂದ ದೇಹ್ಯಕೆ ಸುಖಕೊಡುವ ಪ್ರಯತ್ನವನ್ನು ಮಾಡಬೇಕೆಂದರೆ, ಯಾವ ಈ ದೇಹವೇ ತಾನು ಮರಣದತ್ತ ನಡೆಯುತ್ತ ಸಾಗುತ್ತಿರುವುದು. ಈ ಯಾವ ದೇಹದ ಹಿಂದೆ ಕಾಲನು ಯಾವಾಗಲೂ ಬೆನ್ನುಹತ್ತಿರುವನು ॥೪೨೮॥ ಯಾವ ಯಾವ ಘಳಿಗೆಗಳು ಹೇಗೆ ಹೇಗೆ ಹೋಗುತ್ತಿರುವುವೋ, ಅದರಂತೆಯೇ ಆಯುಷ್ಯವನ್ನು ಕಾಲನು ಕಡಿಮೆಗೊಳಿಸುತ್ತಿರುವನು. ಹೀಗಿದ್ದಮೇಲೆ ಅಲ್ಲಿ ಸುಖದ ಸಂತೋಷವು ಹೇಗಿರಬೇಕು? ಹೀಗಿದ್ದರೂ ಕೂಡ ಜ್ಞಾನೀ ಪುರಷರು ಧನದ ಇಚ್ಛೆಯಿಂದ ಹುಚ್ಚರಾಗುತ್ತಿರುವರು ॥೪೨೯॥

ಸರ್ಪಮುಖೀ ದರ್ದುರ ಜಾತಾ । ತೋ ದರ್ದುರ ಹೋಯಮಾಶಾ ಖಾತಾ । ತೇಣೇ ನ ಸುಖೇ ಸರ್ಪಗ್ರಾಸತಾ । ಜಾಣ ತತ್ತ್ವತಾ ಜಯಾಪರೀ ।೪೩೦॥ ತೇವೀ ನಾನಾಭೋಗಮೇಳೇ । ದೋಹೀಂಚಾ ಮೃತ್ಯೂಮಾಗೇ ನ ಟಳೇ । ಹೇ ಜಾಣೋನಿ ಆಂಧಳೇ । ಧನಕಾಮೇ ಝಾಲೇ ಸಜ್ಞಾನ ।೪೩೧॥ ಸ್ವಯೇ ಕರ್ತಾ ತೋಚಿ ಮರಣಧರ್ಮ । ತ್ಯಾಸೀ ಕೋಣ ನಿವವೀ ಭೋಗಕಾಮ । ಹಾ ಕೇವಳ ಮಾಯೇಚಾ ಭ್ರಮ । ಭ್ರಮಲೇ ಪರಮ ಮಹಾಸಿದ್ಧ ।೪೩೨॥ ಧನೇ ಹೋಈಲ ಪರಲೋಕ । ತೋಹೀ ಭೋಗೂ ದುಃಖದಾಯಕ । ಭೋಗಕ್ಷಯೇ ಕರ್ಮಮೂರ್ಖ । ಯೇತೀ ದೇಖ ಅಧಃಪಾತಾ ।೪೩೩॥ ಕರಿತಾ ಭೋಗ್ಯ ಕಾಮ್ಯ ಕರ್ಮ । ಪುಢತೀ ಮರಣ ಪುಢತೀ ಜನ್ಮ । ಭೋಗಣೇ ಪಡೇ ಅವಿಶ್ರಮ । ಹೇ ದುಃಖ ಪರಮ ಧನಕಾಮಾ ।೪೩೪॥ ಧನಕಾಮಾಸೀ ನಿಜಸುಖ । ಸರ್ವಾತ್ಮನಾ ನಾಹೀ ದೇಖ । ಮೀಹೀ ಐಸಾಚಿ ಹೋತೋ ಮೂರ್ಖ । ನಿಜಭಾಗ್ಯೇ ದೇಖ ಧನ ಗೇಲೇ ।೪೩೫॥

ನೂನಂ ಮೇ ಭಗವಾಂಸ್ತುಷ್ಟಃ ಸರ್ವದೇವಮಯೋ ಹರಿಃ । ಯೇನ ನೀತೋ ದಶಾಮೇತಾಂ ನಿರ್ವೇದಶ್ಚಾತ್ಮನಃ ಪ್ಲವಃ ।೨೮॥

ಅರ್ಥ:- ತನ್ನಲ್ಲಿ ಎಲ್ಲ ದೇವತೆಗಳನ್ನೂ ಒಳಗೊಂಡಿರುವ ಶ್ರೀಹರಿ ಪರಮಾತ್ಮನು ನನ್ನಿಂದ ತೃಪ್ತನಾಗಿರಬೇಕು. ನನ್ನನ್ನು ಈ ಯಾತನಾಮಯ ಸ್ಥಿತಿಗೆ ತಂದು ವಿರಕ್ತಿಯನ್ನು ಅನುಭವಿಸುವಂತೆ ಮಾಡಿದ್ದಾನೆ. ಈ ವಿರಕ್ತಿಯೇ ಭವಸಾಗರವನ್ನು ದಾಟಲು ನಾವೆಯಾಗಿದೆ.

ಮೀ ಪೂರ್ವೀ ಹೋತೋ ಅತಿಅಭಾಗ್ಯ । ಆತಾ ಝಾಲೋ ಅತಿಸಭಾಗ್ಯ । ಮಜ ತುಷ್ಟಲಾ ಶ್ರೀರಂಗ । ವಿವೇಕ ವೈರಾಗ್ಯ ಪಾವಲೋ ।೪೩೬॥ ಮಾಝೇ ಸಂಚಿತ ಜೇ ಕಾ ಧನ । ತೇಚಿ ಮಾಝೇ ಮುಖ್ಯ ಅಜ್ಞಾನ । ತೇ ಹರಿನೇ ಹರೋನಿ ಆಪಣ । ಕೃಪಾ ಪೂರ್ಣ ಮಜ ಕೇಲೀ ।೪೩೭॥ ಭಕ್ತಾಂಚೇ ಅಜ್ಞಾನ ಹರೀ । ಯಾಚಿಲಾಗೀ ನಾಂವ ತೋ ''ಹರೀ'' । ತೇಣೇ ಕೃಪಾ ಕರೂನಿ ಪುರೀ । ವಿವೇಕ ಅಂತರೀ ಉಪಜವಿಲಾ ।೪೩೮॥ ವೈರಾಗ್ಯ ವಿವೇಕಾವೀಣ ಆಂಧಳೇ । ವಿವೇಕ ವೈರಾಗ್ಯಾವೀಣ ಪಾಂಗಳೇ । ತೇ ಮಾಝೇ ಹೃದಯೀ ಜಾವಳೀ ಫಳೇ । ಏಕ ವೇಳೇ ಉಪಜವಿಲೀ ।೪೩೯॥ ಐಶೀ ಹರೀನೇ ಕೃಪಾ ಕರೂನೀ । ಮಾಝೇ ಧನೇಸೀ ಅಜ್ಞಾನ ಹರೂನೀ । ವಿವೇಕ ವೈರಾಗ್ಯ ಯೇ ದೋನೀ । ಮಾಝೇ ಹೃದಯಭುವನೀ ಪ್ರಕಾಶಿಲೀ ।೪೪೦॥ ಪರೀ ಕೋಣೇ ಕಾಳೇ ಕೋಣೇ ದೇಶೀ । ಕೋಣ ಸಮಯವಿಶೇಷೀ । ಹರಿ ಕೃಪಾ ಕರಿತೋ ಕೈಶೀ । ಹೇ ಕೋಣಾಸೀ ಕಳೇನಾ ।೪೪೧॥

ಸರ್ಪವು ಕಪ್ಪೆಯನ್ನು ಹಿಡಿದು ನುಂಗುತ್ತಿರುವುದು. ಇಂತಹ ಸ್ಥಿತಿಯಲ್ಲಿ ಆ ಯಾವ ಕಪ್ಪೆಯ ತಾನು ನೊಣವನ್ನು ಹಿಡಿದು ತಿನ್ನುವ ಕಾರ್ಯವು ನಡೆದೇ ಇರುವುದು. ಆದರೆ ಅದು ಸರ್ಪದ ಬಾಯಿಯಲ್ಲಿ ಹೋಗುವುದು ತಪ್ಪುವುದೇ ಇಲ್ಲ ।೪೩೦॥ ಅದರಂತೆ ನಾನಾ ಪ್ರಕಾರದ ಭೋಗಗಳನ್ನು ಭೋಗಿಸುತ್ತಿದ್ದರೂ ದೇಹದ ಮರಣವು ಏನಾದರೂ ತಪ್ಪುವುದೇ? ಹೀಗೆ ಇದರ ಜ್ಞಾನವು ಇದ್ದರೂ ಕೂಡ ತಿಳಿದಿರುವ ವಿದ್ವಾನರೂ ಕೂಡ ಈ ಧನದ ಲೋಭದಿಂದ ಕುರುಡರಾಗುತ್ತಿರುವರು ।೪೩೧॥ ಕರ್ಮಗಳನ್ನು ಮಾಡುತ್ತಿರುವ ಸ್ವತಃಕರ್ತನ ಬೆನ್ನು ಹಿಂದೆ ಮರಣವು ಹತ್ತಿಕೊಂಡಿರುವುದು. ಆತನಿಗೆ ಯಾವ ಭೋಗದಿಂದ ಸುಖ ಸಮಾಧಾನವು ಲಭಿಸಬೇಕು ? ಇದೆಲ್ಲವೂ ಮಾಯೆಯ ಭ್ರಮೆಯಾಗಿರುವುದು. ಈ ಭ್ರಮೆಯಲ್ಲಿ ಮಹಾ ಮಹಾ ವಿದ್ವಾನರೂ ಕೂಡ ಸಿಲುಕಿಕೊಂಡಿರುವರು ।೪೩೨॥ ಧನದ ಸಹಾಯದಿಂದ ಯಜ್ಞಯಾಗಗಳನ್ನು ನೆರವೇರಿಸಿ ಸ್ವರ್ಗಲೋಕವನ್ನು ಪ್ರಾಪ್ತಮಾಡಿಕೊಳ್ಳಬಹುದು. ಆದರೆ ಆ ಸ್ವರ್ಗಲೋಕವೂ ಕೂಡ ದುಃಖದಾಯಕವೇ ಆಗಿದೆ. ಕಾರಣವೇನೆಂದರೆ ಅವರು ಮಾಡಿರುವ ಪುಣ್ಯವು ಅಲ್ಲಿ ಮುಗಿಯುತ್ತಲೇ ಆ ಕರ್ಮಠ ಮೂರ್ಖ ಜನರು ಅಧೋಗತಿಗೆ ಹೋಗುತ್ತಿರುವರು ।೪೩೩॥ ಭೋಗಗಳನ್ನು ಭೋಗಿಸುವುದಕ್ಕಾಗಿ ಸಕಾಮ ಕರ್ಮಗಳನ್ನು ಮಾಡುತ್ತಿದ್ದರೆ ಅದರಿಂದ ಪುನಃ ಮರಣ ಪುನಃಜನ್ಮ ಈ ಚಕ್ರದಲ್ಲಿ ಸತತವಾಗಿ ತಿರುಗಬೇಕಾಗುವುದು. ಧನಲೋಭೀ ಮನುಷ್ಯನಿಗೆ ಇದೊಂದು ಬಹು ದೊಡ್ಡ ದುಃಖವಾಗಿದೆ ।೪೩೪॥ ಧನಲೋಭೀ ಮನುಷ್ಯನಿಗೆ ಆತ್ಮಸುಖವು ದೊರೆಯುವುದಿಲ್ಲ. ನಾನಾದರೂ ಹೀಗೆಯೇ ಅಜ್ಞಾನಿಯಾಗಿದ್ದೆನು. ಆದರೆ ಸುದೈವದಿಂದ ನನ್ನ ಸರ್ವ ಸಂಪತ್ತು ಹಾಳಾಯಿತು ।೪೩೫॥

ಈ ಪೂರ್ವದಲ್ಲಿ ನಾನು ಅತ್ಯಂತ ದುರ್ಭಾಗ್ಯನಾಗಿದ್ದೆನು. ಆದರೆ ಈಗ ನಾನು ಮಹಾ ಭಾಗ್ಯಶಾಲಿಯಾಗಿರುವೆನು. ಶ್ರೀರಂಗನು ನನ್ನಲ್ಲಿ ಪ್ರಸನ್ನನಾಗಿರುವುದರಿಂದ ನನಗೆ ವಿವೇಕವು ಮತ್ತು ವೈರಾಗ್ಯವು ಪ್ರಾಪ್ತವಾಯಿತು ।೪೩೬॥ ನಾನು ಕೂಡಿಸಿದ್ದ ಯಾವ ಧನಸಂಪತ್ತು ಅದನು ನನ್ನ ಅಜ್ಞಾನವಾಗಿತ್ತು. ಶ್ರೀಹರಿಯು ಆ ಧನಸಂಪತ್ತು ಎಲ್ಲವನ್ನೂ ನಷ್ಟಗೊಳಿಸಿ ನನ್ನ ಮೇಲೆ ಕೃಪೆಯನ್ನು ಪೂರ್ಣವಾಗಿ ಮಾಡಿದನು ।೪೩೭॥ ಭಗವಂತನು ಭಕ್ತರ ಅಜ್ಞಾನವನ್ನು ಹರಣ ಮಾಡುವನು. ಆದ್ದರಿಂದ ಆತನಿಗೆ ಹರಿ ಎಂದು ಕರೆಯುವರು. ಆತನು ನನ್ನ ಮೇಲೆ ಕೃಪೆಮಾಡಿ ನನ್ನ ಅಂತಃಕರಣದಲ್ಲಿ ವಿವೇಕದ ದೀಪವನ್ನು ಪ್ರಜ್ವಲಿತವನ್ನಾಗಿ ಮಾಡಿದನು. ।೪೩೮॥ ವೈರಾಗ್ಯವು ವಿವೇಕವಿಲ್ಲದೇ ಅದು ಕುರಡಾಗಿರುವುದು. ವಿವೇಕವು ವೈರಾಗ್ಯವಿಲ್ಲದೇ ಅದು ಕುಂಟಾಗುವುದು. ನನ್ನ ಹೃದಯದಲ್ಲಿ ಈ ಎರಡೂ ಒಂದೇ ವೇಳೆಗೆ ಉತ್ಪನ್ನವಾದವು. ।೪೩೯॥ ಈ ಪ್ರಕಾರವಾಗಿ ಶ್ರೀಹರಿಯು ಕೃಪೆಯನ್ನು ಮಾಡಿ ನನ್ನ ಧನರೂಪ ಅಜ್ಞಾನವನ್ನು ನಷ್ಟಮಾಡಿ, ನನ್ನ ಹೃದಯದಲ್ಲಿ ವಿವೇಕಯುಕ್ತ ವೈರಾಗ್ಯವನ್ನು ನಿರ್ಮಾಣಗೊಳಿಸಿದನು ।೪೪೦॥ ಆದರೆ ಭಗವಂತನು ಯಾರನ್ನು ಯಾವ ವೇಳೆಯಲ್ಲಿ, ಯಾವ ಸ್ಥಳದಲ್ಲಿ ಮತ್ತು ಯಾವ ಪ್ರಸಂಗದಲ್ಲಿ ಹೇಗೆ ಕೃಪೆಮಾಡುವನು ಎಂಬುವುದು ಇದು ಯಾರಿಗೂ ಯಾವುದೂ ತಿಳಿಯಲು ಶಕ್ಯವಿಲ್ಲ ।೪೪೧॥

ಭಕ್ತಾಂಚೇ ಹರಾವಯಾ ಚಿತ್ತ । ಹರಿ ಹರಿತೋ ತ್ಯಾಂಚೇ ವಿತ್ತ । ವಿತ್ತ ಯೋಗೇ ಕರೂನಿ ಸುಚಿತ್ತ । ದೇ ವಿವೇಕಯುಕ್ತ ವೈರಾಗ್ಯ ।೪೪೨॥ ಐಸೇ ಘೇತೇದೇತೇ ವಿಂದಾನ । ಬ್ರಹ್ಮಾದಿಕಾ ಅತರ್ಕ್ಯ ಜಾಣ । ಯಾಲಾಗೀ ತೋ ಭಗವಂತ ಪೂರ್ಣ । ತ್ಯಾಸೀ ಸಾಹೀ ಗುಣ ವಶವರ್ತೀ ।೪೪೩॥ ತ್ಯಾಚೇ ಅಚಿಂತ್ಯಾನಂತರೂಪ । ಪರೀ ಮಜಲಾಗೀ ಝಾಲಾ ಸಕೃಪ । ಮಾಝೇ ಧನೇಸೀ ನಿರಸೂನಿ ಪಾಪ । ಜ್ಞಾನದೀಪ ಉಜಳಲಾ ।೪೪೪॥ ಹೋ ಕಾ ಕೃಪಾ ಉಪಜಲೀ ಭಗವಂತಾ। ಪರೀ ಮ್ಯಾ ವಂಚಿಲ್ಯಾ ಯಜ್ಞ ದೇವತಾ । ತ್ಯಾ ಕ್ಷೋಭಲ್ಯಾ ಕರಿತೀ ಘಾತಾ । ಹೇಹೀ ಸರ್ವಥಾ ಘಡೇನಾ ।೪೪೫॥ ಕರೀ ಚಕ್ರ ಧಗಧಗಿತ। ಜ್ಯಾಚಾ ಪಾಠಿರಾಖಾ ಹರೀ ಸಮರ್ಥ। ವಿಘ್ನಾಚಾ ವಾರಾ ನ ರಿಘೇ ತೇಥ । ದೇವ ವಂದೀತ ತಯಾಸೀ।೪೪೬॥ ದೇವೀ ವಂದೂನೀ ಪ್ರಹ್ಲಾದಾಸೀ। ಶಾಂತ ಕರವಿಲೇ ನೃಸಿಂಹಾಸೀ । ತೋ ಪಾಠಿರಾಖಾ ನರಹರೀ ಜ್ಯಾಸೀ । ವಿಘ್ನ ತ್ಯಾಪಾಶೀ ರಿಘೇ ಕೇವೀ ।೪೪೭॥ ಜೇಣೇ ದೇವಾಂಚಿಯಾ ಕೋಡೀ । ಕ್ಷಣೇ ಸೋಡವಿಲ್ಯಾ ಬಾಂದವಡೀ । ತ್ಯಾಚೇ ಭಕ್ತಾಂಚೇ ಲೋಂವ ವಾಂಕಡೀ । ದೇವೇ ಬಾಪುಡೀ ಕೇವೀ ಕರಿತೀ ।೪೪೮॥ ಜೋ ಸಕಳ ದೇವಾಂಚಾ ನಿಯಂತಾ। ಜ್ಯಾಚೇ ಚರಣ ದೇವ ವಂದಿತೀ ಮಾಥಾ । ತೋ ಭಗವಂತ ಸಾಹ್ಯ ಅಸತಾ । ವಿಘ್ನ ಸರ್ವಥಾ ಬಾಧೀನಾ।೪೪೯॥ ಜ್ಯಾಚೇನಿ ಬಳೇ ವಾಢಲೇ ದೇವ। ದೇವ ಜಯಾಚೇ ಅವಯವ। ತೋ ಹರಿ ತುಷ್ಟಲಾ ಸ್ವಯಮೇವ । ತೇಥ ವಿಘ್ನಸಂಭವ ಕೋಣಾಚಾ ।೪೫೦॥ ಸರ್ವದೇವಮಯ ಶ್ರೀಹರೀ । ಇಂದ್ರಚಂದ್ರರೂಪೇ ಮಾಝಾ ಹರೀ। ಐಶಿಯಾ ಮಜ ದೀನಾವರೀ। ವಿಘ್ನ ಸಂಸಾರೀ ಅಸೇನಾ।೪೫೧॥ ಐಶಿಯೇ ಕೃಪೇಚೇ ಕಾರಣ । ಯೇ ಜನ್ಮೀ ನಾಹೀ ಸಾಧನ । ಹೇ ಮಾಝೇ ಪೂರ್ವೀಲ ಜುನೇ ಋಣ । ದೇವಾಪಾಶೀ ಜಾಣ ಠೇವಿಲೇ ಹೋತೇ ।೪೫೨॥ ಪೂರ್ವೀ ಕೋಣ ಜನ್ಮೀ ಕೋಣ ದೇಶೀ । ತೀರ್ಥಕ್ಷೇತ್ರೀ ಕೋಣ ವಂಶೀ । ಕೋಣ ಆಚರಲೋ ಸತ್ಕರ್ಮಾಸೀ । ತೇಣೇ ಹೃಷೀಕೇಶೀ ತುಷ್ಟಲಾ ।೪೫೩॥ ಮಾತೇ ಅತೀದುಃಖೀ ದೇಖೋನ । ಹರಿ ತುಷ್ಟಲಾ ಕೃಪಾಪೂರ್ಣ । ತ್ಯಾಚೇ ಕೃಪೇಸ್ತವ ಜಾಣ । ವಿವೇಕಸಂಪನ್ನ ಮೀ ಝಾಲೋ ।೪೫೪॥ ಹೋ ಕಾ ಧನಕ್ಷಯೇ ಝಾಲೇ ದುಃಖ । ತೇಣೇ ದುಃಖೇ ಪಾವಲೋ ನಿಜಸುಖ । ಭವಾಬ್ಧಿ ತರಾವಯಾ ದೇಖ । ವೈರಾಗ್ಯವಿವೇಕ ದೃಢ ತಾರೂ ।೪೫೫॥

ಭಕ್ತನ ಚಿತ್ತವನ್ನು ಹರಣವನ್ನು ಮಾಡುವುದಕ್ಕಾಗಿ ಭಗವಂತನು ಮೊದಲು ಆತನ ದ್ರವ್ಯವನ್ನು ಹರಣ ಮಾಡುವನು. ಧನವು ತೀರಿತೆಂದರೆ ತನ ಚಿತ್ತವು ಶುದ್ಧವಾಗುವುದು. ತದನಂತರ ವಿವೇಕಯುಕ್ತ ವೈರಾಗ್ಯವನ್ನು ದಯಪಾಲಿಸುವನು ।೪೪೨॥ ಹೀಗೆ ಈ ಕೊಡುವ ಮತ್ತು ಗೆದುಕೊಳ್ಳುವ ಈ ಕಾರ್ಯದ ಚಾತುರ್ಯವು ಬ್ರಹ್ಮದೇವನಿಗೂ ತಿಳಿಯಲು ಶಕ್ಯವಿಲ್ಲ. ಆದ್ದರಿಂದ ಆ ಯಾವ ಭಗವಂತನು ಪೂರ್ಣನಾಗಿರುವನು ಮತ್ತು ಆರು ಗುಣಗಳೂ ಕೂಡ ಆತನ ಆಧೀನದಲ್ಲಿರುವುವು ।೪೪೩॥ ಆತನ ಸ್ವರೂಪವು ಅನಂತವಾಗಿದ್ದು ಮತ್ತು ಅಚಿಂತ್ಯವಾಗಿರುವುದು. ಆತನು ನನ್ನಲ್ಲಿ ಕೃಪೆಯ ಮಳೆಯನ್ನು ಸುರಿದು ನನ್ನ ಪಾತಕರೂಪ ಸರ್ವ ಸಂಪತ್ತನ್ನು ನಾಶಗೊಳಿಸಿ ನನ್ನ ಅಂತಃಕರಣದಲ್ಲಿ ಜ್ಞಾನದೀಪವನ್ನು ಪ್ರಜ್ವಲಿಸಿದನು ।೪೪೪॥ ಈ ರೀತಿಯಿಂದ ಭಗವಂತನು ನನ್ನನ್ನು ಕೃಪೆ ಮಾಡಿರುವುದರಿಂದ ನಾನು ಯಜ್ಞ ದೇವತೆಗಳವರನ್ನು ಮೋಸ ಮಾಡಿದ್ದಕ್ಕೆ ಅವರು ನನ್ನ ಮೇಲೆ ಕೋಪಿಸಿಕೊಂಡು ನನ್ನ ಘಾತವನ್ನು ಮಾಡುವುದು ಇದು ಎಂದಿಗೂ ಸಂಭವಿಸುವುದಿಲ್ಲ ।೪೪೫॥ ಕಾರಣವೇನೆಂದರೆ ಅತ್ಯಂತ ಹರಿತವಾಗಿರುವ, ಲಖಲಖಿತವಾದ ಸುದರ್ಶನ ಚಕ್ರವನ್ನು ತೆಗೆದುಕೊಂಡು ಶ್ರೀಹರಿಯು ನನ್ನ ರಕ್ಷಣೆಯನ್ನು ಮಾಡುತ್ತಿರುವನು. ಅಂದಮೇಲೆ ಅಲ್ಲಿ ಯಾವ ವಿಘ್ನಗಳೂ ಪ್ರವೇಶ ಮಾಡಲು ಶಕ್ಯವಿಲ್ಲ. ದೇವತೆಗಳು ಈತನನ್ನು ವಂದಿಸುವರು ।೪೪೬॥ ದೇವತೆಗಳೇ ಪ್ರಹ್ಲಾದನಿಗೆ ವಂದನೆಯನ್ನು ಮಾಡಿ ನೃಸಿಂಹದೇವನಿಗೆ ಶಾಂತವನ್ನಾಗಿ ಮಾಡಿಸಿದರು. ಇಂತಹ ನರಹರಿಯು ಯಾರ ರಕ್ಷಣೆಯನ್ನು ಮಾಡುತ್ತಿರುವನೋ, ಆತನಲ್ಲಿ ವಿಘ್ನಗಳು ಹೇಗೆ ಬರುವುವು? ।೪೪೭॥ ಯಾರು ಕೋಟ್ಯಾವಧಿ ದೇವತೆಗಳನ್ನು ಬಂದಿಖಾನೆಯಿಂದ ಬಿಡಿಸಿರುವನೋ, ಅಂತಹ ದೇವನ ಭಕ್ತನ ಒಂದು ಕೂದಲೂ ಸಹ ಆ ಯಜ್ಞ ದೇವತೆಗಳು ಹೇಗೆ ಡೊಂಕುಗೊಳಿಸುವರು? ।೪೪೮॥ ಯಾರು ಸರ್ವ ದೇವತೆಗಳ ನಿಯಂತಕನಾಗಿರುವನೋ, ಯಾರ ಚರಣಗಳಿಗೆ ಸರ್ವ ದೇವತೆಗಳು ವಂದಿಸುತ್ತಿರುವರೋ, ಅಂತಹ ಭಗವಂತನು ಯಾರಲ್ಲಿ ಸಾಹ್ಯಕರ್ತನಾಗಿರುವನೋ, ಆತನಿಗೆ ವಿಘ್ನಗಳ ಬಾಧೆಯಾಗಲು ಶಕ್ಯವಿಲ್ಲ ।೪೪೯॥ ಯಾರ ಸಾಮರ್ಥ್ಯದಿಂದ ದೇವತೆಗಳು ಇಷ್ಟೊಂದು ದೊಡ್ಡವರಾಗಿರುವರೋ, ದೇವತೆಗಳು ಯಾರ ಅವಯವಗಳಾಗಿರುವರೋ, ಅಂತಹ ಶ್ರೀಹರಿಯು ಸ್ವತಃ ಪ್ರಸನ್ನನಾಗಿರಲು ಅಲ್ಲಿ ಯಾರು ವಿಘ್ನವನ್ನು ಮಾಡಬೇಕು? ।೪೫೦॥ ಯಾವ ಶ್ರೀಹರಿಯು ನಿಜವಾಗಿಯೂ ಸರ್ವದೇವಸ್ವರೂಪನಾಗಿರುವನು. ಇಂದ್ರ ಮತ್ತು ಚಂದ್ರರ ಸ್ವರೂಪವೂ ಕೂಡ ನನ್ನ ಶ್ರೀಹರಿಯೇ ಆಗಿರುವನು. ಅಂದಮೇಲೆ ನನ್ನಂತಹ ದೀನನಮೇಲೆ ಯಾವ ಈ ಸಂಸಾರದಲ್ಲಿ ವಿಘ್ನಗಳು ಬರಲು ಸಾಧ್ಯವಿಲ್ಲ ।೪೫೧॥ ಈ ರೀತಿಯಲ್ಲಿ ನನ್ನ ಪ್ರಭುವಿನ ಕೃಪೆಯು ಆಗಿರುವ ಕಾರಣವನ್ನು ಶೋಧಿಸಲು, ನಾನು ಈ ಜನ್ಮದಲ್ಲಿ ನನ್ನ ಕೈಯಿಂದ ಯಾವ ಸಾಧನೆಯೂ ಸಾಧಿಸಿರುವುದು ಕಾಣುವುದಿಲ್ಲ. ಬಹಳ ಹಳೆಯ ಋಣವನ್ನು ದೇವರಲ್ಲಿ ಇಡಲ್ಪಟ್ಟಿತ್ತು ।೪೫೨॥ ನನ್ನ ಪೂರ್ವ ಜನ್ಮದಲ್ಲಿ ನಾನು ಯಾವುದೋ ದೇಶದಲ್ಲಿ, ಯಾವುದಾದರೂ ತೀರ್ಥ ಕ್ಷೇತ್ರದಲ್ಲಿ, ಯಾವುದಾದರೂ ವಂಶದಲ್ಲಿ ಸತ್ಕರ್ಮಗಳನ್ನು ಮಾಡಿದ್ದೆನು. ಆದ್ದರಿಂದ ಶ್ರೀಕೃಷ್ಣನು ನನ್ನಲ್ಲಿ ಸಂತುಷ್ಟನಾದನು ।೪೫೩॥ ನನಗಾಗಿರುವ ಅತಿಶಯವಾದ ದುಃಖವನ್ನು ಕಂಡು ದಯಾವಂತ ಶ್ರೀಹರಿಯ ಅಂತಃಕರಣವು ಕರಗಿತು. ಆತನು ನನ್ನಲ್ಲಿ ಕೃಪೆ ಮಾಡಿದನು. ಆದ್ದರಿಂದ ನಾನು ವಿವೇಕದಿಂದ ಸಂಪನ್ನನಾದೆನು ।೪೫೪॥ ಆಹಾ! ಧನಸಂಪತ್ತು ಹಾಳಾದ್ದರಿಂದ ನನಗೆ ದುಃಖವು ಒದಗಿತು. ಇದರಿಂದಲೇ ನನಗೆ ಆತ್ಮಸುಖವು ಪ್ರಾಪ್ತವಾಯಿತು. ಈ ಸಂಸಾರದಿಂದ ಪಾರಾಗಬೇಕಾದರೆ ವೈರಾಗ್ಯಯುಕ್ತ ವಿವೇಕವು ಇದೇ ಬಲಿಷ್ಠವಾದ ನೌಕೆಯಾಗಿರುವುದು ।೪೫೫॥

ಹರಿಖೇ ವೋಸಂಡೂನಿ ಬ್ರಾಹ್ಮಣ । ಮ್ಹಣೇ ಉರಲೇ ಆಯುಷ್ಯೇನಿ ಜಾಣ । ವೃಥಾ ಜಾವೋ ನೇದೀ ಅರ್ಧ ಕ್ಷಣ । ಕರೀನ ನಿರ್ದಳಣ ಸುಖದುಃಖಾ ॥೪೫೬॥

ಸೋಽಹಂ ಕಾಲಾವಶೇಷೇಣ ಶೋಷಯಿಷ್ಯೇಽಂಗಮಾತ್ಮನಃ । ಅಪ್ರಮತ್ತೋಽಖಿಲಸ್ವಾರ್ಥೇ ಯದಿ ಸ್ಯಾತ್‌ಸಿದ್ಧ ಆತ್ಮನಿ ॥೪೯॥

ಅರ್ಥ:- ನನಗೆ ಇನ್ನೂ ಅಲ್ಪಸ್ವಲ್ಪ ಆಯುಷ್ಯವು ಉಳಿದಿದ್ದರೆ ವ್ರತತಪಗಳನ್ನಾಚರಿಸುತ್ತ ಅಗತ್ಯವಾದಷ್ಟರಿಂದಲೇ ಜೀವಿಸುವಂತೆ ಶರೀರವನ್ನು ದಂಡಿಸುತ್ತೇನೆ. ಇನ್ನು ಮುಂದೆ ಎಲ್ಲ ಗೊಂದಲವನ್ನು ವರ್ಜಿಸಿ ಜೀವನದಲ್ಲಿ ನನ್ನ ಹಿತವು ಯಾವುದರಿಂದ ಆಗುವುದೋ ಅದಕ್ಕಾಗಿ ಶ್ರಮಿಸುವೆನು ಹಾಗೂ ನನ್ನಲ್ಲಿ ನಾನು ತೃಪ್ತನಾಗಿರುವೆನು.

ಕಾಇಸಾ ಭವಭಯಾಚಾ ಪಾಡ । ಫೇಈನ ಕೋಟಿ ಜನ್ಮಾಂಚಾ ಸೂಡ । ನಾಸಲ್ಯಾ ಆಯುಷ್ಯಾಚಾ ಕೈವಾಡ । ಕರೀನ ನಿವಾಡ ಯೇಣೇ ದೇಹೇ ॥೪೫೭॥ ದೇಹಾಸೀ ಆಲೀ ವಾರ್ಧಕ್ಯತಾ । ಪರೀ ವೃದ್ಧತ್ವ ನವ್ಹೇ ಮಾಝಿಯಾ ಚಿತ್ತಾ । ತೇಣೇ ಚಿತ್ತೇ ಚಿಂತೂನಿ ಭಗವಂತಾ । ಭವಬಂಧ ಆತಾ ಛೇದೀನ ॥೪೫೮॥ ಉರಲೇ ಆಯುಷ್ಯೇ ಯೇಥ । ಕಳಿಕಾಳಾಚೇ ಪಾಡೀನದಾಂತ । ಗರ್ಭದುಃಖಾಚೇ ಖಣೋನಿ ಖತ । ಮರಣಾಚಾ ಘಾತ ಮೀ ಕರೀನ ॥೪೫೯॥ ಜೇಣೇ ದೇಹೇ ಸತ್ಯಾನೃತ । ಕರ್ಮೇ ಆಚರಲೋ ಸಮಸ್ತ । ತೇ ದೇಹ ಮೀ ಶೋಷೀನ ಯೇಥ । ವಿದೇಹಸ್ತ ನಿಜ ಭಾವೇ ॥೪೬೦॥ ಫಾಲೂನಿ ನಿಜಬೋಧಾಚೀ ಧಾಡೀ । ಫೋಡೀನ ದೇಹಾಚೀ ಬಾಂದವಡೀ । ತೋಡೂನಿ ಸುಖ ದುಃಖಾಂಚೀ ಬೇಡೀ । ಉಭವೀನ ಗುಢೀ ಸಾಯುಜ್ಯಾಚೀ ॥೪೬೧॥ ಆಜೀ ವೈರಾಗ್ಯ ವಿವೇಕಯುಕ್ತ । ಮೀ ನಿಜ ಸ್ವಾರ್ಥೀ ಸಾವಚಿತ್ತ । ಜೋ ಜೋ ಸಾಧೀನ ಪರಮಾರ್ಥ । ತೋ ತೋ ಹಸ್ತಗತ ಮಜ ಹೋಯ ॥೪೬೨॥ ಮಜಚಿ ಸಾಧೇ ನಿಜಸ್ವಾರ್ಥ । ಹಾಚಿ ನೇಮ ನಾಹೀ ಯೇಥ । ಜೋ ಜೋ ವೈರಾಗ್ಯವಿವೇಕಯುಕ್ತ । ತ್ಯಾಸೀ ಪರಮಾರ್ಥ ಆಂದಣಾ ॥೪೬೩॥ ವೈರಾಗ್ಯ ವಿವೇಕಾಚೇ ಲಕ್ಷಣ । ದೇಹಗೇಹ ಸ್ತ್ರಿಯಾದಿ ಧನ । ಅಸತಾ ಆಸಕ್ತ ನವ್ಹೇ ಮನ । ವೈರಾಗ್ಯ ಪೂರ್ಣ ಯಾ ನಾಂವ ॥೪೬೪॥ ಮ್ಯಾ ಜೋ ಆರಂಭ ಕೇಲಾ ಪಹಾ ಹೋ । ಯಾಸೀ ದೇವೋದೇವಿಸಮುದಾವೋ । ಯೇಣೇಸಹಿತ ದೇವಾಧಿದೇವೋ । ಮಜ ಸಾಹ್ಯ ಹೋವೋ ಹೇ ಪ್ರಾರ್ಥಿತ ॥೪೬೫॥

ತತ್ರ ಮಾಮನುಮೋದೇರನ್ ದೇವಾಸ್ತ್ರಿಭುವನೇಶ್ವರಾಃ ।
ಮುಹೂರ್ತೇನ ಬ್ರಹ್ಮಲೋಕಂ ಖಟ್ವಾಂಗಃ ಸಮಸಾಧಯೇತ್ ॥೫೦॥

ಅರ್ಥ:- ಮೂರು ಲೋಕದ ಸ್ವಾಮೀ ದೇವಗಣ ಇವರು ನನ್ನ ಸಂಕಲ್ಪಕ್ಕೆ ಅನುಮೋದನೆಯನ್ನು ನೀಡಲಿ. ಈಗ ನಿರಾಶನಾಗುವ ಯಾವ ಕಾರಣವೂ ಇಲ್ಲ. ಕಾರಣ ನಲರಾಜ ಖಟ್‌ವಾಂಗನು ಎರಡೇ ಘಳಿಗೆಯಲ್ಲಿ ಭಗವಂತನ ಧಾಮವನ್ನು ಪಡೆದುಕೊಂಡನು.

ಈ ಪ್ರಕಾರವಾಗಿ ಆ ಬ್ರಾಹ್ಮಣನು ಪರಿಪೂರ್ಣವಾಗಿ ಆನಂದ ಪುಳಕಿತನಾಗಿ ಹೀಗೆ ಹೇಳಿದನು, ಈಗ ನನ್ನ ಆಯುಷ್ಯದಲ್ಲಿನ ಅರ್ಧಕ್ಷಣವನ್ನೂ ಕೂಡ ವ್ಯರ್ಥವಾಗಿ ಕಳೆಯಲಾರೆನು. ಈಗ ಸುಖದುಃಖಗಳನ್ನು ಸಹಜವಾಗಿ ನಾಶಮಾಡಿ ಬಿಡುವೆನು ॥೪೫೬॥

ಈಗ ಭವಭಯದ ವಾರ್ತೆಯು ಎಲ್ಲಿಯದು ? ನಾನು ಕೋಟಿ ಜನ್ಮಗಳ ಸೇಡನ್ನು ತೀರಿಸಿಕೊಳ್ಳುವೆನು. ಇಲ್ಲಿಯವರೆಗೆ ವ್ಯರ್ಥವಾಗಿ ಹೋಗಿರುವ ಆಯುಷ್ಯದ ಕೊರತೆಯನ್ನು ತುಂಬಿಕೊಳ್ಳುವೆನು. ಇದೇ ದೇಹದಲ್ಲಿ ನಾನು ಎಲ್ಲರ ಋಣ ಮುಕ್ತನಾಗುವೆನು ॥೪೫೭॥ ನನ್ನ ದೇಹಕ್ಕೆ ಮುಪ್ಪು ಆವರಿಸಿಕೊಂಡಿದ್ದರೂ ಕೂಡ ನನ್ನ ಮನವು ಮುಪ್ಪಾಗದೆ ತಾಜಾ ತಾರುಣ್ಯದಿಂದ ತುಂಬಿಕೊಂಡಿರುವುದು. ಈ ಮನಸ್ಸಿನಿಂದ ಭಗವಂತನ ಚಿಂತನೆಯನ್ನು ಮಾಡಿ ಈ ಯಾವ ಸಂಸಾರದ ಬಂಧನೆಯನ್ನು ಮುರಿದು ಹಾಕುವೆನು ॥೪೫೮॥ ಈಗ ಉಳಿದಿರುವ ಆಯುಷ್ಯದಿಂದ ಕಲಿಕಾಲನ ಹಲ್ಲುಗಳನ್ನು ಮುರಿದುಹಾಕುವೆನು. ಗರ್ಭದುಃಖದ ಖಾತೆಯನ್ನು ಹರಿದು ಹಾಕುವೆನು. ನಾನು ಮರಣವನ್ನು ಕೊಂದುಬಿಡುವೆನು. ॥೪೫೯॥ ಯಾವ ದೇಹದಿಂದ ನಾನು ಒಳ್ಳೆಯಕೆಟ್ಟ ಕಾರ್ಯಗಳನ್ನು ಮಾಡಿರುವೆನೋ, ಅದೇ ಈ ದೇಹವನ್ನು ವಿದೇಹ ಅವಸ್ಥೆಯ ಆತ್ಮಭಾವದಿಂದ ಶೋಷಣೆಗೆ ಗುರಿ ಮಾಡುವೆನು ॥೪೬೦॥ ಆತ್ಮಜ್ಞಾನದ ಆಧಾರದಿಂದ ಈ ದೇಹದ ಬೇಲಿಯನ್ನೇ ಮುರಿದು ಹಾಕುವೆನು. ಮತ್ತು ಸುಖದುಃಖಗಳ ಬೇಡಿಯನ್ನು ಮುರಿದು ಸಾಯುಜ್ಯದ ಪತಾಕೆಯನ್ನು ನಿಲ್ಲಿಸುವೆನು ॥೪೬೧॥ ಇಂದು ನಾನು ವಿವೇಕ ಮತ್ತು ವೈರಾಗ್ಯದಿಂದ ನನ್ನ ಸ್ವಾರ್ಥ ವಿಷಯಕ್ಕೆ ಎಚ್ಚರನಾಗಿದ್ದೇನೆ. ನಾನು ಎಷ್ಟು ಪರಮಾರ್ಥವನ್ನು ಸಾಧಿಸುವ ಪ್ರಯತ್ನವನ್ನು ಮಾಡುವೆನೋ, ಅದೆಲ್ಲವೂ ನನಗೆ ಪ್ರಾಪ್ತವಾಗುವುದು ॥೪೬೨॥ ನನಗೆ ಮಾತ್ರ ಈ ಸ್ವಾರ್ಥವು ಪ್ರಾಪ್ತವಾಗಬೇಕೆಂಬ ಇಲ್ಲಿ ವಿಶೇಷವಾದ ಯಾವ ನೇಮವೂ ಇಲ್ಲ. ಯಾರೇಯಾಗಲಿ ವಿವೇಕಯುಕ್ತ ವೈರಾಗ್ಯವನ್ನು ಪ್ರಾಪ್ತಮಾಡಿಕೊಂಡರೆ ಆತನಿಗೆ ಪರಮಾರ್ಥವು ಸಹಜವಾಗಿ ದೊರೆಯುವುದು ॥೪೬೩॥ ವೈರಾಗ್ಯ ವಿವೇಕದ ಲಕ್ಷಣವು ಹೇಗಿದೆ ಎಂದರೆ ದೇಹ, ಮನೆ, ಹೆಂಡತಿ, ಮಕ್ಕಳು, ಧನಸಂಪತ್ತು ಇತ್ಯಾದಿ ಎಲ್ಲವೂ ಅನುಕೂಲವಾಗಿ ಇದ್ದರೂ ಕೂಡ ಅದರಲ್ಲಿ ಆಸಕ್ತನಾಗಿ ಇರದೇ ಇರುವುದಕ್ಕೆ ಪೂರ್ಣ ವೈರಾಗ್ಯವೆಂದು ಹೇಳುವರು ॥೪೬೪॥ ಈಗ ನಾನು ಆರಂಭಮಾಡಿದ ಯಾವ ನನ್ನ ಸ್ಥಿತಿಗೆ ದೇವ ಮತ್ತು ದೇವಿಯವರ ಸರ್ವ ಸಮುದಾಯವು ಮತ್ತು ದೇವಾಧಿದೇವ ಶ್ರೀಹರಿಯು ನನಗೆ ಸಹಾಯವನ್ನು ಮಾಡಬೇಕೆಂದು ನಾನು ಅಂತಃಕರಣಪೂರ್ವಕವಾಗಿ ಪ್ರಾರ್ಥನೆಯನ್ನು ಮಾಡುವೆನು. ॥೪೬೫॥

ಇಂದ್ರಿಯಅಧಿಷ್ಠಾತ್ರೀ ದೇವತಾ । ಮಜ ಸಾಹ್ಯ ಹೇತೂ ಸಮಸ್ತಾ । ಸಿದ್ಧಿ ಪಾವಾವಯಾ ಪರಮಾರ್ಥಾ । ಇಂದ್ರಿಯಜಯತಾ ಮಜ ದ್ಯಾವೀ ।೪೬೬॥ ಜೋ ತ್ರಿಭುವನೇಶ್ವರ ವಿಖ್ಯಾತ । ತೋ ಸಾಹ್ಯ ಝಾಲಿಯಾ ಭಗವಂತ । ದೇವತಾ ಸಾಹ್ಯ ಹೋತೀ ಸಮಸ್ತ । ತ್ಯಾ ಅಂತರ್ಭೂತ ಹರಿರೂಪೀ ।೪೬೭॥ ದೇವತಾರೂಪೇ ಭಾವೂನಿ ಹರೀ । ಸಕಳ ದೇವಾಂಚೀ ಸೇವಾ ಕರೀ । ಸಾಹ್ಯ ಹೋಊನಿ ದೀನೋದ್ಧಾರೀ । ಮಜ ಭವಸಾಗರೀ ತಾರಾವೇ ।೪೬೮॥ ಮ್ಹಣಾಲ ವಯಸೇಚಾ ಶೇವಟ । ಕೇವಳ ಝಾಲಾಸೀ ತೂ ಜರಠ । ವಾರ್ಧಕೀ ಹೇ ಖಟಪಟ । ವೃಥಾ ಕಷ್ಟ ಕಾ ಕರಿಶೀ ।೪೬೯॥ ಐಸಾ ನ ಮಾನಾವಾ ಅರ್ಥ । ಖಟ್ವಾಂಗರಾಜಾ ವಿಖ್ಯಾತ । ಮುಹೂರ್ತೇ ಸಾಧಿಲಾ ಪರಮಾರ್ಥ । ನಿಜಸ್ವಾರ್ಥ ಫಾವಲಾ ।೪೭೦॥ ತ್ಯಾಹೂನಿ ಮಾಝೀ ತಂವ ಯೇಥ । ಆಯುಷ್ಯ ಅಸೇಲ ಬಹುತ । ದೇವ ಸಾಹ್ಯ ಹೋತ ಸಮಸ್ತ । ನಿಮೇಷೇ ಪರಮಾರ್ಥ ಸಾಧೀನ ।೪೭೧॥ ಆಜೀ ವಿವೇಕ ವೈರಾಗ್ಯ ಜೈಸೇ ಆಹೇ । ಹೇ ಜೈ ನಿರ್ವಾಹಲೇ ರಾಹೇ । ತೈ ಕಳಿಕಾಳ ಬಾಪುಡೇ ಕಾಯೇ । ಮ್ಯಾ ಜಿಂತಿಲಾ ಹೋಯೇ ಸಂಸಾರ ।೪೭೨॥ ಹಾ ಪೂರ್ವೀ ಕೈಸಾ ಹೋತಾ ಯೇಥ । ಆತಾ ಪಾಲಟಲೇ ಯಾಚೇ ವೃತ್ತ । ಝಾಲಾ ವಿವೇಕವೈರಾಗ್ಯಯುಕ್ತ । ಆಶ್ಚರ್ಯೇ ಸಾಂಗತ ಶ್ರೀಕೃಷ್ಣ ।೪೭೩॥

ಶ್ರೀಭಗವಾನುವಾಚ :-

ಇತ್ಯಭಿಪ್ರೇತ್ಯ ಮನಸಾ ಹ್ಯಾವಂತ್ಯೋ ದ್ವಿಜಸತ್ತಮಃ ।
ಉನ್ಮುಚ್ಯ ಹೃದಯಗ್ರಂಥೀನ್ ಶಾಂತೋ ಭಿಕ್ಷುರಭೂನ್ಮುನಿಃ ।೩೧॥

ಅರ್ಥ:- ಶ್ರೀಕೃಷ್ಣನು ಹೇಳಿದನು, ಆ ಶ್ರೇಷ್ಠ ಅವಂತೀ ಬ್ರಾಹ್ಮಣನು ದೃಢವಾದ ಮನೋನಿರ್ಧಾರದಿಂದ ತನ್ನ ಮನದಲ್ಲಿನ ಅಪೇಕ್ಷೆಗಳೆಂಬ ಗಂಟುಗಳನ್ನು ಬಿಚ್ಚಿಹಾಕಲು ಸಮರ್ಥನಾಗಿ, ಶಾಂತಚಿತ್ತನೂ, ಮೌನಿಯೂ ಆದ ಪರಿವ್ರಾಜಕ ಸನ್ಯಾಸಿಯಾದನು.

ಐಸಾ ತೋ ಅವಂತೀಚಾ ಬ್ರಾಹ್ಮಣ । ಅತಿಕದರ್ಯು ಹೋತಾ ಜಾಣ । ತ್ಯಾಚ್ಯಾ ಹಾತೀಂಚೇ ಗೇಲಿಯಾ ಧನ । ವೈರಾಗ್ಯಚಿನ್ಹ ಪಾಲಟಲೇ ।೪೭೪॥ ಯಾಲಾಗೀ ವೈರಾಗ್ಯವಿವೇಕ ಚಿತ್ತೀ । ಝಾಲ್ಯಾ ಆಂದಣೇ ಬ್ರಹ್ಮಪ್ರಾಪ್ತೀ । ಕೃಷ್ಣ ಸಾಂಗೇ ಉದ್ಧವಾಪ್ರತೀ । ನಿಜಾತ್ಮಸ್ಥಿತೀ ಸಾಧಾವಯಾ ।೪೭೫॥ ಪೂರ್ವೀ ಹೋತಾ ಬ್ರಾಹ್ಮಣಾಧಮ । ಧನಲೋಭೀ ನಿಂದ್ಯಕರ್ಮ । ತೋಚಿ ಝಾಲಾ ದ್ವಿಜೋತ್ತಮ । ವಿವೇಕೇ ಪರಮ ವೈರಾಗೀ ।೪೭೬॥

ಇಂದ್ರಿಯಗಳಿಗೆಲ್ಲ ಪ್ರೇರಣೆಯನ್ನು ಕೊಡುವ ಸರ್ವ ದೇವತೆಗಳವರು ನನಗೆ ಸಹಾಯವನ್ನು ಮಾಡಬೇಕು. ಇವರು ನನಗೆ ಪರಮಾರ್ಥ ಪ್ರಾಪ್ತವಾಗುವುದಕ್ಕಾಗಿ ಇಂದ್ರಿಯಗಳನ್ನು ಗೆಲ್ಲುವ ಸಾಮರ್ಥ್ಯವನ್ನು ಕೊಡಬೇಕು ।೪೬೬॥ ತ್ರಿಭುವನದಲ್ಲಿ ಈಶ್ವರನೆಂದು ಪ್ರಸಿದ್ಧನಾಗಿರುವ ಯಾವ ಭಗವಂತನು ಒಮ್ಮೆ ನನಗೆ ಸಹಾಯನಾದರೆ ಸಾಕು, ಆಗ ಸರ್ವದೇವತೆಗಳು ನನಗೆ ಸಹಾಯವನ್ನು ಮಾಡುವರು. ಕಾರಣ, ಆ ಯಾವ ಸರ್ವ ದೇವತೆಗಳವರು ಹರಿಯ ಸ್ವರೂಪದಲ್ಲಿ ಅಂತರ್ಭೂತರಾಗುವರು ।೪೬೭॥ ಸರ್ವ ದೇವತೆಗಳ ಸ್ವರೂಪಗಳು ಹರಿಯೇ ಆಗಿರುವನೆಂದು ಈ ಭಾವನೆಯನ್ನು ತಾಳಿ ನಾನು ಸರ್ವ ದೇವತೆಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡುವೆನು. ಆದ್ದರಿಂದ ಸರ್ವರೂ ನನ್ನನ್ನು ಸಹಾಯವನ್ನು ಮಾಡಿ ನನಗೆ ಭವಸಾಗರದಿಂದ ಪಾರುಮಾಡಿರಿ ।೪೬೮॥ ಈಗ ನೀವು ಹೀಗೆ ಹೇಳಬಹುದು; ನಿನ್ನ ಆಯುಷ್ಯವು ಕೊನೆಯ ಘಟ್ಟಕ್ಕೆ ತಲುಪಿದೆ. ನೀನು ಈಗ ಕೇವಲ ವೃದ್ಧನಾಗಿರುವೆ. ಇಂತಹ ಮುಪ್ಪಾವಸ್ಥೆಯಲ್ಲಿ ನಿನಗೇಕೆ ಈ ಖಟಾಟೋಪವು ? ವ್ಯರ್ಥವಾಗಿ ಕಷ್ಟವನ್ನು ಏಕೆ ಸೋಸುವೆ? ।೪೬೯॥ ಆದರೆ ಇಂತಹ ವಿಕಲ್ಪಗಳನ್ನು ಮನದಲ್ಲಿ ತರಬೇಡಿರಿ. ಖಟ್ವಾಂಗರಾಜನ ಚರಿತ್ರೆಯು ಪ್ರಸಿದ್ಧವಾಗಿದೆ. ಆತನು ಒಂದೇ ತಾಸಿನಲ್ಲಿ ಪರಮಾರ್ಥವನ್ನು ಪ್ರಾಪ್ತಮಾಡಿಕೊಂಡು ತನ್ನ ಜೀವನದ ಕಲ್ಯಾಣವನ್ನು ಮಾಡಿಕೊಂಡನು ।೪೭೦॥ ಆ ರಾಜನಕ್ಕಿಂತಲೂ ನನ್ನ ಆಯುಷ್ಯವು ಹೆಚ್ಚಿಗೆ ಇರಬಹುದು. ಸರ್ವ ದೇವತೆಗಳು ನನ್ನನ್ನು ಸಹಾಯ ಮಾಡಿದರೆ ಒಂದೇ ನಿಮಿಷದಲ್ಲಿ ಪರಮಾರ್ಥವನ್ನು ಸಾಧಿಸುವೆನು ।೪೭೧॥ ಇಂದು ನನಗೆ ಪ್ರಾಪ್ತವಾಗಿರುವ ವಿವೇಕ, ವೈರಾಗ್ಯವು ಇದು ಶಾಶ್ವತವಾಗಿ ನನ್ನಲ್ಲಿ ಉಳಿದುಕೊಂಡರೆ ಪಾಪ! ಕಲಿಕಾಲನು ನನಗೇನು ಮಾಡಿಯಾನು? ನಾನು ಪ್ರಪಂಚವನ್ನೇ ಜಯಿಸಿದಂತಾಗುವುದು ।೪೭೨॥ ಈ ಯಾವ ಬ್ರಾಹ್ಮಣನು ಪೂರ್ವದಲ್ಲಿ ಹೇಗಿದ್ದನು, ಈಗ ಆತನ ವೃತ್ತಿಯು ಹೇಗೆ ಬದಲಾಯಿಸಿರುವುದು ಮತ್ತು ಆತನು ವಿವೇಕ ವೈರಾಗ್ಯಯುಕ್ತನಾಗಿ ಹೇಗಾದನು, ಈ ಎಲ್ಲ ಆಶ್ಚರ್ಯದ ಸಂಗತಿಯನ್ನು ಶ್ರೀಕೃಷ್ಣನು ಈಗ ಹೇಳುವನು. ।೪೭೩॥ ಪೂರ್ವದಲ್ಲಿ ಹೀಗೆ ಆ ಅವಂತಿಯ ಬ್ರಾಹ್ಮಣನು ಅತಿಶಯವಾಗಿ ಕೃಪಣನಾಗಿದ್ದನು. ಆತನಲ್ಲಿಯ ಸರ್ವ ಧನ ಸಂಪತ್ತು ನಾಶವಾದನಂತರ ಆತನ ಸ್ವಭಾವವು ಬದಲಾಯಿತು ಮತ್ತು ಆತನು ವಿರಕ್ತನಾದನು ।೪೭೪॥ ಆದ್ದರಿಂದ ಅಂತಃಕರಣದಲ್ಲಿ ವಿವೇಕವೈರಾಗ್ಯವು ನಿರ್ಮಾಣವಾಗುತ್ತಲೇ ಸಹಜವಾಗಿ ಬ್ರಹ್ಮಪ್ರಾಪ್ತಿಯಾಗುವುದು. ಹೀಗೆ ಶ್ರೀಕೃಷ್ಣನು ಉದ್ಧವನಿಗೆ ಆತ್ಮಜ್ಞಾನವನ್ನು ಸಾಧಿಸುವುದಕ್ಕಾಗಿ ಹೇಳಿದನು ।೪೭೫॥ ಪೂರ್ವದಲ್ಲಿ ಯಾರು ಅತ್ಯಂತ ಧನಲೋಭಿಯಾಗಿದ್ದನೋ, ನಿಂದ್ಯ ಕರ್ಮಗಳನ್ನು ಮಾಡುತ್ತಿದ್ದನೋ, ಆತನಿಗೆ ವಿವೇಕ ವೈರಾಗ್ಯದ ಉದಯವಾಗುತ್ತಲೇ ದ್ವಿಜೋತ್ತಮನಾದನು ।೪೭೬॥

ಪೂರ್ವೀ ಕೇಲಿಯಾ ನಿಶ್ಚಿತಾರ್ಥಾ । ಮೀ ಸಾಧೀನ ಸರ್ವಥಾ । ಐಶಿಯಾ ಅತಿಉಲ್ಹಾಸತಾ । ನಿಜಪರಮಾರ್ಥಾ ಸಾಧಕ ।।೫೭೭।। ಮಾಝಿಯಾ ದುಃಖಾಚೇ ಕಾರಣ । ಮಾಝಾ ಮೀಚಿ ಝಾಲೋ ಜಾಣ । ಧರಿತಾ ಕಾಮ ಲೋಭ ಧನಾಭಿಮಾನ । ದುಃಖ ದಾರುಣ ಮಜ ಮಾಝೇ ।।೫೭೮।। ಮಜ ದುಃಖ ದೇಊನಿ ಗೇಲೇ ಧನ । ಧನ ತೇ ದುಃಖಾಚೇ ಭಾಜನ । ಸ್ತ್ರೀಪುತ್ರಾರ್ಥ ಸಲೋಭೀ ಆಪಣ । ತಿಹೀಂಚ ಜಾಣ ಮಜ ದವಡಿಲೇ ।।೫೭೯।। ಧರಾವಾ ಜ್ಞಾತೀಚಾ ಅಭಿಮಾನ । ತಂವ ಸ್ವಯಾತೀ ಮೀ ಸಾಂಡಿಲೋ ಜಾಣ । ಮಜಸೀ ವಿಮುಖ ಝಾಲೇ ಸ್ವಜನ । ತ್ಯಾಂಚಾ ಲೋಭ ಕೋಣ ಮಜ ಆತಾ ।।೫೮೦।। ಸ್ತ್ರೀ ಪುತ್ರ ಸ್ವಜನ ಧನ । ಯಾಂಚ್ಯಾ ಲೋಭಾಚೇ ಮುಖ್ಯ ಕಾರಣ । ಮಾಝಾ ಮಜ ದೇಹಾಭಿಮಾನ । ತ್ಯಾಸೀ ಮಾಝೇ ನಮನ ಸಾಷ್ಟಾಂಗ ।।೫೮೧।। ನಮನ ಸ್ತ್ರೀಪುತ್ರಾದೀ ಧನಾಂಸೀ। ನಮನ ಸ್ವಯಾತಿಸ್ವಜನಾಂಸೀ । ನಮನ ದೇಹಾಭಿಮಾನಾಸೀ । ಸಂಬಂಧ ತುಮ್ಹಾ ಆಮ್ಹಾಂಸೀ ಅಸೇನಾ ।।೫೮೨।। ಜೇವೀ ಕಾ ಜಳಾ ಆಣಿ ಚಂದ್ರಬಿಂಬಾಸೀ । ಏಕತ್ರ ವಾಸ ದಿಸೇ ದೋಹೀಂಸೀ । ಪರೀ ಚಂದ್ರ ಅಲಿಪ್ತ ಜಳೇಸೀ। ತೇವೀ ಸಂಬಂಧ ತುಮ್ಹಾಸೀ ಮಜ ನಾಹೀ ।।೫೮೩।। ಜೇವೀ ಕಾ ಅಖಂಡ ಅಹರ್ನಿಶೀ । ಛಾಯಾ ಜಡಲೀಸೇ ರೂಪಾಸೀ । ತೈ ರೂಪ ನ ಬೈಸೇ ನಿಜಚ್ಛಾಯೇಸೀ । ತೇವೀ ಸಂಬಂಧೂ ತುಮ್ಹಾಸೀ ಮಜ ನಾಹೀ ।।೫೮೪।। ಜೇವೀ ತಾರುಣ್ಯ ಯೇ ದೇಹಾಪಾಶೀ । ತೇಣೇ ತಾರುಣ್ಯೇ ದೇಹೋ ಮುಸಮುಶೀ । ಶೇಖೀ ತಾರುಣ್ಯ ಸಾಂಡೀ ದೇಹಾಸೀ । ತೇವೀ ಮ್ಯಾ ತುಮ್ಹಾಂಸೀ ಸಾಂಡಿಲೇ ।।೫೮೫।। ವನೀ ವಸಂತಾಚೇ ರಿಗವಣೇ । ವನಶ್ರೀ ಶೋಭಾ ಮಿರವೀ ತೇಣೇ । ತೋ ವಸಂತೂ ಜೇವೀ ಸಾಂಡೀ ವನೇ । ತೇವೀ ಮ್ಯಾ ಸಾಂಡಣೇ ಅಹಂಮಮತಾ ।।೫೮೬।। ಬಾಪ ಸವೈರಾಗ್ಯ ವಿವೇಕ । ತ್ಯಾಗ ಕರವಿಲಾ ಅಲೋಕಿಕ । ದೇಹಾಭಿಮಾನಾ ತಿಳೋದಕ । ದೀಧಲೇ ದೇಖ ಮಮತೇಸೀ ।।೫೮೭।। ಜೇವೀ ಭ್ರಷ್ಟಲಿಯಾ ಪುತ್ರಾಸೀ । ಪಿತಾ ಘಟಸ್ಫೋಟೇ ತ್ಯಾಗೀ ತ್ಯಾಸೀ । ತೇವೀ ತ್ಯಾಗೂನಿ ದೇಹಾಭಿಮಾನಾಸೀ । ಸ್ವಯೇ ಸನ್ಯಾಸೀ ತೋ ಝಾಲಾ ।।೫೮೮।। ಜೇವೀ ಕಾ ಯೇ ಫಳ ಪರಿಪಾಕಾತೇ । ಸಾಂಡೀ ಜನ್ಮಲ್ಯಾ ನಿಜದೇಹಾತೇ । ದೇಠ ನ ಧರೀ ತ್ಯಾ ಫಳಾತೇ । ಫಳ ದೇಠಾತೇ ಧರೀನಾ ।।೫೮೯।।

ಪೂರ್ವದಲ್ಲಿ ಮಾಡಿರುವ ನಿಶ್ಚಯಗಳನ್ನು ನಾನು ಅವಶ್ಯವಾಗಿ ಪಾಲಿಸುವೆನು. ಹೀಗೆಂದು ಆತನು ಉಲ್ಹಾಸಭರಿತನಾಗಿ ಪರಮಾರ್ಥದ ಸಾಧನೆಯತ್ತ ತಿರುಗಿದನು ।।೫೭೭।। ನನ್ನ ಈ ದುಃಖಕ್ಕೆ ನಾನೇ ಕಾರಣೀಭೂತನಾಗಿರುವೆನು. ಕಾಮ, ಕ್ರೋಧ, ಲೋಭ ಮತ್ತು ಧನದ ಅಭಿಮಾನವನ್ನು ಹಿಡಿದಿದ್ದರಿಂದ ಇದರ ಫಲವಾಗಿ ನನಗೇನೇ ದುಃಖವನ್ನು ಭೋಗಿಸಬೇಕಾಯಿತು ।।೫೭೮।। ಧನಸಂಪತ್ತು ಇದೇ ನನಗೆ ದುಃಖವನ್ನು ಕೊಟ್ಟು ಹೋಯಿತು. ಆದ್ದರಿಂದ ಧನಸಂಪತ್ತು ಇದುವೇ ದುಃಖಕ್ಕೆ ಮೂಲಕಾರಣವಾಗಿರುವುದು. ಹೆಂಡತಿ ಮಕ್ಕಳ ಲೋಭವನ್ನು ನಾನು ಹಿಡಿದುಕೊಂಡಿದ್ದೆನು. ಆದರೆ ಅವರೇ ನನಗೆ ಮನೆಯ ಹೊರಗೆ ಅಟ್ಟಿದರು ।।೫೭೯।। ಜಾತಿಯ ಅಭಿಮಾನವನ್ನು ಹಿಡಿಯಬೇಕೆಂದರೆ ನನ್ನ ಜಾತಿಬಾಂಧವರು ನನ್ನನ್ನು ಬಿಟ್ಟುಕೊಟ್ಟರು. ನನ್ನ ಅಣ್ಣತಮ್ಮಂದಿರು ನನಗೆ ವಿಮುಖರಾದರು. ಆದ್ದರಿಂದಲೇ ಈಗ ನನಗೆ ಇವರೆಲ್ಲರ ವಿಷಯಕ್ಕೆ ಯಾವ ಲೋಭವೂ ಇರುವುದಿಲ್ಲ ।।೫೮೦।। ಹೆಂಡತಿ, ಮಕ್ಕಳು, ಆಪ್ತರು, ಧನಸಂಪತ್ತು ಸರ್ವರ ಲೋಭಕ್ಕೆ ಮುಖ್ಯ ಕಾರಣವು ನನಗೆ ನನಗಾದ ದೇಹಾಭಿಮಾನವೇ ಆಗಿರುವುದು. ಆದ್ದರಿಂದ ಈ ನನ್ನ ದೇಹಾಭಿಮಾನಕ್ಕೆ ಸಾಷ್ಟಾಂಗ ನಮಸ್ಕಾರಗಳು. ।।೫೮೧।। ಹೆಂಡತಿ, ಮಕ್ಕಳು ಮತ್ತು ಧನಸಂಪತ್ತು ಇವರಿಗೂ ಕೂಡ ನನ್ನ ನಮಸ್ಕಾರಗಳು. ಜಾತಿ ಬಾಂಧವರಿಗೆ ಆಪ್ತೇಷ್ಟರಿಗೆ ನನ್ನ ನಮಸ್ಕಾರಗಳು. ಇನ್ನು ಮುಂದೆ ನಮ್ಮ ನಿಮ್ಮ ಯಾವ ಸಂಬಂಧವೂ ಬೇಡ ।।೫೮೨।। ಯಾವ ಪ್ರಕಾರವಾಗಿ ಕೆರೆಯಲ್ಲಿನ ಜಲವು ಮತ್ತು ಅದರಲ್ಲಿ ಬಿದ್ದಿರುವ ಚಂದ್ರನ ಪ್ರತಿಬಿಂಬವು ಈ ಎರಡರ ಸಹವಾಸವು ಏಕತ್ರವಾಗಿರುವಂತೆ ತೋರುವುದು. ಆದರೆ ಚಂದ್ರನು ಆ ಯಾವ ಜಲದಿಂದ ಪರಿಪೂರ್ಣವಾಗಿ ಅಲಿಪ್ತನಾಗಿರುವನು. ಅದರಂತೆಯೇ ನಿಮ್ಮಿಂದ ನಾನೀಗ ಪರಿಪೂರ್ಣವಾಗಿ ಅಲಿಪ್ತನಾಗಿರುವೆನು ।।೫೮೩।। ಯಾವುದೇ ಪದಾರ್ಥವಾಗಲಿ ಅದರ ನೆರಳು ಹಗಲು ರಾತ್ರಿ ಅದರ ಜೊತೆಯಲ್ಲಿಯೇ ಅಖಂಡವಾಗಿ ಇರುವುದು. ಆದರೆ ಆ ಪದಾರ್ಥಗಳು ಮಾತ್ರ ನೆರಳಿನಲ್ಲಿ ಹೋಗಿ ಕುಳಿತುಕೊಳ್ಳುವುದಿಲ್ಲ. ಅದರಂತೆಯೇ ಈಗ ನಮ್ಮ ನಿಮ್ಮ ಯಾವ ಸಂಬಂಧವಿಲ್ಲ ।।೫೮೪।। ಅಥವಾ ಯೌವನವು ಇದು ಯಾವ ಶರೀರಕ್ಕೆ ಬರುವುದೋ, ಆಗ ಆ ಶರೀರವು ತಾರುಣ್ಯದಿಂದ ತುಂಬಿಕೊಂಡು ಎದ್ದು ಕಾಣುವುದು. ಆದರೆ ಕೊನೆಯಲ್ಲಿ ಆ ಯಾವ ಯೌವನವು ಅವನನ್ನು ಬಿಟ್ಟು ತೊಲಗುವುದು. ಅದರಂತೆಯೇ ನಾನೀಗ ನಿಮ್ಮನ್ನು ಬಿಟ್ಟುಬಿಟ್ಟಿರುವೆನು ।।೫೮೫।। ವಸಂತ ಋತುವು ವನದಲ್ಲಿ ಪ್ರವೇಶವನ್ನು ಮಾಡುತ್ತಲೇ ವನಶ್ರೀಯ ಶೋಭೆಯು ರಮಣೀಯವಾಗಿ ತೋರುವುದು. ಆದರೆ ಆ ವಸಂತವು ತನ್ನ ಕಾಲವು ಮುಗಿಯುತ್ತಲೇ ಆ ವನವನ್ನು ಬಿಟ್ಟುಕೊಟ್ಟು ಹೋಗಿಬಿಡುವುದು. ಅದರಂತೆಯೇ ನಾನು ಅಹಂ-ಮಮತೆಯನ್ನು ಬಿಟ್ಟುಕೊಟ್ಟಿರುವೆನು. ।।೫೮೬।। ವೈರಾಗ್ಯಯುಕ್ತ ವಿವೇಕದ ಸಾಮರ್ಥ್ಯವು ಬಹಳ ದೊಡ್ಡದಾಗಿರುವುದು. ಅದು ನನ್ನಿಂದ ಅಲೌಕಿಕವಾಗಿ ತ್ಯಾಗವನ್ನು ಮಾಡಿಸಿತು. ಇದರಿಂದ ದೇಹಾಭಿಮಾನಕ್ಕೆ ಮತ್ತು ಮಮತೆಗೆ ನಾನು ತಿಲಾಂಜನಿಯನ್ನು ಕೊಟ್ಟುಬಿಟ್ಟಿರುವೆನು ।।೫೮೭।। ಯಾವ ಪ್ರಕಾರವಾಗಿ ಪಿತನು ಭ್ರಷ್ಟನಾಗಿರುವ ಪುತ್ರನ ಘಟಸ್ಫೋಟವನ್ನು ಮಾಡುವನು ಮತ್ತು ಅವನ ಸಂಬಂಧವನ್ನು ತ್ಯಜಿಸಿಬಿಡುವನು. ಅದರಂತೆಯೇ ದೇಹದ ಅಭಿಮಾನವನ್ನು ತ್ಯಜಿಸಿ ಅವನು ಸ್ವತಃ ಸನ್ಯಾಸಿಯಾದನು ।।೫೮೮।। ಯಾವ ವೃಕ್ಷದಲ್ಲಿನ ಫಲವು ಪರಿಪಕ್ವವಾಗಲು ಆಗ ಆ ಫಲವು ತನಗೆ ಜನ್ಮಕೊಟ್ಟ ವೃಕ್ಷವನ್ನು ತ್ಯಜಿಸಿಬಿಡುವುದು. ಯಾವ ಆ ವೃಕ್ಷದ ತುಂಬು ಪಕ್ವಫಲವನ್ನು ಹಿಡಿಯುವುದಿಲ್ಲ ಮತ್ತು ಆ ಫಲವೂ ಕೂಡ ಆ ತುಂಬನ್ನು ಹಿಡಿದುಕೊಳ್ಳುವುದಿಲ್ಲ ।।೫೮೯।।

ತೇವೀ ಹಾ ನ ಧರೀ ಅಹಂತೇಸೀ । ಅಹಂತಾ ಲಾಜಲೀ ನ ಯೇ ಯಾಪಾಶೀ । ಹಾಹೀ ದೇಹಾಭಿಮಾನಾಸೀ । ಸದ್ಭಾವೇಸೀ ನಾತಳೇ ।।೪೯೦।। ಜಳೀ ಜೇವೀ ಪದ್ಮಿನೀಪಾನ । ಅಸೋನಿ ಜಳೇಸೀ ಅಲಿಪ್ತ ಜಾಣ । ತೇವೀ ನಾತಳೋನಿ ದೇಹಾಭಿಮಾನ । ಸನ್ಯಾಸಗ್ರಹಣ ವಿಧ್ಯುಕ್ತ ।।೪೯೧।। ಅನ್ಯ ಸನ್ಯಾಸೀ ಕರೋನಿ ಹೋಮ । ಜಾಳಿಲಾ ಮ್ಹಣತೀ ಕ್ರೋಧಕಾಮ । ಶೇಖೀ ತಿಳತೂಪ ಹೋಯ ಭಸ್ಮ । ಕ್ರೋಧಕಾಮ ಸಂಚಲೇ ।।೪೯೨।। ತೈಶೀ ನವ್ಹೇಚ ಯಾಚೀ ಹೋಮಸ್ಥಿತೀ । ಜಾಳಿಲ್ಯಾ ವಿಕಲ್ಪಾಚ್ಯಾ ವೃತ್ತೀ । ಕಾಮಕ್ರೋಧಾಂಚೀ ಪೂರ್ಣಾಹುತೀ । ಕೇಲೀ ಅಹಂಕೃತೀಸಮವೇತ ।।೪೯೩।। ಹೋಮೂನಿ ನಿಜಸ್ವಭಾವಾಸೀ । ಝಾಲಾ ತ್ರಿದಂಡಿ ಸನ್ಯಾಸೀ । ಆಜ್ಞಾ ಘೇಊನಿ ಗುರೂಪಾಶೀ । ಸುಖೇ ಸುಖವಾಸೀ ವಿಚರತ ।।೪೯೪।।

ಸ ಚಚಾರ ಮಹೀಮೇತಾಂ ಸಂಯತಾತ್ಮೇಂದ್ರಿಯಾನಿಲಃ ।
ಭಿಕ್ಷಾರ್ಥಂ ನಗರಗ್ರಾಮಾನಸಂಗೋಽಲಕ್ಷಿತೋಽವಿಶತ್ ।।೨।।

ಅರ್ಥ:- ಬುದ್ಧಿ, ಇಂದ್ರಿಯಗಳು ಹಾಗೂ ಪ್ರಾಣವನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಆ ಸನ್ಯಾಸಿಯು ದೇಶಾಟನೆ ಮಾಡಿದನು. ಭಿಕ್ಷೆ ಬೇಡಲು ಅನೇಕ ನಗರಗಳಿಗೂ, ಗ್ರಾಮಗಳಿಗೂ ಒಂಟಿಯಾಗಿ ಅಲೆದಾಡಿದನು. ಅವನು ತನ್ನ ಉತ್ಕೃಷ್ಟವಾದ ಅಧ್ಯಾತ್ಮಿಕ ಸಾಧನೆಯ ಬಗೆಗೆ ಪ್ರಚಾರ ಮಾಡಿಕೊಳ್ಳಲಿಲ್ಲ. ತನ್ನನ್ನು ಯಾರೂ ಕಂಡಹಿಡಿಯದಂತೆ ವರ್ತಿಸುತ್ತಿದ್ದನು.

ಜಿಣೋನಿಯಾ ಮನಪವನ । ಸಾಂಡೋನಿಯಾ ಮಾನಾಭಿಮಾನ । ಪರಮಾನಂದೇ ಪರಿಪೂರ್ಣ । ಪೃಥ್ವೀಮಾಜೀ ಜಾಣ ವಿಚರತ ।।೪೯೫।। ಜ್ಯಾಸೀ ನಾವಡೇ ದೇಹಸಂಗತೀ । ತ್ಯಾಸೀ ಕೈಚಾ ಸಂಗೂ ಸಾಂಗಾತೀ । ಏಕಲಾ ವಿಚರೇ ಕ್ಷಿತೀ । ಆತ್ಮಸ್ಥಿತೀ ನಿಜಬೋಧೇ ।।೪೯೬।। ಅಖಂಡ ವಸೇ ವನಾಂತರೀ । ಭಿಕ್ಷೇಲಾಗೀ ನಿಘೇ ನಗರೀ । ಖೇಟ ಖರ್ವಟ ಗ್ರಾಮೀ ಪುರೀ । ಭಿಕ್ಷಾ ಕರೀ ಯಥಾಪ್ರಾಪ್ತ ।।೪೯೭।। ಮೀ ಏಕ ಭಿಕ್ಷೇಸೀ ಯೇತಾ । ಹಾ ನೇಮ ನ ಕರೀ ಸರ್ವಥಾ । ಅಲಕ್ಷ್ಯ ಯೇವೋನಿ ಅವಚಿತಾ । ಜೇ ಆಲೇ ಹಾತಾ ತೇಣೇ ಸುಖೀ ।।೪೯೮।। ಪಂಚಾಗಾರ ಸಪ್ತಾಗಾರ । ಹಾಹೀ ನೇಮ ನಾಹೀ ನಿರ್ಧಾರ । ಕೋಣೇವಿಖೀಂಚಾ ಅಹಂಕಾರ । ಅಣುಮಾತ್ರ ಧರೀನಾ ।।೪೯೯।।

ತಂ ವೈ ಪ್ರವಯಸಂ ಭಿಕ್ಷುಮವಧೂತಮಸಜ್ಜನಾಃ ।
ದೃಷ್ಟ್ವಾ ಪರ್ಯಭವನ್ ಭದ್ರ ಬಹ್ವೀಭಿಃ ಪರಿಭೂತಿಭಿಃ ।।೩।।

ಅರ್ಥ:- ಹೇ ಕರುಣಾಶಾಲಿಯಾದ ಉದ್ಧವನೇ, ಪುಂಡ ಜನರು ಆ ಮುದಕನಾಗಿರುವ ಅವಧೂತ ಭಿಕ್ಷುಕನನ್ನು ತಿರಸ್ಕರಿಸುತ್ತ ನಾನಾ ಬಗೆಯಲ್ಲಿ ಪೀಡಿಸುತ್ತ ಅಗೌರವಿಸಿದರು.

ಅದರಂತೆ ಈತನು ಅಹಂತೆಗೆ ಹಿಡಿಯುವುದಿಲ್ಲ ಮತ್ತು ಅಹಂತೆಯು ನಾಚಿಕೊಂಡು ಇವನಲ್ಲಿ ಬರುವುದಿಲ್ಲ. ಈತನೂ ಕೂಡ ಸದ್ಭಾವನೆಯಿಂದ ದೇಹಾಭಿಮಾನಕ್ಕೆ ಮುಟ್ಟುವುದಿಲ್ಲ ।।೪೯೦।।

ಕಮಲದ ಎಲೆಯು ನೀರಿನಲ್ಲಿಯೇ ಇದ್ದು ನೀರಿನಿಂದ ಅಲಿಪ್ತವಾಗಿರುವುದು. ಅದರಂತೆ ಈತನು ದೇಹಾಭಿಮಾನದಿಂದ ಅಲಿಪ್ತನಾದನು. ಈತನು ವಿಧಿಯುಕ್ತವಾಗಿ ಸನ್ಯಾಸವನ್ನು ಗ್ರಹಣಮಾಡಿದನು ।।೪೯೧।। ಸರ್ವಸಾಧಾರಣವಾಗಿ ಇತರ ಸನ್ಯಾಸಿಗಳು ಹೋಮವನ್ನು ಮಾಡಿ ಕಾಮಕ್ರೋಧಗಳನ್ನು ಸುಟ್ಟಿರುವೆನು ಎಂದು ಹೇಳುವರು. ಆದರೆ ನಿಜವಾಗಿ ನೋಡಿದರೆ ಹೋಮದಲ್ಲಿ ಎಳ್ಳು ತುಪ್ಪ ಭಸ್ಮವಾಗಿ ಅವರ ಕಾಮಕ್ರೋಧಗಳು ಹಾಗೆಯೇ ಉಳಿದಿರುವುವು ।।೪೯೨।। ಆದರೆ ಈತನ ಹೋಮವು ಆ ಪ್ರಕಾರವಾಗಿ ಇದ್ದಿಲ್ಲ. ಈತನು ವಿಕಲ್ಪದ ವೃತ್ತಿಯನ್ನು ಸುಟ್ಟು ಒಗೆದು ಬಿಟ್ಟು ಅಹಂಕಾರಸಮೇತವಾಗಿ ಕಾಮಕ್ರೋಧದ ಪೂರ್ಣಾಹುತಿಯನ್ನು ಮಾಡಿದ್ದನು. ।।೪೯೩।। ಈ ಪ್ರಕಾರವಾಗಿ ಈತನು ತನ್ನ ಮೂಲ ಸ್ವಭಾವದ ಹೋಮವನ್ನು ಮಾಡಿ ತ್ರಿದಂಡೀ ಸನ್ಯಾಸಿಯಾದನು. ಗುರುಗಳ ಆಜ್ಞೆಯನ್ನು ಪಡೆದು ಈತನು ಸುಖವಾಗಿ ಸರ್ವತ್ರವೂ ಸಂಚಾರ ಮಾಡಲಾರಂಭಿಸಿದನು. ।।೪೯೪।।

ಈತನು ತನ್ನ ಮನ ಮತ್ತು ಪ್ರಾಣವನ್ನು ಜಯಿಸಿದನು. ಮಾನಾಭಿಮಾನದ ತ್ಯಾಗವನ್ನು ಮಾಡಿದನು. ಪರಮಾನಂದದಿಂದ ಈತನು ಪರಿಪೂರ್ಣನಾದನು. ಪೃಥ್ವಿಯ ಮೇಲೆ ಸಂಚಾರವನ್ನು ಮಾಡಹತ್ತಿದನು. ।।೪೯೫।। ಯಾರಿಗೆ ತನ್ನ ದೇಹದ ಸಂಗತಿಯೇ ಪ್ರಿಯವಾಗದಿರಲು ಆತನಿಗೆ ಇತರರ ಸಂಗತಿಯು ಹೇಗೆ ಪ್ರಿಯವಾಗಬೇಕು ? ಆತ್ಮಜ್ಞಾನದಿಂದ ಸಂಪನ್ನನಾಗಿ ಆತನು ಈ ಕ್ಷಿತಿಯಲ್ಲಿ ಒಬ್ಬನೇ ಸಂಚಾರವನ್ನು ಮಾಡುತ್ತಿದ್ದನು. ।।೪೯೬।। ಆತನ ವಾಸ್ತವ್ಯವು ಯಾವಾಗಲೂ ಅರಣ್ಯದಲ್ಲಿಯೇ ಆಗುತ್ತಿತ್ತು. ಭಿಕ್ಷೆಗಾಗಿ ಮಾತ್ರ ಆತನು ಊರಲ್ಲಿ ಬರುತ್ತಿದ್ದನು. ಯಾವ ಊರಿನಲ್ಲಿ ಸಂತೆಯಾಗುತ್ತಿತ್ತೋ, ಅಲ್ಲಿ ಆತನು ದೊರೆಯುವ ಭಿಕ್ಷೆಯನ್ನು ಬೇಡಿ ತರುತ್ತಿದ್ದನು. ।।೪೯೭।। ನಾನೊಬ್ಬ ಭಿಕ್ಷುಕನು ಆಗಿರುವೆನೆಂಬ ಯಾವ ಸಂಕಲ್ಪವನ್ನೂ ಆತನು ಮಾಡುತ್ತಿದ್ದಿಲ್ಲ. ಯಾರಿಗೂ ತೋರದಂತೆ ಆತನು ಅಕಸ್ಮಾತಾಗಿ ಭಿಕ್ಷೆಗೆ ಹೋಗಿ ಅಲ್ಲಿ ಏನೇ ಸಿಗಲಿ ಅಷ್ಟರಲ್ಲಿಯೇ ಸಮಾಧಾನ ಪಡೆಯುತ್ತಿದ್ದನು ।।೪೯೮।। ಐದೇ ಮನೆಗಳ ಭಿಕ್ಷೆ ಬೇಡುವ ಅಥವಾ ಏಳೇ ಮನೆಗಳಲ್ಲಿ ಭಿಕ್ಷೆ ಬೇಡುವ ಈ ನಿಯಮವನ್ನು ಆತನು ಹಾಕಿಕೊಂಡಿದ್ದಿಲ್ಲ. ಆತನು ಯಾವುದೇ ಸ್ವಲ್ಪವೂ ಕೂಡ ಅಭಿಮಾನವನ್ನು ಹಿಡಿಯಲಿಲ್ಲ ।।೪೯೯।।

ನ ಕರೀ ದೇಹಮಳಕ್ಷಾಳಣ । ಮುಸಲವತ ಕರೀ ಸ್ನಾನ । ಯಾಲಾಗೀ ತೋ ಧೂಸರವರ್ಣ । ಅವಧೂತಪಣ ಯಾ ಹೇತೂ ॥೫೦೦॥ ಐಸಾ ವಿಚರತಾ ಪೃಥ್ವೀಸೀ । ಅವಚಟೇ ಆಲಾ ಅವಂತೀಸೀ । ಅತಿವೃದ್ಧ ಆಣಿ ಸನ್ಯಾಸೀ । ಅವಧೂತವೇಶೀ ದೇಖಿಲಾ ॥೫೦೧॥ ಸನ್ಯಾಸ ಘೇತಲಿಯಾ ಜಾಣ । ಪೂರ್ವಭೂಮಿಕಾ ಅವಲೋಕನ । ಏಕ ವೇಳಾ ಕರಾವೀ ಆಪಣ । ಪದ್ಧತಿಲೇಖನ ಆಚಾರ್ಯಾಚೇ ॥೫೦೨॥ ತೇ ನಗರೀಚೇ ಮ್ಹಣತೀ ಜನ । ಅರೇ ಹಾ ಕದರ್ಯು ಬ್ರಾಹ್ಮಣ । ಯಾಚೇ ಹಾರಪಲ್ಯಾ ಧನ । ಸನ್ಯಾಸೀ ಜಾಣ ಹಾ ಝಾಲಾ ॥೫೦೩॥ ಹೇ ಐಕೋನಿಯಾ ಅತಿದುರ್ಜನ । ತ್ಯಾಸಭೋಂವತೇ ಮಿನಲೇ ಜಾಣ । ಪರಸ್ಪರೇ ದಾವೂನಿ ಖೂಣ । ವಿರುದ್ಧ ಛಳಣ ಮಾಂಡಿಲೇ ॥೫೦೪॥ ತ್ಯಾಸೀ ಬಹುಸಾಲ ಉಪದ್ರವಿತಾ । ಕ್ಷಣಾರ್ಧ ಪಾಲಟ ನವ್ಹೇ ಚಿತ್ತಾ । ಕ್ರೋಧಾ ನ ಯೇಚಿ ಸರ್ವಥಾ । ಅತಿವಿವೇಕತಾ ಮಹಾಧೀರೂ ॥೫೦೫॥ ತ್ಯಾಚ್ಯಾ ಉಪದ್ರವಾಚೀ ಕಥಾ । ಆಣಿ ತ್ಯಾಚೀ ಸಹನಶೀಲತಾ । ತುಜ ಮೀ ಸಾಂಗೇನ ತತ್ತ್ವತಾ । ಸಾವಧಾನತಾ ಅವಧಾರೀ ॥೫೦೬॥ ದೃಷ್ಟಿ ಠೇವೂನಿ ಯೇಥೀಂಚ್ಯಾ ಅರ್ಥಾ । ವಿವೇಕೇ ಕುಶಳ ಹೋಯ ಶ್ರೋತಾ । ಅರ್ಥ ಧರೀ ಭಾವಾರ್ಥತಾ । ಶಾಂತಿ ತತ್ತ್ವತಾ ತೋ ಲಾಭೇ ॥೫೦೭॥ ವಿವೇಕಚಿತ್ತ ಚಕೋರಚಂದ್ರಾ । ಭಾಗವತ ಭಾಗ್ಯೇ ಶುದ್ಧಮುದ್ರಾ । ಶಾಂತಿಸೌಭಾಗ್ಯ ನರೇಂದ್ರಾ । ಐಕ ಸುಭದ್ರಾ ಉದ್ಧವಾ ॥೫೦೮॥ ಆಕಳಾವಯಾ ನಿಜಶಾಂತೀಸೀ । ಕೃಷ್ಣ ಸಂಬೋಧೀ ಉದ್ಧವಾಸೀ । ಐಸೇ ಸಾವಧ ಕರೋನಿ ತ್ಯಾಸೀ । ಮ್ಹಣೇ ದಶಾ ತೇ ಐಸೀ ಶಾಂತೀಚೀ ॥೫೦೯॥ ಅವರೋಧಿತಾ ಜೀವಿಕೇಸೀ । ಸನ್ಮಾನ ದೇತಾ ಅಪಮಾನೇಸೀ । ಜೋ ಸರ್ವಥಾ ನ ಯೇ ಕ್ಷೋಭಾಸೀ । ಶಾಂತಿ ತ್ಯಾಪಾಶೀ ತೇ ಐಕ ॥೫೧೦॥

ಕೇಚಿತ್ರಿವೇಣುಂ ಜಗೃಹುರೇಕೇ ಪಾತ್ರಂ ಕಮಂಡಲುಮ್ । ಪೀಠಂ ಚೈಕೇಽಕ್ಷಸೂತ್ರಂ ಚ ಕಂಥಾಂ ಚೀರಾಣಿ ಕೇಚನ ॥೩೪॥

ಅರ್ಥ:- ಕೆಲವರು ಆ ಸನ್ಯಾಸಿಯ ತ್ರಿದಂಡವನ್ನು ಭಿಕ್ಷಾಪಾತ್ರೆಯನ್ನು ಕಮಂಡಲವನ್ನು, ಆಸನವನ್ನು ಕಸಿದುಕೊಂಡರು. ಕೆಲವರು ಆತನ ಜಪಮಾಲೆಯನ್ನು, ಕಂಬಳಿಯನ್ನು ಇನ್ನೂ ಕೆಲವರು ಆತನ ಹರಕ ವಸ್ತ್ರಗಳನ್ನು ಎಳೆದು ತೆಗೆದುಕೊಂಡರು.

ದುರ್ಜನೀ ವೇಢೂನಿ ಸನ್ಯಾಸೀ । ಛಳಣಾರ್ಥ ಲಾಗತೀ ಪಾಯಾಂಸೀ । ತೇಣೇ ನಮನಪ್ರಸಂಗೇಸೀ ಕರಿತೀ ಸ್ಪರ್ಶಾಸೀ ಅವಘೇಹೀ ॥೫೧೧॥

ಸ್ನಾನವನ್ನು ಮಾಡುವಾಗ್ಗೆ ಆತನು ಮೈಮೇಲಿನ ಹೊಲಸನ್ನು ಎಂದೂ ತೆಗೆಯುತ್ತಿದ್ದಿಲ್ಲ. ಒನಕೆಯಂತೆ ಸ್ನಾನವನ್ನು ಮಾಡುತ್ತಿದ್ದನು. ಆದ್ದರಿಂದ ಶರೀರದ ಬಣ್ಣವು ಬೂದಿಬಣ್ಣದಂತಾಗಿತ್ತು. ಈ ಕಾರಣವಾಗಿ ಆತನನ್ನು ಅವಧೂತ ಎಂದು ಕರೆಯುತ್ತಿದ್ದರು ॥೫೦೦॥ ಹೀಗಿರುವ ಯಾವ ಈ ಭಿಕ್ಷುಕನು ಸಂಚಾರವನ್ನು ಮಾಡುತ್ತಿರಲು ಅಕಸ್ಮಾತಾಗಿ ಅವಂತಿನಗರಕ್ಕೆ ಬಂದನು. ಅವಧೂತ ವೇಶದಲ್ಲಿರುವ ಈ ಯಾವ ಅತಿವೃದ್ಧ ಸನ್ಯಾಸಿಯನ್ನು ಜನರು ಕಂಡರು ॥೫೦೧॥ ಸನ್ಯಾಸವನ್ನು ಸ್ವೀಕರಿಸಿದ ನಂತರ ಒಂದು ಸಲ ತನ್ನ ಜನ್ಮಭೂಮಿಯ ದರ್ಶನವನ್ನು ಪಡೆಯಬೇಕೆಂಬ ಈ ನಿಯಮವನ್ನು ದೊಡ್ಡ ದೊಡ್ಡ ಆಚಾರ್ಯರು ಬರೆದಿಟ್ಟಿರುವರು ॥೫೦೨॥ ಈತನನ್ನು ಕಾಣುತ್ತಲೇ ಪಟ್ಟಣದ ಎಲ್ಲ ಜನರು ಜಮಾಯಿಸಿದರು ಮತ್ತು ಹೀಗೆ ಹೇಳಹತ್ತಿದರು; ಅರೇ! ಈತನು ಅತ್ಯಂತ ಕೃಪಣನಾದ ಬ್ರಾಹ್ಮಣನು ಇವನ ಎಲ್ಲ ಧನಸಂಪತ್ತು ನಾಶವಾಗಿ ಹೋಗಿದ್ದಕ್ಕೆ ಇವನು ಈಗ ಸನ್ಯಾಸಿಯಾಗಿರುವನು. ॥೫೦೩॥

ಇದನ್ನು ಕೇಳುತ್ತಲೇ ಅತ್ಯಂತ ದುಷ್ಟ ಜನರು ಈತನ ಸುತ್ತಲೂ ಕೂಡಿಕೊಂಡರು ಮತ್ತು ಇವರು ಒಬ್ಬರಿಗೊಬ್ಬರು ಸನ್ನೆ ಮಾಡುತ್ತ ಈ ಯಾವ ಸನ್ಯಾಸಿಯನ್ನು ಪೀಡಿಸಲು ಆರಂಭಿಸಿದರು. ॥೫೦೪॥ ಈತನಿಗೆ ಈ ದುಷ್ಟ ಜನರು ಅತಿಶಯವಾಗಿ ಪೀಡೆಯನ್ನು ಕೊಟ್ಟರು. ಆದರೆ ಈತನ ಮನೋವೃತ್ತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಈತನು ಅತ್ಯಂತ ವಿವೇಕೀ ಮತ್ತು ಧೈರ್ಯವಂತನಾಗಿದ್ದನು. ಆದ್ದರಿಂದ ಈತನಿಗೆ ಸ್ವಲ್ಪವೂ ಕೂಡ ಕೋಪವು ಬರಲಿಲ್ಲ. ॥೫೦೫॥ ಈತನಿಗೆ ಈ ಜನರು ಯಾವ ಪ್ರಕಾರವಾಗಿ ಪೀಡೆಯನ್ನು ಕೊಟ್ಟರು ಮತ್ತು ಈತನ ಸಹನಶೀಲತೆಯು ಹೇಗಿತ್ತು ಎಂಬ ವಿಷಯವನ್ನು ಕುರಿತು ಈಗ ವರ್ಣನೆಯನ್ನು ಮಾಡುತ್ತೇನೆ, ಕಾರಣ ಏಕಾಗ್ರಚಿತ್ತದಿಂದ ಆಲಿಸಬೇಕು ॥೫೦೬॥ ಶ್ರೋತೃಗಳು ಇದರಲ್ಲಿನ ಅರ್ಥವನ್ನು ತಿಳಿದುಕೊಂಡರೆ ಇವರು ವಿವೇಕದಿಂದ ಚತುರರಾಗುವರು ಮತ್ತು ಇದರ ಅರ್ಥದ ಗ್ರಹಣವನ್ನು ಮಾಡಿದರೆ ಶ್ರೋತೃಗಳವರಿಗೆ ಶಾಂತಿಯು ಲಭಿಸುವುದು ॥೫೦೭॥ ಹೇ ವಿವೇಕಯುಕ್ತ ಚಿತ್ತಚಕೋರಚಂದ್ರನೇ, ಭಕ್ತರ ಭಾಗ್ಯದಿಂದ ಸುಲಕ್ಷಣನೇ, ಶಾಂತಿ ಸೌಭಾಗ್ಯದ ರಾಜನೇ, ಹೇ ಭಾಗ್ಯವಾನ ಉದ್ಧವನೇ, ಈಗ ಕೇಳು ॥೫೦೮॥ ಉದ್ಧವನಿಗೆ ಆತ್ಮಶಾಂತಿಯನ್ನು ಗ್ರಹಣ ಮಾಡಲು ಬರಬೇಕೆಂಬ ಉದ್ದೇಶದಿಂದ ಶ್ರೀಕೃಷ್ಣನು ಆತನಿಗೆ ಈ ರೀತಿಯಾಗಿ ಸಂಬೋಧಿಸಿ ಕರೇ ಕೊಟ್ಟನು ಮತ್ತು ಆತನಿಗೆ ಎಚ್ಚರಿಸಿ ಈ ರೀತಿಯಾಗಿ ಹೇಳಿದನು. ಶಾಂತಿಯ ಲಕ್ಷಣದ ಸ್ವರೂಪವು ಹೀಗಿರುತ್ತದೆ ॥೫೦೯॥ ಕೆಲವರು ಜೀವನಕ್ರಮದಲ್ಲಿ ಅಡ್ಡ ಬಂದರೆ, ಸನ್ಮಾನದ ನಿಮಿತ್ತ ಮಾಡಿ ಅಪಮಾನವನ್ನು ಮಾಡಿದರೆ ಆಗ ಯಾವನು ಸರ್ವಥಾ ಕ್ರೋಧಗ್ರಸ್ಥನಾಗುವುದಿಲ್ಲವೋ, ಆತನಲ್ಲಿ ಮಾತ್ರ ಶಾಂತಿಯು ಇರುವುದು. ಅದನ್ನು ಈಗ ಕೇಳು ॥೫೧೦॥

ಆ ಯಾವ ಸನ್ಯಾಸಿಯ ಹಿಂದೆ ಮುಂದೆ ಎಲ್ಲ ದುಷ್ಟಜನರು ಸುತ್ತುವರಿದು ಕೂಡಿದರು. ಆತನಿಗೆ ತ್ರಾಸ ಕೊಡುವುದಕ್ಕಾಗಿ ಎಲ್ಲರೂ ಆತನನ್ನು ಸ್ಪರ್ಶ ಮಾಡಹತ್ತಿದರು. ಆತನ ಚರಣಗಳಿಗೆ ಮಸ್ತಕವನ್ನಿಡಲಾರಂಭಿದರು ॥೫೧೧॥

ಏಕ ಮ್ಹಣತೀ ವೃದ್ಧ ಸನ್ಯಾಸೀ । ಏಕ ಮ್ಹಣತೀ ಕಿತೀ ಚಾತುರ್ಮಾಸೀ । ಏಕ ಪುಸತೀ ಸಂಪ್ರದಾಯಾಸೀ । ಕೋಣೇ ಗುರೂನೇ ತುಮ್ಹಾಂಸೀ ಮುಂಡಿಲೇ ।।೫೧೨।। ಏಕ ಖುಣಾವಿತೀ ಏಕಾಂಸೀ । ಪೂರ್ವಭೂಮೀ ಪುಸಾ ಯಾಸೀ । ಏಕ ಮ್ಹಣತೀ ಯಾಪಾಶೀ । ಧನಸಂಗ್ರಹಾಸೀ ಪುಸಾರೇ ।।೫೧೩।। ಏಕ ಮ್ಹಣತೀ ಅಹೋ ಸ್ವಾಮೀ । ತುಮಚೀ ಕವಣ ಪೂರ್ವಭೂಮೀ। ತುಮ್ಹಿ ವ್ಯಾಪಾರೀ ಕೀ ಉದಿಮೀ । ಕೋಣೇ ಗ್ರಾಮೀ ನಿವಾಸೂ ।।೫೧೪।। ಏಕ ಮ್ಹಣತೀ ಕಾಹೀ ಆಹೇ ಧನ । ಏಕ ಮ್ಹಣತೀ ಆತಾ ನಿರ್ಧನ । ಏಕ ಮ್ಹಣತೀ ನ ಕರಾ ಛಳಣ । ವಿರಕ್ತ ಪೂರ್ಣ ಸನ್ಯಾಸೀ ।।೫೧೫।। ಐಸೇ ಕರಿತಾ ಛಳಣ । ಸನ್ಯಾಸೀ ಅನುದ್ವೇಗ ಜಾಣ । ನಿಃಶಬ್ದ ವಾದೇ ಧರಿಲೇ ಮೌನ । ಕಾಂಹೀ ವಚನ ನ ಬೋಲೇ ।।೫೧೬।। ಏಕ ಮ್ಹಣತೀ ತ್ರಿದಂಡಾ ಕಾರಣ । ಹಾ ಪೂರ್ವಿ ಹೋತಾ ಅತಿಸಧನ । ಕೋರೂನಿ ಭರಿಲೇ ಅಸೇಲ ಧನ । ಹೇಚಿ ಲಕ್ಷಣ ತ್ರಿದಂಡಾ ।।೫೧೭।। ಏಕ ಮ್ಹಣತೀ ಸಹಸ್ರದೋರೀ । ಕಂಥಾ ಕೇಲೀ ಅಸೇ ಅತಿಥೋರೀ । ಏಕ ಮ್ಹಣತೀ ತ್ಯಾಮಾಝಾರೀ । ಧನ ಶಿರೋವೇರೀ ಖಿಳಿಲೇಸೇ ।।೫೧೮।। ಏಕ ಮ್ಹಣತೀ ಕಾಯ ಪಾಹತಾ ತೋಂಡ । ಯೇಣೇ ಮಾಂಡಿಲೇಸೇ ಪಾಖಂಡ । ಐಸಾ ನಿರ್ಭರ್ತ್ಸಿತಾ ವಿತಂಡ । ಏಕೇ ತ್ರಿದಂಡ ಹರಿತಲಾ ।।೫೧೯।। ಏಕೇ ಹರಿತಲೇ ಪಾಣಿಪಾತ್ರ । ಏಕೇ ನೇತೀ ಪೀಠ ಪವಿತ್ರ । ಏಕೇ ನೇತೀ ಅಕ್ಷಸೂತ್ರ । ಕಾಷಾಯವಸ್ತ್ರ ತೇ ಏಕೇ ।।೫೨೦।। ಏಕ ಮ್ಹಣೇ ಹಾ ಮಾಝಾ ಋಣಾಯಿತ । ಭಲಾ ಸಾಂಪಡಲಾ ಯೇಥ । ಮ್ಹಣೋನಿ ಕಂಥೇಸೀ ಘಾಲೀ ಹಾತ । ಕೌಪೀನಯುಕ್ತ ತೇಣೇ ನೇಲೀ ।।೫೨೧।। ಐಸೇ ಕರಿತಾಂಹೀ ದುರ್ಜನ । ತ್ಯಾಚೇ ಗಜಬಜೇನಾ ಮನ । ಕಾಂಹೀ ನ ಬೋಲೇ ವಚನ । ಕ್ಷಮೇನೇ ಪೂರ್ಣ ನಿಜಧೈರ್ಯ ।।೫೨೨।। ತೋ ಮ್ಹಣೇ ಜಾಣೇಯೇಣೇ ಹೀ ದೋನೀ । ಕೇವಳ ಅದೃಷ್ಟಾ ಅಧೀನೀ । ಯಾಲಾಗೀ ಮಾಗಣ್ಯಾಚೀ ಗ್ಲಾನೀ । ನ ಕರೂನಿ ಮುನೀ ನಿಘಾಲಾ ।।೫೨೩।। ಸನ್ಯಾಸೀ ಜಾತಾ ದೇಖೋನೀ । ಸಭ್ಯ ಸಭ್ಯ ಶಠ ಯೇಊನೀ । ಸಾಷ್ಟಾಂಗ ನಮಸ್ಕಾರ ಕರೂನೀ । ಅತಿವಿನೀತಪಣೇ ವಿನವಿತ ।।೫೨೪।।

ಕೆಲವರು ಇವನು ಮುಪ್ಪಾದ ಸನ್ಯಾಸಿ ಎಂದು ಹೇಳಹತ್ತಿದರು. ಕೆಲವರು ಸ್ವಾಮೀ, ನೀವು ಸನ್ಯಾಸವನ್ನು ಸ್ವೀಕರಿಸಿ ಎಷ್ಟು ಚತುರ್ಮಾಸಗಳಾದವು ? ಎಂದು ವಿಚಾರಿಸಹತ್ತಿದರು. ಕೆಲವರು ನಿಮ್ಮ ಸಾಂಪ್ರದಾಯ ಯಾವುದು? ಯಾವ ಗುರುಗಳು ನಿಮ್ಮ ಮುಂಡನವನ್ನು ಮಾಡಿದರು? ಎಂದು ಕೆಳಹತ್ತಿದರು ।।೫೧೨।। ಕೆಲವರು ಇನ್ನು ಕೆಲವರಿಗೆ ಸನ್ನೆಯನ್ನು ಮಾಡುತ್ತ ಇವರ ಜನ್ಮಭೂಮಿ ಯಾವುದೆಂದು ಕೇಳಿರಿ ಎಂದು ಹೇಳಹತ್ತಿದರು ।।೫೧೩।। ತದನಂತರ ಕೆಲವರು ಹೀಗೆ ಕೆಳಿದರು ; ಅಹೋ ಸ್ವಾಮೀ, ನಿಮ್ಮ ಪೂರ್ವಭೂಮಿ ಯಾವುದು? ನೀವು ವ್ಯಾಪಾರಿಗಳೇ ಅಥವಾ ಉದ್ಯಮಸ್ಥರೇ ? ನೀವು ಇರತಕ್ಕ ಊರು ಯಾವುದು? ।।೫೧೪।। ಕೆಲವರು ಹೀಗೆ ಹೇಳಹತ್ತಿದರು; ಛೇ, ಛೇ, ಇವನು ನಿರ್ಧನನಂತೆ ಕಾಣುತ್ತಿರುವನು, ಆದರೆ ಇನ್ನೂ ಕೆಲವರು ಹೀಗೆ ಹೇಳಹತ್ತಿದರು, ಇವನಲ್ಲಿ ಧನವಿದ್ದಂತೆ ಕಾಣುವುದು. ಕೆಲವರು ಇವನು ವಿರಕ್ತನಂತೆ ಕಾಣುವನು ಎಂದು ಹೇಳಿದರು. ।।೫೧೫।। ಹೀಗೆ ನಾನಾ ಪ್ರಕಾರಗಳಿಂದ ಜನರು ಈತನಿಗೆ ಪೀಡೆಯನ್ನು ಕೊಡಲಾರಂಭಿಸಿದರು. ಆದರೆ ಈ ಸನ್ಯಾಸಿಗೆ ಎಷ್ಟೂ ಕೂಡ ತ್ರಾಸವೆನಿಸಲಿಲ್ಲ. ಆತನ ಶಾಂತಿಯು ಅಲುಗಾಡಲಿಲ್ಲ. ಆತನು ತನ್ನ ಮುಖದಿಂದ ಒಂದು ಶಬ್ದವನ್ನೂ ನುಡಿಯಲಿಲ್ಲ. ಆತನು ಮೌನನಾಗಿ ಕುಳಿತುಕೊಂಡನು. ಒಂದಕ್ಷರವನ್ನೂ ಉಚ್ಚರಿಸಲಿಲ್ಲ. ।।೫೧೬।। ಪುನಃ ಕೆಲವರು ಹೀಗೆ ಹೇಳಹತ್ತಿದರು; ಇವನು ಪೂರ್ವದಲ್ಲಿ ದೊಡ್ಡ ಶ್ರೀಮಂತನಾಗಿದ್ದನು. ಈಗ ಇವನು ಆ ಎಲ್ಲ ಸಂಪತ್ತನ್ನು ಈ ದಂಡದಲ್ಲಿ ಕೊರೆದು ತುಂಬಿರಬಹುದು. ಇದೇ ಇವನ ತ್ರಿದಂಡೀ ಸನ್ಯಾಸದ ಕಾರಣವಾಗಿದೆ. ।।೫೧೭।। ಕೆಲವರು ಹೀಗೆ ಹೇಳಹತ್ತಿದರು ; ಅನೇಕ ಪ್ರಕಾರದ ದಾರಗಳಿಂದ ಈತನು ದೊಡ್ಡ ಕೌದಿಯನ್ನು ತಯಾರಿಸಿರುವನು. ಇದರಲ್ಲಿ ಇವನು ತನ್ನ ಧನವೆಲ್ಲವನ್ನೂ ಒಳಗೆ ತುಂಬಿರುವನು. ಇದೇ ಇವನ ಸನ್ಯಾಸದ ಕಾರಣವಾಗಿ ತೋರುವುದು ।।೫೧೮।। ಕೆಲವರು ಹೀಗೆ ಹೇಳಿದರು; ಇವನ ಮುಖ ನೋಡುತ್ತ ಏಕೆ ಕುಳಿತಿರುವಿರಿ? ಇವನು ಏನೋ ಪಾಖಂಡತನ ಹಬ್ಬಿಸಿರುವನು ಎಂದು ಅವಹೇಳನವನ್ನು ಮಾಡುತ್ತ ಒಬ್ಬನು ಆತನ ಕೈಯಲ್ಲಿದ್ದ ದಂಡವನ್ನು ಕಸಿದುಕೊಂಡನು ।।೫೧೯।। ಇನ್ನೊಬ್ಬನು ಆತನ ಕಮಂಡಲವನ್ನು ಕೈಯಿಂದ ಕಿತ್ತುಕೊಂಡನು. ಬೇರೆಯವನು ಆತನ ಪವಿತ್ರವಾದ ಆಸನವನ್ನು ಎಳೆದುಕೊಂಡನು, ಯಾವನೋ ಒಬ್ಬನು ಆತನ ರುದ್ರಾಕ್ಷಿ ಮಾಳವನ್ನು ಕಿತ್ತುಕೊಂಡರೆ ಮಗದೊಬ್ಬನು ಕಷಾಯ ವಸ್ತ್ರವನ್ನು ಜಗ್ಗಿಕೊಂಡನು ।।೫೨೦।। ಅವರಲ್ಲಿ ಒಬ್ಬನು ಹೀಗೆಂದನು; ಇವನು ನನ್ನ ಸಾಲಗಾರನು. ಈಗ ಇವನು ನನಗೆ ಸಿಕ್ಕಿಬಿಟ್ಟನು ಎಂದೆನ್ನುತ್ತ ಆತನ ಕೌದಿಯನ್ನು ಎಳೆದು ತೆಗೆದುಕೊಂಡನು. ಕೊನೆಗೆ ಲಂಗೋಟಿಯನ್ನು ಸಹ ಬಿಚ್ಚಿಕೊಂಡನು ।।೫೨೧।। ಈ ಪ್ರಕಾರವಾಗಿ ಆ ಯಾವ ದುರ್ಜನರು ಅನೇಕ ಪ್ರಕಾರವಾಗಿ ಪೀಡೆಯನ್ನು ಕೊಟ್ಟರು. ಆದರೂ ಆ ಸನ್ಯಾಸಿಯ ಮನವು ಗಜಿಬಿಜಿಯಾಗಲಿಲ್ಲ. ಆತನು ಒಂದು ಶಬ್ದವನ್ನೂ ಕೂಡ ನುಡಿಯಲಿಲ್ಲ. ದೊಡ್ಡ ಧೈರ್ಯದಿಂದ ಎಲ್ಲವನ್ನೂ ಕ್ಷಮಿಸಿಬಿಟ್ಟನು ।।೫೨೨।। ಆತನು ತನ್ನ ಮನದಲ್ಲಿಯೇ ಹೀಗೆ ಅಂದುಕೊಂಡನು; ಯಾವುದೇ ಪದಾರ್ಥಗಳು ಪ್ರಾಪ್ತವಾಗುವಿಕೆ ಅಥವಾ ಕಳೆದುಕೊಳ್ಳುವಿಕೆ ಇದು ಕೇವಲ ಪ್ರಾರಬ್ಧದ ಆಧೀನವಾಗಿರುವುದು. ಆದ್ದರಿಂದ ತನ್ನ ವಸ್ತುಗಳನ್ನು ಅವರಲ್ಲಿ ತಿರುಗಿ ಕೇಳದೇ ಆತನು ಅಲ್ಲಿಂದ ಮುಂದೆ ಹೋಗಲು ಹೊರಟನು ।।೫೨೩।। ಆ ಸನ್ಯಾಸಿಯು ಹೊರಟು ಹೋಗುವುದನ್ನು ಕಂಡು ಕೆಲವು ಸುಳ್ಳುಖೋರರು ಮುಂದೆ ಬಂದು ಆತನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಬಹು ನಮ್ರತೆಯಿಂದ ಹೀಗೆ ವಿನಂತಿಯನ್ನು ಮಾಡಿದರು ।।೫೨೪।।

ಮಗ ಮ್ಹಣತೀ ಹರಹರ । ಅಪರಾಧ ಘಡಲಾ ಥೋರ । ಮಾತಲೇ ಹೇ ರಾಂಡಪೋರ । ಪಾತ್ರಾಪಾತ್ರ ನ ಮ್ಹಣತೀ ।।೫೨೫।। ಸ್ವಾಮೀ ಕೋಪ ನ ಧರಾವಾ ಮನೀ । ವಸ್ತ್ರೇ ಘ್ಯಾವೀ ಕೃಪಾ ಕರೂನೀ । ಪರತವಿಲಾ ಪಾಯಾ ಲಾಗೂನೀ ಪೂರ್ಣ ಛಳಣೇ ಛಳಾವಯಾ ।।೫೨೬।।

ಪ್ರದಾಯ ಚ ಪುನಸ್ತಾನಿ ದರ್ಶಿತಾನ್ಯಾದದುರ್ಮುನೇಃ ।

ಅರ್ಥ:- ಇವುಗಳನ್ನು ತೆಗೆದುಕೊಳ್ಳಿ ಎಂದು ಆ ಮುನಿಗೆ ತೋರಿಸಿ, ಕೊಟ್ಟುಬಿಟ್ಟು ಪುನಃ ಆತನ ಕೈಗಳಿಂದ ಕಸಿದುಕೊಂಡರು.

ಸನ್ಯಾಸೀ ಆಣೂನಿ ಸಾಧುವೃತ್ತೀ । ದಂಡಕಮಂಡಲೂ ಪುಢೇ ಠೇವಿತೀ । ಏಕ ವಸ್ತ್ರೇ ಆಣೋನಿ ದೇತೀ । ಏಕ ತೇ ನೇತೀ ಹಿರೋನೀ ।।೫೨೭।। ಏಕ ತೇ ಮ್ಹಣತೀ ವೃದ್ಧ ಸನ್ಯಾಸೀ । ಯಾಚೀ ವಸ್ತ್ರೇ ದ್ಯಾವೀ ಯಾಸೀ । ಏಕ ಮ್ಹಣತೀ ಯಾ ಶಠಾಸೀ । ದಂಡಿತಾ ಆಮ್ಹಾಂಸೀ ಅತಿ ಪುಣ್ಯ ।।೫೨೮।। ವಸ್ತ್ರೇ ನ ದೇತೀ ಉಪಹಾಸೀ । ಸನ್ಯಾಸೀ ನಿಘೇ ಸಾವಕಾಶೀ । ಏಕ ಪರತವೂನಿ ತ್ಯಾಸೀ । ದೇಊನಿ ವಸ್ತ್ರಾಂಸೀ ಜಾ ಮ್ಹಣತೀ ।।೫೨೯।। ಏಕ ಧಾಂವೂನಿ ಹಾಣೇ ಮಾಥಾ । ವಸ್ತ್ರೇ ಹಿರೋನಿ ಜಾಯ ಪರತಾ । ಏಕ ಮ್ಹಣತೀ ದ್ಯಾರೇ ಆತಾ । ವೃದ್ಧ ಕಾ ವೃಥಾ ಶಿಣವಾಲ ।।೫೩೦।। ಯಾವರೀ ಸನ್ಯಾಸೀ ಆಪಣ । ಗೇಲಾ ವಸ್ತ್ರೇ ವೋ ಸಂಡೂನ । ಕರೋನಿಯಾ ಸಂಧ್ಯಾಸ್ನಾನ । ಭಿಕ್ಷಾರ್ಥ ಜಾಣ ನಿಘಾಲಾ ।।೫೩೧।।

ಅನ್ನಂ ಚ ಭೈಕ್ಷ್ಯಸಂಪನ್ನಂ ಭುಂಜಾನಸ್ಯ ಸರಿತ್ತಟೇ ।।೪೫।।
ಮೂತ್ರಯಂತಿ ಚ ಪಾಪಿಷ್ಠಾಃ ಷ್ಠೀವಂತ್ಯಸ್ಯ ಚ ಮೂರ್ಧನಿ ।
ಯತವಾಚಂ ವಾಚಯಂತಿ ತಾಡಯಂತಿ ನ ವಕ್ತಿ ಚೇತ್ ।।೪೬।।

ಅರ್ಥ:- ಆ ಯಾವ ಸನ್ಯಾಸಿಯು ಭಿಕ್ಷೆ ಬೇಡಿ ತಂದ ಅನ್ನವನ್ನು ಭುಂಜಿಸುವುದಕ್ಕಾಗಿ ನದಿ ದಂಡೆಯ ಮೇಲೆ ಕುಳಿತುಕೊಂಡನು. ಆ ಸಮಯಕ್ಕೆ ಪಾಪಿಷ್ಠ ಜನರು ಅಲ್ಲಿಗೆ ಬಂದು ಆ ಅನ್ನದ ಮೇಲೆ ಮೂತ್ರ ಬಿಟ್ಟರು. ಆತನ ಮುಖದ ಮೇಲೆ ಉಗುಳಿದರು. ಆ ಮೌನಿ ಸನ್ಯಾಸಿಗೆ ಮಾತನಾಡಿಸುವ ಪ್ರಯತ್ನ ಮಾಡಹತ್ತಿದರು. ಆದರೆ ಇವರು ಇಷ್ಟೊಂದು ಮಾಡಿದರೂ ಕೂಡ ಆ ಸನ್ಯಾಸಿಯು ಏನೂ ಮಾತನಾಡದಕ್ಕೆ ಆಗ ಆತನಿಗೆ ಮನಬಂದಂತೆ ಹೊಡೆಯ ಹತ್ತಿದರು.

ಭಿಕ್ಷಾ ಮಾಗೋನಿ ಸಂಪೂರ್ಣ । ಶಾಸ್ತ್ರವಿಭಾಗೇ ವಿಭಾಗೂನ । ಸರಿತಾತಟೀ ಕರಿತಾ ಭೋಜನ । ತೇ ದೇಖೋನಿ ದುರ್ಜನ ತೇಚಿ ಆಲೇ ।।೫೩೨।। ಅರೇ ಹಾ ಸನ್ಯಾಸೀ ನವ್ಹೇ ಸಾಚಾ । ಕದರ್ಯು ಆಮುಚೇ ಗಾವೀಂಚಾ । ಹೋಯ ನವ್ಹೇ ನ ಬೋಲೇ ವಾಚಾ । ಹಾ ಠಕಪಣಾಚಾ ಉಪಾವೋ ।।೫೩೩।।

ಅರೇರೇರೆ, ಶಿವಶಿವಾ, ನಮ್ಮ ಕೈಯಿಂದ ಎಂತಹ ಅನರ್ಥವಾಯಿತಲ್ಲ ! ಈ ರಂಡೇ ಮಕ್ಕಳು ಬಹಳ ಸೊಕ್ಕಿಗೆ ಬಂದಿರುವರು. ಇವರಿಗೆ ಯೋಗ್ಯ, ಅಯೋಗ್ಯ ಎಂಬ ಯಾವ ವಿಚಾರವು ತಿಳಿಯುವುದಿಲ್ಲ ।।೫೨೫।। ಹೇ ಸ್ವಾಮೀ, ಮಹಾರಾಜರೇ, ದಯಮಾಡಿ ನೀವು ಮನದಲ್ಲಿ ಯಾವ ಕೋಪವನ್ನು ತರಬೇಡಿರಿ. ಕೃಪೆಮಾಡಿ ನಿಮ್ಮ ವಸ್ತ್ರಗಳನ್ನು ನೀವು ತೆಗೆದುಕೊಳ್ಳಿರಿ. ಹೀಗೆನ್ನುತ್ತ ಅವರ ಕಾಲಿಗೆ ಬಿದ್ದು ಬೇಡುತ್ತ, ಈ ಯಾವ ಲಫಂಗ ಜನರು ಸನ್ಯಾಸಿಗೆ ಪುನಃ ಪೀಡಿಸಲೆಂದೇ ಹಿಂದಕ್ಕೆ ಕರೆತಂದರು ।।೫೨೬।।

ಈ ಪ್ರಕಾರವಾಗಿ ಈ ಯಾವ ದುಷ್ಟ ಜನರು ಆ ಸನ್ಯಾಸಿಯನ್ನು ಹಿಂದಕ್ಕೆ ಕರೆತಂದು ತಾವು ಬಹಳ ಸಭ್ಯವಂತರೆಂಬಂತೆ ನಟಿಸುತ್ತ ಅವರ ಎದುರಿಗೆ ಅವರ ದಂಡ ಕಮಂಡಲಗಳನ್ನು ತಂದಿಟ್ಟರು. ಇನ್ನು ಕೆಲವರು ವಸ್ತ್ರಗಳನ್ನು ತಂದು ಮುಂದಿಟ್ಟರು. ಅಷ್ಟರಲ್ಲಿಯೇ ಇನ್ನೊಬ್ಬನು ಇಟ್ಟ ಎಲ್ಲವನ್ನೂ ಎಳೆದು ತೆಗೆದುಕೊಂಡನು ।।೫೨೭।। ಕೆಲವರು ಹೀಗೆ ಹೇಳಹತ್ತಿದರು. ಪಾಪ ! ಸನ್ಯಾಸಿಯು ಮುದುಕನಾಗಿದ್ದಾನೆ. ಆತನ ವಸ್ತ್ರಗಳನ್ನು ಆತನಿಗೆ ತಿರುಗಿ ಕೊಟ್ಟುಬಿಡಿರಿ. ಕೂಡಲೇ ಇನ್ನೊಬ್ಬನು, ಇವನು ಮಹಾ ಢೋಂಗಿಯಾಗಿರುವನು. ಇವನಿಗೆ ಸರಿಯಾಗಿ ಶಿಕ್ಷೆಯನ್ನು ಕೊಟ್ಟರೆ ನಮಗೆ ಮಹಾ ಪುಣ್ಯವು ದೊರಕುವುದು ಎಂದು ಹೇಳಿದನು ।।೫೨೮।। ಈ ಪ್ರಕಾರವಾಗಿ ವಸ್ತ್ರಗಳನ್ನು ಕೊಡದೇ ಈ ಜನರು ತಮ್ಮ ಅವಹೇಳನ ಚೇಷ್ಟೆ ಮಾಡುತ್ತಿರುವುದನ್ನು ಕಂಡು ಆ ಸನ್ಯಾಸಿಯು ಶಾಂತ ಮನಸ್ಸಿನಿಂದ ಅಲ್ಲಿಂದ ಹೊರಟನು. ಆಗ ಪುನಃ ಒಬ್ಬನು ಆತನನ್ನು ತಿರುಗಿ ಕರೆತಂದು ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ ಎಂದನು. ।।೫೨೯।। ಇಷ್ಟರಲ್ಲಿಯೇ ಒಬ್ಬನು ಧಾವಿಸಿ ಬಂದು ಸನ್ಯಾಸಿಯ ತಲೆಗೆ ಜೋರಾಗಿ ಹೊಡೆತವನ್ನು ಬಾರಿಸಿ ಆತನಲ್ಲಿದ್ದ ಎಲ್ಲ ವಸ್ತ್ರಗಳನ್ನು ಕಸಿದುಕೊಂಡುಬಿಟ್ಟನು. ಆಗ ಸುಮ್ಮನೇ ಕೆಲವರು, ಯಾಕೋ ? ಈ ವೃದ್ಧ ಮನುಷ್ಯನಿಗೆ ಹೀಗೇಕೆ ಪೀಡಿಸುವೆ ? ಎಂದು ಹೇಳಿದರು. ।।೫೩೦।। ತದನಂತರ ಆ ಸನ್ಯಾಸಿಯು ಸ್ವತಃ ತಾನೇ ಎಲ್ಲ ವಸ್ತ್ರಗಳನ್ನು ಒಗೆದು ಬಿಟ್ಟು ತನ್ನ ನಿತ್ಯದ ಕಾರ್ಯದ ಸ್ನಾನಸಂಧ್ಯಾ ಮಾಡಿಕೊಂಡು ಭಿಕ್ಷೆಗಾಗಿ ಹೊರಟನು ।।೫೩೧।।

ಆ ಯಾವ ಸನ್ಯಾಸಿಯು ಭಿಕ್ಷೆಯನ್ನು ಬೇಡಿ ತಂದು ಶಾಸ್ತ್ರಪ್ರಮಾಣದಂತೆ ಅದರ ವಿಭಾಗವನ್ನು ಮಾಡಿ ನದಿದಂಡೆಯ ಮೇಲೆ ಭೋಜನಕ್ಕೆ ಕುಳಿತದ್ದು ಕಂಡು ಆ ಯಾವ ಪಾಪೀ, ದುರ್ಜನರು ಸನ್ಯಾಸಿಯ ಹತ್ತಿರ ಬಂದರು ।।೫೩೨।। ಒಬ್ಬನು ಹೀಗೆ ಅಂದನು; ಇವನು ನಿಜವಾದ ಸನ್ಯಾಸೀ ಅಲ್ಲ. ಇವನು ನಮ್ಮ ಊರಿನವನಾದ ಕೃಪಣ ಮನುಷ್ಯನು. ಇವನು ಏನೂ ಮಾತನಾಡುತ್ತಿಲ್ಲ. ಇದೇ ಇವನ ಢೋಂಗಿತನದ ಕಾರಣವಾಗಿದೆ ।।೫೩೩।।

ಯಾಸೀ ಬೋಲವಿಲ್ಯಾವಿಣ ರಾಹೇ । ತೋ ಯಾಚಾಚಿ ದಾಸೀಪುತ್ರ ಹೋಯೇ । ಐಶೀ ಶಪಥ ಕರೂನಿ ಪಾಹೇ । ಆಲೇ ಸಮುದಾಯೇ ತಯಾಪಾಶೀ ।।೫೩೪।। ಏಕ ಮ್ಹಣೇ ಯಾಚೇ ಮೌನ । ಉಡವೀನ ಮೀ ನ ಲಾಗತಾ ಕ್ಷಣ । ಹಾ ಜೇಣೇ ಕರೀ ಶಂಖಸ್ಫುರಣ । ತೋ ಉಪಾವೋ ಜಾಣ ಮೀ ಜಾಣೇ ।।೫೩೫।। ತೋ ಮಹಾಪಾಪೀ ಅತಿ ದುರ್ಮತೀ । ಜೇವಿತಾ ತ್ಯಾಚೇ ಮಸ್ತಕೀ ಮುತೀ । ತರೀ ಕ್ರೋಧ ನ ಯೇ ತ್ಯಾಚೇ ಚಿತ್ತೀ । ನಿಜಾತ್ಮಸ್ಥಿತೀ ನಿವಾಲಾ ।।೫೩೬।। ಜರೀ ಅಂತರೀ ಕ್ರೋಧ ಆಲಾ । ತರೀ ತೋ ಅಶಾಂತಚಿ ಝಾಲಾ । ಬಾಹೇರೀ ನ ಬೋಲೇಚಿ ಬೋಲಾ । ಲೋಕಲಾಜೇ ಭ್ಯಾಲಾ ಪೋಟಾಸ್ಥೇ ।।೫೩೭।। ತೈಸಾ ನವ್ಹೇ ಹಾ ಸನ್ಯಾಸೀ । ಧೋಊನಿ ಸಾಂಡಿಲೇ ನಿಜಲಾಜೇಸೀ । ನಿಜಶಾಂತೀಚೇ ದಶಾ ಕೈಶೀ । ಕ್ರೋಧ ಮಾನಸೀ ಪೋಳೇನಾ ।।೫೩೮।। ಆಂತ ಏಕ ಬಾಹ್ಯ ಏಕ । ಯಾ ನಾಂವ ಮುಖ್ಯ ದಾಂಭಿಕ । ತೈಸಾ ಸನ್ಯಾಸೀ ನವ್ಹೇ ದೇಖ । ಸಬಾಹ್ಯ ಚೋಖ ನಿಜಶಾಂತೀ।।೫೩೯।। ತಂವ ತೇ ದುರ್ಜನ ಮ್ಹಣತೀ। ಅರೇ ಹಾ ನ ಬೋಲೇ ನಿಶ್ಚಿತೀ । ಸಮ್ಮುಖ ಮುಖಾವರೀ ಥುಂಕಿತೀ । ಅತಿನಿಂದಿತೀ ನೋಕೂನೀ ।।೫೪೦।। ಏಕ ಹಾಣಿತೀ ಲಾತಾ । ಏಕಟೋಲೇ ದೇತೀ ಮಾಥಾ । ಏಕ ಮ್ಹಣತೀ ನ ಬೋಲತಾ । ಯಾಸೀ ಸರ್ವಥಾ ನ ಸೋಡಾ ।।೫೪೧।।

ತರ್ಜನಂತ್ಯಪರೇ ವಾಗ್ಭಿಃ ಸ್ತೇನೋಽಯಮಿತಿ ವಾದಿನಃ । ಬಧ್ನಂತಿ ರಜ್ಜ್ವಾತಂ ಕೇಚಿದ್‌ಬಧ್ಯತಾಂ ಬಧ್ಯತಾಮಿತೀ ।।೩೭।।

ಅರ್ಥ:- ಕೆಲವರು ಈತನಿಗೆ ಕಳ್ಳ ಎಂದರು, ಕೆಲವರು ಈತನನ್ನು ಹಗ್ಗದಿಂದ ಕಟ್ಟಿಹಾಕಿರಿ ಎಂದರು, ನಿಜವಾಗಿಯೂ ಆತನಿಗೆ ಹಗ್ಗದಿಂದ ಕಟ್ಟ ಹತ್ತಿದರು.

ಆಣಿಕ ಏಕ ದುರೂನಿ ಜಾಣ । ವರ್ಮೀ ವಿಂಧಿತೀ ವಾಗ್ಬಾಣ । ಯಾಚ್ಯಾ ವೇಷಾಚೇ ಲಕ್ಷಣ । ಆಮ್ಹೀ ಸಂಪೂರ್ಣ ಜಾಣೇತಲೇ ।।೫೪೨।। ಯಾಚೇ ವೇಷಾಚಾ ವಿಚಾರೂ । ಶಠ ನಷ್ಟ ದಾಂಭಿಕ ಥೋರೂ । ಭಿಕ್ಷಾ ಮಿಸೇ ಹಿಂಡೇ ಹೇರೂ । ಧರಾ ಚೋರೂ ನಿಶ್ಚಿತೀ ।।೫೪೩।। ಐಸೇ ವಿಕಲ್ಪವಾಕ್ಯೇ ಗರ್ಜತೀ । ಏಕ ಬಾಂಧಾ ಬಾಂಧಾ ಮ್ಹಣತೀ । ಏಕ ದೃಢ ದೋರೀ ಬಾಂಧಿತೀ । ದೋಹೀ ಹಾತೀ ಅಧೋಮುಖ ।।೫೪೪।।

ಕ್ಷಿಪಂತ್ಯೇಕೇಽವಜಾನಂತ ಏಷ ಧರ್ಮಧ್ವಜಃ ಶಠಃ । ಕ್ಷೀಣವಿತ್ತ ಇಮಾಂ ವೃತ್ತಿಮಗ್ರಹೀತ್ಸ್ವಜನೋಜ್ಝಿತಃ ।।೩೮।।

ಅರ್ಥ:- '' ಇವನೊಬ್ಬ ಆಷಾಢಭೂತಿ, ಮೋಸಗಾರನು, ತನ್ನ ಧನಸಂಪತ್ತನ್ನೆಲ್ಲ ಕಳೆದುಕೊಂಡನೆಂದು ಕುಟುಂಬದವರು ಇವನನ್ನು ಹೊರದಬ್ಬಿದ್ದಾರೆ. ಈ ಕಾರಣವಾಗಿ ಈ ಸೋಗು ಹಾಕಿಕೊಂಡು ಸನ್ಯಾಸದ ಹೆಸರಿನಲ್ಲಿ ಧಂದೇ ಮಾಡುತ್ತಿದ್ದಾನೆ '' ಎನ್ನುತ್ತ ಸನ್ಯಾಸಿಯನ್ನು ಕಟುವಾಗಿ ಟೀಕಿಸಹತ್ತಿದರು.

ಯಾರೇಯಾಗಲಿ ಇವನನ್ನು ಮಾತನಾಡಿಸದೇ ಹೋದರೆ ಅವನು ಇವನ ದಾಸೀಪುತ್ರನೆಂದು ತಿಳಿಯಬೇಕು. ಹೀಗೆಂದು ಪಣತೊಟ್ಟು ಕುಚೋದ್ಯದ ಗುಂಪು ಸನ್ಯಾಸಿಯ ಅತೀ ಹತ್ತಿರ ಬಂದಿತು ।।೫೩೪।। ಒಂದೇ ಕ್ಷಣದಲ್ಲಿ ಇವನ ಮೌನವನ್ನು ಮುರಿದುಬಿಡುವೆನು ಎಂದು ಒಬ್ಬನು ಹೇಳಿದನು. ಇವನನ್ನು ಬಾಯಿ ಬಿಡಿಸಿ ಶಂಖಧ್ವನಿ ಮಾಡಿಸುವ ಉಪಾಯವು ನನಗೆ ತಿಳಿದಿರುವುದು ಎಂದನು ।।೫೩೫।। ಹೀಗೆ ಹೇಳುತ್ತ ಆ ಮಹಾಪಾಪೀ ಮನುಷ್ಯರು ಸನ್ಯಾಸಿಯು ಭೋಜನ ಮಾಡುತ್ತಿರಲು ಆತನ ಮಸ್ತಕದ ಮೇಲೆ ಮೂತ್ರ ಮಾಡಿದರು. ಆದರೂ ಕೂಡ ಆ ಸನ್ಯಾಸಿಗೆ ಕ್ರೋಧವು ಬರಲಿಲ್ಲ. ಆತನು ಆತ್ಮಜ್ಞಾನದಿಂದ ಶಾಂತನಾಗಿದ್ದನು ।।೫೩೬।। ಕಾರಣವೇನಂದರೆ, ಅಂತಃಕರಣದಲ್ಲಿ ಕ್ರೋಧವು ನಿರ್ಮಾಣವಾದರೆ ಸಾಕು, ಆಗ ಆತನು ಅಶಾಂತನಾಗುವನು. ಕೇವಲ ಹೊಟ್ಟೆಪಾಡಿಗೆ ಲೋಕ ಲಜ್ಜೆಗೆ ಹೆದರಿಕೊಂಡು ಅವನು ಹೊರಗಡೆ ಏನೂ ಹೇಳದಂತಾಗುವನು ಅಷ್ಟೇ ।।೫೩೭।। ಆದರೆ ಆ ಸನ್ಯಾಸಿಯು ಹೀಗೆ ಇದ್ದಿಲ್ಲ. ಆತನು ನಾಚಿಕೆ ಎಂಬುವುದನ್ನು ಪರಿಪೂರ್ಣವಾಗಿ ತೊಳೆದು ನಷ್ಟಮಾಡಿಕೊಂಡಿದ್ದನು. ಕ್ರೋಧವು ಆತನ ಮನಸ್ಸಿಗೆ ಸ್ವಲ್ಪವೂ ಕೂಡ ಸ್ಪರ್ಶ ಮಾಡುತ್ತಿದ್ದಿಲ್ಲ. ಇಷ್ಟೊಂದು ಉಚ್ಚ ದರ್ಜೆಗೆ ಆತನ ಆತ್ಮಶಾಂತಿಯು ಮುಟ್ಟಿಕೊಂಡಿತ್ತು ।।೫೩೮।। ಒಳಗೊಂದು ಮತ್ತು ಹೊರಗೊಂದು ಹೀಗೆ ವೃತ್ತಿಯನ್ನು ಇಟ್ಟುಕೊಂಡರೆ ಅದಕ್ಕೆ ಡಾಂಭಿಕತನವೆನ್ನುವರು. ಇಂತಹ ದರ್ಜೆಯ ಈ ಯಾವ ಸನ್ಯಾಸಿಯು ಇದ್ದಿಲ್ಲ. ಆತನ ಆತ್ಮಶಾಂತಿಯು ಒಳಗೂ, ಹೊರಗೂ ಶುದ್ಧ ಸ್ವರೂಪದಿಂದ ಕೂಡಿತ್ತು ।।೫೩೯।। ಆಗ ಆ ದುರ್ಜನರು ಅರೇ! ಇವನು ನಿಜವಾಗಿಯೂ ಮೌನವನ್ನು ಮುರಿಯುತ್ತಿಲ್ಲವಲ್ಲ! ಹೀಗೆ ಹೇಳುತ್ತ ಅವನ ಎದುರಿನಲ್ಲಿ ನಿಂತುಕೊಂಡು ಮುಖದಮೇಲೆ ಉಗುಳಿದರು ಮತ್ತು ನಿಂದಿಸುತ್ತ ದುಃಖವನ್ನು ಕೊಡಹತ್ತಿದರು ।।೫೪೦।। ಕೆಲವರು ಕಾಲಿನಿಂದ ಜಿಗಿದು ಒದೆಯಹತ್ತಿದರು, ಕೆಲವರು ತಲೆಗೆ ಪ್ರಹಾರಮಾಡಹತ್ತಿದರು, ಕೆಲವರು ಇವನು ಮಾತನಾಡುವವರೆಗೆ ಬಿಡುವಂತೆಯೇ ಇಲ್ಲವೆಂದರು ।।೫೪೧।।

ಕೆಲವು ಜನರು ದೂರಿನಿಂದಲೇ ಮನಸ್ಸಿಗೆ ನೆಡುವಂತೆ ಕೆಟ್ಟ ಬೈಗಳ ಶಬ್ದಗಳನ್ನು ನುಡಿಯಹತ್ತಿದರು. ಇವನು ಎಂತಹ ಸನ್ಯಾಸಿ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ ಎಂದು ಹೇಳಹತ್ತಿದರು ।।೫೪೨।। ಇವನು ಸುಮ್ಮನೇ ಸನ್ಯಾಸಿಯ ವೇಷವನ್ನು ಹಾಕಿರುವನು. ಇವನು ಮಹಾಸುಳ್ಳುಗಾರನು, ಠಕ್ಕನು, ನಷ್ಟನು. ಸನ್ಯಾಸಿಯ ವೇಶದಲ್ಲಿ ಗೂಢಚಾರನಾಗಿ ಭಿಕ್ಷೆಯ ನಿಮಿತ್ತದಿಂದ ತಿರುಗುತ್ತಿರುವನು. ನಿಜವಾಗಿಯೂ ಈ ಕಳ್ಳನನ್ನು ಈಗ ಹಿಡಿಯಲಾಯಿತು ।।೫೪೩।। ಈ ಪ್ರಕಾರವಾಗಿ ನಿಂದಾಸ್ಪದ ಕೆಟ್ಟುಶಬ್ದಗಳಿಂದ ಚೋರು ಚೋರಾಗಿ ಒದರಲು ಪ್ರಾರಂಭಿಸಿದರು. ಕೆಲವರು ಈತನನ್ನು ಹಿಡಿಯಿರಿ ಹಗ್ಗದಿಂದ ಕಟ್ಟುಬಿಡಿರಿ ಎಂದರು. ಆತನನ್ನು ಕೆಳಮುಖ ಮಾಡಿಸಿ ಆತನ ಎರಡೂ ಕೈಗಳನ್ನು ಬಿಗಿಯಾಗಿ ಕಟ್ಟಬಿಟ್ಟರು ।।೫೪೪।।

ತ್ಯಾಚೇ ಪೂರ್ವವೃತ್ತ ಜೇ ಜಾಣತೀ । ತೇ ಅಪಮಾನೂನಿ ನಿಂದಿತೀ । ಪೂರ್ವೀ ಕದರ್ಯೂ ಯಾಚೀ ಖ್ಯಾತೀ । ಹಾ ಆಮ್ಹಾಂ ಪ್ರತೀ ಸನ್ಯಾಸ ಮಿರವೀ ॥೪೪೫॥ ಯೇಣೇ ಸೂಕ್ತಾಸೂಕ್ತೀ ಸಂಚಿಲೇ ಧನ । ಅಧರ್ಮೇ ವಿತ್ತ ಝಾಲೇ ಕ್ಷೀಣ । ಸ್ವಜನೀ ಸಾಂಡಿಲಾ ದವಡೂನ । ಪೋಟಾಸೀ ಅನ್ನ ಮಿಳೇನಾ ॥೪೪೬॥ ಅನ್ನ ಮಿಳಾವಯಾ ಪೋಟಾಸೀ । ಝಾಲಾ ಕಪಟ-ವೇಷ ಸನ್ಯಾಸೀ । ಲಾಜ ನಾಹೀ ಯಾ ನಿರ್ಲಜ್ಜಾಸೀ । ಯೋಗ್ಯತಾ ಆಮ್ಹಾಂಸೀ ದಾವಿತಾ ॥೪೪೭॥ ಪೂರ್ವೀಲಾಗೂನಿ ಹಾ ವಂಚಕೂ । ಆತಾ ಝಾಲಾ ಸನ್ಯಾಸೀ ದಾಂಭಿಕೂ । ಯಾಚೇ ಮತ ನೇಣೇ ಹಾ ಭೋಳಾ ಲೋಕೂ । ಮಹಾಠಕೂ ದೃಢಮೌನೀ ॥೪೪೮॥ ಹೋ ಕಾ ಬಹುರುಪ್ಯಾಚೀ ಸೋಂಗೇ ಜೈಸೀ । ತೇವೀ ಹಾ ಉತ್ತಮ ವೇಷೇ ಸನ್ಯಾಸೀ । ಹೋಊನಿ ಠಕೂ ಆಲಾ ಆಮ್ಹಾಂಸೀ । ಮಾರಿತಾ ಯಾಸೀ ದೋಷ ನಾಹೀ ॥೪೪೯॥

ಅಹೋ ಏಷ ಮಹಾಸಾರೋ ಧೃತಿಮಾನ್ ಗಿರಿರಾಡಿವ । ಮೌನೇನ ಸಾಧಯತ್ಯರ್ಥಂ ಬಕವದ್ ದೃಢನಿಶ್ಚಯಃ ॥೯॥

ಅರ್ಥ:- ಇವನು ಮಹಾ ಠಕ್ಕನಾಗಿರುವ ಭಿಕಾರಿಯು ಧೈರಿಷ್ಠನಾಗಿರುವನು. ಪರ್ವತ ಸಮಾನನಾಗಿರುವನು. ಬಕಪಕ್ಷಿಯಂತೆ ಮೌನವನ್ನು ಪಾಲಿಸುತ್ತ ತನ್ನ ಕಾರ್ಯವನ್ನು ಸಾಧಿಸುತ್ತಿರುವನು.

ಹಾ ದಾಂಭಿಕಾಮಾಜೀ ಮಹಾಬಳೀ । ಧರಿಲ್ಯಾ ವೇಷಾತೇ ಪ್ರತಿಪಾಳೀ । ಆಮ್ಹೀ ಪೀಡಿತಾ ನ ಡಂಡಳೀ । ಜೇವೀ ಕಾ ವಾಹಟೋಳೀ ಮಹಾಮೇರೂ ॥೪೫೦॥ ಯಾಚ್ಯಾ ಧೈರ್ಯಾಚೇ ಶಾಹಣಪಣ । ಸಾಧಾವಯಾ ಅನ್ನ ಅಚ್ಛಾದನ । ಬಕಾಚ್ಯಾ ಐಸೇ ಧರಿಲೇ ಮೌನ । ಸ್ವಾರ್ಥ ಪೂರ್ಣ ಲಕ್ಷೂನೀ ॥೪೫೧॥ ಬಕ ಗಿಳಾವಯಾ ಮಾಸಾ । ಮೌನ ಧರೋನಿ ರಾಹೇ ಜೈಸಾ । ಹಾಹೀ ಜಾಣಾವಾ ತೈಸಾ । ಭೋಳ್ಯಾ ಮಾಣಸಾ ನಾಡೀಲ ॥೪೫೨॥ ಆತಾ ಹಾ ಧನಲೋಭಾರ್ಥ ಜಾಣಾ । ಪೂರ್ವೀಲ ಉಪದ್ರವ ನಾಣೀ ಮನಾ । ತೇಚಿ ಝಾಲೀಸೇ ದೃಢ ಧಾರಣಾ । ಉಪದ್ರವಗಣನಾ ಯಾ ನಾಹೀ ॥೪೫೩॥ ಏಕ ಮ್ಹಣತೀ ಧೈರ್ಯಮೂರ್ತೀ । ಮ್ಹಣೋನಿಯಾ ಲಾತಾ ಹಾಣಿತೀ । ಏಕ ತೇ ನಾಕೀ ಕಾಡ್ಯಾ ಖುಪಸಿತೀ । ಯಾಚೀ ನಿಜಶಾಂತೀ ಪಾಹೋ ಪಾ ॥೪೫೪॥ ಐಸಐಸೇ ಉಪದ್ರವತೀ । ನಾನಾಪರೀ ಉಪಹಾಸಿತೀ । ತರೀ ದ್ವೇಷ ನುಪಜೇ ಚಿತ್ತೀ । ನಿಜಶಾಂತಿ ನಿಶ್ಚಳೂ ॥೪೫೫॥ ಜಂವ ಜಂವ ದೇಖತೀ ತ್ಯಾಚೀ ಶಾಂತೀ । ತಂವ ತಂವ ದುರ್ಜನ ಕ್ಷೋಭಾ ಯೇತೀ । ನಾನಾ ಉಪದ್ರವ ತ್ಯಾಸೀ ದೇತೀ । ತೇಚಿ ಶ್ರೀಪತೀ ಸಾಂಗತ ॥೪೫೬॥

ಈ ಯಾವ ಸನ್ಯಾಸಿಯ ಪೂರ್ವ ವೃತ್ತಾಂತವು ಯಾರಿಗೆ ತಿಳಿದಿತ್ತೋ, ಅವರು ಈತನ ಅಪಮಾನವನ್ನು ಮಾಡಿ ನಿಂದೆಯನ್ನು ಮಾಡಹತ್ತಿದರು. ಪೂರ್ವದಲ್ಲಿ ಇವನು ಅತ್ಯಂತ ಕೃಪಣನಾಗಿದ್ದನು. ಆದರೆ ಈಗ ದೊಡ್ಡ ಸನ್ಯಾಸಿಯಾಗಿ ನಮ್ಮ ಮುಂದೆ ಡೌಲು ಮಾಡುತ್ತಿರುವನು ॥೪೪೫॥ ಇವನು ಕೊನೆಯವರೆಗೂ ಕೆಟ್ಟ ಕರ್ಮಗಳನ್ನು ಮಾಡುತ್ತ ಧನ ಸಂಪಾದಿಸಿದ್ದನು. ಈ ಅಧರ್ಮದಿಂದ ಇವನ ಸರ್ವ ಸಂಪತ್ತು ಹಾಳಾಗಿಹೋಯಿತು. ಹೆಂಡತಿ, ಮಕ್ಕಳು ಇವನನ್ನು ಮನೆಯ ಹೊರೆಗೆ ಅಟ್ಟಿಬಿಟ್ಟರು. ಆಗ ಇವನಿಗೆ ಹೊಟ್ಟೆಗೆ ಅನ್ನವೂ ಕೂಡ ಸಿಗದಂತಾಯಿತು ॥೪೪೬॥ ಹೊಟ್ಟೆಗೆ ಅನ್ನವನ್ನು ಕೂಡಿಸುವುದಕ್ಕಾಗಿ ಇವನು ಕಪಟ ವೇಷವನ್ನು ಹಾಕಿಕೊಂಡು ಸನ್ಯಾಸಿಯಾಗಿರುವನು. ಈ ನಿರ್ಲಜ್ಜನಿಗೆ ನಮ್ಮಂಥವರ ಎದುರಿನಲ್ಲಿ ತನ್ನ ಪ್ರೌಢತ್ವವನ್ನು ಪ್ರಕಾಶಿಸುವ ನಾಚಿಕೆಯೂ ಕೂಡ ಆಗುತ್ತಿಲ್ಲ ॥೪೪೭॥ ಪ್ರಾರಂಭದಿಂದಲೂ ಇವನ ಸ್ವಭಾವವು ಢೋಂಗೀತನದಿಂದ ಕೂಡಿರುವುದು. ಈಗ ಇವನು ಡಾಂಭಿಕ ಸನ್ಯಾಸಿಯಾಗಿರುವನು. ಭೋಳೇ ಜನರಿಗೆ ಇವನ ಮನದ ಉದ್ದೇಶವು ತಿಳಿಯುವುದಿಲ್ಲ. ಇವನು ಮಹಾ ಠಕ್ಕನಾಗಿರುವುದರಿಂದ ಇಂತಹ ದೃಢ ಮೌನವನ್ನು ಹಿಡಿದು ಕುಳಿತಿರುವನು ॥೪೪೮॥ ನಟರು ಹೇಗೆ ವೇಷವನ್ನು ಹಾಕಿಕೊಳ್ಳುವರೋ, ಅದರಂತೆಯೇ ಇವನು ಸನ್ಯಾಸಿಯ ವೇಷವನ್ನು ಧರಿಸಿರುವನು. ಇವನು ನಮಗೆ ಮೋಸಮಾಡಬೇಕೆನ್ನುವನು. ಇಂಥವನಿಗೆ ಥಳಿಸುವುದರಿಂದ ಯಾವ ದೋಷವೂ ನಮಗೆ ಹತ್ತಲಾರದು ॥೪೪೯॥

ಇವನು ಮಹಾಡಾಂಭಿಕನಾಗಿರುವನು. ತೆಗೆದುಕೊಂಡಿರುವ ವೇಷವನ್ನು ಚಾಚೂ ತಪ್ಪದೇ ಪರಿಪಾಲಿಸುತ್ತಿರುವನು. ಬಿರುಗಾಳಿಗೆ ಪರ್ವತವು ಅಲುಗಾಡದಂತೆ, ಇವನಿಗೆ ಎಷ್ಟು ನಿಂದಿಸಿದರೂ ಸ್ವಲ್ಪವೂ ಚಂಚಲನಾಗುತ್ತಿಲ್ಲ ॥೪೫೦॥ ಅನ್ನ ವಸ್ತ್ರ ಕೂಡಿಸುವುದಕ್ಕಾಗಿ ಇವನ ಈ ಧೈರ್ಯದ ಜಾಣತನವಾಗಿರುವುದು. ಮನದಲ್ಲಿ ಸ್ವಾರ್ಥವನ್ನಿಟ್ಟುಕೊಂಡು ಬಕಪಕ್ಷಿಯಂತೆ ಇವನು ಮೌನವನ್ನು ಹಿಡಿದಿರುವನು ॥೪೫೧॥ ಮೀನವನ್ನು ಹಿಡಿಯುವುದಕ್ಕಾಗಿ ಬಕಪಕ್ಷಿಯು ಹೇಗೆ ಮೌನ ಹಿಡಿದಿರುವುದೋ, ಅದೇ ಪ್ರಕಾರವಾಗಿ ಇವನ ಸ್ವಭಾವವಾಗಿರುವುದು. ಭೋಳೆ ಜನರಿಂದ ಲೂಟು ಮಾಡುವ ಪ್ರಯತ್ನವು ಇವನದಾಗಿರುವುದು ॥೪೫೨॥ ಈ ಯಾವ ಧನಲೋಭಿಯು ದ್ರವ್ಯಪ್ರಾಪ್ತಿಗಾಗಿ, ಈ ಪೂರ್ವದಲ್ಲಿಯೂ ಪಡೆದ ತೊಂದರೆ ಕಷ್ಟಗಳನ್ನು ಮನದಲ್ಲಿ ತರುತ್ತಿಲ್ಲ. ಇದೇ ಈತನಿಗೆ ದೃಢವಾದ ಅಭ್ಯಾಸವಾಗಿಬಿಟ್ಟಿದೆ. ಆದ್ದರಿಂದಲೇ ಇವನಿಗೆ ನಮ್ಮ ಉಪದ್ರವದ ಭಯವಿರುವುದಿಲ್ಲ ॥೪೫೩॥ ಹೀಗೆ ಹೇಳುತ್ತ ಇವನೆಂತಹ ಧೈರ್ಯದ ಮೂರ್ತಿ ಎನ್ನುತ್ತಲೇ ಜಿಗಿದು ಕಾಲಿನಿಂದ ಒದೆದರು. ಕೆಲವರು ಆತನ ಮೂಗಿನಲ್ಲಿ ಕಡ್ಡಿಯನ್ನು ಚುಚ್ಚಿದರು. ಈಗ ನೋಡೋಣ ಇವನ ನಿಜಶಾಂತಿ ಎಂದರು ॥೪೫೪॥ ಈ ರೀತಿಯಲ್ಲಿ ಆತನಿಗೆ ನಾನಾ ಪ್ರಕಾರವಾಗಿ ಪೀಡಿಸಹತ್ತಿದರು. ಕುಚೇಷ್ಟೆ ಮಾಡಹತ್ತಿದರು. ಆದರೂ ಕೂಡ ಸನ್ಯಾಸಿಯ ಮನದಲ್ಲಿ ದ್ವೇಷವು ಹುಟ್ಟಲಿಲ್ಲ. ಆತನ ಶಾಂತಿಯು ದೃಢವಾಗಿತ್ತು ॥೪೫೫॥ ಸನ್ಯಾಸಿಯ ಶಾಂತಿಯನ್ನು ಕಂಡು ದುರ್ಜನರು ಇನ್ನೂ ಹೆಚ್ಚಾಗಿಯೇ ಕ್ರೋಧಾಯಮಾನರಾದರು ಮತ್ತು ಆತನಿಗೆ ಮನಬಂದಂತೆ ಅನೇಕ ಉಪದ್ರವಗಳನ್ನು ಕೊಡಹತ್ತಿದರು. ಇದನ್ನೇ ಈಗ ಶ್ರೀಕೃಷ್ಣನು ಹೇಳುವನು ॥೪೫೬॥

ಇತ್ಯೇಕೇ ವಿಹಸಂತ್ಯೇನಮೇಕೇ ದುರ್ವಾತಯಂತಿ ಚ । ತಂ ಬಬಂಧುರ್ನಿರುರುಧುರ್ಯಥಾ ಕ್ರಿಡನಕಂ ದ್ವಿಜಮ್ ॥೪೦॥

ಅರ್ಥ:- ಕೆಲವರು ಈತನನ್ನು ಅಪಹಾಸ್ಯ ಮಾಡುತ್ತಿದ್ದರೆ, ಕೆಲವರು ಈತನ ಮೂಗಿನತ್ತ ಅಪಾನವಾಯು ಬಿಡುತ್ತಿದ್ದರು. ತೋತಾ-ಮೈನಾ ಪಕ್ಷಿಗಳನ್ನು ಹಿಡಿದು ಪಂಜರದಲ್ಲಿ ಕಟ್ಟಿಹಾಕುವಂತೆ ಈತನನ್ನು ಕಟ್ಟಿ ಮನೆಯಲ್ಲಿ ಹತ್ತಿಕ್ಕಿದರು.

ಕದರ್ಯಾ ಬಾಣಲೀ ಪೂರ್ಣ ಶಾಂತೀ । ಐಸೇ ಏಕ ಉಪಹಾಸಿತೀ । ಏಕ ನಾಕೀ ಚುನಾ ಲಾವಿತೀ । ಏಕ ಮುಖ ಮಾಖಿತೀ ಕಾಜಳೇ ॥೫೫೭॥ ಏಕ ಅತಿಶಠ ಸಾಚೋಕಾರೇ । ಪುಢಾ ಠಾಕೋನಿ ಪಾಠಿಮೋರೇ । ಶರ್ಧಾ ಕರಿತೀ ಅಧೋದ್ವಾರೇ । ನಾಕೀ ತೋಂಡೀ ಭರೇ ದುರ್ಗಂಧ ॥೫೫೮॥ ತರೀ ತ್ಯಾಚಿಯಾ ನಿಜಸ್ಥಿತೀ । ಅಣುಮಾತ್ರ ಕ್ಷೋಭ ನ ಯೇ ಚಿತ್ತೀ। ತೋಚಿ ಸನ್ಯಾಸೀ ತ್ರಿಜಗತೀ। ಜ್ಯಾಚೀ ಢಳೇನಾ ಶಾಂತೀ ಕ್ಷೋಭವಿಲ್ಯಾಹೀ।೫೫೯॥ ಏವಂ ಕ್ಷೋಭೇನಾ ತ್ಯಾಚೇ ಮನ । ದೇಖೋನ ಖವಳಲೇ ದುರ್ಜನ । ತ್ಯಾಸೀ ಗಳಾ ಶೃಂಖಲಾ ನಿರೋಧೂನ । ಆಣಿಲಾ ಬಾಂಧೂನ ಚೌಬಾರಾ ॥೫೬೦॥ ಯಾಸೀ ವೋಳಖಾ ರೇ ಕೋಣೀ ತುಮ್ಹೀ । ಹಾ ಧನಲೋಭೀ ಜೋ ಅಕರ್ಮೀ । ತೋ ಆಜೀ ಸಾಂಪಡವಿಲಾ ಆಮ್ಹೀ । ಅತಿಅಧರ್ಮೀ ದಾಂಭಿಕ ॥೫೬೧॥ ಜೇವೀ ಗಾರುಡೀ ಬಾಂಧೀ ಮಾಕಡಾ। ತೇವೀ ಸನ್ಯಾಸೀ ಬಾಂದಿಲಾ ಗಾಢಾ। ಮಿಳೋನಿಯಾ ಚಹೂಕಡಾ । ಮಾಗಾಪುಢಾ ವೋಢಿತೀ ॥೫೬೨॥ ಏಕ ಓಢಿತೀ ಪೂರ್ವೇಸೀ। ಏಕ ಓಢಿತೀ ಪಶ್ಚಿಮೇಸೀ। ಸನ್ಯಾಸೀ ಹಾಂಸೇ ನಿಜಮಾನಸೀ। ಸುಖ ಸರ್ವಾಸೀ ಹೋಯೇ ಯೇಣೇ ॥೫೬೩॥ ದೇಹ ಪ್ರಾರಬ್ಧ ಭೋಗೀ ಜಾಣ । ಯಾಚಾ ಮಜಸೀ ಸಂಬಂಧ ಕೋಣ । ಯೇಣೇ ವಿವೇಕೇ ಕ್ಷಮಾ ಪೂರ್ಣ। ಕೋಣಾಚೇ ಮನ ದುಖವೀನಾ ॥೫೬೪॥ ಜೇಥ ಸ್ವಗೋತ್ರ ಸೋಇರೇ ಸ್ವಜನ । ಜಿಂಹೀ ಧೀಧಲಾ ಅತಿಸನ್ಮಾನ । ತ್ಯಾದೇಖತಾ ಅಪಮಾನ। ಅನುದ್ವಿಗ್ನ ಜೋ ಸಾಹೇ ॥೫೬೫॥ ತ್ಯಾಪಾಶೀ ಶಾಂತಿ ಸಂಪೂರ್ಣ। ಉದ್ಧವಾ ನಿಶ್ಚಯೇಸೀ ಜಾಣ । ಜ್ಯಾಚೇ ಲೋಕೇಷಣೇ ಲಾಜೇ ಮನ। ಅಶಾಂತಿ ಜಾಣ ತೇ ಠಾಯೀ।೫೬೬॥ ಐಸಾ ಕ್ಷೋಭವಿತಾ ಪಹಾ ಹೋ। ಕ್ಷೋಭಾ ನ ಚಢೇ ತ್ಯಾಚಾ ಭಾವೋ। ತ್ಯಾ ಸನ್ಯಾಶಾಚಾ ಅಭಿಪ್ರಾವೋ। ಸ್ವಯೇ ದೇವಾಧಿದೇವೋ ಸಾಂಗತ ॥೫೬೭॥

ಏವಂ ಸ ಭೌತಿಕಂ ದುಃಖಂ ದೈವಿಕಂ ದೈಹಿಕ ಚ ಯತ್ । ಭೋಕ್ತವ್ಯಮಾತ್ಮನೋ ದಿಷ್ಟಂ ಪ್ರಾಪ್ತಂಪ್ರಾಪ್ತಮಬುಧ್ಯತ ॥೪೧॥

ಅರ್ಥ:- ಆದರೆ ಆತನು ಸರ್ವವನ್ನೂ ಶಾಂತಚಿತ್ತದಿಂದ ಸಹನೆಯನ್ನು ಮಾಡಿಕೊಳ್ಳುತ್ತಿದ್ದನು. ಈತನಿಗೆ ದೇಹಪೀಡೆಯನ್ನು ಸಹಿಸಬೇಕಾಗುತ್ತಿತ್ತು. ಬೇಸಿಗೆಯ ತಾಪದಿಂದ ಚಳಿಗಾಲದ ಚಳಿಯಿಂದ ದೈವೀ ಕಷ್ಟಗಳನ್ನು ಸಹನೆ ಮಾಡಬೇಕಾಗುತ್ತಿತ್ತು. ಆಗಾಗ ದುರ್ಜನರ ಅಪಮಾನ ಇತ್ಯಾದಿ ದ್ವಾರಾ ಭೌತಿಕ ಪೀಡೆಯನ್ನು ಸಹಿಸಬೇಕಾಗುತ್ತಿತ್ತು. ಆದರೆ ಭಿಕ್ಷುಕನ ಮನವು ಇದರ ಯಾವುದನ್ನೂ ವಿಚಾರ ಮಾಡುತ್ತಿದ್ದಿಲ್ಲ. ಇದೆಲ್ಲವೂ ನನ್ನ ಪೂರ್ವಜನ್ಮದ ಫಲವೆಂದು ತಿಳಿಯುತ್ತಿದ್ದನು. ಇದನ್ನು ನನಗೆ ಅವ್ಯಶ್ಯವಾಗಿ ಭೋಗಿಸಬೇಕಾಗುವುದು ಎನ್ನುತ್ತಿದ್ದನು.

ಈ ಕೃಪಣನ ಮನದಲ್ಲಿ ಪೂರ್ಣ ಶಾಂತಿಯು ನೆಲೆಸಿಕೊಂಡಿದೆ ಎಂದು ಹೇಳುತ್ತ ಕೆಲವರು ಅಪಹಾಸ್ಯ ಮಾಡುತ್ತಿದ್ದರು. ಕೆಲವರು ಈತನ ಮೂಗಿಗೆ ಸುಣ್ಣವನ್ನು ಬಳಿದರು. ಮುಖಕ್ಕೆ ಕಾಡಿಗೆಯನ್ನು ಬಡೆಯುತ್ತಿದ್ದರು ॥೫೫೭॥ ಕೆಲವು ಅತ್ಯಂತ ಕೆಟ್ಟ ಜನರು ಆತನತ್ತ ಬೆನ್ನು ಮಾಡಿ ಸರಿಯಾಗಿ ಬಗ್ಗಿ ಅಪಾನವಾಯು ಬಿಡುತ್ತಿದ್ದರು. ಇದರಿಂದ ಆ ಸನ್ಯಾಸಿಯ ಮುಖ ಮೂಗಿನಲ್ಲಿ ಕೆಟ್ಟ ದುರ್ಗಂಧವು ತುಂಬುತ್ತಿತ್ತು. ॥೫೫೮॥ ಇಷ್ಟಾದರೂ ಆತನ ಶಾಂತ ವೃತ್ತಿಯಲ್ಲಿ ಸ್ವಲ್ಪವೂ ಕೂಡ ಬದಲಾವಣೆಯಾಗುತ್ತಿದ್ದಿಲ್ಲ. ಜನರು ಒಬ್ಬನಿಗೆ ಸಿಟ್ಟಿಗೆ ಬರಬೇಕೆಂದು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಕೂಡ ಯಾವನು ಶಾಂತಚಿತ್ತದಿಂದ ಇರುವನೋ, ಆತನೇ ತ್ರಿಭುವನದಲ್ಲಿ ನಿಜವಾದ ಸನ್ಯಾಸಿಯಾಗಿರುವನು ॥೫೫೯॥ ಕೊನೆಯಲ್ಲಿ ಇಷ್ಟೊಂದು ತೊಂದರೆಗಳನ್ನು ಕೊಟ್ಟರೂ ಸಹ ಈ ಸನ್ಯಾಸಿಯ ಶಾಂತಿಯು ಕಡಿಮೆಯಾಗದ ಸ್ಥಿತಿಯನ್ನು ಕಂಡು ಅವರು ಈತನ ಕುತ್ತಿಗೆಗೆ ಸರಪಳಿಯನ್ನು ಕಟ್ಟಿ ಎಳೆಯುತ್ತ ಎಳೆಯುತ್ತ ಚಾವಡಿಗೆ ತಂದರು ॥೫೬೦॥ ಅಲ್ಲಿ ಕೂಡಿದ ಜನರಿಗೆ ಈ ದುಷ್ಟರು ಹೀಗೆ ಹೇಳಹತ್ತಿದರು. ನೀವು ಇವನನ್ನು ಬಲ್ಲಿರಾ? ಇವನು ದ್ರವ್ಯಲೋಭೀ ನಿಂದ್ಯಕರ್ಮಗಳನ್ನು ಮಾಡಿದವನಾಗಿರುವನು. ಇಂದು ನಾವು ಇವನಿಗೆ ಹಿಡಿದಿದ್ದೇವೆ. ಇವನು ಅತ್ಯಂತ ಅಧರ್ಮೀ ಮತ್ತು ಡಾಂಭಿಕನಾಗಿರುವನು ॥೫೬೧॥ ಯಾವ ಪ್ರಕಾರವಾಗಿ ಗಾರುಡಿಯು ಮಂಗವನ್ನು ಕಟ್ಟಿ ಹಾಕಿರುವನೋ, ಅದರಂತೆಯೇ ಆ ಸನ್ಯಾಸಿಯನ್ನು ಗಟ್ಟಿಯಾಗಿ ಕಟ್ಟಿಹಾಕಿದರು. ಎಲ್ಲರೂ ಈತನಿಗೆ ನಾಲ್ಕೂ ಕಡೆಯಿಂದ ಹಿಂದಕ್ಕೆ ಮುಂದಕ್ಕೆ ಎಳದಾಡ ಹತ್ತಿದರು ॥೫೬೨॥ ಕೆಲವರು ಪೂರ್ವಕ್ಕೆ ಎಳೆದಾಡಿದರೆ ಇನ್ನು ಕೆಲವರು ಪಶ್ಚಿಮಕ್ಕೆ ಎಳದಾಡತೊಡಗಿದರು. ಇದರಿಂದ ಎಲ್ಲರಿಗೂ ಸಂತೋಷವಾಗುತ್ತಿರುವುದನ್ನು ಕಂಡು ಸನ್ಯಾಸಿಯು ತನ್ನ ಮನದಲ್ಲಿಯೇ ನಗಲಾರಂಭಿಸಿದನು. ॥೫೬೩॥ ಈ ಯಾವ ನನ್ನ ದೇಹವು ತನ್ನ ಪ್ರಾರಬ್ಧವನ್ನು ಭೋಗಿಸುತ್ತಿರುವುದು. ಇದಕ್ಕೂ ನನಗೂ ಯಾವ ಸಂಬಂಧವಿದೆ? ಹೀಗೆ ಕ್ಷಮಾಶೀಲ ವಿಚಾರವನ್ನು ಮಾಡುತ್ತ ಆತನು ಯಾರ ಮನವನ್ನೂ ನೋಯಿಸಲಿಲ್ಲ ॥೫೬೪॥ ಯಾವ ಸ್ಥಾನದಲ್ಲಿ ತನ್ನ ಅಣ್ಣತಮ್ಮಂದಿರು, ಬೀಗರು ಬಿಜ್ಜರು, ಇಷ್ಟಮಿತ್ರರು ಇದ್ದು, ಯಾರು ಪೂರ್ವದಲ್ಲಿ ತನ್ನ ಆದರ ಸತ್ಕಾರವನ್ನು ಮಾಡಿದ್ದರೋ, ಅವರೆಲ್ಲರೂ ನೋಡುತ್ತಿದ್ದಂತೆಯೇ ಯಾವನು ಸ್ವಲ್ಪವೂ ಕೂಡ ತೊಂದರೆಯನ್ನು ಪಡೆಯದೇ ಅಪಮಾನವನ್ನು ಸಹಿಸುವನೋ ॥೫೬೫॥ ಹೇ ಉದ್ಧವಾ, ಆತನ ಹತ್ತಿರ ಪರಿಪೂರ್ಣವಾದ ಶಾಂತತೆಯು ವರ್ತಿಸುತ್ತಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ. ಲೌಕಿಕ ಪ್ರತಿಷ್ಠೆಗಾಗಿ ಯಾರ ಮನವು ನಾಚಿಗೆಪಡುವುದೋ, ಆತನಲ್ಲಿ ಶಾಂತಿಯು ಇರುವುದಿಲ್ಲ ॥೫೬೬॥ ಈ ಪ್ರಕಾರವಾಗಿ ಆ ಯಾವ ದುರ್ಜನರು ಆ ಸನ್ಯಾಸಿಯನ್ನು ಪೀಡಿಸಿದರೂ ಕೂಡ ಆತನಿಗೆ ಸ್ವಲ್ಪವೂ ಕೂಡ ಕೋಪವು ಬರಲಿಲ್ಲ. ಇದೇ ವರ್ಣನೆಯನ್ನು ಶ್ರೀಕೃಷ್ಣನು ಮುಂದೆ ಮಾಡುತ್ತಿರುವನು ॥೫೬೭॥

ಭಿಕ್ಷು ಬೋಲೇ ನಿಜವಿವೇಕ । ತ್ರಿವಿಧ ಪ್ರಾರಬ್ಧೇ ಬಾಂಧಲೇ ಲೋಕ । ತೇಣೇ ಭೋಗಣೇ ಪಡೇ ಆವಶ್ಯಕ । ರಾವೋ ರಂಕ ಸುಟೇನಾ ।೫೬೮॥ ಭೂತಾಂಚೀ ಪೀಡಾ ತೇ ಭೌತಿಕ । ದೇವಾಂಚೀ ಪೀಡಾ ತೇ ದೈವಿಕ । ದೇಹೀ ಉಪಜತೀ ಜ್ವರಾದಿಕ । ಹೇ ಪೀಡಾ ದೇಖ ದೈಹಿಕ ।೫೬೯॥ ಯಾಪರೀ ತ್ರಿವಿಧ ದುಃಖ । ಪ್ರಾರಬ್ಧ ಝಾಲೇ ಜನಕ । ತೇ ಭೋಗಿತಾ ಮಾನೀ ಅಸುಖ । ತೋ ಕೇವಳ ಮೂರ್ಖ ಅತಿಮಂದ ।೫೭೦॥ ಜೇ ಭೋಗ ಆಲೇ ಪ್ರಾರಬ್ಧೇಸೀ । ತೇಥೇ ಸಾಹ್ಯಕೇಲ್ಯಾ ಹರಿಹರಾಂಸೀ । ಭೋಗ ನ ಚುಕತೀ ಪ್ರಾಣ್ಯಾಸೀ । ಹೇ ಜಾಣೋನಿ ಸನ್ಯಾಸೀ ಕ್ಷಮಾವಂತ ।೫೭೧॥ ಕೃಷ್ಣ ಸಾಹ್ಯ ಪಾಂಡವಾಸೀ । ತೇ ಭೋಗಿತೀ ನಷ್ಟಚರ್ಯಾಸೀ । ತೇಥೇ ಸಾಹ್ಯ ಕೇಲ್ಯಾ ಹರಿಹರಾಂಸೀ । ಪ್ರಾರಬ್ಧ ಕೋಣಾಸೀ ಟಳೇನಾ ।೫೭೨॥

ಪರಿಭೂತ ಇಮಾಂ ಗಾಥಾಮಾಗಾಯತ ನರಾಧಮೈಃ । ಪಾತಯದ್ಭಿಃ ಸ್ವಧರ್ಮಸ್ಥೋ ಧೃತಿಮಾಸ್ಥಾಯ ಸಾತ್ತ್ವಿಕೀಮ್ ।೨॥

ಅರ್ಥ:- ಈ ರೀತಿಯಾಗಿ ನರಾಧಮರು ಸನ್ಯಾಸಿಗೆ ಭಿನ್ನಭಿನ್ನವಾಗಿ ಪೀಡೆಯನ್ನು ಕೊಡುವ ಪ್ರಯತ್ನ ಮಾಡಿದರೂ ಆತನು ಮಹಾ ಧೈರ್ಯದಿಂದ ತನ್ನ ಧರ್ಮದಲ್ಲಿ ಸ್ಥಿರವಾಗಿರುವನು. ಸಾತ್ವಿಕ ಧೈರ್ಯದ ಅಶ್ರಯವನ್ನು ಪಡೆದು ಹೀಗೆ ಗೀತೆಯನ್ನು ಹಾಡಿದನು.

ದುರ್ಜನಾಂಚ್ಯಾ ಉಪದ್ರವಾಹಾತೀ । ನಿಜಶಾಂತಿ ನ ಸಾಂಡೀಚ ಯತೀ । ಧರೋನಿಯಾ ಸಾತ್ತ್ವಿಕೀ ಧೃತೀ । ಸ್ವಧರ್ಮಸ್ಥಿತೀ ನ ಢಳೇಚಿ ।೫೭೩॥ ತೇಣೇ ಭಿಕ್ಷೂನೇ ಗಾಯಿಲೀ ಗಾಥಾ । ತೇ ತುಜ ಮೀ ಸಾಂಗೇನ ಆತಾ । ಉದ್ಧವಾ ಅತಿಸಾವಧಾನತಾ । ತೋ ಬೋಧ ತತ್ತ್ವತಾ ಅವಧಾರೀ ।೫೭೪॥ ತೋ ಬೋಧೂ ಧರಿತಾ ಚಿತ್ತೀ । ದ್ವಂದ್ವಸಾಮ್ಯಾ ಪಾವೇ ಸ್ಥಿತೀ । ಸಹಜೇ ಉಲ್ಹಾಸೇ ನಿಜಶಾಂತಿ । ಸಾಯುಜ್ಯಮುಕ್ತೀ ಘರ ರಿಘೇ ।೫೭೫॥ ಜಗೀ ಉದ್ಧವಾಚೇ ಭಾಗ್ಯ ಪೂರ್ಣ । ಜ್ಯಾಸೀ ಶ್ರೀಕೃಷ್ಣ ಕರೀ ಸಾವಧಾನ । ಕಾಯ ಬೋಲಿಲಾ ಭಿಕ್ಷು ಆಪಣ । ತೇ ನಿರೂಪಣ ಅವಧಾರೀ ।೫೭೬॥

ದ್ವಿಜ ಉವಾಚ :-

ನಾಯಂ ಜನೋ ಮೇ ಸುಖದುಃಖ ಹೇತುರ್ನ ದೇವತಾತ್ಮಾ ಗ್ರಹಕರ್ಮಕಾಲಾಃ ।
ಮನಃಪರಂ ಕಾರಣಮಾಮನಂತಿ ಸಂಸಾರಚಕ್ರ ಪರಿವರ್ತಯದ್ಯತ್ ।೩॥

ಅರ್ಥ:- ಬ್ರಾಹ್ಮಣನು ನುಡಿದನು :- ನನ್ನ ಸುಖದುಃಖದ ಕಾರಣ ಈ ಮನುಷ್ಯರಲ್ಲ ದೇವತೆಗಳಲ್ಲ, ಶರೀರವಲ್ಲ, ಗ್ರಹವಲ್ಲ, ಕರ್ಮ ಮತ್ತು ಕಾಲವಲ್ಲ. ಶ್ರುತಿ ಮತ್ತು ಮಹಾತ್ಮರು ಇದ್ಯಕೆ ಮನಸ್ಸೇ ಪರಮ ಕಾರಣವೆನ್ನುವರು. ಮನವು ಸರ್ವ ಸಂಸಾರಚಕ್ರಕ್ಕೆ ತಿರುಗಿಸಿತ್ತಿರುವುದು.

ಆ ಭಿಕ್ಷುಕನು ತನ್ನ ವಿವೇಕಯುಕ್ತ ವಾಣಿಯಿಂದ ಹೇಳಹತ್ತಿದನು. ಮೂರು ಪ್ರಕಾರಗಳ ಪ್ರಾರಬ್ಧದಿಂದ ಜನರು ಬದ್ಧರಾಗಿರುವರು. ಆದ್ದರಿಂದ ಆ ಕಾರ್ಯದ ಫಲವನ್ನು ಅವಶ್ಯವಾಗಿ ಭೋಗಿಸಬೇಕಾಗುವುದು. ಇದರಿಂದ ಶ್ರೀಮಂತರಿಗೂ, ಬಡವರಿಗೂ ಬಿಡುಗಡೆಯಾಗುವುದಿಲ್ಲ ।೫೬೮॥ ಪಂಚಮಹಾಭೂತಗಳಿಂದ ಆಗುವ ಪೀಡೆಯು ಭೌತಿಕಪೀಡೆಯಾಗಿರುವುದು. ದೇವತೆಗಳಿಂದ ಆಗುವ ಪೀಡೆಯು ದೈವಿಕ ಪೀಡೆಯು ಮತ್ತು ದೇಹದಲ್ಲಿಯೇ ಜ್ವರಾದಿ ರೋಗಗಳು ಕೊಡುವ ಪೀಡೆಯು ದೈಹಿಕ ಪೀಡೆಯಾಗಿರುವುದು ।೫೬೯॥ ಈ ಪ್ರಕಾರದ ಮೂರು ದುಃಖಗಳು ಪ್ರಾರಬ್ಧದಿಂದ ಉತ್ಪನ್ನವಾಗುತ್ತಿರುವುವು. ಈ ದುಃಖಗಳನ್ನು ಭೋಗಿಸುವಾಗ, ಯಾವನು ತ್ರಾಸುಪಡುವನೋ, ಅವನು ಮೂರ್ಖನು, ಮಂದಬುದ್ಧಿಯವನಾಗಿರುವನು ।೫೭೦॥ ಹರಿಹರರೂ ಕೂಡ ಸಹಾಯ ಮಾಡಿದರೂ ಪ್ರಾರಬ್ಧದಿಂದ ಪ್ರಾಪ್ತವಾಗಿರುವ ಭೋಗಗಳನ್ನು ಪ್ರಾಣಿಗಳಿಗೆ ತಪ್ಪಿಸಲು ಸಾಧ್ಯವಾಗುವುದಿಲ್ಲ. ಇದನ್ನು ತಿಳಿದು ಸನ್ಯಾಸಿಯು ಪರಿಪೂರ್ಣವಾಗಿ ಕ್ಷಮಾಶೀಲನಾಗಿದ್ದನು ।೫೭೧॥ ಶ್ರೀಕೃಷ್ಣನು ಪಾಂಡವರ ಸಹಾಯಕರ್ತನಾಗಿದ್ದನು. ಆದರೂ ಕೂಡ ಪಾಂಡವರಿಗೆ ಅನೇಕ ಪ್ರಕಾರದ ಸಂಕಟಗಳನ್ನು ಭೋಗಿಸಬೇಕಾಯಿತು. ಇದನ್ನು ವಿಚಾರಿಸಿದರೆ ಹರಿಹರರು ಸಹಾಯ ಮಾಡಿದರೂ ಕೂಡ ಪ್ರಾರಬ್ಧವು ಯಾರನ್ನೂ ಬಿಡುವುದಿಲ್ಲ ಎಂಬುವುದು ಸಿದ್ಧವಾಗುವುದು ।೫೭೨॥

ದುಷ್ಟ ಜನರು ಇಷ್ಟೊಂದು ಪೀಡೆಯನ್ನು ಕೊಟ್ಟರೂ ಕೂಡ ಆ ಯಾವ ಯತಿಯು ತನ್ನ ಮನದ ಶಾಂತಿಯನ್ನು ಕದಲಿಸಲಿಲ್ಲ. ಸಾತ್ವಿಕ ಧೈರ್ಯದಿಂದ ಆತನು ಸ್ವಧರ್ಮವನ್ನು ಬಿಟ್ಟುಕೊಡಲಿಲ್ಲ ।೫೭೩॥ ಈ ಪ್ರಸಂಗದಲ್ಲಿ ಆ ಭಿಕ್ಷುಕನು ಗೀತೆಯನ್ನು ಹಾಡಿದನು. ಈಗ ದನ್ನು ನಿನಗೆ ಹೇಳುವೆನು. ಹೇ ಉದ್ಧವನೇ, ಈ ಉಪದೇಶವನ್ನು ನೀನು ಅತ್ಯಂತ ಏಕಾಗ್ರಚಿತ್ತದಿಂದ ಶ್ರವಣವನ್ನುಮಾಡು ।೫೭೪॥ ಈತನ ಬೋಧೆಯು ಒಮ್ಮೆ ಹೃದಯದಲ್ಲಿ ಮೂಡಿತೆಂದರೆ ಸರ್ವ ಸುಖದುಃಖಾದಿ ದ್ವಂದ್ವಗಳು ಸಮವಾಗುವುವು. ಸಹಜವಾಗಿಯೇ ನಿಜಶಾಂತಿಯು ಉಲ್ಹಾಸಭರಿತವಾಗುವುದು ಮತ್ತು ಸಾಯುಜ್ಯ ಮುಕ್ತಿಯು ಆತನ ಮನೆಗೆ ನಡೆದು ಬರುವುದು ।೫೭೫॥ ಯಾರಿಗೆ ಶ್ರೀಕೃಷ್ಣನು ಎಚ್ಚರಿಕೆ ನೀಡಬೇಕಾದರೆ ಆ ಉದ್ಧವನ ಭಾಗ್ಯವು ಜಗತ್ತಿನಲ್ಲಿ ಪರಿಪೂರ್ಣವಾಗಿರುವುದು. ಭಿಕ್ಷುಕನು ತನ್ನ ಗೀತೆಯಲ್ಲಿ ಏನು ಹೇಳಿದನೆಂಬುದನ್ನು ನಾನು ನಿರೂಪಣೆಯನ್ನು ಮಾಡುವೆನು, ಅದನ್ನು ನೀನು ಲಕ್ಷಕೊಟ್ಟು ಕೇಳು ।೫೭೬॥

ಸುಜನ ದುರ್ಜನ ಸಾಧಾರಣ । ಐಸೇ ಜೇ ತ್ರಿವಿಧ ಜನ । ಮಾಝ್ಯಾ ಸುಖದುಃಖಾಂಸೀ ಕಾರಣ । ಸರ್ವಥಾ ಜಾಣ ತೇ ನವ್ಹತೀ ।೫೭೭॥ ಜನ ತಿತುಕೇ ಪಾಂಚಭೌತಿಕ । ಮಾಝಾಹೀ ದೇಹೋ ತೋಚಿ ದೇಖ । ಜನಾಂಸೀ ಮಜ ಸಹಜೇ ಐಕ್ಯ । ಉಪಜೇ ಸುಖದುಃಖ ಮನಾಪಾಶೀ ।೫೭೮॥ ದೇವತಾ ಸುಖದುಃಖದಾಯಕ । ಐಸೇ ಮ್ಹಣಾವೇ ಆವಶ್ಯಕ । ತೀ ದೈವತೇ ಮನಃಕಾಲ್ಪನಿಕ । ತ್ಯಾಚೇ ಸುಖದುಃಖ ಮಜಸೀ ನ ಲಗೇ ।೫೭೯॥ ದೇವತಾ ರೂಪೇ ಮನ ಆಪಣ । ಮನೇ ಕಲ್ಪಿಲೇ ದೇವತಾಗಣ । ತೇ ಜೈ ಸುಖದುಃಖೇ ದೇತೀ ಜಾಣ । ತೈ ಮುಖ್ಯಕಾರಣ ಮನ ಝಾಲೇ ।೫೮೦॥ ಜೇಥ ಜೈಸಾ ಮನಾಚಾ ಸದ್‌ಭಾವೋ । ತೇಥ ತದ್ರೂಪೇ ಭಾಸೇ ದೇವೀ ದೇವೋ । ಜೇಥ ಮನಾಚಾ ವಿಕಲ್ಪ ಪಹಾ ಹೋ । ತೇಥ ಥಿತಾ ದೇವೋ ದಿಸೇನಾ ।೫೮೧॥ ಯಾಲಾಗೀ ಸಕಳ ದೇವತಾ । ತ್ಯಾ ಜಾಣ ಮನಃಕಲ್ಪಿತಾ । ತ್ಯಾಪಾಸಾವ ಸುಖದುಃಖವ್ಯಥಾ । ತೇ ಮನಾಚೇ ಮಾಥಾ ನಿಶ್ಚಿತ ।೫೮೨॥ ಆತ್ಮಾ ಸುಖದುಃಖಾಂಸೀ ಕಾರಣ । ಹೇ ಸಮೂಳ ಮಿಥ್ಯಾವಾಚನ । ಆತ್ಮ್ಯಾಚೇ ಠಾಯೀ ದ್ವೈತಭಾನ । ತ್ರಿಶುದ್ಧಿ ಜಾಣ ಅಸೇನಾ ।೫೮೩॥ ಮೀ ಏಕ ಸುಖದುಃಖಾಂಚಾ ದಾತಾ । ಹಾ ಏಕ ಸುಖದುಃಖಾಂಚಾ ಭೋಕ್ತಾ । ಹೇ ಆತ್ಮ್ಯಾಚೇ ಠಾಯೀ ತತ್ತ್ವತಾ । ಜಾಣ ಸರ್ವಥಾ ಅಸೇನಾ ।೫೮೪॥ ಜನ್ಮ ಕಾಳೀಚೇ ಗ್ರಹ ದಾರುಣ । ಮ್ಹಣೋ ಸುಖದುಃಖಾಂಸೀ ಕಾರಣ । ಗ್ರಹಾಂಚಾ ಗ್ರಹೋ ಮನ ಆಪಣ । ಜನ್ಮ ಮರಣ ಭೋಗವೀ ।೫೮೫॥ ಗ್ರಹಾಂಚೀ ಗ್ರಹಗತೀ ದೇಹಾಂತವರೀ । ಮನಾಚಿ ಗ್ರಹಗತೀ ತ್ಯಾಹೂನಿ ಥೋರೀ । ದುಃಖ ಭೋಗವೀ ನಾನಾ ಪ್ರಕಾರೀ । ಜನ್ಮ ಜನ್ಮಾಂತರೀ ಸೋಡೀನಾ ।೫೮೬॥ ದುಷ್ಟಗ್ರಹ ಚಾರೀ ದಿವಸ ಪೀಡೀ । ಮನಾಚೀ ಪೀಡಾ ಜನ್ಮಕೋಡೀ । ದುಷ್ಟ ಗ್ರಹೋ ಭೋಗೂನಿ ಸೋಡೀ । ಮನ ನ ಸೋಡೀ ಕಲ್ಪಾಂತೀ ।೫೮೭॥ ಜೈ ಮನ ನ ಧರೀ ದೇಹಾಭಿಮಾನ । ತೈ ಗ್ರಹಾಂಚೀ ಪೀಡಾ ಮಾನೀ ಕೋಣ । ಯಾಲಾಗೀ ಸುಖದುಃಖಾ ಕಾರಣ । ಮನಚಿ ಜಾಣ ಮಹಾಗ್ರಹೋ ।೫೮೮॥ ಯೇಥ ನಿಜಕರ್ಮ ದುಃಖದಾಯಕ । ಹೇಹೀ ಮ್ಹಣತಾ ನ ಯೇ ದೇಖ । ಕರ್ಮ ಕರ್ಮಬಂಧಮೋಚಕ । ತೇ ದುಃಖದಾಯಕ ಘಡೇ ಕೇವೀ ।೫೮೯॥

ಆ ಸನ್ಯಾಸಿಯು ಹೀಗೆ ಹೇಳಿದನು; ಸಜ್ಜನ, ದುರ್ಜನ ಮತ್ತು ಸರ್ವಸಾಧಾರಣ ಹೀಗೆ ಮೂರು ಪ್ರಕಾರದ ಜನರು ಇರುವರು. ಇವರು ನನ್ನ ಸುಖದುಃಖಗಳಿಗೆ ಅಣುಮಾತ್ರವೂ ಕಾರಣೀಭೂತರಾಗಿರುವುದಿಲ್ಲ ।೫೭೭॥ ಜಗತ್ತಿನಲ್ಲಿ ಎಷ್ಟೊಂದು ಜನರಿರುವರೋ, ಅವರೆಲ್ಲರೂ ಪಂಚಮಹಾಭೂತಗಳಿಂದ ಉತ್ಪನ್ನರಾಗಿರುವರು. ನನ್ನ ದೇಹವೂ ಕೂಡ ಪಂಚಮಹಾಭೂತಗಳಿಂದ ಸಿದ್ಧವಾಗಿರುವುದು. ಹೀಗೆ ಜನರು ಮತ್ತು ನನ್ನ ದೇಹಗಳ ಐಕ್ಯವಾಗಿರುವುದು. ಸುಖದುಃಖಗಳು ಕೇವಲ ಮನಸ್ಸಿನಿಂದ ನಿರ್ಮಾಣವಾಗುವುವು ।೫೭೮॥ ದೇವತೆಗಳು ಈ ಸುಖದುಃಖಗಳನ್ನು ಕೊಡುವವರು ಎಂದು ಹೇಳಬೇಕೆಂದರೆ ದೇವತೆಗಳ ಸಮೂಹವನ್ನು ಮನಸ್ಸು ಕಲ್ಪಿಸಿರುವುದು. ಆದ್ದರಿಂದ ಅವರ ಸುಖದುಃಖಗಳೂ ಕೂಡ ನನಗೆ ಹತ್ತಲಾರವು ।೫೭೯॥ ಮನಸ್ಸು ಇದು ಒಂದು ದೇವತಾಸ್ವರೂಪವಾಗಿರುವುದು. ಇದೇ ಮನವು ದೇವತೆಗಳ ಕಲ್ಪನೆಯನ್ನು ಮಾಡಿರುವುದು. ಈ ದೇವತೆಗಳು ಸುಖದುಃಖಗಳನ್ನು ಕೊಡುತ್ತಿರುವುವು. ಇದರ ಕಾರಣವು ಈ ಮನಸ್ಸೇ ಆಗಿರುವುದು ।೫೮೦॥ ಮನಸ್ಸಿನ ಯಾವ ಪ್ರಕಾರದ ಸದ್ಭಾವನೆಯು ಇರುವುದೋ ಅಲ್ಲಿ ಅದೇ ಪ್ರಕಾರವಾಗಿ ದೇವೀ ಮತ್ತು ದೇವತೆಗಳು ಭಾಸಮಾನರಾಗುವರು. ಎಲ್ಲಿ ಮನಸ್ಸಿನ ಆಧಾರವಿರುವುದಿಲ್ಲವೋ ಅಲ್ಲಿ ಇದ್ದ ದೇವರೂ ಕೂಡ ಕಾಣುವುದಿಲ್ಲ ।೫೮೧॥ ಆದ್ದರಿಂದ ಸರ್ವ ದೇವತೆಗಳು ಮನಃಕಲ್ಪಿತವಾಗಿರುವುವು. ಈ ಕಾರಣವಾಗಿ ಅವರಿಂದಾಗುವ ಯಾವ ಸುಖದುಃಖಗಳ ವ್ಯಥೆಯು ಆದರೆ ಅದು ಮನಸ್ಸಿನಿಂದಲೇ ಎಂದು ನಿಶ್ಚಯಪೂರ್ವಕವಾಗಿ ತಿಳಿಯಬೇಕು ।೫೮೨॥

ಆತ್ಮವು ಸುಖದುಃಖದ ಕಾರಣವಾಗಿದೆ ಎಂದು ಹೇಳಿದರೆ ಅದು ಯೋಗ್ಯವಾಗುವುದಿಲ್ಲ. ಕಾರಣವೇನೆಂದರೆ ಆತ್ಮಕ್ಕೆ ದ್ವೈತದ ಪರಿಣಾಮವು ಎಂದಿಗೂ ಇರುವುದಿಲ್ಲ ।೫೮೩॥ ನಾನೊಬ್ಬನು ಸುಖದುಃಖಗಳನ್ನು ಕೊಡುವವನು ಮತ್ತು ಇವನೊಬ್ಬನು ಸುಖದುಃಖಗಳ ಭೋಕ್ತಾನಾಗಿರುವನು ಎಂಬುವ ಈ ಮಾತೂ ಕೂಡ ಆತ್ಮನಲ್ಲಿ ಇರುವುದೇ ಇಲ್ಲ ।೫೮೪॥ ಜನನಕಾಲದ ದಾರುಣ ಗ್ರಹಗಳು ಸುಖದುಃಖಗಳಿಗೆ ಕಾರಣೀಭೂತವಾಗಿರುವುವು ಎಂದು ಹೀಗೆ ಹೇಳಬೇಕೆಂದರೆ, ತನ್ನ ಮನವೇ ಸ್ವತಃ ಸರ್ವ ಗ್ರಹಗಳ ಗ್ರಹವಾಗಿರುವುದು. ಈ ಮನಸ್ಸೇ ಜನ್ಮಮರಣಗಳನ್ನು ಭೋಗಿಸಲು ಹಚ್ಚುತ್ತಿರುವುದು ।೫೮೫॥ ಗ್ರಹಗಳ ಗ್ರಹದಶೆಗಳು ಈ ಶರೀರವು ಅಂತ್ಯವಾಗುವವರೆಗೆ ಮಾತ್ರ ಇರುವುದು. ಆದರೆ ಮನಸ್ಸಿನ ಗ್ರಹದಶೆಯು ಇದಕ್ಕಿಂತಲೂ ಅಧಿಕವಾಗಿರುವುದು. ಇದು ಅನೇಕ ಪ್ರಕಾರಗಳ ದುಃಖವನ್ನು ಭೋಗಿಸಲು ಹಚ್ಚುವುದು ಮತ್ತು ಜನ್ಮಜನ್ಮಕ್ಕೂ ಜೊತೆಯಲ್ಲಿಯೇ ಇರುವುದು ।೫೮೬॥ ದುಷ್ಟ ಗ್ರಹಗಳ ಪೀಡೆಯು ಅಲ್ಪಕಾಲದವರೆಗೆ ಇರುವುದು. ಆದರೆ ಮನಸ್ಸಿನ ಪೀಡೆಯು ಇದು ಕೋಟ್ಯಾವಧಿ ಜನ್ಮಗಳವರೆಗೂ ಇರುವುದು. ಇರುವ ಯಾವ ದುಷ್ಟಗ್ರಹವು ತನ್ನ ಭೋಗದಶೆಯನ್ನು ಭೋಗಿಸಿದ ಕೂಡಲೇ ಬಿಟ್ಟು ಹೋಗುವುದು. ಆದರೆ ಮನವು ಇದು ಕಲ್ಪಾಂತಕ್ಕೂ ಬಿಡುವುದಿಲ್ಲ ।೫೮೭॥ ಮನಸ್ಸು ಒಂದುವೇಳೆ ದೇಹಾಭಿಮಾನವನ್ನು ಹಿಡಿಯದಿದ್ದರೆ, ಆಗ ಗ್ರಹದ ಪೀಡೆಯನ್ನಾದರೂ ಯಾರು ಮನ್ನಿಸಬೇಕು? ಆದ್ದರಿಂದ ಮನಸ್ಸೇ ಸುಖದುಃಖಗಳಿಗೆ ಕಾರಣವಾಗುವುದು ।೫೮೮॥ ತನ್ನ ಕರ್ಮಗಳು ದುಃಖವನ್ನು ಕೊಡುವುವು ಎಂದು ಹೀಗೆ ಹೇಳಲು ಬರುವುದಿಲ್ಲ. ಕಾರಣ ಕರ್ಮವು ಬಂಧನದಿಂದ ಬಿಡಿಸುವುದು. ಅಂದಮೇಲೇ ಅದು ದುಃಖವನ್ನು ಕೊಡುವುದು ಎನ್ನುವುದು ಹೇಗಾಗುವುದು? ।೫೮೯॥

ಸ್ವಕರ್ಮ ಶುದ್ಧ ಸ್ವಾಭಾವಿಕ । ತ್ಯಾಸೀ ಮನೇ ಕರೂನಿ ಸಕಾಮಿಕ । ನಾನಾಪರೀ ಅತಿದುಃಖ । ಯೋನಿ ಅನೇಕ ಭೋಗವೀ।।೪೯೦।। ಹೋ ಕಾ ಕರ್ಮಾಚೇನಿ ಕ್ರಿಯಾಯೋಗೇ । ಜೈ ಮನಃಸಂಕಲ್ಪ ಕರ್ಮೀ ನ ಲಗೇ । ತೈ ಸುಖ ದುಃಖಾಂಚೀ ಅನೇಗೇ । ವಿಭಾಂಡೀ ವೇಗೇ ನಿಜಕರ್ಮ ।।೪೯೧।। ದೇಹ ಸುಖದುಃಖಾಂಸೀ ಕಾಯ ಜಾಣೇ । ಆತ್ಮಾ ಸುಖದುಃಖ ಸರ್ವಥಾ ನೇಣೇ । ಯೇಥ ಸುಖದುಃಖಾಂಚೇ ಗಾಡೇ ಭರಣೇ । ಮನೇಭೋಗವಣೇ ನಿಜಸತ್ತಾ ।।೪೯೨।। ಯೇಥ ಸುಖದುಃಖದಾಯಕ । ಮನಚಿ ಝಾಲೇ ಅಸೇ ಏಕ । ಮನಾಅಧೀನ ಹೋಊನಿ ಲೋಕ । ಮಿಥ್ಯಾ ಸುಖದುಃಖ ಭೋಗಿತೀ ।।೪೯೩।। ಕಾಳ ಸುಖದುಃಖಾಂಚಾ ದಾತಾ । ಹೇಹೀ ನ ಘಡೇ ಗಾ ಸರ್ವಥಾ । ಮನಃಸಂಕಲ್ಪಸಂಕೇತಾ । ಕಾಳಾಚೀ ಸತ್ತಾ ಲಾಗಲೀ ।।೪೯೪।। ಅಜರಾಮರ ಅಸತಾ ಆಪಣ । ಮನೇ ಘೇತಲೇ ಮಜ ಆಹೇ ಮರಣ । ತೇಥೇಚಿ ಕಾಳ ಲಾಗಲಾ ಜಾಣ । ಕ್ಷಣೋಕ್ಷಣ ನಿರ್ದಾಳಿತ ।।೪೯೫।। ಆಪುಲೇನಿ ಹಾತೇ ಆಪಣ । ಪಥಾಡೇ ಖೋಂವಿಲೇ ದಾಭಣ । ರಾತ್ರೀ ರುತತಾಂಚಿ ತೇ ಜಾಣ । ಸರ್ಪಭಯೇ ಪ್ರಾಣ ಸಾಂಡಿಲಾ ।।೪೯೬।। ತ್ಯಾಸೀ ಸರ್ಪ ನಾಹೀ ಲಾಗಲಾ । ಮಾ ವಿಖೇ ಕೇವೀ ತೋ ಘಾರಲಾ । ಪರೀ ನಿಜಶಂಕೇ ಸ್ವಯೇ ನಿಮಾಲಾ । ತೈಸಾ ಕಾಳ ಲಾಗಲಾ ಜನಾಸೀ ।।೪೯೭।। ಏಕಾಸೀ ಸರ್ಪ ಝೋಂಬಲಾ ಪಾಠೀಸೀ । ಕಾಯ ರುತಲೇ ಮ್ಹಣೇ ಸಾಂಗಾತಿಯಾಸೀ । ತೋ ಮ್ಹಣೇ ಕಾಂಟೀ ಲಾಗಲೀ ಹೋತೀ ಕೈಸೀ । ತೇ ಮ್ಯಾ ಅನಾಯಾಸೀ ಉಪಡಿಲೀ ।।೪೯೮।। ತೋ ನವ್ಹೇ ಸರ್ಪಾ ಸಾಶಂಕ । ಯಾಲಾಗೀ ತ್ಯಾಸೀ ನ ಚಢೇಚಿ ವಿಖ । ನಿಜ ವ್ಯಾಪಾರೀ ದೇಖ । ಯಥಾಸುಖ ವರ್ತತ ।।೪೯೯।। ತ್ಯಾಸೀ ಸಾಂಗೋನಿ ಬಹುಕಾಳೇ ಖೂಣ । ದೇತಾ ಸರ್ಪಾಚೀ ಆಠವಣ । ತತ್ಕಾಳ ವಿಕ್ಷೀ ಆರಂಬಳೋನ । ಆಶಂಕಾ ಪ್ರಾಣ ಸಾಂಡಿಲಾ ।।೫೦೦।। ತೇವೀ ನಿರ್ವಿಕಲ್ಪಪುರುಖಾ । ಉಠೀ ಸಂಕಲ್ಪಾಚೀ ಆಶಂಕಾ । ತೇ ಕಾಳೀ ಕಾಳೂ ದೇಖಾ । ಬಾಂಧೇ ಆವಾಂಕಾ ನಿರ್ದಳಣೇ ।।೫೦೧।। ನಿಃಶಂಕಪಣೇ ಸಾಚಾರ । ಜ್ಯಾಚೇ ಮನ ಮ್ಹಣೇ ಮೀ ಅಮರ । ತ್ಯಾಚೇ ಕಾಳ ವರ್ಜೀ ಘರ । ಕಾಳ ದುರ್ಧರ ಮನಃಶಂಕಾ ।।೫೦೨।।

ತನ್ನ ಕರ್ಮವು ಸ್ವಾಭಾವಿಕವಾಗಿರುವುದು ಮತ್ತು ಪವಿತ್ರವಾಗಿರುವುದು. ಆದರೆ ಮನಸ್ಸು ಅದಕ್ಕೆ ಸಕಾಮವನ್ನಾಗಿ ಮಾಡುವುದು. ಆದ್ದರಿಂದ ಅನೇಕ ಪ್ರಕಾರದ ದುಃಖಗಳನ್ನು ಭೋಗಿಸಲು ಹಚ್ಚುವುದು. ಇದರಿಂದ ಅನೇಕ ಜನ್ಮಗಳನ್ನು ಎತ್ತುವ ಪ್ರಸಂಗವು ಒದಗುವುದು ।।೪೯೦।। ಮನವು ಇದು ಕರ್ಮದ ಕ್ರಿಯಾಸಂಬಂಧವಾಗಿ ಸಂಕಲ್ಪವನ್ನು ಮಾಡದಿದ್ದರೆ ಆಗ ಅದು ಸುಖದುಃಖದ ಅನೇಕ ಭಾವಗಳನ್ನು ನಿರ್ಮಾಣ ಮಾಡುವುದಿಲ್ಲ ।।೪೯೧।। ದೇಹವು ಇದು ಜಡವಾಗಿರುವುದರಿಂದ ಸುಃಖದುಃಖಗಳನ್ನು ಹೇಗೆ ತಿಳಿಯಬಲ್ಲದು? ಆತ್ಮವಾದರೂ ಸುಖ, ದುಃಖಗಳ ದ್ವಂದ್ವವನ್ನು ತಿಳಿಯಲಾರದು. ಇದರಿಂದ ನಮಗೆ ತೋರುವುದೇನೆಂದರೆ ಸುಖದುಃಖಗಳನ್ನು ಚಕ್ಕಡಿಯಲ್ಲಿ ತುಂಬಿಸಿ ಅವುಗಳನ್ನು ಭೋಗಿಸಲು ಹಚ್ಚುವುದು. ಈ ಎಲ್ಲ ಕಾರ್ಯಗಳು ಮನಸ್ಸಿನ ಸತ್ತೆಯಿಂದ ನಡೆಯುತ್ತಿರುವುವು ।।೪೯೨।। ಈ ಕಾರಣವಾಗಿ ಮನಸ್ಸೇ ಸುಖ ದುಃಖವನ್ನು ಕೊಡುವಂಥದ್ದಾಗಿದೆ ಎಂದು ನಿಶ್ಚಯವಾಗುವುದು. ಇಂತಹ ಈ ಮನಸ್ಸಿನ ಆಧೀನರಾಗಿ ಅನೇಕ ಜನರು ಸುಳ್ಳೇ ಕಲ್ಪನೆಗಳನ್ನು ಮಾಡಿ ಸುಖದುಃಖಗಳನ್ನು ಭೋಗಿಸುತ್ತಿರುವರು ।।೪೯೩।। ಕಾಲವು ಇದು ಸುಖದುಃಖಗಳನ್ನು ಭೋಗಿಸಲು ಹಚ್ಚುವುದು ಎಂದು ಹೇಳಬೇಕೆಂದರೆ ಇದೂ ಕೂಡ ಸಂಭವಿಸುವುದಿಲ್ಲ. ಕಾರಣ ಮನಸ್ಸು ಯಾವ ಸಮಯದಲ್ಲಿ ಸಂಕಲ್ಪವನ್ನು ಮಾಡುವುದೋ, ಆಗ ಮಾತ್ರ ಕಾಲನ ಸತ್ತೆಯು ನಡೆಯುವುದು ।।೪೯೪।। ಆತ್ಮವು ಜನ್ಮಮರಣಗಳಿಂದ ಮುಕ್ತವಾಗಿರುವುದು. ಆದರೆ ''ನನಗೆ ಮರಣವಿದೆ'' ಎಂದು ಮನಸ್ಸಿನಿಂದ ಮನ್ನಿಸಿದಾಗಲೇ ಕಾಲನ ಸತ್ತೆಯು ನಿರ್ಮಾಣವಾಗುವುದು. ಅದು ಪ್ರತಿಕ್ಷಣಕ್ಕೂ ಆಯುಷ್ಯದ ನಾಶವನ್ನು ಮಾಡುತ್ತಿರುವುದು ।।೪೯೫।। ಒಬ್ಬ ಮನುಷ್ಯನು ಹಾಸಿಗೆಯಲ್ಲಿ ಒಂದು ದಬ್ಬಣ ಸೂಜಿಯನ್ನು ಚುಚ್ಚಿದ್ದನು. ರಾತ್ರಿ ಆ ಹಾಸಿಗೆಯಲ್ಲಿ ಮಲಗುತ್ತಲೇ ಅದು ಆತನಿಗೆ ಚುಚ್ಚಿತು. ಆದರೆ ಸರ್ಪವು ಕಚ್ಚಿತು ಎಂಬ ಭಯದಿಂದ ಅವನು ಮರಣನಾದನು ।।೪೯೬।। ನಿಜವಾಗಿ ನೋಡಿದರೆ ಅಲ್ಲಿ ಸರ್ಪವು ಇಲ್ಲವೇ ಇಲ್ಲ. ಅಂದಮೇಲೆ ವಿಷವು ಎಲ್ಲಿಂದ ಏರಬೇಕು? ಆದರೆ ಕೇವಲ ಸಂಶಯದಿಂದಲೇ ಆತನಿಗೆ ಮರಣವು ಒದಗಿತು. ಅದರಂತೆ ಈ ಕಾಲನು ಜನರು ಬೆನ್ನು ಹತ್ತಿರುವನು ।।೪೯೭।। ಇನ್ನೊಬ್ಬ ಮನುಷ್ಯನಿಗೆ ಬೆನ್ನಿಗೆ ನಿಜವಾಗಿಯೂ ಸರ್ಪವು ಕಚ್ಚಿತ್ತು. ಆಗ ಆತನು ತನ್ನ ಮಿತ್ರನಿಗೆ ಬೆನ್ನಿಗೆ ಏನು ನಟ್ಟಿದೆ ನೋಡು ಎಂದನು. ಮಿತ್ರನು ಏನೂ ಆಗಿಲ್ಲ. ಮುಳ್ಳು ನಟ್ಟಿತ್ತು, ಅದನ್ನು ನಾನು ಕಿತ್ತೊಗೆದೆನು ಎಂದನು ।।೪೯೮।। ಹೀಗೆಂದಮೇಲೆ ಆ ಮನುಷ್ಯನಿಗೆ ಸರ್ಪಕಚ್ಚಿರುವ ಅನುಮಾನವು ಹುಟ್ಟಲೇ ಇಲ್ಲ. ಇದರಿಂದ ಆತನಿಗೆ ನಿಜವಾಗಿಯೂ ಸರ್ಪ ಕಚ್ಚಿದ ವಿಷವು ಏರಲಿಲ್ಲ. ಆತನು ತನ್ನ ಉದ್ಯೋಗ ಧಂದೆಯಲ್ಲಿ ನಿರತನಾದನು ।।೪೯೯।। ಕೆಲವು ಸಮಯದ ನಂತರ ಆತನಿಗೆ ಸರ್ಪ ಕಚ್ಚಿರುವುದನ್ನು ಹೇಳಿ ಆತನಿಗೆ ಅದರ ಚಿನ್ಹೆಯನ್ನು ತೋರಿಸಲಾಯಿತು. ಕೂಡಲೇ ಆತನು ಭಯಗ್ರಸ್ಥನಾಗಿ ಮನದಲ್ಲಿ ಸಂಶಯವು ನಿರ್ಮಾಣವಾಗಿ ಕೊನೆಗೆ ಪ್ರಾಣವನ್ನು ಬಿಟ್ಟನು ।।೫೦೦।। ಇದರಂತೆ ನಿರ್ವಿಕಲ್ಪ ಪುರುಷನಿಗೆ ಯಾವ ಸಮಯದಲ್ಲಿ ಸಂಕಲ್ಪದ ಸಂಶಯವು ಬರುವುದೋ, ಆ ಸಮಯದಲ್ಲಿ ಆತನ ನಾಶಕ್ಕಾಗಿ ಕಾಲನು ಸಿದ್ಧನಾಗುವನು ।।೫೦೧।। ಯಾವ ಮನುಷ್ಯನು ''ನಾನು ಅಮರನು'' ಎಂದು ನಿಶ್ಚಯಪೂರ್ವಕವಾಗಿ ತಿಳಿದು ನಿಶಂಕನಾಗಿರುವನೋ, ಆತನ ಮನೆಗೆ ಕಾಲನು ಹೋಗುವುದಿಲ್ಲ. ಮನಸ್ಸಿನ ಅನುಮಾನವೇ ಇದು ದುರ್ಧರವಾದ ಕಾಲವಾಗಿರುವುದು ।।೫೦೨।।

ಜೋ ನಿರ್ವಿಕಲ್ಪ ನಿಜನಿವಾಡೇ । ಕಾಳ ಸರ್ವಥಾ ನ ಯೇ ತ್ಯಾಕಡೇ । ನಶ್ವರ ನಾಹೀ ಮಾ ತಯಾಪುಢೇ । ಕಾಳ ಕೋಣೇಕಡೇ ರಿಘೇಲ ॥೬೦೩॥ ಯಾಪರೀ ಗಾ ಕಾಳ ದೇಖ । ನವ್ಹೇ ಸುಖದುಃಖದಾಯಕ । ಸುಖದುಃಖಾಂಚೇ ಜನಕ । ಮನಚಿ ಏಕ ನಿಶ್ಚಿತ ॥೬೦೪॥ ಮನಃಕಲ್ಪಿತ ಸಂಸಾರ ಜಾಣ । ಮನೇಕಲ್ಪಿಲೇ ಜನ್ಮ ಮರಣ । ಸಂಸಾರಚಕ್ರೀ ಆವರ್ತನ । ಮನಾಸ್ತವ ಜಾಣ ಪುನಃಪುನಃ ॥೬೦೫॥ ಹೇ ಸಾಹೀ ಪ್ರಕಾರ ಜಾಣ । ಮ್ಹಣತೀ ಸುಖದುಃಖಾಂಸೀ ಕಾರಣ । ವಿಚಾರಿತಾ ಹೇ ಅಪ್ರಮಾಣ । ಮನೋಜನ್ಯ ಸುಖದುಃಖೇ ॥೬೦೬॥ ನವಲ ಲಾಘವೀ ಕೈಸೇ ಮನ । ಶುದ್ಧಿ ಉಪಜವೀ ಮೀಪಣ । ಚಿದ್ರೂಪಾ ಲಾವೂನಿ ಜೀವಪಣ । ಸುಖದುಃಖೇ ಜಾಣ ಭೋಗವೀ ॥೬೦೭॥ ಡೋಳೀಂಚಾ ಕಣೂ ಅಲ್ಪ ಏಕ । ತೋ ಶರೀರಾಸೀ ದೇ ಅತಿದುಃಖ । ತೇವೀ ವಾಸನಾಮಾತ್ರೇ ಮನ ದೇಖ । ದಾರುಣ ಸುಖದುಃಖ ಭೋಗವೀ ॥೬೦೮॥ ಮ್ಹಣಾಲ ಯೇಥ ಅವಿದ್ಯಾ ಏಕ । ತೇ ಹೋಯ ಸುಖದುಃಖದಾಯಕ । ಅವಿದ್ಯಾ ಬ್ರಹ್ಮ ಅಸತಾ ದೇಖ । ಮನೇವೀಣ ಸುಖದುಃಖ ಕದಾ ನುಪಜೇ ॥೬೦೯॥ ಅವಿದ್ಯಾ ಬ್ರಹ್ಮ ಅಸತಾ ಪಾಹೀ । ಮನ ಲೀನ ಸುಷುಪ್ತೀಚ್ಯಾ ಠಾಯೀ । ತೇವ್ಹಾ ಸುಖದುಃಖಚಿ ನಾಹೀ । ಭೋಗ ಕೋಣ್ಹೇಹೀ ಕಂಹೀ ದೇಖಿಜೇನಾ ॥೬೧೦॥ ಮನ ದುಶ್ಚಿತ ಜೇವ್ಹಾ ಪಾಹೀ । ತೇವ್ಹಾ ಜೋ ಭೋಗ ಭೋಗಿಜೇ ದೇಹೀ । ತೇ ಸುಖ ದುಃಖ ನ ಪಡೇ ಠಾಯೀ । ಸ್ವಯೇ ಸ್ವದೇಹೀ ದೇಖಿಯೇ ॥೬೧೧॥ ಯಾಲಾಗೀ ಸುಖದುಃಖಾಂಚೇ ಕಾರಣ । ಮನಚಿ ಆಪಣ್ಯಾ ಆಪಣ । ತೇಣ್ಹೇ ಲಾವೂನಿ ಜನ್ಮ ಮರಣ । ಭೋವಂಡೀ ದಾರುಣ ಭವಚಕ್ರೀ ॥೬೧೨॥ ಭವಚಕ್ರೀ ಪ್ರತ್ಯಾವರ್ತನ । ಕೋಣ್ಹೇ ರೀತೀ ಕರವೀ ಮನ । ತೇಚಿ ಅರ್ಥೀಚೇ ನಿರೂಪಣ । ಭಿಕ್ಷು ಆಪಣ್ಯಾ ಆಪಣ ನಿರೂಪೀ ॥೬೧೩॥

ಮನೋ ಗುಣಾನ್ವೈ ಸೃಜತೇ ಬಲೀಯಸ್ತತಶ್ಚ ಕರ್ಮಾಣೀ ವಿಲಕ್ಷಣಾನಿ ।
ಶುಕ್ಲಾನಿ ಕೃಷ್ಣಾನ್ಯಥ ಲೋಹಿತಾನಿ ತೇಭ್ಯಃ ಸವರ್ಣಾಃ ಸೃತಯೋ ಭವಂತಿ ॥೪೪॥

ಅರ್ಥ:- ಮನವು ಅತಿಶಯವಾಗಿ ಬಲಾಢ್ಯವಾಗಿರುವುದು. ಅದು ಸತ್ವಾದಿ ಗುಣವೃತ್ತಿಗಳಿಗೆ ಹುಟ್ಟಿಸುವುದು. ಈ ಣವೃತ್ತಿಯಿಂದ ಸಾತ್ವಿಕ, ರಾಜಸ, ತಾಮಸ ಹೀಗೆ ಮೂರು ಪ್ರಕಾರ ಕರ್ಮಗಳು ಹುಟ್ಟಿಕೊಳ್ಳುವುವು. ಈ ಕರ್ಮಾನುಸಾರವಾಗಿ ದೇವತೆಗಳು, ತಿರ್ಯಕ್, ಮನುಷ್ಯಾದಿ ಪ್ರಾಣಿ ಜಾತಿಗಳು ಉತ್ಪನ್ನವಾಗುವುವು.

ಯಾವನು ಸ್ವತಃ ನಿರ್ವಿಕಲ್ಪನಾಗುವನೋ, ಆತನತ್ತ ಕಾಲನು ನೋಡುವುದೇ ಇಲ್ಲ. ಕಾರಣ ಆತನಲ್ಲಿ ಯಾವ ನಶ್ವರತ್ವವು ಇರುವುದಿಲ್ಲ. ಅಂದಮೇಲೆ ಕಾಲನು ಪ್ರವೇಶವನ್ನು ಎಲ್ಲಿ ಮಾಡಬೇಕು? ॥೬೦೩॥ ಹೀಗೆ ವಿಚಾರವನ್ನು ಮಾಡಲು ಕಾಲನು ಸುಖದುಃಖವನ್ನು ಕೊಡುವವನಲ್ಲ, ಮನಸ್ಸೇ ಸುಖದುಃಖವನ್ನು ಕೊಡುವದ್ದಾಗಿರುವುದು ಎಂದು ಹೀಗೆ ನಿಶ್ಚಯವಾಗುವುದು ॥೬೦೪॥ ಈ ಸಂಸಾರವು ಮನಃಕಲ್ಪಿತವಾಗಿರುವುದು. ಮನಸ್ಸೇ ಜನ್ಮಮರಣದ ಕಲ್ಪನೆಯನ್ನು ಮಾಡಿರುವುದು. ಮನಸ್ಸಿನ ಕಾರಣವಾಗಿಯೇ ಈ ಸಂಸಾರ ಚಕ್ರದಲ್ಲಿ ಪುನಃಪುನಃ ತಿರುಗಬೇಕಾಗಿರುವುದು ॥೬೦೫॥ ಹೀಗೆಲ್ಲ ವಿಚಾರಿಸಿ ನೋಡಿದರೆ ಜನರು, ದೇವತೆಗಳು, ಆತ್ಮವು, ಗ್ರಹಗಳು, ಕರ್ಮ ಮತ್ತು ಕಾಲನು ಈ ಆರು ಸುಖದುಃಖಕ್ಕೆ ಕಾರಣವೆಂದು ಹೇಳುವುದು ಸುಳ್ಳಾಗುವುದು. ಸುಖದುಃಖಗಳು ಇವು ಮನಸ್ಸಿನಿಂದಲೇ ಆಗುತ್ತಿರುವುವು ॥೬೦೬॥ ಈ ಮನಸ್ಸು ಅತಿಶಯವಾಗಿ ವಿಲಕ್ಷಣವಾಗಿರುವುದು, ಚಮತ್ಕಾರವಾಗಿರುವುದು. ಯಾವ ಜ್ಞಾನರೂಪ ಆತ್ಮನಲ್ಲಿ ನಾನು ಎಂಬುವ ಭಾಸವನ್ನು ನಿರ್ಮಾಣಗೊಳಿಸಿ ಅದಕ್ಕೆ ಜೀವತ್ವದ ಅವಸ್ಥೆಯನ್ನು ಕೊಟ್ಟಿರುವುದು ಮತ್ತು ಅದಕ್ಕೆ ಸುಖದುಃಖಗಳನ್ನು ಭೋಗಿಸಲು ಹಚ್ಚಿರುವುದು ॥೬೦೭॥ ಕಣ್ಣಿನಲ್ಲಿ ಅತ್ಯಲ್ಪ ಒಂದು ಕಣವು ಬಿದ್ದರೆ ಅದು ಸಂಪೂರ್ಣ ಶರೀರಕ್ಕೆ ದುಃಖವನ್ನು ಕೊಡುವುದು. ಅದರಂತೆ ವಾಸನೆಯ ಯೋಗದಿಂದ ಮನಸ್ಸು ಇದು ದಾರುಣವಾದ ಸುಖದುಃಖಗಳನ್ನು ಭೋಗಿಸಲು ಹಚ್ಚುತ್ತಿರುವುದು ॥೬೦೮॥ ಅವಿದ್ಯೆಯು ಇದು ಸುಖದುಃಖಗಳನ್ನು ಕೊಡುವುದು ಎಂದು ಹೀಗೆ ಹೇಳಬೇಕೆಂದರೆ ಇದು ಕೂಡ ಯೋಗ್ಯವಾಗಿರುವುದಿಲ್ಲ. ಕಾರಣ ಈ ಯಾವ ಅವಿದ್ಯೆಯು ಬ್ರಹ್ಮಸ್ವರೂಪವಾಗಿರುವುದರಿಂದ ಮನಸ್ಸಿನ ಹೊರತಾಗಿ ಸುಖದುಃಖಗಳು ಎಂದಿಗೂ ಆಗಲು ಶಕ್ಯವಿಲ್ಲ ॥೬೦೯॥ ಅವಿದ್ಯೆ ಮತ್ತು ಬ್ರಹ್ಮ ಇದ್ದರೂ ಕೂಡ ಸುಷುಪ್ತಿಯಲ್ಲಿ ಅಂದರೆ ಗಾಢವಾದ ನಿದ್ರೆಯಲ್ಲಿ ಮನವು ಲೀನವಾಗಿರಲು ಆಗ ಸುಖದುಃಖಗಳು ಯಾರಿಗೂ ತಿಳಿಯುವುದಿಲ್ಲ. ಯಾರಿಗೂ ಯಾವ ಭೋಗವು ಎಂದಿಗೂ ಕಾಣುವುದಿಲ್ಲ ॥೬೧೦॥ ಒಂದುವೇಳೆ ಮನಸ್ಸು ಯಾವುದೇ ಚಿಂತೆಯಲ್ಲಿ ಪೂರ್ಣವಾಗಿ ಮಗ್ನವಾಗಿರಲು ಆ ಸಮಯದಲ್ಲಿ ಶರೀರಕ್ಕೆ ಆಗುವ ಸುಖದುಃಖಾದಿ ಭೋಗಗಳ ಪರಿಣಾಮವು ಆಗುವುದೇ ಇಲ್ಲ. ಈ ಅನುಭವವನ್ನು ತಮ್ಮ ದೇಹದಲ್ಲಿ ತಾವೇ ನೋಡಿಕೊಳ್ಳಬಹುದು ॥೬೧೧॥ ಈ ಎಲ್ಲ ಕಾರಣಗಳಿಂದ ತನ್ನ ಮನಸ್ಸೇ ತನ್ನ ಸುಖದುಃಖದ ಕಾರಣವಾಗಿರುವುದು. ಇದುವೇ ನಮ್ಮ ಹಿಂದೆ ಜನ್ಮಮರಣದ ಪರಂಪರೆಯನ್ನು ಹಚ್ಚಿಕೊಟ್ಟಿರುವುದು ಮತ್ತು ಭಯಂಕರವಾದ ಭವಚಕ್ರದ ತಿರುಗುವಿಕೆಯ ಭೋಗವನ್ನು ಹಚ್ಚಿಕೊಟ್ಟಿರುವುದು ॥೬೧೨॥ ಈ ಯಾವ ಮನಸ್ಸೇ ಭವಚಕ್ರದಲ್ಲಿ ಯಾವ ಪ್ರಕಾರವಾಗಿ ತಿರುಗಿಸುತ್ತಿರುವುದನ್ನು ಭಿಕ್ಷುಕನು ತನ್ನಷ್ಟಕ್ಕೆ ತಾನೇ ಅದರ ವರ್ಣನೆಯನ್ನು ಸ್ವತಃ ಮಾಡುತ್ತಿರುವನು ॥೬೧೩॥

ಮನೇ ಕಲ್ಪೋನಿ ನಿಜಸತ್ತೇ । ಉಪಜವೀ ನಾನಾ ವೃತ್ತೀತೇ । ತ್ಯಾಚಿ ತ್ರಿಗುಣಾ ಹೋತೀ ಯೇಥೇ । ಗುಣವಿಭಾಗಾತೇ ಗುಣವೃತ್ತಿ ॥೬೧೪॥ ಸತ್ತ್ವರಜತಮಾದಿ ಗುಣೇ । ಸುರನರತಿರ್ಯಗಾದಿ ಯೋನೀ । ಮನೇ ತ್ರಿಭುವನ ಉಭವೂನೀ । ಸಂಸಾರಭುವನೀ ಸ್ವಯೇ ನಾಂದೇ ॥೬೧೫॥ ತ್ಯಾ ಮನಾಚಿ ಪ್ರೌಢೀ ಗಾಢೀ । ಕ್ಷಣೇ ರಚೀ ಕ್ಷಣೇ ಮೋಡೀ । ಮನ ಬ್ರಹ್ಮಾದಿಕಾ ಭುಲೀ ಪಾಡೀ । ಇತರ ಬಾಪುಡೀ ತೀ ಕಾಯೀ ॥೬೧೬॥ ಮನಾಚಾ ಬಲಾತ್ಕಾರ ಕೈಸಾ । ನಿರ್ಗುಣೇ ಪಾಡೀ ಗುಣಾಚ್ಯಾ ಫಾಂಸಾ । ಲಾವೂನಿ ಜೀವಪಣಾಚಾ ರಘಾಂಸಾ । ಸಂಸಾರವಳಸಾ ಆವರ್ತೀ ॥೬೧೭॥ ಕೇವಳ ವಿಚಾರಿತಾ ಮನ । ತೇ ಜಡ ಮೂಢ ಅಚೇತನ । ತ್ಯಾಚೇ ಕೇವೀ ಘಡೇ ಸ್ರಜನ । ತೇಚಿ ನಿರೂಪಣ ಸಾಂಗತ ॥೬೧೮॥

ಅನೀಹ ಆತ್ಮಾ ಮನಸಾ ಸಮೀಹತಾ ಹಿರಣ್ಮಯೋ ಮತ್ಸಖ ಉದ್ವಿಚಷ್ಟೇ ।
ಮನಃ ಸ್ವಲಿಂಗಂ ಪರಿಗ್ರಹ್ಯ ಕಾಮಾನ್ ಜಪನ್ನಿಬದ್ಧೋ ಗುಣಸಂಗತೋಽಸೌ ॥೫೫॥

ಅರ್ಥ:- ಮನವೇ ಸರ್ವ ಪ್ರಯತ್ನಗಳನ್ನು ಮಾಡುತ್ತಿರುವುದು. ಇದರ ಜೊತೆಯಲ್ಲಿ ಇದ್ದರೂ ಕೂಡ ಆತ್ಮವು ನಿಷ್ಕ್ರೀಯವಾಗಿರುವುದು. ಅವಿದ್ಯೆಯಿಂದಾಗುವ ಯಾವ ಅಭ್ಯಾಸವು ಆದರ ಯೋಗದಿಂದ ಆತ್ಮದ ಸಂಸಾರವಾಗಿರುವುದು. ಸ್ವಾಭಾವಿಕ ಅಲ್ಲದ ಅದು ಜ್ಞಾನಶಕ್ತಿ ಪ್ರಧಾನವಾಗಿರುವುದು. ನನ್ನ ಜೀವದ ಸನಾತನ ಸಖನಾಗಿರುವುದು. ತನ್ನ ಜ್ಞಾನದಿಂದ ಎಲ್ಲವನ್ನೂ ಕಾಣುವುದು. ಮನಸ್ಸಿನ ಮುಖಾಂತರವಾಗಿ ಅದರ ಅಭಿವ್ಯಕ್ತಿಯಾಗುವುದು. ಆತನು ಮನವನ್ನು ಸ್ವೀಕರಿಸಿ ಅದರ ಮುಖಾಂತರವಾಗಿ ವಿಷಯಗಳ ಭೋಕ್ತಾನಾಗುವನು. ಆಗ ಕರ್ಮದ ಜೊತೆಯಲ್ಲಿ ಆಸಕ್ತಿಯಾದ್ದರಿಂದ ಆತನು ಬಂಧಿಸಲ್ಪಡುವನು.

ಆತ್ಮಾ ಚಿತ್ಸ್ವರೂಪ ಪರಿಪೂರ್ಣ । ನಿಃಸಂಗ ನಿರ್ವಿಕಾರ ನಿರ್ಗುಣ । ತ್ಯಾಸೀ ಸಂಸಾರಬಂಧನ । ಸರ್ವಥಾ ಜಾಣ ಘಡೇನಾ ॥೬೧೯॥ ಜೋ ಸ್ವಪ್ರಕಾಶೇ ಪ್ರಕಾಶಘನ । ನಿಜತೇಜೇ ವಿರಾಜಮಾನ । ಜೋ ಪರಮಾತ್ಮಾ ಪರಿಪೂರ್ಣ । ತ್ಯಾಸೀ ಕ್ರಿಯಾಚರಣ ಕದಾ ನ ಘಡೇ ॥೬೨೦॥ ವಿಚಾರಿತಾ ನಿಜನಿವಾಡೇ । ಮನಾಚೇ ಜಡತ್ವಚಿ ಜೋಡೇ । ತ್ಯಾಸೀಹೀ ಸಂಸಾರ ನ ಘಡೇ । ಭವಬಂಧ ಘಡೇ ತೋ ಐಕಾ ॥೬೨೧॥ ನವಲ ಮನಾಚೇ ವಿಂದಾನ । ಶುದ್ಧೀ ಉಪಜವೀ ಮೀಪಣ । ತೇಚಿ ವಸ್ತೂಸೀ ಜೀವಪಣ । ಸಗುಣತ್ವಾ ಜಾಣ ಸ್ವಯೇ ಆಣೀ ॥೬೨೨॥ ಮನಃಸಂಕಲ್ಪಾಚೇ ಬಳ । ಶುದ್ಧಾಸೀ ಕರೀ ಶಬಳ । ಲಾವೂನಿ ತ್ರಿಗುಣಾಂಚೀ ಮಾಳ । ಭವಬಂಧಜಾಳ ಸ್ವಯೇ ಬಾಂಧೇ ॥೬೨೩॥ ಜೇವೀ ಘಟಾಮಾಜೀಲ ಘಟಜಳ । ಆಕಳೀ ಅಲಿಪ್ತ ಚಂದ್ರಮಂಡಳ । ತೇವೀ ಮನಃಸಂಕಲ್ಪೇ ಕೇವಳ । ಕೀಜೇ ಶಬಳ ಚಿದಾತ್ಮಾ ॥೬೨೪॥

ಯಾವ ಈ ಮನವು ತನ್ನ ಸತ್ತೆಯಿಂದ ಕಲ್ಪನೆಯನ್ನು ಮಾಡಿ ಅನೇಕ ಪ್ರಕಾರಗಳ ವೃತ್ತಿಯನ್ನು ನಿರ್ಮಾಣ ಮಾಡುತ್ತಿರುವುದು. ಈ ವೃತ್ತಿಯು ತ್ರಿಗುಣಾತ್ಮಕವಾಗಿ ಗುಣಗಳ ವಿಭಾಗದಂತೆ ಗುಣವೃತ್ತಿಯಾಗುವುದು ॥೬೧೪॥ ಅದು ಸತ್ವ, ರಜ ತಮ ಗುಣಗಳಿಂದ ದೇವ, ಮನುಷ್ಯ ಮತ್ತು ಪಶುಪಕ್ಷೀ ಇತ್ಯಾದಿ ಯೋನಿಗಳನ್ನು ನಿರ್ಮಿಸಿ ತನ್ನ ಸಾಮರ್ಥ್ಯದಿಂದ ತ್ರಿಭುವನಗಳನ್ನು ರಚಿಸಿ ಸಂಸಾರಭುವನದಲ್ಲಿ ತಾನು ವರ್ತಿಸುತ್ತಿರುವುದು ॥೬೧೫॥ ಈ ಮನಸ್ಸಿನ ಸಾಮರ್ಥ್ಯವು ಅತಿಶಯವಾಗಿ ವಿಲಕ್ಷಣವಾಗಿರುವುದು. ಇದು ಕ್ಷಣದಲ್ಲಿಯೇ ಮನೋರಾಜ್ಯವನ್ನು ನಿರ್ಮಾಣ ಮಾಡುವುದು ಮತ್ತು ಕ್ಷಣದಲ್ಲಿಯೇ ಅದನ್ನು ಮುರಿದುಬಿಡುವುದು. ಈ ಮನವು ಬ್ರಹ್ಮದೇವರಿಗೂ ಕೂಡ ಭುಲಾಯಿಸುವಂತೆ ಮಾಡುವುದು. ಅಂದಮೇಲೆ ಪಾಪ, ಇತರರ ಯಾವ ಕಥೆ? ॥೬೧೬॥ ಮನಸ್ಸಿನ ಪ್ರಭಾವವು ಎಷ್ಟಿದೆ ಎಂಬುವುದು ನೋಡಿರಿ, ಇದು ನಿರ್ಗುಣಕ್ಕೆ ಗುಣದಲ್ಲಿನ ಬಲೆಯಲ್ಲಿ ಸ್ಕಿಕಿಕೊಳ್ಳುವಂತೆ ಮಾಡಿರುವುದು. ಅದಕ್ಕೆ ಜೀವತ್ವದ ಗೊಂದಲವನ್ನು ಹಚ್ಚಿ ಸಂಸಾರದ ತಿರುಗಣೆಯಲ್ಲಿ ತಿರುಗುವಂತೆ ಮಾಡಿರುವುದು ॥೬೧೭॥ ನಿಶ್ಚಯವಾಗಿ ವಿಚಾರಿಸಲು ಈ ಯಾವ ಮನವು ಜಡ, ಮೂಢ, ಅಚೇತನವಾಗಿರುವುದು. ಇದರ ಉತ್ಪತ್ತಿಯು ಹೇಗಾಗುವುದೆಂಬ ಇದರ ನಿರೂಪಣೆಯನ್ನು ಈಗ ಭಿಕ್ಷು ಮಾಡುತ್ತಿರುವನು ॥೬೧೮॥

ಆತ್ಮವು ಇದು ಜ್ಞಾನಸ್ವರೂಪ, ಪರಿಪೂರ್ಣ, ನಿಃಸಂಗ, ನಿರ್ವಿಕಾರ ಮತ್ತು ನಿರ್ಗುಣವಾಗಿರುವುದು. ಇದಕ್ಕೆ ಸಂಸಾರಬಂಧನವು ಎಂದಿಗೂ ಸಂಭವಿಸುವುದಿಲ್ಲ ॥೬೧೯॥ ಆತ್ಮವು ಸ್ವಯಂ ಪ್ರಕಾಶ, ಪ್ರಕಾಶಘನ, ತನ್ನ ತೇಜದಿಂದಲೇ ದೇದಿಪ್ಯಮಾನ, ಪರಿಪೂರ್ಣ ಪರಮಾತ್ಮನಾಗಿರುವುದರಿಂದ ಆದರ ಕಾರ್ಯವು ಎಂದಿಗೂ ಸಂಭವಿಸುವುದಿಲ್ಲ ॥೬೨೦॥ ನಾವು ವಿಚಾರವನ್ನು ಮಾಡಿ ನೋಡಿದರೆ ಮನವು ಜಡವಾಗಿರುವುದು ತೋರುವುದು. ಅಂದಮೇಲೆ ಅದಕ್ಕೆ ಸಂಸಾರವು ಸಂಭವಿಸಲಾರದು. ಈಗ ಬಂಧನವು ಯಾರಿಗೆ? ಇದನ್ನು ಈಗ ಕೇಳು ॥೬೨೧॥ ಮನಸ್ಸಿನ ಲೀಲೆಯು ಇದು ನಿಜವಾಗಿಯೂ ಅಗಾಧವಾಗಿರುವುದು. ಇದು ಆತ್ಮಕ್ಕೆ ನಾನು ಎನ್ನುವುದನ್ನು ನಿರ್ಮಾಣ ಮಾಡುತ್ತದೆ ಇದರಿಂದ ಆದಕ್ಕೆ ಜೀವತ್ವಕ್ಕೆ ತರುತ್ತದೆ. ಇದು ತಾನು ಸ್ವತಃವೇ ಯಾವ ಶುದ್ಧ ಬ್ರಹ್ಮನಿಗೆ ಸಗುಣ ರೂಪವನ್ನು ಕೊಡುತ್ತದೆ ॥೬೨೨॥ ಮನವು ತನ್ನ ಸಂಕಲ್ಪದ ಬಲದಿಂದ ಪರಬ್ರಹ್ಮನಿಗೆ ಉಪಾಧಿಯುಕ್ತನನ್ನಾಗಿ ಮಾಡುವುದು. ಅದರ ಹಿಂದೆ ತ್ರಿಗುಣಗಳ ಮಾಲಿಕೆಯನ್ನು ಜೋಡಿಸಿ ಸ್ವತಃ ತಾನೇ ಅದಕ್ಕೆ ಸಂಸಾರದ ಬಲೆಯಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿರುವುದು ॥೬೨೩॥ ಮಡಿಕೆಯಲ್ಲಿನ ನೀರು ಯಾವ ಪ್ರಕಾರವಾಗಿ ಅಲಿಪ್ತವಾಗಿರುವ ಚಂದ್ರನ ಬಿಂಬವನ್ನು ಧರಿಸುವುದೋ ಅದೇ ಪ್ರಕಾರವಾಗಿ ನಿರುಪಾಧಿಕ ಬ್ರಹ್ಮನಿಗೆ ಮನ ಸಂಕಲ್ಪವು ಉಪಾಧಿಯುಕ್ತನನ್ನಾಗಿ ಮಾಡುವುದು ॥೬೨೪॥

ಘಟೀಚೇ ಹಾಲತಾ ಜೀವನ । ಚಂದ್ರಮಾ ಕರೀ ಕಂಪಾಯಮಾನ । ತೇವೀ ಶುದ್ಧಾಸೀ ಜನ್ಮ ಮರಣ । ಮನೋಜನ್ಯ ಸುಖದುಃಖೇ ॥೬೨೫॥ ಆತ್ಮಾ ಸ್ವಪ್ರಕಾಶ ಚಿತ್ಸ್ವರೂಪ । ಮನ ಜಡ ಕಲ್ಪನಾರೂಪ । ತೇ ಮಾನೂನಿ ಆಪುಲೇ ಸ್ವರೂಪ । ತ್ಯಾಚೇ ಪುಣ್ಯಪಾಪ ಸ್ವಯೇ ಭೋಗೀ ॥೬೨೬॥ ಜೀವಾಚಾ ಆಪ್ತ ಆವಶ್ಯಕ । ಸುಹೃದ ಸಖಾ ಪರಮಾತ್ಮಾ ಏಕ । ತೋ ಮನಾಜೀವಾಚಾ ನಿಯಾಮಕ । ದ್ರಷ್ಟಾ ದೇಖ ಸಾಕ್ಷಿತ್ವೇ ॥೬೨೭॥ ಅವಿದ್ಯಾಪ್ರತಿಬಿಂಬೇ ನೇಟಕಾ । ಜೀವ ಜೋ ಕಾ ಮಾಝಾ ಸಖಾ । ತೋ ಮನೋಭ್ರಮೇ ಭ್ರಮೋನಿ ದೇಖಾ । ಭೋಗೀ ಸುಖದುಃಖಾ ಮನೋ ಜನ್ಯ ॥೬೨೮॥ ಮನಾಚೀ ಏಕಾತ್ಮತಾ ಪರಮ । ಜೀವಾಸೀ ಪಡಲಾ ಥೋರ ಭ್ರಮ । ಆಪಣ ಅಸತಾಂಹೀ ನಿಷ್ಕರ್ಮ । ಕರ್ಮಾಕರ್ಮ ಸ್ವಯೇ ಭೋಗೀ ॥೬೨೯॥ ಸೂಳೀ ಜೀವ ಮನಾಚಾ ನಿಯಂತಾ । ತೋಚಿ ಮನಾಚ್ಯಾ ಏಕಾತ್ಮತಾ । ಮನಾಚಿಯಾ ಸುಖದುಃಖವ್ಯಥಾ । ಆಪುಲೇ ಮಾಥಾ ನಾಥಿಲ್ಯಾ ಸೋಶೀ ॥೬೩೦॥ ಜೇವೀ ಅತಿಆಪ್ತತಾ ಪ್ರಧಾನ । ರಾಯಾಸೀ ಲಾವೀ ದೃಢಬಂಧನ । ಮಗ ರಾಜಾ ತೋ ಹೋಯ ದೀನ । ತೋ ಭೋಗವೀ ತೇ ಆಪಣ ಸುಖದುಃಖ ಭೋಗೀ ॥೬೩೧॥ ತೇ ದಶಾ ಝಾಲೀ ಜೀವಾಸೀ । ಮನೇ ಸಂಸಾರೀ ಕೇಲೇ ತಯಾಸೀ । ಮಗ ನಾನಾ ಜನ್ಮ ಮರಣೇ ಸೋಶೀ । ಅಹರ್ನಿಶೀ ಸುಖದುಃಖೇ ॥೬೩೨॥ ತ್ಯಾ ಮನಾಸೀ ನಿಗ್ರಹೋ ನ ಕರಿತಾ । ಜೀವಾಚಿ ನ ಚುಕೇ ವ್ಯಥಾ । ಮನಾಚೇನಿ ಛಂದೇ ನಾಚತಾ । ಸಾಧನೇ ಸರ್ವಥಾ ವ್ಯರ್ಥ ಹೋತೀ ॥೬೩೩॥

ದಾನಂ ಸ್ವಧರ್ಮೋ ನಿಯಮೋ ಯಮಶ್ಚ ಶ್ರುತಂ ಚ ಕರ್ಮಾಣಿ ಚ ಸದ್‌ವ್ರತಾನಿ ।
ಸರ್ವೇ ಮನೋನಿಗ್ರಹ ಲಕ್ಷಣಾಂತಾಃ ಪರೋ ಹಿ ಯೋಗೋ ಮನಸಃ ಸಮಾಧಿಃ ॥೪೬॥

ಅರ್ಥ:- ದಾನ, ಸ್ವಧರ್ಮ ಪಾಲನೆ, ನಿಯಮ, ಯಮ, ವೇದಾಧ್ಯಯನ, ಸತ್ಕರ್ಮ ಮತ್ತು ಬ್ರಹ್ಮಚರ್ಯಾದಿ ಶ್ರೇಷ್ಠವ್ರತ, ವು ಎಲ್ಲದರ ಅಂತಿಮ ಫಲವಾಗಿರುವುದು. ಆದಕ್ಕಾಗಿ ಮನಸ್ಸನ್ನು ಏಕಾಗ್ರಗೊಳಿಸಬೇಕು ಮತ್ತು ಪ್ರಭು ಚರಣಗಳಲ್ಲಿ ಅರ್ಪಿಸಬೇಕು.

ನ ಲಕ್ಷಿತಾ ಮನೋನಿಯಮನ । ಸರ್ವಸ್ವಹೀ ದಿಧಲ್ಯಾ ದಾನ । ಏಕ ಮೀ ದಾತಾ ಹೋಯ ಅಭಿಮಾನ । ತೇಣೇ ದಾನೇ ಮನ ದಾಟುಗೇ ಹೋಯ ॥೬೩೪॥ ಚುಕೋನಿ ಮನೋನಿಗ್ರಹಾಚೇ ವರ್ಮ । ಆಚರತಾ ವರ್ಣಾಶ್ರಮಧರ್ಮ । ತೇಣೇ ಉಲ್ಹಾಸೇ ಮನೋಧರ್ಮ । ಮಾಝೇ ಸ್ವಕರ್ಮ ಅತಿಶ್ರೇಷ್ಠ ॥೬೩೫॥

ಆ ಮಡಿಕೆಯಲ್ಲಿನ ಜಲವು ಅಲುಗಾಡಲು ಅದು ಚಂದ್ರಬಿಂಬವನ್ನು ಕಂಪಿಸುವುದು. ಅದರಂತೆ ಮನಸ್ಸಿನಿಂದಲೇ ಶುದ್ಧ ಬ್ರಹ್ಮಕ್ಕೆ ಜನ್ಮ ಮರಣಗಳು ಮತ್ತು ಸುಖದುಃಖಗಳು ನಿರ್ಮಾಣವಾದಂತೆ ಕಾಣುವುದು ॥೬೨೫॥ ಆತ್ಮವು ಇದು ಸ್ವಯಂ ಪ್ರಕಾಶಮಾನವಾಗಿರುವುದು ಮತ್ತು ಜ್ಞಾನಸ್ವರೂಪವಾಗಿರುವುದು. ಮನಸ್ಸು ಇದು ಜಡವಾಗಿದ್ದು ಕಲ್ಪನಾರೂಪವಾಗಿರುವುದು. ಆದರೆ ಇದೇ ನನ್ನ ಸ್ವರೂಪವೆಂದು ತಿಳಿದು ಅದರ ಪಾಪಪುಣ್ಯಗಳನ್ನು ಮತ್ತು ಸುಖದುಃಖಗಳನ್ನು ಈ ಜೀವಾತ್ಮನು ತಾನು ಸ್ವತಃ ಭೋಗಿಸುತ್ತಿರುವನು ॥೬೨೬॥ ಜೀವಾತ್ಮದ ಆಪ್ತ, ಮಿತ್ರ, ಬಂಧು, ಸುಹೃದ ಈ ಸರ್ವರೂ ಪರಮಾತ್ಮರಾಗಿರುವರು. ಆತನು ಮನದ ಮತ್ತು ಜೀವದ ನಿಯಂತ್ರಣವನ್ನು ಮಾಡುತ್ತಿರುವನು. ಆತನು ಸಾಕ್ಷಿತ್ವದಿಂದ ದ್ರಷ್ಟಾನಾಗಿರುವನು ॥೬೨೭॥ ಅವಿದ್ಯೆಯಲ್ಲಿ ಪ್ರತಿಬಿಂಬನಾಗುವ ಜೀವಾತ್ಮನು ನನ್ನ ಮಿತ್ರನಾಗಿರುವನು. ಆತನು ಮನದ ಭ್ರಮೆಯಿಂದ ಭ್ರಮಿಷ್ಟನಾಗಿ ಮನಸ್ಸಿನಿಂದಾಗುವ ಸುಖದುಃಖಗಳನ್ನು ತಾನು ಭೋಗಿಸುತ್ತಿರುವನು ॥೬೨೮॥ ಮನಸ್ಸಿನ ಮತ್ತು ಜೀವದ ಈ ತಾದಾತ್ಮ್ಯತೆಯು ವಿಲಕ್ಷಣವಾಗಿರುವುದು. ಇದರಿಂದಲೇ ಜೀವನು ಭ್ರಮದಲ್ಲಿ ಬೀಳುವನು. ತಾನು ಸ್ವತಃ ನಿಷ್ಕಾಮನಾಗಿದ್ದರೂ ಕೂಡ ಕರ್ಮ ಅಕರ್ಮಗಳನ್ನೆಲ್ಲ ತಾನೇ ಭೋಗಿಸುತ್ತಿರುವನು ॥೬೨೯॥ ವಾಸ್ತವಿಕವಾಗಿ ನೋಡಲು ಯಾವ ಈ ಜೀವನು ಮನಸ್ಸಿನ ಮೇಲಾಧಿಕಾರಿಯಾಗಿರುವನು. ಹೀಗಿದ್ದರೂ ತದ್ವಿರುದ್ಧವಾಗಿ ಆತನೇ ಮನಸ್ಸಿನಲ್ಲಿ ಏಕರೂಪವಾಗಿ ಮನಸ್ಸಿನ ಸುಖದುಃಖದ ವ್ಯಾಧಿಯನ್ನು ತನ್ನ ತಲೆಯಮೇಲೆ ಹೊತ್ತುಕೊಂಡು ಸಹಿಸುತ್ತಿರುವನು ॥೬೩೦॥ ಅತ್ಯಂತ ಪ್ರಿಯನಾಗಿರುವ ಒಬ್ಬ ಮಂತ್ರಿಯು ರಾಜನನ್ನು ತನ್ನ ಅಂಕಿತನನ್ನಾಗಿ ಮಾಡಿಕೊಳ್ಳಲು ಆಗ ಆ ರಾಜನು ಮಂತ್ರಿಯಿಂದ ಆಗತಕ್ಕ ಸುಖದುಃಖಗಳನ್ನು ಯಾವ ಪ್ರಕಾರವಾಗಿ ಭೋಗಿಸುತ್ತಿರುವನೋ ॥೬೩೧॥ ಅದೇ ಪ್ರಕಾರವಾಗಿ ಈ ಜೀವದ ಸ್ಥಿತಿಯಾಗಿರುವುದು. ಜೀವಕ್ಕೆ ಮನಸ್ಸೇ ಸಂಸಾರಿಯನ್ನಾಗಿ ಮಾಡಿರುವುದು. ಇದರಿಂದಲೇ ಜೀವವು ಅನೇಕ ಜನ್ಮ ಮರಣಗಳನ್ನು ಮತ್ತು ಭಿನ್ನಭಿನ್ನವಾದ ಸುಖದುಃಖಗಳನ್ನು ಅಹೋರಾತ್ರಿ ಭೋಗಿಸುತ್ತಿರುವುದು ॥೬೩೨॥ ಆದ್ದರಿಂದ ಯಾವ ಈ ಮನಸ್ಸನ್ನು ನಿಗ್ರಹ ಮಾಡದಿದ್ದರೆ ಜೀವದ ದುಃಖವು ದೂರಾಗಲು ಸಾಧ್ಯವಿಲ್ಲ. ಮನಸ್ಸಿನ ಛಂದದಂತೆ ಕುಣಿಯುತ್ತಿದ್ದರೆ ಸರ್ವ ಸಾಧನೆಗಳು ವ್ಯರ್ಥವಾಗುವುವು ॥೬೩೩॥

ಮನಸ್ಸಿನ ನಿಗ್ರಹವನ್ನು ಮಾಡದೇ ಸರ್ವಸ್ವವನ್ನು ದಾನಮಾಡಿದರೆ ನಾನೇ ದಾತಾ, ದಾನೀ ಎಂಬ ಅಭಿಮಾನವು ನಿರ್ಮಾಣವಾಗುವುದು. ಈ ದಾನದಿಂದ ಮನಸ್ಸು ಗರ್ವದಿಂದ ಉಬ್ಬಿಕೊಂಡು ಉನ್ಮತ್ತವಾಗುವುದು ॥೬೩೪॥ ಅಥವಾ ಮನೋನಿಗ್ರಹದ ತತ್ವವನ್ನು ತಿಳಿಯದೇ ಯಾರು ವರ್ಣಾಶ್ರಮ ಧರ್ಮದ ಆಚರಣೆಯನ್ನು ಮಾಡುವರೋ, ಅವರಿಗೆ ನನ್ನ ಕರ್ಮ ಮಾತ್ರ ಅತಿಶಯ ಶ್ರೇಷ್ಠವಾಗಿರುವುದು ಎಂದು ಅನಿಸುವುದು ॥೬೩೫॥

ಮೀಚಿ ಏಕ ತಿಹೀ ಲೋಕೀ । ಸ್ವಾಚಾರನಿಷ್ಠ ಸ್ವಯಂಪಾಕೀ । ಯಾಪರೀ ಸ್ವಧರ್ಮಾದಿಕೀ । ಮನ ಹೋಯ ಅಧಿಕೀ ಚಾವಿರೇ ॥೬೩೬॥ ಮನೋನಿಯಮನೀ ನಾಹೀ ಬುದ್ಧೀ । ತೈ ಯಮನಿಯಮ ತೇ ಉಪಾಧೀ । ಮೀ ಏಕ ಸಾಧಕ ತ್ರಿಶುದ್ಧೀ । ಹೇಚಿ ಪ್ರತಿಪಾದೀ ಮನೋಧರ್ಮ ॥೬೩೭॥ ಕರಿತಾ ವೇದಶಾಸ್ತ್ರಶ್ರವಣ । ಗರ್ವಾಚೇ ಭರತೇ ಗಹನ । ಪಾಂಡಿತ್ಯೀ ಅತಿಅಭಿಮಾನ । ಮನೋನಿಯಮನ ತೇಥೇ ಕೈಚೇ ॥೬೩೮॥ ಕರೂ ಜಾತಾ ನಿಜಕರ್ಮ । ಕರ್ಮಕ್ರಿಯಾ ಅತಿದುರ್ಗಮ । ಕರ್ಮಠತೇಚಾ ಚಢೇ ಭ್ರಮ । ಮನೋನಿಯಮನ ಘಡೇ ಕೇವೀ ॥೬೩೯॥ ಕರ್ಮ ಕೇವಳ ದೇಹಾಚೇ ಮಾಥಾ । ಆತ್ಮಾ ದೇಹೀ ಅಸೋನಿ ವಿದೇಹತಾ । ತ್ಯಾಸೀ ಕರ್ಮಿ ಕರ್ಮಬದ್ಧತಾ । ಕರ್ಮಠ ಮೂರ್ಖತಾ ಮಾನಿತೀ ॥೬೪೦॥ ಅನಂತವ್ರತೇ ಝಾಲೇ ವ್ರತೀ । ತೇಣೇ ಧನಧಾನ್ಯ ವಾಂಛಿತೀ । ಮನೋನಿಗ್ರಹೋ ನಾಹೀ ಚಿತ್ತೀ । ಸಹ್ಯತೇ ಜಾತೀ ಸುನಾಟ ॥೬೪೧॥ ವ್ರತ ದಾನ ಸ್ವಧರ್ಮ ಸಕಳ । ಯಾಂಸೀ ಮನೋ ನಿಗ್ರಹೋ ಮುಖ್ಯ ಫಳ । ತೇಣೇವೀಣ ಅವಘೀ ವಿಕಳ । ಸಾಧನೇ ನಿಷ್ಫಳ ಸಾಧಕಾ ॥೬೪೨॥ ದಾನಾದಿಕ ಸಪ್ತ ಪದಾರ್ಥ । ಹೇ ಜ್ಞಾನಾಚೇ ಅಂಗಭೂತ । ತೀ ಸಾಧನೇ ಸಮಸ್ತ । ನಿಷ್ಫಳ ಯೇಥ ಕೇವೀ ಮ್ಹಣಾ ॥೬೪೩॥ ದಾನಾದಿಕೇ ಜೇ ಜೇ ಯೇಥೇ । ಇಹಾಮುತ್ರ ಫಳ ಯೇ ತ್ಯಾಂತೇ । ತೇ ಫಳಚಿ ನಿಷ್ಫಳ ಯೇಥೇ । ಜನ್ಮ ಮರಣಾಂತೇ ವಾಢವೀ ॥೬೪೪॥ ಯೇಥ ಸಾಧಕ ಹೋಯ ಸಜ್ಞಾನ । ಫಳಾಶಾ ನಿಃಶೇಷ ತ್ಯಾಗೂನ । ದಾನಾದಿ ಸ್ವಧರ್ಮಾಚರಣ । ಚಿತ್ತಶುದ್ಧೀಸೀ ಜಾಣ ಉಪಯೋಗೀ ॥೬೪೫॥ ಮಾಝೀ ವ್ಹಾವೀ ಚಿತ್ತಶುದ್ಧೀ । ಐಶೀ ಉಪಜಾವಯಾ ಬುದ್ಧೀ । ಭಗವತ್ಕೃಪಾ ಪಾಹಿಜೇ ಆಧೀ । ತೈ ಸಾಧನೇ ಸಿದ್ಧೀ ಪಾವತೀ ॥೬೪೬॥ ಸಾಧನೀ ಮಾಝೀ ಮುಖ್ಯ ಭಕ್ತೀ । ತ್ಯಾಂತ ವಿಶೇಷೇ ನಾಮಕೀರ್ತೀ । ನಾಮೇ ಚಿತ್ತಶುದ್ಧಿ ಚಿತ್ತೀ । ಸ್ವರೂಪಸ್ಥಿತೀ ಸಾಧಕಾ ॥೬೪೭॥ ನಾಮಾಪರತೇ ಸಾಧನ । ಸರ್ವಥಾ ನಾಹೀ ಆನ । ನಾಮೇ ಭವಬಂಧಚ್ಛೇದನ । ಸತ್ಯ ಜಾಣ ಉದ್ಧವಾ ॥೬೪೮॥ ಸ್ವರೂಪಸ್ಥಿತ ನಿಶ್ಚಳ ಮನ । ಜೇಥ ಲಾಜೋನಿ ಜಾಯ ಸಾಧನ । ತೇಥ ದಾನಾದಿಕಾಂಚೇ ಪ್ರಯೋಜನ । ಸಹಜಚಿ ಜಾಣ ಖುಂಟಲೇ ॥೬೪೯॥

ಸಮಾಹಿತಂ ಯಸ್ಯಮನಃ ಪ್ರಶಾಂತಂ ದಾನಾಧಿಭಿಃ ಕಿಂ ವದ ತಸ್ಯ ಕೃತ್ಯಮ್ ।

ಸರ್ವ ತ್ರಿಭುವನದಲ್ಲಿ ನಾನೊಬ್ಬನೇ ಆಚಾರ ಸಂಪನ್ನನಾಗಿರುವೆ. ನಾನು ಸ್ವಾವಲಂಬನೆಯಿಂದ ಅನ್ನವನ್ನು ಪಾಕಮಾಡಿ ಭುಂಜಿಸುವೆನು. ಹೀಗೆ ಸ್ವಧರ್ಮಾದಿ ಆಚರಣೆಯಿಂದ ಮನವು ಹೆಚ್ಚಾಗಿಯೇ ಅಭಿಮಾನಿಯಾಗುವುದು ॥೬೩೬॥ ಮನಸ್ಸನ್ನು ನಿಗ್ರಹ ಮಾಡುವ ಬುದ್ಧಿಯು ಇಲ್ಲವಾದರೆ ಯಮ-ನಿಯಮಗಳೂ ಕೂಡ ಒಂದು ಉಪಾಧಿಯೇ ಆಗುವುವು. ಕಾರಣ ಇದರಿಂದ ನಾನೊಬ್ಬನೇ ಸಾಧಕನು ಎಂದು ಆತನ ಮನಸ್ಸು ಹೇಳುತ್ತಿರುತ್ತದೆ ॥೬೩೭॥ ವೇದಶಾಸ್ತ್ರಗಳ ಶ್ರವಣ ಮಾಡಿದರೂ ಗರ್ವಕ್ಕೆ ಅತಿಶಯವಾಗಿ ಪೂರವು ಬರುವುದು. ಪಾಂಡಿತ್ಯದಲ್ಲಿ ವಿಶೇಷ ಅಭಿಮಾನವು ನಿರ್ಮಾಣವಾಗುತ್ತಿರುವುದು. ಹೀಗಿರಲು ಅಲ್ಲಿ ಮನಸ್ಸಿನ ನಿಗ್ರಹ ಹೇಗಾಗಬೇಕು? ॥೬೩೮॥ ತಮ್ಮ ಕರ್ಮಗಳನ್ನು ಮಾಡಲು ಹೊರಟರೆ ಕರ್ಮಕ್ರಿಯೆಗಳು ಅತ್ಯಂತ ಕಠಿಣವಾಗಿರುವುವು. ಆ ಕರ್ಮಠತನದ ಮಹಾಭ್ರಮೆಯು ಬೆಳೆಯುತ್ತಿರುವುದು. ಅಲ್ಲಿ ಮನಸ್ಸಿನ ನಿಗ್ರಹವನ್ನು ಹೇಗೆ ಮಾಡಬೇಕು? ॥೬೩೯॥ ಕರ್ಮವು ಇದು ಕೇವಲ ದೇಹದಲ್ಲಿರುವುದು. ಆತ್ಮವು ದೇಹದಲ್ಲಿದ್ದರೂ ಕೂಡ ವಿದೇಹಸ್ಥಿತಿಯಲ್ಲಿರುವುದು. ಅದಕ್ಕೆ ಕರ್ಮಗಳಿಂದ ಕರ್ಮಬದ್ಧತೆಯು ಪ್ರಾಪ್ತವಾಗುವುದೆಂದು ಕರ್ಮಠ ಜನರು ಮೂರ್ಖತನದಿಂದ ತಿಳಿದಿರುವರು ॥೬೪೦॥ ಅನೇಕ ಪ್ರಕಾರದ ವ್ರತಗಳನ್ನು ನೇಮದಿಂದ ಮಾಡಿದರೂ ಕೂಡ ಆ ವ್ರತಾಚರಣೆಯ ಜನರು ಧನಧಾನ್ಯಾದಿ ಫಲದ ಅಪೇಕ್ಷೆಯನ್ನು ಮಾಡುತ್ತಿರುವರು. ಅವರ ಮನಸ್ಸಿನ ನಿಗ್ರಹವಾಗಿರುವುದಿಲ್ಲ. ಆದ್ದರಿಂದ ಅವರ ಈ ವ್ರತಗಳು ವ್ಯರ್ಥವಾಗುವುವು ॥೬೪೧॥ ವ್ರತ, ದಾನ, ಸ್ವಧರ್ಮ ಇವುಗಳ ಮುಖ್ಯ ಫಲವೆಂದರೆ ಮನಸ್ಸನ್ನು ಜಯಿಸುವುದಾಗಿದೆ. ಇದರ ಹೊರತಾದ ಸರ್ವ ಸಾಧನೆಗಳು ದುರ್ಬಲ ಮತ್ತು ನಿಷ್ಫಲವಾಗಿರುವುವು ॥೬೪೨॥ ದಾನಾದಿ ಏಳು ಸಾಧನೆಗಳು ಇವು ಜ್ಞಾನದ ಅಂಗಭೂತಗಳಾಗಿರುವುವು. ಈ ಎಲ್ಲ ಸಾಧನೆಗಳು ನಿಷ್ಫಲವೆಂದು ಹೇಗೆ ಹೇಳಬೇಕು? ॥೬೪೩॥ ಇಲ್ಲಿ ದಾನಾದಿ ಯಾವ ಯಾವ ಸಾಧನೆಗಳಿರುವುವೋ, ಅವು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಫಲಗಳನ್ನು ಕೊಡುವುವು. ಆದರೆ ಇದರಿಂದ ಜನ್ಮಮರಣಗಳು ಬೆಳೆಯುತ್ತಿರುವುದರಿಂದ ಈ ಫಲಗಳು ನಿಷ್ಫಲವಾಗುವುವು ॥೬೪೪॥ ಸಾಧಕನು ಜ್ಞಾನಸಂಪನ್ನನಾಗಿದ್ದರೆ ಆತನು ಫಲದ ಆಶೆಯನ್ನು ಬಿಟ್ಟುಕೊಟ್ಟು ದಾನಾದಿಕ ಸ್ವಧರ್ಮದ ಆಚರಣೆಯನ್ನು ಮಾಡುವನು. ಇದರಿಂದ ಆತನ ಚಿತ್ತಶುದ್ಧಿಗೆ ಉಪಯೋಗವಾಗುವುದು ॥೬೪೫॥ ಆದರೆ ನನ್ನ ಚಿತ್ತವು ಶುದ್ಧವಾಗಬೇಕೆಂಬ ಬುದ್ಧಿಯು ಹುಟ್ಟಬೇಕಾದರೆ ಅದಕ್ಕೆ ಭಗವಂತನ ಕೃಪೆಯಾಗಬೇಕಾಗುವುದು. ಆಗ ಮಾತ್ರ ಆ ಯಾವ ಸಾಧನೆಗಳು ಸಿದ್ಧಿಯಾಗುವುವು ॥೬೪೬॥ ಸರ್ವ ಪ್ರಕಾರಗಳ ಸಾಧನೆಗಳಲ್ಲಿ ನನ್ನ ಭಕ್ತಿಯು ಇದು ಮುಖ್ಯವಾಗಿರುವುದು. ಅದರಲ್ಲಿಯೂ ಕೂಡ ನಾಮದ ಕೀರ್ತಿಯು ವಿಶೇಷವಾಗಿರುವುದು. ನಾಮದಿಂದ ಚಿತ್ತಶುದ್ಧಿಯಾಗುವುದು ಮತ್ತು ಸಾಧಕನಿಗೆ ಸ್ವರೂಪಸ್ಥಿತಿಯು ಪ್ರಾಪ್ತವಾಗುವುದು ॥೬೪೭॥ ನಾಮಕ್ಕಿಂತಲೂ ಶ್ರೇಷ್ಠವಾದ ಸಾಧನೆಯು ಇನ್ನೊಂದು ಇರುವುದಿಲ್ಲ. ಹೇ ಉದ್ಧವಾ, ನಾಮದಿಂದ ಸಂಸಾರದ ಬಿಡುಗಡೆಯಾಗುವುದು ಇದನ್ನು ಲಕ್ಷದಲ್ಲಿಡು ॥೬೪೮॥ ಸ್ವಸ್ವರೂಪದಲ್ಲಿ ಮನವು ನಿಶ್ಚಲವಾಗಲು ಆಗ ಸರ್ವ ಸಾಧನೆಗಳು ನಾಚಿಕೊಳ್ಳುವುವು. ಆಗ ಅಲ್ಲಿ ದಾನಾದಿ ಸರ್ವ ಸಾಧನೆಗಳ ಪ್ರಯೋಜನವು ಸಹಜವಾಗಿ ಕುಂಠಿತವಾಗುವುದು ॥೬೪೯॥

ಅಸಂಯತಂ ಯಸ್ಯ ಮನೋ ವಿನಶ್ಯೇದ್ಧ್ಯಾನಾದಿಭಿಶ್ಚೇದಪರಂ ಕಿಮೇಭಿಃ ॥೯೭॥

ಅರ್ಥ:- ಯಾರ ಮನವು ಶಾಂತವಾಗಿದ್ದು ಚಿತ್ತವು ಸಮಾಹಿತವಾಗಿರುವುದೋ, ಆತನಿಗೆ ದಾನ ಮತ್ತು ಕರ್ಮಗಳ ಫಲವು ಪ್ರಾಪ್ತವಾಗುವುದು. ಆತನಿಗೆ ಈಗ ಪುನಃ ಪ್ರಾಪ್ತಿ ಮಾಡಿಕೊಳ್ಳುವುದೇನೂ ಉಳಿಯುವುದಿಲ್ಲ. ಆದರೆ ಯಾರ ಮನವು ಚಂಚಲ ಹಾಗೂ ಆಲಸ್ಯಭರಿತವಾಗಿರುವುದೋ, ಆತನಿಗೆ ದಾನಾದಿಕ ಶುಭಕರ್ಮಗಳಿಂದ ಯಾವ ಲಾಭವೂ ಆಗುವುದಿಲ್ಲ.

ಯೇಥ ಜ್ಯಾ ಪುರಷಾಚೇ ಮನ । ಠಾಕೀ ಆಪುಲೇ ಜನ್ಮಸ್ಥಾನ । ತ್ಯಾಸೀ ದಾನಾದಿಕಾಂಚೇ ಕೋಣ । ಪ್ರಯೋಜನ ಸಾಧನೀ ॥೬೫೦॥ ಪೂರ್ಣತೃಪ್ತಾ ಪಾಶೀ ಜಾಣ । ಓಗರಲಿಯಾ ಸದನ್ನ । ತೋ ಜೇವೀ ನ ಪಾಹೇ ಹುಂಗೋನ । ತೇವೀ ಸಾಧನ ಅಮನಸ್ಕಾ ॥೬೫೧॥ ಗಂಗಾ ಉತರಾವಯಾ ಮಹಾಪೂರೀ । ಅತಿಪ್ರಯಾಸೀ ತಾಫಾ ಕರೀ । ತೋಚಿ ಪೂರ ವೋಹಟಲ್ಯಾವರೀ । ತಾಫಾ ಅವ್ಹೇರೀ ನಿಃಶೇಷ ॥೬೫೨॥ ತೇವೀ ಕಾಮಕ್ರೋಧಾದಿ ವೇಗಶೂನ್ಯ । ಜ್ಯಾಚೇ ನಿರ್ವಿಕಲ್ಪೀ ನಿಶ್ಚಳ ಮನ । ತ್ಯಾಸೀ ದಾನಾದಿಕೀ ಪ್ರಯೋಜನ । ನಾಹಿ ಜಾಣ ನಿಶ್ಚಿತ ॥೬೫೩॥ ಜೇವೀ ಸುರ್ಯೋದಯ ಝಾಲ್ಯಾಪಾಠೀ । ಉಪೇಗಾ ನ ಯೇ ಲಕ್ಷ ದಿವಟೀ । ತೇವೀ ನಿರ್ವಿಕಲ್ಪತಾ ಮನೀ ಉಠೀ । ತೈ ಸಾಧನೇ ಕೋಟೀ ಸುನಾಟ ॥೬೫೪॥ ಏವಂ ಸಮಾಹಿತ ಜ್ಯಾಚೇ ಮನ । ತ್ಯಾಸೀ ದಾನಾದೀ ನಾನಾ ಸಾಧನ । ಕರಾವಯಾ ನಾಹೀ ಪ್ರಯೋಜನ । ಕಲ್ಪನಾ ಪೂರ್ಣ ನಿಮಾಲ್ಯಾ ॥೬೫೫॥ ಜ್ಯಾಚೇ ನೇಮು ನ ಮನೀ ಚಿತ್ತ । ಜೇ ಸದಾ ವಿವೇಕರಹಿತ । ಜೇ ಅನಿವಾರ ವಿಷಯಾಸಕ್ತ । ತ್ಯಾಸೀಹೀ ಅನುಪಯುಕ್ತ ಸಾಧನೇ ॥೬೫೬॥ ಜೇವೀ ಮದಗಜಾಂಚ್ಯಾ ಲೋಟೀ । ಸೈನ್ಯ ಪಳೇ ಬಾರಾ ವಾಟೀ । ತೇವೀ ವಿಷಯಾಸಕ್ತಾ ಪಾಠೀ । ಸಾಧನೇ ಹಿಂಪುಟೀ ಹೋಊನಿ ಠಾತೀ ॥೬೫೭॥ ಜೋ ವಿಷಯಾಸಕ್ತ ಮನಾ । ತೋ ಸರ್ವಥಾ ನಾತಳೇ ಸಾಧನಾ ಕರೀ ತೈ ತೇಥೇಹೀ ಜಾಣಾ । ವಿಷಯಕಲ್ಪನಾ ಸಂಕಲ್ಪೀ ॥೬೫೮॥ ಸ್ವಯೇ ಕರಿತಾ ಪೈ ಸಾಧನಾ । ಜೇ ಜೇ ಫಳ ವಾಂಛೀ ವಾಸನಾ । ತೇ ತೇಚಿ ಫಳೇ ಜಾಣಾ । ಕರೀ ಉಗಾಣಾ ದಾನಾದಿಕಾಂಚಾ ॥೬೫೯॥ ಜೇವೀ ಕಾ ಪೂರ್ಣಬಳಾಚಾ ವಾರೂ । ತ್ಯಾವರೀ ಬೈಸಲಾ ನಿರ್ಬಳ ನರೂ । ತೋ ತ್ಯಾಸೀ ಸರ್ವಥಾ ಅನಾವರೂ । ನವ್ಹೇ ಸ್ಥಿರೂ ಅಣುಮಾತ್ರ ॥೬೬೦॥ ತೈಸೇ ಜ್ಯಾಚೇ ಅತಿದುರ್ಮನ । ಸದಾ ಕಾಮಕ್ರೋಧೀ ಪರಿಪೂರ್ಣ । ಜೋ ಸ್ವಯೇ ಝಾಲಾ ಮನಾಚೇ ಆಧೀನ । ಜ್ಯಾಚಾ ವಿವೇಕ ನಿಮಗ್ನ ಮಹಾಮೋಹೀ ॥೬೬೧॥

ಯಾವ ಪುರುಷನ ಮನವು ತನ್ನ ಮೂಲ ಸ್ವರೂಪದಲ್ಲಿ ಐಕ್ಯರೂಪವಾಗಲು, ಆಗ ಆತನಿಗೆ ದಾನಾದಿ ಇತರ ಸಾಧನೆಗಳ ಯಾವ ಅವಶ್ಯಕತೆ ಇರುವುದು? ॥೬೫೦॥ ಹೊಟ್ಟೆತುಂಬ ಭೋಜನವನ್ನು ಮಾಡಿ ಪೂರ್ಣ ತೃಪ್ತನಾಗಿರುವ ಮನುಷ್ಯನಿಗೆ ಸುಗ್ರಾಸ ಅನ್ನವನ್ನು ನೀಡಿದರೆ ಆತನು ಅದನ್ನು ಭುಂಜಿಸುವುದಿಲ್ಲ, ಕೊನೆಗೆ ಅದರ ವಾಸನೆಯನ್ನು ಕೂಡ ನೋಡುವುದಿಲ್ಲ. ಅದರಂತೆ ಯಾವನು ತನ್ನ ಮನಸ್ಸನ್ನು ಜಯಿಸಿರುವನೋ, ಆತನಿಗೆ ಸರ್ವಸಾಧನೆಗಳು ವ್ಯರ್ಥವಾಗುವುವು ॥೬೫೧॥ ಗಂಗಾನದಿಯ ಮಹಾಪೂರದಲ್ಲಿ ಹೋಗಬೇಕಾದರೆ ಬಹಳ ಪ್ರಯತ್ನಪಟ್ಟು ಡೋಣಿಯನ್ನು ತರಬೇಕಾಗುವುದು. ಆದರೆ ಅದೇ ನದಿಯ ಪೂರವು ಪೂರ್ಣವಾಗಿ ಇಳಿಯಿತೆಂದರೆ ಆಗ ಆ ದೋಣಿಯ ಯಾವ ಉಪಯೋಗವಾಗುವುದಿಲ್ಲ ॥೬೫೨॥ ಅದರಂತೆ ಕಾಮಕ್ರೋಧಗಳನ್ನು ಜಯಿಸಿ ಯಾರು ತನ್ನ ಮನವನ್ನು ನಿರ್ವಿಕಲ್ಪದಲ್ಲಿ ಸ್ಥಿರವನ್ನಾಗಿ ಮಾಡಿರುವನೋ, ಆತನಿಗೆ ದಾನಾದಿಕ ಸಾಧನೆಗಳ ಅವಶ್ಯಕತೆಯು ಇರುವುದಿಲ್ಲ. ಇದನ್ನು ನೀನು ನಿಶ್ಚಿತವಾಗಿ ತಿಳಿ ॥೬೫೩॥ ಯಾವ ಪ್ರಕಾರವಾಗಿ ಸೂರ್ಯೋದಯವಾಗಲು ಆಗ ಲಕ್ಷಾವಧಿ ದೀಪಗಳ ಉಪಯೋಗವು ಹೇಗೆ ಆಗುವುದಿಲ್ಲವೋ ಅದರಂತೆ ಮನವು ನಿರ್ವಿಕಲ್ಪವಾಗುತ್ತಲೇ ಕೋಟ್ಯಾವಧಿ ಸಾಧನೆಗಳ ಅವಶ್ಯಕತೆ ಇರುವುದಿಲ್ಲ ॥೬೫೪॥ ಯಾರ ಮನವು ಈ ಪ್ರಕಾರವಾಗಿ ಶಾಂತವಾಗಿರುವುದೋ, ಆತನಿಗೆ ದಾನಾದಿಕ ಅನೇಕ ಸಾಧನೆಗಳನ್ನು ಮಾಡುವ ಯಾವ ಅವಶ್ಯಕತೆಯು ಇರುವುದಿಲ್ಲ. ಕಾರಣ ಆತನ ಸರ್ವ ಕಲ್ಪನೆಗಳು ಪರಿಪೂರ್ಣವಾಗಿ ವಿಲೀನವಾಗಿರುವುವು ॥೬೫೫॥ ಯಾರ ಮನವು ಯಾವುದೇ ಪ್ರಕಾರದ ನೇಮುಗಳನ್ನು ಪಾಲಿಸುವುದಿಲ್ಲವೋ, ಯಾವ ಈ ಮನವು ಸರ್ವಕಾಲದಲ್ಲಿ ವಿಚಾರಶೂನ್ಯವಾಗಿರುವುದೋ, ಮತ್ತು ಯಾವ ಮನದಲ್ಲಿ ಬಹಳಷ್ಟು ವಿಷ್ಯಗಳ ಆಸಕ್ತಿ ವಿರುವುದೋ, ಆತನಿಗೂ ಕೂಡ ಸಾಧನೆಗಳು ನಿರುಪಯೋಗಿವಾಗುವುವು ॥೬೫೬॥ ಮದ್ದಾನೆಗಳ ಹಿಂಡು ಸೈನ್ಯದಮೇಲೆ ಏರಿ ಬರಲು, ಆಗ ಸೈನಿಕರು ಸಿಕ್ಕ ಸಿಕ್ಕ ಕಡೆ ಓಡಲಾರಂಭಿಸುವರು. ಅದರಂತೆ ವಿಷಯಗಳ ಆಸಕ್ತಿಯಿಂದ ತುಂಬಿಕೊಂಡಿರುವ ಮನುಷ್ಯನ ಎದುರಿನಲ್ಲಿ ಯಾವ ಸಾಧನೆಗಳು ಹಿಂದಕ್ಕೆ ಸರಿಯುವುವು ॥೬೫೭॥ ಯಾರ ಮನದಲ್ಲಿ ವಿಷಯಗಳು ತುಂಬಿಕೊಂಡಿರುವುವೋ, ಆತನು ಸಾಧನೆಗಳತ್ತ ಎಂದಿಗೂ ನೋಡಲಾರನು. ಅಥವಾ ಒಂದುವೇಳೆ ಆತನು ಸಾಧನೆಗಳನ್ನು ಆಚರಿಸಿದರೆ ಅದರಲ್ಲಿಯೇ ಆತನು ವಿಷಯಗಳ ಚಿಂತನೆಯನ್ನು ಮಾಡುತ್ತಿರುವನು ॥೬೫೮॥ ಸ್ವತಃ ತಾನು ಸಾಧನೆಗಳನ್ನು ಮಾಡುತ್ತಿರಲು, ಯಾವ ಯಾವ ಫಲದ ವಾಸನೆ ಇರುವುದೋ, ಆ ಫಲಗಳು ಪ್ರಾಪ್ತವಾಗುವುವು ಇದರಿಂದ ದಾನಾದಿಕಗಳು ನಾಶವಾಗುವುವು ॥೬೫೯॥ ಯಾವ ಪ್ರಕಾರವಾಗಿ ಒಂದು ಬಲಿಷ್ಠವಾದ ಕುದುರೆಯ ಮೇಲೆ ಒಬ್ಬ ದುರ್ಬಲ ಮನುಷ್ಯನು ಕುಳಿತುಕೊಳ್ಳಲು ಆಗ ಆ ಕುದುರೆಯು ಆತನ ಹತೋಟಿಗೆ ಬರುವುದಿಲ್ಲ. ಅದು ಒಂದು ಕ್ಷಣ ಕೂಡ ಸ್ಥಿರವಾಗಿ ನಿಲ್ಲುವುದಿಲ್ಲ ॥೬೬೦॥ ಅದರಂತೆ ಯಾರ ಮನವು ಅತಿಶಯವಾಗಿ ದುರ್ಬಲವಾಗಿ, ಸತತವಾಗಿ ಕಾಮ-ಕ್ರೋಧಗಳಿಂದ ಪರಿಪೂರ್ಣವಾಗಿ ತುಂಬಿಕೊಂಡಿದ್ದು, ಯಾವನು ಸ್ವತಃ ತಾನು ಮನಸ್ಸಿನ ಗುಲಾಮನಾಗಿರುವನೋ, ಆತನ ವಿಚಾರಗಳು ಈ ಯಾವ ಮಹಾಮೋಹದಲ್ಲಿ ನಿಮಗ್ನವಾಗಿರುವುವು ॥೬೬೧॥

ತೇಥ ಸಾಧನಚಿ ಕರೀ ಕೋಣ । ಕರೀ ತೇ ಮೋಹಾಸ್ತವ ಜಾಣ । ತೇಣೇ ವಾಢೇ ತಮೋಗುಣ । ಮನೋ ನಿಯಮನ ಘಡೇನಾ ॥೬೨॥ ಶ್ರವಣಾದಿ ಇಂದ್ರಿಯಬಂಧನ । ಕರೂನಿ ಕರಿತಾ ಸಾಧನ । ತೇಣೇ ವಶ್ಯನವ್ಹೇ ಮನ । ಮನಾಅಧೀನ ಇಂದ್ರಿಯೇ ॥೬೩॥

ಮನೋವಶೇಽನ್ಯೇ ಹ್ಯಭವನ್ಸ್ಮ ದೇವಾ ಮನಶ್ಚ ನಾನ್ಯಸ್ಯ ವಶಂ ಸಮೇತಿ ।
ಭೀಷ್ಮೋ ಹಿ ದೇವಃ ಸಹಸಃ ಸಹೀಯಾನ್ ಯುಂಜ್ಯಾದ್ ವಶೇ ತಂ ಸ ಹಿ ದೇವ ದೇವಃ ॥೫೮॥

ಅರ್ಥ:- ಸರ್ವ ಇಂದ್ರಿಯಗಳು ಮನಸ್ಸಿನ ಅಂಕಿತದಲ್ಲಿ ರುವುವು. ಮನವು ಯಾವ ಇಂದ್ರಿಯಕ್ಕೂ ವಶವಾಗಿಲ್ಲ. ಈ ಮನಸ್ಸು ಬಲಾಢ್ಯರಲ್ಲಿ ಬಲಾಢ್ಯವಾಗಿರುವುದು. ಅತ್ಯಂತ ಭಯಂಕರವಾಗಿರುವುದು. ಯಾವನು ಈ ಮನಸ್ಸನ್ನು ವಶಮಾಡಿಕೊಳ್ಳುವನೋ, ಆತನು ಸರ್ವ ಇಂದ್ರಿಯಗಳನ್ನು ಜಯಿಸಿರುವನು.

ಮನೇ ಆಕಳಿಲೇ ಸರ್ವಾಂಸೀ । ಪರೀ ಮನ ನಾಕಳೇ ಕೋಣಾಸೀ । ಮನೇ ಛಳಿಲೇ ದೇವಾಂಸೀ । ತೇ ಕೇವೀ ಇಂದ್ರಿಯಾಂಸೀ ಆಟೋಪೇ ॥೬೪॥ ಚಂದ್ರ ಅಧಿಷ್ಠಾತಾ ಮನಾಸೀ। ಮನೇ ಛಳಿಲೇ ಚಂದ್ರಮ್ಯಾಸೀ । ವ್ಯಭಿಚಾರೋನಿ ಗುರುಪತ್ನೀಸೀ । ಕ್ಷಯರೋಗೀ ತ್ಯಾಸೀ ಮನೇ ಕೇಲೇ ॥೬೫॥ ಬ್ರಹ್ಮಾ ಅಧಿಷ್ಠಾತಾ ಬುದ್ಧೀಸೀ । ಮನ ಬ್ರಹ್ಮ್ಯಾಚೀ ಬುದ್ಧಿ ಭ್ರಂಶೀ । ನಿಜಪುತ್ರೀ ವಾರಿತಾ ತ್ಯಾಸೀ । ಸ್ವಕನ್ಯೇಸೀ ಅಭಿಲಾಷೀ ॥೬೬॥ ಚಿತ್ತೀ ವಾಸುದೇವಾಚೇ ಅಧಿಷ್ಠಾನ । ತ್ಯಾತೇಹೀ ಹಳೂಚ ಠಕೀ ಮನ । ಲಾವೂನಿ ವೃಂದೇಚೇ ಧ್ಯಾನ । ಶ್ಮಶಾನೀ ಜಾಣ ಪಾಡಿಲಾ ॥೬೭॥ ರುದ್ರ ಅಧಿಷ್ಠಾತಾ ಅಹಂಕಾರೀ । ತ್ಯಾತೇಹೀ ಮನ ಸಿಂತರೀ । ಅಭಿಲಾಷಿತಾ ಋಷಿ ನಾರೀ । ಶಾಪಿಲಾ ಋಷೀಶ್ವರೀ ಲಿಂಗಪಾತೇ ॥೬೮॥ ಐಸೇ ದೇವಾ ದುಜಯ ಜೇ ಮನ । ತ್ಯಾಸೀ ಆವರೀ ಇತರ ಕೋಣ । ಮ್ಹಣಾಲ ಇಂದ್ರಿಯೇ ನಿಯಮಿತೀಲ ಮನ । ತರೀ ಮನಾಧೀನ ಇಂದ್ರಿಯೇ ॥೬೯॥ ಜೈ ಇಂದ್ರಿಯೇ ಧರೋನಿ ಹಾತೀ । ಮನ ಏಕಾಗ್ರ ಹೋಇಜೇ ಅರ್ಥೀ । ತೇವ್ಹಾ ಇತರ ಇಂದ್ರಿಯಾಚೀ ಸ್ಥಿತೀ । ರಾಹೇ ನಿಶ್ಚಿತೀ ಸುನಾಟ ॥೭೦॥ ಇಂದ್ರಿಯವಿಷಯಾ ಹೋಯ ಸಂಗತೀ । ತೇ ಕಾಳೀ ಜೈ ದುಶ್ಚಿತೀ ಮನೋ ವೃತ್ತೀ । ತೇವ್ಹಾ ನ ಘಡೇ ವಿಷಯಪ್ರಾಪ್ತೀ । ಇಂದ್ರಿಯಾ ಸ್ಫೂರ್ತೀ ಸ್ಫುರೇನಾ ॥೭೧॥ ಜೇವ್ಹಾ ಅನಾಸಕ್ತ ಮನೋಧರ್ಮ । ತೆವ್ಹಾ ಇಂದ್ರಿಯಾಂಚೇ ನ ಚಲೇ ಕಾಮ । ಮನಾಅಧೀನ ಇಂದ್ರಿಯಗ್ರಾಮ । ಇಂದ್ರಿಯಾ ಮನೋನೇಮ ಕದಾ ನ ಘಡೇ ॥೭೨॥

ಇಂತಹ ಸ್ಥಿತಿಯಲ್ಲಿ ಸಾಧನೆಗಳನ್ನು ಯಾರು ಮಾಡುವರು? ಆತನು ಮೋಹದಿಂದ ಮಾಡಿದ ಸಾಧನೆಗಳಿಂದ ತಮೋಗುಣವು ಬೆಳೆಯುತ್ತಿರುವುದು. ಏನು ಮಾಡಿದರೂ ಮನಸ್ಸಿನ ನಿಗ್ರಹವಾಗುವುದಿಲ್ಲ ॥೬೨॥ ಶ್ರವಣಾದಿ ಇಂದ್ರಿಯಗಳನ್ನು ನಿಗ್ರಹಿಸಿ ಸಾಧನೆಗಳನ್ನು ಮಾಡಿದರೆ, ಮನವು ವಶವಾಗುವುದಿಲ್ಲ. ಕಾರಣ ಇಂದ್ರಿಯಗಳು ಮನಸ್ಸಿನ ಆಧೀನದಲ್ಲಿರುವುವು ॥೬೩॥

ಮನವು ಸರ್ವರನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿರುವುದು. ಆದರೆ ಆ ಮನವು ಮಾತ್ರ ಯಾರ ಅಂಕಿತದಲ್ಲಿಯೂ ಇರುವುದಿಲ್ಲ ಯಾವ ಈ ಮನವು ದೇವಾದಿಕರಿಗೆ ಪೀಡೆಯನ್ನು ಕೊಡುವುದು. ಅಂದಮೇಲೆ ಇದು ಇಂದ್ರಿಯಗಳಿಗೆ ಹೇಗೆ ವಶವಾದೀತು? ॥೬೪॥ ಚಂದ್ರನು ಈ ಮನಸ್ಸಿನ ನಿಯಾಮಕ ದೇವನಾಗಿರುವನು. ಈ ಚಂದ್ರನನ್ನೇ ಮನವು ಪೀಡೆಯನ್ನು ಕೊಟ್ಟಿತು. ಆ ಚಂದ್ರನಿಗೆ ಗುರುಪತ್ನಿಯ ಜೊತೆಯಲ್ಲಿ ವ್ಯಭಿಚಾರವನ್ನು ಮಾಡಲು ಹಚ್ಚಿತು. ಆದ್ದರಿಂದ ಆತನು ಕ್ಷಯರೋಗಿಯಾದನು ॥೬೫॥

ಬ್ರಹ್ಮದೇವನು ಬುದ್ಧಿಯ ಅಧಿಷ್ಠಾನ ದೇವನಾಗಿರುವನು. ಆದರೆ ಈ ಮನವು ಬ್ರಹ್ಮದೇವನ ಬುದ್ಧಿಯನ್ನು ಭ್ರಷ್ಟಮಾಡಿತು. ಆದ್ದರಿಂದ ಆತನ ಕನ್ಯಾ ಆತನಿಗೆ ಪ್ರತಿಬಂಧ ಮಾಡಿದರೂ ಕೂಡ ಬ್ರಹ್ಮದೇವನು ತನ್ನ ಕನ್ಯೆಯ ಅಭಿಲಾಷೆ ಮಾಡಿದನು ॥೬೬॥ ಚಿತ್ತಕ್ಕೆ ಅಧಿಷ್ಠಾನ ವಾಸುದೇವನಾಗಿರುವನು. ಆದರೂ ಕೂಡ ಮನವು ಮೆಲ್ಲನೇ ವಾಸುದೇವನಿಗೆ ಮೋಸಮಾಡಿತು. ಆತನಿಗೆ ವೃಂದೆಯ ಧ್ಯಾನವನ್ನು ಹಚ್ಚಿಸಿ ಶ್ಮಶಾನಕ್ಕೆ ಕಳುಹಿಸಿತು ॥೬೭॥ ರುದ್ರನು ಅಹಂಕಾರದ ನಿಯಾಮಕನಾಗಿರುವನು. ಆದರೆ ಮನವು ಆತನಿಗೂ ಕೂಡ ಮೋಸವನ್ನು ಮಾಡಿತು. ಆತನು ಋಷಿಸ್ತ್ರೀಯರ ಅಭಿಲಾಷೆಯನ್ನು ಮಾಡಿದನು. ಅದಕ್ಕಾಗಿ ಋಷಿಗಳು ಶಾಪವನ್ನು ಕೊಟ್ಟು ಆತನ ಲಿಂಗಪಾತ ಮಾಡಿದರು. ॥೬೮॥ ಹೀಗೆ ಈ ಮನವನ್ನು ದೇವರಿಗೂ ಕೂಡ ಜಯಿಸುವುದು ಕಠಿಣವಾಗಿರುವುದು. ಅಂದಮೇಲೆ ಈ ಮನವನ್ನು ಯಾರು ಹತೋಟಿಗೆ ತರಬೇಕು? ಇಂದ್ರಿಯಗಳು ಮನವನ್ನು ನಿಗ್ರಹಿಸಬಹುದೆಂದು ನೀವು ಹೇಳಬಹುದು. ಆದರೆ ಈ ಇಂದ್ರಿಯಗಳು ಮನಸ್ಸಿನ ಆಧೀನದಲ್ಲಿರುವುವು ॥೬೯॥ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟು ಮನವು ಒಂದುವೇಳೆ ವಿಷಯಗಳಲ್ಲಿ ಏಕರೂಪವಾಗಲು ಆಗ ಅಲ್ಲಿ ಇಂದ್ರಿಯಗಳ ಸಾಮರ್ಥ್ಯವು ನಿಷ್ಫಲವಾಗುವುದು ॥೭೦॥ ಇಂದ್ರಿಯಗಳು ಮತ್ತು ವಿಷಯಗಳು ಏಕರೂಪವಾಗಿ ಆಗ ಒಂದುವೇಳೆ ಮನದ ವೃತ್ತಿಯು ದುಶ್ಚಿತ್ತವಾದರೆ ಆಗ ಆ ವಿಷಯಗಳನ್ನು ಭೋಗಿಸಲು ದೊರೆಯುವುದಿಲ್ಲ. ಇಂದ್ರಿಯಗಳಲ್ಲಿ ಉಪಭೋಗದ ಸ್ಫೂರ್ತಿಯೇ ಸ್ಫುರಣವಾಗುವುದಿಲ್ಲ ॥೭೧॥ ಯಾವ ಸಮಯದಲ್ಲಿ ಮನಸ್ಸಿನ ಧರ್ಮವು ಆಸಕ್ತಿರಹಿತವಾಗಿಬಿಟ್ಟರೆ ಆಗ ಇಂದ್ರಿಯಗಳ ಯಾವ ಇಚ್ಛೆಯೂ ಇರುವುದಿಲ್ಲ. ಕಾರಣ ಸರ್ವ ಇಂದ್ರಿಯಗಳ ಸಮುದಾಯವು ಮನಸ್ಸಿನ ಆಧೀನವಾಗಿರುವುದು. ಆದ್ದರಿಂದ ಇಂದ್ರಿಯಗಳಿಂದ ಮನಸ್ಸಿನ ನಿಗ್ರಹಮಾಡಲು ಆಗುವುದಿಲ್ಲ ॥೭೨॥

ಇಂದ್ರಿಯಾಂಚಾ ರಾಜಾ ಮನ । ಇಂದ್ರಿಯೇ ನ ಚಾಲತೀ ಮನೇ ವೀಣ । ಪುರುಷಾತೇ ಹೀ ಮನ ಆಪಣ । ವಶ್ಯ ಜಾಣ ಸ್ವಯೇ ಕರೀ ॥೬೭೩॥ ಅತಿಬಳಿಯಾ ಬಳೀ ಮನ । ತೇಥ ಇಂದ್ರಿಯೇ ಬಾಪುಡೀ ಕೋಣ । ಮನಾಚೇ ಕರಾವಯಾ ದಮನ । ನವ್ಹೇ ಆಂಗವಣ ವರಿಷ್ಠಾ ॥೬೭೪॥ ಕಾಳ ನಿಜಸತ್ತಾ ಸರ್ವಗ್ರಾಸೀ । ಪರೀ ಲೋಂವ ನುಪಡೇ ತ್ಯಾಸೀ । ಕರಿತಾ ಉತ್ಪತ್ತಿಸ್ಥಿತಿಪ್ರಳಯಾಂಸೀ । ಮನ ಕಾಳಾಸೀ ನಾಟೋಪೇ ॥೬೭೫॥ ಶಸ್ತ್ರೀ ನ ತುಟೇ ಸರ್ವಥಾ ಮನ । ತ್ಯಾಸೀ ವಿರವೂ ನ ಶಕೇಚಿ ಜೀವನ । ಮನ ಜಾಳೂ ನ ಶಕೇ ದಹನ । ಮನಾತೇ ಗಗನ ಶೂನ್ಯ ಕರೂ ನ ಶಕೇ ॥೬೭೬॥ ಮನಾಸೀ ಲಾಗೋ ನ ಶಕೇ ವ್ಯಾಧೀ । ಮನ ರೋಡೇಜೇ ಐಶೀ ನಾಹೀ ಆಧೀ । ಮನ ಆಕಳಾವಯಾ ಸಿದ್ಧೀ । ಪಾಹತಾ ತ್ರಿಶುದ್ಧೀ ದಿಸೇನಾ ॥೬೭೭॥ ಮನ ಬ್ರಹ್ಮಾದಿಕಾಂಚ್ಯಾ ರಚೀ ಕೋಡೀ । ಮನ ಬ್ರಹ್ಮಾಂಡೇ ಘಡಿ ಮೋಡೀ । ಮನ ನಿಜಕಲ್ಪನಾ ಕಡಾಡೀ । ನಾಚವೀ ಧಾಂದಡೀ ತ್ರೈಲೋಕ್ಯಾ ॥೬೭೮॥ ಮನ ಕಳಿಕಳಾತೇ ಛಳೀ । ಮನ ಪ್ರಳಯಾನಳಾತೇ ಗಿಳೀ । ಮನ ಬಳಿಯಾಮಾಜೀ ಅತಿಬಳೀ । ಮನಾತೇ ಆಕಳೀ ಐಸಾ ನಾಹೀ ॥೬೭೯॥ ಮನ ದೇವಾಂಸೀ ದುರ್ಧರ । ಮನ ಭಯಂಕರಾ ಭಯಂಕರ । ಮನೇ ಆಕಳಿಲೇ ಹರಿಹರ । ಮನಾಸಮೋರ ಕೋಣ ರಾಹೇ ॥೬೮೦॥ ಮನಾಚಾ ಅನಿವಾರ ಮಾರ । ಕೋಣ ರಾಹೇ ಮನಾಸಮೋರ । ಮನಾಸ ಪರ್ಜೀ ಐಸಾ ಥೋರ । ಸುರ ನರ ಅಸುರ ದಿಸೇನಾ ॥೬೮೧॥ ಮನಾಸೀ ಮೇಳವೀ ಹಾತೋಫಳೀ । ಐಸಾ ತ್ರಿಲೋಕೀ ನಾಹೀ ಬಳೀ । ಮನ ಕಳಿಕಾಳಾತೇ ಆಕಳೀ । ಪ್ರಳಯರುದ್ರಾತೇ ಗಿಳೀ ನ ಮಾಖತಾ ದಾಢ ॥೬೮೨॥ ಐಸಾ ಮನಾಚಾ ಅಗಾಧ ಭೇವೋ । ಯಾಲಾಗೀ ಯಾತೇ ಮ್ಹಣಿಜೇ ದೇವೋ । ಮನಾಚಾ ಭಯಾನಕಾ ಭೇವೋ । ಯಾಲಾಗೀ ಭೀಷ್ಮದೇವೋ ಮನಾತೇ ಮ್ಹಣತೀ ॥೬೮೩॥ ಐಶೀ ಮನಾಚೀ ಅನಾವರ ಸ್ಥಿತೀ । ಯಾಸೀ ಆಕಳಾವಯಾಚೀ ಸವರ್ಮ ಯುಕ್ತೀ । ಸಾಚಾರ ಸಾಂಗೇನ ತುಮ್ಹಾ ಪ್ರತೀ । ಸಾವಧಾನಸ್ಥಿತೀ ಅವಧಾರಾ ॥೬೮೪॥ ಜೇವೀ ಹಿರೋನಿ ಹಿರಾ ಚಿರಿಜೇ । ತೇವೀ ಮನೇಚಿ ಮನ ಧರಿಜೇ । ಹೇಹೀ ತೈಚಿ ಗಾ ಲಾಹಿಜೇ । ಜೈ ಗುರುಕೃಪಾ ಪಾವಿಜೇ ಸಂಪೂರ್ಣ ಸ್ವಯೇ॥೬೮೫॥

ಮನವು ಇಂದ್ರಿಯಗಳ ರಾಜನಾಗಿರುವುದು. ಇಂದ್ರಿಯಗಳು ಮನಸ್ಸಿನ ಹೊರತಾಗಿ ನಡೆಯಲಾರವು. ಈ ಮನವು ಮನುಷ್ಯನಿಗೆ ತನ್ನ ಅಂಕಿತದಲ್ಲಿ ಇಟ್ಟುಕೊಳ್ಳುವುದು ॥೬೭೩॥ ಯಾವ ಈ ಮನವು ಬಲಾಢ್ಯರಲ್ಲಿಯೇ ಬಲಾಢ್ಯವಾಗಿರುವುದು. ಇದಕ್ಕೆ ಇಂದ್ರಿಯಗಳ ಯಾವ ಲೆಕ್ಕ? ಮನದ ದಮನವನ್ನು ಮಾಡುವ ಧೈರ್ಯವು ಮಹಾ ಮಹಾ ಪುರುಷರಿಗೂ ಇರುವುದಿಲ್ಲ ॥೬೭೪॥ ಕಾಲನು ತನ್ನ ಸಾಮರ್ಥ್ಯದಿಂದ ಎಲ್ಲವನ್ನೂ ಭಕ್ಷಿಸುವನು. ಆದರೆ ಅದಕ್ಕೂ ಕೂಡ ಮನಸ್ಸಿನ ಒಂದು ಕೂದಲಿಗೆ ಧಕ್ಕೆ ತರುವ ಸಾಮರ್ಥ್ಯವಿಲ್ಲ. ಕಾಲನು ಜಗತ್ತಿನ ಉತ್ಪತ್ತೀ, ಸ್ಥಿತೀ, ಲಯ ಮಾಡುವನು. ಆದರೆ ಮನವನ್ನು ಅಂಕಿತ ಮಾಡಿಕೊಳ್ಳುವುದಾಗುವುದಿಲ್ಲ ॥೬೭೫॥ ಮನವು ಯಾವುದೇ ಶಸ್ತ್ರಗಳಿಂದ ಮುರಿಯುವುದಿಲ್ಲ. ಯಾವುದೇ ಜಲವು ಮನವನ್ನು ಕರಗಿಸಲು ಸಾಧ್ಯವಿಲ್ಲ. ಮನವನ್ನು ಸುಟ್ಟುಹಾಕುವ ಸಾಮರ್ಥ್ಯವು ಅಗ್ನಿಗೆ ಇರುವುದಿಲ್ಲ. ಆಕಾಶಕ್ಕೆ ಮನವನ್ನು ಶೂನ್ಯಗೊಳಿಸಲಿಕ್ಕೆ ಆಗುವುದಿಲ್ಲ ॥೬೭೬॥ ಮನಸ್ಸಿಗೆ ಯಾವುದೇ ಪ್ರಕಾರದ ವ್ಯಾಧಿಯು ಬರುವುದಿಲ್ಲ. ಅದು ಎಂದಿಗೂ ಸೊರಗುವುದಿಲ್ಲ ಮನವನ್ನು ವಶಮಾಡಿಕೊಳ್ಳುವಂತಹ ಸಿದ್ಧಿಯು ಎಲ್ಲಿಯೂ ಕಾಣುವುದಿಲ್ಲ ॥೬೭೭॥ ಈ ಮನವು ಕೋಟ್ಯಾವಧಿ ಬ್ರಹ್ಮದೇವರಿಗೆ ನಿರ್ಮಾಣ ಮಾಡಬಲ್ಲದು. ಮನವು ಬ್ರಹ್ಮಾಂಡದ ಅನೇಕ ಸ್ಥಿತಿ, ನಾಶ ಮಾಡಬಲ್ಲದು. ಮನವು ತನ್ನ ಕಲ್ಪನೆಯಿಂದ ಗರ್ಜಿಸುತ್ತಿರುವುದು ಮತ್ತು ಮೂರು ಲೋಕಗಳಿಗೂ ಸಿಸ್ತಾಗಿ ಕುಣಿಸುತ್ತಿರುವುದು ॥೬೭೮॥ ಮನವು ಕಲಿಕಾಲನಿಗೂ ಪೀಡಿಸುತ್ತಿರುವುದು. ಮನವು ಪ್ರಳಯ ಕಾಲದ ಅಗ್ನಿಯನ್ನು ನುಂಗಿಬಿಡುವುದು. ಹೀಗೆ ಮನವು ಬಲಾಢ್ಯರಲ್ಲಿ ಬಲಾಢ್ಯವಾಗಿರುವುದು. ಮನವನ್ನು ಅಂಕಿತದಲ್ಲಿಟ್ಟುಕೊಳ್ಳುವವರು ಯಾರೂ ಕಾಣುವುದಿಲ್ಲ ॥೬೭೯॥ ಮನವು ಸರ್ವ ದೇವತೆಗಳಿಗೆ ದುರ್ಧರವಾಗಿದೆ. ಮನವು ಭಯಂಕರ ಪ್ರಾಣಿಗಳಿಗೂ ಭಯಂಕರವಾಗಿದೆ. ಮನವು ಹರಿಹರರಿಗೂ ಅಂಕಿತದಲ್ಲಿಟ್ಟುಕೊಂಡಿರುವುದು. ಇಂತಹ ಶಕ್ತಿಶಾಲಿ ಮನಸ್ಸಿನ ಎದುರು ಯಾರು ನಿಲ್ಲುವರು? ॥೬೮೦॥

ಮನಸ್ಸಿನ ಯಾವ ಆಘಾತವು ಅತ್ಯಂತ ವಿಲಕ್ಷಣವಾಗಿರುವುದು. ಈ ಮನಸ್ಸಿನ ಎದುರಾಗಿ ಯಾರು ನಿಲ್ಲುವರು? ಸುರ, ನರ, ಅಸುರ ಇವರು ಯಾರೂ ಮನಸ್ಸನ್ನು ಪರಾಭವಗೊಳಿಸಲು ಸಾಧ್ಯವಿಲ್ಲ ॥೬೮೧॥ ಮನದ ಜೊತೆಯಲ್ಲಿ ಯುದ್ಧ ಮಾಡುವಂತಹ ಶೂರನು ಈ ಮೂರು ಲೋಕಗಳಲ್ಲಿಯೂ ಇರುವುದಿಲ್ಲ. ಮನವು ಕಲಿಕಾಲನಿಗೂ ಕೂಡ ತನ್ನ ಅಂಕಿತದಲ್ಲಿಟ್ಟುಕೊಂಡಿರುವುದು. ತನ್ನ ದವಡೆಯನ್ನು ಆಡಿಸದೇ ಮನವು ಪ್ರಳಯ ರುದ್ರನಿಗೂ ನುಂಗಿಬಿಡುವುದು ॥೬೮೨॥ ಹೀಗೆ ಈ ಮನಸ್ಸಿನ ಮಹಿಮೆಯು ಅತಿಶಯವಾಗಿ ಅಗಾಧವಾಗಿರುವುದು. ಆದ್ದರಿಂದ ಅದಕ್ಕೆ ದೇವರು ಎಂದು ಕರೆಯುವರು. ಮಹಾ ಮಹಾ ಭಯಾನಕರಿಗೂ ಕೂಡ ಮನದ ಭಯವಾಗುವುದು. ಆದ್ದರಿಂದ ಮನಸ್ಸಿಗೆ ಭೀಷ್ಮದೇವ ಎಂದು ಹೇಳುವರು ॥೬೮೩॥ ಈ ಪ್ರಕಾರವಾಗಿ ಮನದ ಸ್ಥಿತಿಗತಿಯು ಅತಿಶಯ ಬಲಾಢ್ಯವಾಗಿರುವುದು. ಇದನ್ನು ಅಂಕಿತವನ್ನಾಗಿ ಮಾಡುವ ಯುಕ್ತಿಯನ್ನು ಮತ್ತು ಅದರ ರಹಸ್ಯವನ್ನು ನಾನು ನಿಮಗೆ ಹೇಳುವೆನು. ಕಾರಣ ನೀವು ಶಾಂತಚಿತ್ತದಿಂದ ಆಲಿಸಿರಿ ॥೬೮೪॥ ಯಾವ ಪ್ರಕಾರವಾಗಿ ವಜ್ರದಿಂದಲೇ ವಜ್ರವನ್ನು ಕೊಯ್ಯಬೇಕಾಗುವುದೋ, ಆದರಂತೆ ಮನಸ್ಸಿನಿಂದಲೇ ಮನಸ್ಸನ್ನು ಜಯಿಸಬೇಕು. ಶ್ರೀಗುರುಕೃಪೆ ಪ್ರಾಪ್ತವಾದಾಗ ಮಾತ್ರ ಈ ಸ್ಥಿತಿಯು ಸಾಧ್ಯವಾಗುವುದು ॥೬೮೫॥

ಮನ ಗುರುಕೃಪೇಚಿ ಆಂದಣೀ ದಾಸೀ । ಮನ ಸದಾ ಭೀತಸೇ ಸದ್ಗುರೂಸೀ । ತೇ ಠೇವಿತಾ ಗುರುಚರಣಾಪಾಶೀ । ದೇ ಸಾಧಕಾಂಸೀ ಸಂತೋಷ ॥೬೮೬॥ ಯಾ ಮನಾಚೀ ಏಕ ಉತ್ತಮ ಗತೀ । ಜರೀ ಸ್ವಯೇ ಲಾಗಲೇ ಪರಮಾರ್ಥೀ । ತರೀ ದಾಸೀ ಕರೀ ಚಾರೀ ಮುಕ್ತೀ । ದೇ ಬಾಂಧೋನಿ ಹಾತೀ ಪರಬ್ರಹ್ಮ ॥೬೮೭॥ ಮನಚಿ ಮನಾಚೇ ದ್ಯೋತಕ । ಮನಚಿ ಮನಾಚೇ ಸಾಧಕ । ಮನಚಿ ಮನಾಚೇ ಬಾಧಕ । ಮನಚಿ ಘಾತಕ ಮನಾಸೀ ॥೬೮೮॥ ಜೇವಿ ವೇಳು ವಾಢವೀ ವೇಳುಜಾಳೀ । ವೇಳುವೇಳುವಾ ಕಾಂಚಣೇಮೇಳೀ । ಸ್ವಯೇ ಪಾಡೂನಿ ಇಂಗಳೀ । ಸಮೂಳ ಜಾಳೀ ಆಪಣ್ಯಾತೇ॥೬೮೯॥ ತೇವೀ ಮನ ಮನಾಸೀ ಚಿಂತೀ ಮರಣ। ತೈ ಸದ್ಗುರೂಸೀ ರಿಘವೀ ಶರಣ । ತ್ಯಾಚೇ ವಚನೀ ವಿಶ್ವಾಸೋನ । ಕರವೀ ಗುರುಭಜನ ನಿರಭಿಮಾನೇ ॥೬೯೦॥ ಸದ್ಗುರುಕೃಪಾ ಝಾಲಿಯಾ ಸಂಪೂರ್ಣ । ಹೇ ಮನಚಿ ಮನಾಸೀ ದಾವೀ ಖೂಣ । ತೇಣೇ ನಿಜಸುಖೇ ಸುಖಾವೋನ । ಮನಚಿ ಪ್ರಸನ್ನ ಮನಾಸೀ ಹೋಯ ॥೬೯೧॥ ಮನ ಮನಾಸೀ ಝಾಲಿಯಾ ಪ್ರಸನ್ನ । ತೇವ್ಹಾ ವೃತ್ತಿ ಹೋಯ ನಿರಭಿಮಾನ । ಐಸೇ ಸಾಧಕಾ ನಿಜಸಮಾಧಾನ। ಮನೇ ಆಪಣ ಸಾಧಿಜೇ॥೬೯೨॥ ಪಾವೋನಿ ಗುರುಕೃಪೇಚೀ ಗೋಡೀ । ಮನೋ ವಿಜಯಾಚೀ ನಿಜಗುಢೀ । ಮನೇ ಉಭವೂನಿ ಲವಡಸವಡೀ । ದೀಜೇ ರೋಕಡೀ ಸಾಧಕಾಹಾತೀ ॥೬೯೩॥ ಯಾಪರೀ ಸಾಧಕಾಂಸೀ ಸಂಪೂರ್ಣ । ಮನ ಆಪಲಾ ವಿಜಯೋ ದೇ ಆಪಣ । ಶೇಖೀ ಸದ್ಗುರುನಿಜಬೋಧೀ ಪೂರ್ಣ । ಮನ ಹೋಯ ಲೀನ ನಿಜಾತ್ಮತಾ ॥೬೯೪॥ ಜೇವೀ ಕಾ ಸೈಂಧವಾಚಾ ಖಡಾ । ರಿಘೋನಿ ಸಿಂಧೂಮಾಜಿ ವಡಾ । ಸ್ವಯೇ ವಿರೋನಿಯಾ ರೋಕಡಾ । ಸಿಂಧೂಏವಢಾ ತೋ ಹೋಯ॥೬೯೫॥ ಯಾಪರೀ ಸಾಧಕ ಜಾಣ। ಹೋತಾಂಚ ನಿರಭಿಮಾನ। ಸ್ವಯೇ ಹೋತೀ ಬ್ರಹ್ಮ ಪೂರ್ಣ। ಮೀತೂಪಣ ಗಿಳೋನೀ॥೬೯೬॥ ಮಗ ತ್ಯಾಚಿಯಾ ನಿಜದೃಷ್ಟೀ। ಮೀಚಿ ಏಕ ಅವಘೀ ಸೃಷ್ಟೀ। ಮಾವಳಲೀ ದ್ವಂದ್ವತ್ರಿಪುಟೀ । ಸುಖದುಃಖ ಪಾಠೀ ಲಾಗೇನಾ ॥೬೯೭॥ ತೇಥೇ ಕೈಚೇ ಸುಖ ಕೈಚೇ ದುಃಖ । ಕೈಚಾ ಬಂಧ ಕೈಚಾ ಮೋಕ್ಷ । ಕೋಣ ಪಂಡಿತ ಕೋಣ ಮೂರ್ಖ । ಬ್ರಹ್ಮ ಏಕ ಏಕಲೇ॥೬೯೮॥ ತೇಥ ಕೋಣ ದೇವ ಕೋಣ ಭಕ್ತ । ಕೋಣ ಶಾಂತ ಕೋಣ ಅಶಾಂತ। ಮಾವಳಲೇ ದ್ವೈತಾ ದ್ವೈತ । ವಸ್ತು ಸದೋದಿತ ಸ್ವಾನಂದೇ ॥೬೯೯॥ ತ್ ೯ ಪ್ರ

ಮನವು ಇದು ಗುರುಕೃಪೆಗೆ ಕಾಣಿಕೆಯಾಗಿ ಕೊಟ್ಟ ದಾಸೀಯಾಗಿರುವುದು. ಆದ್ದರಿಂದ ಮನವು ಯಾವಾಗಲೂ ಸದ್ಗುರುಗಳಿಗೆ ಭಯಪಡುತ್ತಿರುವುದು. ಮನವನ್ನು ಒಂದುವೇಳೆ ಸದ್ಗುರುಗಳ ಚರಣಗಳಿಗೆ ಅರ್ಪಣೆಯನ್ನು ಮಾಡಲು, ಆಗ ಸರ್ವ ಸಾಧಕರನ್ನು ತತ್ಕಾಲದಲ್ಲಿ ಪರಮ ಸಂತೋಷವನ್ನು ಕೊಡುವುದು ॥೬೮೬॥ ಈ ಯಾವ ಮನಸ್ಸಿನ ಒಂದು ಅತಿ ಉತ್ತಮ ಗುಣವಿರುವುದು. ಇದು ಒಂದು ಸಾರೇ ಪರಮಾರ್ಥದತ್ತ ನಡೆದರೆ ಸಾಕು, ನಾಲ್ಕು ಮುಕ್ತಿಗಳನ್ನೂ ದಾಸೀಯನ್ನಾಗಿ ಮಾಡಿಬಿಡುವುದು ಮತ್ತು ಪರಬ್ರಹ್ಮವನ್ನು ಕಟ್ಟಿ ಕೈಯಲ್ಲಿ ತಂದು ಕೊಡುವುದು ॥೬೮೭॥ ಮನಸ್ಸೇ ಮನಸ್ಸಿನ ಪ್ರಕಾಶಕವಾಗಿರುವುದು. ಮನಸ್ಸೇ ಮನಸ್ಸಿನ ಸಾಧಕವಾಗಿರುವುದು ಮತ್ತು ಮನಸ್ಸೇ ಮನಸ್ಸಿನ ಬಾಧಕವಾಗಿರುವುದು. ಹಾಗೂ ಈ ಮನವು ಮನಕ್ಕೆ ಘಾತಕವಾಗಿರುವುದು ॥೬೮೮॥ ಯಾವ ಪ್ರಕಾರವಾಗಿ ಬಿದಿರು ತಮ್ಮ ಬಿದಿರುಗಳ ಗುಂಪನ್ನು ಬೆಳೆಸುತ್ತಿರುತ್ತ ಒಂದು ಬಿದಿರು ಇನ್ನೊಂದು ಬಿದುರಿಗೆ ತಿಕ್ಕುತ್ತ ಅದರಿಂದ ಅಗ್ನಿಯ ಕಿಡಿಯನ್ನು ಹುಟ್ಟಿಸಿ ಆ ಅಗ್ನಿಯು ಬೆಳೆಯುತ್ತಲೇ ತಮ್ಮನ್ನು ತಾವೇ ಪೂರ್ಣವಾಗಿ ಹೇಗೆ ಸುಟ್ಟುಹಾಕುತ್ತಿರುವುವೋ ॥೬೮೯॥ ಅದೇ ಪ್ರಕಾರವಾಗಿ ಮನಸ್ಸೇ ಮನಸ್ಸಿಗೆ ಮರಣವಾಗಬೇಕೆಂದು ಚಿಂತಿಸುವುದು. ಆಗ ಅದು ಸದ್ಗುರುವಿಗೆ ಶರಣಾಗುವಂತೆ ಮಾಡುವುದು ಮತ್ತು ಅವರ ವಚನಗಳಲ್ಲಿ ವಿಶ್ವಾಸವನ್ನು ಇಡಿಸಿ ಅಭಿಮಾನ ಬಿಡಿಸಿ ಗುರುಭಜನಕ್ಕೆ ಹಚ್ಚುವುದು ॥೬೯೦॥ ಪರಿಪೂರ್ಣವಾಗಿ ಸದ್ಗುರುಗಳ ಕೃಪೆಯಾಗಲು ಆಗ ಮನಸ್ಸೇ ಮನಸ್ಸಿಗೆ ನಿಜಸ್ಥಿತಿಯನ್ನು ತೋರಿಸುವುದು ಮತ್ತು ತನ್ನ ಸುಖದಿಂದ ಅದು ಸುಖೀಯಾಗುವುದು. ಮನಸ್ಸೇ ಮನಸ್ಸಿನ ಮೇಲೆ ಪ್ರಸನ್ನವಾಗುವುದು ॥೬೯೧॥ ಮನವು ಮನಸ್ಸಿನ ಮೇಲೆ ಪ್ರಸನ್ನವಾಗಲು ಆಗ ವೃತ್ತಿಯಲ್ಲಿನ ಅಭಿಮಾನವು ಇಲ್ಲದಾಗುವುದು. ಈ ಪ್ರಕಾರವಾಗಿ ಮನಸ್ಸೇ ಸಾಧಕನಿಗೆ ಸಮಾಧಾನವನ್ನು ಕೊಡುತ್ತಿರುವುದು ॥೬೯೨॥ ಗುರುಕೃಪೆಯ ಸುಖವು ಹತ್ತಲು ಮನಸ್ಸೇ ಮನೋಜಯದ ಧ್ವಜವನ್ನು ಪ್ರತ್ಯಕ್ಷವಾಗಿ ಸಾಧಕನ ಕೈಯಲ್ಲಿ ಕೊಡುವುದು ॥೬೯೩॥ ಹೀಗೆ ಸಾಧಕನಿಗೆ ಮನಸ್ಸೇ ಜಯವನ್ನು ತಂದುಕೊಡುವುದು. ಕೊನೆಯಲ್ಲಿ ಸದ್ಗುರುಗಳ ಆತ್ಮಜ್ಞಾನದಲ್ಲಿ ಇದು ಆತ್ಮಸ್ವರೂಪದಿಂದ ಲೀನವಾಗಿಬಿಡುವುದು ॥೬೯೪॥ ಉಪ್ಪಿನ ಹರಳನ್ನು ಸಮುದ್ರದಲ್ಲಿ ಒಗೆಯಲು ಅದು ಅಲ್ಲಿ ಕರಗಿ ತಾನು ಸ್ವತಃ ಸಮುದ್ರರೂಪವಾಗುವುದು ॥೬೯೫॥ ಅದರಂತೆ ಸಾಧಕನೂ ಕೂಡ ಅಭಿಮಾನರಹಿತನಾಗಲು ಆಗ ನಾನು, ನೀನು ಎಂಬುವುದು ಇಲ್ಲದಾಗಿ ತಾನು ಸ್ವತಃ ಪೂರ್ಣ ಬ್ರಹ್ಮನಾಗುವನು. ಇದನ್ನು ನೀನು ಲಕ್ಷದಲ್ಲಿಡು ॥೬೯೬॥ ತದನಂತರ ಆತನ ದೃಷ್ಟಿಯಲ್ಲಿ ಸರ್ವ ಸೃಷ್ಟಿತುಂಬ ನಾನೇ ಒಬ್ಬನು ಇರುವುದು ಆತನಿಗೆ ಗೋಚರಿಸುವುದು. ನನ್ನ ಹೊರತಾಗಿ ಇತರ ಸರ್ವ ದ್ವಂದ್ವಗಳು-ತ್ರಿಪುಟೀಗಳು ಮುಳುಗಿಹೋಗುವುವು. ಇದರಿಂದ ಸುಖದುಃಖಗಳು ಆತನಿಗೆ ಬೆನ್ನುಹತ್ತುವುದಿಲ್ಲ ॥೬೯೭॥ ಆಗ ಅಲ್ಲಿ ಸುಖವು ಎಲ್ಲಿಯದು? ಮತ್ತು ದುಃಖವು ಎಲ್ಲಿಯದು? ಬಂಧನವು ಎಂತಹದ್ದು? ಮತ್ತು ಮೋಕ್ಷವು ಎಂತಹದ್ದು? ಪಂಡಿತನು ಯಾರು? ಮತ್ತು ಮೂರ್ಖನು ಯಾರು? ಸರ್ವವೂ ಒಂದೇ ಒಂದು ಪರಬ್ರಹ್ಮವಾಗಿರುವುದು ॥೬೯೮॥ ಅಲ್ಲಿ ದೇವರು ಯಾರು? ಮತ್ತು ಭಕ್ತನು ಯಾರು? ಶಾಂತವು ಯಾವುದು? ಮತ್ತು ಅಶಾಂತವು ಯಾವುದು? ದ್ವೈತ ಮತ್ತು ಅದ್ವೈತವು ಈ ಎಲ್ಲವೂ ನಷ್ಟವಾಗಿಹೋಗುವುವು ಮತ್ತು ಪರಬ್ರಹ್ಮವು ಸದೋದಿತವಾಗಿ ಸ್ವಾನಂದರೂಪದಿಂದ ಅಖಂಡವಾಗಿ ಇರುವುದು ॥೬೯೯॥

ಉಗಾಣಲೇ ಕ್ರಿಯಾಕರ್ಮ । ಲಾಜಾ ವಿರಾಲೇ ಧರ್ಮಾ ಧರ್ಮ । ಕೈಚೇ ಅಧಮ ಉತ್ತಮ ಮಧ್ಯಮ । ಪರಿಪೂರ್ಣ ಬ್ರಹ್ಮ ಕೋಂದಲೇ ॥೨೦೦॥ ತೇಥ ಕೈಚೇ ಶಾಸ್ತ್ರ ಕೈಚಾ ವೇದ । ಕೈಚೇ ಬುದ್ಧಿ ಕೈಚಾ ಬೋಧ । ನಿಃಶೇಷ ನಿಮಾಲಾ ಭೇದ । ಪರಮಾನಂದ ಕೋಂದಲಾ ॥೨೦೧॥ ಯಾಪರೀ ಮನೋವಿಜಯೇ ಪಹಾ ಹೋ । ಐಶಿಯಾ ಸ್ಥಿತೀ ಪಾವಲಾ ಭಾವೋ । ತೇಚಿ ಸ್ವಯೇ ವದೇ ದೇವೋ । ಯೇ ಅರ್ಥೀ ಸಂದೇಹೋ ಅಸೇನಾ ॥೨೦೨॥ ಮನೋಜಯಾಚಾ ಸದ್ಭಾವೋ । ಬ್ರಹ್ಮಾದಿಕಾ ಅಗಮ್ಯ ಪಹಾ ಹೋ । ಜೋ ಸ್ವಾಂಗೇ ಕರೀ ಸ್ವಯ ಮೇವೋ । ತೋ ದೇವಾಧಿದೇವೋ ನಿಜಬೋಧೇ ॥೨೦೩॥ ಜೋ ನಿಜಮನಾತೇ ಜಿಂಕೋನೀ । ಜನೀ ಪಾವಲಾ ಜನಾರ್ದನೀ । ತೋ ಧನ್ಯ ಧನ್ಯ ತ್ರಿಭುವನೀ । ತ್ಯಾಚೇನಿ ಅವನೀ ಪವಿತ್ರ ॥೨೦೪॥ ತೇಣೇಚಿ ಪೂರ್ವಜ ತಾರಿಲೇ । ತೇಣೇ ಸಕಳ ಕುಳ ಉದ್ಧರಿಲೇ । ತೇಣೇಚಿ ಪರಬ್ರಹ್ಮ ಆಂಗವಿಲೇ । ಜೇಣೇ ಜಿಂಕಿಲೇ ಮನಾತೇ ॥೨೦೫॥ ಮನೋಜಯೇ ಜೇ ಅತಿಸಮರ್ಥ । ಶಾಂತಿ ಸರ್ವಸ್ವೇ ವಿಕಿಲೀ ತೇಥ । ತ್ಯಾಂಸೀ ಸುಖದುಃಖಾಚೇ ಆವರ್ತ । ಗೇಲೇ ನ ಲಗತ ನಿಜಾತ್ಮತಾ ॥೨೦೬॥ ಐಶೀ ಭಿಕ್ಷೂಚೀ ನಿಜವಾಣೀ । ಉಲ್ಹಾಸೇ ಸಾಂಗೇ ಶಾಂರ್ಙ್ಗಪಾಣೀ । ಉದ್ಧವಾಸ ಮ್ಹಣೇ ಸಂತೋಷೋನೀ । ಧನ್ಯ ತ್ರಿಭುವನೀ ಮನೋಜಯ ॥೨೦೭॥ ಜೇಣೇ ನಿಜಮನಾತೇ ಜಿಂಕಿಲೇ । ತ್ಯಾಸೀ ಮೀ ಕಿತೀ ವಾನೂ ಬೋಲೇ । ತೇಣೇ ಮಜ ಆಪಲೇ ಪೋಸಣೇ ಕೇಲೇ । ಕೀ ವಿಕತ ಘೇತಲೇ ಉಖಿತೇಚಿ ॥೨೦೮॥ ಮಜ ಸುಖರೂಪಾ ತ್ಯಾಚೇನಿ ಸುಖಪ್ರಾಪ್ತೀ । ನಿತ್ಯತೃಪ್ತಾ ತ್ಯಾಚೇನಿ ತೃಪ್ತೀ । ಮಜ ಅನಂತಾ ತ್ಯಾಮಾಜೀ ವಸ್ತೀ । ಮೀ ದಾಟುಗಾ ತ್ರಿಜಗತೀ । ತ್ಯಾಚೇನಿ ॥೨೦೯॥ ''ಮೀ ತೋ'' ಯಾ ಶಬ್ದ ಕುಸರೀ । ತ್ಯಾಹೀ ಜಾಣ ಆಮ್ಹಾ ಬಾಹೇರೀ। ಆಂತುವಟೇ ನಿಜವಿಚಾರೀ। ತೋಚಿ ಮೀ ನಿರ್ಧಾರೀ ನಿಜಐಕ್ಯತಾ॥೨೧೦॥ ಮನೋ ಜಯೇ ಹೇ ಪದವೀ ಪ್ರಾಪ್ತ । ತೋ ಮನೋಜಯ ನ ಕರೂನಿ ತೇಥ । ಪ್ರಾಕೃತ ರಿಪುಜಯೇ ಜೇ ಗರ್ವಿತ । ತ್ಯಾತೇ ನಿರ್ಭರ್ತ್ಸಿತ ಸ್ವಯೇ ಭಿಕ್ಷು ॥೨೧೧॥

ತಂ ದುರ್ಜಯಂ ಶತ್ರುಮಸಹ್ಯವೇಗಮರುಂತುದಂ ತಂ ನ ವಿಜಿತ್ಯ ಕೇಚಿತ್ ।
ಕುರ್ವಂತ್ಯಸದ್ವಿಗ್ರಹಮತ್ರ ಮರ್ತ್ಯೈರ್ಮಿತ್ರಾಣ್ಯುದಾಸೀನರಿಪೂನ್ ವಿಮೂಢಾಃ ।೪೯॥

ಅರ್ಥ:- ನಿಜವಾಗಿಯು ಈ ಮನಸ್ಸು ಎಲ್ಲರಕ್ಕಿಂತಲೂ ದೊಡ್ಡ ವೈರಿಯಾಗಿರುವುದು. ಇದರ ಆಕ್ರಮಣವು ದುಸ್ತರವಾಗಿದೆ. ಇದು ಹೊರಗಿನ ಶರೀರವಷ್ಟೇ ಅಲ್ಲ, ಮರ್ಮಸ್ಥಾನಗಳಿಗೂ ದುಃಖ ಕೊಡುವುದು. ಇದನ್ನು ಜಯಿಸುವುದು ಮಹಾ ಕಠಿಣ ಕಾರ್ಯವಾಗಿರುವುದು. ಮನುಷ್ಯನು ಮೊಟ್ಟಮೊದಲು ಈ ಮನಸ್ಸನ್ನು ಜಯಿಸಬೇಕು. ಆದರೆ ಮೂರ್ಖ ಜನರು ಇದನ್ನು ಜಯಿಸುವ ಪ್ರಯತ್ನವನ್ನು ಮಾಡುವುದಿಲ್ಲ. ಬೇರೆಯವರೊಂದಿಗೆ ವ್ಯರ್ಥವಾಗಿ ಜಗಳವಾಡುವರು. ಇವರಿಗೆ ಮಿತ್ರ, ಶತ್ರು, ಉದಾಸೀನನ್ನಾಗಿ ಮಾಡುವರು.

ಅಲ್ಲಿ ಕ್ರಿಯೆಗಳು ಮತ್ತು ಕರ್ಮಗಳು ಇಲ್ಲದಾಗುವುವು. ಧರ್ಮ ಮತ್ತು ಅಧರ್ಮಗಳು ನಾಚಿಕೊಂಡು ಕರಗಿಹೋಗುವುವು. ಅಲ್ಲಿ ಉತ್ತಮ, ಮಧ್ಯಮ ಕನಿಷ್ಠ ಇವು ಇರುವುದಿಲ್ಲ. ಪರಿಪೂರ್ಣವಾದ ಪರಬ್ರಹ್ಮವೇ ಯಾವಾಗಲೂ ತುಂಬಿಕೊಂಡಿರುವುದು ॥೨೦೦॥ ಅಲ್ಲಿ ಶಾಸ್ತ್ರ ಯಾವುದು? ವೇದವು ಯಾವುದು? ಮತ್ತು ಎಲ್ಲಿಯ ಬುದ್ಧಿ? ಎಲ್ಲಿಯ ಬೋಧ? ಸರ್ವ ಪ್ರಕಾರದ ಭೇದವೇ ನಷ್ಟವಾಗಿ ಬಿಡುವುದು ಮತ್ತು ಸತ್ ಚಿತ್ ಆನಂದರೂಪ ಪರಬ್ರಹ್ಮವು ತುಂಬಿ ಇರುವುದು ॥೨೦೧॥ ಈ ಪ್ರಕಾರವಾಗಿ ಮನಸ್ಸಿನ ಜಯವನ್ನು ಸಂಪಾದಿಸುವುದರಿಂದ ಆತನ ಭಾವನೆಯು ಈ ಸ್ಥಿತಿಗೆ ಮುಟ್ಟಿಕೊಳ್ಳುವುದು. ಇದನ್ನು ಸ್ವತಃ ಭಗವಂತನು ಹೇಳುತ್ತಿರುವುದರಿಂದ ಇದರಲ್ಲಿ ಎಳ್ಳಷ್ಟೂ ಕೂಡ ಸಂಶಯವಿರುವುದಿಲ್ಲ ॥೨೦೨॥ ಮನೋಜಯವನ್ನು ಸಂಪಾದಿಸುವುದು ಇದು ಸ್ವತಃ ಬ್ರಹ್ಮದೇವರಿಗೂ ಕೂಡ ಅಗಮ್ಯವಾಗಿರುವುದು. ಹೀಗಿರುತ್ತಿರಲು ಯಾವನು ಸ್ವತಃವೇ ತನ್ನಷ್ಟಕ್ಕೆ ತಾನೇ ಮನೋಜಯವನ್ನು ಪ್ರಾಪ್ತ ಮಾಡಿಕೊಳ್ಳುವನೋ, ಆತನು ಆತ್ಮಜ್ಞಾನದಿಂದ ದೇವಾಧಿದೇವನಾಗುವನು ॥೨೦೩॥ ಯಾರು ತನ್ನ ಮನವನ್ನು ಜಯಿಸಿ, ಈ ಲೋಕದಲ್ಲಿಯೇ ಜನಾರ್ದನನಲ್ಲಿ ಏಕರೂಪನಾಗುವನೋ, ಆತನು ತ್ರಿಭುವನದಲ್ಲಿಯೇ ಅತ್ಯಂತ ಧನ್ಯನು. ಈತನಿಂದಲೇ ಪೃಥ್ವಿಯು ಪಾವನವಾಗುತ್ತಿರುವುದು ॥೨೦೪॥ ಈತನಿಂದಲೇ ಪೂರ್ವಜರು ಉದ್ಧಾರರಾದರು. ಈತನೇ ಸರ್ವ ಕುಲದ ಉದ್ಧಾರವನ್ನು ಮಾಡಿದನು ಮತ್ತು ಪರಬ್ರಹ್ಮವನ್ನು ಸ್ವಾಧೀನ ಮಾಡಿಕೊಂಡನು ॥೨೦೫॥ ಮನೋಜಯದಿಂದ ಯಾವನು ಸಮರ್ಥನಾಗಿರುವನೋ, ಅಲ್ಲಿಯೇ ಶಾಂತಿಯು ಸರ್ವಭಾವದಿಂದ ತನ್ನನ್ನು ಮಾರಿಕೊಂಡಿರುವುದು. ಅವರಿಗೆ ಆತ್ಮಯೋಗದ ಬೋಧೆಯಿಂದ ಸುಖದುಃಖಗಳ ಸುಳಿಗಳು ಸ್ಪರ್ಶವನ್ನು ಮಾಡದೇ ಹೋಗಿಬಿಡುವುವು. ॥೨೦೬॥ ಹೀಗೆ ಆ ಯಾವ ಭಿಕ್ಷು ಸ್ವತಃ ಮಾಡಿದ ಭಾಷಣವನ್ನು ಶ್ರೀಕೃಷ್ಣನು ಅತ್ಯಂತ ಉಲ್ಹಾಸಭರಿತನಾಗಿ ಉದ್ಧವನಿಗೆ ಹೇಳಿ, ಮನೋಜಯವು ಇದು ತ್ರಿಭುವನದಲ್ಲಿಯೇ ಧನ್ಯವಾಗಿರುವುದು ಎಂದನು ॥೨೦೭॥ ಯಾರು ತನ್ನ ಮನವನ್ನು ಜಯಿಸಿರುವನೋ ಆತನ ವರ್ಣನೆಯನ್ನು ಯಾವ ಶಬ್ದದಿಂದ ಹೇಗೆ ಮಾಡಬೇಕು? ಆತನು ನನ್ನನ್ನು ತನ್ನ ದಾಸನನ್ನಾಗಿ ಮಾಡಿಕೊಂಡನು. ಆಗ ಏಕಾಏಕಿಯಾಗಿ ನನ್ನನ್ನು ಖರೀದಿಸಿಬಿಟ್ಟನು ॥೨೦೮॥ ಆನಂದಸ್ವರೂಪನಾದ ನನಗೆ ಆತನಿಂದಲೇ ಆನಂದವಾಗುವುದು. ನಿತ್ಯತೃಪ್ತನಾಗಿರುವ ನಾನು ಆತನಿಂದ ತೃಪ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವೆನು. ನಾನು ಸ್ವತಃ ಅನಂತನಾಗಿದ್ದರೂ ಆತನಲ್ಲಿ ನನ್ನ ವಸತಿ ಇರುವುದು. ಈತನಿಂದಲೇ ನಾನು ತ್ರಿಭುವನದಲ್ಲಿ ಬಲಾಢ್ಯನಾಗಿರುವೆನು ॥೨೦೯॥ ''ಅದುವೇ ನಾನು'' ಹೀಗೆನ್ನುವುದು ಮಾತಿನ ಕೌಶಲ್ಯವಾಗಿರುವುದು. ಅದುಕೂಡ ನಮ್ಮ ಆಚೆಗೆ ಇರುವುದು. ವಾಸ್ತವಿಕವಾಗಿ ಆತನು ಮತ್ತು ನಾನು ಐಕ್ಯರೂಪದಿಂದ ಒಂದೇ ಇರುವೆವು ॥೨೧೦॥ ಆದ್ದರಿಂದ ಮನೋಜಯವನ್ನು ಪ್ರಾಪ್ತ ಮಾಡಿಕೊಳ್ಳದೇ ಇಹಲೋಕದ ಸಾಮಾನ್ಯ ಶತ್ರುಗಳಲ್ಲಿ ಜಯವನ್ನು ಸಂಪಾದಿಸಿ ಗರ್ವದಿಂದ ಉಬ್ಬಿಕೊಳ್ಳುವರು. ಅದರ ಅವಹೇಳನೆಯನ್ನು ಸ್ವತಃ ಭಿಕ್ಷು ಮಾಡುತ್ತಿರುವನು ೨೧೧॥

ಪಾರ್ಥಿವ ಶತ್ರು ಸಬಳ ಯೇತೀ । ತೇಥ ಸಾಮದಾನಾದಿಕಾ ಸ್ಥಿತೀ । ಕಾರಣೇ ಲಾವೋನಿಯಾ ಖ್ಯಾತೀ । ಜಿಂಕಿಲೇ ಜಾತೀ ನಿಜಾಂಗೇ ॥೭೧೨॥ ಹೇ ಪ್ರಕಾರ ಮನಾಚ್ಯಾ ಠಾಯೀ । ಕರಿತಾ ನ ಚಲತೀ ಪಾಹೀ । ಮನಾಸೀ ಕರಾವೀ ಶಿಷ್ಟಾ ಈ । ತೇ ಕೋಣಾಚೇ ಕಾಂಹೀ ಐಕೇನಾ ॥೭೧೩॥ ಮನಾಸೀ ದ್ಯಾವೇ ವಿಷಯದಾನ । ಪರೀ ವಿಷಯೀ ತೃಪ್ತ ನವ್ಹೇ ಮನ । ತೇಣೇ ಅಧಿಕಚಿ ಹೋಯ ದಾರುಣ । ಆವರೀ ಕೋಣ ತಯಾಸೀ ॥೭೧೪॥ ನ ಚಲೇ ಶಮದಮಾದಿ ಪ್ರಕಾರೂ । ತರೀ ಮನಾಸೀ ಕರಾವಾ ಮಾರೂ । ತೇಥ ನ ಚಲೇ ಹಾತಿಯೇರೂ । ಮಾರಣೇ ವಿಚಾರೂ ಸ್ಫುರೇನಾ ॥೭೧೫॥ ಯಾಪರೀ ಹಾ ಮನೋವೈರೀ । ದುರ್ಜಯತ್ವೇ ಕಠಿಣ ಭಾರೀ । ತೋ ಸುಖ ದುಃಖಾಂಚ್ಯಾ ಭರೋವರೀ । ಸರ್ವದಾ ಮಾರೀ ಜನ್ಮ ಮರಣೇ ॥೭೧೬॥ ಇತರ ಶತ್ರು ನಾವರತೀ । ತರೀ ಪಳೋ ಯೇ ಹಾತೋಹಾತೀ । ರಿಘೋನಿಯಾ ಗಡದುರ್ಗಾಪ್ರತೀ । ವಾಂಚತೀ ಗತೀ ದೇಖೀಜೇ ॥೭೧೭॥ ಪರೀ ಪಳಾವಯಾ ಮನಾಪುಢೇ । ಪಳತಾ ತ್ರೈಲೋಕ್ಯ ಹೋಯ ಥೋಡೇ । ಜೇಥ ಲಪಾವೇ ಅವಘಡೇ । ತೇಥ ಹೀ ರೋಕಡೇ ಮನ ಪಾವೇ ॥೭೧೮॥ ಮನಾಚೇ ಸೇನಾಪತೀ ಶೂರ । ಕಾಮಕ್ರೋಧಾದಿ ಮಹಾವೀರ । ತ್ಯಾಂಚಾ ಮಾರ ಅತಿದುರ್ಧರ । ಘಾಯೀ ಥೋರ ಥೋರ ಲೋಳವಿತೀ ॥೭೧೯॥ ಬಾಹ್ಯ ಶತ್ರು ತೇ ದೂರದೇಶೀ । ಯೇತಾ ಬಹು ದಿನ ಲಾಗತೀ ತ್ಯಾಂಸೀ । ಮನಃಶತ್ರು ತೋ ಅಂಗೇಸೀ । ಅಹರ್ನಿಶೀ ಜಡಲಾಸೇ ॥೭೨೦॥ ಆಸನೀ ಭೋಜನೀ ಏಕಾಂತೀ । ಜಪೀ ಅಥವಾ ಧ್ಯಾನಸ್ಥಿತೀ । ಮನಾಚೇ ಉಡೀ ಪಡೇ ಅವಚಿತ್ತೀ । ವಿಭಾಂಡೀ ಸರ್ವಾರ್ಥೀ ವೈರಾಕಾರೇ ॥೭೨೧॥ ಬಾಹ್ಯ ಶುತ್ರೂಚೇ ಅಲ್ಪ ದುಃಖ । ಮನಾಚೇ ಪೀಡಾ ವಿಶೇಖ । ಜನ್ಮ ಮರಣಾಂಚೇ ಆವರ್ತ ದೇಖ । ಮನ ಆವಶ್ಯಕ ಭೋಗವೀ ॥೭೨೨॥ ಬಾಹ್ಯ ಶತ್ರು ಮರಣಾತ್ಮಕ । ಮನ ಮರಣಾಸೀ ಅಟಕ । ಹಾ ವೈರೀ ನ ಜಿಂಕಿತಾ ದೇಖ । ಜೀವಾಚೇ ಅತಿದುಃಖ ಟಳೇನಾ ॥೭೨೩॥ ಮನಾಚೇ ಸವೇಗ ವೇಗಾಸೀ । ನ ಸಾಹವೇ ಸುರನರಾಂಸೀ । ಕಷ್ಟೀ ನ ಜಿಂಕವೇ ಕೋಣಾಸೀ । ಯಾಲಾಗಿ ಮನಾಸೀ ದುರ್ಜಯತ್ವ ॥೭೨೪॥

ಬಲಾಢ್ಯ ರಾಜರು ಸೈನ್ಯದೊಂದಿಗೆ ಯುದ್ಧಕ್ಕಾಗಿ ಧಾವಿಸಿ ಬಂದು ಆಗ ನೀತಿಯುಕ್ತರಾದ ಈ ರಾಜರು ಸಾಮ, ದಾಮ ದಂಡ ಮತ್ತು ಭೇದ ಈ ಉಪಾಯಗಳಿಂದ ಅವರನ್ನು ಜಯಿಸುವರು ॥೭೧೨॥ ಆದರೆ ಈ ಯಾವ ಉಪಾಯಗಳೂ ಮನಸ್ಸಿನ ಮುಂದೆ ನಡೆಯ ಲಾರವು. ಮನಸ್ಸಿಗೆ ಏನಾದರೂ ತಿಳಿಸಿ ಹೇಳಬೇಕೆಂದು ಪ್ರಯತ್ನಿಸಿದರೆ ಅದು ಯಾರ ಮಾತನ್ನೂ ಯಾವುದೊಂದೂ ಕೇಳಲು ಸಿದ್ಧವಿಲ್ಲ ॥೭೧೩॥ ಮನಸ್ಸಿಗೆ ವಿಷಯಗಳನ್ನು ದಾನವಾಗಿ ನೀಡಲು ಅದು ವಿಷಯ ಭೋಗಗಳಿಂದ ಎಂದಿಗೂ ತೃಪ್ತವಾಗುವುದಿಲ್ಲ. ದಾರುಣವಾದ ಭೋಗೇಚ್ಛೆಯು ಬೆಳೆಯುತ್ತ ಸಾಗುವುದು. ಹೀಗಿರಲು ಅದನ್ನು ಯಾರು ತಡೆಹಿಡಿಯಬೇಕು? ॥೭೧೪॥ ಶಮ ದಮಾದಿಗಳ ಪ್ರಕಾರವು ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅದನ್ನು ಕೊಂದುಬಿಡಬೇಕೆಂದರೆ ಯಾವ ಶಸ್ತ್ರಗಳೂ ಅದಕ್ಕೆ ನಾಟುವುದಿಲ್ಲ ॥೭೧೫॥ ಈ ಪ್ರಕಾರವಾಗಿ ಮನರೂಪೀ ವೈರಿಯನ್ನು ಜಯಿಸುವುದು ಅತಿಶಯವಾಗಿ ಕಠಿಣ ಕಾರ್ಯವಾಗಿರುವುದು. ಈ ಮನಸ್ಸೇ ಸುಖದುಃಖಗಳ ಸಹಾಯದಿಂದ ಜನ್ಮ ಮರಣಗಳಿಂದ ಸತತವಾಗಿ ನಮ್ಮನ್ನು ಹೊಡೆಯುತ್ತಿರುವುದು ॥೭೧೬॥ ಇತರ ಶತ್ರುಗಳನ್ನು ನಮಗೆ ಜಯಿಸುವುದು ಸಾಧ್ಯವಾಗದಿದ್ದರೆ ನಾವು ಅಲ್ಲಿಂದ ಕೂಡಲೇ ಓಡಿಹೋಗಬಹುದಾಗಿದೆ. ಪರ್ವತದ ದುರ್ಗದಲ್ಲಿ ಎಲ್ಲಿಯಾದರೂ ಅಡಗಿಕೊಂಡು ತಮ್ಮ ಪ್ರಾಣಗಳನ್ನು ಉಳಿಸಬಹುದಾಗಿದೆ ॥೭೧೭॥ ಆದರೆ ಮನಸ್ಸಿಗೆ ಹೆದರಿ ಓಡಿ ಹೋಗಬೇಕೆಂದರೆ ಮೂರು ಲೋಕಗಳು ಸಾಲುವುದಿಲ್ಲ. ಯಾವುದೇ ದುರ್ಗಮವಾದ ಸ್ಥಾನದಲ್ಲಿ ಅಡಗಿ ಕುಳಿತುಕೊಳ್ಳಬೇಕೆಂದರೆ ಅಲ್ಲಿ ಮನವು ಎದುರಿನಲ್ಲಿಯೇ ಬಂದು ನಿಲ್ಲುವುದು ॥೭೧೮॥ ಕಾಮ, ಕ್ರೋಧಾದಿ ಮಹಾವೀರರು ಈ ಮನಸ್ಸಿನ ಶೂರ ಸೇನಾಪತಿಗಳಾಗಿರುವರು. ಅವರ ಪ್ರಹಾರವು ಅತಿಶಯವಾಗಿದ್ದು ಯಾರಿಗೂ ಸಹಿಸುವುದಾಗುವುದಿಲ್ಲ, ಇವು ತಮ್ಮ ಒಂದೇ ಒಂದು ಹೊಡೆತದಿಂದ ಮಹಾ ಮಹಾ ಯೋದ್ಧರನ್ನು ನೆಲಕ್ಕೆ ಉರುಳಿಸುವುವು ॥೭೧೯॥ ಹೊರಗಿನ ಶತ್ರುಗಳವರಿಗೆ ದೂರ ದೇಶದಿಂದ ಬರಲು ಕೆಲವು ಕಾಲ ಬೇಕಾಗುವುದು. ಆದರೆ ಈ ಯಾವ ಮನರೂಪೀ ಶತ್ರು ಹಗಲು ರಾತ್ರಿ ನಮ್ಮ ಹತ್ತಿರವೇ ಇರುತ್ತಿರುವನು ॥೭೨೦॥ ನಾವು ಆಸನದಮೇಲೆ ಕುಳಿತಿರಲಿ, ಭೋಜನವನ್ನು ಮಾಡುತ್ತಿರಲಿ, ಏಕಾಂತದಲ್ಲಿರಲಿ, ಜಪವನ್ನು ಮಾಡುತ್ತಿರಲಿ, ಧ್ಯಾನವನ್ನು ಮಾಡುತ್ತಿರಲಿ ಆಗ ಮನರೂಪೀ ವೈರಿಯು ಕೂಡಲೇ ಏರಿ ಬಂದು ಶತ್ರುವಿನಂತೆ ನಮ್ಮನ್ನು ಪರಾಭವಗೊಳಿಸುವುದು ॥೭೨೧॥ ಹೊರಗಿನ ಶತ್ರುಗಳ ಬಾಧೆಯು ಅತ್ಯಂತ ಅಲ್ಪವಾಗಿರುವುದು. ಆದರೆ ಮನಸ್ಸಿನ ಬಾಧೆಯನ್ನು ತಡೆಯುವುದಾಗುವುದಿಲ್ಲ. ಇದು ಜನ್ಮ ಮರಣಗಳ ಅನೇಕ ಸುತ್ತನ್ನು ಭೋಗಿಸಲು ಹಚ್ಚುವುದು ॥೭೨೨॥ ಹೊರಗಿನ ಶತ್ರು ಮರಣಾಧೀನನಾಗಿರುವನು. ಆದರೆ ಮನಸ್ಸು ಮರಣಕ್ಕೂ ವಿಘ್ನವನ್ನು ತರುವುದು. ಈ ಮನರೂಪೀ ಶತ್ರುವನ್ನು ಜಯಿಸದಿದ್ದರೆ ಜೀವದ ಅತ್ಯಂತ ದುಃಖವು ಮುಗಿಯುವುದೇ ಇಲ್ಲ ॥೭೨೩॥ ಮನಸ್ಸಿನ ವೇಗವು ಪ್ರಚಂಡವಾಗಿರುವುದು. ಇದು ಯಾವ ಸುರನರರಿಗೂ ಸಹಿಸಲು ಅಸಾಧ್ಯವಾಗಿರುವುದು. ಯಾರೇಯಾಗಲಿ, ಎಷ್ಟೇ ಕಷ್ಟಪಡಲಿ, ಮನಸ್ಸನ್ನು ಜಯಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಮನಸ್ಸು ದುರ್ಜಯವಾಗಿರುವುದು ॥೭೨೪॥

ಐಶಿಯಾ ಮನಾತೇ ನ ಜಿಂಕಿತ । ಬಾಹ್ಯ ಶತ್ರು ಜಿಣೋನಿ ಯೇಥ । ಜೇ ಹೋತೀ ಅತಿಗರ್ವಿತ । ತೇ ನಿಶ್ಚಿತ ಜಾಣ ಮಹಾ ಮೂರ್ಖ ॥೭೨೫॥ ಮನೇಚಿ ಜಿಂಕಾವೇ ಮನಾಸೀ। ಹೇ ಗತಶ್ಲೋಕೀ ತುಜಪಾಶೀ । ಸಾಂಗಿ ತಲೇ ಯಥಾರ್ಥೇಸೀ । ಮನೋಜಯಾಸೀ ಉಪಾವೋ ॥೭೨೬॥ ಏವಂ ಮನಾತೇ ಐಶಿಯಾಪರೀ । ನ ಸಾಧ ವೇಚಿ ಕರೂನಿ ವೈರೀ । ತರೀ ಮನಾಸೀ ಕರೋನಿ ಮೈತ್ರೀ । ಮನ ಸುಖೀ ಕರೀ ಮಿತ್ರತ್ವೇ ॥೭೨೭॥ ಪ್ರಾಕೃತ ಮಿತ್ರಾಂಚೀ ಮೈತ್ರೀ । ಉಪಕಾರೀ ಪ್ರತ್ಯುಪಕಾರೀ । ತೇಹೀ ವಿಷಯಸುಖಾವರೀ । ಯೇರಯೇರ ಘರೀ ಉಚಿತಾ ನುಕಾಳೇ॥೭೨೮॥ ತೈಶೀ ನವ್ಹೇ ಮನಾಚೀ ಮೈತ್ರೀ। ಉಪಕಾರೇವೀಣ ಪ್ರತ್ಯುಪಕಾರೀ । ಸಕಳ ದುಃಖಾತೇ ನಿವಾರೀ । ಸುಖಸಾಗರೀ ನಾಂದವೀ॥೭೨೯॥ ಪ್ರಾಕೃತೀ ಅತಿಮಿತ್ರತ್ವ ಜ್ಯಾಸೀ । ನಿಜದುಃಖ ಸಾಂಗತಾ ತ್ಯಾಪಾಶೀ । ಸರ್ವಥಾ ನಿವಾರೇನಾ ತ್ಯಾಸೀ। ಮ್ಹಣೇ ಹೇ ಆಮ್ಹಾಂಸೀ ಅಸಾಧ್ಯ ॥೭೩೦॥ ತೈಸೇ ಮಿತ್ರತ್ವಾ ನವ್ಹೇ ಮನ । ಮನಾ ಬೈಸವೂನಿ ಸಾವಧಾನ । ಕರಿತಾ ನಿಜದುಃಖ ನಿವೇದನ । ಹರೀ ಜನ್ಮ ಮರಣಮಹಾಬಾಧಾ ॥೭೩೧॥ ಮರಣಭಯ ಅಸತಾ ಚಿತ್ತೀ। ಕನಕಕಾಮಿನೀಂಚೀ ಆಸಕ್ತೀ। ಸ್ತ್ರಿಯಾ ಅತಿಶಯೇ ನಿರ್ಭಸ್ತಿತೀ। ತರೀ ನಿರ್ಲಜ್ಜ ವೃತ್ತೀ ಲಾಜೇನಾ ॥೭೩೨॥ ಪರದಾರಾ ಪರಧನ। ಪರದ್ರೋಹೋ ಪರನಿಂದಾ ಜಾಣ। ಲಾಗಲ್ಯಾ ನ ಸಾಂಡಿತಾ ಕ್ಷಣ। ನರಕ ದಾರುಣ ಭೋಗಾವಯಾ ॥೭೩೩॥ ಉಸಂತ ನಾಹೀ ಕ್ಷುಧೇಹಾತೀ । ದ್ವಂದ್ವ ದುಃಖಾಂಚೀ ಅತಿ ಪ್ರಾಪ್ತೀ । ನಾವರೇ ಇಂದ್ರಿಯವೃತ್ತೀ । ಐಸೇ ಮನಾಪ್ರತೀ ಸಾಂಗತಾ ॥೭೩೪॥ ಐಸೇ ಐಕತಾ ಸ್ವಯೇ ಮನ । ವೈರಾಗ್ಯೇ ಖವಳೇ ಪೂರ್ಣ । ವೇಂಚೂನಿ ವಿವೇಕಾಚೇ ಧನ । ದುಃಖನಿರ್ದಳಣ ಕರೂ ಪಾವೇ ॥೭೩೫॥ ಚೋರ ಭಾಂಡಾರೀ ಕರಿತ ಪೂರ್ಣ । ಚೋರ ಚೋರಾತೇ ನಿವಾರೀ ಜಾಣ। ತೇವೀ ಮನಾಸೀ ಕರಿತಾ ಮಿತ್ರಪಣ । ಮನಾಚೇ ಅವಗುಣ ಮನಚಿ ನಾಶೀ ॥೭೩೬॥ ಅಧರ್ಮೀ ಪ್ರವರ್ತತಾ ಆಪಣ । ಮನಚಿ ಮನಾಸೀ ನಿವಾರೀ ಜಾಣ । ಅಸತ್ಯಾಚೀ ವಾಚೇಸೀ ಆಣ । ಆಪಣ್ಯಾ ಆಪಣ ಮನ ಘಾಲೀ ॥೭೩೭॥ ಕೈಶೀ ಮನಾಚೀ ಮೈತ್ರೀ ಪರಮ । ನಿಃಶೇಷ ಜಾಳಾವಯಾ ಕರ್ಮಾಕರ್ಮ । ಜೋಡಾವಯಾ ಚಿತ್ತಶುದ್ಧೀಚೇ ವರ್ಮ । ಸ್ಮರೇ ಹರಿನಾಮ ಅಹರ್ನಿಶೀ ॥೭೩೮॥

ಇಂತಹ ಅಜಿಂಕ್ಯ ಮನಸ್ಸನ್ನು ಜಯಿಸದೇ ಕೇವಲ ಬಾಹ್ಯ ಶತ್ರುಗಳನ್ನು ಜಯಿಸಿ ತಮ್ಮ ಗರ್ವವನ್ನು ಪ್ರದರ್ಶಿಸುವವರು ನಿಜವಾಗಿಯೂ ಮಹಾಮೂರ್ಖರಾಗಿರುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೭೨೫॥ ಮನಸ್ಸಿನಿಂದಲೇ ಮನಸ್ಸನ್ನು ಜಯಿಸುವುದು ಮನೋಜಯದ ಸ್ಪಷ್ಟವಾದ ಉಪಾಯವಾಗಿರುವುದು. ಇದನ್ನು ನಾನು ಈ ಹಿಂದಿನ ಶ್ಲೋಕದಲ್ಲಿ ಹೇಳಿರುವೆನು ॥೭೨೬॥ ಮನಸ್ಸನ್ನು ವೈರಿಯನ್ನಾಗಿ ಮಾಡಿಕೊಂಡು ಅದಕ್ಕೆ ಜಯಿಸುವುದು ಆಗುವುದಿಲ್ಲ. ಆದ್ದರಿಂದ ಆ ಮನಸ್ಸಿನೊಂದಿಗೆ ಸ್ನೇಹವನ್ನು ಬೆಳೆಸಬೇಕು. ಮಿತ್ರಭಾವನೆಯಿಂದ ಮನಸ್ಸಿಗೆ ಸುಖಿಯನ್ನಾಗಿ ಮಾಡಬೇಕು ॥೭೨೭॥ ಜಗತ್ತಿನಲ್ಲಿಯ ಮಿತ್ರತ್ವವು ಇದು ಪರಸ್ಪರರಲ್ಲಿ ಉಪಕಾರವನ್ನು ಮಾಡುತ್ತಿರುವುದು. ಈ ಮಿತ್ರತ್ವವು ಕೇವಲ ವಿಷಯ ಸುಖಕ್ಕಾಗಿ ಇರುವುದು. ಪ್ರಸಂಗಾನುಸಾರವಾಗಿ ಒಬ್ಬರಿಗೊಬ್ಬರು ಮನೆಗೆ ಹೋಗುತ್ತಿರುವರು ॥೭೨೮॥ ಆದರೆ ಮನಸ್ಸಿನ ಮಿತ್ರತ್ವವು ಈ ಸ್ವರೂಪದಿಂದ ಕೂಡಿರುವುದಿಲ್ಲ. ಇದು ಉಪಾಕಾರವಿಲ್ಲದೇ ಪ್ರತ್ಯುಪಕಾರವನ್ನು ಮಾಡುವುದು. ಸರ್ವ ದುಃಖದ ನಿವಾರಣೆಯನ್ನು ಮಾಡುವುದು ಮತ್ತು ಸುಖಸಾಗರದಲ್ಲಿ ವರ್ತಿಸಲು ಹಚ್ಚುವುದು ॥೭೨೯॥ ವ್ಯವಹಾರದಲ್ಲಿನ ಸರ್ವಸಾಮಾನ್ಯ ಮಿತ್ರನಲ್ಲಿ ತನ್ನ ದುಃಖಗಳನ್ನು ಹೇಳಿಕೊಂಡರೆ, ಆಗ ಆತನಿಗೆ ಅದರ ನಿವಾರಣೆಯನ್ನು ಮಾಡುವುದಾಗುವುದಿಲ್ಲ. ಇದು ನಮಗೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುವನು ॥೭೩೦॥ ಆದರೆ ಮನಸ್ಸಿನ ಮಿತ್ರತ್ವವು ಈ ಪ್ರಕಾರವಾಗಿರುವುದಿಲ್ಲ. ಶಾಂತ ರೀತಿಯಲ್ಲಿ ತನ್ನ ದುಃಖಗಳನ್ನು ಮನಸ್ಸಿಗೆ ತಿಳಿಸಿ ಹೇಳಿದರೆ ಅದು ಜನ್ಮಮರಣದ ಮಹಾಬಾಧೆಯನ್ನು ನಿವಾರಣೆ ಮಾಡುವುದು ॥೭೩೧॥ ಮನಸ್ಸಿನಲ್ಲಿ ಮರಣದ ಭಯವಿದ್ದರೂ ಕೂಡ ಕನಕ ಮತ್ತು ಕಾಂತಾ ಇವರ ಆಸಕ್ತಿ ವಿರುವುದು. ಸ್ತ್ರೀಯರು ಈತನನ್ನು ಅತಿಶಯವಾಗಿ ದೂರಿಸುತ್ತ ನಿಂದಿಸಿದರೂ ಕೂಡ ಆತನ ನಿರ್ಲಜ್ಜತನದ ವೃತ್ತಿಗೆ ನಾಚಿಕೆಯು ಉಂಟಾಗುವುದಿಲ್ಲ ॥೭೩೨॥ ಪರಸ್ತ್ರೀ, ಪರದ್ರವ್ಯ, ಪರನಿಂದಾ ಇವುಗಳ ಚಟವು ಒಮ್ಮೆ ಹತ್ತಲು, ಈ ವ್ಯಸನವು ಒಂದು ಕ್ಷಣಹೊತ್ತೂ ಸಹ ಶಾಂತವಾಗಿ ಕುಳಿತುಕೊಳ್ಳಲು ಬಿಡುವುದಿಲ್ಲ. ಕೊನೆಗೆ ಭಯಾನಕವಾದ ನರಕವಾಸವನ್ನು ಭೋಗಿಸಲು ಹಚ್ಚುವುದು ॥೭೩೩॥ ಹಸಿವೆಯ ಮುಂದೆ ಸ್ವಲ್ಪ ಸಮಯವೂ ಕೂಡ ನಡೆಯುವುದಿಲ್ಲ. ದ್ವಂದ್ವದ ದುಃಖಗಳು ಮಾತ್ರ ಒಂದರ ಮೇಲೊಂದು ಬಂದು ಬಡೆದುಕೊಳ್ಳುವುವು. ಇಂದ್ರಿಯಗಳ ವೃತ್ತಿಯನ್ನು ತಡೆಹಿಡಿಯಲು ಆಗುವುದೇ ಇಲ್ಲ. ಈ ರೀತಿಯಾಗಿ ತನ್ನ ಮನಸ್ಸಿಗೆ ನಿವೇದಿಸಿಕೊಳ್ಳಲು ॥೭೩೪॥ ಆಗ ಆ ಮನವು ಸ್ವತಃ ವೈರಾಗ್ಯದಿಂದ ಉಗ್ರಗೊಳ್ಳುವುದು ಮತ್ತು ವಿವೇಕದ ದ್ರವ್ಯವನ್ನು ಖರ್ಚುಮಾಡಿ ದುಃಖವನ್ನು ಇಲ್ಲದಾಗಿ ಮಾಡಲು ಸಿದ್ಧವಾಗುವುದು ॥೭೩೫॥ ಒಬ್ಬ ಕಳ್ಳನನ್ನು ಕೋಶಾಧ್ಯಕ್ಷನನ್ನಾಗಿ ಮಾಡಿ ಅದರ ರಕ್ಷಣೆಯ ಅಧಿಕಾರವನ್ನು ನೀಡಲು ಆ ಕಳ್ಳನು ಇತರ ಕಳ್ಳರನ್ನು ನಿವಾರಣೆ ಮಾಡುವನು. ಅದರಂತೆ ಮನಸ್ಸಿನ ಜೊತೆಯಲ್ಲಿಯೇ ಸ್ನೇಹವನ್ನು ಬೆಳೆಸಿಕೊಳ್ಳಲು ಆಗ ಮನದಲ್ಲಿ ನಿರ್ಮಾಣವಾಗುತ್ತಿರುವ ದುರ್ಗುಣಗಳನ್ನು ಆ ಮನಸ್ಸೇ ಇಲ್ಲದಂತಾಗಿ ಮಾಡುವುದು ॥೭೩೬॥ ನಾವು ಅಧರ್ಮ ಕಾರ್ಯಗಳನ್ನು ಮಾಡಲು ಹೋದರೆ ಆಗ ಮನಸ್ಸೇ ಮನಸ್ಸಿಗೆ ಅದನ್ನು ಮಾಡದಂತೆ ಮಾಡಿ ವಾಣಿಗೆ ಅಸತ್ಯವನ್ನು ನುಡಿಯಬೇಡ ಎಂದು ಅದಕ್ಕೆ ಶಪಥವನ್ನು ಹಾಕುವುದು ॥೭೩೭॥ ಮನಸ್ಸಿನ ಈ ಸ್ನೇಹವು ಎಷ್ಟು ವಿಲಕ್ಷಣವಾಗಿದೆ ನೋಡಿರಿ, ಕರ್ಮಾಕರ್ಮಗಳನ್ನು ನಿಃಶೇಷವಾಗಿ ನಾಶಮಾಡುವುದಕ್ಕಾಗಿ ಹಾಗೂ ಚಿತ್ತಶುದ್ಧಿಯ ಮರ್ಮವನ್ನು ತಿಳಿದುಕೊಳ್ಳುವುದಕ್ಕಾಗಿ ಅದು ಹಗಲು ರಾತ್ರಿ ಹರಿನಾಮದ ಸ್ಮರಣೆಯನ್ನು ಮಾಡಲಾರಂಭಿಸುವುದು ॥೭೩೮॥

ಶ್ರೀರಾಮ ಜಯರಾಮ ದೋ ಅಕ್ಷರೀ । ಮಹಾಪಾತಕಾ ಹೋಯ ಬೋಹರೀ । ನಾಮ ನ ವಿಸಂಬೇ ಕ್ಷಣಭರೀ । ಅಖಂಡಾಕಾರೀ ಹರಿ ಸ್ಮರೇ ॥೭೩೯॥ ತೇವ್ಹಾ ಅಸತ್ಯಾಚೇ ಶೀಸ ತೋಡೀ । ಅಧರ್ಮಾಚೀ ಸಾಲೀ ಕಾಢೀ । ಕಲ್ಪನೇಚೇ ಪಾಯ ಮೋಡೀ । ತಟಕಾ ತೋಡೀ ಆಶೇಚಾ ॥೭೪೦॥ ವಿಕಲ್ಪಾಚಾ ಘರಠಾವ ಮೋಡೀ । ಪ್ರಪಂಚಾಚೇ ದಾಂತ ಪಾಡೀ । ಅವಿಶ್ವಾಸೂ ತೀ ಠಾಯೀ ತೋಡೀ । ವಿಶ್ವಾಸಾಚೀ ಗುಢೀ ಉಭವೀ ಮನ ॥೭೪೧॥ ಐಸೇನಿ ಪರಿಪಕ್ಕ ವಿಶ್ವಾಸೀ । ಯೇಊನಿ ಸದ್ಗುರುಚರಣಾಪಾಶೀ । ತನು ಮನ ಧನ ಸರ್ವಸ್ವೇಸೀ । ಗುರುವಚನಾಸೀ ವಿಶ್ವಾಸೇ ॥೭೪೨॥ ಪೂರ್ಣ ವಿಶ್ವಾಸಾಚೇ ಲಕ್ಷಣ । ಹೋತಾ ಗುರುವಾಕ್ಯಶ್ರವಣ । ಪರಿಸೀ ಲೋಹ ಪಾಲಟೇ ಜಾಣ । ತೈಸೇ ಅಂತಃಕರಣ ಪಾಲಟೇ ॥೭೪೩॥ ಗುರುವಚನ ಸಾಂಗೋನ ರಾಹೇ । ಪರೀ ಮನೀಂಚೇ ಮನನ ನ ರಾಹೇ । ಕೀಟಕೀ ಭ್ರಮರೀ ಐಸಾ ಪಾಹೇ । ತದ್ರೂಪ ಹೋಯೇ ನಿದಿಧ್ಯಾಸೇ ॥೭೪೪॥ ತೇವ್ಹಾ ಕಮನೀಯ ಕಾಮಿನೀ ಧನ । ತೇ ದೇಖೇ ವಿಷ್ಠೇಸಮಾನ । ನಿಂದಾ ದ್ವೇಷ ಮಾನಾಭಿಮಾನ । ಹೇ ಮನಾಚೇ ಅವಗುಣ ಮನಚಿ ನಾಶೀ ॥೭೪೫॥ ಧನ್ಯ ಧನ್ಯ ಮನಾಚೀ ಮೈತ್ರೀ । ವಿಶ್ವಾಸ ಧರೋನಿ ನಿರ್ಧಾರೀ । ಜನ್ಮ ಮರಣ ಜೀವೇ ಮಾರೀ । ಜೀವಾತೇ ಕರೀ ಅಜರಾಮರ ॥೭೪೬॥ ಐಸೀ ಮನಾಶೀ ಕರಿತಾ ಮೈತ್ರೀ । ಮನ ಪರಮ ಉಪಕಾರೀ । ಜೀವಾತೇ ಧರೂನಿ ನಿಜಕರೀ । ಸ್ವಾನಂದ ಸಾಗರೀ ಬುಡೀ ದೇ ॥೭೪೭॥ ತೇಥ ಮನಾಚೇ ಮನಪಣ ಸರೇ । ಜೀವಾಚೇ ಜೀವಪಣ ವಿರೇ । ಬಂಧಮೋಕ್ಷಾಂಚೀ ಧಾಂವ ಪುರೇ । ಸಮೂಳ ಓಸರೇ ಭವಭಯ ॥೭೪೮॥ ಮನಾಚೇ ಮಿತ್ರತ್ವ ಯಾಪರೀ । ಆಪುಲೇ ಕುಳ ಸ್ವಯೇ ಸಂಹಾರೀ । ಆಪಣಹೀ ಮರೇ ಮಿತ್ರೋಪಕಾರೀ । ಮನ ಮಿತ್ರಾಚಾರೀ ಅವಂಚಕ ॥೭೪೯॥ ಐಸೇ ಮೈತ್ರೀಸೀ ಮನ ಸಾದರ । ಜವಳೀ ಅಸತಾ ನಿರಂತರ । ತ್ಯಾತೇ ವೋಸಂಡೂನಿ ಪಾಮರ । ಪ್ರಾಕೃತ ನರ ಮಿತ್ರ ಕರಿತೀ ॥೭೫೦॥ ವೈರ ಕರೋನಿ ಮನಚಿ ಮಾರಾವೇ । ಮಿತ್ರತ್ವೇ ಮನೇ ಮನ ಸಾಧಾವೇ । ಇಯೇ ದೋನೀ ಜೈ ನ ಸಂಭವೇ । ತೈ ಉಪೇಕ್ಷಾವೇ ಮನಾತೇ ॥೭೫೧॥ ಮನ ಮ್ಹಣೇಲ ತೇ ನ ಕರಾವೇ । ಮನಾತೇ ಹಾತೀ ನ ಧರಾವೇ । ಮನಾತೇ ಕಾಂಹೀ ನಾತಳಾವೇ । ಜೀವೇಭಾವೇ ನಿಃಶೇಷ ॥೭೫೨॥

ಶ್ರೀರಾಮ ಜಯರಾಮ ಎಂಬ ಈ ಮಂತ್ರಗಳಲ್ಲಿನ ಎರಡು ಅಕ್ಷರಗಳಿಂದಲೇ ಮಹಾಪಾಪಗಳ ನಾಶವಾಗುವುದು. ಈ ಮನವು ಈ ನಾಮವನ್ನು ಒಂದು ಕ್ಷಣವೂ ಕೂಡ ಮರೆಯುವುದಿಲ್ಲ. ಅಖಂಡವಾಗಿ ಹರಿನಾಮದಲ್ಲಿ ತಲ್ಲೀನವಾಗಿಬಿಡುವುದು ॥೭೩೯॥ ಆಗ ಆ ಮನಸ್ಸು ಅಸತ್ಯದ ಶಿರಚ್ಛೇಧನವನ್ನು ಮಾಡುವುದು. ಅಧರ್ಮದ ಚರ್ಮವನ್ನು ಸುಲಿದುಬಿಡುವುದು. ಕಲ್ಪನೆಯ ಕಾಲುಗಳನ್ನು ಮುರಿದು ಹಾಕುವುದು. ಆಶೆಯ ಸಂಬಂಧವನ್ನು ಬಿಟ್ಟುಬಿಡುವುದು ॥೭೪೦॥ ವಿಕಲ್ಪದ ಮನೆಯನ್ನು ಮುರಿದು ಹಾಕುವುದು, ಪ್ರಪಂಚದ ಹಲ್ಲುಗಳನ್ನು ಕಿತ್ತಿಬಿಡುವುದು. ಅವಿಶ್ವಾಸದ ತುಕಡಿ ತುಕಡಿ ಮಾಡಿ ಒಗೆಯುವುದು ಮತ್ತು ವಿಶ್ವಾಸದ ಮಂಗಲಮಯ ಧ್ವಜವನ್ನು ನಿಲ್ಲಿಸುವುದು ॥೭೪೧॥ ಈ ಪ್ರಕಾರವಾಗಿ ಪರಿಪಕ್ವವಾದ ವಿಶ್ವಾಸದಿಂದ ಸದ್ಗುರುಗಳ ಚರಣಕಮಲಗಳಲ್ಲಿ ಬಂದು ಅವರಿಗೆ ತನ ಮನ ಧನಗಳನ್ನು ಅರ್ಪಿಸಿ ಗುರುವಚನಗಳಲ್ಲಿ ಪರಿಪೂರ್ಣವಾದ ವಿಶ್ವಾಸವನ್ನು ಇಡುವುದು ॥೭೪೨॥ ಪರಿಸಮಣಿಯ ಸ್ಪರ್ಶವಾದ ಕೂಡಲೆ ಕಬ್ಬಿಣದ ಮೂಲ ಸ್ವರೂಪವು ಬದಲಾಗಿ ಅದು ಬಂಗಾರವಾಗುವುದು. ಅದರಂತೆ ಗುರುವಚನಗಳ ಶ್ರವಣದಿಂದ ಆತನ ಅಂತಃಕರಣವು ಪರಿಪೂರ್ಣವಾಗಿ ಪರಿವರ್ತನೆಯಾಗುವುದು ॥೭೪೩॥ ಗುರುಗಳ ಉಪದೇಶವು ಹೇಳಿ ಮುಗಿಯುವುದು. ಆದರೆ ಮನಸ್ಸಿನಲ್ಲಿನ ಮನನವು ಮುಗಿಯುವುದೇ ಇಲ್ಲ. ಕೀಟಕವು ಭ್ರಮರದ ಸತತ ಚಿಂತನೆಯಿಂದ ತದ್ರೂಪವಾಗುವುದು. ಅದರಂತೆ ನಿದಿಧ್ಯಾಸದಿಂದ ಮನವು ತದ್ರೂಪವಾಗುವುದು ॥೭೪೪॥ ಆಗ ಆ ಮನಸ್ಸು ಸುಂದರ ಲಾವಣ್ಯವತಿ ಸ್ತ್ರೀ ಮತ್ತು ದ್ರವ್ಯ ಇವುಗಳನ್ನು ವಿಷ್ಠಾಸಮಾನವಾಗಿ ಭಾವಿಸುವುದು. ನಿಂದೆ, ದ್ವೇಷ, ಮಾನ, ಅಭಿಮಾನ ಈ ಎಲ್ಲ ಮನಸ್ಸಿನ ದುರ್ಗುಣಗಳನ್ನು ಆ ಮನಸ್ಸೇ ಬಿಟ್ಟುಬಿಡುವುದು ॥೭೪೫॥ ಮನಸ್ಸಿನ ಮಿತ್ರತ್ವವು ನಿಜವಾಗಿಯೂ ಧನ್ಯ ಧನ್ಯವಾಗಿರುವುದು. ಇದು ವಿಶ್ವಾಸವನ್ನು ಹಿಡಿದುಕೊಂಡು ಜನ್ಮಮರಣಗಳನ್ನು ಇಲ್ಲದಾಗಿ ಮಾಡಿಬಿಡುವುದು ಮತ್ತು ಜೀವಕ್ಕೆ ಅಜರಾಮರವನ್ನಾಗಿ ಮಾಡುವುದು ॥೭೪೬॥ ಈ ಪ್ರಕಾರವಾಗಿ ಮನಸ್ಸಿನ ಜೊತೆ ಸ್ನೇಹವನ್ನು ಮಾಡಲು ಅದು ಅತಿಶಯವಾಗಿ ಉಪಕಾರವನ್ನು ಮಾಡುವುದು. ಅದು ಜೀವವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಆತ್ಮಾನಂದ ಸಾಗರದಲ್ಲಿ ಮುಳುಗಿಸಿ ಬಿಡುವುದು ॥೭೪೭॥ ಆ ಸಮಯದಲ್ಲಿ ಮನಸ್ಸಿನ ಮನತ್ವವೇ ಇಲ್ಲದಾಗುವುದು. ಜೀವದ ಜೀವತ್ವವೇ ಕರಗಿಹೋಗುವುದು. ಬಂಧ ಮೋಕ್ಷದ ಓಡಾಟವು ಮುಗಿದು ಹೋಗುವುದು ಮತ್ತು ಸಂಸಾರಭಯವು ಪರಿಪೂರ್ಣವಾಗಿ ಇಲ್ಲದಾಗುವುದು ॥೭೪೮॥ ಮನಸ್ಸಿನ ಮೈತ್ರಿಯು ಹೇಗಿದೆ ಎಂದರೆ, ಅದು ಸ್ವತಃ ತನ್ನ ಕುಲದ ಸಂಹಾರವನ್ನು ಮಾಡಿಬಿಡುವುದು. ತಾನೂ ಕೂಡ ಮಿತ್ರನಿಗೆ ಉಪಕಾರವನ್ನು ಮಾಡುವ ಉದ್ದೇಶದಿಂದ ಮರಣಹೊಂದುವುದು. ಹೀಗೆ ಮನಸ್ಸು ಮಿತ್ರನಿಗಾಗಿ ಅವಂಚಕವಾಗಿರುವುದು ॥೭೪೯॥ ಹೀಗೆ ಮಿತ್ರತ್ವಕ್ಕೆ ಆದರಪೂರ್ವಕವಾಗಿ ವಶವಾಗುವ ಮನವು ಯಾವಾಗಲೂ ತನ್ನ ಹತ್ತಿರವೇ ಇರುತ್ತಿರಲು ಪಾಮರರು ಇಂತಹ ಮನಸ್ಸನ್ನು ಬಿಟ್ಟು ಸಾಮಾನ್ಯ ಮನುಷ್ಯರ ಮೈತ್ರಿಯನ್ನು ಮಾಡುವರು ॥೭೫೦॥ ಮನಸ್ಸಿಗೆ ವೈರಿಯನ್ನಾಗಿ ಮಾಡಿ ಅದನ್ನು ಕೊಲ್ಲಬೇಕು ಒಂದು, ಇಲ್ಲವೇ ಮಿತ್ರತ್ವದಿಂದ ಅನುಕೂಲವನ್ನು ಸಾಧಿಸಿಕೊಳ್ಳಬೇಕು ಒಂದು. ಈ ಎರಡೂ ಕೂಡ ಸಾಧ್ಯವಾಗದಿದ್ದರೆ ಮನಸ್ಸನ್ನು ಪೂರ್ಣವಾಗಿ ಉಪೇಕ್ಷೆ ಮಾಡಬೇಕು ॥೭೫೧॥ ಮನಸ್ಸು ಹೇಳಿದ್ದು ಎಂದಿಗೂ ಮಾಡಬಾರದು. ಮನಸ್ಸನ್ನು ಸ್ವಲ್ಪವೂ ಕೂಡ ಪ್ರೀತಿಸಬಾರದು. ಜೀವಭಾವದಿಂದ ಅದನ್ನು ಮುಟ್ಟಲೂಬಾರದು ॥೭೫೨॥

ಮನ ಮ್ಹಣೇಲ ಜೇ ಸುಖ । ತೇ ಸಾಂಡಾವೇ ಆವಶ್ಯಕ । ಮನ ಮ್ಹಣೇಲ ಜೇ ದುಃಖ । ತೇಹೀ ನಿಃಶೇಖ ತ್ಯಜಾವೇ ॥೭೫೩॥ ಐಸೇ ಉದಾಸ ಮನ ದೇಖ । ಜೋ ಕರೀ ಆವಶ್ಯಕ । ತರೀ ತೋ ಝಾಲಾ ಅಮನಸ್ಕ । ಶಾಂತಿ ಅಲೋಲಿಕ ತೇ ಠಾಯೀ ॥೭೫೪॥ ಶತ್ರು, ಮಿತ್ರ, ಉದಾಸೀನ । ಕರೂನಿ ವಶ್ಯ ನ ಕರೀ ಮನ । ಜೋ ಧರೀ ದೇಹಾಭಿಮಾನ । ತ್ಯಾಚೇ ಭವಭ್ರಮಣ ಸರೇನಾ ॥೭೫೫॥

ದೇಹಂ ಮನೋಮಾತ್ರಮಿಮಂ ಗೃಹೀತ್ವಾ ಮಮಾಹಮಿತ್ಯಂಧಧಿಯೋ ಮನುಷ್ಯಾಃ ।
ಏಷೋಽಹಮನ್ಯೋಽಯಮಿತಿ ಭ್ರಮೇಣ ದುರಂತಪಾರೇ ತಮಸಿ ಭ್ರಮಂತಿ ।೫೦॥

ಅರ್ಥ:- ಸಾಧಾರಣ ಮನುಷ್ಯನ ಬುದ್ಧಿಯು ಕುರುಡಾಗಿರುವುದು. ಆದ್ದರಿಂದ ಆತನು ಈ ಮನಃಕಲ್ಪಿತ ಶರೀರಕ್ಕೆ ನಾನು ಮತ್ತು ನನ್ನದು ಎಂದು ತಿಳಿಯುವನು ಮತ್ತು ಈ ಯಾವ ಭ್ರಮೆಯ ಬಲೆಯಲ್ಲಿ ಸಿಕ್ಕಿಕೊಳ್ಳುವನು. ತನ್ನ ಶರೀರಕ್ಕೆ ನಾನು ಎಂದು, ಬೇರೆ ಶರೀರಕ್ಕೆ ಇನ್ನೊಬ್ಬನು ಎನ್ನುವನು. ಹೀಗೆ ತಿಳಿಯುವ ಪರಿಣಾಮವು ಅನಂತ ಕಾಲದವರೆಗೆ ಅಜ್ಞಾನ ಬಂಧನದಲ್ಲಿಯೇ ತಿರುಗಾಡುತ್ತಿರಬೇಕಾಗುವುದು.

ಆತ್ಮಾ ವಿದೇಹೋ ಚಿದ್‌ಘನ । ತೇಥ ಮೀ ದೇಹೀ ಹೇ ಮಾನೀ ಮನ । ತ್ಯಾ ದೇಹಾಸವೇ ಮೀ-ಮಾಝೇ ಪಣ । ಜನ್ಮ ಮರಣ ಸುಖದುಃಖೇ ॥೭೫೬॥ ಆತ್ಮಾ ನಿತ್ಯಮುಕ್ತ ವಿದೇಹೀ । ತೋ ಮನಾಚ್ಯಾ ಏಕಾತ್ಮತಾ ಪಾಹೀ । ವಿದೇಹೀ ತೋ ಮ್ಹಣವೀ ದೇಹೀ । ಶೇಖೀ ದೇಹಾಚ್ಯಾಠಾಯೀ ಆತ್ಮತ್ವ ಮಾನೀ ॥೭೫೭॥ ಮೀ ದೇಹ ಹೇ ಮಾನೀ ಮನ । ತೇಣೇ ದೃಢ ಹೋಯ ದೇಹಾಭಿಮಾನ । ತೇವ್ಹಾ ದೇಹಚಿ ಹೋಯ ಆಪಣ । ಮೀ-ಮಾಝೇ ಪಣ-ತೇ ಠಾಯೀ॥೭೫೮॥ ಮೀ ಸಚ್ಚಿದಾನಂದ ಪರಿಪೂರ್ಣ । ಹೇ ಆಪಲೇ ವಿಸರೇ ಆಪಣ । ಮೀ ವೈಶ್ಯ ಶೂದ್ರ ಕ್ಷತ್ರಿಯ ಬ್ರಾಹ್ಮಣ । ಮೂರ್ಖ ಸಜ್ಞಾನ ಮೀ ಏಕ ॥೭೫೯॥ ಮೀ ರೋಡಕಾ ಬೋಡಕಾ ಕುಬ್ಜ ಕಾಣ । ಮೀ ಧಾಟಾಮೋಠಾ ವಿಚಕ್ಷಣ । ಹೇ ನಾಥಿಲೇ ಘೇಊನಿ ದೇಹಗುಣ । ಮಾಣುಸಪಣ ಸ್ವಯೇ ಮಿರವೀ ॥೭೬೦॥ ಸ್ವಪ್ನಾ ಮಾಜೀ ಸನ್ಯಾಸೀ। ಆಪಣ ದೇಖೇ ಅಂತ್ಯಜವಂಶೀ। ತೋ ಆತಳೋ ಭೀ ಬ್ರಾಹ್ಮಣಾಸೀ। ಜೀವಾಸ ತೈಸೀ ದಶಾ ಝಾಲೀ ॥೭೬೧॥ ಸ್ವಯೇ ಪರಮಾತ್ಮಾ ಭೇದಶೂನ್ಯ । ತೇಥ ಮೀ ಮಾಝೇ ಸ್ತ್ರೀ ಪುತ್ರ ಧನ । ಸ್ವಜನ ದುರ್ಜನ ಉದಾಸೀನ । ತ್ರಿವಿಧ ಭೇದ ಪೂರ್ಣ ಸತ್ಯತ್ವೇ ಮಾನೀ ॥೭೬೨॥ ಐಸೀ ದೇಹಾತ್ಮಭಾವಸಿದ್ಧೀ । ಸತ್ಯ ಮಾನಿತಾ ಭೇದವಿಧೀ । ಜಿವಾಚೀ ನಿಜಾತ್ಮಬುದ್ಧೀ । ಝಾಲೀ ತ್ರಿಶುದ್ಧೀ ಆಂಧಳೀ ॥೭೬೩॥

ಮನವು ಸುಖವೆನ್ನುವುದನ್ನು ತ್ಯಜಿಸಬೇಕು. ಯಾವುದಕ್ಕೆ ದುಃಖವೆನ್ನುವುದೋ, ಅದನ್ನೂ ಕೂಡ ಬಿಡಬೇಕು ॥೭೫೩॥ ಹೀಗೆ ಮನ ವಿಷಯಕ್ಕೆ ಉದಾಸೀನನಾಗಲು ಆತನು ಅಮನಸ್ಕನಾಗುವನು. ಆತನ ಅಂತಃಕರಣದಲ್ಲಿ ಅಪೂರ್ವ ಶಾಂತಿಯು ವಾಸಿಸುವುದು ॥೭೫೪॥ ಶತ್ರುತ್ವದಿಂದ, ಮಿತ್ರತ್ವದಿಂದ ಅಥವಾ ಉದಾಸೀನತೆಯಿಂದ ವರ್ತಿಸಿ ಈ ಮನವನ್ನು ವಶಮಾಡಿಕೊಳ್ಳದಿದ್ದರೆ ದೇಹಾಭಿಮಾನವು ಬೆಳೆಯುವುದು. ಆತನ ಸಂಸಾರಚಕ್ರದ ಭ್ರಮಣವು ಮುಗಿಯುವುದಿಲ್ಲ ॥೭೫೫॥

ಆತ್ಮವು ವಿದೇಹಿಯಾಗಿದ್ದು ಜ್ಞಾನಸ್ವರೂಪವಾಗಿರುವುದು. ಹೀಗಿರಲು ಮನವು ಆತ್ಮಕ್ಕೆ ದೇಹಧಾರಿ ಎಂದು ತಿಳಿದಿರುವುದು. ಈ ದೇಹದ ಜೊತೆಯಿಂದ ''ನಾನು ಮತ್ತು ನನ್ನದು'' ಎಂಬ ವಿಚಾರವು ಹುಟ್ಟಿಕೊಂಡು ಜನ್ಮ-ಮರಣ ಮತ್ತು ಸುಖದುಃಖಗಳನ್ನು ಭೋಗಿಸಬೇಕಾಗಿರುವುದು ॥೭೫೬॥ ಆತ್ಮವು ನಿತ್ಯಮುಕ್ತವಾಗಿ ವಿದೇಹಿಯಾಗಿರುವುದು. ಆದರೆ ಮನಸ್ಸಿನೊಂದಿಗೆ ಏಕರೂಪವಾಗಿರುವುದರಿಂದ ವಿದೇಹಿಯಾಗಿದ್ದರೂ ಕೂಡ ನಾನು ದೇಹಿಯಾಗಿರುವೆ ಎಂದು ಹೇಳುತ್ತಿರುವುದು ಮತ್ತು ದೇಹದಲ್ಲಿ ನಾನು ಎಂದು ತಿಳಿದಿರುವುದು॥೭೫೭॥ ನಾನು ದೇಹಿ ಎಂದು ಮನವು ತಿಳಿಯಲು ಆಗ ದೇಹದ ಅಭಿಮಾನವು ಬೆಳೆಯುತ್ತ ಸಾಗುವುದು ಮತ್ತು ಆತ್ಮವು ತಾನು ದೇಹಸ್ವರೂಪವಾಗಿ ಆ ದೇಹದಲ್ಲಿ ನಾನು ಮತ್ತು ನನ್ನದು ಎಂದು ತಿಳಿಯುತ್ತಿರುವುದು ॥೭೫೮॥ ನಾನು ಪರಿಪೂರ್ಣವಾಗಿ ಸತ್‌ಚಿತ್ ಆನಂದಸ್ವರೂಪನಾಗಿರುವೆ ಎಂಬುವುದನ್ನು ಆತ್ಮವು ಮರೆತುಬಿಡುವುದು ಮತ್ತು ನಾನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಸಜ್ಞಾನಿ, ಮೂರ್ಖ ಎನ್ನುವುದು ॥೭೫೯॥ ಮತ್ತು ನಾನು ಬಡಕ, ಬೊಕ್ಕ ತಲೆಯವ, ಕುಳ್ಳಾ, ಒಕಣ್ಣಾ, ಧಿಟ್ಟಾ, ಚತುರಾ ಇತ್ಯಾದಿಯಾಗಿ ಸ್ವತಃ ತನ್ನಲ್ಲಿ ಇಲ್ಲವೇ ಇಲ್ಲದ ದೇಹದ ಗುಣಗಳನ್ನು ತನ್ನ ಮೇಲೆ ಹಾಕಿಕೊಂಡು ಆತ್ಮವು ಮನುಷ್ಯನಾಗಿ ಮರೆಯುತ್ತಿರುವುದು ॥೭೬೦॥ ಒಬ್ಬ ಸನ್ಯಾಸಿಗೆ ತಾನು ಹೊಲೆಯನಾಗಿದ್ದಂತೆ ಸ್ವಪ್ನವು ಬಿದ್ದಿತು. ಆಗ ಆತನು ಬ್ರಾಹ್ಮಣರಿಗೆ ಮುಟ್ಟಿಕೊಳ್ಳಲು ಭಯಪಡುತ್ತಿರುವನು. ಈ ಸ್ಥಿತಿಯೇ ಜೀವಕ್ಕೆ ಆಗಿರುವುದು ॥೭೬೧॥ ಪರಮಾತ್ಮನು ತಾನು ಸ್ವತಃ ಭೇದರಹಿತನಾಗಿರುವನು. ಆದರೆ ಆತನು ಸ್ವತಃ ತನ್ನಲ್ಲಿ ನಾನು, ನನ್ನ ಹೆಂಡತಿ, ನನ್ನ ಮಗ, ನನ್ನ ಸಂಪತ್ತು ಇತ್ಯಾದಿಯಾಗಿ ತಿಳಿಯುತ್ತಿರುವನು. ತನ್ನ ಇಷ್ಟಮಿತ್ರ, ದುರ್ಜನ, ಉದಾಸೀನ ಹೀಗೆ ಈ ತ್ರಿವಿಧ ಭೇಧಗಳಿರುವುವು. ಇವುಗಳಿಗೆಲ್ಲ ನಿಜವೆಂದೇ ಭಾವಿಸುವನು ॥೭೬೨॥ ಈ ಪ್ರಕಾರವಾಗಿ ಒಮ್ಮೆ ಈ ದೇಹಭಾವವು ಸಿದ್ಧವಾಯಿತೆಂದರೆ, ಈ ಭೇದಭಾವವೂ ಕೂಡ ನಿಜವಾಗಿಯೇ ಇವೆ ಇಂದು ತಿಳಿಯುತ್ತಿರುವುದು. ಆಗ ಜೀವದ ಆತ್ಮಬುದ್ಧಿಯು ಕುರುಡವಾಯಿತೆಂದು ತಿಳಿಯಬೇಕು ॥೭೬೩॥

ಜೈಸಾ ಸ್ವಪ್ನೀಂಚಾ ಮಿಥ್ಯಾ ವೇವ್ಹಾರ । ತೈಸಾ ಮನಃಕಲ್ಪಿತ ಸಂಸಾರ । ತೋ ಮಾನಿತಾಂಚಿ ಸಾಚಾರ । ದೇಹ ಅಹಂಕಾರ ದೃಢ ಝಾಲಾ ॥೭೬೪॥ ದೃಢ ಹೋತಾ ದೇಹಾಭಿಮಾನ । ಪುಢತೀ ಜನ್ಮ ಪುಢತೀ ಮರಣ । ಭವ ಚಕ್ರೀ ಪರೀಭ್ರಮಣ । ನಿಜಭ್ರಮೇ ಜಾಣ ಜೀವಾಸೀ ॥೭೬೫॥ ಜೇವೀ ಕೇವಳ ಅಗ್ನೀಪ್ರತೀ । ಘಣಘಾಯ ಕದಾ ನ ಲಾಗತೀ । ತೇಚಿ ಲೋಹಾಚಿಯಾ ಸಂಗತೀ । ಘಣ ವರೀ ಘೇತ ಸುಬದ್ಧ ॥೭೬೬॥ ತೇವೀ ನಿತ್ಯಮುಕ್ತ ಪರಿಪೂರ್ಣ । ತೇಣೇ ಧರಿತಾ ದೇಹಾಭಿಮಾನ । ಅಂಗೀ ಲಾಗಲೇ ಜೀವಪಣ । ಜನ್ಮ ಮರಣ ತೇಥೇ ಸೋಶೀ ॥೭೬೭॥ ಜೇವೀ ಡೋಳೇ ಬಾಂಧೋನಿ ವ್ಯಾಪಾರೂ । ಭಂವೇ ತೇಲಿಯಾಚಾ ಢೋರೂ । ತೇವೀ ಅಹಂಕಾರೇ ಅಂಧ ನರೂ । ಪರಿಭ್ರಮೇ ಥೋರೂ ಭವಚಕ್ರೀ ॥೭೬೮॥ ತೇಥ ಸೋಶಿತಾ ಜನ್ಮ ಮರಣ । ಅತಿದುಃಖೀ ಹೋಯ ಆಪಣ । ತರೀ ನ ಸಾಂಡೀ ದೇಹಾಭಿಮಾನ । ಅಂಧತಮೀ ಜಾಣ ತೋ ಘಾಲೀ ॥೭೬೯॥ ಜ್ಯಾಚೇ ದುಃಖೇ ನ ಪವಿಜೇ ಪಾರ । ಜೋ ತರವೇನಾ ಅತಿದುಸ್ತರ । ಜೋ ಭೋಗ ಭೋಗವೀ ಅಘೋರ । ತೋ ಸಂಸಾರ ಮನೋಜನ್ಯ ॥೭೭೦॥ ಮನಚಿ ಸುಖದುಃಖಾಂಸೀ ಕಾರಣ । ಹೇ ಆಠವೇ ಶ್ಲೋಕೀ ನಿರೂಪಣ । ಭಿಕ್ಷು ಬೋಲೋನಿ ಆಪಣ । ಜನಾದಿ ದುಃಖಕಾರಣ ಮಿಥ್ಯಾತ್ವೇ ದಾವೀ ॥೭೭೧॥

ಜನಸ್ತು ಹೇತುಃ ಸುಖದುಃಖಯೋಶ್ಚೇತ್ ಕಿಮಾತ್ಮನಶ್ಚಾತ್ರ ಹಿ ಭೌಮಯೋಸ್ತತ್ ।
ಜಿವ್ಹಾಂ ಕ್ವಚಿತ್ಸಂದಶತಿ ಸ್ವದದ್ಭಿಸ್ತದ್ವೇದನಾಯಾಂ ಕತಮಾಯ ಕುಪ್ಯೇತ್ ॥೫೧॥

ಅರ್ಥ:- ತನ್ನ ಸುಖದುಃಖಗಳಿಗೆ ಈ ಜನರು ಕಾರಣರು ಎಂದು ನೀವು ಹೇಳುವಿರಾದರೆ, ಆಗ ಇಂತಹ ಕಲ್ಪನೆಯಲ್ಲಿ ಆತ್ಮದ ಸ್ಥಾನವೇನು? ಸುಖದುಃಖಗಳೂ ಆತ್ಮಕ್ಕೆ ಸಂಬಂಧವಾಗಿರದೇ ದೇಹಗಳ ನಡುವಿನ ಅಂತರಿಕ ಕ್ರಿಯೆಗಳಾಗಿವೆ. ತನ್ನ ಹಲ್ಲುಗಳಿಂದ ನಾಲಿಗೆಯನ್ನು ಕಚ್ಚಿಕೊಳ್ಳುವ ಮನುಷ್ಯನು ತನಗಾದ ದುಃಖಕ್ಕಾಗಿ ಯಾರಲ್ಲಿ ಕೋಪಿಸಿಕೊಳ್ಳಬೇಕು?

ಜನನೀಜಠರೀ ಜ್ಯಾಸೀ ಜನನ । ತ್ಯಾ ನಾಂವ ಬೋಲಿಜೇತೀ ಜನ । ತೇ ಸುಖದುಃಖಾಂಸೀ ಕಾರಣ । ಸರ್ವಥಾ ಜಾಣ ಮಜ ನವ್ಹತೀ ॥೭೭೨॥ ಜನ ಜನಾಸೀ ದೇ ದುಃಖಬಾಧೂ । ತೇಥ ಆತ್ಮ್ಯಾಸೀ ಕಾಯ ಸಂಬಂಧೂ । ಆತ್ಮಾ ದೇಹಾತೀತ ಶುದ್ಧೂ । ಸುಖದುಃಖಬಾಧೂ ತ್ಯಾ ನ ಲಗೇ ॥೭೭೩॥ ದೇಹೇ ದೇಹಾಸೀ ಹೋಈಲ ದುಃಖ । ದೇಹೋ ತಿತುಕಾ ಪಾಂಚಭೌತಿಕ । ತ್ಯಾಂಸೀ ಪರಸ್ಪರೇ ಅಸೇ ಐಕ್ಯ । ಸರ್ವಥಾ ಸುಖದುಃಖ ಘಡೇನಾ ॥೭೭೪॥

ಯಾವ ಪ್ರಕಾರವಾಗಿ ಸ್ವಪ್ನದಲ್ಲಿನ ವ್ಯವಹಾರಗಳು ಸುಳ್ಳಾಗಿರುವುವೋ, ಅದೇ ಪ್ರಕಾರವಾಗಿ ಮನವು ಕಲ್ಪಿಸಿರುವ ಯಾವ ಈ ಸಂಸಾರವೂ ಕೂಡ ಸುಳ್ಳಾಗಿರುವುದು. ಇದನ್ನು ನಿಜವೆಂದು ತಿಳಿದರೆ ಆಗ ದೇಹದ ಅಹಂಕಾರವು ಬೆಳೆಯುತ್ತ ಸಾಗುತ್ತಿರುವುದು ॥೭೬೪॥ ಹೀಗೆ ದೇಹದ ಅಭಿಮಾನವು ದೃಢವಾಗಲು ಆಗ ಪುನಃಪುನಃ ಜನ್ಮ ಮರಣಗಳ ತಿರುಗಾಟವು ತನ್ನ ಭ್ರಮೆಯ ಕಾರಣವಾಗಿಯೇ ದೇಹದ ಬೆನ್ನಿಗೆ ಹತ್ತಿಕೊಂಡಿರುವುದು ॥೭೬೫॥ ಶುದ್ಧವಾಗಿರುವ ಅಗ್ನಿಗೆ ಗನ್ನಿನ ಹೊಡೆತವು ಎಂದಿಗೂ ಬೀಳುವುದಿಲ್ಲ. ಆದರೆ ಆ ಅಗ್ನಿಗೆ ಕಬ್ಬಿಣದ ಸಂಗತಿಯು ಒದಗಲು ಆಗ ಅಗ್ನಿಯ ಮೈಮೇಲೆ ಗನ್ನಿನ ಬಿಗಿಯಾದ ಹೊಡೆತವು ಬೀಳುವುದು ॥೭೬೬॥ ಅದರಂತೆಯೇ ಪರಿಪೂರ್ಣವಾಗಿ ನಿತ್ಯಮುಕ್ತವಾಗಿರುವ ಆತ್ಮಕ್ಕೆ ಕೇವಲ ದೇಹದ ಅಭಿಮಾನದಿಂದ ಜೀವತ್ವವು ಪ್ರಾಪ್ತವಾಗಿರುವುದು. ಈ ಕಾರಣವಾಗಿ ಜೀವಕ್ಕೆ ಜನ್ಮ ಮರಣಗಳ ಸುಖದುಃಖಗಳನ್ನು ಭೋಗಿಸಬೇಕಾಗಿರುವುದು ॥೭೬೭॥ ಗಾಣಿಗನ ಗಾಣಕ್ಕೆ ಕಟ್ಟಿರುವ ಎತ್ತು ಕಣ್ಣುಗಳನ್ನು ಕಟ್ಟಿಸಿಕೊಂಡು ಕುರುಡತನದಿಂದ ಗಾಣದ ಸುತ್ತು ಸುತ್ತುತ್ತಲೇ ಇರಬೇಕಾಗುವುದು. ಅದರಂತೆಯೇ ಮನುಷ್ಯನೂ ಕೂಡ ಅಹಂಕಾರದಿಂದ ಕುರುಡನಾಗಿ ಸಂಸಾರಚಕ್ರದಲ್ಲಿ ಸತತವಾಗಿ ತಿರುಗುತ್ತಲೇ ಇರಬೇಕಾಗಿರುವುದು ॥೭೬೮॥ ಈ ಸಂಸಾರ ಚಕ್ರದಲ್ಲಿ ಜನ್ಮ ಮರಣಗಳನ್ನು ಸೋಸುತ್ತ ಅತ್ಯಂತ ದುಃಖಿಗಳಾಗುತ್ತಿದ್ದರೂ ಕೂಡ ದೇಹಾಭಿಮಾನವನ್ನು ಬಿಡುವುದಿಲ್ಲ. ಕೊನೆಗೆ ಈ ಅಭಿಮಾನವು ಇವರಿಗೆ ಘನಘೋರ ನರಕದಲ್ಲಿ ಒಯ್ದು ಮುಟ್ಟಿಸುವುದು ॥೭೬೯॥ ಯಾವ ಈ ಸಂಸಾರವು ಮನೋಕಲ್ಪಿತವಾಗಿರುವುದು. ಇದರ ದುಃಖವು ಅಪಾರವಾಗಿರುವುದು. ಇದು ಅತಿಶಯವಾಗಿ ದುಸ್ತರವಾಗಿರುವುದರಿಂದ ಇದರಿಂದ ಪಾರಾಗಲು ಸಾಧ್ಯವಾಗುವುದಿಲ್ಲ. ಇದು ಭಯಂಕರ ಭೋಗಗಳನ್ನು ಭೋಗಿಸಲು ಹಚ್ಚುವುದು ॥೭೭೦॥ ಯಾವ ಈ ಮನಸ್ಸೇ ಸುಖದುಃಖಗಳ ಕಾರಣವಾಗಿರುವುದು. ಇದರ ಸವಿಸ್ತಾರವಾದ ನಿರೂಪಣೆಯನ್ನು ಭಿಕ್ಷು ಹಿಂದಿನ ಎಂಟನೆಯ ಶ್ಲೋಕದಲ್ಲಿ ಮಾಡಿರುವನು. ಈಗ ಜನ ಇತ್ಯಾದಿಕರು ದುಃಖಕ್ಕೆ ಕಾರಣರಲ್ಲ ಎಂದು ಹೇಳುತ್ತಿರುವನು ॥೭೭೧॥

ಜನರು ಜನನಿಯ ಜಠರದಲ್ಲಿ ಜನಿಸುವರು. ಆದ್ದರಿಂದಲೇ ಇವರಿಗೆ ಜನ ಎಂದು ಹೀಗೆ ಕರೆಯಲಾಗುವುದು. ಈ ಯಾವ ಜನರು ನನ್ನ ಸುಖದುಃಖಗಳಿಗೆ ಯಾವ ಕಾರಣದಿಂದಲೂ ಕಾರಣರಾಗುವುದಿಲ್ಲ ॥೭೭೨॥ ಮನುಷ್ಯನು ಇವನು ಇನ್ನೊಬ್ಬ ಮನುಷ್ಯನಿಗೆ ಪೀಡೆಯನ್ನು ಕೊಡುತ್ತಿರುವನು. ಅಲ್ಲಿ ಆತ್ಮದ ಯಾವ ಸಂಬಂಧ ಬರುವುದು? ಆತ್ಮವು ಇದು ದೇಹದಿಂದ ಭಿನ್ನವಾಗಿ ಶುದ್ಧವಾಗಿರುವುದು. ಅದಕ್ಕೆ ಸುಖ ದುಃಖಗಳ ಬಾಧೆಯು ಎಂದಿಗೂ ಹತ್ತಲು ಸಾಧ್ಯವಿಲ್ಲ ॥೭೭೩॥ ದೇಹದಿಂದಲೇ ದೇಹಕ್ಕೆ ದುಃಖವಾಗುವುದು ಎಂದು ಹೀಗೆ ಹೇಳಿದರೆ, ಎಷ್ಟೊಂದು ದೇಹಗಳಿರುವುವೋ, ಆ ದೇಹಗಳೆಲ್ಲವೂ ಪಂಚಮಹಾಭೂತಾತ್ಮಕವಾಗಿರುವುವು. ಅಂದಮೇಲೆ ಅವರ ಪರಸ್ಪರರಲ್ಲಿ ಐಕ್ಯವಿರುತ್ತಿರಲು ಒಬ್ಬರಿಂದೊಬ್ಬರಿಗೆ ಸುಖದುಃಖಗಳು ಹೇಗೆ ಸಂಭವಿಸುವುವು? ॥೭೭೪॥

ಜಳಾಮಾಜೀ ಜಳಸೂತಾ । ಜೇವೀ ಜಳಾಸೀ ನವ್ಹೇ ವ್ಯಥಾ । ಕಾ ದೀಪೂ ದೀಪೇ ಏಕವಟತಾ । ದೀಪಾಸೀ ಸರ್ವಥಾ ದುಃಖ ನ ಬಾಧೀ ॥೭೭೫॥ ತೇವೀ ಪಾರ್ಥಿವೇ ಪಾರ್ಥಿವಾಸೀ । ಸುಖದುಃಖಬಾಧಾ ನ ಘಡೇ ತ್ಯಾಸೀ । ಆತ್ಮಾ ನಾತಳೇ ಸುಖದುಃಖಾಂಸೀ । ತೋ ದೇಹಾಸೀ ಸ್ಪರ್ಶೇನಾ ॥೭೭೬॥ ಮ್ಹಣಾಲ ಜೀವ ಜೋ ದೇಹಾಚಾ ಅಭಿಮಾನೀ । ಸುಖದುಃಖೇ ಹೋತೀ ತ್ಯಾಲಾಗೋನೀ । ದುಃಖಭೋಕ್ತಾ ದುಜೇಪಣೀ । ಪಾಹತಾ ಕೋಣೀ ದಿಸೇನಾ ॥೭೭೭॥ ಆಪುಲಿಯೀ ಜಿವ್ಹಾ ಆಪುಲೇ ದಾಂತೀ । ರಗಡಿಲೀ ಹೋಯ ಅವಚಿತೀ । ತಯಾ ಕೋಪಾಚೀ ಅತಿಪ್ರಾಪ್ತೀ । ಕೋಣಾಪ್ರತೀ ಕರಾವೀ ॥೭೭೮॥ ತೇಥಿಲ ಕೋಪಾಚ್ಯಾ ಕಡಾಡೀ । ದಾಂತ ಪಾಡೀ ಕೀ ಜೀಭ ತೋಡೀ । ತೈಶೀ ಜಗೀ ಏಕಾತ್ಮತಾ ಧಡಪುಡೀ । ಕೋಪ ಯಾವಯಾ ಸವಡೀ ಅಸೇನಾ ॥೭೭೯॥ ಜೋ ಪುಢಿಲಾಚೇ ಧಕ್ಯಾನೀ ಪಡೇ । ತೋ ತ್ಯಾವರೀ ಕೋಪೇ ವಾವಡೇ । ಸ್ವಯೇ ನಿಸರೋನಿ ಗಡಬಡೇ । ತೋ ಲಾಜಿಲಾ ಮಾಗೇಪುಢೇ ನ ಕೋಪತಾ ನಿಘೇ ॥೭೮೦॥ ತೇವೀ ಮೀಚಿ ಭೂತೇ ಮೀಚಿ ಭೋಕ್ತಾ । ಮಾಝ್ಯಾ ಸುಖದುಃಖಾಚಾ ಮೀ ದಾತಾ । ಜಗೀ ಮೀಚ ಮೀ ಏಕಾತ್ಮತಾ । ಕೋಣಾವರೀ ಆತಾ ಕೋಪಾವೇ ॥೭೮೧॥ ಮಾಝ್ಯಾ ಸುಖದುಃಖಾಂಸಿ ಕಾರಣ । ಯಾಪರೀ ನವ್ಹತೀಚ ಜನ । ಮ್ಹಣಾಲ ಜರೀ ದೇವತಾಗಣ । ತೇಹೀ ಪ್ರಮಾಣ ಘಡೇನಾ ॥೭೮೨॥

ದುಃಖಸ್ಯ ಹೇತುರ್ಯದಿ ದೇವತಾಸ್ತು ಕಿಮಾತ್ಮನಸ್ತತ್ರ ವಿಕಾರಯೋಸ್ತತ್ ।
ಯದಂಗಮಂಗೇನ ನಿಹನ್ಯತೇ ಕ್ವಚಿತ್ಕ್ರುಧ್ಯೇತ ಕಸ್ಮೈ ಪುರುಷಃ ಸ್ವದೇಹೇ ।೮೨॥

ಅರ್ಥ:- ದೇವತೆಗಳೇ ಈ ದುಃಖಕ್ಕೆ ಕಾರಣರು ಎಂದು ಹೇಳಿದರೆ ಈ ದುಃಖದಿಂದ ಆತ್ಮಕ್ಕೆ ಯಾವ ಹಾನಿ ? ದುಃಖದ ಕಾರಣ ದೇವತೆಗಳಾಗಿರುವರು. ಅಂದರೆ ಇಂದ್ರಿಯಗಳ ಅಭಿಮಾನೀ ದೇವತೆಗಳ ರೂಪದಿಂದ ಆತನ ಭೋಕ್ತೃತ್ವಕೆ ಅವರೇ ಇರುವರು. ಯಾವ ದೇವತೆಗಳು ಒಂದು ಶರೀರದಲ್ಲಿರುವಂತೆ ಬೇರೆ ಶರೀರದಲ್ಲಿಯೂ ಇರುವರು. ಅಂದಮೇಲೆ ತನ್ನ ಶರೀರದ ಅಂಗಕ್ಕೆ ಇನ್ನೊಂದು ಶರೀರದ ಅಂಗವು ತಾಡನೆ ಮಾಡಲು ಆಗ ಮನುಷ್ಯನು ಯಾರ ಮೇಲೆ ಕೋಪಿಸಿಕೊಳ್ಳಬೇಕು.

ಆತಾ ದುಸರೇ ಕಾರಣ ಮತೀ। ದೇವಾಪಾಸೋನಿ ದುಃಖಪ್ರಾಪ್ತೀ । ದೇವಾಂಚೀ ದೇಹಾಮಾಜೀ ವಸ್ತೀ । ಆತ್ಮಾ ನಿಜಸ್ಥಿತೀ ವಿದೇಹೀ ॥೭೮೩॥ ದೇಹೀಂಚ್ಯಾ ಇಂದ್ರಿಯವಿಕಾರೀ । ದೇವ ಝಾಲೇ ಅಧಿಷ್ಠಾತ್ರೀ । ಆತ್ಮಾ ಅಖಂಡ ಅವಿಕಾರೀ । ಸುಖದುಃಖಾಮಾಝಾರೀ ಅಲಿಪ್ತ ॥೭೮೪॥ ಭೂಮಿ ಸಹಜೇ ನಿರ್ವಿಕಾರ । ತಿಚೀ ಭಿಂತೀ ತೀವರೀ ಸವಿಕಾರ । ತೇವೀ ವಸ್ತು ನಿತ್ಯ ನಿರ್ವಿಕಾರ । ತೇಥ ಭಾಸತೀ ಸವಿಕಾರ । ಅಧಿಷ್ಠಾತ್ರೀ ದೇವ ॥೭೮೫॥ ಭಿಂತೀ ಪಡಲ್ಯಾ ಭೂಮೀವರೀ । ತೇ ಮೇಳವೀ ಆಪಣ್ಯಾ ಮಾಝಾರೀ । ತೇವೀ ನಿರ್ಗುಣನಿರ್ವಿಕಾರೀ । ಇಂದ್ರಿಯೇ

ೀರಿನಲ್ಲಿ ನೀರನ್ನು ಸೇರಿಸಿದರೆ ಆ ನೀರಿಗೆ ಏನಾದರೂ ದುಃಖವಾಗುವುದೆ? ಅಥವಾ ಒಂದು ದೀಪವನ್ನು ಇನ್ನೊಂದು ದೀಪಕ್ಕೆ ಸೇರಿಸಲು, ಆಗ ಆ ದೀಪಕ್ಕೆ ಏನಾದರೂ ದುಃಖವಾಗುವುದೆ? ।೭೭೫॥ ಅದರಂತೆ ದೇಹದಿಂದ ದೇಹಕ್ಕೆ ಸ್ಪರ್ಶವಾಗಲು ಆಗ ದೇಹಕ್ಕೆ ಸುಖದುಃಖದ ಪೀಡೆಯಾಗುವುದಿಲ್ಲ. ಆತ್ಮವು ದೇಹಕ್ಕೆ ಸ್ಪರ್ಶಮಾಡುವುದಿಲ್ಲ. ಆದ್ದರಿಂದ ಅದಕ್ಕೆ ಸುಖದುಃಖಗಳಿರುವುದಿಲ್ಲ ।೭೭೬॥ ಯಾವ ಈ ದೇಹದ ಅಭಿಮಾನಿಯಾಗಿರುವ ಯಾವ ಜೀವಕ್ಕೆ ಮಾತ್ರ ಸುಖದುಃಖಗಳುಂಟಾಗುವುವು. ಜೀವದ ಹೊರತಾಗಿ ಬೇರೆ ಯಾರು ಸುಖದುಃಖಗಳನ್ನು ಭೋಗಿಸಬೇಕು? ಹೀಗೆಂದು ಯಾರಾದರು ಹೇಳಿದರೆ ಅದೂ ಕೂಡ ಸರಿಯಾಗುವುದಿಲ್ಲ ।೭೭೭॥ ಕಾರಣವೇನೆಂದರೆ, ತನ್ನದೇ ಆಗಿರುವ ನಾಲಿಗೆಯನ್ನು ತನ್ನ ಹಲ್ಲುಗಳು ಕಚ್ಚಲು, ಆಗ ಆತನು ಯಾರಮೇಲೆ ಕೋಪಿಸಿಕೊಳ್ಳಬೇಕು? ।೭೭೮॥ ಆಗ ಆತನು ಕೋಪದಿಂದ ಹಲ್ಲನ್ನು ಕೀಳುವುದಿಲ್ಲ, ನಾಲಿಗೆಯನ್ನೂ ಕಿತ್ತುವುದಿಲ್ಲ. ಅದರಂತೆಯೇ ಜಗತ್ತಿನಲ್ಲಿ ಎಲ್ಲವೂ ಐಕ್ಯವಾಗಿರುವುದರಿಂದ ಯಾರು ಯಾರಮೇಲೆಯೂ ಕೋಪಿಸಿಕೊಳ್ಳುವ ಕಾರಣವಿರುವುದಿಲ್ಲ ।೭೭೯॥ ಒಬ್ಬಾತನಿಗೆ ಇನ್ನೊಬ್ಬನು ಡಿಕ್ಕಿ ಹೊಡೆದು ಬೀಳಿಸಲು ಬಿದ್ದವನಿಗೆ ಕೋಪವು ಉಂಟಾಗುವುದು. ಆದರೆ ಆತನು ತಾನು ಸ್ವತಃ ಕಾಲುಜಾರಿ ಬೀಳಲು, ಆಗ ಹಿಂದೆ ಮುಂದೆ ನೋಡುತ್ತ ನಾಚಿಕೊಂಡು ಯಾರನ್ನೂ ಕೋಪಿಸದೇ ಸುಮ್ಮನೇ ಹೊರಟು ಹೋಗುವನು ।೭೮೦॥ ಅದರಂತೆ ಸರ್ವಪ್ರಾಣಿಮಾತ್ರರು ನಾನೇ ಆಗಿರುವೆನು ಮತ್ತು ಭೋಗಗಳನ್ನು ಭೋಗಿಸುವವನು ನಾನೇ ಆಗಿರುವೆನು, ನನ್ನ ದುಃಖಗಳ ಕಾರಣನು ನಾನೇ ಆಗಿರುವೆನು. ಸರ್ವ ಚರಾಚರಗಳಲ್ಲಿ ನಾನೇ ತುಂಬಿರುವೆನು, ಅಂದಮೇಲೆ ನಾನೀಗ ಯಾರಮೇಲೆ ಕೋಪಿಸಕೊಳ್ಳಬೇಕು? ।೭೮೧॥ ಈ ಪ್ರಕಾರವಾಗಿ ನನ್ನ ಸುಖದುಃಖಗಳಿಗೆ ಜನರು ಕಾರಣೀಭೂತರಾಗುವುದಿಲ್ಲ. ಈಗ ಈ ಸುಖದುಃಖಗಳಿಗೆ ದೇವತೆಗಳ ಸಮುದಾಯವು ಕಾರಣವಾಗುವುದೆಂದು ಹೇಳಿದರೆ ಅದೂ ಕೂಡ ಪ್ರಮಾಣವು ನಿಜವಾಗಿರುವುದಿಲ್ಲ ।೭೮೨॥

ಇತರ ಅನೇಕ ಮತಗಳ ಪ್ರಕಾರ ದೇವತೆಗಳಿಂದ ದುಃಖ ಪ್ರಾಪ್ತಿಯಾಗುವುದು ಎಂದಾಗಿರುವುದು. ಆದರೆ ಇದು ಸತ್ಯವಲ್ಲ. ಕಾರಣವೇನೆಂದರೆ ದೇವತೆಗಳು ಶರೀರದಲ್ಲಿರುವರು. ಆತ್ಮವು ಇದು ತನ್ನ ನಿಜಸ್ಥಿತಿಯಲ್ಲಿದ್ದು ವಿದೇಹಿಯಾಗಿರುವುದು ।೭೮೩॥ ದೇಹದಲ್ಲಿನ ಸರ್ವ ಇಂದ್ರಿಯಗಳ ವಿಕಾರಗಳಿಗೆ ದೇವತೆಗಳು ನಿಯಾಮಕರಾಗಿರುವರು. ಆತ್ಮವು ಅವಿಕಾರಿಯಾಗಿರುವುದು. ಅದು ಸರ್ವ ಪ್ರಕಾರದ ಸುಖದುಃಖಗಳಿಂದ ಅಲಿಪ್ತವಾಗಿರುವುದು ।೭೮೪॥ ಭೂಮಿಯು ಇದು ಸ್ವಭಾವತವೇ ನಿರ್ವಿಕಾರವಾಗಿರುವುದು. ಆದರೆ ಅದೇ ಭೂಮಿಯಿಂದ ಒಂದು ಗೋಡೆಯನ್ನು ಕಟ್ಟಲು ಆಗ ಅದು ಸವಿಕಾರವಾಗುವುದು. ಅದರಂತೆ ಬ್ರಹ್ಮವು ನಿತ್ಯವಾಗಿದೆ, ನಿರ್ವಿಕಾರವಾಗಿದೆ. ಅದರಲ್ಲಿ ದೇವತೆಗಳ ಅಧಿಷ್ಠಾನದಿಂದ ಸವಿಕಾರವಾಗಿ ಭಾಸವಾಗುವುದು ।೭೮೫॥

ಅಧಿಷ್ಠಾತ್ರೀ ಯೇತೀ ಐಕ್ಯಾ ॥೭೮೬॥ ಸ್ವದೇಹೀ ಪರದೇಹೀ ಜಾಣ । ಇಂದ್ರಿಯೇ ಅಧಿಷ್ಠಾತ್ರೀ ಸಮಾನ । ಇಂದ್ರಿಯಾಂಚೇ ಸುಖದುಃಖ ದಾರುಣ । ಆಪುಲೇ ಆಪಣ ಭೋಗಿತೀ ದೇವ ॥೭೮೭॥ ಹಾತೇ ಹಾಣತಾ ತೋಂಡಾವರೀ। ತೇಥ ಇಂದ್ರ ಅಗ್ನಿ ಅಧಿಷ್ಠಾತ್ರೀ। ತೆವ್ಹಾ ಇಂದ್ರಚಿ ಅಗ್ನೀತೇ ಮಾರೀ। ಆತ್ಮಾ ಅವಿಕಾರೀ ದುಃಖಾತೀತ ॥೭೮೮॥ ಹೋ ಕಾ ಮುಖೇ ಡಸಲ್ಯಾ ಹಾತಾಸೀ । ಅಗ್ನೀನೇ ಘಾಯ ಕೇಲೇ ಇಂದ್ರಾಸೀ । ಆತ್ಮಾ ಅಲಿಪ್ತ ಇಂದ್ರಾದಿ ದೇವಾಂಸೀ । ಸುಖದುಃಖ ತ್ಯಾಸೀ ಸ್ಪರ್ಶೇನಾ ॥೭೮೯॥ ಪರಮುಖೇ ಸ್ವಮುಖಾವರೀ ಥುಂಕಿಜೇ । ದೋಹೀ ಮುಖೀ ಅಗ್ನೀನೇ ನಾಂದಿಜೇ । ತೇಥ ಕೋಣೇ ಕೋಣಾವರೀ ಕೋಪಿಜೇ । ಆತ್ಮಸ್ವರುಪೀ ದುಜೇ ಅಸೇನಾ ॥೭೯೦॥ ಥುಂಕ ಆಣಿ ಜೇ ಕಾ ಮೂತ । ದೇಹೀ ಉಪಜೇ ತೇ ದೇಹಾಚೇ ಅಪತ್ಯ । ತೇ ದೇಹೀಂಚೇ ದೇಹಾ ವರೀ ಲೋಳತ । ಕೋಪೇ ತೇಥ ಕೋಣ ಕೋಣಾ ॥೭೯೧॥ ಸ್ವಮುಖೇ ಪರಮುಖಾ ಚುಂಬನ ದೀಜೇ । ತೇಥ ಅಗ್ನೀನೇ ಅಗ್ನೀಸೀ ಚುಂಬಿಜೇ । ತೇಣೇ ಸುಖೇ ಕೋಣ ಫುಂಜೇ । ಆತ್ಮತ್ವೀ ದುಜೇ ಅಸೇನಾ ॥೭೯೨॥ ಸ್ವದೇಹೇ ಪರದೇಹಾ ಆಲಿಂಗನ । ಉಭಯಸ್ಪರ್ಶೀ ವಾಯೂಚಿ ಜಾಣ । ತೇಣೇ ಸುಖೇ ಸುಖಾವೇ ಕೋಣ । ದುಜೇಪಣ ಅಸೇನಾ ॥೭೯೩॥ ಯಾಪರೀ ದೇವತಾಗಣ । ನವ್ಹೇ ಸುಖದುಃಖಾಂಸೀ ಕಾರಣ । ಆತ್ಮ್ಯಾಚೇ ಠಾಯೀ ದೈವತೇ ಜಾಣ । ಹಾರಪತೀ ಪೂರ್ಣ ಅಭೇದತ್ವೇ ॥೭೯೪॥ ದೇವೀ ದೇಹೋ ಪೀಡಿತಾ ನಿಃಶೇಖ । ದೇಹಾಭಿಮಾನ್ಯಾ ಹೋಈಲ ದುಃಖ। ಹೇ ಮಾನಿತೀ ತೇ ಅತಿಮೂರ್ಖ । ತೇಹೀ ದೇಖ ಘಡೇನಾ ॥೭೯೫॥ ಪುರ ಮ್ಹಣಿಜೇ ದೇಹೋ ದೇಖ । ತೇ ಪುರೀ ಜೋ ಪುರನಿವಾಸಕ । ತೋ ಸಕಳ ದೇಹೀ ಪುರುಷ ಏಕ । ತೇಥ ಕೋಣಾಚೇ ದುಃಖ ಕೋಣ ಮಾನೀ ॥೭೯೬॥ ಜೇವೀ ಸಂಭ್ರಮ ಆವೇಶವೇಗೀ । ನಿಜಕರ ಹಾಣತಾ ನಿಜಾಂಗೀ । ತೇಥೀಲ ವ್ಯಥೇಚಾ ಭಾಗೀ । ಕೋಪಾವಯಾಲಾಗೀ ಆಪ ಆಪಣ್ಯಾ ॥೭೯೭॥ ದೇಖತಾ ಆಪಲೇ ಏಕಪಣ । ಕೋಣಾಚೇ ವ್ಯಥಾ ಮಾನೀ ಕೋಣ । ಕೋಣ ಕೋಣಾವರೀ ಕೋಪೇ ಜಾಣ । ಆಪಣ್ಯಾ ಆಪಣ ಏಕಲಾ ॥೭೯೮॥ ತೇವೀ ವಿಶ್ವಾತ್ಮಾ ಮೀಚಿ ಏಕ। ಮೀಚಿ ದೈವತೇ ಮೀಚಿ ಲೋಕ। ತೇಥ ಕೋಣ ಕೋಣಾ ದುಃಖದಾಯಕ । ಮ್ಯಾ

ಕಟ್ಟಿದ ಇದೇ ಗೋಡೆಯು ಭೂಮಿಯಮೇಲೆ ಬೀಳಲು ಆಗ ಭೂಮಿಯು ತನ್ನಲ್ಲಿ ಏಕರೂಪವನ್ನಾಗಿ ಮಾಡಿಕೊಳ್ಳುವುದು. ಅದರಂತೆ ನಿರ್ಗುಣ ಮತ್ತು ನಿರ್ವಿಕಾರ ಬ್ರಹ್ಮನಲ್ಲಿ ಅಧಿಷ್ಠಾತ್ರೀ ದೇವತೆಗಳು ಏಕರೂಪರಾಗುವರು ॥೭೮೬॥ ತನ್ನ ದೇಹದಲ್ಲಿ ಮತ್ತು ಇತರರ ದೇಹಗಳಲ್ಲಿ ಇಂದ್ರಿಯಗಳ ನಿಯಂತ್ರಣ ಮಾಡುವ ಅಧಿಷ್ಠಾತ್ರೀ ದೇವತೆಗಳು ಒಂದೇ ಸಮಾನರಾಗಿರುವರು. ಆದ್ದರಿಂದ ಇಂದ್ರಿಯಗಳ ಭಯಾನಕ ಸುಖದುಃಖಗಳನ್ನು ತಮ್ಮಿಂದ ತಾವೇ ಭೋಗಿಸುತ್ತಿರುವರು ॥೭೮೭॥ ಕೈಯಿಂದ ಮುಖಕ್ಕೆ ಪ್ರಹಾರ ಮಾಡಲು ಆಗ ಅಲ್ಲಿ ಕೈಗಳ ಅಧಿಷ್ಠಾತ್ರೀ ದೇವತೆಯು ಇಂದ್ರನಾಗಿರುವನು ಮತ್ತು ಮುಖದ ದೇವತೆ ಅಗ್ನಿಯಾಗಿರುವುದು. ಅಂದಮೇಲೆ ಇಂದ್ರನು ಅಗ್ನಿಗೆ ಹೊಡೆದನು ಎಂದಾಗುವುದು. ಆತ್ಮವು ಮಾತ್ರ ಅವಿಕಾರಿಯಾಗಿರುವುದು. ಆದ್ದರಿಂದ ಆತ್ಮವು ದುಃಖಗಳಿಂದ ಪರಿಪೂರ್ಣವಾಗಿ ಅಲಿಪ್ತವಾಗಿರುವುದು ॥೭೮೮॥ ಮುಖವು ಇನ್ನೊಬ್ಬನ ಕೈಯನ್ನು ಕಚ್ಚಲು ಆಗ ಅಗ್ನಿಯು ಇಂದ್ರನಿಗೆ ಘಾಸಿ ಮಾಡಿತು ಎಂದಾಗುವುದು. ಆತ್ಮವು ಇಂದ್ರಿಯಗಳಿಂದ ಅಲಿಪ್ತವಾಗಿರುವುದರಿಂದ ಅದಕ್ಕೆ ಸುಖದುಃಖಗಳ ಸ್ಪರ್ಶಕೂಡ ಆಗುವುದಿಲ್ಲ ॥೭೮೯॥ ಒಬ್ಬ ಮನುಷ್ಯನು ನಮ್ಮ ಮುಖಕ್ಕೆ ಉಗುಳಲು ಆಗ ಎರಡೂ ಮುಖಗಳ ದೇವತೆಯು ಅಗ್ನಿಯೇ ಆಗಿರುವುದು. ಅಂದಮೇಲೆ ಯಾರು ಯಾರಿಗೆ ಕೋಪಿಸಿಕೊಳ್ಳಬೇಕು? ಆತ್ಮಸ್ವರೂಪದಲ್ಲಿ ಬೇರೆ ಯಾರೂ ಇರುವುದಿಲ್ಲ ॥೭೯೦॥ ಉಗುಳು ಅಥವಾ ಅಮಂಗಲವಾದ ಮೂತ್ರ ಈ ಎರಡೂ ಕೂಡ ದೇಹದಿಂದಲೇ ಉತ್ಪನ್ನವಾಗಿರುವ ಸಂತಾನವಾಗಿರುವುವು. ಅಂದಮೇಲೆ ಇವರಿಬ್ಬರೂ ದೇಹದ ಮೇಲೆ ಉರುಳಾಡುತ್ತಿರಲು ಆಗ ಯಾರು ಯಾರ ಮೇಲೆ ಕೋಪಿಸಿಕೊಳ್ಳಬೇಕು? ॥೭೯೧॥ ತನ್ನ ಮುಖದಿಂದ ಇನ್ನೊಬ್ಬರ ಮುಖಕ್ಕೆ ಚುಂಬಿಸಲು ಆಗ ಅಗ್ನಿಯೇ ಅಗ್ನಿಗೆ ಚುಂಬನವನ್ನು ಕೊಟ್ಟಂತಾಗುವುದು. ಈ ಸುಖದಿಂದ ಯಾರು ಉಬ್ಬಿಕೊಳ್ಳಬೇಕು? ಕಾರಣ ಆತ್ಮ ತತ್ವದಲ್ಲಿ ಬೇರೆ ಎನ್ನುವುದು ಇರುವುದೇ ಇಲ್ಲ ॥೭೯೨॥ ತನ್ನ ದೇಹದಿಂದ ಇನ್ನೊಂದು ದೇಹಕ್ಕೆ ಆಲಿಂಗನವನ್ನು ಕೊಡಲು ಆಗ ಇಬ್ಬರ ಸ್ಪರ್ಶದಲ್ಲಿ ಒಂದೇ ಆದ ವಾಯು ದೇವತೆ ಇರುವುದು. ಈ ಸುಖದಿಂದ ಯಾರು ಯಾರಿಗೆ ಸುಖಿಯನ್ನಾಗಿ ಮಾಡಬೇಕು? ಅಲ್ಲಿ ಬೇರೆಯವರು ಯಾರೂ ಇರುವುದೇ ಇಲ್ಲ ॥೭೯೩॥

ಈ ರೀತಿಯಾಗಿ ನೋಡಲು ದೇವತೆಗಳ ಸಮುದಾಯವು ಈ ಯಾವ ಸುಖದುಃಖಗಳಿಗೆ ಕಾರಣವಾಗುವುದಿಲ್ಲ. ಕಾರಣವೇನೆಂದರೆ ಆತ್ಮದಲ್ಲಿ ಸರ್ವ ದೇವತೆಗಳು ಲಯವಾಗುವುವು ॥೭೯೪॥ ದೇವತೆಗಳು ದೇಹಕ್ಕೆ ಪರಿಪೂರ್ಣವಾಗಿ ಪೀಡೆಯನ್ನು ಕೊಟ್ಟರೆ ದೇಹಾಭಿಮಾನಕ್ಕೆ ದುಃಖವಾಗುವುದು ಎಂದು ತಿಳಿಯುವುದು ಯೋಗ್ಯವಾಗುವುದಿಲ್ಲ. ಹಾಗೆ ತಿಳಿದುಕೊಂಡರೆ ಅದು ಮಹಾಮೂರ್ಖತನವಾಗುವುದು. ಏಕೆಂದರೆ ಹಾಗೆ ಎಂದಿಗೂ ಆಗಲು ಸಾಧ್ಯವಿರುವುದಿಲ್ಲ ॥೭೯೫॥ ಪುರವೆಂದರೆ ದೇಹವಾಗಿರುವುದು. ಆ ಪುರದಲ್ಲಿರುವನು ಪುರುಷನಾಗಿರುವನು. ಈ ಪುರುಷನು ಸರ್ವ ಶರೀರದಲ್ಲಿ ಒಬ್ಬನೇ ಆಗಿರುವನು. ಅಂದಮೇಲೆ ಯಾರು ಯಾರ ದುಃಖವನ್ನು ಮನ್ನಿಸಬೇಕು? ॥೭೯೬॥ ಒಂದುವೇಳೆ ತನ್ನ ಹಸ್ತವು ತನ್ನ ದೇಹಕ್ಕೆ ಪ್ರಹಾರವನ್ನು ಮಾಡಲು ಆಗ ಆಗುವ ದುಃಖದ ಭಾಗೀದಾರನು ತಾನೇ ಆಗುವನು. ಅಥವಾ ಕೋಪಿಸಿಕೊಳ್ಳುವ ಭಾಗೀದಾರನೂ ಕೂಡ ತಾನೇ ಆಗುವನು ॥೭೯೭॥ ಈ ಪ್ರಕಾರವಾಗಿ ತನ್ನ ಐಕ್ಯವನ್ನು ತಿಳಿದುಕೊಳ್ಳಲು ಆಗ ಯಾರು ಯಾರ ದುಃಖವನ್ನು ಒಪ್ಪಿಕೊಳ್ಳಬೇಕು ? ಮತ್ತು ಯಾರು ಯಾರಮೇಲೆ ಕೋಪಿಸಿಕೊಳ್ಳಬೇಕು? ಕಾರಣ ಆತನು ಸ್ವತಃ ಸರ್ವತ್ರವೂ ತನ್ನನ್ನೇ ಕಾಣುತ್ತಿರುವನು. ॥೭೯೮॥

ಕೋಣಾವರೀ ದೇಖ ಕೋಪಾವೇ ।೪೯೯॥ ಯಾಪರೀ ಸ್ವಯೇ ವಿಚಾರಿತಾ । ದೇವಾಪಾಸಾವ ಸುಖದುಃಖತಾ । ಸಮೂಳ ನ ಘಡೇ ಸರ್ವಥಾ । ದೈವಿಕೀ ವ್ಯಥಾ ಅಸೇನಾ ।೫೦೦॥ ಆತ್ಮಾ ಸುಖದುಃಖಾಂಸೀ ಕಾರಣ । ಮೂಳೀ ಮಜಚಿ ಹೇ ಅಪ್ರಮಾಣ । ಆತ್ಮ್ಯಾಚ್ಯಾ ಠಾಯೀ ಕಾರ್ಯಕಾರಣ । ಸುಖದುಃಖ ಜಾಣ ಅಸೇನಾ ।೫೦೧॥

ಆತ್ಮಾ ಯದಿ ಸ್ಯಾತ್ಸುಖದುಃಖಹೇತುಃ ಕಿಮನ್ಯತಸ್ತತ್ರ ನಿಜಸ್ವಭಾವಃ ।
ನ ಹ್ಯಾತ್ಮನೋಽನ್ಯದ್ಯದಿ ತನ್ಮೃಷಾ ಸ್ಯಾತ್ಕ್ರುಧ್ಯೇತ ಕಸ್ಮಾನ್ನ ಸುಖಂ ನ ದುಃಖಮ್ ।೫೩॥

ಅರ್ಥ:- ಒಂದು ವೇಳೆ ಆತ್ಮನಿಗೆ ಸುಖದುಃಖದ ಕಾರಣ ಹೊರಿಸಿದರೆ ಅದು ತಾನೇ ತಾನಾಗಿರುವುದು. ಬೇರೆ ಯಾರೂ ಇಲ್ಲ. ಕಾರಣ ಆತ್ಮನನ್ನು ಬಿಟ್ಟು ಅನ್ಯ ಯಾವ ಪದಾರ್ಥವೂ ಇರುವುದಿಲ್ಲ. ಬೇರೆ ಯಾವುದಾದರು ಕಾಣುತ್ತಿದ್ದರೆ ಅದು ಮಿಥ್ಯೆಯಾಗಿರುವುದು. ಆದ್ದರಿಂದ ಸುಖವು ಇಲ್ಲ, ದುಃಖವೂ ಇಲ್ಲ. ಅಂದಮೇಲೆ ಕ್ರೋಧವು ಎಲ್ಲಿಯದು ? ಕ್ರೋಧದ ನಿಮಿತ್ತವಾದರೂ ಯಾವುದು ?

ಆತ್ಮಾ ಕೇವಳ ಏಕಲಾ ಏಕ । ತೇಥ ಕೈಚೇ ಸುಖ ಕೈಚೇ ದುಃಖ । ಆತ್ಮಾ ಸುಖದುಃಖ ದಾಯಕ । ಮ್ಹಣತೀ ತೇ ಮೂರ್ಖ ಅವಿವೇಕೀ ।೫೦೨॥ ಜೇವೀ ವಿಘುರಲೇ ಘೃತ ಜಾಣ । ತ್ಯಾಸೀ ನಸೇ ಆಕಾರ ನಾ ವರ್ಣ । ತೇಚೇ ಸಹಜೇ ಥಿಜೋನಿ ಜಾಣ। ದಿಸೇ ಶುಭ್ರವರ್ಣ ಕಣಿಕಾರೂಪೇ।೫೦೩॥ ತ್ಯಾ ಘೃತಕಣಿಕಾ ಮಿಳತಾ ದೇಖ । ನಾಹೀ ಪರಸ್ಪರೇ ಸುಖದುಃಖ । ತೇವೀ ನಿಜಾತ್ಮಾ ಏಕಲಾ ಏಕ । ತೋಚಿ ಅನೇಕ ಸ್ವರೂಪೇ ।೫೦೪॥ ಜಳೀ ಜಳಾಚ್ಯಾ ಜಳಲಹರೀ। ಆದಳತಾಂಹೀ ಪರಸ್ಪರೀ। ಸುಖದುಃಖ ನುಮಟೇ ತ್ಯಾಮಾಝಾರೀ। ತೇವೀ ಚರಾಚರೀ ಪರಮಾತ್ಮಾ ।೫೦೫॥ ಪರಮಾತ್ಮಾ ಏಕಲಾ ಏಕ । ಏಕಪಣೇಚಿ ತೋ ಅನೇಕ । ತೇಥ ವಿಜಾತೀಯ ನಾಹೀ ದೇಖ । ಮಾ ಸುಖದುಃಖ ಕೋಣಾಚೇ।೫೦೬॥ ಆತ್ಮಾ ಸುಖರೂಪ ಅವಘಾ ಏಕ। ತೇಥ ಆಭಾಸೇ ಜೇ ಅನೇಕ । ತೇ ಮಾಯಾ ಮಯ ಕಾಲ್ಪನಿಕ । ಸ್ವಪ್ನಪ್ರಾಯ ದೇಖ ಮಿಥ್ಯಾತ್ವೇ ।೫೦೭॥ ಮೃಗಜಳೀ ಪಾಹತಾ ದಿಸೇ ಜಳ । ಪರೀ ತೇ ಕೋರಡೇ ದೇಖ ಕೇವಳ । ತೇವೀ ದಿಸೇ ಜೇ ಜಗಡೂವಾಳ । ತೇ ಮಿಥ್ಯಾ ಸಮೂಳ ಮಾಯಿಕ ।೫೦೮॥ ಜೇಥ ಮಿಥ್ಯಾ ದ್ವೈತಮಾಯಿಕ । ತೇಥ ಪರಮಾತ್ಮಾ ಏಕಲಾ ಏಕ । ತೇವ್ಹಾಂಚಿ ಹಾರಪಲೇ ಸುಖದುಃಖ । ಕೋಪಾವಯಾ ನಿಃಶೇಖ ಠಾವೋ ನಾಹೀ ।೫೦೯॥ ಜೇಥ ನಿಜಾತ್ಮತಾ ಏಕಪಣ । ತೇಥ ಸುಖದುಃಖೇ ನಾಹೀ ಜಾಣ । ಕೋಣಾ ವರೀ ಕೋಪೇ ಕೋಣ । ಆಪಲ್ಯಾ ಆಪಣ ಏಕಲಾ ।೫೧೦॥

ಜೇಥ ಆತ್ಮ್ಯಾಚಾ ನಿಜಾನುಭವೋ। ತೇಥ ದ್ವೈತಾಚಾ ಅಭಾವೋ । ಸುಖದುಃಖೇ ಝಾಲೀ ವಾವೋ । ಕೋಪಾಸೀ

ಈ ಪ್ರಕಾರವಾಗಿ ನಾನೇ ಒಬ್ಬ ವಿಶ್ವಾತ್ಮಾನಾಗಿರುವೆ, ನಾನೇ ದೇವತೆಗಳಾಗಿರುವೆ. ನಾನೇ ಜನರಾಗಿರುವೆ. ಅಂದಮೇಲೆ ಯಾರು ಯಾರಿಗೆ ದುಃಖವನ್ನು ಕೊಡಬೇಕು? ಮತ್ತು ನಾನು ಯಾರಲ್ಲಿ ಕೋಪಿಸಿಕೊಳ್ಳಬೇಕು? ।೪೯೯॥ ಈ ಪ್ರಕಾರವಾಗಿ ವಿಚಾರವನ್ನು ಮಾಡಲು ಸುಖದುಃಖಗಳ ವ್ಯಥೆಯು ದೇವತೆಗಳಿಂದ ಆಗುವುದಿಲ್ಲ. ಇದು ದೈವಿಕ ವ್ಯಥೆಯಲ್ಲ. ಹೀಗೆ ನಿಶ್ಚಯವಾಗುವುದು ।೫೦೦॥ ಆತ್ಮನು ಈ ಯಾವ ಸುಖದುಃಖಗಳಿಗೆ ಕಾರಣನು ಎಂದು ಹೇಳಿದರೆ ಅದು ಕೂಡ ಮೂಲತಃ ಒಪ್ಪಲಾರದು. ಕಾರಣ ಆತ್ಮನಲ್ಲಿ ಕಾರ್ಯಕಾರಣ, ಸುಖದುಃಖ ಇವು ಯಾವವೂ ಎಂದಿಗೂ ಸಂಭವಿಸಲಾರವು ।೫೦೧॥

ಆತ್ಮವು ಇದು ಕೇವಲ ಒಂದೇ ಒಂದಾಗಿರುವುದು. ಅಲ್ಲಿ ಎಲ್ಲಿಯ ಸುಖ? ಮತ್ತು ಎಲ್ಲಿಯ ದುಃಖ? ಆತ್ಮನು ಸುಖದುಃಖಗಳನ್ನು ಕೊಡುವವನು ಎಂದು ಹೇಳುವ ಅವರು ಅವಿವೇಕಿ ಹಾಗೂ ಮೂರ್ಖರಾಗಿರುವರು ।೫೦೨॥ ಕರಗಿರುವ ತುಪ್ಪಕ್ಕೆ ಯಾವ ಆಕಾರವು ಇರುವುದಿಲ್ಲ ಮತ್ತು ವರ್ಣವೂ ಇರುವುದಿಲ್ಲ. ಆದರೆ ಅದೇ ತುಪ್ಪವು ಗಟ್ಟಿಯಾಗಲು ಶುಭ್ರವರ್ಣವಾಗಿ ಕಣಗಳ ರೂಪದಲ್ಲಿ ಆಕಾರ ವಾಗುವುದು ।೫೦೩॥ ಈ ಯಾವ ತುಪ್ಪದ ಕಣಗಳು ಒಂದಕ್ಕೊಂದು ಕೂಡಿಕೊಳ್ಳಲು ಆಗ ಅವುಗಳಿಗೆ ಪರಸ್ಪರರಿಂದ ಯಾವ ಸುಖದುಃಖ ಗಳಾಗುವುದಿಲ್ಲ ।೫೦೪॥ ಸಮುದ್ರದಲ್ಲಿನ ನೀರಿನ ತೆರೆಗಳು ನೀರಿನಮೇಲೆಯೇ ಅಪ್ಪಳಿಸುವುವು. ಆದರೆ ಅದರಿಂದ ಅಲ್ಲಿ ಯಾವ ಸುಖದುಃಖ ಗಳು ಹುಟ್ಟಿಕೊಳ್ಳುವುದಿಲ್ಲ. ಅದರಂತೆಯೇ ಈ ಯಾವ ಚರಾಚರಗಳಲ್ಲಿ ಒಬ್ಬನೇ ಪರಮಾತ್ಮನಿರುವನು ।೫೦೫॥ ಪರಮಾತ್ಮನು ಒಬ್ಬನೇ ಇದ್ದು ಆತನು ಒಂದರಿಂದಲೇ ಅನೇಕವಿಧನಾಗುವನು. ಆದ್ದರಿಂದ ಅಲ್ಲಿ ಭಿನ್ನತ್ವವಿಲ್ಲ. ಅಂದಮೇಲೇ ಸುಖದುಃಖಗಳು ಎಲ್ಲಿಯವು? ।೫೦೬॥ ಆತ್ಮವು ಆನಂದ ಸ್ವರೂಪವಾಗಿದ್ದು ಸರ್ವತ್ರವೂ ಏಕತ್ರವಾಗಿರುವುದು. ಅದರಲ್ಲಾಗುವ ಅನೇಕತ್ವದ ಭಾಸವು ಇದು ಮಾಯಾಮಯ, ಕಾಲ್ಪನಿಕ ಮತ್ತು ಸ್ವಪ್ನವತ್‌ವಾಗಿರುವುದು ।೫೦೭॥ ಮೃಗಜಲದತ್ತ ನೋಡಲು ಸರ್ವತ್ರವೂ ನೀರೇ ಕಾಣಿಸುವುದು. ಆದರೆ ನಿಜವಾಗಿ ಹೇಳಬೇಕೆಂದರೆ ಅದು ಕೇವಲ ಒಣಗಿದ ಸ್ಥಳವಾಗಿರುವ ಬೈಲುಭೂಮಿಯಾಗಿರುವುದು. ಅದರಂತೆ ಹರಡಿಕೊಂಡಿರುವ ಈ ಜಗತ್ತು ಮಿಥ್ಯೆಯಾಗಿದ್ದು ಸಮೂಲವಾಗಿ ಮಾಯಿಕವಾಗಿರುವುದು ।೫೦೮॥ ಈ ಎಲ್ಲವೂ ಮಿಥ್ಯೆಯಾದ ದ್ವೈತಮಾಯಿಕವಾಗಿದ್ದು ಕೇವಲ ಪರಮಾತ್ಮನು ಮಾತ್ರ ಒಬ್ಬನೇ ಸತ್ಯನಾಗಿರುವನು. ಈ ಅರ್ಥದಿಂದಲೇ ಸುಖದುಃಖಗಳು ಇಲ್ಲದಾಗುವುವು ಮತ್ತು ಕೋಪಿಸಿಕೊಳ್ಳಲು ಯಾವ ಸ್ಥಳವೂ ಸಿಗುವುದಿಲ್ಲ ।೫೦೯॥ ಎಲ್ಲಿ ಒಬ್ಬನೇ ಆತ್ಮನು ಪರಿಪೂರ್ಣರೂಪದಿಂದ ತುಂಬಿಕೊಂಡಿರಲು ಅಲ್ಲಿ ಸುಖದುಃಖಗಳು ಇರುವು ದಿಲ್ಲವೆಂದು ನಿಶ್ಚಿತವಾಗಿ ತಿಳಿಯಬೇಕು. ಸರ್ವವೂ ಏಕತ್ರವಾಗಿರಲು ಅಲ್ಲಿ ಯಾರು ಯಾರಲ್ಲಿ ಕೋಪಿಸಿಕೊಳ್ಳಲು ಸಾಧ್ಯ? ।೫೧೦॥

ಠಾವೋ ಅಸೇನಾ ॥೫೧೧॥ ಹೇ ನಿಜಾತ್ಮತಾ ನೇಣೋನಿ ದೇಖ । ಸತ್ಯ ಮಾನಿತೀ ಜೇ ಸುಖದುಃಖ । ತೇ ಹೋತ ಕಾ ವೇದಶಾಸ್ತ್ರಜ್ಞ ಲೋಕ । ತಯಾ ಕ್ರೋಧ ದೇಖ ವಿಭಾಂಡೀ ॥೫೧೨॥ ಜ್ಯಾಸೀ ಸರ್ವ ಭೂತೀ ನಿಜಾತ್ಮತಾ । ತೇಥ ಕೋಣ ಕೋಣಾ ದುಃಖದಾತಾ। ಕೋಣ ಕೋಣಾವರೀ ಕೋಪತಾ । ನಿಜಾತ್ಮತಾ ಏಕಲೀ ॥೫೧೩॥ ಆತ್ಮಾ ಸುಖದುಃಖಾಂಚಾ ದಾತಾ । ಯಾಪರೀ ನವ್ಹೇ ಗಾ ತತ್ತ್ವತಾ । ಆಪಣ್ಯಾ ಆಪಣ ವ್ಯಥಾ । ಮೂರ್ಖಹೀ ಸರ್ವಥಾ ನ ದೇತೀ ॥೫೧೪॥ ಏಥಿಲೇನಿ ಚೌಥೇ ಮತೇ । ಗ್ರಹ ಮಾನಾವೇ ದುಃಖದಾತೇ । ತೇಹೀ ನ ಘಡೇ ಗಾ ಯೇಥೇ । ಐಕ ನಿಶ್ಚಿತೇ ಸಾಂಗೇನ ॥೫೧೫॥

ಗ್ರಹಾನಿಮಿತ್ತಂ ಸುಖದುಃಖಯೋಶ್ಚೇತ್ ಕಿಮಾತ್ಮನೋಽಜಸ್ಯ ಜನಸ್ಯತೇ ವೈ ।
ಗ್ರಹೈರ್ಗ್ರಹಸ್ಯೈವ ವದಂತಿ ಪೀಡಾಂ ಕ್ರುಧ್ಯೇತ ಕಸ್ಮೈ ಪುರುಷಸ್ತತೋಽನ್ಯಃ ॥೫೪॥

ಅರ್ಥ:- ಒಂದುವೇಳೆ ಗ್ರಹಗಳು ಸುಖದುಃಖಕ್ಕೆ ಕಾರಣವೆಂದು ತಿಳಿದರೆ ಅಜನ್ಮ ಆತ್ಮಕ್ಕೆ ಹಾಗೂ ಗ್ರಹಗಳಿಗೂ ಸಂಬಂಧ ವೆಲ್ಲಿದೆ? ಗ್ರಹಗತಿಯ ಪರಿಣಾಮಗಳು ಜನ್ಮವೆತ್ತಿರುವ ವಸ್ತುಗಳಿಗಷ್ಟೆ ಅನ್ವಯವಾಗುತ್ತದೆ. ಮೇಲಾಗಿ ಗ್ರಹಗಳೇ ಹೇಗೆ ಪರಸ್ಪರರಿಗೆ ಪೀಡೆಯನ್ನು ಕೊಡುತ್ತವೆ? ಹೀಗೆಂದು ಖ್ಯಾತ ಜ್ಯೋತಿಷಿಗಳು ವಿವರಿಸಿ ಹೇಳಿದ್ದಾರೆ. ಆದ್ದರಿಂದ ಗ್ರಹಗತಿ ಹಾಗೂ ಶರೀರಕ್ಕೆ ಪ್ರತ್ಯೇಕವಾಗಿರುವ ಜೀವಿಯು ತನ್ನ ಕೋಪವನ್ನು ಯಾರಲ್ಲಿ ತೀರಿಸಬೇಕು?

ಜನನೀಜಠರೀ ಜನ್ಮೇ ಜಾಣ । ತ್ಯಾ ದೇಹಾಚೇ ನಾಂವ ಮ್ಹಣತೀ ಜನ । ತೇ ಜನ್ಮಕಾಳೀ ಜೇ ಹೋಯ ಲಗ್ನ । ತ್ಯಾ ಜನ್ಮಾಪಾಸೂನ ಪೂರ್ಣ ಗ್ರಹಗತಿ ಲಾಗೇ ॥೫೧೬॥ ತೇಥ ದ್ವಾದಶಾಷ್ಟಮಜನ್ಮಸ್ಥ । ಶುಭಾಶುಭ ಗ್ರಹ ಜೇ ಯೇತ । ತೇ ಸುಖದುಃಖಾಂತೇ ದೇತ । ಆತ್ಮಾ ಅಲಿಪ್ತ ಗ್ರಹಗತೀ ॥೫೧೭॥ ಮುಳೀ ಆತ್ಮ್ಯಾಸೀ ಜನ್ಮ ನಾಹೀ । ಮಾ ಗ್ರಹ ಲಾಗತೀ ಕವಣೇ ಠಾಯೀ । ಜೇಥ ಶೇತಚಿ ಪೇರಿಲೇ ನಾಹೀ । ತೇಥ ಉಂದಿರೀ ಕಾಯೀ ಕರಾಂಡಾವೇ ॥೫೧೮॥ ಮುಖ್ಯತ್ವೇ ಘರ ಕೇಲೇ ನಾಹೀ । ತೇಥಲೀ ಮಾಡೀ ಜಳೇಲ ಕಾಯೀ । ಆತ್ಮ್ಯಾಸೀ ತಂವ ಜನ್ಮಚಿ ನಾಹೀ । ಮಾ ಗ್ರಹಗತೀ ಕಾಈ ಲಾಗೇಲ ॥೫೧೯॥ ಗ್ರಹಾಂಚೀ ಗ್ರಹಗತೀ ದೇಹಾಪಾಸೀ । ಆತ್ಮಾ ಅಲಿಪ್ತ ದೇಹಭಾವಾಸೀ । ಜೇವೀ ಕಾಉಳಾ ನ ಚಢೇ ಕೈಲಾಸೀ । ತೇವೀ ಗ್ರಹ ಆತ್ಮ್ಯಾಸೀ ನ ಲಗತೀ ॥೫೨೦॥ ಜೇವೀ ಕಾ ಅಗ್ನಿ ತೇ ನ ಚಾಖೇ ಮಾಶೀ । ಘಾರೀ ಝುಡಪೀನಾ ಚಂದ್ರಮ್ಯಾಸೀ । ತೇವೀ ಲಾಗಾವಯಾ ಆತ್ಮ್ಯಾಸೀ

ಎಲ್ಲಿ ಆತ್ಮನಿಗೆ ಸ್ವತಃವೇ ಅನುಭವಕ್ಕೆ ಬರಲು ಅಲ್ಲಿ ಸರ್ವಪ್ರಕಾರಗಳ ದ್ವೈತವು ಇಲ್ಲದಾಗುವುದು ಮತ್ತು ಸುಖದುಃಖಗಳೆಲ್ಲವೂ ಸುಳ್ಳಾಗಿ ಬಿಡುವುವು. ಹೀಗಾದಮೇಲೆ ಕ್ರೋಧಕ್ಕೆ ಯಾವ ಸ್ಥಳವೂ ಉಳಿದುಕೊಳ್ಳುವುದಿಲ್ಲ ॥೫೧೧॥ ಈ ಯಾವ ಆತ್ಮತತ್ತ್ವದ ವಿಶಾಲತೆಯನ್ನು ಅರಿತು ಕೊಳ್ಳದೇ ಯಾವ ಜನರು ಸುಖದುಃಖಗಳಿಗೆ ಸತ್ಯವೆಂದು ತಿಳಿಯುವರೋ, ಆ ಜನರು ವೇದಶಾಸ್ತ್ರಸಂಪನ್ನರಾಗಿದ್ದರೂ ಕೂಡ ಕ್ರೋಧವು ಅವರ ಜೀವನವನ್ನು ಧ್ವಂಸಗೊಳಿಸುವುದು ॥೫೧೨॥ ಸರ್ವಪ್ರಾಣಿಮಾತ್ರರಲ್ಲಿ ಯಾರಿಗೆ ಆತ್ಮತತ್ತ್ವವು ತೋರುತ್ತಿರುವುದೋ, ಅಲ್ಲಿ ಯಾರು ಯಾರಿಗೆ ದುಃಖವನ್ನು ಕೊಡಲು ಸಾಧ್ಯವಿದೆ? ಯಾರು ಯಾರಮೇಲೆ ಕೋಪಿಸಬೇಕಾಗಿದೆ? ಕಾರಣ ಸರ್ವತ್ರವೂ ಒಂದೇ ಒಂದು ಆತ್ಮತತ್ತ್ವವು ತುಂಬಿಕೊಂಡಿರುವುದು ॥೫೧೩॥ ಈ ಪ್ರಕಾರವಾಗಿ ಆತ್ಮವು ಎಂದಿಗೂ ಸುಖದುಃಖಗಳನ್ನು ಕೊಡುವುದಾಗಿರುವುದಿಲ್ಲ. ಕಾರಣವೇನೆಂದರೆ ಒಬ್ಬ ಮೂರ್ಖನಾದವನೂ ಕೂಡ ತಾನೇ ತನಗೆ ಎಂದಿಗೂ ಪೀಡೆಯನ್ನು ಕೊಡಲಾರನು ॥೫೧೪॥ ಇದರಲ್ಲಿನ ನಾಲ್ಕನೆಯ ಮತಪ್ರಮಾಣದಂತೆ ಗ್ರಹಗಳು ದುಃಖವನ್ನು ಕೊಡುವುವು ಎಂದು ಹೀಗೆ ತಿಳಿದುಕೊಂಡರೆ ಇದೂ ಕೂಡ ಸಂಭವಿಸಲಾರದು. ಅದು ಹೇಗೆ ಎಂಬುವುದನ್ನು ಈಗ ಹೇಳುವೆನು, ಅದನ್ನು ಕೇಳು ॥೫೧೫॥

ಯಾವ ಈ ದೇಹವು ಜನನೀಜಠರದಲ್ಲಿ ಜನ್ಮವನ್ನು ಪಡೆಯುವುದು. ಆದ್ದರಿಂದ ಈ ದೇಹಗಳಿಗೆ ಜನ ಎಂದು ಹೆಸರು ಕೊಟ್ಟಿರುವರು. ಅವರ ಜನ್ಮಕಾಲದಲ್ಲಿ ಯಾವ ಲಗ್ನವಿರುವುದೋ, ಆ ಜನ್ಮಲಗ್ನಕ್ಕೆ ಜನ್ಮಕಾಲದಿಂದಲೇ ಗ್ರಹಗಳ ಗತಿಯು ನಿಶ್ಚಯವಾಗುತ್ತಿರುವುದು ॥೫೧೬॥ ಅದರಲ್ಲಿನ ಎಂಟನೆಯ, ಹನ್ನೆರಡನೆಯ ಸ್ಥಾನಗಳಲ್ಲಿ ಶುಭಾಶುಭ ಗ್ರಹಗಳಿರುವುವು. ಅದರಂತೆಯೇ ಸುಖದುಃಖಗಳ ಪ್ರಾಪ್ತಿಯಾಗುತ್ತಿರುವುದು. ಆದರೆ ಈ ಗ್ರಹಗಳ ಗತಿಯಿಂದ ಆತ್ಮವು ಪರಿಪೂರ್ಣವಾಗಿ ಅಲಿಪ್ತವಾಗಿರುವುದು ॥೫೧೭॥ ಆತ್ಮಕ್ಕೆ ಮಾತ್ರ ಮೂಲತಃ ಜನ್ಮವಿರುವುದಿಲ್ಲ. ಅಂದಮೇಲೆ ಅದಕ್ಕೆ ಯಾವ ಕಾಲದಲ್ಲಿ ಗ್ರಹಗಳು ಹತ್ತಿಕೊಳ್ಳಬೇಕು? ಯಾವ ಸ್ಥಾನದಲ್ಲಿ ಹೊಲವನ್ನು ಬಿತ್ತಿರುವುದೇ ಇಲ್ಲವೋ, ಆ ಸ್ಥಳದಲ್ಲಿ ಇಲಿಗಳು ಯಾವ ಬೆಳೆಯನ್ನು ನಾಶಮಾಡಬೇಕು? ॥೫೧೮॥ ಮುಖ್ಯವಾಗಿ ಮನೆಯನ್ನೇ ಕಟ್ಟದಿರಲು ಅಲ್ಲಿ ಮನೆಯ ಮಹಡಿ ಮಾಳಿಗೆ ಹೇಗೆ ಸುಡುವುದು? ಅದರಂತೆ ಆತ್ಮಕ್ಕೆ ಜನ್ಮವೇ ಇಲ್ಲದಿರಲು, ಅಲ್ಲಿ ಗ್ರಹಗಳ ಶುಭಾಶುಭ ಫಲಗಳು ಹೇಗೆ ಒದಗಬೇಕು? ॥೫೧೯॥

ಗ್ರಹಗಳ ಯಾವ ಗ್ರಹದಶೆಗಳು ಇವು ಕೇವಲ ದೇಹಗಳಿಗಷ್ಟೇ ಸೀಮಿತವು. ಆದರೆ ಆತ್ಮನು ಮಾತ್ರ ದೇಹದಿಂದ ಪರಿಪೂರ್ಣವಾಗಿ ಅಲಿಪ್ತನಾಗಿರುವನು. ಕಾಗೆಯು ಕೈಲಾಸಕ್ಕೆ ಏರಿ ಹೋಗದಂತೆ ಗ್ರಹಗಳು ಆತ್ಮನವರೆಗೆ ಹೋಗಿ ಮುಟ್ಟಲಾರವು ॥೫೨೦॥ ಯಾವ ಪ್ರಕಾರವಾಗಿ

। ಸಾಮರ್ಥ್ಯ ಗ್ರಹಾಂಸೀ ಅಸೇನಾ ॥೮೨೧॥ ಆತ್ಮಾ ಸರ್ವಾಂಚಾ ಅವಘಾ ಏಕ । ತೈ ಗ್ರಹಾಂಚಾ ಆತ್ಮಾ ತೋಚಿ ದೇಖ । ತಯಾ ನಿಜಾತ್ಮ್ಯಾಸೀ ದೇತಾ ದುಃಖ । ಗ್ರಹಪೀಡೀ ಆವಶ್ಯಕ ಆಪಆಪಣ್ಯಾ ॥೮೨೨॥ ದೇಹ ಜಡ ಮೂಢ ಅಜ್ಞಾನ । ತೇ ಸುಖದುಃಖಾಂಚೇ ನೇಣೇ ಜ್ಞಾನ । ಆತ್ಮ್ಯಾಸೀ ಸುಖದುಃಖ ದೇತಾ ಜಾಣ । ತೈ ಆಪಣ್ಯಾ ಆಪಣ ಪೀಡಿತೀ ಗ್ರಹ ॥೮೨೩॥ ಆಪಣಚಿ ಆಪಣಾಪ್ರತೀ । ಕದಾ ನ ದೇವವೇ ದುಃಖಪ್ರಾಪ್ತೀ । ಯಾಲಾಗೀ ಆತ್ಮ್ಯಾಸೀ ಗ್ರಹಗತೀ । ಜಾಣ ಕಲ್ಪಾಂತೀ ಬಾಧೀನಾ ॥೮೨೪॥ ಗ್ರಹಗ್ರಹಾಮಾಜೀ ವೈರಸ್ಥಿತೀ । ಗ್ರಹ ಗ್ರಹಾಂತೇ ಪೀಡಾ ದೇತೀ । ತೇಹೀ ಅರ್ಥಾಚೀ ಉಪಪತ್ತೀ । ಯಥಾನಿಗುತೀ ಅವಧಾರಾ ॥೮೨೫॥ ಜ್ಯೋತಿಷಶಾಸ್ತ್ರಸಂಮತೀ । ಶನಿ-ಭೌಮಸೂರ್ಯಾ ವೈರಪ್ರಾಪ್ತೀ । ಗುರು-ಶುಕ್ರ ದೋನೀ ವೈರೀ ಹೋತೀ । ಬುಧ-ಸೋಮಾಪ್ರತೀ ಮಹಾವೈರ ॥೮೨೬॥ ತೇಥ ಏಕಾಂಚೀ ತೇ ಶೀಘ್ರಗತೀ । ಏಕ ಗ್ರಹ ಮಂದಗಾಮೀ ಹೋತೀ । ಅತಿಚಾರ ಕಾ ವಕ್ರಗತೀ । ಮಂಡಳಭೇಧೇ ಯೇತೀ ಏಕತ್ರ ॥೮೨೭॥ ವೈರೀ ಮೀನಲ್ಯಾ ಏಕೇ ರಾಶೀ । ಏಕೇ ಚರಣೀ ಏಕತ್ರ ವಾಸೀ । ತೈ ರಾಹು ಗಿಳೀ ಸೂರ್ಯಾಸೀ । ಸೂರ್ಯ ಚಂದ್ರಾಸೀ ಕುಹೂ ಕರೀ ॥೮೨೮॥ ಐಸೇ ಗ್ರಹಚಿ ಗ್ರಹಾಂಸೀ ಜಾಣ । ಪರಸ್ಪರೇ ಪೀಡಿತೀ ಆಪಣ । ಮೀ ಆತ್ಮ ತ್ಯಾಂಹೂನಿ ಭಿನ್ನ । ಸುಖದುಃಖ ಕೋಣ ಮಜ ತ್ಯಾಂಚೇ ॥೮೨೯॥ ಅಲಂಕಾರ ಮೋಡಿತಾ ಖಣಾಣ । ಸೋನೇ ಮೋಡೇನಾ ಆಪಣ । ತೇವೀ ಗ್ರಹ ಗ್ರಹಾಂಸೀ ಪೀಡಿತಾ ಜಾಣ । ಮಜ ಆತ್ಮ್ಯಾಸೀ ಕೋಣ ಸುಖದುಃಖ ॥೮೩೦॥ ರಣಭೂಮೀ ಯುದ್ಧಝೋಟಧರಣೀ । ಹೋತಾ ಘಾಯವಾಟ ನವ್ಹೇ ಧರಣೀ । ತೇವೀ ಗ್ರಹಪೀಡೇ ಪಾಸೂನೀ । ಮೀ ಅಲಿಪ್ತಪಣೇ ನಿಜಾತ್ಮಾ ॥೮೩೧॥ ರಜಸ್ವಲಾ ಚಾಲತಾ ಭೂಮೀಸೀ । ತೋ ವಿಟಾಳ ಬಾಧೀನಾ ಪೃಥ್ವೀಸೀ । ತೇವೀ ಗ್ರಹೀ ಪೀಡಿತಾ ಗ್ರಹಾಂಸೀ । ಮೀ ಸುಖದುಃಖಾಂಸೀ ಅಲಿಪ್ತ ॥೮೩೨॥ ಏವಂ ಗ್ರಹಾನಿಮಿತ್ತ ಜೇ ಕಾಂಹೀ । ಸುಖದುಃಖ ಉಮಟೇ ದೇಹೀ । ತೇ ಮಜ ಆತ್ಮ್ಯಾಸೀ ನ ಲಗೇ ಕಂಹೀ । ಮಗ ಕೋಣೇ ಪಾಹೀ ಕೋಣಾ ಕೋಪಾವೇ ॥೮೩೩॥

ಸುಖದುಃಖ ನುಮಟೇ ಜ್ಯಾಚ್ಯಾ ಠಾಯೀ । ತ್ಯಾಸೀ ಕ್ರೋಧಚಿ ನ ಯೇ ಕಂಹೀ । ಏವಂ ಗ್ರಹಾನಿಮಿತ್ತ ದುಃಖ

ನೊಣವು ಅಗ್ನಿಯನ್ನು ನೆಕ್ಕಲಾರದೋ, ಅಥವಾ ಹದ್ದು ಚಂದ್ರನಮೇಲೆ ಏರಿ ಹಾರಲಾರದೋ, ಅದರಂತೆ ಗ್ರಹಗಳು ಆತ್ಮಕ್ಕೆ ಸ್ಪರ್ಶಮಾಡಲು ಸಮರ್ಥರಾಗಿರುವುದಿಲ್ಲ ॥೮೨೧॥ ಸರ್ವರ ಆತ್ಮವು ಒಂದೇ ಒಂದಾಗಿರುವುದು. ಗ್ರಹಗಳ ಆತ್ಮವಾದರೂ ಅದೇ ಆಗಿರುವುದು. ಅಂದಮೇಲೆ ಗ್ರಹಗಳು ಒಂದುವೇಳೆ ತಮ್ಮ ಆತ್ಮಕ್ಕೆ ಪೀಡೆಯನ್ನು ಕೊಟ್ಟರೆ ತಾವೇ ತಮಗೆ ಕ್ಲೇಶಗಳನ್ನು ಕೊಟ್ಟಂತಾಗುವುದು ॥೮೨೨॥ ದೇಹವು ಜಡ, ಮೂಢ ಅಜ್ಞಾನಿಯಾಗಿರುವುದು. ಸುಖದುಃಖಗಳ ಜ್ಞಾನವಿರುವುದಿಲ್ಲ. ಹೀಗಿರಲು ಗ್ರಹಗಳು ಆತ್ಮನಿಗೆ ಸುಖದುಃಖಗಳನ್ನು ಕೊಟ್ಟರೆ ಅದು ತನಗೆ ತಾನೇ ಪೀಡೆಯನ್ನು ಕೊಟ್ಟಂತಾಗುವುದು ॥೮೨೩॥ ಯಾರೂ ಎಂದಿಗೂ ತಮ್ಮನ್ನು ತಾವೇ ಪೀಡೆಯನ್ನು ಕೊಡಲಾರರು. ಹೀಗೆ ವಿಚಾರಿಸಿ ನೋಡಲು ಗ್ರಹದಶೆಗಳು ಆತ್ಮಕ್ಕೆ ಕಲ್ಪಾಂತಕ್ಕೂ ಬಾಧಿಸಲು ಸಾಧ್ಯವಿಲ್ಲವೆಂಬುದು ನಿಶ್ಚಳವಾಗಿರುವುದು ॥೮೨೪॥ ಗ್ರಹಗ್ರಹಗಳಲ್ಲಿ ವೈರ ಭಾವವು ಇದ್ದೇ ಇರುವುದು. ಗ್ರಹಗಳೇ ಗ್ರಹಗಳಿಗೆ ಪೀಡೆಯನ್ನು ಕೊಡುತ್ತಿರುವುವು. ಈ ವಿಷಯವನ್ನು ಕುರಿತು ಈಗ ಹೇಳುವೆನು. ಆದ್ದರಿಂದ ಏಕಾಗ್ರತೆಯಿಂದ ಕೇಳು ॥೮೨೫॥ ಜ್ಯೋತಿಷ್ಯಶಾಸ್ತ್ರದ ಮತ ಪ್ರಮಾಣದಂತೆ ಶನೀ, ಮಂಗಳ ಮತ್ತು ಸೂರ್ಯ ಇವರ ಪರಸ್ಪರವಾಗಿ ವೈರ ವಿರುವುದು. ಗುರು, ಶುಕ್ರರಲ್ಲಿ ವೈರವಿರುವುದು. ಬುಧ ಮತ್ತು ಸೋಮ ಇವರು ಮಾತ್ರ ಕಟ್ಟಾ ವೈರಿಗಳಾಗಿರುವರು ॥೮೨೬॥ ಇವುಗಳಲ್ಲಿನ ಕೆಲವು ಗ್ರಹಗಳ ಗತಿಯು ಶೀಘ್ರವಾಗಿದ್ದರೆ ಇನ್ನು ಕೆಲವು ಗ್ರಹಗಳ ಗತಿಯು ಅತ್ಯಂತ ಮಂದಸ್ವರೂಪವಾಗಿರುವುದು. ಕೆಲವು ಗ್ರಹಗಳು ಅತಿಶಯವಾಗಿ ತೀವ್ರ ಗತಿಯಿಂದ ನಡೆಯುತ್ತಿದ್ದರೆ ಇನ್ನು ಕೆಲವು ಗ್ರಹಗಳು ವಕ್ರಗತಿಯಿಂದ ಹಿಂದಕ್ಕೆ ತಿರುಗಿ ಬರುತ್ತಿರುವುವು. ಕೆಲವು ಗ್ರಹಗಳು ಬೇರೆ ಗ್ರಹಗಳ ಮಂಡಳವನ್ನು ಭೇದಮಾಡಿ ಏಕತ್ರವಾಗಿ ಬರುತ್ತಿರುವುವು. ॥೮೨೭॥ ಪರಸ್ಪರ ವೈರಿಯಾಗಿರುವ ಗ್ರಹಗಳು ಒಂದೇ ರಾಶಿಯಲ್ಲಿ ಬಂದು ಒಂದೇ ಚರಣದಲ್ಲಿ ವಾಸಿಸುತ್ತಿದ್ದರೆ ಆಗ ರಾಹು ಸೂರ್ಯನನ್ನು ಗ್ರಾಸಮಾಡುವುದು ಮತ್ತು ಸೂರ್ಯನು ಚಂದ್ರನನ್ನು ಲೋಪಗೊಳಿಸುವನು ॥೮೨೮॥ ಈ ಪ್ರಕಾರವಾಗಿ ಗ್ರಹಗಳೇ ಗ್ರಹಗಳಿಗೆ ಪೀಡೆಯನ್ನು ಕೊಡುತ್ತಿರುತ್ತವೆ ಆದರೆ ನಾನು ಆತ್ಮಸ್ವರೂಪನಾಗಿದ್ದು ಅವುಗಳಿಂದ ಭಿನ್ನನಾಗಿರುವೆನು. ಅಂದಮೇಲೆ ಅವುಗಳ ಸುಖದುಃಖಗಳು ನನಗೇನು ಮಾಡಬಲ್ಲವು? ॥೮೨೯॥ ಅಲಂಕಾರಗಳನ್ನು ಖಡ್‌ಖಡಾ ಎಂದು ಎಷ್ಟೇ ತುಂಡುಗಳನ್ನಾಗಿ ಮಾಡಲಿ ಅದರಿಂದ ಬಂಗಾರವು ತುಂಡಾಗುವುದೇ ಇಲ್ಲ. ಅದರಂತೆ ನನ್ನ ಆತ್ಮನಿಗೆ ಯಾವುದೇ ಪ್ರಕಾರದ ಸುಖದುಃಖಗಳಾಗುವುದಿಲ್ಲ ॥೮೩೦॥ ರಣರಂಗದಲ್ಲಿ ಚಿಕ್ಕ ದೊಡ್ಡ ಯುದ್ಧಗಳಾಗಲು ಅಲ್ಲಿನ ಭೂಮಿಯು ಘಾಯಾಳುವಾಗುವುದಿಲ್ಲ. ಅದರಂತೆ ನಾನು ಆತ್ಮಸ್ವರಪನಾಗಿರುವುದರಿಂದ ಗ್ರಹಗಳ ಪೀಡೆಯಿಂದ ಅಲಿಪ್ತನಾಗಿರುವೆನು ॥೮೩೧॥ ಮುಟ್ಟಾಗಿರುವ ಸ್ತ್ರೀಯಳು ನೆಲದಮೇಲೆ ನಡೆಯುವುದರಿಂದ ಪೃಥ್ವಿಗೆ ಈಕೆಯಿಂದ ಎಂದಿಗೂ ಬಾಧೆಯಾಗುವುದಿಲ್ಲ. ಅದರಂತೆ ಗ್ರಹಗಳು ಗ್ರಹಗಳಿಗೆ ಪೀಡೆಯನ್ನು ಕೊಡುತ್ತಿರಲು ಅದರಿಂದ ನಾನು ಅಲಿಪ್ತನಾಗಿರುವೆನು ॥೮೩೨॥ ಈ ಪ್ರಕಾರವಾಗಿ ಗ್ರಹಗಳಿಂದ ಯಾವ ಸುಖದುಃಖಗಳು ದೇಹದಲ್ಲಿ ನಿರ್ಮಾಣವಾಗುತ್ತಿರುವುವು. ಇವು ನನ್ನ ಆತ್ಮಕ್ಕೆ ಎಂದಿಗೂ ಬಾಧಿಸಲಾರವು. ಅಂದಮೇಲೆ ಯಾರು ಯಾರಮೇಲೆ ಕೋಪಿಸಿಕೊಳ್ಳಬೇಕು? ॥೮೩೩॥

ಕಾಂಹೀ। ಸರ್ವಥಾ ನಾಹೀ ಯಾ ಹೇತೂ।॥೮೩೪॥ ಸುಖದುಃಖದಾತೇ ನಿಜಕರ್ಮ । ಮ್ಹಣತಾ ಜನಾಂಸೀ ಪಡೇ ಭ್ರಮ । ಆತ್ಮಾ ಕೇವಳ ನಿಷ್ಕರ್ಮ । ತ್ಯಾಸೀ ಜಡ ಕರ್ಮ ಕೇವೀ ಭಾಧೀ ।॥೮೩೫॥

ಕರ್ಮಾಸ್ತು ಹೇತುಃ ಸುಖದುಃಖಯೋಶ್ಚೇತ್ಕಿಮಾತ್ಮನಸ್ತದ್ಧಿ ಜಡಾಜಡತ್ವೇ ।
ದೇಹಸ್ತ್ವಚಿತ್ಪುರುಷೋಽಯಂ ಸುಪರ್ಣಃ ಕ್ರುಧ್ಯೇತ ಕಸ್ಮೈನ ಹೀ ಕರ್ಮ ಮೂಲಮ್ ।॥೫೫॥

ಅರ್ಥ:- ಒಂದುವೇಳೆ ಕರ್ಮಕ್ಕೆ ಸುಖದುಃಖದ ಕಾರಣವೆಂದು ತಿಳಿದರೆ ಇದರಿಂದ ಆತ್ಮಕ್ಕೆ ಏನಾಗಬೇಕಾಗಿದೆ ? ದೇಹವು ಮಾತ್ರ ಅಚೇತನವಾಗಿದೆ. ಆದರಲ್ಲಿ ಪಕ್ಷಿ ರೂಪದಿಂದ ಇರುವ ಆತ್ಮನು ಪರಿಪೂರ್ಣವಾಗಿ ನಿರ್ವಿಕಾರ ಮತ್ತು ಸಾಕ್ಷಿಮಾತ್ರನಾಗಿರುವನು. ಈ ಪ್ರಕಾರವಾಗಿ ಕರ್ಮಗಳು ಮಾತ್ರ ಯಾವ ಆಧಾರದಿಂದಲೂ ಸಿದ್ಧವಾಗುವುದಿಲ್ಲ. ಅಂದಮೇಲೆ ಕ್ರೋಧವನ್ನು ಯಾರಮೇಲೆ ಮಾಡಬೇಕು?

ಕರ್ಮ ಜಡತ್ವೇ ಅತಿಬದ್ಧ । ಆತ್ಮಾ ಚಿದ್ರೂಪೇ ಪರಮ ಶುದ್ಧ । ತ್ಯಾಸೀ ಕರ್ಮಾಚಾ ಕರ್ಮಬಾಧ । ಸರ್ವಥಾ ಸಂಬಂಧ ಧರೀನಾ ।॥೮೩೬॥ ರವೀಸೀ ಅಂಧಾರೀ ಲಪವೇ । ವಣವಾ ತೃಣಾಮಾಜೀ ಬಾಂಧವೇ । ಗೋಚಿಡಾಚೇನಿ ಮುಖಲಾಘವೇ । ಜರೀ ಲಾಗವೇ ದೀಪಾಸೀ ।॥೮೩೭॥ ಚಂಡವಾತಾತೇ ತುಷ ರೋಖೇ । ಥಿಲ್ಲರ ಚಿಖಲೇ ಚಂದ್ರ ಮಾಖೇ । ತೈ ಕರ್ಮಜನ್ಯ ಸುಖದುಃಖೇ । ಆತ್ಮಾ ಯಥಾಸುಖೇ ಬದ್ಧತಾ ಭೋಗೀ ।॥೮೩೮॥ ಆತ್ಮಾ ಕರ್ಮಾಕರ್ಮ ಸಂಹಾರೀ । ಸುಖದುಃಖಾಂಚೀ ಹೋಳೀ ಕರೀ । ತೋ ಕರ್ಮಫಳಾಂಚಾ ಫಳಾಹಾರೀ । ಮೂರ್ಖ ಗವ್ಹಾರೀ ಮಾನಿಜೇ ।॥೮೩೯॥ ಸ್ವಪ್ನೀಂಚೀ ಸ್ವಪ್ನಸಂತತೀ । ಜಾಗೃತೀ ಕೋಣಾ ಭೇಟೋ ಯೇತೀ । ತರೀ ಕರ್ಮಾಚೀ ಸುಖದುಃಖಪ್ರಾಪ್ತೀ । ಆತ್ಮ್ಯಾಪ್ರತೀ ಬಾಧಕ ।॥೮೪೦॥ ಜೇವೀ ಅಗ್ನೀವರೀ ಮುಂಗೀ ನ ಚಲೇ । ತೇವೀ ಆತ್ಮಾ ನ ಮಾಖೇ ಕರ್ಮಮಳೇ । ಆಕಾಶ ನ ಖೋಂಚೇ ಶಸ್ತ್ರಬಳೇ । ತೇವೀ ಆತ್ಮಾ ಕರ್ಮಫಳೇ । ಸ್ವರ್ಶೇನಾ ।॥೮೪೧॥ ಕರ್ಮ ತಿತುಕೇ ಆವಿದ್ಯಕ । ಆತ್ಮಾ ವಿದ್ಯಾಅವಿದ್ಯಾತೀತ ಚೋಖ । ತ್ಯಾಸೀ ಕರ್ಮಾಚೇ ಸುಖದುಃಖ । ಮಾನಿತೀ ಮೂರ್ಖ ದೇಹಮೋಹೇ ।॥೮೪೨॥ ಕರ್ಮ ಅತಿಜಡ ಆತ್ಮಾ ಶುದ್ಧ । ಕರ್ಮ ಪರಿಚ್ಛಿನ್ನ ಆತ್ಮಾ ಅಗಾಧ । ಕರ್ಮ ಕರ್ಮಠತಾ ನಿತ್ಯಬದ್ಧ । ಆತ್ಮಾ ಚಿದಾನಂದಸ್ವರೂಪ ।॥೮೪೩॥
ಕರ್ಮ ಮಿಥ್ಯಾಭೂತ ಮಾಯಿಕ । ಆತ್ಮಾ ನಿತ್ಯ ಅಮಾಯಿಕ । ಕರ್ಮಾಸೀ ಬ್ರಹ್ಮ ಅನೋಳಖ । ಬ್ರಹ್ಮ ತೇಥ ದೇಖ

ಯಾರ ಅಂತಃಕರಣದಲ್ಲಿ ಸುಖದುಃಖಗಳ ಉದಯವಾಗುವುದಿಲ್ಲವೋ, ಆತನಿಗೆ ಕ್ರೋಧವು ಎಂದಿಗೂ ಬರುವುದಿಲ್ಲ. ಈ ಕಾರಣದಿಂದಲೇ ಗ್ರಹಗಳ ನಿಮಿತ್ತವಾಗಿ ಸರ್ವಥಾ ದುಃಖವಾಗುವುದಿಲ್ಲ ।॥೮೩೪॥ ತಮ್ಮ ಕರ್ಮಗಳೇ ತಮಗೆ ಸುಖದುಃಖಗಳನ್ನು ಕೊಡುತ್ತಿರುವುವು ಎಂದು ಜನರಿಗೆ ಭ್ರಮೆಯಾಗಿರುವುದು. ಆದರೆ ಆತ್ಮವು ಕೇವಲ ನಿಷ್ಕರ್ಮವಾಗಿರುವುದು. ಅದಕ್ಕೆ ಜಡವಾಗಿರುವ ಕರ್ಮಗಳು ಹೇಗೆ ಬಾಧಿಸಲು ಸಾಧ್ಯ? ।॥೮೩೫॥

ಕರ್ಮವು ಇದು ಜಡವಾಗಿರುವುದು. ಆದ್ದರಿಂದ ಅದು ಬದ್ಧನನ್ನಾಗಿ ಮಾಡುವುದು. ಆತ್ಮವು ಜ್ಞಾನಸ್ವರೂಪವಾಗಿರುವುದು. ಆದ್ದರಿಂದ ಅದು ಅತ್ಯಂತ ಶುದ್ಧವಾಗಿರುವುದು. ಕರ್ಮಗಳಿಂದ ಆಗುವ ಬಾಧೆಯು ಆತ್ಮನಿಗೆ ಎಂದಿಗೂ ಸ್ಪರ್ಶಕೂಡ ಮಾಡಲು ಶಕ್ಯವಿಲ್ಲ. ।॥೮೩೬॥ ಸೂರ್ಯನಿಗೆ ಕತ್ತಲಲ್ಲಿ ಅಡಗಿ ಕುಳಿತುಕೊಳ್ಳಲು ಬರುತ್ತಿದ್ದರೆ, ಹುಲ್ಲು ಕಾಡಬೆಂಕಿಯನ್ನು ಕಟ್ಟಿಹಾಕಲು ಸಾಧ್ಯವಾದರೆ, ಉಣ್ಣೆಯು ತನ್ನ ಮುಖದಿಂದ ದೀಪವನ್ನು ಕಟ್ಟಿಕೊಂಡರೆ, ।॥೮೩೭॥ ತೌಡು ಬಿರುಗಾಳಿಯನ್ನು ಅಡ್ಡಗಟ್ಟಿ ತಡೆದರೆ, ಚಿಕ್ಕಹೊಂಡದ ನಿಂತ ನೀರಿನ ರೊಜ್ಜಿನಲ್ಲಿ ಚಂದ್ರನು ಸಿಕ್ಕಿಕೊಂಡರೆ, ಆಗ ಮಾತ್ರ ಕರ್ಮಗಳಿಂದ ಆಗತಕ್ಕ ಸುಖದುಃಖಗಳಲ್ಲಿ ಆತ್ಮನು ಬದ್ಧನಾಗಬಹುದು ।॥೮೩೮॥ ಆತ್ಮನು ಈ ಯಾವ ಕರ್ಮಾಕರ್ಮಗಳನ್ನು ಸಂಹಾರ ಮಾಡುವನು. ಆತನು ಸುಖದುಃಖಗಳ ಹೋಳಿ ಮಾಡಿಬಿಡುವನು. ಹೀಗಿರುತ್ತಿರಲು ಆತನು ಕರ್ಮಗಳ ಸುಖದುಃಖಗಳನ್ನು, ಫಲಗಳನ್ನು ಭೋಗಿಸುವನು ಎಂದು ಹೇಳುವುದು ನಿಜವಾಗಿ ಅಜ್ಞಾನೀ ಮತ್ತು ಮೂರ್ಖರ ಮಾತಾಗಿರುವುದು. ।॥೮೩೯॥ ಸ್ವಪ್ನದಲ್ಲಿ ಹುಟ್ಟಿರುವ ಸ್ವಪ್ನ ಸಂತತಿಯು ಜಾಗೃತೆಯಾದಾಗ ಅದು ಯಾರಿಗಾದರೂ ಭೇಟಿಯಾಗಲು ಬಂದರೆ, ಆಗ ಮಾತ್ರ ಕರ್ಮಗಳಿಂದ ಉತ್ಪನ್ನವಾಗುವ ಸುಖದುಃಖಗಳು ಆತ್ಮನಿಗೆ ಬಾಧಕವಾಗಲು ಸಾಧ್ಯವಾಗುವುದು ।॥೮೪೦॥ ಯಾವ ಪ್ರಕಾರವಾಗಿ ಅಗ್ನಿಯ ಕೆಂಡದ ಮೇಲೆ ಇರುವೆಯು ನಡೆಯಲು ಶಕ್ಯವಿಲ್ಲವೋ, ಅದರಂತೆ ಆತ್ಮವು ಯಾವ ಕರ್ಮಗಳ ಫಲಕ್ಕೆ ಲಿಪ್ತನಾಗುವುದಿಲ್ಲ. ಆಕಾಶಕ್ಕೆ ಶಸ್ತ್ರಗಳಿಂದ ಕಿಂಡಿ ಬೀಳಿಸುವ ಪ್ರಯತ್ನವನ್ನು ಮಾಡಿದರೆ ಅದು ಎಂದಿಗೂ ಆಗಲು ಸಾಧ್ಯವಿಲ್ಲ. ಅದರಂತೆ ಆತ್ಮವೂ ಕೂಡ ಕರ್ಮಗಳ ಫಲಕ್ಕೆ ಸ್ಪರ್ಶವನ್ನು ಮಾಡಲು ಶಕ್ಯವಿಲ್ಲ ।॥೮೪೧॥ ಇರುವ ಸರ್ವ ಕರ್ಮಗಳು ಅವಿದ್ಯೆಯಿಂದಲೇ ಆಗುತ್ತಿರುವುವು. ಆದರೆ ಆತ್ಮವು ವಿದ್ಯಾ ಮತ್ತು ಅವಿದ್ಯೆಯ ಆಚೆಕಡೆ ಇರುವುದು. ಅದು ಅತ್ಯಂತ ನಿರ್ಮಲವಾಗಿರುವುದು. ಆತನಿಗೆ ಕರ್ಮಗಳ ಸುಖದುಃಖಗಳು ಪ್ರಾಪ್ತವಾಗುವುವು ಎಂದು ಮೂರ್ಖ ಜನರು ದೇಹದ ಮೋಹದಿಂದ ಹೇಳುತ್ತಿರುವರು ।॥೮೪೨॥ ಕರ್ಮವು ಇದು ಅತ್ಯಂತ ಜಡವಾಗಿರುವುದು. ಆದರೆ ಆತ್ಮವು ಅತ್ಯಂತ ಶುದ್ಧವಾಗಿರುವುದು. ಕರ್ಮವು ಇದು ಮರ್ಯಾದಿತವಾಗಿರುವುದು. ಆದರೆ ಆತ್ಮವು ಇದು ಅನಂತರೂಪವಾಗಿ ಅಗಾಧವಾಗಿರುವುದು. ಕರ್ಮಕ್ಕೆ ಕರ್ಮಠತನವಿರುವುದರಿಂದ ಅದು ನಿತ್ಯ ಬದ್ಧವಾಗಿರುವುದು. ಆದರೆ ಆತ್ಮವು ಸಚ್ಚಿದಾನಂದರೂಪವಾಗಿರುವುದು ।॥೮೪೩॥

ಕರ್ಮ ನಾಹೀ ॥೮೪೪॥ ದೋರಾಚೇ ಸರ್ಪೀ ಸರ್ಪತ್ವ ನಾಹೀ । ಮಾ ತೋ ಡಸೋನಿ ಚಢೇಲ ಕಾಯೀ । ತೇವೀ ಸ್ವರೂಪೀ ಕರ್ಮ ಮಿಥ್ಯಾ ಪಾಹೀ । ತೇ ಆತ್ಮ್ಯಾಸೀ ಕಾಯೀ ಬಾಧೀಲ ॥೮೪೫॥ ವಾಂಝ ರಾಣೀಚಾ ಲಾಡಕಾ ನಾತೂ । ರಾಜಬಳೇ ಜಗಾ ದಂಡಿತೂ । ತೇವೀ ಕರ್ಮಾಚಿ ಸುಖದುಃಖಮಾತೂ । ಕರ್ಮತಾಂತೂ ದಾಟುಗೀ ॥೮೪೬॥ ಏವಂ ಕರ್ಮಚಿ ಮಿಥ್ಯಾ ಏಥೇ । ತೇ ಕೇವೀ ದೇ ಸುಖದುಃಖಾಂತೇ । ಹೇ ಜಾಣೋನಿಯಾ ನಿಶ್ಚಿತೇ । ಕೋಣೇ ಕೋಣಾತೇ ಕೋಪಾವೇ ॥೮೪೭॥ ಕರ್ಮ ಸುಖದುಃಖಾಂಚೇ ದಾತೇ । ಯಾಪರೀ ನ ಘಡೇ ಏಥೇ । ಮ್ಹಣಾಲ ಕಾಳ ದೇ ಸುಖದುಃಖಾಂತೇ । ತೇಹೀ ನಿಶ್ಚಿತೇ ಘಡೇನಾ ॥೮೪೮॥

ಕಾಲಸ್ತು ಹೇತುಃ ಸುಖದುಃಖಯೋಶ್ಚೇತ್ ಕಿಮಾತ್ಮನಸ್ತತ್ರ ತದಾತ್ಮಕೋಽಸೌ ।
ನಾಗ್ನೇರ್ಹಿ ತಾಪೋ ನ ಹಿಮಸ್ಯ ತತ್ಸ್ಯಾತ್ಕ್ರುಧ್ಯೇತ ಕಸ್ಮೈ ನ ಪರಸ್ಯ ದ್ವಂದ್ವಮ ॥೧೬॥

ಅರ್ಥ:- ಕಾಲವು ಸುಖದುಃಖಗಳಿಗೆ ಕಾರಣವೆಂದು ತಿಳಿಯಲು ಆತ್ಮನಲ್ಲಿ ಅದರ ಪ್ರಭಾವವೇನು ? ಕಾರಣ ಕಾಲವು ಆತ್ಮಸ್ವರೂಪವಾಗಿರುವುದು. ಯಾವ ಪ್ರಕಾರವಾಗಿ ಅಗ್ನಿಯು ಅಗ್ನಿಯನ್ನು ಸುಡಲಾರದೋ, ಬರ್ಫವು ಬರ್ಫಕ್ಕೆ ಬಾಧಿಸಲಾರದೋ, ಅದರಂತೆ ಆತ್ಮಸ್ವರೂಪವಾದ ಕಾಲವು ಆತ್ಮಕ್ಕೆ ಸುಖದುಃಖಗಳನ್ನು ಕೊಡಲು ಸಾಧ್ಯವಿಲ್ಲ. ಅಂದಮೇಲೆ ಯಾರ ಮೇಲೆ ಕೋಪಿಸಿಕೊಳ್ಳಬೇಕು ? ಆತ್ಮವು ಶೀತ-ಉಷ್ಣ, ಸುಖ-ದುಃಖ ಇತ್ಯಾದಿ ದ್ವಂದ್ವಗಳಿಂದ ಪರಿಪೂರ್ಣವಾಗಿ ಅಲಿಪ್ತವಾಗಿರುವುದು.

ಕಾಳ ಶೀತಕಾಳೀ ಶೀತೇ ಪೀಡೀ । ಉಷ್ಣಕಾಳೀ ಉಬಾರಾ ಸೋಡೀ । ವರ್ಷಾಕಾಳೀ ಪರ್ಜನ್ಯ ಧಾಡೀ । ತ್ರಿಮಾಳಿಕೇ ಪಾಡೀ ಧವಳಾರೇ ॥೮೪೯॥ ಬೈಸವೂನಿ ಸಾತವಾಂಕಡೀ । ಅಖಂಡಧಾರಾ ಡೋಳಾ ನುಘಡೀ । ಜೀವಮಾತ್ರಾ ತೇಣೇ ಪೀಡೀ । ಪಡೇ ಸಾಂಕಡೀ ಅನ್ನಾಚೀ ॥೮೫೦॥ ಅನ್ನಾಚಿಯಾ ಚಿಡಾಣೇ । ಪೀಡತೀ ಪಶುಪಕ್ಷಿಪ್ರಾಣೀ । ತೇ ಕಾಳೀ ಸುಖದುಃಖ ನ ಮಾನೀ ಕೋಣೀ । ದುಃಖದಾತಾ ಜನೀ ನಿಜಕಾಳೂ ॥೮೫೧॥ ಅತಿತಾಪ ಅತಿಶೀತ । ಸೋಡೂನಿಯಾ ಅತಿವಾತ । ಕಾಳ ಜಗಾತೇ ಖಾತ । ಜಗ ಕಾಂಪತ ಕಾಳಾಸೀ ॥೮೫೨॥ ಐಕೋನಿ ಕಾಳಾಚೀ ಗೋಠೀ । ದೇವ ಕಾಂಪತೀ ಉಠಾಉಠೀ । ಇತರಾಂಚೀ ಕಾಯಸೀ ಗೋಠೀ । ಧಾಕೇ ಪೋಟೀ ವಿಧಾತಾ ॥೮೫೩॥ ಅತಿವೃಷ್ಟಿ ಅನಾವೃಷ್ಟಿ । ಜನ ಪೀಡೀ ನಾನಾ ಸಂಕಟೀ । ಶೇಖೀ ಪ್ರಳಯೋ ಕರೀ ಉಠಾಉಠೀ । ದುಃಖದಾತಾ ಸೃಷ್ಟೀ ಮಹಾಕಾಳ ॥೮೫೪॥
ಐಸೇ ಬೋಲತೀ ಜ್ಞಾತೇ ಲೋಕ । ತೇ ಜ್ಞಾತೇಪಣೇ ಝಾಲೇ ಮೂರ್ಖ । ಕಾಳ ತೋಚಿ ಈಶ್ವರೂ ದೇಖ ।

ಕರ್ಮವು ಇದು ಮಿಥ್ಯಾಭೂತವಾಗಿದ್ದು ಮಾಯಿಕವಾಗಿರುವುದು. ಆದರೆ ಆತ್ಮವು ನಿತ್ಯವಾಗಿದ್ದು ಮಾಯಾರಹಿತವಾಗಿರುವುದು. ಕರ್ಮಕ್ಕೆ ಬ್ರಹ್ಮಸ್ವರೂಪದ ಪರಿಚಯವಿಲ್ಲ. ಆದ್ದರಿಂದ ಎಲ್ಲಿ ಬ್ರಹ್ಮವಿರುವುದೋ ಅಲ್ಲಿ ಕರ್ಮವು ಇರುವುದಿಲ್ಲ ॥೮೪೪॥ ಹಗ್ಗಕ್ಕೆ ಹಾವು ಎಂದು ತಿಳಿದುಕೊಂಡರೆ ಆ ಹಗ್ಗದ ಹಾವಿನಲ್ಲಿ ಹಾವು ಎಂಬುದು ಇರುವುದಿಲ್ಲ. ಅಂದಮೇಲೆ ಅದು ಯಾರಿಗೆ ಕಚ್ಚಿ ವಿಷವೇರಬೇಕು? ಅದರಂತೆ ಕರ್ಮದ ಸ್ವರೂಪವೇ ಮಿಥ್ಯೆಯಾಗಿರಲು, ಅದು ಆತ್ಮಕ್ಕೆ ಬಾಧಿಸುವದೆಂತು? ॥೮೪೫॥ ಬಂಜೆಯಾಗಿರುವ ರಾಣಿಯ ಪ್ರೀತಿಯ ಮೊಮ್ಮಗನು ತನ್ನ ರಾಜ ಸತ್ತೆಯಿಂದ ಪ್ರಜೆಗಳಿಗೆ ಶಾಸನವನ್ನು ಕೊಡುತ್ತಿರುವನು ಎಂದರೆ ಹೇಗಾಗುವುದೋ, ಅದರಂತೆ ಕರ್ಮಗಳ ಸುಖದುಃಖದ ವಾರ್ತೆಗಳು ಈ ಕರ್ಮಠರಲ್ಲಿಯೇ ತುಂಬಿಕೊಂಡಿರುವುವು ॥೮೪೬॥ ಈ ಪ್ರಕಾರವಾಗಿ ಕರ್ಮವೇ ಮಿಥ್ಯೆಯಾಗಿರುವುದು ಎಂದು ನಿಶ್ಚಯಿಸಲು ಆಗ ಕರ್ಮವು ಸುಖದುಃಖಗಳನ್ನು ಹೇಗೆ ಕೊಡಲು ಸಾಧ್ಯ? ಇದನ್ನು ಒಮ್ಮೆ ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳಲು ಆಗ ಯಾರು ಯಾರಿಗಾಗಿ ಕ್ರೋಧಿಸಬೇಕು? ॥೮೪೭॥ ಈ ಪ್ರಕಾರವಾಗಿ ಕರ್ಮಗಳು ಸುಖದುಃಖಗಳನ್ನು ಕೊಡಲಾರವು. ಹಾಗಾದರೆ ಕಾಲವು ಸುಖದುಃಖಗಳನ್ನು ಕೊಡುವುದು ಎಂದು ಹೇಳಲು ಹೋದರೆ ಅದೂ ಕೂಡ ನಿಜವಾಗಿಯೂ ಸಾಧ್ಯವಾಗುವುದಿಲ್ಲ ॥೮೪೮॥

ಕಾಲವು ಇದು ಚಳಿಗಾಲದಲ್ಲಿ ಥಂಡಿಯ ಬಾಧೆಯನ್ನು ಕೊಡುವುದು. ಬೇಸಿಗೆಯ ಕಾಲದಲ್ಲಿ ಸೆಕೆಯ ಸಂಕಟ ಒದಗಿಸುವುದು. ಮಳೆಗಾಲದಲ್ಲಿ ಭರ್ಜರೀ ಮಳೆಯು ಮೂರು ಅಂತಸ್ತಿನ ಮನೆಯನ್ನು ನೆಲಸಮ ಮಾಡುವುದು ॥೮೪೯॥ ಏಳೇಳು ದಿನಗಳವರೆಗೆ ಸತತವಾಗಿ ಮಳೆಯು ಸುರಿಯುತ್ತಿರಲು ಆಗ ನಮಗೆ ಕಣ್ಣುಗಳನ್ನೂ ಕೂಡ ತೆರೆಯಲು ಬರುವುದಿಲ್ಲ. ಇದರಿಂದ ಪ್ರತಿಯೊಂದು ಪ್ರಾಣಿಮಾತ್ರಕ್ಕೂ ಪೀಡೆಯುಂಟಾಗುವುದು ಮತ್ತು ಆಹಾರಕ್ಕಾಗಿ ತೊಂದರೆಯುಂಟಾಗುವುದು ॥೮೫೦॥ ಆಹಾರದ ದುರ್ಲಭತೆಯಿಂದ ಪಶು, ಪಕ್ಷೀ ಮತ್ತು ಪ್ರಾಣಿಗಳು ವ್ಯಾಕುಲವಾಗುವುವು. ಆ ಸಮಯದಲ್ಲಿ ಯಾರೂ ಇದಕ್ಕೆ ಸುಖದುಃಖವೆನ್ನುವುದಿಲ್ಲ. ಕಾರಣ ಸರ್ವ ಜಗತ್ತಿಗೆ ದುಃಖವನ್ನು ಕೊಡುವವನು ಈ ಕಾಲನಾಗಿರುವನು ॥೮೫೧॥ ಅತಿಶಯ ಥಂಡಿಯಿಂದ ಅತಿಶಯ ಉಷ್ಣತೆಯಿಂದ ಮತ್ತು ಅತಿಶಯ ಗಾಳಿಯಿಂದ ಕಾಲವು ಜಗತ್ತನ್ನು ಗ್ರಾಸಿಸುತ್ತಿರುತ್ತದೆ. ಆದ್ದರಿಂದ ಜಗತ್ತು ಈ ಕಾಲನಿಗೆ ಗಡಗಡ ನಡುಗುತ್ತಿರುವುದು ॥೮೫೨॥ ಕಾಲನ ಪರಾಕ್ರಮವನ್ನು ಕೇಳಿದಾಕ್ಷಣವೇ ದೇವತೆಗಳೂ ಸಹ ತತ್ಕಾಲದಲ್ಲಿ ನಡುಗುತ್ತಿರುವರು. ಅಂದಮೇಲೆ ಇತರರ ಯಾವ ಕಥೆ ? ಪ್ರತ್ಯಕ್ಷವಾಗಿಬ್ರಹ್ಮದೇವನೂ ಕೂಡ ಕಾಲಕ್ಕೆ ಭಯಪಡುವನು ॥೮೫೩॥ ಕಾಲನು ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ಮಾಡಿ ಜನರಿಗೆ ಅನೇಕ ಪ್ರಕಾರದ ಸಂಕಟಗಳಿಗೆ ಗುರಿಮಾಡುವನು ಮತ್ತು ಕೊನೆಯಲ್ಲಿ ಪ್ರಳಯವನ್ನು ಮಾಡುವನು. ಹೀಗೆ ಈ ಕಾಲನು ಸೃಷ್ಟಿಗೆ ಬಾಧಕನಾಗಿರುವನು ॥೮೫೪॥

ಸುಖದಾಯಕ ಸರ್ವಾಂಸೀ ॥೮೫೫॥ ಈಶ್ವರಾಹೂನಿ ಕಾಳ ಭಿನ್ನ । ಮ್ಹಣೇ ತೋ ಜಡ ಮೂಢ ಅಜ್ಞಾನ । ಕಾಳ ತೋಚಿ ಈಶ್ವರ ಜಾಣ । ಕೃಪಾಳೂ ಪೂರ್ಣ ವಿಶ್ವಾತ್ಮಾ ॥೮೫೬॥ ಕಾಳ ಸ್ವಕಾಳೀ ವರ್ಷೋನಿ ಜೀವನ । ಸುಖೀ ಕರೀ ಸಂತಪ್ತ ಜನ। ಪೃಥ್ವಿ ನಿವವೂನಿಯಾ ಜಾಣ। ನವ ಧಾನ್ಯ ವಾಢವೀ॥೮೫೭॥ ತೇ ಕಾಳೀ ಜೈ ಶೀತ ನ ವಾಹೇ। ತೈ ವಾಫಿಲೇ ಧಾನ್ಯ ರಾಖ ಹೋಯೇ । ತೇವ್ಹಾ ಶೀತಕಣ ವರ್ಷೋನಿ ಪಾಹೇ । ಕರೀ ಲವಲಾಹೇ ಸಫಳಿತ ಧಾನ್ಯೇ ॥೮೫೮॥ ತೀ ಆರ್ದ್ರ ಧಾನ್ಯೇ ಭೂತಾಂಸೀ । ಉಪೇಗಾ ನ ಯೇತೀ ಸಂಗ್ರಹಾಸೀ । ಯಾಲಾಗೀ ಉಷ್ಣ ಕಾಳೇಸೀ । ಕಾಳ ಶೋಷೀ ಆರ್ದ್ರತಾ ॥೮೫೯॥ ಯಾಪರೀ ಶೀತೋಷ್ಣ ಪರ್ಜನ್ಯಾಂಸೀ । ಕಾಳ ಉತ್ಪಾದೀ ಭೂತ ಹಿತಾಸೀ। ತೇಚಿ ಕಠಿಣ ವಾಟೇ ತ್ಯಾಸೀ। ದೇಹಭ್ರಮಾಸೀ ಭುಲೋನೀ॥೮೬೦॥ ಹಿರೋನಿ ಅತಿಜೀರ್ಣ ವಸ್ತ್ರಾಂಸೀ । ನವೀ ನೇಸವೀ ಜೋ ಸಾಕ್ಷೇಪೇಸೀ । ಐಶಿಯಾ ಹಿತಕಾರಿಯಾ ಕಾಳಾಸೀ । ವೈರೀ ಪಿಶೀ ಮ್ಹಣತಾತೀ ॥೮೬೧॥ ತೇವೀ ಜರಾಜರ್ಜರಿತ ವಿಕಳ । ತೇ ದೇಹ ನಿರ್ದಳೀ ಸಕಾಳೇ ಕಾಳ । ಆಣಿಕ ನವೇ ದೇ ತತ್ಕಾಳ । ಐಸಾ ಕೃಪಾಳೂ ಕಾಳ ಜನಾಸೀ ॥೮೬೨॥ ಜುನೇ ಘೇಊನಿ ದೇ ನವ್ಯಾಸೀ । ಐಶಾ ಉಪಕಾರಿಯಾ ಕಾಳಾಸೀ । ಅಪಕಾರೀ ಮ್ಹಣತೀ ಪಿಶೀ । ದೇಹಮೋಹೇಸೀ ಲೋಭಿಟೇ ॥೮೬೩॥ ಜನ ಜೈಶಿಯಾ ನಿಜಭಾವನಾ । ಜೇ ಜೇ ಧರೀ ದೃಢ ವಾಸನಾ । ಕಾಳ ಕೃಪಾಳೂ ತತ್‌ಕ್ಷಣಾ । ತೇ ತೇ ದೇಹ ಜಾಣಾ ತ್ಯಾ ದೇತ ॥೮೬೪॥ ಮಹಾಮಹೋತ್ಸಾಹೇ ಪಿತಾ ಪುತ್ರಾಸೀ । ಸಾಂಡವೂನಿ ಜೀರ್ಣ ವಾಸಾಂಸೀ । ನವೀ ವಸ್ತ್ರೇ ದೇ ತಯಾಸೀ । ತೇವೀ ಜಗಾಸೀ ಪ್ರಳಯಕಾಳೂ ॥೮೬೫॥ ತೇವೀ ಪ್ರಳಯಕಾಳೀ ಜಗಾಸೀ । ಕಾಳ ಜೀರ್ಣ ದೇಹ ನಾಶೀ । ಮಗ ನೂತನ ದೇಹ ಸರ್ವಾಸೀ । ಅತಿಕೃಪೇಸೀ ಗೌರವೀ ॥೮೬೬॥ ಯಾಪರೀ ಕಾಳ ಕೃಪಾಳೂ । ತ್ಯಾಸೀ ವೈರೀ ಮ್ಹಣೇ ಜನ ಬರಳೂ । ಜಗಾಚಾ ನಿಜಾತ್ಮಾ ಸ್ವಯೇ ಕಾಳೂ । ತೋ ದುಃಖಾಚಾ ಸಳೂ ಕೋಣಾಸೀ ನೇದೀ ॥೮೬೭॥

ಜನಾಂಚಾ ದೇಹೀ ದೃಢ ಭಾವೋ । ಭಾವನಾನುಸಾರೇ ಕಾಳ ಪಹಾ ಹೋ । ದೇಹಾಪಾಠೀ ಉಪಜವೀ ದೇಹೋ

ಹೀಗೆ ಹೇಳುವ ಜನರು ತಮ್ಮ ವಿದ್ವತ್ತಿನಿಂದ ಮೂರ್ಖರಾಗಿರುವರು. ಯಾಕೆಂದರೆ ಕಾಲನೇ ಸರ್ವರಿಗೂ ಸುಖವನ್ನು ಕೊಡುವ ಈಶ್ವರನಾಗಿರುವನು ॥೮೫೫॥ ಈಶ್ವರ ಮತ್ತು ಕಾಲ ಇವರನ್ನು ಭಿನ್ನರೆಂದು ಹೇಳುವವರು ಜಡರಾಗಿ ಮೂರ್ಖ ಮತ್ತು ಅಜ್ಞಾನಿಗಳಾಗಿರುವರು. ಕಾಲನೇ ಈಶ್ವರನಾಗಿರುವನು. ಇದನ್ನು ನೀನು ತಿಳಿ. ಆತನು ವಿಶ್ವಾತ್ಮನು ಮತ್ತು ಕೃಪಾವಂತನಾಗಿರುವನು ॥೮೫೬॥ ಕಾಲನು ಯಥಾ ಸಮಯಕ್ಕೆ ಮಳೆಯನ್ನು ತಂದು ಸಂತಪ್ತ ಜನರನ್ನು ತೃಪ್ತಗೊಳಿಸುವನು. ಭೂಮಿಯನ್ನು ತೋಯಿಸಿ ಬಿತ್ತಲು ಅನುಕೂಲ ಮಾಡಿಕೊಡುವನು ॥೮೫೭॥ ಚಳಿಗಾಲದಲ್ಲಿ ಥಂಡಿಯು ಬೀಳದಿದ್ದರೆ ಬಿತ್ತಿದ ಬೆಳೆಯು ಸುಟ್ಟುಹೋಗುವುದು. ಶೀತಕಣಗಳನ್ನು ಸುರಿಸಿ ಸರ್ವ ಧಾನ್ಯಗಳನ್ನು ಫಲಭರಿತ ಮಾಡುವನು ॥೮೫೮॥ ಆಗ ಹಸಿಯಾಗಿರುವ ಧಾನ್ಯಗಳನ್ನು ಜನರಿಗೆ ಶೇಖರಿಸಲು ಬರುವುದಿಲ್ಲವೆಂದು ಬೇಸಿಗೆಯನ್ನು ಹುಟ್ಟಿಸಿ ಎಲ್ಲ ಧಾನ್ಯಗಳನ್ನು ಒಣಗಿಸಿಬಿಡುವುದು ॥೮೫೯॥

ಈ ಪ್ರಕಾರವಾಗಿ ಸರ್ವ ಪ್ರಾಣಿಮಾತ್ರರಿಗೆ ಹಿತದೃಷ್ಟಿಯಿಂದ ಕಾಲನು ಶೀತ, ಉಷ್ಣ, ಮಳೆಗಳನ್ನು ನಿರ್ಮಾಣ ಮಾಡುವನು. ಆದರೆ ಪ್ರಾಣಿಯು ತನ್ನ ದೇಹಕ್ಕೆ ನಾನು ಎಂಬ ಭ್ರಮೆಯನ್ನು ಧರಿಸಿ ಭುಲಾಯಿಸಿರುವುದರಿಂದ ಅದೇ ಆತನಿಗೆ ದುಃಖದಾಯಕವಾಗಿ ತೋರುತ್ತದೆ ॥೮೬೦॥ ಹಳೆಯ ಜೀರ್ಣವಾದ ವಸ್ತ್ರಗಳನ್ನು ಕಸಿದುಕೊಂಡು ಯಾವ ಕಾಲನು ಹೊಸದಾದ ವಸ್ತ್ರಗಳನ್ನು ಕಾಳಜಿ ಪೂರ್ವಕವಾಗಿ ಕೊಡುತ್ತಿರುವನು. ಆದರೆ ಈ ರೀತಿಯಾಗಿ ಹಿತಮಾಡುವ ಕಾಲನನ್ನು ಅವಿಚಾರೀ ಜನರು ಆತನಿಗೆ ವೈರಿ ಎಂದು ಕರೆಯುವರು ॥೮೬೧॥ ವೃದ್ಧಾವಸ್ಥೆಯಿಂದ ಜರ್ಜರವಾಗಿರುವ ದೇಹವನ್ನು ಯೋಗ್ಯ ಸಮಯದಲ್ಲಿ ನಾಶವನ್ನಾಗಿ ಮಾಡಿ ತತ್ಕಾಲದಲ್ಲಿ ಹೊಸದಾದ ದೇಹವನ್ನು ಕಾಲನು ಕೊಡುತ್ತಿರುವನು. ಈ ರೀತಿಯಾಗಿ ಯಾವ ಈ ಕಾಲನು ಜನರಿಗೆ ಉಪಕಾರವನ್ನು ಮಾಡುವ ಕೃಪಾವಂತನಾಗಿರುವನು ॥೮೬೨॥ ಹಳೆಯದನ್ನು ತೆಗೆದುಕೊಂಡು ಹೊಸದಾಗಿರುವುದನ್ನು ಕೊಡುವಂತಹ ಈ ಉಪಕಾರಕರ್ತನು ಕಾಲನಾಗಿರುವನು. ಆದರೆ ದೇಹದ ಲೋಭದಿಂದ ಲೋಭಿಷ್ಠರಾಗಿರುವ ಅಜ್ಞಾನೀ ಜನರು ಆತನಿಗೆ ಅಪಕಾರೀ ಎಂದು ಹೇಳುತ್ತಿರುವರು ॥೮೬೩॥ ಜನರು ಯಾವ ಭಾವನೆಯಿಂದ ಹೇಗೆ ದೃಢವಾಸನೆಯನ್ನು ತಳೆದಿರುವರೋ, ಅದರಂತೆಯೇ ಅವರಿಗೆ ದೇಹವನ್ನು ಕೃಪಾವಂತನಾದ ಕಾಲನು ತತ್ಕಾಲದಲ್ಲಿ ಕೊಡುತ್ತಿರುವನು ॥೮೬೪॥ ತಂದೆಯಾದವನು ಆನಂದದಿಂದ ತನ್ನ ಮಗನ ಹಳೆಯ ವಸ್ತ್ರಗಳನ್ನು ತೆಗೆದುಬಿಡುವನು ಮತ್ತು ಆತನಿಗೆ ಹೊಸ ವಸ್ತ್ರಗಳನ್ನು ಕೊಡುವನು. ಅದರಂತೆ ಈ ಯಾವ ಪ್ರಳಯಕಾಲನು ಈ ಜಗತ್ತಿಗೆ ಪ್ರಳಯರೂಪದಿಂದ ಹೊಸದಾಗಿ ಆಕಾರವನ್ನು ಕೊಡುವನು ॥೮೬೫॥ ಇದರಂತೆ ಈ ಯಾವ ಕಾಲನು ಪ್ರಳಯಕಾಲದಲ್ಲಿ ಜಗತ್ತಿನಲ್ಲಿಯ ಹಳೆಯ ದೇಹಗಳನ್ನೆಲ್ಲ ನಾಶವನ್ನು ಮಾಡಿ ಸರ್ವರಿಗೂ ಬಹು ದೊಡ್ಡ ಕೃಪೆಯಿಂದ ಹೊಸ ಹೊಸ ದೇಹಗಳನ್ನು ಪ್ರದಾನ ಮಾಡುವನು. ಹೀಗೆ ಎಲ್ಲರನ್ನೂ ಗೌರವಿಸುವನು. ॥೮೬೬॥ ಈ ಪ್ರಕಾರವಾಗಿ ಕಾಲನು ಬಹು ದೊಡ್ಡ ಕೃಪಾವಂತನಾಗಿರುವನು. ಆದರೆ ಇಂತಹವನಿಗೂ ಕೂಡ ಮೂರ್ಖ ಜನರು ಯಾವ ಕಾಲನಿಗೆ ''ವೈರಿ'' ಎಂದು ಹೀಗೆಯೇ ಸಂಬೋಧಿಸುವರು. ಈ ಯಾವ ಸರ್ವ ಜಗತ್ತಿನ ಆತ್ಮವಾದರೂ ಈ ಕೃಪಾವಂತ ಕಾಲನೇ ಆಗಿರುವನು. ಹೀಗಿದ್ದಮೇಲೆ ಆತನು ದುಃಖವನ್ನು ಕೊಟ್ಟು ಯಾರಿಗೆ ಪೀಡಿಸಲು ಸಾಧ್ಯವಿದೆ ? ॥೮೬೭॥

। ಜನ್ಮ ಮರಣನಿರ್ವಾ ಹೋ ತೇಣೇ ವಾಢೇ ॥೮೬೮॥ ಜೋ ಸಾಚಾರ ವಾಂಛೀ ವಿದೇಹಭಾವೋ । ತ್ಯಾಚಾ ಕಾಳ ನಿರ್ದಳೀ ಅಹಂಭಾವೋ । ನಿಜಾನಂದೇ ನಿವವೂನಿ ಸ್ವಯಮೇವೋ । ಜನ್ಮ ಮರಣಾಂಚಾ ಠಾವೋ ವಿಭಾಂಡೀ ॥೮೬೯॥ ಜೈಶೀ ಜ್ಯಾಸಿ ಹೋಯ ಬುದ್ಧೀ । ಕಾಳ ತೈಶೀ ದೇ ತ್ಯಾಸೀ ಸಿದ್ಧೀ । ಹೇ ನೇಣಿಜೇ ದೇಹ ಮೋಹಾಂಧೀ । ಕಾಳ ತ್ರಿಶುದ್ಧೀ ಕೃಪಾಳೂ ॥೮೭೦॥ ಕಾಳ ತೋಚಿ ನಿಜಾತ್ಮಾ ಜನೀ । ಐಸೇ ಜಾಣೇ ಜೋ ನಿಜಜ್ಞಾನೀ । ತೈ ಕೋಣಾಚೇ ದುಃಖ ಕೋಣಕಾಮಾನೀ । ದುಸರೇ ಕೋಣೇ ಅಸೇನಾ ॥೮೭೧॥ ಮೀ ಏಕ ಯೇಥೇ ದುಃಖದಾತಾ । ಪೈಲ ತೋ ಏಕ ದುಃಖಭೋಕ್ತಾ । ಹೇಹೀ ನಾಹೀ ದ್ವೈತ ಕಥಾ । ಜಗಾಸೀ ಏಕುಲತಾ ನಿಜಾತ್ಮಾ ಕಾಳ ॥೮೭೨॥ ಕಾಳ ನಿಜಾತ್ಮಾ ದೋನೀ ಏಕ । ತೈ ಕೋಣಾಚೇ ಕೋಣಾಸ ಹೋಯ ಸುಖ । ಕೋಣ ಕೋಣಾಚಾ ಮಾನೀ ಶೋಕ । ದ್ವಂದ್ವದುಃಖ ಅಸೇನಾ ॥೮೭೩॥ ಜೇವೀ ನಾಮಮಾತ್ರ ಮೃಗಜಳ । ತೇಥ ನಾಹೀ ತಿಳಭರೀ ಜಳ । ತೇವೀ ಆತ್ಮತ್ವೀ ಜಗಡ್‌ವ್ಯಾಳ । ತೋ ಭ್ರಮ ಕೇವಳ ಮನಾಚಾ ॥೮೭೪॥ ಆತ್ಮಾ ಏಕತ್ವೇ ಅಭೇದ । ಕಾಳನಾಮೇ ತೋಚಿ ಪ್ರಸಿದ್ಧ । ಜೀವ ತದಂಶೇ ಚಿದತ್ವೇ ಶುದ್ಧ । ತ್ಯಾಸೀ ಕಾಳಾದಿ ದ್ವಂದ್ವ ಬಾಧೀನಾ ॥೮೭೫॥ ಆಗೀನೇ ಕಾಯ ಆಗೀ ಜಳೇ । ಕಾ ಉನ್ಹಾಳೇನಿ ಸೂರ್ಯ ಪೋಳೇ । ಸಾಗರೂ ಬುಡೇ ಲಹರೀಬಳೇ । ಕೀ ಅಂಧಾರಾತೇ ಕಾಳೇ ಕಾಜಳೇ ಕೀಜೇ ॥೮೭೬॥ ಕೀ ಹಿಮಾಚಳ ಹಿಮಕಣೇ ಕಾಂಪೇ । ತುಪಾಸೀ ಮೋಡಶೀ ಹೋಯ ತುಪೇ । ತೈ ಕಾಳಸತ್ತಾ ಖಟಾಟೋಪೇ । ಆತ್ಮಾ ಅಮೂಪೇ ದ್ವಂದ್ವೇ ಭೋಗೀ ॥೮೭೭॥ ಆಪ ಆಪಣೆಯಾ ಆಪದಾ । ಕೋಣಾ ನ ಕರವೇ ವಿರುದ್ಧಾ । ತೇವೀ ಆತ್ಮ್ಯಾಸೀ ದ್ವಂದ್ವಬಾಧಾ । ಕಾಳಾಚೇನಿ ಕದಾ ಕರವೇನಾ ॥೮೭೮॥ ಏವಂ ಏಕಾತ್ಮತಾ ಅಭೇದ । ತೇಥ ಕಾಳಾಚಾ ನ ಚಲೇ ಬಾಧ । ಅಭೇದೀ ಸರ್ವಥಾ ನಾಹೀ ದ್ವಂದ್ವ । ಕೋಣಾವರೀ ಕ್ರೋಧ ಕರಾವಾ ॥೮೭೯॥ ಜೀವ-ಶಿವತ್ವೇ ಮೀ ಕೇವಳ । ಮೀಚಿ ಆತ್ಮಾ ಮೀಚಿ ಕಾಳ । ಮಿಥ್ಯಾ ದ್ವಂದ್ವದುಃಖಗೋಂಧಳ । ಕ್ರೋಧಾಚಾ ಕಲ್ಲೋಳ ಕೋಣಾವರೀ ಕರೂ ॥೮೮೦॥ ಕಾಳ

ಜನರಲ್ಲಿ ತಮ್ಮ ದೇಹಗಳ ಮೇಲೆ ಪರಿಪೂರ್ಣವಾದ ಶ್ರದ್ಧೆವಿರುವುದು. ಅದಕ್ಕಾಗಿ ಕಾಲನೂ ಕೂಡ ಆ ಜನರ ದೃಢವಾದ ಭಾವನೆಯ ತಕ್ಕಂತೆ ದೇಹದ ನಂತರ ದೇಹವನ್ನು ಉತ್ಪನ್ನಗೊಳಿಸುತ್ತಿರುವನು. ಇದರಿಂದ ಈ ಜನ್ಮ ಮರಣದ ಪರಂಪರೆಯು ಬೆಳೆಯುತ್ತಸಾಗಿರುವುದು ॥೮೬೮॥ ಯಾವ ಮನುಷ್ಯನು ವಿದೇಹಾವಸ್ಥೆಯನ್ನು ನಿಜವಾಗಿ ಇಚ್ಛೆಯನ್ನು ಮಾಡಿದರೆ ಆಗ ಕಾಲನು ಆತನ ಅಹಂಭಾವವನ್ನು ಇಲ್ಲದಾಗಿ ಮಾಡಿ ಮತ್ತು ಆತನಿಗೆ ಆತ್ಮಾನಂದದಲ್ಲಿ ತೃಪ್ತನನ್ನಾಗಿ ಮಾಡುವನು. ಹಾಗೂ ಆತನ ಜನ್ಮ ಮರಣದ ತಿರುಗಾಟವನ್ನು ಇಲ್ಲದಂತೆ ಮಾಡುವನು ॥೮೬೯॥ ಯಾರಿಗೆ ಯಾವ ಬುದ್ಧಿಯು ಇರುವುದೋ, ಅದರಂತೆಯೇ ಕಾಲನು ಅವರಿಗೆ ಸಿದ್ಧಿಯನ್ನು ದಯಪಾಲಿಸುವನು. ಅದಕ್ಕಾಗಿ ನಿಜವಾಗಿಯೂ ಈ ಕಾಲನು ಕೃಪಾವಂತನೇ ಆಗಿರುವನು. ಯಾವ ತಮ್ಮ ದೇಹದ ಮೋಹದಿಂದ ಕುರುಡರಾಗಿರುವ ಯಾವ ಈ ಜನರು ಇದನ್ನು ತಿಳಿಯಲಾರರು ॥೮೭೦॥ ಕಾಲನು ಈ ಜಗತ್ತಿನ ಆತ್ಮನಾಗಿರುವನು. ಹೀಗೆ ಆತ್ಮಜ್ಞಾನಿಗಳು ಹೇಳುವರು. ಅಂದಮೇಲೆ ಅವರು ಯಾರ ದುಃಖವನ್ನು ಏಕೆ ಮನ್ನಿಸುವರು? ಏಕೆಂದರೆ ಅಲ್ಲಿ ಎರಡೆಂಬುದು ಇಲ್ಲವೇ ಇಲ್ಲ ॥೮೭೧॥ ನಾನೊಬ್ಬನು ದುಃಖವನ್ನು ಕೊಡುವ ದಾತಾನಾಗಿರುವೆನು ಮತ್ತು ಇನ್ನೊಬ್ಬನು ದುಃಖವನ್ನು ಭೋಗಿಸುವವನಾಗಿರುವನು ಎಂಬ ಈ ಪದ್ಧತಿಯ ಭೇದವು ಅಲ್ಲಿ ಉಳಿಯಲು ಸಾಧ್ಯವೇ ಇಲ್ಲ. ಒಬ್ಬನೇ ಒಬ್ಬನಾದ ಈ ಕಾಲನು ದೊಡ್ಡದಾಗಿರುವ ಈ ಅಖಿಲ ಜಗತ್ತಿನ ಆತ್ಮನಾಗಿರುವನು ॥೮೭೨॥ ಆತ್ಮಾ ಮತ್ತು ಕಾಲ ಇವರು ಒಂದೇ ಇರುವುದರಿಂದ ಅಲ್ಲಿ ಯಾರ ಸುಖವು ಯಾರಿಗೆ ಆಗಬೇಕು? ಮತ್ತು ಯಾರು ಯಾರಿಗೆ ದುಃಖವನ್ನು ಕೊಡಬೇಕು? ಕಾರಣ ಇಲ್ಲಿ ದ್ವಂದ್ವದ ದುಃಖವೇ ಇರುವುದಿಲ್ಲ ॥೮೭೩॥ ಯಾವ ಪ್ರಕಾರವಾಗಿ ಮೃಗಜಲವು ಇದು ಕೇವಲ ಹೆಸರಿಗೆ ಮಾತ್ರ ಜಲವಾಗಿದ್ದು ಅದರಲ್ಲಿ ಒಂದು ಹನಿಯಷ್ಟೂ ಕೂಡ ಹೇಗೆ ಜಲವಿರುವುದಿಲ್ಲವೋ, ಅದರಂತೆಯೇ ಆತ್ಮಸ್ವರೂಪದಲ್ಲಿ ಜಗತ್ತಿನ ಭವ್ಯವಾದ ಮತ್ತು ವಿಶಾಲವಾದ ಈ ನೋಟವು ಕೇವಲ ಮನಸ್ಸಿನ ಭ್ರಮೆಯಾಗಿರುವುದು ॥೮೭೪॥ ಆತ್ಮವು ಒಂದೇ ಒಂದಾಗಿರುವುದರಿಂದ ಅದರಲ್ಲಿ ಇನ್ನೊಂದು ಯಾವುದೇ ಪ್ರಕಾರದ ಭೇದವಿರುವುದಿಲ್ಲ. ಈ ಆತ್ಮವೇ ಕಾಲನೆಂಬ ನಾಮದಿಂದ ಪ್ರಸಿದ್ಧವಾಗಿರುವುದು. ಜೀವವು ಅದರದೇ ಅಂಶವಾಗಿದ್ದು ಜ್ಞಾನಸ್ವರೂಪದಿಂದ ಶುದ್ಧವಾಗಿರುವುದು. ಆದ್ದರಿಂದ ಅದಕ್ಕೆ ಕಾಲಾದಿಕ ದ್ವಂದ್ವಗಳು ಬಾಧಿಸಲಾರವು ॥೮೭೫॥ ಜ್ವಾಲೆಯು ಜ್ವಾಲೆಗೆ ಎಂದಾದರೂ ಸುಡಬಹುದೆ? ಬೇಸಿಗೆಯ ತಾಪದಿಂದ ಸೂರ್ಯನು ಎಂದಾದರೂ ತಾಪಗೊಳ್ಳುವನೆ? ವೇಗಯುಕ್ತ ತೆರೆಗಳಿಂದ ಸಮುದ್ರವು ಎಂದಾದರೂ ಮುಳುಗಿಬಿಡುವುದೆ? ಕಾಡಿಗೆಯು ಕತ್ತಲಿಗೆ ಎಂದಾದರೂ ಕಪ್ಪಾಗಿ ಮಾಡಬಹುದೆ? ॥೮೭೬॥ ಹಿಮಾಲಯ ಪರ್ವತವು ಹಿಮದಿಂದ ಎಂದಾದರೂ ನಡುಗುವುದೆ? ತುಪ್ಪದಿಂದ ತುಪ್ಪಕ್ಕೆ ಎಂದಾದರೂ ಬೇನೆಯುಂಟಾಗುವುದೇ? ಈ ಎಲ್ಲ ಮಾತುಗಳು ನಿಜವಾದರೆ ಮಾತ್ರ ಕಾಲನ ಸತ್ತೆಯಿಂದ ಆತ್ಮವು ಸುಖದುಃಖಾದಿ ಅಪಾರ ದ್ವಂದ್ವಗಳನ್ನು ಭೋಗಿಸಬಹುದು ॥೮೭೭॥ ತಾವೇ ತಮ್ಮ ಮೇಲೆ ಯಾರೂ ಎಂದಿಗೂ ವಿಪತ್ತುಗಳನ್ನು ತಂದುಕೊಡುವುದಿಲ್ಲ ಅಥವಾ ತಮ್ಮ ವಿರುದ್ಧವಾದ ಕಾರ್ಯಗಳನ್ನು ತಾವೇ ಎಂದಿಗೂ ಮಾಡುವುದಿಲ್ಲ. ಅದರಂತೆ ಕಾಲನಿಂದ ಆತ್ಮಕ್ಕೆ ಎಂದಿಗೂ ದ್ವಂದ್ವದ ಬಾಧೆಯಾಗುವುದಿಲ್ಲ ॥೮೭೮॥ ಈ ಪ್ರಕಾರವಾಗಿ ಎಲ್ಲಿ ಏಕಾತ್ಮತೆಯಿಂದ ಅಭೇದವಿರುವುದೋ, ಅಲ್ಲಿ ಕಾಲನ ಪೀಡೆಯು ಎಂದಿಗೂ ನಡೆಯುವುದೇ ಇಲ್ಲ. ಅಭೇದದಲ್ಲಿ ಈ ಯಾವ ದ್ವಂದ್ವವು ಮೂಲದಲ್ಲಿಯೇ ಇರಲು ಶಕ್ಯವಿಲ್ಲ. ಅಂದಮೇಲೆ ಯಾರಮೇಲೆ ಹೇಗೆ ಕೋಪಿಸಕೊಳ್ಳಬೇಕು? ॥೮೭೯॥

ಸುಖದುಃಖಾಂಚಾ ದಾತಾ । ಯಾಪರೀ ನವ್ಹೇ ವಿಚಾರಿತಾ । ಸುಖದುಃಖಾಂಚೀ ಭಾದಕತಾ । ಆತ್ಮ್ಯಾಸೀ ಸರ್ವಥಾ ಅಸೇನಾ ।।೮೮೧।। ಸುಖದುಃಖಾದಿ ಹೇತುಷಟ್ಕ । "ನಾಯಂ ಜನೋ" ಇತ್ಯಾದಿಕ । ಯಾಚಾ ಕರಿತಾ ನಿಜವಿವೇಕ । ನವ್ಹತೀ ಬಾಧಕ ಆತ್ಮ್ಯಾಸೀ ।।೮೮೨।। ಯಾಂಹೀ ವೇಗಳೇ ಬಾಧಕಪಣೇ । ದೇಶವಾಸೇ ತ್ರಿಗುಣಗುಣೇ । ಆತ್ಮ್ಯಾಸೀ ಬಾಧಾವಯಾಕಾರಣೇ । ಕೋಠೇ ಕೋಣೀ ದಿಸೇನಾ ।।೮೮೩।। ನಿಜಾತ್ಮ್ಯಾಸೀ ಬಾಧಕತಾ । ಕಾಯಸೇನಿ ನ ಸಂಭವೇ ಸರ್ವಥಾ । ಜನಾಸೀ ಬಾಧಕ ದೇಹಅಹಂತಾ । ತ್ಯಾಚಿ ನಿಜಾರ್ಥಾ ಭಿಕ್ಷು ಬೋಲೇ ।।೮೮೪।।

ನ ಕೇನಚಿತ್ಕ್ವಾಪಿ ಕಥಂಚನಾಸ್ಯ ದ್ವಂದ್ವೋಪರಾಗಃ ಪರತಃ ಪರಸ್ಯ ।
ಯಥಾऽಹಮಃ ಸಂಸೃತಿರೂಪಿಣಃ ಸ್ಯಾದೇವಂ ಪ್ರಬುದ್ಧೋ ನ ಬಿಭೇತಿ ಭೂತೈಃ ।।೬೨।।

ಅರ್ಥ:- ಆತ್ಮವು ಪ್ರಕೃತಿಯ ಸ್ವರೂಪ, ಧರ್ಮಕಾರ್ಯ, ಗಂಧ ಇತ್ಯಾದಿಗಳಿಂದ ರಹಿತವಾಗಿರುವುದು. ಯಾವುದೇ ಪ್ರಕಾರದಿಂದ ದ್ವಂದ್ವದ ಸ್ಪರ್ಶವಾಗುವುದಿಲ್ಲ. ಅದು ಕೇವಳ ಜನ್ಮಮರಣಗಳ ಚಕ್ರದಲ್ಲಿ ತಿರುಗುತ್ತಿರುವ ಅಹಂಕಾರದಲ್ಲಾಗುತ್ತಿರುವುದು. ಈ ಮಾತನ್ನು ಯಾರು ತಿಳಿಯುವರೋ, ಆತನು ಯಾವುದೇ ಪ್ರಕಾರದ ಭಯದಿಂದ ಭಯಭೀತನಾಗುವುದೇ ಇಲ್ಲ.

ಆತ್ಮಾ ಗುಣಾತೀತ ಶುದ್ಧ । ಪರಾತ್ಪರತರ ಸ್ವಾನಂದ । ಪರಿಪೂರ್ಣ ಸಚ್ಚಿದಾನಂದ । ತೇಥ ದ್ವಂದ್ವಬಾಧ ರಿಘೇನಾ ।।೮೮೫।। ದ್ವಂದ್ವ ರಿಘಾವಯಾ ಆತ್ಮಭುವನೀ । ಕೈಸೇನಿ ಕಾಯಿಸೇನಿ ಕೋಣಾಚೇನೀ । ಕರ್ಮಕಾರ್ಯ ಕ್ರಿಯಾಕರಣೀ । ಭಾಧಕಪಣೇ ಅಸೇನಾ ।।೮೮೬।। ಅಭೇದಾ ನಾಹೀ ದ್ವಂದ್ವಬಾಧ । ಸ್ವಾನಂದಾಸೀ ಸುಖದುಃಖ ಸಂಬಂಧ । ಪೂರ್ಣಾಸೀ ಕೈಚೇ ವಿರುದ್ಧ । ಪರಮಾನಂದ ಏಕಲಾ ।।೮೮೭।। ಆಶಂಕಾ ಆತ್ಮ್ಯಾಸೀ ನ ಘಡೇ ದ್ವಂದ್ವಸಂಬಂಧ । ದೇಹೋ ಜಡತ್ವೇ ನೇಣೇ ದ್ವಂದ್ವ । ತರೀ ಸುಖದುಃಖಾಂಚಾ ಮಹಾಬಾಧ । ಕೋಣಾಸೀ ಪ್ರಸಿದ್ಧ ಹೋತಸೇ ।।೮೮೮।। ಸುಖದುಃಖಭೋಗಾಸೀ ಜಾಣ । ಸೋಸಾವಯಾ ಜನ್ಮಮರಣ । ಏಥ ಮುಖ್ಯತ್ವೇ ದೇಹಾಭಿಮಾನ । ತೇಹೀ ಲಕ್ಷಣ ಅತರ್ಕ್ಯ ।।೮೮೯।। ಜೇವೀ ಅಸೋನಿ ಭರ್ತಾರಾಪಾಶೀ । ವ್ಯಭಿಚಾರ ಕರಿತಾ ಅಹೇವೇಸೀ । ಪೋಟ ವಾಢಲ್ಯಾಹೀ ಪರಪುರುಷೀ । ತೇ ಕೋಣಾಸೀ ಕಳೇನಾ ।।೮೯೦।।
ತೈಸೇ ಅಭಿಮಾನಾಚೇ ವಿಂದಾನ । ಚಿತ್ಸ್ವರೂಪೀ ಜಡೋನಿ ಜಾಣ । ಮಿಥ್ಯಾ ದಾವೂನಿ ಜೀವಪಣ । ಸುಖದುಃಖೇ ಆಪಣ ಸ್ವೇಚ್ಛಾ ಭೋಗೀ ।।೮೯೧।। ಜೇವೀ ರಾಯಾಪಾಶೀಲ ಕುಡಾ ಮಂತ್ರೀ । ರಾಜಬಳೇ ಅಧರ್ಮ ಕರೀ ।

ಜೀವ ಮತ್ತು ಶಿವ ರೂಪದಿಂದ ಕೇವಲ ನಾನೇ ಇರುವೆನು. ನಾನೇ ಆತ್ಮನು, ಮತ್ತು ನಾನೇ ಕಾಲನಾಗಿರುವೆನು. ದ್ವಂದ್ವ ದುಃಖದ ಪರ್ವತವು ಇದು ಕೇವಲ ಮಿಥ್ಯೆಯಾಗಿರುವುದು. ಅಂದಮೇಲೆ ಕ್ರೋಧದ ಬಡಿವಾರವನ್ನು ಯಾರಮೇಲೆ ಮಾಡಬೇಕು? ।।೮೮೦।। ಈ ಪ್ರಕಾರವಾಗಿ ವಿಚಾರವನ್ನು ಮಾಡಲು ಆಗ ಕಾಲನು ಸುಖದುಃಖವನ್ನು ಕೊಡುವವನು ಆಗುವುದಿಲ್ಲ. ಇದರಿಂದ ಆತ್ಮಕ್ಕೆ ಸುಖದುಃಖಗಳ ಬಾಧೆಯು ಎಂದಿಗೂ ಆಗಲು ಸಾಧ್ಯವಿಲ್ಲ. ಹೀಗೆ ನಿಶ್ಚಯವಾಗುವುದು ।।೮೮೧।। "ನಾಯಂ ಜನಃ" ಇತ್ಯಾದಿ ಶ್ಲೋಕಗಳಲ್ಲಿ ಸುಖದುಃಖಗಳ ಯಾವ ಆರು ಕಾರಣಗಳನ್ನು ಹೇಳಿರುವುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವಿಚಾರವನ್ನು ಮಾಡಲು, ಅವುಗಳೆಲ್ಲವೂ ಆತ್ಮಕ್ಕೆ ಬಾಧಿಸುವುದಿಲ್ಲವೆಂದು ತಿಳಿಯುವುದು ।।೮೮೨।। ಇವುಗಳಲ್ಲದೇ ದೇಶಗಳ ವಾಸ್ತವ್ಯದಿಂದ ಅಥವಾ ತ್ರಿಗುಣಗಳ ಗುಣದಿಂದ ಆತ್ಮಕ್ಕೆ ಪೀಡೆಯನ್ನು ಕೊಡುವ ಇತರರು ಯಾರೂ ಕಾಣುವುದಿಲ್ಲ ।।೮೮೩।। ಆತ್ಮಕ್ಕೂ ಕೂಡ ಯಾವುದೇ ಪ್ರಕಾರದಿಂದ ಯಾವುದೇ ಬಾಧೆಗಳು ಎಂದೆಂದಿಗೂ ಬಂದು ಒದಗಲು ಶಕ್ಯವೇ ಇಲ್ಲ. ಜನರಿಗೆ ಅವರ ದೇಹದ ಅಭಿಮಾನವೇ ಬಾಧಕವಾಗುತ್ತಿರುವುದು. ಈ ವಿಷಯವನ್ನು ಕುರಿತು ಈಗ ಭಿಕ್ಷು ಹೇಳುತ್ತಿರುವನು ।।೮೮೪।।

ಆತ್ಮನು ಈ ಯಾವ ಸರ್ವ ಪ್ರಕಾರಗಳ ಗುಣಗಳಿಂದ ಭಿನ್ನನಾಗಿ ಶುದ್ಧನಾಗಿರುವನು. ಆತನು ಮಾಯೆಯ ಆಚೆಕಡೆ ಇದ್ದು ಆನಂದ ಸ್ವರೂಪನಾಗಿರುವನು. ಆತನು ಪರಿಪೂರ್ಣ ಸತ್ ಚಿತ್ ಆನಂದಸ್ವರೂಪನಾಗಿರುವನು. ಅಲ್ಲಿ ದ್ವಂದ್ವದ ಬಾಧೆಯು ಪ್ರವೇಶವನ್ನು ಮಾಡಲು ಶಕ್ಯವಿಲ್ಲ ।।೮೮೫।। ಆತ್ಮಾನುಭವದಲ್ಲಿ ದ್ವಂದ್ವದ ಪ್ರವೇಶವನ್ನು ಮಾಡಿ ಅಲ್ಲಿ ಪೀಡೆಯನ್ನು ಕೊಡುವ ಯಾವುದೇ ಪ್ರಕಾರದ ಕ್ರಿಯಾ, ಕರ್ಮ, ಕಾರ್ಯ ಮತ್ತು ಕರಣೀಗಳನ್ನು ಯಾರಿಗೂ ಎಂದಿಗೂ ಮಾಡಲು ಶಕ್ಯವೇ ಇಲ್ಲ ।।೮೮೬।। ಕಾರಣ, ಅಭೇದಕ್ಕೆ ದ್ವಂದ್ವವು ಎಂದಿಗೂ ಬಾಧಿಸಲು ಸಾಧ್ಯವಿಲ್ಲ. ಸ್ವಾನಂದರೂಪಕ್ಕೆ ದುಃಖವೆಂಬುವುದು ಎಲ್ಲಿಯದು? ಪರಿಪೂರ್ಣವಾದ ಆತ್ಮದ ವಿರುದ್ಧವಾಗಿ ಯಾವುದಿರುವುದು? ಪರಮಾನಂದವು ಇದು ಒಂದೇ ಒಂದಾಗಿರುವುದು ।।೮೮೭।। ಆತ್ಮಕ್ಕೆ ದ್ವಂದ್ವದ ಸಂಬಂಧವು ಎಂದಿಗೂ ಒದಗುವುದೇ ಇಲ್ಲ ಮತ್ತು ದೇಹವಾದರೂ ಜಡವಾಗಿರುವುದರಿಂದ ಅದು ದ್ವಂದ್ವವನ್ನು ತಿಳಿಯುವುದಿಲ್ಲ. ಅಂದಮೇಲೆ ಈ ಯಾವ ಸುಖದುಃಖಗಳ ಬಾಧೆಯು ಯಾರಿಗಾಗುವುದು? ।।೮೮೮।। ಸುಖದುಃಖಗಳನ್ನು ಭೋಗಿಸಲು ಮತ್ತು ಜನ್ಮಮರಣದ ವೇದನಾಯುಕ್ತ ಕ್ಲೇಶಗಳನ್ನು ಸಹಿಸಲು ಈ ಯಾವ ದೇಹದ ಅಭಿಮಾನವೇ ಮುಖ್ಯವಾದ ಕಾರಣವಾಗಿರುವುದು. ಹೀಗೆಂದು ಹೇಳಿದರೂ ಕೂಡ ಅದರ ಲಕ್ಷಣವೂ ಸಹ ಅತರ್ಕ್ಯವಾಗಿರುವುದು ।।೮೮೯।। ಯಾವ ಪ್ರಕಾರವಾಗಿ ಪತಿಯೊಡನೆ ಇದ್ದು ಸುಮಂಗಲೆ ಸ್ತ್ರೀಯು ಪರಪುರುಷನಲ್ಲಿ ವ್ಯಭಿಚಾರವನ್ನು ಮಾಡಿ ಆಕೆಯು ಗರ್ಭವನ್ನು ಧರಿಸಲು ಅದು ಯಾರಿಂದ ಎಂಬುವುದು ಯಾರಿಗೂ ತಿಳಿಯುವುದಿಲ್ಲ ।।೮೯೦।।

ಪ್ರಜೇತೇ ಛಳೀ ನಾನಾಪರೀ । ತೈಸಾ ಶರೀರೀ ಅಭಿಮಾನ ॥೯೨॥ ಕಾ ಅಗ್ನಿಸಂಗೇ ಲೋಹ ಜಾಣ । ಅಗ್ನಿಪ್ರಾಯ ಹೋಯ ಆಪಣ । ತಯಾ ಹಾತೀ ಧರೂ ಶಕೇ ಕೋಣ । ಪೋಳೀ ದಾರುಣ ಸರ್ವಾಂಸೀ ॥೯೩॥ ತೇವೀ ಚಿದ್ರೂಪಾಚಾ ಅಭಿಮಾನ । ದೇಹಾತ್ಮತಾ ಖವಳೋನಿ ಪೂರ್ಣ । ಸುಖದುಃಖಾದಿ ಜನ್ಮಮರಣ । ವಾಢವಿತಾ ಕೋಣ ಆವರೀ॥೯೪॥ ಸ್ವಪ್ನೀಂಚಾ ದೇಹ ಕೇವಳ ಮನ । ತ್ಯಾಹೀ ದೇಹಾಸೀ ಅಸೇ ಮನಪಣ । ತೈಸಾ ಹಾಹೀ ದೇಹೋ ಮನಚಿ ಜಾಣ । ಅಭಿಮಾನೇ ಕಠಿಣ ಸ್ಥೂಳ ಕೇಲಾ ॥೯೫॥ ಕಾರ್ಯಕಾರಣರೂಪೇ ಜಾಣ । ಸಂಸಾರಚಿ ಮನೋಭಿಮಾನ । ವಾಢವೂನಿ ಸುಖದುಃಖ ದಾರುಣ । ಜನ್ಮಮರಣ ಸ್ವಯೇ ಭೋಗೀ ॥೯೬॥ ಭೋಗಿಲೇಚಿ ಭೋಗ ಭೋಗಿತಾ । ನಾನಾಪರೀಂಚೀ ಪಾವೇ ವ್ಯಥಾ । ತರೀ ನ ಸಾಂಡೀ ಅಹಂತಾ । ದೇಹಾತ್ಮತಾ ವಾಢವೀ ॥೯೭॥ ಬ್ರಹ್ಮಪ್ರಳಯ ಹೋತಾ ಜಾಣ । ದೇಹಅಹಂತಾ ನವ್ಹೇ ಕ್ಷೀಣ । ಪ್ರಳಯೀ ವಿರೇನಾ ಅಭಿಮಾನ । ಸುಖದುಃಖ ಜಾಣ ತೋ ಭೋಗೀ ॥೯೮॥ ಯಾಮಾಜೀ ಜೀವ ಅಸೇ ಕೈಸಾ । ಜಪಾಕುಸುಮೀ ಸ್ಫಟಿಕ ಜೈಸಾ। ದಿಸೋನ ತ್ಯಾ ರಂಗಾಐಸಾ । ಸ್ವಯೇ ತೈಸಾ ಹೋಯೇನಾ ॥೯೯॥ ಆತ್ಮತ್ವೀ ಸುಖದುಃಖ ನಾಹೀ । ತೇ ಪ್ರತ್ಯಕ್ಷ ದಿಸತಾಹೇ ದೇಹೀ । ಹೇ ಅವಿಚಾರರಮಣೀಯ ಪಾಹೀ । ಕಲ್ಪನೇಚ್ಯಾ ಠಾಯೀ ಆಭಾಸೇ ॥೧೦೦॥ ತೇ ದೇಹ ಮಾರ್ಝೇ ಮ್ಹಣೋನಿ ತತ್ತ್ವತಾ । ಅಭಿಮಾನೇ ಘೇಊನಿ ಮಾಥಾ । ಜನ್ಮಮರಣಾದಿ ಆವರ್ತಾ । ಸುಖದುಃಖ ಭೋಕ್ತಾ ಸ್ವಯೇ ಹೋಯ ॥೧೦೧॥ ಯೇಣೇಚಿ ವಿವೇಕೇ ನಿಜಜ್ಞಾನೀ । ಪ್ರಾಪ್ತತತ್ತ್ವ ಗುರುವಚನೀ । ತೇ ವರ್ತತಾಂಹೀ ಜನೀವನೀ । ದೇಹಾಭಿಮಾನೀ ಕದಾ ನವ್ಹತೀ ॥೧೦೨॥ ಐಸೇ ಪ್ರಬುದ್ಧ ಜೇ ಆತ್ಮಪ್ರತೀತೀ । ತಯಾಂಸೀ ಪ್ರಾರಬ್ಧಾಚಿಯೇ ನಿಜಗತೀ । ನಾನಾ ಸುಖದುಃಖೇದೇತಾ ಭೂತೀ । ಆತ್ಮಸ್ಥಿತೀ ಢಳೇನಾ ॥೧೦೩॥ ತ್ಯಾಂಸೀ ದ್ವೇಷ ನುಪಜೇ ಭೂತೀ। ಕೋಣ ಸರ್ವಥಾ ನ ಯೇ ಚಿತ್ತೀ। ಮೀ ಏಕ ತ್ರಿಜಗತೀ । ಜಾಣೋನಿ ನಿಶ್ಚಿತೀ ನಿರ್ದ್ವಂದ್ವ ॥೧೦೪॥ ತೋ ದೇಖೋನಿಯಾ ವಿಷಮಾಸೀ । ಭಯ ನ ಧರೀ ಮಾನಸೀ । ಪಾರಕೇ ನ ಮ್ಹಣೇ

ಹ್ಮವು ಇಂತಹ ಪ್ರಕಾರದ ಅಭಿಮಾನದ ರೀತಿಯಾಗಿರುವುದು. ಅದು ಚಿತ್‌ಸ್ವರೂಪದಲ್ಲಿ ಏಕರೂಪವಾಗಿ ಮಿಥ್ಯೆಯಾದ ಜೀವತ್ವವನ್ನು ತೋರಿಸುತ್ತ ತನ್ನ ಇಚ್ಛೆಯಿಂದ ಸುಖದುಃಖಗಳನ್ನು ಭೋಗಿಸುತ್ತಿರುವುದು ॥೯೧॥ ಯಾವ ಪ್ರಕಾರವಾಗಿ ಒಬ್ಬ ರಾಜನ ಆಸ್ಥಾನದಲ್ಲಿ ಕಪಟಿಯಾದ ಮಂತ್ರಿಯು ಇರಲು, ಆಗ ಆತನು ತನ್ನ ಅಧಿಕಾರದ ಪ್ರಭಾವದಿಂದ ಕೆಟ್ಟ ಕಾರ್ಯಗಳನ್ನು ಮಾಡುತ್ತ ಪ್ರಜೆಗಳಿಗೆ ಪೀಡೆಯನ್ನು ಕೊಡುತ್ತಿರುವನು. ಅದರಂತೆಯೇ ಈ ಯಾವ ಅಭಿಮಾನವು ಶರೀರದಲ್ಲಿದ್ದುಕೊಂಡು ಮನಬಂದಂತೆ ಮಾಡುತ್ತಿರುವುದು ॥೯೨॥ ಅಗ್ನಿಯ ಸಂಗತಿಯಿಂದ ಕಬ್ಬಿಣವು ಅಗ್ನಿಪ್ರಾಯವಾಗುವುದು. ಇಂತಹ ಸಮಯದಲ್ಲಿ ಆ ಕಬ್ಬಿಣವನ್ನು ಯಾರು ಕೈಯಿಂದ ಹಿಡಿಯಬೇಕು ? ಅದು ಹಿಡಿದವರಿಗೆ ತಕ್ಷಣ ಸುಟ್ಟುಬಿಡುವುದು ॥೯೩॥ ಅದರಂತೆ ಈ ಅಭಿಮಾನವು ಚಿದ್ರೂಪದಲ್ಲಿ ಐಕ್ಯವಾಗಿ ದೇಹಬುದ್ಧಿಯಿಂದ ಉಗ್ರಗೊಳ್ಳುತ್ತಿರುವುದು ಮತ್ತು ಸುಖದುಃಖಾದಿ ಯುಕ್ತವಾದ ಜನ್ಮಮರಣಗಳ ಬಾಧೆಯನ್ನು ಬೆಳೆಸುತ್ತಿರುವುದು. ಆಗ ಅದನ್ನು ಯಾರು ತಡೆಹಿಡಿಯಬೇಕು? ॥೯೪॥ ಸ್ವಪ್ನದಲ್ಲಿನ ದೇಹವೆಂದರೆ ಅದು ಕೇವಲ ಮನಸ್ಸಿನ ಕ್ರೀಡೆಯಾಗಿರುವುದು. ಆದರೆ ಆ ದೇಹಕ್ಕೂ ಕೂಡ ಮನಸ್ಸು ಇರುವುದು. ಅದರಂತೆ ಜಾಗೃತೆಯಲ್ಲಿನ ದೇಹಕ್ಕೂ ಕೂಡ ಮನಸ್ಸೇ ಇರುವುದು. ಆದರೆ ಅಭಿಮಾನವು ಅದಕ್ಕೆ ಕಠಿಣ, ಸ್ಥೂಲವನ್ನಾಗಿ ಮಾಡುತ್ತಿರುವುದು ॥೯೫॥ ಕಾರ್ಯ ಕಾರಣ ರೂಪದಿಂದ ಯಾವ ಈ ಸಂಸಾರವು ಇದು ಮನಸ್ಸಿನ ಅಭಿಮಾನವಾಗಿರುವುದು ಎಂದು ನೀನು ತಿಳಿದುಕೊ. ಅದು ಸುಖದುಃಖಗಳನ್ನು ಅತಿಶಯವಾಗಿ ಬೆಳೆಸಿ ಜನ್ಮಮರಣಗಳನ್ನು ತಾನು ಸ್ವತಃ ಭೋಗಿಸುತ್ತಿರುವುದು ॥೯೬॥ ಭೋಗಿಸಿರುವ ಭೋಗಗಳನ್ನೇ ಭೋಗಿಸುತ್ತಿರಲು ಆಗ ಅದಕ್ಕೆ ನಾನಾ ಪ್ರಕಾರದ ದುಃಖಗಳು ಉಂಟಾಗುತ್ತಿರುವುವು. ಆದರೂ ಕೂಡ ಅದು ತನ್ನ ಅಹಂಕಾರವನ್ನು ಬಿಟ್ಟುಕೊಡುವುದಿಲ್ಲ. ನಾನೇ ದೇಹವೆಂಬ ದೇಹಾತ್ಮಾ ಭಾವವನ್ನು ಮಾತ್ರಅಖಂಡವಾಗಿ ಬೆಳೆಸುತ್ತಿರುವುದು ॥೯೭॥ ಪ್ರಳಯ ಕಾಲವು ಉದ್ಭವಿಸಿದರೂ ಸಹ ದೇಹದ ಅಹಂತೆಯು ಹೋಗುವುದಿಲ್ಲ. ಪ್ರಳಯದಲ್ಲಿಯೂ ಸಹ ಅಬಿಮಾನವು ಕರಗುವುದಿಲ್ಲ. ಆದ್ದರಿಂದಲೇ ಅದು ಸುಖದುಃಖಗಳನ್ನು ಭೋಗಿಸುತ್ತಿರುವುದು ॥೯೮॥ ಈ ಅಭಿಮಾನದಲ್ಲಿ ಜೀವವು ಹೇಗೆ ಇರುವುದೆಂಬುದನ್ನು ಕೇಳು. ದಾಸಾಳ ಹೂವಿನಮೇಲೆ ಸ್ಫಟಿಕಮಣಿಯನ್ನಿಡಲು ಆಗ ಆ ಸ್ಫಟಿಕವು ಆ ಹೂವಿನ ಬಣ್ಣದಂತೆ ತೋರುವುದು. ಆದರೆ ಸ್ವತಃ ತಾನು ಅದರಂತೆ ಆಗುವುದಿಲ್ಲ ॥೯೯॥ ಆತ್ಮಸ್ವರೂಪದಲ್ಲಿ ಸುಖದುಃಖಗಳಿರುವುದಿಲ್ಲ. ಇದು ದೇಹದಲ್ಲಿ ಪ್ರತ್ಯಕ್ಷವಾಗಿ ತೋರುವುದು. ಈ ಸುಖದುಃಖಗಳು ಅವಿಚಾರವಾಗಿ ರಮಣೀಯವಾಗಿ ಗೋಚರಿಸುವುವು. ಕಲ್ಪನೆಗಳಲ್ಲಿ ಭಾಸವಾಗುವುವು ॥೧೦೦॥ ದೇಹವು "ಈ ಸುಖದುಃಖಗಳು ನನ್ನವು " ಎಂದು ಹೇಳುತ್ತ ತನ್ನ ತಲೆಯಮೇಲೆ ಅಭಿಮಾನದಿಂದ ಹೊತ್ತುಕೊಳ್ಳುತ್ತಿರುವುದು. ಆದ್ದರಿಂದ ಆತನು ಜನ್ಮಮರಣಗಳ ಚಕ್ರದಲ್ಲಿ ಸಿಲುಕಿಕೊಳ್ಳುವನು ಮತ್ತು ಸುಖದುಃಖಗಳ ಭೋಕ್ತಾನಾಗುವನು ॥೧೦೧॥ ಈ ಯಾವ ವಿವೇಕದಿಂದ ಆತ್ಮಜ್ಞಾನಿಗಳು ಇರುವರು. ಅವರ ಹೃದಯ ತೆರೆಯಮೇಲೆ ಗುರುಗಳ ಉಪದೇಶವು ಪರಿಪೂರ್ಣವಾಗಿ ಮೂಡಿಕೊಂಡಿರುವುದು. ಆದ್ದರಿಂದ ಅವರು ಜನರಲ್ಲಿರಲಿ ಅಥವಾ ಅರಣ್ಯದಲ್ಲಿರಲಿ, ಹೀಗೆ ಎಲ್ಲಿಯೇ ಇರಲಿ ಎಂದಿಗೂ ದೇಹಾಭಿಮಾನಿಗಳಾಗುವುದಿಲ್ಲ ॥೧೦೨॥ ಈ ಪ್ರಕಾರವಾಗಿ ಯಾರು ಆತ್ಮಜ್ಞಾನದಿಂದ ಪರಿಪೂರ್ಣರಾಗಿರುವರೋ, ಅವರಿಗೆ ತಮ್ಮ ಪ್ರಾರಬ್ಧಪ್ರಮಾಣದಂತೆ ಪ್ರಾಣಿಗಳಿಂದ ಎಷ್ಟೇ ಸುಖದುಃಖಗಳು ಬಂದೊದಗಿದರೂ ಅವರು ತಮ್ಮ ಆತ್ಮಸ್ವರೂಪದಿಂದ ಎಂದಿಗೂ ಕದಲಲು ಶಕ್ಯವೇ ಇಲ್ಲ ॥೧೦೩॥

ಕೋಣಾಸೀ । ಆಪ್ತ ಸರ್ವಾಂಸೀ ನಿಜಾತ್ಮಾ ।।೯೦೫।। ಸಮವಿಷಮಭಾವ ನಾ ಭೇದ । ಜ್ಞಾತಾ ಸರ್ವ ರೂಪೇ ಅಭೇದ । ತೋ ನ ಮಾನೀ ಕೋಣಾಚಾ ಭಯಖೇದ । ಸುಖಸ್ವಾನಂದ ಸರ್ವದಾ ।।೯೦೬।। ನಿಂದಾಉಪ ದ್ರವ ಅನುದ್ವಿಗ್ನ । ಸಾಹೋನಿಯಾ ಸುಖಸಂಪನ್ನ । ಹೇ ಸಿದ್ಧಾಂಚೇ ಮುಖ್ಯ ಲಕ್ಷಣ । ತೇಚಿ ಸಾಧನ ಸಾಧಕಾ ।।೯೦೭।।

ಏತಾಂ ಸ ಆಸ್ಥಾಯ ಪರಾತ್ಮನಿಷ್ಠಾಮಧ್ಯಾಸಿತಾಂ ಪೂರ್ವತಮೈರ್ಮಹರ್ಷಿಭಿಃ ।
ಅಹಂ ತರಿಷ್ಯಾಮಿ ದುರಂತಪಾರಂ ತಮೋ ಮುಕುಂದಾಂಘ್ರಿ ನಿಷೇವಯೈವ ।೫೭।।

ಅರ್ಥ:- ಮಹಾ ಮಹಾ ಋಷಿಮುನಿಗಳು ಈ ಯಾವ ಪರಮಾತ್ಮ ನಿಷ್ಠೆಯ ಮಾರ್ಗವನ್ನು ಆಶ್ರಯಿಸಿರುವರು. ನಾನಾದರೂ ಇದರಂತೆಯೇ ಆಶ್ರಯವನ್ನು ಪಡೆಯುವೆನು ಹಾಗೂ ಮುಕ್ತಿ ಮತ್ತು ಪ್ರೇಮದ ದಾತಾನಾಗಿರುವ ಭಗವಂತನ ಚರಣ ಕಮಲಗಳ ಸೇವೆಯ ಮುಖಾಂತರವಾಗಿ ಬಹು ಬೇಗನೇ ಅಜ್ಞಾನ ಸಾಗರದಿಂದ ಪಾರಾಗುವೆನು.

ಮಾಝ್ಯಾ ಪೂರ್ವಾಪರ ಭಾಗ್ಯೋದಯೇ । ಅದ್ವೈತಾತ್ಮನಿಷ್ಠಾ ಉಪಜಲೀ ಪಾಹೇ । ಜೇ ನಿಷ್ಠೇಚೇನಿ ಸಮವಾಯೇ । ನಾನಾ ದುಃಖೇ ಸಾಹೇ ನಿರ್ದ್ವಂದ್ವ ।।೯೦೮।। ದ್ವಂದ್ವಸುಖದುಃಖಸಹಿಷ್ಣುಪಣ । ಹೇ ಸಿದ್ಧಾಂಚೇ ಸಹಜ ಲಕ್ಷಣ । ಮಾಝೇ ಮುಖ್ಯತ್ವೇ ಹೇಚಿ ಸಾಧನ । ಮನೋಜಯೋ ಜಾಣ ಯೇಣೇ ಹೋಯೇ ।।೯೦೯।। ಹೇಚೀ ಪರಮಾರ್ಥಸಾಧನ ವರಿಷ್ಠಾ । ಹೇಚಿ ಮಹಾಋಷೀಂಚೀ ನಿಜನಿಷ್ಠಾ । ಹೇಚಿ ನಿಜಭಜನ ವೈಕುಂಠಾ । ನಿಜಾತ್ಮನಿಷ್ಠಾ ಯೇಣೇ ಸಾಧೇ ।।೯೧೦।। ಯೇಣೇ ನ ಬಾಧೇ ದ್ವಂದ್ವದುಃಖ । ಯೇಣೇ ಪಾವಿಜೇ ನಿತ್ಯಸುಖ । ದುಸ್ತರ ಸಂಸಾರತಾರಕ । ಹಾ ನಿಜವಿವೇಕ ಆಮ್ಹಾಸೀ ।।೯೧೧।। ದುಸ್ತರ ತರಾವಯಾ ಭವಸಾಗರೂ । ಹಾ ವಿವೇಕೂ ಸುಕಲ್ಪ ತಾರೂ । ಏಥ ಸದ್ಗುರೂ ಕರ್ಣಧಾರೂ । ಪರಾತ್ಪರಪಾರೂ ಪಾವವೀ ।।೯೧೨।। ಹಾ ವಿವೇಕ ಕೈಸೇನಿ ಯೇ ಹಾತಾ । ಹೇಹೀ ಕರಣೇ ನ ಲಗೇ ಚಿಂತಾ । ನಿಜಭಾವೇ ಏಕಾಗ್ರತಾ । ಶರಣ ಭಗವಂತಾ ರಿಘಾವೇ ।।೯೧೩।। ಸಾಂಡೋನಿ ಲೌಕಿಕಾಚೇ ಲಾಜೇ । ಸಾಂಡೋನಿ ಅಭಿಮಾನಾಚೇ ಓಝೇ । ಭಗವಂತಾ ಶರಣ ರಿಘಿಜೇ । ತೈ ಲಾಹಿಜೇ ವಿವೇಕ ।।೯೧೪।।

ತಾನೇ ಬಾಳ ಜೇವೀ ಜನನೀಸೀ । ಅನನ್ಯ ಶರಣ ಸರ್ವಭಾವೇಸೀ । ಐಶಿಯಾ ಅನನ್ಯತಾ ಅಹರ್ನಿಶೀ । ಶರಣ ಹರೀಸೀ ರಿಘಾವೇ ।।೯೧೫।। ಹರೀಸೀ ರಿಘಾಲಿಯಾ ಶರಣ । ಮುಖ ನ ದಾಖವೀ ಜನ್ಮ ಮರಣ । ತೇಥ ಬಾಧೂ

ಯಾವುದೇ ಪ್ರಾಣಿಮಾತ್ರರಲ್ಲಿ ಅವರ ಮನದಲ್ಲಿ ದ್ವೇಷವು ಉತ್ಪನ್ನವಾಗುವುದಿಲ್ಲ. ಅವರ ಮನದಲ್ಲಿ ಕ್ರೋಧವು ಮಾತ್ರ ಹುಟ್ಟುವುದೇ ಇಲ್ಲ. ತ್ರಿಭುವನದಲ್ಲಿ ನಾನೊಬ್ಬನೇ ತುಂಬಿಕೊಂಡಿರುವೆನು ಎಂದು ತಿಳಿದುಕೊಂಡು ಅವರು ಪರಿಪೂರ್ಣವಾಗಿ ದ್ವಂದ್ವರಹಿತರಾಗಿರುವರು ।।೯೦೪।। ಇಂತಹ ಆತ್ಮ ಸಂಪನ್ನನಾಗಿರುವ ಮಹಾತ್ಮನು ಸಂಕಟಗಳನ್ನು ಕಂಡು ಮನಸ್ಸಿನಲ್ಲಿ ಎಂದಿಗೂ ಭಯಗ್ರಸ್ತನಾಗುವುದಿಲ್ಲ ಮತ್ತು ಯಾರನ್ನೂ ಇವರು ಬೇರೆಯವರು ಎಂದು ತಿಳಿದುಕೊಳ್ಳುವುದಿಲ್ಲ. ಸರ್ವವೂ ಆತ್ಮಸ್ವರೂಪವೇ ಆಗಿರುವುದರಿಂದ ಆತನು ಎಲ್ಲರಲ್ಲಿಯೂ ಆತ್ಮತತ್ವದಿಂದಲೇ ವರ್ತಿಸುತ್ತಿರುವನು ।।೯೦೫।। ಅವರ ಮನದಲ್ಲಿ ಸಮ-ವಿಷಮವೆಂಬ ಭೇದಭಾವವೇ ಇರುವುದಿಲ್ಲ. ಜ್ಞಾನಿಯು ಸರ್ವ ಪ್ರಕಾರದಿಂದ ಅಭೇದರೂಪನಾಗಿಯೇ ಇರುವನು. ಆತನು ಯಾರ ಭಯವನ್ನು ಹಿಡಿಯುವುದಿಲ್ಲ ಮತ್ತು ಯಾವ ವಿಷಯಕ್ಕೂ ಕೂಡ ಖೇದವನ್ನು ಮಾಡಿಕೊಳ್ಳುವುದಿಲ್ಲ. ಆತನು ಯಾವಾಗಲೂ ಸ್ವಾನಂದ ಸುಖದಲ್ಲಿಯೇ ರಮಮಾಣನಾಗಿರುವನು ।।೯೦೬।। ಯಾರು ಎಷ್ಟೇ ನಿಂದೆಯನ್ನು ಮಾಡಲಿ ಅಥವಾ ಪೀಡೆಯನ್ನು ಕೊಡಲಿ ಸ್ವಲ್ಪವೂ ಕೂಡ ಉದ್ವಿಗ್ನನಾಗದೇ ಆಗುತ್ತಿರುವ ಪೀಡೆಯನ್ನು ಸಹನೆ ಮಾಡುತ್ತ ಸಮಾಧಾನದಿಂದ ಇರುವಿಕೆಯೇ ಸಿದ್ಧ ಪುರುಷನ ಲಕ್ಷಣವಾಗಿರುವುದು. ಸಾಧಕನಿಗೂ ಕೂಡ ಇದೇ ಸಾಧನೆಯಾಗಿರುವುದು ।।೯೦೭।।

ನಿಜವಾಗಿಯೂ ನನ್ನ ಪೂರ್ವಪುಣ್ಯದ ಪ್ರಭಾವದಿಂದ ನನಗೆ ಭಾಗ್ಯೋದಯವಾಯಿತು. ಅದ್ವೈತರೂಪ ಆತ್ಮನಿಷ್ಠೆಯು ನನ್ನ ಹೃದಯದಲ್ಲಿ ಪ್ರಕಟವಾಯಿತು. ಈ ಆತ್ಮನಿಷ್ಠೆಯ ಆಶ್ರಯದಿಂದ ನಾನಾ ಪ್ರಕಾರದ ದುಃಖಗಳು ನಿರ್ದ್ವಂದ್ವವಾಗಿ ನಾನು ಅವುಗಳನ್ನು ಸಹಜವಾಗಿ ಸಹಿಸುತ್ತಿರುವೆನು ।।೯೦೮।। ಭೇದಗಳಿಂದ ಸುಖದುಃಖಗಳನ್ನು ಸಹನೆ ಮಾಡುವ ಗುಣವು ಇದೇ ಸಿದ್ಧಿಯ ಸ್ವಾಭಾವಿಕವಾದ ಲಕ್ಷಣವಾಗಿದೆ. ಇದೇ ನನ್ನ ಮುಖ್ಯವಾದ ಸಾಧನೆಯಾಗಿದೆ. ಇದರ ಸಹಾಯದಿಂದಲೇ ನನಗೆ ಮನೋಜಯದ ಪ್ರಾಪ್ತಿಯಾಗುತ್ತಿರುತ್ತದೆ. ।।೯೦೯।। ಇದುವೇ ಪರಮಾರ್ಥದ ಶ್ರೇಷ್ಠತಮವಾದ ಸಾಧನೆಯಾಗಿದೆ. ಮಹಾ ಮಹಾ ಋಷಿಗಳ ಇದೇ ಆತ್ಮನಿಷ್ಠೆಯಾಗಿದೆ. ಇದುವೇ ವಿಷ್ಣುವಿನ ಭಜನೆಯಾಗಿದೆ. ಇದರಿಂದಲೇ ಆತ್ಮನಿಷ್ಠೆಯು ಪ್ರಾಪ್ತವಾಗುವುದಾಗಿದೆ ।।೯೧೦।। ಹೀಗಾದಲ್ಲಿ ದ್ವಂದ್ವದಿಂದಾಗುವ ದುಃಖಗಳು ಎಂದಿಗೂ ಬಾಧಿಸುವುದಿಲ್ಲ, ನಿತ್ಯಸುಖದ ಪ್ರಾಪ್ತಿಯಾಗುವುದು. ಇದೇ ಆತ್ಮವಿವೇಕವು ನಮಗೆ ಈ ದುಸ್ತರವಾದ ಸಂಸಾರದಿಂದ ಪಾರು ಮಾಡುವುದಾಗಿರುವುದು ।।೯೧೧।। ಸಂಸಾರ ಸಾಗರವನ್ನು ದಾಟಿ ಹೋಗುವುದು ಬಹಳ ಕಠಿಣವಾಗಿರುವುದು. ಆದರೆ ವಿವೇಕರೂಪ ನೌಕೆಯು ಇದು ಉತ್ತಮವಾಗಿರುವುದು. ಸದ್ಗುರುಗಳು ಈ ಯಾವ ನೌಕೆಯ ಅಂಬಿಗನಾಗಿರುವನು. ಆತನು ಮಾಯೆಯ ಆಚೆದಡಕ್ಕೆ ಸಹಜವಾಗಿಯೇ ಮುಟ್ಟಿಸುವನು. ।।೯೧೨।। ಇಂತಹ ವಿವೇಕವು ಹೇಗೆ ಪ್ರಾಪ್ತವಾಗಬೇಕು? ಇಂತಹ ಚಿಂತೆಯನ್ನು ಮಾಡುವ ಯಾವ ಕಾರಣವಿಲ್ಲ. ಚಿತ್ತವನ್ನು ಏಕಾಗ್ರತೆಯನ್ನು ಮಾಡಿ ಪರಿಪೂರ್ಣವಾದ ಶ್ರದ್ಧೆಯಿಂದ ಸರ್ವಶಕ್ತಿವಂತನಾದ ಭಗವಂತನಿಗೆ ಶರಣು ಹೋಗಬೇಕು ।।೯೧೩।। ಲೌಕಿಕದ ಲಜ್ಜೆಯನ್ನು ತೊರೆದು, ತನ್ನ ಬೆನ್ನಿನಮೇಲೆ ಹೊತ್ತಿರುವ ಅಭಿಮಾನದ ಭಾರವನ್ನು ತ್ಯಜಿಸಿ ಪ್ರೇಮಸ್ವರೂಪನಾಗಿರುವ ಮತ್ತು ವಾತ್ಸಲ್ಯಸಿಂಧೂನಾಗಿರುವ ಭಗವಂತನಿಗೆ ಪರಿಪೂರ್ಣಭಾವದಿಂದ ಶರಣಾಗಬೇಕು. ಆಗ ಆತ್ಮವಿವೇಕವು ಪ್ರಕಟವಾಗುವುದು ।।೯೧೪।।

ಶಕೇ ದ್ವಂದ್ವಕೋಣ। ಹರಿ ರಕ್ಷಣ ನಿಜಭಕ್ತಾ ॥೯೧೬॥ ಮೋಕ್ಷದಾತಾ ಮುಕುಂದ ಪೂರ್ಣ । ತ್ಯಾಸೀ ಕೈಸೇ ರಿಘಾವೇ ಶರಣ । ತೋ ಅನಂತತ್ವೇ ನಿಜನಿರ್ಗುಣ । ತೇಥ ಕೋಣ ಪಾವೇಲ ॥೯೧೭॥ ಅಸೋ ಹರಿರೂಪ ಅತಿ ನಿರ್ಗುಣ। ತ್ಯಾಚೀಮೂರ್ತಿ ಚಿಂತಿತಾ ಸಗುಣ । ಧ್ಯಾನೀ ಸ್ಥಿರಾವಲ್ಯಾ ಸಂಪೂರ್ಣ । ದ್ವಂದ್ವದುಃಖೇ ಜಾಣ ಹಾರಪತೀ ॥೯೧೮॥ ಧ್ಯಾನೀ ಮೂರ್ತಿ ನ ಯೇ ಸಂಪೂರ್ಣ । ತೈ ದೃಢ ಧರಾವೇ ಹರೀಚೇ ಚರಣ । ತೇಣೇ ಉಠೋನಿ ಪಳೇ ಜನ್ಮಮರಣ । ಆಪಭಯೇ ಆಪಣ ಪಳತೀ ದ್ವಂದ್ವೇ ॥೯೧೯॥ ಜೈ ನ ಧರವತೀ ದೃಢ ಚರಣ । ತೈಕರಾವೇ ನಾಮಸ್ಮರಣ । ಜ್ಯಾಚೇನಿ ನಾಮಮಾತ್ರೇ ಜಾಣ । ಯಮ ಕಾಳ ಪೂರ್ಣ ಕಾಂಪತೀ ॥೯೨೦॥ ಜೇಥ ಹರಿನಾಮಾಚಾ ನಿತ್ಯ ಘೋಖ । ತೇಥ ಮರಣಾ ಮರಣ ಆಲೇ ದೇಖ । ಜನ್ಮಾಚೇ ಹೋಯ ಕಾಳೇ ಮುಖ । ಲಾಜೋನಿ ನಿಃಶೇಖ ತೇ ಪಳೇ ॥೯೨೧॥ ರಾಮನಾಮಾಚ್ಯಾ ಗಜರಾಪುಢೇ । ಕಾಇಸೇ ದ್ವಂದ್ವದುಃಖ ಬಾಪುಡೇ । ಅವಘೇ ಭವಭಯಚಿ ಉಡೇ । ನಾಮಪವಾಡೇ ಗರ್ಜತಾ ॥೯೨೨॥ ಅಖಂಡ ನಾಮೇಗರ್ಜೇ ವಾಣೇ । ತ್ಯಾಚೇ ಬೋಲಾಂ ಮಾಜೇ ಚಕ್ರಪಾಣೇ । ತೇಥ ಋದ್ಧಿಸಿದ್ಧಿ ವಾಹೇ ಪಾಣೇ । ಮುಕ್ತಿ ಆಂದಣೇ ತಯಾಚೇ ॥೯೨೩॥ ನಿರ್ವಿಕಲ್ಪ ಭಾವಾರ್ಥೇ ಆಪಣ। ಸಗುಣ ನಿರ್ಗುಣ ಕಾ ನಾಮಸ್ಮರಣ । ಭಕ್ತ ಭಾವಾರ್ಥೇ ಆದರೀ ಜಾಣ । ತೇ ತೇ ಹೋಯ ಪೂರ್ಣ ಸದ್ಭಾವೇಚಿ ॥೯೨೪॥ ಭಾವಾರ್ಥೇ ಜೇ ಭಗವತ್ಪ್ರೀತೀ । ತೇಚಿ ಜಾಣಾವೀ ಸಾಚಾರ ಭಕ್ತೀ । ಭಾವೇ ತುಷ್ಟಲಾ ಶ್ರೀಪತೀ । ದೇ ನಿಜಶಾಂತೀ ಸಾಧಕಾ ॥೯೨೫॥ ತೇ ನಿಜಶಾಂತೀಚ್ಯಾ ಪೋಟೀ । ಹರಪತೀ ದ್ವಂದ್ವದುಃಖ ಕೋಟೀ। ಪರಮಾನಂದೇ ಕೋಂದೇ ಸೃಷ್ಟೀ। ಮೀ ತೂ ದೃಷ್ಟೀ ದಿಸೇನಾ॥೯೨೬॥ ಐಸೇನಿ ಅಭೇದ ಭಾವೇಜಾಣ । ಸೇವಿತಾ ಮುಕುಂದಶ್ರೀಚರಣ । ಮೀ ಆಪಣಯಾ ಆಪಣ । ತಾರೀನ ಜಾಣ ನಿಶ್ಚಿತ ॥೯೨೭॥ ತಾರೀ ನ ಮ್ಹಣತಾ ಉಧಾರೂ । ಬೋಲೀ ದಿಸತಾಹೇ ಉಶೀರೂ । ಜೋ ಝಾಲಾ ಹರೀಚಾ ಡಿಂಗರೂ। ತ್ಯಾಸೀ ಸಂಸಾರೂ ಅಸೇನಾ ॥೯೨೮॥

ಐಶೀ ಭಿಕ್ಷೂನೇ ಗಾಇಲೀ ಗಾಥಾ । ತೇ ಅತ್ಯಂತ ರುಚಲೀ ಶ್ರೀಕೃಷ್ಣನಾಥಾ । ಹರಿಖೇ ಓಸಂಡೋನಿ ಚಿತ್ತಾ । ಉದ್ಧವಾಚಾ ಮಾಥಾ ಥಾಪಟೀ ॥೯೨೯॥ ಐಶೀ ಜೇ ಹೇ ನಿಜಶಾಂತೀ । ಮಾಝ್ಯಾ ಉದ್ಧವಾಸೀ ವ್ಹಾವೀ ಪ್ರಾಪ್ತೀ

ಚಿಕ್ಕ ಬಾಲಕನು ತನ್ನ ತಾಯಿಯಲ್ಲಿ ಅನನ್ಯಭಾವದಿಂದ ಶರಣು ಹೋಗಿರುವನು. ಅದರಂತೆಯೇ ಅಹೋರಾತ್ರಿ ಏಕನಿಷ್ಠೆಯಿಂದ ಭಗವಂತನಲ್ಲಿ ಪರಿಪೂರ್ಣವಾಗಿ ಮತ್ತು ತುಂಬಿದ ಭಕ್ತಿಭಾವದಿಂದ ಶರಣು ಹೋಗಬೇಕು ॥೯೧೫॥ ಸರ್ವಶಕ್ತಿಮಾನನಾಗಿರುವ ಮತ್ತು ಪ್ರೇಮಸ್ವರೂಪನಾಗಿರುವ ಶ್ರೀಹರಿಯನ್ನು ಶರಣು ಹೋಗಲು ಆಗ ಜನ್ಮಮರಣಗಳು ತಮ್ಮ ಮುಖ ಕೂಡ ತೋರಿಸಲಾರವು. ಶ್ರೀಹರಿಯೇ ತನ್ನ ಪ್ರಿಯ ಭಕ್ತರ ರಕ್ಷಣೆಯನ್ನು ಮಾಡುವವನಾಗಿರುವುದರಿಂದ ಅಲ್ಲಿ ಯಾವ ದ್ವಂದ್ವಗಳು ದುಃಖವನ್ನು ಕೊಡಲು ಸಾಧ್ಯವಿದೆ? ॥೯೧೬॥ ಪರಿಪೂರ್ಣವಾಗಿ ಮೋಕ್ಷದಾತಾ ಶ್ರೀಹರಿ ಪರಮಾತ್ಮನೇ ಆಗಿರುವನು. ಆತನಿಗೆ ಹೇಗೆ ಶರಣು ಹೋಗಬೇಕು? ಆತನು ಅನಂತರೂಪನಾಗಿದ್ದು ಸ್ವತಃ ನಿರ್ಗುಣನಾಗಿರುವನು. ಅಲ್ಲಿ ಹೋಗಬೇಕಾದರೂ ಹೇಗೆ? ॥೯೧೭॥ ಶ್ರೀಹರಿಯ ಸ್ವರೂಪವು ನಿರ್ಗುಣವಾಗಿದ್ದರೂ ಕೂಡ ಆತನ ಸಗುಣ ಮೂರ್ತಿಯ ಧ್ಯಾನವನ್ನು ಚಿತ್ತದಲ್ಲಿ ಸ್ಥಿರವಾಗಲು ಆಗ ದ್ವಂದ್ವದಿಂದಾಗುವ ದುಃಖಗಳು ದೂರಾಗಿಬಿಡುವುವು ॥೯೧೮॥ ಧ್ಯಾನದಲ್ಲಿ ಶ್ರೀಹರಿಯ ಮೂರ್ತಿಯು ಪರಿಪೂರ್ಣವಾಗಿ ಮೂಡದಿದ್ದರೆ ಆಗ ಹರಿಚರಣಗಳಲ್ಲಿ ದೃಢವಾದ ನಿಷ್ಠೆಯನ್ನಿಡಬೇಕು. ಇದರಿಂದಲೇ ಹುಟ್ಟು ಸಾವುಗಳು ಎದ್ದು ಓಡಿಹೋಗುವುವು. ಆಗ ದ್ವಂದ್ವಗಳು ತಮ್ಮಿಂದ ತಾವೇ ಭಯಪಟ್ಟು ಓಡಲಾರಂಭಿಸುವುವು ॥೯೧೯॥ ಶ್ರೀಹರಿಯ ಚರಣ ಕಮಲಗಳನ್ನು ಸರಿಯಾಗಿ ಚಿತ್ತದಲ್ಲಿ ಧರಿಸುವುದಾಗದಿದ್ದರೆ ಆಗ ಪ್ರೇಮದಿಂದ ಹರಿಯ ನಾಮಸ್ಮರಣೆಯನ್ನು ಮಾಡಬೇಕು. ಇದರಿಂದ ಯಮ ಮತ್ತು ಕಾಲನು ಥರಥರನೇ ನಡುಗುತ್ತಿರುವರು ॥೯೨೦॥ ಹರಿನಾಮದ ಘೋಷವು ನಿತ್ಯದಲ್ಲಿ ಎಲ್ಲಿ ಇರುವುದೋ, ಅಲ್ಲಿ ಮರಣಕ್ಕೇನೇ ಮರಣ ಉಂಟಾಗುವುದು. ಜನ್ಮದ ಮುಖವು ಕಪ್ಪಾಗಿಬಿಡುವುದು. ಅದು ನಾಚಿಕೆಯಿಂದ ಓಡಿಹೋಗುವುದು ॥೯೨೧॥ ರಾಮನಾಮದ ಗರ್ಜನೆಯ ಮುಂದೆ ಭೇದಾಭೇದಗಳ ದುಃಖವು ಎಲ್ಲಿಯದು? ಪ್ರಭುವಿನ ನಾಮದ ಗರ್ಜನೆಯನ್ನು ಕೇಳುತ್ತಲೇ ಸರ್ವ ಭವಭಯಗಳು ಹಾರಿ ಹೋಗುವುವು ॥೯೨೨॥ ಯಾರ ವಾಣಿಯು ಅಖಂಡವಾಗಿ ಎಡೆಬಿಡದೇ ಜಪವನ್ನು ಮಾಡುತ್ತಿರುವುದೋ, ಆತನ ಹರಿನಾಮದಲ್ಲಿ ಶ್ರೀಹರಿಯ ವಸತಿಯಾಗುವುದು. ಆತನ ಮನೆಗೆ ಋದ್ಧಿ-ಸಿದ್ಧಿಗಳು ನೀರು ತುಂಬುವ ದಾಸರಾಗುವರು. ಮುಕ್ತಿಯೂ ಕೂಡ ಆತನ ಸೇವಕವಾಗುವುದು ॥೯೨೩॥ ಭಕ್ತನು ತಾನು ಸ್ವತಃ ನಿರ್ವಿಕಲ್ಪ ಭಕ್ತಿಯಿಂದ ಸಗುಣ-ನಿರ್ಗುಣ ಭಕ್ತಿಯನ್ನು ಅಥವಾ ನಾಮಸ್ಮರಣೆಯನ್ನು ಹೀಗೆ ಯಾವುದನ್ನೇ ಸ್ವೀಕರಿಸಲಿ, ಆತನ ಸದ್ಭಾವನೆಯಿಂದ ಪೂರ್ಣವಾಗುವುದು ॥೯೨೪॥ ಪೂರ್ಣಶ್ರದ್ಧೆಯಿಂದ ಭಗವಂತನಲ್ಲಿ ನಿಃಸ್ವಾರ್ಥ ಪ್ರೇಮ ಮಾಡುವುದೇ ನಿಜವಾದ ಭಕ್ತಿಯು. ಆತನ ಭಕ್ತಿಯಿಂದ ಶ್ರೀಪತಿಯು ಸಂತುಷ್ಟನಾಗಿ ಸಾಧಕನಿಗೆ ಆತ್ಮಶಾಂತಿಯನ್ನು ಪ್ರದಾನ ಮಾಡುವನು ॥೯೨೫॥ ಒಮ್ಮೆ ಈ ಯಾವ ಆತ್ಮಶಾಂತಿಯು ಪ್ರಾಪ್ತವಾಗಲು ಕೋಟ್ಯಾವಧಿ ದ್ವಂದ್ವ ದುಃಖಗಳು ನಾಶವಾಗುವುವು. ಸರ್ವಸೃಷ್ಟಿಯು ಪರಮಾನಂದದಿಂದ ತುಂಬಿ ಬಿಡುವುದು. ''ನಾನು-ನೀನು'' ಎಂಬ ಭಾವವು ದೃಷ್ಟಿಗೆ ಬೀಳುವುದಿಲ್ಲ ॥೯೨೬॥ ಇಂತಹ ಅಭೇದಭಾವದಿಂದ ಭಗವಂತನ ಚರಣಗಳ ಸೇವೆಯನ್ನು ಮಾಡುವುದರಿಂದ ನಾನು ಸ್ವತಃ ನನ್ನನ್ನು ಉದ್ಧರಿಸಿಕೊಳ್ಳುವೆನು. ಇದು ನಿಶ್ಚಯವಾದ ಮಾತೆಂದು ತಿಳಿಯಬೇಕು ॥೯೨೭॥ ''ನಾನು ಉದ್ಧರಿಸಿಕೊಳ್ಳುವೆನು'' ಈ ಶಬ್ದ ಉಚ್ಚಾರವನ್ನು ಮಾಡಲು ಉದ್ಧಾರಕ್ಕೆ ಕೆಲಕಾಲಬೇಕೆಂದು ಹೇಳಿದಂತಾಗುವುದು. ಆದರೆ ಭಗವಂತನಲ್ಲಿ ಹೃದಯಪೂರ್ವಕವಾಗಿ ಪ್ರೇಮವನ್ನು ಮಾಡುವವನಿಗೆ ಸಂಸಾರಸಾಗರವನ್ನು ದಾಟಿ ಹೋಗಲು ಅಷ್ಟೂ ಕೂಡ ಸಮಯವು ಹತ್ತುವುದಿಲ್ಲ ॥೯೨೮॥

। ಐಸಾ ಕಳವಳೋನಿ ಶ್ರೀಪತೀ । ಕಾಯ ಉದ್ಧವಾಪ್ರತೀ ಬೋಲಿಲಾ ।।೯೩೦।।

ಶ್ರೀಭಗವಾನುವಾಚ:-

ನಿರ್ವಿದ್ಯ ನಷ್ಟದ್ರವಿಣೋ ಗತಕ್ಲಮಃ ಪ್ರವಜ್ಯ ಗಾಂ ಪರ್ಯಟಮಾನ ಇತ್ಥಮ್ ।
ನಿರಾಕೃತೋಽಸದ್ಭಿರಪಿ ಸ್ವಧರ್ಮಾದಕಂಪಿತೋಽಮೂಂ ಮುನಿರಾಹಗಾಥಾಮ್ ।೬೯।।

ಅರ್ಥ:- ಶ್ರೀಕೃಷ್ಣನು ನುಡಿದನು:- ಹೀಗೆ ಐಶ್ವರ್ಯ ನಷ್ಟದಿಂದ ವಿರಕ್ತನಾದ ಆ ಸಾಧುವು ತನ್ನ ಖಿನ್ನತೆಯನ್ನು ತೊರೆದನು. ಮನೆಯನ್ನು ಬಿಟ್ಟು ನಡೆದು ಸನ್ಯಾಸವನ್ನು ಸ್ವೀಕರಿಸಿ ದೇಶಾಟನೆ ಮಾಡಿದನು. ಅವಿವೇಕಿಗಳಾದ ಧೂರ್ತರಿಂದ ಹಿಂಸೆಗೊಳಗಾದರೂ ಕೂಡ ತನ್ನ ಕರ್ಮಪಥವನ್ನು ಬಿಟ್ಟಗಲದೆ ಈ ಗೀತೆಯನ್ನು ಹಾಡುತ್ತಿದ್ದನು.

ಜ್ಯಾಚೇ ನಿಃಶ್ವಾಸೀ ಜನ್ಮಲೇ ವೇದ । ಜ್ಯಾಚೇನಿ ಚರಣೀ ಗಂಗಾ ಪ್ರಸಿದ್ಧ । ಜ್ಯಾಚೇ ನಾಮ ಛೇದೀ ಭವಬಂಧ । ತೋ ಉದ್ಧವಾಸೀ ಗೋವಿಂದ ಸ್ವಮುಖೇ ಬೋಲೇ ।।೯೩೧।। ಯಾಲಾಗಿ ಉದ್ಧವಾಚೇ ಭಾಗ್ಯ ಥೋರ । ಜ್ಯಾಸೀ ತುಷ್ಟೋನಿ ಶಾರಂಗಧರ । ದಾಖವೀ ನಿಜಶಾಂತೀಚೇ ಘರ । ನಿರಂತರ ವಸ್ತಿಲಸೀ ।।೯೩೨।। ಉದ್ಧವಾ ಐಕ ಸಾವಧಾನ । ಧನಲೋಭ್ಯಾಚೇ ನಾಸೋನಿ ಧನ । ತೋ ಧನನಾಶು ಝಾಲಾ ಪ್ರಸನ್ನ । ಕೇಲಾ ವಿವೇಕ ಸಂಪನ್ನ ವೈರಾಗೀ ।।೯೩೩।। ಜೋ ಧನಲೋಭೀ ನ ಖಾತಾ । ಜ್ಯಾಚೇನಾಂವ ನ ಘೇತೀ ಸರ್ವಥಾ । ತೋಚಿ ವೈರಾಗ್ಯೇ ಕೇಲಾ ಸರತಾ । ಮಾಝೇ ಮುಖೀ ಕಥಾ ತಯಾಚೀ ।।೯೩೪।। ತ್ಯಾಚೇ ನಾಮ ಮಾಝೇ ಮುಖೀ ಜಾಣ । ತ್ಯಾಚೇ ಕರ್ಮ ವರ್ಣೀ ಮೀ ಆಪಣ । ತೊ ಮಜ ಪಢಿಯಂತಾ ಜಾಣ । ಜೋ ವಿವೇಕಸಂಪನ್ನ ವೈರಾಗೀ ।।೯೩೫।। ವೈರಾಗ್ಯಾಪರತೇ ಭಾಗ್ಯಥೋರ । ಜಗೀ ನಾಹೀ ಆನ ಸಧರ । ವಿವೇಕವೈರಾಗ್ಯೇ ಜೋ ಸಾಚಾರ । ತೋ ಮಾಝೇ ಜಿವ್ಹಾರ ಉದ್ಧವಾ ।।೯೩೬।। ಜೋ ವಿವೇಕವೈರಾಗ್ಯೇ ಆಥಿಲಾ । ತೋ ಜಾಣ ಮಜಮಾಜೀ ಆಲಾ । ಮೀ ಆಧೀನ ತ್ಯಾಚಿಯಾ ಬೋಲಾ । ತೋ ಮಜ ವಿಕಲಾ ಸರ್ವಸ್ವೇ ।।೯೩೭।। ಲೋಭ್ಯಾಚೇ ನಿಃಶೇಷ ಗೇಲೇ ಧನ । ಧನಾಸವೇ ಗೇಲೇ ಮಾನಾಭಿಮಾನ । ಅಭಿಮಾನಾಸವೇ ಜಾಣ । ಗೇಲೇ ದ್ವಂದ್ವ ದಾರುಣ ಸುಖದುಃಖ ।।೯೩೮।।

ಧನ ಜಾತಾ ಝಾಲೀ ವಿರಕ್ತೀ । ತೇಣೇ ನೇಮಸ್ತ ಝಾಲಾ ಯತೀ । ಭಿಕ್ಷಾರ್ಥ ಹಿಂಡತಾ ಕ್ಷಿತೀ । ದುರ್ಜನೀ ದುರುಕ್ತೀ ನಿರ್ಭರ್ತ್ಸಿಲಾ ।।೯೩೯।। ಪೀಡಿತಾ ನಾನಾ ವಿಕಾರೀ । ಉಪದ್ರವಿತಾ ನಾನಾಪರೀ । ನ ಡಂಡಳೀಚ ನಿಜ

ಈ ಪ್ರಕಾರವಾಗಿ ಆ ಯಾವ ಭಿಕ್ಷು ಈ ರೀತಿಯಲ್ಲಿ ಗೀತವನ್ನು ಹಾಡಿದ್ದಕ್ಕೆ ಇದು ಶ್ರೀಕೃಷ್ಣನಿಗೆ ಬಹಳ ಪ್ರಿಯವಾಯಿತು. ಆ ಸಮಯದಲ್ಲಿ ಅಂತಃಕರಣದಲ್ಲಿನ ಆನಂದವು ಉಕ್ಕೇರಿ ಪ್ರಕಟವಾಯಿತು. ಆಗ ಆತನು ಉದ್ಧವನ ಮಸ್ತಕಕ್ಕೆ ಚಪ್ಪರಿಸಿದನು ।।೯೨೯।। ಹೀಗಿರುವ ಆತ್ಮ ಶಾಂತಿಯು ನನ್ನ ಉದ್ಧವನಿಗೆ ಪ್ರಾಪ್ತವಾಗಬೇಕೆಂದು ಶ್ರೀಕೃಷ್ಣನ ಅಂತಃಕರಣದಲ್ಲಿ ಕಳಕಳಿಯು ನಿರ್ಮಾಣವಾಯಿತು. ಆ ಸಮಯದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಏನು ಹೇಳಿದನೆಂಬುವುದನ್ನು ಈಗ ಕೇಳಿರಿ ।।೯೩೦।।

ಯಾರ ಉಸುರಿನಲ್ಲಿ ವೇದವು ನಿರ್ಮಾಣವಾಯಿತೋ, ಯಾರ ಚರಣಕಮಲಗಳಿಂದ ಪ್ರಸಿದ್ಧಳಾದ ಗಂಗೆಯು ಪ್ರಕಟಳಾದಳೋ, ಯಾರ ನಾಮದಿಂದ ಭವ ಬಂಧನವು ಛೇದಗೊಳ್ಳುವುದೋ, ಅಂತಹ ಶ್ರೀಕೃಷ್ಣನು ತನ್ನ ಸ್ವಮುಖದಿಂದ ಉದ್ಧವನಿಗೆ ಹೇಳಹತ್ತಿದನು. ।।೯೩೧।। ಈ ಕಾರಣದಿಂದ ಉದ್ಧವನನ್ನು ಮಹಾ ಭಾಗ್ಯವಂತನೆಂದು ತಿಳಿಯಬೇಕು. ಏಕೆಂದರೆ ಆತನಮೇಲೆ ಶ್ರೀಹರಿಯು ಸಂತುಷ್ಟನಾಗಿ ಆತ್ಮ ಶಾಂತಿಯ ಮನೆಯನ್ನು ಆತನಿಗೆ ಸ್ಥಿರವಾಗಿ ವಾಸ್ತವ್ಯ ಮಾಡಲು ತೋರಿಸಿಕೊಡುತ್ತಿರುವನು ।।೯೩೨।। ಹೇ ಉದ್ಧವಾ, ನೀನು ಲಕ್ಷ ಕೊಟ್ಟು ಇದನ್ನು ಕೇಳು. ಧನಲೋಭಿಯ ಧನವು ನಷ್ಟಗೊಳ್ಳಲು, ಆ ಧನನಾಶವೇ ಆ ಧನಲೋಭಿಯಮೇಲೆ ಪ್ರಸನ್ನವಾಯಿತು ಮತ್ತು ಆತನನ್ನು ವಿವೇಕಸಂಪನ್ನನಾದ ವೈರಾಗಿಯನ್ನಾಗಿ ಮಾಡಿತು ।।೯೩೩।। ಯಾವ ಈ ಧನಲೋಭಿಯು ತನ್ನ ಹೊಟ್ಟೆಗೂ ಕೂಡ ಸಾಮಾನ್ಯವಾಗಿ ತಿನ್ನುತ್ತಿದ್ದಿಲ್ಲ. ಯಾರೂ ಕೂಡ ಆತನ ಹೆಸರು ತೆಗೆದುಕೊಳ್ಳುತ್ತಿದ್ದಿಲ್ಲ. ಹೀಗಿದ್ದ ಅದೇ ವ್ಯಕ್ತಿಯು ಪರಿಪೂರ್ಣವಾಗಿ ವಿರಕ್ತನಾಗುತ್ತಲೇ ನನ್ನ ಮುಖದಿಂದ ಆತನ ಕಥೆಯು ಹೊರಡಿತು ।।೯೩೪।। ಮತ್ತು ಆತನ ನಾಮವು ನನ್ನ ಮುಖದಲ್ಲಿ ಬಂದಿತು. ಆತನ ಕೃತಿಯ ವಿಷಯವನ್ನು ಕುರಿತು ನಾನು ಸ್ವತಃ ವರ್ಣನೆಯನ್ನು ಮಾಡುತ್ತಿರುವೆನು. ಆತನು ವಿವೇಕಸಂಪನ್ನ ವಿರಕ್ತನಾಗುತ್ತಲೇ ನನಗೆ ಅತ್ಯಂತ ಪ್ರಿಯನಾದನು ।।೯೩೫।। ವೈರಾಗ್ಯದಂತಹ ಅನ್ಯ ಭಾಗ್ಯವು ಜಗತ್ತಿನಲ್ಲಿರುವುದಿಲ್ಲ. ಹೇ ಉದ್ಧವಾ, ಯಾರು ನಿಜವಾಗಿಯೂ ವಿವೇಕಯುಕ್ತವಾದ ವೈರಾಗ್ಯದಿಂದ ಯುಕ್ತನಾಗುವನೋ ಆತನು ನನ್ನ ಜೀವ, ಪ್ರಾಣನಾಗುವನು ।।೯೩೬।। ಯಾವನು ವಿವೇಕ ವೈರಾಗ್ಯಸಂಪನ್ನನಾಗುವನೋ, ಆತನು ನನ್ನಲ್ಲಿ ಪ್ರವೇಶ ಮಾಡಿದನೆಂದು ತಿಳಿಯಬೇಕು. ಆತನ ಶಬ್ದದಲ್ಲಿ ನಾನು ಆಧೀನನು. ಆತನೂ ಕೂಡ ತನ್ನನ್ನು ನನ್ನಲ್ಲಿ ಸರ್ವಸ್ವದಿಂದ ಮಾರಿಕೊಂಡಿರುವನು ।।೯೩೭।। ಆ ಲೋಭಿಯಾದ ಮನುಷ್ಯನ ಸರ್ವ ದ್ರವ್ಯವು ನಾಶವಾಯಿತು. ಆ ದ್ರವ್ಯದ ಜೊತೆಯಲ್ಲಿ ಆತನ ಮಾನಾಭಿಮಾನವೂ ಕೂಡ ನಾಶವಾಯಿತು ಮತ್ತು ಅಭಿಮಾನದ ಜೊತೆಯಲ್ಲಿ ದ್ವಂದ್ವದಿಂದಾಗುವ ಭಯಂಕರ ಸುಖದುಃಖಗಳೂ ಕೂಡ ನಾಶವಾದವು ।।೯೩೮।।

ನಿರ್ಧಾರೀ । ಸ್ವಧರ್ಮಧೈರ್ಯ ಕರೀ ನಿರ್ದ್ವಂದ್ವ ॥೯೪೦॥ ಸನ್ಯಾಶಾಚಾ ಸ್ವಧರ್ಮ ಪೂರ್ಣ । ಮೀ ದೇಹಾತೀತ ನಾರಾಯಣ । ಸಾಚಾರ ಹರವಿಲಾ ದೇಹಾಭಿಮಾನ । ಯಾಲಾಗೀ ಜಾಣ ನ ಡಂಡಳೀ ॥೯೪೧॥ ಜೇವೀ ಛಾಯೇಸೀ ಲಾಗತಾ ಘಾವೋ। ಪುರುಷಾಸೀ ನಾಹೀ ಭಯಸಂದೇಹೋ । ತೇವೀ ದುರ್ಜನೀ ದಂಡಿತಾ ದೇಹೋ । ನಾಹೀ ದುಃಖಭೇವೋ ನಿರಹಂಕಾರಾ ॥೯೪೨॥ ದೇಹಾಸೀ ಹೋತಾ ನಾನಾ ವ್ಯಥಾ । ಆಪುಲೀ ಜೇ ದೇಹಾತೀತತಾ । ತೇಚಿ ಭಿಕ್ಷೂನೇ ಗಾಯಿಲೀ ಗಾಥಾ । ತೇ ತುಜ ಮ್ಯಾ ಆತಾ ನಿರೂಪಿಲೀ ॥೯೪೩॥ ಯೇಥ ಸುಖದುಃಖಾಂಸೀ ಕಾರಣ । ಆಪಲಾ ಭ್ರಮ ಆಪಣಾ ಜಾಣ । ಯೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೯೪೪॥

ಸುಖದುಃಖಪ್ರದೋ ನಾನ್ಯಃಪುರುಷಸ್ಯಾತ್ಮ ವಿಭ್ರಮಃ । ಮಿತ್ರೋದಾಸೀನರಿಪವಃ ಸಂಸಾರಸ್ತಮಸಃ ಕೃತಃ ॥೬೦॥

ಅರ್ಥ:- ಹೇ ಉದ್ಧವಾ, ಈ ಜಗತ್ತಿನ ಮಾನವನಿಗೆ ಬೇರೆ ಯಾರೂ ಸುಖದುಃಖಗಳನ್ನು ಕೊಡಲಾರರು. ಅದು ಆತನ ಚಿತ್ತದಲ್ಲಿನ ಭ್ರಮೆಯಾಗಿರುವುದು. ಉದಾಸೀನ, ಶತ್ರು ಹೀಗೆ ಈ ಎಲ್ಲ ಸಂಸಾರವು ಅಜ್ಞಾನದಿಂದ ಕೇವಲ ಮನಸ್ಸಿನ ವಿಭ್ರಮೆಯು ಮಾಡಲ್ಪಟ್ಟಿರುವುದು.

ಆವಿದ್ಯಕ ಜೇ ನಿಜಅಜ್ಞಾನ । ತೇಥೇ ಮನಪಣೇ ಉಠೀ ಮನ । ಮನೇ ಭೇದ ಕರೂನಿಯಾ ಪೂರ್ಣ । ಸುಖದುಃಖೇ ಜಾಣ ಭೋಗವೀ ॥೯೪೫॥ ಆತ್ಮಾ ಕೇವಳ ಭೇದಶೂನ್ಯ । ತೇಥ ಶತ್ರು ಮಿತ್ರ ಉದಾಸೀನ । ಮನೇ ಕಲ್ಪೂನಿಯಾ ಜಾಣ । ಮನ ಸಂಪೂರ್ಣ ಸ್ವಯೇ ಚಾಳೀ ॥೯೪೬॥ ಐಸೇ ಭೇದೀ ಠಸಾವಲೇ ಮನ । ತೇಚಿ ಪುರುಷಾಚೇ ಅಜ್ಞಾನ । ತೇಣೇ ದ್ವಂದ್ವದುಃಖೇಸೀ ಜಾಣ । ಸಂಸಾರ ದಾರುಣ ಸಭ್ರಾಂತಾ ॥೯೪೭॥ ಮನ ಸುಖದುಃಖಾಂಸೀ ಕಾರಣ । ಮನಃಕಲ್ಪಿತ ಸಂಸಾರ ಜಾಣ । ತ್ಯಾ ಮನಾಚೇ ನಿಗ್ರಹಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೯೪೮॥

ತಸ್ಮಾತ್ಸರ್ವಾತ್ಮನಾ ತಾತ ನಿಗೃಹಾಣಾ ಮನೋ ದಿಯಾ । ಮಯ್ಯಾವೇಶಿತಯಾ ಯುಕ್ತ ಏತಾವಾನ್ ಯೋಗಸಂಗ್ರಹಃ ॥೬೧॥

ಅರ್ಥ:- ಪ್ರಿಯ ಉದ್ಧವಾ, ನಿನ್ನ ಸರ್ವ ವೃತ್ತಿಯನ್ನು ನನ್ನಲ್ಲಿ ಅರ್ಪಣೆಯನ್ನು ಮಾಡು. ನಿನ್ನ ಸರ್ವಶಕ್ತಿಯನ್ನು ಒಂದುಮಾಡಿ ಮನಸ್ಸನ್ನು ವಶಗೊಳಿಸು ಮತ್ತು ನನ್ನಲ್ಲಿ ನಿತ್ಯ ಸ್ಥಿರಮಾಡು. ಇದು ಸರ್ವಯೋಗಸಾಧನೆಯ ಸಾರವಾಗಿದೆ.

ಜೋ ನಾಸೂ ಪಾಹೇ ಸಂಸಾರದುಃಖ । ತೇಣೇ ಮನ ನೇಮಾವೇ ಆವಶ್ಯಕ । ಮನಾವೇಗಳೇ ದುಃಖ ದಾಯಕ । ನಾಹೀ ಆಣಿಕ ತ್ರಿಲೋಕೀ ॥೯೪೯॥ ಮನ ಅತಿಶಯೇ ಚಂಚಳ । ತೇ ಸಹಸಾ ನವ್ಹೇ ನಿಶ್ಚಳ । ತ್ಯಾಸೀ

ದ್ರವ್ಯ ನಾಶವಾಗುತ್ತಲೇ ವಿರಕ್ತಿಯು ನಿರ್ಮಾಣವಾಯಿತು. ಆದ್ದರಿಂದ ಆತನು ನೇಮನಿಷ್ಠ ಸನ್ಯಾಸಿಯಾದನು. ಭಿಕ್ಷೆಗಾಗಿ ಭೂಮಿಯಲ್ಲಿ ತಿರುಗಾಡುತ್ತಿರಲು ದುರ್ಜನರು ಆತನನ್ನು ಬಹುವಾಗಿ ಪೀಡಿಸಿದರು ॥೯೩೯॥ ಅನೇಕರು ಅನೇಕ ಪ್ರಕಾರಗಳಿಂದ ಪೀಡೆಯನ್ನು ಕೊಟ್ಟರು. ನಾನಾ ಪ್ರಕಾರಗಳ ಉಪದ್ರವವನ್ನು ಕೊಟ್ಟರು. ಆದರೂ ಕೂಡ ಆತನು ತನ್ನ ಶಾಂತಿಯಿಂದ ಸ್ವಲ್ಪವೂ ಸಹ ಕದಲಲಿಲ್ಲ. ಸ್ವಧರ್ಮದ ಧೈರ್ಯದಿಂದ ಆತನು ನಿರ್ದ್ವಂದ್ವನಾದನು ॥೯೪೦॥ ನಾನು ದೇಹದಿಂದ ಭಿನ್ನನಾಗಿರುವ ನಾರಾಯಣ ಸ್ವರೂಪನು ಎಂದು ತಿಳಿಯುವುದೇ ಸನ್ಯಾಸಿಯ ಸ್ವಧರ್ಮವಾಗಿರುವುದು. ಈ ಯಾವ ಜ್ಞಾನದಿಂದ ನಿಜವಾಗಿಯೂ ಆತನು ದೇಹದ ಅಭಿಮಾನವನ್ನು ತ್ಯಜಿಸಿಬಿಟ್ಟಿದ್ದನು ॥೯೪೧॥ ಯಾವ ಪ್ರಕಾರವಾಗಿ ತನ್ನ ನೆರಳಿನ ಮೇಲೆ ಶಸ್ತ್ರದ ಹೊಡೆತ ಹಾಕಲು ಅದರಿಂದ ಆ ಪುರುಷನಿಗೆ ಭಯದ ಸಂಶಯವು ಉಂಟಾಗುವುದಿಲ್ಲವೋ, ಅದರಂತೆ ದೇಹಕ್ಕೆ ದುರ್ಜನರು ಎಷ್ಟೇ ದಂಡಿಸಲಿ, ನಿರಹಂಕಾರಿ ಮನುಷ್ಯನಿಗೆ ದುಃಖದ ಭಯವಾಗುವುದಿಲ್ಲ ॥೯೪೨॥ ದೇಹಕ್ಕೆ ಅನೇಕ ಪ್ರಕಾರದ ದುಃಖವಾಗುತ್ತಿದ್ದರೂ ಕೂಡ ತಾನು ದೇಹದಿಂದ ಭಿನ್ನನಾಗಿರುವೆನು ಎಂಬ ಭಾವನೆಯನ್ನು ಇಟ್ಟುಕೊಂಡು ಭಿಕ್ಷು ಯಾವ ಗೀತೆಯನ್ನು ಹಾಡಿದನೋ, ಅದನ್ನು ನಾನೀಗ ನಿನಗೆ ಹೇಳಿದೆನು ॥೯೪೩॥ ತನ್ನ ಭ್ರಮೆಯೇ ತನಗೆ ದುಃಖಕ್ಕೆ ಕಾರಣವಾಗುವುದು ಎಂಬ ಈ ಅರ್ಥದಿಂದ ಸ್ವತಃ ಶ್ರೀಕೃಷ್ಣನು ಈಗ ನಿರೂಪಣೆಯನ್ನು ಮಾಡುವನು ॥೯೪೪॥

ಅವಿದ್ಯೆಯಿಂದ ಉತ್ಪನ್ನವಾಗಿರುವ ಯಾವ ಆತ್ಮ ವಿಷಯದ ಅಜ್ಞಾನವೇ ಮನಸ್ಸಿನ ರೂಪದಿಂದ ಪ್ರಕಟವಾಗುವುದು. ಭೇದವನ್ನು ಹುಟ್ಟಿಸಿ ಸುಖದುಃಖಗಳನ್ನು ಭೋಗಿಸಲು ಹಚ್ಚುವುದು ॥೯೪೫॥ ಆತ್ಮವು ಇದು ಕೇವಲ ಭೇದರಹಿತವಾಗಿರುವುದು. ಅದರಲ್ಲಿ ಶತ್ರು, ಮಿತ್ರ, ಉದಾಸೀನವೆಂಬ ಭೇದಗಳನ್ನು ಮನಸ್ಸೇ ಕಲ್ಪಿಸಿ ಇದನ್ನು ಮನಸ್ಸೇ ನಡೆಸುತ್ತಿರುವುದು ॥೯೪೬॥ ಈ ಪ್ರಕಾರದ ಭೇದಗಳಲ್ಲಿ ಮನವು ಸಿಲುಕಿಕೊಂಡಿರುವುದೇ ಪುರುಷನ ಅಜ್ಞಾನವಾಗಿರುವುದು. ಈ ಪ್ರಕಾರದ ಭ್ರಾಂತನಾಗಿರುವ ಮನುಷ್ಯನಿಗೆ ಈ ದ್ವಂದ್ವದುಃಖಗಳಿಂದ ಸಂಸಾರವು ಭಯದಾಯಕವಾಗುತ್ತಿರುವುದು ॥೯೪೭॥ ಈ ಮನಸ್ಸೇ ಸುಖದುಃಖಗಳಿಗೆ ಕಾರಣವಾಗಿದೆ ಮತ್ತು ಸಂಸಾರವೂ ಕೂಡ ಇದು ಮನೋಕಲ್ಪಿತವಾಗಿದೆ. ಇದನ್ನು ಲಕ್ಷದಲ್ಲಿರಲಿ. ಇಂತಹ ಈ ಮನಸ್ಸಿನ ನಿಗ್ರಹವನ್ನು ಹೇಗೆ ಮಾಡಬೇಕೆಂಬುವುದನ್ನು ಈಗ ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೯೪೮॥

ವಿವೇಕ ದ್ಯಾವಾ ಮೋಕಳ। ಅಭೇದಶೀಲ ಅಹರ್ನಿಶೀ।।೯೫೦।। ಮನ ಸಿಂತರೀಲ ವಿವೇಕಾಸೀ। ಯಾಲಾಗೀ ಹಾತ ಕಡಿಯಾ ದೋಹೀಂಸೀ । ಕರೂನಿಯಾ ಅಹರ್ನಿಶೀ । ಯೇರಯೇರಾಪಾಶೀ ರಾಖಾವೀ ।।೯೫೧।। ಮನ ಜೇಥ ವಿಕಲ್ಪೂ ಧಾಂವೇ। ತೇಥ ಮಹಾಮಾರೀ ವಿವೇಕೂ ಪಾವೇ । ಮನ ಜೇಥ ಅಧರ್ಮೇ ಸಂಭವೇ । ತೇಥ ವಿವೇಕ ಧಾಂವೇ ಹಾಂಕಿತ।।೯೫೨।। ಮನ ಜಾಯ ಕಾಮಕ್ರೋಧಾಪಾಶೀ। ವಿವೇಕ ಓಢೀ ಧರೋನಿ ಕೇಶೀ । ಮನ ರಿಘತಾ ನಿಂದೇಪಾಶೀ । ವಿವೇಕ ತ್ಯಾಸೀ ಬುಕಾಲೀ ।।೯೫೩।। ಮನ ಮ್ಹಣೇ ವಿಷಯ ಸುಟೀ । ವಿವೇಕ ಹಾಣೇ ವೈರಾಗ್ಯ ಕಾಠೀ । ಮನ ಧಾಂವತಾ ಕಲ್ಪನೇಪಾಠೀ । ವಿವೇಕ ಉಠಾಉಠೀ ಝೋಂಟಾಳೀ ।।೯೫೪।। ಪರದಾರಾ ಪರಧನ । ಅಭಿಲಾಷೂ ಧಾಂವೇಮನ। ತೇಥ ವಿವೇಕ ಪಾವೋನ। ರಣಕಂದನ ಆರಂಭೀ।।೯೫೫।। ಐಸಾ ಮನಾ-ವಿವೇಕಾಂಚಾ ಝಗಡಾ। ಗಾರ್ಹಾಣೇ ಆಲೇ ಸದ್ಗುರುಪುಢಾ। ತೇಣೇ ಕರಾವಯಾ ನಿವಾಡಾ। ಅದ್ವೈತವಾಡಾ ಕೋಂಡಿಲೀ ।।೯೫೬।। ತೋ ದೃಷ್ಟೀ ದೇಖತಾಂಚಿ ಠಾವೋ । ಮನಾಚಾ ಮೋಡಲಾ ಸ್ವಭಾವೋ । ದೋಹೀಂಚಾ ಸಾಂಡೋನಿ ಅಹಂಭಾವೋ । ವಿವೇಕೇಸೀ ಪಹಾ ಹೋ ಐಕ್ಯ ಕೇಲೇ ।।೯೫೭।। ತೇಥ ಮನಾಚೇ ಗೇಲೇ ಮನಪಣ। ವಿವೇಕ ವಿಸರಲಾ ಆಕಳಣ। ಜೀವಾಚೇ ವಿರಾಲೇ ಜೀವಪಣ। ವಸ್ತು ಸಂಪೂರ್ಣ ಅದ್ವಯೇ।।೯೫೮।। ಜೇವೀ ಸುವರ್ಣಾಚೇ ನಾಗಭೂಷಣೇ। ಫಡಾ ಪುಚ್ಛ ಮಿರವೀ ನಾಗಪಣೇ। ತೇ ನ ಮೋಡಿತಾ ನಾಗತ್ವಾಚೇ ಲೇಣೇ। ಸೋನೇ ಸೋನೇಪಣೇ ನಾಗತ್ವ ವಿಸರೇ।।೯೫೯।। ತೇವೀ ಜಾಣೋನಿ ವಸ್ತು ಪೂರ್ಣ। ನ ಮೋಡಿತಾ ಜಗ ಜಾಣ। ಜೀವ ವಿಸರಲಾ ಜೀವಪಣ। ಮನತ್ವಾ ಮನ ಮೂಕಲೇ।।೯೬೦।। ಐಶಿಯಾ ವಿವೇಕಯುಕ್ತಿ ಜಾಣ। ಮಾಝೇ ಸ್ವರೂಪೀ ಪ್ರವೇಶೇ ಮನ। ಜೇಥ ಮನಪಣೇ ನುಠೀ ಮನ। ಮನೋನಿಗ್ರಹಣ ಯಾ ನಾಂವ ।।೯೬೧।। ಐಕ ಚುತುರಚಿತ್ತಚಿಂತಾಮಣೀ । ವಿವೇಕ ಚಕ್ರವರ್ತಿಚೂಡಾಮಣೀ । ಉದ್ಧವಾ ಭಕ್ತಶಿರೋಮಣೀ । ಮನೋನಿಗ್ರಹಣೀ ಪ್ರವರ್ತ ।।೯೬೨।।

ಆವಡೀ ಭುಲಲಾ ಕೃಷ್ಣನಾಥ । ತೋ ಉದ್ಧವಾಸೀ ಮ್ಹಣೇ ತಾತ । ಮನೋನಿಗ್ರಹೀ ತೂ ಏಥ । ಹೋಈ ಸಾಕ್ಷೇಪಯುಕ್ತ ಸಾದರ ।।೯೬೩।। ಸಾಕ್ಷೇಪೇ ನಿಗ್ರಹೂನಿ ಮನಾಸೀ । ಜೋ ಸಾಂಡವೀ ಮನೋಜನ್ಯ ಭೇದಾಸೀ

ಯಾರಿಗೆ ಸಂಸಾರದುಃಖಗಳ ನಾಶವನ್ನು ಮಾಡಬೇಕೆಂದು ಬಯಕೆಯಾದರೆ ಆತನು ಮನಸ್ಸನ್ನು ಅವಶ್ಯವಾಗಿ ನಿಯಂತ್ರಿಸಬೇಕು. ಸರ್ವ ತ್ರೈಲೋಕ್ಯದಲ್ಲಿ ಮನಸ್ಸನ್ನು ಬಿಟ್ಟರೆ ಅನ್ಯರಾರೂ ದುಃಖವನ್ನು ಕೊಡುವವರಾಗಿರುವುದಿಲ್ಲ ।।೯೪೯।। ಈ ಮನಸ್ಸು ಅತ್ಯಂತ ಚಂಚಲವಾಗಿರುವುದು. ಅದು ಎಂದಿಗೂ ಸಹಸಾ ನಿಶ್ಚಲವಾಗಿ ಇರುವುದಿಲ್ಲ. ಆದ್ದರಿಂದ ವಿವೇಕದಿಂದ ದೇಹಭಾವವನ್ನು ಇಲ್ಲದಾಗಿ ಮಾಡಿ ಮನಸ್ಸಿಗೆ ಹಗಲು ರಾತ್ರಿ ಸ್ವಾಧೀನದಲ್ಲಿಟ್ಟುಕೊಳ್ಳಬೇಕು ।।೯೫೦।। ಈ ಮನಸ್ಸು ವಿವೇಕಕ್ಕೆ ತಪ್ಪಿಸಿಕೊಳ್ಳುತ್ತಿರುವುದು. ಆದ್ದರಿಂದ ಈ ಇಬ್ಬರನ್ನೂ ಕೈಗಳಿಗೆ ಬೇಡಿಯನ್ನು ತೊಡಿಸಿ ಹಗಲು ರಾತ್ರಿ ಒಬ್ಬರಿಂದೊಬ್ಬರು ಅಗಲದಂತೆ ಕಾಯುತ್ತಿರಬೇಕು ।।೯೫೧।। ಮನಸ್ಸು ವಿಕಲ್ಪ ಮಾಡಲು ಧಾವಿಸಿದರೆ ಆಗ ವಿವೇಕವು ಅಲ್ಲಿ ನಿಂತು ಬಿಡಿಸುವುದು. ಮನಸ್ಸು ಅಧರ್ಮ ಕಾರ್ಯಕ್ಕೆ ಕೈಹಾಕುತ್ತಲೇ ಆಗ ವಿವೇಕವು ಧಾವಿಸುತ್ತ ಅದರಿಂದಲೂ ತಪ್ಪಿಸುವುದು ।।೯೫೨।। ಯಾವ ಈ ಮನಸ್ಸು ಕಾಮಕ್ರೋಧಗಳ ಜೊತೆಯಲ್ಲಿ ಕುಳಿತುಕೊಂಡರೆ ಆಗ ವಿವೇಕವು ಅದರ ಕೂದಲುಗಳನ್ನು ಹಿಡಿದು ಹಿಂದಕ್ಕೆ ಜಗ್ಗುವುದು. ಮನಸ್ಸು ನಿಂದೆಯ ಹತ್ತಿರ ಹೋಗಲು ಆಗ ವಿವೇಕವು ಅದಕ್ಕೆ ಚೆನ್ನಾಗಿ ಥಳಿಸುವುದು ।।೯೫೩।। "ನಾನು ವಿಷಯಗಳತ್ತ ಹೋಗುವೆ" ಹೀಗೆಂದು ಮನಸ್ಸು ಹೇಳುವುದೊಂದೇ ತಡ, ಕೂಡಲೆ ಅದರ ಬೆನ್ನಿಗೆ ವೈರಾಗ್ಯದ ಕೋಲಿನಿಂದ ವಿವೇಕವು ಬಾರಿಸುವುದು. ಮನಸ್ಸು ಕಲ್ಪನೆಗಳ ಬೆನ್ನು ಹತ್ತಿದರೆ ಆಗ ವಿವೇಕವು ಅಲ್ಲಿಂದ ಹಿಂದಕ್ಕೆ ತಳ್ಳುವುದು ।।೯೫೪।। ಪರದಾರಾ, ಪರಧನಗಳ ಅಭಿಲಾಷೆಯು ಮನಸ್ಸಿನಲ್ಲಿ ನಿರ್ಮಾಣವಾಗುತ್ತಲೇ ಆಗ ವಿವೇಕವು ಪ್ರಕಟವಾಗಿ ಅಲ್ಲಿ ಭಯಂಕರವಾಗಿ ಯುದ್ಧವನ್ನೇ ಆರಂಭಿಸುವುದು. ।।೯೫೫।। ಈ ಪ್ರಕಾರವಾಗಿ ಮನಸ್ಸು ಮತ್ತು ವಿವೇಕ ಇವರ ಸಂಘರ್ಷವು ನಡೆಯುತ್ತಿರಲು, ಇವರಿಬ್ಬರೂ ಸದ್ಗುರುಗಳಲ್ಲಿ ತಮ್ಮ ದೂರುಗಳನ್ನು ಹೇಳಲು ಬರುವರು. ಆಗ ಗುರುಗಳು ಇವರಿಗೆ ನ್ಯಾಯವನ್ನು ಒದಗಿಸುವುದಕ್ಕಾಗಿ ಅದ್ವೈತದ ವಾಡೆಯಲ್ಲಿ ಇವರಿರ್ವರನ್ನು ಕಟ್ಟಿಹಾಕುವರು ।।೯೫೬।। ಆಗ ವಿಚಾರ ದೃಷ್ಟಿಯಿಂದ ನೋಡುತ್ತಲೇ ಮನಸ್ಸಿನ ಸ್ವಭಾವವೇ ಇಲ್ಲದಾಗಿಬಿಡುವುದು. ಅದು ದೇಹದ ಅಭಿಮಾನವನ್ನು ಬಿಟ್ಟುಕೊಟ್ಟು ವಿವೇಕದಲ್ಲಿ ಐಕ್ಯವಾಗುವುದು ।।೯೫೭।। ಆಗ ಮನಸ್ಸಿನ ಮನತ್ವವು ಇಲ್ಲದಾಗುವುದು ಮತ್ತು ವಿವೇಕವು ಮನಸ್ಸನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳುವುದನ್ನು ಮರೆತುಬಿಡುವುದು. ಜೀವದ ಜೀವತ್ವವೂ ಕೂಡ ಇಲ್ಲದಾಗಿ ಅದ್ವೈತದ ಯೋಗದಿಂದ ಸಂಪೂರ್ಣವಾಗಿ ಪರಬ್ರಹ್ಮ ಸ್ವರೂಪವಾಗುವುದು ।।೯೫೮।। ಬಂಗಾರದ ಸರ್ಪವನ್ನು ಸಿದ್ಧಗೊಳಿಸಲು ಅದರ ಬಾಲ, ಹೆಡೆ ಇತ್ಯಾದಿ ಸರ್ವವೂ ಸರ್ಪದಂತೆಯೇ ಶೋಭಿಸುತ್ತಿರುವುದು. ಆದರೆ ಈ ಸರ್ಪಾಕಾರದ ಅಲಂಕಾರವನ್ನು ಮುರಿಯದಿದ್ದರೂ ಕೂಡ ಬಂಗಾರವು ತಾನು ಬಂಗಾರ ರೂಪದಲ್ಲಿಯೇ ಇರುವುದರಿಂದ ಅದಕ್ಕೆ ಸರ್ಪದ ಭಾನವೂ ಕೂಡ ಇರುವುದಿಲ್ಲ ।।೯೫೯।। ಅದರಂತೆ ಪರಿಪೂರ್ಣವಾದ ಆತ್ಮಸ್ವರೂಪವನ್ನು ತಿಳಿದುಕೊಳ್ಳಲು ಜಗತ್ತನ್ನು ಮುರಿಯದೇ ಜೀವವು ತನ್ನ ಜೀವತ್ವವನ್ನು ಮರೆಯುವುದು. ಮನಸ್ಸು ತನ್ನ ಮನತ್ವವನ್ನು ಬಿಟ್ಟುಕೊಡುವುದು ।।೯೬೦।। ಹೀಗೆ ವಿವೇಕದ ಯುಕ್ತಿಯಿಂದ ಮನಸ್ಸು ನನ್ನಲ್ಲಿ ಪ್ರವೇಶವನ್ನು ಮಾಡುವುದು. ಮನಸ್ಸು ತನ್ನ ಮನತ್ವದಿಂದ ಎದ್ದು ನಿಲ್ಲದಿದ್ದರೆ ಅದಕ್ಕೇನೇ ಮನೋನಿಗ್ರಹ ಎಂದು ಹೇಳುವರು ।।೯೬೧।। ಹೇ ಚತುರಚಿತ್ತ ಚಿಂತಾಮಣಿಯೇ, ವಿವೇಕ ಚಕ್ರವರ್ತಿ ಚೂಡಾಮಣಿಯೇ, ಹೇ ಭಕ್ತಶಿರೋಮಣಿ ಉದ್ಧವನೇ, ನೀನೀಗ ಮನೋನಿಗ್ರಹವನ್ನು ಮಾಡುವ ಪ್ರಯತ್ನ ಮಾಡು ।।೯೬೨।।

। ಶಾಂತಿ ಸಾಂಡೂ ನೇಣೇ ತ್ಯಾಸೀ । ಜೇವೀ ತಾನ್ಹ ಯಾಸೀ ಮಾಉಲೀ ॥೯೬೪॥ ನಿಜಶಾಂತೀ ಬಾಣಲ್ಯಾ ಶುದ್ಧ । ತ್ಯಾಸೀ ನ ಬಾಧೀ ಕೋಣೇ ದ್ವಂದ್ವ । ಹಾಚಿ ಯೋಗಸಂಗ್ರಹಹೋ ಪ್ರಸಿದ್ಧ । ಬೋಲಿಲೇ ಸಿದ್ಧ ಮಹಾಯೋಗೀ ॥೯೬೫॥ ಸಾಂಡೂನಿ ಸಂಸಾರಸ್ಫೂರ್ತೀ । ಚಿತ್ಸ್ವರೂಪೀ ಜಡೇ ವೃತ್ತೀ । ಜೀವ ಶಿವ ಏಕತ್ವ ಯೇತೀ । ಯೋಗಸಂಗ್ರಹಸ್ಥಿತೀ ಯಾ ನಾಂವ ॥೯೬೬॥ ಐಶಿಯಾ ಯೋಗಸಂಗ್ರಹಶಾಂತೀ । ಸಾಧಕಾ ದ್ವಂದ್ವೇ ನ ಬಾಧಿತೀ । ಹೇ ಅಸೋ ಜಯಾ ಭಿಕ್ಷುಗೀತಭಕ್ತೀ । ದ್ವಂದ್ವನಿರ್ಮುಕ್ತೀ ತಯಾ ಲಾಭೇ ॥೯೬೭॥

ಯ ಏತಾಂ ಭಿಕ್ಷುಣಾಂ ಗೀತಾಂ ಬ್ರಹ್ಮನಿಷ್ಠಾಂ ಸಮಾಹಿತಃ ।
ಧಾರಯನ್ ಶ್ರಾವಯನ್ ಶೃಣ್ವನ್ ದ್ವಂದ್ವೈರ್ನೈವಾಭಿಭೂಯತೇ ॥೬೧॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧ ತ್ರಿಯೋವಿಶಂತಿಸಮೋಧ್ಯಾಯಃ॥

ಅರ್ಥ:- ಈ ಯಾವ ಭಿಕ್ಷುಗೀತವೆಂದರೆ ಮೂರ್ತಿಮಂತವಾದ ಬ್ರಹ್ಮಜ್ಞಾನದ ನಿಷ್ಠೆಯಾಗಿರುವುದು. ಯಾವ ಪುರುಷನು ಇದನ್ನು ಏಕಾಗ್ರಚಿತ್ತದಿಂದ ಕೇಳುವನೋ, ಹೇಳುವನೋ ಅಥವಾ ಧರಿಸುವನೋ, ಆತನು ಸುಖದುಃಖಗಳ ಚಕ್ರದಲ್ಲಿ ಸಿಲುಕಿಕೊಳ್ಳುವುದಿಲ್ಲ.

ಸಾಧಾವಯಾ ಶಾಂತೀಚೀ ಪ್ರಾಪ್ತೀ । ಕೋಟಿಸಾಧನೇ ನ ಲಭೇ ಶಾಂತೀ । ಹಾ ಭಿಕ್ಷುಗೀತಾರ್ಥ ಧರಿತಾ ಚಿತ್ತೀ । ಶಾಂತಿ ಆಪೈತೀ ಸಾಧಕಾ ॥೯೬೮॥ ಯೋಗನಿಷ್ಠಾ ಬ್ರಹ್ಮಜ್ಞಾನ । ತೇ ಹೇ ಭಿಕ್ಷುಗೀತನಿರೂಪಣ । ಜೋ ಹೃದಯೀ ಧರೀ ಸಾವಧಾನ । ಶಾಂತಿ ಆಂದಣ ತಯಾಚೀ ॥೯೬೯॥ ಯೇ ಭಿಕ್ಷುಗೀತೇಚಾ ಗೀತಾರ್ಥೂ । ಜೋ ಜೀವೀ ಧರೀ ಸಮಾಹಿತೂ । ತ್ಯಾಸೀ ದ್ವಂದ್ವಾಚಾ ನ ಬಾಧೀ ಘಾತೂ । ಅತಿಶಾಂತೂ ನಿಜಬೋಧೇ ॥೯೭೦॥ ಭಿಕ್ಷುಗೀತಾರ್ಥೀ ಸಮಾಧಾನ । ಹೇ ಸಾಂಗತಾ ನವಲ ಕೋಣ । ಜೋ ಸಾದರೇ ಕರೀ ಶ್ರವಣ । ತ್ಯಾಸೀ ದ್ವಂದ್ವೇ ಜಾಣ ನ ಬಾಧಿತೀ ॥೯೭೧॥ ಪರದೇಶಾ ಗೇಲಾ ಬಹುತಕಾಳ ಭರ್ತಾ । ತ್ಯಾಚೇ ಪತ್ರ ಸಾದರ ಐಕೇ ಕಾಂತಾ । ತೈಶಿಯಾ ಅತಿಏಕಾಗ್ರತಾ । ಭಿಕ್ಷುಗೀತಾ ಐಕಾವೀ ॥೯೭೨॥ ನಿಘೋನಿ ಗೇಲಿಯಾ ಪುತ್ರಾಸೀ । ತ್ಯಾಚೀ ಶುದ್ಧಿ ಯೇ ಮಾತೇಪಾಶೀ । ಐಕೋನಿಯಾ ಉಣಖುಣೇಸೀ । ಚರಫಡೀ ಜೈಸೀ ವಿವ್ಹಳ ॥೯೭೩॥ ಶೀಜವಳ ಜ್ಯಾ ಸೋಯರ್‍ಯಾ ಅಸತೀ । ತ್ಯಾಹೀ ಸ್ನೇಹೇ ಕಳವಳತೀ । ಪರೀ ಮಾತಾ ಜೈಸೀ ತಳಮಳೀ ಚಿತ್ತೀ । ತೇ ಆಣಿಕಾಪ್ರತೀ ಅಸೇನಾ ॥೯೭೪॥ ತೈಸೇ ಭಿಕ್ಷುಗೀತಶ್ರವಣ । ಕರಿತಾ ದ್ರವೇ ಜ್ಯಾಚೇ ಮನ । ಜೋ ಸಾತ್ವಿಕೇ

ಶ್ರೀಕೃಷ್ಣನು ಪ್ರೇಮದಿಂದ ಮಾರು ಹೋಗಿ ಉದ್ಧವನಿಗೆ "ತಾತಾ" ಎನ್ನುತ್ತ ನೀನು ಆದರಪೂರ್ವಕವಾಗಿ ಮನೋನಿಗ್ರಹವನ್ನು ಸಾಧಿಸಲು ಸಿದ್ಧನಾಗು ಎಂದನು ॥೯೬೩॥ ತನ್ನ ಕೂಸನ್ನು ತಾಯಿಯು ಬಿಟ್ಟಗಲದಂತೆ ಆದರ ಪೂರ್ವಕವಾಗಿ ಮನೋನಿಗ್ರಹವನ್ನು ಮಾಡಿ ಅದರಿಂದಾಗುವ ಭೇದದ ತ್ಯಾಗ ಮಾಡಿದವರನ್ನು ಶಾಂತಿಯು ಬಿಟ್ಟಗಲುವುದಿಲ್ಲ ॥೯೬೪॥ ಒಮ್ಮೆ ಅಂತಃಕರಣದಲ್ಲಿ ಶುದ್ಧ ಶಾಂತಿಯು ಸ್ಥಿರವಾದರೆ ಸಾಕು ಆಗ ಯಾವುದೇ ದ್ವೈತವು ಬಾಧಿಸುವುದಿಲ್ಲ. ಇದೇ ಪ್ರಸಿದ್ಧವಾದ ಯೋಗಸಂಗ್ರಹವನ್ನು ಮಹಾಯೋಗಿಗಳು ಹೇಳಿರುವರು ॥೯೬೫॥ ಸಂಸಾರದ ಸ್ಫೂರ್ತಿಯನ್ನು ಸಾಯಿಸಿ ಆತ್ಮಸ್ವರೂಪದತ್ತ ವೃತ್ತಿಯನ್ನಿಡುವುದು ಮತ್ತು ಜೀವಶಿವರ ಐಕ್ಯಗೊಳಿಸುವುದಕ್ಕೆ ಯೋಗಸಂಗ್ರಹವೆಂದು ಕರೆಯುವರು ॥೯೬೬॥ ಈ ಪ್ರಕಾರದ ಯೋಗಸಂಗ್ರಹ ಸ್ಥಿತಿಯು ಪ್ರಾಪ್ತವಾಗುತ್ತಲೇ ಸಾಧಕನಿಗೆ ದ್ವಂದ್ವಗಳು ಬಾಧೆಯನ್ನು ಕೊಡಲಾರವು. ಇದು ಇರಲಿ ಭಿಕ್ಷುಗೀತದಲ್ಲಿ ಯಾರ ಭಕ್ತಿಯು ನೆಟ್ಟಿಕೊಳ್ಳುವುದೋ, ಅವರಿಗೆ ದ್ವಂದ್ವಗಳಿಂದ ಮುಕ್ತಿಯು ಲಭಿಸುವುದು ॥೯೬೭॥

ಶಾಂತಿಯ ಪ್ರಾಪ್ತಿಗಾಗಿ ಕೋಟ್ಯಾವಧಿ ಸಾಧನೆಗಳನ್ನು ಮಾಡಿದರೂ ಕೂಡ ಆ ಶಾಂತಿಯು ಲಭಿಸುವುದಿಲ್ಲ. ಆದರೆ ಈ ಯಾವ ಭಿಕ್ಷುಗೀತೆಯಲ್ಲಿನ ತತ್ವವನ್ನು ತಿಳಿದುಕೊಂಡರೆ ಸಾಧಕನಿಗೆ ಅಖಂಡವಾದ ಶಾಂತಿಯು ಪ್ರಾಪ್ತವಾಗುವುದು ॥೯೬೮॥ ಯೋಗನಿಷ್ಠೆ ಮತ್ತು ಬ್ರಹ್ಮಜ್ಞಾನ ಇದೇ ಈ ಭಿಕ್ಷುಗೀತೆಯ ನಿರೂಪಣೆಯಾಗಿರುವುದು. ಇದರಲ್ಲಿನ ತತ್ವವನ್ನು ಯಾವನು ತನ್ನ ಹೃದಯದಲ್ಲಿ ಧರಿಸುವನೋ, ಶಾಂತಿಯು ಆತನ ದಾಸಿಯಾಗುವುದು ॥೯೬೯॥ ಈ ಯಾವ ಭಿಕ್ಷುಗೀತೆಯಲ್ಲಿನ ಅರ್ಥವನ್ನು ಯಾವನು ತನ್ನ ಚಿತ್ತದಲ್ಲಿ ಏಕಾಗ್ರತೆಯಿಂದ ತಿಳಿದು ಧರಿಸುವನೋ, ಆತನಿಗೆ ದ್ವಂದ್ವದ ಪೀಡೆಯು ಎಂದಿಗೂ ಆಗಲಾರದು ಮತ್ತು ಆತ್ಮಜ್ಞಾನದಿಂದ ಆತನು ಅತ್ಯಂತ ಶಾಂತನಾಗಿರುವನು. ॥೯೭೦॥ ಭಿಕ್ಷುಗೀತೆಯ ಅರ್ಥವನ್ನು ತಿಳಿದಮೇಲೆ ಸಮಾಧಾನವು ದೊರಕುವುದರಲ್ಲಿ ಯಾವ ಆಶ್ಚರ್ಯವಿರುವುದು? ಯಾರು ಆದರದಿಂದ ಮತ್ತು ಪ್ರೇಮದಿಂದ ಇದನ್ನು ಶ್ರವಣಮಾಡುವರೋ, ಅವರಿಗೂ ಕೂಡ ದ್ವಂದ್ವವು ಬಾಧಿಸಲಾರದು. ॥೯೭೧॥ ಬಹಳ ದಿವಸಗಳ ಹಿಂದೆ ಪರದೇಶಕ್ಕೆ ಹೋಗಿರುವ ಪತಿಯಿಂದ ಬಂದ ಪತ್ರವನ್ನು ಪತಿವ್ರತೆ ಸ್ತ್ರೀಯಳು ಎಷ್ಟೊಂದು ಆದರ ಭಾವದಿಂದ ಓದಿಸಿ ಕೇಳುವಳೋ, ಅದರಂತೆಯೇ ಅತ್ಯಂತ ಏಕಾಗ್ರತೆಯಿಂದ ಭಿಕ್ಷುಗೀತೆಯನ್ನು ಕೇಳಬೇಕು ॥೯೭೨॥ ತನ್ನ ಮಗನು ಮನೆಯಿಂದ ಓಡಿ ಹೋಗಿರಲು ಆಗ ಆತನ ಎಲ್ಲ ದೃಷ್ಟಿಯಿಂದ ಶೋಧಮಾಡಿ ಯಾರಾದರೂ ಆ ತಾಯಿಗೆ ತಿಳಿಸಲು, ಆಗ ಓಡಿ ಹೋದ ಉದ್ದೇಶ ಇತ್ಯಾದಿ ಕೇಳಿ ಆಕೆಗೆ ಮನದಲ್ಲಿ ಅತ್ಯಂತ ತಳಮಳವಾಗುತ್ತ ಸಂಕಟಪಡುತ್ತಿರುವಳು ॥೯೭೩॥

ವೋಸಂಡೇ ಪೂರ್ಣ। ತೋ ದ್ವಂದ್ವಾಸೀ ಜಾಣ ನಾಟೋಪೇ।।೯೭೫।। ಅಸೋ ನವ್ಹೇ ಸಾದರೇ ಶ್ರವಣ । ತರೀ ಕರಿತಾ ಯಾಚೇ ನಿತ್ಯ ಪಠಣ। ಭಿಕ್ಷು ಗೀತಪ್ರತಾಪೇಕರೂನ। ದ್ವಂದ್ವೇ ಜಾಣ ನಾತಳತೀ ।।೯೭೬।। ಪಡತಾ ಪಂಚಾನನಾಚೀ ಘಾಣೀ। ಮದಗಜಾ ಹೋಯ ಮಹಾಪಳಣೀ। ತೇವೀ ಭಿಕ್ಷು ಗೀತಪಣೀ । ಹೋಯ ಭಂಗಣೀ ದ್ವಂದ್ವಾಂಚೀ ।।೯೭೭।। ನಿರ್ಲೋಭ ಹೋಊನಿ ಮಾನಸೀ । ಬೈಸೋನಿ ಸಾಧುಸಜ್ಜನಾಪಾಶೀ । ಜೋ ನಿರೂಪೀ ಭಿಕ್ಷು ಗೀತಾಸೀ । ದ್ವಂದ್ವೇ ತ್ಯಾಸೀ ನಾತಳತೀ ।।೯೭೮।। ಅರ್ಥೇ ಪಾಠೇ ಶ್ರವಣ ಕರಿತಾ । ದ್ವಂದ್ವೇ ನಿವಾರೀ ಭಿಕ್ಷು ಗೀತಾ । ಹೇ ವರ್ಮ ಕಳಲೇಸೇ ಶ್ರೀಕೃಷ್ಣನಾಥಾ। ತೋ ಸಾಂಗೇ ಹಿತಾರ್ಥ ಉದ್ಧವಾ।।೯೭೯।। ಜ್ಯಾ ಭಿಕ್ಷು ಗೀತಾಚಿ ಫಳಶ್ರುತೀ । ಸ್ವಮುಖೇ ಸಾಂಗತಾಹೇ ಶ್ರೀಪತೀ । ತ್ಯಾ ಭಿಕ್ಷೂಚೇ ಭಾಗ್ಯ ವಾನೂ ಕಿತೀ । ಧನ್ಯ ತ್ರಿಜಗತೀ ತೋ ಏಕ ।।೯೮೦।। ವಿವೇಕ ವೈರಾಗ್ಯ ಸಮರಸೀ। ಜೋ ಸಾಹೇ ಅತಿದ್ವಂದ್ವಾಸೀ। ತೋಚಿ ಪಢಿಯಂತಾ ಹೃಷೀಕೇಶೀ। ಹೇ ಉದ್ಧವಾಸೀ ದಾವಿಲೇ ।।೯೮೧।। ಜಗಾಸೀ ಉದ್ಧವಾಚಾ ಉಪಕಾರ । ಗುಹ್ಯ ಜ್ಞಾನ ಪರಾತ್ಪರ । ಉಘಡೂನಿ ಶ್ರೀಕೃಷ್ಣೇ ಭಾಂಡಾರ। ಭಿಕ್ಷು ಗೀತಸಾರ ಪ್ರಕಟಿಲೇ।।೯೮೨।। ಉದ್ಧವ ನ ಪುಸತಾ ಜೈ ಶಾಂತೀ। ತೈ ಹೇ ಕಾ ಸಾಂಗತಾ ಶ್ರೀಪತೀ । ಕೃಷ್ಣಾಸೀ ಉದ್ಧವಾಚೇ ಪ್ರೀತೀ । ತ್ಯಾಸೀ ನಾನಾ ಉಪಪತ್ತೀ ಉಪದೇಶೀ ।।೯೮೩।। ಹೇಚಿ ಜಡಜೀವಾ ಉದ್ಧರಣ । ಯೇಣೇ ಉಪಾಯೇ ತರತೀ ದೀನ । ಜಗ ತಾರಾವಯಾ ಜಗಜ್ಜೀವನ । ಉದ್ಧವಮಿಷೇ ಶ್ರೀಕೃಷ್ಣ ಬೋಲಿಲಾ।।೯೮೪।। ಶ್ರೀಕೃಷ್ಣ ಬೋಲಿಲಾ ಭಿಕ್ಷು ಗೀತ। ಜೇ ವೇದಶಾಸ್ತ್ರಾರ್ಥಮಥಿತ। ಉಪನಿಷದಾಂಚೇ ಸಾರಭೂತ । ವಾರ್ತಿಕಾಂತರ್ಗತ ರಹಸ್ಯ ।।೯೮೫।। ಯೇಣೇ ಆಪಆಪಣಿಯಾ ಆಪಣ । ಲಾಗತಾಹೇ ನಿಜಾತ್ಮಲಗ್ನ । ಹೇ ಜ್ಞಾನಾಚೇಹೀ ಗುಹ್ಯಜ್ಞಾನ । ಭಕ್ತಕೃಪೇ ಶ್ರೀಕೃಷ್ಣ ಬೋಲಿಲಾ ।।೯೮೬।।

ಯೇಣೇ ಜೀವಾಚೇ ಜೀವತ್ವ ಉಡೇ । ಶಿವಾಚೇ ಶಿವತ್ವಹೀ ಬುಡೇ । ದ್ವಂದ್ವಾಚೇ ಬಾಧಕತ್ವ ಮೋಡೇ । ಸ್ವಾನಂದಾಚೇ ಉಘಡೇ ಭಾಂಡಾರ ।।೯೮೭।। ವೇದೇ ಮೌನ ಧರಿಲೇ ಜೇಥ । ಸಶಬ್ದ ಶಾಸ್ತ್ರೇ ಲಾಜಲೀ ತೇಥ ।

ಅದೇ ಸಮಯದಲ್ಲಿ ಆಕೆಯ ಹತ್ತಿರ ಸಂಬಂಧಿಕರಾದ ಸ್ತ್ರೀಯರೂ ಕೂಡ ಇರುವರು. ಅವರೂ ಸಹ ಸ್ನೇಹದ ಕಾರಣ ತಳಮಳಿಸುವರು. ಆದರೆ ತಾಯಿಯು ಹೇಗೆ ಚಡಪಡಿಸುವಳೋ ಅಂತಹ ತಳಮಳವು ಇತರರ ಮನದಲ್ಲಿ ಇರುವದಿಲ್ಲ ।।೯೭೪।। ಅದರಂತೆ ಭಿಕ್ಷು ಗೀತೆಯ ಶ್ರವಣವನ್ನು ಮಾಡುತ್ತಿರಲು ಆಗ ಯಾರ ಮನವು ದ್ರವಿಭೂತವಾಗುವುದೋ ಮತ್ತು ಸಾತ್ವಿಕತೆಯಿಂದ ಪರಿಪೂರ್ಣವಾಗಿ ತುಂಬಿಬಿಡುವುದೋ ಆತನು ದ್ವಂದ್ವದ ಪೇಚಿನಲ್ಲಿ ಸಿಲುಕಿಕೊಳ್ಳಲಾರನು. ।।೯೭೫।। ಒಂದುವೇಳೆ ಇದರ ಶ್ರವಣವನ್ನು ಆದರದಿಂದ ಮಾಡುವದು ಸಾಧಿಸದಿದ್ದರೆ ಇದರ ಪಾರಾಯಣವನ್ನು ನಿತ್ಯದಲ್ಲಿ ಮಾಡುತ್ತಿರಬೇಕು. ಇದರಿಂದ ದ್ವಂದ್ವಗಳು ಈತನನ್ನು ಸ್ಪರ್ಶಕೂಡ ಮಾಡಲಾರವು ।।೯೭೬।। ಸಿಂಹದ ಅಂಗದಿಂದ ಅದರ ದರ್ಪವು ಹೊರಬೀಳುತ್ತಲೇ ಮದೋನ್ಮತ್ತ ಆನೆಯು ಓಡಲಾರಂಭಿಸುವುದು. ಅದರಂತೆಯೇ ಭಿಕ್ಷು ಗೀತೆಯ ಪಠಣೆಯಿಂದ ದ್ವಂದ್ವಗಳೂ ಕೂಡ ದಿಕ್ಕೆಟ್ಟು ಓಡುವುವು ।।೯೭೭।। ಯಾವನು ನಿರ್ಲೋಭ ಮನಸ್ಸಿನಿಂದ ಸಾಧುಸಂತರ ಜೊತೆಯಲ್ಲಿ ಕುಳಿತುಕೊಂಡು ಭಿಕ್ಷು ಗೀತೆಯನ್ನು ಶ್ರವಣ ಮಾಡಿದರೆ ಆತನಿಗೆ ದ್ವಂದ್ವಗಳು ಸ್ಪರ್ಶಕೂಡ ಮಾಡಲು ಸಾಧ್ಯವಾಗುವುದಿಲ್ಲ ।।೯೭೮।। ಭಿಕ್ಷು ಗೀತೆಯ ಅರ್ಥವನ್ನು ತಿಳಿದುಕೊಂಡರೆ, ಅದರ ಪಾರಾಯಣ ಮಾಡುತ್ತಿದ್ದರೆ, ಶ್ರವಣವನ್ನು ಮಾಡುತ್ತಿದ್ದರೆ ದ್ವಂದ್ವಗಳ ನಿವಾರಣೆಯಾಗುವುದೆಂಬ ಈ ಮರ್ಮವನ್ನು ಶ್ರೀಕೃಷ್ಣನಿಗೆ ತಿಳಿದಿತ್ತು. ಆದ್ದರಿಂದ ಆತನು ಉದ್ಧವನ ಹಿತಕ್ಕಾಗಿ ಇದನ್ನು ಹೇಳಿರುವನು ।।೯೭೯।। ಯಾವ ಭಿಕ್ಷು ಗೀತೆಯ ಫಲಶ್ರುತಿಯನ್ನು ಭಗವಾನ ಶ್ರೀಕೃಷ್ಣನು ತನ್ನ ಸ್ವಮುಖದಿಂದ ಹೇಳಬೇಕೆಂದರೆ ಆ ಭಿಕ್ಷುವಿನ ಭಾಗ್ಯವನ್ನು ಏನೆಂದು ವರ್ಣಿಸಬೇಕು ? ತ್ರಿಭುವನದಲ್ಲಿ ಆತನೇ ಧನ್ಯ ಧನ್ಯನಾಗಿರುವನು ।।೯೮೦।। ವಿವೇಕ ಮತ್ತು ವೈರಾಗ್ಯವನ್ನು ಪ್ರಾಪ್ತಮಾಡಿಕೊಂಡು ಮಹಾಮಹಾ ದ್ವಂದ್ವಗಳನ್ನು ಯಾರು ಸಹಿಸಿಕೊಳ್ಳುವರೋ ಅವರೇ ಭಗವಂತನಿಗೆ ಪ್ರಿಯರಾಗುವರು. ಇದನ್ನು ಉದ್ಧವನಿಗೆ ತೋರಿಸಿಕೊಟ್ಟನು ।।೯೮೧।। ಆದಕಾರಣ ಉದ್ಧವನಿಂದ ಈ ಜಗತ್ತಿಗೆ ಅತಿಶಯವಾದ ಉಪಕಾರವಾಗಿರುವುದು. ಈತನಿಗಾಗಿಯೇ ಶ್ರೀಕೃಷ್ಣನು ಪರಾತ್ಪರವಾದ ಗುಹ್ಯಜ್ಞಾನದ ಭಾಂಡಾರವನ್ನೇ ತೆರೆದು ಭಿಕ್ಷು ಗೀತಾಸಾರವನ್ನು ಪ್ರಕಟಮಾಡಿದನು ।।೯೮೨।। ಉದ್ಧವನು ಶಾಂತಿ ವಿಷಯವನ್ನು ಕುರಿತು ಪ್ರಶ್ನೆಯನ್ನು ಮಾಡದಿದ್ದರೂ ಕೂಡ ಶ್ರೀಕೃಷ್ಣನು ಈ ಕಥೆಯನ್ನು ಏತಕ್ಕಾಗಿ ಹೇಳಿರಬೇಕು? ಶ್ರೀಕೃಷ್ಣನಿಗೆ ಉದ್ಧವನಲ್ಲಿ ಅತಿಶಯವಾದ ಪ್ರೇಮವಿದ್ದದರಿಂದ ಆತನು ನಾನಾ ಪ್ರಕಾರದ ಯುಕ್ತಿ ಪ್ರಯುಕ್ತಿಗಳಿಂದ ಉಪದೇಶವನ್ನು ಮಾಡಿದನು ।।೯೮೩।। ಜಡಜೀವಿಗಳಿಗೆ ಉದ್ಧಾರವಾಗುವ ಈ ಸಾಧನೆಯಾಗಿರುವುದು. ಈ ಯಾವ ಉಪದೇಶದಿಂದ ದೀನರು, ಮೂಢರು ಉದ್ಧಾರರಾಗುವರು. ಸಂಪೂರ್ಣ ಜಗತ್ತನ್ನು ಉದ್ಧರಿಸುವುದಕ್ಕಾಗಿ ಜಗಜ್ಜೀವನನಾದ ಶ್ರೀಕೃಷ್ಣನು ಉದ್ಧವನ ನಿಮಿತ್ತ ಮಾಡಿ ಈ ಯಾವ ರಹಸ್ಯಮಯ ಜ್ಞಾನವನ್ನು ಹೇಳಿದನು. ।।೯೮೪।। ವೇದಗಳ ತಾತ್ಪರ್ಯವಾಗಿರುವ, ಉಪನಿಷದಗಳ ಸಾರವಾಗಿರುವ ಮತ್ತು ವಾರ್ತಿಕದಲ್ಲಿನ ಗೂಢವಾದ ರಹಸ್ಯವಾಗಿರುವ ಈ ಭಿಕ್ಷು ಗೀತೆಯನ್ನು ಶ್ರೀಕೃಷ್ಣನು ಹೇಳಿರುವನು ।।೯೮೫।। ಈ ಭಿಕ್ಷು ಗೀತೆಯಿಂದ ತನ್ನಷ್ಟಕ್ಕೆ ತಾನೇ ಜೀವದ ಆತ್ಮನಲ್ಲಿ ಲಗ್ನವಾಗುವುದು. ಹೀಗೆ ಜ್ಞಾನದಲ್ಲಿಯೇ ಗುಹ್ಯ ಜ್ಞಾನವಾಗಿರುವ ಇದನ್ನು ಭಕ್ತನ ಕೃಪೆಗಾಗಿ ಶ್ರೀಕೃಷ್ಣನು ಹೇಳಿರುವನು ।।೯೮೬।।

ಐಸೇ ಅತಿ ರಹಸ್ಯ ಭಿಕ್ಷುಗೀತ । ತೇ ಮೀ ಪ್ರಾಕೃತ ಬೋಲಿಲೋ ॥೯೮೮॥ ಜೇವೀ ಜಳೀ ಬುಡತೇ ಪಾಷಾಣ । ಶ್ರೀರಾಮೇ ತಾರಿಲೇ ಆಪಣ । ತೇವೀ ಮೀ ಜಡ ಮೂಢ ಅಜ್ಞಾನ । ಬೋಲವೀ ಬ್ರಹ್ಮಜ್ಞಾನ ಜನಾರ್ದನ ಕೃಪಾ॥೯೮೯॥ ಅಹಲ್ಯಾ ಜೇ ವ್ಯಭಿಚಾರಿಣೀ । ತೇ ಲಾಗತಾ ಶ್ರೀರಾಮಚರಣೀ । ತಿಚೇನಿ ನಾಮೇ ಪಾಪಾ ಧುಣೀ । ಪ್ರಾತಃಸ್ಮರಣೀ ಪಢವಿಲೀ ॥೯೯೦॥ ತೇವೀ ಸದ್ಗುರುಕೃಪೇಚೀ ಕರಣೀ । ಮಾಝೀ ಪ್ರಾಕೃತ ಜಡ ಮೂಢ ವಾಣೀ । ಮಾನಿಜೇ ಸಾಧುಸಜ್ಜ್ಞಾನೀ । ತೈಶೀ ಬೋಲಣೀ ಬೋಲವಿಲೀ ॥೯೯೧॥ ಸರಸ್ವತೀ ಜ್ಯಾಸೀ ವೋಳೇ । ತೋ ಮುಕಾಹೀ ವೇದಶಾಸ್ತ್ರ ಬೋಲೇ। ತೈಸೇ ಜನಾರ್ದನೇ ಆಮ್ಹಾ ಕೇಲೇ । ಭಿಕ್ಷುಗೀತ ಬೋಲವಿಲೇ ಪ್ರಾಕೃತ ॥೯೯೨॥ ರಾಜಮುದ್ರಾ ಚಢೇ ಜ್ಯಾಚೇ ಹಾತೀ । ತ್ಯಾತೇ ಸಮಸ್ತ ಸನ್ಮಾನಿತೀ । ತೇವೀ ಮಾಝೀ ವಾಣೀ ಸರತೀ । ಕೇಲೀ ನಿಶ್ಚಿತೀ ಜನಾರ್ದನೇ ॥೯೯೩॥ ಬಾಳಕಾಚೇ ಬೋಬಡೇ ವಾಣೀ । ಐಕೋನಿ ಸಂತೋಷೇ ನಿಜಜನನೀ । ತೇವೀ ಮಾಝೀ ಆರಿಖ ವಾಣೀ । ಸಂತಸಜ್ಜನೀ ಪ್ರಿಯಕರ ॥೯೯೪॥ ಮೀ ಮಾಝೀ ಉಂಚ ನೀಚ ಬೋಲಣೇ । ಹೇಹೀ ಮಾಥಾ ಘ್ಯಾವೇ ಕೋಣೇ । ಮೀಪಣ ನೇಊನಿ ಜನಾರ್ದನೇ । ಗ್ರಂಥಕಥನೇ ಕಥವಿತ ॥೯೯೫॥ ಆಧೀಂಚ ಹೇ ಶ್ರೀಭಾಗವತ । ತ್ಯಾಮಾಜೇ ಗೂಢ ಏಕಾದಶಾರ್ಥ । ತ್ಯಾಹೀಮಾಜೇ ಭಿಕ್ಷುಗೀತ । ಅತಿಗುಹ್ಯಾರ್ಥ ನಿರ್ದ್ವಂದ್ವ ॥೯೯೬॥ ತ್ಯಾ ಭಿಕ್ಷುಗೀತಾಚೇ ಟೀಕಾ । ಏಕಲಾ ಕರ್ತಾ ನವ್ಹೇ ಏಕಾ । ತೇ ಏಕಪಣ ಹಿರೋನಿ ದೇಖಾ । ಗ್ರಂಥಾರ್ಥಲೇಖಾ ಜನಾರ್ದನ ವದವೀ ॥೯೯೭॥ ತೇಥ ಏಕ ನಾ ಅನೇಕ । ಐಸೇ ಜನಾರ್ದನೇ ಕೇಲೇ ದೇಖ । ತ್ಯಾವರೀ ದ್ವಂದ್ವಸಾಮ್ಯ ಕವತಿಕ । ಗ್ರಂಥ ಸಮ್ಯಕ ವಾಖಾಣವೀ ॥೯೯೮॥ ಏಕಾ ಜನಾರ್ದನ ಶರಣ । ಜನಾರ್ದನೂ ಝಾಲಾ ಏಕಪಣ । ಐಸೇನಿ ಏಕತ್ವೇ ಜಾಣ । ಕೇಲೇ ಸಂಪೂರ್ಣ ಭಿಕ್ಷುಗೀತ ॥೯೯೯॥ ಮಾಝೇ ನಿಜಗುರುಚಾಹೀ ಗುರೂ । ಶ್ರೀದತ್ತ ಪರಮಗುರೂ । ತೋ ಭಿಕ್ಷುಗೀತಾರ್ಥೇ ಸಾಚಾರೂ । ಯೋಗ್ಯಾ ಯೋಗೇಶ್ವರೂ ತುಷ್ಟಲಾ ॥೧೦೦೦॥

ತೇಣೇ ತೋಖಲೇನಿ ಅದ್ಭುತೇ । ಆದರೇ ಆಶ್ವಾಸೂನಿ ಮಾತೇ । ಅಭಯ ದೇಊನಿ ನಿಜಹಸ್ತೇ । ಪೂರ್ಣ ಗ್ರಂಥಾರ್ಥೇ ಡುಲ್ಲತೂ ॥೧೦೦೧॥ ಏಕಾ ಜನಾರ್ದನ ಶರಣ । ಶ್ರೋತಾ ವ್ಹಾವೇ ಸಾವಧಾನ । ಪುಢೀಲ ಅಧ್ಯಾಯೀ

ಈ ಭಿಕ್ಷುಗೀತೆಯ ಯೋಗದಿಂದ ಜೀವದ ಜೀವತ್ವವು ಇಲ್ಲದಾಗುವುದು ಮತ್ತು ಶಿವದ ಶಿವತ್ವವೂ ಕೂಡ ಮುಳುಗಿಹೋಗುವುದು. ಇದರಿಂದ ದ್ವಂದ್ವಗಳ ಬಾಧೆಯು ಮುರಿದುಬಿಡುವುದು ಮತ್ತು ಆತ್ಮಾನಂದದ ಭಾಂಡಾರವು ತೆರೆಯಲ್ಪಡುವುದು ॥೯೮೭॥ ಎಲ್ಲಿ ವೇದಗಳು ಮೌನವನ್ನು ಧರಿಸಿದ್ದವೋ, ಶಬ್ದಶಾಸ್ತ್ರಗಳು ಎಲ್ಲಿ ನಾಚಿಕೊಂಡು ಕುಳಿತಿದ್ದವೋ ಅಂತಹ ಅತಿರಹಸ್ಯವಾದ ಯಾವ ಈ ಭಿಕ್ಷು ಗೀತೆಯನ್ನು ಸಾಮನ್ಯ ಮನುಷ್ಯನಾದ ನಾನು ಹೇಳಿದೆನು ॥೯೮೮॥ ನೀರಿನಲ್ಲಿ ಮುಳುಗುವ ಕಲ್ಲುಗಳನ್ನು ಶ್ರೀರಾಮನು ಸ್ವತಃ ಹೇಗೆ ತೇಲಿಸಿದನೋ, ಅದರಂತೆಯೇ ನಾನು ಜಡ, ಮೂಢ ಮತ್ತು ಅಜ್ಞಾನಿಯಾಗಿದ್ದರೂ ಶ್ರೀ ಜನಾರ್ದನರ ಕೃಪಾಪ್ರಸಾದದಿಂದ ನನ್ನಿಂದ ಬ್ರಹ್ಮಜ್ಞಾನವನ್ನು ಹೇಳಲ್ಪಟ್ಟಿತು ॥೯೮೯॥ ಯಾವ ವ್ಯಭಿಚಾರಿಯಾಗಿದ್ದ ಅಹಲ್ಯೆಯು ಶಿಲೆಯಾಗಿರಲು, ಶ್ರೀರಾಮನ ಚರಣ ಸ್ಪರ್ಶವಾಗುತ್ತಲೇ ಆಕೆಯ ನಾಮಸ್ಮರಣೆಯಿಂದ ಪಾಪಗಳು ನಾಶವಾಗುವುವು. ಆಕೆಯ ನಿತ್ಯ ಪ್ರಾತಃಸ್ಮರಣೆಯಾಗಿರುವುದು ॥೯೯೦॥ ಅದರಂತೆ ಇದು ಸದ್ಗುರುಗಳ ಕೃಪೆಯ ಕಾರ್ಯವಾಗಿರುವುದು. ನನ್ನ ಜಡ, ಮೂಢ ಅಜ್ಞಾನ ವಾಣಿಯು ಸಾಧು ಸಂತರಿಗೆ ಮಾನ್ಯವಾಗುವಂತೆ ಭಾಷಣವನ್ನು ಮಾಡಿಸಿರುವುದು ॥೯೯೧॥ ಯಾರಲ್ಲಿ ಶ್ರೀಸರಸ್ವತಿಯು ಪ್ರಸನ್ನಳಾಗುವಳೋ, ಆತನು ಮೂಕನಾಗಿದ್ದರೂ ಕೂಡ ವೇದಶಾಸ್ತ್ರಗಳನ್ನು ಹೇಳುವಂತಾಗುವನು. ಅದರಂತೆ ಶ್ರೀಜನಾರ್ದನಸ್ವಾಮಿಗಳವರು ನನ್ನ ಮೇಲೆ ಪ್ರಸನ್ನರಾಗಿ ಈ ಭಿಕ್ಷುಗೀತೆಯನ್ನು ಪ್ರಾಕೃತ ಭಾಷೆಯಲ್ಲಿ ಪ್ರಕಟಗೊಳಿಸಿದರು ॥೯೯೨॥ ಯಾರಿಗೆ ರಾಜ್ಯಾಧಿಕಾರದ ಮುದ್ರೆಯು ಪ್ರಾಪ್ತವಾಗುವುದೋ, ಆತನಿಗೆ ಸರ್ವ ಜನರು ಸನ್ಮಾನವನ್ನು ಮಾಡುವರು. ಅದರಂತೆ ಶ್ರೀ ಜನಾರ್ದನಸ್ವಾಮಿಯವರು ನನ್ನ ವಾಣಿಯನ್ನು ಪ್ರಾಸಾದಿಕವನ್ನಾಗಿ ಮಾಡಿದರು ॥೯೯೩॥ ತನ್ನ ಚಿಕ್ಕ ಬಾಲಕನ ತೊದಲು ನುಡಿಗಳನ್ನು ಕೇಳಿ ತಂದೆತಾಯಿಯವರಿಗೆ ಹೇಗೆ ಪರಮ ಸಂತೋಷವಾಗುವುದೋ, ಅದರಂತೆ ನನ್ನ ಜಡಮೂಢ ಶಬ್ದಗಳು ಸಂತಜನರಿಗೆ ಪ್ರಿಯವಾಗುವುವು. ॥೯೯೪॥ ನಾನು ಮತ್ತು ನನ್ನ ಒಳ್ಳೆಯ, ಕೆಟ್ಟ ಭಾಷಣವನ್ನು ಯಾರು ತನ್ನ ತಲೆಯಮೇಲೆ ಹೊರಬೇಕು? ಕಾರಣ ನನ್ನ, ನಾನೆಂಬಭಾವವನ್ನು ಶ್ರೀಜನಾರ್ದನಸ್ವಾಮಿಗಳು ನನ್ನಿಂದ ಪಡೆದುಕೊಂಡು ಈ ಗ್ರಂಥವನ್ನು ನುಡಿಸಿರುವರು ॥೯೯೫॥ ಮೊದಲೇ ಇದು ಭಾಗವತ ಗ್ರಂಥ, ಇದರಲ್ಲಿ ಗೂಢಾರ್ಥಗಳಿಂದ ತುಂಬಿರುವ ಹನ್ನೊಂದನೆಯ ಸ್ಕಂಧ, ಪುನಃ ಅದರಲ್ಲಿಯೇ ಈ ಭಿಕ್ಷುಗೀತವು ನಿರ್ದ್ವಂದ್ವವನ್ನಾಗಿ ಮಾಡುವ ಅತ್ಯಂತ ಗೂಢಾರ್ಥದಿಂದ ತುಂಬಿಕೊಂಡಿರುವುದು ॥೯೯೬॥ ಈ ಯಾವ ಭಿಕ್ಷುಗೀತೆಯ ಮೇಲಿನ ಭಾಷ್ಯವನ್ನು ಬರೆದವನು ಒಬ್ಬನಾದ ಏಕನಾಥನು ಅಲ್ಲ. ಹಾಗಾದರೆ ಆತನ ಏಕತ್ವವನ್ನೂ ಇಲ್ಲದಾಗಿ ಮಾಡಿ ಗ್ರಂಥಾರ್ಥದ ನಿರೂಪಣೆಯನ್ನು ಶ್ರೀಜನಾರ್ದನಸ್ವಾಮಿಯವರು ನುಡಿಸಿದರು ॥೯೯೭॥ ಅದರಲ್ಲಿ ಒಂದೂ ಇಲ್ಲ, ಮತ್ತು ಅನೇಕವೂ ಕೂಡ ಇಲ್ಲ. ಶ್ರೀಜನಾರ್ದನಸ್ವಾಮಿಯವರು ಹೀಗೆಯೇ ಮಾಡಿರುವರು. ಇದರಲ್ಲಿ ದ್ವಂದ್ವದ ಸಮತೆಯನ್ನು ಮಾಡುವ ಕೌಶಲ್ಯವಿರುವುದು. ಇದರಿಂದ ಗ್ರಂಥವನ್ನು ಉತ್ತಮಪ್ರಕಾರವಾಗಿ ನುಡಿಸಿರುವರು ॥೯೯೮॥ ಏಕನಾಥನು ಶ್ರೀಜನಾರ್ದನಸ್ವಾಮಿಯವರನ್ನು ಅನನ್ಯ ಭಾವದಿಂದ ಶರಣಾದನು. ಆಗ ಇಬ್ಬರೂ ಒಂದಾಗಿಬಿಟ್ಟರು. ತದನಂತರ ಈ ಏಕರೂಪದಿಂದಲೇ ಭಿಕ್ಷುಗೀತವು ಸಂಪೂರ್ಣವಾಯಿತು ॥೯೯೯॥ ನನ್ನ ಗುರುಗಳ ಗುರುಗಳಾದ ಯಾವ ಪರಮಗುರು ಶ್ರೀದತ್ತಾತ್ರೇಯರು, ಇವರೇ ಯೋಗಿಗಳಲ್ಲಿ ಯೋಗೇಶ್ವರರು, ಇವರು ನಿಜವಾಗಿಯೂ ಈ ಭಿಕ್ಷುಗೀತೆಯ ಅರ್ಥದಿಂದ ಸಂತುಷ್ಟರಾದರು ॥೧೦೦೦॥

ಶ್ರೀಕೃಷ್ಣ । ಪ್ರಕೃತಿಪುರುಷಲಕ್ಷಣ ಸಾಂಗೇಲ ॥೧೦೦೨॥ ತೇ ಪ್ರಕೃತಿಪುರುಷಾಂಚೀ ಕಥಾ । ವಿವಂಚನಾ ಹೃದಯೀ ಧರಿತಾ । ಮೀ ಸುಖದುಃಖದ್ವಂದ್ವಾಪರತಾ । ನಿಜಾತ್ಮತಾ ನಿಜಬೋಧೂ ॥೧೦೦೩॥ ಸಂತಸಜ್ಜನಾ ಸಾಷ್ಟಾಂಗ ನಮನ । ಶ್ರೋತೇಜನಾಸೀ ಲೋಟಾಂಗಣ । ಏಕಾ ವಿನವೀ ಜನಾರ್ದನ । ಅತಿಗೋಡ ನಿರೂಪಣ ಪುಢೇ ಆಹೇ ॥೧೦೦೪॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ
ಏಕಾಕಾರ ಟೀಕಾಯಾಂ ಭಿಕ್ಷುಗೀತನಿರೂಪಣಂ ನಾಮ ತ್ರಯೋವಿಶಂತಿತಮೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಯಾವ ಅದ್ಭುತವಾದ ಆನಂದದ ಆವೇಶದಲ್ಲಿ ಅವರು ನನಗೆ ಅತ್ಯಂತ ಆದರದಿಂದ ಆಶ್ವಾಸನೆಯನ್ನು ಕೊಟ್ಟು ತಮ್ಮ ಹಸ್ತದಿಂದ ನನಗೆ ಅಭಯವನ್ನು ನೀಡಿದರು. ಈ ನಿರೂಪಣೆಯನ್ನು ಕೇಳಿ ಆನಂದಪುಲಕಿತರಾಗಿ ತೂಗಾಡಹತ್ತಿದರು ॥೧೦೦೧॥ ಏಕನಾಥನು ಜನಾರ್ದನರಿಗೆ ಶರಣ್ಯನಾಗಿರುವನು. ಶ್ರೋತೃಗಳು ಈಗ ಸಾವಧಾನರಾಗಬೇಕು. ಮುಂದಿನ ಅಧ್ಯಾಯದಲ್ಲಿ ಶ್ರೀಕೃಷ್ಣನು ಪ್ರಕೃತಿಪುರುಷರ ಲಕ್ಷಣವನ್ನು ಹೇಳುವನು. ॥೧೦೦೨॥ ಆ ಯಾವ ಪ್ರಕೃತಿಪುರಷರ ಕಥೆಯ ವಿಚಾರವನ್ನು ನಾನು ಅಂತಃಕರಣದಲ್ಲಿ ಮಾಡಿದ್ದರಿಂದ ಸುಖದುಃಖ ದ್ವಂದ್ವಗಳಿಂದ ಭಿನ್ನನಾಗಿರುವೆನು. ಆತ್ಮಜ್ಞಾನದಿಂದ ನಾನು ಆತ್ಮನಲ್ಲಿ ಏಕರೂಪನಾಗಿರುವೆನು ॥೧೦೦೩॥ ಸಂತಸಜ್ಜನರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು, ಶ್ರೋತೃಗಳವರಲ್ಲಿಯೂ ಕೂಡ ನನ್ನ ಲೋಟಾಂಗಣವು. ಈಗ ಏಕನಾಥ ಜನಾರ್ದನರು ಹೀಗೆ ವಿನಂತಿಸುತ್ತಿರುವರು. ಮುಂದಿನ ಯಾವ ನಿರೂಪಣೆಯು ಅತ್ಯಂತ ರಸಸಂಪನ್ನವಾಗಿರುವುದು. ಆದ್ದರಿಂದ ತಾವೆಲ್ಲರೂ ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡಿರಿ ॥೧೦೦೪॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜರ
ಭಾಷ್ಯೆಯಾದ ಭಿಕ್ಷುಗೀತಾ ಎಂಬ ಇಪ್ಪತ್ತೂರನೆಯ ಅಧ್ಯಾಯವು ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ನಾಲ್ಕನೆಯ ಅಧ್ಯಾಯ

ಶ್ರೀ ಗಣೇಶಾಯನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಜೀ ಗುಣಾತೀತಾ । ವ್ಯಕ್ತಿರಹಿತಾ ಅವ್ಯಕ್ತಾ । ತುಜಮಾಜೀ ನಾಹೀ ದ್ವೈತಕಥಾ । ಅದ್ವೈತತಾರಹಿವಾಸೀ ॥೧॥ ತುಝಾ ಅದ್ವೈತ ನಿಜನಿರ್ವಾಹೋ । ತೇಥ ನಾಹೀ ದೇವೀ ದೇವೋ । ಉದಯ-ಅಸ್ತಾಂಚಾ ಅಭಾವೋ । ರವಿಚಂದ್ರಾಸೀ ಠಾವೋ ಅಸೇನಾ ॥೨॥ ತೇಥ ಸಶಬ್ದ ಹಾರಪಲಾ ವೇದೂ । ಬುದ್ಧೀಸೀ ಮಿಥ್ಯಾ ಬೋಧೂ । ತಿಳಭರೀ ನಾಹೀ ಭೇದೂ । ಅದ್ವಯಾನಂದೂ ಏಕಲಾ ॥೩॥ ಐಸಿಯಾ ಅದ್ವೈತಪಣೀ । ಪ್ರಕೃತಿಪುರುಷಾಂಚೀ ಕಹಾಣೀ । ಸಾಂಗಿಜೇ ಕೇವಳ ಅಜ್ಞಾನೀ । ಜ್ಞಾತೇಪಣೀ ಚಾತುರ್ಯೆ ॥೪॥ ಜೇಥ ಮೀತೂಪಣಾ ನಾಹೀ ಠಾವೋ । ತೇಥ ಪ್ರಕೃತಿಪುರುಷಾ ಕೇವೀ ನಿರ್ವಾಹೋ । ಜ್ಯಾಚಾ ನಾಹೀ ಗರ್ಭಸಂಭವೋ । ತ್ಯಾಚೇ ಜಾತಕ ಪಹಾ ಹೋ ವರ್ತವಿತೀ ॥೫॥ ಜೇ ಜನ್ಮಲೇಚಿ ನಾಹೀ । ತ್ಯಾಚೇ ಶ್ರಾದ್ಧ ಕರಾವೇ ಕಾಯೀ । ಹೇ ಜ್ಞಾತ್ಯಾಸೀ ಪುಸತಾ ಪಾಹೀ । ಠೇವಿತಾ ಠಾಯೀ ಠಾಕೇನಾ ॥೬॥ ವಾಂಝೇಚ್ಯಾ ಪುತ್ರಾಚಾ ವಿವಾಹೋ । ಸಮಾರಂಭ ಚಲಾ ಪಹಾ ಹೋ । ನೇಣಾ ಸಾಚ ಜಾಣಾ ವಾವೋ । ತೈಸಾ ನಿರ್ವಾಹೋ ಪ್ರಕೃತಿಪುರುಷಾ ॥೭॥ ಐಸೇ ನಸತೇಚಿ ನಾಥಿಲೇ । ಸಾಚಾಚೇ ಪರೀ ನಾಂದವಿಲೇ । ಏಕೀ ಅನೇಕತ್ವ ದಾವಿಲೇ । ಏಕಪಣ ಸಂಚಲೇ ನ ಮೋಡತಾ ॥೮॥ ಐಸಾ ಏಕಪಣೇ ಏಕುಲತಾ । ತೋಚಿ ಆಪಣ ಆಪಲೀ ಝಾಲಾ ಕಾಂತಾ । ಆಪುಲೇ ಕಾಂತೇಚಾ ಆಪಣ ಭರ್ತಾ । ಅತಿಲಾಘವತಾ ಅತರ್ಕ್ಯ ॥೯॥ ಜೇವೀ ಅರ್ಧನಾರೀನಟೇಶ್ವರೀ । ಜೋ ಪುರುಷ ತೋಚಿ ನಾರೀ । ತೇವೀ ಪ್ರಕೃತಿ ಪುರುಷ ಸಂಸಾರೀ । ಏಕಾಕಾರೀ ನಾಂದತ ॥೧೦॥ ತೋ ಪುರುಷ ತೇ ಪತಿವ್ರತಾ । ದೋಘಾ ಅನನ್ಯ ಪ್ರೀತಿ ಏಕಾತ್ಮತಾ । ಯೇರಯೇರಾ ವೇಗಳೀಕತಾ । ಪಾಊಲ ಸರ್ವಥಾ ನ ಘಾಲಿತೀ ॥೧೧॥

ಹೇ ಓಂಕಾರಸ್ವರೂಪನಾದ, ಗುಣಾತೀತನೇ, ನಿನಗೆ ನನ್ನ ನಮಸ್ಕಾರಗಳು. ನೀನು ವ್ಯಕ್ತಿರಹಿತ ಅವ್ಯಕ್ತನಾಗಿರುವೆ. ನಿನ್ನಲ್ಲಿ ದ್ವೈತದ ಹೆಸರೂ ಕೂಡ ಇರುವುದಿಲ್ಲ. ನೀನು ಅದ್ವೈತದಲ್ಲಿರುವೆ ॥೧॥ ಅದ್ವೈತವೇ ನೀನಿರುವ ಸ್ಥಾನವಾಗಿದೆ. ಅಲ್ಲಿ ದೇವ-ದೇವೀ ಎಂಬ ಭೇದವಿರುವುದಿಲ್ಲ. ಅಲ್ಲಿ ಉದಯ, ಅಸ್ತವೆಂಬ ಭೇದವಿಲ್ಲ. ಕಾರಣ ಅಲ್ಲಿ ಸೂರ್ಯಚಂದ್ರರಿಗೆ ಸ್ಥಾನವೇ ಇರುವುದಿಲ್ಲ ॥೨॥ ಅಲ್ಲಿ ಶಬ್ದಾಸಹ ವೇದವು ಲೀನವಾಯಿತು. ಬುದ್ಧಿಗೆ ಜ್ಞಾನವೆಂಬುವುದು ಮಿಥ್ಯೆಯಾಗಿ ತೋರಹತ್ತಿತು. ಅಲ್ಲಿ ಎಳ್ಳಷ್ಟೂ ಕೂಡ ಭೇದವಿರುವುದಿಲ್ಲ. ಒಂದೇ ಒಂದಾದ ಅದ್ವಯಾನಂದವು ಮಾತ್ರ ತುಂಬಿಕೊಂಡಿರುವುದು ॥೩॥ ಇಂತಹ ಅದ್ವೈತದ ಸ್ಥಿತಿಯಲ್ಲಿ ಪ್ರಕೃತಿಪುರುಷರ ಕಥೆಯನ್ನು ಕೇವಲ ಅಜ್ಞಾನಿ ಜನರು ಮಾತ್ರ ತಮ್ಮ ಜ್ಞಾನದ ಪ್ರದರ್ಶನಕ್ಕಾಗಿ ಮಾತ್ರ ಹೆಚ್ಚಿನ ಚಾತುರ್ಯದಿಂದ ಹೇಳಬೇಕಾಗುವುದು ॥೪॥ ಕಾರಣ ವಾಸ್ತವಿಕವಾಗಿ ಅಲ್ಲಿ ನಾನು, ನೀನು ಎನ್ನುವುದಕ್ಕೆ ಸ್ಥಾನವೇ ಇಲ್ಲ. ಅಂದಮೇಲೆ ಅಲ್ಲಿ ಪ್ರಕೃತಿ ಮತ್ತು ಪುರುಷರಿಗೆ ಎಲ್ಲಿಂದ ಸ್ಥಾನವು ದೊರಕಬೇಕು ? ಯಾರಿಗೆ ಗರ್ಭದಲ್ಲಿ ಇರಲಿಕ್ಕೆ ಸಂಭವವಿಲ್ಲದಿರಲು ಆತನ ಜನ್ಮಪತ್ರಿಕೆ ಸಿದ್ಧಗೊಳಿಸುವರು ಯೋಗ್ಯವಾಗುವುದೆ ? ॥೫॥ ಯಾವನು ಜನ್ಮವನ್ನೇ ಧರಿಸಿರುವುದಿಲ್ಲ, ಆತನ ಶ್ರಾದ್ಧವನ್ನು ಮಾಡಬೇಕಾದೀತೆ? ಇದನ್ನು ತಿಳಿದವರಿಗೆ ಕೇಳಿದರೆ ಅವರು ಇದಕ್ಕೆ ಒಪ್ಪುವರೆ ? ॥೬॥ ಬಂಜೆಯ ಮಗನ ಮದುವೆಯ ಸಮಾರಂಭಕ್ಕೆ ಯಾರಾದರೂ ಆಮಂತ್ರಣವನ್ನು ಕೊಟ್ಟರೆ ಅದು ಅಜ್ಞಾನಿ ಜನರಿಗೆ ಮಾತ್ರ ನಿಜವೆನಿಸುವುದು. ಆದರೆ ಜ್ಞಾನೀ ಜನರಿಗೆ ಇದು ಅಸತ್ಯವೆಂದು ತಿಳಿಯುವುದು. ಇಂತಹ ಪ್ರಕಾರವು ಈ ಪ್ರಕೃತಿಪುರುಷದ್ದಾಗಿದೆ ॥೭॥ ಹೀಗೆ ಕೇವಲ ಇಲ್ಲದೇ ಇರುವ, ಮಿಥ್ಯೆಯಾಗಿದೆ. ಆದರೆ ಅದು ನಿಜವೆನ್ನುವಂತೆ ವರ್ತಿಸಿರುವುದು. ಒಂದರಲ್ಲಿಯೇ ಅನೇಕತ್ವವನ್ನು ತೋರಿಸಿಕೊಟ್ಟಿತು. ಆದರೂ ಕೂಡ ಅದರ ಏಕತ್ವವು ಮುರಿಯದೇ ಹಾಗೆಯೇ ಉಳಿದಿರುವುದು ॥೮॥ ಹೀಗೆ ಏಕತ್ವದಿಂದ ಒಂದೇಯಾಗಿ ಆತನೇ ತನಗೆ ತಾನೇ ಪತ್ನಿಯಾದನು ಮತ್ತು ತನ್ನ ಪತ್ನಿಯ ಪತಿಯು ತಾನೇ ಆದನು. ಈ ಯಾವ ಈತನ ಲೀಲೆಯು ನಿಜವಾಗಿಯೂ ವಿಲಕ್ಷಣ, ಚಮತ್ಕಾರ ಮತ್ತು ಅತರ್ಕ್ಯವಾಗಿರುವುದು ॥೯॥ ಅರ್ಧನಾರೀ ನಟೇಶ್ವರನ ಮೂರ್ತಿಯಲ್ಲಿ ಪುರುಷನೇ ಸ್ತ್ರೀಯಾಗಿರುವನು. ಅದರಂತೆ ಈ ಸಂಸಾರದಲ್ಲಿ ಪ್ರಕೃತಿ ಮತ್ತು ಪುರುಷ ಇವರು ಒಂದೇ ರೂಪದಲ್ಲಿ ವರ್ತಿಸುತ್ತಿರುವರು ॥೧೦॥ ಆತನು ಪುರುಷನು ಈಕೆಯು ಪತಿವ್ರತೆ, ಈ ಇಬ್ಬರ ಅತ್ಯಂತ ಪ್ರೀತಿಯು ಏಕಾತ್ಮಭಾವನೆಯಿಂದ ಇರುವುದು. ಇವರು ಒಬ್ಬರಿಗೊಬ್ಬರು ಭಿನ್ನರಾಗಿ ಎಂದಿಗೂ ಒಂದು ಹೆಜ್ಜೆಯನ್ನೂ ಕೂಡ ಇಡುವುದಿಲ್ಲ ॥೧೧॥

ದೋಘಾ ಏಕತ್ರ ಸದಾ ಅಸಣೇ । ದೋಘಾಂಸಿ ಏಕಚಿ ನೇಸಣೇ । ದೋಘಾ ಏಕೇ ಸತ್ತಾ ಬೈಸಣೇ । ದೋಘೇ ಏಕಚಿ ಪ್ರಾಣೇ ವರ್ತತೀ ।।೧೨।। ದೋಘಾ ಏಕಚಿ ದೇಖಣೇ । ದೋಘಾ ಏಕಚಿ ಚಾಖಣೇ । ದೋಘಾ ಏಕಚಿ ಬೋಲಣೇ । ದೋಘಾ ಕರಣೇ ಏಕಚಿ ।।೧೩।। ಕೈಶೀ ದೋಘಾ ಪ್ರೀತಿ ಅಲೋಕಿಕ । ಯೇರಯೇರಾವೀಣ ನ ಘೇತೀ ವಿಖ । ಯೇರಯಾರಾವೀಣ ನ ಚಾಖತೀ ಉದಕ । ಯೇರೆಯೇರೇವೀಣ ದೇಖ ಆಂಧಳೀ ।।೧೪।। ನವಲ ಬಾಇಲೇಚೇ ಕರಣೇ । ನಪುಂಸಕಾ ಪುರುಷತ್ವ ಇಣೇ ದೇಣೇ । ಮಗ ತಿಚೇನಿ ಆಧಿನಪಣೇ । ಪುರುಷೇ ನಾಂದಣೇ ಸರ್ವದಾ ।।೧೫।। ಮಗ ಹಾ ತಿಚೇನಿ ಡೋಳಾ ದೇಖೇ । ಮಗ ಹಾ ತಿಚೇನಿ ಬೋಲೇ ಮುಖೇ । ತಿಚೇನಿ ಭೋಗೀ ಹಾ ಸುಖದುಃಖೇ । ಬಂಧಮೋಕ್ಷ ಚಾಖೇ ತಿಚೇನಿ ।।೧೬।। ತಿಚೇನಿ ಮ್ಹಣವೀ ಮೀ ಬ್ರಹ್ಮ । ತಿಚೇನಿ ಕರೀ ಹಾ ಕರ್ಮಾಕರ್ಮ । ತಿಚೇನಿ ಭೋಗೀ ಹಾ ಮರಣಜನ್ಮ । ಧರ್ಮಾಧರ್ಮವಿಭಾಗೇ ।।೧೭।। ತಿಚೇನಿ ಯಾಸೀ ಪಾಪ ಘಡೇ । ತಿಚೇನಿ ಯಾಸೀ ಪುಣ್ಯ ಜೋಡೇ । ತಿಚೇನಿ ಹಾ ಮಹತ್ವಾ ಚಢೇ । ತಿಚೇನಿ ಪಡೇ ಅಧಃಪಾತೀ ।।೧೮।। ಏಥವರೀ ಅತಿಪ್ರೀತೀ । ವಾಢವಿಲೀ ನಿಜಪ್ರಕೃತೀ । ಪ್ರಕೃತಿ ಪಾತಿವ್ರತ್ಯಸ್ಥಿತೀ । ವಶ್ಯ ನಿಜಪತೀ ತಿಯೇ ಕೇಲಾ ।।೧೯।। ನವಲ ದೋಘಾಂಚೀ ಸೋಯರಿಕೀ । ದೋಹೀ ಭಾವಂಡೇ ಹೋತೀ ಸಖೀ । ತೋ ಬಾಪ ತೇ ತ್ಯಾಚೀ ಲೇಕೀ । ಪಾಹತಾ ವಿವೇಕೀ ತೋ ಪುತ್ರ ತಿಚಾ ।।೨೦।। ಯಾಪರೀ ಅಗಮ್ಯಾಗಮನ । ತಿಂಹೀ ದೋಘೀ ಕರೂನಿ ಜಾಣ । ವಾಢವಿಲೇ ಅನೇಕ ಜನ । ತಿಸರೇಪಣ ನಾತಳತಾ ।।೨೧।। ಐಸಾ ಅವ್ಯಭಿಚಾರೀ ವ್ಯಭಿಚಾರೂ । ಕರೂನಿ ವಾಢವಿಲಾ ಸಂಸಾರೂ । ತೋ ಅತಿಅತರ್ಕ್ಯ ಅಗೋಚರೂ । ಅಗಮ್ಯ ದುರ್ಧರೂ ಶಿವಾದಿಕಾ ।।೨೨।। ಹಾ ನಿಜಶಕ್ತಿಪ್ರಕೃತಿಮೇಳೀ । ಭೋಗೀ ಶಿವತ್ವಾಚೇ ಸೋಹಳೇ । ಪ್ರಿಯಾ ನ ದೇಖತಾ ತಾತ್ಕಾಳೇ । ಸಾಂಡೀ ಸಗಳೇ ಶಿವತ್ವ ।।೨೩।। ಜ್ಯಾಸೀ ಗಾಂವಠಾವ ನಾ ಜೀವಮೇಳ । ರೂಪನಾಂವ ನಾ ಕಾಳವೇಳ । ಐಸಾಹೀ ಪ್ರಕೃತಿ ಕೇವಳ । ಕೇಲಾ ಸಬಳ ನಿಜಗುಣೇ ।।೨೪।। ಪ್ರಕೃತೀ ನಿಜಗುಣಾಸ್ತವ । ನಿಜಭರ್ತಾ ಕೇಲಾ ಸಾವೇವ । ವರ್ಣ ವ್ಯಕ್ತಿ ರೂಪ ನಾಂವ । ನಾನಾ ವೈಭವವಿಲಾಸೇ ।।೨೫।। ತಂವ ಪೂರ್ಣತ್ವ ಲೋಪೋನಿಯಾ ಶಿವೇ । ಅಂಗಾವರೀ ವಾಢವಿಲೇ ಶಾಂಭವೇ । ಯೇರೀ ಪತಿವ್ರತಾ ಆಹೇವೇ । ರೂಪೇ ನಾಂವೇ ಶಿವ ಪೂಜೀ ।।೨೬।।

ಈರ್ವರೂ ಸತತವಾಗಿ ಕೂಡಿಕೊಂಡೇ ಇರುವರು. ಈರ್ವರ ತೊಡುವಿಕೆಯು ಒಂದೇಯಾಗಿರುವುದು. ಈರ್ವರು ಒಂದೇ ಸತ್ತಾರೂಪ ಆಸನದಮೇಲೆ ಕುಳಿತುಕೊಳ್ಳುವರು ಮತ್ತು ಒಂದೇ ಪ್ರಾಣದಿಂದ ಇರುವರು. ।।೧೨।। ಇಬ್ಬರ ಇರುವಿಕೆಯು ಒಂದೇ, ಇಬ್ಬರ ತಿನಸು ಒಂದೇ, ಇಬ್ಬರ ಹೇಳಿಕೆಯೂ ಕೂಡ ಒಂದೇಯಾಗಿರುವುದು ಮತ್ತು ಈ ಇಬ್ಬರ ಕಾರ್ಯವೂ ಕೂಡ ಒಂದೇಯಾಗಿರುವುದು ।।೧೩।। ಈ ಇಬ್ಬರ ಪ್ರೇಮವು ಎಷ್ಟೊಂದು ಅಲೌಕಿಕವಾಗಿದೆ ಎಂದರೆ ಇವರು ಒಬ್ಬರಿಗೊಬ್ಬರನ್ನು ಬಿಟ್ಟು ವಿಷವನ್ನೂ ಸಹ ತೆಗೆದುಕೊಳ್ಳುವುದಿಲ್ಲ. ಒಬ್ಬರಿಗೊಬ್ಬರನ್ನು ಬಿಟ್ಟು ನೀರನ್ನೂ ಕೂಡ ಕುಡಿಯುವುದಿಲ್ಲ. ಒಬ್ಬರಿಗೊಬ್ಬರು ಹೊರತಾಗಿ ಈ ಈರ್ವರೂ ಕುರುಡರಾಗಿರುವರು ।।೧೪।। ಇದರಲ್ಲಿ ಸ್ತ್ರೀಯಳ ಕಾರ್ಯವು ಮಾತ್ರ ಅತ್ಯಂತ ವಿಚಿತ್ರವಾಗಿರುವುದು. ಪುರುಷತ್ವವು ಇಲ್ಲದವನಿಗೂ ಕೂಡ ಆಕೆಯು ಪುರುಷನನ್ನಾಗಿ ಮಾಡುವಳು. ಆಗ ಆ ಪುರುಷನು ಸತತವಾಗಿ ಆಕೆಯ ಆಜ್ಞೆಯಲ್ಲಿ ಇರುತ್ತಿರುವನು ।।೧೫।। ತದನಂತರ ಈತನು ಆಕೆಯ ಕಣ್ಣುಗಳಿಂದ ನೋಡುವನು. ಆಕೆಯ ಮುಖದಿಂದ ನುಡಿಯುವನು. ಈಕೆಯ ಯೋಗದಿಂದಲೇ ಸುಖದುಃಖಗಳನ್ನು ಭೋಗಿಸುತ್ತಿರುವನು. ಈಕೆಯ ಕಾರಣದಿಂದಲೇ ಬಂಧಮೋಕ್ಷಗಳ ಅನುಭವವನ್ನು ಪಡೆಯುತ್ತಿರುವನು ।।೧೬।। ಈಕೆಯಿಂದಲೇ ''ನಾನು ಬ್ರಹ್ಮನು'' ಎಂದು ಹೇಳಿಕೊಳ್ಳುವನು. ಈಕೆಯಿಂದಲೇ ಈತನು ಕರ್ಮಾಕರ್ಮಗಳನ್ನು ಮಾಡುತ್ತಿರುವನು. ಈಕೆಯಿಂದಲೇ ಈತನು ಧರ್ಮಾಧರ್ಮದ ಪರಿಣಾಮ ಪ್ರಮಾಣದಂತೆ ಜನ್ಮ ಮತ್ತು ಮರಣವನ್ನು ಭೋಗಿಸುತ್ತಿರುವನು ।।೧೭।। ಈಕೆಯಿಂದಲೇ ಈತನಿಗೆ ಪಾಪವು ಒದಗುವುದು, ಈಕೆಯಿಂದಲೇ ಪುಣ್ಯವು ಲಭಿಸುವುದು. ಈಕೆಯಿಂದಲೇ ಮಹತ್ವವು ಪ್ರಾಪ್ತವಾಗುವುದು ಮತ್ತು ಈಕೆಯಿಂದಲೇ ಅಧಃಪಾತವೂ ಕೂಡ ಆಗುವುದು ।।೧೮।। ಈ ಈರ್ವರ ಸಂಬಂಧವೂ ಕೂಡ ಅತ್ಯಂತ ಆಶ್ಚರ್ಯಕಾರಕವಾಗಿದೆ. ಇವರಿಬ್ಬರೂ ಒಡಹುಟ್ಟಿದ ಅಣ್ಣಾತಮ್ಮರಾಗಿದ್ದರು. ಆತನು ತಂದೆಯಾದರೆ ಈಕೆಯು ಆತನ ಮಗಳು ಪುನಃ ವಿಚಾರಿಸಿ ನೋಡಿದರೆ ಆತನು ಈಕೆಯ ಮಗನೂ ಕೂಡ ಆಗುವನು ।।೨೦।। ಈ ಪ್ರಕಾರವಾಗಿ ಈ ಈರ್ವರು ಅಗಮ್ಯಗಮನವನ್ನು ಮಾಡಿ ಮೂರನೆಯ ಯಾವ ಸಂಪರ್ಕವನ್ನು ಪಡೆಯದೇ ಈಕೆಯು ಈ ವಿಶ್ವದ ಸೃಷ್ಟಿಯನ್ನು ನಿರ್ಮಾಣಗೊಳಿಸಿದಳು ।।೨೧।। ಇವರು ಅವ್ಯಭಿಚಾರರೂಪ ವ್ಯಭಿಚಾರವನ್ನು ಮಾಡಿ ಈ ಸಂಸಾರವನ್ನು ಬೆಳೆಸಿದರು. ಇದು ಶಿವಾದಿಕರಿಗೂ ಕೂಡ ಅತ್ಯಂತ ದುರ್ಧರ, ಅಗೋಚರ ಮತ್ತು ಅಗಮ್ಯವಾಗಿರುವುದು ।।೨೨।। ಇದು ತನ್ನದೇ ಆದ ಶಕ್ತಿ ಯಾವ ಪ್ರಕೃತಿಯಾಗಿರುವುದು. ಈಕೆಯ ಸಂಗತಿಯಿಂದ ಶಿವತ್ವದ ಸರ್ವವೈಭವವನ್ನು ಭೋಗಿಸುವನು. ತನ್ನ ಪ್ರೀತಿಯ ಪ್ರಕೃತಿಯು ಕಾಣದಿದ್ದರೆ ಆತನು ತನ್ನ ಶಿವತ್ವವನ್ನು ಬಿಟ್ಟು ಬಿಡುವನು ।।೨೩।। ಯಾರಿಗೆ ಊರು ಇಲ್ಲ, ಸ್ಥಾನವಿಲ್ಲ, ಜೀವದ ಸ್ಥಳವಿಲ್ಲ, ರೂಪವಿಲ್ಲ, ನಾಮವಿಲ್ಲ, ಕಾಲವು ಇಲ್ಲ, ವೇಳೆಯೂ ಇಲ್ಲ, ಹೀಗಿದ್ದರೂ ಕೂಡ ಪ್ರಕೃತಿಯು ಕೇವಲ ತನ್ನ ಗುಣಗಳಿಂದ ಆತನಿಗೆ ಪ್ರಬಲನನ್ನಾಗಿ ಮಾಡಿರುವುದು ।।೨೪।। ಪ್ರಕೃತಿಯು ತನ್ನ ಗುಣಗಳಿಂದ ಪತಿಗೆ ಅವಯವಯುಕ್ತ ಮಾಡಿದಳು. ಆತನಿಗೆ ವರ್ಣ, ವ್ಯಕ್ತಿ, ರೂಪ, ನಾಮ ಹೀಗೆ ಅನೇಕ ತರಹದ ವೈಭವ, ವಿಲಾಸಗಳನ್ನು ಹಚ್ಚಿಕೊಟ್ಟಳು ।।೨೫।। ಆಗ ಶಿವನು ತನ್ನ ಪೂರ್ಣತ್ವವನ್ನು ಬಿಟ್ಟುಕೊಟ್ಟು ತನ್ನ ಮೇಲೆ ಶಿವತ್ವವನ್ನು ಬೆಳೆಯಿಸಿದನು. ಈ ಪತಿವ್ರತೆ ಪ್ರಕೃತಿಯು ಸೌಭಾಗ್ಯದಿಂದ ನಾಮರೂಪಯುಕ್ತ ಶಿವನನ್ನು ಪೂಜಿಸುವಳು ।।೨೬।।

ದೋಘಾಪಾಸೂನಿ ಝಾಲೇ ಜಗ । ಪರೀ ನ ದಿಸೇ ತಿಸರಾ ಭಾಗ । ನ ತುಟೇ ಅನನ್ಯಮಿಳಣೀಯೋಗ । ಭಿನ್ನ ವಿಭಾಗ ದಾಖವಿತಾ ॥೨೭॥ ತ್ರೈಲೋಕ್ಯ ಪಾಹತಾ ಸಾಂಗ । ನ ದಿಸೇ ತಿಸರೇ ಅಂಗ । ದೋಘೀ ದುಮದುಮಿತ ಜಗ । ಭರಲೇ ಚಾಂಗ ದುಬಂಧೀ ॥೨೮॥ ದೋಘಾಂಚೀ ಅತಿಪ್ರೀತಿ ಐಶೀ । ಅನನ್ಯಮಿಳಣೀ ಅನನ್ಯಾಸೀ । ದೋಘೇ ಅಣೂಮಾಜೀ ಸಾವಕಾಶೀ । ನಿಜರಹಿವಾಸೀ ನಾಂದತ ॥೨೯॥ ಪತೀವೀಣ ತೇ ಪತಿವ್ರತಾ । ಸಗಳೀಚಿ ವಿರೇ ಸರ್ವಥಾ । ಪ್ರಿಯೇವೀಣ ಅಸತಚಿ ನಸತಾ । ಹೋಯ ಕಾಂಹೀ ನವ್ಹತಾ ಭರ್ತಾರೂ ॥೩೦॥ ಶಿವ ನಿಃಸಂಗ ಜೋ ಪೈ ಸದಾ । ಕ್ರಿಯಾಕರಣೇವೀಣ ನುಸಧಾ । ತ್ಯಾಸೀಹೀ ಅತಿಪ್ರೀತಿ ನಿಜಪ್ರಮದಾ । ಸುಖದುಃಖಬಾಧಾ ಭೋಗವೀ ॥೩೧॥ ಯಾಪರೀ ನಿಜನೋವರಾ । ಪ್ರಕೃತಿ ಗೋಂವಿಲಾ ಘರಚಾರಾ । ಮಗ ಘರವಾತೇಚಾ ಥಾರಾ । ತ್ಯಾಚ್ಯಾಚಿ ಶರೀರಾವರೀ ಕೇಲಾ ॥೩೨॥ ಪ್ರಕೃತಿ ಪತಿವ್ರತಾ ಅವಂಚಕ । ಕರ್ಮಾಕರ್ಮೀ ಶಿಣೋನಿ ಅನೇಕ । ಸುಖದುಃಖಾಂಚೀ ಪರವಡೀ ದೇಖ । ಅರ್ಪೀ ಆವಶ್ಯಕ ನಿಜಕಾಂತಾ ॥೩೩॥ ನವಲ ತೇ ಮೀ ಸಾಂಗಾವೇ ಕಾಯೇ । ಸ್ತ್ರೀ ಜೋಡೀ ತೇ ಪುರುಷ ಖಾಯೇ । ತಿಯೇವೀಣ ತೋ ಪಾಹೇ । ಕಂಹೀ ನ ಲಾಹೇ ಕವಡಾಹೀ ॥೩೪॥ ಪ್ರಕೃತಿ ಪತಿವ್ರತಾಶಿರೋಮಣೀ । ಕಾಂತ ವಶ್ಯ ಕರೋನಿ ನಿಜಗುಣೀ । ವಾಸನಾ ಸೂಕ್ಷ್ಮ ಸೇವಯಾ ಅನುದಿನೀ । ಭೋಗವೀ ಸುಗರಣೀ ಭರ್ತಾರಾಕರವೀ ॥೩೫॥ ತೇಥ ಪ್ರಕೃತಿಚೇನಿ ಗದಾರೋಳೇ । ಭವಾಬ್ಧೀ ಜಲಕ್ರೀಡಾ ಖೇಳೇ । ಪ್ರಕೃತಿ ಪುರುಷಾತೇ ಬುಡವೀ ಬಳೇ । ಪುರುಷ ಏಕೇ ಕಾಳೇ ಪ್ರಕೃತಿ ಬುಡವೀ ॥೩೬॥ ಐಶಾ ಪ್ರಕೃತೀಚ್ಯಾ ಸಂಗಾಆಂತ । ಪುರುಷಾಸ ಲಾವಿಲೇ ಪಂಚಭೂತ । ಜನ್ಮಮರಣಾಂಚ್ಯಾ ಬುಡ್ಯಾ ದೇತ । ಅವಸ್ಥಾಭೂತ ಹೋಊನಿ ॥೩೭॥ ಐಸಾ ಪ್ರಕೃತಿಚಿಯಾ ಭಿಡಾ । ಪುರುಷ ಕೇವಳ ಝಾಲಾ ವೇಡಾ । ನಿಜತ್ವ ವಿಸರೋನಿ ಬಾಪುಡಾ । ಕೇಲಾ ಗಾಢಾ ಅತಿದೀನ ॥೩೮॥ ಐಸಾ ವಿಸರೋನಿ ಪೂರ್ಣತ್ವಾಸೀ । ಜೀವಶಿವದ್ವಂದ್ವೇ ಸ್ವಯೇ ಸೋಶೀ । ತ್ಯಾಸೀ ನ್ಯಾವಯಾ ನಿಜತ್ವಾಸೀ । ಗುಣಿಯಾ ಪೂರ್ಣಾಶೀ ಗುರುರಾವೋ ॥೩೯॥ ಜ್ಯಾಚೇ ವಚನಮಾತ್ರೇ ಪಹಾ ವೋ। ಜೀವಾಚಾ ಹಾರಪೇ ಜೀವಭಾವೋ । ಶಿವಾ ಶಿವಪದೀ ಠಾವೋ । ಜ್ಯಾಚಾ ವಚನ ಗೌರವೋ ನಾಂದವೀ ॥೪೦॥

ಈ ಈರ್ವರಿಂದ ಈ ಜಗತ್ತು ಉತ್ಪನ್ನವಾಗಿರುವುದು. ಆದರೆ ಇದರಲ್ಲಿ ಮೂರನೆಯ ಯಾವ ಭಾಗವೂ ಕಾಣಿಸುವುದಿಲ್ಲ. ಭಿನ್ನ ವಿಭಾಗವನ್ನು ತೋರಿಸುವ ಪ್ರಯತ್ನ ಮಾಡಿದರೆ ಅನನ್ಯಭಾವದಿಂದಾಗಿರುವ ಐಕ್ಯವು ಭಂಗವಾಗುವುದಿಲ್ಲ ॥೨೭॥ ಸಂಪೂರ್ಣ ಮೂರು ಲೋಕಗಳಲ್ಲಿ ಶೋಧ ಮಾಡಿದರೂ ಮೂರನೆಯ ಕಾರಣವು ಕಾಣುವುದಿಲ್ಲ. ಪ್ರಕೃತಿ ಮತ್ತು ಪುರುಷ ಇವರಿಬ್ಬರೇ ತುಂಬಿ ತುಳುಕುತ್ತಿರುವರು. ಸರ್ವತ್ರವೂ ಇವರಿಬ್ಬರ ಐಕ್ಯವೇ ತೋರುತ್ತಿರುವುದು ॥೨೮॥ ಈ ಇಬ್ಬರ ಅತ್ಯಂತ ಪ್ರೇಮವು ಹೇಗಿದೆ ಎಂದರೆ ಈ ಇಬ್ಬರೂ ಒಬ್ಬರಿಂದೊಬ್ಬರು ಏಕರೂಪರಾಗಿರುವರು. ಒಂದು ಪರಮಾಣುವಿನಲ್ಲಿಯೂ ಕೂಡ ಈ ಇಬ್ಬರು ಸುಖವಾಗಿ ವರ್ತಿಸುತ್ತಿರುವರು ॥೨೯॥ ಪತಿಯು ಇಲ್ಲದಿದ್ದರೆ ಈ ಪತಿವ್ರತೆಯು ಸಂಪೂರ್ಣವಾಗಿ ಇಲ್ಲದಾಗಿಬಿಡುವಳು ಮತ್ತು ಪತಿಯು ತನ್ನ ಸ್ತ್ರೀ ಹೊರತಾಗಿ ಇದ್ದೂ ಇಲ್ಲದಂತಾಗುವನು. ಆತನು ವಾಸ್ತವಿಕವಾಗಿ ಏನೂ ಅಲ್ಲದವನು ಪತಿಯಾಗಿರುವನು ॥೩೦॥ ನಿಜವಾಗಿಯೂ ಶಿವನೆಂದರೆ ಆತನು ಸದೈವ ನಿಃಸಂಗ, ನಿಷ್ಕ್ರಿಯ, ಇಂದ್ರಿಯರಹಿತನಾಗಿರುವನು. ಪರಂತು ಆತನಿಗೂ ಕೂಡ ಸ್ತ್ರೀ ಪ್ರೇಮವು ವಶಮಾಡಿಕೊಂಡು ಅನೇಕ ಪ್ರಕಾರದ ಸುಖದುಃಖಗಳ ಕಷ್ಟವನ್ನು ಭೋಗಿಸಲು ಹಚ್ಚಿರುವುದು ॥೩೧॥ ಈ ಪ್ರಕಾರವಾಗಿ ಪ್ರಕೃತಿಯು ತನ್ನ ಪತಿಯನ್ನು ಪ್ರಪಂಚದಲ್ಲಿ ನೂಕಿರುವಳು ಮತ್ತು ಆತನಲ್ಲಿ ತನ್ನ ದರ್ಬಾರದ ಆಜ್ಞೆಯನ್ನು ಪ್ರದರ್ಶಿಸುವಳು ॥೩೨॥ ಪ್ರಕೃತಿಯು ಪತಿವ್ರತಳಾಗಿರುವಳು. ಈಕೆಯು ಪತಿಯಲ್ಲಿ ಮೋಸವನ್ನು ಮಾಡಲಾರಳು. ಈಕೆಯು ಅನೇಕ ಕರ್ಮಗಳಲ್ಲಿ ಕಷ್ಟಗಳನ್ನು ಸೋಸುತ್ತ ಭಿನ್ನಭಿನ್ನ ಸುಖದುಃಖಗಳನ್ನು ತನ್ನ ಪತಿಗೆ ಕೊಡುತ್ತಿರುವಳು. ॥೩೩॥ ಇನ್ನೊಂದು ಆಶ್ಚರ್ಯವನ್ನು ಏನೆಂದು ಹೇಳಬೇಕು ? ಪತ್ನಿಯು ದುಡಿದು ತಂದದ್ದನ್ನು ಪತಿಯು ಸೇವಿಸುತ್ತಿರುವನು. ಈಕೆಯನ್ನು ಬಿಟ್ಟರೆ ಈತನಿಗೆ ಎಲ್ಲಿಯೂ ಒಂದು ಕವಡಿಯೂ ಕೂಡ ದೊರೆಯಲಾರದು ॥೩೪॥ ಪ್ರಕೃತಿಯು ಪತಿವ್ರತೆಯರಲ್ಲಿ ಅತ್ಯಂತ ಶ್ರೇಷ್ಠರಾಗಿರುವಳು. ಈಕೆಯು ತನ್ನ ಗುಣಗಳಿಂದ ತನ್ನ ಪತಿಯನ್ನು ವಶಮಾಡಿಕೊಂಡಿರುವಳು ಮತ್ತು ಯಾವಾಗಲೂ ಸೂಕ್ಷ್ಮ ವಾಸನೆಗಳ ಸೇವನೆಯನ್ನು ಮಾಡಿಸುತ್ತಿರುವಳು ॥೩೫॥ ಪ್ರಕೃತಿಯ ಆಗ್ರಹದಿಂದ ಆತನು ಆಕೆಯ ಜೊತೆಯಲ್ಲಿ ಜಲಕ್ರೀಡೆಯನ್ನು ಮಾಡುತ್ತಿರುವನು. ಆ ಸಮಯದಲ್ಲಿ ಆಕೆಯು ಆತನನ್ನು ಮುಳುಗಿಸಿಬಿಡುವಳು ಮತ್ತು ಕೆಲವೊಮ್ಮೆ ಈತನು ಆಕೆಯನ್ನು ಮುಳುಗಿಸಿಬಿಡುವನು ॥೩೬॥ ಹೀಗಿರುವ ಪ್ರಕೃತಿಯ ಸಂಗತಿಯಲ್ಲಿ ಪುರುಷನ ಹಿಂದೆ ಪಂಚಮಹಾಭೂತಗಳು ಹತ್ತಿಕೊಳ್ಳುವುವು. ಆಗ ಆತನು ಸಾಕಾರನಾಗಿ ಜನ್ಮಮರಣಗಳ ಮಡುವಿನಲ್ಲಿ ಮುಳುಗುತ್ತಿರುವನು ॥೩೭॥ ಹೀಗೆ ಪ್ರಕೃತಿಯ ಭಿಡೆಯಿಂದ ಪುರುಷನು ಹುಚ್ಚನಾಗಿಬಿಡುವನು ಮತ್ತು ವಿಚಾರಗಳ ಮ..ಲ ರೂಪವನ್ನು ಮರೆತುಬಿಡುವನು. ನಿಜವಾಗಿಯೂ ಪ್ರಕೃತಿಯೇ ಈತನನ್ನು ದೀನನನ್ನಾಗಿ ಮಾಡಿರುವಳು ॥೩೮॥ ಆತನು ತನ್ನ ಪೂರ್ಣತ್ವವನ್ನು ಮರೆತುಬಿಡುವನು ಮತ್ತು ಜೀವಶಿವದ ಭೇದವನ್ನು ಸ್ವತಃ ತಾನೇ ಭೋಗಿಸುತ್ತ ಕುಳಿತುಕೊಳ್ಳುವನು. ಆಗ ಆತನಿಗೆ ಪುನಃ ತನ್ನ ಮೂಲ ಆತ್ಮಸ್ವರೂಪದಲ್ಲಿ ಒಯ್ಯಬೇಕಾದರೆ ಒಬ್ಬ ಸದ್ಗುರು ಮಾತ್ರ ಆಗಿರುವನು ॥೩೯॥ ಗುರುಗಳ ಒಂದು ಶಬ್ದ ಮಾತ್ರದಿಂದ ಜೀವದ ಜೀವತ್ವವು ಇಲ್ಲದಾಗುವುದು. ಶಿವನಿಗೆ ತನ್ನ ಶಿವತ್ವದ ಸ್ಥಾನವು ದೊರೆಯುವುದು. ಇಷ್ಟೊಂದು ಅವರ ವಚನದ ದೊಡ್ಡ ಪ್ರಭಾವವಾಗಿರುವುದು ॥೪೦॥

ಜ್ಯಾಚೇ ಭಾವಾರ್ಥೇ ಐಕತಾ ಗೋಠೀ । ಅಹಂಕಾರೂ ನಿಮೇ ಉಠಾಉಠೀ । ಜನ್ಮ ಮರಣಾಂಸೀ ಪಡೇ ತುಟೀ । ನ ದಿಸೇ ದೃಷ್ಟೀ ಭವಭಯ॥೪೧॥ ಜ್ಯಾಚಿಯಾ ಕೃಪಾದೃಷ್ಟೀಪುಢೇ । ಜೀವಶಿವಾಂಚೇ ಫಿಟೇ ಬಿರಡೇ । ಮಾಯಾ ಮಿಥ್ಯಾತ್ವೇ ಸಮೂಳ ಉಡೇ । ಪೂರ್ಣತ್ವಾಚೇ ಉಘಡೇ ಭಾಂಡಾರ ॥೪೨॥ ಶಿವೂ ಭುಲವಿಲಾ ಶಿವತ್ವಾಸೀ । ಯಾವಯಾ ತೋ ನಿಜಪದಾಸೀ। ಆಜ್ಞಾ ಜೈ ಪುಸೇ ಸದ್ಗುರುಸೀ । ತೈಚಿ ಶಿವಾಸೀ ಶಿವತ್ವ ॥೪೩॥ ಏವಢೀ ಮಹಿಮಾ ಸದ್ಗುರುಸೀ । ವಚನೇ ಕೇವೀ ವಾನೂ ತ್ಯಾಸೀ । ತಂವ ವಾನಿತೇ ವಾಣೀನೇ ವಾನಾವಯಾಸೀ । ವದವೀ ವಾಚೇಸೀ ಗುರುರಾವೋ ॥೪೪॥ ತೇಥ ಏಕ ಮೀ ವಾನಿತಾ । ಹೇ ಕೋಣೇ ಘ್ಯಾವೇ ಆಪುಲೇ ಮಾಥಾ । ಗುರೂನೇ ಹರಿತಲೀ ಅಹಂತಾ । ತೇಥ ಮೀ ಏಕ ಕರ್ತಾ ಘಡೇ ಕೇವೀ ॥೪೫॥ ತೇಥ ಮೀಪಣೇ ಘ್ಯಾವೀ ಅಹಂತಾ । ತಂವ ಗುರೂಚಿ ಮೀಪಣಾ ಆಂತೌತಾ। ಗುರೂವೇಗಳಾ ಠಾವ ನಾಹೀ ರಿತಾ। ಮೀಪಣಾಚೇ ಮಾಥಾ ಗುರುರಾವೋ॥೪೬॥ ಮಾಝೀ ಜೇ ಕಾ ಮೀಪಣ । ತೇ ಸದ್ಗುರು ಝಾಲಾ ಆಪಣ । ತೇವ್ಹಾ ರೂಪ ಏಕ ನಾಂವೇ ಭಿನ್ನ । ಏಕಾ ಜನಾರ್ದನ ಏಕತ್ವೇ ॥೪೭॥ ಅವಘಾ ಜನಾರ್ದನಚಿ ದೇಖಾ । ತೋಚಿ ಉಪನಾಂವೇ ಝಾಲಾ ಏಕಾ । ತೇಣೇ ನಾಮೇ ಶ್ರೀಭಾಗವತ ದೇಖಾ। ದೇಶಭಾಖಾ ಅರ್ಥವೀ॥೪೮॥ ತೇವಿಸಾವೇ ಅಧ್ಯಾಯಾಚೇ ಅಂತೀ । ದೇವೋ ಬೋಲಿಲಾ ಉದ್ಧವಾಪ್ರತೀ । ದ್ವಂದ್ವಭೋಗಾಂಚೀ ನಿಜಪ್ರಾಪ್ತೀ । ಸಾಹಾವೀ ಶಾಂತೀ ಧರೋನಿ ॥೪೯॥ ಜ್ಯಾಂಸೀ ಬಾಣಲೀ ಅಢಳ ಶಾಂತೀ । ತೇ ಮಜ ಅಜಿತಾತೇ ಜಿಂಕಿತೀ । ತೇಚಿ ಸಾಚಾರ ಪರಮಾರ್ಥೀ । ಸ್ವಮುಖೇ ಶ್ರೀಪತೀ ಬೋಲಿಲಾ ॥೫೦॥ ತೇ ಐಕೋನ ಕೃಷ್ಣವಚನ। ಉದ್ಧವಾಚೇ ದಚಕಲೇ ಮನ । ದ್ವಂದ್ವಸಹಿಷ್ಣುತಾ ಅತಿಕಠಿಣ । ಕೈಸೇನಿ ಆಪಣ ಸಾಹಾವೀ ॥೫೧॥ ದ್ವಂದ್ವಸಹಿಷ್ಣುತಾಸಾಧನ । ಪುಸತಾ ಉಬಗೇಲ ಶ್ರೀಕೃಷ್ಣ । ಐಶಿಯಾ ಭಿಡಾ ಉದ್ಧವ ಪೂರ್ಣ । ಧರೋನಿ ಮೌನರಾಹಿಲಾ ॥೫೨॥ ತೋ ಉದ್ಧವಾಚಾ ಅಭಿಪ್ರಾವೋ । ಜಾಣೋನಿಯಾ ದೇವಾಧಿದೇವೋ । ದ್ವಂದ್ವಸಹಿಷ್ಣುತಾ ಉಪಾವೋ । ಸಮೂಳ ಪಹಾ ವೋ ಸಾಂಗತ ॥೫೩॥ ಅದ್ವಯತ್ವೇ ಪರಿಪೂರ್ಣ । ಪ್ರಕತೀಹೂನಿ ಪುರುಷ ಭಿನ್ನ । ಹೇ ಆಕಳಲ್ಯಾ ನಿಜಜ್ಞಾನ । ದ್ವಂದ್ವಬಂಧನ ಬಾಧೀನಾ ॥೫೪॥

ಭಕ್ತಿ ಭಾವದಿಂದ ಸದ್ಗುರುಗಳ ಉಪದೇಶವನ್ನು ಕೇಳಲು ಆಗ ಅಹಂಕಾರವು ತಾನಿದ್ದ ಸ್ಥಳದಲ್ಲಿಯೇ ಲೋಪವಾಗಿಬಿಡುವುದು. ಜನ್ಮ ಮರಣದ ಬಂಧನವು ಮುರಿದುಬೀಳುವುದು ಮತ್ತು ಸಂಸಾರದ ಭಯವು ದೃಷ್ಟಿಗೆ ಕೂಡ ಬೀಳುವುದಿಲ್ಲ ॥೪೧॥ ಆತನ ಕೃಪಾದೃಷ್ಟಿಯಿಂದ ಜೀವಶಿವರ ಬಂಧನವು ಮುರಿದುಹೋಗುವುದು ಮಾಯೆ ಎಂಬುದು ಸುಳ್ಳಾಗಿ ಪರಿಪೂರ್ಣವಾಗಿ ಇಲ್ಲದಾಗಿ ಬಿಡುವುದು ಮತ್ತು ಪೂರ್ಣತ್ವದ ಭಾಂಡಾರವು ತೆರೆಯುವುದು ॥೪೨॥ ಯಾವ ಶಿವನು ತನ್ನ ಶಿವತ್ವಕ್ಕೆ ಭುಲಾಯಿಸಿದನು. ಅಂದರೆ ಆತನು ತನ್ನ ಮೂಲವಾದ ನಿಜಪದಕ್ಕೆ ಬರುವುದಕ್ಕಾಗಿ ಗುರುವಿನಲ್ಲಿ ಆಜ್ಞೆಯನ್ನು ಬೇಡುವನು. ಆಗ ಆ ಶಿವನಿಗೆ ತನ್ನ ಮೂಲದ ಶಿವಸ್ವರೂಪವು ಪ್ರಾಪ್ತವಾಗುವುದು ॥೪೩॥ ಸದ್ಗುರುಗಳ ಮಹಿಮೆಯು ಹೀಗೆ ಬಹಳ ದೊಡ್ಡದಾಗಿರುವುದು. ಆತನ ವರ್ಣನೆಯನ್ನು ಯಾವ ಶಬ್ದಗಳಿಂದ ಹೇಗೆ ಮಾಡಬೇಕು? ಈ ಗೌರವದ ವರ್ಣನೆಯನ್ನು ಮಾಡಲು ನನ್ನ ವಾಣಿಯಿಂದ ಸದ್ಗುರುಗಳೇ ನುಡಿಸುತ್ತಿರುವರು ॥೪೪॥ ಈ ಎಲ್ಲಕ್ಕೂ ನಾನೊಬ್ಬನೇ ವರ್ಣನೆ ಮಾಡುವವನೆಂಬ ಈ ಶ್ರೇಯಸ್ಸನ್ನು ತನ್ನ ತಲೆಯಮೇಲೆ ಯಾರು ಹೊರಬೇಕು? ಶ್ರೇಷ್ಠನಾಗಿರುವ ಸದ್ಗುರುಗಳೇ ನನ್ನ ಸರ್ವ ಅಹಂಕಾರವನ್ನು ಕಿತ್ತುಕೊಂಡಿರಲು ಆಗ ನಾನೊಬ್ಬ ಕರ್ತನು ಎನ್ನುವುದು ಹೇಗೆ ಸಿದ್ಧವಾಗುವುದು? ॥೪೫॥ ಅಲ್ಲಿ ನಾನೆಂಬುವ ಅಹಂಕಾರವನ್ನು ಸ್ವೀಕರಿಸಿದ್ದರೂ ಕೂಡ ನಾನು ಎಂಬುವ ಒಳಗಡೆಯಲ್ಲಿ ಸದ್ಗುರುರಾಯರೇ ಕುಳಿತುಕೊಂಡಿರುವರು. ಗುರುಗಳ ಹೊರತಾಗಿ ಎಲ್ಲಿಯೂ ಸ್ವಲ್ಪವೂ ಕೂಡ ಬರಿದಾದ ಸ್ಥಳವು ಇಲ್ಲವೇ ಇಲ್ಲ. ಅಂದಮೇಲೆ ನಾನು ಎನ್ನುವುದನ್ನು ಹೊತ್ತುಕೊಂಡ ತಲೆಯಮೇಲೆಯೂ ಗುರುಗಳೇ ಇರುವರು ॥೪೬॥ ನನ್ನಲ್ಲಿನ ನಾನು ಎಂಬುವ ಸ್ಥಾನದಲ್ಲಿ ಸದ್ಗುರುಗಳೇ ಆಗಿರುವರು. ಆದ್ದರಿಂದ ನಮ್ಮಿಬ್ಬರ ರೂಪವು ಒಂದೇ ಆಗಿರುವುದು. ಆದರೆ ನಾಮವು ಮಾತ್ರ ಭಿನ್ನವಾಗಿ ರುವುದು. ಏಕಾ ಮತ್ತು ಜನಾರ್ದನ ಈ ಎರಡೂ ಕೂಡ ಐಕ್ಯರೂಪದಿಂದ ಒಂದೇ ಆಗಿರುವುವು ॥೪೭॥ ಸರ್ವತ್ರವೂ ಜನಾರ್ದರೇ ತುಂಬಿರುವರು. ಆತನೇ ಉಪನಾಮದಿಂದ ಏಕನಾಥನಾಗಿರುವನು ಮತ್ತು ಅದೇ ನಾಮದಿಂದ ಆತನು ಶ್ರೀಮದ್ ಭಾಗವತದ ಅರ್ಥವನ್ನು ಮರಾಠೀ ಭಾಷೆಯಲ್ಲಿ ಮಾಡಿಸುತ್ತಿರುವನು ॥೪೮॥ ಇಪತ್ಮೂರನೆಯ ಅಧ್ಯಾಯದ ಕೊನೆಯಲ್ಲಿ ದ್ವಾರಕಾಧೀಶನು ಉದ್ಧವನಿಗೆ ಮನದಲ್ಲಿ ಅಖಂಡವಾದ ಶಾಂತಿಯನ್ನು ಧರಿಸಿ ಸುಖದುಃಖಾದಿ ದ್ವಂದ್ವಗಳನ್ನು ಸಹಿಸಬೇಕೆಂದು ಹೇಳಿದನು ॥೪೯॥ ಯಾರಲ್ಲಿ ಶಾಂತಿಯು ಅಖಂಡವಾಗಿ ಇರುವುದೋ, ಅವರು ಅಜಿಂಕ್ಯನಾದ ನನ್ನನ್ನು ಜಯಿಸುವರು. ಅವರೇ ನಿಜವಾದ ಪರಮಾರ್ಥಿಗಳಾಗುವರು. ಹೀಗೆ ಭಗವಾನ ಶ್ರೀಕೃಷ್ಣನು ಸ್ವತಃ ತನ್ನ ಮುಖದಿಂದ ವರ್ಣನೆಯನ್ನು ಮಾಡಿರುವನು ॥೫೦॥ ಈ ಯಾವ ಶ್ರೀಗೋಪಾಲಕೃಷ್ಣನ ವಚನಗಳನ್ನು ಕೇಳಿ ಉದ್ಧವನ ಮನದಲ್ಲಿ ಭಯ ಉಂಟಾಯಿತು. ಏಕೆಂದರೆ ಈ ಯಾವ ದ್ವಂದ್ವಗಳನ್ನು ಸಹಿಸುವುದು ಅತ್ಯಂತ ಮಹಾ ಕಠಿಣವಾಗಿರುವುದು. ಇದು ನನಗೆ ಹೇಗೆ ಸಾಧಿಸಲು ಸಾಧ್ಯ? ಎಂದು ಅನಿಸಿತು ॥೫೧॥ ಈ ಯಾವ ದ್ವಂದ್ವಸಹಿಷ್ಣುತೆಯ ಸಾಧನೆ ಯಾವುದು ಎಂದು ಕೇಳಿದರೆ ಶ್ರೀಕೃಷ್ಣನು ತನ್ನ ಮೇಲೆ ಕೋಪಗೊಳ್ಳುವನೋ ಏನೋ ಎಂಬ ವಿಚಾರವನ್ನು ಉದ್ಧವನು ಮಾಡಿ ಮೌನವನ್ನು ಧರಿಸಿ ಸುಮ್ಮನೇ ಕುಳಿತುಬಿಟ್ಟನು. ॥೫೨॥ ಉದ್ಧವನ ಮನದಲ್ಲಿನ ಈ ಉದ್ದೇಶವನ್ನು ಶ್ರೀಕೃಷ್ಣನು ಅರಿತುಕೊಂಡನು. ಹಾಗೆಯೇ ದ್ವಂದ್ವವನ್ನು ಸಹಿಸಿಕೊಳ್ಳುವ ಉಪಾಯವನ್ನು ಹೇಳಲಿಕ್ಕೆ ಆರಂಭಿಸಿದನು ॥೫೩॥ ಪುರುಷನು ಪರಿಪೂರ್ಣವಾದ ಅದ್ವೈತಭಾವದಿಂದ ಪ್ರಕೃತಿಯಿಂದ ಅತ್ಯಂತ ಭಿನ್ನನಾಗಿರುವನು. ಈ ಆತ್ಮಜ್ಞಾನವು ಒಮ್ಮೆ ಮನದಲ್ಲಿ ನಾಟಿಕೊಳ್ಳಲು ಆಗ ಯಾವುದೇ ಪ್ರಕಾರದ ದ್ವಂದ್ವಗಳು ಭಾಧೆಯನ್ನು ಕೊಡಲಾರವು ॥೫೪॥

ದ್ವಂದ್ವೇ ಜಿಣಾವಯಾ ಪೂರ್ಣ । ಪ್ರಕೃತಿ ಪುರುಷವಿವಂಚನ । ಉದ್ಧವೇ ನ ಕರಿತಾ ಪ್ರಶ್ನ । ಸ್ವಯೇ ಶ್ರೀಕೃಷ್ಣ ಸಾಂಗತ ।೫೫॥ ಭಕ್ತ ಅಂತರೀಚೇ ಜಾಣತಾ । ಯಾಲಾಗೀ ಅಂತರ್ಯಾಮೀ ತತ್ತ್ವತಾ । ತೋ ನಿಜಭಕ್ತಾಂಚಿಯಾ ಸ್ವಾರ್ಥಾ । ಪೂರ್ಣ ಪರಮಾರ್ಥಾ ಸಾಂಗತ ।೫೬॥ ನಿಜಭಕ್ತಾಂಚೇ ಮನೋಗತ । ಜಾಣೋನಿಯಾ ಶ್ರೀಕೃಷ್ಣನಾಥ । ಕರಾವಯಾ ಭಕ್ತಹಿತ । ಕೃಪೇನೇ ಸಾಂಗತ ಕೃಪಾಳೂ ।೫೭॥ ಜಗೀ ಧನ್ಯಭಾಗ್ಯ ಉದ್ಧವಾಂಚೇ । ಕೃಷ್ಣ ದೈವತ ತಿಹೀ ಲೋಕೀಂಚೇ । ಕೃಪಾ ವೋರಸೋನಿಯಾ ಸಾಚೇ । ಪ್ರಕೃತಿಪುರುಷಾಂಚೇ ನಿಜ ಸಾಂಗೇ ।೫೮॥ ಆಶಂಕೇಚೇ ನಿರೂಪಣ । ಉದ್ಧವೇ ನ ಸಾಂಗತಾಹೀ ಜಾಣ । ತೇ ಜಾಣೋನಿಯಾ ಶ್ರೀಕೃಷ್ಣ । ಕೃಪಾ ನಿರೂಪಣ ನಿರೂಪೀ ।೫೯॥ ಕೃಷ್ಣ ಮ್ಹಣೇ ಜ್ಯಾಸೀ ತಾರೀನ । ತೋ ಪಹಿಲಾಚಿ ತರಲಾ ಜಾಣ । ಕರಾವಯಾ ಜಗಾಚೇ ಉದ್ಧರಣ । ಕೃಪೇ ಶ್ರೀಕೃಷ್ಣ ಬೋಲತ ।೬೦॥ ಧೇನು ವತ್ಸಾಚೇನಿ ಲೋಭೇ । ಜೇವೀ ಘರಾಪುರತೇ ದುಭೇ । ತೇವೀ ಉದ್ಧವಾಚೇನಿ ವಾಲಭೇ । ಜಗ ಪದ್ಮನಾಭೇ ಉದ್ಧರಿಲೇ ।೬೧॥

ಶ್ರೀಭಗವಾನುವಾಚ :-

ಅಥ ತೇ ಸಂಪ್ರವಕ್ಷ್ಯಾಮಿ ಸಾಂಖ್ಯಂಪೂರ್ವೈರ್ವಿನಿಶ್ಚಿತಮ್ ।
ಯದ್ವಿಜ್ಞಾಯ ಪುಮಾನ್ ಸದ್ಯೋ ಜಹ್ಯಾದ್ವೈಕಲ್ಪಿಕಂ ಭ್ರಮಮ್ ।೧॥

ಅರ್ಥ:- ಶ್ರೀಕೃಷ್ಣನು ನುಡಿದನು ; ಹೇ ಪ್ರಿಯ ಉದ್ಧವಾ, ನಾನು ನಿನಗೀಗ ಸಾಂಖ್ಯಶಾಸ್ತ್ರದ ನಿರ್ಣಯವನ್ನು ಹೇಳುವೆ. ಪ್ರಾಚೀನ ಕಾಲದಿಂದ ಋಷಿಮುನಿಗಳು ಇದರ ನಿಶ್ಚಯವನ್ನು ಮಾಡಿರುವರು. ಜೀವವು ಇದನ್ನು ಎಂದು ಯೋಗ್ಯ ಪ್ರಕಾರದಲ್ಲಿ ತಿಳಿಯುವುದೋ, ಆಗ ಆತನು ಭೇದಬುದ್ಧಿಯಿಂದಾಗುವ ಸುಖದುಃಖಾದಿರೂಪ ಭ್ರಮವನ್ನು ತತ್ಕಾಲದಲ್ಲಿ ತ್ಯಜಿಸುವನು.

ಜೋ ಯೋಗಿಯಾಂಚಾ ಯೋಗೇಂದ್ರ । ಜೋ ಜ್ಞಾನಿಯಾಂಚಾ ಜ್ಞಾನೇಂದ್ರ । ಜೋ ಭಕ್ತಚಿತ್ತಚಕೋರಚಂದ್ರ । ಜೋ ಯಾದವೇಂದ್ರ ಯದುವಂಶೀ ।೬೨॥ ಜೋ ಪ್ರಕೃತಿಪುರುಷಾಹೂನಿ ಪರ । ತೋ ಸ್ವಯೇ ಬೋಲೇ ಶಾರ್ಙ್ಗಧರ । ಉದ್ಧವಾ ದ್ವಂದ್ವಸಹನಪ್ರಕಾರ । ಅತಿಗುಹ್ಯ ವಿಚಾರ ಅವಧಾರೀ ।೬೩॥ ಜೇ ಐಕತಾಂಚಿ ನಿರೂಪಣ । ಸುಖದುಃಖಾತೀತ ಆಪಣ । ಹೇ ಸಂಪೂರ್ಣ ಪಾವೇ ಖೂಣ । ತೇ ಗುಹ್ಯ ಜ್ಞಾನ ಅವಧಾರೀ ।೬೪॥ ಮೀ ಕಪಿಲರೂಪೇ ಅವತರೂನೀ । ಪ್ರಕೃತಿಪುರುಷ ವಿವಂಚೋನೀ । ಉಪದೇಶಿಲೀ ನಿಜಜನನೀ । ತೇ ಜುನೀ ಕಹಾಣೀ ಸಾಂಗೇನ ।೬೫॥

ಆದ್ದರಿಂದ ದ್ವಂದ್ವ ವಿಷಯಕ್ಕೆ ಪರಿಪೂರ್ಣವಾಗಿ ವಿಜಯವನ್ನು ಸಾಧಿಸಲು ಪ್ರಕೃತಿಪುರುಷರ ವಿವೇಚನೆಯನ್ನು ಉದ್ಧವನು ಕೇಳದಿದ್ದರೂ ದಯಾಸಾಗರನಾದ ಭಗವಾನ ಶ್ರೀಕೃಷ್ಣನು ತಾನೇ ಮುಂದಾಗಿ ಹೇಳುತ್ತಿರುವನು ।೫೫॥ ಶ್ರೀಕೃಷ್ಣನು ತನ್ನ ಪ್ರಿಯ ಭಕ್ತರ ಅಂತಃಕರಣದಲ್ಲಿ ಇರುವುದನ್ನು ತಿಳಿಯುವವನಾದ್ದರಿಂದ ಆತನಿಗೆ ಅಂತರ್ಯಾಮೀ ಎಂದು ಕರೆಯುವರು. ಆತನು ತನ್ನ ಭಕ್ತನ ಸರ್ವಕಲ್ಯಾಣಕ್ಕಾಗಿ ಪೂರ್ಣ ಪರಮಾರ್ಥವನ್ನು ಹೇಳುತ್ತಿರುವನು ।೫೬॥ ನಿಜಭಕ್ತನ ಮನೋಗತವನ್ನು ತಿಳಿದು ಶ್ರೀಕೃಷ್ಣನು ಭಕ್ತನ ಹಿತಕ್ಕಾಗಿ ಕೃಪೆದೋರಿ ಹೇಳುತ್ತಿರುವನು ।೫೭॥ ಜಗತ್ತಿನಲ್ಲಿ ಉದ್ಧವನ ಭಾಗ್ಯವು ನಿಜವಾಗಿಯೂ ಧನ್ಯವಾಗಿದೆ. ಮೂರು ಲೋಕಗಳಿಗೆ ದೇವರಾದ ಶ್ರೀಕೃಷ್ಣನು ನಿಜವಾಗಿ ಅಖಂಡ ಕೃಪೆಯ ಮಳೆಗರೆದು ಪ್ರಕೃತಿ ಪುರುಷರ ಗುಹ್ಯ ಜ್ಞಾನವನ್ನು ಉದ್ಧವನಿಗೆ ಹೇಳಲಾರಂಭಿಸಿದನು ।೫೮॥ ಉದ್ಧವನು ತನ್ನ ಮನದಲ್ಲಿರುವ ಅನುಮಾನಕ್ಕಾಗಿ ಪ್ರಶ್ನೆಯನ್ನು ಕೇಳದಿದ್ದರೂ ಕೂಡ ಶ್ರೀಕೃಷ್ಣನು ಅದನ್ನು ತಿಳಿದುಕೊಂಡನು. ತದನಂತರ ಕೃಪೆಯಿಂದ ಅದಕ್ಕಾಗಿ ನಿರೂಪಣೆಯನ್ನು ಮಾಡಹತ್ತಿದನು ।೫೯॥ ಶ್ರೀಕೃಷ್ಣ ಪರಮಾತ್ಮನು ಯಾರನ್ನು ಉದ್ಧರಿಸಬೇಕೆಂದು ಇಚ್ಛಿಸುವನೋ ಆತನು ತಕ್ಷಣ ಉದ್ಧಾರನಾದನೆಂದು ತಿಳಿಯಬೇಕು. ಈಗ ಸರ್ವ ಜಗತ್ತಿನ ಉದ್ಧಾರವನ್ನು ಮಾಡುವುದಕ್ಕಾಗಿ ಶ್ರೀಕೃಷ್ಣನು ಕೃಪೆಮಾಡಿ ಉಪದೇಶವನ್ನು ಮಾಡುತ್ತಿರುವನು ।೬೦॥ ಹೇಗೆ ಆಕಳು ತನ್ನ ಕರುವಿನ ನಿಮಿತ್ತ ಮಾಡಿ ಮನೆಯವರಿಗೆಲ್ಲರಿಗೂ ಹಾಲನ್ನು ಪೂರೈಸುವುದೋ, ಅದರಂತೆ ಪದ್ಮನಾಭನಾದ ಶ್ರೀಕೃಷ್ಣನು ಉದ್ಧವನ ಪ್ರೇಮದಿಂದ ಸರ್ವ ಜಗತ್ತಿನ ಉದ್ಧಾರವನ್ನು ಮಾಡಿದನು ।೬೧॥

ಯಾವ ಯೋಗಿಗಳವರಲ್ಲಿ ಶ್ರೇಷ್ಠನಾಗಿರುವ ಯೋಗೀಶ್ವರನು, ಜ್ಞಾನಿಗಳವರಲ್ಲಿ ಜ್ಞಾನೇಂದ್ರನು, ಭಕ್ತರ ಚಿತ್ತರೂಪ ಚಕೋರಕ್ಕೆ ತೃಪ್ತಗೊಳಿಸುವ ಚಂದ್ರಮನು,ಯದುವಂಶದಲ್ಲಿನ ಯಾದವ ಶ್ರೇಷ್ಠನು. ।೬೨॥ ಯಾವ ಪ್ರಕೃತಿಪುರುಷದಿಂದ ಭಿನ್ನನಾಗಿರುವ ಶ್ರೀಕೃಷ್ಣನು ಹೀಗೆ ಹೇಳಿದನು. ಹೇ ಉದ್ಧವಾ, ದ್ವಂದ್ವಗಳನ್ನು ಸಹಿಸಿಕೊಳ್ಳುವ ಪ್ರಕಾರವು ಅತ್ಯಂತ ಗೂಢವಾಗಿರುವುದು. ಅದನ್ನು ನಾನು ನಿನಗೆ ಹೇಳುವೆನು, ಅದಕ್ಕಾಗಿ ನೀನು ಲಕ್ಷಪೂರ್ವಕವಾಗಿ ಕೇಳು ।೬೩॥ ಯಾವ ಈ ನಿರೂಪಣೆಯನ್ನು ಕೇಳುತ್ತಲೇ ತಾನು ಸುಖದುಃಖಗಳಿಂದ ಪರಿಪೂರ್ಣವಾಗಿ ಭಿನ್ನನಾಗಿರುವೆ ಎಂಬ ರಹಸ್ಯವು ಸಂಪೂರ್ಣವಾಗಿ ಮನದಟ್ಟಾಗುವುದು. ಅಂತಹ ಯಾವ ಗುಹ್ಯ ಜ್ಞಾನವನ್ನು ಈಗ ಕೇಳು ।೬೪॥ ನಾನು ಪೂರ್ವದಲ್ಲಿ ಕಪಿಲಮುನಿಯ ರೂಪದಿಂದ ಅವತಾರವನ್ನು ತೆಗೆದುಕೊಂಡು ನನ್ನ ತಾಯಿಗೆ ಪ್ರಕೃತಿಪುರುಷರ ವಿಚಾರವನ್ನು ಅಂದರೆ ಸಾಂಖ್ಯಶಾಸ್ತ್ರದ ಉಪದೇಶವನ್ನು ಮಾಡಿದ್ದೆನು. ಆ ಯಾವ ಪ್ರಾಚೀನ ಕಥೆಯನ್ನು ನಾನೀಗ ನಿನಗೆ ಹೇಳುವೆನು ।೬೫॥

ಜೇ ಪರಿಸತಾ ಸಾವಧಾನ । ಸ್ವಯೇ ಹೋಇಜೇ ಜ್ಞಾನಸಂಪನ್ನ । ಪುರುಷಾಹೂನಿ ಪ್ರಕೃತಿ ಭಿನ್ನ। ಸುಖದುಃಖ ಜಾಣ ತೀಪಾಶೀ ॥೧೬॥ ಸುಖದುಃಖೇ ಮಾಯಿಕ ಪೂರ್ಣ । ಐಸೇ ಜ್ಯಾಸಿ ಕಳಲೇ ಜ್ಞಾನ । ತೆವ್ಹಾ ಭವಭಯಭ್ರಮ ದಾರುಣ । ತತ್ಕಾಳ ಜಾಣ ತೋ ಸಾಂಡೀ ॥೧೭॥ ಜೇವೀ ಮೋತಿಯಾಂಚಿ ಕಂಠಮಾಳಾ । ಭ್ರಮೇ ಸರ್ಪ ಭಾಸಲೀ ಡೋಳಾ । ತೇ ಭ್ರಮಾಂತೀ ಘಾಲಿತೀ ಗಳಾ । ನ ಬಾಧೀ ಕಂಟಾಳಾ ಸರ್ಪಭಯಾಚಾ ॥೧೮॥ ತೇವೀ ಶಿವಶಕ್ತಿವಿವಂಚನ । ತುಜ ಮೀ ಸಾಂಗೇನ ಸಂಪೂರ್ಣ । ಜೇ ಆಕರ್ಣಿತಾ ಸಾವಧಾನ । ದ್ವಂದ್ವೇ ಸಕಾರಣ ಹಾರಪತೀ ॥೧೯॥ ಬ್ರಹ್ಮ ಸುಖರೂಪ ಏಕಲೇಪಣೇ । ತೇಥ ಪ್ರಕೃತಿಪುರುಷ ಕೈಚೇ ದೋನೀ । ದ್ವಂದ್ವಸುಖದುಃಖೇ ಜ್ಯಾಪಾಸೋನೀ । ತ್ರಿಭುವನೀ ನ ಸಮಾತೀ ॥೨೦॥ ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಪ್ರಕೃತಿಪುರುಷಾಂಚೇ ಜನ್ಮ ಜಾಣ । ತೇ ಮುಖ್ಯ ಕಾರಣ ಸುಖದುಃಖಾ ॥೨೧॥

ಅಸೀಜ್‌ಜ್ಞಾನಮಥೋ ಅರ್ಥ ಏಕಮೇವಾವಿಕಲ್ಪಿತಮ್ ।
ಯದಾ ವಿವೇಕನಿಪುಣಾ ಆದೌಕೃತಯುಗೇಽಯುಗೇ ॥೨॥

ಅರ್ಥ:- ಅನೇಕ ಯುಗಗಳ ಪೂರ್ವದಲ್ಲಿ ಪ್ರಳಯಕಾಲದ ಮೊದಲಿನ ಸತ್ಯಯುಗದಲ್ಲಿ ಮತ್ತು ಮನುಷ್ಯನು ವಿವೇಕಿಯಾಗಿದ್ದಾಗ, ಆ ಸರ್ವ ಅವಸ್ಥೆಗಳ ಮಧ್ಯೆದಲ್ಲಿಯೂ ಕೂಡ ಈ ಯಾವ ಸಂಪೂರ್ಣ ದೃಶ್ಯ, ದೃಷ್ಟಾ, ಜಗತ್ ಮತ್ತು ವಿಕಲ್ಪಶೂನ್ಯ ಜೀವ ಮತ್ತು ಯಾವುದೇ ಪ್ರಕಾರದ ಭೇದರಹಿತವಾದ ಬ್ರಹ್ಮವು ಇತ್ತು.

ಜೇವೀ ನಿಜೇಲ್ಯಾ ಪುರುಷಾಚೀ ಛಾಯಾ । ಪುರುಷಾತಳೀ ಜಾಯ ಲಯಾ । ತೇವೀ ಸವಿಕಾರ ಮಿಳೋನಿ ಮಾಯಾ । ಬ್ರಹ್ಮ ಏಕಲ್ಯಾ ಏಕಾಕೀ ॥೨೨॥ ಬ್ರಹ್ಮ ಏಕಾಕೀ ಪರಿಪೂರ್ಣ । ಹೇಹೀ ಮ್ಹಣಾವಯಾ ಮ್ಹಣತೇ ಕೋಣ । ನಾಹೀ ನಾಮರೂಪ ವ್ಯಕ್ತಿ ಪೂರ್ಣ । ಬ್ರಹ್ಮೀ ಬ್ರಹ್ಮಪಣ ಸ್ಫುರೇನಾ ॥೨೩॥ ತೇಥ ನಾಹೀ ಯುಗಸಂಖ್ಯಾ ಕಾಳ ವೇಳ । ನಾಹೀ ದಿನ ಮಾನ ಘಟಿಕಾ ಪಳ । ನಾಹೀ ಶೂನ್ಯತ್ವೇ ಶೂನ್ಯ ಮಂಡಳ । ಬ್ರಹ್ಮ ಕೇವಳ ಪರಿಪೂರ್ಣತ್ವೇ ॥೨೪॥ ತೇಥ ಮೀ ಬ್ರಹ್ಮ ಹೇ ಸ್ಫುರೇ ಜೇ ಸ್ಫುರಣ । ತೇಚಿ ಮಾಯೇಚೇ ಮುಖ್ಯ ಲಕ್ಷಣ । ತೇಚಿ ಪ್ರಕೃತಿಪುರಷಾಂಚೇ ಜನ್ಮಸ್ಥಾನ । ಜಾವಳೀ ಫಳೇ ಜಾಣ ಜನ್ಮಲೀ ॥೨೫॥ ಜೇವೀ ಕಾ ಕವಳೂನಿಯಾ ಕಣ । ನಿಕಣ ಕೋಂಡಾ ವಾಢೇ ಆಪಣ । ತೇವೀ ಪುರುಷಯೋಗೇ ಪೂರ್ಣ । ಪ್ರಕೃತಿ ಜಾಣ ಥೋರಾವೇ ॥೨೬॥

ಈ ನನ್ನ ಮಾತುಗಳನ್ನು ಕೇಳಿದರೆ, ಕೇಳಿದ ಮನುಷ್ಯನು ಜ್ಞಾನಸಂಪನ್ನನಾಗುವನು. ಪುರುಷನಿಂದ ಪ್ರಕೃತಿಯು ಪರಿಪೂರ್ಣವಾಗಿ ಭಿನ್ನವಾಗಿರುವುದು ಮತ್ತು ಯಾವತ್ತೂ ದುಃಖಗಳು ಪ್ರಕೃತಿಯದ್ದಾಗಿರುವುದು. ಈ ಜ್ಞಾನವು ಆತನಿಗೆ ಪ್ರಾಪ್ತವಾಗುವುದು ॥೧೬॥ ಇರುವ ಸರ್ವ ಸುಖದುಃಖಗಳು ಇವು ಸಂಪೂರ್ಣವಾಗಿ ಮಾಯಿಕವಾಗಿರುವುವು. ಈ ಜ್ಞಾನವು ಯಾರಿಗಾಗುವುದೋ, ಆತನು ಅದೇ ವೇಳೆಯಲ್ಲಿ ಸಂಸಾರದ ಭಯದ ಮಹಾಭ್ರಮೆಯನ್ನು ತತ್ಕಾಲದಲ್ಲಿ ಬಿಟ್ಟುಬಿಡುವನು ॥೧೭॥ ಮುತ್ತಿನ ಸುಂದರವಾದ ಹಾರವು ಹಾವಿನಂತೆ ಕಂಡಾಕ್ಷಣಕ್ಕೆ, ಆದ ಭ್ರಮೆಯು ದೂರಾದನಂತರ ಅದೇ ಹಾರವನ್ನು ಕೊರಳಲ್ಲಿ ಧರಿಸುವರು ಮತ್ತು ಮನಸ್ಸಿಗೆ ಯಾವ ಹಾವಿನ ಭಯದ ತೊಂದರೆಯು ಆಗುವುದೇ ಇಲ್ಲ ॥೧೮॥ ಅದರಂತೆ ಇರುವ ಶಿವ ಮತ್ತು ಶಕ್ತಿ ಇವರ ವಿಚಾರವನ್ನು ನಾನು ನಿನಗೆ ಹೇಳುವೆನು. ಈ ವಿಚಾರವನ್ನು ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡಲು ಸರ್ವ ಪ್ರಕಾರದ ದ್ವಂದ್ವಗಳು ಪರಿಪೂರ್ಣವಾಗಿ ಇಲ್ಲದಾಗಿಬಿಡುವುವು ॥೧೯॥ ಬ್ರಹ್ಮವು ಇಂದು ಒಂದೇ ಒಂದಾಗಿ ಆನಂದರೂಪವಾಗಿರುವುದು. ಇದರಿಂದಾಗಿರುವ ಸುಖದುಃಖಗಳು ತ್ರಿಭುವನದಲ್ಲಿಯೂ ಹಿಡಿಸುವುದಿಲ್ಲ. ಹೀಗಿರುವ ಪ್ರಕೃತಿ ಮತ್ತು ಪುರುಷರ ನಿರ್ಮಾಣವು ಎಲ್ಲಿಂದಾಯಿತು? ॥೨೦॥ ಈ ಅರ್ಥದ ನಿರೂಪಣೆಯನ್ನು ಶ್ರೀಕೃಷ್ಣ ಪರಮಾತ್ಮನು ಸ್ವತಃ ಹೇಳುತ್ತಿರುವನು. ಪ್ರಕೃತಿ ಪುರುಷರ ಜನ್ಮವೇ ಮುಖ್ಯವಾಗಿ ಸುಖದುಃಖಗಳಿಗೆ ಕಾರಣವಾಗಿರುವುದು ॥೨೧॥

ಯಾವ ಪ್ರಕಾರವಾಗಿ ಮಲಗಿಕೊಂಡವನ ನೆರಳು ಆತನ ಅಂಗದ ಕೆಳಗೆ ಲಯವಾಗುವುದೋ, ಅದರಂತೆ ವಿಕಾರಾತ್ಮಕ ಮಾಯೆಯನ್ನು ನುಂಗಿಬಿಟ್ಟು ಬ್ರಹ್ಮವು ಪುನಃ ಒಂದೇ ಒಂದಾಗಿ ಉಳಿದುಕೊಳ್ಳುವುದು ॥೨೨॥ ಬ್ರಹ್ಮವು ಒಂದೇಯಾಗಿದ್ದು ಅದು ಪರಿಪೂರ್ಣಾತ್ಮಕವಾಗಿರುವುದು. ಆದರೆ ಹೀಗೆ ಹೇಳಸಲಿಕ್ಕೆ ಹುಟ್ಟಿದವರಾದರೂ ಯಾರಿರಬೇಕು ? ಏಕೆಂದರೆ ಆತನಿಗೆ ನಾಮವೂ ಇಲ್ಲ, ರೂಪವೂ ಇಲ್ಲ ಮತ್ತು ಪೂರ್ಣವಾದ ವ್ಯಕ್ತಿತ್ವವೂ ಇರುವುದಿಲ್ಲ. ಪರಿಪೂರ್ಣವಾದ ಬ್ರಹ್ಮನಲ್ಲಿ ಬ್ರಹ್ಮತ್ವದ ಸ್ಫುರಣವೂ ಕೂಡ ಇಲ್ಲ ॥೨೩॥ ಅದರಲ್ಲಿ ಯುಗಗಳ ಸಂಖ್ಯೆಗಳಿಲ್ಲ. ಕಾಲ ಮತ್ತು ವೇಳೆ ಇವು ಯಾವುವೂ ಇಲ್ಲ. ದಿನಗಳು ಇಲ್ಲ, ಘಳಿಗೆಗಳಲ್ಲ ,ನಿಮಿಷಗಳು ಇಲ್ಲ. ಶೂನ್ಯತ್ವದ ಶೂನ್ಯ ಮಂಡಳವೂ ಇಲ್ಲ. ಹೀಗೆ ಬ್ರಹ್ಮವು ಕೇವಲ ಪರಿಪೂರ್ಣ ಸ್ವರೂಪದಿಂದ ಇರುವುದು ॥೨೪॥ ಆ ಯಾವ ನನ್ನ ಬ್ರಹ್ಮದ ಸ್ಫುರಣವೇ ಮಾಯೆಯ ಲಕ್ಷಣವಾಗಿದೆ. ಇದೇ ಪ್ರಕೃತೀ ಪುರುಷರ ಜನ್ಮಸ್ಥಾನವಾಗಿದೆ. ಇದರಿಂದ ಈ ಎರಡು ಜೋಡಿ ಫಲಗಳು ಜನ್ಮಕ್ಕೆ ಬಂದಿರುವುವು ॥೨೫॥ ಯಾವ ಪ್ರಕಾರವಾಗಿ ಕಾಳನ್ನು ಹೊಟ್ಟೆಯಲ್ಲಿಟ್ಟುಕೊಂಡು ನಿಃಸತ್ವವಾದ ತೌಡು ಸ್ವತಃ ಬೆಳೆಯುತ್ತಿರುವುದೋ, ಅದರಂತೆ ಪುರುಷನ ಆಧಾರದಿಂದ ಈ ಯಾವ ಪ್ರಕೃತಿಯು ಪರಿಪೂರ್ಣವಾಗಿ ಬೆಳೆಯುವುದು. ಇದನ್ನು ನೀನು ಲಕ್ಷದಲ್ಲಿಡು ॥೨೬॥

ಧರೂನಿ ಗೋಡಪಣಾಚಾ ಸಾಂಠಾ । ಫಣಸಾ ಅಂಗೀ ವಾಢೇ ಕಾಂಟಾ । ತೇವೀ ಪುರುಷಯೋಗೇ ತಾಠಾ । ಚಢಲಾ ಮೋಠಾ ಪ್ರಕೃತೀಸೀ ॥೭೭॥ ಜೇವೀ ಕಾ ಡೋಳೀಂಚೇಚಿ ಜಳ । ಗೋಠೋನಿ ಡೋಳಾ ಹೋಯ ಪಡಳ । ತೇವೀ ಬ್ರಹ್ಮೀ ಮಾಯಾಮಳ । ಕರೀ ಶಬಳ ಶುದ್ಧಾಸೀ ॥೭೮॥ ಪಡಳ ಡೋಳಾ ಮಂದ ಕರೀ । ಮಾಯಾ ನಿಜಾನಂದ ಆವರೀ । ವಾಢೋನಿ ತ್ಯಾಚೇ ತ್ಯಾಚಿವರೀ । ವೇಡಾ ಕರೀ ಪುರುಷಾತೇ ॥೭೯॥ ಐಸೇ ಕರ್ತೇನವೀಣ ಆಪಸಯಾ । ಕಾರ್ಯಕಾರಣ ಜೇ ಆಲೇ ಆಯಾ । ತ್ಯಾತೇ ಕೃತಯುಗ ಮ್ಹಣಾವಯಾ । ವೇದೂ ಲವ ಲಾಹ್ಯಾ ಉದೇಲಾ ॥೮೦॥ ಅಕಾರ-ಉಕಾರ-ಮಕಾರೇಸೀ । ವೇದು ಉಪಜೇ ಪ್ರಕೃತಿಪುರುಷೀ । ಜೇವೀ ಉಕಲಲ್ಯಾ ಬೀಜಾಸೀ । ಪ್ರಥಮ ತೇ ತ್ಯಾಸೀ ತಿವಣಾ ಡಿರೂ ॥೮೧॥ ತೇ ವೇದೀಂಚಾ ಅಭಿಪ್ರಾವೋ । ಬ್ರಹ್ಮ ಸತ್ಯ ಮಾಯಾ ವಾವೋ । ಆಪುಲೇನಿ ಅಭೇದೇ ಬ್ರಹ್ಮ ಭಾವೋ । ವಿವೇಕನಿಪುಣ ಪಹಾವೋ ಜಾಣತೀ ॥೮೨॥ ಐಸೇ ವೇದವಿವೇಕೇ ಅಭೇದಯೋಗೀ । ತೇ ಕೃತಾದಿ ಹೋತ ಕಾ ಕಲಿಯುಗೀ । ವರ್ತತಾ ತೇ ಸದಾ ಅಯುಗೀ । ಯುಗ ತ್ಯಾಲಾಗೀ ಅಸೇನಾ ॥೮೩॥ ಕೃತಯುಗಾದಿ ಯುಗಪಂಕ್ತಿ । ಚರಾಚರ ನಾನಾ ವ್ಯಕ್ತಿ । ಯಾಂಸೀ ಉಪಜವೀ ಪ್ರಕೃತೀ । ತಿಚೀ ಉತ್ಪತ್ತೀ ಹರಿ ಸಾಂಗೇ ॥೮೪॥

ತನ್ಮಾಯಾಫಲರೂಪೇಣ ಕೇವಲಂ ನಿರ್ವಿಕಲ್ಪಿತಮ್ । ವಾಙ್ಮನೋಽಗೋಚರಂ ಸತ್ಯಂ ದ್ವಿಧಾ ಸಮಭವದ್ ಬೃಹತ್ ॥೩॥

ಅರ್ಥ:- ಬ್ರಹ್ಮನಲ್ಲಿ ಯಾವುದೇ ಪ್ರಕಾರದ ವಿಕಲ್ಪವಿಲ್ಲ ಎನ್ನುವುದರಲ್ಲಿ ಯಾವ ಸಂದೇಹವಿಲ್ಲ. ಅದು ಕೇವಲ ಅದ್ವಿತೀಯ ಸತ್ಯವಾಗಿರುವುದು. ಮನ ಮತ್ತು ವಾಣೀ ಇವುಗಳಿಗೆ ಅತೀತನು. ಈ ಬ್ರಹ್ಮವು ಮಾಯಾ ಮತ್ತು ಅದರಲ್ಲಿ ಪ್ರತಿಬಿಂಬಿತ ಜೀವರೂಪದಿಂದ ದೃಶ್ಯ, ದೃಷ್ಟಾರೂಪದಿಂದ ಎರಡು ಭಾಗಗಳಲ್ಲಿ ವಿಭಾಗವಾಗಿರುವುದು.

ತೇ ಬ್ರಹತ್ ಜೇ ಪರಬ್ರಹ್ಮ । ಜೇಥ ನ ರಿಗೇ ರೂಪನಾಮ । ಜೇ ಮನಬುದ್ಧೀಸೀ ಅಗಮ್ಯ । ಜೇ ದುರ್ಗಮ ಇಂದ್ರಿಯಾ ॥೮೫॥ ಜೇ ನಿರ್ಗುಣ ನಿರಾಕಾರ । ಜೇ ಸತ್ಯಸ್ವರೂಪ ಸಾಚಾರ । ಜೇ ಪರೇಹೂನಿ ಪರಾತ್ಪರ । ನಿರ್ವಿಕಾರ ನಿಜವಸ್ತು ॥೮೬॥ ತೇಥ ಅತರ್ಕ್ಯ ಮಾಯಾಚಮತ್ಕಾರ । ಕರೀ ದೃಷ್ಟ್ಯ ದ್ರಷ್ಟತ್ವೇ ಸವಿಕಾರ । ತೇಚಿ ಪ್ರಕೃತಿ ಪುರುಷ ಸಾಚಾರ । ತೇಣೇ ಚರಾಚರ ವಾಢವೀ ॥೮೭॥ ಜೇವೀ ರೂಪಾಸವೇ ಛಾಯೇಚೀ ವ್ಯಕ್ತಿ । ತೇವೀ ಬ್ರಹ್ಮೀ ಮಾಯೇಚೀ ನಿಜಸ್ಥಿತೀ । ತಿಣೇ ಉಪಜವಿಲೀ ಶಿವಶಕ್ತೀ । ಪುರುಷ ಪ್ರಕೃತಿ ದ್ವಿಧಾ ಭೇದೇ ॥೮೮॥

ಸಿಹಿಯನ್ನು ಒಳಗಿನ ಭಾಗದಲ್ಲಿ ಸಂಗ್ರಹಿಸುತ್ತ ಹಲಸಿನ ಹಣ್ಣಿನ ಹೊರಭಾಗದಲ್ಲಿ ಮುಳ್ಳುಗಳು ಬೆಳೆಯುತ್ತಲೇ ಇರುವುವು. ಅದರಂತೆ ಪುರುಷನ ಯೋಗದಿಂದ ಪ್ರಕೃತಿಗೆ ದೊಡ್ಡ ಗರ್ವವು ಏರುತ್ತಲೇ ಇರುವುದು ॥೭೭॥ ಯಾವ ಪ್ರಕಾರವಾಗಿ ಕಣ್ಣಿನೊಳಗಿನ ನೀರು ಹೆಪ್ಪುಗಟ್ಟಿ ಕಣ್ಣಿಗೆ ಪೊರೆಯನ್ನು ಹುಟ್ಟಿಸುವುದೋ, ಅದರಂತೆ ಬ್ರಹ್ಮನಲ್ಲಿ ಮಾಯಾರೂಪಿ ಹೊಲಸು ಕೂಡಿಕೊಂಡು ಯಾವ ಶುದ್ಧವಾಗಿರುವ ಬ್ರಹ್ಮನಿಗೂ ಕೂಡ ಮಲಿನವನ್ನಾಗಿ ಮಾಡುವುದು ॥೭೮॥ ಕಣ್ಣಿಗೆ ಪೊರೆ ಬರಲು ಆಗ ದೃಷ್ಟಿಯು ಮಂದಾಗುವುದು. ಅದರಂತೆ ಈ ಯಾವ ಮಾಯೆಯು ಆತ್ಮಾನಂದಕ್ಕೆ ಅಡ್ಡ ಬರುತ್ತಿರುವುದು ಮತ್ತು ಆತ್ಮದ ಆಶ್ರಯದಿಂದಲೇ ಬೆಳೆದು ಪುರುಷನಿಗೆ ಹುಚ್ಚನನ್ನಾಗಿ ಮಾಡಿಬಿಡುವುದು ॥೭೯॥ ಹೀಗೆ ಯಾವ ಕಾರ್ಯವಿಲ್ಲದೇ ತನ್ನಷ್ಟಕ್ಕೆ ತಾನೇ ಈ ಯಾವ ಕಾರ್ಯಕಾರಣವು ಆಕಾರಕ್ಕೆ ಬಂದಿತು. ಅದಕ್ಕೆ ''ಕೃತಯುಗ'' ಎಂದು ಕರೆಯಲು ವೇದವು ಕೂಡಲೇ ಸಿದ್ಧವಾಯಿತು ॥೮೦॥ ಯಾವ ಪ್ರಕಾರವಾಗಿ ಅಂಕುರ ಹುಟ್ಟಿದ ಬೀಜಕ್ಕೆ ಆರಂಭದಲ್ಲಿ ಮೂರು ಎಲೆಗಳ ಚಿಗುರು ನಿರ್ಮಾಣವಾಗುವುದೋ, ಅದರಂತೆ ಅಕಾರ, ಉಕಾರ ಮತ್ತು ಮಕಾರಗಳ ಜೊತೆಯಲ್ಲಿ ಪ್ರಕೃತಿ ಪುರುಷರಲ್ಲಿ ವೇದವು ಉತ್ಪನ್ನವಾಯಿತು. ॥೮೧॥ ಆ ಯಾವ ವೇದದಲ್ಲಿನ ಮುಖ್ಯವಾದ ಅರ್ಥವೇನೆಂದರೆ ಬ್ರಹ್ಮವು ಸತ್ಯವಾಗಿದೆ ಮತ್ತು ಮಾಯೆಯು ಮಿಥ್ಯೆಯಾಗಿದೆ ಮತ್ತು ನಾವು ಸರ್ವ ಪ್ರಕಾರದ ಭೇದಾಭೇದಗಳನ್ನು ಬಿಟ್ಟರೆ ಬ್ರಹ್ಮಸ್ವರೂಪದ ಪ್ರಾಪ್ತಿಯಾಗುತ್ತದೆ. ಈ ರಹಸ್ಯವನ್ನು ವಿವೇಕನಿಪುಣರು ತಿಳಿಯುವರು. ॥೮೨॥ ಈ ಪ್ರಕಾರವಾಗಿ ಯಾವ ವೇದಗಳ ವಿಚಾರದಿಂದ ಅಭೇದಭಾವದಿಂದ ಯೋಗಿಗಳಾಗುವರು. ಇವರು ಕೃತಯುಗದಲ್ಲಾಗಲಿ ಅಥವಾ ಕಲಿಯುಗದಲ್ಲಾಗಲಿ ಜನ್ಮವೆತ್ತಿದರೂ ಯುಗರಹಿತರಾಗಿ ವರ್ತಿಸುತ್ತಿರುವರು. ಇವರಿಗೆ ಯಾವ ಯುಗವು ಇರುವುದಿಲ್ಲ ॥೮೩॥ ಕೃತಯುಗಾದಿ ಯಾವ ಯುಗಗಳ ಮಾಲಿಕೆ ಇರುವುದು. ಚರಾಚರಾದಿ ಯಾವ ನಾನಾ ಪ್ರಕಾರಗಳ ವ್ಯಕ್ತಿಗಳನ್ನು ಯಾವ ಪ್ರಕೃತಿಯೇ ಉತ್ಪನ್ನ ಮಾಡುವುದು. ಆ ಪ್ರಕೃತಿಯ ಉತ್ಪತ್ತಿಯನ್ನು ಭಗವಾನ ಶ್ರೀಕೃಷ್ಣನು ಈಗ ಹೇಳುವನು ॥೮೪॥

ಯಾವ ಪರಬ್ರಹ್ಮವು ಸರ್ವವ್ಯಾಪಕವಾಗಿ ನಾಮರೂಪಾತೀತವಾಗಿರುವುದರಿಂದ ಮನ ಬುದ್ಧಿಗೆ ಅಗಮ್ಯವಾಗಿರುವುದು. ಇದು ಇಂದ್ರಿಯಗಳಿಗೆ ದುರ್ಗಮವಾಗಿರುವುದು ॥೮೫॥ ಯಾವ ಈ ಪರಬ್ರಹ್ಮವು ನಿರ್ಗುಣ ನಿರಾಕಾರವಾಗಿದೆ, ಸತ್ಯಸ್ವರೂಪವಾಗಿದೆ, ಪರಾದ ಆಚೆಕಡೆ ಇದೆ. ಈ ನಿಜವಸ್ತು ನಿರ್ವಿಕಾರವಾಗಿದೆ ॥೮೬॥ ಈ ಯಾವ ಪರಬ್ರಹ್ಮನಲ್ಲಿ ಮಾಯೆಯ ಚಮತ್ಕಾರವು ಅತರ್ಕ್ಯವಾಗಿರುವುದು. ಈ ಮಾಯೆಯು ಪರಬ್ರಹ್ಮನಿಗೆ ದೃಶ್ಯ ಮತ್ತು ದೃಷ್ಟಾ ಈ ಪ್ರಕಾರದ ವಿಕಾರವನ್ನು ಉತ್ಪನ್ನಗೊಳಿಸುವುದು. ಇದೇ ನಿಜವಾಗಿಯೂ ಪ್ರಕೃತಿ ಮತ್ತು ಪುರುಷವಾಗುವುದು ಮತ್ತು ಈ ಯೋಗದಿಂದ ಚರಾಚರಗಳ ವೃದ್ಧಿಯನ್ನು ಮಾಡುತ್ತಿರುವುದು ॥೮೭॥ ರೂಪದ ಜೊತೆಯಲ್ಲಿ ನೆರಳು ಹೇಗೆ ವ್ಯಕ್ತವಾಗುತ್ತಿರುವುದೋ, ಅದರಂತೆ ಬ್ರಹ್ಮನಲ್ಲಿ ಮಾಯೆಯ ಸ್ಥಿತಿಯಾಗಿರುವುದು. ಈ ಮಾಯೆಯು ಶಿವಶಕ್ತಿಯನ್ನು ಪ್ರಕೃತಿ ಮತ್ತು ಪುರುಷ ಹೀಗೆ ಎರಡು ಪ್ರಕಾರದ ಭೇದದಿಂದ ಉತ್ಪನ್ನಗೊಳಿಸುವುದು ॥೮೮॥

ಬ್ರಹ್ಮಾಂಡೀ ಈಶ್ವರ ಸ್ವಭಾವೋ । ಪಿಂಡೀ ತ್ಯಾಸೀಚ ಜೀವಭಾವೋ । ಐಸಾ ಪ್ರಕೃತಿಪುರುಷನಿರ್ವಾಹೋ । ಮಾಯೇನೇ ಪಹಾ ಹೋ ದ್ವಿಧಾ ಕೇಲಾ ॥೮೯॥ ಬ್ರಹ್ಮ ಅಚ್ಛೇದ್ಯ ವೇದೂ ಬೋಲೇ । ತೇ ಫಾಡೂನಿ ದ್ವಿದಾ ಕೈಸೇ ಕೇಲೇ । ಜೇವೀ ಆರಿಸಾ ಆಪಣಾ ಆಪುಲೇ । ಮುಖ ದೇಖಿಲೇ ಸಂಮುಖ ॥೯೦॥ ಆಪಣ ಪೂರ್ವಾಮುಖ ಆಹೇ । ಪ್ರತಿಬಿಂಬ ಪೂರ್ವೇಕಡೇ ನ ಹೋಯೇ । ಆಪಲೇ ಆಪಣಾ ಸಂಮುಖ ಹೋಯೇ । ಹೇ ಲಾಘವ ಪಾಹೇ ಮಾಯೇಚೇ ॥೯೧॥ ಪ್ರತಿಬಿಂಬ ದಿಸತಾ ಸಂಮುಖ । ಸಂಮುಖ ಮ್ಹಣತಾ ಅತಿವಿಮುಖ । ಪುರುಷ ಪೂರ್ವೇಕಡೇ ದೇಖ । ಪ್ರತಿಬಿಂಬಾಚೇ ಮುಖ ಪಶ್ಚಿಮೇಕಡೇ ॥೯೨॥ ತೇವೀ ಆತ್ಮದೃಷ್ಟಿ ಸ್ವರೂಪೀ ಪಡೇ । ಜೀವದೃಷ್ಟಿ ಪ್ರಪಂಚಾಕಡೇ । ಯೇಣೇ ಸಂಮುಖತ್ವ ನ ಘಡೇ । ವಿಮುಖತ್ವ ಗಾಢೇ ಜೀವಾಸೀ ॥೯೩॥ ತೇವೀ ಬ್ರಹ್ಮೀ ಜೇ ಬ್ರಹ್ಮಸ್ಫುರಣ । ತೇಚಿ ಮೂಳಮಾಯೇಚೇ ಲಕ್ಷಣ । ತೇಥ ಈಶ್ವರತ್ವೇ ಜಾಣ । ಹೋಯ ಆಪಣ್ಯಾ ಆಪಣ ಸಂಮುಖ ॥೯೪॥ ಜೇ ಅದ್ವಿತೀಯ ವಸ್ತು ಶುದ್ಧ । ತೇಥ ಮಿಥ್ಯಾ ಮಾಯಾಸಂಬಂಧ । ಅಭೇದೀ ಉಪಜವೂನಿ ಭೇದ । ಕೇಲೀ ದ್ವಿವಿಧ ಶಿವಶಕ್ತೀ ॥೯೫॥

ತಯೋರೇಕತರೋ ಹ್ಯರ್ಥಃ ಪ್ರಕತಿಃ ಸೋಭಯಾತ್ಮಿಕಾ । ಜ್ಞಾನಂ ತ್ವನ್ಯತಮೋ ಭಾವಃ ಪುರುಷಃ ಸೋಽಭಿಧೀಯತೇ ॥೪॥

ಅರ್ಥ:- ಅದರಲ್ಲಿ ಒಂದು ವಸ್ತುವಿಗೆ ಪ್ರಕೃತಿ ಎಂದು ಹೇಳುವರು. ಈಕೆಯು ಜಗತ್ತಿನಲ್ಲಿ ಕಾರ್ಯ ಮತ್ತು ಕಾರ್ಯದರೂಪವನ್ನು ಧರಿಸಿದಳು. ಇನ್ನೊಂದು ವಸ್ತು ಜ್ಞಾನಸ್ವರೂಪವಾಗಿರುವುದು. ಇದಕ್ಕೆ ಪುರುಷ ಎಂದು ಹೇಳುವರು.

ತ್ಯಾ ದೋಹೀ ಭಾಗಾಮಾಝಾರೀ । ಪ್ರಕೃತಿಭಾಗ ತೋ ವಿಕಾರೀ । ಪುರುಷಭಾಗ ತೋ ಅವಿಕಾರೀ । ಸ್ವಯೇ ಶ್ರೀಹರೀ ಸಾಂಗತ ॥೯೬॥ ತೇಥ ಆಪಣ ಆಪುಲೀ ಕಾಂತಾ । ಆಪುಲೇ ಕಾಂತೇಚಾ ಆಪಣ ಭರ್ತಾ । ಏಕಪಣೇ ದಾವೂನಿ ದ್ವೈತಾ । ಭಿನ್ನ ವಿಭಾಗತಾ ಶಿವಶಕ್ತಿ ॥೯೭॥ ಜೇವೀ ಆಪುಲೇ ಏಕ ಅಂಗ । ತೇಥ ಬೋಲತೀ ವಾಮಸವ್ಯ ಭಾಗ । ತೇವೀ ಪ್ರಕೃತಿಪುರುಷವಿಭಾಗ । ಜಾಣಾವೇ ಸಾಙ್ಗ ಮಾಯಿಕ ॥೯೮॥ ಅರ್ಧನಾರೀನಟೇಶ್ವರೀ । ಜೋ ಪುರುಷ ತೋಚಿ ನಾರೀ । ಪ್ರಕೃತಿಪುರುಷೀ ತೈಶೀ ಪರೀ । ಏಕ ಶರೀರೀ ಏಕಾತ್ಮತಾ ॥೯೯॥ ಜೈ ಪುರುಷವಿಭಾಗ ಲಪವೀ । ತೈ ಸ್ವೇಚ್ಛಾ ಪ್ರಕೃತಿ ನಾಚವೀ । ಪ್ರಕೃತಿಭಾಗ ಜೈ ಲಪವೀ । ತೈ ಪುರುಷಾಚೀ ಪದವೀ ಪ್ರಕಟ ದಿಸೇ ॥೧೦೦॥

ಪುರುಷನು ಈ ಯಾವ ಬ್ರಹ್ಮಾಂಡದಲ್ಲಿ ಈಶ್ವರರೂಪನಾಗಿ ಇರುವನು ಮತ್ತು ದೇಹದಲ್ಲಿ ಜೀವಭಾವದಿಂದ ಇರುವನು. ಹೀಗೆ ಈ ಪ್ರಕೃತಿ ಪುರುಷರ ಎರಡು ಪ್ರಕಾರದ ವಿಭಾಗವನ್ನು ಮಾಯೆಯು ಮಾಡಿರುವುದು ॥೮೯॥ ಬ್ರಹ್ಮವು ಅಚ್ಛೇದ್ಯವಾಗಿದೆ ಎಂದು ವೇದವು ಹೇಳುತ್ತಿರಲಿಕ್ಕಾಗಿ ಅದರ ಎರಡು ಭಾಗಗಳು ಹೇಗೆ ಉಂಟಾದವು ? ಕನ್ನಡಿಯಲ್ಲಿ ಹೇಗೆ ನಮ್ಮ ಮುಖವನ್ನು ನಾವೇ ನೋಡುತ್ತೇವೆಯೋ, ಅದರಂತೆ ಆತನ ಎರಡು ಭಾಗಗಳು ತೋರುತ್ತಿರುವುವು ॥೯೦॥ ನಾವು ಪೂರ್ವ ದಿಕ್ಕಿಗೆ ಮುಖಮಾಡಿಕೊಂಡು ಇರಲು ಆಗ ನಮ್ಮ ಪ್ರತಿಬಿಂಬವು ಪೂರ್ವದಿಕ್ಕಿನತ್ತ ಮುಖಮಾಡದೇ ತನ್ನತ್ತ ಪಶ್ಚಿಮಾಭಿಮುಖವಾಗಿರುವುದು. ಇದು ಮಾಯೆಯ ಕೌತುಕವಾಗಿರುವುದು ॥೯೧॥ ಪ್ರತಿಬಿಂಬವು ಎದುರಿನಲ್ಲಿಯೇ ಕಾಣುವುದು, ಎದುರಿನಲ್ಲಿಯೇ ಇದೆ ಎಂದು ಹೇಳಬೇಕೆಂದರೆ ಅದು ನಮ್ಮ ವಿರುದ್ಧ ದಿಕ್ಕಿನಲ್ಲಿರುವುದು. ಅಂದರೆ ಪೂರ್ವಕಡೆ ಮುಖ ಮಾಡಿದ್ದರೆ ಆ ಪ್ರತಿಬಿಂಬವು ಪಶ್ಚಿಮಕ್ಕೆ ಮುಖಮಾಡಿರುವುದು ॥೯೨॥ ಅದರಂತೆ ಯಾವ ಆತ್ಮದೃಷ್ಟಿಯು ತನ್ನ ಸ್ವರೂಪದತ್ತ ಇರುವುದು ಮತ್ತು ಜೀವದೃಷ್ಟಿಯು ಅದು ಪ್ರಪಂಚದತ್ತ ಇರುವುದು. ಆದ್ದರಿಂದ ಜೀವಕ್ಕೆ ಸ್ವರೂಪದತ್ತ ಸಮ್ಮುಖವಾಗಲು ಬರುವುದಿಲ್ಲ. ಈ ಯಾವ ಜೀವವು ಪೂರ್ಣವಾಗಿ ವಿರುದ್ಧ ದಿಶೆಯನ್ನು ನೋಡುತ್ತಿರುವುದು ॥೯೩॥ ಅದರಂತೆ ಬ್ರಹ್ಮನಲ್ಲಿ ಯಾವ ಬ್ರಹ್ಮದ ಸ್ಫುರಣವಾಗುವುದೋ, ಅದು ಮೂಲ ಮಾಯೆಯ ಸ್ವರೂಪವಾಗಿರುವುದು. ಅಲ್ಲಿ ಈಶ್ವರನ ಸ್ವರೂಪದಿಂದಲೇ ತಾನು ತನ್ನ ಸಮ್ಮುಖವಾಗುವನು ॥೯೪॥ ನಿಜವಾಗಿ ನೋಡಿದರೆ ಶುದ್ಧವಾದ ಮತ್ತು ಅದ್ವಿತೀಯವಾಗಿರುವ ಬ್ರಹ್ಮನಲ್ಲಿ ಮಾಯೆಯ ಸಂಬಂಧವು ಮಿಥ್ಯೆಯಾಗಿರುವುದು. ಆದರೆ ಈ ಮಾಯೆಯು ಅಭೇದದಲ್ಲಿ ಭೇದವನ್ನು ಉತ್ಪನ್ನಮಾಡುವುದು. ಶಿವ ಮತ್ತು ಶಕ್ತಿ ಅಂದರೆ ಪ್ರಕೃತಿ ಮತ್ತು ಪುರುಷ ಹೀಗೆ ಭಿನ್ನಭಿನ್ನವಾಗಿ ಮಾಡಿರುವುದು ॥೯೫॥

ಈ ಎರಡು ಭಾಗಗಳಲ್ಲಿ ಪ್ರಕೃತಿಯ ಭಾಗವು ವಿಕಾರಿಯಾಗಿರುವುದು ಮತ್ತು ಪುರುಷನ ಭಾಗವು ಅದು ಅವಿಕಾರಿಯಾಗಿರುವುದು. ಹೀಗೆ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೯೬॥ ಆ ಪುರುಷನು ತಾನು ಸ್ವತಃ ತನ್ನ ಸ್ತ್ರೀಯಾಗುವನು ಮತ್ತು ತಾನೇ ಆಕೆಯ ಪತಿಯಾಗುವನು. ಹೀಗೆ ಏಕತ್ವದಲ್ಲಿ ಎರಡು ಭಾಗಗಳನ್ನು ತೋರಿಸಿ ಭಿನ್ನ ವಿಭಾಗಗಳಿಂದ ಶಿವಶಕ್ತಿಯಾಗಿರುವುದು ॥೯೭॥ ತನ್ನ ಒಂದೇ ದೇಹಕ್ಕೆ ಬಲಭಾಗ ಮತ್ತು ಎಡಭಾಗ ಇರುವಂತೆ ಪ್ರಕೃತಿ ಮತ್ತು ಪುರುಷ ಈ ಭಾಗಗಳು ಪೂರ್ಣವಾಗಿ ಮಾಯಿಕವಾಗಿರುವುವು. ಇದನ್ನು ತಿಳಿ ॥೯೮॥ ಅರ್ಧನಾರೀನಟೇಶ್ವರದಲ್ಲಿ ಪುರುಷನಾದವನೇ ಸ್ತ್ರೀಯಾಗಿರುವನು. ಪ್ರಕೃತಿಪುರುಷರ ಪ್ರಕಾರವೂ ಕೂಡ ಹಾಗೆಯೇ ಇರುವುದು. ಅಂದರೆ ಈ ಎರಡೂ ಒಂದೇ ಶರೀರ ಹಾಗೂ ಆತ್ಮವೂ ಕೂಡ ಒಂದೇಯಾಗಿರುವುದು ॥೯೯॥ ಪುರುಷನ ವಿಭಾಗವನ್ನು ಅಡಗಿಸಲು, ಆಗ ಪ್ರಕೃತಿಯು ಸ್ವೇಚ್ಛೆಯಿಂದ ಕುಣಿಯುತ್ತಿರುವುದು ಮತ್ತು ಪ್ರಕೃತಿಯನ್ನು ಅಡಗಿಸಲು ಆಗ ಪುರುಷನ ಸ್ವರೂಪವು ಸ್ಪಷ್ಟವಾಗಿ ಗೋಚರಿಸುವುದು ॥೧೦೦॥

ಮಧೀಲ ಪಡದಾ ಜೈ ತೋಡಿತೀ । ತೈ ಪುರುಷ ನಾ ಪ್ರಕೃತಿ । ತೇವ್ಹಾ ಪ್ರಕಟೇ ನಿಜಾತ್ಮಸ್ಥಿತೀ । ಸ್ತ್ರೀಪುರುಷವ್ಯಕ್ತೀ ಸಮೂಳ ಮಿಥ್ಯಾ ॥೧೦೧॥ ಐಶೀ ಮಿಥ್ಯಾ ಮಾಯಿಕ ಪ್ರಕೃತೀ । ತೀಪಾಸವ ಗುಣೋತ್ಪತ್ತೀ । ಗುಣಾಸ್ತವ ಸಂಸಾರಸ್ಥಿತೀ । ಸ್ವಯೇ ಶ್ರೀಪತೀ ಸಾಂಗತ ॥೧೦೨॥

ತಮೋ ರಜಃ ಸತ್ತ್ವಮಿತಿ ಪ್ರಕೃತೇರಭವನ್ಗುಣಾಃ । ಮಯಾಃ ಪ್ರಕ್ಷೋಭ್ಯಮಾಣಾಯಾಃ ಪುರುಷಾನುಮತೇನಚ ॥೮॥

ಅರ್ಥ:- ಹೇ ಉದ್ಧವನೇ, ನಾನು ಜೀವದ ಶುಭ-ಅಶುಭ ಕರ್ಮಗಳ ಅನುಸಾರವಾಗಿ ಪ್ರಕೃತಿಯನ್ನು ಕ್ಷುಬ್ಧಗೊಳಿಸಿದೆನು. ಆಗ ಅದರಿಂದ ಸತ್ವ, ರಜ, ತಮ ಎಂಬ ಮೂರು ಗುಣಗಳು ಪ್ರಕಟವಾದವು.

ಪ್ರಕೃತಿ ಗುಣಮಯೀ ಪೂರ್ಣ । ತೇ ಲಾಹೋನಿ ಪುರುಷಈಷಣ । ಪ್ರಕಟ ಕರೀ ತಿನ್ಹೀ ಗುಣ । ತೇಚಿ ನಿರೂಪಣ ಹರಿ ಸಾಂಗೇ ॥೧೦೩॥ ಜೇವೀ ಸೂರ್ಯಾವಲೋಕನಮೇಳೀ । ಕಳೀ ವಿಕಾಸೇ ಕಮಳದಳೀ । ತೇ ವೇಗಳವೇಗಳೀ ಪಾಕೋಳೀ । ಹೋತೀ ಮೂಳೀ ಕಳಿಕೇಮಾಜೀ ॥೧೦೪॥ ತೇವೀ ಪುರುಷಾಚ್ಯಾ ಈಕ್ಷಣೇ । ಗುಣಮಯೀ ಝಾಲೀ ನಿರ್ಗುಣೇ । ತೇ ತಮ-ರಜ-ಸತ್ತ್ವಗುಣೇ । ಪ್ರಸವಲೀ ತಿನೀ ಗುಣಾಂತೇ ॥೧೦೫॥ ಜೇವೀ ಜಳೇ ಬೀಜ ಕ್ಷೋಭೂನೀ । ದೋನೀ ದಳೇ ಉಲವೂನೀ । ಡಿರೂ ನಿಘಾಲಾ ತ್ಯಾಂತೂನೀ । ತರತರೂನ ತಿವಣಾ ಪೈ ॥೧೦೬॥ ತೇವೀ ಪರಮಾತ್ಮಾ ಮೀ ಆಪಣ । ಪುರುಷತ್ವಾತೇ ಪಾವೋನಿ ಜಾಣ । ಪ್ರಕೃತಿ ಕ್ಷೋಭವೂನೀ ಪೂರ್ಣ । ತಿನೀ ಗುಣ ಪ್ರಕಟವಿಲೇ ॥೧೦೭॥ ಜೇವೀ ಕಾ ಸೂರ್ಯಾಚೇ ಕಿರಣೇ । ಸೂರ್ಯಕಾಂತೀ ಪಡೇ ಅಗ್ನೀ । ತೇವೀ ಪುರುಷೇ ಪ್ರಕೃತಿ ಭೋಗುನೀ । ಗುಣ ತಿನೀ ತೇ ಪ್ರಸವೇ ॥೧೦೮॥

ತೇಭ್ಯಃ ಸಮಭವತ್ಸೂತ್ರಂ ಮಹಾನ್ಸೂತ್ರೇಣ ಸಂಯುತಃ । ತತೋ ವಿಕುರ್ವತೋ ಜಾತೋ ಯೋಽಹಂಕಾರೋ ವಿಮೋಹನಃ ॥೯॥

ಅರ್ಥ:- ಅದರಿಂದ ಕ್ರಿಯಾಶಕ್ತಿ ಪ್ರಧಾನ ಸೂತ್ರ, ಮತ್ತು ಜ್ಞಾನಶಕ್ತಿಪ್ರಧಾನ ಮಹತ್‌ತತ್ವ ಪ್ರಕಟವಾಯಿತು. ಈ ಎರಡೂ ಪರಸ್ಪರವಾಗಿ ಕೂಡಿಕೊಂಡಿರುವುವು. ಮಹತ್‌ತತ್ವದಲ್ಲಿ ವಿಕಾರವಾದನಂತರ ಅಹಂಕಾರವು ವ್ಯಕ್ತವಾಯಿತು. ಈ ಅಹಂಕಾರವು ಜೀವಕ್ಕೆ ಮೋಹದಲ್ಲಿ ಬೀಳಿಸುವುದು.

ತೇ ತಿನೀ ಗುಣ ಭಿನ್ನ । ಭಿನ್ನಪಣೇ ವಾಢೀ ಸಮಾನ । ತ್ಯಾ ನಾಂವ ಸೂತ್ರ ಪ್ರಧಾನ । ಕ್ರಿಯಾಶಕ್ತಿ ಜಾಣ ಯಾ ನಾಂವ ॥೧೦೯॥ ಕ್ರಿಯಾಶಕ್ತೀಸ ಜಡಪಣ । ತೇಥ ಚೇತನಾತ್ಮಕ ಉಪಜೇ ಜ್ಞಾನ । ತೇಚಿ ಮಹತ್ತತ್ತ್ವ ನಾಂವ ಜಾಣ । ಭಿನ್ನಾಭಿಧಾನ ಯಾ ಹೇತೂ ॥೧೧೦॥ ಮಹತ್ತತ್ತ್ವ ಆಣಿ ಪ್ರಧಾನ । ದೋಹೀಂಚೇ ರೂಪ ಏಕಚಿ ಜಾಣ । ತೇಥ ಕ್ರಿಯಾ ಆಣಿ ಸ್ಫುರೇ ಜ್ಞಾನ । ಯಾಲಾಗೀ ನಾಂವೇ ಭಿನ್ನ ದೋಹೀಂಚೀ ॥೧೧೧॥

ಇದರ ನಡುವೆ ಇರುವ ಪರದೆಯನ್ನು ಸರಿಸಲು ಆಗ ಪುರುಷನೂ ಇಲ್ಲ, ಪ್ರಕೃತಿಯೂ ಇರುವುದಿಲ್ಲ. ಆಗ ಕೇವಲ ಆತ್ಮಸ್ಥಿತಿಯು ಮಾತ್ರ ಪ್ರಕಟವಾಗುವುದು. ಸ್ತ್ರೀ ಮತ್ತು ಪುರುಷ ವ್ಯಕ್ತಿಗಳು ಸಂಪೂರ್ಣವಾಗಿ ಸುಳ್ಳಾಗಿ ತೋರುತ್ತಿರುವರು ॥೧೦೧॥ ಈ ಪ್ರಕಾರವಾಗಿ ಪ್ರಕೃತಿಯು ಮಾಯಿಕವಾಗಿರುವುದರಿಂದ ಮಿಥ್ಯೆಯಾಗಿದೆ. ಇದರಿಂದ ಗುಣಗಳು ಹುಟ್ಟಿಕೊಳ್ಳುವುವು ಮತ್ತು ಗುಣಗಳಿಂದ ಸಂಸಾರವು ನಿರ್ಮಾಣವಾಗುವುದು. ಈ ವಿಷಯವನ್ನು ಕುರಿತು ಈಗ ಸ್ವತಃ ಶ್ರೀಕೃಷ್ಣನು ವರ್ಣನೆಯನ್ನು ಮಾಡುವನು ॥೧೦೨॥

ಯಾವ ಈ ಪ್ರಕೃತಿಯು ಪರಿಪೂರ್ಣವಾಗಿ ಗುಣಮಯಿಯಾಗಿರುವುದು. ಈಕೆಗೆ ಪುರುಷ ದೃಷ್ಟಿಯು ಪ್ರಾಪ್ತವಾಗುತ್ತಲೇ ಮೂರು ಗುಣಗಳನ್ನು ಪ್ರಕಟಿಸುವಳು. ಈಗ ಶ್ರೀಕೃಷ್ಣನು ಇದೆ ನಿರೂಪಣೆಯನ್ನು ಮಾಡುತ್ತಿರುವನು ॥೧೦೩॥ ಸೂರ್ಯನ ದೃಷ್ಟಿಯು ತನಗೆ ಮುಟ್ಟುತ್ತಲೇ ಕಮಲದ ಮೊಗ್ಗು ಭಿನ್ನ ಭಿನ್ನ ದಳಗಳಿಂದ ವಿಕಸಿತವಾಗುವುದು. ವಿಕಾಸಗೊಂಡ ಯಾವ ಭಿನ್ನ ಭಿನ್ನ ದಳಗಳು ಕಮಲದಲ್ಲಿಯೇ ಇರುವುವು ॥೧೦೪॥ ಅದರಂತೆ ಪುರುಷನ ಕೇವಲ ದೃಷ್ಟಿಮಾತ್ರದಿಂದ ಪ್ರಕೃತಿಯು ಗುಣಯುಕ್ತವಾಗುವುದು ಮತ್ತು ಆಕೆಯಿಂದ ಉಂಟಾದ ಬೀಜದಿಂದ ಸತ್ವ, ರಜ, ತಮ ಗುಣಗಳ ಉತ್ಪತ್ತಿಯಾಗುವುದು ॥೧೦೫॥ ಯಾವ ಪ್ರಕಾರವಾಗಿ ನೀರಿನಿಂದ ಬೀಜವು ಉಬ್ಬಿಕೊಂಡು ಅದರಿಂದ ಎರಡು ದಳಗಳು ಬಿಚ್ಚಿ ಅದರಿಂದ ಮೂರು ಎಲೆಗಳ ಅಂಕುರವು ತರಾತುರಿಯಿಂದ ಪ್ರಕಟವಾಗುವುದೋ ॥೧೦೬॥ ಅದರಂತೆ ಪರಮಾತ್ಮನಾದ ನಾನು ಪುರುಷತ್ವವನ್ನು ಪ್ರಾಪ್ತಮಾಡಿಕೊಂಡು ಪ್ರಕೃತಿಯನ್ನು ಕ್ಷೋಭಿಸುವೆನು ಮತ್ತು ಈಕೆಯಿಂದ ಮೂರು ಗುಣಗಳನ್ನು ಪ್ರಕಟಗೊಳಿಸುವೆನು ॥೧೦೭॥ ಸೂರ್ಯಕಾಂತ ಮಣಿಯಮೇಲೆ ಸೂರ್ಯಕಿರಣಗಳು ಬೀಳಲು ಅದರಿಂದ ಅಗ್ನಿಯು ಹೇಗೆ ಪ್ರಕಟವಾಗುವುದೋ, ಅದರಂತೆ ಪುರುಷನು ಪ್ರಕೃತಿಯನ್ನು ಭೋಗಿಸಿ ಮೂರು ಗುಣಗಳನ್ನು ಪ್ರಕಟಿಸುವನು ॥೧೦೮॥

ಈ ಮೂರೂ ಗುಣಗಳು ಭಿನ್ನಭಿನ್ನವಾಗಿರುವುವು. ಈ ಭಿನ್ನತ್ವದಲ್ಲಿಯೂ ಕೂಡ ಸಮವಾಗಿಯೇ ಬೆಳೆಯುತ್ತಿರುವುವು. ಇದಕ್ಕೆ ಸೂತ್ರ, ಪ್ರಧಾನ ಮತ್ತು ಕ್ರಿಯಾಶಕ್ತಿ ಎಂಬ ನಾಮಗಳಿರುವುವು ॥೧೦೯॥ ಕ್ರಿಯಾಶಕ್ತಿಯಲ್ಲಿ ಜಡತ್ವವು ಇರುವುದು. ಆದರೆ ಅದರಲ್ಲಿ ಚೇತನಾತ್ಮಕವಾದ ಜ್ಞಾನವು ಉತ್ಪನ್ನವಾಗುತ್ತಿರುವುದು. ಇದಕ್ಕೆ ಮಹತ್‌ತತ್ವವೆಂದು ಹೇಳುವರು. ಈ ಭಿನ್ನ ನಾಮವು ಈ ಕಾರಣವಾಗಿ ಅದಕ್ಕೆ ಪ್ರಾಪ್ತವಾಗಿರುವುದು ॥೧೧೦॥ ಮಹತ್‌ತತ್ವ ಮತ್ತು ಪ್ರಧಾನ ಈ ಎರಡರ ಸ್ವರೂಪವು ಸಮವಾಗಿಯೇ ಇರುವುದು. ಆದರೆ ಸೂತ್ರಾತ್ಮನು ಕ್ರಿಯಾಶಕ್ತಿಮಾನನಾಗಿರುವನು. ಮಹತ್‌ತತ್ವವು ಜ್ಞಾನಶಕ್ತಿಮಾನವಾಗಿರುವುದು. ಆದ್ದರಿಂದ ಇಬ್ಬರ ನಾಮಗಳು ಭಿನ್ನವಾಗಿರುವುವು ॥೧೧೧॥

ಕ್ರಿಯಾಯುಕ್ತ ಜೇ ಸ್ಫುರೇ ಜ್ಞಾನ । ತೇಥ ಚೇತವೇ ಅಭಿಮಾನ । ತ್ರಿಗುಣೇ ಅಹಂಕಾರ ಪೂರ್ಣ । ತೇ ಠಾಯೀ ಜಾಣ ಉಠಾವೇ ।।೧೧೨।। ಅಹಂ ಖವಳಲ್ಯಾ ದಾರುಣ । ಶಿವಾಸೀ ವಿಸರವೀ ಶಿವಪಣ । ದೇಹಾತ್ಮವಾದೇ ಭುಲವೀ ಪೂರ್ಣ । ಜನ್ಮಮರಣ ಭೋಗವೀ ।।೧೧೩।। ತ್ಯಾ ಅಹಂಕಾರಾಚೀ ಮೋಹಕ ಶಕ್ತೀ । ಭವಭ್ರಮೇ ಪಾಡೀ ಭ್ರಾಂತೀ । ಅಹಂಕಾರಾಚೀ ವಿಕಾರಉತ್ಪತ್ತೀ । ಸ್ವಯೇ ಶ್ರೀಪತೀ ಸಾಂಗತ ।।೧೧೪।।

ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿವತ್ । ತನ್ಮಾತ್ರೇಂದ್ರಿಯಮನಸಾಂ ಕಾರಣಂ ಚಿದಚಿನ್ಮಯಃ ।।೭।।

ಅರ್ಥ:- ಅದು ಮೂರು ಪ್ರಕಾರದಿಂದಿರುವುದು. ಇವು ಯಾವವು ಎಂದರೆ ಸಾತ್ವಿಕ, ರಾಜಸ ಮತ್ತು ತಾಮಸಗಳಾಗಿರುವುವು. ಅಹಂಕಾರ, ಪಂಚತನ್ಮಾತ್ರಾ, ಇಂದ್ರಿಯಗಳು ಮತ್ತು ಮನದ ಕಾರಣವಾಗಿರುವುದು. ಆದ್ದರಿಂದ ಅದು ಜಡ ಮತ್ತು ಚೇತನ ಹೀಗೆ ಎರಡೂ ಸ್ವರೂಪದಲ್ಲಿರುವುದು.

ಅಹಂಕಾರ ಅತಿದುರ್ಧರ । ಗುಣಾನುಸಾರೇ ತ್ರಿಪ್ರಕಾರ । ಗುಣ ಅಹಂತಾ ದೃಢ ಸಂಸಾರ । ಗುಣವಿಕಾರ ತೋ ಐಸಾ ।।೧೧೫।। ಪ್ರಥಮ ಅಹಂಭಾವೋ ಸಾತ್ತ್ವಿಕ । ರಘಾಲಾ ಅಂತಃಕರಣದ್ಯೋತಕ । ತೋಚಿ ದೇವತಾವಿಕಾರಜನಕ । ಯಾಲಾಗೀ ವೈಕಾರಿಕ ಬೋಲಿಜೇ ತ್ಯಾಸೀ ।।೧೧೬।। ಅಹಂಕಾರ ಜೋ ರಾಜಸೂ । ತೋ ಜ್ಞಾನಕರ್ಮೇಂದ್ರಿಯ ಪ್ರಕಾಶೂ । ವಾಂಛ್ಟಿ ರಜತೇಜ ವಿಲಾಸೂ । ಯಾಲಾಗೀ ತೈಜಸೂ ಬೋಲಿಜೇ ।।೧೧೭।। ತಾಮಸಾಹಂಕಾರಾಚೀ ಸಿದ್ಧೀ । ಸೂಕ್ಷ್ಮ ಭೂತಾಂತೇ ಉತ್ಪಾದೀ । ಯಾಲಾಗೀ ಮ್ಹಣಿಜೇ ಜೋ ಭೂತಾದೀ । ಜಾಣ ತ್ರಿಶುದ್ಧೀ ಉದ್ಧವಾ ।।೧೧೮।। ನವಲ ಅಹಂಕಾರಾಚೀ ಥೋರೀ । ಸಚೇತನಾ ಅಚೇತನ ನೋವರೀ । ಸ್ವಯೇ ಲಗ್ನಲಾವೀ ಪ್ರಿತೀವರೀ । ಚಿದಚಿದ್‌ಗ್ರಂಥೀ ಪುರೀ ಪಾಡೂನಿ ।।೧೧೯।। ಚಿನ್ಮಾತ್ರಸ್ವರೂಪತಾ ಜೀವಾಸೀ । ಲಗ್ನ ಲಾವೀ ಜಡ ದೇಹೇಸೀ । ''ಓಂ ಪುಣ್ಯಾ'' ಏಕಾತ್ಮತೇಸೀ । ಕರ್ತಾ ಜ್ಯೋತಿಷೀ ಅಭಿಮಾನ ।।೧೨೦।। ಜೀವ ಜ್ಞಾನಸ್ವರೂಪ ಚೋಖಡಾ । ತೋ ಕರೋನಿ ಜಡ ಮೂಢ ವೇಡಾ । ದೃಢ ಘಾಲೀ ಹಾಡಾಂಚೇ ಖೋಡಾ । ತೋ ಹಾ ಧಡಪುಡಾ ಅಹಂಕಾರೂ ।।೧೨೧।। ತೋಚಿ ಸಾತ್ತ್ವಿಕ ಆಣಿ ರಾಜಸ । ಹೋಊನಿ ತಿಸರಾ ತಾಮಸ । ತ್ರಿವಿಧ ವಿಕಾರೀ ಬಹುವಸ । ವಾಢವೀ ಅಸೋಸ ಸಂಸಾರೂ ।।೧೨೨।।

ಅರ್ಥಸ್ತನ್ಮಾತ್ರಿಕಾಜ್ಜಜ್ಞೇ ತಾಮಸಾದಿಂದ್ರಿಯಾಣಿ ಚ । ತೈಜಸಾದೇವತಾ ಆಸನ್ನೇಕಾದಶ ಚ ವೈಕೃತಾತ್ ।।೮।।

ಅರ್ಥ:- ತಾಮಸ ಅಹಂಕಾರದಿಂದ ಪಂಚತನ್ಮಾತ್ರಾ ಮತ್ತು ಅದರಿಂದ ಪಂಚಮಹಾಭೂತಗಳ ಉತ್ಪತ್ತಿಯಾಯಿತು. ಹಾಗೆಯೇ ರಾಜಸ ಅಹಂಕಾರದಿಂದ ಇಂದ್ರಿಯಗಳು ಮತ್ತು ಸಾತ್ವಿಕ ಅಹಂಕಾರದಿಂದ ಇಂದ್ರಿಯಗಳ ಹನ್ನೊಂದು ದೇವತೆಗಳು ಐದು ಜ್ಞಾನೇಂದ್ರಿಯಗಳು ಐದು ಕರ್ಮೇಂದ್ರಿಯಗಳು ಮತ್ತು ಒಂದು ಮನಸ್ಸು ಇವು ಪ್ರಕಟವಾಗಿರುವುವು.

ಕ್ರಿಯಾಯುಕ್ತ ಜ್ಞಾನವು ಸ್ಫುರಣವಾದರೆ ಅಭಿಮಾನವು ನಿರ್ಮಾಣವಾಗುತ್ತದೆ ಮತ್ತು ಮೂರೂ ಗುಣಗಳಲ್ಲಿ ಅಹಂಕಾರವು ಹುಟ್ಟಿಕೊಳ್ಳುತ್ತದೆ ।।೧೧೨।। ಅಹಂಕಾರವು ಉಗ್ರಗೊಳ್ಳಲು ಶಿವನಿಗೆ ಶಿವತ್ವದ ವಿಸ್ಮರಣೆಯಾಗುವುದು. ಆಗ ದೇಹಾತ್ಮವಾದದಿಂದ ದೇಹವೇ ನಾನೆಂಬ ಭಾವನೆಯಿಂದ ಭ್ರಾಂತನಾಗುವನು. ಆದ್ದರಿಂದ ಜನ್ಮಮರಣಗಳನ್ನು ಭೋಗಿಸುತ್ತಿರುವನು ।।೧೧೩।। ಆ ಯಾವ ಅಹಂಕಾರದ ಮೋಹಕ ಶಕ್ತಿಯು ಸಂಸಾರಭ್ರಮದಿಂದ ಭ್ರಾಂತಿಯಲ್ಲಿ ತಳ್ಳುವುದು. ಅಹಂಕಾರದಿಂದ ವಿಕಾರಗಳು ಹೇಗೆ ನಿರ್ಮಾಣವಾಗುವುವು ಎಂಬುವುದನ್ನು ಸ್ವತಃ ಶ್ರೀಕೃಷ್ಣನು ಈಗ ಹೇಳುವನು ।।೧೧೪।।

ಈ ಯಾವ ಅಹಂಕಾರವು ಅತ್ಯಂತ ದುರ್ಧರವಾಗಿರುವುದು. ಈ ಅಹಂಕಾರದ ಸತ್ವಾದಿ ಗುಣಗಳು ಮೂರು ಪ್ರಕಾರಗಳಾಗಿರುವುವು. ಗುಣಗಳು ಮತ್ತು ಅಹಂಕಾರ ಇವೇ ಸರ್ವರೂಪದಿಂದ ದೊಡ್ಡ ಸಂಸಾರವಾಗಿರುವುದು. ಗುಣಗಳ ವಿಕಾರವು ಹೀಗೆ ಇರುವುವು ।।೧೧೫।। ಎಲ್ಲಕ್ಕೂ ಮೊದಲು ಸಾತ್ವಿಕ ಅಹಂಕಾರದ ನಿರ್ಮಾಣವಾಗುವುದು. ಅದು ಅಂತಃಕರಣಕ್ಕೆ ದೇದಿಪ್ಯಮಾನ ಪ್ರಕಾಶದಿಂದ ಪ್ರಕಾಶಿತಗೊಳಿಸುವುದು. ಇದೇ ಅನೇಕ ದೇವತೆಗಳ ವಿಕಾರವನ್ನು ಉತ್ಪನ್ನಗೊಳಿಸುವುದು. ಆದ್ದರಿಂದ ಅದಕ್ಕೆ ''ವೈಕಾರಿಕ'' ಎಂದು ಸಂಬೋಧಿಸುವರು ।।೧೧೬।। ರಾಜಸ ಅಹಂಕಾರವು ಜ್ಞಾನೇಂದ್ರಿಯಗಳನ್ನು ಮತ್ತು ಕರ್ಮೇಂದ್ರಿಯಗಳನ್ನು ಪ್ರಕಾಶಿತಗೊಳಿಸುವುದು. ರಾಜಸತೇಜದ ವಿಲಾಸವು ಅದಕ್ಕೆ ಪ್ರಿಯವಾಗಿರುವುದು. ಆದ್ದರಿಂದ ಅದಕ್ಕೆ ''ತೈಜಸ'' ಎಂದು ಕರೆಯುವರು. ।।೧೧೭।। ತಾಮಸ ಅಹಂಕಾರವು ಇದು ಸೂಕ್ಷ್ಮಭೂತಗಳನ್ನು ಉತ್ಪನ್ನಗೊಳಿಸುವುದು. ಹೇ ಉದ್ಧವಾ, ಆದ್ದರಿಂದ ಅದಕ್ಕೆ ''ಭೂತಾದಿ'' ಎಂದು ಹೇಳುವರು ।।೧೧೮।। ಅಹಂಕಾರದ ಪ್ರಭಾವವು ನಿಜವಾಗಿಯೂ ಬಹು ವಿಲಕ್ಷಣವಾಗಿರುವುದು. ಅದು ಸಚೇತನಕ್ಕೆ ಅಚೇತನ ವಧುವನ್ನು ಕೊಟ್ಟು ಜ್ಞಾನ ಅಜ್ಞಾನಗಳ ಗಟ್ಟಿಯಾಗಿ ಗಂಟುಹಾಕಿ ಅತಿಶಯ ಪ್ರೇಮದಿಂದ ಇವರಿಬ್ಬರ ಲಗ್ನವನ್ನು ಮಾಡುವುದು ।।೧೧೯।। ಆ ಯಾವ ಜ್ಞಾನರೂಪ ಜೀವದ ಜೊತೆಯಲ್ಲಿ ಜಡದೇಹದ ವಿವಾಹವನ್ನು ಹೂಡಿ ''ಓಂ ಪುಣ್ಯಾಹಂ'' ಎಂಬ ಮಂತ್ರವನ್ನು ಹೇಳಿ ಇವರನ್ನು ಐಕ್ಯಗೊಳಿಸುವುದು. ಅಹಂಕಾರವು ಇದು ಒಬ್ಬ ಜ್ಯೋತಿಷಿಯೇ ಆಗಿರುವುದು ।।೧೨೦।। ಜೀವವು ಇದು ಜ್ಞಾನಸ್ವರೂಪವಾಗಿದ್ದರೂ ಕೂಡ ಅದಕ್ಕೆ ಜಡ, ಮೂಢ ಮತ್ತು ಹುಚ್ಚನನ್ನಾಗಿ ಮಾಡಿಬಿಡುವುದು ಮತ್ತು ಅದಕ್ಕೆ ಎಲುಬಿನ ಹಂದರದಲ್ಲಿ ದೃಢವಾಗಿ ಬಂಧಿಸಿಬಿಡುವುದು. ಹೀಗೆ ಈ ಯಾವ ಅಹಂಕಾರವು ಬಹಳಷ್ಟು ಉಪದ್ವ್ಯಾಪತನವನ್ನು ಮಾಡುತ್ತಿರುವುದು ।।೧೨೧।। ಈ ಅಹಂಕಾರವೇ ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ಪ್ರಕಾರಗಳಿಂದ ಎಲ್ಲಿ ಬೇಕಾದಲ್ಲಿ ಹರಡುತ್ತಿರುವುದು ಮತ್ತು ಸಿಕ್ಕಾಪಟ್ಟೆಯಾಗಿ ಸಂಸಾರವನ್ನು ಬೆಳೆಸುತ್ತಿರುವುದು ।।೧೨೨।।

ವಿಷಯ ತೇಚಿ ಮಹಾಭೂತೇ । ತಾಮಸ ಪ್ರಸವಲಾ ಅಪಂಚಿಕೃತೇ । ವಿಷಯಾಸ್ತವ ಪ್ರಕಟತೀ ಭೂತೇ । ಐಕ ತೂತೇ ಸಾಂಗೇನ ॥೧೨೩॥ ಶಬ್ದಾ ಪಾಸಾವ ನಭ ಉದ್ಭವತ । ಸ್ಪರ್ಶಾಪಾಸಾವ ಮಾರುತ । ರೂಪಾಪಾಸಾವ ತೇಜ ಹೋತ । ರಸಾಸ್ತವ ಯೇಥ ಆಪ ಉಪಜೇ ॥೧೨೪॥ ಗಂಧಾಪಾಸೋನಿ ಪೃಥ್ವೀ ಕಠಿಣ । ಉಪಜಲೀ ಆಪೀ ಆಪಣ । ಯೇರಯೇರಾಂಚೇ ಅನುಸ್ಯೂತಪಣ । ಸರ್ವಥಾ ಜಾಣ ಮೋಡೇನಾ ॥೧೨೫॥ ಶಬ್ದ ನಿಃಶಬ್ದೀ ಜನ್ಮಲಾ । ತೋ ಆಕಾಶಾತೇ ಪ್ರಸವಲಾ । ಆಕಾಶೀ ಸೂಕ್ಷ್ಮ ಸ್ಪರ್ಶ ಝಾಲಾ । ತೋ ಸ್ಪರ್ಶ ವ್ಯಾಲಾ ಮಾರುತ ॥೧೨೬॥ ಜನ್ಮಲ್ಯಾ ಮಾರುತಾಆಂತ । ಶಬ್ದ ಸ್ಪರ್ಶ ದೋನೀ ನಾಂದತ । ಮಾರುತ ರೂಪಾತೇ ಪ್ರಸವತ । ತ್ಯಾ ರೂಪಾಂತ ತೇಜ ಜನ್ಮಲೇ ॥೧೨೭॥ ತ್ಯಾ ಜನ್ಮಲ್ಯಾ ತೇಜಾ ಆಂತ । ಶಬ್ದ ಸ್ಪರ್ಶ ರೂಪ ನಾಂದತ । ರೂಪ ರಸಾತೇ ಪ್ರಸವತ । ಆಪ ರಸಾಂತ ಜನ್ಮಲೇ ॥೧೨೮॥ ಜನ್ಮಲೇ ಆಪೀ ಸಮರಸ । ಶಬ್ದ ಸ್ಪರ್ಶ ರೂಪ ರಸ । ನಾಂದತಾತೀ ಸಾವಕಾಶ । ವಿಷಯೀ ವಿಷಯಾಂಸ ಪ್ರವೇಶೂ ॥೧೨೯॥ ಆಪಾಮಾಜೀ ಜನ್ಮೇ ಗಂಧ । ಗಂಧಾಪಾಸಾವ ಪೃಥ್ವಿ ಶುದ್ಧ । ಶಬ್ಧ ಸ್ಪರ್ಶ ರೂಪ ರಸ ಗಂಧ । ಪೃಥ್ವಿ ಪಂಚವಿಧ ವಿಷಯಯುಕ್ತ ॥೧೩೦॥ ವಿಷಯಯುಕ್ತ ಅಪಂಚೀಕೃತೇ । ಪೂರ್ವಿ ಲೀನ ಹೋತೀ ಸಮಸ್ತೆ । ತೀಚಿ ಸ್ಥೂಳಾವಲೀ ಯೇಥೇ । ಮಹಾಭೂತೆ ಪ್ರಸಿದ್ಧ ॥೧೩೧॥ ಜ್ಞಾನ ಕರ್ಮ ಉಭಯಪಂಚಕ । ಶ್ರೋತ್ರಾದಿ ಇಂದ್ರಿಯ ದಶಕ । ರಾಜಸಾಪಾಸೋನಿ ದೇಖ । ಸ್ವಾಭಾವಿಕ ಜನ್ಮಲೀ ॥೧೩೨॥ ಸತ್ತ್ವ ಅಹಂತೇಚಾ ವಿಕಾರ । ಚಿತ್ತ ಚತುಷ್ಟಯ ಚಮತ್ಕಾರ । ಮನ ಬುದ್ಧಿ ಚಿತ್ತ ಅಹಂಕಾರ । ಅಕರಾಹೀ ಸುರ ಇಂದ್ರಿಯಾಧಿಪ ॥೧೩೩॥ ಮಹಾಭೂತೇ ಅತಿಜಡೇ ದೇಖ । ಇಂದ್ರಿಯೇ ತೇಥೇ ಪ್ರವರ್ತಕ । ಅಂತಃಕರಣಚಾಳಕ । ದೇವ ಪ್ರಕಾಶಕ ಕರ್ಮಾಚೇ ॥೧೩೪॥ ತ್ರಿವಿಧ ಅಹಂಕಾರವೃತ್ತೀ । ಗುಣಕ್ಷೋಭೇ ಕ್ಷೋಭಕ ಶಕ್ತಿ । ಯಾಪರೀ ಝಾಲೀ ಉತ್ಪತ್ತೀ । ಬ್ರಹ್ಮಾಂಡಸ್ಥಿತೀಲಾಗೂನೀ ॥೧೩೫॥

ಮಯಾ ಸಂಚೋದಿತಾ ಭಾವಾಃ ಸರ್ವೇ ಸಂಹತ್ಯಕಾರಿಣಃ । ಅಂಡಮುತ್ಪಾದಯಾಮಾಸುರ್ಮಮಾಯತನ ಮುತ್ತಮಮ್ ॥೯॥

ಅರ್ಥ:- ಈ ಎಲ್ಲ ಪದಾರ್ಥಗಳು ನನ್ನ ಪ್ರೇರಣೆಯಿಂದ ಒಂದೆಡೆ ಬಂದು ಪರಸ್ಪರಲ್ಲಿ ಕೂಡಿಕೊಂಡವು. ಇವು ಬ್ರಹ್ಮಾಂಡರೂಪ ಅಂಡಗಳನ್ನು ನಿರ್ಮಾಣಗೊಳಿಸಿದವು. ಈ ಅಂಡಗಳು ನನ್ನ ಉತ್ತಮವಾದ ನಿವಾಸಸ್ಥಾನಗಳಾಗಿರುವುವು.

ವಿಷಯಗಳೇ ಮಹಾಭೂತಗಳಾಗಿರುವುವು. ತಾಮಸ ಗುಣದಿಂದ ಈ ಪಂಚಮಹಾಭೂತಗಳು ಪರಸ್ಪರರಲ್ಲಿ ಮಿಶ್ರಣವಾಗದೇ ಭಿನ್ನ ಭಿನ್ನವಾಗಿ ನಿರ್ಮಾಣವಾಗಿರುವುವು. ಈ ಪಂಚಮಹಾಭೂತಗಳು ವಿಷಯಗಳಿಂದ ಉತ್ಪನ್ನವಾಗುವುವು. ಅವುಗಳ ಪ್ರಕಾರಗಳನ್ನು ನಿನಗೀಗ ಹೇಳುವೆನು, ಕೇಳು ॥೧೨೩॥ ಶಬ್ದದಿಂದ ಆಕಾಶವು ನಿರ್ಮಾಣವಾಗುವುದು. ಸ್ಪರ್ಶದಿಂದ ವಾಯು ಉತ್ಪನ್ನವಾಗುವುದು. ರೂಪದಿಂದ ತೇಜವು ಉತ್ಪನ್ನವಾಗುವುದು ಮತ್ತು ಜಲವು ರಸದಿಂದ ಉತ್ಪನ್ನವಾಗುವುದು ॥೧೨೪॥ ಗಂಧದಿಂದ ಕಠಿಣವಾದ ಪೃಥ್ವಿಯು ಜಲದಲ್ಲಿ ಉತ್ಪನ್ನವಾಗುವುದು. ಈ ರೀತಿಯಿಂದ ಇವು ಭಿನ್ನಭಿನ್ನವಾಗಿ ಉತ್ಪನ್ನವಾಗುತ್ತಿದ್ದರೂ ಕೂಡ ಇವರ ಪರಸ್ಪರರ ಐಕ್ಯವು ಎಂದಿಗೂ ಬಿಗಡಾಯಿಸುವುದಿಲ್ಲ ॥೧೨೫॥ ನಿಃಶಬ್ದದಿಂದ ಅಂದರೆ ಪರಬ್ರಹ್ಮನಿಂದ ಶಬ್ದವು ನಿರ್ಮಾಣವಾಯಿತು. ಅದು ಆಕಾಶವನ್ನು ಹುಟ್ಟಿಸಿತು. ಆಕಾಶದಲ್ಲಿ ಸೂಕ್ಷ್ಮವಾದ ಸ್ಪರ್ಶವು ಹುಟ್ಟಿಕೊಂಡಿತು ಮತ್ತು ಸ್ಪರ್ಶದಿಂದ ವಾಯುವು ಹುಟ್ಟಿತು ॥೧೨೬॥ ಈ ರೀತಿಯಾಗಿ ಪ್ರಕಟಗೊಂಡಿರುವ ವಾಯುವಿನಲ್ಲಿ ಶಬ್ದ ಮತ್ತು ಸ್ಪರ್ಶ ಎರಡೂ ಕೂಡ ವರ್ತಿಸುತ್ತಿರುವುವು. ಆ ವಾಯುವು ರೂಪವನ್ನು ಉತ್ಪನ್ನಗೊಳಿಸಿತು ಮತ್ತು ಆ ರೂಪದಲ್ಲಿ ತೇಜವು ಜನ್ಮಕ್ಕೆ ಬಂದಿರುವುದು ॥೧೨೭॥ ಆ ಯಾವ ಉತ್ಪನ್ನವಾಗಿರುವ ತೇಜದಲ್ಲಿ ಶಬ್ದ, ಸ್ಪರ್ಶ ಮತ್ತು ರೂಪ ಈ ಮೂರೂ ವರ್ತಿಸುತ್ತಿರುವುವು. ರೂಪದಿಂದ ರಸವು ಉತ್ಪನ್ನವಾಯಿತು ಮತ್ತು ಆ ರಸದಿಂದ ಜಲವು ಉತ್ಪನ್ನವಾಯಿತು ॥೧೨೮॥ ಈ ರೀತಿಯಲ್ಲಿ ಜನ್ಮ ಪಡೆದಿರುವ ನೀರಿನಲ್ಲಿ ಶಬ್ದ, ಸ್ಪರ್ಶ, ರೂಪ ಮತ್ತು ರಸ ಇವು ವರ್ತಿಸುತ್ತಿರುವುವು. ಈ ಪ್ರಕಾರವಾಗಿ ವಿಷಯಗಳಲ್ಲಿ ವಿಷಯಗಳು ಮಿಶ್ರವಾಗಿರುವುವು ॥೧೨೯॥ ನೀರಿನಲ್ಲಿ ಗಂಧವು ಉತ್ಪನ್ನವಾಗುವುದು ಮತ್ತು ಆ ಗಂಧದಿಂದ ಈ ಯಾವ ಶುದ್ಧವಾಗಿರುವ ಪೃಥ್ವಿಯು ನಿರ್ಮಾಣವಾಗುವುದು. ಈ ಯಾವ ಪೃಥ್ವಿಯು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಹೀಗೆ ಐದು ವಿಷಯಗಳಿಂದ ಯುಕ್ತವಾಗಿರುವುದು ॥೧೩೦॥ ಹೀಗೆ ಇವು ಎಲ್ಲವೂ ಅಪಂಚೀಕೃತ ವಿಷಯಯುಕ್ತ ಭೂತಗಳು ಸೂಕ್ಷ್ಮರೂಪದಿಂದ ಪೂರ್ವದಲ್ಲಿ ಲೀನವಾಗಿದ್ದವು. ಅವು ಸ್ಥೂಲರೂಪದಿಂದ ಪಂಚಮಹಾಭೂತಗಳೆಂಬ ನಾಮದಿಂದ ಪ್ರಸಿದ್ಧವಾಗಿರುವುವು ॥೧೩೧॥ ರಾಜಸ ಅಹಂಕಾರದಿಂದ ಐದು ಕರ್ಮೇಂದ್ರಿಯಗಳು ಮತ್ತು ಐದು ಜ್ಞಾನೇಂದ್ರಿಯಗಳು ಇವು ಚಕ್ಷು-ಶ್ರೋತ್ರಾದಿ ಹತ್ತು ಇಂದ್ರಿಯಗಳು ಸ್ವಾಭಾವಿಕವಾಗಿ ಉತ್ಪನ್ನವಾಗುವುವು ॥೧೩೨॥ ಸಾತ್ವಿಕ ಅಹಂಕಾರದ ವಿಕಾರದಿಂದ ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ ಇವು ಚಿತ್ತಚತುಷ್ಟಯಗಳು ಉದ್ಭವವಾಗುವುವು. ಪ್ರಜಾಪತೀ ಇಂದ್ರಾದಿಕ ಹನ್ನೊಂದು ದೇವತೆಗಳು ಇಂದ್ರಿಯಗಳ ಅಧಿಷ್ಠಾತೆಯಾಗಿರುವರು ॥೧೩೩॥ ವಾಸ್ತವಿಕವಾಗಿ ಮಹಾಭೂತಗಳು ಇವು ಅತ್ಯಂತ ಜಡವಾಗಿರುವುವು. ಇಂದ್ರಿಯಗಳು ಅವುಗಳ ಪ್ರವರ್ತಕವಾಗುವುವು. ಅಂತಃಕರಣವು ಚಾಲಕವಾಗಿದ್ದು ದೇವತೆಗಳು ಈ ಕರ್ಮಗಳ ಪ್ರಕಾಶಕರಾಗಿರುವರು ॥೧೩೪॥ ಮೂರು ಪ್ರಕಾರಗಳ ಅಹಂಕಾರವೃತ್ತಿಯು ಗುಣಕ್ಷೋಭದಿಂದ ಕ್ಷೋಭಕಶಕ್ತಿಯಾಗುವುವು. ಈ ಪ್ರಕಾರವಾಗಿ ಬ್ರಹ್ಮಾಂಡಗಳ ಉತ್ಪತ್ತಿಯಾಗಿರುವುವು ॥೧೩೫॥

ಭೂತಾ ಪರಸ್ಪರೇ ವೈರ ದೇಖ । ಪೃಥ್ವಿತೇ ಗಿಳೂ ಧಾಂವೇ ಉದಕ । ಉದಕಾತೇ ಆವಶ್ಯಕ । ತೇಜ ದೇಖ ನಿರ್ದಳೀ ।।೧೩೬।। ತೇಜಾತೇ ಪ್ರಾಶೀ ಪವನ । ಪವನಾತೇ ಗ್ರಾಸೀ ಗಗನ । ಏವಂ ಭೂತಾಂಸೀ ಸೌಜನ್ಯ । ಸರ್ವಥಾ ಜಾಣ ಅಸೇನಾ ।।೧೩೭।। ತೇಥ ಅಂತರ್ಯಾಮಿರೂಪೇ ಮೀ ಜಾಣ । ಸ್ವಯೇ ಪ್ರವೇಶೋನಿ ಆಪಣ । ಭೂತೇ ಮೇಳವೂನಿ ಪೂರ್ಣ । ಕರೀ ಸಂರಕ್ಷಣ ಮರ್ಯಾದಾ ।।೧೩೮।। ಮಾಝ್ಯೇ ಮರ್ಯಾದೇಚಿ ರೇಖಾ । ಪೃಥ್ವೀ ನ ವಿರವೀ ಉದಕಾ । ಉದಕಾತೇ ತೇಜ ದೇಖಾ । ನ ಲಾವೀ ನಖಾ ಶೋಷಾಚೇ ।।೧೩೯।। ತೇಜಾತೇ ನ ಪ್ರಾಶೀ ಪವನ । ವಾಯು ಸ್ವೇಚ್ಛಾ ವಿಚರತಾ ಜಾಣ । ಸರ್ವಥಾ ಗ್ರಾಸೀನಾ ಗಗನ । ಗತಿಬಂಧನ ಕರೀನಾ ।।೧೪೦।। ಯಾಪರೀ ಹೀ ಮಹಾಭೂತೇ । ಏಕವಟೂನಿ ಸಮಸ್ತೇ । ಸ್ರಜಲೇ ಬ್ರಹ್ಮಾಂಡಾತೇ । ಮಜ ಮಹಾಪುರುಷಾತೇ ವಸ್ತೀಶೀ ।।೧೪೧।। ಸಪ್ತಾವರಣೇಸೀ ಪ್ರಚಂಡ । ಆವೋ ಸಾಧೂನಿ ಉದಂಡ । ನಿರ್ಮಾಣ ಕೇಲೇ ಬ್ರಹ್ಮಾಂಡ । ಮಯಾರಾಂಡ ಆಕಾರೇ ।।೧೪೨।।

ತಸ್ಮಿನ್ನಹಂ ಸಮುಭವಮಂಡೇ ಸಲಿಲಸಂಸ್ಥಿತೌ । ಮಮ ನಾಭ್ಯಾಮಭೂತ್ಪದ್ಮಂ ವಿಶ್ವಾಖ್ಯಂ ತತ್ರ ಚಾತ್ಮಭೂಃ ।।೧೦।।

ಅರ್ಥ:- ಈ ಅಂಡಗಳು ಜಲದಲ್ಲಿ ಸ್ಥಿರವಾಗಲು ನಾನು ನಾರಾಯಣರೂಪದಿಂದ ಅದರಲ್ಲಿ ವಿರಾಜಮಾನನಾದೆನು. ನನ್ನ ನಾಭಿಯಿಂದ ವಿಶ್ವಕಮಲದ ನಿರ್ಮಾಣವಾಗಿ ಅದರ ಮೇಲೆ ಬ್ರಹ್ಮನ ಆವಿರ್ಭಾವವಾಯಿತು.

ಐಸೇ ಬ್ರಹ್ಮಾಂಡ ಜೇ ವಿದ್ಯಮಾನ । ತ್ಯಾಮಾಜೀ ಮೀ ನಾರಾಯಣ । ಲೀಲಾವಿಗ್ರಹೀ ಝಾಲೋ ಜಾಣ । ಆಪಣ್ಯಾ ಆಪಣ ವಿಶ್ವಾತ್ಮಾ ।।೧೪೩।। ತ್ಯಾ ಮಾಝ್ಯೇನಾಭೀಸೀ ನಾಭಿಪದಮ್ । ವಿಕಾಸಲೇ ವಿಶ್ವಧಾಮ । ತ್ಯಾಹೀಮಾಜೀ ಉತ್ತಮೋತ್ತಮ । ಆತ್ಮಭೂ ನಾಮ ಜನ್ಮಲಾ ಬ್ರಹ್ಮಾ ।।೧೪೪।। ನಾಹೀ ಯೋನಿದ್ವಾರಾ ಉದರಗರ್ಭೀ । ಮಜ ಆತ್ಮ್ಯಾಪಾಸೂನಿ ಸ್ವಯಂಭೂ । ಉಪಜಲಾ ಯಾಲಾಗೀ ಆತ್ಮಭೂ । ನಾಮಾಚಾ ಶೋಭೂ ಬ್ರಹ್ಮ್ಯಾಸೀ ।।೧೪೫।। ಬ್ರಹ್ಮಾಂಡ ತೋ ವಿರಾಟದೇಹೋ । ತ್ಯಾಚಾ ಮುಖ್ಯಭಾಗ ವಿಗ್ರಹೋ । ಮಾಝ್ಯೇ ನಾಭೀಕಮಳೀ ಪಹಾ ಹೋ । ಬ್ರಹ್ಮದೇವೋ ಜನ್ಮಲಾ ।।೧೪೬।। ಕರಾವಯಾ ಲೋಕಸರ್ಜನ । ಪದ್ಮನಾಭಾಚೇ ನಾಭೀಸೀ ಜಾಣ । ಸ್ವಯೇ ಜನ್ಮಲಾ ಚತುರಾನನ । ರಜೋಗುಣ ಪ್ರಾಧಾನ್ಯೇ ।।೧೪೭।।

ಸೋಽಸೃಜತ್ತಪಸಾ ಯುಕ್ತೋ ರಜಸಾ ಮದನುಗ್ರಹಾತ್ । ಲೋಕಾನ್ ಸಪಾಲನ್ ವಿಶ್ವಾತ್ಮಾ ಭೂರ್ಭುವಃಸ್ವರಿತಿ ತ್ರಿಧಾ ।।೧೧।।

ಅರ್ಥ:- ಬ್ರಹ್ಮನು ಪೂರ್ವದಲ್ಲಿ ಬಹಳಷ್ಟು ತಪಸ್ಸನ್ನಾಚರಿಸಿದ್ದನು. ತದನಂತರ ನನ್ನ ಕೃಪಾ ಪ್ರಸಾದವನ್ನು ಪ್ರಾಪ್ತ ಮಾಡಿಕೊಂಡು ರಜೋಗುಣ ಮುಖಾಂತರವಾಗಿ ಭೂಃ ಭುವಃ ಸ್ವಃ ಅರ್ಥಾತ ಪಾತಾಳಸಹ ಪೃಥ್ವೀ, ಅಂತರಿಕ್ಷ ಮತ್ತು ಸ್ವರ್ಗ ಈ ಮೂರು ಲೋಕಗಳ ಮತ್ತು ಲೋಕಪಾಲಕರ ರಚನೆಯನ್ನು ಮಾಡಿದನು.

ಭೂತಗಳಲ್ಲಿ ಪರಸ್ಪರವಾಗಿ ವೈರವಿರುವುದು. ಜಲವು ಪೃಥ್ವಿಯನ್ನು ಮುಳುಗಿಸಲು ಧಾವಿಸುತ್ತಿರುವುದು. ತೇಜವು ಇದು ಜಲವನ್ನು ನಾಶಮಾಡುತ್ತಿರುವುದು ।।೧೩೬।। ತೇಜವನ್ನು ವಾಯುವು ನುಂಗಿಬಿಡುವುದು. ವಾಯುವಿಗೆ ಆಕಾಶವು ಗ್ರಾಸಮಾಡುವುದು. ಈ ಪ್ರಕಾರವಾಗಿ ಭೂತಭೂತಗಳಲ್ಲಿ ಸ್ವಲ್ಪವೂ ಸಖ್ಯತ್ವವು ಇರುವುದಿಲ್ಲ ।।೧೩೭।। ಅವುಗಳಲ್ಲಿ ನಾನು ಅಂತಃಕರಣರೂಪದಿಂದ ಪ್ರವೇಶವನ್ನು ಮಾಡುವೆನು ಹಾಗೂ ಭೂತಗಳನ್ನು ಏಕತ್ರಗೊಳಿಸಿ ಅವರ ಮರ್ಯಾದೆಯ ರಕ್ಷಣೆಯನ್ನು ಮಾಡುವೆನು ।।೧೩೮।। ನಾನು ಮರ್ಯಾದೆಯ ರೇಖೆಯನ್ನು ಹಾಕಿಕೊಟ್ಟಿರುವುದರಿಂದ ನೀರು ಪೃಥ್ವಿಯನ್ನು ಮುಳುಗಿಸಲಾರದು. ತೇಜವು ಉದಕವನ್ನು ಶೋಷಿಸಲಾರದು ।।೧೩೯।। ವಾಯುವು ತೇಜವನ್ನು ನುಂಗಲಾರದು. ಹಾಗೆಯೇ ಸ್ವೇಚ್ಛೆಯಿಂದ ವಿಹರಿಸುತ್ತಿರುವ ವಾಯುವಿಗೆ ಆಕಾಶವು ಪ್ರತಿಬಂಧವನ್ನು ಮಾಡಲಾರದು ।।೧೪೦।। ಈ ಪ್ರಕಾರವಾಗಿ ಈ ಎಲ್ಲ ಮಹಾಭೂತಗಳು ಏಕತ್ರವಾಗಿ ಬಂದು ಮಹಾಪುರಷನಾದ ನನಗೆ ವಾಸಿಸಲು ಅವರು ಬ್ರಹ್ಮಾಂಡಗಳನ್ನು ನಿರ್ಮಾಣ ಮಾಡಿರುವರು ।।೧೪೧।। ಇವರು ಪ್ರಚಂಡವಾಗಿರುವ ಮಹತ್ತರ ಏಳು ಆವರಣಗಳ ವಿಸ್ತೃತ ಸ್ಥಳವನ್ನು ವ್ಯಾಪಿಸಿ ನವಿಲಿನ ತತ್ತಿಯ ಆಕಾರಗಳ ಬ್ರಹ್ಮಾಂಡಗಳನ್ನು ನಿರ್ಮಾಣ ಮಾಡಿರುವರು ।।೧೪೨।।

ಈ ಯಾವ ಅಸ್ತಿತ್ವದಲ್ಲಿ ಬಂದಿರುವ ಬ್ರಹ್ಮಾಂಡಗಳಲ್ಲಿ ಮೂಲತಃ ನಾನೇ ನಾನಾಗಿರುವ ವಿಶ್ವಾತ್ಮನಾದ ನಾನು ನಾರಾಯಣನು, ಲೀಲೆಯಿಂದ ದೇಹ ಧಾರಣ ಮಾಡಿದೆನು ।।೧೪೩।। ನನ್ನ ಯಾವ ನಾಭಿಯಿಂದ ಸಂಪೂರ್ಣ ವಿಶ್ವಕ್ಕೆ ಆಧಾರಭೂತವಾಗುವಂತಹ ನಾಭಿಕಮಲವು ವಿಕಸಿತವಾಯಿತು. ಅದರಿಂದ ಉತ್ತಮೋತ್ತಮನಾದ ಸ್ವಯಂಭೂ ನಾಮದ ಬ್ರಹ್ಮದೇವನು ಜನ್ಮಕ್ಕೆ ಬಂದನು ।।೧೪೪।। ಆತನ ಗರ್ಭದಲ್ಲಿದ್ದು ಯೋನಿದ್ವಾರಾ ಜನ್ಮ ಪಡೆದವನಲ್ಲ. ಆತನು ನನ್ನ ಆತ್ಮನಿಂದ ಸ್ವಭಾವತವೇ ಜನ್ಮಕ್ಕೆ ಬಂದನು. ಆದ್ದರಿಂದ ಆತನಿಗೆ ''ಆತ್ಮಭೂ ಅಥವಾ ಸ್ವಯಂಭೂ'' ಎಂದು ಯಥಾರ್ಥವಾದ ಭೂಷಣಯುಕ್ತ ನಾಮವನ್ನು ಕೊಡಲ್ಪಟ್ಟದೆ ।।೧೪೫।। ಬ್ರಹ್ಮಾಂಡವೇ ವಿರಾಟದೇಹವಾಗಿರುವುದು. ಅದೇ ಆತನ ಶರೀರರೂಪ ಮುಖ್ಯ ಭಾಗವಾಗಿರುವುದು. ಈ ಪ್ರಕಾರವಾಗಿ ನನ್ನ ನಾಭಿಕಮಲದಿಂದ ಬ್ರಹ್ಮದೇವನು ಜನಿಸಿದನು ।।೧೪೬।। ಸೃಷ್ಟಿಯ ನಿರ್ಮಾಣವನ್ನು ಮಾಡುವುದಕ್ಕಾಗಿ ನಾಭಿಕಮಲದಲ್ಲಿ ರಜೋಗುಣದ ಪ್ರಾಧಾನ್ಯದಿಂದ ಚತುರ್ಮುಖ ಬ್ರಹ್ಮದೇವನು ಸ್ವತಃ ಜನ್ಮವನ್ನು ಪಡೆದನು।।೧೪೭।।

ಬ್ರಹ್ಮಾ ರಜೋಗುಣ ಪ್ರಧಾನ । ನಾಭಿಕಮಳೀ ಬೈಸೋನಿ ಜಾಣ । ಮೀ ಜನ್ಮ ಮೂಳ ಜೋ ನಾರಾಯಣ । ತ್ಯಾಸೀ ತೋ ಆಪಣ ದೇಖೇನಾ ॥೧೪೮॥ ಸ್ವಯೇ ಬೈಸಲ್ಯಾ ಕಮಳಾಸೀ । ಕಮಳಮೂಳ ನ ಕಳೇ ತ್ಯಾಸೀ । ದೇಖೇ ಏಕಾರ್ಣವ ಜಳಾಸೀ । ರಜೋಗುಣೇಸೀ ಮೋಹಿತ ॥೧೪೯॥ ತೇ ಕಮಳಮೂಳ ಪಹಾವಯಾ ಬುಡೀ । ಏಕಾರ್ಣವೀ ಘಾಲೋನಿ ಉಡೀ । ಬುಡತಾ ದಿವಸಾಂಚಿಯಾ ಕೋಡೀ । ತ್ಯಾ ಮೂಳಾಚೀ ಜೋಡೀ ನ ಲಭೇಚಿ ಬ್ರಹ್ಮಾ ॥೧೫೦॥ ತೇಥ ನಿರ್ಬುಜಲಾ ಜಳಭಯೇ । ಬಾಹೇರೀ ಉಸಾಸೇ ಲವಲಾಹೇ । ಕಮಳಾವರೀ ಬೈಸೋನಿ ಪಾಹೇ । ಕರಾವೇ ಕಾಯೇ ಸ್ಮರೇನಾ ॥೧೫೧॥ ಧಾಂವ ಪಾವ ಗಾ ಅಚ್ಯುತಾ । ನಿವಾರೀ ಮಾಝೀ ಜಗದಂಧತಾ । ತುಜವಾಂಚೂನಿ ಸರ್ವಥಾ । ಸಂರಕ್ಷಿತಾ ಮಜ ನಾಹೀ ॥೧೫೨॥ ಬ್ರಹ್ಮಾ ಮಾಝೀ ಪೋಟೀಂಚೇ ಬಾಳ । ರಜೇ ರಜಾಂಧ ಝಾಲೇ ಕೇವಳ । ಧರೋನಿ ಠೇಲಾ ನಾಭಿಕಮಳ । ಕೃಪಾ ತತ್ಕಾಳ ಮಜ ಆಲೀ ॥೧೫೩॥ ಮಜ ವಿಶ್ವಾತ್ಮ್ಯಾಚೇ ಅಪತ್ಯ । ಜಡತ್ವೇ ರಾಹಿಲಾ ತಟಸ್ಥ । ಮ್ಯಾ ಉಪದೇಶಿಲಾ ತೇಥ । ಸೃಷ್ಟಿಸರ್ಜನಾರ್ಥ ತಪೋನಿಷ್ಠಾ ॥೧೫೪॥ ಮಹಾಕಲ್ಪಾದೀಂಚೇ ಮಾಂಡಣೀ । ಮಾಝಿಯಾ ಅಶರೀರೀ ವಾಣೀ । ತಪ ತಪ ಯಾ ದೋ ವಚನೀ । ಉಪದೇಶಿಲಾ ಅಗ್ರಗಣೀ ಚತುರಾನನ ॥೧೫೫॥ ಯಥೋಕ್ತ ತಪ ಕರತಾ ಜಾಣ । ವೃದ್ಧಿ ಪಾವಲಾ ಸತ್ತ್ವಗುಣ । ತ್ಯಾಚಿಯಾ ಸಾತ್ತ್ವಿಕತಾ ಪೂರ್ಣ । ಪ್ರತ್ಯಕ್ಷ ನಾರಾಯಣ ಮೀ ಝಾಲೋ ॥೧೫೬॥ ಕಾಳತ್ರಯೀ ಅಬಾಧಿತ । ತೂಚಿ ವಿಶ್ವಾತ್ಮಾ ನಿಶ್ಚಿತ । ಹೇ ಚತುಃಶ್ಲೋಕೀ ಭಾಗವತ । ಮ್ಯಾ ತ್ಯಾಸೀ ತೇಥ ಉಪದೇಶಿಲೇ ॥೧೫೭॥ ಮಾಝಿಯಾ ಉಪದೇಶವಿಧೀ । ಹೋಊನಿಯಾ ಸಮಬುದ್ಧೀ । ಕಲ್ಪಕಲ್ಪಾಂಚಿಯೇ ಅವಧೀ । ಮೋಹ ತ್ರಿಶುದ್ಧೀ ಬಾಧೀನಾ ॥೧೫೮॥ ಯಾಪರೀ ಬ್ರಹ್ಮಾ ಕಲ್ಪಾದೀ । ಪಾವಲಾ ಪರಮ ಸಮಾಧೀ । ಪ್ರಕಟೋನಿ ನಿಜಾತ್ಮಾ ಬುದ್ಧೀ । ಸರ್ಜನಸಿದ್ಧೀ ತೇಣೇ ಕೇಲೀ ॥೧೫೯॥ ಸುರಾಸುರ ಮಾನವ ಪನ್ನಗಾದಿಕ । ಯಾಂಚೇ ವಸತೇ ತಿನ್ಹೀ ಲೋಕ । ಸಪ್ತ ಪಾತಾಳ ಘರೇ ದೇಖ । ಗೋಪುರೇ ಅಲೋಕಿಕ ಸಪ್ತಸಂಖ್ಯಾ ॥೧೬೦॥ ಭೂಶಬ್ದೇ ಪಾತಾಳ ಲೋಕ । ಭುವಃಶಬ್ದೇ ಮೃತ್ಯುಲೋಕ । ಸ್ವಶಬ್ದೇ ಸ್ವರ್ಗಲೋಕ । ತ್ರಿಲೋಕ ದೇಖ ಯಾ ನಾಂವ ॥೧೬೧॥ ಚತುರ್ದಶ ಭುವನೇ ಸಕಳ । ತೇಥ ವಸತೇ ಲೋಕ ಲೋಕಪಾಳ । ತೇಚಿ ಕರೋನಿಯಾ ವಿವಳ । ಸಾಂಗೇ ಪ್ರಾಂಜಳ ಶ್ರೀಕೃಷ್ಣ ॥೧೬೨॥

ಈ ಪ್ರಕಾರದ ರಜೋಗುಣ ಪ್ರಧಾನವಾದ ಯಾವ ಬ್ರಹ್ಮದೇವನು ಜನ್ಮಕ್ಕೆ ಬಂದು ನಾಭಿಕಮಲದಲ್ಲಿ ಕುಳಿತುಕೊಂಡನು. ಆದರೆ ಆತನ ಜನ್ಮದ ಮೂಲಕಾರಣವಾಗಿರುವ ನಾರಾಯಣನಾದ ನನ್ನನ್ನು ಆತನು ನೋಡಲಾರನಾದನು ॥೧೪೮॥ ಕಾರಣ ಆತನು ಕಮಲದಲ್ಲಿ ಕುಳಿತುಕೊಂಡಿದ್ದಕ್ಕಾಗಿ ಆತನಿಗೆ ಕಮಲದ ಮೂಲವು ಕಾಣದಾಯಿತು. ಆತನು ರಜೋಗುಣದಿಂದ ಮೋಹಿತನಾದ್ದರಿಂದ ಆತನಿಗೆ ಸರ್ವತ್ರವೂ ಒಂದೇ ರೂಪವಾಗಿ ಸಮುದ್ರದಂತೆ ನೀರೇ ನೀರಾಗಿ ಕಾಣ ಹತ್ತಿತು ॥೧೪೯॥ ಆ ಯಾವ ಕಮಲದ ತುಂಬನ್ನು ಕಾಣುವುದಕ್ಕಾಗಿ ಆತನು ಸಮುದ್ರದಲ್ಲಿ ಮುಳುಗಿ ಎಷ್ಟೋ ದಿನಗಳವರೆಗೆ ನೀರಿನಲ್ಲಿಯೇ ಇದ್ದನು. ಆದರೂ ಕೂಡ ಆ ಬ್ರಹ್ಮದೇವನಿಗೆ ಕಮಲದ ದೇಟಿನ ಶೋಧವು ಹತ್ತಲಿಲ್ಲ ॥೧೫೦॥ ಆ ಯಾವ ಜಲದ ಪ್ರಚಂಡವಾದ ತೆರೆಗಳಿಂದ ಆತನು ಭಯಪಟ್ಟನು. ಕೊನೆಗೆ ಹೊರಗೆ ಬಂದು ಕಮಲದ ಮೇಲೆ ಕುಳಿತುಕೊಂಡು ನಿಟ್ಟುಸಿರುಬಿಟ್ಟನು ॥೧೫೧॥ ಆಗ ಆತನು ಹೀಗೆ ಪ್ರಾರ್ಥಿಸಿದನು; ಹೇ ಅಚ್ಯುತನೇ, ಈಗ ಬೇಗನೇ ಧಾವಿಸು, ಪ್ರಸನ್ನನಾಗು, ನನಗೆ ಜಗತ್ತಿನ ವಿಷಯದಲ್ಲಿ ಬಂದಿರುವ ಅಂಧತ್ವವನ್ನು ನಿವಾರಿಸು. ನಿನ್ನ ಹೊರತಾಗಿ ನನ್ನನ್ನು ಪರಿಪೂರ್ಣವಾಗಿ ರಕ್ಷಣೆಯನ್ನು ಮಾಡುವವನು ಬೇರೆ ಯಾರೂ ಇರುವುದಿಲ್ಲ ॥೧೫೨॥ ಬ್ರಹ್ಮದೇವನು ನನ್ನ ಹೊಟ್ಟೆಯ ಬಾಲಕನು. ಆತನು ಕೇವಲ ರಜೋಗುಣದಿಂದ ಕುರುಡನಾಗಿದ್ದನು. ಆತನು ನನ್ನ ನಾಭಿಕಮಲವನ್ನು ಹಿಡಿದುಕೊಂಡು ಕುಳಿತಿದ್ದನು. ಆಗ ನನಗೆ ಆತನಲ್ಲಿ ದಯೆ ಹುಟ್ಟಿತು ॥೧೫೩॥ ನನ್ನ ವಿಶ್ವಾತ್ಮನ ಪುತ್ರನಾಗಿದ್ದರೂ ಕೂಡ ಆತನು ಕೇವಲ ಜಡತ್ವದಿಂದ ಸ್ತಬ್ಧನಾಗಿಬಿಟ್ಟನು. ಆ ಸಮಯದಲ್ಲಿ ನಾನು ತಪೋನಿಷ್ಠನಾಗಿರುವ ಆತನಿಗೆ ಸೃಷ್ಟಿಯ ಉತ್ಪತ್ತಿಗಾಗಿ ಉಪದೇಶವನ್ನು ಮಾಡಿದೆನು ॥೧೫೪॥ ಮಹಾಕಲ್ಪಾದಿಕಗಳ ಆರಂಭದಲ್ಲಿ ನಾನು ನನ್ನ ಆಕಾಶವಾಣಿಯಿಂದ ''ತಪ, ತಪ'' ಎಂದು ಹೀಗೆ ಎರಡು ಶಬ್ದಗಳಿಂದ ಶ್ರೇಷ್ಠನಾಗಿರುವ ಬ್ರಹ್ಮದೇವನಿಗೆ ಉಪದೇಶಿಸಿದೆನು ॥೧೫೫॥ ನಾನು ತಿಳಿಸಿದಂತೆ ಆತನು ತಪವನ್ನಾಚರಿಸಿದನು. ಇದರಿಂದ ಆತನ ಸತ್ವಗುಣವು ವೃದ್ಧಿಯಾಯಿತು. ಆತನ ಸತ್ವಗುಣಕ್ಕಾಗಿ ನಾರಾಯಣನಾದ ನಾನು ಪ್ರತ್ಯಕ್ಷನಾದೆನು ॥೧೫೬॥ ''ತ್ರಿಕಾಲಾಬಾಧಿತ ವಿಶ್ವಾತ್ಮಾ ನಿಜವಾಗಿಯೂ ನೀನೇ ಆಗಿರುವೆ'' ಎಂಬುವ ಅರ್ಥದ ಚತುಃಶ್ಲೋಕೀ ಭಾಗವತವನ್ನು ನಾನು ಆತನಿಗೆ ಅಲ್ಲಿ ಉಪದೇಶವನ್ನು ಮಾಡಿದೆನು ॥೧೫೭॥ ನನ್ನ ಉಪದೇಶಾನುಸಾರವಾಗಿ ಆತನ ಬುದ್ಧಿಯು ಸಮವಾಯಿತು. ಈಗ ಕಲ್ಪ ಕಲ್ಪಗಳು ಉರುಳಿದರೂ ಕೂಡ ಆತನಿಗೆ ಮೋಹವು ಸ್ಪರ್ಶ ಸಹ ಮಾಡಲು ಶಕ್ಯವಿಲ್ಲ ॥೧೫೮॥ ಈ ಪ್ರಕಾರವಾಗಿ ಕಲ್ಪದ ಆರಂಭದಲ್ಲಿ ಬ್ರಹ್ಮದೇವನು ಪರಮ ಸಮಾಧಿಯಿಂದ ಆತ್ಮಜ್ಞಾನವನ್ನು ಪ್ರಾಪ್ತ ಮಾಡಿಕೊಂಡನು. ತದನಂತರ ಸೃಷ್ಟಿಯ ಉತ್ಪತ್ತಿಕಾರ್ಯವನ್ನು ಮಾಡಿದನು ॥೧೫೯॥ ದೇವತೆಗಳು, ರಾಕ್ಷಸರು, ಮನುಷ್ಯರು, ಸರ್ಪಗಳು ಇವುಗಳ ವಸತಿಗಾಗಿ ಮೂರು ಲೋಕಗಳನ್ನು, ಏಳು ಪಾತಾಳಗಳನ್ನು ಹಾಗೆಯೇ ವಿಲಕ್ಷಣವಾದ ಏಳು ಗೋಪುರಗಳನ್ನೂ ಕೂಡ ಆತನು ನಿರ್ಮಾಣವನ್ನುಮಾಡಿದನು ॥೧೬೦॥ ಭೂಃ ಅಂದರೆ ಪಾತಾಳ ಲೋಕ, ಭುವಃ ಅಂದರೆ ಮೃತ್ಯುಲೋಕ ಮತ್ತು ಸ್ವಃ ಅಂದರೆ ಸ್ವರ್ಗಲೋಕ, ಇವುಗಳಿಗೆ ತ್ರಿಭುವನವೆಂದು ಕರೆಯುವರು ॥೧೬೧॥ ಒಟ್ಟಿನಲ್ಲಿ ಹದಿನಾಲ್ಕು ಲೋಕಗಳು, ಅಲ್ಲಿರುವ ಪ್ರಾಣಿಗಳು ಮತ್ತು ಲೋಕಪಾಲಕರು ಇವುಗಳ ಅಧಿಕ ಸ್ಪಷ್ಟೀಕರಣವನ್ನು ಈಗ ಶ್ರೀಕೃಷ್ಣನು ಮಾಡುತ್ತಿರುವನು ॥೧೬೨॥

ದೇವನಾಮೋಕ ಆಸೀತ್ಸ್ವರ್ಭೂತಾನಾಂಚ ಭುವಃ ಪದಮ್ ।
ಮರ್ತ್ಯಾದೀನಾಂ ಚ ಭೂರ್ಲೋಕಃ ಸಿದ್ಧಾನಾಂ ತ್ರಿತಯಾತ್ಪರಮ್ ॥೧೨॥

ಅಧೋಽಸುರಾಣಾಂ ನಾಗಾನಾಂ ಭೂಮೇರೋಕೋಽಸೃಜತ್ಪ್ರಭುಃ ।
ತ್ರಿಲೋಕ್ಯಾ ಗತಯಃ ಸರ್ವಾಃ ಕರ್ಮಣಾಂ ತ್ರಿಗುಣಾತ್ಮನಾಮ್ ॥೧೩॥

ಅರ್ಥ:- ದೇವತೆಗಳ ನಿವಾಸಕ್ಕಾಗಿ ಸ್ವರ್ಲೋಕ । ಭೂತಪ್ರೇತಗಳಿಗಾಗಿ ಭುವಲೋಕ ಮತ್ತು ಮನುಷ್ಯ ಇತ್ಯಾದಿಕರಿಗಾಗಿ ಭೂಲೋಕದ ನಿಶ್ಚಯವು ಮಾಡಲಾಯಿತು. ಈ ಮೂರು ಲೋಕಗಳ ಮೇಲೆ ಮಹರ್ಲೋಕ, ತಪ ಲೋಕ ಸಿದ್ಧರ ನಿವಾಸಸ್ಥಾನವಾಗಿರುವುವು. ಸೃಷ್ಟಿ ಕಾರ್ಯದಲ್ಲಿ ಸಮರ್ಥ ಬ್ರಹ್ಮದೇವನು ಅಸುರ ಮತ್ತು ನಾಗಗಳಿಗಾಗಿ ಪೃಥ್ವಿಯ ಕೆಳಗೆ ಅತ್ತಳ, ವಿತಳ, ಸುತಳ ಇತ್ಯಾದಿ ಏಳು ಪಾತಾಳಗಳನ್ನು ನಿರ್ಮಿಸಿದನು. ಈ ಮೂರೂ ಲೋಕಗಳಲ್ಲಿ ತ್ರಿಗುಣಾತ್ಮಾಕ ಕರ್ಮಗಳ ವಿವಿಧ ಗತಿಗಳು ಪ್ರಾಪ್ತವಾಗುತ್ತಿರುವುವು.

ಮಾಗೀಲ ಶ್ಲೋಕಾಚೇ ಅಂತೀ । ಭೂರ್ಭುವಃಸ್ವ ಇತಿ । ಯಾಪರೀ ತ್ರಿಲೋಕೀ ಶ್ರೀಪತೀ । ಜಾಣ ನಿಶ್ಚಿತೀ ಬೋಲಿಲಾ ॥೧೬೩॥ ತೇಚಿ ಪುಢೀಲ ಶ್ಲೋಕಾರ್ಥಾ । ಪಾತಾಳಲೋಕ ಹೋಯ ಚೌಥಾ । ತೋ ಮೃತ್ಯುಲೊಕ ಏಕಾತ್ಮತಾ । ಜಾಣ ತತ್ತ್ವತಾ ವ್ಯಾಖ್ಯಾನ ॥೧೬೪॥ ಇಂದ್ರಾದಿ ಸಕಳ ದೇವಾಂಸೀ । ಸ್ವರ್ಗ ನಿಜಮಂದಿರ ತ್ಯಾಂಸೀ । ಯಕ್ಷರಕ್ಷಭೂತಗಂಧರ್ವಾಸೀ । ನಿವಾಸಾಸೀ ಅಂತರಿಕ್ಷ ॥೧೬೫॥ ಜೇಣೇ ಪಾವಿಜೇ ನಿಜಮೋಕ್ಷಾಸೀ । ಜೇಥೂನಿ ಗಮನ ಲೋಕಾಂತರಾಸೀ । ತೇ ಕರ್ಮಭೂಮೀ ಮನುಷ್ಯಾಸೀ । ನಿಜಭಾಗ್ಯೇಸೀ ಭೂರ್ಲೋಕ ॥೧೬೬॥ ತ್ರಿಲೋಕೀವರತೇ ಜಾಣ । ಸಿದ್ಧ ವೋಳಂಗತೀ ಆಪಣ । ತೇ ಸಿದ್ಧಾಂಚೇ ಸಿದ್ಧಿಸ್ಥಾನ । ವಸತೇ ಜಾಣ ನಿರಂತರ ॥ ೧೬೭॥ ಅತಳ ವಿತಳ ಸುತಳ । ರಸಾತಳ ಮಹಾತಳ । ತಳಾತಳ ಆಣಿ ಪಾತಾಳ । ಅಧಃಸಂಖ್ಯಾ ಸಕಳ ಪಾತಾಳಾ ॥೧೬೮॥ ಸಪ್ತಪಾತಾಳೀ ಅಧಿಕಾರಮೇಳೂ । ಅತಳೀ ವಸೇ ಮಯಪುತ್ರ ಬಳೂ । ಪ್ರತಾಪೇ ಅತಿಪ್ರಬಳೂ । ದೈತ್ಯಮೇಳೂ ಸಮುದಾಯ ॥೧೬೯॥ ವಿತಳೀ ವಸೇ ಹಾಟಕೇಶ್ವರೂ । ಜೋ ಉಮಾಕಾಂತ ಕರ್ಪೂರಗೌರೂ । ಜೇಥೀಲೇ ಹಾಟಕನದೀಚಾ ಪೂರೂ । ಸುವರ್ಣಸಂಭಾರೂ ಪ್ರವಾಹೀ ॥೧೭೦॥ ಸುತಳೀ ಮಹಾವೈಷ್ಣವ ಬಳೀ । ಜ್ಯಾಚಾ ದ್ವಾರಪಾಳ ವನಮಾಳೀ । ಪ್ರಹ್ಲಾದಹೀ ತ್ಯಾಚಿಜವಳೀ । ವೈಷ್ಣವಕುಳೀ ನಾಂದತ ॥೧೭೧॥ ತ್ರಿಪುರ ಭೇದೂನಿ ಶಂಕರೂ । ರಸಾತಳೀ ಸ್ಥಾಪಿಲಾ ಮಯಾಸುರೂ । ತೋ ಮಾಯಾಲಾಘವೀ ಮಹಾವೀರೂ । ಸಪರಿವಾರೂ ವಸತಾಹೇ ॥೧೭೨॥ ಮಹಾತಳೀ ಕದ್ರೂಸುತ । ಜೇ ವಿಷಧರ ಕ್ರೋಧಯುಕ್ತ । ತೇ ಸರ್ಪ ಜಾಣ ಸಮಸ್ತ । ತೇಥ ನಾಂದತ ನಿಜವಾಸೇ ॥೧೭೩॥

ಹಿಂದಿನ ಶ್ಲೋಕದ ಕೊನೆಯಲ್ಲಿ ಶ್ರೀಕೃಷ್ಣನು ಭೂಃ ಭುವಃ ಸ್ವಃ ಹೀಗೆ ಮೂರು ಲೋಕಗಳ ವಿಷಯಕ್ಕೆ ಸ್ಪಷ್ಟವಾಗಿ ಹೇಳಿರುವನು ॥೧೬೩॥ ಅದರಂತೆಯೇ ಮುಂದಿನ ಶ್ಲೋಕದಲ್ಲಿ ನಾಲ್ಕನೆಯ ಪಾತಾಳ ಲೋಕಗಳನ್ನು ಹೇಳಿರುವನು. ಇವುಗಳು ಮೃತ್ಯುಲೋಕಕ್ಕೆ ಐಕ್ಯವಾಗಿರುವುವು. ಈಗ ಇದರ ನಿರೂಪಣೆಯನ್ನು ಕೇಳು ॥೧೬೪॥ ಸ್ವರ್ಗವು ಇದು ಇಂದ್ರಾದಿಕ ದೇವತೆಗಳು ಇರುವ ಸ್ಥಾನವಾಗಿದೆ. ಯಕ್ಷ, ರಾಕ್ಷಸ, ಭೂತಗಳು, ಗಂಧರ್ವರು ಇವರು ಅಂತರಿಕ್ಷದಲ್ಲಿರುವರು ॥೧೬೫॥ ಯಾವ ಲೋಕದಲ್ಲಿ ಜೀವಕ್ಕೆ ಮೋಕ್ಷವಾಗುವುದೋ ಮತ್ತು ಎಲ್ಲಿಂದ ಪರಲೋಕಕ್ಕೆ ಹೋಗಲು ಸಾಧ್ಯವೋ, ಅದು ಕರ್ಮಭೂಮಿ ಅಂದರೆ ಸಪ್ತ ಪಾತಾಳ ಸಹ ಪೃಥ್ವಿಯಾಗಿರುವುದು. ಮಹಾಭಾಗ್ಯದಿಂದ ಈಪೃಥ್ವಿಯು ಮನುಷ್ಯರಿಗೆ ವಾಸ್ತವ್ಯ ಮಾಡಲು ದೊರಕಿರುವುದು ॥೧೬೬॥ ಸಿದ್ಧಪುರುಷರಾದವರು ಇವರು ಯಾವಾಗಲೂ ಮೂರು ಲೋಕಗಳ ಮೇಲೆ ಇರುತ್ತಿರುವರು. ಅದು ಸಿದ್ಧರಿರುವ ಸಿದ್ಧಸ್ಥಾನವಾಗಿರುವುದು ॥೧೬೭॥ ಅತಳ, ವಿತಳ, ಸುತಳ, ರಸಾತಳ, ಮಹಾತಳ, ತಳಾತಳ ಮತ್ತು ಪಾತಾಳ ಇವು ಪೃಥ್ವಿಯ ಕೆಳಗಿರುವ ಏಳು ಲೋಕಗಳಾಗಿರುವುವು ॥೧೬೮॥ ಈಗ ಈ ಏಳು ಪಾತಾಳಗಳಲ್ಲಿ ಎಲ್ಲಿ ಯಾವ ಅಧಿಕಾರಿಗಳಿರುವುದೆಂಬುದನ್ನು ಹೇಳುವೆನು. ಅತಳದಲ್ಲಿ ಮಯಾಸುರನ ಪುತ್ರನಾದ ಬಳ ಎಂಬಾತನು ಇರುವನು. ಅವನು ಮಹಾ ಪರಾಕ್ರಮಿಯಾಗಿರುವನು ಮತ್ತು ಆತನಲ್ಲಿ ರಾಕ್ಷಸರ ದೊಡ್ಡದಾದ ಸಮುದಾಯವಿರುವುದು ॥೧೬೯॥ ವಿತಳದಲ್ಲಿ ಹಾಟಕೇಶ್ವರನಿರುವನು. ಈ ಯಾವ ಹಾಟಕೇಶ್ವರನಾದ ಉಮಾಕಾಂತನು ಕರ್ಪೂರದಂತೆ ಗೌರವರ್ಣದವನಾಗಿರುವನು. ಅಲ್ಲಿ ಹಾಟಕ ನದಿಯು ಹರಿಯುತ್ತಿರುವುದು. ಈ ಪ್ರವಾಹದಿಂದ ಸುವರ್ಣದ ರಾಶಿಯ ಹರಿಯುತ್ತಿರುವುದು. ಆದ್ದರಿಂದ ಅದಕ್ಕೆ ಹಾಟಕ ಎಂದು ಕರೆಯುವರು. ಹಾಟಕ ಎಂದ್ರರೆ ಬಂಗಾರವಾಗಿರುವುದು ॥೧೭೦॥ ಸುತಳದಲ್ಲಿ ಮಹಾಭಗವದ್ಭಕ್ತನಾದ ಬಳೀ ಮಹಾರಾಜನು ಇರುವನು. ಅಲ್ಲಿ ಶ್ರೀವಿಷ್ಣು ದ್ವಾರಪಾಲಕನಾಗಿರುವನು. ಹಾಗೆಯೇ ಭಕ್ತರಾಜನಾದ ಪ್ರಹ್ಲಾದನೂ ಕೂಡ ವಿಷ್ಣುಭಕ್ತನ ಜೊತೆಯಲ್ಲಿ ಇರುವನು ॥೧೭೧॥ ಶ್ರೀಶಂಕರನು ತ್ರಿಪುರಾಸುರನ ವಧೆಯನ್ನು ಮಾಡಿ ರಸತಾಳದಲ್ಲಿ ಮಯಾಸುರನನ್ನು ಸ್ಥಾಪಿಸಿದನು. ಆತನು ಮಹಾ ಮಾಯಾವಿ ಚಮತ್ಕಾರಿಕ ಪರಾಕ್ರಮೀ ವೀರನು ತನ್ನ ಪರಿವಾರ ಸಮೇತನಾಗಿ ಅಲ್ಲಿ ವಾಸ್ತವ್ಯ ಮಾಡಿರುವನು ॥೧೭೨॥ ಮಹಾತಳದಲ್ಲಿ ವಿಷವನ್ನು ಧರಿಸಿರುವ, ಅತಿಶಯ ಕ್ರೋಧಿಗಳಾಗಿರುವ ಕದ್ರೂಸುತರಾದ ಸರ್ವ ಸರ್ಪಗಳು ವಾಸ್ತವ್ಯ ಮಾಡಿರುವುವು ॥೧೭೩॥

ತಳಾತಳೀ ನಾಂದತೀ ದಾನವ । ನಿವಾತಕವಚೀ ವೀರ ಸರ್ವ । ಫಣಿಮುಖ್ಯ ರಾಜಗೌರವ । ರಚನಾ ಅಪೂರ್ಣ ತೇ ಠಾಯೀ ॥೧೭೪॥ ಸಾತವೇ ಪಾತಾಳೀ ವಸತೀ ನಾಗ । ಶತಸಹಸ್ರ ಫಣಿಗಣಭೋಗ । ವಾಸುಕಿಪ್ರಮುಖ ಅನೇಗ । ಪದ್ಮಿನೀ ಭೋಗ ಭೋಗಿತೀ ॥೧೭೫॥ ಸ್ವರ್ಗೀ ರಂಭಾ ಉರ್ವಶೀ ಸುಂದರೀ । ಕಾ ಪಾತಾಳೀ ಪದ್ಮಿಣೀ ನಾರೀ । ತ್ಯಾಂಚ್ಯಾ ಸೌಂದರ್ಯಾಚೀ ಥೋರೀ । ಲೋಕಾಂತರೀ ವಾಖಾಣೇ ॥೧೭೬॥ ತ್ಯಾ ತಳೀ ತೀ ಶತಯೋಜನಾವರೀ । ಶೇಷ ವಸೇ ಸಹಸ್ರಶಿರೀ । ಜ್ಯಾಚ್ಯಾ ನಿಜಾಂಗಾವರೀ । ನಿದ್ರಾ ಕರೀ ಮೀ ಭಗವಂತ ॥೧೭೭॥ ತ್ಯಾಹೂನಿ ತಳೀ ಆತ್ಯಂತಿಕ ಅಂಧತಮಿಸ್ತ್ರಾದಿ ಮಹಾನರಕ । ತ್ಯಾಹೀತಳೀ ಕೂರ್ಮ ದೇಖ । ಆವರೋಣದಕ ತಯಾತಳೀ ॥೧೭೮॥ ಜ್ಯಾಂಚ್ಯಾ ಸ್ವರ್ಗಭೋಗ ಹೋಯ ಕ್ಷೀಣ । ಅಧೋಭೋಗಾಚೇ ಉರೇ ಪುಣ್ಯ । ತೇಣೇ ಪುಣ್ಯಾನುಕ್ರಮೇ ಜಾಣ । ಸಪ್ತ ಪಾತಾಳೀ ಜನ ಜನ್ಮತೀ ॥೧೭೯॥ ಜ್ಯಾಚೇ ಗಾಂಠೀ ಪಾಪ ಚೋಖ । ತೋ ಭೋಗೀ ನಾನಾ ನರಕ । ಐಶೀ ತ್ರಿಲೋಕೀ ದೇಖ । ಚತುರ್ಮುಖ ಸ್ವಯೇ ರಚೀ ॥೧೮೦॥ ಜ್ಯಾಂಸೀ ನಿಷ್ಕಾಮತಾ ನಾಹೀ ಚಿತ್ತೀ । ಜೇ ಸ್ವಪ್ನೀ ನ ದೇಖತೀ ವಿರಕ್ತೀ । ತ್ಯಾಂಸೀ ತ್ರಿಲೋಕಿ ವರತೀ ಗತೀ । ನಾಹೀ ನಿಶ್ಚಿತೀ ಉದ್ಧವಾ ॥೧೮೧॥ ಜೇ ನ ಕರಿತೀಚಿ ಮಾಝೀ ಭಕ್ತೀ । ಜೇ ನಾಯಕತೀಚೇ ಮಾಝೀ ಕೀರ್ತೀ । ಜೇ ಮಾಝೇ ರಾಮನಾಮ ನುಚ್ಚರಿತೀ । ಭವಬಂಧಪಂಕ್ತಿಚ್ಛೇದಕ ॥೧೮೨॥ ತ್ಯಾಂಸೀ ಪುನಃ ಪುನಃ ಸ್ವರ್ಗಲೋಕ । ಪುನಃ ಪುನಃ ಭೋಗಿತೀ ನರಕ । ಪುನಃ ಪಾತಾಳ ಮೃತ್ಯುಲೋಕ । ನಾನಾ ಯೋನೀ ದುಃಖ ಭೋಗಿತೀ ॥೧೮೩॥ ಜೇ ತ್ರಿಗುಣಗುಣೇ ಸದಾ ಸಕಾಮ । ಜೇ ಸರ್ವದಾ ಕರಿತೀ ಸಕಾಮ ಕರ್ಮ । ತ್ಯಾಂಸೀ ತ್ರೈಲೋಕ್ಯಾಬಾಹೇರೀ ನಿರ್ಗಮ । ತ್ರಿಗುಣಧರ್ಮ ನಿಘೋ ನೇದೀ ॥೧೮೪॥ ಸಾಂಗೀತಲೀ ಪಾತಾಳ ವಿವಂಚನಾ । ಆತಾ ಐಕ ಸ್ವರ್ಗರಚನಾ । ಲೋಕೀ ಲೋಕಾಂತರಗಣನಾ । ಸಮೂಳ ಜಾಣಾ ಸಾಂಗೇನ ॥೧೮೫॥ ರವಿಚಂದ್ರಪ್ರಭಾ ಜೇಥವರೀ । ತೇಥವರೀ ಪೃಥ್ವೀಚೇ ಥೋರೀ । ತಳೀ ಪಾತಾಳ ಸ್ವರ್ಗ ವರೀ । ಲೋಕಲೋಕಾಂತರೀ ನಿವಾಸ ॥೧೮೬॥ ಪಾಯೀ ಚಾಲಿಜೇ ತೋ ಭೂಲೋಕ ಜೋಡೇ ।

ತಳಾತಳದಲ್ಲಿ ದಾನವರು ಇರುವರು. ಅವರಿಗೆ ''ನಿವಾತಕವಚ ವೀರ''ರೆಂದು ಕರೆಯುವರು. (ಅವರು ಪ್ರಹ್ಲಾದನ ತಮ್ಮನಾದ ಯಾವ ಸಹ್ಲಾದನ ಪುತ್ರರಾಗಿರುವರು) ಅಲ್ಲಿನ ರಾಜನು ನಾಗನು. ಆತನು ಇವರಿಗೆ ಅತ್ಯಂತ ಪೂಜ್ಯನಾಗಿರುವನು. ಅಲ್ಲಿನ ರಚನೆಯು ಬಹು ಅಪೂರ್ವವಾಗಿರುವುದು ॥೧೭೪॥ ಏಳನೆಯ ಪಾತಾಳ ಲೋಕದಲ್ಲಿ ನಾಗಗಳ ವಸತಿ ಇರುವುದು. ಅಲ್ಲಿ ನೂರು ಸಾವಿರ ನಾಗಗಳು ಇರುವುವು. ನಾಗಗಳ ರಾಜನಾದ ವಾಸುಕಿಯು ಪದ್ಮಿನಿಯ ಜೊತೆಯಲ್ಲಿ ಅನೇಕ ಪ್ರಕಾರದ ವಿಲಾಸಗಳನ್ನು ಭೋಗಿಸುತ್ತಿರುವನು ॥೧೭೫॥ ಸ್ವರ್ಗದಲ್ಲಿ ಯಾವ ಪ್ರಕಾರವಾಗಿ ರಂಭಾ, ಉರ್ವಶೀ ಇತ್ಯಾದಿ ಸುಂದರ ಸ್ತ್ರೀಯರಿರುವರೋ, ಅದೇ ಪ್ರಕಾರವಾಗಿ ಪಾತಾಳದಲ್ಲಿ ಪದ್ಮಿನೀ ನಾಮದಿಂದ ಲಾವಣ್ಯವತಿಯರಾದ ನಾಗಕನ್ಯೆಯರಿರುವರು. ಇವರ ಸೌಂದರ್ಯದ ಕೀರ್ತಿಯು ಇತರ ಲೋಕಗಳಲ್ಲಿ ಹರಡಿರುವುದು॥೧೭೬॥ ಅದರ ಕೆಳಗೆ ಮೂರು ನೂರು ಯೋಜನೆಯ ಅಂತರದಲ್ಲಿ ಸಹಸ್ರಮುಖದ ಶೇಷನು ಇರುವನು. ಆತನ ಶರೀರದ ಮೇಲೆ ಭಗವಾನನಾದ ನಾನು ಶಯನ ಮಾಡುವೆನು ॥೧೭೭॥ ಅದರ ಕೆಳಗೆ ಬಹಳಷ್ಟು ದೂರದಲ್ಲಿ ಅಂಧತಮಸ್ತ್ರಾದಿ ಭಯಂಕರವಾದ ಮಹಾನರಕಗಳಿರುವುವು. ಇದರ ಕೆಳಗೆ ಕೂರ್ಮನಿರುವನು. ಆತನ ಕೆಳಗೆ ಆವರಣೋದಕವಿರುವುದು ॥೧೭೮॥ ಯಾರ ಸ್ವರ್ಗದಲ್ಲಿನ ಭೋಗಗಳು ಮುಗಿದಿರುವುವೋ, ಅವರಲ್ಲಿ ಅಧೋ ಭಾಗದ ಭೋಗಗಳನ್ನು ಭೋಗಿಸುವಷ್ಟು ಪುಣ್ಯವು ಉಳಿದುಕೊಂಡಿರುವುದು. ಆ ಪುಣ್ಯದ ಅನುಕ್ರಮ ಪ್ರಮಾಣದಂತೆ ಅವರು ಸಪ್ತ ಪಾತಾಳ ಲೋಕಗಳಲ್ಲಿ ಜನ್ಮಕ್ಕೆ ಬರುವರು ॥೧೭೯॥ ಯಾರ ಪದರಿನಲ್ಲಿ ಕೇವಲ ಪಾಪಗಳೇ ತುಂಬಿರುವುವೋ, ಅವರು ಅನೇಕ ಪ್ರಕಾರದ ನರಕ ಯಾತನೆಗಳನ್ನು ಭೋಗಿಸುವರು. ಈ ಯಾವ ತ್ರಿಭುವನದ ರಚನೆಯನ್ನು ಸ್ವತಃ ಚತುರ್ಮುಖ ಬ್ರಹ್ಮದೇವನು ಮಾಡಿರುವನು ॥೧೮೦॥ ಹೇ ಉದ್ಧವನೇ, ಯಾರ ಮನದಲ್ಲಿ ನಿಷ್ಕಾಮ ಭಾವವು ಇರುವುದಿಲ್ಲವೋ, ಯಾರ ಸ್ವಪ್ನದಲ್ಲಿಯೂ ಕೂಡ ವಿರಕ್ತಿಯು ನಿರ್ಮಾಣವಾಗುವುದಿಲ್ಲವೋ, ಅವರಿಗೆ ಈ ತ್ರೈಲೋಕ್ಯದ ಮೇಲೆ ಹೋಗಲು ಸಾಧ್ಯವಾಗುವುದಿಲ್ಲ ॥೧೮೧॥ ಯಾರು ನನ್ನ ಭಕ್ತಿಯನ್ನು ಮಾಡುವುದಿಲ್ಲವೋ, ಯಾರು ನನ್ನ ಕೀರ್ತಿಯನ್ನು ಕೇಳುವುದಿಲ್ಲವೋ, ಭವಬಂಧನದ ಚಕ್ರವನ್ನು ತಪ್ಪಿಸುವಂತಹ ನನ್ನ ರಾಮನಾಮವನ್ನು ಯಾರು ಉಚ್ಚರಿಸುವುದಿಲ್ಲವೋ ॥೧೮೨॥ ಅವರಿಗೆ ಪುನಃ ಪುನಃ ನರಕಯಾತನೆಯನ್ನು ಭೋಗಿಸಬೇಕಾಗುವುದು. ಇವರು ಪುನಃ ಪುನಃ ಸ್ವರ್ಗಲೋಕ ಮತ್ತು ಪುನಃ ಪುನಃ ಪಾತಾಳ ಲೋಕ ಮತ್ತು ಮೃತ್ಯುಲೋಕಗಳಲ್ಲಿ ಅನೇಕಪ್ರಕಾರದ ಯೋನಿಗಳಲ್ಲಿ ಜನ್ಮಗಳನ್ನು ಧರಿಸುತ್ತ ದುಃಖವನ್ನು ಭೋಗಿಸುತ್ತಿರುವರು ॥೧೮೩॥ ಯಾರು ಈ ಮೂರು ಗುಣಗಳಲ್ಲಿ ಸಿಲುಕಿಕೊಂಡಿರುವರೋ, ಲೋಭಿಗಳಾದ ಇವರು ನಿರಂತರವಾಗಿ ಸಕಾಮ ಕರ್ಮಗಳನ್ನು ಮಾಡುವರೋ, ಅವರಿಗೆ ಈ ತ್ರಿಗುಣ ಧರ್ಮವು ಈ ತ್ರಿಭುವನದ ಹೊರಗೆ ಬೀಳಿಸಿಕೊಡುವುದಿಲ್ಲ ॥೧೮೪॥ ಈ ಪ್ರಕಾರವಾಗಿ ಪಾತಾಳಗಳ ವರ್ಣನೆಯು ವಿಸ್ತಾರವಾಯಿತು. ಈಗ ಸ್ವರ್ಗದ ರಚನೆಯನ್ನು ಕೇಳು. ಇತರ ಲೋಕಗಳ ವರ್ಣನೆಯನ್ನೂ ಕೂಡ ಹೇಳುವೆನು, ಅದನ್ನೂ ಕೇಳು ॥೧೮೫॥ ಎಲ್ಲಿಯವರೆಗೆ ಸೂರ್ಯ ಚಂದ್ರರ ಪ್ರಕಾಶವು ತಲಪುವುದೋ, ಅಲ್ಲಿಯವರೆಗೆ ಈ ಪೃಥ್ವಿಯ ಮಹತ್ವವಿರುವುದು. ಕೆಳಗೆ ಪಾತಾಳಗಳು ಮತ್ತು ಮೇಲೆ ಸ್ವರ್ಗ, ಇವುಗಳಲ್ಲಿ ಅನೇಕ ಪ್ರಕಾರದ ಪ್ರಾಣಿಗಳಿರುವುವು ॥೧೮೬॥

ಯೇಥೂನಿ ಸೂರ್ಯಾಖಾಲೀಕಡೇ । ಭುವರ್ಲೋಕಾಂಚೀ ಥೋರೀ ವಾಢೇ । ತೇಥ ವಸ್ತೀ ಘಡೇ
ಯಕ್ಷರಕ್ಷಗಂಧರ್ವಾ ॥೧೮೭॥ ಭುವರ್ಲೋಕಾಹೀವರೀ । ಸೂರ್ಯಲೋಕಾಚೀ ವಾಢೇ ಥೋರೀ ।
ಪೃಥ್ವಿಪಾಸೂನಿ ಲಕ್ಷಾವರೀ । ಜಾಣ ನಿರ್ಧಾರೀ ರವಿಲೋಕ ॥೧೮೮॥ ವಾಯೂಪಾಸೂನಿ ಚಕ್ರಾಕಾರೀ ।
ರವಿಚಂದ್ರತಾರಾಲೋಕ ಕುಸರೀ । ಖೇವಣೋನಿಯಾ ತಯಾವರೀ । ಕಾಳ ಸೂತ್ರಧಾರೀ ಭವಂಡೀತ ॥೧೮೯॥
ತ್ಯಾ ಕಾಳಾಹೀವರೀ ಮಾಝೀ ಸತ್ತಾ । ಮಾಝೇನಿ ಭೇಣೇ ಕಾಳೂ ತತ್ತ್ವತಾ । ಕ್ಷಣಲವನಿಮಿಷಾವಸ್ಥಾ ।
ಅಧಿಕನ್ಯೂನತಾ ಹೋಊ ನೇದೀ ॥೧೯೦॥ ನವಲ ಕಾಳಚಕ್ರಗತೀ । ಮಾಸಾ ರವಿಚಂದ್ರ ಸಮಾನ ಹೋತೀ ।
ಸೂರ್ಯಾಆಡ ಚಂದ್ರಾಸೀ ಗತೀ । ಜಾಣ ನಿಶ್ಚಿತೀ ದಿನದ್ವಯೇ ॥೧೯೧॥ ತೇ ಅಮಾವಾಸ್ಯಾಪ್ರತಿಪದೇಸೀ । ಚಂದ್ರ
ಚಂದ್ರಮಂಡಳೀ ಸಾವಕಾಶೀ । ಸೂರ್ಯಸಮಭಾಗೇ ಗಮನ ತ್ಯಾಸೀ । ತೇ ಯಾ ಲೋಕಾಂಸೀ ದಿಸೇನಾ ॥೧೯೨॥
ಇತುಕ್ಯಾಸಾಠೀ ತೇ ದಿವಶೀ । ಜೇವೇ ಜೆತ್ಯಾ ಚಂದ್ರಾಶೀ । ನಷ್ಟತ್ವ ಸ್ಥಾಪಿತೀ ಜ್ಯೋತಿಷೀ । ತೇ ಯಾ ಲೋಕಾಂಸೀ
ಸತ್ಯ ಮಾನೇ ॥೧೯೩॥ ರವಿ ಚಂದ್ರ ಏಕಾಸನೀ । ಸರ್ವಥಾ ನವ್ಹತೀ ಗಮನೀ । ಲಕ್ಷಾಂತರೇ ವಸತೀ ದೋನ್ಹೀ ।
ಮಂಡಳಸಮಾನೀ ಮಾಸಾಂತೀ ಗತೀ ॥೧೯೪॥ ರವಿ ಆಡ ಗತೀ ಜ್ಯಾ ಗ್ರಹಾಸೀ । ತ್ಯಾಚಾ ಅಸ್ತ ಸಾಂಗೇ ಜ್ಯೋತಿಷೀ
। ಸತ್ಯ ಮಾನೇ ಯಾ ಲೋಕಾಂಸೀ । ತೋ ಗ್ರಹೋ ದೃಷ್ಟೀಸೀ ದಿಸೇನಾ ॥೧೯೫॥ ದೃಷ್ಟಿಸೃಷ್ಟಿಚಾ ಜೋ ನ್ಯಾವೋ
। ತೋ ಜ್ಯೋತಿಷಶಾಸ್ತ್ರೀ ಸತ್ಯ ಪಹಾ ಹೋ । ನ ದಿಸೇ ತ್ಯಾಚಾ ಅಸ್ತಭಾವೋ । ದಿಸೇ ತೋ ಪಹಾ ಹೋ ಪೂಜಿತೀ
॥೧೯೬॥ ಅಭ್ರಾ ಆಡ ಗ್ರಹಣ ಝಾಲೇ । ದೇಖಿಲೇ ತೇಥೇ ಪರ್ವ ಘಾವಲೇ । ನ ದಿಸೇ ತೇ ದೇಶೀ ನಾಹೀಂಚ
ಝಾಲೇ । ಯೇಣೇಹೀ ಬೋಲೇ ವರ್ತತೀ ॥೧೯೭॥ ರವಿಚಂದ್ರಾಹೂನಿ ಆರತೀ । ರಾಹುಕೇತೂಂಚೀ ಅಸೇ
ವಸ್ತೀ । ತೇ ಜೈ ಮಂಡಳಾ ಆಡ ಯೇತೀ । ತೈ ಗ್ರಾಸಿಲೇಮ್ಹಣತೀ ರವಿಚಂದ್ರಾ ॥೧೯೮॥ ರಾಹು ಸೂರ್ಯಾಗಿಳಿತಾ
ಸಾಚೇ । ತೈ ತೋಂಡ ಜಳತೇ ರಾಹೂಚೇ । ಮಂಡಳೀ ಮಂಡಳ ಆಡ ಯೇ ತ್ಯಾಚೇ । ಹೇ ಸರ್ವಗ್ರಾಸಾಂಚೇ
ಸಂಮತ ॥೧೯೯॥ ಸೂರ್ಯ ಸೂರ್ಯಮಂಡಳೀ ರಾಜ್ಯ ಕರೀ । ತ್ಯಾಚ್ಯಾ

ಯಾವ ಲೋಕದಲ್ಲಿ ಕಾಲುಗಳಿಂದ ನಡೆಯುವರೋ, ಅದು ಭೂಲೋಕವಾಗಿರುವುದು. ಅಲ್ಲಿಂದ ಸೂರ್ಯನ ಕೆಳಭಾಗದಲ್ಲಿ ಭುವರ್ಲೋಕವು ಹರಡಿಕೊಂಡಿರುವುದು. ಅಲ್ಲಿ ಯಕ್ಷರ, ರಾಕ್ಷಸರ ಮತ್ತು ಗಂಧರ್ವರ ವಾಸ್ತವ್ಯವಿರುವುದು ॥೧೮೭॥ ಭುವರ್ಲೋಕದ ಮೇಲೆ ಸೂರ್ಯಲೋಕದ ವಿಸ್ತಾರವಿರುವುದು. ಪೃಥ್ವಿಯಿಂದ ಲಕ್ಷಾವಧೀ ಯೋಜನೆಗಳ ಮೇಲೆ ಸೂರ್ಯಲೋಕವಿರುವುದು. ಇದನ್ನು ತಿಳಿದುಕೋ ॥೧೮೮॥ ಕಾಲರೂಪ ಸೂತ್ರಾಧಾರನು ವಾಯುವಿನಿಂದ ಸಿದ್ಧಮಾಡಿದ ಚಕ್ರದ ಮೇಲೆ ಸೂರ್ಯ, ಚಂದ್ರ ಮತ್ತು ತಾರಾ ಮಂಡಳಗಳನ್ನು ತನ್ನ ಕೌಶಲ್ಯದಿಂದ ಜೋಡಣೆಯಲ್ಲಿ ಕೂಡಿಸಿದಂತೆ ಕೂಡಿಸಿ ಅವುಗಳನ್ನು ಸತತವಾಗಿ ತಿರುಗಿಸುತ್ತಿರುವನು ॥೧೮೯॥ ಆದರೆ ಆ ಕಾಲನ ಮೇಲೆಯೂ ಕೂಡ ನನ್ನ ಅಧಿಕಾರವಿರುವುದು,ನನ್ನ ಭಯದಿಂದ ಕ್ಷಣ, ಲವ, ನಿಮಿಷಗಳಲ್ಲಿಯೂ ಆತನು ಹೆಚ್ಚು ಕಡಿಮೆ ಮಾಡಿಕೊಡುವುದಿಲ್ಲ ॥೧೯೦॥ ಕಾಲಚಕ್ರದ ಗತಿಯು ಮಹಾ ಆಶ್ಚರ್ಯಕಾರಕವಾಗಿರುವುದು. ಒಂದು ತಿಂಗಳಲ್ಲಿ ಚಂದ್ರ ಮತ್ತು ಸೂರ್ಯರು ಸಮರೇಖೆಯಲ್ಲಿ ಬರುವರು. ನಕ್ಷತ್ರಚಕ್ರದಲ್ಲಿ ಚಂದ್ರನ ಒಂದು ಪರಿಭ್ರಮಣೆಯು ಪೂರ್ಣವಾದ ನಂತರ ಪುನಃ ಎರಡು ದಿವಸಗಳಲ್ಲಿ ಚಂದ್ರನು ಸೂರ್ಯನ ಅಡ್ಡ ಬರುವನು ॥೧೯೧॥ ಅಮಾವಾಸ್ಯ ಮತ್ತು ಪ್ರತಿಪದ ಇವುಗಳ ಸಂಧಿಕಾಲದಲ್ಲಿ ಚಂದ್ರನು ತನ್ನ ಭ್ರಮಣ ಮಾರ್ಗದಲ್ಲಿ ಯಥಾವಕಾಶವಾಗಿ ನಡೆಯುತ್ತಿರಲು ಆತನ ರಾಶೀ ಅಂಶಾದಿ ಸ್ಥಾನ ಇದು ಸೂರ್ಯನಷ್ಟೇ ಆಗುವುದು. ಆತನು ಆಗ ಸೂರ್ಯನ ತೇಜದಿಂದ ಈ ಜನರಿಗೆ ಕಾಣಿಸುವುದಿಲ್ಲ ॥೧೯೨॥ ಆದ್ದರಿಂದ ಜ್ಯೋತಿಷಿಯು ಆ ದಿನಗಳಲ್ಲಿ ವಿದ್ಯಮಾನನಾಗಿರುವ ಚಂದ್ರನಿಗೆ ನಷ್ಟನಾದನು ಎಂದು ಹೀಗೆ ಹೇಳುವನು. ಜನರೂ ಕೂಡ ಇದನ್ನು ನಿಜವೆಂದೇ ತಿಳಿಯುವರು ॥೧೯೩॥ ಸೂರ್ಯ ಮತ್ತು ಚಂದ್ರ ಇವರು ತಮ್ಮ ತಮ್ಮ ಮಾರ್ಗದಿಂದ ನಡೆಯುತ್ತಿರುವರು. ಒಂದೇ ಕಡೆ ಇವರು ಎಂದಿಗೂ ಬರುವುದಿಲ್ಲ. ಕಾರಣ ಇವರಿಬ್ಬರು ಪರಸ್ಪರವಾಗಿ ಲಕ್ಷಾವಧೀ ಯೋಜನೆಗಳಷ್ಟು ದೂರದಲ್ಲಿರುವರು. ಆದರೆ ಇವರು ಪ್ರತಿ ತಿಂಗಳದ ಕೊನೆಯ ದಿನದಲ್ಲಿ ತಮ್ಮ ಕಕ್ಷೆಯ ಸಮಾನ ರೇಖೆಯಲ್ಲಿ ಬರುತ್ತಿರುವರು ॥೧೯೪॥ ಯಾವ ಗ್ರಹವು ತಮ್ಮ ಸೂರ್ಯನಿಗೆ ಅಡ್ಡವಾಗುವುದೋ, ಅದರ ಅಸ್ತವಾಯಿತೆಂದು ಜ್ಯೋತಿಷಿಯು ಹೇಳುವನು. ಆ ಸಮಯದಲ್ಲಿ ಆ ಗ್ರಹವು ಕಾಣಿಸುವುದಿಲ್ಲ. ಆದ್ದರಿಂದ ಜನರು ಆತನ ಹೇಳುವಿಕೆಯನ್ನು ನಿಜವೆಂದು ತಿಳಿದುಕೊಳ್ಳುವರು ॥೧೯೫॥ ವೇದದಲ್ಲಿ ಯಾವ ದೃಷ್ಟಿ ಸೃಷ್ಟಿಯ ನ್ಯಾಯವಿರುವುದೋ, ಅದು ಜ್ಯೋತಿಷ್ಯಶಾಸ್ತ್ರದಲ್ಲಿ ನಿಜವೆಂದು ನಿಶ್ಚಯಿಸಲ್ಪಡುವುದು. ಕಾರಣ ಯಾವ ದಿವಸ ಯಾವ ಗ್ರಹವು ಇರುವುದಿಲ್ಲವೋ, ಅಂದು ಅದಕ್ಕೆ ಅಸ್ತನಾದನು ಎಂದು ಜ್ಯೋತಿಷ್ಯ ಜನರು ತಿಳಿಯುವರು ಮತ್ತು ಯಾವ ಗ್ರಹವು ಕಾಣಿಸುವುದೋ, ಅದರ ಪೂಜೆಯನ್ನು ಮಾಡುವರು ॥೧೯೬॥ ಅಭ್ರಗಳು ಅಡ್ಡವಾಗುವುದರಿಂದ ಗ್ರಹಣವಾಗುವುದು. ಇದನ್ನು ನೋಡಿದ ಜನರು ಅದಕ್ಕೆ ಪರ್ವಕಾಲವೆನ್ನುವರು. ಯಾವ ದೇಶದಲ್ಲಿ ಇದು ಕಾಣುವುದಿಲ್ಲವೋ, ಅಲ್ಲಿನ ಜನರು ಗ್ರಹಣವು ನಮಗೆ ಇಲ್ಲವೇ ಇಲ್ಲ ಎಂದು ಹೇಳುವರು ॥೧೯೭॥ ಸೂರ್ಯಚಂದ್ರರ ಕೆಳಭಾಗದಲ್ಲಿ ರಾಹೂಕೇತುಗಳವರ ವಸತಿ ಇರುವುದು. ಈ ರಾಹೂಕೇತುಗಳವರು ಸೂರ್ಯಚಂದ್ರರ ಬಿಂಬಗಳಿಗೆ ಅಡ್ಡಬಂದಾಗ ಅವರು ರವಿ -ಚಂದ್ರರನ್ನು ಗ್ರಾಸಮಾಡಿದರು ಎಂದು ಹೇಳುವರು ॥೧೯೮॥ ನಿಜವಾಗಿ ನೋಡಿದರೆ ರಾಹೂ ಸೂರ್ಯನನ್ನು ನುಂಗಲು ಆತನ ಮುಖವು ಸುಟ್ಟು ಹೋಗಿಬಿಡಬೇಕಾಗಿತ್ತು. ಒಂದು ಬಿಂಬಕ್ಕೆ ಇನ್ನೊಂದು ಬಿಂಬವು ಅಡ್ಡ ಬರುತ್ತಿರುವುದು. ಇದೇ ಸರ್ವ ಗ್ರಹಣಗಳಲ್ಲಿನ ಸರ್ವ ಗ್ರಾಸಗಳ ವರ್ತಮಾನದ ತತ್ವವು ಈ ರೀತಿಯಾಗಿರುವುದು ॥೧೯೯॥

ಸರ್ವಗ್ರಾಸಾಚೀ ಘೋರೀ । ಜ್ಯೋತಿಷೀ ಸಾಂಗೇ ಘರೋಘರೀ । ತೇ ದೇಖೋನಿ ನರೀ ಮಹಾಶಬ್ದ ಕೀಜೇ ॥೨೦೦॥ ಸೂರ್ಯಸರ್ವಗ್ರಾಸಾಚಿಯಾ ಗೋಠೀ । ಜಗೀ ಏಕ ಬೋಂಬ ಉಠೀ। ಶೇಖೀ ರವಿ-ರಾಹೂಂಸೀ ನಾಹೀ ಭೇಟೀ । ಸ್ಪರ್ಶಹೀ ಶೇವಟೀ ಅಸೇನಾ ॥೨೦೧॥ ಗ್ರಹಚಕ್ರ ವೇಗೇ ಚಳತಾ ಪಾಹೀ । ರವಿಚಂದ್ರಾದಿಕಾ ಚಾಲಣೇ ನಾಹೀ । ತೇ ನಿಶ್ಚಳ ನಿಜರಾಜ್ಯಾಚಿಯಾ ಠಾಯೀ । ನ ಚಾಲತಾ ಪಾಹೀ ಚಾಲತೀ॥೨೦೨॥ ರವಿಲೋಕಾಹೂನಿ ವರೀ । ಚಂದ್ರ ಲೋಕ ಲಕ್ಷಾಂತರೀ । ಚಂದ್ರಲೋಕಾ ಹೂನಿ ದೂರೀ । ಲಕ್ಷಾಂತರೀ ತಾರಾಲೋಕ ॥೨೦೩॥ ತಾರಾಲೋಕಾಹೂನಿ ವರೀ । ಬುಧಲೋಕ ದೋ ಲಕ್ಷಾಂ ತರೀ । ಬುಧಲೋಕಾಹೂನಿ ವರೀ । ದೋ ಲಕ್ಷಾಂತರೀ ಶುಕ್ರಲೋಕ ॥೨೦೪॥ ಮಿಳೋನಿಯಾ ದೈತ್ಯಗುಣ । ಜ್ಯಾಚ್ಯಾ ಚರಣಾ ಯೇತೀ ಶರಣ । ನಿತ್ಯ ಘಾಲಿಲೇ ಲೋಟಾಂಗಣ । ತೋ ಶುಕ್ರಾಚಾರ್ಯ ಜಾಣ ದೈತ್ಯಗುರೂ ॥೨೦೫॥ ಶುಕ್ರಲೋಕಾಹೂನಿ ದೋ ಲಕ್ಷಾಂತರೀ । ಭೌಮ ಲೋಕ ವಸೇ ಅಂಬರೀ । ಭೌಮಲೋಕಾಹೂನಿ ದೋ ಲಕ್ಷಾಂತರೀ । ದೇವಗುರು ಕರೀ ನಿಜವಾಸೂ ॥೨೦೬॥ ಜ್ಯಾಚೇ ಚರಣ ವಂದಿತೀ ದೇಖ । ಇಂದ್ರಚಂದ್ರ ವರುಣಾದಿ ಅರ್ಕ । ನಿತ್ಯ ಯೇತೀ ಆವಶ್ಯಕ । ತೋ ಬೃಹಸ್ಪತಿಲೋಕ ಗುರೂಚಾ ॥೨೦೭॥ ತ್ಯಾಹೀವರೀ ಲಕ್ಷ ದೋನೀ । ಸೂರ್ಯಸುತ ವಸೇ ಶನೀ । ಲಕ್ಷಾಂತರೇ ತೇಥೂನಿ । ಸಪ್ತ ಋಷಿಜನೀ ನಿವಾಸೂ ॥೨೦೮॥ ಸಪ್ತ ಋಷೀಂಚೀ ಋಷಿಪಂಕ್ತೀ । ತೇಥೇಚಿ ವಸೇ ಅರುಂಧತೀ । ಯಾವರೀ ವಸೇ ಅಮರಾವತೀ । ಇಂದ್ರಸಂಪತ್ತೀ ಸಮವೇತ ॥೨೦೯॥ ಜೇಥ ಅಂಗೇ ವಸೇ ಇಂದ್ರ ಜಾಣ । ಐರಾವತೀ ಆರೋಹಣ । ಪಾರ್ಷದಗಣ ಮರುದ್ಗಣ । ಸುರಸೇನಾ ಜಾಣ ಜಯಾಚೀ ॥೨೧೦॥ ಉಚ್ಚೈಃಶ್ರವಾ ವಾರೂ ಜಾಣ । ಕಲ್ಪತರೂಂಚೇ ಉದ್ಯಾನ । ಕಾಮಧೇನೂಂಚೇ ಗೋಧನ । ನಂದನವನ ಕ್ರೀಡೇಸೀ ॥೨೧೧॥ ಜೇಥೀಂಚ್ಯಾ ಪಾಯರ್‍ಯಾ ಚಿಂತಾಮಣೀ । ರಂಭಾ ಉರ್ವಶೀ ವಿಲಾಸಿನೀ । ಅಷ್ಟವಿನಾಯಿಕಾ ನಾಚಣೀ । ಜ್ಯಾಚ್ಯಾ ರಂಗಣೀ ನಾಂದತೀ ॥೨೧೨॥ ಯೇಣೇ ವೈಭವೇ ಅಮರಾವತೀ । ಇಂದ್ರ ತೇಥೀಲ

ವಾಸ್ತವಿಕವಾಗಿ ಸೂರ್ಯನು ತನ್ನ ಮಂಡಳದಲ್ಲಿ ಮಾತ್ರ ರಾಜ್ಯವಾಳುತ್ತಿರುವನು. ಹೀಗಿರಲು ಜ್ಯೋತಿಷಿಗಳವರು ಮನೆ ಮನೆಗೆ ತಿರುಗಿ ಗ್ರಹಣದ ಮಹಾತ್ಮ್ಯಯನ್ನು ಹೇಳುತ್ತಿರುವರು. ಈ ಜನರಾದರೂ ಗ್ರಹಣವನ್ನು ಕಾಣುತ್ತಲೇ ದೊಡ್ಡ ಗದ್ದಲವನ್ನೇ ಎಬ್ಬಿಸುವರು ॥೨೦೦॥ ಸೂರ್ಯನ ಖಗ್ರಾಸ ಗ್ರಹಣವಾಗಲು ಜಗತ್ತಿನಲ್ಲಿ ಎಲ್ಲ ಕಡೆ ಕೋಲಾಹಲವಾಗುವುದು. ಆದರೆ ವಾಸ್ತವಿಕವಾಗಿ ಸೂರ್ಯ ರಾಹೂಗಳ ಮಿಲನವಾಗುವುದೇ ಇಲ್ಲ. ಕೊನೆಯವರೆಗೂ ಅವರ ಪರಸ್ಪರ ಸ್ಪರ್ಶಕೂಡ ಆಗುವುದಿಲ್ಲ ॥೨೦೧॥ ಗ್ರಹಮಂಡಳಗಳು ಇವು ವೇಗದಿಂದ ಪೂರ್ವದಿಂದ ಪಶ್ಚಿಮದತ್ತ ಹೋಗುತ್ತಿರುವಂತೆ ಕಂಡರೂ ಕೂಡ ಸೂರ್ಯಚಂದ್ರಾದಿಕರಿಗೆ ನಮಗೆ ಕಾಣುವಂತೆ ಗತಿಯು ಇರುವುದಿಲ್ಲ. ಅವು ತಮ್ಮ ತಮ್ಮ ಅಧಿಕಾರಗಳ ಮರ್ಯಾದೆಯಲ್ಲಿಯೇ ಸ್ಥಿರವಾಗಿರುವುವು ॥೨೦೨॥ ಸೂರ್ಯನಿಂದ ಲಕ್ಷಾವಧೀ ಯೋಜನೆಗಳ ಮೇಲೆ ಚಂದ್ರಲೋಕವಿರುವುದು. ಚಂದ್ರಲೋಕದಿಂದ ಮೇಲಕ್ಕೆ ಲಕ್ಷಾವಧೀ ಯೋಜನೆಗಳ ಅಂತರದಲ್ಲಿ ತಾರಾಲೋಕವು ಇರುವುದು ॥೨೦೩॥ ತಾರಾಲೋಕದಿಂದ ಮೇಲ್ಭಾಗದಲ್ಲಿ ಎರಡು ಲಕ್ಷ ಯೋಜನೆಗಳ ಅಂತರದಲ್ಲಿ ಬುಧನು ಇರುವನು. ಬುಧಲೋಕದಿಂದ ಮೇಲಕ್ಕೆ ಎರಡು ಲಕ್ಷ ಯೋಜನೆಗಳ ಅಂತರದಲ್ಲಿ ಶುಕ್ರಲೋಕವಿರುವುದು ॥೨೦೪॥ ಸರ್ವ ದೈತ್ಯರು ಏಕತ್ರವಾಗಿ ಯಾರ ಚರಣಗಳಲ್ಲಿ ಶರಣು ಬರುವುರೋ ಮತ್ತು ಲೋಟಾಂಗಣವನ್ನು ಹಾಕುವರೋ, ಆ ಯಾವ ದೈತ್ಯರ ಗುರುಗಳು ಶುಕ್ರಾಚಾರ್ಯರಾಗಿರುವರು ॥೨೦೫॥ ಶುಕ್ರಲೋಕದಿಂದ ಎರಡು ಲಕ್ಷ ಯೋಜನೆಗಳ ಅಂತರದಲ್ಲಿ ಮಂಗಳನ ವಸತಿವಿರುವುದು. ಮಂಗಳನಿಂದ ಮೇಲಕ್ಕೆ ಎರಡು ಲಕ್ಷ ಯೋಜನೆಗಳ ಅಂತರದಲ್ಲಿ ಗುರು ಬೃಹಸ್ಪತೀ ಇರುವನು ॥೨೦೬॥ ಇಂದ್ರ, ಚಂದ್ರ, ವರುಣ, ಸೂರ್ಯ ಇತ್ಯಾದಿ ದೇವತೆಗಳು ನಿತ್ಯದಲ್ಲಿ ಅಲ್ಲಿಗೆ ಬಂದು ಯಾರ ಚರಣಕಮಲಗಳಲ್ಲಿ ಆದರ ಪೂರ್ವಕವಾಗಿ ವಂದನೆಯನ್ನು ಮಾಡುವರೋ, ಅದೇ ಯಾವ ಗುರುಗಳ ಬೃಹಸ್ಪತಿ ಲೋಕವಾಗಿರುವುದು ॥೨೦೭॥ ಅದರ ಮೇಲೆ ಎರಡು ಲಕ್ಷ ಯೋಜನೆಗಳ ಅಂತರದಲ್ಲಿ ಸೂರ್ಯ ಪುತ್ರ ಶನಿಯು ವಸ್ತಿಯನ್ನು ಮಾಡಿರುವನು. ಆತನಿಂದ ಮೇಲಕ್ಕೆ ಒಂದು ಲಕ್ಷ ಯೋಜನೆಗಳ ಅಂತರದಲ್ಲಿ ಸಪ್ತಋಷಿಗಳವರ ನಿವಾಸಸ್ಥಾನವಿರುವುದು ॥೨೦೮॥ ಸಪ್ತಋಷಿಗಳ ಸಮುದಾಯವು ಎಲ್ಲಿ ವಸತಿ ಮಾಡಿರುವುದೋ, ಅಲ್ಲಿ ಅರುಂಧತಿಯ ವಾಸ್ತವ್ಯವು ಇರುವುದು ಮತ್ತು ಅದರ ಮೇಲೆ ಭಿನ್ನ ಭಿನ್ನ ವೈಭವಗಳ ಸಂಪನ್ನವಾಗಿರುವ ಇಂದ್ರನ ಅಮರಾವತೀ ನಗರವಿರುವುದು ॥೨೦೯॥ ಅಲ್ಲಿ ಸ್ವತಃ ಇಂದ್ರನ ನಿವಾಸಸ್ಥಾನವಿರುವುದು. ಆತನು ಐರಾವತದ ಮೇಲೆ ಆರೋಹಣ ಮಾಡುವನು. ಮರುದ್ಗಣರು ಆತನ ಸಭಾಸದರಾಗಿದ್ದು ದೇವತೆಗಳ ಸಮುದಾಯವು ಅವರ ಸೈನ್ಯವಾಗಿರುವುದು ॥೨೧೦॥ ಉಚ್ಚೈಃಶ್ರವಾ ಆತನ ಅಶ್ವವಾಗಿರುವುದು. ಅಲ್ಲಿ ಕಲ್ಪವೃಕ್ಷಗಳ ದೊಡ್ಡ ದೊಡ್ಡ ಮೋಹಕ ಉದ್ಯಾನಗಳಿರುವುವು. ಕಾಮಧೇನುಗಳ ಹಿಂಡು ಇರುವುದು. ಅಲ್ಲಿ ನಂದನವನವು ಕ್ರೀಡಾಸ್ಥಾನವಾಗಿರುವುದು ॥೨೧೧॥ ಅಲ್ಲಿನ ಪಾವುಟಣಿಗಳಿಗೆ ಚಿಂತಾಮಣಿಗಳನ್ನು ಜೋಡಿಸಲ್ಪಟ್ಟಿರುವುವು. ಅಲ್ಲಿ ರಂಭಾ, ಉರ್ವಶೀ ಇತ್ಯಾದಿ ವಿಲಾಸಿನೀ ಸ್ತ್ರೀಯರಿರುವರು ಮತ್ತು ನೃತ್ಯಾಂಗನೆಯರು, ಅಷ್ಟನಾಯಿಕೆಯರು ಅಲ್ಲಿ ಯಾವಾಗಾಲೂ ನೃತ್ಯವನ್ನು ಮಾಡುತ್ತಿರುವರು ॥೨೧೨॥

ಅಧಿಪತೀ । ಯೇಥೂನಿ ಸ್ವರ್ಗಾಚೀ ಸಮಾಪ್ತೀ । ತ್ರೈಲೋಕ್ಯ ನಿಶ್ಚಿತೀ ಯಾ ನಾಂವ ॥೨೧೩॥ ಆತಾ ತ್ರೈಲೋಕ್ಯಾಬಾಹೇರೀ । ಏಕ ಲಕ್ಷ ಯೋಜನಾವರೀ । ಭಕ್ತಕೃಪಾಳೂ ಶ್ರೀಹರೀ । ಧ್ರುವಮಂಡಳ ಕರೀ ಕೃಪೇನೇ ॥೨೧೪॥ ತ್ರಿಲೋಕೀ ಹೋತಾ ಪ್ರಲಯಕಾಳ । ಧ್ರುವಾಸೀ ಕದಾ ನವ್ಹೇ ಚಳ । ತೋ ಸರ್ವದಾ ಅಚಳ । ಯಾಲಾಗೀ ಅಢಳ ಧ್ರುವಪದ ॥೨೧೫॥ ಪೃಥ್ವಿಪಾಸೋನಿ ಕೋಟಿ ಯೋಜನ । ಮಹರ್ಲೋಕ ವಸೇ ಜಾಣ । ತೇಥ ವಸತೀ ಕಲ್ಪಾಯು ಜನ । ತೇ ವಸತಿಸ್ಥಾನ ತಯಾಂಚೇ ॥೨೧೬॥ ತೇಥೂನಿ ಕೋಟಿ ಯೋಜನೇ ದೇಖ । ವರುತಾ ಅಸೇ ಜನೋಲೋಕ । ತೇಥ ವಸತೀ ಸನಕಾದಿಕ । ಊರ್ಧ್ವರೇತೇ ದೇಖ ಮಹಾಯೋಗೀ ॥೨೧೭॥ ತೇಥೂನಿ ದೋನ ಕೋಟಿ ಅಧಿಕ । ವಸತಾಹೇ ತಪೋಲೋಕ । ತೇಥಿಲ ನಿವಾಸೀ ಆವಶ್ಯಕ । ವೈರಾಜ ದೇವ ದೇಖ ತಪಸ್ವೀ ॥೨೧೮॥ ತಪೋಲೋಕಾಹೂನಿ ದೇಖ । ಚೌಕೋಟೀ ಉಂಚ ಅಧಿಕ । ತೇಥ ವಸತಾಹೇ ಸತ್ಯಲೋಕ । ತೇಥಿಲ ನಾಯಕ ಚತುರಾನನ ॥೨೧೯॥ ತೇಥ ಮೂರ್ತಿಮಂತ ಚಾರೀ ವೇದ । ಮೂರ್ತಿಮಂತ ಧರ್ಮ ಪ್ರಸಿದ್ಧ । ಮೂರ್ತಿಮಂತ ಬ್ರಹ್ಮಚರ್ಯ ಶುದ್ಧ । ತಪಹೀ ವಿಶದ ಮೂರ್ತಿಮಂತ ॥೨೨೦॥ ಗಾಯತ್ರೀ ಮೂರ್ತಿಮಂತ ತೇಥ । ವಾಚಾ ಮೂರ್ತಿಮಂತ ವರ್ತತ । ದಯಾ ಮೂರ್ತಿಮಂತ ನಾಂದತ । ಯೋಗ ಮೂರ್ತಿಮಂತ ಬ್ರಹ್ಮಸದನೀ ॥೨೨೧॥ ತೇಥ ಅಗ್ನಿ ತಿನೀ ಮೂರ್ತಿಮಂತ । ತೇ ಏಕರೂಪೇ ತ್ರಿಧಾ ಭಾಸತ । ಸತ್ಯ ಸತ್ಯಲೋಕೀ ಮೂರ್ತಿಮಂತ । ಅಸತ್ಯ ತೇಥ ಅಸೇನಾ ॥೨೨೨॥ ತೇ ಲೋಕೀ ವಸತೇ ಕೋಣ ಲೋಕ । ಜೇ ಗಾಯತ್ರೀಮಂತ್ರಜಾಪಕ । ಜೇ ಬ್ರಾಹ್ಮಣ ತೀರ್ಥಪ್ರಾಶಕ । ಜೇ ಯಾಗ ಉಪಾಸಕ ನಿಷ್ಕಾಮ ॥೨೨೩॥ ಜೇ ಬ್ರಾಹ್ಮಣಕಾರ್ಯೀ ನಿಮಾಲೇ । ಜೇ ಗೋಸಂರಕ್ಷಣೀ ಜೀವೇ ಗೇಲೇ । ಜೇ ಪರೋಪಕಾರಾರ್ಥ ವೇಚಲೇ । ತೇ ಪಾವಲೇ ಸತ್ಯಲೋಕ ॥೨೨೪॥ ಜೇ ನಿಷ್ಕಾಮ ದ್ವಿಜಾ ಭಜಲೇ । ಜಿಂಹೀ ನಿಷ್ಕಾಮ ದ್ವಿಜ ಪೂಜಿಲೇ । ಜಿಂಹೀ ನಿಷ್ಕಾಮ ದ್ವಿಜ ಭೋಜಿಲೇ । ತೇ ಪಾವಲೇ ಸತ್ಯಲೋಕ ॥೨೨೫॥ ಜೇ ಕೃಪಾಳೂ ದೀನಾರ್ಥ ದೇಖ । ಜೇ ಕೃಪಾಳೂ ಬಂಧಮೋಚಕ । ಜೇ ಸತ್ಯವಾದೀ ಸಾತ್ತ್ವಿಕ । ತೇ ಸತ್ಯಲೋಕನಿವಾಸೀ ॥೨೨೬॥

ಜೇ ಪರಾಪವಾದೀ ಮೂಕ । ಪರದಾರಾ ನಪುಂಸಕ । ಜೇ ಪರದ್ರವ್ಯಾ ಪರಾಂಗ್ಮುಖ । ತೇ ಸತ್ಯಲೋಕ ನಿವಾಸೀ

ಹೀಗೆ ಆ ಇಂದ್ರನ ಸರ್ವ ಸಂಪನ್ನವಾಗಿರುವ, ವೈಭವದಿಂದ ಪರಿಪೂರ್ಣವಾಗಿರುವ ಅಮರಾವತೀ ನಗರವು ಸುಶೋಭಿತವಾಗಿರುವುದು. ಇಂದ್ರದೇವನು ಅಲ್ಲಿನ ಅಧಿಪತಿಯಾಗಿರುವನು. ಇಲ್ಲಿಗೆ ಸ್ವರ್ಗದ ಸೀಮೆಯು ಮುಗಿದಿರುವುದು. ಇದರ ನಾಮವೇ ತ್ರೈಲೋಕ್ಯವಾಗಿರುವುದು ॥೨೧೩॥ ಈ ತ್ರಿಭುವನದ ಹೊರಗೆ ಒಂದು ಲಕ್ಷ ಯೋಜನೆಯ ಅಂತರದಲ್ಲಿ ಭಕ್ತವತ್ಸಲನಾದ ಶ್ರೀಹರಿಯು ತನ್ನ ಕೃಪೆಯಿಂದ ಧ್ರುವ ಮಂಡಳವನ್ನು ನಿರ್ಮಿಸಿರುವನು ॥೨೧೪॥ ತ್ರೈಲೋಕ್ಯದ ಪ್ರಳಯವಾದರೂ ಕೂಡ ಧ್ರುವನಿಗೆ ತನ್ನ ಸ್ಥಾನದಿಂದ ಕದಲಬೇಕಾಗುವುದಿಲ್ಲ .ಆತನು ಯಾವಾಗಲೂ ಅಚಲನಾಗಿರುವನು. ಆದ್ದರಿಂದ ಧ್ರುವಪದಕ್ಕೆ ಸ್ಥಿರವಾದದ್ದು ಎಂದು ಹೇಳುವರು ॥೨೧೫॥ ಪೃಥ್ವಿಯಿಂದ ಒಂದು ಕೋಟಿ ಯೋಜನೆಗಳ ಅಂತರದಲ್ಲಿ ಮಹರ್ಲೋಕವಿರುವುದು. ಅಲ್ಲಿ ಕಲ್ಪದವರೆಗೆ ಆಯುಷ್ಯವಿರುವ ಜನರಿರುವರು. ಇದೇ ಅವರ ವಸತಿಸ್ಥಾನವಾಗಿರುವುದು ॥೨೧೬॥ ಅಲ್ಲಿಂದ ಮೇಲಕ್ಕೆ ಒಂದು ಕೋಟಿ ಯೋಜನೆಯ ಅಂತರದಲ್ಲಿ ಜನಲೋಕವಿರುವುದು. ಅಲ್ಲಿ ಜಿತೇಂದ್ರಿಯರಾದ, ಮಹಾಯೋಗಿಗಳಾದ ಸನಕಾದಿಕರು ಇರುವರು ॥೨೧೭॥ ಅಲ್ಲಿಂದ ಮುಂದಕ್ಕೆ ಎರಡು ಕೋಟಿ ಯೋಜನೆಗಳ ಅಂತರದಲ್ಲಿ ತಪೋಲೋಕ ವಿರುವುದು. ಅಲ್ಲಿ ತಪಸ್ವಿಯಾದ ವೈರಾಜದೇವನ ವಸತಿವಿರುವುದು ॥೨೧೮॥ ತಪೋಲೋಕದ ಮೇಲೆ ನಾಲ್ಕು ಕೋಟಿ ಯೋಜನೆಗಳ ಅಂತರದಲ್ಲಿ ಸತ್ಯಲೋಕವಿರುವುದು. ಅಲ್ಲಿನ ಅಧಿಪತಿಯು ಬ್ರಹ್ಮದೇವನಿರುವನು ॥೨೧೯॥ ಅಲ್ಲಿ ಪ್ರತ್ಯಕ್ಷ ನಾಲ್ಕು ವೇದಗಳು, ಸಾಕ್ಷಾತ್ ಧರ್ಮ, ಶುದ್ಧ ಬ್ರಹ್ಮಚರ್ಯ ಮತ್ತು ತಪಸ್ಸು ಈ ಸರ್ವವೂ ಮೂರ್ತಿಮಂತವಾಗಿರುವುವು ॥೨೨೦॥ ಅಲ್ಲಿ ಮೂರ್ತಿಮಂತವಾಗಿ ಗಾಯತ್ರಿಮಂತ್ರ, ಶುದ್ಧವಾಣೀ, ದಯೆ, ಯೋಗ ಇವು ಬ್ರಹ್ಮಲೋಕದಲ್ಲಿ ಮೂರ್ತಿಮಂತವಾಗಿ ವಾಸ್ತವ್ಯಮಾಡಿರುವುವು ॥೨೨೧॥ ದಕ್ಷಿಣಾಗ್ನೀ, ಗಾರ್ಹಪತ್ಯ ಮತ್ತು ಆಹವನೀಯ ಹೀಗೆ ಯಾವ ಮೂರು ಅಗ್ನಿಗಳು ವಸ್ತುತಃ ಏಕರೂಪವಾಗಿದ್ದು ಮೂರು ಪ್ರಕಾರಗಳಿಂದ ಭಾಸವಾಗುವುವು ॥೨೨೨॥ ಅಲ್ಲಿ ಯಾವ ಯಾವ ಜನರು ಇರುವರೆಂಬುವದನ್ನು ಈಗ ನಾನು ಹೇಳುವೆನು, ಅದನ್ನು ಕೇಳು. ಗಾಯತ್ರೀ ಮಂತ್ರದ ಜಪ ಮಾಡುವವರು, ಬ್ರಾಹ್ಮಣರ ಚರಣ ತೀರ್ಥವನ್ನು ಪ್ರಾಶನ ಮಾಡುವವರು ಮತ್ತು ನಿಷ್ಕಾಮ ಭಾವನೆಯಿಂದ ಉಪಾಸನೆಯನ್ನು ಮಾಡುವವರು ಅಲ್ಲಿ ವಾಸ್ತವ್ಯ ಮಾಡುವರು ॥೨೨೩॥ ಯಾರು ಬ್ರಾಹ್ಮಣರ ಸಾತ್ವಿಕ ಕಾರ್ಯಗಳಿಗಾಗಿ ಮಡಿಯುವರೋ, ಯಾರು ಗೋ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡುವರೋ, ಯಾರು ಪರೋಪಕಾರಕ್ಕಾಗಿ ತಮ್ಮ ಧನವನ್ನು ಖರ್ಚಿಸುವರೋ, ಆ ಜನರೇ ಸತ್ಯಲೋಕಕ್ಕೆ ಹೋಗಿರುವರು ॥೨೨೪॥ ನಿಷ್ಕಾಮ ಬುದ್ಧಿಯಿಂದ ಬ್ರಾಹ್ಮಣರನ್ನು ಭಜಿಸಿದವರು, ನಿಷ್ಕಾಮ ಬುದ್ಧಿಯಿಂದ ಬ್ರಾಹ್ಮಣರನ್ನು ಪೂಜಿಸಿದವರು ಮತ್ತು ನಿಷ್ಕಾಮ ಬುದ್ಧಿಯಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಿದವರು ಸತ್ಯಲೋಕವನ್ನು ಪಡೆಯುವರು ॥೨೨೫॥ ಯಾರು ದೀನ ಜನರಿಗಾಗಿ ಉಪಕಾರಗಳನ್ನು ಮಾಡಲು ಯಾವಾಗಲೂ ಕೃಪಾವಂತರಾಗಿರುವರೋ, ಯಾರು ಸತ್ಯವನ್ನೇ ನುಡಿಯುವರೋ ಮತ್ತು ಸಾತ್ವಿಕ ವೃತ್ತಿಯಿಂದ ಇರುವರೋ, ಅವರು ಸತ್ಯಲೋಕದ ರಹಿವಾಸಿಯಾಗಿರುವರು ॥೨೨೬॥

॥೨೨೭॥ ಐಸೀ ಸತ್ಯಲೋಕೀಂಚೀ ಸ್ಥಿತೀ । ತೇಥೀಂಚಾ ಬ್ರಹ್ಮಾ ಅಧಿಪತೀ । ಬ್ರಹ್ಮಸೃಷ್ಟೀ ಯಾಹೀವರತೀ । ನಾಹೀ ನಿಶ್ಚಿತೀ ಉದ್ಧವಾ ॥೨೨೮॥ ಬ್ರಹ್ಮಾಂಡಾಹೂನಿ ವೇಗಳಾ । ಕೈಲಾಸ ನಿರ್ಮಾಣ ಕರೀ ಭೋಳಾ । ವೈಕುಂಠ ರಚೀ ಘನಸಾಂವಳಾ । ಹೇ ಲೋಕ ಸ್ವಲೀಳಾ ನಿರ್ಮಿತ ॥೨೨೯॥ ಹೋತಾ ಬ್ರಹ್ಮಾಂಡಾ ಘಡಾಮೋಡೀ । ವೈಕುಂಠ ಕೈಲಾಸ ನ ಲಗೇ ಢೋಢೀ । ತೇಥೀಲ ವಸ್ತೀಚೀ ಅಭಿನವ ಗೋಡೀ । ಹರಿಹರಭಕ್ತ ಪುಡೀ ಜಾಣತೀ ॥೨೩೦॥ ತೇಥ ನಾಹೀ ಕಾಳಾಚೇ ಗಮನ । ನಾಹೀ ಕರ್ಮಾಚೇ ಕರ್ಮಬಂಧನ । ತೇಥ ನಾಹೀ ಜನ್ಮಮರಣ । ಹೇ ಭಕ್ತ ಅನನ್ಯ ಪಾವತೀ ॥೨೩೧॥ ವೈಕುಂಠಕೈಲಾಸ ರಚನಾ । ಸಾಂಗತಾ ಮನ ಮುಕೇ ಮನಪಣಾ । ತೇ ಲೋಕೀಂಚೀ ಲೋಕಲಕ್ಷಣಾ । ಐಕ ವಿಚಕ್ಷಣಾ ಸಾಂಗೇನ ॥೨೩೨॥ ಸಕಳ ಬ್ರಹ್ಮಾಂಡಾಬಾಹೇರೀ । ಮಾಯಾ ಆವರಣಾಭೀತರೀ । ವೈಕುಂಠ ಕೆಲಾಸ ಹರಹರೀ । ಸ್ವಲೀಲೇಕರೀ ನಿರ್ಮಿಜೇ ॥೨೩೩॥ ಸಕಳ ಜೀವಾ ಸುಖಕರೂ । ಕೈಲಾಸೀ ವಸೇ ಶಂಕರೂ । ಜೋ ಕಾ ಪಾರ್ವತೀಪರಮೇಶ್ವರೂ । ಜೋ ಯೋಗೇಶ್ವರೂ ಯೋಗಿಯಾ ॥೨೩೪॥ ಜಟಾಜೂಟೀ ಗಂಗಾಧರ । ಪಿನಾಕಪಾಣೀ ಪಂಚವಕ್ತ್ರ । ಕರ್ಪೂರಗೌರ ಗೋಕ್ಷೀರ । ಅಭಯವರದಕರ ನಿಜ ಭಕ್ತಾ ॥೨೩೫॥ ತ್ರಿಮಾತ್ರಾತೀತ ತ್ರ್ಯಂಬಕ । ತ್ರಿಪುಟೀತ್ರಿಪುರ ತ್ರಿಪುರಾಂತಕ । ತ್ರಿವಿಧತಾಪ ಉಚ್ಛೇದಕ । ತಿನೀ ಲೋಕ ಸುಖಕಾರೀ ॥೨೩೬॥ ನಾಗಭೂಷಣೇ ಶೋಭೇ ಲೀಲಾ । ರುದ್ರಾಕ್ಷಯುಕ್ತ ರುಂಡಮಾಳಾ । ನೀಳಕಂಠ ಜಾಶ್ವನೀಳಾ । ಭಸ್ಮೋದ್ಧೂಲಿಧೂಸರ ॥೨೩೭॥ ತ್ರಿಶೂಳ ಮರಾಂಕಿತ ಕರ । ತ್ರಿನೇತ್ರವ್ಯಾಘ್ರಾಜಿನ ಅಂಬರ । ರಾಮನಾಮೀ ಅತಿತತ್ಪರ । ಕರೀ ನಿರಂತರ ಜಪಮಾಳಾ ॥೨೩೮॥ ಸಹಸ್ರಬಾಹು ಬಳಿಪುತ್ರ ಬಾಣ । ಶೃಂಗೀ ಭೃಂಗೀ ಚಂಡಿ ಪಾರ್ಷದ ಪೂರ್ಣ । ಸಾಠೀ ಸಹಸ್ರ ರುದ್ರಗಣ । ಕಾತ್ಯಾ ತ್ರಿಶೂಳ ಜಾಣ ಝೇಲತೀ ॥೨೩೯॥ ಗಣೇಶ ಸ್ವಾಮಿಕಾರ್ತಿಕ । ನಂದೀ ಪಂಚಮುಖ ಷಣ್ಮುಖ । ವೀರಭದ್ರ ಸೇನಾನಾಯಕ । ಜೇಣೇ ಲಾವಿಲೀ ಸೀಕ ದಕ್ಷಾಸೀ ॥೨೪೦॥ ಭೂತ

ಎಂದೆಂದಿಗೂ ತಮ್ಮ ಮುಖದಿಂದ ಪರನಿಂದೆಯನ್ನು ಮಾಡದವರು, ಪರಸ್ತ್ರೀಯರ ಸಂಗವನ್ನು ಎಂದಿಗೂ ಮಾಡದವರು, ಪರಧನವನ್ನು ಎಂದಿಗೂ ಸ್ಪರ್ಶ ಕೂಡ ಮಾಡದವರು, ಇವರೆಲ್ಲರೂ ಸತ್ಯಲೋಕದಲ್ಲಿ ಇರುವರು ॥೨೨೭॥ ಈ ಪ್ರಕಾರವಾಗಿ ಸತ್ಯಲೋಕದ ಸ್ಥಿತಿಯಾಗಿರುವುದು. ಅಲ್ಲಿನ ಅಧಿಪತಿಯು ಬ್ರಹ್ಮದೇವನಾಗಿರುವನು. ಹೇ ಪ್ರಿಯ ಉದ್ಧವನೇ, ಆ ಸತ್ಯಲೋಕಕ್ಕಿಂತಲೂ ಮೇಲಭಾಗದಲ್ಲಿ ಬ್ರಹ್ಮದೇವನ ಸೃಷ್ಟಿಯು ಸರ್ವಥಾ ಇರುವುದಿಲ್ಲ. ಇದನ್ನು ನೀನು ಲಕ್ಷದಲ್ಲಿಡು ॥೨೨೮॥ ಭೋಳಾ ಶಂಕರನು ಬ್ರಹ್ಮಾಂಡಗಳಿಂದ ಭಿನ್ನವಾಗಿರುವಂತಹ ಕೈಲಾಸವನ್ನು ನಿರ್ಮಾಣ ಮಾಡಿರುವನು ಮತ್ತು ಮೇಘಶ್ಯಾಮನಾಗಿರುವ ವಿಷ್ಣು ಈತನು ವೈಕುಂಠದ ರಚನೆಯನ್ನು ಮಾಡಿರುವನು. ಈ ಎರಡು ಲೋಕಗಳನ್ನು ಇವರೀರ್ವರು ತಮ್ಮ ಅದ್ಭುತವಾದ ಲೀಲೆಯಿಂದ ನಿರ್ಮಿಸಿರುವರು ॥೨೨೯॥ ಬ್ರಹ್ಮಾಂಡಗಳಲ್ಲಿ ಎಷ್ಟೇ ಆಗುಹೋಗುಗಳಾಗಲಿ ಆದರೆ ವೈಕುಂಠ ಮತ್ತು ಕೈಲಾಸಗಳಿಗೆ ಯಾವುದೇ ಪ್ರಕಾರದ ಧಕ್ಕೆಯುಂಟಾಗುವುದಿಲ್ಲ. ಅಲ್ಲಿನ ವಾಸ್ತವ್ಯದ ಅಮೃತಮಯ ಆನಂದವನ್ನು ವಿಷ್ಣು ಮತ್ತು ಶಂಕರರ ಭಕ್ತರು ಮಾತ್ರ ತಿಳಿದಿರುವರು ॥೨೩೦॥ ಅಲ್ಲಿ ಕಾಲನ ಪ್ರವೇಶ ಸಹ ಆಗುವುದಿಲ್ಲ. ಅಲ್ಲಿ ಕರ್ಮಗಳ ಕರ್ಮಬಂಧನೆ ಇರುವುದಿಲ್ಲ, ಅಲ್ಲಿ ಜನ್ಮಮರಣಗಳಿಲ್ಲ. ಅನನ್ಯ ಭಕ್ತರಿಗೆ ಮಾತ್ರ ಈ ಸ್ಥಾನವು ಪ್ರಾಪ್ತವಾಗುವುದು ॥೨೩೧॥ ವೈಕುಂಠ ಮತ್ತು ಕೈಲಾಸ ಲೋಕಗಳ ರಚನೆಯ ವರ್ಣನೆಯನ್ನು ಮಾಡಲು ಹೋದರೆ ಮನಸ್ಸಿನ ಮನತ್ವವೇ ಇಲ್ಲದಾಗುವುದು. ಹೇ ಬುದ್ಧಿವಂತನಾಗಿರುವ ಉದ್ಧವಾ, ಈಗ ಅಲ್ಲಿಯ ಜನರ ಲಕ್ಷಣಗಳನ್ನು ಹೇಳುವೆನು, ಅದಕ್ಕಾಗಿ ನೀನದನ್ನು ಕೇಳು ॥೨೩೨॥ ಸರ್ವ ಬ್ರಹ್ಮಾಂಡಗಳ ಹೊರಭಾಗಗಳಲ್ಲಿ ಮತ್ತು ಮಾಯೆಯ ಆವರಣದ ಒಳಭಾಗದಲ್ಲಿ ಶಿವ ಮತ್ತು ವಿಷ್ಣು ಇವರು ಕೈಲಾಸ, ವೈಕುಂಠ ಲೋಕಗಳನ್ನು ತಮ್ಮ ತಮ್ಮ ಅಗಾಧವಾದ ಲೀಲೆಗಳಿಂದ ನಿರ್ಮಾಣ ಮಾಡಿರುವರು ॥೨೩೩॥ ಸರ್ವ ಜೀವಿಗಳಿಗೆ ಸುಖಕರನಾಗಿರುವ, ಪಾರ್ವತಿಯ ಪತಿಯಾದ ಪರಮೇಶ್ವರನು, ಯೋಗಿಗಳವರಲ್ಲಿ ಯೋಗೇಶ್ವರನಾಗಿರುವ ಶ್ರೀಶಂಕರನು ಕೈಲಾಸದಲ್ಲಿರುವನು ॥೨೩೪॥ ಈತನು ಜಡೆಯನ್ನು ಧರಿಸಿರುವನು, ಈತನ ಮಸ್ತಕದಿಂದ ಗಂಗೆಯು ಹರಿಯುತ್ತಿರುವಳು. ಪಿನಾಕ ನಾಮದ ಧನುಷ್ಯವು ಈತನ ಕೈಯಲ್ಲಿರುವುದು. ಪಂಚ ಮುಖ ಉಳ್ಳವನು, ಕರ್ಪೂರ ಅಥವಾ ಗೋಕ್ಷೀರದಂತೆ ಶುಭ್ರ ವರ್ಣದವನು ಮತ್ತು ಭಕ್ತರಿಗೆ ಯಾವಾಗಲೂ ಅಭಯ ಕೊಡುವ ವರದಾಯಕನಾಗಿರುವನು ॥೨೩೫॥ ಅಕಾರ, ಉಕಾರ, ಮಕಾರ ಈ ಮೂರು ಮಂತ್ರಗಳ ಆಚೆಕಡೆಯವನು, ತ್ರೈಲೋಕ್ಯದ ನೇತ್ರ ತ್ರಿಪುಟಿಯಾದವನು, ತ್ರಿಪುರಾಂತಕನು, ತ್ರಿವಿಧ ತಾಪಗಳ ನಿವಾರಕನು ಮತ್ತು ಮೂರೂ ಲೋಕಗಳಿಗೆ ಸುಖವನ್ನು ಕೊಡುವವನು ॥೨೩೬॥ ನಾಗಭೂಷಣನಾಗಿರುವುದರಿಂದ ಆತನ ಶೋಭೆಯು ವಿಶೇಷವಾಗಿ ಶೋಭಿಸುತ್ತಿರುವುದು. ಆತನು ರುದ್ರಾಕ್ಷಿಗಳ ಮಾಲೆ ಹಾಗೂ ರುಂಡಮಾಲೆಯನ್ನು ಧರಿಸಿರುವನು. ಆತನ ಕಂಠವು ನೀಲರತ್ನದಂತೆ ಶೋಭಾಯಮಾನವಾಗಿರುವುದು. ಭಸ್ಮಲೇಪನದಿಂದ ಆತನ ಅಂಗವು ಮಸುಕಾಗಿ ತೋರುತ್ತಿರುವುದು ॥೨೩೭॥ ತ್ರಿಶೂಲ ಮತ್ತು ಡಮರನ್ನು ಆತನು ತನ್ನ ಕೈಯಲ್ಲಿ ಧರಿಸಿರುವನು. ಆತನಿಗೆ ಮೂರು ನೇತ್ರಗಳಿರುವುವು. ಆತನು ವ್ಯಾಘ್ರ ಚರ್ಮವನ್ನು ಶರೀರಕ್ಕೆ ತೊಟ್ಟಿಕೊಂಡಿರುವನು. ಆತನು ತನ್ನ ಹಸ್ತದಲ್ಲಿನ ಜಪಮಾಲೆಯಿಂದ ಸದಾ ರಾಮನಾಮವನ್ನು ಜಪಿಸುತ್ತಿರುವನು ॥೨೩೮॥ ಬಲಿಯ ಪುತ್ರನಾದ ಸಹಸ್ರಬಾಹೂ ಬಾಣಾಸುರ, ಶೃಂಗೀ, ಭೃಂಗೀ, ಚಂಡೀ ಇವರು ಆತನ ಸೇವಕರಾಗಿರುವರು. ಇದಲ್ಲದೇ ಅರವತ್ತು ಸಾವಿರ ರುದ್ರಗಣರು ಲಖಲಖೀತವಾಗಿರುವ ಕುಡಗೋಲು, ತ್ರಿಶೂಲಗಳನ್ನು ಸದಾ ಕೈಯಲ್ಲಿ ಧರಿಸಿಕೊಂಡು ನಿಂತುಕೊಂಡಿರುವರು ॥೨೩೯॥

ಪ್ರೇತ ಪಿಶಾಚಕ । ಮಹಾಪ್ರಥಮ ಜ್ಯಾಂಚೇ ಸೈನ್ಯಕ । ಅವಘೇ ಶಿವಾಂಕಿತ ದೇಖ । ಶಿವನಾಮಘೋಷ ಗರ್ಜತೀ।೨೪೧॥ ಶಂಭು ಶಿವ ಶೂಲೀ ಶಂಕರ । ಉಮಾಕಾಂತ ಕರ್ಪೂರಗೌರ । ಭವ ಭರ್ಗ ಭವಾನೀವರ । ಕಪರ್ದೀ ಈಶ್ವರ ಮಹಾದೇವ ।೨೪೨॥ ಹರಹರ ಶಂಕರ ನಾಮೋಚ್ಚಾರೀ । ಧಾಕೇ ಕಳಿಕಾಳ ಪಳೇ ದೂರೀ । ಶಿವನಾಮೇ ಗರ್ಜೇ ಸದಾ ಗಿರೀ । ಗಿರೀಶ ರಾಜ್ಯ ಕರೀ ತೇ ಠಾಯೀ ।೨೪೩॥ ಜೇಥ ಶಿವನಾಮಾಚಾ ಉಚ್ಚಾರ । ತೇಥ ಸುಖೇಸೀ ತಿಷ್ಠೇ ಶಂಕರ । ಭಕ್ತ ಕೃಪಾಳೂ ಈಶ್ವರ । ಭೋಳಾ ನಿರಂತರ ಭಾವಾರ್ಥ್ಯಾ ।೨೪೪॥ ನಿಜದಾಸಾಂಚೇ ತ್ರಿಗುಣ ವೈರೀ । ಛೇದಾವಯಾ ಸದಾ ತ್ರಿಶೂಳ ಕರೀ । ನಿಜಡಮರೂಚ್ಯಾ ಗಜರೀ । ಪಾಪಾಚೀ ಉರೀ ಉರೋ ನೇದೀ ।೨೪೫॥ ಕೈಲಾಸೀ ತೃಣ ತರೂ ಸಮಸ್ತ । ಪಶು ಪಕ್ಷೀ ಜೇ ಜೇ ತೇಥ । ತೇ ಅವಘೇಚಿ ಶಿವಾಂಕಿತ । ಸರ್ವರೂಪೇ ಸಮಸ್ತ ಶಿವೂ ನಾಂದೇ ।೨೪೬॥ ಯಾಪರೀ ಬ್ರಹ್ಮಾಂಡಾಬಾಹೇರೀ । ಶಿವೂ ಸ್ವಲೀಲಾ ನಿರ್ಮಾಣ ಕರೀ । ನೇಮೂನಿಯಾ ಕೈಲಾಸಗಿರೀ । ಭವೂ ರಾಜ್ಯ ಕರೀ ಭವಾನೀಶೀ ।೨೪೭॥ ಆತಾ ವೈಕುಂಠೀಚೀ ಸ್ಥಿತೀ। ಐಕ್ಯ ಸಾಂಗೇನ ತುಜಪ್ರತೀ । ಜೇ ಐಕತಾ ಚಿತ್ತವೃತ್ತೀ । ಸ್ವಾನಂದಸ್ಫೂರ್ತಿ ವೋಸಂಡೇ ।೨೪೮॥ ಉಂಸ ಗಾಳೂನಿ ಕಾಢಿಜೇ ಸಾರ । ಯಾಚಿ ಆಳೂನಿ ಕೀಜೇ ಸಾಕರ । ತಿಚೇಹೀ ನಾನಾ ಪ್ರಕಾರ । ಕರಿತೀ ನಾನಾಕಾರ ಅತಿ ಕುಶಳ ।೨೪೯॥ ತೇವೀ ಚೈತನ್ಯಚಿ ನಿಶ್ಚಿತೇ । ಮುಸಾವೂನಿ ಶ್ರೀಭಗವಂತೇ । ವೈಕುಂಠ ರಚಿಲೇ ತೇಥೇ । ನಿಜ ಸಾಮರ್ಥ್ಯೇ ನಾಂದಾವಯಾ ।೨೫೦॥ ಸ್ವಲೀಲಾ ಸಗುಣ ಸಾಕಾರ । ಸುಕುಮಾರ ಅತಿಸುಂದರ । ಘನಶ್ಯಾಮ ಮನೋಹರ । ಮೂರ್ತಿ ಚಿನ್ಮಾತ್ರ ಚೋಖಡೀ ।೨೫೧॥ ಶಂಖ ಚಕ್ರ ಪದ್ಮ ಗದಾ । ಚಾರೀ ಭುಜಾ ಸಾಯುಧಾ । ಡೋಳೇ ಲಾಂಚಾವಲೇ ಆನಂದಾ । ಸಗುಣ ಗೋವಿಂದಾ ದೇಖೋನಿ ।೨೫೨॥ ಮುಕುಟ ಕುಂಡಲೇ ಮೇಖಳಾ । ಕಾಂಸೇ ಪಿಂವಳಾ ಸೋನಸಳಾ । ಕೌಸ್ತುಭ ಝುಳಕೇ ಗಳಾ । ಆಪಾದ ವನಮಾಳಾ ಶೋಭತ ।೨೫೩॥ ಚರಣೇಂಚೀ ಗಂಗಾ ಅತಿಪುನೀತ । ಜೇ ಜಗಾತೇ ಪವಿತ್ರ ಕರೀತ । ತೇ ಮಾಥಾ ವಾಹೇ ಉಮಾಕಾಂತ । ನಿಜಸ್ವಾರ್ಥಾ ದೇಖೋನಿ

ಗಣಪತೀ, ಕಾರ್ತಿಕಸ್ವಾಮಿ, ನಂದೀ, ಪಂಚಮುಖ, ಷಣ್ಮುಖ ಮತ್ತು ದಕ್ಷಬ್ರಹ್ಮನಿಗೆ ಶಿಕ್ಷೆಯನ್ನು ಕೊಟ್ಟಂತಹ ವೀರಭದ್ರನು ।೨೪೦॥ ಭೂತ, ಪ್ರೇತ, ಪಿಶಾಚ್ಚ ಮತ್ತು ಮಹಾಮಹಾದೇವತೆಗಳು ಆತನ ಸೈನಿಕರಾಗಿರುವರು. ಹೀಗಿರುವ ಶ್ರೀಶಂಕರನು, ಈ ಸರ್ವರೂ ಈ ಶಂಕರನ ಆಜ್ಞೆಯನ್ನು ಪರಿಪಾಲಿಸುತ್ತಿರುವರು. ಇವರು ಯಾವಾಗಲೂ ಶಿವನಾಮದ ಗರ್ಜನೆಯನ್ನು ಮಾಡುತ್ತಿರುವರು ।೨೪೧॥ ಶಂಭೋ, ಶಿವ, ಶೂಲೀ, ಶಂಕರಾ, ಉಮಾಕಾಂತಾ, ಕರ್ಪೂರಗೌರಾ, ಭವ, ಭರ್ಗ, ಭವಾನೀಪತೀ, ಕದರ್ಪೀ, ಈಶ್ವರಾ, ಮಹಾದೇವ ।೨೪೨॥ ಹರಹರ, ಹೀಗೆ ಶ್ರೀಶಂಕರನ ನಾಮೋಚ್ಚಾರದ ಭಯದಿಂದ ಕಲಿಕಾಲನು ದಿಕ್ಕೆಟ್ಟು ದೂರ ಓಡಿಹೋಗುವನು. ಕೈಲಾಸ ಪರ್ವತವು ಇದು ಸತತವಾಗಿ ಶಿವನಾಮದ ಗರ್ಜನೆಯನ್ನು ಮಾಡುತ್ತಿರುವುದು. ಅಲ್ಲಿ ಶ್ರೀಶಂಕರನು ರಾಜ್ಯವನ್ನಾಳುವವನು ।೨೪೩॥ ಎಲ್ಲಿ ಶಿವನಾಮದ ಉಚ್ಚಾರವಾಗುವುದೋ, ಅಲ್ಲಿ ಶ್ರೀಶಂಕರನಿರುವನು. ಈ ಯಾವ ಈಶ್ವರನು ಭಕ್ತರಿಗಾಗಿ ಮಹಾ ಕೃಪಾವಂತನಾಗಿದ್ದು ಭಾವಿಕರಿಗೆ ಸದಾಕಾಲದಲ್ಲಿ ಭೋಳೇತನದಿಂದ ವಶನಾಗುವವನಾಗಿರುವನು ।೨೪೪॥ ತ್ರಿಗುಣಗಳು ಇವು ತನ್ನ ಭಕ್ತರಿಗೆ ವೈರಿಯಾಗಿರುವುವು. ಆದ್ದರಿಂದ ಆ ತ್ರಿಗುಣಗಳನ್ನು ಸಂಹರಿಸುವದಕ್ಕಾಗಿ ತನ್ನ ಹಸ್ತದಲ್ಲಿ ಯಾವಾಗಲೂ ತ್ರಿಶೂಲವನ್ನು ಧರಿಸಿರುವನು. ಆತನು ತನ್ನ ಡಮರು ಬಾರಿಸಿ ಪಾತಕಗಳನ್ನು ನಾಶಪಡಿಸುವನು ।೨೪೫॥ ಕೈಲಾಸದಲ್ಲಿನ ತೃಣ, ವೃಕ್ಷ, ಪಶು, ಪಕ್ಷಿ ಹೀಗೆ ಅಲ್ಲಿರುವ ಸರ್ವ ಸಜೀವ ಪ್ರಾಣಿಗಳು ಎಲ್ಲವೂ ಶ್ರೀ ಶಂಕರನ ಆಜ್ಞೆಯಲ್ಲಿರುವುವು. ಆ ಎಲ್ಲರ ರೂಪದಿಂದ ಸಾಕ್ಷಾತ ಶಂಕರನೇ ಅಲ್ಲಿ ವರ್ತಿಸುತ್ತಿರುವನು ।೨೪೬॥ ಈ ಪ್ರಕಾರವಾಗಿ ಬ್ರಹ್ಮಾಂಡಗಳ ಹೊರಗೆ ಶ್ರೀಶಂಕರನು ತನ್ನ ಸ್ವಲೀಲೆಯಿಂದ ಕೈಲಾಸ ಪರ್ವತವನ್ನು ನಿರ್ಮಾಣಗೊಳಿಸಿರುವನು. ಅಲ್ಲಿ ಆತನು ಭವಾನೀ ಸಹ ರಾಜ್ಯವನ್ನಾಳುತ್ತಿರುವನು ।೨೪೭॥ ಈಗ ವೈಕುಂಠದಲ್ಲಿನ ಸ್ಥಿತಿ ಗತಿಯನ್ನು ನಾನು ನಿನಗೆ ಹೇಳುವೆನು. ಅದನ್ನು ಏಕಾಗ್ರಚಿತ್ತದಿಂದ ಆಲಿಸು. ವೈಕುಂಠದ ವರ್ಣನೆಯನ್ನು ಕೇಳುತ್ತಿದ್ದಂತೆ ಚಿತ್ತವೃತ್ತಿಯು ಸ್ವಾನಂದಸ್ಫೂರ್ತಿಯಿಂದ ಪರಿಪೂರ್ಣವಾಗಿ ತುಂಬಿ ತುಳುಕುತ್ತಾ ಹರಿಯಲಾರಂಭಿಸುವುದು ।೨೪೮॥ ಕಬ್ಬನ್ನು ಹಿಂಡಿ ಅದರಿಂದ ರಸವನ್ನು ತೆಗೆಯಲ್ಪಡುವುದು. ಆ ರಸವನ್ನು ಕುದಿಸಿ ಇಂಗಿಸಿ ಸಕ್ಕರೆಯನ್ನು ಸಿದ್ಧಗೊಳಿಸಲಾಗುವುದು. ಆ ಸಕ್ಕರೆಯಿಂದ ಅತ್ಯಂತ ಕೌಶಲ್ಯದಿಂದ ನಾನಾ ಪ್ರಕಾರಗಳ ಪದಾರ್ಥಗಳನ್ನು ಸಿದ್ಧಗೊಳಿಸಲಾಗುವುದು ।೨೪೯॥ ಈ ಪ್ರಕಾರವಾಗಿ ಭಗವಂತನು ತನ್ನ ಸ್ವತಃದ ಸಾಮರ್ಥ್ಯದಿಂದ ವಸತಿಗಾಗಿ ಚೈತನ್ಯಮಯವನ್ನು ಮುಶೀಯಲ್ಲಿ ಹಾಕಿ ಅದನ್ನು ಗಟ್ಟಿಗೊಳಿಸಿ ಅದರಿಂದಲೇ ವೈಕುಂಠವನ್ನು ರಚಿಸಿರುವನು ।೨೫೦॥ ತನ್ನ ಸ್ವತಃದ ಲೀಲೆಯಿಂದ ತಾನು ಸಗುಣ, ಸಾಕಾರನಾಗಿ, ಸುಕುಮಾರ, ಅತ್ಯಂತ ಸುಂದರನಾಗಿ, ಘನಶ್ಯಾಮ ಮನೋಹರನಾಗಿ, ಜ್ಞಾನಮಯದಿಂದ ಸಿದ್ಧಗೊಳಿಸಿದ ಸುಂದರ ಮೂರ್ತಿಯಾದ ।೨೫೧॥ ಶಂಖ, ಚಕ್ರ, ಪದ್ಮ, ಗದಾ ಹೀಗೆ ನಾಲ್ಕು ಆಯುಧಗಳಿಂದ ಯುಕ್ತನಾಗಿರುವ ಚತುರ್ಭುಜನಾದ ಸಗುಣ ಗೋವಿಂದನ ನಯನರಮ್ಯ ರೂಪವನ್ನು ನೋಡಲು ನೇತ್ರಗಳು ಆನಂದದಿಂದ ತುಂಬಿಕೊಳ್ಳುವುವು ।೨೫೨॥ ಮಸ್ತಕದ ಮೇಲೆ ಕಿರೀಟವು, ಕರ್ಣಗಳಲ್ಲಿ ಕುಂಡಲಗಳು, ನುಡುವಿನಲ್ಲಿ ಪಟ್ಟಿಯು, ಪೀತ ಪೀತಾಂಬರವು, ಕೊರಳಲ್ಲಿ ಕೌಸ್ತುಭಮಾಲೆಯು, ಮತ್ತು ಆಪಾದ ವನಮಾಲೆ, ಇವುಗಳಿಂದ ಶೋಭಾಯಮಾನನಾಗಿರುವನು ।೨೫೩॥

॥೨೫೪॥ ತ್ಯಾ ಶ್ರೀಹರೀಚೇ ಪದದ್ವಂದ್ವ । ವಾನಿತಾ ಮುಖಾ ಝಾಲಾ ವೇದ । ಅಗಮ್ಯ ಹರೀಚೇ ನಿಜಪದ । ಮಹಿಮಾ ಅಗಾಧ ಶ್ರೀಹರಿ ಚರಣೀ ॥೨೫೫॥ ಪಾಹತಾ ಮುಕುಂದಾಚೇ ಶ್ರೀಮುಖ । ಫಿಕೇ ಝಾಲೇ ಜೇ ಪೀಯೂಖ । ಡೋಳ್ಯಾ ಝಾಲೇ ಪರಮ ಸುಖ । ಧನ್ಯ ಶ್ರೀಮುಖ ಹರೀಚೇ ॥೨೫೬॥ ಜ್ಯಾಚೇ ನಿಮೇಷಾರ್ಧ ದೇಖಿಲ್ಯಾ ಮುಖ । ಹಾರಪೇ ಕೋಟೀ ಜನ್ಮಾಂಚೇ ದುಃಖ । ತ್ರಿಲೋಕೀ ನ ಮಾಯ ಹರಿಖ। ಧನ್ಯ ಶ್ರೀಮುಖ ಹರೀಚೇ।॥೨೫೭॥ ಜ್ಯಾಚಾ ದೇಖಿಲಿಯಾ ವದನೇಂದೂ। ಬಾಧೂ ನ ಶಕೇ ದ್ವಂದ್ವ ಬಾಧೂ । ಚಢತಾ ವಾಢತಾ ಪರಮಾನಂದೂ । ಸ್ವಾನಂದಕಂದೂ ಜಗಾಚಾ ॥೨೫೮॥ ಜಯಾಚೀ ವಿಕ್ಷೇಪಭ್ರು ಕಟೀ। ರಚೀ ಬ್ರಹ್ಮಾಂಡೇ ಉಠಾಉಠೀ। ಜ್ಯಾಚೇ ರೋಮಕೂಪೀ ಬ್ರಹ್ಮಾಂಡೇ ಕೋಟೀ। ತೋ ಹರಿ ವೈಕುಂಠೀ ನಾಂದತ।॥೨೫೯॥ ಜ್ಯಾಚೀ ಝಾಲಿಯಾ ಕೃಪಾದೃಷ್ಟೀ । ಅಹಂಕಾರಾಚೀ ವಿರೇ ಗಾಂಠೀ । ದುಸರೇ ದಿಸೋ ನೇದೀ ಸೃಷ್ಟೀ । ತೋ ಹರಿ ವೈಕುಂಠೀ ನಾಂದತ ॥೨೬೦॥ ಜಯಾ ದಾದಲ್ಯಾಚೇ ನಾಮ । ನಿರ್ದಾಳೀ ಗಾ ಮರಣಜನ್ಮ । ಸಮೂಳ ಉಪಡೀ ಕರ್ಮಾಕರ್ಮ । ತೋ ಪುರುಷೋತ್ತಮ ನಾಂದತ ॥೨೬೧॥ ತೇ ವೈಕುಂಠೀ ಪಾಹತಾ ಸಾಚಾರ । ಅವಘೇ ಚತುರ್ಭುಜ ನರ । ಘನಶ್ಯಾಮ ಪೀತಾಂಬರ ಧರ । ಶಂಖ ಚಕ್ರ ಅವಘ್ಯಾಂಸೀ ॥೨೬೨॥ ಅವಘ್ಯಾಂಚೇ ಏಕ ಸ್ವರೂಪ । ಅವಘೇ ದಿಸತೀ ಏಕರೂಪ । ಜೇಥ ಹರೀ ನಾಂದೇ ಸ್ವಯೇ ಸದ್ರೂಪ । ತೇಥ ಕೋಣೀ ಕುರೂಪ ದಿಸೇನಾ ॥೨೬೩॥ ತೇಥ ನಾಹೀ ಆಧೀ ವ್ಯಾಧೀ । ನಾಹೀ ವಿಷಯ ವಾರ್ತಾ ಉಪಾಧೀ । ಸ್ತ್ರೀಪುರುಷಾ ಸಮಾನ ಬುದ್ಧೀ । ಜಾಣ ತ್ರಿಶುದ್ಧೀ ಉದ್ಧವಾ ॥೨೬೪॥ ತೇಥ ನಾಹೀ ತಹಾನಭೂಕ । ನಾಹೀ ಕಾಮಕ್ರೋಧ ದ್ವಂದ್ವದುಃಖ । ನಾಹೀ ಜನ್ಮ ಮರಣ ನಿಃಶೇಖ । ಐಸಾ ವೈಕುಂಠ ಲೋಕ ನಾಂದತ ॥೨೬೫॥ ಲಕ್ಷ್ಮೀನೇ ಕರಾವೇ ಅವಲೋಕನ। ಯಾಲಾಗೀ ಕಷ್ಟತೀ ಸುರಗಣ। ತೇ ಲಕ್ಷ್ಮೀ ಅಂಗೇ ಆಪಣ। ಕರೀ ಸಂಮಾರ್ಜನ ವೈಕುಂಠೀ।॥೨೬೬॥ ತೇ ವೈಕುಂಠೀ ಜಗನ್ನಾಥ । ಉದ್ಧರಾವಯಾ ನಿಜಭಕ್ತ । ಸ್ವಲೀಲಾ ಅಸೇ ನಾಂದತ । ದೀನಕೃಪಾಯುಕ್ತ ದಯಾಳೂ ॥೨೬೭॥ ಅಂತೀ ನಾಮಮಾತ್ರ ಘೇತಲ್ಯಾಸಾರೀ । ಉದ್ಧರಲ್ಯಾ ಜೀವಕೋಟೀ । ತೋ ಸ್ವಾಮೀ ಶ್ರೀವಿಷ್ಣು ವೈಕುಂಠೀ ।

ಆತನ ಚರಣಗಳಿಂದ ಉದ್ಭವಿಸಿದ ಗಂಗೆಯು ಅತ್ಯಂತ ಪುನೀತಳು. ಆಕೆಯು ಜಗತ್ತನ್ನು ಪವಿತ್ರಗೊಳಿಸುವಳು ಎಂದು ಶ್ರೀಶಂಕರನು ಸ್ವಾರ್ಥಕ್ಕಾಗಿ ಆ ಗಂಗೆಯನ್ನು ತನ್ನ ಮಸ್ತಕದಲ್ಲಿ ಧರಿಸಿದನು ॥೨೫೪॥ ಇಂತಹ ಯಾವ ಶ್ರೀಹರಿಯ ಚರಣ ಕಮಲಗಳ ವರ್ಣನೆಯನ್ನು ಮಾಡುತ್ತ ವೇದವೂ ಕೂಡ ಮೂಕವಾಯಿತು. ಕಾರಣ ಈ ಯಾವ ಶ್ರೀಹರಿಯ ಪಾದಗಳು ಆಗಮ್ಯವಾಗಿರುವುವು. ಶ್ರೀಹರಿಯ ಮಹಿಮೆಯು ಅಗಾಧವಾಗಿರುವುದು ॥೨೫೫॥ ಶ್ರೀಹರಿಯ ಸುರೇಖವಾಗಿರುವ ಮುಖಕಮಲವನ್ನು ನೋಡಿದಾಕ್ಷಣವೇ ಅಮೃತವೂ ಕೂಡ ಸಪ್ಪಗಾಗುವುದು. ಕಣ್ಣುಗಳಿಗೆ ಅಪ್ರತಿಮವಾದ ಸುಖವಾಗುವುದು. ಶ್ರೀಹರಿಯ ಈ ಯಾವ ಶ್ರೀಮುಖವು ಧನ್ಯವಾಗಿರುವುದು ॥೨೫೬॥ ಆತನ ಮುಖದತ್ತ ಅರ್ಧಕ್ಷಣ ಮಾತ್ರ ನೋಡಲು ಕೋಟ್ಯಾವಧೀ ಜನ್ಮಗಳ ದುಖವು ನಾಶವಾಗುವುದು ಮತ್ತು ಆಗುವ ಆನಂದವು ತ್ರಿಭುವನದಲ್ಲಿ ಹಿಡಿಸಲಾರದಾಗುವುದು. ಹೀಗೆ ಶ್ರೀಹರಿಯ ಮುಖಕಮಲವು ಧನ್ಯ ಧನ್ಯವಾಗಿರುವುದು ॥೨೫೭॥ ಆತನ ಮುಖಚಂದ್ರನನ್ನು ನೋಡುವುದರಿಂದ ಯಾವುದೇ ಪ್ರಕಾರದ ದ್ವಂದ್ವಗಳು ಬಾಧಿಸಲಾರವು. ಪರಮಾನಂದವು ಬೆಳೆಯುತ್ತಲೇ ಸಾಗುವುದು. ಹೀಗೆ ಆತನು ಸರ್ವ ವಿಶ್ವಗಳ ಆತ್ಮನಾಗಿ, ಆನಂದದ ಮೂಲನಾಗಿರುವರು ॥೨೫೮॥ ಆ ಯಾವ ಕಮಾನಿನಂತಿರುವ ಆತನ ಹುಬ್ಬುಗಳ ಕೇವಲ ದೃಷ್ಟಿಕ್ಷೇಪದಿಂದ ಅನೇಕ ಬ್ರಹ್ಮಾಂಡಗಳು ತತ್ಕಾಲದಲ್ಲಿ ರಚನೆಯಾಗುವುವು. ಆತನ ರೋಮ ರೋಮಗಳಲ್ಲಿ ಕೋಟಿ ಕೋಟಿ ಬ್ರಹ್ಮಾಂಡ ಗಳಿರುವುವು. ಅಂತಹ ಯಾವ ಶ್ರೀಹರಿಯು ವೈಕುಂಠದಲ್ಲಿ ವರ್ತಿಸುತ್ತಿರುವನು ॥೨೫೯॥ ಆತನ ಕೃಪಾದೃಷ್ಟಿಯು ಪ್ರಾಪ್ತವಾಗುತ್ತಲೇ ತಕ್ಷಣ ಅಹಂಕಾರವು ನಾಶವಾಗಿ ಸೃಷ್ಟಿತುಂಬ ಆತನ ಹೊರತಾಗಿ ಅನ್ಯವು ಯಾವುದೂ ತೋರುವುದಿಲ್ಲ ॥೨೬೦॥ ಆ ಪ್ರಭುವಿನ ಮಂಗಲನಾಮದಿಂದ ಜನ್ಮಮರಣಗಳ ತಿರುಗಾಟವು ತಪ್ಪುವುದು, ಕರ್ಮಾಕರ್ಮಗಳು ಬೇರು ಸಮೇತವಾಗಿ ಇಲ್ಲದಾಗುವುವು. ಅಂತಹ ಪುರುಷೋತ್ತಮನು ವೈಕುಂಠದಲ್ಲಿ ವರ್ತಿಸುತ್ತಿರುವನು ॥೨೬೧॥ ಆ ವೈಕುಂಠದಲ್ಲಿ ಎಲ್ಲರೂ ಚತುರ್ಭುಜರಾಗಿರುವರು. ಎಲ್ಲರ ವರ್ಣವು ಮೇಘಶ್ಯಾಮವಾಗಿ ರುವುದು. ಇವರು ಪೀತಾಂಬರ ಧಾರಿಯಾಗಿರುವರು. ಎಲ್ಲರ ಕೈಗಳಲ್ಲಿ ಶಂಖ ಚಕ್ರಾದಿ ಆಯುಧಗಳಿರುವುವು ॥೨೬೨॥ ಎಲ್ಲರ ಸ್ವರೂಪವು ಒಂದೇಯಾಗಿರುವುದು. ಎಲ್ಲರೂ ಒಂದೇ ಸಮಾನರಾಗಿ ಕಾಣುವರು. ಎಲ್ಲಿ ಸೌಂದರ್ಯಶಾಲಿ ಶ್ರೀಹರಿಯ ವಾಸ್ತವ್ಯವಿರುವುದೋ, ಅಲ್ಲಿ ಯಾರೂ ಸಾಮಾನ್ಯರಾಗಿ ಕಾಣುವುದಿಲ್ಲ ॥೨೬೩॥ ಅಲ್ಲಿ ಆಧಿದೈವಿಕಾದಿ ತಾಪಗಳು, ವಿಷಯಗಳ ಉಪಾಧಿಗಳು ಇರುವುದಿಲ್ಲ. ಅಲ್ಲಿ ಸ್ತ್ರೀ ಪುರುಷರಲ್ಲಿ ಸಮದೃಷ್ಟಿಯಿರುವುದು. ಹೇ ಉದ್ಧವಾ, ಇದನ್ನು ನೀನು ನಿಶ್ಚಿತವಾಗಿ ನಿಜವೆಂದು ತಿಳಿ ॥೨೬೪॥ ಅಲ್ಲಿ ಹಸಿವು ನೀರಡಿಕೆಗಳಿಲ್ಲ, ಕಾಮ-ಕ್ರೋಧಗಳ ವಾಸ್ತವ್ಯವಿಲ್ಲ, ಸುಖದುಃಖಗಳ ದ್ವಂದ್ವಗಳಿಲ್ಲ, ಜನ್ಮ-ಮರಣಗಳ ಚಕ್ರವಿಲ್ಲ. ಹೀಗೆ ಈ ಯಾವ ವೈಕುಂಠಲೋಕ ವಿರುವುದು ॥೨೬೫॥ ಯಾವ ಲಕ್ಷ್ಮಿಯು ನಮತ್ತ ಕೃಪಾದೃಷ್ಟಿಯಿಂದ ನೋಡಬೇಕೆಂಬ ಬಯಕೆಯಿಂದ ಸರ್ವ ದೇವತೆಗಳು ಪ್ರಯತ್ನವನ್ನು ಮಾಡುತ್ತಿರುವರು. ಆದರೆ ಆ ಲಕ್ಷ್ಮಿಯು ವೈಕುಂಠದಲ್ಲಿ ಸ್ವತಃ ತಾನು ಅಂಗಳಕಸಗೂಡಿಸಿ ಚಳೇ ಹಾಕುವಳು ॥೨೬೬॥ ಆ ಯಾವ ವೈಕುಂಠದಲ್ಲಿ ದೀನದಯಾಳುವಾದ, ಉದಾರನಾಗಿರುವ ಶ್ರೀಹರಿಯು ತನ್ನ ಭಕ್ತರ ಉದ್ಧಾರವನ್ನು ಮಾಡುವುದಕ್ಕಾಗಿ ತನ್ನ ನಾನಾವಿಧ ಲೀಲೆಗಳಿಂದ ವರ್ತಿಸುತ್ತಿರುವನು ॥೨೬೭॥ ಅಂತ್ಯ ಸಮಯದಲ್ಲಿ ಯಾರ ಕೇವಲ

ದೀನಕೃಪಾದೃಷ್ಟೀ ನಾಂದತ ।೨೬೮॥ ಜೈಸಾ ಜ್ಯಾಸೀ ಭಾವಾರ್ಥ । ತೈಸಾ ಪುರವೀ ಮನೋರಥ । ಪಢಿಯೇ ಪಂಚಮ ಪುರುಷಾರ್ಥ । ತೋ ಹರಿ ನಾಂದತ ವೈಕುಂಠೀ ।೨೬೯॥ ಲೋಕಲೋಕಾಂತರಗಣನಾ । ಬ್ರಹ್ಮಾಂಡ ಸಂಖ್ಯಾ ಅವಘೀ ಜಾಣಾ । ವೈಕುಂಠಕೈಲಾಸರಚನಾ । ಸಮೂಳ ವಿವಂಚನಾ ಸಾಂಗೀತಲೀ ।೨೭೦॥ ಲೋಕ ಸಾಂಗೀತಲೇ ಭಿನ್ನ ಭಿನ್ನ । ತೇಥೀಲ ಪ್ರಾಪ್ತೀಚೇ ಕೋಣ ಜನ । ಐಸೇ ಕಲ್ಪೀಲ ತುಝೇ ಮನ । ತೇ ಅರ್ಥೀ ನಿರೂಪಣ ಅವಧಾರೀ ।೨೭೧॥ ಮಹರ್ಜನತಪಃಸತ್ಯಲೋಕ । ವೈಕುಂಠರಚನಾ ಅಲೋಕಿಕ । ತೇಥೀಲ ಪ್ರಾಪ್ತೀಚೇ ಕೋಣ ಲೋಕ । ತೇ ಯದುನಾಯಕ ಸಾಂಗತ ।೨೭೨॥

ಯೋಗಸ್ಯ ತಪಸಶ್ಚೈವ ನ್ಯಾಸಸ್ಯ ಗತಯೋಽಮಲಾಃ ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್‌ಗತಿಃ ।೧೪॥

ಅರ್ಥ:- ಯೋಗ, ತಪಸ್ಸುಗಳು ಮತ್ತು ಸನ್ಯಾಸದ ಆಧಾರದಿದ ಮಹರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕರೂಪ ಉತ್ತಮ ಗತಿಯು ಪ್ರಾಪ್ತವಾಗುವುದು ಮತ್ತು ಭಕ್ತಿಯೋಗದಿಂದ ನನ್ನ ಪರಮಧಾಮವು ಪ್ರಾಪ್ತವಾಗುವುದು.

ನಿಶ್ಚಳ ಕರಾವಯಾ ನಿಜಚಿತ್ತಾ । ಸಾಧಿಲೀ ಪ್ರಾಣಾಪಾನಸಮತಾ । ಷಟ್‌ಚಕ್ರೇ ಭೇದೂನಿ ತತ್ತ್ವತಾ । ಪುಢೇ ನಿಜಾತ್ಮತಾ ಪಾವಾವೀ ।೨೭೩॥ ತಂವ ಆಯುಷ್ಯಾ ಝಾಲೇ ಅಸ್ತಮಾನ । ನಿಜಾಂಗೀ ಆದಳೇ ಮರಣ । ಐಸೇ ನಿಮಾಲೇ ಜೇ ಯೋಗೀ ಜನ । ತ್ಯಾಂಸೀ ಊರ್ಧ್ವ ಗಮನ ಮಹರ್ಜನಾದಿ ಲೋಕೀ ।೨೭೪॥ ಜೋ ಗೃಹಸ್ಥಾಶ್ರಮೀ ಬ್ರಹ್ಮಚಾರೀ । ಬ್ರಹ್ಮಚರ್ಯನೇಮೇ ವ್ರತಧಾರೀ । ಜೋ ಸ್ವಪ್ನೀಹೀ ನಾತಳೇ ನಾರೀ । ಜೋ ಭಿಕ್ಷಾಹಾರೀ ಸರ್ವದಾ ।೨೭೫॥ ಜೋ ಸದಾ ಧಡಧಡೀತ ವಿರಕ್ತೀ ।ಏಕ ಭಿಕ್ಷಾ ನ ಧರೀ ಹಾತೀ । ಸದ್ಗುರುಚಿಯಾ ಸೇವಾ ಕರಿತೀ । ಆತ್ಮಜ್ಞಾನಪ್ರಾಪ್ತೀ ಪಾವಾವಯಾ ।೨೭೬॥ ಜೇ ಸಂಧೀ ವ್ಹಾವೇ ಆತ್ಮಜ್ಞಾನ । ತೇ ಸಂಧೀಸೀ ಆಲೇ ಮರಣ । ಐಶಾ ಬ್ರಹ್ಮಚಾರಿಯಾಸೀ ಜಾಣ । ಊರ್ಧ್ವ ಗಮನ ಮಹರ್ಜನಾದಿ ಲೋಕೀ ।೨೭೭॥ ಜೇ ಗೃಹಸ್ಥಾಶ್ರಮೀ ನೇಟಕ । ಚೇ ಅಗ್ನಿಸೇವೇ ಸಾಗ್ನಿಕ । ಜೇ ಸ್ವಧರ್ಮೇ ಚಿತ್ತಶೋಧಕ । ಜೇ ಸೇವಕ ದ್ವಿಜದೇವಾ ।೨೭೮॥

ಜೇ ಭೂತದಯಾಳೂ ಭಾವಿಕ । ಜೇ ಸತ್ಯವಾದೀ ಸಾತ್ವಿಕ । ಜೇ ನಿಜಾತ್ಮಜ್ಞಾನಸಾಧಕ । ಜೇ ಅವಂಚನ

ನಾಮದ ಉಚ್ಚಾರವನ್ನು ಮಾಡಿದರೆ ಕೋಟ್ಯಾವಧೀ ಜೀವಿಗಳು ಉದ್ಧಾರರಾಗುವರು. ದೀನರಲ್ಲಿ ಕೃಪೆಯ ಮಳೆಗರೆಯುವ ಪ್ರಭು ಶ್ರೀ ವಿಷ್ಣು ವೈಕುಂಠದಲ್ಲಿ ವರ್ತಿಸುತ್ತಿರುವನು ।೨೬೮॥ ಯಾರ ಭಾವನೆಯು ಹೇಗೆ ಇರುವುದೋ, ಅದರಂತೆ ಆತನು ಅವರ ಮನೋಗತವನ್ನು ಪೂರೈಸುವನು ಮತ್ತು ಆತನು ಐದನೆಯ ಪುರುಷಾರ್ಥದಲ್ಲಿ ಬಹು ಪ್ರೀತಿಯನ್ನು ಮಾಡುವಂತಹ ಸರ್ವಶಕ್ತಿಮಾನ ಶ್ರೀಹರಿಯು ವೈಕುಠಂದಲ್ಲಿ ವರ್ತಿಸುತ್ತಿರುವನು ।೨೬೯॥ ಈ ಪ್ರಕಾರವಾಗಿ ಯಾವ ಭಿನ್ನ ಭಿನ್ನ ಲೋಕಗಳನ್ನು ಹೇಳಿದೆನು ಬ್ರಹ್ಮಾಂಡಗಳ ಸಂಖ್ಯೆಯನ್ನು, ವೈಕುಂಠಕೈಲಾಸಗಳ ರಚನೆ, ಇವುಗಳ ಸರ್ವ ವಿಷಯಕ್ಕೆ ಸವಿಸ್ತಾರವಾಗಿ ವರ್ಣನೆಯನ್ನು ಕಥಿಸಿರುವೆನು ।೨೭೦॥ ಈಗ ಬೇರೆ ಬೇರೆ ಲೋಕಗಳ ಬಗ್ಗೆ ಹೇಳಲಾಯಿತು. ಆ ಲೋಕಗಳನ್ನು ಪ್ರಾಪ್ತಮಾಡಿಕೊಳ್ಳುವ ಅಧಿಕಾರಿಗಳಾರು? ಹೀಗೆ ನಾನಾವಿಧ ಪ್ರಶ್ನೆಗಳು ನಿನ್ನ ಮನದಲ್ಲಿ ನಿರ್ಮಾಣವಾಗಬಹುದು. ಆದ್ದರಿಂದ ಆ ಪ್ರಶ್ನೆಗಳ ಉತ್ತರವನ್ನು ನಾನು ನಿನಗೆ ಹೇಳುವೆನು. ಅದಕ್ಕಾಗಿ ನೀನು ಲಕ್ಷಪೂರ್ವಕವಾಗಿ ಶ್ರವಣವನ್ನು ಮಾಡು ।೨೭೧॥ ಮಹರ್ಲೋಕ, ಜನಲೋಕ, ಸತ್ಯಲೋಕ ಮತ್ತು ಯಾವುದರ ರಚನೆಯು ಅತ್ಯಂತ ಆಶ್ಚರ್ಯಕಾರಕವಾಗಿರುವುದೋ, ಅಂತಹ ವೈಕುಂಠದ ಪ್ರಾಪ್ತಿಯನ್ನು ಯಾರು ಮಾಡಿಕೊಳ್ಳುವರೆಂಬ ವಿಷಯಕ್ಕೆ ಯದುನಾಯಕ ದ್ವಾರಕಾಧೀಶನಾದ ಭಗವಾನ ಶ್ರೀಕೃಷ್ಣನು ಈಗ ಹೇಳುತ್ತಿರುವನು ।೨೭೨॥

ತನ್ನ ಚಿತ್ತವನ್ನು ಸ್ಥಿರಮಾಡುವುದಕ್ಕಾಗಿ ಪ್ರಾಣಾಪಾನವನ್ನು ಸಮ ಮಾಡುವ ಸಾಧಕರು ಮೂಲಾಧಾರಾದಿ ಆರು ಚಕ್ರಗಳ ಭೇದವನ್ನು ಮಾಡಿ ಆತ್ಮಸ್ವರೂಪಪರ್ಯಂತದವರೆಗೆ ಹೋಗಿ ಮುಟ್ಟಿಕೊಳ್ಳುವರು ।೨೭೩॥ ಆದರೆ ಮಧ್ಯದಲ್ಲಿಯೇ ಅವರ ಆಯುಷ್ಯವು ಮುಗಿದು ಅವರಿಗೆ ಮರಣವು ಪ್ರಾಪ್ತವಾದರೆ ಆಗ ಆ ಯೋಗಿ ಜನರು ಮಹರ್ಲೋಕ, ಜನೋಲೋಕ ಇತ್ಯಾದಿ ಮೇಲಿನ ಲೋಕಗಳಲ್ಲಿ ಹೋಗಿ ಅಲ್ಲಿರುವರು ।೨೭೪॥ ಯಾರು ಗೃಹಸ್ಥಾಶ್ರಮದಲ್ಲಿದ್ದೂ ಕೂಡ ಬ್ರಹ್ಮಚಾರೀ ವ್ರತವನ್ನು ಪಾಲಿಸುವರೋ, ಯಾರು ಸ್ವಪ್ನದಲ್ಲಿಯೂ ಕೂಡ ಎಂದಿಗೂ ಸ್ತ್ರೀಯಳನ್ನು ಸ್ಪರ್ಶಮಾಡುವುದಿಲ್ಲವೋ, ಯಾರು ಭಿಕ್ಷೆಯಿಂದ ತಮ್ಮ ಜೀವಿತವನ್ನು ನಡೆಸುತ್ತಿರುವರೋ ।೨೭೫॥ ಯಾರು ಸದಾವಕಾಲದಲ್ಲಿ ದೃಢವಾದ ವೈರಾಗ್ಯವನ್ನು ಧರಿಸಿರುವರೋ, ಅಥವಾ ಯಾರು ಭಿಕ್ಷೆಗೆ ಸ್ಪರ್ಶ ಕೂಡ ಮಾಡುವುದಿಲ್ಲವೋ ಮತ್ತು ಆತ್ಮಜ್ಞಾನದ ಪೂರ್ಣಪ್ರಾಪ್ತಿಗಾಗಿ ಸದ್ಗುರುಗಳ ಮನೋಭಾವದಿಂದ ಸೇವೆಯನ್ನು ಮಾಡುತ್ತಿರುವರೋ, ।೨೭೬॥ ಅಂತಹ ಬ್ರಹ್ಮಚಾರೀ ಜನರಿಗೆ ಆತ್ಮಜ್ಞಾನವು ಪ್ರಾಪ್ತವಾಗುವ ಸಮಯ ಬಂದಾಗ ಒಂದುವೇಳೆ ಮರಣವು ಒದಗಲು ಅವರು ಮಹರ್ಜನಾದಿ ಲೋಕಗಳನ್ನು ಪಡೆಯುವರು ।೨೭೭॥ ಯಾರು ಗೃಹಸ್ಥಾಶ್ರಮದಲ್ಲಿ ತತ್ಪರರಾಗಿ ಇರುವರೋ, ಅಗ್ನಿಸೇವೆಗಾಗಿ ಅಗ್ನಿಹೋತ್ರಗಳನ್ನು ಮಾಡುವರೋ, ಯಾರು ಸ್ವಧರ್ಮಗಳ ಆಚರಣೆಯನ್ನು ಮಾಡಿ ಚಿತ್ತವನ್ನು ಶುದ್ಧಗೊಳಿಸುವರೋ, ಯಾರು ಬ್ರಾಹ್ಮಣರ ಮತ್ತು ದೇವರ ಸೇವೆಯನ್ನು ಮಾಡುವರೋ ।೨೭೮॥

ಗುರುಭಜನೀ ।।೨೭೯।। ಗುರುಕೃಪಾ ಸಾಧುನಿ ಜ್ಞಾನ । ಪಾವಾವೇ ಬ್ರಹ್ಮ ಸನಾತನ । ತಂವ ವೇಚಲೇ ಆಯುಷ್ಯಧನ । ಅಂಗೀ ನಿಧನ ಆದಳಲೇ ।।೨೮೦।। ತೇಣೇ ಖೋಳಂಬಲೀ ಬ್ರಹ್ಮಪ್ರಾಪ್ತೀ । ಪರೀ ಊರ್ಧ್ವಲೋಕೀ ಹೋಯ ಗತೀ । ಜೈಸೀ ಉಪಾಸನಾ ವಿರಕ್ತೀ । ತೇಣೇ ತಾರತಮ್ಯೇ ಜಾತೀ ಮಹರ್ಜನಾದಿ ಲೋಕೀ ।।೨೮೧।। ಜೇ ವನವಾಸೀ ವಾನಪ್ರಸ್ಥ । ಜೇ ವೈರಾಗ್ಯೇ ಅತಿವಿರಕ್ತ । ಜೇ ಕಂದಮೂಳಫಳೀ ತೃಪ್ತ । ಜೇ ಸದಾ ನೇಮಸ್ತ ಆಶ್ರಮಧರ್ಮೀ ।।೨೮೨।। ವರ್ಷಾಕಾಳೀ ಆಸಾರೀ ರಾಹೇ । ಹೇಮಂತೀ ಜಳಾಶಯೇ । ಉಷ್ಣಕಾಳೀ ಪಂಚಾಗ್ನಿ ಸಾಹೇ । ತಪಶ್ಚರ್ಯಾ ವಾಹೇ ಅತಿನಿಷ್ಠಾ ।।೨೮೩।। ಶರೀರಶೋಷಣಾಚೇ ಪಾಹೇ । ಸರ್ವಥಾ ನ ಧರೀ ಭಯೇ । ಸ್ವಾರ್ಥಾಚೇನಿ ಲವಲಾಹೇ । ತಪೋನಿಷ್ಠಾ ಸಾಹೇ ದಾರುಣ ।।೨೮೪।। ವೈರಾಗ್ಯ ಸಾಧೂನಿ ಪೂರ್ಣ । ಕರಾವೇ ಸನ್ಯಾಸ ಗ್ರಹಣ । ಸಾಧಾವಯಾ ಬ್ರಹ್ಮಜ್ಞಾನ । ತೇಚಿ ಕಾಳೀ ಮರಣ ವೋಢವಲೇ ।।೨೮೫।। ಐಸೇನಿ ದೇಹಾಂತಸ್ಥಿತೀ । ತ್ಯಾಸೀ ಊರ್ಧ್ವಲೋಕೀ ಹೊಯ ಗತೀ । ಮಹರ್ಜನತಪೋಲೋಕಪ್ರಾಪ್ತೀ । ತಾರತಮ್ಯಸ್ಥಿತೀ ಉಪಾಸನಾ ।।೨೮೬।। ಜೋ ಸಮೂಳಸಂಕಲ್ಪಸನ್ಯಾಸೀ । ಲೋಕಲೋಕಾಂತರ ನ ಘಡೇ ತ್ಯಾಸೀ । ಹೇ ನ ಟಕೇಚಿ ಗಾ ಜಯಾಸೀ । ಆಣಿ ಝಾಲೇ ಸನ್ಯಾಸೀ ವಿಧಿಯುಕ್ತ ।।೨೮೭।। ಜೇ ಕಾ ಪೋಟೀ ಹೂನ ಅತಿವಿರಕ್ತ । ಸ್ವಪ್ನೀ ಧಾತೂಂಸೀ ನ ಲಾವಿತೀ ಹಾತ । ಜೇ ಯತಿಧರ್ಮೀ ಸದಾ ನಿರತ । ಜೇ ಸದಾ ಜಪತ ಪ್ರಣವಾತೇ ।।೨೮೮।। ಅಂಗೀಕಾರಿಲೇ ಆಶ್ರಮ ವಿಧೀ । ಉಬಗೂ ನ ಮಾನೀ ಜೋ ತ್ರಿಶುದ್ಧೀ । ಮರಣೀ ಡಂಡಳೀನಾ ಬುದ್ಧೀ । ತ್ಯಾ ಗಮನಸಿದ್ಧೀ ಸತ್ಯಲೋಕೀ ।।೨೮೯।। ಐಸೇ ಸತ್ಯಲೋಕಾತೇ ಪಾವತೀ । ತೇಥಿಲ್ಯಾ ಭೋಗಾಂಚೀ ಜ್ಯಾ ವಿರಕ್ತೀ । ತೇ ಬ್ರಹ್ಮಾಸವೇ ಮುಕ್ತ ಹೋತೀ । ಯೇರ ತೇ ಯೇತೀ ಮಾಘಾರೇ ।।೨೯೦।। ಜ್ಯಾಂಸಿ ಸತ್ಯಲೋಕೀ ಭೋಗಾಸಕ್ತಿ । ತೇಹೀ ಖಚೋನಿ ಮಾಘಾರೇ ಯೇತೀ । ಇತರ ಲೋಕಾಂಚೀ ಕೋಣ ಗತೀ । ಪುನರಾವೃತ್ತೀ ಸೋಡಿನಾ ।।೨೯೧।।

ಜೇಥವರೀ ಭೋಗಾಸಕ್ತೀ । ತೇಥವರೀ ಪುನರಾವೃತ್ತೀ । ಜೇಥ ಭೋಗಾಚೀ ನಿವೃತ್ತೀ । ತೇಥ ಚಾರೀ ಮುಕ್ತೀ

ಯಾರು ಅತ್ಯಂತ ಭಾವಿಕರಾಗಿರುವರೋ ಮತ್ತು ಪ್ರಾಣಿಮಾತ್ರರಲ್ಲಿ ದಯಾವಂತರಾಗಿರುವರೋ, ಯಾರು ಯಾವಾಗಲೂ ಸತ್ಯವನ್ನು ನುಡಿಯುವರೋ, ಸಾತ್ವಿಕ ಆಚರಣೆಗಳನ್ನು ಆಚರಿಸುವರೋ, ಯಾರು ಆತ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವರೋ, ಯಾರು ಗುರುಸೇವೆಯಲ್ಲಿ ತತ್ಪರರಾಗಿರುವರೋ ।।೨೭೯।। ಯಾರು ಗುರುಕೃಪೆಯಿಂದ ಸನಾತನ ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾಗ ಆಯುಷ್ಯವು ಮುಗಿಯಲು ಅವರಿಗೆ ಬ್ರಹ್ಮಪ್ರಾಪ್ತಿಯ ಅಡಚಣೆಯಲ್ಲಿ ನಿಧನರಾದರೆ ।।೨೮೦।। ಹೀಗೆ ಅಡೆತಡೆಯಾಗಿದ್ದಕ್ಕೆ ಅವರು ಊರ್ಧ್ವಲೋಕಕ್ಕೆ ಹೋಗುವರು ಮತ್ತು ಅವರ ಉಪಾಸನೆ ಮತ್ತು ವಿರಕ್ತಿಯು ಯಾವ ಪ್ರಕಾರದಿಂದಿರುವುದೋ, ತದನುಸಾರವಾಗಿ ಅವರು ಮಹರ್ಜನಾದಿ ಲೋಕಗಳಿಗೆ ಹೋಗಿ ಮುಟ್ಟಿಕೊಳ್ಳುವರು ।।೨೮೧।। ಯಾರು ವಾನಪ್ರಸ್ಥ ಆಶ್ರಮವನ್ನು ಆಚರಿಸುತ್ತ ಅರಣ್ಯದಲ್ಲಿರುವರೋ, ಯಾರು ವೈರಾಗ್ಯ ತಾಳಿ ಅತ್ಯಂತ ವಿರಕ್ತರಾಗಿರುವರೋ, ಯಾರು ಕಂದಮೂಲ ಫಲಾಹಾರದೊಂದಿಗೆ ತಮ್ಮ ಜೀವನವನ್ನು ನಡೆಸುವರೋ, ಮತ್ತು ಯಾರು ಸದಾಸರ್ವಕಾಲದಲ್ಲಿ ತಮ್ಮ ಆಶ್ರಮಧರ್ಮವನ್ನು ಪರಿಪಾಲಿಸುತ್ತಿರುವರೋ ।।೨೮೨।। ಯಾವ ಸಾಧಕರು ಮಳೆಗಾಲದಲ್ಲಿ ಪರ್ಜನ್ಯ ವೃಷ್ಟಿಯಲ್ಲಿ ಕುಳಿತುಕೊಳ್ಳುವರೋ, ಚಳಿಗಾಲದಲ್ಲಿ ತಣ್ಣೀರಿನಲ್ಲಿ ಕುಳಿತುಕೊಳ್ಳುವರೋ, ಅತಿಶಯ ಉಗ್ರ ಬೇಸಿಗೆಯಲ್ಲಿ ಯಾರು ಪಂಚಾಗ್ನಿ ಸಾಧನೆಯನ್ನು ಮಾಡುವರೋ, ಹೀಗೆ ಯಾರು ಅತ್ಯಂತ ನಿಷ್ಠೆಯಿಂದ ತಪವನ್ನಾಚರಿಸುವರೋ ।।೨೮೩।। ತಮ್ಮ ಶರೀರವು ಇದರಿಂದ ಕ್ಷೀಣವಾಗುವುದೆಂಬ ಯಾವ ಭಯವನ್ನು ಅಣುಮಾತ್ರವೂ ಹಿಡಿಯದೇ ಸ್ವಾರ್ಥಸಾಧನೆಯಾದ ಆತ್ಮಹಿತವನ್ನು ಸಾಧಿಸುವ ಉತ್ಕಂಠದಿಂದ ತೀವ್ರ ತಪಶ್ಚರ್ಯವನ್ನು ಸಹಿಸುತ್ತಿರುವರೋ ।।೨೮೪।। ಅಥವಾ ಪರಿಪೂರ್ಣವಾದ ವೈರಾಗ್ಯದ ಆಧಾರದಿಂದ ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕಾಗಿ ಸನ್ಯಾಸವನ್ನು ಸ್ವೀಕರಿಸುವರೋ, ಹೀಗಿರುವ ಸಮಯದಲ್ಲಿ ಒಂದುವೇಳೆ ಅವರಿಗೆ ಮರಣವು ಒದಗಿದರೆ ।।೨೮೫।। ಅಂತ್ಯಕಾಲದ ನಂತರ ಅವರಿಗೆ ಊರ್ಧ್ವಲೋಕ ಗಮನವಾಗುವುದು ಮತ್ತು ಅವರ ಉಪಾಸನೆಯ ಪ್ರಕಾರವಾಗಿ ಮಹರ್ಜನಲೋಕಗಳ ಪ್ರಾಪ್ತಿಯಾಗುವುದು ।।೨೮೬।। ಯಾರು ಸರ್ವ ಸಂಕಲ್ಪಗಳ ಸನ್ಯಾಸ ಮಾಡುವರೋ, ಅವರಿಗೆ ಇತರ ಲೋಕಗಳಿಗೆ ಹೋಗುವ ಕಾರಣವಿರುವುದಿಲ್ಲ. ಅವರು ತತ್ಕಾಲದಲ್ಲಿ ಮುಕ್ತರಾಗುವರು. ಆದರೆ ಯಾರಿಗೆ ಈ ಸಾಧನೆಯು ಸಾಧಿಸುವುದಿಲ್ಲವೋ, ಅವರು ಶಾಸ್ತ್ರಸಿದ್ಧ ವಿಧಿಪ್ರಮಾಣದಂತೆ ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು ।।೨೮೭।। ಯಾರು ತಮ್ಮ ಅಂತಃಕರಣದಲ್ಲಿ ಅತ್ಯಂತ ವಿರಕ್ತರಾಗಿರುವರೋ, ಸ್ವಪ್ನದಲ್ಲಿಯೂ ಕೂಡ ಬೆಳ್ಳಿಬಂಗಾರಾದಿ ಸ್ಪರ್ಶ ಮಾಡುವುದಿಲ್ಲವೋ, ಸದಾ ಸರ್ವಕಾಲದಲ್ಲಿ ಸನ್ಯಾಸಧರ್ಮದಲ್ಲಿಯೇ ತಲ್ಲೀನರಾಗಿರುವರೋ ಮತ್ತು ಸತತವಾಗಿ ಪ್ರಣವವನ್ನು ಉಚ್ಚರಿಸುತ್ತಿರುವರೋ ।।೨೮೮।। ಒಂದು ಸಾರೆ ಸ್ವೀಕರಿಸಿದ ಆಶ್ರಮ ವಿಧಿಯಲ್ಲಿ ಯಾರು ಎಂದಿಗೂ ಬೇಸರಪಡುವುದಿಲ್ಲವೋ, ಯಾರ ಬುದ್ಧಿಯು ಮರಣಕಾಲದಲ್ಲಿಯೂ ಕೂಡ ವಿಚಲಿತವಾಗುವುದಿಲ್ಲವೋ, ಇವರಿಗೆ ಸತ್ಯಲೋಕಕ್ಕೆ ಹೋಗಲು ಸಾಧ್ಯವಾಗುವುದು ।।೨೮೯।। ಈ ಪ್ರಕಾರದ ಸಾಧಕರು ಸತ್ಯಲೋಕವನ್ನು ಸೇರುವರು. ಆದರೆ ಅಲ್ಲಿನ ಭೋಗವಿಲಾಸಗಳಲ್ಲಿ ಯಾರಲ್ಲಿ ವಿರಕ್ತಿಯಾಗುವುದೋ ಅವರು ಬ್ರಹ್ಮದೇವರ ಜೊತೆಯಲ್ಲಿ ಮುಕ್ತರಾಗುವರು ಮತ್ತು ಇತರರ ಪುಣ್ಯಕ್ಷಯವಾಗುತ್ತಲೇ ಮೃತ್ಯುಲೋಕಕ್ಕೆ ಮರಳಿ ಬರುವರು ।।೨೯೦।। ಯಾರಿಗೆ ಸತ್ಯಲೋಕದಲ್ಲಿನ ಭೋಗಗಳಲ್ಲಿ ಆಸಕ್ತಿವಿರುವುದೋ, ಅವರೂ ಕೂಡ ನಿಶ್ಚಯವಾಗಿ ಕೆಳಗೆ ಬರುವರು. ಅಂದಮೇಲೆ ಇತರ ಲೋಕಗಳ ಯಾವ ಕಥೆ? ಅವರಿಗೆ ಜನ್ಮಮರಣಗಳು ಬಿಡುವುದೇ ಇಲ್ಲ ।।೨೯೧।।

ಆಂದಣ್ಯಾ ।೯೨॥ ಜ್ಯಾ ಲೋಕೀ ಜ್ಯಾ ಭೋಗವಿರಕ್ತೀ । ತೇಥೂನ ತೇ ಪುಢಾರೇ ಜಾತೀ । ಜೇ ಲೋಕೀ ಜ್ಯಾ ಭೋಗಾಸಕ್ತೀ । ತೇ ಖಚೋನಿ ಪಡತೀ ಭೂಲೋಕೀ ।೯೩॥ ತೈಸೀ ನವ್ಹೇ ಮಾಝೀ ಭಕ್ತೀ । ಭಕ್ತಾ ನಾಹೀ ಇತರ ಪ್ರಾಪ್ತೀ । ಮದ್ಭಕ್ತಾ ಮಾಝೀ ಗತೀ । ಜಾಣ ನಿಶ್ಚಿತೀ ಉದ್ಧವಾ ।೯೪॥ ಜೇ ಸಕಾಮ ಸೇವಾ ಕರಿತೀ । ತ್ಯಾಂಸೀ ಕಾಮನಾಫಳೀ ಪಡೇ ವಸ್ತೀ । ಜ್ಯಾಂಸೀ ನಿಷ್ಕಾಮ ಮಾಝೀ ಭಕ್ತೀ । ತ್ಯಾಂಸೀ ಮಾಝೀ ಪ್ರಾಪ್ತೀ ಅನನ್ಯ ।೯೫॥ ಸಕಾಮ ಭಕ್ತಾಂಚೇ ಪುರವೂನಿ ಕಾಮ । ತ್ಯಾಂಸೀ ಮೀ ಕರೀ ನಿತ್ಯ ನಿಷ್ಕಾಮ । ನಿಜಭಕ್ತಾಂಸೀ ನಿಜಧಾಮ । ಮೀ ಪುರುಷೋತ್ತಮ ಪಾವವೀ ।೯೬॥ ಯಾಲಾಗೀ ಗೋಪೀಂಚೀ ಕಾಮಾಸಕ್ತಿ । ಮ್ಯಾಂಚಿ ಆಣೂನಿ ನಿಷ್ಕಾಮಸ್ಥಿತೀ । ತ್ಯಾಂಸೀ ದಿಧಲೀ ಸಾಯುಜ್ಯಮುಕ್ತೀ । ಜಾಣ ನಿಶ್ಚಿತೀ ಉದ್ಧವಾ ।೯೭॥ ಮ್ಯಾ ಗೋಪಿಕಾಂಸೀ ಕಾಮೂ ಕೇಲಾ । ಕೀ ನಿಃಶೇಷ ಕಾಮೂ ತ್ಯಾಂಚಾ ಹರಿಲಾ । ನ ವಿಚಾರಿತಾ ಯಾ ಬೋಲಾ । ಕೃಷ್ಣ ವ್ಯಭಿಚಾರಲಾ ಮೂರ್ಖ ಮ್ಹಣತೀ ।೯೮॥ ಸಲೋಕತಾ ಆವಡೇ ಭಕ್ತಾಂಸೀ । ತೈ ಮೀ ಕರೀ ವೈಕುಂಠವಾಸೀ । ಭಕ್ತ ಮಾಗೇ ಸಮೀಪತೇಸೀ । ಕರೀ ಮೀ ತಯಾಸೀ ಜೀವಲಗ ।೯೯॥ ಹಿತಗುಜ ಆಳೋಂಚ್ಯಾಸೀ । ಹೃದಯೀಂಚೇ ಗೋಡ ಸಾಂಗಾವಯಾಸೀ। ಉದ್ಧವಾ ತೂ ಜೈಸಾ ಆವಡಸೀ । ಐಶೀಚ ತ್ಯಾಂಸೀ ಕರೀ ಪ್ರೀತಿ ।೧೦೦॥ ಭಕ್ತ ಮಾಗೇ ಸರೂಪತಾ । ತ್ಯಾಸೀ ಮೀ ದೇ ಚತುರ್ಭುಜತಾ । ಶಂಖ ಚಕ್ರಾದಿ ಸಾಯುಧತಾ । ಘನಃಶ್ಯಾಮತಾ ಸುರೇಖ ।೧೦೧॥ ಮುಕುಟ ಕುಂಡಲೇ ಮೇಖಳಾ । ಕಾಂಸೇ ಮಿರವೇ ಸೋನಸಳಾ । ವಾಂಕೀ ತೋಡರೂ ಚರಣಕಮಳಾ । ಕೌಸ್ತುಭ ಗಳಾ ಮತ್ಸಮ ।೧೦೨॥ ಠಾಣಮಾಣ ಗುಣಲಕ್ಷಣ । ವೀರ್ಯ ಶೌರ್ಯ ಗಾಂಭೀರ್ಯ ಪೂರ್ಣ । ರೂಪರೇಖಾ ಸಮಸಮಾನ । ದೋಘೇಹೀ ಅನನ್ಯ ಸರೂಪತಾ ।೧೦೩॥ ರಮಾ ದೋಘಾಂಸೀ ಏಕತ್ರ ದೇಖೇ । ದೇವೋ ಕೋಣ ಹೇ ತೇ ನೋಳಖೇ । ಪಾರ್ಷದಕ್ರಿಯಾ ಠಕಲೀ ಠಾಕೇ । ಕೋಣಾಸೀ ಸೇವಕೇ ಸೇವಾವೇ ।೧೦೪॥

ಛತ್ರದರೂ ಚವಕೇ ಚಿತ್ತೀ । ಕೋಣಾವರೀ ಧರೂ ಛತ್ರೀ। ಚವರಧರೇ ಚವರೇ ಹಾತೀ । ಕೋಣಾಪ್ರತೀ

ಎಲ್ಲಿಯವರೆಗೆ ಭೋಗಾಸಕ್ತಿಯು ಇರುವುದೋ, ಅಲ್ಲಿಯವರೆಗೆ ಪುನರಾವೃತ್ತಿಯು ತಪ್ಪದೇ ಆಗುತ್ತಿರುವುದು. ಆದರೆ ಎಲ್ಲಿ ಭೋಗಗಳ ಇಚ್ಛೆಯು ಸಮಾಪ್ತಿಯಾಗಿರುವುದೋ, ಅಲ್ಲಿ ನಾಲ್ಕು ಮುಕ್ತಿಗಳು ಕಾಣಿಕೆ ಕೊಟ್ಟ ದಾಸಿಯರಾಗಿ ರುವರು ।೯೨॥ ಯಾವ ಲೋಕದಲ್ಲಿ ಯಾರಿಗೆ ಅಲ್ಲಿನ ಭೋಗಗಳಲ್ಲಿ ವಿರಕ್ತಿಯು ಉಂಟಾದರೆ ಅವರು ಅಲ್ಲಿಂದ ಮುಂದಕ್ಕೆ ಹೋಗುವರು. ಯಾವ ಲೋಕದಲ್ಲಿ ಯಾರಿಗೆ ಅಲ್ಲಿನ ಭೋಗಗಳಲ್ಲಿ ಆಸಕ್ತಿಯು ಬೆಳೆದರೆ ಅಲ್ಲಿಂದ ಅವರು ನಿಶ್ಚಯವಾಗಿ ಮೃತ್ಯುಲೊಕಕ್ಕೆ ತಳ್ಳಲ್ಪಡುವರು ।೯೩॥ ಆದರೆ ನನ್ನ ಭಕ್ತಿಯು ಈ ಪ್ರಕಾರವಾಗಿ ಇರುವುದಿಲ್ಲ. ಈ ಭಕ್ತರಿಗೆ ಇನ್ನೊಂದು ಬೇರೆ ಲೋಕಕ್ಕೆ ಹೋಗಬೇಕಾಗುವುದಿಲ್ಲ. ನನ್ನ ಭಕ್ತರು ನನ್ನನ್ನೇ ಪ್ರಾಪ್ತಮಾಡಿ ಕೊಳ್ಳುವರು. ಇದನ್ನು ನೀನು ನಿಶ್ಚಯಪೂರ್ವಕವಾಗಿ ತಿಳಿ ।೯೪॥ ಯಾರು ಫಲದ ಇಚ್ಛೆಯನ್ನು ಹಿಡಿದು ನನ್ನ ಭಕ್ತಿಯನ್ನು ಮಾಡುತ್ತಿದ್ದರೆ, ಅವರಿಗೆ ಇಷ್ಟ ಫಲದಲ್ಲಿ ಇರಬೇಕಾಗುವುದು. ಯಾರು ನನ್ನ ನಿಷ್ಕಾಮ ಭಕ್ತಿಯನ್ನು ಮಾಡುತ್ತಿದ್ದರೆ ಅವರಿಗೆ ನನ್ನ ಅನನ್ಯ ಪ್ರಾಪ್ತಿಯಾಗುವುದು ।೯೫॥ ಸಕಾಮ ಭಕ್ತರ ಇಚ್ಛೆಯನ್ನು ನಾನು ಪೂರ್ಣಗೊಳಿಸಿ ಅವರನ್ನು ಸದೈವ ನಿಷ್ಕಾಮರನ್ನಾಗಿ ಮಾಡುವೆನು. ಆ ಯಾವ ನನ್ನ ಭಕ್ತರಿಗೆ ನನ್ನ ನಿಜಧಾಮಕ್ಕೆ ಒಯ್ಯುವೆನು ।೯೬॥ ಅದಕ್ಕಾಗಿ ಹೇ ಉದ್ಧವನೇ, ನಾನು ಗೋಪಿಕೆಯರ ಕಾಮಾಸಕ್ತಿಯನ್ನು ನಿವಾರಣೆಗೊಳಿಸಿ ಅವರಿಗೆ ನಿಷ್ಕಾಮರನ್ನಾಗಿ ಮಾಡಿದೆನು. ಹಾಗೆಯೇ ಅವರಿಗೆ ಸಾಯುಜ್ಯ ಮುಕ್ತಿಯನ್ನು ಕೊಟ್ಟೆನು ।೯೭॥ ಹೇ ಉದ್ಧವಾ, ನಾನು ಗೋಪಿಕೆಯರಲ್ಲಿ ಕಾಮವಿಲಾಸವನ್ನು ಮಾಡಿ ಅವರ ಕಾಮವನ್ನು ಪರಿಪೂರ್ಣವಾಗಿ ನಷ್ಟಗೊಳಿಸಿದೆನು. ಈ ವಿಚಾರವನ್ನು ಮಾಡದೇ ಮೂರ್ಖ ಜನರು ಕೃಷ್ಣನು ವ್ಯಭಿಚಾರವನ್ನು ಮಾಡಿದನು ಎಂದು ಹೇಳುತ್ತಿರುವರು ।೯೮॥ ಯಾವ ಭಕ್ತರಿಗೆ ಸಲೋಕತೆಯು ಪ್ರಿಯವಾದರೆ ಅವರಿಗೆ ನಾನು ವೈಕುಂಠದಲ್ಲಿ ವಾಸ್ತವ್ಯ ಮಾಡುವುದಕ್ಕಾಗಿ ಒಯ್ಯುವೆನು. ಭಕ್ತರು ಒಂದು ವೇಳೆ ಸಮೀಪತಾ ಮುಕ್ತಿಯನ್ನು ಕೇಳಿದರೆ ನಾನು ಅವರಿಗೆ ನನ್ನ ಪ್ರಿಯಮಿತ್ರರನ್ನಾಗಿ ಮಾಡುವೆನು ।೯೯॥ ಹೇ ಉದ್ಧವಾ, ಮನದಲ್ಲಿನ ಹಿತವಾಗಿರುವ ಗುಟ್ಟು ಹಾಗೂ ಹೃದಯದಲ್ಲಿನ ಪ್ರಿಯವಾಗಿರುವ ಮಾತುಗಳನ್ನು ಹೇಳಲು ನೀನು ನನಗೆ ಹೇಗೆ ಪ್ರಿಯನೋ, ಅದರಂತೆಯೇ ಭಕ್ತರೂ ಕೂಡ ನನಗೆ ಪ್ರಿಯರಾಗಿರುವರು ।೧೦೦॥ ಭಕ್ತರು ಒಂದುವೇಳೆ ಸರೂಪತಾ ಮುಕ್ತಿಯನ್ನು ಬೇಡಲು ನಾನು ಅವರಿಗೆ ಚತುರ್ಭುಜರನ್ನಾಗಿ ಮಾಡುವೆನು. ಹಾಗೂ ಶಂಖ ಚಕ್ರಾದಿ ಆಯುಧಗಳನ್ನು ಕೊಡುವೆನು. ಮೇಘದಂತೆ ಸುಂದರವಾಗಿರುವ ಶ್ಯಾಮ ವರ್ಣವನ್ನು ಕೊಡುವೆನು ।೧೦೧॥ ಅವರಿಗೆ ನಾನು ನನಗಿರುವಂತೆ ಕಿರೀಟ, ಕುಂಡಲಗಳು, ನಡುಪಟ್ಟಿ, ಪೀತಪೀತಾಂಬರ, ಕಾಲುಗಳಲ್ಲಿ ತೋಡೆಗಳು, ಕೊರಳಲ್ಲಿ ಕೌಸ್ತುಭಮಣಿಗಳ ಮಾಲೆ, ಎಲ್ಲವೂ ನನ್ನ ಸಮಾನವಾಗಿ ಕೊಡುವೆನು ।೧೦೨॥ ಅವರ ಶರೀರಗಳ ರಚನೆಯನ್ನು ನನ್ನನ್ನೇ ಹೋಲುವಂತೆ ಮಾಡುವೆನು. ಅವರಿಗೆ ವೀರ್ಯ, ಶೌರ್ಯ, ಗಾಂಭೀರ್ಯ, ರೂಪರೇಖೆ ಇತ್ಯಾದಿಗಳನ್ನು ನನಗಿರುವಂತೆಯೇ ಕೊಟ್ಟು ಅವರು ಮತ್ತು ನಾನು ಪರಸ್ಪರರಲ್ಲಿ ಎಲ್ಲವೂ ಸಮವಾಗಿಯೇ ಕಾಣುತ್ತಿರುವೆವು ।೧೦೩॥ ಲಕ್ಷ್ಮಿಗೆ ನಾನು ಮತ್ತು ನನ್ನ ಭಕ್ತರು ಸಮವಾಗಿಯೇ ತೋರುವೆವು. ನಮ್ಮಲ್ಲಿ ನಾನು ಯಾರು? ಮತ್ತು ಭಕ್ತರು ಯಾರು? ಎಂಬುವುದನ್ನು ಆಕೆಗೆ ಕಂಡು ಹಿಡಿಯಲು ಆಗುವುದಿಲ್ಲ. ಸೇವಕರ ಸೇವಾ ಕಾರ್ಯವೂ ಕೂಡ ನಿಂತುಬಿಡುವುದು. ಕಾರಣ ಅವರು ಯಾರನ್ನು ಕುರಿತು ಸೇವೆಯನ್ನು ಮಾಡಬೇಕು ? ।೧೦೪॥

ವಿಂಜಾವೇ ।।೩೦೫।। ನಮನಾ ಯೇತೀ ಬ್ರಹ್ಮಾದಿ ದೇವ । ತೇಹೀ ಮಾನಿತೀ ಅತಿ ಅಪೂರ್ವ । ದೋಘಾಮಾಜೀ ಕೋಣ ಆದಿದೈವ । ತ್ಯಾಸೀಹೀ ಸ್ವಯಮೇವ ಕಳೇನಾ ।।೩೦೬।। ಜೇವೀ ದೀಪೇ ದೀಪೂ ಲಾವಿಲಾ । ನ ಕಳೇ ವಡೀಲ ಕೋಣ ಧಾಕುಲಾ । ತೇವೀ ಮಾಝೀ ಸರೂಪತಾ ಪಾವಲಾ । ನ ವಚೇ ಓಳಖಿಲಾ ಆನಾಸೀ ।।೩೦೭।। ಜೇವೀ ಆರಿಶಾಚೇ ಪ್ರತಿಬಿಂಬ । ದಿಸೇ ಸಮರೂಪೇ ಸ್ವಯಂಭ । ತೈಶೀ ಸರೂಪತೇಚೀ ಶೋಭ । ಸಮ ವಿಡಂಬ ದೋಹೀಂಚಾ ।।೩೦೮।। ದೇವೋ ಹೋಊನಿಯಾ ಪ್ರಸನ್ನ । ಆಪಲೀ ಸರೂಪತಾ ದೇ ಸಂಪೂರ್ಣ । ನೇದಿ ಹೃದಯೀಂಚಾ ದ್ವಿಜಚರಣ । ಶ್ರೀವತ್ಸಲಾಂಛನ ಅವಿನಾಶೀ ।।೩೦೯।। ಶ್ರೀವತ್ಸ ಚಿನ್ಹ ದ್ಯಾವಯಾಸೀ ಪಾಹೀ । ವಿಷ್ಣು ಮ್ಹಣೇ ಮಜ ಸಾಮರ್ಥ್ಯ ನಾಹೀ । ತೇ ಅಸೇ ಬ್ರಾಹ್ಮಣಾಚ್ಯಾ ಪಾಯೀ । ತ್ಯಾಚಾ ಚರಣ ಹೃದಯೀ ಧರಿಲ್ಯಾ ಲಾಭೇ ।।೩೧೦।। ಸರೂಪತೇ ಮಾಜೀ ಜಾಣ । ದೇವಾ-ಭಕ್ತಾಂಚೀ ಹೇ ಖೂಣ । ಜ್ಯಾಚೇ ಹೃದಯೀ ಶ್ರೀವತ್ಸಲಾಂಛನ । ತೋ ಸ್ವಾಮೀ ಶ್ರೀ ವಿಷ್ಣೂ ಜಾಣ ಸರ್ವಾಂಚಾ ।।೩೧೧।। ಐಶೀ ಸರೂಪತಾ ಜರೀ ಝಾಲೀ ಪ್ರಾಪ್ತ । ತರೀ ಹಾ ದೇವೋ ಮೀ ಏಕ ಭಕ್ತ । ಹಾ ಭಿನ್ನಭಾವಾಚಾ ಭೇದ ಕಿಂತ । ತ್ಯಾ ಆಂತ ಉರಲಾ ಅಸೇ ।।೩೧೨।। ದೇವಭಕ್ತಾಮಾಜೀ ಭೇದು । ಭಿನ್ನ ಸರೂಪತಾಸಂವಾದೂ । ಜಂವ ನಾಹೀ ಅದ್ವಯಬೋಧೂ । ತಂವ ಪರಮಾನಂದೂ ಪ್ರಕಟೇನಾ ।।೩೧೩।। ಸಾಂಡೂನಿ ಭಿನ್ನ ಭೇದವಾರ್ತಾ । ಭಕ್ತ ಮಾಗೇ ಸಾಯುಜ್ಯತಾ । ತೇ ಗೋಡ ನಿರೂಪಣಕಥಾ । ತೇಥೀಲ ಸ್ವಾದತಾ ಮೀ ಜಾಣೇ ।।೩೧೪।। ಸಾಯಜ್ಯಾಂಚೇ ಗೋಡಪಣ । ಮಾಝೇ ಮೀ ಜಾಣೇ ಆಪಣ । ಉದ್ಧವಾ ತುಜ ತೇಹೀ ಜಾಣ । ಸಾಂಗ ಸಂಪೂರ್ಣ ಸಾಂಗೇನ ।।೩೧೫।। ದೇಹ ಸರೂಪತಾ ಸಾರಿಖೇಪಣ । ಹೃದಯೀ ಭಿನ್ನ ಮೀತೂಪಣ । ಐಶಿಯೇಹೀ ಮುಕ್ತೀಸೀ ಜಾಣ । ಭಕ್ತ ಸಜ್ಞಾನ ನಾತಳತೀ ।।೩೧೬।। ಮೀ ಹೋಊನಿಯಾ ಮಾತೇ । ಭಜನ ಸ್ವತಃಸಿದ್ಧ ಆಇತೇ । ತೇ ಸಾಂಡೂನಿಯಾ ಭೇದಾತೇ । ನಿಜಭಕ್ತ ಚಿತ್ತೇ ನಾತಳತೀ ।।೩೧೭।।

ದೇವೇಸೀ ಭಕ್ತ ಅನಾದಿಸಿದ್ಧ । ಠಾಯೀ ಮುಳೀಹೂನ ಅಭೇದ । ತೇಥ ದಾಟೂನಿ ಜೋ ಧರೀ ಭೇದ । ತೋ

ಛತ್ರವನ್ನು ಹಿಡಿಯುವವರೂ ಕೂಡ ಸಂಶಯದಲ್ಲಿ ಬಿದ್ದರು. ಯಾರ ಮೇಲೆ ಛತ್ರವನ್ನು ಹಿಡಿಯಬೇಕೆಂಬುವ ವಿಚಾರ ಮಾಡಹತ್ತುವರು. ಚವರೀ ಬೀಸುವವರು ಕೈಯಲ್ಲಿ ಚವರೀಗಳನ್ನು ಹಿಡಿದುಕೊಂಡು ಯಾರನ್ನುಕುರಿತು ಗಾಳಿಯನ್ನು ಬೀಸಬೇಕೆಂದು ಅವರೂ ಕೂಡ ವಿಚಾರವನ್ನು ಮಾಡಹತ್ತಿದರು ।।೩೦೫।। ಬ್ರಹ್ಮದೇವರು ಮೊದಲು ಮಾಡಿ ಇತರ ದೇವತೆಗಳೆಲ್ಲರೂ ಭಗವಂತನನ್ನು ವಂದಿಸಲು ಬಂದ ಸಮಯದಲ್ಲಿ ಅವರಿಗೆ ಇದೆಲ್ಲವನ್ನೂ ಕಂಡು ಅಪೂರ್ವವೆನಿಸುವುದು. ಇವರಲ್ಲಿ ಆದಿದೇವನು ಯಾರು ಎಂಬುವುದು ಇವರಿಗೂ ಕೂಡ ತಿಳಿಯುವುದಿಲ್ಲ ।।೩೦೬।। ಒಂದು ದೀಪದಿಂದ ಇನ್ನೊಂದು ದೀಪವನ್ನು ಹಚ್ಚಲು ಆಗ ಮೊದಲನೆಯ ದೀಪ ಯಾವುದು ಮತ್ತು ಎರಡನೆಯ ದೀಪ ಯಾವುದು ಎಂಬುವುದು ತಿಳಿಯುವುದೇ ಇಲ್ಲ. ಅದರಂತೆ ನನ್ನ ಸ್ವರೂಪವು ಪ್ರಾಪ್ತವಾಗಲು ಆಗ ಇತರರಿಗೆ ದೇವನು ಯಾರು, ಭಕ್ತರು ಯಾರು ಎಂಬುವುದು ತಿಳಿಯುವುದಿಲ್ಲ ।।೩೦೭।। ಕನ್ನಡಿಯಲ್ಲಿನ ಪ್ರತಿಬಿಂಬವು ತನ್ನ ಮೂಲಕ ಸ್ವಾಭಾವಿಕ ರೂಪದಂತೆಯೇ ಕಾಣುತ್ತಿರುವುದು. ಅದರಂತೆ ಸರೂಪತೆಯಲ್ಲಿ ದೇವ-ಭಕ್ತರ ಶೋಭೆಯೂ ಕೂಡ ಸಮಾನವಾಗಿಯೇ ಕಾಣುತ್ತಿರುವುದು ।।೩೦೮।। ದೇವನು ಪ್ರಸನ್ನನಾಗಿ ತನ್ನ ಪೂರ್ಣವಾದ ಸರೂಪತೆಯನ್ನುಕೊಟ್ಟರೂ ಕೂಡ ತನ್ನ ಹೃದಯದ ಮೇಲೆ ಮೂಡಿರುವ ಬ್ರಾಹ್ಮಣನ ಪಾದ, ಅವಿನಾಶಿಯಾಗಿರುವ ಶ್ರೀವತ್ಸ ಲಾಂಛನವನ್ನು ಮಾತ್ರ ಕೊಡುವುದಿಲ್ಲ ।।೩೦೯।। ಶ್ರೀವಿಷ್ಣುದೇವನು ಸ್ವತಃ ಹೀಗೆ ಹೇಳುವನು, ಈ ಯಾವ ಶ್ರೀವತ್ಸಲಾಂಛನ ಚಿನ್ಹೆಯನ್ನು ಕೊಡುವ ಸಾಮರ್ಥ್ಯವು ನನ್ನಲ್ಲಿರುವುದಿಲ್ಲ. ಈ ಸಾಮರ್ಥ್ಯವು ಬ್ರಾಹ್ಮಣರ ಪಾದದಲ್ಲಿರುವುದು. ಆ ಯಾವ ಬ್ರಾಹ್ಮಣರ ಚರಣವನ್ನು ಹೃದಯದಲ್ಲಿ ಧರಿಸಿದಾಗ ಮಾತ್ರ ಅದು ಪ್ರಾಪ್ತವಾಗುವುದು ।।೩೧೦।। ಸರೂಪತೆಯಲ್ಲಿ ದೇವ ಮತ್ತು ಭಕ್ತರ ಭಿನ್ನತ್ವವನ್ನು ತಿಳಿಯಲು ಒಂದೇ ಒಂದು ಚಿನ್ಹೆಯಾಗಿರುವುದು. ಅದು ಯಾವುದೆಂದರೆ ಹೃದಯದ ಮೇಲೆ ಶ್ರೀವತ್ಸಲಾಂಛನ ಧರಿಸಿರುವವನೇ ಸರ್ವರ ಸ್ವಾಮಿಯಾಗಿರುವ ಶ್ರೀವಿಷ್ಣು ಎಂದು ತಿಳಿಯಬೇಕು ।।೩೧೧।। ಈ ಪ್ರಕಾರವಾಗಿ ಸರೂಪತೆಯು ಪ್ರಾಪ್ತವಾದರೂ ಕೂಡ ದೇವ ಮತ್ತು ಭಕ್ತರಲ್ಲಿ ಈ ಯಾವ ಕಿಂಚಿತ್ತ ಭೇದವು ಇದ್ದೇ ಇರುವುದು ।।೩೧೨।। ದೇವ ಮತ್ತು ಭಕ್ತರಲ್ಲಿ ಎಲ್ಲಿಯವರೆಗೆ ಭೇದವಿರುವುದೋ, ಅಲ್ಲಿಯವರೆಗೆ ಸರೂಪತೆ ಪ್ರಾಪ್ತವಾಯಿತೆನ್ನುವುದು ಯೋಗ್ಯವಾಗುವುದಿಲ್ಲ. ಎಲ್ಲಿಯವರೆಗೆ ಅದ್ವಯ ಜ್ಞಾನವು ಪ್ರಾಪ್ತವಾಗುವುದಿಲ್ಲವೋ ಅಲ್ಲಿಯವರೆಗೆ ಪರಮಾನಂದವು ಪ್ರಕಟವಾಗುವುದಿಲ್ಲ ।।೩೧೩।। ಆದ್ದರಿಂದ ಭಿನ್ನತ್ವದ ಭೇದವಾರ್ತೆಯನ್ನು ಬಿಟ್ಟುಕೊಟ್ಟು ಭಕ್ತನು ಸಾಯುಜ್ಯತೆಯನ್ನು ಬೇಡುವನು. ಈ ನಿರೂಪಣೆಯ ಕಥೆಯು ಅತ್ಯಂತ ಸುಂದರವಾಗಿರುವುದು. ಇದರಲ್ಲಿನ ಮಹತ್ವವನ್ನು ನಾನೊಬ್ಬನೇ ತಿಳಿದಿರುವೆನು ।।೩೧೪।। ಸಾಯುಜ್ಯತೆಯ ಆನಂದವನ್ನು ನಾನೊಬ್ಬನೇ ಮಾತ್ರ ಅರಿತಿರುವೆನು. ಇದನ್ನು ನಾನು ನಿನಗೆ ಸವಿಸ್ತಾರವಾಗಿ ಹೇಳುವೆನು ।।೩೧೫।। ಸರೂಪತೆಯಲ್ಲಿ ದೇಹದ ಸಾಮ್ಯವು ಪ್ರಾಪ್ತವಾದರೂ ಕೂಡ ಹೃದಯದಲ್ಲಿ ನಾನು-ನೀನೆಂಬುವ ಭೇದವು ಉಳಿದಿರುವುದು. ಆದ್ದರಿಂದ ಇಂತಹ ಸರೂಪತಾ ಮುಕ್ತಿಗೆ ಜ್ಞಾನಿಗಳು ಮನ್ನಿಸುವುದಿಲ್ಲ ।।೩೧೬।। ನನ್ನ ಸ್ವರೂಪವನ್ನು ಪ್ರಾಪ್ತಮಾಡಿಕೊಂಡು ನನ್ನ ಸ್ವತಃ ಸಿದ್ಧ ಭಜನೆಯನ್ನುಮಾಡುವಿಕೆ, ಇದನ್ನು ಬಿಟ್ಟು ನನ್ನ ಭಕ್ತರು ಭೇದದ ವಿಚಾರವನ್ನೂ ಕೂಡ ಮಾಡಲಾರರು ।।೩೧೭।।

ಭಕ್ತಿ ಮಂದ ಮಾಯಿಕ ।೩೧೮॥ ಆರ್ತ ಜಿಜ್ಞಾಸು ಆಣಿ ಅರ್ಥಾರ್ಥೀ । ಹೇ ಭೇದ ಕೇಲೇ ಮಾಯಿಕಾ ಭಕ್ತೀ । ಜೇ ಅಭೇದಭಾವೇ ಮಜ ಭಜತೀ। ಸಾಯುಜ್ಯಮುಕ್ತೀ ತಯಾಂಸೀ ।೩೧೯॥ ಜ್ಯಾಂಸೀ ರಾವೋರಂಕ ಸಮಾನ । ವಂದ್ಯನಿಂದ್ಯ ನ ಮನೀ ಮನ । ಜೇ ನ ಧರಿತೀ ದೇಹಾಭಿಮಾನ । ಸಾಯುಜ್ಯ ಜಾಣ ತಯಾಂಸೀ ।೩೨೦॥ ಜೈಸೀ ಆಪುಲೀ ಸಾಉಲೀ । ಮಿಥ್ಯಾ ಆಪಣಾಸವೇ ಲಾಗಲೀ । ತೈಶೀ ದೇಹಬುದ್ಧಿ ಜ್ಯಾಂಸೀ ಝಾಲೀ । ತ್ಯಾಂಸೀ ಫಾವಲೀ ಸಾಯುಜ್ಯತಾ ।೩೨೧॥ ಜನ್ಮೂನಿ ಛಾಯಾ ಸರಿಸೀ ವಾಢೇ । ಮಾಝೀ ಹೇ ಮಮತಾ ನುಠೀ ಪುಢೇ । ಐಸೇ ದೇಹಾಚೇ ನ ಬಾಧೀ ಸಾಂಕಡೇ । ಸಾಯುಜ್ಯ ರೋಕಡೇ ತಯಾಸೀ ।೩೨೨॥ ಸಾಂಡೂನಿ ದೇಹಾಚೀ ವಿಷಯಾಸಕ್ತೀ । ಜೋ ಕರೀ ಭಾವೇ ಅಭೇದಭಕ್ತಿ । ತ್ಯಾಸೀಚಿ ಸಾಯುಜ್ಯ ಮುಕ್ತಿ । ಜಾಣ ನಿಶ್ಚಿತೀ ಉದ್ಧವಾ ।೩೨೩॥ ಜ್ಯಾಸೀ ದೇಹೀ ನುಠೀ ಮೀಪಣ । ಭೂತಮಾತ್ರೀ ನ ದೇಖೇ ತೂಪಣ । ತ್ಯಾಸೀ ಸಾಯುಜ್ಯ ಮುಕ್ತಿ ಜಾಣ । ಸಾಂಗ ಸಂಪೂರ್ಣ ಸಾಪಡೇ ।೩೨೪॥ ಜೇವಢೀ ಮಜ ಆತ್ಮ್ಯಾಚೀ ವ್ಯಕ್ತಿ । ತೇವಢೀಚ ತ್ಯಾಚೀ ಪ್ರತೀತೀ । ತ್ಯಾಸೀಚ ಸಾಯುಜ್ಯತಾ ಮುಕ್ತಿ । ಸಹಜ ಆಪೈತೀ ಉದ್ಧವಾ ।೩೨೫॥ ತ್ಯಾಸೀ ವಿಷ್ಣುಸ್ವರೂಪ ವ್ಹಾವಾ ದೇಹೋ । ಹಾ ಸರ್ವಥಾ ನುಪಜೇ ಅಹಂಭಾವೋ । ತ್ಯಾಸೀ ವಿಷ್ಣು ಸಗಟ ಸ್ವದೇಹ ವಾವೋ । ಯಾಲಾಗೀ ಸಾರೂಪ್ಯ ಪಹಾ ಹೋ ವಾಂಛೀನಾ ।೩೨೬॥ ನಿಜವಿವೇಕೇ ಪಾಹತಾ ಠಾಯೀ । ದೇಹೋ ತಿತುಕಾ ಮಿಥ್ಯಾ ಪಾಹೀ । ತೇಥ ಸಾರೂಪ್ಯತಾ ಕೋಣೇ ಠಾಯೀ । ಸಜ್ಞಾನೀ ಕಾಯೀ ಮಾಗಾವೀ ।೩೨೭॥ ಸಾಯುಜ್ಯತಾ ಆಲಿಯಾ ಹಾತಾ । ವಸ್ತೂವೀಣ ಠಾವೋ ನಾಹೀ ರೀತಾ । ಸಕಳ ಭೂತೀ ಏಕಾತ್ಮತಾ । ಸಾಯುಜ್ಯ ತತ್ತ್ವತಾ ಯಾ ನಾಂವ ।೩೨೮॥ ಸಕಳ ರೂಪೇ ನಾಂದತೇ ಜಗ । ತೇ ಜೋ ಜಾಣೇ ಆಪುಲೇ ಅಂಗ । ಆಪಣ ಸರ್ವಾತ್ಮಾ ಅಭಂಗ । ತ್ಯಾಸೀಚ ಸಾಂಗ ಸಾಯುಜ್ಯ ।೩೨೯॥ ಮೀ ಏಕ ಸಬಾಹ್ಯಾಭ್ಯಂತರೀ । ಮೀ ಏಕ ಜಂಗಮೀ ಸ್ಥಾವರೀ । ಮೀಚಿ ಆತ್ಮಾ ಚರಾಚರೀ । ಜಾಣ ತ್ಯಾಚೇ ಘರೀ ಸಾಯುಜ್ಯ ನಾಂದೇ ।೩೩೦॥ ಮೀಚಿ ಏಕ ಏಕಲಾ । ಏಕಪಣೇಚಿ ಸಂಚಲಾ । ಜ್ಯಾಸೀ ದ್ವೈತಾಚಾ ದುಷ್ಕಾಳ ಪಡಿಲಾ । ಸತ್ಯ ಪಾವಲಾ ಸಾಯುಜ್ಯ ।೩೩೧॥ ಏವಂ ಭಾವಾರ್ಥಾಚ್ಯಾ ಅತಿಪ್ರೀತೀ । ಜೇ ಜೇ ನಿಜಭಕ್ತ ವಾಂಛಿತೀ । ತೇ ತೇ ಮೀ ಪುರವೀ ಶ್ರೀಪತೀ । ಚಾರೀ ಮುಕ್ತಿ ಭಕ್ತಾಂಸೀ।೩೩೨॥

ದೇವಸಮೇತ ಭಕ್ತ ಇದು ಅನಾದಿಸಿದ್ಧವಾಗಿದೆ. ಇದು ಮೂಲತಃ ಅಭೇದರೂಪವೇ ಆಗಿರುವುದು. ಹೀಗಿದ್ದರೂ ಕೂಡ ಭೇದವನ್ನು ಮಾಡುವುದು ಭಕ್ತಿ ಹೀನ ಮತ್ತು ಮಾಯಿಕವಾಗಿದೆ ಎಂದು ತಿಳಿಯಬೇಕು ।೩೧೮॥ ಆರ್ತ, ಜಿಜ್ಞಾಸು, ಅರ್ಥಾರ್ಥೀ ಈ ಭೇದವು ಮಾಯಿಕ ಭಕ್ತಿಯಿಂದ ಕೂಡಿರುವುದು. ಯಾರು ಅಭೇದ ಭಾವದಿಂದ ನನ್ನ ಭಜನೆಯನ್ನು ಮಾಡುವರೋ, ಅವರಿಗೆ ಸಹಜವಾಗಿ ಸಾಯುಜ್ಯ ಮುಕ್ತಿಯು ಲಭಿಸುವುದು ।೩೧೯॥ ಯಾರಲ್ಲಿ ರಾಜಾ,ರಂಕರಲ್ಲಿ ಸಮಭಾವವಿರುವುದೋ, ನಿಂದ್ಯ, ವಂದ್ಯ ಭಾವವು ಯಾರಲ್ಲಿ ಇರುವುದಿಲ್ಲವೋ, ಯಾರು ದೇಹಾಭಿಮಾನವನ್ನು ಹಿಡಿಯುವುದಿಲ್ಲವೋ, ಅವರಿಗೆ ಸಾಯುಜ್ಯ ಮುಕ್ತಿಯು ದೊರೆಯುವುದು ।೩೨೦॥ ಮಿಥ್ಯೆಯಾಗಿರುವ ತನ್ನ ನೆರಳು ಬೆನ್ನುಹತ್ತಿದಂತೆ ದೇಹಬುದ್ಧಿಯು ಮಿಥ್ಯೆ ಎಂದು ತಿಳಿಯುವರೋ, ಅವರಿಗೆ ಸಾಯುಜ್ಯತೆಯು ಲಭಿಸುವುದು ।೩೨೧॥ ತನ್ನ ದೇಹದ ಜೊತೆಯಲ್ಲಿ ತನ್ನ ನೆರಳು ಬೆಳೆಯುತ್ತಲೇ ಇರುವುದು. ಆದರೂ ಕೂಡ ಇದು ನನ್ನದೆಂಬ ಭಾವವು ಹುಟ್ಟುವುದಿಲ್ಲ. ಅದರಂತೆ ದೇಹದ ಮಮತ್ವವು ಯಾರಿಗೆ ಬಾಧಿಸುವುದಿಲ್ಲವೋ, ಅವರಿಗೆ ಸಾಯುಜ್ಯತೆಯು ದೊರೆಯುವುದು ।೩೨೨॥ ಹೇ ಉದ್ಧವಾ, ದೇಹದ ವಿಷಯಾಸಕ್ತಿಯನ್ನು ಬಿಟ್ಟುಕೊಟ್ಟು ಮನಃಪೂರ್ವಕವಾಗಿ ಯಾರು ಅಭೇದ ಭಕ್ತಿಯನ್ನು ಮಾಡುವನೋ, ಆತನಿಗೆ ಸಾಯುಜ್ಯ ಮುಕ್ತಿಯು ಪ್ರಾಪ್ತವಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೨೩॥ ಯಾರ ದೇಹದಲ್ಲಿ ನಾನೆಂಬ ಭಾವವು ಸ್ವಲ್ಪವೂ ಕೂಡ ಇರುವುದಿಲ್ಲವೋ, ಸರ್ವ ಪ್ರಾಣಿಮಾತ್ರರಲ್ಲಿ ಆತ್ಮಸ್ವರೂಪವನ್ನು ಕಾಣುವನೋ, ಆತನಿಗೆ ಪೂರ್ಣವಾದ ಸಾಯುಜ್ಯ ಮುಕ್ತಿಯು ಪ್ರಾಪ್ತವಾಗುವುದು ।೩೨೪॥ ನನ್ನ ಆತ್ಮದ ಎಷ್ಟೊಂದು ಅಫಾಟ ವಿಸ್ತಾರವಿರುವುದೋ, ಆ ಎಲ್ಲದರಲ್ಲಿಯೂ ಆತ್ಮಪ್ರತೀತಿಯು ಬರುತ್ತಿದ್ದರೆ ಆತನಿಗೆ ತೀವ್ರಗತಿಯಲ್ಲಿ ಸಾಯುಜ್ಯ ಮುಕ್ತಿಯು ಪ್ರಾಪ್ತವಾಗುವುದು ।೩೨೫॥ ತನ್ನ ದೇಹವು ವಿಷ್ಣು ಸ್ವರೂಪವಾಗಬೇಕೆಂಬ ಬಯಕೆಯು ಈತನಿಗೆ ಎಂದಿಗೂ ಆಗುವುದಿಲ್ಲ. ಈತನಿಗೆ ತನ್ನ ದೇಹ ಮತ್ತು ವಿಷ್ಣುವಿನ ದೇಹ ಈ ಎರಡೂ ಕೂಡ ಮಿಥ್ಯೆಯಾಗಿ ತೋರುವುವು. ಆದ್ದರಿಂದ ಈತನು ಸರೂಪತೆಯ ಇಚ್ಛೆಯನ್ನು ಮಾಡಲಾರನು ।೩೨೬॥ ಸೂಕ್ಷ್ಮವಾಗಿ ವಿಚಾರವನ್ನು ಮಾಡಲು ಈ ದೇಹವು ಮಿಥ್ಯೆಯಾಗಿದೆ ಎಂದು ತಿಳಿಯುವುದು. ಅಂದಮೇಲೆ ಜ್ಞಾನೀ ಪುರುಷರು ಸರೂಪತೆಯನ್ನು ಹೇಗೆ ಕೇಳುವರು ? ।೩೨೭॥ ಸಾಯುಜ್ಯತೆಯು ಪ್ರಾಪ್ತವಾಗುತ್ತಲೇ ಭಗವಂತನ ಸತ್ತೆಯ ಹೊರತಾಗಿ ರಿಕ್ತ ಸ್ಥಳವು ಎಲ್ಲಿಯೂ ಕಾಣುವುದಿಲ್ಲ. ಸರ್ವ ಪ್ರಾಣಿಮಾತ್ರರಲ್ಲಿ ಏಕಾತ್ಮಭಾವವು ನಿರ್ಮಾಣವಾಗುವಿಕೆಗೆ ಸಾಯುಜ್ಯತೆ ಎಂದು ಹೇಳುವರು ।೩೨೮॥ ಈ ಎಲ್ಲವೂ ವಿವಿಧ ರೂಪಗಳಿಂದ ತೋರುವ ಜಗತ್ತು ಕೇವಲ ತನ್ನ ಅಂಗವೇ ಆಗಿದೆ ಎಂದು ತಿಳಿಯುವುದು ಮತ್ತು ತಾನೇ ಭಂಗವಾಗದಂತಹ ಸರ್ವಾತ್ಮಾನಾಗಿರುವೆ ಎಂದು ಭಾವಿಸುವುದು. ಹೀಗಿರುವವನಿಗೆ ಮಾತ್ರ ಪೂರ್ಣ ಸಾಯುಜ್ಯತೆಯು ಪ್ರಾಪ್ತವಾಗುವುದು ।೩೨೯॥ ಒಳಹೊರಗೆ ವ್ಯಾಪಿಸಿಕೊಂಡಿರುವುದೆಲ್ಲವೂ ನಾನೇ ಒಬ್ಬನಾಗಿರುವೆನು, ನಾನು ಸರ್ವ ಸ್ಥಾವರ ಜಂಗಮಗಳಲ್ಲಿ ವ್ಯಾಪಿಸಿಕೊಂಡಿರುವೆನು, ಚರಾಚರಗಳಲ್ಲಿನ ಆತ್ಮವು ನಾನೇ ಆಗಿರುವೆನು ಎಂದು ತಿಳಿದುಕೊಂಡವನಿಗೆ ಮಾತ್ರ ಸಾಯುಜ್ಯತೆಯು ಆತನ ಮನೆಯಲ್ಲಿ ವಸತಿಯಾಗುವುದು ।೩೩೦॥ ಸರ್ವ ಚರಾಚರಗಳಲ್ಲಿ ಒಬ್ಬನೇ ಒಬ್ಬನಾದ ನಾನು ಒಂದೇಯಾಗಿ ತುಂಬಿರುವೆನು. ಹೀಗೆ ತಿಳಿದುಕೊಂಡಿರುವನು ದ್ವೈತದ ಹೆಸರೂ ಕೂಡ ಕಲ್ಪಿಸುವುದಿಲ್ಲ. ಹೀಗಿರುವ ಈತನಿಗೆ ಮಾತ್ರ ಸಾಯುಜ್ಯತೆಯು ಪ್ರಾಪ್ತವಾಗುವುದು ।೩೩೧॥

ಯಾವೇಗಳೇ ಮಾಝೇ ಪ್ರಿಯ ಭಕ್ತ । ಭಕ್ತಿಪ್ರತಾಪೇ ಪ್ರತಾಪವಂತ । ಭಜನಶೌರ್ಯ ಅತಿಅದ್ಭುತ । ನಿಷ್ಕಾಮ ನಿರತ ಮದ್ಭಜನೀ ।೩೩೩॥ ಆರ್ತ ಜಿಜ್ಞಾಸು ಅರ್ಥಾರ್ಥೀ । ಯಾ ಕಲ್ಪನಾ ನ ಧರೋನಿ ಹಾತೀ । ನಿತ್ಯ ನಿಷ್ಕಾಮ ಅತಿಪ್ರೀತೀ । ಮಜ ಭಜತೀ ಮಹಾಭಾಗ ।೩೩೪॥ ನೇಘತೀ ಸಾಲೋಕ್ಯ ಸಾಮೀಪ್ಯ ಸರೂಪತಾ । ಶೇಖೀ ನ ಮಾಗತೀ ಸಾಯುಜ್ಯತಾ । ನಿಷ್ಕಾಮ ಭಜತೀ ಭಗವಂತಾ । ಭಕ್ತಿ ತತ್ತ್ವತಾ ಯಾ ನಾಂವ ।೩೩೫॥ ನವಲ ಭಜನಾಚೀ ಪರವಡೀ । ಆವಡೀತೇ ಪ್ರಸವೇ ಆವಡೀ । ಕ್ಷಣೋಕ್ಷಣ ಚಢೋವಢೀ । ನಿತ್ಯ ನೂತನ ಗೋಡೀ ಪ್ರೇಮಾಚೀ ।೩೩೬॥ ಮಾಝಿಯಾ ಆವಡೀ ತತ್ತ್ವತಾ । ಸರ್ವಸ್ವೇ ವೇಚಿತ ಜೀವಿತಾ । ಕದಾ ಪಾಲಟ ನವ್ಹೇ ಚಿತ್ತಾ । ಭಾವಾರ್ಥತಾ ವಿಶ್ವಾಸೀ ।೩೩೭॥ ಮೀಚ ಏಕ ದೇವಾಧಿದೇವೋ । ಸರ್ವಭೂತೀ ಮಾಝಾಚಿ ಭಾವೋ । ವಿಕಲ್ಪ ವಿಕೃತಿ ಸಂದೇಹೋ । ಘಾಲಿತಾ ಪಹಾ ಹೋ ಉಪಜೇ ನಾ ।೩೩೮॥ ನವಲ ಭಾವಾರ್ಥಾಚೀ ಥೋರೀ । ಮದ್ಭಾವೇ ದೇಖೇ ನರನಾರೀ । ಶ್ವಾನಸೂಕರಾದಿ ಆಕಾರೀ । ನಮಸ್ಕಾರೀ ಮದ್ಭಾವೇ ।೩೩೯॥ ನವಲ ತ್ಯಾಚೇ ಭಜನಖ್ಯಾತೀ । ಸಾಯುಜ್ಯಾದಿ ಚಾರೀ ಮುಕ್ತಿ । ಮಾಝ್ಯಾ ನಾಂವಾವರೂನಿ ಓವಾಳಿತೀ । ಭಕ್ತಿ ಪಢಿಯಂತೀ ಯೇಣೇ ಪಾಡೇ ।೩೪೦॥ ಮಾಂಡಲ್ಯಾ ಅತಿವಿಘ್ನ ಸಾಂಕಡೇ । ಗ್ಲಾನೀ ನ ಕರಿತೀ ಆಣಿಕಾಕಡೇ । ಜಾಣತೀ ರಾಮನಾಮಾಪುಢೇ । ವಿಘ್ನ ಬಾಪುಡೇ ತೇ ಕಾಯೀ ।೩೪೧॥ ಗಗನ ಪಡೋ ಪಾಹೇ ಕಡಾಡೇ । ಪೃಥ್ವೀ ಉಲಥಾವಯಾ ಗಡಬಡೇ । ಐಸೇ ಮಾಂಡಲಿಯಾ ಸಾಕಡೇ । ನಾಮ ಪಢೇ ಶ್ರೀಹರೀಚೇ ।೩೪೨॥ ಐಶೀ ದೇಖೋನಿ ಅನನ್ಯ ಪ್ರೀತೀ । ಮೀ ಸರ್ವಸ್ವೇ ಭುಲಲೋ ಶ್ರೀಪತೀ । ಮಗ ನ ಪಾಹತಾ ಕುಳ ಜಾತೀ । ತ್ಯಾಚ್ಯಾ ಘರಾಪ್ರತೀ ಮೀ ಧಾಂವೇ ।೩೪೩॥ ತೇ ನ ಘೇತೀ ವೈಕುಂಠೀಂಚೀ ವಾಟ । ತ್ಯಾಂಚೇ ಘರಚಿ ಮೀ ಕರೀ ವೈಕುಂಠ । ತೇಥೇ ಚಿನ್ಮಾತ್ರೇ ಫುಟೇ ಪಾಹಾಂಟ । ಪಿಕೇ ಪೇಠ ಸಂತಾಂಚೀ ।೩೪೪॥ ಉಪನಿಷದ್ ಪದೇ ಯೇತೀ ತಯಾಪಾಶೀ । ಸ್ವಧರ್ಮ ಯೇ ಸುಖವಸ್ತಿಸೀ । ನಾರದಾದಿ ಸನಕಾದಿಕಾಂಸೀ । ತಯಾ ಘರಾಸೀ ಅತಿಪ್ರೀತೀ ।೩೪೫॥ ಗರ್ಜತೀ ನಾಮಾಚೇ

ಅತ್ಯಂತ ಪ್ರೇಮದಿಂದ ಈ ಪ್ರಕಾರದ ಭಾವನೆಯಿಂದ ನನ್ನ ಭಕ್ತರು ಯಾವ ಯಾವ ಇಚ್ಛೆಯನ್ನು ಮಾಡುವರೋ, ಶ್ರೀಹರಿಯಾದ ನಾನು ಅವರಿಗೆ ಕೊಡುತ್ತಿರುವೆನು. ನನ್ನ ಭಕ್ತರಿಗೆ ನಾನು ನಾಲ್ಕೂ ಮುಕ್ತಿಯನ್ನು ಕೊಡುವೆನು ।೩೩೨॥ ಇದಲ್ಲದೇ ಇನ್ನುಳಿದ ನನ್ನ ಪ್ರಿಯ ಭಕ್ತರು ನನ್ನ ಭಕ್ತಿಯ ಪ್ರತಾಪದಿಂದ ಪ್ರತಾಪವಂತರಾಗಿರುವರು. ಅವರ ಭಜನೆಯ ಸಾಮರ್ಥ್ಯವು ಅತ್ಯಂತ ವಿಲಕ್ಷಣವಾಗಿರುವುದು. ಅವರು ನಿಷ್ಕಾಮ ಭಾವನೆಯಿಂದ ನನ್ನ ಭಜನೆಯಲ್ಲಿ ಯಾವಾಗಲೂ ತಲ್ಲೀನರಾಗಿರುವರು ।೩೩೩॥ ಆರ್ತ, ಜಿಜ್ಞಾಸು, ಅರ್ಥಾರ್ಥೀ ಎಂಬ ಈ ಕಲ್ಪನೆಯನ್ನು ತ್ಯಜಿಸಿ ಯಾವ ಮಹಾ ಭಕ್ತರು ಸತತವಾಗಿ ನಿಷ್ಕಾಮ ಭಾವನೆಯಿಂದ ಅತ್ಯಂತ ಪ್ರೇಮದಿಂದ ನನ್ನ ಭಜನೆಯನ್ನು ಮಾಡುವರು ।೩೩೪॥ ಇವರು ಸಲೋಕತಾ, ಸಮೀಪತಾ ಮತ್ತು ಸರೂಪತಾ ಇವುಗಳ ಕಲ್ಪನೆಯನ್ನೂ ಕೂಡ ಮನದಲ್ಲಿ ತರುವುದಿಲ್ಲ. ಕೊನೆಗೆ ಸಾಯುಜ್ಯವನ್ನೂ ಕೇಳುವುದಿಲ್ಲ. ನಿಷ್ಕಾಮ ಭಾವನೆಯಿಂದ ಭಗವಂತನ ಭಜನೆಯನ್ನು ಮಾಡುವರು. ಇದಕ್ಕೆ ಮಾತ್ರ ನಿಜಭಕ್ತಿ ಎನ್ನುವರು ।೩೩೫॥ ಆ ಯಾವ ಭಕ್ತರ ಭಜನದ ಪ್ರೇಮವೂ ಕೂಡ ಆಶ್ಚರ್ಯಕಾರಕವಾಗಿರುವುದು. ಈ ಪ್ರೇಮದಿಂದ ಭಜನೆಯ ಪ್ರೇಮವು ಅಧಿಕವಾಗಿಯೇ ಬೆಳೆಯುತ್ತಿರುವುದು. ಪ್ರತಿ ಕ್ಷಣಕ್ಕೆ ಪ್ರೇಮದ ನಿತ್ಯ ನೂತನವಾದ ಆನಂದವು ಉತ್ಪನ್ನವಾಗುವುದು ।೩೩೬॥ ಭಕ್ತನು ನನ್ನ ಈ ಪ್ರೇಮಕ್ಕಾಗಿ ತನ್ನ ಸರ್ವಸ್ವವನ್ನು ಅರ್ಪಿಸುವನು. ಈತನ ಚಿತ್ತದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಆತನ ಭಕ್ತಿಯು ಪ್ರೇಮದಲ್ಲಿ ಅತ್ಯಂತ ದೃಢವಾದ ವಿಶ್ವಾಸವು ಕುಳಿತುಕೊಂಡಿರುವುದು ।೩೩೭॥ ನಾನು ದೇವಾಧಿ ದೇವನಾಗಿರುವೆನು. ಸರ್ವ ಪ್ರಾಣಿಮಾತ್ರರಲ್ಲಿ ನನ್ನ ಆತ್ಮವೇ ಇರುವುದು. ಹೀಗೆ ಈತನು ದೃಢವಾಗಿ ತಿಳಿದುಕೊಂಡಿರುವನು. ಈತನ ಈ ಜ್ಞಾನದಲ್ಲಿ ವಿಕಲ್ಪ, ವಿಕೃತಿ, ಸಂಶಯಗಳನ್ನು ಉತ್ಪನ್ನಗೊಳಿಸುವ ಪ್ರಯತ್ನ ಮಾಡಿದರೆ ಅವು ಈತನಲ್ಲಿ ಯಾವ ಪರಿಣಾಮವೂ ಬೀರುವುದಿಲ್ಲ ।೩೩೮॥ ಈತನು ಇಂತಹ ಭಾವನೆಯನ್ನು ಧರಿಸಿರುವ ಮಹಿಮೆಯು ಅತ್ಯಂತ ಅಗಾಧವಾಗಿರುವುದು. ಈ ಭಕ್ತನು ಸರ್ವ ಸ್ತ್ರೀಪುರುಷರಲ್ಲಿ ನನ್ನ ಭಾವನೆಯಿಂದ ಕಾಣುವನು. ನಾಯಿ, ಹಂದಿ ಇತ್ಯಾದಿಗಳಲ್ಲಿಯೂ ನನ್ನ ಸ್ವರೂಪದಿಂದ ಕಂಡು ಅವುಗಳಿಗೆ ನಮಸ್ಕರಿಸುವನು ।೩೩೯॥ ಇವರ ಈ ಭಜನೆಯ ಪ್ರಕಾರವು ಅತ್ಯಂತ ವಿಲಕ್ಷಣವಾಗಿರುವುದು. ಇವರು ಸಾಯುಜ್ಯಾದಿ ನಾಲ್ಕು ಮುಕ್ತಿಗಳನ್ನು ನನ್ನ ನಾಮದ ಮೇಲಿಂದ ನಿವಾಳಿಸಿ ಒಗೆದುಬಿಡುವರು. ಇವರಿಗೆ ನನ್ನ ಭಕ್ತಿಯು ಇಷ್ಟೊಂದು ಪ್ರಿಯವಾಗಿರುವುದು ।೩೪೦॥ ಮಹಾ ಮಹಾ ವಿಘ್ನಗಳು ಬಂದೊದಗಲಿ, ಅಥವಾ ಅನೇಕ ಸಂಕಟಗಳು ಕಾಡುತ್ತಿರಲಿ, ಇವರು ಇನ್ನೊಬ್ಬರಲ್ಲಿ ಹೋಗಿ ದೀನತನದಿಂದ ಸಹಾಯವನ್ನು ಬೇಡುವುದಿಲ್ಲ. ರಾಮನಾಮದ ಅಲೌಕಿಕ ಪ್ರಭಾವದಮುಂದೆ ಇವು ಏನು ಮಾಡಬಲ್ಲವು? ಇದನ್ನು ಇವರು ಅರಿತಿರುವರು? ।೩೪೧॥ ಆಕಾಶವು ಘನಗರ್ಜನೆಯಿಂದ ಹರಿದು ಬೀಳಲಿ, ಅಥವಾ ಪೃಥ್ವಿಯು ನಡುಗುತ್ತ ಬುಡಮೇಲು ಆಗಲಿ, ಭಕ್ತನು ಶ್ರೀಹರಿಯ ನಾಮವನ್ನು ಎಂದಿಗೂ ಬಿಡುವುದಿಲ್ಲ ।೩೪೨॥ ಹೀಗಿರುವ ಈತನ ಏಕನಿಷ್ಠ ಪ್ರೇಮವನ್ನು ಕಂಡು ಶ್ರೀಪತಿಯಾದ ನಾನು ಈತನಿಗೆ ಮಾರು ಹೋಗುವೆನು. ತದನಂತರ ಈತನ ಕುಲ, ಜಾತಿಗಳನ್ನು ಲಕ್ಷಿಸದೇ ನಾನು ಈತನು ಇರುವ ಮನೆಯತ್ತ ಧಾವಿಸಿ ಬರುವೆನು ।೩೪೩॥ ಈ ಭಕ್ತರು ವೈಕುಂಠದ ಮಾರ್ಗಕ್ಕೆ ಹೋಗುವುದಿಲ್ಲ. ಅದಕ್ಕಾಗಿ ನಾನು ಅವರ ಮನೆಯನ್ನೇ ವೈಕುಂಠವನ್ನಾಗಿ ಮಾಡಿಬಿಡುವೆನು. ಅಲ್ಲಿ ದಿವ್ಯಜ್ಞಾನದ ಪ್ರಕಾಶವು ಬೆಳಗುವುದು. ಅಲ್ಲಿ ಸಂತರ ಸಂತೆಯು ಸಜ್ಜಾಗುವುದು ।೩೪೪॥

ಪವಾಡೇ । ಮಾಝೀ ಗಾತೀ ವಾಡೇಕೋಡೇ । ಮಾಝ್ಯಾ ರಾಮನಾಮಾಪುಢೇ । ದ್ವಂದ್ವಾಚೇ ಉಡೇ ಬಾಧಕತ್ವ ॥೩೪೬॥ ಐಶೀ ದೇಖೋನಿ ಮಾಝೀ ಭಕ್ತೀ । ವೋರಸೋನಿಯಾ ನಿಜಶಾಂತೀ । ಧಾವೋನಿ ಯೇ ತಯಾಪ್ರತೀ । ವೋಳಲೀ ಮಾಗುತೀ ಜಾವೋ ವಿಸರೇ ॥೩೪೭॥ ತ್ಯಾಂಸೀ ಛಳೋ ಯೇ ಜೇ ಜೇ ದೂಷಣ । ತೇತೇ ತ್ಯಾಸೀ ಹೋಯೆ ಭೂಷಣ । ಮಾಝೀ ಭಕ್ತಿಚೇ ಪ್ರಸನ್ನಪಣ । ಜಾಣ ಸಂಪೂರ್ಣ ಯಾ ನಾಂವ ॥೩೪೮॥ ತೇಥ ಸಾಯುಜ್ಯಾದಿ ಚಾರೀ ಮುಕ್ತೀ । ತ್ಯಾಂಚೇ ಸೇವೇಸೀ ಸ್ವಯೇ ಯೇತೀ। ತೇ ಜೇಥ ವಿಷಯ ಸೇವೂ ಜಾತೀ । ತೇಥ ಸಾಯುಜ್ಯ ಮುಕ್ತೀ ಸೇವಾ ಕರೀ ॥೩೪೯॥ ಋದ್ಧಿ ಸಿದ್ಧಿ ತ್ಯಾಚ್ಯಾ ಘರೀ। ಹೋಊನಿ ರಾಹತೀ ಕಾಮಾರೀ । ತರೀ ತೋ ಸಿದ್ಧೀಂಚೀ ಚಾಡ ನ ಧರೀ । ಮಾಝೀ ಭಕ್ತಿವರೀ ನಿಶ್ಚಯೋ॥೩೫೦॥ ಐಶೀ ದೇಖೋನಿ ನಿಶ್ಚಯೇ ಭಕ್ತೀ । ಮೀಹೀ ಕರೀ ಅನನ್ಯ ಪ್ರೀತೀ । ಭಕ್ತ ಜೇಉತೀ ವಾಸ ಪಾಹತೀ । ತೇಉತಾ ಮೀ ಶ್ರೀಪತೀ ಸ್ವಯೇ ಪ್ರಕಟೇ ॥೩೫೧॥ ಭಕ್ತ ಸ್ವಭಾವೇ ಬೋಲೋ ಜಾಯೇ । ತ್ಯಾಚೇ ಬೋಲಣೇ ಮೀಚಿ ಹೋಯೇ । ತ್ಯಾಚೇ ಬೋಲಣ್ಯಾ ಸಬಾಹ್ಯೇ । ಮೀಚಿ ರಾಹೇ ಶಬ್ದಾರ್ಥೇ ॥೩೫೨॥ ತೋ ಕೌತುಕೇ ಖೇಳೇ ಖಡೇ । ತೇ ಖಡೇಚಿ ಮಜ ಹೋಣೇ ಘಡೇ । ತೋ ಕೃಪಾಳು ಪಾಹೇ ಜಯಾಕಡೇ । ತ್ಯಾಚೇ ಛೇದೀ ಮೀ ಗಾಢೇ ಭವಬಂಧ॥೩೫೩॥ ತೋ ವಾಸ ಪಾಹೇ ಜೇಣೇ ಮೋಹರೀ। ತೇಉತೀ ಮೀ ಸುಖಾಚೀ ಸೃಷ್ಟೀ ಕರೀ। ತೋ ಮ್ಹಣೇ ಜಯಾತೇ ಉದ್ಧರೀ। ತೋ ಮೀ ಸ್ವಪದಾವರೀ ಬೈಸವೀ॥೩೫೪॥ ತ್ಯಾಸೀ ಅಲ್ಪಹೀ ವಿಚಂಭೂ ಪಾವೇ। ತೋ ಸರ್ವಾಂಗೇ ಮೀ ಕರೂ ಧಾಂವೇ। ತ್ಯಾಚೇ ನಾಮ ಜಿಂಹೀ ಸ್ಮರಾವೇ। ತ್ಯಾಂಸೀ ಮ್ಯಾ ತಾರಾವೇ ಸರ್ವಥಾ ॥೩೫೫॥ ಜೇವೀ ತಾನ್ಹಯಾಲಾಗೀ ಮಾತಾ । ತೇವೀ ಭಕ್ತಾಂಚೀ ಮಜ ಚಿಂತಾ । ತ್ಯಾಂಚೀ ಸೇವಾಹೀ ಕರಿತಾ । ಮೀ ಸರ್ವಥಾ ಲಾಜೇನಾ ॥೩೫೬॥ ಮಾತಾ ಬಾಳಕಾಚೇ ಪುರವೀ ಕೋಡ । ತೈಸೇ ತೇ ಮಾಝೇ ಲಳೇವಾಡ । ತ್ಯಾಂಚೇ ಪ್ರೇಮಚಿ ಮಜ ಗೋಡ । ಉಪಚಾರಚಾಡ ಮಜ ನಾಹೀ ॥೩೫೭॥ ಮೀ ಶರೀರ ತೋ ಮಾಝಾ ಆತ್ಮಾ । ಪ್ರೇಮಳ ಅಸೇ ಪಢಿಯಾ ಆಮ್ಹಾ । ಪ್ರೇಮಳಾವರತೀ ಸೀಮಾ । ಭಕ್ತೀಚಾ ಮಹಿಮಾ ಚಢೇನಾ॥೩೫೮॥ ತ್ಯಾಸೀ ಝಣೇ ಕಾಳ ಸಂಹಾರೀ।

ಉಪನಿಷದ್‌ಗಳು ಅವರಲ್ಲಿ ಬರುವುವು. ಸ್ವಧರ್ಮಗಳು ಅವರಲ್ಲಿ ಆನಂದದಿಂದ ವಸತಿ ಮಾಡುವುವು. ನಾರದರು, ಸನಕಾದಿಕರು ಅವರ ಮನೆಗೆ ಅತಿಶಯ ಪ್ರೀತಿಯಿಂದ ಹೋಗಲು ಇಚ್ಛಿಸುತ್ತಿರುವರು ॥೩೪೫॥ ಇವರು ನನ್ನ ನಾಮ ಸಂಕೀರ್ತನೆಯನ್ನು ಗರ್ಜಿಸುತ್ತ ಅತ್ಯಂತ ಪ್ರೇಮದಿಂದ ನನ್ನ ಕೀರ್ತಿಯ ಗುಣಗಾನವನ್ನು ಮಾಡುವರು. ನನ್ನ ರಾಮನಾಮದ ಪ್ರಭಾವದಿಂದ ಇವರಿಗೆ ಸುಖದುಃಖಗಳ ದ್ವಂದ್ವಗಳು ಯಾವ ಬಾಧೆಯನ್ನೂ ಕೊಡಲಾರವು ॥೩೪೬॥ ಇಂತಹ ನನ್ನ ಭಕ್ತಿಯನ್ನು ಕಂಡು ಆತ್ಮಶಾಂತಿಯು ಅತ್ಯಂತ ಪ್ರೇಮದಿಂದ ಅವರತ್ತ ಧಾವಿಸಿ ಬರುವುದು. ಆಗ ಅವರಲ್ಲಿ ರಮಮಾಣಗೊಂಡು ತಿರುಗಿ ಹೋಗುವುದನ್ನು ಮರೆತುಬಿಡುವುದು ॥೩೪೭॥ ಅವರನ್ನು ಪೀಡಿಸಲೆಂದು ಬರುವ ಎಲ್ಲ ದೂಷಣೆಗಳು ಅವರ ಭೂಷಣೆಯಾಗಿ ಪರಿವರ್ತಿಸುವುವು. ಹೀಗಾಗುವುದಕ್ಕೆ ಇದು ನನ್ನ ಭಕ್ತಿಯ ಪರಿಪೂರ್ಣ ಪ್ರಸನ್ನತೆ ಎಂದು ಹೇಳುವರು ॥೩೪೮॥ ಸಾಯುಜ್ಯಾದಿ ನಾಲ್ಕೂ ಮುಕ್ತಿಗಳು ಇವರಲ್ಲಿ ಸೇವೆ ಮಾಡಲು ಬರುವುವು. ಇವರು ಎಲ್ಲಿಯಾದರೂ ವಿಷಯಗಳ ಸೇವನೆ ಮಾಡುತ್ತಿರಲು ಆಗ ಸಾಯುಜ್ಯ ಮುಕ್ತಿಯು ಸೇವೆಯನ್ನು ಮಾಡುತ್ತಿರುವುದು ॥೩೪೯॥ ಋದ್ಧಿಸಿದ್ಧಿಗಳು ಇವರ ಮನೆಯ ಸೇವಕರಾಗಿರುವುವು. ಆದರೆ ಇವರು ಇವುಗಳ ಅಪೇಕ್ಷೆಯನ್ನು ಸ್ವಲ್ಪವೂ ಕೂಡ ಮಾಡಲಾರರು. ನನ್ನ ಭಕ್ತಿ ಪ್ರೇಮದಲ್ಲಿಯೇ ಇವರ ವಿಶ್ವಾಸವಿರುವುದು ॥೩೫೦॥ ಹೀಗೆ ಇವರ ದೃಢಭಕ್ತಿಯನ್ನು ಕಂಡು ನಾನೂ ಕೂಡ ಇವರಲ್ಲಿ ಅನನ್ಯ ಪ್ರೀತಿಯನ್ನು ಮಾಡುವೆನು. ನನ್ನ ಪ್ರಿಯ ಭಕ್ತರು ಎಲ್ಲಿ ನನ್ನ ದಾರಿ ಕಾಯುವರೋ, ಅಲ್ಲಿ ನಾನು ಸ್ವತಃ ಪ್ರಕಟನಾಗುವೆನು ॥೩೫೧॥ ಭಕ್ತರು ಸಹಜವಾಗಿ ನುಡಿಯಲು, ಅವರ ನುಡಿಗಳನ್ನು ಸ್ವತಃ ನಾನೇ ಆಗುವೆನು. ಅವರ ನುಡಿಗಳ ಒಳ ಹೊರಗೆ ಶಬ್ದರೂಪದಿಂದ ನಾನೇ ಮುಂದಾಗುವೆನು ॥೩೫೨॥ ನನ್ನ ಭಕ್ತನು ಕೌತುಕದಿಂದ ಸಹಜವಾಗಿ ಹರುಳುಗಳ ಆಟವನ್ನು ಆಡುತ್ತಿದ್ದರೆ, ಆಗ ಆ ಹರಳುಗಳು ನಾನಾಗುವೆನು, ಆತನು ಯಾರತ್ತ ಕೃಪಾದೃಷ್ಟಿಯಿಂದ ನೋಡುವನೋ, ಆತನ ಸಂಸಾರದ ದೃಢಬಂಧನವನ್ನು ನಾನು ಮುರಿದುಹಾಕುವೆನು ॥೩೫೩॥ ಆತನು ಯಾವ ಮಾರ್ಗದಲ್ಲಿ ನನ್ನ ದಾರಿಯನ್ನು ಕಾಯುತ್ತಿರುವನೋ, ಅಲ್ಲಿ ನಾನು ಸುಖದ ರಾಜ್ಯವನ್ನು ಸೃಷ್ಟಿಸುವೆನು. ಆತನು ಯಾರನ್ನು ಉದ್ಧರಿಸು ಎಂದು ನನಗೆ ಹೇಳುವನೋ, ಆತನನ್ನು ನಾನು ನನ್ನ ಪದವಿಯಲ್ಲಿ ಸ್ಥಿರಮಾಡುವೆನು ॥೩೫೪॥ ಆತನ ಮೇಲೆ ಸ್ವಲ್ಪಾದರೂ ಸಂಕಟವು ಒದಗಲು ಆಗ ನಾನು ಸರ್ವಾಂಗದಿಂದ ಆತನತ್ತ ಧಾವಿಸುವೆನು. ಆತನ ನಾಮಸ್ಮರಣೆಯನ್ನು ಯಾರು ಮಾಡುವರೋ, ನಾನು ಅವರನ್ನು ಉದ್ಧರಿಸುವೆನು ॥೩೫೫॥ ಯಾವ ಪ್ರಕಾರವಾಗಿ ತಾಯಿಯು ತನ್ನ ಕೂಸಿನ ಕಾಳಜಿಯನ್ನು ಹೇಗೆ ಮಾಡುತ್ತಿರುವಳೋ, ಅದೇ ಪ್ರಕಾರವಾಗಿ ನಾನು ನನ್ನ ಭಕ್ತರ ಚಿಂತೆಯನ್ನು ಮಾಡುತ್ತಿರುವೆನು. ಆ ಭಕ್ತರ ಸೇವೆಯನ್ನು ಮಾಡುತ್ತಿರಲು ನನಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲ ॥೩೫೬॥ ತಾಯಿಯು ತನ್ನ ಬಾಲಕನ ಇಚ್ಛೆಯನ್ನು ಪೂರೈಸುತ್ತಲೇ ಇರುವಳು. ಅದರಂತೆಯೇ ನನ್ನ ಭಕ್ತರು ನನಗೆ ಸಲುಗೆಯ ಪ್ರಿಯರಾಗಿರುವರು. ಅವರ ಪ್ರೇಮದಲ್ಲಿ ನನಗೆ ಅತ್ಯಂತ ಆಸಕ್ತಿವಿರುವುದು. ಇದನ್ನು ಬಿಟ್ಟರೆ ನನಗೆ ಇತರ ಉಪಚಾರಗಳ ಅಪೇಕ್ಷೆಯೇ ಇರುವುದಿಲ್ಲ ॥೩೫೭॥

ಯಾಲಾಗೀ ತ್ಯಾ ಆಂತಬಾಹೇರೀ। ಮೀ ನಿಜಾಂ ಗಾಚೇ ದುರ್ಗ ಕರೀ। ಐಶೀ ಪ್ರೀತಿ ಪುರೀ ಪ್ರೇಮಳಾಚೀ।೩೫೯॥ ತೇಥ ಕಾಳಾಚೇನಿ ಹಟತಟೇ। ಲಾವೂನಿ ಬ್ರಹ್ಮಸ್ಥಿತೀಚೇ ವಾಟೇ । ಮಾಝೋ ಭಕ್ತ ನೇಟೇಪಾಟೇ । ಆಪಣಿಯಾ ಆಂತವಟೇ ಸ್ವಸುಖೇ ಬಸವೀ ।೩೬೦॥ ತ್ಯಾಚೇ ಸ್ವಾಭಾವಿಕ ಕರ್ಮ ಜಾಣ । ತೇ ಮಾಝೇ ಪ್ರೀತೀಚೇ ಪೂಜನ । ತೋ ದೇಖೇ ತೇ ಮಾಝೇ ದರ್ಶನ । ತ್ಯಾಚೇ ಚಾವಟೀ ತೇ ಸ್ತವನ ಖುಣೇಚೇ ಮಾಝೇ ।೩೬೧॥ ತೋ ಸ್ವಯೇ ಕರೀ ಆರೋಗಣ । ತೇಚಿ ಮಜ ನೈವೇದ್ಯ ಅರ್ಪಣ। ತ್ಯಾಚಿ ನಿದ್ರಾ ತೇ ಜಾಣ। ಸಮಾಧಿ ಸಂಪೂರ್ಣ ಪೈ ಮಾಝಿ।೩೬೨॥ ತ್ಯಾಚಾ ನಿಮೇಷೋನ್ಮೇ ಷಾಂಚಾ ವ್ಯಾಪಾರ । ತೋ ಮಜ ಅತ್ಯಂತ ಪ್ರಿಯಕರ । ತ್ಯಾಚೇ ಶ್ವಾಸಾಚೇ ಪರಿವಾರ । ಮಜ ಅಪಾರ ಸುಖವಿತೀ ।೩೬೩॥ ಭಕ್ತಾಂಚೇ ಶರೀರಸ್ವಭಾವಸ್ಥಿತೀ । ತೇಣೇ ಮೀ ಸುಖಾವೇ ಶ್ರೀಪತೀ । ಐಸೇ ಸಪ್ರೇಮ ಭಕ್ತ ಆವಡತೀ । ಮಾಝೀ ಅನನ್ಯಪ್ರೀತೀ ಮದ್ಭಕ್ತಾ ।೩೬೪॥ ಚಾರೀ ಪುರುಷಾರ್ಥ ನಾತಳತೀ । ಉಪೇಕ್ಷೂನಿ ಚಾರೀ ಮುಕ್ತೀ । ಸಪ್ರೇಮ ಕರಿತೀ ಮಾಝೀ ಭಕ್ತೀ । ಮಜಚಿ ಪಾವತೀ ಮದ್ಭಕ್ತ ।೩೬೫॥ ಗಂಗಾ ಸಾಗರೀಮೀನಲೀ ಮಿಳೇ । ಮೀನಲೀ ತ್ಯಾಚೀಚ ತ್ಯಾವರೀ ಲೋಳೇ । ತೈಸಾ ಭಕ್ತ ಮಿಳೋನಿ ಭಾವಬಳೇ । ಮಾಝೇ ಭಕ್ತೀಚೇ ಸೋಹಳೇ ಮಜಮಾಜೀ ಭೋಗೀ ।೩೬೬॥ ಜೇವೀ ಕಾ ಭರೇ ತರುಣಾಂಗೀ । ತರುಣಪಣ ಭೋಗೀ ಸರ್ವಾಂಗೀ । ತೇವೀ ಭಕ್ತ ಮಿಳೋನಿ ಮಜಲಾಗೀ । ಮಾಝೇ ಭಕ್ತೀಚೇ ಭೋಗೀ ವೈಭವ ।೩೬೭॥ ಕಾ ಸತರಾವೀಚೇ ಗೋಡಪಣ । ಚಂದ್ರ ಜಾಣೇ ಆಪುಲೇ ಆಪಣ । ತೇವೀ ಮೀ ಹೋಊನಿ ಮಾಝೇ ಭಜನ । ಭಕ್ತ ಸಜ್ಞಾನ ಜಾಣತೀ ।೩೬೮॥ ಜಾತಿ ಸ್ವಭಾವೇ ಉದಕ ಏಕ । ತೇಚಿ ಗಂಗಾ ಯಮುನಾ ನಾವೀ ದೇಖ । ಪ್ರಯಾಗಸಂಗಮೀ ಉದ್ಧರೀ ಲೋಕ । ತೇವೀ ಭಕ್ತ ಭಾವಿಕ ಮದ್ಯೋಗೇ ।೩೬೯॥ ತೇವೀ ಮಾಝೇ ಭಕ್ತ ಮಜ ಮಿಳೂನ । ಅನನ್ಯ ಕರಿತೀ ಮಾಝೇ ಭಜನ । ಯೇಥ ಭಾವಿಕ ಸಾತ್ತ್ವಿಕ ಅತಿದೀನ । ಉದ್ಧರತೀ ಜಾಣ ಮದ್ಯೋಗೇ ।೩೭೦॥ ಪೃಥ್ವಿ ನಿಧಾನೇ ಭರಲೀ ಆಹೇ । ಪರೀ ಪಾಯಾಳೇವೀಣ ಪ್ರಾಪ್ತಿ ನೋಹೇ । ತೇವೀ ಆತ್ಮಾ ಸ್ವತಃಸಿದ್ಧ ಆಹೇ । ಗುರುಕೃಪಾ ಲಾಹೇ ತೈ ಪ್ರಾಪ್ತೀ ।೩೭೧॥ ಚಹೂ ಪುರುಷಾರ್ಥಾತೇ

ನಾನು ಶರೀರನಾಗಿರುವೆನು ಭಕ್ತನು ನನ್ನ ಆತ್ಮನಾಗಿರುವನು. ಪ್ರೇಮಳ ಭಕ್ತನು ನನಗೆ ಅತ್ಯಂತ ಪ್ರಿಯನಾಗಿರುವನು. ಭಕ್ತಿಯ ಮಹಿಮೆಯು ಎಷ್ಟೇ ದೊಡ್ಡದಾಗಿರಲಿ, ಆದರೆ ಈ ಪ್ರೇಮಳ ಭಕ್ತನಿಗಿಂತ ದೊಡ್ಡದಾಗಲು ಶಕ್ಯವಿಲ್ಲ ।೩೫೮॥ ಅಕಸ್ಮಾತಾಗಿ ಕಾಲವು ಆತನನ್ನು ಸಂಹರಿಸಬಹುದೆಂದು ತಿಳಿದು ನಾನು ಆತನ ಒಳಹೊರಗೆ ನನ್ನ ಅಂಗದ ದುರ್ಗವನ್ನು ಕಟ್ಟುವೆನು. ಪ್ರೇಮಳ ಭಕ್ತನಲ್ಲಿ ನನ್ನ ಇಂತಹ ಪೂರ್ಣ ಪ್ರೀತಿ ಇರುವುದು ।೩೫೯॥ ಅಲ್ಲಿ ಕಾಲನ ನಿಗ್ರಹವನ್ನು ಮಾಡಿ ಭಕ್ತನನ್ನು ಬ್ರಹ್ಮಸ್ಥಿತಿಯ ಮಾರ್ಗಕ್ಕೆ ಹಚ್ಚಿ ಆತನನ್ನು ನನ್ನ ಆತ್ಮಸ್ವರೂಪದ ಆತ್ಮಸುಖದಲ್ಲಿ ಕೂಡಿಸುವೆನು ।೩೬೦॥ ಇಂತಹ ಭಕ್ತರ ಯಾವುದೇ ಸ್ವಾಭಾವಿಕ ಕರ್ಮವಿರಲಿ ಅದುವೇ ನನ್ನ ಪ್ರೇಮದ ಪೂಜೆಯಾಗಿರುವುದು. ಆತನನ್ನು ಕಾಣುವಿಕೆಯೇ ನನ್ನ ದರ್ಶನವಾಗಿರುವುದು. ಆತನು ಏನೇ ನುಡಿಯಲಿ ಅದು ನನ್ನ ಸ್ತವನೆಯಾಗಿರುವುದು ।೩೬೧॥ ಆತನು ಸ್ವತಃ ಯಾವ ಭೋಜನವನ್ನು ಮಾಡುವನೋ, ಅದೇ ನನಗೆ ನೈವೇದ್ಯವನ್ನು ಸಮರ್ಪಿಸಿದಂತಾಗಿರುವುದು. ಆತನ ನಿದ್ರೆಯೇ ನನ್ನ ಸಮಾಧಿಯಾಗಿರುವುದು ।೩೬೨॥ ಆತನು ತನ್ನ ಕಣ್ಣುಗಳನ್ನು ಮಿಳುಕಿಸುತ್ತಿರಲು ಅದು ನನಗೆ ಅತ್ಯಂತ ಪ್ರಿಯವಾಗುವುದು. ಆತನ ಉಸಿರಾಡುವಿಕೆಯು ನನಗೆ ಅತ್ಯಂತ ಆನಂದವನ್ನು ಕೊಡುತ್ತಿರುವುದು ।೩೬೩॥ ಭಕ್ತನ ಶರೀರದ ಯಾವ ಸ್ವಾಭಾವಿಕವಾದ ಸ್ಥಿತಿಯನ್ನು ಕಂಡು ಲಕ್ಷ್ಮೀಪತಿಯಾದ ನಾನು ಅತ್ಯಂತ ಆನಂದಿತನಾಗುವೆನು. ಇಂತಹ ಏಕನಿಷ್ಠ ಭಕ್ತರು ನನಗೆ ಅತ್ಯಂತ ಪ್ರಿಯರಾಗಿರುವರು. ನನ್ನ ಭಕ್ತರಲ್ಲಿ ನನ್ನದೂ ಕೂಡ ಅನನ್ಯ ಪ್ರೀತಿವಿರುವುದು ।೩೬೪॥ ಈ ಯಾವ ಭಕ್ತರು ನಾಲ್ಕುಪುರುಷಾರ್ಥಗಳನ್ನು ಸ್ಪರ್ಶಕೂಡ ಮಾಡಲಾರರು ಮತ್ತು ನಾಲ್ಕೂ ಮುಕ್ತಿಗಳನ್ನು ದೂರ ಸರಿಸಿ ನಿಃಸ್ವಾರ್ಥ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡುತ್ತಿರುವರು. ಈ ಭಕ್ತರು ನನ್ನನ್ನೇ ಪ್ರಾಪ್ತಮಾಡಿಕೊಳ್ಳುವರು ।೩೬೫॥ ಗಂಗೆಯು ಸಮುದ್ರವನ್ನು ಸೇರಿ ಅದರಲ್ಲಿ ಏಕರೂಪವಾಗಿ ಅದರಲ್ಲಿಯೇ ಉರುಳಾಡುತ್ತಿರುವಂತೆ ಭಕ್ತರು ತಮ್ಮ ಭಕ್ತಿಯ ಸಾಮರ್ಥ್ಯದಿಂದ ನನ್ನಲ್ಲಿ ಏಕರೂಪರಾಗಿ ನನ್ನ ಭಕ್ತಿಯ ಸಮಾರಂಭವನ್ನು ನನ್ನಲ್ಲಿಯೇ ಭೋಗಿಸುತ್ತಿರುವರು ।೩೬೬॥ ತರುಣ ಸ್ತ್ರೀಯಳು ಯೌವನದ ಮದದಿಂದ ಸರ್ವಾಂಗಯುಕ್ತಳಾಗಿ ತರುಣನ ಉಪಭೋಗವನ್ನು ಪಡೆಯುವಳು. ಅದರಂತೆ ಭಕ್ತನು ಪ್ರೇಮದಿಂದ ನನ್ನಲ್ಲಿ ಏಕರೂಪನಾಗಿ ನನ್ನ ಭಕ್ತಿಯ ವೈಭವವನ್ನು ಭೋಗಿಸುತ್ತಿರುವನು ।೩೬೭॥ ಅಥವಾ ಚಂದ್ರನು ತನ್ನ ಸತರಾವೀ ಕಲೆಯ ಆನಂದವನ್ನು ತಾನೇ ತಾನಾಗಿ ಹೇಗೆ ಪಡೆಯುತ್ತಿರುವನೋ, ಅದರಂತೆಯೇ ನನ್ನಲ್ಲಿ ಏಕರೂಪರಾಗಿ ನನ್ನ ಭಕ್ತಿಯನ್ನು ಹೇಗೆ ಮಾಡಬೇಕೆಂಬುವುದನ್ನು ಸಜ್ಞಾನಿ ಭಕ್ತರು ತಿಳಿದಿರುವರು ।೩೬೮॥ ಎಲ್ಲ ಸ್ಥಳಗಳಲ್ಲಿಯೂ ಉದಕವು ಒಂದೇ ಇರುವುದು. ಆದರೆ ಅದೇ ಉದಕವು ಗಂಗಾ, ಯಮುನಾ, ಹೀಗೆ ಭಿನ್ನ ಭಿನ್ನವಾಗಿ ನಾಮಗಳನ್ನು ಧರಿಸಿಕೊಂಡು ಪ್ರಯಾಗದಲ್ಲಿ ಒಂದುಗೂಡುವುವು ಮತ್ತು ಈ ಸಂಗಮರೂಪದಲ್ಲಿ ಅನೇಕರ ಉದ್ಧಾರವಾಗುವುದು. ಅದರಂತೆ ನನ್ನಲ್ಲಿ ಐಕ್ಯವಾಗುವುದರಿಂದ ಭಾವಿಕ ಭಕ್ತರು ಬಹುದೊಡ್ಡ ಯೋಗ್ಯತೆಯನ್ನು ಪಡೆದುಕೊಳ್ಳುವರು ।೩೬೯॥ ಹೀಗೆ ನನ್ನ ಭಕ್ತರು ನನ್ನಲ್ಲಿ ಏಕರೂಪರಾಗಿ ಏಕನಿಷ್ಠೆಯಿಂದ ನನ್ನ ಭಜನೆಯನ್ನು ಮಾಡುವರು. ಇಂತಹ ಭಜನೆಯಿಂದ ನನ್ನಲ್ಲಿ ಏಕರೂಪತೆಯು ಪ್ರಾಪ್ತವಾದ್ದರಿಂದ ಇವರಿಂದ ಭಾವಿಕ, ಸಾತ್ವಿಕ ಮತ್ತು ದೀನಜನರ ಉದ್ಧಾರವಾಗುವುದು ।೩೭೦॥

ತ್ಯಾಗಿತೀ । ಚಾರೀ ಮುಕ್ತಿ ಉಪೇಕ್ಷಿತೀ । ಪಂಚಮ ಪುರುಷಾರ್ಥಾಚೀ ಭಕ್ತೀ । ಮಜ ಪಢಿಯಂತೀ ಉದ್ಧವಾ ।।೬೭೨।। ಯೇಚಿ ಭಕ್ತೀಚೇ ಮಜ ಕೋಡ । ಹೇಚಿ ಭಕ್ತ ಮಾಝೇ ಲಳೇವಾಡ । ಮಜ ಅವಾಪ್ತಕಾಮಾ ತ್ಯಾಂಚೇ ಚಾಡ । ಐಸೇ ಪ್ರೇಮ ಗೋಡ ತಯಾಂಚೇ ।।೬೭೩।। ಆಮ್ಹೀ ಪ್ರೇಮಾಚೇ ಪಾಹುಣೇ । ಭಾವಾರ್ಥಾಚೇ ಆಂದಣೇ । ಮ್ಯಾ ಅನನ್ಯಾಚೀ ಸೇವಾ ಕರಣೇ । ಜೀವೇಪ್ರಾಣೇ ಸರ್ವಸ್ವೇ ।।೬೭೪।। ಮಾಝೇ ನಾಮ ಆತ್ಮಾರಾಮ । ಮೀ ಅವಾಪ್ತಸಕಳಕಾಮ । ಪರೀ ಪ್ರೇಮಳಾಲಾಗೀ ಸಕಾಮ । ಐಸೇಗೋಡ ಪ್ರೇಮ ತಯಾಂಚೇ ।।೬೭೫।। ಮಗ ಆಪುಲಿಯೇ ಸಂವಸಾಟೀ । ಪ್ರೇಮಳೂ ಘೇ ಮೀ ಉಠಾ ಉಠೀ । ವರೀವ ಸುಖಹೀ ದೇ ಶೇವಟೀ । ಮಜ ಪ್ರಿತಿ ಮೋಠೀ ಪ್ರೇಮಾಚೀ ।।೬೭೬।। ಪ್ರೇಮ ಮಜಸೀ ಮೋಲೇ ಅಧಿಕ । ಸಂವಸಾಟೀ ಕರಿತಾ ನವ್ಹೇ ದೇಖ । ಯಾಲಾಗೀ ವರೀವ ದೇತಾ ಸುಖ । ನ ಯೇ ತೈ ಸೇವಕ ಸೇಲೇಚಾ ಹೋಯ ।।೬೭೭।। ಪ್ರೇಮಾಚಾ ಜಿವ್ಹಾಳಾ ಪೂರ್ಣ । ಭಾವಾರ್ಥಾಚೀ ಉಣಖೂಣ । ಜಾಣತಾ ಮೀ ಏಕ ಶ್ರೀಕೃಷ್ಣ । ಇತರಾಂಸೀ ಜಾಣ ಕಳೇನಾ ।।೬೭೮।। ಮಜ ಗೋಪಿಕಾಂಚೀ ಕೋಣ ಗೋಡೀ । ತ್ಯಾಂಚ್ಯಾ ಪ್ರೇಮಾಚೀ ಜಾತಿ ಚೋಖಡೀ । ಯಾಲಾಗೀ ಮಜ ತ್ಯಾಂಚೀ ಆವಡೀ । ಅತಿಗಾಢೀ ಉದ್ಧವಾ ।।೬೭೯।। ಕುಬ್ಜಾ ಕಾಯ ಸುಂದರ ಹೋತೀ । ತಿಚ್ಯಾ ಪ್ರೇಮಾಚೀ ಮಜ ಪ್ರೀತೀ । ರಾಧಾ ಪ್ರಾರ್ಥೀ ಮೀ ವನಾಪ್ರತೀ । ಕಾಯ ವಿಷಯಾಸಕ್ತೀ ಲಾಗೂನೀ ।।೬೮೦।। ಕೋಣ ಭಕ್ತೀ ಕೇಲೀ ಗೋಪಾಳೀ । ಕಾಯ ತೀ ಸೋಂವಳೀ ಕೀ ವೋವಳೀ । ತ್ಯಾಂಚೇ ಉಚ್ಛಿಷ್ಟ ಕವಳ ಮೀ ಗಿಳೀ । ಪ್ರೇಮಸಂಮೇಳೀ ಡುಲ್ಲತ ।।೬೮೧।। ಪಾಂಡವಾಂಚ್ಯಾ ಬಾಚೇ ಮೀ ಕಾಯ ಲಾಗೇ । ತ್ಯಾಂಚೀ ವೇವಟೇ ಸೋಶೀ ಅನೇಗೇ । ಮೀ ಸುದಾಮ್ಯಾಚ್ಯಾ ಪಾಯಾ ಲಾಗೇ । ಕಾಯ ತ್ಯಾಚೇನಿ ಪಾಂಗೇ ಪಾಂಗಲೋ ।।೬೮೨।। ಮೀ ಕಾಯ ಅನ್ನಾಸೀ ದುಕಾಳಲೋ । ತೋ ಯಜ್ಞಪತ್ನ್ಯಾಂಸೀ ಮಾಗೋ ಗೇಲೋ । ಮೀ ಭಾವಾರ್ಥಾ ಭುಕೇಲೋ । ಪ್ರೇಮಾಚ್ಯಾ ಪಾವಲೋ ಪಾಹುಣೇರಾ ।।೬೮೩।।

ಮಾಝೀ ಕಾಯ ಕ್ಷೀಣ ಝಾಲೀ ಶಕ್ತೀ । ಮಜ ಗೋಪಿಕಾ ದಾವೀ ಬಾಂಧಿತೀ । ತ್ಯಾಂಚ್ಯಾ ನಿಜಪ್ರೇಮಾಚೀ ಜಾತೀ । ಮೀ ಸ್ವಯೇ ಶ್ರೀಪತೀ ಪೋಖಿತೂ ।।೬೮೪।। ಮೀ ನ ಲಾಗತಾ ಕೋಣಾಚೀ ಕವಡೀ ।

ಯಾವ ಈ ಪೃಥ್ವಿಯು ಗುಪ್ತ ನಿಧಿಯಿಂದ ತುಂಬಿಕೊಂಡಿರುವುದು. ಆದರೆ ಆ ನಿಧಿಯು ಮುಂದೆ ಕಾಲು ಮಾಡಿ ಹುಟ್ಟಿದ ಮನುಷ್ಯನ ಹೊರತಾಗಿ ಇತರರಿಗೆ ಕಾಣುವುದಿಲ್ಲ. ಅದರಂತೆ ಆತ್ಮವು ಮೂಲದಲ್ಲಿಯೇ ಸ್ವತಃಸಿದ್ಧವಾಗಿರುವುದು. ಆದರೆ ಗುರುಕೃಪೆಯಾದ ಸಮಯದಲ್ಲಿ ಆ ಆತ್ಮದ ಪ್ರಾಪ್ತಿಯಾಗುವುದು ।।೬೭೧।। ಭಕ್ತರು ನಾಲ್ಕು ಪುರುಷಾರ್ಥಗಳನ್ನು ತ್ಯಾಗ ಮಾಡುವರು. ನಾಲ್ಕು ಮುಕ್ತಿಗಳನ್ನೂ ಕೂಡ ಸ್ಪರ್ಶ ಮಾಡಲಾರರು. ಆದರೆ ಐದನೆಯ ಪುರುಷಾರ್ಥದ ನನ್ನ ಭಕ್ತಿಯನ್ನು ಮಾಡುವರು. ಹೇ ಉದ್ಧವಾ, ಇವರೇ ನನಗೆ ಪ್ರಿಯರಾಗಿರುವರು ।।೬೭೨।। ಇಂತಹ ಭಕ್ತರಲ್ಲಿ ನನಗೆ ಅತ್ಯಂತ ಪ್ರೇಮವಿರುವುದು. ಇಂತಹ ಭಕ್ತರು ನನಗೆ ಬಹು ಸಲುಗೆಯವರಾಗಿರುವರು. ನಿರಪೇಕ್ಷ ಭಕ್ತರು ನನಗೆ ಯಾವಾಗಲೂ ಕೌತುಕಪ್ರಾಯರಾಗಿರುವರು. ಇವರ ಪ್ರೇಮವು ನನಗೆ ಅತ್ಯಂತ ಆನಂದಕರಣವಾಗಿರುವುದು ।।೬೭೩।। ನಾನು ಪ್ರೇಮದ ಬೀಗನಾಗಿರುವೆನು ಮತ್ತು ಭಾವಿಕರ ಸೇವಕನಾಗಿರುವೆನು. ನಾನು ಏಕನಿಷ್ಠ ಭಕ್ತರ ಸೇವೆಯನ್ನು ಜೀವಭಾವದಿಂದ ಮಾಡುತ್ತಿರುವೆನು ।।೬೭೪।। ನನ್ನ ನಾಮವು ಆತ್ಮಾರಾಮವು, ನಾನು ಪೂರ್ಣಕಾಮನು, ಆದರೂ ಕೂಡ ಪ್ರೇಮಳ ಭಕ್ತರ ಕಾಮನೆಯನ್ನು ಮಾಡುವೆನು. ಕಾರಣ ಅವರ ಪ್ರೇಮವು ಅತಿಶಯ ಆನಂದಕಾರಕವಾಗಿರುವುದು ।।೬೭೫।। ಪ್ರೇಮಳ ಭಕ್ತರನ್ನು ನಾನು ಕೂಡಲೇ ಜೊತೆಗೂಡುವೆನು, ಕೊನೆಗೆ ನನ್ನ ಸುಖಶಾಂತಿಯನ್ನು ಅವರಿಗೆ ಕೊಡುವೆನು. ನನಗೆ ಅವರ ಪ್ರೇಮವು ಅತಿಶಯ ಪ್ರಿಯವಾಗಿರುವುದು ।।೬೭೬।। ನಿಃಸ್ವಾರ್ಥ ಪ್ರೇಮವು ನನಗಿಂತಲೂ ಅಧಿಕ ಮೌಲ್ಯ ಉಳ್ಳದ್ದಾಗಿದೆ. ನನಗೆ ಆ ಪ್ರೇಮದ ಸರಿಸಮ ಮಾಡಲು ಬರುವುದಿಲ್ಲ. ನನ್ನ ಸುಖವನ್ನು ನನ್ನ ಭಕ್ತನಿಗೆ ಕೊಡುವುದಾಗದಿದ್ದರೆ, ನಾನು ಆತನ ಸೇವಕನಾಗುವೆನು ।।೬೭೭।। ಪ್ರೇಮದ ನಿಜವಾದ ಮರ್ಮವನ್ನು ಮತ್ತು ಭಾವಾರ್ಥಿಯ ಲಕ್ಷಣವನ್ನು ಶ್ರೀಕೃಷ್ಣನಾದ ನಾನೊಬ್ಬನು ಮಾತ್ರ ತಿಳಿದಿರುವೆನು. ಇತರರಿಗೆ ಇದು ತಿಳಿಯಲು ಶಕ್ಯವಿಲ್ಲ ।।೬೭೮।। ನನಗೆ ಗೋಪಿಕೆಯರಲ್ಲಿ ಅತ್ಯಂತ ಪ್ರೀತಿಯ ಕಾರಣವೇನೆಂದರೆ ಅವರಲ್ಲಿರುವ ಪರಿಶುದ್ಧ ನಿರ್ಮಲವಾದ ಪ್ರೇಮವಾಗಿರುವುದು. ಹೇ ಉದ್ಧವಾ, ಆದ್ದರಿಂದಲೇ ನನಗೆ ಅವರಲ್ಲಿ ಅತಿಶಯ ಪ್ರೀತಿ ಉಂಟಾಗಿರುವುದು ।।೬೭೯।। ಕುಬ್ಜಾಳು ಸುಂದರಳಾಗಿದ್ದಳೇ? ಆದರೆ ಆಕೆಯ ಅನನ್ಯ ಪ್ರೇಮವು ನನಗೆ ಅತಿಶಯ ಪ್ರಿಯವಾಯಿತು. ನಾನು ವನಕ್ಕೆ ಹೋಗಿ ರಾಧೆಯನ್ನು ಪ್ರಾರ್ಥಿಸುತ್ತಿದ್ದೆನು. ಇದು ವಿಷಯಾಸಕ್ತಿಗಾಗಿಯೆ? ।।೬೮೦।। ಗೋಪಾಲಕರು ನನ್ನನ್ನು ಎಷ್ಟು ಭಕ್ತಿಯನ್ನು ಮಾಡಿದರು ? ಆ ಗೋಪಾಲಕರು ಪವಿತ್ರರೊ, ಅಪವಿತ್ರರೋ ಎಂಬ ವಿಚಾರವನ್ನು ನಾನು ಮಾಡಲಿಲ್ಲ. ಅವರ ಎಂಜಲ ಅನ್ನವನ್ನು ನಾನು ನುಂಗುತ್ತ ಪ್ರೇಮದಿಂದ ತೂಗಾಡುತ್ತಿದ್ದೆನು ।।೬೮೧।। ಪಾಂಡವರಿಗಾಗಿ ನಾನು ಸಾಲಗಾರನಾಗಿದ್ದೆನೆಯೇ? ಆದರೆ ಅವರಿಗೆ ಒದಗಿದ ಅನೇಕ ಸಂಕಟಗಳನ್ನು ನಾನು ಸೋಶಿಸಿದೆನು. ನಾನು ಸುದಾಮನ ಕಾಲು ಮುಗಿದೆನು, ಆದರೆ ನಾನು ಆತನ ಪಾದಸೇವಕನಾಗಿದ್ದೆನೆಯೇ? ।।೬೮೨।। ನನ್ನ ಮನೆಯಲ್ಲಿ ಏನಾದರೂ ಅನ್ನದ ಬರಗಾಲ ಬಿದ್ದಿತ್ತೇ? ಇದಕ್ಕಾಗಿ ನಾನು ಯಾಜ್ಞಿಕ ಪತ್ನಿಯರಲ್ಲಿ ಅನ್ನವನ್ನು ಬೇಡಲು ಹೋಗಿದ್ದೇನೆಯೇ? ನಾನು ಶುದ್ಧ ಭಾವಕ್ಕಾಗಿ ಹಸಿದವನಾಗಿರುವೆನು, ಪ್ರೇಮದ ಉಪಚಾರ ಸ್ವೀಕರಿಸುವವನಾಗಿರುವೆನು ।।೬೮೩।।

ಅರ್ಜುನಾಚೇ ಧೂತಸೇ ಘೋಡೇ । ಧರ್ಮಾಘರೀ ಉಚ್ಛಿಷ್ಟೇ ಕಾಢೀ । ಮಜ ಅತಿ ಆವಡೀ ಪ್ರೇಮಾಚೀ ।।೩೮೫।। ಮಜ ಪ್ರೇಮಳಾಂಚೀ ಅತಿ ಆವಡೀ । ತೇ ಲೋಕೇಷಣಾಲಾಜ ದವಡೀ । ಮಹತ್ತ್ವಾಚ್ಯಾ ವಿಸರವೀ ಕೋಡೀ । ತ್ಯಾಂಚ್ಯಾ ಸೇವೇಚೀ ಜೋಡೀ ಮಜಲಾಗೀ ।।೩೮೬।। ಸಕಳ ಅಳಂಕಾರ ಲೇಊನಿ ಮಾತಾ । ನಿಜಪುತ್ರ ಮಸ್ತಕೀ ಲಾಡವಿತಾ । ತ್ಯಾಚ್ಯಾ ಕಂಟಾಳೇನಾ ಥುಂಕಮುತಾ । ತೇವೀ ಪ್ರೇಮಳೇ ಸರ್ವಥಾ ಮಜಲಾಗೀ ।।೩೮೭।। ಐಸಾ ಪ್ರೇಮಾಚೇನಿ ಅತಿಪಾಂಗೇ । ಮ್ಯಾ ಪಂಗಿಸ್ತ ಹೋಇಜೇ ಶ್ರೀರಂಗೇ । ಯಾಲಾಗೀ ತಯಾ ಪುಢೇಮಾಗೇ । ಸದಾ ಸರ್ವಾಂಗೇ ತಿಷ್ಠತ ।।೩೮೮।। ಉದ್ಧವಾ ಯಾದವ ಸಮಸ್ತ । ಅಸತಾ ಮಾಝೇ ಬಹುತಗೋತ । ತೂಂಚಿ ಪ್ರಿಯಕರ ಮಜ ಜೋ ಯೇಥ । ಮಾಝೇ ಪ್ರೇಮ ಅದ್ಭುತ ತುಜಲಾಗೀ ।।೩೮೯।। ಹೇ ಐಕೋನಿ ದೇವಾಚೀ ಗೋಠೀ । ಉದ್ಧವೇ ಪಾಯೀ ಘಾತಲೀ ಮಿಠೀ । ದೇವೋ ಸುಖಾವೋನಿ ಪೋಟೀ । ಉಠಾಉಠೀ ಆಲಿಂಗೀ ।।೩೯೦।। ಹೃದಯೀ ಹೃದಯ ಝಾಲೇ ಸಂಲಗ್ನ । ದೇಹೀ ದೇಹಾ ಪಡಿಲೇ ಆಲಿಂಗನ । ಮನೇಸೀ ಏಕ ಝಾಲೇ ಮನ । ಸ್ವಾನಂದ ಪೂರ್ಣ ವೋಸಂಡೇ ।।೩೯೧।। ದೇವೋ ವಿಸರಲಾ ದೇವಪಣ । ಭಕ್ತಾ ನಾಠವೇ ಭಕ್ತಪಣ । ದೋಘಾಂಚೇ ಉಡಾಲೇ ದೋನೀಪಣ । ಸ್ವಾನಂದೀ ಪೂರ್ಣ ಬುಡಾಲೇ ।।೩೯೨।। ಸೇವ್ಯ ಸೇವಕತಾ ಠೇಲೀ ಗೋಠೀ । ದ್ವೈತಭಾವಾಚೀ ಖುಂಟಲೀ ದೃಷ್ಟೀ । ಭಕ್ತಿಸಾಮ್ರಾಜ್ಯಾಚ್ಯಾ ಪಾಟೀ । ದೋಘಾ ಝಾಲೀ ಭೇಟೀ ನಿಜಾತ್ಮತಾ ।।೩೯೩।। ಸ್ಥೂಳ ಲಿಂಗ ಆಣಿ ಕಾರಣ । ಇಂಹೀ ಉಪಲಕ್ಷಿಜೇ ಮಹಾಕಾರಣ । ತೇ ದೇಹಚತುಷ್ಟಯಾಚೀ ಆಠವಣ । ಆಠವಿತೇ ಕೋಣ ತೇ ಠಾಯೀ ।।೩೯೪।। ತೇಥ ನಿಬಿಡ ಆಣಿ ನಿಘೋಟ । ಸುಖಸ್ವರೂಪ ಘನದಾಟ । ನಾಹೀ ಆದೀ ಮಧ್ಯ ಶೇವಟ । ತೇ ಝಾಲೇ ಪ್ರಕಟ ಸ್ವಯಂಭ ।।೩೯೫।। ನವಲ ದೇವಾಚೇ ಪೂರ್ಣಪಣ । ತೇಥಹೀ ಲಾಘವ ಕೇಲೇ ಜಾಣ । ಮೋಡೋ ನೇದೀಚಿ ಉದ್ಧವಪಣ । ಐಸಾ ಭಕ್ತ ಆನ ಮಜ ಮಿಳೇನಾ ।।೩೯೬।। ಉದ್ಧವ ಐಸಾ ಮಜಪಾಶೀ । ಕೋಣ ಮಿಳೇಲ ಅಳೋಂಚಾಸೀ । ಮಾಝೇ ನಿಜಗೋಡ ಕೋಣಾಪಾಶೀ । ಮ್ಯಾ ಸಾವಕಾಶೀ ಸಾಂಗಾವೇ ।।೩೯೭।। ಮಜ ನಿಜಧಾಮಾ ಗೇಲಿಯಾ ಜಾಣ । ಮಾಝೇ ಜೇ ನಿಃಸೀಮ ನಿಜಜ್ಞಾನ ।

ಗೋಪಿಕೆಯರು ನನ್ನನ್ನು ಹಗ್ಗದಿಂದ ಕಟ್ಟಿಹಾಕಿದರು. ಆ ಸಮಯದ ಬಂಧನದಲ್ಲಿ ತೊಡಕಿಕೊಳ್ಳಲು ಅಪ್ಪೊಂದು ನಾನು ಶಕ್ತಿಹೀನನಾಗಿದ್ದೇನೇಯೇ ? ಅವರ ಪ್ರೇಮದ ವೈಭವವನ್ನು ನಾನೇ ಸ್ವತಃ ಬೆಳೆಸುತ್ತಿರುವೆನು ।೩೮೪।। ನಾನು ಯಾರಿಗೂ ಒಂದು ಕವಡಿಯನ್ನೂ ಕೊಡಬೇಕಾಗಿದ್ದಿಲ್ಲ. ಹೀಗಿದ್ದರೂ ಅರ್ಜುನನ ರಥದ ಕುದುರೆಗಳ ಮೈತೊಳೆದೆನು. ಧರ್ಮರಾಜನ ಮನೆಯಲ್ಲಿ ಯಜ್ಞ ಸಮಯದಲ್ಲಿ ಎಂಜಲ ಎಲೆಗಳನ್ನು ತೆಗೆದೆನು. ಈ ಪ್ರಕಾರವಾಗಿನನಗೆ ಪ್ರೇಮದಲ್ಲಿ ಅತ್ಯಂತ ಅಪೇಕ್ಷೆ ಇರುವುದು ।೩೮೫।। ಪ್ರೇಮಳ ಭಕ್ತರಲ್ಲಿ ನನಗೆ ಅತ್ಯಂತ ಪ್ರೀತಿ ಇರುವುದು. ಅದಕ್ಕಾಗಿ ನಾನು ಲೋಕೇಷಣದ ನಾಚಿಕೆ ಹಿಡಿಯುವುದಿಲ್ಲ. ಮಹತ್ವಪೂರ್ಣ ಕಾರ್ಯಗಳನ್ನು ಒಂದಕ್ಕೆ ಸರಿಸಿ ಅವರ ಸೇವೆಯನ್ನು ಮಾಡಲು ನನಗೆ ಅತ್ಯಂತ ಪ್ರೇಮವಾಗುವುದು ।೩೮೬।। ತಾಯಿಯು ತನ್ನ ಕೂಸನ್ನು ಸಕಲ ಅಲಂಕಾರಗಳಿಂದ ಶೃಂಗರಿಸಿ ತನ್ನ ತೊಡೆ, ತಲೆಯ ಮೇಲೆ ಆಡಿಸುತ್ತಿರುವಳು. ಆಗ ಕೂಸು ಹೊಲಸು ಮಾಡಿದರೆ ಬೇಸರಪಡದೇ ಸ್ವಚ್ಛಗೊಳಿಸುವಳು. ಇದರಂತೆಯೇ ನನಗೆ ಪ್ರೇಮಳ ಭಕ್ತರು ಪ್ರಿಯರಾಗಿರುವರು ।೩೮೭।। ಈ ಪ್ರಕಾರವಾಗಿ ಪ್ರೇಮದ ಅತ್ಯಂತ ಅಪೇಕ್ಷೆ ಮೇರೆಗೆ ನಾನು ಭಕ್ತರ ಆಧೀನನಾಗಿರುವೆನು. ಆದ್ದರಿಂದ ನಾನು ಅವರಲ್ಲಿ ಹಿಂದೆ ಮುಂದೆ ಯಾವಾಗಲೂ ಸರ್ವಾಂಗದಿಂದ ನಿಂತುಕೊಂಡಿರುವೆನು ।೩೮೮।। ಹೇ ಉದ್ಧವಾ, ಎಲ್ಲ ಯಾದವರು ನನ್ನ ಗೋತ್ರಜರೇ ಆಗಿದ್ದು ನೀನೊಬ್ಬನೇ ಮಾತ್ರ ನನಗೆ ಅತ್ಯಂತ ಪ್ರಿಯನಾಗಿರುವೆ. ನಿನಗಾಗಿ ನನ್ನ ಪ್ರೇಮವು ಅದ್ಭುತವಾಗಿರುವುದು ।೩೮೯।। ಶ್ರೀಕೃಷ್ಣನ ಈ ವಚನವನ್ನು ಆಲಿಸಿ ಉದ್ಧವನು ಶ್ರೀಕೃಷ್ಣನ ಪಾದಗಳನ್ನು ಅಪ್ಪಿಕೊಂಡನು. ಆಗ ದೇವನಿಗೆ ಅಂತಃಕರಣದಲ್ಲಿ ಅತಿ ಆನಂದವಾಯಿತು. ಆಗ ಆತನು ಉದ್ಧವನಿಗೆ ತಕ್ಷಣ ಪ್ರೇಮದಿಂದ ಆಲಿಂಗಿಸಿದನು ।೩೯೦।। ಹೃದಯಕ್ಕೆ ಹೃದಯವು ಕೂಡಿಕೊಂಡಿತು, ದೇಹಕ್ಕೆ ದೇಹವು ಆಲಿಂಗಿಸಿತು. ತದನಂತರ ಮನವು ಮನದಲ್ಲಿ ಐಕ್ಯವಾಯಿತು. ಆಗ ಆತ್ಮಾನಂದವು ತುಂಬಿತುಳುಕಾಡಲಾರಂಭಿಸಿತು ।೩೯೧।। ದೇವನು ತನ್ನ ದೇವತ್ವವನ್ನು ಮರೆತನು, ಭಕ್ತನಿಗೆ ತಾನು ಭಕ್ತನೆಂಬುವುದು ಸ್ಮರಿಸದಾಯಿತು, ಈರ್ವರ ಭಿನ್ನತ್ವವು ನಷ್ಟವಾಯಿತು. ಇವರು ಆತ್ಮಾನಂದದಲ್ಲಿ ಪರಿಪೂರ್ಣವಾಗಿ ಮಗ್ನರಾದರು ।೩೯೨।। ಸೇವ್ಯ, ಸೇವಕ ಎಂಬ ಮಾತು ಅಳಿದುಹೋಯಿತು. ದ್ವೈತಭಾವದ ದೃಷ್ಟಿಯು ನಿಂತುಹೋಯಿತು, ಆತ್ಮದ ಐಕ್ಯಭಾವದಿಂದ ಭಕ್ತಿಸಾಮ್ರಾಜ್ಯದ ಸಿಂಹಾಸನದಲ್ಲಿ ಇವರಿಬ್ಬರ ಭೇಟಿಯಾಯಿತು ।೩೯೩।। ಸ್ಥೂಲ ದೇಹ, ಲಿಂಗ ದೇಹ ಮತ್ತು ಕಾರಣ ದೇಹ ಇವುಗಳಿಂದ ಮಹಾಕಾರಣ ದೇಹವನ್ನು ಕಾಣಬೇಕಾಗಿತ್ತು. ಆದರೆ ಈ ದೇಹಚತುಷ್ಟಯಗಳನ್ನು ಆ ಸಮಯದಲ್ಲಿ ಯಾರಿಗೆ ಸ್ಮರಿಸಬೇಕು ? ।೩೯೪।। ಆ ಸಮಯದಲ್ಲಿ ತುಂಬಿತುಳುಕುವ ಪರಿಪೂರ್ಣವಾದ, ಆದಿ, ಮಧ್ಯ ಮತ್ತು ಅಂತ್ಯ ಇಲ್ಲದ ಮೂರ್ತಿಮಂತ ಆನಂದಮಯ ಸ್ವರೂಪವು ಪ್ರಕಟವಾಯಿತು ।೩೯೫।। ಇಷ್ಟಾದರೂ ದೇವನ ಪರಿಪೂರ್ಣತೆಯು ಮಹಾ ಆಶ್ಚರ್ಯಕಾರಕವಾಗಿರುವುದು. ಆತನು ಅಲ್ಲಿ ದೊಡ್ಡದಾದ ಚಮತ್ಕಾರವನ್ನು ಮಾಡಿದನು. ಉದ್ಧವನಿಗೆ ತನ್ನ ಭಕ್ತಭಾವವನ್ನು ಇಲ್ಲದಂತೆ ಮಾಡಲಿಲ್ಲ. ಕಾರಣ, ಈತನು ನನ್ನಲ್ಲಿ ಐಕ್ಯನಾದರೆ ಉದ್ಧವನಂತಹ ಭಕ್ತನು ನನಗೆ ಎಂದಿಗೂ ಸಿಗಲಾರನೆಂದು ಶ್ರೀಕೃಷ್ಣನು ತಿಳಿದನು ।೩೯೬।।

ತ್ಯಾಸೀ ಉದ್ಧವ ಶುದ್ಧ ಸಾಂಠವಣ । ಯಾಲಾಗೀ ಉದ್ಧವಪಣ ರಾಖಿಲಾ ।॥೯೮॥ ಉದ್ಧವ ಸ್ವಾನಂದೀ ನಿಮಗ್ನ । ತ್ಯಾಸೀ ಥಾಪಟೂನಿ ಆಪಣ । ಸಾವಧ ಕರೀ ಶ್ರೀಕೃಷ್ಣ । ಯೇರಾ ಭಕ್ತಪಣ ಆಠವಲೇ ।॥೯೯॥ ಮ್ಹಣೇ ಜಯ ಜಯ ಶ್ರೀಕೃಷ್ಣನಾಥಾ । ಜೇ ಮಜ ಸುಖ ದಾವಿಲೇ ಆತಾ । ತೇ ನಿತ್ಯ ನಿರ್ವಾಹೇ ಸರ್ವಥಾ । ಐಶೀ ಕೃಪಾ ತತ್ತ್ವತಾ ಕರಾವೀ ।॥೪೦೦॥ ತಂವ ಶ್ರೀಕೃಷ್ಣ ಮ್ಹಣೇ ಉದ್ಧವಾ । ಹಾ ಮಾಝಾ ನಿಜಗುಹ್ಯ ಗೋಪ್ಯ ಠೇವಾ । ತುಜ ಮ್ಯಾ ಸಾಂಗೀತಲಾ ಕಣವಾ । ಪುರುಷಾರ್ಥ ಪಾಂಚವಾ ಯಾ ನಾಂವ ॥೪೦೧॥ ಹೇ ವೇದಶಾಸ್ತ್ರಾ ಅಗಮ್ಯ । ಸಕಳ ದೇವಾಂಸೀ ಅತಿದುರ್ಗಮ । ಜೇಣೇ ಲುಬ್ಧೇ ಮೀ ಪುರುಷೋತ್ತಮ । ತೇ ಹೇ ಭಕ್ತಪ್ರೇಮರಹಸ್ಯ ॥೪೦೨॥ ಮಜ ವಶ್ಯ ಕರಾವಯಾಚೇ ವರ್ಮ । ಪೋಟೀ ಧರಾವೇ ಭಕ್ತಿಪ್ರೇಮ । ಚಹೂ ಮುಕ್ತೀಂಚಾ ಪಡೇ ಭ್ರಮ । ಪುರುಷಾರ್ಥಕಾಮ ವೋಸರೇ ॥೪೦೩॥ ಜ್ಯಾಸೀ ಮಾಝೀ ಸಪ್ರೇಮ ಭಕ್ತೀ । ತ್ಯಾಚೇನಿ ನಾಂವೇ ವಿಘ್ನೇ ಪಳತೀ । ಮಜವೇಗಳೀ ಅನ್ಯಥಾ ಗತೀ । ಕರಾವಯಾ ಪ್ರಾಪ್ತೀ ಕೋಣಾಚೀ ॥೪೦೪॥ ಜಯಾಸೀ ಮಾಝೀ ಅನನ್ಯ ಭಕ್ತೀ । ತೇಥ ಮಾಝೀ ಪೂರ್ಣ ಕೃಪಾಸ್ಥಿತೀ । ಮದ್ಭಕ್ತಾ ಮಜವೇಗಳೀ ಗತೀ । ಕದಾ ಕಲ್ಪಾಂತೀ ಅಸೇನಾ ॥೪೦೫॥ ವೇದವಿಧೀ ಕರಾವಾ ಬಾಧೂ । ತೋ ನಿಃಶ್ವಸಿತ ಮಾಝಾ ವೇದೂ । ಜೇಥ ಮಾಝಾ ಪೂರ್ಣ ಕೃಪಾಬೋಧೂ । ತೇಥ ವಿಧಿವಾದೂ ಬಾಧೀನಾ ॥೪೦೬॥ ಜೇ ಕಾ ಮಾಝೇ ಭಕ್ತ ಸಕಾಮ । ತೇ ಫಳಭೋಗಾಂತೀ ಹೋಊನಿ ನಿಷ್ಕಾಮ । ತೇಹೀ ಟಾಕಿತೀ ಮಾಝೇ ನಿಜಧಾಮ । ಭಕ್ತಾ ಅನ್ಯಗಮನ ಅಸೇನಾ ॥೪೦೭॥ ಜ್ಯಾಸೀ ಮಾಝೇ ಅನನ್ಯ ಭಜನ । ಸ್ವಕರ್ಮ ತ್ಯಾಚೇ ಸೇವೀ ಚರಣ। ವಿಧಿವೇದೂ ವೋಳಂಗೇ ಅಂಗಣ । ತ್ಯಾಸೀ ಅನ್ಯಥಾಗಮನ ಅಸೇನಾ ॥೪೦೮॥ ಜೇಥ ಸಪ್ರೇಮ ನಾಹೀ ಮಾಝೀ ಭಕ್ತೀ । ತೇಥ ಕರ್ಮೇ ಅವಶ್ಯ ಬಾಧತೀ । ಕರ್ಮಾಸ್ತವ ಅನ್ಯಥಾಗತೀ । ಅಭಕ್ತ ಪಾವತೀ ಉದ್ಧವಾ ॥೪೦೯॥ ಜೇಥ ಮಾಝೀ ಸಾಚಾರ ಭಕ್ತೀ । ತೇಥ ಕರ್ಮಾಚೀ ನ ಚಲೇ ಗತೀ । ಮದ್ಭಕ್ತಾ ಮಾಝೀ ಪ್ರಾಪ್ತೀ । ಸತ್ಯ ನಿಶ್ಚಿತೀ ಯಾ ಹೇತೂ ॥೪೧೦॥ ಭಕ್ತಾಂಸೀ ಸರ್ವಾಭೂತೀ ಮದ್ಭಾವೋ । ತೇಥ ಕರ್ಮಬಂಧಾ ಕೈಚಾ ಠಾವೋ । ಕರ್ಮಾನುಗತೀ ಖುಂಟಲೀ ಪಹಾ ಹೋ । ಮತ್ಪ್ರಾಪ್ತಿ ಸ್ವಯಮೇವೋ ಮದ್ಭಕ್ತಾ ॥೪೧೧॥ ಭಕ್ತ ಪಾಊಲ ಠೇವೀ ಅವನೀ । ಪರೀ ಮ್ಯಾ ಠೇವಿಲೇ ನ ಧರೀ ಮನೀ ।

ಉದ್ಧವನನ್ನು ಬಿಟ್ಟರೆ ನನ್ನ ಗುಜಗೋಪ್ಪಿ ಹೇಳಲು ನನಗೆ ಇನ್ನಾವ ಭಕ್ತನು ಸಿಗಬೇಕು? ನಾನು ನನ್ನ ಮನದಲ್ಲಿನ ಪ್ರೇಮಭಾವವನ್ನು ಯಾರಲ್ಲಿ ಪ್ರಕಟಿಸಬೇಕು?॥೯೭॥ ನಾನು ನಿಜಧಾಮಕ್ಕೆ ಹೋದನಂತರ ನನ್ನ ನಿಃಸೀಮ ಆತ್ಮಜ್ಞಾನವನ್ನು ಈ ಉದ್ಧವನು ಮಾತ್ರ ಸಂಗ್ರಹಿಸಿಕೊಳ್ಳಬಲ್ಲನು. ಆದ್ದರಿಂದ ಶ್ರೀಕೃಷ್ಣನು ಉದ್ಧವನಿಗೆ ಭಕ್ತನಾಗಿಯೇ ಸ್ಥಿರಗೊಳಿಸಿದನು ॥೯೮॥ ಉದ್ಧವನು ಸ್ವಾನಂದದಲ್ಲಿ ಸಂಪೂರ್ಣವಾಗಿ ನಿಮಗ್ನನಾಗಿದ್ದನು. ಶ್ರೀಕೃಷ್ಣನು ಆತನನ್ನು ತನ್ನ ಕೈಯಿಂದ ಚಪ್ಪರಿಸಿ ಎಚ್ಚರಗೊಳಿಸಿದನು. ಆಗ ಆತನಿಗೆ ನಾನು ಭಕ್ತನು ಎಂಬ ಸ್ಮರಣೆಯಾಯಿತು ॥೯೯॥ ಆಗ ಉದ್ಧವನು ಹೀಗೆ ನುಡಿದನು; ಹೇ ಶ್ರೀಕೃಷ್ಣನೇ, ನಿನಗೆ ಜಯಜಯಕಾರವು. ಈಗ ನೀನು ನನಗೆ ತೋರಿಸಿರುವ ಆತ್ಮಸುಖವನ್ನು ಸತತವಾಗಿ ಸ್ಥಿರವಾಗುವಂತೆ ನನ್ನ ಮೇಲೆ ಕೃಪೆಯನ್ನು ಮಾಡು ॥೪೦೦॥ ಆಗ ಶ್ರೀಕೃಷ್ಣನು ಹೀಗೆ ಉತ್ತರಿಸಿದನು; ಹೇ ಉದ್ಧವಾ, ಇದು ನನ್ನ ಆತ್ಮಜ್ಞಾನದ ಅತಿಶಯ ಗೂಢ ಮತ್ತು ಗುಪ್ತವಾಗಿರುವ ನಿಧಿಯಾಗಿರುವುದು. ಇದನ್ನು ನಾನು ನಿನಗೆ ಪ್ರೇಮದಿಂದ ತಿಳಿಸಿರುವೆನು. ಇದಕ್ಕೆ ಮಾತ್ರ ''ಪಂಚಮ ಪುರುಷಾರ್ಥ'' ಎಂದು ಹೇಳುವರು ॥೪೦೧॥ ಇದು ವೇದಶಾಸ್ತ್ರಗಳಿಗೆ ಅಗಮ್ಯವಾಗಿರುವುದು ಮತ್ತು ಸರ್ವ ದೇವತೆಗಳಿಗೂ ಅತ್ಯಂತ ದುರ್ಲಭವಾಗಿರುವುದು. ಇದು ಭಕ್ತಿ ಪ್ರೇಮದ ರಹಸ್ಯವಾಗಿರುವುದು. ಇದಕ್ಕಾಗಿಯೇ ಪುರುಷೋತ್ತಮನಾದ ನಾನು ಲುಬ್ಧನಾಗುವೆನು ॥೪೦೨॥ ನನ್ನನ್ನು ವಶಮಾಡಿಕೊಳ್ಳಲು ಮರ್ಮವು ಯಾವುದೆಂದರೆ, ನನಗಾಗಿ ಅಂತಃಕರಣದಲ್ಲಿ ಪರಿಪೂರ್ಣವಾದ ಭಕ್ತಿ ಪ್ರೇಮವಿರಬೇಕು. ಇದರಿಂದ ನಾಲ್ಕೂ ಮುಕ್ತಿಗಳ ಭ್ರಮೆಯು ಇಲ್ಲದಾಗುವುದು. ನಾಲ್ಕು ಪುರುಷಾರ್ಥಗಳೂ ಕೂಡ ಹಿಂದಕ್ಕೆ ಸರಿಯುವುವು ॥೪೦೩॥ ಯಾರಲ್ಲಿ ನನ್ನ ಸಪ್ರೇಮ ಭಕ್ತಿ ಇರುವುದೋ, ಆತನ ನಾಮವನ್ನು ಕೇಳುತ್ತಲೇ ಸರ್ವ ವಿಘ್ನಗಳು ದೂರ ಓಡಿಹೋಗುವುವು. ನನ್ನ ಪ್ರಾಪ್ತಿಯ ಹೊರತಾಗಿ ಅನ್ಯ ಗತಿಯನ್ನು ಯಾರು ಕೊಡಲು ಸಮರ್ಥರಿರುವರು ? ॥೪೦೪॥ ಯಾರಲ್ಲಿ ನನ್ನ ಅನನ್ಯ ಭಕ್ತಿ ಇರುವುದೋ, ಅವರಿಗೆ ನನ್ನ ಪೂರ್ಣ ಕೃಪೆಯು ಪ್ರಾಪ್ತವಾಗುವುದು. ನನ್ನ ಭಕ್ತರಿಗೆ ನನ್ನ ಹೊರತಾದ ಅನ್ಯ ಯಾವ ಗತಿಯೂ ಕಲ್ಪಾಂತಕ್ಕೂ ಪ್ರಾಪ್ತವಾಗಲು ಶಕ್ಯವಿಲ್ಲ ॥೪೦೫॥ ವೇದ ವಚನಗಳು ಉಪದೇಶ ಮಾಡಬೇಕೆಂದರೆ ಆ ವೇದಗಳು ನನ್ನ ಶ್ವಾಸದಲ್ಲಿ ಪ್ರಕಟವಾಗಿರುವುವು. ಆದ್ದರಿಂದ ಎಲ್ಲಿ ನನ್ನ ಕೃಪೆಯು ಪರಿಪೂರ್ಣವಾಗಿ ಪ್ರಕಾಶಿಸುವುದೋ, ಅಲ್ಲಿ ಯಾವುದೇ ಪ್ರಕಾರದ ವೇದವಿಧಿಗಳು ಬಾಧಿಸಲಾರವು ॥೪೦೬॥ ನನ್ನ ಸಕಾಮ ಭಕ್ತರು ತಮ್ಮ ಅಪೇಕ್ಷಿತ ಫಲಗಳನ್ನು ಭೋಗಿಸಿದ ನಂತರ ನಿಷ್ಕಾಮರಾಗಿ ಅವರೂ ಕೂಡ ನನ್ನ ನಿಜಧಾಮಕ್ಕೆ ಬಂದು ಸೇರುವರು. ಏಕೆಂದರೆ ಭಕ್ತರಿಗೆ ನನ್ನನ್ನು ಬಿಟ್ಟು ಬೇರೆ ಯಾವ ಗತಿಯೂ ಇರುವುದಿಲ್ಲ ॥೪೦೭॥ ಯಾರು ನನ್ನ ಅನನ್ಯ ಭಾವನೆಯಿಂದ ಭಜನೆಯನ್ನು ಮಾಡುವರೋ, ಸ್ವಕರ್ಮವು ಅವರ ಚರಣಗಳ ಸೇವೆಯನ್ನು ಮಾಡುವುದು. ವೇದವಿಧಿಗಳು ಅವರ ಅಂಗಳದಲ್ಲಿ ಕೈ ಜೋಡಿಸಿ ನಿಂತುಕೊಳ್ಳುವುವು. ಇವರಿಗೆ ನನ್ನ ಹೊರತಾದ ಅನ್ಯ ಯಾವ ಲೋಕವಿರುವುದಿಲ್ಲ ॥೪೦೮॥ ಹೇ ಉದ್ಧವಾ, ಯಾರು ನನ್ನ ಸಪ್ರೇಮ ಭಜನೆಯನ್ನು ಮಾಡಲಾರರೋ ಅವರಿಗೆ ಕರ್ಮಗಳು ಅವಶ್ಯವಾಗಿ ಬಾಧಿಸುವುವು. ಈ ಅಭಕ್ತರು ಕರ್ಮಗಳ ಕಾರಣದಿಂದಲೇ ಇತರ ಗತಿಗಳನ್ನು ಪಡೆಯುತ್ತಿರುವರು ॥೪೦೯॥ ಎಲ್ಲಿ ನನ್ನ ಅನನ್ಯ ಭಕ್ತಿವಿರುವುದೋ, ಅಲ್ಲಿ ಕರ್ಮಗಳ ಯಾವ ಆಟವೂ ನಡೆಯುವುದಿಲ್ಲ. ಆದ್ದರಿಂದ ನನ್ನ ಭಕ್ತರಿಗೆ ನಿಶ್ಚಯಪೂರ್ವಕವಾಗಿ ನನ್ನ ಪ್ರಾಪ್ತಿಯೇ ಆಗುವುದು ॥೪೧೦॥

ಕರ್ತಾ ಭಗವಂತ ಸತ್ಯ ಮಾನೀ। ಯಾಲಾಗೀ ಕರ್ಮಬಂಧನೀ ಬಾಂಧವೇನಾ ॥೫೧೨॥ ಭಕ್ತಾಂಸ ನಾಹೀ ಅನ್ಯಥಾ ಗತೀ । ಮದ್ಭಕ್ತಾ ಮಾಝೀ ಅನನ್ಯ ಪ್ರೀತೀ । ತ್ಯಾ ಭಕ್ತಭಾವಾರ್ಥಾಚ್ಯಾ ಯುಕ್ತೀ । ವಿಶದ ಶ್ರೀಪತೀ ಸ್ವಯೇ ಕೇಲ್ಯಾ ॥೫೧೩॥ ''ನ ಮೇ ಭಕ್ತಃ ಪ್ರಣಶ್ಯತಿ'' । ಹೇ ಬೋಲಿಲಾ ಅರ್ಜುನಾ ಪ್ರತೀ । ತೇ ಸಾಚಾರ ಬಿರುದ ಶ್ರೀಪತೀ । ತೋ ಭಕ್ತಾ ಅನ್ಯಗತೀ ಘಡೋಂಚಿ ನೇದಿ ॥೫೧೪॥ ಭಕ್ತಶಾಪಾಚೀ ಐಕತಾ ಗೋಠೀ । ದೇವೋ ಕೈವಾರೇ ಸವೇಗ ಉಠೀ । ಸುದರ್ಶನ ಲಾವೂನಿ ಪಾಠೀ । ಕೇಲಾ ಹಿಂಪುಟೀ ದುರ್ವಾಸಾ ॥೫೧೫॥ ಏಕಾ ಅಂಬರೀಷಾಕಾರಣೇ । ದಹಾ ಗರ್ಭವಾಸ ಸೋಶಿಲೇ ಜೇಣೇ । ತೋ ಅನನ್ಯ ಭಕ್ತಾಂಸೀ ಉಣೇ । ಕೋಣ್ಯಾಹೀ ಗುಣೇ ಯೇವೋ ನೇದೀ ॥೫೧೬॥ ಭಕ್ತಕೈವಾರೀ ಶ್ರೀಕೃಷ್ಣ । ಹೇ ಭಾವಾರ್ಥಾಚೀ ನಿಜಖೂಣ । ಏಕಾ ಜನಾರ್ದನ ಶರಣ । ಭಾವೋ ಪ್ರಮಾಣ ಭಕ್ತೀಸೀ ॥೫೧೭॥ ಶುದ್ಧಭಾವೇವೀಣ ಜೇ ಭಕ್ತೀ । ತೇಚಿ ದಾಂಭಿಕ ಜಾಣ ನಿಶ್ಚಿತೀ । ತೇ ಅಪಕ್ವಚಿ ರಾಹೇ ಪ್ರಾಪ್ತೀ । ಜೇವೀ ಕಾಂಕಡ ಜಾತೀ ಮುಗಾಂಚೀ ॥೫೧೮॥ ''ಭಕ್ತಿಯೋಗಸ್ಯ ಮದ್ಗತಿಃ'' । ಹೇ ಮೂಳ ಪದೀಂಚೀ ಪದಸ್ಥಿತೀ । ತೇಚಿ ವಾಢವಿಲೇ ಕಿತೀ । ಐಸೇ ಶ್ರೋತೀ ನ ಮ್ಹಣಾವೇ ॥೫೧೯॥ ''ಮದ್ಗತೀ'' ಯಾ ಪದಾಚೀ ವ್ಯುತ್ಪತ್ತೀ । ಕೋಣ ಆಹೇ ಜಾಣೇ ಕಿತೀ । ಹೇ ರಸಹ್ಯ ಜಾಣೇ ವಿರಳಾ ಕ್ಷಿತೀ । ಯಾಲಾಗೀ ಕ್ಷಮಾ ಶ್ರೋತೀ ಕರಾವೀ ॥೫೨೦॥ ಹೋ ಕಾ ಭಕ್ತೀ ಮಾಝೀ ನಿಜಜನನೀ । ಜ್ಯಾ ಪ್ರೇಮಪಾನ್ಹಾ ಯೇ ವಾಢವೂನೀ । ಸರತಾ ಕೇಲೋ ಭಗವದ್ಭಜನೀ । ತೇ ಮ್ಯಾ ಗೌಣ ಮಹಿಮೇನೀ ವಾನಿಲೀ ॥೫೨೧॥ ಭಗವದ್ಭಕ್ತೀಚೇ ಮಹಿಮಾನ । ಮೀ ಕೇವೀಜಾಣೇ ಅಜ್ಞಾನ । ಜೇ ಬೋಲಿಲೋ ತೇ ಸರ್ವಥಾ ಗೌಣ । ಕ್ಷಮಾ ಪೂರ್ಣ ಕರಾವೀ ॥೫೨೨॥ ಭಕ್ತಿ ಮಾಝೀ ನಿಜಮಾಉಲೀ । ತೇ ಮೀ ಆಪುಲ್ಯಾ ಬೋಬಡೇ ಬೋಲೀ । ಗ್ರಂಥಾಧಾರೇ ಗೌರವಿಲೀ । ಸಪ್ರೇಮ ಭುಲೀ ಭುಲೋನಿ ॥೫೨೩॥ ಪ್ರೇಮಾಚೀ ನಿಜಜಾತಿ ಕೈಶೀ । ಆಠವೋ ನೇದಿ ಆಠವಣೇಸಿ । ಏವಂ ವಿಸರವೂನಿ ಹೇತೂಸಿ । ಭಕ್ತಿರಹಸ್ಯಾಸೀ ಬೋಲವಿಲೇ ॥೫೨೪॥ ಜೇವೀ ಕಾ ನಿಜಬಾಳಕಾತೇ । ಮಾಉಲೀ ಬೋಲ ಬೋಲವೀ ತ್ಯಾತೇ । ತೇವೀ ಭಕ್ತೀನೇ ಮಜ ಕೇಲೇ ಯೇಥೇ । ಮ್ಯಾ ಚುಕೀ ಕೋಣಾತೇ

ಕ್ತರಿಗೆ ಸರ್ವಪ್ರಾಣಿಮಾತ್ರರಲ್ಲಿ ನನ್ನ ಭಾವನೆಯಿಂದಲೇ ಕಾಣುತ್ತಿರುವುದು. ಒಂದು ಸಾರೆ ಕರ್ಮಗಳ ಗತಿಯು ಕುಂಠಿತವಾದರೆ ಸಾಕು, ಭಕ್ತರಿಗೆ ಸ್ವಭಾವತವೇ ನನ್ನ ಪ್ರಾಪ್ತಿಯಾಗುವುದು ॥೫೧೧॥ ನನ್ನ ಭಕ್ತರು ಭೂಮಿಯ ಮೇಲೆ ತಮ್ಮ ಹೆಜ್ಜೆಯನ್ನು ಇಡಲು ಆಗ ಅವರು ನಾನು ಹೆಜ್ಜೆಯನ್ನಿಟ್ಟೆನು ಎಂದು ತಿಳಿಯುವುದಿಲ್ಲ. ಭಗವಂತನೇ ಸರ್ವ ಕರ್ಮಗಳ ಕರ್ತನು ಎಂದು ತಿಳಿದಿರುವರು. ಅದಕ್ಕಾಗಿ ಅವರಿಗೆ ಕರ್ಮಗಳು ಬಾಧಿಸುವುದಿಲ್ಲ ॥೫೧೨॥ ಭಕ್ತರಿಗೆ ನನ್ನ ಹೊರತಾಗಿ ಅನ್ಯ ಗತಿಯು ಇರುವುದಿಲ್ಲ. ಕಾರಣ ನನ್ನ ಭಕ್ತರಿಗೆ ನನ್ನಲ್ಲಿಯೇ ಏಕನಿಷ್ಠ ಪ್ರೇಮವಿರುವುದು. ಆ ಭಕ್ತರ ಭಕ್ತಿಪ್ರೇಮದ ಲಕ್ಷಣಗಳನ್ನು ಶ್ರೀಕೃಷ್ಣನು ಸವಿಸ್ತಾರವಾಗಿ ಸ್ಪಷ್ಟವಾಗಿ ತಿಳಿಸಿದನು ॥೫೧೩॥ ''ನ ಮೇ ಭಕ್ತಃ ಪ್ರಣಶ್ಯತಿ'' ಅಂದರೆ ನನ್ನ ಭಕ್ತರ ನಾಶವು ಎಂದಿಗೂ ಆಗುವುದಿಲ್ಲ. ಹೀಗೆಂದು ಶ್ರೀಕೃಷ್ಣನು ಅರ್ಜುನನಿಗೆ ಯುದ್ಧ ಪ್ರಸಂಗದಲ್ಲಿ ಹೇಳಿದ್ದನು. ಇದೇ ನಿಜವಾದ ಶ್ರೀಕೃಷ್ಣನ ಬಿರುದಾವಳಿಯಾಗಿರುವುದು. ಈತನು ಭಕ್ತರಿಗೆ ಬೇರೆ ಗತಿಯನ್ನು ಆಗಗೊಡುವುದಿಲ್ಲ ॥೫೧೪॥ ತನ್ನ ಭಕ್ತನಿಗೆ ಶಾಪಕೊಟ್ಟ ವಾರ್ತೆಯನ್ನು ಕೇಳಿದಾಕ್ಷಣವೇ ದೇವನು ಆ ಭಕ್ತನನ್ನು ಬೆನ್ನಿಗೆ ಹಾಕಿಕೊಂಡು ಕೂಡಲೇ ಧಾವಿಸಿ ತನ್ನ ಸುದರ್ಶನ ಚಕ್ರವನ್ನು ಬಿಟ್ಟು ದುರ್ವಾಸಮುನಿಯ ಗರ್ವವನ್ನು ಹರಣ ಮಾಡಿದನು ॥೫೧೫॥ ಕೇವಲ ಒಬ್ಬ ಅಂಬರೀಷನಿಗಾಗಿ ಶ್ರೀಕೃಷ್ಣನು ಹತ್ತು ಗರ್ಭವಾಸವನ್ನು ಸೋಸಿಸಿದನು. ಆತನು ಅನನ್ಯ ಭಕ್ತನಿಗೆ ಸ್ವಲ್ಪೂ ಕೂಡ ಕೊರತೆ ಬೀಳಿಸಿಕೊಡುವುದಿಲ್ಲ ॥೫೧೬॥ ಶ್ರೀಕೃಷ್ಣನು ಭಕ್ತರ ಅಭಿಮಾನಿಯಾಗಿರುವನು. ಇದುವೇ ಭಾವಾರ್ಥದ ಚಿನ್ಹೆಯಾಗಿರುವುದು. ಏಕನಾಥನು ಜನಾರ್ದನಸ್ವಾಮಿಯರಿಗೆ ಪೂರ್ಣ ಶರಣಾಗಿ ಭಕ್ತರಿಗೆ ಪ್ರೇಮಭಾವದಿಂದ ವಂದನೆಯನ್ನು ಮಾಡುವನು ॥೫೧೭॥ ಶುದ್ಧವಾದ ಭಾವವಿಲ್ಲದ ಭಕ್ತಿಯು ಅದು ದಾಂಭಿಕಭಕ್ತಿಯಾಗಿರುವುದು ಎಂದು ಹೀಗೆ ತಿಳಿ. ಹೆಸರುಕಾಳುಗಳಲ್ಲಿನ ಕೆಟ್ಟ ಬೀಜಗಳು ನೀರಿನಲ್ಲಿ ನೆನೆಯದೇ ಗಟ್ಟಿಯಾಗಿಯೇ ಇರುವುವು. ಕುದಿಯದೇ ಅಪಕ್ವವಾಗಿರುವುವು. ಅದರಂತೆ ದಾಂಭಿಕ ಜನರ ಭಕ್ತಿಯು ಕೊನೆಯವರೆಗೂ ಅಪಕ್ವವಾಗಿಯೇ ಇರುವುದು ॥೫೧೮॥ ''ಭಕ್ತಿಯೋಗಸ್ಯ ಮದ್ಗತಿ'' ಹೀಗೆ ಮೂಲ ಶ್ಲೋಕದಲ್ಲಿನ ಪದವಾಗಿರುವುದು. ಈ ಒಂದು ಪದದ ನಿರೂಪಣೆಯನ್ನು ಎಷ್ಟೊಂದು ವಿಸ್ತಾರಮಾಡಿರುವಿರಲ್ಲಾ ? ಎಂದು ಶ್ರೋತೃಗಳು ಹೇಳಬಾರದು ॥೫೧೯॥ ''ಮದ್ಗತಿ'' ಈ ಶಬ್ದದ ಅರ್ಥವು ಇನ್ನೂ ಎಷ್ಟಿದೆ ಎಂಬುದು ಯಾರು ಬಲ್ಲರು ? ಅದರಲ್ಲಿನ ರಹಸ್ಯವನ್ನು ತಿಳಿಯುವ ಮನುಷ್ಯನು ಈ ಜಗತ್ತಿನಲ್ಲಿ ವಿರಳನಾಗಿರುವನು. ಆದಕಾರಣವಾಗಿ ಶ್ರೋತೃಗಳವರು ನನ್ನನ್ನು ಕ್ಷಮಿಸಬೇಕು ॥೫೨೦॥ ಕೇಳಿರಿ, ಈ ಭಕ್ತಿಯು ನನ್ನ ತಾಯಿಯಾಗಿರುವಳು. ಈಕೆಯು ತನ್ನ ಪ್ರೇಮದ ಹಾಲನ್ನು ಕುಡಿಸಿ ನನ್ನನ್ನು ಬೆಳೆಸಿರುವಳು. ಭಗವಂತನ ಭಜನೆಯಲ್ಲಿ ಪ್ರವೀಣನನ್ನಾಗಿ ಮಾಡಿರುವಳು. ನಿಜವಾಗಿಯೂ ಆಕೆಯನ್ನು ನನ್ನ ಶಬ್ದಗಳಿಂದ ವರ್ಣಿಸಿರುವೆನು ॥೫೨೧॥ ಕಾರಣ ಭಗವದ್ಭಕ್ತಿಯ ಅಲೌಕಿಕ ಮಹಿಮೆಯನ್ನು ಅಜ್ಞಾನಿಯಾದ ನಾನು ಹೇಗೆ ತಿಳಿಯಬಲ್ಲೆನು ? ನಾನು ಇಲ್ಲಿ ವರ್ಣಿಸಿರುವುದು ಬಹಳ ನ್ಯೂನ್ಯವಾಗಿರುವುದು. ಆದ್ದರಿಂದ ಶ್ರೋತೃಗಳು ನನ್ನನ್ನು ಅಂತಃಕರಣಪೂರ್ವಕವಾಗಿ ಕ್ಷಮಿಸಬೇಕು ॥೫೨೨॥ ಭಕ್ತಿ ಎಂಬುವುದು ನನ್ನ ಪ್ರೇಮದ ಜನನಿಯಾಗಿರುವಳು. ಆಕೆಯನ್ನು ನಾನು ಪ್ರೇಮದ ಭರದಲ್ಲಿ ತೊದಲು ನುಡಿಗಳಿಂದ ಕೇವಲ ಗ್ರಂಥದ ಆಧಾರದಿಂದ ಮಾತ್ರ ಗೌರವಿಸಿರುವೆನು ॥೫೨೩॥

ಠೇವಾವೀ ।೪೨೫॥ ಮಾಉಲೀಚೇ ಲೋಭಾಳೂ ಪಣ । ಪ್ರಕಟ ಕರೀ ತೋ ಮೂರ್ಖ ಜಾಣ । ಯಾಹೀಪರೀ ಮೀ ಅಜ್ಞಾನ । ಚುಕಲೇಪಣ ದಿಸತಾಹೇ ।೪೨೬॥ ಉಡಿದೀ ಕಾಳೇ ಜೇಥೀಚ್ಯಾ ತೇಥೇ । ತೇವೀ ಚುಕಲೇಪಣ ಮಾಝೇ ಯೇಥೇ । ಚುಕೀಚಿ ಮಾನಾವೀ ನಿಶ್ಚಿತೇ । ಹೇಹೀ ಗುರುನಾಥೇ ವಾರಿಲೇ ।೪೨೭॥ ಚುಕಲೇಪಣಚಿ ಮಾನಿತಾ । ಮೀ ಹೋ ಪಾಹೇ ಕವಿಕರ್ತಾ । ಮೀಪಣ ನಾವಡೇ ಗುರುನಾಥಾ । ತೇಣೇ ತೇ ತತ್ತ್ವತಾ ಸಾಂಡವಿಲೇ ।೪೨೮॥ ಸಾಂಗ ಝಾಲಿಯಾ ಕಥಾಕಥನ । ತೇಣೇ ಶ್ಲಾಘೇ ನ ಘ್ಯಾವೇ ಮೀಪಣ । ತಂವ ಗುರೂನೀ ದಾವೂನಿ ನಿಜಖೂಣ । ಮೀತೂಪಣ ಉಡವಿಲೇ ।೪೨೯॥ ಹೇಹೀ ಬೋಲ ಬೋಲತಾ । ಮೀ ನವ್ಹೇ ನವ್ಹೇ ಗಾ ಸರ್ವಥಾ । ಮೀ ನವ್ಹೇ ಕವಿ ಕರ್ತಾ । ಹೇ ಗುರೂಚೇ ತತ್ತ್ವತಾ ಗುರೂ ಜಾಣೇ ।೪೩೦॥ ತಂವ ಶ್ರೋತೇ ಮ್ಹಣತೀ ಚಮತ್ಕಾರ । ಭಕ್ತಿಸುಖಾಚೇ ಸುಖಸಾರ । ಭಕ್ತಿಪರಮಾಮೃತಸಾಗರ । ಉಘಡ ಸಾಚಾರ ತುವಾ ಕೇಲಾ ।೪೩೧॥ ಭಾಗವತ ಮುಖ್ಯ ಭಕ್ತಿಪ್ರಧಾನ । ಜೇ ಭಕ್ತೀಚೇ ಸುಖ ಸನಾತನ । ತೇ ಕರತಳಾಮಲಕ ಕರೂನಿ ಜಾಣ । ತುವಾ ಪರಿಪೂರ್ಣ ದಾವಿಲೇ ।೪೩೨॥ ತುವಾ ಹಾ ಥೋರ ಕೇಲಾ ಉಪಕಾರ । ತರಾವಯಾ ಸ್ತ್ರೀಯಾದಿ ಶೂದ್ರ । ಜಗ ವ್ಹಾವಯಾ ಭಜನತತ್ಪರ । ಭಾಗವತ ನಿಜಸಾರ ಕಾಢಿಲೇ ।೪೩೩॥ ಭಾಗವತೀಂಚೇ ಗುಪ್ತ ಪೀಯೂಖ । ತೇ ತ್ವಾಂ ಪ್ರಕಟಿಲೇ ಭಕ್ತಿಸುಖ । ತೇಣೇ ಸಂತ ಸುಖಾವಲೇ ದೇಖ । ಶ್ರೋತೇ ಸಕಳಿಕ ನಿವಾಲೇ ।೪೩೪॥ ತುಜ ಸಂತೋಷೋನಿ ಶ್ರೀಪತೀ । ದೀಧಲೀ ಆಪಲೀ ನಿಜಭಕ್ತೀ । ಯಾಲಾಗೀ ತುವಾ ಭಕ್ತೀಚೀ ಕೀರ್ತೀ ಯಥಾರ್ಥಸ್ಥಿತೀ ವರ್ಣಿಲೀ ।೪೩೫॥ ತುಝೇ ಭಕ್ತೀಚಾ ಏಕೇಕ ಬೋಲ । ಬ್ರಹ್ಮಸುಖೇಸೀ ಸಖೋಲ । ತ್ಯಾಹೀಮಾಜೀ ಪ್ರೇಮಾಚೀ ಬೋಲ । ಯೇತಾತಿ ಡೋಲ ಚಿತ್ಸುಖೇ ।೪೩೬॥ ತುಜ ವಾಖಾಣಿತಾ ನಿಜಭಕ್ತಿ । ಪ್ರೇಮೇ ವೋಸಂಡೇ ಚಿತ್ತವೃತ್ತೀ । ವಿಸರೋನಿಯಾ ಗ್ರಂಥಸ್ಫೂರ್ತೀ । ಭಕ್ತೀಚೀ ಕೀರ್ತೀ ವಾನಿಶೀ ।೪೩೭॥

ನಿಜ ಆವಡೀ ವಾಡೇಕೋಡೇ । ವಾನಿತಾ ಭಕ್ತೀಚೇ ಪವಾಡೇ । ತುಜ ನಾಠವೇ ಮಾಗೇಪುಢೇ । ಪ್ರೇಮ ಗಾಢೇ ಜಾಣವಲೇ ।೪೩೮॥ ಜಂವ ಜಂವ ಭಕ್ತೀಚೇ ನಿರೂಪಣ । ಅಧಿಕಾಧಿಕ ವಾಢತಾ ಜಾಣ । ತಂವ ತಂವ ಯೇತಸೇ ಸ್ಫುರಣ । ತೇಥ ಕೋಣ ಪುರೇ ಮ್ಹಣೇಲ ।೪೩೯॥ ಜಂವ ಜಂವ ನಿರೂಪಣಾ ವಾಢೀ । ತಂವ ತಂವ

ಪ್ರೇಮದ ಮೂಲಸ್ವರೂಪವು ಹೇಗಿದೆ ಎಂದರೆ ಅದು ಸ್ಮರಣೆಗೂ ಕೂಡ ಸ್ಮರಿಸಿಕೊಡುವುದಿಲ್ಲ. ಆದ್ದರಿಂದ ನನಗೆ ಮೂಲ ಉದ್ದೇಶವು ಮರೆತು ಹೋಗಿ ಅಂತಃಕರಣದಿಂದ ಭಕ್ತಿ ರಹಸ್ಯವು ಪ್ರಕಟವಾಯಿತು ।೪೨೪॥ ತಾಯಿಯು ತನ್ನ ಚಿಕ್ಕ ಬಾಲಕನಿಂದ ಮಾತುಗಳನ್ನು ಆಡಿಸುತ್ತಿರುವಳು. ಅದರಂತೆಯೇ ಭಕ್ತಿತಾಯಿಯು ನನ್ನ ಮುಖದಿಂದ ಇದನ್ನು ನುಡಿಸಿರುವಳು. ಅಂದಮೇಲೆ ದೋಷವನ್ನು ಯಾರ ಮೇಲೆ ಹೊರಿಸಬೇಕು ?।೪೨೫॥ ತಾಯಿಯ ವಾತ್ಸಲ್ಯ ಲೋಭವನ್ನು ಪ್ರಕಟಿಸುವುದು ಮೂರ್ಖತನವಾಗುವುದು. ಅದಕ್ಕಿಂತಲೂ ನನ್ನ ಅಜ್ಞಾನದಿಂದ ತಪ್ಪಿದೆನು ಎನ್ನುವುದೇ ಸರಿಕಾಣುವುದು ।೪೨೬॥ ಉದ್ದಿನ ಕಾಳುಗಳ ಕಪ್ಪುತನ ಅವುಗಳಲ್ಲಿ ಹಾಗೆಯೇ ಇರುವುವು. ಅದರಂತೆ ಇಲ್ಲಿ ನನ್ನದಾಗಿರುವ ತಪ್ಪು ಆಗಿದ್ದರೆ ಮಾತ್ರ ತಪ್ಪು ಎಂದು ಹೇಳಬೇಕು ನಿಜ, ಆದರೆ ಶ್ರೀಗುರುಗಳು ಅದನ್ನೂ ಕೂಡ ನಿವಾರಣೆ ಮಾಡಿದರು ।೪೨೭॥ ಕಾರಣ ನಾನು ತಪ್ಪುಮಾಡಿದೆನು ಎಂದು ಒಪ್ಪಿಕೊಂಡರೆ ನಾನೇ ಕಾವ್ಯಕರ್ತನು ಎಂದು ಒಪ್ಪಿಕೊಂಡಂತಾಗುವುದು. ಆದರೆ ನನ್ನ ಶ್ರೀಗುರುನಾಥರಿಗೆ ''ನಾನು'' ಎಂಬುವುದು ಸರ್ವಥಾ ಮನ್ನಿಸುವುದಿಲ್ಲ. ಅವರು ಅದನ್ನು ನಿಜವಾಗಿಯೂ ಬಿಡಿಸಿರುವರು ।೪೨೮॥ ಸಂಪೂರ್ಣವಾಗಿ ಕಥೆಯನ್ನು ಹೇಳಿ ಮುಗಿಸಿದರೂ ಕೂಡ ಅದರ ಅಭಿಮಾನದಿಂದ ''ನಾನು ಮಾಡಿದೆ'' ಎಂಬುವುದನ್ನು ಹಚ್ಚಿಕೊಳ್ಳಬಾರದೆಂಬ ಗುಟ್ಟನ್ನು ಶ್ರೀಗುರುಗಳು ತೋರಿಸಿರುವರು. ಆದ್ದರಿಂದ ನಾನು-ನೀನೆಂಬುವುದು ಹೊರಟು ಹೋಗಿರುವುದು ।೪೨೯॥ ಈ ಮಾತುಗಳನ್ನು ಆಡುವನೂ ಕೂಡ ನಾನು ಸರ್ವಥಾ ಅಲ್ಲ. ನಾನು ಕವಿಯೂ ಕೂಡ ಅಲ್ಲ, ಗ್ರಂಥಕರ್ತನೂ ಕೂಡ ಅಲ್ಲ. ನಿಜವಾಗಿಯೂ ಇದೆಲ್ಲವೂ ಗುರುಗಳದ್ದೇ, ಗುರುಗಳೇ ಬಲ್ಲರು ।೪೩೦॥ ಆ ಸಮಯದಲ್ಲಿ ಶ್ರೋತೃಗಳು ಹೀಗೆಂದರು ; ಇದೆಂತಹ ಚಮತ್ಕಾರವು ? ನೀವು ಭಕ್ತಿರೂಪ ಅಮೃತಸಾಗರದಲ್ಲಿನ ಭಕ್ತಿಸುಖದ ಸಾರಭೂತ ತತ್ತ್ವವನ್ನು ತೆಗೆದುತೋರಿಸಿರುವಿರಿ ।೪೩೧॥ ಭಾಗವತದಲ್ಲಿ ಪ್ರಾಮುಖ್ಯವಾಗಿ ಭಕ್ತಿಯ ಪ್ರತಿಪಾದನೆಯನ್ನು ಮಾಡಲಾಗಿರುವುದು. ಇದು ಭಕ್ತಿಪ್ರಧಾನ ಗ್ರಂಥವಾಗಿರುವುದು. ಭಕ್ತಿಯ ಶಾಶ್ವತ ಸುಖವನ್ನು ಕೈಯಲ್ಲಿನ ನೆಲ್ಲಿಕಾಯಿಯಂತೆ ನೀವು ಸ್ಪಷ್ಟಮಾಡಿ ತೋರಿಸಿರುವಿರಿ ।೪೩೨॥ ಸ್ತ್ರೀ ಶೂದ್ರರ ಉದ್ಧಾರಕ್ಕಾಗಿ ನೀವುದೊಡ್ಡ ಉಪಕಾರವನ್ನು ಮಾಡಿರುವಿರಿ. ಇಡೀ ಜಗತ್ತು ಭಜನೆಯಲ್ಲಿ ತಲ್ಲೀನರಾಗುವಂತೆ ನೀವು ಭಾಗವತದ ನಿಜಸಾರವನ್ನು ಪ್ರಕಟಗೊಳಿಸಿರುವಿರಿ ।೪೩೩॥ ಭಾಗವತದಲ್ಲಿನ ಗುಪ್ತವಾಗಿರುವ ಅಮೃತವೇ ಭಕ್ತಿಸುಖವಾಗಿರುವುದು. ಅದನ್ನು ನೀವು ಸ್ಪಷ್ಟಮಾಡಿ ತೋರಿಸಿರುವಿರಿ. ಆದ್ದರಿಂದ ಸರ್ವ ಸಂತರು ಆನಂದಿತರಾದರು ಮತ್ತು ಸರ್ವ ಶ್ರೋತೃಗಳವರು ತೃಪ್ತರಾದರು ।೪೩೪॥ ಶ್ರೀಕೃಷ್ಣನು ಪ್ರಸನ್ನನಾಗಿ ನಿಮಗೆ ತನ್ನ ಭಕ್ತಿಯನ್ನು ಕೊಟ್ಟನು. ಆದ್ದರಿಂದ ನೀವು ಯಥಾರ್ಥ ರೀತಿಯಲ್ಲಿ ಭಕ್ತಿಯ ವರ್ಣನೆಯನ್ನು ಮಾಡಿರುವಿರಿ ।೪೩೫॥ ನಿಮ್ಮ ಭಕ್ತಿಯ ಒಂದೊಂದು ತೇಜಸ್ವೀ ಶಬ್ದವು ಬ್ರಹ್ಮಾನಂದಕ್ಕಿಂತಲೂ ಅತ್ಯಂತ ಗಂಭೀರವಾಗಿದೆ. ಅದರಲ್ಲಿ ಪ್ರೇಮದ ರಸವು ನಿರ್ಮಾಣವಾದ್ದರಿಂದ ಚಿತ್ಸುಖದಿಂದ ತೂಗಾಡುತ್ತಿದ್ದೇವೆ ।೪೩೬॥ ನೀವು ಭಕ್ತಿಯ ವರ್ಣನೆಯನ್ನು ಮಾಡಲಾರಂಭಿಸಿದರೆ ಆಗ ನೀವು ಪ್ರೇಮಭರಿತರಾಗುವಿರಿ. ಆದ್ದರಿಂದ ಗ್ರಂಥದ ಸ್ಫೂರ್ತಿಯು ಪಕ್ಕಕ್ಕೆ ಸರಿಯುವುದು. ಹಾಗಾಗಿ ನೀವು ಆನಂದದಿಂದ ಪ್ರೇಮದ ಮಹಿಮೆಯನ್ನು ಹೊಗಳುತ್ತ ಕುಳಿತುಕೊಳ್ಳುವಿರಿ ।೪೩೭॥

ಭಕ್ತೀಚೀ ಅಧಿಕ ಗೋಡೀ । ತೇಣೇ ಶ್ರೋತ್ಯಾಂಚೀಹೀ ಆವಡೀ । ಚಢೋವಢೀ ವಾಢಲೀ ।।೪೪೦।। ಕರಿತಾ ಭಕ್ತಿಸುಖನಿರೂಪಣ । ಶ್ರೋತೇ ವಕ್ತೇ ಲಾಂಚಾವಲೇ ಜಾಣ । ಹೋತಾ ಅಮೃತಾಚೇ ಆರೋಗಣ । ಪುರೇ ಕೋಣ ಮ್ಹಣೋ ಶಕೇ ।।೪೪೧।। ಯಾಪರೀ ಗಾ ಅತಿಪ್ರೀತೀ । ವಾಢಲೀ ನಿರೂಪಣೀ ಭಕ್ತೀ । ತೇ ಆವರೂನಿಯಾ ಸ್ಫೂರ್ತಿ । ಪುಢೀಲ ಗ್ರಂಥಾರ್ಥೀ ಪ್ರವರ್ತೇ ।।೪೪೨।। ಹೇ ಐಕೋನಿ ಸಂತವಚನ । ಕೇಲೇ ಸಾಷ್ಟಾಂಗ ನಮನ । ಭಲೀ ದೀದಲೀ ಆಠವಣ । ಯೇರವೀ ನಿರೂಪಣ ನಾವರತೇ ।।೪೪೩।। ''ಭಕ್ತಿಯೋಗಸ್ಯ ಮದ್ಗತಿಃ'' । ಯೇ ಪದಾಚೀ ಪದವ್ಯುತ್ಪತ್ತೀ । ನಿರೂಪಿಲೀ ಭಗವದ್ಭಕ್ತೀ । ಜೇಣೇ ಭಗವತ್ಪ್ರಾಪ್ತೀ ಅತಿಸುಲಭ ।।೪೪೪।। ಹೇ ನ ಕರಿತಾ ಭಗವದ್ಭಕ್ತೀ । ತ್ರಿಗುಣಗುಣೀ ಜೀವಪಂಕ್ತೀ । ಬಾಂಧಿಲ್ಯಾ ಸಂಸಾರೀ ಉನ್ಮಜ್ಜತೀ । ತೇಹೀ ಸ್ಥಿತೀ ಹರಿ ಸಾಂಗೇ ।।೪೪೫।।

ಮಯಾ ಕಾಲಾತ್ಮನಾ ಧಾತ್ರಾ ಕರ್ಮಯುಕ್ತಮಿದಂ ಜಗತ್ । ಗುಣಪ್ರವಾಹ ಏತಸ್ಮಿನ್ನುನ್ಮಜ್ಜತಿ ನಿಮಜ್ಜತಿ ।।೧೫।।

ಅರ್ಥ:- ಈ ಯಾವ ಸಂಪೂರ್ಣ ಜಗತ್ತು ಕರ್ಮ ಮತ್ತು ಅದರ ಸಂಸ್ಕಾರಯುಕ್ತವಾಗಿದೆ. ನಾನು ಕಾಲರೂಪದಿಂದ ಕರ್ಮಾನುಸಾರವಾಗಿ ಅದರ ಫಲದ ವಿಧಾನವನ್ನು ಮಂಡಿಸುವೆನು. ಈ ಗುಣ ಪ್ರವಾಹದಲ್ಲಿ ಬಿದ್ದ ಜೀವವು ಮುಳುಗುವುದು, ಏಳುವುದು ಮಾಡುತ್ತಿರುವುದು. ಕೆಲಒಮ್ಮೆ ಅಧೋಗತಿಯಾದರೆ ಕೆಲಒಮ್ಮೆ ಪುಣ್ಯದಿಂದ ಉಚ್ಚಗತಿಯಾಗುವುದು.

ಮುಖ್ಯ ಮೂಳೀ ಮೀ ಜಗಾಚಾ ಧರಿತಾ । ಸ್ರಷ್ಟರೂಪೇ ಮೀಚಿ ಸ್ರಜಿತಾ । ವಿಷ್ಣುರೂಪೇ ಮೀ ಪ್ರತಿಪಾಳಿತಾ । ಮೀಚಿ ಸಂಹರ್ತಾ ರುದ್ರರೂಪೇ ।।೪೪೬।। ಹೇ ತ್ರಿಗುಣ ಕಾಳಾಚೀ ಕಾಳಸತ್ತಾ । ತೋ ಮೀ ನಿಜಕಾಳ ತತ್ತ್ವತಾ । ಸ್ರಜಿತಾ ಪಾಳಿತಾ ಸಂಹರ್ತಾ । ಗುಣಾವಸ್ಥಾ ವಿಭಾಗೇ ।।೪೪೭।। ಜನಾಂಚೇ ವಾಸನಾಕರ್ಮ ವಿಚಿತ್ರ । ತೇಚಿ ಕಾಳಸತ್ತಾ ನಿಜಸೂತ್ರ । ತೇಣೇ ರಚಿಲಾ ಸಂಸಾರ । ಚರಾಚರ ಗುಣಬದ್ಧ ।।೪೪೮।। ಗುಣಕರ್ಮೇ ಸ್ವರ್ಗಾ ಚಢೇ । ಗುಣಕರ್ಮೇ ನರಕೀ ಪಡೇ । ನಾನಾ ಯೋನೀಂಚೇ ಸಾಂಕಡೇ । ಭೋಗಣೇ ಘಡೇ ಗುಣಕರ್ಮೇ ।।೪೪೯।।

ಸ್ವರ್ಗ ಭೋಗೂನಿ ವಾಡೇಕೋಡೇ । ಮಹರ್ಜನತಪೋಲೋಕಾಪುಢೇ । ಸತ್ಯಲೋಕವರೀ ವರತಾ ಚಢೇ । ಉನ್ಮಜ್ಜನ ಘಡೇ ಯಾ ನಾಂವ ।।೪೫೦।। ಪಶುಪಕ್ಷಿ ಸ್ಥಾವರಾಂತ । ವೃಕ್ಷ ಪಾಷಾಣಕ್ಯಮಿತ್ವ ಪ್ರಾಪ್ತ । ಮಹಾನರಕೀ ಅಧಃಪಾತ । ನಿಮಜ್ಜನ ಏಥ ತ್ಯಾ ನಾಂವ ।।೪೫೧।। ಉಂಚೀ ಚಢೋನಿ ನೀಚೀ ಪಡಣೇ । ಭೋಗವೀ ನಾನಾ

ಅತ್ಯಂತ ಪ್ರೇಮದಿಂದ, ಸಲುಗೆಯಿಂದ ಭಕ್ತಿಯ ಗುಣಗಾನ ಮಾಡುತ್ತಿರಲು ನಿಮಗೆ ಆಗ ಹಿಂದು-ಮುಂದು ಯಾವುದೂ ಸ್ಮರಣೆಯಾಗುವುದಿಲ್ಲ. ನಿಮಗೆ ಇಷ್ಟೊಂದು ಗಾಢವಾದ ಪ್ರೇಮದ ಪೂರವು ಹುಟ್ಟುವುದು ।।೪೩೮।। ನೀವು ಹೇಗೆ ಹೇಗೆ ಭಕ್ತಿಯ ವರ್ಣನೆಯನ್ನು ಮಾಡುತ್ತ ಹೊರಟಂತೆ ವರ್ಣಿಸುವ ನಿಮ್ಮ ಸ್ಫುರಣವು ಇನ್ನೂ ಅಧಿಕವಾಗಿಯೇ ಬೆಳೆಯುತ್ತ ಸಾಗುತ್ತದೆ. ಅಂದಮೇಲೆ ಸಾಕು ಎಂದು ಯಾರು ಹೇಳಬೇಕು ? ।।೪೩೯।। ಹೇಗೆ ಹೇಗೆ ನಿಮ್ಮ ನಿರೂಪಣೆಯು ಬೆಳೆಯುತ್ತ ಸಾಗುವುದೋ, ಅದರಂತೆಯೇ ಭಕ್ತಿಯ ಆನಂದವು ಹೆಚ್ಚುತ್ತಲೇ ಸಾಗುತ್ತದೆ. ಇದರಿಂದ ಶ್ರೋತೃಗಳವರಿಗೂ ಕೂಡ ಹೆಚ್ಚಾದ ಆನಂದವು ಬೆಳೆಯುತ್ತ ನಡೆದಿದೆ ।।೪೪೦।। ಭಕ್ತಿಸುಖದ ವರ್ಣನೆಯನ್ನು ಮಾಡುತ್ತಿರಲು ಆಗ ಶ್ರೋತೃಗಳು ಹಾಗೂ ವಕ್ತಾ ಇಬ್ಬರೂ ಕೂಡ ಅದರಲ್ಲಿ ತಲ್ಲೀನರಾಗುವರು. ಅಮೃತದ ಭೋಜನಕ್ಕೆ ಸಾಕು ಎಂದು ಯಾರು ಹೇಳಬೇಕು ? ।।೪೪೧।। ಈ ಪ್ರಕಾರವಾಗಿ ಅತಿಶಯ ಪ್ರೀತಿಯಿಂದ ನಿರೂಪಣೆಯ ಅಪೇಕ್ಷೆಯು ಬೆಳೆದಿರುವುದರಿಂದ ಈಗ ಅದನ್ನು ತಡೆಹಿಡಿದು ಗ್ರಂಥದ ಮುಂದಿನ ವಿಷಯ ಬರೆಯುವುದಕ್ಕೆ ಪ್ರವರ್ತಿಸಿರಿ ।।೪೪೨।। ಈ ಸಂತರ ವಚನಗಳನ್ನು ಕೇಳಿ ಏಕನಾಥರು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಹೀಗೆ ಹೇಳಿದರು, ನೀವು ನನಗೆ ಸರಿಯಾಗಿ ಸ್ಮರಣೆಯನ್ನು ಕೊಟ್ಟಿರಿ. ಇಲ್ಲದಿದ್ದರೆ ಈ ನನ್ನ ವರ್ಣನೆಯು ಮುಗಿಯುತ್ತಿದ್ದಿಲ್ಲ ।।೪೪೩।। ''ಭಕ್ತಿಯೋಗಸ್ಯ ಮದ್ಗತಿಃ'' ಈ ಪದದ ಅರ್ಥವು ಹೀಗಿದೆ. ಯಾವ ಭಕ್ತಿಯಿಂದ ಭಗವಂತನ ಪ್ರಾಪ್ತಿಯು ಅತ್ಯಂತ ಸುಲಭಸಾಧ್ಯವೋ, ಆ ಭಗವದ್ಭಕ್ತಿಯ ನಿರೂಪಣೆಯನ್ನು ಮಾಡಲಾಯಿತು ।।೪೪೪।। ಈ ಯಾವ ಭಗವದ್ಭಕ್ತಿಯನ್ನು ಮಾಡದಿದ್ದರೆ ತ್ರಿಗುಣರೂಪ ಹಗ್ಗದಿಂದ ಬಂಧಿಸಲ್ಪಟ್ಟ ಜೀವಿಗಳು ಸಂಸಾರದಲ್ಲಿ ಹೇಗೆ ಜನ್ಮಕ್ಕೆ ಬರುವುದು ಎನ್ನುವ ವಿಷಯಕ್ಕಾಗಿ ಶ್ರೀಹರಿಯು ಈಗ ಹೇಳುವನು ।।೪೪೫।।

ನಾನೇ ಮೂಲದಲ್ಲಿ ಜಗತ್ತನ್ನು ಧಾರಣೆಮಾಡುವವನಾಗಿರುವೆನು. ಬ್ರಹ್ಮದೇವನ ರೂಪದಿಂದ ನಾನು ಉತ್ಪತ್ತಿಯನ್ನು ಮಾಡುವೆನು. ವಿಷ್ಣುವಿನ ರೂಪದಿಂದ ನಾನು ಅದರ ಪ್ರತಿಪಾಲನೆಯನ್ನು ಮಾಡುವೆನು. ರುದ್ರದೇವನ ರೂಪದಿಂದ ಸಂಹಾರವನ್ನು ಮಾಡುವೆನು ।।೪೪೬।। ಈ ಯಾವ ಮೂರು ಗುಣಗಳು ಕಾಲನ ಸತ್ತೆಯಾಗಿರುವುದು. ನಾನು ನಿಜಕಾಲನಾಗಿದ್ದು ಗುಣಾವಸ್ಥೆಯ ಸ್ವರೂಪಪ್ರಕಾರವಾಗಿ ಉತ್ಪನ್ನ ಮಾಡುವವ, ಪಾಲನೆ ಮಾಡುವವ ಮತ್ತು ಸಂಹಾರ ಮಾಡುವವನಾಗಿರುವೆನು ।।೪೪೭।। ಈ ಜನರ ವಾಸನಾಕರ್ಮಗಳು ವಿಚಿತ್ರವಾಗಿರುವುವು. ಇದೇ ಕಾಲಸತ್ತೆಯ ಸೂತ್ರವಾಗಿರುವುದು. ಈತನು ಈ ಗುಣಗಳಿಂದ ಬದ್ಧವಾಗಿರುವ ಚರಾಚರ ಪ್ರಪಂಚವನ್ನು ರಚಿಸಿರುವನು ।।೪೪೮।। ಜೀವವು ಗುಣಕರ್ಮಾನುಸಾರವಾಗಿ ಸ್ವರ್ಗಕ್ಕೆ ಹೋಗುವುದು. ಅಥವಾ ನರಕದಲ್ಲಿ ಬೀಳುವುದು. ಗುಣಕರ್ಮದಿಂದ ಜನ್ಮಮರಣಗಳ ಸಂಕಟಗಳನ್ನು ಭೋಗಿಸಬೇಕಾಗುವುದು ।।೪೪೯।।

ಈ ಜೀವವು ಪ್ರೇಮದಿಂದ ಸ್ವರ್ಗಸುಖವನ್ನು ಭೋಗಿಸಿ ಮಹಾಃಜನ-ತಪಾದಿ ಲೋಕಗಳಿಂದ ಮುಂದೆ ಸಪ್ತಲೋಕಗಳಿಗೆ ಹೋಗುವುದು.

ಜನ್ಮ ಮರಣೇ । ತೇ ಪ್ರಕೃತಿಪುರುಷಚಾಂಚೇ ಸಾಜಣೇ । ಜೀವಬಂಧನೇ ಭೋಗವೀ ॥೪೫೨॥

ಅಣುರ್ಬೃಹತ್ ಕೃಶಃ ಸ್ಥೂಲೋ ಯೋ ಯೋ ಭಾವಃ ಪ್ರಸಿಧ್ಯತಿ ।
ಸರ್ವೋಽಪ್ಯುಭಯಸಂಯುಕ್ತಃ ಪ್ರಕೃತ್ಯಾ ಪುರುಷೇಣ ಚ ॥೧೬॥

ಅರ್ಥ:- ಜಗತ್ತಿನಲ್ಲಿನ ಸಿದ್ಧವಾಗುವ ಸರ್ವ ಚಿಕ್ಕ ದೊಡ್ಡ ಪದಾರ್ಥಗಳು, ಅವೆಲ್ಲವೂ ಪ್ರಕತೀ ಮತ್ತು ಪುರುಷರ ಸಂಯೋಗದಿಂದ ಸಿದ್ಧವಾಗುವುವು.

ಅಣು ಮ್ಹಣಿಜೇ ಅತಿಸೂಕ್ಷ್ಮ ಸಾನ । ಬೃಹತ್ ಮ್ಹಣಿಜೇ ವಿಶಾಳ ಜಾಣ । ಕೃಶ ಮ್ಹಣಿಜೇ ಕಿರಕೋಳಪಣ । ಸ್ಥೂಳ ತೇ ಪೂರ್ಣ ಜಡಾವಯವೀ ॥೪೫೩॥ ಜೇ ಜೇ ದೃಷ್ಟಿಗೋಚರ ಝಾಲೇ । ಜೇ ಜೇ ನಾಂವರೂಪಾ ಆಲೇ । ತೇ ತೇ ಉಭಯಯೋಗೇ ಕೇಲೇ । ಜಾಣ ಘಡಲೇ ಪ್ರಕೃತಿಪುರುಷೀ ॥೪೫೪॥ ಜೇ ಉಭಯಯೋಗ ಸಂಭವ । ಜಗ ಐಸೇ ಜ್ಯಾಚೇ ನಾಂವ । ತೇ ಪ್ರಕೃತಿಪುರುಷ ಸಾವೇವ । ತಿಸರಾ ಭಾವ ಅಸೇನಾ ॥೪೫೫॥ ಯಾ ದೋಹೀವೇಗಳೇ ನಿರವಯವ । ಜೇಥೂನಿ ಯಾ ದೋಹಿಂಚಾ ಉದ್ಭವ । ತೇಚಿ ಸದ್ವಸ್ತು ಸರ್ವೀ ಸರ್ವ । ದೇವಾಧಿದೇವ ಸಾಂಗತ ॥೪೫೬॥

ಯಸ್ತು ಯಸ್ಯಾದಿರಂತಶ್ಚ ಸ ವೈ ಮಧ್ಯಂ ಚ ತಸ್ಯ ಸನ್ ।
ವಿಕಾರೋ ವ್ಯವಹಾರಾರ್ಥೋ ಯಥಾ ತೈಜಸಪಾರ್ಥಿವಾಃ ॥೧೭॥

ಅರ್ಥ:- ಯಾವ ಪದಾರ್ಥವು ಯಾವ ಕಾರ್ಯದ ಕಾರಣವಾಗಿ ಮತ್ತು ಲಯಸ್ಥಾನವಾಗಿರುವುದೋ, ಅದೇ ಪದಾರ್ಥವು ಅದರ ಮಧ್ಯಾವಸ್ಥೆಯಲ್ಲಿಯೂ ಇರುತ್ತದೆ. ಆದ್ದರಿಂದ ಅವ್ಯಭಿಚಾರತ್ವದಿಂದ ಅದು ಸತ್‌ವಾಗಿದೆ. ಬೇರೆ ಸತ್ ಇರುವುದಿಲ್ಲ. ಚಿನ್ನದ ಆಭರಣಗಳು ಮಣ್ಣಿನ ಮಡಿಕೆಗಳು ಇವು ವ್ಯವಹಾರಕ್ಕೆ ಉಪಯೋಗಿಯಾಗಿರುವುವು. ಅದರಂತೆ ಈ ಎಲ್ಲ ವಿಕಾರಗಳು ವ್ಯವಹಾರೋಪಯೋಗಿಯಾಗಿರುವುವು.

ಪ್ರಕೃತಿಪುರುಷೇಸೀ ಸಾಕಾರ । ಜೇ ದಿಸತಾಹೇ ಚರಾಚರ । ತ್ಯಾಸೀ ಆದ್ಯಂತೀ ಜೇ ಅನಶ್ವರ । ತೇಚಿ ಸಾಚಾರ ಮಧ್ಯೇಹೀ ॥೪೫೭॥ ಲೇಣ್ಯಾ ಆಧೀ ಕನಕ ಏಕ । ಲೇಣ್ಯಾ ಅಂತೀ ತೇಚಿ ಆವಶ್ಯಕ । ಮಧ್ಯೇಹೀ ಲೇಣೇರೂಪೇ ದೇಖ । ಭಾಸೇ ಕನಕ ಅದ್ವಿತೀಯ ॥೪೫೮॥ ನ ಕರಿತಾ ಮಾತೀಚೇ ಗೋಕುಳ । ಪೂರ್ವೀ ಮೃತ್ತಿಕಾಚಿ ಕೇವಳ । ಗೋಕುಳ ಮೋಡಲ್ಯಾ ಸಕಳ । ಉರೇ ಅವಿಕಳ ಮೃತ್ತಿಕಾ ॥೪೫೯॥
ತೇಚಿ ಗೋಕುಳರೂಪೇ ಅಸತಾ । ಭಾಸೇ ಮೃತ್ತಿಕಾಚಿ ತತ್ತ್ವತಾ । ತೇವೀ ಆದಿಮಧ್ಯ ಅವಸಾನತಾ । ಭಾಸೇ ಚಿತ್ಸತ್ತಾ ಅನಶ್ವರ ॥೪೬೦॥ ತ್ರಿಗುಣಗುಣೇ ಸವಿಕಾರ । ಜೇ ಜಗ ದಿಸತಾಹೇ ಸಾಕಾರ । ತೇ ಮಾಯಿಕ ಗಾ ಚರಾಚರ । ಜೇವೀ ವ್ಯವಹಾರ ಸ್ವಪ್ನೀಂಚಾ ॥೪೬೧॥ ಸಕಳ ವಿಕಾರಾಂಚೇ ಕಾರಣ । ಅಂಗೇ ಅವಿದ್ಯಾ ಆಪಣ । ತೇ

ಇದಕ್ಕೆ ಉನ್ಮಜ್ಜನ ಎಂದು ಕರೆಯುವರು, ॥೪೫೦॥ ಪಶು, ಪಕ್ಷೀ, ಸ್ಥಾವರ, ವೃಕ್ಷ, ಪಾಷಾಣ, ನಾನಾ ಪ್ರಕಾರದ ಕ್ರಿಮಿಕೀಟಗಳು ಇವುಗಳಲ್ಲಿ ಜನ್ಮಗಳನ್ನು ಧರಿಸುತ್ತ ಕೊನೆಗೆ ಮಹಾನರಕದಲ್ಲಿ ಅಧಃಪಾತವಾಗುವಿಕೆಗೆ ನಿಮಜ್ಜನ ಅಂದರೆ ಕೆಳಗೆ ಬರುವಿಕೆ ಎಂದು ಹೇಳುವರು ॥೪೫೧॥ ಮೇಲಕ್ಕೆ ಹತ್ತುವುದು ಮತ್ತು ಕೆಳಗೆ ಬೀಳುವುದು ಇವುಗಳ ಮುಖಾಂತರವಾಗಿ ಅನೇಕ ಪ್ರಕಾರದ ಜನ್ಮ,ಮರಣಗಳನ್ನು ಭೋಗಿಸುವಿಕೆಯು ಇದು ಪ್ರಕೃತಿಪುರುಷರ ಕಾರ್ಯವಾಗಿರುವುದು. ಜೀವಾತ್ಮಕ್ಕೆ ಇದೇ ಬದ್ಧನನ್ನಾಗಿ ಮಾಡಿರುವುದು ॥೪೫೨॥

ಅಣು ಅಂದರೆ ಅತ್ಯಂತ ಸೂಕ್ಷ್ಮ ಚಿಕ್ಕವಸ್ತು, ಬೃಹತ್ ಎಂದರೆ ಅತಿಶಯ ದೊಡ್ಡದಾದ ವಸ್ತುವಾಗಿರುವುದು. ಕೃಶ ಎಂದರೆ ಬಡಕಲ ಮತ್ತು ಸ್ಥೂಲವೆಂದರೆ ಪೂರ್ಣ ಜಡವಾದ ಅವಯುವಯುಕ್ತವಾದದ್ದು ॥೪೫೩॥ ಹೀಗೆ ಯಾವ ಯಾವ ವಸ್ತುಗಳು ದೃಷ್ಟಿಗೆ ಗೋಚರಿಸುವುವೋ, ಅವು ನಾಮರೂಪಕ್ಕೆ ಬರುವುವು . ಈ ಎಲ್ಲವೂ ಪ್ರಕೃತಿ ಪುರುಷರ ಸಂಯೋಗದಿಂದ ಸಿದ್ಧವಾಗಿರುವುವು ॥೪೫೪॥ ಈ ಈರ್ವರ ಸಂಯೋಗದಿಂದ ಉತ್ಪನ್ನವಾಗಿರುವುದು ಜಗತ್ತಾಗಿರುವುದು. ಪ್ರಕೃತಿ ಮತ್ತು ಪುರುಷ ಇವರಿಬ್ಬರ ಹೊರತಾಗಿ ಮೂರನೆಯ ಸಾಕಾರ ಪದಾರ್ಥವೇ ಇರುವುದಿಲ್ಲ ॥೪೫೫॥ ಯಾವುದು ಈ ಎರಡರಿಂದ ಭಿನ್ನವಾಗಿರುವ ಮತ್ತು ಅವಯವರಹಿತವಾಗಿರುವ ಹಾಗೂ ಈ ಈರ್ವರ ಉತ್ಪತ್ತಿಸ್ಥಾನವು ಪರಬ್ರಹ್ಮವಾಗಿರುವುದು. ಹೀಗೆ ದೇವಾಧಿದೇವನು ಹೇಳುತ್ತಿರುವನು ॥೪೫೬॥

ಪ್ರಕೃತಿ ಪುರುಷಾಸಹ ಈ ಯಾವ ಸಾಕಾರ ಚರಾಚರವು ತೋರುತ್ತಿರುವುದೋ, ಅದು ಆದಿ ಮತ್ತು ಅಂತ್ಯದಲ್ಲಿ ಅನಶ್ವರವಾಗಿರುವಂತೆ ಮಧ್ಯದಲ್ಲಿಯೂ ಕೂಡ ಅದು ನಿಜವಾಗಿಯೂ ಹಾಗೆಯೇ ಇರುವುದು ॥೪೫೭॥ ಅಲಂಕಾರವನ್ನು ತಯಾರಿಸುವ ಮೊದಲು ಇರುವ ಸುವರ್ಣವೇ, ಅಲಂಕಾರವನ್ನು ಮುರಿದಾಗಲೂ ಕೂಡ ಅದು ಹಾಗೆಯೇ ಇರುವುದು. ಮಧ್ಯಂತರದಲ್ಲಿಯೂ ಕೂಡ ಅದೇ ಶುದ್ಧವಾದ ಸುವರ್ಣವು ಅಲಂಕಾರದ ರೂಪದಿಂದಲೇ ಭಾಸವಾಗುತ್ತಿರುವುದು ॥೪೫೮॥ ಮಣ್ಣಿನ ಗೋಕುಳ ತಯಾರಿಸುವ ಮೊದಲು ಕೇವಲ ಮಣ್ಣೇ ಇರುವುದು ಮತ್ತು ಸಿದ್ಧಗೊಂಡ ಗೋಕುಳವನ್ನು ಪೂರ್ಣವಾಗಿ ಮುರಿದರೆ ಆಗಲೂ ಕೂಡ ಕೇವಲ ಮಣ್ಣೇ ಉಳಿದುಕೊಳ್ಳುವುದು ॥೪೫೯॥
ಅದೇ ಮಣ್ಣು ಗೋಕುಳ ರೂಪದಿಂದ ಇದ್ದಾಗಲೂ ಕೂಡ ನಿಜವಾಗಿಯೂ ಮಣ್ಣೇ ಆಗಿ ತೋರುತ್ತಿರುವುದು. ಅದರಂತೆ ಆದಿ,ಮಧ್ಯ ಮತ್ತು

ವಿಕಾರೀ ಸತ್ಯತಾ ಸ್ಥಾಪಿತಾ ಜಾಣ । ಆಲೇ ಸತ್ಯಪಣ ಅವಿದ್ಯೇಸೀ ॥೪೬೨॥ ಅವಿದ್ಯಾ ಆಪುಲೇನಿ ನಾಂವೇ ಜಾಣ । ಆಪುಲೇ ನಾಸ್ತಿಕ್ಯ ಸಾಂಗೇ ಆಪಣ । ಹೇ ವರ್ಮ ಜಾಣತೀ ಸಜ್ಞಾನ । ನೇಣೋನಿ ಅಜ್ಞಾನ ಮಾನಿತೀ ಸತ್ಯ ॥೪೬೩॥ ಅವಿದ್ಯಾ ಅವಿದ್ಯಕತ್ವೇ ಮಿಥ್ಯಾ ಜಾಣ । ವಸ್ತು ವಸ್ತುತ್ವೇ ಸದಾ ಸಂಪನ್ನ । ಯೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೪೬೪॥

ಯದುಪಾದಾಯ ಪೂರ್ವಸ್ತು ಭಾವೋ ವಿಕುರತೇಽಪರಮ್ । ಆದಿರಂತೋ ಯದಾ ಯಸ್ಯ ತತ್ಸತ್ಯಮಭಿಧೀಯತೇ ॥೧೮॥

ಅರ್ಥ:- ಪೂರ್ವವರ್ತೀ ಕಾರಣವು ಯಾವ ಪರಮ ಕಾರಣಗಳ ಉಪಾದಾನವಾಗಿ ಅಹಂಕಾರ ಇತ್ಯಾದಿ ಕಾರ್ಯ ವರ್ಗದ ಸೃಷ್ಟಿ ಮಾಡುವುದು. ಈ ಯಾವ ಆತನ ಅಪೇಕ್ಷೆಯು ಪರಮ ಸತ್ಯವಾಗಿರುವುದು. ತಾತ್ಪರ್ಯವೇನೆಂದರೆ, ಯಾವುದೇ ಕಾರ್ಯಗಳಲ್ಲಿ ಆದಿ ಅಂತ್ಯದಲ್ಲಿ ವಿದ್ಯಮಾನವಾಗಿರುವುದು ಇದು ಪರಮಸತ್ಯವಾಗಿದೆ.

ಪ್ರಕೃತಿ ಅಂಗೀಕಾರೇ ದೇಖ । ವಸ್ತೂಪಾಸಾವ ಹೋತೀ ಲೋಕ । ಜೇವೀ ನಿದ್ರಾಯೋಗೇ ಏಕ । ಹೋಯ ಅನೇಕ ನಿಜಸ್ವಪ್ನೀ ॥೪೬೫॥ ಜೇವೀ ತಂತೂಪಾಸಾವ ಕೋಟಿ ಪಟ । ಕೋಟಿ ಪಟೀ ತಂತು ಏಕವಟ । ಪಾಹತಾ ಆದಿ ಮಧ್ಯ ಶೇವಟ । ದ್ವೈತಾಚೇ ಬೋಟ ರಿಘೇನಾ ॥೪೬೬॥ ತೇವೀ ವಸ್ತೂಪಾಸೋನಿಯಾ ಲೋಕ । ಪ್ರಕೃತಿಪುರುಷಾದಿ ಸಕಳಿಕ । ಆದಿ-ಮಧ್ಯ-ಅವಸಾನೀ ಏಕ । ದ್ವೈತವಾರ್ತಾ ದೇಖ ಅಸೇನಾ ॥೪೬೭॥ ತಂತು ಸತ್ಯ ಪಟ ಮಾಯಿಕ। ವಸ್ತು ಸತ್ಯ ಅವಿದ್ಯಾ ಲಟಿಕ। ಜೇ ಆದಿ-ಮಧ್ಯ-ಅವಸಾನೀ ಏಕ । ತೇ ಸತ್ಯ ನಿಷ್ಟಂಕ ಉದ್ಧವಾ ॥೪೬೮॥ ಜೇವೀ ಕಾ ಕಾಷ್ಠಾಚೀ ಬಾಹುಲೀ । ಕಾಷ್ಠಾವಯವೇ ಶೋಭೇ ಆಲೀ । ತೇವೀ ವಸ್ತು ವಸ್ತುತ್ವೇ ಏಕಲೀ । ಶೋಭಾ ಪಾವಲೀ ಜಗತ್ವೇ ॥೪೬೯॥ ಜೇವೀ ಕಾ ಏಕಲೇ ದೇಹ ದೇಖ । ದಿಸೇ ಅವಯವರೂಪೀ ಅನೇಕ । ತೇವೀ ವಸ್ತು ಏಕಲೀ ಏಕ । ಆಭಾಸೇ ಅನೇಕಸ್ವರೂಪೀ ॥೪೭೦॥ ಜೇವೀ ಕಾ ಜಳೀ ಕ್ರೀಡತಾ ಜಳಾ । ಉಪಜವೀ ತರಂಗಾಚ್ಯಾ ಮಾಳಾ । ತೇವೀ ವಸ್ತೂಚಿಯಾ ಸ್ವಲೀಳಾ । ಜಗದಾದೀ ಮೇಳಾ ಪ್ರಕಾಶೇ ॥೪೭೧॥ ತರಂಗಾ ಆದಿ-ಮಧ್ಯ-ಅವಸಾನೀ । ಜೇವೀ ಪಾಣೀಪಣೇ ಅಸೇ ಪಾಣೀ । ತೇವೀ ಉತ್ಪತ್ತಿ ಸ್ಥಿತಿನಿದಾನೀ । ವಸ್ತು ವಸ್ತೂಪಣೇ ಅನಶ್ವರ ॥೪೭೨॥ ಬ್ರಹ್ಮ ಸತ್ಯ ಪ್ರಪಂಚ ವಾವೋ । ಹಾ ಸಾಧಕಾ ಸಾಧಾವಯಾ ನಿರ್ವಾಹೋ । ಕಾರ್ಯಕಾರಣಅಭಿನ್ನ ಭಾವೋ । ದೇವಾಧಿದೇವೋ ಬೋಲಿಲಾ ॥೪೭೩॥ ಕಾರ್ಯಕಾರಣೀ ಅಭಿನ್ನ । ತೈ ಬ್ರಹ್ಮೀ

ಅಂತ್ಯ ಈ ಮೂರು ಅವಸ್ಥೆಗಳಲ್ಲಿ ಅವಿನಾಶೀ ಬ್ರಹ್ಮತತ್ವವು ಯಾವಾಗಲೂ ಇರುವುದು ॥೪೬೦॥ ಮೂರು ಗುಣಗಳ ಪ್ರಭಾವದಿಂದ ವಿಕೃತಗೊಂಡಿರುವ ಈ ಜಗತ್ತು ಸಾಕಾರವಾಗಿ ತೋರುವುದು. ಯಾವ ಪ್ರಕಾರವಾಗಿ ಸ್ವಪ್ನದಲ್ಲಿನ ವ್ಯವಹಾರವು ಕೇವಲ ಮಾಯಿಕವಾಗಿರುವುದೋ, ಅದರಂತೆ ಈ ಸರ್ವ ಜಗತ್ತು ಮಾಯಿಕವಾಗಿರುವುದು ॥೪೬೧॥ ಈ ಸರ್ವ ವಿಕಾರಗಳ ಕಾರಣವು ಸ್ವತಃ ಅವಿದ್ಯೆಯಾಗಿರುವುದು. ಈ ವಿಕಾರದಲ್ಲಿ ನಾನು ನನ್ನ ಸತ್ಯತ್ವವನ್ನು ಸ್ಥಾಪಿಸಿರುವುದರಿಂದ ಅವಿದ್ಯೆಗೂ ಕೂಡ ಸತ್ಯತ್ವವು ಬರುವುದು ॥೪೬೨॥ ಅವಿದ್ಯೆಯು ತನ್ನ ನಾಮದಿಂದಲೇ ಸ್ವತಃ ಅಭಾವವನ್ನು ಹೇಳುತ್ತಿರುವುದು. ಸಜ್ಞಾನಿಗಳವರು ಇದರ ಮರ್ಮವನ್ನು ತಿಳಿದಿರುವರು. ಆದರೆ ಅಜ್ಞಾನಿ ಜನರು ಮಾತ್ರ ಅವಿದ್ಯೆಗೆ ಸತ್ಯವೆಂದು ತಿಳಿಯುವರು ॥೪೬೩॥ ಅವಿದ್ಯೆಯು ತನ್ನ ಅಜ್ಞಾನತ್ವದಿಂದ ಮಿಥ್ಯೆಯಾಗಿರುವುದು ಮತ್ತು ಆತ್ಮವಸ್ತು ತನ್ನ ಸ್ವತಃದ ಸತ್ಯತ್ವದಿಂದ ಸಂಪನ್ನವಾಗಿರುವುದು. ಇದರ ನಿರೂಪಣೆಯನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೪೬೪॥

ಯಾವ ಪ್ರಕಾರವಾಗಿ ನಾವು ನಿದ್ರೆಯ ಯೋಗದಿಂದ ಸ್ವಪ್ನದಲ್ಲಿ ವಸ್ತುತಃ ಒಬ್ಬನೇ ಆಗಿದ್ದು ಅನೇಕರಾಗುತ್ತಿರುವೆವೋ, ಅದೇ ಪ್ರಕಾರವಾಗಿ ಪ್ರಕೃತಿಯ ಅಂಗೀಕಾರವನ್ನು ಮಾಡಿರುವುದರಿಂದ ಬ್ರಹ್ಮತತ್ವದಿಂದ ಜನರು ಉತ್ಪನ್ನರಾಗುತ್ತಿರುವರು ॥೪೬೫॥ ನೂಲಿನ ಎಳೆಗಳಿಂದ ಕೋಟ್ಯಾವಧಿ ವಸ್ತ್ರಗಳು ಉತ್ಪನ್ನವಾಗುವುವು. ಆದರೆ ಆ ಎಲ್ಲ ಕೋಟ್ಯಾವಧಿ ವಸ್ತ್ರಗಳಲ್ಲಿ ನೂಲಿನ ಎಳೆಗಳು ಐಕ್ಯವಾಗಿರುವುವು. ಆ ವಸ್ತ್ರಗಳಲ್ಲಿ ಆದಿಯಲ್ಲಾಗಲಿ, ಅಂತ್ಯದಲ್ಲಾಗಲಿ, ಮಧ್ಯದಲ್ಲಾಗಲಿ ಎಲ್ಲಿ ನೋಡಿದರೂ ಅಲ್ಲಿ ಭಿನ್ನ ವಸ್ತು ತೋರುವುದೇ ಇಲ್ಲ, ॥೪೬೬॥ ಅದರಂತೆಯೇ ಪ್ರಕೃತಿಪುರುಷರನ್ನು ಮೊದಲು ಮಾಡಿ ಸರ್ವ ಜನರು ಪರಬ್ರಹ್ಮನಿಂದಲೇ ಉತ್ಪನ್ನವಾಗಿರುವರು. ಆದ್ದರಿಂದ ಅವೆಲ್ಲವೂ ಆದಿ, ಮಧ್ಯ, ಅಂತ್ಯದಲ್ಲಿ ಒಂದೇ ಪರಬ್ರಹ್ಮಸ್ವರೂಪದಲ್ಲಿಯೇ ಇರುವುವು. ಅಲ್ಲಿ ಯಾವುದೇ ಪ್ರಕಾರದ ದ್ವೈತವಿರುವುದಿಲ್ಲ ॥೪೬೭॥ ನೂಲಿನ ಎಳೆಯು ಇದು ನಿಜವಾಗಿರುವುದು, ಆದರೆ ವಸ್ತ್ರವು ಮಾತ್ರ ಮಾಯಿಕವಾಗಿರುವುದು. ಅದರಂತೆ ಪರಬ್ರಹ್ಮವು ಸತ್ಯವಾಗಿರುವುದು. ಮಾಯೆಯು ಮಿಥ್ಯೆಯಾಗಿರುವುದು. ಹೇ ಉದ್ಧವನೇ, ಆದಿ, ಮಧ್ಯ, ಅಂತ್ಯದಲ್ಲಿ ಒಂದೇ ಇರುವ ಅದೇ ಶುದ್ಧ ಸತ್ಯವಾಗಿರುವುದು ॥೪೬೮॥ ಯಾವ ಪ್ರಕಾರವಾಗಿ ಮರದ ಕೊಂಬೆಯು, ಮರದ ಅವಯವಗಳಿಂದ ಶೋಭಾಯಮಾನವಾಗಿ ತೋರುವುದೋ, ಅದೇ ಪ್ರಕಾರವಾಗಿ ಬ್ರಹ್ಮವು ಬ್ರಹ್ಮಸ್ವರೂಪದಿಂದ ಒಂದೇಯಾಗಿದ್ದು ಜಗತ್ತಿನ ರೂಪದಿಂದ ಶೋಭಾಯಮಾನವಾಗಿರುವುದು ॥೪೬೯॥ ಯಾವ ಪ್ರಕಾರವಾಗಿ ಈ ಯಾವ ದೇಹವು ಒಂದೇ ಒಂದಾಗಿದ್ದು ಭಿನ್ನ ಭಿನ್ನ ಅವಯವಗಳ ರೂಪದಿಂದ ಅನೇಕ ಪ್ರಕಾರವಾಗಿ ತೋರುವುದೋ, ಅದೇ ಪ್ರಕಾರವಾಗಿ ಬ್ರಹ್ಮವು ಒಂದೇ ಒಂದಾಗಿದ್ದು ಅದು ಅನೇಕ ರೂಪದಿಂದ ತೋರುತ್ತಿರುವುದು ॥೪೭೦॥ ಜಲದಲ್ಲಿ ಜಲಕ್ರೀಡೆ ಆರಂಭವಾಗಲು ಆಗ ನಾನಾವಿಧಗಳಾದ ತರಂಗಗಳ ಮೇಲೆ ತರಂಗಗಳು ನಿರ್ಮಾಣವಾಗುತ್ತಿರುವುವು. ಅದರಂತೆ ಪರಬ್ರಹ್ಮನ ಅಗಾಧ ಲೀಲೆಯಿಂದ ಜಗತ್ತು ಇತ್ಯಾದಿ ಸರ್ವ ವಸ್ತುಗಳ ಸಮುದಾಯವು ಪ್ರಕಟವಾಗುವುವು ॥೪೭೧॥
ತರಂಗಗಳ ಆದಿಯಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಜಲದ ರೂಪದಿಂದ ಜಲವೇ ಇರುವುದು. ಅದರಂತೆ ಉತ್ಪತ್ತಿ, ಸ್ಥಿತಿ ಮತ್ತು ಲಯ

ಮಾಯಾ ಕೈಚೀ ಭಿನ್ನ। ಜಗದ್ರೂಪೇ ಬ್ರಹ್ಮ ಪರಿಪೂರ್ಣ । ಅನ್ಯೋಪದೇಶೇ ಜಾಣ ದಾವಿಲೇ ॥೪೭೪॥ ಬ್ರಹ್ಮ ಮಾಯಾ ಕಾಳಗತೀ । ಯೇ ತಿನ್ಹೀ ಅನಾದಿ ಮ್ಹಣತೀ । ತೇಹೀ ನ ಘಡೇ ಉಪಪತ್ತೀ । ಯೇಚಿ ಅರ್ಥೀ ಹರಿ ಬೋಲೇ ॥೪೭೫॥

ಪ್ರಕೃತಿರ್ಯಸ್ಯೋಪಾದಾನಮಾಧಾರಃ ಪುರುಷಃ ಪರಃ ।
ಸತೋಽಭಿವ್ಯಂಜಕಃ ಕಾಲೋ ಬ್ರಹ್ಮ ತತ್ತ್ರಿತಯಂ ತ್ವಹಮ್ ।೧೯॥

ಅರ್ಥ:- ಈ ಪ್ರಪಂಚದ ಉಪಾದಾನ ಕಾರಣವು ಪ್ರಕೃತಿಯಾಗಿರುವುದು ಮತ್ತು ಪರಮಾತ್ಮನು ಅಧಿಷ್ಠಾನನಾಗಿರುವನು. ಇವುಗಳಿಗೆ ಪ್ರಕಟ ಮಾಡುವವನು ಕಾಲನಾಗಿರುವನು. ವ್ಯವಹಾರ ಕಾಲದ ಈ ತ್ರಿವಿಧಗಳ ಅವಸ್ಥೆಯು ವಸ್ತುತಃ ಬ್ರಹ್ಮಸ್ವರೂಪವಾಗಿರುವುದು. ನಾನು ಶುದ್ಧ ಪರಬ್ರಹ್ಮನಾಗಿರುವೆನು.

ಬ್ರಹ್ಮಾವೇಗಳೀ ಮಾಯಾ । ಸರ್ವಥಾ ನ ಯೇ ಆಯಾ । ತೇ ಬ್ರಹ್ಮಾಧಾರೇ ವಾಢೋನಿಯಾ । ಗುಣಕಾರ್ಯಾ ವಾಢವೀ ॥೪೭೬॥ ಮಾಯಾನಿಯಂತೇ ಬ್ರಹ್ಮ ಆಪಣ । ಯಾಲಾಗೀ ಪುರುಷಪಣ । ಪುರುಷಾಚೀ ಪ್ರಿಯಾ ಮಾಯಾ ಪೂರ್ಣ । ಪ್ರಕೃತಿ ಅಭಿಮಾನ ಯಾ ಹೇತೂ ॥೪೭೭॥ ಬ್ರಹ್ಮಾಹೂನ ಪುರುಷ ಭಿನ್ನ । ಹೇ ಸರ್ವಥಾ ಮಿಥ್ಯಾ ವಚನ । ಬ್ರಹ್ಮ ಪುರುಷ ನಾಮಾಭಿಮಾನ । ಏಕಾಸೀಚಿ ಜಾಣ ಆಲೇ ಅಸೇ ॥೪೭೮॥ ಮಾಯಾ ಪ್ರಕೃತಿ ಅಭಿಮಾನ । ದೋಹೀ ನಾಂವೀ ಮಾಯಾಚಿ ಪೂರ್ಣ । ಅವಿದ್ಯಕ ದಾವೀ ಕಾರ್ಯ ಭಿನ್ನ । ಅವಿದ್ಯಾ ಜಾಣ ಯಾ ಹೇತೂ ॥೪೭೯॥ ಮಾಯಾ ಬ್ರಹ್ಮೀಂಚೀ ಶಕ್ತಿ ಜಾಣ । ತೇಹೀ ಬ್ರಹ್ಮೇಸೀ ಅಸೇ ಅಭಿನ್ನ । ವೇಗಳೀ ನವ್ಹೇ ಅರ್ಧಕ್ಷಣ । ಸದಾ ಸುಲೀನ ಬ್ರಹ್ಮೇಸೀ ॥೪೮೦॥ ಜೇವೀ ಶೂರಾಂಚೀ ಶೌರ್ಯಶಕ್ತಿ ಪೂರ್ಣ । ಶೂರಾಹೋನಿ ನವ್ಹೇ ಭಿನ್ನ । ತೇವೀ ಬ್ರಹ್ಮೀ ಮಾಯಾಶಕ್ತಿ ಜಾಣ । ಅಸೇ ಸುಲೀನ ಸರ್ವದಾ ॥೪೮೧॥ ಮಾಯಾ ಬ್ರಹ್ಮೀ ಅಸತಾ ಜಾಣ । ಕ್ಷೋಭೇವೀಣ ನವ್ಹೇ ಸರ್ಜನ । ಮಾಯಾಕ್ಷೋಭಕೂ ಕಾಳ ಪೂರ್ಣ । ಕಾಳಾಸ್ತವ ಜನ ಜನ್ಮತೀ ॥೪೮೨॥ ಬ್ರಹ್ಮೀಂಚೀ ಸತ್ತಾ ತೋ ಕಾಳ ಜಾಣ । ಪ್ರಕೃತೀ ಕ್ಷೋಭವೂನಿ ಆಪಣ । ದಾವೀ ಉತ್ಪತ್ತಿ ಸ್ಥಿತೀ ನಿದಾನ । ತೋ ಕಾಳಹೀ ಅಭಿನ್ನ ಬ್ರಹ್ಮೇಸೀ ॥೪೮೩॥

ಜೇವೀ ರಾಯಾಚ್ಯಾ-ರಾಜಪುತ್ರಾಸೀ । ರಾಜಾಚಿ ದಮೂ ಶಕೇ ತ್ಯಾಸೀ । ತೇವೀ ಝಾಲೇ ಜೇ ಪ್ರಕೃತೀಚೇ ಕುಶೀ । ತೇ ನಿಜಸತ್ತೇಸೀ ನಿರ್ದಳೀ ॥೪೮೪॥ ವಿವೇಕದೃಷ್ಟೀ ಪಾಹತಾ ಜಾಣ । ಕಾಳ ಪರಮಾತ್ಮಾ ದೋನ್ಹೀ ಅಭಿನ್ನ । ಪ್ರಕೃತಿ ಪುರುಷ ಕಾಳ ಜಾಣ । ತಿಹೀಂಸೀ ಏಕಪಣ ಯಾ ಹೇತೂ ॥೪೮೫॥ ಬ್ರಹ್ಮ ಮಾಯಾಕಾಳಸಂಬಂಧ

ಇವುಗಳಲ್ಲಿ ಬ್ರಹ್ಮವು ಬ್ರಹ್ಮದ ರೂಪದಿಂದಲೇ ಅವಿನಾಶಿಯಾಗಿರುವುದು।೪೭೨॥ ಇದರಿಂದ ಬ್ರಹ್ಮ ಸತ್ಯ ಮತ್ತು ಜಗನ್ಮಿಥ್ಯಾ ಎಂಬ ಸಿದ್ಧಾಂತವು ಸಾಧಕರಿಗೆ ತಿಳಿಯಲೆಂದು ದೇವಾಧಿದೇವನು ಕಾರ್ಯಕಾರಣಗಳ ಅಭಿನ್ನತೆಯನ್ನು ಹೇಳಿರುವನು ।೪೭೩॥ ಕಾರ್ಯವು ಒಂದುವೇಳೆ ಕಾರಣಕ್ಕೆ ಅಭಿನ್ನವಾಗಿದ್ದರೆ ಬ್ರಹ್ಮನಲ್ಲಿ ಮಾಯೆಯಾದರೂ ಭಿನ್ನ ಹೇಗಾಗುವುದು? ಹೀಗೆ ಶಂಕೆಯು ಮನದಲ್ಲಿ ಬರಬಹುದೆಂದು ತಿಳಿದು ಬ್ರಹ್ಮವು ಜಗತ್ ರೂಪದಿಂದ ಪರಿಪೂರ್ಣವಾಗಿ ಸರ್ವತ್ರವೂ ತುಂಬಿಕೊಂಡಿರುವುದು. ಹೀಗೆ ಪರ್ಯಾಯದಿಂದ ತೋರಿಸಿಕೊಡಲಾಗಿದೆ ।೪೭೪॥ ಬ್ರಹ್ಮ, ಮಾಯಾ ಮತ್ತು ಕಾಲದ ಜಲದ ಗತಿ ಇವು ಮೂರೂ ಕೂಡ ಅನಾದಿಯಾಗಿರುವುವು ಎಂದು ಹೀಗೆ ಹೇಳುವರು. ಆದರೆ ಈ ಯುಕ್ತಿಯು ಸರಿಯಾಗುವುದಿಲ್ಲ. ಈ ವಿಷಯವನ್ನು ಕುರಿತು ಈಗ ಶ್ರೀಹರಿ ಭಗವಾನ ಶ್ರೀಕೃಷ್ಣನು ಹೇಳುವನು ।೪೭೫॥

ಬ್ರಹ್ಮದ ಹೊರತಾಗಿ ಮಾಯೆಯು ಎಂದಿಗೂ ಸಾಕಾರವಾಗಲು ಶಕ್ಯವಿಲ್ಲ. ಇದು ಬ್ರಹ್ಮದ ಆಧಾರದಿಂದಲೇ ಬೆಳೆಯುವುದು ಮತ್ತು ಮುಂದೆ ಗುಣಗಳ ಕಾರ್ಯಗಳನ್ನು ಬೆಳೆಸುವುದು ।೪೭೬॥ ಮಾಯೆಯ ನಿಯಂತ್ರಣವನ್ನು ಬ್ರಹ್ಮವು ಮಾಡುವುದು. ಆದ್ದರಿಂದ ಅದಕ್ಕೆ ಪುರುಷ ಎಂದು ಹೇಳುವರು. ಆ ಪುರುಷನ ಪ್ರಿಯ ಪತ್ನಿಯು ಮಾಯಾ ಆಗಿದ್ದು, ಪ್ರಕೃತೀ ಎಂಬ ನಾಮವು ಆಕೆಗೆ ದೊರೆಯಿತು ।೪೭೭॥ ಬ್ರಹ್ಮದ ಹೊರತಾಗಿ ಪುರುಷನು ಭಿನ್ನನು ಎಂದು ಹೇಳುವುದು ಸರ್ವಥಾ ಮಿಥ್ಯೆಯಾಗಿರುವುದು ಮತ್ತು ಬ್ರಹ್ಮ ಮತ್ತು ಪುರುಷ ಈ ಎರಡೂ ನಾಮಗಳನ್ನು ಬ್ರಹ್ಮ ಒಂದಕ್ಕೆ ಮಾತ್ರ ಕೊಟ್ಟಿರುವುದು ।೪೭೮॥ ಅದರಂತೆಯೇ ಮಾಯಾ ಮತ್ತು ಪ್ರಕೃತಿ ಈ ಎರಡೂ ನಾಮಗಳು ಒಂದೇ ಮಾಯೆಯದ್ದಾಗಿರುವುದು. ಆಕೆಯು ಅಜ್ಞಾನದಿಂದ ಕಾರ್ಯಗಳನ್ನು ಭಿನ್ನವಾಗಿ ತೋರಿಸುತ್ತಿರುವದರಿಂದ ಆಕೆಗೆ ಅವಿದ್ಯೆ ಎಂದು ಹೇಳುವರು ।೪೭೯॥ ವಾಸ್ತವಿಕವಾಗಿ ನೋಡಲು ಈ ಯಾವ ಮಾಯೆಯು ಬ್ರಹ್ಮನ ಶಕ್ತಿಯಾಗಿರುವುದು. ಈಕೆಯು ಬ್ರಹ್ಮನಿಂದ ಅಭಿನ್ನಳಾಗಿರುವಳು. ಅರ್ಧಕ್ಷಣವೂ ಕೂಡ ಆತನಿಂದ ದೂರ ಇರುವುದಿಲ್ಲ. ನಿರಂತರವೂ ಬ್ರಹ್ಮನಲ್ಲಿಯೇ ಲೀನಳಾಗಿರುವಳು ।೪೮೦॥ ಶೂರ ಪುರುಷನ ಶೌರ್ಯವು ಹೇಗೆ ಆತನಿಂದ ಭಿನ್ನವಾಗಿರುವುದಿಲ್ಲವೋ, ಅದರಂತೆಯೇ ಬ್ರಹ್ಮನಲ್ಲಿಯೂ ಕೂಡ ಮಾಯಾ ಶಕ್ತಿಯು ಸದಾಸರ್ವದಾ, ಸದೈವ ಏಕರೂಪವಾಗಿರುವುದು ।೪೮೧॥ ಈ ಯಾವ ಮಾಯೆಯು ಬ್ರಹ್ಮನಲ್ಲಿ ಇರುವುದು. ಈಕೆಯ ಕ್ಷೋಭವಾಗದ ಹೊರತು ಸೃಷ್ಟಿಯ ಉತ್ಪತ್ತಿಯಾಗಲು ಶಕ್ಯವಿಲ್ಲ. ಮಾಯೆಯನ್ನು ಕ್ಷೋಭಿಸುವವನು ಕಾಲನಾಗಿರುವನು. ಆತನಿಂದ ಪ್ರಾಣಿಗಳು ಜನ್ಮಕ್ಕೆ ಬರುಗುತ್ತಿರುವುವು ।೪೮೨॥ ಬ್ರಹ್ಮನ ಯಾವ ಸತ್ತೆಯೇ ಕಾಲನೆಂದು ತಿಳಿಯಬೇಕು. ಅದು ಪ್ರಕೃತಿಯನ್ನು ಉಗ್ರಗೊಳಿಸಿ ಉತ್ಪತ್ತೀ, ಸ್ಥಿತೀ ಮತ್ತು ಲಯವನ್ನು ಮಾಡುತ್ತಿರುವುದು. ಈ ಕಾಲನೂ ಕೂಡ ಬ್ರಹ್ಮದಿಂದ ಅಭಿನ್ನನಾಗಿರುವನು ।೪೮೩॥

ರಾಜಪುತ್ರನನ್ನು ರಾಜನು ಮಾತ್ರ ತನ್ನ ಅಂಕಿತದಲ್ಲಿಟ್ಟುಕೊಳ್ಳಲು ಸಾಧ್ಯವು. ಅದರಂತೆ ಪ್ರಕೃತಿಯ ಉದರದಲ್ಲಿ ಕಾಲನು ಜನ್ಮಕ್ಕೆ ಬರುವನು.

। ಹೇ ತಿನೀ ಮೂಳೀಂಚಿ ಅಭೇದ । ದಿಸೇ ಜೋ ವ್ಯವಹಾರಿಕ ಭೇದ । ತೋಹೀ ಅಬದ್ಧ ಮಿಥ್ಯಾತ್ವೇ ।।೪೮೬।। ವಸ್ತು ಏಕಲೀಚಿ ಆಪಣ । ಪ್ರಕೃತಿ-ಪುರುಷ ಕಾಳರೂಪೇ ಜಾಣ । ಅಖಂಡತ್ವೇ ದಾವಿತಾ ಪೂರ್ಣ । ತೋ ಮೀ ಶ್ರೀಕೃಷ್ಣ ಪರಮಾತ್ಮಾ ।।೪೮೭।। ಉತ್ಪತ್ತೀ ಪೂರ್ವೀ ಮೀ ಬ್ರಹ್ಮ ಪೂರ್ಣ । ಉತ್ಪತ್ತೀಚೇ ಮೀ ಬ್ರಹ್ಮ ಆದಿಕಾರಣ । ಸ್ಥಿತಿಕಾಳೀ ಮೀ ಬ್ರಹ್ಮರೂಪೇ ಜಾಣ । ಏಕೀ ಅನೇಕಪಣ ಸ್ವಯೇ ದಾವೀ ।।೪೮೮।। ಸ್ವಲೀಲಾ ಸೃಷ್ಟೀಚೇ ಪ್ರಾಂತೀ ಜಾಣ । ಪ್ರಳಯೀ ಉರೇ ಮೀ ಬ್ರಹ್ಮ ಪರಿಪೂರ್ಣ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೪೮೯।।

ಸರ್ಗಃ ಪ್ರವರ್ತತೇ ತಾವತ್ಪೌರ್ವಾಪರ್ಯೇಣ ನಿತ್ಯಶಃ । ಮಹಾನ್ ಗುಣವಿಸರ್ಗಾರ್ಥಃ ಸ್ಥಿತ್ಯಂತೋ ಯಾವದೀಕ್ಷಣಮ್ ।।೨೦।।

ಅರ್ಥ:- ಎಲ್ಲಿಯವರೆಗೆ ಪರಮಾತ್ಮನ ಈ ಕ್ಷಣಶಕ್ತಿಯು ತನ್ನ ಕಾರ್ಯ ಮಾಡುತ್ತಿರುವುದೋ, ಅಲ್ಲಿಯವರೆಗೆ ಅದರ ಪಾಲನೆಯ ಪ್ರವೃತ್ತಿಯು ಆಗುತ್ತಿರುವುದು. ಅಲ್ಲಿಯವರೆಗೆ ಜೀವಿಗಳ ಕರ್ಮಭೋಗಕ್ಕಾಗಿ ಕಾರಣ-ಕಾರ್ಯರೂಪದಿಂದ ಅಥವಾ ಪಿತಾ ಹಾಗೂ ಪುತ್ರ, ಈ ರೂಪದಿಂದ ಈ ಯಾವ ಸೃಷ್ಟಿ ಚಕ್ರವು ಅಖಂಡವಾಗಿ ನಡೆಯುತ್ತಿರುವುದು.

ಮಹಾನ್ ಮ್ಹಣಿಜೇ ಅತಿಥೋರು । ಪಿತೃಪುತ್ರಪ್ರವಾಹೇ ಸಂಸಾರೂ । ಅನವಚ್ಛಿನ್ನ ನಿರಂತರೂ । ಅತಿದುರ್ಧರೂ ವಾಢಲಾ ।।೪೯೦।। ಅತಿಶಯೇಸೀ ದುರ್ಧರೂ । ಕೈಸೇನಿ ವಾಢಲಾ ಸಂಸಾರೂ । ತೇಹೀ ಅರ್ಥೀಚಾ ವಿಚಾರೂ । ಶಾಙ್ಗಧರೂ ಸಾಂಗತ ।।೪೯೧।। ವಿಷಯಾಂಚಿಯೇ ಆಸಕ್ತೀ । ವಾಸನಾನಿಷ್ಠ ಝಾಲೀ ವೃತ್ತೀ । ತೇ ದೇಹಾತ್ಮತಾ ಅತಿಪ್ರೀತೀ । ಸಂಸಾರಸ್ಥಿತೀ ವಾಢವೀ ।।೪೯೨।। ಖವಳಲಾ ಜೋ ದೇಹಾಭಿಮಾನ। ತೋ ಶುದ್ಧಾಸೀ ಲಾವೀ ಜೀವಪಣ । ನಾನಾ ಯೋನೀ ಜನ್ಮಮರಣ । ವಿಶೇಷೇ ಜಾಣ ವಾಢವೀ ।।೪೯೩।। ಐಸೇನ ಅತಿದುರ್ಧರೂ । ಸ್ರಷ್ಟೇನ ಸೃಜಿಲಾ ಸಂಸಾರೂ । ತೋ ಬ್ರಹ್ಮಾಯುಪರ್ಯಂತ ಸ್ಥಿರೂ । ಬ್ರಹ್ಮಪ್ರಳಯೀ ಸಂಸಾರೂ ಸೃಷ್ಟೀಚಾ ।।೪೯೪।। ಏಕ ನಿತ್ಯಪ್ರಳಯೋ ಲಾಗಲಾ ಆಹೇ । ಏಕ ದೈನಂದಿನ ಪ್ರಳಯೋ ಪಾಹೇ । ಕರ್ಮಜನ್ಯ ಪ್ರಳಯೋ ಲಾಹೇ । ಏಕ ತೋ ಹೋಯೇ ಅವಾಂತರ ಪ್ರಳಯೋ ।।೪೯೫।। ಸಕಳ ಪ್ರಳಯಾಂಚ್ಯಾ ಶಿರೀ । ಬ್ರಹ್ಮಪ್ರಳಯಾಚೀ ಥೋರೀ । ತೋ ಸಕಳ ಸೃಷ್ಟೀತೇ ಸಂಹಾರೀ । ಕಾಂಹೀ ಸಂಸಾರೀ ಉರೋ ನೇದೀ ।।೪೯೬।। ಬ್ರಹ್ಮಪ್ರಳಯೀ ನಾಶ ಸೃಷ್ಟೀಸೀ । ಪುಢತೀ ರಚಾವಯಾ ಕಲ್ಪಾದೀಸೀ । ಉಂಚ ನೀಚ ನಾನಾಯೋನೀಸೀ । ನವ್ಯಾ ಕರಾವಯಾಸೀ ಕಾರಣ ಕಾಯ ।।೪೯೭।। ಬ್ರಹ್ಮಪ್ರಳಯೀ ಸೃಷ್ಟೀಂಚಾ

ಪ್ರಕೃತಿಯು ಆತನನ್ನು ತನ್ನ ನಿಜಸತ್ತೆಯಿಂದ ನಷ್ಟಗೊಳಿಸುವುದು ।।೪೮೪।। ವಿವೇಕದೃಷ್ಟಿಯಿಂದ ನೋಡಲು ಕಾಲನು ಮತ್ತು ಪರಮಾತ್ಮನು ಏಕರೂಪರಾಗಿರುವರು. ಇದೇ ಕಾರಣದಿಂದ ಪ್ರಕೃತಿ, ಪುರುಷ ಮತ್ತು ಕಾಲ ಈ ಮೂವರ ಐಕ್ಯವಿರುವುದು ।।೪೮೫।। ಬ್ರಹ್ಮ, ಮಾಯಾ ಮತ್ತು ಕಾಲ ಇವುಗಳ ಸಂಬಂಧ ಹೇಗೆಂದರೆ ಇವು ಮೂಲದಲ್ಲಿಯೇ ಏಕರೂಪರಾಗಿರುವರು. ಅವರಲ್ಲಿ ಕಾಣುವ ವ್ಯವಹಾರಿಕ ಭೇದವೂ ಕೂಡ ಮಿಥ್ಯತ್ವದಿಂದ ಅಸಂಬಂಧವಾಗಿದೆ ।।೪೮೬।। ಬ್ರಹ್ಮತತ್ವವು ಒಂದೇ ಇರುತ್ತಿರಲು ಕಾಲರೂಪದಿಂದ ಅದೇ ಪ್ರಕೃತಿಪುರುಷವಾಗುವುದು. ಆದರೆ ಅಖಂಡರೂಪದಿಂದ ಅದರ ಪ್ರಚೀತಿ ಬಂದರೆ ಅದೇ ನಾನು ಶ್ರೀಕೃಷ್ಣ ಪರಮಾತ್ಮನಾಗಿರುವೆನು ।।೪೮೭।। ಉತ್ಪತ್ತಿಯ ಪೂರ್ವದಲ್ಲಿ ಪೂರ್ಣ ಬ್ರಹ್ಮವೇ ಇತ್ತು. ಅದೇ ನಾನೇ ಉತ್ಪತ್ತಿಯ ಆದಿಕಾರಣನಾಗಿರುವ ಯಾವ ಬ್ರಹ್ಮವು, ಅದೇ ನಾನು ಸ್ಥಿತಿಕಾಲದಲ್ಲಿಯೂ ಬ್ರಹ್ಮರೂಪದಿಂದಲೇ ಇರುವೆನು. ಸ್ವತಃವೇ ಒಂದರಲ್ಲಿ ಅನೇಕತ್ವವನ್ನು ತೋರಿಸುವೆನು ।।೪೮೮।। ನನ್ನ ಲೀಲೆಯಿಂದ ಸೃಷ್ಟಿಯ ಅಂತ್ಯದಲ್ಲಿನ ಪ್ರಳಯಕಾಲದಲ್ಲಿ ನಾನೇ ಪರಿಪೂರ್ಣ ಬ್ರಹ್ಮನಾಗಿರುವೆನು. ಇದರ ನಿರೂಪಣೆಯನ್ನು ಭಗವಾನ ಶ್ರೀಕೃಷ್ಣನು ಮಾಡುತ್ತಿರುವನು ।।೪೮೯।। ಪಿತಾ ಮತ್ತು ಪುತ್ರ ಹೀಗೆ ಪರಂಪರೆಯಿಂದ ಈ ಯಾವ ಸಂಸಾರವು ಅತ್ಯಂತ ಮಹಾನ್ ಅಂದರೆ ಅಪರಿಮಿತವಾಗಿ ದೊಡ್ಡದಾಗಿ ಬೆಳೆದಿರುವುದು ।।೪೯೦।। ಆದರೆ ಈ ಯಾವ ಅತಿಶಯ ದುರ್ಧರವಾದ ಸಂಸಾರವು ಹೀಗೆ ಬೆಳೆಯುತ್ತಿರುವ ಕಾರಣವಾದರೂ ಯಾವುದು ? ಈ ವಿಷಯವನ್ನು ಕುರಿತಾದ ವಿಚಾರವನ್ನು ಶ್ರೀಸಾರಂಗಧರನು ಹೇಳುತ್ತಿರುವನು ।।೪೯೧।। ವಿಷಯಗಳ ಅತ್ಯಂತ ಲಾಲಾಸೆಮೇರೆಗೆ ಹಾಗೂ ಆಸಕ್ತಿಯಿಂದ ಯಾವ ವೃತ್ತಿಯು ವಾಸನಾನಿಷ್ಠವಾಗುವುದು ಮತ್ತು ಅದು ದೇಹ ಭಾವನೆಯಿಂದ ಅತಿಶಯ ಪ್ರೇಮದಿಂದ ಸಂಸಾರದ ಸ್ವರೂಪವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಿರುವುದು ।।೪೯೨।। ಯಾವ ದೇಹಾಭಿಮಾನವು ಅತ್ಯಂತ ಉಗ್ರಗೊಳ್ಳಲು ಅದು ಶುದ್ಧವಾಗಿರುವ ಪರಬ್ರಹ್ಮಕ್ಕೆ ಜೀವತ್ವವನ್ನು ಹಚ್ಚುವುದು. ಇದರಿಂದ ನಾನಾ ಪ್ರಕಾರದ ಯೋನಿಗಳಲ್ಲಿ ಜನ್ಮಮರಣಗಳನ್ನು ಮುಖ್ಯತ್ವವಾಗಿ ಬೆಳೆಸುವುದು ।।೪೯೩।। ಈ ರೀತಿಯಲ್ಲಿ ಬ್ರಹ್ಮದೇವನು ಅತ್ಯಂತ ದುರ್ಧರವಾದ ಸಂಸಾರವನ್ನು ನಿರ್ಮಾಣ ಮಾಡಿರುವನು. ಆ ಬ್ರಹ್ಮದೇವನ ಆಯುಷ್ಯವು ಇರುವವರೆಗೂ ಹೀಗೆಯೇ ಅಖಂಡವಾಗಿ ಸಂಸಾರವಿರುವುದು. ಬ್ರಹ್ಮದೇವನ ಪ್ರಳಯಕಾಲದಲ್ಲಿ ಈ ಯಾವ ಸೃಷ್ಟಿಯ ಸಂಹಾರವಾಗುವುದು ।।೪೯೪।। ಒಂದು ನಿತ್ಯಪ್ರಳಯ ಕಾಲವು ಹತ್ತಿಕೊಂಡಿರುವುದು, ಒಂದು ದೈನದಿಂನ ಪ್ರಳಯವಿರುವುದು. ಹಾಗೆಯೇ ಒಂದು ಕರ್ಮಜನ್ಯ ಪ್ರಳಯವಾಗುತ್ತಿರುವುದು ಮತ್ತು ಒಂದು ಆವಾಂತರ ಪ್ರಳಯವಿರುವುದು ।।೪೯೫।।
ಆದರೆ ಈ ಎಲ್ಲ ಪ್ರಕಾರದ ಪ್ರಳಯಕ್ಕಿಂತಲೂ ಶ್ರೇಷ್ಠವಾದ ಬ್ರಹ್ಮಪ್ರಳಯವು ಅತಿದೊಡ್ಡದಾಗಿರುವುದು. ಅದು ಸರ್ವ ಸೃಷ್ಟಿಯ

ಹ್ರಾಸೂ । ಪರೀ ನಿಃಶೇಷ ನವ್ಹೇಚಿ ನಾಶೂ । ಉರೇ ವಾಸನಾಬೀಜವಿಲಾಸೂ । ಸುಲೀನ ರಹಿವಾಸೂ ಅವಿದ್ಯೇ ಅಂಗೀ ॥೪೯೮॥ ತೇಚಿ ಬೀಜೇ ಕಲ್ಪಾದಿಜಾಣ । ಮೀಚಿ ಸ್ರಷ್ಟರೂಪೇ ಆಪಣ । ಮಜ ಮ್ಯಾ ಅನುಗ್ರಹೂನಿ ಪೂರ್ಣ । ಸೂಕ್ಷ್ಮ ಕಾರಣ ಲಕ್ಷವಿಲೇ ॥೪೯೯॥ ಜೇವೀ ವರ್ಷಾಕಾಳೀ ನಾನಾ ತೃಣೇ । ವಾಢೂನಿ ಶರತ್ಕಾಳೀ ಹೋತೀ ಪೂರ್ಣೇ । ತೀಂಚ ಉಷ್ಣ ಕಾಳೀ ಬೀಜಕಣೇ । ಹೋತೀ ಸುಲೀನೇ ಪೃಥ್ವೀಸೀ ॥೫೦೦॥ ಸುಲೀನ ಬೀಜೇ ಪೂರ್ಣ ಕ್ಷಿತೀ । ಪರೀ ತೀ ಕೋಣಾ ವ್ಯಕ್ತೀ ನ ಯೇತೀ । ತೇವೀ ವಾಸನಾಬೀಜೇ ಪ್ರಳಯಾಂತೀ । ಉರೇ ಅವ್ಯಕ್ತೀ ಸಂಸಾರೂ ॥೫೦೧॥ ಜೇವೀ ಕಾಳೀ ವರುಷಲೇನಿ ಘನೇ । ಬೀಜೇ ವಿರೂಢತೀ ಸತ್ರಾಣೇ । ವಾಢತೀ ನಾನಾ ಜಾತೀಂಚೇ ತೃಣೇ । ಪೂರ್ವಲಕ್ಷಣೇ ಯಥಾಸ್ಥಿತ ॥೫೦೨॥ ತೇವೀ ಉತ್ಪತ್ತಿ ಕಾಳಾವರೀ । ಸೂಕ್ಷ್ಮವಾಸನಾ ಬೀಜಾಂಕುರೀ। ನಾನಾ ಯೋನೀ ಚರಾಚರೀ । ಜಂಗಮಸ್ಥಾವರೀ ಜಗ ವಾಢೇ ॥೫೦೩॥ ಬ್ರಹ್ಮಾಚೇ ಪ್ರಳಯಾ ಆಂತೂ । ನಿಃಶೇಷ ಸೃಷ್ಟೀಚಾ ನವ್ಹೇ ಅಂತೂ । ಯಾಲಾಗೀ ಸಂಸಾರೀ ಅನಂತೂ । ವೇದಶಾಸ್ತ್ರಾರ್ಥೂ ಪ್ರತಿಪಾದೀ ॥೫೦೪॥ ಐಸಾ ಸಂಸಾರ ಅನಂತೂ । ಯಾಚಾ ನಿಃಶೇಷ ಹೋತ ಅಂತೂ । ತೇಚಿ ಅರ್ಥೀ ಶ್ರೀಕೃಷ್ಣನಾಥೂ । ಶ್ಲೋಕೀಂಚಾ ಪದಾರ್ಥೂ ಬೋಲಿಲಾ ॥೫೦೫॥ ''ಸ್ಥಿತ್ಯಂತೋ ಯಾವ ದೀಕ್ಷಣಮ್'' । ಯೇಣೇ ಪದೇ ಶ್ರೀಕೃಷ್ಣ । ಅತ್ಯಂತ ಪ್ರಳಯೀಂಚೇ ಲಕ್ಷಣ । ಸೂತ್ರಪ್ರಾಯ ಜಾಣ ಬೋಲಿಲಾ ॥೫೦೬॥ ''ಈ ಕ್ಷಣ'' ಯಾ ಪದಾಚಾ ಅರ್ಥ ಜಾಣ । ಸದ್ಗುರುಕೃಪಾದೃಷ್ಟಿ ಪೂರ್ಣ । ತೇಚಿ ಮಾಝೀ ಕೃಪಾವಲೋಕನ । ಜೇಣೇ ಬ್ರಹ್ಮಜ್ಞಾನ ಪ್ರಕಾಶೇ ॥೫೦೭॥ ಪೂರ್ಣ ಪ್ರಕಾಶಲ್ಯಾ ಬ್ರಹ್ಮಜ್ಞಾನ । ಸಂಸಾರ ಝಾಲಾ ನಾಹೀಂಚ ಜಾಣ । ವಸ್ತು ವಸ್ತುತ್ವೇ ಪರಿಪೂರ್ಣ । ಮೀ ತೂಪಣ ಅಸೇನಾ ॥೫೦೮॥

ತೇಥ ಧ್ರುವಮಂಡಳಾಚೀ ಠೇಲೀ ಮಾತ । ವೈಕುಂಠಕೈಲಾಸಾ ಝಾಲಾ ಪ್ರಾಂತ। ಶೇಷಶಾಯೀಚಾಹೀ ಅಂತ । ಬ್ರಹ್ಮಜ್ಞಾನಾಂತ ಹೋಊ ಸರಲಾ ॥೫೦೯॥ ಹಾರಪಲೇ ಮೀತೂಪಣ । ಉಡಾಲೇ ದೇವ-ಭಕ್ತ ಭಜನ । ಬುಡಾಲೇ ಸಾಕಾರತೇಚೇ ಭಾನ । ಬ್ರಹ್ಮ ಸನಾತನ ಸದೋದಿತ ॥೫೧೦॥ ಪ್ರಪಂಚ ಏಕ ಝಾಲಾ ಹೋತಾ ।

ಸಂಹಾರವನ್ನು ಮಾಡುವುದು. ಆಗ ಈ ಸಂಸಾರದಲ್ಲಿ ಯಾವುದು ಒಂದೂ ಸಹ ಉಳಿಯುವುದಿಲ್ಲ ॥೪೯೬॥ ಬ್ರಹ್ಮಪ್ರಳಯದಲ್ಲಿ ಸೃಷ್ಟಿಯ ನಾಶಮಾಡುವುದು ಮತ್ತು ಹೊಸ ಕಲ್ಪದ ಆರಂಭದಲ್ಲಿ ಸೃಷ್ಟಿಯ ರಚನೆಯನ್ನು ಮಾಡುವುದಕ್ಕಾಗಿ ಉಚ್ಚ, ನೀಚ ಹೀಗೆ ನಾನಾ ಜನ್ಮಗಳ ಹೊಸದಾಗಿ ರಚನೆ ಮಾಡಲು ಯಾವ ಕಾರಣವಿದೆ? ॥೪೯೭॥ ಬ್ರಹ್ಮಪ್ರಳಯದಲ್ಲಿ ಸೃಷ್ಟಿಯ ಲಯವಾಗುವುದು ನಿಜ ; ಆದರೆ ಸಂಪೂರ್ಣವಾಗಿ ನಾಶವಾಗುವುದಿಲ್ಲ. ಕಾರಣ ವಾಸನಾರೂಪ ಬೀಜ ವಿಭಾಗವು ಉಳಿದುಕೊಂಡಿರುವುದು. ಅದು ಅವಿದ್ಯೆಯ ಅಂಗದಲ್ಲಿ ಪೂರ್ಣವಾಗಿ ಲೀನವಾಗಿರುವುದು ॥೪೯೮॥ ಇದೇ ವಾಸನಾರೂಪ ಬೀಜಗಳಿಂದ ಕಲ್ಪದ ಪುನರಾರಂಭವಾಗುವುದು. ಬ್ರಹ್ಮದೇವನ ರೂಪದಿಂದ ನಾನೇ ಸ್ವತಃ ನನಗೆ ಪೂರ್ಣವಾಗಿ ಅನುಗ್ರಹವನ್ನು ಮಾಡಿ ಆ ಸೂಕ್ಷ್ಮ ಕಾರಣವನ್ನು ಕಾಣಲು ಹಚ್ಚುವೆನು ॥೪೯೯॥ ಯಾವ ಪ್ರಕಾರದಿಂದ ಮಳೆಗಾಲದಲ್ಲಿ ಅನೇಕ ಪ್ರಕಾರದ ತೃಣಗಳು ಹುಟ್ಟಿಕೊಳ್ಳುವುವು ಮತ್ತು ಅವು ಶರದ್ ಋತುವರೆಗೆ ಪೂರ್ಣಾವಸ್ಥೆಗೆ ಬರುವುವು ಕೊನೆಗೆ ಅವುಗಳ ಬೀಜಕಣಗಳು ಬೇಸಿಗೆಯಲ್ಲಿ ಭೂಮಿಯಲ್ಲಿ ಕೂಡಿಕೊಳ್ಳುತ್ತಿರುವುವು ॥೫೦೦॥ ಈ ಬೀಜಗಳು ಭೂಮಿಯಲ್ಲಿ ಸರ್ವತ್ರ ಹರಡಿಕೊಂಡಿರುವುವು. ಆದರೆ ಅವು ಯಾರಿಗೂ ಕಾಣಿಸುವುದಿಲ್ಲ. ಅದರಂತೆಯೇ, ಪ್ರಳಯಾಂತದಲ್ಲಿ ವಾಸನೆಯು ಬೀಜರೂಪದಿಂದ ಸಂಸಾರ ಅವ್ಯಕ್ತದಲ್ಲಿ ಉಳಿದುಕೊಳ್ಳುವುದು ॥೫೦೧॥ ಉರಿ ಬಿಸಿಲಿನಲ್ಲಿ ಭೂಮಿಯಲ್ಲಿ ಬಿದ್ದಿರುವ ಬೀಜಗಳು ಮಳೆಗಾಲದಲ್ಲಿ ಮಳೆಯಾಗುತ್ತಲೇ ಅತಿಶಯ ವೇಗದಿಂದ ಹುಟ್ಟಿಕೊಳ್ಳುವುವು ಮತ್ತು ನಾನಾವಿಧವಾದ ತೃಣಗಳು ಮೊದಲಿನಂತೆಯೇ ಎದ್ದು ಕಾಣುತ್ತಿರುವುವು ॥೫೦೨॥ ಅದರಂತೆ ಉತ್ಪತ್ತಿಕಾಲದ ಸಮಯದಲ್ಲಿ ಅತ್ಯಂತ ಸೂಕ್ಷ್ಮವಾಗಿರುವ ವಾಸನೆಗಳ ಬೀಜಾಂಕುರಗಳು ಅನೇಕ ಪ್ರಕಾರದ ಯೋನಿಗಳಲ್ಲಿ ಚರಾಚರ ಮತ್ತು ಸ್ಥಾವರ ಜಂಗಮಾತ್ಮಕ ಜಗತ್ತಿನ ಬೆಳವಣಿಗೆ ಆಗುವುದು ॥೫೦೩॥ ಬ್ರಹ್ಮದೇವನ ಪ್ರಳಯಕಾಲದಲ್ಲಿಯೂ ಕೂಡ ಈ ಯಾವ ಸೃಷ್ಟಿಯ ನಿಃಶೇಷ ನಾಶವಾಗುವುದಿಲ್ಲ. ಆದ್ದರಿಂದಲೇ ''ಈ ಸಂಸಾರವು ಅನಂತವಾಗಿದೆ'' ಎಂದು ಹೀಗೆ ವೇದಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ ॥೫೦೪॥ ಆದರೆ ಈ ಪದ್ಧತಿಯಿಂದ ಯಾವ ಈ ಸಂಸಾರವು ಅನಂತವಾಗಿದ್ದರೂ ಕೂಡ ಇದರ ನಾಶವು ಪೂರ್ಣವಾಗಿ ಆಗಬಲ್ಲದು ಎಂಬ ಅರ್ಥದಿಂದ ಶ್ರೀಕೃಷ್ಣನಾಥನು ಶ್ಲೋಕದಲ್ಲಿನ ಭಾವಾರ್ಥವನ್ನು ಹೇಳಿದನು ॥೫೦೫॥ ''ಸ್ಥಿತ್ಯಂತ್ಯೋಯಾವ ದೀಕ್ಷಣಮ್'' ಈ ಪದದಿಂದ ಭಗವಾನ ಶ್ರೀಕೃಷ್ಣನು ಅತ್ಯಂತ ಪ್ರಚಂಡವಾಗಿರುವ ಪ್ರಳಯದ ಲಕ್ಷಣವನ್ನು ಸಂಕ್ಷಿಪ್ತವಾಗಿ ಹೇಳಿರುವನು ॥೫೦೬॥ ''ಈ ಕ್ಷಣ'' ಈ ಪದದ ಅರ್ಥವೇನೆಂದರೆ, ''ಸದ್ಗುರುಗಳ ಪೂರ್ಣ ಕೃಪಾದೃಷ್ಟಿ'' ಎಂದಾಗಿದೆ. ಯಾರ ಯೋಗದಿಂದ ಬ್ರಹ್ಮಜ್ಞಾನದ ಪ್ರಾಪ್ತಿಯಾಗಲು ಈ ಯಾವ ಸಂಸಾರವು ನಿರ್ಮಾಣವಾಗಿಯೇ ಇಲ್ಲ ಎಂದು ಭಾಸವಾಗುವುದು ಮತ್ತು ಬ್ರಹ್ಮವೇ ಬ್ರಹ್ಮರೂಪದಿಂದ ಪೂರ್ಣ ಸ್ವರೂಪದಿಂದ ಇರುವುದು. ಅಂದಮೇಲೆ ಅಲ್ಲಿ ನಾನು, ನೀನು ಎನ್ನಲು ಅವಕಾಶವೇ ಇರದು ॥೫೦೮॥

ಆಗ ಧ್ರುವಮಂಡಳದ ಮಾತೇ ಅಡುಗಿಹೋಗುವುದು. ವೈಕುಂಠ ಮತ್ತು ಕೈಲಾಸ ಇವುಗಳೂ ಕೂಡ ಕೊನೆಗೊಳ್ಳುವುವು. ಹೆಚ್ಚಿಗೇನು

ಹೇ ಸಮೂಳ ಮಿಥ್ಯಾ ವಾರ್ತಾ । ಪುಢೇ ಹೋಈಲ ಮಾಗುತಾ । ಕದಾ ಕಲ್ಪಾಂತಾ ಘಡೇನಾ ।೫೧೧॥ ಹೇ ಅತ್ಯಂತ ಪ್ರಳಯಾಂಚೇ ಲಕ್ಷಣ । ಭಾಗ್ಯೇವೀಣ ನ ಪಾವಿಜೇ ಜಾಣ । ಜ್ಯಾಸೀ ಸಾಚಾರ ಸದ್ಗುರುಚರಣ । ತೇ ಸಭಾಗ್ಯ ಜನ ಪಾವತೀ ।೫೧೨॥ ಅತ್ಯಂತ ಪ್ರಳಯೀಂಚೀ ಗತಿ । ನ ಘಡೇ ಗಾ ಸಮರತಾಂಪ್ರತೀ । ಹೇ ಪರಮ ನಿರ್ವಾಣಗತೀ । ಜಾಣ ನಿಶ್ಚಿತೀ ಉದ್ಧವಾ ।೫೧೩॥ ಜ್ಯಾಚೀ ಅಹಂಮಮತಾ ಖುಂಟೇ । ತ್ಯಾಚಿ ನಿಃಶೇಷ ಕಲ್ಪನಾ ತುಟೇ । ಅತ್ಯಂತ ಪ್ರಳಯೋ ತ್ಯಾಸೀಚ ಭೇಟೇ । ನೇಟೇ ಪಾಟೇ ನಿಜಾತ್ಮತಾ ।೫೧೪॥ ದೇಹ ಪಡಲಿಯಾಪ್ರಳಯೋ ಘಡೇ । ಹೇ ಬೋಲಣೇ ಸರ್ವಥಾ ಕುಡೇ । ಜಿತಾಂಚಿ ಹಾ ಪ್ರಳಯೋ ಜೋಡೇ । ವಾಡೇ ಕೋಡೇ ನಿಜನಿಷ್ಠಾ ।೫೧೫॥ ಜಿತಾಂಚಿ ಹಾ ಪ್ರಳಯೋ ಜಾಣ । ಜೇಣೇ ಸಂಸಾರಬೀಜದಹನ । ಆತಾ ಬ್ರಹ್ಮಪ್ರಳಯಲಕ್ಷಣ । ಐಕ ಸಂಪೂರ್ಣ ಸಾಂಗೇನ ।೫೧೬॥ ಬ್ರಹ್ಮಾಂಡಪ್ರಳಯಾಚಾ ಅನುಕ್ರಮ । ತೇಥ ಅಂತೀ ಉರೇ ಪೂರ್ಣ ಬ್ರಹ್ಮ । ಹೇ ಉದ್ಧವೇ ಜಾಣಾವಯಾ ವರ್ಮ । ಪುರುಷೋತ್ತಮ ಬೋಲತ ।೫೧೭॥

ವಿರಾಣ್ಮಯಾಽಽಸಾಧ್ಯಮಾನೋ ಲೋಕಕಲ್ಪವಿಕಲ್ಪಕಃ । ಪಂಚತ್ವಾಯ ವಿಶೇಷಾಯ ಕಲ್ಪತೇ ಭುವನೈಃ ಸಹ ।೨೧॥

ಅರ್ಥ:- ಈ ಯಾವ ವಿರಾಟವು ಇದೇ ವಿವಿಧ ಲೋಕಗಳ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳ ಲೀಲಾಭೂಮಿಯಾಗಿರುವುದು. ನಾನು ಕಾಲರೂಪದಿಂದ ಎಂದು ಇದರಲ್ಲಿ ವ್ಯಾಪ್ತನಾಗುವೆನೋ ಮತ್ತು ಪ್ರಳಯ ಮಾಡುವ ಸಂಕಲ್ಪ ಮಾಡುವೆನೋ, ಆಗ ಈ ಭುವನಗಳ ಜೊತೆಯಲ್ಲಿ ವಿನಾಶರೂಪ ವಿಭಾಗಕ್ಕೆ ಯೋಗ್ಯನಾಗುವೆನು.

ಚತುರ್ದಶಭುವನೇಸೀ ಬ್ರಹ್ಮಾಂಡ । ಕಾಳೇ ಕಲ್ಪಿಲೇ ಪ್ರಚಂಡ । ತೇ ಸ್ಥಿತೀಕಾಳೀ ಪಾಳೂನಿ ಅಂಡ । ಅಂತೀ ನಾಶಾಚೇ ಬಂಡ ಆದರೀ ಕಾಳೂ ।೫೧೮॥ ತೋ ತೂ ಕಾಳ ಮ್ಹಣಶೀ ಕೋಣ । ತರೀ ಕಾಳಾತ್ಮಾ ಮೀಚಿ ಜಾಣ । ತೇಣೇ ಕಾಳೇ ಮ್ಯಾ ಪ್ರಳಯ ಈಕ್ಷಣ । ಕೇಲೇ ಜಾಣ ಸೃಷ್ಟೀಸೀ ।೫೧೯॥

ಪಂಚ ಭೂತಾಂಚೇ ಭಿನ್ನ ಭಾಗ । ಕಾಳಸತ್ತಾ ರಾಖಿಲೇ ವಿಭಾಗ । ತೇ ಸತ್ತಾ ಮ್ಯಾ ಆವರಿತಾ ಸಾಂಗ । ಖವಳೇ ಲಗಬಗ ಪಂಚತ್ವಾಸೀ ।೫೨೦॥ ಜೈಸಾ ಉತ್ಪತ್ತೀಚಾ ಉಪಕ್ರಮೂ । ತೈಸಾಚಿ ಪ್ರಳಯಾಚಾ ಅನುಕ್ರಮೂ । ಭೂತೀ ಭೂತಲಯೋ ಸುಗಮೂ । ಪುರುಷೋತ್ತಮೂ ಸಾಂಗತ ।೫೨೧॥

ವರ್ಣಿಸಬೇಕು ? ಈ ಯಾವ ಅಗಾಧವಾದ ಬ್ರಹ್ಮಜ್ಞಾನದಲ್ಲಿ ಶೇಷಶಾಯಿಯೂ ಸಹ ಕೊನೆಗೊಳ್ಳುವನು ।೫೦೯॥ ನಾನು ನೀನೆಂಬುವುದು ಇಲ್ಲದಾಗಿ ಹೋಗುವುದು. ದೇವ-ಭಕ್ತ, ಮತ್ತು ಭಜನೆ ಈ ಭೇದವು ಮುಳುಗಿಹೋಗುವುದು.ಸಗುಣವಾಗಿರುವ ವಾತ್ಸಲ್ಯ ಸಿಂಧು ಮೂರ್ತಿಯ ಎಚ್ಚರವು ಹಾರಿಹೋಗುವುದು ಮತ್ತು ಅಖಂಡವಾದ ಬ್ರಹ್ಮವೇ ಮಾತ್ರ ಉಳಿದುಕೊಳ್ಳುವುದು ।೫೧೦॥ ಪೂರ್ವದಲ್ಲಿ ಎಂದೋ ಒಂದು ಪ್ರಪಂಚವಿತ್ತು ಎಂಬ ಈ ಮಾತೂ ಕೂಡ ಸುಳ್ಳಾಗಿ ತೋರುವುದು ಮತ್ತು ಭವಿಷ್ಯ ಕಾಲದಲ್ಲಿ ಪುನಃ ಎಂದಾದರೂ ಹುಟ್ಟಬಹುದೆಂಬುದು ಕಲ್ಪಾಂತಕ್ಕೂ ಕೂಡ ಸಾಧಿಸುವುದಿಲ್ಲ ।೫೧೧॥ ಇದು ಇಂತಹ ಮಹಾ ಭಯಂಕರವಾದ ಪ್ರಳಯದ ಲಕ್ಷಣವಾಗಿರುವುದು. ಇದು ತಿಳಿಯಲು ಪರಮ ಭಾಗ್ಯದ ಹೊರತಾಗಿ ಅತಿಶಯ ಕಠಿಣವಾಗಿರುವುದು. ಯಾವ ಜನರಿಗೆ ನಿಜವಾಗಿಯೂ ಸದ್ಗುರು ಚರಣಗಳ ಅಮೌಲ್ಯ ಲಾಭವಾಗಿರುವುದೋ, ಅಂತಹ ಭಾಗ್ಯವಂತರು ಮಾತ್ರ ಇದನ್ನು ತಿಳಿಯಬಲ್ಲರು ।೫೧೨॥ ಮಹಾ ಭಯಂಕರವಾಗಿರುವ ಇಂತಹ ಪ್ರಳಯದ ಗತಿಯು ಸರ್ವರಿಗೂ ಇದು ತಿಳಿಯುವ ಮಾತಲ್ಲ. ಕಾರಣ ಹೇ ಪ್ರಿಯ ಉದ್ಧವಾ, ಇದುವೇ ನಿಜವಾದ ಪರಮ ನಿರ್ವಾಣದ ಗತಿಯಾಗಿರುವುದು. ಹೀಗೆಂದು ನೀನು ನಿಶ್ಚಯವಾಗಿ ತಿಳಿ ।೫೧೩॥ ಯಾರ ಅಹಂಕಾರ, ಮಮಕಾರ ಮಾಯವಾಗಿರುವುದೋ, ಅವರ ಕಲ್ಪನೆಗಳೂ ಕೂಡ ಪರಿಪೂರ್ಣವಾಗಿ ನಾಶವಾಗುವುವು. ಆತನಿಗೆ ಮಾತ್ರ ಆತ್ಮಸ್ವರೂಪದ ಬೋಧವಾಗಲು ಅತ್ಯಂತ ಪ್ರಳಯದ ಲಾಭದ ಪ್ರಾಪ್ತಿಯಾಗುವುದು ।೫೧೪॥ ದೇಹವು ಬಿದ್ದುಹೋದಮೇಲೆ ಈ ಪ್ರಳಯ ಸಂಭವಿಸುವುದು ಎಂದು ಹೇಳುವಿಕೆಯು ಮಿಥ್ಯೆಯಾಗಿರುವುದು. ಆತ್ಮನಿಷ್ಠನಾಗಿರುವವನಿಗೆ ಮಾತ್ರ ಜೀವಂತವಿರುವಾಗಲೇ ಈ ಪ್ರಳಯವು ನಿಶ್ಚಿತವಾಗಿ ಪ್ರಾಪ್ತವಾಗುವುದು ।೫೧೫॥ ಒಂದು ವೇಳೆ ಹೀಗೆ ಜೀವಂತವಿರುವಾಗಲೇ ಈ ಪ್ರಳಯವು ಸಾಧಿಸಿದರೆ ಈ ಯೋಗದಿಂದ ಸಂಸಾರದ ಬೀಜವೇ ನಷ್ಟವಾಗಿ ಬಿಡುವುದು. ಈಗ ಬ್ರಹ್ಮ ಪ್ರಳಯಕಾಲದ ಸಂಪೂರ್ಣ ಲಕ್ಷಣಗಳ ವರ್ಣನೆಯನ್ನು ಹೇಳುವೆನು, ಅದಕ್ಕಾಗಿ ಸರಿಯಾಗಿ ಶ್ರವಣವನ್ನು ಮಾಡು ।೫೧೬॥ ಬ್ರಹ್ಮಾಂಡ ಪ್ರಳಯದ ಯಾವ ಅನುಕ್ರಮವಿರುವುದೋ, ಅದರಲ್ಲಿ ಕೊನೆಗೆ ಪೂರ್ಣ ಚರಾಚರಗಳಲ್ಲಿ ಬ್ರಹ್ಮವು ಉಳಿದುಕೊಳ್ಳುವುದು. ಈ ಮರ್ಮವು ಉದ್ಧವನಿಗೆ ತಿಳಿಯಲೆಂದು ಪುರುಷೋತ್ತಮನು ಇದನ್ನು ಹೇಳುತ್ತಿರುವನು ।೫೧೭॥

ಹದಿನಾಲ್ಕು ಲೋಕಗಳ ಸಮೇತ ಈ ಯಾವ ವಿರಾಟ ಸ್ವರೂಪದ ಬ್ರಹ್ಮಾಂಡಗಳನ್ನು ಕಾಲನು ತನ್ನ ಕಲ್ಪನೆಯಿಂದ ರಚಿಸಿರುವನು. ಇವು ಅಸ್ತಿತ್ವದಲ್ಲಿದ್ದಾಗ ಅವುಗಳ ಪಾಲನೆ ಪೋಷಣೆಗಳನ್ನು ಮಾಡುತ್ತ ಅಂತ್ಯದಲ್ಲಿ ಅವುಗಳ ನಾಶದ ಕಾರ್ಯವನ್ನು ಈ ಕಾಲನೇ ಮಾಡುತ್ತಿರುವನು ।೫೧೮॥ ಈ ಕಾಲನು ಯಾರು ? ಎಂದು ಹೀಗೆ ನೀನು ಕೇಳಬಹುದು, ಅದಕ್ಕಾಗಿ ಈ ಕಾಲನ ಆತ್ಮನು ನಾನೇ ಆಗಿರುವೆನು. ಆ ಕಾಲರೂಪದಿಂದ ನಾನು ಸೃಷ್ಟಿಯತ್ತ ಸಂಹಾರದ ದೃಷ್ಟಿಯಿಂದ ನೋಡುವೆನು ।೫೧೯॥

ಪಂಚಮಹಾಭೂತಗಳ ಯಾವ ಭಿನ್ನ ಭಿನ್ನ ವಿಭಾಗಗಳನ್ನು ಆ ಯಾವ ಕಾಲನ ಸತ್ತೆಯಿಂದ ರಕ್ಷಣೆಯನ್ನು ಮಾಡಲಾಗಿರುವುದು. ಈ ಯಾವ

ಅನ್ನೇ ಪ್ರಲೀಯತೇ ಮರ್ತ್ಯಮನ್ನಂ ಧಾನಾಸು ಲೀಯತೇ । ಧಾನಾ ಭೂಮೌ ಪ್ರಲೀಯಂತೇ ಭೂಮಿರ್ಗಂಧೇ ಪ್ರಲೀಯತೇ ।೬೨॥

ಅರ್ಥ:- ಆತನ ಲೀನವಾಗುವುವಿಕೆಯ ಪ್ರಕ್ರಿಯೆ ಹೇಗೆ ಇರುವುದೆಂದರೆ, ಪ್ರಾಣಿ ಮಾತ್ರರ ಶರೀರವು ಅನ್ನದಲ್ಲಿ, ಅನ್ನವು ಬೀಜದಲ್ಲಿ, ಬೀಜವು ಭೂಮಿಯಲ್ಲಿ ಮತ್ತು ಭೂಮಿಯ ಗಂಧ ತನ್ಮಾತ್ರದಲ್ಲಿ ಲೀನವಾಗುವುದು.

ಮ್ಯಾ ಪಾಹಿಲ್ಯಾ ಪ್ರಳಯದೃಷ್ಟೀ । ಪಡೋನಿ ಠಾಕೇ ಅನಾವೃಷ್ಟೀ । ತೇಣೇ ಅನ್ನ ಕ್ಷೀಣ ಹೋಯ ಸೃಷ್ಟೀ । ಅನ್ನಪಾಠೀ ಶರೀರ ।೫೨೨॥ ಯೇಥೇ ಅಸೇ ''ಅನ್ನಮಯ ಪ್ರಾಣ'' । ಹೇ ವಚನ ಪ್ರತ್ಯಕ್ಷಪ್ರಮಾಣ । ತೇ ಅನ್ನ ಹೋತಾಂಚಿ ಕ್ಷೀಣ । ಅನ್ನಾಸವೇ ಪ್ರಾಣ ಪ್ರಾಣ್ಯಾಂಚೇ ಜಾತೀ ।೫೨೩॥ ಅನ್ನವೃದ್ಧೀ ಖುಂಟಲ್ಯಾ ಧಾನ್ಯ । ಬೀಜಮಾತ್ರ ರಾಹೇ ಆಪಣ । ತೇಹೀಪೃಥ್ವೀಸೀ ಹೋಯ ಲೀನ । ತತ್ಕಾಳ ಜಾಣ ಉದ್ಧವಾ ।೫೨೪॥ ತಂವ ದ್ವಾದಶಾದಿತ್ಯಮೇಳಾ । ಏಕತ್ರ ಹೋಯ ರವಿಮಂಡಳಾ । ತೋ ಪೀಠ ಕರೀ ಪರ್ವತಶಿಳಾ । ತೇಹೀ ತೃಣಸಾಳಾ ಉರೋ ನೇದೀ ।೫೨೫॥ ತೇಣೇ ತಾಪಲೇ ಸಪ್ತ ಪಾತಾಳ । ಪೋಳಲೇ ಶೇಷಾಂಚೇ ಕಪಾಳ । ತೋ ವಮೀ ವಿಷಾಗ್ನಿಕಲ್ಲೋಳ । ಮಹಾಜ್ವಾಳ ಧಡಧಡೀತ ।೫೨೬॥ ತೋ ಸಂಕರ್ಷಣಮುಖಾನಳ । ಪಾರ್ಥಿವ ಜಾಳೀ ಸಕಳ । ಬ್ರಹ್ಮಾಂಡ ಜಾಳೋನಿ ತತ್ಕಾಳ । ಪೃಥ್ವಿ ಕೇವಳ ಭಸ್ಮ ಕರೀ ।೫೨೭॥ ತೇವ್ಹಾ ಪೃಥ್ವೀಚೇ ಪೃಥ್ವಿಪಣ ಸರೇ । ತೇ ಗಂಧಮಾತ್ರಸ್ವರೂಪೇ ಉರೇ । ತೋಹೀ ಗಂಧೂ ಜಳೀ ವಿರೇ । ತೇಚಿ ಶಾರ್ಙ್ಗಧರೇ ಸಾಂಗಿಜೇ ।೫೨೮॥

ಅಪ್ಸು ಪ್ರಲೀಯತೇ ಗಂಧ ಆಪಶ್ಚ ಸ್ವಗುಣೇ ರಸೇ । ಲೀಯತೇ ಜ್ಯೋತಿಷಿ ರಸೋ ಜ್ಯೋತಿ ರೂಪೇ ಪ್ರಲೀಯತೇ ।೬೩॥

ಅರ್ಥ:- ಗಂಧವು ಜಲದಲ್ಲಿ, ಜಲವು ತನ್ನ ಗುಣರಸದಲ್ಲಿ, ರಸವು ತೇಜದಲ್ಲಿ ಮತ್ತು ತೇಜವು ರೂಪದಲ್ಲಿ ವಿಲೀನವಾಗುವುದು.

ತೇವ್ಹಾ ಪ್ರಳಯಮೇಘಾಂಚಾ ಮೇಳಾ । ಶುಂಡಾದಂಡಧಾರಾ ಪ್ರಬಳಾ । ಶತ ವರುಷೇ ವರ್ಷತಾ ಜಳಾ । ಸಪ್ತಸಮುದ್ರಮೇಳಾ ಏಕತ್ರ ಜಾಹಲಾ ।೫೨೯॥
ತೇಣೇ ಜಳ ಕೋಂಡಲೇ ಸುಬದ್ಧ । ತೇ ಜಳೀ ಪೃಥ್ವೀಚಾ ವಿರೇ ಗಂಧ । ತೇವ್ಹಾ ಜಳಚಿ ಏಕವದ । ಪ್ರಳಯೀ ಪ್ರಸಿದ್ಧ ಉಧವಲೇ ಪೈ ।೫೩೦॥ ಸಾಂವರ್ತಕ ಮೇಘಾಂಚೇ ಲಕ್ಷಣ । ಸಿಂಧೂ ಏಕತ್ರ ಕರಿತೀ ಪೂರ್ಣ । ಪೃಥ್ವೀ ವಿರವೂನಿಯಾ ಜಾಣ । ತೇ ಜಳೀ ಆಪಣ ವಿರೋನಿ ಜಾತೀ ।೫೩೧॥ ತೇ ಕಾಳೀ ಅತಿದುರ್ಧರ । ಸಾಂವರ್ತಾಗ್ನಿ

ಸರ್ವ ಸತ್ತೆಯನ್ನು ನಾನು ಒಂದುವೇಳೆ ಆವರಿಸಿಕೊಳ್ಳಲು ಆಗ ಪಂಚಮಹಾಭೂತಗಳ ಗಡಿಬಿಡಿಯು ಹಾರಿಹೋಗುವುದು ।೫೨೦॥ ಯಾವ ಪ್ರಕಾರವಾಗಿ ಉತ್ಪತ್ತಿಯ ಅನುಕ್ರಮವಿರುವುದೋ, ಅದೇ ಪ್ರಕಾರವಾಗಿ ಪ್ರಳಯದ ಅನುಕ್ರಮವೂ ಕೂಡ ಇರುವುದು. ಭೂತಗಳಲ್ಲಿ ಭೂತಗಳ ಸಹಜವಾಗಿ ಲಯವಾಗುವುದು. ಇದನ್ನು ಪುರುಷೋತ್ತಮನು ಹೇಳುತ್ತಿರುವನು ।೫೨೧॥

ನಾನು ಪ್ರಳಯದ ದೃಷ್ಟಿಯಿಂದ ನೋಡಲು, ಆಗ ಅನಾವೃಷ್ಟಿ ತಲೆದೋರುವುದು. ಈ ಕಾರಣವಾಗಿ ಸೃಷ್ಟಿಯಲ್ಲಿ ಅನ್ನದ ಕೊರತೆಯಾಗುವುದು. ಅನ್ನದ ಕೊರತೆಯಾಗುತ್ತಲೇ ಅದರೊಂದಿಗೆ ಶರೀರವೂ ಕೂಡ ಕ್ಷೀಣವಾಗುವುದು ।೫೨೨॥ ''ಅನ್ನಮಯ ಪ್ರಾಣ'' ಎಂಬ ಈ ವಚನವು ಪ್ರತ್ಯಕ್ಷ ಪ್ರಮಾಣವಾಗಿರುವುದು. ಈ ಯಾವ ಅನ್ನವು ಇಲ್ಲದಾಗಲು, ಆಗ ಅನ್ನದ ಜೊತೆಯಲ್ಲಿಯೇ ಪ್ರಾಣಿಗಳ ಪ್ರಾಣವೂ ಕೂಡ ಹೊರಟು ಹೋಗುವುದು ।೫೨೩॥ ಅನ್ನದ ವೃದ್ಧಿಯು ಕುಂಠಿತಗೊಳ್ಳಲು ಆಗ ಧಾನ್ಯವು ಸ್ವತಃ ಬೀಜರೂಪದಿಂದ ಉಳಿದುಕೊಳ್ಳುವುದು. ಆದರೆ ಹೇ ಶ್ರೇಷ್ಠನಾದ ಉದ್ಧವನೇ, ಈ ಬೀಜಗಳೂ ಕೂಡ ಭೂಮಿಯಲ್ಲಿ ಕೂಡಲೇ ಲೀನವಾಗಿಬಿಡುವುವು. ಇದನ್ನು ಲಕ್ಷದಲ್ಲಿಡು ।೫೨೪॥ ಆಗ ಹನ್ನೆರಡು ಸೂರ್ಯರ ಸಮುದಾಯವು ಸೂರ್ಯಮಂಡಲದಲ್ಲಿ ಏಕತ್ರವಾಗುವುದು. ಆ ಸಮುದಾಯವು ತಮ್ಮ ಉಷ್ಣತೆಯಿಂದ ಪರ್ವತ, ಪಾಷಾಣಗಳನ್ನು ಭಸ್ಮಮಾಡಿಬಿಡುವುವು. ತೃಣ, ಧಾನ್ಯ ಇತ್ಯಾದಿ ಏನೇನೂ ಉಳಿಯುವುದಿಲ್ಲ ।೫೨೫॥ ಈ ಯಾವ ಯೋಗದಿಂದ ಸಪ್ತ ಪಾತಾಳಗಳು ಕುದಿಯಲಾರಂಭಿಸುವುವು. ಆಗ ಶೇಷನ ಮಸ್ತಕವು ಸುಡಲಾರಂಭಿಸಲು ವಿಷಯುಕ್ತ ಅಗ್ನಿಯ ಅತಿಭಯಂಕರ ಜ್ವಾಲೆಯು ಮುಖದಿಂದ ಹೊರಬೀಳುವುದು ।೫೨೬॥ ಶೇಷನ ಮುಖದಿಂದ ಹೊರಟಿರುವ ಪ್ರಚಂಡವಾದ ವಿಷಯುಕ್ತ ಅಗ್ನಿಯು ಪೃಥ್ವಿಯ ಮೇಲಿರುವ ಸರ್ವ ವಸ್ತುಗಳನ್ನು ಭಸ್ಮ ಮಾಡುವುದು. ಸರ್ವ ಬ್ರಹ್ಮಾಂಡಗಳು ಸುಟ್ಟು ಬೂದಿಯಾಗುವುವು ।೫೨೭॥ ಆ ಸಮಯದಲ್ಲಿ ಪೃಥ್ವಿಯ ಪೃಥ್ವಿತನವು ತೀರಿಹೋಗುವುದು. ಆಗ ಅದು ಗಂಧರೂಪದಿಂದ ಉಳಿದುಕೊಳ್ಳುವುದು. ತದನಂತರ ಆ ಗಂಧವೂ ಕೂಡ ನೀರಿನಲ್ಲಿ ಕರಗಿಹೋಗುವುದು. ಹೀಗೆ ಶಾರಂಗಧರನು ಹೇಳುತ್ತಿರುವನು ।೫೨೮॥

ಆ ಸಮಯದಲ್ಲಿ ಪ್ರಳಯಕಾಲದ ಮೋಡಗಳ ಸಮುದಾಯವು ಒಂದೆಡೆ ಕೂಡುವುವು ಮತ್ತು ಆನೆಯ ಸೊಂಡಿಲ ಗಾತ್ರ ಮುಸುಳಧಾರಾ ಮಳೆಯನ್ನು ಸುರಿಸುವುವು. ನೂರು ವರ್ಷಗಳವರೆಗೆ ಇಂತಹ ಮಳೆಯು ಸುರಿಯುತ್ತಿರಲು ಆಗ ಏಳು ಸಮುದ್ರಗಳ ಜಲವು ಏಕತ್ರವಾಗುವುದು ।೫೨೯॥
ಹೀಗಾಗುವುದರಿಂದ ಆಗ ಎಲ್ಲಿ ನೋಡಿದಲ್ಲಿ ಎಲ್ಲೆಲ್ಲಿಯೂ ನೀರೇ ನೀರು ಕಾಣಿಸುವುದು ಮತ್ತು ಆ ನೀರಿನಲ್ಲಿ ಪೃಥ್ವಿಯ ಉಳಿದಿರುವ

ಖವಳೇ ಘೋರ । ತೋ ಜಳ ಶೋಷೀ ಸರ್ವತ್ರ । ಉರೇ ರಸಮಾತ್ರ ಅವಶೇಷ ।೫೩೨॥ ರಸಮಾತ್ರ ಜಳ ಉರೇ ತೇಹೀ । ಲೀನ ಹೋಯ ತೇಜಾಚೇ ಠಾಯೀ । ತೆವ್ಹಾ ತೇಜಚಿ ದಿಶಾ ದಾಹೀ । ಕೋಂದೋನಿ ಪಾಹೀ ವೋಸಂಡೇ ।೫೩೩॥ ಸಾಂವರ್ತಾಗ್ನೀಚೇ ಮಾತೂ । ಜಳ ಶೋಷೂನಿ ರಾಹೇ ನಿವಾಂತೂ । ಜಾಳಿತೀ ಶಕ್ತಿ ಸ್ವಯೇ ಜಾಳಿತೂ । ಯಾ ನಾಂವ ನಿಶ್ಚಿತೂ ಸಾಂವರ್ತಕಾಗ್ನೀ ।೫೩೪॥ ತೇಣೇಚಿ ಕಾಳೇ ಝುಂಝಾಮಾರುತ । ಉಠೀ ತೇಜಾತೇ ಶೋಷಿತ । ತೇ ತೇಜ ಶೋಷಿತಾ ಸಮಸ್ತ । ಉರೇ ತೇಥ ರೂಪ ಮಾತ್ರ ।೫೩೫॥

ರೂಪಂ ವಾಯೌ ಸ ಚ ಸ್ಪರ್ಶ ಲೀಯತೇ ಸೋಽಪಿ ಚಾಂಬರೇ । ಅಂಬರಂ ಶಬ್ದತನ್ಮಾತ್ರ ಇಂದ್ರಿಯಾಣಿ ಸ್ವಯೋನಿಷು ।೨೫॥

ಅರ್ಥ:- ರೂಪವು ವಾಯುವಿನಲ್ಲಿ, ವಾಯು ಸ್ಪರ್ಶದಲ್ಲಿ, ಸ್ಪರ್ಶವು ಆಕಾಶದಲ್ಲಿ, ಮತ್ತು ಆಕಾಶವು ಶಬ್ದತನ್ಮಾತ್ರದಲ್ಲಿ ಲೀನವಾಗುವುವು. ಇಂದ್ರಿಯಗಳು ತಮ್ಮ ತಮ್ಮ ಮೂಲಗಳಾದ ಅಭಿಮಾನಿ ದೇವತೆಗಳಲ್ಲಿ ಲೀನವಾಗುತ್ತವೆ ಕೊನೆಗೆ ರಾಜಸ ಅಹಂಕಾರದಲ್ಲಿ ಕೂಡಿಕೊಳ್ಳುತ್ತವೆ.

ತೇಜಾಚೇ ಜೇ ಉರೇ ರೂಪ । ತೇ ವಾಯು ಶೋಷೂನಿ ಕರೀ ಅರೂಪ । ತೇವ್ಹಾ ವಾಯೂಚಿ ಏಕರೂಪ । ಅತಿ ಅಮೂಪ ಕೋಂದಾಟೇ ।೫೩೬॥ ಕೋಂದಾಟಲ್ಯಾ ವಾಯೂಸೀ । ಗಗನ ಜೇಥೀಂಚೇ ತೇಥೇ ಗ್ರಾಸೀ । ತೇವ್ಹಾ ವಾಯು ಪ್ರವೇಶೇ ಸ್ಪರ್ಶೀ । ತೋ ಉರೇ ಅವಶೇಷೀ ಸ್ಪರ್ಶಮಾತ್ರ ।೫೩೭॥ ಉರಲ್ಯಾ ವಾಯುಚ್ಯಾ ಸ್ಪರ್ಶಾಸೀ । ಲಯೋ ತತ್ಕಾಳ ಹೋಯ ಆಕಾಶೀ । ಆಕಾಶ ಪ್ರವೇಶೇ ಶಬ್ದಾಸೀ । ಉರೇ ಅವಶೇಷೀ ಶಬ್ದ ತನ್ಮಾತ್ರ ।೫೩೮॥ ದಶೇಂದ್ರಿಯಾಂಚೇ ಮಂಡಳೀ । ರಾಜಸಾಪಾಸೋನಿ ಜನ್ಮಲೀ । ತೇ ನಿಜಗುಣೇ ಸಾಮಾವಲೀ । ಜೇವೀ ಪಂಚಾಂಗುಳೀ ಮುಷ್ಟೀಮಾಜೀ ।೫೩೯॥

ಯೋನಿರ್ವೈಕಾರಿಕೇ ಸೌಮ್ಯ ಲೀಯತೇ ಮನಸೀಶ್ವರೇ । ಶಬ್ದೋ ಭೂತಾದಿಮಪ್ಯೇತಿ ಭೂತಾದಿರ್ಮಹತಿ ಪ್ರಭುಃ ।೨೫॥

ಅರ್ಥ:- ಹೇ ಉದ್ಧವಾ, ಆ ಯಾವ ಇಂದ್ರಿಯ ದೇವತೆಗಳು ಸಾತ್ವಿಕ ಮತ್ತು ಸಮರ್ಥವಾಗಿರುವ ಮನಸ್ಸಿನಲ್ಲಿ ಲೀನವಾಗುವುವು. ಭೂತಕಾರಣ ತಾಮಸ ಅಹಂಕಾರದಲ್ಲಿ ಶಬ್ದವು ಲೀನವಾಗುವುದು. ಸಮರ್ಥವಾದ ಮತ್ತು ಭೂತಕಾರಣವಾದ ತ್ರಿವಿಧ ಅಹಂಕಾರವು ಮಹತತ್ವದಲ್ಲಿ ಲೀನವಾಗುವುದು.

ವೈಕಾರಿಕ ಜೋ ಸತ್ತ್ವಗುಣ । ವ್ಯಾಲಾ ದೇವತಾ ಅಂತಃಕರಣ । ಪ್ರಳಯಸ್ವಭಾವೇ ಆಪಣ । ಮನಾಮಾಜೀ ಜಾಣ ಪ್ರವೇಶೇ ।೫೪೦॥ ಸಕಳ ಇಂದ್ರಿಯಾಂಚಾ ರಾಜಾ ಮನ । ಮನಃಕಲ್ಪನಾ ಜೀವಶಿವಪಣ । ಶ್ಲೋಕಪದೇ ''ಮನಸೀಶ್ವರ'' ಪೂರ್ಣ । ಮನಾಶೀಂಚ ಜಾಣ ಹರಿ ಬೋಲೇ ।೫೪೧॥ ಮನೋದೇವತಾ ಅಂತಃಕರಣ ।

ಗಂಧವೂ ಕೂಡ ಕರಗಿ ಹೋಗುವುದು. ಆಗ ಎಲ್ಲೆಲ್ಲಿಯೂ ಕೂಡಿರುವ ಜಲವು ಪ್ರಳಯಕ್ಕಾಗಿ ಪರಿಪೂರ್ಣವಾಗಿ ಸಿದ್ಧವಾಗುವುದು ।೫೩೦॥ ಪ್ರಳಯಕಾಲದಲ್ಲಿ ಮೇಘಗಳು ಎಲ್ಲ ನದಿಗಳನ್ನು ಮತ್ತು ಸಮುದ್ರಗಳನ್ನು ಒಂದುಗೂಡಿಸಿ ಅದರಲ್ಲಿ ಪೃಥ್ವಿಯನ್ನು ಮುಳುಗಿಸಿಬಿಡುವುವು. ಆಗ ಅದರಲ್ಲಿ ತಾವು ಸ್ವತಃ ಲೀನವಾಗುವುವು ।೫೩೧॥ ಆ ಸಮಯದಲ್ಲಿ ಮಹಾ ಭಯಂಕರವಾದ ಪ್ರಳಯಾಗ್ನಿಯು ಉಗ್ರಗೊಳ್ಳುವುದು. ಆಗ ಅದು ಎಲ್ಲ ಜಲವನ್ನು ನುಂಗಿಬಿಡುವುದು. ಆಗ ಕೇವಲ ರಸತನ್ಮಾತ್ರ ಮಾತ್ರ ಉಳಿದುಕೊಳ್ಳುವುದು ।೫೩೨॥ ಆ ಯಾವ ರಸಮಾತ್ರ ಉಳಿದಿರುವ ಜಲವೂ ಕೂಡ ತೇಜದಲ್ಲಿ ಲೀನವಾಗುವುದು. ಆ ಸಮಯದಲ್ಲಿ ದಶದಿಕ್ಕುಗಳಲ್ಲಿ ಎಲ್ಲೆಲ್ಲಿಯೂ ತೇಜವೇ ತುಂಬಿ ತುಳುಕುತ್ತಿರುವುದು ।೫೩೩॥ ಪ್ರಳಯಾಗ್ನಿಯು ಎಷ್ಟೊಂದು ಪ್ರಚಂಡವಾಗಿರುವುದೆಂದರೆ ಅದು ಸಂಪೂರ್ಣ ಜಲವನ್ನು ಶೋಷಿಸಿ ಕೊನೆಗೆ ತನ್ನ ಸುಡುವಿಕೆಯ ಶಕ್ತಿಯನ್ನೂ ಕೂಡ ಸುಟ್ಟುಹಾಕುವುದು. ಈ ಕಾರಣವಾಗಿ ಇದಕ್ಕೆ ಪ್ರಳಯಾಗ್ನಿ ಎಂದು ಹೆಸರು ಕೊಟ್ಟಿರುವುದು ।೫೩೪॥ ಇಷ್ಟೆಲ್ಲ ಸರ್ವವೂ ಆದನಂತರ ಅದೇ ಕಾಲನ ಸಹಾಯದಿಂದ ಅತ್ಯಂತ ವೇಗವುಳ್ಳ ಬಿರುಗಾಳಿಯು ಬೀಸಲು ಆರಂಭಿಸಿ ಅದು ಎಲ್ಲ ತೇಜವನ್ನು ಶೋಷಣೆಗೊಳಿಸಿ, ಅದೆಲ್ಲವೂ ಮುಗಿದ ನಂತರ ಅಲ್ಲಿ ಕೇವಲ ರೂಪವು ಮಾತ್ರ ಉಳಿದುಕೊಳ್ಳುವುದು ।೫೩೫॥

ಯಾವ ತೇಜದ ರೂಪವು ಉಳಿದುಕೊಂಡಿರಲು ಆಗ ಅದನ್ನೂ ಕೂಡ ವಾಯುವು ಶೋಷಿಸಿ ಇಲ್ಲದಾಗಿ ಮಾಡುವುದು. ಆಗ ಎಲ್ಲೆಲ್ಲಿಯೂ ವಾಯುವೇ ವಾಯು ತುಂಬಿ ಹೋಗುವುದು ।೫೩೬॥ ಆ ಯಾವ ಎಲ್ಲೆಲ್ಲಿಯೂ ತುಂಬಿಕೊಂಡಿರುವ ವಾಯುವನ್ನು ಆಕಾಶವು ಎಲ್ಲಿದ್ದಲ್ಲಿಯೇ ನುಂಗಿಬಿಡುವುದು. ಆಗ ಆ ವಾಯುವು ಸ್ಪರ್ಶದ ರೂಪದಲ್ಲಿ ಸೇರಿಕೊಂಡು ಉಳಿದುಕೊಳ್ಳುವುದು ।೫೩೭॥ ಆ ಯಾವ ವಾಯುವಿನ ಉಳಿದಿರುವ ಸ್ಪರ್ಶರೂಪದ ಲಯವು ತತ್ಕಾಲದಲ್ಲಿ ಆಕಾಶದಲ್ಲಿ ಆಗುವುದು, ತದನಂತರ ಆಕಾಶವು ಶಬ್ದದಲ್ಲಿ ಪ್ರವೇಶ ಮಾಡುವುದು. ಈ ಯಾವ ಶಬ್ದವು ತನ್ಮಾತ್ರದಲ್ಲಿ ಉಳಿದುಕೊಳ್ಳುವುದು ।೫೩೮॥ ದಶ ಇಂದ್ರಿಯಗಳ ಈ ಯಾವ ಸಮುದಾಯವು ರಾಜಸಗುಣದಿಂದ ಹುಟ್ಟಿಕೊಂಡಿರುವುದು. ಮುಷ್ಟಿಯಲ್ಲಿ ಐದೂ ಬೆರಳುಗಳು ಕೂಡಿಕೊಳ್ಳುವಂತೆ ಅದು ತನ್ನ ರಾಜಸ ಗುಣದಲ್ಲಿ ಹೋಗಿ ಲೀನವಾಗುವುದು ।೫೩೯॥

ವಿಕಾರವನ್ನು ಹೊಂದಿಕೊಂಡಿರುವ ಯಾವ ಈ ಸತ್ವಗುಣವು ಅದು ದೇವತೆಗಳನ್ನು ಮತ್ತು ಅಹಂಕಾರವನ್ನು ಉತ್ಪನ್ನಗೊಳಿಸುವುದು.

ಘೇಊನಿ ಪ್ರವೇಶೇ ಸತ್ತ್ವಗುಣ । ಜ್ಯಾ ಕಾರ್ಯಾಚೇ ಜೇ ಕಾರಣ । ತೇಥ ತೀ ಜಾಣ ಪ್ರವೇಶತೀ ।।೫೪೨।। ಶಬ್ದ ತನ್ಮಾತ್ರ ಉರಲೇ ಆಧೀ । ತೇ ಮೀನಲೇ ತಾಮಸಾಮಧೀ। ಕಾರಣೀ ಕಾರ್ಯಾಸೀ ಅವಧೀ । ಜಾಣ ತ್ರಿಶುದ್ಧೀ ಉದ್ಧವಾ ।।೫೪೩।। ತ್ರಿವಿಧ ಗುಣೀ ಅಹಂಕಾರೂ । ಏಕವಟಲಾ ಮಹಾಥೋರೂ । ಐಕ ತ್ಯಾಚಾ ಬಡಿವಾರೂ । ತೋಚಿ ದುರ್ಧರೂ ಸಂಸಾರೀ ।।೫೪೪।। ಜೋ ಶಿವಾತೇ ಮಹತ್ತ್ವ ಚಢವೀ । ಜೀವಾತೇ ದೇಹಾತ್ಮತಾ ಗೋವೀ । ಅಹಂಮಮತಾ ಜಗ ಭುಲವೀ । ಪ್ರಭುತ್ವಪದವೀ ಮಹತ್ತ್ವೇ ಯೇಣೇ ।।೫೪೫।। ಅಹಂಕಾರೂ ಐಸಾ ಆಹೇ । ತೋ ಜೈ ಪರಮಾರ್ಥೀ ಸಾಹ್ಯ ಹೋಯೇ । ತೈ ಸೋಹಂಭಾವಾಚೇನಿ ಲವಲಾಹೇ । ವಿಭಾಂಡೀ ಪಾಹೇ ಸಂಸಾರೂ ।।೫೪೬।। ಚೋರ ಜೈ ವಿಶ್ವಾಸೂ ಮಿತ್ರ ಹೋಯೇ । ತೈ ಚೋರ ಚೋರಾ ನಿವಾರೀ ಪಾಹೇ । ತೇವೀ ಅಭಿಮಾನೂ ಜೈ ಸಾಹ್ಯ ಹೋಯೇ । ತೈ ಭವಭಯ ಬಾಧೀನಾ ।।೫೪೭।। ಯಾಹೀಪರೀ ಅಭಿಮಾನ । ಸಾಮರ್ಥ್ಯೇ ಅತಿಗಹನ । ಯಾಲಾಗೀ ಪ್ರಭುತ್ವೇ ಜಾಣ । ಕೇಲೇ ವ್ಯಾಖ್ಯಾನ ಉದ್ಧವಾ ।।೫೪೮।। ತ್ರಿಗುಣಗುಣೀ ಗುಣಾಭಿಮಾನ । ಏಕತ್ರ ಹೋಊನಿಯಾ ಪೂರ್ಣ । ಮಹತ್ತತ್ತ್ವೀ ಹೋಯ ಲೀನ । ಅತಿಸುಲೀನ ತದ್ರೂಪೇ ।।೫೪೯।।

ಸ ಲೀಯತೇ ಮಹಾನ್ಸ್ವೇಷು ಗುಣೇಷು ಗುಣವತ್ತಮಃ । ತೇಽವ್ಯಕ್ತೇ ಸಂಪ್ರಲೀಯಂತೇ ತತ್ ಕಾಲೇ ಲೀಯತೇಽವ್ಯಯೇ ।।೨೬।।

ಅರ್ಥ:- ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಪ್ರಧಾನ ಮಹತ್ತತ್ತ್ವವು ತನ್ನ ಕಾರಣ ಗುಣದಲ್ಲಿ ಲೀನವಾಗುವುದು. ಗುಣತತ್ತ್ವವು ಅವ್ಯಕ್ತ ಪ್ರಕೃತಿಯಲ್ಲಿ ತನ್ನ ಪ್ರೇರಕ ಅವಿನಾಶಿ ಕಾಲನಲ್ಲಿ ಲೀನವಾಗುವುದು.

ತೇಹೀ ಮಹತ್ತತ್ತ್ವ ಯೇಥೇ । ಕಾರಣಗುಣೀ ಲೀನ ಹೋತೇ । ತೇಹೀ ಗುಣಸಾಮ್ಯೇ ನಿಶ್ಚಿತೇ । ಪಾವೇ ಲಯಾತೇ ಅವ್ಯಕ್ತೀ ।।೫೫೦।। ಆಕಾರವಿಕಾರ ಸಮಸ್ತ । ಹಾರಪೋನಿ ಜಾತೀ ಜೇಥ । ಉರೇ ಬೀಜಮಾತ್ರ ಅವಶೇಷಿತ । ತ್ಯಾ ನಾಂವ ಅವ್ಯಕ್ತ ಬೋಲಿಜೇ ।।೫೫೧।।

ವಟಾಚಾ ಆಕಾರವಿಕಾರ । ನಾ ಶೇಂಡಾ ಮೂಳ ಪುಷ್ಪ ಪತ್ರ । ಉರೇ ಅವಶೇಷ ಬೀಜಮಾತ್ರ । ತೇವೀ ಸಂಸಾರ ಅವ್ಯಕ್ತೀ ।।೫೫೨।। ವಟಬೀಜ ಉರಲೇ ಯೇಥ । ತೇ ದೃಷ್ಟಿಸೀ ತರ್ಕೇನಾ ನಿಶ್ಚಿತ । ತೇವೀ ಭವಬೀಜ ಜೇ ಅವ್ಯಕ್ತ । ತೇ ನವ್ಹೇ ವ್ಯಕ್ತ ಜೀವಾಸೀ ।।೫೫೩।। ನಾನಾ ತೃಣಜಾತಿಬೀಜ ಗಹನ । ಉಷ್ಣಕಾಳೀ ಕಾಳ ಕರೀ ಲೀನ । ತೇವೀ ಭವಬೀಜ ಅವ್ಯಕ್ತ ಜಾಣ । ಹೋಯ ಸುಲೀನ ಕಾಳೇಸೀ ।।೫೫೪।। ಪೂರ್ವೀ ಕಾಳೇ ಕ್ಷೋಭೋನಿ

ಅದು ಪ್ರಳಯದ ಸ್ವಭಾವ ಪ್ರಮಾಣದಂತೆ ಸ್ವತಃ ಮನಸ್ಸಿನಲ್ಲಿ ಪ್ರವೇಶವನ್ನು ಮಾಡುವುದು ।।೫೪೦।। ಮನಸ್ಸು ಇದು ಸರ್ವ ಇಂದ್ರಿಯಗಳ ರಾಜನಾಗಿರುವುದು. ಜೀವತ್ವ ಮತ್ತು ಶಿವತ್ವ ಇವು ಕೂಡ ಮನಸ್ಸಿನ ಕಲ್ಪನೆಯಾಗಿರುವುವು. ಆದ್ದರಿಂದ ಶ್ಲೋಕದಲ್ಲಿ ಇದಕ್ಕೆ ''ಮನಸೀಶ್ವರ'' ಎಂದು ಕರೆಯಲ್ಪಟ್ಟಿದೆ ।।೫೪೧।। ಮನಸ್ಸಿನ ದೇವತೆಯು ಅಂತಃಕರಣ ಸಹ ಸತ್ವಗುಣದಲ್ಲಿ ಪ್ರವೇಶವನ್ನು ಮಾಡುವುದು. ಕಾರ್ಯದ ಯಾವ ಕಾರಣವು ಇರುವುದೋ, ಅದರಲ್ಲಿ ಅದು ಪ್ರವೇಶವನ್ನು ಮಾಡುವುದು ।।೫೪೨।। ಉಳಿದಿರುವ ಶಬ್ದತನ್ಮಾತ್ರವು ತಮೋಗುಣದಲ್ಲಿ ಪ್ರವೇಶವನ್ನು ಮಾಡುವುದು. ಅಂದರೆ ಹೇ ಉದ್ಧವಾ, ಕಾರ್ಯವು ಇದು ಕಾರಣದಲ್ಲಿ ಲಯಹೊಂದುವುದು. ಈ ಮಾತನ್ನು ನೀನು ಲಕ್ಷದಲ್ಲಿಡು ।।೫೪೩।। ಮೂರು ಗುಣಗಳಿಂದ ಯುಕ್ತವಾಗಿರುವ ಇಂತಹ ಅಹಂಕಾರವು ಒಂದುಗೂಡಿ ಮಹಾ ಬಲಾಢ್ಯವಾಗಿರುವುದು. ಅದು ಸಂಸಾರದಲ್ಲಿ ದುರ್ಧರವಾಗಿರುವುದು. ಅದರ ದೊಡ್ಡಸ್ಥಿಕೆಯನ್ನು ಈಗ ಹೇಳುವೆನು, ಅದನ್ನು ಕೇಳು ।।೫೪೪।। ಈ ಅಹಂಕಾರವೇ ಶಿವನ ಮಹತ್ವವನ್ನು ಬೆಳೆಸಿರುವುದು. ಜೀವಕ್ಕೆ ದೇಹ ತಾದಾತ್ಮ್ಯದಲ್ಲಿ ಸಿಲುಕಿಸಿಬಿಟ್ಟಿರುವುದು. ಅಹಂ ಮಮತೆಯಿಂದ ಸರ್ವ ಜಗತ್ತಿಗೆ ಭುಲಾಯಿಸಲು ಹಚ್ಚಿರುವುದು. ಇದರಿಂದಲೇ ಮಹತ್ತತ್ವಕ್ಕೆ ಪ್ರಭುತ್ವ ಪ್ರಾಪ್ತವಾಗಿರುವುದು ।।೫೪೫।। ಅಹಂಕಾರದ ಸ್ವಭಾವವು ಹೇಗಿದೆ ಎಂದರೆ ಅದು ಒಂದುವೇಳೆ ಪರಮಾರ್ಥಕ್ಕೆ ಸಹಾಯವನ್ನು ಮಾಡಿದರೆ ಸೋಹಂಭಾವದ ಆಧಾರದಿಂದ ತತ್ಕಾಲದಲ್ಲಿ ಸಂಸಾರದ ನಾಶವನ್ನು ಮಾಡಿಬಿಡುವುದು ।।೫೪೬।। ಕಳ್ಳನಾಗಿರುವವನು ಒಂದುವೇಳೆ ನಮಗೆ ವಿಶ್ವಾಸಿಕ ಮಿತ್ರನಾಗಿ ಪರಿವರ್ತಿಸಿದರೆ ಆಗ ಆ ಕಳ್ಳನೇ ಇತರ ಕಳ್ಳರಿಂದ ನಮ್ಮ ರಕ್ಷಣೆಯನ್ನು ಮಾಡುವನು. ಅದರಂತೆ ಅಭಿಮಾನವು ಸಹಾಯವನ್ನು ಮಾಡಿದರೆ ಯಾವ ಈ ಸಂಸಾರದ ಭಯವು ಬಾಧಿಸುವುದಿಲ್ಲ ।।೫೪೭।। ಹೇ ಉದ್ಧವಾ, ಈ ಪ್ರಕಾರವಾಗಿ ಯಾವ ಈ ಅಭಿಮಾನದ ಸಾಮರ್ಥ್ಯವು ಅತ್ಯಂತ ಗಹನವಾಗಿರುವುದು. ಆದ್ದರಿಂದ ಪ್ರಾಮುಖ್ಯವಾಗಿ ಅದರ ವ್ಯಾಖ್ಯಾನವನ್ನು ಮಾಡಲಾಯಿತು ।।೫೪೮।। ಮೂರು ಗುಣಗಳಿಂದ ನಿರ್ಮಾಣಗೊಂಡಿರುವ ಈ ಯಾವ ಗುಣಾಭಿಮಾನವು ಪರಿಪೂರ್ಣವಾಗಿ ಏಕತ್ರವಾಗಿ ಮಹತ್ತತ್ವದಲ್ಲಿ ಲೀನವಾಗುವುದು ಹಾಗೂ ತಾದಾತ್ಮ್ಯ ಹೊಂದುವುದು ।।೫೪೯।। ಈ ಸಮಯದಲ್ಲಿ ಯಾವ ಮಹತ್ತತ್ವ ಅಂದರೆ ಮೂಲ ಮಾಯೆಯ ಪ್ರಥಮ ಕಾರ್ಯವೂ ಕೂಡ ಕಾರಣ ಗುಣದಲ್ಲಿ ಲೀನವಾಗುವುದು ಮತ್ತು ಗುಣಗಳ ಸಾಮ್ಯಾವಸ್ಥೆಯಲ್ಲಿ ಕೂಡಿಕೊಂಡು ಅವ್ಯಕ್ತದಲ್ಲಿ ಅಂದರೆ ಸೂಕ್ಷ್ಮ ಪ್ರಕೃತಿಯಲ್ಲಿ ಲಯವಾಗುವುದು ।।೫೫೦।। ಆ ಸಮಯದಲ್ಲಿ ಸರ್ವ ಆಕಾರವಿಕಾರಗಳು ಇಲ್ಲದಾಗಿ ಬಿಡುವುವು. ಕೇವಲ ಬೀಜ ಮಾತ್ರ ಉಳಿದುಕೊಳ್ಳುವುದು. ಅದಕ್ಕೇನೇ ಅವ್ಯಕ್ತ ಎಂದು ಹೇಳುವರು ।।೫೫೧।। ವಟವೃಕ್ಷದ ಆಕಾರ ವಿಕಾರ ಹೋಗಿ ಬುಡ, ಮೇಲು ಇಲ್ಲದಾಗುವುದು. ಎಲೆ, ಹೂವುಗಳೂ ಕೂಡ ಉದುರಿಬೀಳುವುವು. ಕೊನೆಗೆ ಬೀಜ

ಅವ್ಯಕ್ತ । ಜಗದಾಕಾರೇ ಕೇಲೇ ವ್ಯಕ್ತ । ತೇಚಿ ಕಾಳಯೋಗೇ ಅವ್ಯಕ್ತ । ಸುಲೀನ ಹೋತ ಕಾಳೇಸೀ ।೫೫೫॥ ಯಾ ನಾಂವ ಅವ್ಯಕ್ತಾಚಾ ಪಹಾ ಹೋ । ಕಾಳಾ ಮಾಜೀ ಬೋಲತೀ ಲಯೋ । ಕಾಳ ಬೋಲೀಜೇ ಮಹಾಬಾಹೋ । ತ್ಯಾಚಾ ಹೋಯ ವ್ಯಯೋ ಪುರುಷೇಸೀ ।೫೫೬॥

ಕಾಲೋ ಮಾಯಾಮಯೇ ಜೀವೇ ಜೀವ ಆತ್ಮನೀ ಮಯ್ಯಜೇ । ಆತ್ಮಾ ಕೇವಲ ಆತ್ಮಸ್ಥೋ ವಿಕಲ್ಪಾಪಾಯಲಕ್ಷಣಃ ।೨೭॥

ಅರ್ಥ:- ಈ ಯಾವ ಕಾಲವು ಮಾಯಾಮಯ ಜೀವದಲ್ಲಿ ಮತ್ತು ಜೀವವು ನನ್ನ ಅಜನ್ಮಾ ಆತ್ಮದಲ್ಲಿ ಲೀನವಾಗುವುದು. ಆತ್ಮವು ಯಾವುದರಲ್ಲಿಯೂ ಲೀನವಾಗಲಾರದು. ಅದು ಉಪಾಧಿರಹಿತವಾಗಿ ತನ್ನ ಸ್ವರೂಪದಲ್ಲಿ ಸ್ಥಿರವಾಗಿರುವುದು. ಅದು ಜಗತ್ತಿನ ಸೃಷ್ಟಿ ಮತ್ತು ಲಯಗಳ ಕಾರಣವಾಗಿದೆ ಮತ್ತು ಅಧಿಷ್ಠಾನರೂಪದಿಂದ ಲಕ್ಷಿಸಲ್ಪಟ್ಟಿದೆ.

ಪುರುಷಾಚೀ ಪೂರ್ಣ ಕ್ಷೋಭಕತಾ । ತೋಚಿ ಕಾಳ ಬೋಲಿಜೇ ತತ್ತ್ವತಾ । ಉತ್ಪತ್ತಿ-ಸ್ಥಿತಿ-ಪ್ರಲಯಾಂತಾ । ತಿನೀ ಅವಸ್ಥಾ ಕಾಳಾಚ್ಯಾ ।೫೫೭॥ ತಿನೀ ಅವಸ್ಥಾ ಲೋಟಲ್ಯಾ ಠಾಯೀ । ಕಾಳಾಸೀ ಕರ್ತವ್ಯತಾ ನಾಹೀ । ತೋ ಉಪಜತ ವ್ಯಾಪಾರೇ ಪಾಹೀ । ಜೀವಾಚೇ ಠಾಯೀ ಸಮಾವೋ ।೫೫೮॥ ಅಚೇತನೀ ಚೇತವಿತಾ । ಜಡಾತೇ ಜೋ ಜೀವವಿತಾ । ಯಾಲಾಗೀ ಜೀವೂ ಐಶೀ ವಾರ್ತಾ । ಜಾಣ ತತ್ತ್ವತಾ ಪುರುಷಾಸೀ ।೫೫೯॥ ಪ್ರಕೃತೀಚೇನಿ ಯೋಗೆ ಜಾಣ । ಶುದ್ಧಾಸೀ ಬೋಲಿಜೇ ಜೀವಪಣ । ಪುರುಷು ಹೇಹೀ ಅಭಿಧಾನ । ತ್ಯಾಸೀಚ ಜಾಣ ಬೋಲಿಜೇ ।೫೬೦॥ ಕರಿತಾ ಪ್ರಕೃತಿವಿವಂಚನ । ಕೇವಳ ಮೃಗಜಳಾಸಮಾನ । ದಿಸೇ ಪರೀ ಸಾಚಪಣ । ಸರ್ವಥಾ ಜಾಣ ಅಸೇನಾ ।೫೬೧॥ ಮೃಗಜಳಾಮಾಜೀ ಜೋ ಪಡೇ । ತೇಥ ಜಳ ನಾಹೀ ಮಾ ತೋ ಕೋಠೇ ಬುಡೇ । ತೇವೀ ಪ್ರಕೃತೀ ನಸತಾ ಜೋಡೇ । ವಾಡೇಕೋಡೇ ಜೀವತ್ವ ಕೋಣಾ ।೫೬೨॥ ಜಳೀ ಬುಡಾಲೇ ದಿಸೇ ವ್ಯೋಮ । ಸತ್ಯ ಮಾನಣೇ ತೋ ಮೂರ್ಖಧರ್ಮ । ತೈಸೇ ರೂಪ ನಾಮ ಗುಣ ಕರ್ಮ । ಹಾ ಮಿಥ್ಯಾ ಭ್ರಮ ಮಾಯಿಕ ।೫೬೩॥

ಪ್ರಕೃತಿಕಾಳೀಹೀ ಜಾಣ । ಸತ್ಯ ನಾಹೀ ಜೀವಪಣ । ತೇಹೀ ಅರ್ಥೀಚೇ ನಿಜಖೂಣ । ಉದ್ಧವಾ ಸಂಪೂರ್ಣ ಅವಧಾರೀ ।೫೬೪॥ ಸ್ವಯೇ ಅವಲೋಕಿತಾ ದರ್ಪಣ । ದರ್ಪಣಾಮಾಜೀ ದಿಸೇ ಆಪಣ । ತರೀ ಆಪುಲೇ ವೇಗಳೇಪಣ । ಸ್ವಯೇ ಆಪಣ ಜಾಣಿಜೇ ।೫೬೫॥ ತೇವೀ ಪ್ರಕೃತಿಕರ್ಮ ಕರಿತಾ । ಜರೀ ದಿಸೇ ಪ್ರಕೃತಿ ಆಂತೌತಾ । ತರೀ ಮೀ ಪ್ರಕೃತೀಪರತಾ । ಜಾಣ ತತ್ತ್ವತಾ ಉದ್ಧವಾ ।೫೬೬॥ ದಿಸೇ ವ್ಯೋಮ ಜಳೀ ಬುಡಾಲೇ । ಪರೀ ತೇ

ಮಾತ್ರ ಉಳಿದುಕೊಳ್ಳುವುದು. ಅದರಂತೆ ಈ ಯಾವ ಸಂಸಾರವು ಅವ್ಯಕ್ತದಲ್ಲಿರುವುದು ।೫೫೨॥ ವಟ ಬೀಜವು ಎಷ್ಟೊಂದು ಸೂಕ್ಷ್ಮವಾಗಿದೆ ಎಂದರೆ ಅದು ಎಲ್ಲಿ ಬಿದ್ದಿರುವುದೋ, ಕಣ್ಣಿಗೂ ಕೂಡ ಕಾಣಿಸಲಾರದು. ಅದರಂತೆ ಈ ಸಂಸಾರದ ಬೀಜವು ಅವ್ಯಕ್ತವಾಗಿರುವುದು. ಇದು ಜೀವಕ್ಕೆ ನಿಚ್ಚಳವಾಗಿ ಕಾಣುವುದಿಲ್ಲ ।೫೫೩॥ ತೃಣಗಳ ಅನೇಕ ಜಾತಿಯ ಬೀಜಗಳನ್ನು ಯಾವ ಕಾಲನು ಬೇಸಿಗೆಯಲ್ಲಿ ಇಲ್ಲದಂತೆ ಮಾಡುವನು. ಅದರಂತೆ ಅವ್ಯಕ್ತವಾಗಿರುವ ಭವಬೀಜಗಳೂ ಕೂಡ ಕಾಲನಲ್ಲಿ ಏಕರೂಪವಾಗುವುವು ।೫೫೪॥ ಪೂರ್ವದಲ್ಲಿ ಕಾಲನು ಕ್ಷುಬ್ಧಗೊಂಡು ಯಾವ ಅವ್ಯಕ್ತವನ್ನು ಜಗತ್ತಿನ ಆಕಾರದಲ್ಲಿ ವ್ಯಕ್ತಮಾಡಿದ್ದನೋ, ಅದೇ ಅವ್ಯಕ್ತವು ಕಾಲಯೋಗದಿಂದ ಕಾಲನಲ್ಲಿ ಲೀನವಾಗುವುದು ।೫೫೫॥ ಅದಕ್ಕಾಗಿ ಹೇ ಉದ್ಧವನೇ, ಇದಕ್ಕೆ ಮಾತ್ರ ಅವ್ಯಕ್ತದ ಕಾಲನಲ್ಲಿ ಲಯವಾಗುವಿಕೆ ಎಂದು ಹೇಳುವರು. ಈ ಕಾಲಕ್ಕೆ ಮಹಾಬಾಹೂ ಎಂದು ಹೇಳುವರು. ಈ ಕಾಲನ ಲಯವು ಪುರುಷನಲ್ಲಾಗುವುದು ।೫೫೬॥

ಪುರುಷನ ಯಾವ ಪೂರ್ಣ ಕ್ಷೋಭಕ್ಕೆ ಕಾಲನು ಎಂದು ಹೇಳುವರು. ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಮೂರು ಅವಸ್ಥೆಗಳು ಕಾಲನದ್ದಾಗಿರುವುದು ।೫೫೭॥ ಈ ಮೂರೂ ಅವಸ್ಥೆಗಳು ಎಂದು ಮುಗಿಯುವುವೋ, ಆ ಸಮಯದಲ್ಲಿ ಕಾಲನ ಯಾವ ಕಾರ್ಯವೂ ಉಳಿದುಕೊಳ್ಳುವುದಿಲ್ಲ. ಆದ್ದರಿಂದ ಆ ಕಾಲನು ತನ್ನ ಸ್ವಾಭಾವಿಕ ರೂಪದಿಂದ ಜೀವದಲ್ಲಿ ಏಕರೂಪವಾಗಿರುವನು ।೫೫೮॥ ಅಚೇತನಕ್ಕೆ ಚೇತನವನ್ನು ಕೊಡುವವ ಮತ್ತು ಜಡಕ್ಕೆ ಸಜೀವವನ್ನಾಗಿ ಮಾಡುವವ, ಆ ಯಾವ ಪುರುಷನಿಗೆ ಜೀವನೆಂದು ನಾಮವು ಪ್ರಾಪ್ತವಾಗಿರುವುದು ।೫೫೯॥ ಪ್ರಕೃತಿಯ ಸಂಯೋಗದಿಂದ ಶುದ್ಧ ಬ್ರಹ್ಮನಿಗೆ ಜೀವತ್ವವು ಪ್ರಾಪ್ತವಾಗುವುದು. ಇದಕ್ಕೇನೇ ಪುರುಷನೆಂದೂ ಕೂಡ ನಾಮವಿರುವುದು. ಇದನ್ನು ನೀನು ಲಕ್ಷದಲ್ಲಿಡು ।೫೬೦॥ ಪ್ರಕೃತಿಯ ಒಂದನ್ನೇ ವಿಚಾರ ಮಾಡಿದರೆ ಅದು ಕೇವಲ ಮೃಗಜಲದಂತಿರುವುದು. ಅದು ಪ್ರತ್ಯಕ್ಷವಾಗಿ ತೋರುವುದು ನಿಜ. ಆದರೆ ಅದರಲ್ಲಿ ಸತ್ಯತ್ವವು ಇಲ್ಲವೇ ಇಲ್ಲ ।೫೬೧॥ ಮೃಗಜಲದಲ್ಲಿ ಬಿದ್ದ ಮನುಷ್ಯನು ಅದರಲ್ಲಿ ಮುಳುಗಬಲ್ಲನೇ? ಏಕೆಂದರೆ ಅದರಲ್ಲಿ ಜಲವೇ ಇರುವುದಿಲ್ಲ. ಅದರಂತೆ ಪ್ರಕೃತಿಯೇ ಇಲ್ಲದಿರುವಾಗ್ಗೆ ಪ್ರೀತಿಯಿಂದ ಜೀವತ್ವವನ್ನು ಯಾರನ್ನು ಜೋಡಿಸಬೇಕು? ।೫೬೨॥ ಆಕಾಶವು ನೀರಿನಲ್ಲಿ ಮುಳುಗಿರುವಂತೆ ತೋರುವುದು ನಿಜ, ಆದರೆ ಅದು ನಿಜವೆಂದು ತಿಳಿವಿಕೆಯು ಮೂರ್ಖತನದ್ದಾಗಿರುವುದು. ಅದರಂತೆಯೇ ಈ ಯಾವ ರೂಪ, ನಾಮ, ಗುಣಕರ್ಮ ಎಲ್ಲವೂ ಮಾಯಿಕ ಭ್ರಮೆಯಾಗಿರುವುದು ।೫೬೩॥ ಹೇ ಉದ್ಧವಾ, ಪ್ರಕೃತಿಯ ಅಸ್ತಿತ್ವಕಾಲದಲ್ಲಿಯೂ ಕೂಡ ಜೀವತ್ವವು ನಿಜವಲ್ಲ. ಇದರ ನಿಜವಾದ ರಹಸ್ಯವನ್ನು ನಾನು ನಿನಗೆ ಹೇಳುವೆನು,

ನಾಹೀ ವೋಲೇ ಝಾಲೇ । ತೇವೀ ಪ್ರಕೃತಿಕರ್ಮ ಮ್ಯಾ ಕೇಲೇ । ನಾಹೀ ಮಾಖಲೇ ಮಮಾಂಗ ।೫೬೭॥ ಯಾಪರೀ ಕರಿತಾ ನಿರ್ವಾಹೋ । ಪ್ರಕೃತೀಚಾ ಝಾಲಾ ಅಭಾವೋ । ತೇವ್ಹಾ ಜೀವಶಿವನಾಂವೇ ವಾವೋ । ಜೀವ ತೋಚಿ ಪಹಾ ಹೋ ಪರಮಾತ್ಮಾ ।೫೬೮॥ ಜೀವಾಚೇ ಗೇಲಿಯಾ ಜೀವಪಣ । ಸಹಜೇಚಿ ಉಡೇ ಶಿವಪಣ । ದೋಘೇಹೀ ಆತ್ಮತ್ವೇ ಜಾಣ । ಹೋತೀ ಪರಿಪೂರ್ಣ ಪೂರ್ಣತ್ವೇ ।೫೬೯॥ ಜೀವಾಸೀ ನಿಜಸ್ವರೂಪ ಆಠವೋ । ಯಾ ನಾಂವ ಜೀವಾಚಾ ಪರಬ್ರಹ್ಮೀ ಲಯೋ । ಪರಮಾತ್ಮಾ ಅಜ ಅವ್ಯಯೋ । ಅವಿನಾಶ ಅದ್ವಯೋ ಅನಂತ ।೫೭೦॥ ಬ್ರಹ್ಮೀ ಸ್ಫುರೇನಾ ಬ್ರಹ್ಮಪಣ । ತೇಥ "ಮೀ ತೂ"ಮ್ಹಣೇ ಕೋಣ । ಪರಮಾನಂದ ಪರಿಪೂರ್ಣ । ಉರೇ ಜಾಣ ಉದ್ಧವಾ ।೫೭೧॥ ಐಸಾ ಪರಮಾನಂದ ಮ್ಹಣಸೀ ಕೋಣ । ತೋ ಮೀ ಅಜ ಅವ್ಯಯ ಶ್ರೀಕೃಷ್ಣ । ಆನಂದಸ್ವರೂಪ ತೋ ಮೀ ಜಾಣ । ಮಜವೇಗಳೇ ಸ್ಥಾನ ಅಸೇನಾ ।೫೭೨॥ ಜ್ಯಾ ಸ್ವಾನಂದಾ ನಾಂವ ಶ್ರೀಕೃಷ್ಣ। ತೇ ತುರ್ಝೇ ಸ್ವರೂಪ ಉದ್ಧವಾ ಜಾಣ । ತೇಥ ನಾಹೀ ಗಾ ಮೀತೂಪಣ । ಪರಮ ಕಾರಣ ಉರ್ವರೀತ ।೫೭೩॥ ಉದ್ಧವಾ ಜೀವಾಚಾ ಜೀವ ಮೀ ಶ್ರೀಕೃಷ್ಣ । ಮಜ ತುಜ ನಾಹೀ ವೇಗಳೇಪಣ । ಯಾಲಾಗೀ ಜೀವಾಚೀ ಹೇ ನಿಜಖೂಣ । ಪರಮ ಕಾರಣ ಸಾಂಗೀತಲೇ ।೫೭೪॥ ಜಗಾಚಾ ಆತ್ಮಾ ಶ್ರೀಕೃಷ್ಣ । ತ್ಯಾ ಮಾರ್ಝಾ ಆತ್ಮಾ ತೂ ಉದ್ಧವ ಪೂರ್ಣ । ಹೇ ಐಕೋನಿ ಶ್ರೀಕೃಷ್ಣವಚನ । ಉದ್ಧವ ಜಾಣ ಗಜಬಜಿಲಾ ।.೫೭೫॥ ಕೃಷ್ಣ ಮಜ ಮ್ಹಣೇ ಆಪುಲಾ ಆತ್ಮಾ । ಪರೀ ಮೀ ನೇಣೇ ಕೃಷ್ಣಮಹಿಮಾ । ಅಗಾಧ ಲೀಲಾ ಪುರುಷೋತ್ತಮಾ । ತೋ ಕೇವೀ ಆಮ್ಹಾ ಆಕಳೇ ।೫೭೬॥ ನಾತಿಲೇಚಿ ಉದ್ಧವಪಣ । ಮಾರ್ಝ್ಯಾ ಅಂಗೀ ಜಡಲೇ ಜಾಣ । ಕೃಷ್ಣವಿವೇಕೇ ಪಾಹತಾ ಪೂರ್ಣ । ಮಾರ್ಝೇ ಮೀಪಣ ದಿಸೇನಾ ।೫೭೭॥ ಮಜ ಉದ್ಧವಪಣ ಸಾಂಡಿತಾ । ಕೃಷ್ಣ ನಿಜಧಾಮಾ ಜಾಈಲ ತತ್ತ್ವತಾ । ತೇ ನ ಸಾಹವೇ ಅವಸ್ಥಾ । ಸಖೇದತಾ ಸಪ್ರೇಮ ।೫೭೮॥ ಹೇ ಉದ್ಧವಾಚೀ ಅವಸ್ಥಾ । ಕಳೋ ಸರಲೀ ಶ್ರೀಕೃಷ್ಣನಾಥಾ । ತೇಚಿ ಅರ್ಥೀಚೀ ಹೇ ಕಥಾ । ಶಬ್ದಾರ್ಥತಾ ನಿರೂಪೀ ।೫೭೯॥

ಏವಮನ್ವೀಕ್ಷಮಾಣಸ್ಯ ಕಥಂ ವೈಕಲ್ಪಿಕೋ ಭ್ರಮಃ । ಮನಸೋ ಹೃದೀ ತಿಷ್ಠೇತ ವ್ಯೋಮ್ನೀವಾರ್ಕೋದಯೇ ತಮಃ ।೨೮॥

ಅರ್ಥ:- ಉದ್ಧವಾ, ಯಾರು ಈ ಪ್ರಕಾರವಾಗಿ ವಿವೇಕ ದೃಷ್ಟಿಯಿಂದ ನೋಡುವವರೋ, ಅವರ ಚಿತ್ತದಲ್ಲಿ ಪ್ರಪಂಚದ

ಈ ನಿರೂಪಣೆಯನ್ನು ಸಂಪೂರ್ಣವಾಗಿ ಲಕ್ಷಕೊಟ್ಟು ಕೇಳು ।೫೬೪॥ ನಾವು ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವನ್ನು ಕಾಣುತ್ತಿರುತ್ತೇವೆ. ಆದರೆ ನಾವು ಆ ಪ್ರತಿಬಿಂಬದಿಂದ ಭಿನ್ನರಾಗಿದ್ದೇವೆ ಎಂಬುವುದನ್ನು ತಿಳಿಯುತ್ತೇವೆ ।೫೬೫॥ ಅದರಂತೆ ಹೇ ಉದ್ಧವಾ, ಪ್ರಕೃತಿಯ ಅನುರೋಧದಿಂದ ಕರ್ಮಗಳನ್ನು ಮಾಡುತ್ತಿರಲು ನಾನು ಆ ಪ್ರಕೃತಿಯಲ್ಲಿರುವೆನು ಎಂಬಂತೆ ಕಾಣುತ್ತಿದ್ದರೂ ಕೂಡ ನಿಜವಾಗಿಯೂ ನಾನು ಅದರಿಂದ ಭಿನ್ನನಾಗಿರುವೆನು, ಇದನ್ನು ನೀನು ನಿಶ್ಚಿತವಾಗಿ ಲಕ್ಷದಲ್ಲಿ ಇಡು ।೫೬೬॥ ಆಕಾಶವು ನೀರಿನಲ್ಲಿ ಮುಳುಗಿದಂತೆ ತೋರುವುದು. ಆದರೆ ಅದೇನಾದರೂ ಹಸಿಯಾಗುವುದಿಲ್ಲ. ಅದರಂತೆ ನಾನು ಪ್ರಕೃತಿಯ ಕರ್ಮಗಳನ್ನು ಮಾಡುತ್ತಿದ್ದರೂ ಕೂಡ ನಾನು ಅದರಲ್ಲಿ ಲಿಪ್ತನಾಗುವುದಿಲ್ಲ ।೫೬೭॥ ಈ ಪ್ರಕಾರವಾಗಿ ವಿಚಾರವನ್ನು ಮಾಡಲು ಪ್ರಕೃತಿಯ ಅಭಾವವಾಗಿಬಿಡುವುದು. ಅದರಿಂದ ಜೀವ ಮತ್ತು ಶಿವ ಇವುಗಳ ನಾಮವೂ ಕೂಡ ಮಿಥ್ಯೆಯಾಗುವುವು. ಆಗ ಜೀವವೇ ಪರಮಾತ್ಮನಾಗುವುದು ।೫೬೮॥ ಜೀವದ ಜೀವತ್ವವು ಮುಗಿದುಹೋಯಿತೆಂದರೆ ಆಗ ಶಿವನ ಶಿವತ್ವವೂ ಕೂಡ ಮುಗಿದು ಹೋಗುವುದು ಮತ್ತು ಈ ಈರ್ವರೂ ಪೂರ್ಣತ್ವದಿಂದ ಆತ್ಮಸ್ವರೂಪದಲ್ಲಿ ಪರಿಪೂರ್ಣರಾಗುವರು ।೫೬೯॥ ಜೀವಕ್ಕೆ ಆತ್ಮಸ್ವರೂಪದ ಜ್ಞಾನವಾಗುವ ಇದರ ನಾಮವೇ ಜೀವಕ್ಕೆ ಪರಬ್ರಹ್ಮನಲ್ಲಿ ಲಯವಾಗುವಿಕೆ ಎಂದಾಗಿರುವುದು. ಪರಮಾತ್ಮನು ಅಜ, ಅವ್ಯಯ, ಅವಿನಾಶೀ, ಅದ್ವಯ, ಆನಂದಸ್ವರೂಪನಾಗಿರುವನು ।೫೭೦॥ ಬ್ರಹ್ಮನಲ್ಲಿ ಬ್ರಹ್ಮಸ್ವರೂಪದ ಸ್ಫುರಣವು ಮೂಲತಃ ಆಗದಿದ್ದರೆ ಆಗ ಅಲ್ಲಿ "ನಾನು ಮತ್ತು ನೀನು" ಎಂದು ಹೇಳಲು ಅಲ್ಲಿ ಇರುವವರಾದರೂ ಯಾರು? ಹೇ ಉದ್ಧವಾ, ಆ ಸಮಯದಲ್ಲಿ ಪರಿಪೂರ್ಣವಾಗಿ ಪರಮಾನಂದವು ಮಾತ್ರ ಉಳಿದುಕೊಂಡಿರುವುದು ।೫೭೧॥ ಈಗ ಪರಮಾನಂದವು ಯಾವುದು? ಹೀಗೆಂದು ನೀನು ಕೇಳಬಹುದು, ಅದಕ್ಕಾಗಿ ಕೇಳು ಅಜ, ಅವ್ಯಯನಾದ ಶ್ರೀಕೃಷ್ಣನು ನಾನೇ ಆಗಿರುವೆನು. ಅದೇ ನಾನು ಪರಮಾನಂದಸ್ವರೂಪ ನಾಗಿರುವೆನು ಹೀಗೆಂದು ತಿಳಿ. ಈ ಯಾವ ಪರಮಾನಂದಕ್ಕೆ ನನ್ನನ್ನು ಬಿಟ್ಟರೆ ಅದಕ್ಕೆ ಅನ್ಯ ಯಾವ ಸ್ಥಾನವೂ ಇರುವುದಿಲ್ಲ ।೫೭೨॥ ಹೇ ಉದ್ಧವಾ, ಈ ಯಾವ ಸ್ವಾನಂದಕ್ಕೆ ಶ್ರೀಕೃಷ್ಣ ಎಂಬ ನಾಮವಿರುವುದು. ಅದೇ ನಿನ್ನದೂ ಕೂಡ ಸ್ವರೂಪವಾಗಿರುವುದು. ಇದರಲ್ಲಿ ನಾನು ನೀನೆಂಬುವುದು ಇರುವುದಿಲ್ಲ. ಕೇವಲ ಪರಮ ಕಾರಣ ಮಾತ್ರ ಉಳಿದುಕೊಂಡಿರುವುದು ।೫೭೩॥ ಹೇ ಉದ್ಧವನೇ, ನಿನ್ನ ಜೀವದ ಜೀವವು ಅದುವೇ ನಾನು ಶ್ರೀಕೃಷ್ಣನಾಗಿರುವೆನು. ನನ್ನಲ್ಲಿ ಮತ್ತು ನಿನ್ನಲ್ಲಿ ಯಾವ ಭಿನ್ನತ್ವವೇ ಇರುವುದಿಲ್ಲ. ಆದ್ದರಿಂದಲೇ ಜೀವದ ಪರಮಕಾರಣವಾದ ನನ್ನ ಯಾವ ಈ ರಹಸ್ಯವನ್ನು ನಾನು ನಿನಗೆ ಹೇಳಿರುವೆನು।೫೭೪॥ ಶ್ರೀಕೃಷ್ಣನಾದ ನಾನು ಸರ್ವ ಜಗತ್ತಿನ ಆತ್ಮನಾಗಿರುವೆನು. ಅದೇ ಉದ್ಧವಾ, ನೀನು ನನ್ನ ಆತ್ಮನಾಗಿರುವೆ! ಈ ಯಾವ ಶ್ರೀಕೃಷ್ಣನ ವಚನಗಳನ್ನು ಕೇಳಿ ಉದ್ಧವನು ಮನಸ್ಸಿನಲ್ಲಿ ಗೊಂದಲಕ್ಕೀಡಾದನು ।೫೭೫॥ ಶ್ರೀಕೃಷ್ಣನು ನನಗೆ ತನ್ನ ಆತ್ಮನು ಎಂದು ಹೇಳಿದನು. ಆದರೆ ನಾನು ಶ್ರೀಕೃಷ್ಣನ ಮಹಿಮೆಯನ್ನು ಕೂಡ ತಿಳಿದವನಾಗಿರುವುದಿಲ್ಲ. ಈ ಯಾವ ಪುರುಷೋತ್ತಮನ ಲೀಲೆಯು ಅಗಾಧವಾಗಿರುವುದು. ಅದು ನಮಗೆ ಹೇಗೆ ತಿಳಿಯಬೇಕು? ।೫೭೬॥ ಇಲ್ಲದ ಉದ್ಧವತನವು ನನ್ನ ಅಂಗದಲ್ಲಿ ಬಂದು ಬಿದ್ದಿರುವುದು. ಆದರೆ ಶ್ರೀಕೃಷ್ಣನ ವಚನಗಳನ್ನು ವಿವೇಕ ದೃಷ್ಟಿಯಿಂದ ನೋಡಲು ನನ್ನ ನಾನೆಂಬುವುದೇ ನನಗೆ ಕಾಣುವುದಿಲ್ಲ ।೫೭೭॥ ನನ್ನ ಉದ್ಧವತ್ವವು ಇಲ್ಲದಂತಾದರೆ ಆಗ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗಬಹುದು. ಆಗ ಖೇದಯುಕ್ತ ಪ್ರೇಮಾವಸ್ಥೆಯು ನನಗೆ

ಭ್ರಮೆಯಾಗುವುದಿಲ್ಲ. ಒಂದುವೇಳೆ ಅಕಸ್ಮಾತಾಗಿ ಅದರ ಸ್ಫೂರ್ತಿಯಾದರೂ ಅದು ಬಹುಕಾಲದವರೆಗೆ ಹೃದಯದಲ್ಲಿರುವುದಿಲ್ಲ. ಸೂರ್ಯೋದಯವಾದನಂತರ ಅಂಧಕಾರವು ಇರಲಾರದು.

ಪ್ರಕೃತಿ-ಪುರುಷವಿವಂಚನ । ಆದಿ ಮಧ್ಯ ಅವಸಾನ । ತುಜ ಮ್ಯಾ ದಾವಿಲೇ ಏಕಪಣ । ತೇಥ ಕಾ ಭಿನ್ನಪಣ ಕಲ್ಪಿಸೀ ವಾಯಾ ।೫೮೦॥ ಉತ್ಪತ್ತೀ ಆದಿ ಬ್ರಹ್ಮ ಪೂರ್ಣ । ಉತ್ಪತ್ತೇಸೀ ತೇಚಿ ಕಾರಣ । ಜಗ ಜನ್ಮಲೇ ಜೇ ಸಗುಣ । ತೇಹೀ ಬ್ರಹ್ಮರೂಪೇ ಜಾಣ ದಾವಿಲೇ ತುಜ ।೫೮೧॥ ಆಣಿ ಪ್ರಳಯಾಚ್ಯಾ ಅಂತೀ । ಬ್ರಹ್ಮಚಿ ಉರೇ ನಿಜಸ್ಥಿತೀ । ತೇಹೀ ವಿಖಿಂಚೀ ಪ್ರತೀತೀ । ತುಜ ಮ್ಯಾ ನಿಶ್ಚಿತೀ ದಾವಿಲೀ ।೫೮೨॥ ಪ್ರಕೃತಿಹೂನಿ ಪುರುಷ ಭಿನ್ನ । ಪ್ರಕೃತಿ ಸ್ವಾತಂತ್ರ್ಯೇ ಮಿಥ್ಯಾ ಜಾಣ । ಐಸೇ ಪ್ರಕೃತಿ ಪುರುಷ ಜ್ಯಾಸೀ ಜ್ಞಾನ । ತ್ಯಾಸೀ ಮೀತೂಪಣ ಭಾಸೇನಾ ।೫೮೩॥ ಜೇಥ ನಾಹೀ ಮೀತೂಪಣ । ತೇಥ ವಿಕಲ್ಪ ಕಲ್ಪೀ ಕೋಣ । ಆದ್ಯಂತೀ ವಸ್ತು ಪೂರ್ಣ । ಹೇ ವಿವೇಕಜ್ಞಾನ ಜಯಾಸೀ ।೫೮೪॥ ಜೋ ವಿವೇಕ ಪುರುಷಪ್ರಕೃತೀ । ಸಾಂಖ್ಯ ಜಾಗೇ ಜ್ಯಾಚೇ ಚಿತ್ತೀ । ತ್ಯಾಸೀ ವಿಕಲ್ಪಾತೀ ಪ್ರಾಪ್ತೀ । ನವ್ಹೇ ಕಲ್ಪಾಂತೀ ಉದ್ಧವಾ ।೫೮೫॥ ಸಾಂಖ್ಯವಿವೇಕಗಭಸ್ತೀ । ಪೂರ್ಣ ಉಗವಲಾ ಜ್ಯಾಚೇ ಚಿತ್ತೀ । ತೇಥ ವಿಕಲ್ಪಾಚೀ ಅಂಧಾರೀ ರಾತೀ । ಕೈಶಾ ರೀತೀ ಉರೇಲ ।೫೮೬॥ ಜ್ಯಾಸೀ ಪಟುತರ ಸಾಂಖ್ಯಜ್ಞಾನ । ವಿಕಲ್ಪ ವಿಸರೇ ತ್ಯಾಚೇ ಮನ । ಹೃದಯೀ ಉಗವೇ ಚಿದ್ಭಾನ । ಅಜ್ಞಾನನಿಶಾ ಪೂರ್ಣ ನಿರಸೂನಿ ।೫೮೭॥ ಜೇಥ ವಿಸರಲೇ ಅಜ್ಞಾನ । ತೇಥ ವಿಕಲ್ಪಾಚೇ ಕೈಚೇ ಸ್ಥಾನ । ಯಾಪರೀ ಸಾಂಖ್ಯಜ್ಞಾನ । ಸಾಧಕಾ ಪೂರ್ಣ ಉಪಕಾರೀ ।೫೮೮॥ ಜೇ ಸಾರಾಚೇ ನಿಜಸಾರ । ಜೇ ಗುಹ್ಯಜ್ಞಾನಭಾಂಡಾರ । ಜೇ ಕಾ ವಿವೇಕರತ್ನಾಕರ । ತೇ ಸಾಚಾರ ಉದ್ಧವಾ ।೫೮೯॥

ಏಷ ಸಾಂಖ್ಯವಿಧಿಃ ಪ್ರೋಕ್ತಃ ಸಂಶಯಗ್ರಂಥಿಭೇದನಃ । ಪ್ರತಿಲೋಮಾನುಲೋಮಾಭ್ಯಾಂ ಪರಾವರದೃಶಾ ಮಯಾ ।೨೯॥

ಅರ್ಥ:- ಹೇ ಉದ್ಧವಾ, ನಾನು ಕಾರ್ಯ ಮತ್ತು ಕಾರಣ ಈ ಎರಡರ ಸಂಬಂಧಿತನಾಗಿರುವೆನು. ನಾನು ನಿನಗೆ ಸೃಷ್ಟಿಯ ಪ್ರಳಯವನ್ನು ಮತ್ತು ಪ್ರಳಯದಿಂದ ಸೃಷ್ಟಿಯವರೆಗೆ ಸಾಂಖ್ಯ ವಿಧಿಯನ್ನು ಹೇಳಿರುವೆನು. ಈ ಮುಖಾಂತರವಾಗಿ ಸಂದೇಹಗಳ ಗಂಟು ಬಿಚ್ಚಲ್ಪಡುವುದು ಮತ್ತು ಪುರುಷನು ತನ್ನ ಸ್ವರೂಪದಲ್ಲಿ ಸ್ಥಿರನಾಗುವನು.

ಮೀ ವಿವೇಕಾಚಾ ವಿವೇಕೂ । ಮೀ ಅರ್ಕಾಚಾ ಆದಿಅರ್ಕೂ । ಮೀ ಜ್ಞಾನಿಯಾಂಚಾ ಜ್ಞಾನತಿಲಕೂ । ತ್ಯಾ ಮಾಝಾ ಪರಿಪಾಕೂ ತೇ ಹೇ ಸಾಂಖ್ಯ ।೫೯೦॥ ಮೀ ವೇದಾಂಚಾ ಆದಿವೇದೂ । ಮೀ ಬೋಧಾಚಾ ಆದಿಬೋಧೂ। ಮೀ ಆನಂದಾಚಾ ನಿಜಾನಂದೂ। ತ್ಯಾ ಮಾಝಾ ಪ್ರಬೋಧೂ ತೇ ಹೇ ಸಾಂಖ್ಯ ।೫೯೧॥ ತೇಣೇ ಮ್ಯಾ ಸರ್ವಜ್ಞೇ ಶ್ರೀಕೃಷ್ಣೇ। ನಿರ್ಧಾರೋನಿ ನಿಜಜ್ಞಾನೇ । ಸಾಂಖ್ಯಯೋಗ ಉಪಲಕ್ಷಣೇ । ಬ್ರಹ್ಮ

ಹಿಸುವುದಾಗುವುದಿಲ್ಲ ।೫೭೮॥ ಉದ್ಧವನ ಈ ಯಾವ ಅವಸ್ಥೆಯನ್ನು ಶ್ರೀಕೃಷ್ಣನು ತಿಳಿದುಕೊಂಡನು ಮತ್ತು ಇದೇ ವಿಷಯವನ್ನು ಕುರಿತಾದ ಥೆಯನ್ನು ಶಬ್ದರೂಪದಿಂದ ಹೇಳಲಾರಂಭಿಸಿದನು ।೫೭೯॥

ಶ್ರೀಕೃಷ್ಣನು ಹೀಗೆ ನುಡಿದನು; ಪ್ರಕೃತಿ ಪುರುಷರ ವಿವೇಚನೆಯನ್ನು ಮಾಡಿ ನಾನು ನಿನಗೆ ಆದಿ, ಮಧ್ಯ ಮತ್ತು ಅಂತ್ಯ ಈ ಮೂರೂ ಅವಸ್ಥೆಗಳಲ್ಲಿ ಐಕ್ಯವನ್ನು ತೋರಿಸಿಕೊಟ್ಟಿರುವೆನು. ಅಂದಮೇಲೆ ಅವುಗಳಲ್ಲಿ ವ್ಯರ್ಥವಾಗಿ ಭಿನ್ನತ್ವವನ್ನು ಏಕೆ ಕಲ್ಪಿಸುವೆ? ।೫೮೦॥ ಉತ್ಪತ್ತಿಯ ಪೂರ್ವದಲ್ಲಿ ಪೂರ್ಣ ಬ್ರಹ್ಮವಿರುವುದು. ಉತ್ಪತ್ತಿಯ ಕಾರಣವಾದರು ಅದೇ ಆಗಿರುವುದು. ಈ ಯಾವ ಸಗುಣ ಜಗತ್ತು ನಿರ್ಮಾಣವಾಗಿರುವುದು. ಇದೂ ಕೂಡ ಬ್ರಹ್ಮಸ್ವರೂಪವೇ ಆಗಿರುವುದು. ಇದನ್ನು ನಾನು ನಿನಗೆ ಸ್ಪಷ್ಟವಾದ ಪದ್ಧತಿಯಿಂದ ತೋರಿಸಿರುವೆನು ।೫೮೨॥ ಪ್ರಕೃತಿಯಿಂದ ಪುರುಷನು ಭಿನ್ನನಾಗಿರುವನು. ಪ್ರಕೃತಿಯು ಇದು ಸ್ವರೂಪದಿಂದ ಮಿಥ್ಯೆಯಾಗಿರುವುದು. ಪ್ರಕೃತಿ ಪುರುಷರ ವಿಷಯಕ್ಕೆ ಯಾರಿಗೆ ಹೀಗೆ ಜ್ಞಾನವು ಆಗುವುದೋ, ಆತನಿಗೆ ನಾನು ನೀನೆಂಬುವುದು ಭಾಸವಾಗುವುದಿಲ್ಲ ।೫೮೩॥ ಸೃಷ್ಟಿಯ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಪರಿಪೂರ್ಣವಾಗಿ ಆತ್ಮತತ್ತ್ವವೇ ತುಂಬಿಕೊಂಡಿರುವುದು. ಈ ಯಾವ ವಿವೇಕವು ಎಲ್ಲಿ ಪ್ರಕಟವಾಗುವುದೋ, ಅಲ್ಲಿ ನಾನು, ನೀನೆಂಬ ಭಾವವು ಉಳಿದುಕೊಳ್ಳುವುದಿಲ್ಲ. ಅಂದಮೇಲೆ ಅಲ್ಲಿ ವಿಕಲ್ಪಗಳ ಕಲ್ಪನೆಗಳನ್ನು ಯಾರು ಮಾಡಬೇಕು? ।೫೮೪॥ ಹೇ ಉದ್ಧವಾ, ಯಾರು ಪ್ರಕೃತಿಪುರುಷರ ವಿವೇಕವನ್ನು ಅರಿತುಕೊಂಡಿರುವನೋ, ಸಾಂಖ್ಯಶಾಸ್ತ್ರದ ತತ್ತ್ವಜ್ಞಾನವನ್ನು ಯಾರ ಹೃದಯದಲ್ಲಿ ಜಾಗೃತವಾಗಿರುವುದೋ, ಆತನ ಮನದಲ್ಲಿ ಕಲ್ಪಾಂತಕ್ಕೂ ಕೂಡ ವಿಕಲ್ಪಗಳು ಬರುವುದಿಲ್ಲ ।೫೮೫॥ ಪ್ರಕೃತಿ ಪುರುಷರೂಪ ಸೂರ್ಯನು ಯಾರ ಮನದಲ್ಲಿ ಪರಿಪೂರ್ಣವಾಗಿ ಉದಯಗೊಂಡಿರುವನೋ, ಅಲ್ಲಿ ವಿಕಲ್ಪದ ಅಂಧಕಾರದ ರಾತ್ರಿಯು ಹೇಗಿರಲು ಸಾಧ್ಯ? ।೫೮೬॥ ಯಾರಿಗೆ ಈ ಯಾವ ಉತ್ಕೃಷ್ಟವಾದ ಸಂಖ್ಯಾಜ್ಞಾನವು ಪ್ರಾಪ್ತವಾಗಿರುವುದೋ, ಆತನ ಮನಸ್ಸಿಗೆ ಈ ಯಾವ ವಿಕಲ್ಪವು ಮರೆತುಹೋಗುವುದು. ಆತನ ಅಂತಃಕರಣದಲ್ಲಿ ಜ್ಞಾನರೂಪ ಸೂರ್ಯನ ಉದಯವಾಗಿ, ಆತನು ಅಜ್ಞಾನರೂಪ ರಾತ್ರಿಯನ್ನು ಪರಿಪೂರ್ಣವಾಗಿ ನಿರಸನೆ ಮಾಡುವನು ।೫೮೭॥ ಅಜ್ಞಾನದ ನಿರಸನೆಯಾದ ಮೇಲೆ ಅಲ್ಲಿ ವಿಕಲ್ಪಕ್ಕೆ ಸ್ಥಳವು ಎಲ್ಲಿಂದ ದೊರಕಬೇಕು? ಈ ಪ್ರಕಾರವಾಗಿ ಯಾವ ಸಾಂಖ್ಯ ಜ್ಞಾನವು ಸಾಧಕರಲ್ಲಿ ಕೃಪೆಯ ಮಳೆಗರೆಯುವಂತಾಗಿರುವುದು ।೫೮೮॥ ಉದ್ಧವಾ, ಯಾವ ಸಾರಗಳ ಸಾರವಾಗಿರುವ, ಗುಹ್ಯಜ್ಞಾನದ ಭಾಂಡಾರವಾಗಿರುವ, ಯಾವ ವಿವೇಕರತ್ನಗಳ ಸಾಗರವಾಗಿರುವ ಈ ಯಾವ ಸಾಂಖ್ಯಜ್ಞಾನವಾಗಿರುವುದು ।೫೮೯॥

ನಾನು ವಿವೇಕದ ವಿವೇಕನಾಗಿರುವೆನು, ಸೂರ್ಯನ ಆದಿ ಸೂರ್ಯನಾಗಿರುವೆನು, ಜ್ಞಾನಿಗಳ ಜ್ಞಾನತಿಲಕನಾಗಿರುವೆನು. ಹೀಗಿರುವ

ಅವ್ಯಯಪಣೇ ದಾವಿಲೇ ॥೫೯೨॥ ಜೇವೀ ಗರಗರೀತ ವಾಟೋಳಾ । ಕರತಳೀ ದಿಸೇ ಆಂವಳಾ । ತೇವೀ ಸಾಂಖ್ಯಯೋಗಲೀಳಾ । ಬ್ರಹ್ಮ ತುಜ ಡೋಳಾ ದಾವಿಲೇ ॥೫೯೩॥ ಜೋ ಬ್ರಹ್ಮ ಡೋಳಾ ದೇಖೋ ಜಾಯೇ । ತೋ ಸರ್ವಾಂಗೇ ದೇಖಿಪಣಾ ಹೋಯೇ । ಐಶೀ ಸಾಂಖ್ಯಜ್ಞಾನನಿಜಸೋಯೇ । ತುಜ ಮ್ಯಾ ಪಾಹೇ ದಾವಿಲೀ ॥೫೯೪॥ ಹಾ ಸಾಂಖ್ಯಯೋಗ ಅನುಕ್ರಮ । ಅನ್ವಯವ್ಯತಿರೇಕೇ ಉಪಕ್ರಮ । ಆಲೋಡಿತಾ ಆಕಳೇ ವರ್ಮ । ಅಖಂಡ ಬ್ರಹ್ಮ ಅದ್ವಯ ॥೫೯೫॥ ಉತ್ಪತ್ತಿ-ಸ್ಥಿತಿ-ಪ್ರಳಯಾಂತ। ಬ್ರಹ್ಮ ಅಖಂಡ ನಿಜನಿತ್ಯ। ಹೇಚಿ ಸಾಂಖ್ಯಯೋಗೇ ಪ್ರಾಪ್ತ। ಜಾಣ ನಿಶ್ಚಿತ ಸಾಧಕಾ॥೫೯೬॥ ಜ್ಯಾಂಸಿ ಬ್ರಹ್ಮಜ್ಞಾನಾಚೇ ಕೋಡ। ತೇ ಸಾಂಖ್ಯಯೋಗ ಪುರವೀ ಚಾಡ । ಲಿಂಗದೇಹಾಚೇ ಸುದೃಢ ಝಾಡ । ತ್ಯಾಚೇಸಮೂಳ ಬೂಡ ಉನ್ಮಳೀ ॥೫೯೭॥ ಲಿಂಗದೇಹ ಅತ್ಯಂತ ಕಠಿಣ। ತೇ ಸಾಂಖ್ಯಯೋಗಾಪುಢೇ ಜಾಣ । ಜೇವೀ ಅಗ್ನೀಮಾಜೀ ತೃಣ । ತೇವೀ ಹೋಯ ಸಂಪೂರ್ಣ ಭಸ್ಮಾಂತ ॥೫೯೮॥ ಲಿಂಗದೇಹ ಸೈಂಧವಗಿರಿವರ। ಸಾಂಖ್ಯ ಅತ್ಯಂತ ಪ್ರಳಯಸಾಗರ। ಖವಳಲಾ ವಿರವೂನಿ ಕರೀ ನೀರ। ಏಕಾಕಾರ ನಿಜಾತ್ಮತಾ ॥೫೯೯॥ ಖವಳಲ್ಯಾ ಅತ್ಯಂತ ಚಿತ್ಸಾಗರಾ । ನಾನಾ ಸಂಶಯಜಳಗಾರಾ । ಉರಾವಯಾ ನಾಹೀ ಥಾರಾ। ನಿಜನಿರ್ಧಾರಾ ಉದ್ಧವಾ॥೬೦೦॥ ಸಕಳ ಸಂಶಯಾಚೇ ಭೇದನ । ಲಿಂಗದೇಹಾಚೇ ಭೇದನ। ಕರೀ ತೇ ಸಾಂಖ್ಯಯೋಗಜ್ಞಾನ। ಉದ್ಧವಾ ಜಾಣ ನಿಶ್ಚಿತ॥೬೦೧॥ ಅನುಲೋಮ ಪ್ರತಿಲೋಮ । ವಿವಂಚನಾ ವಾಟೇಲ ದುರ್ಗಮ । ಹೇ ನ ಕರಿತಾ ಸಾಂಖ್ಯಸುಗಮ । ಆಕಳೇ ತೇ ವರ್ಮ ಸಾಂಗೇನ ಐಕ ॥೬೦೨॥ ಸಾಂಡೂನಿ ಆಕಾರವಿಷಮತಾ । ಸರ್ವ ಭೂತೀ ಭಗವಂತತಾ । ಜೋ ಪಾಹೇ ಸದ್ಭಾವತಾ । ಸಾಂಖ್ಯ ತ್ಯಾಚೇ ಹಾತಾ ಸಮೂಳ ಆಲೇ ॥೬೦೩॥

ಕಾ ಜೈಸೇ ಹೋಈಲ ಕರ್ಮಾಚರಣ । ತೈಸೇ ಸುಖೇಚಿ ಹೋ ಆಪಣ । ಮೀ ಕರ್ತಾ ಹೇ ತೂ ನ ಮ್ಹಣ । ಇತುಕೇನ ಬ್ರಹ್ಮಪೂರ್ಣ ತೂ ಹೋಸೀ ॥೬೦೪॥ ಯಾಹೀ ವರತೀ ಸುಗಮತಾ । ಮಜ ದಿಸೇನಾ ಸರ್ವಥಾ । ಉದ್ಧವಾ ತುಝೀ ನಿಜಹಿತಾರ್ಥ । ಜಾಣ ತತ್ತ್ವತಾ ಸಾಂಗೀತಲೇ ॥೬೦೫॥ ಹೇಚಿ ಏಕ ಮಾಝೀ ವಚನ । ವಿಚಾರೂನಿಯಾ ಸಂಪೂರ್ಣ । ನಿಜಹಿತಾರ್ಥ ಆಪಣ । ಅವಶ್ಯ ಜಾಣ ಕರಾವೇ ॥೬೦೬॥ ಐಸೇ ಬೋಲಿಲಾ ದೇವಾಧಿದೇವೋ ।

ನನ್ನ ಯಾವ ಪೂರ್ಣ ಅವಸ್ಥೆಯು ಈ ಸಾಂಖ್ಯಮತವಾಗಿರುವುದು ॥೫೯೦॥ ನಾನು ದೇವರ ಆದಿ ದೇವನು, ನಾನು ಉಪದೇಶಗಳ ಆದ್ಯ ಉಪದೇಶಕನು, ನಾನು ಆನಂದದ ನಿಜಾನಂದನಾಗಿರುವೆನು. ಈ ನನ್ನ ಜ್ಞಾನವೇ ಸಾಂಖ್ಯಜ್ಞಾನವಾಗಿರುವುದು ॥೫೯೧॥ ಹೀಗೆ ಸರ್ವಜ್ಞ ಭಗವಂತನಾಗಿರುವ ಶ್ರೀಕೃಷ್ಣನಾದ ನಾನು ಆತ್ಮಜ್ಞಾನದಿಂದ ನಿರ್ಧಾರವನ್ನು ಮಾಡಿ ಸಾಂಖ್ಯಯೋಗದ ಆಧಾರದಿಂದ ಅವ್ಯಯತನದಲ್ಲಿ ಬ್ರಹ್ಮವನ್ನು ತೋರಿಸಿರುವೆನು ॥೫೯೨॥ ಯಾವ ಪ್ರಕಾರವಾಗಿ ಅಂಗೈ ಮೇಲೆ ಇಟ್ಟ ಗರಗರೀತ ವರ್ತುಲಾಕಾರದ ನೆಲ್ಲಿಕಾಯಿಯು ಹೇಗೆ ಸ್ಪಷ್ಟವಾಗಿ ತೋರುವದೋ, ಅದೇ ಪ್ರಕಾರವಾಗಿ ಸಾಂಖ್ಯಯೋಗದ ಸಾಧನೆಯಿಂದ ಪ್ರತ್ಯಕ್ಷ ಪರಬ್ರಹ್ಮವನ್ನು ನಿನಗೆ ನಿನ್ನ ಕಣ್ಣುಗಳಿಗೆ ತೋರಿಸಿರುವೆನು ॥೫೯೩॥ ಯಾವನು ತನ್ನ ಕಣ್ಣುಗಳಿಂದ ಬ್ರಹ್ಮವನ್ನು ಕಾಣುತ್ತಿರುವನೋ, ಆತನು ಸರ್ವಾಂಗದಿಂದ ತನ್ಮಯನಾಗುವನು. ಹೀಗಿರುವ ಯಾವ ಸಾಂಖ್ಯಶಾಸ್ತ್ರದ ತತ್ವವನ್ನು ನಾನು ನಿನಗೆ ತೋರಿಸಿರುವೆನು ॥೫೯೪॥ ಈ ಯಾವ ಸಾಂಖ್ಯಯೋಗದ ಅನುಕ್ರಮವನ್ನು ಅನ್ವಯ ವ್ಯತಿರೇಕದಿಂದ ಸರಿಯಾಗಿ ವಿಚಾರ ಮಾಡಿ ನೋಡಿದರೆ ಬ್ರಹ್ಮವು ಅಖಂಡವಾಗಿದ್ದು ಅಕ್ಷಯವಾಗಿರುವುದು ತಿಳಿದು ಬರುವುದು ॥೫೯೫॥ ಉತ್ಪತ್ತೀ, ಸ್ಥಿತಿ ಮತ್ತು ಲಯ ಇವುಗಳಲ್ಲಿ ಬ್ರಹ್ಮವು ಅಖಂಡವಾಗಿ ಮತ್ತು ಸ್ವತಃ ನಿತ್ಯವಾಗಿರುವುದೆಂಬ ಜ್ಞಾನವು ಸಾಧಕರಿಗೆ ನಿಜವಾಗಿಯೂ ಸಾಂಖ್ಯಯೋಗದಿಂದ ಪ್ರಾಪ್ತವಾಗುವುದು ॥೫೯೬॥ ಯಾರಿಗೆ ಬ್ರಹ್ಮಜ್ಞಾನದ ಅಪೇಕ್ಷೆ ಇರುವುದೋ, ಅವರಿಗೆ ಈ ಯಾವ ಸಾಂಖ್ಯಯೋಗವು ಅವರಿಗೆ ಪೂರ್ಣ ಮಾಡುವುದು ಮತ್ತು ಲಿಂಗದೇಹದ ಸದೃಢವಾಗಿರುವ ವೃಕ್ಷವನ್ನು ಬೇರು ಸಮೇತವಾಗಿ ಕಿತ್ತಿ ಒಗೆಯುವುದು ॥೫೯೭॥ ಲಿಂಗದೇಹವು ಇದು ಅತ್ಯಂತ ಕಠಿಣವಾಗಿರುವುದು. ಆದರೆ ಯಾವ ಪ್ರಕಾರವಾಗಿ ಧಗಧಗಿಸುವ ಅಗ್ನಿಯಲ್ಲಿ ತೃಣವು ಸುಟ್ಟು ಭಸ್ಮವಾಗುವುದೋ, ಅದೇ ಪ್ರಕಾರವಾಗಿ ಸಾಂಖ್ಯಯೋಗದ ಮುಂದೆ ಲಿಂಗದೇಹವು ಇಲ್ಲದಾಗುವುದು ॥೫೯೮॥ ಲಿಂಗದೇಹ ಎಂಬುವುದು ಇದು ಲವಣದ ಪರ್ವತವಾಗಿರುವುದು ಮತ್ತು ಈ ಸಾಂಖ್ಯಯೋಗವು ಮಹಾಸಾಗರವಾಗಿರುವುದು. ಈ ಯಾವ ಮಹಾಸಾಗರವು ಉಗ್ರಗೊಳ್ಳಲು ಅದು ತನ್ನ ಜಲದಲ್ಲಿ ಆ ಪರ್ವತವನ್ನು ಕರಗಿಸಿ, ತನ್ನ ಸ್ವರೂಪದಿಂದ ಏಕಾಕಾರವನ್ನಾಗಿ ಮಾಡುವುದು ॥೫೯೯॥ ಹೇ ಉದ್ಧವಾ, ಈ ಜ್ಞಾನಸಾಗರವು ಒಮ್ಮೆ ಉಗ್ರವಾದರೆ ಸಾಕು ಆಗ ಸಂಶಯರೂಪ ಆಣೆಕಲ್ಲು ಉಳಿದುಕೊಳ್ಳಲು ಸ್ಥಾನವೇ ಇರಲಾರದು ॥೬೦೦॥ ಹೇ ಪ್ರಿಯ ಉದ್ಧವನೇ, ಈ ಜ್ಞಾನವು ಸರ್ವ ಸಂಶಯಗಳನ್ನು ನಾಶಪಡಿಸುವುದು. ಲಿಂಗದೇಹವನ್ನು ಇಲ್ಲದಾಗಿ ಮಾಡುವುದು, ಈ ಸಾಂಖ್ಯಯೋಗದ ಜ್ಞಾನವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು ॥೬೦೧॥ ಈಗ ನಿನಗೆ ಅನುಲೋಮ ಮತ್ತು ಪ್ರತಿಲೋಮ ಇವುಗಳ ವಿವೇಚನೆಯನ್ನು ಮಾಡುವಿಕೆಯು ಬಹಳ ಕಠಿಣವಾಗಬಹುದು. ಅದಕ್ಕಾಗಿ ಸಾಂಖ್ಯ ಯೋಗವು ಸುಲಭವಾಗಿ ಕೈಗೆ ಎಟಕಲು ಅದರ ಉಪಾಯವನ್ನು ನಾನು ನಿನಗೆ ಹೇಳುವೆನು. ಅದಕ್ಕಾಗಿ ನೀನು ಲಕ್ಷಪೂರ್ವಕವಾಗಿ ಶ್ರವಣವನ್ನು ಮಾಡು ॥೬೦೨॥ ಭಿನ್ನ ಭಿನ್ನ ಆಕಾರದಲ್ಲಿ ತೋರುತ್ತಿರುವ ಭೇದವನ್ನು ಬಿಟ್ಟುಕೊಟ್ಟು ಸರ್ವಪ್ರಾಣಿಮಾತ್ರರಲ್ಲಿ ಭಗವಂತನ ಸ್ವರೂಪವು ತುಂಬಿರುವುದೆಂಬುದನ್ನು ಯಾವ ಅನುಭವ ಪೂರ್ವಕವಾಗಿ ಕಾಣಲು, ಅವರಿಗೆ ಸಂಪೂರ್ಣ ಸಾಂಖ್ಯಯೋಗವು ಹಸ್ತಗತವಾಗುವುದು ॥೬೦೩॥

ಅಥವಾ ಕರ್ಮಾಚರಣೆಗಳು ಆಗುತ್ತಿದ್ದಂತೆ ಸುಖವಾಗಿ ಆಗುತ್ತಿರಲಿ, ಆದರೆ ಅವುಗಳಲ್ಲಿ ನಾನು ಕರ್ತನು ಎಂಬ ಅಭಿಮಾನವನ್ನು ಇಡಬೇಡ.

ತೇಥ ಜಡಲಾ ಉದ್ಧವಾಚಾ ಭಾವೋ । ನಿಃಶೇಷ "ಅಹಂ" ಸಾಂಡಿತಾ ಪಹಾ ಹೋ । ಬ್ರಹ್ಮಸ್ವಯೇ ಮೇವೋ ಸಹಜಚಿ ॥೬೦೭॥ ವಿಚಾರಿತಾ ಸಾಂಖ್ಯಜ್ಞಾನ । ಜಗಾತೇ ಗೋವೀ ಅಹಂಪಣ । ಅಹಂಪಾಶೀ ಜನ್ಮಮರಣ । ದುಃಖ ದಾರುಣ ಅಹಂಭಾವೀ ॥೬೦೮॥ ಐಸಾ ಅಹಂಭಾವೋ ಕಠಿಣ । ಸಾಂಡಿತಾ ನ ಸಾಂಡೇ ಆಪಣ । ಯೇಚಿ ಗುತೀಂಚೇ ಕಾರಣ । ಸರ್ವಥಾ ಜಾಣ ಕಳೇನಾ ॥೬೦೯॥ ಹೇ ಪುಸೋ ಜಾವೇ ದೇವಾಪಾಶೀ । ತೇಣೇ ವಿಶದ ಸಾಂಗೀತಲೇ ಸಾಂಖ್ಯಾಸೀ । ಆತಾ ಆಪುಲೀ ಗುಂತೀ ಆಪಲ್ಯಾಪಾಶೀ । ತೇಚಿ ಆಮ್ಹಾಂಸೀ ಕಳೇನಾ ॥೬೧೦॥ ಯೇಚಿ ಅರ್ಥೀ ಶ್ರೀಕೃಷ್ಣ । ಪಂಚವಿಸಾವೇ ಅಧ್ಯಾಯೀ ಜಾಣ । ಸಗುಣ - ನಿರ್ಗುಣವಿಭಾಗೇ ಪೂರ್ಣ । ಗೋಡ ನಿರೂಪಣ ಸಾಂಗೇಲ ॥೬೧೧॥ ತೇ ಸುರಸ ರಸಾಳ ಮಧುರ ಕಥಾ । ಜೇಥ ಕೃಷ್ಣಾ ಐಸಾ ವಕ್ತಾ । ಉದ್ಧವ ಶಿರೋಮಣೀ ಶ್ರೋತಾ । ಅನುಪಮ ಸ್ವಾದುತಾ ತೇ ಠಾಯೀ ॥೬೧೨॥ ತ್ಯಾ ಸ್ವಾದಾಚೇ ಗೋಡಪಣ । ಸಾಂಗಾವಯಾ ಸಮರ್ಥ ಶ್ರೀಕೃಷ್ಣ । ಸೇವಾವಯಾ ಶ್ರೋತಾ ಅತಿಸಜ್ಞಾನ । ನಿಜ ಭಕ್ತ ಜಾಣ ಉದ್ಧವ ॥೬೧೩॥ ತೇ ದೇವಭಕ್ತಸಂವಾದಗೋಡೀ । ವೇದಶಾಸ್ತ್ರೀ ನ ಜೋಡೇ ಜೋಡೀ । ಆಲೋಡಿತಾ ಗ್ರಂಥಕೋಡೀ । ತೇ ನಿಜಗೋಡೀ ನಾತುಡೇ ॥೬೧೪॥ ಆತುಡಾವಯಾ ತೇ ನಿಜಗೋಡೀ । ಜೈ ಭಾಗ್ಯೇ ಭಾವಾರ್ಥೀ ಜೋಡೇ ಜೋಡೀ । ಭಾವಾರ್ಥಾಚೇ ನಿಜ ಆವಡೀ । ಜಿವ್ಹಾರೀಂಚೀ ಗೋಡೀ ದೇವೋ ದೇ ಭಕ್ತಾ ॥೬೧೫॥ ಏವಂ ಭಾವಾರ್ಥಾಪರತೇ ಕಾಂಹೀ । ದೇವಾಸೀ ಆವಡತೇ ನಾಹೀ । ತೋ ಭಾವೋ ನಾಹೀ ಜ್ಯಾಂಚೇ ಠಾಯೀ । ತೇ ಮೂರ್ಖ ಪಾಹೀ ಬಾಲಿಶ ॥೬೧೬॥ ತ್ಯಾ ಬಾಳಕಾಂಚಾ ಧನ್ಯ ಭಾವೋ । ಖಾಪರೇ ಮಾಂಡೂನಿ ಮ್ಹಣತೀ ದೇವೋ । ತೇಥಹೀ ಪ್ರಕಟೇ ದೇವಾಧಿದೇವೋ । ಧರಿಲ್ಯಾ ನಿಃಸಂದೇಹೋ ವಿಶ್ವಾಸ ॥೬೧೭॥

ಬಾಳಕೇ ದೂಧ ಮಾಗಾವಯಾಸಾಠೀ । ಭಾವಾರ್ಥೇ ಲಾಗಲಾ ದೇವಾಪಾಠೀ । ಕಾ ಕ್ಷೀರಾಬ್ಧೀ ಕರೂನಿ ವಾಟೀ । ಉಪಮನ್ಯೂಓಠೀ ಲಾವಿಲೀ ॥೬೧೮॥ ಏವಂ ಭಾವಿಕೂ ದೇವಾಚಾ ಲಾಹಣಾ । ದೇವೋ ಭಾವಿಕಾಂಚಾ ಆಂದಣಾ । ಭಾವೇ ವೀಣ ದೇವೋ ಜಾಣಾ । ಕಧೀ ಕೋಣಾ ನ ಭೇಟೇ ॥೬೧೯॥ ಯಾಲಾಗೀ ಜೇಥ ಭಾವಾರ್ಥ । ತೇಥಚಿ ಜೋಡೇ ಸುಖಸ್ವಾರ್ಥ । ಭಾವಾರ್ಥ ತೇಥ ಪರಮಾರ್ಥ । ಸಾಂಗ ಸಾದ್ಯಂತ ಸಾಂಪಡೇ ॥೬೨೦॥ ಐಸಾ ವಾಢವಿಲ್ಯಾ ಭಾವಾರ್ಥ

ಇದರಿಂದ ನೀನು ಪೂರ್ಣ ಬ್ರಹ್ಮನಾಗುವೆ ॥೬೦೪॥ ಹೇ ಉದ್ಧವನೇ, ಇದಕ್ಕಿಂತಲೂ ಅಧಿಕವಾಗಿರುವ ಸುಲಭ ಮಾರ್ಗವು ತೋರುತ್ತಿಲ್ಲ. ನಿನ್ನ ಸರ್ವಭಾವದ ಕಲ್ಯಾಣಕ್ಕಾಗಿ ನಾನು ಈ ಅತ್ಯಂತ ಸುಲಭ ಮಾರ್ಗವನ್ನು ತಿಳಿಸಿರುವೆನು ॥೬೦೫॥ ಈ ಯಾವ ನನ್ನ ವಚನಗಳನ್ನು ಪರಿಪೂರ್ಣವಾಗಿ ವಿಚಾರಿಸುತ್ತ ಅವಶ್ಯವಾಗಿ ಆಚರಣೆಯನ್ನು ಮಾಡಬೇಕು ॥೬೦೬॥ ಹೀಗೆ ದೇವಾಧಿದೇವನು ಹೇಳಿದ್ದಕ್ಕೆ ಉದ್ಧವನಿಗೆ ಅದರಲ್ಲಿ ನಿಶ್ಚಿತ ಭಕ್ತಿಯುಂಟಾಯಿತು. ಅಹಂಕಾರವನ್ನು ತೊಲಗಿಸಲು ಸಹಜವಾಗಿಯೇ ತಾನು ಬ್ರಹ್ಮಸ್ವರೂಪನಾಗುವನು. ಇದನ್ನು ನೀವು ತಿಳಿದುಕೊಳ್ಳಿರಿ॥೬೦೭॥ ಸಾಂಖ್ಯಯೋಗದ ವಿಚಾರವನ್ನು ಮಾಡಿ ನೋಡಿದರೆ, ಈ ಸರ್ವ ಜಗತ್ತಿಗೆ ಅಹಂಕಾರವು ನುಂಗಿರುವಂತೆ ಕಾಣುವುದು. ಕಾರಣ ಅಹಂಕಾರದಲ್ಲಿ ಜನ್ಮ-ಮರಣ ಮತ್ತು ಅತಿಶಯವಾದ ದುಃಖವಿರುವುದು ॥೬೦೮॥ ಈ ಪ್ರಕಾರವಾಗಿ ಆಹಂಕಾರವು ಬಹು ಕಠಿಣವಾಗಿರುವುದು. ಅದನ್ನು ಬಿಡಲು ಪ್ರಯತ್ನ ಮಾಡಿದರೆ ತನ್ನಷ್ಟಕ್ಕೆ ತಾನೇ ಅದು ಎಂದಿಗೂ ಬಿಡುವುದಿಲ್ಲ ಮತ್ತು ಅದರಲ್ಲಿ ಸಿಕ್ಕಿಕೊಂಡಿರುವ ಕಾರಣವೂ ಕೂಡ ತಿಳಿಯುವುದಿಲ್ಲ ॥೬೦೯॥ ಇದನ್ನು ಕೇಳಲು ಶ್ರೀಕೃಷ್ಣನಲ್ಲಿ ಹೋಗಬೇಕೆಂದರೆ ಆತನು ಈಗಾಗಲೇ ಸಾಂಖ್ಯಶಾಸ್ತ್ರವನ್ನು ಹೇಳಿರುವನು. ನಾವು ಈ ಅಹಂಕಾರದಲ್ಲಿ ಹೇಗೆ ಸಿಕ್ಕಿಕೊಂಡಿರುವೆವೋ, ಎಂಬುವುದು ಅದು ಯಾವುದೂ ನಮಗೆ ತೋಚುತ್ತಿಲ್ಲ ॥೬೧೦॥ ಈ ವಿಷಯವನ್ನು ಕುರಿತು ಕೃಪಾಸಾಗರನಾದ ಶ್ರೀಕೃಷ್ಣನು ಇಪ್ಪತ್ತೈದನೆಯ ಅಧ್ಯಾಯದಲ್ಲಿ ಸಗುಣನಿರ್ಗುಣದ ಅಮೃತಮಧುರ ನಿರೂಪಣೆಯನ್ನು ಮಾಡುವನು ॥೬೧೧॥ ಈ ಯಾವ ಕಥೆಯು ಸುರಸ, ರಸಾಳ ಮತ್ತು ಮಧುರವಾಗಿರುವುದು. ಶ್ರೀಕೃಷ್ಣನಂತಹ ವಕ್ತಾ ಮತ್ತು ಉದ್ಧವನಂತಹ ಶ್ರೋತಾ ಇದ್ದ ಮೇಲೆ ನಿರೂಪಣೆಯಲ್ಲಿ ಮಾಧುರ್ಯವು ತುಂಬಿ ತುಳುಕಲೇ ಬೇಕು ॥೬೧೨॥ ಈ ಯಾವ ಸ್ವಾದದ ರುಚಿಯನ್ನು ಹೇಳಲು ಗೋಪಾಲಕೃಷ್ಣನು ಸಮರ್ಥನಾಗಿರುವನು. ಇದರ ಸೇವನೆಯನ್ನು ಮಾಡುವವ ಶ್ರೋತಾ ಭಕ್ತಶ್ರೇಷ್ಠ ಉದ್ಧವನು ಅತ್ಯಂತ ಜ್ಞಾನಸಂಪನ್ನನಾಗಿರುವನು ॥೬೧೩॥ ಈ ಯಾವ ದೇವಭಕ್ತರ ಸಂವಾದದ ರುಚಿಯು ವೇದಶಾಸ್ತ್ರಗಳಿಗೂ ಕೂಡ ಲಭಿಸುವುದಿಲ್ಲ. ಕೋಟಿಗಟ್ಟಲೇ ಗ್ರಂಥಗಳನ್ನು ಅವಲೋಕನ ಮಾಡಿದರೂ ಕೂಡ ಈ ಅಭಿರುಚಿಯು ಪ್ರಾಪ್ತವಾಗುವುದಿಲ್ಲ ॥೬೧೪॥ ಈ ಆನಂದವನ್ನು ಪ್ರಾಪ್ತಮಾಡಿಕೊಳ್ಳಬೇಕೆಂಬ ಬಯಕೆವಿದ್ದರೆ ಭಾವಾರ್ಥವನ್ನು (ಭಕ್ತಿಯನ್ನು) ಬೆಳೆಸಬೇಕಾಗುವುದು. ಕಾರಣ ಭಕ್ತಿಯ ಪ್ರೇಮದಿಂದ ದೇವನು ತನ್ನ ಅಂತಃಕರಣದಲ್ಲಿನ ಆನಂದವನ್ನು ತನ್ನ ಭಕ್ತರಿಗೆ ಅರ್ಪಿಸುತ್ತಿರುವನು ॥೬೧೫॥ ತಾತ್ಪರ್ಯವೇನೆಂದರೆ, ದೇವನಿಗೆ ಭಕ್ತಿಯ ಹೊರತಾಗಿ ಅನ್ಯ ಯಾವುದೂ ಕೂಡ ಪ್ರಿಯವಾಗುವುದಿಲ್ಲ. ಆ ಪ್ರೇಮಭಾವವು ಯಾರಲ್ಲಿ ಇರುವುದಿಲ್ಲವೋ, ಅವನೇ ಮೂರ್ಖನಾಗಿರುವನು॥೬೧೬॥ ಚಿಕ್ಕ ಬಾಲಕರು ಮಣ್ಣಿನ ಮಡಿಕೆಗಳನ್ನು ಮಂಡಿಸಿ ಅವರಿಗೆ ದೇವರೆಂದು ಕರೆಯುವರು. ಈ ಬಾಲಕರ ಭಕ್ತಿಯೂ ಕೂಡ ಮಹಾ ಧನ್ಯವಾಗಿರುವುದು. ಅಲ್ಲಿಯೂ ಕೂಡ ಸಂಶಯವಿಲ್ಲದೇ ವಿಶ್ವಾಸವನ್ನಿಡಲು ದೇವಾದಿದೇವನು ಪ್ರಕಟನಾಗುವನು ॥೬೧೭॥ ಉಪಮನ್ಯೂಬಾಲಕನು ಹಾಲನ್ನು ಬೇಡುವುದಕ್ಕಾಗಿ ಭಕ್ತಿಭಾವದಿಂದ ದೇವರ ಬೆನ್ನಿಗೆ ಹತ್ತಿದನು. ಆಗ ದೇವನು ಹಾಲಿನ ಸಮುದ್ರವನ್ನು

।ತೇಣೇ ಜೋಡೇ ನಿರ್ಗುಣ ನಿಜಸ್ವಾರ್ಥ ।ತೇಚಿ ಅರ್ಥೀಚಾ ವೃತ್ತಾಂತ । ಪುಢಿಲ್ಯಾ ಅಧ್ಯಾಯಾತ ಹರಿ ಸಾಂಗೇ ॥೬೨೧॥ ತೇ ಕಥೇಚೇ ಗೋಡಪಣ । ಅಮೃತಾಸ ವಿಸರವೀ ಜಾಣ । ಐಸೇ ರಸಾಳ ನಿರೂಪಣ । ಸಾದರೇ ಶ್ರೀಕೃಷ್ಣ ಸಾಂಗೇಲ ॥೬೨೨॥ ತೇ ಶ್ರೀಕೃಷ್ಣಕಥಾಪೀಯೂಖ । ಶ್ರೋತ್ಯಾಚೇ ಪಾವೇ ಶ್ರವಣ ಸುಖ । ಏಕಾ ಜನಾರ್ದನೀ ಅತಿಸುಖ । ಸಕೌತುಕ ವ್ಯಾಖ್ಯಾನ ॥೬೨೩॥ ಶ್ರೀ ಭಾಗವತ ಅತ್ಯಾದರೇ । ಶ್ರೀಕೃಷ್ಣಕಥಾ ಸವಿಸ್ತರೇ । ಅಹೇರ ವಿಸ್ತಾರಿಲೇ ಸಾಜಿರೇ । ಪರಮಾರ್ಥಅಳಂಕಾರೇ ಸಾಳಂಕೃತ ॥೬೨೪॥ ತೇಣೇ ಸಂತ ಸಜ್ಜನ ಸೋಯರೇ । ಗೌರವೀನ ಶ್ರವಣಾದರೇ । ಏಕಾ ಜನಾರ್ದನಕೃಪಾಕರೇ । ಆವಿಷ್ಕಾರೇ ಸಾಮರ್ಥ್ಯ ॥೬೨೫॥ ಗೌರವಿಲೇ ಸೋಯರೇ ಸಜ್ಜನ । ಮ್ಹಣಾಲ ಉಪೇಕ್ಷಿಲೇ ಇತರ ಜನ । ಜೋ ಶ್ರೀಭಾಗವತೀ ಸಾವಧಾನ । ತೋ ಪರಮಾರ್ಥೀ ಜಾಣ ಗೌರವೇ ॥೬೨೬॥ ಭಾವಾರ್ಥಸಾರಿಖೇ ಗೌರವಣ । ಏಕಾ ಜನಾರ್ದನ ಜಾಣೇ ಜಾಣ । ಏಕಾ ಜನಾರ್ದನಾ ಶರಣ । ಆಪಣ್ಯಾ ಆಪಣ ಗೌರವೀ ॥೬೨೭॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂದೇ ಶ್ರೀಕೃಷ್ಣೋದ್ಧವಸಂವಾದೇ ಏಕಾಕಾರಟೀಕಾಯಾಂ ಪ್ರಕೃತಿಪುರುಷಸಾಂಖ್ಯಯೋಗೋ ನಾಮ ಚತುರ್ವಿಂಶತಿತಮೋಽಧ್ಯಾಯಃ ॥೨೪॥

॥ಶ್ರೀಕೃಷ್ಣಾರ್ಪಣಮಸ್ತು ॥

ಮಾಡಿ ಅದೇ ಬಟ್ಟಲವನ್ನು ಉಪಮನ್ಯುವಿನ ಮುಖಕ್ಕೆ ಹಚ್ಚಿದನು ॥೬೧೮॥ ಈ ಪ್ರಕಾರವಾಗಿ ದೇವನು ಭಾವಿಕರ ಭಾವಕ್ಕೆ ಪ್ರಾಪ್ತನು. ಹೀಗೆ ಭಾವಿಕರು ಆತನ ಅತ್ಯಂತ ಪ್ರಿಯರಾಗಿರುವರು. ಭಾವವಿಲ್ಲದೇ ದೇವನು ಯಾರಿಗೂ ಎಂದಿಗೂ ಭೇಟಿಯಾಗಲಾರನು ॥೬೧೯॥ ಆದ್ದರಿಂದ ಎಲ್ಲಿ ಭಾವಭಕ್ತಿ ಇರುವುದೋ, ಅಲ್ಲಿ ಸುಖದ ಲಾಭವಾಗುತ್ತಿರುವುದು. ಈ ಭಾವಾರ್ಥವು ಇದ್ದಲ್ಲಿಯೇ ಪರಮಾರ್ಥವು ಪರಿಪೂರ್ಣವಾಗಿ ಇರುವುದು ॥೬೨೦॥ ಈ ಪ್ರಕಾರವಾಗಿ ಭಕ್ತಿಭಾವವನ್ನು ಬೆಳೆಸಿದರೆ ಮಾತ್ರ ಈ ಯೋಗದಿಂದ ನಿರ್ಗುಣಪ್ರಾಪ್ತಿಯ ಅಪೇಕ್ಷೆಯು ತೃಪ್ತವಾಗುವುದು. ಈ ವಿಷಯದ ವೃತ್ತಾಂತವನ್ನು ಶ್ರೀಹರಿಯು ಮುಂದಿನ ಅಧ್ಯಾಯದಲ್ಲಿ ಹೇಳುವನು ॥೬೨೧॥ ಈ ಯಾವ ಕಥೆಯ ರುಚಿಯು ಅಮೃತವನ್ನೂ ಕೂಡ ಮರೆಯಿಸುವುದು. ಇಂತಹ ರಸಭರಿತ ನಿರೂಪಣೆಯನ್ನು ಶ್ರೀಕೃಷ್ಣನು ಆದರದಿಂದ ಮಾಡುತ್ತಿರುವನು ॥೬೨೨॥ ಈ ಯಾವ ಶ್ರೀಕೃಷ್ಣನ ಕಥಾರೂಪ ಅಮೃತವು ಶ್ರೋತೃಗಳ ಶ್ರವಣರೂಪ ಮುಖದಲ್ಲಿ ಬೀಳುವುದು. ಏಕನಾಥರೂಪ ಜನಾರ್ದನಸ್ವಾಮಿಯವರಿಗೂ ಕೂಡ ಅತಿಶಯ ಆನಂದವಾಗಿ ಆತನು ದೊಡ್ಡ ಕೌತುಕದಿಂದ ಅದರ ನಿರೂಪಣೆಯನ್ನು ಮಾಡುವನು ॥೬೨೩॥ ಶ್ರೀ ಭಾಗವತವು ಬಹು ಆದರದಿಂದ ಶ್ರೀಕೃಷ್ಣ ಕಥಾವಿಸ್ತಾರದ ಸುಂದರವಾದ ಉಡುಗೊರೆಯನ್ನು ಕೊಟ್ಟಿರುವುದು. ಪರಮಾರ್ಥರೂಪ ಅಲಂಕಾರಗಳಿಂದ ಅದು ಸುಶೋಭಿತವನ್ನಾಗಿ ಮಾಡಿರುವುದು ॥೬೨೪॥ ಈ ಯಾವ ಉಡುಗೊರೆಯನ್ನು ಶ್ರವಣ ವಿಷಯದಲ್ಲಿ ಆದರ ಉತ್ಪನ್ನಗೊಳಿಸಿ ನಾನು ನನ್ನ ಆಪ್ತರಾದ ಯಾವ ಸಂತ ಸಜ್ಜನರ ಗೌರವವನ್ನು ಮಾಡುವೆನು. ಜನಾರ್ದನಸ್ವಾಮಿಯವರು ಕೃಪೆ ಮಾಡಿರುವುದರಿಂದ ಇಷ್ಟೊಂದು ಸಾಮರ್ಥ್ಯವು ಪ್ರಕಟವಾಗಿರುವುದು ॥೬೨೫॥ ಆಪ್ತ-ಸಜ್ಜನ, ಸಂತರ ಗೌರವ ಮಾಡಿದನು ಮತ್ತು ಇತರರ ಉಪೇಕ್ಷೆ ಮಾಡಿದನು ಎಂದು ಹೀಗೆ ಹೇಳಬಹುದು. ಆದರೆ ಹಾಗೆ ಮಾಡಿರುವುದಿಲ್ಲ. ಯಾರು ಭಾಗವತವನ್ನು ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡುವರೋ ಅವರನ್ನು ಪರಮಾರ್ಥದಿಂದ ಗೌರವವಾಗುವುದು ॥೬೨೬। ನಿಜವಾಗಿಯೂ ಭಾವಭಕ್ತಿಯೇ ಮುಖ್ಯವಾದ ಗೌರವವಾಗಿರುವುದು. ಇದನ್ನೇ ಏಕನಾಥರೂಪ ಜನಾರ್ದನರು ತಿಳಿದುಕೊಂಡಿರುವರು. ಆದ್ದರಿಂದ ಏಕನಾಥನು ಜನಾರ್ದನರಿಗೆ ಶರಣಾಗಿ ತಾನೇ ತನಗೆ ಗೌರವಿಸಿದನು ॥೬೨೭॥

ಇತಿ ಶ್ರೀಭಾಗವತದ ಮಹಾಪುರಾಣವಾದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜರ ಟೀಕೆಯಾದ ಪ್ರಕೃತಿ ಪುರುಷಸಾಂಖ್ಯಯೋಗ ನಾಮದ ಇಪ್ಪತ್ತಾಲ್ಕನೆಯ ಅಧ್ಯಾಯವು ಸಂಪೂರ್ಣವು.

॥ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀ ಏಕನಾಥೀ ಭಾಗವತ

ಇಪ್ಪತ್ತೈದನೆಯ ಅಧ್ಯಾಯ

॥ ಶ್ರೀ ಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ದೇವ ನಿರ್ಗುಣ । ಮ್ಹಣೋ ಪಾಹೇ ತಂವ ನ ದೇಖೇ ಗುಣ । ಗುಣೇವೀಣ ನಿರ್ಗುಣಪಣ । ಸರ್ವಥಾ ಜಾಣ ಘಡೇನಾ ॥೧॥ ಸರ್ವಥಾ ನ ಘಡೇ ನಿರ್ಗುಣಪಣ । ತರೀ ಘಡೋ ನೇದಿಶೀ ಸಗುಣಪಣ । ನಾತಳಶೀ ಗುಣಾಗುಣ । ಅಗುಣಾಚಾ ಪೂರ್ಣ ಗುರುರಾಯಾ ॥೨॥ ಅಗುಣಾಚ್ಯಾ ವಿಪರೀತ ತೂ ಗುಣೀ । ಕರಿಸೀ ತ್ರಿಗುಣಗುಣಾ ಝಾಡಣೀ । ಪಂಚಭೂತಾಪಾಸೂನೀ । ಸೋಡವಿತಾ ಜನೀ ಜನಾರ್ದನೂ ॥೩॥ ಜ್ಯಾಚೇನಿ ಜನಾಂಸೀ ಅರ್ದನ । ಜ್ಯಾಚೇನಿ ಲಿಂಗದೇಹಾ ಮರ್ದನ । ಜೋ ಜೀವಾಸೀ ಜೀವೇ ಮಾರೀ ಪೂರ್ಣ । ತೋ ಕೃಪಾಳು ಜನಾರ್ದನ ಘಡೇ ಕೇವೀ ॥೪॥ ಜನಾರ್ದನಾಚೇ ಕೃಪಾಳೂಪಣ । ಸರ್ವಥಾ ನೇಣತೀ ಜನ । ನೇಣಾವಯಾ ಹೇಚಿ ಕಾರಣ । ಜೇ ದೇಹಾಭಿಮಾನ ನ ಸಾಂಡಿತೀ ॥೫॥ ಜನನೀಜಠರೀ ಜನ್ಮ ಜಾಣ । ತ್ಯಾ ಜನ್ಮಾಸ್ತವ ಮ್ಹಣತೀ ಜನ । ತ್ಯಾ ಜನಜನ್ಮಾ ಕರೀ ಮರ್ದನ । ಯಾಲಾಗೀ ಜನಾರ್ದನ ನಾಮ ತ್ಯಾಸೀ ॥೬॥ ಮರಣ ಮಾರೂನಿ ವಾಢವೀ ಜಿಣೇ । ಜೀವ ಮಾರೂನಿ ಜೀವಪಣೇ । ದೇಹೀ ನಾಂದವೀ ವಿದೇಹಪಣೇ । ಐಶೀ ಜನಾರ್ದನೇ ಕೃಪಾ ಕೀಜೇ ॥೭॥ ನಿಜಭಾವಾರ್ಥೇ ಪರಿಪೂರ್ಣ । ಏಕಾಕೀ ದೇಖೋನಿಯಾ ದೀನ । ಕೃಪಾ ಕರೀ ಜನಾರ್ದನ । ಕೃಪಾಳು ಪೂರ್ಣ ದೀನಾಂಚಾ ॥೮॥ ಜೇ ಜೇ ಭಾವನಾ ಭಾವೀ ಜನ । ತೇ ತೇ ಪುರವೀ ಜನಾರ್ದನ । ಜೋ ಮಾಗೇ ಪರಮ ಸಮಾಧಾನ । ತ್ಯಾಚಾ ದೇಹಾಭಿಮಾನ ನಿರ್ದಳೀ ॥೯॥ ಹೋ ಕಾ ಜನಾರ್ದನಾ ಸಮೋರ । ಕೈ ಆಲಾ ಹೋತಾ ಅಹಂಕಾರ । ಮಾ ತೇಣೇ ಘೇಊನಿಯಾ ಶಸ್ತ್ರ । ಕರೀ ಶತಚೂರ ನಿಜಾಂಗೇ ॥೧೦॥ ಜೇವೀ ಸೂರ್ಯಾಚೇನಿ ಉಜಿಯೇಡೇ । ಅಂಧಾರೇಸೀ ರಾತ್ರೀ ಉಡೇ । ತೇವೀ ಜನಾರ್ದನ ನಾಮಾಪುಢೇ । ಅಹಂಕಾರ ಬಾಪುಡೇ ಉರೇ ಕೇವೀ ॥೧೧॥

ಹೇ, ಓಂಕಾರಸ್ವರೂಪನಾದ ನಿರ್ಗುಣದೇವನೇ, ನಿನಗೆ ನನ್ನ ಸಾಷ್ಟಾಂಗ ನಮಸ್ಕಾರಗಳು. ಹೀಗೆ ಹೇಳಬೇಕೆಂದರೆ ಯಾವ ಗುಣವೂ ಎಲ್ಲಿಯೂ ದೃಷ್ಟಿಗೆ ಬೀಳುತ್ತಿಲ್ಲ ಮತ್ತು ಗುಣವಿಲ್ಲದೇ ನಿರ್ಗುಣತ್ವವು ಎಂದಿಗೂ ಸಂಭವಿಸುವುದಿಲ್ಲ ॥೧॥ ಈ ಪ್ರಕಾರವಾಗಿ ನಿರ್ಗುಣತ್ವವು ಸಂಭವಿಸುವುದಿಲ್ಲ ಮತ್ತು ಸಗುಣತ್ವವನ್ನೂ ಕೂಡ ನೀನು ಅಂಗಕ್ಕೆ ಹಚ್ಚಿಕೊಳ್ಳುವುದಿಲ್ಲ. ಈ ಪ್ರಕಾರವಾಗಿ ನೀನು ಸಗುಣ, ನಿರ್ಗುಣಗಳಿಗೆ ಸ್ಪರ್ಶ ಮಾಡುವುದಿಲ್ಲ. ಆದ್ದರಿಂದ ಹೇ ಗುರುರಾಯನೇ, ನೀನು ಪೂರ್ಣ ಅಗುಣನಾಗಿರುವೆ ॥೨॥ ಅವಗುಣಗಳ ವಿರುದ್ಧವಾಗಿರುವ ಯಾವ ಸದ್ಗುಣಗಳಿಂದ ನೀನು ಯುಕ್ತನಾಗಿರುವೆ. ಆದರೆ ಸತ್ವ, ರಜ, ತಮಾದಿ ಗುಣಗಳನ್ನು ನಾಶಮಾಡಿಬಿಡುವೆ. ನಿಜವಾಗಿಯೂ ಪಂಚಮಹಾಭೂತಗಳಿಂದ ಬಿಡಿಸುವವ ನೀನೊಬ್ಬ ಜನಾರ್ದನನಾಗಿರುವೆ ॥೩॥ ಯಾರ ಯೋಗದಿಂದ ದುಷ್ಟಜನರ ಸಂಹಾರವಾಗುವುದು, ಯಾರ ಯೋಗದಿಂದ ಲಿಂಗದೇಹದ ನಾಶವಾಗುವುದು. ಯಾವ ಜೀವತ್ವಕ್ಕೆ ಜೀವದಿಂದಲೇ ಪೂರ್ಣವಾಗಿ ಕೊಲ್ಲುವನು. ಹೀಗಿರುವ ಜನಾರ್ದನನು ಕೃಪಾವಂತ ಹೇಗಾಗುವನು? ॥೪॥ ಆದರೆ ಜನಾರ್ದನ ಕೃಪಾವಂತಿಕೆಯನ್ನು ಜನರು ಸ್ವಲ್ಪವೂ ತಿಳಿಯಲಾರರು. ತಿಳಿಯಲಾರದ ಕಾರಣವೇನೆಂದರೆ ಇವರು ತಮ್ಮ ದೇಹಾಭಿಮಾನವನ್ನು ಬಿಟ್ಟುಕೊಡಲಾರರು ॥೫॥ ಮನುಷ್ಯನು ಜನನಿಯ ಜಠರದಲ್ಲಿ ಜನ್ಮವನ್ನು ಪಡೆಯುವನು. ಆದ್ದರಿಂದ ಆತನಿಗೆ "ಜನ" ಎಂದು ಹೇಳುವರು. ಈ ಯಾವ ಜನ್ಮದ ನಾಶವನ್ನು ಮಾಡುವವನಾಗಿದ್ದರಿಂದ ಈತನಿಗೆ ಜನಾರ್ದನ ಎಂದು ನಾಮವಿರುವುದು ॥೬॥ ನೀನು ಮರಣಕ್ಕೆ ಕೊಂದು ಜೀವನವನ್ನು ಬೆಳೆಸುವೆ, ಜೀವಕ್ಕೆ ಸಾಯಿಸಿ ಜೀವಂತವಿಡುವೆ, ದೇಹದಲ್ಲಿಯೇ ವಿದೇಹತ್ವದೊಂದಿಗೆ ವರ್ತಿಸಲು ಹಚ್ಚುವೆ, ಹೀಗೆ ಜನಾರ್ದನರು ಕೃಪೆದೋರಬೇಕು ॥೭॥ ಭಕ್ತಿಯಿಂದ ಪರಿಪೂರ್ಣ ಮತ್ತು ಒಬ್ಬನೇ ಒಬ್ಬನಾಗಿರುವುದರಿಂದ, ದೀನನಾಗಿರುವ ಇಂತಹ ಭಕ್ತನನ್ನು ಕಾಣುತ್ತಲೇ ದೀನದಯಾಳ ಜನಾರ್ದನರು ಕೃಪೆಯನ್ನು ಮಾಡುವರು ॥೮॥ ಭಾವಿಕ ಜನರ ಯಾವ ಯಾವ ಇಚ್ಛೆವಿರುವುದೋ, ಅವೆಲ್ಲವನ್ನೂ ಜನಾರ್ದನರು ಪೂರ್ಣ ಮಾಡುವರು. ಯಾರು ತಮಗೆ ಪರಮ ಸಮಾಧಾನವನ್ನು ಬೇಕೆನ್ನುವರೋ, ಅವರ ದೇಹಾಭಿಮಾನವನ್ನು ಇಲ್ಲದಂತೆ ಮಾಡುವರು ॥೯॥ ಒಂದುವೇಳೆ ಜನಾರ್ದನರ ಎದುರಿನಲ್ಲಿ ಅಹಂಕಾರವು ಬಂದಿತೆಂದರೆ ಇವರು ಕೈಯಲ್ಲಿ ಶಸ್ತ್ರವನ್ನು ಹಿಡಿದು ಅದರ ಶತಚೂರ ಮಾಡುವರು ॥೧೦॥ ಯಾವ ಪ್ರಕಾರವಾಗಿ ಸೂರ್ಯನ ಉದಯವಾಗುತ್ತಲೇ ಅಂಧಃಕಾರಸಮೇತವಾಗಿ ರಾತ್ರಿಯು ಹೊರಟು ಹೋಗುವುದೋ, ಅದೇ ಪ್ರಕಾರವಾಗಿ ಜನಾರ್ದನರ ನಾಮದ ಎದುರಿನಲ್ಲಿ ಅಹಂಕಾರದ ಅಂಧಃಕಾರವು ಉಳಿಯುವುದೇ ಇಲ್ಲ ॥೧೧॥

ಐಕತಾ ಗುರುನಾಮಾಚಾ ಗಜರೂ । ಸಮೂಳ ವಿರೇ ಅಹಂಕಾರೂ । ಯೇಥೇ ದುಃಖದಾಯಕ ಸಂಸಾರೂ । ಕೈಸೇನಿ ಧೀರೂ ಧರೀಲ ॥೧೨॥ ಜ್ಯಾಚೇ ನಾಮ ಸ್ಮರತಾ ಆವಡೀ । ಸಂಸಾರ ಬಾಂದವಡೀ ಫೋಡೀ । ಜೀವಾಚೇ ಜೀವಬಂಧ ಸೋಡೀ । ನಾಮಾಚೀ ಗೋಡೀ ಲಾಜವೀ ಮೋಕ್ಷಾ ॥೧೩॥ ನಿಜಮೋಕ್ಷಾ ಹೀ ವರತೇ । ಜ್ಯಾಚೇ ನಾಮ ಕರೀ ಸರತೇ । ತ್ಯಾಚ್ಯಾ ಕೃಪಾಳೂಪಣಾತೇ । ಕೇವಿ ಮ್ಯಾ ಯೇಥೇ ಸಾಂಗಾವೇ ॥೧೪॥ ನಾಮಪ್ರತಾಪಾ ನ ಕರವೇ ಸೀಮಾ । ತ್ಯಾ ಸದ್ಗುರೂಚಾ ನಿಜಮಹಿಮಾ । ಕೈಶಾಪರೀ ಆಕಳೇ ಆಮ್ಹಾ । ಕಾಯ ನಿರುಪಮಾ ಉಪಮಾವೇ ॥೧೫॥ ಅಗಾಧ ಕೀರ್ತಿ ಗುರೂಚೀ ಗಹನ । ಗುಣ ಗಣಿತಾ ಅನಂತಗುಣ । ಕಾಯ ಘ್ಯಾವೇ ತ್ಯಾಚೇ ಆಪಣ । ನಿತ್ಯ ನಿರ್ಗುಣ ನಿಜಾಂಗೇ ॥೧೬॥ ಧಾಂವ ಘೇಊನಿ ತ್ಯಾಪೇ ಜಾವೋ । ತಂವ ತ್ಯಾ ನಾಹೀ ಗಾಂವಠಾವೋ । ತ್ಯಾಚೇ ಪ್ರಾಪ್ತೀಸೀ ನ ಚಲೇ ಉಪಾವೋ । ಏಕ ಸದ್ಭಾವೋ ವಾಂಚೂನೀ ॥೧೭॥ ಸದ್ಭಾವೇ ಸ್ಮರತಾ ನಾಮಾಸೀ । ಗುರು ಪ್ರಕಟೇ ಸ್ಮರಣಾಪಾಶೀ । ಜೇವೀ ಸಾಗರೂ ಸೈಂಧವಾಸೀ । ಯೇ ಭೇಟೀಸೀ ನಿಜಾಂಗೇ ॥೧೮॥ ಸಾಗರಾ ದೇತಾ ಆಲಿಂಗನ । ಜೇವೀ ಸೈಂಧವ ಹೋಯ ಜೀವನ । ತೇವೀ ವಂದಿತಾ ಸದ್ಗುರುಚರಣ । ಮೀತೂಪಣ ಹಾರಪೇ ॥೧೯॥ ಸದ್ಗುರುಕೃಪಾ ಝಾಲಿಯಾ ಪೂರ್ಣ । ಜನಚಿ ಹೋಯ ಜನಾರ್ದನ । ತೇವ್ಹಾ ಜನ ವನ ವಿಜನ । ಭಿನ್ನಾ ಭಿನ್ನ ಭಾಸೇನಾ ॥೨೦॥ ಜನ ತೇಚಿ ಜನಾರ್ದನ । ಜನಾರ್ದನಚಿ ಸಕಳ ಜನ । ಹೇಚಿ ಉಪನಿಷತ್ಸಾರ ಪೂರ್ಣ । ಹೇ ನಿಜಖೂಣ ಜನಾರ್ದನೀ ॥೨೧॥ ಯೇಣೇಚಿ ಅಭಿನ್ನಾರ್ಥೇ ಯೇಥ । ಸಾಂಖ್ಯ ಬೋಲಿಲಾ ಭಗವಂತ । ಉತ್ಪತ್ತೀ - ಸ್ಥಿತಿ - ಪ್ರಳಯಾಂತ । ವಸ್ತು ಸದೋದಿತ ಸಂಪೂರ್ಣ ॥೨೨॥ ಸಾಂಖ್ಯ ಐಕೋನಿಯಾ ಉದ್ಧವೋ । ವಿಚಾರೀ ಆಪುಲಾ ಅಭಿಪ್ರಾವೋ । ಸಂಸಾರ ವಾಢವೀ ಜೋ ಅಹಂಭಾವೋ । ತೋ ಅವಶ್ಯ ಪಹಾ ಹೋ ಸಾಂಡಾವಾ ॥೨೩॥ ಅಹಂಕಾರ ಜಡಲಾ ಚಿತ್ತಾ । ತೋ ಸಾಂಡಿತಾ ನ ವಚೇ ಸರ್ವಥಾ । ಹೇ ಪುಸೋ ಜರೀ ಶ್ರೀಕೃಷ್ಣನಾಥಾ । ತೇಣೇ ಸಾಂಖ್ಯ ಯಾ ಅರ್ಥಾ ನಿರೂಪಿಲೇ ॥೨೪॥ ಸಕಳ ಪ್ರಾಪ್ತೀಚಾ ಅಭಿಪ್ರಾವೋ । ಸಾಂಖ್ಯ ಅನುವಾದಲಾ ದೇವೋ । ಅವಶ್ಯ ಸಾಂಡಾವಾ ಅಹಂಭಾವೋ । ಹೇಚಿ ಪಹಾ ಹೋ ದೃಢ ಕೇಲೇ ॥೨೫॥ ಮಾಝೇನಿ ಪರಾಕ್ರಮೇ ತತ್ವತಾ । ಮಾಝೇ ಮೀಪಣ ನ ವಚೇ ಸರ್ವಥಾ । ಲಾಜಿರವಾಣೇ ಕೃಷ್ಣನಾಥಾ । ಕಿತೀ ಆತಾ ಪುಸಾವೇ ॥೨೬॥

ಗುರುನಾಮದ ಗರ್ಜನೆಯನ್ನು ಕೇಳುತ್ತಲೇ ಅಹಂಕಾರವು ಪೂರ್ಣವಾಗಿ ನಾಶವಾಗುವುದು. ಗುರುಗಳ ಎದುರಿನಲ್ಲಿ ದುಃಖದಾಯಕ ಸಂಸಾರವು ಉಳಿದುಕೊಳ್ಳಲು ಹೇಗೆ ಸಾಧ್ಯ? ॥೧೨॥ ಪ್ರೇಮದಿಂದ ಗುರುನಾಮದ ಸ್ಮರಣೆಯನ್ನು ಮಾಡುವುದರಿಂದ ಸಂಸಾರದ ಬಂಧನೆಗಳು ಮುರಿದು ಬೀಳುವುವು. ಜೀವದ ಜೀವಬಂಧವು ಇಲ್ಲದಾಗುವುದು. ಗುರುನಾಮದ ಆನಂದವು ಮೋಕ್ಷ ಸುಖಕ್ಕೆ ನಾಚಿಕೆಯನ್ನು ಹುಟ್ಟಿಸುವುದು ॥೧೩॥ ಗುರುನಾಮವು ಮೋಕ್ಷಕ್ಕಿಂತಲೂ ಶ್ರೇಷ್ಠವಾದ ಪದವಿಗೆ ಮುಟ್ಟಿಸುವುದು. ಅವರ ಕೃಪಾವಂತಿಕೆಯ ವಿಷಯವಾಗಿ ನಾನು ಏನೆಂದು ವರ್ಣಿಸಲಿ? ॥೧೪॥ ಅವರ ನಾಮ ಪ್ರತಾಪಕ್ಕೆ ಸೀಮೆಯೇ ಇಲ್ಲ. ಅಂದಮೇಲೆ ಅಂತಹ ಸದ್ಗುರುಗಳ ಮಹಿಮೆಯನ್ನು ನಾವು ಹೇಗೆ ತಿಳಿದುಕೊಳ್ಳಲು ಸಾಧ್ಯ? ನಿರುಪಮರಾದ ಇವರಿಗೆ ಯಾವ ಉಪಮೆಯನ್ನು ಕೊಟ್ಟು ವರ್ಣಿಸಬೇಕು? ॥೧೫॥ ಗುರುಗಳ ಅಗಾಧ ಕೀರ್ತಿಯು ನಿಜವಾಗಿಯೂ ಗಹನವಾಗಿರುವುದು. ಅವರ ಗುಣಗಳನ್ನು ತಿಳಿಯಲು ಹೋದರೆ ಅವರು ಅನಂತರಾಗಿರುವರೆಂದು ತೋಚುವುದು. ಯಾವುದು ಸ್ವತಃ ಯಾವಾಗಲೂ ನಿರ್ಗುಣವಾಗಿರಲು ಅದರಿಂದ ನಾವೇನು ಪಡೆಯಬೇಕು? ॥೧೬॥ ಧಾವಿಸಿ ಆತನತ್ತ ಹೋಗಬೇಕೆಂದರೆ ಆತನಿಗೆ ಯಾವ ಸ್ಥಾನವಿಲ್ಲ, ಯಾವ ಊರು ಇಲ್ಲ. ಸದ್ಭಾವದ ಒಂದೇ ಒಂದು ಉಪಾಯದ ಹೊರತಾಗಿ ಆತನ ಪ್ರಾಪ್ತಿಯ ಅನ್ಯ ಮಾರ್ಗವೇ ಇರುವುದಿಲ್ಲ ॥೧೭॥ ಭಕ್ತಿಭಾವದಿಂದ ಆತನ ನಾಮಸ್ಮರಣೆಯನ್ನು ಮಾಡಲು ಆಗ ನಾಮಸ್ಮರಣೆಯ ಜೊತೆಯಲ್ಲಿಯೇ ಗುರುಗಳು ಪ್ರಕಟರಾಗುವರು. ಸಮುದ್ರವು ತಾನಾಗಿಯೇ ಲವಣಕ್ಕೆ ಭೇಟಿಯಾಗಲು ಬಂದಂತಾಗುವುದು ॥೧೮॥ ಸಮುದ್ರವು ಲವಣಕ್ಕೆ ಆಲಿಂಗನವನ್ನು ಕೊಡಲು ಆಗ ಲವಣವೆಲ್ಲವೂ ಕರಗಿ ಸಮುದ್ರದಲ್ಲಿ ಏಕರೂಪವಾಗುವುದು. ಅದರಂತೆ ಸದ್ಗುರುಗಳ ಚರಣಗಳನ್ನು ವಂದಿಸಿದರೆ ನಾನು-ನೀನು ಎಂಬುವುದು ಮರೆತು ಹೋಗುವುದು ॥೧೯॥ ಸದ್ಗುರುಗಳ ಪೂರ್ಣ ಕೃಪೆಯಾಯಿತೆಂದರೆ ಜನರೆಲ್ಲರೂ ಜನಾರ್ದನಸ್ವರೂಪರಾಗುವರು. ಆ ಸಮಯದಲ್ಲಿ ಜನ, ವನ ಅಥವಾ ವಿಜನ ಇವುಗಳಲ್ಲಿ ಭಿನ್ನ ಭಿನ್ನ ಭಾವವು ಭಾಸವಾಗಲಾರದು ॥೨೦॥ ಆದ್ದರಿಂದ ಜನರೇ ಜನಾರ್ದನರು ಮತ್ತು ಜನಾರ್ದನರೇ ಸರ್ವ ಜನರಾಗಿರುವರು. ಇದೇ ಉಪನಿಷತ್‌ಗಳಲ್ಲಿನ ಸಾರವಾಗಿರುವುದು. ಇದೇ ಜನಾರ್ದನರ ನಿಜವಾದ ಸ್ವರೂಪವಾಗಿರುವುದು ॥೨೧॥ ಇದೇ ಅಭೇದ ಭಾವದಿಂದ ಇಲ್ಲಿ ಭಗವಂತನು ಸಾಂಖ್ಯಶಾಸ್ತ್ರವನ್ನು ಹೇಳಿರುವನು. ಅದು ಹೇಗೆಂದರೆ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವು ಮೂರೂ ಅವಸ್ಥೆಗಳಲ್ಲಿ ಪರಬ್ರಹ್ಮವು ಪರಿಪೂರ್ಣವಾಗಿರುವುದು ॥೨೨॥ ಈ ಸಾಂಖ್ಯ ಮತವನ್ನು ಕೇಳಿ ಉದ್ಧವನು ತನ್ನ ಮನದಲ್ಲಿ ಹೀಗೆ ವಿಚಾರವನ್ನು ಮಾಡಲಾರಂಭಿಸಿದನು. ಅಹಂಕಾರವೇ ಸಂಸಾರವನ್ನು ಬೆಳೆಸುತ್ತಿರುವುದು. ಅದಕ್ಕಾಗಿ ಅದನ್ನು ಬಿಟ್ಟುಬಿಡಬೇಕು ॥೨೩॥ ಆದರೆ ಚಿತ್ತದಲ್ಲಿ ಅಂಟಿಕೊಂಡಿರುವ ಈ ಅಹಂಕಾರವು ಏನು ಮಾಡಿದರೂ ಬಿಡುವುದಿಲ್ಲ. ಆದ್ದರಿಂದ ಶ್ರೀಕೃಷ್ಣನಿಗೆ ಕೇಳಬೇಕೆಂದರೆ ಆತನು ಸಾಂಖ್ಯಶಾಸ್ತ್ರದ ಅರ್ಥವನ್ನು ಹೇಳಿರುವನು ॥೨೪॥ ಸರ್ವ ಪ್ರಾಪ್ತಿಯ ರಹಸ್ಯವಾಗಿರುವ ಯಾವ ಸಾಂಖ್ಯಶಾಸ್ತ್ರವನ್ನು ಭಗವಂತನು ಈಗಾಗಲೇ ನಿರೂಪಿಸಿರುವನು. ಅದರಲ್ಲಿಯೇ ಅಹಂಭಾವವನ್ನು ಬಿಟ್ಟುಬಿಡಬೇಕೆಂದು ದೃಢೀಕರಿಸಲಾಗಿರುವುದು ॥೨೫॥ ನಿಜವಾಗಿ ನೋಡಿದರೆ ನನ್ನ ಸಾಮರ್ಥ್ಯದಿಂದ ನನ್ನ ಈ ಅಹಂಕಾರವು ಮೂಲತಃ ಹೋಗಲು ಸಾಧ್ಯವಿಲ್ಲ. ಇಂತಹ ನಾಚಿಕೆಪಡುವ ಅವಸ್ಥೆಯಲ್ಲಿ ಶ್ರೀಕೃಷ್ಣನಿಗೆ ಎಷ್ಟು ಸಾರೆ ಕೇಳುತ್ತಿರಬೇಕು? ॥೨೬॥

ಐಶೀ ಉದ್ಧವಾಚೀ ಚಿಂತಾ । ಕಳೂ ಸರಲೀ ಶ್ರೀಕೃಷ್ಣನಾಥಾ । ಬಾಪ ಕೃಪಾಳು ನಿಜಭಕ್ತಾ । ಜೇಣೇ ನಿವಾರೇ ಅಹಂತಾ ತೇ ನಿಜವರ್ಮ ಸಾಂಗೇ ।೨೭॥ ಆಜಿ ಉದ್ಧವಾಚೇ ಭಾಗ್ಯ ಪೂರ್ಣ । ಜಗೀ ಉದ್ಧವಚಿ ಧನ್ಯ ಧನ್ಯ । ಜ್ಯಾಸೀ ಸಂತುಷ್ಟಲಾ ಶ್ರೀಕೃಷ್ಣ । ನ ಕರಿತಾ ಪ್ರಶ್ನ ನಿಜಗುಹ್ಯ ಸಾಂಗೇ ।೨೮॥ ಬಾಳಕ ಕಾಯ ಭೂಕ ಸಾಂಗೇ । ಮಗ ಮಾತಾ ಸ್ತನ ದೇಊ ಲಾಗೇ । ತೇ ಕಳವಳ್ಯಾಚೇ ಪಾಂಗೇ । ಧಾಂವೋನಿ ನಿಜಾಂಗೇ ಸ್ತನಪಾನಾ ಲಾವೀ ।೨೯॥ ತ್ಯಾಹೂನಿ ಅತಿ ಆಗಳಾ । ಕೃಷ್ಣೀ ಉದ್ಧವ ಕಳವಳಾ । ತೋ ಸ್ವಭಕ್ತಾಂಚೀ ಭಜನಕಳಾ । ಜಾಣೋನಿ ಜಿವ್ಹಾಳಾ ಪೋಖಿತ ।೩೦॥ ಬಾಳಕ ನೇಣೇ ಆಪುಲೀ ಚಿಂತಾ । ಪರೀ ಮಾತಾ ಪ್ರವರ್ತೇ ತ್ಯಾಚ್ಯಾ ಹಿತಾ । ತೇವೀ ಉದ್ಧವಾಚೇ ನಿಜಸ್ವಾರ್ಥಾ । ಶ್ರೀಕೃಷ್ಣನಾಥಾ ಕಳವಳಾ ।೩೧॥ ತ್ಯಾ ಉದ್ಧವಾಚೇ ಜೇ ಜೇ ನ್ಯೂನ । ತೇ ತೇ ಕರಾವಯಾ ಪರಿಪೂರ್ಣ । ಪ್ರವರ್ತಲಾಸೇ ಶ್ರೀಕೃಷ್ಣ । ತೋ ನಿಜನಿರ್ಗುಣ ಉಪದೇಶೀ ।೩೨॥ ಪಂಚವಿಸಾವೇ ಅಧ್ಯಾಯೀ ಜಾಣ । ಸಾಂಗೋನಿ ಗುಣಜಯೋಲಕ್ಷಣ । ಲಕ್ಷವೀಲ ನಿಜನಿರ್ಗುಣ। ಹೇಚಿ ನಿರೂಪಣ ನಿಜನಿಷ್ಠಾ ।೩೩॥ ಪ್ರಕೃತಿ ಪುರುಷವಿವೇಕ । ಝಾಲಿಯಾಹೀ ಬುದ್ಧಿಪೂರ್ವಕ । ಜಂವ ಗುಣಜಯೋ ನಾಹೀ ನಿಷ್ಟಂಕ । ತಂವ ವಾಢೇ ಸುಖದುಃಖ ಅಹಂಭಾವೋ ।೩೪॥ ತಿಹೀ ಗುಣಾಸ್ತವ ದೇಹ ಝಾಲಾ । ದೇಹೀ ಗುಣಜಯೋ ನ ವಚೇ ಕೇಲಾ । ಮೂಲ ಉಚ್ಛೇದೂ ಆಪುಲಾ । ನ ಕರವೇ ವಹಿಲಾ ಕೋಣಾಸೀ ।೩೫॥ ದಾಂಡಾ ಜನ್ಮಲಾ ವೃಕ್ಷಜಾತೀಸೀ । ತೋ ಮಿಳೋನಿಯಾ ಕುರ್‍ಹಾಡೀಸೀ । ಸಮೂಳ ಛೇದವೀ ವೃಕ್ಷಾಸೀ । ತೇವೀ ವಿವೇಕಾಸೀ ಸತ್ತ್ವಗುಣ ।೩೬॥ ವಿವೇಕಾ ಮೀನಲ್ಯಾ ಸತ್ತ್ವಗುಣ । ಸಮೂಳ ಉಚ್ಛೇದೀ ತಿನೀ ಗುಣ । ಸಹಜೇ ಪ್ರಕಟೇ ನಿಜನಿರ್ಗುಣ । ತೇವ್ಹಾ ಗುಣಚ್ಛೇದನ ತೇ ಮಿಥ್ಯಾ ।೩೭॥ ಸಮೂಳ ಮಿಥ್ಯಾ ತಿನೀ ಗುಣ । ನಿತ್ಯ ಸತ್ಯ ನಿಜನಿರ್ಗುಣ । ಯೇಚಿ ಅರ್ಥೀಚೇ ನಿರೂಪಣ । ಸ್ವಮುಖೇ ಶ್ರೀಕೃಷ್ಣ ಸಾಂಗತ ।೩೮॥

ಶ್ರೀಭಗವಾನುವಾಚ :-

ಗುಣಾನಾಮಸಮಿಶ್ರಾಣಾಂ ಪುಮಾನ್ಯೇನ ಭವೇತ್ । ತನ್ಮೇ ಪುರುಷವರ್ಯೇದಮುಪಧಾರಯ ಶಂಸತಃ ।೧॥

ಅರ್ಥ:- ಭಗವಾನ ಶ್ರೀಕೃಷ್ಣನು ನುಡಿದನು; ಹೇ ಉದ್ಧವಾ, ಪ್ರತಿಯೊಬ್ಬ ವ್ಯಕ್ತಿಗಳಲ್ಲಿ ಬೇರೆ ಬೇರೆ ಗುಣಗಳ ಪ್ರಕಾಶವಿರುವುದು. ಆದ್ದರಿಂದ ಪ್ರಾಣಿ ಮಾತ್ರರ ಸ್ವಭಾವದಲ್ಲಿ ಭೇದವಾಗುತ್ತಿರುವುದು. ಯಾವ ಗುಣದಿಂದ ಯಾವ ಯಾವ ಸ್ವಭಾವ ನಿರ್ಮಾಣವಾಗುವುದು ಎಂಬುದನ್ನು ವರ್ಣಿಸಿ ಹೇಳುವೆನು, ಆದಕ್ಕಾಗಿ ನೀನು ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡು.

ಈ ಯಾವ ಉದ್ಧವನ ಮನದಲ್ಲಿನ ಚಿಂತೆಯನ್ನು ಭಗವಂತನು ಅರಿತುಕೊಂಡು, ಭಕ್ತರಲ್ಲಿ ಕೃಪೆಯ ಮಳೆಗರೆಯುವ ಶ್ರೀಕೃಷ್ಣನು ಯಾವುದರಿಂದ ಅಹಂಕಾರವು ಇಲ್ಲದಾಗುವುದೋ, ಅಂತಹ ರಹಸ್ಯವನ್ನು ತಾನೇ ಹೇಳಲಾರಂಭಿಸಿದನು ।೨೭॥ ಇಂದು ಉದ್ಧವನ ಭಾಗ್ಯವು ಪೂರ್ಣವಾಗಿ ಪ್ರಕಟವಾಯಿತು. ಉದ್ಧವನು ಜಗತ್ತಿನಲ್ಲಿಯೇ ನಿಜವಾಗಿ ಧನ್ಯ ಧನ್ಯನಾಗಿರುವನು. ಶ್ರೀಕೃಷ್ಣನು ಆತನಲ್ಲಿ ಸಂತುಷ್ಟನಾಗಿ ಆತನು ಪ್ರಶ್ನೆಯನ್ನು ಮಾಡದಿದ್ದರೂ ತನ್ನ ಗುಹ್ಯಜ್ಞಾನವನ್ನು ಹೇಳಲಾರಂಭಿಸಿದನು ।೨೮॥ ಕೂಸು ತನ್ನ ತಾಯಿಗೆ ಹೊಟ್ಟೆ ಹಸಿವೆಯಾಗಿದೆ ಎಂದು ಕೇಳುವುದೇ ? ಆಗ ಆ ತಾಯಿಯು ಅದಕ್ಕೆ ಹಾಲು ಕುಡಿಸುವಳೇ ? ತಾಯಿಯು ಅಂತಃಕರಣದ ಕಳಕಳಿಯಿಂದ ಧಾವಿಸಿ ಬಂದು ಸ್ವತಃ ತನ್ನ ಕೂಸಿಗೆ ಸ್ತನಪಾನಮಾಡಿಸುವಳು ।೨೯॥ ಉದ್ಧವನ ವಿಷಯಕ್ಕಾಗಿ ಶ್ರೀಕೃಷ್ಣನ ಅಂತಃಕರಣದಲ್ಲಿ ಅದಕ್ಕಿಂತಲೂ ಅದೆಷ್ಟೋ ಹೆಚ್ಚಾದ ಕಳಕಳಿಯು ಇತ್ತು. ಕಾರಣ ತನ್ನ ಭಕ್ತನ ಭಕ್ತಿಯ ಮಹಿಮೆಯನ್ನು ತಿಳಿದು ಆತನ ಅಂತಃಕರಣವು ಅತಿಶಯವಾಗಿ ಕಳವಳಿಸುತ್ತಿರುವುದು ।೩೦॥ ಕೂಸು ತನ್ನ ಚಿಂತೆಯನ್ನು ಮಾಡುವುದಿಲ್ಲ. ತಾಯಿಯೇ ಅದರ ಹಿತಕ್ಕಾಗಿ ಪ್ರವೃತ್ತಳಾಗುವಳು. ಅದರಂತೆಯೇ ಉದ್ಧವನ ಉದ್ದೇಶವನ್ನು ಸಫಲವನ್ನಾಗಿ ಮಾಡಲು ಶ್ರೀಕೃಷ್ಣನಿಗೆ ಕಳವಳ ಉಂಟಾಯಿತು ।೩೧॥ ಉದ್ಧವನ ಯಾವ ಯಾವ ನ್ಯೂನತೆವಿತ್ತೋ, ಅದೆಲ್ಲವನ್ನೂ ತನ್ನ ನಿರ್ಗುಣ ಸ್ವರೂಪದ ಉಪದೇಶವನ್ನು ಮಾಡಿ ಪೂರ್ಣಗೊಳಿಸಲು ಶ್ರೀಕೃಷ್ಣನು ಪ್ರವೃತ್ತನಾದನು ।೩೨॥ ಈ ಯಾವ ಇಪ್ಪತ್ತೈದನೆಯ ಅಧ್ಯಾಯದಲ್ಲಿ ಗುಣಗಳೊಂದಿಗೆ ವಿಜಯವನ್ನು ಸಾಧಿಸುವ ಲಕ್ಷಣಗಳನ್ನು ಹೇಳಿ ತನ್ನ ನಿರ್ಗುಣತ್ವವನ್ನು ತೋರಿಸಿಕೊಡುವನು. ಇದು ಏಕನಿಷ್ಠೆಯ ನಿರೂಪಣೆಯಾಗಿರುವುದು ।೩೩॥ ಪ್ರಕೃತಿ-ಪುರುಷರ ವಿಚಾರವು ಬುದ್ಧಿಪೂರ್ವಕವಾಗಿ ಮಾಡಿದರೂ ಕೂಡ ಎಲ್ಲಿಯವರೆಗೆ ಗುಣಗಳೊಂದಿಗೆ ವಿಜಯವನ್ನು ಸಾಧಿಸುವುದಿಲ್ಲವೋ, ಅಲ್ಲಿಯವರೆಗೆ ಸುಖದುಃಖದ ಅಹಂಕಾರವು ಇದು ಬೆಳೆಯುತ್ತಲೇ ಸಾಗುವುದು ।೩೪॥ ಮೂರು ಗುಣಗಳಿಂದ ದೇಹವು ಸಿದ್ಧಗೊಂಡಿರುವುದು. ಅಂದಮೇಲೆ ಆ ದೇಹದಿಂದ ಗುಣಗಳನ್ನು ಜಯಿಸಲು ಶಕ್ಯವೇ ಇಲ್ಲ. ಕಾರಣ ತನ್ನ ಬೇರನ್ನು ತಾನೇ ಯಾರೂ ಕತ್ತರಿಸಲಾರರು ।೩೫॥ ಕೊಡಲಿಯ ಕಾವು ಮೂಲತಃ ವೃಕ್ಷದಿಂದಲೇ ಸಿದ್ಧಗೊಂಡಿರುವುದು. ಅದು ಕೊಡಲಿಗೆ ಸಹಾಯವನ್ನು ಮಾಡಿ ಸಂಪೂರ್ಣ ವೃಕ್ಷದ ಬೇರು ಸಮೇತವಾಗಿ ಛೇದವನ್ನು ಮಾಡುವುದು. ಅದರಂತೆ ವಿವೇಕಕ್ಕೆ ಸತ್ವಗುಣವು ಕೂಡಿಕೊಳ್ಳುವುದು ।೩೬॥ ವಿವೇಕಕ್ಕೆ ಸತ್ವಗುಣವು ಕೂಡಿಕೊಂಡರೆ ಅದು ಮೂರು ಗುಣಗಳನ್ನು ಬೇರು ಸಮೇತವಾಗಿ ನಾಶಮಾಡುವುದು. ಆದ್ದರಿಂದ ಮೂಲದಲ್ಲಿರುವ ನಿರ್ಗುಣತ್ವವು ತನ್ನಷ್ಟಕ್ಕೆ ತಾನೇ ಪ್ರಕಟವಾಗುವುದು. ಆಗ ಗುಣಗಳನ್ನು ಛೇದಿಸುವುದು ಇದೂ ಕೂಡ ಮಿಥ್ಯೆಯೇ ಆಗುವುದು ।೩೭॥ ಮೂರು ಗುಣಗಳು ಇವು ಮೊದಲೇ ಮಿಥ್ಯೆಯಾಗಿರುವುವು ಮತ್ತು ನಿರ್ಗುಣವು ಇದು ಮಾತ್ರ ನಿತ್ಯ ಮತ್ತು ಸತ್ಯವಾಗಿರುವುದು. ಈ ಅರ್ಥದ ನಿರೂಪಣೆಯನ್ನು ಸ್ವತಃ ಶ್ರೀಕೃಷ್ಣನು ತನ್ನ ಮುಖದಿಂದ ಮಾಡುತ್ತಿರುವನು ।೩೮॥

ಜ್ಯಾಚೇನಿ ಚರಣೇ ಪವಿತ್ರ ಕ್ಷಿತೀ। ನಾಮೇ ಉದ್ಧರೇ ತ್ರಿಜಗತೀ। ಜ್ಯಾಚೀ ಐಕತಾ ಗುಣಕೀರ್ತೀ। ಕ್ಷಯೋ ಪಾವತೀ ಮಹಾಪಾಪೇ॥೪೯॥ ಜ್ಯಾಚೇ ಮೃದು ಮಧುರ ಅವೀಟ ನಾಮ। ಉಚ್ಚಾರಿತಾ ನಿವವೀ ಪರಮ। ತೋ ಉದ್ಧವಾಸೀ ಪುರುಷೋತ್ತಮ। ಆವಡೀ ಪರಮ ಬೋಲತ ॥೫೦॥ ಸತ್ತ್ವ ರಜ ತಮ ತಿನೀ ಗುಣ। ನ ಮಿಸಳತಾ ಭಿನ್ನ ಭಿನ್ನ। ಪುರುಷಾಸೀ ಏಕೈಕ ಗುಣ। ಉಪಜವೀ ಚಿನ್ಹ ತೇ ಐಕಾ ॥೫೧॥ ನಿಃಸಂದೇಹ ಸಾವಧಾನ। ನಿರ್ವಿಕಲ್ಪ ಕರೂನಿ ಮನ। ಐಕತಾ ಮಾಝೇ ವಚನ। ಪುರುಷೋತ್ತಮ ಪೂರ್ಣ ಹೋಈಜೇ ಸ್ವಯೇ ॥೫೨॥ ಮಾಝೇ ಸ್ವರೂಪೀ ಸದ್ಭಾವತಾ। ತೇ ಪುರುಷಾಚೀ ಉತ್ತಮಾವಸ್ಥಾ। ಮಾಝೇ ವಚನೀ ವಿಶ್ವಾಸತಾ। ಪುರಷೋತ್ತಮತಾ ಘರ ರಿಘೇ ॥೫೩॥ ಐಶೀ ಉತ್ತಮಾ ಅತಿ ಉತ್ತಮ। ನಿರ್ಗುಣ ಪದವೀ ನಿರುಪಮ। ತುಜ ಮೀ ಅರ್ಪಿತಸೇ ಪುರುಷೋತ್ತಮ। ಮಾಝೇ ವಚನ ಪರಮ ವಿಶ್ವಾಸಲ್ಯಾ ॥೫೪॥ ಭಕ್ತಿಭಾವಾರ್ಥೇ ಪರಮ ಶ್ರೇಷ್ಠ। ವಚನವಿಶ್ವಾಸೀ ಅತಿವರಿಷ್ಠ। ಯಾಲಾಗೀ ಉದ್ಧವಾಸೀ ಪುರುಷ ಶ್ರೇಷ್ಠ। ಸ್ವಮುಖೇ ವೈಕುಂಠ ಸಂಬೋಧೀ ॥೫೫॥ ಸಂಸಾರೀ ಯೋನಿ ಅನೇಗ। ತ್ಯಾಮಾಜೀ ಮನುಷ್ಯತ್ವ ಅತಿಚಾಂಗ। ತೇಹೀ ಅವಿಕಳ ಅವ್ಯಂಗ। ಸಂಪೂರ್ಣ ಸಾಂಗ ನಿರ್ದುಷ್ಟ ॥೫೬॥ ಸಕಳ ದೇಹಾಮಾಜೀ ಜಾಣ। ಅಸೇ ಪುರುಷದೇಹಪ್ರಧಾನ್ಯ। ತ್ಯಾಹೀಮಾಜೀ ವಿವೇಕಸಂಪನ್ನ। ವೇದಶಾಸ್ತ್ರಜ್ಞ ಮುಮುಕ್ಷೂ ॥೫೭॥ ವೇದಶಾಸ್ತ್ರವಿವೇಕಸಂಪನ್ನ। ತ್ಯಾಹೀಮಾಜೀ ಜ್ಯಾ ಮಾಝೇ ಭಜನ। ಭಜತ್ಯಾಮಾಜೀ ಅನನ್ಯ ಶರಣ। ಸರ್ವಸ್ವೇ ಜಾಣ ಮಜಲಾಗೀ ॥೫೮॥ ಸರ್ವಸ್ವೇ ಜೇ ಅನನ್ಯ ಶರಣ। ತೇಥ ಮಾಝೀ ಕೃಪಾ ಪರಿಪೂರ್ಣ। ಮಾಝೇ ಕೃಪೇ ಮಾಝೇ ಜ್ಞಾನ। ಪಾವೋನಿ ಸಂಪನ್ನ ಮದ್ಭಜನೀ ॥೫೯॥ ಯೇಹೀ ಗುಣೇ ವಿಚಾರಿತಾ ಲೋಕ। ಆಥಿಲಾ ದಿಸೇ ಉದ್ಧವ ಏಕ। ತ್ಯಾಲಾಗೀ ಯದುನಾಯಕ। ಪುರುಷವರ್ಯಾಭಿಷೇಕ ವಚನೇ ಕರೀ ॥೬೦॥ ಐಸೇ ಸಂಬೋಧೂನಿ ಉದ್ಧವಾಸೀ। ತ್ರಿಗುಣಗುಣಸ್ವಭಾವಾಂಸೀ। ಸಾಂಗತಾ ಪ್ರಥಮ ಸತ್ತ್ವಾಸೀ। ಹೃಷೀಕೇಶೀ ಉಪಪಾದೀ ॥೬೧॥ ಉದಂಡ ಸತ್ತ್ವಾಚೀ ಲಕ್ಷಣೇ। ತ್ಯಾಂತ ಪಂಧರಾ ಬೋಲಿಲೀ ಶ್ರೀಕೃಷ್ಣೇ। ತೇಚಿ ಐಕಾ ಕೋಣಕೋಣೇ। ನಿಜನಿರೂಪಣೇ ಹರಿ ಸಾಂಗೇ ॥೬೨॥

ಯಾರ ಚರಣ ಕಮಲಗಳ ಸ್ಪರ್ಶದಿಂದ ಈ ಕ್ಷಿತಿಯು ಪವಿತ್ರವಾಗುವುದು. ಯಾರ ನಾಮದಿಂದ ತ್ರೈಲೋಕ್ಯದ ಉದ್ಧಾರವಾಗುವುದು. ಯಾರ ಗುಣಗಳ ಕೀರ್ತಿಯನ್ನು ಶ್ರವಣ ಮಾಡುವುದರಿಂದ ಮಹಾ ಪಾಪಗಳು ಕ್ಷಯಗೊಳ್ಳುವುವು ॥೪೯॥ ಯಾರ ಅತ್ಯಂತ ಮೃದು, ಮಧುರ ಮತ್ತು ಮನೋರಂಜಕವಾಗಿರುವ ನಾಮವನ್ನು ಮುಖದಿಂದ ಉಚ್ಚರಿಸುವುದರಿಂದ ಪರಮ ಸಂತೋಷವಾಗುವುದೋ, ಆ ಭಗವಾನ ಶ್ರೀಕೃಷ್ಣ ಪುರಷೋತ್ತಮನು ಅತ್ಯಂತ ಪ್ರೀತಿಯಿಂದ ಉದ್ಧವನಲ್ಲಿ ಹೇಳಲಾರಂಭಿಸಿದನು ॥೫೦॥ ಸಾತ್ವಿಕ, ರಾಜಸ ಮತ್ತು ತಾಮಸ ಈ ಮೂರು ಗುಣಗಳು ಒಂದರಲ್ಲಿ ಒಂದು ಕೂಡದೇ ಬೇರೆ ಬೇರೆಯಾಗಿರುವುವು. ಪುರುಷರಲ್ಲಿ ಒಂದೊಂದು ಗುಣಗಳಿರುವುವು. ಯಾವ ಗುಣದಿಂದ ಯಾವ ಚಿನ್ಹವು ದೃಷ್ಟಿಗೆ ಬೀಳುವುದೆಂಬ ವರ್ಣನೆಯನ್ನು ಈಗ ಕೇಳಿರಿ ॥೫೧॥ ಈ ನನ್ನ ವಚನವನ್ನು ನಿಃಸಂದೇಹಪೂರ್ವಕವಾಗಿ, ಲಕ್ಷಪೂರ್ವಕವಾಗಿ ಮತ್ತು ಮನಸ್ಸನ್ನು ನಿರ್ವಿಕಲ್ಪವನ್ನಾಗಿ ಮಾಡಿ, ಯಾರು ಕೇಳುವರೋ, ಅವರು ಸ್ವತಃವೇ ಪರಿಪೂರ್ಣವಾಗಿ ಪುರುಷೋತ್ತಮರಾಗುವರು ॥೫೨॥ ನನ್ನ ಸ್ವರೂಪದಲ್ಲಿ ಸದ್ಭಾವನೆಯನ್ನು ಧರಿಸುವುದೇ ಪುರುಷನ ಉತ್ತಮ ಅವಸ್ಥೆಯಾಗಿರುವುದು. ನಾನು ಹೇಳುತ್ತಿರುವ ವಚನಗಳಲ್ಲಿ ವಿಶ್ವಾಸವನ್ನಿಟ್ಟರೆ ಪುರುಷೋತ್ತಮತ್ವವು ಸ್ವತಃ ಮನೆಗೆ ನಡೆದು ಬರುವುದು ॥೫೩॥ ಹೀಗೆ ಇದೊಂದು ಅತಿ ಉತ್ತಮ, ನಿರೂಪಮ ಮತ್ತು ನಿರ್ಗುಣಮಯ ಸ್ಥಾನವನ್ನು ನನ್ನ ವಚನಗಳಲ್ಲಿ ನೀನು ಪರಿಪೂರ್ಣವಾಗಿ ವಿಶ್ವಾಸ ಮತ್ತು ಶ್ರದ್ಧೆಯನ್ನಿಟ್ಟರೆ ನಾನು ನಿನಗೆ ಅರ್ಪಣೆಯನ್ನು ಮಾಡುವೆನು ॥೫೪॥ ಭಕ್ತಿ ಭಾವಾರ್ಥದಲ್ಲಿ ಪರಮಶ್ರೇಷ್ಠನಾದ್ದರಿಂದ, ವಚನ ವಿಶ್ವಾಸದಲ್ಲಿ ಅತಿವರಿಷ್ಠನಾದ್ದರಿಂದ ಶ್ರೀಕೃಷ್ಣನು ಉದ್ಧವನಿಗೆ "ಹೇ ಪುರುಷಶ್ರೇಷ್ಠಾ" ಎಂದು ಸಂಬೋಧಿಸಿದನು ॥೫೫॥ ಈ ಸಂಸಾರದಲ್ಲಿ ನಾನಾವಿಧವಾಗಿ ಅನೇಕ ಯೋನಿಗಳಿರುವುವು. ಅದರಲ್ಲಿ ಮನುಷ್ಯ ದೇಹವು ಅತಿ ಉತ್ತಮವಾಗಿರುವುದು. ಅದರಲ್ಲಿ ಸದೃಢ, ಅವ್ಯಂಗ, ಸಂಪೂರ್ಣ ಅವಯವಗಳಿಂದ ಪರಿಪೂರ್ಣ ಮತ್ತು ಯಾವುದೇ ಕೊರತೆಯಿಲ್ಲದ ಇಂತಹ ಮನುಷ್ಯ ದೇಹವಿರಬೇಕು ॥೫೬॥ ಈ ಪ್ರಕಾರವಾಗಿ ಸರ್ವ ದೇಹಗಳಲ್ಲಿ ಪುರುಷ ದೇಹವು ಪ್ರಧಾನವಾಗಿರುವುದು. ಅದರಲ್ಲಿಯೂ ಕೂಡ ಚಿಂತನಶೀಲ, ವೇದಶಾಸ್ತ್ರಗಳನ್ನು ತಿಳಿದವನು ಮತ್ತು ಮುಮುಕ್ಷು ಹೀಗೆ ಅಲೌಕಿಕ ಪುರುಷನಿರಬೇಕು ॥೫೭॥ ಹೀಗೆ ಅಲೌಕಿಕ ಪುರುಷನು ವೇದಶಾಸ್ತ್ರ ವಿವೇಕ ಸಂಪನ್ನನಾಗಿ ಅದರಲ್ಲಿಯೂ ಕೂಡ ನನ್ನ ಅಲೌಕಿಕ ಮತ್ತು ಅತ್ಯಂತ ಮಧುರವಾದ ಭಜನೆಯನ್ನು ಸಾಧಿಸುತ್ತಿದ್ದರೆ ಇಂತಹ ಭಕ್ತನಲ್ಲಿಯೂ ಕೂಡ ನನ್ನಲ್ಲಿ ಪರಿಪೂರ್ಣವಾಗಿ ಶರಣು ಬರುವವನಾಗಿರಬೇಕು ॥೫೮॥ ಈ ಪ್ರಕಾರವಾಗಿ ಸರ್ವಸ್ವರೀತಿಯಲ್ಲಿ ಯಾರು ನನಗೆ ಅನನ್ಯ ಭಾವನೆಯಿಂದ ಶರಣು ಬರುವರೋ ಅವರಲ್ಲಿ ನನ್ನ ಪರಿಪೂರ್ಣವಾದ ಮತ್ತು ಅಲೌಕಿಕ ಕೃಪೆಯಿರುವುದು. ನನ್ನ ಪೂರ್ಣ ಕೃಪೆಯಿಂದಲೇ ನನ್ನ ಜ್ಞಾನವನ್ನು ಅರಿತು ನನ್ನ ಭಜನೆಯಲ್ಲಿ ಆನಂದಿತರಾಗಿ ಮತ್ತು ರಮಮಾಣರಾಗುವರು ॥೫೯॥ ಹೀಗೆ ವಿವಿಧ ಗುಣಗಳ ವಿಚಾರವನ್ನು ಮಾಡಲು ಆಗ ಸರ್ವ ಗುಣಗಳಿಂದ ಸಂಪನ್ನನಾಗಿರುವ ಒಬ್ಬನೇ ಒಬ್ಬ ಉದ್ಧವನು ಕಾಣುವನು. ಅದಕ್ಕಾಗಿಯೇ ಯದುಕುಲತಿಲಕನಾದ ಶ್ರೀಕೃಷ್ಣನು "ಹೇ ಪುರುಷಶ್ರೇಷ್ಠಾ" ಎಂದು ಸಂಬೋಧಿಸಿ ಪುರುಷತ್ವದ ಅಭಿಷೇಕವನ್ನು ಉದ್ಧವನ ಮೇಲೆ ಮಾಡಿದನು ॥೬೦॥ ಈ ಪ್ರಕಾರವಾಗಿ ಉದ್ಧವನಿಗೆ ಸಂಬೋಧಿಸಿ ತ್ರಿವಿಧ ಗುಣಗಳ ಸ್ವಭಾವವನ್ನು ಹೇಳುತ್ತಿರಲು ಪ್ರಥಮವಾಗಿ ಹೃಷೀಕೇಶಿಯಾದ ಶ್ರೀಕೃಷ್ಣನು ಸಾತ್ವಿಕ ಗುಣಗಳ ವರ್ಣನೆಯನ್ನು ಮಾಡಲಾರಂಭಿಸಿದನು ॥೬೧॥ ಸತ್ವಗುಣದ ಲಕ್ಷಣಗಳು ಬಹಳಷ್ಟಾಗಿರುವುವು. ಆದರೆ ಅವುಗಳಲ್ಲಿ ಕೇವಲ ಹದಿನೈದು ಗುಣಗಳಷ್ಟೇ ಶ್ರೀಕೃಷ್ಣನು ಹೇಳಿರುವನು. ಶ್ರೀ ಹರಿಯು ಈಗ ತನ್ನ ನಿರೂಪಣೆಯಲ್ಲಿ ವರ್ಣಿಸಿರುವ ಬೇರೆ ಬೇರೆ ಲಕ್ಷಣಗಳು ಯಾವುವು ಎಂಬುವುದನ್ನು ಈಗ ಕೇಳಿರಿ ॥೬೨॥

ಶಮೋ ದಮಸ್ತಿತಿಕ್ಷೇಕ್ಷಾ ತಪಃ ಸತ್ಯಂ ದಯಾ ಸ್ಮೃತಿಃ ।
ತುಷ್ಟಿಸ್ತ್ಯಾಗೋಽಸ್ಪೃಹಾ ಶ್ರದ್ಧಾ ಹ್ರೀರ್ದಯಾದಿಃ ಸ್ವನಿರ್ವೃತಿಃ ।೨॥

ಅರ್ಥ:- ಸಾತ್ವಿಕ ಗುಣದ ಲಕ್ಷಣಗಳು ಹೀಗಿವೆ ; ಶಮ (ಮನ-ಸಂಯಮ) ದಮ (ಇಂದ್ರಿಯನಿಗ್ರಹ) ತಿತಿಕ್ಷಾ (ಸಹಿಷ್ಣುತೆ) ವಿವೇಕ, ತಪ, ಸತ್ಯ, ದಯಾ, ಸ್ಮೃತೀ, ಸಂತೋಷ, ತ್ಯಾಗ, ವಿಷಯವಿರಾಗ, ಶ್ರದ್ಧೆ, ಲಜ್ಜೆ (ಪಾಪ ಕರ್ಮಗಳಿಗೆ ಸ್ವಭಾವತಾ ಸಂಕೋಚಪಡುವಿಕೆ) ಆತ್ಮರತೀ, ದಾನ, ವಿನಯ ಮತ್ತು ಸರಳತೆ ಇತ್ಯಾದಿ.

ಆಪುಲೀ ಜೇ ಚಿತ್ತವೃತ್ತೀ । ಸಾಂಡೂನಿ ಬಾಹ್ಯಸ್ಫೂರ್ತೀ । ಅಖಂಡ ರಾಖಣೇ ಆತ್ಮಸ್ಥಿತೀ । ಶಮ ನಿಶ್ಚಿತೀ ತ್ಯಾ ನಾಂವ ।೫೩॥ ಬಾಹ್ಯ ಇಂದ್ರಿಯಾಂಚೀ ಚಡಫಡ । ಶಮೇಸೀ ಕರಾವಾ ಗಲಜೋಡ । ನಿಗ್ರಹಣೇ ವಿಷಯಚಾಡ । ದಮಾಚೇ ಕೋಡ ಯಾ ನಾಂವ ।೫೪॥ ಜೇಣೇ ಹರಿಖೇ ಸಾಹಣೇ ಸುಖ । ತ್ಯಾಚಿ ವೃತ್ತೀ ಸಾಹಣೇ ದುಃಖ । ತಿತಿಕ್ಷಾ ಯಾ ನಾಂವ ದೇಖ । ಶುದ್ಧಸತ್ವಾತ್ಮಕ ಉದ್ಧವಾ ।೫೫॥ ಮೀ ಕೋಣ ಕೈಚಾ ಕಿಮಾತ್ಮಕ । ನಿಷ್ಕರ್ಮ ಕೀ ಕರ್ಮಬದ್ಧಕ । ಕರಣೇ ನಿಜಾತ್ಮವಿವೇಕ । ಈಕ್ಷಾ ಪರಿಪಾಕ ಯಾ ನಾಂವ ।೫೬॥ ಜಾಗ್ರತಿಸ್ವಪ್ನಸುಷುಪ್ತಿ ಆಂತ । ಭಗವತ್ಪ್ರಾಪ್ತೀಲಾಗೀ ಚಿತ್ತ । ಝುರಣೇಮಾಜೇ ಪಡೇ ನಿತ್ಯ । ತಪ ನಿಶ್ಚಿತ ಯಾ ನಾಂವ ।೫೭॥ ಆವಡೀ ಜೇವೀ ನೇಘವೇ ವಿಖ । ತೇವೀ ಪ್ರಾಣಾಂತೇ ನ ಬೋಲೇ ಲಟಿಕ । ಸಾಚಚಿ ಬೋಲಣೇ ನಿಷ್ಟಂಕ । ಹೇ ಸತ್ಯ ದೇಖ ಸಾತ್ತ್ವಿಕಾ ।೫೮॥ ಭೂತಾವರೀ ಕಠಿಣಪಣ । ಜೋ ಸ್ವಪ್ನೀ ನ ದೇಖೇ ಆಪಣ । ಭೂತದಯಾ ತೇ ಸಂಪೂರ್ಣ । ಉದ್ಧವಾ ಜಾಣ ನಿಶ್ಚಿತ ।೫೯॥ ಮಾಝಾ ಮುಖ್ಯ ನಿಜಸ್ವಾರ್ಥ ಕೋಣ । ಮೀ ಕಾರ್ಯ ಕರಿತೋ ಕರ್ಮಾಚರಣ । ಐಸೇ ಜೇ ಪೂರ್ವಾನುಸ್ಮರಣ । ಸ್ಮೃತಿ ಜಾಣ ಯಾ ನಾಂವ ।೬೦॥ ನ ಕರಿತಾ ಅತಿಆಟಾಟೀ । ಯಥಾಲಾಭೇ ಸುಖೀ ಪೋಟೀ । ಯಾ ನಾಂವ ಗಾ ನಿಜಸಂತುಷ್ಟೀ । ಜಾಣ ಜಗಜೇಠೀ ಉದ್ಧವಾ ।೬೧॥ ಜೇ ಮಿಳಾಲೇ ಜೀವಿಕಾಭಾಗ । ತ್ಯಾಂತಹೀ ಸತ್ಪಾತ್ರೀ ದಾನಯೋಗ । ವಿಷಯಮಮತಾ ಸಾಂಡಣೇ ಸಾಂಗ । ತ್ಯಾ ನಾಂವ ತ್ಯಾಗ ಉದ್ಧವಾ ।೬೨॥ ಅರ್ಥಸ್ವಾರ್ಥೀ ಇಚ್ಛಾ ಚಢೇ । ಅರ್ಥ ಜೋಡತಾ ಅಧಿಕ ವಾಢೇ । ತೇ ಇಚ್ಛಾ ಸಾಂಡಣೇ ನಿಜನಿವಾಡೇ । ನಿಃಸ್ಪೃಹತಾ ಘಡೇ ತೇ ಠಾಯೀ ।೬೩॥ ಜೇಥ ನಿಃಸ್ಪೃಹತಾ ಸಮೂಳ ಸಾಂಗ । ತ್ಯಾಚಿ ನಾಂವ ದೃಢ ವೈರಾಗ್ಯ । ಹೇ ಪರಮಾರ್ಥಾಚೇ ನಿಜಭಾಗ್ಯ । ಯೇಣೇ ಶ್ರೀರಂಗ ಸಾಂಪಡೇ ।೬೪॥

ಹೊರಗೆ ಇರುವ ಸ್ಫೂರ್ತಿಯ ತ್ಯಾಗವನ್ನು ಮಾಡಿ, ತನ್ನ ಯಾವ ಚಿತ್ತವೃತ್ತಿಯನ್ನು ತನ್ನ ಆತ್ಮನಲ್ಲಿ ಏಕಾಗ್ರ ಮಾಡುವಿಕೆಗೆ ''ಶಮ'' ಎಂದು ಕರೆಯುವರು ।೫೩॥ ಬಾಹ್ಯದಲ್ಲಿ ಚಡಪಡಿಸುತ್ತಿರುವ ಇಂದ್ರಿಯಗಳನ್ನು ಶಾಂತಿಯಿಂದ ಆ ಚಡಪಡಿಸುವಿಕೆಯನ್ನು ಐಕ್ಯಗೊಳಿಸಿ ವಿಷಯಗಳ ಅಪೇಕ್ಷೆಯನ್ನು ಆವರಿಸಿಕೊಂಡು ಇರುವಿಕೆಗೆ ''ದಮ'' ಎಂಬ ನಾಮವು ನಿಜವಾಗಿಯೂ ಸಾರ್ಥಕವಾಗಿರುವುದು ।೫೪॥ ಹೇ ಉದ್ಧವಾ, ನಾವು ಸುಖಗಳನ್ನು ಎಷ್ಟು ಆನಂದದಿಂದ ಭೋಗಿಸುತ್ತೇವೆಯೋ, ಅಷ್ಟೇ ಆನಂದದಿಂದ ದುಃಖಗಳನ್ನೂ ಕೂಡ ಸಹಿಸಬೇಕು. ಹೀಗೆ ಇರುವಿಕೆಗೆ ಶುದ್ಧ ಸತ್ವಾತ್ಮಕ ತಿತಿಕ್ಷಾ ಎಂದು ಕರೆಯುವರು ।೫೫॥ ನಾನು ಯಾರು? ಎಲ್ಲಿಂದ ಬಂದಿರುವೆ? ನನ್ನ ಸ್ವರೂಪವೇನು? ನಾನು ನಿಷ್ಕರ್ಮನೋ, ಅಥವಾ ಕರ್ಮಬದ್ಧನೋ? ಈ ರೀತಿಯಲ್ಲಿ ಆತ್ಮ ವಿಚಾರವನ್ನು ಮಾಡುವಿಕೆಗೆ ಈಕ್ಷಾ ಪರಿಪಾಕವೆಂದು ನಾಮವಿರುವುದು ।೫೬॥ ಜಾಗೃತ, ಸ್ವಪ್ನ ಮತ್ತು ಸುಷುಪ್ತಿ ಈ ತ್ರಿವಿಧ ಸ್ಥಿತಿಯಲ್ಲಿ ಭಗವತ್ಪ್ರಾಪ್ತಿಗಾಗಿ ಹೃದಯವು ಯಾವಾಗಲೂ ಚಿಂತಿಸುತ್ತಿರುವುದು. ಈ ಸ್ಥಿತಿಗೆ ಮಾತ್ರ ''ತಪ'' ಎಂದು ಸಂಬೋಧಿಸುವರು ।೫೭॥ ಯಾರೂ ಕೂಡ ಪ್ರೀತಿಯಿಂದ ವಿಷವನ್ನು ಕುಡಿಯಲಾರರು. ಅದರಂತೆಯೇ ಪ್ರಾಣಾಂತಕ್ಕೂ ಸಹ ಅಸತ್ಯ ಭಾಷಣವನ್ನು ಮಾಡದೇ ಇರುವುದು, ಯಾವಾಗಲೂ ಸತ್ಯವನ್ನೇ ನುಡಿಯುವುದು, ಇದೇ ಸಾತ್ವಿಕರ ಸತ್ಯತನವಾಗಿರುವುದು ।೫೮॥ ಹೇ ಪ್ರಿಯ ಉದ್ಧವನೇ, ಯಾವನು ತಾನು ಸ್ವತಃ ಸ್ವಪ್ನದಲ್ಲಿಯೂ ಕೂಡ ವಿವಿಧ ಪ್ರಾಣಿ ಮಾತ್ರರಲ್ಲಿ ನಿಷ್ಠುರತೆಯನ್ನು ಎಂದಿಗೂ ಹಿಡಿಯುವುದಿಲ್ಲವೋ, ಆತನ ಅದೇ ಪೂರ್ಣವಾದ ಭೂತದಯೆಯಾಗಿರುವುದೆಂದು ಹೀಗೆ ನಿಶ್ಚಯವಾಗಿ ತಿಳಿ ।೫೯॥ ನನ್ನ ಹಿತವು ಯಾವುದರಲ್ಲಿದೆ? ನಾನು ಯಾವ ಕರ್ಮಾಚರಣೆಯನ್ನ ಮಾಡುತ್ತಿರುವೆನು? ಹೀಗೆ ಯಾರು ಪೂರ್ವಾನುಸ್ಮರಣೆಯನ್ನು ಮಾಡುವರೋ, ಅದರ ನಾಮವೇ ಸ್ಮೃತಿ ಎಂದಾಗಿರುವುದು ।೬೦॥ ಹೇ ಜಗಜೇಠಿ ಉದ್ಧವನೇ, ಅತಿಶಯವಾಗಿ ಪರಿಶ್ರಮ ಸಂಕಟಪಡದೇ ಎಷ್ಟು ದೊರಕುವುದೋ, ಅಷ್ಟರಲ್ಲಿಯೇ ಅಂತಃಕರಣದಲ್ಲಿ ಸದಾ ಸಂತೋಷದಿಂದ ಸುಖಿಯಾಗಿರುವುದಕ್ಕೆ ಆತ್ಮತುಷ್ಟಿ ಎಂದು ಅದಕ್ಕೆ ನಾಮವಿರುವುದು. ಹೀಗೆಂದು ನೀನು ತಿಳಿ ।೬೧॥ ತನ್ನ ಜೀವನವನ್ನು ನಡೆಸಲು ಪ್ರಾಪ್ತವಾಗಿರುವ ವಿವಿಧ ಅನ್ನದಲ್ಲಿ ಸ್ವಲ್ಪ ಭಾಗವನ್ನು ಸತ್ಪಾತ್ರಕ್ಕೆ ದಾನವನ್ನು ಮಾಡುವಿಕೆಗೆ ಮತ್ತು ಹೇ ಪ್ರಿಯ ಉದ್ಧವಾ, ಕೆಟ್ಟಾಗಿರುವ ವಿಷಯ ಮಮತೆಯನ್ನು ಬಿಟ್ಟುಬಿಡುವುದಕ್ಕೆ ತ್ಯಾಗವೆಂದು ಅದರ ನಾಮವಿರುವುದು ।೬೨॥ ಧನ ಗಳಿಸುವ ಅನಿವಾರ್ಯ ಇಚ್ಛೆ ಇದ್ದು ಮತ್ತು ಧನಸಂಗ್ರಹದ ಜೊತೆಯಲ್ಲಿಯೇ ಧನ ಬೆಳೆಸುವ ಇಚ್ಛೆಯು ಬೆಳೆಯುತ್ತಿದ್ದರೆ ಈ ಎರಡನ್ನೂ ನಿಷ್ಕಾಮ ಬುದ್ಧಿಯಿಂದ ತ್ಯಾಗ ಮಾಡಲು ನಿಸ್ಪೃಹತೆಯು ಸಹಜವಾಗಿ ಪ್ರಾಪ್ತವಾಗುವುದು ।೬೩॥ ಹೀಗೆ ನಿಃಸ್ಪೃಹತೆಯು ಎಲ್ಲಿ ಬೆಳೆದಿರುವುದೋ, ಅದಕ್ಕೆ ದೃಢ ವೈರಾಗ್ಯವೆಂದು ಹೇಳುವರು. ಇದು ಪರಮಾರ್ಥದಲ್ಲಿ ಮಹತ್ತರವಾದ ಭಾಗ್ಯವಾಗಿರುವುದು. ಇದರಿಂದಲೇ ಶ್ರೀರಂಗನ ಪ್ರಾಪ್ತಿಯಾಗುವುದು ।೬೪॥

ಜೋ ಗುರುವಾಕ್ಯವಿಶ್ವಾಸೀ ।ಸಬಾಹ್ಯ ವಿಕಲಾ ಸರ್ವಸ್ವೇಸೀ । ತೋಚಿ ಭಾವಾರ್ಥ ದ್ವಿಜದೇವಾಂಸೀ । ಶ್ರದ್ಧಾ ತ್ಯಾಪಾಶೀ ಸಮೂಳ ನಾಂದೇ ॥೬೫॥ ನರದೇಹೀ ಲಾಭೇ ಪರಬ್ರಹ್ಮ । ತದರ್ಥ ನ ಕರೂನಿ ಸತ್ಕರ್ಮ । ವಿಷಯಾರ್ಥ ಕರೀ ಧರ್ಮಾಧರ್ಮ । ತೇ ಲಜ್ಜಾ ಪರಮ ಅತಿನಿಂದ್ಯ ॥೬೬॥ ಜೇಣೇ ದುಃಖೀ ಹೋಈಜೇ ಆಪಣೇ । ತೇ ಪುಢಿಲಾಸೀ ನಾಹೀ ಕರಣೇ । ದುಃಖ ನೇದೂನಿ ಸುಖ ದೇಣೇ । ಹೇ ದಯಾ ಮ್ಯಾ ಶ್ರೀಕೃಷ್ಣೇ ವಂದಿಜೇ ॥೬೭॥ ಪುಢಿಲಾಸೀ ನೇದೂನಿ ದುಃಖ । ಸ್ವಯೇ ಭೂತಮಾತ್ರೀ ದೇಣೇ ಸುಖ । ಹೇಚಿ ದಯಾ ಪಾರಮಾರ್ಥಿಕ । ದುಸರೇನಿ ದೇಖಿಯಾಲಾಗೀ ಸಾಂಗೇ ॥೬೮॥ ಖಾತಾ ನಾಬದೇ ಪುಢೇ ಪೇಂಡ ಜೈಸೀ । ತೈಸೇ ಗೌಣ ದೇಖೋನಿ ವಿಷಯಾಂಸೀ । ಜೋ ವಿನಟಲಾ ಬ್ರಹ್ಮಸುಖಾಸೀ । ಸ್ವನಿವೃತ್ತಿ ತ್ಯಾಸೀ ಬೋಲಿಜೇ ॥೬೯॥ ರಂಕ ಬೈಸಲ್ಯಾ ಪಾಲಖೀಸೀ । ಉಪೇಕ್ಷೀ ಪೂರ್ವಿಲ ಸುಡಕ್ಯಾಸೀ । ತೇವೀ ಉಪೇಕ್ಷುನಿ ವಿಷಯಾಂಸೀ । ಜೋ ಬ್ರಹ್ಮಸುಖಾಸೀ ಪಕಡಲಾ ॥೭೦॥ ಕಣಾಚೀ ವಾಢೀ ಭುಸಾಪಾಶೀ । ಕಣ ನಿಡಾರೇ ಭುಸೇಸೀ । ತೋ ಕಣ ಯಾವಯಾ ಹಾತಾಸೀ । ಸಾಂಡಿತೀ ಭುಸಾಸೀ ಪಾಖಡೂ ನೀ ॥೭೧॥ ತೇವೀ ಬ್ರಹ್ಮಸುಖಾಚಿಯೇ ಪಾಡೇ । ನರದೇಹಾಚಾ ಪಾಂಗಡಾ ಪಡೇ । ತೇ ಬ್ರಹ್ಮಸುಖ ಜೈ ಹಾತಾ ಚಢೇ । ತೈ ದೇಹಚೀ ನಾವಡೇ ವಿಷಯಭೂಸ ॥೭೨॥ ತೇವೀ ಸಾಂಡೂನಿ ವಿಷಯಪ್ರೀತೀ । ಜ್ಯಾಂಸೀ ಬ್ರಹ್ಮಸುಖೀ ಸುಖಪ್ರಾಪ್ತೀ । ಯಾಚಿ ನಾಂವ ಸ್ವನಿವೃತ್ತೀ । ಜಾಣ ನಿಶ್ಚಿತೀ ಉದ್ಧವಾ ॥೭೩॥ ಯಾ ಪಂಧರಾ ಲಕ್ಷಣಾಂಚೀ ಸ್ಥಿತೀ । ವರ್ತೇ ತೋ ಶುದ್ಧ ಸತ್ತ್ವಮೂರ್ತೀ । ಶೋಧಿತಸತ್ತ್ವಾಚೀ ಸತ್ತ್ವವೃತ್ತೀ । ''ಆದಿ'' ಶಬ್ದೇ ಶ್ರೀಪತೀ ಸಾಂಗತ ॥೭೪॥ ಸರ್ವ ಭೂತೀ ಅಕೃತ್ರಿಮತಾ । ದೇಖೇ ಭಗವದ್ಭಾವೇ ತತ್ತ್ವತಾ । ಯಾ ನಾಂವ ಶೋಧಿತಸತ್ತ್ವತಾ । ಗುಣಾವಸ್ಥಾಭೇದಕ ॥೭೫॥ ಐಶಿಯಾಪರೀ ಸತ್ತ್ವಗುಣ । ಸಾತ್ತ್ವಿಕಾಪಾಸೀ ವರ್ತೇ ಪೂರ್ಣ । ಆತಾ ರಜಾಚೇ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೭೬॥

ಕಾಮ ಈಹಾ ಮದಸ್ತೃಷ್ಣಾಸ್ತಂಭ ಆಶೀರ್ಭಿದಾ ಸುಖಮ್ ।
ಮಹೋತ್ಸಾಹೋ ಯಶಃ ಪ್ರೀತಿರ್ಹಾಸ್ಯಂ ವೀರ್ಯಂ ಬಲೋದ್ಯಮಃ ॥೩॥

ಅರ್ಥ:-ಸ್ವರ್ಗಾದಿ ವಿಷಯಗಳ ವಿಷಯವಾಗಿ ಯಜ್ಞಾದಿ ವ್ಯಾಪಾರ, ದರ್ಪ, ಲಾಭವಾದರೂ ಕೂಡ ಅಸಂತೋಷ, ಗರ್ವ, ಹಣದಾಶೆಗಾಗಿ ದೇವಾದಿಕರ ಪ್ರಾರ್ಥನೆ, ಮನದಲ್ಲಿ ಭೇದಬುದ್ಧಿ, ವಿಷಯಭೋಗ ಮದದಿಂದ ಯುದ್ಧಾದಿಕಾರಿ ವಿಷಯದಲ್ಲಿ ಅಭಿನಿವೇಶ, ಸ್ತುತಿಪ್ರಿಯತಾ, ಉಲ್ಹಾಸ, ದೃಢಪೂರ್ವಕವಾಗಿ ಉದ್ಯೋಗದಲ್ಲಿ ತೊಡಗುವಿಕೆ ಇವು ರಾಜಸವೃತ್ತಿಯಾಗಿವೆ.

ಯಾರು ಸದ್ಗುರು ಚರಣಗಳಲ್ಲಿ ವಿಶ್ವಾಸವನ್ನಿಡುವರೋ, ಸದ್ಗುರುಗಳ ಚರಣಗಳಲ್ಲಿ ತಮ್ಮನ್ನು ಅರ್ಪಿಸಿಕೊಳ್ಳುವರೋ, ಅವರಲ್ಲಿ ದೇವಬ್ರಾಹ್ಮಣರಿಗಾಗಿ ಭಕ್ತಿಯುಂಟಾಗುವುದು. ಅವರಲ್ಲಿಯೇ ಶ್ರದ್ಧೆಯು ಪೂರ್ಣವಾಗಿ ವರ್ತಿಸುತ್ತಿರುವುದು ॥೬೫॥ ನರದೇಹವು ಮಹಾಭಾಗ್ಯದಿಂದ ಲಭಿಸುವುದು. ಈ ದೇಹದಲ್ಲಿ ಪರಬ್ರಹ್ಮನ ಪ್ರಾಪ್ತಿಯಾಗುವುದು. ಹೀಗಿದ್ದರೂ ಕೂಡ ಇದಕ್ಕಾಗಿ ಯಾರು ಸತ್ಕರ್ಮಗಳನ್ನು ಮಾಡುವುದಿಲ್ಲವೋ, ವಿಷಯಗಳ ಪ್ರಾಪ್ತಿಗಾಗಿ ಧರ್ಮ, ಅಧರ್ಮಗಳ ಮನಬಂದಂತೆ ಆಚರಿಸುವರೋ, ಅವರ ಈ ಆಚರಣೆಗಳು ನಿಂದ್ಯ ಮತ್ತು ಲಜ್ಜಾಸ್ಪದವಾಗಿರುವುವು ॥೬೬॥ ತನಗೆ ಯಾವುದರಿಂದ ದುಃಖವಾಗುವುದೋ, ಆ ದುಃಖವನ್ನು ಇತರರಿಗೆ ಎಂದಿಗೂ ಕೊಡಿದಿರುವಿಕೆ, ಇದರ ಬದಲಾಗಿ ಸುಖವನ್ನೇ ಕೊಡುತ್ತಿರುವಿಕೆ. ಈ ವರ್ತನೆಗೆ ದಯೆ ಎಂದು ಕರೆಯುವರು. ಇದು ಶ್ರೀಕೃಷ್ಣನಿಗೆ ವಂದನೀಯವಾಗಿರುವುದು ॥೬೭॥ ಬೇರೆಯವರಿಗೆ ದುಃಖವನ್ನು ಕೊಡದೇ ಸರ್ವ ಪ್ರಾಣಿಮಾತ್ರರಿಗೆ ಸುಖವನ್ನು ಕೊಡುವುದು .ಇದೇ ಪಾರಮಾರ್ಥಿಕ ದಯೆಯಾಗಿರುವುದು. ಇದನ್ನು ನಾನು ಎರಡೆರಡು ಸಾರೆ ಹೇಳುತ್ತಿದ್ದೇನೆ ॥೬೮॥ ಉತ್ತಮ ಪ್ರಕಾರದ ಕಲ್ಲುಸಕ್ಕರೆಯ ಎದುರಿಗೆ ಕೆಸರಿನ ಮುದ್ದೆ ಹೇಗೋ, ಅದರಂತೆಯೇ ವಿಷಯಗಳಿಗೆ ತುಚ್ಛವನ್ನಾಗಿ ಮಾಡಿ ಬ್ರಹ್ಮಸುಖದಲ್ಲಿ ನಿಮಗ್ನನಾಗುವಿಕೆಗೆ ಆತ್ಮನಿವೃತ್ತಿ ಎಂದು ಹೇಳುವರು ॥೬೯॥ ದರಿದ್ರನು ಪಾಲಖಿಯಲ್ಲಿ ಕುಳಿತುಕೊಳ್ಳಲು ಆಗ ಆತನು ತನ್ನ ಮೊದಲಿನ ಹರಕ ವಸ್ತ್ರಗಳನ್ನು ಒಗೆದುಬಿಡುವನು. ಅದರಂತೆ ಭಕ್ತನು ವಿಷಯಗಳ ತ್ಯಾಗ ಮಾಡಿ ಬ್ರಹ್ಮಸುಖದಲ್ಲಿ ತಲ್ಲೀನನಾಗುವನು ॥೭೦॥ ಧಾನ್ಯಗಳು ತೌಡಿನೊಂದಿಗೆ ಬೆಳೆಯುತ್ತಿರುತ್ತವೆ. ಬೀಜಗಳು ಆ ತೌಡಿನ ಜೊತೆಯಲ್ಲಿಯೇ ಬೆಳೆಯುತ್ತಿರುತ್ತವೆ. ಆದರೆ ಧಾನ್ಯಗಳು ಪೂರ್ಣವಾಗಿ ಬೆಳೆಯಲು ಅದರೊಳಗಿನ ಕಾಳುಗಳು ನಮ್ಮ ಕೈ ಸೇರಬೇಕಾದರೆ ತೌಡನ್ನು ಮರದಿಂದ ಕೇರಬೇಕಾಗುವುದು ॥೭೧॥ ಹೀಗೆ ಬ್ರಹ್ಮಸುಖದಂತೆಯೇ ದೇಹದ ಮೋಹವೂ ಆಗುತ್ತಿರುವುದು. ಆದರೆ ಅದೇ ಬ್ರಹ್ಮಸುಖವು ಕೈಗೆ ದೊರಕಿದರೆ, ಆಗ ದೇಹದ ವಿಷಯರೂಪ ತೌಡು ಪ್ರಿಯವಾಗುವುದಿಲ್ಲ ॥೭೨॥ ಈ ಪ್ರಕಾರವಾಗಿ ವಿಷಯಪ್ರೇಮವನ್ನು ಬಿಟ್ಟುಕೊಟ್ಟು ಯಾವ ಬ್ರಹ್ಮಪ್ರಾಪ್ತಿಯ ಲಾಭವಿರುವುದೋ, ಅದಕ್ಕೆ ಮಾತ್ರ ಆತ್ಮನಿವೃತ್ತಿ ಎಂದು ಹೇಳುವರು. ಅದನ್ನು ನೀನು ನಿಶ್ಚಿತವಾಗಿ ತಿಳಿ ॥೭೩॥ ಯಾರ ಅಂಗದಲ್ಲಿ ಈ ಹದಿನೈದು ಲಕ್ಷಣಗಳಿರುವುವೋ, ಆತನೇ ಶುದ್ಧ ಸತ್ವದ ಮೂರ್ತಿಯಾಗಿರುವನು. ಈಗ ಶ್ರೀಕೃಷ್ಣನು ''ಆದಿ'' ಶಬ್ದದಿಂದ ಶುದ್ಧವಾಗಿರುವ ಸತ್ವಗುಣದ ವೃತ್ತಿಯನ್ನು ಹೇಳುತ್ತಿರುವನು ॥೭೪॥ ಸರ್ವ ಪ್ರಾಣಿಮಾತ್ರರಲ್ಲಿ ಭಗವದ್ಭಾವದಿಂದ ನಿಷ್ಕಪಟ ಬುದ್ಧಿಯನ್ನಿಡುವಿಕೆಗೇನೇ ಮೂರು ಗುಣಗಳ ಭೇದ ಮಾಡುವ ಶುದ್ಧ ಸಾತ್ವಿಕವಾಗಿರುವುದು ॥೭೫॥ ಈ ಪ್ರಕಾರವಾಗಿ ಸಾತ್ವಿಕ ಮನುಷ್ಯರಲ್ಲಿ ಸತ್ವಗುಣಗಳು ಪರಿಪೂರ್ಣವಾಗಿ ಇರುವುವು. ಈಗ ರಜೋಗುಣದ ಲಕ್ಷಣಗಳನ್ನು ಶ್ರೀಕೃಷ್ಣನು ಹೇಳುವನು ॥೭೬॥

ಕಾಮ ಮ್ಹಣಿಜೇ ವಿಷಯಸೋಸೂ । ಜೇವೀ ಇಂಧನೀ ವಾಢೇ ಹುತಾಶೂ । ತೇವೀ ಪುರವಿತಾ ಕಾಮಾಭಿಲಾಷೂ । ಕಾಮ ಅಸೋಸೂ ಪೈ ವಾಢೇ ॥೭೭॥ ಯಾ ನಾಂವ ಕಾಮು ಜಾಣ । ಕಾಮಕ್ರಿಯಾ ತೇ ಈಹಾ ಪೂರ್ಣ । ಝಾಲೇ ವಿದ್ಯೇಚಾ ದರ್ಪ ಗಹನ । ಮದಾಚೇ ಲಕ್ಷಣ ಯಾ ನಾಂವ ॥೭೮॥ ಝಾಲಿಯಾ ಅರ್ಥಪ್ರಾಪ್ತೀ । ವಾಸನೇಚೀ ನವ್ಹೇ ತೃಪ್ತೀ । ಚಢತೀವಾಢತೀ ಆಸಕ್ತೀ । ತೃಷ್ಣಾ ನಿಶ್ಚಿತೀ ಯಾ ನಾಂವ ॥೭೯॥ ಅತಿಗರ್ವೇ ಜೇ ಸ್ತಬ್ಧತಾ । ಕೋಣೇ ದೃಷ್ಟೀ ನಾಣೀ ಸರ್ವಥಾ । ಯಾ ನಾಂವ ಸ್ತಂಭಾವಸ್ಥಾ । ಜಾಣ ತತ್ತ್ವತಾ ಉದ್ಧವಾ ॥೮೦॥ ಅರ್ಥಪ್ರಾಪ್ತೀಕಾರಣೇ । ಇಷ್ಟದೇವತಾ ಪ್ರಾರ್ಥಣೇ । ಪ್ರಾಪಂಚಿಕ ಸುಖ ಮಾಗಣೇ । ಆಶಾ ಮ್ಹಣಣೇ ಯಾ ನಾಂವ ॥೮೧॥ ಭಿದಾ ಮ್ಹಣಿಜೇ ಭೇದ ಜಾಣ । ಸ್ಫುರದ್ರೂಪ ಪ್ರಪಂಚಭಾನ । ಮಾಝೇ ತುಝೇ ಪ್ರಪಂಚವಚನ । ಭಿದಾಲಕ್ಷಣ ಯಾ ನಾಂವ ॥೮೨॥ ರಾಜಸುಖಾಚಾ ನವಲಭಾಗ । ವಿಷಯಸುಖಭೋಗ ಜೋ ಸಾಙ್ಗ । ತೇಚಿ ಸುಖ ಮಾನಿತೀ ಚಾಂಗ । ಸುಖ ಪ್ರಯೋಗ ಯಾ ನಾಂವ ॥೮೩॥ ರಣೀ ಉತ್ಸಾಹ ಶೂರಾಸೀ । ಕಾ ಪುತ್ರೋತ್ಸಾಹ ನರಾಸೀ । ವಿವಾಹೋತ್ಸವ ಸುಹೃದಾಂಸೀ । ಮಹೋತ್ಸಾಹ ತ್ಯಾಸೀ ಬೋಲಿಜೇ ॥೮೪॥ ಶಾಸ್ತ್ರ ವಿವಾದೀ ಜಯೋ ಘೇಣೇ । ಕಾ ಯುದ್ಧೀ ಶೂರ ಪರಾಭವಣೇ । ತೇಣೇ ಖ್ಯಾತೀ ವಾಢವಿಣೇ । ಯಶ ಮಿರವಣೇ ಯಾ ನಾಂವ ॥೮೫॥ ಬಂದಿಜನಾಹಾತೀ ಕೀರ್ತೀ । ಸ್ವಯೇ ವಾಖಾಣವೀ ದಿಗಂತೀ । ಯಾ ನಾಂವ ಯಶಃಪ್ರೀತೀ । ಜಾಣ ನಿಶ್ಚಿತೀ ಉದ್ಧವಾ ॥೮೬॥ ಐಕೋನಿ ವಚನೋಕ್ತಿ ಛಂದೋಬದ್ಧ । ಉಪಹಾಸೀ ಅತಿವಿನೋದ । ತೇಥ ರಾಜಸಾ ಹಾಸ್ಯ ವಿಶದ । ಜಾಣ ಪ್ರಸಿದ್ಧ ಉದ್ಧವಾ ॥೮೭॥ ವೀರ್ಯ ಮ್ಹಣಿಜೇ ಕೇವಳ । ಬಲಾಢ್ಯತಾ ಅತಿಪ್ರಬಳ । ದಾಖವಣೇ ಶಾರೀರಬಳ । ಯಾ ನಾಂವ ಶೀಳ ವೀರ್ಯಾಚೇ ॥೮೮॥ ರಾಜಬಳೇ ಉದ್ಯಮವ್ಯವಹಾರ । ಆಂಗದಟ ಜೋ ವ್ಯಾಪಾರ । ನ್ಯಾಯ ಸಾಂಡೂನಿ ಸ್ವಾರ್ಥ ಥಾರ । ಬಲೋದ್ಯಮಪ್ರಕಾರ ಯಾ ನಾಂವ ॥೮೯॥ ಹೀ ಪಂಧರಾಹೀ ಲಕ್ಷಣೇ । ಜ್ಯಾಪೇ ನಾಂದತೀ ಸಂಪೂರ್ಣೇ । ತೋ ರಾಜಸ ವೋಳಖಣೇ । ಜೀವೇಪ್ರಾಣೇ ನಿಶ್ಚಿತ ॥೯೦॥ ಕೇವಳ ಅವಿವೇಕಸಂಪತ್ತಿ । ತಾಮಸಾಚೀ ತಮೋವೃತ್ತೀ । ಸೋಳಾ ಲಕ್ಷಣೇ ತ್ಯಾಚೀ ಸ್ಥಿತೀ । ಐಕತುಜಪ್ರತೀ ಸಾಂಗೇನ ॥೯೧॥

ಕಾಮವೆಂದರೆ ವಿಷಯಗಳ ಆಸಕ್ತಿ. ಕಾಷ್ಠಗಳು ಅಗ್ನಿಯನ್ನು ಹೇಗೆ ಅಧಿಕವಾಗಿಯೇ ಪ್ರಜ್ವಲಿತವನ್ನಾಗಿ ಮಾಡುವುವೋ, ಅದರಂತೆ ಕಾಮದ ಇಚ್ಛೆಯನ್ನು ಪೂರ್ಣಗೊಳಿಸಿದಂತೆ ಇನ್ನೂ ಅಧಿಕವಾಗಿಯೇ ವಿಷಯಾಸಕ್ತಿಯು ಬೆಳೆಯುತ್ತಿರುವುದು ॥೭೭॥ ಇದರ ನಾಮವೇ ಕಾಮವಾಗಿರುವುದು. ವಿಷಯ ವಾಸನೆಯ ಯಾವ ವ್ಯವಹಾರವಿರುವುದೋ, ಅದಕ್ಕೆ ''ಈಹಾ'' ಎಂದು ಹೇಳುವರು. ತಾನು ಪ್ರಾಪ್ತಮಾಡಿಕೊಂಡಿರುವ ವಿದ್ಯೆಯ ಅತಿಶಯವಾಗಿ ಗರ್ವವಾಗುವಿಕೆಯೇ ಇದು ಮದದ ಲಕ್ಷಣವಾಗಿರುವುದು ॥೭೮॥ ಎಷ್ಟೇ ಸಂಪತ್ತು ಪ್ರಾಪ್ತವಾದರೂ ಕೂಡ ವಾಸನೆಯ ತೃಪ್ತಿಯಾಗದಿರುವಿಕೆಗೆ ಮತ್ತು ಯಾವಾಗೂ ಬೆಳೆಯುತ್ತಿರುವ ಅತೃಪ್ತಿಯ ನಾಮವು ತೃಷ್ಣಾ ಎಂದಾಗಿರುವುದು ॥೭೯॥ ಹೇ ಉದ್ಧವನೇ, ಅತ್ಯಂತ ಗರ್ವದಿಂದ ಮದವೇರಿದಾಗ ಆತನ ಕಣ್ಣುಗಳ ಮುಂದೆ ಯಾವುದೂ ಕಾಣುವುದಿಲ್ಲ. ಇದಕ್ಕೆ ''ಸ್ತಂಭಾವಸ್ಥೆ'' ಎಂದು ಕರೆಯುವರು ॥೮೦॥ ಹಣಗಳಿಸುವುದಕ್ಕಾಗಿ ಇಷ್ಟ ದೇವತೆಗಳ ಪೂಜೆಯನ್ನು ಮಾಡುವುದು ಮತ್ತು ಅವರಲ್ಲಿ ಪ್ರಾಪಂಚಿಕ ಸುಖದ ಅಪೇಕ್ಷೆ ಮಾಡುವುದು. ಇದರ ನಾಮವು ಆಶಾ ಇರುವುದು ॥೮೧॥ ಭಿದಾ ಎಂದರೆ ಭೇದಭಾವವಾಗಿರುವುದು. ಪ್ರಪಂಚದ ಭಾನವು ಸ್ಫುರಣವಾಗುವಿಕೆ ಮತ್ತು ಇದು ನನ್ನದು ಇದು ನಿನ್ನದು ಇತ್ಯಾದಿ ಈ ಯಾವ ಪ್ರಾಪಂಚಿಕ ವಿಚಾರಗಳಿಗೆ ಭಿದಾ ಎಂಬ ನಾಮಾಭಿಧಾನವಿರುವುದು ॥೮೨॥ ರಾಜಸ ಸುಖದ ಒಂದು ಆಶ್ಚರ್ಯವೇನೆಂದರೆ ವಿಷಯಸುಖದ ಯಾವ ಯಾವ ಸರ್ವ ಭೋಗಗಳಿರುವುವೋ, ಅವುಗಳಿಗೆ ಉತ್ತಮ ಸುಖವೆಂದು ಹೇಳುವರು. ಸುಖಪ್ರಯೋಗ ಎಂದು ಇದರ ನಾಮವಾಗಿರುವುದು ॥೮೩॥ ರಣರಂಗದಲ್ಲಿ ಶೂರನಿಗೆ ವೀರಶ್ರೀಯು ಪ್ರಾಪ್ತವಾಗುವಿಕೆ ಅಥವಾ ಸಾಮಾನ್ಯ ಪುರುಷನಿಗೆ ಗಂಡು ಕೂಸು ಹುಟ್ಟುವಿಕೆಯಿಂದ ಉತ್ಸಾಹಬರುವಿಕೆ ಅಥವಾ ಬೀಗರು, ಬಂಧುಬಳಗದವರಲ್ಲಿ ಶುಭವಿವಾಹದ ಸಮಾರಂಭದಿಂದ ಆಪ್ತೇಷ್ಟರಿಗೆ ಉತ್ಸಾಹವಾಗುವಿಕೆ ಇದಕ್ಕೆ ''ಮಹೋತ್ಸಾಹ'' ಎಂದು ಹೇಳುವರು ॥೮೪॥ ಶಾಸ್ತ್ರವಿವಾದಗಳಲ್ಲಿ ವಿಜಯವನ್ನು ಸಂಪಾದಿಸುವುದು ಅಥವಾ ರಣರಂಗದಲ್ಲಿ ಶೂರನನ್ನು ಪರಾಭವಗೊಳಿಸುವುದು, ಇದರಿಂದ ತನ್ನ ವಿಜಯದ ಖ್ಯಾತಿಯನ್ನು ಪ್ರಸಾರಮಾಡುವುದು ಇದರ ನಾಮವೇ ಯಶವಾಗಿರುವುದು ॥೮೫॥ ತನ್ನ ಸ್ವತಃದ ಆಶ್ರಿತರಿಂದ ತನ್ನ ಸ್ವತಃದ ಕೀರ್ತಿಯ ಸುಗಂಧವನ್ನು ಸರ್ವತ್ರವೂ ಹರಡಿಸುವಿಕೆಗೆ ಯಶಃಪ್ರೀತಿ ಎಂದು ಕರೆಯುವರು. ಹೇ ಉದ್ಧವಾ, ಇದನ್ನು ನೀನು ನಿಶ್ಚಯವಾಗಿ ತಿಳಿ ॥೮೬॥ ಹೇ ಉದ್ಧವಾ, ಛಂದೋಬದ್ಧ ವಚನೋಕ್ತಿ ಅಥವಾ ಉಪಹಾಸದಲ್ಲಿ ನಡೆದಿರುವ ಅತಿ ವಿನೋದಗಳನ್ನು ಕೇಳಿ ರಾಜಸ ಪುರುಷನಲ್ಲಿ ಹಾಸ್ಯದ ನಗುವಿಕೆಯ ಸುರಿಮಳೆಯಾಗುವುದು ॥೮೭॥ ವೀರ್ಯವೆಂದರೆ ಅತ್ಯಂತ ಪ್ರಬಲವಾದ ಬಲಾಢ್ಯ ಸಾಮರ್ಥ್ಯವು. ಶಾರೀರಿಕ ಬಲ ಪ್ರದರ್ಶನಮಾಡುವಿಕೆಗೆ ವೀರ್ಯ ಶಾಲಿತ್ವ ಎಂದು ನಾಮವಿರುವುದು ॥೮೮॥ ರಾಜನ ಪ್ರಾಬಲ್ಯದಿಂದ ವ್ಯವಹಾರ ಉದ್ಯಮಗಳ ವ್ಯಾಪಾರ ಮಾಡುತ್ತಿರುವಿಕೆ ಮತ್ತು ನ್ಯಾಯವನ್ನು ಬಿಟ್ಟು ಅಧಿಕಾರ ಬಲದಿಂದ ವ್ಯಾಪಾರ ನಡೆಸುವಿಕೆಗೆ ''ಬಲೋದ್ಯಮ'' ಎಂದು ಕರೆಯುವರು ॥೮೯॥ ಈ ಯಾವ ಹದಿನೈದು ಲಕ್ಷಣಗಳು ಯಾರಲ್ಲಿ ಪರಿಪೂರ್ಣವಾಗಿ ವಾಸ್ತವ್ಯ ಮಾಡಿರುವುವೋ, ಆತನು ನಿಜವಾಗಿಯೂ ಜೀವಭಾವದಿಂದ ರಾಜಸ ಮನುಷ್ಯನೆಂದು ತಿಳಿದುಕೊಳ್ಳಬೇಕು ॥೮೯॥ ಈಗ ಅವಿವೇಕದ ಭಾಂಡಾರವಾಗಿರುವ ಯಾವ ತಾಮಸೀ ಜನರ ತಮೋವೃತ್ತಿಗಳನ್ನು ನಾನು ನಿನಗೆ ವರ್ಣಿಸಿ ಹೇಳುವೆನು, ಅದನ್ನು ನೀನು ಕೇಳು ॥೯೧॥

ಕ್ರೋಧೋ ಲೋಭೋಽನೃತಂ ಹಿಂಸಾಯಾಚ್ಞಾ ದಂಭಃ ಕ್ಲಮಃ ಕಲಿಃ ।
ಶೋಕಮೋಹೌ ವಿಷಾದಾರ್ತೀ ನಿದ್ರಾಶಾಭೀರನುದ್ಯಮಃ ॥೪॥

ಅರ್ಥ:- ಕ್ರೋಧ, ಲೋಭ, ಅಸತ್ಯ ಭಾಷಣ, ಹಿಂಸಾ, ಯಾಚನಾ, ಪಾಖಂಡ, ಶ್ರಮ, ಸಂಘರ್ಷ, ಶೋಕ, ಮೋಹ, ವಿಷಾದ, ದೀನತೆ, ನಿದ್ರಾ, ಆಶಾ, ಭಯ ಮತ್ತು ಅಕರ್ಮಣ್ಯತೆ ಇತ್ಯಾದಿ ತಮೋಗುಣದ ವೃತ್ತಿಯಾಗಿರುವುವು.

ಕ್ರೋಧ ಕಾಮಾಚೀ ಪೂರ್ಣಾವಸ್ಥಾ । ಲೋಭ ಮ್ಹಣಿಜೇ ಅತಿಕೃಪಣತಾ । ಅನೃತ ಮ್ಹಣಿಜೇ ಅಸತ್ಯತಾ । ಹಿಂಸಾ ತೇ ತತ್ತ್ವತಾ ಪರಪೀಡಾ ॥೯೨॥ ಯಾಂಚಾ ಮ್ಹಣಿಜೇ ಲೋಲಂಗತಾ । ದಂಭ ಮ್ಹಣಿಜೇ ಅತಿಮಾನ್ಯತಾ । ಕ್ಲಮನಾಮೇ ಅತಿ ಆಯಾಸತಾ । ವ್ಯರ್ಥ ಕಲಹತಾ ಕಲಿ ಜಾಣ ॥೯೩॥ ಶೋಕ ಮ್ಹಣಿಜೇ ಹಾಹಾಕಾರೂ । ಮೋಹ ಮ್ಹಣಿಜೇ ಭ್ರಮಾಚಾ ಪೂರೂ । ವಿಷಾದ ಮ್ಹಣಿಜೇ ದುಃಖಸಂಚರೂ । ಅಭ್ಯಂತರೂ ಜೇಣೇ ಪೋಳೇ ॥೯೪॥ ಆರ್ತಿ ಮ್ಹಣಿಜೇ ಅತಿಸಂತಾಪ । ನಿಂದಾ ಮ್ಹಣಿಜೇ ಅಸದಾರೋಪ । ಆಶಾ ಮ್ಹಣಿಜೇ ಅತಿಲೋಲುಪ್ಯ । ಮಹಾಭಯಕಂಪ ಭೀಶಬ್ದೀ ॥೯೫॥ ಐಕ ನಿದ್ರೇಚೇ ನಿಜವರ್ಮ । ಜೇ ಆಳಸಾಚೇ ನಿಜಧಾಮ । ಜಾಡ್ಯತಾ ಸೋಲೀಂವ ಪರಮ । ತೇ ನಿದ್ರಾ ನಿಃಸೀಮ ತಾಮಸೀ ॥೯೬॥ ಸಾಂಡೂನಿಯಾ ಸರ್ವ ಕರ್ಮ । ಸ್ತಬ್ಧತಾ ರಾಹೇ ಪರಮ । ಯಾ ನಾಂವ ಅನುದ್ಯಮ । ಸುಖಾವಲೇ ತಮ ತೇ ಠಾಯೀ ॥೯೭॥ ಯಾ ತಮೋಗುಣಾಚ್ಯಾ ಸೋಳಾ ಕಳಾ । ಜ್ಯಾಚೇ ಅಂಗೀ ಬಾಣತೀ ಸಕಳಾ । ತೋ ತಮೋರಾತ್ರೀಂಚೀ ಚಂದ್ರಕಳಾ । ಅವಿವೇಕ ಆಂಧಳಾ ತಾಮಸೂ ॥೯೮॥ ಸತ್ತ್ವರಜತಮೋಗುಣ । ಯಾಂಚೇ ಓಳಖೀ ಲಾಗೀ ಜಾಣ । ಕೇಲೇ ಭಿನ್ನ ಭಿನ್ನ ನಿರೂಪಣ । ಆತಾ ಮಿಶ್ರಲಕ್ಷಣ ತೇ ಐಕ ॥೯೯॥

ಸತ್ತ್ವಸ್ಯ ರಜಸಶ್ಚೈತಾಸ್ತಮಸಶ್ಚಾನುಪೂರ್ವಶಃ । ವೃತ್ತಯೋ ವರ್ಣಿತಪ್ರಾಯಾಃ ಸನ್ನಿಪಾತಮಥೋ ಶೃಣು ॥೫॥

ಅರ್ಥ:- ಈ ಪ್ರಕಾರವಾಗಿ ಕ್ರಮದಿಂದ ಸತ್ವಗುಣ, ರಜೋಗುಣ ಮತ್ತು ತಮೋಗುಣ ಇವುಗಳ ವೃತ್ತಿಯ ಸ್ಥಿತಿಯನ್ನು ಭಿನ್ನ ಭಿನ್ನವಾಗಿ ವರ್ಣನೆಯನ್ನು ಮಾಡಲಾಯಿತು. ಈಗ ಅವುಗಳ ಮಿಶ್ರಣದಿಂದ ಆಗುವ ವೃತ್ತಿಗಳ ವರ್ಣನೆಯನ್ನು ಕೇಳು.

ಸಾಂಗಿತಲೀ ತ್ರಿಗುಣಸ್ಥಿತೀ । ತ್ಯಾ ಏಕಏಕಾಚ್ಯಾ ಅನಂತ ವೃತ್ತೀ । ತ್ಯಾಹೀ ಅನಂತಪ್ರಾಯ ಹೋತೀ । ಜೀವಾಸೀ ಗುಣಗುಂತೀ ಯೇಥೇಂಚಿ ಪಡೇ ॥೧೦೦॥ ಮಸ್ತಕೀ ಕೇಶ ಚಿಕಟಲೇ ಹೋತೀ । ತೇ ಜ್ಯಾಚೇ ತ್ಯಾ ನುಗವತೀ । ತೇವೀ ತ್ರಿಗುಣಾಂಚಿ ಗುಣಗುಂತೀ । ಜೀವಾಹಾತೀ ಉಗವೇನಾ ॥೧೦೧॥ ಮಿಳೋನಿ ಸಖ್ಯಾ ಮಾಯಬಹಿಣೀ । ಹಾತೀ ಘೇಊನಿ ತೇ ಫಣೀ । ಉಗವಿತೀ ಚಿಕಟಲ್ಯಾ ಕೇಶಶ್ರೇಣೀ । ತೇವೀ ತ್ರಿಗುಣಾಂಚೀ ವೇಣೀ ಜೀವಾಸೀ ॥೧೦೨॥

ಕ್ರೋಧವೆಂದರೆ ಕಾಮದ ಪರಿಪೂರ್ಣವಾದ ಬೆಳವಣಿಗೆಯಾದ ಸ್ಥಿತಿಯಾಗಿರುವುದು. ಲೋಭವೆಂದರೆ ಅತ್ಯಂತ ಕೃಪಣತನವು, ಅನೃತವೆಂದರೆ ಸುಳ್ಳು ಮಾತನಾಡುವುದು, ಹಿಂಸಾ ಎಂದರೆ ಇತರರಿಗೆ ಪೀಡೆಯನ್ನು ಕೊಡುವುದು ॥೯೨॥ ಯಾಂಚಾವೆಂದರೆ ಯಾಚನೆಯನ್ನು ಮಾಡುವುದು, ದಂಭವೆಂದರೆ ಅತಿಮಾನ್ಯತೆಯನ್ನು ಪ್ರಾಪ್ತಮಾಡಿಕೊಳ್ಳಲು ಮಾಡುವ ಡೋಂಗೀತನ, ಕ್ಲಮವೆಂದರೆ ಅತ್ಯಂತ ಪರಿಶ್ರಮದಿಂದ ಒದಗುವ ದಣಿವು, ಮತ್ತು ಯಾವುದೇ ಕಾರಣವಿಲ್ಲದೇ ಸಂಘರ್ಷ ಮಾಡುವುದು. ಇದರ ನಾಮವೇ "ಕಲಿ" ಎಂದು ಇರುವುದು ॥೯೩॥ ಶೋಕವೆಂದರೆ ಹಾಹಾಃಕಾರವು, ಭ್ರಮದ ಪೂರವೆಂದರೆ ಮೋಹವು, ಯಾವುದರಿಂದ ಅಂತಃಕರಣವು ಸುಡಲಾರಂಭಿಸುವುದೋ, ಆ ದುಃಖದ ಸಂಚಾರವೇ ವಿಶಾದವಾಗಿರುವುದು ॥೯೪॥ ಅತಿಶಯ ಸಂತಾಪವೆಂದರೆ ಆರ್ತತ್ವವಾಗಿರುವುದು. ಒಬ್ಬರಲ್ಲಿ ಸುಳ್ಳು ಆರೋಪ ಹೊರಿಸುವುದು ಇದು ನಿಂದೆಯಾಗಿರುವುದು. ಅತಿಶಯ ಲೋಲುಪ್ಯತೆಯ ಆಶೆಯಾಗಿರುವುದು. ಭೀ ಎಂದರೆ ಅತಿಶಯ ಭಯದಿಂದ ಶರೀರವು ಥರಥರವೆಂದು ನಡುಗುವುದು ॥೯೫॥ ಈಗ ನಿದ್ರೆಯ ಮರ್ಮವನ್ನು ಹೇಳುವೆನು ಅದನ್ನು ಕೇಳು. ಯಾವ ಆಲಸ್ಯದ ತವರುಮನೆಯಾಗಿರುವ, ಯಾವ ಅತ್ಯಂತ ಜಾಡ್ಯತನದ ಅಮರ್ಯಾದಾ ತಾಮಸತನವು ನಿದ್ರೆಯಾಗಿರುವುದು ॥೯೬॥ ಸರ್ವ ಕರ್ಮಗಳನ್ನು ಹಿಂದಕ್ಕೆ ಸರಿಸಿ, ಏನೊಂದೂ ಮಾಡದೇ ಮೂಢನಂತೆ ಸುಮ್ಮನೇ ಕುಳಿತುಕೊಳ್ಳುವುದು ಇದಕ್ಕೆ ಅನುದ್ಯಮವೆಂದು ಕರೆಯುವರು. ಈ ಅವಸ್ಥೆಯಲ್ಲಿ ತಮುಗುಣದ ವಸತಿಯು ಪರಿಪೂರ್ಣವಾಗಿರುವುದು ॥೯೭॥ ಈ ಯಾವ ತಮೋಗುಣದ ಹದಿನಾರು ಲಕ್ಷಣಗಳು ಯಾರ ಅಂಗದಲ್ಲಿ ಪೂರ್ಣವಾಗಿ ತುಂಬಿಕೊಂಡಿರುವುವೋ, ಆತನು ಅವಿವೇಕದಿಂದ ಕುರುಡನಾಗಿ ತಾಮಸ ಅಮವಾಸ್ಯ ರಾತ್ರಿಯ ಕಡು ಕಪ್ಪಾದ ಚಂದ್ರನಾಗಿರುವನು ॥೯೮॥ ಸಾತ್ವಿಕ, ರಾಜಸ ಮತ್ತು ತಾಮಸ ಈ ಮೂರು ಗುಣಗಳ ಪರಿಚಯವಾಗುವುದಕ್ಕಾಗಿ ಅವುಗಳನ್ನು ಬೇರೆ ಬೇರೆಯಾಗಿ ನಿರೂಪಣೆಯನ್ನು ಮಾಡಲಾಗಿರುವುದು. ಈಗ ಅವುಗಳ ಮಿಶ್ರಲಕ್ಷಣಗಳನ್ನು ಆಲಿಸು ॥೯೯॥

ವಿವಿಧ ಗುಣಗಳ ಸ್ಥಿತಿಯನ್ನು ನಾನು ನಿನಗೆ ಹೇಳಿದೆನು. ಅವು ಒಂದೊಂದರ ಅನೇಕ ವೃತ್ತಿಗಳಿರುವುವು ಮತ್ತು ಅದರಲ್ಲಿಯೂ ಅನಂತ ಪ್ರಕಾರಗಳಿರುವುವು. ಇದರಲ್ಲಿ ಜೀವವು ಸಿಲುಕಿಕೊಂಡಿರುವುದು ॥೧೦೦॥ ಸ್ತ್ರೀಯಳ ತಲೆಯಲ್ಲಿಯ ಕೂದಲುಗಳು ತೊಡಕುಬೀಳಲು ಆಗ ಆಕೆಗೆ ತನ್ನ ಕೂದಲುಗಳ ತೊಡಕು ಸ್ವತಃ ಬಿಡಿಸಲು ಆಗುವುದಿಲ್ಲ. ಅದರಂತೆ ತ್ರಿವಿಧ ಗುಣಗಳ ತೊಡಕು ಜೀವಕ್ಕೆ ಬಿಡಿಸಲು ಅಶಕ್ಯವಾಗಿರುವುದು ॥೧೦೧॥ ಮೈತ್ರಿಣೀ, ತಾಯೀ, ಅಕ್ಕ ಇವರು ಏಕತ್ರ ಕೂಡಿಕೊಂಡು ಕೈಯಲ್ಲಿ ಎಣ್ಣೆ ಮತ್ತು ಬಾಚಣಿಕೆಯನ್ನು ಹಿಡಿದು ಗಟ್ಟಿಯಾಗಿ ತೊಡಕಿರುವ ಕೂದಲುಗಳನ್ನು ಬಿಡಿಸುವರು. ಅದರಂತೆ ಜೀವಕ್ಕೂ ಕೂಡ ತ್ರಿಗುಣಗಳ ಜಡೆವಿರುವುದು ॥೧೦೨॥

ತ್ರಿಗುಣಾಂಚೀ ವಿಭಾಗವೃತ್ತೀ । ಜೀವಸಾಮರ್ಥ್ಯೆ ಜರೀ ಹೋತೀ । ತರೀ ಶುದ್ಧಸತ್ತ್ವೇ ಕರೂನಿ ವಸ್ತೀ । ಗುಣಾತೀತೀ ಪ್ರವೇಶತಾ ।।೧೦೩।। ಐಸಾ ನಿಜಗುಣಾಂಚಾ ಉಗವೋ । ಜೀವಾಚೇನಿ ನೋಹೇ ನಿರ್ವಾಹೋ । ಯಾಲಾಗೀ ಗುರುಚರಣೀ ಸದ್ಭಾವೋ । ಸಭಾಗ್ಯ ಪಹಾ ವೋ ರಾಖಿತೀ ।।೧೦೪।। ಜೇ ಸಭಾಗ್ಯ ಭಾಗ್ಯವಂತ ಜನೀ । ಜ್ಯಾಂಸೀ ಸದ್ಗುರು ಸಖೀ ಜನನೀ । ವಿವೇಕವೈರಾಗ್ಯ ಘೇಊನಿ ಘಣೀ । ಜೋ ತ್ರಿಗುಣಾಂಚೀ ವೇಣೀ ಉಗವಿತೂ ।।೧೦೫।। ಜ್ಯಾಂಚೀ ಉಗವಿಲೀ ಗುಣಗುಂತೀ । ಪುಢತೀ ಗುಂತೀ ಪಡೇ ಮಾಗುತೀ । ಯಾಲಾಗೀ ತೇ ಮಹಾಮತೀ । ಮುಂಡೂನಿ ಸಾಂಡಿತೀ ಸನ್ಯಾಸೀ ।।೧೦೬।। ಏಕಾಚೀ ನವಲಗತೀ । ಉದ್ಭಟ ವೈರಾಗ್ಯಾಚೀ ಸ್ಥಿತೀ । ಗುಂತಿ ಉಗವಾಯಾ ನ ರಿಘತೀ । ಮುಳೀಂಚಿ ಮುಂಡಿತೀ ಸಮೂಳ ।।೧೦೭।। ವಿವೇಕಫಣೀಚೇನಿ ಮೇಳೇ । ಓಢಿತಾ ವೈರಾಗ್ಯ ಬಳೇ । ಜೋ ಅಶಕ್ತ ಭಾವಬಳೇ । ತೋ ಮಧ್ಯೇಚಿ ಪಳೇ ಉಠೂನಿ ।।೧೦೮।। ಅಶಕ್ತೇ ಪಳತಾ ದೇಖೋನಿ ದೂರೀ । ಏಕೇ ಪಳಾಲೀ ಮೋಹ ಅಂಧಾರೀ । ಏಕೇ ಗುಂತೀ ರಾಖೋನಿ ಶಿರೀ । ಗುಂತಿ ಮಾರ್ಝಾರೀ ರಿಘಾಲೀ ।।೧೦೯।। ಏಕೇ ಅಸತ್ಯ ಕರಂಟೀ । ನವ್ಹೇಚಿ ಗುರುಮಾಉಲೀಸೀ ಭೇಟೀ । ಐಶೀ ಸಂಸಾರೀ ಪೋರೇ ಪೋರಟೀ । ಗುಣದುಃಖಕೋಟೀ ಭೋಗಿತೀ ।।೧೧೦।। ದ್ವಿಪರಾರ್ಧಾಯು ವಿಧಾತಾ । ತ್ಯಾಚೇನಿ ನೋಹೇ ಗುಣಭಾಗತಾ । ಮಗ ಇತರಾಂಚೀ ಕೋಣ ಕಥಾ । ಗುಣ ತತ್ತ್ವತಾ ನಿವಡಾವಯಾ ।।೧೧೧।। ಐಶಿಯಾ ಜ್ಯಾ ತ್ರಿಗುಣವೃತ್ತೀ । ಮಜಹೀ ನಿಃಶೇಷ ನ ನಿವಡತೀ । ಯಾಲಾಗೀ ಧ್ವನಿತಪ್ರಾಯ ಪದೋಕ್ತೀ । ದೇವ ಶ್ಲೋಕಾರ್ಧೀ ಬೋಲಿಲಾ ।।೧೧೨।। ಮಾಗಿಲ್ಯಾ ತೀ ಶ್ಲೋಕಾರ್ಧೀ । ಸಾಂಗೀತಲ್ಯಾ ತ್ರಿಗುಣಸ್ಥಿತೀ । ತ್ರಿಗುಣಾಂಚೀ ಮಿಶ್ರಿತ ಗತೀ । ಸನ್ನಿಪಾತ ವೃತ್ತೀ ತೇ ಐಕಾ ।।೧೧೩।।

ಸನ್ನಿಪಾತಸ್ತ್ವಹಮಿತಿ ಮಮೇತ್ಯುದ್ಧವ ಯಾ ಮತಿಃ । ವ್ಯವಹಾರಃ ಸನ್ನಿಪಾತೋ ಮನೋಮಾತ್ರೇಂದ್ರಿಯಾಸುಭಿಃ ।।೬।।

ಅರ್ಥ :- ಹೇ ಉದ್ಧವಾ, ''ನಾನು'' ಮತ್ತು ''ಇದು ನನ್ನದು'' ಈ ಪ್ರಕಾರದ ಬುದ್ಧಿಯು ಮೂರು ಗುಣಗಳ ಮಿಶ್ರಣವಾಗಿರುವುದು. ಯಾವ ಮನ, ಶಬ್ದಾದಿ ವಿಷಯ ಇಂದ್ರಿಯಗಳು ಮತ್ತು ಪ್ರಾಣಗಳ ಕಾರಣದಿಂದ ಪೂರ್ವೋಕ್ತ ವೃತ್ತಿಗಳ ಉದಯವಾಗುವುವು. ಇದು ಸರ್ವರ ಸಾತ್ವಿಕ, ರಾಜಸ ಮತ್ತು ತಾಮಸ ಗುಣಗಳಾಗಿರುವುವು.

ಗುಣಸನ್ನಿಪಾತಪ್ರಕಾರೂ । ಏಕಚಿ ಜೋ ಕಾ ಅಹಂಕಾರೂ । ತೋ ಗುಣಸಂಗೇ ತ್ರಿಪ್ರಕಾರೂ । ಐಕ ವಿಚಾರೂ ತಯಾಚಾ ।।೧೧೪।।

ಜೀವಕ್ಕೆ ಒಂದುವೇಳೆ ತನ್ನ ಸಾಮರ್ಥ್ಯದಿಂದ ಮೂರು ಗುಣಗಳ ವಿಭಾಗ ಮಾಡಲು ಬಂದಿದ್ದರೆ ಆಗ ಆ ಜೀವವು ಶುದ್ಧ ಸತ್ವಗುಣದಲ್ಲಿ ವಾಸವನ್ನು ಮಾಡಿ ಗುಣಾತೀತ ಅವಸ್ಥೆಗೆ ಮುಟ್ಟಬಹುದಾಗಿತ್ತು ।।೧೦೩।। ಹೀಗೆ ಗುಣಗಳ ವಿಭಾಗ ಮಾಡಲು ಜೀವಕ್ಕೆ ಅಸಾಧ್ಯವಾದ್ದರಿಂದ ಸಭಾಗ್ಯ ಭಕ್ತರು ಸದ್ಗುರುಗಳ ಚರಣಕಮಲಗಳಲ್ಲಿ ದೃಢವಾದ ಸದ್ಭಾವವನ್ನು ಇಡುವರು ।।೧೦೪।। ಜಗತ್ತಿನಲ್ಲಿ ಇಂತಹ ಶ್ರೇಷ್ಠ ಭಾಗ್ಯವಂತ ಭಕ್ತರಿಗೆ ಅವರ ಸದ್ಗುರುಗಳು ಅವರಿಗೆ ತಾಯಿಯಾಗಿರುವಳು. ಈ ಸದ್ಗುರು ತಾಯಿಯು ಕೈಯಲ್ಲಿ ವಿವೇಕ ವೈರಾಗ್ಯರೂಪ ಬಾಚಣಿಕೆಯನ್ನು ತೆಗೆದುಕೊಂಡು ತಮ್ಮ ಭಕ್ತರ ತ್ರಿಗುಣರೂಪ ಜಡೆಯ ತೊಡಕನ್ನು ಬಿಡಿಸುವಳು ।।೧೦೫।। ಇದು ಒಂದುಸಾರೆ ತೊಡಕಿನಿಂದ ಪಾರಾಗಲು ಪುನಃ ತೊಡಕಾಗಬಾರದೆಂಬ ದೂರದೃಷ್ಟಿಯ ಭಕ್ತರು ತಮ್ಮ ತಲೆಯನ್ನು ಬೋಳಿಸಿಕೊಂಡು ಸನ್ಯಾಸಿಯಾಗಿಬಿಡುವರು ।।೧೦೬।। ಕೆಲವು ಭಕ್ತರ ವಿಶೇಷವಾದ ಆಶ್ಚರ್ಯವೇನೆಂದರೆ, ಅವರು ತ್ರಿಗುಣಗಳ ತೊಡಕು ಬಿಡಿಸುವ ಪ್ರಯತ್ನವನ್ನು ಮಾಡದೇ ತಮ್ಮ ತೀವ್ರವಾದ ವೈರಾಗ್ಯದಿಂದ ಒಮ್ಮೆಲೇ ಸಂಪೂರ್ಣವಾಗಿ ಮುಂಡನವನ್ನು ಮಾಡಿಕೊಳ್ಳುವರು ।।೧೦೭।। ವಿವೇಕದ ಬಾಚಣಿಕೆಯಿಂದ ಬಾಚುತ್ತಿರಲು ಆಗ ವಿರಕ್ತಿಯ ಬಲದಿಂದ ಎಳೆದಾಗ ಆತನ ಶ್ರದ್ಧೆಯು ಚಂಚಲವಾಗಿ ಅವನು ಮಧ್ಯದಲ್ಲಿಯೇ ಎದ್ದು ಓಡಿ ಹೋಗುವನು ।।೧೦೮।। ಈ ಪ್ರಕಾರವಾಗಿ ದುರ್ಬಲ ಮನಸ್ಸಿನ ಜನರು ದೂರ ಓಡಿ ಹೋಗುತ್ತಿರುವುದನ್ನು ನೋಡಿದ ಇತರ ಅನೇಕರು ಮೋಹರೂಪ ಅಂಧಃಕಾರದಲ್ಲಿ ಧಾವಿಸುತ್ತಿರುವರು. ಇನ್ನೂ ಕೆಲವರು ತಮ್ಮ ಕೂದಲುಗಳ ತೊಡಕನ್ನು ಹಾಗಯೇ ಬಿಟ್ಟು ಪುನಃ ಆ ತೊಡಕಿನಲ್ಲಿ ಹೆಚ್ಚಾಗಿ ಸಿಕ್ಕಿ ಬೀಳುತ್ತಿರುವರು ।।೧೦೯।। ಕೆಲವರು ಅತ್ಯಂತ ಅಭಾಗ್ಯರಾಗಿರುವುದರಿಂದ ಅವರಿಗೆ ಗುರುಮಾತೆಯ ದರ್ಶನವೇ ಆಗುವುದಿಲ್ಲ . ಈ ಕಾರಣವಾಗಿ ಸಂಸಾರದಲ್ಲಿ ಇಂತಹ ಅನೇಕ ಬಾಲಕರು ಹುಡುಗರು ತ್ರಿಗುಣದಿಂದ ಆಗುತ್ತಿರುವ ಬಹುವಿಧ ಪ್ರಕಾರದ ಕೋಟ್ಯಾವಧಿ ದುಃಖಗಳನ್ನು ಭೋಗಿಸುತ್ತಿರುವರು ।।೧೧೦।। ಎರಡು ಪರಾರ್ಧ ವರ್ಷಗಳಷ್ಟು ಆಯುಷ್ಯವಿರುವ ಬ್ರಹ್ಮದೇವನಿಗೂ ಕೂಡ ಈ ತ್ರಿಗುಣಗಳ ವಿಭಾಗವನ್ನು ಮಾಡಲು ಬರಲಿಲ್ಲ. ಅಂದಮೇಲೆ ಇತರರ ಯಾವ ಕಥೆ? ಈ ಗುಣಗಳ ವಿಭಾಗವನ್ನು ಹೇಗೆ ಮಾಡಲು ಸಾಧ್ಯ? ।।೧೧೧।। ಹೀಗೆ ಈ ತ್ರಿಗುಣಗಳ ವೃತ್ತಿಯಾಗಿದ್ದು ಅವುಗಳ ಪರಿಪೂರ್ಣ ವಿಭಾಗವನ್ನು ಮಾಡಲು ನನಗೂ ಕೂಡ ಆಗದ ಮಾತಾಗಿರುವುದು. ಆದ್ದರಿಂದ ಧ್ವನಿತ ಮಾಡಿರುವ ಪದಗಳನ್ನು ದೇವನು ಶ್ಲೋಕಾರ್ಧದಿಂದ ಹೇಳಿರುವನು ।।೧೧೨।। ಹಿಂದಿನ ಮೂರು ಶ್ಲೋಕಗಳಲ್ಲಿ ಮೂರು ಗುಣಗಳ ಭಿನ್ನ ಭಿನ್ನ ಲಕ್ಷಣಗಳನ್ನು ಹೇಳಿರುವುದು. ಈಗ ಅವುಗಳ ಮಿಶ್ರ ಲಕ್ಷಣಗಳನ್ನು ಹೇಳುವೆನು. ಇದಕ್ಕೆ ಸನ್ನಿಪಾತವೃತ್ತಿ ಎನ್ನುವರು, ಅದನ್ನು ಏಕಾಗ್ರಚಿತ್ತದಿಂದ ಕೇಳು ।।೧೧೩।।

ಗುಣಸನ್ನಿಪಾತದ ಪ್ರಕಾರವು ಹೇಗಿದೆ ಎಂದರೆ ಒಂದೇ ಇರುವ ಅಹಂಕಾರವು ಅದು ಗುಣಗಳ ಸಂಗತಿಯಿಂದ ಮೂರು ಪ್ರಕಾರವಾಗಿದೆ. ಅವುಗಳ ವಿಚಾರವನ್ನು ಈಗ ಕೇಳು ।।೧೧೪।।

ವರ್ಣಾಶ್ರಮವಿಹಿತ ವಿಲಾಸ । ವೇದಾಜ್ಞಾ ಪಾಳಣೇ ಅವಶ್ಯ । ಮೀ ಆತ್ಮಾ ಜಾಣ ಚಿದಂಶ । ಹಾ ಅಹಂವಿಲಾಸ ಸಾತ್ವಿಕ ॥೧೧೫॥ ಮೀ ಸ್ವಧರ್ಮಕರ್ಮಕರ್ತಾ । ಮೀ ಸ್ವರ್ಗಾದಿ ಸುಖಭೋಕ್ತಾ । ಮಜ ಪಾವತೀ ನಾನಾವಸ್ಥಾ । ಯಾ ನಾಂವ ಅಹಂತಾ ರಾಜಸ ॥೧೧೬॥ ಮೀ ದೇಹಧಾರೀ ಸುಭಟ ನರ । ಮೀಚಿ ಕರ್ತಾ ಶತ್ರುಸಂಹಾರ । ಮೀ ಸರ್ವಾರ್ಥೀ ಅತಿದುರ್ಧರ । ಹಾ ಅಹಂಕಾರ ತಾಮಸ ॥೧೧೭॥ ಗುಣಾನುಸಾರೇ ಮಮತಾ ಜಾಣ । ತ್ರಿವಿಧರೂಪೇ ಸ್ಫುರಣ । ತೇಚಿ ಅರ್ಥೀಚೇ ನಿರೂಪಣ । ವಿಶದ ಶ್ರೀಕೃಷ್ಣ ಸಾಂಗತ ॥೧೧೮॥ ಮಾಝ್ಯೋ ಹೃದಯೀಂಚಾ ಭಗವಂತ । ತೋಚಿ ಸರ್ವ ಭೂತೀ ಹೃದಯಸ್ಥ । ಭೂತೇ ಮಾಝೀಂಚ ಸಮಸ್ತ । ಹೇ ಮಮತಾ ಶೋಧಿತ ಸತ್ತ್ವಾಚೀ ॥೧೧೯॥ ಭಕ್ತ ಸಂತ ಸಾಧು ಸಜ್ಜನ । ತೇಚಿ ಮಾಝ್ಯೋ ಸುಹೃಜ್ಜನ । ಐಶೀ ಜೇ ಮಮತಾ ಪೂರ್ಣ । ಉದ್ಧವಾ ಜಾಣ ಸತ್ತ್ವಸ್ಥ ॥೧೨೦॥ ಜೀವಾಹೂನೀ ಪರತೀ । ಸದ್ಗುರುಚರಣೀ ಅತಿಪ್ರೀತೀ । ಐಶೀ ಮಮತೇಚೀ ಜೇ ಜಾತೀ । ತೇ ಜಾಣ ನಿಶ್ಚಿತೀ ಸಾತ್ವಿಕ ॥೧೨೧॥ ಜ್ಯಾ ದೇವಾಚೀ ಉಪಾಸಕತಾ । ಶೈವೀ ವೈಷ್ಣವೀ ದೀಕ್ಷಿತತಾ । ದೇವೀ ಧರ್ಮೀಪೂರ್ಣ ಮಮತಾ । ತೇ ಜಾಣ ಸಾತ್ತ್ವಿಕತಾ ಸತ್ವಸ್ಥ ॥೧೨೨॥ ಶೈವೀ ವೈಷ್ಣವೀ ಧರ್ಮಮಮತಾ । ದಂಭರಹಿತ ನಿಷ್ಕಾಮತಾ । ತೇ ತೇ ಸಾತ್ತ್ವಿಕೀ ಮಮತಾ । ಐಕ ಅವಸ್ಥಾ ರಾಜಸಾಚೀ ॥೧೨೩॥ ನಿವೃತ್ತಿಮಾರ್ಗ ಮಾನೀ ಲಟಿಕ । ಸತ್ಯ ಸಾಚಾರ ಲೌಕಿಕ । ಲೋಕೈಷಣೇಚೀ ಮಮತಾ ದೇಖ । ತೇ ಆವಶ್ಯಕ ರಾಜಸೀ ॥೧೨೪॥ ಪ್ರವೃತ್ತಿಶಾಸ್ತ್ರೀ ಆವಡೀ । ಲೌಕಿಕಾಚೀ ಅತಿಗೋಡೀ । ನಾಮರೂಪಾಂಚೀ ಉಭವೀ ಗುಢೀ । ಹೇ ಮಮತಾ ರೋಕಡೀ ರಾಜಸ ॥೧೨೫॥ ಸ್ತ್ರೀಪುತ್ರೇ ಮಾಝೀ ಆವಶ್ಯಕ । ಶರೀರಸಂಬಂಧೀ ಆಪ್ತ ಲೋಕ । ದ್ರವ್ಯಾಚೀ ಮಮತಾ ನಿಷ್ಟಂಕ । ಹೇ ಬುದ್ಧಿ ವೋಳಖ ರಾಜಸ ॥೧೨೬॥ ಜ್ಯಾ ದೇವಾಚೀ ಕರಿತಾ ಭಕ್ತಿ । ನಾಮ ರೂಪ ಜೋಡೇ ಸಂಪತ್ತೀ । ತೀ ತೀ ದೈವತೇ ಆವಡತೀ । ಹೇ ಮಮತಾ ನಿಶ್ಚಿತೀ ರಾಜಸ ॥೧೨೭॥ ಕಾಮ್ಯ ಕರ್ಮೀ ಆವಡೀ ದೇಖ । ಆಪ್ತ ಮಾನೀ ಸಕಾಮಕರ್ಮಕ । ಸತ್ಯ ಸ್ವರ್ಗಾದಿ ವಿಷಯಸುಖ । ಹೇ ಮಮತಾ ನಿಷ್ಟಂಕ ರಾಜಸ ॥೧೨೮॥

ವರ್ಣಾಶ್ರಮ ಪ್ರಕಾರ ನಿಯಮಿಸಿ ಕೊಟ್ಟಿರುವ ಆಚರಣೆಯನ್ನು ವೇದಾಜ್ಞೆಯಂತೆ ಆಚರಿಸಿ ನಾನೇ ಜ್ಞಾನರೂಪ ಆತ್ಮನಾಗಿರುವೆನು ಎಂದು ತಿಳಿದುಕೊಳ್ಳುವಿಕೆಯು ಇದು ಸಾತ್ವಿಕ ಅಹಂಕಾರದ ಪ್ರಕಾರವಾಗಿರುವುದು ॥೧೧೫॥ ನಾನು ಸ್ವಧರ್ಮದಂತೆ ಕರ್ಮಗಳನ್ನು ಮಾಡುವವನಾಗಿರುವೆ, ನಾನು ಸ್ವರ್ಗಾದಿ ಸುಖದ ಉಪಭೋಗಗಳನ್ನು ಪಡೆಯುವವನಾಗಿರುವೆ, ನನಗೆ ಅನೇಕ ಪ್ರಕಾರಗಳ ಸುಖವಿಲಾಸಗಳು ಪ್ರಾಪ್ತವಾಗುತ್ತಿವೆ. ಹೀಗೆಂದು ತಿಳಿದುಕೊಳ್ಳುವಿಕೆಯು ಇದು ರಾಜಸ ಅಹಂಕಾರವಾಗಿರುವುದು ॥೧೧೬॥ ನಾನು ದೇಹಧಾರೀ ಶೂರ ಪರಾಕ್ರಮೀ ಯೋದ್ಧನಾಗಿರುವೆನು, ನಾನು ಶತ್ರುಗಳನ್ನು ಸಂಹರಿಸುವವನಾಗಿರುವೆನು, ನಾನು ಎಲ್ಲದರಲ್ಲಿಯೂ ಅಜಿಂಕ್ಯನಾಗಿರುವೆನು, ಹೀಗೆಂದು ತಿಳಿದುಕೊಳ್ಳುವಿಕೆಯು ಇದು ತಾಮಸ ಅಹಂಕಾರವಾಗಿರುವುದು ॥೧೧೭॥ ಸಾತ್ವಿಕ, ರಾಜಸ, ತಾಮಸ ಈ ಮೂರು ಗುಣಗಳಾನುಸಾರವಾಗಿ ಮಮತೆಯೂ ಕೂಡ ಮೂರು ಪ್ರಕಾರವಾಗಿರುವುವು. ಶ್ರೀ ಕೃಷ್ಣನು ಈಗ ಇದೇ ವಿಷಯವನ್ನು ಕುರಿತು ಸ್ಪಷ್ಟವಾಗಿ ನಿರೂಪಣೆಯನ್ನು ಮಾಡುವನು ॥೧೧೮॥ ನನ್ನ ಹೃದಯದಲ್ಲಿರುವ ಯಾವ ಪರಮಾತ್ಮನು ಸರ್ವ ಪ್ರಾಣಿಮಾತ್ರರ ಹೃದಯದಲ್ಲಿರುವನು. ಸರ್ವ ಪ್ರಾಣಿಮಾತ್ರರು ನನ್ನವರೇ ಆಗಿರುವರು. ಹೀಗೆಂದು ತಿಳಿದುಕೊಳ್ಳುವಿಕೆಯು ಇದೇ ಶುದ್ಧ ಸಾತ್ವಿಕ ಗುಣದ ಮಮತೆಯಾಗಿರುವುದೆಂದು ತಿಳಿಯಬೇಕು ॥೧೧೯॥ ಹೇ ಉದ್ಧವಾ, ಭಕ್ತ, ಸಾಧು, ಸಂತ, ಸಜ್ಜನ ಈ ಸರ್ವರೂ ನನ್ನ ಆಪ್ತಬಂಧುಗಳಾಗಿರುವರು ಎಂದು ಹೀಗೆ ಇರುವ ಮಮತೆಯು ಇದು ಸಾತ್ವಿಕವಾಗಿರುವುದೆಂದು ನೀನು ತಿಳಿ ॥೧೨೦॥ ಸದ್ಗುರು ಚರಣ ಕಮಲಗಳಲ್ಲಿ ತನ್ನ ಜೀವಕ್ಕಿಂತಲೂ ಅಧಿಕವಾಗಿ ಪ್ರೇಮವನ್ನು ಮಾಡುವುದು. ಈ ಯಾವ ಮಮತೆಯ ಪ್ರಕಾರವು ಇದೂ ಕೂಡ ನಿಜವಾಗಿಯೂ ಸಾತ್ವಿಕವಾಗಿರುವುದು ॥೧೨೧॥ ಯಾವ ದೇವರ ಉಪಾಸನೆ ಹೇಗಿರುವುದೋ, ಅದು ಶೈವವಾಗಿರಲಿ ಅಥವಾ ವೈಷ್ಣವವಾಗಿರಲಿ ದೀಕ್ಷೆಯನ್ನು ಪಡೆದುಕೊಳ್ಳುವಿಕೆ ಅಥವಾ ದೇವಧರ್ಮಗಳಲ್ಲಿ ಪರಿಪೂರ್ಣವಾದ ಮಮತೆಯನ್ನಿಡುವಿಕೆ ಇದೂ ಕೂಡ ಸಾತ್ವಿಕ ಮಮತೆಯಾಗಿರುವುದು ॥೧೨೨॥ ಶೈವ ಅಥವಾ ವೈಷ್ಣವ ಧರ್ಮಗಳಲ್ಲಿ ದಂಭರಹಿತವಾಗಿ ನಿಷ್ಕಾಮ ಮಮತೆಯನ್ನಿಡುವಿಕೆಯು ಇದು ಸಾತ್ವಿಕ ಮಮತೆಯಾಗಿರುವುದು. ಈಗ ರಾಜಸ ಮಮತೆಯ ಸ್ಥಿತಿಯನ್ನು ಆಲಿಸು ॥೧೨೩॥ ನಿವೃತ್ತಿ ಮಾರ್ಗಕ್ಕೆ ಸುಳ್ಳು ಎಂದು ತಿಳಿದುಕೊಳ್ಳುವುದು, ಲೌಕಿಕದ ಎಲ್ಲವೂ ಅಷ್ಟೇ ನಿಜವೆಂದು ತಿಳಿದುಕೊಳ್ಳುವುದು, ಲೌಕಿಕದಲ್ಲಿ ಮಾನ ಸನ್ಮಾನಗಳ ಅಪೇಕ್ಷೆ ಪಡುವುದು, ಈ ಮಮತೆಯು ನಿಜವಾಗಿಯೂ ರಾಜಸಿಯಾಗಿರುವುದು ॥೧೨೪॥ ಪ್ರಪಂಚದಲ್ಲಿ ಅತಿಶಯವಾಗಿ ಪ್ರೀತಿವಿರುವಿಕೆ, ಲೌಕಿಕದಲ್ಲಿ ಆನಂದ ಪಡೆಯುವಿಕೆ ನಾಮರೂಪದ ಪತಾಕೆ ಹಾರಿಸುವಿಕೆ ಇವು ರಾಜಸ ಮಮತೆಯಾಗಿರುವುದು ॥೧೨೫॥ ಸ್ತ್ರೀ ಪುತ್ರರು, ಆಪ್ತೇಷ್ಟರು, ಬಂಧುಬಳಗದವರು ಇವರೆಲ್ಲರೂ ನನ್ನವರು ಎಂದು ಬುದ್ಧಿಯನ್ನಿಡುವಿಕೆ, ಹಣದಲ್ಲಿ ಅತ್ಯಂತ ಮಮತೆಯನ್ನಿಡುವಿಕೆ ಇದು ರಾಜಸಮಮತೆಯಾಗಿರುವುದು ॥೧೨೬॥ ಯಾವ ದೇವರ ಭಕ್ತಿಯನ್ನು ಮಾಡಿದರೆ ತನ್ನ ಕೀರ್ತಿಯು ಬೆಳೆಯುವುದೋ ಮತ್ತು ಧನಸಂಪತ್ತು ಪ್ರಾಪ್ತವಾಗುವುದೋ, ಅಂತಹ ದೇವರು ಪ್ರಿಯವಾಗುವಿಕೆಯು ಇದು ರಾಜಸ ಮಮತೆಯಾಗಿರುವುದು ॥೧೨೭॥ ಕಾಮ್ಯ ಕರ್ಮಗಳಲ್ಲಿ ಅತ್ಯಂತಿಕ ಪ್ರೇಮಧರಿಸುವಿಕೆಯು, ಸಕಾಮ ಕರ್ಮಗಳನ್ನು ಮಾಡುವವರು ತನ್ನ ಆಪ್ತರೆಂದು ಭಾವಿಸುವಿಕೆಯು, ಸ್ವರ್ಗಾದಿ ಸುಖಗಳನ್ನು ನಿಜವೆಂದು ತಿಳಿದುಕೊಳ್ಳುವಿಕೆಯು ಇದು ರಾಜಸ ಮಮತೆಯಾಗಿರುವುದು ॥೧೨೮॥

ಹೇ ರಜೋಗುಣಾಚೀ ಮಮತಾ । ತುಜ ಮ್ಯಾ ಸಾಂಗಿತಲೀ ತತ್ತ್ವತಾ । ತಮೋಗುಣಾಚೀ ಜೇ ಅವಸ್ಥಾ । ಐಕ ವ್ಯವಸ್ಥಾ ಸಾಂಗೇನ ॥೧೨೯॥ ಆಪುಲ್ಯಾ ದೇಹಾಸೀ ಹೂಂತೂ ಕರೀ । ಕಾ ಪೂರ್ವಪೂರ್ವಜಾಂಚಾ ವೈರೀ । ತ್ಯಾಂಚ್ಯಾ ಲೇಕರಾಂಸೀ ವೈರ ಧರೀ । ಹೇ ಬುದ್ಧಿ ನಿಷ್ಠುರೀ ತಾಮಸ ॥೧೩೦॥ ಪುಢೇ ಲೇಕುರಾಂಚೇ ಲೇಕುರೀ । ವೃತ್ತಿಭೂಮಿ ಜೇವಿಕೇವರೀ । ಆಡವಾ ಯೇಈಲ ಸ್ವಗೋತ್ರೀ । ತ್ಯಾಸೀ ವೈರ ಧರೀ ತಾಮಸ ॥೧೩೧॥ ಐಸೇ ಪೂರ್ವಾಪರ ಮಾರ್ಝೇ ವೈರೀ । ಮೀ ನಿರ್ದಾಳೀನ ಸಂಸಾರೀ । ಯಾಲಾಗೀ ರಿಘೇ ಅಭಿಚಾರೀ । ತೇ ಮಮತಾ ಖರೀ ತಾಮಸ ॥೧೩೨॥ ಅಭಿಚಾರಿಕೀ ಜೇ ಮಂತ್ರಜ್ಞ । ತೇ ಮಾನೀ ಆಪ್ತಸ್ವಜನ । ಶಾಕಿನೀಡಾಕಿನೀ ಉಪಾಸನ । ಹೇ ಮಮತಾ ಸಂಪೂರ್ಣ ತಾಮಸೀ ॥೧೩೩॥ ಅಸೋ ಬಹುಸಾಲ ವ್ಯುತ್ಪತ್ತೀ । ಏಕೇಕ ಗುಣೇ ಅನಂತ ಶಕ್ತೀ । ಹೇ ತಿನ್ಹೀ ಜೇಥ ಮಿಶ್ರ ಹೋತೀ । ಸನ್ನಿಪಾತವೃತ್ತೀ ಯಾ ನಾಂವ ॥೧೩೪॥ ಕಫ ವಾತ ಆಣಿ ಪಿತ್ತ । ತಿನ್ಹೀ ಏಕತ್ರ ಜೇಥ ಹೋತ । ತೇಥ ಉಪಜೇ ಸನ್ನಿಪಾತ । ತೇವೀ ಸನ್ನಿಪಾತ ಯೇಥ ತ್ರಿಗುಣಾಂಚಾ ॥೧೩೫॥ ಸಂಕಲ್ಪವಿಕಲ್ಪಾತ್ಮ ಮನ । ಪಂಚ ವಿಷಯ ಪಂಚ ಪ್ರಾಣ । ದಶೇಂದ್ರಿಯೀ ವ್ಯವಹಾರ ಸಂಪೂರ್ಣ । ತೇಥ ಉಪಜೇ ತ್ರಿಗುಣಸನ್ನಿಪಾತ ॥೧೩೬॥ ತೇಚಿ ಸನ್ನಿಪಾತನಿರೂಪಣ । ತ್ರಿಗುಣಾಂಚೇ ಮಿಶ್ರಲಕ್ಷಣ । ಸ್ವಯೇ ಸಾಂಗತಾಹೇ ಶ್ರೀಕೃಷ್ಣ । ಮಿಶ್ರಗುಣ ಸನ್ನಿಪಾತು ॥೧೩೭॥

ಧರ್ಮೇ ಚಾರ್ಥೇ ಚ ಕಾಮೇ ಚ ಯದಾಽಸೌ ಪರಿನಿಷ್ಠಿತಃ । ಗುಣಾನಾಂ ಸನ್ನಿಕರ್ಷೋಽಯಂ ಶ್ರದ್ಧಾರತಿಧನಾವಹಃ ॥೭॥

ಅರ್ಥ:- ಮನುಷ್ಯನು ಧರ್ಮ, ಅರ್ಥ ಮತ್ತು ಕಾಮ ಇವುಗಳಲ್ಲಿ ಎಂದು ಸಂಲಗ್ನನಾಗಿರುವನೋ, ಆಗ ಆತನಿಗೆ ಸಾತ್ವಿಕ ಗುಣದಿಂದ ಶ್ರದ್ಧೆಯು, ರಾಜಸ ಗುಣದಿಂದ ರತೀ ಮತ್ತು ತಾಮಸೀ ಗುಣದಿಂದ ಹಣದ ಪ್ರಾಪ್ತಿಯಾಗುವುದು. ಇದೂ ಕೂಡ ಗುಣಗಳ ಮಿಶ್ರಣವಾಗಿರುವುದು.

ಪುರುಷಾಚ್ಯಾ ಠಾಯೀ ಕ್ರಿಯಾಕರ್ಮ । ಕ್ಷಣೇ ಸ್ವಧರ್ಮ ಕ್ಷಣೇ ಕಾಮ । ಕ್ಷಣೇ ವಾಢವೀ ಅರ್ಥೋದ್ಯಮ । ಹಾ ಸಂಕ್ರಮ ತ್ರಿಗುಣಾಂಚಾ ॥೧೩೮॥ ಗುಣಸಂಕ್ರಮಣ ಕರೀ ಕಾಯ । ತ್ರಿಗುಣೇ ಧರ್ಮ ತ್ರಿವಿಧ ಹೋಯ । ಕಾಮಹೀ ತ್ರಿವಿಧ ಹೋಊನಿ ಠಾಯ । ಅರ್ಥಸ್ವಾರ್ಥನಿರ್ವಾಹ ತ್ರಿಗುಣಾತ್ಮಕ ॥೧೩೯॥ ಯೇಥ ಕರ್ಮಾಸೀ ದೋಷ ನಾಹೀ । ದೋಷ ಕಾರ್ಯಾಚೇ ಬುದ್ಧೀಚ್ಯಾ ಠಾಯೀ । ತೋ ಜೇ ಕಲ್ಪನಾ ಕರೀಲ ಕಾಂಹೀ । ತೇ ಫಳ ಪಾಹೀ ಸ್ವಯೇ ಭೋಗೀ ॥೧೪೦॥

ರಜೋಗುಣದ ಮಮತೆಯನ್ನು ನಿನಗೆ ತತ್ವತಾ ತಿಳಿಸಲಾಯಿತು. ಈಗ ತಮೋಗುಣದ ಮಮತೆಯನ್ನು ನಿನಗೆ ಹೇಳುವೆನು. ಅದನ್ನು ಕೇಳು ॥೧೨೯॥ ಯಾವನು ತನ್ನ ದೇಹವನ್ನೇ ತಿರಸ್ಕಾರ ದೃಷ್ಟಿಯಿಂದ ನೋಡುವನೋ, ಅವನು ಹಿಂದಿನ ಪೂರ್ವಜರ ವೈರಿಯಾಗಿ ಮತ್ತು ಅವರ ಮಕ್ಕಳಲ್ಲಿಯೂ ಕೂಡ ವೈರವನ್ನು ಮಾಡುವವನ ಯಾವ ನಿಷ್ಠುರ ಬುದ್ಧಿಯು ತಾಮಸವಾಗಿರುವುದು ॥೧೩೦॥ ಮುಂದೆ ನನ್ನ ಮಕ್ಕಳು, ಮೊಮ್ಮಕ್ಕಳು ನನ್ನ ವೃತ್ತಿಯನ್ನು ಮುಂದುವರಿಸುತ್ತಿರಲು ಆಗ ನನ್ನ ಸ್ವಗೋತ್ರದವರು ಅಡ್ಡ ಬಂದು ತಡೆಮಾಡುವ ಸಂಭವ ಬರಬಹುದೆಂದು ತಿಳಿದು ಅವರಲ್ಲಿ ವೈರಧರಿಸುವವನು ತಾಮಸನಾಗಿರುವನು ॥೧೩೧॥ ಹೀಗೆ ತನ್ನ ಪೂರ್ವಾಪರ ವೈರಿಗಳನ್ನು ನಾಶಮಾಡುವೆನೆಂದು ಬಗೆದು ಅವನು ಜಾರಣ-ಮಾರಣಾದಿ ಕರ್ಮಗಳನ್ನು ಮಾಡಲಾರಂಭಿಸುವನು. ಇದು ನಿಜವಾಗಿಯೂ ತಾಮಸ ಮಮತೆಯಾಗಿರುವುದು ॥೧೩೨॥ ಯಾವ ಜಾರಣ-ಮಾರಣ ಮಾಡುತ್ತಿರುವ ಮಾಂತ್ರಿಕರನ್ನು ತನ್ನ ಇಷ್ಟ ಮಿತ್ರರೆಂದುಭಾವಿಸುವಿಕೆ ಮತ್ತು ಶಾಕಿನೀ-ಢಾಕಿನೀ ದೇವತೆಗಳ ಉಪಾಸನೆಯನ್ನು ಮಾಡುವಿಕೆ, ಇವು ಪರಿಪೂರ್ಣವಾಗಿ ತಾಮಸ ಮಮತೆಯಾಗಿರುವುದೆಂದು ತಿಳಿಯಬೇಕು. ಹೀಗೆ ಈ ಗುಣಗಳ ಭಿನ್ನ ಭಿನ್ನ ಪ್ರಕಾರಗಳಿರುವುವು ॥೧೩೩॥ ಒಂದೊಂದೇ ಗುಣಗಳಲ್ಲಿ ಅನಂತ ಶಕ್ತಿ ಸಮಾವೇಶವಾಗಿರುವುದು. ಅಂದಮೇಲೆ ಮೂರೂ ಗುಣಗಳು ಒಂದೆಡೆ ಮಿಶ್ರವಾಗಲು ಅದಕ್ಕೆ ಸನ್ನಿಪಾತ ವೃತ್ತಿ ಎಂದು ಹೇಳುವರು ॥೧೩೪॥ ಶರೀರದಲ್ಲಿ, ಕಫ, ವಾತ, ಪಿತ್ತ ಈ ಮೂರು ಏಕತ್ರವಾಗಲು, ಆಗ ಯಾವ ಪ್ರಕಾರವಾಗಿ ಸನ್ನಿಪಾತವಾಗುವುದೋ, ಅದೇ ಪ್ರಕಾರವಾಗಿ ಈ ಮೂರು ಗುಣಗಳ ಸನ್ನಿಪಾತವಾಗಿರುವುದು ॥೧೩೫॥ ಸಂಕಲ್ಪವಿಕಲ್ಪಾತ್ಮಕ ಮನಸ್ಸು, ಐದು ವಿಷಯಗಳು, ಐದು ಪ್ರಾಣಗಳು, ಹತ್ತು ಇಂದ್ರಿಯಗಳ ಸಂಪೂರ್ಣ ವ್ಯವಹಾರವು ಇವುಗಳಿಂದಾಗುವ ಸರ್ವ ಕಾರ್ಯಗಳು ಇವು ತ್ರಿಗುಣ ಸನ್ನಿಪಾತವಾಗಿರುವುವು ॥೧೩೬॥ ಈ ಯಾವ ಸನ್ನಿಪಾತದ ನಿರೂಪಣೆ ಎಂದರೆ ಮೂರು ಗುಣಗಳ ಮಿಶ್ರ ಲಕ್ಷಣವಾಗಿರುವುದು. ಇದಕ್ಕೆ ತ್ರಿಗುಣ ಸನ್ನಿಪಾತ ಎಂದು ಹೇಳುವರು. ಇದನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೧೩೭॥

ಮನುಷ್ಯನಲ್ಲಿ ಒಂದು ಕ್ಷಣದಲ್ಲಿ ಕ್ರಿಯೆಯಾದರೆ ಇನ್ನೊಂದು ಕ್ಷಣದಲ್ಲಿ ಕರ್ಮವಾಗುವುದು, ಮರುಕ್ಷಣದಲ್ಲಿ ಸ್ವಧರ್ಮ, ಮತ್ತೊಂದು ಕ್ಷಣದಲ್ಲಿ ಕಾಮ, ಇದಾದ ಕ್ಷಣದಲ್ಲಿ ಹಣಗಳಿಸುವ ಉದ್ಯೋಗ. ಹೀಗೆ ನಾನಾವಿಧ ವೃತ್ತಿಗಳು ಉದ್ಭವಿಸುವಿಕೆಯೇ ತ್ರಿಗುಣದ ಸನ್ನಿಪಾತವಾಗಿರುವುದು ॥೧೩೮॥ ಗುಣಗಳ ಯಾವ ಈ ಮಿಶ್ರಣವು ಯಾವ ಕರ್ಮ ಮಾಡುವುದೆಂದರೆ, ಈ ತ್ರಿವಿಧ ಗುಣಗಳಿಂದ ಧರ್ಮವು ಮೂರು ಪ್ರಕಾರಗಳಲ್ಲಿ ಆಗುವುದು. ಕಾಮವೂ ಕೂಡ ಮೂರು ಪ್ರಕಾರವಾಗುವುದು ಮತ್ತು ಅರ್ಥ, ಸ್ವಾರ್ಥ, ನಿರ್ವಾಹ ಇವು ಎಲ್ಲವೂ ಮೂರು ಪ್ರಕಾರವಾಗಿ ಸಂಭವಿಸುವುವು ॥೧೩೯॥ ಇದರಲ್ಲಿ ಕರ್ಮಗಳ ದೋಷವು ಏನೂ ಇರುವುದಿಲ್ಲ. ದೋಷವು ಕರ್ತನ ಮತಿಯಲ್ಲಿರುವುದು. ಅವನು ಯಾವ ಕಲ್ಪನೆಯನ್ನು ಯೋಜಿಸಿ ಕರ್ಮ ಮಾಡುವನೋ, ಅದರ ಫಲವನ್ನು ತಾನು ಸ್ವತಃ ಭೋಗಿಸುವನು ॥೧೪೦॥

ಸೋನೇ ವಂದ್ಯ ಸೋನೇಪಣೇ । ತ್ಯಾಚೇ ಸ್ವಯೇ ಘಡವಿಲ್ಯಾ ಸುಣೇ । ವಂದ್ಯ ತೇಚಿ ನಿಂದ್ಯ ಕರಣೇ । ತೇವೀ ಸ್ವಕರ್ಮ ದೂಷಣೇ ಗುಣಬುದ್ಧೀ ।।೧೪೧।। ಭೂಮಿ ಸಹಜೇ ಶುದ್ಧ ಆಹೇ । ತೇ ಪೇರೀಜೇ ತೇ ಪೀಕ ಹೋಯೇ । ತೇವೀ ಸ್ವಕರ್ಮ ಶುದ್ಧ ಸ್ವಯೇ । ಫಲಭೋಗೂ ಲಾಹೇ ಗುಣವೃತ್ತೀ ।।೧೪೨।। ವಾಚಾ ಸಹಜ ಸರಳ ಗೋಮಟೀ । ರಾಮನಾಮೇ ಜೋಡೇ ಬ್ರಹ್ಮಪುಷ್ಟೀ । ವೃಥಾ ಜಾಯ ಕರಿತಾ ಚಾವಟೀ । ಭೋಗೀ ನಿಂದೇಪಾಠೀ ಮಹಾಪಾಪ ।।೧೪೩।। ತೇವೀ ಸ್ವಧರ್ಮ ಶ್ರದ್ಧಾಯುಕ್ತ । ಪುರುಷಾಸೀ ಕರೀ ವಿರಕ್ತ । ತೇಥ ತ್ರಿಗುಣಾಂಚಾ ಸನ್ನಿಪಾತ । ಶ್ರದ್ಧಾ ಛಳಿತ ತೇ ಐಕ ।।೧೪೪।। ಸ್ವಧರ್ಮಕರ್ಮೀ ಶ್ರದ್ಧಾ ಜೋಡೇ । ಕ್ಷಣೈಕೈ ಲಾಗೇ ವಿರಕ್ತೀಕಡೇ । ಕ್ಷಣೇ ಭೋಗಫಳಾಶಾ ವಾಢೇ । ಕ್ಷಣೈಕ ಪಡೇ ಮಮತಾಸಂಧೀ ।।೧೪೫।। ತೈಶೀಚ ಕಾಮಾಚೀಹೀ ರತೀ । ಕ್ಷಣೈಕೇ ನಿಷ್ಕಾಮೀ ಅತಿಪ್ರೀತೀ । ಕ್ಷಣೇ ಸ್ತ್ರೀಭೋಗ ಆಸಕ್ತೀ । ಕ್ಷಣೇ ಕಾಮರತೀ ಪರದ್ವಾರೀ ।।೧೪೬।। ಯಾಚಿಪರೀ ಧನಾಚೀ ಜೋಡೀ । ಕ್ಷಣೈಕ ದ್ರವ್ಯಾಂಸ ಸೋಡೀ । ಕ್ಷಣೈಕ ಅರ್ಥಾಚೀ ಅತಿಗೋಡೀ । ಕ್ಷಣೈಕ ಆಸುಡೀ ಪರದ್ರವ್ಯ ।।೧೪೭।। ತ್ರಿವಿಧ ಧರ್ಮ ತ್ರಿವಿಧ ಕರ್ಮ । ತ್ರಿವಿಧ ರೂಪೇ ಧನಾಗಮ । ಯಾ ಗುಣವೃತ್ತೀಸ್ತವ ಸ್ವಧರ್ಮ । ಸಾಂಡೂನಿ ಅಕರ್ಮ ಕರೀ ಪ್ರಾಣೀ ।।೧೪೮।। ಏವಂ ಧರ್ಮ ಅರ್ಥಕಾಮಾ ಆಂತ । ಗುಣಸನ್ನಿಪಾತ ಅನಂತ । ಫೋಡೂನಿ ಸಾಂಗತಾ ಯೇಥ । ವಾಢೇಲ ಗ್ರಂಥ ಅನಿವಾರ ।।೧೪೯।। ಯಾಲಾಗೀ ಗುಣಸನ್ನಿಪಾತ । ಸಾಂಗಿತಲಾ ಸಂಕಲಿತ । ತೇಚಿ ಅರ್ಥೀ ಶ್ರೀಕೃಷ್ಣನಾಥ । ಅಸೇ ಸಾಂಗತ ಸಂಕ್ಷೇಪೇ ।।೧೫೦।।

ಪ್ರವೃತ್ತಿಲಕ್ಷಣೇ ನಿಷ್ಠಾ ಪುಮಾನ್ಯರ್ಹಿ ಗೃಹಾಶ್ರಮೇ ।
ಸ್ವಧರ್ಮೇ ಚಾನುತಿಷ್ಠೇತ ಗುಣಾನಾಂ ಸಮಿತಿರ್ಹಿ ಸಾ ।।೮।।

ಅರ್ಥ:- ಯಾವ ವೇಳೆಯಲ್ಲಿ ಮನುಷ್ಯನು ಸಕಾಮ ಕರ್ಮಗಳಲ್ಲಿ ಹಾಗೂ ಗೃಹಸ್ಥಾಶ್ರಮದಲ್ಲಿ, ಸ್ವಧರ್ಮಾಚರಣೆಗಳಲ್ಲಿ ಅತ್ಯಂತ ಪ್ರೇಮವನ್ನಿಡುವನೋ, ಆಗ ಮೂರು ಗುಣಗಳ ಸನ್ನಿಪಾತವಾಗುವುದು.

ಪುರುಷಾಸೀ ಜೋ ಗೃಹಾಶ್ರಮ । ತೋ ಜಾಣಾವಾ ಕೇವಳ ಕಾಮ । ತೇಥ ನಿತ್ಯ ನೈಮಿತ್ತಿಕ ಕರ್ಮ । ಹಾ ಸ್ವಧರ್ಮ ಚಿತ್ತಶುದ್ಧೀ ।।೧೫೧।।

ಬಂಗಾರಕ್ಕೆ ಅದರ ಬಂಗಾರತ್ವದಿಂದಲೇ ಅದಕ್ಕೆ ಸನ್ಮಾನವು ಪ್ರಾಪ್ತವಾಗಿರುವುದು. ಅದರಿಂದಲೇ ನಾವು ಒಂದು ನಾಯಿಯನ್ನು ಸಿದ್ಧಗೊಳಿಸಿದರೆ, ಆಗ ಆ ವಂದನೀಯ ಬಂಗಾರಕ್ಕೆ ನಿಂದಿಸಿದಂತೆ ಆಗುವುದು. ಅದರಂತೆ ಸ್ವಕರ್ಮವು ಗುಣಬುದ್ಧಿಯಿಂದ ದೂಷಿತವಾಗುವುದು ।।೧೪೧।। ಭೂಮಿಯು ಇದು ಮೂಲತಃ ಶುದ್ಧವಾಗಿರುವುದು. ಅದರಲ್ಲಿ ನಾವು ಏನನ್ನು ಬಿತ್ತುವೆವೋ, ಅದರಂತೆಯೇ ಪೀಕವು ಪ್ರಾಪ್ತವಾಗುವುದು. ಅದರಂತೆ ಸ್ವಕರ್ಮವು ಸ್ವಭಾವತಃ ಶುದ್ಧವಾಗಿರುವುದು. ಆದರೆ ಆ ಗುಣಗಳ ವೃತ್ತಿಯಿಂದ ಅದಕ್ಕೆ ಫಲವು ದೊರಕುವುದು ।।೧೪೨।। ನಮ್ಮ ವಾಣಿಯು ಸರಳವಾಗಿದೆ ಹಾಗೂ ಶುದ್ಧವಾಗಿದೆ. ಇದು ಸರಸ್ವತಿಯ ರೂಪವಾಗಿದೆ. ಈ ವಾಣಿಯು ರಾಮನಾಮದ ಉಚ್ಚಾರವನ್ನು ಮಾಡಲು ಬ್ರಹ್ಮಸುಖದ ಪ್ರಾಪ್ತಿಯಾಗುವುದು . ಇದೇ ವಾಣಿಯಿಂದ ವ್ಯರ್ಥವಾದ ಹರಟೆ ಕೊಚ್ಚುತ್ತಿರಲು ಆಗ ನಿಂದೆಯ ಮಹಾಪಾಪವನ್ನು ಭೋಗಿಸಬೇಕಾಗುವುದು ।।೧೪೩।। ಅದರಂತೆ ಪರಮ ಶ್ರದ್ಧೆಯಿಂದ ಧರ್ಮಾಚರಣೆಗಳನ್ನು ಮಾಡಿದರೆ ಆ ಪುರುಷನ ಅಂತಃಕರಣದಲ್ಲಿ ವಿರಕ್ತಿಯು ನಿರ್ಮಾಣವಾಗುವುದು. ಆದರೆ ಅದರಲ್ಲಿ ಸನ್ನಿಪಾತವಾಗಲು, ಅದೇ ಶ್ರದ್ಧೆಯು ಹೇಗೆ ಪೀಡಿಸುವುದೆಂಬುದನ್ನು ಈಗ ಕೇಳಿರಿ ।।೧೪೪।। ಸ್ವಧರ್ಮ ಕರ್ಮದಲ್ಲಿ ಶ್ರದ್ಧೆಯು ಉತ್ಪನ್ನವಾಗುವುದು. ಆದ್ದರಿಂದ ಮನುಷ್ಯನು ಕ್ಷಣಿಕ ವಿರಕ್ತನಾಗುವನು. ಕ್ಷಣದಲ್ಲಿಯೇ ಆತನಿಗೆ ಫಲದ ಆಶೆಯು ಬದ್ಧನನ್ನಾಗಿ ಮಾಡುವುದು ಮತ್ತು ಮರುಕ್ಷಣವೇ ಆತನು ಮಮತೆಯ ಚಕ್ರದಲ್ಲಿ ಸಿಕ್ಕಿಕೊಳ್ಳುವನು ।।೧೪೫।। ಕಾಮದ ಪ್ರಕಾರವೂ ಕೂಡ ಹಾಗೆಯೇ ಇರುವುದು. ಕ್ಷಣದಲ್ಲಿ ನಿಷ್ಕಾಮತೆಯು ಅತಿಶಯವಾಗಿ ಬೆಳೆಯುವುದು. ಆದರೆ ಮರುಕ್ಷಣದಲ್ಲಿಯೇ ಸ್ತ್ರೀಸಂಗದ ಇಚ್ಛೆಯು ಮನದಲ್ಲಿ ನಿರ್ಮಾಣವಾಗುವುದು. ಅದಾದ ಕ್ಷಣದಲ್ಲಿ ಪರಸ್ತ್ರೀಯ ಲಾಲಸೆಯು ತಡೆಯದಾಗದು ।।೧೪೬।। ಈ ಪ್ರಕಾರವೇ ಧನದ ಮಾತಾಗಿರುವುದು. ಕ್ಷಣದಲ್ಲಿ ಧನದ ಆಶೆಯು ಬಿಟ್ಟುಹೋಗುವುದು ಮತ್ತು ಮರುಕ್ಷಣದಲ್ಲಿ ದ್ರವ್ಯವಿಷಯಕ್ಕೆ ಅತ್ಯಂತ ಪ್ರೇಮವು ಹುಟ್ಟಿಕೊಳ್ಳುವುದು. ಇನ್ನೊಂದು ಕ್ಷಣದಲ್ಲಿ ಪರದ್ರವ್ಯವನ್ನು ಕದ್ದು ಪಡೆಯುವನು ।।೧೪೭।। ಧರ್ಮವು ಮೂರು ಪ್ರಕಾರದ್ದಾಗಿರುವುದು ಮತ್ತು ಕರ್ಮಗಳೂ ಮೂರು ಪ್ರಕಾರವಾಗಿರುವುವು. ದ್ರವ್ಯ ಪ್ರಾಪ್ತಿಯ ಪ್ರಕಾರವೂ ಕೂಡ ಮೂರು ಪ್ರಕಾರವಾಗಿರುವುದು. ಈ ಗುಣವೃತ್ತಿಯ ಭೇದಕಾರಣವಾಗಿ ಜನರು ಸ್ವಧರ್ಮವನ್ನು ಬಿಟ್ಟು ಅಧರ್ಮದಲ್ಲಿ ಪ್ರವೃತ್ತರಾಗುತ್ತಿರುವರು ।।೧೪೮।। ಇದೇ ಪ್ರಕಾರವಾಗಿ ಧರ್ಮ, ಅರ್ಥ, ಕಾಮ ಇವುಗಳಲ್ಲಿ ಅನಂತ ಗುಣ ಸನ್ನಿಪಾತಗಳಿರುವುವು. ಇವುಗಳ ಸರ್ವವನ್ನೂ ಸ್ಪಷ್ಟೀಕರಣ ಮಾಡಲು ಹೋದರೆ ಗ್ರಂಥವು ಬಹಳ ಬೆಳೆಯುವುದು ।।೧೪೯।। ಅದಕ್ಕಾಗಿ ಸನ್ನಿಪಾತದ ಈ ಗುಣವನ್ನು ನಾನು ನಿನಗೆ ಸ್ವಲ್ಪದರಲ್ಲಿಯೇ ಹೇಳಿರುವೆನು. ಶ್ರೀಕೃಷ್ಣನು ಪುನಃ ಇದೇ ಅರ್ಥದ ನಿರೂಪಣೆಯನ್ನು ಸಂಕ್ಷಿಪ್ತವಾಗಿ ಹೇಳುತ್ತಿರುವನು ।।೧೫೦।।

ಪುರುಷನ ಯಾವ ಗೃಹಸ್ಥಾಶ್ರಮವು ಅದು ಕೇವಲ ಕಾಮಕ್ಕಾಗಿಯೇ ಇರುವುದು, ಹೀಗೆಂದು ತಿಳಿಯಬೇಕು. ಅದರಲ್ಲಿ ಚಿತ್ತಶುದ್ಧಿಗಾಗಿ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡುವುದೇ ಸ್ವಧರ್ಮವಾಗಿರುವುದು ।।೧೫೧।।

ಗೃಹಾಶ್ರಮೀ ಹಿಂಸಾ ಪಂಚಸೂನ । ಯಾಲಾಗೀ ತಮೋಗುಣ ಪ್ರಧಾನ । ಗೃಹೀ ಸ್ತ್ರೀಭೋಗ ಪಾವೇ ಜಾಣ । ರಜೋಗುಣ ಯಾ ಹೇತೂ ॥೧೫೨॥ ನಿತ್ಯನೈಮಿತ್ತಿಕ ಸ್ವಧರ್ಮ । ಹೇ ಗೃಹಸ್ಥಾಚೇ ನಿಜಕರ್ಮ । ಹೇ ಚಿತ್ತಶುದ್ಧೀಚೇ ನಿಜವರ್ಮ । ಸತ್ತ್ವ ಸುಗಮ ಯಾ ಹೇತೂ ॥೧೫೩॥ ಗೃಹಾಶ್ರಮಪ್ರವೃತ್ತಿ ಜಾಣ । ಸದಾ ಮಿಶ್ರಿತ ತಿನೀ ಗುಣ । ಗುಣೀ ಗುಣವಂತ ಕರೂನ । ಕರ್ಮಾಚರಣ ಕರವಿತೀ ॥೧೫೪॥ ನ ರಂಗತಾ ತೇಣೇ ರಂಗೇ । ಸ್ಫಟಿಕ ತದ್ರೂಪ ಭಾಸೋ ಲಾಗೇ । ತೇವೀ ಗುಣಾತ್ಮಾ ಗುಣಸಂಗೇ । ವರ್ತೋ ಲಾಗೇ ಗುಣಕರ್ಮೀ ॥೧೫೫॥ ಜೇವೀ ಕಾ ಕಸವಟೀ ಆಪಣ । ಕಸೂನಿ ದಾವೀ ಸುವರ್ಣವರ್ಣ । ತೇವೀ ಪುರುಷಾಚೀ ಕ್ರಿಯಾ ಜಾಣ । ದಾವೀ ಗುಣಲಕ್ಷಣ ವಿಭಾಗ ॥೧೫೬॥

ಪುರುಷಂ ಸತ್ತ್ವಸಂಯುಕ್ತಮನುಮೀಯಾಚ್ಛಮದಿಭಿಃ । ಕಾಮಾದಿಭೀ ರಜೋಯುಕ್ತಂ ಕ್ರೋಧಾದ್ಯೈಸ್ತಮಸಾ ಯುತಮ್ ॥೯॥

ಅರ್ಥ:- ಮಾನಸಿಕ ಶಾಂತಿ ಮತ್ತು ಜಿತೇಂದ್ರಿಯತೆ ಇತ್ಯಾದಿ ಗುಣಗಳಿಂದ ಸತ್ವಗುಣ ಪುರುಷನನ್ನು, ಕಾಮನಾ ಇತ್ಯಾದಿಗಳಿಂದ ರಜೋಗುಣದ ಪುರುಷನನ್ನು ಮತ್ತು ಕ್ರೋಧ ಹಿಂಸೆಗಳಿಂದ ತಮೋಗುಣ ಪುರುಷನನ್ನು ಕಂಡುಹಿಡಿಯಬಹುದು.

ಇಂದ್ರಿಯನಿಗ್ರಹೋ ಯಥೋಚಿತ । ಜೋ ಶಮದಮೀ ಸದಾ ಕ್ರೀಡತ । ಶಾಂತಿ ವಸೇ ಜಯಾ ಆಂತ । ತೋ ಜಾಣ ನಿಶ್ಚಿತ ಸಾತ್ತ್ವಿಕ ॥೧೫೭॥ ಜೋ ಸದಾ ಫಳಕಾಮೇ ಕಾಮುಕ । ವಾಂಛೀ ಸಂಸಾರ ಭೋಗಸುಖ । ದ್ರವ್ಯಾರ್ಥೀ ಅತಿದಾಂಭಿಕ । ರಜೋಗುಣೀ ಲೋಕ ತೋ ಜಾಣ ॥೧೫೮॥ ಜ್ಯಾಸೀ ಸ್ವಧರ್ಮೀ ನಾಹೀ ರತೀ । ಆವಡೇ ಅಧರ್ಮಪ್ರವೃತ್ತೀ । ಕ್ರೋಧಲೋಭೇ ಗಿಳಿಲೀ ಸ್ಫೂರ್ತೀ । ತೋ ಜಾಣ ನಿಶ್ಚಿತೀ ತಾಮಸೂ ॥೧೫೯॥ ಏವಂ ದೇಖೋನಿ ಕರ್ಮಾಚರಣ । ಲಕ್ಷಿಜೇ ಪುರುಷಲಕ್ಷಣ । ಯಾ ನಾಂವ ಗಾ ಅನುಮಾನ । ವಿವೇಕಸಂಪನ್ನ ಜಾಣತೀ ॥೧೬೦॥ ಸಾಮಾನ್ಯತಃ ತಿನ್ಹೀ ಗುಣ । ಸಾಂಗೀತಲೇ ನಿರೂಪಣ । ಹೇ ನ ಕಳೇ ಮ್ಹಣೇಲ ಮನ । ಗುಣವೃತ್ತಿ ಭಿನ್ನ ಅವಧಾರೀ ॥೧೬೧॥

ಯದಾ ಭಜತಿ ಮಾಂ ಭಕ್ತ್ಯಾ ನಿರಪೇಕ್ಷಃ ಸ್ವಕರ್ಮಭಿಃ ।
ತಂ ಸತ್ತ್ವಪ್ರಕೃತಿಂ ವಿದ್ಯಾತ್ಪುರುಷಂ ಸ್ತ್ರೀಯಮೇವ ವಾ ॥೧೦॥

ಅರ್ಥ:- ಪುರುಷನಾಗಿರಲಿ ಅಥವಾ ಸ್ತ್ರೀಯಾಗಿರಲಿ ನಿಷ್ಕಾಮರಾಗಿ ನಿತ್ಯ ನೈಮಿತ್ತಿಕ ಕರ್ಮಗಳ ಮುಖಾಂತರವಾಗಿ ನನ್ನ ಪೂಜೆಯನ್ನು ಮಾಡಿದರೆ ಆಗ ಅವರಿಗೆ ಸತ್ವಗುಣಿ ಎಂದು ತಿಳಿಯಬೇಕು.

ಗೃಹಸ್ಥಾಶ್ರಮ ಮನೆಯಲ್ಲಿ ಬೀಸುವುದು, ಕುಟ್ಟುವುದು, ಒಲೆ ಹೊತ್ತಿಸುವುದು, ನೀರು ತುಂಬುವುದು ಮತ್ತು ಕಸ ಬಳಿಯುವುದು ಈ ಕೆಲಸಗಳನ್ನು ಮಾಡುತ್ತಿದ್ದಾಗ ತಿಳಿಯದೇ ಜೀವಜಂತುಗಳ ಹತ್ಯೆಯಾಗುತ್ತಿರುವುದು. ಇದಕ್ಕೆ ಪಂಚಸೂತದೋಷವೆಂದು ಹೇಳುವರು. ಇದರಲ್ಲಿ ತಮೋಗುಣವು ಮುಖ್ಯವಾಗಿರುವುದು. ಗೃಹಸ್ಥನು ಸ್ತ್ರೀ ಸುಖವನ್ನೂ ಕೂಡ ಅನುಭವಿಸುವನು. ಅಂದಮೇಲೆ ರಜೋಗುಣವೂ ಕೂಡ ಅದರಲ್ಲಿರುವುದು ॥೧೫೨॥ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡುವಿಕೆ ಮತ್ತು ಸ್ವಧರ್ಮವನ್ನು ಆಚರಿಸುವಿಕೆ ಇದೇ ಗೃಹಸ್ಥನ ಮುಖ್ಯ ಕರ್ಮವಾಗಿರುವುದು. ಇದುವೇ ಚಿತ್ತಶುದ್ಧಿಯ ರಹಸ್ಯವಾಗಿರುವುದು. ಆದ್ದರಿಂದ ಗೃಹಸ್ಥಾಶ್ರಮದಲ್ಲಿ ಸತ್ವಗುಣವೂ ಕೂಡ ಸುಲಭವಾಗಿರುವುದು ॥೧೫೩॥ ಗೃಹಸ್ಥಾಶ್ರಮದಲ್ಲಿ ಪುರುಷನ ಪ್ರವೃತ್ತಿಯು ಯಾವಾಗಲೂ ಮೂರು ಗುಣಗಳಿಂದ ಮಿಶ್ರವಾಗಿರುವುದು. ಆತನಿಗೆ ಗುಣಯುಕ್ತ ಮಾಡಿರುವುದರಿಂದ ಅವು ಆತನಿಂದ ಕರ್ಮಾಚರಣೆಗಳನ್ನು ಮಾಡಿಸುವುವು ॥೧೫೪॥ ಸ್ಫಟಿಕ ಮಣಿಯು ಇದು ಯಾವುದೇ ಬಣ್ಣದಿಂದ ಬೆಳಗುವುದು. ಇದು ಹೇಗೆ ಆಯಾ ಬಣ್ಣದಂತೆ ತೋರುವುದೋ ಅದರಂತೆ ಗುಣಗಳ ಸಂಗತಿಯಿಂದ ಗುಣಾತ್ಮಕ ಜೀವವೂ ಕೂಡ ಗುಣಕರ್ಮಗಳಲ್ಲಿ ವರ್ತಿಸುತ್ತಿರುವುದು ॥೧೫೫॥ ಯಾವ ಪ್ರಕಾರವಾಗಿ ಒರೆಗಲ್ಲು ಬಂಗಾರವನ್ನು ಒರೆಗೆ ಹಚ್ಚಿ ಅದರಲ್ಲಿನ ಕ್ರಿಯೆ ಹಾಗೂ ಶುದ್ಧತ್ವವನ್ನು ತೋರಿಸುವುದೋ, ಅದರಂತೆ ಪುರುಷನ ಕ್ರಿಯೆಯು ಇದು ಗುಣಲಕ್ಷಣಗಳ ವಿಭಾಗ ಮಾಡಿ ತೋರಿಸುವುದು ॥೧೫೬॥

ಯಾವನು ಯಥೋಚಿತವಾಗಿ ಇಂದ್ರಿಯ ನಿಗ್ರಹವನ್ನು ಮಾಡುವನೋ, ಆತನು ಶಮ ದಮಗಳಲ್ಲಿ ಯಾವಾಗಲೂ ಕ್ರೀಡಿಸುತ್ತಿರುವನು. ಆತನ ಅಂತಃಕರಣದಲ್ಲಿ ಶಾಂತಿಯು ನೆಲೆಸಿರುವುದು. ಆತನೇ ನಿಜವಾಗಿ ಸಾತ್ವಿಕನಾಗಿರುವನೆಂದು ತಿಳಿ ॥೧೫೭॥ ಯಾವನು ಯಾವಾಗಲೂ ಫಲಪ್ರಾಪ್ತಿ ಆಶೆಯ ಲೋಭಿಯಾಗಿರುವನೋ, ಸಂಸಾರದಲ್ಲಿನ ಉಪಭೋಗಗಳ ಸುಖದ ಇಚ್ಛೆ ಮಾಡುವನೋ, ಹಣಕ್ಕಾಗಿ ಯಾವುದೇ ಡಾಂಭಿಕತನ ಪ್ರದರ್ಶಿಸುವನೋ, ಆ ಮನುಷ್ಯನು ರಜೋಗುಣಿಯಾಗಿರುವನು. ಇದನ್ನು ಲಕ್ಷದಲ್ಲಿಡು ॥೧೫೮॥ ಸ್ವಧರ್ಮದಲ್ಲಿ ಯಾರಿಗೆ ಪ್ರಿಯವೆನಿಸುವುದಿಲ್ಲ, ಅಧರ್ಮಪ್ರವೃತ್ತಿಯು ಪ್ರಿಯವಾಗುವುದು. ಕ್ರೋಧದಿಂದ ಮತ್ತು ಲೋಭದಿಂದ ಯಾರ ಸ್ಫೂರ್ತಿಯು ನುಂಗಲ್ಪಟ್ಟಿದೆಯೋ, ಅವನು ನಿಶ್ಚಯವಾಗಿ ತಾಮಸನೆಂದು ತಿಳಿ ॥೧೫೯॥ ಈ ಪ್ರಕಾರವಾಗಿ ಪುರುಷನ ಕರ್ಮಾಚರಣೆಯನ್ನು ನೋಡಿ ಅದರಿಂದ ಆತನ ಗುಣದ ಲಕ್ಷಣವನ್ನು ತಿಳಿಯಬೇಕು. ಇದಕ್ಕೆ ಅನುಮಾನ ಎಂದು ಹೇಳುವರು. ವಿವೇಕಿ ಜನರು ಇದನ್ನು ಉತ್ತಮ ಪ್ರಕಾರವಾಗಿ ತಿಳಿಯುವರು ॥೧೬೦॥ ಇಲ್ಲಿಯವರೆಗೆ ಸಾಮಾನ್ಯವಾಗಿ ಈ ಮೂರೂ ಗುಣಗಳ ನಿರೂಪಣೆಯನ್ನು ಮಾಡಲಾಯಿತು. ಆದರೆ ಇದು ಸರಿಯಾಗಿ ತಿಳಿಯಲಿಲ್ಲವೆಂದು ನಿನ್ನ ಮನಸ್ಸಿನಲ್ಲಿದ್ದರೆ ಅದಕ್ಕಾಗಿ ಆ ಗುಣಗಳ ಭಿನ್ನ ಭಿನ್ನ ವೃತ್ತಿಗಳ ಶ್ರವಣವನ್ನು ಮಾಡು ॥೧೬೧॥

ಸ್ವಕರ್ಮಿಂ ವಾಂಛಿತ ಫಳ । ತೇಚಿ ಮಾಯೇಚೇ ದೃಢ ಪಡಳ । ತೇ ಫಳಾಶಾ ಸಾಂಡೋನಿ ಕೇವಳ । ಜೇ ಭಜನಶೀಳ ಮದ್ರೂಪೀ ।।೧೬೨।। ಕರೂನಿ ಫಳಾಶೇಚೇ ಶೂನ್ಯ । ಸ್ವಧರ್ಮೆಂ ಕರಿತೀ ಮಾಝೇಂ ಭಜನ । ಪುರುಷ ಅಥವಾ ಸ್ತ್ರೀಯಾ ಜಾಣ । ತೇ ಸತ್ವಸಂಪನ್ನ ನಿಶ್ಚಿತ ।।೧೬೩।। ದೇಹಾವಯವಲಿಂಗದರ್ಶನ । ತೇಣೇಂ ಸ್ತ್ರೀಪುರುಷನಾಮಾಭಿಧಾನ । ಪರೀ ಆತ್ಮಾ ಆತ್ಮೀ ನಾಹೀಂ ಜಾಣ । ಜೀವತ್ವ ಸಮಾನ ಸ್ತ್ರೀಪುರುಷೀಂ ।।೧೬೪।। ಚಿತ್ತವೃತ್ತೀಂ ಕ್ರಿಯಾಚರಣ । ತ್ಯಾ ನಾಂವ ಗಾ ಕರ್ಮ ಜಾಣ । ತೇಥ ನಿರಪೇಕ್ಷ ತೇ ಮಾಝೇಂ ಭಜನ । ಸ್ವಧರ್ಮ ಸಂಪೂರ್ಣ ಯಾ ನಾಂವ ।।೧೬೫।। ಐಶಿಯಾ ಸ್ವಧರ್ಮಪ್ರವೃತ್ತೀಂ । ಜೇಥ ಪ್ರಕಟೇ ಮಾಝೀ ಭಕ್ತೀ । ತೇ ತೇ ಸಾತ್ತ್ವಿಕ ಪ್ರಕೃತೀ । ಜಾಣ ನಿಶ್ಚಿತೀ ಉದ್ಧವಾ ।।೧೬೬।। ಆಶಂಕಾ ।। ಕರ್ಮ ಕರಿತಾ ಫಳಾಶಾ ವಾಢೇ । ತೋ ಫಳಭೋಗ ಭೋಗಣೇ ಪಡೇ । ಸ್ವಕರ್ಮೆಂ ಭಕ್ತೀ ಕೇವೀ ಘಡೇ । ಕರ್ಮ ತೇ ಕುಡೇ ಅತ್ಯಂತ ।।೧೬೭।। ಕರ್ಮ ಕರಿತಾ ಫಳ ಬಾಧಕ । ನ ಕರಿತಾ ಪ್ರತ್ಯವಾಯ ನರಕ । ಕರ್ಮೆಂ ಕರ್ಮಬದ್ಧ ಲೋಕ । ಕೇಲೇ ದೇಖ ಸಂಸಾರೀ ।।೧೬೮।। ಜೀವ ಹೋತಾ ಜೋ ಸ್ವತಂತ್ರ । ತೋ ಕರ್ಮೆಂ ಕೇಲಾ ಪರತಂತ್ರ । ಏವಢೇ ಕರ್ಮಾಚೇ ಚರಿತ್ರ ಅತಿವಿಚಿತ್ರ ಬಾಧಕ ।।೧೬೯।। ಸ್ವಕರ್ಮೆಂ ಭಗದ್ಭಕ್ತೀ । ಮ್ಹಣಶೀ ಘಡೇ ಕೈಶಾ ರೀತೀ । ತೇಚಿ ಅರ್ಥೀಂಚೀ ಉಪಪತ್ತೀ । ಸ್ವಯೇಂ ಶ್ರೀಪತೀ ಸಾಂಗತ ।।೧೭೦।। ಸರ್ಪ ಧಾಂವೋನಿ ಧರಿಲ್ಯಾ ತೋಂಡೀಂ । ತೋ ಸರ್ವಾಂಗೀಂ ಘಾಲೀ ಆಢೀ । ತೇಣೇಂ ಧಾಕೇಂ ಜೋ ಸೋಡೀ । ತರೀ ತೋ ವಿಭಾಂಡೀ ಮಹಾವಿಖೇಂ ।।೧೭೧।। ತೇ ಸರ್ಪಬಾಧೇಚೀ ಸಾಂಕಡೀ । ನಿವಾರೀ ಮಂತ್ರವಾದೀ ಗಾರುಡೀ । ತೇವೀಂ ಕರ್ಮಿಂ ಕರ್ಮಬಾಧಾ ಗಾಢೀ । ನಿವಾರೀ ರೋಕಡೀ ಗುರುರಾವೋ ।।೧೭೨।। ರಿಘತಾ ಸದ್ಗುರೂಸೀ ಶರಣ । ಕರ್ಮ ಕರವೀ ಬ್ರಹ್ಮಾರ್ಪಣ । ಹೇಚಿ ನಿರಪೇಕ್ಷ ಲಕ್ಷಣ । ಉದ್ಧವಾ ಜಾಣ ನಿಶ್ಚಿತ ।।೧೭೩।। ಬ್ರಹ್ಮ ಕರ್ಮಾಚೇ ಪ್ರಕಾಶಕ । ಕರ್ಮ ತಿತುಕೇ ಬ್ರಹ್ಮಾತ್ಮಕ । ಹೇಚಿ ಮದರ್ಪಣ ಚೋಖ । ಮಾಝೇಂ ಭಜನ ದೇಖ ಯಾ ರೀತೀ ।।೧೭೪।। ಸರ್ವೇಂದ್ರಿಯೀಂ ಜ್ಞಾನಸ್ಫೂರ್ತೀ । ತೇ ಬ್ರಹ್ಮೀಂಚೀ ಬ್ರಹ್ಮಶಕ್ತೀ । ಐಸೇನಿ ನಿಶ್ಚಯೇಂ ಕರ್ಮಸ್ಥಿತೀ । ಸ್ವಕರ್ಮಭಕ್ತಿ ಯಾ ನಾಂವ ।।೧೭೫।।

ಸ್ವಧರ್ಮದ ಆಚರಣೆಯನ್ನು ಮಾಡುತ್ತಿರಲು ಆಗ ಫಲದ ಆಶೆಯನ್ನು ಧರಿಸುವಿಕೆಯು ಇದು ಮಾಯೆಯ ಪರದೆಯಾಗಿರುವುದು. ಈ ಫಲಾಶೆಯನ್ನು ಬಿಟ್ಟು ನನ್ನಲ್ಲಿ ಏಕರೂಪರಾಗಿ ನನ್ನ ಭಜನೆಯಲ್ಲಿ ತನ್ಮಯರಾಗಬೇಕು ।।೧೬೨।। ಫಲದ ಆಶೆಯನ್ನು ಬಿಟ್ಟುಕೊಟ್ಟು ಯಾರು ಸ್ವಧರ್ಮದಿಂದ ನನ್ನ ಭಜನೆಯನ್ನು ಮಾಡುವರೋ, ಅವರು ಸ್ತ್ರೀಯಾಗಿರಲಿ ಅಥವಾ ಪುರುಷರಾಗಿರಲಿ ಅವರನ್ನು ನಿಜವಾಗಿಯೂ ಸತ್ವಗುಣಿ ಎಂದು ತಿಳಿಯಬೇಕು ।।೧೬೩।। ದೇಹದ ಅವಯವಗಳ ಯಾವ ಸ್ವರೂಪವು ಕಾಣುವುದೋ, ಅದರ ಮೇಲೆ ಸ್ತ್ರೀ ಅಥವಾ ಪುರುಷ ಎಂಬ ನಾಮವು ಪ್ರಾಪ್ತವಾಗಿರುವುದು. ಆದರೆ ಆ ಸ್ತ್ರೀಪುರುಷರಲ್ಲಿ ಜೀವಭಾವವು ಇದು ಸಮಾನವಾಗಿರುವುದು. ಇದರಲ್ಲಿ ಆತ್ಮಾ ಮತ್ತು ಆತ್ಮೀ ಎಂಬ ಭೇದಭಾವವು ಇರುವುದಿಲ್ಲ ।।೧೬೪।। ಏಕಾಗ್ರಚಿತ್ತದಿಂದ ಯಾವ ಕ್ರಿಯೆಯನ್ನು ಆಚರಿಸಲ್ಪಡುವುದೋ, ಅದಕ್ಕೆ ಕರ್ಮ ಎಂದು ಸಂಭೋಧಿಸುವರು. ಇದರಲ್ಲಿ ನಿರಪೇಕ್ಷ ಭಾವದಿಂದ ನನ್ನ ಭಜನೆಯನ್ನು ಮಾಡುವಿಕೆಯೇ ಸ್ವಧರ್ಮವಾಗಿರುವುದು ।।೧೬೫।। ಹೇ ಉದ್ಧವಾ ಎಲ್ಲಿ ಎಂತಹ ಧರ್ಮಪ್ರವೃತ್ತಿಯಾಗಿರುವುದೋ ಅಲ್ಲಿ ನನ್ನ ಭಕ್ತಿಯು ಪ್ರಕಟವಾಗುವುದು. ಇದು ನಿಜವಾಗಿಯೂ ಸಾತ್ವಿಕ ವೃತ್ತಿಯಾಗಿರುವುದು. ಇದನ್ನು ನೀನು ತಿಳಿದುಕೊಂಡಿರು ।।೧೬೬।। ಆಶಂಕಾ ।। ಕರ್ಮವನ್ನು ಮಾಡಿದರೆ ಫಲಾಶೆಯು ಬೆಳೆಯುವುದು, ಆಗ ಆ ಫಲವನ್ನು ಭೋಗಿಸಬೇಕಾಗುವುದು. ಅಂದಮೇಲೆ ಸ್ವಧರ್ಮದಿಂದ ಭಕ್ತಿಯು ಹೇಗೆ ಸಾಧಿಸುವುದು ? ಕಾರಣ ಕರ್ಮವು ಮಾತ್ರ ಅತ್ಯಂತ ದೋಷಯುಕ್ತವಾಗಿರುವುದು ।।೧೬೭।। ಕರ್ಮವನ್ನು ಮಾಡಿದರೆ ಅದರ ಫಲವು ಬಾಧಕವಾಗುವುದು. ಮಾಡದೇ ಇದ್ದರೆ ಪ್ರತ್ಯವಾಯ ಪ್ರಾಪ್ತಿಯಿಂದ ನರಕವನ್ನು ಭೋಗಿಸಬೇಕಾಗುವುದು. ಈ ರೀತಿಯಿಂದ ಈ ಸಂಸಾರದಲ್ಲಿ ಕರ್ಮವು ಜನರನ್ನು ಕರ್ಮಬದ್ಧರನ್ನಾಗಿ ಮಾಡಿ ಸಂಸಾರಿಯರನ್ನಾಗಿ ಮಾಡಿರುವುದು ।।೧೬೮।। ಜೀವವು ಸ್ವತಂತ್ರವಾಗಿತ್ತು. ಆದರೆ ಕರ್ಮವು ಅದಕ್ಕೆ ಪರತಂತ್ರವನ್ನಾಗಿ ಮಾಡಿರುವುದು. ಹೀಗೆ ಈ ಕರ್ಮದ ಚರಿತ್ರೆಯು ಅತಿವಿಚಿತ್ರವಾಗಿದ್ದು ಬಾಧಕವಾಗಿರುವುದು ।।೧೬೯।। ಸ್ವಕರ್ಮದಿಂದ ಭಕ್ತಿಯು ಹೇಗೆ ಸಾಧಿಸುವುದೆಂದು ನೀನು ಕೇಳಬಹುದು ಅದಕ್ಕಾಗಿ ಆ ವಿಷಯದ ಉಪಪತ್ತಿಯನ್ನು ಶ್ರೀಕೃಷ್ಣನು ಸ್ವತಃ ಹೇಳುವನು ।।೧೭೦।। ಧಾವಿಸಿ ಹೋಗಿ ಸರ್ಪದ ಹೆಡೆಯನ್ನು ಹಿಡಿಯಲು ಅದು ಕೂಡಲೇ ತನ್ನನ್ನು ಸುತ್ತಿಕೊಳ್ಳುವುದು. ಇದಕ್ಕೆ ಬೆದರಿ ಕೈಬಿಟ್ಟರೆ ಅದು ನಮ್ಮನ್ನು ಕಚ್ಚಿ ತನ್ನ ಘಾತಕ ವಿಷದಿಂದ ನಾಶ ಮಾಡುವುದು ।।೧೭೧।। ಹೀಗೆ ಸರ್ಪಕಚ್ಚುವಿಕೆಯ ಸಂಕಟವನ್ನು ಹಾವಿನ ಮಂತ್ರವನ್ನು ತಿಳಿದಿರುವ ಗಾರುಡಿಯು ನಿವಾರಿಸಬಲ್ಲನು. ಅದರಂತೆ ಕರ್ಮದಲ್ಲಿ ಉತ್ಪನ್ನವಾಗಿರುವ ಬಾಧೆಯನ್ನು ಸದ್ಗುರುಗಳು ತತ್ಕಾಲದಲ್ಲಿ ನಿವಾರಿಸುವರು ।।೧೭೨।। ಸದ್ಗುರುಗಳಿಗೆ ಶರಣು ಹೋಗುವುದರಿಂದ ಅವರು ಸರ್ವ ಕರ್ಮಗಳನ್ನು ಬ್ರಹ್ಮಾರ್ಪಣ ಮಾಡಿಸುವರು. ಈ ನಿಷ್ಕಾಮ ಬುದ್ಧಿಯಿಂದ ಭಗವತ್ಸೇವೆ ಮಾಡುವವನಲ್ಲಿ ಸತ್ವಗುಣದ ಲಕ್ಷಣವಿರುವುದೆಂದು ನಿಶ್ಚಿತವಾಗಿ ತಿಳಿ ।।೧೭೩।। ಬ್ರಹ್ಮವು ಇದು ಕರ್ಮದ ಪ್ರಕಾಶಕವಾಗಿರುವುದು ಮತ್ತು ಕರ್ಮವೂ ಕೂಡ ಬ್ರಹ್ಮಾತ್ಮಕವಾಗಿರುವುದು. ಇದೇ ನಿಜವಾದ ಮದರ್ಪಣೆಯ ಕರ್ಮವಾಗಿರುವುದು. ಈ ರೀತಿಯಲ್ಲಿ ನನ್ನ ಭಜನೆಯನ್ನು ಮಾಡಬೇಕು ।।೧೭೪।। ಸರ್ವ ಇಂದ್ರಿಯಗಳಿಗೆ ಜ್ಞಾನದ ಸ್ಫೂರ್ತಿಯಾಗುವಿಕೆಯೇ ಬ್ರಹ್ಮದ ಬ್ರಹ್ಮಶಕ್ತಿಯಾಗಿರುವುದು ಎಂಬ ಈ ನಿಶ್ಚಯದಿಂದ ಕರ್ಮದ ಆಚರಣೆಯನ್ನು ಮಾಡುವಿಕೆಯ ನಾಮವು ಸ್ವಧರ್ಮಭಕ್ತಿ ಎಂದು ಹೇಳಲ್ಪಡುವುದು ।।೧೭೫।।

ಐಸೇನೀ ಸ್ವಕರ್ಮೇ ಸ್ವಾಭಾವಿಕ । ಜೇ ಮಜ ಭಜತೀ ಭಾವಿಕ । ತೇ ತೇ ಶುದ್ಧ ಸಾತ್ತ್ವಿಕ ಲೋಕ । ಜಾಣ ನಿಷ್ಟಂಕ ಉದ್ಧವಾ ॥೧೭೬॥ ಸ್ವಧರ್ಮ ಸರ್ವಥಾ ನಿಷ್ಫಳ । ಮ್ಹಣತೀ ತೇ ಮೂರ್ಖ ಕೇವಳ । ಸ್ವಧರ್ಮ ನಿರಸೀ ಚಿತ್ತಮಳ । ಕರ್ಮ ಸಮೂಳ ನಿರ್ದಳೀ ॥೧೭೭॥ ಐಸಾ ಥೋರ ಸ್ವಧರ್ಮಾಚೀ ಜೋಡೀ । ಸಾಂಡೂನಿ ವಾಂಛಿತ ವಿಷಯಗೋಡೀ । ತೇ ತೇ ರಾಜಸೇ ಬಾಪುಡೀ । ಕೇವಳ ವೇಡೀ ವಿಷಯಾರ್ಥೀ ॥೧೭೮॥ ವಿಷಯಫಳ ವಾಂಛಿತಾ ದೇಖ । ದೇಹ ಧರಣೇ ಆವಶ್ಯಕ । ದೇಹಸಂಭವ ದುಃಖದಾಯಕ । ಸ್ವರ್ಗನರಕಫಳ ಭೋಗೀ ॥೧೭೯॥ ಯಾಪರೀ ಜನೀ ದುಃಖದಾತೀ । ರಾಜಸತಾಮಸಪ್ರಕೃತೀ । ಐಕ ತ್ಯಾ ದೋನೀ ಗುಣವೃತ್ತೀ । ವಿಶದ ತುಜಪ್ರತೀ ಸಾಂಗೇನ ॥೧೮೦॥

ಯದಾ ಆಶಿಷ ಆಶಾಸ್ಯ ಮಾಂ ಭಜೇತ ಸ್ವಕರ್ಮಭಿಃ । ತಂ ರಜಃ ಪ್ರಕೃತಿಂ ವಿದ್ಯಾದ್ಧಿಂಸಾಮಾಶಾಸ್ಯ ತಾಮಸಮ್ ॥೧೧॥

ಅರ್ಥ:- ಸಕಾಮ ಭಾವನೆಯಿಂದ ತನ್ನ ಕರ್ಮಗಳಿಂದ ನನ್ನ ಭಜನೆ, ಪೂಜನೆಗಳನ್ನು ಮಾಡುವವನು ರಜೋಗುಣಿಯಾಗಿರುವನು. ತನ್ನ ಶತ್ರುವಿನ ಮರಣಕ್ಕಾಗಿ ನನ್ನ ಭಜನೆಯನ್ನು ಮಾಡುವವನಿಗೆ ತಮೋಗುಣಿ ಎಂದು ತಿಳಿದುಕೊಳ್ಳಬೇಕು.

ಜೋ ಕಾ ಆಚರೋನಿ ಸ್ವಧರ್ಮ । ವಾಂಛೀ ನಾನಾ ಫಳಕಾಮ । ತೇ ತೇ ಜಾಣ ಕಾಮ್ಯ ಕರ್ಮ । ರಾಜಸ ಧರ್ಮ ಯಾ ನಾಂವ ॥೧೮೧॥ ಜೋ ಅಭ್ಯಂತರೀ ಅತಿಸಕಾಮ । ತೋ ಜೇ ಜೇ ಆಚರೇ ಕರ್ಮಧರ್ಮ । ತೇ ತೇಂಅವಘೇಚಿ ಸಕಾಮ । ಫಳಸಂಭ್ರಮ ನಿಜಹೇತೂ ॥೧೮೨॥ ಸ್ವರೂಪೀ ಕಾಮ್ಯ ಕರ್ಮ ನಾಹೀ । ಕಾಮನಾ ಕಾಮ್ಯ ಕರೀ ಪಾಹೀ । ಸೋನೇ ಸ್ವಭಾವೇ ಅಸೇ ಠಾಯೀ । ಲೇಣೇ ಉಪಾಯೀ ಸ್ವಯೇ ಕೀಜೇ ॥೧೮೩॥ ಸ್ವಕರ್ಮ ಸ್ವಭಾವೇ ಪವಿತ್ರ ಜಾಣ । ಸ್ವಧರ್ಮೇ ಮಾಝೇ ಶುದ್ಧ ಭಜನ । ತೇಥ ಕಾಮನಾಫಳ ಕಾಮೂನ । ಕಾಮ್ಯ ಆಪಣ ಸ್ವಯೇ ಕೀಜೇ ॥೧೮೪॥ ಫಳಕಾಮೇ ಜೇ ಮಾಝೇ ಯಜನ । ತೇ ಕೇವಳ ಫಳಾಚೇಚಿ ಭಜನ । ಸಕಾಮೇ ಜೇ ಸ್ವಧರ್ಮಾಚರಣ । ತೇ ಪ್ರಕೃತಿ ಜಾಣ ರಾಜಸ ॥೧೮೫॥ ಐಸಐಶಿಯೇ ಪ್ರಕೃತೀಚಾ ವಿಲಾಸ । ಸ್ತ್ರೀ ಅಥವಾ ಹೋ ಕಾ ಪುರುಷ । ತೇ ತೇ ಜಾಣ ಪಾ ರಾಜಸ । ಐಕ ತಾಮಸ ಗುಣವೃತ್ತಿ ॥೧೮೬॥ ಕ್ರೋಧಯುಕ್ತ ಅಂತಃಕರಣ । ತೇಣೇಸೀ ಜ್ಯಾಚೇ ಸ್ವಧರ್ಮಾಚರಣ । ಫಳ ವಾಂಛೀ ಶತ್ರುಮರಣ । ತೇ ಪ್ರಕೃತೀ ಜಾಣ ತಾಮಸೀ ॥೧೮೭॥

ಇಂತಹ ಪ್ರಕಾರದ ಸ್ವಧರ್ಮದಿಂದ ಯಾವ ಭಾವಿಕ ಭಕ್ತರು ನನ್ನನ್ನು ಭಜಿಸುವರೋ, ಹೇ ಉದ್ಧವನೇ, ಆ ಭಕ್ತರೂ ಕೂಡ ಸಾತ್ವಿಕರಾಗುವರೆಂದು ನೀನು ನಿಶ್ಚಯವಾಗಿ ತಿಳಿ ॥೧೭೬॥ ಸ್ವಧರ್ಮವು ನಿಷ್ಫಲವಾಗಿರುವುದೆಂದು ಹೇಳುವವರೆಲ್ಲರೂ ಮೂರ್ಖರಾಗಿರುವರು. ಸ್ವಧರ್ಮವು ಇದು ಚಿತ್ತದಲ್ಲಿನ ಮಲವನ್ನು ನಿವಾರಿಸುವುದು ಮತ್ತು ಕರ್ಮಗಳನ್ನು ಸಮೂಲವಾಗಿ ನಿರಸನೆಮಾಡುವುದು ॥೧೭೭॥ ಸ್ವಧರ್ಮದಿಂದಾಗುವ ಇಂತಹ ಮಹಾಲಾಭವನ್ನು ಬಿಟ್ಟುಕೊಟ್ಟು ಯಾರು ವಿಷಯಗಳ ಸುಖದ ಇಚ್ಛೆಯನ್ನು ಮಾಡುವರೋ, ಇವರು ಪಾಪ ! ರಾಜಸರಾಗಿರುವರು. ಇವರು ವಿಷಯಸುಖಕ್ಕಾಗಿ ಹುಚ್ಚರಾಗಿರುವರು ॥೧೭೮॥ ವಿಷಯಗಳ ಫಲದ ಇಚ್ಛೆಯನ್ನು ಮಾಡುವುದರಿಂದ ಅದಕ್ಕಾಗಿ ದೇಹವನ್ನು ಧರಿಸಬೇಕಾಗುವುದು. ದೇಹಧಾರಣೆಯು ದುಃಖದಾಯಕವಾಗಿರುವುದರಿಂದ ಅದರ ಯೋಗದಿಂದ ಸ್ವರ್ಗ, ನರಕ ಇತ್ಯಾದಿ ಫಲಗಳನ್ನು ಭೋಗಿಸಬೇಕಾಗುವುದು ॥೧೭೯॥ ಈ ಪ್ರಕಾರವಾಗಿ ಜಗತ್ತಿನ ರಾಜಸ-ತಾಮಸ ಪ್ರಕೃತಿಯು ದುಃಖವನ್ನು ಕೊಡುತ್ತಿರುವುದು. ಈ ಎರಡೂ ಪ್ರಕಾರದ ಗುಣವೃತ್ತಿಯನ್ನು ನಾನು ನಿನಗೆ ಸ್ಪಷ್ಟಮಾಡಿ ಹೇಳುವೆನು ॥೧೮೦॥

ಸ್ವಧರ್ಮದ ಆಚರಣೆಯನ್ನು ಮಾಡುತ್ತ ಯಾವನು ಬಹು ಪ್ರಕಾರಗಳ ಫಲದ ಇಚ್ಛೆಯನ್ನು ಮಾಡುವನೋ, ಅದು ಆತನ ಕಾಮ್ಯ ಕರ್ಮವಾಗಿರುವುದು. ಇದಕ್ಕೇನೇ ರಾಜಸಧರ್ಮವೆಂದು ಹೇಳುವರು ॥೧೮೧॥ ಅಂತಃಕರಣದಲ್ಲಿ ಯಾವನು ಅತಿಶಯವಾಗಿ ಲೋಭಿಯಾಗಿದ್ದು ಅವನು ಎಷ್ಟೊಂದು ಕರ್ಮಗಳನ್ನು ಮಾಡುವನೋ, ಆ ಸರ್ವ ಕರ್ಮಗಳು ಸಕಾಮವಾಗಿರುವುವು. ಆ ಎಲ್ಲ ಕರ್ಮಗಳಲ್ಲಿ ತನಗೆ ಕರ್ಮಗಳ ಫಲ ದೊರೆಯಬೇಕೆಂಬುವುದೇ ಅವನ ಉದ್ದೇಶವಿರುವುದು ॥೧೮೨॥ ಕರ್ಮದ ಮೂಲ ಸ್ವರೂಪದಲ್ಲಿ ಕಾಮ್ಯತ್ವವು ಇದು ಮೂಲತಃ ಇರುವುದಿಲ್ಲ. ಆದರೆ ಕಾಮನೆಯು ಇದು ಆ ಕರ್ಮಕ್ಕೆ ಕಾಮ್ಯವನ್ನಾಗಿ ಮಾಡುವುದು, ಬಂಗಾರವು ಅದು ತನ್ನ ಸ್ವರೂಪದಲ್ಲಿ ಸ್ಥಿರವಾಗಿರುವುದು. ಆದರೆ ನಾವು ಪ್ರಯತ್ನ ಮಾಡಿ ಅದರಿಂದ ಅಲಂಕಾರಗಳನ್ನು ಮಾಡುವೆವು ॥೧೮೩॥ ಅದರಂತೆ ಸ್ವಕರ್ಮವು ಇದು ಸ್ವಭಾವತವೇ ಪವಿತ್ರವಾಗಿರುವುದು. ಸ್ವಧರ್ಮದಿಂದ ನನ್ನದೂ ಕೂಡ ಭಜನೆಯು ಸಾಧಿಸುತ್ತಿರುವುದು. ಆದರೆ ಹೀಗಿದ್ದರೂ ಕೂಡ ಅದರಲ್ಲಿ ಇಷ್ಟ ಫಲದ ಇಚ್ಛೆಯನ್ನು ಧರಿಸಿ ನಾವು ಆ ಸ್ವಧರ್ಮಕ್ಕೆ ಕಾಮ್ಯವನ್ನಾಗಿ ಮಾಡುತ್ತಿದ್ದೇವೆ. ॥೧೮೪॥ ಫಲದ ಇಚ್ಛೆಯಿಂದ ಯಾವ ನನ್ನ ಭಜನೆಯು ಅದು ವಾಸ್ತವಿಕವಾಗಿ ಫಲದ ಭಜನೆಯಾಗಿರುವುದು. ಇಂತಹ ಪ್ರಕಾರದ ಸ್ವಧರ್ಮಾಚರಣೆಯು ಅದು ರಾಜಸ ಪ್ರಕೃತಿಯ ಲಕ್ಷಣವೆಂದು ತಿಳಿಯಬೇಕು ॥೧೮೫॥ ಹೀಗೆಲ್ಲ ಇರುವ ಪ್ರಕೃತಿಯ ವಿಲಾಸವನ್ನು ಯಾವ ಸ್ತ್ರೀಯರಾಗಲಿ ಅಥವಾ ಪುರುಷರಾಗಿರಲಿ ಆಚರಿಸುವವರೆಲ್ಲರೂ ರಾಜಸರು ಎಂದು ತಿಳಿಯಬೇಕು. ಈಗ ತಾಮಸ ಗುಣವೃತ್ತಿಯ ಪ್ರಕಾರವನ್ನು ಹೇಳುವೆನು. ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡು ॥೧೮೬॥ ಮನದಲ್ಲಿ ಕ್ರೋಧವನ್ನಿಟ್ಟುಕೊಂಡು ಯಾರು ಸ್ವಧರ್ಮದ ಆಚರಣೆಯನ್ನು ಮಾಡುವರೋ ಮತ್ತು ತನ್ನ ವೈರಿಗೆ ಮರಣವಾಗಬೇಕೆಂಬ ಯಾರ ಮನದಲ್ಲಿ ಇಚ್ಛೆವಿರುವುದೋ, ಅವರು ತಾಮಸ ಸ್ವಭಾವದ ಜನರಾಗಿರುವರು ॥೧೮೭॥

ಜೇಥೇ ದ್ವೇಷೀ ಬಾಂಧಲೇ ಘರ । ಜೇ ಠಾಯೀ ಕ್ರೋಧ ಅನಿವಾರ । ಜೋ ಭೂತಮಾತ್ರೀ ನಿಷ್ಠೂರ । ಜ್ಯಾಚೀ ಪ್ರಕೃತಿ ಕ್ರೂರ ಸರ್ವದಾ ॥೧೮೮॥ ಐಶಿಯಾ ಸ್ವಭಾವಾವರೀ । ನರ ಅಥವಾ ಹೋ ಕಾ ನಾರೀ । ತೇ ತೇ ತಾಮಸ ಸಂಸಾರೀ । ನಿಜನಿರ್ಧಾರೀ ಉದ್ಧವಾ ॥೧೮೯॥ ಜೀವ ಸ್ವರೂಪೇ ಚೈತನ್ಯ ಪಹಾ ಹೋ । ತ್ಯಾಸೀ ''ಮಾಂ ಭಜ'' ಕಾ ಮ್ಹಣೇ ದೇವೋ । ಜೀವಾಸೀ ಕಾ ಸೇವಕಭಾವೋ । ಸೇವ್ಯ ದೇವೋ ಕೈಸೇನಿ ॥೧೯೦॥ ಯೇಚ ಅರ್ಥೀಚೇ ನಿರೂಪಣ । ಕೃಷ್ಣ ಸಾಂಗತಾಹೇ ಆಪಣ । ಸೇವ್ಯ ಸೇವಕಲಕ್ಷಣ । ಮಾಯಾಗುಣ ಸಂಬಂಧೇ ॥೧೯೧॥

ಸತ್ತ್ವ ರಜಸ್ತಮ ಇತಿ ಗುಣಾ ಜೀವಸ್ಯ ನೈವ ಮೇ । ಚಿತ್ತಜಾ ಯೈಸ್ತು ಭೂತಾನಾಂ ಸಜ್ಜಮಾನೋ ನಿಬಧ್ಯತೇ ॥೧೨॥

ಅರ್ಥ:- ಸತ್ವ, ರಜ ಮತ್ತು ತಮ ಈ ಮೂರು ಗುಣಗಳು ಜೀವದ ಮೇಲೆ ಪ್ರಭಾವ ಬೀರುತ್ತವೆ.ನನ್ನ ಮೇಲಲ್ಲ. ಈ ಮೂರು ಗುಣಗಳು ಜೀವದ ಉಪಾಧಿಯಾಗಿ ಯಾವ ಚಿತ್ತವು ಆದರಲ್ಲಿ ಅಭಿವ್ಯಕ್ತವಾಗುವುದು. ಆದ್ದರಿಂದ ಆ ಗುಣಗಳ ಯೋಗದಿಂದ ಜೀವವು ಬದ್ಧವಾಗುವುದು. ಅದು ತನ್ನ ದೇಹದಲ್ಲಿ ಮತ್ತು ಇತರ ಸೃಷ್ಟಿಗೊಂಡ ವಸ್ತುಗಳಲ್ಲಿ ಆಸಕ್ತವಾಗುವುದು.

ಬಾಂಧೋನಿ ನಾಣಿತಾ ಆಯಾ । ಜೇವೀ ದೇಹಾಧೀನ ಅಸೇ ಛಾಯಾ । ತೇವೀ ಭಗವಂತಾಧೀನ ಮಾಯಾ । ನಾತಳೋನಿಯಾ ವರ್ತವೀ ॥೧೯೨॥ ಮಾಯಾ ವರ್ತವಿತಾ ನಿವರ್ತವಿತಾ । ಸ್ವಾಮೀ ಭಗವಂತ ತತ್ತ್ವತಾ । ಯಾಲಾಗೀ ಮಾಯಾ ಅಧ್ಯಕ್ಷತಾ । ತ್ಯಾಸೀಚಿ ಸರ್ವಥಾ ವೇದ ಬೋಲೇ ॥೧೯೩॥ ಸೂರ್ಯ ಅಂಧಾರಾತೇ ನಾಶೀ । ಪರೀ ತೋ ಸಂಮುಖ ನ ಯೇ ತ್ಯಾಪಾಶೀ । ತೇವೀ ಮಾಯಾನಿಯಂತಾ ಹೃಷೀಕೇಶೀ । ಪರೀ ಮಾಯಾ ದೇವಾಸೀ ದೃಷ್ಟ ನವ್ಹೇ ॥೧೯೪॥ ಮಾಝೀ ಜೇ ದೇಖಣೇಪಣ । ತೇಚಿ ಮಾಯೇಚೇ ಮುಖ್ಯ ಲಕ್ಷಣ । ಮಜಪಾಶೀ ಮಾಯಾ ಜಾಣ । ಗುಣಾಭಿಮಾನೇಸೀ ನಾಹೀ ॥೧೯೫॥ ಮಾಯಾಬಿಂಬಿತ ಚೈತನ್ಯ । ತ್ಯಾಸೀ ಬೋಲಿಜೇ ಜೀವಪಣ । ತ್ಯಾ ಜೀವಾಸೀ ತ್ರಿಗುಣೀ ಬಾಂಧೋನ । ದೇಹಾಭಿಮಾನ ದೃಢಕೇಲಾ ॥೧೯೬॥ ಜೀವಾಸೀ ಲಾಗತಾ ದೇಹಾಭಿಮಾನ । ತೋ ಝಾಲಾ ಮಾಯಾಧೀನ । ಮಾಯಾನಿಯಂತಾ ಶ್ರೀನಾರಾಯಣ । ತೋ ಸ್ವಾಮೀ ಜಾಣ ಜೀವಾಚಾ ॥೧೯೭॥ ಜೀವ ಗುಣಾಭಿಮಾನೇ ಬದ್ಧಕ । ಯಾಲಾಗೀ ಝಾಲಾ ತೋ ಸೇವಕ । ಆತ್ಮಾ ಗುಣಾತೀತ ಚೋಖ । ಬಂಧಮೋಚಕ ಜೀವಾಚಾ ॥೧೯೮॥ ಯಾಪರೀ ಸೇವ್ಯಸೇವಕಭಾವೋ । ವಿಭಾಗ ದಾವೋನಿಯಾ ಪಹಾ ಹೋ । ತ್ರಿಗುಣಗುಣಾಂಚಾ ಅನ್ವಯೋ । ವಿಶದ ದೇವೋ ಸ್ವಯೇ ಸಾಂಗೇ ॥೧೯೯॥

ಎಲ್ಲಿ ದ್ವೇಷವು ಮನೆ ಮಾಡಿರುವುದೋ, ಅಲ್ಲಿ ಅತಿಶಯವಾಗಿ ಕ್ರೋಧವು ವರ್ತಿಸುತ್ತಿರುವುದು. ಯಾರ ಪ್ರಕೃತಿಯು ಸತತವಾಗಿ ಕ್ರೋಧಯುಕ್ತವಾಗಿರುವುದೋ, ಅವರು ಸರ್ವಭೂತಮಾತ್ರರಲ್ಲಿ ಅತಿಶಯವಾಗಿ ನಿಷ್ಠೂರರಾಗಿರುವರು ॥೧೮೮॥ ಹೇ ಉದ್ಧವಾ, ಇಂತಹ ಸ್ವಭಾವದ ಯಾವ ಸ್ತ್ರೀ ಪುರುಷರು, ಈ ಸಂಸಾರದಲ್ಲಿ ತಾಮಸ ಪ್ರಕೃತಿಯವರಾಗಿರುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೮೯॥ ವಾಸ್ತವಿಕವಾಗಿ ಯಾವ ಈ ಜೀವವು ಸ್ವಭಾವತವೇ ಬ್ರಹ್ಮಸ್ವರೂಪವಾಗಿರುವುದು. ಹೀಗಿದ್ದ ಮೇಲೆ ದೇವನು ಆತನಿಗೆ ನನ್ನ ಭಕ್ತಿಯನ್ನು ಮಾಡು ಎಂದು ಏಕೆ ಹೇಳುತ್ತಿರುವನು? ಜೀವಕ್ಕೆ ಸೇವಕತನವು ಏಕೆ ಬಂದಿತು? ಮತ್ತು ದೇವನು ಸೇವ್ಯ ಹೇಗಾದನು? ॥೧೯೦॥ ಮಾಯೆಯ ಗುಣಗಳಿಂದ ಸೇವ್ಯ ಸೇವಕತನವು ಯಾರಲ್ಲಿ ಹೇಗೆ ನಿರ್ಮಾಣವಾಗುವುದೆಂಬ ಈ ಅರ್ಥದಿಂದಲೇ ಸ್ವತಃ ಶ್ರೀಕೃಷ್ಣನು ನಿರೂಪಣೆಯನ್ನು ಮಾಡುತ್ತಿರುವನು ॥೧೯೧॥

ನೆರಳು ಇದು ಮನುಷ್ಯನ ಜೊತೆಯಲ್ಲಿ ಹೇಗೆ ಕಟ್ಟಲ್ಪಡದೇ ಅದರ ಆಧೀನವಾಗಿದ್ದು, ತಾನೇ ಸ್ವತಃ ದೇಹದ ಜೊತೆಯಲ್ಲಿಯೇ ಹೋಗುತ್ತಿರುವುದೋ, ಅದೇ ಪ್ರಕಾರವಾಗಿ ಮಾಯೆಯು ಇದು ಭಗವಂತನ ಆಧೀನದಲ್ಲಿದ್ದು, ಆತನು ಅದಕ್ಕೆ ಸ್ಪರ್ಶ ಕೂಡ ಮಾಡದೇ ತನ್ನ ಜೊತೆಯಲ್ಲಿ ನಡೆಸುತ್ತಿರುವನು ॥೧೯೨॥ ನಿಜವಾಗಿಯೂ ಮಾಯೆಯನ್ನು ದುಡಿಸಿಕೊಳ್ಳುವನು ಮತ್ತು ಆದರ ನಾಶವನ್ನು ಮಾಡುವನು. ಈ ಭಗವಂತನು ಮಾತ್ರ ಆಗಿರುವನು. ಆದ್ದರಿಂದ ವೇದವು ಭಗವಂತನಿಗೆ ಗುಣಮಾಯೆಯ ನಿಯಂತ್ರಕನು ಎಂದು ಹೇಳಿರುವುದು.ಸೂರ್ಯನು ಯಾವ ಅಂಧಃಕಾರದ ನಾಶವನ್ನು ಮಾಡುವನು. ಆದರೆ ಅಂಧಃಕಾರವು ಸೂರ್ಯನ ಎದುರಿನಲ್ಲಿ ಎಂದಿಗೂ ನಿಲ್ಲುವುದಿಲ್ಲ. ಈಶ್ವರಮಾಯೆಯ ನಿಯಂತ್ರಣ ಮಾಡುವವನು ಪರಮಾತ್ಮನಾಗಿದ್ದರೂ ಕೂಡ ಮಾಯೆಯ ಭಗವಂತನ ಎದುರಿನಲ್ಲಿ ಎಂದಿಗೂ ನಿಲ್ಲುವುದಿಲ್ಲ ॥೧೯೪॥ ನನ್ನ ಯಾವ ಅವಲೋಕನೆಯು ಅದೇ ಮಾಯೆಯ ಮುಖ್ಯ ಲಕ್ಷಣವಾಗಿರುವುದು. ನನ್ನ ಹತ್ತಿರ ಮಾಯೆಯು ಗುಣ ಅಭಿಮಾನ ಸಹ ಇರುವುದಿಲ್ಲ ॥೧೯೫॥ ಮಾಯೆಯಲ್ಲಿ ಪ್ರತಿಬಿಂಬವಾಗಿರುವ ಯಾವ ಚೈತನ್ಯಕ್ಕೆ ಜೀವ ಎಂದು ಕರೆಯುವರು. ಮೂರು ಗುಣಗಳು ಯಾವ ಈ ದೇಹಕ್ಕೆ ಬದ್ಧನನ್ನಾಗಿ ಮಾಡಿರುವುದು. ಆದ್ದರಿಂದ ದೇಹಾಭಿಮಾನವು ದೃಢವಾಗಿರುವುದು ॥೧೯೬॥ ಜೀವಕ್ಕೆ ದೇಹಾಭಿಮಾನವು ಹತ್ತಿಕೊಳ್ಳುತ್ತಲೇ ಅದು ಮಾಯೆಯ ಅಧೀನವಾಗುವುದು. ಅದಕ್ಕಾಗಿ ಮಾಯೆಯ ನಿಯಂತ್ರಕನಾಗಿರುವ ನಾನು ನಾರಾಯಣನು, ಆ ಜೀವದ ಸ್ವಾಮಿಯಾಗಿರುವೆನೆಂದು ಹೀಗೆ ತಿಳಿ ॥೧೯೭॥ ಯಾವ ಜೀವವು ಈ ಯಾವ ಗುಣಗಳ ಅಭಿಮಾನದಿಂದ ಬದ್ಧನಾಗಿರುವುದು. ಆದ್ದರಿಂದ ಅದು ಸೇವಕನಾಗಿರುವುದು. ಆತ್ಮವು ಗುಣಗಳಿಂದ ಅಲಿಪ್ತವು ಅಂದರೆ ನಿರ್ಮಲವಾಗಿರುವುದರಿಂದ ಅದುವೇ ಜೀವಕ್ಕೆ ಜನ್ಮಮರಣಗಳಿಂದ ಬಿಡಿಸುವುದ್ದಾಗಿರುವುದು ॥೧೯೮॥ ಈ ಪ್ರಕಾರವಾಗಿ ಸೇವ್ಯ ಸೇವಕ ಭಾವದ ವಿಭಾಗವನ್ನು ತೋರಿಸಿ ತ್ರಿಗುಣಗಳ ಪರಸ್ಪರ ಸಂಬಂಧವನ್ನು ದೇವನು ಸ್ಪಷ್ಟಮಾಡಿ ಸ್ವತಃ ವರ್ಣಿಸುತ್ತಿರುವನು ॥೧೯೯॥

ಗುಣ ತಿನ್ಹೀ ಸಮಸಮಾನ । ತ್ಯಾಮಾಜೀ ಕ್ಷೋಭೋನಿಯಾ ಜಾಣ । ಜೋ ಜೋ ವಾಢೇ ಅಧಿಕ ಗುಣ । ತೇ ತೇ ಲಕ್ಷಣ ಹರಿ ಸಾಂಗೇ ॥೨೦೦॥ ಬ್ರಹ್ಮ ನಿರ್ಮಳತ್ವೇ ಪ್ರಸಿದ್ಧ । ಕರ್ಮ ಶೋಧಕತ್ವೇ ಅತಿಶುದ್ಧ । ಯೇಥ ಕರ್ಮೀ ಉಪಜೇ ಕರ್ಮಬಾಧ । ತೋ ಚಿತ್ತಸಂಬಂಧ ಗುಣಕ್ಷೋಭೇ ॥೨೦೧॥ ಕರ್ಮಬ್ರಹ್ಮೀ ದೋಷ ನಾಹೀ । ದೋಷ ಚಿತ್ತವೃತ್ತೀಚ್ಯಾ ಠಾಯೀ । ತೋಹೀ ಗುಣಕ್ಷೋಭೇ ಪಾಹೀ । ಘಾಲೀ ಅಪಾಯೀ ಪುರುಷಾತೇ ॥೨೦೨॥ ಯೇಚಿ ಅರ್ಥೀಚೇ ನಿರೂಪಣ. । ಸಾಂಗಿತಲೇ ಮಿಶ್ರಲಕ್ಷಣ । ಆತಾ ವಾಢಲ್ಯಾ ಏಕೇಕ ಗುಣ । ಗುಣಲಕ್ಷಣ ತೇ ಐಕ ॥೨೦೩॥ ಜೋ ಗುಣ ವಾಢೇ ಅತಿ ಉನ್ನತೀ । ಇತರ ತ್ಯಾತಳೀ ವರ್ತತೀ । ತೇ ಕಾಳೀಂಚೀ ಪುರುಷಸ್ಥಿತೀ । ಉದ್ಧವಾಪ್ರತೀ ಹರಿ ಸಾಂಗೇ ॥೨೦೪॥

ಯದೇತರೌ ಜಯತ್ಸತ್ತ್ವಂ ಭಾಸ್ವರಂ ವಿಶದಂ ಶಿವಮ್ । ತದಾ ಸುಖೇನ ಯುಜ್ಯೇತ ಧರ್ಮಜ್ಞಾನಾದಿಭಿಃ ಪುಮಾನ್ ॥೧೩॥

ಅರ್ಥ:- ಸತ್ವಗುಣವು ಇತರ ಎರಡು ಗುಣಗಳನ್ನು ಜಯಿಸಿ ಬೆಳೆದರೆ ಆಗ ಚಿತ್ತವು ಪ್ರಕಾಶಕ, ಸ್ವಚ್ಛ ಹಾಗೂ ಶಾಂತವಾಗುವುದು. ತದನಂತರ ಆ ಪುರುಷನಿಗೆ ಸಂತೋಷ, ಸದ್ಧರ್ಮ, ಸುಜ್ಞಾನ ಮುಂತಾದ ಸದ್ಗುಣಗಳು ಲಭಿಸುತ್ತವೆ.

ಸಮೂಳ ಫಳಾಶಾ ತ್ಯಾಗೂನಿ । ನಿರ್ವಿಕಲ್ಪ ನಿರಭಿಮಾನೀ । ಜೋ ಲಾಗೇ ಸ್ವಧರ್ಮಾಚರಣೀ । ತೈ ರಜ ತಮ ದೋನೀ ಜಿಣೇ ಸತ್ವ ॥೨೦೫॥ ಜೈ ಭಾಗ್ಯಾಚೇ ಭರಣ ಉಘಡೇ । ತೈ ಹರಿಕಥಾಶ್ರವಣ ಘಡೇ । ಮುಖೀ ಹರಿನಾಮಕೀರ್ತಿ ಆವಡೇ । ತೇಣೇ ಸತ್ತ್ವವಾಢೇ ಅತಿಶುದ್ಧ ॥೨೦೬॥ ಕಾ ದೈವೇ ಜೋಡಿಲ್ಯಾ ಸತ್ಸಂಗತೀ । ಶ್ರವಣೀ ಶ್ರವಣ ಲಾಂಚಾವತೀ । ವಾಚಾ ಲಾಂಚಾವೇ ನಾಮಕೀರ್ತೀ । ಅತಿಪ್ರೀತೀ ಅಹರ್ನಿಶೀ ॥೨೦೭॥ ಐಸಐಶಿಯಾ ಅನುವೃತ್ತೀ । ರಜ ತಮ ದೋನೀ ಕ್ಷೀಣ ಹೋತೀ । ಸತ್ತ್ವ ವಾಢೇ ಅನುದ್ವೇಗ ವೃತ್ತೀ । ತ್ಯಾ ಸತ್ತ್ವಾಚೇ ಸ್ಥಿತೀ ಸಮೂಳ ಐಕ ॥೨೦೮॥ ಭಾಸ್ವರತ್ವೇ ಪ್ರಕಾಶ ಬಹುಳ । ವಿಶದತ್ವೇ ಅತಿನಿರ್ಮಳ । ಶಿವ ಮ್ಹಣಿಜೇ ಶಾಂತ ಸರಳ । ಹೇ ಸತ್ತ್ವಾಚೇ ಕೇವಳ ಸ್ವರೂಪ ಮುಖ್ಯ ॥೨೦೯॥ ಹೇ ಸತ್ತ್ವಾಚೇ ಸತ್ವವೃತ್ತೀ । ಆತುಡೇ ಜ್ಯಾ ಸಾಧಕಾಹಾತೀ । ತೇ ಕಾಳೀಂಚೀ ಪುರುಷಸ್ಥಿತೀ । ಐಕ ತುಜಪ್ರತೀ ಸಾಂಗೇನ ॥೨೧೦॥ ತೈ ವಿವೇಕಾಚೇ ತಾರೂ ಆತುಡೇ । ವೈರಾಗ್ಯಾಚೇ ನಿಜಗುಜ ಜೋಡೇ । ಸರ್ವೇಂದ್ರಿಯೀ ಪ್ರಕಾಶ ಉಘಡೇ । ಶಿಗೇ ಚಢೇ ಸ್ವಧರ್ಮ ॥೨೧೧॥

ಮೂರೂ ಗುಣಗಳು ಇವು ಸರಿಸಮಾನವಾಗಿರುವುವು. ಅವುಗಳಲ್ಲಿ ಯಾವ ಯಾವ ಗುಣಗಳ ಕ್ಷೋಭವಾಗಿ ಅವು ಅಧಿಕವಾಗಿ ಬೆಳೆಯುತ್ತಿರುವುವೋ, ಆಯಾ ಲಕ್ಷಣಗಳನ್ನು ಶ್ರೀಹರಿಯು ಹೇಳುತ್ತಿರುವನು ॥೨೦೦॥ ಬ್ರಹ್ಮವು ಇದು ಪವಿತ್ರತೆಯಲ್ಲಿ ಪ್ರಸಿದ್ಧವಾಗಿರುವುದು. ಕರ್ಮವೂ ಕೂಡ ನಿರ್ಮಲತ್ವದಲ್ಲಿ ಅತ್ಯಂತ ಶುದ್ಧವಾಗಿರುವುದು. ಹೀಗಿದ್ದರೂ ಕೂಡ ಕರ್ಮಗಳಲ್ಲಿ ಕರ್ಮಬಂಧನವು ಉತ್ಪನ್ನವಾಗುವುದಕ್ಕೆ ಗುಣಕ್ಷೋಭದ ಸಂಬಂಧವಾಗಿರುವುದು ॥೨೦೧॥ ಕರ್ಮ ಮತ್ತು ಬ್ರಹ್ಮ ಇವು ದೋಷರಹಿತವಾಗಿರುವುವು. ಆದರೆ ಚಿತ್ತವೃತ್ತಿಯಲ್ಲಿ ದೋಷವಿರುವುದು. ಅದು ಗುಣಕ್ಷೋಭದ ಯೋಗದಿಂದಲೇ ಆಗಿರುವುದು. ಇದು ಮನುಷ್ಯನಿಗೆ ಅನರ್ಥಕ್ಕೆ ಗುರಿಮಾಡುವುದು ॥೨೦೨॥ ಇದೇ ಅರ್ಥದ ನಿರೂಪಣೆಯನ್ನು ಮಾಡಿ ನಾನು ಗುಣಗಳ ಮಿಶ್ರ ಲಕ್ಷಣವನ್ನು ಕುರಿತು ಹೇಳಿರುವೆನು. ಈಗ ಒಂದೊಂದೇ ಗುಣಗಳು ವೃದ್ಧಿಯಾಗಲು ಆಗ ಆ ಗುಣಗಳ ಲಕ್ಷಣವು ಹೇಗಿರುವುದೆಂಬುದನ್ನು ಕೇಳು ॥೨೦೩॥ ಒಂದು ಗುಣವು ಕ್ಷೋಭಗೊಂಡು ಅತಿ ಉನ್ನತವಾಗಿ ಬೆಳೆಯುತ್ತಿರಲು, ಆಗ ಉಳಿದ ಎರಡು ಗುಣಗಳು ಅದರ ಆಧೀನವಾಗಿರುವುವು. ಆ ಸಮಯದಲ್ಲಿ ಪುರುಷನ ಸ್ಥಿತಿಗತಿಯು ಹೇಗಿರುವುದೆಂಬ ನಿರೂಪಣೆಯನ್ನು ಶ್ರೀಹರಿಯು ಉದ್ಧವನಿಗೆ ಹೇಳುತ್ತಿರುವನು ॥೨೦೪॥

ಪುರುಷನು ಸಂಪೂರ್ಣವಾಗಿ ಫಲದ ಆಶೆಯನ್ನು ತ್ಯಜಿಸಿ ನಿರ್ವಿಕಲ್ಪ ಮತ್ತು ನಿರಾಭಿಮಾನನಾಗಿ ಸ್ವಧರ್ಮದ ಆಚರಣೆಯನ್ನು ಮಾಡಲು ಆಗ ಯಾವ ಸತ್ವಗುಣವು ರಜ ಮತ್ತು ತಮೋಗುಣಗಳನ್ನು ಜಯಿಸುವುದು ॥೨೦೫॥ ಭಾಗ್ಯದ ಭಾಂಡಾರವು ತೆರೆಯಲು ಆಗಲೇ ಹರಿಕಥೆಯ ಶ್ರವಣವು ಸಾಧಿಸುವುದು. ಮುಖದಿಂದ ಹರಿನಾಮದ ಕೀರ್ತಿಯನ್ನು ಗುಣಗಾನ ಮಾಡಲು ಪ್ರಿಯವಾಗುವುದು. ಇದರಿಂದ ಯಾವ ಸತ್ವಗುಣವು ಅತಿಶಯವಾಗಿ ವೃದ್ಧಿಯಾಗುವುದು ॥೨೦೬॥ ದೈವಯೋಗದಿಂದ ಸತ್‌ಸಂಗತಿಯ ಲಾಭವು ದೊರಕಿತೆಂದರೆ ಆಗ ಭಗವಂತನ ಗುಣಗಾನವನ್ನು ಕೇಳುವ ವಿಷಯದಲ್ಲಿ ಶ್ರವಣಗಳು ತನ್ಮಯವಾಗುವುವು ಮತ್ತು ವಾಣಿಯು ಹಗಲು ರಾತ್ರಿ ಅತಿಶಯ ಪ್ರೇಮದಿಂದ ಭಗವಂತನ ನಾಮಕೀರ್ತನೆಯ ವರ್ಣನೆಯನ್ನು ಮಾಡಲು ತನ್ಮಯವಾಗುವುದು ॥೨೦೭॥ ಈ ಪ್ರಕಾರದ ಆಚರಣೆಯಿಂದ ರಜ ತಮ ಗುಣಗಳು ಕ್ಷೀಣವಾಗುವುವು. ಆಗ ಸತ್ವಗುಣವು ಅತ್ಯಂತ ಉತ್ಸಾಹದಿಂದ ಬೆಳೆಯುತ್ತ ಸಾಗುವುದು. ಆ ಯಾವ ಸತ್ವಗುಣದ ಸವಿಸ್ತಾರ ಪ್ರಕಾರವನ್ನು ಈಗ ಕೇಳು ॥೨೦೮॥ ತೇಜೋರೂಪದಿಂದ ಅತಿಶಯ ಪ್ರಕಾಶಮಾನ, ನಿರ್ಮಲತ್ವದಿಂದ ಅತ್ಯಂತ ಪವಿತ್ರ, ಶಿವ ಎಂದರೆ ಶಾಂತ ಹಾಗೂ ಸರಳತೆ ಇವು ಸತ್ವಗುಣದ ಸವಿಸ್ತಾರ ಸ್ವರೂಪವಾಗಿರುವುದು ॥೨೦೯॥ ಈ ಯಾವ ಸತ್ವಗುಣದ ಸತ್ವವೃತ್ತಿಯು ಯಾವ ಸಾಧಕನ ಕೈ ಸೇರುವುದೋ, ಆ ಸಾಧಕ ಪುರುಷನ ಸ್ಥಿತಿಯು ಹೇಗಾಗುವುದೆಂಬುದನ್ನು ಹೇಳುವೆನು, ಅದನ್ನು ಕೇಳು ॥೨೧೦॥ ಆತನಿಗೆ ಆ ಸಮಯದಲ್ಲಿ ವಿಚಾರದ ನೌಕೆಯು ದೊರೆಯುವುದು. ವೈರಾಗ್ಯದ ಶ್ರೇಷ್ಠವಾದ ಆತ್ಮರಹಸ್ಯವು ಆತನಿಗೆ ಪ್ರಾಪ್ತವಾಗುವುದು. ಇಂದ್ರಿಯಗಳಲ್ಲಿ ದೇದಿಪ್ಯಮಾನವಾದ ಪ್ರಕಾಶವು ಬೀಳುವುದು ಮತ್ತು ಸ್ವಧರ್ಮವು ಇದು ಶಿಖರದ ತುಟ್ಟ ತುದಿಯನ್ನು ಮುಟ್ಟುವುದು ॥೨೧೧॥

ತೇ ಕಾಳೀ ಜನ ಅಧರ್ಮರ್ತಾ । ಗರ್ವ ಅಭಿಮಾನ ಅಸತ್ಯತಾ । ಬಲಾತ್ಕಾರೇಹೀ ಶಿಕವಿತಾ । ನ ಕರೀ ಸರ್ವಥಾ ಅಧರ್ಮ ॥೨೧೨॥ ನಿಕಟ ಅಸತಾ ದುಃಖಸಾಧನ । ಸಾತ್ತ್ವಿಕ ಸದಾ ಸುಖಸಂಪನ್ನ । ಬಲಾತ್ಕಾರೇ ಕ್ಷೋಭವಿತಾ ಮನ । ಸಾತ್ತ್ವಿಕ ಜಾಣ ಕ್ಷೋಭೇನಾ ॥೨೧೩॥ ಐಶಿಯಾ ನಿಜಸತ್ತ್ವ ದೃಷ್ಟೀ । ಸುಖ ಸುಖಾ ಯೇತಾ ಭೇಟೀ । ತ್ಯಾಸೀ ಸ್ವಾನಂದೇ ಕೋಂದೇ ಸೃಷ್ಟೀ । ಶುದ್ಧ ಸತ್ತ್ವಪುಷ್ಟೀ ಯಾ ನಾಂವ ॥೨೧೪॥ ಐಸೇ ವಿಶದ ಸತ್ವ ಜಯಾಪಾಶೀ । ಶಮದಮ ಸೇವತೀ ತಯಾಂಸೀ । ವೈರಾಗ್ಯ ಲಾಗೇ ಪಾಯಾಂಸೀ । ಶುದ್ಧ ಸತ್ತ್ವರಾಶೀ ತೇ ಉದ್ಧವಾ ॥೨೧೫॥ ತೈಸೇಚಿ ಸತ್ತ್ವ ತಮ ಜಿಣೋನ । ಜೈ ವಾಢೇ ಗಾ ರಜೋಗುಣ । ತೈ ರಾಜಸಾಚೇ ಲಕ್ಷಣ । ಐಕ ಸಂಪೂರ್ಣ ಹರಿ ಸಾಂಗೇ ॥೨೧೬॥

ಯದಾ ಜಯೇತ್ತಮಃ ಸತ್ತ್ವಂ ರಜಃ ಸಂಗಂ ಭಿದಾ ಬಲಮ್ । ತದಾ ದುಃಖೇನ ಯುಜ್ಯೇತ ಕರ್ಮಣಾ ಯಶಸಾ ಶ್ರಿಯಾ ॥೧೪॥

ಅರ್ಥ:- ರಜೋಗುಣವು ಇದು ಭೇದಬುದ್ಧಿಯ ಕಾರಣವಾಗಿರುವುದು. ಅದರ ಸ್ವಭಾವವು ಆಸಕ್ತಿ ಮತ್ತು ಪ್ರವೃತ್ತಿಯಾಗಿರುವುದು. ತಮೋಗುಣ ಮತ್ತು ಸತ್ವಗುಣಗಳನ್ನು ಸೋಲಿಸಿ ರಜೋಗುಣದ ವೃದ್ಧಿಯಾಗುವುದು. ಆಗ ಮನುಷ್ಯನು ದುಃಖ, ಕರ್ಮ, ಯಶ ಮತ್ತು ಸಂಪತ್ತಿನಿಂದ ಸಂಪನ್ನನಾಗುವನು.

ರಜೋವೃದ್ಧೀಚೇ ಕಾರಣ । ದೇಹೀ ಉಪಜೇ ಜ್ಞಾನಾಭಿಮಾನ । ಪದೋಪದೀ ದೇಖೇ ದೋಷಗುಣ । ವಾಂಛೀ ಸನ್ಮಾನ ಪ್ರತಿಷ್ಠೀ ॥೨೧೭॥ ನವಲ ರಜೋಗುಣಾಚೀ ಖ್ಯಾತೀ । ಜ್ಞಾತೇಪಣೇ ಕಾಮಾಸಕ್ತೀ । ನಾನಾ ಭೋಗ ವಾಂಛೀ ಚಿತ್ತೀ । ತೇಣೇ ರಜಾಚೀ ಪ್ರಾಪ್ತೀ ಅನಿವಾರ ॥೨೧೮॥ ಐಸೇನಿ ರಜೋಗುಣ ವಾಢೋನಿ ವಾಢೀ । ಸತ್ತ್ವತಮಾಂತೇ ತಳೀ ಪಾಡೀ । ತ್ಯಾ ರಜಾಚೀ ಸ್ವರೂಪತಾಮೋಡೀ । ಐಕ ನಿರವಡೀ ಸಾಂಗೇನ ॥೨೧೯॥ ಶ್ಲೋಕೀ ತ್ರೈಪದೀ ಪ್ರಬಳ । ರಜ ಸಂಗಭಿದಾಬಳ । ಬೋಲಿಲಾ ರಜೋಗುಣ ಕೇವಳ । ತೇಚಿ ವಿವಳ ಹರಿ ಸಾಂಗೇ ॥೨೨೦॥ ಸಂಗ ಮ್ಹಣಿಜೇ ದೇಹಾಭಿಮಾನ । ಭೇದ ಮ್ಹಣಿಜೇ ಮೀಮಾಝೇಪಣ । ಬಳ ಮ್ಹಣಿಜೇ ಕಾಮ ಗಹನ । ಆಗ್ರಹೋ ಪೂರ್ಣ ಪ್ರವೃತ್ತೀಚಾ ॥೨೨೧। ದೇಹಾಭಿಮಾನೇ ದುಃಖ ಉಠೀ । ಭೇದೇ ಭಯ ಲಾಗೇ ಪಾಠೀ । ತ್ಯಾ ನಶ್ವರ ದೇಹಾಚಿಯಾ ಪುಷ್ಟೀ । ಕಾಮ್ಯಕಾಮಾಠೀ ಕರ್ಮಾಚೀ ಮಾಂಡೀ ॥೨೨೨॥

ಇಂತಹ ಪ್ರಸಂಗದಲ್ಲಿ ಇತರ ಜನರು ಆತನಿಗೆ ಧರ್ಮ ವಿರುದ್ಧವಾದ ಆಚರಣೆಗಳನ್ನು ಮಾಡಲು, ಗರ್ವ, ಅಭಿಮಾನ, ಅಸತ್ಯತನ ಇತ್ಯಾದಿಗಳನ್ನು ಒತ್ತಡಪೂರ್ವಕವಾಗಿ ಕಲಿಸುತ್ತಿರುವರು. ಆದರೂ ಕೂಡ ಆತನು ಆ ಅಧರ್ಮಗಳ ಕೃತಿಯನ್ನು ಸರ್ವಥಾ ಮಾಡಲಾರನು ॥೨೧೨॥ ದುಃಖಮಯ ಸಾಧನೆಗಳು ಅತಿ ಸಮೀಪದಲ್ಲಿದ್ದರೂ ಕೂಡ ಸಾತ್ವಿಕ ಮನುಷ್ಯನು ಯಾವಾಗಲೂ ಸುಖಸಂಪನ್ನನಾಗಿ ಇರುತ್ತಿರುವನು. ಸಾತ್ವಿಕನ ಮನವನ್ನು ಬಲಾತ್ಕಾರವಾಗಿ ಕ್ಷೋಭಿಸಿದರೂ ಕೂಡ ಆತನು ಎಂದೆಂದಿಗೂ ಕ್ಷುಬ್ಧನಾಗುವುದಿಲ್ಲ ॥೨೧೩॥ ಈ ಪ್ರಕಾರವಾಗಿ ಆತ್ಮ ಸತ್ವದ ದೃಷ್ಟಿಯಿಂದ ಸುಖವೇ ಸುಖಕ್ಕೆ ಕೂಡಲು ಬಂದಿರುವುದರಿಂದ ಆತನಿಗೆ ಸಂಪೂರ್ಣ ಸೃಷ್ಟಿಯಲ್ಲಿ ಆತ್ಮಾನಂದವು ತುಂಬಿಕೊಂಡಿರುವಂತೆ ತೋರುವುದು. ಇದಕ್ಕೇನೇ ಶುದ್ಧ ಸತ್ವದ ವೃದ್ಧಿಯಾಗಿದೆ ಎಂದು ತಿಳಿಯುವರು ॥೨೧೪॥ ಹೀಗೆ ಯಾರು ಅತ್ಯಂತ ಶುದ್ಧವಂತರಾಗಿರುವರೋ, ಅವರ ಸೇವೆಯನ್ನು ಶಮ ಮತ್ತು ದಮ ಇವರು ಮಾಡುವರು. ವೈರಾಗ್ಯವು ಇವರ ಕಾಲಿಗೆ ಬೀಳುವುದು. ಹೇ ಉದ್ಧವಾ, ಇಂತಹ ಸಾತ್ವಿಕ ಮನುಷ್ಯನೆಂದರೆ ಆತನು ಶುದ್ಧಮಯವಾದ ಸತ್ವದ ರಾಶಿಯೇ ಆಗಿರುವನು ॥೨೧೫॥ ಇದೇ ಪ್ರಕಾರದಿಂದ ಸತ್ವ ಮತ್ತು ತಮ ಈ ಎರಡನ್ನೂ ಪರಾಭವಗೊಳಿಸಿ ರಜೋಗುಣದ ವೃದ್ಧಿಯಾಗುವುದು. ಈಗ ರಾಜಸದ ಲಕ್ಷಣಗಳನ್ನು ಸಂಪೂರ್ಣವಾಗಿ ಕೇಳು ಎಂದು ಶ್ರೀಹರಿಯು ಹೇಳುತ್ತಿರುವನು ॥೨೧೬॥

ದೇಹದಲ್ಲಿ ಜ್ಞಾನಾಭಿಮಾನವು ಉತ್ಪನ್ನವಾಗುವಿಕೆಯು ಇದು ರಜೋಗುಣವೃದ್ಧಿಯ ಕಾರಣವಾಗಿರುವುದು. ಇಂತಹ ಮನುಷ್ಯನು ಸತತವಾಗಿ ಇತರರ ಗುಣದೋಷಗಳನ್ನು ನೋಡುತ್ತಿರುವನು ಮತ್ತು ತಾನು ಸನ್ಮಾನದ ಮತ್ತು ಪ್ರತಿಷ್ಠೆಯ ದಾರಿಕಾಯುತ್ತಿರುವನು ॥೨೧೭॥ ರಜೋಗುಣದ ಪ್ರಸಿದ್ಧಿಯು ಅತಿಶಯವಾಗಿ ವಿಲಕ್ಷಣವಾಗಿರುವುದು. ಇಂತಹ ಮನುಷ್ಯನು ಜ್ಞಾನಿಯಾಗಿದ್ದರೂ ಕೂಡ ಆತನ ಹೃದಯದಲ್ಲಿ ಕಾಮದ ಆಸಕ್ತಿಯು ಇರುವುದು. ಆತನ ಮನಸ್ಸಿನಲ್ಲಿ ಭೋಗ ವಿಲಾಸಗಳ ಆಸಕ್ತಿಯು ತುಂಬಿಕೊಂಡಿರುವುದು. ಇದರಿಂದ ರಜೋಗುಣವು ಅನಿವಾರ್ಯವಾಗಿ ಬೆಳೆಯುತ್ತಿರುವುದು ॥೨೧೮॥ ಈ ಪ್ರಕಾರವಾಗಿ ರಜೋಗುಣವು ಬೆಳೆಯಿತೆಂದರೆ ಆಗ ಅದು ಸತ್ವ ಮತ್ತು ತಮ ಗುಣಗಳನ್ನು ನೆಲಕ್ಕೆ ಉರುಳಿಸುವುದು. ಈ ಯಾವ ರಜೋಗುಣವನ್ನು ನಾಶ ಮಾಡುವ ಉಪಾಯವನ್ನು ನಾನು ನಿನಗೆ ಹೇಳುವೆನು ॥೨೧೯॥ ಮೂಲ ಶ್ಲೋಕದಲ್ಲಿ ''ಸಂಗ-ಭಿದಾ-ಬಲಂ'' ಈ ಮೂರು ಶಬ್ದಗಳಿಂದ ಪ್ರಬಲವಾದ ರಜೋಗುಣದ ವರ್ಣನೆಯನ್ನು ಮಾಡಲಾಗಿರುವುದು. ಅದನ್ನೇ ಈಗ ಶ್ರೀಕೃಷ್ಣನು ಸ್ಪಷ್ಟೀಕರಣವನ್ನು ಮಾಡಿ ಹೇಳುತ್ತಿರುವನು ॥೨೨೦॥ ಸಂಗವೆಂದರೆ ದೇಹದ ಅಭಿಮಾನವಾಗಿರುವುದು. ಭೇದವೆಂದರೆ ನಾನು ಮತ್ತು ನನ್ನದು ಎಂಬ ಭೇದಭಾವವಾಗಿರುವುದು. ಬಲವೆಂದರೆ ಬಲಿಷ್ಠವಾದ ಇಚ್ಛೆ ಹಾಗೂ ಪ್ರವೃತ್ತಿಯಪೂರ್ಣ ಆಗ್ರಹವಾಗಿರುವುದು ॥೨೨೧॥ ದೇಹಾಭಿಮಾನದಿಂದ ದುಃಖವು ನಿರ್ಮಾಣವಾಗುವುದು. ದೇಹಭಾವದಿಂದ ಭಯವು ಬೆನ್ನುಹತ್ತುವುದು. ಹೀಗಿರುವ ಯಾವ ಮಾನವನು ಯಾವ ತನ್ನ ನಶ್ವರವಾಗಿರುವ ದೇಹದ ಬಲದಿಂದ ಕಾಮ್ಯಕರ್ಮಗಳ ಆಚರಣೆಯನ್ನು ಆರಂಭಿಸುವನು ॥೨೨೨॥

ಜ್ಯಾ ಕರ್ಮಾಚೇನಿ ಕೈವಾಡೇ । ಯಶ ಶ್ರೀ ಉದಂಡ ಜೋಡೇ । ತೇ ತೇ ಕರ್ಮ ವಾಢವೀ ಪುಢೇ । ಹೇ ರಜೋಗುಣ ಘಡೇ ಆಚರಣ ॥೨೨೩॥ ಮೀ ಏಕ ಪವಿತ್ರ ತ್ರಿಜಗತೀ । ಮಾಝೀಚ ಉತ್ತಮ ಕರ್ಮಸ್ಥಿತೀ । ಪ್ರವೃತ್ತಿ ಮಾನ್ಯತಾ ಆಸಕ್ತೀ । ಜೇ ಜಾಣಾವೀ ಸ್ಥಿತೀ ರಾಜಸ ॥೨೨೪॥ ರಜಾಚೇ ಬಳ ಉದ್ಭಟ । ಕರ್ಮ ಆದರೀ ಅಚಾಟ । ವಾಢವೀ ಕರ್ಮಕಚಾಟ । ತೋ ಜಾಣ ಶ್ರೇಷ್ಠ ರಾಜಸ ॥೨೨೫॥ ಬಾಹೇರ ದಿಸೇ ಸಾತ್ತ್ವಿಕಸ್ಥಿತೀ । ಅಂತರೀ ಕರ್ಮವಾಸನಾ ದ್ರವ್ಯಾಸಕ್ತೀ । ಜ್ಯಾಸೀ ಪ್ರಿಯ ಆವಡೇ ಚಿತ್ತೀ । ತೋ ಜಾಣ ನಿಶ್ಚಿತೀ ರಾಜಸೂ ॥೨೨೬॥ ಜೆವ್ಹಾ ಸತ್ತ್ವ ರಜ ದೋನೀ ಗುಣ । ಜಿಣೋನಿ ತಮ ವಾಢೇ ಪೂರ್ಣ । ತೇ ಕಾಳೀಂಚೇ ಪುರುಷ ಲಕ್ಷಣ । ಸ್ವಯೇ ನಾರಾಯಣ ಸಾಂಗತ ॥೨೨೭॥

ಯದಾ ಜಯೇದ್ರಜಃ ಸತ್ತ್ವಂ ತಮೋ ಮೂಢಂ ಲಯಂ ಜಡಮ್ ।
ಯುಜ್ಯೇತ ಶೋಕಮೋಹಭ್ಯಾಂ ನಿದ್ರಯಾ ಹಿಂಸಯಾಽಽಶಯಾ ॥೧೫॥

ಅರ್ಥ:- ತಮೋಗುಣದ ಸ್ವರೂಪವು ಅಜ್ಞಾನವಾಗಿರುವುದು. ಆದರ ಸ್ವಭಾವವು ಆಲಸ್ಯತನದಿಂದ ಕೂಡಿರುವುದು. ಬುದ್ಧಿಯು ಮೂಢವಾಗಿರುವುದು ಎಂದು ಅವನು ಸತ್ವಗುಣ ಮತ್ತು ರಜೋಗುಣವನ್ನು ಹತ್ತಿಕ್ಕುವನೋ, ಆಗ ಆ ಪ್ರಾಣಿಯು ತರತರದ ಆಶೆಯನ್ನು ಮಾಡುವನು. ಶೋಕ ಮೋಹಗಳಲ್ಲಿ ಸಿಲುಕಿಕೊಳ್ಳುವನು. ಹಿಂಸೆಯನ್ನು ಮಾಡಲಾರಂಬಿಸುವನು ಮತ್ತು ನಿದ್ರೆ ಆಲಸ್ಯಗಳಲ್ಲಿ ತೊಡಗಿ ಬಿದ್ದುಕೊಂಡಿರುವನು.

ರಜ ಸತ್ತ್ವ ಕರೂನಿ ಗೂಢ । ಜೈ ತಮೋಗುಣ ಹೋಯ ರೂಢ । ತೈ ತೋ ಪುರುಷಾತೇ ಸದೃಢ । ಕರೀ ಜಡಮೂಢ ಅತಿಸ್ತಬ್ಧ ॥೨೨೮॥ ವಿಶ್ವಾಸೂನಿ ವಾಡೇಕೋಡೇ । ಜೈ ಪರದ್ರವ್ಯ ಬುಡವಣೇ ಪಡೇ । ಕಾ ಪರದಾರಾಗಮನ ಘಡೇ । ತೈ ತೇಣೇ ವಾಢೇ ತಮೋಗುಣ ॥೨೨೯॥ ಸ್ವಮುಖೇ ಪರಾಪವಾದ ಬೋಲಣೇ । ಸ್ವಯೇ ಸಾಧುನಿಂದಾ ಕರಣೇ । ಸಂತಸಜ್ಜನಾ ದ್ವೇಷಣೇ । ತೈ ತಮಾಚೇ ಠಾಣೇ ಅನಿವಾರ ॥೨೩೦॥ ಧುಈಚೇನಿ ಆಲೇಪಣೇ । ಪಡೇ ಸೂರ್ಯಾಸೀ ಝಾಂಕಣೇ । ತೇವೀ ವಿವೇಕಾಚೇ ಜಿಣೇ । ತಮೋಗುಣ ಗ್ರಾಸಿಜೇ ॥೨೩೧॥ ಸತ್ತ್ವಗುಣ ಪ್ರಕಾಶಕ । ರಜ ಪ್ರವೃತ್ತಿಪ್ರವರ್ತಕ । ದೋನೀಂತೇ ಗಿಳೂನೀ ದೇಖ । ತಮಾಚೇ ಆಧಿಕ್ಯ ಅಧರ್ಮೇ ವಾಢೇ ॥೨೩೨॥ ಕರಿತಾ ಪೂಜ್ಯಾಚೇ ಹೇಳಣ । ಸಾಧೂಚೇ ದೇಖತಾ ದೋಷಗುಣ । ತೇಣೇ ಖವಳಲಾ ತಮೋಗುಣ । ತ್ಯಾಚೇ ಸ್ವರೂಪ ಪೂರ್ಣ ತೇ ಐಕ ॥೨೩೩॥

ಈ ಯಾವ ಕರ್ಮಗಳ ಯೋಗದಿಂದ ಯಶಗಳ ಮೇಲೆ ಯಶವು ಪ್ರಾಪ್ತವಾಗುವ ಮತ್ತು ಹೇರಳವಾಗಿ ಧನ ಸಂಪತ್ತು ದೊರೆಯುವ ಇಂತಹ ಕರ್ಮಗಳನ್ನು ಇವನು ಬೆಳೆಸುತ್ತಲೇ ಇರುವನು. ರಜೋಗುಣದಿಂದ ಇಂತಹ ಆಚರಣೆಯು ಸಾಧಿಸುತ್ತಿರುವುದು ॥೨೨೩॥ ಮೂರು ಲೋಕಗಳಲ್ಲಿ ನಾನೊಬ್ಬನೇ ಪವಿತ್ರನಾಗಿರುವೆನು, ನನ್ನ ಕರ್ಮಗಳೇ ಸರ್ವಶ್ರೇಷ್ಠವಾಗಿರುವುವು ಎಂಬ ಈ ಪ್ರಕಾರದ ಪ್ರವೃತ್ತಿ, ಮಾನ್ಯತೆ ಮತ್ತು ಆಸಕ್ತಿ ಇವೇ ರಾಜಸ ಲಕ್ಷಣಗಳೆಂದು ತಿಳಿಯಬೇಕು ॥೨೨೪॥ ರಜೋಗುಣದ ಶಕ್ತಿಯು ಇದು ಅತಿಶಯ ವಿಲಕ್ಷಣ ಸ್ವರೂಪದ್ದಾಗಿರುವುದು. ಆದ್ದರಿಂದ ಯಾವ ರಜೋಗುಣದ ಮನುಷ್ಯನು ಆಶ್ಚರ್ಯಕಾರಕ ಕಾರ್ಯಗಳನ್ನು ಮಾಡಲು ಪ್ರಾರಂಭಿಸುವನು. ಉದ್ಯೋಗದ ವಿಸ್ತಾರವನ್ನು ಬೆಳೆಸುತ್ತಿರುವನು, ಇವನು ಶ್ರೇಷ್ಠ ರಜೋಗುಣಿ ಎಂದು ತಿಳಿಯಬೇಕು ॥೨೨೫॥ ಹೊರಗಿನಿಂದ ನೋಡಿದರೆ ಆತನ ವೃತ್ತಿಯು ಸಾತ್ವಿಕದಂತೆ ತೋರುತ್ತಿರುವುದು. ಆದರೆ ಅಂತರಂಗದಲ್ಲಿ ಮಾತ್ರ ಕರ್ಮದ ವಾಸನೆಯು ಮತ್ತು ದ್ರವ್ಯಲೋಭವು ಇವು ತುಂಬಿಕೊಂಡಿರುವುವು. ಆತನ ಮನಸ್ಸಿನಲ್ಲಿ ಸ್ತ್ರೀ ಆಸಕ್ತಿ ವಿರುವುದು. ಹೀಗಿರುವವನು ನಿಶ್ಚಯವಾಗಿ ರಾಜಸನೆಂದು ತಿಳಿಯಬೇಕು ॥೨೨೬॥ ಸತ್ವ ಮತ್ತು ರಜ ಈ ಎರಡೂ ಗುಣಗಳನ್ನು ಜಯಿಸಿ ತಮೋಗುಣವು ಬೆಳೆಯುವುದು. ಆ ಕಾಲದಲ್ಲಿ ಪುರುಷನ ಲಕ್ಷಣಗಳು ಹೇಗಿರುವುದೆಂಬುದನ್ನು ಈಗ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೨೨೭॥

ಸತ್ವ ಮತ್ತು ರಜ ಈ ಗುಣಗಳನ್ನು ಹತ್ತಿಕ್ಕಿ ಯಾವ ವೇಳೆಯಲ್ಲಿ ತಮೋಗುಣವು ಪ್ರಬಲವಾಗುವುದೋ, ಆಗ ಅದು ಆ ಪುರುಷನನ್ನು ಪೂರ್ಣವಾಗಿ ಜಡ, ಮೂಢ ಮತ್ತು ಅತ್ಯಂತ ಸ್ತಬ್ಧನನ್ನಾಗಿ ಮಾಡುವುದು ॥೨೨೮॥ ಆಗ ಆ ಮನುಷ್ಯನು ಇತರರಿಗೆ ಅನೇಕ ಪ್ರಕಾರದ ವಿಶ್ವಾಸವನ್ನು ತೋರಿಸಿ ಅವರ ಧನವನ್ನು ಅಪಹರಿಸುವನು. ಪರಸ್ತ್ರೀಯರ ಸಂಗ ಮಾಡುವನು. ಇದರಿಂದ ಆತನಲ್ಲಿ ತಮೋಗುಣವು ವೃದ್ಧಿಯಾಗಿದೆ ಎಂದು ತಿಳಿಯಬೇಕು ॥೨೨೯॥ ತನ್ನ ಮುಖದಿಂದ ಬೇರೆಯವರ ದೋಷಗಳನ್ನು ಹೇಳುತ್ತಿರುವುದು, ಸ್ವತಃ ಸಾಧು ನಿಂದೆಯನ್ನು ಮಾಡುವುದು, ಸಂತ ಸಜ್ಜನರಲ್ಲಿ ದ್ವೇಷವನ್ನು ಮಾಡುತ್ತಿರುವುದು ಇವು ತಮೋಗುಣ ಬೆಳೆದಿರುವ ಲಕ್ಷಣವಾಗಿರುವುದು ॥೨೩೦॥ ಇಬ್ಬನ್ನಿಯು ಬಹುವಾಗಿ ಬೆಳೆಯಲು ಆಗ ಸೂರ್ಯನು ಹೇಗೆ ಮುಚ್ಚಿಹೋಗುವನೋ, ಅದರಂತೆ ತಮೋಗುಣವು ಬೆಳೆಯುತ್ತಲೇ ಅದು ವಿವೇಕವನ್ನು ನುಂಗಿಬಿಡುವುದು ॥೨೩೧॥ ಸತ್ವಗುಣವು ಇದು ಪ್ರಕಾಶದಾತಾ ಆಗಿರುವುದು. ರಜೋಗುಣವು ಇದು ಪ್ರವೃತ್ತಿಯನ್ನು ಬೆಳೆಸುವುದ್ದಾಗಿರುವುದು. ಆದರೆ ತಮೋಗುಣದ ವೃದ್ಧಿಯಾಯಿತೆಂದರೆ, ಅದು ಈ ಎರಡೂ ಗುಣಗಳನ್ನು ನುಂಗಿ ಅಧರ್ಮವನ್ನು ಬೆಳೆಸುತ್ತಿರುವುದು ॥೨೩೨॥ ಪೂಜ್ಯರಾದವರನ್ನು ಅಪಮಾನಗೊಳಿಸುವಿಕೆ ಹಾಗೂ ಸಾಧುಗಳವರ ದೋಷಗಳನ್ನು ಎಣಿಸುವಿಕೆ, ಇದರಿಂದ ತಮೋಗುಣವು ಉಗ್ರಗೊಳ್ಳುವುದು. ಆದರ ಸ್ವರೂಪದ ವಿಷಯವಾಗಿ ಈಗ ಕೇಳು ॥೨೩೩॥

ತಮೋಗುಣ ವಾಢಲ್ಯಾ ಪ್ರೌಢ । ಸ್ಫೂರ್ತಿಮಾತ್ರ ಹೋಯ ಮೂಢ । ಲಯೋ ಉಪಜವೋನಿ ದೃಢ । ಕರೀ ಜಡ ಜೀವಾತೇ ॥೯೩೪॥ ಕಾರ್ಯಾಕಾರ್ಯವಿವೇಕಜ್ಞಾನ । ತೇ ಸ್ಫೂರ್ತಿ ಅಂಧ ಹೋಯ ಪೂರ್ಣ । ಯಾ ನಾಂವ ಗಾ ಮೂಢಪಣ । ಐಕ ಚಿನ್ಹ ಲಯಾಚೇ ॥೯೩೫॥ ಜಾಗೃತೀಮಾಜೀ ಅಸತಾ ಚಿತ್ತ । ಅರ್ಥ ಸ್ವಾರ್ಥ ಪರಮಾರ್ಥ । ಕಾಂಹೀ ಸ್ಫುರೇನಾ ಕೃತ್ಯಾಕೃತ್ಯ । ಲಯೋ ನಿಶ್ಚಿತ ಯಾ ನಾಂವ ॥೯೩೬॥ ಸಮಸ್ತಾಂಹೀ ಇಂದ್ರಿಯವೃತ್ತೀ । ಅನುಧ್ಯಮೇ ಸ್ತಬ್ಧಗತೀ । ನಿಃಶೇಷ ಲೋಪೇ ಜ್ಞಾನಶಕ್ತೀ । ಜಡತ್ವಪ್ರಾಪ್ತೀ ಯಾ ನಾಂವ ॥೯೩೭॥ ಮೂಢತ್ವೇ ಪಾವೇ ಶೋಕ ದುಃಖ । ಜಡತ್ವೇ ಮಿಥ್ಯಾ ಮೋಹ ದೇಖ । ಮೋಹಾತ್ಸವ ಹೋಯ ಪಾತಕ । ಅತಿವಿವೇಕ ಅಧರ್ಮೀ ॥೯೩೮॥ ಐಕ ಲಯಾಚೇ ಕೌತುಕ । ಅಹೋರಾತ್ರ ನಿದ್ರಾ ಅಧಿಕ । ನಿದ್ರೇವೇಗಳೇ ಬ್ರಹ್ಮಸುಖ । ನಾವಡೇ ದೇಖ ತಾಮಸಾ ॥೯೩೯॥ ಪೂರ್ಣ ವಾಢಲ್ಯಾ ತಮೋಗುಣ । ಐಸೇ ಹೋಯ ಪುರುಷಲಕ್ಷಣ । ವಾಢಲ್ಯಾ ಸತ್ತ್ವಾದಿ ಗುಣ । ಫಳ ಕೋಣ ತೇ ಹರಿ ಸಾಂಗೇ ॥೯೪೦॥

ಯದಾ ಚಿತ್ತಂ ಪ್ರಸೀದೇತ ಇಂದ್ರಿಯಾಣಾಂ ಚ ನಿರ್ವೃತಿಃ । ದೇಹೇಽಭಯಂ ಮನೋಽಸಂಗಂ ತತ್ಸತ್ತ್ವಂ ವಿದ್ಧಿ ತತ್ಪದಮ್ ॥೧೬॥

ಅರ್ಥ:- ಚಿತ್ತದ ಪ್ರಸನ್ನತೆ, ಇಂದ್ರಿಯಗಳು ಶಾಂತವಾಗುವಿಕೆ, ದೇಹವು ನಿರ್ಭಯದಿಂದಿರುವುದು, ಮನದಲ್ಲಿ ಆಸಕ್ತಿ ಇಲ್ಲದಿರುವಿಕೆಯು, ಹೀಗಾದಲ್ಲಿ ಇದು ಸತ್ವಗುಣದ ವೃದ್ಧಿ ಎಂದು ತಿಳಿದುಕೊಳ್ಳಬೇಕು. ಸತ್ವಗುಣವು ನನ್ನ ಪ್ರಾಪ್ತಿಯ ಸಾಧನೆಯಾಗಿರುವುದು.

ವಾಢಲಿಯಾ ಸತ್ತ್ವಗುಣ । ಚಿತ್ತ ಸದಾ ಸುಪ್ರಸನ್ನ । ಕಾಮಕ್ರೋಧಲೋಭಾಚೇ ಸ್ಫುರಣ । ಸರ್ವಥಾ ಜಾಣ ಸ್ಫುರೇನಾ ॥೯೪೧॥ ಜೇ ಚಿತ್ತ ವಣವಣೀ ವಿಷಯಾಲಾಗೀ । ತೇ ಉದಾಸ ಹೋಯ ವಿಷಯಭೋಗೀ । ವಿಷಯ ಆದಳತಾಂಹೀ ಅಂಗೀ । ತ್ಯೈ ವಿಷಯಸಂಗೀ ವಿಗುಂತೇನಾ ॥೯೪೨॥ ಜೇವೀ ಜಳಾಮಾಜೀ ಜಳಸ್ಥ । ಪದ್ಮಿಣೀಪತ್ರ ಜಳೀ ಅಲಿಪ್ತ । ತೇವೀ ವಿಷಯಾಂಮಾಜೀ ಚಿತ್ತ । ವಿಷಯಾತೀತ ಮದ್ಬೋಧೇ ॥೯೪೩॥ ಸದಾ ಮರಣಭಯ ದೇಹಾಸೀ । ತೇ ಮರಣ ಆಲಿಯಾ ದೇಹಾಪಾಶೀ । ಭಯ ನುಪಜೇ ಸಾತ್ತ್ವಿಕಾಸೀ । ಭಾವೇ ಮತ್ಪದಾಸೀ ವಿನಟಲೇ ॥೯೪೪॥ ಜಂವವರೀ ಭಾಸೇ ಮೀತೂಪಣ । ತಂವವರೀ ಅವಶ್ಯ ಬಾಧೀ ಮರಣ । ಸಾತ್ವಿಕ ಮತ್ಪದೀ ಅಭಿನ್ನ । ಯಾಲಾಗೀ ಮರಣಭಯ ತ್ಯಾ ನಾಹೀ ॥೯೪೫॥

ತಮೋಗುಣವು ಅತಿಶಯವಾಗಿ ಬೆಳೆಯಲು ಆಗ ಸ್ಫೂರ್ತಿಯು ಮಂದಾಗುವುದು. ಅದು ಆಲಸ್ಯವನ್ನು ನಿರ್ಮಾಣ ಮಾಡಿ ಜೀವಕ್ಕೆ ಜಡ ಮೂಢನನ್ನಾಗಿ ಮಾಡುವುದು ॥೯೩೪॥ ಕಾರ್ಯ ಯಾವುದು ಮತ್ತು ಅಕಾರ್ಯ ಯಾವುದು ಎಂಬ ವಿಷಯದ ಬುದ್ಧಿಯು ಇಲ್ಲದಾಗುವುದು. ಸ್ಫೂರ್ತಿಯು ಸಂಪೂರ್ಣವಾಗಿ ಕುರುಡಾಗುವುದು, ಇದಕ್ಕೆ ಮೂಢತ್ವವೆಂದು ಹೇಳುವರು. ಈಗ ಅದರ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ॥೯೩೫॥ ಜಾಗೃತಾವಸ್ಥೆಯಲ್ಲಿದ್ದರೂ ಕೂಡ ಚಿತ್ತಕ್ಕೆ ಅರ್ಥ, ಸ್ವಾರ್ಥ, ಪರಮಾರ್ಥ, ಕೃತ್ಯ, ಅಕೃತ್ಯ ಇವು ಯಾವುವೂ ಸ್ಫುರಣವಾಗುವುದಿಲ್ಲ. ಇದಕ್ಕೇನೇ ಲಯವೆಂದು ಕರೆಯುವರು ॥೯೩೬॥ ಸರ್ವ ಇಂದ್ರಿಯಗಳ ವ್ಯಾಪಾರವು ಸ್ತಬ್ಧವಾಗುವುದು. ಜ್ಞಾನಶಕ್ತಿಯು ಇದು ಪರಿಪೂರ್ಣವಾಗಿ ಲೋಪವಾಗುವುದು. ಇದಕ್ಕೆ ಜಡತ್ವವೆಂದು ಹೇಳುವರು ॥೯೩೭॥ ಮೂಢತ್ವದಿಂದ ಶೋಕ ಮತ್ತು ದುಃಖವು ಪ್ರಾಪ್ತವಾಗುವುದು. ಜಡತ್ವದಿಂದ ಮಿಥ್ಯಾ ಮೋಹವು ವೃದ್ಧಿಗೊಳ್ಳುತ್ತಿರುವುದು ಮತ್ತು ಮೋಹದಿಂದ ಅತಿಶಯವಾಗಿ ಅವಿವೇಕವು ಮತ್ತು ಅಧರ್ಮವು ಬೆಳೆದು ಪಾಪಗಳು ಉಂಟಾಗುವುವು ॥೯೩೮॥ ಈಗ ಲಯದ ಕೌತುಕವನ್ನು ಆಲಿಸು. ಹಗಲು ರಾತ್ರಿ ಸತತವಾಗಿ ನಿದ್ರೆ ಬರುವಿಕೆಯು. ಈ ನಿದ್ರೆಯ ಹೊರತಾಗಿ ಬೇರೆ ಬ್ರಹ್ಮಾನಂದವೂ ಕೂಡ ಆತನಿಗೆ ಸುಖವೆನಿಸುವುದಿಲ್ಲ ॥೯೩೯॥ ತಮೋಗುಣವು ಪೂರ್ಣವಾಗಿ ಬೆಳೆಯಲು ಆಗ ಪುರುಷನ ಇಂತಹ ಸ್ಥಿತಿಯಾಗುವುದು. ಸತ್ವಾದಿ ಗುಣಗಳು ಬೆಳೆಯಲು ಆಗ ಯಾವ ಫಲವು ಪ್ರಾಪ್ತವಾಗುವುದೆಂಬುದನ್ನು ಈಗ ಶ್ರೀಹರಿಯು ಹೇಳುತ್ತಿರುವನು ॥೯೪೦॥

ಶರೀರದಲ್ಲಿ ಸತ್ವಗುಣವು ವೃದ್ಧಿಯಾಯಿತೆಂದರೆ ಸದಾ ಸುಪ್ರಸನ್ನತೆಯು ನಿರ್ಮಾಣವಾಗುವುದು. ಕಾಮ, ಕ್ರೋಧ, ಲೋಭಗಳು ಸರ್ವಥಾ ಸ್ಫುರಣಗೊಳ್ಳುವುದಿಲ್ಲ ಇದನ್ನು ನೀನು ತಿಳಿ ॥೯೪೧॥ ಪೂರ್ವದಲ್ಲಿ ಚಿತ್ತವು ವಿಷಯಗಳ ಹಿಂದೆ ವ್ಯರ್ಥವಾಗಿ ಸುಮ್ಮನೇ ಧಾವಿಸುತ್ತಿತ್ತು. ಈಗ ಅದೇ ಚಿತ್ತವು ವಿಷಯಭೋಗ ವಿಷಯದಲ್ಲಿ ವಿರಕ್ತವಾಗುವುದು. ವಿಷಯಗಳು ಬಂದು ಮೈಮೇಲೆ ಬಿದ್ದರೂ ಕೂಡ ಅದರ ಮೋಹದಲ್ಲಿ ಸಿಲುಕಿರಲಾರದು ॥೯೪೨॥ ನೀರಿನಲ್ಲಿರುವ ಕಮಲದ ಎಲೆಗಳು ಯಾವ ಪ್ರಕಾರವಾಗಿ ನೀರಿನಿಂದ ಲಿಪ್ತವಾಗುವುದಿಲ್ಲವೋ ಅದೇ ಪ್ರಕಾರವಾಗಿ ನನ್ನ ಜ್ಞಾನದಿಂದ ಚಿತ್ತವು ವಿಷಯಗಳಲ್ಲಿದ್ದರೂ ಕೂಡ ಆ ವಿಷಯಗಳಿಂದ ಅಲಿಪ್ತವಾಗಿರುವುದು ॥೯೪೩॥ ದೇಹಕ್ಕೆ ಯಾವಾಗಲೂ ಮರಣದ ಭಯವು ಉಂಟಾಗುತ್ತಿರುವುದು. ಆದರೆ ಆ ಮರಣವು ದೇಹದ ಸಮೀಪಕ್ಕೆ ಬಂದು ಒದಗಿದರೂ ಕೂಡ ಸಾತ್ವಿಕ ಮನುಷ್ಯನ ಮನದಲ್ಲಿ ಭಯವು ಉತ್ಪನ್ನವಾಗಲಾರದು. ಕಾರಣವೇನೆಂದರೆ, ಈ ಸಾತ್ವಿಕ ಜನರು ನನ್ನ ಪ್ರೇಮದಲ್ಲಿ ತಲ್ಲೀನರಾಗಿರರುವರು ॥೯೪೪॥ ಎಲ್ಲಿಯವರೆಗೆ ''ನಾನು, ನೀನು'' ಎಂಬುವುದು ಭಾಸವಾಗುತ್ತಿರುವುದೋ ಅಲ್ಲಿಯವರೆಗೆ ಮರಣವು ಅವಶ್ಯವಾಗಿ ಬಾಧಿಸುತ್ತಿರುವುದು. ಆದರೆ ಸಾತ್ವಿಕ ಭಕ್ತನಾದವನು ನನ್ನಿಂದ ಭಿನ್ನನಾಗಿ ಇಲ್ಲದ್ದರಿಂದ, ಆತನಿಗೆ ಮರಣದ ಭಯವು ಇರುವುದಿಲ್ಲ ॥೯೪೫॥

ಸಾತ್ವಿಕ ಮತ್ಪದೀ ಅನನ್ಯ ಶರಣ । ಯಾಲಾಗೀ ಬಾಧೀನಾ ಜನ್ಮ ಮರಣ । ಯಾ ಸ್ಥಿತೀ ವರ್ತವೀ ಸತ್ತ್ವಗುಣ । ಆತಾ ಐಕ ಲಕ್ಷಣ ರಜಾಚೇ ।೨೪೬॥

ವಿಕುರ್ವನ್ ಕ್ರಿಯಯಾ ಚಾಧೀರನಿರ್ವೃತ್ತಿಶ್ಚ ಚೇತಸಾಮ್ । ಗಾತ್ರಾಸ್ವಾಸ್ಥ್ಯಂ ಮನೋಭ್ರಾಂತಂ ರಜ ಏತೈರ್ನಿಶಾಮಯ ।೧೭॥

ಅರ್ಥ:- ಕ್ರಿಯೆಯಿಂದ ವಿಕಾರ ಹೊಂದುವ ಪುರುಷನು ಸರ್ವತಃ ವಿಕ್ಷಿಪ್ತಚಿತ್ತನಾಗುವನು. ಜ್ಞಾನೇಂದ್ರಿಯಗಳ ಅಶಾಂತಿವಿರುವುದು. ಕರ್ಮೇಂದ್ರಿಯಗಳಲ್ಲಿ ವಿಕಾರಗಳು ಅಧಿಕವಾಗಿರುವುವು. ಮನಸ್ಸು ಅಸ್ಥಿರವಾಗಿರುವುದು. ಈ ಚಿನ್ಹೆಗಳಿಂದ ರಜೋಗುಣವು ಬೆಳೆದಿದೆ ಎಂದು ತಿಳಿಯಬೇಕು.

ಖವಳಲಿಯಾ ರಜೋಗುಣ । ವಿಷಯಚಿಂತಾ ಅತಿದಾರುಣ । ಕರ್ಮೇಂದ್ರಿಯೀ ಕ್ರಿಯಾಭರಣ । ನಾನಾ ಪರೀಂಚೇ ಜಾಣ ಉಪಪಾದೀ ।೨೪೭॥ ಶರೀರ ಅಸತಾಂಹೀ ಸ್ವಸ್ಥ । ಮನ ಚಿಂತಾತುರ ಅತಿಭ್ರಾಂತ । ವಾಢವಿತಾ ವಿಷಯಸ್ವಾರ್ಥ । ದುಃಖೀ ಹೋತ ಸರ್ವದಾ ।೨೪೮॥ ಅಸತಾ ಪುತ್ರವಿತ್ತಸಂಪತ್ತೀ । ಅಧಿಕ ಸ್ವಾರ್ಥ ವಾಢವೀ ಚಿತ್ತೀ । ರಾಜಸಾಚೀ ಚಿತ್ತವೃತ್ತೀ । ನ ಮನೀ ನಿವೃತ್ತೀ ಕ್ಷಣಾರ್ಧ ।೨೪೯॥ ನಸತಾ ವಿಕಾರಾಂಚೇ ಕಾರಣ । ಚಿತ್ತೀ ವಿಕಾರ ಚಿಂತೀ ಆಪಣ । ಹೇಚಿ ರಾಜಸಾಚೇ ಲಕ್ಷಣ । ಮುಖ್ಯತ್ವೇ ಜಾಣ ಉದ್ಧವಾ ।೨೫೦॥ ರಾತ್ರೀ ನೋಹೇ ಪೈ ಪ್ರಬಳ । ನಾ ದಿವಸ ನವ್ಹೇ ಸೋಜ್ಜ್ವಳ । ಜೈಸೀ ಝೂಂಬವಲೀ ಸಾಂಜವೇಳ । ತೈಸಾ ಕೇವಳ ರಜೋಗುಣ ।೨೫೧॥ ಸತ್ತ್ವರಜಾಂಚೀ ಉಣಖೂಣ । ತುಜ ದಾವಿಲೀ ಓಳಖಣ । ಆತಾ ಐಕ ತಮೋಗುಣ । ಜಡ ಲಕ್ಷಣ ತಯಾಚೇ ।೨೫೨॥

ಸೀದಚ್ಚಿತ್ತಂ ಪ್ರಲೀಯೇತ ಚೇತಸೋ ಗ್ರಹಣೇಽಕ್ಷಮಮ್ । ಮನೋ ನಷ್ಟಂ ತಮೋ ಗ್ಲಾನಿಸ್ತಮಸ್ತದುಪಧಾರಯ ।೧೮॥

ಅರ್ಥ:- ವ್ಯಕ್ತಿಯ ಉನ್ನತ ಪ್ರಜ್ಞೆಯು ಸೋತು ಕೊನೆಗೆ ಇಲ್ಲವಾದಾಗ, ಹೀಗೆ ವ್ಯಕ್ತಿಯು ತನ್ನ ಮನಸ್ಸನ್ನು ಕೇಂದ್ರಿಕರಿಸಲು ಅಸಮರ್ಥನಾದಾಗ, ಅವನ ಮಸನ್ಸು ಹಾಳಾಗುತ್ತದೆ ಮತ್ತು ಅಜ್ಞಾನ ಹಾಗೂ ಖಿನ್ನತೆಗಳನ್ನು ವ್ಯಕ್ತಪಡಿಸುತ್ತದೆ. ಈ ಸ್ಥಿತಿಯನ್ನು ನೀನು ತಮೋಗುಣದ ಪ್ರಾಬಲ್ಯವೆಂದು ತಿಳಿಯಬೇಕು.

ಚಿತ್ತೀ ಚಿಂತಾ ಅತಿಗಹನ । ತೇ ಮಹಾಮೋಹೀ ಹೋಯ ನಿಮಗ್ನ । ಕೋಣೇಹೀ ಅರ್ಥೀಚೇ ಜ್ಞಾನ । ಹೃದಯೀ ಜಾಣ ಸ್ಫುರೇನಾ ।೨೫೩॥ ಸುಷುಪ್ತೀವೇಗಳೇ ಅಜ್ಞಾನ । ಸದಾ ಪಳೇ ದೇಖೋನಿ ಜ್ಞಾನ । ತೇಥ ನವಲ ಕೈಸೇ ಝಾಲೇ ಜಾಣ । ತ್ಯಾ ಜ್ಞಾನಾತೇ ಅಜ್ಞಾನ ಗಿಳೂನಿ ಠಾಕೇ ।೨೫೪॥ ಜಾಗಾಚಿ ಪರೀ ನಿಜೇಲಾ ಽಸೇ । ಕರ್ಮ ಕರೀ ಸ್ಫುರಣ ನಸೇ । ಜೇವೀ ಕಾ ಆಭಾಳಾತಿಲೇ ಅಂವಸೇ । ರಾತ್ರೀ ಚಾಲೇ ಜೈಸೇ ಆಂಧಳೇ ।೨೫೫॥

ಸಾತ್ವಿಕ ಭಕ್ತನು ನನ್ನ ಚರಣಗಳಲ್ಲಿ ಅನನ್ಯ ಭಾವದಿಂದ ಶರಣು ಬಂದಿರುವನು. ಆದ್ದರಿಂದ ಆತನಿಗೆ ಜನ್ಮ ಮರಣ ಬಾಧೆಯು ಉಂಟಾಗಲು ಶಕ್ಯವಿಲ್ಲ. ಸತ್ವಗುಣದಿಂದ ಇಂತಹ ಸ್ಥಿತಿಯು ಪ್ರಾಪ್ತವಾಗುವುದು. ಈಗ ರಜೋಗುಣದ ಲಕ್ಷಣಗಳನ್ನು ಕೇಳು ।೨೪೬॥

ರಜೋಗುಣವು ಉಗ್ರಗೊಳ್ಳಲು ಆಗ ಅತಿಶಯ ಪ್ರಬಲವಾದ ವಿಷಯ ಚಿಂತೆಯು ನಿರ್ಮಾಣವಾಗುವುದು. ಈ ಕಾರಣದಿಂದ ಕರ್ಮೇಂದ್ರಿಯಗಳಿಂದ ಈತನು ನಾನಾ ಪ್ರಕಾರದ ಕ್ರಿಯಾಕರ್ಮಗಳನ್ನು ಮಾಡಲು ಸಿದ್ಧನಾಗುವನು ।೨೪೭॥ ಶರೀರವು ಒಂದು ವೇಳೆ ಸ್ವಸ್ಥವಾಗಿದ್ದರೂ ಕೂಡ ಯಾವ ಈ ಮನವು ಚಿಂತಾತುರವಾಗಿ ಅತಿಶಯವಾಗಿ ಭ್ರಾಂತವಾಗುವುದು. ವಿಷಯಗಳ ಸ್ವಾರ್ಥವನ್ನು ಬೆಳೆಯಿಸಿ ಅವನು ಯಾವಾಗಲೂ ದುಃಖಿಯಾಗಿಯೇ ಇರುವನು ।೨೪೮॥ ಪುತ್ರ, ಧನ ಹಾಗೂ ಸಂಪತ್ತು ಈ ಎಲ್ಲವೂ ಸಮರ್ಪಕವಾಗಿ ಅನುಕೂಲವಿದ್ದರೂ ಕೂಡ ಸ್ವಾರ್ಥವು ಇದು ಬಹಳಷ್ಟು ಬೆಳೆಯುತ್ತಿರುವುದು. ರಾಜಸನ ಚಿತ್ತವೃತ್ತಿಯು ಇದು ಅರ್ಧಕ್ಷಣವೂ ಕೂಡ ನಿವೃತ್ತಿಯನ್ನು ಮನ್ನಿಸುವುದಿಲ್ಲ ।೨೪೯॥ ಹೇ ಉದ್ಧವಾ, ವಿಕಾರಗಳಿಗೆ ಯಾವ ಕಾರಣವೂ ಇಲ್ಲದಿರಲು, ಅವನು ಮನದಲ್ಲಿ ವಿಷಯಗಳ ಚಿಂತನೆಯನ್ನು ಮಾಡುತ್ತಲೇ ಇರುವನು. ಇದು ರಾಜಸ ಮನುಷ್ಯನ ಪ್ರಮುಖವಾದ ಲಕ್ಷಣವಾಗಿದೆ ಎಂದು ತಿಳಿಯಬೇಕು ।೨೫೦॥ ಈ ಕಡೆ ಗಾಢವಾದ ಅಂಧಃಕಾರವೂ ಅಲ್ಲ, ಅಥವಾ ಸ್ವಚ್ಛವಾದ ಪ್ರಕಾಶ ದಿವಸವೂ ಅಲ್ಲ. ಹೀಗೆ ಈ ಎರಡರ ಮಧ್ಯದಲ್ಲಿ ಮಸುಕು ಮಸಕಾದ ಸಾಯಂಕಾಲವಾಗಿರುವುದು. ಅದರಂತೆ ಈ ರಜೋಗುಣವೆಂದು ತಿಳಿಯಬೇಕು ।೨೫೧॥ ಸತ್ವ ಮತ್ತು ರಜ ಈ ಗುಣಗಳ ಲಕ್ಷಣಗಳನ್ನು ನಾನು ನಿನಗೆ ಪರಿಚಯವನ್ನು ಮಾಡಿಕೊಟ್ಟಿರುವೆನು. ಈಗ ತಮೋಗುಣದಿಂದ ಜಾಡ್ಯವಾಗಿರುವ ಲಕ್ಷಣಗಳನ್ನು ಕೇಳು ।೨೫೨॥

ಚಿತ್ತದಲ್ಲಿ ಅತಿಗಹನವಾದ ಚಿಂತೆಯು ನಿರ್ಮಾಣವಾಯಿತೆಂದರೆ ಆತನು ಮಹಾಮೋಹದಲ್ಲಿ ನಿಮಗ್ನನಾಗುವನು. ಆ ಸಮಯದಲ್ಲಿ ಯಾವುದೇ ಜ್ಞಾನವು ಆತನ ಅಂತಃಕರಣದಲ್ಲಿ ಸ್ಫುರಣವಾಗುವುದಿಲ್ಲ ।೨೫೩॥ ಗಾಢವಾದ ನಿದ್ರೆಯ ಹೊರತಾಗಿ ಇರುವ ಸರ್ವ ಅಜ್ಞಾನಗಳು ಈ ಯಾವ ಜ್ಞಾನವನ್ನು ಕಂಡು ಓಡಿಹೋಗುತ್ತಿರುವುವು. ಆದರೆ ಇಲ್ಲಿ ಯಾವ ಆಶ್ಚರ್ಯವು ನಡೆಯುವುದೆಂಬುದನ್ನು ನೋಡಿರಿ. ಈ ಜ್ಞಾನಕ್ಕೆ ಅಜ್ಞಾನವು ನುಂಗಿಬಿಡುವುದು।೨೫೪॥ ತಾಮಸ ಮನುಷ್ಯನು ಜಾಗೃತಾವಸ್ಥೆಯಲ್ಲಿಯೂ ಕೂಡ ಮಲಗಿದವನಂತೆ ತೋರುತ್ತಿರುವನು. ಒಬ್ಬ ಕುರುಡ ಮನುಷ್ಯನು ಆಕಾಶದಲ್ಲಿ ಮೋಡಗಳಿಂದ ತುಂಬಿಕೊಂಡ ಅಮವಾಸ್ಯೆಯ ರಾತ್ರಿಯ ಕತ್ತಲಿನಲ್ಲಿ ಹೇಗೋ ಅಡ್ಡತಿಡ್ಡ ನಡೆಯುತ್ತಿರುವನು. ಅದರಂತೆಯೇ ಇವನು ಕಾರ್ಯಗಳನ್ನು ಮಾಡುತ್ತಿರುವನು. ಯಾವ ಯೋಗ್ಯ ಸ್ಫುರಣವು ಆಗುವುದಿಲ್ಲ ।೨೫೫॥

ಸಕಳ ಶರೀರಾಚಾ ಗೋಳಾ । ಹೋಯ ಆಳಸಾಚಾ ಮೋದಳಾ । ಹಾ ತಮೋಗ್ಲಾನೀಚಾ ಸೋಹಳಾ । ಪಡಳ ಯೇ ಡೋಳಾ ಚಿತ್ತವೃತ್ತೀ ।೨೫೬॥ ಸಂಕಲ್ಪವಿಕಲ್ಪಾಂಚೀ ಖ್ಯಾತೀ । ಉಪಜವೀ ಸದಾ ಮನೋವೃತ್ತೀ । ತ್ಯಾ ಮನಾಚೀ ಜಡ ಹೋಯ ಸ್ಥಿತೀ । ಸಂಕಲ್ಪಸ್ಫೂರ್ತೀ ಸ್ಫುರೇನಾ ।೨೫೭॥ ಆಣಿಕಹೀ ನವಲಸ್ಥಿತೀ । ಚಿತ್ತಾಸೀ ನಾಠವೇ ಚಿತ್ತಸ್ಫೂರ್ತೀ । । ಏವಢೀ ವಾಢೇ ತಮಾಚೀ ಖ್ಯಾತೀ । ಮನೋವೃತ್ತಿ ವಿನಾಶಕ ।೨೫೮॥ ಯಾಪರೀ ತಮಾಚೇ ಬಳ ಹೋಯ । ತೇ ಮನಾತೇ ಅಜ್ಞಾನ ಖಾಯ । ತೇ ಕಾಳೀ ಮನ ನಷ್ಟಪ್ರಾಯ । ಮೂರ್ಚ್ಛಿತ ರಾಹೇ ಮೂಢತ್ವೇ ।೨೫೯॥ ಮನ ನಿಃಶೇಷ ಜೈ ನಾಸತೇ । ತೈ ಮಹಾದುಃಖ ಕೋಣ ಭೋಗಿತೇ । ಯಾಲಾಗೀ ತಮಾಚೇನಿ ಐಕ್ಯಮತೇ । ಮನ ಉರೇ ತೇಥೇ ಜಡಮೂಢ ।೨೬೦॥ ಯಾಪರೀ ಜೇ ವರ್ತತೀ ಗತೀ । ತೇಚಿ ಅತ್ಯಂತ ದುಃಖದಾತೀ । ಯಾ ನಾಂವ ಗಾ ತಮಾಚೀ ಸ್ಥಿತೀ । ಜಾಣ ನಿಶ್ಚಿತೀ ಉದ್ಧವಾ ।೨೬೧॥ ವಾಢವಿತಾ ಗುಣವೃತ್ತೀ । ಕೋಣೇ ಗುಣೇ ಕೋಣ ವಾಢತೀ । ಯೇಚಿ ಅರ್ಥೀಚೀ ಉಪಪತ್ತೀ । ಸ್ವಯೇ ಶ್ರೀಪತೀ ಸಾಂಗತ ।೨೬೨॥

ಏಧಮಾನೇ ಗುಣೇ ಸತ್ತ್ವೇ ದೇವಾನಾಂ ಬಲಮೇಧತೇ । ಆಸುರಾಣಾಂ ಚ ರಜಸಿ ತಮಸ್ಯುದ್ಧವ ರಕ್ಷಸಾಮ್ ।೧೯॥

ಅರ್ಥ:- ಸತ್ವಗುಣವು ಹೆಚ್ಚಾದಂತೆ ದೇವತೆಗಳ ಬಲವು ಹೆಚ್ಚಾಗುವುದು. ರಜೋಗುಣವು ಹೆಚ್ಚಾದಾಗ ದಾನವರ ಬಲವು ಪ್ರಬಲವಾಗುವುದು ಮತ್ತು ತಮೋಗುಣವು ಹೆಚ್ಚಾದಂತೆ ಹೇ ಉದ್ಧವನೇ, ರಾಕ್ಷಸರ ಬಲವು ವೃದ್ಧಿಯಾಗುತ್ತದೆ.

ದೈವೀ ಆಸುರೀ ರಾಕ್ಷಸೀ ಸ್ಥಿತೀ । ಹೇ ತ್ರಿಗುಣ ಗುಣಾಂಚೀ ಸಂಪತ್ತೀ । ಜೇ ಜೇ ಬ್ರಹ್ಮಾಂಡೀ ಇಂದ್ರಿಯ ವೃತ್ತೀ । ತೋಚಿ ಸ್ಥಿತೀ ಪಿಂಡೀಹೀ ।೨೬೩॥ ಬ್ರಹ್ಮಾಂಡೀ ಸಕಳ ದೇವ । ಮಹಾಪುರುಷಾಚೇ ಅವಯವ । ಪಿಂಡೀಹೀ ತೇಚಿ ಸ್ವಯಮೇವ । ವರ್ತತೀ ಸರ್ವ ನಿಜಐಕ್ಯ ।೨೬೪॥ ಉಚಿತ ಸ್ವಧರ್ಮಶಾಸ್ತ್ರಸ್ಥಿತೀ । ನಿವೃತ್ತಿಕರ್ಮೀ ಜೇ ಪ್ರವೃತ್ತೀ । ಐಶೀ ಜೇಥ ಇಂದ್ರಿಯ ವೃತ್ತೀ । ತೇ ದೈವೀ ಸಂಪತ್ತೀ ಸತ್ತ್ವಸ್ಥ ।೨೬೫॥ ಕಾಮಾಭಿಲಾಷ ದೃಢ ಚಿತ್ತೀ । ಆಣಿ ಸ್ವಧರ್ಮೀ ತರೀ ವರ್ತತೀ। ಐಶೀ ಜೇ ಇಂದ್ರಿಯಸ್ಥಿತೀ। ಜೇ ಆಸುರೀ ಸಂಪತ್ತೀ ರಾಜಸೀ ।೨೬೬॥ ಸಲೋಭ ಮೋಹೇ ಕ್ರೋಧ ಚಿತ್ತೀ । ಸದಾ ಅಧರ್ಮೀ ಪ್ರವೃತ್ತೀ । ಐಶೀ ಜೇ ಇಂದ್ರಿಯಸ್ಥಿತೀ । ತೇ ರಾಕ್ಷಸೀ ಸಂಪತ್ತೀ ತಾಮಸೀ ।೨೬೭॥

ಈತನು ಯಾವ ಉತ್ಸಾಹವಿಲ್ಲದೇ ಕಾರ್ಯಗಳನ್ನು ಮಾಡುತ್ತಿರುವನು. ಸರ್ವ ಶರೀರವು ಆಲಸ್ಯದ ಉಂಡೆಯಾಗಿರುವುದು. ಆ ತಮೋಗುಣದ ಗ್ಲಾನಿಯ ಲೀಲೆಯು ಹೇಗಿರುವುದೆಂದರೆ, ಇದರಿಂದ ಚಿತ್ತವೃತ್ತಿಯ ದೃಷ್ಟಿಯ ಮೇಲೆ ಪರದೆಯು ಬರುವುದು ।೨೫೬॥ ಮನೋವೃತ್ತಿಯು ಇದು ಯಾವಾಗಲೂ ಸಂಕಲ್ಪವಿಕಲ್ಪಗಳನ್ನು ಮಾಡುವಿಕೆಯಲ್ಲಿ ತುಂಬಾ ಖ್ಯಾತಿಯನ್ನು ಪಡೆದಿರುವುದು. ಆದರೆ ಈ ಮನೋವೃತ್ತಿಯು ತಮೋಗುಣ ಕಾರಣದಿಂದ ಎಷ್ಟೊಂದು ಜಡವಾಗುವುದೆಂದರೆ ಅದಕ್ಕೆ ಸಂಕಲ್ಪಗಳೇ ಸ್ಫುರಣವಾಗುತ್ತಿರುವುದಿಲ್ಲ ।೨೫೭॥ ಇದಲ್ಲದೇ ಇನ್ನೊಂದು ಆಶ್ಚರ್ಯದ ಸಂಗತಿವೇನೆಂದರೆ ಈ ಯಾವ ಮನಸ್ಸಿನ ಮನತ್ವವೇ ಇಲ್ಲದಾಗುವುದು. ಮನೋವೃತ್ತಿಯನ್ನೇ ನಾಶಮಾಡುವಂತಹ ಈ ತಮೋಗುಣದ ಬೆಳವಣಿಗೆಯಾಗಿರುವುದು ।೨೫೮॥ ಈ ಪ್ರಕಾರವಾಗಿ ಯಾವ ವೇಳೆಯಲ್ಲಿ ತಮೋಗುಣವು ಪ್ರಬಲವಾಗುವುದೋ, ಆಗ ಅಜ್ಞಾನವು ಯಾವ ಈ ಮನವನ್ನು ತಿಂದುಬಿಡುವುದು. ಆದ್ದರಿಂದ ಈ ಮನವು ನಷ್ಟಪ್ರಾಯವಾಗಿ ಮೂಢತನದಿಂದ ಮೂರ್ಛಿತವಾಗಿ ಬಿದ್ದುಕೊಂಡಿರುವುದು ।೨೫೯॥ ಮನಸ್ಸಿನ ಸಂಪೂರ್ಣ ನಾಶವಾಯಿತೆಂದರೆ ಅಲ್ಲಿ ಮಹಾದುಃಖಗಳನ್ನು ಯಾರು ಭೋಗಿಸಬೇಕಾದೀತು? ಆದ್ದರಿಂದ ಮನವು ತಮದಲ್ಲಿ ಏಕರೂಪವಾಗಿ ಜಡಮೂಢತನದಿಂದ ಉಳಿದುಕೊಳ್ಳುವುದು ।೨೬೦॥ ಹೇ ಉದ್ಧವನೇ, ಈ ಪ್ರಕಾರದ ಯಾವ ಸ್ಥಿತಿಯು ಅತ್ಯಂತ ದುಃಖದಾಯಕವಾಗಿರುವುದು. ಇದಕ್ಕೆ ನಿಜವಾಗಿಯೂ ತಮೋಗುಣದ ಸ್ಥಿತಿ ಎಂಬ ನಾಮವು ಇದೆ ಎಂದು ತಿಳಿದುಕೋ ।೨೬೧॥ ಗುಣವೃತ್ತಿಯ ವೃದ್ಧಿಯಾದರೆ ಯಾವ ಗುಣದಿಂದ ಯಾವುದು ಬೆಳೆಯುವುದು ಎಂಬ ಈ ವಿಷಯವನ್ನು ಕುರಿತು ಸ್ವತಃ ಶ್ರೀಕೃಷ್ಣನು ಈಗ ನಿರೂಪಣೆಯನ್ನು ಮಾಡುತ್ತಿರುವನು ।೨೬೨॥

ದೈವೀ, ಅಸುರೀ ಮತ್ತು ರಾಕ್ಷಸೀ ಇವು ಮೂರು ಪ್ರಕಾರದ ಗುಣಗಳ ಸಂಪತ್ತಾಗಿರುವುದು. ಯಾವ ಇಂದ್ರಿಯಗಳ ವೃತ್ತಿಯು ಬ್ರಹ್ಮಾಂಡದಲ್ಲಿ ಇರುವುದೋ, ಅದೇ ಸ್ಥಿತಿಯು ಪಿಂಡದಲ್ಲಿ ಅಂದರೆ ದೇಹದಲ್ಲಿರುವುದು ।೨೬೩॥ ಬ್ರಹ್ಮಾಂಡದಲ್ಲಿನ ಸರ್ವ ದೇವತೆಗಳು ಇವು ಮಹಾಪುರುಷನ ಅವಯವಗಳಾಗಿರುವರು. ಈ ದೇವತೆಗಳೇ ಶರೀರದಲ್ಲಿ ಐಕ್ಯರೂಪದಿಂದ ವರ್ತಿಸುತ್ತಿರುವರು ।೨೬೪॥ ವಿಹಿತ ಸ್ವಧರ್ಮದಂತೆ ಆಚರಣೆಯನ್ನು ಮಾಡಿ ನಿಷ್ಕಾಮ ಕರ್ಮಗಳಲ್ಲಿ ಪ್ರವೃತ್ತವಾಗುವ ಯಾವ ಇಂದ್ರಿಯ ವೃತ್ತಿಯು ಅದು ಸತ್ವಗುಣದಲ್ಲಿರುವ ದೈವಿಸಂಪತ್ತಾಗಿರುವುದು ।೨೬೫॥ ಮನಸ್ಸಿನಲ್ಲಿ ವಿಶೇಷವಾಗಿ ದೃಢವಾದ ಕಾಮಾಭಿಲಾಷೆಯನ್ನು ಧರಿಸಿ ಅದರಲ್ಲಿಯೂ ಸ್ವಧರ್ಮದಂತೆ ಆಚರಿಸುತ್ತಿರುವುದು. ಈ ಪ್ರಕಾರದ ಯಾವ ಇಂದ್ರಿಯವೃತ್ತಿಯು ಅದು ರಾಜಸವಾಗಿರುವ ಆಸುರೀಸಂಪತ್ತಾಗಿರುವುದು ।೨೬೬॥ ಲೋಭ ಮತ್ತು ಮೋಹ ಇವುಗಳಿಂದ ಮನದಲ್ಲಿ ಕ್ರೋಧಾಗ್ನಿಯ ಜ್ವಾಲೆಯು ನಿರ್ಮಾಣವಾಗುವಿಕೆ ಮತ್ತು ಅಧರ್ಮದತ್ತ ಪ್ರವೃತ್ತಿ ವಿರುವಿಕೆ ಹೀಗಿರುವ ಯಾವ ಇಂದ್ರಿಯಗಳ ಸ್ಥಿತಿಗೆ ತಾಮಸಿಯಾಗಿರುವ ರಾಕ್ಷಸೀ ಸಂಪತ್ತಾಗಿರುವುದು ।೨೬೭॥

ಕ್ಷಣೇ ಸಕಾಮ ಕ್ಷಣೇ ನಿಷ್ಕಾಮ । ಐಸಾ ಜೇಥ ವಾಢೇ ಸ್ವಧರ್ಮ । ತೇಥ ದೇವಾ ಅಸುರಾ ಪರಮ । ಹೋಯ ಸಂಗ್ರಾಮ ವೃತ್ತೀಸೀ ॥೨೬೮॥ ಚಿತ್ತೀ ವಾಢವೂನಿ ಮೋಹಭ್ರಮ । ಅಧರ್ಮಾಚೀ ಮಾನೀ ಸ್ವಧರ್ಮ । ತೈ ರಾಕ್ಷಸಾಚಾ ಪರಾಕ್ರಮ । ದೇವಾಸುರಾ ಪರಮ ನಿರ್ದಾಳೀ ॥೨೬೯॥ ಸಕಾಮನಿಷ್ಕಾಮಮೋಹಭ್ರಮೇಸೀ । ವೃತ್ತೀ ವರ್ತೇ ಗಾ ಜಯಾಪಾಶೀ । ತೇಥ ದೇವಾಅಸುರಾರಾಕ್ಷಸಾಂಸೀ । ಕಲಹೋ ಅಹರ್ನಿಶೀ ಅನಿವಾರ ॥೨೭೦॥ ಕ್ಷಣೈಕ ರತಿ ಪರಮಾರ್ಥೀ । ಕ್ಷಣೈಕ ರತಿ ಅರ್ಥಸ್ವಾರ್ಥೀ । ಕ್ಷಣೈಕ ಹೋಯ ಅನರ್ಥೀ । ಪರದಾರಾ ರತಿ ಪರದ್ರವ್ಯೇ ॥೨೭೧॥ ಐಶಿಯೇ ಗಾ ಚಿತ್ತವೃತ್ತೀ । ಕದಾ ನುಪಜೇ ನಿಜಶಾಂತೀ । ಮಾ ಪರಮಾರ್ಥಾಚೀ ಪ್ರಾಪ್ತೀ । ಕೈಶಾ ರೀತಿ ಹೋಈಲ ॥೨೭೨॥ ಸಾಧಕ ಸರ್ವದಾ ಪುಸತೀ । ಕೋಣ ಬಾಧಾ ಅಸೇ ಚಿತ್ತವೃತ್ತೀ । ತೇ ಬಾಧಕತ್ವಾಚೀ ಸ್ಥಿತೀ । ವಿಶದ ತುಜಪ್ರತೀ ಸಾಂಗೀತಲೀ ॥೨೭೩॥ ಏಕಚಿ ಗುಣ ಜೈ ಪುರತಾ ಜೋಡೇ । ತೈ ಏಕವಿಧ ವೃತ್ತೀ ವಾಢೇ । ಹೇ ತಂವ ಸರ್ವಥಾ ನ ಘಡೇ । ಗುಣ ಗುಣಾಸೀ ಭಿಡೇ ಉಪಮರ್ದೇ ॥೨೭೪॥ ಏಕಚಿ ನ ಜೋಡೇ ಗುಣಾವಸ್ಥಾ । ಯಾಲಾಗೀ ನವ್ಹೇ ಏಕವಿಧತಾ । ತೇಣೇ ಅನಿವಾರ ಭವವ್ಯಥಾ । ಬಾಧೀ ಭೂತಾ ಗುಣಕ್ಷೋಭೇ ॥೨೭೫॥ ತಮ ಅಧರ್ಮಾಕಡೇ ವಾಢೇ । ರಜೋಗುಣ ದೇಹಧರ್ಮಾಕಡೇ । ಸತ್ತ್ವಗುಣಾಸೀ ವಾಢೀ ನ ಘಡೇ । ಮುಕ್ತತಾ ಜೋಡೇ ಕೈಸೇನೀ ॥೨೭೬॥ ರಜತಮ ಉಭಯಸಂಬಂಧೀ । ಸತ್ತ್ವ ಅಡಕಲೇ ದೋಹೀಮಧೀ । ತೇ ವಾಢೋ ನ ಶಕೇ ತ್ರಿಶುದ್ಧೀ । ನೈರಾಶ್ಯೇ ವೃದ್ಧೀ ಸತ್ತ್ವಗುಣಾ ॥೨೭೭॥ ತ್ರಿಗುಣ ಗುಣಾಂಚೀ ತ್ರಿಪುಟೀ । ಆಪಣ ಕಲ್ಪೀ ಆಪಲ್ಯಾ ಪೋಟೀ । ತೇಚೀ ಭವಭಯ ಹೋಊನಿಯಾ ಉಠೀ । ಲಾಗೇ ಪಾಠೀ ಬಾಧಕತ್ವೇ ॥೨೭೮॥ ಸತ್ತ್ವೇ ದೇವಾಂಸೀ ಪ್ರಬಳ ಬಳ । ರಜೋಗುಣೇ ದೈತ್ಯ ಪ್ರಬಳ । ತಮೋಗುಣೇ ಕೇವಳ । ಆತುರ್ಬಳ ರಾಕ್ಷಸಾ ॥೨೭೯॥ ಹೇ ಗುಣವೃತ್ತೀಂಚೇ ವ್ಯವಸ್ಥಾ । ಸಮೂಳ ಸಾಂಗೀತಲೀ ಕಥಾ । ಆತಾ ತ್ರಿಗುಣಾಂಚ್ಯಾ ತೀನ ಅವಸ್ಥಾ । ಏಕ ತತ್ತ್ವತಾ ಸಾಂಗೇನ ॥೨೮೦॥

ಸತ್ತ್ವಾಜ್ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ । ಪ್ರಸ್ವಾಪಂ ತಮಸಾ ಜಂತೋಸ್ತುರೀಯಂ ತ್ರಿಷು ಸಂತತಮ್ ॥೨೦॥

ಅರ್ಥ:- ಸತ್ವಗುಣದಿಂದ ಜಾಗೃತಾವಸ್ಥೆ, ರಜೋಗುಣದಿಂದ ಸ್ವಪ್ನಾವಸ್ಥೆ ಮತ್ತು ತಮೋಗುಣದಿಂದ ಸುಷುಪ್ತಾವಸ್ಥೆ ಪ್ರಾಪ್ತವಾಗುವುದು. ತುರೀಯ ಇದು ನಾಲ್ಕನೆಯ ಅವಸ್ಥೆ ಅಂದರೆ ಜಾಗರಾದಿ ಮೂರೂ ಅವಸ್ಥೆಗಳಲ್ಲಿ ಏಕರೂಪವಾಗಿರುವ ಆತ್ಮತತ್ವವೇ ಆಗಿರುವುದು.

ಒಂದು ಕ್ಷಣದಲ್ಲಿ ಕಾಮದ ಆಸಕ್ತಿಯಾಗುವುದು ಮತ್ತು ಮರುಕ್ಷಣದಲ್ಲಿ ನಿರೀಚ್ಛೆಭಾವವು ಉಂಟಾಗುವುದು, ಇಂತಹ ಸ್ವಧರ್ಮವು ಎಲ್ಲಿ ಬೆಳೆಯುತ್ತಿರುವುದೋ, ಆಗ ದೈವೀ ಮತ್ತು ಅಸುರೀ ವೃತ್ತಿಗಳಲ್ಲಿ ಸಂಘರ್ಷವು ಬೆಳೆಯುತ್ತಿರುವುದು ॥೨೬೮॥ ಮನದಲ್ಲಿನ ಮೋಹಭ್ರಮೆಗಳನ್ನು ವೃದ್ಧಿಗೊಳಿಸಿ ಅಧರ್ಮಕ್ಕೆ ಸ್ವಧರ್ಮವೆಂದು ಮನ್ನಿಸುವಿಕೆಯು ಇದು ರಾಕ್ಷಸೀ ವೃತ್ತಿಯ ಪ್ರಭಾವವಾಗಿರುವುದು. ಅವನು ದೈವೀ ಮತ್ತು ಆಸುರೀ ವೃತ್ತಿಗಳ ನಾಶವನ್ನು ಮಾಡಿ ತಾನು ಪ್ರಬಲನಾಗುವನು ॥೨೬೯॥ ಸಕಾಮ-ನಿಷ್ಕಾಮ ಮೋಹಾತ್ಮಕ ಭ್ರಮೆಯು, ಈ ರೀತಿಯಲ್ಲಿ ವೃತ್ತಿಯು ನಿರ್ಮಾಣವಾಯಿತೆಂದರೆ ಆಗ ದೇವ, ಅಸುರ ಮತ್ತು ರಾಕ್ಷಸ ಇವರ ಬಲವಾದ ಕಲಹವು ಆಹೋರಾತ್ರಿ ನಡೆಯುತ್ತಿರುವುದು ॥೨೭೦॥ ಆ ಸಮಯದಲ್ಲಿ ಯಾವ ಈ ಮನವು ಒಂದು ಕ್ಷಣದಲ್ಲಿ ಪರಮಾರ್ಥದಲ್ಲಿ ರಮಮಾಣವಾದರೆ ಮರುಕ್ಷಣದಲ್ಲಿ ದ್ರವ್ಯಾದಿ ವಿಷಯಗಳಲ್ಲಿ ತನ್ಮಯವಾಗುವುದು ಮತ್ತು ಇನ್ನೊಂದು ಕ್ಷಣದಲ್ಲಿ ಪರಸ್ತ್ರೀ, ಪರಧನಗಳಲ್ಲಿ ಅಭಿಲಾಷೆಯಿಂದ ಅನರ್ಥಗಳನ್ನು ಮಾಡಲಾರಂಭಿಸುವುದು ॥೨೭೧॥ ಇಂತಹ ಚಿತ್ತವೃತ್ತಿಯಲ್ಲಿ ನಿಜವಾದ ಶಾಂತತೆಯು ಎಂದಿಗೂ ನಿರ್ಮಾಣವಾಗುವುದಿಲ್ಲ. ಅಂದಮೇಲೆ ಪರಮಾರ್ಥದ ಪ್ರಾಪ್ತಿಯು ಉಂಟಾಗಲು ಹೇಗೆ ಸಾಧ್ಯ? ॥೨೭೨॥ ಸಾಧಕರು ಯಾವಾಗಲೂ ಚಿತ್ತವೃತ್ತಿಯು ಹೇಗೆ ಬಾಧಕವಾಗುವುದೆಂದು ವಿಚಾರಿಸುತ್ತಿರುವರು. ಈ ಕಾರಣದ ಜ್ಞಾನವನ್ನು ನಾನು ನಿನಗೆ ಸ್ಪಷ್ಟ ಮಾಡಿ ಹೇಳಿರುವೆನು ॥೨೭೩॥ ಒಂದೇ ಗುಣವು ಒಂದುವೇಳೆ ಪರಿಪೂರ್ಣವಾಗಿ ಪ್ರಾಪ್ತವಾದರೆ ಆಗ ಒಂದೇ ಪ್ರಕಾರದ ವೃತ್ತಿಯು ಬೆಳೆಯುತ್ತಿತ್ತು. ಆದರೆ ನಿಜವಾಗಿಯೂ ಹೀಗೆ ಸಾಧಿಸುವುದೇ ಇಲ್ಲ. ಗುಣಗಳು ಪರಸ್ಪರರಲ್ಲಿ ಹೆಚ್ಚು ಕಡಿಮೆಯಾಗಿ ಯಾವಾಗಲೂ ಜಗಳವಾಡುತ್ತಿರುವುವು ॥೨೭೪॥ ಈ ಕಾರಣದಿಂದ ಒಂದೇ ಪ್ರಕಾರದ ಗುಣಾವಸ್ಥೆಯು ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಒಂದೇ ಪ್ರಕಾರದ ವೃತ್ತಿಯು ಇರದೇ ಗುಣಗಳ ಕ್ಷೋಭೆಯಿಂದ ಭಯಂಕರವಾದ ಭವವ್ಯಥೆಯು ಪ್ರಾಣಿಗಳಿಗೆ ಬಾಧಿಸುತ್ತಿರುವುದು ॥೨೭೫॥ ತಮೋಗುಣದ ವೃದ್ಧಿಯು ಅಧರ್ಮದತ್ತ ಬಾಗುತ್ತಿದ್ದರೆ ರಜೋಗುಣದ ವೃದ್ಧಿಯು ದೇಹಧರ್ಮದತ್ತ ಬಾಗುತ್ತಿರುವುದು ಮತ್ತು ಇದರಿಂದ ಸತ್ವಗುಣದ ವೃದ್ಧಿಯು ಆಗುವುದೇ ಇಲ್ಲ. ಹೀಗಾದ ಮೇಲೆ ಜೀವಿಗಳ ಮುಕ್ತತೆಯು ಆಗುವುದಾದರೂ ಹೇಗೆ? ॥೨೭೬॥ ರಜ ಮತ್ತು ತಮ ಈ ಎರಡು ಗುಣಗಳಲ್ಲಿ ಸತ್ವಗುಣವು ಸಿಕ್ಕಿಕೊಂಡಿರುವುದು. ಈ ಕಾರಣವಾಗಿ ಅದು ವೃದ್ಧಿಯಾಗುತ್ತಿರುವುದಿಲ್ಲ. ಆಶೆಯನ್ನು ಪರಿಪೂರ್ಣವಾಗಿ ಇಲ್ಲದಾಗಿ ಮಾಡಲು ಆಗ ಸತ್ವಗುಣವು ಬೆಳೆಯಲಾರಂಭಿಸುವುದು ॥೨೭೭॥ ಮೂರು ಗುಣಗಳ ತ್ರಿಪುಟಿಯು ತನ್ನದೇ ಕಲ್ಪನೆಗಳಿಂದ ಮನದಲ್ಲಿ ಹುಟ್ಟುತ್ತಿರುವುದು. ಆಗ ಯಾವ ಸಂಸಾರವು ಭಯದ ರೂಪದಿಂದ ಬೆನ್ನಿಗೆ ಹತ್ತುವುದು ॥೨೭೮॥ ಸತ್ವಗುಣದಿಂದ ದೇವತೆಗಳು ಪ್ರಬಲರಾಗುವರು. ರಜೋಗುಣದಿಂದ ದೈತ್ಯರು ಬಲಿಷ್ಠರಾಗುವರು ಮತ್ತು ತಾಮಸ ಗುಣದಿಂದ ರಾಕ್ಷಸರು ಅತ್ಯಂತ ಬಲಾಢ್ಯರಾಗುವರು ॥೨೭೯॥ ಈ ಪ್ರಕಾರವಾಗಿ ಈ ಗುಣಗಳ ವೃತ್ತಿಯ ಸವಿಸ್ತಾರವಾದ ಕಥೆಯನ್ನು ನಾನು ನಿನಗೆ ಹೇಳಿದೆನು. ಈಗ ಈ ಮೂರು ಗುಣಗಳ ಮೂರು ಅವಸ್ಥೆಗಳನ್ನು ಕುರಿತು ಹೇಳುವೆನು, ಅದನ್ನು ಕೇಳು ॥೨೮೦॥

ಸತ್ತ್ವಗುಣಾಚಿಯೇ ಸ್ಥಿತಿ । ನಾತಳೇ ಸ್ವಪ್ನ ಆಣಿ ಸುಷುಪ್ತೀ । ಜೇವೀ ಸದಾ ನಾಂದೇ ಜೇ ಜಾಗೃತಿ । ಇಂದ್ರಿಯಪ್ರವೃತ್ತೀ ಸಾವಧ ।।೭೮೧।। ರಜೋಗುಣಾಚೇನಿ ಆಧಿಕ್ಯೇ । ಚಿತ್ತವೃತ್ತೀತೇ ಸ್ವಪ್ನ ಜಿಂಕೇ । ಜಾಗೃತಿ ಸುಷುಪ್ತಿ ದೂರೀ ಠಾಕೇ । ಬೈಸಲಾ ದೇಖೇ ಸ್ವಪ್ನಚಿ ।।೭೮೨।। ತಮೋಗುಣ ವಾಢಲ್ಯಾ ವಾಢೀ । ಜಾಗೃತಿ ಸ್ವಪ್ನ ದೂರೀ ದವಡೀ । ಮಗ ಸುಷುಪ್ತೀಚೀ ಅತಿಗಾಢೀ । ಆದಳೇ ರೋಕಡೀ ಜೇವಾಅಂಗೀ ।।೭೮೩।। ತ್ಯಾಸೀ ಸಭೇ ಬೈಸವಿಲ್ಯಾ ಪಾಹೇ । ಬೋಲತಾಬೋಲತಾ ಡುಲಕೀ ಜಾಯೇ । ಜೇವಿತಾಜೇವಿತಾಂಹೀ ಪಾಹೇ । ಝೋಪೀ ಜಾಯೇ ಕಡಕಡಾ ।।೭೮೪।। ಕ್ಷಣಾ ಜಾಗೃತಿ ಕ್ಷಣಾ ಸುಷುಪ್ತೀ । ಕ್ಷಣೈಕ ಸ್ವಪ್ನಾಚೀ ಪ್ರತೀತೀ । ಹೇ ತ್ರಿಗುಣಾಂಚೀ ಮಿಶ್ರಿತ ವೃತ್ತೀ । ಜಾಣ ನಿಶ್ಚಿತೀ ಉದ್ಧವಾ ।।೭೮೫।। ಜಾಗೃತಿ ಸ್ವಪ್ನ ಸುಷುಪ್ತೀ । ತಿಹೀ ಅವಸ್ಥಾಂತೇ ಪ್ರಕಾಶಿತೀ । ಯಾಲಾಗೀ ತೇ ಚೌಥೀ । ತುರೀಯ ಮ್ಹಣತೀ ಸಜ್ಞಾನ ।।೭೮೬।। ಜೇ ಜಾಗೃತೀತೇ ಜಾಗವಿತ । ಜೇ ಸ್ವಪ್ನೀ ಸ್ವಪ್ನಾತೇ ನಾಂದವಿತ । ಜೇ ಸುಷುಪ್ತೀತೇ ನಿಜವಿತ । ತ್ಯಾತೇ ತುರೀಯ ಮ್ಹಣತ ಉದ್ಧವಾ ।।೭೮೭।। ಜೇ ತಿಹೀ ಅವಸ್ಥಾ ಆಂತ । ಅಸೋನಿ ನವ್ಹೇ ಅವಸ್ಥಾಭೂತ । ಜೇ ನಿರ್ಗುಣ ನಿಜನಿತ್ಯ । ತ್ಯಾತೇಚಿ ಮ್ಹಣತ ತುರೀಯ ।।೭೮೮।। ಜೇವೀ ಪುತ್ರಾಚೇನಿ ಜಾಹಲೇಪಣೇ । ಪುರುಷೇ ಪಿತಾ ನಾಂವ ಪಾವಣೇ । ತೇವೀ ತಿಹೀ ಅವಸ್ಥಾಗುಣೇ । ತುರೀಯ ಮ್ಹಣಣೇ ವಸ್ತೂಸೀ ।।೭೮೯।। ವಸ್ತೂವರೀ ಅವಸ್ಥಾ ಭಾಸೇ । ಭಾಸಲೀ ಅವಸ್ಥಾ ಸವೇಂಚಿ ನಾಸೇ । ತ್ಯಾ ನಾಶಾಮಾಜೀ ವಸ್ತು ನ ನಾಸೇ । ಉರೇ ಅವಿನಾಶೇ ತುರೀಯ ।।೭೯೦।। ತುರೀಯ ತ್ರಿಕಾಳೀ ಸಂತತ । ಯಾಪರೀ ಜಾಣಾವೇ ಏಥ । ಆತಾ ಗುಣವೃದ್ಧಿ ಭೂಮಿಕಾ ಪ್ರಾಪ್ತ । ತೋಹೀ ವೃತ್ತಾಂತ ಹರಿ ಸಾಂಗೇ ।।೭೯೧।।

ಉಪರ್ಯುಪರಿ ಗಚ್ಛಂತಿ ಸತ್ತ್ವೇನ ಬ್ರಾಹ್ಮಣಾ ಜನಾಃ । ತಮಸಾಽಧೋಽಧ ಆಮುಖ್ಯಾದ್‌ರಜಸಾಂತರಚಾರಿಣಃ ।।೨೧।।

ಅರ್ಥ:- ವೇದಗಳ ಅಭ್ಯಾಸದಲ್ಲಿ ತತ್ಪರರಾದ ಬ್ರಾಹ್ಮಣರು ಸತ್ವಗುಣದ ಆಧಾರದಿಂದ ಉತ್ತರೋತ್ತರವಾಗಿ ಮೇಲಿನ ಲೋಕಗಳಿಗೆ ಹೋಗುವರು. ತಮೋಗುಣದಿಂದ ಜೀವಕ್ಕೆ ವೃಕ್ಷಾದಿಪರ್ಯಂತ ಅಧೋಗತಿಯು ಪ್ರಾಪ್ತವಾಗುವುದು ಮತ್ತು ರಜೋಗುಣದಿಂದ ಮನುಷ್ಯ ಶರೀರವು ಪ್ರಾಪ್ತವಾಗುವುದು.

ಸತ್ತ್ವಗುಣಾಚೇ ಆಯತನ । ಮುಖ್ಯತ್ವೇ ಬ್ರಾಹ್ಮಣ ಜನ । ತೇ ನ ಕರೂನಿ ಬ್ರಹ್ಮಾರ್ಪಣ । ಸ್ವಧರ್ಮಾಚರಣ ಜೇ ಕರಿತೀ ।।೭೯೨।।

ಅಂತಃಕರಣದಲ್ಲಿ ಸತ್ವಗುಣವು ಬೆಳೆಯಲು ಆಗ ಜೀವಕ್ಕೆ ಸ್ವಪ್ನ ಹಾಗೂ ಸುಷುಪ್ತೀ ಇವು ಸ್ಪರ್ಶ ಕೂಡ ಮಾಡಲಾರವು. ಜೀವವು ಯಾವಾಗಲೂ ಜಾಗೃತೆಯಲ್ಲಿಯೇ ಇರುತ್ತಿರುವುದು. ಈ ಕಾರಣದಿಂದ ಇಂದ್ರಿಯವೃತ್ತಿಯು ಎಚ್ಚರಾಗಿರುವುದು ।೭೮೧।। ರಜೋಗುಣವು ಬೆಳೆಯಿತೆಂದರೆ ಸ್ವಪ್ನವು ಚಿತ್ತವೃತ್ತಿಯನ್ನು ಜಯಿಸುವುದು. ಜಾಗೃತೀ ಹಾಗೂ ಸುಷುಪ್ತೀ ಇವು ದೂರವಿರುವುವು. ರಾಜಸನು ಕುಳಿತುಕೊಂಡಿದ್ದಾಗಲೂ ಸಹ ಸ್ವಪ್ನವನ್ನು ಕಾಣುವನು ।೭೮೨।। ತಮೋಗುಣವು ಇದು ಪ್ರಬಲವಾಗಲು ಆಗ ಜಾಗೃತೀ ಮತ್ತು ಸ್ವಪ್ನ ಈ ಎರಡನ್ನೂ ದೂರ ಓಡಿಸುವುದು. ಆಗ ಜೀವದ ಶರೀರದಲ್ಲಿ ಅತ್ಯಂತ ಗಾಢವಾದ ನಿದ್ರೆಯು ಬಂದು ಒದಗುವುದು ।೭೮೩।। ಆತನಿಗೆ ಸಭೆಯಲ್ಲಿ ಒಯ್ದು ಕುಳ್ಳಿರಿಸಲು ಆಗ ಮಾತುಮಾತಾಡುತ್ತಲೇ ಆತನಿಗೆ ತೂಕಡಿಕೆಯು ಆರಂಭವಾಗುವುದು. ಇದಲ್ಲದೇ ಆತನಿಗೆ ಉಣ್ಣು ಉಣ್ಣುತ್ತಲೇ ಗಾಢವಾದ ನಿದ್ರೆಯು ಹತ್ತುವುದು ।೭೮೪।। ಹೇ ಉದ್ಧವನೇ, ಕ್ಷಣದಲ್ಲಿ ಜಾಗೃತೆಯ ಮತ್ತು ಮರುಕ್ಷಣದಲ್ಲಿ ಸುಷುಪ್ತಿಯ ಇನ್ನೊಂದು ಕ್ಷಣದಲ್ಲಿ ಸ್ವಪ್ನದ ಅನುಭವವಾಗುವಿಕೆಯು ಇದು ಮೂರು ಗುಣಗಳ ಮಿಶ್ರಿತ ವೃತ್ತಿಯಾಗಿರುವುದು ।೭೮೫।। ಜಾಗೃತೀ ಸ್ವಪ್ನ ಮತ್ತು ಸುಷುಪ್ತೀ ಈ ಮೂರೂ ಅವಸ್ಥೆಗಳಿಗೆ ಪ್ರಕಾಶಿತ ಮಾಡುವ ಯಾವ ಸಾಕ್ಷಿರೂಪ ಆತ್ಮತತ್ವವೇ ಆಗಿರುವುದು. ಇದಕ್ಕೆ ಜ್ಞಾನೀ ಪುರುಷರು ನಾಲ್ಕನೆಯ ತುರ್ಯಾವಸ್ಥೆ ಎಂದು ಹೇಳುವರು ।೭೮೬।। ಹೇ ಉದ್ಧವನೇ, ಯಾವುದು ಜಾಗೃತಿಗೆ ಜಾಗೃತವನ್ನಾಗಿ ಮಾಡುವುದೋ ಅದೇ ಸ್ವಪ್ನದಲ್ಲಿ ಸ್ವಪ್ನಕ್ಕೆ ಚಾಲನೆ ನೀಡವುದು ಮತ್ತು ಸುಷುಪ್ತಿಗೆ ಮಲಗಿಸುವುದು. ಈ ಅವಸ್ಥೆಗೆ ತುರೀಯ ಅವಸ್ಥೆ ಎಂದು ಕರೆಯುವರು ।೭೮೭।। ಯಾವುದು ಮೂರು ಅವಸ್ಥೆಗಳಲ್ಲಿದ್ದೂ ಕೂಡ ಯಾವುದೇ ಅವಸ್ಥೆಯಲ್ಲಿ ಯುಕ್ತವಾಗದ, ಯಾವುದು ನಿರ್ಗುಣವಾಗಿದ್ದು ನಿತ್ಯವಾಗಿರುವ, ಇದಕ್ಕೇನೇ ತುರೀಯ ಅವಸ್ಥೆ ಎಂದು ಹೇಳುವರು ।೭೮೮।। ಒಬ್ಬಾತನಿಗೆ ಒಬ್ಬ ಪುತ್ರನು ಜನಿಸಿದನೆಂದರೆ ಆತನಿಗೆ ''ಪಿತಾ'' ಎಂಬ ನಾಮವು ಯಾವ ಪ್ರಕಾರವಾಗಿ ಉಂಟಾಗುವುದೋ, ಅದರಂತೆಯೇ ಗುಣಗಳ ಈ ಮೂರು ಅವಸ್ಥೆಗಳಿಂದ ಪರಮಾತ್ಮ ತತ್ವಕ್ಕೆ ತುರೀಯವೆಂದು ಕರೆಯಲ್ಪಡುವುದು ।೭೮೯।। ಪರಬ್ರಹ್ಮನಲ್ಲಿ ಈ ಮೂರು ಅವಸ್ಥೆಗಳು ಭಾಸವಾಗುವುವು. ಹೀಗೆ ಭಾಸವಾಗುತ್ತಿರುವ ಅವಸ್ಥೆಗಳು ಕೂಡಲೇ ನಾಶಹೊಂದುತ್ತಿರುವುವು. ಆದರೆ ಈ ನಾಶದ ಜೊತೆಯಲ್ಲಿ ಆತ್ಮತತ್ವವು ನಾಶವಾಗುವುದಿಲ್ಲ. ಹಿಗಿರುವ ಯಾವ ಅವಿನಾಶೀ ತತ್ವವು ಉಳಿಯುವುದೋ, ಅದೇ ತುರೀಯವಾಗಿರುವುದು ।೭೯೦।। ಈ ತುರೀಯವು ತ್ರಿಕಾಲದಲ್ಲಿ ಅಖಂಡವಾಗಿರುವುದು. ಇದನ್ನು ತಿಳಿದುಕೊಳ್ಳಬೇಕು. ಈಗ ಗುಣವೃದ್ಧಿಯ ಯೋಗದಿಂದ ಯಾವ ಕರ್ಮದ ಗತಿಯು ಪ್ರಾಪ್ತವಾಗುವುದೋ, ಆ ವೃತ್ತಾಂತವನ್ನೂ ಕೂಡ ಶ್ರೀಹರಿಯು ಹೇಳುವನು ।೭೯೧।।

ಬ್ರಾಹ್ಮಣರು ಇವರು ಮುಖ್ಯವಾಗಿ ಸತ್ವಗುಣದ ಆಶ್ರಯಸ್ಥಾನರಾಗಿರುವರು. ಬ್ರಹ್ಮಾರ್ಪಣೆಯನ್ನು ಮಾಡದೇ ಯಾವ ಸ್ವಧರ್ಮವನ್ನು ಆಚರಿಸಿದ್ದಕ್ಕಾಗಿ ।೭೯೨।।

ತ್ಯಾಂಸೀ ಸ್ವಧರ್ಮಾಚ್ಯಾ ಕರ್ಮಶಕ್ತೀ । ಊರ್ಧ್ವಲೋಕೀ ಹೋಯ ಗತೀ । ಲೋಕಲೋಕಾಂತರಪ್ರಾಪ್ತೀ । ಬ್ರಾಹ್ಮಣ ಪಾವತೀ ತೇ ಐಕ ॥ ॥೯೩॥ ಸ್ವರ್ಗಲೋಕ ಮಹರ್ಲೋಕ । ಕ್ರಮೂನಿ ಪಾವತೀ ಜನಲೋಕ । ಉಲ್ಲಂಘೋನಿಯಾ ತಪೋಲೋಕ । ಪಾವತೀ ಸಾತ್ತ್ವಿಕ ಸತ್ಯಲೋಕ ಪೈ ॥೯೪॥ ವಾಢಲಿಯಾ ರಜೋಗುಣ । ಶೂದ್ರಾದಿ ಚಾಂಡಾಳಪಣ । ಪುಢತೀ ಜನ್ಮ ಪುಢತೀ ಮರಣ । ಅವಿಶ್ರಮ ಜಾಣ ಭೋಗವೀ ॥೯೫॥ ವಾಢಲಿಯಾ ತಮೋಗುಣ । ಪಶ್ವಾದಿ ಯೋನಿ ಪಾವೋನ । ದಂಶ ಮಶಕ ವೃಕ್ಷ ಪಾಷಾಣ । ಯೋನಿ ಸಂಪೂರ್ಣ ಭೋಗವೀ ॥೯೬॥ ಪ್ರಾಣ್ಯಾಸೀ ಅಂತಕಾಳೀ ಜಾಣ । ದೇಹಾಂತೀ ಜೋ ವಾಢೇ ಗುಣ । ತ್ಯಾ ಮರಣಾಚೇ ಫಳ ಕೋಣ । ತೇಹೀ ಶ್ರೀಕೃಷ್ಣ ಸ್ವಯೇ ಸಾಂಗೇ ॥೯೭॥ ಅನನ್ಯ ಕರಿತಾ ಭಕ್ತೀ । ಭಕ್ತಾಂಸೀ ಅಂತೀ ಕೋಣ ಗತೀ । ತೇಹೀವಿಖಿಂಚೀ ಉಪಪತ್ತೀ । ಶ್ಲೋಕಾರ್ಥೀ ಹರಿ ಸಾಂಗೇ ॥೯೮॥

ಸತ್ತ್ವೇ ಪ್ರಲೀನಾಃ ಸ್ವರ್ಯಾಂತಿ ನರಲೋಕಂ ರಜೋಲಯಾಃ । ತಮೋಲಯಾಸ್ತು ನಿರಯಂ ಯಾಂತಿ ಮಾಮೇವ ನಿರ್ಗುಣಾಃ ॥೨೨॥

ಅರ್ಥ:- ಸತ್ವಗುಣದ ವೃದ್ಧಿಯಲ್ಲಿ ಮರಣವಾದವನಿಗೆ ಸ್ವರ್ಗದ ಪ್ರಾಪ್ತಿಯಾಗುವುದು. ರಜೋಗುಣದ ವೃದ್ಧಿಯಲ್ಲಿ ಮರಣವಾದವನಿಗೆ ಮನುಷ್ಯಲೋಕವು ದೊರೆಯುವುದು. ತಮೋಗುಣದ ವೃದ್ಧಿಯಲ್ಲಿ ಮರಣವಾದವನಿಗೆ ನರಕದ ಪ್ರಾಪ್ತಿಯಾಗುವುದು. ಆದರೆ ಯಾವ ಪುರುಷನು ತ್ರಿಗುಣಾತೀತ, ಜೀವನ್ಮುಕ್ತನಾಗುವನೋ, ಆತನಿಗೆ ನನ್ನ ಪ್ರಾಪ್ತಿಯಾಗುವುದು.

ಸಂಸಾರೀ ಮುಖ್ಯತ್ವೇ ತ್ರಿಗುಣ । ತೇಥ ವಾಢೋನಿಯಾ ಸತ್ತ್ವಗುಣ । ಜ್ಯಾಸೀ ಪ್ರಾಪ್ತ ಹೋಯ ಮರಣ । ತೋ ಸ್ವರ್ಗಭೋಗೀ ಜಾಣ ದಿವ್ಯ ದೇಹ ಪಾವೇ ॥೯೯॥ ಸತ್ತ್ವೇ ನಿಮಾಲ್ಯಾ ಸಾತ್ತ್ವಿಕ । ತೇ ಪಾವತೀ ಸ್ವರ್ಗಲೋಕ । ರಜೋಗುಣೇ ನಿಮಾಲ್ಯಾ ದೇಖ । ತ್ಯಾ ಮನುಷ್ಯಲೋಕ ಮಾನವಾ ॥೧೦೦॥ ಅಂತೀ ವಾಢೋನಿಯಾ ತಮಾಧಿಕ್ಯ । ತಮೋಗುಣೇ ನಿಮಾಲ್ಯಾ ದೇಖ । ತೇ ಭೋಗಿತೀ ಮಹಾನರಕ । ದುಃಖದಾಯಕ ದಾರುಣ ॥೧೦೧॥ ಸಪ್ರೇಮ ಕರಿತಾ ಮಾಝೀ ಭಕ್ತೀ । ಮಾಝಿಯಾ ಭಕ್ತಾಂಸೀ ದೇಹಾಂತೀ । ಹೃದಯೀ ಪ್ರಕಟೇ ಮಾಝೀ ಮೂರ್ತೀ । ಘವಘವಿತೀ ನಿಜತೇಜೇ ॥೧೦೨॥ ಶಂಖಚಕ್ರಗದಾದಿ ಸಂಪೂರ್ಣ । ಪೀತಾಂಬರಧಾರೀ ಶ್ರೀಕೃಷ್ಣ । ಧ್ಯಾನೀ ಧರೂನಿ ಪಾವೇ ಮರಣ । ತೋ ವೈಕುಂಠೀ ಜಾಣ ಮೀ ಹೋಯೇ ॥೧೦೩॥ ಸರ್ವಭೂತಿ ಮೀ ಆತ್ಮಾ ಪೂರ್ಣ । ಐಸೇ ಜ್ಯಾಚೇ ಅಖಂಡ ಭಜನ । ತೇ ಜಿತಾಂಚಿ ತಿನ್ಹೀ ಗುಣ । ಜಿಣೋನಿ ನಿರ್ಗುಣ ಪಾವತೀ ॥೧೦೪॥

ಆ ಸಾತ್ವಿಕ ಬ್ರಾಹ್ಮಣರು ವೇದೋಕ್ತ ಅನುಷ್ಠಾನದಿಂದ ಬ್ರಹ್ಮಲೋಕದ ವರೆಗೆ ಊರ್ಧ್ವಗತಿಯನ್ನು ಪಡೆಯುವರು. ಬ್ರಾಹ್ಮಣರಿಗೆ ಉತ್ತರೋತ್ತರವಾಗಿ ಶ್ರೇಷ್ಠಲೋಕಗಳು ಹೇಗೆ ಪ್ರಾಪ್ತವಾಗುವುವು ಎಂಬುವುದನ್ನು ಈಗ ಕೇಳು ॥೯೩॥ ಸಾತ್ವಿಕ ಬ್ರಾಹ್ಮಣರು ಸ್ವರ್ಗಲೋಕದ ಉಲ್ಲಂಘನೆಯನ್ನು ಮಾಡಿ ಜನಲೋಕಕ್ಕೆ ಸೇರುವರು. ಅಲ್ಲಿಂದ ಅವರು ತಪೋಲೋಕದ ಉಲ್ಲಂಘನೆಯನ್ನು ಮಾಡಿ ಸತ್ಯಲೋಕಕ್ಕೆ ಬಂದು ಮುಟ್ಟಿಕೊಳ್ಳುವರು ॥೯೪॥ ರಜೋಗುಣವು ವೃದ್ಧಿಯಾಯಿತೆಂದರೆ ಜೀವವು ಶೂದ್ರಾದಿ ಸ್ಥಾನಗಳಲ್ಲಿ ಜನ್ಮವನ್ನು ಧರಿಸಿ ಪುನಃ ಪುನಃ ಜನ್ಮ ಮರಣದ ಚಕ್ರದಲ್ಲಿ ತಿರುಗುತ್ತಿರುವುದು ॥೯೫॥ ತಮೋಗುಣವು ಬೆಳೆಯಿತೆಂದರೆ ಆಗ ಸೊಳ್ಳೆ, ನೊಣ, ವೃಕ್ಷ, ಪಾಷಾಣ ಇತ್ಯಾದಿ ಸ್ಥಾನಗಳಲ್ಲಿ ಜನ್ಮವು ಪ್ರಾಪ್ತವಾಗುವುದು ॥೯೬॥ ಪ್ರಾಣಿಗಳ ಮರಣ ಕಾಲದಲ್ಲಿ ದೇಹದಲ್ಲಿ ಯಾವ ಗುಣವು ವೃದ್ಧಿಯಾಗುತ್ತಿರುವುದೋ, ಆ ಮರಣದ ಯಾವ ಫಲ ಎಂಬುವುದನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೯೭॥ ಏಕನಿಷ್ಠೆಯಿಂದ ನನ್ನ ಅನನ್ಯ ಭಕ್ತಿಯನ್ನು ಮಾಡುವುದರಿಂದ ಆ ಭಕ್ತರಿಗೆ ಕೊನೆಯಲ್ಲಿ ಯಾವ ಗತಿಯು ಪ್ರಾಪ್ತವಾಗುವ ಈ ವಿಷಯದ ವಿವೇಚನೆಯನ್ನು ಶ್ರೀಕೃಷ್ಣನು ಶ್ಲೋಕಾರ್ಥದಿಂದ ಹೇಳುತ್ತಿರುವನು ॥೯೮॥

ಸಂಸಾರದಲ್ಲಿ ಮೂರು ಗುಣಗಳು ಮುಖ್ಯವಾಗಿರುವುವು. ಸತ್ವಗುಣವು ವೃದ್ಧಿಯಾದಾಗ್ಗೆ ಯಾರಿಗೆ ಮರಣವು ಪ್ರಾಪ್ತವಾಗುವದೋ, ಆತನು ದಿವ್ಯವಾದ ದೇಹವನ್ನು ಧರಿಸಿ ಸ್ವರ್ಗದಲ್ಲಿನ ಸುಖವನ್ನು ಭೋಗಿಸುವನು ॥೯೯॥ ಈ ಪ್ರಕಾರವಾಗಿ ಸಾತ್ವಿಕ ಪುರುಷನು ಸತ್ವಗುಣದಲ್ಲಿ ಮರಣಾಗಲು ಆತನು ಸ್ವರ್ಗಲೋಕವನ್ನು ಪ್ರಾಪ್ತಮಾಡಿಕೊಳ್ಳುವನು. ರಜೋಗುಣವು ವೃದ್ಧಿಯಾದಾಗ್ಗೆ ಮರಣಾಗಲು ಆತನಿಗೆ ಮನುಷ್ಯಲೋಕವು ಪ್ರಾಪ್ತವಾಗುವುದು ॥೧೦೦॥ ಅಂತ್ಯಕಾಲದಲ್ಲಿ ತಮೋಗುಣದ ಪ್ರಾಬಲ್ಯವು ಬೆಳೆದು ಅದರಲ್ಲಿಯೇ ಮೃತ್ಯು ಆಗಲು ಆಗ ಅದು ಭಯಂಕರ ದುಃಖಕಾರಕ ನರಕವನ್ನು ಭೋಗಿಸಲು ಹಚ್ಚುವುದು ॥೧೦೧॥ ನಿಷ್ಕಾಮ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡಲು, ಆ ನನ್ನ ಭಕ್ತರ ಹೃದಯದಲ್ಲಿ ಅಂತ್ಯಕಾಲಕ್ಕೆ ಆತ್ಮ ತೇಜದ ದಿವ್ಯವಾದ ನನ್ನ ಮೂರ್ತಿಯು ಪ್ರಕಟವಾಗುವುದು ॥೧೦೨॥ ಶಂಖ-ಚಕ್ರ-ಗದಾ ಇತ್ಯಾದಿ ಸಂಪೂರ್ಣ ಆಯುಧಗಳನ್ನು ಧರಿಸಿರುವ ಪೀತಾಂಬರಧಾರೀ ಶ್ರೀಕೃಷ್ಣನ ಧ್ಯಾನವನ್ನು ಮಾಡುತ್ತ ಯಾರು ಮರಣವನ್ನು ಹೊಂದುವರೋ, ಅವರು ವೈಕುಂಠದಲ್ಲಿ ಮತ್ಸ್ವರೂಪರಾಗುವರು ॥೧೦೩॥ ಸರ್ವಪ್ರಾಣಿಮಾತ್ರರ ಹೃದಯದಲ್ಲಿ ಆತ್ಮನಾದ ನಾನೇ ಪರಿಪೂರ್ಣ ರೂಪದಿಂದ ತುಂಬಿಕೊಂಡಿರುವೆ ಎಂಬ ಈ ಭಾವನೆಯ ಭಜನೆಯು ಯಾರಲ್ಲಿ ಇರುವುದೋ, ಆತನು ಜೀವಂತನಾಗಿರುವಾಗಲೇ ಮೂರು ಗುಣಗಳನ್ನು ಜಯಿಸಿ ನಿರ್ಗುಣ ಪದಕ್ಕೆ ಮುಟ್ಟಿಕೊಳ್ಳುವನು ॥೧೦೪॥

ತ್ಯಾಂಚೇ ದೇಹಾಸೀ ದೈವೇ ಆಲ್ಯಾ ಮರಣ । ಮಜವೇಗಳೇ ನಾಹೀ ಸ್ಥಾನ । ತೇ ನಿಜಾನಂದೇ ಪರಿಪೂರ್ಣ । ನಿಜನಿರ್ಗುಣ ಸ್ವಯೇ ಹೋತೀ ॥೩೦೫॥ ಮಾಝೇ ಸ್ವರೂಪ ನಿಜನಿರ್ಗುಣ । ಅಥವಾ ವೈಕುಂಠೀಚೇ ಸಗುಣ । ದೋನ್ಹೀ ಏಕಚಿ ನಿಶ್ಚಯೇ ಜಾಣ । ಸಗುಣ ನಿರ್ಗುಣ ಸಮಸಾಮ್ಯ ॥೩೦೬॥ ಸ್ವರ್ಗ ನರಕ ಮನುಷ್ಯಲೋಕ । ಪ್ರಾಪ್ತಿ ಪಾವಲೇ ನಿರ್ಗುಣ ಚೋಖ । ತ್ಯಾಂಚ್ಯಾ ಸಾಧನಾಂಚೇ ಕೌತುಕ । ಸ್ವಯೇ ಯುದುನಾಯಕ ಸಾಂಗತ ॥೩೦೭॥

ಮದರ್ಪಣಂ ನಿಷ್ಫಲಂ ವಾ ಸಾತ್ತ್ವಿಕಂ ನಿಜಕರ್ಮ ತತ್ । ರಾಜಸಂ ಫಲಸಂಕಲ್ಪಂ ಹಿಂಸಾಪ್ರಾಯಾದಿ ತಾಮಸಮ್ ॥೨೩॥

ಅರ್ಥ:- ತನ್ನ ಧರ್ಮದ ಆಚರಣೆಯನ್ನು ಮಾಡಿ ನನಗೆ ಸಮರ್ಪಿಸಿದರೆ ಅಥವಾ ನಿಷ್ಕಾಮ ಭಾವನೆಯಿಂದ ಆಚರಿಸಿದರೆ ಅದು ಸಾತ್ವಿಕ ಕರ್ಮವಾಗುವುದು. ತನ್ನ ಕರ್ಮದ ಅನುಷ್ಠಾನದಲ್ಲಿ ಯಾವುದಾದರೂ ಫಲದ ಇಚ್ಛೆ ಇಡಲು ಅದು ರಾಜಸ ಕರ್ಮವಾಗುವುದು. ತನ್ನ ಕರ್ಮವು ಯಾರಿಗಾದರೂ ತೊಂದರೆಕೊಡುವುದಕ್ಕಾಗಿ ಅಥವಾ ಜನರಿಗೆ ತೋರಿಸುವುದಕ್ಕಾಗಿ ಇದ್ದರೆ ಅದು ತಾಮಸ ಕರ್ಮವಾಗುವುದು.

ಸಕಳ ಕರ್ಮಕ್ರಿಯಾಚರಣ । ಸಂಕಲ್ಪೇವೀಣ ಆಪಣ । ಸಹಜೇ ಹೋಯ ಬ್ರಹ್ಮಾರ್ಪಣ । ಹೇ ನಿರ್ಗುಣ ಸಾಧನ ಶೋಧಿತಸತ್ವೇ ॥೩೦೮॥ ವರ್ಣಾಶ್ರಮಧರ್ಮ ಸಕಳ । ಆಚರೇ ಪರೀ ನ ವಾಂಛೀ ಫಳ । ಮಾಝೀ ಭಕ್ತೀಚೇ ಪ್ರೇಮ ಪ್ರಬಳ । ಹೇ ಕರ್ಮ ಕೇವಳ ಸಾತ್ತ್ವಿಕ ॥೩೦೯॥ ಮಾಝೇ ಭಜನ ಹಾಚಿ ಸ್ವಧರ್ಮ । ಯಾಚಿ ನಾಂವ ಗಾ ನಿಜಕರ್ಮ । ಐಸೇ ಜ್ಯಾಸಿ ಕಳೇ ವರ್ಮ । ಸಾತ್ತ್ವಿಕ ಕರ್ಮ ಯಾ ನಾಂವ ॥೩೧೦॥ ಸ್ವಧರ್ಮ ಆಚರೋನಿ ಸಕಳ । ಇಂದ್ರಾದಿ ದೇವಾ ಯಜನಶೀಳ । ಜೋ ವಾಂಛೀ ಇಹಾಮುತ್ರ ಫಳ । ಹೇ ಕರ್ಮ ಕೇವಳ ರಾಜಸ ॥೩೧೧॥ ಜೇಕರ್ಮೀ ಪ್ರಕಟ ಹಿಂಸಾ ಘಡೇ । ಕಾ ಆಭಿಚಾರಕ ಕರಣೇ ಪಡೇ । ಸ್ವರೂಪೇ ಜೇ ಕರ್ಮ ಕುಡೇ । ತೇ ಜಾಣ ಧಡಪುಡೇ ತಾಮಸ ॥೩೧೨॥ ಜೇಥ ದಾಂಭಿಕ ಕರ್ಮಾಚಾರೂ । ಜೇಥ ಸಾಧೂಂಸೀ ಅತಿಮತ್ಸರೂ । ಜೇಥ ನಿಂದೇಚಾ ಪ್ರಬಳ ಭರೂ । ತೋ ಕರ್ಮಾದರೂ ತಾಮಸ ॥೩೧೩॥ ಆತಾ ತ್ರಿಗುಣ ಆಣಿ ನಿರ್ಗುಣ । ಯಾಂಚೇ ಚತುರ್ವಿಧ ಲಕ್ಷಣ । ಯಾ ಶ್ಲೋಕೀ ಶ್ರೀಕೃಷ್ಣ । ಸ್ವಮುಖೇ ಆಪಣ ಸಾಂಗತ ॥೩೧೪॥

ಕೈವಲ್ಯ ಸಾತ್ತ್ವಿಕಂ ಜ್ಞಾನಂ ರಜೋ ವೈಕಲ್ಪಿಕಂ ಚ ಯತ್ ।
ಪ್ರಾಕೃತಂ ತಾಮಸಂ ಜ್ಞಾನಂ ಮನ್ನಿಷ್ಠಂ ನಿರ್ಗುಣಸ್ಮೃತಮ್ ॥೨೪॥

ಅರ್ಥ:- ಶುದ್ಧ ಆತ್ಮದ ಜ್ಞಾನವು ಸಾತ್ವಿಕವಾಗಿರುವುದು. ಅದಕ್ಕೆ ಕರ್ತಾ, ಭೋಕ್ತಾ ಎಂದು ತಿಳಿದುಕೊಳ್ಳುವುದು ರಾಜಸ ಜ್ಞಾನವು. ಅದಕ್ಕೆ ಶರೀರವಿದೆ ಎಂದು ತಿಳಿದುಕೊಳ್ಳುವುದು ತಾಮಸ ಜ್ಞಾನವು. ಈ ಮೂರಕ್ಕಿಂತಲೂ ವಿಲಕ್ಷಣವಾಗಿರುವ ನನ್ನ ಸ್ವರೂಪದ ವಾಸ್ತವಿಕ ಜ್ಞಾನವು ನಿರ್ಗುಣ ಜ್ಞಾನವು.

ದೈವಯೋಗದಿಂದ ಆತನ ದೇಹಕ್ಕೆ ಮರಣವು ಬರಲು ಆಗ ಆತನಿಗೆ ನನ್ನ ಹೊರತಾದ ಅನ್ಯಸ್ಥಾನವೇ ಇರುವುದಿಲ್ಲ. ಆತನು ನಿಜಾನಂದದಿಂದ ಪರಿಪೂರ್ಣನಾಗಿರುವುದರಿಂದ ಸ್ವತಃ ನಿರ್ಗುಣಸ್ವರೂಪನಾಗುವನು ॥೩೦೫॥ ನನ್ನ ನಿರ್ಗುಣ ಸ್ವರೂಪವಾಗಲಿ ಅಥವಾ ವೈಕುಂಠದಲ್ಲಿನ ಸಗುಣ ಸ್ವರೂಪವಾಗಲಿ ಈ ಎರಡೂ ಕೂಡ ನಿಜವಾಗಿಯೂ ಒಂದೇಯಾಗಿರುವುವು. ಇದನ್ನು ನೀನು ನಿಶ್ಚಯಪೂರ್ವಕವಾಗಿ ತಿಳಿದುಕೋ. ಸಗುಣ ಮತ್ತು ನಿರ್ಗುಣ ಇವುಗಳ ಸಮಸಾಮ್ಯವಿರುವುದು ॥೩೦೬॥ ಕೆಲವರು ಸ್ವರ್ಗ, ನರಕ, ಮನುಷ್ಯಲೋಕ ಅಥವಾ ಶುದ್ಧವಾದ ನಿರ್ಗುಣ ಸ್ವರೂಪ ಪ್ರಾಪ್ತಮಾಡಿಕೊಳ್ಳುವರು. ಆ ಸಾಧಕರ ಸಾಧನೆಗಳ ಚಮತ್ಕಾರವನ್ನು ಸ್ವತಃ ಯದುನಾಯಕನು ಹೇಳುತ್ತಿರುವನು ॥೩೦೭॥

ಸರ್ವಕರ್ಮಗಳನ್ನು ಸಂಕಲ್ಪವಿಲ್ಲದೇ ಮಾಡಿದರೆ ಅವು ತಾವೇ ಸ್ವತಃ ಸಹಜವಾಗಿ ಬ್ರಹ್ಮಾರ್ಪಣೆಯಾಗುವುವು. ಇದೇ ಶುದ್ಧ ಸತ್ವದ ನಿರ್ಗುಣ ಸ್ವರೂಪದ ಸಾಧನೆಯಾಗಿರುವುದು ॥೩೦೮॥ ಆತನು ಸರ್ವ ವರ್ಣಾಶ್ರಮಧರ್ಮದ ಆಚರಣೆಯನ್ನು ಮಾಡುತ್ತಿರುವನು. ಆದರೆ ಆತನ ಮನದಲ್ಲಿ ಫಲದ ಇಚ್ಛೆಯು ಇರುವುದಿಲ್ಲ. ಅದರಲ್ಲಿ ನನ್ನ ಭಕ್ತಿಯ ಅತ್ಯಂತ ಪ್ರೇಮವಿರುವುದು. ಈ ಕರ್ಮವು ನಿಜವಾಗಿಯೂ ಸಾತ್ವಿಕವಾಗಿರುವುದು ॥೩೦೯॥ ನನ್ನ ಭಜನೆಯನ್ನು ಮಾಡುವುದು ಇದೇ ಸ್ವಧರ್ಮವಾಗಿರುವುದು. ಇದರ ನಾಮವೇ ನಿಜಕರ್ಮವಾಗಿರುವುದು. ಈ ಮರ್ಮವು ಯಾರಿಗೆ ತಿಳಿಯುವುದೋ, ಆತನ ಕರ್ಮಕ್ಕೆ ಸಾತ್ವಿಕ ಕರ್ಮವೆನ್ನುವರು ॥೩೧೦॥ ಯಾವನು ತನ್ನ ಧರ್ಮದಂತೆ ಅದನ್ನು ಆಚರಣೆಯನ್ನು ಮಾಡಿ ಯಜ್ಞಯಾಗ ಮುಖಾಂತರವಾಗಿ ಇಂದ್ರನಿಗೆ ತೃಪ್ತಗೊಳಿಸುವನೋ ಹಾಗೂ ಇಹಲೋಕದ ಮತ್ತು ಪರಲೋಕದ ಫಲದ ಆಶೆಯನ್ನು ಮಾಡುತ್ತಿರುವನೋ ಆತನ ಈ ಯಾವ ಕರ್ಮವು ಕೇವಲ ರಾಜಸವಾಗಿರುವುದು ॥೩೧೧॥ ಯಾವ ಕರ್ಮಗಳಲ್ಲಿ ಹಿಂಸೆಯು ನಡೆಯುವುದೋ, ಯಾವುದರಲ್ಲಿ ಜಾರಣ-ಮಾರಣಾದಿ ಪರಪೀಡೆವಿರುವುದೋ, ಯಾವ ಕರ್ಮದ ಸ್ವರೂಪವು ಕೆಟ್ಟದ್ದಾಗಿರುವುದೋ, ಆ ಕರ್ಮವು ತಾಮಸೀಯಾಗಿದೆ ಎಂದು ತಿಳಿದುಕೊಳ್ಳಬೇಕು ॥೩೧೨। ಯಾವ ಕರ್ಮದಲ್ಲಿ ಕೇವಲ ದಾಂಭಿಕತನ ತುಂಬಿರುವುದೋ, ಯಾವುದರಲ್ಲಿ ಸಾಧು ಸಂತರ ಮತ್ಸರವು ಅತಿಯಾಗಿರುವುದೋ, ಯಾವುದರಲ್ಲಿ ಪರನಿಂದೆಯು ಪ್ರಬಲವಾಗಿ ತುಂಬಿಕೊಂಡಿದೆಯೋ, ಆ ಕರ್ಮವು ತಾಮಸೀಯಾಗಿರುವುದು ॥೩೧೩॥ ಈಗ ಮೂರು ಗುಣಗಳು ಮತ್ತು ನಿರ್ಗುಣ ಇವುಗಳ ನಾಲ್ಕು ಪ್ರಕಾರದ ಲಕ್ಷಣಗಳನ್ನು ದ್ವಾರಕಾಧೀಶನಾದ ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ಸ್ವತಃ ಹೇಳುತ್ತಿರುವನು ॥೩೧೪॥

ದೇಹೀ ಅಸೋನಿ ದೇಹಾತೀತ । ಭೂತೀ ಭೂತಾತ್ಮಾ ಭಗವಂತ । ಭೂತಾ ಸಬಾಹ್ಯ ಸಭರಾಭರಿತ । ಹೇ ಜ್ಞಾನ ನಿಶ್ಚಿತ ಸಾತ್ತ್ವಿಕ ।।೩೧೫।। ಭಿನ್ನ ಖಾಣೀ ಭಿನ್ನಾಕಾರ । ಭಿನ್ನ ನಾಂವೇ ಭಿನ್ನ ವ್ಯಾಪಾರ । ತೇಥ ವಸ್ತು ದೇಖೇ ಅಭಿನ್ನಾಕಾರ । ಹೇ ಜ್ಞಾನ ಸಾಚಾರ ಸಾತ್ತ್ವಿಕ ।।೩೧೬।। ಕರೂನಿ ವೇದಶಾಸ್ತ್ರಪಠನ । ನಿರ್ಧಾರಿತಾ ನಿಜಜ್ಞಾನ । ಸವೇಚಿ ವಿಕಲ್ಪೀ ಆಪಣ । ವಿಕಲ್ಪ ಪೂರ್ಣ ರಜಾಚೇ ।।೩೧೭।। ಕರೂನ ವಾರ್ತಿಕಾಂತ ವ್ಯುತ್ಪತ್ತೀ । ಅದ್ವೈತನಿಶ್ಚಯೋ ನಾಹೀ ಚಿತ್ತೀ । ಆಪಣ ವಿಕಲ್ಪೀ ಆಪುಲ್ಯಾ ಯುಕ್ತೀ । ತೇ ಜ್ಞಾನ ನಿಶ್ಚಿತೀ ರಾಜಸ ।।೩೧೮।। ಕರೂನಿ ವೇದಶಾಸ್ತ್ರ ಶ್ರವಣ । ಹೋಯ ಶಿಶ್ನೋದರಪರಾಯಣ । ಇಂದ್ರಿಯಾರ್ಥೀ ಶ್ರದ್ಧಾ ಪೂರ್ಣ । ತೋ ಕೇವಳ ಜಾಣ ರಾಜಸ ।।೩೧೯।। ಏಕ ನಿಶ್ಚಯೋ ನಾಹೀ ಚಿತ್ತೀ । ವಿಕಲ್ಪ ಉಪಜತೀ ನೇಣೋ ಕಿತೀ । ಹೇ ರಜೋಗುಣಾಚೀ ಜ್ಞಾನವೃತ್ತೀ । ಐಕ ನಿಶ್ಚಿತೀ ತಮೋಗುಣ ।।೩೨೦।। ಮಹಾಮೋಹೇ ಗಿಳೀ ಜ್ಞಾನಸ್ಫೂರ್ತೀ । ಮೀ ಜಡ ಅಂಧ ಮಾನೀ ನಿಶ್ಚಿತೀ । ನಶ್ವರ ಪದಾರ್ಥೀ ಆಸಕ್ತೀ । ತೇ ಜ್ಞಾನ ನಿಶ್ಚಿತೀ ತಾಮಸ ।।೩೨೧।। ಆಹಾರ ನಿದ್ರಾ ಭಯ ಮೈಥುನ । ಕೇವಳ ಪಶುಪ್ರಾಯ ಜೇ ಜ್ಞಾನ । ತೇ ನಿಶ್ಚಯೇ ತಾಮಸ ಜಾಣ । ಐಕ ನಿರ್ಗುಣವಿಭಾಗ ।।೩೨೨।। ಕಾರ್ಯ ಕರ್ತಾ ಆಣಿ ಕಾರಣ । ತ್ರಿಪುಟೀ ತ್ರಿಗುಣೇಸೀ ಕರೂನಿ ಶೂನ್ಯ । ಕೇವಳ ಜೇ ಚೈತನ್ಯಘನ । ತೇ ನಿರ್ಗುಣ ಜ್ಞಾನ ಉದ್ಧವಾ ।।೩೨೩।। ಸತ್ತ್ವಾಚೇನಿ ನಿಜ ಉಲ್ಹಾಸೇ । ಸರ್ವೇಂದ್ರಿಯೀ ಜ್ಞಾನ ಪ್ರಕಾಶೇ । ತೇ ಜ್ಞಾನಚಿ ಮಾನೀ ವಾಯವಸೇ । ಮೀ ಜ್ಞಾನರೂಪೇ ಅಸೇ ಅನಾದೀ ।।೩೨೪।। ಸಿಂಧುಜಳೇ ಸರಿತಾ ವಾಹತೀ । ತ್ಯಾ ಆಲಿಯಾ ಸಿಂಧೂಪ್ರತೀ । ತೇಣೇ ಉಲ್ಹಾಸೇನಾ ಅಪಾಂಪತೀ । ತೇವೀ ಜ್ಞಾನಸ್ಫೂರ್ತೀ ಶ್ಲಾಘೇನಾ ।।೩೨೫।। ರಜೋಗುಣೇ ಆಲಿಯಾ ಸಕಾಮ । ತ್ಯಾಸೀ ಕ್ಷೋಭೂ ನ ಶಕೇ ಕಾಮ । ಮ್ಹಣೇ ಮಾರ್ಝೇನಿ ಚಾಲೇ ಕಾಮ್ಯ ಕರ್ಮ । ಶೇಖೀ ಮೀ ನಿಷ್ಕಾಮ ನಿಜಾಂಗೇ ।।೩೨೬।। ಹೋತಾ ಕಾಮ್ಯ ಕರ್ಮಾಚಾ ಸೋಹಳಾ । ಜೇವೀ ಸೂರ್ಯಾ ನ ಬಾಧೀ ಉನ್ಹಾಳಾ । ತೇವೀ ಕಾಮ್ಯ ಕರ್ಮೀ ಮೀ ಜಿವ್ಹಾಳಾ । ಮಾರ್ಝೇನಿ ಸೋಜ್ವಳಾ ಕಾಮ ಸವೇಗ ।।೩೨೭।।

ಪರಮಾತ್ಮನು ದೇಹದಲ್ಲಿದ್ದರೂ ಕೂಡ ದೇಹಾತೀತನಾಗಿರುವನು. ಆತನು ಸರ್ವಭೂತಗಳಲ್ಲಿನ ಭೂತಾತ್ಮನಾಗಿರುವನು. ಸರ್ವ ಭೂತಗಳಲ್ಲಿ ಒಳ ಹೊರಗೆ ವ್ಯಾಪಿಸಿಕೊಂಡಿರುವನು. ಹೀಗಿರುವ ಯಾವ ಜ್ಞಾನವು ಅದು ನಿಜವಾಗಿಯೂ ಸಾತ್ವಿಕವಾಗಿರುವುದು ।।೩೧೫।। ಭಿನ್ನ ಜಾತಿಗಳು, ವಿವಿಧ ಆಕಾರಗಳು, ಅನೇಕ ತರಹದ ನಾಮಗಳು, ವಿಭಿನ್ನ ಕ್ರಿಯೆಗಳು, ಈ ಎಲ್ಲದರಲ್ಲಿಯೂ ಬ್ರಹ್ಮವು ಅಭಿನ್ನ ಸ್ವರೂಪವಾಗಿರುವುದೆಂದು ತಿಳಿದುಕೊಳ್ಳುವುದು ಸಾತ್ವಿಕ ಜ್ಞಾನವಾಗಿರುವುದು ।।೩೧೬।। ವೇದಶಾಸ್ತ್ರಗಳ ಅಭ್ಯಾಸವನ್ನು ಮಾಡಿ ಆತ್ಮಜ್ಞಾನದ ಚಿಂತನೆಯನ್ನು ಮಾಡುತ್ತಿರಲು ಆಗ ವಿಕಲ್ಪದಿಂದ ತನ್ನ ಮನದಲ್ಲಿ ಅನುಮಾನ ಹುಟ್ಟುವಿಕೆಯು ರಾಜಸ ಜ್ಞಾನವಾಗಿರುವುದು ।।೩೧೭।। ವಾರ್ತಿಕದವರೆಗೆ ಅಧ್ಯಯನವನ್ನು ಮಾಡಿಯೂ ಕೂಡ ಹೃದಯದಲ್ಲಿ ಅದ್ವೈತವು ಸ್ಥಿರವಾಗುವುದಿಲ್ಲ. ತನ್ನದೇ ತರ್ಕದಿಂದ ವಿಕಲ್ಪಗಳನ್ನು ಹುಟ್ಟಿಸುತ್ತಿರುವನು. ಈ ಜ್ಞಾನವು ನಿಜವಾಗಿಯೂ ರಾಜಸವಾಗಿರುವುದು ।।೩೧೮।। ವೇದಶಾಸ್ತ್ರಗಳ ಶ್ರವಣ ಮಾಡಿಯೂ ಕೂಡ ಶಿಶ್ನೋದರಪರಾಯಣನಾಗುವಿಕೆ, ಇಂದ್ರಿಯಗಳ ತೃಪ್ತಿಯತ್ತ ಲಕ್ಷವನ್ನು ಕೊಡುವಿಕೆ ಇದು ನಿಜವಾಗಿಯೂ ರಾಜಸ ಗುಣದ ಲಕ್ಷಣವಾಗಿರುವುದು ।।೩೧೯।। ಮನದಲ್ಲಿ ಒಂದು ದೃಢವಾದ ನಿಶ್ಚಯವನ್ನಿಡದೇ ಕ್ಷಣ ಕ್ಷಣಕ್ಕೂ ಚಿತ್ತದಲ್ಲಿ ನಾನಾವಿಧ ವಿಕಲ್ಪಗಳು ನಿರ್ಮಾಣವಾಗುವಿಕೆ ಇದು ರಾಜಸ ಜ್ಞಾನವೃತ್ತಿಯಾಗಿರುವುದು. ಈಗ ತಮೋಗುಣದ ಪ್ರಕಾರ ಕೇಳು ।।೩೨೦।। ಜ್ಞಾನದ ಸರ್ವಸ್ಫೂರ್ತಿಯನ್ನು, ಮಹಾಮೋಹದಿಂದ ನುಂಗಿ ಬಿಡುವನು. ನಾನು ಜಡ, ಅಂಧನಾಗಿರುವೆ ಎಂಬುದನ್ನು ನಿಜವೆಂದೇ ಭಾವಿಸುವನು. ಕ್ಷಣಭಂಗುರ ಪದಾರ್ಥಗಳಲ್ಲಿ ಅತ್ಯಂತ ಆಸಕ್ತಿಯನ್ನಿಡುವನು. ಹೀಗಿರುವ ಈತನ ಜ್ಞಾನವು ತಾಮಸವಾಗಿರುವುದು ।।೩೨೧।। ಆಹಾರ, ನಿದ್ರಾ, ಭಯ, ಮೈಥುನ ಈ ವಿಷಯಗಳ ಕೇವಲ ಪಶುತುಲ್ಯವಾಗಿರುವ ಯಾವ ಜ್ಞಾನವು ಅದು ನಿಜವಾಗಿಯೂ ತಾಮಸವಾಗಿರುವುದು. ಈಗ ನಿರ್ಗುಣದ ವಿಭಾಗವನ್ನು ಕೇಳು ।।೩೨೨।। ಹೇ ಭಕ್ತಶ್ರೇಷ್ಠ ಉದ್ಧವಾ, ಕಾರ್ಯ, ಕರ್ತಾ, ಕಾರಣ ಈ ತ್ರಿಗುಣಗಳ ತ್ರಿಪುಟಿಯನ್ನು ಶೂನ್ಯವನ್ನಾಗಿ ಮಾಡಿದಾಗ ಯಾವ ಚೈತನ್ಯರೂಪ ಉಳಿದುಕೊಳ್ಳುವುದೋ, ಅದು ನಿರ್ಗುಣ ಜ್ಞಾನವಾಗಿರುವುದು ।।೩೨೩।। ಸತ್ವದ ಉಲ್ಹಾಸದಿಂದ ಸರ್ವ ಇಂದ್ರಿಯಗಳಲ್ಲಿ ಯಾವ ಜ್ಞಾನವು ಪ್ರಕಟವಾಗುತ್ತಿರುವುದೋ, ಆ ಜ್ಞಾನವು ವ್ಯರ್ಥವಾಗಿರುವುದು. ಕಾರಣ ನಾನು ಜ್ಞಾನರೂಪದಿಂದ ಅನಾದಿಯಾಗಿರುವೆನು ।।೩೨೪।। ಸಮುದ್ರದ ನೀರಿನಿಂದಲೇ ರೂಪಾಂತರವಾಗಿ ನದಿಯು ಹರಿಯುತ್ತಿರುವುದು. ಈ ನದಿಯು ಸಮುದ್ರಕ್ಕೆ ಬಂದು ಕೂಡುವುದು. ಆಗ ಸಮುದ್ರಕ್ಕೆ ಇದರಿಂದ ಯಾವ ವಿಶೇಷ ಉಲ್ಹಾಸ ಉಂಟಾಗುವುದಿಲ್ಲ. ಅದರಂತೆ ಜ್ಞಾನೀ ಪುರುಷರು ಜ್ಞಾನಸ್ಫೂರ್ತಿಗೆ ವಿಶೇಷವಾಗಿ ಶ್ಲಾಘಿಸಲಾರರು ।।೩೨೫।। ರಜೋಗುಣದಿಂದ ಆತನ ಮನಸ್ಸಿನಲ್ಲಿ ಯಾವುದಾದರೂ ಇಚ್ಛೆಯು ನಿರ್ಮಾಣವಾಗಲು ಇದರಿಂದ ಆತನು ಎಂದಿಗೂ ಕ್ಷುಬ್ಧನಾಗಲಾರನು. ಆತನು ಹೀಗೆ ಹೇಳುವನು ; ನನ್ನಿಂದ ಕಾಮ್ಯ ಕರ್ಮಗಳು ಆಗುತ್ತಿದ್ದರೂ ಕೂಡ ನಾನು ಮಾತ್ರ ನಿಜವಾಗಿಯೂ ನಿಷ್ಕಾಮನೇ ಆಗಿರುವೆನು ।।೩೨೬।। ಯಾವ ಪ್ರಕಾರವಾಗಿ ಸೂರ್ಯನಿಗೆ ಬೇಸಿಗೆಯ ತಾಪವು ಎಂದಿಗೂ ಬಾಧಿಸಲಾರದೋ, ಅದೇ ಪ್ರಕಾರವಾಗಿ ಕಾಮ್ಯ ಕರ್ಮದ ವಿಧಿಗಳು ಆಗುತ್ತಿದ್ದರೂ ಕೂಡ ಆ ಕಾಮ್ಯ ಕರ್ಮಗಳಲ್ಲಿ ನನ್ನ ಯಾವ ಸಂಬಂಧವಿಲ್ಲ. ಆದರೆ ನನ್ನಿಂದ ಕಾಮ್ಯವು ಸವೇಗ ಮತ್ತು ಪ್ರಕಾಶಮಾನವಾಗುವುದು ।।೩೨೭।।

ತಮೋಗುಣಾಚ್ಯಾ ಝಡಾಡಾ । ಪಡಿಲಾ ಮಹಾಮೋಹಾಚಾ ವೇಢಾ । ನ ಕರಿತಾ ಢ್ಲೋಢಾಚಾ ನಿರ್ಝಾಡಾ । ಮೋಹನಿರ್ಣಯ ಗಾಢಾ ಆಪಣ ಪೈ ಜಾಣೇ ।೩೨೮॥ ಸೂರ್ಯೋ ನ ದಿಸೇ ಜಿಕಡೇ । ಅಂಧಾರೂ ವ್ಯಾಪೀ ತಿಕಡೇ । ತೇವೀ ಸ್ವರೂಪನಿಷ್ಠೇಪುಢೇ । ನ ಬಾಧೀ ಸಾಂಕಡೇ ಮೋಹಾಚೇ ।೩೨೯॥ ಅಂಗೀ ಆದಳತಾ ತಿನ್ಹೀ ಗುಣ । ಜೋ ಗಜಬಜೇನಾ ಆಪಣ । ತೇ ನಿಜನಿಷ್ಠಾ ನಿಜನಿರ್ಗುಣ । ಉದ್ಧವಾ ಜಾಣ ನಿಶ್ಚಿತ ।೩೩೦॥ ಅಜ್ಞಾನಾಚ್ಯಾ ಅವಸರೀ । ಜ್ಞಾನಾಚೀ ಚಾಡ ನ ಧರೀ । ಪ್ರವರ್ತತಾ ಕಾಮಾಚಾರೀ । ನಿಷ್ಕಾಮಾಚಾ ನ ಕರೀ ಪಾಂಗಡಾ ।೩೩೧॥ ಆದಳತಾ ಮೋಹಾಚೀ ಝುಟೇ । ಜ್ಯಾಚಾ ಬೋಧ ಕದಾ ನ ಪಾಲಟೇ । ತ್ರಿಗುಣೀ ನಿರ್ಗುಣತ್ವೇ ರಾಹಾಟೇ । ಮಾಝಿಯಾ ನಿಷ್ಠೇ ಮದ್ಭಕ್ತ ।೩೩೨॥ ತ್ರಿಗುಣಾಂಚಾ ತ್ರಿವಿಧ ವಾಸ । ನಿರ್ಗುಣ ನಿಜರಹಿವಾಸ । ಯೇಚಿ ಅರ್ಥೀ ಹೃಷೀಕೇಶ । ವಿಶದ ವಿಲಾಸ ಸಾಂಗತ ।೩೩೩॥

ವನಂ ತು ಸಾತ್ತ್ವಿಕೋ ವಾಸೋ ಗ್ರಾಮೋ ರಾಜಸ ಉಚ್ಯತೇ । ತಾಮಸಂ ದ್ಯೂತಸದನಂ ಮನ್ನಿಕೇತಂ ತು ನಿರ್ಗುಣಮ್ ।೨೫॥

ಅರ್ಥ:- ವನದಲ್ಲಿ ಇರುವಿಕೆಯು ಸಾತ್ತ್ವಿಕ ನಿವಾಸವಾಗಿರುವುದು. ಪಟ್ಟಣದಲ್ಲಿರುವುದು ರಾಜಸವಾಗಿರುವುದು. ಜೂಜು ಆಡುವ ಸ್ಥಾನದಲ್ಲಿರುವುದು ತಾಮಸಿಯಾಗಿರುವುದು. ಮಂದಿರದಲ್ಲಿರುವಿಕೆಯು ನಿರ್ಗುಣ ನಿವಾಸವಾಗಿರುವುದು.

ಪವಿತ್ರ ಆಣಿ ತೀರ್ಥಭೂತ । ವಿಜನ ಮನ ಏಕಾಂತ । ಐಶಿಯೇ ವಸ್ತೀ ಸುಖಾವೇ ಚಿತ್ತ । ತೋ ವಾಸ ನಿಶ್ಚಿತ ಸಾತ್ತ್ವಿಕ ।೩೩೪॥ ವಸ್ತೀ ವ್ಯವಹಾರೀ ವ್ಯಾಪಾರೀ । ಕಾ ಸದಾ ಸನ್ಮಾನೇ ರಾಜದ್ವಾರೀ । ವಿವಾಹಮಂಡಪಾಮಾಝಾರೀ । ಜ್ಯಾಸೀ ಪ್ರೀತಿ ಭಾರೀ ವಸ್ತಿಸೀ ।೩೩೫॥ ಜ್ಯಾಸೀ ಆವಡೇ ಧನಸಂಪದಾ । ನಿಕಟವಾಸೇ ವಸತೀ ಪ್ರಮದಾ । ಜೋ ನಗರೀ ಗ್ರಾಮೀ ವಸೇ ಸದಾ । ಹೇ ವಸ್ತೀ ಸಂಪದಾ ರಾಜಸ ।೩೩೬॥ ಜೇಥ ಸನ್ಮಾನ ವಾಂಛೀ ಚಿತ್ತ । ಸದಾ ಕ್ಷೋಭೇ ವಿಷಯಾಸಕ್ತ । ಐಸ ಐಸೀ ವಸ್ತೀ ಜೇಥ । ತೇ ಜಾಣ ನಿಶ್ಚಿತ ರಾಜಸ ।೩೩೭॥ ಜೇಥ ಸಾಧುನಿಂದಾ ಜೋಡೇ । ಜೇಥ ಗುಣದೋಷೀ ದೃಷ್ಟಿ ವಾಢೇ । ಐಶಿಯಾ ಠಾಯೀ ವಸ್ತೀ ಆವಡೇ । ತೇ ತಾಮಸಾಚೇ ಗಾಢೇ ನಿವಾಸಸ್ಥಾನ ।೩೩೮॥ ಜೇಥ ಕಲಹಾಚೇ ಕಾರಣ । ಜೇಥ ಅವಿವೇಕೀ ಹೋಯ ಮನ । ವೇಶ್ಯಾ ದ್ಯೂತ ಮದ್ಯಸದನ । ಹೇ ನಿವಾಸಸ್ಥಾನ ತಾಮಸ ।೩೩೯॥

ತಮೋಗುಣವು ವೃದ್ಧಿಯಾಯಿತೆಂದರೆ ಮಹಾಮೋಹವು ಮುತ್ತಿಕೊಳ್ಳುವುದು. ಆದರೆ ಆ ಮೋಹಕ್ಕೆ ಝಾಡಿಸಿ ಒಗೆಯದೇ ಮೋಹದ ನಿಜವಾದ ಪ್ರತ್ಯೇಕ ಸ್ವರೂಪವನ್ನು ಆತನು ಪಕ್ಕಾ ತಿಳಿದುಕೊಂಡಿರುವನು ।೩೨೮॥ ಸೂರ್ಯನು ಎಲ್ಲಿ ಕಾಣಿಸಲಾರನೋ ಅಲ್ಲಿ ಕತ್ತಲವು ವ್ಯಾಪಿಸಿಕೊಂಡಿರುವುದು. ಅದರಂತೆ ಆತ್ಮಸ್ವರೂಪದ ನಿಷ್ಠೆಯ ಎದುರಿನಲ್ಲಿ ಮಹಾಮೋಹದ ಸಂಕಟವು ಎಂದಿಗೂ ಬಂದು ಒದಗಲಾರದು ।೩೨೯॥ ಹೇ ಭಕ್ತರಾಜ ಉದ್ಧವಾ, ಈ ಪ್ರಕಾರವಾಗಿ ಸತ್ವ, ರಜ ಮತ್ತು ತಮ ಈ ಮೂರೂ ಗುಣಗಳು ಮೈಮೇಲೆ ಬಂದು ಬಿದ್ದರೂ ಕೂಡ ಆತನು ಸ್ವಲ್ಪವೂ ಕೂಡ ಹೊಯ್ದಾಡಲಾರನು. ಆತನೇ ನಿಜವಾದ ಆತ್ಮನಿಷ್ಠ ನಿರ್ಗುಣವೃತ್ತಿಯವನಾಗಿರುವನು. ಇದನ್ನು ನೀನು ಲಕ್ಷದಲ್ಲಿಡು ।೩೩೦॥ ಅಜ್ಞಾನದ ಪ್ರಸಂಗದಲ್ಲಿ ಆತನು ಜ್ಞಾನದ ಇಚ್ಛೆಯನ್ನು ಮಾಡಲಾರನು. ವಿಷಯಗಳಲ್ಲಿ ಪ್ರವೃತ್ತನಾಗಿರಲು ಆಗ ನಿಷ್ಕಾಮದ ಅಪೇಕ್ಷೆಯನ್ನು ಮಾಡಲಾರನು ।೩೩೧॥ ಮೋಹದ ಸಂಕಟಗಳು ಆತನ ಮೇಲೆ ಬಂದು ಬಿದ್ದರೂ ಕೂಡ ಆತನ ಜ್ಞಾನದಲ್ಲಿ ಯಾವುದೂ ಬದಲಾಗುವುದಿಲ್ಲ. ಹೀಗೆ ನನ್ನ ಭಕ್ತನಿರುವನು. ಆತನು ನನ್ನ ಮೂರು ಗುಣಗಳಲ್ಲಿ ನಿರ್ಗುಣನಾಗಿರುವನು ।೩೩೨॥ ಮೂರು ಗುಣಗಳಿಂದ ಮೂರು ಪ್ರಕಾರವಾಗಿರುವಿಕೆ ಮತ್ತು ನಿರ್ಗುಣತನದಿಂದ ಇರುವಿಕೆ ಇವುಗಳ ಪ್ರಕಾರವನ್ನು ಹೃಷೀಕೇಶೀ ಶ್ರೀಕೃಷ್ಣನು ವರ್ಣನೆ ಮಾಡುತ್ತ ಹೇಳುತ್ತಿರುವನು ।೩೩೩॥

ಪವಿತ್ರವಾಗಿರುವ ಪುಣ್ಯತೀರ್ಥಗಳ ಸ್ಥಾನ, ಜನದಟ್ಟಣೆ ಇಲ್ಲದ ಏಕಾಂತ ವನಸ್ಥಾನ, ಇಂತಹ ಸ್ಥಾನಗಳಲ್ಲಿ ಇರುವುದರಿಂದ ಮನವು ಪ್ರಸನ್ನವಾಗಿರುವುದು. ಇವರ ಈ ಇರುವಿಕೆಯು ನಿಜವಾಗಿಯೂ ಸಾತ್ವಿಕವಾಗಿರುವುದು ।೩೩೪॥ ವ್ಯವಹಾರಗಳ ಅಥವಾ ವ್ಯಾಪಾರ ಬಜಾರ ಸ್ಥಳದಲ್ಲಿ ವಾಸ್ತವ್ಯಹೂಡಲು ದೊಡ್ಡ ಮಾನಸನ್ಮಾನಗಳಿಂದ ರಾಜದರ್ಬಾರದಲ್ಲಿ ಇರಲು ಅಥವಾ ಮದುವೆಯ ಸಮಾರಂಭದ ಮಂಟಪದಲ್ಲಿ ವಸತಿ ಮಾಡಲು ಯಾರಿಗೆ ಅತಿಶಯವಾಗಿ ಪ್ರೀತಿವಿರುವುದೋ ।೩೩೫॥ ಯಾರಿಗೆ ದ್ರವ್ಯ, ಸಂಪತ್ತು ಹಾಗೂ ಸ್ತ್ರೀಯರು, ಇವರ ಸಹವಾಸದಲ್ಲಿ ಅತಿಶಯವಾಗಿ ಉಲ್ಹಾಸವಾಗುವುದೋ, ಯಾರು ನಗರ, ಪಟ್ಟಣಗಳಲ್ಲಿ ಯಾವಾಗಲೂ ಇರುವರೋ ಅವರು ರಾಜಸರು ಎಂದು ತಿಳಿಯಬೇಕು ।೩೩೬॥ ಯಾವ ಸ್ಥಳದಲ್ಲಿ ಮನಸ್ಸು ಯಾವ ಮಾನಸನ್ಮಾನಗಳ ಅಪೇಕ್ಷೆಯನ್ನು ಮಾಡುವುದೋ, ವಿಷಯಗಳ ಆಸಕ್ತಿಯಿಂದ ಸತತವಾಗಿ ಕ್ಷೋಭೆಪಡುತ್ತಿರುವುದೋ, ಆ ಸ್ಥಳವು ನಿಶ್ಚಯಪೂರ್ವಕವಾಗಿ ರಾಜಸವೆಂದು ತಿಳಿದುಕೊಳ್ಳಬೇಕು ।೩೩೭॥ ಯಾವ ಸ್ಥಳದಲ್ಲಿ ಸಾಧು ಸಂತರ ನಿಂದೆಯಾಗುತ್ತಿರುವುದೋ, ದೃಷ್ಟಿಯಲ್ಲಿ ಯಾವಾಗಲೂ ಗುಣದೋಷವನ್ನೇ ತುಂಬಿಕೊಂಡಿರುವುದೋ, ಇಂತಹ ಸ್ಥಳದಲ್ಲಿ ಇರಲು ಯಾರಿಗೆ ಪ್ರಿಯವಾಗುವುದೋ, ಅದು ತಾಮಸ ಜನರ ನಿವಾಸಸ್ಥಾನವೆಂದು ತಿಳಿಯಬೇಕು ।೩೩೮॥ ಎಲ್ಲಿ ಮನವು ಅವಿವೇಕಿಯಾಗಿಬಿಡುವುದೋ, ಎಲ್ಲಿ ಸಂಘರ್ಷಕ್ಕೆ ಕಾರಣವಾಗುವುದೋ, ಎಲ್ಲಿ ವೇಶ್ಯೆಯರು, ಜೂಜಾಟ, ಮದ್ಯದ ಅಂಗಡಿಗಳಿರುವುವೋ, ಇವು ತಾಮಸ ಜನರು ಇರುವ ಸ್ಥಳವಾಗಿರುವುವು ।೩೩೯॥

ದೇವಾಲಯೀ ಘವಘವಿತೀ । ದೇಖೋನಿ ಮಾಝೀ ನಿಜಮೂರ್ತೀ । ಸಾಚಾರ ಸುಖಾವೇ ಚಿತ್ತವೃತ್ತೀ । ತೇ ನಿರ್ಗುಣ ವಸ್ತೀ ಉದ್ಧವಾ ।೩೪೦॥ ಅಭೇದಭಕ್ತಾಂಚೇ ನಿಜಮಂದಿರ । ತೇ ಮಜ ನಿರ್ಗುಣಾಚೇ ನಿಜಘರ । ತೇಥ ಸುಖತ್ವೇ ಜ್ಯಾಚೀ ವೃತ್ತಿ ಸ್ಥಿರ । ತೇ ವಸ್ತೀ ಸಾಚಾರ ನಿರ್ಗುಣ ।೩೪೧॥ ನಿರ್ಗುಣಾಸೀ ಘರ ಠಾವೋ । ಹೇ ಬೋಲಣೇ ಮ್ಹಣಸೀ ವಾವೋ । ಜೇಥ ಉಪಜೇ ಬ್ರಹ್ಮಸದ್ಭಾವೋ । ತೇ ವಸ್ತೀ ಪಹಾ ಹೋ ನಿರ್ಗುಣ ।೩೪೨॥ ವಿಷಯಾತೀತ ನಿಜಸ್ಥಿತೀ । ಸುಖೇ ಸುಖರೂಪ ರಾಹೇ ವೃತ್ತೀ । ತೇ ನಿರ್ಗುಣಾಚೀ ನಿಜವಸ್ತೀ । ಜಾಣ ನಿಶ್ಚಿತೀ ಉದ್ಧವಾ ।೩೪೩॥ ಸಾಂಡೂನಿ ಆಕಾರಾಚೇ ಜ್ಞಾನ । ನಿರಾಕಾರೀ ಸುಖಸಂಪನ್ನ । ವೃತ್ತಿ ಸ್ಥಿರಾವೇ ಪರಿಪೂರ್ಣ । ತೇ ವಸ್ತೀ ನಿರ್ಗುಣ ಜನೀ ವಿಜನೀ ।೩೪೪॥ ತ್ರಿಗುಣಸಂಗೇ ತ್ರಿವಿಧ ಕರ್ತಾ । ನಿರ್ಗುಣಲಕ್ಷಣೇ ಲಕ್ಷಿಜೇ ಚೌಥಾ । ಚತುರ್ವಿಧ ಕರ್ತ್ಯಾಚೀ ವ್ಯವಸ್ಥಾ । ಐಕ ಆತಾ ಸಾಂಗೇನ ।೩೪೫॥

ಸಾತ್ತ್ವಿಕಃ ಕಾರಕೋಽಸಂಗೀ ರಾಗಾಂಧೋ ರಾಜಸಃ ಸ್ಮೃತಃ । ತಾಮಸಃ ಸ್ಮೃತಿವಿಭ್ರಷ್ಟೋ ನಿರ್ಗುಣೋ ಮದಪಾಶ್ರಯಃ ।೨೬॥

ಅರ್ಥ:- ಅನಾಸಕ್ತ ಭಾವದಿಂದ ಕರ್ಮಗಳನ್ನು ಮಾಡುವವನು ಸಾತ್ವಿಕನಾಗಿರುವನು. ಅತಿಶಯವಾಗಿ ಆಶೆಯನ್ನಿಟ್ಟುಕೊಂಡು ಕರ್ಮಗಳನ್ನು ಮಾಡುವವನು ರಾಜಸನಾಗಿರುವನು. ಅನುಸಂಧಾನರಹಿತ ಕರ್ತನು ತಾಮಸನಾಗಿರುವನು. ನನಗೆ ಶರಣಾಗಿರುವ ಕರ್ತನು ನಿರಹಂಕಾರದಿಂದ ನಿರ್ಗುಣನಾಗಿರುವನು.

ಕಾಂಟೇನಿ ಕಾಂಟಾ ಫೇಡಿತಾ । ಜೇವೀ ನಿವಾರೇ ನಿಜವ್ಯಥಾ । ತೇವೀ ಸಂಗೇ ಸಂಗಾತೇ ಛೇದಿತಾ । ಸಾತ್ತ್ವಿಕ ಕರ್ತಾ ಅಸಂಗೀ ।೩೪೬॥ ಸದ್ಗುರುಚರಣಸತ್ಸಂಗೇ । ಸಕಳ ಸಂಗ ಛೇದೀ ವಿರಾಗೇ । ಸಾತ್ತ್ವಿಕ ಕರ್ತಾ ನಿಜಾಂಗೇ । ವಿಷಯಸಂಗೇ ಅಸಂಗೀ ।೩೪೭॥ ಫಲಾಭಿಲಾಷೇಚ್ಯಾ ಚಿತ್ತೀ ಗಾಂಠೀ । ತೇಣೇ ಅಂಧ ಝಾಲೀ ವಿವೇಕದೃಷ್ಟೀ । ರಾಜಸ ಕರ್ತಾ ಫಳಾಶೇಸಾಠೀ । ಅತಿದುಃಖ ಕೋಟೀ ಸ್ವಯೇ ಸೋಶೀ ।೩೪೮॥ ನಿಃಶೇಷ ಹಾರಪೇ ವಿವೇಕಜ್ಞಾನ । ಸ್ಮೃತಿ ಸೈರಾ ವಳಘೇ ರಾನ । ನಾಠವೇ ಕಾರ್ಯ ಕಾರಣ । ಐಸಾ ಕರ್ತಾ ಜಾಣ ತಾಮಸ ।೩೪೯॥ ಅನನ್ಯ ಭಾವೇ ಹರೀಸೀ ಶರಣ । ಕರ್ಮಚಾಳಕ ಶ್ರೀನಾರಾಯಣ । ಕದಾ ನ ಧರೀ ಕರ್ಮಾಭಿಮಾನ । ಹಾ ಕರ್ತಾ ನಿರ್ಗುಣ ನಿಶ್ಚಯೇ ।೩೫೦॥ ತ್ರಿಗುಣಾಂಚೀ ಶ್ರದ್ಧಾ ತ್ರಿವಿಧ । ನಿರ್ಗುಣಾಚೀ ಶ್ರದ್ಧಾ ಶುದ್ಧ । ಯೇಚ ಅರ್ಥೀಚೇ ವಿಶದ । ಸ್ವಯೇ ಗೋವಿಂದ ಸಾಂಗತ ।೩೫೧॥

ಹೇ ಉದ್ಧವಾ, ದೇವಾಲಯದಲ್ಲಿ ನನ್ನ ಸುಂದರ ಪ್ರಸನ್ನಮೂರ್ತಿಯನ್ನು ಕಂಡು ಮನವು ಪ್ರಸನ್ನವಾಗುತ್ತಿರುವುದು. ಇದು ನಿರ್ಗುಣ ವಸತಿ ಎಂದು ತಿಳಿಯಬೇಕು ।೩೪೦॥ ಅದ್ವೈತ ಭಾವದಿಂದ ನನ್ನ ಭಕ್ತಿಯನ್ನು ಮಾಡುವ ನನ್ನ ಭಕ್ತರ ಯಾವ ಹೃದಯಮಂದಿರವು, ಇದೇ ನನ್ನ ನಿರ್ಗುಣದ ತವರುಮನೆಯಾಗಿರುವುದು. ಅಲ್ಲಿ ಯಾರ ಚಿತ್ತವು ಸುಖಸಮಾಧಾನಗಳಿಂದ ಸ್ಥಿರವಾದರೆ ಅದು ನಿಜವಾದ ನಿರ್ಗುಣ ವಸತಿ ಎಂದು ತಿಳಿಯಬೇಕು ।೩೪೧॥ ಆದರೆ ನಿರ್ಗುಣಕ್ಕೆ ಮನೆ, ಮಠ ಇದೆ ಎಂದು ಹೀಗೆ ಹೇಳುವುದೇ ವ್ಯರ್ಥವಾಗಿರುವುದು ಎಂದು ಒಂದು ವೇಳೆ ನೀನು ಕೇಳಬಹುದು. ಅದಕ್ಕಾಗಿ ಎಲ್ಲಿ ಬ್ರಹ್ಮಭಾವವು ಉತ್ಪನ್ನವಾಗುವುದೋ, ಅದೇ ನಿರ್ಗುಣದ ವಸತಿಯಾಗಿರುವುದು ।೩೪೨॥ ಹೇ ಉದ್ಧವಾ, ವಿಷಯಗಳ ಆಚೆಕಡೆ ಇರುವ ಯಾವ ಆತ್ಮಸ್ಥಿತಿಯು, ಅದರಲ್ಲಿ ವೃತ್ತಿಯು ಏಕರೂಪವಾಗಿ ಇರುವಿಕೆಯು ಇದು ನಿಜವಾಗಿ ನಿರ್ಗುಣದ ವಾಸ್ತವ್ಯದ ಸ್ಥಾನವಾಗಿರುವುದು ।೩೪೩॥ ಆಕಾರಗಳ ಆಭಾಸವನ್ನು ಬಿಟ್ಟುಕೊಟ್ಟು ನಿರಾಕಾರದಲ್ಲಿ ಸುಖಸಂಪನ್ನನಾಗುವುದು. ಅದರಲ್ಲಿ ವೃತ್ತಿಯನ್ನು ಪರಿಪೂರ್ಣವಾಗಿ ಸ್ಥಿರವಾಗಿಡುವುದು. ಇದುವೇ ಜನರಲ್ಲಿನ ಅಥವಾ ಮನದಲ್ಲಿನ ನಿರ್ಗುಣದ ನಿವಾಸ ಸ್ಥಾನವಾಗಿರುವುದು ।೩೪೪॥ ಮೂರು ಗುಣಗಳ ಸಂಬಂಧದಿಂದ ಕರ್ತುಗಳೂ ಕೂಡ ಮೂರು ಪ್ರಕಾರಗಳಾಗುವುವು ಮತ್ತು ನಿರ್ಗುಣ ಲಕ್ಷಣದ ಕರ್ತನು ನಾಲ್ಕನೆಯವನಾಗಿರುವನು. ಈ ನಾಲ್ಕು ಪ್ರಕಾರಗಳ ಕರ್ತುಗಳವರ ಸ್ಥಿತಿಗಳನ್ನು ಹೇಳುವೆನು, ಕೇಳು ।೩೪೫॥ ಒಬ್ಬನು ಮುಳ್ಳಿನಿಂದ ಮುಳ್ಳನ್ನು ತೆಗೆದು ಹೇಗೆ ತನ್ನ ವ್ಯಥೆಯನ್ನು ದೂರ ಮಾಡುವನೋ ಹಾಗೆಯೇ ಸಾತ್ವಿಕ ಕರ್ತನು ಸಂಗದಿಂದ ಸಂಗವನ್ನು ತ್ಯಜಿಸುತ್ತ ತಾನು ಅಲಿಪ್ತನಾಗುವನು ।೩೪೬॥ ಸಾತ್ವಿಕ ಕರ್ತನಾದವನು ಸದ್ಗುರುಗಳ ಸಂಗತಿಯಿಂದ ವಿರಕ್ತಿಯನ್ನು ಪ್ರಾಪ್ತಮಾಡಿಕೊಳ್ಳುವನು. ಆದ್ದರಿಂದ ಆತನ ಸಂಗವು ಇಲ್ಲದಾಗುವುದು. ಆತನು ವಿಷಯಗಳ ಸಂಗತಿಯಲ್ಲಿದ್ದರೂ ಕೂಡ ನಿಃಸಂಗನಾಗಿರುವನು ।೩೪೭॥ ಮನದಲ್ಲಿ ಫಲಾಶೆಗಳ ಅನೇಕ ಗಂಟುಗಳಿರುವುವು. ಈ ಕಾರಣದಿಂದ ವಿವೇಕದೃಷ್ಟಿಯು ಕುರುಡಾಗುವುದು. ಈತನು ರಾಜಸ ಕರ್ತನಾಗಿರುವನು. ಇವನು ಫಲಾಶೆಗಳಿಂದ ದುಃಖದ ಅನೇಕ ರಾಶಿಯನ್ನು ಭೋಗಿಸುತ್ತಿರುವನು ।೩೪೮॥ ಯಾರ ವಿವೇಕ ಜ್ಞಾನವು ಇಲ್ಲದಾಗಿರುವುದೋ, ಅವನ ಸ್ಮೃತಿಯು ಮನಬಂದಂತೆ ಅರಣ್ಯದಲ್ಲಿ ತಿರುಗಾಡುತ್ತಿರುವುದು. ಕಾರ್ಯ ಯಾವುದು, ಕಾರಣ ಯಾವುದು ಎಂಬ ಇದರ ಸ್ಮರಣೆಯೇ ಆಗುವುದಿಲ್ಲ ಹೀಗೆ ತಾಮಸಕರ್ತನಾಗಿರುವನು. ಇದನ್ನು ಲಕ್ಷದಲ್ಲಿಡು ।೩೪೯॥ ಯಾವನು ಅನನ್ಯ ಭಾವದಿಂದ ಪ್ರಭು ಶ್ರೀಹರಿಗೆ ಶರಣುಹೋಗುವನೋ ಹಾಗೂ ಸರ್ವರ ಚಾಲಕನು ಶ್ರೀನಾರಾಯಣನು ಎಂದು ತಿಳಿದುಕೊಂಡು ಯಾವುದೇ ಕರ್ಮದ ಅಭಿಮಾನವನ್ನು ಹಿಡಿಯಲಾರನೋ, ಆತನು ನಿರ್ಗುಣಕರ್ತನಾಗಿರುವನು ।೩೫೦॥ ತ್ರಿಗುಣದ ಮೂರು ಪ್ರಕಾರಗಳ ಶ್ರದ್ಧೆಯನ್ನು ಮತ್ತು ನಿರ್ಗುಣದ ಶುದ್ಧ ಶ್ರದ್ಧೆಯ ವಿಷಯಗಳ ಸ್ಪಷ್ಟ ವಿವೇಚನೆಯನ್ನು ಈಗ ಸ್ವತಃ ಶ್ರೀಗೋವಿಂದನು ಹೇಳುತ್ತಿರುವನು ।೩೫೧॥

ಸಾತ್ತ್ವಿಕ್ಯಾಧ್ಯಾತ್ಮಿಕೀ ಶ್ರದ್ಧಾ ಕರ್ಮಶ್ರದ್ಧಾ ತು ರಾಜಸೀ । ತಾಮಸ್ಯಧರ್ಮೇ ಯಾ ಶ್ರದ್ಧಾ ಮತ್ಸೇವಾಯಾಂ ತು ನಿರ್ಗುಣಾ ।೨೭॥

ಅರ್ಥ:- ಆತ್ಮಜ್ಞಾನ ವಿಷಯಕ ಶ್ರದ್ಧೆಯು ಸಾತ್ವಿಕವು. ಕರ್ಮ ವಿಷಯಕ ಶ್ರದ್ಧೆಯು ರಾಜಸವು. ಯಾವ ಶ್ರದ್ಧೆಯು ಅಧರ್ಮದಿಂದ ಯುಕ್ತವಾಗಿರುವುದೋ ಅದು ತಾಮಸವು. ನನ್ನ ಸೇವೆಯಲ್ಲಿರುವ ಶ್ರದ್ಧೆಯು ಅದು ನಿರ್ಗುಣವು.

ದೇಹ ಇಂದ್ರಿಯ ಚೇತನಾ ಪ್ರಾಣ । ಯೇಣೇಸೀ ಸ್ಫುರೇ ಜೇ ಮೀಪಣ । ತೇಥ ವಿವೇಕ ಕರೂನಿಯಾ ಪೂರ್ಣ । ಆಪುಲೇ ಮೀಪಣ ಆಪಣ ಪಾಹೇ ।೩೫೨॥ ದೇಹ ನವ್ಹೇ ಮೀ ಜಡಮೂಢತ್ವೇ । ಇಂದ್ರಿಯ ನವ್ಹೇ ಮೀ ಏಕದೇಶಿತ್ವೇ । ಪ್ರಾಣ ನವ್ಹೇ ಮೀ ಚಪಳತ್ವೇ । ಮನ ಚಂಚಳತ್ವೇ ಕದಾ ಮೀ ನವ್ಹೇ ।೩೫೩॥ ಚಿತ್ತ ನವ್ಹೇ ಮೀ ಚಿಂತಕತ್ವೇ । ಬುದ್ಧಿ ನವ್ಹೇ ಮೀ ಬೋಧಕತ್ವೇ । "ಅಹಂ" ನವ್ಹೇ ಮೀ ಬಾಧಕತ್ವೇ । ಮೀ ತೋ ಯೇಥೇ ಅನಾದಿಸಿದ್ಧ ।೩೫೪॥ ಏವಂ ಮೀಪಣಾಚೇ ನಿಜಸಾರ । ವಿವಂಚೂ ಜಾಣೇ ಬುದ್ಧಿಚತುರ । ತೇ ಆಧ್ಯಾತ್ಮಶ್ರದ್ಧಾ ಉದಾರ । ಸಾತ್ವಿಕ ನರ ಸದಾ ವಾಹತೀ ।೩೫೫। ಜೇ ಜೇ ಮೀ ನವ್ಹೇ ಮ್ಹಣತ ಜಾಯೇ । ತೇ ಮೀ ದೇಖಿಲ್ಯಾ ಮೀಚಿ ಆಹೇ । ಮಾಝ್ಯಾ ಮೀಪಣಾಚೇ ವಂದಿಲ್ಯಾ ಪಾಯೇ । ಮೀಚಿ ಮೀ ಠಾಯೇ ಕೋಂದೋನಿ ।೩೫೬॥ ಹೇ ಅಧ್ಯಾತ್ಮಿಕೀ ಶುದ್ಧ ಶ್ರದ್ಧಾ । ಸಾತ್ತ್ವಿಕಾಪಾಶೀ ವಸೇ ಸದಾ । ಆತಾ ರಾಜಸಾಚೀ ಶ್ರದ್ಧಾ । ಐಕ ಪ್ರಬುದ್ಧಾ ಸಾಂಗೇನ ।೩೫೭॥ ಮೀ ಏಕ ಯೇಥೇ ವರ್ಣಾಶ್ರಮೀ । ಮೀ ಏಕ ಯೇಥೇ ಆಶ್ರಮಧರ್ಮೀ । ಮೀ ಏಕ ಯೇಥೇ ಕರ್ತಾ ಕರ್ಮೀ । ಹೇ ಮನೋಧರ್ಮೀ ದೃಢ ಮಾನೀ ।೩೫೮॥ ಯೇಣೇ ಭಾವಾರ್ಥೇ ಕರ್ಮತತ್ಪರೂ । ಕುಶಮೃತ್ತಿಕೇಚಾ ಅತ್ಯಾದರೂ । ಅತಿಶಯೇ ವಾಢವೀ ಶೌಚಾಚಾರೂ । ವಿಧಿನಿಷೇಧಾ ಥೋರೂ ಆವರ್ತ ಬೋವೇ ।೩೫೯॥ ದೋಷದೃಷ್ಟೀಚ್ಯಾ ರಂಗಣೇ । ಮಿರವತೀ ಗುಣದೋಷಾಂಚ್ಯಾ ಶ್ರೇಣೇ । ಪವಿತ್ರಪಣಾಚ್ಯಾ ಅಭಿಮಾನೀ । ಬ್ರಹ್ಮ್ಯಾಸೀ ನ ಮನೀ ಶುಚಿತ್ವೇ ।೩೬೦॥ ದೇಹಾಭಿಮಾನ ಘೇಊನಿ ಖಾಂದಾ । ಸತ್ಯ ಮಾನಣೇ ಕರ್ಮಬಾಧಾ । ತೇ ಹೇ ರಾಜಸಾಚೀ ಕರ್ಮಶ್ರದ್ಧಾ । ಜಾಣ ಪ್ರಬುದ್ಧಾ ಉದ್ಧವಾ ।೩೬೧॥ ಅಧಿಕ ಅವಿವೇಕ ವಾಢೇ । ಜೇಣೇ ಅಕರ್ಮ ಅಂಗೀ ಘಡೇ । ಅಧರ್ಮಾಚೀ ಜೋಡೀ ಜೋಡೇ । ಹೇ ಶ್ರದ್ಧಾ ಆವಡೇ ತಾಮಸೀ ।೩೬೨॥ ಜೇಥ ಅಪೇಯಾಚೇ ಪಾನ । ಸ್ವೇಚ್ಛಾ ಅಭಕ್ಷ್ಯಭಕ್ಷಣ । ಅಗಮ್ಯಾದಿ ಘಡೇ ಗಮನ । ಹೇ ಶ್ರದ್ಧಾ ಸಂಪೂರ್ಣ ತಾಮಸೀ ।೩೬೩॥

ದೇಹ, ಇಂದ್ರಿಯಗಳು, ಚೇತನಾ ಮತ್ತು ಪ್ರಾಣ ಇವುಗಳ ಯೋಗದಿಂದ ನಾನು ಎಂಬುವ ಯಾವ ಭಾಸವಾಗುವುದೋ, ಅದರ ಪೂರ್ಣವಾಗಿ ವಿಚಾರವನ್ನು ಮಾಡಿ ತನ್ನ ಅಹಂಕಾರವನ್ನು ತಾನೇ ಕಾಣುವನು ।೩೫೨॥ ಈತನು ಹೀಗೆ ಹೇಳುವನು; ಈ ದೇಹವು ಜಡ ಮೂಢವಾಗಿರುವುದರಿಂದ ದೇಹವು ನಾನಲ್ಲ. ಇಂದ್ರಿಯಗಳು ಏಕದೇಶೀಯವಾಗಿರುವುದರಿಂದ ಅವೂ ಕೂಡ ನಾನಲ್ಲ ।೩೫೩॥ ಚಿತ್ತಕ್ಕೆ ಚಿಂತನತ್ವವು ಇರುವುದರಿಂದ ಚಿತ್ತವು ನಾನಲ್ಲ. ಬುದ್ಧಿಗೆ ಬೋಧಕತ್ವವು ಇರುವುದರಿಂದ ಆ ಬುದ್ಧಿಯೂ ಕೂಡ ನಾನಲ್ಲ. ಅಹಂ ಇದು ಬಾಧಕವಾಗಿರುವುದರಿಂದ ಆ ಅಹಂಕಾರವು ನಾನಲ್ಲ. ಪ್ರಾಣವು ಚಪಲವಾಗಿರುವುದರಿಂದ ಆ ಪ್ರಾಣವೂ ಕೂಡ ನಾನಲ್ಲ. ಮನವು ಚಂಚಲವಾಗಿರುವುದರಿಂದ ಅದೂ ಕೂಡ ನಾನಲ್ಲ. ಅಂದಮೇಲೆ ನಾನು ಅನಾದಿಸಿದ್ಧ ಆತ್ಮತತ್ವನಾಗಿರುವೆನು ।೩೫೪॥ ಈ ಪ್ರಕಾರವಾಗಿ ಬುದ್ಧಿವಂತನಾದ ಚತುರನು ನಾನು ಎಂಬುವುದರಲ್ಲಿನ ಸಾರವು ಏನಿದೆ ಎಂಬುವುದನ್ನು ವಿಚಾರ ಮಾಡುವನು. ಇದುವೇ ಶ್ರೇಷ್ಠವಾಗಿರುವ ಆಧ್ಯಾತ್ಮಶ್ರದ್ಧೆಯಾಗಿರುವುದು. ಸಾತ್ವಿಕ ಜನರಲ್ಲಿ ಈ ಶ್ರದ್ಧೆಯು ಬಲಾಢ್ಯವಾಗಿರುವುದು ।೩೫೫॥ ಪುನಃ ಹೀಗೆ ವಿಚಾರಿಸುವನು ; ಯಾವ ಯಾವುದನ್ನು ನಾನಲ್ಲವೆಂದು ಹೇಳುತ್ತಿರುವೆನೋ ಅದೆಲ್ಲವೂ ತಿಳಿದು ನೋಡಿದರೆ ನಾನೇ ಆಗಿರುವೆನು. ಆದ್ದರಿಂದ ನನ್ನ ನಾನೆಂಬುವ ಕಾಲನ್ನು ಹಿಡಿದರೆ ಸರ್ವತ್ರವೂ ನಾನೇ ತುಂಬಿಕೊಂಡಿರುವೆನು ।೩೫೬॥ ಇದುವೇ ಶುದ್ಧವಾಗಿರುವ ಅಧ್ಯಾತ್ಮಶ್ರದ್ಧೆಯಾಗಿರುವುದು. ಇದು ಯಾವಾಗಲೂ ಸಾತ್ವಿಕ ಮನುಷ್ಯರಲ್ಲಿ ಇರುವುದು. ಹೇ ಬುದ್ಧಿಮಾನ ಉದ್ಧವನೇ, ಈಗ ರಾಜಸದ ಶ್ರದ್ಧೆಯು ಹೇಗೆ ಇರುವುದೆಂಬುವುದನ್ನು ಕೇಳು ।೩೫೭॥ ವರ್ಣಾಶ್ರಮ ಧರ್ಮದಿಂದ ಇರುವವನು ನಾನೊಬ್ಬನೇ ಆಗಿರುವೆನು. ಆಶ್ರಮ ಧರ್ಮದಿಂದ ಇರುವವನು ನಾನೊಬ್ಬನೇ ಆಗಿರುವೆನು. ಕರ್ಮಗಳನ್ನು ಮಾಡುವವನೂ ಕೂಡ ನಾನೇ ಆಗಿರುವೆನು. ಹೀಗೆ ದೃಢವಾದ ಮನೋಧಾರಣೆಯನ್ನು ಮಾಡುವವನಾಗಿರುವೆನು ।೩೫೮॥ ಇಂತಹ ಯಾವ ಭಾವನೆಯಿಂದ ಕರ್ಮದ ಆಡಂಬರವನ್ನು ಪ್ರದರ್ಶಿಸುವುದು, ದರ್ಭ, ಮೃತ್ತಿಕಾ ಇತ್ಯಾದಿ ಸಾಹಿತ್ಯಗಳನ್ನು ಅತಿ ಅಗತ್ಯವಾಗಿ ಸಂಗ್ರಹಿಸುವುದು, ಹೀಗಿರುವ ಯಾವ ಸಾಧಕನಿಗೆ ವಿಧಿನಿಷೇಧಗಳ ಚಕ್ರವು ಬಾಧಿಸುತ್ತಿರುವುದು ।೩೫೯॥ ಈತನು ದೋಷದೃಷ್ಟಿಯ ಅಂಗಳದಲ್ಲಿ ಗುಣದೋಷಗಳ ರಾಶಿಯನ್ನೇ ರಚಿಸುವನು. ಈತನು ಪವಿತ್ರತೆಯ ಅಭಿಮಾನದಿಂದ ಬ್ರಹ್ಮದೇವನಿಗೂ ಕೂಡ ತುಚ್ಛವನ್ನಾಗಿ ತಿಳಿಯುವನು ।೩೬೦॥ ದೇಹದ ಅಭಿಮಾನವನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಕರ್ಮಗಳ ಬಾಧೆಗೆ ಸತ್ಯವೆಂದು ತಿಳಿಯುವನು. ಹೇ ಉದ್ಧವಾ, ಇದು ರಾಜಸ ಮನುಷ್ಯನ ಕರ್ಮಶ್ರದ್ಧೆಯಾಗಿರುವುದು ಎಂದು ತಿಳಿ ।೩೬೧॥ ಯಾವುದರಿಂದ ಅಧಿಕವಾಗಿ ಅವಿಚಾರವು ವೃದ್ಧಿಯಾಗುವುದೋ ಮತ್ತು ಯಾವುದರಿಂದ ತನ್ನ ಕೈಯಿಂದ ಅಕರ್ಮವು ನಡೆದು ಅಧರ್ಮವು ಬೆಳೆಯುತ್ತ ಸಾಗುವುದೋ, ಅಂತಹ ಶ್ರದ್ಧೆಯು ತಾಮಸ ಮನುಷ್ಯನಿಗೆ ಪ್ರಿಯವಾಗುವುದು ।೩೬೨॥ ಅಪೇಯಪಾನ ಮಾಡುವುದು, ಅಭಕ್ಷ್ಯ ಭಕ್ಷಣೆಯನ್ನು ಮಾಡುವುದು, ಅಯೋಗ್ಯ ಸ್ಥಳಗಳಲ್ಲಿ ಗಮನ ಮಾಡುವುದು, ಹೀಗೆ ಮಾಡುವುದರಲ್ಲಿ ಸಮಾಧಾನವಾಗುವಿಕೆಯು ಇದು ತಾಮಸ ಶ್ರದ್ಧೆಯ ಲಕ್ಷಣವಾಗಿರುವುದು ।೩೬೩॥

ಅಧರ್ಮ ತೋಚಿ ಮಾನೀ ಧರ್ಮ । ಹೇ ತಾಮಸೀ ಶ್ರದ್ಧೇಚೇ ವರ್ಮ । ಆತಾ ನಿರ್ಗುಣಶ್ರದ್ಧಾ ಪರಮ । ಉತ್ತಮೋತ್ತಮ ತೇ ಐಕ ।೧೬೪॥ ಸರ್ವ ಭೂತೀ ಭಗವಂತ । ಐಶಿಯೇ ಶ್ರದ್ಧೇ ಶ್ರದ್ಧಾವಂತ । ಅನನ್ಯ ಭಾವೇ ಭೂತಾ ಭಜತ । ತೋ ಭಜನಭಾವಾರ್ಥ ನಿರ್ಗುಣ ।೧೬೫॥ ಸ್ತ್ರೀ ಪುತ್ರ ವಿತ್ತ ಜೀವಿತ । ಮಜಲಾಗೀ ಕುರವಂಡೀ ಕರೀತ । ಅನನ್ಯ ಭಾವೇ ಜೇ ಮಜ ಭಜತ । ತೇ ಶ್ರದ್ಧಾ ನಿಶ್ಚಿತ ನಿರ್ಗುಣ ।೧೬೬॥ ಚಾರೀ ಪುರುಷಾರ್ಥ ತ್ಯಾಗಿತೀ । ಉಪೇಕ್ಷೂನಿ ಚಾರೀ ಮುಕ್ತೀ । ಐಕ್ಯಭಾವೇ ಮಜ ಭಜತೀ । ತೇ ಶ್ರದ್ಧಾಸಂಪತ್ತೀ ನಿರ್ಗುಣ ।೧೬೭॥ ನಿಷ್ಕಾಮ ನಾಮಸ್ಮರಣ । ನಿರ್ಲೋಭ ಹರಿಕೀರ್ತನ । ಭಾವಾರ್ಥೇ ಜೇ ಜೇ ಭಜನ । ತೇ ಶ್ರದ್ಧಾ ನಿರ್ಗುಣ ಉದ್ಧವಾ ।೧೬೮॥ ತ್ರಿಗುಣಾಂಚಾ ತ್ರಿವಿಧ ಆಹಾರೂ । ಸ್ವಯೇ ಸಾಂಗೇ ಶಾರ್ಙ್ಗಧರೂ । ನಿರ್ಗುಣ ಆಹಾರಾಚಾ ಪ್ರಕಾರೂ । ಸಖೋಲ ವಿಚಾರೂ ಹರಿ ಸಾಂಗೇ ।೧೬೯॥

ಪಥ್ಯಂ ಪೂತಮನಾಯಸ್ತಮಹಾರ್ಯಂ ಸಾತ್ತ್ವಿಕಂ ಸ್ಮೃತಮ್ । ರಾಜಸಂ ಚೇಂದ್ರಿಯಪ್ರೇಷ್ಠಂ ತಾಮಸಂ ಚಾರ್ತಿದಾಶುಚಿ ।೨೮॥

ಅರ್ಥ:- ಆರೋಗ್ಯದಾಯಕ, ಪವಿತ್ರ ಮತ್ತು ಅನಾಯಾಸವಾಗಿ ಪ್ರಾಪ್ತವಾದ ಭೋಜನವು ಸಾತ್ವಿಕವಾಗಿರುವುದು. ರಸನೇಂದ್ರಿಯಕ್ಕೆ ರುಚಿಯಾಗುವ ಮತ್ತು ಸ್ವಾದದ ದೃಷ್ಟಿಯಿಂದ ರುಚಿಕರ ಆಹಾರವು ರಾಜಸವಾಗಿರುವುದು. ದುಃಖದಾಯಕ ಮತ್ತು ಅಪವಿತ್ರ ಆಹಾರವು ತಾಮಸವಾಗಿರುವುದು.

ಪವಿತ್ರ ಆಣಿ ಹಳುವಾರ । ಸತ್ತ್ವವೃದ್ಧಿಸೀ ಹಿತಕರ । ಅಪ್ರಯಾಸೀ ಪ್ರಾಪ್ತಿ ಸಾಚಾರ । ಸಾತ್ವಿಕ ಆಹಾರ ಯಾ ನಾಂವ ।೧೭೦॥ ಅಲ್ಪಾಹಾರ ಯಾ ನಾಂವ ಪಥ್ಯ । ಪವಿತ್ರ ಮ್ಹಣಿಜೇ ಧರ್ಮಾರ್ಜಿತ । ತೇಹೀ ಅಪ್ರಯಾಸಾನೇ ಪ್ರಾಪ್ತ । ತೋ ಜಾಣ ನಿಶ್ಚಿತ ಸಾತ್ತ್ವಿಕಾಹಾರ ।೧೭೧॥ ಗೋಡ ಖರಪೂಸ ಆಂಬಟ । ತಳೀಂವ ಘೋಳೀಂವ ತಿಖಟ । ಚಿರೀಂವ ಚೋಳೀಂವ ತುರಟ । ವಳೀಂವ ವಳಿವಟ ಆಳಿಲೇ ।೧೭೨॥ ರಸೀ ರಸಾಂತರಮಿಳಣೀ । ಪನ್ಹೀ ಕಾಲವಣೇ ಶಿಖರಿಣೀ । ಕುಡಕುಡೀ ನಿರ್ಪೂಸ ಸಣಾಣೀ । ಆಹಾರಭರಣೀ ರಾಜಸ ।೧೭೩॥ ನಾನಾ ಪರೀಂಚ್ಯಾ ಆವಡೀ । ಸಡಿವಾ ಸೋಲಿವಾ ಪರವಡೀ । ರಸನಾಸುಖಾಚೀ ಅತಿಗೋಡೀ । ತೋ ಆಹಾರ ನಿರವಡೀ ರಾಜಸ ।೧೭೪॥ ನಾನಾ ಪರೀಂಚೇ ಆಯಾಸ । ಕರೂನಿ ಅತಿಪ್ರಯಾಸ । ಆಹಾರ ಸೇವಿತೀ ರಾಜಸ । ಐಕ ತಾಮಸ ಭೋಜನ।೧೭೫॥

ಅಧರ್ಮಕ್ಕೆ ಧರ್ಮವೆಂದು ತಿಳಿದುಕೊಳ್ಳುವಿಕೆಯು ಇದು ತಾಮಸೀ ಶ್ರದ್ಧೆಯೊಳಗಿನ ಮುಖ್ಯವಾದ ಮರ್ಮವಾಗಿರುವುದು. ಈಗ ಅತಿ ಉತ್ತಮವಾಗಿರುವ ಯಾವ ನಿರ್ಗುಣ ಶ್ರದ್ಧೆಯ ವಿಷಯವನ್ನು ಕೇಳು ।೧೬೪॥ ಸರ್ವ ಭೂತಮಾತ್ರರಲ್ಲಿ ಸಮಪ್ರಮಾಣವಾಗಿ ಭಗವಂತನಿರುವನು ಎಂಬ ಇಂತಹ ಭಾವನೆಯಿಂದ ಯಾವ ಪ್ರಾಣಿಮಾತ್ರರ ನಿಃಸ್ವಾರ್ಥ ಮನೋಭಾವದಿಂದ ಸೇವೆಯನ್ನು ಮಾಡುವನೋ, ಇದು ನಿರ್ಗುಣ ಭಜನೆಯ ಪ್ರಕಾರವಾಗಿರುವುದು ।೧೬೫॥ ಯಾರು ತನ್ನ ಸ್ತ್ರೀ, ಪುತ್ರ, ಧನ ಮತ್ತು ಜೀವನ ಈ ಎಲ್ಲವನ್ನೂ ನನ್ನ ಮೇಲಿಂದ ನಿವಾಳಿಸಿ ಒಗೆಯುವನೋ ಮತ್ತು ಅನನ್ಯ ಭಾವದಿಂದ ನನ್ನನ್ನು ಭಜಿಸುವನೋ, ಆತನ ಯಾವ ಶ್ರದ್ಧೆಯು ನಿರ್ಗುಣವಾಗಿರುವುದು ।೧೬೬॥ ನಾಲ್ಕೂ ಪುರುಷಾರ್ಥಗಳನ್ನು ತ್ಯಜಿಸಿ, ನಾಲ್ಕೂ ಮುಕ್ತಿಗಳನ್ನು ದೂರ ಮಾಡಿ ಐಕ್ಯಭಾವದಿಂದ ನನ್ನನ್ನು ಭುಜಿಸುವನೋ, ಆತನ ಶ್ರದ್ಧೆಯ ಸಂಪತ್ತು ನಿರ್ಗುಣವಾಗಿರುವುದು ।೧೬೭॥ ಹೇ ಉದ್ಧವಾ, ನಿಷ್ಕಾಮನಾಗಿ ನನ್ನ ನಾಮಸ್ಮರಣೆಯನ್ನು ಮಾಡಬೇಕು. ಯಾವುದೇ ಲೋಭವನ್ನು ಇಡದೇ ಹರಿಕೀರ್ತನೆಯನ್ನು ಮಾಡಬೇಕು. ಹೀಗೆ ಭಕ್ತಿಭಾವದಿಂದ ನನ್ನ ಭಜನೆಯನ್ನು ಮಾಡುವಿಕೆಯು ಇದೇ ನಿರ್ಗುಣ ಶ್ರದ್ಧೆಯಾಗಿರುವುದು ।೧೬೮॥ ಮೂರು ಗುಣಗಳ ಆಹಾರವೂ ಕೂಡ ಮೂರು ಪ್ರಕಾರವಾಗಿರುವುದು. ಇದನ್ನೂ ಕೂಡ ಶ್ರೀಕೃಷ್ಣನು ಹೇಳುವನು. ನಿರ್ಗುಣ ಆಹಾರದ ಸಖೋಲ ವಿಚಾರವನ್ನೂ ಸಹ ಹೇಳುವನು ।೧೬೯॥

ಪವಿತ್ರವಾಗಿ ಪಚನಕ್ಕೆ ಹಗುರವಾಗಿರಬೇಕು, ಸತ್ವವೃದ್ಧಿಗೆ ಉಪಯುಕ್ತವಾಗಿರಬೇಕು ಮತ್ತು ಅನ್ನವು ಪ್ರಯಾಸವಿಲ್ಲದೇ ಪ್ರಾಪ್ತವಾಗಿರಬೇಕು. ಇವೇ ಸಾತ್ವಿಕ ಆಹಾರವಾಗಿರುವುವು ।೧೭೦॥ ಪಥ್ಯಕರವೆಂದರೆ ಅಲ್ಪಾಹಾರ ವಾಗಿರುವುದು, ಪವಿತ್ರವೆಂದರೆ ಧರ್ಮದಿಂದ ಪಡೆದಿರಬೇಕು ಮತ್ತು ಅದೂ ಕೂಡ ಅಪ್ರಯಾಸವಾಗಿ ಪ್ರಾಪ್ತವಾದ ಆಹಾರವಾಗಿರಬೇಕು. ಇದು ಸಾತ್ವಿಕವಾಗಿರುವುದು ।೧೭೧॥ ಸಿಹಿ, ಅತಿ ಉಪ್ಪು, ಹುಳಿ, ಕರೆದ, ಬೆರೆಸಿದ, ಖಾರವಾದ, ಕೊಯ್ದಿರುವ, ತಿಕ್ಕಲ್ಪಟ್ಟಿರುವ, ಒಣಗಿರುವ, ಕುಟ್ಟಿರುವ, ಸುಡುತ್ತಿರುವ ಒಗ್ಗರಣೆ ಕೊಟ್ಟ ।೧೭೨॥ ಒಂದು ರಸದಲ್ಲಿ ಹಲವು ರಸಗಳನ್ನು ಕೂಡಿಸಿರುವ ಪಾನಕ, ಅನೇಕ ದಿನಸುಗಳನ್ನು ಕೂಡಿಸಿದ ಸಾಂಬರ, ಶಿಕರಣೀ, ಕುರುಕುರು ಎನ್ನುವ ಹಪ್ಪಳ, ಸಂಡಿಗೆ, ಉಪ್ಪುಪ್ಪಾಗಿರುವ, ಕಡಕ್ಕಾಗಿರುವ ಇಂತಹ ಆಹಾರವು ರಾಜಸವೆಂದು ತಿಳಿಯಬೇಕು ।೧೭೩॥ ಧಾನ್ಯಗಳು, ಕಾಯಿಪಲ್ಲೆಗಳು ಇತ್ಯಾದಿಗಳನ್ನು ಸುಲಿದು, ಕುಟ್ಟಿ, ಅದರಿಂದ ಸಿದ್ಧವಾದ ನಾನಾ ಪ್ರಕಾರದ ಪ್ರಿಯವಾದ ಅನ್ನದ ರುಚಿಯು ನಾಲಿಗೆಯನ್ನು ಸುಖಪಡಿಸುವುದು. ಇದು ರಾಜಸ ಆಹಾರವೆಂದು ತಿಳಿಯಬೇಕು ।೧೭೪॥ ಅತಿಶಯವಾಗಿ ಪ್ರಯತ್ನ ಮಾಡಿ ಅತ್ಯಂತ ಕಷ್ಟಪಟ್ಟು ತಯಾರಿಸಿದ ಆಹಾರವು ಇದು ರಾಜಸನಿಗೆ ಪ್ರಿಯವಾಗುವುದು. ಈಗ ತಾಮಸ ಜನರ ಭೋಜನದ ಪ್ರಕಾರವನ್ನು ಕೇಳು ।೧೭೫॥

ಸೇವಿತಾ ದುರ್ಗಂಧಿ ಉನ್ಮಾದಕ । ಪರಿಪಾಕೇ ಕರೀ ಮೂರ್ಖ । ಅಶುಚಿ ಆಣಿ ದುಃಖದಾಯಕ । ಹಾ ಆಹಾರ ದೇಖ ತಾಮಸ ।।೩೭೬।। ಭಗವಂತಾಚಾ ಭುಕ್ತ ಪ್ರಸಾದ । ಸಾಧುಸಜ್ಜನಾಂಚೇ ಶೇಷಶುದ್ಧ । ಹಾ ನಿರ್ಗುಣ ಆಹಾರ ಪ್ರಸಿದ್ಧ । ''ಚ'' ಕಾರೇ ಗೋವಿಂದ ಬೋಲಿಲಾ ।।೩೭೭।। ಗ್ರಾಸೋಗ್ರಾಸೀ ಗೋವಿಂದ । ಯೇಣೇ ಸ್ಮರಣೇ ಅನ್ನ ಶುದ್ಧ । ಹಾ ನಿರ್ಗುಣ ಆಹಾರ ಪ್ರಸಿದ್ಧ । ''ಚ'' ಕಾರೇ ಗೋವಿಂದ ಬೋಲಿಲಾ ।।೩೭೮।। ''ಅನ್ನಂ ಬ್ರಹ್ಮ ಅಹಂ ಚ ಬ್ರಹ್ಮ '' । ಪಂಕ್ತೀಕರ ತೋಹೀ ಬ್ರಹ್ಮ । ಐಸಾ ಜ್ಯಾಚಾ ಭೋಜನಾನುಕ್ರಮ । ತೋ ಆಹಾರ ಪರಮ ನಿರ್ಗುಣತ್ವೇ ।।೩೭೯।। ತ್ರಿಗುಣಾಂಚೇ ತ್ರಿವಿಧ ಸುಖ । ನಿರ್ಗುಣ ಸುಖ ಅಲೋಕಿಕ । ತ್ಯಾಹೀ ಸುಖಾಚಾ ಪರಿಪಾಕ । ಯದುನಾಯಕ ಸ್ವಯೇ ಸಾಂಗೇ ।।೩೮೦।।

ಸಾತ್ವಿಕಂ ಸುಖಮಾತ್ಮೋತ್ಥಂ ವಿಷಯೋತ್ಥಂ ತು ರಾಜಸಮ್ । ತಾಮಸಂ ಮೋಹದೈನ್ಯೋತ್ಥಂ ನಿರ್ಗುಣಂ ಮದಪಾಶ್ರಯಮ್ ।೨೯॥

ಅರ್ಥ:- ದೃಷ್ಟಿಯನ್ನು ಅಂತರ್ಮುಖವನ್ನಾಗಿ ಮಾಡಿ ಆತ್ಮಚಿಂತನೆಯಿಂದ ಪ್ರಾಪ್ತವಾಗುವ ಸುಖವು ಇದು ಸಾತ್ವಿಕವಾಗಿದೆ. ಬಹಿರ್ಮುಖದಿಂದ ವಿಷಯಗಳಿಂದ ಪ್ರಾಪ್ತವಾಗುವ ಸುಖವು ರಾಜಸವಾಗಿದೆ. ಹಾಗೆಯೇ ಅಜ್ಞಾನ ಮತ್ತು ದೀನತೆಯಿಂದ ಪ್ರಾಪ್ತವಾಗುವ ಯಾವ ಸುಖವು ತಾಮಸವಾಗಿದೆ. ಯಾವ ಸುಖವು ನನ್ನಿಂದ ದೊರೆಯುವುದೋ ಅದು ಗುಣಾತೀತ, ಅಪ್ರಾಕೃತವಾಗಿದೆ.

ಸಾಂಡೂನಿ ವಿಷಯಸುಖಾಚೀ ಸ್ಫೂರ್ತೀ । ಆತ್ಮಸುಖೇ ಸುಖಾವೇ ಚಿತ್ತವೃತ್ತೀ । ಐಶಿಯಾ ನಿಜಸುಖಾಚೀ ಪ್ರಾಪ್ತೀ । ತೇ ಸುಖ ನಿಶ್ಚಿತೀ ಸಾತ್ವಿಕ ।।೩೮೧।। ಗಂಗಾಪೂರ ಭರೇ ಉನ್ನತೀ । ತೇಣೇ ಅಮರ್ಯಾದ ವೋತ ಭರತೀ । ತೇವೀ ಆತ್ಮಸುಖಾಚಿಯೇ ಪ್ರಾಪ್ತೀ । ಇಂದ್ರಿಯಾ ತೃಪ್ತೀ ಸ್ವಾನಂದೇ ।।೩೮೨।। ನಾನಾ ವಿಷಯಾಂಚೇ ಕೋಡ । ಇಂದ್ರಿಯಾಂಚಾ ಅತಿಧುಮಾಡ । ವಿಷಯಸುಖ ಲಾಗೇ ಗೋಡ । ತೇ ಸುಖ ಸುದೃಢ ರಾಜಸ ।।೩೮೩।। ಅತಿನಿಂದ್ಯ ಆಣಿ ಉನ್ಮಾದೀ । ತೇಚಿ ಸುಖ ಆವಡೇ ಬುದ್ಧೀ । ತಾಮಸ ಸುಖಾಚೀ ಹೇ ಸಿದ್ಧೀ । ಜಾಣ ತ್ರಿಶುದ್ಧೀ ಉದ್ಧವಾ ।।೩೮೪।। ಹೃದಯೀ ಪ್ರಕಟಲ್ಯಾ ಮಾಝೀ ಮೂರ್ತೀ । ವಿಸರೇ ಸಂಸಾರಾಚೀ ಸ್ಫೂರ್ತೀ । ತ್ಯಾವರೀ ಜೇ ಹೋಯ ಸುಖಪ್ರಾಪ್ತೀ । ತೇ ಸುಖ ನಿಶ್ಚಿತೀ ನಿರ್ಗುಣ ।।೩೮೫।। ಸರ್ವ ಭೂತೀ ವಸೇ ಭಗವಂತ । ತೋಚಿ ಮೀ ಹಾ ತಾತ್ತ್ವಿಕಾರ್ಥ । ಐಸೇನಿ ಮದೈಕ್ಯೇ ಸುಖಪ್ರಾಪ್ತ । ತೋ ನಿಜಸುಖಾರ್ಥ ನಿರ್ಗುಣ ।।೩೮೬।। ದೇಖಿಲ್ಯಾ ನಿಜಾತ್ಮಸುಖಸ್ವರೂಪ । ಸ್ವಯೇ ಹೋಇಜೇ ಸುಖರೂಪ । ಹೇ ನಿರ್ಗುಣಸುಖಾಚೇ ನಿಜದೀಪ । ಝಡಲ್ಯಾ ಪುಣ್ಯಪಾಪ ಪಾವಿಜೇ ।।೩೮೭।।

ಯಾವುದರ ಕೇವಲ ವಾಸನೆಯಿಂದ ಉನ್ಮಾದ ಉಂಟಾಗುವುದೋ, ಅದರ ಸೇವನೆಯಿಂದ ಮಬ್ಬು ಏರುವುದೋ, ಇಂತಹ ಅಪವಿತ್ರ ಮತ್ತು ದುಃಖದಾಯಕ ಆಹಾರವು ತಾಮಸವಾಗಿರುವುದು ।।೩೭೬।। ಭಗವಂತನಿಗೆ ನೈವೇದ್ಯ ಮಾಡಿ ಪಡೆದ ಪ್ರಸಾದ, ಸಾಧು ಸಂತರ ಭೋಜನ ನಂತರದ ಶೇಷಪ್ರಸಾದ, ಈ ಪವಿತ್ರ ಅನ್ನವು ನಿರ್ಗುಣ ಆಹಾರವೆಂದು ಪ್ರಸಿದ್ಧವಾಗಿರುವುದು. ಹೀಗೆ ಪ್ರಭು ಗೋವಿಂದನು ''ಚ'' ಎಂಬ ಅಕ್ಷರದಿಂದ ಸೂಚಿಸಿರುವನು ।।೩೭೭।। ಪ್ರತಿಯೊಂದು ತುತ್ತು ತುತ್ತಿಗೂ ಗೋವಿಂದ, ಗೋವಿಂದ ಎಂದು ಉಚ್ಚರಿಸುತ್ತಿದ್ದರೆ ಆ ಅನ್ನವು ಪವಿತ್ರವಾಗುವುದು. ಇದುವೇ ಪ್ರಸಿದ್ಧವಾಗಿರುವ ನಿರ್ಗುಣ ಆಹಾರವೆಂದು ಶ್ರೀಕೃಷ್ಣನು ''ಚ'' ಅಕ್ಷರದಿಂದ ಹೇಳಿರುವನು ।।೩೭೮।। ಅನ್ನವು ಇದು ಬ್ರಹ್ಮವು, ನಾನೂ ಕೂಡ ಬ್ರಹ್ಮನು, ಮತ್ತು ಪಂಕ್ತಿಯಲ್ಲಿ ಕುಳಿತುಕೊಂಡಿರುವರೆಲ್ಲರೂ ಬ್ರಹ್ಮಸ್ವರೂಪರು, ಹೀಗೆ ಯಾರ ಭೋಜನದಲ್ಲಿ ಪರಿಪಾಠವಿರುವುದೋ ಅದೂ ಕೂಡ ಆತನ ನಿರ್ಗುಣ ಆಹಾರವಾಗಿರುವುದು ।।೩೭೯।। ಮೂರು ಗುಣಗಳ ಸುಖವೂ ಕೂಡ ಮೂರು ಪ್ರಕಾರವಾಗಿರುವುವು. ನಿರ್ಗುಣದ ಸುಖವು ಮಾತ್ರ ಅಲೌಕಿಕವಾಗಿರುವುದು. ಈ ಸುಖಗಳ ಪ್ರಕಾರವನ್ನು ಯದುನಾಯಕ ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ।।೩೮೦।।

ವಿಷಯ ಸುಖದ ಸ್ಫೂರ್ತಿಯನ್ನು ತ್ಯಾಗ ಮಾಡಿ, ಯಾವ ಚಿತ್ತವೃತ್ತಿಯು ಆತ್ಮಸ್ವರೂಪದಲ್ಲಿ ತನ್ಮಯವಾದಾಗ್ಗೆ ಪ್ರಾಪ್ತವಾಗುವ ಸುಖವು ಅದು ಸಾತ್ವಿಕವಾಗಿರುವುದು ।।೩೮೧।। ಗಂಗಾನದಿಗೆ ಪೂರವು ಬರಲು ಆಗ ನದಿಸಮೀಪದ ಹಳ್ಳಕೊಳ್ಳಗಳು ನೀರಿನಿಂದ ತುಂಬಿ ಹರಿಯುವುವು. ಅದರಂತೆ ಆತ್ಮಸುಖಕ್ಕೆ ಪೂರವು ಬರಲು ಎಲ್ಲ ಇಂದ್ರಿಯಗಳು ಸುಖಾನಂದದಿಂದ ತೃಪ್ತವಾಗುವುವು ।।೩೮೨।। ಅನೇಕ ಪ್ರಕಾರದ ವಿಷಯಗಳ ಅಪೇಕ್ಷೆ, ಇಂದ್ರಿಯಗಳ ಉಪದ್ರವ, ವಿಷಯ ಸುಖದಲ್ಲಿ ಆನಂದ, ಇವು ನಿಜವಾಗಿಯೂ ರಾಜಸ ಸುಖವಾಗಿರುವುದು ।।೩೮೩।। ಹೇ ಉದ್ಧವಾ, ಅತ್ಯಂತ ನಿಂದಾತ್ಮಕವಾಗಿರುವ, ಉನ್ಮಾದವನ್ನು ತರುವಂತಹ, ಈ ಸುಖವು ಬುದ್ಧಿಗೆ ಪ್ರಿಯವಾಗುವಿಕೆ ಎಂದರೆ ಇದು ತಾಮಸ ಸುಖದ ಸಿದ್ಧಿಯಾಗಿರುವುದೆಂದು ನೀನು ನಿಶ್ಚಯವಾಗಿ ತಿಳಿ ।।೩೮೪।। ಹೃದಯ ಮಂದಿರದಲ್ಲಿ ನನ್ನ ಮೂರ್ತಿಯು ಪ್ರಕಟವಾಗುತ್ತಲೇ ಸಂಸಾರಸ್ಫೂರ್ತಿಯು ಮರೆತು ಹೋಗುವುದು. ಇದರಿಂದ ಯಾವ ಸುಖವು ಪ್ರಾಪ್ತವಾಗುವುದೋ, ಅದು ನಿಶ್ಚಯಪೂರ್ವಕವಾಗಿ ನಿರ್ಗುಣಸುಖವೆಂದು ತಿಳಿಯಬೇಕು ।।೩೮೫।। ಸರ್ವ ಚರಾಚರಗಳಲ್ಲಿ ಒಬ್ಬ ಭಗವಂತನು ಮಾತ್ರ ತುಂಬಿರುವನು ಎಂಬ ಈ ತತ್ವವನ್ನು ತಿಳಿದುಕೊಂಡು ನನ್ನ ಐಕ್ಯದಿಂದ ಯಾವ ಸುಖವು ಪ್ರಾಪ್ತವಾಗುವುದೋ, ಅದೇ ನಿರ್ಗುಣವಾದ ಆತ್ಮಸುಖವೆಂದು ತಿಳಿಯಬೇಕು ।।೩೮೬।। ಆತ್ಮಸ್ವರೂಪದ ಸುಖವು ದೃಷ್ಟಿಗೆ ಬೀಳಲು ತಾನೇ ಸ್ವತಃ ಸುಖರೂಪವಾಗುವನು. ಪಾಪಪುಣ್ಯಗಳನ್ನು ಝಾಡಿಸಿ ಒಗೆದ ನಂತರ ನಿರ್ಗುಣಸುಖದ ದೀಪವು ಹಸ್ತಗತವಾಗುವುದು ।।೩೮೭।।

ಆಪಣ ಸುಖಸ್ವರೂಪ ಸರ್ವಾಂಗೀ । ಸುಖಸ್ವರೂಪ ಸ್ವಯೇ ಭೋಗೀ । ಹೇ ನಿರ್ಗುಣ ಸುಖಾಚೀ ಮಾಗೀ । ಭಕ್ತೀ ಅಂತರಂಗೀ ಭೋಗಿಜೇ ॥೩೮೮॥ ಕಲ್ಪಾಂತಾಚೇ ಪೂರ್ಣ ಭರಿತೇ । ಉರೋ ನೇದೀ ನದೀ-ನದಾಂತೇ । ತೇವೀ ನಿರ್ಗುಣ ಸುಖ ಯೇಥೇ । ದೇಹೇಂದ್ರಿಯಾಂತೇ ಉರೋ ನೇದೀ ॥೩೮೯॥ ಜೇವೀ ಮೃಗಜಳೀ ಜಳ ನಾಹೀ । ತೇವೀ ಪರಬ್ರಹ್ಮಾ ಠ್ಯಾ ಠಾಯೀ । ಪ್ರಪಂಚ ಸ್ಪರ್ಶಿಲಾಚಿ ನಾಹೀ । ತೇ ಸುಖ ನಿರ್ವಾಹೀ ನಿರ್ಗುಣ ॥೩೯೦॥ ಜ್ಯಾ ಸುಖಾಚೀ ಮರ್ಯಾದಾ । ಕರಿತಾ ನ ಕರವೇ ಕದಾ । ಸುಖೇ ಸುಖಸ್ವರೂಪ ಹೋಈಜೇ ಸದಾ । ಹೇ ಸುಖಸಂಪದಾ ನಿರ್ಗುಣ ॥೩೯೧॥ ತ್ರಿಗುಣ ಆಣಿ ನಿರ್ಗುಣ । ಯಾಂಚೇ ದಾವಿಲೇ ಭೇದಲಕ್ಷಣ । ಆತಾ ತ್ಯಾಚೇ ಉಪಸಂಹರಣ । ಗ್ರಂಥಾಂತೀ ಜಾಣ ಹರಿ ಕರೀ ॥೩೯೨॥

ದ್ರವ್ಯಂ ದೇಶಃ ಫಲಂ ಕಾಲೋ ಜ್ಞಾನಂ ಕರ್ಮ ಚ ಕಾರಕಃ । ಶ್ರದ್ಧಾಽವಸ್ಥಾಽಽಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ ॥೩೦॥

ಅರ್ಥ:- ಹೇ ಉದ್ಧವಾ, ದ್ರವ್ಯ, ದೇಶ, ಫಲ,ಕಾಲ, ಜ್ಞಾನ, ಕರ್ಮ, ಕರ್ತಾ, ಶ್ರದ್ಧಾ, ಅವಸ್ಥಾ, ದೇವ, ಮನುಷ್ಯ, ತಿರ್ಯಗಾದಿ ಮತ್ತು ನಿಷ್ಠೆ ಈ ಎಲ್ಲವೂ ತ್ರಿಗುಣಾತ್ಮಕವಾಗಿವೆ.

ದ್ರವ್ಯಶಬ್ದೇ ಆಹಾರ ತ್ರಿವಿಧ । ದೇಶಶಬ್ದೇ ವನಗ್ರಾಮಭೇದ । ಫಳಶಬ್ದೇ ಸುಖ ಉದ್ಬೋಧ । ಸತ್ವಸಂಬಂಧವಿಭಾಗೇ ॥೩೯೩॥ ಕಾಳ ಶಬ್ದೇ ಭಗವದ್ಭಜನ । ಕೈವಲ್ಯ ನಿಷ್ಠಾ ಯಾ ನಾಂವ ಜ್ಞಾನ । ಕರ್ಮ ಮ್ಹಣಿಜೇ ಮದರ್ಪಣ । ಕರ್ತಾ ತೋ ಜಾಣ ಅಸಂಗೀ ॥೩೯೪॥ ಶ್ರದ್ಧಾಶಬ್ದೇ ಆಧ್ಯಾತ್ಮಿಕೀ । ಅವಸ್ಥಾಶಬ್ದೇ ಜಾಗರಣಾದಿಕೀ । ಆಕೃತಿ ಶಬ್ದೇ ಉಪರಿಲೋಕೀ । ದೇವತಾದಿಕೀ ಕ್ರೀಡನ ॥೩೯೫॥ ಜೋ ಗುಣ ವಾಢೇ ದೇಹಾಂತೀ । ಜೇಣೇ ಗುಣೇ ಹೋಯ ಅಂತಃಸ್ಥಿತೀ । ತ್ಯಾ ನಾಂವ ನಿಷ್ಠಾ ಮ್ಹಣತೀ । ಜಾಣ ನಿಶ್ಚಿತೀ ಉದ್ಧವಾ ॥೩೯೬॥ ಭಿನ್ನ ಭಿನ್ನ ಭಾಗ ಅನೇಕ । ಕಿತೀ ಸಾಂಗೂ ಏಕೇಕ । ಅವಘೇ ಜಗಚಿ ತ್ರಿಗುಣಾತ್ಮಕ । ಜಾಣ ನಿಷ್ಟಂಕ ನಿಜಭಕ್ತಾ ॥೩೯೭॥ ಸಂಸಾರ ಸಮಸ್ತ ತ್ರಿಗುಣ । ಯಾಮಾಜೀ ಮೀ ಅವಘಾ ನಿರ್ಗುಣ । ಹೇ ತುಜ ಕಳಾವಯಾ ನಿಜಖೂಣ । ಗುಣನಿರೂಪಣ ಮ್ಯಾಕೇಲೇ ॥೩೯೮॥

ಸರ್ವೇ ಗುಣಮಯಾ ಭಾವಾಃ ಪುರುಷಾವ್ಯಕ್ತಧಿಷ್ಠಿತಾಃ । ದೃಷ್ಟಂ ಶ್ರುತಮನುಧ್ಯಾತಂ ಬುದ್ಧ್ಯಾ ವಾ ಪುರುಷರ್ಷಭ ॥೩೧॥

ಅರ್ಥ:- ಪುರುಷ ಮತ್ತು ಅವ್ಯಕ್ತ ಇವುಗಳಿಂದ ಅಧಿಷ್ಠಿತವಾಗಿರುವ ಪದಾರ್ಥಗಳು ಗುಣಮಯವಾಗಿರುವುವು. ಹೇ ಪುರುಷ ಶ್ರೇಷ್ಠನೇ, ಯಾವುದನ್ನು ಪ್ರತ್ಯಕ್ಷವಾಗಿ ನೋಡಿದ, ಕೇಳಿದ ಅಥವಾ ಬುದ್ಧಿಯಿಂದ ಚಿಂತಿಸಿದ ಈ ಸರ್ವವೂ ಗುಣಮಯವಾಗಿರುವುವು.

ನಾವು ಸರ್ವಾಂಗದಿಂದ ಸುಖರೂಪರಾದೆವೆಂದರೆ ಸ್ವತಃ ನಮಗೆ ಆ ಆನಂದದ ಉಪಭೋಗವನ್ನು ಪಡೆಯಲು ದೊರೆಯುವುದು, ಈ ಯಾವ ನಿರ್ಗುಣ ಸುಖದ ಮಾರ್ಗವನ್ನು ಭಕ್ತರು ತಮ್ಮ ಅಂತಃಕರಣದಲ್ಲಿ ಧರಿಸಬೇಕು ॥೩೮೮॥ ಕಲ್ಪಾಂತದ ಸಮಯದಲ್ಲಿ ಪ್ರಳಯದ ಜಲವು ಸರ್ವತ್ರವೂ ಹರಡಿದಾಗ ನದೀ, ಕಾಲುವೆ ಇತ್ಯಾದಿ ಯಾವುದೂ ಉಳಿಸಿಕೊಡುವುದಿಲ್ಲ ಅದರಂತೆ ನಿರ್ಗುಣ ಸುಖವೂ ಕೂಡ ದೇಹ ಇಂದ್ರಿಯಗಳಿಗೆ ಉಳಿಸಿಕೊಡುವುದಿಲ್ಲ ॥೩೮೯॥ ಯಾವ ಪ್ರಕಾರವಾಗಿ ಮೃಗಜಲದಲ್ಲಿ ನೀರು ಇರುವುದಿಲ್ಲವೋ ಅದೇ ಪ್ರಕಾರವಾಗಿ ಪರಬ್ರಹ್ಮನ ಸ್ಥಾನದಲ್ಲಿ ಪ್ರಪಂಚದ ಸ್ಪರ್ಶವೂ ಕೂಡ ಇರಲು ಶಕ್ಯವಿರುವುದಿಲ್ಲ. ಈ ಯಾವ ಸುಖವು ಅದು ನಿರ್ಗುಣವೆಂದು ತಿಳಿಯಬೇಕು ॥೩೯೦॥ ಯಾವ ಸುಖಕ್ಕೆ ಮರ್ಯಾದೆಯೇ ಮಾಡಲು ಬರುವುದಿಲ್ಲ. ಯಾವಾಗಲೂ ಸುಖದಿಂದ ಸುಖರೂಪವಾಗಿ ಇರಲು ಸಾಧ್ಯವಾಗುವುದು. ಈ ಯಾವ ಸುಖಸಂಪತ್ತು ನಿಜವಾಗಿಯೂ ನಿರ್ಗುಣವೆಂದು ತಿಳಿಯಬೇಕು ॥೩೯೧॥ ತ್ರಿಗುಣಗಳ ಮತ್ತು ನಿರ್ಗುಣದ ಇವುಗಳಲ್ಲಿನ ಭೇದದ ಲಕ್ಷಣಗಳನ್ನು ಶ್ರೀಹರಿಯು ಈ ಪ್ರಕಾರವಾಗಿ ತೋರಿಸಿಕೊಟ್ಟಿರುವನು. ಈಗ ಅಧ್ಯಾಯದ ಕೊನೆಯಲ್ಲಿ ಇವುಗಳ ಉಪಸಂಹಾರವನ್ನು ಮಾಡುತ್ತಿರುವನು ॥೩೯೨॥

''ದ್ರವ್ಯ'' ಶಬ್ದದಿಂದ ಮೂರು ಪ್ರಕಾರದ ಆಹಾರ, ''ದೇಶ'' ಶಬ್ದದಿಂದ ವನ ಮತ್ತು ಗ್ರಾಮ ಇವುಗಳ ಭೇದ, ''ಫಲ''ಶಬ್ದರಿಂದ ಸುಖದ ಬೋಧ, ಇವುಗಳ ಸತ್ವಗುಣದ ಸಂಬಂಧದಿಂದ ವಿಭಾಗವಾಗುವುವು ॥೩೯೩॥ ''ಕಾಲ'' ಶಬ್ದದಿಂದ ಭಗವದ್ಭಜನೆ, ''ಕೈವಲ್ಯನಿಷ್ಠಾ'' ಇದರ ನಾಮವು ಜ್ಞಾನ . ಕರ್ಮವೆಂದರೆ ನನಗೆ ಅರ್ಪಿಸುವುದು. ಯಾವನು ಅಸಂಗನೋ ಆತನು ಕರ್ತಾ ಎಂದು ತಿಳಿ ॥೩೯೪॥ ''ಶ್ರದ್ಧೆ'' ಅಂದರೆ ಆಧ್ಯಾತ್ಮಿಕ ಶ್ರದ್ಧೆಯಾಗಿರುವುದು. ''ಅವಸ್ಥಾ'' ಎಂದರೆ ಜಾಗರಣಾದಿಕ, ಆಕೃತಿ ಎಂದರೆ ಊರ್ಧ್ವ ಲೋಕಗಳಲ್ಲಿನ ದೇವಾದಿಕರ ವಿಲಾಸವು ॥೩೯೫॥ ಹೇ ಉದ್ಧವಾ, ಮರಣಕಾಲದಲ್ಲಿ ಯಾವ ಗುಣವು ಬೆಳೆಯುತ್ತಿರುತ್ತದೆಯೋ ಆ ಗುಣಾನುಸಾರವಾಗಿ ಅಂತಃಕರಣದ ವೃತ್ತಿಯು ಆಗುತ್ತಿರುವುದು. ಇದಕ್ಕೇನೇ ನಿಷ್ಠೆ ಎಂದು ಹೇಳುವರು ॥೩೯೬॥ ಹೀಗೆ ಅದರ ಅನೇಕ ಭಿನ್ನ ಭಿನ್ನ ಭಾಗಗಳಿರುವುವು. ಅವುಗಳನ್ನು ಒಂದೊಂದಾಗಿ ಎಷ್ಟೆಂದು ಹೇಳಬೇಕು ? ಈ ಯಾವ ಸಂಪೂರ್ಣ ಜಗತ್ತು ಸತ್ವ, ರಜ ಮತ್ತು ತಮ ಗುಣಗಳಿಂದ ಯುಕ್ತವಾಗಿರುವುದು. ಹೇ ನನ್ನ ಭಕ್ತನಾದ ಉದ್ಧವನೇ, ಇದನ್ನು ನೀನು ನಿಶ್ಚಯಪೂರ್ವಕವಾಗಿ ತಿಳಿದುಕೋ ॥೩೯೭॥ ಈ ಸರ್ವ ಸಂಸಾರವು ತ್ರಿಗುಣಾತ್ಮಕವಾಗಿರುವುದು. ಅದರಲ್ಲಿ ನಾನೊಬ್ಬನೇ ಮಾತ್ರ ನಿರ್ಗುಣನಾಗಿರುವೆನು. ಇದು ನಿನಗೆ ತಿಳಿಯಲೆಂದೇ ನಾನು ಇಷ್ಟೊಂದು ಗುಣಗಳ ನಿರೂಪಣೆಯನ್ನು ಮಾಡಿರುವೆನು ॥೩೯೮॥

ದೇಖಿಜೇ ಅಥವಾ ಐಕಿಜೇ । ಕಾ ಮನೇ ಜೇ ಜೇ ಚಿಂತಿಜೇ । ತೇ ತೇ ಅವಘೇಚಿ ಜಾಣಿಜೇ । ಮಾಯಾಗುಣಕಾಜೇ ತ್ರಿಗುಣಾತ್ಮಕ ।೯೯॥ ಕರಾವಯಾ ತ್ರಿಗುಣಾಂಚೇ ಮರ್ದನ । ಪ್ರಕೃತಿನಿಯಂತಾ ಪುರುಷ ಭಿನ್ನ । ತೋ ಸರ್ವದಾ ಸರ್ವಾಂಗೇ ನಿರ್ಗುಣ । ವರ್ತವೀ ಗುಣ ನಿಜಸತ್ತಾ ।೧೦೦॥ ಪುರುಷಾ ವೇಗಳೇ ಸಮಸ್ತ । ಪ್ರಕೃತಿಕಾರ್ಯ ಮಿಥ್ಯಾಭೂತ । ತ್ಯಾತೇ ಬೋಲಿಜೇ ಗುಣವಂತ । ಜಾಣ ನಿಶ್ಚಿತ ಉದ್ಧವಾ ।೧೦೧॥ ನರದೇಹ ಪಾವೋನಿಯಾ ಯೇಥ । ಜೇ ನ ಸಾಧಿತೀ ಗುಣಾತೀತ । ತೇ ನಾಡಲೇ ಹಾತೋಹಾತ । ನಿಜಸ್ವಾರ್ಥ ಬುಡಲಾ ।೧೦೨॥ ತೈಸೀ ನವ್ಹೇ ತುಝೀ ಮತೀ । ವಿನಟಲಾಸೀ ಭಗವದ್ಭಕ್ತೀ । ತೇವ್ಹಾಂಚಿ ತೂ ಗುಣಾತೀತೀ । ಜಾಣ ನಿಶ್ಚಿತೀ ಜಡಲಾಸೀ ।೧೦೩॥ ಹರಿಭಕ್ತಾಮಧ್ಯೇ ವರಿಷ್ಠ । ಯಾಲಾಗೀ ನಿಜಮುಖೇ ವೈಕುಂಠ । ಉದ್ಧವಾಸೀ ಮ್ಹಣೇ ಪುರುಷಶ್ರೇಷ್ಠ । ಭಾಗ್ಯೇ ಉತ್ಕೃಷ್ಟ ತೂ ಏಕ ।೧೦೪॥ ತ್ರಿಗುಣಗುಣೇ ಸವಿಸ್ತಾರೂ । ದೃಢ ವಾಢಲಾ ಸಂಸಾರತರೂ । ತ್ಯಾಚೇ ಛೇದಾಚಾ ಕವಣ ಪ್ರಕಾರೂ । ತೋ ಶಾರ್ಙ್ಗಧರೂ ಸಾಂಗತ ।೧೦೫॥

ಏತಾಃ ಸಂಸೃತಯಃ ಪುಂಸೋ ಗುಣಕರ್ಮನಿಬಂಧನಾಃ । ಯೇನೇಮೇ ನಿರ್ಜಿತಾಃ
ಸೌಮ್ಯ ಗುಣಾಜೀವೇನ ಚಿತ್ತಜಾಃ॥೩೨॥ ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ ।

ಅರ್ಥ:- ಜೀವಕ್ಕೆ ಪ್ರಾಪ್ತವಾಗುವ ಗತಿಗಳೆಲ್ಲವೂ ಗುಣಗಳ ಮತ್ತು ಕರ್ಮಗಳ ಅನುಸಾರವಾಗಿರುವುವು. ಸರ್ವರ ಸರ್ವಗುಣಗಳು ಚಿತ್ತಕ್ಕೆ ಸಂಬಂಧಿತವಾಗಿರುವುವು. ಯಾವ ಜೀವನು ಈ ಗುಣಗಳನ್ನು ಜಯಿಸುವನೋ, ಆತನು ನಿಶ್ಚಲವಾದ ಭಕ್ತಿಯೋಗದಿಂದ ನನ್ನಲ್ಲಿ ಏಕರೂಪನಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವನು.

ಸತ್ತ್ವಾದಿ ತಿನ್ಹೀ ಗುಣ ಏಥ । ಕೇವಳ ಆಣಿ ಮಿಶ್ರಿತ । ಪುರುಷಾತೇ ಸಂಸಾರೀ ಕರೀತ । ಗುಣಕರ್ಮೀ ನಿಶ್ಚಿತ ಬಾಂಧೋನೀ ।೧೦೬॥ ತ್ರಿಗುಣಕರ್ಮಾಸ್ತವ ಜಾಣ । ಜೀವಾಸೀ ಝಾಲೇ ದೃಢ ಬಂಧನ । ಜೇವೀ ಘಟಾಮಾಜೀಲ ಜೀವನ । ದಾವೀ ಅಡಕಲೇಪಣ ರವಿಬಿಂಬಾ ।೧೦೭॥ ಘಟೀ ಭರಲ್ಯಾ ಸಮಳ ಜಳ । ತ್ಯಾಮಾಜೀ ರವಿ ದಿಸೇ ಸಮಳ । ಘಟೀಂಚೇ ಡೋಲತಾಂಚಿ ಜಳ । ಕಾಂಪೇ ಚಳಚಳ ರವಿಬಿಂಬ ।೧೦೮॥ ತೇವೀ ತ್ರಿಗುಣಾಂಚೇ ಕರ್ಮಾಚರಣ । ಶುದ್ಧಾಸೀ ಆಣೀ ಜೀವಪಣ । ತೇ ಛೇದಾವಯಾ ಜೀವಬಂಧನ । ಭಗವದ್ಭಜನ ಸಾಧಾವೇ ।೧೦೯॥ ಜಿತಾವಯಾ ಗುಣಬಂಧನ । ರಿಘಾವೇ ಸದ್ಗುರೂಸೀ ಶರಣ । ತೇಥ ಸದ್ಭಾವೇ ಕರಿತಾ ಭಜನ । ವಾಢೇ ಸತ್ತ್ವಗುಣ ಅತಿಶುದ್ಧ ।೧೧೦॥

ನಾವು ಯಾವ ಯಾವುದನ್ನು ನೋಡುವೆವೋ ಅಥವಾ ಕೇಳುವೆವೋ ಹಾಗೂ ಅವುಗಳ ಚಿಂತನೆಯನ್ನು ಮಾಡುವೆವೋ ಅವುಗಳು ಎಲ್ಲವೂ ಮಾಯೆಯ ಗುಣಗಳ ಕಾರ್ಯದಿಂದ ತ್ರಿಗುಣಾತ್ಮಕವಾಗಿರುವುವು ಎಂದು ತಿಳಿಯಬೇಕು ।೯೯॥ ಈ ಮೂರು ಗುಣಗಳ ನಿರಸನೆ ಮಾಡುವವ, ಪ್ರಕೃತಿಪುರುಷರ ನಿಯಂತ್ರಕನಾಗಿ ಆತನು ಪ್ರಕೃತಿಗಿಂತಲೂ ಭಿನ್ನನಾಗಿರುವನು. ಆತನು ಯಾವಾಗಲೂ ಪರಿಪೂರ್ಣ ನಿರ್ಗುಣವಾಗಿದ್ದು ತನ್ನ ಸತ್ತೆಯಿಂದ ಗುಣಗಳಿಗೆ ವರ್ತಿಸುತ್ತಿರುವನು ।೧೦೦॥ ಪುರುಷನ ಹೊರತಾಗಿ ಪ್ರಕೃತಿಯ ಸರ್ವ ಕಾರ್ಯಗಳು ಮಿಥ್ಯೆಯಾಗಿರುವುವು. ಹೇ ಉದ್ಧವಾ, ಈ ರಹಸ್ಯವನ್ನು ತಿಳಿದವನು ಗುಣಾತೀತನಾಗಿರುವನು ।೧೦೧॥ ಅಮೌಲ್ಯವಾಗಿರುವ ನರದೇಹವನ್ನು ಪ್ರಾಪ್ತವಾಗಿದ್ದರೂ ಕೂಡ ಯಾರಿಗೆ ಗುಣಾತೀತರಾಗಲು ಬರುವುದಿಲ್ಲವೋ, ಅವರು ನಿಶ್ಚಿತವಾಗಿ ಮೋಸಹೋದರು ಎಂದು ತಿಳಿಯಬೇಕು. ಅವರ ಸ್ವಾರ್ಥವು ಮುಳುಗಿಹೋಗುವುದು ।೧೦೨॥ ಆದರೆ ನಿನ್ನ ಬುದ್ಧಿಯು ಹೀಗಿರುವುದಿಲ್ಲ. ನೀನು ಭಗವದ್ಭಕ್ತಿಯನ್ನು ಮಾಡುತ್ತಿರುವುದರಿಂದ ಗುಣಾತೀತನಾಗಿರುವೆ ।೧೦೩॥ ಉದ್ಧವನು ಹರಿಭಕ್ತಿಯಲ್ಲಿ ಶ್ರೇಷ್ಠನಾಗಿರುವುದರಿಂದ ಶ್ರೀಕೃಷ್ಣನು ಆತನಿಗೆ ಪುರುಷಶ್ರೇಷ್ಠಾ ಎಂದು ಹೇಳಿರುವನು. ನೀನೇ ಭಾಗ್ಯದಲ್ಲಿ ಶ್ರೇಷ್ಠನು ಎಂದು ಸಂಬೋಧಿಸಿರುವನು ।೧೦೪॥ ಈ ಮೂರು ಗುಣಕಾರಣವಾಗಿ ಯಾವ ಈ ಸಂಸಾರವೃಕ್ಷವು ಬಹಳಷ್ಟು ಹರಡಿಕೊಂಡಿರುವುದು. ಇದರ ಛೇದನೆಯನ್ನು ಯಾವ ಪ್ರಕಾರದಿಂದ ಮಾಡಬೇಕೆಂಬುವುದನ್ನು ಶ್ರೀಕೃಷ್ಣನು ಹೇಳುತ್ತಿರುವನು ।೧೦೫॥

ಈ ಯಾವ ಸತ್ತ್ವಾದಿ ಮೂರು ಗುಣಗಳು ಶುದ್ಧವಾಗಿರಲಿ ಅಥವಾ ಮಿಶ್ರಿತವಾಗಿರಲಿ ಅವು ಪುರುಷನಿಗೆ ಗುಣಕರ್ಮಗಳಿಂದ ಬದ್ಧನನ್ನಾಗಿ ಮಾಡುವುವು ಮತ್ತು ಸಂಸಾರಿಯನ್ನಾಗಿ ಮಾಡುವುವು ।೧೦೬॥ ಘಟದಲ್ಲಿನ ನೀರು ಸೂರ್ಯನ ಪ್ರತಿಬಿಂಬಕ್ಕೆ ಹೇಗೆ ಸಿಕ್ಕಿಹಾಕಿಕೊಂಡಿರುವಂತೆ ತೋರುವುದೋ, ಅದರಂತೆಯೇ ಈ ಮೂರು ಗುಣಕಾರಣವಾಗಿ ಜೀವವು ಬಂಧನದಲ್ಲಿ ಬದ್ಧಿರುವುದು ಎಂಬಂತೆ ತೋರುತ್ತಿರುವುದು ।೧೦೭॥ ಘಟದಲ್ಲಿನ ನೀರು ಹೊಲಸಾಗಿದ್ದರೆ ಅದರಲ್ಲಿನ ಸೂರ್ಯನ ಪ್ರತಿಬಿಂಬವೂ ಕೂಡ ಮಲಿನವಾಗಿ ತೋರುತ್ತಿರುವುದು. ಅದರಲ್ಲಿನ ನೀರು ಅಲುಗಾಡಲು ಪ್ರತಿಬಿಂಬವೂ ಕೂಡ ಗಡಗಡ ನಡುಗುವಂತೆ ತೋರುತ್ತಿರುವುದು ।೧೦೮॥ ಈ ಪ್ರಕಾರವಾಗಿ ಮೂರು ಗುಣಗಳ ಯಾವ ಕರ್ಮಾಚರಣೆಗಳು ಇವೇ ಶುದ್ಧ ಬ್ರಹ್ಮನಿಗೆ ಜೀವತ್ವಕ್ಕೆ ತರುವುವು. ಈ ಜೀವದ ಬಂಧನೆಯನ್ನು ಬಿಡಿಸುವುದಕ್ಕಾಗಿ ಭಗವದ್ಭಜನೆಯನ್ನು ಮಾಡಬೇಕು ।೧೦೯॥ ಗುಣಗಳ ಬಂಧನವನ್ನು ಜಯಿಸಲು ಸದ್ಗುರುಗಳವರಿಗೆ ಶರಣಾಗಬೇಕು. ನನ್ನ ಭಾವನೆಯಿಂದ ಸದ್ಗುರುಗಳವರಲ್ಲಿ ಭಜನೆಯನ್ನು ಮಾಡಲು ಆಗ ಶುದ್ಧವಾಗಿರುವ ಸತ್ತ್ವಗುಣವು ಬೆಳೆಯುವುದು ।೧೧೦॥

ಪಾಯೀ ಜಡಲೀ ಲೋಹಾಚೀ ಬೇಡೀ । ತೇ ಲೋಹೇಚಿ ಲೋಹಾರ ತೋಡೀ । ತೇವೀ ಸತ್ವಗುಣಾಚಿಯಾ ವಾಢೀ । ತ್ರಿಗುಣಾಂತೇ ತೋಡೀ ಗುರುರಾವೋ ।।೪೧೧।। ತೇಥ ಪ್ರವೇಶಾವಯಾ ಗುಣಾತೀತೀ । ಅವಶ್ಯ ಕರಾವೀ ಗುರುಭಕ್ತೀ । ಜೇ ಗುರುಭಜನೀ ವಿಶ್ವಾಸತೀ । ತ್ಯಾಂಸೀ ಚಾರೀ ಮುಕ್ತೀ ಆಂದಣ್ಯಾ ।।೪೧೨।। ಜ್ಯಾಸೀ ಗುರುಚರಣೀ ಭಗವದ್ಭಾವೋ । ತ್ಯಾಚೇ ಸೇವೇಸೀ ಯೇ ಬ್ರಹ್ಮಸದ್ಭಾವೋ । ತೇಥೇ ಬ್ರಹ್ಮಸದ್ಭಾವೇಸೀ ಪಹಾ ಹೋ । ಮೀ ದೇವಾಧಿದೇವೋ ಸಬಾಹ್ಯ ತಿಷ್ಠೇ ।।೪೧೩।। ಜೋ ಗುರುಚರಣೀ ಅನನ್ಯ ಶರಣ । ತೋ ಸಹಜೇ ಹೋಯ ಬ್ರಹ್ಮಸಂಪನ್ನ । ಗುರುರೂಪೇ ಕರಿತಾ ಮಾಝೇ ಭಜನ । ಬ್ರಹ್ಮಸಮಾಧಾನ ಮದ್ಭಕ್ತಾ ।।೪೧೪।। ಉದ್ಧವಾ ಐಸೇ ಮಾಝೇ ಭಜನ । ಸಮೂಳ ಜಾಣಶೀ ತೂ ಸಂಪೂರ್ಣ । ಯಾಲಾಗೀ ''ಸೌಮ್ಯ'' ಹೇ ವಿಶೇಷಣ । ಸ್ವಮುಖೇ ಶ್ರೀಕೃಷ್ಣ ಸಂಬೋಧೀ ।।೪೧೫।। ಭಾಗ್ಯೇ ನರದೇಹ ಪಾವಲ್ಯಾ ಜಾಣ । ಅವಶ್ಯ ಕರಾವೇ ಮಾಝೇ ಭಜನ । ಯೇಚಿ ಅರ್ಥೀಚೇ ನಿರೂಪಣ । ಸ್ವಮುಖೇ ಶ್ರೀಕೃಷ್ಣ ಪ್ರತಿಪಾದೀ ।।೪೧೬।।

ತಸ್ಮಾದ್ದೇಹಮಿಮಂ ಲಬ್ಧ್ವಾ ಜ್ಞಾನವಿಜ್ಞಾನಸಂಭವಮ್ ।।೩೩।। ಗುಣಸಂಗಂ ವಿನಿರ್ಧೂಯ ಮಾಂ ಭಜಂತು ವಿಚಕ್ಷಣಾಃ ।।

ಅರ್ಥ:- ಈ ಮನುಷ್ಯ ಶರೀರವು ಅತ್ಯಂತ ದುರ್ಲಭವಾಗಿರುವುದು. ಈ ಶರೀರದಲ್ಲಿ ತತ್ವಜ್ಞಾನ ಮತ್ತು ಅದರಲ್ಲಿ ನಿಷ್ಠಾರೂಪ ವಿಜ್ಞಾನದ ಪ್ರಾಪ್ತಿಯಾಗಬಲ್ಲದು. ಆದ್ದರಿಂದ ಬುದ್ಧಿವಂತ ಪುರುಷರು ಆಸಕ್ತಿಯನ್ನು ಬಿಟ್ಟು ನನ್ನ ಭಜನೆಯನ್ನು ಮಾಡಬೇಕು.

ಜ್ಯಾ ನರ ದೇಹಾಕಾರಣೇ । ಅಮರ ಉತ್ಕಂಠಿತ ಮನೇ । ತ್ಯಾ ದೇಹಾಚೇ ಜಾಹಲೇಪಣೇ । ಜ್ಞಾನ ಪಾವಣೇ ನಿಷ್ಟಂಕ ।।೪೧೭।। ನರದೇಹ ಪಾವಲ್ಯಾ ಜಾಣ । ಆಪಣಚಿ ನವ್ಹೇ ಬ್ರಹ್ಮಜ್ಞಾನ । ತೇಥೇ ಕರಾವೇ ಮಾಝೇ ಭಜನ । ದೇಹಾಭಿಮಾನ ಸಾಂಡೂನಿ ।।೪೧೮।। ಕರಿತಾ ಮಾಝೇ ಅನನ್ಯ ಭಜನ। ಸಹಜೇ ವಾಢೇ ಸತ್ತ್ವಗುಣ । ಸತ್ವಗುಣಾಸ್ತವ ಜಾಣ । ಉಪಜೇ ಜ್ಞಾನ ಸವಿವೇಕ ।।೪೧೯।। ವಿವೇಕಜ್ಞಾನಾಚಿಯೇ ವೃತ್ತೀ । ತಜ ತಮ ದೋನೀ ಝಡತೀ । ಶೋಧಿತಸತ್ತ್ವಾಚಿಯೇ ಸ್ಥಿತೀ । ಅಭೇದ ಭಕ್ತೀ ಉಲ್ಹಾಸೇ ।।೪೨೦।। ಕರಿತಾ ಮಾಝೇ ಅಭೇದ ಭಜನ। ಹೋಯ ಸ್ವಾನಂದಾಚೇ ಸ್ವಾದನ । ತ್ಯಾ ನಾಂವ ಬೋಲಿಜೇ ವಿಜ್ಞಾನ । ತೇಥ ತಿನೀ ಗುಣ ಮಿಥ್ಯಾತ್ವೇ ।।೪೨೧।। ನರದೇಹ ಜೋಡಲಿಯಾ ಹಾತೀ । ಪ್ರಾಣ್ಯಾಸೀ ಏವಢೀ ಪ್ರಾಪ್ತಿ । ಯಾಲಾಗೀ ಮನುಷ್ಯದೇಹೀ ಭಕ್ತೀ । ಅವಶ್ಯ ಸಮಸ್ತೀ ಕರಾವೀ ।।೪೨೨।।

ಕಾಲುಗಳಲ್ಲಿನ ಕಬ್ಬಿಣದ ಬೇಡಿಗಳು ಬಿದ್ದಿರಲು ಆಗ ಕಮ್ಮಾರನು ಅವುಗಳನ್ನು ಕಬ್ಬಿಣದಿಂದಲೇ ಮುರಿದುಹಾಕುವಂತೆ ಸತ್ವಗುಣವು ಬೆಳೆಯುತ್ತಲೇ ಸದ್ಗುರುಗಳು ಮೂರೂ ಗುಣಗಳನ್ನು ಮುರಿದು ಹಾಕುವರು ।।೪೧೧।। ಆದ್ದರಿಂದ ಗುಣಾತೀತನಾಗುವುದಕ್ಕಾಗಿ ಅಂತಃಕರಣಪೂರ್ವಕವಾಗಿ ಗುರುಭಕ್ತಿಯನ್ನು ಅವಶ್ಯವಾಗಿ ಮಾಡಬೇಕು. ಗುರುಭಜನೆಯಲ್ಲಿ ದೃಢವಾದ ಶ್ರದ್ಧೆಯನ್ನಿಟ್ಟರೆ ಅವರಿಗೆ ನಾಲ್ಕೂ ಮುಕ್ತಿಗಳು ದಾಸಿಯರಾಗುವುವು ।।೪೧೨।। ಸದ್ಗುರುಗಳ ಚರಣಗಳಲ್ಲಿ ಯಾರ ಭಗವದ್ಭಾವನೆವಿರುವದೋ ಆತನ ಸೇವೆಗೆ ಬ್ರಹ್ಮಭಾವನೆಯೂ ಕೂಡ ಬರುವುದು. ಹಾಗೆಯೇ ದೇವಾಧಿದೇವನಾಗಿರುವ ನಾನೂ ಸಹ ಆತನ ಸೇವೆಗಾಗಿ ಒಳಹೊರಗೆ ನಿಂತುಕೊಂಡಿರುವೆನು ।।೪೧೩।। ಯಾರು ಅನನ್ಯ ಭಾವದಿಂದ ಸದ್ಗುರುಗಳಿಗೆ ಶರಣು ಹೋಗುವರೋ, ಆತನು ಸಹಜವಾಗಿಯೇ ಬ್ರಹ್ಮಸ್ವರೂಪನಾಗುವನು. ಗುರುರೂಪದಿಂದ ನನ್ನ ಭಜನೆಯನ್ನು ಮಾಡಲು ಆಗ ಭಕ್ತನಿಗೆ ಬ್ರಹ್ಮಸುಖದ ಪ್ರಾಪ್ತಿಯಾಗುವುದು ।।೪೧೪।। ಹೇ ಉದ್ಧವಾ, ಇಂತಹ ನನ್ನ ಭಜನೆಯನ್ನು ನೀನು ಸಂಪೂರ್ಣವಾಗಿ ತಿಳಿದುಕೊಂಡಿರುವೆ. ಎಂದು ಹೀಗೆ ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ''ಸೌಮ್ಯ'' ಎಂದು ಸ್ವಮುಖದಿಂದ ಸಂಬೋಧಿಸಿದನು ।।೪೧೫।। ಮಹಾಭಾಗ್ಯದಿಂದ ಈ ಮನುಷ್ಯ ಜನ್ಮವು ಪ್ರಾಪ್ತವಾಗಿರುವುದು. ಆದ್ದರಿಂದ ಅಂತಃಕರಣದಿಂದ ನನ್ನ ಭಜನೆಯನ್ನು ಮಾಡಬೇಕು. ಈ ವಿಷಯವನ್ನು ಕುರಿತು ಸ್ವತಃ ಶ್ರೀಕೃಷ್ಣನು ನಿರೂಪಣೆಯನ್ನು ಮಾಡುತ್ತಿರುವನು ।।೪೧೬।।

ಈ ನರದೇಹದ ಪ್ರಾಪ್ತಿಗಾಗಿ ಸ್ವರ್ಗದಲ್ಲಿನ ಅಮರರು ಉತ್ಕಟೇಚ್ಛೆಯನ್ನು ಮಾಡುತ್ತಿರುವರು. ಇಂತಹ ದುರ್ಲಭವಾದ ಮನುಷ್ಯ ಶರೀರವು ಪ್ರಾಪ್ತವಾಗಿರುವುದರಿಂದ ಅಖಂಡವಾಗಿ ಜ್ಞಾನ ಸಂಪಾದನೆಯನ್ನು ಮಾಡುತ್ತಿರಬೇಕು ।।೪೧೭।। ಈ ನರದೇಹವು ಪ್ರಾಪ್ತವಾಯಿತೆಂದರೆ ಬ್ರಹ್ಮಜ್ಞಾನವು ತಾನೇ ತಾನಾಗಿ ಪ್ರಾಪ್ತವಾಗಲಾರದು. ಅದಕ್ಕಾಗಿ ದೇಹದ ಅಭಿಮಾನವನ್ನು ಬಿಟ್ಟು ನನ್ನ ಭಜನೆಯನ್ನು ಮಾಡಬೇಕಾಗುವುದು ।।೪೧೮।। ಅನನ್ಯ ಭಾವದಿಂದ ನನ್ನ ಭಜನೆಯನ್ನು ಮಾಡಲು ಆಗ ಸತ್ವಗುಣವು ಸಹಜವಾಗಿ ಬೆಳೆಯುವುದು. ಆ ಯಾವ ಸತ್ವಗುಣದಿಂದ ವಿವೇಕಯುಕ್ತ ಜ್ಞಾನವು ಹೃದಯದಲ್ಲಿ ಪ್ರಕಟವಾಗುವುದು ।।೪೧೯।। ವಿವೇಕಜ್ಞಾನದಿಂದ ರಜ, ತಮ ಗುಣಗಳು ಸಹಜವಾಗಿ ಉದುರಿಬೀಳುವುವು. ಆ ಯಾವ ಶುದ್ಧ ಸತ್ವದ ಸ್ಥಿತಿಯಲ್ಲಿ ಅಭೇದ ಭಕ್ತಿಯು ಅತ್ಯಂತ ಉತ್ಸಾಹದಿಂದ ಬೆಳೆಯುವುದು ।।೪೨೦।। ನನ್ನ ಅಭೇದ ಭಜನೆಯನ್ನು ಮಾಡುವುದರಿಂದ ಸ್ವಾನಂದದ ಅನುಭವವು ಬರುವುದು. ಮತ್ತು ಇದಕ್ಕೇನೇ ವಿಜ್ಞಾನ ಎಂದು ಹೇಳುವರು. ಅಲ್ಲಿ ಮೂರು ಗುಣಗಳು ಮಿಥ್ಯೆಯಾಗಿವೆ ಎಂಬ ನಿಶ್ಚಯವಾಗುವುದು ।।೪೨೧।। ನರದೇಹದ ಪ್ರಾಪ್ತಿಯಿಂದ ಪ್ರಾಣಿಗಳಿಗೆ ಇಷ್ಟೊಂದು ಲಾಭವಾಗುವುದು. ಆದ್ದರಿಂದ ಮನುಷ್ಯ ದೇಹದಲ್ಲಿ ಸರ್ವರೂ ನನ್ನ ಭಕ್ತಿಯನ್ನು ಅವಶ್ಯವಾಗಿ ಮಾಡಬೇಕು ।।೪೨೨।।

ಹೇ ಭಾಗವತೀಚೇ ಅತಿಗುಹ್ಯ ಜ್ಞಾನ । ಮುಖ್ಯತ್ವೇಸೀ ಭಕ್ತಿಪ್ರಾಧಾನ್ಯ । ಭಾವೇ ಕರಿತಾ ಮಾಝೇ ಭಜನ । ಸ್ತ್ರಿಯಾಶೂದ್ರಜನ ಉದ್ಧರತೀ ॥೪೨೩॥ ನರದೇಹ ಜೋಡಲ್ಯಾ ಜಾಣ। ಮಾಝೀ ಭಕ್ತೀ ಕರಿತೀ ವಿಚಕ್ಷಣ । ಭಜನೇ ಜಿಣೋನಿ ಗುಣಾಗುಣ । ಬ್ರಹ್ಮ ಪರಿಪೂರ್ಣ ಸ್ವಯೇ ಹೋತೀ ॥೪೨೪॥ ಪೂರ್ಣ ಬ್ರಹ್ಮಾ ಚಿಯಾ ಪ್ರಾಪ್ತೀ । ನಿರಪೇಕ್ಷ ಮಾಝೀ ಭಕ್ತೀ । ತೋಚಿ ಭಜನಭಾವ ಶ್ರೀಪತೀ । ಪುನಃ ಪುನಃ ಶ್ಲೋಕಾರ್ಥೀ ದೃಢದಾವೀ ॥೪೨೫॥

ನಿಃಸಂಗೋ ಮಾಂ ಭಜೇದ್ವಿದ್ವಾನಪ್ರಮತ್ತೋ ಜಿತೇಂದ್ರಿಯಃ ॥೩೪॥
ರಜಸ್ತಮಶ್ಚಾಭಿಜಯೇತ್ಸತ್ತ್ವಸಂಸೇವಯಾ ಮುನಿಃ । ಸತ್ತ್ವಂ ಚಾಭಿಜಯೇದ್ಯುಕ್ತೋ ನೈರಪೇಕ್ಷ್ಯೇಣ ಶಾಂತಧೀಃ ॥೩೫॥

ಅರ್ಥ:- ವಿಚಾರಶೀಲ ಮಾನವನು ಲಕ್ಷ ಪೂರ್ವಕವಾಗಿ ಸತ್ವಗುಣದ ಸೇವನೆಯಿಂದ ರಜೋಗುಣ ಮತ್ತು ತಮೋಗುಣಗಳನ್ನು ಗೆಲ್ಲಬೇಕು. ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ನನ್ನ ಸ್ವರೂಪವನ್ನು ತಿಳಿದು ನನ್ನ ಭಜನೆಯನ್ನು ಮಾಡಬೇಕು. ಸ್ವಲ್ಪವೂ ಕೂಡ ಆಸಕ್ತಿ ಇಡಕೂಡದು. ರೋಗಮುಕ್ತಿಯಿಂದ ಚಿತ್ತಕ್ಕೆ ಶಾಂತಗೊಳಿಸಿ ಮತ್ತು ನಿರಪೇಕ್ಷೆಯ ಮುಖಾಂತರವಾಗಿ ಸತ್ವಗುಣದ ವಿಜಯವನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಈ ಪ್ರಕಾರವಾಗಿ ಗುಣಗಳಿಂದ ಮುಕ್ತವಾಗಿ ಜೀವವು ತನ್ನ ಜೀವಭಾವವನ್ನು ಬಿಟ್ಟುಕೊಡುವುದು ಮತ್ತು ನನ್ನಲ್ಲಿ ಏಕರೂಪವಾಗುವುದು.

ಕರೂನಿ ವಿಷಯಾಂಚೀ ವಿರಕ್ತೀ । ಹೃದಯೀ ನಾಪೇಕ್ಷಾವೀ ಮುಕ್ತೀ । ಐಸೀ ನಿರಪೇಕ್ಷ ಮಾಝೀ ಭಕ್ತೀ । ವಾಢತ್ಯಾ ಪ್ರೀತೀ ಕರಾವೀ ॥೪೨೬॥ ತೇಣೇ ಅನಿವಾರ ಸತ್ತ್ವಶುದ್ಧೀ । ಸರ್ವಭೂತೀ ಭಗವದ್ಬುದ್ಧೀ । ದೃಢ ವಾಢೇ ಗಾ ತ್ರಿಶುದ್ಧೀ । ಹೇ ಭಜನಸಿದ್ಧೀ ಸಾಧಕಾ ॥೪೨೭॥ ಐಸೇ ಕರಿತಾ ಮಾಝೇ ಭಜನ । ವಿಸ್ಮರಣಾಸೀ ಯೇ ಮರಣ । ಸರ್ವೇಂದ್ರಿಯೀ ಸಾವಧಪಣ । ಸಹಜೇ ಜಾಣ ಠಸಾವೇ ॥೪೨೮॥ ತೇವ್ಹಾ ರಜ ತಮ ದೋನೀ ಗುಣ । ನಿಃಶೇಷ ಜಾತೀ ಹಾರಪೋನ । ಶುದ್ಧಸತ್ವಾಚೇ ಸ್ಫುರಣ । ತೇಣೇ ಸ್ವಾನಂದ ಪೂರ್ಣ ಸಾಧಕಾ ॥೪೨೯॥ ಕೇವಳ ಉರಲ್ಯಾ ಸತ್ತ್ವಗುಣ । ಸಾಧಕಾ ಐಸೇ ಸ್ಫುರಣ । ಜಗಾಮಾಜೀ ಏಕ ಪಾವನ । ಧನ್ಯ ಧನ್ಯ ಮೀ ಹೋಯೇ ॥೪೩೦॥ ಮೀ ಪಾವಲೋ ಶುದ್ಧ ಬೋಧ । ಮಜ ಪ್ರಕಟಲಾ ಪರಮಾನಂದ । ಐಸಾ ಸುಖಾಚಾ ಜೋ ಸ್ಫುಂದ । ತೋ ಸತ್ತ್ವಬೋಧ ಸಾಧಕಾ ॥೪೩೧॥ ಐಸಾ ಉರಲಾ ಜೋ ಸತ್ತ್ವಗುಣ । ತೋ ನಿವಾರಾವಯಾ ಸಾಧನ ಕೋಣ । ಮೀ ಸ್ವಯೇ ಸುಖಸ್ವರೂಪ ಆಪಣ । ಮಜ ಸುಖಾಚೇ ಸ್ಫುರಣ ತೇ ಮಾಯಾ ॥೪೩೨॥ ಗೂಳ ಗುಳಾ ಗೋಡಪಣೇ ಪಾಂಗೇ । ಕೀ ದುಧಾ ದೂಧ ಗೋಡ ಲಾಗೇ । ತೈಸಾ ಸುಖರೂಪ ಮೀ ಸರ್ವಾಂಗೇ । ವೃಥಾ ಸುಖಭೋಗೇ ಕಾ ಪುಂಜೇ ॥೪೩೩॥

ಇದು ಭಾಗವತದಲ್ಲಿನ ಗುಹ್ಯಜ್ಞಾನವಾಗಿರುವುದು. ಇದು ಪ್ರಾಮುಖ್ಯದಿಂದ ಭಕ್ತಿಪ್ರಧಾನವಾಗಿರುವುದು. ಭಕ್ತಿಭಾವದಿಂದ ಹೀಗೆ ನನ್ನ ಭಜನೆಯನ್ನು ಮಾಡುವುದರಿಂದ ಸ್ತ್ರೀಯರು ಹಾಗೂ ಶೂದ್ರರು ಉದ್ಧಾರರಾಗುವರು ॥೪೨೩॥ ಆದ್ದರಿಂದಲೇ ನರದೇಹವು ಪ್ರಾಪ್ತವಾಗಲು ಜಾಣ ಜನರು ನನ್ನ ಭಕ್ತಿಯನ್ನು ಮಾಡುವರು ಮತ್ತು ನನ್ನ ಪ್ರೇಮಮಯ ಭಜನೆಯಿಂದ ಗುಣಾಗುಣಗಳನ್ನು ಜಯಿಸಿ ಸ್ವತಃ ಬ್ರಹ್ಮನಲ್ಲಿ ಏಕರೂಪರಾಗುವರು ॥೪೨೪॥ ಪೂರ್ಣ ಬ್ರಹ್ಮದ ಪ್ರಾಪ್ತಿಗಾಗಿ ನನ್ನ ಭಕ್ತಿಯನ್ನು ನಿರಪೇಕ್ಷ ಭಾವನೆಯಿಂದ ಮಾಡಬೇಕು. ಇದೇ ಭಜನೆಯ ಪ್ರಕಾರವನ್ನು ಶ್ರೀಕೃಷ್ಣನು ಪುನಃ ಪುನಃ ದೃಢೀಕರಿಸಿ ಮುಂದಿನ ಶ್ಲೋಕದಲ್ಲಿ ಹೇಳುತ್ತಿರುವನು ॥೪೨೫॥

ವಿಷಯಗಳ ವಿಷಯದಲ್ಲಿ ವಿರಕ್ತರಾಗಬೇಕು. ಅಂತಃಕರಣದಲ್ಲಿ ಮುಕ್ತಿಯ ಇಚ್ಛೆಯನ್ನು ಸರ್ವಥಾ ಮಾಡಕೂಡದು. ಬೆಳೆಯುತ್ತಿರುವ ಪ್ರೇಮದಿಂದ ನನ್ನ ನಿರಪೇಕ್ಷ ಭಕ್ತಿಯನ್ನು ಮಾಡಬೇಕು ॥೪೨೬॥ ಹೀಗೆ ಮಾಡುವುದರಿಂದ ಸತ್ವಶುದ್ಧಿಯು ಅತಿಶಯವಾಗಿ ವೃದ್ಧಿಯಾಗುವುದು. ಸರ್ವ ಚರಾಚರ ವಿಷಯದಲ್ಲಿ ಭಗವದ್ಭಾವನೆಯು ದೃಢವಾಗುವುದು. ಇದು ಸಾಧನೆಯ ಭಜನಸಿದ್ಧಿಯಾಗಿರುವುದು ॥೪೨೭॥ ಈ ರೀತಿಯಿಂದ ನನ್ನ ಭಜನೆಯನ್ನು ಮಾಡಲು ವಿಸ್ಮರಣಕ್ಕೆ ಮರಣ ಉಂಟಾಗುವುದು ಮತ್ತು ಸರ್ವೇಂದ್ರಿಯಗಳಲ್ಲಿ ಎಚ್ಚರಿಕೆಯು ಸಹಜವಾಗಿ ನಟ್ಟಿಕೊಳ್ಳುವುದು ॥೪೨೮॥ ಆ ವೇಳೆಯಲ್ಲಿ ರಜ ಮತ್ತು ತಮ ಈ ಗುಣಗಳು ಪರಿಪೂರ್ಣವಾಗಿ ನಷ್ಟವಾಗುವುವು. ಶುದ್ಧ ಸತ್ವದ ಸ್ಫೂರ್ತಿಯಿಂದ ಸಾಧಕನಿಗೆ ಪೂರ್ಣ ಆತ್ಮಾನಂದದ ಪ್ರಾಪ್ತಿಯಾಗುವುದು ॥೪೨೯॥ ಕೇವಲ ಸತ್ವಗುಣವು ಉಳಿದುಕೊಂಡಾಗ ಮಾತ್ರ ಸಾಧಕನಿಗೆ ಇಂತಹ ಸ್ಫುರಣವು ಆಗುತ್ತಿರುವುದು. ಅದಾವುದೇಂದರೆ, ಈ ಜಗತ್ತಿನಲ್ಲಿ ನಾನೊಬ್ಬನೇ ಪಾವನನಾಗಿರುವೆನು. ನಾನು ಧನ್ಯ ಧನ್ಯನಾಗಿರುವೆನು ॥೪೩೦॥ ನನಗೆ ಶುದ್ಧವಾದ ಆತ್ಮಜ್ಞಾನವು ಪ್ರಾಪ್ತವಾಗಿರುವುದು. ನನ್ನಲ್ಲಿ ಪರಮಾನಂದವು ಪ್ರಕಟವಾಯಿತು. ಇಂತಹ ಸುಖದ ಅನುಭವವು ಕೇವಲ ಆತ್ಮಜ್ಞಾನವಾಗಿರುವ ಸಾತ್ವಿಕರಲ್ಲಿ ಮಾತ್ರ ಇರುವುದು ॥೪೩೧॥ ಈ ರೀತಿಯಲ್ಲಿರುವ ಯಾವ ಈ ಸತ್ವಗುಣವು ಉಳಿದುಕೊಂಡಿರುವುದು. ಇದರ ನಿವಾರಣೆಯನ್ನು ಯಾವ ಸಾಧನೆಯಿಂದ ಮಾಡಬೇಕು? ನಾನು ಸ್ವತಃ ಮಾತ್ರ ಸುಖರೂಪನಿರುವೆನು. ಅಂದಮೇಲೆ ನನಗೆ ಸ್ಫೂರ್ತಿಯಾಗುತ್ತಿರುವುದು ಇದು ಮಾಯೆಯಾಗಿರುವುದು ॥೪೩೨॥ ಬೆಲ್ಲವು ಎಂದಾದರೂ ಬೆಲ್ಲಕ್ಕೆ ನೀನು ಸಿಹಿಯಾಗಿರುವೆ ಎಂದು ಅದಕ್ಕೆ ಶ್ರೇಷ್ಠತೆಯನ್ನು ಕೊಡುವುದೇ? ಅಥವಾ ಹಾಲಿಗೆ ಹಾಲು ರುಚಿಯಾಗುವುದೇ? ಅದರಂತೆ ನಾನೇ ಸರ್ವಾಂಗದಿಂದ ಸುಖರೂಪನಾಗಿ ಇರುತ್ತಿರಲು ಸುಖೋಪಭೋಗದಿಂದ ವ್ಯರ್ಥವಾಗಿ ಏಕೆ ಉಬ್ಬಿಕೊಳ್ಳಬೇಕು? ॥೪೩೩॥

ಐಸೀ ಸಾಧಕೀ ಸ್ಫೂರ್ತಿ ಸ್ಫುರೇ । ತಂವ ಸತ್ತ್ವಗುಣ ಸ್ವರೂಪೀ ವಿರೇ । ತೇವ್ಹಾ ಸುಖಾಚಾಹೀ ಪುಂದ ಸರೇ । ನಿಜಸುಖ ಉರೇ ನಿಜಶಾಂತೀ ।।೪೩೪।। ಐಸೇ ನಿವಾರಲ್ಯಾ ತಿನೀ ಗುಣ। ಕೇವಳ ಉರೇ ನಿರ್ಗುಣ। ತೇಚಿ ಅರ್ಥೀಚೇ ನಿರೂಪಣ । ವಿಶದ ಶ್ರೀಕೃಷ್ಣ ಸಾಂಗತ ।।೪೩೫।।

ಸಂಪದ್ಯತೇ ಗುಣೈರ್ಮುಕ್ತೋ ಜೀವೋ ಜೀವಂ ವಿಹಾಯ್ ಮಾಮ್ । ಜೀವೋ ಜೀವವಿನಿರ್ಮುಕ್ತೋ ಗುಣೈಶ್ಚಾಶಯಸಂಭವೈಃ

ಅರ್ಥ:- ತ್ರಿಗುಣಗಳಿಂದ ಮುಕ್ತವಾಗಿರುವ ಜೀವವು ಇದು ಜೀವತ್ವದ ಕಾರಣ, ಲಿಂಗ ಶರೀರವು ಅದಕ್ಕೆ ಬಿಟ್ಟು ನನ್ನನ್ನು ಪ್ರಾಪ್ತವಾಗುವುದು. ಲಿಂಗಶರೀರದಿಂದ ಹಾಗೂ ಚಿತ್ತ ಜನ್ಯ ಗುಣಗಳಿಂದ ಸಂಪೂರ್ಣ ಮುಕ್ತವಾಗಿರುವ ಜೀವವು ನನ್ನ ಬ್ರಹ್ಮ ರೂಪದಿಂದ ಪರಿಪೂರ್ಣವಾಗುವುದು.

ವಾಢಲ್ಯಾ ಸತ್ವಗುಣಾಚಾ ಹರಿಖ । ತ್ಯಾತೇ ನಿರ್ದಳೀ ಶುದ್ಧ ಸತ್ತ್ವವಿವೇಕ । ಪಾಠೀ ವಿವೇಕೇಸೀ ಸತ್ತ್ವ ದೇಖ । ಹಾರಪೇ ನಿಃಶೇಖ ನಿಜಾತ್ಮಾ ರೂಪೀ ।।೪೩೬।। ಐಸೇ ನಿಮಾಲ್ಯಾತಿನೀಗುಣ । ನಿಮೇ ಕಾರ್ಯ ಕರ್ಮಕಾರಣ । ಲಿಂಗದೇಹ ನಾಶೇ ಸಂಪೂರ್ಣ । ಜೀವಾಸೀ ಜೀವಪಣ ಹೋಯ ಮಿಥ್ಯಾ ।।೪೩೭।। ತೇವ್ಹಾ ಕಾರ್ಯ ಕರ್ಮಕರ್ತಾ । ಭೋಗ್ಯ ಭೋಗ ಆಣಿ ಭೋಕ್ತಾ । ಜ್ಞಾನ ಜ್ಞೇಯ ಮೀ ಏಕ ಜ್ಞಾತಾ । ಯಾಚೀವಾರ್ತಾ ಅಸೇನಾ ।।೪೩೮।। ಐಸೇ ಹಾರಪಲ್ಯಾ ಜೀವಪಣ । ಸ್ವಯೇ ಸಹಜೇ ನಿಜನಿರ್ಗುಣ । ಹೋಉನಿ ಠಾಕೇ ಬ್ರಹ್ಮ ಪೂರ್ಣ । ಅಹಂಸೋಹಂಪಣ ಸಾಂಡೂನೀ ।।೪೩೯।। ಯಾಪರೀ ಮದ್ಭಕ್ತ ಜಾಣ । ಬ್ರಹ್ಮ ಹೋತೀ ಪರಿಪೂರ್ಣ । ತೇಚಿ ಜಾಹಲೇಪಣಾಚೇ ಲಕ್ಷಣ । ಶ್ಲೋಕಾರ್ಧೇ ಶ್ರೀಕೃಷ್ಣ ಸಾಂಗತ ।।೪೪೦।।

ಮಯ್ಯೆವ ಬ್ರಹ್ಮಾ ಪೂರ್ಣೋ ನ ಬಹಿರ್ನಾಂತರಶ್ಚರೇತ್ ।೩೬।।

ಅರ್ಥ:- ತದನಂತರ ಈತನು ಬಾಹ್ಯ ವಿಷಯಭೋಗದಿಂದ ಹಾಗೂ ಮನದಲ್ಲಿನ ವಿಷಯಚಿಂತನೆಯಿಂದ ಸ್ವರೂಪ ಸ್ಥಿತಿಯೊಂದಿಗೆ ಚ್ಯುತನಾಗಕೂಡದು.

ಪ್ರಪಂಚ ಏಕ ಪೂರ್ವೀ ಹೋತಾ । ಹೇ ಸಮೂಳ ಮಿಥ್ಯಾ ವಾರ್ತಾ । ಪುಢೇ ಹೋಈಲ ಮಾಗುತಾ । ಹೇಹೀ ಸರ್ವಥಾ ಅಸೇನಾ ।।೪೪೧।। ಜೈಸೇ ಆಂತ ಬಾಹೇರೀ ಭಾಗ । ನೇಣೇ ಸಾಖರೇಚೇ ಅಂಗ । ತೈಸೇ ಸಬಾಹ್ಯಭ್ಯಂತರ ಚಾಂಗ । ಬ್ರಹ್ಮ ನಿರ್ವ್ಯಂಗ ನಿಜಾನಂದೇ ।।೪೪೨।। ಐಸೇ ಪಾವಲ್ಯಾ ಬ್ರಹ್ಮ ಪರಿಪೂರ್ಣ । ಸಾಧಕಾಸೀ ನ ಯೇ ಮರಣ । ಪ್ರಾರಬ್ಧೇ ದೇಹೀ ಉರಲ್ಯಾ ಜಾಣ । ದೇಹಾಭಿಮಾನ ಬಾಧೀನಾ ।।೪೪೩।।

ಈ ಪ್ರಕಾರವಾಗಿ ಸಾಧಕನಿಗೆ ಸ್ಫೂರ್ತಿಯಾಗಲು ಆಗ ಸತ್ವಗುಣವು ಆತ್ಮಸ್ವರೂಪದಲ್ಲಿ ಸೇರಿಕೊಂಡುಬಿಡುವುದು. ಆಗ ಸುಖದ ಅನುಭವವು ಮುಗಿದುಹೋಗುವುದು. ಆತ್ಮಾನಂದವು ಮತ್ತು ಶಾಂತಿಯು ಅಖಂಡವಾಗಿ ಉಳಿದುಕೊಳ್ಳುವುದು ।।೪೩೪।। ಈ ಪ್ರಕಾರವಾಗಿ ಮೂರು ಗುಣಗಳು ಇಲ್ಲದಂತಾಗಲು ಆಗ ಕೇವಲ ನಿರ್ಗುಣ ಮಾತ್ರ ಉಳಿದುಕೊಳ್ಳುವುದು. ಈಗ ಶ್ರೀಕೃಷ್ಣನು ಆ ವಿಷಯವನ್ನು ಕುರಿತು ನಿರೂಪಣೆಯನ್ನು ಮಾಡುತ್ತಿರುವನು ।।೪೩೫।।

ಸತ್ವಗುಣದ ಹರ್ಷವು ಬೆಳೆಯಿತೆಂದರೆ ಆಗ ಶುದ್ಧ ಸತ್ವವಿವೇಕವು ಆ ಯಾವ ಹರ್ಷವನ್ನು ನಷ್ಟಗೊಳಿಸುವುದು. ತದನಂತರ ವಿವೇಕಸಹ ಸತ್ವವು ಆತ್ಮಸ್ವರೂಪದಲ್ಲಿ ಪೂರ್ಣವಾಗಿ ಲೀನವಾಗುವುದು ।।೪೩೬।। ಈ ಪ್ರಕಾರವಾಗಿ ಮೂರು ಗುಣಗಳು ಇಲ್ಲದಾಗಲು ಆಗ ಕಾರ್ಯ,ಕರ್ಮ ಮತ್ತು ಕಾರಣ ಇವೂ ಕೂಡ ಇಲ್ಲದಾಗುವುವು. ಲಿಂಗದೇಹವು ನಾಶವಾಗುವುದು ಮತ್ತು ಜೀವದ ಜೀವತ್ವವು ಮಿಥ್ಯೆಯಾಗುವುದು ।।೪೩೭।। ತದನಂತರ ಕಾರ್ಯ, ಕರ್ಮ, ಕರ್ತಾ ಅಥವಾ ಭೋಗ್ಯ, ಭೋಗ, ಭೋಕ್ತಾ ಮತ್ತು ಜ್ಞಾನ, ಜ್ಞೇಯ, ನಾನೇ ಒಬ್ಬ ಜ್ಞಾತಾ ಎಂಬ ತ್ರಿಪುಟಿಗಳ ವಾರ್ತೆಯೂ ಕೂಡ ಇರುವುದಿಲ್ಲ ।।೪೩೮।। ಈ ಪ್ರಕಾರವಾಗಿ ಜೀವತ್ವವು ಇಲ್ಲದಾಗಲು ಆಗ ಆತನು ಸ್ವತಃ ಸಹಜವಾಗಿ ನಿರ್ಗುಣನಾಗಿ ಹಾಗೂ ಅಹಂಸೋಹಂ ಜಪಿಸುವುದನ್ನು ಬಿಟ್ಟುಕೊಟ್ಟು ತಾನು ಪರಿಪೂರ್ಣ ಬ್ರಹ್ಮವೇ ಆಗಿ ಇರುವನು ।।೪೩೯।। ಈ ಪ್ರಕಾರವಾಗಿ ನನ್ನ ಭಕ್ತರು ಪರಿಪೂರ್ಣವಾಗಿ ಬ್ರಹ್ಮಸ್ವರೂಪರಾಗುವರು. ಇದನ್ನೇ ಬ್ರಹ್ಮಸ್ವರೂಪವಾಗುವ ಲಕ್ಷಣಗಳನ್ನು ಶ್ರೀಕೃಷ್ಣನು ಮುಂದಿನ ಅರ್ಧಶ್ಲೋಕದಲ್ಲಿ ಹೇಳುವನು ।।೪೪೦।।

ಪೂರ್ವದಲ್ಲಿ ''ಒಂದು ಪ್ರಪಂಚವು ಇತ್ತು'' ಎಂಬ ಈ ವಿಚಾರವೇ ಪೂರ್ಣವಾಗಿ ಮಿಥ್ಯೆಯಾಗಿರುವುದು. ಅಂದಮೇಲೆ ''ಪುನಃ ಪ್ರಪಂಚವು ಆಗುವುದು'' ಎಂಬ ಮಾತೂ ಕೂಡ ಯಾವ ನಿಜವಾದದ್ದು? ।।೪೪೧।। ಸಕ್ಕರೆಯ ಸ್ವರೂಪದಲ್ಲಿ ಒಳಗೆ, ಹೊರಗೆ ಎಂಬುವ ಯಾವುದೂ ಇರುವುದಿಲ್ಲ. ಏಕೆಂದರೆ ಸಕ್ಕರೆಯು ಸರ್ವಾಂಗದಿಂದಲೂ ಸಿಹಿಯಾಗಿಯೇ ಇರುವುದು. ಅದರಂತೆಯೇ ಬ್ರಹ್ಮವು ಅಂತರ್ಬಾಹ್ಯವಾಗಿ ದೋಷರಹಿತ ನಿಜಾನಂದದಿಂದ ಪರಿಪೂರ್ಣವಾಗಿ ಇರುವುದು ।।೪೪೨।। ಹೀಗೆ ಪರಿಪೂರ್ಣ ಬ್ರಹ್ಮಸ್ವರೂಪವೇ ಪ್ರಾಪ್ತವಾಗಲು ಸಾಧಕನಿಗೆ ಮರಣವಾಗಲು ಸಾಧ್ಯವಿಲ್ಲ. ಒಂದು ವೇಳೆ ಪ್ರಾರಬ್ಧ ಯೋಗದಿಂದ ಆಯುಷ್ಯವು ಉಳಿದುಕೊಂಡರೆ ಆಗ ಆತನಿಗೆ ದೇಹದ ಅಭಿಮಾನವು ಬಾಧಿಸಲಾರದು ।।೪೪೩।।

ಬಾಹ್ಯ ನ ದೇಖೇ ದೃಶ್ಯದರ್ಶನ । ಅಂತರೀ ನಾಹೀ ವಿಷಯಸ್ಫುರಣ । ದೇಹೀಚೇ ನ ದೇಖೇ ದೇಹಪಣ। ಜೀವನ್ಮುಕ್ತಲಕ್ಷಣ ಯಾ ನಾಂವ ॥೪೪೪॥ ಬಾಹ್ಯ ದೇಖೇ ದೃಶ್ಯಪ್ರತೀತೀ । ಅಂತರೀ ವಿಷಯಾಂಚೀ ಆಸಕ್ತೀ । ಯಾ ನಾಂವ ಅಜ್ಞಾನಾಚೀ ಸ್ಥಿತೀ । ಅವಿದ್ಯಾಶಕ್ತೀ ಬಾಧಕ ॥೪೪೫॥ ತೇ ನಿರಸಾವಯಾ ಅವಿದ್ಯಾಬಂಧನ। ಅವಶ್ಯ ಕರಾವೇ ಮಾಝೇ ಭಜನ। ಹೇ ಜಾಣೋನಿ ಸಾಧುಸಜ್ಜನ । ಭಕ್ತೀಸೀ ಪ್ರಾಣ ವಿಕಿಲಾ ॥೪೪೬॥ ಮಾಝಿಯೇ ಭಕ್ತೀಪರತೀ । ಆಣಿಕ ನಾಹೀ ಉತ್ತಮ ಗತೀ । ತೇಹೀ ಭಜನ ಅಭೇದಯುಕ್ತೀ । ತೈ ಚಾರೀ ಮುಕ್ತೀ ಕಾಮಾರ್ಥ್ಯಾ ॥೪೪೭॥ ಹೃದಯೀ ವಿಷಯಾಚೀ ವಿರಕ್ತೀ । ವರೀ ಅಭೇದಭಾವೇ ಮಾಝೀ ಭಕ್ತೀ । ತೇ ಭಜನ ಅನನ್ಯ ಪ್ರೀತೀ । ತ್ಯಾಚಾ ಮೀ ಶ್ರೀಪತೀ ಆಜ್ಞಾಧಾರ ॥೪೪೮॥ ಭಕ್ತಿನಾಮಾಚಾ ಇತ್ಯರ್ಥ । ಮಾಝೇ ಸ್ವರೂಪೀ ನಿಜಭಾವಾರ್ಥ । ಯೇಣೇಚಿ ಲಾಭೇ ಪರಮಾರ್ಥ । ಸುಫಳ ಶಾಸ್ತ್ರಾರ್ಥ ಯಾ ನಾಂವ ॥೪೪೯॥ ಮಾಝಿಯೇ ಭಕ್ತೀಚೇನಿ ನಾಂವೇ । ಪಶುಪಕ್ಷೀ ಉದ್ಧರಾವೇ । ಮಾ ಮಾನವೀ ಭಜನಭಾವೇ । ಮ್ಯಾ ಅವಶ್ಯ ನ್ಯಾವೇ ನಿಜಧಾಮಾ ॥೪೫೦॥ ಯಾಲಾಗೀ ಸಾಂಡೋನಿ ವ್ಯುತ್ಪತ್ತೀ । ಜಾಣತೀ ನೇಣತೀ ಗಾ ಸಮಸ್ತೀ । ಭಾವೇ ಕರಾವೀ ಭಗವದ್ಭಕ್ತೀ । ತೈ ನಿಜಾತ್ಮಪ್ರಾಪ್ತೀ ಅನಾಯಾಸೇ ॥೪೫೧॥ ಭಾವೇ ಕರಿತಾ ಮಾಝೇ ಭಜನ । ಸ್ವಯೇ ನಿರ್ದಳತೀ ತಿನ್ಹೀ ಗುಣ । ಸಹಜೇ ಪ್ರಕಟೇ ನಿಜನಿರ್ಗುಣ । ಹೇ ಸತ್ಯ ಶ್ರೀಕೃಷ್ಣ ಬೋಲಿಲಾ ॥೪೫೨॥ ಜೇಥ ಉಗವಲೀ ಗುಣಗುಂತೀ । ತೇಥ ಪ್ರಕಟೇ ನಿಜಶಾಂತೀ । ಹೇಚಿ ಯೇ ಅಧ್ಯಾಯೀ ಶ್ರೀಪತೀ । ಉದ್ಧವಾಪ್ರತೀ ಬೋಲಿಲಾ ॥೪೫೩॥ ಯಾಲಾಗೀ ಜೇಥ ಭಗವದ್ಭಕ್ತೀ । ತೇಥ ಗುಣಜಯೋ ಲಾಭೇ ವೃತ್ತೀ । ಸಹಜೇ ಪ್ರಕಟೇ ನಿಜಶಾಂತೀ । ನಿಜಾತ್ಮಪ್ರಾಪ್ತೀ ಸ್ವತಃಸಿದ್ಧ ॥೪೫೪॥ ತೇ ನಿಜಭಕ್ತೀ ಮಾಝೀ ಜನನೀ । ಜ್ಯಾ ಪೈತಾ ಕೇಲೋ ಜನಾರ್ದನೀ । ಏಕಾ ಜನಾರ್ದನಚರಣೀ । ಮಿಳೋನಿ ಮಿಳಣೀ ಭಜತಚಿ ॥೪೫೫॥ ಪುಢಿಲೇ ಅಧ್ಯಾಯೀ ಕಥಾ ಗಹನ । ಐಕ ಊರ್ವಶೀ ಉಪಾಖ್ಯಾನ । ಜ್ಯಾ ಅಧ್ಯಾಯಾಚೇ ಕರಿತಾ ಪಠಣ । ಅಗಮ್ಯಾಗಮನದೋಷ ಹರತೀ ॥೪೫೬॥ ಜ್ಯಾ ಪುರುರವ್ಯಾಚೀ ವಿರಕ್ತೀ । ಸ್ವಮುಖೇ ವರ್ಣೀಲ ಶ್ರೀಪತೀ । ವೈರಾಗ್ಯೇ ನಿಜಾತ್ಮಪ್ರಾಪ್ತೀ । ಸಭಾಗ್ಯ ಪಾವತೀ ವೈರಾಗ್ಯ ॥೪೫೭॥

ಆತನು ಹೊರಗಿನ ದೃಶ್ಯ ಪದಾರ್ಥಗಳನ್ನು ನೋಡುವುದಿಲ್ಲ. ಆತನ ಅಂತರಂಗದಲ್ಲಿ ದೇಹದ ಸ್ಫುರಣೆಯು ಇರುವುದಿಲ್ಲ. ದೇಹದ ದೇಹತ್ವವನ್ನೂ ಕೂಡ ಆತನು ನೋಡುವುದಿಲ್ಲ. ಇದರ ನಾಮವೇ ಜೀವನ್ಮುಕ್ತಿಯ ಲಕ್ಷಣವಾಗಿರುವುದು ॥೪೪೪॥ ಹೊರಗಿನ ದೃಶ್ಯ ಪದಾರ್ಥಗಳ ಅನುಭವ ಪಡೆಯುವುದು ಮತ್ತು ಹೃದಯದಲ್ಲಿ ವಿಷಯಗಳ ಆಸಕ್ತಿಯನ್ನು ಹಿಡಿಯುವುದು, ಇದಕ್ಕೆ ಅಜ್ಞಾನದ ಸ್ಥಿತಿ ಎಂದೇ ಹೇಳುವರು. ಇದು ಅವಿದ್ಯೆಯ ಶಕ್ತಿಯಾಗಿದ್ದು ಬಾಧಕತೆಯಿಂದ ಕೂಡಿರುವುದು ॥೪೪೫॥ ಈ ಯಾವ ಅವಿದ್ಯೆಯ ಬಂಧನವನ್ನು ಮುರಿದು ಹಾಕುವುದಕ್ಕಾಗಿ ಪ್ರೇಮದಿಂದ ನನ್ನ ಭಜನೆಯನ್ನು ಮಾಡಬೇಕು. ಇದನ್ನು ತಿಳಿದುಕೊಂಡೇ ಸಂತ ಸಜ್ಜನರು ಭಕ್ತಿಗಾಗಿ ತಮ್ಮ ಪ್ರಾಣವನ್ನೇ ಮಾರಿಕೊಳ್ಳುವರು ॥೪೪೬॥ ನನ್ನ ಭಕ್ತಿಯ ಹೊರತಾದ ಅನ್ಯ ಯಾವ ಉತ್ತಮ ಗತಿಯು ಇರುವುದಿಲ್ಲ. ಮತ್ತು ಈ ಭಜನೆಯನ್ನು ಅಭೇದ ಭಾವದಿಂದ ಮಾಡಲು ಆಗ ನಾಲ್ಕೂ ಮುಕ್ತಿಗಳು ದಾಸಿಯಾಗುವುವು॥೪೪೭॥ ಅಂತಃಕರಣದಲ್ಲಿ ವಿಷಯಗಳ ವಿರಕ್ತಿ, ಅದರಲ್ಲಿ ನನ್ನ ಅಭೇದ ಭಾವದ ಭಕ್ತಿ ಪುನಃ ಅನನ್ಯಭಾವದ ಪ್ರೇಮಮಯ ಭಜನೆಯ ಸ್ಥಿತಿ ಹೀಗಿರುವ ಭಕ್ತರಲ್ಲಿ ಶ್ರೀಹರಿಯು ಅವರ ಆಜ್ಞಾಧಾರಕನಾಗಿರುವನು ॥೪೪೮॥ ಭಗವತ್ಸ್ವರೂಪದಲ್ಲಿ ಅಭಿನ್ನನಾಗಿರುವುದೇ ಭಕ್ತಿಯ ಲಕ್ಷಣವಾಗಿರುವುದು. ಈ ಭಕ್ತಿಯಿಂದ ಪರಮಾರ್ಥದ ಲಾಭವಾಗುವುದು. ಶಾಸ್ತ್ರದ ಸುಫಲವು ಇದೇ ಆಗಿರುವುದು ॥೪೪೯॥ ನನ್ನ ಭಕ್ತಿಯಿಂದ ಪಶು ಪಕ್ಷಿಗಳು ಉದ್ಧಾರವಾಗುತ್ತಿರುವುವು. ಅಂದಮೇಲೆ ಮಾನವರು ನನ್ನ ಭಕ್ತಿಯನ್ನು ಮಾಡಿದರೆ ಅವರನ್ನು ನಿಜಧಾಮಕ್ಕೆ ಅವಶ್ಯವಾಗಿ ನನಗೆ ಒಯ್ಯಬೇಕಾಗುವುದು ॥೪೫೦॥ ಆದ್ದರಿಂದ ವಿದ್ವತ್ತು, ಶಬ್ದಶಾಸ್ತ್ರ, ಇತ್ಯಾದಿ ಎಲ್ಲವನ್ನೂ ಬದಿಗೆ ಸರಿಸಿ ತಜ್ಞರಾಗಿರಲಿ, ಅಜ್ಞರಾಗಿರಲಿ ಸರ್ವರೂ ಭಕ್ತಿಭಾವದಿಂದ ನನ್ನ ಭಜನೆಯನ್ನು ಮಾಡಬೇಕು. ಇದರಿಂದ ಸಹಜವಾಗಿ ಆತ್ಮಪ್ರಾಪ್ತಿಯಾಗುವುದು ॥೪೫೧॥ ಪರಮ ಶ್ರದ್ಧೆಯಿಂದ ನನ್ನ ಭಜನೆಯನ್ನು ಮಾಡಿದರೆ ಮೂರೂ ಗುಣಗಳು ನಾಶವಾಗುವುವು ಮತ್ತು ನಿಜ ನಿರ್ಗುಣವು ಸಹಜವಾಗಿ ಪ್ರಕಟವಾಗುವುದು. ಇದನ್ನು ನಿಶ್ಚಯವಾಗಿ ಸತ್ಯವೆಂದು ತಿಳಿಯಿರಿ ಎಂದು ಶ್ರೀಕೃಷ್ಣನು ಹೇಳಿರುವನು ॥೪೫೨॥ ಎಲ್ಲಿ ಮೂರು ಗುಣಗಳ ತೊಡಕು ಇಲ್ಲದಾಗುವುದೋ, ಅಲ್ಲಿ ಆತ್ಮಶಾಂತಿಯು ಪ್ರಕಟವಾಗುವುದು. ಇದನ್ನೇ ಈ ಅಧ್ಯಾಯದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ತಿಳಿಸಿರುವನು ॥೪೫೩॥ ಅದಕ್ಕಾಗಿ ಭಗವದ್ಭಕ್ತಿಯು ಇದ್ದರೆ ಗುಣಗಳಲ್ಲಿ ಜಯವನ್ನು ತಿಳಿಸುವ ವೃತ್ತಿಯು ನಿರ್ಮಾಣವಾಗುವುದು. ತದನಂತರ ಸಹಜವಾಗಿಯೇ ಆತ್ಮಶಾಂತಿಯು ಪ್ರಕಟವಾಗುವುದು. ಸ್ವತಃಸಿದ್ಧವಾಗಿರುವ ಆತ್ಮಸ್ವರೂಪವು ಪ್ರಾಪ್ತವಾಗುವುದು ॥೪೫೪॥ ಈ ಯಾವ ನಿಜಭಕ್ತಿಯೇ ನನ್ನ ತಾಯಿಯಾಗಿರುವಳು. ಜನಾರ್ದನಸ್ವಾಮಿಯವರ ಚರಣಕಮಲದ ಹತ್ತಿರ ಕುಳಿತು ಏಕನಾಥನು ಭಜನೆಯಲ್ಲಿ ತಲ್ಲೀನನಾಗಿರುವನು ॥೪೫೫॥ ಈಗ ಮುಂದಿನ ಅಧ್ಯಾಯವನ್ನು ಕೇಳು. ಉರ್ವಶಿಯ ಆಖ್ಯಾನದ ಕಥೆಯು ಅತಿಗಹನವಾಗಿರುವುದು. ಈ ಯಾವ ಅಧ್ಯಾಯದ ಪಠಣೆಯನ್ನು ಮಾಡುವುದರಿಂದ ಪರಸ್ತ್ರೀಗಮನಾದಿಯಂತಹ ದೋಷಗಳು ಇಲ್ಲದಾಗುವುವು ॥೪೫೬॥ ಆ ಯಾವ ಪುರುರವಾನ ವಿರಕ್ತಿಯ ವರ್ಣನೆಯನ್ನು ಶ್ರೀಹರಿಯು ತನ್ನ ಸ್ವಮುಖದಿಂದ ಮಾಡುವನು. ಈ ಯಾವ ವೈರಾಗ್ಯದ ಯೋಗದಿಂದ ಆತ್ಮಪ್ರಾಪ್ತಿಯಾಗುವುದು. ಭಾಗ್ಯವಂತರಿಗೆ ಮಾತ್ರ ಈ ವೈರಾಗ್ಯವು ಲಭಿಸುವುದು ॥೪೫೭॥

ತ್ಯಾ ವೈರಾಗ್ಯಾಚೇ ನಿರೂಪಣ । ಅತಿಗೋಡ ನಿರೂಪೀ ಶ್ರೀಕೃಷ್ಣ । ಶ್ರೋತಾ ಕೃಪಾ ಕರಾವೀ ಪೂರ್ಣ । ದ್ಯಾವೇ ಅವಧಾನ ಕಥೇಸೀ ॥೫೫೮॥ ಜೇ ಕಥೇಚೇನಿ ಅವಧಾನೇ । ದುರಿತದೋಷ ಹೋತೀ ದಹನೇ । ಬಹ್ಮೀ ಬ್ರಹ್ಮತ್ವ ಪಾವಣೇ । ಹೋಉನಿ ಠಾಕಣೇ ಚಿನ್ಮಾತ್ರ ॥೫೫೯॥ ಏವಢ್ಯಾ ನಿರೂಪಣಾಚೀ ಗೋಡೀ । ಪುಢಿಲೇ ಅಧ್ಯಾಯೀ ಆಹೇ ಪುಢೀ । ಏಕಾ ಜನಾರ್ದನಕೃಪಾ ಗಾಢೀ । ಪರಾಪರಥಡೀಪ್ರಾಪಕ ॥೫೬೦॥ ಭಾವೇ ಧರಿತಾ ಜನಾರ್ದನಚರಣ । ಬಾಧೂ ನ ಶಕೇ ಬಾಧಕಪಣ । ಏಕಾ ಜನಾರ್ದನಾ ಶರಣ। ರಸಾಳ ನಿರೂಪಣ ಪುಢೇ ಆಹೇ ॥೫೬೧॥

ಇತಿ ಶ್ರೀಭಾಗವತ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ ಗುಣನಿರ್ಗುಣನಿರೂಪಣಂ ನಾಮ ಪಂಚವಿಂಶೋಽಧ್ಯಾಯಃ ॥೨೫॥

॥ಶ್ರೀಕೃಷ್ಣಾರ್ಪಣಮಸ್ತು॥

ಈ ವೈರಾಗ್ಯದ ನಿರೂಪಣೆಯನ್ನು ಶ್ರೀಕೃಷ್ಣನು ಬಹು ರಸಭರಿತವಾಗಿ ಮಾಡಿರುವನು. ಆದ್ದರಿಂದ ಶ್ರೋತೃಗಳವರು ಕೃಪೆ ಮಾಡಿ ಕಥೆಯತ್ತ ಸರಿಯಾಗಿ ಲಕ್ಷವನ್ನು ಕೊಡಬೇಕು ॥೫೫೮॥ ಈ ಕಥೆಯನ್ನು ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡುವುದರಿಂದ ಮಹಾಪಾಪಗಳ ದೋಷವು ಸುಟ್ಟು ಭಸ್ಮವಾಗುವುದು. ಬ್ರಹ್ಮದಲ್ಲಿ ಬ್ರಹ್ಮವನ್ನು ಪಡೆದು ಸಾಧಕನು ಬ್ರಹ್ಮಸ್ವರೂಪನಾಗುವನು ॥೫೫೯॥ ಮುಂದಿನ ಅಧ್ಯಾಯದಲ್ಲಿ ನಿರೂಪಣೆಯ ಇಂತಹ ಉತ್ಕೃಷ್ಟವಾದ ರಸವಿರುವುದು. ಮಾಯೆಯ ಆಚೆ ದಂಡೆಗೆ ಪಾರು ಮಾಡುವಂತಹ ಶ್ರೀಜನಾರ್ದನಸ್ವಾಮಿಯವರ ಅಪಾರ ಕೃಪೆಯಾಗಿರುವುದು ॥೫೬೦॥ ಭಕ್ತಿಭಾವದಿಂದ ಜನಾರ್ದನಸ್ವಾಮಿಯವರ ಚರಣ ಕಮಲಗಳನ್ನು ಹಿಡಿದರೆ ಯಾವುದೇ ಪ್ರಕಾರದ ದುಃಖದ ಬಾಧೆಯು ಆಗುವುದಿಲ್ಲ. ಈ ಯಾವ ಜನಾರ್ದನಸ್ವಾಮಿಯವರಲ್ಲಿ ಏಕನಾಥನು ಅನನ್ಯಭಾವದಿಂದ ಶರಣಾಗಿರುವನು. ಈಗ ರಸಾಳವಾದ ನಿರೂಪಣೆಯು ಮುಂದಿರುವುದು ॥೫೬೧॥

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಏಕನಾಥ ಮಹಾರಾಜರ ಭಾಷ್ಯೆಯ ಗುಣನಿರ್ಗುಣ ನಿರೂಪಣೆಯ ನಾಮದ ಇಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣವು.

॥ಶ್ರೀಕೃಷ್ಣಾರ್ಪಣಮಸ್ತು॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತಾರನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ದೇವ ಜಗನ್ಮೋಹನ । ಮೋಹಿನೀಮೋಹನಾ ಆದ್ಯಕಾರಣ। ಕಾರ್ಯಕಾರಣಾತೀತ ಚಿದ್‌ಘನ । ಜಯಜನಾರ್ದನ ಜಗದ್ಗುರೂ ॥೧॥ ಜಗಾಸೀ ಪಡೇ ಮಾಯಾಮೋಹನ । ತೇ ತೂ ನಿರ್ದಳಿಸೀ ಜ್ಞಾನಘನ । ಜಗೀ ಜಗದ್ರೂಪ ಜನಾರ್ದನ। ಕೃಪಾಳೂ ಪೂರ್ಣ ದೀನಾಂಚಾ ॥೨॥ ದೀನಾಸೀ ದೇವಮಾಯಾ ಸ್ತ್ರೀರೂಪೇ । ಭುಲವೀ ಹಾವಭಾವಖಟಾಟೋಪೇ । ತೇ ಸ್ತ್ರೀಮೋಹಾದಿ ಮೋಹಕ ರೂಪೇ । ಜನಾರ್ದನಕೃಪೇ ನಿರ್ದಳತೀ ॥೩॥ ಜೇಥ ವೈರಾಗ್ಯ ವಾಢೇ ಸಂಪೂರ್ಣ । ತೇಥ ಜನಾರ್ದನಾಚೀ ಕೃಪಾ ಪೂರ್ಣ । ವೈರಾಗ್ಯ ತೇಥ ಬ್ರಹ್ಮಜ್ಞಾನ। ಸಹಜೇ ಜಾಣ ಠಸಾವೇ ॥೪॥ ಜೀವ ಸಹಜೇ ಬ್ರಹ್ಮಚಿ ಆಹೇ । ತೋ ಮಾಯಾಗುಣೇ ಜೀವತ್ವ ವಾಹೇ । ಜೇವೀ ಭದ್ರೀ ನಿಜಲೇನಿ ರಾಯೇ । ತೋ ಸ್ವಪ್ನೀಂಚೇ ಲಾಹೇ ರಂಕತ್ವ ॥೫॥ ತ್ಯಾಸೀ ರಾಜಪದಾ ಯಾವಯಾ ಜಾಣ । ಸೇವಕ ಕರಿತೀ ಥಾಪಟಣ । ತೇವೀ ವೈರಾಗ್ಯ ನಿರ್ದಳೀ ತ್ರಿಗುಣ । ಜೀವಾ ಬ್ರಹ್ಮಪಣ ಸ್ವಯಂಭಚಿ ॥೬॥ ಐಸೇ ಸ್ವಯಂಭ ಜೋಡಲ್ಯಾ ಬ್ರಹ್ಮ ಪೂರ್ಣ । ತೇವ್ಹಾ ಸ್ತ್ರೀ ಪುರುಷ ಹೇ ಮಿಥ್ಯಾ ಜ್ಞಾನ । ಮೃಷಾ ದೃಶ್ಯಾಚೇ ದೃಶ್ಯಭಾನ । ಭೋಗ್ಯಭೋಕ್ತೇಪಣ ಅಸೇನಾ ॥೭॥ ಅಸೋ ಸಾಧಕಾಸೀ ದೇವಮಾಯಾ । ಸ್ತ್ರೀರೂಪೇ ಯೇ ಭುಲವಾವಯಾ । ತೇಥ ಸ್ಮರತಾ ಭಾವೇ ಗುರುರಾಯಾ । ಜಾಯ ವಿಲಯಾ ಸ್ತ್ರೀಬಾಧೂ ॥೮॥ ಸದ್ಗುರೂಚೇ ನಿಜನಾಮ ಏಕ । ನಿವಾರೀ ಬಾಧಾ ಮಹಾದೋಖ । ವೈರಾಗ್ಯ ಉಪಜವೀ ಅಲೋಕಿಕ । ತೇಣೇ ಹೋಯ ನಿಜಸುಖ ಸಾಧಕಾ ॥೯॥ ನಿರ್ವಿಶೇಷ ನಿಜಸುಖದಾತಾ । ಆಮ್ಹಾ ಸದ್ಗುರೂಚಿ ತತ್ತ್ವತಾ । ತ್ಯಾಚೇ ಚರಣೀ ಠೇವಿತಾ ಮಾಥಾ । ಸುಖಸಂಪನ್ನ ತಾ ಸಾಧಕಾ ॥೧೦॥

ಹೇ ದೇವಾ ಜಗನ್ಮೋಹನನೇ, ಈ ಮೋಹಿನಿಯ ಮೋಹಕತ್ವಕ್ಕೆ ಮೂಲ ಕಾರಣನೇ, ನಿನಗೆ ನನ್ನ ಅನೇಕ ನಮಸ್ಕಾರಗಳು. ಕಾರ್ಯಕಾರಣಾತೀತ ಮತ್ತು ಜ್ಞಾನಸ್ವರೂಪ ಜನಾರ್ದನಸ್ವಾಮಿರೂಪ ಜಗದ್ಗುರುಗಳಿಗೆ ಜಯಜಯಕಾರವು ॥೧॥ ಜಗತ್ತಿನಲ್ಲಿರುವ ಯಾವ ಮಾಯೆಯ ಆವರಣವನ್ನು ನೀನು ಜ್ಞಾನಸ್ವರೂಪ ಜನಾರ್ದನ ಕೃಪಾದೃಷ್ಟಿಯಿಂದ ಇಲ್ಲದಾಗಿ ಮಾಡುವೆ. ಹೀಗೆ ನೀನು ದೀನ ಜನರಲ್ಲಿ ಕೃಪೆಯನ್ನು ತೋರುವವನಾಗಿರುವೆ ॥೨॥ ದೇವನ ಈ ಮಾಯೆಯು ಸ್ತ್ರೀಯರ ರೂಪದಿಂದ ಹಾವಭಾವದೊಂದಿಗೆ ನೇತ್ರಕಟಾಕ್ಷದ್ವಾರಾ ದೀನದರಿದ್ರ ಜನರನ್ನು ಮೋಸಗೊಳಿಸುತ್ತಿರುವುದು. ಆದರೆ ಸ್ತ್ರೀಯರ ಮೋಹದಂತಹ ಮೋಹಕ ಸ್ಥಿತಿಯ ಸರ್ವವೂ ಯಾವ ಜನಾರ್ದನಸ್ವಾಮಿಯವರ ಕೃಪೆಯಿಂದ ನಾಶವಾಗುವುವು ॥೩॥ ಎಲ್ಲಿ ಪರಿಪೂರ್ಣವಾಗಿ ವೈರಾಗ್ಯವು ವೃದ್ಧಿಯಾಗುತ್ತಿರುವುದೋ ಅಲ್ಲಿ ಜನಾರ್ದನರ ಕೃಪೆಯಾಗುವುದು. ವೈರಾಗ್ಯವು ಪ್ರಾಪ್ತವಾಗಲು ಆಗ ಹೃದಯಪಟಲದಲ್ಲಿ ಆತ್ಮಜ್ಞಾನವು ನಟ್ಟಿಕೊಳ್ಳುವುದು ॥೪॥ ಜೀವವು ಇದು ಮೂಲತಃ ಬ್ರಹ್ಮಸ್ವರೂಪವೇ ಆಗಿರುವುದು. ಆದರೆ ಅದು ಮಾಯೆಯ ಗುಣಗಳಿಂದ ಜೀವವಾಗಿ ಬಾಳುತ್ತಿರುವುದು. ಒಬ್ಬ ರಾಜನು ತನ್ನ ಪಲಂಗದಮೇಲೆ ಮಲಗಿದಾಗ ತಾನು ಸ್ವತಃ ಭಿಕ್ಷುಕನಾಗಿರುವುದನ್ನು ಸ್ವಪ್ನದಲ್ಲಿ ಕಾಣುತ್ತಿರುವನು ॥೫॥ ಆಗ ಆತನಿಗೆ ಕಳೆದ ರಾಜ್ಯಪದವಿಯು ದೊರೆಯಬೇಕಾದರೆ ಆತನ ಸೇವಕನು ಆತನನ್ನು ಚಪ್ಪರಿಸಿ ಎಬ್ಬಿಸಬೇಕಾಗುವುದು. ಅದರಂತೆ ವೈರಾಗ್ಯದಿಂದ ಮೂರು ಗುಣಗಳ ನಾಶವನ್ನು ಮಾಡಲು ಆಗ ಜೀವನಿಗೆ ತನ್ನದೇ ಆದ ಸ್ವಯಂಸಿದ್ಧ ಬ್ರಹ್ಮತ್ವವು ಇದ್ದೇ ಇರುವುದು ॥೬॥ ಹೀಗೆ ಸ್ವಯಂಭೂವಾಗಿರುವ ಪರಬ್ರಹ್ಮವು ಪ್ರಾಪ್ತವಾಗಲು ಆಗ ಸ್ತ್ರೀ ಮತ್ತು ಪುರುಷ ಎನ್ನುವ ಈ ಜ್ಞಾನವೇ ಸುಳ್ಳಾಗಿಬಿಡುವುದು. ದೃಶ್ಯದ ದೃಶ್ಯಭಾವವು ಸುಳ್ಳಾಗುವುದು. ಹಾಗೆಯೇ ಭೋಗ್ಯ ಹಾಗೂ ಭೋಕ್ತೃತ್ವವು ಉಳಿಯುವುದಿಲ್ಲ ॥೭॥ ಸಾಧಕನಿಗೆ ದೇವರ ಈ ಯಾವ ಮಾಯೆಯು ಸ್ತ್ರೀರೂಪದಿಂದ ಮೋಹಗೊಳಿಸಲು ಬರುತ್ತಿರುವುದು. ಆ ಸಮಯದಲ್ಲಿ ಸದ್ಗುರುಗಳ ಸ್ಮರಣೆಯನ್ನು ಮಾಡುವುದರಿಂದ ಸ್ತ್ರೀ ರೂಪ ಮಾಯೆಯ ಬಂಧನವು ಇಲ್ಲದಾಗುವುದು ॥೮॥ ಸದ್ಗುರುಗಳ ಕೇವಲ ನಾಮಮಾತ್ರದಿಂದ ಮಹಾದೋಷಗಳ ಬಾಧೆಯು ದೂರಾಗುವುದು. ಮನದಲ್ಲಿ ವೈರಾಗ್ಯವು ಉದಯವಾಗುವುದು. ಆದ್ದರಿಂದ ಸಾಧಕನಿಗೆ ಸುಖವು ಪ್ರಾಪ್ತವಾಗುವುದು ॥೯॥ ನಿಜವಾಗಿಯೂ ನಮಗೆ ನಿರ್ವಿಶೇಷ ನಿಜಸುಖವನ್ನು ಕೊಡುವವನು ಒಬ್ಬ ಸದ್ಗುರುರಾಯನೇ ಆಗಿರುವನು. ಅವರ ಚರಣಕಮಲಗಳಲ್ಲಿ ಮಸ್ತಕವನ್ನಿಡುವುದರಿಂದ ಯಾವ ಸಾಧಕನು ಸುಖಸಂಪನ್ನನಾಗುವನು॥೧೦॥

ಸಂತ ಸಾಧಕಾಂಚೀ ನಿಜಮಾಉಲೀ । ಶಾಂತಿ ನಿಜಸುಖಾಚೀ ಸಾಉಲೀ । ಜನಾರ್ದನಕೃಪೇಚ್ಯಾ ಪಾಉಲೀ । ಕಥಾ ಚಾಲಿಲೀ ಯಥಾರ್ಥ ।।೧೧।। ಹಾತಾ ಆಲಿಯಾ ನಿಜನಿರ್ಗುಣ। ಸಾಧಕ ಹೋತೀ ಸುಖಸಂಪನ್ನ । ತದರ್ಥ ಕರಾವೇ ಮಾಝೇ ಭಜನ । ಹೇ ಬೋಲಿಲಾ ಶ್ರೀಕೃಷ್ಣ ಪಂಚವಿಸಾವಾ ।।೨।। ಭಾವೇ ಕರಿತಾ ಭಗವದ್ಭಜನ । ದೇವ ದಾರಾರೂಪೇ ಕರಿತೀ ವಿಘ್ನ । ತೇ ನಿರ್ದಾಳಾವಯಾ ಜಾಣ । ಮಾಝೇ ನಾಮಸ್ಮರಣ ಕರಾವೇ ।।೩।। ಅಚ್ಯುತ ಹೇ ಸ್ಮರತಾ ನಾಮ । ಪ್ರತಾಪೇ ನಿರ್ದಳೀ ಕರ್ಮಾಕರ್ಮ । ಸಕಳ ಪಾತಕೇ ಕರೀ ಭಸ್ಮ । ದಾಟುಗೇ ನಾಮ ಹರೀಚೇ ।।೪।। ನಾಮೇ ಹೋಈಜೇ ವಿರಕ್ತ । ನಾಮೇ ನಿರ್ಮಳ ಹೋಯ ಚಿತ್ತ । ನಾಮೇ ಸಾಧೇ ಗುಣಾತೀತ । ನಾಮೇ ನಿರ್ಮುಕ್ತ ಭವಪಾಶ ।।೫।। ನಾಮೀ ಲೋಲಿಂಗತ ಚಿತ್ತ । ಭವಭಯ ರಿಘೋ ನ ಶಕೇ ತೇಥ । ನಾಮೀ ವಿಶ್ವಾಸ ಐಸಾ ಜೇಥ । ಭಗವಂತ ತೇಥ ತುಷ್ಟಲಾ ।।೬।। ದುಷ್ಟಸಂಗೇ ವಿಷಯಾಸಕ್ತ । ಜರೀ ಝಾಲಾ ಲೋಲಿಂಗತ । ಅನುತಾಪ ಉಪಜಲಿಯಾ ತೇಥ । ಹೋಯ ವಿರಕ್ತಕ್ಷಣಾರ್ಧೇ ।।೭।। ಮಹಾದೋಷಾಸೀ ಪ್ರಾಯಶ್ಚಿತ್ತ । ಕೇವಳ ಅನುತಾಪ ನಿಶ್ಚಿತ । ಅನುತಾಪೇವೀಣ ಪ್ರಾಯಶ್ಚಿತ್ತ । ತೋ ಜಾಣ ಏಥ ವಿಟಂಬೂ ।।೮।। ಅನುತಾಪಾಐವಢಾ ಸಖಾ । ಜಗೀ ಆಣಿಕ ನಾಹೀ ಲೋಕಾ । ಧಡಾಡಿಲ್ಯಾ ಅನುತಾಪ ದೇಖಾ । ಸಕಳ ಪಾತಕಾ ನಿರ್ದಳೀ ।।೯।। ಅನುತಾಪಾ ಚಢಲಿಯಾ ಹಾತ । ಕ್ಷಣಾರ್ಧೇ ಕರೀ ವಿರಕ್ತ । ಯೇಚಿ ಅರ್ಥೀ ಐಲಗೀತ । ಹರಿ ಸಾಂಗತ ಉದ್ಧವಾ ।।೧೦।। ಸವ್ವಿಸಾವ್ಯಾ ಅಧ್ಯಾಯೀ ಯೇಥ । ವಿಷಯಾಸಕ್ತ ಜ್ಯಾಚೇ ಚಿತ್ತ । ತ್ಯಾಸೀ ವ್ಹಾವಯಾ ವಿರಕ್ತ । ಐಲಗೀತಪ್ರಸ್ತಾವೋ ।।೧೧।।

ಶ್ರೀಭಗವಾನುವಾಚ :-

ಮಲ್ಲಕ್ಷಣಮಿಮಂ ಕಾಯಂ ಲಬ್ಧ್ವಾ ಮದ್ಧರ್ಮ ಆಸ್ಥಿತಃ ।
ಆನಂದಂ ಪರಮಾತ್ಮಾನಮಾತ್ಮಸ್ಥಂ ಸಮುಪೈತಿ ಮಾಮ್ ।।೧।।

ಅರ್ಥ:- ಶ್ರೀಕೃಷ್ಣನು ಹೇಳಿದನು; ಹೇ ಉದ್ಧವಾ, ಈ ಮಾನವ ಶರೀರವು ನನ್ನ ಸ್ವರೂಪಜ್ಞಾನದ ಪ್ರಾಪ್ತಿಯ ಮುಖ್ಯ ಸಾಧನವಾಗಿರುವುದು. ಈ ಶರೀರವನ್ನು ಪ್ರಾಪ್ತಮಾಡಿಕೊಂಡಿರುವ ಮನುಷ್ಯನು ನಿಜವಾದ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡಿದರೆ ಆತನು ಅಂತಃಕರಣದಲ್ಲಿ ಸ್ಥಿತವಾಗಿರುವ ನನ್ನ ಆನಂದಸ್ವರೂಪ ಪರಮಾತ್ಮನನ್ನು ಪ್ರಾಪ್ತಮಾಡಿಕೊಳ್ಳುವನು.

ಬ್ರಹ್ಮಲಕ್ಷೀಜೇ ಪರಿಪೂರ್ಣ । ಹೇಚಿ ಕಾಯೇಚೇ ಮುಖ್ಯ ಲಕ್ಷಣ। ತೇ ಹೇ ಮಾನವೀ ಶರೀರ ಜಾಣ । ಪರಮ ಪಾವನ ತಿಹೀ ಲೋಕೀ ।।೨।।

ಸಂತರು ಇವರು ಸಾಧಕರ ನಿಜವಾದ ತಾಯಿಯಾಗಿರುವರು. ಶಾಂತಿ ಸುಖದ ನೆರಳಾಗಿರುವರು. ಇಂತಹ ಜನಾರ್ದನಸ್ವಾಮಿಯವರ ಕೃಪೆಯಿಂದ ಈ ಕಥೆಯು ಆರಂಭವಾಗುವುದು ।।೧೧।। ನಿರ್ಗುಣದ ಪ್ರಾಪ್ತಿಯಾಯಿತೆಂದರೆ ಸಾಧಕನು ಸುಖಸಂಪನ್ನನಾಗುವನು. ಆದ್ದರಿಂದ ಈ ಸುಖದ ಪ್ರಾಪ್ತಿಗಾಗಿ ಯಾವಾಗಲೂ ನನ್ನ ಭಜನೆಯನ್ನು ಮಾಡಬೇಕು. ಹೀಗೆ ಶ್ರೀಕೃಷ್ಣನು ಇಪ್ಪತ್ತೈದನೆಯ ಅಧ್ಯಾಯದಲ್ಲಿ ಹೇಳಿರುವನು ।।೨।। ಭಕ್ತಿಭಾವದಿಂದ ನನ್ನ ಭಜನೆಯನ್ನು ಮಾಡಹತ್ತಲು ಆಗ ದೇವತೆಗಳು ಯಾವ ಸ್ತ್ರೀಯರ ರೂಪದಿಂದ ವಿಘ್ನಗಳನ್ನು ತಂದೊಡ್ಡುವರು. ಆಗ ಅದರ ನಿವಾರಣೆಗಾಗಿ ನನ್ನ ನಾಮಸ್ಮರಣೆಯನ್ನು ಮಾಡಬೇಕು ।।೩।। ''ಅಚ್ಯುತ'' ಎಂಬ ಈ ನಾಮದ ಸ್ಮರಣೆಯನ್ನು ಮಾಡಿದರೆ ಅದರ ಪ್ರಭಾವದಿಂದ ಕರ್ಮ-ಅಕರ್ಮ ಈ ಎರಡೂ ಕೂಡ ನಷ್ಟವಾಗುವುವು. ಶ್ರೀಹರಿಯ ನಾಮವು ಅತ್ಯಂತ ಸಾಮರ್ಥ್ಯಸಂಪನ್ನವಾಗಿರುವುದು. ಇದು ಸರ್ವ ಪಾಪಗಳ ನಾಶವನ್ನು ಮಾಡುವುದು ।।೪।। ಹರಿನಾಮದಿಂದ ಮಾನವನು ವಿರಕ್ತನಾಗುವನು. ನಾಮದಿಂದ ಚಿತ್ತಶುದ್ಧಿಯಾಗುವುದು. ನಾಮದಿಂದ ಗುಣಾತೀತನಾಗಲು ಸಾಧ್ಯವು. ನಾಮವು ಭವಪಾಶದಿಂದ ಬಿಡಿಸುವುದು ।।೫।। ಚಿತ್ತವು ಒಂದು ಸಾರೆ ನಾಮದಲ್ಲಿ ಲೋಲಿಂಗತವಾದರೆ ಅಲ್ಲಿ ಭವಭಯವು ಪ್ರವೇಶ ಮಾಡಲು ಸಾಧ್ಯವಿರುವುದಿಲ್ಲ. ಹೀಗೆ ನಾಮದಲ್ಲಿ ಯಾರ ವಿಶ್ವಾಸವಿರುವುದೋ, ಅವರಲ್ಲಿ ಭಗವಂತನು ಸಂತುಷ್ಟನಾಗುವನು ।।೬।। ದುರ್ಜನರ ಸಂಗತಿಯಿಂದ ಒಂದು ವೇಳೆ ಮನುಷ್ಯನು ವಿಷಯಗಳಲ್ಲಿ ಪೂರ್ಣವಾಗಿ ರಮಮಾಣನಾದನೆಂದರೆ, ಆತನಿಗೆ ಅದಕ್ಕಾಗಿ ಪಶ್ಚಾತ್ತಾಪವು ಉಂಟಾಗುತ್ತಲೇ ಅರ್ಧಕ್ಷಣದಲ್ಲಿ ಆತನು ವಿರಕ್ತನಾಗುವನು ।।೭।। ಪಶ್ಚಾತ್ತಾಪವು ಇದುವೇ ಮಹಾದೋಷಗಳ ಪ್ರಾಯಶ್ಚಿತ್ತವಾಗಿರುವುದು. ಪಶ್ಚಾತ್ತಾಪವಿಲ್ಲದೇ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುವಿಕೆಯು ಇದು ಕೇವಲ ಹ್ಯಾಸ್ಯಾಸ್ಪದವಾಗಿರುವುದು ।।೮।। ಸರ್ವರಿಗೂ ಪಶ್ಚಾತ್ತಾಪದಂತಹ ಮಿತ್ರನು ಈ ಜಗತ್ತಿನಲ್ಲಿಯೇ ಬೇರೆ ಯಾರೂ ಇರುವುದಿಲ್ಲ. ಒಮ್ಮೆ ಪಶ್ಚಾತ್ತಾಪವಾಯಿತೆಂದರೆ ಅದು ಸರ್ವ ಪಾಪಗಳನ್ನು ಭಸ್ಮಮಾಡುವುದು ।।೯।। ಪಶ್ಚಾತ್ತಾಪವು ಹಸ್ತಗತವಾಯಿತೆಂದರೆ ಅದು ಕ್ಷಣಾರ್ಧದಲ್ಲಿ ವಿರಕ್ತನನ್ನಾಗಿ ಮಾಡುವುದು. ಇದೇ ಅರ್ಥದಲ್ಲಿರುವ ''ಐಲಗೀತ''ವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ।।೧೦।। ಯಾರ ಚಿತ್ತವು ವಿಷಯಗಳಲ್ಲಿ ಆಸಕ್ತವಾಗಿರುವುದೋ, ಆತನಿಗೆ ವಿರಕ್ತನಾಗುವುದಕ್ಕಾಗಿ ಐಲಗೀತದ ಪ್ರಸ್ತಾವನೆಯು ಈ ಯಾವ ಇಪ್ಪತ್ತಾರನೆಯ ಅಧ್ಯಾಯದಲ್ಲಿ ಮಾಡಲಾಗಿದೆ ।।೧೧।।

ಬ್ರಹ್ಮವನ್ನು ಪರಿಪೂರ್ಣವಾಗಿ ತಿಳಿಯುವುದೇ ಈ ನರದೇಹದ ಪ್ರಮುಖ ಕರ್ತವ್ಯವಾಗಿರುವುದು. ಈ ನರದೇಹವು ಮೂರೂ ಲೋಕಗಳಲ್ಲಿ ಪವಿತ್ರವಾಗಿರುವುದು ।।೨।।

ಮನುಷ್ಯದೇಹೀ ಅಧರ್ಮ । ಕರಿತಾ ನಾತುಡೇ ಪರಬ್ರಹ್ಮ । ತೇಥ ಕರಾವೇ ಭಾಗವತಧರ್ಮ । ಜೇ ಕಾ ಪರಮ ಪಾವನ ।೨೩।। ಭಾಗವತ ಧರ್ಮೇ ಕರಿತಾ ಭಕ್ತೀ । ನಿರ್ಮಳ ಹೋಯ ಚಿತ್ತವೃತ್ತೀ । ಜೀವ ತೋಚಿ ಬ್ರಹ್ಮ ನಿಶ್ಚಿತೀ । ಐಸೀ ಶುದ್ಧ ಸ್ಫೂರ್ತೀ ಠಸಾವೇ ।೨೪।। ಠಸಾವಲ್ಯಾ ಬ್ರಹ್ಮಸ್ಫೂರ್ತೀ । ಹೋಯ ಸ್ವಾನಂದಾಚೀ ಅವಾಪ್ತೀ । ತೇಣೇ ಪರಮಾನಂದೀ ಲೀನ ಹೋತೀ । ಹೇ ಶುದ್ಧಪ್ರಾಪ್ತೀ ಪೈ ಮಾಝೀ ।೨೫।। ಮಾಝಿಯೇ ಪ್ರಾಪ್ತೀಚೇ ಲಕ್ಷಣ । ದೇಹೀ ಅಸತಾ ವರ್ತಮಾನ । ಸರ್ವಥಾ ನಾಹೀ ವಿಷಯಸ್ಫುರಣ। ತೇಚಿ ನಿರೂಪಣ ಹರಿ ಸಾಂಗೇ ।೨೬।।

ಗುಣಮಯ್ಯಾ ಜೀವಯೋನ್ಯಾ ವಿಮುಕ್ತೋ ಜ್ಞಾನನಿಷ್ಠಯಾ । ಗುಣೇಷು ಮಾಯಾಮಾತ್ರೇಷು ದೃಶ್ಯಮಾನೇಷ್ವವಸ್ತುತಃ ।
ವರ್ತಮಾನೋಽಪಿ ನ ಪುಮಾನ್ ಯುಜ್ಯತೇಽವಸ್ತುಭಿರ್ಗುಣೈಃ ।೨।।

ಅರ್ಥ:- ಜೀವಿಯ ಸರ್ವ ಯೋನಿಗಳು, ಸರ್ವಗತಿಗಳು ತ್ರಿಗುಣಾತ್ಮಕವಾಗಿರುವುವು. ಜೀವವು ಜ್ಞಾನನಿಷ್ಠೆಯಿಂದ ಇವುಗಳಿಂದ ಸದಾ ಮುಕ್ತವಾಗುವುದು. ಸತ್ವ, ರಜ ಮತ್ತು ತಮ ಕಾಣುವ ಈ ಮೂರು ಗುಣಗಳು ವಾಸ್ತವಿಕವಾಗಿ ಇರುವುದಿಲ್ಲ. ಮಾಯಾಮಾತ್ರವಾಗಿರುವುವು. ಜ್ಞಾನವಾದ ನಂತರ ಪುರುಷನು ಗುಣಗಳಲ್ಲಿದ್ದರೂ ಕೂಡ ಅದರ ಬಂಧನದಲ್ಲಿಸಿಲುಕಲಾರನು. ಇದರ ಕಾರಣವೇನೆಂದರೆ, ಆ ಗುಣಗಳ ವಾಸ್ತವಿಕ ಸತ್ತೆ ಇರುವುದಿಲ್ಲ.

ಜೇ ಮೂಳ ಅಜ್ಞಾನಾಚೀ ಖಾಣೀ । ಜೇ ಸಂಸಾರಪ್ರವಾಹಾಚೇ ಶ್ರೇಣೀ । ಜೇತಿಹೀ ಗುಣಾಂಚಿ ಜನನೀ । ಮಾಯಾ ರಾಣೀ ಅನಾದಿ ।೨೭।। ಮಾಯಾ ಗುಣಯೋಗೇ ಪಹಾ ಹೋ । ಸೋಳಾ ಕಳಾಂಚಾ ಸಂಭವೋ । ತೋ ವಾಸನಾತ್ಮಕ ಲಿಂಗದೇಹೋ । ಜೀವಾಸೀ ಪಹಾ ಹೋ ದೃಢ ಝಾಲಾ ।೨೮।। ಜ್ಯಾ ಲಿಂಗದೇಹಾಚಿಯೇ ಪ್ರಾಪ್ತೀ । ಭೋಗೀ ನಾನಾ ಸುಖದುಃಖ ಸಂಪತ್ತೀ । ಪಡೇ ಸ್ವರ್ಗನರಕ ಆವರ್ತೀ । ಮಿಥ್ಯಾಮರಣ ಪಂಕ್ತೀ ಸ್ವಯೇ ಸೋಶೀ ।೨೯।। ವಂಧ್ಯಾ ಪುತ್ರಾಚಾ ಘರಾಚಾರ । ತೈಸಾ ಜೀವಾಸೀ ಸಂಸಾರ । ದೇಹಾಭಿಮಾನೇ ಕೇಲಾ ಥೋರ । ಅಪರಂಪಾರ ಅನಿವಾರ್ಯ ।೩೦।। ತೇಥ ಗುರುವಾಕ್ಯೇ ಜ್ಞಾನಾನುಭವೋ । ಪಾಹತಾ ಮಾಯೇಚಾ ಅಭಾವೋ । ಲಿಂಗದೇಹ ಝಾಲಾ ವಾವೋ । ಜೀವಾ ಜೀವಭಾವೋ ತೋ ಮಿಥ್ಯಾ ।೩೧।। ಜೇವೀ ಉಗವಲಿಯಾ ಗಭಸ್ತೀ । ಅಂಧಾರೇಸೀ ಹಾರಪೇ ರಾತೀ । ತೇವೀ ಗುರುವಾಕ್ಯೇ ಜ್ಞಾನಪ್ರಾಪ್ತೀ । ಮಾಯೇಚೀ ಸ್ಥಿತೀ ಮಾವಳೇ ।೩೨।। ಏವಂ ನಾಸಲ್ಯಾ ಗುಣವಿಕಾರ । ಜೀವನ್ಮುಕ್ತ ಹೋತೀ ನರ । ಜೇವೀ ಕಾ ಕುಲಾಲಚಕ್ರ । ಭಂವೇ ಸಾಚಾರ ಪೂರ್ವಭ್ರಮಣೇ ।೩೩।। ತೇವೀ ಪ್ರಾರಬ್ಧಶೇಷವೃತ್ತೀ । ಜ್ಞಾತೇ ನಿಜದೇಹೀ ವರ್ತತೀ । ವರ್ತತಾಂಹೀ ದೇಹಸ್ಥಿತೀ ।ದೇಹ ಅಹಂಕೃತೀ ಅಸೇನಾ ।೩೪।।

ಮನುಷ್ಯ ದೇಹಕ್ಕೆ ಬಂದು ಅಧರ್ಮಗಳನ್ನು ಮಾಡಹತ್ತಿದರೆ ಪರಬ್ರಹ್ಮವು ದೊರೆಯಲಾರದು. ಅದಕ್ಕಾಗಿ ಪರಮ ಪಾವನವಾದ ಭಾಗವತ ಧರ್ಮದ ಆಚರಣೆಯನ್ನು ಮಾಡಬೇಕು ।೨೩।। ಭಾಗವತ ಧರ್ಮದಲ್ಲಿ ಹೇಳಿದ ಪ್ರಕಾರದಂತೆ ಭಕ್ತಿಯನ್ನು ಮಾಡಿದರೆ ಚಿತ್ತವೃತ್ತಿಯು ನಿರ್ಮಲವಾಗಿ ಜೀವವು ಬ್ರಹ್ಮಸ್ವರೂಪ ಎಂಬ ಜ್ಞಾನವು ಹೃದಯಕ್ಕೆ ನಾಟುವುದು ।೨೪।। ಹೀಗೆ ಬ್ರಹ್ಮಸ್ಫೂರ್ತಿಯು ಹೃದಯಕ್ಕೆ ನಾಟಿದರೆ ಸ್ವಾನಂದವು ಪ್ರಾಪ್ತವಾಗಿ ಸಾಧಕನು ಪರಮಾನಂದದಲ್ಲಿ ಲೀನನಾಗುವನು. ಇದೇ ನನ್ನ ನಿಜವಾದ ಪ್ರಾಪ್ತಿಯಾಗಿರುವುದು ।೨೫।। ಶರೀರದಿಂದ ಸರ್ವ ವ್ಯವಹಾರಗಳು ನಡೆಯುತ್ತಿದ್ದರೂ ಕೂಡ ವಿಷಯಸ್ಫೂರ್ತಿಯಾಗಿರುವಿಕೆಯೇ ನನ್ನ ಪ್ರಾಪ್ತಿಯ ಲಕ್ಷಣವಾಗಿರುವುದು. ಇದರ ನಿರೂಪಣೆಯನ್ನು ಶ್ರೀಹರಿಯು ಈಗ ಹೇಳುವನು ।೨೬।।

ಯಾವ ಮೂಲತಃ ಅಜ್ಞಾನದ ಗಣಿಯಾಗಿರುವ, ಯಾವ ಸಂಸಾರಪ್ರವಾಹದ ಪಂಕ್ತಿಯಾಗಿರುವ, ಮೂರು ಗುಣಗಳ ತಾಯಿಯಾಗಿರುವ, ಅನಾದಿಯಾಗಿರುವ ಈಕೆಯು ಮಾಯಾರಾಣಿಯಾಗಿರುವಳು ।೨೭।। ಈ ಮಾಯಾಗುಣಗಳ ಯೋಗದಿಂದ ಹದಿನಾರು ತತ್ವಗಳಾಗುವುವು. ಮನಸಹಿತವಾಗಿ ಹನ್ನೊಂದು ಇಂದ್ರಿಯಗಳು, ಐದು ವಿಷಯಗಳು ಕೂಡಿ ಈ ಯಾವ ಹದಿನಾರು ಕಲೆಗಳು ವಾಸನಾತ್ಮಕವಾದ ಲಿಂಗದೇಹವು ಸಿದ್ಧವಾಗುವುದು. ಅದು ಜೀವಕ್ಕೆ ಬದ್ಧನನ್ನಾಗಿ ಮಾಡುವುದು ।೨೮।। ಈ ಯಾವ ಲಿಂಗದೇಹ ಕಾರಣವಾಗಿ ಜೀವವು ನಾನಾ ಪ್ರಕಾರದ ಸುಖದುಃಖಗಳ ರಾಶಿಯನ್ನು ಭೋಗಿಸುತ್ತಿರುವುದು. ಸ್ವರ್ಗನರಕಗಳ ಚಕ್ರದಲ್ಲಿ ಸಿಲುಕಿಕೊಳ್ಳುವುದು. ಜನ್ಮ ಮರಣಗಳ ಪಂಕ್ತಿಯಲ್ಲಿ ತಿರುಗಾಡುತ್ತಿರುವುದು ।೨೯।। ಬಂಜೆಯ ಮಗನ ಸಂಸಾರವು ಹೇಗೋ, ಅದರಂತೆಯೇ ಈ ಸಂಸಾರವು ಜೀವಕ್ಕೆ ಇರುವುದು. ದೇಹದ ಅಭಿಮಾನವು ಸಂಸಾರವನ್ನು ಅಪರಂಪಾರವಾಗಿ ಬೆಳೆಸಿರುವುದು ।೩೦।। ಆದರೆ ಈ ಜೀವಕ್ಕೆ ಗುರುಗಳ ಉಪದೇಶದಿಂದ ಜ್ಞಾನಪ್ರಾಪ್ತಿಯಾದಾಗ ಮಾಯೆಯ ಅಭಾವವಾಗುವುದು. ಲಿಂಗದೇಹವು ಇದು ವ್ಯರ್ಥವಾಗುವುದು. ಜೀವಭಾವವು ಮಿಥ್ಯೆಯಾಗುವುದು ।೩೧।। ಸೂರ್ಯನ ಉದಯವಾಗುತ್ತಲೇ ಕತ್ತಲೆಯ ಜೊತೆಯಲ್ಲಿ ರಾತ್ರಿಯು ಪಲಾಯನ ಮಾಡುವುದು. ಅದರಂತೆ ಗುರುಗಳ ಉಪದೇಶದಿಂದ ಜ್ಞಾನದ ಪ್ರಾಪ್ತಿಯಾಗುತ್ತಲೇ ಮಾಯೆಯ ರೂಪವು ಮುಳುಗಿಹೋಗುವುದು ।೩೨।। ಈ ಪ್ರಕಾರವಾಗಿ ಗುಣಗಳು ಇಲ್ಲದಾಗಲು ಮನುಷ್ಯನು ಜೀವನ್ಮುಕ್ತನಾಗುವನು. ಕುಂಬಾರನ ಚಕ್ರವು ಒಮ್ಮೆ ತಿರುಗಿಸಿ ಬಿಟ್ಟಾಗ ಅದು ತನ್ನ ಗತಿ ಮುಗಿಯುವವರೆಗೂ ತಿರುಗುತ್ತಲೇ ಇರುವುದು ।೩೩।। ಅದರಂತೆ ಪ್ರಾರಬ್ಧ ಕರ್ಮವು ಮುಗಿಯುವವರೆಗೂ ಆತ್ಮಜ್ಞಾನಿಯು ತನ್ನ ದೇಹದಲ್ಲಿದ್ದು ಶರೀರದ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದರೂ ಕೂಡ ಆತನು ದೇಹದ ಅಭಿಮಾನವನ್ನು ಹಿಡಿಯುವುದಿಲ್ಲ ।೩೪।।

ಜೇವೀ ಕಾ ಛಾಯಾ ಆಪುಲೀ । ಕೋಣೆ ಗಾಂಜಿಲೀ ನಾ ಪೂಜಿಲೀ । ಪರೀ ಕಳವಳ್ಯಾಚೀ ನ ಯೇ ಭುಲೀ । ತೇವೀ ದೇಹೀಂಚೀ ಚಾಲೀ ಸಜ್ಞಾನಾ ।೩೫॥ ತೋ ದೇಹಾಚೇನಿ ದೈವಮೇಳೇ । ಜರೀ ವಿಷಯಾಂಮಾಜೀ ಲೋಳೇ । ಪರೀ ವಿಕಾರಾಚೇನಿ ವಿಟಾಳೇ । ವೃತ್ತಿ ನ ಮೈಳೇ ಅಣುಮಾತ್ರ ।೩೬॥ ತ್ಯಾಸೀ ವಿಷಯಾಂಚೇ ದರ್ಶನ । ಸಮೂಳತ್ವೇ ಮಿಥ್ಯಾ ಜಾಣ । ಕರಿತಾ ಮೃಗಜಳಾತೇ ಪಾನ । ಕರಾ ವೋಲೇಪಣ ಬಾಧೀನಾ ।೩೭॥ ಗಗನಕಮಳಾಂಚಾ ಆಮೋದ । ಜೈ ಭ್ರಮರ ಸೇವೀ ಸುಗಂಧ । ತೈ ಸಜ್ಞಾನಾ ವಿಷಯಸಂಬಂಧ । ನಿಜಾಂಗೀ ಬಾಧ ಲಾಗತಾ ।೩೮॥ ಅಸೋ ಅತರ್ಕ್ಯ ಮುಕ್ತಾಂಚೀ ಸ್ಥಿತೀ । ಪರೀ ಮುಮುಕ್ಷಾಲಾಗೀ ಶ್ರೀಪತೀ । ನಿಯಮಾಚೀ ಯಥಾನಿಗುತೀ । ನಿಜಾತ್ಮಪ್ರಾಪ್ತೀಲಾಗೀ ಸಾಂಗೇ ।೩೯॥

ಸಂಗಂ ನ ಕುರ್ಯಾದಸತಾಂ ಶಿಶ್ನೋದರತೃಪಾಂ ಕ್ವಚಿತ್ । ತಸ್ಯಾನುಗಸ್ತಮಸ್ಯಂಧೇ ಪತತ್ಯಂಧಾನುಗಾಂಧವತ್ ।೩॥

ಅರ್ಥ:- ಶಿಶ್ನ ಮತ್ತು ಉದರಗಳ ತುಷ್ಟಿಯಲ್ಲಿ ನಿರತರಾಗಿರುವ ಪ್ರಾಪಂಚಿಕರ ಸಹವಾಸವನ್ನು ಎಂದಿಗೂ ಮಾಡಬಾರದು. ಅವರನ್ನು ಅನುಸರಿಸುವವನು ಕುರುಡನನ್ನು ಹಿಂಬಾಲಿಸುವ ಕುರುಡನಂತೆ, ಕತ್ತಲ ಕವಿದ ಆಳವಾದ ಬಾವಿಗೆ ಬೀಳುತ್ತಾನೆ.

ಶಿಶ್ನೋದರಾರ್ಥ ಆಸಕ್ತ । ಸ್ವಧರ್ಮತ್ಯಾಗೇ ಅಧರ್ಮರತ । ಐಸೇ ಜೇ ವಿಷಯಾಸಕ್ತ । ತೇ ಜಾಣ ನಿಶ್ಚಿತ ಅಸಾಧೂ ।೪೦॥ ಐಸೇ ಜೇ ಅಸಾಧೂ ಜನ । ತ್ಯಾಂಸೀ ಸರ್ವಥಾ ಆಪಣ । ಸಂಗತೀ ನ ಕರಾವೀ ಜಾಣ । ಕಾಯಾವಾಚಾಮನಃಪೂರ್ವಕ ।೪೧॥ ವೋಢಾಳೇಚೇ ಸಂಗತೀ ಪಾಹೇ । ಕ್ಷಣಭರೀ ಗೇಲಿಯಾ ಧರ್ಮಗಾಯೇ । ತ್ಯಾ ಕ್ಷಣಾಸಾರೀ ಪಾಹೇ । ಲೋಢಣೇ ವಾಹೇ ನಿರಂತರ ।೪೨॥ ಯಾಲಾಗೀ ದುರ್ಜನಾಚೀ ಸಂಗತೀ । ಕ್ಷಣಾರ್ಧೇ ಪಾಡೀ ಅನರ್ಥೀ । ಮುಮುಕ್ಷೀ ಐಶಿಯಾಪ್ರತೀ । ಅಣುಮಾತ್ರ ವಸ್ತೀ ನ ವಚಾವೇ ।೪೩॥ ಲೋಹಾರಾಚೀ ಆಗಿಠೀ ಜೈಸೀ । ಸಹಜೇ ಪೋಳೂ ಭಲತ್ಯಾಸೀ । ದುರ್ಜನಾಸೀ ಸಂಗತೀ ತೈಶೀ । ಪಾಡೀ ಅಪಭ್ರಂಶೀ ಭಾವಿಕಾ ।೪೪॥ ಅವಚಟೇ ಅಸಾಧುಸಂಗತೀ । ಜೋಡಲ್ಯಾ ವಾಢೇ ವಿಷಯಾಸಕ್ತೀ । ತೇಣೇ ಉಠೀ ಅಧರ್ಮರತೀ । ವಿವೇಕ - ಸ್ಫೂರ್ತಿಘಾತಕ॥೪೫॥ ಮಾವಳಲ್ಯಾ ವಿವೇಕವೃತ್ತೀ । ಅಂಧ ಹೋಯ ಜ್ಞಾನಸ್ಫೂರ್ತೀ । ಆಪಣ ಆಪಲೀ ನ ದೇಖೇ ಗತೀ । ಜೇವೀ ಆಭಾಳೀ ರಾತೀ ಅಂವಸೇಚೀ ।೪೬॥ ಜೇವೀ ಅಂಧೇ ಅಂಧ ಧರಿಲ್ಯಾ ಹಾತೀ । ದೋಘಾ ಪತನ ಮಹಾಗರ್ತೀ । ತೇವೀ ಅವಿವೇಕಾಚಿಯಾ ಸ್ಥಿತೀ । ಅಂಧತಮಾ ಜಾತೀ ವಿಷಯಾಂಧ ।೪೭॥

ನಮ್ಮ ನೆರಳಿಗೆ ಯಾರಾದರು ತೊಂದರೆ ಕೊಡಲಿ ಅಥವಾ ಆ ನೆರಳನ್ನು ಪೂಜಿಸಲಿ, ಯಾವ ಪ್ರಕಾರವಾಗಿ ಅದರ ವಿಷಯಕ್ಕೆ ನಮಗೆ ಹರ್ಷ-ಶೋಕವಾಗುವುದಿಲ್ಲವೋ, ಅದರಂತೆ ಆತ್ಮಜ್ಞಾನಿಯ ದೇಹದ ಚಲನವಲನವಾಗಿದೆ ಎಂದು ತಿಳಿಯಬೇಕು ।೩೫॥ ಆತನು ದೈವಯೋಗದಿಂದ ವಿಷಯಗಳಲ್ಲಿ ಉರುಳಾಡುತ್ತಿದ್ದರೂ ಕೂಡ ಆ ವಿಕಾರಗಳ ಮೈಲಿಗೆಯಿಂದ ಆತನ ವೃತ್ತಿಯು ಅಣುಮಾತ್ರವೂ ಕೂಡ ಮಲಿನವಾಗುವುದಿಲ್ಲ ।೩೬॥ ಮೃಗಜಲದ ಪಾನವನ್ನು ಮಾಡಿದರೆ ಕೈಗಳೇನಾದರೂ ಹಸಿಯಾಗುವುವೆ? ಅದರಂತೆ ವಿಷಯಗಳ ದರ್ಶನವು ಸಮೂಲವಾಗಿ ಮಿಥ್ಯೆಯಾಗಿರುವುದು ।೩೭॥ ಆಕಾಶ ಪುಷ್ಪಗಳ ಪರಿಮಳದ ಸುಗಂಧವನ್ನು ಭ್ರಮರವು ಸೇವಿಸುತ್ತಿದ್ದರೆ ಆಗ ಮಾತ್ರ ಜ್ಞಾನಿಯು ವಿಷಯಗಳಲ್ಲಿ ಬದ್ಧನಾಗುವನು ।೩೮॥ ಅದು ಇರಲಿ, ಹೀಗೆ ಮುಕ್ತನ ಸ್ಥಿತಿಯು ಅತರ್ಕ್ಯವಾಗಿರುವುದು. ಆದ್ದರಿಂದ ಮುಮುಕ್ಷುಗಳವರಿಗೆ ಆತ್ಮಜ್ಞಾನಪ್ರಾಪ್ತಿಗಾಗಿ ಶ್ರೀಕೃಷ್ಣನು ಅದರ ನಿಯಮಾವಳಿಗಳನ್ನು ಹೇಳುತ್ತಿರುವನು ।೩೯॥

ಯಾರು ರತಿಸುಖದ ಭೋಗ ಮತ್ತು ಹೊಟ್ಟೆತುಂಬಿಕೊಳ್ಳುವ ಸುಖದಲ್ಲಿ ಆಸಕ್ತರಾಗಿರುವರೋ, ಸ್ವಧರ್ಮದ ತ್ಯಾಗ ಮಾಡಿ ಅಧರ್ಮಕಾರ್ಯಗಳಲ್ಲಿ ರಮಮಾಣರಾಗಿರುವರೋ, ಅವರು ಅಸಾಧುಗಳಾಗಿರುವರು।೪೦॥ ಈ ಪ್ರಕಾರದಲ್ಲಿ ಇರುವ ಅಸಾಧು ಜನರ ಸಂಗತಿಯನ್ನು ಕಾಯಾ, ವಾಚಾ, ಮನದಿಂದ ಎಂದಿಗೂ ಮಾಡಬಾರದು ।೪೧॥ ಉಡಾಳ ದನಗಳ ಸಂಗತಿಯಲ್ಲಿ ಆಕಸ್ಮಾತಾಗಿ ಒಂದು ಒಳ್ಳೆಯ ಆಕಳು ಸ್ವಲ್ಪ ಸಮಯ ಕೂಡಲು, ಆ ಸಂಗತಿಯ ಫಲವಾಗಿ ಆ ಆಕಳಿಗೆ ಯಾವಾಗಲೂ ತನ್ನ ಕೊರಳಿಗೆ ಗುದ್ದಿಯನ್ನು ಕಟ್ಟಿಕೊಳ್ಳಬೇಕಾಗುವುದು ।೪೨॥ ಇದರಂತೆಯೇ ದುರ್ಜನರ ಸಂಗತಿಯನ್ನು ಒಂದು ಕ್ಷಣ ಹೊತ್ತು ಮಾಡಿದರೂ ಕೂಡ, ಅದು ಅನರ್ಥವನ್ನು ಮಾಡುವುದು. ಮುಮುಕ್ಷುಗಳು ಅಣುಮಾತ್ರವೂ ಕೂಡ ಇಂತಹ ಅಸಾಧು ಜನರ ಸಂಗತಿಯಲ್ಲಿ ನಿಲ್ಲಕೂಡದು ।೪೩॥ ಕಮ್ಮಾರನ ಅಗ್ನಿಯ ಕಿಡಿಗಳು ಯಾರಿಗಾದರೂ ಸಹಜವಾಗಿ ಸುಡುತ್ತಿರುವುವು. ಅದರಂತೆ ದುರ್ಜನರ ಸಂಗತಿಯು ಭಾವಿಕ ಜನರನ್ನು ಭ್ರಮೆಯಲ್ಲಿ ನೂಕಿಬಿಡುವುದು ।೪೪॥ ಅಪ್ಪಿತಪ್ಪಿಯಾದರೂ ಒಂದು ವೇಳೆ ಅಸಾಧುವಿನ ಸಂಗತಿಯನ್ನು ಮಾಡಲು ಕೂಡಲೇ ವಿಷಯಗಳ ಆಸಕ್ತಿಯು ವೃದ್ಧಿಯಾಗುವುದು. ಈ ಕಾರಣವಾಗಿ ವಿವೇಕಸ್ಫೂರ್ತಿಯನ್ನು ಘಾತ ಮಾಡುವ ಅಧರ್ಮದಲ್ಲಿ ಮನಸ್ಸಾಗುವುದು ।೪೫॥ ವಿವೇಕಸ್ಫೂರ್ತಿಯು ಮುಳುಗಿತೆಂದರೆ ಆಗ ಜ್ಞಾನದ ಸ್ಫೂರ್ತಿಯು ಕುರುಡಾಗುವುದು. ಇದರಿಂದ ಮೋಡ ತುಂಬಿದ ಅಮವಾಸ್ಯೆಯ ರಾತ್ರಿಯು ಹೇಗೆ ಗಾಢಾಂಧಕಾರದಿಂದ ಹರಡಿಕೊಳ್ಳುವುದೋ ಅದರಂತೆ ಅಜ್ಞಾನದಿಂದ ಆವೃತವಾಗಿರುವ ಜೀವವು ತನ್ನ ಸ್ವತಃದ ಗತಿಯನ್ನು ತಾನೇ ಅರಿಯದಂತಾಗುವುದು ।೪೬॥ ಒಬ್ಬ ಕುರುಡ ಮನುಷ್ಯನು ಇನ್ನೊಬ್ಬ ಕುರುಡನ ಕೈ ಹಿಡಿದು ನಡೆಯುತ್ತಿದ್ದರೆ ಇಬ್ಬರೂ ಹಾಳು ಬಾವಿಯಲ್ಲಿ ಬೀಳುವರು. ಅದರಂತೆ ಅವಿವೇಕದಿಂದ ವಿಷಯಗಳಲ್ಲಿ ಅಂಧರಾಗಿರುವ ಜನರು ''ಅಂಧತಮ'' ನಾಮದ ನರಕದಲ್ಲಿ ಬೀಳುವರು ।೪೭॥

ಕುಸಂಗಾಚಾ ಜೋ ಸಾಂಗಾತ । ತೇಣೇ ಘೋಢಲೇ ನರಕಪಾತ । ಅನುತಾಪ ಸೋಡವಿತಾ ತೇಥ । ತೇ ''ಐಲಗೀತ'' ಹರಿ ಸಾಂಗೇ ॥೪೮॥

ಐಲಃ ಸಮ್ರಾಡಿಮಾಂ ಗಾಥಾಮಗಾಯತ ಬೃಹಚ್ಛ್ರವಾಃ । ಉರ್ವಶೀವಿರಹಾನ್ಮುಹ್ಯನ್ನಿರ್ವಿಣ್ಣಃ ಶೋಕ ಸಂಯಮೇ ॥೫॥

ಅರ್ಥ:- ಉದ್ಧವಾ, ಪೂರ್ವದಲ್ಲಿ ಪರಮ ಯಶಸ್ವೀ ಸಮ್ರಾಟ ಇಲಾನಂದನ ಪುರೂರವಾನು ಉರ್ವಶಿಯ ವಿರಹತಾಪದಿಂದ ಅತಿಶಯವಾಗಿ ಮೋಹಿತನಾಗಿದ್ದನು. ಪುನಃ ಶೋಕವು ಮುಗಿದನಂತರ ವೈರಾಗ್ಯವು ಪ್ರಾಪ್ತವಾಯಿತು. ಆ ಸಮಯದಲ್ಲಿ ಆತನು ಈ ಗೀತೆಯನ್ನು ಹಾಡಿದನು.

ಸಮುದ್ರವಲಯಾಂಕಿತ ಕ್ಷಿತೀ । ಸಕಳ ರಾಯಾಂಚಾ ರಾಜಪತೀ । ಪುರೂರವಾ ಚಕ್ರವರ್ತೀ । ಜ್ಯಾಚೀ ಖ್ಯಾತೀ ಪುರಾಣೀ ॥೪೯॥ ತೇಜ ಪ್ರಭಾವ ಮಹಾಶೌರ್ಯ । ಉಚಿತ ವದಾನ್ಯ ಗಾಂಭೀರ್ಯ । ಮಹಿಮಾ ಮಹತೀ ಅತಿವೀರ್ಯ । ಧರ್ಮಧೈರ್ಯ ಪೂರೂರವಾ ॥೫೦॥ ರಾಜಧರ್ಮಾಚಿಯಾ ನೀತೀ । ಸ್ವಧರ್ಮೇ ಪ್ರತಿಪಾಳೀ ಕ್ಷಿತೀ । ಬ್ರಾಹ್ಮಣ ತಿತುಕಾ ಬ್ರಹ್ಮ ಮೂರ್ತೀ । ಹಾ ಭಾವ ನಿಶ್ಚಿತೀ ರಾಯಚಾ ॥೫೧॥ ಪ್ರಾಣಾಂತೇಹೀ ಆಪಣ । ನ ಕರೀ ಬ್ರಾಹ್ಮಣಹೇಳಣ । ಗಾಯೀಲಾಗೀ ವೇಚೀ ಪ್ರಾಣ। ಕರೀ ಸಂರಕ್ಷಣ ದೀನಾಚೇ ॥೫೨॥ ಐಸಾ ಧಾರ್ಮಿಕ ಐಲ - ಚಕ್ರವರ್ತೀ । ತೋಹೀ ಉರ್ವಶೀಚೇ ಆಸಕ್ತೀ । ಭುಲೋನಿ ಠೇಲಾ ಭೂಪತೀ । ನಿಜಾತ್ಮ ಗತೀ ವಿಸರಲಾ ॥೫೩॥ ತೇಣೇ ಅನುತಾಪೇ ಗಾಇಲೀ ಗಾಥಾ । ತೇ ತುಜ ಮೀ ಸಾಂಗೇನ ಆತಾ । ಪರೀ ತ್ಯಾಚೀ ಪೂರ್ವಕಥಾ । ಕಾಮಾಸಕ್ತತಾ ತೇ ಐಕ ॥೫೪॥ ವಿಸರೋನಿ ನಿಜಮಹತ್ತ್ವಾಸೀ । ಅತಿದೀನ ಝಾಲಾ ವೇಶ್ಯೇಸೀ। ಕಾಮ ಪಿಸೇ ಲಾವೀ ಮನುಷ್ಯಾಸೀ । ತೇ ಐಲ - ಇತಿಹಾಸೀ ಹರಿ ಸಾಂಗೇ ॥೫೫॥ ಐಲ - ಉರ್ವಶೀಕಾಮಾಸಕ್ತೀ । ಸವೇಂಚಿ ಅನುತಾಪೇ ವಿರಕ್ತೀ । ಹೇ ಕಥಾ ಬೋಲಿಲೀ ವೇದೋಕ್ತೀ । ತೇಚಿ ಯದುಪತಿ ಸ್ವಯೇ ಸಾಂಗೇ ॥೫೬॥ ಉರ್ವಶೀಪುರೂರವ್ಯಾಚಾ ಸಂಬಂಧ । ನವಮ ಸ್ಕಂಧೀ ಅಸೇ ವಿಶದ । ತೇಣೇ ಜಾಣೋನಿಯಾ ಗೋವಿಂದ । ಏಥ ಕಥಾಅನುವಾದ ನ ಕರೀಚ ॥೫೭॥ ಪೂರ್ವಕಥಾಸಂಬಂಧಃ ॥ ಉರ್ವಶೀ ಸ್ವರ್ಗಭೂಷಣ। ನಾರಾಯಣೇ ಧಾಡಿಲೇ ಆಪಣ । ತೋ ಉರ್ವಶೀಸೀ ಗರ್ವ ಪೂರ್ಣ । ಶ್ರೇಷ್ಠಪಣ ಮಾನೂನೀ ॥೫೮॥ ತಯಾ ಗರ್ವಾಚಿಯೇ ಸ್ಥಿತೀ । ತಾಲ ಚುಕಲೀನೃತ್ಯಗತೀ । ತೇಣೇ ಬ್ರಹ್ಮಶಾಪಾಚೀ ಪ್ರಾಪ್ತೀ । ತುಜ ಮಾನವೀ ಭೋಗಿತೀ ಭೂ ತಳೀ ॥೫೯॥

ಹೀಗೆ ದುರ್ಜನರ ಸಂಗತಿಯಿಂದ ನರಕವಾಸವು ಪ್ರಾಪ್ತವಾಗುವುದು. ಇದರಿಂದ ಪಶ್ಚಾತ್ತಾಪವು ಬಿಡಿಸುವುದು. ಈ ವಿಷಯವನ್ನೇ ಕುರಿತು ಈಗ ಶ್ರೀಕೃಷ್ಣನು ''ಐಲಗೀತ''ವನ್ನು ಹೇಳುವನು ॥೪೮॥

ಸಮುದ್ರವಲಯಾಂಕಿತ ಸಮಗ್ರ ಪೃಥ್ವಿಯಲ್ಲಿಯ ಸರ್ವ ರಾಜರ ಯಾವ ಸಾಮ್ರಾಟ ಚಕ್ರವರ್ತಿ ಪೂರೂರವಾ ರಾಜನು. ಈತನ ಕೀರ್ತಿಯು ಪುರಾಣದಲ್ಲಿ ವರ್ಣಿಸಲ್ಪಟ್ಟಿರುವುದು ॥೪೯॥ ತೇಜ, ಪ್ರಭಾವ, ಮಹಾಶೌರ್ಯ, ಯೋಗ್ಯ ಔದಾರ್ಯ, ಗಾಂಭೀರ್ಯ, ಕೀರ್ತಿ, ಪರಾಕ್ರಮ, ಧಾರ್ಮಿಕ ಧೈರ್ಯ ಇತ್ಯಾದಿ ಗುಣಗಳಿಂದ ಪುರೂರವಾ ರಾಜನು ಯುಕ್ತನಾಗಿದ್ದನು ॥೫೦॥ ರಾಜಧರ್ಮದ ನೀತಿಯಂತೆ ಆತನು ಸ್ವಧರ್ಮದಿಂದ ಪೃಥ್ವಿಯ ಪಾಲನೆಯನ್ನು ಮಾಡುತ್ತಿದ್ದನು. ಬ್ರಾಹ್ಮಣರು ಪ್ರತ್ಯಕ್ಷ ಬ್ರಹ್ಮಮೂರ್ತಿಯಾಗಿರುವರು ಎಂಬ ಆ ರಾಜನ ದೃಢವಾದ ಭಾವವಿತ್ತು ॥೫೧॥ ಪ್ರಾಣಹೋದರೂ ಸರಿಯೇ, ಆತನು ಬ್ರಾಹ್ಮಣರ ನಿಂದೆಯನ್ನು ಎಂದಿಗೂ ಮಾಡುತ್ತಿದ್ದಿಲ್ಲ. ಗೋವುಗಳ ಸಂರಕ್ಷಣೆಗಾಗಿ ತನ್ನ ಸ್ವತಃ ಪ್ರಾಣವನ್ನು ಕೊಡಲು ಸಿದ್ಧನಾಗುತ್ತಿದ್ದನು. ದೀನದಲಿತರ ಸಂರಕ್ಷಣೆಯನ್ನೂ ಕೂಡ ಮಾಡುತ್ತಿದ್ದನು ॥೫೨॥ ಇಂತಹ ಧಾರ್ಮಿಕ, ಚಕ್ರವರ್ತಿ ಪುರೂರವಾ ರಾಜನು ಉರ್ವಶಿ ಸ್ತ್ರೀಯಳನ್ನು ಮೆಚ್ಚಿಕೊಂಡನು ಮತ್ತು ಆಕೆಯ ಮೋಹದಲ್ಲಿ ಸಿಲುಕಿಕೊಂಡು ತನ್ನ ಆತ್ಮ ಹಿತವನ್ನು ಮರೆತನು ॥೫೩॥ ತದನಂತರ ಆತನು ಪಶ್ಚಾತ್ತಾಪ ತಾಳಿ ಗೀತವನ್ನು ಹಾಡಿದನು. ಅದನ್ನು ನಾನು ನಿನಗೆ ಈಗ ಹೇಳುವೆನು. ಆದರೆ ಆತನ ಪೂರ್ವದ ಕಥೆ ಮತ್ತು ಕಾಮದ ಆಸಕ್ತಿಯನ್ನು ಮೊದಲು ಕೇಳು ॥೫೪॥ ಆತನು ತನ್ನ ದೊಡ್ಡಸ್ತಿಕೆಯನ್ನು ಮರೆತನು. ಉರ್ವಶಿಯ ಮೋಹದಿಂದ ಅತ್ಯಂತ ದೀನನಾದನು. ಕಾಮದ ಆಸಕ್ತಿಯು ಮನುಷ್ಯನನ್ನು ಹೇಗೆ ಹುಚ್ಚನನ್ನಾಗಿ ಮಾಡುವದೆಂಬ ವಿಷಯವನ್ನು ಐಲನ ಇತಿಹಾಸದಿಂದ ಶ್ರೀಕೃಷ್ಣನು ಹೇಳುತ್ತಿರುವನು ॥೫೫॥ ಐಲ ಎಂದರೆ ಇಲೇಯಿಂದ ಬುಧನಿಗೆ ಹುಟ್ಟಿದ ಮಗನು ಪುರೂರವಾ ರಾಜನು. ಉರ್ವಶೀಯಲ್ಲಿ ಎಷ್ಟೊಂದು ಲಂಪಟನಾದನು ಮತ್ತು ಕೊನೆಗೆ ಆತನಿಗೆ ಪಶ್ಚಾತ್ತಾಪವು ಉಂಟಾಗಿ ವಿರಕ್ತಿಯು ಹೇಗೆ ನಿರ್ಮಾಣವಾಯಿತು ಎನ್ನುವ ಈ ಸಂಬಂಧದ ಕಥೆಯು ವೇದದಲ್ಲಿ ಬಂದಿರುವುದು. ಅದನ್ನೇ ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೫೬॥ ಉರ್ವಶೀ ಮತ್ತು ಪುರೂರವ್ಯಾ ಇವರ ಕಥೆಯನ್ನು ಒಂಬತ್ತನೆಯ ಸ್ಕಂಧದ ಹದಿನಾಲ್ಕನೆಯ ಅಧ್ಯಾಯದಲ್ಲಿ ಸವಿಸ್ತಾರವಾದ ವರ್ಣನೆ ಇರುವುದು. ಅದನ್ನು ಲಕ್ಷದಲ್ಲಿಟ್ಟುಕೊಂಡು ಶ್ರೀಕೃಷ್ಣನು ಈ ಕಥೆಯನ್ನು ಪುನಃ ವಿಸ್ತಾರವಾಗಿ ಹೇಳಿರುವುದಿಲ್ಲ ॥೫೭॥ ಉರ್ವಶಿಗೆ ಒಂದು ಭೂಷಣವಾಗಿ ನಾರಾಯಣನು ಆಕೆಗೆ ಸ್ವರ್ಗಕ್ಕೆ ಕಳಿಸಿದ್ದನು. ಆದರೆ ಆಕೆಗೆ ತನ್ನ ಶ್ರೇಷ್ಠತ್ವದ ಅತಿಶಯವಾಗಿ ಗರ್ವವು ಉಂಟಾಯಿತು ॥೫೮॥ ಈ ಗರ್ವದ ಮದದಿಂದ ಈಕೆಯು ನೃತ್ಯ ಮಾಡುವಾಗ ಆಕೆಯ ತಾಳವು ತಪ್ಪಿತು. ಆಗ ಬ್ರಹ್ಮದೇವನು ''ನೀನು ಮೃತ್ಯುಲೋಕದಲ್ಲಿ ಮಾನವರಿಂದ ಭೋಗಿಸಲ್ಪಡುವೆ'' ಎಂದು ಶಾಪವನ್ನು ಕೊಟ್ಟನು ॥೫೯॥

ಉಃಶಾಪ ಮಾಗತಾ ತಿಸೀ । ಬ್ರಹ್ಮಾ ಸಾಂಗೇ ತಿಯೇಪಾಶೀ । ನಗ್ನ ದೇಖಿಲ್ಯಾ ಪುರೂರವ್ಯಾಸೀ । ಸ್ವರ್ಗಾ ಯೇಸೀ ಮೇಷಪ್ರಸಂಗೇ ॥೬೦॥ ಐಶಾ ಲಾಹೋನಿ ಶಾಪಾಸೀ । ಭೂತಳಾ ಆಲೀ ಉರ್ವಶೀ । ದೇಖೋನಿ ತಿಚಿಯಾ ಸ್ವರೂಪಾಸೀ । ಪುರೂರವಾ ತಿಸೀ ಭೂಲಲಾ ॥೬೧॥ ವಿಸರೋನಿ ಆಪುಲೀ ಮಹಂತೀ । ವಶ್ಯ ಝಾಲಾ ವೇಶ್ಯೇಪ್ರತೀ । ರೂಪಾ ಭುಲಲಾ ಭೂಪತೀ । ವಿಚಾರಸ್ಫೂರ್ತಿ ವಿಸರಲಾ ॥೬೨॥ ನಗ್ನ ದೇಖಿಲಿಯಾ ರಾಯಾಸೀ । ಸಾಂಡೂನಿ ಜಾವೇ ಉರ್ವಶೀ । ಐಶೀ ಭಾಕ ದೇಊನಿ ತಿಸೀ । ನಿಜಭೋಗಾಸೀ ಆಣಿಲೀ ॥೬೩॥ ತಿಣೇ ಆಪುಲಿಯಾ ಉಃಶಾಪಾಸೀ । ಆಣಿತೀ ದೋಘಾ ಏಡಕ್ಯಾಂಸೀ । ಪುತ್ರಸ್ನೇಹೇ ಪಾಳಾವೇ ತ್ಯಾಂಸೀ । ತೇವಿಖೀ ಭಾಕೇಸೀ ದಿಧಲೇ ರಾಯೇ ॥೬೪॥ ತೇ ಉರ್ವಶೀಚ್ಯಾ ಕಾಮಪ್ರಾಪ್ತೀ । ಅತಿಶಯೇ ವಾಢಲೀ ಕಾಮಾಸಕ್ತೀ । ತೋ ನೇಣೇ ಉದಯಾಸ್ತ-ದಿವಸರಾತೀ । ಐಶಾ ಅಮಿತ ತಿಥೀ ಲೋಟಲ್ಯಾ ॥೬೫॥ ಭೋಗಿತಾ ಉರ್ವಶೀಕಾಮ । ವಿಸರಲಾ ಸ್ವಧರ್ಮಕರ್ಮ । ವಿಸರಲಾ ನಿತ್ಯನೇಮ । ಕಾಮಸಂಭ್ರಮ ವಾಢಲಾ ॥೬೬॥ ತೇಥ ಮೇಷರೂಪೇ ದೋಘೇ ಜಣ । ಝಾಲೇ ಅಶ್ವಿನೀಕುಮಾರ ಆಪಣ । ಉರ್ವಶೀಭೋಗಕ್ಷಯಾ ಕಾರಣ । ಇಂದ್ರೇ ಜಾಣ ಪಾಠವಿಲೇ ॥೬೭॥ ಪುರೂರವ್ಯಾಚಾ ಭೋಗಪ್ರಾಂತೀ । ಉರ್ವಶೀ ನ್ಯಾವಯಾ ಸ್ವರ್ಗಾಪ್ರತೀ । ದೋನಿ ಏಡಕೇ ಚೋರ ನೇತೀ । ಮಧ್ಯರಾತೀ ಮೇಮಾತ ॥೬೮॥ ಐಕೋನಿ ಮೇಷಾಂಚ್ಯಾ ಶಬ್ದಾಸೀ । ದುಃಖೇ ಹಡಬಡಲೀ ಉರ್ವಶೀ । ರಾಗೇ ನಿರ್ಭರ್ತ್ಸೀ ರಾಯಾಸೀ । ನಪುಂಸಕ ಹೋಸೀ ತೂ ಏಕ ॥೬೯॥ ವೃಥಾ ವಲ್ಗಸೀ ಪುರುಷಬಳೇ । ಚೋರೇ ನೇಲೀ ಮಾಝೀ ಬಾಳೇ । ಜಳೋ ತುಝೇ ತೋಂಡ ಕಾಳೇ । ಮ್ಹಣೋನಿ ಕಪಾಳೇ ತೇ ಪಿಟೀ ॥೭೦॥ ಐಕೋನಿ ಸ್ತ್ರೀಯೇಚಾ ಶೋಕ ಥೋರು । ಶಸ್ತ್ರ ಘೇಊನಿ ಸತ್ವರು । ಧಾಂವತಾ ಫಿಟಲಾ ಪೀತಾಂಬರು । ತೇನ್ನೃಪವರೂ ಸ್ಮರೇನಾ ॥೭೧॥ ಪರಾಭವೂನಿ ತೇ ಚೋರ । ಮೇಷ ಆಣಿತಾ ಸತ್ವರ । ವಿದ್ಯುಲ್ಲತಾ ಝಳಕಳೀ ಥೋರ । ತಂವ ನಗ್ನ ಶರೀರ ರಾಯಾಚೇ ॥೭೨॥ ನಗ್ನ ದೇಖೋನಿ ರಾಯಾಸೀ । ಸಾಂಡೂನಿ ನಿಘಾಲೀ ಉರ್ವಶೀ । ತಿಚೇನಿ ವಿಯೋಗೇ ಮಾನಸೀ । ಅತಿಶೋಕಾಸೀ ಪಾವಲಾ ॥೭೩॥

ತ್ಯಕ್ತ್ವಾಽಽತ್ಮಾನಂ ವ್ರಜಂತಿಂ ತಾಂ ನಗ್ನ ಉನ್ಮತ್ತವನ್ನೃಪಃ । ವಿಲಪನ್ನನ್ವಗಾಜ್ಜಾಯೇ ಘೋರೇ ತಿಷ್ಠೇತಿ ವಿಕ್ಲವಃ॥೮॥

ಅರ್ಥ:- ರಾಜನು ನಗ್ನನಾಗಿ ಹುಚ್ಚನಂತೆ ಉರ್ವಶಿಯ ಹಿಂದೆ ಧಾವಿಸಲಾರಂಭಿಸಿದನು. ಆತನು ಅತಿಶಯ ವಿಲಾಪಿಸಿದನು ಮತ್ತು ಹೀಗೆ ಹೇಳಹತ್ತಿದನು. ಹೇ ದೇವಿಯೇ, ನಿಷ್ಠುರ ಹೃದಯದವಳೇ, ಸ್ವಲ್ಪ ಸಮಯಕ್ಕಾದರೂ ನಿಲ್ಲು ಓಡಬೇಡ.

ಆಗ ಆಕೆಯು ಉಃಶಾಪವನ್ನು ಕೈಮುಗಿದು ಬೇಡಿಕೊಂಡಳು. ಆಗ ಬ್ರಹ್ಮದೇವನು ''ನೀನು ಪುರೂರವ ರಾಜನನ್ನು ಬತ್ತಲು ಕಂಡಾಗ ಪುನಃ ಸ್ವರ್ಗಕ್ಕೆ ಬರುವೆ'' ಎಂದು ಹೇಳಿದನು ॥೬೦॥ ಶಾಪದಿಂದಾಗಿ ಉರ್ವಶಿಯು ಮೃತ್ಯುಲೋಕಕ್ಕೆ ಬಂದಳು. ಆಕೆಯ ಲಾವಣ್ಯ ಸೌಂದರ್ಯ ರೂಪವನ್ನು ಕಂಡು ಪುರೂರವಾ ರಾಜನು ಆಕೆಯಲ್ಲಿ ಭುಲಾಯಿಸಿಬಿಟ್ಟನು ॥೬೧॥ ತನ್ನ ಶ್ರೇಷ್ಠತ್ವವನ್ನು ಮರೆತು ಆತನು ಆ ವೇಶ್ಯೆಗೆ ವಶನಾದನು. ಆಕೆಯ ರೂಪಕ್ಕೆ ಮೋಹಿತನಾಗಿದ್ದಕ್ಕೆ ಆತನ ವಿಚಾರಶಕ್ತಿಯು ಪರಿಪೂರ್ಣವಾಗಿ ಇಲ್ಲದಾಯಿತು ॥೬೨॥ ರಾಜನು ಉರ್ವಶಿಗೆ ನಗ್ನನಾಗಿ ಕಂಡಾಕ್ಷಣವೇ ಆಕೆಯು ಆತನನ್ನು ಬಿಟ್ಟು ಹೋಗಬೇಕೆಂಬ ಷರತ್ತನ್ನು ಒಪ್ಪಿಕೊಂಡು ಆಕೆಯನ್ನು ತನ್ನ ಉಪಭೋಗಕ್ಕಾಗಿ ತಂದನು ॥೬೩॥ ಆಕೆಯು ತನ್ನ ಶಾಪದ ಪರಿಹಾರಕ್ಕಾಗಿ ಎರಡು ಟಗರುಗಳನ್ನು ತಂದಿದ್ದಳು. ರಾಜನು ಅವುಗಳನ್ನು ತನ್ನ ಪುತ್ರ ಸಮಾನವಾಗಿ ಪಾಲನೆಯನ್ನು ಮಾಡಬೇಕೆಂದು ಆತನಿಂದ ವಚನವನ್ನು ಪಡೆದುಕೊಂಡಳು ॥೬೪॥ ಹೀಗೆ ಉರ್ವಶಿಯ ಕಾಮಪ್ರಾಪ್ತಿಯಾಗುತ್ತಲೇ ರಾಜನ ಭೋಗಾಸಕ್ತಿಯು ಪ್ರಬಲವಾಯಿತು. ಹಗಲು ಯಾವುದು, ರಾತ್ರಿ ಯಾವುದು ಎಂಬುವುದು ತಿಳಿಯದಾಯಿತು. ಹೀಗೆ ಎಷ್ಟೋ ದಿವಸಗಳು ಗತಿಸಿದವು ॥೬೫॥ ಈ ಪ್ರಕಾರವಾಗಿ ಉರ್ವಶಿಯ ಸಹವಾಸದಲ್ಲಿ ಆತನು ತನ್ನ ಸ್ವಧರ್ಮ ಆಚರಣೆಗಳನ್ನು ಮರೆತುಬಿಟ್ಟನು. ನಿತ್ಯನಿಯಮಗಳತ್ತ ದುರ್ಲಕ್ಷವು ಉಂಟಾಯಿತು ಮತ್ತು ವಿಲಾಸಭೋಗವು ಅತಿರೇಕವಾಗಿ ಬೆಳೆಯುತ್ತ ಸಾಗಿತು ॥೬೬॥ ಈ ಯಾವ ಎರಡು ಟಗರುಗಳು ಅಶ್ವಿನಿ ಕುಮಾರರಾಗಿದ್ದವು. ಉರ್ವಶಿಯ ಶಾಪದಿಂದ ಮುಕ್ತ ಮಾಡುವುದಕ್ಕಾಗಿ ಇಂದ್ರನು ಅವರನ್ನು ಕಳಿಸಿದ್ದನು ॥೬೭॥ ಪುರೂರವಾನ ಭೋಗದಿಂದ ಬಿಡಿಸಿ ಉರ್ವಶಿಗೆ ಸ್ವರ್ಗಕ್ಕೆ ಒಯ್ಯುವ ಉದ್ದೇಶದಿಂದ ಒಂದು ರಾತ್ರಿ ಕಳ್ಳರು ಆ ಎರಡೂ ಟಗರುಗಳನ್ನು ಕದ್ದು ಒಯ್ದರು. ಆಗ ಅವು ಬ್ಯಾ ಬ್ಯಾ ಎಂದು ಒದರಲಾರಂಭಿಸಿದವು ॥೬೮॥ ಹೀಗೆ ಒದರುತ್ತಿರುವ ಧ್ವನಿಯನ್ನು ಕೇಳಿ ಉರ್ವಶಿಯು ದುಃಖದಿಂದ ವ್ಯಾಕುಳಳಾಗಿ ರಾಜನನ್ನು ತಿರಸ್ಕಾರವನ್ನು ಮಾಡುತ್ತ ಆತನಿಗೆ ನಿನಗೆ ಪುರುಷಾರ್ಥವು ಇದೆಯೋ ಇಲ್ಲವೋ ಎಂದು ಹೇಳಹತ್ತಿದಳು ॥೬೯॥ ಪುನಃ ನೀನು ವ್ಯರ್ಥವಾಗಿ ನಿನ್ನ ಪುರುಷಾರ್ಥದ ಮಾತುಗಳನ್ನು ಜಲ್ಪಿಸುವೆ, ನನ್ನ ಮಕ್ಕಳನ್ನು ಕಳ್ಳರು ಕದ್ದು ಒಯ್ಯುತ್ತಿರುವರು. ಅವುಗಳನ್ನು ಸಾಂಭಾಳಿಸುವುದು ನಿನ್ನಿಂದ ಆಗಲಿಲ್ಲ. ನಿನ್ನ ಮುಖಕ್ಕೆ ಬೆಂಕಿ ಹತ್ತಲಿ ಎಂದು ಹೇಳುತ್ತ ಆಕೆಯು ತನ್ನ ಹಣೆಯನ್ನು ಬಡೆದುಕೊಳ್ಳಹತ್ತಿದಳು ॥೭೦॥ ರಾಜನು ಉರ್ವಶಿಯ ಮಹಾಶೋಕವನ್ನು ಕಂಡನು. ಕೂಡಲೇ ಅತಿ ಗಡಬಡಿಯಿಂದ ಕೈಯಲ್ಲಿ ಶಸ್ತ್ರ ಹಿಡಿದು ಟಗರುಗಳನ್ನು ಬಿಡಿಸಿಕೊಂಡು ಬರಲು ಹೊರಟನು. ಅವಸರದಿಂದ ಧಾವಿಸುತ್ತಿರಲು ಆಗ ಆತನ ಪೀತಾಂಬರವು ಕಳಚಿತು. ಆದರೆ ಇದರ ಎಚ್ಚರ ಆತನಿಗೆ ಇರಲಿಲ್ಲ ॥೭೧॥ ರಾಜನು ಕಳ್ಳರನ್ನು ಸೋಲಿಸಿ ಟಗರುಗಳನ್ನು ಮರಳಿ ತರುತ್ತಿರಲು ಆಕಾಶದಲ್ಲಿ ಆಕಸ್ಮಿಕವಾಗಿ ಭಯಂಕರ ಮಿಂಚು ಮಿಂಚಿತು. ಆ ಪ್ರಕಾಶದಲ್ಲಿ ರಾಜನ ನಗ್ನ ಶರೀರವು ಉರ್ವಶಿಯ ದೃಷ್ಟಿಗೆ ಬಿದ್ದಿತು ॥೭೨॥ ಆಗ ಆ ಉರ್ವಶಿಯು ರಾಜನನ್ನು ಬಿಟ್ಟುಕೊಟ್ಟು ಸ್ವರ್ಗದತ್ತ ಹೊರಟಳು. ಆ ಸಮಯದಲ್ಲಿ ಆಕೆಯ ವಿಯೋಗದಿಂದ ರಾಜನು ಅತಿಶಯವಾಗಿ ಶೋಕಾಕುಲನಾದನು ॥೭೩॥

ಪೃಥ್ವೀಪರಿಪಾಲನೀ ವರಿಷ್ಠ । ಸ್ವಧರ್ಮೀ ಧಾರ್ಮಿಕ ಶ್ರೇಷ್ಠ । ಶತ್ರುದಮನೀ ಅತಿಸುಭಟ । ಪ್ರತಾಪೇ ಉದ್ಭಟ ಮಹಾವೀರ ॥೪೪॥ ಜಾಣೇ ವೇದಶಾಸ್ತ್ರ ವಿವೇಕ । ಜ್ಯಾಸೀ ವಂದಿತೀ ಸಕಳ ಲೋಕ । ತೋಹೀ ವೇಶ್ಯೇಚಾ ಕೇವಳ ರಂಕ । ಝಾಲಾ ದೇಖ ನಿಜಾಂಗೇ ॥೪೫॥ ಸುರಾ ಅಸುರಾನ ಖಾಲವೀ ಮಾನ । ಜೋ ಅಲ್ಪ ಹೀ ನ ಸಾಹೇ ಅಪಮಾನ। ತೋ ವೇಶ್ಯೆಲಾಗೀ ಝಾಲಾ ದೀನ । ನಿಜಸನ್ಮಾನ ವಿಸರೋನೀ ॥೪೬॥ ಉರ್ವಶೀ ಜಾತಾ ದೇಖೋನಿ ದಿಠೀ । ನಗ್ನ ಉನ್ಮತ್ತ ಉಠಾಉಠೀ । ರಡತ ಪಡತ ಲಾಗೇ ಪಾಠೀ। ಸ್ಫುಂದತಾ ಪೋಟೀ ಶ್ವಾಸ ನ ರಿಘೇ ॥೪೭॥ ಡೋಳೇಭರೀ ಪಾಹೂ ದೇ ದಿಠೀ। ಸಾಂಗೇನ ಜೀವಿಂಚ್ಯಾ ಗುಹ್ಯ ಗೋಷ್ಟೀ । ಪ್ರಾಣ ರಿಘೋ ಪಾಹೇ ಉಠಾಉಠೀ । ಕ್ಷಣಭರ ಭೇಟೀ ನ ದೇತಾ ॥೪೮॥ ಆಪುಲ್ಯಾ ಪೂರ್ವಜಾಂಚೀ ಆಣ । ಕದಾ ನುಲ್ಲಂಘೀ ತುಝೇ ವಚನ । ಸತ್ಯ ಮಾನೀ ಮಾಝೇ ಪ್ರಮಾಣ। ತುಜ ಕಾಯ ಕಾರಣ ರುಸಾವಯಾ ॥೪೯॥ ತುಜ ಚಾಲತಾ ಲವಲಾಹೀ । ಝಣೀ ಖಡೇ ರುತತೀಲ ಪಾಯೀ । ತುಜ ಜಾಣೇ ಕೋಣೇ ಠಾಯೀ । ತರೀ ಸವೇ ಮೀಹೀ ಯೇಈನ ॥೫೦॥ ಜಾಊ ನಕೋ ಉಭೀ ರಾಹೇ । ಪರತೋನೀ ಮಜಕಡೇ ಪಾಹೇ । ಮ್ಹಣೋನಿ ಧರೂ ಧಾಂವೇ ಪಾಯೇ । ತಂವ ತೇ ಜಾಯೇ ಉಪೇಕ್ಷುನೀ ॥೫೧॥ ಜ್ಯಾಸೀ ರಾಜೇಮುಕುಟಮಣೀ । ಸದಾ ಯೇತೀ ಲೋಟಾಂಗಣೀ । ತೋ ಲಾಗೇ ವೇಶ್ಯೇಚೇ ಚರಣೀ । ಬಾಪ ಕರಣೀ ಕಾಮಾಚೀ ॥೫೨॥ ತುಝೀ ಮಜ ಅತಿ ಕಳವಳ । ತುಜಲಾಗೀ ಮನ ಮಾಝೇ ಕೋಮಳ । ತೂ ಕಠಿಣ ಝಾಲೀಸ ಕೇವಳ । ಕೋಪ ಪ್ರಬಳ ಕಾ ಧರಿಲಾ ॥೫೩॥ ಯಾಪರೀ ರಾಯಾಚೇ ಚಿತ್ತ । ವಿರಹಾತುರ ಶೋಕಾಕುಲಿತ । ಅತಿಶಯೇ ಗ್ಲಾನಿಯುಕ್ತ। ತೇ ಗ್ಲಾನೀ ಸಾಂಗತ ಶ್ರೀಕೃಷ್ಣ ॥೫೪॥

ಕಾಮಾನತೃಪ್ತೋಽನುಜಷನ್ ಕ್ಷುಲ್ಲಕಾನ್ವರ್ಷಯಾಮಿನೀಃ । ನ ವೇದ ಯಾಂತೀರ್ನಾಯಾಂತೀರುರ್ವಶ್ಯಾಕೃಷ್ಟಚೇತನಃ ॥೬॥

ಅರ್ಥ:- ಪುರೂರವನು ಅನೇಕ ವರ್ಷಗಳ ಕಾಲ ಸಂಧ್ಯಾಕಾಲದಲ್ಲಿ ಕಾಮೋಪಭೋಗವನ್ನು ಅನುಭವಿಸಿದ್ದನು. ಆದರೂ ಅಂತಹ ಕ್ಷುದ್ರ ಸುಖದಿಂದ ಆತನಿಗೆ ತೃಪ್ತಿಯಾಗಿರಲಿಲ್ಲ. ಅವನ ಮನಸ್ಸು ಉರ್ವಶಿಯ ವಿಷಯದಲ್ಲಿ ಎಷ್ಟು ಆಕರ್ಷಿತವಾಗಿತ್ತೆಂದರೆ ರಾತ್ರಿಗಳು ಹೇಗೆ ಉರುಳಿಹೋಗುತ್ತಿದ್ದವೆಂದು ಆತನು ಗಮನಿಸಲೇ ಇಲ್ಲ.

ಉರ್ವಶೀಕಾಮೀ ಕಾಮಾಸಕ್ತ । ಏಕಾಗ್ರ ಝಾಲೇ ರಾಯಾಚೇ ಚಿತ್ತ । ನೇಣೇಸೂರ್ಯಾಚೇ ಗತಾಗತ । ಕೇಲಾ ಭ್ರಾಂತ ಕಂದರ್ಪೇ ॥೫೫॥ ಭೋಗೆಲೀಚಿ ಕಾಮಿನೀ । ಭೋಗಿತಾಂಹೀ ಅನುದಿನೀ । ಅಧಿಕ ಪ್ರೇಮ ವಾಢಲೇ ಮನೀ । ಐಸಾ ನಿಜಲಾಗೂನೀ ಆಸಕ್ತ ॥೫೬॥

ಪೃಥ್ವಿಯ ಪಾಲನೆ ಮಾಡುವುದರಲ್ಲಿ ವರಿಷ್ಠನು, ಸ್ವಧರ್ಮದಲ್ಲಿ ಶ್ರೇಷ್ಠನು, ಧಾರ್ಮಿಕನು, ಶತ್ರು ದಮನದಲ್ಲಿ ಅತ್ಯಂತ ಪರಾಕ್ರಮಿಯು, ಪ್ರತಾಪದಿಂದ ಆತನು ಮಹಾವೀರರ ಸಮಾನನು ॥೪೪॥ ವೇದಶಾಸ್ತ್ರಗಳನ್ನು ಅರಿತವನು, ಸರ್ವಜನರಿಗೂ ವಂದ್ಯನಾದವನು, ಹೀಗಿರುವ ಯಾವ ಪೂರೂರವ ರಾಜನು ಸರ್ವಸ್ವದಿಂದ ವೇಶ್ಯೆಯ ದಾಸನಾದನು ॥೪೫॥ ಸುರಾಸುರರಿಗೆ ಎಂದಿಗೂ ತಲೆ ಕೆಳಗೆ ಮಾಡಿದವನಲ್ಲ. ಈತನಿಗೆ ಸ್ವಲ್ಪವೂ ಕೂಡ ಆಪಮಾನ ಸಹಿಸುವುದಿಲ್ಲ. ಹೀಗಿರುವ ಈತನ ಎಲ್ಲ ದೊಡ್ಡಸ್ತಿಕೆಗಳನ್ನು ಮರೆತು ಒಬ್ಬ ವೇಶ್ಯೆಗಾಗಿ ದೀನನಾದನು ॥೪೬॥ ಉರ್ವಶಿಯು ತತ್ಕಾಲದಲ್ಲಿ ಹೊರಟದ್ದು ನೋಡಿ ರಾಜನು ನಗ್ನಾವಸ್ಥೆಯಲ್ಲಿಯೇ ಆಕೆಯ ಹಿಂದೆ ಧಾವಿಸಲಾರಂಭಿಸಿದನು. ದುಃಖದಿಂದ ಬಿಕ್ಕುತ್ತಿರಲು ಸರಿಯಾಗಿ ಶ್ವಾಸವು ಆಡುತ್ತಿದ್ದಿಲ್ಲ ॥೪೭॥ ನಿನಗೆ ಒಂದು ಸಲ ಕಣ್ತುಂಬ ನೋಡುವೆ, ನನ್ನ ಹೃದಯದ ಇಂಗಿತ ತಿಳಿಸುವೆ, ನೀನು ಒಂದು ಕ್ಷಣವಾದರೂ ಭೇಟಿಕೊಡದಿದ್ದರೆ ನನ್ನ ಪ್ರಾಣವು ಉಳಿಯುವುದಿಲ್ಲ ॥೪೮॥ ನಾನು ನನ್ನ ಪೂರ್ವಜರ ಆಣೆ ಮಾಡಿ ಹೇಳುವೆ, ನಿನ್ನ ವಚನದ ಉಲ್ಲಂಘನೆಯನ್ನು ನಾನು ಎಂದಿಗೂ ಮಾಡುವುದಿಲ್ಲ. ಇದು ಸತ್ಯವೆಂದು ತಿಳಿ. ನೀನು ಮುನಿಸಿಕೊಳ್ಳಲು ಕಾರಣವಾದರೂ ಏನು? ॥೪೯॥ ಹೀಗೆ ನಡೆದರೆ ನಿನ್ನ ಚರಣಗಳಿಗೆ ಹರಳುಗಳು ನಡುವುವು. ನೀನು ಎಲ್ಲಿಗೆ ಹೊರಟಿರುವೆ, ತಡೆ, ನಾನೂ ನಿನ್ನ ಜೊತೆಯಲ್ಲಿಯೇ ಬರುವೆ ॥೫೦॥ ತಡೆ, ಹೋಗಬೇಡ, ಸ್ವಲ್ಪ ನಿಲ್ಲು, ಒಮ್ಮೆಯಾದರೂ ಹೊರಳಿ ನನ್ನತ್ತ ನೋಡು, ಹೀಗೆ ಹೇಳುತ್ತ ಆಕೆಯ ಕಾಲು ಹಿಡಿಯಲು ಹೋದರೆ ಆಕೆಯು ತಿರಸ್ಕರಿಸಿ ಹೊರಟುಬಿಟ್ಟಳು ॥೫೧॥ ಮಹಾ ಮಹಾ ರಾಜ-ಮಹಾರಾಜರು ಲೋಟಾಂಗಣ ಹಾಕುತ್ತಿರುವ ಈ ಮಹಾರಾಜಾಧಿರಾಜನು ವೇಶ್ಯೆಯ ಕಾಲು ಹಿಡಿಯುವನೆಂದರೆ ಅಬ್ಬಾ! ಈ ಕಾಮದ ಪ್ರತಾಪವು ಎಂತಹದ್ದು! ॥೫೨॥ ಆತನು ಹೀಗೆ ಹೇಳಹತ್ತಿದನು, ನನಗೆ ನಿನ್ನಲ್ಲಿ ಅತಿಶಯವಾದ ಪ್ರೀತಿ ಇದೆ. ನಿನಗಾಗಿ ನನ್ನ ಮನವು ಸತತವಾಗಿ ಚಡಪಡಿಸುತ್ತಿದೆ. ನೀನೇಕೆ ಹೀಗೆ ನಿಷ್ಠುರಳಾದೆ? ಇಷ್ಟೊಂದು ಕೋಪವನ್ನು ಏತಕ್ಕಾಗಿ ಹಿಡಿದೆ? ॥೫೩॥ ಈ ಪ್ರಕಾರವಾಗಿ ರಾಜನ ಮನವು ವಿರಹದಿಂದ ಶೋಕಾಕುಲಿತವಾಯಿತು. ಅತಿಶಯ ಗ್ಲಾನಿಯುಕ್ತನಾದನು. ಶ್ರೀಕೃಷ್ಣನು ಈಗ ಆ ಗ್ಲಾನಿಯನ್ನು ವರ್ಣಿಸುವನು॥೫೪॥

ರಾಜನ ಚಿತ್ತವು ಉರ್ವಶಿಯ ಪ್ರೇಮವಿಲಾಸದಲ್ಲಿ ಎಷ್ಟು ರಮಮಾಣವಾಗಿತ್ತೆಂದರೆ ಆತನಿಗೆ ಸೂರ್ಯನು ಉದಯನಾದನು ಮತ್ತು ಅಸ್ತನಾದನು ಎಂಬ ಯಾವ ಎಚ್ಚರವೂ ಇರುತ್ತಿದ್ದಿಲ್ಲ. ಇಷ್ಟೊಂದು ಕಂದರ್ಪದಿಂದ ಅವನು ಹುಚ್ಚನಾಗಿದ್ದನು ॥೫೫॥ ಉರ್ವಶಿಯ ಸತತವಾದ ಸಹವಾಸದಿಂದ ಆಕೆಯ ಮೇಲಿನ ಪ್ರೇಮವು ಆತನಲ್ಲಿ ಅಧಿಕಾಧಿಕವಾಗಿ ಬೆಳೆಯುತ್ತಲೇ ಸಾಗಿತ್ತು. ರಾಜನು ಆಕೆಯಲ್ಲಿ ಅತ್ಯಂತ ಆಸಕ್ತನಾದನು ॥೫೬॥

ಭೋಗಿತಾ ಉರ್ವಶೀಕಾಮಾಸೀ । ನೇಣೇ ದಿವಸಮಾಸವರ್ಷಾಸೀ । ವ್ಯಯೋ ಝಾಲಾ ಆಯುಷ್ಯಾಸೀ । ಹೇಹೀ ತ್ಯಾಸೀ ಸ್ಮರೇನಾ ॥೮೭॥ ಜೇವೀ ಅಗ್ನಿ ಮಾಜೀಘೃತ ಪಡೇ। ತಂವ ತಂವ ಜ್ವಾಳಾ ಅಧಿಕ ವಾಢೇ। ತೇವೀ ಕಾಂತಾ ಭೋಗಿತಾ ವಾಡೇಕೋಡೇ । ಕಾಮ ಪುಢೇ ಥೋರಾವೇ ॥೮೮॥ ವಿಚಾರಿತಾ ಸ್ತ್ರೀಕಾಮಾಸೀ । ಅತಿತುಚ್ಛತ್ವ ದಿಸೇ ತ್ಯಾಸೀ । ತೋಹೀ ಭೋಗಿತಾ ಅಹರ್ನಿಶೀ । ವಿರಕ್ತೀ ರಾಯಾಸೀ ನುಪಜೇಚಿ ॥೮೯॥ ಪ್ರೀತಿ ಗುಂತಲೀ ಉರ್ವಶೀಸೀ । ಅತಿಗ್ಲಾನೀ ಕರಿತಾ ತಿಸೀ। ಪರತೋನಿ ನ ಯೇಚಿ ರಾಯಾಪಾಶೀ । ನಿಘೇ ವೇಗೇಸೀ ಸಾಂಡೂನಿ ॥೯೦॥ ಉರ್ವಶೀ ನ ದೇಖೂನಿ ಪುಢೇ । ರಾಜಾ ವಿರಹೇ ಮೂರ್ಚ್ಛಿತ ಪಡೇ । ಪಾಹೋ ಧಾಂವೇ ಇಕಡೇತಿಕಡೇ । ಆಕ್ರೋಶೇ ರಡೇ ಅತಿದುಃಖೀ ॥೯೧॥ ಅಟಣ ಕರಿತಾ ದಾಹೀ ದಿಶೀ । ಅವಚಟೇ ಆಲಾ ಕುರುಕ್ಷೇತ್ರಾಸೀ । ತಂವ ಅಂತರಿಕ್ಷೀ ಉರ್ವಶೀ । ದೇಖೇ ದೃಷ್ಟೀಸೀ ನೃಪನಾಥ ॥೯೨॥ ದೇಖೋನಿ ಮ್ಹಣೇ ಧಾಂವ ಪಾವ । ಮಜಲಾಗೀ ದೇ ಕಾ ವೇಗೀ ಖೇವ । ಯೇರೀ ಮ್ಹಣೇ ಮೂಢಭಾವ । ಸಾಂಡೀ ಸರ್ವ ವಿಷಯಾಂಧಾ ॥೯೩॥ ಆಮ್ಹಾ ಸ್ತ್ರೀಯಾಂಚೀ ಆಸಕ್ತೀ । ಕದಾ ಧಡ ನವ್ಹೇ ಗಾ ಭೂಪತೀ । ಸದಾ ಸ್ತ್ರೀಯಾಂಚೀ ದುಷ್ಟ ಜಾತೀ । ಜಾಣ ನಿಶ್ಚಿತೀ ಮಹಾರಾಜಾ ॥೯೪॥ ವಿಶೇಷೇ ಆಮ್ಹೀ ಸ್ವೈರಿಣೀ । ಸ್ವೇಚ್ಛಾ ಪರಪುರುಷಗಾಮಿನೀ । ಆಮುಚಾ ವಿಶ್ವಾಸ ಮನೀ । ಝಣೇ ನ ಮಾನೀ ನೃಪನಾಥಾ ॥೯೫॥ ಆಮ್ಹಾ ಪ್ರಮದಾಂಚ್ಯಾ ಸಂಗತೀ । ರಾಯಾ ಠಕಲೇ ನೇಣೋ ಕಿತೀ । ಆತಾ ಸಾಂಡೂನಿ ಆಮಚೀ ಆಸಕ್ತೀ । ಹೋಈ ಪರಮಾರ್ಥೀ ವಿರಕ್ತ ॥೯೬॥ ಬಹು ಕಾಳ ಭೋಗಿತಾ ಮಾಝಾ ಭೋಗ । ಅಧ್ಯಾಪಿ ನುಜಪೇ ತುಜ ವಿರಾಗ । ಕಾಮಾಸಕ್ತಿ ಸಾಂಡೂನಿ ಸಾಂಗ। ಸಾಧೀ ಚಾಂಗ ನಿಜಸ್ವಾರ್ಥ ॥೯೭॥ ರಾಜಾ ಗ್ಲಾನೀ ಕರೀ ಅನೇಗ ।ಏಕವೇಳ ನಿಜಾಂಗೇ ಅಂಗ । ಮಜ ದೇ ಈ ಅಂಗಸಂಗ । ಸುಖಸಂಭೋಗ ಭಾಮಿನೀ ॥೯೮॥ ನಿಲಾಗ ದೇಖೋನಿ ಗ್ಲಾನೀಸೀ। ಕೃಪೇನೇ ದ್ರವಲೀ ಉರ್ವಶೀ । ಮಗ ತೇ ಆಪುಲ್ಯಾ ಪೂರ್ವ ವೃತ್ತಾಂತಾಸೀ । ರಾಯಾಪಾಶೀ ನಿವೇದೀ ॥೯೯॥ ಮೀ ಸ್ವರ್ಗಾಂಗನಾ ಅತಿಸುರೂಪ ।ಮಜ ಘಡಲಾ ಬ್ರಹ್ಮಶಾಪ । ತೂ ಮಹಾರಾಜ ಪುಣ್ಯರೂಪ । ಸಂಗೇ ನಿಃಶಾಪ ಮೀ ಝಾಲೇ ॥೧೦೦॥ ತುಝೇನಿ ಸಂಗೇ ಮೀ ನಿರ್ಧೂತ । ಶಾಪ ನಿಸ್ತರಲೇ ಸಮಸ್ತ । ಮಜ ತುಜ ಸಂಗ ನ ಘಡೇ ಏಥ । ಮೀ ಅಸೇ ಜಾತ ಸ್ವರ್ಗಾಸೀ ॥೧೦೧॥

ಉರ್ವಶಿಯ ಜೊತೆಯಲ್ಲಿ ವಿಲಾಸ ಮಾಡುತ್ತಿರಲು ಆಗ ಆತನಿಗೆ ಎಷ್ಟು ದಿನ, ಮಾಸ,ವರ್ಷಗಳು ಕಳೆದವು ಮತ್ತು ಇದರಲ್ಲಿ ತನ್ನ ಆಯುಷ್ಯವು ಎಷ್ಟು ನಾಶವಾಯಿತು ಎನ್ನುವ ಸ್ಮರಣೆಯೂ ಕೂಡ ಆತನಿಗೆ ಉಳಿಯಲಿಲ್ಲ ॥೮೭॥ ಅಗ್ನಿಯಲ್ಲಿ ತುಪ್ಪದ ಆಹುತಿಕೊಟ್ಟಂತೆ ಅದರ ಜ್ವಾಲೆಯು ಅಧಿಕವಾಗಿಯೇ ಪ್ರಜ್ವಲಿಸುತ್ತಿರುವುದು. ಅದರಂತೆ ಸ್ತ್ರೀಯಳ ಉಪಭೋಗ ಪಡೆಯುತ್ತಿರುವುದರಿಂದ ಯಾವ ಕಾಮವು ಯಾವಾಗಲೂ ಬೆಳೆಯುತ್ತಲೇ ಸಾಗುತ್ತಿರುವುದು ॥೮೮॥ ಸ್ತ್ರೀವಿಷಯದ ವಿಚಾರವನ್ನು ಮಾಡಿದರೆ ಅದು ಅತ್ಯಂತ ತುಚ್ಛವಾಗಿದೆ ಎಂದು ಕಂಡು ಬರುವುದು. ಆದರೆ ಆ ವಿಷಯವನ್ನು ಹಗಲೂ ರಾತ್ರಿ ಭೋಗಿಸುತ್ತಿದ್ದರೂ ಕೂಡ ರಾಜನಿಗೆ ಯಾವ ವೈರಾಗ್ಯವು ಉತ್ಪನ್ನವಾಗಲಿಲ್ಲ ॥೮೯॥ ಆತನ ಮನಸ್ಸೆಲ್ಲವೂ ಉರ್ವಶಿಯಲ್ಲಿ ನಟ್ಟಿಕೊಂಡಿತ್ತು. ರಾಜನು ಆಕೆಯಲ್ಲಿ ಕರುಣೆಯಿಂದ ಬೇಡಿಕೊಂಡನು. ಆದರೆ ಆಕೆಯು ರಾಜನತ್ತ ಹೊರಳಿಯೂ ಕೂಡ ನೋಡದೇ ಲಗುಬಗೆಯಿಂದ ಹೊರಟೇ ಹೋದಳು ॥೯೦॥ ಉರ್ವಶಿಯು ಮುಂದೆ ಕಾಣದಾದಾಗ, ರಾಜನು ಅತ್ತ ಇತ್ತ ನೋಡುತ್ತ ಜೋರು ಜೋರಾಗಿ ಅಳುತ್ತ ಆಕ್ರೋಶ ಮಾಡಿ ಕೊನೆಗೆ ಮೂರ್ಚ್ಛಿತನಾಗಿ ಬಿದ್ದುಕೊಂಡನು ॥೯೧॥ ಆಮೇಲೆ ಎಚ್ಚರಾಗಿ ಹತ್ತೂ ದಿಕ್ಕಿನತ್ತ ಹುಡುಕುತ್ತ ಅಕಸ್ಮಾತಾಗಿ ರಾಜನು ಕುರುಕ್ಷೇತ್ರಕ್ಕೆ ಬಂದನು. ಅಲ್ಲಿ ಆತನಿಗೆ ಆಕಾಶದಲ್ಲಿ ಉರ್ವಶಿಯು ಕಾಣಿಸಿಕೊಂಡಳು ॥೯೨॥ ಆಕೆಯನ್ನು ಕಾಣುತ್ತಲೇ ರಾಜನು ಹೇಳಿದನು ; ಹೇ ಉರ್ವಶೀ, ಬೇಗ ಬಾ, ನನ್ನಲ್ಲಿ ಪ್ರಸನ್ನಳಾಗು, ನನಗೆ ಆಲಂಗಿಸು ಎಂದಾಗ ಉರ್ವಶಿಯು ಹೀಗೆ ಉತ್ತರಿಸಿದಳು; ಎಲವೋ ವಿಷಯಾಂಧನೇ, ಇದೆಲ್ಲ ಮೂರ್ಖತನವನ್ನು ಈಗ ಬಿಟ್ಟುಬಿಡು ॥೯೩॥ ಹೇ ಮಹಾರಾಜನೇ, ನಮ್ಮ ಸ್ತ್ರೀಯರ ಆಸಕ್ತಿಯು ಎಂದಿಗೂ ಹಿತಕರವಲ್ಲ. ಸ್ತ್ರೀಯರ ಸಂಗವು ದುಷ್ಟವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೯೪॥ ವಿಶೇಷವಾಗಿ ನಾವು ವೇಶ್ಯೆಯರು ಸ್ವೈರಿಣೆಯರಾಗಿರುವೆವು. ಮನ ಬಂದಂತೆ ಪುರುಷರಲ್ಲಿ ರತರಾಗುತ್ತಿರುವೆವು. ಆದ್ದರಿಂದ ಹೇ ರಾಜನೇ, ನೀನು ನಮ್ಮ ಮೇಲೆ ಎಂದಿಗೂ ವಿಶ್ವಾಸವನ್ನಿಡಬೇಡ ॥೯೫॥ ಹೇ ರಾಜನೇ, ನಮ್ಮ ಈ ಸ್ತ್ರೀಯರ ಸಂಗತಿಯಲ್ಲಿ ಅದೆಷ್ಟೋ ಜನರು ಇಲ್ಲಿಯವರೆಗೆ ಮೋಸ ಹೋಗಿರುವರೆಂಬುದು ಇದರ ಗಣಿತವೇ ಇಲ್ಲ. ಆದಕಾರಣ ಈಗ ನೀನು ನನ್ನ ಆಸಕ್ತಿಯನ್ನು ಬಿಟುಕೊಟ್ಟು ವಿರಕ್ತನಾಗಿ ಪರಮಾರ್ಥದ ಮಾರ್ಗಕ್ಕೆ ಹತ್ತಿಕೋ ॥೯೬॥ ದೀರ್ಘಕಾಲದವರೆಗೆ ನೀನು ನನ್ನಲ್ಲಿ ವಿಲಾಸವನ್ನು ಭೋಗಿಸಿದರೂ ಕೂಡ ಇನ್ನೂ ನಿನ್ನ ಮನದಲ್ಲಿ ವಿರಕ್ತಿಯು ಹೇಗೆ ನಿರ್ಮಾಣವಾಗಲಿಲ್ಲ ? ಆದ್ದರಿಂದ ಈಗ ನೀನು ಕಾಮದ ಆಸಕ್ತಿಯನ್ನು ಪರಿಪೂರ್ಣವಾಗಿ ತ್ಯಜಿಸಿ ಮೊದಲು ನಿನ್ನ ನಿಜಸ್ವಾರ್ಥದತ್ತ ಚಿತ್ತ ಕೊಟ್ಟು ಸಾಧಿಸು ॥೯೭॥ ರಾಜನು ಅನೇಕ ರೀತಿಯಿಂದ ಗ್ಲಾನಿಯನ್ನು ಮಾಡಿದನು. ಆಕೆಯನ್ನು ವಿನಂತಿಸುತ್ತ, ಹೇ ಭಾಮಿನಿಯೇ, ನನಗೆ ಒಮ್ಮೆಯಾದರೂ ಆಲಂಗಿಸಿ ಸುಖವನ್ನು ಕೊಡು ಎಂದು ಹೇಳಹತ್ತಿದನು ॥೯೮॥ ಆಗ ರಾಜನ ಆರ್ತ ಭಾವನೆಯನ್ನು ಕಂಡು ಉರ್ವಶಿಯ ಹೃದಯವು ಕರಗಿತು. ಆಕೆಯು ತನ್ನ ಪೂರ್ವದ ಇತಿಹಾಸವನ್ನು ಹೇಳಲಾರಂಭಿಸಿದಳು ॥೯೯॥ ನಾನು ಅತ್ಯಂತ ಸುರೂಪಳಾದ ಸ್ವರ್ಗದ ಅಪ್ಸರೆಯಾಗಿರುವೆ. ನನಗೆ ಬ್ರಹ್ಮ ಶಾಪವಾಗಿದ್ದಕ್ಕೆ ನಾನು ಈ ಮೃತ್ಯುಲೋಕಕ್ಕೆ ಬರಬೇಕಾಯಿತು. ಆದರೆ ನೀನು ಪುಣ್ಯವಂತನಾಗಿರುವುದರಿಂದ ನಿನ್ನ ಕಾರಣವಾಗಿ ನಾನು ಶಾಪದಿಂದ ಮುಕ್ತಳಾಗಿರುವೆ ॥೧೦೦॥

ಐಕೋನಿ ಉರ್ವಶೀಚೇ ವಚನ । ರಾಜಾ ವಿರಹೇ ಕರೀ ರುದನ । ತೆವ್ಹಾ ಕಳವಳಲೇ ತಿಚೇ ಮನ । ತ್ಯಾ ಉಪಾಯ ಪೂರ್ಣ ದಾವಿಲಾ ॥೧೦೨॥ ಪ್ರಾರ್ಥೂನಿಯಾ ಗಂಧರ್ವಾಸೀ । ಅಗ್ನಿಸ್ಥಾಲೀ ದಿಧಲೀ ರಾಯಾಸೀ । ಯಾವರೀ ಕರೂನಿ ಯಾಗಾಸೀ । ಮಜ ಪಾವಸೀ ಮಹಾರಾಜಾ ॥೧೦೩॥ ಉರ್ವಶೀವಿಯೋಗೇ ವ್ಯಥಾಭೂತ । ಅಗ್ನಿಸ್ಥಾಲೀ ಉಪೇಕ್ಷೂನಿ ತೇಥ । ರಾಜಾ ನಿಜಮಂದಿರಾ ಯೇತ । ಶೋಕಾಕುಲಿತ ಅತಿದುಃಖೀ ॥೧೦೪॥ ಉರ್ವಶೀಚೇ ವ್ಯಥಾ ರಾಯಾಸೀ । ಸ್ವಪ್ನೀ ದೇಖಿಲೇ ತಿಯೇಸೀ । ತ್ವರೇನೇ ಪಾಹೂ ಆಲಾ ಸ್ಥಾಲೀಸೀ । ತಂವ ದೇಖೇ ಅಶ್ವತ್ಥಾಸೀ ಶಮೀಗರ್ಭಾ ॥೧೦೫॥ ತ್ಯಾಚ್ಯಾ ಅರಣೀ ಕರೂನಿ ದೇಖ । ಯಜ್ಞಾಗ್ನಿ ಪಾಡಿಲಾ ಚೋಖ । ಯಜೂನಿ ಪಾವಲಾ ಉರ್ವಶೀಲೋಕ । ಕಾಮಸುಖಭೋಗೇಚ್ಛಾ ॥೧೦೬॥ ಭೋಗ ಭೋಗಿತಾ ಉರ್ವಶೀಸೀ । ವಿರಕ್ತಿ ಉಪಜಲೀ ರಾಯಾಸೀ । ತೋ ಜೇ ಬೋಲಿಲಾ ಅನುತಾಪೇಸೀ । ತೇ ಐಕ ತುಜಸೀ ಸಾಂಗೇನ ॥೧೦೭॥ ಅಠರಾ ಶ್ಲೋಕಾಂಚೇ ನಿರೂಪಣ । ರಾಜಾ ಬೋಲಿಲಾ ಆಪಣ । ಆಠೇ ಶ್ಲೋಕೀ ಅನುತಾಪ ಪೂರ್ಣ । ತೇಚಿ ಶ್ರೀಕೃಷ್ಣ ಸ್ವಯೇ ಸಾಂಗೇ ॥೧೦೮॥

ಐಲ ಉವಾಚ :-

ಅಹೋ ಮೇ ಮೋಹವಿಸ್ತಾರಃ ಕಾಮುಕಶ್ಮಲಚೇತಸಃ ।
ದೇವ್ಯಾ ಗೃಹಿತಕಂಠಸ್ಯ ನಾಯುಃಖಂಡಾ ಇಮೇ ಸ್ಮೃತಾಃ ॥೭॥

ಅರ್ಥ:- ಪುರೂರವಾ ಹೇಳಿದನು; ನನ್ನ ಮೂಢತನ ನೋಡಿರಿ, ಕಾಮವಾಸನೆಯಿಂದ ನನ್ನ ಚಿತ್ತವು ಅದೆಷ್ಟೋ ಕಲುಷಿತವಾಯಿತು. ಉರ್ವಶಿಯು ತನ್ನ ಬಾಹುಪಾಶದಿಂದ ನನ್ನ ಕುತ್ತಿಗೆಯನ್ನು ಹಿಚುಕಿದಳು. ಇದರಿಂದ ನನ್ನ ಆಯುಷ್ಯದಲ್ಲಿನ ಎಷ್ಟೋ ವರ್ಷಗಳು ವ್ಯರ್ಥವಾಗಿ ಹೋದವು.

ಐಲಗೀತಾಚಾ ಅನುತಾಪ । ನಾಶೀಅಗಮ್ಯಾಗಮನಪಾಪ । ಕರೀ ಶ್ರೋತ್ಯಾಂಸೀ ನಿಷ್ಪಾಪ । ಸಾಧಕಾ ಕಂದರ್ಪ ಬಾಧೀನಾ ॥೧೦೯॥ ಜೇವೀ ಮದಗಜ ಗಜೀಸಂಗೀ । ನಾನಾ ಅಪತ್ತಿ ಸ್ವಯೇ ಭೋಗೀ । ತೇವೀ ಉರ್ವಶೀಚ್ಯಾ ಸಂಭೋಗೀ । ಝಾಲಾ ವಿರಾಗೀ ಪುರೂರವಾ ॥೧೧೦॥ ಜೋ ಉರ್ವಶೀಲಾಗೀ ಅನುರಕ್ತ । ತೋಚಿ ತಿಸೀ ಝಾಲಾ ವಿರಕ್ತ । ತೇಣೇ ವೈರಾಗ್ಯೇ ಅನುತಾಪಯುಕ್ತ । ಸ್ವಯೇಬೋಲತ ಐಲರಾವೋ ॥೧೧೧॥

ನಿನ್ನ ಸಂಗದಿಂದ ನಾನು ನಿಷ್ಪಾಪಳಾದೆನು. ನನ್ನ ಶಾಪದ ನಿರಸನೆಯಾಯಿತು. ಈ ಕಾರಣವಾಗಿ ಈಗ ಈ ಲೋಕದಲ್ಲಿ ನನ್ನ, ನಿನ್ನ ಸಂಗವು ಸಾಧಿಸಲು ಸಾಧ್ಯವಿಲ್ಲ. ನಾನೀಗ ಸ್ವರ್ಗಲೋಕಕ್ಕೆ ಹೋಗುತ್ತಿರುವೆ ॥೧೦೧॥ ಈ ಯಾವ ಉರ್ವಶಿಯ ಉದ್ಗಾರವನ್ನು ಕೇಳಿ ರಾಜನು ಆಕೆಯ ವಿರಹದಿಂದ ರೋಧಿಸಲಾರಂಭಿಸಿದನು. ಆಗ ಆಕೆಯ ಮನವು ತಳಮಳಿಸಿ ಆತನಿಗೆ ಒಂದು ಉತ್ತಮ ಉಪಾಯವನ್ನು ಹೇಳಿಕೊಟ್ಟಳು ॥೧೦೨॥ ಆಕೆಯು ಗಂಧರ್ವನನ್ನು ಸ್ಮರಿಸಿ ರಾಜನಿಗೆ ಒಂದು ಅಗ್ನಿಪಾತ್ರೆಯನ್ನು ಕೊಟ್ಟಳು. ಹೇ ರಾಜನೇ, ನೀನು ಈ ಅಗ್ನಿಯಿಂದ ಯಜ್ಞವನ್ನು ಆಚರಿಸು. ಈ ಫಲವಾಗಿ ನಿನಗೆ ನನ್ನ ಪ್ರಾಪ್ತಿಯಾಗುವುದು ಎಂದು ಹೇಳಿದಳು ॥೧೦೩॥ ಆದರೆ ರಾಜನು ಉರ್ವಶಿಯ ವಿಯೋಗದಿಂದ ಅತ್ಯಂತ ದುಃಖಿಯಾದ್ದರಿಂದ ಆ ಅಗ್ನಿಪಾತ್ರೆಯನ್ನು ಅಲ್ಲಿಯೇ ಬಿಸಾಡಿಬಿಟ್ಟು ದುಃಖದಿಂದ ಅತಿಶಯ ಶೋಕಾಕುಲಿತನಾಗಿ ತಾನು ತನ್ನ ರಾಜಧಾನಿಗೆ ಬಂದನು ॥೧೦೪॥ ರಾಜನ ಮನದಲ್ಲಿ ಉರ್ವಶಿಯ ಚಿಂತೆವಿರುವುದರಿಂದ ಆತನಿಗೆ ಸ್ವಪ್ನದಲ್ಲಿ ಉರ್ವಶಿಯು ಕಂಡಳು. ಆಗ ಆ ರಾಜನು ಲಗುಬಗೆಯಿಂದ ಒಗೆದ ಅಗ್ನಿಪಾತ್ರೆಯನ್ನು ಶೋಧಿಸಲು ಹೊರಟನು. ಅಲ್ಲಿ ಅಶ್ವತ್ಥವೃಕ್ಷದ ಗರ್ಭದಲ್ಲಿ ಶಮೀ ಇರುವುದನ್ನು ಕಂಡನು ॥೧೦೫॥ ಆಗ ಆತನು ಆ ಅಶ್ವತ್ಥವೃಕ್ಷದ ಅರಣಿಯನ್ನು ಮಾಡಿ ಯಜ್ಞಕ್ಕಾಗಿ ಪವಿತ್ರವಾದ ಅಗ್ನಿಯನ್ನು ಸಿದ್ಧಮಾಡಿದನು. ಯಥಾಸಾಂಗವಾಗಿ ಯಜ್ಞವನ್ನು ಆಚರಿಸಿ ಕಾಮಸುಖದ ಇಚ್ಛೆಯಿಂದ ಆತನು ಉರ್ವಶಿಯ ಲೋಕಕ್ಕೆ ಹೋದನು ॥೧೦೬॥ ಅಲ್ಲಿ ಉರ್ವಶಿಯ ಜೊತೆಯಲ್ಲಿ ವಿಲಾಸವನ್ನು ಭೋಗಿಸುತ್ತಿರಲು ರಾಜನಿಗೆ ವಿರಕ್ತಿಯು ಉಂಟಾಯಿತು. ಆ ಸಮಯದಲ್ಲಿ ಪಶ್ಚಾತ್ತಾಪಯುಕ್ತ ಅಂತಃಕರಣದಿಂದ ಆತನು ಏನೇನು ಹೇಳಿದನೋ, ಅದೆಲ್ಲವನ್ನು ನಾನು ನಿನಗೆ ಹೇಳುವೆನು ॥೧೦೭॥ ರಾಜನು ಈ ನಿರೂಪಣೆಯನ್ನು ಹದಿನೆಂಟು ಶ್ಲೋಕಗಳಲ್ಲಿ ಹೇಳಿರುವನು. ಅವುಗಳಲ್ಲಿ ಎಂಟು ಶ್ಲೋಕಗಳು ಪಶ್ಚಾತ್ತಾಪಯುಕ್ತವಾಗಿ ಪರಿಪೂರ್ಣವಾಗಿರುವುವು. ಅದನ್ನೇ ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೧೦೮॥

ಐಲಗೀತೆಯ ಈ ಪಶ್ಚಾತ್ತಾಪವನ್ನು ಕೇಳುವವರ ಪರಸ್ತ್ರೀಗಮನದ ಪಾಪವು ಇಲ್ಲದಾಗುವುದು. ಹೀಗೆ ಶ್ರೋತೃಗಳವರು ನಿಷ್ಪಾಪರಾಗುವರು. ಸಾಧಕರಿಗೆ ಮದನದ ಬಾಧೆಯು ಎಂದಿಗೂ ಬಾಧಿಸಲಾರದು ॥೧೦೯॥ ಮದವೇರಿದ ಆನೆಯು ಹೆಣ್ಣಾನೆಯ ಸಂಗತಿಯಿಂದ ನಾನಾ ಪ್ರಕಾರದ ವಿಪತ್ತುಗಳನ್ನು ಭೋಗಿಸುತ್ತಿರುವುದು. ಅದರಂತೆ ಉರ್ವಶಿಯ ಸಂಗತಿಯಿಂದ ಪುರೂರವಾ ರಾಜನು ದುಃಖವನ್ನು ಭೋಗಿಸಿ ವಿರಕ್ತನಾದನು ॥೧೧೦॥ ಆತನು ಉರ್ವಶಿಯಲ್ಲಿ ಅತಿಶಯವಾಗಿ ಲುಬ್ಧನಾಗಿದ್ದನು. ಆತನೇ ಆಕೆಗೆ ಪರಿಪೂರ್ಣವಾಗಿ ಹೇಸಿಕೊಂಡನು. ವೈರಾಗ್ಯದಿಂದ ಪಶ್ಚಾತ್ತಾಪಪಟ್ಟು ಆ ಯಾವ ಪುರೂರವಾ ರಾಜನು ಸ್ವತಃ ತಾನೇಹೇಳಲಾರಂಭಿಸಿದನು॥೧೧೧॥

ಮಾಝ್ಯಾ ಮೋಹಾಚಾ ವಿಷಯವಿಸ್ತಾರ । ಕಾಮಾಸಕ್ತ ಕಾಮಾತುರ । ಕುತ್ಸಿತ ಕಂದರ್ಪಾಚೇ ಘರ । ತ್ಯಾಂಚಿ ಸಾಚಾರ ಸೇವಿಲೇ ।।೧೧೨।। ಉರ್ವಶೀಕಾಮೇ ಅತೀ ಆಸಕ್ತ । ಕಾಮಾತುರ ಝಾಲೇ ಚಿತ್ತ । ತೇಣೇ ತ್ಯಾ ಜೋಡಿಲಾ ಅನರ್ಥ । ಥಿತೇ ಕೇಲೇ ವ್ಯರ್ಥ ಆಯಷ್ಯ ।।೧೧೩।। ಉರ್ವಶೀ ಕಂಠಸಂಲಗ್ನ ಶಸ್ತ್ರ । ಆಯುಷ್ಯಚ್ಛೇದನೀ ಸತೇಜಧಾರ । ಛೇದಿಲೇ ಆಯುಷ್ಯ ಅಪಾರ । ತೇ ಮೀ ಪಾಮರ ಸ್ಮರೇನಾ ।।೧೧೪।। ಕಾಂತಾ ಆಲಿಂಗನ ವಿಷಯವಲ್ಲೀ। ತ್ಯಾ ಕಂಠೀ ಘಾತಲೀ ಸಕಾಮ ಭುಲೀ । ತಿಣೇ ಆಯುಷ್ಯಾಚೀ ಹೋಳೀ ಕೇಲೀ । ವಿವೇಕ ಸಮೂಳೀ ಗಿಳಿಲಾ ।।೧೧೫।। ಕಾಮಿನೀಕಾಮ ಆಲಿಂಗನೀ । ಕಂಠೀ ಪೇಟವಿಲಾ ದಾವಾಗ್ನೀ । ತೋ ಧಡಾಡಿಲಾ ಆಯುಷ್ಯವನೀ । ವಿವೇಕಅವನೀ ಜಾಳಿತ ।।೧೧೬।। ನರದೇಹೀಂಚೇ ಉತ್ತಮೋತ್ತಮ। ಅಮೂಲ್ಯ ಆಯುಷ್ಯ ಕೇಲೇ ಭಸ್ಮ । ಜಳೋ ಜಳೋ ಮಾಝೇ ಕರ್ಮ । ನಿಂದ್ಯ ಅಧರ್ಮ ತೋ ಏಕ ।।೧೧೭।। ನರದೇಹಿಂಚ್ಯಾ ಆಯುಷ್ಯಪುಷ್ಟೀ । ಸಾಧಕ ರಿಘಾಲೇ ವೈಕುಂಠೀ । ಜ್ಞಾತೇ ಬ್ರಹ್ಮ ಹೋತೀ ಉಠಾಉಠೀ । ತೇ ತ್ಯಾ ಕಾಮಾಸಾಠೀ ನಾಶಿಲೇ।।೧೧೮।।

ನಾಹಂ ವೇದಾಭಿನಿರ್ಮುಕ್ತ: ಸೂರ್ಯೋ ವಾಽಭ್ಯುದಿತೋಽಮಯಾ । ಮುಷಿತೋ ವರ್ಷಪೂಗಾನಾಂ ಬತಾಹಾನಿ ಗತಾನ್ಯುತ ।।೮।।

ಅರ್ಥ:- ನಿಜವಾಗಿಯೂ ಈಕೆಯು ನನ್ನನ್ನು ಲೂಟಿ ಮಾಡಿದಳು. ಸೂರ್ಯನು ಉದಯನಾದನೋ, ಅಸ್ತನಾದನೋ ಎಂಬುವುದೂ ಕೂಡ ನನಗೆ ತಿಳಿಯಲಿಲ್ಲ. ಅನೇಕ ವರ್ಷಗಳ ದಿನಕಾಲವು ಗತಿಸಿಹೋದವು. ಆದರೂ ನನಗೆ ಯಾವುದೂ ತಿಳಿಯಲಿಲ್ಲ.

ನರದೇಹಾಚಾ ಆಯುಷ್ಯಕ್ಷಣ । ನ ಮಿಳೇ ದೇತಾ ಕೋಟೀ ಸುವರ್ಣ । ತೇ ತ್ಯಾ ನಾಶಿಲೇ ಸಂಪೂರ್ಣ । ಆಪಣಯಾ ಆಪಣ ನಾಡಿಲೇ ।।೧೧೯।। ಸಾಧೂಂಚಿಯಾ ನಿಜಸ್ವಾರ್ಥಾ । ಸಾಧೂನಿ ದ್ಯಾವಯಾ ಉಗವೇ ಸವಿತಾ । ನಿಮೇಷೋನ್ಮೇಷೇ ಪರಮಾರ್ಥಾ । ಸಾಧಕ ತತ್ತ್ವತಾ ಸಾಧಿತೀ ।।೧೨೦।। ತೋಚಿ ಸವಿತಾ ಸಕಾಮಾಸೀ । ಆಯುಷ್ಯ ಹರಿ ಅಹರ್ನಿಶೀ । ಹೇ ನ ಕಳೇ ಜ್ಯಾಚೇ ತ್ಯಾಸೀ । ನರಕಪಾತಾಸೀ ನಿಜಮೂಳ ।।೧೨೧।। ಪುಢಿಲಾಂಚೀ ಗೋಠೀ ತೇ ಕಾಯಸೀ । ಮೀಚ ನಾಡಲೋ ಉರ್ವಶೀ ಪಾಸೀ । ಹ್ರಾಸ ಝಾಲಾ ಆಯುಷ್ಯಾಸೀ । ಹೇ ಹಾನಿ ಕೋಣಾಸೀ ಸಾಂಗಾವೀ।।೧೨೨।। ಜನಾಂಚಿಯಾ ಹಿತಾಸೀ ವಹಿಲಾ । ಸೂರ್ಯೋ ಅನುದಿನೀ ಉಗವಲಾ । ತೇ ಮೀ ನೇಣೇಚಿ ದಾದುಲಾ । ಉರ್ವಶೀಕಾಮೇ ಭುಲಲಾ ಉನ್ಮತ್ತ ।।೧೨೩।।

ನನ್ನ ಮೋಹದಿಂದ ವಿಷಯ ವಾಸನೆಯು ಅತಿಶಯವಾಗಿ ಭಡಕಾಯಿಸುತ್ತಲೇ ಸಾಗಿತು. ಈ ಕಾರಣವಾಗಿ ನಾನು ಅಮಂಗಲವಾದ ಮದನದ ಮನೆಯನ್ನು ಸೇವಿಸಿದನು ।।೧೧೨।। ಉರ್ವಶಿಯ ಕಾಮೇಚ್ಛೆಯಿಂದ ನಾನು ಸ್ತ್ರೀಲಂಪಟನಾದೆನು. ನನ್ನ ಚಿತ್ತವು ಕಾಮವಿಕಾರದಿಂದ ತುಂಬಿಹೋಗಿತ್ತು. ನನ್ನ ಕೈಯಿಂದ ಮಹಾ ಅನರ್ಥವು ನಡೆಯಿತು. ನನ್ನ ಆಯುಷ್ಯವನ್ನು ನಾನೇ ವ್ಯರ್ಥವಾಗಿ ಹಾಳುಮಾಡಿಕೊಂಡೆನು ।।೧೧೩।। ನನ್ನ ಕೊರಳಿಗೆ ಹತ್ತಿಕೊಂಡ ಉರ್ವಶಿಯ ಶಸ್ತ್ರವು, ಆಯುಷ್ಯವನ್ನು ಛೇದಿಸಲು ಆ ಶಸ್ತ್ರಕ್ಕೆ ತೀಕ್ಷ್ಣವಾದ ಧಾರೆ ಇರುವುದು. ಅದು ಎಷ್ಟೊಂದು ನನ್ನ ಆಯುಷ್ಯವನ್ನು ಛೇದಿಸಿರುವುದೋ ಪಾಮರನಾದ ನನಗೆ ಅದರ ಯಾವ ಪತ್ತೆಯೂ ಹತ್ತಲಿಲ್ಲ ।।೧೧೪।। ಸ್ತ್ರೀಯಳ ಆಲಿಂಗನವೆಂದರೆ ಅದು ಕೇವಲ ವಿಷದ ಬಳ್ಳಿಯಾಗಿರುವುದು. ಆ ವಿಷದ ಬಳ್ಳಿಯನ್ನು ನಾನು ಕೊರಳಲ್ಲಿ ತೊಡಕಿಸಿದೆನು. ಇದರಿಂದ ಆಕೆಯು ನನ್ನ ಸರ್ವ ವಿವೇಕವನ್ನು ನುಂಗಿಬಿಟ್ಟು ನನ್ನ ಆಯುಷ್ಯದ ಹೋಳಿ ಮಾಡಿದಳು ।।೧೧೫।। ಅತಿಶಯವಾಗಿ ನಾನು ವಿಷಯಾಸಕ್ತನಾಗಿ ಸ್ತ್ರೀಕಾಮದಿಂದ ಆಕೆಯನ್ನು ಆಲಿಂಗಿಸಿ ನಾನೇ ನನ್ನ ಕೊರಳಿನ ಸುತ್ತ ದಾವಾಗ್ನಿಯನ್ನು ಹೊತ್ತಿಸಿದೆನು. ಅದು ಆಯುಷ್ಯರೂಪ ವನದಲ್ಲಿ ಧಡಧಡಿತವಾಗಿ ಹೊತ್ತಿಕೊಂಡು ವಿವೇಕರೂಪ ಭೂಮಿಯನ್ನೂ ಕೂಡ ಸುಟ್ಟುಹಾಕಿತು ।।೧೧೬।। ನರದೇಹದ ಉತ್ತಮೋತ್ತಮ ಅಮೌಲ್ಯ ಆಯುಷ್ಯವನ್ನು ನಾನು ಭಸ್ಮಮಾಡಿಬಿಟ್ಟೆನು. ನನ್ನ ಈ ಕರ್ಮಕ್ಕೆ ಬೆಂಕಿ ಹತ್ತಲಿ! ನಾನೊಂದು ಇದನ್ನು ನಿಂದಾತ್ಮಕ ಅಧರ್ಮವನ್ನೇ ಎಸಗಿದೆನು ।।೧೧೭।। ನರದೇಹದ ಆಶ್ರಯದಿಂದ ಸಾಧಕ ಜನರು ವೈಕುಂಠಕ್ಕೆ ಹೋಗುವರು. ಜ್ಞಾನಿಗಳು ಮಾತ್ರ ಬ್ರಹ್ಮಪದವಿಯನ್ನು ಪಡೆಯುವರು. ಆದರೆ ನಾನು ಆ ಲಾಭವನ್ನು ಪಡೆಯದೇ ಸ್ತ್ರೀಲೋಭದಲ್ಲಿ ಆಯುಷ್ಯವನ್ನು ಹಾಳುಮಾಡಿಕೊಂಡೆನು ।।೧೧೮।।

ಕೋಟ್ಯಾವಧೀ ಸುವರ್ಣದ ರಾಶಿಯನ್ನೇ ಕೊಟ್ಟರೂ ಸಹ ಅಮೌಲ್ಯವಾದ ಈ ಮನುಷ್ಯ ಶರೀರದ ಒಂದು ಕ್ಷಣವೂ ಕೂಡ ದೊರೆಯುವುದಿಲ್ಲ. ಅಂತಹ ಸರ್ವ ಆಯುಷ್ಯವನ್ನು ನಷ್ಟಮಾಡಿ ನನ್ನ ಆಯುಷ್ಯದ ಘಾತವನ್ನು ಮಾಡಿದೆನು ।।೧೧೯।। ಸಾಧು ಜನರ ಹಿತಸಾಧಿಸುವುದಕ್ಕಾಗಿ ಪ್ರತಿನಿತ್ಯ ಸೂರ್ಯನು ಉದಯನಾಗುವನು. ಆದ್ದರಿಂದ ಸಾಧಕರು ಕ್ಷಣಕ್ಷಣದ ಸದುಪಯೋಗವನ್ನು ಮಾಡಿಕೊಂಡು ಪರಮಾರ್ಥವನ್ನು ಸಾಧಿಸುತ್ತಿರುವರು ।।೧೨೦।। ಅದೇ ಸೂರ್ಯನು ಕಾಮದಿಂದ ಆಸಕ್ತರಾದ ಪುರುಷರ ಆಯುಷ್ಯವನ್ನು ಹಗಲುರಾತ್ರಿ ಕಳೆಯುತ್ತಿರುವನು. ಆದರೆ ಹೀಗಾಗುತ್ತಿರುವುದು ಅವರದು ಅವರಿಗೇ ತಿಳಿಯುವುದಿಲ್ಲ. ಇದುವೇ ಅಧಃಪಾತದ ಮೂಲಕಾರಣವಾಗಿರುವುದು ।।೧೨೧।। ಇತರರ ಮಾತೇಕೇ, ನಾನೇ ಉರ್ವಶಿಯ ನಾದದಲ್ಲಿ ನನ್ನ ಆಯುಷ್ಯದ ನಾಶ ಮಾಡಿಕೊಂಡೆನು. ಆದರೆ ಈ ಹಾನಿಯನ್ನು ಯಾರಲ್ಲಿ ತೋಡಿಕೊಳ್ಳಬೇಕು ? ।।೧೨೨।। ಜನರ ಹಿತಮಾಡುವುದಕ್ಕಾಗಿ ಸೂರ್ಯನು ದಿನಾಲೂ ಉದಯಿಸುವನು. ಗಂಡಸಾಗಿರುವ ನಾನು ಇದನ್ನು ತಿಳಿಯಲೇ ಇಲ್ಲ. ಉರ್ವಶಿಯ ಕಾಮದಲ್ಲಿ ಮರೆತು ಮದೋನ್ಮತ್ತನಾದೆನು ।।೧೨೩।।

ಸೂರ್ಯಾಚಾ ಉದಯೋ ಅಸ್ತಮಾನ । ವರ್ಷೇಹೀ ಲೋಟಲ್ಯಾ ನಾಹೀ ಜ್ಞಾನ । ಕರಿತಾ ಉರ್ವಶೀ - ಅಧರಪಾನ । ತೇಣೇ ಮದೇ ಸಂಪೂರ್ಣ ಮಾತಲೋ ॥೧೨೪॥ ಮದ್ಯಮದು ಉತರೇ ದಿನಾಂತೀ । ಧನಮದು ಜಾಯ ನಿಧನಸ್ಥಿತೀ । ತಾರುಣ್ಯಮದು ಜಾಯ ಕ್ಷೀಣಶಕ್ತೀ । ಸ್ತ್ರೀ ಮದಪ್ರಾಪ್ತೀ ಕದಾ ನುತರೇ ॥೧೨೫॥ ನರದೇಹೀಚೀ ಆಯುಷ್ಯ ಕಥಾ । ಪುಢತೀ ದುರ್ಲಭ ನ ಲಭೇ ಹಾತಾ । ಜಳೋ ಹೇ ಉರ್ವಶೀ ದೇವಕಾಂತಾ । ಇಣೇಚಿ ತತ್ತ್ವತಾ ನಾಗವಿಲೋ ॥೧೨೬॥ ಮೀ ನಿರ್ಭಯ ರಕ್ಷಿತಾ ಸರ್ವಾಸೀ । ತ್ಯಾ ಮಜ ನಾಗವಿಲೇ ಉರ್ವಶೀ । ಹೇ ಲಾಜ ಸಾಂಗೋ ಕೋಣಾಪಾಶೀ । ಉಕಸಾಬುಕಸೀ ಸ್ಫುಂದತ ॥೧೨೭॥ ಮಾಝ್ಯಾ ನಿಜಹಿತಾಚಾ ಚೋರೂ । ಹೇ ಉರ್ವಶೀ ಜೀವೇ ಮಾರೂ । ಸವೇಂಚಿ ಉಪಜಲಾ ವಿಚಾರೂ । ಯೇಥ ಮೀಚಿ ಪಾಮರೂ ಅವಿವೇಕೀ ॥೧೨೮॥ ಮಗ ಮ್ಹಣೇ ಕಟಕಟಾ । ಸೃಷ್ಟೀಮಾಜೀ ಮೀ ಕರಂಟಾ । ಆಯುಷ್ಯ ನಾಶಿಲೇ ಕಾಮಚೇಷ್ಟಾ । ಅಪಾವ ಮೋಠಾ ಮಜ ಝಾಲಾ ॥೧೨೯॥ ಮಗ ಆಕ್ರಂದೇ ಆತಿಗರ್ಜೋನೀ । ಕಾಮೇ ನಾಗವಿಲೋ ಆಯುಷ್ಯ ಹರೋನೀ । ಯಹೀಹೋನಿ ಅಧಿಕ ಹಾನೀ । ಪಾಹತಾ ಯೇ ಜನೀ ಅಸೇನಾ ॥೧೩೦॥

ಅಹೋ ಮೇ ಆತ್ಮಸಂಮೋಹೋ ಯೇನಾತ್ಮಾ ಯೋಷಿತಾಂ ಕೃತಃ । ಕ್ರೀಡಾಮೃಗಶ್ಚಕ್ರವರ್ತೀ ನರದೇವಶಿಖಾಮಣಿಃ ।೯॥

ಅರ್ಥ:- ಅಹೋ! ಇದೆಂತಹ ಆಶ್ಚರ್ಯ ! ರಾಜರ ಮುಕುಟಮಣಿ ಚಕ್ರವರ್ತಿಯಾಗಿರುವ ಯಾವ ಈ ದೇಹಕ್ಕೆ ಸ್ತ್ರೀಯಳ ಕೈಯೊಳಗಿನ ಕ್ರೀಡಾಮೃಗವನ್ನಾಗಿ ಮಾಡಿದೆನು. ನಾನು ಆಕೆಯ ಪೂರ್ಣ ಆಧೀನನಾದೆನು.

ರಾಜೇ ಮುಕುಟಾಂಚೇ ಪ್ರತಾಪೀ ಪೂರ್ಣ । ಮಾಝ್ಯಾ ಚರಣಾ ಯೇತಿ ಶರಣ । ತೋ ಮೀ ವೇಶ್ಯೇಚೇ ಧರೀ ಚರಣ । ಹೇ ನಿರ್ಲಜ್ಜಪಣ ಮ್ಯಾ ಕೇಲೇ ॥೧೩೧॥ ಮಜ ಪುರೂರವ್ಯಾಚೇ ಆಜ್ಞೇಕರೀ । ರಾಜೇ ನಾಚತೀ ಚರಾಚರೀ । ತೋ ಮೀ ವೇಶ್ಯೇಚೇ ಆಜ್ಞೇವರೀ । ಶ್ವಾನಾಚೇಪರಿ ವರ್ತಲೋ ॥೧೩೨॥ ಜೈಸೇ ವಾನರ ಗಾರುಡ್ಯಾಚೇ । ತೈಸಾ ಸ್ತ್ರೀಯೇಚೇನಿ ಛಂದೇ ನಾಚೇ । ಮಾಝ್ಯಾ ಚಕ್ರವರ್ತೀಪಣಾಚೇ । ಅತಿನಿಂದ್ಯ ಸಾಚೇ ಫಳ ಝಾಲೇ ॥೧೩೩॥ ಸಕಳ ರಾಜೇ ಮಜ ದೇತೀ ಸನ್ಮಾನ । ಭೂಪತಿ ಸದಾ ವಂದಿತೀ ಚರಣ । ತೋ ಮೀ ಝಾಲೋ ಸ್ತ್ರೀಯೇ ಆಧೀನ । ಹೀನದೀನ ಅತಿರಂಕ ॥೧೩೪॥ ರಾಖಿತಾ ಸ್ತ್ರಿಯೇಚಾ ರಸರಂಗಪ್ರೇಮ । ಪಾಯಾ ಪಡಣೇ ಹೇ ಉಚಿತ ಕರ್ಮ । ಮ್ಹಣತೀ ತೇ ಜಳೋ ಜನ ಸಕಾಮ । ಹೇಚಿ ಧಾಡೀ ಪರಮ ಕಾಮಾಚೀ ॥೧೩೫॥

ಸೂರ್ಯೋದಯ ಮತ್ತು ಸೂರ್ಯಾಸ್ತ ಆಗುತ್ತಲೇ ಇದ್ದು ಅನೇಕ ವರ್ಷಗಳು ಗತಿಸಿದವು. ಆದರೆ ನನಗೆ ಇದರ ಎಚ್ಚರಿಕೆಯೇ ಇರಲಿಲ್ಲ. ಉರ್ವಶಿಯ ಅಧರಾಮೃತದ ಪಾನ ಮಾಡುವುದರಲ್ಲಿಯೇ ಧುಂದನಾಗಿಬಿಟ್ಟೆನು ॥೧೨೪॥ ಮದ್ಯದ ಮದವು ಎರಡನೆಯ ದಿನ ಇಳಿಯುವುದು, ಧನದ ಮದವು ದರಿದ್ರತೆ ಒದಗುತ್ತಲೇ ಇಳಿಯುವುದು. ತಾರುಣ್ಯದ ಮದವು ಶಕ್ತಿಕ್ಷೀಣವಾದಾಗ ಇಳಿಯುವುದು. ಆದರೆ ಸ್ತ್ರೀಮದವು ಇದು ಎಂದಿಗೂ ಇಳಿಯುವುದಿಲ್ಲ ॥೧೨೫॥ ನರದೇಹದ ಆಯುಷ್ಯವು ಅತ್ಯಂತ ದುರ್ಲಭವಾಗಿರುವುದು. ಇದು ಪುನಃ ಕೈಸೇರುವುದಿಲ್ಲ. ಈ ದೇವಾಂಗನೆಯಾದ ಉರ್ವಶಿಯನ್ನು ಸುಡಬೇಕು. ಈಕೆಯೇ ನನ್ನನ್ನು ತನ್ನ ನಾದದಲ್ಲಿ ಮುಳುಗಿಸಿದಳು॥೧೨೬॥ ನಾನು ನಿರ್ಭಯನು, ಸರ್ವರನ್ನು ರಕ್ಷಿಸುವ ರಾಜನು, ಆ ಯಾವ ಉರ್ವಶಿಯು ನನ್ನ ಶೋಷಣೆಯನ್ನು ಮಾಡಿದಳು. ನನ್ನ ಇಂತಹ ನಾಚಿಕೆಗೇಡು ಸ್ಥಿತಿಯನ್ನು ಯಾರಲ್ಲಿ ಹೇಳಬೇಕು? ಹೀಗೆ ಹೇಳುತ್ತ ಬಿಕ್ಕಿ ಬಿಕ್ಕಿ ಅಳಹತ್ತಿದನು ॥೧೨೭॥ ನನ್ನ ನಿಜಹಿತವನ್ನು ಈಕೆಯು ಕದ್ದುಕೊಂಡಳು. ಈಗ ಈಕೆಯನ್ನು ಕೊಂದೇಬಿಡಬೇಕು. ಹೀಗೆ ಹೇಳುತ್ತಲೇ ಪುನಃ ವಿಚಾರಿಸಿದನು, ಇದರಲ್ಲಿ ಆಕೆಯ ತಪ್ಪೇನಿದೆ? ನಾನೇ ಅವಿಚಾರಿಯು ಎಂದನು ॥೧೨೮॥ ಪುನಃ ಹೇಳಿದನು, ಈ ಜಗತ್ತಿನಲ್ಲಿ ನಾನೇ ದುರ್ದೈವಿಯು ಕಾಮಾಸಕ್ತಿಯಿಂದ ನಾನು ನನ್ನ ಜೀವನವನ್ನೇ ನಾಶಮಾಡಿಕೊಂಡೆನು. ಇದು ದೊಡ್ಡ ಹಾನಿಯಾಯಿತು ॥೧೨೯॥ ತದನಂತರ ಗಟ್ಟಿಯಾಗಿ ಆಕ್ರೋಶ ಮಾಡುತ್ತ ಜೋರಾಗಿ ಹೇಳಹತ್ತಿದನು. ಈ ಯಾವ ಕಾಮವು ನನ್ನನ್ನು ಸುಲಿಗೆ ಮಾಡಿತು. ನಾನು ನನ್ನ ಆಯುಷ್ಯವನ್ನು ಹಾಳುಮಾಡಿಕೊಂಡೆನು. ನಿಜವಾಗಿ ವಿಚಾರವನ್ನು ಮಾಡಿ ನೋಡಲು ಇದಕ್ಕಿಂತಲೂ ಹೆಚ್ಚಾದ ಹಾನಿಯು ಈ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ ॥೧೩೦॥

ಮಹಾಪರಾಕ್ರಮೀ, ಮುಕುಟಮಣಿ ರಾಜರು ನನ್ನ ಚರಣಗಳಲ್ಲಿ ಶರಣು ಬರುವರು. ಹೀಗಿರುವ ನಾನು ಒಬ್ಬ ಕ್ಷುದ್ರ ವೇಶ್ಯೆಯ ಕಾಲನ್ನು ಹಿಡಿಯಲು ಹೋದೆನು. ಇದು ನನ್ನ ನಿರ್ಲಜ್ಜತನದ ಕಳಸಪ್ರಾಯವಾಗಿರುವುದು ॥೧೩೧॥ ನನ್ನ ಪೂರೂರವಾನ ಆಜ್ಞೆಯಲ್ಲಿ ಎಲ್ಲ ರಾಜರು ನಡೆಯುತ್ತಿರುವರು. ಹೀಗಿರುವ ನಾನು ಒಂದು ನಾಯಿಯಂತೆ ವೇಶ್ಯೆಯ ಆಜ್ಞೆಯಲ್ಲಿ ನಡೆದುಕೊಂಡೆನು ॥೧೩೨॥ ಗಾರುಡಿಗನ ಮಂಗವು ಹೇಳಿದಂತೆ ಕುಣಿಯುತ್ತಿರುವಂತೆ ನಾನು ಉರ್ವಶಿಯ ಛಂದದಲ್ಲಿ ಕುಣಿದೆನು. ನಾನು ಸಾರ್ವಭೌಮ ರಾಜನಾಗಿದ್ದರೂ ಕೂಡ ನನಗೆ ಇಂತಹ ನಿಂದಾತ್ಮಕ ಫಲವು ದೊರೆಯಿತು ॥೧೩೩॥ ಸರ್ವ ರಾಜರು ನನಗೆ ಮಾನವನ್ನು ಕೊಡುವರು. ನನ್ನ ಚರಣಗಳಿಗೆ ವಂದಿಸುವರು. ಹೀಗಿರುವ ನಾನು ಹೀನದೀನನಾಗಿ, ಅತಿಶಯ ದರಿದ್ರನಾಗಿ ಪರಿಪೂರ್ಣವಾಗಿ ಉರ್ವಶಿಯ ಆಧೀನನಾದೆನು ॥೧೩೪॥ ಸ್ತ್ರೀಯಳ ರಸರಂಗಪ್ರೇಮಕ್ಕಾಗಿ ಆಕೆಯ ಕಾಲು ಮುಗಿಯುವುದು ಉಚಿತವು ಎಂದು ಹೇಳುವ ಕಾಮುಕ ಪುರುಷರಿರುವರು. ಇವರ ಮುಖಕ್ಕೆ ಬೆಂಕಿ ಹಚ್ಚಬೇಕು. ಕಾರಣ ಅದು ಮದನದ ಮಹತ್ತರವಾದ ಆಕ್ರಮಣವಾಗಿರುವುದು ॥೧೩೫॥

ಮೀ ವಲಯಾಂಕಿತ ಚಕ್ರವರ್ತೀ । ತೋಹೀ ಯೋಷಿತಾ ಘಾತಲೋ ಆವರ್ತೀ । ತ್ಯಾಚಿ ಆವರ್ತಾಚೀ ಸ್ಥಿತೀ । ಸ್ವಮುಖೇ ಭೂಪತಿ ಅನುವಾದೇ ॥೧೩೬॥

ಸಪರಿಚ್ಛದಮಾತ್ಮಾನಂ ಹಿತ್ವಾ ತೃಣಾಮಿವೇಶ್ವರಮ್ । ಯಾಂತೀಂ ಸ್ತ್ರೀಯಂ ಚಾನ್ವಗಂ ನಗ್ನ ಉನ್ಮತ್ತವದ್ರುದನ್ ॥೧೦॥

ಅರ್ಥ:- ನಾನು ಪ್ರಜೆಗಳಿಗೆ ಮರ್ಯಾದೆಯಿಂದ ಇಡುವ ಸಾಮ್ರಾಟನು. ನನಗೆ ತೃಣಪ್ರಾಯ ಮಾಡಿ ಬಿಟ್ಟು ಹೊರಟ ಆ ಸ್ತ್ರೀಯಳ ಹಿಂದೆ ಹಿಂದೆ ನಾನು ನಗ್ನನಾಗಿ ಹುಚ್ಚನಂತೆ ಅಳುಅಳುತ್ತ ಹೊರಟೆನಲ್ಲ !

ಕೇವಳ ಸಾಕಾರ ಮಾಯಾಭ್ರಮ । ಯಾಲಾಗೀ ''ಪ್ರಮದಾ'' ಸ್ತ್ರೀಚೇ ನಾಮ । ಸಂಗೇ ಠಕಿಲೇ ಉತ್ತಮೋತ್ತಮ । ಸ್ತ್ರೀಸಂಭ್ರಮ ವಾಢವಿತಾ ॥೧೩೭॥ ಪ್ರಮದಾ ಅಂಬರೇ ಅಲಂಕಾರ । ಹೇ ಮಾಯೇಚೇ ಸೋಲೀವ ಸಾರ । ಏಥ ಭುಲಲೇ ಥೋರಥೋರ । ಮೀಹೀ ಪಾಮರ ಸ್ತ್ರೀಸಂಗೇ ॥೧೩೮॥ ಮಾಝೀಚ ಮಜ ಕರಣೀ । ದಿಸತಸೇ ದೈನ್ಯ ವಾಣೀ । ಉರ್ವಶೀ ವೇಶ್ಯಾ ಕಾಮಚಾರಿಣೀ । ಜೇ ಬಹುಜನೀ ಭೋಗಿಲೀ ॥೧೩೯॥ ಐಶಿಯೇಚ್ಯಾ ಕಾಮಾಸಕ್ತತಾ । ಮೀ ಸರ್ವಸ್ವೇ ಭುಲಲೋ ಸರ್ವಥಾ । ತೇ ಭುಲಲೇಪಣಾಚೀ ಕಥಾ । ಅನುತಾಪತಾ ಸ್ವಯೇ ಬೋಲೇ ॥೧೪೦॥ ಧರ್ಮಪತ್ನೀಸೀ ಭೋಗಿತಾ ಕಾಮ । ಸಹಸಾ ನಾಸೇನಾ ಸ್ವಧರ್ಮ । ಮಜ ವೋಢವಲೇ ದುಷ್ಟಕರ್ಮ । ವೇಶ್ಯೇಸೀ ಪರಮ ಭುಲಲೋ ॥೧೪೧॥ ಪರದಾರಾ ಅಭಿಲಾಷಿತೀ । ತೇ ಅವಶ್ಯ ನರಕಾ ಜಾತೀ । ಮಾ ಸ್ವದಾರಾ - ಕಾಮಾಸಕ್ತೀ । ತೇಥಹೀ ಅಧೋಗತೀ ಸೋಡೀನಾ ॥೧೪೨॥ ಸ್ತ್ರೀಯಾ ಭುಲವಿಲೇ ಹರಿಹರ । ಸ್ತ್ರೀಯಾ ಭುಲವಿಲೇ ಋಷೀಶ್ವರ । ಸ್ತ್ರೀಯಾ ಭುಲವಿಲೇ ಥೋರಥೋರ । ಮೀಹೀ ಕಿಂಕರ ಸ್ತ್ರೀಯಾ ಕೇಲೋ ॥೧೪೩॥ ರಾಜ್ಯ ಆಣಿ ರಾಜವೈಭವ । ವೇಶ್ಯೇ ಅಧೀನ ಕೇಲೇ ಸರ್ವ । ಯಾಹೀಹೂನಿ ಕೇಲೇ ಅಪೂರ್ವ । ತೀಲಾಗೀ ಜೀವ ಅರ್ಪಿಲಾ ॥೧೪೪॥ ಮೀ ರಾಜವರ್ಯಾ ಮುಕುಟಮಣೀ। ತೋ ದಾಸ ಝಾಲೋ ತಿಚೇ ಚರಣೀ । ಬಾಪ ಕಂದರ್ಪಾಚೀ ಕರಣೀ । ಕೇಲೋ ಕಾಮಾನೀ ಅಧೀನ ॥೧೪೫॥ ಐಶಿಯಾ ಮಜ ರಾಜೇಶ್ವರಾತೇ । ವೇಶ್ಯೇನೇ ಹಾಣೋನಿ ಲಾತೇ । ಉಪೇಕ್ಷೂನಿಯಾ ತೃಣವತೇ । ನಿಘಾಲೀ ನಿಶ್ಚಿತೇ ಸಾಂಡೋನಿ ॥೧೪೬॥ ತೀಸೀ ಜಾತಾ ದೇಖೋನಿಯಾ ಪುಢೇ । ಮೀ ನಾಗವಾ ಧಾಂವೇ ಲವಡಸವಡೇ । ಲಾಜ ಸಾಂಡೋನಿಯಾ ರಡೇ । ತರೀ ತೇ ಮಜಕಡೇ ಪಾಹೇನಾ ॥೧೪೭॥

ಸಮುದ್ರವಲಯಾಂಕಿತ ಪೃಥ್ವಿಯ ಸಾರ್ವಭೌಮನಾಗಿರುವ, ಇಂತಹ ರಾಜನಾದ ನನಗೆ ಒಬ್ಬ ವೇಶ್ಯೆಯು ಈ ಯಾವ ಮಡುವಿನಲ್ಲಿ ಸಿಲುಕಿಸಿದಳು. ಈ ಸುಳಿಗುಂಡಿಯ ವರ್ಣನೆಯನ್ನು ರಾಜನು ಸ್ವತಃ ಹೇಳುತ್ತಿರುವನು ॥೧೩೬॥

ಸ್ತ್ರೀ ಎಂದರೆ ಕೇವಲ ಸಾಕಾರಯುಕ್ತ ಮಾಯಾಭ್ರಮೆಯೇ ಆಗಿರುವಳು. ಆದ್ದರಿಂದ ಆಕೆಗೆ ಪ್ರಮದಾ ಎಂದು ಹೇಳುವರು. ಈಕೆಯ ಸಂಗತಿಯಿಂದ ಅನೇಕ ಶ್ರೇಷ್ಠ ಉತ್ತಮ ಜನರು ಮೋಸಹೋಗಿರುವರು ॥೧೩೭॥ ಸ್ತ್ರೀಯರು, ವಸ್ತ್ರಗಳು ಹಾಗೂ ಅಲಂಕಾರಗಳು ಇವು ಮಾಯೆಯ ನಿಜವಾದ ಸಾರವಾಗಿರುವುವು. ಇದಕ್ಕೆ ಮಹಾ ಮಹಾ ಜನರು ಭುಲಾಯಿಸಿರುವರು. ಅದರಂತೆ ನಾನೂ ಕೂಡ ಸ್ತ್ರೀ ಸಂಗತಿಯಿಂದ ಪಾಮರನಾದೆನು ॥೧೩೮॥ ನನ್ನ ಕರ್ಮವೇ ನನಗೆ ಬಾಧಕವಾಯಿತು. ಉರ್ವಶಿಯು ಕಾಮಾಚರಣೆಯಾದ ವೇಶ್ಯಾಸ್ತ್ರೀಯಳಾಗಿರುವಳು. ಆಕೆಯು ಅನೇಕ ಜನರಲ್ಲಿ ಭೋಗವಿಲಾಸಪಟ್ಟಿರುವಳು ॥೧೩೯॥ ಹೀಗಿರುವ ಯಾವ ಸ್ತ್ರೀಯಳಲ್ಲಿ ನಾನು ಪರಿಪೂರ್ಣವಾಗಿ ಲುಬ್ಧನಾದೆನು. ಆಕೆಯನ್ನು ಸರ್ವಸ್ವದಿಂದ ಮರುಳಾದೆನು. ತಾನು ಮರುಳಾದ ಕಥೆಯನ್ನು ರಾಜನು ಸ್ವತಃ ಪಶ್ಚಾತ್ತಾಪಪೂರ್ವಕವಾಗಿ ಹೇಳುತ್ತಿರುವನು ॥೧೪೦॥ ಮದುವೆಯಾದ ಧರ್ಮಪತ್ನಿಯಲ್ಲಿ ವಿಹಿತ ಕಾಮಭೋಗವು ಸ್ವಧರ್ಮವನ್ನು ನಾಶಮಾಡುವುದಿಲ್ಲ. ಆದರೆ ನನ್ನ ದುಷ್ಕರ್ಮವು ನನಗೆ ಎಳೆದುಕೊಂಡಿತು. ಇದರಿಂದ ನಾನು ವಾರಾಂಗನೆಗೆ ಭುಲಾಯಿಸಿ ಹೋದೆನು ॥೧೪೧॥ ಪರಸ್ತ್ರೀಯರನ್ನು ಅಭಿಲಾಷಿಸುವ ಪುರುಷರು ನಿಶ್ಚಿತವಾಗಿ ನರಕಕ್ಕೆ ಹೋಗುವರು. ಇಷ್ಟೇ ಅಲ್ಲ ತನ್ನ ಪತ್ನಿಯಲ್ಲಿಯೂ ಕೂಡ ಸತತ ಕಾಮಾಸಕ್ತರಾದವರಿಗೂ ಕೂಡ ಅಧೋಗತಿಯು ತಪ್ಪುವುದಿಲ್ಲ ॥೧೪೨॥ ಸ್ತ್ರೀಯರು ಹರಿಹರರಿಗೂ ಕೂಡ ಮರುಳು ಮಾಡಿರುವರು. ಮಹಾ ಮಹಾ ಋಷಿಗಳಿಗೂ ಸಹ ಮೋಸಕ್ಕೆ ಬಲಿಗೊಳಿಸಿರುವರು. ದೊಡ್ಡ ದೊಡ್ಡ ಜನರಿಗೂ ಕೂಡ ತಮ್ಮ ಪಾಶದಲ್ಲಿ ಬಂಧಿಸಿರುವರು. ಅದರಂತೆ ನನಗೂ ಕೂಡ ಸ್ತ್ರೀಯಳು ದಾಸನನ್ನಾಗಿ ಮಾಡಿಕೊಂಡಳು ॥೧೪೩॥ ರಾಜ್ಯ ಮತ್ತು ರಾಜವೈಭವವೆಲ್ಲವನ್ನೂ ನಾನು ಆ ವಾರಾಂಗನೆಯ ಚರಣಗಳಿಗೆ ಅರ್ಪಿಸಿದೆನು. ಇದಕ್ಕಿಂತಲೂ ಅಪೂರ್ವವೆಂದರೆ ಆಕೆಯ ಚರಣದಲ್ಲಿ ನನ್ನ ಜೀವವನ್ನೇ ಅರ್ಪಿಸಿಬಿಟ್ಟೆನು ॥೧೪೪॥ ಸರ್ವ ರಾಜರ ಮುಕುಟಮಣಿಯಾದ ನಾನು ಆಕೆಯ ಕೇವಲ ಚರಣದಾಸನಾದೆನು. ಮದನದ ಪ್ರಭಾವವು ವಿಚಿತ್ರವಾಗಿರುವುದು. ಅದು ನನ್ನನ್ನು ಸ್ತ್ರೀಯಳ ಅಧೀನನನ್ನಾಗಿ ಮಾಡಿತು ॥೧೪೫॥ ನನ್ನಂತಹ ರಾಜಾಧಿರಾಜನಿಗೆ ಆ ಯಾವ ವೇಶ್ಯೆಯು ಕಾಲಿನಿಂದ ಒದ್ದು ಝಾಡಿಸಿದಳು. ನನ್ನನ್ನು ತೃಣವತನನ್ನಾಗಿ ಮಾಡಿ ಆಕೆಯು ನನ್ನನ್ನು ಬಿಟ್ಟು ಹೊರಟೇ ಹೋದಳು ॥೧೪೬॥ ಆಕೆಯು ಮುಂದೆ ಹೋಗುತ್ತಿರುವುದನ್ನು ಕಂಡು ನಾನು ಗಡಬಡಿಯಿಂದ ಬತ್ತಲಾವಸ್ಥೆಯಲ್ಲಿಯೇ ಆಕೆಯ ಹಿಂದೆ ಧಾವಿಸುತ್ತ ಹೊರಟೆನು. ನಾನು ನಾಚಿಕೆಯನ್ನು ತೂರೆದು ಆಕ್ರೋಶ ಮಾಡಿದೆನು. ಇಷ್ಟಾದರೂ ಆಕೆಯು ನನ್ನತ್ತ ಹೊರಳಿಯೂ ನೋಡಲಿಲ್ಲ ॥೧೪೭॥

ಜೇವೀ ಕಾ ಲಾಗಲೇ ಮಹದ್ಭೂತ । ನಾತರೀ ಪಿಶಾಚ ಜೈಸೇ ಉನ್ಮತ್ತ । ತೇವೀ ನಾಗವಾ ಧಾಂವೇ ರಡತ । ತರೀ ತಿಚೇ ಚಿತ್ತ ದ್ರವೇನಾ ।।೧೪೮।। ತರೀ ರಡತ ಪಡತ ಅಡಖಳತ । ಮೀ ನಿರ್ಲಜ್ಜ ತೀಮಾಗೇ ಧಾಂವತ । ಮಾಝ್ಯೋ ಮೋಹಾಚಾ ಅತಿಅನರ್ಥ । ಅಪಮಾನಗ್ರಸ್ತ ಮಜ ಝಾಲಾ ।।೧೪೯।।

ಕುತಸ್ತಸ್ಯಾನುಭವಃ ಸ್ಯಾತ್ತೇಜ ಈಶಿತ್ವಮೇವ ವಾ । ಯೋಽನ್ವಗಚ್ಛಂ ಸ್ತ್ರಿಯಂ ಯಾಂತೀಂ ಖರವತ್ಪಾದತಾಡಿತಃ ।।೧೧।।

ಅರ್ಥ:- ನಾನು ಕತ್ತೆಯಂತೆ ಹೆಣ್ಣು ಕತ್ತೆಯ ಒದಿಕೆಗಳನ್ನು ಸಹಿಸುತ್ತ ಸ್ತ್ರೀಯಳ ಹಿಂದೆ ಧಾವಿಸ ಹತ್ತಿದೆ ಇದರಿಂದ ನನ್ನಲ್ಲಿಯ ತೇಜ, ಪ್ರಭಾವ, ಸ್ವಾಮಿತ್ವ ಇವು ಇಲ್ಲದಾದವು.

ಮೀ ಮಹತ್ತ್ವೇ ರಾಜರಾಜೇಶ್ವರು । ಐಸಾ ಗರ್ವ ಹೋತಾ ಅತಿ ದುರ್ಧರು । ತೋ ಮೀ ವೇಶ್ಯೇಚಾ ಅನುಚರು । ಝಾಲೋ ಕಿಂಕರು ನಿಜಾಂಗೇ ।।೧೫೦।। ಏವಢಾಹೀ ಮೀ ರಾಜೇಶ್ವರು । ಮಾಗೇ ಧಾಂವೇ ಹೋಊನಿ ಕಿಂಕರು । ತರೀ ತೇ ನ ಕರೀ ಅಂಗೀಕಾರು । ಜೇವೀ ವೋಸಂಡೀ ಖರೂ ಖರೀ ಜೈಶೀ ।।೧೫೧।। ಜೇವೀ ಖರೀ ದೇಖೋನಿಯಾ ಖರು । ಧಾಂವೋನಿ ಕರೀ ಅತ್ಯಾದರು । ಯೇರೀ ಉಪೇಕ್ಷೂನಿ ಕರೀ ಮಾರು । ಅತಿನಿಷ್ಠುರು ಲಾತಾಂಚಾ ।।೧೫೨।। ತಿಚ್ಯಾ ಲಾತಾ ಲಾಗತಾ ಮಾಥಾ । ಖರೂ ನಿಘೇನಾ ಮಾಗುತಾ । ತ್ಯಾ ಖರಾಐಶೀ ಮೂರ್ಖತಾ । ಮಾಝ್ಯೋ ಅಂಗೀ ಸರ್ವಥಾ ಬಾಣಲೀ ।।೧೫೩।। ಸ್ತ್ರೀ ಉದಾಸ ಕಾಮದೃಷ್ಟೀ । ಮೀ ಆಸಕ್ತ ಲಾಗೇ ಪಾಠೀ । ಮಾಝ್ಯಾ ಸಮರ್ಥಪಣಾಚೀ ಗೋಠೀ । ಸಾಂಗತಾ ಪೋಟೀ ಮೀ ಲಾಜೇ ।।೧೫೪।। ಐಸೇ ಸ್ತ್ರೀಕಾಮೀ ಜ್ಯಾಚೇ ಮನ । ತ್ಯಾಚೇ ಯೋಗ ಯಾಗ ಅನುಷ್ಠಾನ । ಅವಘೇಚಿ ವೃಥಾ ಜಾಣ । ತೇಚಿ ನಿರೂಪಣ ನಿರೂಪೀ ।।೧೫೫।।

ಕಿಂ ವಿದ್ಯಯಾ ಕಿಂ ತಪಸಾ ಕಿಂ ತ್ಯಾಗೇನ ಶ್ರುತೇನ ವಾ । ಕಿಂ ವಿವಿಕ್ತೇನ ಮೌನೇನ ಸ್ತ್ರೀಭಿರ್ಯಸ್ಯ ಮನೋ ಹೃತಮ್ ।।೧೨।।

ಅರ್ಥ:- ಯಾರ ಮನವನ್ನು ಸ್ತ್ರೀ ಕದಿಯುವಳೋ ಆತನ ವಿದ್ಯೆಯು ವ್ಯರ್ಥ ಹೋದಂತೆ, ಆತನಿಗೆ ತಪಸ್ಸು, ತ್ಯಾಗ ಮತ್ತು ಶಾಸ್ತ್ರಾಭ್ಯಾಸ ಇವುಗಳ ಯಾವ ಲಾಭವೂ ಆಗುವುದಿಲ್ಲ. ಆತನ ಏಕಾಂತ ಸೇವನೆ, ಮೌನ ಇವೆಲ್ಲವೂ ನಿಷ್ಫಲವಾಗುವುವು.

ಸ್ತ್ರೀಕಾಮಮಯ ಜ್ಯಾಚೇ ಮನ । ತ್ಯಾಚೇ ವೃಥಾ ವಿದ್ಯಾ ವೃಥಾ ಶ್ರವಣ । ವೃಥಾ ತಪ ವೃಥಾ ಧ್ಯಾನ । ತ್ಯಾಗ ಮುಂಡಣ ತೇ ವೃಥಾ ।।೧೫೬।। ವೃಥಾ ಏಕಾಂತಸೇವನ । ವೃಥಾ ಜಾಣ ತ್ಯಾಚೇ ಮೌನ । ರಾಖೇಮಾಜೀ ಕೇಲೇ ಹವನ । ತೈಸೇ ಅನುಷ್ಠಾನ ಸ್ತ್ರೀಕಾಮಾ ।।೧೫೭।। ಕಾಮಾಸಕ್ತ ಜ್ಯಾಂಚೇ ಚಿತ್ತ । ತ್ಯಾಚೇ ಸಕಳಹೀ ನೇಮ ವ್ಯರ್ಥ । ಆಪುಲೇ ಪೂರ್ವವೃತ್ತ ನಿಂದಿತ । ಅನುತಾಪಯುಕ್ತ ನೃಪ ಬೋಲೇ ।।೧೫೮।।

ಒಬ್ಬನಿಗೆ ಭೂತವು ಬಡಿಯಿತೆಂದರೆ ಅಥವಾ ಉನ್ಮತ್ತ ಪಿಶಾಚವು ಹಿಡಿದುಕೊಂಡರೆ ಹೇಗಾಗುವುದೋ ಅದರಂತೆ ನಾನು ನಗ್ನಾವಸ್ಥೆಯಲ್ಲಿಯೇ ಅಳುತ್ತ ಅಳುತ್ತ ಆಕೆಯ ಹಿಂದೆ ಹಿಂದೆ ಧಾವಿಸುತ್ತ ನಡೆದೆನು. ಆದರೂ ಆಕೆಯ ಮನಸ್ಸು ದ್ರವಿಸಲಿಲ್ಲ ।।೧೪೮।। ಇಷ್ಟಾದರೂ ಕೂಡ ನಾನು ಅಳುತ್ತ, ಬೀಳುತ್ತ, ಏಳುತ್ತ ನಿರ್ಲಜ್ಜತೆಯಿಂದ ಧಾವಿಸುತ್ತಲೇ ನಡೆದೆನು. ನನ್ನ ಈ ಮೋಹದಿಂದ ಆದ ಅನರ್ಥವು ನನಗೆ ಅತ್ಯಂತ ಅಪಮಾನಕಾರಕವಾಯಿತು ।।೧೪೯।।

ನಾನೊಬ್ಬ ದೊಡ್ಡ ರಾಜರಾಜೇಶ್ವರನು ಎಂಬ ಗರ್ವವು ನನಗಿತ್ತು. ಹೀಗಿರುವ ನಾನು ನಾನಾಗಿಯೇ ವಾರಾಂಗನೆಯ ಹೀನದೀನದಿಂದ ದಾಸನಾದೆನು ।।೧೫೦।। ನಾನು ಇಂತಹ ರಾಜರಾಜೇಶ್ವರನಾಗಿದ್ದರೂ ಕೂಡ ಆಕೆಯ ಹಿಂದೆ ಗುಲಾಮನಂತೆ ಧಾವಿಸುತ್ತ ಓಡುತ್ತಿದ್ದೆನು, ಆದರೂ ಕೂಡ ಆಕೆಯು ನನ್ನ ಅಂಗೀಕಾರವನ್ನು ಮಾಡಲಿಲ್ಲ. ಹೆಣ್ಣುಕತ್ತೆಯು ಗಂಡು ಕತ್ತೆಯನ್ನು ಒದ್ದೋಡಿಸುವಂತೆ ಆಕೆಯು ನನ್ನನ್ನು ತಿರಸ್ಕರಿಸಿದಳು ।।೧೫೧। ಹೆಣ್ಣು ಕತ್ತೆಯನ್ನು ನೋಡುತ್ತಲೇ ಗಂಡು ಕತ್ತೆಯು ಧಾವಿಸುತ್ತ ಅದರತ್ತ ಹೋಗಿ ತನ್ನ ಆದರತ್ವವನ್ನು ಮಾಡುತ್ತಿರುವುದು. ಆದರೆ ಅದು ಅದನ್ನು ತಿರಸ್ಕರಿಸುತ್ತ ಅದಕ್ಕೆ ನಿರ್ದಯತ್ವದಿಂದ ಒದೆಯುತ್ತಿರುವುದು ।।೧೫೨।। ಈ ಪ್ರಕಾರವಾಗಿ ತನ್ನ ತಲೆಗೆ ಒದಕೆಯ ಪೆಟ್ಟು ಬಡೆದರೂ ಕೂಡ ಆ ಗಂಡು ಕತ್ತೆಯು ಅಲ್ಲಿಂದ ಕದಲುವುದಿಲ್ಲ. ಆ ಕತ್ತೆಯಂತೆಯೇ ನನ್ನ ಕೈಯಿಂದಲೂ ಇಂತಹ ಮೂರ್ಖತನವು ನಡೆಯಿತು ।।೧೫೩।। ಕಾಮದ ಆಸಕ್ತಿಯಿಂದ ಆಕೆಯು ಉದಾಸಳಾಗಿದ್ದಳು. ಆದರೆ ನಾನೇ ಕಾಮಾಸಕ್ತನಾಗಿ ಆಕೆಯ ಬೆನ್ನು ಹತ್ತಿದೆನು. ನನ್ನ ಪರಾಕ್ರಮದ ಮಾತೆತ್ತಲು ನನಗೇನೇ ನಾಚಿಕೆಯಾಗುವುದು ।।೧೫೪।। ಈ ಪ್ರಕಾರವಾಗಿ ಯಾರ ಮನವು ಸ್ತ್ರೀ-ಕಾಮ ಆಸಕ್ತಿಯಲ್ಲಿ ಮುಳುಗಿರುವುದೋ, ಅವರ ಯೋಗಯಾಗ, ಅನುಷ್ಠಾನ ಈ ಎಲ್ಲವನ್ನೂ ವ್ಯರ್ಥವಾಗುವುವು. ಈ ವಿಷಯವನ್ನು ಕುರಿತು ಶ್ರೀಕೃಷ್ಣನು ಅಧಿಕ ಪ್ರಮಾಣದಲ್ಲಿ ನಿರೂಪಣೆಯನ್ನು ಮಾಡುತ್ತಿರುವನು ।।೧೫೫।।

ಯಾರ ಮನವು ಸ್ತ್ರೀಕಾಮಾಸಕ್ತವಾಗುವುದೋ, ಆತನ ವಿದ್ಯೆ, ಶ್ರವಣ, ತಪ, ಧ್ಯಾನ, ತ್ಯಾಗ, ಸನ್ಯಾಸ ಇವೆಲ್ಲವೂ ಕೂಡ ವ್ಯರ್ಥವಾಗಿ ಹೋಗುವುವು ।।೧೫೬।। ಅವರ ಏಕಾಂತವಾಸವು ಮತ್ತು ಮೌನಧಾರಣೆಯೂ ಕೂಡ ವ್ಯರ್ಥವಾಗಿರುವುದು. ಬೂದಿಯಲ್ಲಿ ಹವನ ಮಾಡಿದಂತೆ ಅವರ ಅನುಷ್ಠಾನಗಳೂ ಕೂಡ ವ್ಯರ್ಥವಾಗುವುವು ।।೧೫೭।। ಯಾರ ಚಿತ್ತದಲ್ಲಿ ಸತತವಾಗಿ ಕಾಮವು ಸಂಚರಿಸುತ್ತಿರುವುದೋ, ಆತನ ನೇಮ - ಧರ್ಮ ಎಲ್ಲವೂ ವ್ಯರ್ಥವು. ಈ ಪ್ರಕಾರವಾಗಿ ಆ ರಾಜನು ಪಶ್ಚಾತ್ತಾಪದಿಂದ ತನ್ನ ಪೂರ್ವ ಚರಿತ್ರೆಯ ನಿಂದೆಯನ್ನು ಮಾಡುತ್ತ ಪುನಃ ಹೇಳಲಾರಂಭಿಸಿದನು ।।೧೫೮।।

ಸ್ವಾರ್ಥಸ್ಯಾಕೋವಿದಂ ಧಿಙ್ಮಾಂ ಮೂರ್ಖಂ ಪಂಡಿತಮಾನಿನಮ್ ।
ಯೋಽಹಮೀಶ್ವರತಾಂ ಪ್ರಾಪ್ಯ ಸ್ತ್ರೀಭಿರ್ಗೋಖರೇವಜ್ಜಿತಃ ।।೧೩।।

ಅರ್ಥ:- ನನಗೆ ಧಿಃಕ್ಕಾರವು! ನಾನೇ ಮಹಾ ಪಂಡಿತನೆಂದು ಗರ್ವಪಡುತ್ತಿದ್ದೆನು. ಆದರೆ ಹಿತಯಾವುದು ಎನ್ನುವುದು ನನಗೆ ಗೊತ್ತಿರಲಿಲ್ಲ. ನಾನು ಎಂತಹ ಮೂರ್ಖನು, ನಾನು ಚಕ್ರವರ್ತಿ ಸಾಮ್ರಾಟನಾಗಿದ್ದರೂ ನಾನೊಂದು ದನ ಅಥವಾ ಕತ್ತೆ ಎಂಬಂತೆ ಸ್ತ್ರೀಯು ನನ್ನನ್ನು ಗೆಲ್ಲಲು ಅವಕಾಶವನ್ನು ಮಾಡಿಕೊಟ್ಟೆನು.

ಚಹೂ ಪುರುಷಾರ್ಥಾಚೇ ಅಧಿಷ್ಠಾನ । ನರದೇಹ ಪರಮ ಪಾವನ । ಜೇಣೇ ದೇಹೇ ಕರಿತಾ ಭಜನ । ಬ್ರಹ್ಮ ಸನಾತನ ಪಾವಿಜೇ ।।೧೪೯।। ನರದೇಹೀಂಚಾ ಕ್ಷಣ ಕ್ಷಣ । ಸಮೂಳ ನಿರ್ದಳೀ ಜನ್ಮ ಮರಣ । ಭಾವೇ ಕರಿತಾ ಹರಿಸ್ಮರಣ । ಮಹಾಪಾಪೇ ಜಾಣ ನಿರ್ದಳತೀ ।।೧೫೦।। ತ್ಯಾ ನರದೇಹಾಚೀ ಲಾಹೋನಿ ಪ್ರಾಪ್ತೀ । ನರವರ್ಯ ಝಾಲೋ ಚಕ್ರವರ್ತೀ । ತ್ಯಾ ಮಾಝೀ ಜಳೋ ಜಳೋ ಸ್ಥಿತೀ । ಜೋ ವೇಶ್ಯೇ ಪ್ರತೀ ಭುಲಲೋ ।।೧೫೧।। ಮಾನೀ ಶ್ರೇಷ್ಠ ಮೀ ಸಜ್ಞಾನ । ಪರೀ ಅಜ್ಞಾನಾಹೂನಿ ಅಜ್ಞಾನ । ನೇಣೇಚಿ ನಿಜಸ್ವಾರ್ಥಸಾಧನ । ವೇಶ್ಯೇ ಆಧೀನ ಮೀ ಝಾಲೋ ।।೧೫೨।। ಲಾಭೋನಿ ನರದೇಹನಿಧಾನ । ಮ್ಯಾ ದೇಹೀ ಧರಿಲಾ ಜ್ಞಾನಾಭಿಮಾನ । ನ ಕರೀಂಚ ನಿಜಸ್ವಾರ್ಥಸಾಧನ । ಹೇ ಮೂರ್ಖಪಣ ಪೈ ಮಾಝೇ ।।೧೫೩।। ಜೈಸಾ ಗಾಯೀಮಾಗೇ ಕಾಮಯುಕ್ತ । ಧಾಂವತಾ ಬೈಲ ನ ಮಾನೀ ಅನರ್ಥ । ಕಾ ಖರೀಮಾಗೇ ಖರ ಧಾಂವತ । ತೈಸಾ ಕಾಮಾಸಕ್ತ ಮೀ ನಿರ್ಲಜ್ಜ ।।೧೫೪।। ಖರೀ ಖರಾಸ ಹಾಣೇ ಲಾತಾಡೇ । ತರೀ ತೋ ಧಸೇ ಪುಢೇ ಪುಢೇ । ತೈಸಾಚಿ ಮೀಹೀ ವೇಶ್ಯೇಕಡೇ । ಕಾಮಕೈವಾಡೇ ಭುಲಲೋ ।।೧೫೫।। ''ಕಾಮಭೋಗಾಂತೀ ವಿರಕ್ತೀ'' । ಐಸೇ ಮೂರ್ಖ ವಿವೇಕೀ ಬೋಲತೀ । ತೇ ಅಧಃಪಾತೀ ಘಾಲಿತೀ । ಹೇ ಮಜ ಪ್ರತೀತಿ ಸ್ವಯೇ ಝಾಲೀ ।।೧೫೬।।

ಸೇವತೋ ವರ್ಷಪೂಗಾನ್ಮೇ ಉರ್ವಶ್ಯಾ ಅಧರಾಸವಮ್ । ನ ತೃಪ್ಯತ್ಯಾತ್ಮಭೂಃ ಕಾಮೋ ವಹ್ನಿ ರಾಹುತಿಭಿರ್ಯಥಾ ।।೧೪।।

ಅರ್ಥ:- ನಾನು ಅನೇಕ ವರ್ಷಗಳ ಕಾಲ ಉರ್ವಶಿಯ ಅಧರಾಮೃತದ ಸೇವನೆಯನ್ನು ಮಾಡಿದೆನು. ಆದರೆ ನನ್ನ ಮನದಲ್ಲಿ ಉತ್ಪನ್ನವಾಗುತ್ತಿರುವ ಕಾಮವು, ಆಹುತಿಯಿಂದ ಅಗ್ನಿಯು ಹೇಗೆ ಶಾಂತವಾಗುವುದಿಲ್ಲವೋ ಅದರಂತೆ ನನಗೆ ತೃಪ್ತಿಯು ಆಗಲಿಲ್ಲ.

ಸತ್ಯಯುಗೀಂಚೇ ಆಯುಷ್ಯ ಮಾಝೇ । ಐಶ್ವರ್ಯ ಸಾರ್ವಭೌಮರಾಜ್ಯೇ । ಉರ್ವಶೀ ಸ್ವರ್ಗಮಂಡನಕಾಜೇ । ಸರ್ವಭೋಗಸಮಾಜೇ ಭೋಗಿತಾ ।।೧೫೭।। ಭೋಗಿತಾ ಲೋಟಲ್ಯಾ ವರ್ಷಕೋಟೀ । ಪರೀ ವಿರಕ್ತೀಚೀ ನಾಠವೇ ಗೋಠೀ । ಮಾ ''ವೈರಾಗ್ಯ ಭೋಗಾಚೇ ಶೇವಟೀ'' । ಹೇ ಮಿಥ್ಯಾ ಚಾವಟೀ ಮೂರ್ಖಾಚೀ ।।೧೫೮।।

---

* ನಾಲ್ಕೂ ಪುರುಷಾರ್ಥಗಳ ಅಧಿಷ್ಠಾನವಾಗಿರುವ, ಪರಮ ಪಾವನವಾಗಿರುವ ನರದೇಹವಾಗಿರುವುದು. ಈ ದೇಹದ ಯೋಗದಿಂದ ಯಾರು ನಿಃಸ್ವಾರ್ಥ ಭಜನೆಯನ್ನು ಮಾಡುವರೋ, ಅವರಿಗೆ ಸನಾತನ ಬ್ರಹ್ಮದ ಪ್ರಾಪ್ತಿಯಾಗುವುದು ।।೧೪೯।। ನರದೇಹದಲ್ಲಿನ ಒಂದೊಂದು ಕ್ಷಣವೂ ಕೂಡ ಜನ್ಮಮರಣದ ನಾಶ ಮಾಡುತ್ತಿರುವುದು. ಭಕ್ತಿಭಾವದಿಂದ ಹರಿಯ ಸ್ಮರಣೆಯನ್ನು ಮಾಡಲು ಮಹಾಪಾಪಗಳು ಇಲ್ಲದಾಗುವುವು ।।೧೫೦।। ಇಂತಹ ಅಮೌಲ್ಯವಾದ ನರದೇಹದ ಲಾಭವಾಗಿ ನಾನು ನೃಪಶ್ರೇಷ್ಠ ಚಕ್ರವರ್ತಿ ರಾಜನಾದೆನು. ಆದರೆ ವೇಶ್ಯೆಗೆ ಭುಲಾಯಿಸಿ ಹೋದೆನು. ಈ ನನ್ನ ಸ್ಥಿತಿಗೆ ಧಿಃಕ್ಕಾರವಿರಲಿ ।।೧೫೧।। ನಾನು ಸ್ವತಃಕ್ಕೆ ಅತಿಶಯ ಶ್ರೇಷ್ಠ ಮತ್ತು ಜ್ಞಾನಿ ಎಂದು ತಿಳಿದುಕೊಂಡಿದ್ದೆನು. ಆದರೆ ಅಜ್ಞಾನಿಗಿಂತಲೂ ಅಜ್ಞಾನಿಯಾಗಿದ್ದೆನು. ಕಾರಣವೇನೆಂದರೆ ನನ್ನ ನಿಜವಾದ ಹಿತವು ಯಾವುದರಲ್ಲಿದೆ ಎಂಬುವುದನ್ನು ನಾನು ತಿಳಿಯಲಿಲ್ಲ. ನಾನು ವಾರಾಂಗನೆಯ ಆಧೀನನಾದೆನು ।।೧೫೨।। ಮನುಷ್ಯ ದೇಹದಂತಹ ಅಮೌಲ್ಯ ನಿಧಿಯು ಪ್ರಾಪ್ತವಾಗಿದ್ದರೂ ಕೂಡ ನಾನು ಜ್ಞಾನದ ಅಭಿಮಾನವನ್ನು ಹಿಡಿದೆನು ಮತ್ತು ಸ್ವಹಿತದ ಯಾವ ಸಾಧನೆಯನ್ನೂ ಮಾಡಲಿಲ್ಲ. ಇದು ನನ್ನ ಎಂತಹ ಮೂರ್ಖತನವಿರಬಹುದು? ।।೧೫೩।। ಕಾಮದ ಆಸಕ್ತಿಯಿಂದ ಎತ್ತು ಆಕಳ ಹಿಂದೆ ಧಾವಿಸುತ್ತಿರುವುದು. ಮುಂದಾಗುವ ಅನರ್ಥವು ಅದಕ್ಕೆ ತಿಳಿಯುತ್ತಿರುವುದಿಲ್ಲ. ಹೆಣ್ಣು ಕತ್ತೆಯ ಹಿಂದೆ ಗಂಡು ಕತ್ತೆಯು ಧಾವಿಸುತ್ತಿರುವುದು. ಅದರಂತೆಯೇ ನಾನು ಕಾಮದ ಆಸಕ್ತಿಯಿಂದ ನಿರ್ಲಜ್ಜನಾಗಿದ್ದೆನು ।।೧೫೪।। ಹೆಣ್ಣು ಕತ್ತೆಯು ಇದು ಗಂಡು ಕತ್ತೆಗೆ ಒದೆಯುತ್ತಿರುವುದು. ಆದರೂ ಕೂಡ ಅದು ಮುಂದು ಮುಂದಾಗಿ ಹೊಕ್ಕುತ್ತಿರುವುದು. ಅದರಂತೆ ನಾನೂ ಕೂಡ ವೇಶ್ಯೆಯಳತ್ತ ಕಾಮಾತುರದಿಂದ ಭುಲಾಯಿಸಿದೆನು ।।೧೫೫।। ಕಾಮಭೋಗದ ನಂತರ ವಿರಕ್ತಿಯು ನಿರ್ಮಾಣವಾಗುವುದು ಎಂದು ವಿವೇಕಿ ಜನರು ಹೇಳುವರು. ಆದರೆ ಅವರು ನಿಜವಾಗಿಯೂ ಮೂರ್ಖರಾಗಿರುವರು. ಕಾರಣ ವಿಷಯ ಭೋಗವು ಅಧೋಗತಿಗೆ ಒಯ್ಯುತ್ತಿರುವುದು. ಇದರ ಪ್ರತ್ಯಕ್ಷ ಅನುಭವವು ನನಗಾಗಿರುವುದು ।।೧೫೬।।

ಸತ್ಯಯುಗದ ನನ್ನ ಆಯುಷ್ಯವು, ಮೇಲಾಗಿ ನನಗೆ ಸಾರ್ವಭೌಮ ರಾಜನ ವೈಭವವು ಪ್ರಾಪ್ತವಾಗಿತ್ತು. ಉರ್ವಶಿಯು ತನ್ನ ಸ್ವರ್ಗದಲ್ಲಿನ ಸ್ವಾರ್ಥಕ್ಕಾಗಿ ನನ್ನಿಂದ ಸರ್ವ ಪ್ರಕಾರದ ವಿಲಾಸಗಳನ್ನು ಭೋಗಿಸುತ್ತಿದ್ದಳು ।।೧೫೭।। ಆ ಸುಖ ವಿಲಾಸಗಳಲ್ಲಿ ಕೋಟಿ ವರ್ಷಗಳು ಗತಿಸಿದವು. ಆದರೆ ವಿರಕ್ತಿಯು ನನಗೆ ಪ್ರಾಪ್ತವಾಗಲಿಲ್ಲ. ಇದನ್ನು ನೋಡಿದರೆ ಭೋಗದ ಕೊನೆಯಲ್ಲಿ ವಿರಕ್ತಿ ಪ್ರಾಪ್ತವಾಗುವುದೆಂದು ಹೇಳುವಿಕೆಯು ಅದು ಮೂರ್ಖ ಜನರ ಬಡಬಡಿಕೆಯಾಗಿರುವುದು ।।೧೫೮।।

ಸ್ತ್ರೀಯೇಚೇ ಮ್ಹಣತೀ ಅಧರಾಮೃತ । ತೇಹೀ ಮೂರ್ಖ ಗಾ ನಿಶ್ಚಿತ । ತೇ ಉನ್ಮಾದಮದ್ಯ ಯಥಾರ್ಥ । ಅಧಿಕೇ ಚಿತ್ತಭ್ರಾಮಕ ।।೧೭೯।। ವನಿತಾಅಧರಪಾನಗೋಡೀ । ತ್ಯಾಪುಢೇ ಸಕಳ ಮದ್ಯೇ ಬಾಪುಡೀ । ತತ್ಕಾಳ ಅನರ್ಥೀ ಪಾಡೀ । ನಿಜಸ್ವಾರ್ಥಕೋಡೀನಾಶಕ ।।೧೮೦।। ಘಾಲಿತಾ ಕೋಟಿ ಘೃತಾಹುತೀ । ಅಗ್ನೀಸೀ ಕದಾ ನವ್ಹೇ ತೃಪ್ತೀ । ತೇವೀ ವನಿತಾಕಾಮಾಸಕ್ತೀ । ಕದಾ ವಿರಕ್ತೀ ಉಪಜೇನಾ ।।೧೮೧।। ಐಸಾ ಆಠ ಶ್ಲೋಕೀ ಅನುತಾಪ । ಸ್ವಯೇ ಬೋಲೋನಿಯಾ ನೃಪ । ಹೃದಯೀ ಉಪಜಲಾ ವಿವೇಕದೀಪ । ಜೇಣೇ ಝಡೇ ಕಂದರ್ಪ ತೇ ಸ್ಮರಲೇ ।।೧೮೨।। ಸಕಾಮಾಸೀ ವಿಷಯ ತ್ಯಾಗಿತಾ । ವಾಸನಾ ನ ತ್ಯಾಗೇ ಸರ್ವಥಾ । ಕಾ ಆದರೇ ವಿಷಯ ಭೋಗಿತಾ । ವಿರಕ್ತಿ ಸರ್ವಥಾ ಉಪಜೇನಾ ।।೧೮೩।। ಐಶಿಯಾ ಅರ್ಥೀಚಾ ಉಪಾವೋ । ವಿಚಾರೋನಿ ಬೋಲೇ ರಾವೋ । ಕಾಮತ್ಯಾಗಾಚಾ ಅಭಿಪ್ರಾವೋ । ಸಾಚಾರ ಪಹಾ ಹೋ ಸಂಬೋಧೀ ।।೧೮೪।।

ಪುಂಶ್ಚಲ್ಯಾಪಹೃತಂ ಚಿತ್ತಂ ಕೋ ನ್ವನ್ಯೋ ಮೋಚಿತುಂ ಪ್ರಭುಃ । ಆತ್ಮಾರಾಮೇಶ್ವರಮೃತೇ ಭಗವಂತಮಧೋಕ್ಷಜಮ್ ।।೧೫।।

ಅರ್ಥ:- ಈ ಕುಟಿಲ ವೇಶ್ಯೆಯು ನನ್ನ ಪ್ರಜ್ಞೆಯನ್ನು ಹರಣ ಮಾಡಿದಳು. ಇದರಿಂದ ಪಾರು ಮಾಡಲು ಭಗವಂತನಲ್ಲದೇ ಬೇರೆ ಯಾರು ಸಮರ್ಥರಿರುವರು?

ಪುರುಷ ಸದಾ ಸ್ತ್ರೀಅನುರಾಗ । ಪರೀ ಸಹಸಾ ನ ಕರವೇ ಪ್ರಸಂಗ । ತ್ಯಾಸೀ ಪುಂಶ್ಚಲೀಚಾ ಘಡಲಾ ಸಂಗ । ತೇ ಬಾಧೀ ನಿಲಾಗ ಹಾವಭಾವೀ ।।೧೮೫।। ಪುಂಶ್ಚಲೀಚೇ ಕಟಾಕ್ಷ ಗುಣ । ತೇಚಿ ಪುರುಷಾಸೀ ದೃಢಬಂಧನ । ಸ್ತ್ರೀಕಾಮಬಂಧನ ಸೋಡವೀ ಕೋಣ । ಏಕ ನಾರಾಯಣವಾಂಚೂನಿ ।।೧೮೬।। ಕಾಮಿನೀಕಾಮಾಪಾಸೂನಿ ನಿರ್ಮುಕ್ತ । ಕರ್ತಾ ಈಶ್ವರ ಸಮರ್ಥ । ಜೋ ಕಾ ಆತ್ಮಾರಾಮ ಭಗವಂತ । ತೋಚಿ ನಿಶ್ಚಿತ ಸೋಡವಿತಾ ।।೧೮೭।। ಮಾಯಾಗುಣೇ ಕಾಮಸಂಚಾರ । ಅವಿದ್ಯಾ ವಾಢವೀ ಸಾಚಾರ । ಮಾಯಾನಿಯಂತಾ ಜೋ ಈಶ್ವರ । ತೋ ಕಾಮಕರಕರ ನಿರ್ದಳೀ ।।೧೮೮।। ಸ್ವಸ್ವರೂಪೀ ರಮಣ ಆರಾಮ । ಐಸಾ ಜೋ ಕಾ ಆತ್ಮಾರಾಮ । ತೋ ನಿವಾರೀ ಸಕಳ ಕಾಮ । ಕರೀ ನಿರ್ಭ್ರಮ ನಿಜಾತ್ಮತಾ ।।೧೮೯।। ಜೋ ಭೋಗ ಭೋಗೂನಿ ಅಭೋಕ್ತಾ । ತ್ಯಾ ಶರಣ ರಿಘಾಲ್ಯಾ ಅನಂತಾ । ಬಾಧೂ ನ ಶಕೇ ವಿಷಯಾವಸ್ಥಾ । ಸ್ತ್ರೀಸಂಗೀ ಸೋಡವಿತಾ ತೋ ಏಕ ।।೧೯೦।।

ಸ್ತ್ರೀಯಳ ಅಧರಪಾನಕ್ಕೆ ಅಮೃತವೆಂದು ಹೇಳುವರು. ಇವರು ನಿಜವಾಗಿಯೂ ಮೂರ್ಖರೇ ಸರಿ. ಅದು ಅಮೃತವಂತೂ ಅಲ್ಲವೇ ಅಲ್ಲ, ಪ್ರತಿಯಾಗಿ ಉನ್ಮಾದ ತರುವ ಮದ್ಯವಾಗಿರುವುದು. ಕಾರಣ ಇದು ಚಿತ್ತದಲ್ಲಿ ಅಧಿಕವಾಗಿಯೇ ಭ್ರಮೆಯನ್ನು ನಿರ್ಮಾಣಮಾಡುತ್ತಿರುವುದು ।।೧೭೯।। ಸ್ತ್ರೀಯಳ ಅಧರಪಾನದ ರುಚಿಯ ಮುಂದೆ ಎಲ್ಲ ಮದ್ಯಗಳು ತುಚ್ಛವಾಗಿರುವುವು. ಕಾರಣ ಇದು ತತ್ಕಾಲದಲ್ಲಿ ಅನರ್ಥ ಉಂಟು ಮಾಡಿ ನಿಜಸ್ವಾರ್ಥದ ರಾಶಿಯನ್ನು ನಾಶಮಾಡುವುದು ।।೧೮೦।। ಕೋಟಿ ಕೋಟಿಸಾರೆ ತುಪ್ಪವನ್ನು ಅಗ್ನಿಯಲ್ಲಿ ಹಾಕಿದರೂ ಕೂಡ ಆ ಅಗ್ನಿಯು ಶಾಂತವಾಗದೇ ತೃಪ್ತಿಯಾಗುವುದಿಲ್ಲ. ಅದರಂತೆ ಸ್ತ್ರೀಸಂಗತಿಯಿಂದ ಎಂದಿಗೂ ವಿರಕ್ತಿಯು ಹುಟ್ಟುವುದಿಲ್ಲ ।।೧೮೧।। ಈ ಪ್ರಕಾರವಾಗಿ ರಾಜನು ತನ್ನ ಪಶ್ಚಾತ್ತಾಪವನ್ನು ಎಂಟು ಶ್ಲೋಕಗಳಿಂದ ವ್ಯಕ್ತಮಾಡಿದನು. ಆತನ ಹೃದಯದಲ್ಲಿ ವಿವೇಕ ಜ್ಯೋತಿಯು ಪ್ರಜ್ವಲಿತವಾಯಿತು. ಮದನ ನಾಶವು ಯಾವುದರಿಂದ ಆಗುವದೆಂಬ ವಿಚಾರವು ಆತನಿಗೆ ಹೊಳೆಯಿತು ।।೧೮೨।। ಮನದಲ್ಲಿ ಆಸಕ್ತಿಯನ್ನಿಟ್ಟು ವಿಷಯಗಳ ತ್ಯಾಗವನ್ನು ಮಾಡಿದರೆ ವಾಸನೆಯು ಇದು ಎಂದಿಗೂ ನಾಶವಾಗುವುದಿಲ್ಲ. ಪ್ರೇಮದಿಂದ ವಿಷಯಗಳ ಸೇವನೆಯನ್ನು ಮಾಡುತ್ತಿದ್ದರೆ ವಿರಕ್ತಿಯು ಹುಟ್ಟುವುದಾದರೂ ಹೇಗೆ ।।೧೮೩।। ಹೀಗಾದಲ್ಲಿ ಇದಕ್ಕೆ ಉಪಾಯವೇನು? ಇದರ ವಿಚಾರವನ್ನು ಮಾಡಿ ಸ್ತ್ರೀವಿಷಯ ತ್ಯಾಗದ ನಿಜವಾದ ಉಪಾಯ ಯಾವುದೆಂಬುದನ್ನು ರಾಜನು ಈಗ ಹೇಳುವನು ।।೧೮೪।।

ಪುರುಷನ ಮನದಲ್ಲಿ ಸ್ತ್ರೀವಿಷಯಕ್ಕಾಗಿ ಯಾವಾಗಲೂ ಅನುರಾಗವು ಇದ್ದೇ ಇರುತ್ತದೆ. ಅದಕ್ಕಾಗಿ ಒಮ್ಮಿಂದೊಮ್ಮೆಲೆ ಅತಿಪ್ರಸಂಗ ಮಾಡಲು ಬರುವುದಿಲ್ಲ. ಆದ್ದರಿಂದ ಆತನಿಗೆ ವಾರಾಂಗನೆಯ ಸಂಗತಿಯು ಸಾಧಿಸುವುದು. ಆತನು ಈಕೆಯ ಹಾವಭಾವಗಳಿಂದ ಅತ್ಯಂತ ಕಾಮಾತುರನಾಗುವನು ।।೧೮೫।। ವಾರಾಂಗನೆಯ ನೇತ್ರಕಟಾಕ್ಷವು ಪುರುಷನಿಗೆ ಬಂಧನದಲ್ಲಿ ತೊಡಕಿಸುವುದು. ಈ ಬಂಧನದಿಂದ ಒಬ್ಬ ನಾರಾಯಣನ ಹೊರತಾಗಿ ಇತರರು ಯಾರು ಬಿಡಿಸುವವರಾಗಿರುವರು? ।।೧೮೬।। ಕಾಮಿನೀಕಾಮದಿಂದ ನಿರ್ಮುಕ್ತನನ್ನಾಗಿ ಮಾಡಲು ಈಶ್ವರನು ಮಾತ್ರ ಸಮರ್ಥನಿರುವನು. ಯಾವ ಆತ್ಮಾರಾಮನಾಗಿರುವ ಭಗವಂತನು ನಿಶ್ಚಿತವಾಗಿ ಬಂಧನದಿಂದ ಬಿಡಿಸುವವನಾಗಿರುವನು ।।೧೮೭।। ಮಾಯೆಯ ಗುಣಕಾರಣವಾಗಿ ಕಾಮದ ಸಂಚಾರವಾಗುತ್ತಿರುವುದು. ಅವಿದ್ಯೆಯು ಆತನಲ್ಲಿ ಬೆಳೆಯುತ್ತಿರುವುದು. ಇದರಿಂದಮಾಯೆಯ ನಿಯಂತ್ರಕನಾಗಿರುವ ಈಶ್ವರನು ಮಾತ್ರ ಈ ಕಾಮದ ಪೀಡೆಯನ್ನು ನಿವಾರಿಸಬಲ್ಲನು ।।೧೮೮।। ಸ್ವರೂಪದಲ್ಲಿ ರಮಮಾಣನಾಗಿ ಆನಂದ ಸ್ವರೂಪನಾಗಿರುವ ಯಾವ ಆತ್ಮಾರಾಮನು, ಆತನೇ ಸರ್ವ ವಿಷಯಗಳ ನಿವಾರಣೆಯನ್ನು ಮಾಡಿ ಆತ್ಮಸ್ವರೂಪ ವಿಷಯದಲ್ಲಿ ಉಂಟಾಗಿರುವ ಭ್ರಮೆಯನ್ನು ದೂರು ಮಾಡುವನು ।।೧೮೯।। ಭೋಗಗಳನ್ನು ಭೋಗಿಸಿಯೂ ಕೂಡ ಯಾರು ಅಭೋಕ್ತಾರಾಗಿರುವರೋ, ಅಂತಹ ಯಾವ ಅನಂತನಿಗೆ ಶರಣು ಹೋದರೆ ಆಗ ವಿಷಯಗಳ ವಿಕಾರವು ಸ್ವಲ್ಪವೂ ಕೂಡ ಬಾಧೆಯನ್ನು ಕೊಡಲು ಶಕ್ಯವಿಲ್ಲ. ಸ್ತ್ರೀಸಂಗದಿಂದ ಬಿಡಿಸುವವ ಇಂತಹ ಪ್ರಭು ಆತನೇ ಆಗಿರುವನು ।।೧೯೦।।

ಜೋ ನಿವಾರೀ ಅಧೋಗತೀ । ತೋ ಅಧೋಕ್ಷಜ ಅಸತಾ ಭಕ್ತಪತೀ । ತ್ಯಾಸೀ ಶರಣ ರಿಘಾಲ್ಯಾ ನಿಶ್ಚಿತೀ । ಕಾಮಾಸಕ್ತೀ ನಿವಾರೀ ॥೧೮೧॥ ರಾಜಾ ಕಾಮಾಸಕ್ತೀ ಅತಿತ್ರಾಸಲಾ । ಸಬಾಹ್ಯ ವಿಷಯೀ ಉದಾಸ ಝಾಲಾ । ತ್ಯಾಚಾ ವಾಸನಾಕಾಮ ಜೋ ಉರಲಾ । ತೋ ನ ವಚೇ ತ್ಯಾಗಿಲಾ ತ್ಯಾಚೇನಿ ॥೧೮೨॥ ಸರ್ವಭಾವೇಸೀ ಸಂಪೂರ್ಣ । ಹರೀಸೀ ರಿಘಾಲಿಯಾ ಶರಣ । ಸಕಳ ಕಾಮಾಚೇ ನಿರ್ದಳಣ । ಸಹಜೇ ಜಾಣ ಸ್ವಯೇ ಹೋಯ ॥೧೮೩॥ ಏಕಾಚಾ ಮತವಾದ ನಿಶ್ಚಿತೀ । ಕರಿತಾ ಶ್ರುತಿವಾಕ್ಯ ವ್ಯುತ್ಪತ್ತೀ । ಯಜಿತಾ ಇಂದ್ರಾದಿ ದೇವಾಂಪ್ರತೀ । ಕಾಮನಿವೃತ್ತಿ ಹೃದಯಸ್ಥ ॥೧೮೪॥ ಐಸೇ ಬೋಲತೀ ಜೇ ಸಜ್ಞಾನ । ತೇ ಸರ್ವಥಾ ಗಾ ಅಜ್ಞಾನ । ಹರೀಸೀ ನ ರಿಘತಾ ಶರಣ । ಕಾಮಸಂಚರಣ ಶಮೇನಾ ॥೧೮೫॥ ಇಂದ್ರಾದಿ ದೇವ ಕಾಮಾಸಕ್ತೀ । ವಿಟಂಬಲೇ ನೇಣೋ ಕಿತೀ । ತ್ಯಾಂಚೇನಿ ಭಜನೇ ಕಾಮನಿವೃತ್ತೀ । ಜೇ ಮ್ಹಣತೀ ತೇ ಅತಿಮೂರ್ಖ ॥೧೮೬॥

ಬೋಧಿತಸ್ಯಾಪಿ ದೇವ್ಯಾ ಮೇ ಸೂಕ್ತವಾಕ್ಯೇನ ದುರ್ಮತೇಃ । ಮನೋಗತೋ ಮಹಾಮೋಹೋ ನಾಪಯಾತ್ಯಜಿತಾತ್ಮನಃ ॥೧೬॥

ಅರ್ಥ:-ನನ್ನ ಬುದ್ಧಿಯು ಮಂಕು ಹಿಡಿದು ಮೋಹದಿಂದ ಗ್ರಸ್ತವಾಗಿತ್ತು. ನನ್ನ ಇಂದ್ರಿಯಗಳನ್ನು ನಿಗ್ರಹಿಸುವುದರಲ್ಲಿ ನಾನು ವಿಫಲನಾದೆನು. ಆದ್ದರಿಂದ ಉರ್ವಶಿಯು ವೇದಾರ್ಥವಾಗಿ ಸೂಕ್ತವಾದ ವಚನಗಳಿಂದ ತಿಳಿಸಿ ಹೇಳಿದರೂ ಕೂಡ ನನ್ನ ಮನದಲ್ಲಿದ್ದ ಮಹಾಮೋಹವು ನಿವಾರಣೆಯಾಗಲಿಲ್ಲ.

ಕಾಮ್ಯ ಕರ್ಮೀ ಹೋಈಲ ಸುಖ । ಹೇ ಬೋಲಣೇ ಸಮೂಳ ಲಟಿಕ । ಕಾಮ್ಯ ಕರ್ಮೀ ಅಧಿಕ ದುಃಖ । ಹೇ ನೇಣತೀ ಮೂರ್ಖ ಸಕಾಮ ॥೧೮೭॥ ಪ್ರತ್ಯಕ್ಷ ಮ್ಯಾ ಯಾಗ ಕರೂನ । ಇಂದ್ರಾದಿ ದೇವಾಂತೇ ಯಜೂನ । ಉರ್ವಶೀಸಂಭೋಗಾ ಲಾಧೂನ । ಅತಿದುಃಖೀ ಜಾಣ ಮೀ ಝಾಲೋ ॥೧೮೮॥ ನಾರಾಯಣ ಉರೂಸೀ ಜನ್ಮಲೀ । ಯಾಲಾಗೀ "ಉರ್ವಶೀ" ನಾಂವ ಪಾವಲೀ । ತ್ಯಾ ಮಜ ಶ್ರುತಿವಾಕ್ಯೇ ಬೋಧಿಲೀ । ನಿಷ್ಕಾಮ ಬೋಲೀ ಅತಿಶುದ್ಧ ॥೧೮೯॥ ಐಕತಾ ಶ್ರುತಿನಿಷ್ಕಾಮಬೋಲೀ । ಮಾಝೀ ನ ವಚೇಚ ಸಕಾಮ ಭುಲೀ । ಜಂವ ಗೋವಿಂದೇ ಕೃಪಾ ನಾಹೀ ಕೇಲೀ । ತಂವ ಕಾಮಾಚೀ ಚಾಲೀ ಖುಂಟೇನಾ ॥೧೯೦॥ ಭಾವೇ ಹರೀಸೀ ನಿಘಾಲ್ಯಾ ಶರಣ । ಹೃದಯೀ ಪ್ರಕಟೇ ನಾರಾಯಣ । ತೇವ್ಹಾ ಸರ್ವ ಕಾಮ ಸಹಜೇ ಜಾಣ । ಜಾತಿ ಪಳೋನ ಹೃದಯಸ್ಥ ॥೧೯೧॥ ಉರ್ವಶೀಕಾಮಸಂಗೇ ಜಾಣ । ಘೋರ ಕಷ್ಟಲೋ ಮೀ ಆಪಣ । ಅಸೋ ತಿಚಾ ಅಪರಾಧ ಕೋಣ । ಮೀಚಿ ಹರಿಸ್ಮರಣ ವಿಸರಲೋ ॥೧೯೨॥

ಅಧೋಗತಿಯನ್ನು ತಪ್ಪಿಸುವವನಾದ ಇಂತಹ ಯಾವ ಅಧೋಕ್ಷಜನು ಆತನು ತನ್ನ ಭಕ್ತರನ್ನು ಪರಿಪಾಲಿಸುತ್ತಿರುವನು. ಆತನಿಗೆ ಶರಣು ಹೋಗಲು, ಆಗ ಆತನೇ ನಮ್ಮ ಕಾಮಾಸಕ್ತಿಯನ್ನು ನಿವಾರಣೆ ಮಾಡುವನು ॥೧೮೧॥ ಆ ಯಾವ ರಾಜನು ತನ್ನ ಕಾಮದ ಆಸಕ್ತಿಯಿಂದ ಅತಿತ್ರಾಸುಪಟ್ಟನು. ವಿಷಯ ಸಂಬಂಧದಲ್ಲಿ ಒಳಗೂ, ಹೊರಗೂ ಉದಾಸೀನನಾದನು. ಆದರೂ ಕೂಡ ಆತನ ಅಂತಃಕರಣದಲ್ಲಿನ ವಿಷಯ ವಾಸನೆಯು ಏನು ಮಾಡಿದರೂ ಆತನಿಗೆ ಬಿಡಲು ಸಾಧ್ಯವಾಗಲಿಲ್ಲ ॥೧೮೨॥ ಅನನ್ಯ ಭಾವದಿಂದ ಹರಿಗೆ ಶರಣು ಹೋಗಲು ಸರ್ವಕಾಮವಾಸನೆಗಳು ಸ್ವಭಾವತವೇ ನಾಶವಾಗಿ ಹೋಗುವುವು ॥೧೮೩॥ ವೇದಗಳ ಅಧ್ಯಯನವನ್ನು ಮಾಡಿ ಮತ್ತು ಇಂದ್ರಾದಿ ದೇವತೆಗಳಿಗಾಗಿ ಯಜ್ಞವನ್ನು ಮಾಡಿದರೆ ಹೃದಯದಲ್ಲಿನ ಕಾಮದ ನಿವೃತ್ತಿಯಾಗುವುದೆಂದು ಕೆಲವು ಜನರ ಮತವಾಗಿರುವುದು ॥೧೮೪॥ ಆದರೆ ಹೀಗೆ ಹೇಳುವ ವಿದ್ವಾನರು ಪೂರ್ಣವಾಗಿ ಅಜ್ಞಾನಿಗಳು ಎಂದು ತಿಳಿಯಬೇಕು. ಕಾರಣ ಭಗವಂತನಿಗೆ ಶರಣು ಹೋಗದ ಹೊರತಾಗಿ ಕಾಮಬಾಧೆಯು ಶಾಂತವಾಗಲು ಶಕ್ಯವೇ ಇಲ್ಲ ॥೧೮೫॥ ಸ್ವತಃ ಇಂದ್ರಾದಿ ದೇವತೆಗಳೇ ಈ ಕಾಮದ ಆಸಕ್ತಿಯಿಂದ ಎಷ್ಟೊಂದು ಪೇಚಿಗೆ ಸಿಕ್ಕಿಕೊಂಡರೋ ಹೇಳಲು ಬಾರದು. ಹೀಗಿರಲು ಅವರ ಭಜನೆಯಿಂದ ಕಾಮದ ನಿವೃತ್ತಿಯಾಗುವುದೆಂದು ಹೇಳುವವರು ಅತಿ ಮೂರ್ಖರಾಗಿರುವರು ॥೧೮೬॥

ಕಾಮ್ಯ ಕರ್ಮಗಳಿಂದ ಸುಖಿಸಿಗಲು ಶಕ್ಯವಿದೆ ಎಂದು ಹೀಗೆ ತಿಳಿದುಕೊಳ್ಳುವುದೇ ಮೂಲತಃ ಸುಳ್ಳಾಗಿರುವುದು. ಕಾಮ್ಯ ಕರ್ಮಗಳಲ್ಲಿ ಸುಖದ ಬದಲಾಗಿ ದುಃಖವೇ ತುಂಬಿಕೊಂಡಿರುವುದು. ಸಕಾಮ ಕರ್ಮಗಳನ್ನು ಮಾಡುತ್ತಿರುವ ಮೂರ್ಖ ಜನರಿಗೆ ಇದು ತಿಳಿಯುವುದೇ ಇಲ್ಲ ॥೧೮೭॥ ಪ್ರತ್ಯಕ್ಷವಾಗಿ ನನ್ನದೇ ಆದ ಉದಾಹರಣೆಯನ್ನು ನೋಡಿಕೊಳ್ಳಿರಿ. ನಾನು ಯಜ್ಞಯಾಗಗಳನ್ನು ಮಾಡಿ ಇಂದ್ರಾದಿ ದೇವತೆಗಳ ಉಪಾಸನೆಯನ್ನು ಮಾಡಿ ಉರ್ವಶಿಯ ವಿಲಾಸಭೋಗದ ಪ್ರಾಪ್ತಿಯನ್ನು ಮಾಡಿಕೊಂಡೆನು. ಆದರೆ ಅದರಿಂದ ಅತ್ಯಂತ ದುಃಖಿಯಾದೆನು ॥೧೮೮॥ (ಊರು ಎಂದರೆ ತೊಡೆ) ನಾರಾಯಣನ ತೊಡೆಯಿಂದ ಜನ್ಮಕ್ಕೆ ಬಂದಿದ್ದಕ್ಕೆ ಆಕೆಗೆ ಉರ್ವಶೀ ಎಂದು ಹೆಸರಾಯಿತು. ಆ ಉರ್ವಶಿಯು ನಿಷ್ಕಾಮದ ಶ್ರುತಿವಾಕ್ಯಗಳಿಂದ ಅತ್ಯಂತ ಶುದ್ಧವಾದ ವಚನಗಳಿಂದ ನನಗೆ ಉಪದೇಶವನ್ನು ಮಾಡಿದಳು ॥೧೮೯॥ ಈ ಯಾವ ಶ್ರುತಿಯ ನಿಷ್ಕಾಮ ವಚನಗಳನ್ನು ಕೇಳಿಯೂ ಕೂಡ ನನ್ನ ಕಾಮದ ಆಸಕ್ತಿಯು ದೂರಾಗಲಿಲ್ಲ. ಏಕೆಂದರೆ ಎಲ್ಲಿಯವರೆಗೆ ಭಗವಂತನ ಕೃಪೆಯಾಗುವುದಿಲ್ಲವೋ ಅಲ್ಲಿಯವರೆಗೆ ಕಾಮವೃತ್ತಿಯ ಆಸಕ್ತಿಯು ನಿಲ್ಲುವುದೇ ಇಲ್ಲ ॥೧೯೦॥ ಭಕ್ತಿಭಾವದಿಂದ ಶ್ರೀಹರಿಗೆ ಶರಣು ಹೋಗಲು ಆಗ ಹೃದಯಲ್ಲಿನ ನಾರಾಯಣನು ಪ್ರಕಟನಾಗುವನು. ಆಗ ಅಂತಃಕರಣದಲ್ಲಿನ ಸರ್ವ ಕಾಮಾಸಕ್ತಿಯು ನಿಲ್ಲದೇ ಓಡಿಹೋಗುವುದು ॥೧೯೧॥ ಉರ್ವಶಿಯ ಕಾಮಸಂಗದಿಂದ ನನಗೆ ಅತಿಶಯವಾಗಿ ಕಷ್ಟವನ್ನು ಸೋಸಬೇಕಾಯಿತು. ಆದರೆ ಈ ವಿಷಯದಲ್ಲಿ ಆಕೆಯ ಅಪರಾಧವು ಎಂದು ಹೇಗೆ ಹೇಳಬೇಕು? ನಾನೇ ಮೂಲತಃ ಶ್ರೀಹರಿಯ ಸ್ಮರಣೆಯನ್ನು ಮರೆತು ಹೋದೆನು ॥೧೯೨॥

ಜರೀ ಮೀ ಕರಿತೋ ಹರೀಚೇ ಸ್ಮರಣ । ತರೀ ಕಾಮ ಬಾಪುಡೇ ಬಾಧೀ ಕೋಣ । ಮಜ ಮಾಝೀ ಅಸತೀ ಆಠವಣ । ತ್ರೈ ತುಚ್ಛ ಜಾಣ ಉರ್ವಶೀ ।।೧೯೩।।

ಕಿಮೇತಯಾ ನೋಽಪಕೃತಂ ರಜ್ಜ್ವಾ ವಾ ಸರ್ಪಚೇತಸಃ । ರಜ್ಜುಸ್ವರೂಪಾವಿದುಷೋ ಯೋಽಹಂ ಯದಜೀತೇಂದ್ರಿಯಃ ।।೧೮।।

ಅರ್ಥ:- ಹಗ್ಗದ ಸ್ವರೂಪಕ್ಕೆ ತಿಳಿಯದೇ ಯಾವನು ಅದರಲ್ಲಿ ಸರ್ಪದ ಕಲ್ಪನೆಯನ್ನು ಮಾಡಿ ಭಯದುಃಖಪಡುತ್ತಿರುವನೋ, ಆತನಿಗೆ ಆ ಹಗ್ಗವು ಯಾವ ತಪ್ಪು ಮಾಡಿರುವುದು? ಆದರಂತೆ ಉರ್ವಶಿಯಾದರೂ ಏನು ಮಾಡಿಯಾಳು? ನಾನು ಸ್ವತಃ ಇಂದ್ರಿಯಗಳನ್ನು ಜಯಿಸದೇ ಅಪರಾಧಿಯಾದೆನು.

ಮೂಢಮತೀಚಾ ಪ್ರಬೋಧ । ಮಾನೀ ಉರ್ವಶೀಚಾ ಅಪರಾಧ । ವಿವೇಕೇ ಪಾಹತಾ ಶುದ್ಧ । ಮೀಚ ಮತಿಮಂದ ಸಕಾಮ ।।೧೯೪।। ಉರ್ವಶೀ ದೇಖತಾ ದೃಷ್ಟೀ । ಮೀ ಕಾಮಾಸ್ತ ಝಾಲೋ ಪೋಟೀ । ಮಾಝಿಯೇ ಲಂಪಟತೇಸಾಠೀ । ಮಜ ಮ್ಯಾ ಶೇವಟೀ ನಾಡಿಲೇ ।।೧೯೫।। ಜೇವೀ ಸಾಂಜವೇಳೇ ಪಡಿಲಾ ದೋರು । ಭೇಡಾ ಸರ್ಪಭಾಸೇ ಥೋರು । ಜಂವ ನಾಹೀ ಕೇಲಾ ನಿರ್ಧಾರು । ತಂವ ಮಹಾಅಜಗರು ಭಯಾನಕ ।।೧೯೬।। ತೇಣೇ ಸರ್ಪಭಯೇ ಲವಡಸವಡೀ । ಪಳೋ ಜಾತಾ ಪೈ ತಾಂತಡೀ । ದುಪಾವಲೀ ಪಡಲೀ ಆಢೀ । ತ್ಯಾಚೀ ಕಲ್ಪನಾ ನಾಡೀ ತಯಾಸೀ ।।೧೯೭।। ತೇವೀ ಮಾಝಿಯೇ ಕಾಮಭ್ರಾಂತೀ । ಉರ್ವಶೀ ಸುಂದರ ಯುವತೀ । ಏಥ ಮಾಝಿಯಾ ಕಾಮಾಸಕ್ತೀ । ಸುರತ - ರತೀ ಭುಲಲೋ ।।೧೯೮।। ಯಾಪರೀ ಮೀ ಅವಿವೇಕಾತ್ಮಾ । ಭುಲಲೋ ಉರ್ವಶೀಚ್ಯಾ ಕಾಮಾ । ತೀವರೀ ಕೋಪಣೇ ಜೇ ಆಮ್ಹಾ । ಹೇಚಿ ಅಧರ್ಮಾಚೇ ಮೂಳ ।।೧೯೯।। ದೃಷ್ಟೀ ದೇಖತಾ ಕಾಮಿನೀ । ಕಾಮಾಸಕ್ತಾ ತೇ ಅತಿರಮಣೀ । ವಿವೇಕಿಯಾ ಪೋಹಣಘಾಣೀ । ನರಕಮಾಥಣೀ ತೇ ಕಾಂತಾ ।।೨೦೦।। ಜೇವೀ ಸೂಕರಾ ವಿಷ್ಠೇಚೀ ಪ್ರೀತೀ । ತೇವೀ ಸಕಾಮಾ ಕಾಮಿನೀಚೀ ರತೀ । ವಿವೇಕೀ ದೇಖೋನಿ ಥುಂಕಿತೀ । ತೇಚಿ ಶ್ಲೋಕಾರ್ಥೀ ನೃಪ ಬೋಲೇ ।।೨೦೧।।

ಕ್ವಾಯಂ ಮಲೀಮಸಃ ಕಾಯೋ ದೌರ್ಗಂಧ್ಯಾದ್ಯಾತ್ಮಕೋಽಶುಚಿಃ । ಕ್ವ ಗುಣಾಃ ಸೌಮನಸ್ಯಾದ್ಯಾ ಹ್ಯಧ್ಯಾಸೋಽವಿದ್ಯಯಾ ಕೃತಃ ।।೧೯।।

ಅರ್ಥ:- ಅತ್ಯಂತ ಮಲಿನ, ದುರ್ಗಂಧಯುಕ್ತ ಅಶುಚಿ ದೇಹವು ಎಲ್ಲಿ? ಹಾಗೂ ಸುಕುಮಾರತೆ, ಪವಿತ್ರತೆ, ಸುಗಂಧ ಇತ್ಯಾದಿ ಹೂವುಗಳ ಪವಿತ್ರಗುಣ ಎಲ್ಲಿ? ಆದರೂ ನಾನು ಅಜ್ಞಾನದಿಂದ ಸುಂದರವಿಲ್ಲದರಲ್ಲಿಯೇ ಸುಂದರತ್ವದ ಆರೋಪವನ್ನು ಮಾಡಿದೆನು.

ಸ್ತ್ರೀ-ಪುರುಷ ನಾಮಾಭಿಧಾನ । ಕೇವಳ ದೇಹಾಸೀಚಿ ಜಾಣ । ತೇ ಸ್ತ್ರೀದೇಹೀ ಪಾಹತಾ ಗುಣ । ಮಲಿನಪಣ ಅತ್ಯಂತ ।।೨೦೨।।

ನಾನು ಒಂದು ವೇಳೆ ಶ್ರೀಹರಿಯ ಸ್ಮರಣೆಯನ್ನು ಮಾಡುತ್ತಿದ್ದರೆ ಆಗ ಕಾಮದ ಬಾಧೆಯು ನನಗಾಗುತ್ತಿದ್ದಿಲ್ಲ. ನನ್ನದು ನನಗೆ ಸ್ಮರಣೆಯಿದ್ದರೆ ನಾನು ಉರ್ವಶಿಗೆ ತುಚ್ಛವೆಂದು ತಿಳಿಯುತ್ತಿದ್ದೆನು ।।೧೯೩।।

ನಾನು ಇಲ್ಲಿಯವರೆಗೆ ಮೂರ್ಖತನದಿಂದ ಉರ್ವಶಿಯ ಅಪರಾಧವೆಂದೇ ಭಾವಿಸಿಕೊಂಡಿದ್ದೆನು. ಆದರೆ ಯಾವ ವೇಳೆಯಲ್ಲಿ ನಾನು ನನ್ನಲ್ಲಿಯೇ ಚಿಂತನೆಯನ್ನು ಮಾಡುತ್ತಿರಲು ಆಗ ನಾನೇ ಮತಿಮಂದನು, ಸಕಾಮನು ಎಂದು ಹೊಳೆಯಿತು ।।೧೯೪।। ಉರ್ವಶಿಯನ್ನು ಕಾಣುತ್ತಲೇ ನನ್ನ ಮನದಲ್ಲಿ ಕಾಮದ ಆಸಕ್ತಿಯು ಬೆಳೆಯಿತು. ನಾನು ಸ್ವತಃ ಸ್ತ್ರೀಲಂಪಟನಾಗಿದ್ದಕ್ಕೆ ನಾನೇ ಪೇಚಿನಲ್ಲಿ ಸಿಕ್ಕಿಕೊಂಡೆನು ।।೧೯೫।। ಸಾಯಂಕಾಲದ ಸಮಯದಲ್ಲಿ ಕತ್ತಲಲ್ಲಿ ಬಿದ್ದಿರುವ ಹಗ್ಗವು ಪುಕ್ಕ ಮನುಷ್ಯನಿಗೆ ಅದು ಸರ್ಪದಂತೆ ಭಾಸವಾಗುವುದು. ಎಲ್ಲಿಯವರೆಗೆ ಸರಿಯಾಗಿ ವಿಚಾರಿಸಿ ನೋಡುವುದಿಲ್ಲವೋ ಅಲ್ಲಿಯವರೆಗೆ ಅದು ಹೆಬ್ಬಾವಿನಂತೆಯೇ ತೋರುತ್ತಿರುವುದು ।।೧೯೬।। ಇದೇ ಭ್ರಮದಿಂದ ಆತನು ಗಡಬಡಿಯಿಂದ ಓಡಹತ್ತಲು ಆಗ ಆತನ ಕಾಲಿಗೆ ಆ ಹಗ್ಗದ ಸಿಂಬಿಯು ತೊಡಕಿಕೊಳ್ಳುವುದು. ಸರ್ಪವು ತನ್ನ ಕಾಲಿಗೆ ಸುತ್ತಿಕೊಂಡಂತೆ ಭಾಸವಾಗುವುದು. ಇದನ್ನು ನೋಡಿದರೆ ಆತನ ಕಲ್ಪನೆಯೇ ಆತನಿಗೆ ಬಾಧಿಸುತ್ತಿರುವುದು ।।೧೯೭।। ಆದರಂತೆಯೇ ಕಾಮದ ಭ್ರಮೆಯಿಂದ ಉರ್ವಶಿಯು ನನಗೆ ಅತಿಶಯವಾಗಿ ಸುಂದರ ಸ್ತ್ರೀಯಾಗಿ ಕಂಡಳು. ನನ್ನ ಕಾಮದ ಆಸಕ್ತಿಯಿಂದಲೇ ರತಿವಿಲಾಸದಲ್ಲಿ ತೊಡಗಿ ಅದರಲ್ಲಿಯೇ ಮಗ್ನನಾದೆನು ।।೧೯೮।। ಈ ರೀತಿಯಲ್ಲಿ ನಿಜವಾಗಿಯೂ ನಾನೇ ಅವಿಚಾರಿ ಪ್ರಾಣಿಯಾಗಿರುವೆನು. ನಾನೇ ಉರ್ವಶಿಯಲ್ಲಿ ಲುಬ್ಧನಾದೆನು. ಹೀಗಿರಲು ಆಕೆಯ ಮೇಲೆ ಕೋಪಿಸುವುದು ಇದು ಅಧರ್ಮದ ಮೂಲವಾಗುವುದು ।।೧೯೯।। ಕಾಮದಿಂದ ಆಸಕ್ತನಾಗಿರುವ ಮನುಷ್ಯನಿಗೆ ಸ್ತ್ರೀಯಳು ದೃಷ್ಟಿಗೆ ಬೀಳುತ್ತಲೇ ಆಕೆಯು ಅತಿಶಯವಾಗಿ ಮನಮೋಹಕ ಹಾಗೂ ರಮಣೀಯವಾಗಿ ತೋರುತ್ತಿರುವಳು. ಆದರೆ ವಿಚಾರವಂತ ಪುರುಷನಿಗೆ ಅದೇ ಸ್ತ್ರೀಯಳು ಅಮಂಗಲವಾಗಿ ಹಾಗೂ ನರಕದ ಪಾತ್ರೆಯಂತೆ ತೋರುತ್ತಿರುವಳು ।।೨೦೦।। ಹಂದಿಗೆ ಯಾವ ಪ್ರಕಾರವಾಗಿ ಮಲವು ಪ್ರಿಯವಾಗುವುದೋ, ಅದೇ ಪ್ರಕಾರವಾಗಿ ವಿಷಯಗಳಿಂದ ಲಂಪಟನಾಗಿರುವ ಪುರುಷನಿಗೆ ಸ್ತ್ರೀಸಂಗವು ಅತ್ಯಂತ ರಮಣೀಯವಾಗಿ ತೋರುವುದು ।।೨೦೧।।

ಸ್ತ್ರೀ ಮತ್ತು ಪುರುಷ ಎಂಬ ಈ ನಾಮಗಳು ಕೇವಲ ದೇಹದ್ದಾಗಿರುವುವು. ಇದರಲ್ಲಿ ಯಾವ ಸ್ತ್ರೀದೇಹದ ಗುಣಧರ್ಮವನ್ನು ನೋಡಿದರೆ ಈ ಶರೀರವು ಅತಿಶಯವಾಗಿ ಅಮಂಗಲವಾಗಿರುವುದು ।।೨೦೨।।

ಜೇ ನೀಚ ನವ್ಯಾ ವಿಟಾಳಾಚೀ ಖಾಣೀ । ಜೇ ರಜಸ್ವಲೇಚಿ ಪ್ರವಾಹಸ್ನಾಣೀ । ಜೇ ಕಾ ದುರ್ಗಂಧಾಚೀ ಪೋಹಣೀ । ಜೇ ಉತಲೀ ಚಿಡಾಣೀ ವಿಷ್ಠೇಚೀ ॥೨೦೩॥ ಜೇ ಕಾ ದೋಷಾಂಚೇ ಜನ್ಮಸ್ಥಾನ । ಜೇ ವಿಕಲ್ಪಾಚೇ ಆಯತನ । ಜೇ ಮಹಾದುಃಖಾಚೇ ಭಾಜನ । ಅಧಃಪತನ ಜಿಜೇನಿ ॥೨೦೪॥ ಜೇ ವಾಢವೀ ಅತಿ ಉದ್ವೇಗ । ಜಿಚೇನಿ ಮನಾಸೀ ಲಾಗೇ ಕ್ಷಯರೋಗ । ಜಿಚಾ ಬಾಧಕ ಅಂಗಸಂಗ । ಅತಿನಿಲಾಗ ನಿಂದ್ಯತ್ವೇ ॥೨೦೫॥ ಜೇವೀ ನೀಚಾಚಾ ಕಾಂಠಪರಾ । ಗಳಾ ಅಡಕಲ್ಯಾ ಮಾಂಜರಾ । ತೇ ರಿಘೋನಿ ಶುಚೀಚಿಯಾ ಘರಾ । ನಾನಾ ರಸಪಾತ್ರಾ ವಿಟಾಳೀ ॥೨೦೬॥ ತೇವೀ ಕಾಮಿನೀಚೀ ಸಂಗತೀ । ಗಳಾ ಪಡಲೀ ನ ನಿಘೇ ಮಾಗುತೀ । ಕಾಮಿನೀಕಾಮೇ ಕಾಮಾಸಕ್ತೀ । ನೇಣೋ ಕಿತೀ ವಿಟಂಬಿಲೇ ॥೨೦೭॥ ತೇ ಮಾಂಜರ ಜೇಥೇ ಘಾಲೀ ಮುಖ । ತೇಥ ಕಾಂಠಪರಾ ರೋಧೀ ದೇಖ । ತೇವೀ ಸ್ತ್ರೀಸಂಗೇ ಅತಿದುಃಖ । ಮಾನಿತೀ ಸುಖ ಸಕಾಮ ॥೨೦೮॥ ಮೃಗಜಳೀ ಕಮಳ ಮನೋಹರ । ತೈಸೇ ಅಂಗನಾವದನ ಸುಂದರ । ಸುಸ್ಮಿತ ಚಾರು ಸುಕುಮಾರ । ಸಕಾಮ ನರ ವಾನಿತೀ ॥೨೦೯॥ ಅಂಗನಾವದನಾಚೀ ನಿಜಸ್ಥಿತೀ । ನಿಖಳ ಶೇಂಬುಡಾಚೀ ತೇಥ ವಸ್ತೀ । ತೇ ಮುಖ ಚಂದ್ರೇಸೀ ಉಪಮಿತೀ । ಜೇವೀ ಅಮೃತ ಮ್ಹಣತೀ ವಿಖಾತೇ ॥೨೧೦॥ ವನಿತಾ ಅಧರೀ ಝುರೇ ಲಾಳ । ತೇ ಮ್ಹಣತೀ ಅಧರಾಮೃತ ಕೇವಳ । ಬಾಪ ಅವಿದ್ಯೇಚೇ ಬಳ । ಭುಲಲೇ ಸಕಳ ಸುರಾಸುರ ॥೨೧೧॥ ಸ್ತ್ರೀಪುರುಷೀ ಆತ್ಮಾ ಏಕ । ಸ್ತ್ರೀರೂಪ ತೇಥ ಅವಿದ್ಯಕ । ಮಿಥ್ಯಾ ಸ್ತ್ರೀಕಾಮೀ ಭುಲಲೇ ಲೋಕ । ಬಾಪ ಕವತಿಕ ಮಾಯೇಚೇ ॥೨೧೨॥ ಆತ್ಮಾ ಭೋಕ್ತಾ ಮ್ಹಣಾವಾ ಸ್ತ್ರೀಸಂಭೋಗೀ । ತಂವ ತೋ ನಿತ್ಯಮುಕ್ತ ಅಸಂಗೀ । ದೇಹ ಭೋಕ್ತಾ ಮ್ಹಣಾವಾ ಸ್ತ್ರೀಸಂಯೋಗೀ । ತಂವ ದೇಹಾಚೇ ಅಂಗೀ ಜಡತ್ವ ॥೨೧೩॥ ತೇಥ ವಿಷಯಭೋಗಾಸೀ ಕಾರಣ । ಮುಖ್ಯತ್ವೇ ದೇಹಾಭಿಮಾನ । ತ್ಯಾ ದೇಹಾಭಿಮಾನಾಸೀ ಜಾಣ । ಬಹುತ ಜಣ ವಿಭಾಗೀ ॥೨೧೪॥

ಸ್ತ್ರೀ ದೇಹವು ನಿತ್ಯನೂತನವಾಗಿ ಮೈಲಿಗೆಯ ಖನಿಯಾಗಿರುವುದು. ರಜಸ್ವಲೆಯ ಬಚ್ಚಲಾಗಿರುವುದು. ಯಾವ ದುರ್ಗಂಧದ ಝರಿಯಾಗಿ ಮಲಮೂತ್ರಗಳಿಂದ ತುಂಬಿದ ಚೀಲವಾಗಿರುವುದು ॥೨೦೩॥ ಯಾವ ದೋಷಗಳ ಜನ್ಮಸ್ಥಾನವಾಗಿರುವ, ವಿಕಲ್ಪಗಳ ಆಶ್ರಯಸ್ಥಾನವಾಗಿರುವ ಆಕೆಯು ಮಹಾದುಃಖದ ಪಾತ್ರೆಯಾಗಿದ್ದು ಆಕೆಯಿಂದ ಪುರುಷನ ಅಧಃಪಾತವಾಗುತ್ತಿರುವುದು ॥೨೦೪॥ ಈಕೆಯು ಅತಿಶಯವಾಗಿ ಉದ್ವೇಗವನ್ನು ಬೆಳೆಸುವವಳಾಗಿರುವಳು. ಈಕೆಯಿಂದಲೇ ಮನಸ್ಸಿಗೆ ಕ್ಷಯರೋಗವು ಬಡೆದುಕೊಳ್ಳುವುದು. ಈಕೆಯ ಅಂಗಸಂಗದಿಂದ ನಿರ್ಲಜ್ಜತನದ ಅತ್ಯಂತ ಬಾಧಕವಾಗುವುದು ॥೨೦೫॥ ನೀಚ ಮನುಷ್ಯನ ಮನೆಯಲ್ಲಿನ ಹೊಡೆದ ಮಡಕೆಯ ಕಂಠವು ಆಕಸ್ಮಾತ್ತಾಗಿ ಒಂದು ಬೆಕ್ಕಿನ ಕೊರಳಲ್ಲಿ ಸಿಕ್ಕಿಕೊಳ್ಳಲು ಅದು ಶುಚಿರ್ಭೂತ ಮನುಷ್ಯನ ಮನೆಯಲ್ಲಿ ಹೋಗಿ ಅಡುಗೆ ಮಾಡಿಟ್ಟಿರುವ ಅನೇಕ ಭಾಂಡೆಗಳನ್ನು ಮುಟ್ಟಿ ಮೈಲಿಗೆಯನ್ನು ಉಂಟು ಮಾಡುವುದು ॥೨೦೬॥ ಅದರಂತೆ ಸ್ತ್ರೀಯರ ಸಂಗತಿಯಾಗಿರುವುದು. ಈ ಸಂಗತಿಯು ಒಬ್ಬನ ಕೊರಳಲ್ಲಿ ಬಿದ್ದಿತೆಂದರೆ ತಿರುಗಿ ಹೊರಗೆ ಹೊರಡುವುದೇ ಇಲ್ಲ. ಸ್ತ್ರೀಸಂಗತಿಯ ಆಸಕ್ತಿಯಿಂದ ಇಂದಿನವರೆಗೆ ಅದೆಷ್ಟೋ ಜನರ ಫಜೀತಿಯಾಗಿದೆ ಎಂಬುವುದನ್ನು ಗಣಿತ ಮಾಡಲು ಬರುವುದಿಲ್ಲ ॥೨೦೭॥ ಈ ಯಾವ ಬೆಕ್ಕು ಯಾವುದರಲ್ಲಿ ಮುಖ ಹಾಕುವುದೋ, ಆಗ ಅದಕ್ಕೆ ಕೊರಳಲ್ಲಿ ಸಿಕ್ಕಿಕೊಂಡಿರುವ ಮಡಕೆಯ ಕಂಠವು ಅಡ್ಡಾಗುತ್ತಿರುವುದು. ಅದರಂತೆ ಸ್ತ್ರೀಸಂಗವು ಅತ್ಯಂತ ದುಃಖದಿಂದ ತುಂಬಿಕೊಂಡಿರುವುದು. ಹೀಗಿದ್ದರೂ ಕೂಡ ಕಾಮದಿಂದ ಆಸಕ್ತರಾಗಿರುವ ಜನರು ಇದರಲ್ಲಿಯೇ ಸುಖವಿದೆ ಎಂದು ತಿಳಿದುಕೊಂಡಿರುವರು ॥೨೦೮॥ ಸ್ತ್ರೀಯಳ ಮುಖಕಮಲವು ಎಷ್ಟು ಸುಂದರವಾಗಿದೆ, ಸುಸ್ಮಿತವಾಗಿದೆ, ರಮಣೀಯವಾಗಿದೆ, ಸುಕುಮಾರವಾಗಿದೆ ಎಂದು ಕಾಮದಿಂದ ಮೋಹಿತರಾಗಿರುವ ಜನರು ಅನೇಕ ರೀತಿಯಿಂದ ವರ್ಣನೆಯನ್ನು ಮಾಡುತ್ತಿರುವರು. ಇದು ಮೃಗಜಲದಲ್ಲಿನ ಕಮಲವು ಮೋಹಕವಾಗಿದೆ ಎಂದು ಹೇಳಿದಂತಾಗುವುದು ॥೨೦೯॥ ಆದರೆ ಸ್ತ್ರೀ ಮುಖದ ನಿಜ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿ ಸಿಂಬಳವು ತುಂಬಿಕೊಂಡಿರುವುದು. ಹೀಗಿದ್ದ ಮೇಲೆ ವಿಷಕ್ಕೆ ಅಮೃತ ಎಂದಂತೆ ಆ ಮುಖಕ್ಕೆ ಚಂದ್ರನ ಉಪಮೆಯನ್ನು ಕೊಡುತ್ತಿರುವರು ॥೨೧೦॥ ಸ್ತ್ರೀಯರ ತುಟಿಗಳಲ್ಲಿ ಜೊಲ್ಲು ಸೋರುತ್ತಿರುವುದು. ಅದಕ್ಕೆ ಅಧರಾಮೃತವೆಂದು ಹೇಳುವರು. ಅವಿದ್ಯೆಯ ಪ್ರಭಾವವು ಅತಿಶಯವಾಗಿ ವಿಲಕ್ಷಣವಾಗಿರುವುದು. ಅಬ್ಬಬ್ಬಾ! ಇಂತಹ ಸ್ತ್ರೀಯಳಿಗೆ ಸರ್ವ ದೇವದಾನವರೂ ಕೂಡ ಮೋಹಕ್ಕೆ ಒಳಗಾಗುವರು ॥೨೧೧॥ ಸ್ತ್ರೀ ಮತ್ತು ಪುರುಷ ಇವರಲ್ಲಿ ಆತ್ಮವು ಒಂದೇಯಾಗಿರುವುದು. ಆದರೆ ಸ್ತ್ರೀಯಳ ರೂಪವು ಅವಿದ್ಯಾತ್ಮಕವಾಗಿರುವುದು. ಸ್ತ್ರೀಕಾಮಾಸಕ್ತ ಜನರು ಅದಕ್ಕೆ ವ್ಯರ್ಥವಾಗಿ ಭುಲಾಯಿಸುವರು. ಅಬ್ಬಾ! ಈ ಮಾಯೆಯ ಆಟವು ಎಂತಹ ಮೋಹಮಯವಾಗಿರುವುದು ನೋಡಿರಿ ॥೨೧೨॥ ಸ್ತ್ರೀ ಸಂಗದ ಭೋಕ್ತಾ ಆತ್ಮನು ಎಂದು ಹೇಳಬೇಕೆಂದರೆ ಆತ್ಮವು ನಿತ್ಯಮುಕ್ತ ಅಸಂಗವಾಗಿರುವುದು. ದೇಹಕ್ಕೆ ಭೋಕ್ತಾ ಎಂದು ಹೇಳಬೇಕೆಂದರೆ ದೇಹದ ಅಂಗಕ್ಕೆ ಜಡತ್ವವು ಇರುವುದು ॥೨೧೩॥ ಈ ಕಾರಣವಾಗಿ ದೇಹಾಭಿಮಾನವು ಈ ಯಾವ ವಿಷಯಭೋಗಗಳ ಮುಖ್ಯ ಕಾರಣವಾಗಿರುವುದು. ಈ ದೇಹಾಭಿಮಾನಕ್ಕೆ ಅನೇಕರು ಪಾಲುಗಾರರಾಗಿರುವರು ॥೨೧೪॥

ಪಿತ್ರೋಃ ಕಿಂ ಸ್ವಂ ನು ಭಾರ್ಯಾಯಾಃ ಸ್ವಾಮಿನೋಽಗ್ನೇಃ ಶ್ವಗೃಧ್ರಯೋಃ ।
ಕಿಮಾತ್ಮನಃ ಕಿಂ ಸುಹೃದಾಮಿತಿ ಯೋ ನಾವಸೀಯತೇ ।೧೯॥

ಅರ್ಥ:- ಈ ಶರೀರವು ತಂದೆ ತಾಯಿಗಳ ಸರ್ವಸ್ವವೋ, ಪತ್ನಿ ಸಂಪತ್ತಾಗಿದೆಯೋ, ಅಧೀನತ್ವದಿಂದ ಇದು ಸ್ವಾಮಿಯ ಧನವೋ, ಆಪ್ತೇಷ್ಟರಿಂದ ಆಹುತಿಯಾಗುವ ಇದು ಅಗ್ನಿಯದಾಗಿದೆಯೇ, ಅಥವಾ ಭಕ್ಷತ್ವದಿಂದ ಇದು ನಾಯಿ ನರಿ ಪ್ರಾಣಿಗಳ ಭಕ್ಷ್ಯವೋ, ಇದಕ್ಕೆ ನನ್ನದೆನ್ನಬೇಕೆ? ಅಥವಾ ಶುದ್ಧಸಂಬಂಧಿತರ ಎನ್ನಬೇಕೆ? ಹೀಗೆ ಬೇಕಾದಷ್ಟು ವಿಚಾರವನ್ನು ಮಾಡಿದರೂ ಕೂಡ ಈ ಶರೀರವು ಯಾರದು ಎಂದು ನಿಶ್ಚಯವಾಗುವುದೇ ಇಲ್ಲ.

ಗರ್ಭಧಾರಣ ಪೋಷಣ । ಸ್ವಯೇ ಶ್ರಮೋನಿಯಾ ಆಪಣ । ಮಾತಾ ಕರೀ ಪರಿಪಾಲನ । ತೋ ಹಾ ದೇಹ ಜಾಣ ''ಮಾತೇಚಾ'' ।೨೧೫॥ ಏಕಲೇಪಣೇ ಮಾತಾ । ಸ್ವಪ್ನೀ ನ ದೇಖೇ ಪುತ್ರಕಥಾ । ಜೋ ನಿಜವೀರ್ಯನಿಕ್ಷೇಪಿತಾ । ತೋ ಹಾ ದೇಹೋ ತತ್ತ್ವತಾ ''ಪಿತ್ಯಾಚಾ'' ।೨೧೬॥ ಜೇ ಅಗ್ನಿ ಬ್ರಾಹ್ಮಣ ಸಾಕ್ಷೀ ಕರೂನೀ । ಭಾರ್ಯಾ ಆಣಿಲೀ ಭಾಕ ದೇವೋನಿ । ಜೇ ಜೀವಿತ್ವ ಸಮರ್ಪೋನೀ । ಸೇವೇಲಾಗೋನೀ ವಿನಟಲೀ ।೨೧೭॥ ಜೇಸೀ ಯಾಚೇನಿ ಸುಖಶೃಂಗಾರ । ಜೇಸೀ ಯಾಚೇನಿ ಐಹಿಕ ಪರ । ಐಸಾ ಸೂಕ್ಷ್ಮ ಕರಿತಾ ವಿಚಾರ । ದೇಹೋ ಸಾಚಾರ ''ಸ್ತ್ರೀಯೇಚಾ'' ।೨೧೮॥ ಯಾ ದೇಹಾಚೀ ಆವಶ್ಯಕೇ । ''ಸುಹೃದ ಬಂಧೂ'' ಜೇ ಕಾ ಸಖೇ । ದೇಹಾಚೇನಿ ಸುಖಾವಲೇ ಸುಖೇ । ದೇಹ ಏಕೇ ಪಾಖೇ ತ್ಯಾಂಚಾಹೀ ।೨೧೯॥ ಸ್ವಯೇ ಘೇಊನಿಯಾ ವೇತನ । ದೇಹೋ ವಿಕಿಲಾ ಆಪಣ । ಆಜ್ಞೇವೀಣ ನ ವಚೇ ಕ್ಷಣ । ದೇಹೋ ಜಾಣ ''ಸ್ವಾಮೀಚಾ'' ।೨೨೦॥ ''ಶ್ವಾನಸೃಗಾಲಗಿಧಾಂಚೇ'' ಖಾಜೇ । ತರೀ ಹಾ ದೇಹೋ ತ್ಯಾಂಚಾ ಮ್ಹಣಿಜೇ । ಜೇ ವಾಸ್ತವ ದೇಹೀ ಕರ್ಮ ನಿಫಜೇ । ಯಾಲಾಗೀ ದೇಹ ಬೋಲಿಜೇ ''ಜೀವಾಚಾ'' ।೨೨೧॥ ಪಿತಾ-ಮಾತಾ-ಸ್ತ್ರೀ-ಪುತ್ರ-ಸ್ವಜನ । ದೇಹಾಚೇ ಅವಶ್ಯ ಕರಿತೀ ದಹನ । ಯಾಲಾಗೀ ದೇಹ ''ಅಗ್ನೀಚಾ'' ಪೂರ್ಣ । ವಿಚಕ್ಷಣ ಬೋಲತೀ ।೨೨೨॥ ಯಾಪರೀ ದೇಹಾಚೇ ಜಾಣ । ವಿಭಾಗೀ ಅಸತೀ ಆಠ ಜಾಣ । ತೇಥ ''ಮೀ ಭೋಕ್ತಾ'' ಹಾ ಅಭಿಮಾನ । ತೋ ಕೇವಳ ಜಾಣ ಮೂರ್ಖತ್ವೇ ।೨೨೩॥ ಏಥ ಏಕ ''ಮೀ'' ವಿಶಿಷ್ಟ ಭೋಕ್ತಾ । ''ಮಾಝಾ'' ದೇಹ ಐಶೀ ಮಮತಾ । ಹೇಚಿ ಜಾಣ ತತ್ತ್ವತಾ । ಅಧಃಪಾತಾ ನೇತಾತೀ ।೨೨೪॥

ತಸ್ಮಿನ್ಕಲೇವರೇಽಮೇಧ್ಯೇ ತುಚ್ಛನಿಷ್ಠೇ ವಿಷಜ್ಜತೇ । ಅಹೋ ಸುಭದ್ರಂ ಸುನಸಂ ಸುಸ್ಮಿತಂ ಚ ಮುಖಂ ಸ್ತ್ರಿಯಃ ।೨೦॥

ಅರ್ಥ:- ಈ ಶರೀರವು ಮಲಮೂತ್ರದಿಂದ ತುಂಬಿದ ಅತಿಶಯ ಅಪವಿತ್ರವಾಗಿರುವುದು. ಶರೀರದಲ್ಲಿ ಒಳಗಿರುವುದನ್ನು ಪಕ್ಷಿಗಳು ತಿಂದು ಮಲವನ್ನಾಗಿ ಮಾಡುವುವು. ಈ ದೇಹವು ಕೊಳೆತು ಹೋದರೆ ಅದರಲ್ಲಿ ತುಂಬಾ ಕ್ರಿಮಿಗಳಾಗುವುವು. ಈ ಶರೀರವನ್ನು ಸುಟ್ಟರೆ ಅದು ಬೂದಿಯಾಗುವುದು. ಇಂತಹ ಶರೀರಕ್ಕೆ ಜನರು ಆಸಕ್ತರಾಗಿ ಯಾವ ಸ್ತ್ರೀಶರೀರದ ಮುಖಕಮಲವು ಸುಂದರವಾಗಿದೆ, ಮೂಗು ಸರಳವಾಗಿದೆ ಮತ್ತು ಆಕೆಯ ಹಾಸ್ಯವದನವು ಎಷ್ಟು ಆಕರ್ಷಕವಾಗಿದೆ ಎಂದು ಪುರುಷರು ಆಸಕ್ತರಾಗುವರು.

ತಾಯಿಯಾಗಿರುವ ಈಕೆಯು ಗರ್ಭಧಾರಣೆಯಿಂದ ಮೊದಲು ಮಾಡಿ ಅನೇಕ ಕಷ್ಟಗಳನ್ನು ಸೋಸುತ್ತ ಬಾಲಕನ ಪಾಲನೆ ಪೋಷಣೆ ಮಾಡುತ್ತಿರುವಳು. ಅಂದಮೇಲೆ ಈ ದೇಹವು ತಾಯಿಯದಾಗಿರುವುದು ।೨೧೫॥ ಆದರೆ ಆ ತಾಯಿಯು ಒಬ್ಬಳೇ ಇದ್ದರೆ ಆಕೆಗೆ ಪುತ್ರಕಥೆಯು ಸ್ವಪ್ನದಲ್ಲಿಯೂ ಕೂಡ ಕಾಣಲಾರದು. ತಂದೆಯ ವೀರ್ಯದಿಂದ ದೇಹದ ಉತ್ಪತ್ತಿಯಾಗಿರುವುದು. ಆದ್ದರಿಂದ ಈ ದೇಹವು ತಂದೆಯದಾಗಿರುವುದು ।೨೧೬॥ ಆದರೆ ಅಗ್ನಿ ಬ್ರಾಹ್ಮಣನಿಗೆ ಸಾಕ್ಷಿ ಇಟ್ಟು ''ಧರ್ಮೇಚ ಅರ್ಥೇಚ ಕಾಮೇಚ ನಾತಿ ಚರಾಮಿ'' ಹೀಗೆ ಶಪಥವನ್ನು ಮಾಡಿ ಆಕೆಯ ಪಾಣಿಗ್ರಹಣವನ್ನು ಮಾಡಲಾಗುವುದು. ಆಕೆಯು ತನ್ನ ಸರ್ವಸ್ವವನ್ನು ಅರ್ಪಣೆಯನ್ನು ಮಾಡಿ ಪತಿಯ ಸೇವೆಯಲ್ಲಿ ಸ್ವತಃ ನಿರತಳಾಗುವಳು ।೨೧೭॥ ಆಕೆಗೆ ಈ ಕಾರಣವಾಗಿ ನಿಜವಾದ ಸೌಖ್ಯವು ಮತ್ತು ಇಹಲೋಕ, ಪರಲೋಕ ಪ್ರಾಪ್ತಿಯಾಗುವುದು. ಈ ದೇಹವು ಈ ಯಾವ ಧರ್ಮಪತ್ನಿಯದಾಗಿರುವುದೆಂದು ವಿಚಾರ ಮಾಡಿ ಸೂಕ್ಷ್ಮವಾಗಿ ನೋಡಿದರೆ ಹೀಗೆ ತಿಳಿದು ಬರುವುದು ।೨೧೮॥ ಸುಹೃದರು, ಬಂಧುಗಳು, ಮಿತ್ರರು ಇವರೆಲ್ಲರೂ ಈ ದೇಹದಿಂದ ಸುಖಿಯಾಗುತ್ತಿರುವರು. ಅಂದಮೇಲೆ ಈ ಕಾರಣವಾಗಿ ಈ ದೇಹವು ಅವರದಾಗಿರುವುದು ।೨೧೯॥ ಸ್ವತಃ ಪಗಾರವನ್ನು ಪಡೆದುಕೊಂಡು ನಾವು ಈ ದೇಹವನ್ನು ಅವರಲ್ಲಿ ಮಾರಿಕೊಂಡಿರುವೆವು. ಅವರ ಆಜ್ಞೆ ಇಲ್ಲದೇ ಒಂದು ಕ್ಷಣವೂ ಕೂಡ ಅತ್ತಿತ್ತ ಹೋಗಲು ಸಾಧ್ಯವಾಗುವುದಿಲ್ಲ. ಅಂದಮೇಲೆ ಈ ದೇಹವು ಸ್ವಾಮಿಯ ಅಂದರೆ ಧನಿಯದಾಗಿರುವುದು ।೨೨೦॥ ಇದಲ್ಲದೇ ಈ ದೇಹವು ನಾಯಿ ನರಿ ಇತ್ಯಾದಿಗಳ ಭಕ್ಷ್ಯವಾಗಿರುವುದು. ಆದ್ದರಿಂದ ಅವರದೂ ಕೂಡ ಈ ದೇಹದ ಮೇಲೆ ಹಕ್ಕು ಇರುವುದು. ಜೀವದಿಂದಲೇ ಈ ದೇಹದ ಸರ್ವ ಕರ್ಮಗಳು ನಡೆಯುತ್ತಿರುವುವು. ಆದ್ದರಿಂದ ಈ ದೇಹವು ಜೀವದ್ದಾಗಿರುವುದು ।೨೨೧॥ ಕೊನೆಯಲ್ಲಿ ಮಾತಾ-ಪಿತರು, ಸ್ತ್ರೀ-ಪುರುಷ ಆತ್ಮ ಮಿತ್ರರು ಇವರೆಲ್ಲರೂ ಕೂಡಿ ಈ ದೇಹದ ದಹನವನ್ನು ಮಾಡುವರು. ಆದ್ದರಿಂದ ಈ ದೇಹವು ಅಗ್ನಿಯದಾಗಿರುವುದು. ಹೀಗೆ ವಿಚಕ್ಷಣ ಜನರು ಹೇಳುವರು ।೨೨೨॥ ಈ ಪ್ರಕಾರವಾಗಿ ಈ ದೇಹದ ಎಂಟು ಮಂಡಳಿಯವರು ಭಾಗೀದಾರರಾಗಿರುವರು. ಅಂದ ಮೇಲೆ ''ನಾನು ಭೋಕ್ತನು'' ಎಂಬ ಅಭಿಮಾನವನ್ನು ಇಡುವಿಕೆಯು ಇದು ಕೇವಲ ಮೂರ್ಖತನವೇ ಆಗಿರುವುದು ।೨೨೩॥ ಇಲ್ಲಿ ನಾನೊಬ್ಬನು ವಿಶಿಷ್ಟವಾದ ಭೋಕ್ತಾನಾಗಿರುವೆ ಎಂದು ತಿಳಿದುಕೊಳ್ಳುವುದು ಅಥವಾ ಈ ದೇಹವು ನನ್ನದು ಎಂದು ಮಮತೆಯನ್ನು ಧರಿಸುವುದು ಹೀಗೆ ಈ ಎರಡು ಅಭಿಮಾನಗಳು ನಮ್ಮನ್ನು ಅಧೋಗತಿಗೆ ತಳ್ಳುತ್ತಿರುವುವು ।೨೨೪॥

ದೇಹೋ ತಿತುಕಾ ಅಶುಚಿಕರ । ತ್ಯಾಂತ ಸ್ತ್ರೀದೇಹ ಅತಿಅಪವಿತ್ರ । ಕೇವಳ ವಿಟಾಳಾಚೇ ಪಾತ್ರ । ನಿರಂತರ ದ್ರವರೂಪೇ ।೨೨೫॥ ಸ್ವಯೇ ಭೋಕ್ತಾ ಅತಿಕುಚ್ಛಿತ । ಐಸೇ ಅವಿವೇಕೀ ಕಾಮಾಸಕ್ತ । ಕಾಮಿನೀಕಾಮೀ ಲೋಲಂಗತ । ತೇ ಮೂರ್ಖ ವಾನೀತ ಸ್ತ್ರೀಯಾಂತೇ ।೨೨೬॥ ಅಹೋ ಹೇ ಸುಂದರ ಸುರೇಖ । ಚಂದ್ರವದನಾ ಅತಿಸುಮುಖ । ಸರಳ ಶೋಭೇ ನಾಸಿಕ । ಸುಭಗ ದೇಖ ಸಕುಮಾರ ।೨೨೭॥ ಐಶಿಯೇ ಸುಂದರ ಸ್ತ್ರೀಯೇತೇ । ಪಾವಲೋ ಆಮ್ಹೀ ಸಭಾಗ್ಯ ಯೇಥೇ । ಐಶೀ ಕಾಮಾಸಕ್ತ ಚಿತ್ತೇ । ಭುಲಲೀ ಭ್ರಾಂತೇ ಪ್ರಮದಾಂಸೀ ।೨೨೮॥ ಸ್ತ್ರೀದೇಹಾಚೇ ವಿವಂಚನೇ । ವಿವಂಚಿತಾ ಓಕಾರಾ ಯೇ ಮನೇ । ಜಳೋ ಸ್ತ್ರೀಯೇಚೇ ನಿಂದ ಜಿಣೇ । ಮೂರ್ಖೀ ರಮಣೇ ತೇ ಠಾಯೀ ।೨೨೯॥

ತ್ವಙ್ಮಾಂಸರುಧಿರಸ್ನಾಯುಮೇದೋಮಜ್ಜಾಸ್ಥಿಸಂಹತೌ । ವಿಣ್ಮೂತ್ರಪೂಯೇ ರಮತಾಂ ಕೃಮೀಣಾಂ ಕಿಯದಂತರಮ್ ।೨೧॥

ಅರ್ಥ:- ಚರ್ಮ, ಮಾಂಸ, ರಕ್ತ, ಮಾಂಸಖಂಡ, ಕೊಬ್ಬು, ಮಜ್ಜೆ,ಮೂಳೆ, ಮಲ, ಮೂತ್ರ ಮತ್ತು ಕೀವಿನಿಂದ ತುಂಬಿರುವ ಇಂತಹ ದೇಹಕ್ಕೆ ಮನುಷ್ಯನು ರಮಮಾಣನಾಗುತ್ತಾನೆಂದರೆ ಆತನಿಗೂ ಮಲಮೂತ್ರದಲ್ಲಿನ ಕ್ರಿಮಿಗಳಿಗೂ ಯಾವ ವ್ಯತ್ಯಾಸವಿದೆ?

ಸ್ತ್ರೀ ದೇಹಾಚಾ ಉಭಾರಾ । ಕೇವಳ ಅಸ್ಥೀಂಚಾ ಪಾಂಜರಾ । ತ್ಯಾಚೇ ಆವರಣ ತೇ ಸ್ನಾಯು ಶಿರಾ । ಬಾಂಧೋನಿ ಖರಾ ದೃಢ ಕೇಲಾ ।೨೩೦॥ ತೇಥ ರುಧಿರಮಾಂಸಾಚೇ ಕಾಲವಣ । ಕರೂನಿ ಪಾಂಜರಾ ಲಿಂಪಿಲಾ ಪೂರ್ಣ । ಅಸ್ಥೀವರೀಲ ಜೇ ವೇಷ್ಟಣ । ''ಮಜ್ಜಾ'' ಮ್ಹಣತೀ ತ್ಯಾ ನಾಂವ ।೨೩೧॥ ಅಸ್ಥಿ ಮಾಜೀಲ ರಸಬದ್ಧ । ತ್ಯಾ ನಾಂವ ಬೋಲಿಜೇ ''ಮೇದ'' । ವರೀ ಚರ್ಮ ಮಢಿಲೇ ಸುಬದ್ಧ । ''ತ್ವಚಾ'' ಶುದ್ಧ ತೀ ನಾಂವ ।೨೩೨॥ ತ್ಯಾ ದೇಹಾಮಾಜೀ ಸಾಂಠವಣ। ವಿಷ್ಠಾ ಮೂತ್ರ ಪರಿಪೂರ್ಣ । ತೇ ಸ್ತ್ರೀದೇಹೀ ಜ್ಯಾಚೇ ರಮಣ । ತೇ ''ಕೃಮಿ'' ಜಾಣ ನರರೂಪೇ ।೨೩೩॥ ವಿಷ್ಠೇ ಮಾಜೀ ಕೃಮಿ ಚರತೀ । ತೈಶೀ ಸ್ತ್ರೀದೇಹೀ ಜ್ಯಾ ಆಸಕ್ತೀ । ತೇಹೀ ಕೃಮಿಪ್ರಾಯ ನಿಶ್ಚಿತೀ । ಸಂದೇಹ ಯೇ ಅರ್ಥೀ ಅಸೇನಾ ।೨೩೪॥ ವನಿತಾದೇಹ ಯಾಪರೀ ಏಥ । ವಿಚಾರಿತಾ ಅತಿಕುಚ್ಛಿತ । ತೋ ವಸ್ತ್ರಾಲಂಕಾರೀ ಶೋಭಿತ । ಕರೂನಿ ಆಸಕ್ತ ನರ ಹೋತೀ ।೨೩೫॥ ಘಂಟಾಪಾರಧೀ ಪಾಶ ಪಸರೀ । ತ್ಯಾವರೀ ತೋ ಮೃಗಾಂತೇ ಧರೀ । ಪುರುಷ ಸ್ತ್ರಿಯೇತೇ ಶೃಂಗಾರೀ । ತ್ಯಾ ಪಾಶಾಭೀತರೀ ಸ್ವಯೇ ಅಡಕೇ ।೨೩೬॥

ಇರುವ ಸರ್ವ ಶರೀರಗಳೂ ಅಪವಿತ್ರವಾಗಿರುವುವು. ಅದರಲ್ಲಿಯೂ ಕೂಡ ಸ್ತ್ರೀ ದೇಹವು ಮಾತ್ರ ಅತ್ಯಂತ ಅಮಂಗಲಕಾರಕವಾಗಿರುವುದು. ನಿರಂತರವಾಗಿ ಮುಟ್ಟು ದ್ರವಿಸುತ್ತಿರುವ ಇದೊಂದು ಪಾತ್ರೆಯಾಗಿರುವುದು ।೨೨೫॥ ಹೀಗಿರುವ ಸ್ತ್ರೀಯಳ ಭೋಕ್ತಾನು ಅತ್ಯಂತ ಪಾತಕಿಯಾಗಿರುವನು. ಹೀಗೆ ಕಾಮದಿಂದ ಆಸಕ್ತರಾಗಿರುವ ಜನರು ಅವಿಚಾರಿಯಾಗಿರುವರು. ಈ ಜನರು ಸ್ತ್ರೀಲಂಪಟರಾಗಿ ಸ್ತ್ರೀಯರನ್ನು ವರ್ಣಿಸುತ್ತಿರುವರು ।೨೨೬॥ ಸ್ತ್ರೀಯಳ ಮುಖ ಕಮಲವು ಎಷ್ಟೊಂದು ಮನಮೋಹಕವಾಗಿದೆ, ಎಂತಹ ಸುಂದರವಾಗಿದೆ, ಈಕೆಯು ಚಂದ್ರಸಮಾನಳಾಗಿ ಕಾಣುತ್ತಿರುವಳು. ಮೂಗು ಸರಳವಾಗಿ ಶೋಭಿಸುತ್ತಿದೆ, ಸೂಕ್ಷ್ಮವಾದ ಸುಕುಮಾರದಿಂದ ಮೈಕಟ್ಟು ಕೂಡಿದೆ ।೨೨೭॥ ಇಂತಹ ಸುಂದರ ಸ್ತ್ರೀಯಳ ಪ್ರಾಪ್ತಿಯು ನನಗಾಗಿರುವುದರಿಂದ ನಾನೆಂತಹ ಭಾಗ್ಯಶಾಲಿಯಾಗಿರುವೆ, ಹೀಗೆ ಕಾಮದ ಆಸಕ್ತಿಯಿಂದ ಭ್ರಾಂತರಾಗಿರುವ ಜನರು ಸ್ತ್ರೀಯರಲ್ಲಿ ಲುಬ್ಧರಾಗಿರುವರು ।೨೨೮॥ ಆದರೆ ಸ್ತ್ರೀ-ದೇಹದತ್ತ ಸೂಕ್ಷ್ಮವಾದ ಪರಿಶೀಲನೆ ಮಾಡುತ್ತ ವಿಚಾರ ಮಾಡಿ ನೋಡಿದರೆ ಆಗ ಮನಸ್ಸಿಗೆ ಹೇಸಿಕೆಯುಂಟಾಗುವುದು. ಸ್ತ್ರೀಯಳ ನಿಂದಾತ್ಮಕ ಜೀವನಕ್ಕೆ ಬೆಂಕಿ ಹತ್ತಲಿ, ಅವರಲ್ಲಿ ಕೇವಲ ಮೂರ್ಖರೇ, ರಮಮಾಣರಾಗುತ್ತಿರುವರು ।೨೨೯॥

ಸ್ತ್ರೀ ದೇಹದ ರಚನೆಯನ್ನು ನೋಡಲು ಅದೊಂದು ಅಸ್ಥಿಪಂಜರವಾಗಿರುವುದು. ಅದರಲ್ಲಿ ಸ್ನಾಯು, ನಾಡಿಗಳಿಂದ ಬಿಗಿಯಾಗಿ ಬಿಗಿದು ಅದನ್ನು ಗಟ್ಟಿಯನ್ನಾಗಿ ಮಾಡಿರುವುದು ।೨೩೦॥ ರಕ್ತ ಮಾಂಸಗಳನ್ನು ಕೂಡಿಸಿ ಅದನ್ನು ಆ ಯಾವ ಅಸ್ಥಿಪಂಜರಕ್ಕೆ ಲೇಪಿಸಿರುವುದು. ಮೂಳೆಯ ಮೇಲಿನ ಹೊದಿಕೆಗೆ ಮಜ್ಜಾ ಎಂದು ಹೇಳುವರು ।೨೩೧॥ ಮೂಳೆಯ ಒಳಭಾಗದಲ್ಲಿರುವ ರಸಕ್ಕೆ ''ಮೇದಸ್ಸು'' ಎಂದು ಕರೆಯುವರು. ಇವುಗಳ ಮೇಲೆ ತೆಳುವಾಗಿರುವ ಹೊದಿಕೆಗೆ ಚರ್ಮವೆಂದು ಅದಕ್ಕೆ ನಾಮವಿರುವುದು ।೨೩೨॥ ಈ ದೇಹದಲ್ಲಿ ಮಲಮೂತ್ರಗಳ ಸಂಗ್ರಹ ಮಾಡಿರುವುದು. ಹೀಗಿರುವ ಇಂತಹ ಸ್ತ್ರೀ ದೇಹದಲ್ಲಿ ಯಾವ ಮನುಷ್ಯರು ರಮಮಾಣರಾಗುವರೋ, ಅವರು ಮನುಷ್ಯರೂಪ ಕ್ರಿಮಿಗಳೇ ಆಗಿರುವರು ।೨೩೩॥ ಕ್ರಿಮಿಗಳು ಯಾವ ಪ್ರಕಾರವಾಗಿ ಮಲದಲ್ಲಿ ಉರುಳಾಡುತ್ತಿರುವುವೋ ಅದರಂತೆಯೇ ಸ್ತ್ರೀದೇಹದಲ್ಲಿ ಆಸಕ್ತಿ ಇರುವವರು ಅವರೂ ಕೂಡ ಕ್ರಿಮಿರೂಪರೇ ಆಗಿರುವರು. ಈ ವಿಷಯದಲ್ಲಿ ಯಾವ ಸಂದೇಹವೂ ಇರುವುದಿಲ್ಲ ।೨೩೪॥ ಈ ಪ್ರಕಾರವಾಗಿ ವಿಚಾರ ಮಾಡಿ ನೋಡಲು ಆಗ ಸ್ತ್ರೀದೇಹವು ಅತಿಶಯವಾಗಿ ಅಮಂಗಲಕಾರಕವಾಗಿರುವುದು ಎಂದು ತಿಳಿಯುವುದು. ಪುರುಷನು ಸ್ತ್ರೀಯಳನ್ನು ವಸ್ತ್ರ-ಅಲಂಕಾರಗಳಿಂದ ಸುಶೋಭಿತಳನ್ನಾಗಿ ಮಾಡಿ ಆಕೆಯಲ್ಲಿ ಆಸಕ್ತನಾಗುವನು ।೨೩೫॥ ಬೇಡನು ಘಂಟಾನಾದವನ್ನು ಮಾಡಿ ಬಲೆಯನ್ನು ಬೀಸುವನು. ತದನಂತರ ಆ ನಾದಕ್ಕೆ ಭುಲಾಯಿಸಿದ ಚಿಗುರೆಗಳನ್ನು ಹಿಡಿಯುವನು. ಆದರೆ ಪುರುಷನು ತಾನೇ ಭೂಷಣಗಳಿಂದ ಸ್ತ್ರೀಯಳನ್ನು ಸುಂದರಗೊಳಿಸಿ ಆಕೆಯ ಪಾಶದಲ್ಲಿ ತಾನು ಸ್ವತಃ ಸಿಕ್ಕಿಕೊಳ್ಳುವನು ।೨೩೬॥

ಯಾಲಾಗೀ ಸ್ತ್ರೀಯಾಚೀ ಸಂಗತಿ । ಕದಾ ನ ಕರಾವೀ ವಿರಕ್ತೀ । ಗೃಹಸ್ಥಿ ಸಾಂಡಾವೀ ಆಸಕ್ತೀ । ಯೇಚಿ ಅರ್ಥೀ ನೃಪ ಬೋಲೇ ।೨೩೭॥

ಅಥಾಪಿ ನೋಪಸಜ್ಜೇತ ಸ್ತ್ರೀಷು ಸ್ತ್ರೈಣೇಷು ಚಾರ್ಥವಿತ್ । ವಿಷಯೇಂದ್ರಿಯ ಸಂಯೋಗಾನ್ಮನಃ ಕ್ಷುಭ್ಯತಿ ನಾನ್ಯಥಾ ।೨೨॥

ಅರ್ಥ:- ಈ ಕಾರಣವಾಗಿ ತನ್ನ ಹಿತವನ್ನು ಬಯಸುವವರು ಸ್ತ್ರೀ ಮತ್ತು ಸ್ತ್ರೀಲಂಪಟ ಪುರುಷನ ಸಂಗತಿಯನ್ನು ಮಾಡಕೂಡದು. ವಿಷಯ ಮತ್ತು ಇಂದ್ರಿಯಗಳ ಸಂಯೋಗದಿಂದ ಮನದಲ್ಲಿ ವಿಕಾರವು ನಿರ್ಮಾಣವಾಗುವುದು. ಇವುಗಳ ಹೊರತಾಗಿ ಆಗುವುದಿಲ್ಲ.

ಸ್ತ್ರೀದೇಹ ಶೋಭನೀಯ ಅಸತಾ । ತರೀ ವಸ್ತ್ರಾಲಂಕಾರೇವೀಣ ಶೋಭತಾ । ತೋ ಅತಿನಿಂದ್ಯ ಕುತ್ಸಿತತಾ । ಉಘಡಾ ಸರ್ವಥಾ ಶೋಭೇನಾ ।೨೩೮॥ ಯಾಲಾಗೀ ವಸ್ತ್ರಾಭರಣೀ । ದೇಹ ಗುಂಡಿತೀ ಕಾಮಿನೀ । ಜೇವೀ ಮೈಂದ ಬ್ರಾಹ್ಮಣಪಣೀ । ವಿಶ್ವಾಸೂನಿ ಘಾತ ಕೀಜೇ ।೨೩೯॥ ತೈಶೀ ಸ್ತ್ರೀಯಾಂಚೀ ಸಂಗತೀ । ಸೇವಾಲಾವೀ ನಾನಾಯುಕ್ತೀ । ಶೇಖೀ ಸಂಗೇ ಪಾಡೀ ಅಧಃಪಾತೀ । ತೇಥ ವಿರಕ್ತೀ ನ ವಚಾವೇ ।೨೪೦॥ ಜರೀ ಸ್ತ್ರೀಯೇಚೀ ವಿರಕ್ತಸ್ಥಿತೀ । ತರೀ ಸಾಧಕೀ ನ ಕರಾವೀ ಸಂಗತೀ । ಅಗ್ನಿಸಂಗೇ ಘೃತೇ ದ್ರವತೀ । ತೇವೀ ವಿಕಾರೇ ವೃತ್ತಿ ಸ್ತ್ರೀಸಂಗೇ ।೨೪೧॥ ಅಮೃತ ಮ್ಹಣೋನಿ ಖಾತಾ ವಿಖ । ಅವಶ್ಯ ಮರಣ ಆಣೀ ದೇಖ । ಸ್ತ್ರೀ ಮಾನೂನಿ ಸಾತ್ತ್ವಿಕ । ಸೇವಿತಾ ದುಃಖ ಭೋಗವೀ ।೨೪೨॥ ಅಗ್ನೀಮಾಜೀ ಘೃತಾಚೀ ವಸ್ತೀ । ಜರೀ ಬಹುಕಾಳ ನಿರ್ವಾಹತೀ । ತರೀ ಸ್ತ್ರೀಸಂಗೇ ಪರಮಾರ್ಥೀ । ನಿಜಾತ್ಮಸ್ಥಿತೀ ಪಾವತೇ ।೨೪೩॥ ಘೃತ ವೇಚಲ್ಯಾ ವರ್ಷೇ ಝಾಲೀ ಸಾಠೀ । ತರೀ ಅಗ್ನಿಸಂಗೇ ದ್ರವ ಉಪಜೇ ಘಟೀ । ತೇವೀ ಪ್ರಮದಾಸಂಗಪರಿಪಾಠೀ । ವಾರ್ಧಕೀಂಹೀ ಉಠೀ ಅತಿಕಾಮು ।೨೪೪॥ ಜರೀ ಕಾಪೂರ ಅಗ್ನೀ ಆಂತ । ನಾಂದೋ ಲಾಹತಾ ನ ಪೋಳತ । ತರೀಚ ಸ್ತ್ರೀಸಂಗೇ ಪರಮಾರ್ಥ । ಪಾವತೇ ಸಮಸ್ತ ಪರಬ್ರಹ್ಮ ।೨೪೫॥ ಅಗ್ನೀ ಪೋಳೀ ಧರಿತಾ ಹಾತೀ । ತೈಸೀ ಸ್ತ್ರೀಯಾಂಚೀ ಸಂಗತೀ । ಸಂಗೇ ವಾಢವೀ ಆಸಕ್ತೀ । ಪಾಡೀ ಅನರ್ಥೀ ಪುರುಷಾಂತೇ ।೨೪೬॥ ಸ್ತ್ರಿಯೇಪರೀಸಹೀ ಸ್ತ್ರೈಣ । ಸಂಗತೀ ಮೀನಲಿಯಾ ಜಾಣ। ಕೋಟಿ ಅನರ್ಥಾಚೇ ಭಾಜನ । ಅಧಃಪತನ ತತ್ಸಂಗೇ ।೨೪೭॥ ಸ್ತ್ರೈಣೇಸೀ ಝಾಲ್ಯಾ ಭೇಟೀ। ಬ್ರಹ್ಮಾನಂದ ಸ್ತ್ರೀಸುಖಾಚ್ಯಾ ಪೋಟೀ । ಐಶಾ ವಿರಕ್ತಾ ಪ್ರಬೋಧೀ ಗೋಠೀ । ಕರೀ ಉಠಾಉಠೀ ಸ್ತ್ರೀಕಾಮು ।೨೪೮॥

ಈ ಕಾರಣವಾಗಿ ವಿರಕ್ತ ಪುರುಷನು ಸ್ತ್ರೀಯರ ಸಂಗತಿಯನ್ನು ಎಂದಿಗೂ ಮಾಡಕೂಡದು. ಗೃಹಸ್ಥಾಶ್ರಮಿಯವರೂ ಕೂಡ ಆಸಕ್ತಿಯನ್ನು ಬಿಡಬೇಕು. ಈ ವಿಷಯವನ್ನು ಕುರಿತು ರಾಜನು ಹೀಗೆ ಹೇಳುತ್ತಿರುವನು ।೨೩೭॥

ಸ್ತ್ರೀದೇಹವು ಒಂದು ವೇಳೆ ನಿಜವಾಗಿಯೂ ಸುಂದರವಾಗಿದ್ದರೆ ಆಕೆಯು ವಸ್ತ್ರಾಲಂಕಾರಗಳಿಲ್ಲದೇ ಶೋಭಿಸುತ್ತಿದ್ದಳು. ಆದರೆ ಈ ದೇಹವು ಅತಿಶಯವಾಗಿ ಅಮಂಗಲವಿರುವುದರಿಂದ ಬತ್ತಲು ಶರೀರವು ಸರ್ವಥಾ ಶೋಭಿಸುವುದಿಲ್ಲ ।೨೩೮॥ ಆದ್ದರಿಂದಲೇ ಸ್ತ್ರೀಯರು ಯಾವ ವಸ್ತ್ರ-ಅಲಂಕಾರಗಳಿಂದ ತಮ್ಮ ಶರೀರವನ್ನು ಮುಚ್ಚಿಕೊಳ್ಳುತ್ತಿರುವರು. ಒಬ್ಬ ಠಕ್ಕ ಮನುಷ್ಯನು ಬ್ರಾಹ್ಮಣನ ಸೋಗು ಹಾಕಿಕೊಂಡು ವಿಶ್ವಾಸವನ್ನು ತೋರಿಸಿ ಘಾತವನ್ನು ಮಾಡುವನು. ಈ ಪ್ರಕಾರವಾಗಿಯೇ ಸ್ತ್ರೀಯರ ಸಂಗತಿಯಾಗಿರುವುದು ।೨೩೯॥ ಆಕೆಯು ನಾನಾ ಯುಕ್ತಿ ಪ್ರಯುಕ್ತಿಗಳಿಂದ ಪುರುಷನಿಗೆ ತನ್ನ ನಾದಕ್ಕೆ ಹಚ್ಚುವಳು. ಕೊನೆಗೆ ಆಸಕ್ತಿಯಿಂದ ಆತನ ಅಧಃಪಾತವನ್ನು ಮಾಡುವಳು. ಈ ಕಾರಣವಾಗಿ ವಿರಕ್ತಿ ಪುರುಷನು ಆಕೆಯ ಮಾರ್ಗಕ್ಕೂ ಕೂಡ ಹೋಗಬಾರದು ।೨೪೦॥ ಸ್ತ್ರೀಯಳು ಒಂದು ವೇಳೆ ವಿರಕ್ತಳಾಗಿದ್ದರೂ ಕೂಡ ಸಾಧಕನು ಆಕೆಯ ಸಂಗತಿಯನ್ನು ಮಾಡಕೂಡದು. ಅಗ್ನಿಯ ಸಂಗತಿಯಿಂದ ತುಪ್ಪವು ಹೇಗೆ ಕರಗುವುದೋ ಅದರಂತೆಯೇ ಸ್ತ್ರೀಯರ ಸಂಗತಿಯಿಂದ ಪುರುಷನ ವೃತ್ತಿಯಲ್ಲಿ ವಿಕಾರವು ಉತ್ಪನ್ನವಾಗುವುದು ।೨೪೧॥ ವಿಷಯವನ್ನು ಅಮೃತವೆಂದು ಸೇವಿಸಿದರೆ ಆಗ ಮರಣವು ನಿಶ್ಚಿತವಾಗಿ ಒದಗುವುದು. ಅದರಂತೆ ಸ್ತ್ರೀಯಳಿಗೆ ಸಾತ್ವಿಕಳು ಎಂದು ತಿಳಿದು ಒಂದು ವೇಳೆ ಆಕೆಯ ಆಸಕ್ತಿಯನ್ನು ಧರಿಸಲು ಅತಿಶಯವಾಗಿ ದುಃಖವನ್ನು ಭೋಗಿಸಬೇಕಾಗುವುದು ।೨೪೨॥ ಅಗ್ನಿಯಲ್ಲಿ ತುಪ್ಪವು ಬಹಳ ದಿನಗಳವರೆಗೆ ಕರಗದೇ ಇದ್ದರೆ ಮಾತ್ರ ಸ್ತ್ರೀಸಂಗತಿಯಿಂದ ಆತ್ಮಸ್ವರೂಪವು ಪ್ರಾಪ್ತವಾದೀತು ।೨೪೩॥ ಅರವತ್ತು ವರ್ಷಗಳವರೆಗೆ ತುಪ್ಪವನ್ನು ಕಾದಿಟ್ಟಿರುವುದನ್ನು ಅಗ್ನಿಯ ಸಾನಿಧ್ಯದಲ್ಲಿ ಅದು ಒಂದೇ ಕ್ಷಣದಲ್ಲಿ ಕರಗಲು ಆರಂಭಿಸುವುದು. ಅದರಂತೆ ಸ್ತ್ರೀ ಸಂಗತಿಯಿಂದ ಅರವತ್ತು ವರ್ಷದ ವೃದ್ಧನ ಮನದಲ್ಲಿಯೂ ಕೂಡ ಕಾಮ ವಿಕಾರವು ನಿರ್ಮಾಣವಾಗಲು ಶಕ್ಯವಿರುವುದು ।೨೪೪॥ ಅಗ್ನಿಯಲ್ಲಿ ಕರ್ಪೂರವು ಹೊತ್ತಿಕೊಳ್ಳದೇ, ಸುಡದೇ ಇದ್ದರೆ ಮಾತ್ರ ಸ್ತ್ರೀಸಂಗತಿಯಿಂದ ಸರ್ವರಿಗೂ ಪರಮಾರ್ಥವು ಲಭಿಸಬಲ್ಲದು ಹಾಗೂ ಪರಬ್ರಹ್ಮನ ಪ್ರಾಪ್ತಿಯೂ ಕೂಡ ಆಗಬಹುದು ।೨೪೫॥ ನಿಗಿನಿಗಿ ಎನ್ನುವ ಬೆಂಕಿ ಕೆಂಡವನ್ನು ಕೈಯಲ್ಲಿ ಹಿಡಿಯುವಂತೆಯೇ ಸ್ತ್ರೀಯರ ಸಂಗತಿಯಾಗಿರುವುದು. ಈಕೆಯ ಸಂಗತಿಯಿಂದ ಆಸಕ್ತಿಯು ಬೆಳೆಯುತ್ತ ಸಾಗಿ ಕೊನೆಗೆ ಪುರುಷನು ಅನರ್ಥದಲ್ಲಿ ಬೀಳುವನು ।೨೪೬॥ ಸ್ತ್ರೀಯರಿಗಿಂತಲೂ ಸ್ತ್ರೈಣ ಪುರುಷರಸಂಗತಿಯು ಮಾತ್ರ ಕೋಟಿ ಅನರ್ಥಗಳ ಮೂಲವಾಗಿರುವುದು. ಇವರ ಸಂಗತಿಯಿಂದ ನಿಶ್ಚಯಪೂರ್ವಕವಾಗಿ ಅಧಃಪಾತವಾಗುವುದು ।೨೪೭॥ ಸ್ತ್ರೈಣ (ಸ್ತ್ರೀಲಂಪಟ) ಪುರುಷನ ಸಂಗತಿಯಾಗುವುದೊಂದೇ ತಡ, ಆತನು ವಿರಕ್ತನಿಗೆ ಸ್ತ್ರೀ ಸಂಗತಿಯಲ್ಲಿ ಬ್ರಹ್ಮಾನಂದವು ತುಂಬಿರುವುದು ಎಂದು ಇಂತಹ ಮಾತುಗಳನ್ನು ಹೇಳಲಾರಂಭಿಸುವನು. ಇದನ್ನು ಕೇಳಿದ ಮನುಷ್ಯನಿಗೆ ಮನದಲ್ಲಿ ಸ್ತ್ರೀಸುಖದ ಆಸಕ್ತಿಯು ನಿರ್ಮಾಣವಾಗುವುದು ।೨೪೮॥

ತೇಥ ಸ್ವಧಾರಾ ಆಣಿ ಪರದಾರಾ। ಯಾ ಕರೂ ನೇದೀ ವಿಚಾರಾ । ಪ್ರವರ್ತವೀ ಸ್ವೇಚ್ಛಾಚಾರಾ । ಸ್ತ್ರೈಣ ಖರಾ ಅತಿಘಾತೀ ॥೨೪೯॥ ಸ್ತ್ರೈಣ ಜೇಥೇ ಪ್ರವೇಶಲಾ । ತೇಥ ಅನಾಚಾರ ವೇಲೀ ಗೇಲಾ । ಅಧರ್ಮ ಸರ್ವಾಂಗೀಫುಲಲಾ । ಬಾಧಕತ್ವೇಫಳಲಾ ಅನರ್ಥಫಳೀ ॥೨೫೦॥ ಯಾಲಾಗೀ ಜೋ ಪರಮಾರ್ಥೀ । ತೇಣೇ ಸ್ತ್ರೀಆಣಿ ಸ್ತ್ರೈಣಾಚೀ ಸಂಗತೀ । ಸರ್ವಥಾ ನ ಧರಾವೀ ಹಾತೀ। ಪಾಡೀ ಅನರ್ಥೀ ತೋ ಸಂಘ ॥೨೫೧॥ ಮುಖ್ಯ ಸ್ತ್ರೈಣಚಿ ವಾಳಿಲಾ ಆಹೇ। ತೇಥೇ ಸ್ತ್ರೀಸಂಗ ಕೋಠೇ ರಾಹೇ । ಹೇ ಸಂಗತೀಚೀ ಪಾಹೇ । ಸೇವ್ಯ ನೋಹೇ ಪರಮಾರ್ಥಾ ॥೨೫೨॥ ಯಾಲಾಗೀ ಸಾಧಕೀ ಆಪಣ । ಸ್ತ್ರೀನಿರೀಕ್ಷಣ ಸಂಭಾಷಣ । ಸರ್ವಥಾ ನ ಕರಾವೇ ಜಾಣ ।ಏಕಾಂತಶೀಲ ನ ಕೆವ್ಹಾಂಹೀ ವ್ಹಾವೇ ॥೨೫೩॥ ಮ್ಹಣಶೀ ವಿವೇಕೀ ಜೋ ಆಹೇ । ತ್ಯಾಸೀ ಸ್ತ್ರೀಸಂಗ ಕರೀಲ ಕಾಯೇ । ಸ್ತ್ರೀಸಂಗಾಸ್ತವ ಪಾಹೇ । ಸೋಶಿಲೇ ಅಪಾಯೇ ಸುಜ್ಞಾನೀ ॥೨೫೪॥ ಪರಾಶರಾಸೀ ಅರ್ಧ ಘಡೀ । ನಾವೇಸೀ ಮೀನಲೀ ನಾವಡೀ । ತೇ ಅರ್ಧ ಘಟಿಕೇಸಾಠೀ ರೋಕಡೀ । ಅಂಗೀ ಪರವಡೀ ವಾಜಲೀ ॥೨೫೫॥ ಋಷ್ಯಶೃಂಗ ಅತಿತಾಪಸೀ । ತೋಹೀ ವಶ ಝಾಲಾ ವೇಶ್ಯೇಸೀ । ಇತರಾಂಚೀ ಗೋಠೀ ಕಾಯಸೀ। ಮುಖ್ಯ ಮಹಾದೇವಾಸೀ ಭುಲವಿಲೇ ॥೨೫೬॥ ವಿಷಯ ಇಂದ್ರಿಯಾಂಚೇ ಸಂಗತೀ । ಅವಶ್ಯ ಕ್ಷೋಭೇ ಚಿತ್ತವೃತ್ತೀ । ತೇಥ ಸಜ್ಞಾನಹೀ ಬಾಧಿಜತೀ । ಮಾ ಕೋಣ ಗತೀ ಅಜ್ಞಾನಾ ॥೨೫೭॥ ಹೇಹೀ ಅಸೋ ಉಪಪತ್ತೀ। ನಸತಾ ಸ್ತ್ರೀಯಾಂಚೀ ಸಂಗತೀ । ಕಾಮ ಕ್ಷೋಭೇ ಏಕಾಂತೀ । ತೇಚಿ ವಿಶದಾರ್ಥೀ ನೃಪ ಬೋಲೇ ॥೨೫೮॥

ಅದೃಷ್ಟಾದಶ್ರುತಾದ್ ಭಾವಾನ್ನ ಭಾವ ಉಪಜಾಯತೇ । ಅಸಂಪ್ರಯುಂಜತಃ ಪ್ರಾಣಾನ್ ಶಾಮ್ಯತಿ ಸ್ತಿಮಿತಂ ಮನಃ ॥೨೩॥

ಅರ್ಥ:- ಯಾವುದೇ ವಸ್ತುವಿನ ವಿಷಯವಾಗಿ ಎಂದೂ ನೋಡದೇ ಕೇಳದೇ ಇದ್ದರೆ ಅದಕ್ಕಾಗಿ ಮನದಲ್ಲಿ ವಿಕಾರವು ಉತ್ಪನ್ನವಾಗುವುದಿಲ್ಲ. ಯಾರು ವಿಷಯಗಳಿಗೆ ತಮ್ಮ ಇಂದ್ರಿಯಗಳ ಸಂಯೋಗ ಮಾಡುವುದಿಲ್ಲವೋ ಅವರ ಮನದಲ್ಲಿ ವಿಕಾರವು ಉತ್ಪನ್ನವಾಗುವುದಿಲ್ಲ. ಅವರ ಮನವು ಶಾಂತವಾಗಿರುವುದು.

ಜೇ ದೇಖಿಲೇ ಐಕಿಲೇ ನಾಹೀ । ಐಶಿಯಾ ವಿಷಯಾಂಚೇ ಠಾಯೀ । ಪುರುಷಾಚೇ ಮನ ಪಾಹೀ । ಸರ್ವಥಾ ಕಹೀ ಕ್ಷೋಭೇನಾ ॥೨೫೯॥ ಜೇ ಪೂರ್ವಭುಕ್ತ ವಿಷಯ ಅಸತೀ । ತೇಚಿ ಸ್ಮರಣ ಝಾಲಿಯಾ ಚಿತ್ತೀ । ಕಾಮ ಉದ್ರೇಕೇ ಕ್ಷೋಭೇ ವೃತ್ತೀ । ನಸತಾ ಸಂಗತೀ ಸ್ತ್ರೀಯೇಚೀ ॥೨೬೦॥

ತದನಂತರ ಅವನು ಸ್ವಸ್ತ್ರೀ ಅಥವಾ ಪರಸ್ತ್ರೀ ಎಂಬ ವಿಚಾರವನ್ನು ಮಾಡಿಕೊಡುವುದಿಲ್ಲ. ಅವನು ಮನಬಂದಂತೆ ನಡೆಯಲು ಕಲಿಸುವನು. ಹೀಗೆ ಸ್ತ್ರೈಣ ಪುರುಷನು ಮಹಾಪಾತಕಿಯಾಗಿರುವನು ॥೨೪೯॥ ಎಲ್ಲಿ ಸ್ತ್ರೈಣ ಪುರುಷನ ಪ್ರವೇಶವಾಗುವುದೋ, ಅಲ್ಲಿ ಅನಾಚಾರವು ಬೆಳೆಯಿತೆಂದೇ ತಿಳಿದುಕೊಳ್ಳಬೇಕು. ಸರ್ವ ಪ್ರಕಾರಗಳ ಅಧರ್ಮದ ಹೂವುಗಳು ವಿಕಾಸಗೊಂಡು ಬಾಧಕವಾಗುವುವು ಹಾಗೂ ಅನರ್ಥಗಳ ಫಲಗಳನ್ನು ಕೊಡಲಾರಂಭಿಸುವವು ॥೨೫೦॥ ಈ ಕಾರಣದಿಂದ ಯಾರಿಗೆ ಪರಮಾರ್ಥದ ಪ್ರಾಪ್ತಿಯನ್ನು ಮಾಡಿಕೊಳ್ಳಬೇಕಾಗಿದೆಯೋ, ಅವರು ಸ್ತ್ರೀಯರ ಮತ್ತು ಸ್ತ್ರೈಣರ ಸಂಗತಿಯನ್ನು ಎಂದಿಗೂ ಮಾಡಕೂಡದು. ಏಕೆಂದರೆ ಇವರ ಸಂಗತಿಯು ಯಾವಾಗಲೂ ಅಧರ್ಮವನ್ನು ನಿರ್ಮಾಣಗೊಳಿಸುವುದು ॥೨೫೧॥ ಮುಖ್ಯವಾಗಿ ಸ್ತ್ರೈಣರ ಸಂಗತಿಯನ್ನು ತ್ಯಜಿಸಿಬಿಟ್ಟರೆ ಆಗ ಸ್ತ್ರೀಸಂಗತಿಯು ಎಲ್ಲಿಂದ ಬರಬೇಕು? ಆದ್ದರಿಂದ ಈ ಸಂಗತಿ ಮಾತ್ರ ಪರಮಾರ್ಥಕ್ಕೆ ಯಾವ ಉಪಯೋಗವು ಇಲ್ಲ ॥೨೫೨॥ ಅದಕ್ಕಾಗಿ ಸಾಧಕರು ಸ್ತ್ರೀಯರತ್ತ ನೋಡುವುದು, ಅವರಲ್ಲಿ ಸಂಭಾಷಣೆಯನ್ನು ಮಾಡುವುದು, ಸ್ತ್ರೀಜೊತೆಯಲ್ಲಿ ಏಕಾಂತದಲ್ಲಿರುವುದು. ಇವು ಎಲ್ಲವನ್ನೂ ಪರಿಪೂರ್ಣವಾಗಿ ವರ್ಜಿಸಬೇಕು ॥೨೫೩॥ ಒಂದು ವೇಳೆ ನೀನು ಹೀಗೆ ಹೇಳಬಹುದು; ವಿವೇಕವಂತರಾದ ಜನರಿಗೆ ಈ ಸಂಗತಿಯು ಏನು ಮಾಡೀತು? ಹಾಗಾದರೆ ಕೇಳು, ಕೇವಲ ಸ್ತ್ರೀ ಸಂಗತಿಯಿಂದ ಮಹಾ ಮಹಾ ಜ್ಞಾನಿಗಳೂ ಕೂಡ ಅನರ್ಥಗಳನ್ನು ಸೋಸಿರುವರು ॥೨೫೪॥ ಪರಾಶರ ಋಷಿಗಳವರಿಗೆ ಅರ್ಧ ಘಳಿಗೆ ಮಾತ್ರ ಅಂಬಿಗ ಕನ್ಯಾ ಸತ್ಯವತಿಯು ಭೇಟಿಯಾದಳು. ಆದರೆ ಆ ಅರ್ಧ ಘಳಿಗೆಯಲ್ಲಿಯೇ ಆತನು ತನ್ನ ಜಿತೇಂದ್ರಿಯತ್ವವನ್ನು ಕಳೆದುಕೊಂಡು ಭ್ರಷ್ಟನಾಗಿಬಿಟ್ಟನು ॥೨೫೫॥ ಋಷ್ಯಶೃಂಗನು ಮಹಾ ತಪಸ್ವಿಯಾಗಿದ್ದನು. ಆದರೆ ಆತನೂ ಸಹ ವೇಶ್ಯೆಯಳಿಗೆ ವಶನಾದನು. ಅಂದಮೇಲೆ ಇತರರ ಮಾತನ್ನು ಏನೆಂದು ಹೇಳಬೇಕು? ಪ್ರತ್ಯಕ್ಷ ಮಹಾದೇವರಿಗೆ ಮೋಹಿನಿಯು ಭುಲಾಯಿಸಿದಳು ॥೨೫೬॥ ವಿಷಯ ಮತ್ತು ಇಂದ್ರಿಯಗಳು ಇವುಗಳ ಸಂಯೋಗವಾಗುತ್ತಲೇ ಅವಶ್ಯವಾಗಿ ಚಿತ್ತವೃತ್ತಿಯು ಕ್ಷೋಭೆಗೊಳ್ಳುವುದು. ಇದರಿಂದ ಜ್ಞಾನಿಗಳೂ ಕೂಡ ಮೋಹದಲ್ಲಿ ಸಿಲುಕಿಕೊಳ್ಳುವರು. ಅಂದಮೇಲೆ ಅಜ್ಞಾನಿ ಜನರ ಯಾವ ಕಥೆ? ॥೨೫೭॥ ಇದೆಲ್ಲ ಇರಲಿ, ಸ್ತ್ರೀಯರ ಸಂಗತಿಯು ಇಲ್ಲದಿದ್ದರೂ ಕೂಡ (ಆಕೆಯ ಸ್ಮರಣದಿಂದ) ಏಕಾಂತದಲ್ಲಿ ಕಾಮವು ಕ್ಷೋಭಿಸುವುದು. ಇದೇ ವಿಷಯವನ್ನು ಕುರಿತು ಈಗ ರಾಜನು ಸವಿಸ್ತಾರವಾಗಿ ಹೇಳುವನು ॥೨೫೮॥

ಎಂದಿಗೂ ನೋಡದೇ ಇರುವ ಅಥವಾ ಎಂದಿಗೂ ಕೇಳದೇ ಇರುವ ವಿಷಯಗಳಿಂದ ಪುರುಷನ ಮನವು ಎಂದಿಗೂ ಕ್ಷುಬ್ಧವಾಗಲಾರದು ॥೨೫೯॥ ಆದರೆ ಪೂರ್ವದಲ್ಲಿ ಭೋಗಿಸಿರುವ ವಿಷಯಗಳ ಸ್ಮರಣೆಯಾದರೆ ಆಗ ಸ್ತ್ರೀ ಸಂಗತಿಯು ಇಲ್ಲದಿದ್ದರೂ ಕೂಡ ಮನೋವೃತ್ತಿಯು ಕ್ಷುಬ್ಧವಾಗುವುದು ॥೨೬೦॥

ಏವಂ ಪೂರ್ವಾಪಾರ ವಿಷಯಾಸಕ್ತೀ । ಪುರುಷಾಸೀ ಬಾಧಕ ನಿಶ್ಚಿತೀ । ತೋ ಬೈಸಲ್ಯಾಹೀ ಏಕಾಂತೀ । ವಾಸನಾಸಂಸ್ಕಾರೇ ವೃತ್ತಿ ಸಕಾಮ ಕ್ಷೋಭೇ ।೫೬೧।। ಪೂರ್ವದಿವಶೀಚೀ ಪಕ್ವಾನ್ನೇ । ಜೇ ಠೇವಿಲೀ ಅತಿಯತ್ನೇ । ತೀ ನ ಕರಿತಾಂಹೀ ರಾಂಧಣೇ । ಪಹಾಂಟೇ ಭಕ್ಷಣೇ ಸ್ವಯೇ ಜೇವೀ ।೫೬೨।। ತೇವೀ ವಾಸನಾಸಂಸ್ಥಿತ ಕಾಮ । ಪುರುಷಾಸ ಕರೀ ಸಕಾಮ । ಕಾಮಕ್ಷೋಭೇ ಪಾಡೀ ಭ್ರಮ । ಕರ್ಮಾಕರ್ಮ ಸ್ಮರೇನಾ ।೫೬೩।। ಏವಂ ವಾಸನಾ ಕಾಮಸಂಗತೀ । ಬಾಧಕ ಹೋಯ ಪರಮಾರ್ಥೀ । ಯಾಲಾಗೀ ಸಾಧಕೀ ಸಮಸ್ತೀ । ಸ್ತ್ರೀಕಾಮಾಸಕ್ತೀ ತ್ಯಾಗಾವೀ ।೫೬೪।। ಮನೀ ಕ್ಷೋಭಲ್ಯಾ ಕಾಮಾಸಕ್ತೀ । ಸಾಧಕೀ ತೇಥೇ ಕರಾವೀ ಯುಕ್ತೀ । ಆವರಾಲ್ಯಾ ಬಾಹ್ಯ ಇಂದ್ರಿಯ ವೃತ್ತೀ । ತೈ ಮನಾಸೀ ಶಾಂತಿ ಹಳೂಹಳೂ ಹೋಯ ।೫೬೫।। ಕರ್ಮೇಂದ್ರಿಯೀ ರಾಖಣ। ದೃಢ ವೈರಾಗ್ಯ ಠೇವಿಲಿಯಾ ಜಾಣ । ಮನೀಕ್ಷೋಭಲ್ಯಾ ಕಾಮ ಪೂರ್ಣ । ಆಪಲ್ಯಾ ಆಪಣ ಉಪಶಮೇ ।೫೬೬।। ಜೇಣೇ ಪಡಿಜೇ ಅನರ್ಥೀ । ತೇ ತ್ಯಾಗಾವೀ ಸಂಗತೀ । ಸಂಗತ್ಯಾಗಾಚೀ ನಿಜಸ್ಥಿತೀ । ದೃಢ ಶ್ಲೋಕಾರ್ಥೀ ನೃಪ ಬೋಲೇ ।೫೬೭।।

ತಸ್ಮಾತ್ಸಂಗೋನ ಕರ್ತವ್ಯಃ ಸ್ತ್ರೀಷು ಸ್ತ್ರೈಣೇಷು ಚೇಂದ್ರಿಯೈಃ । ವಿದುಷಾಂ ಚಾಪ್ಯವಿಶ್ರಬ್ಧಾಃ ಷಡ್ವರ್ಗಃ ಕಿಮು ಮಾದೃಶಾಮ್ ।೨೪।।

ಅರ್ಥ:- ವಾಣಿ, ಕಿವಿ ಮತ್ತು ಮನ ಇತ್ಯಾದಿ ಇಂದ್ರಿಯಗಳು ಸ್ತ್ರೀಯರ ಹಾಗೂ ಸ್ತ್ರೀಲಂಪಟರ ಸಂಗವನ್ನು ಎಂದಿಗೂ ಮಾಡಕೂಡದು. ಮಹಾ ಮಹಾ ವಿದ್ವಾನರಿಗೆ ಇಂದ್ರಿಯಗಳನ್ನು ಮತ್ತು ಮನವನ್ನು ಜಯಿಸುವುದು ಆಗುವುದಿಲ್ಲ. ಅಂದಮೇಲೆ ನನ್ನಂತಹ ಜನರ ಯಾವ ಅವಸ್ಥೆ?

ಜೇಣೇ ಸಜ್ಞಾನಾ ಉಠೀ ಛಳ । ಸಕಾಮ ಭುಲವೀ ತತ್ಕಾಳ । ಐಸಾ ಸ್ತ್ರೀಸಂಗ ಅನರ್ಥಶೀಳ । ತ್ಯಾಹೂನಿ ಪ್ರಬಳ ಸ್ತ್ರೈಣಾಚಾ ।೫೬೮।। ಯಾಲಾಗೀ ಕರ್ಮೇಂದ್ರಿಯಾಂಚೇ ಸ್ಥಿತೀ । ಸ್ತ್ರೀ ಆಣಿ ಸ್ತ್ರೈಣಾಚೀ ಸಂಗತೀ । ಘಢೋ ನೇದಾವೀ ಪರಮಾರ್ಥೀ । ಜೇ ನಿಜಸ್ವಾರ್ಥೀ ಸಾಧಕ ।೫೬೯।। ಜರೀ ವಿಷಯೀ ಕ್ಷೋಭೇಲ ಮನ । ತರೀ ಇಂದ್ರಿಯೇ ಆವರಾವೀ ಆಪಣ । ತರೀ ಮನೀಂಚಾ ವಿಷಯೋ ಜಾಣ । ಮನೀಂಚಿ ಆಪಣ ಸ್ವಯೇ ವಿರೇ ।೫೭೦।। ನಿಕಟ ವಿಷಯ ಸ್ತ್ರೀಸಂಗತೀ । ಮನ ಕ್ಷೋಭೇ ವಿಷಯಾಸಕ್ತೀ । ಕ್ಷಣಾರ್ಧ ಸ್ತ್ರೀಸಂಗಪ್ರಾಪ್ತೀ । ಪಡಲೇ ಅನರ್ಥೀ ಸಜ್ಞಾನ ।೫೭೧।।

ಈ ಪ್ರಕಾರವಾಗಿ ಪುರುಷನಿಗೆ ಪೂರ್ವಸಂಸ್ಕಾರವು ಬಾಧಕವಾಗುತ್ತಿರುವುದು. ಈತನು ಪೂರ್ಣವಾಗಿ ಏಕಾಂತದಲ್ಲಿ ಕುಳಿತುಕೊಂಡಿದ್ದರೂ ಸಹ ವಾಸನೆಯ ಸಂಸ್ಕಾರದಿಂದ ವೃತ್ತಿಯು ಕಾಮಯುಕ್ತವಾಗುವುದು. ಹಾಗೂ ಕ್ಷುಬ್ಧಗೊಳ್ಳುವುದು ।೫೬೧।। ಹಿಂದಿನ ದಿನದ ಪಕ್ವಾನ್ನವನ್ನು ಸರಿಯಾಗಿ ರಕ್ಷಿಸಿ ಇಡಲು ಅದು ಮರುದಿನದಲ್ಲಿ ಅಡುಗೆಯನ್ನು ಮಾಡದೇ ಬೆಳಿಗ್ಗೆ ಭಕ್ಷಿಸಲು ಬರುವುದು ।೫೬೨।। ಅದರಂತೆಯೇ ವಾಸನೆಯಲ್ಲಿ ಸ್ಥಿರಗೊಂಡಿರುವ ಕಾಮವೇ ಪುರುಷನಿಗೆ ಸಕಾಮನನ್ನಾಗಿ ಮಾಡುತ್ತಿರುವುದು. ಆ ಕಾಮದ ಕ್ಷೋಭವು ನಿರ್ಮಾಣವಾಗಿ ಭ್ರಮೆಯು ಉದ್ಭವವಾಗುವುದು. ಆಗ ಕರ್ಮ ಯಾವುದು ಅಕರ್ಮ ಯಾವುದು ಎಂಬುವುದು ತಿಳಿಯುವುದೇ ಇಲ್ಲ ।೫೬೩।। ತಾತ್ಪರ್ಯವೇನೆಂದರೆ ವಾಸನೆ ಮತ್ತು ಕಾಮಾಸಕ್ತಿಯು ಇವೇ ಪರಮಾರ್ಥಕ್ಕೆ ಬಾಧಕವಾಗುತ್ತಿರುವುವು. ಆದ್ದರಿಂದ ಸರ್ವ ಸಾಧಕರು ಸ್ತ್ರಿಸಂಗದ ಆಸಕ್ತಿಯನ್ನು ತ್ಯಜಿಸಬೇಕು।೫೬೪।। ಮನದಲ್ಲಿ ಕಾಮವಿಚಾರವು ನಿರ್ಮಾಣವಾಯಿತೆಂದರೆ ಪುರುಷನು ಈ ರೀತಿಯಲ್ಲಿ ಯುಕ್ತಿಯನ್ನು ಮಾಡಬೇಕು. ಯಾವುದೆಂದರೆ ಇಂದ್ರಿಯವೃತ್ತಿಗಳಿಗೆ ಬಿಗಿಯಾಗಿಹಿಡಿದುಕೊಳ್ಳಬೇಕು. ಇದರಿಂದ ಮನವು ಮೆಲ್ಲಮೆಲ್ಲನೇ ಶಾಂತವಾಗುವುದು ।೫೬೫।। ಕರ್ಮೇಂದ್ರಿಗಳಿಗೆ ದೃಢವಾದ ವೈರಾಗ್ಯದ ಕಾವಲು ಇಡಲು ಆಗ ಮನದಲ್ಲಿ ನಿರ್ಮಾಣಗೊಂಡಿರುವ ಕಾಮವು ತನ್ನಿಂದ ತಾನೇ ಶಾಂತವಾಗುವುದು ।೫೬೬।। ಯಾವ ಕಾರಣದಿಂದ ಅನರ್ಥದಲ್ಲಿ ಬೀಳುವ ಪ್ರಸಂಗವು ಸಂಭವಿಸುವುದೋ, ಅಂತಹ ಸಂಗತಿಯನ್ನು ಅವಶ್ಯವಾಗಿ ತ್ಯಜಿಸಬೇಕು. ಆ ಸಂಗತಿಯ ತ್ಯಾಗವನ್ನುಹೇಗೆ ಮಾಡಬೇಕೆಂಬ ವಿಷಯವನ್ನು ರಾಜನು ಮುಂದಿನ ಶ್ಲೋಕದಲ್ಲಿ ಹೇಳುವನು ।೫೬೭।।

ಯಾವುದರಿಂದ ಜ್ಞಾನೀ, ಯೋಗಿಗಳವರಿಗೂ ಪೀಡಿಸುವಂತಹ, ಕಾಮಾಸಕ್ತಿ ಪುರುಷರಿಗೆ ತಕ್ಷಣ ಮೋಸಮಾಡುವಂತಹ ಯಾವ ಈ ಸ್ತ್ರೀಸಂಗತಿಯು ಅನರ್ಥಕಾರಕವಾಗಿರುವುದು. ಇದಕ್ಕಿಂತಲೂ ಹೆಚ್ಚಾದ ಅನರ್ಥಕಾರಕವು ಸ್ತ್ರೀಲಂಪಟ ಪುರುಷನ ಸಂಗತಿಯಾಗಿರುವುದು ।೫೬೮।। ಆದ್ದರಿಂದ ಯಾರಿಗೆ ತಮ್ಮ ನಿಜವಾದ ಹಿತವನ್ನು ಸಾಧಿಸಬೇಕಾಗಿದೆಯೋ, ಅಂತಹ ಪರಮಾರ್ಥಿಕ ಸಾಧಕರು ಕರ್ಮೇಂದ್ರಿಯಗಳಿಗೆ ಸ್ತ್ರೀ ಮತ್ತು ಸ್ತ್ರೈಣ ಇವರ ಸಂಗತಿಯು ಆಗದಂತೆ ನೋಡಿಕೊಳ್ಳಬೇಕು ।೫೬೯।। ಮನದಲ್ಲಿ ಒಂದು ವೇಳೆ ವಿಷಯಗಳ ಇಚ್ಛೆಯು ನಿರ್ಮಾಣಗೊಡರೆ ಆಗ ಇಂದ್ರಿಯಗಳನ್ನು ತಮ್ಮ ಹತೋಟಿಗೆ ತಂದರೆ, ಆಗ ಮನದಲ್ಲಿನ ವಿಷಯವು ಮನದಲ್ಲಿಯೇ ಲೀನವಾಗಿಬಿಡುವುದು ।೫೭೦।।ವಿಷಯದ ಅಪೇಕ್ಷೆ ಮತ್ತು ಸ್ತ್ರೀಸಂಗತಿ ಇವು ಎರಡೂ ಸಮೀಪ ಬರಲು ಆಗ ಮನವು ತಕ್ಷಣ ಆಸಕ್ತವಾಗುವುದು. ಅರ್ಧ ಕ್ಷಣ ಕೂಡ ಸ್ತ್ರೀಸಂಗವು ಕೂಡಲು ಆಗ ಜ್ಞಾನಿಯೂ ಕೂಡ ಮಹಾಸಂಕಟದಲ್ಲಿ ಬೀಳುವನು ।೫೭೧।।

ಸ್ತ್ರೀದರ್ಶನೇ ಕಾಮಾಸಕ್ತ । ದೇವೇಂದ್ರ ಝಾಲಾ ಭಗಾಂಕಿತ । ಚಂದ್ರ ಕಳಂಕಿಯಾ ಏಥ । ಕೇಲಾ ನಿಶ್ಚಿತ ಗುರುಪತ್ನ್ಯಾ ॥೭೭೨॥ ಸೌಭರೀ ತಪಸ್ವೀ ತಪಯುಕ್ತ । ತೋ ಮತ್ಸ್ಯಮೈಥುನಾಸ್ತವ ಏಥ । ಕರೂನಿ ಸಾಂಡಿಲಾ ಕಾಮಾಸಕ್ತ । ಐಸಾ ಸಂಗ ಅನರ್ಥಭೂತ ಸ್ತ್ರಿಯಾಂಚಾ ॥೭೭೩॥ ನಿಜಕನ್ಯೇಚಿಯಾ ಸಂಗತೀ । ಬ್ರಹ್ಮಾ ಭುಲಲಾ ಕಾಮಾಸಕ್ತೀ। ಮಾ ಇತರಾಂಚೀ ಕೋಣಗತೀ । ಸಂಗ ಅನರ್ಥೀ ಸ್ತ್ರೀಯಾಂಚಾ ॥೭೭೪॥ ಕಾಮಿನೀ ಸಂಗ ಅತಿದಾರುಣ। ಶಿವಾಸೀ ಝಾಲೇ ಲಿಂಗಪತನ। ಪ್ರಮಾದಾಸಂಗೇ ಸಜ್ಞಾನ । ಠಕಲೇ ಜಾಣ ಮಹಾಯೋಗೀ॥೭೭೫॥ ನಾರದೇ ವಿನೋದದೃಷ್ಟೀ। ಕೃಷ್ಣ -ಪತ್ನೀ ಮಾಗಿತಲ್ಯಾ ಸಾಠೀ । ತೋ ನಾರದೀ ಕೇಲಾ ಗಂಗಾತಟೀ । ತೇಥ ಜನ್ಮಲೇ ಪೋಟೀ ಸಾಠೀ ಪುತ್ರ ॥೭೭೬॥ ಕೌತುಕೇ ಸ್ತ್ರೀಯಾಂಪ್ರತಿ ಜಾತಾ । ಸಜ್ಞಾನ ಪಾವೇ ಬಾಧಕತಾ । ಮಾ ಮಜಸಾರಿಖ್ಯಾ ಮೂರ್ಖಾಚೀ ಕಥಾ । ಕೋಣ ವಾರ್ತಾ ತೇ ಠಾಯೀ ॥೭೭೭॥ ಕ್ಷಣಾರ್ಧ ಸ್ತ್ರಿಯಾಂಚೀ ಸಂಗತೀ । ಸಜ್ಞಾನ ಠಕಲೇ ಐಶಾ ರೀತೀ। ಜೇ ಸ್ತ್ರೀಸಂಗಾ ವಿಶ್ವಾಸತೀ । ತೇ ದುಃಖೀ ಹೋತೀ ಮಜಐಸೇ ॥೭೭೮॥ ಯಾಲಾಗೀ ವಿಶ್ವಾಸತಾ ಸ್ತ್ರೀಸಂಗಾಸೀ । ಇಂದ್ರಿಯಷಡ್‌ವರ್ಗ ಠಕೀ ಸರ್ವಾಂಸೀ । ಏಥ ಆವರುನಿ ಇಂದ್ರಿಯಾಂಸೀ । ಸರ್ವಥಾ ಸ್ತ್ರಿಯಾಂಸೀ ತ್ಯಾಗಾವೇ ॥೭೭೯॥ ತ್ಯಾಗೂನಿ ಸ್ತ್ರಿಯಾಂಚಿ ಸಂಗತೀ । ಉಪರಮೂನಿ ಇಂದ್ರಿಯವೃತ್ತೀ । ರಾಜಾ ಪಾವಲಾ ಪರಮ ಶಾಂತೀ । ತೇಚಿ ಶ್ರೀಪತಿ ಸ್ವಯೇ ಸಾಂಗೇ ॥೭೮೦॥

ಶ್ರೀಭಗವಾನುವಾಚ :-

ಏವಂ ಪ್ರಗಾಯನ್ನೃಪದೇವದೇವಃ ಸ ಉರ್ವಶೀಲೋಕಮಥೋ ವಿಹಾಯ।
ಆತ್ಮಾನಮಾತ್ಮನ್ಯವಗಮ್ಯ ಮಾಂ ವೈ ಉಪಾರಮತ್‌ಜ್ಞಾನವಿಧೂತಮೋಹಃ ॥೩॥

ಅರ್ಥ:- ಶ್ರೀ ಭಗವಾನನು ಹೇಳಿದನು; ಹೇ ಉದ್ಧವಾ, ರಾಜರಾಜೇಶ್ವರ ಪುರೂರವ್ಯಾನ ಮನದಲ್ಲಿ ಯಾವ ವೇಳೆಯಲ್ಲಿ ಈ ರೀತಿಯ ವಿಚಾರಗಳು ನಿರ್ಮಾಣವಾಗಲು ಆಗ ಆತನು ಉರ್ವಶಿಯ ಪರಿತ್ಯಾಗವನ್ನು ಮಾಡಿದನು. ಜ್ಞಾನೋದಯವಾದ್ದರಿಂದ ಆತನ ಮೋಹವು ನಷ್ಟವಾಯಿತು. ಆತನ ಹೃದಯದಲ್ಲಿ ಸಾಕ್ಷಾತ್ಕಾರವಾಯಿತು. ಮತ್ತು ಶಾಂತಭಾವದಿಂದ ಸ್ಥಿರನಾದನು.

ಜೋ ಉರ್ವಶೀ ಸ್ವರ್ಗಭೋಗ ಪಾವೋನೀ । ಜ್ಯಾಸೀ ದೇವ ಮಾನಿತೀ ಶ್ರೇಷ್ಠಪಣೀ । ಜೋ ಸಕಳರಾಜಚೂಡಾಮಣೀ । ಜ್ಯಾಸೀ ಯೇತೀ ಲೋಟಾಂಗಣೀ ಭೂಪಾಳ ॥೭೮೧॥ ಐಸಾ ಪುರೂರವಾ ಚಕ್ರವರ್ತೀ । ಲಾಹೋನಿ ಉರ್ವಶೀಭೋಗಪ್ರಾಪ್ತೀ । ಸ್ವರ್ಗಭೋಗೀ ಪಾವಲಾ ವಿರಕ್ತೀ । ಸಭಾಗ್ಯ ನೃಪತಿ ತೋ ಏಕ ॥೭೮೨॥

ಇಂದ್ರನಿಗೆ ಕೇವಲ ಸ್ತ್ರೀ ದರ್ಶನವಾದ್ದರಿಂದ ಇದರ ಪರಿಣಾಮವಾಗಿ ಆತನ ಶರೀರದಲ್ಲಿ ಸಾವಿರ ಛಿದ್ರಗಳು ಉಂಟಾದವು. ಗುರುಪತ್ನಿ ತಾರಾಮತಿಯ ಅಭಿಲಾಷೆ ಮಾಡಿದ್ದಕ್ಕಾಗಿ ಚಂದ್ರನಿಗೆ ಕೊನೆಯವರೆಗೂ ಕಲಂಕಿತನಾಗಿ ಇರಬೇಕಾಯಿತು ॥೭೭೨॥ ಸೌಭರೀಯು ಈತನು ಮಹಾನ್ ತಪಸ್ವಿ ಋಷಿಯಾಗಿದ್ದನು. ಈತನು ಮೀನಗಳ ಮೈಥುನವನ್ನು ಕಂಡು ಕಾಮಾತುರನಾದನು. ಇಷ್ಟೊಂದು ಸ್ತ್ರೀಯರ ಸಂಗತಿಯು ಅನರ್ಥಕಾರಕವಾಗಿರುವುದು ॥೭೭೩॥ ಬ್ರಹ್ಮದೇವನು ತನ್ನ ಮಗಳ ಸೌಂದರ್ಯವನ್ನು ಕಂಡು ಕಾಮಾಸಕ್ತನಾದನು. ಅಂದಮೇಲೆ ಇತರರ ಯಾವ ಕಥೆ? ಹೀಗೆ ಈ ಸ್ತ್ರೀಯರ ಸಂಗತಿಯು ಅತಿಶಯವಾಗಿ ಅನರ್ಥಕಾರಕವಾಗಿರುವುದು ॥೭೭೪॥ ಸ್ತ್ರೀ ಸಂಗವು ಇದು ಅತ್ಯಂತ ದಾರುಣವಾಗಿದೆ. ಏಕೆಂದರೆ ಶಿವನಿಗೂ ಕೂಡ ಲಿಂಗಪಾತವಾಯಿತು. ಮಹಾ ಮಹಾ ಸನ್ಯಾಸೀ, ಯೋಗಿಗಳೂ ಕೂಡ ಸ್ತ್ರೀಸಂಗತಿಯಿಂದ ಮೋಸಕ್ಕೆ ಬಲಿಯಾದರು ॥೭೭೫॥ ನಾರದನು ಕೇವಲ ವಿನೋದ ದೃಷ್ಟಿಯಿಂದ ಕೃಷ್ಣನ ಸ್ತ್ರೀ ಬೇಡಿದ್ದಕ್ಕಾಗಿ ಆತನಿಗೆ ಗಂಗಾತೀರದಲ್ಲಿ ನಾರದಿಯ ರೂಪವು ಪ್ರಾಪ್ತವಾಯಿತು. ಆತನ ಹೊಟ್ಟೆಯಲ್ಲಿ ಅರವತ್ತು ಪುತ್ರರು ಹುಟ್ಟಿದರು ॥೭೭೬॥ ಸಹಜವಾಗಿ ಕೌತುಕದಿಂದ ಸ್ತ್ರೀಯರ ಸಮೀಪ ಹೋಗುವುದರಿಂದ ಜ್ಞಾನೀ ಪುರುಷನಿಗೂ ಕೂಡ ಆ ಸಂಗತಿಯು ಬಾಧಕವಾಗುವುದು. ಅಂದಮೇಲೆ ನನ್ನಂತಹ ಮೂರ್ಖನ ಯಾವ ಕಥೆ ? ॥೭೭೭॥ ಸ್ತ್ರೀಯರ ಸಂಗತಿಯಿಂದ ಅರ್ಧಕ್ಷಣದಲ್ಲಿಯೇ ಅನೇಕ ಜ್ಞಾನೀ ಜನರು ಮೋಸಹೋಗಿರುವರು. ಆದ್ದರಿಂದ ಯಾರೇ ಯಾಗಲಿ ಸ್ತ್ರೀಸಂಗದಲ್ಲಿ ವಿಶ್ವಾಸವಿಟ್ಟರೆ ಆತನಿಗೂ ಕೂಡ ನನ್ನಂತೆಯೇ ದುಃಖಿಯಾಗಬೇಕಾಗುವುದು ॥೭೭೮॥ ಈ ಕಾರಣದಿಂದ ಸ್ತ್ರೀಸಂಗದಲ್ಲಿ ವಿಶ್ವಾಸವನ್ನಿಟ್ಟರೆ ಆರು ಇಂದ್ರಿಯಗಳ ಸಮೂಹವು ಸರ್ವರಿಗೂ ಸಂಕಟದಲ್ಲಿ ತಳ್ಳುವುದು. ಆದ್ದರಿಂದ ಇಂದ್ರಿಯಗಳ ನಿಗ್ರಹವನ್ನು ಮಾಡಿ ಸರ್ವಥಾ ಸ್ತ್ರೀ ತ್ಯಾಗವನ್ನು ಮಾಡಬೇಕು ॥೭೭೯॥ ಈ ಪ್ರಕಾರವಾಗಿ ಸ್ತ್ರೀಯರ ಸಂಗತಿಯನ್ನು ಬಿಟ್ಟುಕೊಟ್ಟು ಇಂದ್ರಿಯ ವೃತ್ತಿಯನ್ನು ಶಾಂತಗೊಳಿಸಿ ರಾಜನು ಯಾವ ಪರಮ ಸಮಾಧಾನವನ್ನು ಪಡೆದನು. ಅದನ್ನೇ ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೭೮೦॥

ಯಾರು ಉರ್ವಶೀ ಸಮೇತ ಸ್ವರ್ಗ ಭೋಗವನ್ನು ಪಡೆದನು, ಯಾರಿಗೆ ದೇವತೆಗಳೂ ಕೂಡ ಶ್ರೇಷ್ಠರೆಂದರು, ಯಾರು ಸರ್ವ ರಾಜರ ಮುಕುಟಮಣಿಯಾಗಿದ್ದನು. ಯಾರಿಗೆ ಸರ್ವ ರಾಜರು ಲೋಟಾಂಗಣವನ್ನು ಹಾಕುತ್ತಿದ್ದರು ॥೭೮೧॥ ಹೀಗಿರುವ ಯಾವ ಚಕ್ರವರ್ತಿ ಪುರೂರವಾ ರಾಜನು ಉರ್ವಶಿಯ ಮತ್ತು ಸ್ವರ್ಗದ ಉಪಭೋಗ ಪಡೆದು ವಿರಕ್ತನಾದನು. ಆದ್ದರಿಂದ ಆ ರಾಜನು ಭಾಗ್ಯವಾನನು ॥೭೮೨॥

ಅಪ್ರಾಪ್ತ ವಿಷಯೇ ಯೋಗೀ । ಬಹುತ ದೇಖಿಲೇ ವಿರಾಗೀ । ಪರೀ ಪ್ರಾಪ್ತಸ್ವರ್ಗಾಂಗನಾಭೋಗೀ । ಧನ್ಯ ವಿರಾಗೀ ಪುರೂರವಾ ।೮೮೩॥ ಪುರುರವ್ಯಾ ಐಶೀ ವಿರಕ್ತೀ । ನಾಹೀ ದೇಖಿಲೀ ಆಣಿಕಾಪ್ರತೀ । ಧನ್ಯ ಪುರೂರವಾ ತ್ರಿಜಗತೀ । ಸ್ವಮುಖೇ ಶ್ರೀಪತಿ ವಾಖಾಣೀ ।೮೮೪॥ ತೇಣೇ ಅನುತಾಪಾಚ್ಯಾ ಅನುವೃತ್ತೀ । ನಿಂದೋನಿಯಾ ನಿಜಾತ್ಮಸ್ಥಿತೀ । ಕ್ಷಾಳಿಲೀ ಕಾಮಿನೀಕಾಮಾಸಕ್ತೀ । ಧುತಲಾ ನಿಶ್ಚಿತೀ ಮಹಾಮೋಹೋ ।೮೮೫॥ ಅನುತಾಪ ಆಗಿರೀ ಅಭಂಗ । ವೈರಾಗ್ಯಪುಟ ದೇಊನಿ ಚಾಂಗ । ವಿವೇಕೇ ದಮಿತಾ ಸಾಂಗ । ಕಾಮಮೋಹಾಚೇ ಡಾಗ ಕ್ಷಾಳಿಲೇ ತೇಣೇ ।೮೮೬॥ ಜೇವೀ ಸೋನೇ ಪುಟೀ ಪಡೇ । ತುಕ ತುಟೇ ವಾನೀ ಚಢೇ । ತೇವೀ ನಿಜಾತ್ಮಪ್ರಾಪ್ತಿ ನಿವಾಡೇ । ವೃತ್ತಿ ವಾಡೇಕೋಡೇ ಕ್ಷಾಳಿಲೀ ।೮೮೭॥ ಐಶಿಯೇ ಅತಿಶುದ್ಧ ನಿಜವೃತ್ತೀ । ವಿವೇಕವೈರಾಗ್ಯ ಸಂಪತ್ತೀ । ಪೂರ್ಣ ಅನುತಾಪಾಚೇ ಸ್ಥಿತೀ । ಮಾಝೀ ಕೃಪಾಪ್ರಾಪ್ತೀ ಪಾವಲಾ ।೮೮೮॥ ಮಾಝಿಯಾ ಕೃಪೇವೀಣ ಕಾಂಹೀ । ಕದಾ ಅನುತಾಪ ನುಪಜೇ ದೇಹೀ । ಶುದ್ಧ ಅನುತಾಪ ಜ್ಯಾಚ್ಯಾ ಠಾಯೀ । ತೇ ಮಾಝೀ ಕೃಪಾ ಪಾಹೀ ಪರಿಪೂರ್ಣ ।೮೮೯॥ ಮಾಝೀ ಕೃಪಾ ಝಾಲಿಯಾ ಜಾಣ । ಜೀವ ಹೋಯ ಬ್ರಹ್ಮ ಪೂರ್ಣ । ನಿಃಶೇಷ ಗಳೇ ದೇಹಾಭಿಮಾನ । ಮೀತೂಪಣಾ ಭಾಸೇನಾ ।೮೯೦॥ ತೇಥ ಕಾರ್ಯ ಕರ್ಮ ಆಣಿ ಕರ್ತಾ । ಭೋಗ್ಯ ಭೋಗ ಆಣಿ ಭೋಕ್ತಾ । ದೃಶ್ಯ ದರ್ಶನ ದ್ರಷ್ಟುತಾ । ಹೇ ತ್ರಿಪುಟೀ ಸರ್ವಥಾ ಅಸೇನಾ ।೮೯೧॥ ತ್ರಿಗುಣ ತ್ರಿಪುಟೀಚೇ ಕಾರಣ । ಮೂಳಭೂತ ನಿಜಅಜ್ಞಾನ । ತೇ ಸದ್ಗುರುಕೃಪೇಸ್ತವ ಜಾಣ । ಗೇಲೇ ಹರಪೋನ ಮಿಥ್ಯಾತ್ವೇ ।೮೯೨॥ ಜೇವೀ ದೋರಾಂಚೇ ಸಾಪಪಣ । ನಿರ್ಧಾರಿತಾ ಹಾರಪೇ ಪೂರ್ಣ । ತೇವೀ ಗುಣೇಸೀ ಅವಿದ್ಯಾ ಜಾಣ । ಜಾಯ ಹಾರಪೋನ ಗುರುಬೋಧೇ ।೮೯೩॥ ಸದ್ಗುರುಬೋಧೇ ಪಾಹತಾ ಜಾಣ । ದಿಸೇನಾ ದ್ವೈತಾಚೇ ಭಾನ । ತೇಥೇ ಉರ್ವಶೀ ಭೋಗೀ ಕೋಣ । ರಾಜಾ ಸ್ವಾನಂದೇ ಪೂರ್ಣ ನಿವಾಲಾ ।೮೯೪॥ ರಾಜಾ ನಿವಾಲಾ ಬ್ರಹ್ಮರಸೀ । ಮಗ ಸಾಂಡೂನಿಯಾ ಉರ್ವಶೀ । ತ್ಯಜೋನಿಯಾ ಸ್ವರ್ಗಲೋಕಾಸೀ । ನಿಜಬೋಧೇಸೀ ನಿಘಾಲಾ ।೮೯೫॥ ಇತರ ಜ್ಞಾತೇ ಸ್ತ್ರೀಯಾ ತ್ಯಾಗಿತೀ । ಪರೀ ತ್ಯಾಗಿನಾ ಕಾಮಾಸಕ್ತೀ । ತೈಸೀ ನವ್ಹೇ ರಾಯಾಚೀ ಸ್ಥಿತೀ । ಪರಮಾರ್ಥವಿರಕ್ತೀ ಪಾವಲಾ ।೮೯೬॥

ವಿಷಯಭೋಗಗಳು ಸಿಗದೇ ಇದ್ದ ಇಂತಹ ಅನೇಕರು ವಿರಕ್ತರಾಗಿ ಯೋಗಿಗಳಾಗಿದ್ದು ನೋಡಿದ್ದೇನೆ. ಆದರೆ ಸ್ವರ್ಗದ ಅಪ್ಸರೆಯ ವಿಲಾಸವನ್ನು ಭೋಗಿಸುತ್ತ ಇರುತ್ತಲೇ ಪುರೂರವಾ ರಾಜನು ವಿರಕ್ತನಾದನು. ಆದ್ದರಿಂದ ಆತನು ಧನ್ಯನು ।೮೮೩॥ ಪುರೂರವಾನಂತಹ ವಿರಕ್ತಿ ಪುರುಷನನ್ನು ನಾನು ಬೇರೆ ಯಾರನ್ನೂ ಕಾಣಲಿಲ್ಲ. ಈತನು ತ್ರಿಭುವನದಲ್ಲಿಯೇ ಧನ್ಯನು. ಹೀಗೆ ಸ್ವತಃ ಶ್ರೀಕೃಷ್ಣನು ಸ್ತುತಿಸಿದನು ।೮೮೪॥ ಪುರೂರವಾನಿಗೆ ಪಶ್ಚಾತ್ತಾಪವಾಯಿತು. ಆದ್ದರಿಂದ ಆತನು ತನ್ನನ್ನು ಸ್ವತಃ ನಿಂದಿಸಿಕೊಂಡನು ಹಾಗೂ ಸ್ತ್ರೀಸಂಗದ ಆಸಕ್ತಿಯನ್ನು ತ್ಯಜಿಸಿದನು. ಮಹಾಮೋಹವನ್ನು ತೊಳೆದುಬಿಟ್ಟನು ।೮೮೫॥ ಪಶ್ಚಾತ್ತಾಪ ರೂಪ ಪ್ರಜ್ವಲಿತ ಅಗ್ನಿಯಲ್ಲಿ ಉತ್ತಮವಾಗಿ ಪುಟವನ್ನು ಕೊಟ್ಟು ಮತ್ತು ವಿಚಾರದಿಂದ ದಮನವನ್ನು ಮಾಡಿ ಕಾಮಮೋಹಗಳ ಕಲೆಯನ್ನು ಸ್ವಚ್ಛಗೊಳಿಸಿದನು ।೮೮೬॥ ಬಂಗಾರವನ್ನು ಪುಟಗೊಳಿಸಲು ಆಗ ಅದರ ತೂಕವು ಕಡಿಮೆಯಾಗಿ ತೇಜವು ಅಧಿಕವಾಗುವುದು. ಅದರಂತೆ ರಾಜನು ಆತ್ಮಾನುಭವದ ಲಾಭದಿಂದ ವೃತ್ತಿಯನ್ನು ತೊಳೆದು ಪವಿತ್ರಗೊಳಿಸಿದನು ।೮೮೭॥ ಈ ಪ್ರಕಾರವಾಗಿ ವೃತ್ತಿಯು ಅತ್ಯಂತ ಶುದ್ಧ ಹಾಗೂ ವಿವೇಕ ವೈರಾಗ್ಯಯುಕ್ತವಾದ್ದರಿಂದ ಆ ರಾಜನು ನನ್ನ ಕೃಪೆಗೆ ಪಾತ್ರನಾದನು ।೮೮೮॥ ನನ್ನ ಕೃಪೆವಿಲ್ಲದೇ ದೇಹದಲ್ಲಿ ಅನುತಾಪವು ಎಂದಿಗೂ ಉತ್ಪನ್ನವಾಗುವುದಿಲ್ಲ. ಯಾರ ಹೃದಯದಲ್ಲಿ ಪರಿಪೂರ್ಣವಾಗಿ ಅನುತಾಪವು ಪ್ರಕಟವಾಗುವುದೋ, ಆತನಲ್ಲಿ ನನ್ನ ಪೂರ್ಣಕೃಪೆಯು ಪ್ರಕಟವಾಯಿತೆಂದೇ ತಿಳಿಯಬೇಕು ।೮೮೯॥ ನನ್ನ ಕೃಪೆಯಾಯಿತೆಂದರೆ ಆ ಯಾವ ಜೀವವು ಪೂರ್ಣ ಬ್ರಹ್ಮರೂಪವಾಗುವುದು ಮತ್ತು ದೇಹಾಭಿಮಾನವು ಇಲ್ಲದಾಗಿ ''ನಾನು ನೀನೆಂಬುವುದು'' ಸರ್ವಥಾ ಭಾಸವಾಗುವುದಿಲ್ಲ ।೮೯೦॥ ಆಗ ಕಾರ್ಯ - ಕರ್ಮ - ಕರ್ತಾ, ಭೋಗ್ಯ - ಭೋಗ - ಭೋಕ್ತಾ ಮತ್ತು ದೃಶ್ಯ-ದರ್ಶನ-ದೃಷ್ಟಾ ಎಂಬ ಈ ತ್ರಿಪುಟಿಗಳೇ ಉಳಿಯುವುದಿಲ್ಲ ।೮೯೧॥ ಮೂರು ಗುಣಗಳ ತ್ರಿಪುಟಿಯ ಕಾರಣವಾಗಿರುವ ಮೂಲಭೂತ ಅಜ್ಞಾನವು, ಅದು ಸದ್ಗುರುಗಳ ಕೃಪೆಯಿಂದ ತತ್ಕಾಲದಲ್ಲಿ ನಾಶವಾಗುವುದು ।೮೯೨॥ ಹಗ್ಗದ ಮೇಲಿನ ಸರ್ಪದ ಆರೋಪವು, ಇದು ಹಗ್ಗವೆಂದು ತಿಳಿಯುತ್ತಲೇ ಕೂಡಲೇ ಇಲ್ಲದಾಗುವುದು. ಅದರಂತೆ ಗುರುಗಳ ಉಪದೇಶದಿಂದ ಮೂರು ಗುಣಗಳ ಸಹ ಅವಿದ್ಯೆಯ ನಿರಸನೆಯಾಗುವುದು ।೮೯೩॥ ಸದ್ಗುರುಗಳ ಕೃಪೆಯಿಂದ ದ್ವೈತದ ಭಾನವೇ ಇಲ್ಲದಾಗುವುದು. ಆಗ ಉರ್ವಶಿಗೆ ಭೋಗಿಸಲು ಯಾರು ಉಳಿಯುವರು? ಈ ಪ್ರಕಾರವಾಗಿ ಆ ರಾಜನು ಆತ್ಮಾನಂದದಲ್ಲಿ ತೃಪ್ತನಾದನು ।೮೯೪॥ ರಾಜನು ಬ್ರಹ್ಮಾನಂದದಿಂದ ತೃಪ್ತನಾದನು. ಆಗ ಆತನು ಉರ್ವಶಿಯನ್ನು ಬಿಟ್ಟುಕೊಟ್ಟು ಸ್ವರ್ಗಭೋಗದ ತ್ಯಾಗವನ್ನು ಮಾಡಿ ಆತ್ಮಾನಂದದಿಂದ ಪೂರ್ಣನಾಗಿ ಸ್ವರ್ಗಲೋಕದಿಂದ ಹೊರಬಿದ್ದನು ।೮೯೫॥ ಇತರ ಜ್ಞಾನಿ ಜನರು ಸ್ತ್ರೀಯರ ತ್ಯಾಗವನ್ನು ಮಾಡುತ್ತಿರುವರು. ಆದರೆ ಅವರ ಆಸಕ್ತಿಯು ಹೋಗಿರುವುದಿಲ್ಲ. ಇದರಂತೆ ರಾಜನ ಅವಸ್ಥೆ ಇದ್ದಿಲ್ಲ. ಆತನು ನಿಜವಾದ ವಿರಕ್ತಿಯ ಅವಸ್ಥೆಯನ್ನು ಪ್ರಾಪ್ತಮಾಡಿಕೊಂಡಿದ್ದನು ।೮೯೬॥

ಜೇ ಪರಮ ವಿರಕ್ತೀಚೇ ಪೋಟೀ । ಕಾಮಿನೀಕಾಮವಾರ್ತಾ ನುರೀ । ಬ್ರಹ್ಮಾನಂದೇ ಕೋಂದಲೀ ಸೃಷ್ಟೀ । ಸ್ವಾನಂದಪುಷ್ಟೀ ನಿವಾಲಾ ।೯೭॥ ಐಸಾ ಸುಖರೂಪೇ ಸಹಜ । ಮೀ ಹೋ ಊನಿ ಪಾವಲಾ ಮಜ । ಜಿಣೋನಿ ಕಲ್ಪನಾಕಾಮಕಾಜ। ನಾಚತ ಭೋಜ ಸ್ವಾನಂದೇ ।೯೮॥ ಐಸಾ ನಿಶ್ಚಯೇಸೀ ನಿಶ್ಚಿತ । ಮಾರ್ಝೀ ನಿಜಸ್ವರೂಪ ಝಾಲಾ ಪ್ರಾಪ್ತ । ತೇಣೇ ಹಾ ಇತಿಹಾಸ ಏಥ । ನಿಜಸುಖಾರ್ಥ ಗಾಯಿಲಾ ।೯೯॥ ಅನುತಾಪ ಆವಡೀ ಇತಿಹಾಸ । ಗಾತಾ ಪ್ರಕಟೇ ಪೂರ್ಣ ಪರೇಶ । ತೇಥ ಸಹಜೇ ಅವಿದ್ಯೇಚಾ ನಾಶ । ನಿಜಸುಖೇ ಕ್ಷಿತೀಶ ನಿವಾಲಾ ।೧೦೦॥ ಏವಢೀ ಪಾವಾವಯಾ ನಿಜಪ್ರಾಪ್ತೀ । ತ್ಯಾಗಾವೀ ಕಾಮಿನೀಕಾಮಾಸಕ್ತೀ । ಮುಖ್ಯತ್ವೇ ಧರಾವೀ ಸತ್ಸಂಗತೀ । ಹೇಚಿ ಉದ್ಧವಾಪ್ರತೀ ಹರಿ ಬೋಲೇ ।೧೦೧॥

ತತೋ ದುಃಸಂಗಮುತ್ಸೃಜ್ಯ ಸತ್ಸು ಸಜ್ಜೇತ ಬುದ್ಧಿಮಾನ್ । ಸಂತ ಏವಾಸ್ಯ ಛಿಂದಂತಿ ಮನೋವ್ಯಾಸಂಗಮುಕ್ತಿಭಿಃ ।೨೬॥

ಅರ್ಥ:- ಬುದ್ಧಿವಂತರಾದ ಪುರುಷರು ಪುರೂರವಾ ರಾಜನಂತೆ ಕೆಟ್ಟ ಸಂಗತಿಯನ್ನು ತ್ಯಜಿಸಿ ಸತ್ಪುರುಷರ ಸಂಗತಿಯನ್ನು ಮಾಡಬೇಕು. ಸಂತ ಪುರುಷನು ತನ್ನ ಸದುಪದೇಶದಿಂದ ನಮ್ಮ ಮನದಲ್ಲಿನ ಆಸಕ್ತಿಯನ್ನು ನಷ್ಟ ಮಾಡುವನು.

ಅವಶ್ಯ ತ್ಯಾಗಾವೀ ದುಃಸಂಗತಾ । ತೋ ದುಃಸಂಗ ಕೋಣ ಮ್ಹಣಸೀ ಆತಾ । ತರೀ ಸ್ತ್ರೀ ಆಣಿ ಸ್ತ್ರೈಣಾವರತಾ । ದುಃಸಂಗ ಸರ್ವಥಾ ಅಸೇನಾ ।೧೦೨॥ ಜೋ ಮಾನೀನಾ ವೇದಶಾಸ್ತ್ರಾರ್ಥಾ । ಜೋ ಅವಿಶ್ವಾಸೀ ಪರಮಾರ್ಥಾ । ಜ್ಯಾಮಾಜೀ ಅತಿವಿಕಲ್ಪತಾ । ತೋಹೀ ತತ್ತ್ವತಾ ದುಃಸಂಗ ।೧೦೩॥ ಜೋ ಬೋಲಲ ಬೋಲೇ ಅತಿವಿರಕ್ತ । ಹೃದಯೀ ಅಧರ್ಮಕಾಮರತ । ಕಾಮರೋಧೇ ದ್ವೇಷಾ ಯೇತ । ತೋಹೀ ನಿಶ್ಚಿತ ದುಃಸಂಗ ।೧೦೪॥ ಕಾ ಸ್ವಧರ್ಮಕರ್ಮವಿನೀತತಾ । ಬಾಹ್ಯ ದಾವೀ ಸಾತ್ತ್ವಿಕತಾ । ಹೃದಯೀ ದೋಷದರ್ಶೀ ಸಂತಾ । ಹೇ ದುಃಸಂಗತಾ ಅತಿದುಷ್ಟ ।೧೦೫॥ ಜೋ ಮುಖೇ ನ ಬೋಲೇ ಆಪಣ । ಪರೀ ದೇಖೇ ಸಾಧೂಂಚೇ ದೋಷಗುಣ । ತೇಚಿ ಸಂವಾದಿಯಾ ದಾವೀ ಉಪಲಕ್ಷಣ । ತೋ ಅತಿಕಠಿಣ ದುಃಸಂಗ ।೧೦೬॥ ಮುಖ್ಯ ಆಪಲೀ ಜೇ ಸಕಾಮತಾ । ತೋಚಿ ದುಃಸಂಗ ಸರ್ವಥಾ । ತೋ ಕಾಮ ಸಮೂಳ ತ್ಯಾಗಿತಾ । ದುಃಸಂಗತಾ ತ್ಯಾಗಿಲೀ ।೧೦೭॥ ಕಾಮಕಲ್ಪನೇಚಾ ಜೋ ಮಾರ । ತೋಚಿ ದುಃಸಂಗ ದುರ್ಧರ । ತೇ ಕಾಮಕಲ್ಪನಾ ತ್ಯಾಗೀ ಜೋ ನರ । ತ್ಯಾಸೀ ಸಂಸಾರ ಸುಖರೂಪ ।೧೦೮॥

ಈ ಯಾವ ತೀವ್ರ ವಿರಕ್ತಿಯಿಂದ ಆತನಿಗೆ ಸ್ತ್ರೀಸಂಗದ ಹೆಸರೇ ಹುಟ್ಟದಾಯಿತು. ಆತನ ದೃಷ್ಟಿಗೆ ಸರ್ವ ವಿಶ್ವದಲ್ಲಿ ತುಂಬಿರುವ ಸತ್ಯಂ ಶಿವಂ ಸುಂದರಂ ಬ್ರಹ್ಮತ್ವದ ತೇಜವು ತೋರಹತ್ತಿತು. ಆತನು ಸ್ವಾನಂದದಿಂದ ತೃಪ್ತನಾದನು ।೯೭॥ ಈ ರೀತಿಯಲ್ಲಿ ಆತನು ಆತ್ಮಸ್ವರೂಪದಲ್ಲಿ ಲೀನನಾಗಿ ಆತ್ಮಸ್ವರೂಪದಿಂದನನಗೆ ಪ್ರಾಪ್ತನಾದನು. ಕಲ್ಪನೆಯಿಂದ ಉತ್ಪನ್ನವಾಗಿರುವ ಕಾಮಸ್ವರೂಪವನ್ನು ನಿಶ್ಚಯವಾಗಿ ಜಯಿಸಿ ಆತನು ಆತ್ಮಾನಂದದಿಂದ ಕುಣಿಯಹತ್ತಿದನು ।೯೮॥ ಹೀಗೆ ದೃಢ ನಿಶ್ಚಯದಿಂದ ಆತನಿಗೆ ನನ್ನ ನಿಜಸ್ವರೂಪವು ಪ್ರಾಪ್ತವಾಯಿತು. ಮತ್ತು ಆತನು ತನ್ನ ಇತಿಹಾಸವನ್ನು ತನ್ನ ಸುಖಕ್ಕಾಗಿ ಹಾಡಿದನು ।೯೯॥ ಪಶ್ಚಾತ್ತಾಪ ಶಬ್ದಗಳಿಂದ ಈ ಇತಿಹಾಸವನ್ನು ಹಾಡಿದ್ದರಿಂದ ರಾಜನಲ್ಲಿಯ ಪರಮೇಶ್ವರನು ಪ್ರಕಟನಾದನು, ಸಹಜವಾಗಿ ಅವಿದ್ಯೆಯ ನಾಶವಾದ್ದರಿಂದ ರಾಜನು ಆತ್ಮಸುಖದಿಂದ ತೃಪ್ತನಾದನು ।೧೦೦॥ ಇಷ್ಟೊಂದು ನಿಜಲಾಭವು ಆಗಬೇಕಾಗಿದ್ದರೆ ಸ್ತ್ರೀಯರ ವಿಷಯಾಸಕ್ತಿಯನ್ನು ತ್ಯಜಿಸಬೇಕು ಮತ್ತು ಪ್ರಾಮುಖ್ಯವಾಗಿ ಸತ್ಸಂಗತಿಯನ್ನು ಮಾಡಬೇಕು ಇದನ್ನೇ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ।೧೦೧॥

ದುಃಸಂಗತಿಯನ್ನು ಅವಶ್ಯವಾಗಿ ತ್ಯಜಿಸಬೇಕು. ದುಃಸಂಗತಿ ಎಂದರೆ ಯಾವುದು ಎಂದು ನೀನು ಕೇಳಬಹುದು. ಅದಕ್ಕಾಗಿ ಹೇಳುವೆ, ಕೇಳು. ಸ್ತ್ರೀ ಮತ್ತು ಸ್ತ್ರೀಲಂಪಟ (ಸ್ತ್ರೈಣ) ಈ ಈರ್ವರಿಗಿಂತಲೂ ಅಧಿಕವಾಗಿ ನಾಶಮಾಡುವ ಅನ್ಯ ಯಾವ ದುಃಸಂಗತಿಯೂ ಇರುವುದಿಲ್ಲ ।೧೦೨॥ ಯಾರು ವೇದಶಾಸ್ತ್ರಗಳ ಪ್ರಮಾಣವನ್ನು ಮನ್ನಿಸುವುದಿಲ್ಲ, ಪರಮಾರ್ಥದಲ್ಲಿ ವಿಶ್ವಾಸವನ್ನು ಇಡುವುದಿಲ್ಲ, ಅತಿಶಯವಾಗಿ ವಿಕಲ್ಪ ಮಾಡುವವರು ಹೀಗಿರುವವರ ಸಂಗತಿಯು ಇದು ದುಃಸಂಗತಿಯಾಗಿರುವುದು ।೧೦೩॥ ಕೆಲವರು ವೈರಾಗ್ಯದ ದೊಡ್ಡ ದೊಡ್ಡ ಪ್ರವಚನ ಮಾಡುವರು, ಆದರೆ ಅವರ ಹೃದಯದಲ್ಲಿ ಅಧರ್ಮ ಮತ್ತು ಕಾಮದ ವಿಷಯದಲ್ಲಿ ಪ್ರೀತಿವಿರುವುದು.ಮತ್ತು ಅವರ ಈ ಇಚ್ಛೆಗೆ ಪ್ರತಿಬಂಧವಾದರೆ ದ್ವೇಷವು ನಿರ್ಮಾಣವಾಗುತ್ತಿರುವುದು. ಇಂತಹವರ ಸಂಗತಿಯೂ ಕೂಡ ದುಃಸಂಗತಿಯಾಗಿರುವುದು ।೧೦೪॥ ಕೆಲವರು ಬಾಹ್ಯದಲ್ಲಿ ಸ್ವಧರ್ಮಕರ್ಮ, ವಿನಯತೆ, ಸಾತ್ವಿಕತೆ ತೋರಿಸುತ್ತಿರುವರು. ಆದರೆ ಮನದಲ್ಲಿ ಸಂತರ ವಿಷಯದಲ್ಲಿ ದೋಷವನ್ನು ಎಣಿಸುತ್ತಿರುವರು. ಇವರ ಸಂಗತಿಯನ್ನು ಕೂಡ ದುಃಸಂಗತಿಯೇ ಆಗಿರುವುದು ।೧೦೫॥ ಇನ್ನು ಕೆಲವರು ತಮ್ಮ ವಾಣಿಯಿಂದ ಏನೂ ನುಡಿಯುವುದಿಲ್ಲ. ಆದರೆ ಮನದಲ್ಲಿ ಮಾತ್ರ ಸಾಧು ಸಂತರ ಗುಣ- ದೋಷಗಳನ್ನು ಕಾಣುತ್ತಿರುವರು. ಸಂವಾದದಲ್ಲಿ ಅವರು ಉಪಲಕ್ಷಣವನ್ನು ತೋರಿಸುತ್ತಿರುವರು. ಇದೂ ಸಹ ದುಃಸಂಗತಿಯಾಗಿರುವುದು ।೧೦೬॥ ಮುಖ್ಯವಾಗಿ ತನ್ನಲ್ಲಿರುವ ಕಾಮಾಸಕ್ತಿಯೇ ದುಃಸಂಗತಿಯಾಗಿರುವುದು. ಈ ಕಾರಣವಾಗಿ ಪ್ರಾರಂಭದಲ್ಲಿ ಈ ಕಾಮಾಸಕ್ತಿಯನ್ನು ಪರಿಪೂರ್ಣವಾಗಿ ತ್ಯಜಿಸಿದರೆ ಆಗ ದುಃಸಂಗತಿಯು ಸಹಜವಾಗಿ ತ್ಯಜಿಸಲ್ಪಡುವುದು ।೧೦೭॥ ಕಾಮಕಲ್ಪನೆಯ ಹೊಡೆತವು ಇದು ನಿಜವಾದ ದುಃಸಂಗವಾಗಿರುವುದು. ಯಾವ ಪುರುಷನು ಕಾಮಕಲ್ಪನೆಯನ್ನು ಬಿಟ್ಟುಬಿಡುವನೋ ಆತನ ಸಂಸಾರವು ಸುಖರೂಪವಾಗುವುದು ।೧೦೮॥

ಕಾಮಕಲ್ಪನಾ ತ್ಯಾಗಾವಯಾ ಜಾಣ । ಮುಖ್ಯ ಸತ್ಸಂಗಚಿ ಕಾರಣ । ಸಂತಾಂಚೇ ವಂದಿತಾ ಶ್ರೀಚರಣ। ಕಲ್ಪನಾಕಾಮ ಜಾಣ ಉಪಮರ್ದೇ ।೩೦೯॥ ಸಂಗ ಸರ್ವಥಾ ಬಾಧಕ । ಮ್ಹಣಶೀ ತ್ಯಜಾವಾ ನಿಃಶೇಖ। ತರೀ ತತ್ಸಂಗ ನ ಧರಿತಾ ದೇಖ । ಕೇವೀ ಸಾಧಕ ಸುಟತೀಲ ।೩೧೦॥ ಸತ್ಸಂಗೇವೀಣ ಜೇ ಸಾಧನ । ತೇಚಿ ಸಾಧಕಾ ದೃಢ ಬಂಧನ । ಸತ್ಸಂಗೇವೀಣ ತ್ಯಾಗ ಜಾಣ । ತೇಚಿ ಸಂಪೂರ್ಣ ಪಾಷಾಂಡ ।೩೧೧॥ ಚಿತ್ತ ವಿಷಯಾಂಚಾ ಸಂಬಂಧ । ಗಾಂಠೀ ಬೈಸಲ್ಯಾ ಸುಬದ್ಧ । ತ್ಯಾಂಚಾ ಕರಾವಯಾ ಛೇದ । ವಿವೇಕೇ ವಿಶದ ನಿಜಸಾಧು ।೩೧೨॥ ಸಂತಾಚ್ಯಾ ಸಹಜ ಗೋಠೀ । ತ್ಯಾಚಿ ಉಪದೇಶಾಂಚ್ಯಾ ಕೋಟೀ । ದೇಹಾತ್ಮತಾ ಜೀವಗಾಂಠೀ । ಬೋಲಾಸಾಠೀ ಛೇದಿತೀ ।೩೧೩॥ ಭಾವೇ ಧರಿಲ್ಯಾ ಸತ್ಸಂಗತೀ। ಸಾಧಕಾ ಭವಪಾಶಾನಿರ್ಮುಕ್ತೀ । ಯಾಲಾಗೀ ಅವಶ್ಯ ಬುದ್ಧಿಮಂತೀ । ಕರಾವೀ ಸಂಗತೀ ಸಂತಾಂಚೀ ।೩೧೪॥ ತ್ಯಾ ಸಂತ ಲಕ್ಷಣಾಂಚೀ ಸ್ಥಿತೀ । ಅತಿಸಾಕ್ಷೇಪೇ ಶ್ರೀಪತೀ । ಆದರೇ ಸಾಂಗೇ ಉದ್ಧವಾಪ್ರತೀ । ಯಥಾನಿಗುತೀ ನಿಜಬೋಧೇ ।೩೧೫॥

ಸಂತೋಽನಪೇಕ್ಷಾ ಮಚಿತ್ತಾಃ ಪ್ರಶಾಂತಾಃ ಸಮದರ್ಶಿನಃ । ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ನಿಷ್ಪರಿಗ್ರಹಾ ।೨೭॥

ಅರ್ಥ:- ನನ್ನ ಭಕ್ತರಾಗಿರುವ ಸಂತರು ತಮ್ಮ ಮನಸ್ಸನ್ನು ನನ್ನಲ್ಲಿ ಸ್ಥಿರಗೊಳಿಸುತ್ತಾರೆ. ಭೌತಿಕವಾದ ಯಾವ ವಸ್ತುವಿನಲ್ಲಿಯೂ ಅವರು ಅವಲಂಬಿಸಿರುವುದಿಲ್ಲ. ಅವರು ಸದಾ ಶಾಂತಚಿತ್ತರಾಗಿರುವರು. ಸಮದೃಷ್ಟಿ ಉಳ್ಳವರಾಗಿರುವರು. ಮಮಕಾರ, ಮಿಥ್ಯಾ ಅಹಂಕಾರ, ದ್ವಂದ್ವ ಮತ್ತು ಲೋಭಗಳಿಂದ ಮುಕ್ತರಾಗಿರುವರು.

ಸಾಧೂಂಚೇ ಅಮಿತ ಗುಣ । ತ್ಯಾಂತ ಮುಖ್ಯತ್ವೇ ಅಷ್ಟಲಕ್ಷಣ । ನಿವಡೂನಿ ಸಾಂಗೇ ಶ್ರೀಕೃಷ್ಣ । ತೇ ಕೋಣ ಕೋಣ ಅವಧಾರೀ ।೩೧೬॥ ಪ್ರಾಪ್ತಾಪ್ರಾಪ್ತ -ಲಾಭಾವಸ್ಥಾ । ಬಾಧೂ ನ ಶಕೇ ಸಾಧೂಂಚ್ಯಾ ಚಿತ್ತಾ । ಚಿತ್ತ ರಾತಲೇ ಭಗವಂತಾ । ''ನಿರಪೇಕ್ಷತಾ'' ಯಾ ನಾಂವ ।೩೧೭॥ ಪೈಲ ವಿಷಯೋಮಜ ವ್ಹಾವಾ । ಐಸಾ ಆಠವ ನಾಠವೇ ಜೀವಾ । ಹಾ ಸಾಧೂಚಾ ನಿರಪೇಕ್ಷ ಠೇವಾ । ಜಾಣ ಉದ್ಧವಾ ಗುಣ ಪಹಿಲಾ ।೩೧೮॥ ಚಿತ್ತೇ ಚಿಂತಾವೇ ಚೈತನ್ಯ । ಯಾಚಿ ನಾಂವೇ ''ಮಚಿತ್ತ''- ಪಣ । ಯಾಚಿ ನಾಂವೇ ನಿರಪೇಕ್ಷ ಪೂರ್ಣ। ಇತರ ಚಿಂತನ ಭವಬಂಧು ।೩೧೯॥ ನಿರಪೇಕ್ಷ ವ್ಹಾವಯಾ ಏಥ । ಜಾಗೃತಿ ಸ್ವಪ್ನಸುಷುಪ್ತಿ ಆಂತ । ಚಿನ್ಮಾತ್ರೀ ಜಡಲೇ ಚಿತ್ತ । ಯಾ ನಾಂವ ''ಮಚ್ಚಿತ್ತ'' ಗುಣ ದುಜಾ ।೩೨೦॥ ದೇಹ ಝಾಲಿಯಾ ಲಕ್ಷ್ಮೀಯುಕ್ತ । ಅಥವಾ ಹೋ ಕಾ ಆಪದ್ಭೂತ । ಚಿತ್ತ ಪರಮಾನಂದೀ ನಿಶ್ಚಿತ । ಯಾ ನಾಂವ ''ಮಚ್ಚಿತ್ತ'' ಉದ್ಧವಾ ।೩೨೧॥

ಕಾಮಕಲ್ಪನೆಯ ತ್ಯಾಗಕ್ಕಾಗಿ ಸತ್ಸಂಗವು ಇದು ಮುಖ್ಯವಾಗಿರುವುದು. ಸಂತರ ಚರಣಗಳಿಗೆ ವಂದನೆಯನ್ನು ಮಾಡಲು ಆಗ ಕಾಮಕಲ್ಪನೆಯು ಸಹಜವಾಗಿಯೇನಾಶವಾಗುವುದು ।೩೦೯॥ ಸಂಗ ಎಂಬುವುದು ಇದೇ ಬಾಧಕವಾಗಿರುವುದು. ಆದ್ದರಿಂದ ಎಲ್ಲ ಸಂಗವನ್ನು ಬಿಟ್ಟುಬಿಡಬೇಕು ಎಂದು ಹೀಗೆ ನೀನು ಹೇಳಬಹುದು. ಆದರೆ ಸತ್ಸಂಗವನ್ನು ಮಾಡದಿದ್ದರೆ ಸಾಧಕನು ಬಂಧನದಿಂದ ಹೇಗೆ ಬಿಡಿಸಿಕೊಳ್ಳುವನು ? ।೩೧೦॥ ಸತ್ಸಂಗವಿಲ್ಲದ ಸಾಧನೆಗಳು ಇವು ಸಾಧಕನಿಗೆ ಬಂಧನಕಾರಕವಾಗುವುವು. ಸತ್ಸಂಗವಿಲ್ಲದೇ ಮಾಡಿದ ತ್ಯಾಗವು ಇದು ಶುದ್ಧವಾದ ಪಾಖಂಡತನವಾಗಿರುವುದು ।೩೧೧॥ ಚಿತ್ತ ಮತ್ತು ವಿಷಯಗಳ ಅತ್ಯಂತ ದೃಢವಾದ ಗಂಟು ಬಿದ್ದಿರುವುದು. ಇದನ್ನು ವಿವೇಕದಿಂದ ಬಿಡಿಸುವವರು ಒಬ್ಬ ಸಂತರು ಮಾತ್ರ ಸಮರ್ಥರಾಗಿರುವರು ।೩೧೨॥ ಸಂತರು ಸಹಜವಾಗಿ ಮಾತನಾಡಿದರೂ ಕೂಡ ಅದು ಉಪದೇಶದ ಕೋಟಿಪಟ್ಟು ಶ್ರೇಷ್ಠವಾಗಿರುವುದು. ದೇಹ ಮತ್ತು ಆತ್ಮಾ ಇದರ ದೃಢಬಂಧನೆಯನ್ನು ಅವರು ಒಂದೇ ಶಬ್ದದಿಂದ ಮುರಿದು ಹಾಕುವರು ।೩೧೩॥ ಪರಮ ಶ್ರದ್ಧೆಯಿಂದ ಸಂತರ ಸಂಗತಿಯನ್ನು ಮಾಡಿದರೆ ಸಾಧಕನು ತತ್ಕಾಲದಲ್ಲಿ ಭವಪಾಶದಿಂದ ಮುಕ್ತನಾಗುವನು. ಆದ್ದರಿಂದ ಜಾಣರಾದವರು ಅವಶ್ಯವಾಗಿ ಸಂತರ ಸಂಗತಿಯನ್ನು ಮಾಡಬೇಕು ।೩೧೪॥ ಸಂತರ ಲಕ್ಷಣಗಳು ಹೇಗೆ ಇರುವುವು ಎಂಬ ಇದರ ಯೋಗ್ಯ ರೀತಿಯ ವರ್ಣನೆಯನ್ನು ಶ್ರೀಕೃಷ್ಣನು ಸಂಕ್ಷಿಪ್ತವಾಗಿ ಅತ್ಯಾದರದಿಂದ ಉದ್ಧವನಿಗೆ ಹೇಳುತ್ತಿರುವನು ।೩೧೫॥

ಸಾಧುಗಳವರ ಗುಣಗಳು ಅನೇಕವಿರುವುವು. ಅವುಗಳಲ್ಲಿನ ಪ್ರಮುಖವಾಗಿರುವ ಎಂಟು ಗುಣಗಳನ್ನು ಆರಿಸಿ ಶ್ರೀಕೃಷ್ಣನು ಹೇಳುತ್ತಿರುವನು. ಅವು ಯಾವ ಯಾವುವು ಎಂಬುವುದನ್ನು ಕೇಳಿರಿ ।೩೧೬॥ ಸಾಧುವಿನ ಮನಸ್ಸಿಗೆ ಲಾಭ, ಹಾನಿಗಳು ಬಾಧಿಸಲಾರವು. ಅವರ ಚಿತ್ತವು ಸತತವಾಗಿ ಭಗವಂತನ ಪ್ರೇಮದಲ್ಲಿ ರಮಮಾಣವಾಗಿರುವುದು. ಹೀಗಿದ್ದರೆ ಮಾತ್ರ ನಿರಪೇಕ್ಷತಾ ಎಂದು ಹೇಳುವರು ।೩೧೭॥ ಸಾಧು ಜನರಿಗೆ ಯಾವುದಾದರೂ ವಿಷಯ ಪ್ರಾಪ್ತವಾಗಬೇಕೆಂಬ ಬಯಕೆಯ ಸ್ಮರಣೆಯೂ ಕೂಡ ಇರುವುದಿಲ್ಲ. ಹೇ ಉದ್ಧವಾ, ಇದು ಸಾಧುಗಳ ನಿರಪೇಕ್ಷತೆಯ ನಿಧಿಯಾಗಿರುವುದು. ಇದು ಅವರ ಮೊದಲನೆಯ ಗುಣವಾಗಿರುವುದು ।೩೧೮॥ ಚಿತ್ತದಿಂದ ಚೈತನ್ಯದ ಚಿಂತನೆಯನ್ನು ಮಾಡಬೇಕು. ಇದಕ್ಕೆ ಮಚ್ಚಿತ್ತಾ ಎಂದು ಹೇಳುವರು. ಈ ಚಿಂತನೆಯಿಂದಲೇ ಪೂರ್ಣವಾದ ನಿರಪೇಕ್ಷತೆಯು ಪ್ರಾಪ್ತವಾಗುತ್ತಿರುವುದು. ಇತರ ಸರ್ವ ಚಿಂತನೆಗಳು ಭವ-ಬಂಧನದಲ್ಲಿ ತಳ್ಳುವುವು ।೩೧೯॥ ಈ ಪ್ರಕಾರವಾಗಿ ನಿರಪೇಕ್ಷತೆಯು ಪ್ರಾಪ್ತವಾಗುವುದಕ್ಕಾಗಿ ಜಾಗೃತೀ, ಸ್ವಪ್ನ ಹಾಗೂ ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಚಿತ್ತವನ್ನು ಪರಬ್ರಹ್ಮ ಸ್ವರೂಪದತ್ತ ತೊಡಗಿಸಬೇಕು. ಹೀಗೆ ಮಚ್ಚಿತ್ತ ಆಗುವುದು ಇದು ಎರಡನೆಯ ಗುಣವಾಗಿರುವುದು ।೩೨೦॥ ದೇಹವು ಸಂಪತ್ತಿನಿಂದ ಕೂಡಿರಲಿ ಅಥವಾ ಬಡತನದಿಂದ ಬಳಲುತ್ತಿರಲಿ, ಯಾರ ಚಿತ್ತವು ಪರಮಾನಂದಯುಕ್ತವಾಗಿರುವುದೋ ಇದರ ನಾಮವೇ ಮಚ್ಚಿತ್ತವಾಗಿರುವುದು ।೩೨೧॥

ಕಾಮಲೋಭಾದಿದೋಷರಹಿತ । ಪರಮಾನಂದೀ ಜಡಲೇ ಚಿತ್ತ । ಶಾಂತಿ ಸುಖವಾಸೇ ವಸೇ ತೇಥ । ಯಾಲಾಗೀ ''ಪ್ರಶಾಂತ'' ಬೋಲಿಜೇ ತ್ಯಾಸೀ ।೩೨೨॥ ಜರೀ ಪ್ರಾಣಾಂತ ಕೇಲಾ ಅಪಕಾರ । ತರೀ ನ ಮ್ಹಣೇ ಹಾ ''ದುಷ್ಟ'' ನರ । ಅಪಕಾರ್‍ಯಾ ಕರೀ ಅತಿ ಉಪಕಾರ । ಪ್ರಶಾಂತಿ ಪ್ರಕಾರ ಯಾ ನಾಂವ ।೩೨೩॥ ಜರೀ ಠಕೂನಿ ಸರ್ವಸ್ವ ನೇಲೇ । ತರೀ ಕ್ರೋಧೇನಾ ದೋಷ ಬೋಲೇ । ತೇ ಜಾಣ ಬ್ರಹ್ಮಾರ್ಪಣ ಝಾಲೇ । ಯೇಣೇ ಆಂಗಾಆಲೇ ಪ್ರಶಾಂತತ್ವ ।೩೨೪॥ ಬ್ರಹ್ಮಭಾವೇಚಿ ತತ್ತ್ವತಾ । ವಿಶ್ವಾಸಣೇ ಸರ್ವಭೂತಾ। ಕದಾ ವಿಕಲ್ಪ ನುಪಜೇ ಚಿತ್ತಾ । ಹೇ ಪ್ರಶಾಂತತಾ ಗುಣ ತಿಜಾ ।೩೨೫॥ ಐಸಾ ಹಾ ಪ್ರಶಾಂತ ಗುಣ । ಅಂಗೀ ಬಾಣಾವಯಾ ಹೇಚಿ ಕಾರಣ । ಜಗಿ ದೇಖೇ ''ಸಮದರ್ಶನ'' । ಬ್ರಹ್ಮ ಪರಿಪೂರ್ಣ ಸಮಸಾಮ್ಯೇ ।೩೨೬॥ ಜಗ ಪಾಹತಾ ದಿಸೇ ವಿಷಮ । ಪರೀ ವಿಷಮೀ ದೇಖೇ ಸಮಬ್ರಹ್ಮ । ತೋಚಿ ''ಸಮದರ್ಶೀ'' ಪರಮ । ಹಾ ಗುಣ ನಿರುಪಮ ಪೈ ಚೌಥಾ ।೩೨೭॥ ಹೇ ಸಮದೃಷ್ಟೀ ಯಾವಯಾ ಹಾತಾ । ಭಾವೇ ಭಜೋನಿ ಭಗವಂತಾ । ನಿಃಶೇಷ ತ್ಯಜಾವೀ ಅಹಂಮಮತಾ । ತೇಹೀ ಕಥಾ ಅವಧಾರೀ ।೩೨೮॥ ದೇಹೀ ವರಿತಾ ದೇಹಾಭಿಮಾನ । ತೇ ಅಹಂತಾ ವಾಢವೀ ''ಮೀಪಣ'' । ಮೀಪಣೇ ''ಮಮತಾ'' ಜಾಣ । ವಾಢೇ ಸಂಪೂರ್ಣ ದೇಹಸಂಬಂಧೇ ।೩೨೯॥ ಜೇ ವಾಢಲೀ ಅಹಂಮಮತಾ । ತೇ ವರ್ತವೀ ಮಹಾದುಃಖಾವರ್ತಾ । ತೇಚಿ ನಿವಾರಾವಯಾ ನಿಜವ್ಯಥಾ । ಸದ್ಭಾವೇ ಗುರುನಾಥಾ ಶರಣ ಜಾವೇ ।೩೩೦॥ ಗುರುಕೃಪಾ ಝಾಲಿಯಾ ಪೂರ್ಣ । ಮಾಝ್ಯಾ ದೇಹೀಂಚೇ ಜೇ ಮೀಪಣ । ತೇ ಉಕಲೋನಿ ದಾವಿತಾ ಜಾಣ । ಜಗ ಸಂಪೂರ್ಣ ಮೀ ಏಕ ।೩೩೧॥ ಜೇ ಜೇ ಸಾನ ಥೋರ ದಿಸೇ ದೃಷ್ಟೀ । ತೇ ತೇ ಅವಘೇ ಮೀಚಿ ಸೃಷ್ಟೀ । ಮಾಝ್ಯಾ ಮೀಪಣಾಚೀ ನಿಜಪುಷ್ಟೀ । ಘೋಂಟೀತ ಉರೀ ತ್ರೈಲೋಕ್ಯ ।೩೩೨॥ ಐಸಾ ಮೀಪಣೇ ಪರಿಪೂರ್ಣ । ತೇಥ ''ಮೀ'' ಮ್ಹಣಾವಯಾ ಮ್ಹಣತೇ ಕೋಣ। ನಿಃಶೇಷ ನಿಮಾಲೇ ಮೀತೂಪಣ । ''ನಿರಭಿಮಾನ'' ಯಾ ನಾಂವ ।೩೩೩॥ ಐಸೇ ಮಾಝೇ ಮೀಪಣ ಪಾಹತಾ । ಸಮೂಳ ಹಾರಪಲೀ ಮಮತಾ । ಹೇ ''ಮಾಝೇ'' ಮ್ಹಣಾವಯಾ ಪುರತಾ । ಠಾವ ರಿತಾ ನುರೇಚಿ ।೩೩೪॥ ಮಾಝ್ಯಾ ಮೀಪಣಾಬಾಹಿರೇ । ಜೈ ಮಮತಾಸ್ಪದ ದುಜೇ ಉರೇ । ತೈ ತೇಥ ಪೂರ್ಣ ಮಮತಾ ಸ್ಫುರೇ । ತೇ ಮ್ಯಾ ಚಿನ್ಮಾತ್ರೇ ಘೋಂಟಿಲೀ ।೩೩೫॥

ಚಿತ್ತವು ಕಾಮಲೋಭಾದಿ ದೋಷರಹಿತವಾಗಿ ಪರಮಾನಂದದಲ್ಲಿ ತನ್ಮಯವಾಗಲು ಆಗ ಅಲ್ಲಿ ಶಾಂತಿಯು ಸುಖವಾಗಿ ವಾಸಮಾಡುವುದು. ಆದ್ದರಿಂದ ಆತನಿಗೆ ಪ್ರಶಾಂತ ಎಂದು ಕರೆಯುವರು ।೩೨೨॥ ಒಬ್ಬನು ತನ್ನ ಮೇಲೆ ಪ್ರಾಣಾಂತಕವಾಗಿ ಅಪಕಾರವನ್ನು ಮಾಡಿದರೂ ಕೂಡ ಆತನಿಗೆ ದುಷ್ಟ ಮನುಷ್ಯನು ಎಂದು ತಿಳಿಯದೇ ಆ ಅಪಕಾರಿಯ ಮೇಲೆ ಉಪಕಾರವನ್ನು ಮಾಡುವಿಕೆಗೆ ಉತ್ಕೃಷ್ಟವಾದ ಶಾಂತಿ ಎಂದು ಹೇಳುವರು ।೩೨೩॥ ಒಬ್ಬನು ಮೋಸ ಮಾಡಿ ತನ್ನಲ್ಲಿಯ ಎಲ್ಲವನ್ನೂ ದೋಚಿಕೊಂಡು ಒಯ್ದರೂ ಕೂಡ ಆ ಅಪರಾಧಿ ಮನುಷ್ಯನಲ್ಲಿ ಕ್ರೋಧವನ್ನು ಮಾಡದೇ ತನ್ನ ವಸ್ತುಗಳು ಬ್ರಹ್ಮಾರ್ಪಣೆಯಾದವು ಎಂದು ತಿಳಿಯುವುದು ಪ್ರಶಾಂತಿಯು ಪ್ರಾಪ್ತವಾಗಿರುವ ಚಿನ್ಹೆಯಾಗಿರುವುದು ।೩೨೪॥ ಸರ್ವ ಪ್ರಾಣಿಮಾತ್ರರಲ್ಲಿ ಬ್ರಹ್ಮಭಾವದಿಂದ ವಿಶ್ವಾಸವನ್ನಿಡುವುದು ಮತ್ತು ಮನದಲ್ಲಿ ಸ್ವಲ್ಪವೂ ಕೂಡ ವಿಕಲ್ಪ ನಿರ್ಮಾಣವಾಗದೇ ಇರುವಿಕೆಯೇ ಪ್ರಶಾಂತದ ಇದು ಮೂರನೆಯ ಗುಣವಾಗಿರುವುದೆಂದು ತಿಳಿಯಬೇಕು ।೩೨೫॥ ಹೀಗೆ ಈ ಯಾವ ಪ್ರಶಾಂತತೆಯ ಗುಣವು ಅಂಗದಲ್ಲಿ ನಿರ್ಮಾಣವಾಗುವುದಕ್ಕಾಗಿ ಜಗತ್ತಿನಲ್ಲಿ ಬ್ರಹ್ಮವು ಸಮಭಾವದಿಂದ ತುಂಬಿದೆ ಎಂದು ತಿಳಿದು ಸರ್ವ ವಿಷಯದಲ್ಲಿ ಸಮಭಾವವನ್ನು ಇಡಬೇಕು ।೩೨೬॥ ಜಗತ್ತಿನಲ್ಲಿ ಎಲ್ಲೆಲ್ಲಿಯೂ ವೈಷಮ್ಯವೇ ತುಂಬಿರುವುದು ಕಾಣುವುದು. ಆದರೆ ಇಂತಹ ವೈಷಮ್ಯಸ್ಥಿತಿಯಲ್ಲಿಯೂ ಕೂಡ ಯಾರು ಸಮಬ್ರಹ್ಮವನ್ನು ಕಾಣುವರೋ ಅವರೇ ಸಮದರ್ಶಿಯಾಗಿರುವರು. ಇದು ನಾಲ್ಕನೆಯ ನಿರುಪಮ ಗುಣವಾಗಿರುವುದು ।೩೨೭॥ ಈ ಸಮದೃಷ್ಟಿಯು ಕೈಸೇರಬೇಕಾದರೆ ಪ್ರೇಮಭಾವದಿಂದ ಭಜನೆಯನ್ನು ಮಾಡುತ್ತ ಅಹಂ ಮಮತೆಯನ್ನು ನಿಃಶೇಷವಾಗಿ ತ್ಯಜಿಸಬೇಕು. ಈ ಮಾತನ್ನು ಈಗ ಕೇಳು ।೩೨೮॥ ದೇಹದಲ್ಲಿ ದೇಹಾಭಿಮಾನವನ್ನು ಹಿಡಿಯಲು ಅದರಿಂದ ಅಹಂಕಾರವು ಬೆಳೆದು ಈ ಸಂಬಂಧವಾಗಿ ಮಮತೆಯೂ ಕೂಡ ಬೆಳೆಯುವುದು ।೩೨೯॥ ಹೀಗೆ ಬೆಳೆದುಕೊಂಡ ಅಹಂ ಮಮತೆಯು ಇದು ಮಹಾದುಃಖದ ಮಡುವಿನಲ್ಲಿ ತಳ್ಳುವುದು. ಈ ನಿಜದುಃಖದ ನಿವಾರಣೆಗಾಗಿ ಪರಮಶ್ರದ್ಧೆಯಿಂದ ಸದ್ಗುರುಗಳಿಗೆ ಶರಣಾಗಬೇಕು ।೩೩೦॥ ಸದ್ಗುರುಗಳ ಕೃಪೆಯಾಯಿತೆಂದರೆ ಅವರು ನಮ್ಮ ದೇಹದಲ್ಲಿನ ನಾನು ಎನ್ನುವುದನ್ನು ಬಿಚ್ಚಿ ತೋರಿಸುವರು. ಆಗ ಸರ್ವ ಜಗತ್ತು ನಾನೇ ಇದ್ದೇನೆ ಎಂಬ ಈ ಯಾವ ಅನುಭವವು ಬರುವುದು ।೩೩೧॥ ಚಿಕ್ಕ ದೊಡ್ಡದಾಗಿರುವ ಯಾವುದೇ ವಸ್ತು ಕಾಣಲಿ ಅವೆಲ್ಲವೂ ಸೃಷ್ಟಿಯಲ್ಲಿ ನನ್ನದೇ ಸ್ವರೂಪವಾಗಿರುವುವು. ಆದ್ದರಿಂದ ನನ್ನಲ್ಲಿಯ ನಾನು ಎನ್ನುವುದು ತ್ರಿಭುವನದಲ್ಲಿ ವ್ಯಾಪಿಸಿಕೊಂಡಿರುವುದು ।೩೩೨॥ ಹೀಗೆ ಶುದ್ಧವಾದ ನಾನು ಎಂಬುವುದೊಂದಿಗೆ ತಾನು ಪರಿಪೂರ್ಣನಾಗಿರಲು, ಆಗ ದೇಹಕ್ಕೆ ನಾನು ಎನ್ನುವವರು ಯಾರು ಇರುವರು? ನಾನು , ನೀನು ಎನ್ನುವುದು ಪೂರ್ಣವಾಗಿ ಇಲ್ಲದಾಗುವುದು. ಇದರ ನಾಮವೇ ನಿರಭಿಮಾನವಾಗಿರುವುದು ।೩೩೩॥ ಹೀಗೆ ನಾನು ಎನ್ನುವ ವಿಷಯಕ್ಕೆ ವಿಚಾರವನ್ನು ಮಾಡಿ ನೋಡಿದಾಗ ನನ್ನದು ಅಂದರೆ ಮಮತೆಯೂ ಕೂಡ ಪೂರ್ಣವಾಗಿ ಇಲ್ಲದಾಗುವುದು. ಇದು ನನ್ನದು ಎಂದು ಹೇಳಿಸಿಕೊಳ್ಳಲು ಸ್ವಲ್ಪ ಕೂಡ ಬರಿದಾದ ಸ್ಥಳವು ಉಳಿದುಕೊಳ್ಳುವುದಿಲ್ಲ ।೩೩೪॥ ನನ್ನ ನಾನು ಎನ್ನುವ ಹೊರಗಡೆ ''ನನ್ನದು'' ಎನ್ನುವಂತಹ ಯಾವುದಾದರೂ ಸ್ಥಳವು ಉಳಿದುಕೊಂಡರೆ ಮಾತ್ರ ಅಲ್ಲಿ ಮಮತೆಯು ಸ್ಫುರಣವಾಗಬಹುದು. ಅದನ್ನು ನಾನು ಚಿನ್ಮಾತ್ರಸ್ವರೂಪದಿಂದ ನುಂಗಿರುವೆನು ।೩೩೫॥

ತೇಥ ಮೀಪಣೇಸೀ ಮೀ ಮಾಝೀ । ನುರೇಚಿ ತೂಪಣೇಸೀ ತುಝೀ । ಐಸೇಪರಬ್ರಹ್ಮಾ ಚೇನಿ ನಿಜೇ । ಝಾಲೇ ಸಹಜೇ ''ನಿರ್ಮಮ'' ।೩೩೬॥ ನಿರ್ಮಮ ನಿರಭಿಮಾನ । ತೇ ಹೇ ಉದ್ಧವಾ ಗಾ ಸಂಪೂರ್ಣ । ಪಾಂಚವೇ ಸಹಾವೇ ಲಕ್ಷಣ । ಸಂತಾಂಚೇ ಜಾಣ ನಿಜಗುಹ್ಯ ।೩೩೭॥ ಐಸೇ ನಿರ್ಮಮ ನಿರಹಂಕಾರ । ಜೇ ಹೋಊನಿ ಠೇಲೇ ಸಾಚಾರ । ತ್ಯಾಂಸೀ ದ್ವಂದ್ವದುಃಖಡೋಂಗರ । ಅಣುಮಾತ್ರ ನ ಬಾಧೀ ।೩೩೮॥ ದೇಹ ಅದೃಷ್ಟಾಚ್ಯಾ ವಾಂಟಾ । ಲಾಗತಾ ಸುಖದುಃಖಾಂಚ್ಯಾ ಝಟಾ । ತೋ ಬ್ರಹ್ಮಸುಖಾಚೇ ಚೋಹಟಾ । ದೇಹಾಚಾ ದ್ರಷ್ಟಾ ಹೋಊನಿ ವಸೇ ।೩೩೯॥ ದೇಹಾಸೀ ಪದವೀ ಆಲೀ ಥೋರೀ। ತೋ ಶ್ಲಾಘೇನಾ ಜೀವಾಭೀತರೀ । ದೇಹ ಘೋಳಸಿತಾ ನರಕದ್ವಾರೀ । ತೋ ಅಣುಭರೀ ಕುಂಥೇನಾ ।೩೪೦॥ ದೇಹ ವ್ಯಾಘ್ರಮುಖೀ ಸಾಂಪಡೇ । ತೇಣೇ ದುಃಖೀ ತೋ ನ ಸಾಂಕಡೇ । ದೇಹ ಪಾಲಖೀ ಮಾಜೀ ಚಢೇ । ತೈ ವಾಡೇಕೋಡೇ ಶ್ಲಾಘೇನಾ ।೩೪೧॥ ಛಾಯಾ ವಿಷ್ಠೇವರೀ ಪಡೇ । ಕಾ ಪಾಲಖೀಮಾಜೀ ಚಢೇ । ತೇಣೇ ಪುರುಷಾ ಸುಖದುಃಖ ನ ಜೋಡೇ । ಮುಕ್ತಾಸೀ ತೇಣೇ ಪಾಡೇ ದೇಹಭೋಗ ।೩೪೨॥ ತ್ಯಾಚೇ ದೃಷ್ಟೀಖಾಲೀ ಏಕಾಏಕ । ದುಃಖಪಣಾ ಮುಕೇ ದುಃಖ । ಸುಖಪಣಾ ವಿಸರೇ ಸುಖ । ''ನಿರ್ದ್ವಂದ್ವ'' ದೇಖ ಯಾ ಹೇತೂ ।೩೪೩॥ ಜೋ ನಿರ್ಮಮ ನಿರಭಿಮಾನ । ತ್ಯಾಸೀ ನಾಹೀ ಭೇದಮಾನ । ಅಭೇದೀ ಮಿಥ್ಯಾ ದ್ವಂದ್ವಬಂಧನ । ಹಾ ಸಾತವಾ ಗುಣ ನಿರ್ದ್ವಂದ್ವ ।೩೪೪॥ ಜೋ ನಿರ್ದ್ವಂದ್ವ ನಿರಭಿಮಾನ ಪಹಾ ಹೋ । ತ್ಯಾಸೀ ಸಮೂಳ ಮಿಥ್ಯಾ ನಿಜದೇಹೋ । ತೇಥ ದೇಹಸಂಬಂಧೇ ಪರಿಗ್ರಹೋ । ಉರಾವಯಾ ಠಾವೋ ಮಗ ಕೈಚಾ ।೩೪೫॥ ಸ್ವಜನಧನ ಸ್ತ್ರೀಪುತ್ರಾಂಸೀ । ನಾಂದೋನಿ ತೋ ನಾತಳೇ ತ್ಯಾಂಸೀ । ಸ್ವಪ್ನೀಂಚೇ ಘರವಾತ ಜಾಗೃತಾ ಜೈಶೀ । ತೈಸಾ ಸಾಧೂಸಿ ಸಂಸಾರು ।೩೪೬॥ ಏವಂ ಪರಿಗ್ರಹೀ ಅಸೋನ । ಸಾಧು ''ಅಪರಿಗ್ರಹೀ'' ಪುರ್ಣ । ಹೇ ಆಠವೇ ಮುಖ್ಯ ಲಕ್ಷಣ । ಅತರ್ಕ್ಯ ಜಾಣ ಜಗಾಸೀ ।೩೪೭॥ ಸಾಧು ಪರಿಗ್ರಹೀ ದಿಸತೀ । ಪರಿ ತೇ ಪರಿಗ್ರಹೀ ನಸತೀ । ಹೇಚಿ ಸಂತಾಂಚೀ ಪಾವಾವಯಾ ಸ್ಥಿತೀ । ತ್ಯಾಂಚೀ ನಿಜಭಕ್ತೀ ಕರಾವೀ ।೩೪೮॥ ಹೇ ಸಾಧೂಚೇ ಅಷ್ಟಲಕ್ಷಣ। ತೇ ಬ್ರಹ್ಮೀಂಚೇ ಅಷ್ಟಾಂಗ ಜಾಣ । ಕೀ ಅಷ್ಟಮಹಾಸಿದ್ಧಿ ನಿರ್ಗುಣ । ತೇ ಹೇ ಅಷ್ಟಗುಣ ಸಾಧೂಂಚೇ ।೩೪೯॥

ಆಗ ನಾನು-ನನ್ನದು ಮತ್ತು ನೀನು-ನಿನ್ನದು ಹೀಗೆನ್ನುವುದಕ್ಕೆ ಏನೊಂದೂ ಉಳಿಯುವುದಿಲ್ಲ. ಈ ಪ್ರಕಾರವಾಗಿ ಪರಬ್ರಹ್ಮದ ಸ್ವರೂಪವು ಪ್ರಾಪ್ತವಾಗುವುದರಿಂದ ಮನವು ಸಹಜವಾಗಿಯೇ ನಿರ್ಮಲವಾಗುವುದು ।೩೩೬॥ ಹೇ ಉದ್ಧವನೇ, ಹೀಗೆ ನಿರ್ಮಮ ಹಾಗೂ ನಿರಾಭಿಮಾನವಾಗುವಿಕೆಯು ಇದು ಐದನೆಯ ಮತ್ತು ಆರನೆಯ ಲಕ್ಷಣವಾಗಿರುವುದು. ಇದು ಸಂತರ ನಿಜವಾದ ಗುಹ್ಯವಾಗಿರುವುದು ।೩೩೭॥ ನಿಜವಾಗಿಯೂ ಹೀಗೆ ನಿರ್ಮಮ ಹಾಗೂ ನಿರಂಹಕಾರವಾಗಿ ಯಾರು ಇರುವರೋ ಅವರೆದುರು ದ್ವಂದ್ವದುಃಖದ ಪರ್ವತವಿದ್ದರೂ ಕೂಡ, ಅವರಿಗೆ ಅದು ಬಾಧಿಸಲಾರದು ।೩೩೮॥ ದೇಹ ಪ್ರಾರಬ್ಧ ಮಾರ್ಗದಲ್ಲಿ ಸುಖದುಃಖದ ಕಾವು ಹತ್ತಿದರೂ ಕೂಡ ಆತನು ಬ್ರಹ್ಮಾನಂದದ ಚೌಕಿನಲ್ಲಿ ದೇಹದ ದ್ರಷ್ಟಾನಾಗಿ ಇರುವನು ।೩೩೯॥ ದೇಹಕ್ಕೆ ಪ್ರತಿಷ್ಠೆಯು ಪ್ರಾಪ್ತವಾಗಿ ಆತನು ಶ್ರೇಷ್ಠ ಪದವಿಗೆ ಪ್ರಾಪ್ತನಾದರೂ ಕೂಡ ಆತನಿಗೆ ಹರ್ಷವಾಗುವುದಿಲ್ಲ. ಅಥವಾ ದೇಹವು ನರಕದ ಬಾಗಿಲಿಗೆ ಹೋಗಿ ಬಿದ್ದುಕೊಂಡರೂ ಆತನು ಅಣುಮಾತ್ರವೂ ವ್ಯಥೆಪಡುವುದಿಲ್ಲ ।೩೪೦॥ ದೇಹವು ಒಂದು ವೇಳೆ ಹುಲಿಬಾಯಿಗೆ ಬಿದ್ದರೂ ಆತನು ದುಃಖಿಯಾಗುವುದಿಲ್ಲ. ಅಥವಾ ದೇಹವು ಪಲ್ಲಕ್ಕಿಯ ಮೇಲೆ ಏರಿ ಕುಳಿತರೂ ಆತನ ಮನವು ನಿರ್ವಿಕಾರವಾಗಿರುವುದು ।೩೪೧॥ ತನ್ನ ದೇಹದ ನೆರಳು ಮಲದ ಮೇಲೆ ಬೀಳಲಿ ಅಥವಾ ಪಾಲಖಿಯಲ್ಲಿ ಏರಲಿ, ಇದರಿಂದ ಯಾರಿಗೂ ಶೋಕವಾಗಲಿ ಅಥವಾ ಹರ್ಷವಾಗಲಿ ಆಗುವುದಿಲ್ಲ. ಅದರಂತೆ ಮುಕ್ತ ಪುರುಷನು ಈಯಾವ ದೇಹದ ಭೋಗ ವಿಷಯದಲ್ಲಿ ಉದಾಸೀನನಾಗಿರುವನು ।೩೪೨॥ ಆತನ ದೃಷ್ಟಿಯಲ್ಲಿ ದುಃಖವು ತನ್ನ ದುಃಖತನವನ್ನು ಸಂಪೂರ್ಣವಾಗಿ ಮರೆಯುವುದು. ಸುಖವೂ ಕೂಡ ತನ್ನ ಸುಖತ್ವವನ್ನು ಮರೆತುಬಿಡುವುದು. ಆದ್ದರಿಂದ ಇದು ನಿರ್ದ್ವಂದ್ವವಾಗಿರುವುದು ।೩೪೩॥ ಯಾರು ನಿರ್ಮಮ ಹಾಗೂ ನಿರಾಭಿಮಾನರಾಗಿರುವರೋ, ಅವರಿಗೆ ಭೇದದ ಭಾನವು ಇರುವುದಿಲ್ಲ. ಅಭೇದದಲ್ಲಿ ದ್ವೈತದ ಬಂಧನೆಯು ಮಿಥ್ಯೆಯಾಗುವುದು. ನಿರ್ದ್ವಂದ್ವ ಎಂದರೆ ಅಭೇದ ಭಾವವು ಇದು ಏಳನೆಯ ಗುಣವಾಗಿರುವುದು ।೩೪೪॥ ಯಾರು ನಿರ್ದ್ವಂದ್ವ ಹಾಗೂ ನಿರಾಭಿಮಾನರಾಗಿರುವರೋ, ಅವರಿಗೆ ತಮ್ಮ ದೇಹವೇ ಮಿಥ್ಯೆಯಾಗಿ ತೋರುವುದು. ಅಂದಮೇಲೆ ಆತನಿಗೆ ದೇಹಸಂಬಂಧವಾಗಿ ತನ್ನ ಪರಿವಾರವನ್ನು ಬೆಳೆಸುವ ಅವಕಾಶವು ಎಲ್ಲಿಯದು ? ।೩೪೫॥ ಆಪ್ತೇಷ್ಟರು, ಸ್ತ್ರೀಪುತ್ರರು, ಈ ಸರ್ವರ ಪರಿವಾರದೊಂದಿಗೆ ಧನಸಂಪತ್ತಿನಿಂದ ಕೂಡಿದ್ದರೂ ಕೂಡ ಆತನು ಅವುಗಳಲ್ಲಿ ಆಸಕ್ತನಾಗುವುದಿಲ್ಲ. ಸ್ವಪ್ನದಲ್ಲಿನ ವ್ಯವಹಾರವು ಮನುಷ್ಯನಿಗೆ ಜಾಗೃತಾವಸ್ಥೆಯಲ್ಲಿರುವುದಿಲ್ಲ. ಅದರಂತೆ ಸಾಧು ಜನರಿಗೂ ಕೂಡ ಸಂಸಾರವು ಇರುವುದಿಲ್ಲ ।೩೪೬॥ ಈ ರೀತಿಯಾಗಿ ಸಾಧು ಜನರು ಪರಿಗ್ರಹದಲ್ಲಿ ಇದ್ದರೂ ಸಹ ಪರಿಪೂರ್ಣವಾಗಿ ಅಪರಿಗ್ರಹರಾಗಿರುವರು. ಇದು ಅವರ ಎಂಟನೆಯ ಲಕ್ಷಣವಾಗಿರುವುದು. ಇದು ಜಗತ್ತಿನ ಇತರ ಜನರಿಗೆ ಅತ್ಯರ್ಕವಾಗಿರುವುದು ।೩೪೭॥ ಸಾಧು ಜನರು ನೋಡಲು ಪರಿಗ್ರಹಿಯವರಂತೆ ಕಾಣುವರು. ಆದರೆ ಅವರು ಪರಿಗ್ರಹಿಯಾಗಿರುವುದಿಲ್ಲ. ಸಂತರ ಈ ಯಾವ ಸ್ಥಿತಿಯು ಪ್ರಾಪ್ತವಾಗುವುದಕ್ಕಾಗಿ ಅವರ ನಿಜಭಕ್ತಿಯನ್ನು ಮಾಡಬೇಕು ।೩೪೮॥ ಈ ಸಾಧುಗಳ ಯಾವ ಎಂಟು ಲಕ್ಷಣಗಳು ಪರಬ್ರಹ್ಮದ ಎಂಟು ಅಂಗಗಳೇ ಆಗಿರುವುವು. ಅಥವಾ ಈ ಯಾವ ಸಾಧುಗಳ ಎಂಟು ಗುಣಗಳು ನಿರ್ಗುಣದ ಅಷ್ಟಸಿದ್ಧಿಗಳೇ ಆಗಿರುವುವು ।೩೪೯॥

ಚೈತನ್ಯಸರೋವರೀಂಚೇ ಕಮಳ । ವಿಕಾಸಲೇ ಅಷ್ಟದಳ । ತೇ ಹೇ ಸಂತಲಕ್ಷಣ ಕೇವಳ । ಸ್ವಾನಂದಶೀಳ ಸಾಧೂಂಚೇ ।।೩೫೦।। ಐಸೇ ಹೇ ಅಷ್ಟಮಹಾಗುಣ । ಸಕಳ ಭೂಷಣಾ ಭೂಷಣ । ಜ್ಯಾಂಚೇ ಅಂಗೀ ಬಾಣಲೇ ಪೂರ್ಣ । ತೇ ಸಾಧು ಸಜ್ಜನ ಅತಿಶುದ್ಧ ।।೩೫೧।। ಇತರ ಸಂಗಾಚಿಯೇ ಪ್ರಾಪ್ತೀ । ಸಂಗ ಬಾಧಕ ನಿಶ್ಚಿತೀ । ತೈಶೀ ನವ್ಹೇ ಸತ್ಸಂಗತೀ । ಸಂಗೇ ಛೇದೀ ಆಸಕ್ತೀ ದೇಹಸಂಗಾ ।।೩೫೨।। ತೇಥ ಉಪದೇಶ ನಲಗೇ ಕಾಂಹೀ । ಸಂಗೇಚಿ ದೇಹೀ ಕರೀ ವಿದೇಹೀ । ತೋಚಿ ಸಾತೇ ಶ್ಲೋಕೀ ಪಾಹೀ । ಸಂತಾಂಚೇ ನವಾಈ ಹರಿ ಸಾಂಗೇ ।।೩೫೩।।

ತೇಷು ನಿತ್ಯಂ ಮಹಾಭಾಗ ಮಹಾಭಾಗೇಷ ಮತ್ಕಥಾಃ । ಸಂಭವಂತಿ ಹಿತಾ ನೃಣಾಂ ಜಷತಾಂ ಪ್ರಪುನಂತ್ಯಘಮ್ ।।೨೮।।

ಅರ್ಥ:- ಪರಮ ಭಾಗ್ಯಶಾಲಿ ಉದ್ಧವನೇ, ಸಂತರ ಸೌಭಾಗ್ಯದ ಮಹಿಮೆಯನ್ನು ಹೇಗೆ ವರ್ಣಿಸಬೇಕು ? ಆತನಲ್ಲಿ ಯಾವಾಗಲೂ ನನ್ನ ಲೀಲಾಮಯ ಕಥೆಯು ನಡೆಯುತ್ತಿರುವುದು. ಈ ನನ್ನ ಕಥೆಯು ಮನುಷ್ಯರಿಗೆ ಬಹು ಹಿತಕಾರಕವಾಗಿರುವುದು. ಇದನ್ನು ಯಾರು ಸೇವಿಸುವರೋ ಅವರ ಸರ್ವಪಾಪಗಳು, ತಾಪಗಳು ನಷ್ಟವಾಗುವುವು.

ಇಂದ್ರಪದಾದಿ ಬ್ರಹ್ಮಸದನ। ಯೇ ಪ್ರಾಪ್ತೀ ನಾಂವ ''ಭಾಗ್ಯ'' ಗಹನ। ತೇಹೀ ಸತ್ಸಂಗಾಸಮಾನ । ಕೋಟ್ಯಂಶೇ ಜಾಣ ತುಕೇನಾ ।।೩೫೪।। ಐಶೀ ಜೇ ಕಾ ಸತ್ಸಂಗತೀ । ಸಭಾಗ್ಯ ಭಾಗ್ಯಾಚೇ ಪಾವತೀ । ಭಗವದ್ಭಾವೇ ಸಾಧು ವರ್ತತೀ । ಮಾಝೆ ಕಥಾಕೀರ್ತಿ-ಅನುವಾದೇ ।।೩೫೫।। ಜೇ ಕಥಾ ಅವಚಟೇ ಕಾನೀ । ಪಡತಾ ಕಲಿಮಲಾಚೀ ಧುಣೀ । ಕರೂನಿ ಸಾಂಡಿತ ತತ್ಕ್ಷಣೀ । ಜೇ ಗಂಗೇಹೂನೀ ಪವಿತ್ರ ।।೩೫೬।। ಜೇಥ ಮಾಜೀ ನಿಜಕಥಾ ಗತೀ । ತೀರ್ಥೇ ತೇಥೇ ಪವಿತ್ರ ಹೋತೀ । ಐಶಿಯಾ ಭಗವತ್ಕಥಾ ಕೀರ್ತೀ । ಸಾಧು ಗರ್ಜತೀ ಸರ್ವದಾ ।।೩೫೭।। ಸ್ವಯೇ ಆಪಣ ಭಾಗೀರಥೀ । ಸರ್ವದಾ ಐಸೀ ಜೀವೀ ಚಿಂತೀ । ಕೋಣೇ ಸಾಧು ಯೇ ಜೈ ಮಜಪ್ರತೀ । ತೈ ಮಾಝೀ ಪಾಪೇ ಜಾತೀ ನಿಃಶೇಷ ।।೩೫೮।। ಪಾರ್ವತಿಚಾ ದ್ವೇಷ ಮನೀ । ತೇ ಬದ್ಧ ಪಾಪ ಮಜಲಾಗುನೀ । ತೇಹೀ ಝಡೇ ಸಂತಚರಣೀ । ಸಕಳ ಪಾಪ ಧುಣೀ ಸತ್ಸಂಗೇ ।।೩೫೯।। ಕಾ ಜ್ಯಾಚೇ ಮುಖೀ ಹರಿನಾಮಕೀರ್ತೀ । ತ್ಯಾಚೇ ಪಾಯ ಜೈ ಮಜಮಾಜೀ ಯೇತೀ । ತೈ ಸಕಳ ಪಾಪೇ ಮಾಝೀ ಜಾತೀ । ಐಸೇ ಭಾಗೀರಥೀ ಸ್ವಯೇ ಬೋಲೇ ।।೩೬೦।। ಐಸೀ ಸಂತಾಂಚೀ ಸಂಗತೀ । ಸದಾ ವಾಂಛ್ಛೀ ಭಾಗೀರಥೀ। ಅವಚಟೇ ಗೇಲಿಯಾ ಸಂತಾಪ್ರತೀ । ಪಾಪೇ ಪಳತೀ ಪ್ರಾಣ್ಯಾಚೀ ।।೩೬೧।। ತೇ ಸಂತಮುಖೀಂಚೇ ಮಾಝೀ ಕಥಾ । ಜೈ ಅತ್ಯಾದರೇ ಐಕೇ ಶ್ರೋತಾ । ತೈ ತ್ಯಾಚೇ ನಿಜಭಾಗ್ಯ ತತ್ತ್ವತಾ । ಮಜಹೀ ಸರ್ವಥಾ ನ ವರ್ಣವೇ।।೩೬೨।।

ಈ ಸಂತಲಕ್ಷಣಗಳು ಚೈತನ್ಯ ಸರೋವರದಲ್ಲಿನ ಅಷ್ಟಕಮಲಗಳಾಗಿರುವುವು. ಇವು ಸಾಧುಜನರಿಗೆ ಆತ್ಮಾನಂದವನ್ನು ಪ್ರಧಾನ ಮಾಡುವುವು ।।೩೫೦।। ಹೀಗಿರುವ ಈ ಎಂಟು ಪರಮಶ್ರೇಷ್ಠ ಗುಣಗಳು ಸರ್ವ ಭೂಷಣಗಳಲ್ಲಿನ ಭೂಷಣವಾಗಿರುವುವು. ಈ ಎಂಟು ಗುಣಗಳು ಯಾರ ಅಂಗದಲ್ಲಿ ಪರಿಪೂರ್ಣವಾಗಿ ವಿಕಾಸಗೊಂಡಿರುವುವೋ, ಆತನೇ ಅತ್ಯಂತ ಪವಿತ್ರ ಸಾಧು ಸಜ್ಜನನಾಗಿರುವನು ।।೩೫೧।। ಇತರ ಯಾವುದೇ ಸಂಗತಿಯು ಪ್ರಾಪ್ತಿಯಾಗಲಿ ಅದು ಬಾಧಕವಾಗುವುದು. ಆದರೆ ಸಂತಸಂಗತಿಯು ಹೀಗಿರುವುದಿಲ್ಲ. ಈ ಯಾವ ಸತ್‌ಸಂಗತಿಯಿಂದ ದೇಹದ ಆಸಕ್ತಿಯು ಇಲ್ಲದಾಗುವುದು ।।೩೫೨।। ಇಲ್ಲಿ ಪುನಃ ಬೇರೆ ಯಾವ ಉಪದೇಶದ ಅವಶ್ಯಕತೆವಿರುವುದಿಲ್ಲ. ಕೇವಲ ಸಂತರ ಸಂಗತಿಯಿಂದ ದೇಹಾಭಿಮಾನಿಯು ವಿದೇಹಿಯಾಗುವನು. ಇದೇ ಅಪೂರ್ವವಾದ ಕಥೆಯನ್ನು ಮುಂದಿನ ಶ್ಲೋಕದಲ್ಲಿ ಶ್ರೀಹರಿಯು ಹೇಳುವನು ।।೩೫೩।।

ಇಂದ್ರಪದವಿಯಿಂದ ಬ್ರಹ್ಮಸದನದ ಪ್ರಾಪ್ತಿಗಾಗಿ ಮಹಾಭಾಗ್ಯವು ಬೇಕಾಗುವುದು. ಆದರೆ ಈ ಭಾಗ್ಯವು ಸತ್ಸಂಗತಿಯ ಕೋಟ್ಯಾಂಶವೂ ಕೂಡ ಸರಿಸಮಾನವಾಗಲಾರದು ।।೩೫೪।। ಈ ಪ್ರಕಾರವಾಗಿ ಈ ಸತ್ಸಂಗತಿಯು ಸಭಾಗ್ಯವಂತರ ಭಾಗ್ಯದಿಂದ ಪ್ರಾಪ್ತವಾಗುವುದು. ಈ ಸಾಧು ಜನರು ನನ್ನ ಕಥೆ ಕೀರ್ತನೆಗಳನ್ನು ಮಾಡುತ್ತಿರುವರು. ಭಗವತ್‌ಭಾವನೆಯಿಂದ ಆಚರಣೆಗಳನ್ನು ಮಾಡುತ್ತಿರುವರು ।।೩೫೫।। ಈ ಕಥೆಯು ಅಕಸ್ಮಾತ್ತಾಗಿ ಕಿವಿಗಳಿಗೆ ಬೀಳಲು ತಕ್ಷಣವೇ ಪಾಪಗಳು ತೊಳೆದುಹೋಗುವುವು. ಹೀಗೆ ಇವರ ಕಥೆಯು ಗಂಗೆಗಿಂತಲೂ ಅತಿಶಯ ಪಾವನವಾಗಿರುವುದು ।।೩೫೬।। ಎಲ್ಲಿ ನನ್ನ ಕಥಾ ಕೀರ್ತನೆಗಳು ನಡೆಯುವುವೋ ಅಲ್ಲಿಯ ತೀರ್ಥಗಳೂ ಕೂಡ ಅತ್ಯಂತ ಪವಿತ್ರವಾಗುವುವು. ಹೀಗಿರುವ ಭಗವಂತನ ಕಥೆ ಕೀರ್ತನೆಗಳನ್ನು ಸಾಧು ಜನರು ಸದಾಕಾಲದಲ್ಲಿ ಗರ್ಜಿಸುತ್ತಿರುವರು ।।೩೫೭।। ಸ್ವತಃ ಭಾಗೀರಥಿಯು ನನ್ನಲ್ಲಿ ಯಾರಾದರೂ ಸಾಧು ಜನರು ಎಂದು ಬಂದಾರು ಎಂದಿಗೆ ನನ್ನ ಸರ್ವಪ್ರಕಾರದ ಪಾಪಗಳು ನಷ್ಟವಾದಾವು ಎಂದು ಸತತವಾಗಿ ಚಿಂತಿಸುತ್ತಿರುವಳು ।।೩೫೮।। ನನ್ನ ಮನದಲ್ಲಿ ಪಾರ್ವತಿಯ ದ್ವೇಷವಿದ್ದದರಿಂದ ನಾನೂ ಕೂಡ ಪಾಪಬದ್ಧನಾಗಿದ್ದೆನು. ಈ ಪಾಪವು ಸಂತಚರಣಗಳಿಂದ ಇಲ್ಲದಾಯಿತು. ಕಾರಣ ಈ ಸಂತಸಂಗತಿಯು ಸರ್ವ ಪಾಪಗಳನ್ನು ನಾಶಮಾಡುವುದು ।।೩೫೯।। ಯಾರ ಮುಖದಲ್ಲಿ ಹರಿನಾಮದ ಕೀರ್ತಿಯು ಇರುವುದೋ, ಅವರ ಚರಣಗಳು ನನ್ನಲ್ಲಿ ಸ್ಪರ್ಶವಾದರೆ ನನ್ನ ಸರ್ವ ಪಾಪಗಳು ನಷ್ಟವಾಗುವುವು ಎಂದು ಸ್ವತಃ ಭಾಗೀರಥಿಯು ಹೇಳುತ್ತಿರುವಳು ।।೩೬೦।। ಈ ಪ್ರಕಾರವಾಗಿ ಸಂತರ ಸಂಗತಿಯ ಇಚ್ಛೆಯನ್ನು ಭಾಗೀರಥಿಯು ಸತತವಾಗಿ ಮಾಡುತ್ತಿರುವಳು. ಆದ್ದರಿಂದ ಸಹಜವಾಗಿ ಸಂತರಲ್ಲಿ ಹೋದರೂ, ಕೂಡ ಮಾನವರ ಪಾಪಗಳು ದೂರು ಹೋಗುವುವು ।।೩೬೧।। ಹೀಗಿರುವ ಈ ಯಾವ ಸಂತರ ಮುಖದಿಂದ ನನ್ನ ಲೀಲೆಯ ಕಥೆಗಳನ್ನು ಅತ್ಯಂತ ಆದರದಿಂದ ಶ್ರೋತೃಗಳವರು ಶ್ರವಣ ಮಾಡಿದರೆ ಅವರ ಭಾಗ್ಯವನ್ನು ನನಗೂ ಸಹ ವರ್ಣಿಸಲು ಸರ್ವಥಾ ಸಾಧ್ಯವಾಗದು ।।೩೬೨।।

ಮಾಝೀ ಕಥೇಚೀ ಅತಿ ಆವಡೀ । ನಿತ್ಯ ನೂತನ ನವೀ ಗೋಡೀ । ಸಾದರೇ ಐಕತಾ ಪಾಪಕೋಡೀ । ಜಾಳೋನಿ ರಾಖೋಡೀ ಉರವೀನಾ ।೩೬೩॥ ಮಾಝೀ ಕಥಾ ಕಾ ಮಾಝೇ ನಾಮ । ಸಕಳ ಪಾತಕಾ ಕರೀ ಭಸ್ಮ । ಹೇಚಿ ಚಿತ್ತಶುದ್ಧೀಚೇ ವರ್ಮ । ಅತಿಸುಗಮ ಉದ್ಧವಾ ।೩೬೪॥ ನಾನಾ ಯೋಗ ಯಾಗ ವೇದಾಧ್ಯಯನ । ಕರಿತಾ ಪವಿತ್ರ ನವ್ಹೇ ಮನ । ತೇ ಕರಿತಾ ಹರಿಕಥಾಶ್ರವಣ । ಹೋಯ ಅಂತಃಕರಣ ಪುನೀತ ।೩೬೫॥ ಅಬದ್ಧ ಪಢತಾ ವೇದ । ದೋಷ ಬಾಧಿತೀ ಸುಬದ್ಧ । ನಾಮ ಪಢತಾ ಅಬದ್ಧ । ಶ್ರೋತೇ ಹೋತೀ ಶುದ್ಧ ಪರಮಾರ್ಥತಾ ।೩೬೬॥ ನಾನಾ ಯೋಗ ಯಾಗ ವೇದಾಧ್ಯಯನ। ತೇಥ ಅಧಿಕಾರೀ ದ್ವಿಜ ಸಂಪೂರ್ಣ । ಕಥಾಶ್ರವಣೇ ಚಾರೀವರ್ಣ । ಹೋತೀ ಪಾವನ ಉದ್ಧವಾ ।೩೬೭॥ ಐಸಾ ಲಾಭ ಕಥಾಶ್ರವಣೇ । ತರೀ ಕಾ ನಾಇಕಿಜೇ ಸಕಳ ಜನೀ । ತೇ ಭಾಗ್ಯ ಭಗವತ್ಕೃಪೇವಾಂಚೂನೀ । ಸರ್ವಥಾ ಕೋಣೇ ಲಾಹೇನಾ ।೩೬೮॥ ಭಗವತ್ಕೃಪಾ ಪಾವಲೇ ಸಾಂಗ । ತ್ಯಾಸೀ ಕಥಾಕೀರ್ತನೀ ಅನುರಾಗ । ತೇಚಿ ನಿಜಭಾಗ್ಯೇ ಮಹಾಭಾಗ । ಸ್ವಮುಖೇ ಶ್ರೀರಂಗ ಬೋಲಿಲಾ ।೩೬೯॥ ಜಗಾತೇ ಪವಿತ್ರ ಕರಿತೀ । ಮಾಝೀ ಜಾಣ ನಾಮಕೀರ್ತೀ । ಐಸಾ ಕಳವಳೋನಿ ಶ್ರೀಪತೀ । ಉದ್ಧವಾಪ್ರತೀ ಬೋಲಿಲಾ ।೩೭೦॥ ಐಶೀ ಭಗವತ್ಕೃಪೇಚೀ ಪ್ರಾಪ್ತೀ । ಕೇವೀ ಆತುಡೇ ಆಪುಲೇ ಹಾತೀ । ತೇಚಿ ಅರ್ಥೀ ಶ್ರೀಪತೀ । ವಿಶದ ಶ್ಲೋಕಾರ್ಥೀ ಸಾಂಗತ ।೩೭೧॥

ತಾ ಯೇ ಶೃಣ್ವಂತಿ ಗಾಯಂತಿ ಹ್ಯನುಮೋದಂತಿ ಚಾದೃತಾಃ । ಮತ್ಪರಾಃ ಶ್ರದ್ಧಧಾನಶ್ಚ ಭಕ್ತಿಂ ವಿಂದಂತಿ ತೇ ಮಯಿ ।೨೯॥

ಅರ್ಥ:- ನನ್ನನ್ನು ಕುರಿತ ಲೀಲಾ ಕಥೆಗಳನ್ನು ಯಾರು ಕೇಳುತ್ತಾರೋ, ಕೀರ್ತಿಸುತ್ತಾರೋ ಮತ್ತು ಗೌರವಾದರಗಳಿಂದ ಅನುಮೋದಿಸುತ್ತಾರೋ, ಅವರು ಶ್ರದ್ಧೆಯಿಂದ ನನಗೆ ಪ್ರಾಪ್ತರಾಗುವರು. ಹೀಗೆ ನನ್ನ ಪ್ರೇಮಮಯ ಭಕ್ತಿಯನ್ನು ಗಳಿಸುವರು.

ಆಪುಲಿಯಾ ಗೃಹಕಾರ್ಯಾರ್ಥಾ । ವಿಷಯವ್ಯಾಪಾರೀ ಜಾತಾ ಜಾತಾ । ಕಾನೀ ಪಡಲೀ ಹರಿಕಥಾ । ಸ್ವಭಾವತಾ ಪ್ರಸಂಗೇ ।೩೭೨॥ ಕೃಷ್ಣಕೀರ್ತಿಕಥನಾಕ್ಷರೇ । ರಿಘತಾಂಚಿ ಕರ್ಣದ್ವಾರೇ । ಭೀತರೀಲ ಪಾಪ ಏಕಸರೇ । ನಿಘೇ ಬಾಹಿರೇ ಗಜಬಜೋನಿ ।೩೭೩॥ ಜೇವೀ ಪಂಚಾನನಾಚೀ ಆರೋಳೀ । ಕರೀ ಮದಗಜಾ ರಾಂಗೋಳೀ । ತೇವೀ ಹರಿಕಥೇಚ್ಯಾ ಮೇಳೀ । ಹೋಯ ರವಂದಳೀ ಮಹಾಪಾಪಾ ।೩೭೪॥ ಐಸಾ ನಿಘಾಲ್ಯಾ ಪಾಪಾಚಾ ಕೇರು । ಕಥೇಸೀ ಉಪಜೇ ಅತ್ಯಾದರು । ಕಥಾವಧಾನೀ ಧರಿತಾ ಧೀರು । ಹರ್ಷೇ ನಿರ್ಭರು ನರ ಹೋಯ ।೩೭೫॥

ನನ್ನ ಕಥೆಯ ಅತ್ಯಂತ ಅನುರಾಗವನ್ನು ಧರಿಸಲು ನಿತ್ಯ ನೂತನವಾಗಿ ಆನಂದವು ನಿರ್ಮಾಣವಾಗುವುದು. ಆದರಪೂರ್ವಕವಾಗಿ ಶ್ರವಣವನ್ನು ಮಾಡಲು ಕೋಟ್ಯಾವಧಿ ಪಾಪಗಳು ಸುಟ್ಟು ಭಸ್ಮವಾಗಿಬಿಡುವುವು. ಅಲ್ಲಿ ಸುಟ್ಟ ಬೂದಿಯೂ ಸಹ ಉಳಿಯುವುದಿಲ್ಲ ।೩೬೩॥ ನನ್ನ ಕಥೆಯಾಗಲಿ ಅಥವಾ ನನ್ನ ನಾಮವಾಗಲಿ ಇವು ಸರ್ವ ಪಾಪಗಳನ್ನು ಕ್ಷಣದಲ್ಲಿಯೇ ಭಸ್ಮವನ್ನಾಗಿ ಮಾಡುವುವು. ಹೇ ಉದ್ಧವನೇ, ಚಿತ್ತ ಶುದ್ಧಿಯಾಗುವ ಇದುವೇ ಮುಖ್ಯಮರ್ಮವಾಗಿರುವುದು ।೩೬೪॥ ಅನೇಕ ಪ್ರಕಾರದ ಯೋಗ ಯಾಗ ಹಾಗೂ ವೇದಾಧ್ಯಯನಗಳನ್ನು ಮಾಡಿದರೂ ಕೂಡ ಮನವು ಪವಿತ್ರವಾಗುವುದಿಲ್ಲ. ಅದನ್ನೆ ಹರಿಕಥೆಯನ್ನು ಶ್ರವಣ ಮಾಡಲು ಅಂತಃಕರಣವು ಪವಿತ್ರವಾಗುವುದು ।೩೬೫॥ ವೇದದ ಉಚ್ಚಾರವನ್ನು ಅಶುದ್ಧವಾಗಿ ಮಾಡಿದರೆ ಮಹಾದೋಷವು ತಟ್ಟುವುದು. ಆದರೆ ನಾಮಸ್ಮರಣೆಯನ್ನು ಅಶುದ್ಧವಾಗಿ ಮಾಡಿದರೂ ಸಹ ಪರಮಾರ್ಥದಿಂದ ಶುದ್ಧರೇ ಆಗುವರು ।೩೬೬॥ ಹೇ ಉದ್ಧವಾ, ಅನೇಕ ಪ್ರಕಾರಗಳ ಯೋಗಯಾಗಗಳು, ವೇದಾಧ್ಯಯನಗಳು ಇವುಗಳಿಗೆ ಅಧಿಕಾರಿಗಳು ಬ್ರಾಹ್ಮಣರಾಗಿರುವರು. ಆದರೆ ನನ್ನ ಕಥೆಯ ಶ್ರವಣದಿಂದ ನಾಲ್ಕೂ ವರ್ಣಗಳು ಪಾವನವಾಗುವುವು ।೩೬೭॥ ಕಥೆಯ ಶ್ರವಣದಿಂದ ಇಷ್ಟೊಂದು ಲಾಭವಾಗುತ್ತಿದ್ದರೆ ಎಲ್ಲ ಜನರು ಕಥೆಯ ಶ್ರವಣವನ್ನು ಏಕೆ ಮಾಡುವುದಿಲ್ಲ? ಹೀಗೆ ಯಾರಾದರು ಹೇಳಬಹುದು. ಇದಕ್ಕಾಗಿ ಭಗವಂತನ ಕೃಪೆವಿಲ್ಲದೇ ಈ ಶ್ರವಣಭಾಗ್ಯವು ಯಾರಿಗೂ ಪ್ರಾಪ್ತವಾಗಲಾರದು ।೩೬೮॥ ಯಾರಲ್ಲಿ ಭಗವಂತನ ಪೂರ್ಣ ಕೃಪೆಯಾಗುವುದೋ, ಅವರಿಗೆ ಕಥೆ ಕೀರ್ತನೆಗಳಲ್ಲಿ ಪ್ರೇಮವು ಉಂಟಾಗುವುದು. ಅವರೇ ಭಾಗ್ಯದಿಂದ ಶ್ರೇಷ್ಠರಾಗಿರುವರು. ಹೀಗೆ ಶ್ರೀಕೃಷ್ಣನು ಸ್ವಮುಖದಿಂದ ಹೇಳುತ್ತಿರುವನು ।೩೬೯॥ ನನ್ನ ನಾಮ ಹಾಗೂ ನನ್ನ ಕೀರ್ತಿಯು ಜಗತ್ತನ್ನು ಪವಿತ್ರಗೊಳಿಸುವುದು. ಹೀಗೆ ಶ್ರೀಪತಿಯು ಉದ್ಧವನಿಗೆ ಕಳಕಳಿಯಿಂದ ತಿಳಿಸಿ ಹೇಳಿದನು ।೩೭೦॥ ಹೀಗಾದರೆ ಇಂತಹ ಭಗವಂತನ ಕೃಪಾಪ್ರಾಪ್ತಿಯು ನಮ್ಮ ಕೈಗೆ ಹೇಗೆ ದೊರಕುವುದು? ಈ ವಿಷಯವನ್ನು ಕುರಿತು ಶ್ರೀಹರಿಯು ಮುಂದಿನ ಶ್ಲೋಕದಲ್ಲಿ ಸ್ಪಷ್ಟಮಾಡಿ ಹೇಳುವನು ।೩೭೧॥

ತನ್ನ ಗೃಹಕಾರ್ಯಾರ್ಥವಾಗಿ,ವಿಷಯವ್ಯಾಪಾರಕ್ಕಾಗಿ ಹೋಗುತ್ತಿರಲು ಆಗ ಸಹಜವಾಗಿ ದಾರಿಯಲ್ಲಿ ನಡೆಯುತ್ತಿರುವ ಪ್ರಸಂಗಾನುರೂಪ ಹರಿಕಥೆಯು ಕಿವಿಗೆ ಬೀಳಲು ।೩೭೨॥ ಆಗ ನಡೆಯುತ್ತಿರುವ ಶ್ರೀಕೃಷ್ಣಕೀರ್ತಿಯ ಕಥೆಯ ಅಕ್ಷರಗಳು ಕಿವಿಗಳಲ್ಲಿ ಪ್ರವೇಶಮಾಡುತ್ತಲೇ ಅವು ಒಳಗಿರುವ ಪಾಪಗಳನ್ನು ತ್ವರಿತವಾಗಿ ಹೊರಹಾಕುವುವು ।೩೭೩॥ ಸಿಂಹದ ಗರ್ಜನೆಯು ಕಿವಿಗೆ ಬೀಳುತ್ತಲೇ ಮದೋನ್ಮತ್ತ ಆನೆಯ ನಾಶವು ನಿಶ್ಚಿತವಾಗಿರುವುದು. ಅದರಂತೆ ಹರಿಕಥೆಯು ಕಿವಿಗೆ ಬೀಳುತ್ತಲೇ ಮಹಾಪಾಪಗಳ ನಾಶವು ನಿಶ್ಚಿತವಾಗಿ ಆಗುವುದು ।೩೭೪॥ ಈ ಪ್ರಕಾರವಾಗಿ ಪಾಪರೂಪ ಹೊಲಸು ಹೊರಟು ಹೋಯಿತೆಂದರೆ ಆಗ ಹರಿಕಥೆಯಲ್ಲಿ ಅತ್ಯಂತ ಪ್ರೇಮವು ಉಂಟಾಗುವುದು. ಕಥೆಯನ್ನು ಕೇಳುತ್ತ ಏಕಾಗ್ರತೆಯನ್ನು ಹೊಂದಿದರೆ ಆಗ ಮನವು ಆನಂದದಿಂದ ತುಂಬಿ ತುಳುಕುವುದು ।೩೭೫॥

ಜಂವ ಜಂವ ಕಥಾರಹಸ್ಯ ಜೋಡೇ । ತಂವ ತಂವ ಅನುಮೋದನೀ ಪ್ರೀತಿ ವಾಢೇ । ವಾಢಲೇ ಪ್ರೀತೀಚೇನಿ ಪಾಡೇ । ತೇ ಕಥಾ ಕೈವಾಡೇ ಸ್ವಯೇ ಗಾಯ ॥೩೭೬॥ ಫೇಡೂನಿ ಲೋಕಲಾಜೇಚೇ ಬಿರಡೇ । ಗಾತಾ ಹರಿಕೀರ್ತಿಗುಣ ಪವಾಡೇ । ನ ಪಾಹೇ ತೋ ಕರ್ಮಾಕಡೇ । ನ ಸಾಂಕಡೇ ಸುಹೃದಾಸೀ ॥೩೭೭॥ ನಿಜಭಾವೇ ಭಗವತ್ಕಥಾ ಗಾತಾ । ಸ್ವಯಂಭ ಉಪಜೇ ಸಾದರತಾ । ತೇಣೇ ಅತ್ಯಾದರೇ ಹರಿಕಥಾ । ಹೋಯ ಸಾಂಗತಾ ಅತಿಶ್ರದ್ಧಾ ॥೩೭೮॥ ಜಂವ ಜಂವ ಕಥಾ ಸಾಂಗೇ ನಿವಾಡೇ । ತಂವ ತಂವ ಶ್ರದ್ಧಾ ಅಧಿಕ ವಾಢೇ । ಪ್ರೇಮಾಚಾ ಪೂರ ಚಢೇ । ತ್ಯಾಮಾಜೀ ಬುಡೇ ನಿಜಶ್ರದ್ಧಾ ॥೩೭೯॥ ಕಥಾಕೀರ್ತನ ಅನುಕೀರ್ತೀ । ವಾಢತ್ಯಾ ಶ್ರದ್ಧೇಚಿಯೇ ಪ್ರೀತೀ । ಬಾಧೂ ನ ಶಕೇ ವಿಷಯಾಸಕ್ತೀ । ತೇಣೇ ಮತ್ಪರ ಸ್ಥಿತಿ ಸಾಧಕಾ ॥೩೮೦॥ ನ ಕರಿತಾ ಭಗವದ್ಭಜನ । ವೇದಾಧ್ಯಯನ ಯಜ್ಞ ದಾನ । ಯೇಣೇಂಚಿ ಆಮ್ಹೀ ಜಾಲೂ ತರೋನ । ಮ್ಹಣತೀ ತೇ ಜನ ಮಹಾಮೂಢ ॥೩೮೧॥ ಏಥ ಮುಖ್ಯತ್ವೇ ಭಗವದ್ಭಕ್ತೀ । ಹಾ ವಿಶ್ವಾಸ ಧರಿತಾ ಚಿತ್ತೀ । ಭಗತ್ಪರ ಝಾಲಿಯಾ ವೃತ್ತೀ । ಸರ್ವ ಭೂತೀ ಮದ್ಭಾವ ॥೩೮೨॥ ಐಸಾ ಭಾವ ಧರೋನಿ ಹೃದಯೀ । ಮಾಝೀ ಭಕ್ತೀವೇಗಳೇ ಕಾಂಹೀ । ಸರ್ವಥಾ ಸ್ವಯೇ ಕರಣೇ ನಾಹೀ । "ಮತ್ಪರ" ಪಾಹೀ ಯಾ ರೀತೀ॥೩೮೩॥ ಐಶಿಯಾ ಮತ್ಪರಾ ವೃತ್ತೀ । ಸಾವಧಾನ ನಿಜಸ್ಥಿತೀ । ತೇಣೇ ಉಪಜೇ "ಚೌಥೀ ಭಕ್ತೀ" । ತೇಚಿ ಶ್ರೀಪತಿ ಸ್ವಯೇ ಸಾಂಗೇ ॥೩೮೪॥ ತೇಥ ನ ಕರಿತಾ ಆಠವಣ । ಅಖಂಡ ಹೋಯ ಹರೀಚೇ ಸ್ಮರಣ । ಕ್ರಿಯಾಮಾತ್ರೇ ಭಗವದ್ಭಜನ । ಸಹಜೇ ಜಾಣ ಸರ್ವದಾ ॥೩೮೫॥ ಜೇ ಜೇ "ದೃಷ್ಟೀ" ದೇಖ ಆಪಣ । ಥೋರ ಅಥವಾ ಸೂಕ್ಷ್ಮ ಸಾನ । ತೇ ತೇ ಹೋಯ ಹರೀಚೇ ನಿಜದರ್ಶನ । ಸಹಜೇ ಭಜನ ಅಹೇತುಕ ॥೩೮೬॥ ಜೇ ಜೇ "ವಾಚಾ" ವದೇ ವಚನ । ತೇ ತೇ ಹೋಯ ಹರೀಚೇ ಸ್ತವನ । ಸ್ತವ್ಯ ಸ್ತವಿತಾ ಉಣಖೂಣ । ಹೇಹೀ ಆಠವಣ ವಿಸರೋನಿ ॥೩೮೭॥ ಶಬ್ದೀ ಶಬ್ದಾತೇ ಶಬ್ದವಿತಾ । ತೇ ಶಬ್ದರೂಪೇ ಹರೀಚೀ ಸತ್ತಾ । ಶಬ್ದ ದ್ಯೋತೀ ಜ್ಯಾ ಶಬ್ದಾರ್ಥಾ । ತೇ ಅರ್ಥಗ್ರಾಹಕತಾ ಹರೀಚೀ ॥೩೮೮॥ ಯಾಪರೀ "ಶಬ್ದಶ್ರವಣ" । ಶ್ರವಣೇ ಶ್ರವಣ ಹೋತಾ ಜಾಣ । ತೋ ಶಬ್ದಾರ್ಥ ಸಂಪೂರ್ಣ । ಹೋಯ ಬ್ರಹ್ಮಾರ್ಪಣ ಶ್ರವಣೇಸೀ ॥೩೮೯॥

ಕಥೆಯಲ್ಲಿನ ರಹಸ್ಯವು ತಿಳಿಯುತ್ತಿದ್ದಂತೆ ಆಗ ಕಥೆಯ ವಿಷಯದಲ್ಲಿ ಅಂತಃಕರಣಪೂರ್ವಕವಾಗಿ ಪ್ರೇಮವು ಪ್ರಕಟವಾಗುವುದು. ಆದ್ದರಿಂದ ಈ ಪ್ರೇಮದ ಭರದಲ್ಲಿ ಅನುರಾಗದಿಂದ ಹರಿಕಥೆಯನ್ನು ತಾನೇ ಸ್ವತಃ ಹಾಡಲಾರಂಭಿಸುವನು ॥೩೭೬॥ ಲೋಕಲಜ್ಜೆಯ ಭಯವನ್ನು ತೊರೆದು ಆತನು ಶ್ರೀಹರಿಯ ಯಶಕೀರ್ತಿಯ ಮಹಿಮೆಯನ್ನು ಹಾಡುವನು. ಆತನು ಕರ್ಮದತ್ತ ನೋಡಲಾರನು. ಆಪ್ತೇಷ್ಟರಿಗೆ ಅಂಜಲಾರನು ॥೩೭೭॥ ಶುದ್ಧವಾದ ಭಕ್ತಿಭಾವದಿಂದ ಹರಿಕಥೆಯನ್ನು ಹಾಡಲಾರಂಭಿಸಲು ಆಗ ಅನುರಾಗವು ತನಗೆ ತಾನೇ ನಿರ್ಮಾಣವಾಗುವುದು. ಇದರಿಂದ ಆತನು ಇನ್ನೂ ಅಧಿಕವಾಗಿಯೇ ಪರಮಶ್ರದ್ಧೆಯಿಂದ ಕಥೆಯನ್ನು ಹೇಳಲಾರಂಭಿಸುವನು ॥೩೭೮॥ ಹೀಗೆ ಆತನು ಪ್ರೀತಿಯಿಂದ ಕಥೆಯನ್ನು ಹೇಳುತ್ತಿದ್ದಂತೆ ಶ್ರದ್ಧೆಯೂ ಸಹ ಬೆಳೆಯುತ್ತಲೇ ಸಾಗುವುದು. ಈ ಕಾರಣವಾಗಿ ಪ್ರೇಮಕ್ಕೆ ಪೂರವು ಬಂದು ಅದರಲ್ಲಿ ನಿಜಶ್ರದ್ಧೆಯು ಮುಳುಗಿಹೋಗುವುದು ॥೩೭೯॥ ಕಥಾಕೀರ್ತನೆಯು ಪರಮ ಶ್ರದ್ಧೆಯಿಂದ ನಿರೂಪಣೆಯಾಗುತ್ತಿರಲು ಆಗ ವಿಷಯಗಳ ಆಸಕ್ತಿಯು ಬಾಧಿಸಲು ಸಾಧ್ಯವಾಗದು. ಈ ಕಾರಣದಿಂದ ಸಾಧಕನು ಮತ್ಪರಾಯಣನಾಗುವನು ॥೩೮೦॥ ಈ ರೀತಿಯಾಗಿ ಭಗವದ್ಭಜನೆಯನ್ನು ಮಾಡದೇ, ವೇದಾಧ್ಯಯನ ಮತ್ತು ಯಜ್ಞದಾನ ಮಾಡಿ ನಾವು ಉದ್ಧಾರರಾಗುವೆವು ಎಂದು ಹೇಳುವ ಜನರು ಮಹಾಮೂರ್ಖರಾಗಿರುವರು ॥೩೮೧॥ ಭಗವಂತನ ಭಕ್ತಿಯೇ ಮುಖ್ಯವಾಗಿರುವುದೆಂದು ಮನದಲ್ಲಿ ವಿಶ್ವಾಸವನ್ನಿಡಲು ಆಗ ವೃತ್ತಿಯು ಭಗವತ್ಸ್ವರೂಪವಾಗುವುದು ಮತ್ತು ಸರ್ವ ಪ್ರಾಣಿಮಾತ್ರರಲ್ಲಿ ಮದ್ಭಾವವು ನಿರ್ಮಾಣವಾಗುವುದು ॥೩೮೨॥ ಹೀಗೆ ತಮ್ಮ ಹೃದಯದಲ್ಲಿ ದೃಢಭಾವವನ್ನು ಧರಿಸಿ ನನ್ನ ಭಕ್ತಿಯ ಹೊರತಾದ ಅನ್ಯ ಯಾವುದನ್ನೂ ಮಾಡಲಾರರು. ಇವರು ಮತ್ಪರರಾಗುವರು ॥೩೮೩॥ ಇಂತಹ ಮತ್ಪರವೃತ್ತಿಯಿಂದ ಅವರು ಆತ್ಮಸ್ಥಿತಿಯಲ್ಲಿ ಸಾವಧಾನರಾಗಿರುವರು. ಇದರಿಂದ ಈ ಯಾವ ಭಕ್ತರಲ್ಲಿ ನಾಲ್ಕನೆಯ ಭಕ್ತಿಯು ಉತ್ಪನ್ನವಾಗುವುದು. ಇದನ್ನೇ ಶ್ರೀಕೃಷ್ಣನು ಸವಿಸ್ತಾರವಾಗಿ ಹೇಳುತ್ತಿರುವನು ॥೩೮೪॥ ಅಲ್ಲಿ ಪ್ರಯತ್ನಿಸಿ ನೆನಪಿಸಿಕೊಳ್ಳುವಂತಿಲ್ಲ. ಅಖಂಡವಾಗಿ ಶ್ರೀಹರಿಯ ಸ್ಮರಣೆಯಾಗುತ್ತಿರುವುದು. ಇದರಿಂದ ಯಾವುದೇ ಕರ್ಮಗಳು ನಡೆಯುತ್ತಿರಲಿ ಅವೆಲ್ಲವೂ ಭಗವದ್ಭಜನೆಯೇ ಆಗುವುವು ॥೩೮೫॥ ಅವರು ತಮ್ಮ ದೃಷ್ಟಿಯಿಂದ ಯಾವ ಯಾವ ದೃಶ್ಯಗಳನ್ನು ನೋಡುತ್ತಿರುವರೋ, ಅವು ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ಅವೆಲ್ಲವೂ ಅವರಿಗೆ ಶ್ರೀಹರಿಯಾಗಿಯೇ ದರ್ಶನವಾಗುತ್ತಿರುವುವು. ನಿಜವಾಗಿಯೂ ಇದೇ ಅಹೇತುಕ ಹಾಗೂ ಸಹಜವಾದ ಭಜನೆಯಾಗಿರುವುದು ॥೩೮೬॥ ಇವರ ವಾಣಿಯಿಂದ ಯಾವ ಯಾವ ಶಬ್ದಗಳು ಪ್ರಕಟವಾಗುತ್ತಿರುವುವೋ ಅವು ಸ್ತವ್ಯ ಮತ್ತು ಸ್ತವಿತಾ ಇವುಗಳನ್ನು ಮರೆತು ಕೇವಲ ಶ್ರೀಹರಿಯ ಸ್ತವನವೇ ಆಗುವುದು ॥೩೮೭॥ ಶಬ್ದಗಳಿಂದ ಶಬ್ದಗಳನ್ನು ನುಡಿಯುತ್ತಿರಲು ಶ್ರೀಹರಿಯ ಸತ್ತೆಯು ಈ ಶಬ್ದಗಳ ರೂಪದಿಂದಲೇ ಇರುವುದು. ಕಾರಣವೇನೆಂದರೆ ಶಬ್ದಗಳಿಂದ ಆಗುವ ಅರ್ಥಬೋಧವು ಅದರಲ್ಲಿನ ಅರ್ಥಗ್ರಹಣ ಇದು ಶ್ರೀಹರಿಯದ್ದಾಗಿರುವುದು ॥೩೮೮॥ ಇದೇ ಪ್ರಕಾರವಾಗಿ ಕಿವಿಗಳಿಂದ ಶಬ್ದಗಳ ಶ್ರವಣವಾಗುತ್ತಿರಲು ಆ ಯಾವ ಪೂರ್ಣ ಶಬ್ದಾರ್ಥಗಳು ಬ್ರಹ್ಮಾರ್ಪಣೆಯಾಗುತ್ತಿರುವುವು ॥೩೮೯॥

''ಗಂಧ'' ಘ್ರಾಣಾ ಹೋತಾ ಭೇಟೀ । ಭೋಕ್ತೇಪಣೇ ಹರೀಚಿ ಉರೀ । ತೋ ಘ್ರೇಯ ಘ್ರಾತಾ ಘ್ರಾಣ ತ್ರಿಪುಟೀ । ಸ್ವಯೇ ಘೋಟೀ ಚಿದತ್ವೇ ॥೯೦॥ ''ರಸ'' ರಸನಾ ರಸತ್ವಬೋಧ । ತೇಥ ನಿಜಭೋಕ್ತಾ ಗೋವಿಂದ । ತೋ ಭೋಗ್ಯ ಭೋಕ್ತಾ ಭೋಜನಸಂಬಂಧ । ಕರೀ ಪರಮಾನಂದ ನಿಜಬೋಧೇ ॥೯೧॥ ''ಶೀತ- ಉಷ್ಣ - ಮೃದು -ಕಠಿಣ'' । ನಿಜಾಂಗೀ ಲಾಗತಾ ಜಾಣ । ತೇ ಅಂಗೇಚಿ ಹೋಯ ಆಪಣ । ಮೃದು ಕಠಿಣ ಮಿಥ್ಯಾತ್ವೇ ॥೯೨॥ ''ಕರಾ'' ಚೀ ಜೇ ಕರ್ತವ್ಯತಾ । ತೀತೇ ಚಾಲವೀ ಅಕರ್ತತಾ । ಯಾಲಾಗೀ ಘೇತಾ ದೇತಾ। ಅಕರ್ತಾತ್ಮತಾ ಹರಿಭಜನ ॥೯೩॥ ನಿಶ್ಚಳ ನಿಜರೂಪಾವರೀ । ಚಪಳ ಪಾ ಉಲಾಂಚ್ಯಾ ಹಾರೀ । ಚಾಲವೀ ಜೈಶಾ ಲಹರೀ। ಸೂರ್ಯಕರೀ ಮೃಗಜಳಾಚ್ಯಾ ॥೯೪॥ ಜಾಗೃತಿ-ಸ್ವಪ್ನ-ಸುಷುಪ್ತೀ । ಚಿನ್ಮಾತ್ರೀ ಜಡಲೀ ವೃತ್ತೀ । ಚಿತ್ತ ಚಿತ್ತತ್ವಾಚೀ ವಿಸರೇ ಸ್ಫೂರ್ತಿ । ಯಾ ನಾಂವ ''ಮದ್ಭಕ್ತಿ'' ಉದ್ಧವಾ ॥೯೫॥ ಹೇ ಮಾಝೀ ಆವಡತೀ ಭಕ್ತೀ । ಇಚೇ ನಾಂವ ಮ್ಹಣಿಜೇತ ''ಚೌಥೀ''। ಹೇ ಭಾಗ್ಯ ಆತುಡೇ ಜ್ಯಾಚೇ ಹಾತೀ । ತ್ಯೆ ಚಾರೀ ಮುಕ್ತೀ ನಿಜದಾಸೀ ॥೯೬॥

ಭಕ್ತಿಂ ಲಬ್ಧವತಃ ಸಾಧೋಃ ಕಿಮನ್ಯದವಶಿಷ್ಯತೇ । ಮಯ್ಯನಂತಗುಣೇ ಬ್ರಹ್ಮಣ್ಯಾನಂದಾನುಭವಾತ್ಮನಿ ॥೩೦॥

ಅರ್ಥ:- ನನ್ನ ಗುಣಗಳು ಅನಂತ. ನಾನು ಸಕಲ ಆನಂದಾನುಭವದ ಸಾಕಾರ ರೂಪ. ಇಂತಹ ಪರಮ ಪರಸತ್ಯನಾದ ನನ್ನಲ್ಲಿ ಭಕ್ತಿ ಸೇವೆಯನ್ನು ಸಾಧಿಸಿದ ಮೇಲೆ ಆ ಪರಿಪೂರ್ಣ ಭಕ್ತನಿಗೆ ಇನ್ನು ಸಾಧಿಸಬೇಕಾದದ್ದು ಏನು ತಾನೆ ಉಳಿದಿದೆ?

ಅತ್ಯಂತ ಮಾಝೀ ಪಢಿಯಂತೀ । ತೇ ಹೇ ಜಾಣ ಚೌಥೀ ಭಕ್ತೀ । ನಿಜಭಾಗ್ಯೇ ಲಾಧಲ್ಯಾಹಾತೀ । ಚಾರೀ ಮುಕ್ತೀ ತೃಣಪ್ರಾಯ॥೯೭॥ ನಿರಪೇಕ್ಷ ಜೇಥ ಮಾಝೀ ಭಕ್ತೀ । ತೇಥ ಪಾಯಾ ಲಾಗತೀ ಚಾರೀ ಮುಕ್ತೀ । ತ್ಯಾಂತೇ ಭಕ್ತ ನ ಧರಿತೀ ಹಾತೀ । ಏಥವರೀ ಪ್ರೀತಿ ಮದ್ಭಜನೀ ॥೯೮॥ ಮಾಝಿಯಾ ನಿಜಭಜನಪ್ರೀತೀ । ಸ್ವಪ್ನೀಹೀ ಬದ್ಧತಾ ನೇಣಿಜೇ ಭಕ್ತೀ । ಬದ್ಧತೇವೀಣ ಮಿಥ್ಯಾ ಮುಕ್ತೀ । ಜಾಣೋನಿ ನ ಘೇತೀ ನಿಜಭಕ್ತ ॥೯೯॥ ಜೇಥ ಬದ್ಧತಾ ಸಮೂಳ ಕುಡೀ । ತೇಥ ಮುಕ್ತಿ ಕಾಯಶೀ ಬಾಪುಡೀ । ಮಾಝಿಯಾ ನಿಜಭಜನಾ ಆವಡೀ । ಸ್ವಾನಂದಕೋಡೀ ಮದ್ಭಕ್ತಾ ॥೧೦೦॥ ನಿರಪೇಕ್ಷ ನಿಜಪ್ರೀತೀ । ಭಾವೇ ಕರಿತಾ ಅನನ್ಯ ಭಕ್ತೀ । ಭಕ್ತಾಂಸೀ ಸ್ವಾನಂದಾಚೀ ಪ್ರಾಪ್ತೀ । ಭಜನಸ್ಥಿತೀ ಮಾಝಾರೀ ॥೧೦೧॥

ಸುಗಂಧ ಮತ್ತು ಘ್ರಾಣ ಇವುಗಳ ಭೇಟಿಯಾಗಲು ಆಗ ಆ ಭೋಕ್ತೃತ್ವದಲ್ಲಿ ಶ್ರೀಹರಿಯೇ ತೋರುತ್ತಿರುವನು. ಅರ್ಥಾತ್ ಈ ಯಾವ ಮೂಸಿನೋಡುವ ಪದಾರ್ಥ, ಮೂಸಿ ನೋಡುವವ ಮತ್ತು ಮೂಗು ಈ ತ್ರಿಪುಟಿಯನ್ನು ಚಿದ್ರೂಪವು ನುಂಗಿಬಿಟ್ಟಿರುವುದು ॥೯೦॥ ರಸ, ರಸನೆ ಮತ್ತು ರಸದ ರುಚಿ ಇವುಗಳ ಭೋಕ್ತಾ ಶ್ರೀಹರಿಯೇ ಆಗಿರುವನು. ಭೋಗ್ಯ, ಭೋಕ್ತಾ ಮತ್ತು ಭೋಜನಸಂಬಂಧ ಇವುಗಳನ್ನು ಆತನು ನಿಜಬೋಧೆಯಿಂದ ಪರಮಾನಂದಸ್ವರೂಪವನ್ನಾಗಿ ಮಾಡುವನು ॥೯೧॥ ಶೀತ, ಉಷ್ಣ, ಮೃದು, ಕಠಿಣ ಇವುಗಳು ತನ್ನ ಅಂಗಕ್ಕೆ ಸಂಬಂಧವಾಗಲು ಆಗ ಆತನು ಅವುಗಳನ್ನು ಸ್ವತಃ ತಾನೇ ಆಗುವನು. ಕಾರಣ ಮೃದು, ಕಠಿಣ ಇತ್ಯಾದಿ ಸರ್ವವೂ ಮಿಥ್ಯೆಯಾಗಿರುವುವು ॥೯೨॥ ಹಸ್ತದ ಯಾವ ಕ್ರಿಯೆಗಳನ್ನು ಆತನು ಅಕರ್ತತ್ವದಿಂದ ಮಾಡುವನು. ಇದರಿಂದ ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ಆತನ ಅಕರ್ತತ್ವವು ಶ್ರೀಹರಿಯ ಭಜನೆಯೇ ಆಗುವುದು ॥೯೩॥ ಆತ್ಮಸ್ವರೂಪದಲ್ಲಿ ನಿಶ್ಚಲನಾಗಿದ್ದುಕೊಂಡು ಆತನು ತನ್ನ ಹೆಜ್ಜೆಯ ಪಂಕ್ತಿಯನ್ನು ಸೂರ್ಯನ ಕಿರಣಗಳಿಂದ ಉತ್ಪನ್ನವಾಗಿರುವ ಮೃಗಜಲದ ತೆರೆಗಳಂತೆ ನಡೆಸುತ್ತಿರುವನು ॥೯೪॥ ಜಾಗೃತೀ, ಸ್ವಪ್ನ ಮತ್ತು ಸುಷುಪ್ತಿಗಳಲ್ಲಿ ವೃತ್ತಿಯು ಚಿತ್ಸ್ವರೂಪದಲ್ಲಿ ನಟ್ಟಿಕೊಂಡಿರುವುದು. ಹೇ ಉದ್ಧವಾ, ಈ ಕಾರಣವಾಗಿ ಚಿತ್ತವು ಚಿತ್ತತ್ವದ ಸ್ಫೂರ್ತಿಯನ್ನೇ ಮರೆತುಬಿಡುವುದು. ಇದರ ನಾಮವೇ ಮದ್ಭಕ್ತಿಯಾಗಿರುವುದು ॥೯೫॥ ಇದು ನನ್ನ ಅತಿಶಯ ಪ್ರೇಮದ ನಾಲ್ಕನೆಯ ಭಕ್ತಿಯಾಗಿರುವುದು. ಈ ಭಕ್ತಿಯ ಭಾಗ್ಯವು ಯಾರ ಕೈಸೇರುವುದೋ, ಅವರಿಗೆ ನಾಲ್ಕೂ ಮುಕ್ತಿಗಳು ದಾಸಿಯಾಗುವುವು ॥೯೬॥

ಹೀಗಿರುವ ಈ ಯಾವ ನಾಲ್ಕನೆಯ ಭಕ್ತಿಯು ಇದು ನನ್ನ ಅತ್ಯಂತ ಪ್ರಿಯಕರವಾಗಿರುವುದು. ಇದು ಒಂದು ವೇಳೆ ನಿಜಭಾಗ್ಯದಿಂದ ಪ್ರಾಪ್ತವಾದರೆ ಆಗ ನಾಲ್ಕೂ ಮುಕ್ತಿಗಳು ತೃಣಸಮಾನವಾಗುವುವು ॥೯೭॥ ಎಲ್ಲಿ ನನ್ನ ನಿರಪೇಕ್ಷವಾದ ಭಕ್ತಿಯು ಇರುವುದೋ, ಅಲ್ಲಿ ನಾಲ್ಕು ಮುಕ್ತಿಗಳೂ ಕೂಡ ಕಾಲಿಗೆ ಬೀಳುವುವು. ಆದರೆ ಭಕ್ತನು ಅವುಗಳ ಸ್ಪರ್ಶ ಕೂಡ ಮಾಡಲಾರನು. ಇಷ್ಟೊಂದು ಆತನಿಗೆ ನನ್ನ ಭಜನೆಯಲ್ಲಿ ಪ್ರೇಮವಿರುವುದು ॥೯೮॥ ನನ್ನ ಭಜನೆಯ ಪ್ರೇಮದ ಭರದಲ್ಲಿ ಭಕ್ತರಿಗೆ ಬದ್ಧತೆ ಎಂದರೆ ಏನು ಎಂಬುವುದು ಸ್ವಪ್ನದಲ್ಲಿಯೂ ಸಹ ತೋರುವುದಿಲ್ಲ. ಈ ಬದ್ಧತೆಯು ಇಲ್ಲದಿರುವಾಗ ಮುಕ್ತಿಯು ಮಿಥ್ಯೆಯಾಗುವುದು. ಆದ್ದರಿಂದ ನನ್ನ ಭಕ್ತರು ಮುಕ್ತಿಯನ್ನು ಸ್ವೀಕರಿಸುವುದಿಲ್ಲ ॥೯೯॥ ಹೀಗೆ ಬದ್ಧತೆಯು ಪರಿಪೂರ್ಣವಾಗಿ ಮಿಥ್ಯೆಯಾಗಲು ಆಗ ಪಾಪ ! ಮುಕ್ತಿ ಏನಾಗಬೇಕು? ನನ್ನ ಭಜನೆಯ ಪ್ರೇಮದಿಂದ ನನ್ನ ಭಕ್ತರಲ್ಲಿ ಆತ್ಮಾನಂದದ ರಾಶಿಯೇ ದೊರೆಯುವುದು ॥೧೦೦॥ ನಿರಪೇಕ್ಷವಾದ ಭಾವನೆಯಿಂದ ಮತ್ತು ಪ್ರೇಮಪೂರ್ವಕವಾದ ಭಕ್ತಿಯಿಂದ ನನ್ನ ಅನನ್ಯ ಭಜನೆಯನ್ನು ಮಾಡಲು ಆಗ ಆ ಭಜನೆಯ ಸ್ಥಿತಿಯಲ್ಲಿ ಭಕ್ತರಿಗೆ ಸ್ವಾನಂದದ ಪ್ರಾಪ್ತಿಯಾಗುತ್ತಿರುವುದು ॥೧೦೧॥

ಜೇವೀ ಗರ್ಭೇಸೀ ವರ್ತೇ ಗುರ್ವಿಣೀ । ಕಾ ತರುಣಪಣೇಸೀ ತರುಣೀ । ತೇವೀ ಸ್ವಾನಂದಾಚ್ಯಾ ಪೂರ್ಣಪಣೀ । ಮಾಝೇ ನಿಜಭಜನೀ ಮದ್ಭಕ್ತ ॥೪೦೨॥ ತೇಥ ಸಗುಣ ಅಥವಾ ನಿರ್ಗುಣ । ಉಭಯರೂಪೇ ಮೀಚಿ ಬ್ರಹ್ಮ ಪೂರ್ಣ। ತೇಥ ಭಾವೇ ಕರಿತಾ ಭಜನ । ಬ್ರಹ್ಮಸಂಪನ್ನ ಮದ್ಭಕ್ತ ॥೪೦೩॥ ಭಾವೇ ಕರಿತಾ ಮಾಝೀ ಭಕ್ತೀ । ಭಾವಿಕಾ ಕೋಣ ಪಾ ಅಪ್ರಾಪ್ತೀ । ವಿವೇಕವೈರಾಗ್ಯಜ್ಞಾನಸಂಪತ್ತೀ । ಪಾಯಾ ಲಾಗತೀ ಮದ್ಭಕ್ತಾಂಚ್ಯಾ ॥೪೦೪॥ ಮಾಝೇ ನಿಜಭಜನೇ ತುಟೇ ಭೇದ । ಸ್ವಯೇಚಿ ಪ್ರಕಟೇ ಅಭೇದಬೋಧ । ತೇಣೇ ವೋಸಂಡೇ ಪರಮಾನಂದ । ಸ್ವಾನಂದಕಂದ ಸ್ವಯಂಭ ॥೪೦೫॥ ಮಾಝೇ ಸ್ವರೂಪಾ ನಾಹೀ ಅಂತ । ಯಾಲಾಗೀ ನಾಂವೇ ಮೀ ''ಅನಂತ''। ಬಾಪ ಭಕ್ತಭಾವ ಸಮರ್ಥ । ತಿಹೀ ಮೀ ಅನಂತ ಆಕಳಿಲೋ ॥೪೦೬॥ ಐಸೇ ಜ್ಯಾಂಚೇ ಪ್ರೇಮ ಗೋಡ । ತ್ಯಾಂಚೇ ಸೇವೇಚೇ ಮಜ ಕೋಡ । ತ್ಯಾಂಚೇ ಸೋಶೀ ಮೀ ಸಾಂಕಡ । ನಿಚಾಡಾ ಚಾಡ ಮಜ ತ್ಯಾಂಚೀ ॥೪೦೭॥ ದೇವ ಸಪ್ರೇಮೇ ಭುಲಲಾ । ಮ್ಹಣೇ ಮೀ ತ್ಯಾಂಚಾಚಿ ಅಂಕಿಲಾ । ಜೀವೇಭಾವೇ ತ್ಯಾಸೀ ವಿಕಿಲಾ । ಮೀ ತ್ಯಾಂಚಾ ಜಾಹಲಾ ತಿಹೀ ಲೋಕೀ ॥೪೦೮॥ ಏಥವರೀ ಭಕ್ತಾ ಮಾಝೀ ಪ್ರಾಪ್ತೀ । ಅವಚಟೇ ಝಾಲ್ಯಾ ಸತ್ಸಂಗತೀ । ಮಾ ಸದ್ಭಾವೋ ಜೇ ಸಾಧು ಸೇವಿತೀ । ತ್ಯಾಂಚೀ ನಿಜಗತೀ ಮಜ ನ ಬೋಲವೇ ॥೪೦೯॥ ಐಸಾ ಸಂತಮಹಿಮಾ ವಾನಿತಾ । ಧಣೀ ನ ಪುರೇ ಶ್ರೀಕೃಷ್ಣನಾಥಾ । ತೋಚಿ ಸಂತಮಹಿಮಾ ಮಾಗುತಾ । ಹೋಯ ವಾನಿತಾ ಚೌ ಶ್ಲೋಕೀ ॥೪೧೦॥

ಯಥೋಪಶ್ರಯಮಾಣಸ್ಯ ಭಗವಂತಂ ವಿಭಾವಸುಮ್। ಶೀತಂ ಭಯಂ ತಮೋಽಪ್ಯೇತಿ ಸಾಧೂನ್ ಸಂಸೇವತಸ್ತಥಾ ॥೩೧॥

ಅರ್ಥ:- ಯಾರು ಸಂತಪುರುಷನಿಗೆಶರಣು ಹೋಗುವವರೋ, ಅವರ ಕರ್ಮ ಜಾಡ್ಯತೆ, ಸಂಸಾರ ಭಯ ಮತ್ತು ಅಜ್ಞಾನ ಇತ್ಯಾದಿ ಎಲ್ಲವೂ ನಷ್ಟವಾಗುವುವು. ಯಾರು ಭಗವಂತನ ಆಶ್ರಯವನ್ನು ಪಡೆದಿರುವರೋ, ಅವರಿಗೆ ಭಯ ಅಥವಾ ಅಂಧಕಾರದ ದುಃಖವು ಹೇಗಾಗುವುದು?

ಜೇವೀ ವೈಶ್ವಾನರ ತೇಜೋಮೂರ್ತೀ । ತ್ಯಾಚೀ ಸೇವಾ ಜೇ ಕರೂ ಜಾಣತೀ । ತ್ಯಾಂಚೇ ಶೀತತಮಭಯ ನಿವೃತ್ತೀ । ತೋ ಕರೀ ನಿಶ್ಚಿತೀ ಉದ್ಧವಾ ॥೪೧೧॥ ಶೀತ ನಿವಾರೀ ಸನ್ನಿಧೀ । ತಮ ನಿವಾರೀ ತೇಜೋವೃದ್ಧೀ । ಭಯ ನಿವಾರೀ ಭಗವದ್ಬುದ್ಧೀ । ಜೇವೀ ತ್ರಿಶುದ್ಧೀ ವಿಭಾವಸು ॥೪೧೨॥

ಯಾವ ಪ್ರಕಾರವಾಗಿ ಗರ್ಭಿಣಿ ಸ್ತ್ರೀಯಳು ತನ್ನ ಗರ್ಭದೊಂದಿಗೆ ಹೇಗೆ ಕಾರ್ಯ ಮಾಡುತ್ತಿರುವಳೋ, ಹಾಗೆಯೇ ತರುಣ ಸ್ತ್ರೀಯಳು ತನ್ನ ತಾರುಣ್ಯದೊಂದಿಗೆ ಹೇಗೆ ವರ್ತಿಸುತ್ತಿರುವಳೋ, ಅದರಂತೆಯೇ ಆತ್ಮಾನಂದದ ಪೂರ್ಣತೆಯೊಂದಿಗೆ ನನ್ನ ಭಕ್ತರು ನನ್ನ ಭಜನೆಯಲ್ಲಿ ತನ್ಮಯರಾಗಿರುವರು ॥೪೦೨॥ ಆಗ ಅವರಿಗೆ ಸಗುಣ ಅಥವಾ ನಿರ್ಗುಣ ಈ ಎರಡೂ ರೂಪಗಳಿಂದ ಪರಿಪೂರ್ಣ ಬ್ರಹ್ಮವು ನಾನೇ ಆಗಿರುವೆನು. ಪ್ರೇಮಭಾವದಿಂದ ನನ್ನ ಭಜನೆಯಲ್ಲಿ ಮಾಡುತ್ತಿದ್ದಂತೆ ನನ್ನ ಭಕ್ತರು ಬ್ರಹ್ಮ ಸಂಪನ್ನನಾಗುವರು ॥೪೦೩॥ ಏಕನಿಷ್ಠೆಯಿಂದ ನನ್ನ ಭಕ್ತಿಯನ್ನು ಮಾಡಿದರೆ ಆ ಭಾವಿಕ ಭಕ್ತರಿಗೆ ಅಪ್ರಾಪ್ತ ಎಂಬುವುದು ಯಾವುದಿರುವುದು? ವಿವೇಕ, ವೈರಾಗ್ಯ, ಜ್ಞಾನ, ಸಂಪತ್ತು ಈ ಎಲ್ಲವೂ ಆತನ ಚರಣಗಳಲ್ಲಿ ನತಮಸ್ತಕವಾಗುವುವು ॥೪೦೪॥ ನನ್ನ ಭಜನೆಯಿಂದ ಹೃದಯದಲ್ಲಿನ ಭೇದಭಾವವು ಪೂರ್ಣವಾಗಿ ಇಲ್ಲದಾಗುವುದು. ಆಗ ಅಭೇದ ಜ್ಞಾನವು ಅಲ್ಲಿ ಪರಿಪೂರ್ಣವಾಗಿ ಪ್ರಕಟವಾಗುವುದು. ಇದರಿಂದ ಸ್ವಾನಂದಕಂದವಾದ ಪರಮಾನಂದವು ಒಳಗಿನಿಂದ ಉಕ್ಕೇರುವುದು ॥೪೦೫॥ ನನ್ನ ಸ್ವರೂಪಕ್ಕೆ ಅಂತವೇ ಇಲ್ಲ. ಆದ್ದರಿಂದ ನನಗೆ ಅನಂತನೆಂದು ಕರೆಯುವರು. ಹೀಗಿದ್ದರೂ ನನ್ನ ಭಕ್ತನ ಭಾವಕ್ಕೆ ಎಷ್ಟೊಂದು ಸಾಮರ್ಥ್ಯ ಮತ್ತು ಶ್ರೇಷ್ಠತೆ ಇದೆ ಎಂದರೆ ಆತನು ಅನಂತನಾಗಿರುವ ನನ್ನನ್ನು ಬಂಧಿಸಿಬಿಡುವನು ॥೪೦೬॥ ಹೀಗೆ ಯಾರ ಪ್ರೇಮವು ಶ್ರೇಷ್ಠವಾಗಿರುವುದೋ, ಅವರ ಸೇವೆಗಾಗಿ ನನ್ನಲ್ಲಿ ಅನುರಾಗವಿರುವುದು. ಅವರ ಎಲ್ಲ ಸಂಕಟಗಳನ್ನು ನಾನು ಸೋಸುವೆನು. ನಾನು ನಿರೀಚ್ಛನಾಗಿದ್ದರೂ ಕೂಡ ನನಗೆ ಅವರಲ್ಲಿ ಇಚ್ಛೆಯಾಗುವುದು ॥೪೦೭॥ ದೇವನು ಈ ಯಾವ ಪ್ರೇಮಕ್ಕೆ ಭುಲಾಯಿಸಿ ಈ ರೀತಿಯಾಗಿ ಹೇಳುತ್ತಿರುವನು. ನಾನು ಭಕ್ತರ ಅಂಕಿತನಾಗಿರುವೆನು. ನಾನು ಜೀವಭಾವದಿಂದ ಅವರಿಗೆ ಮಾರಿಕೊಂಡಿರುವೆನು. ಮೂರು ಲೋಕಗಳಲ್ಲಿಯೂ ನಾನು ಅವರನ್ನಾಗಿಯೇ ಇರಲ್ಪಟ್ಟಿರುವೆನು ॥೪೦೮॥ ಆಕಸ್ಮಾತಾಗಿ ಸತ್ಸಂಗತಿಯು ಪ್ರಾಪ್ತವಾಯಿತೆಂದರೆ ಭಕ್ತರಿಗೆ ಇಷ್ಟೊಂದು ಲಾಭವು ಆಗುವುದು. ಹೀಗಿರುವಾಗ ಸದ್ಭಾವನೆಯಿಂದ ಸಾಧುಗಳ ಸೇವೆಯನ್ನು ಮಾಡುತ್ತಿದ್ದರೆ ಅವರಿಗೆ ಎಷ್ಟೊಂದು ಲಾಭವಾಗುವುದೆಂಬ ವರ್ಣನೆಯನ್ನು ನನಗೆ ಮಾಡಲು ಬರುವುದಿಲ್ಲ ॥೪೦೯॥ ಹೀಗೆ ಸಂತರ ಮಹಿಮೆಯನ್ನು ವರ್ಣಿಸುತ್ತಿರಲು ಶ್ರೀಕೃಷ್ಣನಿಗೆ ಇನ್ನೂ ತೃಪ್ತಿಯಾಗಲಿಲ್ಲ. ಆದ್ದರಿಂದ ಆತನು ಮುಂದೆ ನಾಲ್ಕು ಶ್ಲೋಕಗಳಲ್ಲಿ ಸಂತರ ಮಹಿಮೆಯ ವಿಷಯವನ್ನು ಕುರಿತು ವರ್ಣನೆಯನ್ನು ಮಾಡುತ್ತಿರುವನು ॥೪೧೦॥

ಹೇ ಉದ್ಧವನೇ, ತೇಜೋಮೂರ್ತಿಯಾದ ಅಗ್ನಿಯ ಸೇವೆಯನ್ನು ಮಾಡುತ್ತಿರಲು ಆತನ ಶೀತ, ಕತ್ತಲೆ ಮತ್ತು ಭಯ ಇವುಗಳನ್ನು ಅಗ್ನಿಯು ನಿವಾರಣೆ ಮಾಡುವುದು ॥೪೧೧॥ ಅಗ್ನಿಯ ಸಾನಿಧ್ಯದಿಂದ ಶೀತವು ಇಲ್ಲದಾಗುವುದು. ಅದರ ತೇಜದಿಂದ ಕತ್ತಲೆಯು ನಿವಾರಣೆಯಾಗುವುದು ಮತ್ತು ಅಗ್ನಿಯಲ್ಲಿ ಈಶ್ವರ ಭಾವನೆಯನ್ನು ಧರಿಸಲು ಭಯವು ಭಂಗವಾಗುವುದು. ಹೀಗೆ ಏಕಕಾಲಕ್ಕೆ ತ್ರಿಶುದ್ಧಿಯಾಗುವುದು ॥೪೧೨॥

ತೈಶೀಚ ಜಾಣ ಸತ್ಸಂಗತೀ । ಸಂಗೇ ತ್ರಿವಿಧ ತಾಪ ನಿವಾರತೀ । ತೇಚಿ ಅರ್ಥೀಚೀ ನಿಜಯುಕ್ತೀ । ಐಕ ಉಪಪತ್ತೀ ಉದ್ಧವಾ ॥೪೧೩॥ ಶೀತ ಮ್ಹಣಿಜೇ ದ್ವಂದ್ವಬಾಧು । ತೋ ಸಮೂಳ ನಿವಾರಿತೀ ಸಾಧು । ತಮ ಮ್ಹಣಿಜೇ ಅಜ್ಞಾನಾಂಧು । ತ್ಯಾಸೀ ಕರಿತೀ ಪ್ರಬೋಧು ನಿಜಜ್ಞಾನೇ ॥೪೧೪॥ ಭಯಾಂಮಾಜೀ ಶ್ರೇಷ್ಠ ಮರಣ। ಭಯ ನಿವಾರೀ ಸಾಧು ವಿಚಕ್ಷಣ । ನಿವಾರಿತೀ ಜನ್ಮಮರಣ । ಕೃಪಾಳು ಪೂರ್ಣ ದೀನಾಂಚೇ ॥೪೧೫॥ ಅಗ್ನೀಸಮಾನ ಮ್ಹಣೋ ಸಾಧು । ಹಾಹೀ ಬೋಲ ಅತಿಬದ್ಧು । ಅಗ್ನೀಹೂನ ಅಧಿಕ ಸಾಧು । ತೋಚಿ ಪ್ರಬೋಧು ಹರಿ ಸಾಂಗೇ ॥೪೧೬॥ ಅಗ್ನೀಪಾಶೀ ಪ್ರಬಳ ಧೂಮು । ಸಾಧು ನಿಷ್ಕ್ರೋಧ ನಿರ್ಧೂಮು । ಅಗ್ನಿ ಪೋಳೀ ಅಧಮೋತ್ತಮ। ಸಾಧು ಸರ್ವಸಮ ಸುಖದಾತೇ ॥೪೧೭॥ ಸಾಧೂಂಚೀ ಧನ್ಯ ಸಂಗತೀ । ಸಂಗೇ ಜಡಜಾಡ್ಯ ತೋಡಿತೀ । ಕರ್ಮಾಚೇ ಕರ್ಮತ್ವ ಮೋಡಿತೀ । ಬುಡತ್ಯಾ ತಾರಿತೀ ನಿಜಸಂಗೇ ॥೪೧೮॥

ನಿರ್ಮಜ್ಜ್ಯೋನ್ಮಜ್ಜತಾಂ ಘೋರೇ ಭವಾಬ್ಧೌ ಪರಮಾಯಣಮ್ ।
ಸಂತೋಬ್ರಹ್ಮವಿದಂ ಶಾಂತಾ ನೌರ್ದೃಢೇವಾಪ್ಸು ಮಜ್ಜತಾಮ ॥೩೨॥

ಅರ್ಥ:- ನೀರಿನಲ್ಲಿ ಮುಳುಗುವವರನ್ನು ನೌಕೆಯು ಹೇಗೆ ರಕ್ಷಿಸುವುದೋ ಅದೇ ಪ್ರಕಾರವಾಗಿ ಸಂಸಾರದಲ್ಲಿ ಒದ್ದಾಡುತ್ತಿರುವ ಜೀವಿಗಳಿಗೆ ಬ್ರಹ್ಮವೇತ್ತರಾದ ಶಾಂತಮೂರ್ತಿ ಸಂತರು ಅವರನ್ನು ಉದ್ಧರಿಸಲು ಬಲಿಷ್ಠವಾದ ನೌಕೆಯಾಗಿ ಆಶ್ರಯದಾತಾರಾಗಿರುವರು.

ಪ್ರತಿಕ್ಷಣೇ ಅಧಿಕ ವೃದ್ಧೀ । ಅಮರ್ಯಾದ ವಾಢೇ ಭವಾಬ್ಧೀ । ತೇಥ ಉಬಕಲ್ಯಾ ಚುಬಕಲ್ಯಾ ತ್ರಿಶುದ್ಧೀ । ಅಧರ್ಮಬುದ್ಧಿ ಜನಾಸೀ ॥೪೧೯॥ ಅಧರ್ಮೇ ನಿಮಜ್ಜನ ನರಕಾಂತ । ಸ್ವಧರ್ಮೇ ಉನ್ಮಜ್ಜನ ಸ್ವರ್ಗಾತ । ಐಸೇ ಭೋಗಿತೀ ಆವರ್ತ । ಸ್ವರ್ಗನರಕಾಂತ ಸಂಸಾರೀ ॥೪೨೦॥ ಯಾಪರೀ ಸಂಸಾರೀ ಜನ । ಪಾವತಾ ಉನ್ಮಜ್ಜನ ನಿಮಜ್ಜನ । ತ್ಯಾಸೀ ತರಾವಯಾ ಭವಾಬ್ಧಿ ಜಾಣ । ಸಾಧು ಸಜ್ಜನ ದೃಢ ನಾವ ॥೪೨೧॥ ಪಡಲ್ಯಾ ಜಳಾರ್ಣವಾಮಾಝಾರೀ । ಜೇವೀ ಅಚ್ಛಿದ್ರ ನಾವ ತಾರೀ । ತೇವೀ ಬುಡತಾ ಭವಸಾಗರೀ । ಸುಖರೂಪ ತಾರೀ ಸಜ್ಜನನಾವ ॥೪೨೨॥ ಕಾಮಕ್ರೋಧರಹಿತ ಶಾಂತೀ । ಹೇಚಿ ನಾವೇಚೀ ಅಚ್ಛಿದ್ರ ಸ್ಥಿತೀ । ಬ್ರಹ್ಮಜ್ಞಾನೇ ಸಪುರತೀ। ಸುಖರೂಪ ನಿಶ್ಚಿತೀ ಯಾ ಹೇತು ॥೪೨೩॥ ಕಾಮಕ್ರೋಧಾದಿ ಸಾವಜಾಂಸೀ । ಬಳೇ ಘ್ಯಾವಯಾ ಆಂವಿಸಾಸೀ । ಕದಾ ನ ಯೇವವೇ ನಾವೇಪಾಶೀ । ಸಂಗೇ ಸಕಳಾಂಸೀ ತಾರಕ ॥೪೨೪॥

ಇದರಂತೆಯೇ ಸತ್ಸಂಗತಿಯು ಇರುವುದು. ಇದನ್ನು ನೀನು ತಿಳಿ. ಸತ್ಸಂಗತಿಯಿಂದ ತ್ರಿವಿಧ ತಾಪಗಳ ನಾಶವಾಗುವುದು. ಹೇ ಉದ್ಧವಾ, ಈ ಮಾತನ್ನೇ ನಿನಗೆ ಸ್ಪಷ್ಟಮಾಡಿ ಹೇಳುವೆನು, ಅದನ್ನು ನೀನು ಕೇಳು ॥೪೧೩॥ ಶೀತವೆಂದರೆ ದ್ವಂದ್ವಗಳಿಂದಾಗುವ ಪೀಡೆಯು. ಈ ಪೀಡೆಯನ್ನು ಸಂಪೂರ್ಣವಾಗಿ ನಾಶಮಾಡುವುದು. ತಮವೆಂದರೆ ಅಜ್ಞಾನ-ಅಂಧಕಾರವು. ಇದೂ ಕೂಡ ಆತ್ಮಜ್ಞಾನದ ಉಪದೇಶದಿಂದ ನಷ್ಟವಾಗುವುದು ॥೪೧೪॥ ಸರ್ವ ಭಯಗಳಲ್ಲಿ ಯಾವ ಮರಣಭಯವು ಭಯಂಕರವಾಗಿರುವುದು. ಆದರೆ ದೀನರಲ್ಲಿ ದಯಾವಂತರಾದ ಸಾಧುಗಳವರು ಜನ್ಮಮರಣಗಳನ್ನೂ ಕೂಡ ದೂರ ಮಾಡುವರು ॥೪೧೫॥ ಸಾಧುಗಳವರು ಅಗ್ನಿಸಮಾನರು ಎಂದು ಹೇಳಿದರೆ ಯೋಗ್ಯವಾಗಲಾರದು. ಕಾರಣ, ಸಾಧುಗಳವರು ಅಗ್ನಿಗಿಂತಲೂ ಶ್ರೇಷ್ಠರಾಗಿರುವರು. ಇದು ಹೇಗೆ ಎಂಬುವುದನ್ನು ಶ್ರೀಕೃಷ್ಣನು ವಿವರಿಸುವನು ॥೪೧೬॥ ಅಗ್ನಿಯಲ್ಲಿ ಅತಿಶಯವಾಗಿ ಹೊಗೆ ಇರುವುದು. ಆದರೆ ಸಾಧುಗಳವರು ಕ್ರೋಧರಹಿತರಾಗಿರುವರು ಅಂದರೆ ಧೂಮ್ರರಹಿತರಾಗಿರುವರು. ಅಗ್ನಿಯು ಅಧಮರಾಗಿರಲಿ, ಉತ್ತಮರಾಗಿರಲಿ, ಎಲ್ಲರಿಗೂ ಅದು ಸುಡುವುದು. ಆದರೆ ಸಾಧುಗಳವರು ಸರ್ವರಿಗೂ ಸುಖವನ್ನು ಕೊಡುತ್ತಿರುವರು ॥೪೧೭॥ ಆದ್ದರಿಂದ ಸಾಧುಗಳವರ ಸಂಗತಿಯು ಧನ್ಯ ಧನ್ಯವಾಗಿರುವುದು. ಇವರ ಸಂಗತಿಯಿಂದ ಕರ್ಮಜಾಢ್ಯವು, ಭವಭಯವು ಮತ್ತು ಮೂಲಭೂತವಾದ ಅಜ್ಞಾನವು ಇವು ಎಲ್ಲವೂ ಇಲ್ಲದಾಗುವುವು. ಇವರು ಕರ್ಮಗಳ ಕರ್ಮತ್ವವನ್ನು ಮುರಿದು ಒಗೆಯುವರು ಮತ್ತು ಮುಳುಗುವವನಿಗೆ ತಮ್ಮ ನಿಜಸಂಗತಿಯಿಂದ ಉದ್ಧರಿಸುವರು ॥೪೧೮॥

ಸಂಸಾರ ಸಾಗರಕ್ಕೆ ಪೂರವು ಬಂದು ಅದು ಕ್ಷಣಕ್ಷಣಕ್ಕೆ ಬೆಳೆಯುತ್ತಿರುವುದು. ಅದರಲ್ಲಿ ಜನರು ತೇಲುತ್ತ, ಮುಳುಗುತ್ತ ದುಃಖಪಡುತ್ತಿರುವರು. ಇವರಿಗೆ ಅಧರ್ಮಬುದ್ಧಿಯು ನಿರ್ಮಾಣವಾಗುವುದು ॥೪೧೯॥ ಅಧರ್ಮದಿಂದ ಇವರು ನರಕದಲ್ಲಿ ಮುಳುಗುತ್ತಿರುವರು. ಸ್ವಧರ್ಮದಿಂದ ಇವರು ಸ್ವರ್ಗಕ್ಕೆ ಹೋಗುತ್ತಿರುವರು. ಈ ಪ್ರಕಾರವಾಗಿ ಈ ಯಾವ ಸಂಸಾರೀ ಜನರು ಸ್ವರ್ಗ ನರಕಗಳಲ್ಲಿ ಬಗರಿಯಂತೆ ತಿರುಗುತ್ತಿರುವರು ॥೪೨೦॥ ಇಂತಹ ಪ್ರಸಂಗದಿಂದ ಈ ಜನರು ಕೆಳಗೆ ಮೇಲೆ ಬಿಡುವಿಲ್ಲದೇ ಮುಳುಗಿ ಏಳುತ್ತಿರುವಾಗ ಇವರಿಗೆ ಈ ಸಂಸಾರಸಾಗರದಲ್ಲಿ ಸಾಧು ಸಜ್ಜನರೇ ಪಾರು ಮಾಡುವ ಬಲಿಷ್ಠ ನೌಕೆಯಾಗಿರುವರು ॥೪೨೧॥ ಛಿದ್ರರಹಿತ ನೌಕೆಯು ಜಲಪ್ರವಾಹದಿಂದ ಹೇಗೆ ಜನರನ್ನು ರಕ್ಷಿಸುವುದೋ, ಅದರಂತೆ ಸಾಧುಸಂತರೂಪ ನೌಕೆಯು ಈ ಸಂಸಾರದ ಪ್ರವಾಹದಲ್ಲಿ ಸಿಲುಕಿಕೊಂಡಿರುವ ಜನರನ್ನು ಸುಖರೂಪವಾಗಿ ಆಚೆ ದಂಡೆಗೆ ತಂದು ಮುಟ್ಟಿಸುವುದು ॥೪೨೨॥ ಕಾಮಕ್ರೋಧರಹಿತವಾದ ಶಾಂತಿಯೇ ನೌಕೆಯ ಅಛಿದ್ರತೆಯಾಗಿರುವುದು. ಇದು ಬ್ರಹ್ಮಜ್ಞಾನದಿಂದ ಬಲಿಷ್ಠವಾಗಿರುವುದು. ಇದು ನಿಜವಾದ ಸುಖರೂಪವಾಗಿರುವುದು ॥೪೨೩॥ ಕಾಮಕ್ರೋಧಾದಿ ಭಯಂಕರ ಜಲಚರಗಳಿಗೆ ಆಮಿಷ ತಿನ್ನುವುದಕ್ಕಾಗಿ ಈ ನೌಕೆಯ ಸಮೀಪ ಎಂದಿಗೂ ಬರಲು ಸಾಧ್ಯವಿಲ್ಲ. ನಿಜವಾಗಿಯೂ ಈ ಯಾವ ಸತ್ಸಂಗವು ಸರ್ವರಿಗೂ ತಾರಕವಾಗಿರುವುದು ॥೪೨೪॥

ನವಲ ಯೇ ನಾವೇಚೀ ಸ್ಥಿತೀ । ಜುನೀ ನವ್ಹೇ ಕಲ್ಪಾಂತೀ । ಬುಡವೂ ನೇಣೇ ಧಾರಾವರ್ತೀ । ತಾರಕ ನಿಶ್ಚಿತೀ ನಿಜಸಂಗೇ ॥೪೨೫॥ ಪರೀ ಯೇ ನಾವೇಚೀ ನವಲ ಗತೀ । ವರೀ ಚಢಲೇ ತೇ ಬುಡತೀ । ತಳೀ ರಾಹಿಲೇ ತೇ ತರತೀ । ಜಾಣ ನಿಶ್ಚಿತೀ ಉದ್ಧವಾ ॥೪೨೬॥ ದೀನಾಂಚಾ ಕಳವಳಾ ಪಹಾ ಹೋ । ಹಾಚಿ ಮುಖ್ಯತ್ವೇ ತರುಣೋಪಾವೋ । ತ್ಯಾ ಕಳವಳ್ಯಾಚಾ ಅಭಿಪ್ರಾವೋ । ಸ್ವಯೇ ದೇವೋ ಸಾಂಗತ ॥೪೨೭॥

ಅನ್ನಂ ಹಿ ಪ್ರಾಣಿನಾಂ ಪ್ರಾಣ ಆರ್ತಾನಾಂ ಶರಣಂ ತ್ವಹಮ್ ।
ಧರ್ಮೋ ವಿತ್ತಂ ನೃಣಾಂ ಪ್ರೇತ್ಯ ಸಂತೋಽರ್ವಾಗ್ ಬಿಭ್ಯತೋಽರಣಮ್ ॥೩೩॥

ಅರ್ಥ:- ಸಕಲ ಜೀವಿಗಳಿಗೆ ಆಹಾರವೇ ಪ್ರಾಣ. ಆರ್ತರಿಗೆ ನಾನೇ ಅಂತಿಮ ಆಶ್ರಯ. ಈ ಲೋಕದಿಂದ ತೆರುಳುವವರಿಗೆ ಧರ್ಮವೇ ಸಂಪತ್ತು. ಅದರಂತೆಯೇ ಜೀವನದ ಅತ್ಯಂತ ಸಂಕಟಕರ ಸ್ಥಿತಿಗೆ ಬೀಳುವ ಭಯವಿರುವವರಿಗೆ ಸಂತರಾದ ನನ್ನ ಭಕ್ತರು ಮಾತ್ರ ಆಶ್ರಯ ನೀಡಬಲ್ಲರು.

ಜೇವೀ ಅನ್ನೇವೀಣ ಪ್ರಾಣ । ಸರ್ವಥಾ ನ ವಾಂಚತೀ ಜಾಣ। ಪ್ರಾಣ್ಯಾಂಚೇ ಪ್ರಾಣಪೋಷಣ । ಕರಾವಯಾ ಸಾಮರ್ಥ್ಯ ಪೂರ್ಣ ಅನ್ನೀನಾಂದೇ ॥೪೨೮॥ ಜೋಡಲೀ ಧರ್ಮಾಚೀ ಸಂಪತ್ತೀ । ತೇ ಇಹಲೋಕೀ ಹೋಯ ರಕ್ಷಿತೀ । ತೇಚಿ ಧರ್ಮಧನ ದೇಹಾಂತೀ । ಉತ್ತಮ ಗತಿದಾಯಕ ॥೪೨೯॥ ಸಂಸಾರೀ ಪೀಡಿಲೇ ದಾರುಣ। ತ್ರಿವಿಧ ತಾಪೇ ತಾಪಿಲೇ ಪೂರ್ಣ । ಐಶಿಯಾ ಶರಣಾಗತಾ ಶರಣ್ಯ । ಮೀ ನಾರಾಯಣ ರಕ್ಷಿತಾ ॥೪೩೦॥ ಮಾಝೇ ಕರಿತಾ ನಾಮಸ್ಮರಣ । ಸಹಜೇ ನಿವಾರೇ ಜನ್ಮಮರಣ । ತ್ಯಾ ಮಜ ರಿಘಾಲಿಯಾ ಶರಣ । ಬಾಧೀ ದುಃಖ ಕೋಣ ಬಾಪುಡೇ ॥೪೩೧॥ ದುಃಖಭಯ ನ ಪಾವತಾ ಆಧೀ । ಜೆಂಹೀ ಸಾಧು ಸೇವಿಲೇ ಸದ್‌ಬುದ್ಧೀ । ತ್ಯಾಂಸೀ ಭವಭಯಾಚೀ ಆಧಿವ್ಯಾಧೀ । ಜಾಣ ತ್ರಿಶುದ್ಧೀ ಬಾಧೀನಾ ॥೪೩೨॥ ಪ್ರಾಣಿಯಾಂಸೀ ಹೋತಾ ಪತನ । ಭಾಗ್ಯೇ ಭೇಟಲ್ಯಾ ಸಜ್ಜನ । ನಿವಾರೂನಿ ಅಧೋಗಮನ । ಜನ್ಮ ಮರಣ ಛೇದಿತೀ ॥೪೩೩॥ ಸಂಸಾರ ತರಾವಯಾ ಜಾಣ । ಸತ್ಸಂಗತೀಚಿ ಪ್ರಮಾಣ । ತ್ಯಾಂಚೇ ಭಾವೇ ಧರಿತಾ ಚರಣ । ದೀನೋದ್ಧರಣ ತ್ಯಾಚೇನಿ ॥೪೩೪॥

ಸಂತೋ ದಿಶಂತಿ ಚಕ್ಷೂಂಷಿ ಬಹಿರರ್ಕಃ ಸಮುತ್ಥಿತಃ ।
ದೇವತಾ ಬಾಂಧವಾಃ ಸಂತಃ ಸಂತ ಆತ್ಮಾಽಹಮೇವ ಚ ॥೩೪॥

ಅರ್ಥ:- ಸೂರ್ಯನು ಆಕಾಶದಲ್ಲಿ ಉದಯಿಸಿದಾಗ ಮಾತ್ರ ನಮಗೆ ನೋಡಲು ಹೊರಗಿನ ದೃಷ್ಟಿಯನ್ನು ನೀಡುವನು. ಆದರೆ ನನ್ನ ಭಕ್ತರು ನನಗೆ ದಿವ್ಯ ಚಕ್ಷುಗಳನ್ನು ಅನುಗ್ರಹಿಸುವರು. ನನಗೆ ನನ್ನ ಭಕ್ತರೇ ನಿಜವಾದ ಆರಾಧ್ಯ ದೈವ, ನಿಜವಾದ ಹಿತಕೋರುವ ಬಂಧುಗಳು. ಹೆಚ್ಚಿಗೇನು ಹೇಳಬೇಕು? ನಾನೇ ಸಂತರ ರೂಪದಲ್ಲಿ ವಿರಾಜಮಾನನಾಗಿರುವೆನು.

ಈ ನೌಕೆಯ ವೈಶಿಷ್ಟ್ಯವೇನೆಂದರೆ ಇದು ಎಂದಿಗೂ ಹಳೆಯದಾಗುವುದಿಲ್ಲ ಮತ್ತು ಎಂದಿಗೂ ತಿರುಗಣೆಯಲ್ಲಿ ಮುಳುಗುವುದಿಲ್ಲ. ತನ್ನ ಸಂಗತಿಯಲ್ಲಿನ ಸರ್ವ ಜೀವಿಗಳಿಗೆ ಉದ್ಧರಿಸುವುದು ॥೪೨೫॥ ಹೇ ಉದ್ಧವಾ, ಈ ನೌಕೆಯ ಇನ್ನೊಂದು ಹೀಗೆ ಚಮತ್ಕಾರವಿರುವುದು. ಯಾರು ಈ ನೌಕೆಯ ಮೇಲೆ ಏರುವರೋ, ಅವರು ಮುಳುಗುವರು. ಮತ್ತು ಯಾರು ಈ ನೌಕೆಯ ತಳದಲ್ಲಿ ಇರುವರೋ, ಅವರು ಉದ್ಧಾರ ರಾಗುವರು. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೪೨೬॥ ದೀನರಲ್ಲಿರುವ ಕಳಕಳಿಯೇ ನಿಜವಾದ ತರಣೋಪಾಯವಾಗಿರುವುದು. ಈ ಕಳಕಳಿಯ ಉದ್ದೇಶವನ್ನು ಶ್ರೀಹರಿಯು ಸ್ಪಷ್ಟಮಾಡಿ ಹೇಳುತ್ತಿರುವನು ॥೪೨೭॥

ಅನ್ನವಿಲ್ಲದೇ ಪ್ರಾಣವು ಎಂದಿಗೂ ಬದುಕಲು ಸಾಧ್ಯವಿಲ್ಲ. ಪ್ರಾಣಿಮಾತ್ರರ ಪೋಷಣೆ ಮಾಡುವ ಸಾಮರ್ಥ್ಯವು ಅನ್ನದಲ್ಲಿರುವುದು ॥೪೨೮॥ ಧರ್ಮದಿಂದ ಸಂಪಾದನೆ ಮಾಡಿದ ಧನಸಂಪತ್ತು ಈ ಲೋಕದಲ್ಲಿ ನಮ್ಮ ರಕ್ಷಣೆಯನ್ನು ಮಾಡುವುದು ಮತ್ತು ಮರಣದ ನಂತರ ಉತ್ತಮ ಗತಿಯನ್ನು ಪ್ರಾಪ್ತಮಾಡಿಕೊಡುವುದು ॥೪೨೯॥ ಸಂಸಾರದಲ್ಲಿ ಶ್ರಮಪಡುತ್ತ ತ್ರಿವಿಧ ತಾಪಗಳಿಂದ ಪೀಡೆಗೆ ಒಳಗಾದವರು ನನಗೆ ಅನನ್ಯಭಾವದಿಂದ ಶರಣಾದ ಈ ಜೀವಿಗಳಿಗೆ ರಕ್ಷಿಸಲು ನಾರಾಯಣನಾದ ನಾನೊಬ್ಬನೇ ಇರುವೆನು ॥೪೩೦॥ ನನ್ನ ನಾಮಸ್ಮರಣೆಯನ್ನು ಮಾಡುತ್ತಿರಲು ಜನ್ಮ ಮರಣಗಳು ಸಹಜವಾಗಿಯೇ ನಿವಾರಣೆಯಾಗುವುವು. ನನಗೆ ಶರಣಾದ ಮೇಲೆ ಪಾಪ! ಯಾವ ದುಃಖಗಳು ಇವರಿಗೆ ಪೀಡೆಯನ್ನು ಕೊಡಲು ಸಾಧ್ಯವಾದೀತು? ॥೪೩೧॥ ದುಃಖದ ಭಯವು ಬಾಧಿಸುವ ಪೂರ್ವದಲ್ಲಿಯೇ ಇವರು ಸದ್‌ಬುದ್ಧಿಯಿಂದ ಸಾಧುಗಳವರ ಸೇವೆಯನ್ನು ಮಾಡಿದರು. ಅಂದಮೇಲೆ ಇವರಿಗೆ ಆದಿವ್ಯಾಧಿಯು ಎಂದಿಗೂ ಬಾಧಿಸಲಾರದು ॥೪೩೨॥ ಮನುಷ್ಯರು ಅಧೋಗತಿಗೆ ಹೋಗುತ್ತಿರಲು ಆಗ ಅವರಿಗೆ ಒಬ್ಬ ಸಾಧುವಿನ ಭೇಟಿಯಾದರೆ ಇವರ ಕೃಪೆಯಿಂದ ಅವರ ಅಧಃಪಾತವು ತಪ್ಪುವುದಲ್ಲದೇ ಜನ್ಮಮರಣಗಳೂ ಕೂಡ ಇಲ್ಲದಾಗುವುವು ॥೪೩೩॥ ಸಂಸಾರಸಾಗರದಿಂದ ಪಾರಾಗುವುದಕ್ಕಾಗಿ ಸತ್ಸಂಗತಿಯೊಂದೇ ನಿಜವಾದ ಆಧಾರವಾಗಿರುವುದು. ಭಕ್ತಿಭಾವದಿಂದ ಸಂತರ ಚರಣ ಕಮಲಗಳನ್ನು ಹಿಡಿದರೆ ಅವರಿಂದ ದೀನರ ಉದ್ಧಾರವಾಗುವುದು ॥೪೩೪॥

ಜೇವೀ ಅಂಧಾರೇಸಿ ಸಗಳೀ ರಾತೀ । ನಿಜತೇಜೇ ನಿರಸೀ ಗಭಸ್ತೀ । ತೇವೀ ಸತ್ಸಂಗಸೂರ್ಯಪ್ರಾಪ್ತೀ । ಅವಿದ್ಯೇಚಿ ನಿಶ್ಚಿತೀ ನಿರಸೀ ನಿಶಾ ।।೫೩೫।। ಬಾಹ್ಯ ಉಗವಲ್ಯಾ ಗಭಸ್ತೀ । ಚೋರಭಯಾಚೀ ಹೋಯ ನಿವೃತ್ತೀ । ತೇವೀ ಜೋಡಲ್ಯಾ ಸತ್ಸಂಗತೀ । ಭವಭಯ ಕಲ್ಪಾಂತೀ ಅಸೇನಾ ।।೫೩೬।। ಬಾಹ್ಯ ಸೂರ್ಯೋದಯಕಾಳೀ । ಪಕ್ಷೀ ಸಾಂಡಿತೀ ಅವಿಸಾಳೀ । ಸತ್ಸಂಗಸೂರ್ಯಾಚೇ ಮೇಳೀ । ದೇಹಾಚೀ ಅವಿಸಾಳೀ ಸಾಂಡಿತೀ ಜೀವ ।।೫೩೭।। ಬಾಹ್ಯ ಸೂರ್ಯಾಚ್ಯಾ ಕಿರಣೀ । ಹರ್ಷೇ ವಿಕಾಸೇ ಕಮಳಿಣೀ । ಸತ್ಸಂಗಸೂರ್ಯಾಚೇ ಮಿಳಣೀ । ನಿರ್ವಿಕಲ್ಪ ಕಮಳಣೀ ವಿಕಾಸೇ ।।೫೩೮।। ಸೂರ್ಯ ಉಗವಲಿಯಾ ಗಗನೀ । ಚಕ್ರವಾಕೇ ಮಿಳತೀ ಮಿಳಣೀ । ತೇವೀ ಸತ್ಸಂಗ ಪಾವೋನಿ । ಜೀವ ಶಿವ ದೋನೀ ಏಕವಟತೀ ।।೫೩೯।। ಬಾಹ್ಯ ಸೂರ್ಯಾಚೇ ಪಹಾಂಟೇಸೀ । ಪಾಂಥಿಕ ಚಾಲತೀ ಸ್ವಗ್ರಾಮಾಸೀ । ಸತ್ಸಂಗ ಸೂರ್ಯಾಚೇ ಪ್ರಕಾಶೀ । ಮುಮುಕ್ಷು ನಿಜಧಾಮಾಸೀ ಪಾವತೀ ।।೫೪೦।। ಬಾಹ್ಯ ಸೂರ್ಯಾಚೇ ಉದಯಸ್ಥಿತೀ । ಕರ್ಮಾಚೇ ಚಾಲೇ ಕರ್ಮಗತೀ । ಸತ್ಸಂಗಸೂರ್ಯಾಚೇ ಸಂಗತೀ । ನಿಷ್ಕರ್ಮಪ್ರವೃತ್ತಿ ಪ್ರವರ್ತೇ ।।೫೪೧।। ಸೂರ್ಯಬಿಂಬಾಚೇ ಉದಯಸಂಧೀ । ಅರ್ಘ್ಯವಾದ ದೀಜೇ ವೇದವಿಧೀ । ಸತ್ಸಂಗಸೂರ್ಯಾಚೇ ಸಂಬಂಧೀ । ದೀಜೇ ದೇಹಬುದ್ಧೀ ತಿಲಾಂಜಳೀ ।।೫೪೨।। ಸೂರ್ಯ ಉದಯಾಚಿಯಾ ಪ್ರಾಪ್ತೀ । ಯಾಜ್ಞಿಕ ಹೋಮಾತೇ ಹವಿತೀ । ತೇವೀ ಸತ್ಸಂಗ ಸೂರ್ಯಸ್ಥಿತೀ । ಅಹಂತಾ ಹವಿತೀ ಜ್ಞಾನಾಗ್ನೀ ।।೫೪೩।। ಸೂರ್ಯ ಉಗವೂನಿ ಆಕಾಶೀ । ಜಗಾಚೇ ಜಡ ನಿದ್ರಾ ನಿರಸೀ । ಸಂತ ಉಗವೂನಿ ಚಿದಾಕಾಶೀ । ಜೀವ ಚಿತ್ಪ್ರಕಾಶೀ ಪ್ರಬೋಧೀ ।।೫೪೪।। ಹೋ ಕಾ ಸಾಧು ಸೂರ್ಯಸಮಾನ । ಹೇ ಬೋಲಣೇ ನಿಲಾಗ ಹೀನ । ಸೂರ್ಯೋ ಪಾವೇ ಅಸ್ತಮಾನ । ಸಾಧು ಪ್ರಕಾಶಮಾನ ಸರ್ವದಾ ।।೫೪೫।। ಸೂರ್ಯಾಸೀ ಆಚ್ಛಾದೀ ಆಭಾಳ । ಸಾಧು ಸದಾ ನಿಜನಿರ್ಮಳ । ಸೂರ್ಯಾಸೀ ಸದಾ ಭ್ರಮಣಕಾಳ । ಸಾಧು ಅಚಂಚಳ ಭ್ರಮಣ ರಹಿತ ।।೫೪೬।। ಗ್ರಹಣ ಕಾಳಾಚಾ ಲವಲಾಹೋ । ಪಾವತಾ ಸೂರ್ಯಾತೇ ಗ್ರಾಸೀ ರಾಹೋ । ಸಾಧು ಗ್ರಹಾಂಚಾ ಪುಸೋನಿ ಠಾವೋ । ಸ್ವಾನಂದೇ ಪಹಾ ಹೋ ನಾಂದತೀ ।।೫೪೭।। ಧುಈ ದಾಟತಾ ಪ್ರಬಳ । ತೇಣೇ ಆಚ್ಛಾದೇ ರವಿಮಂಡಳ । ತಮ ಧೂಮ ಮೋಹಪಡಳ । ಸಾಧೂಂಸೀ ಅಳುಮಾಳ ಬಾಧೀನಾ ।।೫೪೮।।

ಸೂರ್ಯನು ಯಾವ ಪ್ರಕಾರವಾಗಿ ತನ್ನ ಪ್ರಕಾಶದಿಂದ ಕತ್ತಲೆ ಸಮೇತವಾಗಿ ಸರ್ವ ರಾತ್ರಿಯನ್ನು ಕಳೆಯುವನೋ, ಅದೇ ಪ್ರಕಾರವಾಗಿ ಸತ್ಸಂಗರೂಪ ಸೂರ್ಯನು ಅವಿದ್ಯಾರೂಪ ರಾತ್ರಿಯನ್ನು ಕಳೆಯುವನು ।।೫೩೫।। ಸೂರ್ಯೋದಯವಾಗುತ್ತಲೇ ಕಳ್ಳರ ಭಯವು ನಿವಾರಣೆಯಾಗುವುದು. ಅದರಂತೆಯೇ ಸತ್ಸಂಗವು ಲಭಿಸುತ್ತಲೇ ಭವಭಯ ನಿವಾರಣೆಯಾಗುವುದು ।।೫೩೬।। ಆಕಾಶದಲ್ಲಿ ಸೂರ್ಯನು ಉದಯವಾಗುತ್ತಲೇ ಪಕ್ಷಿಗಳು ತಮ್ಮ ಗೂಡುಗಳನ್ನು ತೊರೆದು ಹೊರೆಗೆ ಬೀಳುವುವು. ಅದರಂತೆ ಜೀವವು ಸತ್ಸಂಗದ ಉದಯವಾಗುತ್ತಲೇ ದೇಹರೂಪ ತನ್ನ ಗೂಡನ್ನು ತೊರೆಯುವುದು ।।೫೩೭।। ಸೂರ್ಯಕಿರಣಗಳ ಸಹಾಯದಿಂದ ಯಾವ ಪ್ರಕಾರವಾಗಿ ಕಮಲದ ಹೂವು ವಿಕಾಸಹೊಂದುವುದೋ, ಅದರಂತೆ ಸತ್ಸಂಗರೂಪ ಸೂರ್ಯನ ಪ್ರಕಾಶದಿಂದ ನಿರ್ವಿಕಲ್ಪ ಕಮಲವು ವಿಕಸಿತಗೊಳ್ಳುವುದು ।।೫೩೮।। ಆಕಾಶದಲ್ಲಿ ಸೂರ್ಯನು ಉದಯವಾಗುತ್ತಲೇ ಚಕ್ರವಾಕ ಪಕ್ಷಿಗಳ ಜೋಡಿಗಳು ಪ್ರೇಮದಿಂದ ಕೂಡಿಕೊಳ್ಳುವುವು. ಅದರಂತೆ ಸತ್ಸಂಗವಾಗುತ್ತಲೇ ಜೀವ ಮತ್ತು ಶಿವ ಇವರು ಐಕ್ಯರಾಗಿ ಕೂಡಿಕೊಳ್ಳುವರು ।।೫೩೯।। ಸೂರ್ಯೋದಯದಿಂದ ಬೆಳಗಾಗುತ್ತಲೇ ಪಾಂಥಿಕನು ತನ್ನ ಸ್ವಗ್ರಾಮದತ್ತ ಮುಂದೆ ನಡೆಯುವನು. ಅದರಂತೆ ಸಾಧು ಸಂತರ ಪ್ರಕಾಶವು ಪ್ರಾಪ್ತವಾಗುತ್ತಲೇ ಮುಮುಕ್ಷುನಾದವನು ನಿಜಧಾಮವನ್ನು ಪ್ರಾಪ್ತಮಾಡಿಕೊಳ್ಳುವನು ।।೫೪೦।। ಲೌಕಿಕ ಸೂರ್ಯನು ಉದಯನಾಗುತ್ತಲೇ ಕರ್ಮಗಳ ಕರ್ಮಗತಿಯು ಆರಂಭವಾಗುವುದು. ಆದರೆ ಸತ್ಸಂಗ ಸೂರ್ಯನ ಸಂಗತಿಯಿಂದ ನಿಷ್ಕರ್ಮ ಪ್ರವೃತ್ತಿಯು ಆರಂಭವಾಗುವುದು ।।೫೪೧।। ಸೂರ್ಯೋದಯ ಕಾಲಕ್ಕೆ ಜನರು ಮಂತ್ರಯುಕ್ತವಾಗಿ ಅರ್ಘ್ಯದಾನಾದಿಗಳನ್ನು ಕೊಡುವರು. ಭಕ್ತರು ಸತ್ಸಂಗವು ಲಭಿಸುತ್ತಲೇ ದೇಹಬುದ್ಧಿಗೆ ತಿಲಾಂಜಲಿಯನ್ನು ಕೊಡುವರು ।।೫೪೨।। ಸೂರ್ಯೋದಯವಾಯಿತೆಂದರೆ ಯಾಜ್ಞಿಕ ಜನರು ಯಾವ ಪ್ರಕಾರವಾಗಿ ಹೋಮಗಳಲ್ಲಿ ಆಹುತಿಯನ್ನು ಕೊಡುವರೋ, ಅದೇ ಪ್ರಕಾರವಾಗಿ ಸತ್ಸಂಗರೂಪ ಸೂರ್ಯೋದಯವಾಯಿತೆಂದರೆ ಜ್ಞಾನಾಗ್ನಿಯಲ್ಲಿ ಅಹಂಕಾರವನ್ನು ಆಹುತಿಯನ್ನಾಗಿ ಕೊಡುವರು ।।೫೪೩।। ಸೂರ್ಯನು ಆಕಾಶದಲ್ಲಿ ಉದಯನಾಗುವನು ಮತ್ತು ಜಗತ್ತಿನ ಸರ್ವಪ್ರಾಣಿಗಳ ಜಡತ್ವ ಮತ್ತು ನಿದ್ರೆಯನ್ನು ಇಲ್ಲದಂತೆ ಮಾಡುವನು. ಸಂತರು ಚಿದಾಕಾಶದಲ್ಲಿ ಉದಯರಾಗಿ ಜೀವಿಗಳಿಗೆ ಚಿತ್‌ಪ್ರಕಾಶದಿಂದ ಜಾಗೃತರನ್ನಾಗಿ ಮಾಡುವರು ।।೫೪೪।। ಈ ಪ್ರಕಾರವಾಗಿ ಸಾಧು ಸಂತರು ಸೂರ್ಯ ಸಮಾನರು ಎಂದು ಹೇಳಬೇಕೆಂದರೆ, ಈ ಉಪಮೆಯೂ ಕೂಡ ಯೋಗ್ಯವಾಗಲಾರದು. ಕಾರಣ ಸೂರ್ಯನು ಅಸ್ತನಾಗುತ್ತಿರುವನು. ಆದರೆ ಸಾಧು ಸಂತರು ಸದಾಸರ್ವದಾ ಪ್ರಕಾಶವನ್ನು ಕೊಡುತ್ತಿರುವರು।।೫೪೫।। ಸೂರ್ಯನಿಗೆ ಮೋಡಗಳು ಮುಸುಗುತ್ತಿರುವುವು. ಆದರೆ ಸಾಧುಗಳು ನಿರಂತರವಾಗಿ ಬಹು ನಿಚ್ಚಳವಾಗಿರುವರು. ಸೂರ್ಯನು ಸತತವಾಗಿ ತಿರುಗುತ್ತಲೇ ಇರುವನು. ಆದರೆ ಸಾಧುಗಳು ನಿಶ್ಚಲರಾಗಿರುವರು ।।೫೪೬।। ಗ್ರಹಣ ಕಾಲಕ್ಕೆ ರಾಹು ಸೂರ್ಯನಿಗೆ ಗ್ರಾಸಮಾಡುವನು. ಆದರೆ ಸಾಧುಗಳು ಗ್ರಹಗಳನ್ನು ಹೆಸರಿಲ್ಲದಂತೆ ಮಾಡಿ ತಾವು ಸ್ವಾನಂದದಲ್ಲಿರುವರು ।।೫೪೭।। ದಟ್ಟವಾದ ಹೊಗೆಯಿಂದ ಸೂರ್ಯ ಮಂಡಲವು ಮುಚ್ಚಲ್ಪಡುವುದು. ಆದರೆ ಕತ್ತಲು, ಹೊಗೆ ಮೋಹದ ಪರದೆ ಇವು ಸಾಧುಗಳಿಗೆ ಎಂದಿಗೂ ಅಡ್ಡ ಬರಲಾರವು ।।೫೪೮।।

ಸೂರ್ಯ ನಿಜಕಿರಣೇ ಸರ್ವಾಂತೇ ತಾವೀ । ಸಾಧು ನಿಜಾಂಗೇ ಜಗ ನಿವವೀ । ಸೂರ್ಯ ಸರ್ವಾಂತೇ ಕ್ಷಯೋ ದಾವೀ । ಸಾಧು ಅಕ್ಷಯೀ ಕರೀ ನಿಜಬೋಧೇ ।।೪೪೯।। ಸೂರ್ಯೇ ಸಾಹ್ಯ ಝಾಲಿಯಾ ದೃಷ್ಟೀ । ದೃಶ್ಯಾಕಾರೇ ಉಘಡೇ ಸೃಷ್ಟೀ । ಸತ್ಸಂಗ ಸಾಹ್ಯ ಝಾಲಿಯಾ ದೃಷ್ಟೀ । ಚಿನ್ಮಾತ್ರೇ ಸೃಷ್ಟೀ ಠಸಾವೇ ।।೪೫೦।। ವಿವೇಕೇ ವಿಚಾರಿತಾ ದೇಖ । ಸೂರ್ಯಾಹೂನಿ ಸಾಧು ಅಧಿಕ । ಸಾಧು ಧರಾತಳೀ ಜ್ಞಾನಾರ್ಕ । ಭವಾಬ್ಧಿತಾರಕ ನಿಜಸಂಗಿಯಾ ।।೪೫೧।। ಪೃಥ್ವೀತಳೀ ದೇವತಾ ಸಾಧು । ಸಾಧು ದೀನಾಂಚೇ ಸಖೇ ಬಂಧು । ಸಾಧುರೂಪೇ ಮೀ ಪರಮಾನಂದು । ಜಾಣ ಪ್ರಸಿದ್ಧು ಪರಮಾತ್ಮಾ ।।೪೫೨।। ದೇವಾ ದೀಜೇ ಬಳಿ ಅವದಾನ । ತೇವ್ಹಾ ದೇವ ಹೋತೀ ಪ್ರಸನ್ನ । ಕೃಪಾತಾರಕ ನಿಜಸಜ್ಜನ । ದಯಾಳು ಪೂರ್ಣ ದೀನಾಂಚೇ ।।೪೫೩।। ಸುಹೃದ ಸಖೇ ಸಗೋತ್ರ ಬಂಧು । ದ್ರವ್ಯಲೋಭೇ ಭಜನ-ಸಂಬಂಧು । ನಿರ್ಲೋಭೇ ಕೃಪಾಳು ಸಾಧು । ಸಖೇ ಬಂಧು ದೀನಾಂಚೇ ।।೪೫೪।। ಸಂತ ಕೇವಳ ಕೃಪೇಚೇ ದೀಪ । ಸಂತ ತೇ ಮಾಝೇ ನಿಜಸ್ವರೂಪ । ಯಾಲಾಗೀ ಸತ್ಸಂಗೇ ಫಿಟೇ ಪಾಪ । ಹೋತೀ ನಿಷ್ಪಾಪ ಸಾಧಕ ।।೪೫೫।। ನಿಷ್ಪಾಪ ಕರೂನಿ ಸಾಧಕಾಂಸೀ । ಬ್ರಹ್ಮಸ್ವರೂಪತಾ ದೇತೀ ತ್ಯಾಂಸೀ । ಐಸೇ ಕೃಪಾಳುತ್ವ ಸಾಧೂಪಾಶೀ । ಜಾಣ ನಿಶ್ಚಯೇಸೀ ಉದ್ಧವಾ ।।೪೫೬।। ಮೀ ನಿರ್ಗುಣತ್ವೇ ಬ್ರಹ್ಮ ಪೂರ್ಣ । ಸಾಧು ಚಾಲತೇಬೋಲತೇ ಬ್ರಹ್ಮ ಜಾಣ । ಸಾಧೂಂಸೀ ರಿಘಾಲಿಯಾ ಶರಣ । ತೈ ಜನ್ಮ ಮರಣ ಅಸೇನಾ ।।೪೫೭।। ಸಾಧೂಂಸೀ ಸದ್ಭಾವೇ ಶರಣ । ರಿಘಾಲ್ಯಾ ನುರೇ ಜನ್ಮ ಮರಣ । ಸಾಧು ಶರಣಾಗತಾ ಶರಣ್ಯ । ಸತ್ಯ ಜಾಣ ಉದ್ಧವಾ ।।೪೫೮।। ಭಾವೇ ಧರಿಲಿಯಾ ಸತ್ಸಂಗತೀ । ಸಂಸಾರಿಯಾ ಹೋಯ ನಿರ್ಮುಕ್ತೀ । ಹೇ ಪ್ರತಿಜ್ಞಾ ಪೂರ್ವಕ ಶ್ರೀಪತೀ । ಉದ್ಧವಾಪ್ರತೀ ಬೋಲಿಲಾ ।।೪೫೯।। ಸದ್ಭಾವೇಸೀ ಸತ್ಸಂಗತೀ । ಧರಿತಾ ಘರಾ ಯೇ ಬ್ರಹ್ಮಸ್ಥಿತೀ । ಹೇ ನಿಜವರ್ಮ ಉದ್ಧವಾಪ್ರತೀ । ದೇವೇ ಅಧ್ಯಾಯಾಂತೀ ನಿರೂಪಿಲೇ ।।೪೬೦।। ಪರಮ ವಿರಕ್ತೀಂಚೇ ಕಾರಣ । ತೇ ಹೇ ಪುರೂರವಾಪ್ರಕರಣ । ಉಪಸಂಹಾರ ಶ್ರೀಕೃಷ್ಣ । ಅಧ್ಯಾಯಾಂತೀ ಜಾಣ ಸಂಪವೀ ।।೪೬೧।।

ಸೂರ್ಯನು ತನ್ನ ಅಂಗದ ಉಷ್ಣತೆಯಿಂದ ಎಲ್ಲರಿಗೂ ತಾಪವನ್ನು ಕೊಡುವನು. ಆದರೆ ಸಾಧುಗಳು ತಮ್ಮ ಪ್ರೇಮದ ಸ್ವಭಾವದಿಂದ ಸರ್ವರಿಗೂ ಶಾಂತಗೊಳಿಸುವರು. ಸೂರ್ಯನು ಪ್ರತಿದಿನದಂತೆ ಎಲ್ಲರಿಗೂ ಆಯುಷ್ಯಕ್ಷಯ ತೋರಿಸುವನು. ಆದರೆ ಸಾಧುಗಳು ಆತ್ಮದ ಉಪದೇಶಗಳಿಂದ ಸರ್ವರಿಗೂ ಅಕ್ಷಯಗೊಳಿಸುವರು ।।೪೪೯।। ದೃಷ್ಟಿಗೆ ಸೂರ್ಯನ ಸಹಾಯವಾಗುತ್ತಲೇ ಸರ್ವ ಸೃಷ್ಟಿಯು ದೃಶ್ಯಾಕಾರದಿಂದ ಕಾಣುವುದು. ಸಾಧುಗಳವರ ಸತ್ಸಂಗತಿಯು ಲಭ್ಯವಾಯಿತೆಂದರೆ ಸರ್ವ ಸೃಷ್ಟಿಯು ಚಿನ್ಮಾತ್ರವಾಗಿ ತೋರಲಾರಂಭಿಸುವುದು ।।೪೫೦।। ಈ ಪ್ರಕಾರವಾಗಿ ವಿವೇಕದೃಷ್ಟಿಯಿಂದ ನೋಡಿದರೆ ಸೂರ್ಯನಿಗಿಂತಲೂ ಸಾಧುವಿನ ಯೋಗ್ಯತೆಯು ಅಧಿಕವೆಂದು ನಿಶ್ಚಯವಾಗುವುದು. ಸಾಧುಗಳು ನಿಜವಾಗಿಯೂ ಈ ಪೃಥ್ವಿ ಮೇಲಿನ ಜ್ಞಾನಸೂರ್ಯರಾಗಿರುವರು. ತಮ್ಮ ಸಂಗತಿಯಿಂದ ಇವರು ಜನರನ್ನು ಭವಸಾಗರದಿಂದ ಪಾರು ಮಾಡುವರು ।।೪೫೧।। ಈ ಯಾವ ಮೃತ್ಯುಲೋಕದಲ್ಲಿ ಸಾಧುಗಳೇ ದೇವರಾಗಿರುವರು. ಸಾಧುಗಳು ಇವರು ದೀನಜನರ ಮಿತ್ರರಾಗಿರುವರು. ಮತ್ತು ಇವರೇ ಸಖರು, ಬಂಧುಗಳಾಗಿರುವರು. ಪರಮಾನಂದರೂಪನಾಗಿ ಪ್ರಸಿದ್ಧನಾಗಿರುವ ನಾನು ಪರಮಾತ್ಮನು ಸಾಧುರೂಪದಿಂದ ಜಗತ್ತಿನಲ್ಲಿ ವರ್ತಿಸುತ್ತಿರುತ್ತೇನೆ ।।೪೫೨।। ಇತರ ದೇವತೆಗಳು ಬಲಿದಾನ ಕೊಟ್ಟಾಗ ಮಾತ್ರ ಪ್ರಸನ್ನವಾಗುವುವು. ಆದರೆ ಸಾಧುಗಳು ದೀನದಯಾಳು ಆಗಿರುವುದರಿಂದ ತಮ್ಮ ಕೃಪಾದೃಷ್ಟಿಯಿಂದ ದೀನರನ್ನು ಉದ್ಧರಿಸುವರು ।।೪೫೩।। ಸುಹೃದರು, ಬಂಧುಮಿತ್ರರು ಇವರೆಲ್ಲರೂ ದ್ರವ್ಯಲೋಭಕ್ಕಾಗಿ ತಮ್ಮ ಆಪ್ತರಲ್ಲಿ ಸ್ನೇಹಸಂಬಂಧಗಳನ್ನಿಡುವರು. ಆದರೆ ಸಾಧುಗಳು ನಿರ್ಲೋಭ ಹಾಗೂ ಕೃಪಾವಂತರಾಗಿರುವುದರಿಂದ ಇವರೇ ದೀನರ ನಿಜವಾದ ಬಂಧುಮಿತ್ರರಾಗಿರುವರು ।।೪೫೪।। ಸಂತರು ಇವರು ಕೃಪೆಯ ಕೇವಲ ಪ್ರಜ್ವಲಿತ ದೀಪರಾಗಿರುವರು. ಸಂತರು ಇವರು ನನ್ನ ನಿಜಸ್ವರೂಪರಾಗಿರುವರು. ಆದ್ದರಿಂದ ಸತ್ಸಂಗತಿಯಿಂದ ಪಾಪದ ನಿರಸನೆಯಾಗುವುದು. ಇದರಿಂದ ಸಾಧಕನು ನಿಷ್ಪಾಪನಾಗುವನು ।।೪೫೫।। ಹೇ ಉದ್ಧವಾ, ಈ ಪ್ರಕಾರವಾಗಿ ಸಾಧುಗಳು ಸಾಧಕರಿಗೆ ನಿಷ್ಪಾಪರನ್ನಾಗಿ ಮಾಡಿ ಅವರಿಗೆ ಬ್ರಹ್ಮಸ್ವರೂಪವನ್ನು ಪ್ರಾಪ್ತಮಾಡಿಕೊಡುವರು. ಇಂತಹ ಕೃಪಾತನವು ಸಾಧುಗಳಲ್ಲಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ।।೪೫೬।। ನಾನು ನಿರ್ಗುಣತ್ವದಿಂದ ಪೂರ್ಣ ಬ್ರಹ್ಮನಾಗಿರುವೆನು. ಆದರೆ ಸಾಧುಗಳವರು ನಡೆಯುವ, ಮಾತನಾಡುವ ಬ್ರಹ್ಮರಾಗಿರುವರು. ಇವರನ್ನು ಶರಣಾದರೆ ಜನ್ಮಮರಣಗಳ ಚಕ್ರವು ಇಲ್ಲದಾಗುವುದು ।।೪೫೭।। ಸಾಧುಗಳಿಗೆ ಭಕ್ತಿಭಾವದಿಂದ ಶರಣಾಗಲು ಜನ್ಮಮರಣಗಳ ಹೆಸರೇ ಉಳಿಯುವುದಿಲ್ಲ. ಹೇ ಉದ್ಧವಾ, ನಿಜವಾಗಿಯೂ ಸಾಧುಗಳು ಶರಣಾಗತರಿಗೆ ಶರಣ್ಯರಾಗಿರುವರು ।।೪೫೮।। ಭಕ್ತಿಭಾವದಿಂ ಸತ್ಸಂಗತಿಯನ್ನು ಹಿಡಿಯಲು ಸಂಸಾರದ ಜನರಿಗೆ ಮುಕ್ತಿಯು ದೊರೆಯುವುದು. ಹೀಗೆಂದು ಪ್ರತಿಜ್ಞಾಪೂರ್ವಕವಾಗಿ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು ।।೪೫೯।। ಸದ್ಭಾವದಿಂದ ಸತ್ಸಂಗತಿಯನ್ನು ಹಿಡಿದರೆ ಬ್ರಹ್ಮಪದವು ನಡೆಯುತ್ತ ತನ್ನ ಮನೆಗೆ ಬರುವುದು. ಈ ಮರ್ಮವನ್ನು ಶ್ರೀಕೃಷ್ಣನು ಉದ್ಧವನಿಗೆ ಅಧ್ಯಾಯದ ಕೊನೆಯಲ್ಲಿ ಹೇಳಿರುವನು ।।೪೬೦।। ಪರಮ ವಿರಕ್ತಿಯ ನಿಮಿತ್ತದಿಂದ ಪುರೂರವಾ ರಾಜನ ಆಖ್ಯಾನವನ್ನು ಹೇಳಿ ಶ್ರೀಕೃಷ್ಣನು ಈಗ ಅದರ ಉಪಸಂಹಾರ ಮಾಡಿ ಈ ಅಧ್ಯಾಯವನ್ನು ಪೂರ್ಣಗೊಳಿಸುತ್ತಿರುವನು ।।೪೬೧।।

ವೈತಸೇನಸ್ತತೋಽಪ್ಯೇವಮುರ್ವಶ್ಯಾ ಲೋಕನಿಸ್ಪೃಹಃ । ಮುಕ್ತಸಂಗೋ ಮಹೀಮೇತಾಮಾತ್ಮಾರಾಮಶ್ಚಚಾರ ಹ ॥೩೫॥

ಅರ್ಥ:- ಹೀಗೆ ಪೂರೂರವಾ ಮಹಾರಾಜನಿಗೆ ಉರ್ವಶಿಯು ಇರುವ ಲೋಕದಲ್ಲಿಯೇ ಇದ್ದು ಆಶೆಯು ನಷ್ಟವಾಯಿತು. ಆತನು ಎಲ್ಲ ಲೌಕಿಕ ಸಂಗದಿಂದ ಮುಕ್ತನಾಗಿ ಸಂಪೂರ್ಣವಾಗಿ ಆತ್ಮಸಾಕ್ಷಾತ್ಕಾರದ ಆನಂದದಿಂದ ಭೂಮಂಡಲದಲ್ಲಿ ಸಂಚರಿಸಲಾರಂಭಿಸಿದನು.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಐಲಗೀತಂ ನಾಮ ಷಡ್ವಿಂಶೋಽಧ್ಯಾಯಃ

ಪೂರ್ವೀ ಸೂರ್ಯವಂಶ ಪ್ರಸಿದ್ಧ । ತೇಥ ಸೋಮವಂಶಾಚಾ ಸಂಬಂಧ । ''ವೈತಸೇನ'' ಶ್ಲೋಕೀಚೇ ಪದ । ಲಾವೂನಿ ಗೋವಿಂದ ಬೋಲಿಲಾ ॥೪೬೨॥ ಉಮಾವನೀ ಅತಿಏಕಾಂತ । ತೇಥ ಉಮಾ ಆಣಿ ಉಮಾಕಾಂತ । ವಿಗತವಾಸೇಸೀ ಕ್ರೀಡತ । ಸ್ವಾನಂದಯುಕ್ತ ಸ್ವಲೀಲಾ ॥೪೬೩॥ ತೇಥ ಶಿವಾಚೇ ದರ್ಶನಾಸೀ । ಅವಚಟೇ ಆಲೇ ಸಪ್ತ ಋಷೀ। ಲಜ್ಜಾ ಉಪಜಲೀ ಪಾರ್ವತೀಸೀ । ತಿಣೇ ತ್ಯಾ ವನಾಸೀ ಶಾಪಿಲೇ ॥೪೬೪॥ ''ಜೋ ಪುರುಷ ಯಾ ವನಾಆಂತ । ಯೇಈಲ ತೋ ಹೋ ಸ್ತ್ರೀರೂಪ ಏಥ'' । ಐಸಾ ಶಾಪ ಕ್ರೋಧಯುಕ್ತ । ವದಲೀ ನಿಶ್ಚಿತ ಜಗದಂಬಾ ॥೪೬೫॥ ತೇಥ ರಾಜಾ ''ಸುದ್ಯುಮ್ನ'' ಸೂರ್ಯವಂಶೀ । ನೇಣೋನಿಯಾ ಶಾಪಪ್ರಭಾವಾಸೀ । ಪಾರಧೀ ಆಲಾ ತ್ಯಾ ವನಾಸೀ । ಸಕಳ ಸೇನೇಸೀ ಸನ್ನದ್ಧ ॥೪೬೬॥ ರಿಘತಾಂಚಿ ತ್ಯಾ ವನಾಆಂತ । ಪುರುಷತ್ವ ಪಾಲಟಲೇ ತೇಥ । ಬಾಪ ಶಾಪಾಚೇ ಸಾಮರ್ಥ್ಯ । ಝಾಲೇ ಸಮಸ್ತ ಸ್ತ್ರೀರೂಪ ॥೪೬೭॥ ತೇಥ ಪುರುಷತ್ವಾಚೀ ಆಠವಣ । ನಿಃಶೇಷ ವಿಸರಲೇ ಮನ । ಆಪಣ ಪೂರ್ವೀ ಹೋತೋ ಕೋಣ । ಹೇಹೀ ಸಂಪೂರ್ಣ ವಿಸರಲೇ ॥೪೬೮॥ ಅಶ್ವ ಝಾಲೇ ಅಶ್ವಿನೀ । ಹಸ್ತೀ ಝಾಲೇ ಹಸ್ತಿಣೀ । ಪುರುಷ ಝಾಲೇ ಕಾಮಿನೀ । ತತ್ಕ್ಷಣೀ ತ್ಯಾ ವನಾಂತ ॥೪೬೯॥ ತೇಥ ಪುರುಷಕಾಮೇ ಕಾಮಾಸಕ್ತೀ । ಅನುಕೂಲ ಪುರುಷಾಪ್ರತೀ । ಸ್ತ್ರೀಯಾ ಗೇಲಿಯಾ ತ್ಯಾ ಸಮಸ್ತೀ । ಅತಿಕಾಮ ರತೀ ಸಂಭೋಗಾ ॥೪೭೦॥ ರಾಜಾ ಸುದ್ಯುಮ್ನ ಝಾಲಾ ನಾರೀ । ಅತಿಸುಕುಮಾರ ಸುಂದರೀ । ತೋ ಸೋಮಪುತ್ರ ಬುಧಾತೇ ವರೀ । ಅತಿಪ್ರೀತೀಕರೀ ಭಾಳೋನಿ ॥೪೭೧॥ ಬುಧೇ ಸುದ್ಯುಮ್ನ ದೇಖೋನಿ ನಾರೀ । ತೋ ಭುಲಲಾ ಸ್ತ್ರೀಕಾಮೇಕರೀ । ಏವಂ ಅತಿಪ್ರೀತೀ ಪರಸ್ಪರೀ । ಯೇರಯೇರಾವರೀ ಭಾಳಲೀ ॥೪೭೨॥ ಬುಧ ಮಹಾರಾಜ ಚೂಡಾಮಣೀ । ತೋ ಸುದ್ಯುಮ್ನಾತೇ ಸ್ತ್ರೀತ್ವೇ ಪರ್ಣೀ । ಕೇಲೀ ಪಟಾಚೀ ನಿಜರಾಣೀ । ಬಾಪ ಕರಣೀ ಕರ್ಮಾಚೀ ॥೪೭೩॥ ಸುದ್ಯುಮ್ನಬುಧವೀರ್ಯೇಕರೀ । ಪುರೂರವಾ ಜನ್ಮೇ ತ್ಯಾಂಚೇ ಉದರೀ । ಏವಂ ಸೂರ್ಯವಂಶಾ ಮಾಝಾರೀ । ಸೋಮವಂಶ ಯಾಪರೀ ಸಂಚರಲಾ ॥೪೭೪॥

ಪೂರ್ವದಲ್ಲಿ ಸೂರ್ಯವಂಶವು ಪ್ರಸಿದ್ಧವಾಗಿತ್ತು. ಅದು ಸೋಮವಂಶಕ್ಕೆ ಸಂಬಂಧವಾಗಿದೆ ಎಂದು ಶ್ಲೋಕದಲ್ಲಿ ಶ್ರೀಕೃಷ್ಣನು ಪುರೂರವಾ ರಾಜನಿಗೆ ''ವೈತಸೇನ'' ಎಂದು ಹೇಳಿರುವನು ॥೪೬೨॥ ಒಮ್ಮೆ ಉಮಾವನದಲ್ಲಿ ಉಮಾ, ಶಂಕರ ಇವರು ಅತಿಏಕಾಂತದಲ್ಲಿ ವಸ್ತ್ರರಹಿತರಾಗಿ ಆನಂದದಿಂದ ಸ್ವಲೀಲೆಯಾಗಿ ಕ್ರೀಡಿಸುತ್ತಿದ್ದರು ॥೪೬೩॥ ಅಲ್ಲಿ ಶಿವನ ದರ್ಶನಕ್ಕಾಗಿ ಆಕಸ್ಮಾತಾಗಿ ಸಪ್ತ ಋಷಿಗಳ ಆಗಮನವಾಯಿತು. ಅವರನ್ನು ಕಂಡ ಪಾರ್ವತಿಗೆ ಲಜ್ಜೆಯುಂಟಾಯಿತು. ಆಗ ಆಕೆಯು ವನಕ್ಕೆ ಶಾಪವನ್ನು ಕೊಟ್ಟಳು ॥೪೬೪॥ ಈ ವನದಲ್ಲಿ ಯಾರು ಬರುವರೋ, ಅವರೆಲ್ಲರೂ ಸ್ತ್ರೀಯಾಗುವರು ಎಂದು ಜಗದಂಬೆಯು ಕ್ರೋಧದಿಂದ ನುಡಿದಳು ॥೪೬೫॥ ಒಂದು ದಿನ ಸೂರ್ಯವಂಶದ ರಾಜನಾದ ಸುದ್ಯುಮ್ನನು ಶಾಪದ ಪ್ರಭಾವವನ್ನರಿಯದೇ ತನ್ನ ಸೈನ್ಯದೊಂದಿಗೆ ಬೇಟೆಯಾಡಲು ಈ ವನದಲ್ಲಿ ಬಂದನು ॥೪೬೬॥ ಈತನು ವನದಲ್ಲಿ ಪ್ರವೇಶವನ್ನು ಮಾಡುತ್ತಲೇ ಆತನ ಪುರುಷರೂಪವು ಬದಲಾಯಿಸಿತು. ತತ್ಕಾಲದಲ್ಲಿ ಆತನಿಗೆ ಸ್ತ್ರೀರೂಪವು ಪ್ರಾಪ್ತವಾಯಿತು. ಅಬ್ಬಾ ! ಇದೆಂಥ ಶಾಪದ ಸಾಮರ್ಥ್ಯವಿರಬಹುದು ? ಸೈನ್ಯ ಎಲ್ಲವೂ ಸ್ತ್ರೀರೂಪವಾಯಿತು ॥೪೬೭॥ ಅವರ ಮನದಲ್ಲಿ ತಮ್ಮ ಪುರುಷತ್ವದ ಸ್ಮರಣೆಯೂ ಕೂಡ ಉಳಿಯಲಿಲ್ಲ. ನಾವು ಮೊದಲು ಯಾರಿದ್ದೆವು? ಇದೂ ಸಹ ಮರೆತುಹೋಯಿತು ॥೪೬೮॥ ಆಗ ಆ ವನದಲ್ಲಿದ್ದ ಎಲ್ಲ ಗಂಡು ಕುದುರೆಗಳು ಹೆಣ್ಣು ಕುದುರೆಗಳಾದವು ಮತ್ತು ಗಂಡು ಆನೆಗಳೆಲ್ಲವೂ ಹೆಣ್ಣಾನೆಗಳಾದವು. ಪುರುಷರೆಲ್ಲರೂ ಸ್ತ್ರೀಯರಾದರು ॥೪೬೯॥ ಆಗ ಆ ಎಲ್ಲ ಸ್ತ್ರೀಯರು ಕಾಮಾಸಕ್ತರಾಗಿ ಪುರುಷರ ಹಿಂದೆ ಹೊರಟರು. ತಮ್ಮ ತಮ್ಮ ಅನುಕೂಲ ತಕ್ಕಂತೆ ಪುರುಷರೊಂದಿಗೆ ಎಲ್ಲಕಡೆಗಳಲ್ಲಿ ಎಲ್ಲರೂ ಹೊರಟುಹೋದರು ॥೪೭೦॥ ರಾಜಾ ಸುದ್ಯುಮ್ನನು ಕೂಡ ಅತ್ಯಂತ ಮೋಹಕ, ಸುಕುಮಾರ ಸುಂದರ ಸ್ತ್ರೀಯಾದನು ಮತ್ತು ಈ ಸ್ತ್ರೀಯು ಸೋಮನ ಪುತ್ರನಾದ ಬುಧನಿಗೆ ಬಹು ಪ್ರೀತಿಯಿಂದ ವರಿಸಿದಳು ॥೪೭೧॥ ಬುಧನೂ ಕೂಡ ಸುದ್ಯುಮ್ನನ ಸ್ತ್ರೀರೂಪಕ್ಕೆ ಮರುಳಾಗಿಬಿಟ್ಟನು. ಹೀಗೆ ಇವರಿಬ್ಬರೂ ಒಬ್ಬರಿಗೊಬ್ಬರು ಅತಿಪ್ರೀತಿಯಿಂದ ಮೋಹಿಸಿದರು ॥೪೭೨॥ ಕರ್ಮದ ಗತಿಯು ಎಂತಹ ವಿಲಕ್ಷಣವಾಗಿದೆ ನೋಡಿರಿ. ರಾಜಚೂಡಾಮಣಿಯಾಗಿರುವ ಬುಧಮಹಾರಾಜನು ಸುದ್ಯುಮ್ನ ರೂಪ ಸ್ತ್ರೀಯಳೊಂದಿಗೆ ವಿವಾಹವನ್ನು ಮಾಡಿಕೊಂಡು ಆಕೆಗೆ ಪಟ್ಟದರಾಣಿಯನ್ನಾಗಿ ಮಾಡಿದನು ॥೪೭೩॥ ಈ ಯಾವ ಸುದ್ಯುಮ್ನ ರೂಪ ಸ್ತ್ರೀಯಳ ಗರ್ಭದಲ್ಲಿ ಬುಧಮಹಾರಾಜನ ವೀರ್ಯದಿಂದ ಪುರೂರವಾನ ಜನ್ಮವಾಯಿತು. ಈ ಪ್ರಕಾರವಾಗಿ ಸೂರ್ಯವಂಶದಲ್ಲಿ ಸೋಮವಂಶದ ಸಂಚಾರವಾಯಿತು ॥೪೭೪॥

ಹೇ ಸೋಮವಂಶೀಂಚೇ ಆದ್ಯಕಥಾ । ಏಥೂನಿ ಸೋಮವಂಶ ವಾಢತಾ । ಶ್ರೀಕೃಷ್ಣ ಬೋಲಿಲಾ ಧ್ವನಿತಾರ್ಥಾ । ತೇಚಿ ಮ್ಯಾ ಕಥಾ ಉಪಲವಿಲೀ ॥೪೭೫॥ ಸುದ್ಯುಮ್ನ ಝಾಲಾ ಬುಧಾಚೀ ನಾರೀ । ಮಾಗೇ ಸೂರ್ಯವಂಶಾ ಮಾಝಾರೀ । ನಾಹೀ ರಾಜ್ಯಾಸೀ ಅಧಿಕಾರೀ । ಸಂಕಟ ಭಾರೀ ವೋಢವಲಾ ॥೪೭೬॥ ತೇ ಸೂರ್ಯವಂಶೀಚಾ ಕುಳಗುರು । ವಸಿಷ್ಠ ಮಹಾಯೋಗೀಶ್ವರು । ತೇಣೇಂಕರೂನಿ ಅತ್ಯಾದರು । ಗೌರೀ-ಹರು ಪ್ರಾರ್ಥಿಲಾ ॥೪೭೭॥ ಪ್ರಸನ್ನ ಕರೂನಿ ಪಾರ್ವತೀಸೀ । ಮಾಗೇ ಸುದ್ಯುಮ್ನಚ್ಯಾ ಉಃಶ್ಯಾಪಾಸೀ । ಯೇರೀ ಸಾಂಗೇ ಮಹಾದೇವಾಸೀ । ತುಮ್ಹೀ ವಸಿಷ್ಠಾಸೀ ಬುಝುವಾವೇ ॥೪೭೮॥ ಜೇ ಭವಾನೀಚೇ ಶಾಪವಚನ । ಕದಾ ಅನ್ಯಥಾ ನವ್ಹೇ ಜಾಣ । ಧರಾವಯಾ ವಸಿಷ್ಠಾಚೇ ಮನ । ನವಲವಿಂದಾನ ಶಿವೇ ಕೇಲೇ ॥೪೭೯॥ ಶುಕ್ಲ ಪಕ್ಷೀ ಸುದ್ಯುಮ್ನಾಸೀ । ಪುರುಷತ್ವ ಪ್ರಾಪ್ತ ಹೋಈಲ ತ್ಯಾಸೀ । ಕೃಷ್ಣ ಪಕ್ಷೀ ಬುಧಾಪಾಶೀ । ಸ್ತ್ರೀಭಾವೇಸೀ ವರ್ತೇಲ ॥೪೮೦॥ ಪಕ್ಷೇ ಪುರುಷ ಪಕ್ಷೇ ನಾರೀ । ಐಶಿಯಾ ಉಃಶ್ಯಾಪಾಚೀ ಪರೀ । ಶಿವೇ ಕರೂನಿ ಕೃಪೇಕರೀ । ಕೇಲಾ ಅಧಿಕಾರೀ ನಿಜರಾಜ್ಯಾ ॥೪೮೧॥ ಪುರುಷತ್ವ ಪಾವಲ್ಯಾ ಸುದ್ಯುಮ್ನಾಸೀ । ತೇ ಪುರುಷತ್ವ ನಾವಡೇ ತ್ಯಾಸೀ । ಸ್ತ್ರೀಸಂಭೋಗೇ ಬುಧಾಪಾಶೀ । ಅತಿಪ್ರೀತೀಸೀ ಲೋಧಲಾ ॥೪೮೨॥ ಸ್ವರ್ಗಅಪ್ಸರಾ ಆಲಿಯಾ ಪಾಶೀ । ತ್ಯಾಹೀ ನಾವಡತೀ ಸುದ್ಯುಮ್ನಾಸೀ । ತ್ಯಾಹೂನಿ ಪ್ರೀತಿ ಬುಧಾಪಾಶೀ । ಸ್ತ್ರೀಭಾವೇಸೀ ಅನಿವಾರ ॥೪೮೩॥ ಬುಧಾಸೀಹೀ ಸ್ವರ್ಗಾಂಗನಾ । ಸಂಭೋಗೀ ನ ಯೇತೀ ಮನಾ। ಐಸೀ ಅತಿಪ್ರೀತಿ ಸುದ್ಯುಮ್ನಾ। ಸ್ತ್ರೀಭೋಗೇ ಜಾಣಾ ವಿಗುಂತಲೀ।॥೪೮೪॥ ಪುರುಷೀ ಪುರುಷತ್ವಾಚೀ ರತೀ। ಭೋಗೂ ಜಾಣೇ ಮೀ ಶ್ರೀಪತೀ। ಇತರ ಬಾಪುಡೀ ತೀ ಕಿತೀ। ಸ್ತ್ರೀದೇಹಾಸಕ್ತೀ ಭುಲಲೀ ॥೪೮೫॥ ಸ್ತ್ರೀದೇಹೀ ಜೋ ಆತ್ಮಾ ಅಸೇ। ತೋ ಭೋಗಿಜೇ ಮ್ಯಾ ಹೃಷೀಕೇಶೇ। ಇತರಾಂಸೀ ಸ್ತ್ರೀದೇಹಿಂಚೇ ಪಿಸೇ। ವಿಷಯಾವೇಶೇ ಭುಲೋನಿ ॥೪೮೬॥ ಅಸೋ ಹೇ ಸಾಂಗಾವೇ ಕಿತೀ । ಕಾಮೀ ನಿಷ್ಕಾಮತೇಚೀ ರತೀ । ತೇ ಮೀ ಜಾಣೇ ರಮಾಪತೀ । ಕಾ ಜಾಣತೀ ನಿಜಾನುಭವೀ ॥೪೮೭॥ ಪುರುಷತ್ವಾಪರೀಸ ಕಾಮರತೀ । ಸ್ತ್ರೀದೇಹೀ ಅತಿ ಆಸಕ್ತೀ । ತ್ಯಾ ಸ್ತ್ರೀಕಾಮಾಚೀ ನಿವೃತ್ತೀ । ಜಾಣನಿಶ್ಚಿತೀ ಸತ್ಸಂಗೇ ॥೪೮೮॥

ಇದು ಸೋಮವಂಶದಲ್ಲಿನ ಮೂಲ ಕಥೆ ಹೀಗಾಗಿರುವುದು. ಇಲ್ಲಿಂದಲೇ ಸೋಮವಂಶವು ಬೆಳೆಯುತ್ತ ಸಾಗಿತು. ಈ ವೃತ್ತಾಂತವನ್ನು ಶ್ರೀಕೃಷ್ಣನು ಅತಿ ಸಂಕ್ಷಿಪ್ತವಾಗಿ ಹೇಳಿರುವನು. ಇದೇ ಕಥೆಯನ್ನು ನಾನು ಸ್ವಲ್ಪ ವಿಸ್ತಾರ ಮಾಡಿ ಹೇಳಿರುವೆನು ॥೪೭೫॥ ಸುದ್ಯುಮ್ನನು ಬುಧನ ಹೆಂಡತಿಯಾದನು. ಅಂದಮೇಲೆ ಆತನ ಪಶ್ಚಾತ ರಾಜ್ಯಕ್ಕೆ ಯಾರೊಬ್ಬರೂ ಅಧಿಕಾರಿಯಾಗಲಿಲ್ಲ. ಈ ಕಾರಣವಾಗಿ ಅಲ್ಲಿ ಮಹಾಸಂಕಟ ಪ್ರಸಂಗವು ನಿರ್ಮಾಣವಾಯಿತು ॥೪೭೬॥ ಆಗ ಸೂರ್ಯವಂಶದ ಕುಲಗುರು, ಮಹಾ ಯೋಗಿಗಳಾದ ವಸಿಷ್ಠ ಋಷಿಯವರು ಅನನ್ಯ ಭಕ್ತಿಯಿಂದ ಗೌರಿಹರರನ್ನು ಪ್ರಾರ್ಥಿಸಿದರು ॥೪೭೭॥ ಪಾರ್ವತಿಗೆ ಪ್ರಸನ್ನ ಮಾಡಿ ಸುದ್ಯುಮ್ನನಿಗೆ ಉಃಶಾಪವನ್ನು ಬೇಡಿಕೊಂಡರು. ಆಗ ಪಾರ್ವತಿಯು ವಸಿಷ್ಠರಿಗೆ ತಿಳಿಸಿ ಹೇಳಿರಿ ಎಂದು ಶಂಕರನಿಗೆ ಹೇಳಿಕೊಂಡಳು ॥೪೭೮॥ ಪಾರ್ವತಿಯ ಶಾಪವು ಎಂದಿಗೂ ಸುಳ್ಳಾಗಲು ಸಾಧ್ಯವಿಲ್ಲವೆಂದು ತಿಳಿಸಿ, ವಸಿಷ್ಠರ ಸಮಾಧಾನಕ್ಕಾಗಿ ಶಂಕರನು ಇನ್ನೊಂದು ಹೊಸ ಚಮತ್ಕಾರವನ್ನು ಮಾಡಿದನು ॥೪೭೯॥ ಶಂಕರನು ಹೀಗೆ ಹೇಳಿದನು, ಶುಕ್ಲಪಕ್ಷದಲ್ಲಿ ಸುದ್ಯುಮ್ನನಿಗೆ ಪುರುಷತ್ವವು ಪ್ರಾಪ್ತವಾಗುವುದು ಮತ್ತು ಕೃಷ್ಣಪಕ್ಷದಲ್ಲಿ ಆತನು ಸ್ತ್ರೀಯಾಗಿ ಬುಧನಲ್ಲಿ ವಿಲಾಸ ಮಾಡುವನು ॥೪೮೦॥ ಹದಿನೈದು ದಿನ ಪುರುಷ ಮತ್ತು ಹದಿನೈದು ದಿನ ಸ್ತ್ರೀ ಹೀಗೆ ಉಃಶಾಪದ ಪರಿಯಾಗಿತ್ತು. ಶಿವನು ಹೀಗೆ ಕೃಪೆ ಮಾಡಿ ಆತನಿಗೆ ರಾಜ್ಯದ ಅಧಿಕಾರಿಯನ್ನಾಗಿ ಮಾಡಿದನು ॥೪೮೧॥ ಈ ಪ್ರಕಾರವಾಗಿ ಸುದ್ಯುಮ್ನನಿಗೆ ಪುರುಷತ್ವವು ಪ್ರಾಪ್ತಿಯಾದರೂ ಕೂಡ ಆತನಿಗೆ ಈ ಪುರುಷತ್ವವು ಪ್ರಿಯವಾಗಲಿಲ್ಲ. ಆತನಿಗೆ ಸ್ತ್ರೀಯಾಗಿ ಬುಧನಲ್ಲಿ ರತಿವಿಲಾಸ ಭೋಗಿಸುವುದು ಬಹು ಸುಖವೆನಿಸಿತು ॥೪೮೨॥ ಸ್ವರ್ಗದಲ್ಲಿನ ಅಪ್ಸರೆಯರು ಬಂದರೂ ಕೂಡ ಸುದ್ಯುಮ್ನನಿಗೆ ಅವರೂ ಸಹ ಒಡಿಸಲಿಲ್ಲ. ಆತನಿಗೆ ತಾನು ಪುರುಷನಾಗಿ ಅಪ್ಸರೆಯವರಲ್ಲಿನ ವಿಲಾಸಕ್ಕಿಂತಲೂ ಸ್ತ್ರೀಯಾಗಿ ಬುಧನಲ್ಲಿ ವಿಲಾಸಭೋಗಕ್ಕಾಗಿ ಅತ್ಯಂತ ಆಸಕ್ತನಾದನು ॥೪೮೩॥ ಬುಧನಿಗೂ ಕೂಡ ದೇವಾಂಗನೆಯರ ವಿಲಾಸಭೋಗವು ಪ್ರಿಯವಾಗಲಿಲ್ಲ. ಸುದ್ಯುಮ್ನನಲ್ಲಿ ಆತನ ಪ್ರೇಮವು ಅತಿಯಾಗಿ ಅಂಟಿಕೊಂಡಿತು . ಈ ರೀತಿಯಾಗಿ ಸುದ್ಯುಮ್ನನ ಸ್ತ್ರೀತನವು ಆತನಿಗೆ ಮೋಹಿಸಿಕೊಂಡಿತು ॥೪೮೪॥ ಪುರುಷನು ಪುರುಷನಲ್ಲಿಯೇ ರಮಮಾಣನಾಗುವ ಮರ್ಮವನ್ನು ಶ್ರೀಕೃಷ್ಣನಾದ ನನಗೆ ಒಬ್ಬನಿಗೆ ಮಾತ್ರ ತಿಳಿದಿರುವುದು. ಪಾಪ ! ಇತರ ಸರ್ವ ಪ್ರಾಣಿಗಳು ಸ್ತ್ರೀದೇಹದಲ್ಲಿಯೇ ಆಸಕ್ತರಾಗಿರುವರು ॥೪೮೫॥ ಶ್ರೀಪತಿಯಾದ ನಾನು ಸ್ತ್ರೀದೇಹದಲ್ಲಿನ ಆತ್ಮದ ಭೋಗವನ್ನು ಭೋಗಿಸುತ್ತಿರುವೆನು. ಆದರೆ ಇತರ ಜನರು ವಿಷಯದ ಇಚ್ಛೆಯಿಂದ ಸ್ತ್ರೀದೇಹಕ್ಕಾಗಿ ಹುಚ್ಚರಾಗುತ್ತಿರುವರು ॥೪೮೬॥ ಇರಲಿ, ಇದರ ವರ್ಣನೆಯನ್ನು ಎಷ್ಟೆಂದು ಹೇಳಬೇಕು? ಕಾಮದಲ್ಲಿ ನಿಷ್ಕಾಮಭಾವದಿಂದ ಹೇಗೆ ರಮಮಾಣನಾಗಬೇಕೆಂಬುವುದನ್ನು ರಮಾಪತಿಯಾದ ನಾನೊಬ್ಬನೇ ಇದನ್ನು ತಿಳಿದಿರುವೆನು. ಹಾಗೂ ''ಅನುಭವೀ'' ಇವರೂ ಕೂಡ ತಿಳಿದಿರುವರು ॥೪೮೭॥ ಪುರುಷನಿಗಿಂತಲೂ ಕಾಮರತಿಯು ಸ್ತ್ರೀದೇಹದಲ್ಲಿ ವಿಷಯಾಸಕ್ತಿಯೊಂದಿಗೆ ಅಧಿಕವಾಗಿರುವುದು. ಆ ಸ್ತ್ರೀದೇಹ ವಿಷಯದ ನಿವೃತ್ತಿಯು ಒಂದು ಸತ್ಸಂಗದಿಂದ ಮಾತ್ರ ಆಗುವುದು ॥೪೮೮॥

ವಸಿಷ್ಠಾಚಿಯೇ ಸತ್ಸಂಗತೀ । ಝಾಲೀ ಸ್ತ್ರೀಭಾವಾಚೀ ನಿವೃತ್ತೀ । ಸುದ್ಯುಮ್ನ ಪಾವಲಾ ಪುರುಷತ್ವಪ್ರಾಪ್ತೀ । ಧನ್ಯ ತ್ರಿಜಗತೀ ಸತ್ಸಂಗ ।।೨೮೯।। ಪುರುಷತ್ವ ಪಾವೋನಿ ಸುದ್ಯುಮ್ನ । ನಿಜನಗರಾ ಯೇತಾ ಜಾಣ । ಸ್ತ್ರೀಭಾವೇ ನಷ್ಟಲೇ ಸೈನ್ಯ । ಏಕಲಾ ಆಪಣ ಸ್ವಯೇ ಆಲಾ ।।೨೯೦।। ಏಂವ ನಿಃಶೇಷ ವಿಗತಸೈನ್ಯ । ಯಾಲಾಗೀ ನಾಂವೇ ''ವೀತಸೇನ'' । ತ್ಯಾ ವೀತಸೇನಾಚಾ ಪುತ್ರ ಜಾಣ । ''ವೈತಸೇನ'' ಪುರೂರವಾ ।।೨೯೧।। ತೇಣೇ ನಿಜಾತ್ಮ ಜಾ ಅತಿವಿರಕ್ತೀ । ಸಾಂಡೂನಿ ಸ್ವರ್ಗಭೋಗಸಂಪತ್ತೀ । ತ್ಯಜೂನಿ ಉರ್ವಶೀಕಾಮಾಸಕ್ತೀ । ಆತ್ಮಾರಾಮಸ್ಥಿತೀ ಪಾವಲಾ ।।೨೯೨।। ಆತ್ಮಾರಾಮ ನಿಜಸ್ಥಿತೀ । ಮಿಥ್ಯಾ ದೇಹಸಂಗ ಸಾಂಗಾತೀ । ನಿಜಾತ್ಮಬೋಧೇ ತ್ರಿಜಗತೀ । ಸ್ವಾನಂದೇ ನೃಪತಿ ವಿಚರತ ।।೨೯೩।। ಜೇಥೇ ಜೇಥೇ ಪಾಉಲ ಉಠೀ । ತೇಥೇ ತೇಥೇ ಹೋತೀ ಸುಖಾಚ್ಯಾ ಕೋಟೀ । ಸ್ವಾನಂದೇ ಕೋಂದಲೀ ಸೃಷ್ಟೀ । ಬ್ರಹ್ಮದೃಷ್ಟೀ ವಿಚರತು ।।೨೯೪।। ಬಹ್ಮೀ ವಿಚರತಾ ಬಹ್ಮಪಣೇ । ಬ್ರಹ್ಮರೂಪ ಝಾಲೇ ಜಿಣೇ । ವಿಸರಲಾ ಜಿಣೇಮರಣೇ । ಪೂರ್ಣೀ ಪೂರ್ಣಾಪಣೇ ಪರಿಪೂರ್ಣ ।।೨೯೫।। ಹೇ ಉರ್ವಶೀಪುರುರವೋಪಾಖ್ಯಾನ । ಜೋ ಸ್ವಯೇ ಐಕೇ ಸಾವಧಾನ । ತೈ ದೋಷ ಜಾತೀ ಅಗಮ್ಯಾಗಮನ । ವಿರಕ್ತೀ ಸಂಪೂರ್ಣ ಸಾಧಕಾ ।।೨೯೬।। ಯಾಪರೀ ವೈರಾಗ್ಯಯುಕ್ತೀ । ರಾಜಾ ಪಾವಲಾ ಬ್ರಹ್ಮಪ್ರಾಪ್ತೀ । ವೈರಾಗ್ಯ ಉಪಜೇ ಸತ್ಸಂಗತೀ । ಸತ್ಸಂಗೇ ವಿರಕ್ತೀ ಮದ್ಭಜನೇ ।।೨೯೭।। ''ಸದ್ಭಾವೇ ಕರಿತಾ ಮಾಝೀ ಭಕ್ತೀ । ಸಾಧಕಾ ಉಪಜೇ ವಿರಕ್ತೀ'' । ಐಸೇ ಬೋಲಿಲಾ ಶ್ರೀಪತೀ । ತೇ ಉದ್ಧವೇ ಚಿತ್ತೀ ದೃಢ ಧರಿಲೇ ।।೨೯೮।। ಜೇ ಭಜನಕ್ರಿಯೇಚಾ ಪ್ರಶ್ನ । ಪುಢಿಲೇ ಅಧ್ಯಾಯೀ ಜಾಣ । ಉದ್ಧವ ಪುಸೇಲ ಆಪಣ । ಜೇಣೇ ಶ್ರೀಕೃಷ್ಣ ಸಂತೋಷೇ ।।೨೯೯।। ಉದ್ಧವ ಪುಸೇಲ ಗೋಡ ಗೋಠೀ । ಜೇಣೇ ಶ್ರೀಕೃಷ್ಣ ಸುಖಾವೇ ಪೋಟೀ । ತೇಣೇ ಸ್ವಾನಂದೇ ನಿಜಪುಷ್ಟೀ । ಭಜನ ಹಾತವಟೀ ಸಾಂಗೇಲ ।।೩೦೦।। ಉಪಾಸನಾಕಾಂಡರಹಸ್ಯ ಪೂರ್ಣ । ಮುಖ್ಯ ಕ್ರಿಯಾಯೋಗನಿರೂಪಣ । ಸಮೂಳ ಆಗಮಲಕ್ಷಣ । ಸ್ವಮುಖೇ ಶ್ರೀಕೃಷ್ಣ ಸಾಂಗೇಲ ।।೩೦೧।। ತೇ ಕಥೇಸೀ ಅವಧಾನ । ಶ್ರೋತಾ ದ್ಯಾವೇ ಸಾವಧಾನ । ಏಕಾ ತುಷ್ಟಲಾ ಜನಾರ್ದನ । ಸ್ವಾನಂದಘನ ನಿಜಬೋಧೇ ।।೩೦೨।।

ವಸಿಷ್ಠರ ಸತ್ಸಂಗತಿಯಿಂದ ಸ್ತ್ರೀ- ಸ್ವಭಾವದ ನಿವೃತ್ತಿಯಾಯಿತು. ಮತ್ತು ಸುದ್ಯುಮ್ನನಿಗೆ ಪೂರ್ಣ ಪುರುಷತ್ವವು ಪ್ರಾಪ್ತವಾಯಿತು. ಆದ್ದರಿಂದ ಈ ಸತ್ಸಂಗವು ಮೂರು ಲೋಕಗಳಲ್ಲಿಯೇ ಧನ್ಯ ಧನ್ಯವಾಗಿರುವುದು ।।೨೮೯।। ಸುದ್ಯುಮ್ನನಿಗೆ ಪೂರ್ಣವಾಗಿ ಪುರುಷತ್ವವು ಪ್ರಾಪ್ತಿಯಾಗುತ್ತಲೇ ಆತನು ತನ್ನ ನಗರಕ್ಕೆ ಆಗಮಿಸಿದನು. ಆದರೆ ಆತನ ಸೈನ್ಯವು ಪೂರ್ಣವಾಗಿ ಸ್ತ್ರೀರೂಪದಿಂದ ನಷ್ಟವಾಗಿತ್ತು. ಈ ಕಾರಣವಾಗಿ ಆತನು ತಾನೊಬ್ಬನೇ ನಗರಕ್ಕೆ ಬಂದನು ।।೨೯೦।। ಈ ಪ್ರಕಾರವಾಗಿ ಆತನ ಸರ್ವ ಸೈನ್ಯವು ಇಲ್ಲದಾಗಿದ್ದಕ್ಕೆ ಆತನಿಗೆ ''ವೀತಸೇನ'' ಎಂಬ ನಾಮವು ಪ್ರಾಪ್ತವಾಯಿತು. ''ವೀತಸೇನ''ನ ಪುತ್ರನು ''ವೈತಸೇನ'' ಅಂದರೆ ಪುರೂರವಾ ರಾಜನು ।।೨೯೧।। ಈತನು ತನ್ನ ಆತ್ಮಸ್ವರೂಪವನ್ನು ತಿಳಿದುಕೊಂಡು ಅತ್ಯಂತ ವಿರಕ್ತಿಭಾವದಿಂದ ಸ್ವರ್ಗದಲ್ಲಿನ ಭೋಗಸಂಪತ್ತನ್ನು ತ್ಯಜಿಸಿ, ಉರ್ವಶಿಯ ಮೇಲಿರುವ ಕಾಮಾಸಕ್ತಿಯ ತ್ಯಾಗ ಮಾಡಿ ಆತನು ಆತ್ಮತತ್ವದಲ್ಲಿ ತಲ್ಲೀನನಾದನು ।।೨೯೨।। ಈ ಪ್ರಕಾರವಾಗಿ ಆತ್ಮಸ್ವರೂಪದಲ್ಲಿ ಸ್ಥಿರನಾಗಿ ಹಾಗೂ ದೇಹದ ಮೇಲಿನ ಆಸಕ್ತಿಯನ್ನು ತೊರೆದು ಪುರೂರವಾ ರಾಜನು ಸ್ವಾನಂದದಿಂದ ಮೂರು ಲೋಕಗಳಲ್ಲಿಯೂ ವಿಚರಿಸುತ್ತಿದ್ದನು ।।೨೯೩।। ಈತನು ಎಲ್ಲಿ ತನ್ನ ಹೆಜ್ಜೆಗಳನ್ನಿಡುತ್ತಿದ್ದನೋ, ಅಲ್ಲಿ ಸುಖದ ಅಸಂಖ್ಯ ರಾಶಿಯೇ ನಿರ್ಮಾಣವಾಗುತ್ತಿತ್ತು. ಈತನು ಬ್ರಹ್ಮದೃಷ್ಟಿಯಿಂದ ಸಂಚಾರ ಮಾಡುತ್ತಿರಲು ಸರ್ವ ಸೃಷ್ಟಿಯು ಬ್ರಹ್ಮಾನಂದದಿಂದ ವ್ಯಾಪಿಸಿಕೊಳ್ಳುತ್ತಿತ್ತು ।।೨೯೪।। ತಾನು ಬ್ರಹ್ಮಸ್ವರೂಪನಾಗಿ ಬ್ರಹ್ಮನಲ್ಲಿ ಸಂಚಾರ ಮಾಡುತ್ತಿರಲು ಆತನ ಜೀವನವು ಬ್ರಹ್ಮಸ್ವರೂಪವಾಯಿತು. ಆತನು ಜನ್ಮಮರಣಗಳನ್ನು ಮರೆತು ಪೂರ್ಣವಾಗಿ ಪೂರ್ಣ ಬ್ರಹ್ಮನಲ್ಲಿ ಪರಿಪೂರ್ಣನಾದನು ।।೨೯೫।। ಈ ಯಾವ ಉರ್ವಶೀ-ಪುರೂರವಾ ಆಖ್ಯಾನವನ್ನು ಯಾರು ಏಕಾಗ್ರತೆಯಿಂದ ಶ್ರವಣವನ್ನು ಮಾಡುವರೋ, ಅವರ ಅಗಮ್ಯಗಮನದಂತಹ ಪಾಪಗಳು ತ್ವರಿತವಾಗಿ ನಾಶವಾಗುವುವು. ಹಾಗೂ ಅವರಿಗೆ ಪರಿಪೂರ್ಣವಾದ ವಿರಕ್ತಿಯು ನಿರ್ಮಾಣವಾಗುವುದು ।।೨೯೬।। ಈ ಪ್ರಕಾರವಾಗಿ ತೀವ್ರವಾದ ವೈರಾಗ್ಯದಿಂದ ರಾಜನಿಗೆ ಬ್ರಹ್ಮಪದವಿಯು ಪ್ರಾಪ್ತವಾಯಿತು. ಸತ್ಸಂಗದಿಂದ ವೈರಾಗ್ಯವು ಉತ್ಪನ್ನವಾಗುವುದು. ನನ್ನ ನಿಃಸ್ವಾರ್ಥ ಪ್ರೇಮಮಯ ಭಜನೆಯಿಂದ ಸತ್ಸಂಗ ಮತ್ತು ವಿರಕ್ತಿ ಈ ಎರಡೂ ಪ್ರಾಪ್ತವಾಗುವುವು ।।೨೯೭।। ಸದ್ಭಾವದಿಂದ ನನ್ನ ಭಜನೆಯನ್ನು ಮಾಡಿದರೆ ಸಾಧಕರಿಗೆ ವಿರಕ್ತಿಯು ಉತ್ಪನ್ನವಾಗುವುದು. ಹೀಗೆ ಶ್ರೀಕೃಷ್ಣನು ನುಡಿದ ಈ ವಚನವನ್ನು ಉದ್ಧವನು ತನ್ನ ಚಿತ್ತದಲ್ಲಿ ದೃಢವಾಗಿ ಧರಿಸಿದನು ।।೨೯೮।। ಈಗ ಆ ಯಾವ ಭಜನವಿಧಿಯ ಪ್ರಶ್ನೆಯನ್ನು ಮುಂದಿನ ಅಧ್ಯಾಯದಲ್ಲಿ ಉದ್ಧವನು ಕೇಳುವನು. ಇದರಿಂದ ಶ್ರೀಕೃಷ್ಣನಿಗೆ ಸಂತೋಷವಾಗುವುದು ।।೨೯೯।। ಉದ್ಧವನು ಅಮೃತಸಮಾನ ಉತ್ತಮ ಪ್ರಶ್ನೆಯನ್ನು ಕೇಳುವನು. ಹೀಗೆ ಕೇಳಿದ್ದಕ್ಕೆ ಶ್ರೀಕೃಷ್ಣನ ಅಂತಃಕರಣಕ್ಕೆ ಬಹುಸುಖ ಉಂಟಾಗುವುದು. ಆದ ಆನಂದದ ಭರದಲ್ಲಿ ಆತನು ಭಜನೆಯ ಮರ್ಮವನ್ನು ತಿಳಿಸಿ ಹೇಳುವನು ।।೩೦೦।। ಉಪಾಸನಾಕಾಂಡದ ಪರಿಪೂರ್ಣ ರಹಸ್ಯವನ್ನು ಕ್ರಿಯಾಯೋಗದ ನಿರೂಪಣೆಯನ್ನು ಹಾಗೂ ಆಗಮದ ಸರ್ವ ಲಕ್ಷಣಗಳನ್ನು ತನ್ನ ಸ್ವಮುಖದಿಂದ ಹೇಳುವನು ।।೩೦೧।। ಹೀಗಿರುವ ಕಥೆಯಲ್ಲಿ ಈಗ ಶ್ರೋತೃಗಳವರು ಪೂರ್ಣವಾಗಿ ಲಕ್ಷವನ್ನು ಕೊಡಬೇಕು. ಸ್ವಾನಂದಘನ ಗುರುಗಳಾದ ಶ್ರೀಜನಾರ್ದನಸ್ವಾಮಿಯವರು ಜ್ಞಾನಬೋಧೆಯಿಂದ ಏಕನಾಥನಿಗೆ ತೃಪ್ತಗೊಳಿಸಿದರು ।।೩೦೨।।

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ
ಏಕಾಕಾರಟೀಕಾಯಾಂ ಐಲಗೀತೋಪಾಖ್ಯಾನಂ ನಾಮ ಷಡ್ ವಿಂಶೋಽಧಾಯಃ ||೨೬||

||ಶ್ರೀಕೃಷ್ಣಾರ್ಪಣಮಸ್ತು ||

ಇತಿ ಶ್ರೀಮದ್ಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣೋದ್ಧವ ಸಂವಾದದ ಏಕನಾಥ ಮಹಾರಾಜ ಭಾಷ್ಯೆಯ
ಐಲಗೀತಾವ್ಯಾಖ್ಯಾನ ನಾಮದ ಇಪ್ಪತ್ತಾರನೆಯ ಅಧ್ಯಾಯವು ಸಂಪೂರ್ಣ

||ಶ್ರೀಕೃಷ್ಣಾರ್ಪಣಮಸ್ತು||

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೇಳನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ದೇವ ಸಹಜ ನಿಜ । ತೂ ವಿಶ್ವಾತ್ಮಾ ಚತುರ್ಭುಜ । ಅಷ್ಟಭುಜ ತೂಚಿ ವಿಶ್ವಭುಜ । ಗುರುತ್ವೇ ತುಜ ಗೌರವ ॥೧॥ ನಿಜಶಿಷ್ಯಾಚಿಯಾ ಭಾವಾರ್ಥಾ । ತೂ ಗುರುನಾಮೇ ಅಭಯದಾತಾ । ಅಭಯ ದೇಊನಿ ತತ್ತ್ವತಾ । ಭವವ್ಯಥಾ ನಿವಾರಿಸಿ ॥೨॥ ನಿವಾರೂನಿ ಜನ್ಮ ಮರಣ । ಆಪಣ್ಯಾ ಭೇಟಸೀ ಆಪಣ। ತೇವ್ಹಾ ಗುರುಶಿಷ್ಯನಾಮೀ ಸಂಪೂರ್ಣ । ತುಝೇ ಏಕಪಣ ಆಭಾಸೇ ॥೩॥ ತೇ ಏಕಪಣ ಪಾಹತಾ ದಿಠೀ । ಏಕಾ ಜನಾರ್ದನೀ ಪಡೇ ಮಿಠೀ । ಗುರುತ್ವೇ ಕೋಂದೇ ಸಕಳ ಸೃಷ್ಟೀ । ಸ್ವಾನಂದಪುಷ್ಟೀ ಜಗ ನಾಂದೇ ॥೪॥ ತೋ ಸ್ವಾನಂದೈಕಚಿದ್‌ಘನ । ಜಗದ್ಗುರು ಜನಾರ್ದನ । ಏಕಾ ಜನಾರ್ದನ ಶರಣ । ಏಕೀ ಏಕಪಣ ದೃಢ ಕೇಲೇ ॥೫॥ ದೃಢ ಕೇಲೇ ಜೇ ಏಕಪಣ । ತೇಹೀ ಸದ್ಗುರು ಝಾಲಾ ಆಪಣ । ತೇಥೇ ಖುಂಟಲೇ ಮೀತೂಪಣ । ಏಕಾ ಜನಾರ್ದನಾ ಏಕತ್ವೇ ॥೬॥ ಯಾಪರೀ ಏಕಾಕೀ ಏಕಲಾ । ಏಕಾ ಜನಾರ್ದನೇ ಕವಯಿತಾ ಕೇಲಾ । ತೋ ಏಕಾದಶಾಚಾ ಪಾವಲಾ । ಅತಿಸಖೋಲಾ ಏಕತ್ವಬೋಧ ॥೭॥ ತ್ಯಾ ಏಕತ್ವಾಚೀ ನಿಜಸ್ಥಿತೀ । ಪಾವಲಾ ಪುರೂರವಾಭೂಪತೀ। ದೃಢ ಅನುತಾಪ ವಿರಕ್ತೀ । ಭಗವದ್ಭಕ್ತೀ ಸತ್ಸಂಗೇ ॥೮॥ ಹೇ ಸವ್ವಿಸಾವೇ ಅಧ್ಯಾಯೀ ಜಾಣ । ಸ್ವಮುಖೇ ಬೋಲಿಲಾ ಶ್ರೀಕೃಷ್ಣ । ಸತ್ಸಂಗೇ ಭಗವತ್ಭಜನ । ತೇಣೇ ವೈರಾಗ್ಯ ಪೂರ್ಣ ಸಾಧಕಾ ॥೯॥ ನ ಕರಿತಾ ಭಗವದ್ಭಕ್ತೀ । ಕದಾ ನುಪಜೇ ವಿರಕ್ತೀ । ವಿರಕ್ತೀವೀಣ ಭಗವತ್ಪ್ರಾಪ್ತೀ । ನವ್ಹೇ ಕಲ್ಪಾಂತೀ ಸಾಧಕಾ ॥೧೦॥ ಐಸೇ ಬೋಲಿಲಾ ಶ್ರೀಕೃಷ್ಣ । ತೇ ಉದ್ಧವೇ ಜೇವೀ ಧರೂನಿ ಪೂರ್ಣ । ಭಗವದ್ಭಕ್ತೀ ಪೂಜಾವಿಧಾನ । ಕ್ರಿಯಾಯೋಗ ಜಾಣ ಪುಸತ ॥೧೧॥

ಹೇ, ಓಂಕಾರರೂಪ ಸಹಜ ಆತ್ಮಸ್ವರೂಪ ದೇವನೇ, ನಿನಗೆ ನನ್ನ ನಮಸ್ಕಾರಗಳು. ನೀನು ವಿಶ್ವಾತ್ಮನಾಗಿ ಚತುರ್ಭುಜನಾಗಿರುವೆ. ಅಷ್ಟಭುಜವೂ ನೀನೇ ಇದ್ದು ಅನಂತಭೂಜವೂ ಕೂಡ ನೀನೇ ಆಗಿರುವೆ. ನಾನು ನಿನ್ನನ್ನು ಗುರುತ್ವದಿಂದ ಗೌರವಿಸುವೆನು ॥೧॥ ತನ್ನ ಶಿಷ್ಯನ ಪ್ರೇಮಕ್ಕಾಗಿ ಗುರು ಎಂಬ ನಾಮದಿಂದ ಅಭಯವನ್ನು ಕೊಡುವವನು ನೀನೇ ಆಗಿರುವೆ. ಅಭಯವನ್ನು ನೀಡಿ ಸಂಸಾರದಲ್ಲಿನ ಭವಭಯದ ವ್ಯಥೆಯನ್ನು ನೀನೇ ನಿವಾರಿಸುವೆ ॥೨॥ ಹೀಗೆ ಜನ್ಮಮರಣಗಳ ನಿವಾರಣೆಯನ್ನು ಮಾಡಿ ನೀನು ನಿನ್ನನ್ನು ನೀನೇ ಭೇಟಿಯಾಗುವೆ. ಆಗ ಗುರು ಮತ್ತು ಶಿಷ್ಯ ಎಂಬ ನಾಮದಿಂದ ನಿನ್ನ ಪೂರ್ಣ ಐಕ್ಯವೇ ಭಾಸವಾಗುವುದು ॥೩॥ ಈ ಐಕ್ಯವು ದೃಷ್ಟಿಗೆ ಬೀಳುತ್ತಲೇ ಏಕನಾಥ ಮತ್ತು ಜನಾರ್ದನ ಇವರು ಏಕರೂಪರಾಗುವರು. ಸರ್ವ ಸೃಷ್ಟಿಯು ಗುರುತ್ವದಿಂದ ತುಂಬಿಹೋಗುವುದು. ಹಾಗೂ ಸಂಪೂರ್ಣ ಜಗತ್ತು ಸ್ವಾನಂದದಲ್ಲಿ ನರ್ತಿಸುವುದು ॥೪॥ ಹೀಗೆ ಸ್ವಾನಂದೈಕ್ಯ ಚಿದ್‌ಘನ ಸ್ವರೂಪ ಜಗದ್ಗುರು ಜನಾರ್ದನರಾಗಿರುವರು. ಹೀಗಿರುವ ಜನಾರ್ದನರಿಗೆ ಸರ್ವಭಾವದಿಂದ ಶರಣು ಹೋಗಿ ತನ್ನ ಐಕ್ಯವನ್ನು ದೃಢಪಡಿಸಿದನು ॥೫॥ ಹೀಗೆ ದೃಢಪಡಿಸಿರುವ ಐಕ್ಯವೂ ಕೂಡ ಸ್ವತಃ ಸದ್ಗುರುಗಳೇ ಆಗಿರುವರು. ಆಗ ಏಕನಾಥ ಮತ್ತು ಜನಾರ್ದನ ಒಂದೇಯಾಗಿದ್ದಕ್ಕೆ ನಾನು ನೀನೆಂಬುವುದು ಕುಂಠಿತವಾಯಿತು ॥೬॥ ಈ ಪ್ರಕಾರವಾಗಿ ಜನಾರ್ದನಸ್ವಾಮಿಗಳವರು ಏಕರೂಪನಾಗಿರುವ ಏಕನಾಥನಿಗೆ ಕವಿಯನ್ನಾಗಿ ಮಾಡಿದರು. ಆಗ ಆತನಿಗೆ ಸಹಜವಾಗಿಯೇ ಏಕತ್ವದ ಜ್ಞಾನವಾಯಿತು ॥೭॥ ಇದೇ ಐಕ್ಯದ ನಿಜಸ್ಥಿತಿಯು ಪುರೂರವಾ ರಾಜನಿಗೂ ಕೂಡ ಪ್ರಾಪ್ತವಾಗಿತ್ತು. ಆತನ ವಿರಕ್ತಿಯು, ಪಶ್ಚಾತ್ತಾಪವು ಮತ್ತು ಭಗವದ್ಭಕ್ತಿಯು ಸತ್ಸಂಗದಿಂದ ದೃಢೀಕರಿಸಲ್ಪಟ್ಟಿತು ॥೮॥ ಇದರ ವರ್ಣನೆಯನ್ನು ಇಪ್ಪತ್ತಾರನೆಯ ಅಧ್ಯಾಯದಲ್ಲಿ ಸ್ವತಃ ಶ್ರೀಕೃಷ್ಣನು ಮಾಡಿರುವನು. ಸತ್ಸಂಗದಿಂದ ಭಗವದ್ಭಜನೆಯು ಸಾಧಿಸುವುದು ಮತ್ತು ಇದರಿಂದ ಸಾಧಕನಿಗೆ ಪರಿಪೂರ್ಣವಾದ ವೈರಾಗ್ಯವು ಪ್ರಾಪ್ತವಾಗುವುದು ॥೯॥ ಭಗವದ್ಭಕ್ತಿಯನ್ನು ಮಾಡಲಾರದೇ ವಿರಕ್ತಿಯು ಎಂದಿಗೂ ಉತ್ಪನ್ನವಾಗುವುದಿಲ್ಲ ಮತ್ತು ಸಾಧಕರಿಗೆ ವಿರಕ್ತಿಯ ಹೊರತಾಗಿ ಭಗವತ್‌ಪ್ರಾಪ್ತಿಯು ಕಲ್ಪಾಂತಕ್ಕೂ ಆಗಲು ಶಕ್ಯವಿಲ್ಲ ॥೧೦॥ ಹೀಗೆ ಶ್ರೀಕೃಷ್ಣನು ಪ್ರತಿಪಾದನೆಯನ್ನು ಮಾಡಿದನು. ಇದನ್ನು ಉದ್ಧವನು ತನ್ನ ಅಂತಃಕರಣದಲ್ಲಿ ಪರಿಪೂರ್ಣವಾಗಿ ಇಟ್ಟುಕೊಂಡು ಭಗವದ್ಭಕ್ತಿ, ಪೂಜಾವಿಧಾನ ಮತ್ತು ಕರ್ಮಯೋಗ ಇವುಗಳನ್ನು ಕುರಿತು ಶ್ರೀಕೃಷ್ಣನಿಗೆ ಕೇಳುತ್ತಿರುವನು ॥೧೧॥

ಉದ್ಧವ ಉವಾಚ:-

ಕ್ರಿಯಾಯೋಗಂ ಸಮಾಚಕ್ಷ್ವ ಭವದಾರಾಧನಂ ಪ್ರಭೋ । ಯಸ್ಮಾತ್ತ್ವಾಂ ಯೇ ಯಥಾರ್ಚಂತಿ ಸಾತ್ವತಾಃ ಸಾತ್ವತರ್ಷಭ ।೧॥

ಅರ್ಥ:- ಉದ್ಧವನು,ಕೇಳಿದನು, ಭಕ್ತವತ್ಸಲ ಶ್ರೀಕೃಷ್ಣನೇ, ಯಾವ ಕ್ರಿಯಾಯೋಗದ ಆಶ್ರಯವನ್ನು ಪಡೆದು ಭಕ್ತ ಜನರು ಯಾವ ಪ್ರಕಾರವಾಗಿ ಯಾವ ಉದ್ದೇಶದಿಂದ ತಮ್ಮ ಪೂಜೆ ಅರ್ಚನೆಯನ್ನು ನೆರವೇರಿಸುವರು ಎಂಬುವ ಆ ಆರಾಧನರೂಪ ಕ್ರಿಯಾಯೋಗದ ವರ್ಣನೆಯನ್ನು ಮಾಡಿರಿ.

ನಿಜಭಕ್ತ ಅನುಗ್ರಹಾರ್ಥ । ಸತ್ತ್ವಮೂರ್ತಿ ತೂ ಶ್ರೀಅನಂತ । ತುರ್ಝೇ ನಿಜಭಕ್ತ ಜೇ ಸಾತ್ವತ । ತೇ ತುಜ ಪೂಜಿತ ಕೋಣೇ ವಿಧೀ ।೧೨॥ ತೇ ಸಾಧೂಚೇ ಆರಾಧನ । ತುರ್ಝೇ ಕ್ರಿಯಾಯೋಗೇ ನಿಜಪೂಜನ । ಕೃಪಾ ಕರೋನಿಯಾ ಆಪಣ । ಮಜ ಸಂಪೂರ್ಣ ಸಾಂಗಾವೇ ।೧೩॥ ಮ್ಹಣಸೀ ಜರೀ ಹೇ ಆಣಿಕಾಂತೇ ಪುಸಾವೇ । ಹೇ ಮಾರ್ಝೇನಿ ಜಾಣ ಸರ್ವಥಾ ನವ್ಹೇ । ತುಜ ಸಾಂಡೂನಿ ದೂರೀ ಜಾವೇ । ಹೇ ಲಾಜಹೀ ಜೀವೇ ಸಾಹವೇನಾ ।೧೪॥ ಮೀ ತುರ್ಝಾ ದಾಸ ಜೀವೇಭಾವೇ । ತುರ್ಝೇನಿ ಪ್ರಭುತ್ವಗೌರವೇ । ಮೀ ಕಳಿಕಾಳಾ ನಾಗವೇ । ಕೃಪಾಪ್ರಭಾವೇ ತುರ್ಝೇನಿ ।೧೫॥ ತೂ ಕೃಪಾಳು ಕೃಪಾಯುಕ್ತ । ಕೃಪೇನೇ ಹೋಸೀ ಭಕ್ತಾಂಚಾ ಭಕ್ತ । ತ್ಯಾ ತುರ್ಝಾ ಮೀ ಚರಣಾಂಕಿತ । ಸಲಗೀ ಗುಹ್ಯಾರ್ಥ ಸ್ವಯೇ ಪುಸೇ ।೧೬॥ ಇತಕಾ ಕರೂನಿ ಅತ್ಯಾದರ । ಕಾ ಪುಸಸೀ ಪೂಜಾಪ್ರಕಾರ । ತರೀ ಹಾ ಶ್ರೇಷ್ಠಶ್ರೇಷ್ಠೀ ಕೇಲಾ ವಿಚಾರ । ತೋ ನಿಜನಿರ್ಧಾರ ಅವಧಾರೀ ।೧೭॥

ಏತದ್ವದಂತಿ ಮುನಯೋ ಮುಹುರ್ನಿಃಶ್ರೇಯಸಂ ನೃಣಾಮ್ । ನಾರದೋ ಭಗವಾನ್ ವ್ಯಾಸ ಆಚಾರ್ಯೋಽಂಗಿರಸಃ ಸುತಃ ।೨॥

ಅರ್ಥ:- ದೇವರ್ಷಿ ನಾರದರು, ಭಗವಾನ ವ್ಯಾಸಮುನಿಗಳು ಮತ್ತು ಆಚಾರ್ಯ ಬೃಹಸ್ಪತಿ ಇತ್ಯಾದಿ ಮಹಾ ಮಹಾ ಋಷಿಮುನಿಗಳವರು ಈ ಯಾವ ಮಾತನ್ನು ಪುನಃ ಪುನಃ ಹೇಳುವರು. ಏನೆಂದರೆ, ಕ್ರಿಯಾಯೋಗ ಮುಖಾಂತರವಾಗಿರುವ ನಮ್ಮ ಆರಾಧನೆಯು ಇದು ಮನುಷ್ಯನಿಗೆ ಪರಮ ಕಲ್ಯಾಣಕಾರಕ ಸಾಧನೆಯಾಗಿರುವುದು.

ಪೂರ್ವೀ ವೇದವಿಚಾರನಿಷ್ಠ । ಸುರವರ್ಯ ಮುನಿಶ್ರೇಷ್ಠ । ಹೇಚಿ ಅನುವಾದಲೇ ಸ್ಪಷ್ಟ । ಅತಿವರಿಷ್ಠ ವಿವೇಕೀ ।೧೮॥ ಪೂಜಾವಿಧಾನ ಪ್ರಸಿದ್ಧ । ಬೋಲಿಲಾ ದೇವರ್ಷಿ ''ನಾರದ'' । ಅಂಗಿರಸಾಚಾ ಪುತ್ರ ಅಗಾಧ । ''ದೇವಗುರೂ'' ಪ್ರಬುದ್ಧ ಹೇಚಿ ಬೋಲೇ ।೧೯॥ ಜೋ ''ವ್ಯಾಸ'' ಸತ್ಯವತೀಸುತ । ಜೋ ಕಾ ನಾರಾಯಣ ಮೂರ್ತಿಮಂತ । ಜೇಣೇ ಪ್ರಕಟ ಕೇಲಾ ವೇದಾರ್ಥ । ಜೋ ವಿಖ್ಯಾತ ಮಹಾಕವಿ ।೨೦॥ ಪುರಾಣಕವಿಕರ್ತಾ ತೋ ಸಾಂಗ । ಯಾಲಾಗೀ ''ವಾಸೋಚ್ಛಿಷ್ಟಮಿದಂ ಜಗ'' । ತೇಣೇಹೀ ಭಗವತ್ಪೂಜಾಮಾರ್ಗ । ಹಾ ಕ್ರಿಯಾಯೋಗ ಬೋಲಿಜೇ ।೨೧॥ ಅಸೋ ಇತರಾಂಚೀ ಚಾವಟೀ । ಜೋ ಪಿತಾಮಹ ಸಕಳ ಸೃಷ್ಟೀ । ಜೋ ಜನ್ಮಲಾ ವಿಷ್ಣೂಚ್ಯಾ ಪೋಟೀ । ತೇಣೇಹೀ ಯಾ ಗೋಷ್ಟೀ ದೃಢ ಕೇಲ್ಯಾ ।೨೨॥

ನಿನ್ನ ನಿಜಭಕ್ತರ ಅನುಗ್ರಹಕ್ಕಾಗಿ ಸತ್ವಮೂರ್ತಿಯಾಗಿ, ಶ್ರೀ ಅನಂತನಾಗಿರುವ ನೀನು, ನಿನ್ನ ಪೂಜೆಯನ್ನು ನಿನ್ನ ಭಕ್ತರು ಯಾವ ಪ್ರಕಾರವಾಗಿ ಮಾಡುತ್ತಿರುವರು ?।೧೨॥ ಸಾಧುಗಳವರ ಆರಾಧನೆಯನ್ನು ಮತ್ತು ನಿನ್ನ ಕ್ರಿಯಾಯೋಗದಿಂದ ಪೂಜನೆಯನ್ನು ಯಾವ ಪ್ರಕಾರವಾಗಿ ಮಾಡುವರು ? ಇದನ್ನು ನೀವು ಕೃಪೆ ಮಾಡಿ ನನಗೆ ಸವಿಸ್ತಾರವಾಗಿ ತಿಳಿಸಿಹೇಳಬೇಕು ।೧೩॥ ಇದನ್ನು ಯಾರಲ್ಲಿಯಾದರೂ ಕೇಳಿ ತಿಳಿದುಕೊ ಎಂದು ನೀನು ನನಗೆ ಹೇಳಬಹುದು. ಆದರೆ ನಾನು ಮಾತ್ರ ಹಾಗೆ ಎಂದಿಗೂ ಮಾಡಲಾರೆನು. ನಿನ್ನನ್ನು ಬಿಟ್ಟು ದೂರ ಹೋಗಬೇಕೆಂದರೆ ಅದು ನನಗೆ ಸರ್ವಥಾ ಸಹಿಸಲಾಗುವುದಿಲ್ಲ ।೧೪॥ ನಾನು ನಿನ್ನ ಜೀವಭಾವದಿಂದ ದಾಸನಾಗಿರುವೆನು. ನಿನ್ನಸ್ವಾಮಿತ್ವದ ಸಾಮರ್ಥ್ಯದಿಂದ ನಾನು ಕಲಿಕಾಲನಿಗೂ ಕೂಡ ಭಯಪಡಲಾರೆನು. ಇದು ನಿನ್ನ ಕೃಪೆಯ ಪ್ರಭಾವವೇ ಆಗಿರುವುದು ।೧೫॥ ನೀನು ಕೃಪಾಯುಕ್ತ ಕೃಪಾಳೂ ಆಗಿರುವೆ. ಕೃಪೆಯಿಂದ ನೀನು ಭಕ್ತರ ಭಕ್ತನಾಗುವೆ. ನಾನು ನಿನ್ನ ಚರಣದಾಸನಾಗಿರುವೆ. ಆದ್ದರಿಂದ ಸಲುಗೆಯಿಂದ ನಾನು ನಿನಗೆ ಗುಹ್ಯಾರ್ಥವನ್ನು ಕೇಳುತ್ತಿದ್ದೇನೆ ।೧೬॥ ಇಷ್ಟೊಂದು ಆದರ ಭಾವದಿಂದ ನೀನು ಪೂಜಾ ಪ್ರಕಾರವನ್ನು ಏಕೆ ಕೇಳುವೆ ಎಂದು ನೀನು ನನಗೆ ವಿಚಾರಿಸಬಹುದು. ಆದರೆ ಈ ವಿಚಾರವನ್ನು ಶ್ರೇಷ್ಠಶ್ರೇಷ್ಠರಾದವರೂ ಕೂಡ ಮಾಡಿರುವರು. ಅದನ್ನು ಹೇಳುವೆ, ಕೇಳು ।೧೭॥

ಪ್ರಾಚೀನ ಕಾಲದಲ್ಲಿ ವೇದವಿಚಾರನಿಪುಣರು, ಅತ್ಯಂತ ವರಿಷ್ಠರು ಮತ್ತು ವಿವೇಕಶ್ರೇಷ್ಠರಾದ ದೇವ ಮತ್ತು ಋಷಿಮುನಿಗಳವರು ಸ್ಪಷ್ಟವಾಗಿ ಹೇಳಿರುವರು ।೧೮॥ ದೇವರ್ಷಿ ನಾರದರು ಹೇಳಿರುವ ಪೂಜಾ ವಿಧಾನವು ಪ್ರಸಿದ್ಧವೇ ಆಗಿರುವುದು. ಅಂಗಿರಸನ ಪುತ್ರ, ಅಗಾಧ ಜ್ಞಾನಿಯಾಗಿರುವ ಯಾವ ದೇವಗುರುಗಳೂ ಕೂಡ ಇದನ್ನೇ ಪ್ರತಿಪಾದನೆಯನ್ನು ಮಾಡಿರುವರು ।೧೯॥ ಸತ್ಯವತಿಯ ಪುತ್ರನಾದ ಶ್ರೀವ್ಯಾಸರು, ಯಾವ ಮೂರ್ತಿಮಂತ ನಾರಾಯಣರು, ಇವರು ವೇದದ ಅರ್ಥವನ್ನು ಪ್ರಕಟಗೊಳಿಸಿದರು. ಮತ್ತು ಇವರು ಮಹಾಕವಿಗಳೆಂದು ಪ್ರಖ್ಯಾತರಾಗಿರುವರು ।೨೦॥ ಆತನು ಸರ್ವ ಪುರಾಣಗಳ ಕರ್ತನಾಗಿದ್ದಕ್ಕೆ ಸರ್ವ ಜಗತ್ತು ವ್ಯಾಸೋಚ್ಛಿಷ್ಟವೆಂದು ಹೇಳುವರು. ಆತನೂ ಸಹ ಭಗವಂತನ ಪೂಜೆಯ ಮಾರ್ಗವನ್ನು ಮತ್ತು ಕ್ರಿಯಾಯೋಗವನ್ನು ಹೇಳಿರುವನು ।೨೧॥ ಇತರರ ಈ ಎಲ್ಲ ಮಾತು ಇರಲಿ, ಯಾವ ಸರ್ವ ಜಗತ್ತಿನ ಪಿತಾಮಹನಾಗಿರುವ, ಶ್ರೀವಿಷ್ಣುವಿನ ಪುತ್ರನಾಗಿರುವ ಆ ಯಾವ ಬ್ರಹ್ಮದೇವನು ಇದೇ ಮಾತನ್ನು ದೃಢೀಕರಿಸಿರುವನು।೨೨॥

ನಿಃಸೃತಂ ತೇ ಮುಖಾಂಭೋಜಾದ್ಯದಾಹ ಭಗವಾನಜಃ । ಪುತ್ರೇಭ್ಯೋ ಭೃಗುಮುಖ್ಯೇಭ್ಯೋ ದೇವ್ಯೈ ಚ ಭಗವಾನ್ ಭವಃ ।೩॥

ಅರ್ಥ:- ಈ ಕ್ರಿಯಾಯೋಗವು ಪ್ರಾರಂಭದಲ್ಲಿ ನಿಮ್ಮ ಮುಖದಿಂದಲೇ ಪ್ರಕಟವಾಗಿತ್ತು. ನಿಮ್ಮಿಂದ ತಿಳಿದುಕೊಂಡು ಬ್ರಹ್ಮದೇವರು ತಮ್ಮ ಪುತ್ರ ಭೃಗು ಇತ್ಯಾದಿ ಮಹರ್ಷಿಗಳವರಿಗೆ ತಿಳಿಸಿದರು. ಭಗವಾನ ಶಂಕರನು ತನ್ನ ಅರ್ಧಾಂಗೀ ಪಾರ್ವತಿಗೆ ಉಪದೇಶವನ್ನು ಮಾಡಿದನು.

ತುವಾಂಚಿ ಕಲ್ಪಾಚಿಯಾ ಆದೀ । ಹೇಚಿ ಪೂಜಾವಿಧಾನವಿಧೀ । ಉಪದೇಶಿಲಾ ಪುತ್ರಬುದ್ಧೀ । ಸ್ವಯೇ ತ್ರಿಶುದ್ಧೀ ವಿಧಾತಾ ।೨೩॥ ತೇಣೇಹೀ ಕಲ್ಪಾದೀಸೀ ಆಪಣ । ನಾಭಿಕಮಳಾಸನೀ ಬೈಸೋನ । ಭೃಗಕಶ್ಯಪಾದಿ ಪುತ್ರಾಂಸೀ ಜಾಣ । ಹೇ ಪೂಜಾವಿಧಾನ ಉಪದೇಶೀ ।೨೪॥ ಶ್ರೀ ಮಹಾದೇವೇಹೀ ಆಪಣ । ಹೇ ಕ್ರಿಯಾಯೋಗವಿಧಿವಿಧಾನ । ಭಾವೇ ಭವಾನೀಸೀ ಜಾಣ । ಕೇಲೇ ನಿರೂಪಣ ಏಕಾಂತೀ ।೨೫॥

ಏತದ್ವೈ ಸರ್ವವರ್ಣಾನಾಮಾಶ್ರಮಾಣಾಂ ಚ ಸಂಮತಮ್ । ಶ್ರೇಯಸಾಮುತ್ತಮಂ ಮನ್ಯೇ ಸ್ತ್ರೀ ಶೂದ್ರಾಣಾಂ ಚ ಮಾನದ ।೪॥

ಅರ್ಥ:- ಮರ್ಯಾದಾರಕ್ಷಣನಾದ ಹೇ ಪ್ರಭುವೇ, ಕ್ರಿಯಾಯೋಗವು, ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ವರ್ಣದವರಿಗೆ ಮತ್ತು ಬ್ರಹ್ಮಚಾರೀ, ಗೃಹಸ್ಥ ಇತ್ಯಾದಿ ಆಶ್ರಮದವರಿಗೆ ಪರಮ ಕಲ್ಯಾಣಕಾರಕವಾಗಿದೆ. ಸ್ತ್ರೀಶೂದ್ರರಿಗೂ ಕೂಡ ಇದು ಶ್ರೇಷ್ಠ ಸಾಧನೆ ಎಂದು ನಾನು ತಿಳಿದಿರುವೆನು.

ಏವಂ ಶ್ರೇಷ್ಠ ಪರಂಪರಾ । ತುವಾ ಪ್ರಕಟ ಕೇಲೀ ದೀನೋದ್ಧಾರಾ । ದಿನದಯಾಳು ತೂ ಖರಾ । ಯಾಹೀ ವಿಚಾರಾ ಅವಧಾರೀ ।೨೬॥ ಆಶ್ರಮಧರ್ಮವಿಧಿವಿಧಾನ । ತೇಥ ಅಧಿಕಾರೀ ದ್ವಿಜನ್ಮೇ ಜನ । ತ್ಯಾಂಸೀ ಕರ್ಮಬಾಧಾ ಬಾಧೀ ಗಹನ। ಗುಂತಲೇ ಬ್ರಾಹ್ಮಣ ಕರ್ಮಠತ್ವೇ ।೨೭॥ ತೈಸೇ ನವ್ಹೇ ತುಝೇ ಭಜನ । ಭಜನಾಧಿಕಾರೀ ಸರ್ವ ವರ್ಣ । ದೀನೋದ್ಧಾರೀ ಭಜನ ಪೂರ್ಣ । ಸ್ತ್ರಿಯಾ ಶೂದ್ರಜನ ಉದ್ಧರಿಲೇ ।೨೮॥ ಕರ್ಮೀ ಗುಂತಲೇ ಉತ್ತಮೋತ್ತಮ। ಭಜನೇ ಉದ್ಧರಿಲೇ ಅಧಮಾಧಮ । ಭಜನೇ ಸರ್ವಾಸಹೀ ಸುಗಮ । ಭಜನೇ ಸ್ವಧರ್ಮ ಸಾರ್ಥಕ ।೨೯॥ ಭಜನಮಹಿಮಾ ನಿಃಸೀಮ । ಅಧಮಾ ಪದವೀ ಉತ್ತಮೋತ್ತಮ । ಭಜನಹೀನ ಜೇ ಉತ್ತಮ । ತೇ ಅಧಮಾಧಮ ಸ್ವಯೇಹೋತೀ ।೩೦॥ ಸರ್ವ ವರ್ಣ ಆಣಿ ಆಶ್ರಮ । ಭಗವದ್ಭಜನೇ ಗತಿ ಉತ್ತಮ । ಹೇಚಿ ಭಕ್ತೀಚೇ ನಿಜವರ್ಮ । ಭಕ್ತ ನಿಷ್ಕಾಮ ಜಾಣತೀ ।೩೧॥ ಕರೂನಿಯಾ ಭಗವದ್ಭಕ್ತೀ । ಭಕ್ತ ಸ್ವಯೇ ಭಗವದ್ರೂಪ ಹೋತೀ । ಯಾಲಾಗೀ ಭಕ್ತಾಂತೇ ಶ್ರೀಪತೀ । ಅತಿಪ್ರೀತೀ ಮಾನಿಸೀ ।೩೨॥ ತುಝೇ ಭಜನಪೂಜನ ಕರಿತಾ । ತೂ ನಿಜಭಕ್ತಾಂಚಾ ಹೋಸೀ ತ್ರಾತಾ । ತೂಚಿ ಭಕ್ತಾಂಸೀ ಸನ್ಮಾನ-ದಾತಾ । ತೇ ಪೂಜನಕಥಾ ಮಜ ಸಾಂಗ ।೩೩॥

ಕಲ್ಪದ ಆರಂಭದಲ್ಲಿ ನೀನೇ ಸ್ವತಃ ಇದೇ ಪೂಜಾವಿಧಾನ ವಿಧಿಯನ್ನು ಬ್ರಹ್ಮದೇವನಿಗೆ ಪುತ್ರಭಾವದಿಂದ ತಿಳಿಸಿರುವೆ ।೨೩॥ ಬ್ರಹ್ಮದೇವನೂ ಸಹ ನಿನ್ನ ನಾಭಿಕಮಲದ ಮೇಲೆ ಕುಳಿತುಕೊಂಡು ಭೃಗ ಕಶ್ಯಪಾದಿ ತನ್ನ ಮಕ್ಕಳಿಗೆ ಇದೇ ಪೂಜಾವಿಧಾನಗಳನ್ನು ಕಥನ ಮಾಡಿರುವನು ।೨೪॥ ಅದರಂತೆಯೇ ಶ್ರೀಶಂಕರನು ಇದೇ ಕ್ರಿಯಾಯೋಗ ವಿಧಿಯ ಪ್ರಕಾರವನ್ನು ಪಾರ್ವತಿಗೆ ಏಕಾಂತದಲ್ಲಿ ಸ್ವತಃ ಹೇಳಿರುವನು ।೨೫॥

ಹೇ ದೀನೋದ್ಧಾರಕನೇ, ಈ ಪ್ರಕಾರವಾಗಿ ದೀನಜನರ ಉದ್ಧಾರಕ್ಕಾಗಿ ನೀನು ಶ್ರೇಷ್ಠರ ಪರಂಪರೆಯನ್ನು ಆರಂಭಿಸಿರುವೆ. ನಿಜವಾಗಿಯೂ ನೀನು ದೀನದಯಾಳನಾಗಿರುವೆ. ಈ ವಿಚಾರವನ್ನೂ ಕೂಡ ಹೇಳುವೆ, ಕೇಳು ।೨೬॥ ಆಶ್ರಮಧರ್ಮ ಮತ್ತು ಅದರ ವಿಧಿವಿಧಾನಗಳ ಅಧಿಕಾರಿಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿರುವರು. ಅವರ ಕರ್ಮಾಚರಣೆಗಳಲ್ಲಿ ಏನಾದರೂ ತಪ್ಪಾದರೆ ಅತಿಶಯವಾಗಿ ದೋಷವು ಭಾದಿಸುವುದು. ಅದಕ್ಕಾಗಿ ಬ್ರಾಹ್ಮಣರು ಕರ್ಮಠತನದಲ್ಲಿಯೇ ಸಿಲುಕಿಕೊಂಡಿರುವರು ।೨೭॥ ಆದರೆ, ನಿನ್ನ ಭಜನೆಯು ಹೀಗಿರುವುದಿಲ್ಲ. ಸರ್ವ ವರ್ಣದವರಿಗೂ ನಿನ್ನ ಭಜನೆಯ ಅಧಿಕಾರವಿರುವುದು. ಭಜನೆಯಿಂದ ದೀನಜನರ ಉದ್ಧಾರವಾಗುವುದು. ಇದರಿಂದ ಸ್ತ್ರೀಯರು ಮತ್ತು ಶೂದ್ರರು ಉದ್ಧಾರರಾಗುವರು ।೨೮॥ ಉತ್ತಮೋತ್ತಮ ಜನರು ಕರ್ಮದಲ್ಲಿ ಸಿಲುಕಿಕೊಂಡಿರುವರು. ಆದರೆ ಭಜನೆಯಿಂದ ಅಧಮಾಧಮರ ಉದ್ಧಾರವಾಗುವುದು. ಭಜನೆಯು ಸರ್ವರಿಗೂ ಸುಗಮವಾಗಿರುವುದು. ಭಜನೆಯಿಂದ ಸ್ವಧರ್ಮದ ಸಾರ್ಥಕವಾಗುವುದು ।೨೯॥ ನಿಜವಾಗಿಯೂ ಭಜನೆಯ ಮಹಿಮೆಯು ಅಪೂರ್ವವಾಗಿರುವುದು. ಈ ಭಜನೆಯಿಂದ ಅಧಮನಿಗೂ ಕೂಡ ಉತ್ತಮೋತ್ತಮ ಪದವಿಯು ಪ್ರಾಪ್ತವಾಗುವುದು. ಆದರೆ ಉತ್ತಮನಾಗಿಯೂ ಭಜನಹೀನನಾದರೆ ಆತನು ಸ್ವತಃ ಅಧಮಾಧಮನಾಗುವನು ।೩೦॥ ಸರ್ವ ವರ್ಣದವರಿಗೂ, ಸರ್ವ ಆಶ್ರಮದವರಿಗೂ ಭಗವದ್ಭಜನೆಯಿಂದ ಸದ್ಗತಿಯು ಪ್ರಾಪ್ತವಾಗುವುದು. ಇದು ಭಕ್ತಿಯಲ್ಲಿನ ಪರಮ ರಹಸ್ಯವಾಗಿರುವುದು. ಇದನ್ನು ನಿಷ್ಕಾಮ ಭಕ್ತರು ತಿಳಿದಿರುವರು ।೩೧॥ ಭಕ್ತರು ಭಗವದ್ಭಕ್ತಿಯನ್ನು ಮಾಡಿ ತಾವು ಸ್ವತಃ ಭಗವದ್ರೂಪರಾಗುವರು. ಆದ್ದರಿಂದ ಹೇ ಶ್ರೀಕೃಷ್ಣನೇ, ನೀನು ಭಕ್ತರಿಗೆ ಅತ್ಯಂತ ಪ್ರೇಮದಿಂದ ಮನ್ನಿಸುವೆ ।೩೨॥ ನಿನ್ನ ಭಜನೆ ಪೂಜನೆಯನ್ನು ಮಾಡಿದರೆ ನೀನು ನಿನ್ನ ಈ ಭಕ್ತರಿಗೆ ಉದ್ಧರಿಸುವೆ. ನೀನು ನಿನ್ನ ಭಕ್ತರಿಗೆ ಸನ್ಮಾನಿಸುವೆ. ಈಗ ನಿನ್ನ ಪೂಜಾ ವಿಧಾನವನ್ನು ನನಗೆ ಹೇಳು ।೩೩॥

ಏತತ್ಕಮಲಪತ್ರಾಕ್ಷ ಕರ್ಮಬಂಧವಿಮೋಚನಮ । ಭಕ್ತಾಯ ಚಾನುರಕ್ತಾಯ ಬ್ರೂಹಿ ವಿಶ್ವೇಶ್ವರೇಶ್ವರ ।।೮।।

ಅರ್ಥ:- ಹೇ ಕಮಲನಯನ ಶ್ಯಾಮಸುಂದರನೇ, ನೀನು ಶಂಕರ ಮೊದಲು ಮಾಡಿ ಜಗದೀಶ್ವರರ ಈಶ್ವರನಾಗಿರುವೆ. ನಾನು ನಿನ್ನ ಚರಣ ಪ್ರೇಮಭಕ್ತನಾಗಿರುವೆ. ನೀನು ಕೃಪೆ ಮಾಡಿ ನನಗೆ ಈ ಕರ್ಮಬಂಧನದಿಂದ ಮುಕ್ತನಾಗುವ ವಿಧಿಯನ್ನು ಹೇಳು.

ಕಮಳನಾಭೀ ನಾರಾಯಣಾ । ಭಕ್ತವಿಶ್ರಾಮ ಕಮಳವದನಾ । ಕಮಲಾಲಯಾ ಕಮಲನಯನಾ । ವಿನಂತೀ ಶ್ರೀಕೃಷ್ಣಾ ಅವಧಾರೀ ।।೩೪।। ತುವಾ ಪಾಹಿಲ್ಯಾ ಕೃಪಾದೃಷ್ಟೀ । ತತ್ಕಾಳ ಪೈ ಉಕಲೂರೀ । ಸುಟತೀ ಕರ್ಮಬಂಧಾಚ್ಯಾ ಗಾಂಠೀ । ಸ್ವಾನಂದಪುಷ್ಟೀ ನಿಜಭಕ್ತಾ ।।೩೫।। ಜೇವೀ ಘೃತಾಚೇ ಕಠಿಣಪಣ । ಕ್ಷಣೇ ವಿರವೀ ಸೂರ್ಯಕಿರಣ । ತೇವೀ ಕರ್ಮಬಂಧಾ ನಿರ್ದಳಣ । ತುಝೀ ಕೃಪಾವಲೋಕನ ಕರೀ ಕೃಷ್ಣಾ ।।೩೬।। ಕಾ ಸೈಂಧವಾಚಾ ಮಹಾಗಿರೀ । ಜೇವೀ ವಿರೇ ಸಿಂಧೂಮಾಝಾರೀ । ತೇವೀ ಕರ್ಮಬಂಧಾ ಬಾಹೇರೀ । ತುಝೀ ಕೃಪಾ ಕರೀ ಶ್ರೀಕೃಷ್ಣಾ ।।೩೭।। ತುಝೀ ಝಾಲಿಯಾ ಕೃಪಾದೃಷ್ಟೀ । ಕರ್ಮಾಕರ್ಮಾಸೀ ಪಡೇ ತುಟೀ । ಜೇವೀ ಸೂರ್ಯೋದಯಾಸಾಠೀ । ನಾತುಡೇ ಭೇಟೀ ಖದ್ಯೋತಾ ।।೩೮।। ತಮೀ ದಾಟತೀ ಖದ್ಯೋತಕೋಡೀ । ತೇವೀ ಅಜ್ಞಾನೀ ಕರ್ಮಾಚೀ ಆಡಾಡೀ । ತುಝಾ ಕೃಪಾಸೂರ್ಯ ಜೋಡಲ್ಯಾ ಜೋಡೀ । ಕರ್ಮೇ ಜಾತೀ ಬಾಪುಡೀ ವಿರೋನೀ ।।೩೯।। ಐಶಿಯಾ ನಿಷ್ಕರ್ಮಕೃಪಾಯುಕ್ತ । ತುಝೇ ನಾಂದತೀ ನಿಜಭಕ್ತ । ಜೇ ಕಾ ವಿಷಯೀ ಅತಿವಿರಕ್ತ । ಸದಾ ಅನುರಕ್ತ ಹರಿಚರಣೀ ।।೪೦।। ತೇ ಪೂರ್ಣಕೃಪೇಚೇ ಆಯತನ । ತುಝೇ ಭಜನಪೂಜನವಿಧಾನ । ತೇ ಮಜ ಸಾಂಗ ಕೃಪಾ ಕರೂನ । ಮೀ ಅತಿದೀನ ಪೈ ತುಝಾ ।।೪೧।। ಮ್ಹಣಸೀ ತುಜ ಹಾ ಅಧಿಕಾರ ನಾಹೀ । ಪರೀ ಮೀ ಶರಣ ಆಲೋ ತುಜ ಪಾಹೀ । ಶರಣಾಗತಾಚೀ ತುಝ್ಯಾ ಠಾಯೀ । ಉಪೇಕ್ಷಾ ನಾಹೀ ಶ್ರೀಕೃಷ್ಣಾ ।।೪೨।। ತುವಾ ಉದ್ಧರಿಲೇ ಪಶು-ಗೀಧ-ಗಜಾಂಸೀ । ಗಣಿಕೇ ತಾರಿಲೇ ಕುಂಟಣೇಸೀ । ತೇಚಿ ಕೃಪಾಕರೀ ಆಮ್ಹಾಸೀ । ಹೃಷೀಕೇಶೀ ಕೃಪಾಳುವಾ ।।೪೩।। ಮ್ಹಣಸೀ ''ಬ್ರಹ್ಮಾ ಶಿವ ಅಸತಾ ಸೃಷ್ಟೀ । ಮಜಚಿ ಪುಸಾಯಾಚಿ ಶ್ರದ್ಧಾ ಮೋಠೀ । ಕೈಸೇನಿ ಪಾ ವಾಢಲೀ ಪೋಟೀ''। ಐಕ ತೇ ಗೋಠೀ ಸಾಂಗೇನ ।।೪೪।। ಬ್ರಹ್ಮಾ ಜಗಾಚಾ ಕರ್ತಾ ಹೋಯೇ । ತೋಹೀ ವಿಸರಲಾ ವಾಹೇ ನಿಜಾತ್ಮಸೋಯೇ । ತೋ ತುಝ್ಯಾ ಪೋಟಾ ಯೇಊನಿ ಪಾಹೇ । ನಿಜಜ್ಞಾನ ಲಾಹೇ ತುಝೇನಿ ।।೪೫।। ಶಿವ ಪಾಯವಣೀ ವಾಹೇ ಮಾಥಾ । ತುಝೇ ನಾಮ ಸದಾ ಜಪತಾ । ತುಝೇ ಕೃಪೇಸ್ತವ ತತ್ತ್ವತಾ । ತೋಹೀ ನಿಜಾತ್ಮತಾ ಪಾವಲಾ ।।೪೬।।

ಹೇ ಕಮಲನಯನಾ ನಾರಾಯಣಾ, ಹೇ ಭಕ್ತವಿಶ್ರಾಮಾ ಕಮಲವದನಾ ಶ್ರೀಕೃಷ್ಣಾ, ನನ್ನ ವಿನಂತಿಯನ್ನು ಆಲಿಸು ।।೩೪।। ನೀನು ನಿನ್ನ ಕೃಪಾದೃಷ್ಟಿಯಿಂದ ನೋಡಿದರೆ ಸಾಕು, ತಕ್ಷಣವೇ ಕರ್ಮಬಂಧನಗಳ ಗಂಟು ಬಿಚ್ಚಿ ಬೀಳುವುದು ಮತ್ತು ಭಕ್ತರಿಗೆ ಸ್ವಾನಂದದ ಪುಷ್ಟಿಯು ಪ್ರಾಪ್ತವಾಗುವುದು ।।೩೫।। ತುಪ್ಪದ ಗಟ್ಟಿತನವನ್ನು ಯಾವ ಪ್ರಕಾರವಾಗಿ ಸೂರ್ಯನು ಕ್ಷಣ ಮಾತ್ರದಲ್ಲಿ ಕರಗಿಸುವನೋ, ಅದರಂತೆ ಹೇ ಶ್ರೀಕೃಷ್ಣನೇ, ನಿನ್ನ ಕೃಪಾದೃಷ್ಟಿಯು ಕರ್ಮಬಂಧಗಳ ನಿರಸನೆಯನ್ನು ಮಾಡುವುದು ।।೩೬।। ಲವಣದ ಮಹಾಬೆಟ್ಟವಾಗಿರಲಿ ಅದು ಸಮುದ್ರದಲ್ಲಿ ಹೇಗೆ ಕರಗಿಹೋಗುವುದೋ, ಅದರಂತೆ ಹೇ ಶ್ರೀಕೃಷ್ಣಾ, ನಿನ್ನ ಕೃಪೆಯು ಈ ಯಾವ ಕರ್ಮಬಂಧನಗಳನ್ನು ನಾಶಪಡಿಸುವುದು ।।೩೭।। ಸುರ್ಯೋದಯವಾಗುತ್ತಲೇ ಯಾವ ಪ್ರಕಾರವಾಗಿ ಮಿಂಚುಹುಳವು ಸಿಗುವುದಿಲ್ಲವೋ, ಅದರಂತೆ ನಿನ್ನ ಕೃಪಾದೃಷ್ಟಿಯಾಗುತ್ತಲೇ ಕರ್ಮಾಕರ್ಮಗಳು ಮುರಿದುಬೀಳುವವು ।।೩೮।। ಕಡುಕತ್ತಲೆಯಲ್ಲಿ ಕೋಟ್ಯಾವಧಿ ಮಿಂಚುಹುಳಗಳು ಮಿಂಚುತ್ತಿರುವುವು. ಅದರಂತೆ ಅಜ್ಞಾನ ಅಂಧಕಾರದಲ್ಲಿ ಕರ್ಮಗಳ ಆಡಂಬರಗಳು ಮಿನುಗುತ್ತಿರುವವು. ನಿನ್ನ ಕೃಪಾರೂಪ ಸೂರ್ಯನು ಜೋಡಿಯಾದರೆ ಆಗ ಪಾಪ! ಕರ್ಮಗಳು ಕರಗಿಹೋಗುವವು ।।೩೯।। ಹೀಗೆ ನಿಷ್ಕರ್ಮಕೃಪಾಯುಕ್ತರಾಗಿ ನಿನ್ನ ಭಕ್ತರು ವರ್ತಿಸುತ್ತಿರುವರು. ಅವರು ವಿಷಯಗಳ ವಿಷಯದಲ್ಲಿ ಅತಿವಿರಕ್ತರಾಗಿರುವರು. ಸದಾಸರ್ವದಾ ಹರಿಚರಣಗಳಲ್ಲಿ ಆಸಕ್ತರಾಗಿರುವರು ।।೪೦।। ಈ ಕಾರಣವಾಗಿ ನಿನ್ನ ಪೂರ್ಣಕೃಪೆಯಿಂದ ಯಾವ ಪೂಜಾ ವಿಧಾನವನ್ನು ನನಗೆ ತಿಳಿಸಿ ಹೇಳು. ನಾನು ನಿನ್ನ ಅತಿದೀನನಾಗಿರುವೆನು ।।೪೧।। ಹೇ ಶ್ರೀಕೃಷ್ಣನೇ, ನೀನು ಶರಣು ಬಂದವರಿಗೆ ಎಂದಿಗೂ ತಿರಸ್ಕರಿಸಲಾರೆ ಎಂಬುವುದು ನನಗೆ ತಿಳಿದಿದೆ ।।೪೨।। ಈ ಹಿಂದೆ ನೀನು ಜಟಾಯು, ಸಂಪಾತಿ, ಗಜೇಂದ್ರ ಇತ್ಯಾದಿ ಪಶುಪಕ್ಷಿಗಳನ್ನೂ ಕೂಡ ಉದ್ಧಾರಮಾಡಿರುವೆ. ನೀನು ಕುಂಟಿಣೀ ಗಣಿಕೆಗೆ ಉದ್ಧರಿಸಿರುವೆ. ಹೇ ಹೃಷೀಕೇಶನೇ, ಅದರಂತೆಯೇ ನನ್ನ ಮೇಲೆ ಕೃಪೆಯನ್ನು ಮಾಡು ।।೪೩।। ಈ ಸೃಷ್ಟಿಯಲ್ಲಿ ಬ್ರಹ್ಮದೇವ, ಶಂಕರ ಇತ್ಯಾದಿಯಾಗಿ ಅನೇಕರಿರುವರು. ಇವರನ್ನು ಬಿಟ್ಟುಕೊಟ್ಟು ನನ್ನನ್ನೇ ಪ್ರಶ್ನಿಸುವ ಮಹದಾಶೆಯು ನಿನ್ನ ಮನದಲ್ಲಿ ಹೇಗೆ ಉಂಟಾಯಿತು? ಹೀಗೆಂದು ನೀನು ಕೇಳಬಹುದು. ಅದಕ್ಕಾಗಿ ಈ ಕಾರಣವನ್ನೂ ಸಹ ಹೇಳುವೆನು, ಕೇಳು ।।೪೪।। ಬ್ರಹ್ಮದೇವನು ಜಗತ್ತಿನ ನಿರ್ಮಾಣಕರ್ತನಾಗಿದ್ದರೂ ಕೂಡ ಆತನು ತನ್ನ ಆತ್ಮಸ್ವರೂಪವನ್ನು ಮರೆತನು. ಆದ್ದರಿಂದ ನಿನ್ನ ಹೊಟ್ಟೆಯಲ್ಲಿ ಹುಟ್ಟಿಕೊಂಡು ನಿನ್ನಿಂದ ಆತ್ಮಜ್ಞಾನವನ್ನು ಪಡೆದುಕೊಂಡನು ।।೪೫।। ನಿನ್ನ ಚರಣ ತೀರ್ಥವಾದ ಭಾಗೀರಥಿಯನ್ನು ಶಂಕರನು ತನ್ನ ಮಸ್ತಕದ ಮೇಲೆ ಧರಿಸಿರುವನು. ನಿನ್ನ ನಾಮವನ್ನು ಸದಾ ಸ್ಮರಿಸುತ್ತಿರುವನು. ನಿನ್ನ ಕೃಪೆಯಿಂದ ಆತನು ಆತ್ಮಸ್ವರೂಪವನ್ನು ಪಡೆದನು ।।೪೬।।

ಯಾಲಾಗಿ ತೂ ಈಶ್ವರಾಚಾ ಈಶ್ವರ । ನಿಯಂತ್ಯಾ ನಿಯಂತಾ ಸರ್ವೇಶ್ವರ । ವಿಶ್ವೀ ವಿಶ್ವಾತ್ಮಾ ವಿಶ್ವಂಭರ । ವಿಶ್ವೇಶ್ವರ ತೂ ಕೃಷ್ಣಾ ।೪೭॥ ಯಾಪರೀ ತೂ ಜ್ಞಾನನಿಧೀ । ಪೂರ್ಣ ಬೋಧಾಚಾ ಉದಧೀ । ಜೇಣೇ ಹೋಯ ನಿಜಾತ್ಮಸಿದ್ಧೀ । ತೇ ಪೂಜಾವಿಧೀ ಮಜ ಸಾಂಗ ।೪೮॥ ಐಸಾ ಭಕ್ತವಚನೇ ತೋ ಸಂತೋಷಲಾ । ಪೂರ್ಣ ನಿಜಬೋಧೇ ದ್ರವಲಾ । ನಿಜಾತ್ಮಕೃಪಾ ಕಳವಳಲಾ । ಕಾಯ ಬೋಲಿಲಾ ಶ್ರೀಕೃಷ್ಣ ।೪೯॥

ಶ್ರೀಭಗವಾನುವಾಚ :-

ನಹ್ಯಂತೋಽನಂತಪಾರಸ್ಯ ಕರ್ಮಕಾಂಡಸ್ಯ ಚೋದ್ಧವ । ಸಕ್ಷಿಪ್ತಂ ವರ್ಣಯಿಷ್ಯಾಮಿ ಯಥಾವದನುಪೂರ್ವಶಃ ।೬॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು, ಹೇ ಉದ್ಧವಾ, ಕರ್ಮಕಾಂಡದ ವಿಸ್ತಾರವು ಎಷ್ಟಿದೆಯಂದರೆ ಆದಕ್ಕೆ ಅಂತಪಾರವೇ ಇರುವುದಿಲ್ಲ. ಆದ್ದರಿಂದ ನಾನು ಸ್ವಲ್ಪದರಲ್ಲಿಯೇ ಪೂರ್ವಾಪರದ ಕ್ರಮದಿಂದ ವಿಧಿಪೂರ್ವಕವಾಗಿ ವರ್ಣಿಸುತ್ತೇನೆ.

ಜ್ಯಾಚೇ ಐಕತಾ ವಚನ । ವೇದವಾಕ್ಯಾ ಪಡೇ ಮೌನ। ಜ್ಯಾಚೀ ಕರಿತಾ ಆಠವಣ। ಮನಪಣಾ ಮನ ಸ್ವಯೇ ಮುಕೇ ।೫೦॥ ಜೋ ವೇದಾರ್ಥಪ್ರಕಾಶಕ । ಜೋ ಅರ್ಕಾಚಾ ಆದಿ ಅರ್ಕ । ತೋ ಉದ್ಧವಾಸೀ ಯದುನಾಯಕ । ಸ್ವಮುಖೇ ದೇಖ ಬೋಲತ ।೫೧॥ ಆಗಮನಿಗಮೋಕ್ತ ಪ್ರಕಾರ । ಮಾಝೀ ಪೂಜಾವಿಧೀ ಸವಿಸ್ತರ । ಸಾಂಗತಾ ಅನಂತ ಅಪಾರ । ನ ಕಳೇ ಪಾರ ಬ್ರಹ್ಮಾದಿಕಾ ।೫೨॥ ಉದ್ಧವಾ ಐಕ ಪಾ ತತ್ತ್ವತಾ । ಮೀ ದೇವಾಧಿದೇವ ಝಾಲೋ ವಕ್ತಾ । ತರೀ ಪೂಜಾವಿಧಾನಕಥಾ । ಸಮೂಳ ಸರ್ವಥಾ ನ ಸಾಂಗವೇ ।೫೩॥ ಜರೀ ಝಾಲೇ ಅತಿಸಜ್ಞಾನ। ತರೀ ಪೂಜಾ ವಿಧಿ ವಿಧಾನ । ಸಾಂಗಾವಯಾ ಸಮರ್ಥಪಣ । ಸರ್ವಥಾ ಜಾಣ ಅಸೇನಾ ।೫೪॥ ಏವಂ ಪೂರ್ವೋಕ್ತ ಪ್ರಕಾರ । ಆಗಮನಿಗಮನಿಜಸಾರ । ನಿವಡೂನಿ ಸಂಕ್ಷೇಪಾಕಾರ । ತುಜ ಮೀ ಸಾಚಾರ ಸಾಂಗೇನ ।೫೫॥ ಪೂಜಾವಿಧಿನಿಜಸಾರ । ತ್ರಿವಿಧ ವಿಧಾನ ತ್ರಿಪ್ರಕಾರ । ಐಕ ತ್ಯಾಚಾಹೀ ವಿಚಾರ । ವಿಧಿ ಉಪಚಾರವಿಭಾಗೇ ।೫೬॥

ವೈದಿಕಸ್ತಾಂತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮುಖಃ । ತ್ರಯಾಣಾಮೀಪ್ಸಿತೇನೈವ ವಿಧಿನಾ ಮಾಂ ಸಮರ್ಚರೇತ್ ।೭॥

ಅರ್ಥ:- ನನ್ನ ಪೂಜೆಯ ಮೂರು ವಿಧಿಗಳಿರುವುವು. ವೈದಿಕ,ತಾಂತ್ರಿಕ ಮತ್ತು ಮಿಶ್ರಿತ. ಈ ಮೂರರಲ್ಲಿ ಭಕ್ತನಿಗೆ ಯಾವುದು ಅನುಕೂಲವಾಗುವುದೋ, ಆ ವಿಧಿಯಿಂದ ನನ್ನ ಆರಾಧನೆಯನ್ನು ಮಾಡಬೇಕು.

ವೇದೀಂಚೇ ಮಂತ್ರ ವೇದೀಂಚೇ ಅಂಗ । ವೇದೋಕ್ತ ಮಾಝೀ ಪೂಜಾ ಸಾಂಗ । ಯಾ ನಾಂವ ಗಾ ''ವೈದಿಕ'' ಮಾರ್ಗ । ಆಗಮಪ್ರಯೋಗ ತೋಐಕ ।೫೭॥

ಈ ಕಾರಣವಾಗಿ ಹೇ ಶ್ರೀಕೃಷ್ಣನೇ, ನೀನು ಈಶ್ವರರ ಈಶ್ವರನಾಗಿರುವೆ. ನಿಯಂತ್ರಿಸುವವರ ನಿಯಂತ್ರಕನಾಗಿರುವೆ. ನೀನು ಸರ್ವೇಶ್ವರನು ಮತ್ತು ಸರ್ವ ಸೃಷ್ಟಿಯಲ್ಲಿ ದೀನರನ್ನು ಪರಿಪಾಲನೆ ಮಾಡುವ ವಿಶ್ವೇಶ್ವರನೂ ನೀನೇ ಆಗಿರುವೆ ।೪೭॥ ಆದ್ದರಿಂದ ಯಾವುದರಿಂದ ಆತ್ಮಜ್ಞಾನವು ಪ್ರಾಪ್ತವಾಗುವುದೋ ಅಂತಹ ಪೂಜಾವಿಧಿಯನ್ನು ನನಗೆ ತಿಳಿಸು ಏಕೆಂದರೆ ನೀನು ಜ್ಞಾನನಿಧಿಯಾಗಿರುವೆ, ಪೂರ್ಣಬೋಧೆಯ ಸಮುದ್ರನಾಗಿರುವೆ ।೪೮॥ ಹೀಗೆ ಭಕ್ತನ ಪ್ರೇಮಮಯ ವಚನಗಳನ್ನು ಕೇಳಿ, ಶ್ರೀಕೃಷ್ಣನು ಸಂತುಷ್ಟನಾದನು. ನಿಜ ಬೋಧೆಯಿಂದ ಆತನ ಅಂತಃಕರಣವು ತುಂಬಿಬಂದಿತು. ಈಗ ಆತನು ಆತ್ಮಜ್ಞಾನದ ಕೃಪೆ ಮಾಡಲು ಉತ್ಸುಕನಾದನು. ಏನು ಹೇಳುತ್ತಿರುವನೆಂಬುವುದನ್ನು ಈಗ ಕೇಳಿರಿ ।೪೯॥

ಯಾರ ವಚನಗಳನ್ನು ಕೇಳಿ ವೇದವು ಮೌನ ಹಿಡಿದು ಕುಳಿತುಕೊಂಡಿತು. ಯಾರ ಸ್ಮರಣೆಯನ್ನು ಮಾಡುತ್ತಿರಲು ಮನವು ತನ್ನ ಮನೋಧರ್ಮವನ್ನು ಬಿಟ್ಟುಕೊಟ್ಟಿತು ।೫೦॥ ಯಾರು ವೇದಗಳ ಅರ್ಥವನ್ನು ಪ್ರಕಾಶಿತ ಮಾಡುವವ, ಆದಿ ಸೂರ್ಯನಿಗೂ ಕೂಡ ಸೂರ್ಯನಾಗಿರುವ, ಆ ಶ್ರೀಕೃಷ್ಣನು ಉದ್ಧವನಿಗೆ ತನ್ನ ಸ್ವಮುಖದಿಂದ ಹೇಳುತ್ತಿರುವನು ।೫೧॥ ವೇದ ಹಾಗೂ ಶಾಸ್ತ್ರಗಳು ಇವು ಪೂಜಾವಿಧಿಗಳ ವರ್ಣನೆಯನ್ನು ಮಾಡಿರುವುವು. ಆ ಮಾರ್ಗವನ್ನು ಒಂದು ವೇಳೆ ಸವಿಸ್ತಾರವಾಗಿ ಹೇಳಬೇಕೆಂದರೆ ಅದು ಅನಂತ ಅಪಾರವಾಗಿರುವುದು. ಬ್ರಹ್ಮಾದಿಕರಿಗೂ ಇದರ ಪರಿಪೂರ್ಣ ಪತ್ತೆ ಹತ್ತಿರುವುದಿಲ್ಲ ।೫೨॥ ಅದಕ್ಕಾಗಿ ಹೇ ಉದ್ಧವನೇ, ನಾನು ದೇವಾಧಿದೇವನಾಗಿದ್ದು ಈ ಪೂಜಾ ಪ್ರಕಾರವನ್ನು ಹೇಳಲಾರಂಭಿಸಿದರೆ ನನ್ನಿಂದಲೂ ಕೂಡ ಪರಿಪೂರ್ಣವಾಗಿ ವರ್ಣಿಸಲು ಸಾಧ್ಯವಾಗುವುದಿಲ್ಲ ।೫೩॥ ಯಾರು ಎಷ್ಟೇ ಅತಿಸಜ್ಞಾನರಾಗಿರಲಿ, ಅವರಿಗೂ ಕೂಡ ಪೂಜಾ ವಿಧಾನವನ್ನು ಸಂಪೂರ್ಣವಾಗಿ ವರ್ಣಿಸುವ ಸಾಮರ್ಥ್ಯವಿರುವುದಿಲ್ಲ ।೫೪॥ ಈ ಕಾರಣವಾಗಿ ಪೂರ್ವದಲ್ಲಿ ಹೇಳಿರುವ ವೇದಶಾಸ್ತ್ರಗಳಲ್ಲಿನ ಸಾರವನ್ನು ಹುಡುಕಿ ತೆಗೆದು ಸಂಕ್ಷಿಪ್ತವಾಗಿ ಹೇಳುವೆನು ।೫೫॥ ಪೂಜಾವಿಧಿಯ ನಿಜಸಾರವು ವೈದಿಕ, ತಾಂತ್ರಿಕ ಮತ್ತು ಮಿಶ್ರ ಹೀಗೆ ಮೂರು ಪ್ರಕಾರವಾಗಿರುವುವು. ಅವುಗಳ ಪೂಜೆಯ ಪ್ರಕಾರವನ್ನು ಹೇಳುವೆನು, ಅದನ್ನು ಕೇಳು ।೫೬॥

ವೇದದಲ್ಲಿನ ಮಂತ್ರಗಳು ಮತ್ತು ವೇದದಲ್ಲಿನ ವಿಧಿಗಳು, ಇವುಗಳನ್ನು ಅನುಸರಿಸಿಕೊಂಡ ಸರಿಯಾದ ಪೂಜೆಗೆ ವೈದಿಕ ಮಾರ್ಗವೆಂದು ಹೇಳುವರು. ಈಗ ಆಗಮ ಪ್ರಯೋಗವು ಹೇಗಿರುವುದೆಂಬುವುದನ್ನು ನೀನು ಕೇಳು ।೫೭॥

ಆಗಮಮಂತ್ರ ಆಗಮಚಿ ಅಂಗ । ಮಾಝೀ ಆಗಮೋಕ್ತ ಪೂಜಾ ಸಾಂಗ । ಯಾ ನಾಂವ ಗಾ "ತಾಂತ್ರಿಕ" ಮಾರ್ಗ । ಮಿಶ್ರಪ್ರಸಂಗ ತೋ ಐಕ ॥೫೮॥ ವೇದೀಂಚೇ ಮಂತ್ರ ತಂತ್ರೀಚೇ ಅಂಗ । ಏವಂ ಮಿಶ್ರಿತ ಉಭಯ ಭಾಗ । ಮಾಝೀ ಪೂಜಾ ನಿಪಜೇ ಸಾಂಗ । "ಮಿಶ್ರ" ಮಾರ್ಗ ಯಾ ನಾಂವ ॥೫೯॥ ಹೇ ತ್ರಿವಿಧವಿಧಿ ಪೂಜಾ ಸಾಂಗ । ತೋ ಜಾಣ ಮಾಝಾ "ತ್ರಿವಿಧ" ಯಾಗ । ಯೇಣೇ ಮೀ ಸಂತೋಷೇ ಶ್ರೀರಂಗ । ಪಾರ್ಶ್ವದೇಶೀ ಸಾಂಗ ಸಪರಿವಾರ ॥೬೦॥ ಐಸೇ ಮಾಝೇ ತ್ರಿವಿಧ ಭಜನ । ಜೇಥ ಜ್ಯಾಚೀ ಶ್ರದ್ಧಾ ಪೂರ್ಣ । ತ್ಯಾ ವಿಧೀ ಕರಿತಾ ಪೂಜನ । ಮಜ ತೃಪ್ತಿ ಸಮಾನ ಭಾವಾರ್ಥೇ ॥೬೧॥ ಭಾವಾರ್ಥೇ ಜೇ ಮಾಝೇ ಪೂಜನ । ತೇಣೇ ಮೀ ಸಂತೃಪ್ತ ಜನಾರ್ದನ । ಹಾ ಆಗಮೋಕ್ತ ಯಜ್ಞ ಸಂಪೂರ್ಣ । ತ್ರಿವಿಧ ಲಕ್ಷಣ ಸಮಸಾಮ್ಯೇ ॥೬೨॥ ವೈದಿಕಾದಿ ತ್ರಿವಿಧ ಗತೀ । ಪೂಜಿತಾ ತೃಪ್ತ ಮೀ ಶ್ರೀಪತೀ । ಪೂಜಾಧಿಕಾರಾಚೀ ಸ್ಥಿತೀ । ಐಕ ತುಜಪ್ರತೀ ಸಾಂಗೇನ ॥೬೩॥

ಯದಾ ಸ್ವನಿಗಮೇನೋಕ್ತಂ ದ್ವಿಜತ್ವಂ ಪ್ರಾಪ್ಯ ಪುರುಷಃ । ಯಥಾ ಯಜೇತ ಮಾಂ ಭಕ್ತ್ಯಾ ಶ್ರದ್ಧಯಾ ತಂ ನಿಬೋಧ ಮೇ ॥೮॥

ಅರ್ಥ:- ಪ್ರಾರಂಭದಲ್ಲಿ ತನ್ನ ಅಧಿಕಾರ ತಕ್ಕಂತೆ ಶಾಸ್ತ್ರೋಕ್ತವಾಗಿ ವಿಧಿಯೊಂದಿಗೆ ಸಮಯಾನುಸಾರವಾಗಿ ಯಜ್ಞೋಪವೀತ ಸಂಸ್ಕಾರವನ್ನು ಮಾಡಬೇಕು. ಇದರಿಂದ ದ್ವಿಜತ್ವವು ಪ್ರಾಪ್ತವಾಗುವುದು. ತದನಂತರ ಶ್ರದ್ಧೆ ಮತ್ತು ಭಕ್ತಿಯ ಸಹಾಯದಿಂದ ಯಾವ ಪ್ರಕಾರದ ಪೂಜೆಯನ್ನು ಮಾಡಬೇಕೆಂಬುವ ಅದರ ವಿಧಾನವನ್ನು ನಾನು ನಿನಗೆ ಹೇಳುವೆನು.

ದ್ವಿಜನ್ಮೇ ಜೇ ತಿನ್ಹೀ ವರ್ಣ । ತ್ಯಾಂಚೇ ಅಧಿಕಾರಲಕ್ಷಣ । ಗರ್ಭಾಷ್ಟಮೀ ಉಪನಯನ । ತೈ ಅಧಿಕಾರ ಪೂರ್ಣ ಬ್ರಾಹ್ಮಣಾ ॥೬೪॥ ಕ್ಷತ್ರಿಯಾಂಚಾ ಅಧಿಕಾರ ಶುದ್ಧ । ಬಾರಾ ವರ್ಷಾ ವ್ರತಬಂಧ । ಸೋಳಾ ವರ್ಷಾ ಪ್ರಸಿದ್ಧ । ವ್ರತಬಂಧ ವೈಶ್ಯಾಸೀ ॥೬೫॥ ಗಾಯತ್ರೀ ಉಪದೇಶ ಪಾವೋನ । ದುಸರೇ ಜನ್ಮ ಉಪನಯನ । ಯಾಲಾಗೀ "ಸಾವಿತ್ರ" ಜನ್ಮ ಜಾಣ । ದ್ವಿಜನ್ಮೇ ತ್ರಿವರ್ಣ ವೇದೋಕ್ತವಿಧೀ ॥೬೬॥ ವೇದೋಕ್ತ ಅಧಿಕಾರಲಕ್ಷಣ । ಯಾ ನಾಂವ ಉದ್ಧವಾ ಜಾಣ । ಆತಾ ಮಾಝೇ ಪೂಜಾವಿಧಿಸ್ಥಾನ । ಐಕ ಸಂಪೂರ್ಣ ನಿಜಭಕ್ತಾ ॥೬೭॥

ಅರ್ಚಾಯಾಂ ಸ್ಥಂಡಿಲೇಽಗ್ನೌ ವಾ ಸೂರ್ಯೇ ವಾಽಪ್ಸು ಹೃದಿ ದ್ವಿಜೇ ।
ದ್ರವ್ಯೇಣ ಭಕ್ತಿಯುಕ್ತೋಽರ್ಚೇತ್ ಸ್ವಗುರುಂ ಮಾಮಮಾಯಯಾ ॥೯॥

ಅರ್ಥ:- ಭಕ್ತಿಪೂರ್ವಕವಾಗಿ ನಿಷ್ಕಪಟ ಭಾವದಿಂದ ನನ್ನ ಮೂರ್ತಿಯಲ್ಲಿ ಪೂಜಾ ಸಾಮಗ್ರಿಯೊಂದಿಗೆ ಅರ್ಚಿಸಬೇಕು. ಅದರಂತೆ ವೇದದಲ್ಲಿ, ಅಗ್ನಿಯಲ್ಲಿ, ಸೂರ್ಯನಲ್ಲಿ, ಜಲದಲ್ಲಿ, ಹೃದಯದಲ್ಲಿ ಅಥವಾ ಬ್ರಾಹ್ಮಣರಲ್ಲಿ ಹೀಗೆ ಯಾವುದಲ್ಲಾದರೂ ನನ್ನ ಆರಾಧನೆಯನ್ನು ಮಾಡಬೇಕು.

ಆಗಮೋಕ್ತ ಮಂತ್ರಗಳನ್ನು ಮತ್ತು ಆಗಮದಲ್ಲಿನ ವಿಧಿಗಳನ್ನು ಸ್ವೀಕರಿಸಿ ನನ್ನ ಪೂಜೆಯನ್ನು ಆಗ ಮೋಕ್ತ ರೀತಿಯಲ್ಲಿ ಮಾಡುವಿಕೆಯ ನಾಮವು ತಂತ್ರಮಾರ್ಗವೆಂದು ಇರುವುದು. ಈಗ ಮಿಶ್ರವಿಧಿಯು ಹೇಗಿರುವುದೆಂಬುದನ್ನು ಕೇಳು ॥೫೮॥ ವೇದದಲ್ಲಿನ ಮಂತ್ರಗಳನ್ನು ಮತ್ತು ತಂತ್ರದಲ್ಲಿನ ವಿಧಿಗಳನ್ನು ಹೀಗೆ ಎರಡೂ ಪ್ರಕಾರಗಳನ್ನು ಮಿಶ್ರಮಾಡಿ ಪೂಜೆಯನ್ನು ಮಾಡಿದರೆ ಅದರ ನಾಮವು "ಮಿಶ್ರಮಾರ್ಗ" ಎಂದಿರುವುದು ॥೫೯॥ ಈ ಮೂರು ಪ್ರಕಾರಗಳ ವಿಧಿಯಿಂದ ನನ್ನ ಯಥಾಸಾಂಗ ಪೂಜೆಯನ್ನು ಮಾಡುವಿಕೆಯು ಇದು ಮೂರು ಪ್ರಕಾರಗಳ ಯಾಗವಾಗಿರುವುದು. ಈ ಯೋಗದಿಂದ ನಾನು ಸಂತುಷ್ಟನಾಗುವೆನು. ಸಪರಿವಾರದೊಂದಿಗೆ ಹಿಂದೆ-ಮುಂದೆ ನಿಂತುಕೊಳ್ಳುವೆನು ॥೬೦॥ ಈ ಪ್ರಕಾರವಾಗಿ ನನ್ನ ಭಜನೆಯು ಮೂರು ಪ್ರಕಾರವಾಗಿರುವುದು. ಯಾರಲ್ಲಿ ಯಾವುದರಲ್ಲಿ ಪೂರ್ಣವಾದ ಶ್ರದ್ಧೆವಿರುವುದೋ, ಆ ವಿಧಿಯಿಂದ ಆತನು ಪೂಜೆಯನ್ನು ಮಾಡಬೇಕು. ಇದನ್ನು ಭಕ್ತಿಭಾವದಿಂದ ಮಾಡಲು ಯಾವುದೇ ವಿಧಿ ಆದಾಗಿರಲಿ ನನಗೆ ಸಮಾನವಾಗಿ ತೃಪ್ತಿಯಾಗುವುದು ॥೬೧॥ ಭಕ್ತಿಭಾವದಿಂದ ನನ್ನ ಪೂಜೆಯನ್ನು ಮಾಡಿದರೆ ಜನಾರ್ದನನಾದ ನಾನು ಅತ್ಯಂತ ತೃಪ್ತನಾಗುವೆನು. ಇದು ಆಗಮೋಕ್ತ ಯಜ್ಞವಾಗಿದ್ದು ಮೂರೂ ಲಕ್ಷಣಗಳು ಸಮಾನವಾಗಿರುವುವು ॥೬೨॥ ವೈದಿಕಾದಿ ಮೂರು ಪ್ರಕಾರಗಳಿಂದ ಪೂಜೆಯನ್ನು ಮಾಡಲು ಶ್ರೀಕೃಷ್ಣನಾದ ನಾನು ತೃಪ್ತನಾಗುವೆನು. ಈಗ ಪೂಜೆಯ ಅಧಿಕಾರದ ಪ್ರಕಾರವನ್ನು ನಾನು ನಿನಗೆ ಹೇಳುವೆನು, ಅದನ್ನು ಕೇಳು ॥೬೩॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರು ದ್ವಿಜನ್ಮರಾಗಿರುವರು. ಅವರ ಅಧಿಕಾರದ ವರ್ಣನೆಯು ಈ ರೀತಿಯಾಗಿರುವುದು. ಬ್ರಾಹ್ಮಣರಿಗೆ ಗರ್ಭದಿಂದ ಎಂಟು ವರ್ಷಗಳಲ್ಲಿ ಉಪನಯವನ್ನು ಮಾಡುವ ಪೂರ್ಣ ಅಧಿಕಾರವಿರುವುದು ॥೬೪॥ ಕ್ಷತ್ರಿಯರಿಗೆ ಹನ್ನೆರಡನೆಯ ವರ್ಷದಲ್ಲಿ ವ್ರತಬಂಧ ಮಾಡುವ ಅಧಿಕಾರವಿರುವುದು ಮತ್ತು ವೈಶ್ಯರಿಗೆ ಹದಿನಾರನೆಯ ವರ್ಷದಲ್ಲಿ ಮೌಂಜೀಬಂಧನದ ಅಧಿಕಾರವಿರುವುದು ॥೬೫॥ ಗಾಯತ್ರಿಯ ಉಪದೇಶವನ್ನು ಪಡೆದು ಉಪನಯನ ವಿಧಿಯಾಗಲು ಅದು ಎರಡನೆಯ ಜನ್ಮವಾಗುವುದು. ಇದಕ್ಕೆ ಸಾವಿತ್ರಿಜನ್ಮ ಎಂದೂ ಕರೆಯುವರು. ಮೂರು ವರ್ಣದ ಜನರು ದ್ವಿಜನ್ಮರಾಗಿರುವದರಿಂದ ವೇದೋಕ್ತ ವಿಧಿಗೆ ಯೋಗ್ಯರಾಗಿರುವರು ॥೬೬॥ ಹೇ ಉದ್ಧವಾ, ಇದು ವೇದೋಕ್ತ ಅಧಿಕಾರ ಲಕ್ಷಣವೆಂದು ಹೆಸರಾಗಿರುವುದು. ಈಗ ಪೂಜಾ ವಿಧಾನಗಳ ಸ್ಥಾನವನ್ನು ಕುರಿತು ಹೇಳುವೆನು, ಅದನ್ನು ಕೇಳು ॥೬೭॥

ಮಾಝೀ ಪೂಜಾಅಧಿಷ್ಠಾನ । ಅಷ್ಟವಿಧ ಪೂಜಾಸ್ಥಾನ । ತ್ಯಾಚೇಹೀ ನಿಜಲಕ್ಷಣ । ಊಣಖೂಣ ತೇ ಐಕ ॥೬೮॥ ಪ್ರಿಯ ''ಪ್ರತಿಮಾ '' ಪೂಜಾಸ್ಥಾನ । ಹೇ ಮಾಝೀ ಪ್ರಥಮ ಅಧಿಷ್ಠಾನ । ಕಾ ಪೃಥ್ವೀತಳೀ ''ಸ್ಥಂಡಿಲೀ'' ಜಾಣ । ಪೂಜಾಸ್ಥಾನ ದುಸರೇ ॥೬೯॥ ''ಅಗ್ನೀಚೇ ತೇಜ'' ಸ್ವರೂಪ ಮಾಝೀ । ತೇ ಪೂಜಾಸ್ಥಾನ ಜಾಣ ತಿಜೇ । ''ಸೂರ್ಯಮಂಡಳೀ'' ಜೇ ಪೂಜಾ ಕೀಜೇ । ತೇ ಚವಥೇ ಮಾಝೀ ಪೂಜಾಸ್ಥಾನ ॥೭೦॥ ''ಉದಕೀ'' ಜೇ ಮಾಝೀ ಪೂಜನ । ತೇ ಪಾಂಚವೇ ಪೂಜಾಸ್ಥಾನ । ''ಹೃದಯೀ'' ಜೇ ಮಾಝೀ ಆವಾಹನ । ತೇ ಪೂಜಾಸ್ಥಾನ ಸಹಾವೇ ॥೭೧॥ ಶಾಲಿಗ್ರಾಮ ಕೇವಳ ಅಚೇತನ । ''ಬ್ರಾಹ್ಮಣ'' ಮಾಝೀ ಸ್ವರೂಪ ಸಚೇತನ । ತೇ ಅಖಂಡತ್ವೇ ಬ್ರಹ್ಮಪೂರ್ಣ । ಪೂಜಾಸನ್ಮಾನ ಷೋಡಶೋಪಚಾರೇ ॥೭೨॥ ಬ್ರಾಹ್ಮಣೀ ಜ್ಯಾಚಾ ಬ್ರಹ್ಮಭಾವೋ । ತೋ ಪರಮ ಭಾಗ್ಯಾಚಾ ಸ್ವಯಮೇವೋ । ಬ್ರಹ್ಮಾದಿಕಾ ಪೂಜ್ಯ ಪಹಾ ಹೋ । ಮೀ ದೇವಾಧಿದೇವೋ ಸ್ವಯೇ ವಂದೀ ॥೭೩॥ ಸಕಳ ಪೂಜ್ಯಾಂಮಾಜೀ ಜಾಣ । ಮುಖ್ಯತ್ವೇ ಪೂಜ್ಯ ಬ್ರಾಹ್ಮಣ । ತೇ ಸಾತವೇ ಪೂಜಾಸ್ಥಾನ। ಉದ್ಧವಾ ಜಾಣ ಅತಿಶ್ರೇಷ್ಠ ॥೭೪॥ ಸಕಳ ಪೂಜ್ಯಾ ಪೂಜ್ಯತ್ವೇ ಪೂಜಾ । ಜೋ ವರಿಷ್ಠಾ ವರಿಷ್ಠ ವೋಜಾ । ಜೋ ವಿನಟಲಾ ಆತ್ಮಾ ಮಾಝಾ । ವಂದ್ಯ ''ಗುರುರಾಜಾ'' ಸರ್ವಾಂಸೀ ॥೭೫॥ ಜ್ಯಾಚೇ ಸದ್ಭಾವೇ ಧರಿತಾ ಚರಣ । ಮೀ ಸುಖಾವೇ ಬ್ರಹ್ಮಪೂರ್ಣ । ಜ್ಯಾಚೇ ಮದ್ರೂಪೇ ಕರಿತಾ ಸ್ತವನ । ಮೀ ಪರಮಾತ್ಮಾ ಜಾಣ ಉಲ್ಹಾಸೇ ॥೭೬॥ ಸದ್ಗುರುಚೇ ನಾಮಸ್ಮರಣ । ನಿರ್ದಳೀ ಭವಭಯ ದಾರುಣ । ನಿವಾರೋನಿ ಜನ್ಮಮರಣ । ನಿವವೀ ಪೂರ್ಣ ನಿಜಬೋಧೇ ॥೭೭॥ ತೋ ಮೀ ಪರಮಾತ್ಮಾ ನಾರಾಯಣ । ಗುರುರೂಪೇ ಪ್ರಕಟೋನಿ ಜಾಣ । ಪರಬ್ರಹ್ಮಾಚೇ ಪೂರ್ಣಪಣ । ಶಿಷ್ಯದ್ವಾರಾ ಸಂಪೂರ್ಣ ಪ್ರಕಾಶಕ ॥೭೮॥ ಬ್ರಹ್ಮಾಚೇ ಪರಬ್ರಹ್ಮಪಣ । ಸದ್ಗುರುಚೇನಿ ಸತ್ಯ ಜಾಣ । ಏವ್ಹಢೇ ಅಗಾಧ ಮಹಿಮಾನ । ಅತಿಗಹನ ಗುರೂಚೇ ॥೭೯॥ ಏವಂ ''ಸದ್ಗುರು'' ಜ್ಞಾನಘನ । ಜೋ ಹರಿಹರಾ ವಂದ್ಯ ಪೂರ್ಣ । ತೋ ಮಾಝೀ ಸದ್ರೂಪ ಅಧಿಷ್ಠಾನ । ಹೇ ಪೂಜಾಸ್ಥಾನ ಆಠವೇ ॥೮೦॥ ಹೇ ಆಠವೇ ಪೂಜಾಸ್ಥಾನ । ಅಖಂಡ ಆಠವೇ ಆಠವಣ । ತೇಣೇ ಆಠವೇ ಸಾಂಗ ಸಂಪೂರ್ಣ । ಉದ್ಧವಾ ಜಾಣ ಮೀ ಪೂಜಿಲೋ ॥೮೧॥

ನನ್ನ ಪೂಜೆಯ ಎಂಟು ಸ್ಥಾನಗಳಿರುವುವು. ಅವುಗಳ ಲಕ್ಷಣಗಳನ್ನು ನಿಜಭಕ್ತನಾದ ನೀನು, ನಾನು ಹೇಳುವುದನ್ನು ಸರಿಯಾಗಿ ಶ್ರವಣವನ್ನು ಮಾಡು ॥೬೮॥ ತಮ್ಮ ತಮ್ಮ ಪ್ರೀತಿಯ ಪ್ರತಿಮೆಯು ಇದು ನನ್ನ ಪೂಜೆಯ ಮೊದಲಿನ ಸ್ಥಾನವಾಗಿರುವುದು. ಭೂಮಿಯ ಮೇಲೆ ಸ್ಥಂಡಿಲ ಅಂದರೆ ಮಣ್ಣಿನಿಂದ ಚೌಕೋನ ಕಟ್ಟೆಯನ್ನು ತಯಾರಿಸಿ ಪೂಜೆಯನ್ನು ಮಾಡುವುದು ಇದು ಎರಡನೆಯ ಸ್ಥಾನವಾಗಿರುವುದು ॥೬೯॥ ಅಗ್ನಿಯ ತೇಜವು ಇದು ನನ್ನ ಸ್ವರೂಪವಾಗಿರುವುದು. ಇದು ನನ್ನ ಪೂಜೆಯ ಮೂರನೆಯ ಸ್ಥಾನವಾಗಿರುವುದು. ಸೂರ್ಯಮಂಡಲದ ಯಾವ ಪೂಜೆಯನ್ನು ಮಾಡುವುದು ಇದು ನನ್ನ ನಾಲ್ಕನೆಯ ಪೂಜಾ ಸ್ಥಾನವಾಗಿರುವುದು ॥೭೦॥ ಜಲದಲ್ಲಿ ನನ್ನ ಪೂಜೆಯನ್ನು ಮಾಡುವುದು ಇದು ಐದನೆಯ ಪೂಜಾಸ್ಥಾನವಾಗಿರುವುದು. ಹೃದಯದಲ್ಲಿ ನನ್ನ ಆವಾಹನ, ಇದು ನನ್ನ ಆರನೆಯ ಪೂಜಾಸ್ಥಾನವಾಗಿರುವುದು ॥೭೧॥ ಶಾಲಿಗ್ರಾಮವು ಇದು ಕೇವಲ ಅಚೇತನ ಸ್ವರೂಪವಾಗಿರುವುದು. ಬ್ರಾಹ್ಮಣರು ನನ್ನ ಸಚೇತನ ಸ್ವರೂಪರಾಗಿರುವರು. ಅವರು ಅಖಂಡವಾಗಿ ಬ್ರಹ್ಮಸ್ವರೂಪದಿಂದ ಪೂರ್ಣರಾಗಿರುವರು. ಆದ್ದರಿಂದ ಅವರನ್ನು ಸನ್ಮಾನಪೂರ್ವಕವಾಗಿ ಷೋಡಶೋಪಚಾರಗಳಿಂದ ಪೂಜೆಯನ್ನು ಮಾಡಬೇಕು ॥೭೨॥ ಬ್ರಾಹ್ಮಣರಲ್ಲಿ ಯಾರ ಬ್ರಹ್ಮಭಾವವಿರುವುದೋ, ನಿಜವಾಗಿಯೂ ಅವರು ಸ್ವಭಾವತವಾಗಿ ಅತ್ಯಂತ ಭಾಗ್ಯವಂತರೆಂದು ತಿಳಿಯಬೇಕು. ಅವರು ಬ್ರಹ್ಮಾದಿಕರಿಗೂ ಕೂಡ ಪೂಜ್ಯರು. ದೇವಾಧಿದೇವನಾದ ನಾನೂ ಕೂಡ ಅವರನ್ನು ವಂದಿಸುವೆನು ॥೭೩॥ ಸರ್ವ ಪೂಜೆಗಳಲ್ಲಿ ಪ್ರಾಮುಖ್ಯವಾಗಿ ಬ್ರಾಹ್ಮಣರು ಪೂಜ್ಯರಾಗಿರುವರು. ಹೇ ಉದ್ಧವನೇ, ಇದೇ ನನ್ನ ಅತ್ಯಂತ ಶ್ರೇಷ್ಠವಾದ ಏಳನೆಯ ಪೂಜಾಸ್ಥಾನವಾಗಿರುವುದು ॥೭೪॥ ಸರ್ವ ಪೂಜೆಗಳಲ್ಲಿ ಪೂಜ್ಯತ್ವದಿಂದ ಪೂಜಿಸುವುದಕ್ಕೆ ಯೋಗ್ಯವಾಗಿರುವ ವರಿಷ್ಠರಲ್ಲಿ ಅತಿ ವರಿಷ್ಠರಾಗಿರುವ, ಯಾರು ಕೇವಲ ನನ್ನ ಆತ್ಮರಾಗಿರುವ ಆ ಗುರುರಾಜನು ಎಲ್ಲಕ್ಕಿಂತಲೂ ಅತ್ಯಂತ ಪೂಜ್ಯನಾಗಿರುವನು ॥೭೫॥ ಆತನ ಚರಣಗಳನ್ನು ಸದ್ಭಾವದಿಂದ ಹಿಡಿದರೆ ಪೂರ್ಣ ಬ್ರಹ್ಮನಾದ ನಾನು ಸುಖಿಯಾಗುವೆನು. ಆತನನ್ನು ಸ್ತುತಿ ಮಾಡಲು ಪರಮಾತ್ಮನಾದ ನನಗೆ ಉಲ್ಹಾಸವಾಗುವುದು ॥೭೬॥ ಸದ್ಗುರುಗಳ ನಾಮಸ್ಮರಣೆಯನ್ನು ಅಂತಃಕರಣಪೂರ್ವಕವಾಗಿ ಮಾಡಿದರೆ ಭಯಂಕರವಾಗಿರುವ ಸಂಸಾರಭಯದ ನಾಶವಾಗುವುದು. ಜನ್ಮಮರಣಗಳನ್ನು ನಿರಸನೆ ಮಾಡಿ ನಿಜಬೋಧೆಯಿಂದ ತೃಪ್ತಿ ತರುವುದು ॥೭೭॥ ನಾರಾಯಣನಾದ ನಾನು ಗುರುರೂಪದಿಂದ ಪ್ರಕಟನಾಗುವೆನು. ನಾನು ಶಿಷ್ಯನ ಮುಖಾಂತರವಾಗಿ ಪರಬ್ರಹ್ಮದ ಪೂರ್ಣತ್ವವನ್ನು ಪ್ರಕಾಶಿತ ಮಾಡುವೆನು ॥೭೮॥ ಬ್ರಹ್ಮದ ಬ್ರಹ್ಮತ್ವವು ಇದು ಸದ್ಗುರುಗಳ ಮುಖಾಂತರವಾಗಿ ಸತ್ಯವಾಗುವುದು. ಸದ್ಗುರುಗಳ ಮಹಿಮೆಯು ಇಷ್ಟೊಂದು ಅಗಾಧವಾಗಿರುವುದು ಹಾಗೂ ಅತ್ಯಂತ ಗಹನವಾಗಿರುವುದು ॥೭೯॥ ಒಟ್ಟಿನಲ್ಲಿ ಸದ್ಗುರುಗಳು ಜ್ಞಾನಘನರಾಗಿರುವರು. ಇವರು ಹರಿಹರರಿಗೂ ಪರಮ ವಂದ್ಯರಾಗಿರುವರು. ಸದ್ಗುರುಗಳು ನನ್ನ ಸದ್ರೂಪ ಅದಿಷ್ಠಾನರಾಗಿ ಇವರು ಎಂಟನೆಯ ಪೂಜಾಸ್ಥಾನರಾಗಿರುವರು ॥೮೦॥ ಹೇ ಉದ್ಧವನೇ, ಹೀಗೆ ಸದ್ಗುರುಗಳ ಪೂಜಾಸ್ಥಾನವು ಎಂಟನೆಯದಾಗಿರುವುದು. ಇದನ್ನು ಅಖಂಡವಾಗಿ ಸ್ಮರಣೆಯಲ್ಲಿಟ್ಟರೆ, ಈ ಸ್ಮರಣೆಯಿಂದಲೇ ನನ್ನ ಯಥಾಸಾಂಗವಾಗಿ ಸಂಪೂರ್ಣ ಪೂಜೆಯಾಗುವುದು ॥೮೧॥

ಏವಂ ಹೀ ಆಠಹೀ ಪೂಜಾಸ್ಥಾನೇ । ತುಜ ಸಾಂಗಿತಲೀ ಸುಲಕ್ಷಣೇ । ತೇಥಲೀ ಪೂಜೇಚೀ ಲಕ್ಷಣೇ । ತೇಹೀ ಭಿನ್ನಪಣೇ ಸಾಂಗೇನ ।।೮೨।। ಸಕಳ ಅಧಿಷ್ಠಾನಾ ಗೋಡಪಣ । ತೇ ಪೂಜನೀ ಹೋಯ ಸಂಪೂರ್ಣ । ತೇ ಪೂಜೇಚೇ ಮುಖ್ಯ ಲಕ್ಷಣ । ನಿಜವರ್ಮ ಖೂಣ ತೇ ಐಕ ।।೮೩।। ಸಾಂಡೂನಿ ಲೋಕರಂಜನವ್ಯಾಪಾರ । ತ್ಯಜೂನಿ ದಾಂಭಿಕ ಉಪಚಾರ । ದವಡೂನಿ ಶಠತ್ವಾಚಾ ವ್ಯವಹಾರ । ಭಜನತತ್ಪರ ಸದ್ಭಾವೇ ।।೮೪।। ಹೀ ಅಕ್ವೌಟ ಮಹಾಪೂಜಾಸ್ಥಾನೇ । ಯೇಥ ''ಅಮಾಯಿಕ'' ಜೇ ಜೇ ಭಜನ । ತೇ ತೇ ಅತಿಗೋಡ ಪೂಜನ । ಉದ್ಧವಾ ಜಾಣ ನಿಶ್ಚಿತ ।।೮೫।। ಏಥ ನಿಷ್ಕಪಟ ಜೇ ಜೇ ಸೇವಾ । ತೇ ತೇ ಅತಿವಲ್ಲಭ ದೇವಾಧಿದೇವಾ । ಆತಾ ಪೂಜಾವಿಧೀ ಆಘವಾ । ಐಕ ಬರವಾ ಸಾಂಗೇನ ।।೮೬।।

ಪೂರ್ವಂ ಸ್ನಾನಂ ಪ್ರಕುರ್ವೀತ ಧೌತದಂತೋಽಂಗಶುದ್ಧಯೇ । ಉಭಯೈರಪಿ ಚ ಸ್ನಾನಂ ಮಂತ್ರೈರ್ಮೃದ್‌ಗ್ರಹಣಾದಿಭಿಃ ।।೧೦।।

ಅರ್ಥ:- ಉಪಾಸಕರು ಪ್ರಾರಂಭದಲ್ಲಿ ಹಲ್ಲುಗಳನ್ನು ತಿಕ್ಕಿಕೊಳ್ಳಬೇಕು. ತದನಂತರ ಶರೀರ ಶುದ್ಧಿಗಾಗಿ ಸ್ನಾನವನ್ನು ಮಾಡಬೇಕು. ಆಮೇಲೆ ವೈದಿಕ ಮತ್ತು ತಾಂತ್ರಿಕ ಎರಡೂ ಪ್ರಕಾರದ ಮಂತ್ರಗಳಿಂದ ಮಣ್ಣು ಹಾಗೂ ಭಸ್ಮ ಇತ್ಯಾದಿಗಳ ಲೇಪವನ್ನು ಶರೀರಕ್ಕೆ ಲೇಪಿಸಿ ಪುನಃ ಸ್ನಾನವನ್ನು ಮಾಡಬೇಕು.

ಮಳತ್ಯಾಗ ದಂತಧಾವನ । ಯಥಾಕಾಳೀ ಕರೂನಿ ಜಾಣ । ದೇಹಶುದ್ಧ್ಯರ್ಥ ಕರಾವೆ ಸ್ನಾನ । ಮೃತ್ತಿಕಾ ಗ್ರಹಣಪೂರ್ವಕ ।।೮೭।। ಐಸೇ ಝಾಲಿಯಾ ಮಳತ್ಯಾಗಸ್ನಾನ । ಮಗ ಕರಾವೇ ಮಂತ್ರಸ್ನಾನ । ವೈದಿಕ ತಾಂತ್ರಿಕ ವಿಧಾನ । ದೀಕ್ಷಾಗ್ರಹಣ ಯಥಾವಿಧೀ ।।೮೮।। ಜೈಸಾ ಸದ್ಗುರುಸಂಪ್ರದಾವೋ । ತೈಸಾ ಚಾಲವಾವಾ ಆಮ್ನಾವೋ । ತ್ಯಾ ವಿಧೀ ಸ್ನಾನ ಕರೂನಿ ಪಾಹಾ ಹೋ । ನಿರ್ಮಳ ಭಾವೋ ಧರಾವಾ ।।೮೯।।

ಸಂಧ್ಯೋಪಾಸ್ತ್ಯಾದಿಕರ್ಮಾಣಿ ವೇದೇ ನಾಚೋದಿತಾನಿ ಮೇ । ಪೂಜಾಂ ತೈಃ ಕಲ್ಪಯೇತ್‌ಸಮ್ಯಕ್‌ಸಂಕಲ್ಪಃ ಕರ್ಮಪಾವನೀಮ್ ।।೧೧।।

ಅರ್ಥ:- ತದನಂತರ ವೇದೋಕ್ತ ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ಮಾಡಬೇಕು. ಆಮೇಲೆ ನನ್ನ ಆರಾಧನೆಯ ಉತ್ತಮ ಸಂಕಲ್ಪವನ್ನು ಮಾಡಿ ವೈದಿಕ ಹಾಗೂ ತಾಂತ್ರಿಕ ವಿಧಿಗಳಿಂದ ಕರ್ಮಬಂಧನದಿಂದ ಬಿಡುಗಡೆಯಾಗಲು ನನ್ನ ಪೂಜೆಯನ್ನು ಮಾಡಬೇಕು.

ವರ್ಣಾಶ್ರಮನಿಜವಿಧೀಂಸೀ । ವೇದೇ ಸಂಧ್ಯಾ ಬೋಲಿಲೀ ಜೈಸೀ । ತೇ ತೇ ವರ್ಣಾಶ್ರಮೀ ಸಂಧ್ಯಾ ಕೈಸೀ । ನಿತ್ಯ ನೈಮಿತ್ತ್ಯೇಸೀ ಕರಾವೀ ।।೯೦।। ವೇದೋಕ್ತ ಆಚರಾವೇ ಸ್ವಕರ್ಮ । ನಿಃಶೇಷ ತ್ಯಾಗಾವೇ ನಿಷಿದ್ಧ ಕಾಮ್ಯ । ಯಾ ನಾಂವ ಶುದ್ಧ ಸ್ವಧರ್ಮ । ಉತ್ತಮೋತ್ತಮ ಅಧಿಕಾರೂ ।।೯೧।।

ಹೀಗೆ ಈ ಎಂಟು ಪೂಜಾಸ್ಥಾನಗಳನ್ನು ನಾನು ಉತ್ತಮ ಲಕ್ಷಣಗಳಿಂದ ನಿನಗೆ ತಿಳಿಸಿರುವೆನು. ಈಗ ಅವುಗಳಲ್ಲಿನ ಪೂಜೆಯ ಭಿನ್ನ ಭಿನ್ನ ಪ್ರಕಾರಗಳನ್ನೂ ಕೂಡ ಹೇಳುವೆನು, ಅದನ್ನು ಕೇಳು ।।೮೨।। ಈ ಸರ್ವ ಅಧಿಷ್ಠಾನಗಳಲ್ಲಿ ನಮಗೆ ಯಾವುದು ಅತ್ಯಂತ ಪ್ರಿಯವಾಗುವುದೋ, ಅದೇ ಪೂಜೆಯ ಮುಖ್ಯ ಲಕ್ಷಣವೆಂದು ತಿಳಿಯಬೇಕು. ಇದೇ ನನ್ನ ನಿಜವಾದ ಮರ್ಮದ ಚಿನ್ಹೆಯಾಗಿರುವುದು ।।೮೩।। ಲೋಕರಂಜನೆಯನ್ನು ಮಾಡುವ ವೃತ್ತಿಯನ್ನು ಬಿಟ್ಟುಬಿಡಬೇಕು. ಡಾಂಭಿಕ ಉಪಚಾರಗಳನ್ನು ತ್ಯಜಿಸಬೇಕು. ಹೃದಯದಲ್ಲಿನ ಬಿಂಕದ ವ್ಯವಹಾರವನ್ನು ಹೊರದಬ್ಬಬೇಕು. ಭಕ್ತಿಭಾವದಿಂದ ನನ್ನ ಪೂಜಾಭಜನೆಯಲ್ಲಿ ತತ್ಪರರಾಗಬೇಕು ।।೮೪।। ಹೇ ಉದ್ಧವಾ, ನಾನು ಹೇಳಿರುವ ಎಂಟು ಪೂಜಾಸ್ಥಾನಗಳಲ್ಲಿ, ಯಾವುದೇ ಪೂಜೆಯಲ್ಲಿ ನಿಷ್ಕಪಟಭಾವದಿಂದ ಪೂಜೆಯನ್ನು ಮಾಡಿದರೆ ಅದು ನಿಶ್ಚಿತವಾಗಿ ಅಮೃತಮಯ ಪೂಜೆಯಾಗುವುದು ।।೮೫।। ಹೀಗೆ ಈ ನಿಷ್ಕಪಟಭಾವದಿಂದ ಯಾವುದೇ ಸೇವೆಯಾಗಲಿ ಅದು ದೇವಾಧಿದೇವನಿಗೆ ಅತ್ಯಂತ ಪ್ರಿಯವಾಗುವುದು. ಈಗ ಪೂಜಾ ವಿಭಾಗದ ಸರ್ವ ವಿಧಿಗಳನ್ನು ಕುರಿತು ಹೇಳುವೆನು. ಅದನ್ನು ಚೆನ್ನಾಗಿ ಆಲಿಸು ।।೮೬।।

ಮಲವಿಸರ್ಜನೆಯ ನಂತರ ದಂತಧಾವನೆಯನ್ನು ಮಾಡಿಕೊಂಡು ಸ್ವಚ್ಛವಾಗಿ ಮುಖವನ್ನು ತೊಳೆದುಕೊಳ್ಳಬೇಕು. ಪ್ರಾತಃಕಾಲದಲ್ಲಿ ದೇಹಶುದ್ಧಿಗಾಗಿ ಮೃತ್ತಿಕಾಗ್ರಹಣ ಪೂರ್ವಕವಾಗಿ ಸ್ನಾನವನ್ನು ಮಾಡಬೇಕು ।।೮೭।। ಈ ಪ್ರಕಾರವಾಗಿ ಶುಚಿರ್ಭೂತರಾಗಿ ತದನಂತರ ಮಂತ್ರಯುಕ್ತವಾಗಿ ಸ್ನಾನವನ್ನು ಮಾಡಬೇಕು. ಆಮೇಲೆ ವೈದಿಕ, ತಾಂತ್ರಿಕ ವಿಧಿಗಳಿಂದ ದೀಕ್ಷಾಗ್ರಹಣವನ್ನು ಮಾಡಬೇಕು ।।೮೮।। ಇದಾದನಂತರ ಸದ್ಗುರುಗಳ ಯಾವ ಸಾಂಪ್ರದಾಯವಿರುವುದೋ, ಅದರಂತೆ ಪರಂಪರಾಗತ ಆಚರಣೆಯನ್ನು ಮುಂದುವರೆಸಬೇಕು. ಯಥಾವಿಧಿ ಸ್ನಾನವನ್ನು ಮಾಡಿ ಮನವನ್ನೂ ಕೂಡ ಪರಮ ಪವಿತ್ರವನ್ನಾಗಿ ಮಾಡಬೇಕು ।।೮೯।।

ತನ್ನ ವರ್ಣಾಶ್ರಮವಿಧಿ ತಕ್ಕಂತೆ ವೇದದಲ್ಲಿ ಹೇಳಿದ ರೀತಿಯಲ್ಲಿ ಸಂಧ್ಯಾ ಕರ್ಮವನ್ನು ಆ ಯಾವ ವರ್ಣಾಶ್ರಮದಲ್ಲಿ ನಿತ್ಯ-ನೈಮಿತ್ತಿಕ ಕರ್ಮ ಸಹ ಹೀಗೆ ಸಂಧ್ಯಾ ಆಚರಿಸಬೇಕು ।।೯೦।। ವೇದದಲ್ಲಿ ವರ್ಣನೆಯನ್ನು ಮಾಡಿದ ಪ್ರಕಾರದಂತೆ ಸ್ವಧರ್ಮದ ಆಚರಣೆಯನ್ನು ಮಾಡಬೇಕು. ನಿಷಿದ್ಧ ಕರ್ಮಗಳನ್ನು ಹಾಗೂ ಕಾಮ್ಯ ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಹೀಗೆ ನಡೆಯುವ ನಾಮವೇ ಶುದ್ಧ ಸ್ವಧರ್ಮವಾಗಿರುವುದು. ಇದೇ ಉತ್ತಮೋತ್ತಮ ಅಧಿಕಾರವಾಗಿರುವುದು ।।೯೧।।

ವೇದೋಕ್ತ ಸಾಂಡಣೇ ಸ್ವಕರ್ಮ । ಹಾಚಿ ಮುಖ್ಯತ್ವೇ ಅತಿಅಧರ್ಮ । ಹಾತಾ ಆಲಿಯಾ ಪರಬ್ರಹ್ಮ । ನ ತ್ಯಾಗಿತಾ ಕರ್ಮ ಸ್ವಯೇ ರಾಹೇ ।।೯೨।। ಸ್ವಯೇ ಸ್ವಧರ್ಮ ಜೋ ಸಾಂಡಣೇ । ತೇಚಿ ಅಧರ್ಮಾಚೇ ಮುಖ್ಯ ಠಾಣೇ । ಸ್ವಧರ್ಮೇ ಚಿತ್ತಶುದ್ಧೀ ಸಾಧಣೇ । ಯಾಲಾಗೀ ತ್ಯಾಗಣೇ ಅಹಂತಾ ।।೯೩।। ತೇಥೇ ಸ್ವಧರ್ಮಕರ್ಮ ಆಚರತಾ । ಐಸಾ ಭಾವ ಉಪಜೇ ಚಿತ್ತಾ । ''ಮೀ ನವ್ಹೇ ಏಥ ಕರ್ಮಕರ್ತಾ । ಫಳಭೋಕ್ತಾ ಮೀ ನವ್ಹೇ''।।೯೪।। ದೇಹ ಜಡ ಮೂಢ ಅಚೇತನ । ತ್ಯಾಸೀ ಚೇತವೀ ಜನೀ ಜನಾರ್ದನ । ತೇಥ ಮಾಝೇ ಮೀಪಣ ಕರ್ತೇಪಣ । ಸರ್ವಥಾ ಜಾಣ ರಿಘೇನಾ ।।೯೫।। ಯಾ ಬುದ್ಧೀ ಜೇ ಕರ್ಮಾಚರಣ । ತೇ ಭಾವಾರ್ಥೇ ಭಾವೀ ಬ್ರಹ್ಮಾರ್ಪಣ । ಯಾಪರೀ ನಿರಭಿಮಾನ । ಮಾಝೇ ಉಪಾಸನ ಸಾಧಕಾ ।।೯೬।। ಮಾಝೀ ಪ್ರತಿಮಾ ಪೂಜಾವಿಧಾನ । ತೇ ಪ್ರಥಮ ಮಾಝೇ ಪೂಜಾಸ್ಥಾನ । ತೇ ಪ್ರತಿಮಾಕ್ರಿಯಾಲಕ್ಷಣ । ಐಕ ಸಂಪೂರ್ಣ ಉದ್ಧವಾ ।।೯೭।।

ಶೈಲೀ ದಾರುಮಯೀ ತಾಹೀ ಲೇಪ್ಯಾ ಲೇಖ್ಯಾ ಚ ಸೈಕತೀ । ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ।।೧೨।।

ಅರ್ಥ:- ಮೂರ್ತಿಗಳು ಎಂಟು ಪ್ರಕಾರಗಳಾಗಿರುವುವು. ಕಲ್ಲಿನ, ಕಾಷ್ಠದ, ಧಾತುವಿನ, ಮಣ್ಣಿನ, ಚಿತ್ರಮಯ, ಉಸುಕಿನ, ಮನೋಮಯ ಮತ್ತು ಮಣಿಮಯ.

ಅಷ್ಟಧಾ ಪ್ರತಿಮಾಸ್ಥಿತೀ । ಜ್ಯಾ ಪೂಜಿತಾ ಸದ್ಯಃಶ್ರೇಯ ದೇತೀ । ಐಸಿಯಾ ಪ್ರತಿಮಾಂಚೀ ಜಾತೀ । ಐಕ ತುಜಪ್ರತಿ ಸಾಂಗೇನ ।।೯೮।। ಗಂಡಕ್ಯಾದಿ ''ಶಿಳಾಮೂರ್ತೀ'' ಕಾ ದಾರುಮಾಂದಾರ ಬ್ರಹ್ಮ ''ಕಾಷ್ಠಮೂರ್ತೀ'' । ಅಥವಾ ಸುವರ್ಣಾದಿ ''ಧಾತುಮೂರ್ತೀ ಸದ್ಯಃ ಫಳತೀ ಸಾಧಕಾ ।।೯೯।। ಮೃತಿಕಾಕಾಪಡಕೀಟಣಮೂರ್ತೀ । ಯಾ ನಾಂವ ''ಲೇಪ್ಯಾ'' ಮ್ಹಣಿಜೇತೀ । ಕಾ ಸ್ಥಂಡಿಲೀ ಲಿಹಿಲ್ಯಾ ಅತಿಪ್ರೀತೀ । ತ್ಯಾ ''ಲೇಖ್ಯಾ'' ಮೂರ್ತೀ ಪೂಜಕಾ ।।೧೦೦।। ವಾಳುವೇಚೀ ಜೇ ಕೇಲೀ ಮೂರ್ತೀ । ತೀ ನಾಂವ ''ಸಿಕತಾಮೂರ್ತೀ'' ಮ್ಹಣತೀ । ತೇಹೀ ಪೂಜ್ಯ ಗಾ ನಿಶ್ಚಿತೀ । ಸುವರ್ಣಮೂರ್ತೀಸಮಾನ ।।೧೦೧।। ಮೂರ್ತಿ ''ರತ್ನಮಯೀ'' ಸೋಜ್ಜ್ವಳ । ಹಿರಾ ಮರಕತ ಇಂದ್ರನೀಳ । ಪದ್ಮರಾಗ ಮುಕ್ತಾಫಳ । ಯಾ ಮೂರ್ತಿ ಕೇವಳ ಅತಿಪೂಜ್ಯ ।।೧೦೨।। ಮೂರ್ತೀಮಾಜೀ ಅತಿಪ್ರಾಧಾನ್ಯ । ''ಮನೋಮಯೀ'' ಮೂರ್ತೀ ಪಾವನ । ಜಿಚೇ ಕರಿತಾ ಉಪಾಸನ । ಸಮಾಧಾನ ಸಾಧಕಾ।।೧೦೩।। ತೇಚಿ ಪ್ರತಿಮಾಪೂಜಾವಿಧಾನ । ಸ್ಥಾವರಜಂಗಮಲಕ್ಷಣ । ತೇಹೀ ಅರ್ಥೀಚೇ ನಿರೂಪಣ । ವಿಶದ ಶ್ರೀಕೃಷ್ಣ ಸಾಂಗತ ।।೧೦೪।।

ವೇದವು ಹೇಳಿದಂತೆ ಸ್ವಕರ್ಮವನ್ನು ಬಿಟ್ಟು ಬಿಡುವುದು ಇದುವೇ ಮುಖ್ಯವಾಗಿ ಅಧರ್ಮವಾಗಿರುವುದು. ಒಂದು ಸಾರೆ ಪರಬ್ರಹ್ಮದ ಪ್ರಾಪ್ತಿಯಾಯಿತೆಂದರೆ, ಆಗ ಕರ್ಮಗಳನ್ನು ತ್ಯಾಗ ಮಾಡಬೇಕಾಗುವುದಿಲ್ಲ. ಆ ಕರ್ಮಗಳು ತಮ್ಮಷ್ಟಕ್ಕೆ ತಾವೇ ಇಲ್ಲದಾಗುವುವು ।।೯೨।। ಸ್ವತಃ ತಾನಾಗಿಯೇ ಸ್ವಧರ್ಮದ ತ್ಯಾಗ ಮಾಡುವಿಕೆಯು ಇದು ಅಧರ್ಮದ ಮುಖ್ಯಸ್ಥಾನವಾಗುವುದು. ಸ್ವಧರ್ಮದಿಂದ ಚಿತ್ತಶುದ್ಧಿಯನ್ನು ಮಾಡಬೇಕಾಗಿರುವುದು. ಆದ್ದರಿಂದ ಇದಕ್ಕಾಗಿ ಅಹಂಕಾರವನ್ನು ಬಿಡಬೇಕಾಗುವುದು ।।೯೩।। ಈ ರೀತಿಯಾಗಿ ಸ್ವಧರ್ಮಕರ್ಮವನ್ನು ಮಾಡುತ್ತಿದ್ದರೆ ಮನದಲ್ಲಿ ನಾನು ಕರ್ಮಕರ್ತನು ಅಲ್ಲ ಮತ್ತು ಫಲಭೋಕ್ತಾನು ಅಲ್ಲವೆಂಬ ಭಾವನೆಯು ನಿರ್ಮಾಣವಾಗುವುದು ।।೯೪।। ದೇಹವು ಇದು ಜಡ, ಮೂಢವಾಗಿದ್ದು ಅಚೇತನವಾಗಿರುವುದು. ಅದಕ್ಕೆ ಜನೀ ಜನಾರ್ದನನು ಚೇತನೆಯನ್ನು ಕೊಡುತ್ತಿರುವನು. ಅಂದಮೇಲೆ ಅಲ್ಲಿ ನಾನು, ನನ್ನದು, ಕರ್ತೃತ್ವ ಇವು ಸರ್ವಥಾ ಪ್ರವೇಶ ಮಾಡಲಾರವು ।।೯೫।। ಇಂತಹ ಬುದ್ಧಿಯೊಂದಿಗೆ ಮಾಡಿದ ಕರ್ಮಗಳ ಆಚರಣೆಯು ಭಕ್ತಿಕಾರಣದಿಂದ ಬ್ರಹ್ಮಾರ್ಪಣೆಯಾಗುವುದು. ಈ ಪ್ರಕಾರವಾಗಿ ಸಾಧಕರಿಗೆ ನನ್ನ ನಿರಭಿಮಾನದ ಉಪಾಸನೆಯು ಸಾಧಿಸುವುದು ।।೯೬।। ನನ್ನ ಪ್ರತಿಮೆಯ ಪೂಜಾವಿಧಾನವೇ ನನ್ನ ಪ್ರಥಮ ಪೂಜಾಸ್ಥಾನವಾಗಿರುವುದು. ಹೇ ಉದ್ಧವಾ, ಈ ಪ್ರತಿಮೆಗಳನ್ನು ಯಾವುದರಿಂದ ಸಿದ್ಧಗೊಳಿಸಬೇಕೆಂಬ ಇದರ ಸರ್ವ ಲಕ್ಷಣಗಳನ್ನು ನಿನಗೆ ಹೇಳುವೆನು, ಅದನ್ನು ಕೇಳು ।।೯೭।।

ಪ್ರತಿಮೆಗಳು ಎಂಟು ಪ್ರಕಾರಗಳಾಗಿರುವುವು. ಇವುಗಳನ್ನು ಪೂಜಿಸುತ್ತಲೇ ಕೂಡಲೇ ಕಲ್ಯಾಣವಾಗುವುದು. ಹೀಗೆ ಈ ಪ್ರತಿಮೆಗಳಿರುವುವು. ಅವುಗಳ ಜಾತಿ ಕುರಿತು ತಿಳಿಸುವೆ, ಕೇಳು ।।೯೮।। ಗಂಡಕೀ ನದಿಯಲ್ಲಿನ ಶಾಲಿಗ್ರಾಮ ಇತ್ಯಾದಿ ಶಿಲಾಮೂರ್ತಿಗಳು, ದೇವದಾರ, ಮಂದಾರ ಅಥವಾ ಬ್ರಹ್ಮಕಾಷ್ಠ ಇತ್ಯಾದಿ ಕಾಷ್ಠಗಳ ಮೂರ್ತಿಗಳು, ಸುವರ್ಣಾದಿ ಧಾತುಗಳ ಮೂರ್ತಿಗಳು ಇವು ಸಾಧಕರಿಗೆ ತತ್ಕಾಲದಲ್ಲಿ ಫಲಗಳನ್ನು ಕೊಡುವುವು ।।೯೯।। ಅದರಂತೆ ಮಣ್ಣು, ವಸ್ತ್ರ, ಬಣ್ಣ ಇವುಗಳ ಮೂರ್ತಿಗಳೂ ಕೂಡ ತಯಾರಿಸಲ್ಪಡುವುವು. ಇವುಗಳಿಗೆ ''ಲೇಪ್ಯಾ'' ಎಂದು ಹೇಳುವರು. ಯಾರಾದರೂ ಭಕ್ತಿಭಾವದಿಂದ ಬರೆದ ಚಿತ್ರಗಳಿಗೆ ಲೇಖ್ಯ ಮೂರ್ತಿ ಎಂದು ಕರೆಯುವರು ।।೧೦೦।। ಉಸುಕಿನಿಂದಲೂ ಕೂಡ ಮೂರ್ತಿಯನ್ನು ಸಿದ್ಧಗೊಳಿಸುವರು. ಅದಕ್ಕೆ ಸಿಕತಾಮೂರ್ತಿ ಎಂದು ಹೇಳುವರು. ಅದೂ ಸಹ ಬಂಗಾರದ ಮೂರ್ತಿಯಂತೆ ಪೂಜ್ಯವಾಗಿರುವುದು ।।೧೦೧।। ರತ್ನದ ಸುಂದರ ಮೂರ್ತಿ, ವಜ್ರದ, ಮರಕತ ಇಂದ್ರನೀಲ, ಪದ್ಮರಾಗ ಅಥವಾ ಮುತ್ತಿನ ಮೂರ್ತಿ ಇವು ಅತಿಶಯವಾಗಿ ಪೂಜ್ಯವಾಗಿರುವುವು ।।೧೦೨।। ಸರ್ವ ಪ್ರಕಾರದ ಮೂರ್ತಿಗಳಲ್ಲಿ ಅತಿಶಯವಾಗಿ ಶ್ರೇಷ್ಠವಾಗಿರುವ ಮನೋಮಯ ಮೂರ್ತಿಯು ಪಾವನವಾಗಿರುವುದು. ಇದರ ಉಪಾಸನೆಯನ್ನು ಮಾಡುವುದರಿಂದ ಸಾಧಕರಿಗೆ ಸಮಾಧಾನವು ಸಿಗುವುದು ।।೧೦೩।। ಈಗ ಈ ಯಾವ ಮೂರ್ತಿಗಳ ಪೂಜಾವಿಧಾನಗಳನ್ನು ಮತ್ತು ಚಲ, ಅಚಲ ಲಕ್ಷಣಗಳನ್ನು ಕುರಿತಾದ ನಿರೂಪಣೆಯನ್ನು ಶ್ರೀಕೃಷ್ಣನು ಸ್ಪಷ್ಟವಾಗಿ ಮಾಡುತ್ತಿರುವನು ।।೧೦೪।।

ಚಲಾಚಲೇತಿ ದ್ವಿವಿಧಾ ಪ್ರತಿಷ್ಠಾ ಜೀವಮಂದಿರಮ್ । ಉದ್ವಾಸಾವಾಹನೇ ನ ಸ್ತ: ಸ್ಥಿರಾಯಾಮುದ್ಧವಾರ್ಚನೇ ।।೧೩।।

ಅರ್ಥ:- ಚಲ ಮತ್ತು ಅಚಲ ಹೀಗೆ ಎರಡು ಪ್ರಕಾರದ ಪ್ರತಿಮೆಗಳು ಇವು ಭಗವಂತನ ಮಂದಿರವಾಗಿರುವುವು. ಹೇ ಉದ್ಧವಾ, ಸ್ಥಿರ ಪ್ರತಿಮೆಗಳಲ್ಲಿ ಪೂಜೆಯನ್ನು ಮಾಡಬೇಕಾದರೆ ಆವಾಹನೆ ಮತ್ತು ವಿಸರ್ಜನೆ ಮಾಡಕೂಡದು.

ಅಚೇತನಾಚೇತನ ಪ್ರಕಾರ । ಜಡಾತೇ ಜೀವವೀ ಸಾಚಾರ । ''ಜೀವ'' ಶಬ್ದೇ ಚಿನ್ಮಾತ್ರ । ಮುಖ್ಯ ಪರಮೇಶ್ವರ ಬೋಲಿಜೇ ।।೧೦೫।। ಭಕ್ತಭಾವಾರ್ಥೇ ಸಾಚಾರ । ತ್ಯಾ ಜೀವಾಚೇ ನಿಜಮಂದಿರ । ಪ್ರತಿಮಾ ಜಂಗಮಸ್ಥಾವರ । ಆಗಮಶಾಸ್ತ್ರಸಂಮತೇ ।।೧೦೬।। ತೇಥೇ ಸ್ಥಾವರಮೂರ್ತಿ ಪೂಜನ । ಸಾಧಕೇ ಕರಿತಾ ಆಪಣ । ನ ಲಗೇ ಆವಾಹನವಿಸರ್ಜನ । ತೇಥ ಅಧಿಷ್ಠಾನ ಸ್ವಯಂಭ ।।೧೦೭।।

ಅಸ್ಥಿರಾಯಾಂ ವಿಕಲ್ಪ: ಸ್ಯಾತ್ ಸ್ಥಂಡಿಲೇ ತು ಭವೇದ್'ದ್ವಯಮ್ । ಸ್ನಪನಂ ತ್ವವಿಲೇಪ್ಯಾಯಾಮನ್ಯತ್ರ ಪರಿಮಾರ್ಜನಮ್ ।।೧೪।।

ಅರ್ಥ:- ಚಲ ಪ್ರತಿಮಾ ಸಂಬಂಧದಲ್ಲಿ ವಿಕಲ್ಪವಿರುವುದು. ಶಾಲಿಗ್ರಾಮದಲ್ಲಿ ಆವಾಹನ ಮತ್ತು ವಿಸರ್ಜನೆ ಮಾಡಕೂಡದು. ಮಳಲಿನ ಪ್ರತಿಮೆಯಲ್ಲಿ ಮಾಡಬೇಕು. ಸ್ಥಾಂಡಿಲಾದಲ್ಲಿ ಇವು ಎರಡೂ ಆಗುವುವು. ಮೃಣ್ಮಯೀ ಮತ್ತು ಲೇಪ್ಯಾ ಇವುಗಳನ್ನು ಬಿಟ್ಟು ಇತರ ಪ್ರತಿಮೆಗಳಿಗೆ ಸ್ನಾನ ಮಾಡಿಸಬೇಕು. ವಿಲೇಪ್ಯಾ ಮತ್ತು ಲೇಪ್ಯಾ ಪ್ರತಿಮೆಗಳಿಗೆ ಕೇವಲ ಮಾರ್ಜನ ಮಾಡಬೇಕು.

ಜಂಗಮ ಪ್ರತಿಮಾಂಚ್ಯಾ ಠಾಯೀ । ಆವಾಹನ ವಿಸರ್ಜನ ಪಾಹೀ । ಏಕೀ ಆಹೇ ಏಕೀ ನಾಹೀ । ಐಕ ತೇಹೀ ವಿಭಾಗ ।।೧೦೮।। ಶಾಲಗ್ರಾಮಮೂರ್ತೀಸೀ ಜಾಣ । ಸ್ವಯಂಭ ಮಾಝೇ ಅಧಿಷ್ಠಾನ । ತೇಥ ಆವಾಹನ ವಿಸರ್ಜನ । ಸರ್ವಥಾ ಜಾಣ ಲಾಗೇನಾ ।।೧೦೯।। ಶಾಲಗ್ರಾಮಾಚಾ ಕುಟಕಾ । ಜ್ಯಾಚೇ ಪೂಜೇಸೀ ಆಹೇ ಫುಟಕಾ । ತೇಥ ಪರಮಾತ್ಮಾ ನಿಜಸಖಾ । ಸರ್ವದಾ ದೇಖಾ ನಾಂದತ ।।೧೧೦।। ಇತರ ಮೂರ್ತೀ ಜಂಗಮಾಜಾಣ । ತೇಥ ಆವಾಹನವಿಸರ್ಜನ । ಸಾಕ್ಷೇಪೇ ಕರಾವೇ ಆಪಣ । ಹೇ ವಿಧಿವಿಧಾನ ಆಗಮೋಕ್ತ ।।೧೧೧।। ಸ್ಥಂಡಿಲೀ ಮೂರ್ತೀ ಆವಾಹನ । ಸವೇಚಿ ಪೂಜಾಂತೀ ವಿಸರ್ಜನ । ಹೇ ಉಭಯ ಭಾವನಾವಿಧಾನ । ಸ್ಥಂಡಿಲೀ ಜಾಣ ಆವಶ್ಯಕ ।।೧೧೨।। ಆಪಲೇ ಹೃದಯಿಂಚಾ ಚಿದ್'ಘನ । ಮೂರ್ತೀಮಾಜೀ ಕೀಜೇ ಆವಾಹನ । ಪೂಜಾಂತೀ ಕರೂನಿ ವಿಸರ್ಜನ । ದೇವ ಹೃದಯೀ ಜಾಣ ಠೇವಾವಾ ।।೧೧೩।। ಏಥ ಆಪಣಚಿ ಬ್ರಹ್ಮ ಪರಿಪೂರ್ಣ । ಹೇಚಿ ವ್ಹಾವಯಾ ನಿಜಸ್ಮರಣ । ಆವಾಹನ ವಿಸರ್ಜನೇ ಜಾಣ । ನಿಜಾತ್ಮ ಆಠವಣ ಸಾಧಕಾ ।।೧೧೪।। ಹಾ ಆಗಮೀಂಚಾ ನಿಜಾತ್ಮಭಾವೋ । ಆಪಣಚಿ ಆಪಲಾ ದೇವೋ । ಆಪಲಾ ಆಪಣ ಪೂಜಕ ಪಹಾ ಹೋ । ಹಾ ನಿಜಾತ್ಮ - ಆಠವೋ ನಿಜಪೂಜೇ ।।೧೧೫।।

ಚೇತನ, ಅಚೇತನಗಳ ಪ್ರಕಾರವು ಹೀಗಿರುವುದು. ಯಾವ ಜ್ಞಾನಸ್ವರೂಪ ಜೀವ ಶಬ್ದದಿಂದ ಜಡಕ್ಕೆ ಸಜೀವವನ್ನಾಗಿ ಮಾಡಲು ಬರುವುದು. ಅದಕ್ಕೆ ಮುಖ್ಯವಾಗಿ ಪರಮೇಶ್ವರ ಎಂದು ಹೇಳುವರು ।।೧೦೫।। ಶುದ್ಧ ಭಕ್ತಿಭಾವದಿಂದ ನಿರ್ಮಾಣ ಮಾಡಿದ ಜೀವದ ನಿಜಮಂದಿರವೆಂದರೆ ಆಗಮಶಾಸ್ತ್ರದ ಸಮ್ಮತಿಯಂತೆ ಸ್ಥಾಪನೆಯನ್ನು ಮಾಡಿರುವುದಕ್ಕೆ ಸ್ಥಾವರ ಜಂಗಮ ಪ್ರತಿಮೆ ಎಂದು ತಿಳಿಯಬೇಕು ।।೧೦೬।। ಸಾಧಕರು ಸ್ಥಾವರ ಮೂರ್ತಿಯ ಪೂಜೆಯನ್ನು ಮಾಡಬೇಕಾದರೆ ಅದಕ್ಕಾಗಿ ಆವಾಹನ ಮತ್ತು ವಿಸರ್ಜನೆಯನ್ನು ಮಾಡಬೇಕಾಗುವುದಿಲ್ಲ. ಕಾರಣವೇನೆಂದರೆ ಆ ಮೂರ್ತಿಯಲ್ಲಿ ಸ್ವಯಂಭೂವೇ ಅಧಿಷ್ಠಾನವಾಗಿರುವುದು ।।೧೦೭।।

ಶಾಲಿಗ್ರಾಮಾದಿ ಜಂಗಮ ಪ್ರತಿಮೆಗಳಲ್ಲಿ ಕೆಲವು ಪ್ರತಿಮೆಗಳಿಗೆ ಆವಾಹನ, ವಿಸರ್ಜನೆವಿರುವುದು. ಕೆಲವು ಪ್ರತಿಮೆಗಳಿಗೆ ಇರುವುದಿಲ್ಲ. ಅದನ್ನೂ ಕೂಡ ವಿವರಿಸಿ ಹೇಳುವೆನು, ಕೇಳು ।।೧೦೮।। ಶಾಲಿಗ್ರಾಮದ ಮೂರ್ತಿಯಲ್ಲಿ ನನ್ನ ಸ್ವಯಂಭೂ ಅಧಿಷ್ಠಾನವಿರುವುದು. ಆದ್ದರಿಂದ ಶಾಲಿಗ್ರಾಮಕ್ಕಾಗಿ ಆವಾಹನ ಮತ್ತು ವಿಸರ್ಜನೆಗಳ ಅವಶ್ಯಕತೆವಿರುವುದಿಲ್ಲ ।।೧೦೯।। ಶಾಲಿಗ್ರಾಮದ ತುಂಡಾದ ತುಕಡಿ ಇದ್ದರೂ ಕೂಡ ಅದು ಪೂಜೆಗೆ ಬರುವುದು. ಏಕೆಂದರೆ ಅದರಲ್ಲಿ ನಿಜಸುಖನಾಗಿರುವ ಪರಮಾತ್ಮನು ಯಾವಾಗಲೂ ಇರುವನು, ಇದನ್ನು ತಿಳಿಯಬೇಕು ।।೧೧೦।। ಇದನ್ನು ಬಿಟ್ಟು ಇತರ ಜಂಗಮ ಅಂದರೆ ಚಲಮೂರ್ತಿಗಳಿರುವುವು. ಅವುಗಳಿಗೆ ಆವಾಹನ ಮತ್ತು ವಿಸರ್ಜನೆ ಮಾಡಬೇಕಾಗುವುದು. ಅದನ್ನು ಶ್ರದ್ಧೆ ದಕ್ಷತೆಯೊಂದಿಗೆ ಮಾಡಬೇಕು. ಇದುವೇ ಆಗಮೋಕ್ತ ವಿಧಿವಿಧಾನವಾಗಿರುವುದು ।।೧೧೧।। ಸ್ಥಂಡಿಲದಲ್ಲಿ ತೆಗೆದ ಮೂರ್ತಿಗಾಗಿ ಆವಾಹನವನ್ನು ಮಾಡಬೇಕು.ಮತ್ತು ಪೂಜೆಯು ಮುಗಿದಾಕ್ಷಣವೇ ವಿಸರ್ಜನೆಯನ್ನು ಮಾಡಬೇಕು. ಈ ಎರಡನ್ನು ಭಾವನಾವಿಧಿಗಾಗಿ ಅವಶ್ಯ ಮಾಡಬೇಕು ।।೧೧೨।। ತನ್ನ ಹೃದಯದಲ್ಲಿನ ಚಿದ್'ಘನ ಪರಮಾತ್ಮನಲ್ಲಿ ಮೂರ್ತಿಯ ಆವಾಹನೆಯನ್ನು ಮಾಡಬೇಕು ಮತ್ತು ಪೂಜೆಯು ಮುಗಿದ ನಂತರ ಅದರ ವಿಸರ್ಜನೆಯನ್ನು ಮಾಡಿ ದೇವರನ್ನು ಪುನ: ತನ್ನ ಹೃದಯದಲ್ಲಿ ಸ್ಥಾಪಿಸಿಕೊಳ್ಳಬೇಕು ।।೧೧೩।। ಇದರಲ್ಲಿ ತಾನು ಪರಿಪೂರ್ಣ ಬ್ರಹ್ಮನಾಗಿರುವೆನು ಎಂಬ ಸ್ಮರಣಕ್ಕಾಗಿ ಆವಾಹನ-ವಿಸರ್ಜನೆಯನ್ನು ಮಾಡಬೇಕಾಗಿರುವುದು. ಇದರಿಂದ ಸಾಧಕರಿಗೆ ಆತ್ಮಸ್ವರೂಪದ ಸ್ಮರಣೆಯಾಗುವುದು ।।೧೧೪।। ಆಗಮಶಾಸ್ತ್ರದಲ್ಲಿ ಇದೇ ರಹಸ್ಯವು ಅಡಗಿರುವುದು. ನಾವೇ ನಮ್ಮ ದೇವರಾಗಿರುವೆವು ಮತ್ತು ನಾವೇ ನಮ್ಮ ಪೂಜಕರಾಗಿರುವೆವು. ಹೀಗೆ ನಮ್ಮ ಪೂಜೆಯಲ್ಲಿ ನಮ್ಮದೇ ಆತ್ಮಸ್ವರೂಪದ ಪರಿಚಯವಾಗುವುದು ।।೧೧೫।।

''ದೇವ ಹೋಊನಿ ದೇವ ಪೂಜಿಜೇ'' । ಹೇ ನಿಜಾತ್ಮತಾ ಗೋಡ ಖಾಜೇ । ಉಪಾಸನಾಕಾಂಡ - ವ್ಯಾಜೇ । ಉದ್ಧವಾಸೀ ದೀಜೇ ಶ್ರೀಕೃಷ್ಣೇ ।।೧೧೬।। ಹೇ ನಿಜಾತ್ಮತಾ ನಿಜಗೋಡೀ । ಪ್ರತಿಪದೀ ನ ಲಭತಾ ರೋಕಡೀ । ಉಪಾಸನಾತಡಾತೋಡೀ । ಕೋಣ ಕೋರಡೀ ಸೋಶೀಲ ।।೧೧೭।। ಹೇ ಆಗಮೀಂಚೇ ನಿಜಗುಹ್ಯ ಜಾಣ । ಪ್ರತಿಪದೀ ಸುಖಸಂಪನ್ನ । ಸಾಧಕ ಸ್ವಯೇ ಹೋತೀ ಚಿದ್ಘನ । ತೇ ಹೇ ಉಪಾಸನಾ ಉದ್ಧವಾ ।।೧೧೮।। ಐಸೇ ಐಕತಾ ಕೃಷ್ಣವಚನ । ಉದ್ಧವ ಸ್ವಾನಂದೇ ಝಾಲಾ ಪೂರ್ಣ । ಧಾಂವೋನೀ ಧರಿಲೇ ಶ್ರೀಕೃಷ್ಣಚರಣ । ಮ್ಹಣೇ ಸಮೂಳ ನಿರೂಪಣ ಮಜ ಸಾಂಗ ।।೧೧೯।। ತಂವ ದೇವ ಮ್ಹಣೇ ಸ್ಥಿರ ರಾಹೇ । ಜೇ ಹೇ ಆಗಮೋಕ್ತ ಗುಹ್ಯ ಆಹೇ । ತೇ ಮಾಝೇ ಕೃಪೇವೀಣ ಪಾಹೇ । ಪ್ರಾಪ್ತ ನೋಹೇ ಸಾಧಕಾ ।।೧೨೦।। ಆಗಮೋಕ್ತ ಗುಹ್ಯ ಗಹನ । ಅಸೋ ಹೇ ಮಾಝೇ ಗುಪ್ತಧನ । ತುವಾ ಪುಶಿಲೇ ಪೂಜಾವಿಧಾನ । ಐಕ ಸಾವಧಾನ ಉದ್ಧವಾ ।।೧೨೧।। ಲೇಪ್ಯಾ ಲೇಖ್ಯಾ ಜ್ಯಾ ಮೂರ್ತಿ ಜಾಣ । ತ್ಯಾಂಸೀ ಕರಾವೇನಾ ಸ್ನಾನ । ಇತರಾ ಮೂರ್ತೀಸೀ ಸ್ನಪನ । ಯಥಾವಿಧಾನ ಕರಾವೇ ।।೧೨೨।।

ದ್ರವ್ಯೈಃ ಪ್ರಸಿದ್ಧೈರ್ಮದ್ಯಾಗಃ ಪ್ರತಿಮಾದಿಷ್ವಮಾಯಿನಃ । ಭಕ್ತಸ್ಯ ಚ ಯಥಾಲಬ್ಧೈರ್ಹೃದಿ ಭಾವೇನ ಚೈವ ಹಿ ।೧೫।।

ಅರ್ಥ:- ನನ್ನ ನಿಷ್ಕಾಮ ಭಕ್ತನ ಪ್ರತಿಮಾದಿಕದಲ್ಲಿ ಯಥಾಸಂಭವ ಪ್ರಾಪ್ತವಾದ ಉತ್ತಮ ಚಂದನಾದಿ ದ್ರವ್ಯಗಳಿಂದ ನನ್ನ ಪೂಜೆಯಾಗುವುದು. ಆದರೆ ಚಂದನಾದಿ ಉತ್ತಮ ದ್ರವ್ಯಗಳು ಸಿಗದೇ ಇದ್ದ ಪಕ್ಷದಲ್ಲಿ, ಆಗ ಹೃದಯದಲ್ಲಿ ಕಲ್ಪಿತ ಚಂದನಾದಿ ಉತ್ತಮ ದ್ರವ್ಯಗಳಿಂದ ಪೂಜಿಸಬೇಕು.

ಪೂಜಕ ಸಕಾಮ ಹೋಯ ಚಾಂಗ । ತೈ ಪೂಜಾದ್ರವ್ಯ ವ್ಹಾವೇ ಸಾಂಗ । ಪೂಜಾಸಾಧನ ಝಾಲಿಯಾ ವ್ಯಂಗ । ಫಳ ನಿರ್ವ್ಯಂಗ ಉಪಜೇನಾ ।।೧೨೩।। ಭಕ್ತ ನಿಷ್ಕಾಮ ವಾಡೇಕೋಡೇ । ತೈ ಪೂಜಾದ್ರವ್ಯಾಚೇ ಸಾಂಕಡೇ । ಸರ್ವಥಾ ಕಾಂಹೀ ನ ಪಡೇ । ಭಕ್ತಭಾವ ಆವಡೇ ಭಗವಂತಾ ।।೧೨೪।। ತೇಥ ಅನಾಯಾಸೇ ಜೇ ಪ್ರಾಪ್ತ । ತೇಣೇ ಭಗವಂತ ಹೋಯ ತೃಪ್ತ । ತೋಚಿ ಪೂಜಾಯಾಗ ಯಥೋಕ್ತ । ಜಾಣ ನಿಶ್ಚಿತ ಉದ್ಧವಾ ।।೧೨೫।। ನಿಷ್ಕಾಮವೃತ್ತೀ ಫಲ ಮೂಲ । ದುರ್ವಾಂಕುರ ಕಾ ನಿರ್ಮಳ ಜಳ । ಇತಕೇನ ಪೂಜಾಯಾಗ ಸಕಳ । ಹೋಯ ಅವಿಕಳ ಮದ್ಭಾವೇ ।।೧೨೬।। ಜೇಥ ಮಾಝಾ ಸದ್ಭಾವ ದೃಢ । ತೇಥ ಉಪಚಾರಾಂಚಾ ಕೋಣ ಪಾಡ । ಭಕ್ತಾಂಚಾ ಭಾವಚಿ ಮಜ ಗೋಡ । ತೇಣೇ ಸುಖ ಸುರವಾಡ ಮದ್ಭಕ್ತಾ ।।೧೨೭।।

ದೇವನಾಗಿ ದೇವರ ಪೂಜೆಯನ್ನು ಮಾಡಬೇಕು ಎಂಬುವುದು ಇದು ಆತ್ಮಸ್ವರೂಪದ ರುಚಿಯಾದ ಖಾದ್ಯವಾಗಿರುವುದು. ಇದನ್ನು ಉಪಾಸನಾಕಾಂಡದ ನಿಮಿತ್ತದಿಂದ ಶ್ರೀಕೃಷ್ಣನು ಉದ್ಧವನಿಗೆ ಕೊಟ್ಟನು ।।೧೧೬।। ಈ ಯಾವ ಆತ್ಮಸ್ವರೂಪದ ರುಚಿಯು ಹೆಜ್ಜೆ ಹೆಜ್ಜೆಗೆ ದೊರಕದಿದ್ದರೆ ಈ ಉಪಾಸನೆಯ ಖಾಲೀ ಖಟಪಟಿಯನ್ನು ಯಾರು ಸೋಸಬೇಕು ? ।।೧೧೭।। ಇದು ಆಗಮ ಶಾಸ್ತ್ರದಲ್ಲಿನ ಗೂಢವಾದ ರಹಸ್ಯವಾಗಿರುವುದು. ಹೇ ಉದ್ಧವನೇ, ಈ ಯೋಗದಿಂದ ಸಾಧಕರು ಹೆಜ್ಜೆ ಹೆಜ್ಜೆಗೂ ಸುಖಸಮಾಧಾನದಿಂದ ಸಂಪನ್ನರಾಗುವರು ಹಾಗೂ ಜ್ಞಾನಸ್ವರೂಪರಾಗುವರು. ಇದುವೇ ಉಪಾಸನೆಯಾಗಿರುವುದು ।।೧೧೮।। ಶ್ರೀಕೃಷ್ಣನ ವಚನಗಳನ್ನು ಕೇಳಿ ಉದ್ಧವನಿಗೆ ಅತಿಶಯವಾಗಿ ಆನಂದವಾಯಿತು. ಆತನು ಧಾವಿಸಿ ಹೋಗಿ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದುಕೊಂಡು ಹೀಗೆ ಹೇಳಿದನು. ಹೇ ದೇವನೇ, ನನಗೆ ಈ ವಿಷಯವನ್ನು ಕುರಿತು ಆರಂಭದಿಂದ ನಿರೂಪಣೆಯನ್ನು ಮಾಡಬೇಕು ।।೧೧೯।। ಆಗ ಶ್ರೀಕೃಷ್ಣನು ನೀನು ಸ್ಥಿರನಾಗಿರು ಎಂದು ಹೇಳಿದನು. ಈ ಯಾವ ಆಗಮೋಕ್ತವಾಗಿರುವ ಗೂಢ ರಹಸ್ಯವು ಸಾಧಕರಿಗೆ ನನ್ನ ಕೃಪೆವಿಲ್ಲದೇ ಪ್ರಾಪ್ತವಾಗಲಾರದು ।।೧೨೦।। ಈ ಆಗಮೋಕ್ತ ರಹಸ್ಯವು ಬಹು ಗಹನವಾಗಿದೆ ಇದು ನನ್ನ ಗುಪ್ತ ಧನವಾಗಿದೆ. ಹೇ ಉದ್ಧವಾ, ನೀನು ಕೇಳಿದ ಪೂಜಾವಿಧಾನಕ್ಕಾಗಿ ಸರಿಯಾಗಿ ಲಕ್ಷಕೊಟ್ಟು ಕೇಳು ।।೧೨೧।। ಚಂದನಾದಿಗಳ ಲೇಪ ಮಾಡಿರುವ ಅಥವಾ ಚಿತ್ರಬರೆದು ತಯಾರಿಸಿರುವ ಪ್ರತಿಮೆಗಳಿಗೆ ಸ್ನಾನವನ್ನು ಮಾಡಿಸಬಾರದು. ಇತರ ಮೂರ್ತಿಗಳಿಗೆ ಯಥಾವಿಧಿಯಿಂದ ಸ್ನಾನವನ್ನು ಮಾಡಿಸಬೇಕು ।।೧೨೨।।

ಪೂಜಿಸುವವನು ಸಕಾಮನಾಗಿದ್ದರೆ ಪೂಜಾ ಸಾಹಿತ್ಯಗಳು ಯಥಾಸಾಂಗವಾಗಿ ಇರಬೇಕು. ಕಾರಣ ಪೂಜಾ ಸಾಹಿತ್ಯದಲ್ಲಿ ಏನಾದರೂ ಕೊರತೆಯಾದರೆ ಅದರಿಂದ ಪೂರ್ಣ ಫಲವು ದೊರೆಯುವುದಿಲ್ಲ ।।೧೨೩।। ಆದರೆ ಭಕ್ತನು ನಿಷ್ಕಾಮನಾಗಿದ್ದರೆ ಆತನು ತನಗೆ ಸಾಧ್ಯವಾದ ಪೂಜಾ ಸಾಮುಗ್ರಿಗಳಿಂದ ಪ್ರೀತಿಯಿಂದ ಪೂಜೆಯನ್ನು ಮಾಡಬೇಕು. ಸಾಮುಗ್ರಿಗಳಲ್ಲಿ ಹೆಚ್ಚು ಕಡಿಮೆಯಾದರೂ ಕೂಡ ಆತನಿಗೆ ಯಾವ ಸಂಕಟವು ಒದಗುವುದಿಲ್ಲ. ಕಾರಣ ಭಗವಂತನಿಗೆ ಭಕ್ತನ ಭಾವನೆಯು ಪ್ರಿಯವಾಗಿರುವುದು ।।೧೨೪।। ಇಂತಹ ಪ್ರಸಂಗದಲ್ಲಿ ಅನಾಯಾಸವಾಗಿ ಸಿಕ್ಕ ಸಾಹಿತ್ಯದಲ್ಲಿಯೇ ಭಗವಂತನು ಸಂತುಷ್ಟನಾಗುವನು. ಹೇ ಉದ್ಧವಾ, ಇದೇ ಪೂಜೆಯು ಯಥೋಕ್ತವಾಗಿರುವುದು ।।೧೨೫।। ನಿಷ್ಕಾಮ ವೃತ್ತಿ ಇದ್ದರೆ ಸಾಕು, ಫಲ, ಮೂಲ, ದುರ್ವಾ ಅಥವಾ ಶುದ್ಧ ಜಲ ಇಷ್ಟರಿಂದಲೇ ಸದ್ಭಾವನೆಯು ಸರ್ವ ಪೂಜಾಯಾಗವನ್ನು ಸಫಲವನ್ನಾಗಿ ಮಾಡುವುದು ।।೧೨೬।। ನನ್ನಲ್ಲಿ ದೃಢವಾದ ಭಾವನೆಯು ಇರಲು ಆಗ ಇತರ ಉಪಚಾರಗಳ ಯಾವ ಪ್ರತಿಷ್ಠೆ? ಭಕ್ತರ ಪ್ರೇಮಭಾವವು ನನಗೆ ಅತಿಶಯವಾಗಿ ಪ್ರಿಯವಾಗುವುದು. ಇದರಿಂದ ನನ್ನ ಭಕ್ತರಿಗೂ ಕೂಡ ಮಹಾಸುಖದ ಲಾಭವಾಗುವುದು ।।೧೨೭।।

ಬಾಹ್ಯ ಉಪಚಾರ ಜೇ ಕಾಂಹೀ । ತೇ ಪ್ರತಿಮಾಮೂರ್ತಿಪೂಜೇಸೀ ಪಾಹೀ । ಮಾನಸಪೂಜೇಚೇ ತಂವ ಠಾಯೀ । ವಾಣೇ ನಾಹೀ ಉಪಚಾರಾ ॥೧೨೮॥ ತೇಥ ಮನಚಿ ಹೋಯ ಮಾಝೀ ಮೂರ್ತೀ । ಮನೋಮಯ ಉಪಚಾರಸಂಪತ್ತೀ । ನಿರ್ಲೋಭೇ ಜೇ ಮಜ ಅರ್ಪಿತೀ । ತೇಣೇ ಮೀ ಶ್ರೀಪತೀ ಸಂತುಷ್ಟ ॥೧೨೯॥ ಪ್ರತಿಮಾದಿ ಅಷ್ಟೌ ಪೂಜಾಸ್ಥಾನ । ಯಥೋಕ್ತ ಪೂಜೇಚೇ ವಿಧಾನ । ತುಜ ಮೀ ಸಾಂಗ ಸಾಂಗೇನ । ಐಕ ಸಾವಧಾನ ಉದ್ಧವಾ ॥೧೩೦॥

ಸ್ನಾನಾಲಂಕರಣಂ ಪ್ರೇಷ್ಠಮರ್ಚಾಯಾಮೇವ ತೂದ್ಧವ । ಸ್ಥಂಡಿಲೇ ತತ್ತ್ವವಿನ್ಯಾಸೋ ವಹ್ನಾವಾಜ್ಯಪ್ಲುತಂ ಹವಿಃ ॥೧೬॥
ಸೂರ್ಯೇ ಚಾಭ್ಯರ್ಹಣಂ ಪ್ರೇಷ್ಠಂ ಸಲೀಲೇ ಸಲಿಲಾದಿಭಿಃ ।

ಅರ್ಥ:- ಉದ್ಧವಾ, ಸ್ನಾನ, ವಸ್ತ್ರ, ಅಲಂಕಾರ ಇತ್ಯಾದಿಗಳು ಪಾಷಾಣ ಅಥವಾ ಧಾತುಗಳ ಪ್ರತಿಮೆಗಳಿಗೆ ಪೂಜೆಗಾಗಿ ಉಪಯೋಗಿವಾಗಿರುವುವು. ಮಳಲಿನ ಮೂರ್ತೀ ಅಥವಾ ಮೃತ್ತಿಕೆಯ ಮೂರ್ತಿಗಳ ಪೂಜೆಯನ್ನು ಮಾಡಬೇಕಾದರೆ ಮಂತ್ರದ್ವಾರಾ ಅಂಗವನ್ನು ಮತ್ತು ಆದರಲ್ಲಿ ಪ್ರಧಾನ ದೇವತೆಗಳ ಯಥಾಸಾಂಗ ಪೂಜೆಯನ್ನು ಮಾಡಬೇಕು. ಹಾಗೆಯೇ ಅಗ್ನಿಯಲ್ಲಿ ಪೂಜಿಸಬೇಕಾದರೆ ತುಪ್ಪಮಿಶ್ರಿತ ಹವನ ಸಾಮಗ್ರಿಗಳಲ್ಲಿ ಆಹುತಿಯನ್ನು ಕೊಡಬೇಕು. ಸೂರ್ಯನಲ್ಲಿ ಉಪಸ್ಥಾನ, ಅರ್ಘ್ಯಾದಿಗಳನ್ನು ಮಾಡಬೇಕು.

ಪ್ರತಿಮಾಮೂರ್ತಿ ಪೂಜಾಸ್ಥಾನ । ತೇ ಮೂರ್ತೀಸ ಜೇ ಮಹಾಸ್ನಪನ । ಯಾ ನಾಂವ ಬೋಲಿಜೇ ''ಸ್ನಾನ'' । ಸಾಂಗ ಭೂಷಣ ಮುಕುಟಾದೀ ॥೧೩೧॥ ಜೇ ಲೋಕೀ ಉತ್ತಮ ಪ್ರಕಾರ । ಕಾ ಆಪಣಾಂಸೀ ಜೇ ಪ್ರಿಯಕರ । ಜೇ ಜೇ ಅನರ್ಘ್ಯ ಅಳಂಕಾರ । ತೇಣೇ ಶ್ರದ್ಧಾ ಮೀ ಶ್ರೀಧರ ಪೂಜಾವಾ ॥೧೩೨॥ ಸ್ನಾನ ಭೋಜನ ಅಲಂಕಾರ । ಸಾಂಗ ಪೂಜಾ ಸಪರಿಕರ । ಹಾ ಪ್ರತಿಮಾ ಪೂಜಾಪ್ರಕಾರ । ಐಕ ವಿಚಾರ ಸ್ಥಂಡಿಲಾಚಾ ॥೧೩೩॥ ಸ್ಥಂಡಿಲೀ ಜೇ ಪೂಜಾಸ್ಥಾನ । ತೇಥ ತತ್ತ್ವಾಂಚೇ ಧರೋನಿ ಧ್ಯಾನ । ಕರಾವೇ ತತ್ತ್ವವಿನ್ಯಾಸಲೇಖನ । ಪೂಜಾವಿಧಾನ ಯಾ ಹೇತೂ ॥೧೩೪॥ ಆತ್ಮತತ್ತ್ವಾದಿ ತತ್ತ್ವವಿವಂಚ । ಸ್ಥಂಡಿಲೀ ವಿವಂಚೂನಿ ಸಾಚ । ಹೃದಯ ಶಿರ ಶಿಖಾ ಕವಚ । ನೇತ್ರ ಅಸ್ತ್ರ ದಿಶಂಚ ನಿಜಪೂಜಾ ॥೧೩೫॥ ಅಗ್ನೀಂಚೇ ಠಾಯೀ ಜೇ ಪೂಜನ । ತೇಥ ಮಾಝೇ ಕರೂನಿ ಧ್ಯಾನ । ಆಜ್ಯ ಪ್ಲುತ ಹವಿಹವನ । ಹೇ ಪೂಜಾವಿಧಾನ ಅಗ್ನೀಚೇ ॥೧೩೬॥ ಅಗ್ನಿ ದೇವಾಂಚೇ ವದನ । ಯೇಣೇ ವಿಶ್ವಾಸೇ ಸಂಪೂರ್ಣ । ಹದಿದ್ರವ್ಯ ಕರಿತಾ ಹವನ । ''ಅಗ್ನಿಪೂಜನ'' ಯಾ ಹೇತೂ ॥೧೩೭॥ ಸೂರ್ಯಾಚ್ಯಾ ಠಾಯೀ ಪ್ರಕಾಶಮಾನ । ಮಂಡಳಾತ್ಮಾ ಸೂರ್ಯನಾರಾಯಣ । ತೇಥ ಸೌರಮಂತ್ರೇ ಉಪಸ್ಥಾನ । ಪೂಜಾವಿಧಾನ ಯಾ ಹೇತೂ ॥೧೩೮॥

ಏನಾದರೂ ಬಾಹ್ಯ ಉಪಚಾರವನ್ನು ಮಾಡಬೇಕಾದರೆ ಅದು ಪ್ರತಿಮಾಮೂರ್ತಿಯ ಪೂಜೆಗೆ ಸಲ್ಲುವುದು. ಮಾನಸ ಪೂಜೆಯಲ್ಲಿ ಮಾತ್ರ ಉಪಚಾರಕ್ಕಾಗಿ ಯಾವುದೊಂದೂ ಕೊರತೆಯಾಗದು ॥೧೨೮॥ ಕಾರಣ ಅಲ್ಲಿ ಮನಸ್ಸೇ ನನ್ನ ಮೂರ್ತಿಯಾಗಿರುವುದು. ಉಪಚಾರದ ಸರ್ವ ಪ್ರಕಾರದ ಸಾಹಿತ್ಯಗಳೂ ಕೂಡ ಮನೋಮಯವೇ ಆಗಿರುವುವು. ಈ ಉಪಚಾರ ಸಂಪತ್ತನ್ನೂ ಸಹ ನಿರ್ಲೋಭದಿಂದ ನನಗೆ ಅರ್ಪಿಸುತ್ತಿರುವರು. ಇವರ ಈ ನಿಷ್ಕಾಮ ಭಾವಕ್ಕಾಗಿ ನಾನು ಸಂತುಷ್ಟನಾಗುವೆನು ॥೧೨೯॥ ಹೇ ಉದ್ಧವನೇ, ಪ್ರತಿಮಾದಿ ಯಾವ ಎಂಟು ಪೂಜಾ ಸ್ಥಾನಗಳಿರುವುವೋ ಅವುಗಳ ಯಥೋಚಿತ ಪ್ರಕಾರವನ್ನು ಈಗ ನಾನು ನಿನಗೆ ಸವಿಸ್ತಾರವಾಗಿ ಹೇಳುವೆನು, ಅದನ್ನು ಲಕ್ಷಕೊಟ್ಟು ಕೇಳು ॥೧೩೦॥

ಪ್ರತಿಮಾಮೂರ್ತಿಯು ಒಂದು ಪೂಜಾಸ್ಥಾನವಾಗಿದೆ. ಇದಕ್ಕೆ ಮಹಾ ಅಭಿಷೇಕ ಮಾಡುವರು. ಅದಕ್ಕೆ ಸ್ನಾನವೆನ್ನುವರು. ಆ ಮೂರ್ತಿಗೆ ಕಿರೀಟಾದಿ ಉತ್ತಮ ಅಲಂಕಾರಗಳನ್ನು ಹಾಕುವರು ॥೧೩೧॥ ಈ ಲೋಕದಲ್ಲಿ ಇರುವ ಉತ್ತಮ ಪ್ರಕಾರದಿಂದ ಅಥವಾ ತನಗೆ ಯಾವುದರಲ್ಲಿ ಅತಿಶಯ ಅನುರಾಗವಿರುವುದೋ, ಅಂತಹ ಬೆಲೆಬಾಳುವ ಭೂಷಣಗಳಿಂದ ಶ್ರದ್ಧೆಯಿಂದ ಶ್ರೀಹರಿಯ ಪೂಜೆಯನ್ನು ಮಾಡಬೇಕು ॥೧೩೨॥ ಸ್ನಾನ, ಭೋಜನ, ಅಲಂಕಾರ ಇತ್ಯಾದಿ ಸರ್ವ ಉಪಚಾರ ಸಮೇತ ಯಥಾಸಾಂಗವಾಗಿ ಸರ್ವ ಪೂಜೆಯನ್ನು ಮಾಡುವುದು ಇದು ಪ್ರತಿಮಾಪೂಜೆಯಾಗಿರುವುದು ॥೧೩೩॥ ಸ್ಥಂಡಿಲಿಯ ಯಾವ ಪೂಜಾಸ್ಥಾನಕ್ಕೆ ತತ್ವದ ಧ್ಯಾನವನ್ನು ಮಾಡಬೇಕು. ಮತ್ತು ಅದರಲ್ಲಿ ತತ್ವವಿನ್ಯಾಸದ ಲೇಖನ ಮಾಡಬೇಕು. ಇದೇ ಅದರ ಪೂಜಾವಿಧಾನವಾಗಿರುವುದು ॥೧೩೪॥ ಆತ್ಮತತ್ತ್ವಾದಿಕಗಳ ವಿವೇಚನೆಯನ್ನು ಸ್ಥಂಡಿಲದಲ್ಲಿ ಮಾಡಿ ಹೃದಯ, ಮಸ್ತಕ, ಶಿಖಾ, ಕವಚ, ನೇತ್ರ, ಅಸ್ತ್ರ ಇತ್ಯಾದಿಗಳನ್ನು ತೆಗೆದು ಅವುಗಳ ದಿಶಾಬಂಧನವನ್ನು ಮಾಡಿ ಪೂಜೆಯನ್ನು ಮಾಡಬೇಕು ॥೧೩೫॥ ಅಗ್ನಿಯಲ್ಲಿ ಪೂಜಿಸಬೇಕಾದರೆ, ಮೊದಲು ಅಲ್ಲಿ ನನ್ನ ಧ್ಯಾನವನ್ನು ಮಾಡಬೇಕು. ತುಪ್ಪದ ಆಹುತಿಯನ್ನು ಕೊಡುತ್ತ ಧ್ಯಾನಿಸಬೇಕು. ಇದು ಅಗ್ನಿಯ ಪೂಜೆಯ ವಿಧಾನವಾಗಿರುವುದು ॥೧೩೬॥ ಅಗ್ನಿಯು ಇದು ದೇವತೆಗಳ ಮುಖವಾಗಿರುವುದು. ಹೀಗೆಂದು ಪರಿಪೂರ್ಣ ಶ್ರದ್ಧೆಯಿಂದ ಹವಿದ್ರವ್ಯಗಳ ಹವನವನ್ನು ಮಾಡಿದರೆ ಅದರಿಂದ ಅಗ್ನಿ ಪೂಜೆಯು ಸಾಧಿಸುವುದು ॥೧೩೭॥ ಸೂರ್ಯನಲ್ಲಿ ಪ್ರಕಾಶಮಾನನಾಗುವ ಮಂಡಳಾತ್ಮಾ ಯಾವ ಸೂರ್ಯನಾರಾಯಣನಿಗೆ ಆತನ ಸೌರವಂಶದಿಂದ ಪೂಜೆ ಮತ್ತು ಸ್ತುತಿಮಾಡುವುದರಿಂದ ಇದು ಸೂರ್ಯಪೂಜನೆಯಾಗುವುದು ॥೧೩೮॥

ವಿಚಾರಿತಾ ಶ್ರುತೀಚಾ ಅರ್ಥ । '' ಆಪೋನಾರಾಯಣ'' ಸಾಕ್ಷಾತ್ । ಯೇಥ ಪೂಜಾವಿಧಾನ ಯಥೋಕ್ತ । ಜಳೀ ಜಳಯುಕ್ತ ತರ್ಪಣ ॥೧೪೯॥ ''ಹೃದಯೀ'' ಜೇ ಮಾಝೇ ಪೂಜಾಸ್ಥಾನ । ತೇಥೇ ಮನೇ ಮನಾಚೇ ಅರ್ಚನ । ಮನೋಮಯ ಮೂರ್ತಿ ಸಂಪೂರ್ಣ । ಪೂಜಾವಿಧಾನ ಮಾನಸಿಕ ॥೧೫೦॥ ಮಾಝೇ ಮುಖ್ಯತ್ವೇ ಅಧಿಷ್ಠಾನ । ಬ್ರಹ್ಮಮೂರ್ತಿ ಜೇ ''ಬ್ರಾಹ್ಮಣ'' । ತೇಥೀಲ ಜೇ ಪೂಜಾವಿಧಾನ । ಆಜ್ಞಾಪಾಲನ ದಾಸತ್ವೇ ॥೧೫೧॥ ಬ್ರಹ್ಮಾಸೀ ಜ್ಯಾಚೇನಿ ಬ್ರಹ್ಮಪಣ । ತೋ ''ಸದ್ಗುರು''ಮಾಝೇ ಪೂಜಾಸ್ಥಾನ । ಸರ್ವಾರ್ಥೀ ಶ್ರೇಷ್ಠ ಪಾವನ । ತೇಥೀಲ ಪೂಜನ ತೇ ಐಸೇ ॥೧೫೨॥ ಜೀವೇ ಸರ್ವಸ್ವೇಸೀ ಆಪಣ । ತ್ಯಾಸೀ ರಿಘಾವೇ ಅನನ್ಯ ಶರಣ । ತ್ಯಾಚ್ಯಾ ವಚನಾಸೀ ಪ್ರಾಣ । ನಿಶ್ಚಯೇ ಜಾಣ ವಿಕಾವಾ ॥೧೫೩॥ ಗುರುಚೀ ನೀಚಸೇವಾ ಸೇವನ । ಆವಡೀ ಕರಣೇ ಆಪಣ । ಹೇಚಿ ತೇಥೀಲ ಪೂಜಾವಿಧಾನ । ಯೇಣೇ ಸುಖಸಂಪನ್ನ ಸಾಧಕ ॥೧೫೪॥ ಸದ್ಗುರುಸೇವಾ ಕರಿತಾ ಪಾಹೀ । ಬ್ರಹ್ಮಸಾಯುಜ್ಯ ಲಾಗೇ ಪಾಯೀ । ಗುರುಸೇವೇಪರತೇ ಕಾಂಹೀ । ಶ್ರೇಷ್ಠನಾಹೀ ಸಾಧನ ॥೧೫೫॥ ಸದ್ಗುರುಸ್ವರೂಪ ತೇ ಜಾಣ । ಅಖಂಡತ್ವೇ ಬ್ರಹ್ಮ ಪೂರ್ಣ । ತೇಥೇ ಆವಾಹನ ವಿಸರ್ಜನ । ಸರ್ವಥಾ ಆಪಣ ನ ಕರಾವೇ ॥೧೫೬॥ ನಿಷ್ಕಪಟಭಾವೇ ಸಂಪೂರ್ಣ । ಸದ್ಗುರೂಸೀ ಜೋ ಅನನ್ಯ ಶರಣ । ತ್ಯಾಚೇ ಮೀಹೀ ವಂದೀ ಚರಣ । ಯೇಥವರೀ ಜಾಣ ತೋ ಧನ್ಯ ॥೧೫೭॥ ನಿರ್ಲೋಭಭಾವೇ ಸಹಜ । ಪೂಜಿತಾ ತೋಷೇ ಅಧೋಕ್ಷಜ । ತ್ಯಾ ಭಾವಾಚೇ ನಿಜಗುಜ । ಸ್ವಯೇ ಯದುರಾಜ ಸಾಂಗತ ॥೧೫೮॥

ಶ್ರದ್ಧಯೋಪಾಹೃತಂ ಪ್ರೇಷ್ಠಂ ಭಕ್ತೇನ ಮಮ ವಾರ್ಯಪಿ ।೧೭॥
ಭೂರ್ಯಪ್ಯಭಕ್ತೋಪಾಹೃತಂ ನ ಮೇ ತೋಷಾಯ ಕಲ್ಪತೇ ।
ಗಂಧೋ ಧೂಪಃ ಸುಮನಸೋ ದೀಪೋಽನ್ನಾದ್ಯಂ ಚ ಕಿಂ ಪುನಃ ।೧೮॥

ಅರ್ಥ:- ಭಕ್ತನು ಪರಮ ಶ್ರದ್ಧೆಯಿಂದ ಅರ್ಪಿಸಿದ ಜಲವೂ ಕೂಡ ನನಗೆ ಅತಿಶಯ ಪ್ರಿಯವಾಗಿರುವುದು. ಅಭಕ್ತನು ಅರ್ಪಿಸಿದ ವಿಪುಲವಾದ ಕಾಣಿಕೆಗಳಿಂದ ನನಗೆ ಸಂತೋಷವಾಗುವುದಿಲ್ಲ. ಚಂದನ, ಧೂಪ, ದೀಪ, ಹೂವು, ನೈವೇದ್ಯ ಇತ್ಯಾದಿಗಳನ್ನು ಭಕ್ತಿಯಿಂದ ಅರ್ಪಿಸಿದರೆ ಪುನಃ ಹೇಳುವುದೇನು ? ನಾನು ಅತ್ಯಂತ ಸಂತುಷ್ಟನಾಗುತ್ತೇನೆ.

ಮಾಝ್ಯಾ ಠಾಯೀ ಅತಿಪ್ರೀತೀ । ಶ್ರದ್ಧಾಯುಕ್ತ ಅನನ್ಯ ಭಕ್ತೀ । ಭಕ್ತ ''ಭಾವೇ'' ಜಳ ಅರ್ಪಿತೀ । ತೇಣೇ ಮೀ ಶ್ರೀಪತಿ ಸುಖಾವೇ ॥೧೫೯॥ ತೋ ಜಳಬಿಂದು ಯಥಾಸುಖೇ । ಮ್ಯಾ ಮುಖೀ ಝೇಲಿಜೇ ಆದಿಪುರುಷೇ । ತಂವ ಭಕ್ತಭಾವಾಚೇನಿ ಹರಿಖೇ । ಮೀ ಸುಖರೂಪ ಸುಖೇ ಸುಖಾವೇ ದೇಖ ॥೧೬೦॥

ಶ್ರುತಿಯ ಅರ್ಥದ ವಿಚಾರವನ್ನು ಮಾಡಿ ನೋಡಲು ಆಪ ಅಂದರೆ ಜಲವು ಇದು ಸಾಕ್ಷಾತ್ ನಾರಾಯಣಸ್ವರೂಪವಾಗಿರುವುದು. ಅದರ ಯಥೋಚಿತ ಪೂಜಾವಿಧಾನವೆಂದರೆ ಜಲದಲ್ಲಿಯೇ ಜಲದಿಂದ ತರ್ಪಣೆಯನ್ನು ಮಾಡಬೇಕು ॥೧೪೯॥ ಹೃದಯದಲ್ಲಿರುವ ನನ್ನ ಪೂಜಾಸ್ಥಾನದಲ್ಲಿ ಮನಸ್ಸಿನ ಪೂಜೆಯನ್ನು ಮಾಡಬೇಕು. ಮನೋಮಯ ಮೂರ್ತಿಯ ಮನೋಮಯ ಪೂಜಾ ಸಾಹಿತ್ಯಗಳೊಂದಿಗೆ ಪೂಜೆಯನ್ನು ಮಾಡಬೇಕು ॥೧೫೦॥ ನನ್ನ ಮುಖ್ಯವಾದ ಅಧಿಷ್ಠಾನವೆಂದರೆ ಬ್ರಹ್ಮಮೂರ್ತೀ ಬ್ರಾಹ್ಮಣರಾಗಿರುವರು. ಅವರಲ್ಲಿ ದಾಸ್ಯತ್ವದಿಂದ ಆಜ್ಞಾಪಾಲನೆಯನ್ನು ಮಾಡುವುದೇ ಅವರ ಪೂಜೆಯ ವಿಧಾನವಾಗಿರುವುದು ॥೧೫೧॥ ಯಾರಿಂದ ಬ್ರಹ್ಮಕ್ಕೆ ಬ್ರಹ್ಮತ್ವವು ಬಂದಿರುವುದೋ, ಆ ಯಾವ ಸದ್ಗುರುಗಳು ನನ್ನ ಸರ್ವಶ್ರೇಷ್ಠ ಪೂಜಾಸ್ಥಾನರಾಗಿರುವರು. ಅವರ ಪೂಜೆಯ ವಿಚಾರವು ಹೇಗಿದೆ ಎಂಬುವುದನ್ನು ಕೇಳು ॥೧೫೨॥ ತನ್ನ ಜೀವಭಾವದಿಂದ ಸದ್ಗುರುಗಳವರಿಗೆ ಸರ್ವಸ್ವದಿಂದ ಶರಣು ಹೋಗಬೇಕು. ಅವರ ವಚನಕ್ಕಾಗಿ ತಾನು ನಿಶ್ಚಯಪೂರ್ವಕವಾಗಿ ತನ್ನ ಪ್ರಾಣವನ್ನು ಮಾರಿಕೊಳ್ಳಬೇಕು ॥೧೫೩॥ ಸದ್ಗುರುಗಳ ಎಂತಹ ನೀಚಸೇವೆಯಾದರೂ ಅತ್ಯಂತ ಪ್ರೀತಿಯಿಂದ ಮಾಡುವುದು ಇದು ಪೂಜಾ ವಿಧಾನವಾಗಿರುವುದು. ಇದರಿಂದ ಸಾಧಕರಿಗೆ ನಿಜವಾದ ಸುಖಶಾಂತಿಯು ಲಭಿಸುವುದು ॥೧೫೪॥ ಸದ್ಗುರುಗಳ ಮನೋಭಾವದಂತೆ ಸೇವೆಯನ್ನು ಮಾಡಿದರೆ ಬ್ರಹ್ಮಸಾಮ್ರಾಜ್ಯವು ಕಾಲಿಗೆ ಬೀಳವುದು. ಸದ್ಗುರುಗಳ ಸೇವೆಯ ಹೊರತಾದ ಅನ್ಯ ಶ್ರೇಷ್ಠಸಾಧನೆಯೇ ಇರುವುದಿಲ್ಲ ॥೧೫೫॥ ಸದ್ಗುರುಗಳ ಸ್ವರೂಪವು ಇದು ಅಖಂಡವಾದ ಪೂರ್ಣಬ್ರಹ್ಮವಾಗಿರುವುದು. ಅವರ ಆವಾಹನೆ ಮತ್ತು ವಿಸರ್ಜನೆಗಳನ್ನು ಎಂದಿಗೂ ಮಾಡಕೂಡದು ॥೧೫೬॥ ಮನದಲ್ಲಿ ಯಾವುದೇ ಪ್ರಕಾರದ ಕಪಟವನ್ನಿಡದೇ ಯಾರು ಸದ್ಗುರುಗಳಿಗೆ ಅನನ್ಯಭಾವದಿಂದ ಶರಣಾಗುವರೋ, ಅವರ ಚರಣಗಳಿಗೆ ನಾನೂ ಕೂಡ ವಂದಿಸುವೆನು. ಇಷ್ಟೊಂದು ಆತನು ಧನ್ಯ ಧನ್ಯನಾಗಿರುವನು ॥೧೫೭॥ ನಿರ್ಲೋಭ ಭಾವದಿಂದ ಸಹಜವಾಗಿ ಪೂಜಿಸಲು ಭಗವಂತನಿಗೆ ಸಂತೋಷವಾಗುವುದು. ಈ ಭಾವನೆಯ ರಹಸ್ಯವನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೧೫೮॥

ನನ್ನಲ್ಲಿ ಅತಿಶಯವಾಗಿ ಪ್ರೇಮವನ್ನಿಟ್ಟು ಶ್ರದ್ಧಾಯುಕ್ತ ಅಂತಃಕರಣದಿಂದ, ಅನನ್ಯ ಭಕ್ತಿಯಿಂದ ಯಾವ ಭಕ್ತನು ನನಗೆ ಕೇವಲ ನೀರನ್ನು ಅರ್ಪಿಸಿದರೂ ಕೂಡ ಶ್ರೀಪತಿಯಾದ ನಾನು ಆ ನೀರಿನಿಂದಲೇ ಸಂತೋಷನಾಗುವೆನು ॥೧೫೯॥ ಭಕ್ತನು ಅರ್ಪಿಸಿದ ಆ ಜಲಬಿಂದುವನ್ನು ಆದಿಪುರುಷನಾದ ನಾನು ಅತ್ಯಂತ ಪ್ರೇಮದಿಂದ ಕೈಯಲ್ಲಿ ಸ್ವೀಕರಿಸಿ ಮುಖದಲ್ಲಿ ಹಾಕಿಕೊಳ್ಳುವೆನು. ನಾನು ಮೂಲತಃ ಸುಖರೂಪನು. ಭಕ್ತಭಾವದ ಹರ್ಷದಿಂದ ಇನ್ನೂ ಅಧಿಕವಾಗಿಯೇ ಸುಖಿಯಾಗುವೆನು ॥೧೬೦॥

ಮಾರ್ಝೀ ತ್ರೈಲೋಕ್ಯಾಸೀ ಸುಖ । ಐಸಾ ಮೀಹೀ ಸುಖರೂಪ ದೇಖ । ತ್ಯಾ ಮಜ ಹೋಯ ಪರಮ ಸಂತೋಷ ।
ಭಾವಿಕಾಂಚೇ ಉದಕ ಸೇವಿತಾ ॥೧೫೧॥ ತ್ಯಾ ಜಳ ಬಿಂದೂಚಿಯಾ ಸಾರೀ । ರಮಾ ನಾವಡೇ ಗೋಮಟೀ । ಬ್ರಹ್ಮಾ
ಜನ್ಮಲಾ ಮಾರ್ಝೀ ಪೋಟೀ । ತೋಹೀ ಶೇವಟೀ ನಾವಡೇ ॥೧೫೨॥ ಭಾವಿಕಾಂಚೇನಿ ಉದಕಲೇಖೇ । ಮಜ
ವೈಕುಂಠಹೀ ಝಾಲೇ ಫಿಕೇ । ಶೇಷಶಯನೀಂಚೀ ನಿದ್ರಾಸುಖೇ । ತ್ಯಾಂಚೀಹೀ ತುಕೇ ಉತರಲೀ ॥೧೫೩॥
ಭಾವಿಕಾಂಚ್ಯಾ ಉದಕಾಪುಢೇ । ಮಜ ಆಣಿಕ ಕಾಂಹೀ ನಾವಡೇ । ತೇಥಹೀ ಗಂಧಾದಿ ಪೂಜಾ ಜೋಡೇ । ನೈವೇದ್ಯ
ಚೋಖಡೇ ರಸಯುಕ್ತ ॥೧೫೪॥ ತೇ ಪೂಜೇಚಿಯೇ ಸುಖಪ್ರಾಪ್ತೀ । ಉಪಮಾ ನಾಹೀ ತ್ರಿಜಗತೀ । ಐಸಾ
ಭಾವಿಕಾಂಚಿಯೇ ಭಕ್ತೀ । ಮೀ ಶ್ರೀಪತೀ ಸುಖಾವೇ ॥೧೫೫॥ ಭಾವೇ ಕರಿತಾ ಭಗವದ್ಭಕ್ತೀ । "ಮೀ ಕೃತಕೃತ್ಯ
ಝಾಲೋ ನಿಶ್ಚಿತೀ"। ಐಶಿಯಾ ನಿಶ್ಚಯೀ ಜೋ ಭಾವಾರ್ಥೀ । ತ್ಯಾಚೇನಿ ಜಳೇ ಸಂತೃಪ್ತಿ ಮಜ ಹೋಯ
॥೧೫೬॥ ಯೇರ ಜೋ ಅಭಕ್ತ ದಂಭಸ್ಥಿತೀ । ಜೇವೀ ದ್ರವ್ಯಾಶಾ ಬಾಹ್ಯ ವಿರಕ್ತೀ । ಲೌಕಿಕ ಪ್ರತಿಷ್ಠೇಪುರತೀ ।
ಮಾರ್ಝೀ ಭಕ್ತಿ ಜೋ ಮಿರವೀ ॥೧೫೭॥ ಐಶಿಯಾ ಅಭಕ್ತಾಚಿಯಾ ಸ್ಥಿತೀ । ಛತ್ರ ಚಾಮರ ಗಜಸಂಪತ್ತೀ । ಮಜ
ಅರ್ಪಿತಾಂಹೀ ಅಭಕ್ತೀ । ಸುಖಲೇಶ ಚಿತ್ತೀ ಉಪಜೇನಾ ॥೧೫೮॥ ಕ್ಷೀರಸಾಗರ ನಿವಡೀ ರಾಜಹಂಸ । ತೇಥ
ನಿಸೂ ದೀಧಲಾ ಕಾಪುಸ । ತೇವೀ ಅಭಕ್ತಭಜನೀ ಸಂತೋಷ । ಮೀ ಹೃಷೀಕೇಶ ಪಾವೇನಾ ॥೧೫೯॥ ಕಾಗಾಚೀ
ಗಾಯನಕಳಾ । ಜೇವೀ ತೋಷೇನಾ ಕಿನ್ನರಶಾಳಾ । ತೇವೀ ಅಭಕ್ತಾಚೀ ಭಜನಲೀಲಾ । ಮಾರ್ಝೀ ಚಿತ್ಕಳಾ
ತೋಷೇನಾ ॥೧೬೦॥ ಜೇವೀ ರಜಸ್ವಲೇಚೇ ಪಕ್ವಾನ್ನ । ಉತ್ತಮ ಪರೀ ತೇ ಅತಿಹೀನ । ತೇವೀ ಅಭಕ್ತಾಂಚೇ
ಭಜನ । ಕದಾ ಜನಾರ್ದನ ಸ್ಪರ್ಶೇನಾ ॥೧೬೧॥ ಜ್ಯಾ ಭಜನಾ ನಾತಳೇ ನಾರಾಯಣ । ಐಸೇ ಜೇ ಅಭಕ್ತಾಂಚೇ
ಭಜನ । ತೇಣೇ ಭಜನೇ ಜನಾರ್ದನ । ಅಣುಮಾತ್ರ ಜಾಣ ತೋಷೇನಾ ॥೧೬೨॥ ಏವಂ ಭಕ್ತಾಭಕ್ತಭಜನಮಾರ್ಗ
। ದಾವೂನಿ ಅಧಿಕಾರಾಚೇ ಭಾಗ । ಆತಾ ಸಮೂಳ ಪೂಜಾಮಾರ್ಗ । ಸಾಂಗ ಶ್ರೀಕೃಷ್ಣ ಸಾಂಗತ ॥೧೬೩॥

ಶುಚಿಃ ಸಂಭೃತಸಂಭಾರಃ ಪ್ರಾಗ್ದರ್ಭೈಃ ಕಲ್ಪಿತಾಸನಃ । ಆಸೀನಃ ಪ್ರಾಗುದಗ್ವಾರ್ಚೇದರ್ಚಾಯಾಮಥ ಸಂಮುಖಃ ॥೧೯॥

ಅರ್ಥ:- ಸ್ನಾನಾದಿಕಗಳಿಂದ ಶುಚಿರ್ಭೂತರಾಗಿ ಉಪಾಸಕರು ಪ್ರಾರಂಭದಲ್ಲಿ ಪೂಜೆಯ ಸಾಮಗ್ರಿಗಳನ್ನು ಕೂಡಿಸಿ ಇಡಬೇಕು. ರ್ಭೆಯಿಂದ ಆಸನವನ್ನು ತಯಾರಿಸಬೇಕು. ಮುಂದಿನ ಭಾಗವು ಪೂರ್ವದಿಕ್ಕಿನತ್ತ ಇರಬೇಕು. ಅಥವಾ ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತುಕೊಳ್ಳಬೇಕು. ಪ್ರತಿಮೆಯು ಅಚಲವಾಗಿದ್ದರೆ ಅದರ ಎದುರಿನಲ್ಲಿ ಕುಳಿತುಕೊಳ್ಳಬೇಕು. ತದನಂತರ ಪೂಜಾ ಕಾರ್ಯವನ್ನು ಆರಂಭಿಸಬೇಕು.

ಸಂಪೂರ್ಣ ಮೂರು ಲೋಕಗಳಿಗೆ ಸುಖಿಯನ್ನಾಗಿ ಮಾಡುವ ನಾನು ಸುಖದ ಸಾಗರನಾಗಿರುವೆನು. ಹೀಗಿದ್ದರೂ ಭಾವಿಕರ ಉದಕ
ಸೇವನೆಯಿಂದ ನನಗೆ ಪರಮ ಸಂತೋಷವಾಗುವುದು ॥೧೫೧॥ ಈ ಜಲಬಿಂದುಗಾಗಿ ಸುಂದರಳಾದ ಲಕ್ಷ್ಮಿಯೂ ಕೂಡ ನನಗೆ ಹಿಡಿಸುವುದಿಲ್ಲ.
ಬ್ರಹ್ಮದೇವನು ನನ್ನ ಹೊಟ್ಟೆಯಲ್ಲಿ ಜನ್ಮಿಸಿರುವನು. ಆತನೂ ಸಹ ಈ ಜಲಬಿಂದುವಿನ ಎದುರಿನಲ್ಲಿ ಪ್ರಿಯವೆನಿಸುವುದಿಲ್ಲ ॥೧೫೨॥ ಭಕ್ತನು
ಅರ್ಪಿಸಿರುವ ಜಲಬಿಂದುವಿನ ಎದುರಿನಲ್ಲಿ ನನ್ನ ವೈಕುಂಠವೂ ಕೂಡ ಸಪ್ಪಾಗಿ ತೋರುವುದು. ಶೇಷನ ಮೇಲೆ ಶಯನ ಮಾಡುವ ಸುಖವೂ
ಕೂಡ ಅದರ ತೂಕಕ್ಕೆ ಬರುವುದಿಲ್ಲ ॥೧೫೩॥ ಭಾವಿಕರ ಈ ಉದಕದ ಮುಂದೆ ನನಗೆ ಬೇರೆ ಯಾವುದೂ ಪ್ರಿಯವಾಗುವುದಿಲ್ಲ. ಅದರಲ್ಲಿ ಪುನಃ
ಗಂಧಯುಕ್ತ ಪೂಜೆ ಮತ್ತು ಮೃಷ್ಟಾನ್ನದ ನೈವೇದ್ಯವಿದ್ದರೆ ॥೧೫೪॥ ಇಂತಹ ಪೂಜೆಯ ಸುಖಕ್ಕೆ ಸಮಾನವಾದ ಉಪಮೆಯು ಈ ಮೂರು
ಲೋಕಗಳಲ್ಲಿಯೇ ಇಲ್ಲ. ಭಾವಿಕರ ಭಕ್ತಿಯಿಂದ ಶ್ರೀಪತಿಯಾದ ನಾನು ಇಷ್ಟೊಂದು ಸುಖಿಯಾಗುವೆನು ॥೧೫೫॥ ಭಾವ ಹಿಡಿದು
ಭಗವದ್ಭಕ್ತಿಯನ್ನು ಮಾಡಿ "ನಾನು ನಿಜವಾಗಿಯೂ ಕೃತಕೃತ್ಯನಾದೆನು" ಹೀಗೆ ಯಾರ ನಿಶ್ಚಯವಿರುವುದೋ, ಆತನ ಉದಕದಿಂದಲೇ ಮಾತ್ರ
ನಾನು ತೃಪ್ತನಾಗುವೆನು ॥೧೫೬॥ ಇತರ ಯಾವ ಢೋಂಗೀ ಭಕ್ತರ ಹೃದಯದಲ್ಲಿ ದ್ರವ್ಯದ ಆಶೆವಿರುವುದು. ಆದರೆ ಅವರು ಜನರಿಗೆ
ವಿರಕ್ತಿಯನ್ನು ತೋರಿಸುತ್ತಿರುವರು. ಜನರಲ್ಲಿ ತಮ್ಮ ಪ್ರತಿಷ್ಠೆಯು ಬೆಳೆಯಬೇಕೆಂಬ ಬಯಕೆಯಿಂದ ಅವರು ನನ್ನ ಭಕ್ತಿಯನ್ನು
ಮೆರೆಯಿಸುತ್ತಿರುವರು ॥೧೫೭॥ ಇಂತಹ ಅಭಕ್ತರು ಛತ್ರ, ಚಾಮರ ಅಥವಾ ಗಜಸಂಪತ್ತನ್ನೂ ಕೂಡ ಅರ್ಪಿಸಿದರೂ ನನ್ನ ಅಂತಃಕರಣದಲ್ಲಿ
ಸುಖದ ಲವಲೇಶವೂ ಸಹ ನಿರ್ಮಾಣವಾಗುವುದಿಲ್ಲ ॥೧೫೮॥ ಹಾಲು, ನೀರು ಬೇರ್ಪಡಿಸಿ, ಆರಿಸಿಕೊಳ್ಳುವ ರಾಜಹಂಸ ಪಕ್ಷಿಯ ಮುಂದೆ
ಹಿಂಜುವ ಅರಳಿಯನ್ನು ಇಟ್ಟರೆ ಅದಕ್ಕೆ ಸುಖವಾಗುವುದಿಲ್ಲ. ಅದರಂತೆ ಅಭಕ್ತರ ಭಜನೆ ಪೂಜನೆಯಿಂದ ಹೃಷೀಕೇಶಿಯಾದ ನನಗೆ
ಸಂತೋಷವಾಗುವುದಿಲ್ಲ ॥೧೫೯॥ ಕಾಗೆಯ ಗಾಯನ ಕಲೆಯನ್ನು ಕೇಳಿ ಶ್ರೇಷ್ಠಗಾಯಕರಾದ ಕಿನ್ನರರಿಗೆ ಸಂತೋಷವಾಗಲಾರದು.
ಅದರಂತೆಯೇ ಅಭಕ್ತರ ಭಜನೆಯ ವೈಭವ ಕಂಡು ನನಗೆ ಸಂತೋಷವಾಗುವುದಿಲ್ಲ ॥೧೬೦॥ ರಜಸ್ವಲೆ ಅಡುಗೆ ಮಾಡಿದ ಪಕ್ವಾನ್ನವು ಎಷ್ಟೇ
ಉತ್ತಮವಾಗಿರಲಿ, ಆದರೆ ಅದು ಅತಿಅಮಂಗಲವಾಗಿರುವುದು. ಅದರಂತೆ ಅಭಕ್ತರ ಭಜನೆಗೆ ಜನಾರ್ದನನು ಎಂದಿಗೂ ಸ್ಪರ್ಶ ಕೂಡ
ಮಾಡಲಾರನು ॥೧೬೧॥ ಯಾವ ಭಜನೆಗೆ ನಾರಾಯಣನು ಸ್ಪರ್ಶ ಮಾಡದೇ ಇರುವಾಗ ಅಂತಹ ಅಭಕ್ತನ ಭಜನೆಯಿಂದ ಜನಾರ್ದನನಿಗೆ
ಸ್ವಲ್ಪವೂ ಕೂಡ ಸಂತೋಷವಾಗುವುದಿಲ್ಲ ॥೧೬೨॥ ಈ ಪ್ರಕಾರವಾಗಿ ಭಕ್ತ ಮತ್ತು ಅಭಕ್ತರ ಮಾರ್ಗವನ್ನು ಮತ್ತು ಅಧಿಕಾರಿಗಳ ಭೇದವನ್ನು
ತೋರಿಸಿಕೊಟ್ಟು ತದನುಸಾರವಾಗಿ ಶ್ರೀಕೃಷ್ಣನು ಸಮೂಲ ಮಾರ್ಗವನ್ನು ಸರಿಯಾಗಿ ಹೇಳುತ್ತಿರುವನು ॥೧೬೩॥

ಕರೂನಿ ಮಲಸ್ನಾನ ಆಪಣ । ವೈದಿಕ ತಾಂತ್ರಿಕ ಮಂತ್ರಸ್ನಾನ । ಸಾರೂನಿ ನಿತ್ಯವಿಧಾನ ''ಶುಚಿತ್ವಪಣ'' ಯಾ ನಾಂವ ।।೧೬೪।। ಮಗ ದೇವಪೂಜಾಸಂಭಾರ । ಶೋಧೂನಿ ಕರಾವೇ ಪವಿತ್ರ । ಯಥಾಸ್ಥಾನೀ ಪೂಜಾಪ್ರಕಾರ । ಗಂಧಾದಿ ಉಪಚಾರ ಠೇವಾವೇ ।।೧೬೫।। ಶ್ವೇತಕಂಬಲ ಚೈಲಾಜಿನ । ಪೂರ್ವದರ್ಭಾಗ್ರೀ ಆಸನ । ಪೂರ್ವಾಮುಖ ಬೈಸಾವೇ ಆಪಣ । ಅಥವಾ ಜಾಣ ಉದಂಗ್‌ಮುಖ ।।೧೬೬।। ಸ್ಥಾವರಮೂರ್ತೀ ಪೂಜಿತಾ ದೇಖ । ಆಸನ ಕರಾವೇ ಮೂರ್ತಿಸಂಮುಖ । ಹಾ ಆಸನವಿಧಿ ನಿರ್ದೋಖ । ಪೂಜಾನ್ಯಾಸಾದಿಕ ಹರಿ ಸಾಂಗೇ ।।೧೬೭।।

ಕೃತನ್ಯಾಸಃ ಕೃತನ್ಯಾಸಾಂ ಮದರ್ಚಾಂ ಪಾಣಿನಾಮೃಜೇತ್ । ಕಲಶಂ ಪ್ರೋಕ್ಷಣೀಯಂ ಚ ಯಥಾವದುಪಸಾಧಯೇತ್ ।।೨೦।।

ಅರ್ಥ:- ಪ್ರಾರಂಭದಲ್ಲಿ ವಿಧಿಪೂರ್ವಕವಾಗಿ ಅಂಗನ್ಯಾಸ ಮತ್ತು ಕರನ್ಯಾಸವನ್ನು ಮಾಡಬೇಕು. ತದನಂತರ ಮೂರ್ತಿಯಲ್ಲಿ ಮಂತ್ರನ್ಯಾಸವನ್ನು ಮಾಡಬೇಕು. ಆಮೇಲೆ ಕೈಗಳಿಂದ ಪ್ರತಿಮೆ ಮೇಲಿನ ಪೂರ್ವ ಸಮರ್ಪಿತ ಸಾಮಗ್ರಿಗಳನ್ನು ತೆಗೆದು ಸ್ವಚ್ಛಗೊಳಿಸಬೇಕು. ಇದಾದನಂತರ ಜಲದಿಂದ ತುಂಬಿದ ಕಲಶ ಮತ್ತು ಪ್ರೋಕ್ಷಣಾರ್ಥ ಇರುವ ಉದಕಪಾತ್ರೆ ಇತ್ಯಾದಿಗಳನ್ನು ಗಂಧಪುಷ್ಪಗಳಿಂದ ಪೂಜಿಸಬೇಕು.

ವಿಧಿಯುಕ್ತ ಘಾಲೂನಿ ಆಸನ । ಗುರೂಸೀ ಕರಾವೇ ನಮನ । ಪರಮಗುರುಪರಮೇಷ್ಠೀಸೀ ಜಾಣ । ಕರಾವೇ ಅಭಿವಂದನ ಅತಿಪ್ರೀತೀ ।।೧೬೮।। ಜೋ ಮಂತ್ರ ಪ್ರಾಪ್ತ ಆಪಣಾಂಸ । ತ್ಯಾ ಮಂತ್ರಾಚೇ ದೇಹೀ ಕರಾವೇ ನ್ಯಾಸ । ಮಂತ್ರಮೂರ್ತೀ ಆಣೋನಿ ಧ್ಯಾನಾಸ । ಪೂಜಾ ''ಮಾನಸ'' ಕರಾವೀ ।।೧೬೯।। ಜೇ ಮೂರ್ತಿ ಆಲಿ ಧ್ಯಾನಾಸೀ । ತೇಚಿ ಆಣಾವಯಾ ಪ್ರತಿಮೇಸೀ । ಹಾತೀ ಧರೋನಿಯಾ ಅರ್ಚೇಸೀ । ಕರಾವೇ ನ್ಯಾಸಾಸೀ ಪ್ರತಿಮಾ ಅಂಗೀ ।।೧೭೦।। ಕಲಶ ಆಣಿ ಪ್ರೋಕ್ಷಣೀ ಜಾಣ । ಸಾಧಾವೀ ಯಥಾವಿಧಾನ । ಜಳೇ ಕರೋನಿಯಾ ಪೂರ್ಣ । ದೂರ್ವಾದಿ ಚಂದನ ದ್ರವ್ಯಯುಕ್ತ ।।೧೭೧।।

ತದದ್ಭಿರ್ದೇವಯಜನಂ ದ್ರವ್ಯಾಣ್ಯಾತ್ಮಾನಮೇವ ಚ । ಪ್ರೋಕ್ಷ್ಯ ಪಾತ್ರಾಣಿ ತ್ರೀಣ್ಯದ್ಭಿಸ್ತೈಸ್ತೈರ್ದ್ರವ್ಯೈಶ್ಚ ಸಾಧಯೇತ್ ।।೨೧।।

ಅರ್ಥ:- ಆ ಪ್ರೋಕ್ಷಣೀಯ ಜಲದಿಂದ ದೇವರ ಪೂಜಾಸ್ಥಾನ, ಸಾಮಗ್ರಿಗಳು ಮತ್ತು ಸ್ವಶರೀರ ಇವುಗಳಿಗೆ ಪ್ರೋಕ್ಷಣೆಯನ್ನು ಮಾಡಬೇಕು. ಪಾದ್ಯ, ಅರ್ಘ್ಯ ಮತ್ತು ಆಚಮನ ಇವುಗಳಿಗಾಗಿ ಇರುವ ಪಾತ್ರೆಗಳನ್ನು ಕಲಶೋದಕದಿಂದ ತುಂಬಬೇಕು ಮತ್ತು ಚಂದನ ಪುಷ್ಪಾದಿ ದ್ರವ್ಯಗಳಿಂದ ಅವುಗಳಿಗೆ ಸಂಸ್ಕಾರ ಮಾಡಬೇಕು.

ತೇ ಪ್ರೋಕ್ಷಣಪಾತ್ರೀಂಚೇ ಜಳ । ನಖೋದಕೇ ನ ಕರೂನಿ ನಿರ್ಮಳ । ತೇಣೇ ಪೂಜಾಸಂಭಾರ ಸಕಳ । ಕುಶಾಗ್ರೇ ಕೇವಳ ಪ್ರೋಕ್ಷಾವಾ ।।೧೭೨।। ತೇಣೇಚಿ ಪ್ರೋಕ್ಷಾವೇ ದೇವಸದನ । ಆಪಣಾಂಸೀ ಕರಾವೇ ಪ್ರೋಕ್ಷಣ । ಪ್ರೋಕ್ಷೋನಿ ದೇವಪೂಜಾಸ್ಥಾನ । ಪೂಜಾವಿಧಾನ ಮಾಂಡಾವೇ ।।೧೭೩।।

ಶರೀರ ಶುದ್ಧಿಯ ಸ್ನಾನವಾದ ನಂತರ ವೈದಿಕ ತಾಂತ್ರಿಕ ಮಂತ್ರಸ್ನಾನವನ್ನು ಮಾಡಬೇಕು. ಇದಕ್ಕೆ ಮಾತ್ರ ''ಶುಚಿರ್ಭೂತ'' ಎಂದು ಹೇಳುವರು ।।೧೬೪।। ತದನಂತರ ದೇವಪೂಜೆಯ ಸಾಹಿತ್ಯಗಳನ್ನು ತಿಕ್ಕಿ, ತೊಳೆದು, ಒರೆಸಿ ಸ್ವಚ್ಛ ಮಾಡಬೇಕು. ಗಂಧಪುಷ್ಪಾದಿ ಪೂಜೆಯ ಸಾಹಿತ್ಯಗಳನ್ನು ಇಡುವ ನಿಶ್ಚಿತ ಸ್ಥಳದಲ್ಲಿಯೇ ಇಡಬೇಕು ।।೧೬೫।। ಬಿಳಿಕಂಬಳಿ, ಮೃಗಚರ್ಮ ಮತ್ತು ಪೂರ್ವಾಭಿಮುಖ ದರ್ಭಾಗ್ರ ಆಸನವನ್ನು ಹಾಕಿ ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು ।।೧೬೬।। ಸ್ಥಾವರ ಮೂರ್ತಿಯ ಪೂಜೆಯನ್ನು ಮಾಡುವ ಕಾಲಕ್ಕೆ ನಮ್ಮ ಆಸನವನ್ನು ಮೂರ್ತಿಯ ಎದುರಿನಲ್ಲಿ ಹಾಕಬೇಕು. ಇದು ನಿರ್ದೋಷವಾದ ಆಸನವಿಧಿಯಾಗಿರುವುದು. ಈಗ ಪೂಜ್ಯಾನ್ಯಾಸ ಇತ್ಯಾದಿ ವಿಷಯವನ್ನು ಕುರಿತು ಶ್ರೀಕೃಷ್ಣನು ಹೇಳುವನು ।।೧೬೭।।

ವಿಧಿಯುಕ್ತವಾಗಿ ಆಸನವನ್ನು ಹಾಕಿ ಗುರುಗಳಿಗೆ ನಮಸ್ಕಾರವನ್ನು ಮಾಡಬೇಕು. ನಂತರ ಪರಮಗುರು ಅಂದರೆ ಗುರುವಿನ ಗುರು ಮತ್ತು ಪರಮೇಷ್ಠಿಗುರು ಅಂದರೆ ಪರಮಗುರುವಿನ ಗುರು. ಇವರನ್ನೂ ಕೂಡ ಅತ್ಯಂತ ಪ್ರೇಮದಿಂದ ಅಭಿವಂದನೆಯನ್ನು ಮಾಡಬೇಕು ।।೧೬೮।। ಗುರುಗಳಿಂದ ಯಾವ ಮಂತ್ರವು ಪ್ರಾಪ್ತವಾಗಿರುವುದೋ, ಆ ಮಂತ್ರದಿಂದ ದೇಹದಲ್ಲಿ ನ್ಯಾಸವನ್ನು ಮಾಡಬೇಕು. ಮಂಗಲಮೂರ್ತಿಯ ಧ್ಯಾನವನ್ನು ಮಾಡಿ ಮಾನಸ ಪೂಜೆಯನ್ನು ಮಾಡಬೇಕು ।।೧೬೯।। ಯಾವ ಪ್ರಕಾರದ ಮೂರ್ತಿಯು ಧ್ಯಾನದಲ್ಲಿ ಹಿಡಿದಿದೆಯೋ, ಅದನ್ನು ಪ್ರತಿಮೆಯಲ್ಲಿ ಬರುವುದಕ್ಕಾಗಿ ಪ್ರತಿಮೆಯನ್ನು ಕೈಯಲ್ಲಿ ಧರಿಸಿ ಅದರ ಅಂಗಕ್ಕೆ ನ್ಯಾಸವನ್ನು ಮಾಡಬೇಕು ।।೧೭೦।। ಕಲಶ ಮತ್ತು ಪ್ರೋಕ್ಷಣಪಾತ್ರೆಯನ್ನು ಯೋಗ್ಯ ಸ್ಥಳದಲ್ಲಿಟ್ಟು ಅವುಗಳನ್ನು ಜಲದಿಂದ ತುಂಬಿ ಅದರಲ್ಲಿ ದೂರ್ವಾ, ಗಂಧ ಇತ್ಯಾದಿ ಪೂಜಾ ದ್ರವ್ಯಗಳನ್ನು ಹಾಕಬೇಕು ।।೧೭೧।।

ಯಾವ ಪ್ರೋಕ್ಷಣಾಪಾತ್ರೆಯಲ್ಲಿ ಬೆರಳನ್ನು ಇಡದೇ, ದರ್ಭೆಯಿಂದ ಪೂಜೆಯ ಸರ್ವ ಸಾಹಿತ್ಯಗಳಿಗೆ ಜಲದ ಪ್ರೋಕ್ಷಣೆಯನ್ನು ಮಾಡಬೇಕು ।।೧೭೨।। ಇದರಿಂದ ದೇವರ ಮನೆಯನ್ನೂ ಕೂಡ ಪ್ರೋಕ್ಷಣೆಯನ್ನು ಮಾಡಬೇಕು. ತಾನು ಸ್ವತಃಕ್ಕೆ ಪ್ರೋಕ್ಷಣೆ ಮಾಡಿಕೊಳ್ಳಬೇಕು. ದೇವ ಪೂಜೆಯ ಸ್ಥಳಕ್ಕೆ ಪ್ರೋಕ್ಷಣೆಯನ್ನು ಮಾಡಿ ಪೂಜೆಗೆ ಆರಂಭಿಸಬೇಕು ।।೧೭೩।।

ಪಾದ್ಯ-ಅರ್ಘ್ಯ- ಆಚಮನೀಯೇ । ತದರ್ಥ ಮಾಂಡಾವೀ ಪಾತ್ರತ್ರಯೇ । ಜಳೇ ಪೂರ್ಣ ಕರೂನಿ ಪಾಹೇ । ಭಿನ್ನ ದ್ರವ್ಯ ಆಹೇ ಪಾತ್ರತ್ರಯಾಸೀ ।।೧೭೪।। ಶ್ಯಾಮಾಕ - ದೂರ್ವಾ - ಅಬ್ಜ - ವಿಷ್ಣುಕ್ರಾಂತಾ । ''ಪಾದ್ಯಪಾತ್ರೀ'' ಹೇ ದ್ರವ್ಯಶುದ್ಧತಾ । ಗಂಧ ಪುಷ್ಪ ಫಲ ಅಕ್ಷತಾ । ಏವಂ ಕುಶಾಗ್ರತಾ ''ಅರ್ಘ್ಯಪಾತ್ರೀ'' ।।೧೭೫।। ಏಳಾ ವಾಳಾ ಜಾತೀಫಳ । ಲವಂಗ ಕರ್ಪೂರ ಕಂಕೋೞ । ''ಆಚಮನಪಾತ್ರೀ'' ಹಾ ದ್ರವ್ಯಮೇಳ । ಶುದ್ಧ ಜಳ ಸಮಯುಕ್ತ ।।೧೭೬।।

ಪಾದ್ಯಾರ್ಘ್ಯಾಚಮನೀಯಾರ್ಥ ತ್ರೀಣಿ ಪಾತ್ರಾಣಿ ದೇಶಿಕಃ ।
ಹೃದಾ ಶೀರ್ಷ್ಣಾಽಥ ಶಿಖಯಾ ಗಾಯತ್ರ್ಯಾ ಚಾಭಿಮಂತ್ರಯೇತ್ ।೨೨।।

ಅರ್ಥ:- ಪಾದ್ಯ, ಅರ್ಘ್ಯ ಮತ್ತು ಆಚಮನೀಯ ಇವುಗಳಿಗಾಗಿ ಇರುವ ಮೂರು ಪಾತ್ರೆಗಳನ್ನು ಪೂಜಕನು ಹೃದಯಾಶೀರ್ಷ ಹಾಗೂ ಶಿಖಾ ಈ ಮಂತ್ರದಿಂದ ಮತ್ತು ಗಾಯತ್ರಿಯಿಂದ ಅಭಿಮಂತ್ರಿಸಬೇಕು.

ಗುರುಮಂತ್ರದೀಕ್ಷಾ ಜೈಸೀ ಜ್ಯಾಸೀ । ತೋಚಿ ನಿಜಮಾರ್ಗ ಶಿಷ್ಯಾಸೀ । ತೇಣೇ ಪಾದ್ಯಾದಿ ತಿಹೀ ಪಾತ್ರಾಂಸೀ । ಸಂಪ್ರದಾಯೇಸೀ ಮಾಂಡಾವೇ ।।೧೭೭।। ಪಾದ್ಯ ದ್ಯಾವೇ ಹೃದಯಮಂತ್ರೇ । ಅರ್ಘ್ಯ ಅರ್ಪಾವೇ ಶಿರೋಮಂತ್ರೇ । ಆಚಮನ ದ್ಯಾವೇ ಶಿಖಾಮಂತ್ರೇ । ಗುರುಸಂಸ್ಕಾರೇ ಆಗಮೋಕ್ತ ।।೧೭೮।। ತೇಚಿ ತಿನೀ ಪಾತ್ರೇ ಜಾಣ । ಗಾಯತ್ರೀಮಂತ್ರೇ ಆಪಣ । ಅಭಿಮಂತ್ರೂನಿಯಾ ಪೂರ್ಣ । ದೇವಾರ್ಪಣ ಕರಾವೀ ।।೧೭೯।। ಗುರುಸಂಪ್ರದಾಯ ನೇಟಕ । ಯಾಲಾಗೀ ತ್ಯಾತೇ ''ದೇಶಿಕ'' । ಸ್ವಯೇ ಬೋಲಿಲಾ ಯದುನಾಯಕ । ದೀಕ್ಷಾವಿವೇಕ ನಿಜದ್ರಷ್ಟಾ ।।೧೮೦।। ಆಗಮಶಾಸ್ತ್ರೀಂಚಾ ನಿಜಮಾರ್ಗ । ಭೂತಶುದ್ಧಿ ಪ್ರಾಣಪ್ರತಿಷ್ಠಾ ಯೋಗ । ತೇಣೇಂಚಿ ಅನ್ವಯೇ ಶ್ರೀರಂಗ । ಶ್ಲೋಕಾರ್ಥೇ ಸಾಂಗ ಸಾಂಗತ ।।೧೮೧।।

ಪಿಂಡೇ ವಾಯ್ವಗ್ನಿಸಂಶುದ್ಧೇ ಹೃತ್ಪದ್ಮಸ್ಥಾಂ ಪರಾಂ ಮಮ । ಅಣ್ವೀಂ ಜೀವಕಲಾಂ ಧ್ಯಾಯೇನ್ನಾದಾಂತೇ ಸಿದ್ಧಭಾವಿತಾಮ್ ।೨೩।।

ಅರ್ಥ:- ತದನಂತರ ಪ್ರಾಣಾಯಾಮದ್ವಾರಾ ಪ್ರಾಣವಾಯು ಮತ್ತು ಭಾವನಾದ್ವಾರಾ ಶರೀರದಲ್ಲಿನ ಅಗ್ನಿಯು ಶುದ್ಧವಾದ ನಂತರ ಹೃದಯ ಕಮಲದಲ್ಲಿ ಪರಮ ಸೂಕ್ಷ್ಮ ಮತ್ತು ಶ್ರೇಷ್ಠ ದೇದಿಪ್ಯಮಾನ ನನ್ನ ಜೀವಕಲೆಯ ಧ್ಯಾನವನ್ನು ಮಾಡಬೇಕು. ಮಹಾ ಮಹಾ ಸಿದ್ಧಮುನಿಗಳು ಓಂಕಾರದ ಅಕಾರ, ಉಕಾರ, ಮಕಾರ, ಬಿಂದೂ, ಮತ್ತು ನಾದ ಈ ಐದು ಕಲೆಯ ಕೊನೆಯಲ್ಲಿ ಈ ಜೀವಕಲೆಯ ಧ್ಯಾನವನ್ನು ಮಾಡುವರು.

ವಾಯುಬೀಜೇ ಆವಾಹೂನೀ । ಪಿಂಗಲಾ ಪ್ರಾಣ ಪೂರೂನೀ । ತೋಚಿ ಕುಂಭಕೇ ಸ್ತಂಭೂನಿ ಮಾತ್ರಾಧಾರಣೇ ಧರಾವಾ ।।೧೮೨।। ವಾಯು ಜೋ ಧಾರಣಾ ಧರಾವಾ । ತೋ ಜಂವ ಫುಟೇನಾ ಅವ್ಹಾಸವ್ಹಾ । ತಂವಚಿ ವರೀ ನಿರೋಧಾವಾ । ಮಗ ರೇಚಾವಾ ಶನೈಃಶನೈಃ ।।೧೮೩।।

ಪಾದ್ಯ, ಅರ್ಘ್ಯ ಮತ್ತು ಆಚಮನೀಯ ಇವುಗಳಿಗಾಗಿ ಮೂರು ಪಾತ್ರೆಗಳನ್ನು ಜೋಡಿಸಬೇಕು. ತದನಂತರ ಅವುಗಳಲ್ಲಿ ಜಲವನ್ನು ತುಂಬಿಸಿ ಮೂರೂ ಪಾತ್ರೆಗಳಲ್ಲಿ ಭಿನ್ನ ಭಿನ್ನ ಪದಾರ್ಥಗಳನ್ನು ಹಾಕಬೇಕು ।।೧೭೪।। ಶ್ಯಾಮಾಕ, ದುರ್ವಾ, ಕಮಲ ಮತ್ತು ವಿಷ್ಣುಕಾಂತ ಇವು ಪಾದ್ಯ ಪಾತ್ರೆಯ ಶುದ್ಧ ದ್ರವ್ಯವಾಗಿರುವುವು. ಗಂಧ, ಪುಷ್ಪ, ಫಲ, ಅಕ್ಷತೆ ಮತ್ತು ದರ್ಭೆ ಇವು ಅರ್ಘ್ಯ ಪಾತ್ರೆಯ ದ್ರವ್ಯವಾಗಿರುವುವು ।।೧೭೫।। ಏಲಕ್ಕಿ, ಬಾಳದಬೇರು, ಜಾಜೀಕಾಯೀ, ಕರ್ಪೂರ ಮತ್ತು ಕಂಕೋಳ ಇವು ಆಚಮನೀಯ ಪಾತ್ರೆಯಲ್ಲಿ ಹಾಕುವ ಪದಾರ್ಥಗಳಾಗಿರುವುವು ।।೧೭೬।।

ಯಾವ ಪ್ರಕಾರವಾಗಿ ಗುರುಮಂತ್ರದ ದೀಕ್ಷೆಯು ದೊರಕಿರುವುದೋ, ಅದೇ ಪ್ರಕಾರವಾಗಿ ಶಿಷ್ಯನ ಮಾರ್ಗವಿರುವುದು. ತನ್ನ ಗುರುಸಂಪ್ರದಾಯದಂತೆ ಮೂರು ಪಾತ್ರೆಗಳನ್ನು ರಚಿಸಬೇಕು ।।೧೭೭।। ಗುರುಸಂಸ್ಕಾರಪ್ರಮಾಣದಂತೆ ಶಾಸ್ತ್ರೋಕ್ತವಾಗಿ ಹೃದಯದ ಮಂತ್ರವನ್ನು ಉಚ್ಚರಿಸಿ ಪಾದ್ಯವನ್ನು ಕೊಡಬೇಕು. ಮಸ್ತಕದ ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು. ಶಿಖಾಮಂತ್ರದಿಂದ ಆಚಮನವನ್ನು ಸ್ವೀಕರಿಸಬೇಕು ।।೧೭೮।। ಈ ಮೂರೂ ಪಾತ್ರೆಗಳನ್ನು ತಾನು ಗಾಯತ್ರೀ ಮಂತ್ರದಿಂದ ಅಭಿಮಂತ್ರಿಸಿ ದೇವರಿಗೆ ಅರ್ಪಿಸಬೇಕು ।।೧೭೯।। ಗುರುಸಂಪ್ರದಾಯದಿಂದ ಸಂಸ್ಕಾರಸಂಪನ್ನನಾಗಿರುವುದರಿಂದ ದೀಕ್ಷೆಯ ವಿವೇಕವು ಇರುವುದರಿಂದ ಆತ್ಮದೃಷ್ಟ್ಯಾ ಶ್ರೀಕೃಷ್ಣನು ತಾನು ಸ್ವತಃ ಆತನಿಗೆ ''ದೇಶಿಕ'' ಎಂದು ಹೇಳಿರುವನು ।।೧೮೦।। ಈಗ ಆಗಮಶಾಸ್ತ್ರದ ಮಾರ್ಗ, ಭೂತಶುದ್ಧೀ, ಪ್ರಾಣಪ್ರತಿಷ್ಠೆಯ ಯೋಗ, ಈ ವಿಷಯವಾಗಿ ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ಪ್ರತಿಪಾದನೆಯನ್ನು ಮಾಡುತ್ತಿರುವನು ।।೧೮೧।।

ವಾಯುಬೀಜದಿಂದ ಆವಾಹನೆಯನ್ನು ಮಾಡಿ ಪಿಂಗಳಾ ನಾಡಿಯಿಂದ ಪ್ರಾಣವನ್ನು ಪೂರ್ಣವಾಗಿ ತುಂಬಿಕೊಳ್ಳಬೇಕು. ಅದನ್ನು ಕುಂಭಕದಿಂದ ಆವರಿಸಿಕೊಂಡು ಮಾತ್ರಾಧಾರಣೆಯಿಂದ ಹಿಡಿದುಕೊಳ್ಳಬೇಕು ।।೧೮೨।। ಬಿಗಿದುಹಿಡಿದುಕೊಂಡಿರುವ ವಾಯು ಎಲ್ಲಿಯವರೆಗೆ ಇತರ ಸಿಕ್ಕ ಮಾರ್ಗಕ್ಕೆ ಹೋಗುವುದಿಲ್ಲವೋ, ಅಲ್ಲಿಯವರೆಗೆ ಅದನ್ನು ಹಿಡಿದಿಟ್ಟಿರಬೇಕು. ತದನಂತರ ಮೆಲ್ಲಮೆಲ್ಲನೇ ಹೊರಗೆ ಬಿಡಬೇಕು ।।೧೮೩।।

ಐಸೇ ಕರಿತಾ ಪ್ರಾಣಧಾರಣ । ಸ್ವಯೇ ಕಲ್ಪಾವೇ ಶರೀರಪೋಷಣ । ಶರೀರ ಶೋಷಲೇ ಮಾನೂನಿ ಜಾಣ । ದೇಹದಹನ ಮಾಂಡಾವೇ ॥೧೮೪॥ ಆಧಾರಸ್ಥಿತ ಜೋ ಅಗ್ನೀ । ತೋ ಅಗ್ನಿಬೀಜೇ ಚೇತವೂನೀ । ತೋಚಿ ದೇಹ ಲಾವೂನಿ ದಹನೀ । ಭಸ್ಮ ಮಾನೂನಿ ನಿಜದೇಹ ॥೧೮೫॥ ದೇಹ ದಹನೇ ಅತಿಸಂತಪ್ತ । ತೇಥ ಚಂದ್ರಬೀಜೇ ಚಂದ್ರಾಮೃತ । ಆಣೋನಿ ನಿವವಾವೇ ಸಮಸ್ತ । ನವಾ ದೇಹ ತೇಥ ಕಲ್ಪಾವಾ ॥೧೮೬॥ ದೇಹ ಕಲ್ಪಾವಾ ಜೋ ಏಥ । ಪೂರ್ಣ ಪಾಟವ್ಯ ಇಂದ್ರಿಯಯುಕ್ತ । ತ್ಯಾಚ್ಯಾ ಹೃದಯಪದ್ಮಾ ಆಂತ । ಅಣ್ವೀ ಜೀವಕಳಾ ತೇಥ ಪಹಾವೀ ಮಾಝೀ ॥೧೮೭॥ ಮಾಝೀ ಜೀವಕಳಾ ಪರಮ । ಸೂಕ್ಷ್ಮಾಹೂನಿ ಅತಿ ಸೂಕ್ಷ್ಮ । ಯಾಲಾಗೀ ''ಅಣ್ವೀ'' ತಿಚೇ ನಾವ । ವಿಶ್ರಾಮಧಾಮ ಜಗಾಚೇ ॥೧೮೮॥ ಅಕಾರ ಉಕಾರ ಮಕಾರಸ್ಥಿತೀ । ಯಾತೇ ಪ್ರಕಾಶೇ ಅಣ್ವೀ ಜೀವಜ್ಯೋತೀ । ತೇ ತಂವ ಶಬ್ದಾಹೂನಿ ಪರತಿ । ಯೋಗೀ ನಾದಾಂತೀ ಲಕ್ಷಿಜೇ ॥೧೮೯॥ ತೇ ದೇಹೀ ಸಬಾಹ್ಯ ಪರಿಪೂರ್ಣ । ಅಸೋನಿ ಸೂಕ್ಷ್ಮತ್ವೇ ಅಲಕ್ಷ್ಯ ಜಾಣ । ತೀತೇ ಹೃತ್ಪದ್ಮೀ ಯೋಗಿಜನ । ಲಕ್ಷಿತೀ ಆಸನಪ್ರಾಣಾಯಾಮೇ ॥೧೯೦॥ ತೇ ಅಣ್ವೀ ಜೀವಕಳಾ ಅವ್ಯಕ್ತ । ತೀತೇ ಕರೋನಿಯಾ ವ್ಯಕ್ತ । ಯೋಗೀ ನಿಜಭಾವನಾಯುಕ್ತ । ಹೃದಯೀ ಚಿಂತಿತ ಮಹಾಮೂರ್ತಿ ॥೧೯೧॥ ''ನಾರ'' ಜೀವಸಮೂಹ ಜಾಣ । ತ್ಯಾಂಚೇ ಜೇ ಆಯತನಸ್ಥಾನ । ತೇ ಮಹಾಮೂರ್ತಿ ಶ್ರೀನಾರಾಯಣ । ಹೃದಯೀ ಸಜ್ಜನ ಚಿಂತಿತೀ ॥೧೯೨॥

ತಯಾಽಽತ್ಮ ಭೂತಯಾ ಪಿಂಡೇ ವ್ಯಾಪ್ತೇ ಸಂಪೂಜ್ಯ ತನ್ಮಯಃ ।
ಆವಾಹ್ಯಾರ್ಚಾದಿಷು ಸ್ಥಾಪ್ಯ ನ್ಯಸ್ತಾಂಗಂ ಮಾಂ ಪ್ರಪೂಜಯೇತ್ ॥೨೪॥

ಅರ್ಥ:- ಈ ಜೀವನ ಕಲೆಯು ಆತ್ಮಸ್ವರೂಪವಾಗಿರುವುದು. ಯಾವ ವೇಳೆಯಲ್ಲಿ ಅದರ ದಿವ್ಯ ತೇಜದಿಂದ ಸಂಪೂರ್ಣ ಅಂತಃಕರಣವು ಮತ್ತು ಶರೀರವು ತುಂಬಿಬಿಡುವುದೋ ಆ ಸಮಯದಲ್ಲಿ ಮಾನಸಿಕ ಉಪಚಾರಗಳಿಂದ ಮನೋಮಯವಾಗಿ ಅದರ ಪೂಜೆಯನ್ನು ಮಾಡಬೇಕು. ತದನಂತರ ತನ್ಮಯನಾಗಿ ನನ್ನ ಆವಾಹನೆಯನ್ನು ಮಾಡಬೇಕು. ಮತ್ತು ಪ್ರತಿಮಾ ಇತ್ಯಾದಿಗಳಲ್ಲಿ ಸ್ಥಾಪಿಸಬೇಕು. ಆಮೇಲೆ ಮಂತ್ರದ್ವಾರಾ ಅಂಗನ್ಯಾಸವನ್ನು ಮಾಡಿ ಅದರಲ್ಲಿ ನನ್ನ ಪೂಜೆಯನ್ನು ಮಾಡಬೇಕು.

ಜೇವೀ ಗೃಹ ಪ್ರಕಾಶೀ ದೀಪಸ್ಥಿತೀ । ತೇವೀ ದೇಹ ಪ್ರಕಾಶೀ ಜೀವಜ್ಯೋತೀ । ತೇ ಸಾಂಗೋಪಾಂಗ ಮಾಝೀ ಮೂರ್ತಿ । ಹೃದಯೀ ಚಿಂತಿತೀ ಸಾಕಾರ ॥೧೯೩॥ ಜೇವೀ ತೂಪ ತೂಪಪಣೇ ಥಿಜಲೇ । ತೇಚಿ ಅವರ್ಣ ವರ್ಣವ್ಯಕ್ತೀ ಆಲೇ । ತೇವೀ ಚೈತನ್ಯ ಮಾಝೇ ಮುಸಾವಲೇ । ಲೀಲಾವಿಗ್ರಹೇ ಝಾಲೇ ಸಾಕಾರ ॥೧೯೪॥

ಹೀಗೆ ಪ್ರಾಣಾಯಾಮವನ್ನು ಮಾಡುತ್ತಿರಲು ಆಗ ಶರೀರವು ಕ್ಷೀಣವಾಗಿದೆ ಎಂದು ಹೀಗೆ ತಿಳಿಯಬೇಕು. ಶರೀರವು ಶುಷ್ಕವಾಯಿತೆಂದು ಭಾವನೆಯನ್ನು ಮಾಡಿಕೊಂಡು ಅದರ ದಹನವನ್ನು ಮಾಡಬೇಕು ॥೧೮೪॥ ಮೂಲಾಧಾರ ಚಕ್ರದಲ್ಲಿನ ಅಗ್ನಿಯನ್ನು ಮಂತ್ರದಿಂದ ಜಾಗೃತ ಮಾಡಬೇಕು. ಅದು ದೇಹಕ್ಕೆ ಸುಟ್ಟು ಭಸ್ಮ ಮಾಡಿತು ಎಂದು ಹೀಗೆ ಕಲ್ಪನೆಯನ್ನು ಮಾಡಬೇಕು ॥೧೮೫॥ ದೇಹವು ಅಗ್ನಿಯಿಂದ ಅತಿಶಯವಾಗಿ ಸಂತಪ್ತವಾಗಿದೆ ಎಂದು ಹೀಗೆ ಕಲ್ಪನೆಯನ್ನು ಮಾಡಿ ಚಂದ್ರಬೀಜದಿಂದ ಚಂದ್ರನಲ್ಲಿಯ ಅಮೃತವನ್ನು ತಂದು ದೇಹಕ್ಕೆ ಶಾಂತವನ್ನಾಗಿ ಮಾಡಬೇಕು. ಇದರಿಂದ ತನ್ನ ದೇಹವು ಈಗ ಹೊಸದಾಯಿತು ಎಂದು ಹೀಗೆ ಕಲ್ಪನೆಯನ್ನು ಮಾಡಬೇಕು ॥೧೮೬॥ ಹೊಸ ದೇಹವು ಸರ್ವ ಇಂದ್ರಿಯಗಳಿಂದ ಯುಕ್ತವಾಗಿರಬೇಕು. ನಿರೋಗಿಯಾಗಿ ಕಾರ್ಯಮಗ್ನವಾಗಿರಬೇಕು. ಆ ಶರೀರದ ಹೃದಯಕಮಲದಲ್ಲಿ ನನ್ನ ''ಅಣ್ವೀ'' ಅಂದರೆ ಸೂಕ್ಷ್ಮವಾದ ಜೀವಕಲೆ ಇರುವುದು. ಅದನ್ನು ಅವಲೋಕನೆ ಮಾಡಬೇಕು ॥೧೮೭॥ ನನ್ನ ಈ ಯಾವ ಜೀವಕಲೆಯು ಸೂಕ್ಷ್ಮಕ್ಕಿಂತಲೂ ಅತ್ಯಂತ ಸೂಕ್ಷ್ಮವಾಗಿರುವುದು. ಆದ್ದರಿಂದ ಅದಕ್ಕೆ ''ಅಣ್ವೀ'' ಎಂದು ಕರೆಯುವರು. ನಿಜವಾಗಿಯೂ ಅದು ಸರ್ವ ವಿಶ್ವದ ವಿಶ್ರಾಂತಿಸ್ಥಾನವಾಗಿರುವುದು ॥೧೮೮॥ ಅಕಾರ, ಉಕಾರ ಮತ್ತು ಮಕಾರ ಇವುಗಳಿಗೆ ಈ ಅಣ್ವೀ ಜೀವಜ್ಯೋತಿಯೇ ಪ್ರಕಾಶಿತಗೊಳಿಸುವುದು. ಅದು ಶಬ್ದಕ್ಕಿಂತಲೂ ಮೇಲೆ ಇರುವುದರಿಂದ ಸರ್ವ ಮಹಾನ ಯೋಗಿಗಳವರು ನಾದದ ಕೊನೆಯಲ್ಲಿ ಅದನ್ನು ನೋಡುತ್ತಿರುವರು ॥೧೮೯॥ ಅದು ದೇಹದಲ್ಲಿ ಒಳಹೊರಗೆ ಪರಿಪೂರ್ಣವಾಗಿ ತುಂಬಿರುವುದು. ಅದು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಯೋಗ್ಯ ಪ್ರಯತ್ನವಿಲ್ಲದೇ ಕಾಣಲಾರದು. ಯೋಗೀ ಜನರು ಪ್ರಾಣಾಯಾಮದ ಯೋಗದಿಂದ ತಮ್ಮ ಹೃದಯದಲ್ಲಿ ಕಾಣುತ್ತಿರುವರು ॥೧೯೦॥ ಈ ಯಾವ ಅಣ್ವೀ ಜೀವಕಲೆಯು ಅವ್ಯಕ್ತ ಸ್ವರೂಪದಲ್ಲಿರುವುದು. ಯೋಗಿಗಳು ಅದನ್ನು ಆತ್ಮನಿಷ್ಠೆಯಿಂದ ವ್ಯಕ್ತಗೊಳಿಸುವರು ಮತ್ತು ಅದರ ಮಹಾಮೂರ್ತಿಯನ್ನು ಹೃದಯಧಲ್ಲಿ ಚಿಂತಿಸುವರು ॥೧೯೧॥ ''ನಾರ'' ಎಂದರೆ ಜೀವಸಮೂಹವು. ಅದರ ಅಯನ ಅಂದರೆ ಸ್ಥಾನವು. ಹೀಗಿರುವ ಮಹಾಮೂರ್ತಿ ನಾರಾಯಣನ ಚಿಂತನೆಯನ್ನು ಸಜ್ಜನರು ತಮ್ಮ ಹೃದಯದಲ್ಲಿ ಮಾಡುವರು ॥೧೯೨॥

ದೀಪವು ಮನೆಯನ್ನು ಹೇಗೆ ಪ್ರಕಾಶಗೊಳಿಸುವುದೋ ಅದರಂತೆ ಜೀವಜ್ಯೋತಿ ಇದು ದೇಹವನ್ನು ಪ್ರಕಾಶಗೊಳಿಸುವುದು. ಈ ನನ್ನ ಅಂಗಾಂಗ ಸಹಿತ ಮೂರ್ತಿಯನ್ನು ಹೃದಯದಲ್ಲಿ ಚಿಂತನೆಯನ್ನು ಮಾಡಬೇಕು ॥೧೯೩॥ ತುಪ್ಪವು ಹೆಪ್ಪುಗಟ್ಟಲು ಆಗ ಅದಕ್ಕೆ ಮೂಲತಃ ಬಣ್ಣ, ಆಕಾರವಿಲ್ಲದಿದ್ದರೂ, ಹೇಗೆ ಬಣ್ಣ ಆಕಾರ ಪ್ರಾಪ್ತವಾಗುವುದೋ, ಅದರಂತೆ ನನ್ನ ಚೈತನ್ಯವು ಹೆಪ್ಪುಗಟ್ಟಿ ಲೀಲಾ ಶರೀರದಿಂದ ಸಾಕಾರವಾಗುವುದು ॥೧೯೪॥

ಐಶೀ ತೇ ಮಾಝೀ ಸಗುಣ ಮೂರ್ತಿ । ಚಿನ್ಮಾತ್ರತೇಜೇ ಹೃದಯದೀಪ್ತಿ । ತಿನೇ ವ್ಯಾಪೂನಿ ದೇಹಾಚೀ ಸ್ಥಿತೀ । ಚಿತ್ತೀ ನಿಜಭಕ್ತೀ ಉಪಜವೀ ॥೧೯೫॥ ದೇಹ ಜಡ ಮೂಢ ಅಚೇತನ । ತೇಥ ಮೂರ್ತಿ ಪ್ರಕಟೋನಿ ಚಿದ್‌ಘನ । ಅಚೇತನಾ ಕರೋನಿ ಸಚೇತನ । ಕರವೀ ನಿಜಭಜನ ಉಲ್ಹಾಸೇ ॥೧೯೬॥ ಜೇವೀ ಹರಣುಲೀಚೇ ಸೋಂಗಜಾಣ । ಹರಿಣೀರೂಪೇ ನಾಚೇ ಆಪಣ । ತೇವೀ ಭಕ್ತಭಾವೇ ನಾರಾಯಣ । ಭಜನಪೂಜನ ಸ್ವಯೇ ಕರ್ತಾ ॥೧೯೭॥ ಯಾಪರೀ ಅಭೇದ ಭಜನ । ಮೂರ್ತಿ ಪೂಜಿತಾ ಚಿದ್ಘನ । ಪೂಜ್ಯ ಪೂಜಕ ಹೇ ಆಠವಣ । ಸಹಜೇ ಜಾಣ ಮಾವಳೇ ॥೧೯೮॥ ಮಾವಳಲ್ಯಾ ಹಾ ಭಜನಭೇದ । ಉಲ್ಹಾಸೇ ಭಕ್ತೀಚಾ ಅಭೇದಬೋಧ । ಹಾ ಗುರುಮಾರ್ಗ ಅತಿಶುದ್ಧ । ಪ್ರಿಯ ಪ್ರಸಿದ್ಧಿ ಮಜಲಾಗೀ ॥೧೯೯॥ ಜೇಥ ಮಾಝೀ ಅಭೇದಭಕ್ತೀ । ತೇಥ ಮೀ ಸರ್ವಸ್ವೇ ಶ್ರೀಪತೀ । ಆತುಡಲೋ ಭಕ್ತಾಂಚ್ಯಾ ಹಾತೀ । ಸ್ವಾನಂದಪ್ರೀತೀ ಉಲ್ಹಾಸೇ ॥೨೦೦॥ ಜೇವೀ ಕಾ ಅಘಾಟ ಮೇಘಜಳಾ । ಧರಣ ಬಾಂಧೋನಿ ಘಾಲಿಜೇ ತಳಾ । ತೇವೀ ಮಜ ಅನಂತಾಚಾ ಏಕವಳಾ । ಅಭೇಧ ಭಜನಾಲಾ ಆತುಡೇ ॥೨೦೧॥ ಆವಡೀ ವರ್ಷಲೇ ಸೈರಾ ಜಳ । ತೇಣೇ ನುಪಜೇಚಿ ಉತ್ತಮ ಫಳ । ತೇಚಿ ತಳಾ ಭರಲಿಯಾ ಪ್ರಬಳ । ತೇಣೇ ಪಿಕತೀ ಕೇವಳ ರಾಜಾಗರೇ ॥೨೦೨॥ ತೈಸೇ ಮಾಝೇ ಸ್ವರೂಪ ವಾಡೇಕೋಡೇ । ಅಭೇದಭಕ್ತಾಮಾಜೀ ಆತುಡೇ । ತೈ ಬ್ರಹ್ಮಾನಂದೇ ಗೋಂಧಳ ಪಡೇ । ಶೀಗ ಚಢೇ ಭಕ್ತೀಚೇ ॥೨೦೩॥ ಅಭೇದಭಕ್ತಾಂಚ್ಯಾ ದ್ವಾರಾಪಾಶೀ । ತೀರ್ಥೇ ಯೇತೀ ಪವಿತ್ರ ವ್ಹಾವಯಾಸೀ । ಸುರನರ ಲಾಗತೀ ಪಾಯಾಂಸೀ । ಮೀ ಹೃಷೀಕೇಶೀ ತ್ಯಾಮಾಜೀ ॥೨೦೪॥ ಅಭೇದಭಕ್ತಾಪಾಶೀ ದೇಖ । ಸಕಳ ತೀರ್ಥೇ ಹೋತೀ ನಿರ್ದೋಖ । ಭಕ್ತೀಚೇ ಮಾಹೇರ ತೇ ಆವಶ್ಯಕ । ಮಜಹೀಸುಖ ತ್ಯಾಂಚೇನೀ ॥೨೦೫॥ ಅಭೇದ ಜೇ ಕ್ರಿಯಾಸ್ಥಿತೀ । ಯಾ ನಾಂವ ಮಾಝೀ ಉತ್ತಮ ಭಕ್ತೀ । ಐಸಾ ಅತಿ ಉಲ್ಹಾಸೇ ಶ್ರೀಪತೀ । ಉದ್ಧವಾಪ್ರತೀ ಬೋಲತ ॥೨೦೬॥ ಅಭೇದಭಕ್ತೀ ವಾಡೇಕೋಡೇ । ಶ್ರೀಕೃಷ್ಣಸಾಂಗೇ ಉದ್ಧವಾಪುಢೇ । ಕಥಾ ರಾಹಿಲೀ ಯೇರೀ ಕಡೇ । ತೇಹೀ ಧಡಪುಡೇ ಸ್ಮರೇನಾ ॥೨೦೭॥ ದೇವ ವಿಸರಲಾ ನಿರೂಪಣ । ತಂವ ಉದ್ಧವಾಸೀ ಬಾಣಲೀ ಖೂಣ । ತೋಹೀ ವಿಸರಲಾ ಉದ್ಧವಪಣ । ಕೃಷ್ಣಾ ಕೃಷ್ಣಪಣ ನಾಠವೇ ॥೨೦೮॥

ಹೀಗಿರುವ ನನ್ನ ಸಗುಣಮೂರ್ತಿಯು ಜ್ಞಾನರೂಪ ದಿವ್ಯ ತೇಜದಿಂದ ಹೃದಯದಲ್ಲಿ ಯಾವಾಗಲೂ ಪ್ರಕಾಶಮಾನವಾಗಿ ಇರುವುದು. ಇದೇ ಸರ್ವ ದೇಹಗಳಲ್ಲಿ ವ್ಯಾಪಿಸಿ ಮನದಲ್ಲಿ ಭಕ್ತಿಯನ್ನು ನಿರ್ಮಾಣಗೊಳಿಸುವುದು ॥೧೯೫॥ ವಾಸ್ತವಿಕವಾಗಿ ನೋಡಲು ದೇಹವು ಜಡ, ಮೂಢ ಮತ್ತು ಅಚೇತನವಾಗಿರುವುದು. ಆದರೂ ಅದರಲ್ಲಿ ಜ್ಞಾನರೂಪ ಮೂರ್ತಿಯು ಪ್ರಕಟವಾಗಿ ಅಚೇತನಕ್ಕೆ ಸಜೀವವನ್ನಾಗಿ ಮಾಡಿ ಅತ್ಯಂತ ಉಲ್ಹಾಸದಿಂದ ತನ್ನ ಭಜನೆಯನ್ನು ಮಾಡಿಸುವುದು ॥೧೯೬॥ ಚಿಗರೆಯ ವೇಶವನ್ನು ಧರಿಸಲು ಆಗ ಚಿಗರೆಯಂತೆಯೇ ನರ್ತಿಸಬೇಕಾಗುವುದು. ಅದರಂತೆ ಭಕ್ತನ ರೂಪದಿಂದ ಭಜನೆಯನ್ನು ಮಾಡುವವನು ಸ್ವತ: ನಾರಾಯಣನೇ ಆಗಿರುವನು ॥೧೯೭॥ ಈ ಪ್ರಕಾರವಾಗಿ ಅಭೇದ ಭಾವದಿಂದ ಚಿದ್‌ಘನ ಮೂರ್ತಿಯ ಭಜನೆಯನ್ನು ಮಾಡಿದರೆ, ಪೂಜ್ಯ ಮತ್ತು ಪೂಜಕ ಎಂಬ ಈ ಸ್ಮರಣೆಯು ಸಹಜವಾಗಿಯೇ ಇಲ್ಲದಾಗುವುದು ॥೧೯೮॥ ಈ ಭೇದವೇ ಅಸ್ತವಾಗಲು ಭಕ್ತಿಯ ಅಭೇದ ಭಾವವು ವೃದ್ಧಿಂಗತವಾಗುವುದು. ಇದುವೇ ಅತ್ಯಂತ ಶುದ್ಧ, ಅತ್ಯಂತ ಪ್ರಸಿದ್ಧ ಮತ್ತು ನನಗೆ ಪ್ರಿಯವಾಗಿರುವ ಗುರುಮಾರ್ಗವಾಗಿರುವುದು ॥೧೯೯॥ ಎಲ್ಲಿ ನನ್ನ ಅಭೇದ ಭಕ್ತಿ ಇರುವುದೋ, ಅಲ್ಲಿನಾನು ಸ್ವಾನಂದ ಪ್ರೇಮದ ಉಲ್ಹಾಸದಿಂದ ಸರ್ವಸ್ವದಿಂದ ಭಕ್ತನ ಆಧೀನನಾಗಿ ಬಿಡುವೆನು ॥೨೦೦॥ ಅಪಾರವಾದ ಮಳೆಯ ನೀರಿಗೆ ಆಣೆಕಟ್ಟು ಕಟ್ಟಿ ದೊಡ್ಡ ಕೆರೆಯನ್ನಾಗಿ ಹೇಗೆ ಮಾಡಲ್ಪಡುವುದೋ, ಅದರಂತೆ ಅಭೇದ ಭಜನೆಯಲ್ಲಿನನ್ನ ಅನಂತನಲ್ಲಿ ಐಕ್ಯವು ಪ್ರಾಪ್ತವಾಗುವುದು ॥೨೦೧॥ ಅರಣ್ಯದಲ್ಲಿ ಎಷ್ಟೇ ಮಳೆಯಾಗಲಿ, ಅದರಿಂದ ಬಿತ್ತಿದ ಬೆಳೆಗಳಿಗೆ ಉಪಯೋಗವಾಗುವುದಿಲ್ಲ. ಆದರೆ ಅದೇ ನೀರನ್ನುಕೆರೆಯಲ್ಲಿ ಹಿಡಿದು ಕೂಡಿಸಿದರೆ ಅದರಿಂದ ಉತ್ತಮ ಭತ್ತದ ಬೆಳೆಯು ಲಭಿಸುವುದು ॥೨೦೨॥ ಅದರಂತೆ ನನ್ನ ಅನಂತ ಅಪಾರವಾದ ಸ್ವರೂಪವು ಇದು ಪ್ರೇಮಪೂರ್ವಕ ಅಭೇದ ಭಾವನೆಯ ಭಕ್ತರಲ್ಲಿ ದೊರೆಯುವುದು. ಆಗ ಬ್ರಹ್ಮಾನಂದಕ್ಕೆ ಸ್ಫುರಣವಾಗಿ ಭಕ್ತಿಶಿಖರವು ಪ್ರಾಪ್ತವಾಗುವುದು ॥೨೦೩॥ ಅಭೇದ ಭಕ್ತಿಯನ್ನು ಅಂದರೆ ಐಕ್ಯಭಾವನೆಯಿಂದ ತನ್ಮಯರಾಗಿ ನನ್ನ ಪೂಜೆಯನ್ನು ಮಾಡುವವರ ಮನೆಯ ಬಾಗಿಲಿಗೆ ತೀರ್ಥಗಳೂ ಕೂಡ ಪವಿತ್ರವಾಗಲು ಬರುವುವು. ಸುರನರರೂ ಸಹ ಇವರ ಚರಣಕಮಲಗಳಿಗೆ ವಂದಿಸುವರು. ಭಗವಂತನಾದ ನಾನು ಅವರಲ್ಲಿರುವೆನು ॥೨೦೪॥ ಅಭೇದ ಭಕ್ತರಲ್ಲಿ ಸರ್ವ ತೀರ್ಥಗಳು ಬಂದು ನಿರ್ದೋಷವಾಗುವುವು. ಇವರು ಭಕ್ತಿಯ ತವರು ಮನೆಯಾಗಿರುವರು. ನನಗೂ ಸಹ ಇವರಿಂದ ಸುಖವಾಗುವುದು ॥೨೦೫॥ ಯಾವ ಅಭೇದ ಕ್ರಿಯಾಸ್ಥಿತಿಗೆ ನನ್ನ ಉತ್ತಮ ಭಕ್ತಿ ಎಂದು ಹೇಳುವರು. ಹೀಗೆಂದು ಶ್ರೀಕೃಷ್ಣನು ಉಲ್ಹಾಸದಿಂದ ಉದ್ಧವನಿಗೆ ಹೇಳಿದನು ॥೨೦೬॥ ಶ್ರೀಕೃಷ್ಣನು ಉದ್ಧವನಿಗೆ ಅಭೇದ ಭಕ್ತಿಯನ್ನು ಅತ್ಯಂತ ಪ್ರೀತಿಯಿಂದ ಹೇಳುತ್ತಿರಲು ಆಗ ಕಥಾಭಾಗವು ದೂರ ಉಳಿಯಿತು. ಇವರಿಗೆ ಇದರ ಸ್ಮರಣೆಯೇ ಉಳಿಯಲಿಲ್ಲ ॥೨೦೭॥ ದೇವನು ನಿರೂಪಣೆಯನ್ನು ಮರೆತುಬಿಟ್ಟನು. ಉದ್ಧವನಿಗೆ ಈ ಸ್ಥಿತಿಯು ಒಪ್ಪಿಗೆಯಾಗಿ ತನ್ನ ಉದ್ಧವತ್ವವನ್ನು ಮರೆತನು. ಶ್ರೀಕೃಷ್ಣನಿಗೆ ತನ್ನ ಕೃಷ್ಣತ್ವವೂ ಕೂಡ ಸ್ಮರಣೆಯಾಗದಾಯಿತು ॥೨೦೮॥

ಅಭೇದ ಭಜನಾಚಾ ಹರಿಖ । ದೇವ ಭಕ್ತ ಝಾಲೇ ಏಕ । ದೋಘಾ ಪಡೋನಿ ಠೇಲೇ ಠಕ । ಪರಮ ಸುಖ ಪಾವಲೇ ॥೨೦೯॥ ಉದ್ಧವ ನಿಜಬೋಧೇ ಪರಿಪೂರ್ಣ । ತರೀ ಪೂಜಾವಿಧಾನಪ್ರಶ್ನ । ಏಥ ಕರಾವಯಾ ಕಾಯ ಕಾರಣ । ಐಶೀ ಆಶಂಕಾ ಮನ ಕಲ್ಪೀಲ ॥೨೧೦॥ ತರೀ ಉದ್ಧವಾಚ್ಯಾ ಚಿತ್ತೀ । ಉಗಾ ಕರಾವಯಾ ರಾಹತಾಂಚಿ ಶ್ರೀಪತೀ । ಜಾಈಲ ನಿಜಧಾಮಾಪ್ರತೀ । ಯಾಲಾಗೀ ಪ್ರಶ್ನೋಕೀ ತೋ ಪುಸೇ ॥೨೧೧॥ ಉಪಾಸನಾಕಾಂಡ ಗುಹ್ಯಜ್ಞಾನ । ಆಗಮೋಕ್ತಪೂಜಾವಿಧಾನ । ಉದ್ಧವಮಿಷೇ ಶ್ರೀಕೃಷ್ಣ । ವೇದಾರ್ಥ ಆಪಣ ಸ್ವಯೇ ಬೋಲೇ ॥೨೧೨॥ ಸಕಳ ವೇದಾರ್ಥ ಶಾಸ್ತ್ರವಿಧೀ । ಗ್ರಂಥೀ ಶ್ರೀಕೃಷ್ಣ ಪ್ರತಿಪಾದೀ । ಜೈಸೀ ಶ್ರದ್ಧಾ ತೈಸೀ ಸಿದ್ಧೀ । ವ್ಹಾವಯಾ ತ್ರಿಶುದ್ಧೀ ಸಾಧಕಾ ॥೨೧೩॥ ಅಸೋ ಹೇ ಗ್ರಂಥವ್ಯುತ್ಪತ್ತೀ । ಐಕತಾ ಅದ್ವೈತ-ಭಕ್ತೀ । ಉದ್ಧವ ನಿವಾಲಾ ನಿಜಚಿತ್ತೀ । ತೇಣೇ ಶ್ರೀಪತಿ ಸುಖಾವಲಾ ॥೨೧೪॥ ಸಂತೋಷೇ ಮ್ಹಣೇ ಶ್ರೀಕೃಷ್ಣ । ಉದ್ಧವಾ ಹೋ ಈ ಸಾವಧಾನ । ಪುಢೀಲ ಪೂಜಾವಿಧಾನ । ತುಜ ಮೀ ಸಾಂಗೇನ ಯಥೋಕ್ತ ॥೨೧೫॥ ಪೂಜ್ಯ ಪೂಜಕ ಏಕಾತ್ಮತಾ ಧ್ಯಾನ । ಕರೋನಿಯಾ ದೃಢ ಧಾರಣ । ತೇಚಿ ಬಾಹ್ಯ ಪೂಜೇಲಾಗೀ ಜಾಣ । ಕರಾವೇ ಆವಾಹನ ಪ್ರತಿಮೇಮಾಜೀ ॥೨೧೬॥ ಪ್ರತಿಮೇಸಂಮುಖ ಆಪಣ । ಆವಾಹನಮುದ್ರಾ ದಾಖವೂನ । ಮಾಝೀ ಚಿತ್ಕಳಾ ಸಂಪೂರ್ಣ । ಪ್ರತಿಮೇಸೀ ಜಾಣ ಭಾವಾವೀ ॥೨೧೭ ॥ ತೇವ್ಹಾ ಮೂರ್ತಿಚೇ ಜಡಪಣ । ನಿಃಶೇಷ ನ ದೇಖಾವೇ ಆಪಣ । ಮೂರ್ತಿ ಭಾವಾವೀ ಚೈತನ್ಯಘನ । ಮುಖ್ಯ ''ಆವಾಹನ'' ಯಾ ನಾಂವ ॥೨೧೮॥ ಗುರುಮುಖೇ ಮಂತ್ರ ನಿರ್ದೋಷ । ತೇಣೇ ಮಂತ್ರೇ ಮೂರ್ತಿಸೀ ನ್ಯಾಸ । ಕರಾವೇ ಸರ್ವಾಂಗೀ ಸಾವಕಾಶ । ಶಾಸ್ತ್ರವಿನ್ಯಾಸ ಆಗಮೋಕ್ತ ॥೨೧೯॥ ಏವಂ ಆವಾಹನ ಸಂಸ್ಥಾಪನ । ಸನ್ನಿಧಿ ಸನ್ನಿರೋಧನ । ಸಂಮುಖೀಕರಣ ಸ್ವಾಯತನ । ಯಾ ಮುದ್ರಾ ಆಪಣ ದಾವಾವ್ಯಾ ॥೨೨೦॥ ಅವಗುಂಠನ ಸಕಲೀಕರಣ । ಯಾ ಅಷ್ಟೌ ಮುದ್ರಾ ದಾವೂನಿ ಜಾಣ । ಮಗ ಹೋಊನಿ ಸಾವಧಾನ। ಪೂಜಾವಿಧಾನ ಮಾಂಡಾವೇ ॥೨೨೧॥

ಅಭೇದ ಭಜನೆಯಿಂದ ಆನಂದಪುಲಕಿತರಾಗಿ ದೇವ ಮತ್ತು ಭಕ್ತ ಇಬ್ಬರೂ ಒಂದೇಯಾದರು. ಇಬ್ಬರೂ ಕೂಡ ಸ್ತಬ್ಧರಾಗಿ ಪರಮಸುಖಿಯಾದರು ॥೨೦೯॥ ಉದ್ಧವನು ಒಂದು ವೇಳೆ ಆತ್ಮ ಬೋಧೆಯಿಂದ ಇಷ್ಟೊಂದು ಪರಿಪೂರ್ಣನಾಗಿದ್ದರೆ ಆತನು ಶ್ರೀಕೃಷ್ಣನಿಗೆ ಪೂಜಾವಿಧಾನದ ಪ್ರಶ್ನೆಯನ್ನು ಮಾಡಲು ಕಾರಣವಾದರೂ ಯಾವುದು ? ಹೀಗೆ ಅನುಮಾನವು ಯಾರ ಮನದಲ್ಲಿಯಾದರೂ ಬರಬಹುದು ॥೨೧೦॥ ಉದ್ಧವನಿಗೆ ಹೀಗೆ ಅನಿಸಿಕೆ ಆಯಿತು, ನಾನು ಒಂದು ವೇಳೆ ಶಾಂತನಾಗಿ ಕುಳಿತುಕೊಂಡರೆ ಶ್ರೀಕೃಷ್ಣನು ನಿಜಧಾಮಕ್ಕೆ ಹೊರಟು ಹೋದಾನು ಎಂಬ ಅನುಮಾನದಿಂದ ಪ್ರಶ್ನೆಗಳನ್ನು ಕೇಳುತ್ತಿದ್ದನು ॥೨೧೧॥ ಉಪಾಸನಾ ಕಾಂಡದಲ್ಲಿನ ಗೂಢವಾದ ಜ್ಞಾನವನ್ನು, ಆಗಮೋಕ್ತ ಪೂಜಾವಿಧಾನ ಇತ್ಯಾದಿ ವೇದಗಳ ಅರ್ಥವನ್ನು ಉದ್ಧವನ ನಿಮಿತ್ತದಿಂದ ಶ್ರೀಕೃಷ್ಣನು ತಾನೇ ಹೇಳತೊಡಗಿದನು ॥೨೧೨॥ ಸಾಧಕರಲ್ಲಿ ಯಾವ ಪ್ರಕಾರವಾಗಿ ಶ್ರದ್ಧೆವಿರುವುದೋ ಅದರಂತೆಯೇ ಅವರಿಗೆ ಸಿದ್ಧಿ ಪ್ರಾಪ್ತವಾಗುವುದಕ್ಕಾಗಿ ಸಂಪೂರ್ಣ ವೇದಾರ್ಥ ಶಾಸ್ತ್ರವಿಧಿಗಳನ್ನು ಈ ಗ್ರಂಥದಲ್ಲಿ ಶ್ರೀಕೃಷ್ಣನು ಹೇಳಿದನು ॥೨೧೩॥ ಆದರೆ ಅದು ಇರಲಿ, ಈ ಗ್ರಂಥದ ಯಾವ ಈ ವಿಷಯವು ಹೀಗೆಯೇ ಇರಲಿ, ಒಟ್ಟಿನಲ್ಲಿ ಅದ್ವೈತ ಭಕ್ತಿಯನ್ನು ಶ್ರವಣ ಮಾಡುತ್ತಿರಲು ಉದ್ಧವನು ಮನದಲ್ಲಿ ತೃಪ್ತನಾದನು. ಇದರಿಂದ ಶ್ರೀಕೃಷ್ಣನಿಗೂ ಸುಖವಾಯಿತು ॥೨೧೪॥ ಶ್ರೀಕೃಷ್ಣನು ಆನಂದದಿಂದ ಹೀಗೆ ನುಡಿದನು ; ಈಗ ಸರಿಯಾಗಿ ಲಕ್ಷ ಕೊಡು ಮುಂದಿನ ಪೂಜಾ ವಿಧಾನವನ್ನು ಯಥಾರ್ಥವಾಗಿ ನಾನು ನಿನಗೆ ಹೇಳುವೆನು ॥೨೧೫॥ ಪೂಜ್ಯ ಮತ್ತು ಪೂಜಕ ಇವುಗಳನ್ನು ಏಕಾತ್ಮತೆಯ ಧ್ಯಾನವನ್ನು ದೃಢೀಕರಿಸಬೇಕು. ಇದರದ್ದೇ ಬಾಹ್ಯಪೂಜೆಗಾಗಿ ಪ್ರತಿಮೆಯಲ್ಲಿ ಆವಾಹನೆಯನ್ನು ಮಾಡಬೇಕು ॥೨೧೬॥ ಪ್ರತಿಮೆಯ ಮುಂದೆ ಕುಳಿತುಕೊಳ್ಳಬೇಕು. ಆವಾಹನ ಮುದ್ರೆಯನ್ನು ತೋರಿಸಿ ನನ್ನ ಸರ್ವ ಚಿತ್ಕಲೆಯು ಆ ಯಾವ ಪ್ರತಿಮೆಯಲ್ಲಿದೆ ಎಂದು ಈ ಪ್ರಕಾರದ ಭಾವನೆಯನ್ನು ಮಾಡಬೇಕು ॥೨೧೭॥ ಆ ಸಮಯದಲ್ಲಿ ಮೂರ್ತಿಯ ಜಡತ್ವವನ್ನು ಮನದಲ್ಲಿ ಸ್ವಲ್ಪವೂ ಕೂಡ ತರುವಂತಿಲ್ಲ. ಮೂರ್ತಿಯು ಚೈತನ್ಯಸ್ವರೂಪವಾಗಿದೆ ಎಂತಲೇ ಭಾವಿಸಬೇಕು. ಇದರ ನಾಮವೇ ಮುಖ್ಯವಾಗಿ ಆವಾಹನೆಯಾಗಿರುವುದು ॥೨೧೮॥ ಗುರುಮುಖದಿಂದ ಪ್ರಾಪ್ತವಾಗಿರುವ ಮಂತ್ರವು ನಿರ್ದೋಷವಾಗಿರುವುದು. ಆ ಮಂತ್ರದಿಂದ ಮೂರ್ತಿಯ ಸರ್ವಾಂಗಗಳಲ್ಲಿ ನ್ಯಾಸ ಮತ್ತು ಆಗಮೋಕ್ತ ಶಾಸ್ತ್ರವಿನ್ಯಾಸವನ್ನು ಮಾಡಬೇಕು ॥೨೧೯॥ ಈ ಪ್ರಕಾರವಾಗಿ ಆವಾಹನ, ಸಂಸ್ಥಾಪನ, ಸನ್ನಿಧೀ, ಸನ್ನಿರೋಧನ, ಸಂಮುಖೀಕರಣ , ಸ್ವಾಯತನ ಈ ಮುದ್ರೆಗಳನ್ನು ನಾವು ತೋರಿಸಬೇಕು ॥೨೨೦॥ ಹಾಗೆಯೇ ಅವಗುಂಠನ, ಸಂಕಲೀಕರಣ ಕೂಡಿಸಿ ಒಟ್ಟಿಗೆ ಎಂಟು ಮುದ್ರೆಗಳನ್ನು ತೋರಿಸಿ, ತದನಂತರ ಸಾವಧಾನ ಚಿತ್ತದಿಂದ ಪೂಜೆಯನ್ನು ಆರಂಭಿಸಬೇಕು ॥೨೨೧॥

ಪಾದ್ಯೋಪಸ್ಪರ್ಶಾರ್ಹಣಾದೀನುಪಚಾರಾನ್ಪ್ರಕಲ್ಪಯೇತ್ । ಧರ್ಮಾದಿಭಿಶ್ಚ ನವಭಿಃ ಕಲ್ಪಯಿತ್ವಾಸನಂ ಮಮ ।೨೭॥
ಪದ್ಮಮಷ್ಟದಲಂ ತತ್ರ ಕರ್ಣಿಕಾಕೇಸರೋಜ್ಜ್ವಲಮ್ । ಉಭಾಭ್ಯಾಂ ವೇದತಂತ್ರಾಭ್ಯಾಂ ಮಹ್ಯಂ ತೂಭಯಸಿದ್ಧಯೇ ।೨೮॥

ಅರ್ಥ:- ಹೇ ಉದ್ಧವಾ, ನನ್ನ ಆಸನದಲ್ಲಿ ಧರ್ಮ ಇತ್ಯಾದಿಗುಣಗಳು ಮತ್ತು ವಿಮಲ ಇತ್ಯಾದಿ ಶಕ್ತಿಯ ಭಾವನೆಯನ್ನು ಮಾಡಬೇಕು. ಅರ್ಥಾತ್ ಆಸನದ ನಾಲ್ಕೂ ಮೂಲೆಗಳಲ್ಲಿ ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ಹೀಗೆ ನಾಲ್ಕು ಕಾಲುಗಳಿರುವುವು. ಅಧರ್ಮ, ಅಜ್ಞಾನ, ಅವೈರಾಗ್ಯ ಮತ್ತು ಅನೈಶ್ವರ್ಯ ಇವು ನಾಲ್ಕು ನಾಲ್ಕೂ ದಿಕ್ಕುಗಳಿಗೆ ಕೋಲುಗಳಿರುವುವು. ಸತ್ವ, ರಜ, ತಮ ಇವು ಮೂರು ಪಟ್ಟಿಗಳಿಂದ ಸಿದ್ಧಗೊಂಡಿರುವುವು. ಅವುಗಳ ಮೇಲೆ ವಿಮಲಾ, ಉತ್ಕರ್ಷಿನೀ, ಜ್ಞಾನ, ಕ್ರಿಯಾ, ಯೋಗ, ಪ್ರಪ್ಹಿ, ಸತ್ಯಾ, ಈಶಾನಾ ಮತ್ತು ಅನುಗ್ರಹಾ ಇವು ಒಂಬತ್ತು ಶಕ್ತಿ ವಿರಾಜಮಾನವಾಗಿವೆ. ಈ ಆಸನದ ಮೇಲೆ ಒಂದು ಅಷ್ಟದಳದ ಕಮಲವಿದೆ ಅದರ ಕರ್ಣಿಕಾ ಅತ್ಯಂತ ಪ್ರಕಾಶಮಾನವಾಗಿರುವುದು ಮತ್ತು ಹಳದೀ ಕೆಸರಿಯ ಮಾದರಿಯು ವಿಶೇಷವಾಗಿರುವುದು. ಆಸನ ಸಂಬಂಧದಲ್ಲಿ ಹೀಗೆ ಭಾವನೆಯನ್ನು ಮಾಡಿ ಪಾದ್ಯ, ಆಚಮನೀಯ ಮತ್ತು ಅರ್ಘ್ಯ ಇತ್ಯಾದಿ ಉಪಚಾರಗಳನ್ನು ಮಾಡಬೇಕು. ತದನಂತರ ಭೋಗ ಮತ್ತು ಮೋಕ್ಷದ ಸಿದ್ಧಿಗಾಗಿ ವೈದಿಕ ಮತ್ತು ತಾಂತ್ರಿಕ ವಿಧಿಗಳಿಂದ ನನ್ನ ಪೂಜೆಯನ್ನು ಮಾಡಬೇಕು.

ಸ್ನಾನ ಮಂಡಪ ಕಲ್ಪೂನಿ ಜಾಣ । ತೇಥ ಆಣಾವಾ ದೇವ ಚಿದ್ಘನ । ಪಾದ್ಯ ಅರ್ಘ್ಯ ಆಚಮನ । ಮಧುಪರ್ಕ-ವಿಧಾನ ಕರಾವೇ ।೨೨೨॥ ಅಭ್ಯಂಗ ಅಂಗಮರ್ದನ । ಪುರುಷಸೂಕ್ತೇ ಯಥೋಕ್ತ ಸ್ನಾನ । ಪೀತಾಂಬರ ಪರಿಧಾನ । ಸ್ನಾನಮಂಡಪೀ ಜಾಣ ದೇವಾಸೀ ।೨೨೩॥ ಇತರ ಯಥೋಕ್ತ ಪೂಜನ । ಕರಾವೇ ಸಿಂಹಾಸನೀ ಸಂಪೂರ್ಣ । ತೇ ಆಸನ ಪೀಠಾವರಣ । ಸ್ವಯೇ ಶ್ರೀಕೃಷ್ಣ ಸಾಂಗತ ।೨೨೪॥ ಸಿಂಹಾಸನೀ ಆವರಣಕ್ರಮ । ಆಧಾರಪ್ರಕೃತಿ-ಕೂರ್ಮಕ್ಷೇಮ । ಕ್ಷೀರಾಬ್ಧೀ ಶ್ವೇತದ್ವೀಪ ಕಲ್ಪದ್ರುಮ । ಮನೋರಮ ಭಾವಾವಾ ।೨೨೫॥ ತ್ಯಾ ತಳೀ ರತ್ನಮಂಡಪ ನೇಟಕ । ತ್ಯಾಮಾಜೀ ವಿಚಿತ್ರ ಪರ್ಯಂಕ । ತ್ಯಾ ಮಂಚಕಾಚಾ ವಿವೇಕ । ಯದುನಾಯಕ ಸಾಂಗತ ।೨೨೬॥ ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯ । ಹೇಚಿ ಮಾಚವೇ ಅತಿವರ್ಯ । ಅಧರ್ಮ ಅಜ್ಞಾನ ಅನೈಶ್ವರ್ಯ । ಅವೈರಾಗ್ಯೇಸೀ ಪಾಯ ಗಾತೇ ಚಾರೀ ।೨೨೭॥ ಈಶ್ವರತತ್ತ್ವ ನಿಜಸೂತ । ಗುಣಾಗುಣೇ ವಳೋನಿ ತೇಥ । ಮಂಚಕ ವಿಣಿಲಾ ಅಚುಂಬಿತ । ಯೋಗಯುಕ್ತ ಮಹಾಮುದ್ರಾ ।೨೨೮॥ ತ್ಯಾ ಮಂಚಕಾವರೀ ಶೇಷಪುಟೀ । ಶೋಭೇ ಅತಿಶಯೇಸೀ ಗೋಮಟೀ । ಸಹಸ್ರಫಣೀ ಮಣಿತೇಜ ಉಠೀ । ಛತ್ರಾಕಾರ ಪುಷ್ಠೀ ಝಳಕತ ।೨೨೯॥ ಶೇಷಪುಟೀಮಾಜೀ ನಿರ್ಮಳ । ವಿಕಾಸಲೇ ರಾತೋತ್ಪಳ । ಸಕರ್ಣಿಕ ಅಷ್ಟದಳ । ಶೋಭೇ ಕಮಳ ಮನೋಹರ ।೨೩೦॥ ಸೂತಶಕ್ತಿ ಕಮಳಕಂದಮೂಳ । ಜ್ಞಾನನಾಳ ತ್ಯಾಚೇ ಸರಳ । ಪ್ರಕೃತಿ ಅಷ್ಟಧಾಜೇ ಸಬಳ । ತೇಚಿ ಅಷ್ಟದಳ ಕಮಳಾಚೇ ।೨೩೧॥ ಐಸೇ ಕಮಳ ಅತಿಸುಂದರ । ಷಟ್‌ವಿಕಾರ ತೇಚಿ ಕೇಸರ । ವೈರಾಗ್ಯಕರ್ಣಿಕಾ ಸಧರ । ಘಮಘಮೀ ಥೋರ ಸುವಾಸೇ ।೨೩೨॥

ಪ್ರಾರಂಭದಲ್ಲಿ ಸ್ನಾನಮಂಟಪದ ಕಲ್ಪನೆಯನ್ನು ಮಾಡಿ ಅಲ್ಲಿ ಚಿತ್ಸ್ವರೂಪ ದೇವನಿಗೆ ತಂದು ಪಾದ್ಯ, ಅರ್ಘ್ಯ, ಆಚಮನ, ಮಧುಪರ್ಕ ಇತ್ಯಾದಿ ವಿಧಾನಗಳನ್ನು ಮಾಡಬೇಕು ।೨೨೨॥ ಅಭ್ಯಂಗದಿಂದ ಅಂಗಮರ್ದನವನ್ನು ಮಾಡಬೇಕು. ಮತ್ತು ಪುರುಷಸೂಕ್ತದಿಂದ ಶಾಸ್ತ್ರೋಕ್ತವಾಗಿ ಸ್ನಾನವನ್ನು ಮಾಡಿಸಬೇಕು. ಆ ಸ್ನಾನ ಮಂಟಪದಲ್ಲಿಯೇ ಪೀತಾಂಬರವನ್ನು ತೊಡಿಸಬೇಕು ।೨೨೩॥ ಇತರ ಸರ್ವ ಯಥೋಕ್ತ ಪೂಜೆಯನ್ನು ಸಿಂಹಾಸನದ ಮೇಲೆ ಮಾಡಬೇಕು. ಆಸನ ಮತ್ತು ಪೀಠದ ಮೇಲೆ ಆಚ್ಛಾದನೆ ಹೇಗೆ ಇರಬೇಕೆಂಬುವ ಅದರ ವರ್ಣನೆಯನ್ನು ಈಗ ಶ್ರೀಕೃಷ್ಣನು ಮಾಡುವನು ।೨೨೪॥ ಸಿಂಹಾಸನದ ಮೇಲೆ ಆಚ್ಛಾದನೆಯನ್ನು ಹಾಕುವ ಕ್ರಮ ಹೇಗಿದೆ ಎಂದರೆ, ಆಧಾರಕ್ಕಾಗಿ ಕೂರ್ಮ ಮತ್ತು ಕ್ಷೀರಸಾಗರಸ್ಥ ಶ್ವೇತದ್ವೀಪದಲ್ಲಿನ ಮನೋರಮ ಕಲ್ಪವೃಕ್ಷ ಇವುಗಳ ಭಾವನೆಯನ್ನು ಮಾಡಬೇಕು ।೨೨೫॥ ಅದರ ಕೆಳಗೆ ಅತಿ ಉತ್ತಮ ರತ್ನಖಚಿತ ಮಂಟಪ ಮತ್ತು ಅದರಲ್ಲಿ ಸುವರ್ಣದ ಪಲಂಗವನ್ನು ಕಲ್ಪಿಸಬೇಕು. ಆ ಪಲಂಗದ ವರ್ಣನೆಯನ್ನು ಶ್ರೀಕೃಷ್ಣನು ಹೀಗೆ ಮಾಡುತ್ತಿರುವನು ।೨೨೬॥ ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ಇವು ಆ ಪಲಂಗದ ನಾಲ್ಕು ಕಾಲುಗಳಾಗಿರುವುವು. ಅಧರ್ಮ, ಅಜ್ಞಾನ, ಅನೈಶ್ವರ್ಯ ಮತ್ತು ಅವೈರಾಗ್ಯ ಇವು ಆ ಪಲಂಗದ ಚೌಕಟ್ಟಿನ ಅಡ್ಡ ನಾಲ್ಕು ಕಾಷ್ಠಗಳಾಗಿರುವುವು ।೨೨೭॥ ಈಶ್ವರತತ್ವವು ಇದು ದಾರವಾಗಿದ್ದು ಗುಣಾಗುಣಗಳಿಂದ ಹೊಸೆದು ಆ ಪಲಂಗವನ್ನು ಯೋಗಯುಕ್ತವಾಗಿ ಮಹಾಮುದ್ರೆಯಿಂದ ಬಿಗಿಯಾಗಿ ಹೆಣೆಯಲ್ಪಟ್ಟಿರುವುದು. ಹೀಗೆ ಕಲ್ಪನೆಯನ್ನು ಮಾಡಬೇಕು ।೨೨೮॥ ಈ ಯಾವ ಪಲಂಗದ ಮೇಲೆ ಅತಿಶಯ ಸುಂದರವಾದ ಮತ್ತು ಸುಶೋಭಿತವಾದ ಶೇಷನ ಸುರುಳಿ ಇದ್ದು ಅದರ ಹಿಂದೆ ಛತ್ರಿಯಂತೆ ಸಾವಿರ ಹೆಡೆಗಳು ಬಿಚ್ಚಿಕೊಂಡು ಅವುಗಳಲ್ಲಿನ ರತ್ನದ ದೀಪಗಳು ಪ್ರಜ್ವಲಿಸುತ್ತಿರುವುವು ।೨೨೯॥ ಶೇಷನ ಅಂಗ ಸುರುಳಿಯಲ್ಲಿ ದೇಟದೊಂದಿಗೆ ನಿರ್ಮಲವಾದ ಕೆಂಪು ವರ್ಣದ ಕಮಲವು ವಿಕಾಸಗೊಂಡಿರುವುದು. ಅದು ಮನೋಹರವಾಗಿ ಶೋಭಿಸುತ್ತಿರುವುದು ।೨೩೦॥ ಸತ್‌ಶಕ್ತಿಯು ಆ ಕಮಲಕಂದದ ಬೇರು ಆಗಿರುವುದು. ಜ್ಞಾನವು ಅದರ ನೀಟಾದ ತುಂಬು ಆಗಿರುವುದು ಮತ್ತು ಅಷ್ಟಧಾ ಪ್ರಕೃತಿಯು ಆ ಕಮಲದ ಎಂಟು ದಳಗಳಾಗಿರುವುವು ।೨೩೧॥ ಹೀಗೆ ಈ ಯಾವ ಅತ್ಯಂತ ಸುರೇಖಯುಕ್ತ ಕಮಲವಾಗಿರುವುದು. ಷಡ್‌ವಿಕಾರಗಳು ಅದರ ಕೇಸರವಾಗಿರುವುದು ಮತ್ತು ವೈರಾಗ್ಯವು ಆ ಕಮಲದ ಘಮಘಮಿಸುವ ಮಕರಂದವಾಗಿರುವುದು ।೨೩೨॥

ಪೂರ್ವಾದಿ ಕಮಳದಳೀ ಜಾಣಾ । ದೇವತಾ ನ್ಯಾಸಾವ್ಯಾ ತ್ಯಾತ್ಯಾ ಸ್ಥಾನಾ । ವಿಮಳಾ ಉತ್ಕರ್ಷಿಣೀ ಆಣಿ ಜ್ಞಾನಾ । ಕ್ರಿಯಾಶಕ್ತಿ ಜಾಣಣಾ ಚೌಥೀ ಪೈ ।೨೩೩।। ಯೋಗಾ ಪ್ರಹ್ವೀ ಸತ್ಯಾ ಈಶಾನಾ । ಕರ್ಣಿಕಾ ಯೋಜಿಜೇ ಮಧ್ಯಸ್ಥಾನಾ । ಕಲ್ಪೂನಿ ಅನುಪಮ ರಚನಾ । ಅನುಗ್ರಹಾ ಜಾಣಾ ಸ್ಥಾಪಾವೀ ।೨೩೪।। ಆತ್ಮಾ ಅಂತರಾತ್ಮಾ ಪರಮಾತ್ಮಾ । ಹಾ ಸಂಮುಖಭಾಗ ದೇವೋತ್ತಮಾ । ಸತ್ವ ರಜ ಆಣಿ ಮೋಹ ತಮಾ । ಪುರುಷೋತ್ತಮಾ ಪೃಷ್ಠಿಭಾಗ ।೨೩೫।। ಐಶಾಪರೀ ಪೀಠನ್ಯಾಸ । ಆಗಮೋಕ್ತ ಸಾವಕಾಶ । ಕರೂನಿಯಾ ಹೃಷೀಕೇಶ । ಸಿಂಹಾಸನಾ ಆಣಾವಾ ।೨೩೬।। ಛತ್ರ ಆಣಿ ಯುಗ್ಮ ಚಾಮರ । ನಾನಾ ವಾದ್ಯೇ ಜಯಜಯಕಾರ । ದಾವೂನಿ ಪೀಠ ಮುದ್ರಾ ಸಧರ । ಆಸನೀ ಶ್ರೀಧರ ಬೈಸವಾವಾ ।೨೩೭।। ಮಜ ಸರ್ವಗತಾಸೀ ಆವಾಹನ । ಮಜ ಅಧಿಷ್ಠಾನಾಸೀ ಆಸನ । ಮಜ ನಿರ್ವಿಕಾರಾಸೀ ಜಾಣ । ದಾವತೀ ಆಪಣ ವಿಕಾರಮುದ್ರಾ ।೨೩೮।। ಮಜ ಚಿದ್ರೂಪಾಲಾಗೀ ಲೋಚನ । ನಿಃಶಬ್ದಾ ಕಲ್ಪಿತೀ ಶ್ರವಣ । ಮಜ ವಿಶ್ವಮುಖಾಸೀ ವದನ । ನಿಮಾಸುರೇ ಜಾಣ ಭಾವಿತೀ ।೨೩೯।। ಮೀ ವಿಶ್ವಾಂಘ್ರೀ ದೋಪಾಯೀ ಚಾಲತ । ಮಜ ವಿಶ್ವಬಾಹೂಸೀ ಚಾರೀ ಹಾತ । ಮಜ ಸರ್ವಗತಾತೇ ಏಥ । ಸ್ಥಾನ ಭಾವಿತ ಏಕದೇಶೀ ।೨೪೦।। ಮಜ ನಿರುಪಚಾರಾಸೀ ಉಪಚಾರ । ಮಜ ವಿದೇಹಾಸೀ ಅಳಂಕಾರ । ಮಜ ಸರ್ವಸಮಾನಾ ಅರಿಮಿತ್ರ । ಭಾವನಾ ವಿಚಿತ್ರ ಭಾವಿತೀ ।೨೪೧।। ಮಜ ಅಕರ್ತ್ಯಾ ಕರ್ಮಬಂಧನ । ಅಜಾಸೀ ಜನ್ಮ ನಿಧನ । ನಿತ್ಯತೃಪ್ತಾಸೀ ಭೋಜನ । ನಿರ್ಗುಣಾ ಸಗುಣ ಭಾವಿತೀ ।೨೪೨।। ಯಾ ಅವಘಿಯಾಂಚಾ ಅಭಿಪ್ರಾವೋ । ಉಪಾಸನಾಕಾಂಡನಿರ್ವಾಹೋ । ಜೈಸ ಜೈಸಾ ಭಜನಭಾವೋ । ತೈಸಾ ಮೀ ದೇವೋ ತಯಾಂಸೀ ।೨೪೩।। ಮೀ ಆವಾಪ್ತ ಸಕಳಕಾಮ । ಪರೀ ಭಕ್ತಪ್ರೇಮಾಲಾಗೀ ಸಕಾಮ । ಜೈಸಾ ಭಕ್ತಾಂಚಾ ಮನೋಧರ್ಮ । ತೈಸಾ ಪುರುಷೋತ್ತಮ ಮೀ ತಯಾ ।೨೪೪।। ಭಕ್ತ ಜೈಸಾ ಭಾವೀ ಮಾತೇ । ಮೀ ತೈಸಾಚಿ ಹೋಯೇ ತ್ಯಾತೇ । ತೋ ಜೇ ಜೇ ಅರ್ಪೀ ಭಾವಾರ್ಥೇ । ತೇ ಅರ್ಪೀ ಮಾತೇ ಸಹಜಚಿ ।೨೪೫।। ಮೀ ಸರ್ವತ್ರ ಭರಲೋ ಅಸೇ । ತೇಥ ಜೋ ಜೇಥ ಮಜ ಉದ್ದೇಶೇ । ಭಕ್ತ ಭಾವಾರ್ಥೇ ಅರ್ಪೂ ಬೈಸೇ । ತೇ ಅರ್ಪೇ ಅನಾಯಾಸೇ ಸಹಜೇ ಮಜ ।೨೪೬।।

ಮೀ ಸವತ್ರ ದೇವಾಧಿದೇವ । ತೈಸಾ ಪ್ರಾಣಿಯಾಂಚಾ ನವ್ಹೇ ಭಾವ

ಈಗಾಗಲೇ ವರ್ಣನೆಯನ್ನು ಮಾಡಿರುವ ಯಾವ ಕಮಲದ ಎಂಟು ದಳಗಳಲ್ಲಿ ಆಯಾ ದೇವತೆಗಳ ನ್ಯಾಸವನ್ನು ಮಾಡಬೇಕು. ವಿಮಲಾ, ಉತ್ಕರ್ಷಿಣೀ, ಜ್ಞಾತಾ ಮತ್ತು ನಾಲ್ಕನೆಯ ಕ್ರಿಯಾಶಕ್ತೀ ।೨೩೩।। ಯೋಗಾ, ಪ್ರಹ್ವೀ, ಸತ್ಯಾ ಮತ್ತು ಈಶಾನಾ ಹೀಗೆ ಎಂಟು ಶಕ್ತಿಯ ಸ್ಥಾಪನೆಯನ್ನು ಮಾಡಬೇಕು. ಈ ಪ್ರಕಾರವಾಗಿ ಅನುಪಮ್ಯ ಕಲ್ಪನೆಯಿಂದ ರಚಿಸಿರುವ ಒಂಬತ್ತನೆಯ ಅನುಗ್ರಹಾದ ಸ್ಥಾಪನೆಯನ್ನು ಮಾಡಬೇಕು ।೨೩೪।। ಆತ್ಮಾ, ಅಂತರಾತ್ಮಾ ಮತ್ತು ಪರಮಾತ್ಮಾ ಇವು ಭಗವಂತನ ಮುಂದಿನ ಭಾಗವಾಗಿರುವುವು. ಸತ್ವ, ರಜ ಮತ್ತು ತಮ ಇವು ಅವುಗಳ ಹಿಂದಿನ ಭಾಗವಾಗಿರುವುವು ।೨೩೫।। ಈ ಪ್ರಕಾರವಾಗಿ ಸಾವಕಾಶವಾಗಿ ಆಗಮೋಕ್ತ ಪೀಠನ್ಯಾಸವನ್ನುಮಾಡಿ ದೇವಾಧಿದೇವನಿಗೆ ಸಿಂಹಾಸನದ ಮೇಲೆ ಸ್ಥಾಪಿಸಬೇಕು ।೨೩೬।। ಛತ್ರ ಮತ್ತು ಎರಡು ಚಾಮರಗಳೊಂದಿಗೆ ನಾನಾ ಪ್ರಕಾರದ ವಾದ್ಯಗಳ ಜಯಜಯಕಾರಗಳನ್ನು ಗರ್ಜಿಸಬೇಕು. ಪೀಠ ಮತ್ತು ಮುದ್ರೆಯನ್ನು ಸರಿಯಾಗಿ ತೋರಿಸಿ ಶ್ರೀಹರಿಗೆ ಆಸನದ ಮೇಲೆ ಕುಳ್ಳಿರಿಸಬೇಕು ।೨೩೭।। ಭಕ್ತರು ಸರ್ವ ವ್ಯಾಪಕನಾದ ನನಗೆ ಆವಾಹನೆಯನ್ನು, ಅಧಿಷ್ಠಾನನಾದ ನನಗೆ ಆಸನವನ್ನು ಮತ್ತು ನಿರ್ವಿಕಾರನಾದ ನನಗೆ ವಿಕಾರ ಮುದ್ರೆಯನ್ನು ತೋರಿಸುವರು ।೨೩೮।। ಜ್ಞಾನಸ್ವರೂಪನಾದ ನನಗೆ ನೇತ್ರಗಳನ್ನು, ನಿಃಶಬ್ದನಾದ ನನಗೆ ಕರ್ಣಗಳನ್ನು ಮತ್ತು ವಿಶ್ವತೋಮುಖನಾದ ನನಗೆ ಸುಂದರ ಮುಖವನ್ನು ಹೀಗೆ ಕಲ್ಪನೆಯನ್ನು ಮಾಡುವರು ।೨೩೯।। ವಿಶ್ವಪಾದನಾದ ನನಗೆ ಎರಡು ಕಾಲುಗಳಿಂದ ನಡೆಯಬೇಕಾಗುವುದು. ವಿಶ್ವಬಾಹೂನಾಗಿರುವ ನನಗೆ ನಾಲ್ಕು ಕೈಗಳನ್ನು ಹಾಗೆಯೇ ಸರ್ವಗತನಾದ ನನಗೆ ಏಕದೇಶಿ ಸ್ಥಾನವನ್ನು ಕಲ್ಪಿಸುವರು।೨೪೦।। ನಿರುಪಚಾರನಾಗಿರುವ ನನಗೆ ಉಪಚಾರವನ್ನು, ವಿದೇಹನಾಗಿರುವ ನನಗೆ ಅಲಂಕಾರಗಳನ್ನು ತೊಡಿಸುವರು. ಮತ್ತು ಸರ್ವತ್ರವೂ ಸಮನಾಗಿರುವ ನನಗೆ ಶತ್ರು-ಮಿತ್ರ ಹೀಗೆ ನಾನಾ ಪ್ರಕಾರವಾಗಿ ವಿಚಿತ್ರ ರೀತಿಯಲ್ಲಿ ಕಲ್ಪನೆಗಳನ್ನು ಮಾಡುವರು ।೨೪೧।। ಅಕರ್ತನಾಗಿರುವ ನನ್ನನ್ನು ಕರ್ಮಬಂಧನವನ್ನು, ಜನ್ಮರಹಿತನಾದ ನನಗೆ ಜನ್ಮಮರಣವನ್ನು, ನಿತ್ಯತೃಪ್ತನಾಗಿರುವ ನನಗೆ ಭೋಜನವನ್ನು, ನಿರ್ಗುಣನಾಗಿರುವ ನನಗೆ ಸಗುಣತ್ವವನ್ನು ಹೀಗೆ ಕಲ್ಪನೆಗಳನ್ನು ಮಾಡುವರು ।೨೪೨।। ಈ ಸರ್ವ ವಿಷಯಗಳ ಸಾರವೇನೆಂದರೆ ಉಪಾಸನಾಕಾಂಡದ ನಿರ್ವಾಹವಾಗಬೇಕು. ಉಪಾಸಕರ ಯಾವ ಪ್ರಕಾರದ ಭಾವನೆ ಇರುವುದೋ, ಅದರಂತೆ ನಾನು ಅವರ ದೇವರು ಆಗುವೆನು ।೨೪೩।। ವಾಸ್ತವಿಕವಾಗಿ ನೋಡಲು ನಾನು ಪೂರ್ಣಕಾಮನಾಗಿರುವೆನು. ಆದರೆ ಭಕ್ತರ ಪ್ರೇಮಕ್ಕಾಗಿ ಸಕಾಮನಾಗುವೆನು. ಭಕ್ತರ ಮನೋಭಾವದಂತೆ ನಾನು ಅವರಿಗೆ ತೋರುವೆನು ।೨೪೪।। ಭಕ್ತನು ನನ್ನಲ್ಲಿ ಯಾವ ಭಾವನೆಯನ್ನು ಮಾಡುವನೋ, ನಾನು ಆತನಿಗೆ ಅದರಂತೆಯೇ ಆಗುವೆನು. ಆತನು ಯಾವುದನ್ನೇ ಆಗಲಿ ಪ್ರೇಮದಿಂದ ಅರ್ಪಣೆಯನ್ನು ಮಾಡಿದರೆ ಅದರು ನನಗೆ ಸಹಜವಾಗಿ ಮುಟ್ಟುವುದು ।೨೪೫।। ನಾನು ಸರ್ವತ್ರವೂ ವ್ಯಾಪಿಸಿಕೊಂಡಿರುವೆನು. ಯಾರು ಯಾವ ಸ್ಥಳದಲ್ಲಿನನಗೆ ಪ್ರೇಮದಿಂದ ಅರ್ಪಿಸುವರೋ ಅದು ನನಗೆ ಮುಟ್ಟುವುದು ।೨೪೬।।

। ಯಾಲಾಗೀ ಭಕ್ತಾಂಚಾ ಜೇಥ ಸದ್ಭಾವ । ತೇಥ ಮೀ ದೇವ ಸಹಜೇಂಚಿ ।೨೪೭॥ ಯಾಲಾಗೀ ವಾಡೇಕೋಡೇ । ಭಕ್ತಭಾವಾರ್ಥ ಮಜ ಆವಡೇ । ಭಕ್ತ ಭಾವಾಹೂನಿ ಪುಢೇ । ವೈಕುಂಠ ನಾವಡೇ ಕ್ಷೀರಾಬ್ಧೀಹೀ ।೨೪೮॥ ಭಕ್ತಭಾವಾರ್ಥಾಚೀ ಭೂಷಣೇ । ಅಂಗೀ ಬಾಣಾವಯಾ ಶ್ರೀಕೃಷ್ಣೇ । ಮ್ಯಾ ನಿರ್ಗುಣೇಹೀ ಸಗುಣ ಹೋಣೇ । ಭಾವಾರ್ಥಾಗುಣೇ ಭಕ್ತಾಂಚ್ಯಾ ।೨೪೯॥ ಯಾಲಾಗೀ ಮೀ ಅಜನ್ಮಾ ಜನ್ಮೇ । ಅಕರ್ಮಾಹೀ ಕರೀ ಕರ್ಮೇ । ಅನಾಮಾ ಮೀ ಧರೀ ನಾಮೇ । ಭಕ್ತ ಮನೋಧರ್ಮೇ ತಾರಾವಯಾ ।೨೫೦॥ ನಿರ್ಗುಣೇ ಲಾಗಲ್ಯಾ ಮನ । ಮನಚಿ ಹೋಯ ಚೈತನ್ಯಘನ । ಸಗುಣೇ ಠಸಾವಲ್ಯಾ ಮನ । ಸಾಧಕ ಶ್ರೀಕೃಷ್ಣ ಸ್ವಯೇ ಹೋತೀ ।೨೫೧॥ ನಿರ್ಗುಣಾಚಾ ಬೋಧ ಅಟಕ । ಯಾಲಾಗೀ ಉಪಾಸನಾವಿವೇಕ । ಸಗುಣಮೂರ್ತಿ ಭಾವೂನಿ ದೇಖ । ತರಲೇ ಸಾಧಕ ಅನಾಯಾಸೇ ।೨೫೨॥ ಹೇ ಆಗಮೋಕ್ತ ಉಪಾಸನಾವಿಧೀ । ಯೇಣೇ ಭೋಗಮೋಕ್ಷ ಉಭಯಸಿದ್ಧೀ । ಸಾಧಕ ಪಾವತೀ ತ್ರಿಶುದ್ಧೀ । ಮೀ ಕೃಪಾನಿಧಿ ಸಂತುಷ್ಟೇ ।೨೫೩॥ ತೇಚಿ ಉಪಾಸನವಿಧಿವಿಧಾನ । ಮಾಗಾ ಸಾಂಗತಾ ಪೂಜನ । ದೇವ ಸಿಂಹಾಸನೀ ಬೈಸಲ್ಯಾ ಪೂರ್ಣ । ಪುಢೇ ಆವರಣಪೂಜಾ ಐಕ ।೨೫೪॥

ಸುದರ್ಶನಂ ಪಾಂಚಜನ್ಯಂ ಗದಾಸೀಷುಧನುರ್ಹಲಾನ್ । ಮುಸಲಂ ಕೌಸ್ತುಭಂ ಮಾಲಾಂ ಶ್ರೀವತ್ಸಂ ಚಾನುಪೂಜಯೇತ್ ।೨೭॥

ಅರ್ಥ:- ಸುದರ್ಶನ ಚಕ್ರ, ಪಾಂಚಜನ್ಯ ಶಂಖ, ಗದಾ, ಖಡ್ಗ, ಧನುಷ್ಯ, ಬಾಣ, ಮುಸಲ, ಕೌಸ್ತುಭ, ಮಾಲಾ ಮತ್ತು ಶ್ರೀವತ್ಸ ಇವುಗಳನ್ನು ಪೂಜಿಸಬೇಕು.

ಅಣ್ವೇ ಜೀವಕಳೇಸೀ ''ದೇಹಾವರಣ'' ಸಿಂಹಾಸನೀ ''ಶಕ್ತ್ಯಾವರಣ ''। ಸುದರ್ಶನಾದಿ '' ಆಯುಧಾವರಣ ''। ಆಪುಲೀ ಆಪಣ ಹರಿ ಸಾಂಗೇ ।೨೫೫॥ ಸತೇಜ ಧಾರ ಸುದರ್ಶನ । ಶಂಖ ಶೋಭೇ ಪಾಂಚಜನ್ಯ। ನಂದಕ ತೋ ಖಡ್ಗ ಜಾಣ । ಗದಾ ಗಹನ ಕೌಮೋದಕೀ ।೨೫೬॥ ಶಾರ್ಙ್ಗಧನುಷ್ಯ ಅತಿಸಬಳ । ಸುವರ್ಣ ಪುಂಖೇ ಬಾಣ ಸರಳ । ಹಲ ಆಣಿ ಮುಸಳ । ಆಯುಧೇ ಪ್ರಬಳ ಪೂಜಾವೀ ।೨೫೭॥ ಯಾ ಆಠಹೀ ಭುಜಾ ಸಾಯುಧಾ ಸರಳಾ । ಕಂಠೀ ಕೌಸ್ತುಭ ವನಮಾಳಾ । ಕಾಂಸೇ ಕಶಿಲಾ ಪಿಂವಳಾ । ಘನಸಾಂವಳಾ ಶೋಭತ ।೨೫೮॥

ಬ್ರಹ್ಮಣ್ಯದೇವ ರಮಾನಾಥ । ಬ್ರಾಹ್ಮಣಾಚಾ ಚರಣಾಘಾತ । ಹೃದಯೀ ಅಲಂಕಾರ ಮಿರವತ । ಶೋಭಾ ಅದ್ಭುತ

ಸೇವಾಧಿದೇವನಾದ ನಾನು ಸರ್ವತ್ರವೂ ಸಮಭಾವನೆಯಿಂದ ತುಂಬಿರುವೆನು. ಆದರೆ ಜನರು ಇದನ್ನು ತಿಳಿದಿರುವುದಿಲ್ಲ. ಈ ಕಾರಣವಾಗಿ ಯಾರ ಶ್ರದ್ಧೆಯು ಹೇಗೆ ಇರುವುದೋ, ಅವರಿಗೆ ದೇವನಾದ ನಾನು ಸಹಜವಾಗಿಯೇ ಹಾಗೆಯೇ ಆಗುವೆನು ।೨೪೭॥ ಭಕ್ತರ ಪ್ರೇಮಭಾವವು ನನಗೆ ಅತಿಶಯವಾಗಿ ಪ್ರಿಯವಾಗುವುದು. ಅವರ ಯಾವ ನಿಃಸ್ವಾರ್ಥ ಪ್ರೇಮಭಾವಕ್ಕಾಗಿ ನನಗೆ ವೈಕುಂಠ ಹಾಗೂ ಕ್ಷೀರಸಾಗರ ಕೂಡ ಪ್ರಿಯವೆನಿಸುವುದಿಲ್ಲ ।೨೪೮॥ ಭಕ್ತರ ಪ್ರೀತಿಯ ಭೂಷಣಗಳನ್ನು ಸ್ವೀಕರಿಸುವುದಕ್ಕಾಗಿ ನಾನು ನಿರ್ಗುಣನಾಗಿದ್ದರೂ ಕೂಡ ಸಗುಣನಾಗುವೆನು. ಭಕ್ತರ ಪ್ರೇಮಕ್ಕಾಗಿಯೇ ಈ ರೂಪವನ್ನು ಧರಿಸಿರುವೆನು ।೨೪೯॥ ಇದಕ್ಕಾಗಿಯೇ ನಾನು ಜನ್ಮರಹಿತನಾಗಿದ್ದರೂ ಸಹ ಜನ್ಮವನ್ನು ಧರಿಸುವೆನು. ಕರ್ಮರಹಿತನಾಗಿದ್ದರೂ ಸಹ ಕರ್ಮಗಳನ್ನು ಮಾಡುತ್ತಿರುವೆನು. ನಾನು ನಾಮರಹಿತನಾಗಿದ್ದರೂ ಸಹ ಭಕ್ತರ ಉದ್ಧಾರಕ್ಕಾಗಿ ಅನೇಕ ನಾಮಗಳನ್ನು ಧರಿಸುವೆನು ।೨೫೦॥ ನಿರ್ಗುಣದಲ್ಲಿ ಮನವು ಕೂಡಿಕೊಂಡರೆ ಅವರು ಚೈತನ್ಯ ಸ್ವರೂಪರಾಗುವರು. ಹಾಗೆಯೇ ಸಗುಣ ಮೂರ್ತಿಯು ಹೃದಯಪಟಲದಲ್ಲಿ ಅಂಕಿತವಾದರೆ ಆಗ ಸಾಧಕರು ಸ್ವತಃ ಶ್ರೀಕೃಷ್ಣಸ್ವರೂಪರಾಗುವರು ।೨೫೧॥ ನಿರ್ಗುಣದ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಬೇಕೆಂದರೆ ಅದು ಬಹಳ ಕಠಿಣವಾಗಿರುವುದು. ಈ ಕಾರಣವಾಗಿಯೇ ಉಪಾಸನೆಯ ಮಾರ್ಗದ ವಿಚಾರವನ್ನು ಹೇಳಲ್ಪಟ್ಟಿರುವುದು. ಸಗುಣ ಮೂರ್ತಿಯ ಭಕ್ತಿಯನ್ನು ಮಾಡಿ ಬೇಕಾದಷ್ಟು ಸಾಧಕರು ಉದ್ಧಾರರಾಗಿರುವರು ।೨೫೨॥ ಇದು ಆಗಮೋಕ್ತವಾದ ಉಪಾಸನೆಯ ವಿಧಿವಿಧಾನವಾಗಿರುವುದು. ಇದರಿಂದ ಸಾಧಕರಿಗೆ ಭೋಗ ಮತ್ತು ಮೋಕ್ಷ ಈ ಎರಡೂ ಕೂಡ ಸಾಧ್ಯವಾಗುವುವು. ಇದರಿಂದ ದಯಾಳುನಾದ ನಾನು ಸಂತುಷ್ಟನಾಗುವೆನು ।೨೫೩॥ ಈ ಪೂರ್ವದಲ್ಲಿ ಪೂಜಾವಿಧಾನವನ್ನು ಹೇಳುತ್ತಿರುವ ಪ್ರಸಂಗದಲ್ಲಿ ದೇವರಿಗೆ ಪೂಜೆಗಾಗಿ ಸಿಂಹಾಸನದ ಮೇಲೆ ಕೂಡ್ರಿಸಬೇಕೆಂದು ವರ್ಣಿಸಿರುವುದು. ತದನಂತರ ಆವರಣ ಪೂಜೆಯನ್ನು ಹೇಗೆ ಮಾಡಬೇಕೆಂಬ ವಿಚಾರವನ್ನು ಹೇಳುವೆನು, ಅದನ್ನು ಕೇಳು ।೨೫೪॥

ಸೂಕ್ಷ್ಮವಾಗಿರುವ ಜೀವಕಲೆಯ ಮೇಲೆ ದೇಹದ ಆವರಣ ಮತ್ತು ಸಿಂಹಾಸನದ ಮೇಲೆ ಶಕ್ತಿಯ ಆವರಣವನ್ನು ಹೇಳಿರುವುದು. ನಂತರ ಶ್ರೀಕೃಷ್ಣನು ತಾನು ಸ್ವತಃ ತನ್ನ ಸುದರ್ಶನಾದಿ ಆಯುಧಾವರಣಗಳನ್ನು ಹೇಳುತ್ತಿರುವನು ।೨೫೫॥ ತೇಜಸ್ವೀ, ತೀಕ್ಷ್ಣಧಾರೆಯುಳ್ಳ ಸುದರ್ಶನ ಚಕ್ರ, ಶೋಭಾಯಮಾನವಾದ ''ಪಾಂಚಜನ್ಯ'' ಶಂಖ, ನಂದಕ ನಾಮದ ಖಡ್ಗ ಮತ್ತು ''ಕಾಮೋದಕೀ''ನಾಮದ ಪ್ರಚಂಡವಾದ ಗದೆ ।೨೫೬॥ ಶಾರ್ಙ್ಗ ನಾಮದ ಬಲಿಷ್ಠವಾದ ವಿಶಾಲ ಧನುಷ್ಯ, ಸುವರ್ಣಮಯ ಚೂಪಾದ ತುದಿಯುಳ್ಳ ಸರಳ ಬಾಣ, ನೇಗಿಲ, ಒನಕೆ ಹೀಗೆ ಪ್ರಬಲವಾದ ಆಯುಧಗಳ ಪೂಜೆಯನ್ನು ಮಾಡಬೇಕು ।೨೫೭॥ ಎಂಟೂ ಕೈಗಳಲ್ಲಿ ಆಯುಧಗಳು, ಕೊರಳಲ್ಲಿ ಕೌಸ್ತುಭಮಣೀ ಮತ್ತು ವನಮಾಲೆ, ನಡುವಿಗೆ ತೊಟ್ಟಿರುವ ಹಳದಿವರ್ಣದ ಪೀತಾಂಬರ ಇವುಗಳಿಂದ ಶೋಭಾಯಮಾನನಾದ ಘನಮೇಘಶ್ಯಾಮ ಸುಂದರ ಮೂರ್ತಿಯನ್ನು ಕಲ್ಪಿಸಬೇಕು ।೨೫೮॥

ತೇಣೇ ಶೋಭೇ ॥೮೫೯॥ ಚಿದ್ರತ್ನಾಂಚ್ಯಾ ಅಳಂಕಾರೀ । ಗುಣ ಕಾಢೋನಿಯಾ ಬಾಹೇರೀ ವೋವಿಲೀ ವೈಜಯಂತೀ ಕುಸರೀ । ತೇ ಹೃದಯಾವರೀ ರುಳತ ॥೮೬೦॥ ಯಾಪರೀ ಸಾಳಂಕಾರ ಸಾಯುಧ । ಶಂಖಚಕ್ರ ಪದ್ಮೇಸೀ ಅಗಾಧ । ಐಸಾ ಶೋಭಲಾ ಸ್ವಯಂಬೋಧ । ನಾರದಾದಿ ಸನ್ನಿಧ ತಿಷ್ಠತೀ ಸದಾ ॥೮೬೧॥ ಯಾಪರೀ ಸಾಳಂಕಾರ ಸಾಯುಧ । ಪೂಜ್ಯ ಪೂಜೋನಿಯಾ ಗೋವಿಂದ । ಮಗ ಪೂಜಾವೇ ಪಾರ್ಷದ । ಐಕ ವಿಶದ ಸಾಂಗೇನ ॥೮೬೨॥

ನಂದಂ ಸುನಂದಂ ಗರುಡಂ ಪ್ರಚಂಡಂ ಚಂಡಮೇವ ಚ । ಮಹಾಬಲಂ ಬಲಂ ಚೈವ ಕುಮುದಂ ಕುಮುದೇಕ್ಷಣಮ್ ॥೨೮॥

ಅರ್ಥ:- ನಂದ, ಸುನಂದ, ಗುರುಡ, ಪ್ರಚಂಡ, ಚಂಡ, ಮಹಾಬಲ, ಕುಮುದ, ಕುಮುದೇಕ್ಷಣ, ಈ ನನ್ನ ಎಂಟು ಪಾರ್ಷದರ ಪೂಜೆಯನ್ನು ಮಾಡಬೇಕು.

ನಂದ ಸುನಂದ ದೇವಾಪಾಶೀ । ಗರುಡ ಸದಾ ತಿಷ್ಠೇ ದೃಷ್ಟೀಸೀ । ಚಂಡ ಪ್ರಚಂಡ ದೋನೀ ಬಾಹೀಸೀ । ಅಹರ್ನಿಶೀ ತಿಷ್ಠತೀ ॥೮೬೩॥ ಬಳ ಆಣಿ ಮಹಾಬಳ । ಸುಮುಖ ಸಂಜ್ಞೆ ಅವಧಾನಶೀಳ । ಕುಮುದ ಕುಮುದಾಕ್ಷ ಕೇವಳ । ಪಾಠೀಸೀ ಪ್ರಬಳ ಬಳೇ ಉಭೇ ॥೮೬೪॥ ಗರುಡ ದೃಷ್ಟೀ ತಿಷ್ಠೇ ಆಪಣ । ಯೇರ ನಂದಾದಿ ಜೇ ಅಷ್ಟೌ ಜನ । ತೇ ಅಷ್ಟೌ ದಿಶಾಂಪ್ರತಿ ಜಾಣ । ಪಾರ್ಷದಾವರಣ ಹರಿನಿಕಟೀ ॥೮೬೫॥

ದುರ್ಗಾ ವಿನಾಯಕಂ ವ್ಯಾಸಂ ವಿಷ್ವಕ್ಸೇನಂ ಗುರೂನ್ ಸುರಾನ್ ।
ಸ್ವೇಸ್ವೇ ಸ್ಥಾನೇ ತ್ವಭಿಮುಖಾನ್ ಪೂಜಯೇತ್ಪ್ರೋಕ್ಷಣಾದಿಭಿಃ ॥೨೯॥

ಅರ್ಥ:- ದುರ್ಗಾ, ವಿನಾಯಕ, ವ್ಯಾಸ ಮತ್ತು ವಿಷ್ವಕ್ಸೇನರ ನಾಲ್ಕೂ ಬದಿಗಳಲ್ಲಿ ಸ್ಥಾಪನೆಯನ್ನು ಮಾಡಿ ಪೂಜೆಯನ್ನು ಮಾಡಬೇಕು. ಎಡಭಾಗಕ್ಕೆ ಗುರುಗಳ ಮತ್ತು ಯಥಾಕ್ರಮ ಪೂರ್ವಾದಿ ದಿಶೆಗಳಲ್ಲಿ ಇಂದ್ರಾದಿ ಎಂಟು ಲೋಕಪಾಲಕರ ಸ್ಥಾಪನೆಯನ್ನು ಮಾಡಿ ಪ್ರೋಕ್ಷಣೆ, ಅರ್ಘ್ಯದಾನಾದಿ ಕ್ರಮಗಳಿಂದ ಅವರ ಪೂಜೆಯನ್ನು ಮಾಡಬೇಕು.

ದುರ್ಗಾ ವಿನಾಯಕ ಜಾಣ । ವ್ಯಾಸ ಆಣಿ ವಿಷ್ವಕ್ಸೇನ । ಚಹೂ ಕೋನೀ ಚಾರೀ ಸ್ಥಾಪೂನ । ಕರಾವೇ ಪೂಜನ ದೇವಾಭಿಮುಖ ॥೮೬೬॥ ಮೂಳ ಮೂರ್ತೀಸೀ ಅಭಿನ್ನಾಕಾರು । ಗುರೂ ಆಣಿ ಪರಮಗುರು । ಪರಮೇಷ್ಠೀಗುರೂಸೀ ಏಕಾಕಾರೂ । ಪೂಜಾಪ್ರಕಾರು ಕರಾವಾ ॥೮೬೭॥ ಇಂದ್ರಾದಿ ಅಷ್ಟೌ ಲೋಕಪಾಳ । ಆವ್ಹಾನೂನಿಯಾ ಸಕಳ । ಸ್ಥಾಪೂನಿ ಅಷ್ಟೌ ದಿಶಾ ಕೇವಳ । ತೇಹೀ ತತ್ಕಾಳ ಪೂಜಾವೇ ॥೮೬೮॥
ಗುರು – ದುರ್ಗಾದಿಕ ಲೋಕಪಾಳ । ಪೂಜಾವೇ ಸಾಂಗೋಪಾಂಗ ಸಕಳ । ಪ್ರೋಕ್ಷಣಪಾದ್ಯಾದಿ ಅವಿಕಳ । ಪೂಜಾ ನಿಶ್ಚಳ ಕರಾವೀ ॥೮೬೯॥ ತೇಚಿ ಪೂಜೇಚೇ ಪೂಜೋಪಚಾರ । ಕೋಣ ಕೋಣ ಪೈ ಪ್ರಕಾರ । ಸಾಹೀ ಶ್ಲೋಕೀ

ಬ್ರಾಹ್ಮಣನು ಮಾಡಿರುವ ಲತ್ತಾಪ್ರಹರವನ್ನು ಅಲಂಕಾರವನ್ನಾಗಿ ಮಾಡಿಕೊಂಡು ತನ್ನ ಹೃದಯದ ಮೇಲೆ ಮೆರೆಯಿಸುವ ಬ್ರಾಹ್ಮಣ ಭಕ್ತನಾಗಿರುವ ದೇವನು ಆ ಯಾವ ಶ್ರೀವತ್ಸಲಾಂಛನದಿಂದ ಅತಿಶಯವಾಗಿ ಶೋಭಾಯಮಾನನಾಗಿ ಕಾಣುವನು ॥೮೫೯॥ ಚಿದ್‌ರತ್ನಗಳ ಅಲಂಕಾರಗಳಿಂದ ಗುಣಗಳನ್ನು ಹೊರಗೆ ತೆಗೆದು ಅದರಲ್ಲಿ ಅತಿಶಯ ಕೌಶಲ್ಯದಿಂದ ಪೋಣಿಸಿರುವ ವೈಜಯಂತಿಮಾಲೆಯು ಆತನ ಹೃದಯದ ಮೇಲೆ ಜೋಲಾಡುತ್ತಿರುವುದು ॥೮೬೦॥ ಈ ಪ್ರಕಾರವಾಗಿ ಸಾಲಂಕಾರ ಮತ್ತು ಸಾಯುಧ ಶಂಖ, ಚಕ್ರ, ಪದ್ಮಾದಿಕಸಮೇತವಾಗಿ ಅದ್ಭುತವಾಗಿ ಕಾಣುವ ಸ್ವಯಂಪ್ರಕಾಶಮಾನನಾದ ಭಗವಂತನ ಸಮೀಪದಲ್ಲಿ ನಾರದಾದಿಗಳವರು ಯಾವಾಗಲೂ ನಿಂತುಕೊಂಡಿರುವರು ॥೮೬೧॥ ಈ ಪ್ರಕಾರವಾಗಿ ಅಲಂಕಾರ ಹಾಗೂ ಆಯುಧಗಳ ಸಮೇತವಾಗಿ ಪೂಜ್ಯ ಗೋವಿಂದನ ಪೂಜೆಯನ್ನು ಮಾಡಿ ತದನಂತರ ಆತನ ಪರಿವಾರದ ಪೂಜೆಯನ್ನು ಮಾಡಬೇಕು. ಅದನ್ನೂ ಕೂಡ ನಾನು ನಿನಗೆ ಸ್ಪಷ್ಟವಾಗಿ ಹೇಳುವೆನು, ಕೇಳು ॥೮೬೨॥

ನಂದ ಮತ್ತು ಸುನಂದ ಇವರು ಯಾವಾಗಲೂ ದೇವರ ಜೊತೆಯಲ್ಲಿ ಇರುವರು. ಗರುಡನು ಮಾತ್ರ ಸದಾವಕಾಲ ದೇವರ ಕಣ್ಣೆದುರಿನಲ್ಲಿ ನಿಂತಿರುವನು. ಚಂಡ ಮತ್ತು ಪ್ರಚಂಡರು ಇವರಿಬ್ಬರೂ ದೇವರ ಎರಡು ಬದಿಯಲ್ಲಿ ಅಹೋರಾತ್ರಿ ನಿಂತುಕೊಂಡಿರುವರು ॥೮೬೩॥ ಬಳ ಮತ್ತು ಮಹಾಬಳ ಇವರು ಆಜ್ಞೆಯನ್ನು ಪರಿಪಾಲಿಸಲು ಸದೈವ ತತ್ಪರರಾಗಿರುವರು. ಕುಮುದ ಮತ್ತು ಕುಮುದಾಕ್ಷರರು ಇವರು ಅತ್ಯಂತ ಸಮರ್ಥರಾಗಿದ್ದು ದೇವರ ಹಿಂದೆ ನಿಂತುಕೊಂಡಿರುವರು ॥೮೬೪॥ ಗರುಡನು ಕಣ್ಣೆದುರಿನಲ್ಲಿ ನಿಂತಿದ್ದರೆ ಉಳಿದ ಎಂಟು ಜನರು ಎಂಟು ದಿಕ್ಕುಗಳಲ್ಲಿ ನಿಂತುಕೊಂಡಿರುವರು. ಈ ಪ್ರಕಾರವಾಗಿ ಶ್ರೀಹರಿಯ ಸಾನಿಧ್ಯದಲ್ಲಿರುವ ಈ ಪಾರ್ಷದಾಸರಾಗಿರುವರು ॥೮೬೫॥

ಇವರಲ್ಲದೇ ದುರ್ಗಾ, ವಿನಾಯಕ, ವ್ಯಾಸ ಮತ್ತು ವಿಶ್ವಕ್ಸೇನ ಇವರನ್ನು ನಾಲ್ಕು ಮೂಲೆಗಳಲ್ಲಿ ಸ್ಥಾಪಿಸಿ ದೇವರ ಎದುರಿನಲ್ಲಿ ಇವರನ್ನೂ ಕೂಡ ಮನೋಭಾವದಿಂದ ಪೂಜಿಸಬೇಕು ॥೮೬೬॥ ಮೂಲ ಮೂರ್ತಿಯಲ್ಲಿ ಏಕರೂಪರಾಗಿರುವ ಗುರು ಮತ್ತು ಪರಮಗುರು ಇವರನ್ನು ಪರಮೇಷ್ಠಿ ಗುರುಗಳಲ್ಲಿ ಐಕ್ಯ ಮಾಡಿ ಪೂಜೆಯನ್ನು ಮಾಡಬೇಕು ॥೮೬೭॥ ಇಂದ್ರಾದಿ ಅಷ್ಟ ಲೋಕಪಾಲಕರ ಆವಾಹನೆಯನ್ನು ಮಾಡಿ ಅವರನ್ನೂ ಸಹ ಎಂಟು ದಿಕ್ಕುಗಳಲ್ಲಿ ಸ್ಥಾಪನೆಯನ್ನು ಮಾಡಬೇಕು. ಹಾಗೂ ಪೂಜೆಯನ್ನು ಮಾಡಬೇಕು ॥೮೬೮॥

ಶಾಙ್ಗ್ರ್ಧರ । ಸಂಕ್ಷೇಪಾಕಾರ ಸಾಂಗತ ॥೨೭೦॥

ಚಂದನೋಶೀರಕರ್ಪೂರಕುಂಕುಮಾಗುರುವಾಸಿತೈಃ । ಸಲಿಲೈಃ ಸ್ನಾಪಯೇನ್ ಮಂತ್ರೈರ್ನಿತ್ಯದಾ ವಿಭವೇ ಸತಿ ॥೩೦॥
ಸ್ವರ್ಣಘರ್ಮಾನುವಾಕೇನ ಮಹಾಪುರುಷವಿದ್ಯಯಾ । ಪೌರುಷೇಣಾಪಿ ಸೂಕ್ತೇನ ಸಾಮಭೀರಾಜನಾದಿಭಿಃ ॥೩೧॥

ಅರ್ಥ:- ಪ್ರಿಯ ಉದ್ಧವಾ, ಅನುಕೂಲ ತಕ್ಕಂತೆ ನಿತ್ಯದಲ್ಲಿ ಚಂದನ, ಉಶೀರ ಮೂಲಿಕೆ, ಕರ್ಪೂರ, ಕುಂಕುಮ ಮತ್ತು ಅಗರುಯುಕ್ತವಾದ ಸುಗಂಧಿತ ಜಲದಿಂದ ಪ್ರತಿಮೆಯನ್ನು ಪ್ರತಿದಿನವೂ ಅಭಿಷೇಕ ಮಾಡಬೇಕು. ಆಗ ''ಸುವರ್ಣ ಧರ್ಮ'' ಇತ್ಯಾದಿ ಸ್ವರ್ಣಧರ್ಮಾನುವಾಕ ''ಜಿತಂ ತೇ ಪುಂಡರೀಕಾಕ್ಷ'' ಇತ್ಯಾದಿ ಮಹಾಪುರುಷವಿದ್ಯಾ ''ಸಹಸ್ರಶೀರ್ಷಾಪುರುಷಾ'' ಇತ್ಯಾದಿ ಪುರುಷಸೂಕ್ತ ಮತ್ತು ''ಇದಂ ನರೋ ನೇಮಾಧಿಕಾ ಹವಂತ'' ಇತ್ಯಾದಿ ಮಂತ್ರೋಕ್ತ ರಾಜನಾದಿ ಸಾಮಗಾಯನದ ಪಾಠವನ್ನು ಮಾಡಬೇಕು.

ಏಳಾ ವಾಳಾ ಕರ್ಪೂರ । ಚಂದನ ಕುಂಕುಮ ಕೇಶರ । ತ್ಯಾಮಾಜೀ ಮೇಳವೂನಿ ಅಗರ । ಧೂಪಿಲೇ ನೀರ ಸ್ನಪನಾಸೀ ॥೨೭೧॥ ಸುವಾಸಿತ ಸಪರಿಕರ । ಗಂಗಾಜಳ ಅತಿಪವಿತ್ರ। ಶಂಖಮುದ್ರಾಪುರಸ್ಕರ । ಶಂಖೀ ತೇ ನೀರ ಭರಾವೇ ॥೨೭೨॥ ಐಸೇ ಜಳ ಘೇಊನಿ ಶುದ್ಧ । ಆಪ್ತಸ್ತಂಬಶಾಖೇಚೇ ಪ್ರಸಿದ್ಧ । ''ಸುವರ್ಣಧರ್ಮಾನುವಾಕ'' ಪದ । ತೇಣೇ ಅಭಿಷೇಕ ವಿಶದ ಮಜ ಕರಾವಾ ॥೨೭೩॥ ಅಥವಾ ಕೇವಳ ''ಪುರುಷಸೂಕ್ತ'' । ''ರುದ್ರಾಭಿಷೇಕ'' ''ವಿಷ್ಣುಸೂಕ್ತ'' । ಇಂಹೀ ಮಂತ್ರೀ ಮಂತ್ರೋಕ್ತ । ದೇವಾಸೀ ಯಥೋಕ್ತ ಸ್ನಾನ ದ್ಯಾವೇ ॥೨೭೪॥ ಕಾ ಸಾಮವೇದಿಂಚೇ ಗಾಯನ । ತ್ಯಾಮಾಜೀ ಸಾಮನೀರಾಜನ । ತೇಣೇಹೀ ಕರೂನಿಯಾ ಜಾಣ । ದೇವಾಸೀ ಸ್ನಾನ ಕರಾವೇ ॥೨೭೫॥ ಅಸಲ್ಯಾ ವೈಭವಸಂಪನ್ನ । ನಿತ್ಯ ದ್ಯಾವೇ ಹೇ ಮಹಾಸ್ನಾನ । ನಾತರೀ ಪರ್ವವಿಶೇಷೇ ಜಾಣ । ಕರಾವೇ ಆಪಣ ಜಯಂತ್ಯಾದಿಕೀ ॥೨೭೬॥ ಆಗಮೋಕ್ತ ಸುಲಕ್ಷಣ । ''ಮಹಾಪುರುಷವಿದ್ಯಾ'' ಪೂರ್ಣ । ತೇಣೇಹೀ ಕರೂನಿ ಆಪಣ । ದೇವಾಸೀ ಸ್ನಾನ ಕರಾವೇ ॥೨೭೭॥ ದೇವಾಸೀ ಪೂರ್ಣ ಝಾಲಿಯಾ ಸ್ನಾನ । ಕರಾವೇ ಮಂಗಳನೀರಾಂಜನ । ಮಗ ವಸ್ತ್ರೇ ಅಲಂಕಾರ ಭೂಷಣ । ದೇವಾಸೀ ಆಪಣ ಅರ್ಪಾವೀ ॥೨೭೮॥

ವಸ್ತ್ರೋಪವೀತಾಭರಣಪತ್ರಸ್ರಗ್ಗಂಧಲೇಪನೈಃ । ಅಲಂಕುರ್ವೀತ ಸಪ್ರೇಮ ಮದ್ಭಕ್ತೋ ಮಾಂ ಯಥೋಚಿತಮ್ ॥೩೨॥

ಅರ್ಥ: - ತದನಂತರ ಭಕ್ತನು ಪ್ರೇಮದಿಂದ ವಸ್ತ್ರ, ಯಜ್ಞೋಪವೀತ, ನಾನಾ ಆಭರಣಗಳು, ತಿಲಕವಿನ್ಯಾಸಗಳು ಮತ್ತು ಹಾರಗಳು ಇವುಗಳಿಂದ ನನ್ನನ್ನು ಅಲಂಕರಿಸಬೇಕು ಹಾಗೂ ನನ್ನ ಶರೀರಕ್ಕೆ ವಿದ್ಯುಕ್ತವಾಗಿ ಸುಗಂಧ ತೈಲವನ್ನು ಲೇಪಿಸಬೇಕು.

ದೇವೋ ಸ್ವರೂಪೇ ಘನಸಾಂವಳಾ । ಕಾಂಸೇ ಕಸಾವಾ ಸೋನಸಳಾ । ಹೇಮಸೂತ್ರ ಅರ್ಪೂನಿ ಗಳಾ । ರತ್ನಮೇಖಳಾ ಬಾಣಾವೀ ॥೨೭೯॥
ವಾಂಕೀಅಂದುವಾಂಚಾ ಗಜರ । ಚರಣೇ ನೂಪುರಾಂಚಾ ಝಣತ್ಕಾರ । ಮುಕುಟಕುಂಡಲೇ ಮನೋಹರ । ಹೃದಯೀ ಗಂಭೀರ ಮಹಾಪದಕ ॥೨೮೦॥ ಜಡಿತ ಮೋತಿಲಗ ಪತ್ರವೇಲೀ । ಅತಿಶೋಭಿತ ದಿಸೇ ನಿಢಳೀ । ತಿಲಕ

ಗುರುಗಳ ದುರ್ಗಾದಿಕರ ಮತ್ತು ಅಷ್ಟಲೋಕಪಾಲಕರ ಪ್ರೋಕ್ಷಣ-ಪಾದ್ಯ ಇತ್ಯಾದಿ ಉಪಚಾರಗಳಿಂದ ಪವಿತ್ರ ಮನಸ್ಸಿನಿಂದ ಯಥಾಸಾಂಗವಾಗಿ ಪೂಜೆಯನ್ನು ಮಾಡಬೇಕು ॥೨೬೯॥ ಆ ಪೂಜೆಯ ಉಪಚಾರಗಳು ಯಾವುವು? ಮತ್ತು ಪ್ರಕಾರಗಳೆಷ್ಟು? ಎಂಬುವುದನ್ನು ಮುಂದಿನ ಆರು ಶ್ಲೋಕಗಳಲ್ಲಿ ಶ್ರೀಕೃಷ್ಣನು ಸಂಕ್ಷಿಪ್ತವಾಗಿ ಹೇಳುವನು ॥೨೭೦॥

ಏಲಕ್ಕಿ, ಬಾಳದ ಬೇರು, ಕರ್ಪೂರ, ಚಂದನ, ಕುಂಕುಮ, ಕೇಶರ ಇದರಲ್ಲಿ ಆಗರು ಕೂಡಿಸಿ ಸುಗಂಧಗೊಳಿಸಿರುವ ಜಲವನ್ನು ಸ್ನಾನಕ್ಕಾಗಿ ಉಪಯೋಗಿಸಬೇಕು ॥೨೭೧॥ ಸುಗಂಧ ಪರಿಮಳವನ್ನಾಗಿ ಮಾಡಿದ ಅತ್ಯಂತ ಪವಿತ್ರ ಗಂಗಾಜಲವನ್ನು ಶಂಖಮುಖವನ್ನು ಮುಂದುಮಾಡಿ ಅದರಲ್ಲಿ ತುಂಬಬೇಕು ॥೨೭೨॥ ಹೀಗೆ ಶುದ್ಧವಾದ ಪವಿತ್ರ ಜಲವನ್ನು ತೆಗೆದುಕೊಂಡು ಆಪಸ್ತಂಭ ಶಾಖೆಯಲ್ಲಿನ ''ಸುವರ್ಣಧರ್ಮ'' ಎಂಬ ಮಂತ್ರವನ್ನು ಹೇಳುತ್ತ ಅಭಿಷೇಕವನ್ನು ಮಾಡಬೇಕು ॥೨೭೩॥ ಅಥವಾ ಕೇವಲ ಪುರುಷಸೂಕ್ತ, ರುದ್ರಾಭಿಷೇಕ, ವಿಷ್ಣುಸೂಕ್ತ ಈ ಮಂತ್ರಗಳಿಂದ ದೇವರಿಗೆ ಸ್ನಾನವನ್ನು ಮಾಡಿಸಬೇಕು ॥೨೭೪॥ ಇಲ್ಲವೆ, ಸಾಮವೇದದಲ್ಲಿನ ಗಾಯನವನ್ನು ಮಾಡಬೇಕು. ಅರ್ಥಾತ್ ಅದರಲ್ಲಿನ ರಾಜನಾದಿ ಸಾಮಗಳನ್ನು ಹಾಡುತ್ತ ದೇವರಿಗೆ ಸ್ನಾನವನ್ನು ಮಾಡಿಸಬೇಕು ॥೨೭೫॥ ದ್ರವ್ಯದ ಅನುಕೂಲತೆವಿದ್ದರೆ ಇಂತಹ ವೈಭವದೊಂದಿಗೆ ನಿತ್ಯವೂ ಅಭಿಷೇಕವನ್ನು ಮಾಡಬೇಕು. ಅನುಕೂಲತೆ ಇರದಿದ್ದರೆ ವಿಶೇಷ ಪರ್ವಕಾಲದಲ್ಲಿ ಅಥವಾ ಜಯಂತಿ ಉತ್ಸವಾದಿ ಕಾಲದಲ್ಲಿ ಸ್ನಾನವನ್ನು ಮಾಡಿಸಬೇಕು ॥೨೭೬॥ ಆಗಮೋಕ್ತ ಮಹಾಪುರುಷವಿದ್ಯೆಯು ಪರಿಪೂರ್ಣವಾದ ಸುಲಕ್ಷಣವಾಗಿರುವುದು. ಇದರ ಯೋಗದಿಂದ ತಾನು ಸ್ನಾನವನ್ನು ಮಾಡಿ ತದನಂತರ ದೇವರಿಗೆ ಸ್ನಾನವನ್ನು ಮಾಡಿಸಬೇಕು ॥೨೭೭॥ ದೇವರ ಸ್ನಾನವು ಪೂರ್ಣವಾದ ನಂತರ ದೇವರಿಗೆ ಮಂಗಳಾರತಿಯನ್ನು ಮಾಡಬೇಕು. ತದನಂತರ ದೇವರಿಗೆ ವಸ್ತ್ರಗಳನ್ನು ಅಲಂಕಾರ ಭೂಷಣೆಗಳನ್ನು ಅರ್ಪಿಸಿ ಶೃಂಗರಿಸಬೇಕು ॥೨೭೮॥

ದೇವನು ಮೇಘದಂತೆ ಶ್ಯಾಮವರ್ಣದವನಾಗಿರುವನು. ಆತನ ನಡುವಿಗೆ ಪೀತ ಪೀತಾಂಬರವನ್ನು ತೊಡಿಸಬೇಕು. ಕೊರಳಲ್ಲಿ ಸುವರ್ಣ ಯಜ್ಞೋಪವೀತವನ್ನು ಹಾಕಬೇಕು. ನಡುವಿಗೆ ರತ್ನಖಚಿತನಡುಪಟ್ಟಿಯನ್ನು ಕಟ್ಟಬೇಕು ॥೨೭೯॥

ಪಿಂವಳಾ ತಯಾತಳೀ । ಕಂಠೀ ಝಳಾಳೀ ಕೌಸ್ತುಭ ॥೨೮೧॥ ಬಾಹೀ ಬಾಹುವಟೇ ವೀರಕಂಕಣೇ । ಕರಮುದ್ರಿಕಾ ರತ್ನ ಖೇವಣೇ । ಪೀತಾಂಬರ ಝಳಕೇ ಕೋಣೇ ಮಾನೇ । ರವಿಬಿಂಬ ತೇಣೇ ಲಾಜವಿಲೇ ॥೨೮೨॥ ಸಾಂವಳೇ ಅಂಗೀ ಗೋಮಟೀ । ಶುಭ್ರ ಚಂದನಾಚೀ ಶೋಭೇ ಉಟೀ । ಸುಮನಮಾಳಾ ವೀರಗುಂಠೀ । ಹೋತ ಘರಟೀ ಮಧುಕರಾ ॥೨೮೩॥ ವೈಜಯಂತೀ ವನಮಾಳಾ । ಆಪಾದ ರುಳೇ ಗಳಾ । ಘವಘವೀತ ದಿಸೇ ಡೋಳಾ । ಘನಸಾಂವಳಾ ಶೋಭತ ॥೨೮೪॥ ಏವಂ ವಸ್ತ್ರಾಲಂಕಾರ ಭೂಷಣೇ । ಸ್ವಯೇ ಪೂಜಾವಾ ಶಾರ್ಙ್ಗಪಾಣೀ । ಪೂಜೇಹೂನಿಯಾ ಮನೀ । ಶ್ರದ್ಧಾ ಕೋಟಿಗುಣೀ ಅಸಾವೀ ॥೨೮೫॥ ಭಕ್ತ ಅಸೋ ಅತಿಸಂಪನ್ನ । ಅಥವಾ ಹೋ ಕಾ ಅತಿನಿರ್ಧನ । ಜೇಥ ಶುದ್ಧ ಶ್ರದ್ಧಾ ಸಂಪೂರ್ಣ । ತೇಥ ನಾರಾಯಣ ಸಂತುಷ್ಟೇ ॥೨೮೬॥ ಸಕಳ ಪೂಜೇಚೇ ಕಾರಣ । ಮುಖ್ಯ ಶ್ರದ್ಧಾಚಿ ಗಾ ಪ್ರಮಾಣ । ಅತ್ಯಂತ ಶ್ರದ್ಧೇ ಜೋ ಸಂಪನ್ನ । ತೋ ದೇವಾಚಾ ಪೂರ್ಣ ಪಢಿಯಂತಾ ॥೨೮೭॥

ಪಾದ್ಯಮಾಚನೀಯಂ ಚ ಗಂಧಂ ಸುಮನಸೋಽಕ್ಷತಾನ್ । ಧೂಪದೀಪೋಪಹಾರ್ಯಾಣಿ ದದ್ಯಾನ್ಮೇ ಶ್ರದ್ಧಯಾರ್ಚಕಃ ॥೩೩॥

ಅರ್ಥ:- ಉಪಾಸಕನು ಪಾದ್ಯ, ಆಚಮನ, ಗಂಧ, ಪುಷ್ಪ, ಅಕ್ಷತೆ, ಧೂಪ, ದೀಪ ಹಾಗೂ ನೈವೇದ್ಯ ನನಗೆ ಶ್ರದ್ಧೆಯಿಂದ ಅರ್ಪಿಸಬೇಕು.

ಏವಂ ಮೂರ್ತಿ ಶೃಂಗಾರಿಲ್ಯಾ ಪೂರ್ಣ । ದ್ಯಾವೇ ಪಾದ್ಯ ಅರ್ಘ್ಯ ಆಚಮನ । ದೇಊನಿ ಮಧುಪರ್ಕ ವಿಧಾನ । ಕರಾವೇ ಪೂಜನ ಶ್ರದ್ಧಾಯುಕ್ತ ॥೨೮೮॥ ಗಂಧಾಕ್ಷತಾ ಶುದ್ಧ ಸುಮನ । ಧೂಪ ದಶಾಂಗ ದೀಪದಾನ । ದೀಪಾವಲೀ ನೀರಾಂಜನ । ಶ್ರದ್ಧಾ ಮದರ್ಚನ ಸಾಧಕಾ ॥೨೮೯॥

ಗುಡಪಾಯಸಸರ್ಪೀಂಷಿ ಶಷ್ಕುಲ್ಯಾಪೂಪಮೋದಕಾನ್ । ಸಂಯಾವದಧಿಸೂಪಾಂಶ್ಚ ನೈವೇದ್ಯಂ ಸತಿ ಕಲ್ಪಯೇತ್ ॥೩೪॥

ಅರ್ಥ:- ಯಥಾಶಕ್ತಿ ಬೆಲ್ಲ ಅಥವಾ ಬೆಲ್ಲದ ಖೀರು, ತುಪ್ಪ,ತುಪ್ಪದಲ್ಲಿ ಕರಿದ ಭಕ್ಷ್ಯ, ಶೀಕರಣೆ, ಲಡ್ಡು, ಖಿಚಡೀ, ಮೊಸರು, ಪಲ್ಲೆ ಇತ್ಯಾದಿಗಳನ್ನು ನನ್ನ ಮುಖಕ್ಕೆ ಹಚ್ಚಿ ನೈವೇದ್ಯವನ್ನು ಮಾಡಬೇಕು.

ಝಾಲ್ಯಾ ಧೂಪ ದೀಪ ನೀರಾಂಜನ । ದೇವಾಸೀ ವೋಗರಾವೇ ಭೋಜನ । ನಾನಾಪರೀಚೇ ಪಕ್ವಾನ್ನ । ಅನ್ನ ಸದನ್ನ ರಸಯುಕ್ತ ॥೨೯೦॥
ಮಾಂಡಾ ಸಾಕರಮಾಂಡಾ ಗುಳವರೀ । ಶಷ್ಕುಲ್ಯಾ ಅಮೃತಫಳೇ ಕ್ಷೀರಧಾರೀ । ದುಧಾಮಾಜೀ ಆಳಿಲೀ ಕ್ಷೀರೀ । ವಾಢಿಲೀ ಪರೀ ವಳಿವಟ ॥೨೯೧॥ ಮಧುವಡಾ ಕೋರವಡಾ । ಲಾಡೂ ತಿಳವಯಾಂಚಾ ಜೋಡಾ । ರುಚಿ ಆಲಾ

ವಂಕಿ ಇತ್ಯಾದಿ ಬಾಹುಭೂಷಣೆಗಳನ್ನು ಕಾಲುಗಳಲ್ಲಿ ರುಣುಝುಣು ನಾದ ಮಾಡುವ ಪೈಂಜಣಗಳನ್ನು, ಮಸ್ತಕದ ಮೇಲೆ ಮನಮೋಹಕ ಕೀರಿಟವನ್ನು ಹಾಗೂ ಕಿವಿಗಳಲ್ಲಿ ಕುಂಡಲಗಳನ್ನು ಮತ್ತು ಹೃದಯದ ಮೇಲೆ ವಿಶಾಲವಾದ ಮಹಾಪದಕವನ್ನು ಹಾಕಬೇಕು ॥೨೮೦॥ ಹಣೆಯ ಮೇಲೆ ರತ್ನಜಡಿತ ಮುತ್ತಿನ ಸುಂದರವಾದ ಪತ್ರವೇಲಿಯನ್ನು, ಹಣೆಯಲ್ಲಿ ಕೇಸರಿ ತಿಲಕವನ್ನು ಧರಿಸಬೇಕು. ಹಾಗೆಯೇ ಕೊರಳಲ್ಲಿ ಕೌಸ್ತುಭಮಣಿಯು ಮಿಂಚುತ್ತಿರಬೇಕು ॥೨೮೧॥ ಭುಜಗಳಲ್ಲಿ ಬಾಹುವಟೆ ಹಾಗೂ ವೀರಕಂಕಣಗಳನ್ನು ಬೆರಳುಗಳಲ್ಲಿ ರತ್ನಜಡಿತ ಉಂಗುರಗಳನ್ನು ತೊಡಿಸಬೇಕು. ಸೂರ್ಯನ ಪ್ರಭೆಯನ್ನು ನಾಚಿಸುವ ಪೀತಾಂಬರ ಪ್ರಕಾಶವಿರಬೇಕು ॥೨೮೨॥ ಆತನ ಮೇಘಶ್ಯಾಮ ದೇಹದ ಮೇಲೆ ಶುಭ್ರವಾದ ಸುಗಂಧ ಚಂದನವು ಶೋಭಿಸುತ್ತಿದೆ. ಹಣೆಯ ಮೇಲಿನ ಕೂದಲುಗಳ ಗೊಂಚಲಿಗೆ ತೊಡಿಸಿರುವ ಹೂಮಾಲೆಯ ಸುಗಂಧಕ್ಕೆ ಭ್ರಮರಗಳು ಮೋಹಗೊಂಡು ಅತ್ತಿತ್ತ ಹಾರಾಡುತ್ತಿರುತ್ತವೆ ॥೨೮೩॥ ವೈಜಯಂತಿ ಹಾಗೂ ವನಮಾಲೆ ಪಾದದವರೆಗೂ ತೂಗಾಡುತ್ತಿರುವುವು. ನೋಡಲಿಕ್ಕೆ ಅತಿ ಸುಂದರವಾಗಿ ಕಾಣುತ್ತಿರುವುವು. ಈ ಪ್ರಕಾರವಾಗಿ ಯಾವ ಮೇಘಶ್ಯಾಮ ದೇವನು ಶೋಭಿಸುತ್ತಿರುವನು ॥೨೮೪॥ ಈ ರೀತಿಯಾಗಿ ವಸ್ತ್ರಗಳಿಂದ, ಅಲಂಕಾರ ಭೂಷಣೆಗಳಿಂದ ಶ್ರೀಹರಿಯ ಪೂಜೆಯನ್ನು ಮಾಡಬೇಕು. ಈ ಪೂಜೆಗಿಂತಲೂ ಕೋಟ್ಯಾವಧಿಯಾಗಿ ಮನದಲ್ಲಿ ಪರಮ ಶ್ರದ್ಧೆವಿರಬೇಕು ॥೨೮೫॥ ಭಕ್ತನು ಅತ್ಯಂತ ಶ್ರೀಮಂತನಾಗಿರಲಿ ಅಥವಾ ಅತ್ಯಂತ ಬಡವನಾಗಿರಲಿ, ಎಲ್ಲಿ ಪರಮ ಶ್ರದ್ಧೆವಿರುವುದೋ, ಅಲ್ಲಿ ನಾರಾಯಣನು ಸಂತುಷ್ಟನಾಗುವನು ॥೨೮೬॥ ಸರ್ವ ಪ್ರಕಾರಗಳ ಪೂಜೆಯಲ್ಲಿ ಶ್ರದ್ಧೆಯು ಪ್ರಮಾಣವಾಗಿರುವುದು. ಯಾರು ಶ್ರದ್ಧಾವಂತರೋ, ಅವರೇ ದೇವರಿಗೆ ಅತಿಶಯವಾಗಿ ಪ್ರಿಯರಾಗುವರು ॥೨೮೭॥

ಈ ಪ್ರಕಾರವಾಗಿ ಮೂರ್ತಿಯನ್ನು ಪರಿಪೂರ್ಣವಾಗಿ ಶೃಂಗರಿಸಬೇಕು. ತದನಂತರ ಪಾದ್ಯ, ಅರ್ಘ್ಯ ಹಾಗೂ ಆಚಮನಗಳನ್ನು ಕೊಡಬೇಕು. ಮಧುಪರ್ಕವಿಧಾನವನ್ನು ಕೊಟ್ಟು ಪರಮ ಶ್ರದ್ಧೆಯಿಂದ ಪೂಜೆಯನ್ನು ಮಾಡಬೇಕು ॥೨೮೮॥ ಗಂಧ, ಅಕ್ಷತಾ, ಸುಗಂಧ ಪುಷ್ಪಗಳು, ದಶಾಂಗ, ಧೂಪ, ದೀಪದಾನ ಇತ್ಯಾದಿ ಸಾಹಿತ್ಯಗಳಿಂದ ಸಾಧಕನು ಪರಮ ಶ್ರದ್ಧೆಯಿಂದ ಶುದ್ಧವಾದ ಅಂತಃಕರಣದಿಂದ ನನ್ನ ಪೂಜೆಯನ್ನು ಮಾಡಬೇಕು ॥೨೮೯॥

ಧೂಪ, ದೀಪ, ನಿರಾಂಜನ ಆರತಿಯನ್ನು ಬೆಳಗಿ, ದೇವರಿಗೆ ನೈವೇದ್ಯವನ್ನು ತೋರಿಸಬೇಕು. ಅದರಲ್ಲಿ ನಾನಾ ಪ್ರಕಾರದ ಪಕ್ವಾನ್ನಗಳು ಹಾಗೂ ಷಡ್‌ರಸಯುಕ್ತ ಪದಾರ್ಥಗಳಿರಬೇಕು ॥೨೯೦॥

ಅಂಬವಡಾ । ತಾಯಾಪುಢಾ ವಾಢಿನ್ನಲಾ ॥೯೨॥ ಪತ್ರಶಾಖಾಂಚೀ ಪ್ರಭಾವಳೀ । ಭಾತ ಅರುವಾರ ಜಿರೇಸಾಳೀ । ಸೂಪ ಸೋಲೀಂವ ಮೃಗದಾಳೀ । ಗೋಘೃತ ಪರಿಮಳೀ ಸದ್ಯಸ್ತಪ್ತ ॥೯೩॥ ಸಾಂಜಾ ಸಾಂಡೀವ ಗುಳಯುಕ್ತ । ಏಳಾ ಮಿರೇ ಘಾಲೂನಿ ಆಂತ । ಪಾಕ ಕೇಲಾ ಘೃತಮಿಶ್ರಿತ । ಸೇವಿತಾ ಮುಖಾಂತ ಅರುವಾರ ॥೯೪॥ ಕಥಿಕಾ ತಕ್ರಾಚೀ ಗೋಮಟೀ । ಆಮ್ರರಸೇ ಭರಲೀ ವಾಟೀ । ಶಿಖರಣೀ ಕೇಳಾಂಚೀ ವಾಢಿಲೀ ತಾಟೀ । ದೇಖೋನಿ ಲಾಳ ಘೋಟೀ ಅಮರೇಂದ್ರ ॥೯೫॥ ದಧಿ ದುಗ್ಧ ಸಾಯ ಸಾಕರ । ನೈವೇದ್ಯ ವಾಢಿಲೇ ಪರಿಕರ । ದೇಖ ನ ಪಾಹೇ ಉಪಚಾರ । ಶ್ರದ್ಧಾ ಶ್ರೀಧರ ತೃಪ್ತ ಹೋಯ ॥೯೬॥ ಸಾಮರ್ಥ್ಯ ಅಸಲೇ ಕರಾವಯಾಸೀ । ತರೀ ಹೇ ಪರವಡೀ ಪ್ರತಿದಿವಶೀ । ನೈವೇದ್ಯ ಅರ್ಪಾವೇ ದೇವಾಸೀ । ನಾ ಕರೀ ಪರ್ವವಿಶೇಷೀ ಅರ್ಪಾವೇ ॥೯೭॥ ಉಪಾಸ್ಯಮೂರ್ತಿ ಜೇ ಸಾಚಾರ । ತೇ ಜಯಂತೀಸ ಸವಿಸ್ತರ । ಪರ್ವವಿಶೇಷೀ ಉಪಚಾರ । ಪೂಜಾ ಅಪಾರ ಹರಿ ಸಾಂಗೇ ॥೯೮॥

ಅಭ್ಯಂಗೋನ್ಮರ್ದನಾದರ್ಶದಂತಧಾವಾಭಿಷೇಚನಮ್ । ಅನ್ನಾದ್ಯಂ ಗೀತನೃತ್ಯಾನಿ ಪರ್ವಣಿ ಸ್ಯುರುತಾನ್ವಹಮ್ ॥೩೫॥

ಅರ್ಥ:- ಪರ್ವಕಾಲಗಳಲ್ಲಿ, ಸಾಧ್ಯವಾದರೆ ಪ್ರತಿದಿನವೂ ಪ್ರತಿಮೆಗೆ ಲೇಪನ ತೈಲ ಸ್ನಾನವನ್ನು ಮಾಡಿಸಬೇಕು. ಕನ್ನಡಿಯನ್ನು ತೋರಿಸಬೇಕು. ದಂತಧಾವನೆಗೆ ನೀಲಗಿರಿಯ ಕಾಷ್ಠವನ್ನರ್ಪಿಸಬೇಕು. ಪಂಚಾಮೃತದಿಂದ ಅಭಿಷೇಕ ಮಾಡಬೇಕು. ಸರ್ವ ಪ್ರಕಾರಗಳ ನೈವೇದ್ಯವನ್ನು ಅರ್ಪಿಸಬೇಕು ಮತ್ತು ಗೀತ ನೃತ್ಯಗಳಿಂದ ರಂಜಿಸಬೇಕು.

ಪರ್ವೇ ಬೋಲಿಲೀ ಆಗಮೋಕ್ತೀ । ಅಥವಾ ವಾರ್ಷಿಕ ಪರ್ವೇ ಯೇತೀ । ಕಾ ನಿಜಮೂರ್ತೀಚೀ ಜಯಂತೀ । ತೇ ಪೂಜಾ ಶ್ರೀಪತಿ ಸ್ವಯೇ ಸಾಂಗೇ ॥೯೯॥ ದಂತಧಾವನ ಉದ್ವರ್ತ್ತನ । ಮೂರ್ತಿಸೀ ದ್ಯಾವೇ ಅಭ್ಯಂಜನ । ಪಂಚಾಮೃತೇ ಕರೂನಿ ಸ್ನಪನ । ವಿಚಿತ್ರಾಭರಣ ಪೂಜಾವೀ ॥೧೦೦॥ ಪೂಜೋನಿ ಸಾಳಂಕೃತ ದೇವಾಸೀ । ನೈವೇದ್ಯ ಅರ್ಪಾವೇ ಷಡ್ರಸೀ । ದೇಊನಿ ಕರೋದ್ವರ್ತನಾಸೀ । ಮುಖವಾಸಾಸೀ ಅರ್ಪಾವೇ ॥೧೦೧॥ ದೇವ ವಿಸರಲಾ ದೇವಪಣಾಸೀ । ತೇ ದೇವಪಣ ಭೇಟೇ ದೇವಾಸೀ । ಐಶಿಯಾ ದಾಖವಾವೇ ಆದರ್ಶಾಸೀ । ತೇಣೇ ದೇವದೇವಾಸೀ ಉಲ್ಹಾಸು ॥೧೦೨॥
ಪರ್ವವಿಶೇಷೀ ಜಯಂತೀಸೀ । ಮೇಳವೂನಿ ಸಂತವೈಷ್ಣವಾಂಸೀ । ಕರಾವೇ ಗೀತನೃತ್ಯ ಕೀರ್ತನಾಸೀ । ಅತಿಪ್ರೇಮೇಸೀ ಅಹೋರಾತ್ರ ॥೧೦೩॥ ಆಗಮೋಕ್ತ ದೀಕ್ಷಾ ಹವನ । ಕರಿತಾ ತತ್ಕಾಳ ದೇವ ಪ್ರಸನ್ನ । ತ್ಯಾ ಹೋಮಾಚೇ ವಿಧಿವಿಧಾನ

ಮಂಡಿಗೆ, ಸಿಹಿಮಂಡಿಗೆ, ಗುರವಳೀ, ಕರಂಜೀ, ಮಾವು, ಬಾಸುಂದಿ, ಹಾಲು ಕುದಿಸಿ ಸಿದ್ಧಗೊಳಿಸಿದ ಖೀರು ॥೯೧॥ ಬೆಲ್ಲ ಕಣಕ ಕೂಡಿಸಿ ಕರಿದ ತಿಂಡಿ, ವಡಾ, ಲಾಡೂ, ಎಳ್ಳಿನ ಹೋಳಿಗೆ, ಮೊಸರವಡಾ ಇತ್ಯಾದಿ ಪದಾರ್ಥಗಳನ್ನು ಒಂದು ಕಡೆಯಲ್ಲಿ ಬಡಿಸಬೇಕು ॥೯೨॥ ತಪ್ಪಲು ಪಲ್ಯಗಳನ್ನು ಇನ್ನೊಂದು ಕಡೆಯಲ್ಲಿ ಬಡಿಸಿ, ಮಧ್ಯದಲ್ಲಿ ಸಣ್ಣಕ್ಕಿಯ ಅನ್ನವನ್ನು ಅದರ ಮೇಲೆ ಹೆಸರು ಬೇಳೆಯ ಹಳದಿ ತೊವ್ವೆ, ಅದರ ಮೇಲೆ ಘಮಘಮಿಸುವ ತಾಜಾ ಆಕಳ ತುಪ್ಪವನ್ನು ಹಾಕಬೇಕು ॥೯೩॥ ಉತ್ತಮ ರೀತಿಯಲ್ಲಿ ಸಿದ್ಧಗೊಳಿಸಿದ ಗೋದಿಯ ರವೆಯಲ್ಲಿ ಬೆಲ್ಲವನ್ನು ಹಾಕಿ ಪಾಕಮಾಡಿದ್ದ ಶಿರಾ, ಅದನ್ನು ತುಪ್ಪದಲ್ಲಿ, ಏಲಕ್ಕಿ, ಗೋಡಂಬಿ ಇತ್ಯಾದಿ ಹಾಕಿ ತಯಾರಿಸಬೇಕು. ಮುಖದಲ್ಲಿ ಹಾಕುತ್ತಲೇ ಅತಿಮಧುರವಾಗಿರಬೇಕು ॥೯೪॥ ರುಚಿಯಾಗಿರುವ ಉತ್ತಮವಾದ ಮಜ್ಜಿಗೆ ಸಾರು, ಮಾವಿನ ರಸದಿಂದ ತುಂಬಿದ ಬಟ್ಟಲು ಹಾಗೂ ಬಾಳೇಹಣ್ಣಿನ ಶಿಕರಣೀ, ಇವು ಎಲ್ಲವನ್ನೂ ಕಂಡ ಸ್ವರ್ಗಲೋಕದ ಇಂದ್ರನ ಬಾಯಿಗೆ ನೀರು ಬಿಡುತ್ತಿರಬೇಕು ॥೯೫॥ ಇದೇ ಪ್ರಕಾರವಾಗಿ ಮೊಸರು, ಹಾಲು, ಕೆನೆ, ಸಕ್ಕರೆ ಇತ್ಯಾದಿ ಪದಾರ್ಥಗಳೂ ಕೂಡ ನೈವೇದ್ಯದಲ್ಲಿ ಬಡಿಸಬೇಕು. ಆದರೆ, ದೇವನು ಬಾಹ್ಯ ಉಪಚಾರಕ್ಕಿಂತಲೂ ಅಂತಃಕರಣದ ಶ್ರದ್ಧೆಗೆ ಬಹಳ ತೃಪ್ತನಾಗುವನು ಎಂಬುವುದನ್ನು ತಿಳಿದಿರಬೇಕು ॥೯೬॥ ಯಾರಿಗೆ ಈ ಸರ್ವವನ್ನೂ ಮಾಡಲು ಶಕ್ಯವಿರುವುದೋ ಅವರು ಇಷ್ಟೊಂದು ವಿವಿಧ ಪದಾರ್ಥಗಳನ್ನು ಸಿದ್ಧಗೊಳಿಸಿ ದೇವರಿಗೆ ನೈವೇದ್ಯವನ್ನು ತೋರಿಸಬೇಕು. ಇಲ್ಲದಿದ್ದರೆ ಹಬ್ಬ ಹರಿದಿನಗಳಲ್ಲಿ ಅರ್ಪಿಸಬೇಕು ॥೯೭॥ ತನ್ನ ಉಪಾಸ್ಯ ಮೂರ್ತಿಯ ಜಯಂತಿಯ ದಿನದಲ್ಲಿ ಹಾಗೂ ವಿಶೇಷ ಪರ್ವಕಾಲದಲ್ಲಿ ಮಾಡಬೇಕಾದ ಪೂಜೆಯ ಅಗಣಿತ ಉಪಚಾರಗಳನ್ನು ಶ್ರೀಹರಿಯು ಈಗ ಹೇಳುತ್ತಿರುವನು ॥೯೮॥

ಆಗಮ ಶಾಸ್ತ್ರದಲ್ಲಿ ವರ್ಣಿಸಿರುವ ಪರ್ವಕಾಲಗಳಲ್ಲಿ ಅಥವಾ ಇತರ ವಾರ್ಷಿಕ ಪರ್ವಕಾಲಗಳಲ್ಲಿ ಹಾಗೂ ತನ್ನ ಉಪಾಸ್ಯ ಮೂರ್ತಿಯ ಜಯಂತಿಕಾಲದಲ್ಲಿ ಮಾಡಬೇಕಾದ ಪೂಜಾವಿಧಾನವನ್ನು ಸ್ವತಃ ಶ್ರೀಪತಿಯು ವರ್ಣಿಸುತ್ತಿರುವನು ॥೯೯॥ ಮೂರ್ತಿಗೆ ದಂತಧಾವನ, ಉದ್ವರ್ತನ ಅಭ್ಯಂಜನವನ್ನು ಕೊಡಬೇಕು. ನಂತರ ಪಂಚಾಮೃತಸ್ನಾನವನ್ನು ಮಾಡಿಸಬೇಕು. ಮತ್ತು ವಿವಿಧ ಆಭರಣಗಳಿಂದ ಅದರ ಪೂಜೆಯನ್ನು ಮಾಡಬೇಕು ॥೧೦೦॥ ಅಲಂಕಾರಯುಕ್ತವಾಗಿ ದೇವರ ಪೂಜೆಯ ನಂತರ ಷಡ್‌ರಸಯುಕ್ತ ನೈವೇದ್ಯವನ್ನು ಅರ್ಪಿಸಬೇಕು. ತದನಂತರ ಕೈ ತೊಳೆಯಲು ಸುವಾಸಿಕ ಉದಕವನ್ನು ಸಮರ್ಪಿಸಿ ಮುಖಶುದ್ಧಿಗಾಗಿ ತಾಂಬೂಲವನ್ನು ಅರ್ಪಿಸಬೇಕು ॥೧೦೧॥ ದೇವನು ತನ್ನ ದೇವತ್ವವನ್ನು ಮರೆತಿದ್ದನು. ಆ ದೇವತ್ವವು ದೇವರಿಗೆ ಭೇಟಿಯಾಗಲೆಂದು ದೇವರ ಎದುರಿನಲ್ಲಿ ಕನ್ನಡಿಯನ್ನು ಹಿಡಿಯಬೇಕು. ಇದರಿಂದ ದೇವಾಧಿದೇವನಿಗೆ ಸಂತೋಷವಾಗುವುದು ॥೧೦೨॥

। ಐಕ ಸಾವಧಾನ ಉದ್ಧವಾ ।೩೦೪॥

ವಿಧಿನಾ ವಿಹಿತೇ ಕುಂಡೇ ಮೇಖಲಾಗರ್ತವೇದಿಭಿಃ । ಅಗ್ನಿಮಾಧಾಯ ಪರಿತಃ ಸಮೂಹೇತ್ಪಾಣಿನೋದಿತಮ್ ।೩೬॥
ಪರಿಸ್ತೀರ್ಯಾಥ ಪರ್ಯುಕ್ಷೇದನ್ವಾಧಾಯ ಯಥಾವಿಧೀ । ಪ್ರೋಕ್ಷಣ್ಯಾಸಾದ್ಯ ದ್ರವ್ಯಾಣಿ ಪ್ರೋಕ್ಷ್ಯಾಗ್ನೌ ಭಾವಯೇತ ಮಾಮ್ ।೩೭॥

ಅರ್ಥ:- ಈ ರೀತಿಯಾಗಿ ಪೂಜೆಯನ್ನು ಮಾಡಿ ಶಾಸ್ತ್ರೋಕ್ತ ವಿಧಿಯಿಂದ ಯಜ್ಞಕುಂಡದಲ್ಲಿ ಅಗ್ನಿಯ ಸ್ಥಾಪನೆಯನ್ನು ಮಾಡಬೇಕು. ಈ ಯಾವ ಕುಂಡವು ಮೇಖಲಾ, ಗರ್ತ ಹಾಗೂ ವೇದಿಯಿಂದ ಶೋಭಾಯಮಾನವನ್ನಾಗಿ ಮಾಡಬೇಕು. ಅದರಲ್ಲಿ ಕೈಯ ಹರ್ವೆಯಿಂದ ಅಗ್ನಿಯನ್ನು ಪ್ರಜ್ವಲಿಸಬೇಕು. ವೇದಿಯ ನಾಲ್ಕೂ ಕಡೆಗಳಲ್ಲಿ ಕುಶಕಾಂಡಿಕಾವನ್ನು ಮಾಡಿ ಅರ್ಥಾತ ನಾಲ್ಕೂ ಕಡೆಗಳಲ್ಲಿ ಇಪ್ಪತ್ತು- ಇಪ್ಪತ್ತು ಕುಶಗಳನ್ನು ಹರಡಿಸಿ ಮಂತ್ರಗಳನ್ನು ಹೇಳುತ್ತ ಅದರ ಮೇಲೆ ಜಲವನ್ನು ಸಿಂಪಡಿಸಬೇಕು. ತದನಂತರ ವಿಧಿಪೂರ್ವಕವಾಗಿ ಸಮಿಧಾದಿಂದ ಅಧಾನರೂಪ ಅನವಾಧನ ಮಾಡಿ ಅಗ್ನಿಯ ಉತ್ತರಭಾಗದಲ್ಲಿ ಹೋಮೋಪಯೋಗಿ ಸಾಮಗ್ರಿಗಳನ್ನು ಇಡಬೇಕು ಹಾಗೂ ಪ್ರೋಕ್ಷಣಿ ಪಾತ್ರೆಯ ಜಲದಿಂದ ಪ್ರೋಕ್ಷಣೆಯನ್ನು ಮಾಡಬೇಕು. ತದನಂತರ ಅಗ್ನಿಯಲ್ಲಿ ಈ ಪ್ರಕಾರವಾಗಿ ನನ್ನ ಧ್ಯಾನವನ್ನು ಮಾಡಬೇಕು.

ಆಗಮೋಕ್ತ ಕುಂಡವಿಧಾನ । ಲಾಂಬೀ ರುಂದೀ ಖೋಲೀ ಕೋಣ । ಗಣೂನಿ ಉಂಚೀಚೇ ಪ್ರಮಾಣ । ಕುಂಡ ಸಂಪೂರ್ಣ ಸಾಧಾವೇ ।೩೦೫॥ ಸ್ವಶಾಖಾ ಜೇ ವೇದಪ್ರೋಕ್ತ । ಮೇಖಳಾಯುಕ್ತ ಸಾಧಾವೀ ಗರ್ತ । ಯೋನೀಸಕಟ ವೇದೀ ತೇಥ । ಲಕ್ಷಣೋಕ್ತ ಸಾಧಾವೀ ।೩೦೬॥ ತೇಥ ಕರೂನಿ ಅಗ್ನ್ಯಾಧಾನ । ಪ್ರತಿಷ್ಠಿಲಾ ಜೋ ಹುತಾಶನ । ತ್ಯಾಸೀ ಕರೂನಿ ಕರಸ್ಪರ್ಶನ । ಪರಿಸಮೂಹನ ಕರಾವೇ ।೩೦೭॥ ದರ್ಭೀ ಕರಾವೇ ಪರಿಸ್ತರಣ । ಮಗ ಕರಾವೇ ಪರ್ಯುಕ್ಷಣ । ಇಧ್ಮಾ ಬರ್ಹಿವಿಸರ್ಜನ । ತ್ರಿಸಂಧಾನ ಠೇವಾವೇ ।೩೦೮॥ ಕರೂನಿ ಬರ್ಹೀಚೇ ಆಸ್ತರಣ । ಕರಾವೇ ಆಜ್ಯಸ್ಥಾಲೀಸ್ಥಾಪನ । ವ್ಯಾಹೃತೀ ಸಮಿಧಾಹೋಮ ಜಾಣ । ''ಅನ್ವಾಧಾನ'' ತ್ಯಾ ನಾಂವ ।೩೦೯॥ ಪ್ರೋಕ್ಷಣೀಪಾತ್ರೀಚೇ ವಿಧಾನ । ಕರೂನಿ ಭರಾವೇ ಜಳ ಪೂರ್ಣ । ತೇಣೇ ಕುಶಾಗ್ರಜಳೇ ಆಪಣ । ಹೋಮದ್ರವ್ಯೇ ಜಾಣ ಪ್ರೋಕ್ಷಾವೀ ।೩೧೦॥ ಕುಂಡೀ ಪ್ರದೀಪ್ತ ಹುತಾಶನ । ತೇಥ ಕರಾವೇ ಮಾಝೇ ಧ್ಯಾನ । ತೇ ಧ್ಯಾನಮೂರ್ತೀಚೇ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ।೩೧೧॥

ತಪ್ತಜಾಂಬೂನದಪ್ರಖ್ಯಂ ಶಂಖಚಕ್ರಗದಾಂಬುಜೈಃ । ಲಸಚ್ಚತುರ್ಭುಜಂ ಶಾಂತಂ ಪದ್ಮಕಿಂಜಲ್ಕವಾಸಸಮ್ ।೩೮॥
ಸ್ಫುರತ್ಕಿರೀಟಕಟಕಕಟಿಸೂತ್ರವರಾಂಗದಮ್ । ಶ್ರೀವತ್ಸವಕ್ಷಸಂ ಭ್ರಾಜತ್ ಕೌಸ್ತುಭಂ ವನಮಾಲಿನಮ್ ।೩೯॥

ಅರ್ಥ:- ನನ್ನ ಮೂರ್ತಿಯು ಕಾದ ಬಂಗಾರದಂತೆ ಮಿಂಚುತ್ತಿರಬೇಕು. ಶಂಖ,ಚಕ್ರ, ಗದಾ, ಪದ್ಮಸಮೇತವಾದ ನಾಲ್ಕು ಭುಜಗಳುಳ್ಳ, ಸದಾ ಶಾಂತನಾದ ಮತ್ತು ಕಮಲ ಕೇಸರ ಬಣ್ಣದಂತಿರುವ ವಸ್ತ್ರದಿಂದ ಭೂಷಿತನಾದ ಭಗವಂತನ ರೂಪವನ್ನು ಜ್ಞಾನಿ ಭಕ್ತನು ಧ್ಯಾನಿಸಬೇಕು. ಆತನ ಕಿರೀಟ, ಕಂಕಣಗಳು, ಉಡಿದಾರ ಮತ್ತು ಸುಂದರವಾದ ತೋಳ್ಬಳೆಗಳು ಪ್ರಕಾಶಮಯವಾಗಿ ಹೊಳೆಯುತ್ತಿರಬೇಕು. ವಕ್ಷಸ್ಥಳದಲ್ಲಿ ಶ್ರೀವತ್ಸ ಚಿಹ್ನೆ, ಹೊಳೆಯುವ ಕೌಸ್ತುಭಮಣಿ ಮತ್ತು ವನಮಾಲೆಗಳಿಂದ ಶೋಭಿಸುತ್ತಿರುವ ಭಗವಂತನನ್ನು ಧ್ಯಾನಿಸಬೇಕು.

ಜೈಸೀ ತಪ್ತಸ್ವರ್ಣಭಾ । ತೈಶೀ ಮೂರ್ತೀಚೀ ಅಂಗಪ್ರಭಾ । ಚತುರ್ಭುಜ ಸಾಜಿರೀ ಶೋಭಾ । ಚಿನ್ಮಾತ್ರಗಾಭಾ ಸಾಕಾರ ।೩೧೨॥ ಶಂಖಚಕ್ರಗದಾಕಮಳ । ಕಾಂಸೇ ಪೀತಾಂಬರ ಸೋಜ್ಜ್ವಳ । ಲೋಪೂನಿ

ವಿಶೇಷ ಪರ್ವಕಾಲಗಳಲ್ಲಿ, ಜಯಂತಿಯ ಕಾಲದಲ್ಲಿ ವೈಷ್ಣವ ಭಕ್ತರನ್ನು ಒಂದುಗೂಡಿಸಿ ಪ್ರೇಮದಿಂದ ಹಗಲು ರಾತ್ರಿ ಗೀತ, ನೃತ್ಯ, ಕೀರ್ತನೆಗಳನ್ನು ಮಾಡಬೇಕು ।೩೦೩॥ ಅದರಂತೆಯೇ ಶಾಸ್ತ್ರೋಕ್ತವಾಗಿ ದೀಕ್ಷೆಯನ್ನು ಪಡೆದು ಹವನವನ್ನು ಮಾಡಲು ದೇವನು ತತ್ಕಾಲದಲ್ಲಿ ಪ್ರಸನ್ನನಾಗುವನು. ಹೇ ಉದ್ಧವನೇ, ಈಗ ಆ ಹೋಮದ ವಿಧಾನವನ್ನು ಲಕ್ಷಪೂರ್ವಕವಾಗಿ ಕೇಳು ।೩೦೪॥

ಶಾಸ್ತ್ರೋಕ್ತ ವಿಧಾನದಂತೆ ಯಜ್ಞಕುಂಡದ ಉದ್ದ, ಅಗಲ, ಆಳ, ಮೂಲೆ ಇವುಗಳನ್ನು ಪ್ರಮಾಣಯುಕ್ತವಾಗಿ ಸಿದ್ಧಗೊಳಿಸಬೇಕು ।೩೦೫॥ ತಮ್ಮ ಶಾಖೆಯ ವೇದದಲ್ಲಿ ವರ್ಣಿಸಿದಂತೆ ಮೇಖಳಾಯುಕ್ತ ಗರ್ತವನ್ನು ತಯಾರ ಮಾಡಿ ಯೋನಿ ಸಹ ಯಥೋಕ್ತ ಲಕ್ಷಣಗಳಿಂದ ವೇದಿಯನ್ನು ಸಿದ್ಧ ಮಾಡಬೇಕು ।೩೦೬॥ ಅಲ್ಲಿ ಅಗ್ನಿಯನ್ನು ಪ್ರತಿಷ್ಠಿಸಿ ಆ ಅಗ್ನಿಯನ್ನು ಕೈಯಿಂದ ಸ್ಪರ್ಶ ಮಾಡಿ ಅದರ ಸುತ್ತು ಮೂರು ಸಾರೆ ಬರೀಗೈಯನ್ನು ತಿರುಗಿಸಬೇಕು ।೩೦೭॥ ಕುಂಡದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ದರ್ಭಗಳನ್ನು ಹರಡಿಸಬೇಕು. ನಂತರ ಸುತ್ತಮುತ್ತ ಜಲವನ್ನು ಸಿಂಪಡಿಸಬೇಕು. ಹಾಗೆಯೇ ಇಧ್ಮಾ, ಬರ್ಹಿ ಮತ್ತು ವಿಸರ್ಜನ ಈ ಮೂರರ ತ್ರಿಸಂಧಾನ ಇಡಬೇಕು ।೩೦೮॥ ದರ್ಭದ ಆಸ್ತರಣ ಮಾಡಿ ಅದರ ಮೇಲೆ ತುಪ್ಪದ ಭಾಂಡೆಯನ್ನಿಡಬೇಕು. ವ್ಯಾಹೃತೀ ಇಂದ ಸಮಿಧಾಗಳ ಹೋಮವನ್ನು ಮಾಡಬೇಕು. ಇದಕ್ಕೆ ''ಅನ್ವಾಧಾನ'' ಎನ್ನುವರು ।೩೦೯॥ ಪ್ರೋಕ್ಷಣೀ ಪಾತ್ರೆಯನ್ನು ವಿಧಾನದೊಂದಿಗೆ ನೀರಿನಿಂದ ತುಂಬಬೇಕು. ದರ್ಭದ ತುದಿಯಿಂದ ಅದರಲ್ಲಿನ ಉದಕವನ್ನು ಪಡೆದು ಸರ್ವ ಹೋಮ ದ್ರವ್ಯಗಳಿಗೆ ಸಿಂಪಡಿಸಬೇಕು ।೩೧೦॥ ನಂತರ ಕುಂಡದಲ್ಲಿನ ಪ್ರದೀಪ್ತ ಅಗ್ನಿಯಲ್ಲಿ ನನ್ನ ಧ್ಯಾನವನ್ನು ಮಾಡಬೇಕು. ಈ ಧ್ಯಾನಮೂರ್ತಿಯ ಲಕ್ಷಣವನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।೩೧೧॥

ಅಗ್ನಿಪ್ರಭಾಜ್ವಾಳ । ಮೂರ್ತಿಪ್ರಭಾ ಪ್ರಬಳ ಪ್ರಕಾಶೇ ।।೩೧೩।। ಮುಕುಟಕುಂಡಲೇ ಮೇಖಳಾ । ಶ್ರೀವತ್ಸ ಶೋಭೇ ವಕ್ಷಸ್ಥಳಾ । ಆಪಾದ ರುಳೇ ವನಮಾಳಾ । ಝುಳಕೇ ಗಳಾ ಕೌಸ್ತುಭ ।।೩೧೪।।

ಧ್ಯಾಯನ್ನಭ್ಯರ್ಚ್ಯ ದಾರೂಣಿ ಹವಿಷಾಭಿಘೃತಾನಿ ಚ । ಪ್ರಾಸಾಜ್ಯಭಾಗಾವಾಘಾರೌ ದತ್ವಾ ಚಾಜ್ಯಪ್ಲುತಂ ಹವಿ: ।।೪೦।।

ಅರ್ಥ:- ಅಗ್ನಿಯಲ್ಲಿ ಈ ಮೂರ್ತಿಯ ಧ್ಯಾನವನ್ನು ಮಾಡಿ ಪೂಜೆಯನ್ನು ಮಾಡಬೇಕು. ತದನಂತರ ಒಣಗಿದ ಸಮಿಧಾವನ್ನು ತುಪ್ಪದಲ್ಲಿ ಮುಳುಗಿಸಿ ಆಹುತಿಯನ್ನು ಕೊಡಬೇಕು. ಆಜ್ಯಭಾಗ ಮತ್ತು ಆಧಾರ ನಾಮದ ಎರಡೆರಡು ಆಹುತಿಗಳನ್ನು ಪುನಃ ಹವನವನ್ನು ಮಾಡಬೇಕು. ತದನಂತರ ತುಪ್ಪದಿಂದ ತೋಯಿಸಿ ಅನ್ನ ಹವನ ಸಾಮಗ್ರಿಯಿಂದ ಆಹುತಿಯನ್ನು ಕೊಡಬೇಕು.

ಐಸೇ ಸಾಙ್ಗ ಮಾಝೇ ಧ್ಯಾನ । ಅಗ್ನೀಮಾಜೀ ಭಾವೂನಿ ಜಾಣ । ಕರೂನಿ ಆವಾಹನ ಪೂಜನ । ವಿಧ್ಯುಕ್ತ ಹವನ ಮಾಂಡಾವೇ ।।೩೧೫।। ಅಗ್ನಿ ವಿಧಿಯುಕ್ತ ಆವ್ಹಾನೂನೀ । ಸಮಿಧಾ ಹೋಮಘೃತೇ ಅಭಿಧಾರೂನೀ । ಆಜ್ಯಭಾಗ ದೋ ಅವದಾನೀ । ಪ್ರಥಮ ಹವನೀ ಹೋಮಾವಾ ।।೩೧೬।। ತೇಥ ತಿಲಾಜ್ಯ ಹವಿರ್ದ್ರವ್ಯ ಪೂರ್ಣ । ಘೃತಪ್ಲುತ ಅವದಾನ । ಆಗಮೋಕ್ತ ಹೋಮವಿಧಾನ । ಸ್ವಯೇ ಶ್ರೀಕೃಷ್ಣ ಸಾಂಗತ ।।೩೧೭।।

ಜುಹುಯಾನ್ಮೂಲಮಂತ್ರೇಣ ಷೋಡಶರ್ಚಾವದಾನತಃ । ಧರ್ಮಾದಿಭ್ಯೋ ಯಥಾನ್ಯಾಯಂ ಮಂತ್ರೈಃ ಸ್ವಿಷ್ಟಿಕೃತಂ ಬುಧಃ ।।೪೧।।

ಅರ್ಥ:- ತನ್ನ ಇಷ್ಟಮಂತ್ರದಿಂದ ಅಥವಾ ''ಓಂ ನಮೋನಾರಾಯಣಾಯ'' ಈ ಅಷ್ಟಾಕ್ಷರ ಮಂತ್ರದಿಂದ ಹಾಗೆಯೇ ಪುರುಷಸೂಕ್ತದ ಹದಿನಾರು ಪಂಕ್ತಿಯ ಮಂತ್ರದಿಂದ ಹವನವನ್ನು ಮಾಡಬೇಕು. ಬುದ್ಧಿವಂತ ಪುರುಷನು ಧರ್ಮಾದಿ ದೇವರಿಗಾಗಿ ವಿಧಿಪೂರ್ವಕ ಮಂತ್ರದಿಂದ ಹವನವನ್ನು ಮಾಡಬೇಕು ಮತ್ತು ಸ್ವಿಷ್ಟಕೃತ ಆಹುತಿಯನ್ನು ಕೊಡಬೇಕು.

ಲಕ್ಷೂನಿ ಮುಖಬೋಧ ದೇವಾಚಾ । ಮೂಲಮಂತ್ರೇ ಹೋಮ ಸಾಧಕಾಂಚಾ । ಕಾ ಪುರುಷಸೂಕ್ತ ಸೋಳಾ ಋಚಾ । ಹಾ ಹೋಮಾಚಾ ವಿಧಿಮಾರ್ಗ ।।೩೧೮।। ಧರ್ಮಾದಿಕ ಪೀಠಾರ್ಚನ । ಇತರ ದೇವತಾ ಆವರಣ । ತ್ಯಾಸೀಹೀ ಏಕಏಕ ಅವದಾನ । ನಾಮಮಂತ್ರೇ ಜಾಣ ಹೋಮಾವೇ ।।೩೧೯।। ಮಗ ಸ್ವಿಷ್ಟಕೃತಾಚೇ ಅವದಾನ । ಸಾಧಕೇ ದ್ಯಾವೇ ಸವಿಧಾನ । ಐಸೇ ಹೇ ಮಾಝೇ ನಿಜಭಜನ। ಭಕ್ತ ಸಜ್ಞಾನ ಜಾಣತೀ ।।೩೨೦।। ಹೋಮಾದಿ ಮೂರ್ತಿಭಜನವಿಧೀ । ಯೇಣೇ ತತ್ಕಾಳ ಸಾಧಕಾ ಸಿದ್ಧೀ । ಭಕ್ತ ಪಾವತೀ ನಿಜಪದೀ । ಜಾಣ ತ್ರಿಶುದ್ಧೀ ಉದ್ಧವಾ ।।೩೨೧।।

ಅಭ್ಯರ್ಚ್ಯಾಥ ನಮಸ್ಕೃತ್ಯ ಪಾರ್ಷದೇಭ್ಯೋ ಬಲಿಂ ಹರೇತ್ । ಮೂಲಮಂತ್ರಂ ಜಪೇದ್‌ಬ್ರಹ್ಮ ಸ್ಮರನ್ನಾರಾಯಣಾತ್ಮಕಮ್ ।।೪೨।।

ಕಾದ ಬಂಗಾರದಂತೆ ಮೂರ್ತಿಯ ಅಂಗಕಾಂತಿಯಿರಬೇಕು. ಚತುರ್ಭುಜದಿಂದ ಸುಂದರವಾಗಿರಬೇಕು. ಚೈತನ್ಯರೂಪವಾಗಿ ಸಾಕಾರವಾಗಿರಬೇಕು ।।೩೧೨।। ಕೈಗಳಲ್ಲಿ ಶಂಖ,ಚಕ್ರ, ಗದಾ, ಪದ್ಮ ಈ ಆಯುಧಗಳಿರಬೇಕು. ನಡುವಿಗೆ ತೇಜಃಪುಂಜವಾದ ಪೀತಾಂಬರ ವಿರಬೇಕು. ಅಗ್ನಿಯ ಪ್ರಕಾಶವು ಲೋಪವಾಗುವಂತೆ ಆ ಮೂರ್ತಿಯ ಪ್ರಭೆಯು ಹೊಳೆಯುತ್ತಿರಬೇಕು ।।೩೧೩।। ಕಿರೀಟ, ಕುಂಡಲಗಳು, ನಡುವಿಗೆ ಪಟ್ಟಿ ವಕ್ಷಃಸ್ಥಳದಲ್ಲಿ ಶೋಭಿಸುವ ಶ್ರೀವತ್ಸಲಾಂಛನವು, ಆಪಾದದವರೆಗೆ ವನಮಾಲೆಯು ಮತ್ತು ಕೊರಳಲ್ಲಿ ಹೊಳೆಯುತ್ತಿರುವ ಕೌಸ್ತುಭಮಣಿ ಈ ಪ್ರಕಾರವಾಗಿರುವ ಮೂರ್ತಿಯ ಧ್ಯಾನವನ್ನು ಮಾಡಬೇಕು ।।೩೧೪।।

ಈ ಪ್ರಕಾರವಾಗಿ ಅಗ್ನಿಯಲ್ಲಿ ಯಥಾಸಾಂಗವಾಗಿ ನನ್ನ ಧ್ಯಾನದ ಕಲ್ಪನೆಯನ್ನು ಮಾಡಿ ಅದರ ಆವಾಹನೆಯನ್ನು ಮತ್ತು ಪೂಜೆಯನ್ನು ಮಾಡಬೇಕು. ತದನಂತರ ವಿಧಿಯುಕ್ತವಾಗಿ ಹೋಮ ಮಾಡಲು ಪ್ರಾರಂಭಿಸಬೇಕು ।।೩೧೫।। ಅಗ್ನಿಯನ್ನು ವಿಧಿಯುಕ್ತವಾಗಿ ಆವಾಹನೆಯನ್ನು ಮಾಡಿ ಸಮಿಧಾವನ್ನು ಹೋಮಘೃತದಲ್ಲಿ ತೋಯಿಸಿ ಪ್ರಥಮ ಹೋಮದಲ್ಲಿ ಎರಡು ಆಜ್ಯಭಾಗಗಳನ್ನು ಆಹುತಿ ಕೊಡಬೇಕು ।।೩೧೬।। ಅದರಲ್ಲಿ ಎಳ್ಳು, ಇತ್ಯಾದಿ ಹೋಮ ದ್ರವ್ಯಗಳನ್ನು ತುಪ್ಪದಲ್ಲಿ ತೋಯಿಸಿ ಆಗಮೋಕ್ತ ವಿಧಾನದಿಂದ ಹೋಮವನ್ನು ಮಾಡಬೇಕು. ಈ ವಿಧಾನವನ್ನು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।।೩೧೭।।

ದೇವರ ಮುಖದತ್ತ ಮನವನ್ನು ಏಕಾಗ್ರ ಮಾಡಿ ಸಾಧಕರು ಅಷ್ಟಾಕ್ಷರೀ ''ಓಂ ನಮೋನಾರಾಯಣಾಯ'' ಮೂಲಮಂತ್ರದಿಂದ ಅಥವಾ ಪುರುಷಸೂಕ್ತದ ಹದಿನಾರು ಪಂಕ್ತಿಯ ಮಂತ್ರದಿಂದ ಹೋಮವನ್ನು ಮಾಡಬೇಕು. ಹೀಗೆ ಹೋಮದ ವಿಧಿಯನ್ನು ಮಾಡಬೇಕು ।।೩೧೮।। ಬಹುಪೂರ್ವದಲ್ಲಿ ಹೇಳಿರುವ ಪೀಠಾರ್ಚನೆಯಲ್ಲಿನ ಧರ್ಮಾದಿಕ ದೇವತೆಗಳಿಗೆ ಅದರಂತೆಯೇ ಇತರ ಅನೇಕ ದೇವತೆಗಳ ಪೂಜೆಯನ್ನು ಮಾಡಿದ್ದರೆ ಆ ಎಲ್ಲ ದೇವತೆಗಳಿಗೆ ಒಂದೊಂದು ಅವದಾನವನ್ನು ಕೊಡಬೇಕು ।।೩೧೯।। ತದನಂತರ ಸಾಧಕರು ''ಸ್ವಿಷ್ಟಕೃತಾ'' ಇದನ್ನೂ ಕೂಡ ವಿಧಿಪೂರ್ವಕವಾಗಿ ಅವದಾನವನ್ನು ಕೊಡಬೇಕು. ಹೀಗಿರುವ ನನ್ನ ಭಜನೆಯನ್ನು ಸಜ್ಞಾನ ಭಕ್ತರು ಅರಿತಿರುವರು. ।।೩೨೦।। ಹೋಮಾದಿಕ ವಿಧಿಗಳಿಂದ ಹಾಗೂ ಮೂರ್ತಿಭಜನೆಯ ವಿಧಿಗಳಿಂದ ಸಾಧಕರಿಗೆ ತತ್ಕಾಲದಲ್ಲಿ ಸಿದ್ಧಿಯು ಪ್ರಾಪ್ತವಾಗುವುದು. ಇದಲ್ಲದೇ ಹೇ ಉದ್ಧವಾ, ಇಂತಹ ಸಜ್ಞಾನ ಭಕ್ತರು ಬ್ರಹ್ಮಪದಕ್ಕೆ ತಲುಪುವರು. ಹೀಗೆಂದು ನೀನು ನಿಶ್ಚಯವಾಗಿ ತಿಳಿ ।।೩೨೧।।

ಅರ್ಥ:- ಈ ಪ್ರಕಾರವಾಗಿ ಅಗ್ನಿಯಲ್ಲಿ ಅಂತರ್ಯಾಮಿ ರೂಪ-ಸ್ಥಿತ ಭಗವಂತನ ಪೂಜೆಯನ್ನು ಮಾಡಬೇಕು ಹಾಗೂ ಆತನಿಗೆ ನಮಸ್ಕರಿಸಬೇಕು ಮತ್ತು ನಂದ, ಸುನಂದ ಇತ್ಯಾದಿ ಪಾರ್ಷದವರ ಎಂಟು ದಿಕ್ಕುಗಳಲ್ಲಿ ಬಲಿಯನ್ನು ಸಮರ್ಪಿಸಬೇಕು. ತದನಂತರ ಪ್ರತಿಮೆಯ ಎದುರಿನಲ್ಲಿ ಕುಳಿತುಕೊಂಡು ಪರಬ್ರಹ್ಮಸ್ವರೂಪ ನಾರಾಯಣನ ಸ್ಮರಣೆಯನ್ನು ಮಾಡಬೇಕು. ಹಾಗೆಯೇ ಭಗವತ್ಸ್ವರೂಪ ಮೂಲಮಂತ್ರವಾದ ''ಓಂ ನಮೋನಾರಾಯಣಾಯ'' ಜಪವನ್ನು ಮಾಡಬೇಕು.

ಯಾಪರೀ ಹೋಮ ವಿಧಿಯುಕ್ತ ಅರ್ಚನ । ಕರೂನಿ ಕರಾವೇ ಸಾಷ್ಟಂಗ ನಮನ । ಮಗ ದೇವಾಚೇ ಜೇ ಪಾರ್ಷದಗಣ । ತ್ಯಾಂಸೀ ಬಳಿಹರಣ ಕಲ್ಪಾವೇ ॥೩೨॥ ಮಗ ಬಾಹ್ಯಪ್ರತಿಮಾಪೂಜಾಸ್ಥಾನ । ತೇಥೇ ಯೇವೋನಿಯಾ ಆಪಣ । ಮೂಲಮಂತ್ರಾಚೇ ಸ್ಮರಣ । ಧ್ಯಾನಯುಕ್ತ ಜಾಣ ಕರಾವೇ ॥೩೩॥ ಪೂಜ್ಯ-ಪೂಜಕ ಅಭಿನ್ನ । ಪರಾತ್ಪರ ಜೋ ಕಾ ನಾರಾಯಣ । ತೇ ಪರಬ್ರಹ್ಮೀ ಲಾವೂನೀ ಮನ । ಘಾಲಾವೇ ಆಸನ ಸಾವಧಾನವೃತ್ತೀ ॥೩೪॥ ಧ್ಯಾನೀ ಜಂವ ಸ್ಥಿರಾವೇ ಮನ । ತಂವ ಸ್ಥಿರ ರಾಖಾವೇ ಆಸನ । ತೇಥೂನಿ ಉಪರಮಲ್ಯಾ ಮನ । ಪುಢೇ ಪೂಜಾವಿಧಾನ ಹರಿ ಸಾಂಗೇ ॥೩೫॥

ದತ್ತ್ವಾಚಮನಮುಚ್ಛೇಷಂ ವಿಷ್ವಕ್ಸೇನಾಯ ಕಲ್ಪಯೇತ್ । ಮುಖವಾಸಂ ಸುರಭಿಮತ್ತಾಂಬೂಲಾದ್ಯಮಥಾರ್ಹಯೇತ್ ॥೪೩॥

ಅರ್ಥ:- ಪ್ರಭುವಿನ ಭೋಜನವು ಮುಗಿದಿರುವುದನ್ನು ತಿಳಿದು ಆಚಮನವನ್ನು ಕೊಟ್ಟು ಅವಶಿಷ್ಟ ಉಳಿದಿರುವ ಭಾಗವನ್ನು ವಿಶ್ವಕ್ಸೇನನಿಗೆ ಅರ್ಪಿಸಿ, ಆತನ ಆಜ್ಞೆಯನ್ನು ಬೇಡಿಕೊಂಡು ತಾನು ಸ್ವತಃ ಪ್ರಸಾದವನ್ನು ಭುಂಜಿಸಬೇಕು. ಸುಗಂಧಯುಕ್ತ ತಾಂಬೂಲಾದಿ ಮುಖವಾಸವನ್ನು ಕೊಟ್ಟು ಪುನಃ ಪುಷ್ಪಾಂಜಲಿಯಿಂದ ಪೂಜೆಯನ್ನು ಮಾಡಬೇಕು.

ಏವಂ ವಿಸರ್ಜಿಲಿಯಾ ಧ್ಯಾನ । ಝಾಲೇ ದೇವಾಚೇ ಭೋಜನ । ಐಸೇ ಭಾವೂನಿ ಆಪಣ । ಶುದ್ಧಾಚಮನ ಅರ್ಪಾವೇ ॥೩೬॥ ಅಗ್ನೀಮಾಜೀಲ ಮೂರ್ತಿಧ್ಯಾನ । ಪ್ರತಿಮಾ ಪೂಜಿಲೀ ಜೇ ಆಪಣ । ದೋಹೀ ಠಾಯೀ ಶುದ್ಧಾಚಮನ । ಯಥೋಕ್ತ ಜಾಣ ಕರಾವೇ ॥೩೭॥ ದೇವಾಚಿಯಾ ಭುಕ್ತಶೇಷಾಸೀ । ಭಾಗ ದ್ಯಾವಾ ವಿಷ್ವಕ್ಸೇನಾಸೀ । ಮಗ ಕಾಢೂನಿ ಉಚ್ಛಿಷ್ಟಾಸೀ । ದ್ಯಾವೇ ದೇವಾಸೀ ಕರೋದ್ವರ್ತನ ॥೩೮॥ ಕಾಪುರೇ ಘೋಳಿವಾ ಸುಪಾರೀಪೋಡೀ । ಸುವರ್ಣಾವರ್ಣಾ ಪಾನಾಂಚೀ ವಿಡೀ । ಕಾಥ ವಾಸಿಲಾ ಪರವಡೀ । ಅಭಿನವ ಗೋಡೀ ತಾಂಬೂಲಾ ॥೩೯॥ ಏಳಾ ಲವಂಗಾ ಕಂಕೋಳ । ಅಲ್ಪ ಅರ್ಪಿಲೇ ಜಾತೀ ಫಳ । ಸುರಂಗ ರಂಗಲೇ ತಾಂಬೂಲ । ದಿಸೇ ಮುಖಕಮಳ ಸಾಜಿರೇ ॥೪೦॥ ಚೋವಾ ಕಸ್ತೂರೀ ಬುಕಾ ಸಧರ । ಅರ್ಪೂನಿ ಪುಷ್ಪಾಂಜಳೀ ಸಂಭಾರ । ಜೇಣೇ ಶೀಘ್ರ ಸಂತೋಷೇ ಶ್ರೀಧರ । ತೇ ಪ್ರೇಮ ಸಾಚಾರ ಹರಿಸಾಂಗೇ ॥೪೧॥

ಉಪಗಾಯನ್ಗೃಣನ್ನೃತ್ಯಂಕರ್ಮಾಣ್ಯಭಿನಯನ್ಮಮ । ಮತ್ಕಥಾ ಶ್ರಾವಯನ್ ಶೃಣ್ವನ್ಮುಹೂರ್ತಂ ಕ್ಷಣಿಕೋ ಭವೇತ್ ॥೪೪॥

ಅರ್ಥ:- ಇತರರೊಡನೆ ಹಾಡುತ್ತ ಉಚ್ಚಸ್ವರದಲ್ಲಿ ಕೀರ್ತಿಸುತ್ತ ಮತ್ತು ನರ್ತಿಸುತ್ತ ನನ್ನ ದಿವ್ಯ ಲೀಲೆಗಳನ್ನು ಅಭಿನಯಿಸುತ್ತ, ನನ್ನ ಕಥೆಗಳನ್ನು ಕೇಳುತ್ತ ಮತ್ತು ಇತರರಿಗೆ ಹೇಳುತ್ತ ಭಕ್ತನು ಕೆಲಕಾಲ ಇಂತಹ ಉತ್ಸವದಲ್ಲಿ ಮಗ್ನನಾಗಿರಬೇಕು.

ಜ್ಞಾನ ಧ್ಯಾನ ಉಪಾಸಕತಾ । ಹೇ ಗೌಣ ಜಾಣ ಸರ್ವಥಾ । ದೇವ ಭಾವಾಚಾ ಭೋಕ್ತಾ । ಭಾವೇ ತತ್ತ್ವತಾ

ಈ ಪ್ರಕಾರವಾಗಿ ವಿಧಿಯುಕ್ತದಿಂದ ಹೋಮ ಹಾಗೂ ಪೂಜೆಯನ್ನು ಮಾಡಿ ದೇವರಿಗೆ ಸಾಷ್ಟಾಂಗ ನಮಸ್ಕಾರವನ್ನು ಹಾಕಬೇಕು. ತದನಂತರ ದೇವರ ಸೇವಕರ ಸಮೂಹಕ್ಕೆ ಬಲಿಯನ್ನು ಅರ್ಪಿಸಬೇಕು ॥೩೨॥ ಆಮೇಲೆ ಬಾಹ್ಯ ಪ್ರತಿಮೆಯ ಪೂಜಾಸ್ಥಾನದ ಹತ್ತಿರ ಬಂದು ಧ್ಯಾನಿಸುತ್ತ ಮೂಲಮಂತ್ರದ ಸ್ಮರಣೆಯನ್ನು ಮಾಡಬೇಕು ॥೩೩॥ ಪೂಜ್ಯ ಮತ್ತು ಪೂಜಕ ಇವುಗಳಿಂದ ಭಿನ್ನವಿಲ್ಲದ ಪರಾತ್ಪರನಾದ ಯಾವ ಶ್ರೀನಾರಾಯಣ ಪರಬ್ರಹ್ಮನಲ್ಲಿ ಮನಸ್ಸನ್ನು ಏಕಾಗ್ರಗೊಳಿಸಬೇಕು. ಶಾಂತ ಚಿತ್ತದಿಂದ ಆಸನವನ್ನು ಹಾಕಬೇಕು ॥೩೪॥ ಮನಸ್ಸು ಧ್ಯಾನದಲ್ಲಿ ಸ್ಥಿರವಾಗುವವರೆಗೂ ಆಸನವನ್ನು ಸ್ಥಿರವಾಗಿರಿಸಬೇಕು. ಮನಸ್ಸು ಅಲ್ಲಿಂದ ಕದಲಿದಾಗ ಮುಂದಿನ ಪೂಜಾ ವಿಧಿಯನ್ನು ಹೇಗೆ ಮಾಡಬೇಕೆಂಬುವುದನ್ನು ಈಗ ಶ್ರೀಹರಿಯು ಹೇಳುವನು ॥೩೫॥

ಈ ಪ್ರಕಾರವಾಗಿ ಧ್ಯಾನದ ವಿಸರ್ಜನೆಯು ಆದ ನಂತರ ದೇವರ ಭೋಜನವಾಗಿದೆ ಎಂದು ತಿಳಿದು ಆತನಿಗೆ ಶುದ್ಧ ಆಚಮನವನ್ನು ಅರ್ಪಿಸಬೇಕು ॥೩೬॥ ಅಗ್ನಿಯಲ್ಲಿನ ಧ್ಯಾನ ಮೂರ್ತಿ ಹಾಗೂ ತಾನು ಪೂಜಿಸಿರುವ ಪ್ರತಿಮೆ ಈ ಎರಡರಲ್ಲಿಯೂ ಶಾಸ್ತ್ರೋಕ್ತ ರೀತಿಯಿಂದ ಶುದ್ಧ ಆಚಮನವನ್ನು ಸಮರ್ಪಿಸಬೇಕು ॥೩೭॥ ದೇವರ ನೈವೇದ್ಯದ ಅವಶಿಷ್ಟ ಭಾಗವನ್ನು ವಿಷ್ವಕ್ಸೇನನಿಗೆ ಕೊಡಬೇಕು. ನಂತರ ಎಂಜಲವನ್ನು ಸ್ವಚ್ಛಗೊಳಿಸಿ ದೇವರ ಕೈಗಳಿಗೆ ತಿಕ್ಕಿಕೊಳ್ಳಲು ಚಂದನವನ್ನು ಕೊಡಬೇಕು ॥೩೮॥ ಸುಗಂಧಯುಕ್ತ ಸಣ್ಣಾಗಿರುವ ಚಿಕನಿ ಅಡಿಕೆ, ಹಣ್ಣಾಗಿರುವ ತಾಂಬೂಲ ಎಲೆಗಳು, ಸುವಾಸವಾಗಿರುವ ಕಾಚು ಇವುಗಳ ಮಧುರವಾದ ತಾಂಬೂಲ ॥೩೯॥ ಏಲಕ್ಕಿ, ಲವಂಗ, ಕಂಕೋಳ, ಅಲ್ಪ ಪ್ರಮಾಣದ ಜಾಜೀಕಾಯಿ, ಹೀಗಿರುವ ಪದಾರ್ಥಯುಕ್ತ ತಾಂಬೂಲದಿಂದ ದೇವರ ತುಟಿಗಳು ಕೆಂಪಾಗಿ ಸುರಂಗಗೊಂಡು ಮುಖಕಮಲವು ಅಧಿಕವಾಗಿ ಶೋಭಾಯಮಾನದಿಂದ ತೋರುವುದು ॥೪೦॥ ಚಂದನಯುಕ್ತ ಚೋವಾ, ಕಸ್ತೂರೀ, ಬುಕ್ಕಿಟ್ಟು ಹಾಗೂ ಪುಷ್ಪಾಂಜಲಿಯನ್ನು ಅರ್ಪಿಸಬೇಕು. ಹೀಗೆ ಮಾಡುವುದರಿಂದ ಶ್ರೀಪತಿಯು ಸತ್ವರವಾಗಿ ಸಂತೋಷಪಡುವನು. ಈ ಯಾವ ಪ್ರೇಮದ ವರ್ಣನೆಯನ್ನು ಶ್ರೀಕೃಷ್ಣನು ಈಗ ಮಾಡುತ್ತಿರುವನು ॥೪೧॥

ದೇವ ಭೇಟೇ ॥೩೩೨॥ ಧ್ಯಾನೀ ತುಟಲಿಯಾ ನಿಜಮನ । ಕರಾವೇ ಮಾಝೇ ನಾಮಸ್ಮರಣ। ಕಾ ಮಾಝ್ಯಾಗುಣಾಂಚೇ ಶ್ರವಣ । ಆದರೇ ಜಾಣ ಕರಾವೇ ॥೩೩೩॥ ಕರಿತಾ ಹರಿಗುಣಯಶಶ್ರವಣ । ತೇಣೇ ಸುಖಾವೇ ಅಂತಃಕರಣ । ಸುಖೇ ಸುಖಾವೋನಿ ಆಪಣ । ಸ್ವಯೇ ಹರಿಕೀರ್ತನ ಕರಾವೇ ॥೩೩೪॥ ನಿರ್ಲಜ್ಜ ನಟಾಚೇ ಪರೀ । ಹರಿರಂಗಣೇ ನೃತ್ಯ ಕರೀ । ಹಾವಭಾವಕಟಾಕ್ಷ ಕುಸರೀ । ಅಭಿನಯೋ ಧರೀ ಕರ್ಮಾಚಾ ॥೩೩೫॥ ಗೋವರ್ಧನ ಉದ್ಧರಣ । ಅಂಗೇ ದಾವಾವೇ ಆಪಣ । ಕಾ ಮಾಂಡೂನಿಯಾ ದೃಢ ಠಾಣ । ತ್ರ್ಯಂಬಕಭಂಜನ ದಾವಾವೇ ॥೩೩೬॥ ಪೂತನಾಪ್ರಾಣಶೋಷಣ । ಕುವಲಯಾಚೇ ನಿರ್ದಳಣ । ದಾವೂನಿ ಮಲ್ಲಮರ್ದನ । ಹರಿಕೀರ್ತನ ಕರಾವೇ ॥೩೩೭॥ ನವಲ ಪ್ರೇಮಾಚಾ ಉದ್ಬೋಧ । ಗದ್ಯಪದ್ಯನಾಮಪ್ರಬಂಧ । ಭುಜಂಗ ಪ್ರಯಾತಾದಿ ಅಗಾಧ । ಗಾತೀ ಸ್ವಾನಂದ ಸ್ತುತಿಸ್ತೋತ್ರೇ ॥೩೩೮॥

ಸ್ತವೈರುಚ್ಚಾವಚೈಃ ಸ್ತೋತ್ರೈಃ ಪೌರಾಣೈಃ ಪ್ರಾಕೃತೈರಪಿ । ಸ್ತುತ್ವಾ ಪ್ರಸೀದ ಭಗವನ್ನಿತಿ ವಂದೇತ ದಂಡವತ್ ॥೫೩॥

ಅರ್ಥ:- ಭಕ್ತನು ಭಗವಂತನಿಗೆ ಪುರಾಣ ಮತ್ತಿತರ ಪ್ರಾಚೀನ ಶ್ರುತಿ ಶಾಸ್ತ್ರಗಳ ಹಾಗೂ ಲೌಕಿಕ ಸಂಪ್ರದಾಯದ ಎಲ್ಲ ಬಗೆಯ ಮಂತ್ರಗಳನ್ನು ಮತ್ತು ಸ್ತೋತ್ರಗಳನ್ನು ಹೇಳುತ್ತ ಸ್ತುತಿಸಬೇಕು. ''ಹೇ ಪ್ರಭೋ, ದಯಮಾಡಿ ನನ್ನ ಮೇಲೆ ಅನುಗ್ರಹ ತೋರು'' ಎಂದು ಪ್ರಾರ್ಥಿಸುತ್ತ ಭಕ್ತನು ದೇವನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು.

ಮಾಝೀ ಸ್ತುತಿಸ್ತೋತ್ರೇ ಪುರಾಣ । ಸಾದರೇ ಕರಾವೀ ಶ್ರವಣ । ಶ್ರೋತಾ ಮಿಳಾಲಿಯಾ ಆಪಣ । ಕಥಾನಿರೂಪಣ ಸಾಂಗಾವೇ ॥೩೩೯॥ ಶುದ್ಧ ನ ಯೇ ಸ್ತೋತ್ರಪಠಣ । ಕರಿತಾ ಅಬದ್ಧ ಗಾಯನ । ಪಾತಕಾ ದೋಷ ನ ಲಗೇ ಜಾಣ। ತೇಣೇ ಹೋಯ ನಿರ್ದಳಣ ಮಹಾದೋಷಾ ॥೩೪೦॥ ವೇದಿಂಚೇ ಉಪನಿಷತ್ಪಠಣ । ಕಾ ಋಚಾಮಂತ್ರೇ ಹರೀಚೇ ಸ್ತವನ। ಯೇ ಲೌಕಿಕೀ ಉಚ್ಚಾವಚೇ ಜಾಣ। ದೇವಾಸೀ ಸಮಾನ ನಿಜಭಾವೇ ॥೩೪೧॥ ಪುರಾಣೇಂಚೇ ಶ್ರೇಷ್ಠ ಸ್ತೋತ್ರ । ಅಥವಾ ಪಢತಾ ನಾಮಮಾತ್ರ । ಅರ್ಥೇ ಭಾವಾರ್ಥೇ ಸಾಚಾರ । ಸಮಾನ ಶ್ರೀಧರ ಮೀ ಮಾನೀ ॥೩೪೨॥ ನೇಣೇ ವೇದ ಶಾಸ್ತ್ರ ಪುರಾಣ । ಕೇವಳ ಭಾಳಾಭೋಳಾ ಜಾಣ । ತೇಣೇ ಕರಿತಾ ಪ್ರಾಕೃತ ಸ್ತವನ । ಮೀ ಜನಾರ್ದನ ಸಂತೋಷೇ ॥೩೪೩॥
ವೇದೀ ಚುಕಲ್ಯಾ ಸ್ವರವರ್ಣ । ಪಾತಕಾ ದೋಷ ಬಾಧೀ ಗಹನ । ಪ್ರಾಕೃತ ಕರಿತಾ ಹರೀಚೇ ಸ್ತವನ ।

ಜ್ಞಾನ, ಧ್ಯಾನ, ಉಪಾಸನೆ ಈ ಎಲ್ಲವೂ ಗೌಣವಾಗಿರುವುವು. ದೇವನು ನಿಜಭಾವದ ಭೋಕ್ತಾ ಆಗಿರುವನು. ಅಂತಃಕರಣದಲ್ಲಿನ ಶುದ್ಧ ಭಾವದಿಂದ ದೇವನು ಪ್ರಾಪ್ತನಾಗುವನು ॥೩೩೨॥ ತನ್ನ ಮನವು ಧ್ಯಾನದಿಂದ ಹಿಂದಕ್ಕೆ ಸರಿದರೆ ಆಗ ನನ್ನ ನಾಮಸ್ಮರಣೆಯನ್ನು ಮಾಡಬೇಕು. ಅಥವಾ ನನ್ನ ಗುಣಗಳನ್ನು ಕುರಿತು ಏಕಾಗ್ರಚಿತ್ತದಿಂದ ಮತ್ತು ಆದರ ಭಾವದಿಂದ ಶ್ರವಣವನ್ನು ಮಾಡಬೇಕು ॥೩೩೩॥ ಶ್ರೀಹರಿಯ ಗುಣಗಳ, ಯಶದ ಶ್ರವಣವನ್ನು ಮಾಡಲು ಆಗ ಅಂತಃಕರಣದಲ್ಲಿ ಸುಖದ ರಾಶಿಯು ನಿರ್ಮಾಣವಾಗುವುದು. ಆ ಸುಖ ಸಾಮ್ರಾಜ್ಯದಲ್ಲಿ ತಾನು ಸ್ವತಃ ಹರಿಕೀರ್ತನೆಯನ್ನು ಮಾಡಬೇಕು ॥೩೩೪॥ ನಿರ್ಲಜ್ಜ ನಟನಂತೆ ಹಾವಭಾವವನ್ನು ಮಾಡುತ್ತ ಶ್ರೀಹರಿಯ ಸಭಾಮಂಟಪದಲ್ಲಿ ನೃತ್ಯವನ್ನು ಮಾಡಬೇಕು ಹಾಗೂ ಶ್ರೀಹರಿಯ ಲೀಲಾವಿಲಾಸವನ್ನು ತೋರಿಸಬೇಕು ॥೩೩೫॥ ಗೋವರ್ಧನ ಪರ್ವತವನ್ನು ಹೇಗೆ ಎತ್ತಿದನು ಎಂಬುವುದನ್ನು ಅಭಿನಯಿಸಿ ತೋರಿಸಬೇಕು. ದೃಢವಾದ ಆಸನವನ್ನು ಹಾಕಿ ಶ್ರೀರಾಮನ ಲೀಲೆಯನ್ನು ತೋರಿಸುತ್ತ ಶಿವಧನುಷ್ಯವನ್ನು ಮುರಿದ ರೀತಿಯನ್ನು ತೋರಿಸಬೇಕು ॥೩೩೬॥ ಪೂತನೆಯನ್ನು ಕೊಂದ ಪ್ರಕಾರವನ್ನು, ಕುವಲಯ ಆನೆಯ ಹತ್ಯೆಯನ್ನು, ಮಲ್ಲಮರ್ದನ ಇವುಗಳನ್ನು ತೋರಿಸುತ್ತ ಕೀರ್ತನೆಯನ್ನು ಮಾಡಬೇಕು ॥೩೩೭॥ ಪ್ರೇಮದ ಆವಿರ್ಭಾವವು ಅತಿಶಯವಾಗಿ ವಿಚಿತ್ರವಾಗಿರುವುದು. ಅದರಲ್ಲಿ ಗದ್ಯ, ಪದ್ಯ, ನಾಮಪ್ರಬಂಧ, ಭುಜಂಗಪ್ರಯಾತಾದಿ ಛಂದಗಳನ್ನು ನುಡಿಯುತ್ತ ಭಕ್ತರು ಆನಂದದಿಂದ ಸ್ತುತಿಸ್ತೋತ್ರಗಳನ್ನು ಹಾಡುವರು ॥೩೩೮॥

ನನ್ನ ಸ್ತುತಿಸ್ತೋತ್ರಗಳನ್ನು ಹಾಗೂ ಪುರಾಣಗಳನ್ನು ಆದರಭಾವದಿಂದ ಶ್ರವಣ ಮಾಡಬೇಕು. ಕೆಲವು ಶ್ರೋತೃಗಳು ಕೂಡಿದರೆ ಆಗ ತಾನು ಕಥೆಯ ನಿರೂಪಣೆಯನ್ನು ಮಾಡಬೇಕು ॥೩೩೯॥ ಶುದ್ಧವಾದ ಶಬ್ದೋಚ್ಚಾರಗಳಿಂದ ಸ್ತುತಿಸ್ತೋತ್ರಗಳನ್ನು ಹಾಡಲು ಬಾರದಿದ್ದರೆ, ಸೂರು-ತಾಳಗಳು ಕೂಡದಿದ್ದರೆ ಪ್ರೇಮದಿಂದ ಹಾಡಲು ಆಗ ದೋಷವು ತಗಲುವುದಿಲ್ಲ. ಈ ಪ್ರೇಮದ ಪ್ರಭಾವದಿಂದ ಮಹಾದೋಷಗಳು ನಾಶವಾಗುವುವು ॥೩೪೦॥ ವೇದಗಳಲ್ಲಿನ ಉಪನಿಷದಗಳ ಪಠಣೆಯು ಅಥವಾ ಋಚಾಮಂತ್ರದಿಂದ ಶ್ರೀಹರಿಯ ಸ್ತವನೆ, ಇದರಲ್ಲಿಯ ಉಚ್ಚನೀಚ ಭಾವವು ಲೌಕಿಕದಲ್ಲಿರುವುದು. ಆದರೆ ಭಗವಂತನಿಗೆ ಭಕ್ತಿಭಾವದಿಂದ ಈ ಎರಡೂ ಸಮಾನವೇ ಆಗಿರುವುವು ॥೩೪೧॥ ಪುರಾಣದಲ್ಲಿನ ದೊಡ್ಡ ದೊಡ್ಡ ಸ್ತೋತ್ರಗಳಾಗಿರಲಿ ಅಥವಾ ಕೇವಲ ನಾಮದ ಉಚ್ಚಾರವಾಗಿರಲಿ, ಅರ್ಥದಿಂದ ಮತ್ತು ಭಾವನೆಯಿಂದ ಈ ಎರಡನ್ನೂ ನಾನು ಸಮಾನವಾಗಿ ಮನ್ನಿಸುವೆನು ॥೩೪೨॥ ಒಬ್ಬ ಭೋಳಾಭಾವಿಕ ಭಕ್ತನು ವೇದಶಾಸ್ತ್ರಪುರಾಣಗಳನ್ನು ಏನೂ ಅರಿತಿರುವುದಿಲ್ಲ ಆತನು ತನ್ನ ಸರ್ವಸಾಮಾನ್ಯ ಭಾಷೆಯಲ್ಲಿ ನನ್ನ ಸ್ತವನೆಯನ್ನು ಮಾಡಿದರೆ, ಜನಾರ್ದನನಾದ ನಾನು ಸಂತುಷ್ಟನಾಗುವೆನು ॥೩೪೩॥

ದೋಷನಿರ್ದಳಣ ತೇಣೇ ಹೋಯ ।೩೪೪॥ ಶಾಸ್ತ್ರಶ್ರವಣ ಪುರಾಣಸ್ಥಿತೀ । ಪಾಹಿಜೇ ಪಂಚಮೀಸಪ್ತಮೀ ವ್ಯುತ್ಪತ್ತೀ । ಪ್ರಾಕೃತ ಅಬದ್ಧ ಹೀ ನಾಮಕೀರ್ತೀ । ಭಗವತ್ಪ್ರಾಪ್ತಿ ಪ್ರಾಪಕ ।೩೪೫॥ ಸಂಸ್ಕೃತ ವಾಣೀ ದೇವೇ ಕೇಲೀ । ಪ್ರಾಕೃತ ಚೋರಾಪಾಸೂನ ಝಾಲೀ । ಅಸೋತ ಯಾ ಪಕ್ಷಾಭಿಮಾನೀ ಬೋಲೀ । ದೇವಾಚೀ ಚಾಲೀ ನಿರಭಿಮಾನ ।೩೪೬॥ ವೇದಶಾಸ್ತ್ರ ಹೋ ಪುರಾಣ । ಕಾ ಪ್ರಾಕೃತಭಾಷಾಸ್ತವನ । ಏಥೇ ಭಾವಚಿ ಶ್ರೇಷ್ಠ ಜಾಣ । ತೇಣೇ ನಾರಾಯಣ ಸಂತೋಷೇ ।೩೪೭॥ ದೇವಾಸೀ ಪ್ರೇಮಾಚೀ ಪಢಿಯೇ ಕೋಡ । ನ ಪಾಹೇ ವ್ಯುತ್ಪತ್ತೀಚೇ ಕಾಬಾಡ । ಭಾವಿಕಾಂಚಾ ಭಾವಾರ್ಥಾಚಿ ಗೋಡ । ತೇಣೇ ಭಕ್ತಾಂಚೇ ಭೀಡ ನುಲ್ಲಂಘೀ ದೇವೋ ।೩೪೮॥ ಏವಂ ಭಾವಾರ್ಥೇ ಕರಿತಾ ಸ್ತವನ । ದೇವ ಹೋಯ ಭಕ್ತಾ ಅಧೀನ । ತೇಣೇ ಭಾವಾರ್ಥೇ ಕರೂನಿ ನಮನ । ಹರಿಚರಣ ವಂದಾವೇ ।೩೪೯॥ ಮುಹೂರ್ತ ನಿಮೇಷ ಕ್ಷಣೇಕ್ಷಣ । ಹರಿಚರಣೀ ಸುಖಾವಲ್ಯಾ ಮನ । ಇತರ ವ್ಯಾಪಾರ ತೇಣೇ ಸುಖೇ ಜಾಣ । ಸಹಜೇ ಆಪಣ ವೋಸರತೀ ।೩೫೦॥ ಜೇಣೇ ತುಟೇ ಮಾಝೇ ಅನುಸಂಧಾನ । ತೇ ಕರ್ಮ ತ್ಯಾಗಾವೇ ಆಪಣ । ಜೇಣೇ ಸ್ವರೂಪನಿಷ್ಠ ಹೋಯ ಮನ । ತೇ ಸಮಾಧಾನ ರಾಖಾವೇ ।೩೫೧॥ ಸಪ್ರೇಮ ಕರಿತಾ ನಮನ । ನಿತ್ಯ ನೂತನ ಸಮಾಧಾನ । ತ್ಯಾ ನಮನಾಚೇ ಲಕ್ಷಣ । ಲೋಟಾಂಗಣ ದಂಡವತ ।೩೫೨॥ ಸುಟಲ್ಯಾ ದಂಡ ಸತ್ರಾಣೇ । ಸಂಮುಖ ವಿಮುಖ ಪಾಹೋ ನೇಣೇ । ತೈಶೀ ಘಾಲೀ ಲೋಟಾಂಗಣೇ । ದೇಹಾಭಿಮಾನೇ ಅಹೇತುಕ ।೩೫೩॥ ಅಸತಾ ದೇಹಾಚೇ ಅನುಸಂಧಾನ । ಜೋ ಪರಮಾರ್ಥೇ ಕರೀ ನಮನ । ತ್ಯಾ ನಮಸ್ಕಾರಾಚೇ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ।೩೫೪॥

ಶಿರೋ ಮತ್ಪಾದಯೋಃ ಕೃತ್ವಾ ಬಾಹುಭ್ಯಾಂ ಚ ಪರಸ್ಪರಮ್ । ಪ್ರಪನ್ನಂ ಪಾಹಿ ಮಾಮೀಶ ಭೀತಂ ಮೃತ್ಯುಗ್ರಹಾರ್ಣವಾತ್ ।೪೬॥

ಅರ್ಥ:- ತನ್ನ ಮಸ್ತಕವನ್ನು ನನ್ನ ಚರಣಗಳ ಮೇಲಿಟ್ಟು ಎರಡೂ ಕೈಗಳಿಂದ ಪಾದಗಳಿಗೆ ಆಲಿಂಗಿಸಿ ''ಹೇ ಭಗವಂತನೇ, ಈ ಸಂಸಾರ ಸಾಗರದಲ್ಲಿ ನಾನು ಮುಳುಗುತ್ತಿರುವೆನು. ಮೃತ್ಯುರೂಪ ಮೊಸಳೆಯು ನನ್ನನ್ನು ಬೆನ್ನು ಹತ್ತಿದೆ ಅದಕ್ಕೆ ಭಯಪಟ್ಟು ನಾನು ನಿನ್ನಲ್ಲಿ ಶರಣು ಬಂದಿರುವೆನು. ಹೇ ಪ್ರಭುವೇ, ನೀವು ನನ್ನನ್ನು ರಕ್ಷಿಸಿ ಕಾಪಾಡಿರಿ'' ಎಂದು ಪ್ರಾರ್ಥಿಸಬೇಕು.

ಮಸ್ತಕ ಮಾಝ್ಯಾ ಚರಣಾವರೀ । ಉಭಯ ಬಾಹು ಪರಸ್ಪರೀ ದೋನೀ ಚರಣ ದೋಹೀ ಕರೀ । ಧರೀ ನಿರ್ಧಾರೀ ಭಾವಾರ್ಥೇ ।೩೫೫॥
ಸಂಸಾರಸಾಗರಾಚ್ಯಾ ಪೋಟೀ । ಮೃತ್ಯುಗ್ರಹೇ ಘಾತಲೀ ಮಿಠೀ । ಚರಣೀ ಲಾಗಲೋ ಉಠಾಉಠೀ । ಮಜ

ವೇದಗಳನ್ನು ಪಠಿಸುವಾಗ ಏನಾದರೂ ಸ್ವರ, ವರ್ಣಗಳು ತಪ್ಪಿದರೆ ಪಾಠಕನಿಗೆ ದೋಷವು ತಟ್ಟುವುದು. ಆದರೆ ಪ್ರಾಕೃತ ಭಾಷೆಯಲ್ಲಿ ಶ್ರೀಹರಿಯ ಸ್ಮರಣೆಯನ್ನು ಮಾಡಿದರೆ ಸರ್ವ ದೋಷಗಳು ಭಂಗವಾಗುವುವು ।೩೪೪॥ ಶಾಸ್ತ್ರಗಳ, ಪುರಾಣಗಳ ಶ್ರವಣಕ್ಕೆ ಪಂಚಮೀ ಸಪ್ತಮೀ ಇತ್ಯಾದಿ ವಿಭಕ್ತಿಗಳ ಜ್ಞಾನವು ಇರಬೇಕಾಗುವುದು. ಆದರೆ ಪ್ರಾಕೃತ ನಾಮವನ್ನು ಅಶುದ್ಧ ಪದ್ಧತಿಯಿಂದ ಹಾಡಿದರೂ ಕೂಡ ಇದರಿಂದ ಭಗವಂತನ ಪ್ರಾಪ್ತಿಯಾಗುವುದು ।೩೪೫॥ ಸಂಸ್ಕೃತ ಭಾಷೆ ಮಾತ್ರ ದೇವನು ಮಾಡಿರುವನು ಆದರೆ ಪ್ರಾಕೃತ ಭಾಷೆಯನ್ನು ಕಳ್ಳರು ಮಾತ್ರ ಮಾಡಿರುವರೆ ? ಇದು ಕೇವಲ ಒಂದು ಪಕ್ಷದ ಅಭಿಮಾನ ಹಿಡಿದವರ ಮಾತಾಗಿರುವುದು. ದೇವನು ಈ ಎಲ್ಲ ಅಭಿಮಾನಗಳಿಂದ ದೂರ ಇರುವನು ।೩೪೬॥ ವೇದಶಾಸ್ತ್ರ, ಪುರಾಣ ಅಥವಾ ಪ್ರಾಕೃತ ಭಾಷೆಯಲ್ಲಿನ ಸ್ತವನೆ ಈ ಎಲ್ಲದರಲ್ಲಿಯೂ ಭಕ್ತಿಪ್ರೇಮವೇ ಶ್ರೇಷ್ಠವಾಗಿರುವುದು. ಇದರಿಂದಲೇ ಶ್ರೀನಾರಾಯಣನು ಸಂತುಷ್ಟನಾಗುವನು ।೩೪೭॥ ದೇವರಿಗೆ ಪ್ರೇಮಭಕ್ತಿಯಲ್ಲಿ ಪ್ರೀತಿ ಇರುವುದು. ಆತನು ಭಾಷೆಯ ಆಡಂಬರವನ್ನು ನೋಡಲಾರನು. ಭಾವಿಕರ ಭಕ್ತಿಪ್ರೇಮವು ಆತನಿಗೆ ಅತಿಶಯವಾಗಿ ಪ್ರಿಯವಾಗುವುದು. ಈ ಕಾರಣವಾಗಿ ದೇವರಿಗೆ ಭಕ್ತರ ಭಿಡೆಯನ್ನು ಮುರಿಯಲಿಕ್ಕೆ ಆಗುವುದಿಲ್ಲ ।೩೪೮॥ ತಾತ್ಪರ್ಯವೇನೆಂದರೆ, ಭಕ್ತಿ ಭಾವದಿಂದ ಪ್ರಭುವಿನ ಸ್ತುತಿಯನ್ನು ಮಾಡಲು ದೇವರು ಭಕ್ತರ ಆಧೀನನಾಗುವನು. ಆದ್ದರಿಂದ ಪ್ರೇಮದಿಂದ ನಮಸ್ಕಾರವನ್ನು ಮಾಡಿ ಹರಿಚರಣಗಳಲ್ಲಿ ಆಲಿಂಗಿಸಬೇಕು ।೩೪೯॥ ಒಂದೇ ಮುಹೂರ್ತವಾಗಲಿ, ನಿಮಿಷವಾಗಲಿ ಅಥವಾ ಒಂದೇ ಕ್ಷಣವಾಗಲಿ ಶ್ರೀಹರಿ ಚರಣಗಳಲ್ಲಿ ಮನವು ಸುಖವನ್ನು ಪಡೆದಲ್ಲಿ, ಆ ಸುಖದಿಂದ ಇತರ ಹವ್ಯಾಸಗಳು ಸಹಜವಾಗಿ ಬಿಟ್ಟು ಹೋಗುವುವು ।೩೫೦॥ ಯಾವುದರಿಂದ ನನ್ನ ಅನುಸಂಧಾನವು ಭಂಗವಾಗುವುದೋ, ಅಂತಹ ಕರ್ಮಗಳನ್ನು ತಾನು ಬಿಟ್ಟುಕೊಡಬೇಕು. ಯಾವುದರಿಂದ ಮನವು ಆತ್ಮಸ್ವರೂಪದಲ್ಲಿ ತಲ್ಲೀನವಾಗುವುದೋ, ಅಲ್ಲಿಯೇ ಸಮಾಧಾನವನ್ನು ಕಾಯ್ದುಕೊಳ್ಳಬೇಕು ।೩೫೧॥ ಭಗವಂತನಿಗೆ ಸಪ್ರೇಮವಾಗಿ ನಮಸ್ಕಾರವನ್ನು ಮಾಡಲು ನಿತ್ಯನೂತನವಾಗಿ ಸಮಾಧಾನವು ಲಭಿಸುವುದು. ಆ ನಮಸ್ಕಾರದ ಲಕ್ಷಣವು ಲೋಟಾಂಗಣ, ದಂಡವತವಾಗಿರುವುದು ।೩೫೨॥ ಕೈಯಲ್ಲಿನ ಕೋಲು ಅಪ್ಪಿತಪ್ಪಿ ಕೆಳಗೆ ಬೀಳಲು ಅದು ಹಿಂದು ಮುಂದು ನೋಡದೇ ಬೀಳುವಂತೆ ದೇಹದ ಅಭಿಮಾನವನ್ನು ತ್ಯಜಿಸಿ ನಿಷ್ಕಾಮ ಭಾವನೆಯಿಂದ ಲೋಟಾಂಗಣವನ್ನು ಹಾಕಬೇಕು ।೩೫೩॥ ದೇಹದತ್ತ ಲಕ್ಷವಿಟ್ಟು ಪರಮಾರ್ಥಕ್ಕಾಗಿ ನಮಸ್ಕರಿಸುವ, ಆ ನಮಸ್ಕಾರದ ಲಕ್ಷಣವನ್ನು ಶ್ರೀಕೃಷ್ಣನು ಹೇಳುತ್ತಿರುವನು ।೩೫೪॥

ಭಕ್ತನು ನನ್ನ ಚರಣಕಮಲಗಳಲ್ಲಿ ಪ್ರೇಮದಿಂದ ತನ್ನ ಮಸ್ತಕವನ್ನಿಟ್ಟು, ತನ್ನ ಎರಡೂ ಕೈಗಳಿಂದ ಭಕ್ತಿಭಾವದಿಂದ ನನ್ನ ಪಾದಗಳನ್ನು ಹಿಡಿಯುವನು ।೩೫೫॥

ಜಗಜೇಠೀ ಸೋಡವೀ ।।೩೫೬।। ಭವಭಯೇ ಭ್ಯಾಲೋ ದಾರುಣ । ಯಾಲಾಗೀ ತುಜ ಆಲೋ ಶರಣ । ನಿವಾರೀ ಮಾಝೀ ಜನ್ಮ ಮರಣ । ಭಾವೇ ಶ್ರೀಚರಣ ದೃಢ ಧರಿಲೇ ।।೩೫೭।। ತೂ ಸ್ವಾಮೀ ಅಸತಾ ಶಿರೀ । ಮಜ ಮೃತ್ಯು ಬಾಪುಡೇ ಕೇವೀ ಮಾರೀ । ಭಾವೇ ಲೋಟಾಂಗಣ ಚರಣಾವರೀ । ಕೃಪಾ ಉದ್ಧರೀ ಕೃಪಾಳುವಾ ।।೩೫೮।। ದೇಖೋನಿ ಸಾಷ್ಟಾಂಗ ನಮನ । ಐಕೋನಿ ಭಯಭೀತಸ್ತವನ । ಮಜ ತುಷ್ಟಲಾ ನಾರಾಯಣ । ಐಸೇ ಆಪಣ ಭಾವಾವೇ ।।೩೫೯।।

ಇತಿ ಶೇಷಾಂ ಮಯಾ ದತ್ತಾಂ ಶಿರಸ್ಯಾಧಾಯ ಸಾದರಮ್ । ಉದ್ವಾಸಯೇಚ್ಚೇದುದ್ವಾಸ್ಯಂ ಜ್ಯೋತಿರ್ಜ್ಯೋತಿಷಿ ತತ್ಪುನಃ ।।೪೭।।

ಅರ್ಥ:- ಈ ಪ್ರಕಾರವಾಗಿ ಸ್ತುತಿಯನ್ನು ಮಾಡಿ ಸಮರ್ಪಿತ ಮಾಡಿರುವ ಹೂಮಾಲೆ ವಗೈರೆ ಆದರದಿಂದ ತನ್ನ ಮಸ್ತಕದ ಮೇಲೆ ಧರಿಸಬೇಕು. ಅದು ನನ್ನ ಪ್ರಸಾದವೆಂದು ಭಾವಿಸಬೇಕು. ಪ್ರತಿಮೆಯಿಂದ ಒಂದು ಜ್ಯೋತಿಯು ಹೊರಟು ಅದು ನನ್ನ ಹೃದಯದಲ್ಲಿ ಲೀನವಾಯಿತು ಎಂದು ಹೀಗೆ ಭಾವನೆಯನ್ನು ಮಾಡಿ ವಿಸರ್ಜನೆಯನ್ನು ಮಾಡಬೇಕು.

ಮ್ಯಾ ದೀಧಲಾ ಶೇಷಪ್ರಸಾದ । ತೋ ಶಿರೀ ಧರೋನಿ ಸ್ವಾನಂದ । ಸ್ಥಾವರಮೂರ್ತಿ ಜೇಥ ಪ್ರಸಿದ್ಧ । ತೇಥ ಉದ್ವಾಸಸಂಬಂಧ ನ ಕರಾವಾ ।।೩೬೦।। ಜಂಗಮು ಜೇ ಪ್ರತಿಮಾಮೂರ್ತೀ । ತೇಥ ಆವಾಹಿಲೀ ನಿಜಾತ್ಮ ಜ್ಯೋತೀ । ತೇ ಉದ್ವಾಸೂನಿಯಾ ಮಾಗುತೀ । ನಿಜಾತ್ಮಸ್ಥಿತೀ ಠೇವಾವೀ ।।೩೬೧।। ಮೂರ್ತೀಮಾಝಾರೀಲ ಜ್ಯೋತೀ । ಆಣೋನಿಯಾ ಹೃದಯಸ್ಥಿತೀ । ಮಗ ನಿಜಾತ್ಮ ಜ್ಯೋತೀಸೀ ಜ್ಯೋತೀ । ಯಥಾಸ್ಥಿತೀ ಮೇಳವಾವೀ ।।೩೬೨।। ವಿಸರ್ಜನಾಂತ ಪೂಜಾಸ್ಥಿತೀ । ಐಕೋನಿ ಉದ್ಧವಾಚೇ ಚಿತ್ತೀ । ಸಾಧಕಾ ಪೂಜ್ಯ ಕೋಣ ಮೂರ್ತೀ । ದೇವ ತೇ ಅರ್ಥೀಸ್ವಯೇ ಸಾಂಗೇ ।।೩೬೩।।

ಅರ್ಚಾದಿಷು ಯದಾ ಯತ್ರ ಶ್ರದ್ಧಾ ಮಾಂ ತತ್ರ ಚಾರ್ಚಯೇತ್ । ಸರ್ವಭೂತೇಷ್ವಾತ್ಮನಿ ಚ ಸರ್ವಾತ್ಮಾऽಹಮವಸ್ಥಿತಃ ।।೪೮।।

ಅರ್ಥ:- ಹೇ ಉದ್ಧವಾ, ಪೂರ್ವೋಕ್ತ ಅರ್ಚಾದಿಕಗಳಲ್ಲಿ ಯಾವ ಅಧಿಷ್ಠಾನದಲ್ಲಿ ತನ್ನ ಶ್ರದ್ಧೆಯು ಇರುವುದೋ, ಅಲ್ಲಿಯೇ ನನ್ನ ಪೂಜೆಯನ್ನು ಮಾಡಬೇಕು. ಸರ್ವ ಭೂತಗಳಲ್ಲಿ ಮತ್ತು ಸ್ವತಃ ಪೂಜಕನ ಹೃದಯದಲ್ಲಿ ಸರ್ವಾತ್ಮನಾದ ನಾನು ಸ್ಥಿರವಾಗಿರುವೆನು.

ಉದ್ಧವಾ ಜೇ ಮೂರ್ತಿ ಜ್ಯಾ ಪಢಿಯಂತೀ । ತೇಚಿ ತ್ಯಾಸೀ ಪೂಜ್ಯ ಮೂರ್ತೀ । ತುವಾಂಹೀ ಅಣುಮಾತ್ರ ಚಿತ್ತೀ । ಸಂದೇಹ ಜೇ ಅರ್ಥೀ ನ ಧರಾವಾ ।।೩೬೪।। ವಿಷ್ಣು ವಿರೀಂಚಿ ಸವಿತಾ ಜಾಣ । ಶಿವಶಕ್ತಿ ಕಾ ಗಜವದನ ।ಯಾ ಮೂರ್ತೀಮಾಜೀ ಮೀ ಆಪಣ । ಸರ್ವೀ ಸಮಾನ ಸರ್ವಾತ್ಮಾ ।।೩೬೫।।
ಸರ್ವ ಪ್ರತಿಮಾಂಚೇ ಪೂಜನ । ಕರಿತಾ ಮಜ ಪೂಜಾ ಸಮಾನ । ಭಕ್ತಾಂಚೇ ಜೇಥ ಪ್ರೀತಿ ಗಹನ । ತಿಯೇ ಅಧೀನ

ಆತನು ಹೀಗೆ ಪ್ರಾರ್ಥಿಸುವನು, "ಹೇ ಜಗಜೇಠಿಯೇ, ಈ ಸಂಸಾರ ಸಾಗರದಲ್ಲಿ ಮೃತ್ಯುರೂಪ ಮೊಸಳೆಯು ನನ್ನನ್ನು ಹಿಡಿದುಕೊಂಡಿರುವುದು. ಆದ್ದರಿಂದ ನಾನು ಓಡೋಡಿ ನಿನ್ನ ಚರಣಗಳಲ್ಲಿ ಶರಣಾಗಿರುವೆನು. ಇದರಿಂದ ನನ್ನನ್ನು ರಕ್ಷಿಸಿ, ಕಾಪಾಡು ।।೩೫೬।। ಸಂಸಾರಭಯದಿಂದ ನಾನು ಗಾಬರಿಯಾಗಿರುವೆನು. ನಾನು ನಿನಗೆ ಪೂರ್ಣವಾಗಿ ಶರಣಾಗಿರುವೆನು. ನನ್ನ ಜನ್ಮ ಮರಣದ ಚಕ್ರವನ್ನು ನಿಲ್ಲಿಸು. ನಾನು ಭಕ್ತಿ ಭಾವದಿಂದ ನಿನ್ನ ಪೂಜ್ಯ ಚರಣಗಳನ್ನು ಹಿಡಿದಿರುವೆನು ।।೩೫೭।। ನೀನು ನನ್ನನ್ನು ರಕ್ಷಣೆ ಮಾಡುವ ಸ್ವಾಮಿಯಾಗಿರಲು ಆ ಮೃತ್ಯು ನನಗೆ ಹೇಗೆ ಕೊಲ್ಲುವುದು? ಹೇ ಕೃಪಾಸಾಗರನೇ, ನಾನು ನಿನ್ನ ಚರಣಗಳಲ್ಲಿ ಲೋಟಾಂಗಣವನ್ನು ಹಾಕುವೆನು, ಈಗ ನನ್ನನ್ನು ಉದ್ಧರಿಸು ।।೩೫೮।। ಈ ರೀತಿಯ ಸಾಷ್ಟಾಂಗ ನಮಸ್ಕಾರವನ್ನು ಕಂಡು ಮತ್ತು ಭಯಭೀತನಾಗಿ ಸ್ತುತಿಸುವುದನ್ನು ಕೇಳಿ ಶ್ರೀನಾರಾಯಣನು ನನ್ನ ಮೇಲೆ ಪ್ರಸನ್ನನಾದನು ಎಂದು ಹೀಗೆ ಭಾವನೆಯನ್ನು ಮಾಡಬೇಕು ।।೩೫೯।।

ತದನಂತರ ನಾನು ಕೊಟ್ಟ ಪ್ರಸಾದವನ್ನು ಆನಂದದಿಂದ ಶಿರಸಾ ವಂದಿಸಬೇಕು. ಸ್ಥಾವರಮೂರ್ತಿ ಇದ್ದರೆ ಅದನ್ನು ವಿಸರ್ಜನೆಯನ್ನು ಮಾಡಕೂಡದು ।।೩೬೦।। ಆದರೆ ಚಲ ಪ್ರತಿಮಾ ಮೂರ್ತಿ ಇದ್ದರೆ ಅದರಲ್ಲಿ ಆತ್ಮಜ್ಯೋತಿಯಿಂದ ಆವಾಹನೆಯನ್ನು ಮಾಡಿದ್ದರೆ ಆ ಜ್ಯೋತಿಯನ್ನು ಪುನಃ ತನ್ನ ಹೃದಯದಲ್ಲಿ ಸ್ಥಾಪನೆಯನ್ನು ಮಾಡಬೇಕು ।।೩೬೧।। ಬಾಹ್ಯ ಮೂರ್ತಿಯಲ್ಲಿ ಇರುವ ಜ್ಯೋತಿಯನ್ನು ಪುನಃ ಹೃದಯದಲ್ಲಿ ತರಬೇಕು. ಆ ಜ್ಯೋತಿಯನ್ನು ತನ್ನ ನಿಜಾತ್ಮಜ್ಯೋತಿಯಲ್ಲಿ ಯಥಾಸ್ಥಿತಿಯಿಂದ ಕೂಡಿಸಬೇಕು ।।೩೬೨।। ಈ ಪ್ರಕಾರವಾಗಿ ವಿಸರ್ಜನೆಯವರೆಗೆ ಪೂಜೆಯ ವಿಧಿಯನ್ನು ಕೇಳಿ ಉದ್ಧವನ ಮನದಲ್ಲಿ ಸಾಧಕರಿಗೆ ಪೂಜ್ಯ ಮೂರ್ತಿ ಯಾವುದು ? ಎಂಬ ವಿಚಾರವು ಮೂಡಿಕೊಂಡಿತು ಆಗ ದೇವನು ಈ ವಿಷಯವನ್ನು ಕುರಿತು ಸ್ವತಃ ಹೇಳುವನು ।।೩೬೩।।

ಹೇ ಉದ್ಧವಾ, ಯಾರಿಗೆ ಯಾವ ಮೂರ್ತಿಯು ಪ್ರಿಯವೆನಿಸುವುದೋ, ಅವರಿಗೆ ಅದು ಪೂಜ್ಯವಾಗಿರುವುದು. ಈ ವಿಷಯವನ್ನು ಕುರಿತು ನೀನು ಮನದಲ್ಲಿ ಯಾವ ಸಂಶಯವನ್ನೂ ಮಾಡಬೇಡ ।।೩೬೪।। ವಿಷ್ಣು, ಬ್ರಹ್ಮದೇವ, ಸೂರ್ಯ, ಶಿವ,ಶಕ್ತಿ ಗಣೇಶ ಈ ಪೈಕಿ ಯಾವುದೇ ಮೂರ್ತಿಯಲ್ಲಿ ಸರ್ವಾತ್ಮನಾದ ನಾನು ಸಮಾನ ರೂಪದಲ್ಲಿ ಇರುವೆನು ।।೩೬೫।।

ಮೀ ಪರಮಾತ್ಮಾ ।।೩೬೬।। ಜೇವೀ ಬಾಳಾಕಾಚೇನಿ ಮೇಳೇ । ಮಾತಾ ತದನುಕೂಲ ಖೇಳೇ । ತೇವೀ ಭಕ್ತಪ್ರೇಮಾಚಿಯೇ ಲೀಳೇ । ಮ್ಯಾ ಚಿತ್ಕಲ್ಲೋಳೇ ಕ್ರೀಡಿಜೇ ।।೩೬೭।। ಯಾ ಸರ್ವ ಭೂತಾಂಚ್ಯಾ ಠಾಯೀ । ಆಣಿ ಅವತಾರಾದಿ ಲೀಲಾದೇಹೀ । ಮೀ ಸರ್ವಾಸೀ ಸಮಾನ ಪಾಹೀ । ಯೇ ಅರ್ಥೀ ನಾಹೀ ಸಂದೇಹೋ ।।೩೬೮।। ಉದ್ಧವಾ ಮೀ ನಾಹೀ ಐಸೇ । ಕೋಣೇಹೀ ಠಿಕಾಣ ರಿತೇ ನಸೇ । ಪರೀ ಪ್ರಾಣ್ಯಾಂಚೇ ಭಾಗ್ಯ ಕೈಸೇ । ತ್ಯಾ ಮಜ ವಿಶ್ವಾಸೇ ನ ಭಜತೀ ।।೩೬೯।। ಜೋ ಜೇಥ ಮಜ ಭಜೋ ಬೈಸೇ । ತ್ಯಾ ಮೀ ತೇಥ ತೈಸಾಚಿ ಅಸೇ । ಹೇ ಉಪಾಸನಾಕಾಂಡವಿಶೇಷೇ । ಗುಪ್ತ ಅನಾಯಾಸೇ ಪ್ರಕಾಶಿಲೇ ।।೩೭೦।। ಉಪಾಸನಾಕಾಂಡೀಚಾ ನಿರ್ವಾಹೋ । ಮೀ ಸರ್ವಭೂತೀ ದೇವಾಧಿದೇವೋ । ಹಾ ಜ್ಯಾಸೀ ನ ಫಳೇ ಮುಖ್ಯ ಭಾವೋ । ತ್ಯಾಸೀ ಮೂರ್ತಿನಿರ್ವಾಹೋ ದ್ಯೋತಿಲಾ ।।೩೭೧।। ಹೋ ಕಾ ಮಾಝೀ ಪ್ರತಿಮಾಮೂರ್ತೀ । ತೇಹೀ ಮೀ ಚಿದಾತ್ಮಾ ನಿಶ್ಚಿತೀ । ತೇಥ ಕರಿತಾ ಭಾವೇ ಭಕ್ತೀ । ಭಕ್ತ ಉದ್ಧರತೀ ಉದ್ಧವಾ ।।೩೭೨।।

ಏವಂ ಕ್ರಿಯಾಯೋಗಪಥೈಃ ಪುಮಾನ್ವೈದಿಕತಾಂತ್ರಿಕೈಃ । ಅರ್ಚನ್ನುಭಯತಃ ಸಿದ್ಧಿಂ ಮತ್ತೋ ವಿಂದತ್ಯಭೀಪ್ಸಿತಾಮ್ ।೪೯।।

ಅರ್ಥ:- ಹೇ ಉದ್ಧವಾ, ಯಾವ ಮಾನವನು ಈ ಪ್ರಕಾರವಾಗಿ ವೈದಿಕ, ತಾಂತ್ರಿಕ ಮತ್ತು ಕ್ರಿಯಾಯೋಗದ್ವಾರಾ ನನ್ನ ಪೂಜೆಯನ್ನು ಮಾಡುವನೋ, ಆತನು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಅಭೀಷ್ಟ ಸಿದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳುವನು.

ಏವಂ ಕ್ರಿಯಾಯೋಗಲಕ್ಷಣ । ವೈದಿಕ ತಾಂತ್ರಿಕ ಮಿಶ್ರಜಾಣ । ಆಗಮನಿಗಮ ವಿಸ್ತಾರ ಗಹನ । ತೋ ಮುಖ್ಯಾರ್ಥ ಪೂರ್ಣ ಸಾಂಗಿತಲಾ ।।೩೭೩।। ಯೇಣೇ ಕ್ರಿಯಾಯೋಗ ಭಜನಮಾರ್ಗೇ । ಭಕ್ತ ಜೈ ಭೋಗಮೋಕ್ಷ ಮಾಗೇ । ತೈ ಉಭಯ ಸಿದ್ಧೀ ಲಾಗವೇಗೇ । ಮ್ಯಾ ಶ್ರೀರಂಗೇ ಅರ್ಪಿಜೇ ।।೩೭೪।। ಭಕ್ತ ನಿಷ್ಕಾಮ ಅನನ್ಯಭಕ್ತೀ । ತೈ ಭೋಗ ಮೋಕ್ಷಾದಿ ಸಂಪತ್ತೀ । ಘೇಊನಿಯಾ ಮೀ ಶ್ರೀಪತೀ । ತ್ಯಾಂಚಾ ದ್ವಾರಾಪ್ರತೀ ಸದಾ ತಿಷ್ಠೇ ।।೩೭೫।।

ಮದರ್ಚಾಂ ಸಂಪ್ರತಿಷ್ಠಾಪ್ಯ ಮಂದಿರಂ ಕಾರಯೇದ್ದೃಢಮ್ ।
ಪುಷ್ಪೋದ್ಯಾನಾನಿ ರಮ್ಯಾಣಿ ಪೂಜಾಯಾತ್ರೋತ್ಸವಾಶ್ರಿತಾನ್ ।೫೦।।

ಅರ್ಥ:- ಭಕ್ತನು ಸುಂದರವಾದ ಉದ್ಯಾನಗಳಿಂದ ಶೋಭಿಸುವ ಸುಭದ್ರವಾದ ಮಂದಿರವನ್ನು ಕಟ್ಟಿಸಿ ನನ್ನ ಮೂರ್ತಿಯನ್ನು ವಿಧಿಯುಕ್ತವಾಗಿ ಪ್ರತಿಷ್ಠಾಪಿಸಬೇಕು. ನಿತ್ಯ ಪೂಜೆಗಾಗಿ, ವಿಶೇಷ ಉತ್ಸವ ಹಾಗೂ ಹಬ್ಬಹರಿದಿನಗಳಿಗಾಗಿ ತುಳಸೀ ಪುಷ್ಪಗಳನ್ನು ಒದಗಿಸುವ ಸಲುವಾಗಿ ಹೂದೋಟಗಳಿರಬೇಕು.

ಸಾಙ್ಗ ಮಾಝೀ ಪ್ರತಿಮಾಮೂರ್ತೀ । ಕರೂನಿ ಜೇ ಪ್ರತಿಷ್ಠಾ ಕರಿತೀ । ದೃಢ ದೇವಾಲಯಾ ಉಭಾರಿತೀ

ಯಾವುದೇ ಮೂರ್ತಿಯಲ್ಲಿ ಪೂಜೆಯನ್ನು ಮಾಡಿದರೆ ಆ ಪೂಜೆಯು ನನಗೆ ಸಮಾನವಾಗಿರುವುದು. ಭಕ್ತನ ಪ್ರೇಮವು ಯಾವುದರಲ್ಲಿ ಅಧಿಕವಾಗಿರುವುದೋ, ಪರಮಾತ್ಮನಾದ ನಾನು ಆತನ ಆಧೀನನಾಗಿರುವೆನು ।೩೬೬।। ತಾಯಿಯು ತನ್ನ ಬಾಲಕನಲ್ಲಿ ತಾನು ಬಾಲಕನಾಗಿಯೇ ಹೇಗೆ ಆಡುತ್ತಿರುವಳೋ, ಅದರಂತೆಯೇ ಭಕ್ತನ ಪ್ರೇಮಾನುಸಾರವಾಗಿ ನಾನೂ ಕೂಡ ಕ್ರೀಡೆಗಳನ್ನು ಮಾಡುತ್ತಿರುವೆನು ।೩೬೭।। ನಾನು ಸರ್ವಪ್ರಾಣಿಮಾತ್ರರಲ್ಲಿ ಮತ್ತು ಅವತಾರದ ಸಮಯದಲ್ಲಿ ಲೀಲೆಯಿಂದ ಸ್ವೀಕರಿಸಿದ ದೇಹದಲ್ಲಿ ಪರಿಪೂರ್ಣವಾಗಿ ಸಮಾನವಾಗಿ ಇರುವೆನು. ಇದರಲ್ಲಿ ಯಾವುದೇ ಅನುಮಾನ ಇರುವುದಿಲ್ಲ ।೩೬೮।। ಹೇ ಉದ್ಧವನೇ, ನಾನು ಇಲ್ಲ ಎನ್ನುವ ಅಂತಹ ಸ್ಥಳವೇ ಇರುವುದಿಲ್ಲ. ಆದರೆ ಜನರ ಪ್ರಾರಬ್ಧ ಹೇಗಿದೆ ನೋಡು, ಅದನ್ನು ತಿಳಿಯದೇ ದೃಢಶ್ರದ್ಧೆಯಿಂದ ನನ್ನನ್ನು ಭಜಿಸುವುದೇ ಇಲ್ಲ ।೩೬೯।। ಯಾರು ನನಗೆ ಯಾವ ರೀತಿಯಿಂದ ಭಜಿಸುವರೋ ಅವರಿಗೆ ನಾನು ಅದೇ ಪ್ರಕಾರವಾಗಿ ತೋರುತ್ತಿರುವೆನು. ಈ ಯಾವ ಉಪಾಸನಾಕಾಂಡದಲ್ಲಿನ ಗೂಢವಾದ ರಹಸ್ಯವು ಅನಾಯಾಸವಾಗಿ ಪ್ರಕಟವಾಯಿತು ।೩೭೦।। ದೇವಾಧಿದೇವನಾದ ನಾನು ಸರ್ವಪ್ರಾಣಿಮಾತ್ರರಲ್ಲಿ ಇರುವೆನು ಎಂಬುವುದೇ ಉಪಾಸನಾಕಾಂಡದಲ್ಲಿನ ಮುಖ್ಯ ಮರ್ಮವಾಗಿರುವುದು. ಈ ಮುಖ್ಯ ಅಭಿಪ್ರಾಯವನ್ನು ಯಾರು ತಿಳಿಯಲಾರರೋ, ಅವರಿಗಾಗಿ ಮೂರ್ತಿ ಪೂಜೆಯ ವಿವಿಧ ಪ್ರಕಾರಗಳನ್ನು ಹೇಳಲಾಗಿರುವುದು ।೩೭೧।। ನನ್ನ ಪ್ರತಿಮಾಮೂರ್ತಿಯಲ್ಲಿಯೂ ಕೂಡ ಚಿದಾತ್ಮನಾದ ನಾನು ಇರುವೆನು. ಆ ಮೂರ್ತಿಯ ಭಕ್ತಿಯನ್ನು ಪ್ರೇಮಭಾವದಿಂದ ಮಾಡಿದರೆ ಭಕ್ತರ ಉದ್ಧಾರವಾಗುವುದು ।೩೭೨।।

ಈ ಪ್ರಕಾರವಾಗಿ ಕ್ರಿಯಾಯೋಗದ ಲಕ್ಷಣಗಳು ವೈದಿಕ ಹಾಗೂ ತಾಂತ್ರಿಕದಿಂದ ಕೂಡಿ ಮಿಶ್ರವಾಗಿರುವುವು. ವೇದಶಾಸ್ತ್ರಗಳಲ್ಲಿ ಇದರ ದೊಡ್ಡ ವಿಸ್ತಾರವಿರುವುದು. ಈಗ ನಾನು ಅದರಲ್ಲಿಯ ಮುಖ್ಯ ಸಾರವನ್ನು ನಿನ್ನಲ್ಲಿ ಪ್ರಕಟಿಸಿರುವೆನು ।೩೭೩।। ಈ ಕ್ರಿಯಾಯೋಗದ ಭಜನಮಾರ್ಗದಿಂದ ಭಕ್ತನು ಒಂದು ವೇಳೆ ಭೋಗ ಹಾಗೂ ಮೋಕ್ಷವನ್ನು ಬೇಡಿದರೆ ಶ್ರೀಹರಿಯಾದ ನಾನು ಆತನಿಗೆ ಈ ಎರಡೂ ಸಿದ್ಧಿಗಳನ್ನು ಕೊಡುವೆನು ।೩೭೪।। ಭಕ್ತನು ನಿಷ್ಕಾಮಭಾವದಿಂದ ಅನನ್ಯ ಭಕ್ತಿಯನ್ನು ಮಾಡಹತ್ತಿದರೆ ಶ್ರೀಪತಿಯಾದ ನಾನು ಸ್ವತಃ ಭೋಗಮೋಕ್ಷಗಳ ವೈಭವವನ್ನು ತೆಗೆದುಕೊಂಡು ಆತನ ಬಾಗಿಲಲ್ಲಿ ಸದಾ ಸರ್ವಕಾಲದಲ್ಲಿ ನಿಂತುಕೊಳ್ಳುವೆನು ।೩೭೫।।

। ಅತಿಪ್ರೀತೀ ಮದ್ಭಾವೇ ।೩೭೬॥ ವನ ಉಪವನ ಉದ್ಯಾನ । ಪುಷ್ಪ ವಾಟಿಕಾ ಲಾವಾವ್ಯಾ ಪೂರ್ಣ । ನಿತ್ಯಪೂಜೇಚೇ ವಿಧಾನ । ಉತ್ಸಾಹೀ ಜಾಣ ಮಹಾಪೂಜಾ ।೩೭೭॥ ಯಾತ್ರಾ, ಬಹುಜನ ಸಮಾಜಾ । ವಾರ್ಷಿಕ ಪರ್ವ ಮಹಾಪೂಜಾ । ಚಾಲವಾವಯಾ ಅಧೋಕ್ಷಜಾ । ಉಪಾಯ ಸಹಜಾ ಹರಿ ಸಾಂಗೇ ।೩೭೮॥

ಪೂಜಾದೀನಾಂ ಪ್ರವಾಹಾರ್ಥಂ ಮಹಾ[illegible]ಸ್ವಥಾನ್ವಹಮ್ ।
ಕ್ಷೇತ್ರಾಪಣಪುರಗ್ರಾಮಾನ್ ದತ್ತ್ವಾ ಮತ್ಸಾರ್ಷ್ಟಿತಾಮಿಯಾತ್ ।೫೧॥

ಅರ್ಥ:- ವಿಗ್ರಹಕ್ಕೆ ನಿತ್ಯಪೂಜೆ ಹಾಗೂ ವಿಶೇಷೋತ್ಸವಗಳು ನಿರಂತರವಾಗಿ ನಡೆಯಲು ಭೂಮಿ, ಅಂಗಡಿ, ಪಟ್ಟಣ ಮತ್ತು ಗ್ರಾಮಗಳನ್ನು ದಾನವಾಗಿ ನೀಡುವವನು ನನಗೆ ಸಮಾನವಾದ ಐಶ್ವರ್ಯವನ್ನು ಪಡೆಯುವನು.

ನಿತ್ಯಪೂಜಾ ಮಹಾಪೂಜಾ । ವಾರ್ಷಿಕ ಪರ್ವೇ ಚಾಲವಾವಯಾ ವೋಜಾ । ನಿತ್ಯನಿರ್ವಾಹ ಕರೀ ರಾಜಾ । ಗ್ರಾಮಸಮಾಜಾ ಅರ್ಪೂನೀ ।೩೭೯॥ ''ಕ್ಷೇತ್ರ'' ಮ್ಹಣಿಜೇ ಶೇತ ಗಹನ । ಹಾಟ ಉತ್ಪನ್ನ ದ್ರವ್ಯ ''ಆಪಣ'' । ಹಾಟೇವೀಣ ತೋ ''ಗ್ರಾಮ'' ಜಾಣ । ಐಕ ಲಕ್ಷಣ ಪುರಾಚೇ ।೩೮೦॥ ಹಾಟಯುಕ್ತ ತೇ ''ಪುರ'' ಪಾಹೀ । ಜೇ ಅರ್ಪಿತೀ ದೇವಾಲಯೀ । ತೇ ಮಾಝೇ ಐಶ್ವರ್ಯ ಪಾಹೀ । ಸರ್ವಾಠಾಯೀ ಪಾವತೀ ।೩೮೧॥ ಮೂರ್ತಿಪ್ರತಿಷ್ಠಾ ಪೂಜಾವಿಧಾನ । ದೇವಾಲಯೀ ಕೇಲಿಯಾ ಜಾಣ । ಕರ್ತ್ಯಾಸೀ ಫಳ ಕೋಣ ಕೋಣ । ತೇಹೀ ಶ್ರೀಕೃಷ್ಣಸಾಂಗತ ।೩೮೨॥

ಪ್ರತಿಷ್ಠಯಾ ಸಾರ್ವಭೌಮಂ ಸದ್ಮನಾ ಭುವನತ್ರಯಮ್ । ಪೂಜಾದಿನಾ ಬ್ರಹ್ಮಲೋಕಂ ತ್ರಿಭಿರ್ಮತ್ಸಾಮ್ಯತಾಮಿಯಾತ್ ।೫೨॥

ಅರ್ಥ:- ದೇವತಾ ವಿಗ್ರಹದ ಪ್ರತಿಷ್ಠಾಪನೆಯಿಂದ ವ್ಯಕ್ತಿಯು ಸಾರ್ವಭೌಮನಾಗುತ್ತಾನೆ. ದೇವರಿಗಾಗಿ ಮಂದಿರವನ್ನು ನಿರ್ಮಿಸಿದವನು ತ್ರಿಲೋಕಾಧಿಪತಿಯಾಗುತ್ತಾನೆ. ದೇವತಾ ಪೂಜೆ ಮತ್ತು ಸೇವೆಯನ್ನು ಮಾಡಿದವನು ಬ್ರಹ್ಮಲೋಕವನ್ನು ಸೇರುತ್ತಾನೆ. ಈ ಮೂರೂ ಕಾರ್ಯಗಳನ್ನು ಮಾಡಿದವನು ನನ್ನಂತೆ ದಿವ್ಯ ರೂಪವನ್ನು ಪಡೆಯುತ್ತಾನೆ.

ಜೋ ಮೂರ್ತಿಪ್ರತಿಷ್ಠಾ ಕರೂನಿ ಠಾಯೀ । ತೋ ಸಾರ್ವಭೌಮ ರಾಜ್ಯ ಲಾಹೇ । ಜೋ ದೇವಾಲಯ ಕರೀ ಸ್ವಯೇ । ತೋ ಸ್ವಾಮೀ ಹೋಯೇ ತಿಹೀ ಲೋಕೀ ।೩೮೩॥ ಜೋ ಕರೀ ಪೂಜಾವಿಧಾನ । ತೋ ಪಾವೇ ಬ್ರಹ್ಮಸದನ । ಯೇ ತೀನೀ ಜೋ ಕರೀ ಆಪಣ । ತೋ ಮಜಸಮಾನ ಐಶ್ವರ್ಯ ಪಾವೇ ।೩೮೪॥ ಐಸೇ ಹೇ ತಿಘೇ ಸಾಧಕ । ಪೋಟೀಹೂನಿ ಸಕಾಮುಕ । ಕಾಮನೇಸಾರಖೇ ಲೋಕ । ತೇ ಆವಶ್ಯಕ ಪಾವತೀ ।೩೮೫॥ ಜ್ಯಾಸೀ ಮಾಝೇ ನಿಷ್ಕಾಮ ಭಜನ । ತ್ಯಾಚೇ ಪ್ರಾಪ್ತೀಚೇ ನಿಜಲಕ್ಷಣ । ತೇ ಅತ್ಯಾದರೇ ಶ್ರೀಕೃಷ್ಣ । ಸ್ವಾನಂದೇ

ನನ್ನ ಭಕ್ತನು ನನ್ನಲ್ಲಿ ಅತಿಪ್ರೀತಿಯಿಂದ ದೃಢವಾದ ದೇವಾಲಯವನ್ನು ಕಟ್ಟಿಸಿ ನನ್ನ ಪ್ರತಿಮೆಯ ಉತ್ತಮ ಮೂರ್ತಿಯನ್ನು ತಯಾರಿಸಿ ಅದರ ಪ್ರಾಣಪ್ರತಿಷ್ಠೆಯನ್ನು ಯಥಾಸಾಂಗ ಮಾಡುವನು ।೩೭೬॥ ವನ, ಉಪವನ, ಉದ್ಯಾನ, ಹೂವು ತುಳಸೀ ಬಿಲ್ವಗಳ ವೃಕ್ಷಗಳನ್ನು ನಿರ್ಮಿಸುವರು. ಹಾಗೆಯೇ ವಿಧಿಯುಕ್ತವಾಗಿ ನಿತ್ಯ ಪೂಜೆಯನ್ನು ಮಾಡಿ ಉತ್ಸಾಹದಿಂದ ಮಹಾಪೂಜೆಯನ್ನು ಮಾಡುವರು।೩೭೭॥ ಈ ಯಾವ ದೇವಸ್ಥಾನದ ಯಾತ್ರೆಯನ್ನು ಆರಂಭಿಸಿ ಸರ್ವ ಸಮಾಜವನ್ನು ಏಕತ್ರ ಮಾಡಬೇಕು. ವಾರ್ಷಿಕ, ಪರ್ವಕಾಲಗಳಲ್ಲಿ ಮಹಾಪೂಜೆಯಾಗಬೇಕು. ಇವು ಅಖಂಡವಾಗಿ ನೆರವೇರಲು ಶ್ರೀಕೃಷ್ಣನು ಸಹಜ ಉಪಾಯವನ್ನು ಹೇಳುವನು ।೩೭೮॥

ನಿತ್ಯಪೂಜೆ, ಮಹಾಪೂಜೆ, ವಾರ್ಷಿಕ ಉತ್ಸವ ಇವು ಅಖಂಡವಾಗಿ ಯೋಗ್ಯ ಪ್ರಕಾರಗಳಲ್ಲಿ ನಡೆಯಬೇಕೆಂದು ಊರಿನ ಜನರಿಗೆ ರಾಜನು ವರ್ಷಾಸನೆಯನ್ನು ನಿಗದಿಮಾಡಿ ಕೊಟ್ಟು ಅದರ ನಿರ್ವಹಣೆಯ ಅನುಕೂಲತೆಗಳನ್ನು ಮಾಡುವನು ।೩೭೯॥ ಕ್ಷೇತ್ರ ಅಂದರೆ ದೊಡ್ಡದಾದ ಹೊಲವು. ಗ್ರಾಮವೆಂದರೆ ಬಜಾರ ತುಂಬದ ಊರಾಗಿರುವುದು. ಈಗ ಪಟ್ಟಣದ ಲಕ್ಷಣವನ್ನು ಹೇಳುವೆನು, ಕೇಳು ।೩೮೦॥ ಎಲ್ಲಿ ಬಜಾರವು ತುಂಬುವುದೋ ಅದಕ್ಕೆ ಪಟ್ಟಣ ಎಂದು ಕರೆಯುವರು. ಈ ಬಜಾರದಲ್ಲಿ ಆಗುವ ಲಾಭವನ್ನು ದೇವಾಲಯಕ್ಕೆ ಯಾರು ಅರ್ಪಿಸುವರೋ, ಅವರು ಎಲ್ಲ ಸ್ಥಳಗಳಲ್ಲಿಯೂ ನನ್ನ ಐಶ್ವರ್ಯವನ್ನು ಭೋಗಿಸುವರು ।೩೮೧॥ ದೇವಾಲಯದಲ್ಲಿ ಮೂರ್ತಿಯ ಪ್ರಾಣಪ್ರತಿಷ್ಠೆಯನ್ನು ಹಾಗೂ ಅದರ ಪೂಜೆಯನ್ನು ಮಾಡುವ ಈ ಕರ್ತನಿಗೆ ಯಾವ ಪ್ರಕಾರದ ಫಲಪ್ರಾಪ್ತಿಯಾಗುವುದೆಂಬುದನ್ನು ಶ್ರೀಕೃಷ್ಣನು ಈಗ ಹೇಳುತ್ತಿರುವನು ।೩೮೨॥

ಯಾರು ದೇವಾಲಯವನ್ನು ಕಟ್ಟಿಸುವನೋ, ಆತನು ತ್ರಿಭುವನದ ಸ್ವಾಮಿಯಾಗುವನು. ಮತ್ತು ಯಾರು ಮೂರ್ತಿಯ ಪ್ರಾಣಪ್ರತಿಷ್ಠೆಯನ್ನು ಮಾಡುವನೋ, ಆತನು ಸಾರ್ವಭೌಮ ರಾಜನಾಗುವನು ।೩೮೩॥ ಯಾರು ಪೂಜಾವಿಧಾನವನ್ನು ಸಾಧಿಸುವನೋ, ಆತನು ಸತ್ಯಲೋಕವನ್ನು ಸೇರುವನು. ಮತ್ತು ಈ ಮೂರೂ ಕಾರ್ಯಗಳನ್ನು ಯಾವನು ಸಾಧಿಸುವನೋ, ಆತನಿಗೆ ನನ್ನ ಸಮಾನವಾದ ಐಶ್ವರ್ಯವು ಪ್ರಾಪ್ತವಾಗುವುದು ।೩೮೪॥ ಹೀಗೆ ಈ ಮೂರೂ ಪ್ರಕಾರದ ಸಾಧಕರು ಮನಃಪೂರ್ವಕವಾಗಿ ಸಕಾಮರಾಗಿರುವುದರಿಂದ ಅವರು ತಮ್ಮ ಇಚ್ಛಿತ ಲೋಕಗಳಿಗೆ ಅವಶ್ಯವಾಗಿ ಹೋಗುವರು ।೩೮೫॥

ಪೂರ್ಣ ಸಾಂಗತ ॥೩೮೬॥

ಮಾಮೇವ ನೈರಪೇಕ್ಷೇಣ ಭಕ್ತಿಯೋಗೇನ ಏಂದತಿ । ಭಕ್ತಿಯೋಗಂ ಸ ಲಭತೇ ಏವಂ ಯಃ ಪೂಜಯೇತ ಮಾಮ್ ॥೫೩॥

ಅರ್ಥ:- ನಿಷ್ಕಾಮ ಭಾವದಿಂದ ನನ್ನ ಪೂಜೆಯನ್ನು ಮಾಡುವವನಿಗೆ ಭಕ್ತಿಯೋಗವು ಪ್ರಾಪ್ತವಾಗುವುದು. ಮತ್ತು ಆ ನಿರಪೇಕ್ಷ ಭಕ್ತಿಯೋಗದ ಮುಖಾಂತರ ಆತನು ಸ್ವಯಂ ನನ್ನನ್ನು ಪಡೆದುಕೊಳ್ಳುವನು.

ಮಜ ಮುಖ್ಯತ್ವೇ ಜೇವೀ ಧರೂನ । ಜ್ಯಾಸೀ ಮಾಝೇ ನಿಷ್ಕಾಮ ಭಜನ । ನಿಷ್ಕಾಮತಾ ಜೇ ಅನನ್ಯ । ತೇ ಪುರುಷ ಜಾಣ ಮೀ ಹೋತೀ ॥೩೮೭॥ ತೋ ವರ್ತಮಾನ ದೇಹೀ ಅಸತಾ । ಮಾಝೇ ನಿಜರೂಪ ಹೋಯ ತತ್ತ್ವತಾ । ತ್ಯಾ ಆಮ್ಹಾ ಆಂತೌತಾ । ಭೇದ ಸರ್ವಥಾ ಅಸೇನಾ ॥೩೮೮॥ ಕರಿತಾ ನಿಷ್ಕಾಮ ಭಜನ । ಭಕ್ತ ಝಾಲಾ ಮಜಸಮಾನ । ''ಸಮಾನ'' ಮ್ಹಣಾವಯಾ ಜಾಣ । ವೇಗಳೇಪಣ ಅಸೇನಾ ॥೩೮೯॥ ಏವಂ ಭಕ್ತ ತೋ ಮಜಭೀತರೀ । ಮೀ ಭಕ್ತಾ ಆಂತಬಾಹೇರೀ । ಐಸೇ ಮಿಳಾಲೇ ಪರಸ್ಪರೀ । ನಿಜಭಕ್ತಜನಾವರೀ ನಾಂದತ ॥೩೯೦॥ ಗೂಳ ಜೇವೀ ಗೋಡಿಯೇಸೀ । ಕಾ ಕಲ್ಲೋಳ ಜೈಸಾ ಸಾಗರಾಸೀ । ಐಶಿಯಾ ನಿಜಭಕ್ತೀಪಾಶೀ । ಆಮ್ಹಾ ತಯಾಂಸೀ ರಹಿವಾಸು ॥೩೯೧॥ ಐಶೀ ನಿಷ್ಕಾಮ ಜೋ ಭಕ್ತಿ ಕರೀ । ತೋ ಧನ್ಯ ಧನ್ಯ ಚರಾಚರೀ । ಜೋ ದೇವಾದ್ವಿಜಾಂಚೀ ವೃತ್ತಿ ಹರೀ । ತೋ ಪಚೇ ಅಘೋರೀ ತೇ ಐಕ ॥೩೯೨॥

ಯಃ ಸ್ವದತ್ತಾಂ ಪರೈರ್ದತ್ತಾಂ ಹರೇತ ಸುರವಿಪ್ರಯೋಃ । ವೃತ್ತಿಂ ಸ ಜಾಯತೇ ಏಡ್ ಭುಗ್ ವರ್ಷಾಣಾಮಯುತಾಯುತಮ್ ॥೫೪॥
ಕರ್ತುಶ್ಚ ಸಾರಥೇರ್ಹೇತೋರನುಮೋದಿತುರೇವ ಚ । ಕರ್ಮಣಾಂ ಭಾಗಿನಃ ಪ್ರೇತ್ಯ ಭೂಯೋ ಭೂಯಸೀ ತತ್ಫಲಮ್ ॥೫೫॥

ಅರ್ಥ:- ಯಾವನು ದೇವ, ಬ್ರಾಹ್ಮಣರಿಗೆ ಸ್ವತಃ ತಾನು ಕೊಟ್ಟ ಅಥವಾ ಬೇರೆಯವರು ಕೊಟ್ಟ ವೃತ್ತಿಯ ಅಪಹರಣವನ್ನು ಮಾಡುವನೋ, ಅವನು ಅನೇಕ ವರ್ಷಗಳವರೆಗೆ ಮಲಭಕ್ಷಣೆ ಮಾಡುವ ಹುಳವಾಗಿರುವನು. ಆತನಿಗೆ ಸಹಾಯ ಮಾಡುವವನು, ಪ್ರೇರಣೆ, ಅನುಮೋದನೆ ಮಾಡುವವನು ಇವರಿಗೂ ಕೂಡ ಮರಣೋತ್ತರದಲ್ಲಿ ಅದೇ ಫಲವು ಪ್ರಾಪ್ತವಾಗುವುದು. ಕಾರಣ ಇವರು ಆ ಕರ್ಮದ ಭಾಗೀದಾರರಾಗಿರುವರು. ಆದ್ದರಿಂದ ಇವರ ಅಧಿಕವಾದ ಸಹಕಾರಗಳಿಂದ ಪರಲೋಕದಲ್ಲಿ ಅಧಿಕವಾಗಿಯೇ ಫಲಪ್ರಾಪ್ತವಾಗುತ್ತಿರುವುದು.

ಜೋ ದೇವಾಲಯಾಚೀ ವೃತ್ತಿ ಹರೀ । ಜೋ ಬ್ರಾಹ್ಮಣವೃತ್ತೀಚಾ ಲೋಪ ಕರೀ । ತೋ ಅಯುತಾಯುತವರ್ಷಸಹಸ್ರೀ । ಯೋನಿ ಸುಕರೀ ವಿಷ್ಠಾ ಭೋಗೀ ॥೩೯೩॥ ಜೋ ದ್ವಿಜದೇವಾಂಚೀ ವೃತ್ತಿ ಹರಿ । ತ್ಯಾಸೀ ಜೋ ಹೋಯ ಸಹಕಾರೀ । ಕಾ ಜೋ ಅನುಮೋದನ ಕರೀ । ತೇ ತಿಘೇ ಅಘೋರೀ । ಪಚಿಜೇತೀ ॥೩೯೪॥

ತೇ ಜನ್ಮ ಮರಣಾಂಚ್ಯಾ ಆವರ್ತೀ । ತೇಚಿ ಫಳ ಪುಢತಪುಢತೀ । ಮರಮರೋನಿ ಗಾ ಭೋಗಿತೀ । ಜಾಣ ನಿಶ್ಚಿತೀ

ಆದರೆ ನಿಷ್ಕಾಮ ಭಕ್ತರಾದ ಇವರಿಗೆ ಯಾವುದರ ಪ್ರಾಪ್ತಿಯಾಗುವುದೆಂಬ ಅದರ ಲಕ್ಷಣವನ್ನು ಅತ್ಯಂತ ಆದರದಿಂದ ಮತ್ತು ಆನಂದದಿಂದ ಶ್ರೀಕೃಷ್ಣನು ಹೇಳುತ್ತಿರುವನು ॥೩೮೬॥

ಅಂತಃಕರಣದಲ್ಲಿ ನನ್ನ ಚಿಂತನೆಯನ್ನು ಮಾಡುತ್ತ ಯಾರು ನಿಷ್ಕಾಮ ಭಜನೆಯನ್ನು ಮಾಡುವರೋ ಅವರು ನನ್ನಲ್ಲಿ ಅನನ್ಯರಾಗಿರುವರು. ಈ ಭಕ್ತರು ನನ್ನಲ್ಲಿ ಐಕ್ಯವನ್ನು ಹೊಂದುವರು ॥೩೮೭॥ ಇವರು ಈ ದೇಹದಲ್ಲಿದ್ದರೂ ಕೂಡ ಆತ್ಮಸ್ವರೂಪದಿಂದ ನನ್ನಲ್ಲಿ ಬಂದು ಕೂಡಿಕೊಳ್ಳುವರು. ಅವರ ಮತ್ತು ನನ್ನಲ್ಲಿ ಸ್ವಲ್ಪವೂ ಕೂಡ ಭೇದವು ಉಳಿದುಕೊಳ್ಳುವುದಿಲ್ಲ ॥೩೮೮॥ ನಿಷ್ಕಾಮ ಭಜನೆಯನ್ನು ಮಾಡುವುದರಿಂದ ಭಕ್ತನು ನನ್ನ ಸಮಾನನಾಗುವನು. ಸಮಾನನು ಎನ್ನುವ ಕಾರಣ ಆತನಲ್ಲಿ ಮತ್ತು ನನ್ನಲ್ಲಿ ಯಾವ ಭೇದವೂ ಇರುವುದಿಲ್ಲ ॥೩೮೯॥ ಈ ಪ್ರಕಾರವಾಗಿ ಭಕ್ತನು ನನ್ನಲ್ಲಿ ಇರುವನು ಮತ್ತು ನಾನು ಭಕ್ತನ ಒಳಹೊರಗೆ ವ್ಯಾಪಿಸಿಕೊಂಡಿರುವೆನು. ಹೀಗೆ ಪರಸ್ಪರರಲ್ಲಿ ಐಕ್ಯವನ್ನು ಪಾಲಿಸುತ್ತ ನಾವು ವರ್ತಿಸುತ್ತಿರುವೆವು ॥೩೯೦॥ ಯಾವ ಪ್ರಕಾರವಾಗಿ ಬೆಲ್ಲ ಮತ್ತು ಸಿಹಿ ಅಭಿನ್ನವಾಗಿರುವುದೋ, ತೆರೆ ಮತ್ತು ಸಮುದ್ರ ಭಿನ್ನವಾಗಿರುವುದಿಲ್ಲವೋ, ಅದೇ ಪ್ರಕಾರವಾಗಿ ಭಕ್ತ ಮತ್ತು ನಾನು ಅಭೇದರೂಪದಿಂದ ಇರುವೆವು ॥೩೯೧॥ ಈ ಪ್ರಕಾರವಾಗಿ ಯಾರು ನಿಷ್ಕಾಮ ಭಕ್ತಿಯನ್ನು ಮಾಡುವರೋ, ಅವರು ಈ ಚರಾಚರದಲ್ಲಿ ಧನ್ಯ ಧನ್ಯರಾಗಿರುವರು. ದೇವ, ಬ್ರಾಹ್ಮಣರ ವ್ಯವಸ್ಥೆಗಾಗಿ ಕೊಟ್ಟ ಉತ್ಪನ್ನದ ಅಪಹರಣವನ್ನು ಮಾಡುವವನು ನರಕದಲ್ಲಿ ಹೋಗಿ ಬೀಳುವನು. ಈಗ ಆ ವೃತ್ತಾಂತವನ್ನು ಕೇಳು ॥೩೯೨॥

ಯಾವನು ದೇವಾಲಯದ ಉತ್ಪನ್ನವನ್ನು ಆಪಹರಿಸುವನೋ, ಮತ್ತು ಬ್ರಾಹ್ಮಣನ ಸಂಬಳವನ್ನು ಲೋಪ ಮಾಡುವನೋ, ಅವನು ಕೋಟ್ಯಾವಧಿ ವರ್ಷಗಳವರೆಗೆ ಹಂದಿಯ ಜನ್ಮಕ್ಕೆ ಹೋಗಿ ಮಲವನ್ನು ತಿನ್ನುತ್ತಿರುವನು ॥೩೯೩॥ ದೇವ ಬ್ರಾಹ್ಮಣರ ವೃತ್ತಿಯ ಅಪಹರಿಸಲಿಕ್ಕೆ ಯಾವನು ಸಹಾಯವನ್ನು ಮಾಡುವನೋ, ತನ್ನ ಅನುಮೋದನೆಯನ್ನು ಕೊಡುವನೋ ಈ ಮೂವರೂ ಕೂಡ ಅಘೋರವಾದ ನರಕದಲ್ಲಿ ಬೀಳುವರು ॥೩೯೪॥

ಉದ್ಧವಾ ॥೯೫॥ ಮಾಝೀ ಪ್ರಾಪ್ತೀಚೀ ಚಾಡ ಚಿತ್ತಾ । ತರೀ ನಾತಳಾವೀ ಅಧರ್ಮತಾ । ಅಧರ್ಮವಂತಾಚೀ ಕಥಾ । ಸ್ವಭಾವೇ ಸರ್ವಥಾ ನ ಕರಾವೀ ॥೯೬॥ ನ ದೇಖಾವೇ ದೋಷದರ್ಶನ । ನ ಬೋಲಾವೇ ಮರ್ಮ ಸ್ಪರ್ಶನ । ಭೂತಮಾತ್ರಾಂಚಾ ದ್ವೇಷ ಜಾಣ । ಸರ್ವಥಾ ಆಪಣ ನ ಕರಾವಾ ॥೯೭॥ ನಾಯಕಾವೀ ಪರನಿಂದಾ । ನ ಬೋಲಾವೇ ಪರಾಪವಾದಾ । ಅಧರ್ಮಾಚಿಯಾ ಸಂವಾದಾ । ಕೋಣಾಸೀ ಕದಾ ನ ಮಿಳಾವೇ ॥೯೮॥ ತ್ರಿಲೋಕೀಂಚೇ ಪಾಪ ಅಸಕೇ । ಜ್ಯಾಸ ಘೇಣೇ ಅಸೇಲ ಆವಶ್ಯಕೇ । ತ್ಯೆ ಸಾಧುನಿಂದಾ ನಿಜಸುಖೇ । ಯಥಾಸುಖೇ ಕರಾವೀ ॥೯೯॥ ಸಕಳ ದುಃಖಾಚಿಯಾ ರಾಶೀ । ಅವಶ್ಯ ಯಾವ್ಯಾ ಮಜಪಾಶೀ । ಐಸೀ ಆವಡೀ ಜ್ಯಾಚೇ ಮಾನಸೀ । ತೇಣೇ ಬ್ರಹ್ಮದ್ವೇಷಾಸೀ ಕರಾವೇ ॥೧೦೦॥ ಸಕಳ ಕಾಳ ವೃಥಾ ಜಾವಾ । ಐಸೇ ಆವಡೇ ಜ್ಯಾಚೇ ಜೀವಾ । ತೇಣೇ ಸಾರಿಪಾಟಾದಿ ಆಘವಾ । ಖೇಳ ಮಾಂಡಾವಾ ಅಹರ್ನಿಶೀ ॥೧೦೧॥ ಮೀ ಹೃದಯಸ್ಥ ಆತ್ಮಾರಾಮ । ಸ್ವತಃಸಿದ್ಧ ಪರಬ್ರಹ್ಮ । ತೋ ಮೀ ವ್ಹಾವಯಾ ದುರ್ಗಮ । ಅಧರ್ಮ ಕರ್ಮ ಜಗಾಸೀ ॥೧೦೨॥ ತೇ ನಿರ್ದಾಳಾವಯಾ ಕರ್ಮಾಕರ್ಮ । ಮರ್ಮ ಆಹೇ ಗಾ ಅತಿಸುಗಮ । ಅಖಂಡ ಸ್ಮರಾವೇ ರಾಮನಾಮ । ಪುರುಷೋತ್ತಮ ಅಚ್ಯುತ ॥೧೦೩॥ ಜೇಥೇ ಹರಿನಾಮಾಚಾ ಗಜರ । ತೇಥ ಕರ್ಮಾಕರ್ಮಾಚೇ ಸಂಭಾರ । ಜಾಳೂನಿ ನುರವೀ ಭಸ್ಮಸಾರ । ಐಸೇ ನಾಮ ಪವಿತ್ರ ಹರೀಚೇ ॥೧೦೪॥ ನಾಮ ನಿರ್ದಳೀ ಪಾಪ ಸಮಸ್ತ । ಹೇ ಸಕಳಶಾಸ್ತ್ರಸಂಮತ । ಜೋ ವಿಕಲ್ಪ ಮಾನೀ ಏಥ । ತೋ ಜಾಣ ನಿಶ್ಚಿತ ವಜ್ರಪಾಪೀ ॥೧೦೫॥ ವಜ್ರಪಾಪಾಚೇ ಪರ್ವತ । ನಿರ್ದಳೀ ಶ್ರೀಮಹಾಭಾಗವತ । ತೇ ಜನಾರ್ದನ ಕೃಪಾ ಏಥ । ಝಾಲೇ ಪ್ರಾಪ್ತ ಅನಾಯಾಸೇ ॥೧೦೬॥ ತೇ ಭಾಗವತೀಂಚಾ ಪಾಹತಾ ಅರ್ಥ । ಹರಿಚೇ ನಾಮ ಅತಿಸಮರ್ಥ । ವರ್ಣಿಲೇಸೇ ಪರಮಾದ್ಭುತ । ಸ್ವಮುಖೇ ಅಚ್ಯುತ ಬೋಲಿಲಾ ॥೧೦೭॥ ಏಥಹೀ ಜೋ ವಿಕಲ್ಪ ಧರೀ । ತೋ ಅತಿಅಭಾಗ್ಯ ಸಂಸಾರೀ । ಮಹಾದುಃಖದೋಷ ಸಾಗರೀ । ವಿಕಲ್ಪೇಕರೀ ಬುಡಾಲಾ ॥೧೦೯॥

ಸಂಕಲ್ಪವಿಕಲ್ಪೇಕರೀ ಜಾಣ । ಜನಾಂಸೀ ಝಾಲೇ ದೃಢ ಬಂಧನ । ತ್ಯಾ ಭವಬಂಧಾಚೇ ಭೇದನ । ಜನಾರ್ದನ

ಹೇ ಉದ್ಧವನೇ, ಇವರು ಜನ್ಮ ಮರಣದ ಆವರ್ತಿಯಲ್ಲಿ ಸಿಲುಕಿಕೊಂಡು ಇದೇ ಫಲವನ್ನು ಪುನಃ ಪುನಃ ಹುಟ್ಟುತ್ತ, ಸಾಯುತ್ತ ಭೋಗಿಸುತ್ತಲೇ ಇರುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೯೫॥ ನನ್ನ ಪ್ರಾಪ್ತಿಯ ಇಚ್ಛೆ ಇದ್ದರೆ ತಾನು ತನ್ನ ಮನಕ್ಕೆ ಅಧರ್ಮದ ಸ್ಪರ್ಶವನ್ನು ಮಾಡಕೂಡದು. ಸಹಜಾಸಹಜವಾಗಿಯೂ ಅಧರ್ಮ ಕಾರ್ಯಗಳ ಮಾತನ್ನೂ ಕೂಡ ನುಡಿಯಕೂಡದು ॥೯೬॥ ಯಾರ ದೋಷವನ್ನೂ ನೋಡಬಾರದು. ಯಾರನ್ನೂ ಮನನೋಯುವ ಭಾಷಣವನ್ನು ಮಾಡಬಾರದು ಹಾಗೂ ಪ್ರಾಣಿಮಾತ್ರರ ದ್ವೇಷವನ್ನು ಎಂದಿಗೂ ಮಾಡಬಾರದು ॥೯೭॥ ಬೇರೆಯವರ ನಿಂದೆಯನ್ನು ಕಿವಿಯಿಂದ ಎಂದಿಗೂ ಕೇಳುವಂತಿಲ್ಲ. ಅನ್ಯರ ದೋಷಗಳನ್ನು ಎಂದಿಗೂ ಉಚ್ಚರಿಸುವಂತಿಲ್ಲ. ಅಧರ್ಮದ ಭಾಷಣೆಯು ನಡೆಯುತ್ತಿದ್ದರೆ ಅಲ್ಲಿ ತಾನು ಏನೂ ಹೇಳುವಂತಿಲ್ಲ ॥೯೮॥ ತ್ರಿಭುವನದಲ್ಲಿನ ಸರ್ವ ಪಾಪಗಳನ್ನು ನಿಶ್ಚಯಪೂರ್ವಕವಾಗಿ ತನ್ನ ತಲೆಯ ಮೇಲೆ ತೆಗೆದುಕೊಳ್ಳುವುದಾದರೆ, ಆತನು ಸಾಧುಗಳ ನಿಂದೆಯನ್ನು ಮಾಡಬೇಕು ॥೯೯॥ ಸರ್ವ ದುಃಖಗಳ ರಾಶಿಯು ತನ್ನತ್ತ ಬರಬೇಕೆಂದು ತನ್ನ ಮನದಲ್ಲಿ ಅಪೇಕ್ಷೆ ಇದ್ದರೆ ಆತನು ಅವಶ್ಯವಾಗಿ ಬ್ರಾಹ್ಮಣರ ದ್ವೇಷವನ್ನು ಮಾಡಬೇಕು ॥೧೦೦॥ ತನ್ನ ಸರ್ವ ಕಾಲವು ವ್ಯರ್ಥ ಹಾಳಾಗಬೇಕೆಂದು ಯಾರಿಗೆ ಇಚ್ಛೆಯಾಗುವುದೋ ಆತನು ಹಗಲು ರಾತ್ರಿ ಚದುರಂಗದ ಆಟಗಳನ್ನು ಆಡಬೇಕು ॥೧೦೧॥ ಆತ್ಮಾರಾಮನಾದ ನಾನು ಸ್ವತಃ ಸಿದ್ಧ ಪರಬ್ರಹ್ಮನಾಗಿದ್ದರೂ ಪ್ರಾಪ್ತನಾಗದೇ ದುರ್ಗಮವಾಗಲು ಈ ಅಧರ್ಮವೇ ಕಾರಣವಾಗಿರುವುದು ॥೧೦೨॥ ಈ ಯಾವ ಕರ್ಮ, ಅಕರ್ಮಗಳು ಇಲ್ಲದಾಗುವಂತೆ ಮಾಡುವ ಮರ್ಮವು ಅತಿಶಯವಾಗಿ ಸುಲಭವಾಗಿರುವುದು. ''ಪುರುಷೋತ್ತಮ, ಅಚ್ಯುತ, ರಾಮ-ರಾಮ'' ಹೀಗೆ ಅಖಂಡವಾಗಿ ನಾಮಸ್ಮರಣೆಯನ್ನು ಮಾಡುತ್ತಿರಬೇಕು ॥೧೦೩॥ ಹರಿನಾಮಸ್ಮರಣೆಯ ಬಹು ದೊಡ್ಡ ಗರ್ಜನೆಯು ಎಲ್ಲಿ ನಡೆಯುವುದೋ, ಅಲ್ಲಿ ಕರ್ಮಾಕರ್ಮದ ರಾಶಿಯು ಪರಿಪೂರ್ಣವಾಗಿ ನಷ್ಟವಾಗುವುದು. ಅಲ್ಲಿ ಸುಟ್ಟಬೂದಿಯು ಚಿಮುಟಿಯಷ್ಟೂ ಕೂಡ ಉಳಿಯುವುದಿಲ್ಲ. ಇಷ್ಟೊಂದು ಶ್ರೀಹರಿಯ ನಾಮವು ಪವಿತ್ರವಾಗಿರುವುದು ॥೧೦೪॥ ಶ್ರೀಹರಿಯ ನಾಮವು ಸರ್ವ ಪಾಪಗಳನ್ನು ನಾಶಪಡಿಸುವುದು. ಇದು ಸರ್ವಶಾಸ್ತ್ರ ಸಂಮತವಾಗಿರುವುದು. ಹೀಗಿದ್ದರೂ ಕೂಡ ಈ ವಿಷಯಕ್ಕೆ ಯಾವನು ಸಂಶಯವನ್ನು ಮಾಡುವನೋ ಅವನು ನಿಜವಾಗಿಯೂ ವಜ್ರಪಾಪಿ ಎಂದು ತಿಳಿಯಬೇಕು ॥೧೦೫॥ ಇಂತಹ ವಜ್ರಪಾಪದ ಪರ್ವತವನ್ನೂ ಸಹ ಶ್ರೀಮಹಾಭಾಗವತವು ಭಸ್ಮಮಾಡಿಬಿಡುವುದು. ಶ್ರೀ ಜನಾರ್ದನಸ್ವಾಮಿಗಳವರ ಕೃಪೆಯಿಂದ ಇದು ನನಗೆ ಸಹಜವಾಗಿ ಪ್ರಾಪ್ತವಾಯಿತು ॥೧೦೬॥ ಭಾಗವತದ ಅರ್ಥವನ್ನು ಅವಲೋಕಿಸಲು ಅದರಲ್ಲಿ ಹರಿನಾಮದ ಪರಮಾದ್ಭುತ ಸಾಮರ್ಥ್ಯದ ವರ್ಣನೆಯನ್ನು ಮಾಡಿರುವುದು ತೋರುವುದು. ಇದನ್ನು ಸ್ವತಃ ಶ್ರೀಹರಿಯು ಸ್ವಮುಖದಿಂದ ಹೇಳಿರುವನು ॥೧೦೭॥ ಈ ವಿಷಯಕ್ಕೆ ಯಾವನು ವಿಕಲ್ಪವನ್ನು ಧರಿಸುವನೋ ಅವನು ಸಂಸಾರದಲ್ಲಿ ಅತ್ಯಂತ ದುರ್ಭಾಗ್ಯನಾಗಿರುವನು. ವಿಕಲ್ಪದಿಂದ ಮಹಾದೋಷದ ದುಃಖಸಾಗರದಲ್ಲಿ ಅವನು ಮುಳುಗಿಹೋಗುವನು ॥೧೦೯॥

ನಿಜನಾಮ ।।೧೦೯।। ಜನಾರ್ದನಾಚೇ ನಿಜನಾಮ। ನಿರ್ದಳೀ ಭವಭಯ ಪರಮ । ತೇ ನಾಮ ಸ್ಮರೇ ಜೋ ಸಪ್ರೇಮ । ತೋ ಪುರುಷೋತ್ತಮ ಸ್ವಯೇ ಹೋಯ ।।೧೧೦।। ಸ್ವಯೇ ಹೋಣೇ ಬ್ರಹ್ಮ ಪೂರ್ಣ । ಯೇ ಅರ್ಥೀಚೇ ಗೋಡ ನಿರೂಪಣ । ಅಠ್ಠಾವೀಸಾವೇ ಅಧ್ಯಾಯೀ ಜಾಣ । ಉದ್ಧವಾ ಶ್ರೀಕೃಷ್ಣ ಸಾಂಗೇಲ ।।೧೧೧।। ತೇ ಕಥಾ ಜ್ಯೆ ಶ್ರವಣೇ ಪಡೇ । ತ್ಯೆ ಜೀವೀ ಸ್ವಯಂಭ ಸುಖ ವಾಢೇ । ಮಗ ಆಂತಬಾಹೇರ ದೋಹೀಕಡೇ । ಕರೀ ವಾಡೇಕೋಡೇ ಸಮಸಾಮ್ಯ ।।೧೧೨।। ಜೇ ಕಥೇಚೇ ಗೋಡಪಣ । ಜೀವ ಗೇಲ್ಯಾ ನ ಸೋಡೀ ಜಾಣ । ಐಸೇ ರಸಾಳ ನಿರೂಪಣ । ಉದ್ಧವಾಸೀ ಶ್ರೀಕೃಷ್ಣ ಸಾಂಗೇಲ ।।೧೧೩।। ಶ್ರವಣೇ ಉಪಜೇ ಬ್ರಹ್ಮಭಾವೋ । ತೋ ಹಾ ಅಠ್ಠಾವಿಸಾವಾ ಅಧ್ಯಾವೋ । ಉದ್ಧವಾಸೀ ದೇವಾಧಿದೇವೋ । ನಿಜಕೃಪೇ ಪಹಾ ಹೋ ಸಾಂಗೇಲ ।।೧೧೪।। ಅಕ್ಷರೇ ಭರೋನಿ ಅಕ್ಷರರಸೀ । ದೇವ ಸಾಂಗೇಲ ಉದ್ಧವಾಸೀ । ತೇ ನಿರೂಪಣ ಅಠ್ಠಾವಿಸಾವ್ಯಾಸೀ । ಬ್ರಹ್ಮಸುಖೇಸೀ ಲಗಡೇಲ ।।೧೧೫।। ಬ್ರಹ್ಮಸುಖಾಚೀ ಸಾಂಠವಣ । ತೋ ಹಾ ಅಠ್ಠಾವಿಸಾವಾ ಜಾಣ । ತೇ ಉಘಡೂನಿಯಾ ಊಣಖೂಣ । ಉದ್ಧವಾಸೀ ಶ್ರೀಕೃಷ್ಣ ಸಾಂಗೇಲ ।।೧೧೬।। ತೇ ಕೃಷ್ಣ ಉದ್ಧವನಿಜಜ್ಞಾನ । ಏಕಾ ವಿನವೀ ಜನಾರ್ದನ । ತುಮಚೇ ಕೃಪೇಕರೂನಿ ಪೂರ್ಣ । ಶ್ರೋತಾ ಅವಧಾನ ಮಜ ದ್ಯಾವೇ ।।೧೧೭।। ಶ್ರೋತಾ ದೀಧಲ್ಯಾ ಅವಧಾನ । ಗ್ರಂಥೀ ಉಲ್ಲಾಸೇ ನಿರೂಪಣ । ಏಕಾ ಜನಾರ್ದನಾ ಶರಣ । ಶಿರೀ ಶ್ರೀಚರಣ ವಂದಿಲೇ ।।೧೧೮।।

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ
ಏಕಾಕಾರಟೀಕಾಯಾಂ ಸಪ್ತವಿಂಶೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಸಂಕಲ್ಪ ಮತ್ತು ವಿಕಲ್ಪಗಳಿಂದಲೇ ಜನರಿಗೆ ದೃಢಬಂಧನೆಯು ಪ್ರಾಪ್ತವಾಗಿರುವುದು. ಹೀಗೆ ಇದನ್ನು ನೀನು ತಿಳಿ. ಈ ಸಂಸಾರ ಬಂಧನೆಯನ್ನು ಛೇದಿಸುವುದಕ್ಕಾಗಿ ಶ್ರೀ ಜನಾರ್ದನರ ನಾಮವು ಸಮರ್ಥವಾಗಿರುವುದು ।।೧೦೯।। ಈ ಯಾವ ಜನಾರ್ದನರ ನಾಮವು ದಾರುಣವಾದ ಭವಭಯವನ್ನು ಇಲ್ಲದಾಗಿ ಮಾಡುವುದು. ಈ ನಾಮವನ್ನು ಯಾರು ನಿತ್ಯದಲ್ಲಿಯೂ ಸ್ಮರಿಸುವರೋ, ಅವರು ಸ್ವತಃ ಪುರುಷೋತ್ತಮ ರೂಪರಾಗುವರು ।।೧೧೦।। ಭಕ್ತನು ಸ್ವತಃ ಪೂರ್ಣಬ್ರಹ್ಮ ಹೇಗಾಗುವನು ಎಂಬ ಈ ಅಮೃತ ಮಧುರವಾದ ನಿರೂಪಣೆಯನ್ನು ಮುಂದಿನ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ।।೧೧೧।। ಈ ಕಥೆಯು ಕಿವಿಗಳಿಗೆ ಬಿದ್ದಾಕ್ಷಣವೇ ಜೀವಕ್ಕೆ ನಿರುಪಾಧಿಕ ಸುಖವು ಪ್ರಾಪ್ತವಾಗುವುದು ಮತ್ತು ಒಳಹೊರಗೆ ಆತನು ಸಾಮ್ಯದಿಂದ ತುಂಬಿಕೊಂಡು ಇರುವನು ।।೧೧೨।। ಈ ಯಾವ ಕಥೆಯ ರುಚಿಯನ್ನು ಪ್ರಾಣ ಹೋದರೂ ಬಿಡಲಿಕ್ಕೆ ಆಗುವುದಿಲ್ಲ. ಇಷ್ಟೊಂದು ರಸಾಳ ನಿರೂಪಣೆಯನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ।।೧೧೩।। ಇದನ್ನು ಕೇಳಿದಾಕ್ಷಣವೇ ಬ್ರಹ್ಮಭಾವವು ನಿರ್ಮಾಣವಾಗುವುದು. ಇಂತಹ ಇಪ್ಪತ್ತೆಂಟನೆಯ ಅಧ್ಯಾಯವನ್ನು ದೇವಾಧಿದೇವನಾದ ಶ್ರೀಕೃಷ್ಣನು ನಿಜಕೃಪೆಯಿಂದ ಉದ್ಧವನಿಗೆ ಹೇಳುವನು ।।೧೧೪।। ಪ್ರತಿಯೊಂದು ಅಕ್ಷರಗಳು ಅಕ್ಷರರಸದಿಂದ ತುಂಬಿ ದೇವನು ಉದ್ಧವನಿಗೆ ಹೇಳುವನು. ಈ ಇಪ್ಪತ್ತೆಂಟನೆಯ ಅಧ್ಯಾಯದ ನಿರೂಪಣೆಯು ಬ್ರಹ್ಮಸುಖದಿಂದ ಪರಿಪೂರ್ಣವಾಗಿರುವುದು ।।೧೧೫।। ಈ ಇಪ್ಪತ್ತೆಂಟನೆಯ ಅಧ್ಯಾಯವೆಂದರೆ ಇದು ಬ್ರಹ್ಮಸುಖದ ಸಂಗ್ರಹವಾಗಿರುವುದು. ಇದನ್ನು ಸರಿಯಾಗಿ ವಿವರಿಸಿ ಅದರಲ್ಲಿನ ಅರ್ಥವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ।।೧೧೬।। ಇದು ಶ್ರೀಕೃಷ್ಣ ಉದ್ಧವರ ನಿಜಜ್ಞಾನವಾಗಿರುವುದು. ಏಕನಾಥನು ಶ್ರೀಜನಾರ್ದನಸ್ವಾಮಿಯವರಲ್ಲಿ ಈ ರೀತಿಯಾಗಿ ವಿನಂತಿಸುವನು ; ನಿಮ್ಮ ಕೃಪೆಯಿಂದ ಶ್ರೋತೃಗಳವರು ಇದರತ್ತ ತಮ್ಮ ಲಕ್ಷವನ್ನು ಕೊಡುವಂತಾಗಬೇಕು ।।೧೧೭।। ಶ್ರೋತೃಗಳವರು ಲಕ್ಷವನ್ನು ಕೊಟ್ಟರೆ ಗ್ರಂಥದಲ್ಲಿನ ನಿರೂಪಣೆಯ ಉತ್ಸಾಹವು ಬೆಳೆಯುತ್ತ ಸಾಗುವುದು. ಆದ್ದರಿಂದ ಶ್ರೀಜನಾರ್ದನರಿಗೆ ಏಕನಾಥನು ಪೂರ್ಣ ಶರಣಾಗಿ ಅವರ ಚರಣಗಳಲ್ಲಿ ವಂದನೆಯನ್ನು ಮಾಡುವನು ।।೧೧೮।।

ಇತಿ ಶ್ರೀಮದ್ಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣೋದ್ಧವಸಂವಾದದ ಏಕನಾಥ ಮಹಾರಾಜರ
ಭಾಷ್ಯೆಯ ಇಪ್ಪತ್ತೇಳನೆಯ ಅಧ್ಯಾಯವು ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೆಂಟನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಜಯ ಜಯ ಸದ್ಗುರು ಪರಮು । ಜಯ ಜಯ ಸದ್ಗುರು ಪುರುಷೋತ್ತಮ । ಜಯ ಜಯ ಸದ್ಗುರು ಪರಬ್ರಹ್ಮ । ಬ್ರಹ್ಮಾ ಬ್ರಹ್ಮನಾಮ ತುಝೇನಿ ॥೧॥ ಜಯ ಜಯ ಸದ್ಗುರು ಚಿ ದೈಕಸ್ಫೂರ್ತೀ । ಜಯ ಜಯ ಸದ್ಗುರು ಚಿದಾತ್ಮ ಜ್ಯೋತಿ । ಜಯ ಜಯ ಸದ್ಗುರುಚಿನ್ಮೂರ್ತೀ । ಮೂರ್ತಾಮೂರ್ತೀ ಚಿದ್ರೂಪ ॥೨॥ ಜಯ ಜಯ ಸದ್ಗುರು ಸತ್‌ಕ್ಷೇತ್ರಾ । ಜಯ ಜಯ ಸದ್ಗುರು ಸತ್ಪಾತ್ರಾ । ಜಯ ಜಯ ಸದ್ಗುರು ಸನ್ಮಾತ್ರಾ । ಸದೈಕಾಕ್ಷರಾ ಸದ್ರೂಪಾ ॥೩॥ ಜಯ ಜಯ ಸದ್ಗುರು ಸ್ವಾನಂದಮಾನ । ಜಯ ಜಯ ಸದ್ಗುರು ಸ್ವಾನಂದಪೂರ್ಣ । ಜಯ ಜಯ ಸದ್ಗುರು ಸ್ವಾನಂದಘನ । ಆನಂದಾ ಗೋಡಪಣ ತುಝೇನೀ ॥೪॥ ಜಯ ಜಯ ಸದ್ಗುರುದೇವಅಗ್ರಣೀ । ಜಯ ಜಯ ದೇವಶಿರೋಮಣೀ । ಸಕಳ ದೇವ ಲಾಗತೀ ಚರಣೀ । ದೇವಚೂಡಾಮಣೀ ಗುರುರಾಯಾ ॥೫॥ ಜಯ ಜಯ ಜೀವಾದಿಜೀವಾ । ಜಯ ಜಯ ಶಿವಾದಿಶಿವಾ । ಜಯ ಜಯ ದೇವಾದಿದೇವಾ । ಜಯ ಜಯ ಅಭಿನವಾ ಗುರುರಾಯಾ ॥೬॥ ಜಯ ಜಯ ಸದ್ಗುರು ಸುಖಸಂಪನ್ನಾ । ಜಯ ಜಯ ಸದ್ಗುರು ಸುಖನಿಧಾನಾ । ಜಯ ಜಯ ಸುಖೈಕಘನಾ । ಸುಖಾ ಸುಖಪಣಾ ತುಝೇನಿ ॥೭॥ ತುಝೇನಿ ಸುಖಾ ನಿಜಸುಖ ಘಡೇ । ತುಝೇನಿ ಬೋಧಾ ನಿಜಬೋಧ ಆತುಡೇ । ತುಝೇನಿ ಬ್ರಹ್ಮಾ ಬ್ರಹ್ಮತ್ವ ಜೋಡೇ । ತುಝೇನಿ ಪಡಿಪಾಡೇ ತೂ ಏಕೂ ॥೮॥ ಐಸಾ ಶ್ರೀಗುರು ತೂ ಅನಂತ । ತುಝ್ಯಾ ಸ್ವರೂಪಾಸೀ ನಾಹೀ ಅಂತ । ತೋ ತೂ ಹೋಊನಿ ಕೃಪಾಯುಕ್ತ । ನಿಜಸ್ವರೂಪ ಬೋಧಿತ ನಿಜಭಕ್ತಾ ॥೯॥ ಆಪುಲೇ ನಿಜರೂಪ ಬೋಧೂನ । ನುರವಿಶೀ ದೇವಭಕ್ತಪಣ । ತ್ಯಾಹೀವರೀ ನಿಜಭಜನ । ಅದ್ವಯೇ ಪೂರ್ಣ ಕರವಿಶೀ ॥೧೦॥

ಹೇ, ಪರಮ ಸದ್ಗುರುವೇ, ನಿನಗೆ ಜಯಜಯಕಾರವಾಗಲಿ, ಹೇ ಸದ್ಗುರು ಪುರುಷೋತ್ತಮನೇ, ನಿನಗೆ ಜಯ ಜಯಕಾರವಾಗಲಿ. ಹೇ ಸದ್ಗುರು ಪರಬ್ರಹ್ಮನೇ ನಿನಗೆ ಜಯಜಯಕಾರವಾಗಲಿ. ಬ್ರಹ್ಮಕ್ಕೆ ಬ್ರಹ್ಮ ಎಂಬ ನಾಮವು ನಿನ್ನಿಂದಲೇ ಪ್ರಾಪ್ತವಾಗಿರುವುದು ॥೧॥ ಚಿದೈಕ್ಯ ಸ್ಫೂರ್ತಿರೂಪ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ನೀನು ಜ್ಞಾನಾತ್ಮ ಜ್ಯೋತಿರೂಪನಾಗಿರುವೆ, ಹೇ, ಚಿನ್ಮೂರ್ತೀ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ಸರ್ವ ವಿಶ್ವದಲ್ಲಿ ಚಿದ್ರೂಪದಿಂದ ನೀನು ಪರಿಪೂರ್ಣವಾಗಿ ತುಂಬಿರುವೆ ॥೨॥ ಸತ್‌ಕ್ಷೇತ್ರೀ, ಸದ್ಗುರುರಾಯನೇ, ಸತ್ಪಾತ್ರಾ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ಹೇ ಸದೈಕಾಕ್ಷರಾ, ಸದ್ರೂಪಾ ಸನ್ಮಾತ್ರಾ, ನಿನಗೆ ಸದಾ ಜಯಜಯಕಾರವಾಗಲಿ ॥೩॥ ಹೇ ಸ್ವಾನಂದಮಾನ ಸದ್ಗುರುವೇ, ನಿನಗೆ ಜಯಜಯಕಾರವಾಗಲಿ. ಹೇ ಸ್ವಾನಂದದಿಂದ ಪರಿಪೂರ್ಣವಾಗಿರುವ ಸದ್ಗುರುವೇ, ನಿನಗೆ ಜಯಜಯಕಾರವಾಗಲಿ. ಸ್ವಾನಂದಘನ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ನಿನ್ನಿಂದಲೇ ಆನಂದಕ್ಕೆ ಆನಂದವು ಪ್ರಾಪ್ತವಾಗಿರುವುದು ॥೪॥ ಹೇ ದೇವತೆಗಳಲ್ಲಿ ಅಗ್ರಗಣ್ಯನಾಗಿರುವ ದೇವಶಿರೋಮಣಿಯೇ,ನಿನಗೆ ಜಯಜಯಕಾರವಾಗಲಿ. ಹೇ ದೇವಶ್ರೇಷ್ಠನೇ, ಸದ್ಗುರುರಾಜನೇ, ಸರ್ವ ದೇವತೆಗಳು ನಿನ್ನ ಚರಣಗಳಲ್ಲಿ ವಂದಿಸುತ್ತಿರುವರು ॥೫॥ ಹೇ ಜೀವಾದಿ ಜೀವನೇ, ನಿನಗೆ ಜಯಜಯಕಾರವಾಗಲಿ. ಹೇ ಶಿವಾದಿ ಶಿವನೇ, ನಿನಗೆ ಜಯಜಯಕಾರವಾಗಲಿ. ಹೇ ದೇವಾದಿದೇವನೇ ನಿನಗೆ ಜಯಜಯಕಾರವಾಗಲಿ. ಹೇ ಅಭಿನವ ಗುರುರಾಯನೇ, ನಿನಗೆ ಜಯಜಯಕಾರವಿರಲಿ ॥೬॥ ಸುಖಸಂಪನ್ನನೇ, ಸುಖನಿಧಾನನೇ, ಸುಖೈಕ್ಯಘನನಾದ ಸದ್ಗುರುವೇ, ನಿನಗೆ ಜಯಜಯಕಾರವಾಗಲಿ. ನಿಜವಾಗಿಯೂ ನಿನ್ನಿಂದಲೇ ಸುಖಕ್ಕೆ ಸುಖತ್ವವು ಪ್ರಾಪ್ತವಾಗುವುದು ॥೭॥ ನಿನ್ನ ಬೋಧದಿಂದಲೇ ಆತ್ಮಸುಖವು ಪ್ರಾಪ್ತವಾಗುವುದು. ಹಾಗೆಯೇ ಆತ್ಮಜ್ಞಾನದ ಲಾಭವಾಗುವುದು. ನಿನ್ನ ಯೋಗದಿಂದ ಯೋಗಿಗೆ ಬ್ರಹ್ಮತ್ವವು ಪ್ರಾಪ್ತವಾಗುವುದು. ನಿನ್ನಂತಹ ಸಮರ್ಥನು ನಿಜವಾಗಿಯೂ ನೀನೊಬ್ಬನೇ ಇರುವೆ ॥೮॥ ಹೇ ಸದ್ಗುರುರಾಯನೇ, ನಿಜವಾಗಿಯೂ ನೀನು ಅನಂತನಾಗಿರುವೆ, ನಿನ್ನ ಸ್ವರೂಪಕ್ಕೆ ಅಂತವೇ ಇಲ್ಲ. ನೀನು ಕೃಪೆಯ ಮಳೆಗರೆದು ನಿನ್ನ ಭಕ್ತರಿಗೆ ಆತ್ಮಸ್ವರೂಪದ ಬೋಧೆಯನ್ನು ಮಾಡುವೆ ॥೯॥ ನಿನ್ನ ಆತ್ಮಸ್ವರೂಪದ ಉಪದೇಶವನ್ನು ಮಾಡಿ ದೇವಭಕ್ತ ಎಂಬ ಈ ಭಾವವನ್ನು ಇಲ್ಲದಂತೆ ಮಾಡುವೆ. ಇದಲ್ಲದೇ ಅವರಿಂದ ಅದ್ವೈತಭಾವದಿಂದ ಆತ್ಮಭಜನೆಯನ್ನು ಮಾಡಿಸಿಕೊಳ್ಳುವೆ ॥೧೦॥

ಗಂಗಾ ಮಿಳೋನಿ ಸಾಗರೀ । ಮೀನಲೀ ತಳಪೇ ತಯಾವರೀ । ತೇವೀ ಭಕ್ತ ಮಿಳೋನಿ ತುಜಮಾಝಾರೀ । ತುಜ ಭಜನ ಕರೀ ತುಝೆನಿ ॥೧೧॥ ಅದ್ವಯ ಕರಿತಾ ತುಝೀ ಭಕ್ತೀ । ತೂ ಸಂತೋಷಸೀ ಯಥಾನಿಗುತೀ । ಸಂತೋಷೋನಿ ಶಿಷ್ಯಾಹಾತೀ । ನಿಜಾತ್ಮ ಸಂಪತ್ತೀ ಅರ್ಪಿಶೀ ॥೧೨॥ ಅರ್ಪೂನಿ ನಿಜಾತ್ಮ ಭರಭಾರ । ಶಿಷ್ಯ ಗುರುತ್ವೇ ಕರಿಶೀ ಥೋರ । ಹಾ ಅತಿಲಾಘವೀ ಚಮತ್ಕಾರ । ಅತರ್ಕ್ಯ ವಿಚಾರ ತರ್ಕೇನಾ ॥೧೩॥ ಜೇ ಅತರ್ಕ್ಯ ವೇದಶಾಸ್ತ್ರಾಂಸೀ । ಜ್ಯಾಲಾಗೀ ವೇದ ವಿವಾದಿತೀ ಅಹರ್ನಿಶೀ । ತೇ ತೂ ಕ್ಷಣಾರ್ಧೇ ಬೋಧಿಸೀ । ಸಚ್ಛಿಷ್ಯಾಸಿ ನಿಜಬೋಧೇ ॥೧೪॥ ತುಝ್ಯಾ ನಿಜಬೋಧಾಚೀ ಹಾತವಟೀ । ಪಢತಾ ವೇದವೇದಾಂತಕೋಟೀ । ತರೀ ಅಲಕ್ಷ್ಯ ಲಕ್ಷೇನಾ ದೃಷ್ಟೀ । ಸರ್ವಾರ್ಥೀ ಗೋಷ್ಟೀ ಅಗಮ್ಯ ॥೧೫॥ ಬಹುತ ಕಳಲೇ ಕಳಲೇ ಮ್ಹಣತೀ । ನಾನಾ ಪರೀಚ್ಯಾ ಯುಕ್ತಿ ಚಾಳಿತೀ । ಪರೀ ತೇ ನ ಕಳೋನಿ ವೋಸಣತೀ । ಜೇವೀ ಶುಕ ಬೋಲತೀ ಸುಭಾಷಿತೇ ॥೧೬॥ ಯಾಲಾಗೀ ತುಝೀ ಬೋಧಕಶಕ್ತೀ । ಅಗಮ್ಯ ಸರ್ವಾಶೀ ಸರ್ವಾರ್ಥೀ । ತುಝೀ ಲಾಧಲ್ಯಾ ಕೃಪಾಯುಕ್ತೀ । ಅಗಮ್ಯ ಪಾವತೀ ಸುಗಮತ್ವೇ ॥೧೭॥ ಜೇ ಅಗಮ್ಯ ಶ್ರೀಭಾಗವತ । ತ್ಯಾಹೀಮಾಜೀ ಏಕಾದಶಾರ್ಥ । ಪ್ರಾಕೃತ ಕರವಿಲಾ ಯಥಾರ್ಥ । ಬಾಪ ಸಮರ್ಥ ಕೃಪಾಳೂ ॥೧೮॥ ದಧಿ ಮಂಥೂನೀ ಸಮಸ್ತ । ಜೇವೀ ಮಾತಾ ಕಾಢೀ ನವನೀತ । ತೇ ಆಯಿತೇ ಬಾಳಕಾಹಾತೀ ದೇತ । ತೈಸೇ ಕೇಲೇ ಯೇಥ ಜನಾರ್ದನೇ ॥೧೯॥ ವೇದಶಾಸ್ತ್ರಾಂಚೇ ನಿಜಮಥಿತ । ವ್ಯಾಸೇ ಕಾಢಿಲೇ ಶ್ರೀಭಾಗವತ । ತ್ಯಾ ಭಾಗವತಾಚಾ ಮಥಿತಾರ್ಥ । ಜಾಣ ನಿಶ್ಚಿತ ಏಕಾದಶ ॥೨೦॥ ತ್ಯಾ ಏಕಾದಶಾಚೇ ಗೋಡಪಣ । ಸರ್ವಥಾ ನೇಣೇ ಮೀ ಆಪಣ । ತೇ ಜನಾರ್ದನೇ ಕರೂನಿ ಮಥನ । ಸಾರಾಂಶ ಪೂರ್ಣ ಮಜ ದೀಧಲಾ ॥೨೧॥ ತೋ ಸ್ವಭಾವೇ ಘಾಲಿತಾ ತೋಂಡೀ । ಲಾಗಲೀ ಏಕಾದಶಾಚೀ ಗೋಡೀ । ತ್ಯಾ ಗೋಡಪಣಾಚ್ಯಾ ಆವಡೀ । ಟೀಕಾ ಚಢೋವಢೀ ಚಾಲಿಲೀ ॥೨೨॥ ಯಾಲಾಗೀ ಏಕಾದಶಾಚೀ ಟೀಕಾ । ಏಕಲಾ ಕರ್ತಾ ನವ್ಹೇ ಏಕಾ । ಏಕೀ ಏಕ ಮಿಳೋನಿ ದೇಖಾ । ಗ್ರಂಥ ನೇಟಕಾ ನಿರ್ವಾಳಿಲಾ ॥೨೩॥ ಮಾಗೇಪುಢೇ ಏಕ ಏಕಾ । ಹೇ ಏಕದಶಾಚೇ ರೂಪ ದೇಖಾ । ತೇಣೇ ಏಕಪಣೇ ಚಾಲಿಲೀ ಟೀಕಾ । ಸಾಹ್ಯ ನಿಜಸಖಾ ಜನಾರ್ದನ ॥೨೪॥

ಗಂಗಾ ನದಿಯು ಸಮುದ್ರಕ್ಕೆ ಕೂಡಿದ ನಂತರ ಆಗ ಆಕೆಯು ಅದರ ಮೇಲೆ ಶೋಭಾಯಮಾನಳಾಗುವಳು. ಅದರಂತೆ ನಿನ್ನ ಭಕ್ತರು ನಿನ್ನಲ್ಲಿ ಕೂಡಿಕೊಂಡು ಏಕರೂಪರಾಗಿ ನಿನ್ನಿಂದಲೇ ನಿನ್ನ ಭಜನೆಯನ್ನು ಮಾಡುವರು ॥೧೧॥ ಐಕ್ಯಭಾವದಿಂದ ನಿನ್ನ ಭಕ್ತಿಯನ್ನು ಮಾಡಿದರೆ ನಿನಗೆ ಪರಮ ಸಂತೋಷವಾಗುವುದು. ಅದಕ್ಕಾಗಿ ನೀನು ಪ್ರಸನ್ನನಾಗಿ ಶಿಷ್ಯನಿಗೆ ನಿನ್ನ ಆತ್ಮಜ್ಞಾನದ ಸಂಪತ್ತನ್ನು ಅರ್ಪಿಸುವೆ ॥೧೨॥ ನೀನು ನಿನ್ನ ಶಿಷ್ಯನಿಗೆ ಆತ್ಮರೂಪದಿಂದ ಗುರುತ್ವವನ್ನು ಕೊಟ್ಟು ಆತನನ್ನು ಶ್ರೇಷ್ಠನನ್ನಾಗಿ ಮಾಡುವೆ. ಈ ನಿನ್ನ ಚಮತ್ಕಾರವು ಪರಮ ಆಶ್ಚರ್ಯಕಾರಕವಾಗಿದೆ. ಈ ಯಾವ ಅತರ್ಕ್ಯ ವಿಚಾರದಲ್ಲಿ ತರ್ಕವನ್ನು ಮಾಡಲು ಬರುವುದಿಲ್ಲ ॥೧೩॥ ಯಾವುದು ವೇದಶಾಸ್ತ್ರಗಳಿಗೂ ಕೂಡ ಅತರ್ಕ್ಯವಾಗಿರುವ, ಯಾವುದಕ್ಕಾಗಿ ವೇದವು ಹಗಲು ರಾತ್ರಿ ವಾದ ಮಾಡುತ್ತಿರುವ, ಹೀಗಿರುವ ಯಾವ ನಿನ್ನ ದಿವ್ಯಜ್ಞಾನವನ್ನು ಸತ್‌ಶಿಷ್ಯನಿಗೆ ಒಂದೇ ಕ್ಷಣದಲ್ಲಿ ಬೋಧಿಸುವೆ ॥೧೪॥ ವೇದವೇದಾಂತಗಳ ಕೋಟ್ಯಾವಧಿ ಪಠಣಗಳಿಂದ ನಿನ್ನ ಆತ್ಮಜ್ಞಾನದ ಪತ್ತೆಯು ಹತ್ತುವುದಿಲ್ಲ. ಹೀಗೆ ಅದು ಅಗಮ್ಯವಾಗಿರುವುದು. ಈ ಅಲಕ್ಷ್ಯ ವಸ್ತು ಲಕ್ಷಕ್ಕೆ ಬರುವುದಿಲ್ಲ. ಏಕೆಂದರೆ ಈ ಮಾತು ಅತ್ಯಂತ ಅಗಮ್ಯವಾಗಿರುವುದು ॥೧೫॥ ಬಹಳಷ್ಟು ಜನರು ನಮಗೆ ಆತ್ಮಜ್ಞಾನವು ತಿಳಿದಿದೆ, ತಿಳಿಯಿತು ಎಂದು ಹೇಳಿಕೊಳ್ಳುವರು. ಅನೇಕ ಪ್ರಕಾರದ ಯುಕ್ತಿಗಳನ್ನು ಪ್ರದರ್ಶಿಸುತ್ತಿರುವರು. ಆದರೆ ಇದು ಗಿಳಿಯು ಸುಭಾಷಿತ ಹೇಳುವಂತೆ ಅವರ ಗಿಳಿಪಾಠವು ವ್ಯರ್ಥವಾಗಿರುವುದು ॥೧೬॥ ಆದ್ದರಿಂದ ನಿನ್ನ ಬೋಧಕಶಕ್ತಿಯು ಸರ್ವರಿಗೂ ಸಿಗಲು ಸಾಧ್ಯವಾಗುವುದಿಲ್ಲ. ನಿನ್ನ ಕೃಪಾದೃಷ್ಟಿಯು ಲಭಿಸಿದಾಗ ಮಾತ್ರ ಈ ಅಗಮ್ಯವಾದ ಜ್ಞಾನವು ಸುಲಭವಾಗುವುದು ॥೧೭॥ ಅಗಮ್ಯವಾಗಿರುವ ಈ ಶ್ರೀಭಾಗವತವು, ಅದರಲ್ಲಿಯೂ ಹನ್ನೊಂದನೆಯ ಸ್ಕಂಧದ ಅತ್ಯಂತ ಗಹನವಾದ ಅರ್ಥವನ್ನು ಯಥಾಯೋಗ್ಯವಾಗಿ ನನ್ನಿಂದ ಪ್ರಾಕೃತ ಭಾಷೆಯಲ್ಲಿ ಮಾಡಿಸಿಕೊಂಡಿರುವೆ. ಕಾರಣ ನೀನು ಸಮರ್ಥನು, ಕರುಣಾಮೂರ್ತಿಯಾಗಿರುವೆ ॥೧೮॥ ತಾಯಿಯು ಯಾವ ಪ್ರಕಾರವಾಗಿ ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆದು ಅದನ್ನು ತನ್ನ ಬಾಲಕನ ಕೈಯಲ್ಲಿ ಕೊಡುವಳೋ, ಅದರಂತೆಯೇ ಶ್ರೀಜನಾರ್ದನ ಸ್ವಾಮಿಯವರು ಮಾಡಿರುವರು ॥೧೯॥ ವೇದಶಾಸ್ತ್ರಗಳ ಮಂಥನವನ್ನು ಮಾಡಿ ಮಹರ್ಷಿ ವ್ಯಾಸರು ಅದರಲ್ಲಿನ ನವನೀತವನ್ನು ಹೊರಗೆ ತೆಗೆದರು. ಇದು ಭಾಗವತದ ಮಥಿತಾರ್ಥವು ಹನ್ನೊಂದನೆಯ ಸ್ಕಂಧವಾಗಿದೆ ಎಂದು ತಿಳಿಯಬೇಕು ॥೨೦॥ ಈ ಯಾವ ಹನ್ನೊಂದನೆಯ ಸ್ಕಂಧದಲ್ಲಿನ ಅಮೃತಮಯ ರುಚಿಯು ನನಗೆ ತಿಳಿಯಲಾರದಂತಾಗಿರುವುದನ್ನು ಅರಿತು ಶ್ರೀಜನಾರ್ದನರು ಮಂಥನವನ್ನು ಮಾಡಿ ಅದರಲ್ಲಿನ ಸಂಪೂರ್ಣ ಸಾರವನ್ನು ನನಗೆ ತೆಗೆದುಕೊಟ್ಟರು ॥೨೧॥ ಅದನ್ನು ನಾನು ಸ್ವಾಭಾವಿಕವಾಗಿ ಮುಖದಲ್ಲಿ ಹಾಕುತ್ತಲೇ ಅದರ ರುಚಿಯು ನನಗೆ ತಿಳಿಯಿತು. ಈ ಅಮೃತಮಯ ಮಾಧುರ್ಯದ ರುಚಿಯು ಪ್ರಾಪ್ತವಾಗುತ್ತಲೇ ನಾನು ಪ್ರಸಾದಿಕ ಟೀಕೆಯನ್ನು ಹೆಚ್ಚು ಹೆಚ್ಚಾಗಿ ಬರೆಯುತ್ತ ಸಾಗಿದೆನು ॥೨೨॥ ಆದ್ದರಿಂದ ಈ ಹನ್ನೊಂದನೆಯ ಸ್ಕಂಧದ ಟೀಕೆಯನ್ನು ಬರೆಯುವ ನಾನೊಬ್ಬನೇ ಏಕನಾಥನಲ್ಲ. ಈ ಒಂದರಲ್ಲಿ ಇನ್ನೊಂದು ಕೂಡಿಕೊಂಡು ಈ ಗ್ರಂಥವು ಸುಂದರವಾಗಿ ನಿರ್ಮಾಣವಾಗಿರುವುದು ॥೨೩॥ ಹಿಂದೆ ಒಂದು, ಮುಂದೆ ಒಂದು ಹೀಗೆ ಹನ್ನೊಂದು ಸಂಖ್ಯೆಯ ರೂಪವಾಗಿರುವುದು. ಈ ಏಕತ್ವದಿಂದ ಈ ಟೀಕೆಯು ಮುಂದುವರೆದಿರುವುದು. ಈ ಕಾರ್ಯದಲ್ಲಿ ಸಖಾ ಜನಾರ್ದನರು ನನಗೆ ಪೂರ್ಣ ಸಹಾಯ ಮಾಡಿರುವರು ॥೨೪॥

ಜನಾರ್ದನೇ ಪೈ ಆಪುಲೇ । ಏಕೀ ಏಕಪಣ ದೃಢಕೇಲೇ । ತೇಚಿ ಭಾಗವತೀ ಏಕಾದಶಾಚೇ ಅರ್ಥಾ ಆಲೇ । ಏಕೀ ಮೀನಲೇ ಏಕತ್ವ ।೨೫॥ ಜೇವಿ ಜೇವಣೀ ಗೋಡ ಘಾಸ । ತೇವೀ ಭಾಗವತೀ ಏಕಾದಶ। ತ್ಯಾಹೀಮಾಜೀ ಅಷ್ಟವಿಂಶ । ಅತಿಸುರಸ ಸಾಜಿರಾ ।೨೬॥ ಸರ್ವಾಂಗೀ ಶಿರ ಪ್ರಧಾನ । ತೈಸಾ ಅಠ್ಠಾವಿಸಾವಾ ಜಾಣ । ತೇಥೀಲ ಜೇ ಕಾ ನಿರೂಪಣ । ತೋ ಸ್ವಾನಂದ ಜಾಣ ಸೋಲೀಂವ ।೨೭॥ ತೋ ಹಾ ಅಠ್ಠಾವಿಸಾವಾ ಅಧ್ಯಾವೋ । ಬ್ರಹ್ಮಸುಖಾಚಾ ನಿಜನಿರ್ವಾಹೋ । ಉದ್ಧವೇ ನ ಪುಸತಾ ಪಹಾ ಹೋ । ಸ್ವಯೇ ದೇವಾಧಿದೇವೋ ಸಾಂಗತ ।೨೮॥ ಉದ್ಧವೇ ನ ಕರಿತಾ ಪ್ರಶ್ನ । ಕಾ ಸಾಂಗತಾಹೇ ಶ್ರೀಕೃಷ್ಣ । ಯೇಚಿ ಅರ್ಥೀಚೇ ನಿರೂಪಣ । ಸಾವಧಾನ ಪರಿಸಾವೇ ।೨೯॥ ಉದ್ಧವ ಕೃಷ್ಣೋಕ್ತೀ ನಿಜಜ್ಞಾನ । ಪಾವೋನಿ ಝಾಲಾ ಜ್ಞಾನಸಂಪನ್ನ । ತೇಣೇ ಯೇಊ ಪಾಹೇ ಜ್ಞಾನಾಭಿಮಾನ । ಜಾಣಪಣ ಅನಿವಾರ ।೩೦॥ ಜಗ ಮೂರ್ಖ ಮೀ ಏಕ ಜ್ಞಾತಾ । ಐಶೀ ವಾಢತೀ ಜೇ ಅಹಂತಾ । ತೇ ಗುಣ ದೋಷಾಂಚೀ ಕಥಾ । ದಾವೀಲ ಸರ್ವಥಾ ಸರ್ವತ್ರ ।೩೧॥ ಜೇಥ ಗುಣದೋಷಾಂಚೇ ದರ್ಶನ । ತೇಥ ನಿಃಶೇಷ ಮಾವಳೇ ಜ್ಞಾನ । ಯೇಥವರೀ ಜ್ಞಾನಾಭಿಮಾನ । ಬಾಧಕ ಜಾಣ ಸಾಧಕಾ ।೩೨॥ ಅಭಿಮಾನ ಬಾಧೀ ಸದಾಶಿವಾ । ತೋಹೀ ಆಣಿಲಾ ಜೀವಭಾವಾ । ತೇಥ ಮನುಷ್ಯಾಚಾ ಕೋಣ ಕೇವಾ । ಅಹಂತ್ವೇ ಜೀವಾ ಮುಕ್ತತಾ ಕೈಚೀ ।೩೩॥ ಗುಣದೋಷಾಂಚೇ ದರ್ಶನ । ಜೈ ಈಶ್ವರ ದೇಖೇ ಆಪಣ । ತೋಹೀ ನಾಡೂ ಪಾವೇ ಜಾಣ । ಇತರಾಂಚಾ ಕೋಣ ಪಡಿಪಾಡು ।೩೪॥ ಯಾಪರೀ ಗುಣದೋಷ ದರ್ಶನ । ಸಾಧಕಾ ಬಾಧಕ ಹೋಯ ಪೂರ್ಣ । ಯಾಲಾಗೀ ತ್ಯಾಚೇ ನಿವಾರಣ । ನ ಕರಿತಾ ಪ್ರಶ್ನ ಹರಿ ಸಾಂಗೇ ।೩೫॥ ಬಾಳಕ ನೇಣೇ ನಿಜಹಿತಾ । ತೇಥ ಸಾಕ್ಷೇಪೇ ಪ್ರವರ್ತೇ ಮಾತಾ । ತೇವೀ ಉದ್ಧವಾಚೇ ನಿಜಸ್ವಾರ್ಥಾ । ಶ್ರೀಕೃಷ್ಣನಾಥಾ ಕಳವಳಾ।೩೬॥ ಜ್ಞಾನಾಭಿಮಾನಾಚೇ ಬಾಧಕಪಣ । ಸರ್ವಥಾ ಸಾಧಕಾ ನ ಕಳೇ ಜಾಣ । ಯಾಲಾಗೀ ನ ಕರಿತಾಹೀ ಪ್ರಶ್ನ । ತ್ಯಾಚೇ ನಿರಾಕರಣ ಹರಿ ಸಾಂಗೇ ।೩೭॥ ಉದ್ಧವ ಜನ್ಮಲಾ ಯಾದವವಂಶೀ । ಯಾದವ ನಿಮತೀ ಬ್ರಹ್ಮಶಾಪೇಸೀ । ತೇಥ ವಾಂಚವಾವಯಾ ಉದ್ಧವಾಸೀ । ಸಂಪೂರ್ಣ ಬ್ರಹ್ಮಜ್ಞಾನಾಸೀ ಹರಿ ಸಾಂಗೇ ।೩೮॥ ಜೇಥ ದೇಹಾತೀತ ಆತ್ಮಜ್ಞಾನ । ತೇಥ ನ ಬಾಧೀ ಶಾಪಬಂಧನ । ಹೇ ಜಾಣೋನಿಯಾ ಶ್ರೀಕೃಷ್ಣ । ಪೂರ್ಣ ಬ್ರಹ್ಮಜ್ಞಾನ । ಉಪದೇಶೀ ।೩೯॥

ಶ್ರೀಜನಾರ್ದನಸ್ವಾಮಿಯವರು ತಮ್ಮ ಏಕತ್ವವನ್ನು ಅದ್ವೈತದಲ್ಲಿ ಸ್ಥಿರಮಾಡಿ ಹನ್ನೊಂದನೆಯ ಸ್ಕಂಧದ ಅರ್ಥದಲ್ಲಿ ತುಂಬಿಬಿಟ್ಟರು. ಅಂದರಲ್ಲಿ ಇನ್ನೊಂದು ಲೀನವಾಯಿತು ।೨೫॥ ಭೋಜನದಲ್ಲಿ ಒಂದು ರುಚಿಯಾದ ತುತ್ತು ಇರುವಂತೆ ಈ ಹನ್ನೊಂದನೆಯ ಸ್ಕಂಧವಾಗಿರುವುದು. ಅದರಲ್ಲಿ ಈ ಇಪ್ಪತ್ತೆಂಟನೆಯ ಅಧ್ಯಾಯವು ಅತ್ಯಂತ ಸುರಸವಾಗಿ ಅಮೃತಪ್ರಾಯವಾಗಿರುವುದು ।೨೬॥ ಶರೀರದ ಸರ್ವ ಅವಯವಗಳಲ್ಲಿ ಶಿರವು ಶ್ರೇಷ್ಠವಾಗಿರುವಂತೆ ಈ ಇಪ್ಪತ್ತೆಂಟನೆಯ ಅಧ್ಯಾಯವು ಶ್ರೇಷ್ಠವಾಗಿರುವುದು. ಇದರಲ್ಲಿನ ನಿರೂಪಣೆಯು ಶುದ್ಧ ಬ್ರಹ್ಮಾನಂದಸ್ವರೂಪವಾಗಿರುವುದು ।೨೭॥ ಈ ಯಾವ ಇಪ್ಪತ್ತೆಂಟನೆಯ ಅಧ್ಯಾಯವು ನಿಜವಾಗಿಯೂ ಬ್ರಹ್ಮಸುಖದ ಕೇವಲ ನಿಧಿಯಾಗಿರುವುದು. ಈ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಉದ್ಧವನು ಕೇಳದೇ ಇದ್ದರೂ ಸ್ವತಃ ದೇವಾದಿದೇವನಾದ ಶ್ರೀಕೃಷ್ಣನು ಹೇಳುತ್ತಿರುವನು ।೨೮॥ ಉದ್ಧವನು ಯಾವ ಪ್ರಶ್ನೆಯನ್ನು ಮಾಡದೇ ಇದ್ದರೂ ಶ್ರೀಕೃಷ್ಣನು ಏಕೆ ಹೇಳುತ್ತಿರಬೇಕು ? ಇದರ ಕಾರಣವನ್ನು ಲಕ್ಷಪೂರ್ವಕವಾಗಿ ಶ್ರವಣವನ್ನು ಮಾಡಬೇಕು ।೨೯॥ ಶ್ರೀಕೃಷ್ಣನ ವಿಚಾರಗಳೆಲ್ಲವನ್ನು ಕೇಳಿ ಉದ್ಧವನಿಗೆ ಆತ್ಮಜ್ಞಾನವು ಪ್ರಾಪ್ತವಾದ ಮೇಲೆ ಆತನಿಗೆ ಜ್ಞಾನಾಭಿಮಾನವು ಉಂಟಾಗಲಾರಂಭಿಸಿತು ।೩೦॥ ಸಂಪೂರ್ಣ ಜಗತ್ತು ಅಜ್ಞಾನ ಭರಿತವಾಗಿದ್ದು ನಾನೊಬ್ಬನೇ ಜ್ಞಾನೀ ಎಂಬ ಅಭಿಮಾನವು ಆತನ ಮನದಲ್ಲಿ ಬರಬಹುದೆಂದು ಶ್ರೀಕೃಷ್ಣನು ಗುಣದೋಷಗಳ ನಿರೂಪಣೆಯನ್ನು ಮಾಡುತ್ತಿರುವನು ।೩೧॥ ಎಲ್ಲಿ ಗುಣದೋಷಗಳ ದರ್ಶನವಾಗುವುದೋ, ಅಲ್ಲಿ ಜ್ಞಾನವು ನಿಶ್ಚಿತವಾಗಿ ಮುಳುಗಿಹೋಗುವುದು. ಜ್ಞಾನಾಭಿಮಾನವು ಸಾಧಕನಿಗೆ ಇಷ್ಟೊಂದು ಬಾಧಕವಾಗಿರುವುದು ।೩೨॥ ಅಭಿಮಾನವು ಶಿವನಿಗೂ ಬಾಧಿಸಿ ಆತನಿಗೆ ಜೀವತ್ವ ಭೋಗಿಸಬೇಕಾಯಿತು. ಅಂದಮೇಲೆ ಮನುಷ್ಯನ ಯಾವ ಕಥೆ? ಅಹಂಕಾರದಿಂದ ಜೀವಕ್ಕೆ ಮುಕ್ತಿಯು ಹೇಗೆ ಪ್ರಾಪ್ತವಾಗಬೇಕು ? ।೩೩॥ ಈಶ್ವರನೇ ಆಗಿರಲಿ, ಆತನು ಗುಣದೋಷಗಳನ್ನು ಕಾಣುತ್ತಿದ್ದರೆ ಪೇಚಿಗೆ ಸಿಲುಕಬೇಕಾಗುವುದು. ಹೀಗಿರಲು ಇತರರ ಯಾವ ಪಾಡು? ।೩೪॥ ಈ ಪ್ರಕಾರವಾಗಿ ಗುಣದೋಷಗಳ ದರ್ಶನವು ಇದು ಪರಿಪೂರ್ಣವಾಗಿ ಅನರ್ಥಕಾರಕವಾಗಿರುವುದು. ಆದ್ದರಿಂದ ಇದರ ನಿವಾರಣೆಯ ಉಪಾಯವನ್ನು ಕೇಳದಿದ್ದರೂ ಶ್ರೀಹರಿಯು ವಿವರಿಸುತ್ತಿರುವನು ।೩೫॥ ಚಿಕ್ಕ ಬಾಲಕನಿಗೆ ತನ್ನ ಹಿತವು ತಿಳಿಯುತ್ತಿರುವುದಿಲ್ಲ. ಆದರೆ ಅದರ ತಾಯಿಯು ತಾನಾಗಿಯೇ ಮುಂದಾಗಿ ಅದರ ಹಿತಕ್ಕಾಗಿ ಪ್ರಯತ್ನಪಡುತ್ತಿರುವಳು. ಅದರಂತೆ ಉದ್ಧವನಿಗೆ ನಿಜಸ್ವಾರ್ಥವು ಪ್ರಾಪ್ತವಾಗಬೇಕೆಂಬ ತಳಮಳವು ಶ್ರೀಕೃಷ್ಣನ ಹೃದಯದಲ್ಲಿ ಉಂಟಾಯಿತು ।೩೬॥ ಜ್ಞಾನದ ಅಭಿಮಾನವು ಬಾಧಕವಾಗಿರುವುದು. ಇದು ಸಾಧಕನಿಗೆ ಲಕ್ಷದಲ್ಲಿ ಬರುವುದಿಲ್ಲವೆಂದು ತಿಳಿದು ಶ್ರೀಹರಿಯು ಪ್ರಶ್ನೆಯನ್ನು ಮಾಡದಿದ್ದರೂ ಅದರ ನಿವಾರಣೆಯ ಉಪಾಯವನ್ನು ಹೇಳುತ್ತಿರುವನು ।೩೭॥ ಉದ್ಧವನು ಯಾದವ ವಂಶದಲ್ಲಿ ಜನ್ಮಪಡೆದವನಾಗಿರುವನು. ಬ್ರಾಹ್ಮಣರ ಶಾಪದಿಂದ ಯಾದವರ ವಂಶವು ಸರ್ವನಾಶವಾಗುವುದಿದೆ. ಇಂತಹ ಪ್ರಸಂಗದಲ್ಲಿ ಉದ್ಧವನಿಗೆ ಬದುಕಿಸುವ ಉದ್ದೇಶದಿಂದ ಶ್ರೀಹರಿಯು ಬ್ರಹ್ಮಜ್ಞಾನದ ಉಪದೇಶವನ್ನು ಮಾಡುತ್ತಿರುವನು ।೩೮॥ ಎಲ್ಲಿ ದೇಹಾತೀತವಾದ ಆತ್ಮಜ್ಞಾನವು ಪ್ರಾಪ್ತವಾಗುವುದೋ, ಅಲ್ಲಿ ಶಾಪದ ಬಂಧನೆಯು ಬಾಧಿಸುವುದಿಲ್ಲ. ಇದನ್ನು ಅರಿತ ಶ್ರೀಕೃಷ್ಣನು ಉದ್ಧವನಿಗೆ ಪೂರ್ಣ ಬ್ರಹ್ಮಜ್ಞಾನದ ಉಪದೇಶವನ್ನು ಮಾಡುತ್ತಿರುವನು ।೩೯॥

ಜೇವೀ ಸಾಕರೇವರೀ ಮಾಶೀ । ತೇವೀ ಶ್ರೀಕೃಷ್ಣಮೂರ್ತೀಪಾಶೀ । ಪ್ರೀತಿ ಜಡಲೀ ಉದ್ಧವಾಸೀ । ಭಾವ ಏಕದೇಶೀ ದೃಢ ಝಾಲಾ ॥೫೦॥ ಕೃಷ್ಣಾಪಾಸೂನಿ ದುರೀ ಜಾತಾ । ಉದ್ಧವ ಪ್ರಾಣ ಸಾಂಡೀಲ ತತ್ತ್ವತಾ । ತೇ ಮೋಡಾವಯಾ ಏಕದೇಶೀ ಅವಸ್ಥಾ । ಬ್ರಹ್ಮಸಮತಾ ಹರಿ ಸಾಂಗೇ ॥೫೧॥ ಏಕದೇಶೀ ಝಾಲಾ ಭಾವೋ । ತೋ ಶ್ರೀಕೃಷ್ಣಾ ನಾವಡೇ ಪಹಾ ಹೋ । ಯಾಲಾಗೀ ದೇವಾಧಿದೇವೋ । ಬ್ರಹ್ಮ ಸಮನ್ವಯೋ ಸ್ವಯೇ ಸಾಂಗೇ ॥೫೨॥ ಉದ್ಧವ ಅಸತಾ ಕೃಷ್ಣಾಜವಳೀ । ಬ್ರಹ್ಮಶಾಪೇ ಹೋ ಈಲ ಹೋಳೀ । ಯಾಲಾಗೀ ತ್ಯಾಸೀ ವನಮಾಳೀ । ಸರ್ವಬ್ರಹ್ಮಸುಕಾಳೀ ಘಾಲೂ ಪಾಹೇ ॥೫೩॥ ಕೃಷ್ಣಾವೇಗಳಾ ಉದ್ಧವ ಜಾತಾ । ವಿಯೋಗ ಬಾಧೀನಾ ತ್ಯಾಚಿಯಾ ಚಿತ್ತಾ । ಐಶೀ ಪಾವಾಯಾ ಸರ್ವಗತತಾ । ಉದ್ಧವ ಸರ್ವಥಾ ಹರಿ ಬೋಧೀ ॥೫೪॥

ಶ್ರೀಭಗವಾನುವಾಚ :-

ಪರಸ್ವಭಾವಕರ್ಮಾಣಿ ನ ಪ್ರಶಂಸೇನ್ನ ಗರ್ಹಯೇತ್ । ವಿಶ್ವಮೇಕಾತ್ಮಕಂ ಪಶ್ಯನ್ಪ್ರಕೃತ್ಯಾ ಪುರುಷೇಣ ಚ ॥೧॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು ; ಉದ್ಧವಾ, ವ್ಯವಹಾರದಲ್ಲಿ ಪ್ರಕೃತಿ ಪುರುಷ, ದೃಷ್ಟಾ, ದೃಶ್ಯ ಹೀಗೆ ಎರಡು ಪ್ರಕಾರದ ಭೇದದಿಂದ ಜಗತ್ತು ವ್ಯಾಪಿಸಿರುವಂತೆ ತೋರುವುದು. ಆದರೆ ಪರಮಾರ್ಥ ದೃಷ್ಟಿಯಿಂದ ನೋಡಿದರೆ ಇದೆಲ್ಲವೂ ಅಧಿಷ್ಠಾನ ಸ್ವರೂಪವಾಗಿದೆ. ಆದ್ದರಿಂದ ಇನ್ನೊಬ್ಬರ ಶಾಂತ, ಧೀರ ಇತ್ಯಾದಿ ಸ್ವಭಾವಧರ್ಮದ ಸ್ತುತಿ ಅಥವಾ ನಿಂದೆಯನ್ನು ಮಾಡಬಾರದು. ಯಾವಾಗಲೂ ಅದ್ವೈತ ದೃಷ್ಟಿಯನ್ನಿಡಬೇಕು.

ಜೋ ನಿಃಶಬ್ದಾಚಾ ಸೋಲೀಂವ ಶಬ್ದ । ಜ್ಯಾಚೇ ನಿಃಶ್ವಾಸೇ ಜನ್ಮಲೇ ವೇದ । ಉದ್ಧವಹಿತಾರ್ಥ ಗೋವಿಂದ । ಜ್ಞಾನವಿಶುದ್ಧ ಸ್ವಯೇ ಸಾಂಗೇ ॥೫೫॥ ಸಂಸಾರೀ ಮುಖ್ಯ ತೀನ್ಹೀ ಗುಣ । ತ್ರಿಗುಣಾಸ್ತವ ತ್ರಿವಿಧ ಜನ । ತ್ಯಾಂಚೇ ಸ್ವಾಭಾವಿಕ ಕರ್ಮ ಜಾಣ । ಶಾಂತ ದಾರುಣ ಆಣಿ ಮಿಶ್ರ ॥೫೬॥ ತ್ಯಾ ಕರ್ಮಾಚೇ ನಿಂದಾಸ್ತವನ । ಸರ್ವಥಾ ನ ಕರಾವೇ ಆಪಣ । ಏಕಾಚೇ ವಾನಿತಾ ಭಲೇಪಣ । ಇತರಾ ಕುಡೇಪಣ ತೇಣೇಚಿ ಬೋಲೇ ॥೫೭॥ ಪಾಂಚಾಂಮಾಜೀ ಭಲೇಪಣ । ಏಕಾಚೇ ವಾನಿತಾ ಆಪಣ । ಇತರ ಜೇ ಚೌಘೇಜಣ । ತೇ ಸಹಜೇ ಜಾಣ ನಿಂದಿಲೇ ॥೫೮॥ ವಾಮಸವ್ಯ ಉಭಯ ಭಾಗ । ದೋ ನಾಂದೀ ಏಕಚಿ ಅಂಗ । ತೇವೀ ಪ್ರಕೃತಿ ಪುರುಷಾತ್ಮಕ ಜಗ । ಚಿದ್ರೂಪೇ ಚಾಂಗ ಏಕತ್ವೇ ॥೫೯॥ ಜಗ ಬ್ರಹ್ಮರೂಪ ಪರಿಪೂರ್ಣ । ಯಾಲಾಗೀ ನಿಂದಾ ಆಣಿ ಸ್ತವನ । ಭೂತಮಾತ್ರಾಚೇ ಆಪಣ । ಕದಾಹೀ ಕಾಳೀ ಜಾಣ ನ ಕರಾವೇ ॥೬೦॥ ಸರ್ವ ಭೂತಾಂಚ್ಯಾ ಠಾಯೀ । ಆತ್ಮಾರಾಮ ಅಸೇ ಪಾಹೀ । ಯಾಲಾಗೀ ನಿಂದಾಸ್ತುತಿ ಕಾಂಹೀ । ಪ್ರಾಣಾಂತೀ ಪಾಹೀ ನ ಕರಾವೀ ॥೬೧॥

ಸಕ್ಕರೆಯ ಮೇಲೆ ನೊಣದ ಲೋಭವು ಪೂರ್ಣವಿರುವಂತೆ ಶ್ರೀಕೃಷ್ಣನ ಪ್ರೀತಿಯು ಉದ್ಧವನಲ್ಲಿ ಅಂಟಿಕೊಂಡಿರುವುದು. ಉದ್ಧವನಲ್ಲಿ ಏಕದೇಶಿಯ ಆಸಕ್ತಿಯು ದೃಢವಾಗಿ ಆವರಿಸಿತ್ತು ॥೫೦॥ ಕೃಷ್ಣನನ್ನು ಅಗಲಿ ಉದ್ಧವನು ದೂರ ಹೋದರೆ ಆತನು ನಿಜವಾಗಿಯೂ ಪ್ರಾಣವನ್ನೇ ಬಿಡುವನೆಂಬ ಆತನ ಏಕದೇಶಿಯತ್ವವನ್ನು ದೂರ ಮಾಡುವುದಕ್ಕಾಗಿ ಶ್ರೀಕೃಷ್ಣನು ಬ್ರಹ್ಮ ಸಮಾನತೆಯನ್ನು ಹೇಳುತ್ತಿರುವನು ॥೫೧॥ ಏಕದೇಶಿಯ ಭಾವವನ್ನು ಧರಿಸಿದರೆ ಅದು ಶ್ರೀಕೃಷ್ಣನಿಗೆ ಪ್ರಿಯವಾಗುವುದಿಲ್ಲ. ಆದ್ದರಿಂದಲೇ ದೇವಾದಿದೇವನು ಉದ್ಧವನಿಗೆ ಬ್ರಹ್ಮಸಮನ್ವಯ ಅಂದರೆ ಬ್ರಹ್ಮದ ಸರ್ವತ್ರ ಸಮಾನರೂಪದಿಂದಿರುವ ವ್ಯಾಪಕತ್ವವನ್ನು ಹೇಳುತ್ತಿರುವನು ॥೫೨॥ ಉದ್ಧವನು ಇಲ್ಲಿಯೇ ಇರಲು ಆತನು ಬ್ರಾಹ್ಮಣಶಾಪದಿಂದ ನಾಶವಾಗುವನೆಂದು ಶ್ರೀಕೃಷ್ಣನು ತಿಳಿದು ಆತನನ್ನು ಬ್ರಹ್ಮಸುಖದಲ್ಲಿ ಇಡಲು ಇಚ್ಛೆಪಟ್ಟಿರುವನು ॥೫೩॥ ಶ್ರೀಕೃಷ್ಣನಿಂದ ದೂರ ಹೋದರೂ ಉದ್ಧವನಿಗೆ ಮನದಲ್ಲಿ ವಿಯೋಗದ ಬಾಧೆಯಾಗಬಾರದೆಂದು ಸರ್ವಗತವಾಗಿರುವ ವ್ಯಾಪಕತ್ವದ ಉಪದೇಶವನ್ನು ಶ್ರೀಹರಿಯು ಈಗ ಮಾಡುತ್ತಿರುವನು ॥೫೪॥

ಯಾವ ನಿಃಶಬ್ದದ ಶುದ್ಧವಾದ ಶಬ್ದ, ಯಾರ ಶ್ವಾಸೋಚ್ಛ್ವಾಸದಿಂದ ವೇದವು ನಿರ್ಮಾಣವಾಯಿತೋ, ಆ ಶ್ರೀಕೃಷ್ಣನು ಉದ್ಧವನ ಹಿತದೃಷ್ಟಿಯಿಂದ ವಿಶುದ್ಧವಾಗಿರುವ ಜ್ಞಾನವನ್ನು ಸ್ವತಃ ಹೇಳುತ್ತಿರುವನು ॥೫೫॥ ಸಂಸಾರದಲ್ಲಿ ಪ್ರಾಮುಖ್ಯವಾಗಿ ಮೂರು ಗುಣಗಳಿರುವುವು. ಈ ಗುಣ ಕಾರಣದಿಂದ ಜನರು ಮೂರು ಪ್ರಕಾರಗಳಾಗಿರುವರು. ಅವರ ಶಾಂತ, ದಾರುಣ ಹಾಗೂ ಮಿಶ್ರ ಹೀಗೆ ವಿವಿಧ ಸ್ವಾಭಾವಿಕ ಕಾರ್ಯಗಳಾಗಿರುವುವು ॥೫೬॥ ಅವರ ಆ ಕರ್ಮಗಳ ನಿಂದೆಯಾಗಲಿ ಅಥವಾ ಸ್ತುತಿಯಾಗಲಿ ನಾವು ಎಂದಿಗೂ ಮಾಡಬಾರದು. ಕಾರಣ ಒಬ್ಬರ ಉತ್ತಮ ಗುಣದ ಸ್ತುತಿಯನ್ನು ಮಾಡಿದರೆ ಇತರರು ಅಧಮರು ಎಂದು ಹೇಳಿದಂತಾಗುವುದು ॥೫೭॥ ಐದು ಜನರಲ್ಲಿ ಒಬ್ಬನು ಉತ್ತಮನು ಎಂದು ಸ್ತುತಿ ಮಾಡಲು ಆಗ ಉಳಿದ ನಾಲ್ವರು ಕೆಟ್ಟವರು ಎಂದು ನಿಂದಿಸಿದಂತಾಗಾವುದು ॥೫೮॥ ಎಡ ಮತ್ತು ಬಲ ಹೀಗೆ ಎರಡು ಭಾಗಗಳಿದ್ದರೂ ಆ ಎರಡೂ ಹೆಸರುಗಳು ಒಂದೇ ಅಂಗದ್ದಾಗಿರುವುವು. ಅದರಂತೆ ಪ್ರಕೃತಿ ಪುರುಷಾತ್ಮಕವಾಗಿರುವ ಈ ಜಗತ್ತು ನಿಜವಾಗಿಯೂ ಚಿದ್ರೂಪದಿಂದ ಏಕರೂಪವಾಗಿಯೇ ಇರುವುದು ॥೫೯॥ ಈ ಜಗತ್ತು ಪರಿಪೂರ್ಣವಾಗಿ ಬ್ರಹ್ಮಸ್ವರೂಪವಾಗಿರುವುದು. ಆದ್ದರಿಂದ ನಾವು ಪ್ರಾಣಿಮಾತ್ರರ ನಿಂದೆಯನ್ನು ಅಥವಾ ಸ್ತುತಿಯನ್ನು ಎಂದಿಗೂ ಮಾಡಕೂಡದು ॥೬೦॥ ಸರ್ವಪ್ರಾಣಿಮಾತ್ರರಲ್ಲಿ ಆತ್ಮಾರಾಮನಿರುವನು. ಈ ಕಾರಣವಾಗಿ ನಮ್ಮ ಪ್ರಾಣ ಹೋದರೂ ಕೂಡ ಯಾರ ನಿಂದೆಯಾಗಲಿ ಅಥವಾ ಸ್ತುತಿಯಾಗಲಿ ಮಾಡಬಾರದು ॥೬೧॥

ಉದ್ಧವಾ ನಿಂದಾಸ್ತುತೀಚೀ ಕಥಾ । ಸಾಂಡೀ ಸಾಂಡೀ ಗಾ ಸರ್ವಥಾ । ತರೀಚ ಪಾವಶೀ ಪರಮಾರ್ಥಾ । ನಿಜಸ್ವಾರ್ಥಾ ನಿಜಬೋಧೇ ॥೫೨॥ ಸರ್ವಭೂತೀ ಭಗವದ್ಭಾವ । ಹಾ ಬ್ರಹ್ಮಸ್ಥಿತೀಚಾ ನಿಜ ನಿರ್ವಾಹ । ಯಾಸೀ ಕದಾ ನವ್ಹೇ ಅಪಾವ । ಐಕ ತೋ ಭಾವ ಉದ್ಧವಾ ॥೫೩॥ ಜೇಥೂನಿ ಯೇವೂ ಪಾಹೇ ಅಪಾವ । ತೇಥೇ ದೃಢ ವಾಢಲ್ಯಾ ಭಗವದ್ಭಾವ । ತೇವ್ಹಾ ಅಪಾವಚಿ ಹೋಯ ಉಪಾವ । ವಿಘ್ನಾಸೀ ಠಾವ ಅಸೇನಾ ॥೫೪॥ ಹೇ ಸ್ಥಿತೀ ಸಾಂಡೂನಿಯಾ ದೂರೀ । ಮೀ ಜ್ಞಾತಾ ಹಾ ಗರ್ವ ಧರೀ । ನಿಂದಾಸ್ತುತೀಚ್ಯಾ ಭರೋವರೀ । ತೋ ಅನರ್ಥಾಮಾರ್ಝಾರೀ ನಿಮಗ್ನ ॥೫೫॥

ಪರಸ್ವಭಾವಕರ್ಮಾಣಿ ಯಃ ಪ್ರಶಂಸತಿ ನಿಂದತಿ । ಸ ಆಶು ಭ್ರಶ್ಯತೇ ಸ್ವಾರ್ಥಾದಸತ್ಯಭಿನಿವೇಶತಃ ॥೨॥

ಅರ್ಥ:- ಯಾವ ಮನುಷ್ಯನು ಇತರರ ಸ್ವಭಾವ ಮತ್ತು ಅವರ ಕರ್ಮಗಳ ಪ್ರಶಂಸೆ ಅಥವಾ ನಿಂದೆಯನ್ನು ಮಾಡುವನೋ ಬಹು ಬೇಗ ಅವನು ಪರಮಾರ್ಥದಿಂದ ಪತನನಾಗುವನು.

ಮೀ ಏಕ ಸರ್ವಜ್ಞಾತಾ ಪೂರ್ಣ । ಐಸಾ ಧರೋನಿ ಜ್ಞಾನಾಭಿಮಾನ । ಜಗಾಚೇ ದೇಖೇ ದೋಷಗುಣ । ನಿಂದೀ ಬ್ರಾಹ್ಮಣ ಮುಖ್ಯತ್ವೇ ॥೫೬॥ ಪರಾಚೇ ಸ್ವಾಭಾವಿಕ ಕರ್ಮ । ಸ್ವಯೇ ನಿಂದಣೇ ಹಾ ಅಧರ್ಮ । ಹನುಮಂತ ಜ್ಞಾತಾ ಪರಮ । ತ್ಯಾಸ ವಾನರೀ ಕರ್ಮ ಸೋಡಿನಾ ॥೫೭॥ ನಾರದ ಜ್ಞಾತೇಪಣೇ ಮೋಠಾ । ಸತ್ಯ ಮಾನಲಾ ಶ್ರೇಷ್ಠಶ್ರೇಷ್ಠಾ । ತೋಹೀ ಕಳಿಲಾವಾ ಕಳಿಕಾಂಟಾ । ಸ್ವಭಾವಚೇಷ್ಟಾ ಅನಿವಾರ ॥೫೮॥ ಗರುಡ ದೇವಾಚೇ ವಾಹನ । ಸದಾ ತಿಷ್ಠೇ ಹಾತ ಜೋಡೂನ । ತೋಹೀ ಕರೀ ಸರ್ಪಭಕ್ಷಣ । ಐಸೇ ಕರ್ಮ ಜಾಣ ಸ್ವಾಭಾವಿಕ ॥೫೯॥ ವಿಚಾರತಾ ಜಗ ತ್ರಿಗುಣ । ಗುಣಾನುಸಾರೇ ಕರ್ಮಾಚರಣ । ತೇಥ ಪಾಹತಾ ದೋಷಗುಣ । ದೋಷೀ ಜಾಣ ಪಾಹೇ ತೋ ॥೬೦॥ ಜಗೀ ಪಹಾವೀ ಏಕಾತ್ಮತಾ । ಹೇ ಬ್ರಹ್ಮಸ್ಥಿತೀ ಗಾ ಸರ್ವಥಾ । ಸಾಂಡೂನಿ ಗುಣದೋಷ ಪಾಹತಾ । ತೋ ನಿಜಾತ್ಮಘಾತಾ ಪ್ರವರ್ತೇ ॥೬೧॥ ಸ್ವಭಾವೇ ಭೇಟಲ್ಯಾ ಸಜ್ಜನ । ಶೋಧೂನಿ ಪಾಹೇ ದೋಷಗುಣ । ಯಾಪರೀ ಜ್ಞಾನಾಭಿಮಾನ । ನಿಂದಾಸ್ತವನ ಉಪಜವೀ ॥೬೨॥ ಅಭಿಮಾನಾಚೀ ಜಾತೀ ಕೈಶೀ । ಅಧಿಕ ಖವಳೇ ಸಜ್ಞಾನಾಪಾಶೀ । ತೋ ದಾಖವೀ ಗುಣದೋಷಾಂಸೀ । ನಿಂದಾಸ್ತವನಾಸೀ ಉಪಜವೀ ॥೬೩॥ ಆಪುಲೇ ವೃತ್ತೀಸೀ ಜೋ ಸಮಾನ । ತ್ಯಾಚೇ ಅಳುಮಾಳ ಕರೀ ಸ್ತವನ । ನ ಮನೇ ಆಪಣಾಸೀ ಜ್ಯಾಚಾ ಗುಣ । ತ್ಯಾಸೀ ನಿಂದೀ ಆಪಣ ಯಥೇಷ್ಟ ॥೬೪॥

ಹೇ ಉದ್ಧವನೇ, ನಿಂದಾಸ್ತುತಿಗಳ ಮಾತನ್ನು ಸರ್ವಥಾ ಬಿಟ್ಟುಕೊಡು. ಹೀಗಾದರೆ ಮಾತ್ರ ನಿನಗೆ ಪರಮಾರ್ಥದ ಪ್ರಾಪ್ತಿಯಾಗುವುದು. ಮತ್ತು ಆತ್ಮಬೋಧೆಯಿಂದ ನಿನ್ನ ಸ್ವಾರ್ಥವನ್ನು ಸಾಧಿಸುವೆ ॥೫೨॥ ಸರ್ವಭೂತಗಳಲ್ಲಿ ಬ್ರಹ್ಮಭಾವದಿಂದ ಕಾಣಬೇಕು ಇದುವೇ ಬ್ರಹ್ಮಸ್ಥಿತಿಯ ಲಕ್ಷಣವಾಗಿರುವುದು. ಇದಕ್ಕೆ ಎಂದಿಗೂ ಅಪಾಯವಿರುವುದಿಲ್ಲ. ಈ ಭಾವಕ್ಕಾಗಿ ಈಗ ಕೇಳು ॥೫೩॥ ಎಲ್ಲಿಂದ ಅಪಾಯವು ಪ್ರವೇಶವನ್ನು ಮಾಡುತ್ತಿದ್ದರೆ ಅಲ್ಲಿಯೇ ಭಗವದ್ಭಾವವನ್ನು ದೃಢವಾಗಿ ಬೆಳೆಸಲು ಆಗ ಅಪಾಯವೇ ಉಪಾಯವಾಗಿ ಬಿಡುವುದು ಹಾಗೂ ವಿಘ್ನಗಳಿಗೆ ಸ್ಥಳವೇ ಉಳಿಯುವುದಿಲ್ಲ ॥೫೪॥ ಇಂತಹ ಸ್ಥಿತಿಯನ್ನು ಪೂರ್ಣವಾಗಿ ತ್ಯಜಿಸಿ ''ನಾನೇ ಜ್ಞಾನಿಯು'' ಎಂಬ ಈ ಗರ್ವವನ್ನು ಹಿಡಿದು ನಿಂದಾಸ್ತುತಿಯನ್ನು ಮಾಡಲಾರಂಭಿಸಿದರೆ ಅವನು ಅನರ್ಥಕ್ಕೆ ಗುರಿಯಾಗುವನು ॥೫೫॥

ನಾನೊಬ್ಬನೇ ಪೂರ್ಣಜ್ಞಾನಿಯು ಎಂಬ ಈ ಜ್ಞಾನಾಭಿಮಾನವನ್ನು ಹಿಡಿದು ಅವನು ಜಗತ್ತಿನ ಜನರ ಗುಣದೋಷಗಳನ್ನು ಕಾಣುತ್ತ ಮುಖ್ಯವಾಗಿ ಬ್ರಾಹ್ಮಣರನ್ನು ನಿಂದಿಸುವನು ॥೫೬॥ ಇತರರ ಸ್ವಾಭಾವಿಕ ಕರ್ಮಗಳ ನಿಂದೆಯನ್ನುಮಾಡಿದರೆ ಅದು ಅಧರ್ಮವಾಗುವುದು. ಹನುಮಂತನು ಪರಮಜ್ಞಾನಿಯು. ಆದರೂ ಕೂಡ ಆತನ ಮಂಗಚೇಷ್ಟೆಯು ಬಿಡಲಾಗಲಿಲ್ಲ ॥೫೭॥ ನಾರದರು ಮಹಾಜ್ಞಾನಸಂಪನ್ನರು. ಅನೇಕ ಶ್ರೇಷ್ಠ ಪುರುಷರಿಗೆ ಅವರು ಪರಮಪೂಜ್ಯರು. ಹೀಗಿದ್ದರೂ ಅವರ ಕಲಹಕ್ಕೆ ಕಾರಣವಾಗುವ ಮೂಲ ಸ್ವಭಾವವು ಅನಿವಾರ್ಯವಾಗಿರುವುದು ॥೫೮॥ ಗರುಡನು ದೇವನ ವಾಹನವಾಗಿರುವನು. ಈತನು ಕೈಗಳನ್ನು ಜೋಡಿಸಿ ದೇವರ ಹತ್ತಿರ ಸದಾ ನಿಂತಿರುವನು. ಈತನೂ ಸಹ ಸರ್ಪ ಭಕ್ಷಣೆ ಮಾಡುವನು. ಹೀಗೆ ಇದು ಸ್ವಾಭಾವಿಕ ಕರ್ಮವಾಗಿರುವುದು ॥೫೯॥ ಜಗತ್ತಿನ ವಿಚಾರವನ್ನು ಮಾಡಲು ಅದು ತ್ರಿಗುಣಾತ್ಮಕವಾಗಿರುವುದು. ಗುಣಾನುಸಾರವಾಗಿ ಕರ್ಮಗಳ ಆಚರಣೆಗಳು ನಡೆಯುತ್ತಿರುವುವು. ಹೀಗಿರುತ್ತಿರಲು ಅವರಲ್ಲಿ ಗುಣದೋಷಗಳನ್ನು ನೋಡುತ್ತ ಹೋದರೆ, ನೋಡುವವನೇ ದೋಷಿಯಾಗುವನು ॥೬೦॥ ಜಗತ್ತಿನಲ್ಲಿ ಏಕಾತ್ಮತೆಯನ್ನು ಕಾಣಬೇಕು. ಇದೇ ನಿಜವಾದ ಬ್ರಹ್ಮಸ್ಥಿತಿಯಾಗಿರುವುದು. ಇದನ್ನು ಬಿಟ್ಟುಕೊಟ್ಟು ಯಾವನು ಜನರ ಗುಣದೋಷಗಳನ್ನು ನೋಡುತ್ತ ಕುಳಿತುಕೊಳ್ಳುವನೋ ಅವನು ತನ್ನ ನಾಶಕ್ಕೆ ತಾನೇ ಪ್ರವೃತ್ತನಾಗುವನು ॥೬೧॥ ಸಹಜವಾಗಿ ಒಬ್ಬ ಸದ್ಗುಣಿ ಸಜ್ಜನನು ಭೇಟಿಯಾದರೆ ಆತನಲ್ಲಿಯ ಗುಣದೋಷಗಳನ್ನು ಶೋಧಿಸಿ ನೋಡುವುದು, ಇಷ್ಟೊಂದು ಜ್ಞಾನಾಭಿಮಾನವು ನಿಂದಾಸ್ತುತಿಗಳನ್ನು ಉತ್ಪನ್ನಮಾಡುತ್ತಿರುವುದು ॥೬೨॥ ಈ ಜ್ಞಾನಾಭಿಮಾನದ ಜಾತಿಯು ಹೇಗಿದೆ ಎಂದರೆ ಸಜ್ಞಾನಿಗಳಿಗೆ ಮಾತ್ರ ಅಧಿಕವಾಗಿಯೇ ಪೀಡೆಯನ್ನು ಕೊಡುವುದು. ಇದು ಗುಣದೋಷಗಳನ್ನು ಎತ್ತಿ ತೋರಿಸುತ್ತ ನಿಂದಾಸ್ತುತಿಗಳನ್ನು ಉದ್ಭವಿಸುವುದು ॥೬೩॥ ತನ್ನ ಗುಣಸ್ವಭಾವ ವೃತ್ತಿಗೆ ಅನುಕೂಲವಿದ್ದರೆ ಆತನ ಸ್ತುತಿಯನ್ನು ಮಾಡುವನು ಮತ್ತು ಯಾರ ಸ್ವಭಾವವು ತನಗೆ ಸರಿಕಾಣಲಾರದೋ ಅವರ ನಿಂದೆಯನ್ನು ಮಾಡುತ್ತಿರುವನು ॥೬೪॥

ನಿಂದಾಸ್ತುತಿ ಉಪಜೇ ಜೇಥ । ಭೇದ ಕ್ಷೋಭಲಾ ಉಠೇ ತೇಥ । ನಿಃಶೇಷ ನಿರ್ದಾಳೀ ಪರಮಾರ್ಥ । ಮಹಾ ಅನರ್ಥ ಅಂಗೀ ವಾಜೇ ॥೬೫॥ ನಿಂದೇಪಾಠೀ ಅನರ್ಥ । ಉಧಾರ ಲಾಗೋ ನೇದೀ ತೇಥ । ರೋಕಡಾ ಅಂಗೀ ಆದಳತ । ನಿಜಸ್ವಾರ್ಥಘಾತಕ ॥೬೬॥ ಭೇದ ಸಮೂಳ ಮಿಥ್ಯಾ ಯೇಥ । ಯೇಚಿ ಅರ್ಥೀಚಾ ಸ್ವಪ್ನದೃಷ್ಟಾಂತ । ಸ್ವಯೇ ಸಾಂಗೇ ಶ್ರೀಕೃಷ್ಣನಾಥ । ದೃಢ ಪರಮಾರ್ಥ ಸಾಧಾವಯಾ ॥೬೭॥

ತೈಜಸೇ ನಿದ್ರಯಾಽಽಪನ್ನೇ ಪಿಂಡಸ್ಥೋ ನಷ್ಟಚೇತನಃ ।
ಮಾಯಾಂ ಪ್ರಾಪ್ನೋತಿ ಮೃತ್ಯುಂ ವಾತದ್ವನ್ನಾನಾರ್ಥದೃಕ್ ಪುಮಾನ್ ॥೩॥

ಅರ್ಥ:- ರಾಜಸ ಅಹಂಕಾರದ ಕಾರ್ಯವು ಇಂದ್ರಿಯ ಸಮೂಹ ನಿದ್ರೆಯಿಂದ ಪರಾಭೂತವಾಗಲು ಜೀವವು ಕೇವಲ ಮನೋಭಾವ ರೂಪದಿಂದ ಸ್ವಪ್ನರೂಪ ಮಾಯೆಗೆ ಪ್ರಾಪ್ತವಾಗುವುದು. ನಂತರ ಮನವು ಲೀನವಾಗಲು ಅದರ ಚೇತನೆಯು ನಷ್ಟವಾದಂತಾಗಿ ಮೃತ್ಯುತುಲ್ಯ ಸುಷುಪ್ತಿಯನ್ನು ಹೊಂದುವುದು. ಈ ಪ್ರಕಾರವಾಗಿ ದ್ವೈತದ ಅಭಿಮಾನೀ ವಿಕ್ಷೇಪಕ್ಕೆ ಮತ್ತು ಲಯಕ್ಕೆ ಪ್ರಾಪ್ತನಾಗುವನು.

ಇಂದ್ರಿಯೇ ಜನ್ಮಲೀ ರಜೋಗುಣೇ । ತನ್ಮಾತ್ರಾ ವಿಷಯೋ ತಮೋಗುಣೇ । ತೀ ಇಂದ್ರಿಯೇ ವಿಷಯ ಸೇವುನಿ । ಠೇಲೀ ನಿದ್ರಾಸ್ಥಾನೀ ನಿಶ್ಚಳ ॥೬೮॥ ಜಾಗೃತೀ ''ವಿಶ್ವ'' ಅಭಿಮಾನೀ । ದೋನೀ ಜಾತೀ ಮಾವಳೋನೀ ।ತೇವ್ಹಾ ಮಿಥ್ಯಾ ಪ್ರಪಂಚ ಸ್ವಪ್ನೀ । ''ತೈಜಸ'' ಅಭಿಮಾನೀ ವಿಸ್ತಾರೀ ॥೬೯॥ ಸ್ಥೂಲ ದೇಹ ಅಸೇ ನಿಶ್ಚಳ । ಸ್ವಪ್ನೀ ಮನಚಿ ಕೇವಳ । ವಿಸ್ತಾರೀ ಗಾ ಭವಜಾಳ । ಲೋಕ ಸಕಳ ತ್ರಿಲೋಕೀ ॥೭೦॥ ತ್ಯಾ ಸ್ವಪ್ನಾಮಾಜಿಲೇ ಸೃಷ್ಟೀಸೀ ಜಾಣ । ಉತ್ಪತ್ತಿ ಸ್ಥಿತೀ ಆಣಿ ನಿದಾನ । ಸ್ವಯೇ ದೇಖತಾಂಹೀ ಆಪಣ । ಜನ್ಮ ಮರಣ ತೇ ಮಿಥ್ಯಾ ॥೭೧॥ ತೇವೀ ಹೇ ಅವಿದ್ಯಾ ದೀರ್ಘ ಸ್ವಪ್ನ । ವೃಥಾ ವಿಸ್ತಾರೀ ಅಭಿಮಾನ । ತೇಥೀಲ ಮಿಥ್ಯಾ ಜನ್ಮ ಮರಣ । ತೂ ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೭೨॥ ತುರುಝ್ಯಾ ನಿಜಸ್ವರೂಪಾಚ್ಯಾ ಠಾಯೀ । ಭೇದಾಚೀ ತಂವ ವಾರ್ತಾಹೀ ನಾಹೀ । ತೇಥೀಲ ಶುಭಾಶುಭ ಕಾಂಹೀ । ತುಜ ಸರ್ವಥಾ ಪಾಹೀ ಸ್ಪರ್ಶೇನಾ ॥೭೩॥

ಕಿಂ ಭದ್ರಂ ಕಿಮಭದ್ರಂ ವಾ ದ್ವೈತಸ್ಯಾವಸ್ತುನಃ ಕಿಯತ್ । ವಾಚೋದಿತಂ ತದನೃತಂ ಮನಸಾ ಧ್ಯಾತಮೇವ ಚ ॥೪॥

ಅರ್ಥ:- ಹೇ ಉದ್ಧವಾ, ದ್ವೈತವೆಂಬ ನಾವುದ ವಸ್ತುವೇ ಇಲ್ಲದಿರಲು ಕೆಟ್ಟದ್ದು, ಒಳ್ಳೆಯದೆಂಬ ಪ್ರಶ್ನೆಯೇ ನಿರ್ಮಾಣವಾಗುವುದಿಲ್ಲ. ವಿಶ್ವದಲ್ಲಿನ ಸರ್ವ ವಸ್ತುಗಳ ವರ್ಣನೆಯನ್ನು ವಾಣಿಯಿಂದ ಮಾಡುತ್ತಾರೆ ಮನಸ್ಸಿನಿಂದ ಅವುಗಳ ವಿಚಾರ ಮಾಡಲಾಗುವುದು. ಆದ್ದರಿಂದ ದೃಶ್ಯ ಮತ್ತು ಅನಿತ್ಯವಿರುವುದರಿಂದ ಅದರ ಮಿಥ್ಯತ್ವವು ಸ್ಪಷ್ಟವಾಗುವುದು.

ಜೇ ಜನ್ಮಲೇಚಿ ನಾಹೀ । ತೇ ಕಾಳೇ ಗೋರೇ ಸಾಂಗೂ ಕಾಯೀ । ಗ್ರಹಣೇವೀಣ ಕಾಂಹೀ । ಖಗ್ರಾಸ ಪಾಹೀ ದಿಸೇನಾ ॥೭೪॥

ನಿಂದೆ ಮತ್ತು ಸ್ತುತಿ ಇವು ಎಲ್ಲಿ ನಿರ್ಮಾಣವಾಗುವುವೋ ಅಲ್ಲಿ ಭೇದದ ಕ್ಷೋಭವು ಉಂಟಾಗಿ ಪ್ರಕಟವಾಗುತ್ತಿರುವುದು. ಇದರಿಂದ ಪರಮಾರ್ಥದ ನಾಶವಾಗುವುದು. ಹೀಗೆ ಇದೊಂದು ದೊಡ್ಡ ಅನರ್ಥವಾಗಿ ಪರಿಣಮಿಸುವುದು ॥೬೫॥ ನಿಂದೆಯಿಂದ ಅನರ್ಥವು ನಿಶ್ಚಯವಾಗಿ ಆಗುವುದು. ಇದಕ್ಕಾಗಿ ಯಾವ ಉದ್ರಿ ಇರುವುದಿಲ್ಲ. ತನ್ನ ನಿಜಸ್ವಾರ್ಥದ ಘಾತವನ್ನು ಮಾಡುವಂತಹ ರೋಖ ವ್ಯಾಪಾರವು ಮೈಮೇಲೆ ಬಂದು ಒದಗುವುದು ॥೬೬॥ ಭೇದಭಾವವು ಇದು ಸಂಪೂರ್ಣವಾಗಿ ಮಿಥ್ಯೆಯಾಗಿರುವುದು. ಈ ವಿಷಯಕ್ಕಾಗಿ ಪರಮಾರ್ಥವನ್ನು ದೃಢವಾಗಿ ಸಾಧಿಸುವುದಕ್ಕಾಗಿ ಶ್ರೀಕೃಷ್ಣನು ಸ್ವತಃ ಸ್ವಪ್ನದ ದೃಷ್ಟಾಂತವನ್ನು ಹೇಳುತ್ತಿರುವನು ॥೬೭॥

ರಜೋಗುಣದಿಂದ ಇಂದ್ರಿಯಗಳು ನಿರ್ಮಾಣವಾಗಿರುವುವು. ತಮೋಗುಣದಿಂದ ತನ್ಮಾತ್ರ ವಿಷಯಗಳಾಗಿರುವುವು. ಈ ಇಂದ್ರಿಯಗಳು ಜಾಗೃತೆಯಲ್ಲಿ ವಿಷಯಗಳನ್ನು ಸೇವಿಸಿ ಸುಷುಪ್ತಿಯಲ್ಲಿ ನಿಶ್ಚಲವಾಗಿರುವುವು ॥೬೮॥ ಜಾಗೃತ ಅವಸ್ಥೆಯಲ್ಲಿ ''ವಿಶ್ವ'' ಅಭಿಮಾನಿ ಹಾಗೂ ಜಾಗೃತಿ ಈ ಎರಡೂ ಇಲ್ಲದಾಗಲು ಆಗ ಮಿಥ್ಯಾ ಪ್ರಪಂಚರೂಪ ಸ್ವಪ್ನದಲ್ಲಿ ಸೂಕ್ಷ್ಮ ದೇಹಾಭಿಮಾನಿ ''ತೈಜಸ''ದ ವಿಸ್ತಾರವಾಗುವುದು ॥೬೯॥ ಸ್ವಪ್ನದಲ್ಲಿ ಸ್ಥೂಲದೇಹವು ನಿಶ್ಚಲವಾಗಿರುವುದು. ಆಗ ಮನವೇ ಈ ಎಲ್ಲ ಪ್ರಪಂಚದ ವಿಸ್ತಾರವನ್ನು ಮಾಡುತ್ತಿರುವುದು. ಇದೇ ತ್ರಿಭುವನ ಸರ್ವ ಲೋಕಗಳನ್ನು ಹುಟ್ಟಿಸುತ್ತಿರುವುದು ॥೭೦॥ ಈ ಸ್ವಪ್ನದಲ್ಲಿನ ಉತ್ಪತ್ತೀ, ಸ್ಥಿತೀ ಮತ್ತು ಲಯ ಜನ್ಮ ಮರಣ ಇವುಗಳನ್ನು ನಾವು ಪ್ರತ್ಯಕ್ಷವಾಗಿ ಕಂಡರೂ ಅವೆಲ್ಲವೂ ಮಿಥ್ಯೆಯಾಗಿರುವುವು ॥೭೧॥ ಅದರಂತೆ ಅಜ್ಞಾನವು ದೀರ್ಘವಾದ ಸ್ವಪ್ನವಾಗಿರುವುದು. ಅಭಿಮಾನಿಯು ವ್ಯರ್ಥವಾಗಿ ಇದರ ವಿಸ್ತಾರವನ್ನು ಮಾಡುತ್ತಿರುವನು. ಇದರಲ್ಲಿನ ಜನ್ಮ ಮರಣಗಳು ಮಿಥ್ಯೆಯಾಗಿರುವುವು. ನೀನು ಪೂರ್ಣತ್ವದಿಂದ ಪೂರ್ಣಬ್ರಹ್ಮನಾಗಿರುವೆ ॥೭೨॥ ನಿನ್ನ ಆತ್ಮಸ್ವರೂಪದಲ್ಲಿ ಯಾವ ಪ್ರಕಾರವಾಗಿಯೂ ಭೇದವಿರುವುದಿಲ್ಲ. ಅಲ್ಲಿ ಶುಭ ಅಥವಾ ಅಶುಭ ನಿನ್ನನ್ನು ಸ್ಪರ್ಶ ಕೂಡ ಮಾಡಲಾರದು ॥೭೩॥

ಯಾವನು ಜನ್ಮಕ್ಕೆ ಬಂದಿರುವುದೇ ಇಲ್ಲ. ಆತನಿಗೆ ಗೌರವರ್ಣ, ಕಪ್ಪು ವರ್ಣನೆಂದು ಹೇಗೆ ವರ್ಣಿಸಬೇಕು? ಗ್ರಹಣವಾಗದೇ ಖಗ್ರಾಸವು ಎಂದಿಗೂ ಕಾಣುವುದಿಲ್ಲ ॥೭೪॥

ಉಖರೀ ಭಾಸಲೇ ಮೃಗಜಳ । ತೇ ಖೋಲ ಕಿಂವಾ ಉಥಳ । ಮಧುರ ಕೀ ಕ್ಷಾರ ಕೇವಳ । ಸಾಂಗತಾ ವಿಕಳ ವಿವೇಕ ॥೭೫॥ ತೇವೀ ಮಿಥ್ಯಾ ಪ್ರಪಂಚಾಚೇ ಭಾನ । ತೇಥೀಲ ದೋಷ ಆಣಿ ಗುಣ । ನಿವಡಿತೀ ಜೇ ಸಜ್ಞಾನ । ತೇ ಜಾಣ ನಿಮಗ್ನ ಅಜ್ಞಾನಾಮಾಜೀ ॥೭೬॥ ಜೇವೀ ಆಂವಸೇಚಿಯೇ ರಾತೀ । ಅಂಧಾರಾ ಜೋಖೂ ಆಂಧಳೇ ಯೇತೀ । ತ್ಯಾಂಸೀ ಜೋಖಿತಾ ದೋಹೀ ಹಾತೀ । ಏಕಹೀ ರತೀ ತುಕೇನಾ ॥೭೭॥ ತೇವೀ ಪ್ರಪಂಚ ಮಿಥ್ಯಾಪಣೇ । ತೇಥ ಕಾನೀ ಜೇ ಐಕಣೇ । ಕಾ ಡೋಳಾ ಜೇ ದೇಖಣೇ । ರಸನಾ ಜೇ ಚಾಖಣೇ ಸ್ಪರ್ಶಣೇ ಅಂಗೇ ॥೭೮॥ ಹಾತಾಚೇ ಘೇಣೇದೇಣೇ । ಪಾಯಾಂಚೇ ಜೇ ಚಾಲಣೇ । ವಾಚೇಚೇ ಜೇ ಬೋಲಣೇ । ಕಲ್ಪಣೇ ಮನೇ ತೇ ಮಿಥ್ಯಾ ॥೭೯॥ ಅಹಂಕಾರಾಚಾ ಬಡಿವಾರ । ಚಿತ್ತಾಚಾ ಚಿಂತನಪ್ರಕಾರ । ಬುದ್ಧೀಚಾ ವಿವೇಕವಿಚಾರ । ಹಾ ಸಮೂಳ ವ್ಯವಹಾರ ಮಿಥ್ಯಾ ತೇಥ ॥೮೦॥ ಚಿತ್ರೀ ಜಳ ಆಣಿ ಹುತಾಶನ । ಅಂತ್ಯಜ ಆಣಿ ಬ್ರಾಹ್ಮಣ । ವ್ಯಾಘ್ರ ಆಣಿ ಹರಿಣ । ಭಾಸತಾಂಹೀ ಜಾಣ ಭಿಂತೀಚಿ ಭಾಸೇ ॥೮೧॥ ತೇವೀ ಹಾ ಪ್ರಪಂಚ ದ್ವೈತಯುಕ್ತ । ಭಾಸತಾ ಭಾಸೇ ವಸ್ತು ಅದ್ವೈತ । ಶುಭಾಶುಭ ಕೈಚೇ ತೇಥ । ಬ್ರಹ್ಮ ಸದೋದಿತ ಪರಿಪೂರ್ಣ ॥೮೨॥ ಕೇಳೀಚಾ ದಿಂಡ ಉಕಲಿತಾ । ಜೋ ಜೋ ಪದರ ತೋ ತೋ ರಿತಾ । ತೇವೀ ದೇಹಾದಿ ಪ್ರಪಂಚ ವಿವಂಚಿತಾ । ಮಿಥ್ಯಾ ತತ್ತ್ವತಾ ಮಾಯಿಕ ॥೮೩॥ ಮಿಥ್ಯಾ ಪ್ರಪಂಚಾಚ್ಯಾ ಠಾಯೀ । ಶುಭಾಶುಭ ತೇ ಲಟಿಕೇ ಪಾಹೀ । ಸತ್ಯ ವಸ್ತು ಠಾಯೀಂಚ್ಯಾ ಠಾಯೀ । ಶುಭಾಶುಭ ನಾಹೀ ಅಣುಮಾತ್ರ ॥೮೪॥ ಜೋ ಶುಭಾಶುಭ ಮ್ಹಣೇ ಆಹೇ । ತ್ಯಾಚೀ ಕಲ್ಪನಾ ತ್ಯಾ ಸಂಮುಖ ಹೋಯೇ । ನಿಜಕಲ್ಪನಾಮಹಾಭಯೇ । ಜನ್ಮ ಮರಣ ವಾಹೇ ಲಟಿಕೇಚಿ ॥೮೫॥

ಛಾಯಾ ಪ್ರತ್ಯಾಹ್ವಯಾಭಾಸಾ ಹ್ಯಸಂತೋऽಪ್ಯರ್ಥಕಾರಿಣಃ ।
ಏವಂ ದೇಹಾದಯೋ ಭಾವಾ ಯಚ್ಛಂತ್ಯಾಮೃತ್ಯು ತೋ ಭಯಮ್ ॥೫॥

ಅರ್ಥ:- ಪ್ರತಿಬಿಂಬ, ಪ್ರತಿಧ್ವನೀ, ಶುಕ್ತಿರಜತ, ಮೃಗಜಳ ಇತ್ಯಾದಿ ಆಭಾಸಗಳು ಮಿಥ್ಯೆಯಾಗಿದ್ದರೂ ಕಾರ್ಯಗಳನ್ನು ಹುಟ್ಟಿಸುವುವು. ಅದರಂತೆ ಈ ದೇಹಾದಿ ಪದಾರ್ಥಗಳು ಮಿಥ್ಯೆಯಾಗಿರುವುವು. ಜ್ಞಾನದಿಂದ ಇದರ ಅಸತ್ಯದ ಬೋಧವಾಗುವವರೆಗೂ ನಿವೃತ್ತಿಯಾಗದೇ, ಅಜ್ಞಾನಿಗಳಿಗೆ ಭಯಭೀತರನ್ನಾಗಿ ಮಾಡುವುದು.

ಜಳೀ ಪ್ರತಿಬಿಂಬ ಸಾಚ ನಸೇ । ಜೋ ಪಾಹೇ ತೋ ಬಿಂಬಲಾ ದಿಸೇ । ಮಿಥ್ಯಾ ಪ್ರಪಂಚಾಚೇ ರೂಪ ತೈಸೇ । ನಿಜಕಲ್ಪನಾವಶೇ ಭಾಸತ ॥೮೬॥

ಬಯಲು ಭೂಮಿಯ ಮೇಲೆ ಮೃಗಜಲದ ಭಾಸವಾಗಲು ಅದು ಆಳವಾಗಿದೆ, ತಟ್ಟೆಯಾಗಿದೆ, ನೀರು ಸಿಹಿಯಾಗಿದೆ, ಉಪ್ಪಾಗಿದೆ ಎಂದು ಹೇಳಲು ಹೊರಟರೆ ವಿಚಾರವೇ ಕುಂಠಿತವಾಗುವುದು ॥೭೫॥ ಅದರಂತೆ ಈ ಯಾವ ಪ್ರಪಂಚದ ಭಾಸವೇ ಮೂಲತಃ ಮಿಥ್ಯೆಯಾಗಿರಲು ಅದರಲ್ಲಿ ಗುಣದೋಷಗಳನ್ನು ಹುಡುಕುವವರು ಅಜ್ಞಾನದಲ್ಲಿ ಮುಳುಗಿರುವರು ಎಂದು ತಿಳಿಯಬೇಕು ॥೭೬॥ ಅಮವಾಸ್ಯೆಯ ರಾತ್ರಿಯಲ್ಲಿ ಕತ್ತಲೆಯನ್ನು ತೂಕ ಮಾಡಲು ಕುರುಡರು ಬಂದು ಅವರು ತಮ್ಮ ಎರಡೂ ಕೈಗಳಿಂದ ಕತ್ತಲೆಯನ್ನು ತೂಗಹತ್ತಲು ಅವರಿಗೆ ರವೆ ಎಷ್ಟೂ ಕೂಡ ತೂಕವಾಗಲಾರದು ॥೭೭॥ ಅದರಂತೆ ಈ ಪ್ರಪಂಚವು ಮಿಥ್ಯೆಯಾಗಿರುವುದು. ಆದ್ದರಿಂದ ಅದರಲ್ಲಿನ ಕಿವಿಗಳಿಂದ ಕೇಳುವಿಕೆ, ಕಣ್ಣುಗಳಿಂದ ನೋಡುವಿಕೆ, ನಾಲಿಗೆಯಿಂದ ಸವಿಯುವಿಕೆ, ಅಥವಾ ಅಂಗದಿಂದ ಸ್ಪರ್ಶಮಾಡುವಿಕೆ ॥೭೮॥ ಕೈಗಳಿಂದ ಕೊಡುವ ತೆಗೆದುಕೊಳ್ಳುವಿಕೆ, ಕಾಲುಗಳಿಂದ ನಡೆದಾಡುವಿಕೆ, ವಾಣಿಯಿಂದ ನುಡಿಯುವಿಕೆ, ಅಥವಾ ಮನಸ್ಸಿನಿಂದ ಕಲ್ಪನೆ ಮಾಡುವಿಕೆ ಈ ಎಲ್ಲವೂ ಮಿಥ್ಯೆಯಾಗಿರುವುವು ॥೭೯॥ ಅದರಂತೆ ಅಹಂಕಾರದ ಬಡಿವಾರವು, ಚಿತ್ತದ ಚಿಂತನೆಯು, ಬುದ್ಧಿಯ ವಿಚಾರಶೀಲತೆಯು ಈ ಎಲ್ಲ ವ್ಯವಹಾರಗಳು ಪೂರ್ಣ ಮಿಥ್ಯೆಯಾಗಿರುವುವು ॥೮೦॥ ಗೋಡೆಯ ಮೇಲೆ ಬರೆದಿರುವ ಚಿತ್ರದಲ್ಲಿ ನೀರು, ಅಗ್ನಿ, ಅಂತ್ಯಜ, ಬ್ರಾಹ್ಮಣ, ಹುಲಿ ಹಾಗೂ ಚಿಗರೆ ಇವು ಕಾಣುತ್ತಿದ್ದರೂ ಅಲ್ಲಿ ಯಾವ ಭಿನ್ನತ್ವವಿರದೇ ಒಂದೇ ಒಂದು ಗೋಡೆ ಮಾತ್ರವಿರುವುದು ॥೮೧॥ ಅದರಂತೆ ಈ ಪ್ರಪಂಚವೆಲ್ಲವೂ ದ್ವೈತರೂಪದಿಂದ ತೋರುತ್ತಿದ್ದರೂ ಕೂಡ ಅದರಲ್ಲಿ ಅದ್ವೈತ ವಸ್ತುವೇ ಭಾಸವಾಗುವುದು. ಅಲ್ಲಿ ಶುಭ, ಅಶುಭ ಎಲ್ಲಿಯದು ? ಸರ್ವತ್ರವೂ ಬ್ರಹ್ಮವೇ ಪರಿಪೂರ್ಣ ರೂಪದಿಂದ ಇರುವುದು ॥೮೨॥ ಬಾಳೆಯ ಕಂಭವನ್ನು ಸುಲಿಯುತ್ತ ಸಾಗಿದರೆ ಅದರಲ್ಲಿ ಕೇವಲ ಏನೂ ಇಲ್ಲದ ಪದರುಗಳು ಹೊರಡುವುವು. ಅದರಂತೆ ದೇಹಾದಿ ಪ್ರಪಂಚದ ವಿಚಾರವನ್ನು ಮಾಡಲು ನಿಜವಾಗಿಯೂ ಮಾಯಿಕವಾಗಿ ಮಿಥ್ಯೆಯಾಗಿರುವುದು ॥೮೩॥ ಮಿಥ್ಯೆಯಾಗಿರುವ ಪ್ರಪಂಚದಲ್ಲಿ ಶುಭಾಶುಭಗಳೂ ಕೂಡ ಸುಳ್ಳಾಗಿಯೇ ಇರುವುವು. ಸತ್ಯರೂಪ ಪರಬ್ರಹ್ಮವು ಇದ್ದಲ್ಲೇ ಇರುವುದು. ಅದರಲ್ಲಿ ಸ್ವಲ್ಪವೂ ಕೂಡ ಶುಭಾಶುಭವಿರುವುದಿಲ್ಲ ॥೮೪॥ ಶುಭಾಶುಭಗಳು ಇವೆ ಎಂದು ಹೇಳುವವನ ಕಲ್ಪನೆಯೇ ಅವನ ಮುಂದೆ ನಿಂತಿರುವುದು. ತನ್ನ ಕಲ್ಪನೆಯ ಮಹಾಭಯದಿಂದಲೇ ಮಿಥ್ಯೆಯಾಗಿರುವ ಜನ್ಮ ಮರಣಗಳನ್ನು ಸೋಸುತ್ತಿರುವನು ॥೮೫॥

ಜಲದಲ್ಲಿ ನಿಜವಾಗಿಯೂ ಯಾವ ಪ್ರತಿಬಿಂಬವೂ ಇರುವುದಿಲ್ಲ. ಆದರೆ ಅಲ್ಲಿ ಯಾರು ನೋಡಲು ಹೋಗುವವರೋ ಆತನ ಪ್ರತಿಬಿಂಬವೇ ಕಾಣುತ್ತಿರುವುದು. ಅದರಂತೆ ಪ್ರಪಂಚದ ಸ್ವರೂಪವು ಕೂಡ ಮಿಥ್ಯೆಯಾಗಿರುವುದು. ಇದು ತನ್ನ ಮನಸ್ಸಿನ ಕಲ್ಪನೆಯಿಂದ ತೋರುತ್ತಿರುವುದು ॥೮೬॥

ತೇ ಪ್ರತಿಬಿಂಬ ಪಾಹೋನಿ ಡೋಳಾ । ಮೀ ಮ್ಹಣೋನಿ ಲಾವಿಜೇ ಟಿಳಾ । ತೇವೀ ದೇಹಾಭಿಮಾನಾಚಾ ಸೋಹಳಾ । ಜೀವಾಚ್ಯಾ ಕಪಾಳಾ ಆದಳೇ ॥೮೭॥ ಕಾ ಆಪುಲೀಂಚಿ ಉತ್ತರೇ । ಪಡಿಸಾದೇ ಹೋತೀ ಪ್ರತ್ಯುತ್ತರೇ । ತೇ ಮಿಥ್ಯಾಚಿ ಪರೀ ಸಾಚೋಕಾರೇ । ಶ್ರವಣೀ ಅಕ್ಷರೇ ಉಮಟತೀ ॥೮೮॥ ನಿಶ್ಚಳ ದೋರಾಚೇ ನಿಜರೂಪ । ಭ್ರಮೇ ಭಾಸಲಾ ಪ್ರಚಂಡ ಸರ್ಪ । ತೋ ಮಿಥ್ಯಾ ಪರೀ ಭಯಕಂಪ । ಮಹಾಖಟಾಟೋಪ ಉಪಜವೀ ॥೮೯॥ ಯಾಪರೀ ಅಸಂತ ದೇಹಾದಿಕ । ದೇಹಾಭಿಮಾನೇ ಜೀವಾಸೀ ದೇಖ । ಜನ್ಮ ಮರಣಾವರ್ತ ಅನೇಕ । ಆಕಲ್ಪ ದುಃಖ ಭೋಗವೀ ॥೯೦॥ '' ಆತ್ಮ್ಯಾಪಾಸೋನಿ ದೇಹಾದಿ ಭೇದ । ಉಪಜಲಾ ಹೇ ಬೋಲೇ ವೇದ । ವೇದರೂಪೇ ತೂ ಪ್ರಸಿದ್ಧ । ಮಿಥ್ಯಾ ವೇದವಾದ ಘಡೇ ಕೇವೀ'' ॥೯೧॥ ಐಸಾ ಉದ್ಧವಾಚಾ ಆವಾಂಕಾ । ವೇದವಾದಾಚೀ ಆಶಂಕಾ । ಸಮೂಳ ಕಳಲೀ ಯದುನಾಯಕಾ । ತೇಚಿ ಉತ್ತರ ದೇಖಾ ದೇತಸೇ ॥೯೨॥

ಆತ್ಮೈವ ತದಿದಂ ವಿಶ್ವಂ ಸೃಜ್ಯತೇ ಸೃಜತಿ ಪ್ರಭುಃ । ತ್ರಾಯತೇ ತ್ರಾತಿ ವಿಶ್ವಾತ್ಮಾ ಹ್ರಿಯತೇ ಹರತೀಶ್ವರಃ ॥೬॥
ತಸ್ಮಾನ್ನಹ್ಯಾತ್ಮನೋಽನ್ಯಸ್ಮಾದನ್ಯೋ ಭಾವೋ ನಿರೂಪಿತಃ । ನಿರೂಪಿತೇಯಂ ತ್ರಿವಿಧಾ ನಿರ್ಮೂಲಾ ಭಾತಿರಾತ್ಮನಿ ॥

ಅರ್ಥ:- ಹೇ ಉದ್ಧವಾ, ಯಾವ ಪ್ರತ್ಯಕ್ಷ ಅಥವಾ ಪರೋಕ್ಷ ವಸ್ತು ಅದು ಆತ್ಮವಾಗಿರುವುದು. ಅದು ಸರ್ವಶಕ್ತಿಮಾನವಾಗಿರುವುದು. ಕಾಣುವ ವಿಶ್ವಸೃಷ್ಟಿಗೆ ಅದು ನಿಮಿತ್ತ ಕಾರಣವಾಗಿರುವುದು. ಉಪರಾಂತ ಕಾರಣವಾಗಿರುವುದು. ಅದು ವಿಶ್ವವನ್ನು ಹುಟ್ಟಿಸುವುದು ಹಾಗೂ ತಾನೇ ಆಗುವುದು. ಅದು ರಕ್ಷಕವು ಮತ್ತು ರಕ್ಷಿಸುತ್ತಿರುವುದು. ಸರ್ವಾತ್ಮನು ಅದರ ಸಂಹಾರವನ್ನು ಮಾಡುವನು ಮತ್ತು ಅದರ ಸಂಹಾರವಾಗುವುದು. ಅದೂ ಕೂಡ ಅದೇ ಆಗಿರುವುದು. ವ್ಯವಹಾರ ದೃಷ್ಟಿಯಿಂದ ನೋಡಲು ಆತ್ಮವು ವಿಶ್ವಕ್ಕಿಂತ ಅವಶ್ಯವಾಗಿ ಭಿನ್ನವಾಗಿರುವುದು. ಆದರೆ ಆತ್ಮದೃಷ್ಟಿಯಿಂದ ನೋಡಿದರೆ ಅದರ ಹೊರತಾದ ಬೇರೆ ಯಾವ ವಸ್ತುವೂ ಇರುವುದಿಲ್ಲ. ಅದರ ಅತಿರಿಕ್ತವಾಗಿ ಯಾವುದೇ ಪ್ರತೀತವಾಗಲಿ ಅದನ್ನು ಯಾವುದೇ ಪ್ರಕಾರವಾಗಿ ವಿವೇಚನೆ ಮಾಡಲು ಬರುವುದಿಲ್ಲ.

ಪ್ರಪಂಚ ಪ್ರತ್ಯಕ್ಷ ವಿದ್ಯಮಾನ । ತೇಣೇ ಭೇದಯುಕ್ತ ಝಾಲೇ ಮನ । ತೇಥ ಬೋಧೀ ಮಾಝೇ ವೇದವಚನ । ಪ್ರಪಂಚ ಅಭಿನ್ನ ನಿಜಾತ್ಮತಾ ॥೯೩॥ ಮೂಳೀ ಊಂಸಚಿ ಬೀಜೀ ವಿರೂಢೇ । ತೋ ಊಂಸ ಊಂಸಪಣೇ ಕಾಂಡಾ ಚಢೇ । ತೇವೀ ಪ್ರಪಂಚ ವಸ್ತುಯೋಗೇ ವಾಢೇ । ವಾಡೇಕೋಡೇ ತದ್ರೂಪ ॥೯೪॥ ಜೈಸೇ ಸೋನಿಯಾಚೇ ಝಾಲೇ ಲೇಣೇ । ತೇ ವರ್ತತಾ ವರ್ತೇ ಸೋನೇಪಣೇ । ತೇಣೇ ಮೋಡಲಿಯಾಹೀ ಸೋನೇ । ಸೋನೇಪಣೇ ಸ್ವತಃ ಸಿದ್ಧ ॥೯೫॥ ತಿಳಾಚಿ ಪುತಳೀ ಕೇಲೀ । ತೇ ತಿಳಾವಯವೀ ಶೋಭೇ ಆಲೀ । ತೇ ಮೋಡಿತಾ ನ ಮೋಡಿತಾ ಭಲೀ। ಅಸೇ ಸಂಚಲೀ ತಿಳರೂಪ ॥೯೬॥ ತೇವೀ ಉತ್ಪತ್ತಿ ಸ್ಥಿತಿ ನಿದಾನ । ಪ್ರಪಂಚಾಸೀ ಹೋತಾ ಜಾಣ । ತೇಥ ಆದಿ ಮಧ್ಯ ಅವಸಾನ । ವಸ್ತು ಪರಿಪೂರ್ಣ ಸಂಚಲೀ ॥೯೭॥ ಜೇ ಏಥ ಭಾಸಲೇ ಚರಾಚರ । ತೇ ಮೀ ಆತ್ಮಚಿ ಸಾಚಾರ । ಮಜವೇಗಳಾ ಜಗಾಸೀ ಥಾರ । ಅಣುಮಾತ್ರ ಅಸೇನಾ ॥೯೮॥

ಜಲದಲ್ಲಿನ ತನ್ನ ಪ್ರತಿಬಿಂಬವನ್ನು ಕಂಡು ''ಇದು ನಾನೇ ಇರುವೆನು'' ಎಂದು ಹೇಳುತ್ತ ಅದಕ್ಕೆ ತಿಲಕವನ್ನು ಹಚ್ಚಿದಂತೆ ದೇಹಾಭಿಮಾನದ ವೈಭವವು ಜೀವದ ಹಣೆಗೆ ಬಡೆಯುತ್ತಿರುವುದು ॥೮೭॥ ಅಥವಾ ತಾನೇ ನುಡಿದಿರುವ ಶಬ್ದಗಳು ಪ್ರತಿಧ್ವನಿಯಲ್ಲಿ ಮೂಡುತ್ತಿರುವುವು. ಆದರೆ ಅವು ಸುಳ್ಳಾಗಿರುವುವು. ಹೀಗಿದ್ದರೂ ಕಿವಿಗಳ ಮೇಲೆ ಆ ಶಬ್ದಗಳು ನಿಜವೆನ್ನುವಂತೆ ಬೀಳುತ್ತಿರುವುವು ॥೮೮॥ ಹಗ್ಗದ ಸ್ವರೂಪವು ತಾನಿದ್ದಂತೆಯೇ ಇರುವುದು. ಆದರೆ ಭ್ರಮೆಯ ಕಾರಣವಾಗಿ ಇದು ಹಗ್ಗವಲ್ಲದೇ ಭಯಾನಕ ಸರ್ಪವೆಂಬ ಭಾಸವಾಗುವುದು. ಇದು ಮಿಥ್ಯೆಯಾಗಿರುವುದು. ಆದರೆ ಭಯದಿಂದ ದೇಹದಲ್ಲಿ ನಡುಕು ಉಂಟಾಗಿ ದೊಡ್ಡ ಗದ್ದಲವೇ ನಿರ್ಮಾಣವಾಗುವುದು ॥೮೯॥ ಇದೇ ಪ್ರಕಾರವಾಗಿ ದೇಹಾದಿಕವು ಮಿಥ್ಯೆಯಾಗಿರುವುದು. ದೇಹಾಭಿಮಾನವು ಜೀವಕ್ಕೆ ಜನ್ಮ ಮರಣ ರೂಪ ತಿರುಗಣಿಯಲ್ಲಿ ಬೀಳಿಸಿ ಕಲ್ಪದವರೆಗೆ ದುಃಖವನ್ನು ಭೋಗಿಸಲು ಹಚ್ಚುವುದು ॥೯೦॥ ಆತ್ಮದಿಂದ ದೇಹಾದಿ ಭೇದವು ನಿರ್ಮಾಣವಾಗಿದೆ ಎಂದು ವೇದವು ಹೇಳುವುದು. ನೀನು ವೇದರೂಪದಿಂದ ಪ್ರಸಿದ್ಧನಾಗಿರುವೆ. ಹಾಗಾದರೆ ಈ ಮಿಥ್ಯಾವಾದವು ಹೇಗೆ ಸಂಭವಿಸುವುದು? ॥೯೧॥ ಹೀಗಿರುವ ಉದ್ಧವನ ಮನದಲ್ಲಿನ ಅನುಮಾನವನ್ನು ಶ್ರೀಕೃಷ್ಣನು ತಿಳಿದುಕೊಂಡು ಅದಕ್ಕಾಗಿ ಈಗ ಉತ್ತರವನ್ನು ಕೊಡುತ್ತಿರುವನು ॥೯೨॥

ಪ್ರಪಂಚವು ಪ್ರತ್ಯಕ್ಷವಾಗಿ ಇರುವುದು ತೋರುವುದು. ಆದ್ದರಿಂದ ಮನವು ಭೇದಯುಕ್ತವಾಗಿರುವುದು. ನನ್ನ ವೇದವಚನವು ಪ್ರಪಂಚವು ಆತ್ಮಸ್ವರೂಪದಲ್ಲಿ ಅಭಿನ್ನವಾಗಿದೆ ಎಂದು ಬೋಧಿಸುವುದು ॥೯೩॥ ಬೀಜದಲ್ಲಿ ಕಬ್ಬು ಇರುವುದರಿಂದ ಕಾಂಡರೂಪದಿಂದ ಕಬ್ಬಾಗಿಯೇ ಬೆಳೆಯುವುದು. ಅದರಂತೆ ಪ್ರಪಂಚವು ಬ್ರಹ್ಮನಿಂದ ತದ್ರೂಪವಾಗುವುದು ॥೯೪॥ ಬಂಗಾರದ ಆಭರಣಗಳನ್ನು ಮಾಡಲು ಬಂಗಾರವೇ ಅದರಲ್ಲಿರುವುದು. ಆಭರಣವನ್ನು ಮುರಿದರೂ ಕೂಡ ಬಂಗಾರವು ಸ್ವತಃ ಸಿದ್ಧವಾಗಿರುವುದು ॥೯೫॥ ಅಥವಾ ಎಳ್ಳಿನಿಂದ ಗೊಂಬೆಯನ್ನು ಮಾಡಲು ಆ ಗೊಂಬೆಯು ಎಳ್ಳಿನ ಅವಯವಗಳಿಂದ ಶೋಭಿಸುತ್ತಿರುವುದು. ಅದು ಹಾಗೆಯೇ ಇರಲಿ ಅಥವಾ ಮುರಿದು ಹೋಗಲಿ ಎಳ್ಳು ಮಾತ್ರ ಇದ್ದೇ ಇರುವುದು ॥೯೬॥ ಅದರಂತೆ ಪ್ರಪಂಚಕ್ಕೆ ಸೃಷ್ಟಿ, ಸ್ಥಿತೀ, ಲಯಗಳು ಪ್ರಾಪ್ತವಾದರೂ ಕೂಡ ಆದಿ, ಮಧ್ಯ, ಅಂತ್ಯದಲ್ಲಿ ಒಂದೇ ಒಂದಾದ ಆತ್ಮತತ್ವವೇ ಪರಿಪೂರ್ಣವಾಗಿ ತುಂಬಿಕೊಂಡೇ ಇರುವುದು ॥೯೭॥ ಎಲ್ಲಿ ಚರಾಚರವು ತೋರುವುದೋ, ಅಲ್ಲಿ ನಿಜವಾಗಿಯೂ ನಾನೇ ಆತ್ಮನಾಗಿರುವೆನು. ನನ್ನ ಹೊರತಾಗಿ ಈ ಜಗತ್ತಿಗೆ ಅಣು ಮಾತ್ರವೂ ಕೂಡ ಅಸ್ತಿತ್ವವಿರುವುದಿಲ್ಲ ॥೯೮॥

ಏವಂ ಸೃಜ್ಯ ಆಣಿ ಸೃಜಿತಾ । ಪಾಲ್ಯ ಆಣಿ ಪ್ರತಿಪಾಳಿತಾ । ಸಂಹಾರ ಆಣಿ ಸಂಹರ್ತಾ । ಮೀ ಏಕಾತ್ಮತಾ ಭಗವಂತ ॥೯೯॥ ಏಥ ಉತ್ಪತ್ತಿ ಸ್ಥಿತಿ ನಿಧನ । ತ್ರಿವಿಧರೂಪೇ ಪ್ರಪಂಚ ಭಿನ್ನ । ಯಾ ಸರ್ವಾಂಸೀ ಮೀ ಅಧಿಷ್ಠಾನ । ಮಜವೇಗಳೇ ಜಾಣ ಅಸೇನಾ ॥೧೦೦॥ ಪ್ರಪಂಚ ಮಜವರೀ ಆಭಾಸೇ । ಪರೀ ಮೀ ಪ್ರಪಂಚಾಮಾಜೀ ನಸೇ । ಜೇವೀ ಮೃಗಜಳಾಚೇನಿ ರಸೇ । ಸೂರ್ಯ ಕಾಳವಶೇ ಭಿಜೇನಾ ॥೧೦೧॥ ತ್ರಿವಿಧ ಪ್ರಪಂಚಾಚೇ ಜಾಳ । ಮಜವರೀ ದಿಸೇ ಹೇ ನಿರ್ಮೂಳ । ಜೇವೀ ಗಗನ ಭಾಸೇ ಸುನೀಳ । ಪರೀ ತೇಥ ಅಳುಮಾಳ ನೀಳಿಮಾ ನಾಹೀ ॥೧೦೨॥ ''ಜಗ ಪ್ರತ್ಯಕ್ಷ ಡೋಳಾ ದಿಸೇ । ತೇ ತೂ ನಿರ್ಮೂಳ ಮ್ಹಣಸೀ ಕೈಸೇ'' । ಹೇ ಆಶಂಕಾ ಮಾನಿಸೀ ಮಾನಸೇ । ಐಕ ಅನಾಯಾಸೇ ತೋ ಬೋಧ ॥೧೦೩॥

ಇದಂ ಗುಣಮಯಂ ವಿದ್ಧಿ ತ್ರಿವಿಧಂ ಮಾಯಯಾ ಕೃತಮ್ ॥೭॥
ಏತದ್ವಿದ್ವಾನ್ಮದುದಿತಂ ಜ್ಞಾನವಿಜ್ಞಾನನೈಪುಣಮ್ । ನ ನಿಂದತಿ ನ ಚ ಸ್ತೌತಿ ಲೋಕೇ ಚರತಿ ಸೂರ್ಯವತ್ ॥೮॥

ಅರ್ಥ:- ಈ ಯಾವ ಅಧ್ಯಾತ್ಮಿಕಾದಿರೂಪ ಮೂರು ಪ್ರಕಾರದ ಪ್ರತೀತಿಯು ಆತ್ಮನಲ್ಲಿ ಮೂಲತಃ ಇರುವುದಿಲ್ಲ. ಇದು ಸತ್ವರಜಾತ್ಮಕ ತ್ರಿವಿಧ ಗುಣಮಯ ಜಗತ್ತು ಮಾಯಾ ನಿರ್ಮಿತವಾಗಿರುವುದು ॥೭॥ ಹೇ ಉದ್ಧವಾ, ನಿನಗೆ ನಾನು ಜ್ಞಾನ ಮತ್ತು ವಿಜ್ಞಾನದ ಉತ್ತಮ ಸ್ಥಿತಿಯ ವರ್ಣನೆಯನ್ನು ಮಾಡಿರುವೆನು. ಯಾವ ಪುರುಷನು ಈ ವಚನಗಳ ರಹಸ್ಯವನ್ನು ತಿಳಿಯುವನೋ, ಆತನು ಯಾರನ್ನೂ ಹೊಗಳುವುದಿಲ್ಲ ಮತ್ತು ಯಾರನ್ನೂ ತೆಗಳುವುದಿಲ್ಲ. ಆತನು ಈ ಜಗತ್ತಿನಲ್ಲಿ ಸೂರ್ಯನಂತೆ ಸಮಭಾವನೆಯಿಂದ ಮುನ್ನಡೆಯುವನು ॥೮॥

ಅಧ್ಯಾತ್ಮ ಅಧಿದೈವ ಅಧಿಭೂತ । ಹೇ ತ್ರಿವಿಧ ಜಗ ಮಾಯಾಕೃತ । ನಸತೇಮಜಮಾಜೀ ಆಭಾಸತ । ಜಾಣ ನಿಶ್ಚಿತ ತ್ರಿಗುಣಾತ್ಮಕ ॥೧೦೪॥ ಉದ್ಧವಾ ಮಿಥ್ಯಾ ಮ್ಹಣೋನಿ ತೂ ಏಥ । ಝಣೇ ಹೋಶೀ ಉಪೇಕ್ಷಾಯುಕ್ತ । ಯೇಣೇ ಮದ್ವಾಕ್ಯೇ ಸಾಧುಸಂತ । ಜ್ಞಾನವಿಜ್ಞಾನಾರ್ಥ ಪಾವಲೇ ॥೧೦೫॥ ಪ್ರಪಂಚಾಚೇ ಮಿಥ್ಯಾ ಭಾನ । ತೇಚಿ ಜ್ಞಾನಾಚೇ ಮುಖ್ಯ ಜ್ಞಾನ । ಯೇಣೇ ಜ್ಞಾನೇ ಜೋ ಸಜ್ಞಾನ । ತೋಚಿ ಸಮಾನ ಸರ್ವಾಭೂತೀ ॥೧೦೬॥ ಯಾಲಾಗೀ ಭೂತಾಂಚೇ ಗುಣಾಗುಣ । ಕದಾ ನ ವದೇ ನಿಂದಾಸ್ತವನ । ಸೂರ್ಯಾಚೇ ಪರೀ ಜಾಣ । ವಿಚರೇ ಆಪಣ ಸಮಸಾಮ್ಯೇ ॥೧೦೭॥ ಬದರಿಕಾಶ್ರಮ ಉತ್ತರ ದೇಶೀ । ಸೇತುಬಂಧ ದಕ್ಷಿಣೇಸೀ । ಸೂರ್ಯ ಸಂಮುಖ ಸರ್ವಾಸೀ । ವಿಮುಖತಾ ತ್ಯಾಸೀ ಅಸೇನಾ ॥೧೦೮॥ ಸೂರ್ಯ ಸಂಮುಖ ಪೂರ್ವೇಚ್ಯಾಂಸೀ । ತೋಚಿ ವಿಮುಖ ಪಶ್ಚಿಮೇಚ್ಯಾಂಸೀ । ನಾಹೀ ತೇವೀ ಮೀ ಸರ್ವತ್ರ ಸರ್ವಾಸೀ । ವಿಮುಖತಾ ಮಜಸೀ ಅಸೇನಾ ॥೧೦೯॥

ಈ ರೀತಿಯಾಗಿ ಉತ್ಪನ್ನ ಮಾಡಲು ಯೋಗ್ಯವಾದ ಜಗತ್ತು ಮತ್ತು ಉತ್ಪನ್ನಮಾಡುವವ, ಪಾಲನೆ ಮತ್ತು ಪಾಲಕ, ಸಂಹಾರ ಮತ್ತು ಸಂಹಾರಕರ್ತಾ ಈ ಎಲ್ಲವೂ ಏಕಾತ್ಮತೆಯಿಂದ ಭಗವಂತನಾದ ನಾನೇ ಆಗಿರುವೆನು ॥೯೯॥ ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಮೂರು ಪ್ರಕಾರಗಳಿಂದ ಪ್ರಪಂಚವು ಭಿನ್ನವಾಗಿ ಭಾಸವಾದರೂ ಕೂಡ ಎಲ್ಲಕ್ಕೂ ಅಧಿಷ್ಠಾನನಾಗಿರುವ ಭಗವಂತನು ನಾನಾಗಿರುವೆನು. ನನ್ನ ಹೊರತಾಗಿ ಅನ್ಯವು ಯಾವುದೂ ಇರುವುದಿಲ್ಲ ॥೧೦೦॥ ಯಾವ ಪ್ರಕಾರವಾಗಿ ಮೃಗಜಲದಲ್ಲಿ ಸೂರ್ಯನು ಎಂದಿಗೂ ತೋಯಲಾರನೋ, ಅದರಂತೆಯೇ ನನ್ನಲ್ಲಿ ಪ್ರಪಂಚವು ಭಾಸವಾದರೂ ಕೂಡ ನಾನು ಪ್ರಪಂಚದಲ್ಲಿರುವುದಿಲ್ಲ ॥೧೦೧॥ ಆಕಾಶವು ಇದು ನೀಲಿಯಾಗಿ ಕಾಣಿಸುವುದು. ಆದರೆ ಅದರಲ್ಲಿ ನೀಲಿ ಬಣ್ಣದ ಲೇಪವು ಲೇಶ ಮಾತ್ರವೂ ಇರುವುದಿಲ್ಲ. ಅದರಂತೆ ತ್ರಿವಿಧ ಪ್ರಪಂಚದ ಜಾಲವು ನನ್ನಲ್ಲಿ ತೋರುತ್ತಿದ್ದರೂ ಅದು ಮಿಥ್ಯೆಯಾಗಿರುವುದು ॥೧೦೨॥ ಯಾವ ಈ ಜಗತ್ತು ಕಣ್ಣುಗಳಿಗೆ ಪ್ರತ್ಯಕ್ಷವಾಗಿ ಕಾಣುತ್ತಿರಲು ಅದು ಸಮೂಲವಾಗಿ ಮಿಥ್ಯೆ ಎಂದು ನೀನು ಹೇಗೆ ಹೇಳುವೆ? ಹೀಗೆ ನಿನ್ನ ಮನದಲ್ಲಿ ಶಂಕೆಯು ಬರುತ್ತಿದ್ದರೆ ಅದರ ಪ್ರಕಾರವನ್ನೂ ಕೂಡ ಈಗ ಹೇಳುವೆ, ಕೇಳು ॥೧೦೩॥

ಅಧ್ಯಾತ್ಮ, ಅಧಿದೈವ ಮತ್ತು ಅಧಿಭೂತ ಹೀಗೆ ಮೂರು ಪ್ರಕಾರದ ಜಗತ್ತನ್ನು ಮಾಯೆಯು ನಿರ್ಮಾಣ ಮಾಡಿರುವುದು. ಅದು ನನ್ನ ಮೇಲೆ ಮಿಥ್ಯಾ ಭಾಸವಾಗುತ್ತಿರುವುದು. ವಾಸ್ತವಿಕವಾಗಿ ಅದು ತ್ರಿಗುಣಾತ್ಮಕವಾಗಿರುವುದು ॥೧೦೪॥ ಹೇ ಉದ್ಧವನೇ, ಈ ಜಗತ್ತು ಮಿಥ್ಯೆಯಾಗಿದೆ ಎಂದು ನಾನು ಹೇಳಿದ್ದಕ್ಕೆ ನೀನು ಅದನ್ನು ತ್ಯಜಿಸಬೇಡ, ನನ್ನ ಈ ವಿಚಾರದಿಂದ ಸಾಧುಸಂತರಿಗೆ ಜ್ಞಾನವಿಜ್ಞಾನವು ಪ್ರಾಪ್ತವಾಗಿರುವುದು ॥೧೦೫॥ ಪ್ರಪಂಚದಲ್ಲಿನ ಭಾಸವು ಮಿಥ್ಯೆಯಾಗಿದೆ ಎಂಬ ಈ ಜ್ಞಾನವು ಜ್ಞಾನದಲ್ಲಿನ ಮುಖ್ಯವಾಗಿರುವುದು. ಈ ಜ್ಞಾನದಿಂದ ಸಂಪನ್ನನಾದವನು ಸರ್ವ ಪ್ರಾಣಿಮಾತ್ರರಲ್ಲಿ ಸಮಾನ ಭಾವವನ್ನು ಇಡುವನು ॥೧೦೬॥ ಆದ್ದರಿಂದ ಅವರು ಪ್ರಾಣಿಮಾತ್ರರ ಗುಣ ಅಥವಾ ಅವಗುಣ, ನಿಂದಾ ಅಥವಾ ಸ್ತುತಿ ಮಾಡಲಾರರು. ಸೂರ್ಯನಂತೆ ಇವರು ಎಲ್ಲರಲ್ಲಿಯೂ ಸಮಾನ ಭಾವನೆಯಿಂದ ಕಾಣುತ್ತಿರುವರು ॥೧೦೭॥ ಉತ್ತರ ದಿಕ್ಕಿನಲ್ಲಿ ಬದ್ರಿಕಾಶ್ರಮವು ಇದ್ದರೆ ದಕ್ಷಿಣ ದಿಕ್ಕಿನಲ್ಲಿ ಸೇತುಬಂಧ ರಾಮೇಶ್ವರವಿರುವುದು. ಆದರೆ ಸೂರ್ಯನು ಸರ್ವರ ಸಮಕ್ಷಮವಾಗಿ ಇರುವನು. ಅತನು ಎಂದಿಗೂ ಇವರಲ್ಲಿ ವಿಮುಖನಾಗುವುದಿಲ್ಲ ॥೧೦೮॥ ಪೂರ್ವದಿಕ್ಕಿನ ಜನರಿಗೆ ಸೂರ್ಯನು ಸಂಮುಖನಾಗಿ, ಪಶ್ಚಿಮ ದಿಕ್ಕಿನ ಜನರಿಗೆ ವಿಮುಖನಾಗುವುದಿಲ್ಲ. ಅದರಂತೆ ನಾನು ಸರ್ವರಿಗೂ ಸರ್ವಸ್ಥಳಗಳಲ್ಲಿ ಸಂಮುಖನಾಗಿರುವೆನು. ಯಾರಿಗೂ ಎಂದಿಗೂ ನಾನು ವಿಮುಖನಾಗುವುದಿಲ್ಲ ॥೧೦೯॥

ಸಾಮರ್ಥ್ಯೇ ತಮ ದವಡೂನಿ ಜಾಣ । ಭೂತಾಂಸೀ ಸೂರ್ಯ ಭೇಟೇ ಆಪಣ । ತೇವೀ ಜಗಾಚೇ ದವಡೂನಿ ದೋಷಗುಣ । ಸಾಧುಸಜ್ಜನ ವಿಚರತೀ ॥೧೧೦॥ ಜೇ ಹೇ ಬೋಲಿಲೇ ಜ್ಞಾನಲಕ್ಷಣ । ತೇಚಿ ಸಿದ್ಧಾಂಚೇ ಪೂರ್ಣಪಣ । ಮುಮುಕ್ಷೀ ಹೇ ಅನುಸಂಧಾನ । ಸಾವಧಾನ ಸಾಧಾವೇ ॥೧೧೧॥ ಹೇಚಿ ಪಾವಿಜೇ ನಿಜಜ್ಞಾನ । ತೇಚಿ ಅರ್ಥೀಚೇ ಸಾಧನ । ಉದ್ಧವಾಲಾಗೀ ಶ್ರೀಕೃಷ್ಣ । ಸ್ವಮುಖೇ ಆಪಣ ಸಾಂಗತ ॥೧೧೨॥

ಪ್ರತ್ಯಕ್ಷೇಣಾನುಮಾನೇನ ನಿಗಮೇನಾತ್ಮಸಂವಿದಾ । ಆದ್ಯಂತವದಸಜ್‌ಜ್ಞಾತ್ವಾ ನಿಃಸಂಗೋ ವಿಚರೇದಿಹ ॥೯॥

ಅರ್ಥ:- ಪ್ರತ್ಯಕ್ಷ ಅನುಮಾನ, ಶಾಸ್ತ್ರ ಮತ್ತು ಆತ್ಮಾನುಭೂತೀ ಇತ್ಯಾದಿ ಸರ್ವ ಪ್ರಮಾಣಗಳಿಂದ ಇದು ಸಿದ್ಧವಾಗುವುದು. ಈ ಜಗತ್ತು ಉತ್ಪತ್ತಿ ಮತ್ತು ವಿನಾಶಶೀಲವಾಗಿರುವುದರಿಂದ ಇದು ಅನಿತ್ಯ ಮತ್ತು ಅಸತ್ಯವಾಗಿರುವುದು. ಇದನ್ನು ತಿಳಿದು ನಾವು ಸಂಗರಹಿತರಾಗಿ ವರ್ತಿಸಬೇಕು.

ಜೇ ಜನ್ಮೋನಿ ನಾಶವಂತ । ತೇ ಸರ್ವಹೀ ಜಾಣ ಅಸಂತ । ಆಸಕ್ತಿ ಸಾಂಡೋನಿಯಾ ತೇಥ । ಉದಾಸ ವಿರಕ್ತ ವರ್ತಾವೇ ॥೧೧೩॥ ಸಟವಲ್ಯಾಚೇ ಬಾರಸೇ । ಕೋಣೀ ನ ಕರಿತೀ ಉಲ್ಹಾಸೇ । ನಶ್ವರ ದೇಹ ವಾಢತಾ ತೈಸೇ । ಮೂರ್ಖ ಮಾನಸೇ ಸುಖಾವತೀ ॥೧೧೪॥ ಉತ್ಪತ್ತಿ ವಿನಾಶಲಕ್ಷಣ । ತ್ಯಾಚೇ ದೇವ ಸಾಂಗತೋ ಪ್ರಮಾಣ । ನಿತ್ಯ ಭೂತಾಂಚೇ ಜನ್ಮ ಮರಣ । ದೇಖಿಜೇ ಆಪಣ ''ಪ್ರತ್ಯಕ್ಷ'' ॥೧೧೫॥ ''ಅನುಮಾನ'' ಕರಿತಾ ಸಾಚಾರ । ಜೇ ಜೇ ದೇಖಿಜೇ ಸಾಕಾರ । ಮೇರುಪೃಥ್ವ್ಯಾದಿ ಆಕಾರ । ಹೋತಿ ನಶ್ವರ ಪ್ರಳಯಾಂತೀ ॥೧೧೬॥ ಯೇಚಿ ಅರ್ಥೀ ವೇದೋಕ್ತೀ । ನಾಶವಂತ ಅಷ್ಟಧಾ ಪ್ರಕೃತೀ । ಜೀವಭಾವ ನಾಸೇ ಗಾ ಪ್ರಾಂತೀ । ಗರ್ಜತೀ ಶ್ರುತೀ ಯೇಣೇ ಅರ್ಥೇ ॥೧೧೭॥ ಏಥ ಆಪುಲಾಹೀ ಅನುಭವ ಅಸೇ । ಜಡ ವಿಕಾರೀ ತೇ ತೇ ನಾಸೇ । ಹೇ ಕಳತ ಅಸೇ ಗಾ ಆಪೈಸೇ । ಜಗ ಅನಾಯಾಸೇ ನಶ್ವರ ॥೧೧೮॥ ವಡೀಲ ನಿಮಾಲೇ ದೇಖತೀ । ಪುತ್ರಪೌತ್ರ ಸ್ವಯೇ ಸಂಸ್ಕಾರಿತೀ । ತರೀ ಸ್ವಮೃತ್ಯೂಚೇ ಚಿಂತಾ ನ ಕರಿತೀ । ಪಡಲೀ ಭ್ರಾಂತೀ ದೇಹಲೋಭೇ ॥೧೧೯॥ ಪುತ್ರ ಪಿತರಾ ಪಿಂಡದಾನ ದೇತೀ । ಉತ್ತಮ ಗತಿ ತ್ಯಾಂಚೀ ಚಿಂತಿತೀ । ಆಪುಲೀ ಗತಿ ನ ವಿಚಾರಿತೀ । ನಶ್ವರ ಆಸಕ್ತೀ ದೇಹಲೋಭೇ ॥೧೨೦॥ ಆತ್ಮಾ ಕೇವಲ ಪ್ರಕಾಶಘನ । ಪ್ರಪಂಚ ಜಡ ಮೂಢ ಅಜ್ಞಾನ । ಹೇ ಐಕೋನಿ ಉದ್ಧವೇ ಆಪಣ । ದೇವಾಸೀ ಪ್ರಶ್ನ ಪೂಸತು ॥೧೨೧॥

ಸೂರ್ಯನು ತನ್ನ ಶಕ್ತಿಯಿಂದ ಕತ್ತಲೆಯನ್ನು ದೂರ ಮಾಡಿ ಪ್ರಾಣಿಮಾತ್ರರಿಗೆ ತಾನಾಗಿಯೇ ಭೇಟಿಯಾಗುವನು. ಅದರಂತೆ ಸಂತರು ಜಗತ್ತಿನ ಗುಣದೋಷಗಳನ್ನು ಬದಿಗೆ ಸರಿಸಿ ಸರ್ವತ್ರವೂ ಸಂಚರಿಸುವರು ॥೧೧೦॥ ಇದು ಜ್ಞಾನದ ಲಕ್ಷಣವು ಇದೇ ಪೂರ್ಣ ಸಿದ್ಧಾಂತವು. ಆದ್ದರಿಂದ ಸಾಧಕರು ಅದರತ್ತ ಲಕ್ಷ ಕೊಟ್ಟು ಸರಿಯಾಗಿ ಸಾಧಿಸಬೇಕು ॥೧೧೧॥ ಈ ನಿಜಜ್ಞಾನವು ಪ್ರಾಪ್ತವಾಗುವುದಕ್ಕಾಗಿ ಈ ವಿಷಯವನ್ನೇ ಕುರಿತು ಸಾಧನೆಯ ಮಾರ್ಗವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೧೧೨॥

ಯಾವುದು ಉತ್ಪತ್ತಿಯಾಗಿ ನಾಶಹೊಂದುವುದೋ ಅದೆಲ್ಲವೂ ಮಿಥ್ಯೆ ಎಂದು ಅವಶ್ಯವಾಗಿ ತಿಳಿಯಬೇಕು. ಅವುಗಳ ಮೇಲಿನ ಆಸಕ್ತಿಯನ್ನು ತ್ಯಜಿಸಿ ಆ ವಿಷಯಕ್ಕೆ ಉದಾಸೀನ ಹಾಗೂ ವಿರಕ್ತನಾಗಿರಬೇಕು ॥೧೧೩॥ ಮರಣ ಹೊಂದಿರುವ ಬಾಲಕನ ತೊಟ್ಟಿಲ ಕಾರ್ಯವನ್ನು ಯಾರೂ ಮಾಡಲಾರರು. ಅದರಂತೆ ನಶ್ವರವಾಗಿರುವ ಈ ಶರೀರವು ಬೆಳೆಯುತ್ತ ಸಾಗಿದರೆ ಕೇವಲ ಮೂರ್ಖರು ಮಾತ್ರ ಆನಂದ ಪಡುವರು ॥೧೧೪॥ ದೇವನು ಸ್ವತಃ ಉತ್ಪತ್ತಿ ಹಾಗೂ ನಾಶ ಇವುಗಳ ಲಕ್ಷಣವನ್ನು ಪ್ರಮಾಣ ಕೊಟ್ಟು ಹೇಳುತ್ತಿರುವನು. ನಾವು ಪ್ರಾಣಿಮಾತ್ರರ ಜನ್ಮ ಮರಣಗಳನ್ನು ಪ್ರತ್ಯಕ್ಷವಾಗಿ ಕಣ್ಣುಗಳಿಂದ ಪ್ರತಿನಿತ್ಯವೂ ನೋಡುತ್ತಿರುವೆವು ॥೧೧೫॥ ಅನುಮಾನಿಸಿ ನೋಡಿದರೂ ಕೂಡ ಮೇರು ಪರ್ವತ, ಪೃಥ್ವಿ ಇತ್ಯಾದಿ ಸಾಕಾರ ವಸ್ತುಗಳು ಕಾಣುವ ಸರ್ವ ಪದಾರ್ಥಗಳೆಲ್ಲವೂ ಪ್ರಳಯಕಾಲದಲ್ಲಿ ನಾಶ ಹೊಂದುವುವು ॥೧೧೬॥ ವೇದವು ನನ್ನ ಅಷ್ಟಧಾ ಪ್ರಕೃತಿಯು ನಾಶಿವಂತವೆಂದು ಹೇಳಿರುವುದು. ಜೀವಭಾವವು ಕೂಡ ಕೊನೆಯಲ್ಲಿ ನಾಶಹೊಂದುವುದು. ಶ್ರುತಿಯೂ ಸಹ ಹೀಗೆಯೇ ಗರ್ಜಿಸಿ ಹೇಳಿರುವುದು ॥೧೧೭॥ ಇಲ್ಲಿ ಜಡ ಹಾಗೂ ವಿಕಾರಿಯಾಗಿರುವ ಯಾವುದೇ ವಸ್ತುವಾಗಲಿ ಅವೆಲ್ಲವೂ ನಾಶಹೊಂದುವುವು. ಇದು ನಮ್ಮ ಪ್ರತ್ಯಕ್ಷವಾದ ಅನುಭವವಾಗಿರುವುದು. ಇದರಿಂದ ಈ ಜಗತ್ತು ನಾಶಿವಂತವೆಂದು ತಿಳಿದುಬರುವುದು ॥೧೧೮॥ ತಂದೆಯ ಮರಣವಾಗಲು ಆಗ ಆತನ ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲರೂ ಕೂಡಿ ಆತನ ಶವಸಂಸ್ಕಾರವನ್ನು ಮಾಡುವರು. ಆದರೆ ತಮ್ಮ ಸ್ವತಃದ ಮರಣ ಚಿಂತೆಯನ್ನು ಯಾರೂ ಮಾಡುವುದಿಲ್ಲ. ಇಷ್ಟೊಂದು ತಮ್ಮ ದೇಹದ ಲೋಭದಿಂದ ಭ್ರಾಂತಿಯು ನಿರ್ಮಾಣವಾಗಿರುವುದು ॥೧೧೯॥ ಪುತ್ರರು ತಮ್ಮ ಪಿತರರಿಗೆ ಪಿಂಡದಾನವನ್ನು ಕೊಟ್ಟು ಅವರಿಗೆ ಸದ್ಗತಿಯು ಪ್ರಾಪ್ತವಾಗಬೇಕೆಂದು ಪ್ರಾರ್ಥನೆಯನ್ನು ಮಾಡುತ್ತಿರುವರು. ಆದರೆ ತಮ್ಮ ಗತಿಯು ಏನಾದೀತು ಎಂಬ ಈ ವಿಚಾರವನ್ನು ಮಾಡುವುದೇ ಇಲ್ಲ. ಇಷ್ಟೊಂದು ದೇಹದ ಲೋಭದಿಂದ ಆಸಕ್ತಿಯು ನಿರ್ಮಾಣವಾಗಿರುವುದು ॥೧೨೦॥ ಆತ್ಮವು ಕೇವಲ ಪ್ರಕಾಶಘನವಾಗಿರುವುದು. ಪ್ರಪಂಚವು ಜಡ, ಮೂಢ, ಅಜ್ಞಾನವಾಗಿರುವುದು ಇದನ್ನು ಕೇಳಿ ಉದ್ಧವನು ದೇವನಿಗೆ ಪ್ರಶ್ನೆಯನ್ನು ಕೇಳಲಾರಂಭಿಸಿದನು ॥೧೨೧॥

ಉದ್ಧವ ಉವಾಚ :-

ನೈವಾತ್ಮನೋ ನ ದೇಹಸ್ಯ ಸಂಸೃತಿರ್ದ್ರಷ್ಟೃದೃಶ್ಯಯೋಃ । ಅನಾತ್ಮಸ್ವದೃಶೋರೀಶ ಕಸ್ಯ ಸ್ಯಾದುಪಲಭ್ಯತೇ ॥೧೦॥

ಅರ್ಥ:- ಉದ್ಧವನು ಕೇಳಿದನು ; ಹೇ ಭಗವಂತನೇ, ಆತ್ಮನು ದ್ರಷ್ಟಾ ಮತ್ತು ದೇಹವು ದೃಶ್ಯವಾಗಿರುವುದು. ಆತ್ಮವು ಸ್ವಯಂ ಪ್ರಕಾಶವು ಮತ್ತು ದೇಹವು ಜಡವಾಗಿರುವುದು. ಈ ಸ್ಥಿತಿಯಲ್ಲಿ ಜನ್ಮ ಮರಣರೂಪ ಸಂಸಾರವು ಶರೀರಕ್ಕೆ ಆಗುವುದಿಲ್ಲ ಮತ್ತು ಆತ್ಮಕ್ಕೂ ಆಗುವುದಿಲ್ಲ. ಹಾಗಾದರೆ ಇದು ಯಾರಿಗೆ ಆಗುವುದು ?

ಆತ್ಮಾ ನಿತ್ಯಮುಕ್ತ ಚಿದ್‌ಘನ । ತ್ಯಾಸೀ ನ ಘಡೇ ಭವಬಂಧನ । ದೇಹ ಜಡ ಮೂಢ ಅಜ್ಞಾನ । ತ್ಯಾಸೀ ಸಂಸಾರ ಜಾಣ ಘಡೇನಾ ॥೧೨೨॥ ಏಥ ಭವಬಂಧನ ಹೃಷೀಕೇಶೀ । ಸಾಂಗ ಪಾ ಬಾಧಕ ಕೋಣಾಸೀ । ಜರೀ ತೂ ಸಂಸಾರ ನಾಹೀ ಮ್ಹಣಸೀ । ತೋ ಪ್ರತ್ಯಕ್ಷ ಜಗಾಸೀ ಜಡಲಾಸೇ ॥೧೨೩॥ ಆತ್ಮ್ಯಾಸೀ ವಿಚಾರಿತಾ ಜಾಣ । ಭವಬಂಧಾ ನ ದಿಸೇ ಸ್ಥಾನ । ಯೇಚಿ ಅರ್ಥೀಚೇ ನ ಘಡತೇಪಣ । ಉದ್ಧವ ಆಪಣ ಸಾಂಗತ ॥೧೨೪॥

ಆತ್ಮಾಽವ್ಯಯೋಽಗುಣಃ ಶುದ್ಧಃ ಸ್ವಯಂ ಜ್ಯೋತಿರನಾವೃತಃ । ಅಗ್ನಿವದ್ದಾರುವದಚಿದ್ದೇಹಃ ಕಸ್ಯೇಹ ಸಂಸೃತಿಃ ॥೧೧॥

ಅರ್ಥ:- ಆತ್ಮವು ಅವಿನಾಶೀ, ಪ್ರಾಕೃತ-ಅಪಾಕೃತ ಗುಣ ರಹಿತ, ಶುದ್ಧ, ಸ್ವಯಂ ಪ್ರಕಾಶ ಮತ್ತು ಸರ್ವಪ್ರಕಾರಗಳ ಆವರಣರಹಿತವಾಗಿರುವುದು.ಶರೀರವು ವಿನಾಶೀ, ಸಗುಣ, ಅಶುದ್ಧ ಪ್ರಕಾಶ್ಯ ಮತ್ತು ಆವೃತ್ತವಾಗಿದೆ. ಆತ್ಮವು ಅಗ್ನಿಸಮಾನ ಪ್ರಕಾಶಮಾನವಾದರೆ ಶರೀರವು ಕಾಷ್ಠದಂತೆ ಇರುವುದು. ಅಂದಮೇಲೆ ಈ ಜನ್ಮಮರಣರೂಪ ಸಂಸಾರವು ಯಾರಿಗೆ ?

ಆತ್ಮಾ ಚಿದ್ರೂಪ ಅವಿನಾಶೀ । ಗುಣ ನಿರ್ಗುಣ ನಾತಳೇ ತ್ಯಾಸೀ । ಕರ್ಮಾಕರ್ಮಪಾಪಪುಣ್ಯಾಸೀ । ಠಾವ ತ್ಯಾಪಾಶೀ ಅಸೇನಾ ॥೧೨೫॥ ಪರಾದಿವಾಚಾ ನವ್ಹೇ ಉಚ್ಚಾರ । ಯಾಲಾಗೀ ಮ್ಹಣಿಪೇ ''ಪರಾತ್ಪರ''। ಪ್ರಕೃತಿಗುಣೇ ಅವಿಕಾರ । ಪ್ರಕೃತಿಪರ ಪರಮಾತ್ಮಾ ॥೧೨೬॥ ಜಯಾಚ್ಯಾ ಪ್ರಕಾಶದೀಪ್ತೀ । ರವಿಚಂದ್ರಾದಿ ಪ್ರಕಾಶತೀ । ಪ್ರಕಾಶೇ ಪ್ರಕಾಶೇ ತ್ರಿಜಗತೀ । ತೇಜೋಮೂರ್ತೀ ಪರಮಾತ್ಮಾ ॥೧೨೭॥ ಐಶಿಯಾ ಆತ್ಮ್ಯಾಚ್ಯಾ ಠಾಯೀ । ಭವಬಂಧನ ನ ಲಗೇ ಕಾಂಹೀ । ಸೂರ್ಯ ಬುಡೇ ಮೃಗಜಳಾಚ್ಯಾ ಡೋಹೀ । ತೈ ಆತ್ಮ್ಯಾಸೀ ಪಾಹೀ ಭವಬಂಧ ॥೧೨೮॥ ಖದ್ಯೋತತೇಜೇ ಸೂರ್ಯ ಜಳೇ । ಬಾಗುಲಾಭೇಣೇ ಕಾಳ ಪಳೇ । ಮುಂಗೀಚೇನಿ ಪಾಂಖಬಳೇ । ಜೈ ಉಡೇ ಸಗಳೇ ಆಕಾಶ ॥೧೨೯॥ ವಾರಾ ಆಡಖುಳೀಲಾ ಆಡ ಪಡೇ । ಜೈ ಥಿಲ್ಲರಾಮಾಜೀ ಮೇರು ಬುಡೇ । ತರೀ ಭವಬಂಧ ಆತ್ಮ್ಯಾಕಡೇ । ಸರ್ವಥಾ ನ ಘಡೇ ಗೋವಿಂದಾ ॥೧೩೦॥ ದೇಹಾಕಡೇ ಭವಬಂಧನ । ಮೂರ್ಖಹೀ ನ ಮಾನಿತೀ ಜಾಣ । ದೇಹ ಜಡ ಮೂಢ ಅಜ್ಞಾನ । ತ್ಯಾಸೀ ಭವಬಂಧನ ಕದಾ ನ ಘಡೇ ॥೧೩೧॥

ಆತ್ಮವು ಇದು ನಿತ್ಯ ಮುಕ್ತವಾಗಿದ್ದು ಜ್ಞಾನಸ್ವರೂಪವಾಗಿರುವುದು. ಇದಕ್ಕೆ ಈ ಸಂಸಾರದ ಬಂಧನೆಯು ಇರುವುದಿಲ್ಲ. ದೇಹವು ಇದು ಜಡ, ಮೂಢ ಮತ್ತು ಅಜ್ಞಾನ ಹೀಗೆ ಇರುವುದು. ಈ ಕಾರಣದಿಂದ ಇದಕ್ಕೂ ಕೂಡ ಸಂಸಾರವು ಸಂಭವಿಸುವುದಿಲ್ಲ ॥೧೨೨॥ ಹೀಗೆ ಇರುವುದರಿಂದ ಹೇ ಶ್ರೀಕೃಷ್ಣನೇ, ಈ ಸಂಸಾರದ ಬಂಧನೆಯು ಯಾರಿಗೆ ಬಾಧಿಸುವುದು ? ಸಂಸಾರವು ಮಾತ್ರ ಮೂಲತಃ ಇಲ್ಲವೇ ಇಲ್ಲವೆಂದು ನೀನು ಹೇಳುತ್ತಿರುವೆ. ಆದರೆ ಈ ಸಂಸಾರವು ಜಗತ್ತಿಗೆ ಅಂಟಿಕೊಂಡಿರುವುದು ಪ್ರತ್ಯಕ್ಷವಾಗಿ ಕಾಣುತ್ತಿರುವುದು ॥೧೨೩॥ ಆತ್ಮದ ವಿಚಾರವನ್ನು ಮಾಡಲು ಅದಕ್ಕೆ ಸಂಸಾರ ಬಂಧನಕ್ಕೆ ಎಲ್ಲಿಯೂ ಸ್ಥಳವೇ ಇರುವುದಿಲ್ಲ. ಇದೇ ಅರ್ಥದ ನಿರೂಪಣೆಯನ್ನು ಸ್ವತಃ ಉದ್ಧವನು ಹೇಳುತ್ತಿರುವನು ॥೧೨೪॥

ಆತ್ಮವು ಚಿತ್‌ಸ್ವರೂಪವಾಗಿ ಅವಿನಾಶಿಯಾಗಿರುವುದು. ಅದಕ್ಕೆ ಗುಣವಾಗಲಿ ಅಥವಾ ನಿರ್ಗುಣವಾಗಲಿ ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ. ಅದರಲ್ಲಿ ಕರ್ಮಾಕರ್ಮಗಳಿಗೆ ಅಥವಾ ಪಾಪಪುಣ್ಯಗಳಿಗೆ ಸರ್ವಥಾ ಸ್ಥಾನವಿರುವುದಿಲ್ಲ ॥೧೨೫॥ ಪರಾ ಇತ್ಯಾದಿ ವಾಣಿಗಳಿಂದ ಆತ್ಮದ ಉಚ್ಚಾರವು ಆಗುವುದಿಲ್ಲ. ಆದ್ದರಿಂದ ಅದಕ್ಕೆ ''ಪರಾತ್ಪರ'' ಎಂದು ಸಂಭೋಧಿಸಿರುವುದು. ಪ್ರಕೃತಿಯ ಗುಣಗಳಿಂದ ಆತ್ಮವು ವಿಕಾರಗೊಳ್ಳುವುದಿಲ್ಲ. ಕಾರಣ ಪರಮಾತ್ಮನು ಪ್ರಕೃತಿಯ ಆಚೆಕಡೆ ಇರುವನು ॥೧೨೬॥ ಈತನ ಪ್ರಕಾಶದಿಂದ ಸೂರ್ಯಚಂದ್ರರು ಪ್ರಕಾಶಿತರಾಗುವರು. ಈತನ ಪ್ರಕಾಶದಿಂದ ತ್ರಿಭುವನವು ಪ್ರಕಾಶದಿಂದ ಪ್ರಜ್ವಲಿಸುವುದು. ಹೀಗಿರುವ ಈ ಪರಮಾತ್ಮನು ತೇಜೋಮೂರ್ತಿರೂಪನಾಗಿರುವನು ॥೧೨೭॥ ಇಂತಹ ಆತ್ಮಕ್ಕೆ ಸಂಸಾರ ಬಂಧನವು ಎಂದಿಗೂ ಆಗಲು ಶಕ್ಯವಿಲ್ಲ. ಮೃಗಜಲದ ಮಡುವಿನಲ್ಲಿ ಸೂರ್ಯನು ಮುಳುಗಿದನೆಂದರೆ ಆಗ ಆತ್ಮಕ್ಕೆ ಬಂಧನವು ಸಾಧ್ಯವಾದೀತು ॥೧೨೮॥ ಮಿಂಚಿನ ಹುಳದ ಪ್ರಕಾಶಕ್ಕೆ ಸೂರ್ಯನು ಸುಟ್ಟು ಭಸ್ಮವಾದನೆಂದರೆ, ಬೆದರು ಗೊಂಬೆಯ ಭಯದಿಂದ ಕಾಲನು ಓಡಿ ಹೋದರೆ, ಇರುವೆಯ ರೆಕ್ಕೆಯ ವಾಯು ವೇಗಕ್ಕೆ ಸಂಪೂರ್ಣ ಆಕಾಶವು ಹಾರಿ ಹೋದರೆ ॥೧೨೯॥ ವಾಯುವು ಹಾಳು ಬಾವಿಯಲ್ಲಿ ಸಿಕ್ಕಿ ಬಿದ್ದರೆ, ಚಿಕ್ಕ ಮಡುವಿನ ನೀರಿನಲ್ಲಿ ಮೇರುಪರ್ವತವು ಮುಳುಗಿಹೋದರೆ, ಹೇ ಗೋವಿಂದನೇ, ಆತ್ಮಕ್ಕೆ ಸಂಸಾರ ಬಂಧನವು ಎಂದಿಗೂ ಲಭಿಸಲು ಸಾಧ್ಯವೇ ಇಲ್ಲ ॥೧೩೦॥ ಅದರಂತೆಯೇ ದೇಹಕ್ಕೆ ಸಂಸಾರ ಬಂಧನವು ಇದೆ ಎಂದು ಯಾವ ಮೂರ್ಖನೂ ಕೂಡ ಹೇಳಲಾರನು. ಕಾರಣ ದೇಹವು ಜಡ, ಮೂಢ, ಅಜ್ಞಾನವಾಗಿರುವುದರಿಂದ ಅದಕ್ಕೆ ಸಂಸಾರ ಬಂಧನವು ಎಂದಿಗೂ ಆಗಲು ಶಕ್ಯವಿಲ್ಲ ॥೧೩೧॥

ಜೈ ದಗಡಾಚೇ ಪೋಟ ದುಖೇ । ಕೋರಡೇ ಕಾಷ್ಠ ಚರಫಡೀ ಭುಕೇ । ತೈ ದೇಹಾಕಡೇ ಯಥಾಸುಖೇ । ಭವಬಂಧ ಹರಿಖೇ ಲಾಗತಾ ॥೧೩೨॥ ಜೈ ಡೋಂಗರಾಸೀ ತರಳ ಭರೇ । ಮೃತ್ತಿಕಾ ನಾಹಾಣಾಲಾಗೀ ಝುರೇ । ಕೋಳಸೇನಿ ಕಾಳೇ ಹೋಯ ಅಂಧಾರೇ । ತೈ ಭವಬಂಧಭಾರೇ ದೇಹ ದಾಟೇ ॥೧೩೩॥ ಮ್ಹಣಸೀ ದೇಹಾತ್ಮ ಸಂಗತೀ । ಘಡೇ ಭವಬಂಧಾಚೀ ಪ್ರಾಪ್ತೀ । ವಿಚಾರಿತಾ ತೇಹೀ ಅರ್ಥೀ । ನ ಘಡೇ ಶ್ರೀಪತಿ ತೇ ಐಕ ॥೧೩೪॥ ಆತ್ಮಾ ಸ್ವಪ್ರಕಾಶ ಮಹಾವನ್ಹೀ । ದೇಹ ತೋ ಜಡ ಮೂಢ ಕಾಷ್ಠಸ್ಥಾನೀ । ತೋ ಮಿಳತಾ ಆತ್ಮಮಿಳಣೀ । ಸಾಂಡೀ ಜಾಳೂನಿ ತತ್ಕಾಳ ॥೧೩೫॥ ಜೈ ಅಗ್ನಿ ಮಾಜೀ ಸಂವಾದೇ । ಕಾಪೂರ ಆಠ ಪ್ರಹರ ನಾಂದೇ । ತೈ ದೇಹಾತ್ಮ ನಿಜಸಂಬಂಧೇ । ದೇಹ ಭವಬಂಧೇ ನಾಂದತಾ ॥೧೩೬॥ ಮ್ಹಣಸೀ ಕಾಷ್ಠಾ ಮಾಜೀ ಅಗ್ನಿ ಅಸೇ । ಪರೀ ತೋ ಕಾಷ್ಠ ಚಿ ಹೋಊನಿ ನಸೇ । ಮಥೂನಿ ಕಾಢಿಲ್ಯಾ ನಿಜಪ್ರಕಾಶೇ । ಜಾಳೀ ಅನಾಯಾಸೇ ಕಾಷ್ಠಾತೇ ॥೧೩೭॥ ತೇವೀ ಆತ್ಮಾ ದೇಹಾಮಾಜೀ ಅಸೇ । ಪರೀ ತೋ ದೇಹಚಿ ಹೋಊನಿ ನಸೇ । ದೇಹಪ್ರಕಾಶ ಚಿದಂಶೇ । ಭವಬಂಧಪಿಸೇ ತ್ಯಾ ನ ಘಡೇ ॥೧೩೮॥ ಆಶಂಕಾ ॥ ಮ್ಹಣಶೀ ಆತ್ಮ್ಯಾಚೇ ನಿಜಸಂಗತೀ । ಜೈ ಜಳೋನಿ ಜಾಯ ಭೂತವ್ಯಕ್ತೀ । ತೈ ಭೂತಾಂಚೀ ವರ್ತತೀ ಸ್ಥಿತೀ । ಕೈಶಾ ರೀತೀ ತೇ ಐಕ ॥೧೩೯॥ ಛಾಯಾಮಂಡಪೀ ದೀಪ ಪ್ರಕಾಶೀ । ನಾಚವೀ ಕಾಗದಾಂಚ್ಯಾ ಬಾಹುಲ್ಯಾಸೀ । ತೇಚ ಲಾವಿತಾ ದೀಪಾಸೀ । ಜಾಳೀ ಅನಾಯಾಸೀ ತ್ಯಾ ವ್ಯಕ್ತೀ ॥೧೪೦॥ ತೇವೀ ಆತ್ಮ್ಯಾಚೇ ಸ್ವಸತ್ತಾಶಕ್ತೀ । ಭೂತೇ ದೈವಯೋಗೇ ವರ್ತತೀ । ಸ್ವಯಂಭೂ ಝಾಲ್ಯಾ ಆತ್ಮಸ್ಥಿತೀ । ಭೂತವ್ಯಕ್ತೀ ಉರೇನಾ ॥೧೪೧॥ ಕರಿತಾ ಆತ್ಮ್ಯಾಚೇ ಅನುಸಂಧಾನ । ಸಂಸಾರಾಚೇ ನುರೇ ಭಾನ । ತೇಥ ಭೂತಾಕೃತಿ ಭಿನ್ನ ಭಿನ್ನ । ಕೈಚ್ಯಾ ಜಾಣ ಅತಿಬದ್ಧ ॥೧೪೨॥ ಯಾಪರೀ ಭವಬಂಧನ । ಮಜ ಪಾಹತಾ ಮಿಥ್ಯಾ ಜಾಣ । ಭವಬಂಧಾಲಾಗೀ ಸ್ಥಾನ । ನೇಮಸ್ತ ಜಾಣ ಅಸೇನಾ ॥೧೪೩॥ ಆತ್ಮ್ಯಾಚ್ಯಾ ಠಾಯೀ ನಾ ದೇಹೀ । ಉಭಯಸಂಬಂಧೀಹೀ ನಾಹೀ । ಭವಬಂಧ ಮಿಥ್ಯಾ ಪಾಹೀ । ತ್ಯಾಸೀ ಠಾವೋ ಕೋಠೇಹೀ ಅಸೇನಾ ॥೧೪೪॥ ಕೋಪೋ ನಕೋ ಶ್ರೀಕೃಷ್ಣನಾಥಾ । ಮಾಝೇನಿ ನಿಜನಿರ್ಧಾರೇ ಪಾಹತಾ । ಭವಬಂಧ ಮಿಥ್ಯಾ ತತ್ತ್ವತಾ । ನಿಶ್ಚಯೇ ಚಿತ್ತಾ ಮಾನಲೇ ॥೧೪೫॥ ಐಕೋನಿ ಉದ್ಧವಾಚೇ ವಚನ । ಹರಿಖೇ ವೋಸಂಡಲಾ ಶ್ರೀಕೃಷ್ಣ । ಮಾಝಾ ಉದ್ಧವ ಝಾಲಾ ಸಜ್ಞಾನ । ನಿಜಾತ್ಮ ಖೂಣ ಪಾವಲಾ ॥೧೪೬॥

ಕಲ್ಲಿನ ಹೊಟ್ಟೆಯು ನೋಯಿಸಿದರೆ, ಕಟ್ಟಿಗೆಯು ಹಸಿವೆಯಿಂದ ಬಳಲುತ್ತಿದ್ದರೆ, ಆಗ ಮಾತ್ರ ದೇಹಕ್ಕೆ ಸಂಸಾರ ಬಂಧನವು ಹತ್ತಬಹುದಾಗಿದೆ ॥೧೩೨॥ ಪರ್ವತವು ನಡುಗಹತ್ತಿದರೆ, ಮಣ್ಣು ಸ್ನಾನಕ್ಕಾಗಿ ಚರಪಡಿಸಿದರೆ, ಇದ್ದಲಿಯಿಂದ ಕತ್ತಲೆಯು ಕಪ್ಪಾದರೆ, ಆಗ ದೇಹವು ಭವಬಂಧನದಿಂದ ಯುಕ್ತವಾಗಲು ಸಾಧ್ಯವಿದೆ ॥೧೩೩॥ ದೇಹ ಮತ್ತು ಆತ್ಮಾ ಇವರ ಸಂಗತಿಯಿಂದ ಸಂಸಾರ ಬಂಧನವು ಸಾಧಿಸುವುದು ಎಂದು ನೀವು ಹೇಳಬಹುದು. ಆದರೆ ಈ ವಿಷಯವನ್ನು ವಿಚಾರಿಸಿ ನೋಡಲು ಅದೂ ಕೂಡ ಯೋಗ್ಯವಾಗಲಾರದು. ಹೇ ಶ್ರೀಕೃಷ್ಣನೇ, ಅದನ್ನೂ ಈಗ ಕೇಳು ॥೧೩೪॥ ಆತ್ಮವು ಸ್ವಯಂ ಪ್ರಕಾಶವಾಗಿ ಮಹಾಅಗ್ನಿಸಮಾನವಾಗಿರುವುದು. ದೇಹವು ಜಡಮೂಢ ಕಾಷ್ಠದಂತಿರುವುದು. ಅದು ಆತ್ಮನಲ್ಲಿ ಏಕರೂಪವಾದರೆ ಅದು ತತ್ಕಾಲದಲ್ಲಿ ಸುಟ್ಟು ಭಸ್ಮವಾದೀತು ॥೧೩೫॥ ಅಗ್ನಿಯಲ್ಲಿ ಕರ್ಪುರವು ಒಂದು ವೇಳೆ ಎಂಟೂ ಪ್ರಹರಗಳವರೆಗೆ ಏಕರೂಪವಾಗಿ ಇದ್ದರೆ ಮಾತ್ರ ದೇಹ ಮತ್ತು ಆತ್ಮವೂ ಕೂಡ ಏಕರೂಪವಾಗಿ ದೇಹವೂ ಕೂಡ ಸಂಸಾರಬಂಧನದಲ್ಲಿ ಇರುತ್ತಿತ್ತು ॥೧೩೬॥ ಕಾಷ್ಠದಲ್ಲಿ ಅಗ್ನಿ ವಿರುವುದು. ಆದರೆ ಅದು ಅದರಲ್ಲಿದ್ದರೂ ಹೊರಗೆ ತೋರುವುದಿಲ್ಲ. ಕಾಷ್ಠಗಳನ್ನು ಒಂದಕ್ಕೊಂದು ತಿಕ್ಕಿದರೆ ಮಾತ್ರ ಅಗ್ನಿಯು ಪ್ರಕಟವಾಗುವುದು. ಕಟ್ಟಿಗೆಯನ್ನು ಸುಟ್ಟು ಹಾಕುವುದು ॥೧೩೭॥ ಅದರಂತೆ ಆತ್ಮವು ದೇಹದಲ್ಲಿದ್ದರೂ ದೇಹರೂಪವಾಗಿರುವುದಿಲ್ಲ. ಅದು ಜ್ಞಾನರೂಪದಿಂದ ದೇಹದ ಪ್ರಕಾಶಕವಾಗಿರುವುದು. ಅದಕ್ಕೆ ಭವಬಂಧದ ಹುಚ್ಚು ಹತ್ತಲಾರದು ॥೧೩೮॥ ಆತ್ಮದ ಸಂಗತಿಯಿಂದ ದೇಹವು ಸುಟ್ಟು ಹೋದರೆ ಪ್ರಾಣಿಮಾತ್ರರು ಹೇಗೆ ಬದುಕುವರು? ಅದನ್ನೂ ಕೂಡ ಈಗ ಕೇಳು ॥೧೩೯॥ ಛಾಯಾಮಂಟಪ ಅಂದರೆ ರೂಪೇರೀ ಪರದೆಯ ಮೇಲೆ ದೀಪದ ಪ್ರಕಾಶದಿಂದ ಕಾಗದ ಗೊಂಬೆಗಳು ಅತ್ತಂದಿತ್ತ ಕುಣಿಯುತ್ತಿರುವುವು. ಆದರೆ ಅದೇ ದೀಪವನ್ನು ಕಾಗದ ಗೊಂಬೆಗಳಿಗೆ ಹಚ್ಚಲು ಅವು ಸುಟ್ಟು ಬೂದಿಯಾಗುವುವು ॥೧೪೦॥ ಅದರಂತೆ ಆತ್ಮದ ಸಾಮರ್ಥ್ಯದಿಂದ ಜೀವವು ತನ್ನ ಪ್ರಾರಬ್ಧಾನುಸಾರವಾಗಿ ವರ್ತಿಸುತ್ತಿರುವುದು. ಆದರೆ ಅದೇ ಆತ್ಮವು ತನ್ನ ಸ್ವರೂಪದಲ್ಲಿ ಸ್ಥಿತವಾದರೆ ಒಂದೂ ಪ್ರಾಣಿಯು ಸಹ ಉಳಿಯಲು ಸಾಧ್ಯವಿಲ್ಲ ॥೧೪೧॥ ಆತ್ಮದ ಧ್ಯಾನವನ್ನು ಮಾಡಲು ಸಂಸಾರದ ಸ್ಮರಣೆಯೇ ಇರುವುದಿಲ್ಲ. ಅಂದಮೇಲೆ ಭಿನ್ನ ಭಿನ್ನ ಪ್ರಕಾರದ ಬದ್ಧ ಜೀವಿಗಳು ಹೇಗೆ ಇರಲು ಸಾಧ್ಯ ? ॥೧೪೨॥ ಈ ರೀತಿಯಾಗಿ ನೋಡಿದರೆ ಈ ಸಂಸಾರ ಬಂಧನವು ನನಗೆ ಮಾತ್ರ ಮಿಥ್ಯೆಯಾಗಿಯೇ ತೋರುವುದು. ಸಂಸಾರಬಂಧನಕ್ಕೆ ನಿಶ್ಚಿತವಾದ ಯಾವ ಸ್ಥಳವೇ ಇರುವುದಿಲ್ಲ ॥೧೪೩॥ ಆತ್ಮದಲ್ಲಿ ಅಥವಾ ದೇಹದಲ್ಲಿ ಹೀಗೆ ಎರಡೂ ಸ್ಥಾನದಲ್ಲಿ ಭವಬಂಧವು ಇಲ್ಲ. ಆದ್ದರಿಂದ ಅದು ಮಿಥ್ಯೆಯಾಗಿರುವುದು. ಅದಕ್ಕೆ ಎಲ್ಲಿಯೂ ಸ್ಥಳವಿಲ್ಲ ॥೧೪೪॥ ಹೇ ಶ್ರೀಕೃಷ್ಣನೇ, ನೀನು ಕೋಪಿಸಿಕೊಳ್ಳಬೇಡ, ನನ್ನ ನಿಶ್ಚಯದಂತೆ ನೋಡಲು ನಿಜವಾಗಿಯೂ ಈ ಸಂಸಾರಬಂಧನವು ಮಿಥ್ಯೆಯಾಗಿಯೇ ಇರುವುದು. ಇದು ನನ್ನ ಚಿತ್ತಕ್ಕೆ ದೃಢವಾಗಿ ತೋರುವುದು ॥೧೪೫॥ ಈ ಯಾವ ಉದ್ಧವನ ಭಾಷಣವನ್ನು ಕೇಳಿ ಶ್ರೀಕೃಷ್ಣನಿಗೆ ಆನಂದವು ಉಕ್ಕೇರಿತು. ನನ್ನ ಉದ್ಧವನು ಈಗ ಜ್ಞಾನಿಯಾದನು. ಆತನು ಆತ್ಮಸುಖವನ್ನು ತಿಳಿದುಕೊಂಡನು ಎಂದು ಮನದಲ್ಲಿ ಅಂದುಕೊಂಡನು ॥೧೪೬॥

ಸತ್ಯ ಮಿಥ್ಯಾ ಭವಬಂಧನ । ಐಕೋನಿ ಉದ್ಧವಾಚೇ ವಚನ । ಪರಮಾನಂದೇ ಡೋಲೇ ಶ್ರೀಕೃಷ್ಣ । ಜೀವೇ ನಿಂಬಲೋಣ ಕರೂ ಪಾಹೇ ॥೧೪೭॥ ಆತ್ಮ್ಯಾಸ ಭವಬಂಧ ನಾಹೀ । ಶೇಖೀ ನ ದಿಸೇ ದೇಹಾಚ್ಯಾ ಠಾಯೀ । ಹಾ ವಿವೇಕ ನೇಣಿಜೇ ಜಿಂಹೀ । ತ್ಯಾಸೀ ಭವಬಂಧ ಪಾಹೀ ಹರಿ ಸಾಂಗೇ ॥೧೪೮॥

ಶ್ರೀಭಗವಾನುವಾಚ:-

ಯಾವದ್ದೇಹೇಂದ್ರಿಯಪ್ರಾಣೈರಾತ್ಮನಃ ಸನ್ನಿಕರ್ಷಣಮ್ । ಸಂಸಾರಃ ಫಲವಾಂಸ್ತಾವದಪಾರ್ಥೋऽಪ್ಯವಿವೇಕಿನಃ ॥೧೨॥

ಅರ್ಥ:- ಶ್ರೀ ಕೃಷ್ಣನು ಹೇಳಿದನು ; ಪ್ರಿಯ ಉದ್ಧವಾ, ಸಂಸಾರಕ್ಕೆ ನಿಜವಾಗಿ ಅಸ್ತಿತ್ವವು ಇರುವುದಿಲ್ಲ. ಆದರೆ ಎಲ್ಲಿಯವರೆಗೆ ದೇಹ, ಇಂದ್ರಿಯ, ಮತ್ತು ಪ್ರಾಣ ಜೊತೆಯಲ್ಲಿ ಆತ್ಮದ ಸಂಬಂಧ-ಭ್ರಾಂತಿ ಇರುವುದೋ, ಅಲ್ಲಿಯವರೆಗೆ ಅವಿವೇಕ ಪುರುಷನಿಗೆ ಸಂಸಾರವು ಸತ್ಯ ಎಂಬಂತೆ ಸ್ಫುರಣವಾಗುವುದು.

ಜೋ ವರ್ಣಾಶ್ರಮಾಂಹೀಪರತಾ । ಜೋ ಬಂಧಮೋಕ್ಷಾ ಅಲಿಪ್ತತಾ । ಜೋ ದೇಹದ್ವಂದ್ವಾ ನಾತಳತಾ । ತೋ ಉದ್ಧವ ಹಿತಾರ್ಥಾ ಹರಿ ಬೋಲೇ ॥೧೪೯॥ ಮೀ ಕೃಶ ಸ್ಥೂಳ ಗೌರ ಶ್ಯಾಮು । ಹೇ ದೇಹಾಚೇ "ದೇಹಧರ್ಮ" । ಮೀ ಕಾಣಾ ಮುಕಾ ಬಹಿರಾ ಪರಮ । ಹೇ " ಇಂದ್ರಿಯಧರ್ಮ" ಇಂದ್ರಿಯಾಂಚೇ ॥೧೫೦॥ ಕ್ಷುಧಾತೃಷಾದಿ ಅನುಕ್ರಮ । ಹಾ ಪ್ರಾಣಾಂಚಾ "ಪ್ರಾಣಧರ್ಮ" । ಕಾಮಕ್ರೋಧಲೋಭಾದಿ ಸಂಭ್ರಮ । ಹಾ "ಮನೋಧರ್ಮ" ಮನಾಚಾ ॥೧೫೧॥ ಸತ್ತ್ವಗುಣಾಚೀ "ಜಾಗೃತೀ" । ರಜೋಗುಣೇ "ಸ್ವಪ್ನಸ್ಫೂರ್ತೀ" । ತಮೋಗುಣೇ ಜಾಡ್ಯ "ಸುಷುಪ್ತೀ" । ಜಾಣ ನಿಶ್ಚಿತೀ ದೇಹಯೋಗೇ ॥೧೫೨॥ ದೇಹಾಸೀ ಯೇತಾ ಮರಣ । "ಮೀ ಮೇಲೋ" ಮ್ಹಣೇ ತೋ ಆಪಣ । ದೇಹಾಸೀ ಜನ್ಮ ಹೋತಾ ಜಾಣ । ಜನ್ಮಲೇಪಣ ಸ್ವಯೇ ಮಾನೀ ॥೧೫೩॥ ಇಂದ್ರಿಯೇ ವಿಷಯೋ ಸೇವಿತೀ । ತೇ ಮ್ಯಾ ಸೇವಿಲೇ ಮಾನೀ ನಿಶ್ಚಿತೀ । ಸ್ವರ್ಗನರಕಭೋಗಪ್ರಾಪ್ತೀ । ಸತ್ಯ ಮಾನಿತೀ ದೇಹಾತ್ಮತಾ ॥೧೫೪॥ ಅನ್ನ ಆಕಾಂಕ್ಷೀ ಪ್ರಾಣ । ತ್ಯಾತೇ ಭಕ್ಷೀ ಹುತಾಶನ । ತತ್ಸಾಕ್ಷೀ ಚಿದಾತ್ಮಾ ಆಪಣ । ಮ್ಹಣೇ ಮ್ಯಾ ಅನ್ನ ಭಕ್ಷಿಲೇ ॥೧೫೫॥ ತೇ ಅವಘೇ ಮಾಝೇ ಧರ್ಮ । ಐಸಾ ಆತ್ಮ್ಯಾಸೀ ಜಂವ ದೃಢ ಭ್ರಮ । ತಂವ ಮಿಥ್ಯಾಚಿ ಅತಿದುರ್ಗಮ । ಸಂಸಾರ ವಿಷಯ ಭ್ರಮೇ ಭೋಗೀ ॥೧೫೬॥ ತ್ಯಾ ಭೋಗಾಚೇ ಫಳ ಗಹನ । ಅವಿಶ್ರಮ ಜನ್ಮಮರಣ। ಸ್ವರ್ಗ ನರಕ ಪಾಪಪುಣ್ಯ । ಭ್ರಮೇ ಆಪಣ ಸತ್ಯ ಮಾನೀ ॥೧೫೭॥ ಸಂಸಾರ ಮೂಳೀ ನಿಮೂಳ । ತೋಹೀ ಭ್ರಮಫಳೇ ಸದಾಫಳ । ಜೋ ಕಾ ಅವಿವೇಕ್ಯಾ ಅತಿಪ್ರಬಳ । ಸರ್ವಕಾಳ ಫಳಲಾಸೇ ॥೧೫೮॥

ಭವಬಂಧನವು ಸತ್ಯವಾಗಿ ಮಿಥ್ಯೆಯಾಗಿರುವುದು ಎಂಬ ಉದ್ಧವನ ವಚನಗಳನ್ನು ಕೇಳಿ ಶ್ರೀಕೃಷ್ಣನು ಪರಮಾನಂದದಿಂದ ತೂಗಾಡಹತ್ತಿದನು, ಮತ್ತು ಆತನ ಮೇಲೆ ತನ್ನ ಜೀವವನ್ನು ನಿವಾಳಿಸಿ ಒಗೆಯಬೇಕೆಂದು ಬಯಸಿದನು ॥೧೪೭॥ ಆತ್ಮಕ್ಕೆ ಭವಬಂಧನವು ಇಲ್ಲ ಮತ್ತು ಕೊನೆಗೆ ದೇಹಕ್ಕಾದರೂ ಕಾಣುತ್ತಿಲ್ಲ. ಈ ವಿಚಾರವು ಯಾರಿಗೆ ತಿಳಿಯುವುದಿಲ್ಲವೋ ಅವರಿಗೆ ಭವಬಂಧನವು ಇರುವುದೆಂದು ಹೀಗೆ ಶ್ರೀಹರಿಯು ಹೇಳುತ್ತಿರುವನು ॥೧೪೮॥

ವರ್ಣಾಶ್ರಮಗಳ ಆಚೆಗಿರುವ, ಬಂಧಮೋಕ್ಷಗಳಿಗೆ ಅಲಿಪ್ತನಾಗಿರುವ, ದೇಹದ್ವಂದ್ವಗಳಿಗೆ ಸ್ಪರ್ಶ ಕೂಡ ಮಾಡದೇ ಇರುವ, ಯಾವ ಶ್ರೀಹರಿಯು ಉದ್ಧವನ ಹಿತಕ್ಕಾಗಿ ಹೇಳಲಾರಂಭಿಸಿದನು ॥೧೪೯॥ ನಾನು ಕೃಶನು, ನಾನು ಸ್ಥೂಲನು, ನಾನು ಗೌರ ವರ್ಣನು, ನಾನು ಕಪ್ಪು ವರ್ಣನು ಹೀಗೆ ದೇಹದ "ದೇಹಧರ್ಮ"ವಾಗಿರುವುದು. ನಾನು ಒಕ್ಕಣ್ಣನು, ಮೂಕನು, ಕಿವುಡನು ಇದು "ಇಂದ್ರಿಯಧರ್ಮ"ವಾಗಿರುವುದು ॥೧೫೦॥ ಹಸಿವೆ, ನೀರಡಿಕೆ ಇತ್ಯಾದಿ "ಪ್ರಾಣಧರ್ಮ"ವಾಗಿರುವುದು. ಕಾಮ, ಕ್ರೋಧ, ಲೋಭಾದಿಗಳು "ಮನೋಧರ್ಮ"ವಾಗಿರುವುದು ॥೧೫೧॥ ಸತ್ವಗುಣದಿಂದ ಜಾಗೃತೀ, ರಜೋಗುಣದಿಂದ ಸ್ವಪ್ನಸ್ಫೂರ್ತಿ ಮತ್ತು ತಮೋಗುಣದಿಂದ ಜಡವಾದ ಸುಷುಪ್ತಿ ಇವು ದೇಹಯೋಗದಿಂದ ಆಗುತ್ತಿರುವುವು ॥೧೫೨॥ ದೇಹಕ್ಕೆ ಮರಣವು ಬರಲು ನಾನು ಮರಣನಾದೆನು ಎಂದು ಹೇಳುವನು. ದೇಹಕ್ಕೆ ಜನ್ಮವು ಬರಲು ನಾನು ಹುಟ್ಟಿದೆ ಎಂದು ಹೇಳುವನು ॥೧೫೩॥ ಇಂದ್ರಿಯಗಳು ವಿಷಯಗಳ ಸೇವನೆಯನ್ನು ಮಾಡುತ್ತಿರುವುವು. ಆದರೆ ಈತನು "ನಾನೇ ವಿಷಯಭೋಗ ಪಡೆಯುತ್ತಿರುವೆನು" ಎಂದು ತಿಳಿಯುವನು. ಸ್ವರ್ಗ-ನರಕ ಭೋಗಗಳು ಪ್ರಾಪ್ತವಾಗಲು ದೇಹಾತ್ಮತೆಯಿಂದ ಆತನಿಗೆ ಇವು ನಿಜವೆಂದು ತೋರುವುದು ॥೧೫೪॥ ಪ್ರಾಣವು ಅನ್ನದ ಇಚ್ಛೆಯನ್ನು ಮಾಡುವುದು. ಅದನ್ನು ಅಗ್ನಿಯು ಭಕ್ಷಣೆ ಮಾಡುವುದು. ಆದರೆ ಚಿದಾತ್ಮನು ಇದಕ್ಕೆ ಸಾಕ್ಷಿಯಾಗಿದ್ದರೂ ಅನ್ನವನ್ನು ತಾನೇ ಭಕ್ಷಿಸಿದೆನು ಎಂದು ತಿಳಿಯುವನು ॥೧೫೫॥ ಈ ಎಲ್ಲ ಧರ್ಮಗಳು ನನ್ನದೇ ಎಂಬ ಭ್ರಮೆಯು ಜೀವಕ್ಕೆ ಎಲ್ಲಿಯವರೆಗೆ ಇರುತ್ತದೆಯೋ, ಅಲ್ಲಿಯವರೆಗೆ ಮಿಥ್ಯಾರೂಪವಾದ ಈ ದುರ್ಗಮ ಸಂಸಾರವನ್ನು ವಿಷಯಭ್ರಮೆಯಿಂದ ಭೋಗಿಸುತ್ತಲೇ ಇರುವನು ॥೧೫೬॥ ಈ ಭೋಗದ ಫಲವು ಅತಿಶಯವಾಗಿ ಕೆಟ್ಟ ಸ್ವರೂಪದಿಂದ ಕೂಡಿರುವುದು. ಅವಿಶ್ರಾಂತವಾದ ಜನ್ಮಮರಣ, ಸ್ವರ್ಗ-ನರಕ, ಪಾಪಪುಣ್ಯ ಈ ಎಲ್ಲವನ್ನೂ ಇವನು ಭ್ರಮೆಯಿಂದ ನಿಜವೆಂದೇ ತಿಳಿದಿರುವನು ॥೧೫೭॥ ಯಾವ ಈ ಸಂಸಾರವು ಮೂಲತಃ ನಿರ್ಮೂಲವಾಗಿರುವುದು. ಆದರೆ ಅದು ಭ್ರಮದ ಫಲದಿಂದ ಯಾವಾಗಲೂ ಫಲಿಸುತ್ತಿರುವುದು. ಅವಿವೇಕೀ ಜನರಿಗೆ ಅದು ಪ್ರಬಲವಾಗಿ ಸದಾ ಸರ್ವದಾ ಸುಫಲಿತವಾಗಿ ಭಾಸವಾಗುತ್ತಿರುವುದು ॥೧೫೮॥

ಜೇಥ ಸತ್ಯ ಅರ್ಥ ನಾಹೀ । ತೋ ''ಅನರ್ಥ'' ಮ್ಹಣಿಜೇ ಪಾಹೀ । ತ್ಯಾಚಾ ಫಳಭೋಗ ತೋಹೀ । ಬಾಳಬಾಗುಲ ನ್ಯಾಯೀ ಭೋಗಾವಾ ॥೧೪೯॥ ಆಶಂಕಾ॥ ''ಗಗನಕಮಳಾಂಚಿ ಮಾಳಾ । ಜೈ ವಂಧ್ಯಾಪುತ್ರ ಘಾಲೀ ಗಳಾ । ತೈ ಸಂಸಾರಭೋಗಾಚಾ ಸೋಹಳಾ । ಆತ್ಮ್ಯಾಚ್ಯಾ ಜವಳಾ ದೇಖಿಜೇ ॥೧೫೦॥ ಐಸೇ ನ ಘಡತೇ ಕೇವೀ ಘಡೇ''। ತೇಚಿ ಅರ್ಥೀಚೇ ವಾಡೇಕೋಡೇ । ಶ್ರೀಕೃಷ್ಣ ಉದ್ಧವಾಪುಢೇ । ನಿಜನಿವಾಡೇ ಸಾಂಗತ ॥೧೫೧॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ । ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥೧೩॥

ಅರ್ಥ:- ಸ್ವಪ್ನದಲ್ಲಿ ವಿಪತ್ತು ಬರುವುದು. ಆದರೆ ಅದು ವಿಪತ್ತು ಇರುವುದಿಲ್ಲ. ಆದರೂ ಕೂಡ ಸ್ವಪ್ನವು ಮುಗಿದರೂ ಅದರ ವಿಪತ್ತಿನ ಅಸ್ತಿತ್ವವು ಮುಗಿಯುವುದಿಲ್ಲ. ಅದರಂತೆ ಸಂಸಾರ ಇಲ್ಲದಿರಲು ಯಾವನು ಅದರಲ್ಲಿ ಪ್ರತೀತವಾಗುವ ವಿಷಯಗಳ ಚಿಂತನೆಯನ್ನು ಮಾಡುವನೋ, ಆತನ ಜನ್ಮಮರಣರೂಪ ಸಂಸಾರದ ನಿವೃತ್ತಿಯಾಗಲಾರದು.

ಸತ್ಯಾರ್ಥ ನಸತಾಂಹೀ ಸಂಸಾರ । ನಿವರ್ತೇನಾ ಅತಿದುರ್ಧರ । ಯೇಚಿ ಅರ್ಥೀಚಾ ವಿಚಾರ । ನಿಜನಿರ್ಧಾರ ಅವಧಾರೀ ॥೧೫೨॥ ವಂಧ್ಯಾಪುತ್ರಾಚಿಯಾ ಐಸೇ । ಸಂಸಾರಾ ಸತ್ಯಪಣ ನಸೇ । ಸತ್ಯ ಮ್ಹಣೋ ತರೀ ಹಾ ನಸೇ । ಕಾಳವಶೇ ಸಹಜೇಚಿ ॥೧೫೩॥ ಸಂಸಾರ ಜೈ ಸತ್ಯ ಹೋತಾ । ತೈ ಬ್ರಹ್ಮಜ್ಞಾನೇಹೀ ನ ನಾಸತಾ । ಹಾ ಸಂತಾಸಂತ ನಯೇ ಮ್ಹಣತಾ । ಅನಿರ್ವಾಚ್ಯ ಕಥಾ ಪೈ ಯಾಚೀ ॥೧೫೪॥ ಅವಿಚಾರಿತಾ ಯಾಚೇ ಕೋಡ । ಅವಿವೇಕೇ ಹಾ ಅತಿಗೋಡ । ವಿಷಯಧ್ಯಾನೇ ವಾಢೇ ರೂಢ । ಸಂಕಲ್ಪ ಸದೃಢ ಮೂಳ ಯಾಚೇ ॥೧೫೫॥ ಹಾ ನಸತಾಚಿ ಪರೀ ಆಭಾಸೇ । ನಿದ್ರಿತಾ ಸ್ವಪ್ನೀ ಅನರ್ಥಪಿಸೇ । ತೇವೀ ಸಂಸಾರ ಮಾಯಾವಶೇ । ವಿಷಯ ಆಭಾಸೇ ಭೋಗವೀ ॥೧೫೬॥ ಜಂವ ಜಂವ ವಿಷಯಸೇವನ । ತಂವ ತಂವ ವಾಢೇ ವಿಷಯಧ್ಯಾನ । ವಿಷಯಧ್ಯಾಸೇ ಭವಬಂಧನ । ಸದೃಢ ಜಾಣ ಉದ್ಧವಾ ॥೧೫೭॥ ವಿಷಯ ಸೇವನೇ ಭವಬಂಧನ । ಜೀವಾಸೀ ಝಾಲೇ ದೃಢ ಪೂರ್ಣ । ತೈ ಜೀವನ್ಮುಕ್ತಾಸೀ ವಿಷಯಭಾನ । ದೈವಯೋಗೇ ಜಾಣ ದಿಸತಾಹೇ ॥೧೫೮॥ ''ಜೀವನ್ಮುಕ್ತಾಸೀ ವಿಷಯಪ್ರಾಪ್ತೀ । ತೇಣೇ ಬುಡಾಲೀ ತ್ಯಾಚೀ ಮುಕ್ತೀ''। ಐಸೀ ಆಶಂಕಾ ನ ಧರೀ ಚಿತ್ತೀ । ತೇಚಿ ಶ್ರೀಪತಿ ವಿಶದ ಸಾಂಗೇ ॥೧೫೯॥

ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ । ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥೧೪॥

ಅರ್ಥ:- ಕನಸು ಕಾಣುತ್ತಿರುವಾಗ ಒಬ್ಬನು ಅನೇಕ ವಿಪತ್ತುಗಳನ್ನು ಅನುಭವಿಸಿದರೂ, ಅವನು ಎಚ್ಚರ ತಾಳಿದಾಗ ಕನಸಿನ ಅನುಭವಗಳಿಂದ ಭ್ರಾಂತನಾಗುವುದಿಲ್ಲ.

ಯಾವುದಕ್ಕೆ ನಿಜವಾದ ಅರ್ಥವು ಇರುವುದಿಲ್ಲವೋ, ಅದಕ್ಕೆ ಅನರ್ಥವೆಂದು ಹೇಳಬೇಕಾಗುವುದು. ಅದರ ಫಲವನ್ನೊ ಕೂಡ ಚಿಕ್ಕ ಬಾಲಕರ ಬೆದರು ಬೊಮ್ಮ ನ್ಯಾಯದಂತೆ ಭೋಗಿಸಬೇಕಾಗುವುದು ॥೧೪೯॥ ಆಕಾಶದಲ್ಲಿ ಹುಟ್ಟಿದ ಪುಷ್ಪಗಳಿಂದ ಮಾಲೆಯನ್ನು ತಯಾರಿಸಿ ಬಂಜೆಯ ಮಗನ ಕೊರಳಲ್ಲಿ ಹಾಕಲು ಸಾಧಿಸಿದರೆ ಮಾತ್ರ ಸಂಸಾರಭೋಗದ ವೈಭವವು ಆತ್ಮಕ್ಕೆ ಹತ್ತಿಕೊಳ್ಳಬಹುದು ॥೧೫೦॥ ಹೀಗೆ ಸಾಧಿಸಲು ಸಾಧ್ಯವೇ ಇಲ್ಲದ್ದು ಹೇಗೆ ಸಾಧಿಸಲು ಸಾಧ್ಯ? ಈ ಅರ್ಥದ ನಿರೂಪಣೆಯನ್ನು ಅತ್ಯಂತ ಪ್ರೇಮದಿಂದ ಶ್ರೀಕೃಷ್ಣನು ಉದ್ಧವನಲ್ಲಿ ನಿರ್ಣಯ ಪೂರ್ವಕವಾಗಿ ಹೇಳುತ್ತಿರುವನು ॥೧೫೧॥

ಈ ಯಾವ ಸಂಸಾರವು ಸತ್ಯವಲ್ಲದಾಗಿರಲು ಅದು ಅತ್ಯಂತ ದುರ್ಧರವಾಗಲು ಸಾಧ್ಯವಿಲ್ಲ ಎಂಬ ಅರ್ಥದ ನಿಶ್ಚಿತವಾದ ನಿರ್ಣಯವನ್ನು ಈಗ ಹೇಳುತ್ತಿರುವನು. ಅದಕ್ಕಾಗಿ ನೀನು ಲಕ್ಷಪೂರ್ವಕವಾಗಿ ಕೇಳು ॥೧೫೨॥ ಬಂಜೆಯ ಪುತ್ರಪ್ರಮಾಣದಂತೆ ಸಂಸಾರಕ್ಕೆ ಸತ್ಯತ್ವವು ಇರುವುದಿಲ್ಲ. ಇದಕ್ಕೆ ಸತ್ಯವೆಂದು ಹೇಳಬೇಕೆಂದರೆ ಕಾಲನು ಅದರ ನಾಶವನ್ನು ಸಹಜವಾಗಿ ಮಾಡುತ್ತಿದ್ದಿಲ್ಲ ॥೧೫೩॥ ಸಂಸಾರವು ಸತ್ಯವಾಗಿದ್ದರೆ ಅದು ಬ್ರಹ್ಮಜ್ಞಾನದಿಂದಲೂ ಕೂಡ ನಾಶವಾಗುತ್ತಿದ್ದಿಲ್ಲ. ಹೀಗಾಗಿ ಅದು ಸತ್ಯವೋ, ಅಸತ್ಯವೋ ಎಂಬುದನ್ನು ನಿರ್ಣಯಿಸಲು ಬರುವಂತೆ ಇರುವುದಿಲ್ಲ. ಹೀಗೆ ಈ ಸಂಸಾರವು ಅನಿರ್ವಚನೀಯವಾಗಿರುವುದು ॥೧೫೪॥ ಕೇವಲ ಅವಿಚಾರದಿಂದ ಇದರ ಅಪೇಕ್ಷೆಯು ನಿರ್ಮಾಣವಾಗುವುದು. ಅವಿವೇಕದಿಂದ ಇದು ಅತಿಶಯವಾಗಿ ಪ್ರಿಯವಾಗುತ್ತಿರುವುದು. ವಿಷಯಗಳ ಚಿಂತನೆಯಿಂದ ಇದು ಬೆಳೆಯುತ್ತಿರುವುದು. ಸಂಕಲ್ಪವೇ ಇದಕ್ಕೆ ದೃಢವಾದ ಮೂಲವಾಗಿರುವುದು ॥೧೫೫॥ ಇದು ಇಲ್ಲದಿದ್ದರೂ ಕೂಡ ಭಾಸವಾಗತ್ತಿರುವುದು. ಮಲಗಿದವನ ಸ್ವಪ್ನದಲ್ಲಿ ಅನರ್ಥದ ಹುಚ್ಚು ಹತ್ತಿದಂತೆ ಯಾವ ಈ ಸಂಸಾರವು ಮಾಯೆಯ ಯೋಗದಿಂದ ಭ್ರಾಂತಿಯೊಂದಿಗೆ ವಿಷಯಗಳನ್ನು ಭೋಗಿಸಲು ಹಚ್ಚಿರುವುದು ॥೧೫೬॥ ನಾವು ಹೇಗೆ ಹೇಗೆ ವಿಷಯಗಳ ಸೇವನೆಯನ್ನು ಮಾಡುತ್ತ ಸಾಗುವೆವೋ, ಅದೇ ಪ್ರಮಾಣದಲ್ಲಿ ವಿಷಯ ಧ್ಯಾನವು ಬೆಳೆಯುತ್ತ ಮುನ್ನಡೆಯುವುದು. ಹೇ ಉದ್ಧವನೇ, ಈ ವಿಷಯ ಧ್ಯಾನದಿಂದ ಭವಬಂಧವು ಅತ್ಯಂತ ದೃಢವಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೫೭॥ ವಿಷಯಗಳ ಸೇವನೆಯಿಂದ ಜೀವಕ್ಕೆ ಭವಬಂಧವು ದೃಢವಾಗಿರುವುದು. ಇದೇ ವಿಷಯಗಳ ಸ್ಥಿತಿಯನ್ನು ಜೀವನ್ಮುಕ್ತನಿಗೂ ಕೂಡ ದೈವಯೋಗದಿಂದ ಭೋಗಿಸಬೇಕಾಗುವುದು ॥೧೫೮॥ ಜೀವನ್ಮುಕ್ತ ಪುರುಷನಿಗೆ ವಿಷಯಗಳ ಪ್ರಾಪ್ತಿಯಾದರೆ ಇದರಿಂದ ಆತನ ಮುಕ್ತಿಯು ಇಲ್ಲದಾಗುವುದು ಎಂದು ಹೀಗೆ ಅನುಮಾನವನ್ನು ನೀನು ಮನದಲ್ಲಿ ತರಬೇಡ. ಇದನ್ನು ಶ್ರೀಕೃಷ್ಣನು ಸ್ಪಷ್ಟಮಾಡಿ ಹೇಳುವನು ॥೧೫೯॥

ಸಜ್ಞಾನ ಆಣಿ ಅಜ್ಞಾನ । ಯಾಂಸೀ ಜೇ ವಿಷಯಸೇವನ । ತ್ಯಾಂಚಾ ಅನುಭವ ಬಿನ್ನ ಭಿನ್ನ । ತೇಹೀ ಲಕ್ಷಣ ಅವಧಾರೀ ॥೧೭೦॥ ಜೇವೀ ಸ್ವಪ್ನೀಂಚೀ ವಿಷಯಪ್ರಾಪ್ತೀ । ಸ್ವಪ್ನಸ್ಥ ಸಾಚಚಿ ಮಾನತೀ । ತೇಚಿ ವಿಷಯ ಜಾಗೃತೀ ಸ್ಫುರತೀ । ಪರೀ ಸತ್ಯಪ್ರತೀತಿ ತ್ಯಾ ನಾಹೀ ॥೧೭೧॥ ತೇವೀ ಅಜ್ಞಾನಾ ವಿಷಯಸೇವನ । ತೇಣೇ ವಿಷಯಾಸಕ್ತ ಹೋಯ ಮನ । ತೇಚಿ ಮುಕ್ತಾಂಪ್ರತಿ ವಿಷಯ ಜಾಣ । ಮಿಥ್ಯಾ ದರ್ಶನ ವಿಷಯಾಂಚೇ ॥೧೭೨॥ ನಟನಾಟ್ಯ ಲೋಕಾಚಾರೀ । ಸಂಪಾದೀ ಸ್ತ್ರೀಪುರುಷವ್ಯವಹಾರೀ । ಮುಕ್ತಾ ಸೀ ತೈಶೀ ಪರೀ । ಗೃಹದಾರೀ ನಾಂದತಾ ॥೧೭೩॥ ಕಾ ಲೇಕರಾಂಚ್ಯಾ ಖೇಳಾಪ್ರತೀ । ತುಳಸೀದಳೇ ಘೇಊನಿ ಹಾತೀ । ವಡೇ ಮಾಂಡೇ ಕ್ಷೀರ ತೂಪ ಮ್ಹಣತೀ । ಏಕೀ ಕಲ್ಪಿತೀ ಅನೇಕತ್ವ ॥೧೭೪॥ ತೇವೀ ಜೀವನ್ಮುಕ್ತಾಂಸೀ ದೇಖ । ಜಗೀ ವಿಷಯೋ ಅವಘಾ ಏಕ । ತ್ಯಾಸೀ ನಾನಾತ್ವೇ ಭಾವಿತೀ ಲೋಕ । ಪರೀ ತೋ ಅನೇಕ ದೇಖೇನಾ ॥೧೭೫॥ ದೃಢ ಧರೋನಿ ದೇಹಾಭಿಮಾನ । ''ಮೀ ಮಾಝೋ'' ಜೇ ವಿಷಯಸ್ಫುರಣ । ತೇಚ ಭವಬಂಧಾಚೇ ಕಾರಣ । ವಿಶದ ಶ್ರೀಕೃಷ್ಣ ಸಾಂಗತ ॥೧೭೬॥

ಶೋಕಹರ್ಷಭಯಕ್ರೋಧಲೋಭಮೋಹಸ್ಪೃಹಾದಯಃ । ಅಹಂಕಾರಸ್ಯ ದೃಶ್ಯಂತೇ ಜನ್ಮಮೃತ್ಯುಶ್ಚ ನಾತ್ಮನಃ ॥೧೫॥

ಅರ್ಥ:- ಶೋಕ, ಹರ್ಷ, ಭಯ, ಕ್ರೋಧ, ಲೋಭ, ಮೋಹ, ಸ್ಪೃಹಾ ಮತ್ತು ಜನ್ಮಮರಣ ಇವು ಅಹಂಕಾರದ ಧರ್ಮವಾಗಿರುವುವು, ಆತ್ಮನದಾಗಿರುವುದಿಲ್ಲ. ಕಾರಣ ಇವು ಪ್ರತೀತಿಗೆ ಬರುವುವು.

ದೇಹಾಭಿಮಾನಾಚೇ ಪೋಟೀ । ಅನೇಕ ದುಃಖಾಚಿಯಾ ಕೋಟೀ । ತ್ಯಾಂಚೀ ಸಂಕಳಿತೇ ಗುಣಗೋಠೀ । ಕೃಷ್ಣ ಜಗಜೇಠೀ ಸಾಂಗತ ॥೧೭೭॥ ದೇಹಾಭಿಮಾನಾಚೇ ಕಾರ್ಯ ಏಥ । ಅದ್ವೈತೀ ವಾಢವೀ ದ್ವೈತ । ಇಷ್ಟಾನಿಷ್ಟೀ ಸಮಸ್ತ । ಜಗ ವ್ಯಾಪ್ತ ತೇಣೇ ಕೀಜೇ ॥೧೭೮॥ ನಶ್ವರಾ ಇಷ್ಟಾಚಾ ನಾಶ ದೇಖ । ತೇಣೇ ದೇಹಅಹಂತಾ ಮಾನೀ ದುಃಖ । ಯಾ ನಾಂವ ಗಾ ''ಶೋಕ'' । ಸಕಳಹೀ ಲೋಕ ಮಾನಿತೀ ॥೧೭೯॥ ನಶ್ವರ ವಿಷಯಾಂಚೀ ಪ್ರಾಪ್ತೀ । ತೇಥೇ ಆಹ್ಲಾದ ಉಪಜೇ ಚಿತ್ತೀ । ತ್ಯಾ ನಾಂವ ''ಹರ್ಷ'' ಮ್ಹಣತೀ । ಜಾಣ ನಿಶ್ಚಿತೀ ಉದ್ಧವಾ ॥೧೮೦॥ ಬಳೀ ಮಿಳೋನೀ ಸಮರ್ಥ । ಆಪ್ತ ವಿಷಯೋ ವಿಭಾಂಡೂ ಪಾಹಾತ । ತೇಣೇ ಕಾಸಾವೀಸ ಹೋಯ ಚಿತ್ತ । ''ಭಯ'' ನಿಶ್ಚಿತ ಯಾ ನಾಂವ ॥೧೮೧॥ ಆಪ್ತಕಾಮಾಚೇ ಅವರೋಧನ । ಜ್ಯಾಚೇನಿ ಅಣುಮಾತ್ರ ಹೋಯ ಜಾಣ । ತ್ಯಾಚೇ ಕರೂ ಧಾಂವೇ ಹನನ । ''ಕ್ರೋಧ'' ಸಂಪೂರ್ಣ ತ್ಯಾ ನಾಂವ ॥೧೮೨॥

ಸಜ್ಞಾನಿಯ ಮತ್ತು ಅಜ್ಞಾನಿಯ ಇವರ ವಿಷಯ ಸೇವನೆಯ ಅನುಭವವು ಭಿನ್ನ ಭಿನ್ನ ಪ್ರಕಾರವಾಗಿರುವುದು. ಅವುಗಳ ಲಕ್ಷಣಗಳನ್ನು ಹೇಳುವೆನು, ಕೇಳು ॥೧೭೦॥ ಸ್ವಪ್ನದಲ್ಲಿನ ವಿಷಯಗಳು ಇವು ಸ್ವಪ್ನದಲ್ಲಿ ಮಾತ್ರ ಸತ್ಯವಾಗಿರುವುವು. ಆದರೆ ಎಚ್ಚರಾದ ಮೇಲೆ ಆ ವಿಷಯಗಳು ಸ್ಫುರಣಗೊಂಡರೂ ಕೂಡ ಅವು ಸತ್ಯ ಎಂದು ಅನಿಸುವುದಿಲ್ಲ ॥೧೭೧॥ ಅದರಂತೆ ಅಜ್ಞಾನಿಯು ವಿಷಯ ಸೇವನೆಯನ್ನು ಮಾಡಲು ಆತನ ಮನವು ವಿಷಯಾಸಕ್ತವಾಗುವುದು. ಆದರೆ ಅದೇ ವಿಷಯಗಳು ಜೀವನ್ಮುಕ್ತನಿಗೆ ತೋರುತ್ತಿದ್ದರೂ ಅವು ಮಿಥ್ಯೆಯಾಗಿವೆ ಎಂದು ಅವರಿಗೆ ತಿಳಿದಿರುವುದು ॥೧೭೨॥ ನಾಟಕದಲ್ಲಿನ ನಟರು ಯಾವ ಪ್ರಕಾರವಾಗಿ ಲೋಕದೃಷ್ಟಿಯ ಅನುಸಾರವಾಗಿ ಸ್ತ್ರೀಪುರುಷ ವೇಶದಲ್ಲಿ ವರ್ತಿಸುತ್ತಿರುವರೋ ಅದರಂತೆ ಮುಕ್ತ ಪುರುಷನು ತನ್ನ ಮನೆಮಾರಿನಲ್ಲಿ ವರ್ತಿಸುತ್ತಿರುವನು ॥೧೭೩॥ ಚಿಕ್ಕ ಬಾಲಕಬಾಲಕಿಯರು ಅಡುಗೆ- ಊಟದ ಆಟವನ್ನು ಆಡುತ್ತಿರಲು ಅವರು ಒಂದು ಕೈಯಲ್ಲಿ ಒಂದು ತುಳಸಿ ದಳ ತೆಗೆದುಕೊಂಡು ಇದು ವಡೆ, ಹೋಳಿಗೆ, ಖೀರು, ತುಪ್ಪ ಇತ್ಯಾದಿ ಹೆಸರುಗಳನ್ನು ಕೊಡುತ್ತಿರುವರು. ಹೀಗೆ ಒಂದರಲ್ಲಿಯೇ ಅನೇಕತ್ವದ ಕಲ್ಪನೆಯನ್ನು ಮಾಡುತ್ತಿರುವರು ॥೧೭೪॥ ಅದರಂತೆ ಈ ಯಾವ ಸಂಪೂರ್ಣ ಜಗತ್ತು ಜೀವನ್ಮುಕ್ತನಿಗೆ ಪರಬ್ರಹ್ಮವೆಂಬ ಈ ಒಂದೇ ವಿಷಯವು ತೋರುತ್ತಿರುವುದು. ಜನರು ಭಿನ್ನ ಭಿನ್ನ ಪ್ರಕಾರವಾಗಿ ಕಲ್ಪನೆಗಳನ್ನು ಮಾಡಿದರೂ ಕೂಡ ಆತನು ಅನೇಕತ್ವವನ್ನು ಹೊಂದಲಾರನು ॥೧೭೫॥ ದೇಹಾಭಿಮಾನವು ಅತಿಶಯವಾಗಿ ದೃಢವಾಗಲು ನಾನು, ನನ್ನದೆಂಬ ವಿಷಯಗಳ ಸ್ಫುರಣೆಯಾಗುವುದು. ಇದುವೇ ಸಂಸಾರ ಬಂಧನಕ್ಕೆ ಕಾರಣವು. ಶ್ರೀಕೃಷ್ಣನು ಈಗ ಅದನ್ನು ಸ್ಪಷ್ಟಮಾಡಿ ಹೇಳುವನು ॥೧೭೬॥

ದೇಹಾಭಿಮಾನದ ಹೊಟ್ಟೆಯಲ್ಲಿ ಕೋಟಿಗಟ್ಟಲೆ ದುಃಖಗಳು ತುಂಬಿರುವುವು. ಇವುಗಳ ಗುಣಕಾರ್ಯಗಳನ್ನು ಜಗಜೇಠಿಯಾದ ಶ್ರೀಕೃಷ್ಣನು ಸಾರಾಂಶರೂಪದಿಂದ ಹೇಳುತ್ತಿರುವನು ॥೧೭೭॥ ದೇಹಾಭಿಮಾನದ ಕಾರ್ಯವು ಅದು ಅದ್ವೈತದಲ್ಲಿ ದ್ವೈತವನ್ನು ಹುಟ್ಟಿಸುವುದು. ಆದ್ದರಿಂದ ಈ ಯಾವ ಸಂಪೂರ್ಣ ಜಗತ್ತು ಇಷ್ಟ ಮತ್ತು ಅನಿಷ್ಟಗಳಿಂದ ವ್ಯಾಪಿಸಿಕೊಂಡಿರುವುದು ॥೧೭೮॥ ನಾಶಿವಂತವಾಗಿರುವ ಇಷ್ಟ ಪದಾರ್ಥದ ನಾಶವಾಗಲು ದೇಹ ಅಹಂತೆಯು ದುಃಖವನ್ನು ತಾಳುವುದು. ಇದರ ನಾಮವೇ ಶೋಕವು ಎಂದು ಎಲ್ಲರೂ ಹೇಳುವರು ॥೧೭೯॥ ನಶ್ವರ ವಿಷಯಗಳ ಪ್ರಾಪ್ತಿಯಾಗಲು ಮನಸ್ಸಿಗೆ ಅತಿಶಯ ಸುಖವಾಗುವುದು. ಇದಕ್ಕೆ ಹರ್ಷವೆಂದು ಕರೆಯುವರು ॥೧೮೦॥ ಬಲಾಢ್ಯರು ಒಂದುಗೂಡಿ ಕಲಹ ಮಾಡಿ ಪ್ರಿಯ ವಿಷಯಪ್ರಾಪ್ತಿಗೆ ಅಡ್ಡಿಯಾಗುವರು. ಆಗ ಜೀವವು ಕಸಿವಿಸಿಯಾಗುವುದು. ಅದಕ್ಕೆ ಭಯವೆಂದು ಹೇಳುವರು ॥೧೮೧॥ ತಮ್ಮ ಇಷ್ಟ ವಿಷಯಗಳ ಪ್ರಾಪ್ತಿಯಲ್ಲಿ ಪ್ರತಿಬಂಧ ಮಾಡುವ ಮನುಷ್ಯನಿಗೆ ಕೊಲ್ಲಲು ಧಾವಿಸುವುದಕ್ಕೆ ಕ್ರೋಧವೆಂದು ಹೇಳುವರು ॥೧೮೨॥

ಗಾಂಠೀ ಝಾಲ್ಯಾಹೀ ಧನಕೋಡೀ । ಕವಡೀ ವೇಚಿತಾ ಪ್ರಾಣ ಸೋಡೀ । ಯಾ ನಾಂವ ''ಲೋಭಾಚೀ'' ಬೇಡೀ । ಕೃಪಣ-ಪರವಡೀ ಪುರುಷಾಚೀ ।।೧೮೩।। ಕರ್ಮಾಕರ್ಮ ಹಿತಾಹಿತ । ಇಷ್ಟಾನಿಷ್ಟ ನಾಠವೀ ಚಿತ್ತ । ವಿವೇಕಶೂನ್ಯ ಸ್ತಬ್ಧತಾ ಪ್ರಾಪ್ತ । ''ಮೋಹ'' ನಿಶ್ಚಿತ ಯಾ ನಾಂವ ।।೧೮೪।। ನಿತ್ಯ ಕರಿತಾ ವಿಷಯಸೇವನ । ಮನೀ ವಿಷಯ ಇಚ್ಛಾ ಗಹನ । ಅಖಂಡ ವಿಷಯಾಂಚೇ ಧ್ಯಾನ । ''ಸ್ಪೃಹಾ'' ಜಾಣ ತೀ ನಾಂವ ।।೧೮೫।। ಇತ್ಯಾದಿ ಹೇ ನಾನಾ ಗುಣ। ಅಥವಾ ಕಾ ಜನ್ಮ ಮರಣ । ಆತ್ಮ್ಯಾಸೀ ಸಂಬಂಧ ನಾಹೀ ಜಾಣ । ಹೇ ದೇಹಾಭಿಮಾನ ಸ್ವಯೇ ಭೋಗೀ ।।೧೮೬।। ಜಾಗೃತಿ ಆಣಿ ದೇಖಿಜೇ ಸ್ವಪ್ನ । ತೇಥ ವಸೇ ದೇಹಾಭಿಮಾನ । ತೇ ಠಾಯೀ ಹೇ ದಿಸತೀ ಗುಣ । ಸುಷುಪ್ತೀಸ ಜಾಣ ಗುಣ ನಾಹೀ ।।೧೮೭।। ಜೇಥ ವೃತ್ತಿ ನಿರಭಿಮಾನ । ತೇಥ ಜನ್ಮ ಮರಣಾದಿ ಹೇ ಗುಣ । ಸರ್ವಥಾ ನುಠತೀ ಜಾಣ । ಗುಣಾಸೀ ಕಾರಣ ಅಭಿಮಾನ ।।೧೮೮।। ಜಳೀ ಸ್ಥಳೀ ವಾಯು ಝುಗಟೀ । ಜಳೀ ತರಂಗ ಸ್ಥಳೀ ನುಠೀ । ತೈ ತರಂಗತಾ ಜಳಾಚೇ ಪೋಟೀ । ತೇವೀ ಶೋಕಾದಿ ಗುಣಕೋಟೀ ಅಹಂತೇಮಾಜೀ ।।೧೮೯।। ಬದ್ಧತಾ ಝಾಲೀ ಅಹಂಕಾರಾಸೀ । ಮ್ಹಣಸೀ ಮುಕ್ತಿ ವ್ಹಾವೀ ತ್ಯಾಸೀ । ತೇ ಅಹಂತಾ ಲಾಗಲೀ ಜೀವಾಸೀ । ತೇಚಿ ಹೃಷೀಕೇಶೀ ಸಾಂಗತ ।।೧೯೦।। ಅಂತ್ಯಜಾಚಾ ವಿಟಾಳ ಜ್ಯಾಸೀ । ಗಂಗಾಸ್ನಾನೇ ಶುದ್ಧತ್ವ ತ್ಯಾಸೀ । ತೇ ಗಂಗಾಸ್ನಾನ ಅಂತ್ಯಜಾಸೀ । ಶುದ್ಧತ್ವಾಸೀ ಅನುಪಯೋಗೀ ।।೧೯೧।। ತೇವೀ ಅಹಂತಾ ಜಡಲೀ ಜೀವಾಸೀ । ತೇ ತ್ಯಾಗಿತಾ ಮುಕ್ತತ್ವ ತ್ಯಾಸೀ । ಪರೀ ಮುಕ್ತತ್ವ ಅಹಂಕಾರಾಸೀ । ಕಲ್ಪಾಂತೇಸೀ ಘಡೇನಾ ।।೧೯೨।।

ದೇಹೇಂದ್ರಿಯಪ್ರಾಣಮನೋಽಭಿಮಾನೋ ಜೀವಾಂತರಾತ್ಮಾ ಗುಣಕರ್ಮಮೂರ್ತಿಃ ।
ಸೂತ್ರಂ ಮಹಾನಿತ್ಯುರುಧೇವ ಗೀತಃ ಸಂಸಾರ ಆಧಾವತಿ ಕಾಲತಂತ್ರಃ ।।೧೬।।

ಅರ್ಥ:- ಉದ್ಧವಾ, ದೇಹ, ಇಂದ್ರಿಯ ಮತ್ತು ಪ್ರಾಣ ಹಾಗೂ ಮನಸ್ಸು ಇವುಗಳಲ್ಲಿ ಸ್ಥಿತವಾದ ಆತ್ಮವೂ ಕೂಡ ಅದರ ಅಭಿಮಾನವನ್ನು ಹಿಡಿದು ಅದಕ್ಕೆ ತನ್ನ ಸ್ವರೂಪವೆಂದು ಮನ್ನಿಸಿದಾಗ ಅದಕ್ಕೆ ಜೀವ ಎಂಬ ನಾಮವು ಬರುವುದು. ಆ ಸೂಕ್ಷ್ಮ ಆತ್ಮದ ಮೂರ್ತಿಯಾಗಿರುವುದು; ಗುಣ ಮತ್ತು ಕರ್ಮಗಳ ಲಿಂಗದೇಹಕ್ಕೆ ಸೂತ್ರಾತ್ಮಾ ಎಂದು ಹೇಳುವರು. ಮಹತ್ತತ್ತ್ವ ಇದರ ಅನೇಕ ನಾಮಗಳಿರುವುವು. ಅದು ಕಾಲರೂಪ ಪರಮೇಶ್ವರನಿಗೆ ಅಧೀನನಾಗಿ ಜನ್ಮಮೃತ್ಯುರೂಪ ಸಂಸಾರದಲ್ಲಿ ಅತ್ತಂದಿತ್ತ ಓಡಾಡುತ್ತಿರುವುದು.

ಅನಂತ ಅಪಾರ ಜ್ಞಾನಘನ । ಮಾಯಾತೀತ ಆತ್ಮಾ ಪೂರ್ಣ । ತೋಚಿ ಝಾಲಾ ಮಾಯೇಚೇ ಅಧಿಷ್ಠಾನ । ''ಅಂತರಾತ್ಮಾ'' ಜಾಣ ಯಾಲಾಗೀ ಮ್ಹಣಿಪೇ ।।೧೯೩।।

ತನ್ನಲ್ಲಿ ಕೋಟಿಗಟ್ಟಲೇ ಧನ ಸಂಗ್ರಹವಿದ್ದರೂ ಒಂದು ಕವಡಿಯಷ್ಟು ಖರ್ಚಿಸಬೇಕೆಂದರೆ ಪ್ರಾಣ ಬಿಡಲೂ ಸಿದ್ಧನಾಗುವನು. ಈತನು ಕೃಪಣ ಮನುಷ್ಯನು. ಈತನ ಕೃತಿಗೆ ಲೋಭದ ಹುಚ್ಚು ಎನ್ನುವರು ।।೧೮೩।। ಕರ್ಮ ಯಾವುದು? ಮತ್ತು ಅಕರ್ಮ ಯಾವುದು? ಹಿತವು ಯಾವುದರಲ್ಲಿದೆ? ಅಹಿತವು ಯಾವುದರಿಂದ ಆಗುತ್ತಿದೆ? ಇಷ್ಟವೆಂದರೇನು? ಅನಿಷ್ಟ ಯಾವುದು? ಇವುಗಳು ಮನಸ್ಸಿಗೆ ಎಂದಿಗೂ ಸ್ಮರಣವಾಗುವುದಿಲ್ಲ. ಆತನು ವಿಚಾರಶೂನ್ಯನಾಗಿ ಯಾವುದೂ ತಿಳಿಯದಂತಾಗುವುದು. ಇದಕ್ಕೆ ಮೋಹವೆಂದು ಹೇಳುವರು ।।೧೮೪।। ನಿತ್ಯದಲ್ಲಿ ವಿಷಯಗಳ ಸೇವನೆ ಮಾಡುತ್ತಿದ್ದರೂ ಮನದಲ್ಲಿ ಪುನಃ ಪುನಃ ವಿಷಯಗಳ ಅನಿವಾರ್ಯ ಇಚ್ಛೆಯು ನಿರ್ಮಾಣವಾಗುವಿಕೆ, ವಿಷಯಗಳ ಅಖಂಡ ಧ್ಯಾನ ಮಾಡುವಿಕೆಗೆ ಸ್ಪೃಹಾ ಎನ್ನುವರು ।।೧೮೫।। ಈ ಪ್ರಕಾರದ ಅನೇಕ ಗುಣಗಳು, ಹಾಗೂ ಜನ್ಮ ಮರಣಗಳು ಇವು ಆತ್ಮಕ್ಕೆ ಯಾವ ಸಂಬಂಧವೇ ಇರುವುದಿಲ್ಲ. ಇವೆಲ್ಲವನ್ನು ದೇಹಾಭಿಮಾನವೇ ಭೋಗಿಸುತ್ತಿರುವುದು ಎಂದು ತಿಳಿಯಬೇಕು ।।೧೮೬।। ಜಾಗೃತೀ ಮತ್ತು ಸ್ವಪ್ನ ಇವುಗಳಲ್ಲಿ ದೇಹಾಭಿಮಾನವು ಇರುವುದು. ಆದ್ದರಿಂದ ಈ ಗುಣಗಳು ಅಲ್ಲಿ ತೋರುತ್ತಿರುವುವು. ಆದರೆ ಸುಷುಪ್ತಿಯಲ್ಲಿ ಮಾತ್ರ ಈ ಗುಣಗಳು ಕಾಣಸಲಾರವು ।।೧೮೭।। ವೃತ್ತಿಯು ನಿರಭಿಮಾನಿಯಾಗಲು ಆಗ ಜನ್ಮ ಮರಣಾದಿ ಈ ಗುಣಗಳು ಉದ್ಭವಿಸುವುದೇ ಇಲ್ಲ. ಗುಣಗಳಿಗೆ ಕಾರಣ ಕೇವಲ ಅಭಿಮಾನವೇ ಆಗಿರುವುದು ।।೧೮೮।। ಗಾಳಿಯು ನೀರಿನ ಮೇಲೆಯೂ, ಭೂಮಿಯ ಮೇಲೆಯೂ ಬೀಸುವುದು. ನೀರಿನ ಮೇಲೆ ಇದರಿಂದ ತೆರೆಗಳು ಹುಟ್ಟುವುವು. ಭೂಮಿಯ ಮೇಲೆ ಹುಟ್ಟಲಾರವು. ಅಂದಮೇಲೆ ತೆರೆಗಳ ಹುಟ್ಟುವಿಕೆಯ ಧರ್ಮವು ನೀರಿನಲ್ಲಿರುವುದು. ಅದರಂತೆ ಶೋಕಾದಿ ಕೋಟ್ಯಾವಧಿ ಧರ್ಮಗಳು ಅಹಂಕಾರದಲ್ಲಿ ನೆಲೆಸಿರುವುವು ।।೧೮೯।। ಅಹಂಕಾರಕ್ಕೆ ಜಡತ್ವ ಹಾಗೂ ಬದ್ಧತ್ವ ಇರುವುದು. ಅಂದಮೇಲೆ ಅದಕ್ಕೆ ಮುಕ್ತಿಯು ದೊರಕಬೇಕೆಂದು ನೀನು ಹೇಳಿದರೆ ಅಹಂತೆಯು ಜೀವಕ್ಕೆಹತ್ತಿಕೊಂಡಿರುವುದನ್ನು ಶ್ರೀಕೃಷ್ಣನು ಹೇಳುತ್ತಿರುವನು ।।೧೯೦।। ಯಾರಿಗಾದರು ಅಂತ್ಯಜನಿಂದ ಮೈಲಿಗೆ ಒದಗಲು ಆಗ ಆತನಿಗೆ ಗಂಗಾಜಲದಿಂದ ಶುದ್ಧಿಯು ಪ್ರಾಪ್ತವಾಗುವುದು. ಆದರೆ ಅದೇ ಗಂಗಾಜಲವು ಅಂತ್ಯಜನಿಗೆ ನಿರುಪಯೋಗಿಯಾಗಿರುವುದು ।।೧೯೧।। ಈ ಪ್ರಕಾರವಾಗಿ ಜೀವಕ್ಕೆ ಅಹಂಕಾರವು ಅಂಟಿಕೊಂಡಿರುವುದು. ಅದನ್ನು ತ್ಯಜಿಸಿದರೆ ಜೀವವು ಮುಕ್ತವಾಗುವುದು. ಆದರೆ ಆ ಮುಕ್ತಿಯು ಅಹಂಕಾರಕ್ಕೆ ಕಲ್ಪಾಂತಕ್ಕೂ ಸಾಧಿಸುವುದಿಲ್ಲ ।।೧೯೨।।

ಆತ್ಮವು ಅನಂತ, ಅಪಾರ, ಜ್ಞಾನಮಯ, ಮಾಯಾತೀತ ಹಾಗೂ ಪೂರ್ಣವಾಗಿರುವುದು. ಅದು ಮಾಯೆಯ ಅಧಿಷ್ಠಾನ ಆಗುವುದರಿಂದ ಅದಕ್ಕೆ ಅಂತರಾತ್ಮಾ ಎನ್ನುವರು ।।೧೯೩।।

ಮಾಯಾ ವ್ಯಾಪೂನಿ ಅಪಾರ । ಯಾಲಾಗೀ ಬೋಲಿಜೇ ''ಪರಮೇಶ್ವರ'' । ಮಾಯಾನಿಯಂತಾ ಸಾಚಾರ । ಯಾಲಾಗೀ ''ಈಶ್ವರ'' ಮ್ಹಣಿಪೇ ತೋ ॥೧೯೪॥ ತೋಚಿ ಅವಿದ್ಯೇಮಾಜೀ ಪ್ರತಿಬಿಂಬಲಾ । ಯಾಲಾಗೀ ''ಜೀವ'' ಹೇ ನಾಮ ಪಾವಲಾ । ತೋಚಿ ದೇಹಧ್ಯಾಸೇ ಪ್ರಬಳಲಾ । ''ಅಹಂಕಾರ'' ಝಾಲಾ ಯಾ ಹೇತೂ ॥೧೯೫॥ ತೋ ಸಂಕಲ್ಪವಿಕಲ್ಪ ಉಪಾಧೀನೇ । ಸ್ವಯೇ ಹೋಊನಿ ಠೇಲಾ ''ಮನ'' । ತ್ಯಾ ಮನಾಸೀ ಕರಾವಯಾಸ ಗಮನ । ''ದಶೇಂದ್ರಿಯೇ'' ಜಾಣ ತೋಚಿ ಝಾಲಾ ॥೧೯೬॥ ತ್ಯಾ ಇಂದ್ರಿಯಾಂಚಾ ಆಧಾರ । ಸುಖದುಃಖಭೋಗಾಂಚಾ ನಿಕರ । ಪಾಪಪುಣ್ಯಾಚಾ ಚಮತ್ಕಾರ । ''ದೇಹಾಚಾ ಆಕಾರ'' ತೋಚಿ ಝಾಲಾ ॥೧೯೭॥ ತ್ಯಾ ದೇಹಾಚೇ ಜೇ ಕಾರಣ । ''ಸತ್ವ ರಜತಮೋಗುಣ''। ತೇ ತೀನ್ಹೀ ಗುಣ ಜಾಣ । ತೋಚಿ ಆಪಣ ಸ್ವಯೇ ಝಾಲಾ ॥೧೯೮॥ ಗುಣಕ್ಷೋಭಾಚೇ ನಿಜವರ್ಮ । ಝಾಲಾ ''ಪಂಚವಿಷಯ'' ಪರಮ । ವಿಷಯಭೋಗಾದಿ ಕ್ರಿಯಾ ಕರ್ಮ । ಸ್ವಯೇ ''ಸ್ವಧರ್ಮ'' ಹೋಊನಿ ಠೇಲಾ ॥೧೯೯॥ ತಿನೀ ಗುಣಾಂಚೇ ಜನ್ಮ ಕಾರಣ । ಝಾಲಾ ''ಮಹತ್ತತ್ತ್ವ - ಸೂತ್ರಪ್ರಧಾನ''। ಏವಂ ಸಂಸಾರ ಅವಘಾ ಜಾಣ । ಈಶ್ವರ ಆಪಣ ಸ್ವಯೇ ಝಾಲಾ ॥೨೦೦॥ ತ್ಯಾ ಸಂಸಾರಾಚೇ ಆಧಾವತೀ ಗುಣಸಾಮ್ಯೇ ತೋಚಿ ''ಪ್ರಕೃತೀ'' । ತೇಥ ಉತ್ಪತ್ತಿಸ್ಥಿತಿ-ಪ್ರಳಯಾರ್ಥೀ । ಕ್ಷೋಭಿಕಾಶಕ್ತೀ ''ಕಾಳ'' ತೋ ಝಾಲಾ ॥೨೦೧॥ ತೋ ಕಾಳ ಆಪಲ್ಯಾ ಸತ್ತಾಶಕ್ತೀ । ಉಪಜವೀ ಪಾಳೀ ಸಂಹಾರೀ ಅಂತೀ । ಐಶಾ ಪುನಃ ಪುನಃ ಆವೃತ್ತೀ । ನೇಣೋ ಕಿತೀ ಕರವೀತ ॥೨೦೨॥ ಏವಂ ಸಂಸಾರ ತೋ ಬ್ರಹ್ಮಸ್ಫೂರ್ತೀ । ಲೀಲಾವಿಗ್ರಹೇ ಸಾಕಾರಸ್ಥಿತೀ । ಮೀ ವಿಶ್ವೇಶ್ವರ ವಿಶ್ವಮೂರ್ತೀ । ಬಹುಧಾ ವ್ಯಕ್ತೀ ಮೀ ಏಕ ॥೨೦೩॥ ಯಾಲಾಗೀ ಜೋ ಜೋ ಪದಾರ್ಥ ದಿಸೇ । ತೇಣೇ ತೇಣೇ ರೂಪೇ ಆತ್ಮಾ ಭಾಸೇ । ಮಜವೇಗಳಾ ಪದಾರ್ಥ ನಸೇ । ಹೇ ಮಾನೀ ವಿಶ್ವಾಸೇ ತೋ ಧನ್ಯ ॥೨೦೪॥ ಮೀಚಿ ಏಕ ಬಹುಧಾ ವ್ಯಕ್ತೀ । ವೇದಹೀ ಸಾಕ್ಷೀ ಯೇಚಿ ಅರ್ಥೀ । ''ವಿಶ್ವತಶ್ಚಕ್ಷು'' ಯಾ ವೇದೋಕ್ತೀ । ಶ್ರುತಿ ಮಜ ಗಾತೀ ಸರ್ವದಾ ॥೨೦೫॥ ಐಸೇ ಅಸತಾ ನವಲ ಕೈಸೇ । ಜೀವ ಭುಲಲಾ ಕಲ್ಪನಾವಶೇ । ಅಹಂತಾ ವಾಢವೀ ದೇಹಾಧ್ಯಾಸೇ । ತೋ ಮ್ಹಣೇ ದೇವ ನ ದಿಸೇ ತಿಹೀ ಲೋಕೀ ॥೨೦೬॥ ಸತ್ಯ ಮಾನೂನಿ ಭೇದಭಾನ । ಜೀವ ಝಾಲಾ ಅತಿಅಜ್ಞಾನ । ಭುಲಲಾ ಆಪಣ್ಯಾ ಆಪಣ । ದೇಹಾಭಿಮಾನ ದೃಢ ಝಾಲಾ ॥೨೦೭॥

ಅದು ಮಾಯೆಗೆ ವ್ಯಾಪಿಸಿ ಅಪಾರವಾಗಿರುವುದು. ಆದ್ದರಿಂದ ಅದಕ್ಕೆ ಪರಮೇಶ್ವರ ಎಂದು ಹೇಳುವರು. ಮಾಯೆಯ ನಿಯಂತಕನಾಗಿರುವುದರಿಂದ ಈಶ್ವರನೆಂದು ಕರೆಯುವರು ॥೧೯೪॥ ಅವಿದ್ಯೆಯಲ್ಲಿ ಪ್ರತಿಬಿಂಬವಾಗಿದ್ದಕ್ಕೆ ಅದಕ್ಕೆ ಜೀವ ಎಂಬ ನಾಮವು ಬಂದಿರುವುದು. ಇದು ದೇಹದರೂಪದಿಂದ ಪ್ರಬಲವಾಗುತ್ತಲೇ ಅಹಂಕಾರವಾಯಿತು ॥೧೯೫॥ ಅದೇ ಸಂಕಲ್ಪ-ವಿಕಲ್ಪ ಉಪಾಧಿಯ ಸಂಸರ್ಗದಿಂದ ಮನಸ್ಸಾಗಿರುವುದು. ಮನಕ್ಕೆ ಸಂಚಾರ ಮಾಡಲು ಹತ್ತು ಇಂದ್ರಿಯಗಳು ಆಗಿರುವುವು ॥೧೯೬॥ ಈ ಇಂದ್ರಿಯಗಳ ಆಧಾರ ಮತ್ತು ಪಾಪಪುಣ್ಯಗಳ ಚಮತ್ಕಾರ ಹಾಗೂ ಸುಖದುಃಖ ಭೋಗಗಳ ಸಮುದಾಯ ಹೀಗೆ ಈ ದೇಹದ ಆಕಾರವೂ ಕೂಡ ಆಗಿರುವುದು ॥೧೯೭॥ ಈ ದೇಹದ ಕಾರಣವೇನೆಂದರೆ ಯಾವ ಸತ್ವ, ರಜ ಮತ್ತು ತಮ ಈ ಮೂರೂ ಗುಣಗಳು ಆತನೇ ಸ್ವತಃ ಆಗಿರುವನು ॥೧೯೮॥ ಗುಣಕ್ಷೋಭದ ಮುಖ್ಯ ಮರ್ಮವೆಂದರೆ ಯಾವ ಐದು ವಿಷಯಗಳು, ವಿಷಯಭೋಗಾದಿ ಕ್ರಿಯೆ ಮತ್ತು ಸ್ವಧರ್ಮ ಕೂಡ ಆತನೇ ಆಗಿರುವನು ॥೧೯೯॥ ಮೂರು ಗುಣಗಳ ಉತ್ಪತ್ತಿಯ ಕಾರಣ ಯಾವ ಮಹತತ್ವ, ಸೂತ್ರ ಪ್ರಧಾನ ಈ ಸರ್ವವೂ ಆತನೇ ಆಗಿರುವನು. ಈ ಪ್ರಕಾರವಾಗಿ ಸರ್ವ ವಿಶಾಲ ಸಂಸಾರವನ್ನು ಈ ಈಶ್ವರನು ತಾನು ಸ್ವತಃ ಆಗಿರುವನು ॥೨೦೦॥ ಈ ಸಂಸಾರದ ಹೀಗಿರುವ ಸ್ಥಿತಿ ಆಶ್ರಯಭೂತ ಪ್ರಕೃತಿಯು ಗುಣಸಾಮ್ಯದಿಂದ ಆತನೇ ಆಗಿರುವನು. ಹಾಗೆಯೇ ಉತ್ಪತ್ತೀ, ಸ್ಥಿತೀ ಮತ್ತು ಪ್ರಳಯ ಇವುಗಳನ್ನು ಮಾಡುವ ಕ್ಷೋಭಕಶಕ್ತಿ ಕಾಲನು ಆತನೇ ಆಗಿರುವನು ॥೨೦೧॥ ಈ ಯಾವ ಕಾಲನು ತನ್ನ ಸತ್ತೆಯಿಂದ ಜೀವಿಗಳನ್ನು ಉತ್ಪನ್ನ ಮಾಡುವನು, ಅವುಗಳ ಲಾಲನೆ ಪಾಲನೆ ಮಾಡುವನು ಮತ್ತು ಕೊನೆಯಲ್ಲಿ ಸಂಹಾರವನ್ನು ಮಾಡುವನು. ಹೀಗೆ ಈತನು ಅದೆಷ್ಟು ಸಾರೆ ಆವೃತ್ತಿ ಮಾಡುವನೋ ಅದರ ಗಣಿತವನ್ನು ಮಾಡಲು ಬರುವುದಿಲ್ಲ ॥೨೦೨॥ ಈ ಪ್ರಕಾರವಾಗಿ ಈ ಯಾವ ಸರ್ವ ಸಂಸಾರವು ಪರಬ್ರಹ್ಮನ ಮೂರ್ತಿಯೇ ಆಗಿರುವುದು. ಇದಕ್ಕೆ ಲೀಲಾಶಕ್ತಿಯಿಂದ ಸಾಕಾರ ಸ್ಥಿತಿಯು ಪ್ರಾಪ್ತವಾಗಿರುವುದು. ನಾನು ವಿಶ್ವೇಶ್ವರನಾಗಿದ್ದು ವಿಶ್ವರೂಪನಾಗಿರುವೆನು. ವಿಶ್ವದಲ್ಲಿನ ಸರ್ವ ನಾನಾವಿಧ ಪದಾರ್ಥಗಳು ನಾನೇ ಆಗಿರುವೆನು ॥೨೦೩॥ ಆದ್ದರಿಂದ ಯಾವ ಯಾವ ಪದಾರ್ಥಗಳು ಕಾಣುವುವೋ ಆಯಾ ರೂಪದಿಂದ ಆತ್ಮವೇ ಭಾಸವಾಗುತ್ತಿರುವುದು. ನನ್ನ ಹೊರತಾದ ಅನ್ಯ ಯಾವ ಒಂದೂ ಸಹ ಪದಾರ್ಥವಿರುವುದಿಲ್ಲ. ಹೀಗೆ ಯಾರ ವಿಶ್ವಾಸವು ಇರುವುದೋ, ನಿಜವಾಗಿಯೂ ಆತನೇ ಧನ್ಯ ಧನ್ಯನಾಗಿರುವನು ॥೨೦೪॥ ನಾನೇ ನಾನಾ ರೂಪದಿಂದ ವ್ಯಕ್ತನಾಗಿರುವೆನು. ಇದಕ್ಕೆ ವೇದವು ಸಾಕ್ಷಿಯಾಗಿರುವುದು. ''ವಿಶ್ವತಶ್ಚಕ್ಷುः'' ವೇದವಚನರೂಪ ಶ್ರುತಿಯು ನಿರಂತರವಾಗಿ ನನ್ನ ಗುಣಗಾನವನ್ನು ಮಾಡುತ್ತಿರುವುದು ॥೨೦೫॥ ಹೀಗಿದ್ದರೂ ಕೂಡ ಎಂತಹ ಆಶ್ಚರ್ಯವಿದೆ ನೋಡಿರಿ. ಜೀವವು ತನ್ನ ಕಲ್ಪನೆಯಿಂದ ಭುಲಾಯಿಸಲ್ಪಡುವುದು. ಅದು ದೇಹದ ಧ್ಯಾಸದಿಂದ ಅಹಂಕಾರವನ್ನು ಬೆಳೆಸುತ್ತಿರುವುದು. ಇಷ್ಟೇ ಅಲ್ಲ, ಮೂರು ಲೋಕಗಳಲ್ಲಿ ದೇವರೇ ಇಲ್ಲ ಎಂದು ಹೇಳಲಾರಂಭಿಸುವುದು ॥೨೦೬॥ ದ್ವೈತದ ದೇಹಭಾನವನ್ನು ನಿಜವೆಂದು ತಿಳಿದು ಯಾವ ಈ ಜೀವವು ಅತ್ಯಂತ ಅಜ್ಞಾನಿಯಾಗಿರುವುದು. ಇದು ತನಗೆ ತಾನೇ ಭುಲಾಯಿಸಿರುವುದು. ಇಷ್ಟೊಂದು ದೇಹಾಭಿಮಾನವು ದೃಢವಾಗಿರುವುದು ॥೨೦೭॥

ದೇಹಾಭಿಮಾನಾಚೇ ದೃಢಪಣ । ತೇಚಿ ''ಬದ್ಧತೇಚೇ ಲಕ್ಷಣ''। ದೇಹಾಭಿಮಾನಾಚೇ ನಿರಸನ । ''ಮುಕ್ತತಾ'' ಜಾಣ ತೀ ನಾಂವ ।೨೦೮॥ ಸಮೂಳ ಮಿಥ್ಯಾ ದೇಹಾಭಿಮಾನ । ಮಿಥ್ಯಾ ಭೇದಾಚೇ ಭವಭಾನ । ತ್ಯಾಚೇ ಆದ್ಯಂತ ನಿರ್ದಳಣ । ಹೋತೇ ಲಕ್ಷಣ ಹರಿ ಸಾಂಗೇ ।೨೦೯॥

ಅಮೂಲಮೇತದ್‌ಬಹುರೂಪರೂಪಿತಂ ಮನೋವಚಃ ಪ್ರಾಣಶರೀರಕರ್ಮ ।
ಜ್ಞಾನಾಸಿನೋಪಾಸನಯಾ ಶಿತೇನ ಚ್ಛಿತ್ವಾ ಮುನಿರ್ಗಾಂ ವಿಚರತ್ಯತೃಷ್ಣಂ ।೧೭॥

ಅರ್ಥ:- ಮಿಥ್ಯಾಹಂಕಾರಕ್ಕೆ ನಿಜವಾದ ತಳಹದಿ ಇಲ್ಲದಿದ್ದರೂ ಕೂಡ ಅದು ಮನಸ್ಸಿನ, ಮಾತಿನ, ಪ್ರಾಣವಾಯು ಮತ್ತು ಶಾರೀರಿಕ ಕಾರ್ಯಪ್ರವೃತ್ತಿಗಳಾಗಿ ಬಹುರೂಪಗಳಲ್ಲಿ ಗೋಚರಿಸುವುದು. ಆದರೆ ಶಾಂತ ಚಿತ್ತನಾದ ಮುನಿಯು ಸದ್ಗುರುವಿನ ಉಪಾಸನೆಯಿಂದ ಹರಿತಗೊಂಡ ದಿವ್ಯಜ್ಞಾನವೆಂಬ ಖಡ್ಗದಿಂದ ಈ ಮಿಥ್ಯಾಭಿಮಾನವನ್ನು ತುಂಡರಿಸುವನು ಮತ್ತು ಸಕಲ ಸಂಸಾರ ತೃಷ್ಣೆಯಿಂದ ಮುಕ್ತನಾಗಿ ಈ ಜಗತ್ತಿನಲ್ಲಿ ಸಂಚರಿಸುತ್ತಿರುವನು.

ಭೇದರೂಪೇ ಭವಭಾನ । ಮನಸಾ ವಾಚಾ ಕರ್ಮ ಪ್ರಾಣ । ದೇಹದ್ವಯಾಚೇ ಜೇ ಸ್ಫುರಣ । ತೇ ನಿರ್ಮೂಳ ಜಾಣ ಉದ್ಧವಾ ।೨೧೦॥ ಭೇದೇ ಬಹುರೂಪ ಭವಪಟಳ । ವಿಚಾರಿತಾ ತೇ ನಿರ್ಮೂಳ । ವಿಚಿತ್ರ ಭಾಸಾವಯಾ ಭವಜಾಳ । ಆತ್ಮ್ಯಾವೇಗಳೇ ಸ್ಥಳ ಅಸೇನಾ ।೨೧೧॥ ಆತ್ಮ್ಯಾಹೂನಿ ಸಂಸಾರ ಭಿನ್ನ । ಮ್ಹಣತೀ ತೇ ಕೇವಳ ಅಜ್ಞಾನ । ತ್ಯಾಂಸೀ ಬಹುರೂಪೇ ಭವಭಾನ । ದೇಹಾಭಿಮಾನ ವಾಢವೀ ।೨೧೨॥ ತ್ಯಾ ದೇಹಾಭಿಮಾನಾಚೇ ಪೋಟೀ । ಕರ್ಮಾಕರ್ಮಾಚೀ ಆಟಾಟೀ । ಜನ್ಮ ಮರಣಾಂಚಿಯಾ ಕೋಟೀ । ದುಃಖ ಸಂಕಟೀ ಜೀವಭೋಗೀ ।೨೧೩॥ ಐಸಾ ದುಃಖದಾತಾ ದೇಹಾಭಿಮಾನ । ಸಮೂಳ ಜಾಣೋನಿಯಾ ಆಪಣ । ತ್ಯಾಚೇ ಕರಾವಯಾ ನಿರ್ದಳಣ । ಅನುತಾಪೀ ಪೂರ್ಣ ಜೋ ಸ್ವಯೇ ಹೋಯ ।೨೧೪॥ ತೇಣೇ ಆಚಾರ್ಯ ಉಪಾಸ್ತೀ । ಲಾಹೋನಿ ಜ್ಞಾನಖಡ್ಗಾಚೀ ಪ್ರಾಪ್ತೀ । ಗುರುವಾಕ್ಯಸಾಹಣೇಪ್ರತೀ । ಸತೇಜದ್ಯುತೀ ಖಡ್ಗ ಕೇಲೇ।೨೧೫॥ ಭವವೃಕ್ಷಾಚಾ ಸಮೂಳ ಕಂದ । ದೇಹಾಭಿಮಾನ ಅತಿಸುಬದ್ಧ । ಅದ್ವೈತಸಾಧನೇ ಸಾಧಕ ಶುದ್ಧ । ತೇಣೇ ಸಮೂಳ ಭೇದ ಕರಾವಾ ।೨೧೬॥ ಏವಂ ಭೇದೂನಿ ದೇಹಾಭಿಮಾನ । ಉರಲೇನಿ ಆಯುಷ್ಯೇ ಜಾಣ । ಮಹೀ ವಿಚರತೀ ಸಜ್ಜನ । ನಿರಭಿಮಾನ ನಿಜನಿಷ್ಠಾ ।೨೧೭॥ ತೇಥ ಇಚ್ಛಾ ನಿಂದಾ ದ್ವೇಷ ತೃಷ್ಣಾ । ಸರ್ವಥಾ ನಾತಳೇ ಪೈ ಜಾಣಾ । ಮನಚಿ ಮುಕಲೇ ಮನಪಣಾ । ಇಚ್ಛಾದಿ ತೃಷ್ಣಾ ತೇಥ ಕೈಚೀ ।೨೧೮॥ ಆಶಂಕಾ ॥ ಸಮೂಳ ಸಂಸಾರನಿರ್ದಳಣ । ಕರೀ ಐಸೇ ತೇ ಜ್ಞಾನ ಕೋಣ । ತ್ಯಾ ಜ್ಞಾನಾಸೀ ಕೋಣ ಸಾಧನ । ಸಾಧಲ್ಯಾ ಜ್ಞಾನ ಫಲ ಕಾಯ ।೨೧೯॥

ದೇಹದ ದೃಢವಾದ ಅಭಿಮಾನವಾಗುವಿಕೆಯೇ ನಿಜವಾಗಿಯೂ ಇದೇ ಬದ್ಧತೆಯ ಲಕ್ಷಣವಾಗಿರುವುದು. ಅದರಂತೆ ದೇಹದ ಅಭಿಮಾನವು ಪರಿಪೂರ್ಣವಾಗಿ ಇಲ್ಲದಂತಾಗುವಿಕೆಯೇ ಇದಕ್ಕೆ ಮುಕ್ತಿ ಎಂದು ಹೇಳುವರು ।೨೦೮॥ ದೇಹಾಭಿಮಾನವು ಇದು ಸಮೂಲವಾಗಿ ಮಿಥ್ಯೆಯಾಗಿರುವುದು. ಸಂಸಾರ ಸ್ಫೂರ್ತಿಯೂ ಸಹ ಮಿಥ್ಯೆಯಾಗಿರುವುದು. ಇವುಗಳನ್ನು ಪರಿಪೂರ್ಣವಾಗಿ ನಾಶವನ್ನು ಹೇಗೆ ಮಾಡಬೇಕು? ಈ ವಿಷಯವನ್ನು ಕುರಿತು ಈಗ ದ್ವಾರಕಾಧೀಶನಾದ ಶ್ರೀಹರಿಯು ಹೇಳುತ್ತಿರುವನು ।೨೦೯॥

ದ್ವೈತ ಭಾವದಿಂದ ಸಂಸಾರದ ಭಾನವು ನಿರ್ಮಾಣವಾಗುವುದು. ಹೇ ಭಕ್ತಶ್ರೇಷ್ಠ ಉದ್ಧವನೇ, ಮನ, ವಾಣೀ, ಕರ್ಮ, ಪ್ರಾಣ ಇವು ದೇಹದ ಸ್ಫುರಣವಾಗಿರುವುವು. ಇದನ್ನು ನೀನು ನಿಶ್ಚಯವಾಗಿ ತಿಳಿ ।೨೧೦॥ ಭೇದದಿಂದ ಅನೇಕ ಪ್ರಕಾರಗಳಿಂದ ಭಾಸವಾಗುವ ಈ ಸಂಸಾರದ ಪರದೆಯು ವಿವೇಕವು ಜಾಗೃತವಾದಾಗ ಮಿಥ್ಯೆ ಎಂದು ನಿಶ್ಚಯವಾಗುವುದು. ಈ ಯಾವ ವಿಚಿತ್ರವಾದ ಪ್ರಪಂಚದ ಜಾಲಗಳು ಭಾಸವಾಗುವುದಕ್ಕೆ ಆತ್ಮದ ಹೊರತಾಗಿ ಬೇರೆ ಯಾರೂ ಇರುವುದಿಲ್ಲ ।೨೧೧॥ ಆತ್ಮದಿಂದ ಸಂಸಾರವು ಭಿನ್ನವಾಗಿದೆ ಎಂದು ಹೀಗೆ ಹೇಳುವ ಅವರು ಕೇವಲ ಅಜ್ಞಾನಿಗಳೆಂದು ತಿಳಿಯಬೇಕು. ಇವರ ದೇಹಾಭಿಮಾನವು ಅನೇಕ ಪ್ರಕಾರದ ಭೇದಭಾವವನ್ನು ಬೆಳೆಸುತ್ತಿರುವುದು ।೨೧೨॥ ಈ ಯಾವ ದೇಹದ ಅಭಿಮಾನದಿಂದಲೇ ಕರ್ಮ ಅಕರ್ಮದ ಖಟಪಟಿಯು ಜನ್ಮಮರಣದ ರಾಶೀ ಮತ್ತು ದುಃಖ ಹಾಗೂ ಅನೇಕ ಸಂಕಟಗಳನ್ನು ಭೋಗಿಸಲು ಕಾರಣವಾಗಿರುವುದು ।೨೧೩॥ ಹೀಗೆ ದೇಹದ ಅಭಿಮಾನವು ದುಃಖವನ್ನು ನಿರ್ಮಾಣ ಮಾಡುವುದು ಎಂದು ತಿಳಿದು ಅದರ ನಾಶವನ್ನು ಮಾಡುವುದಕ್ಕಾಗಿ ಯಾರು ಪರಿಪೂರ್ಣವಾಗಿ ಪಶ್ಚಾತ್ತಾಪವನ್ನು ಹೊಂದುವರೋ ।೨೧೪॥ ಅವರು ಸದ್ಗುರುಗಳ ಸೇವೆಯನ್ನು ಮನೋಭಾವದಿಂದ ಮಾಡಬೇಕು ಮತ್ತು ಜ್ಞಾನದ ತೇಜಸ್ವೀ ಖಡ್ಗವನ್ನು ಪ್ರಾಪ್ತಮಾಡಿಕೊಂಡು, ಗುರುಪದೇಶ ಎಂಬ ಸಾಣೇಕಲ್ಲಿಗೆ ಸರಿಯಾಗಿ ತಿಕ್ಕಿ ಆ ಯಾವ ಜ್ಞಾನತೇಜಸ್ವಿರೂಪ ಖಡ್ಗಕ್ಕೆ ತೇಜಸ್ವಿಯಾದ ತೀಕ್ಷ್ಣವನ್ನಾಗಿ ಮಾಡಬೇಕು ।೨೧೫॥ ಈ ಯಾವ ಖಡ್ಗದಿಂದ ಸಂಸಾರ ವೃಕ್ಷದ ಬೇರುಗಳಾಗಿರುವ ಯಾವ ದೇಹಾಭಿಮಾನವನ್ನು ಸಮೂಲವಾಗಿ ಕತ್ತರಿಸಿ ಒಗೆಯಬೇಕು ।೨೧೬॥ ಈ ಪ್ರಕಾರವಾಗಿ ದೇಹದ ಅಭಿಮಾನದ ಭೇದವನ್ನು ಮಾಡಿ ಉಳಿದುಕೊಂಡಿರುವ ಆಯುಷ್ಯದಲ್ಲಿ ಸಂತಸಜ್ಜನರು ನಿರಭಿಮಾನದಿಂದ ಮತ್ತು ಆತ್ಮನಿಷ್ಠೆಯಿಂದ ಭೂಮಿಯ ಮೇಲೆ ಸರ್ವತ್ರವೂ ಆನಂದದಿಂದ ಸಂಚರಿಸುತ್ತಿರುವರು ।೨೧೭॥ ಇವರಿಗೆ ಇಚ್ಛೆ, ನಿಂದೆ, ದ್ವೇಷ ಅಥವಾ ತೃಷ್ಣಾ ಇವು ಸ್ಪರ್ಶ ಕೂಡ ಮಾಡಲಾರವು. ಅವರ ಮನಸ್ಸೇ ಮನತ್ವದಿಂದ ದೂರಾಗಿರುವುದು. ಅಂದಮೇಲೆ ಇಚ್ಛೆ ಮತ್ತು ತೃಷ್ಣಾ ಹೇಗೆ ಇರಲು ಸಾಧ್ಯ? ।೨೧೮॥ ಹೀಗೆ ಸಂಸಾರದ ಸಮೂಲ ನಾಶ ಮಾಡುವಂತಹ ಜ್ಞಾನವು ಯಾವುದು? ಆ ಜ್ಞಾನಕ್ಕಾಗಿ ಸಾಧನೆಯು ಯಾವುದು? ಹಾಗೂ ಆ ಜ್ಞಾನವನ್ನು ಪ್ರಾಪ್ತಮಾಡಿಕೊಂಡ ಫಲವು ಯಾವುದು? ।೨೧೯॥

ಯಾಚೇ ಸಮೂಳ ಶ್ರವಣ । ಉದ್ಧವಾಚೇ ವಾಂಛೀ ಮನ । ತೇ ಜಾಣೋನಿಯಾ ಶ್ರೀಕೃಷ್ಣ । ಸ್ವಯೇ ನಿರೂಪಣ ಸಾಂಗತ ।೨೨೦॥

ಜ್ಞಾನಂ ವಿವೇಕೋ ನಿಗಮಸ್ತಪಶ್ಚ ಪ್ರತ್ಯಕ್ಷಮೈತಿಹ್ಯಮಥಾನುಮಾನಮ್ ।
ಆದ್ಯಂತಯೋರಸ್ಯ ಯದೇವ ಕೇವಲಂ ಕಾಲಶ್ಚ ಹೇತುಶ್ಚ ತದೇವ ಮಧ್ಯೆ ।೧೮॥

ಅರ್ಥ:- ಆತ್ಮ ಮತ್ತು ಅನಾತ್ಮದ ಸ್ವರೂಪವನ್ನು ಬೇರೆ ಬೇರೆಯಾಗಿ ತಿಳಿಯುವಿಕೆಯು ಈ ಜ್ಞಾನವಾಗಿರುವುದು. ಕಾರಣ ವಿವೇಕವು ನಿರ್ಮಾಣವಾಗುತ್ತಲೇ ದ್ವೈತದ ಅಸ್ತಿತ್ವವು ಇಲ್ಲದಾಗುವುದು. ಇದರ ಸಾಧನವೇನೆಂದರೆ ತಪಶ್ಚರ್ಯದಿಂದ ಅಂತಃಕರಣವನ್ನು ಶುದ್ಧಗೊಳಿಸುವುದು. ವೇದಾದಿ ಶಾಸ್ತ್ರಗಳ ಶ್ರವಣವನ್ನು ಮಾಡಬೇಕು. ಇದೇ ವಿಷಯಕ್ಕೆ ಶ್ರವಣಕ್ಕೆ ಅನುಕೂಲವಾಗುವ ಮಹಾಪುರುಷರ ಉಪದೇಶಗಳ ಯುಕ್ತಿ ಮತ್ತು ಸ್ವಾನುಭವ ಪ್ರಮಾಣವಿರುವುದು. ವಿಶ್ವಸೃಷ್ಟಿಗೆ ಮೊದಲು ಇದ್ದ ಒಂದೇ ಒಂದಾದ ಮತ್ತು ಪ್ರಳಯನಂತರ ಒಂದೇಯಾಗಿ ಉಳಿಯತಕ್ಕ ಪರತತ್ವವೂ ಕೂಡ ಕಾಲತತ್ವವಾಗಿರುತ್ತದೆ. ಮತ್ತು ಅಂತಿಮ ಕಾರಣವಾಗಿರುತ್ತದೆ. ಈ ಸೃಷ್ಟಿಯ ಅಸ್ತಿತ್ವದ ಮಧ್ಯದಲ್ಲಿ ಪರತತ್ವವೊಂದೇ ವಾಸ್ತವಿಕ ಸತ್ಯವಾಗಿರುತ್ತದೆ.

ನಿತ್ಯಾನಿತ್ಯ ವಿವೇಕ । ಯಾ ನಾಂವ ''ಜ್ಞಾನ'' ಚೋಖ । ದೇಹದ್ವಯಾಚಾ ಪ್ರಕಾಶಕ । ಆತ್ಮಾ ಸಮ್ಯಕ ಜಾಣತೀ ಜ್ಞಾತೇ ।೨೨೧॥ ಸೇವಾವಯಾ ಸ್ವಾದರಸನವ್ಹಾಳೀ । ಪ್ರಥಮ ಉಂಸಾಚೀ ಪಾನೇ ಸಾಳೀ । ಮಗ ಊಂಸ ತೋಹೀ ಬಳೇ ಪಿಳೀ । ತೋಹೀ ರಸ ಆಳೀ ತೈ ಶರ್ಕರಾ ಲಾಭೇ ।೨೨೨॥ ತೇಹೀ ಶರ್ಕರಾ ಪರಿಪಾಕಬಳೇ । ತೈ ಸಾಖರಚಿ ಕೇವಳೇ । ಕೇಳೇ ಆಣಿ ನಾರೇಳೇ । ಕರಿತೀ ನಾನಾ ಫಳೇ ಮೂಳೀಂಚ್ಯಾ ಗೋಡ್ಯಾ ।೨೨೩॥ ತೇವೀ ಸ್ಥೂಳಾಚೇ ನಿರಾಕಾರಣ । ಲಿಂಗದೇಹಾಚೇ ಉಪಮರ್ದನ । ಅಹಂಕಾರಾಚೇ ನಿರ್ದಳಣ । ಕರೂನಿ ಪೂರ್ಣ ಬ್ರಹ್ಮ ಪಾವತೀ ಜ್ಞಾತೇ ।೨೨೪॥ ತೇ ಬ್ರಹ್ಮ ನಿರ್ಗುಣ ನಿರಾಕಾರ । ತದ್ರೂಪೇ ದೇಖತೀ ಚರಾಚರ । ಯಾಪರೀ ವಿವೇಕಚತುರ । ವಸ್ತೂಚಾ ನಿರ್ಧಾರ ಜಾಣತೀ ।೨೨೫॥ ಯಾಪರೀ ಗಾ ವಿಚಕ್ಷಣ । ಜಾಣತೀ ವಸ್ತೂಂಚೇ ಲಕ್ಷಣ । ಯಾ ನಾಂವ ಪೈ ''ವಿವೇಕಜ್ಞಾನ'' । ಉದ್ಧವಾ ಜಾಣ ನಿಶ್ಚಿತ ।೨೨೬॥ ವಸ್ತು ನಿಃಶಬ್ದ ನಿರ್ಗುಣ । ತೇಥ ಜೇ ಶ್ರುತೀಚೇ ಸ್ಫುರಣ । ಇತ್ಥಂಭೂತ ಶಬ್ದಜ್ಞಾನ । ವೇದ ತೋ ಜಾಣ ನಿಗಮ ಮಾಝಾ ।೨೨೭॥ ತೋ ಮೀ ವೇದರೂಪ ನಾರಾಯಣ । ಯಾಲಾಗೀ ವೇದವಚನ ಪ್ರಮಾಣ । ಶ್ರುತ್ಯರ್ಥ ಶಬ್ದಜ್ಞಾನ । ಕರೀ ಪಾವನ ಪಾಠಕಾ ।೨೨೮॥ ಜಾಣಾವಯಾ ನಿಜಾತ್ಮ ಸ್ವರೂಪ । ದೇಹಾದಿ ವಿಷಯಾಂಚಾ ಅನುತಾಪ । ಜೇಣೇ ಸಾಧಕ ಹೋತೀ ನಿಷ್ಪಾಪ । ಯಾ ನಾಂವ ''ತಪ'' ಉದ್ಧವಾ ।೨೨೯॥ ಅನುತಾಪೇ ದಮಿತಾ ಮನ । ಹೋಯ ಪಾಪಾಚೇ ಕ್ಷಾಲನ । ತೇವ್ಹಾ ಶ್ರುತ್ಯರ್ಥೇ ಆಪಣ । ಕಲ್ಪೀ ''ಅನುಮಾನ'' ವಸ್ತೂಚೇ ।೨೩೦॥

ಇವುಗಳಿಗಾಗಿ ವಿಸ್ತಾರಪೂರ್ವಕವಾಗಿ ಶ್ರವಣವನ್ನು ಮಾಡಬೇಕು ಎಂಬ ಇಚ್ಛೆಯು ಉದ್ಧವನ ಮನದಲ್ಲಿ ನಿರ್ಮಾಣವಾಗಿರುವುದನ್ನು ಶ್ರೀಕೃಷ್ಣನು ಅರಿತುಕೊಂಡು, ಇದೇ ವಿಷಯವನ್ನು ಕುರಿತು ಸ್ವತಃ ನಿರೂಪಣೆಯನ್ನು ಮಾಡುತ್ತಿರುವನು ।೨೨೦॥

ನಿತ್ಯ ಯಾವುದು? ಮತ್ತು ಅನಿತ್ಯ ಯಾವುದು? ಇದರ ವಿವೇಕದ ನಾಮವೇ ಉತ್ತಮವಾದ ''ಜ್ಞಾನ''ವಾಗಿರುವುದು. ಇಂತಹ ಜ್ಞಾನವನ್ನು ಪಡೆದ ಜನರು ಸ್ಥೂಲ ಮತ್ತು ಸೂಕ್ಷ್ಮ ಈ ಎರಡೂ ದೇಹಗಳ ಪ್ರಕಾಶಕನು ಆತ್ಮನೆಂದು ತಿಳಿದಿರುವರು ।೨೨೧॥ ಸಿಹಿಯಾದ ರಸದ ಸ್ವಾದವನ್ನು ಸ್ವೀಕರಿಸುವುದಕ್ಕಾಗಿ ಪ್ರಾರಂಭದಲ್ಲಿ ಕಬ್ಬಿನ ಎಲೆಗಳನ್ನು ಮುರಿದು ಹಾಕುವರು. ತದನಂತರ ಕಬ್ಬನ್ನು ಜೋರಾಗಿ ಹಿಂಡಿ ಅದರ ರಸವನ್ನು ತೆಗೆಯುವರು. ಈ ರಸವನ್ನು ಕುದಿಸಿದಾಗ ಸಕ್ಕರೆಯು ಪ್ರಾಪ್ತವಾಗುವುದು ।೨೨೨॥ ತದನಂತರ ಆ ಸಕ್ಕರೆಯ ಪಾಕವನ್ನು ಮಾಡಿ ಅದರಿಂದ ಬಾಳೆಯಹಣ್ಣು, ತೆಂಗಿನಕಾಯಿ ಇತ್ಯಾದಿ ಅನೇಕ ಪ್ರಕಾರದ ಫಲಗಳನ್ನು ತಯಾರಿಸಿದರೆ ಆ ಎಲ್ಲದರಲ್ಲಿಯೂ ಸಕ್ಕರೆಯ ಸಿಹಿಯು ಸಮೂಲವಾಗಿ ಇರುವುದು ।೨೨೩॥ ಅದರಂತೆ ಜ್ಞಾನೀಪುರುಷರು ಸ್ಥೂಲದೇಹದ ನಿರಾಕರಣೆಯನ್ನು ಮಾಡುವರು. ಸೂಕ್ಷ್ಮದೇಹದ ಉಪಮರ್ದನ ಮಾಡುವರು. ಹಾಗೂ ಅಹಂಕಾರದ ನಾಶವನ್ನು ಮಾಡಿ ಪೂರ್ಣ ಬ್ರಹ್ಮವನ್ನು ಪ್ರಾಪ್ತಮಾಡಿಕೊಳ್ಳುವರು ।೨೨೪॥ ಈ ಯಾವ ಬ್ರಹ್ಮವು ನಿರ್ಗುಣನಿರಾಕಾರವಾಗಿರುವುದು. ತದ್ರೂಪವಾಗಿಯೇ ಸಂಪೂರ್ಣ ಜಗತ್ತನ್ನು ಕಾಣುವರು. ಈ ಪ್ರಕಾರವಾಗಿ ಜ್ಞಾನೀಪುರುಷರು ಪರಬ್ರಹ್ಮದ ನಿಶ್ಚಯವನ್ನು ಮಾಡುತ್ತಿರುವರು ।೨೨೫॥ ಹೇ ಉದ್ಧವಾ, ಈ ಪ್ರಕಾರವಾಗಿ ಜ್ಞಾನೀಪುರುಷರು ಪರಬ್ರಹ್ಮದ ಸ್ವರೂಪವನ್ನು ತಿಳಿದಿರುವರು. ಇದರ ನಾಮವೇ ನಿಶ್ಚಿತವಾಗಿ ''ವಿವೇಕಜ್ಞಾನ''ವಾಗಿರುವುದು ।೨೨೬॥ ಬ್ರಹ್ಮವು ನಿಃಶಬ್ದ ಹಾಗೂ ನಿರ್ಗುಣವಾಗಿರುವುದು. ಅದರಲ್ಲಿ ಯಾವ ಶ್ರುತಿಯ ಸ್ಫುರಣ, ಯಾವ ಸರ್ವ ಶಬ್ದಜ್ಞಾನ ಇದೇ ನನ್ನ ವೇದವಾಗಿರುವುದು. ಇದನ್ನು ನೀನು ತಿಳಿ ।೨೨೭॥ ಆ ಯಾವ ವೇದರೂಪ ನಾರಾಯಣನು ನಾನಾಗಿರುವೆನು. ಆದ್ದರಿಂದ ವೇದವಚನವು ಪ್ರಮಾಣವಾಗಿರುವುದು. ಶ್ರುತಿಯ ಶಬ್ದಜ್ಞಾನವನ್ನು ಪಾಠ ಮಾಡುವವರಿಗೆ ಪಾವನತೆಯು ಪ್ರಾಪ್ತವಾಗುವುದು ।೨೨೮॥ ಹೇ ಉದ್ಧವಾ, ಆತ್ಮಸ್ವರೂಪವನ್ನು ಅರಿತುಕೊಳ್ಳುವುದಕ್ಕಾಗಿ ದೇಹಾದಿ ವಿಷಯಗಳ ತ್ಯಾಗವನ್ನು ಮಾಡಲು, ಈ ಯೋಗದಿಂದ ಸಾಧಕರ ಹೃದಯವು ನಿಷ್ಪಾಪವಾಗುವುದು. ಅದಕ್ಕೆ ತಪವೆಂದು ಹೇಳುವರು ।೨೨೯॥ ಪಶ್ಚಾತ್ತಾಪದಿಂದ ಮನವನ್ನು ದಮನಗೊಳಿಸಲು ಪಾತಕಗಳ ನಾಶವಾಗುವುದು. ಆಗ ಆತನು ಶ್ರುತಿಯ ಅರ್ಥದ ಅನುರೋಧದಿಂದ ಪರಬ್ರಹ್ಮವನ್ನು ತಿಳಿಯುವ ಸಮರ್ಥನಾಗುವನು ।೨೩೦॥

ದೇಹ ಜಡಮೂಢ ಅಚೇತನ । ತೇಥ ಚೇತನಾತ್ಮಕ ನಾರಾಯಣ । ದೇಹಾಚೇ ಮಾನೂನಿ ಮಿಥ್ಯಾಪಣ । ಅದ್ವೈತೀ ಮನ ಮುಸಾವೇ ॥೭೩೧॥ ತೇ ಅದ್ವೈತಪ್ರಾಪ್ತೀಚೇ ಲಕ್ಷಣ । ಅನನ್ಯಭಾವೇ ಆಪಣ । ಸದ್ಗುರೂಸೀ ರಿಘಾವೇ ಶರಣ । ನಿರಭಿಮಾನ ಭಾವಾರ್ಥೇ ॥೭೩೨॥ ಸದ್ಭಾವೇ ಅನನ್ಯ ಶರಣ । ತೋ ಗುರುಕೃಪಾ ಪಾವೇ ಆಪಣ । ಪಾಹೋನಿ ಅಧಿಕಾರಲಕ್ಷಣ । ಗುರು ಗುಹ್ಯಜ್ಞಾನ ಉಪದೇಶೀ ॥೭೩೩॥ ''ಸರ್ವಹೀ ನಿಷ್ಟಂಕ ಪರಬ್ರಹ್ಮ'' । ಹೇ ಶ್ರುತಿಗುಹ್ಯ ಉತ್ತಮೋತ್ತಮ । ಏಥ ಭಾಗ್ಯೇ ಜೋ ಸಭಾಗ್ಯ ಪರಮ । ತ್ಯಾಸಚಿ ಸುಗಮ ಠಸಾವೇ ॥೭೩೪॥ ಗುರುವಚನ ಪಡತಾ ಕಾನೀ । ವೃತ್ತಿ ನಿಜಾತ್ಮಸಮಾಧಾನೀ । ವಿನಟೋನಿ ಠೇಲೀ ಚಿದ್‌ಘನೀ । ಸುಖಸಮಾಧಾನೀ ಸ್ವಾನಂದೇ ॥೭೩೫॥ ತಯಾಸೀ ಪುಢತೀ ಸಾಧನ । ಅಥವಾ ಕರ್ಮಾಚೇ ಕರ್ಮಾಚರಣ । ತೇಥ ಬೋಲೋ ಶಕೇ ಕೋಣ । ವೇದೀ ಮೌನ ಘೇತಲೇ ॥೭೩೬॥ ಜೇಥ ದ್ವಂದ್ವಾಚೇ ನಿಮಾಲೀ ಸ್ಫೂರ್ತಿ । ಸಕಳ ದುಃಖಾಂಚೀ ಸಮಾಪ್ತೀ । ದೇಹೀ ವಿದೇಹವಸ್ತುಪ್ರಾಪ್ತೀ । ''ಪ್ರತ್ಯಕ್ಷ'' ಮ್ಹಣತೀ ಯಾ ನಾಂವ ॥೭೩೭॥ ಪುಸೂನಿಯಾ ವಿಸರಾಚಾ ಠಾವೋ । ಆಠವೇವೀಣ ನಿತ್ಯ ಆಠವೋ । ಅಖಂಡ ಸ್ವರೂಪಾನುಭವೋ । ''ಪ್ರತ್ಯಕ್ಷ'' ಪಹಾ ಹೋ ಯಾ ನಾಂವ ॥೭೩೮॥ ಮೀ ಆತ್ಮಾ ಸ್ವಾನಂದಕಂದ । ಐಸಾ ಅಖಂಡತ್ವೇ ಪರಮಾನಂದ । ''ಪ್ರತ್ಯಕ್ಷ'' ಪದಾಚಾ ಹಾ ನಿಜಬೋಧ । ಸ್ವಯೇ ಗೋವಿಂದ ಬೋಲಿಲಾ ॥೭೩೯॥ ಹಾಚಿ ಬೋಧ ಸಭಾಗ್ಯಾಕಡೇ । ಶ್ರವಣಮಾತ್ರೇ ತ್ಯಾ ಆತುಡೇ । ಏಕಾ ಮನನೇ ಜೋಡೇ । ಏಕಾ ಸಾಂಪಡೇ ನಿಧಿಧ್ಯಾಸೇ ॥೭೪೦॥ ಏಕಾಸೀ ತೋ ಪ್ರತ್ಯಗಾವೃತ್ತೀ । ಹಾ ಬೋಧ ಠಸಾವೇ ಚಿತ್ತೀ । ಏಕಾ ಮಾಝಿಯಾ ಅದ್ವೈತಭಕ್ತೀ । ಮೀ ಸಗಳಾ ಶ್ರೀಪತೀ ಆತುಡೇ ॥೭೪೧॥ ನಿಜಬೋಧ ಸಾಧಾವಯಾ ಪೂರ್ಣ । ಉದ್ಧವ ಹೇ ತೋ ಮುಖ್ಯಸಾಧನ । ಏವಂ ಸಾಧಲಿಯಾ ನಿಜಜ್ಞಾನ । ಫಳ ಕೋಣ ತೇ ಐಕ ॥೭೪೨॥ ಜೋ ಮೀ ಸೃಷ್ಟಿ ಆದಿ ಅನಂತು । ನಿತ್ಯಮುಕ್ತತ್ವೇ ಅಹೇತು । ತೋ ಮೀ ಭವಮೂಳಾ ಮೂಳಹೇತು । ಸೃಷ್ಟಿಸೃಜಿತಾ ಅಚ್ಯುತು ಸ್ವಲೀಲಾ ॥೭೪೩॥ ತೇಥ ರಜೋಗುಣಾಚಿಯೇ ಸ್ಥಿತೀ । ಸೃಷ್ಟ್ಯರೂಪೇ ಮೀಚಿ ಪುಢತೀ । ಅದ್ವೈತೀ ದಾವೀ ಅನೇಕ ವ್ಯಕ್ತೀ । ಸೃಷ್ಟಿ ಉತ್ಪತ್ತಿಕರ್ತಾ ತೋ ಮೀ ॥೭೪೪॥ ಜೈಸೇ ಮೂಳೇವಿಣ ಸಫಳ ಝಾಡ । ವಾಢವಿಲೇ ನಿಜಾಂಗೀ ಗೋಡ । ತೇವೀ ಸೃಷ್ಟಿಸಂರಕ್ಷಣೀ ಕೋಡ । ಮಜ ನಿಚಾಡಾ ಚಾಡ ಪ್ರತಿಪಾಲನೀ ॥೭೪೫॥

ದೇಹವು ಇದು ಜಡ, ಮೂಢ ಹಾಗೂ ಅಚೇತನವಾಗಿರುವುದು. ಆದರಲ್ಲಿ ಚೈತನ್ಯರೂಪ ನಾರಾಯಣನಿರುವನು. ದೇಹದ ಮಿಥ್ಯೆತ್ವವನ್ನು ಅರಿತು ಅದ್ವೈತದಲ್ಲಿ ರಮಮಾಣನಾಗಬೇಕಾಗುವುದು ॥೭೩೧॥ ಈ ಅದ್ವೈತದ ಪ್ರಾಪ್ತಿಯ ಮಾರ್ಗವು ಯಾವುದೆಂದರೆ ಶುದ್ಧಭಾವದಿಂದ ಹಾಗೂ ನಿರಾಭಿಮಾನದಿಂದ ಸದ್ಗುರುಗಳಿಗೆ ಶರಣು ಹೋಗಬೇಕು ॥೭೩೨॥ ಸದ್ಭಾವದಿಂದ ಯಾರು ಸದ್ಗುರುಗಳಿಗೆ ಅನನ್ಯವಾಗಿ ಶರಣು ಹೋಗುವರೋ, ಅವರಿಗೆ ಶ್ರೀಗುರುಗಳ ಕೃಪೆಯ ಲಾಭವಾಗುವುದು. ಶರಣಾಗತರಾದವರ ಅಧಿಕಾರವನ್ನು ಹಾಗೂ ಲಕ್ಷಣವನ್ನು ಕಂಡು ಸದ್ಗುರುಗಳು ಅವರಿಗೆ ಗುಹ್ಯಜ್ಞಾನದ ಉಪದೇಶವನ್ನು ಮಾಡುವರು ॥೭೩೩॥ ಸರ್ವತ್ರವೂ ಸಮಪ್ರಮಾಣದಲ್ಲಿ ಪರಬ್ರಹ್ಮವಿರುವುದು ಎಂಬ ಶ್ರುತಿಯ ಉತ್ತಮೋತ್ತಮ ಗುಹ್ಯವಾಗಿರುವುದು. ಯಾರು ಪರಮ ಭಾಗ್ಯವಂತರೋ, ಅವರ ಹೃದಯಪಟಲದಲ್ಲಿ ಈ ವಿಚಾರವು ಅಂಕಿತವಾಗುವುದು ॥೭೩೪॥ ಸದ್ಗುರುಗಳ ವಚನಗಳು ಕಿವಿಗಳಿಗೆ ಬೀಳುತ್ತಲೇ, ವೃತ್ತಿಯು ಚಿತ್ಸ್ವರೂಪದಲ್ಲಿ ತಲ್ಲೀನವಾಗಿ ಆತ್ಮಾನಂದದಲ್ಲಿ ಸ್ಥಿರವಾಗುವುದು ॥೭೩೫॥ ಇಂತಹವರಿಗೆ ಮುಂದೆ ಇನ್ನೇನಾದರೂ ಸಾಧನೆಗಳು ಅಥವಾ ಕರ್ಮಗಳ ಆಚರಣೆಗಳು ಇವೆ ಎಂದು ಹೀಗೆ ಯಾರು ಹೇಳಲು ಸಾಧ್ಯ ? ವೇದವೂ ಕೂಡ ಅಲ್ಲಿ ಮೌನವನ್ನು ಧರಿಸಿರುವುದು ॥೭೩೬॥ ಎಲ್ಲಿ ದ್ವಂದ್ವದ ಸ್ಫೂರ್ತಿಯು ಸಂಪೂರ್ಣವಾಗಿ ಸಮಾಪ್ತಿಯಾಗುವುದೋ ಅಲ್ಲಿ ಸರ್ವ ದುಃಖಗಳು ಕೊನೆಗೊಳ್ಳುವುವು. ದೇಹಕ್ಕೆ ವಿದೇಹೀ ಅವಸ್ಥೆಯು ಪ್ರಾಪ್ತವಾಗುವುದು. ಅದಕ್ಕೇನೇ ''ಪ್ರತ್ಯಕ್ಷ'' ವೆಂದು ಹೇಳುವರು ॥೭೩೭॥ ವಿಸ್ಮೃತಿಯ ಸ್ಥಾನವನ್ನೇ ಒರೆಸಿಬಿಟ್ಟು, ಸ್ಮರಣೆಯ ಹೊರತಾಗಿ ನಿತ್ಯವೂ ಸ್ಮರಣೆಯಾಗುವಿಕೆ ಮತ್ತು ಅಖಂಡವಾಗಿ ಸ್ವಸ್ವರೂಪದ ಅನುಭವವನ್ನು ಪಡೆಯುವಿಕೆ, ಇದಕ್ಕೆ ''ಪ್ರತ್ಯಕ್ಷ''ವೆಂದು ಕರೆಯುವರು ॥೭೩೮॥ ನಾನು ಸ್ವಾನಂದಕಂದ ಆತ್ಮರೂಪನಾಗಿರುವೆನು ಎಂಬ ಈ ಪರಮಾನಂದದ ಅಖಂಡ ಅನುಭವವು ಇದು ''ಪ್ರತ್ಯಕ್ಷ'' ಪದದ ನಿಜವಾದ ಅರ್ಥವಾಗಿರುವುದು. ಹೀಗೆ ಸ್ವತಃ ಶ್ರೀಕೃಷ್ಣನು ಹೇಳಿರುವನು ॥೭೩೯॥ ಈ ಜ್ಞಾನವು ಭಾಗ್ಯವಂತನಿಗೆ ಕೇವಲ ಶ್ರವಣ ಮಾತ್ರದಿಂದ ಪ್ರಾಪ್ತವಾಗುವುದು. ಕೆಲವರಿಗೆ ಮನನದಿಂದ ಪ್ರಾಪ್ತವಾಗುವುದು. ಇನ್ನು ಕೆಲವರಿಗೆ ನಿಧಿಧ್ಯಾಸದಿಂದ ಲಭಿಸುವುದು ॥೭೪೦॥ ಎಷ್ಟೋ ಸಾಧಕರಿಗೆ ಈ ಬೋಧವು ಸ್ವರೂಪಾಕಾರ ವೃತ್ತಿಯ ಅಭ್ಯಾಸದಿಂದ ಪ್ರಾಪ್ತವಾಗುವುದು. ಕೆಲವರಿಗೆ ನನ್ನ ಅದ್ವೈತ ಭಕ್ತಿಯಿಂದ ಶ್ರೀಪತಿಯಾದ ನಾನು ಪ್ರಾಪ್ತನಾಗುತ್ತೇನೆ ॥೭೪೧॥ ಹೇ ಉದ್ಧವಾ, ಪರಿಪೂರ್ಣವಾಗಿ ಆತ್ಮಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳುವುದೇ ನಿಜವಾದ ಸಾಧನೆಯಾಗಿರುವುದು. ಈ ಪ್ರಕಾರವಾಗಿ ಆತ್ಮಜ್ಞಾನವು ಪ್ರಾಪ್ತವಾಗಲು ಅದರ ಫಲವು ಯಾವುದೆಂಬುವುದನ್ನು ಹೇಳುವೆನು. ಈಗ ಅದನ್ನು ಕೇಳು ॥೭೪೨॥ ನಾನು ಸೃಷ್ಟಿಯ ಆದಿಯಲ್ಲಿ, ಅಂತ್ಯದಲ್ಲಿ ನಿತ್ಯಮುಕ್ತನಾಗಿರುವುದರಿಂದ ನಿಷ್ಕಾಮನಾಗಿರುವೆನು. ಹೀಗಿರುವ ನಾನು ಪ್ರಪಂಚದ ಮೂಲ ಕಾರಣನಾಗಿರುವೆನು. ನಾನು ನನ್ನ ಲೀಲಾರ್ಥವಾಗಿ ಸೃಷ್ಟಿಯನ್ನು ಉತ್ಪನ್ನ ಮಾಡುತ್ತಿರುವೆನು ॥೭೪೩॥ ರಜೋಗುಣದ ಸಹಾಯದಿಂದ ನಾನೇ ಉತ್ಪನ್ನಕಾರ್ಯದ ರೂಪದಿಂದ ಅದ್ವೈತದಲ್ಲಿ ಅನೇಕ ವ್ಯಕ್ತಿಗಳನ್ನು ತೋರಿಸುವೆನು. ಈ ಪ್ರಕಾರವಾಗಿ ನಾನು ಸೃಷ್ಟಿಯ ಉತ್ಪತ್ತಿಕರ್ತನಾಗಿರುವೆನು ॥೭೪೪॥ ಯಾವ ಪ್ರಕಾರವಾಗಿ ಬೇರುಗಳಿಲ್ಲದ ಸಿಹಿ ಪದಾರ್ಥಗಳ ವೃಕ್ಷವನ್ನು ನಿಜಾಂಗದಲ್ಲಿ ಬೆಳೆಯಿಸಬೇಕೋ, ಅದರಂತೆ ನಿಷ್ಕಾಮನಾದ ನನಗೆ ಈ ಸೃಷ್ಟಿ ಸಂರಕ್ಷಣದ ಕಾರ್ಯದಲ್ಲಿ ಪ್ರೀತಿ ಇರುವುದು ॥೭೪೫॥

ಬುದ್ಧಿಬಳೇ ಏಕಾ ಕಾಷ್ಠಾಚೇ ಪೋಟೀ । ತೇಥ ರಾಜಾ ಪ್ರಧಾನ ಪಶು ಪ್ಯಾದಾ ಉರೀ । ತ್ಯಾಂಸೀ ಪೂರ್ವಕರ್ಮ ನಾಹೀ ಗಾಂಠೀ । ತೇವಿ ನಿಷ್ಕರ್ಮೆ ಸೃಷ್ಟಿಪ್ರಕಾಶಿತಾ ತೋ ಮೀ ।೮೪೬॥ ನಿಷ್ಕರ್ಮೆ ಜಗ ಸಮಸ್ತ । ಸೃಜಿತಾ ಮೀಮಾಂಸಕಮತ । ಠಕೋನಿ ಠೇಲೇ ನಿಶ್ಚಿತ । ಜಗ ಸದೋದಿತ ನಿಷ್ಕರ್ಮಬ್ರಹ್ಮ ।೮೪೭॥ ಜೇವೀ ಬುದ್ಧಿಬಳಾಂಚಾ ಖೇಳ । ಅಚೇತನೀ ಯುದ್ಧ ಪ್ರಬಳ । ತೇವೀ ಲೋಕರಕ್ಷಣೇ ಕಳವಳ । ಸೃಷ್ಟಿಪ್ರತಿಪಾಳ ಮೀ ಕರ್ತಾ ।೮೪೮॥ ಪ್ರಕೃತೀಚ್ಯಾ ಜಡ -ಮೂಢ ಸಾರೀ । ಪುರುಷಾಚೇನಿ ಸಚೇತನ ನಿರ್ಧಾರೀ । ಕಾಳಫಾಂಸೇ ಘೇಊನಿ ಕರೀ । ಖೇಳವಿತಾ ಚರಾಚರೀ ಮೀ ಏಕ ವಿಷ್ಣು ।೮೪೯॥ ತೇಥ ಅಚೇತನಾ ಝುಂಜಾರೀ । ನ ಮರತ್ಯಾ ಮಹಾಮಾರೀ । ಏಕಾ ಜೈತ ಏಕ ಹಾರೀ । ಉಭಯಪಕ್ಷಾಂತರೀ ಖೇಳವಿತಾ ಮೀ।೮೫೦॥ ಸೋಂಗಟೀ ನಿಮಾಲಿಯಾಪಾಠೀ । ಕವಣ ಪುಣ್ಯಾತ್ಮಾ ಚಢೇ ವೈಕುಂಠಿ । ಕೋಣ ಪಡೇ ನರಕಸಂಕಟೀ । ತೈಸಾ ಜಾಣ ಸೃಷ್ಟೀ ಬಂಧಮೋಕ್ಷ ।೮೫೧॥ ತೇವೀ ನ ಮೋಡತಾ ಏಕಲೇಪಣ । ತ್ಯಾ ಖೇಳಾಚ್ಯಾ ಐಸೇ ಜಾಣ । ಜಗಾಚೇ ಕರೀ ಮೀ ಪಾಲನ । ದುಜೇಪಣ ನಾತಳತಾ ।೮೫೨॥ ದೋರಾಚಾ ಸರ್ಪಾಕಾರ । ಸಬಳ ಬಳೇ ಮಾರೀ ವೀರ । ತೈಸಾ ಸೃಷ್ಟೀಸೀ ಸಂಹಾರ ಮೀ ಪ್ರಳಯರುದ್ರ ಪೈ ಕರ್ತಾ ।೮೫೩॥ ಸ್ವಪ್ನೀ ಭಾಸಲೇ ಜಗ ಸಂಪೂರ್ಣ । ತೇಥೂನಿ ಜಾಗಾ ಹೋತಾ ಆಪಣ । ಸ್ವಪ್ನ ನಿರ್ದಳಿತಾ ಕಷ್ಟ ಕೋಣ । ತೈಸಾ ಮೀ ಜಾಣ ಪ್ರಳಯಕರ್ತಾ ।೮೫೪॥ ಸೃಷ್ಟೀಸೀ ಉತ್ಪತ್ತಿ ಸ್ಥಿತೀ ನಿದಾನ । ಆತ್ಮಾ ಆತ್ಮತ್ವೇ ಅಖಂಡ ಪೂರ್ಣ । ತೇಚಿ ಸ್ವರೂಪ ಸಜ್ಞಾನ । ಸ್ವಾನುಭಾವೇ ಆಪಣ ಹೋಊನಿ ಠೇಲೇ ।೮೫೫॥ ತೇ ನಿಜರೂಪ ಝಾಲೋ ಮ್ಹಣಣೇ । ಹೇಹೀ ಬೋಲಣೇ ಲಾಜಿರವಾಣೇ । ತೇ ಸ್ವಯಂಭ ಅಸತಾ ಬ್ರಹ್ಮಪಣೇ । ಹೋಣೇ ನ ಹೋಣೇ ಭ್ರಮಮಾತ್ರ ।೮೫೬॥ ಮಿಥ್ಯಾ ದೋರಾಚಾ ಸರ್ಪಾಕಾರ । ಭಾಸತಾ ತೋ ಅಸೇ ದೋರ । ನಿವರ್ತಲ್ಯಾ ಸರ್ಪಭರಭಾರ । ದೋರ ತೋ ದೋರ ದೋರರೂಪೇ ।೮೫೭॥ ತೇವೀ ಸೃಷ್ಟೀಸೀ ಉತ್ಪತ್ತಿ ಹೋತಾ । ಆತ್ಮಾ ಜನ್ಮೇನಾ ತತ್ತ್ವತಾ । ಸೃಷ್ಟೀಚಾ ಪ್ರತಿಪಾಳಕರ್ತಾ । ಆತ್ಮಾ ಸರ್ವಥಾ ವಾಢೇನಾ ।೮೫೮॥ ಸೃಷ್ಟೀಸೀ ಮಹಾಪ್ರಳಯ ಹೋತಾ । ಆತ್ಮಾ ನಾಯಕೇ ಪ್ರಳಯವಾರ್ತಾ । ಉತ್ಪತ್ತಿಸ್ಥಿತಿನಿದಾನತಾ । ಆತ್ಮಾ ತತ್ತ್ವತಾ ಅವಿಕಾರೀ ।೮೫೯॥

ಬುದ್ಧಿ ಪ್ರದರ್ಶಿಸುವ ಆಟದಲ್ಲಿ, ರಾಜಾ, ಪ್ರಧಾನ, ಕಾಲ್ದಳ, ಒಂಟೆ, ಹಾಗೂ ಕುದುರೆ ಈ ಎಲ್ಲವೂ ಒಂದೇ ಕಟ್ಟಿಗೆಗಳಿಂದ ಸಿದ್ಧಗೊಂಡಿರುವುವು. ಅವುಗಳಿಗೆ ಯಾವ ಪೂರ್ವ ಕರ್ಮಗಳಿರುವುದಿಲ್ಲ. ಹಾಗೆಯೇ ನಾನು ನಿಷ್ಕರ್ಮತೆಯಿಂದಲೇ ಸೃಷ್ಟಿಯನ್ನು ಪ್ರಕಾಶಿತವನ್ನಾಗಿ ಮಾಡುವೆನು ।೮೪೬॥ ನಿಷ್ಕರ್ಮದಿಂದಲೇ ಸೃಷ್ಟಿಕಾರ್ಯದ ಈ ಸರ್ವ ಜಗತ್ತನ್ನು ನಿರ್ಮಾಣ ಮಾಡಿರುವುದನ್ನು ಕಂಡು ಮೀಮಾಂಸಕರ ಮತಿಯು ಕುಂಠಿತವಾಗಿರುವುದು. ಹೀಗೆ ಈ ಜಗತ್ತು ನಿರಂತರವಾಗಿ ನಿಷ್ಕರ್ಮ ಬ್ರಹ್ಮವೇ ಆಗಿರುವುದು ।೮೪೭॥ ಯಾವ ಪ್ರಕಾರವಾಗಿ ಬುದ್ಧಿಪ್ರದರ್ಶನ ಆಟದಲ್ಲಿ ಅಚೇತನದಲ್ಲಿ ಪ್ರಬಲವಾದ ಯುದ್ಧವು ನಿರ್ಮಾಣವಾಗುತ್ತಿರುವುದೋ, ಅದರಂತೆ ಲೋಕ ರಕ್ಷಣೆಯ ಕಳವಳದಿಂದ ನಾನು ಸೃಷ್ಟಿಯ ಪ್ರತಿಪಾಲನೆಯನ್ನು ಮಾಡುತ್ತಿರುವೆನು ।೮೪೮॥ ಪ್ರಕೃತಿಯ ಸರ್ವ ವಸ್ತುಗಳು ಅಂದರೆ ಸೋಗು ಹಾಕಿಕೊಂಡ ಯಾವತ್ತೂ ಜಡಮೂಢವಾಗಿರುವುವು. ಆ ಪುರುಷನ ಯೋಗದಿಂದ ಸಚೇತನಗೊಳಿಸಿ ಕೈಯಲ್ಲಿ ಕಾಲನ ಪಾಶವನ್ನು ತೆಗೆದುಕೊಂಡು ಚರಾಚರಗಳಿಗೆ ಆಟವನ್ನು ಆಡಿಸುವವ ನಾನೇ ಒಬ್ಬ ಶ್ರೀವಿಷ್ಣು ಆಗಿರುವೆನು ।೮೪೯॥ ಈ ನಿರ್ಜೀವಿಗಳ ಸಂಘರ್ಷದಲ್ಲಿ ಸಾಯಲಾರದವನಿಗೂ ಕೂಡ ಮೃತ್ಯುವಾಗುವುದು. ಒಬ್ಬನ ಜಯವಾದರೆ ಇನ್ನೊಬ್ಬನ ಪರಾಜಯವಾಗುವುದು. ಹೀಗೆ ಎರಡೂ ಪಕ್ಷಗಳಲ್ಲಿ ಆಟವನ್ನು ಆಡಿಸುವವನು ನಾನೇ ಆಗಿರುವೆನು ।೮೫೦॥ ವೇಷಧಾರಿಯು ಸತ್ತರೆ ಯಾವ ಪುಣ್ಯಾತ್ಮನು ವೈಕುಂಠಕ್ಕೆ ಏರ್‍ಯಾನು, ಯಾವ ಪಾಪಿಯು ನರಕದಲ್ಲಿ ಬಿದ್ದಾನು ? ಅದರಂತೆ ಈ ಸೃಷ್ಟಿಯ ಬಂಧಮೋಕ್ಷವಿರುವುದು ।೮೫೧॥ ಹಾಗೆಯೇ ನನ್ನ ಏಕತ್ವವನ್ನು ಬಿಟ್ಟುಕೊಡದೇ, ಹಾಗೂ ಆ ಯಾವ ಆಟದಂತೆ ನಾನು ದ್ವೈತಕ್ಕೆ ಸ್ಪರ್ಶವನ್ನು ಮಾಡದೇ, ಸರ್ವ ಜಗತ್ತಿನ ಪಾಲನೆಯನ್ನು ಮಾಡುತ್ತಿರುವೆನು ।೮೫೨॥ ಹಗ್ಗಕ್ಕೆ ಹಾವು ಎಂದು ತಿಳಿದು ಒಬ್ಬ ವೀರನು ಅದಕ್ಕೆ ಮಹಾಬಲದಿಂದ ಹೊಡೆಯುತ್ತಿರುವನು. ಅದರಂತೆ ನಾನು ಪ್ರಳಯಕಾಲದ ರುದ್ರನು ಸೃಷ್ಟಿಯ ಸಂಹಾರಕರ್ತನಾಗಿರುವೆನು ।೮೫೩॥ ಸ್ವಪ್ನದಲ್ಲಿ ಕಂಡ ಸಂಪೂರ್ಣ ಜಗತ್ತನ್ನು ತಾನು ಎಚ್ಚರಾದ ಮೇಲೆ ಕಂಡದ್ದನ್ನು ಇಲ್ಲದಂತೆ ಮಾಡಲು ಯಾವ ಕಷ್ಟವಾಗುವುದು ? ಅದರಂತೆ ನಾನು ಪ್ರಳಯಕರ್ತನಾಗಿರುವೆನು ಇದನ್ನು ನೀನು ತಿಳಿ ।೮೫೪॥ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವು ಸೃಷ್ಟಿಗಾಗಿ ಇರುವುವು. ಆತ್ಮವು ಇದು ಆತ್ಮರೂಪದಿಂದ ಪರಿಪೂರ್ಣವಾಗಿ ಅಖಂಡವಾಗಿರುವುದು. ಜ್ಞಾನಿಯು ಸ್ವತಃವೇ ಆ ಸ್ವರೂಪಕ್ಕೆ ಪ್ರಾಪ್ತನಾಗಿರುವನು ।೮೫೫॥ ಆ ಆತ್ಮಸ್ವರೂಪ ನಾನಾದೆನು ಎಂದು ಹೀಗೆ ಹೇಳುವುದೂ ಕೂಡ ಲಜ್ಜಾಸ್ಪದವಾಗಿರುವುದು. ಕಾರಣ ಬ್ರಹ್ಮವು ಇದು ಸ್ವಯಂಭೂವಾಗಿರುವುದು. ಅದಕ್ಕಾಗುವ ಆಗುಹೋಗುಗಳು ಎನ್ನುವುದು ಭ್ರಮಮಾತ್ರವಾಗಿರುವುದು ।೮೫೬॥ ಹಗ್ಗವು ಮಿಥ್ಯಾಭಾಸದಿಂದ ಹಾವಿನಂತೆ ಕಂಡರೂ ಕೂಡ ಅದು ಹಗ್ಗವಾಗಿಯೇ ಇರುವುದು. ಆದ ಸರ್ಪದ ಆಭಾಸವು ಇಲ್ಲವಾದಾಗಲೂ ಕೂಡ ಅದು ಹಗ್ಗದ ರೂಪದಿಂದಲೇ ಇರುವುದು ।೮೫೭॥ ಅದರಂತೆ ಸೃಷ್ಟಿಯಲ್ಲಿ ಉತ್ಪತ್ತಿಯಾಗುತ್ತಲೇ ಆತ್ಮವೇನಾದರು ಜನ್ಮಕ್ಕೆ ಬರುವುದಿಲ್ಲ. ಅಥವಾ ಸೃಷ್ಟಿಯ ಲಾಲನೆ - ಪಾಲನೆ ಮಾಡುವಾಗ್ಗೆ ಆತ್ಮವು ಸ್ವಲ್ಪವೂ ಕೂಡ ಬೆಳೆಯುವುದಿಲ್ಲ ।೮೫೮॥ ಸೃಷ್ಟಿಯ ಪ್ರಳಯವಾದರೂ ಕೂಡ ಆ ಪ್ರಳಯದ ವಾರ್ತೆಯೂ ಕೂಡ ಆತ್ಮಕ್ಕೆ ಇರುವುದಿಲ್ಲ. ಅದರಂತೆ ಉತ್ಪತ್ತೀ, ಸ್ಥಿತೀ ಮತ್ತು ಲಯ ಈ ಮೂರೂ ಅವಸ್ಥೆಗಳಲ್ಲಿ ಆತ್ಮವು ವಾಸ್ತವಿಕವಾಗಿ ವಿಕಾರರಹಿತವಾಗಿಯೇ ಇರುವುದು ।೮೫೯॥

ಏವಂ ಸಾಧನೀ ಸಾಧೂನಿ ಜ್ಞಾನ । ಸಾಧಕ ಝಾಲೇ ಸಜ್ಞಾನ । ತೇ ಅಬಾಧಿತ ಬ್ರಹ್ಮ ಪೂರ್ಣ । ಸ್ವಯೇ ಆಪಣ ಹೋಊನಿ ಠೇಲೇ ।೨೬೦।। ಅಜ ಅವ್ಯಯ ಸ್ವಾನಂದಘನ । ಸಾಧಕ ಝಾಲೇ ಬ್ರಹ್ಮ ಪೂರ್ಣ । ಹೇ ಜ್ಞಾನಾಚೇ ಫಳ ಸಂಪೂರ್ಣ । ಉದ್ಧವಾ ಜಾಣ ನಿಶ್ಚಿತ ।೨೬೧।। ಹೇ ಜ್ಞಾನಫಳ ಆಲಿಯಾ ಹಾತಾ । ಉತ್ಪತ್ತಿ ಸ್ಥಿತಿ ಪ್ರಳಯ ಹೋತಾ । ಅಖಂಡ ಪರಿಪೂರ್ಣ ನಿಜಾತ್ಮತಾ । ತೇ ಸದೃಷ್ಟಾಂತಾ ಹರಿ ಸಾಂಗೇ ।೨೬೨।।

ಯಥಾ ಹಿರಣ್ಯಂ ಸುಕೃತಂ ಪುರಸ್ತಾತ್ಪಶ್ಚಾಚ್ಚ ಸರ್ವಸ್ಯ ಹಿರಣ್ಮಯಸ್ಯ ।
ತದೇವ ಮಧ್ಯೇ ವ್ಯವಹಾರ್ಯಮಾಣಂ ನಾನಾಪದೇಶೈರಹವಸ್ಯ ತದ್ವತ್ ।೧೯।।

ಅರ್ಥ:- ಹೇ ಉದ್ಧವಾ, ಬಂಗಾರದ ಬಳೆಗಳು, ಕುಂಡಲಗಳು ಇತ್ಯಾದಿ ನಾನಾ ಪ್ರಕಾರದ ಅಲಂಕಾರಗಳು ತಯಾರಾಗುವುವು. ಇವು ಅಲಂಕಾರಗಳಾಗಿದ್ದಾಗಲೂ ಅವುಗಳಲ್ಲಿ ಬಂಗಾರವೇ ಇರುವುದು. ಅಲಂಕಾರಗಳು ಮುರಿದಾಗಲೂ ಕೂಡ ಬಂಗಾರವೇ ಉಳಿಯುವುದು. ಅಲಂಕಾರಗಳು ಬೇರೆ ಬೇರೆ ಹೆಸರುಗಳಿಂದ ಕರೆಯಿಸಿಕೊಂಡಾಗಲೂ ಬಂಗಾರವೇ ಇರುವುದು. ಇದೇ ಪ್ರಕಾರವಾಗಿ ಜಗತ್ತಿನ ಆದಿ, ಮಧ್ಯ, ಅಂತ್ಯಗಳಲ್ಲಿ ನಾನೇ ಇರುವೆನು. ವಾಸ್ತವಿಕವಾಗಿ ನಾನೇ ಸತ್ಯತತ್ವನಾಗಿರುವೆನು.

ಮುಕುಟ ಕುಂಡಲೇ ಕರಕಂಕಣೇ । ನ ಘಡಿತಾ ಸೋನೇ ಸೋನೇಪಣೇ । ತ್ಯಾಚೇ ಕರಿತಾ ನಾನಾ ಭೂಷಣೇ । ಲೇಣೇಪಣೇ ಉಣೇ ನವ್ಹೇಚಿ ಹೇಮ ।೨೬೩।। ತೇ ನ ಮೋಡತಾ ಅಳಂಕಾರಠಸೇ । ಸೋನೇ ಅವಿಕಾರ ಸಂಚಲೇ ಅಸೇ । ತೇವೀ ಉತ್ಪತ್ತಿಸ್ಥಿತಿವಿನಾಶೇ । ಮಾಝೇ ಸ್ವರೂಪ ಚಿದಂಶೇ ಅವಿನಾಶೀ ।೨೬೪।। ಮಾಝೇ ಸ್ವರೂಪ ಶುದ್ಧ ಪರಬ್ರಹ್ಮ । ತೇಥ ನಾನಾ ರೂಪ ನಾನಾ ನಾಮ । ಭಾಸತಾಂಹೀ ಜಗ ವಿಷಮ । ಬ್ರಹ್ಮ ಸಮ ಸಮಸಾಮ್ಯೇ ।೨೬೫।। ಜೇವೀ ಸೂರ್ಯಾಚೇ ಕಿರಣ । ಸೂರ್ಯಾವೇಗಳೇ ನವ್ಹತೀ ಜಾಣ । ತೇವೀ ಮಜಶೀ ಅಭಿನ್ನ । ತೇಚಿ ನಿರೂಪಣ ಹರಿ ಸಾಂಗೇ ।೨೬೬।।

ವಿಜ್ಞಾನಮೇತತ್ತ್ರಿಯವಸ್ಥಮಂಗಗುಣತ್ರಯಂ ಕಾರಣಕಾರ್ಯಕರ್ತೃ ।
ಸಮನ್ವಯೇನ ವ್ಯತಿರೇಕತಶ್ಚ ಯೇನೈವ ತುರ್ಯೇಣ ತದೇವ ಸತ್ಯಮ್ ।೨೦।।

ಅರ್ಥ:- ಹೇ ಉದ್ಧವಾ, ಮನದ ಮೂರು ಅವಸ್ಥೆಗಳಿರುವುವು. ಜಾಗೃತೀ, ಸ್ವಪ್ನ, ಸುಷುಪ್ತಿ. ಈ ಅವಸ್ಥೆಗಳ ಕಾರಣ ಮೂರು ಗುಣಗಳಾಗಿರುವುವು. ಸತ್ವ, ರಜ ಮತ್ತು ತಮ. ಜಗತ್ತಿನ ಮೂರು ಬೇಧಗಳಿರುವುವು. ಅಧ್ಯಾತ್ಮ, ಅಧಿಭೂತ ಮತ್ತು ಅಧಿದೈವ. ಈ ಸರ್ವ ತ್ರಿವಿಧಗಳು ಯಾರ ಸತ್ತೆಯಿಂದ ಸತ್ಯಸಮಾನವಾಗಿ ಪ್ರತೀತವಾಗುವುವೋ, ಹಾಗೆಯೇ ಈ ತ್ರಿವಿಧತೆಗಳು ಸಮಾಧಿಯಲ್ಲಿ ಇಲ್ಲದಿರುವಾಗಲೂ ಅದರ ಸತ್ತೆಯು ಇರುವುದೋ, ಅದು ತುರೀಯ ತತ್ವವಾಗಿರುವುದು. ಈ ಮೂರು ತತ್ವಗಳ ಆಚೆ ಇರುವ ನಾಲ್ಕನೆಯ ಬ್ರಹ್ಮತತ್ವವು, ಇದು ಸತ್ಯವಾಗಿರುವುದು.

ಸತ್ತ್ವಗುಣೇ ಜಾಗರಣ । ರಜೋಗುಣೇ ದಿಸೇ ಸ್ವಪ್ನ । ತಮೋಗುಣೇ ಸುಷುಪ್ತಿ ಜಾಣ । ಲಾಗೇ ಸಂಪೂರ್ಣ ಗಾಢ ಮೂಢ ।೨೬೭।।

ಇದೇ ಸಾಧನೆಯಿಂದ ಜ್ಞಾನವನ್ನು ಸಾಧ್ಯಮಾಡಿಕೊಂಡು ಸಾಧಕರು ಸಜ್ಞಾನಿಗಳಾಗುವರು ಮತ್ತು ಅವರು ಸ್ವತ: ಅಬಾಧಿತವಾಗಿರುವ ಪೂರ್ಣಬ್ರಹ್ಮರಾಗಿ ಇರುವರು ।೨೬೦।। ಹೇ ಪರಮ ಪ್ರಿಯನಾದ ಉದ್ಧವನೇ, ಸಾಧಕರು ಅಜ, ಅವ್ಯಯ ಹಾಗೂ ಆನಂದರೂಪ ಪೂರ್ಣ ಬ್ರಹ್ಮರಾಗುವರು. ಇದೇ ಜ್ಞಾನದ ಫಲವೆಂದು ನೀನು ನಿಶ್ಚಯವಾಗಿ ತಿಳಿ ।೨೬೧।। ಈ ಯಾವ ಜ್ಞಾನದ ಫಲವು ಒಮ್ಮೆ ಕೈಗೆ ಸಿಗಲು ಆಗ ಉತ್ಪತ್ತೀ, ಸ್ಥಿತೀ ಮತ್ತು ಪ್ರಳಯವಾದರೂ ಕೂಡ ಆತ್ಮಸ್ವರೂಪವು ಅಖಂಡ ಹಾಗೂ ಪರಿಪೂರ್ಣವಾಗಿ ಇರುವುದು. ಇದನ್ನೇ ಈಗ ಶ್ರೀಹರಿಯು ದೃಷ್ಟಾಂತಪೂರ್ವಕವಾಗಿ ಹೇಳುತ್ತಿರುವನು ।೨೬೨।।

ಕಿರೀಟ, ಕುಂಡಲಗಳು, ಕೈಗಳಲ್ಲಿನ ಬಳೆಗಳು ಹೀಗೆ ಆಲಂಕಾರಗಳನ್ನು ಸಿದ್ಧಗೊಳಿಸುವ ಪೂರ್ವದಲ್ಲಿ ಬಂಗಾರವು ಬಂಗಾರವಾಗಿಯೇ ಇರುವುದು. ಆ ಬಂಗಾರದ ಅನೇಕ ಪ್ರಕಾರದ ಅಲಂಕಾರಗಳನ್ನು ತಯಾರಿಸಿದಾಗಲೂ ಕೂಡ ಆ ಬಂಗಾರದಲ್ಲಿ ಯಾವ ಬದಲಾವಣೆಯಾಗುವುದಿಲ್ಲ ।೨೬೩।। ಪುನ: ಅಲಂಕಾರಗಳನ್ನು ಕರಗಿಸಲು ಆಗ ಬಂಗಾರವು ಪೂರ್ವದಂತೆಯೇ ಇರುವುದು. ಅದರಂತೆ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವುಗಳಾದರೂ ಕೂಡ ನನ್ನಸ್ವರೂಪವು ಬ್ರಹ್ಮರೂಪದಿಂದ ಅವಿನಾಶಿಯಾಗಿರುವುದು ।೨೬೪।। ನನ್ನ ಸ್ವರೂಪವು ಶುದ್ಧವಾದ ಪರಬ್ರಹ್ಮವಾಗಿರುವುದು. ಅದರಲ್ಲಿ ನಾನಾ ಪ್ರಕಾರಗಳ ರೂಪಗಳು ಹಾಗೂ ನಾಮಗಳು ಭಾಸಿಸುತ್ತ ಯಾವ ಈ ಜಗತ್ತು ವಿಷಮವಾಗಿ ಕಂಡರೂ ಕೂಡ ಬ್ರಹ್ಮವು ಸರ್ವತ್ರವೂ ಸಮವಾಗಿಯೇ ಇರುವುದು ।೨೬೫।। ಸೂರ್ಯನ ಕಿರಣಗಳು ಯಾವ ಪ್ರಕಾರವಾಗಿ ಸೂರ್ಯನಿಂದ ಭಿನ್ನವಾಗಿರುವುದಿಲ್ಲವೋ, ಅದೇ ಪ್ರಕಾರವಾಗಿ ಈ ಜಗತ್ತು ನನ್ನಿಂದ ಭಿನ್ನವಾಗಿರುವುದಿಲ್ಲ ಇದೇ ನಿರೂಪಣೆಯನ್ನು ಮುರಲಿಮನೋಹರನಾದ ಭಗವಾನ ಶ್ರೀಕೃಷ್ಣನು ಈಗ ಹೇಳುತ್ತಿರುವನು ।೨೬೬।।

ಸತ್ವಗುಣದಿಂದ ಜಾಗೃತೀ, ರಜೋಗುಣದಿಂದ ಸ್ವಪ್ನ ಮತ್ತು ತಮೋಗುಣದಿಂದ ಗಾಢ, ಮೂಢವಾಗಿರುವ ಸುಷುಪ್ತೀ ಅವಸ್ಥೆಗಳು ಪ್ರಾಪ್ತವಾಗುವುವು. ಇದನ್ನು ನೀನು ತಿಳಿ ।೨೬೭।।

ಐಸೇ ತಿಹೀ ಅವಸ್ಥಾಯುಕ್ತ ಮನ । ಕಾರ್ಯ ಕರ್ತೃತ್ವ ಕಾರಣ । ತ್ರಿವಿಧ ಜಗ ಭಾಸೇ ಸಂಪೂರ್ಣ । ಬ್ರಹ್ಮ ಸಮನ್ವಯೇ ಜಾಣ ಸದೋದಿತ ।।೨೧೮।। ಮೃತ್ತಿಕೇವೇಗಳಾ ಘಟ ನ ದಿಸೇ । ತಂತೂವೇಗಳಾ ಪಟ ನ ಪ್ರಕಾಶೇ । ತೇವೀ ಮಜವೇಗಳೇ ಜಗ ನಸೇ । ಜೇ ಜೇ ಭಾಸೇ ತೇ ಮದ್ರೂಪ ।।೨೧೯।। ಜೋ ಮೀ ತಿನೀ ಗುಣಾಂತೇ ನಾತಳತಾ । ಅವಸ್ಥಾತ್ರಯಾತೇ ನಾಕಳತಾ। ತಿಂಹೀ ಅವಸ್ಥಾತೇ ಪ್ರಕಾಶಿತಾ । ತೋ ಮೀ ಚವಥಾ ಜಾಣ ''ತುರೀಯ'' ।।೨೨೦।। ತಿನ್ಹೀ ಅವಸ್ಥಾ ತಿನ್ಹೀ ಗುಣ । ದೃಶ್ಯ ದ್ರಷ್ಟಾ ಆಣಿ ದರ್ಶನ । ತ್ರಿಪುಟೀಪ್ರಕಾಶಿತಾ ಪೂರ್ಣ । ತೀ ಮೀ ಚವಥಾ ಜಾಣ ''ತುರೀಯ''।।೨೨೧।। ಜೋ ಮೀ ತುರೀಯ ಸಚ್ಚಿದ್‌ಘನ । ತ್ಯಾ ಮಾಝ್ಯಾ ಠಾಯೀ ಅವಸ್ಥಾಗುಣ । ನಭೀ ನೀಳಿಮಾ ಮಿಥ್ಯಾ ಭಾನ । ತೈಸೇ ನಸತೇ ಜಾಣ ಭಾಸತೀ ।।೨೨೨।। ।। ಆಶಂಕಾ।। ''ತಿಂಹೀ ಅವಸ್ಥಾಂಚೇ ಜ್ಞಾನ ಪಾಹೀ । ದೇಖಿಜೇ ಸಮಸ್ತಾಂಚ್ಯಾ ಠಾಯೀ । ಚವಥೇ ಜ್ಞಾನ ''ತುರೀಯ'' ಕಾಂಹೀ । ಐಕಿಲೇ ನಾಹೀ ಗೋವಿಂದಾ ''।।೨೨೩।। ಚೌಥೇ ಜ್ಞಾನ ತುರೀಯಾವಸ್ಥಾ । ಮಿಥ್ಯಾ ಮ್ಹಣಸೀ ನ ವಿಚಾರಿತಾ । ತೇಚಿವಿಖೀ ವಿಶದಾರ್ಥಾ । ಶ್ರೀಕೃಷ್ಣ ತತ್ತ್ವತಾ ಸಾಂಗತ ।।೨೨೪।।''ವ್ಯತಿರೇಕತಶ್ಚ'' ।। ದೇಹಾದಿಪ್ರಪಂಚ ವ್ಯತಿರೇಕತಾ । ಭೂತೀ ಭೂತಾಂಚಾ ಲಯೋ ಪಾಹತಾ । ಲೀನ ಝಾಲಿಯಾ ಗುಣಾವಸ್ಥಾ । ಉರೇ ಮೀ ಚವಥಾ ''ತುರೀಯ'' ।।೨೨೫।। ತೇ ಏವಂವಿಧ ಬೋಲೋ ಜಾತಾ । ವೇದಿ ಮೂಗ ಆರೋಗಿಲೇ ಸರ್ವಥಾ । ಹೇ ಅನುಭವೈಕವೇದ್ಯ ತತ್ತ್ವತಾ । ಶಬ್ದಪ್ರಗಲ್ಭತಾ ಸರೇನಾ ।।೨೨೬।। ಏಥ ನ ಚಲೇ ಯುಕ್ತಿಪ್ರಯುಕ್ತೀ । ನ ಚಲೇ ಜಾಣೆವೇಚೀ ವ್ಯುತ್ಪತ್ತೀ । ನ ಚಲೇ ಲಕ್ಷ್ಯಲಕ್ಷಣಸ್ಥಿತೀ । ಗುರುಕೃಪಾಪ್ರಾಪ್ತೀ ''ತುರೀಯ'' ।।೨೨೭।। ಜಾಗೃತ್ಯಾದಿ ಸರ್ವಹೀ ಸತ್ತಾ । ಸುಷುಪ್ತಿ ಸರ್ವಹೀ ಅಸತಾ । ಯಾಚಾ ''ತುರೀಯ'' ಮೀ ಪ್ರಕಾಶಿತಾ । ಮಜವಿಣ ಸರ್ವಥಾ ತ್ಯಾ ಭಾಸತೀ ಕೇವೀ ।।೨೨೮।। ಜೋ ಸುಷುಪ್ತೀ ಸಾಕ್ಷಿತ್ವ ಪಾವತಾ । ತೋ ಮೀ ''ತುರೀಯ'' ಜಾಣ ಪಾ ಚೌಥಾ । ತ್ಯಾ ಮಜ ಸತ್ಯಸ್ವರೂಪತಾ । ಕೇಲಾ ನಿಶ್ಚಿತಾರ್ಥಾ ನಿಶ್ಚಯೋ ವೇದೇ ।।೨೨೯।। ತ್ಯಾ ಸ್ವರೂಪಾವೇಗಳೇ ಏಥ । ಜೇ ಭಾಸೇ ತೇ ಮಿಥ್ಯಾಭೂತ । ತೇಚಿ ಅರ್ಥೀ ಶ್ರೀಕೃಷ್ಣನಾಥ । ಅಸೇ ಸಾಂಗತ ನಿಜಬೋಧೇ ।।೨೩೦।।

ಈ ಪ್ರಕಾರವಾಗಿ ಮನವು ಮೂರು ಅವಸ್ಥೆಗಳಿಂದ ಯುಕ್ತವಾಗಿರುವುದು. ಕಾರ್ಯ, ಕರ್ತೃತ್ವ ಮತ್ತು ಕಾರಣ ಇವು ಮೂರು ಪ್ರಕಾರಗಳ ಜಗತ್ತಾಗಿರುವುದು. ಆದರೆ ಬ್ರಹ್ಮವು ಇದು ಯಾವಾಗಲೂ ಸರ್ವತ್ರವೂ ಸಮಪ್ರಮಾಣದಲ್ಲಿರುವುದು ।೨೧೮।। ಮಣ್ಣಿಲ್ಲದೇ ಮಡಿಕೆಯು ಕಾಣುವುದಿಲ್ಲ. ನೂಲಿಲ್ಲದೇ ವಸ್ತ್ರವು ತೋರುವುದಿಲ್ಲ. ಅದರಂತೆ ಜಗತ್ತು ಇದು ನನ್ನನ್ನು ಬಿಟ್ಟು ಭಿನ್ನವಿಲ್ಲ. ಭಾಸವಾಗುವ ಎಲ್ಲವೂ ನನ್ನ ಸ್ವರೂಪವೇ ಆಗಿರುವುದು ।೨೧೯।। ಯಾವ ನಾನು ಈ ಮೂರೂ ಗುಣಗಳಿಗೆ ಸ್ಪರ್ಶವನ್ನು ಮಾಡಲಾರದವನು, ಮೂರೂ ಅವಸ್ಥೆಗಳಲ್ಲಿ ಸಿಕ್ಕಿಕೊಳ್ಳದೇ ಇರುವವನು, ಹಾಗೆಯೇ ಮೂರೂ ಅವಸ್ಥೆಗಳಿಗೆ ಪ್ರಕಾಶಿತ ಮಾಡುವವನು, ಹೀಗೆ ನಾನು ನಾಲ್ಕನೆಯ ತುರೀಯನಾಗಿರುವೆನು ।೨೨೦।। ಮೂರೂ ಅವಸ್ಥೆಗಳು, ಮೂರೂ ಗುಣಗಳು, ದೃಶ್ಯ, ದೃಷ್ಟಾ ಮತ್ತು ದರ್ಶನ ಈ ತ್ರಿಪುಟಿಯನ್ನು ಪೂರ್ಣವಾಗಿ ಪ್ರಕಾಶಿತವನ್ನಾಗಿ ಮಾಡುವ ನಾನು ನಾಲ್ಕನೆಯ ''ತುರೀಯ''ನಾಗಿರುವೆನೆಂದು ತಿಳಿ ।೨೨೧।। ಹೀಗಿರುವ ಯಾವ ನಾನು ಸತ್‌ಚಿದ್‌ಘನನು, ಈ ಯಾವ ನನ್ನಲ್ಲಿ ಗುಣ ಅವಸ್ಥೆಗಳು ಇಲ್ಲದಿದ್ದರೂ ಕೂಡ, ಆಕಾಶದಲ್ಲಿ ಯಾವ ಪ್ರಕಾರವಾಗಿ ನೀಲವರ್ಣವು ಭಾಸವಾಗುತ್ತಿರುವುದೋ, ಅದರಂತೆ ನಾನು ಭಾಸಿಸುವೆನು ।೨೨೨।। ಹೇ ಗೋವಿಂದನೇ, ಜಾಗೃತೀ ಆದಿಯಾಗಿ ಮೂರೂ ಅವಸ್ಥೆಗಳಲ್ಲಿ ಜ್ಞಾನವು ಸರ್ವದರಲ್ಲಿಯೂ ಇರುವುದು ಕಾಣುವುದು. ಆದರೆ ನಾಲ್ಕನೆಯದಾದ ''ತುರೀಯ'' ಜ್ಞಾನವು ನನಗೆ ಕೇಳಲಿಕ್ಕೆ ದೊರಕಿರುವುದಿಲ್ಲ ।೨೨೩।। ಈ ಪ್ರಶ್ನೆಗೆ ಉತ್ತರಿಸುತ್ತ ಶ್ರೀಕೃಷ್ಣನು ಹೇಳಿದನು; ನಾಲ್ಕನೆಯ ಅವಸ್ಥೆಯ ತುರೀಯ ಜ್ಞಾನವು ಮಿಥ್ಯೆ ಎಂದು ನೀನು ವಿಚಾರ ಮಾಡದೇ ಹೇಳಿದರೆ, ಅದಕ್ಕಾಗಿ ಸ್ಪಷ್ಟವಾದ ಅರ್ಥವನ್ನು ಹೇಳುವೆನು, ಅದಕ್ಕಾಗಿ ಕೇಳು ।೨೨೪।। ದೇಹಾದಿಕ ಪ್ರಪಂಚದ ವ್ಯತಿರೇಕ ಅರ್ಥಾತ ಭೂತಗಳಲ್ಲಿಯೇ ಆಗುವ ಭೂತಗಳ ಲಯವನ್ನು ನೋಡಿದರೆ ಗುಣಾವಸ್ಥೆಗಳೂ ಕೂಡ ಅವುಗಳಲ್ಲಿಯೇ ಲಯವಾಗಿ ನಾಲ್ಕನೇಯದಾದ ನಾನು ''ತುರೀಯ''ನು ಉಳಿದುಕೊಂಡೇ ಇರುವೆನು ।೨೨೫।। ಈ ವಿಷಯಕ್ಕಾಗಿ ಹೇಳಲು ಹೋಗಿ ವೇದವು ಮೌನವಾಗಿಬಿಟ್ಟಿತು. ಇದು ನಿಜವಾಗಿಯೂ ಅನುಭವದಿಂದ ಮಾತ್ರ ತಿಳಿಯಬೇಕಾಗಿರುವುದು. ಶಬ್ದ ಪಾಂಡಿತ್ಯದ ಉಪಯೋಗವು ಇಲ್ಲಿ ಏನೂ ನಡೆಯುವುದಿಲ್ಲ ।೨೨೬।। ಇಲ್ಲಿ ಯುಕ್ತಿ ಪ್ರಯುಕ್ತಿಗಳ ಯಾವ ಉಪಯೋಗವು ಆಗುವುದಿಲ್ಲ. ನಾನು ತಿಳಿದಿರುವೆನೆಂಬ ವ್ಯುತ್ಪತ್ತಿಯು ಅಥವಾ ಲಕ್ಷ್ಯ ಲಕ್ಷಣ ಸ್ಥಿತಿಗಳೂ ಕೂಡ ನಡೆಯುವುದಿಲ್ಲ. ಸದ್ಗುರುಗಳ ಕೃಪೆಯಿಂದ ಮಾತ್ರ ತುರೀಯ ಅವಸ್ಥೆಯು ಪ್ರಾಪ್ತವಾಗುವುದು ।೨೨೭।। ಜಾಗೃತಾದಿ ಸರ್ವ ಸತ್ತೆಯಲ್ಲಿ ಅಥವಾ ಸುಷುಪ್ತೀ ಅವಸ್ಥೆ ಇದ್ದಾಗ, ಅವರಿಗೆ ತುರೀಯನಾದ ನಾನು ಪ್ರಕಾಶಿತಗೊಳಿಸುತ್ತಿರುವೆನು. ನನ್ನ ಹೊರತಾಗಿ ಭಾಸವಾಗುವ ಮಾತೇ ಇಲ್ಲ ।೨೨೮।। ಯಾವ ಸುಷುಪ್ತಿಯಲ್ಲಿ ಸಾಕ್ಷಿರೂಪದಿಂದಿರುವ ನಾಲ್ಕನೆಯ ತುರೀಯನು ನಾನಾಗಿರುವೆನು. ಇದನ್ನು ನೀನು ತಿಳಿ. ಇದೇ ನನ್ನ ಸತ್ಯಸ್ವರೂಪವಾಗಿರುವುದು. ಹೀಗೆ ವೇದಗಳು ನಿಶ್ಚಯಮಾಡಿರುವುವು ।೨೨೯।। ಈ ಸ್ವರೂಪದ ಹೊರತಾಗಿ ಇಲ್ಲಿ ಯಾವ ಯಾವುದು ಭಾಸವಾಗುವುವೋ, ಅವುಗಳೆಲ್ಲವೂ ಮಿಥ್ಯೆಯಾಗಿರುವುವು. ಇದೇ ವಿಷಯವನ್ನು ಕುರಿತು ಈಗ ಶ್ರೀಕೃಷ್ಣನು ಆತ್ಮಜ್ಞಾನದ ನಿರೂಪಣೆಯನ್ನು ಹೇಳುತ್ತಿರುವನು ।೨೩೦।।

ನ ಯತ್ಪುರಸ್ತಾದುತ ಯನ್ನ ಪಶಸ್ಚಾನ್ಮಧ್ಯೇ ಚ ತತ್ತದ್ವ್ಯಪದೇಶಮಾತ್ರಮ್ ।
ಭೂತಂ ಪ್ರಸಿದ್ಧಂ ಚ ಪರೇಣ ಯದ್ಯತ್ತದೇವ ತತ್ಸ್ಯಾದಿತಿ ಮೇ ಮನೀಷಾ ।೨೧॥

ಅರ್ಥ:- ಯಾವುದು ಉತ್ಪತ್ತಿ ಪೂರ್ವದಲ್ಲಿ ಇದ್ದಿಲ್ಲ, ಪ್ರಳಯದ ನಂತರ ಇರುವುದಿಲ್ಲ. ಅಂದಮೇಲೆ ಅದು ಮಧ್ಯದಲ್ಲಿಯೂ ಇಲ್ಲವೆಂದು ತಿಳಿಯಬೇಕು. ಕೇವಲ ಕಲ್ಪನಾಮಾತ್ರ, ನಾಮಮಾತ್ರ ಇರುವುದು. ಯಾವ ಪದಾರ್ಥವು ಯಾವುದರಿಂದ ಸಿದ್ಧಗೊಳ್ಳುವುದೋ ಮತ್ತು ಯಾರ ಮುಖಾಂತರವಾಗಿ ಪ್ರಕಾಶಿತವಾಗುವುದೋ, ಅದು ಅದರ ವಾಸ್ತವಿಕ ಸ್ವರೂಪವಾಗಿದೆ, ಇದು ನಿಶ್ಚಯಾತ್ಮಕ ಸತ್ಯವಾಗಿದೆ. ಅದು ಅದರ ಪಾರಮಾರ್ಥಿಕ ಸತ್ತೆಯಾಗಿರುವುದು ಇದು ನನ್ನ ದೃಢ ನಿಶ್ಚಯವು.

ಜಾಗೃತೀಮಾಜೀ ಜೇ ಜೇ ದಿಸೇ। ತೇ ತೇ ಜಾಗೃತೀ ಸವೇ ನಾಸೇ । ಸ್ವಪ್ನೀ ಜೇಜೇ ಆಭಾಸೇ। ತೇ ಸ್ವಪ್ನಾಸರಿಸೇ ಮಾವಳೇ ।೮೮೧॥ ಜಾಗೃತೀ ಸ್ವಪ್ನ ನಿಜಕಾರ್ಯೆಸೀ । ದೋನೀ ಹಾರಪತೀ ಸುಷುಪ್ತೀಪಾಶೀ । ಸುಷುಪ್ತಿ ಹಾರಪೇ ಜಾಗೃತೀಸೀ। ಯಾಪರೀ ಪ್ರಪಂಚಾಸೀ ಸತ್ಯತ್ವ ನಾಹೀ।೮೮೨॥ ಪ್ರಪಂಚ ಸೃಷ್ಟೀಪೂರ್ವೀ ನಾಹೀ । ಪ್ರಳಯಾನಂತರ ನುರೇಚಿ ಕಾಂಹೀ । ಮಧ್ಯೇಚಿ ಆಭಾಸೇ ಜೇ ಕಾಹೀ । ತೇ ಮಿಥ್ಯಾ ಪಾಹೀ ಅಸಂತ ।೮೮೩॥ ಪ್ರಪಂಚಾಚೇ ವೋಡಂಬರ । ನಾಮರೂಪಾಚೇ ಉಭಾರೀ ಭಾರ । ತೇ ಪ್ರತ್ಯಕ್ಷ ದೇಖೋ ನಶ್ವರ । ಗಂಧರ್ವನಗರ ತತ್ಪ್ರಾಯ ।೮೮೪॥ ಪಿತ್ಯಾದೇಖತಾ ಪುತ್ರ ಮರೇ । ಪುತ್ರಾದೇಖತಾ ಪಿತಾ ಝುರೇ । ಕಾಳೇ ಕಾಳ ಅವಘೇಚಿ ಸರೇ। ಕೋಣೇಹೀ ನುರೇ ಕ್ರಿಯೇಸೀ।೮೮೫॥ ಸಾಗರೀ ಜೇ ಲಹರೀ ಉಸಾಸೇ। ಉಸಾಸಲೀ ತೇ ಸ್ವಯೇಚಿ ನಾಸೇ । ತೇವೀ ನಾಮರೂಪಾ ಆಲೇ ದಿಸೇ । ತೇ ಅನಾಯಾಸೇ ನಶ್ವರ ।೮೮೬॥ ಪ್ರಪಂಚ ಹೇ ನಾಮಮಾತ್ರ । ಯೇರವೀ ಪರಮಾತ್ಮಾ ಮೀ ಸ್ವತಂತ್ರ। ಏವಂ ಸಂಸಾರಾಚೇ ಜನ್ಮಪತ್ರ । ನೇಣೋನಿ ದುಸ್ತರ ಮಾನಿತೀ ಜೀವ।೮೮೭॥ ಪ್ರಪಂಚ ಜ್ಯಾಪಾಸೂನಿ ಝಾಲಾ । ಜೇಣೇ ಸರ್ವಾರ್ಥೀ ಪ್ರಕಾಶಿಲಾ। ಅಂತೀ ಜ್ಯಾಮಾಜೀ ಸಾಮಾವಲಾ। ತೋ ತದ್ರೂಪ ಸಂಚಲಾ ನಿಜಾತ್ಮಾ।೮೮೮॥ ಶುಕ್ತಿಕಾರಜತನ್ಯಾಯೇ ಜಾಣ। ಪ್ರಪಂಚ ಬ್ರಹ್ಮೇಸೀ ಅಭಿನ್ನ । ಜೇ ಪ್ರಪಂಚಾಚೇ ಸ್ಫುರೇ ಸ್ಫುರಣ। ತೇ ಬ್ರಹ್ಮಚಿ ಪೂರ್ಣ ಉದ್ಧವಾ।೮೮೯॥ ತ್ಯಾ ಮಾಝೇನಿ ಸತ್ಯ ಶ್ರುತಿಸ್ಮೃತೀ। ತೋ ಮೀ ಸತ್ಯಪ್ರತಿಜ್ಞ ಶ್ರೀಪತೀ। ತ್ರಿಸತ್ಯ ಸತ್ಯ ತುಜಪ್ರತೀ। ಸಾಂಗಿತಲಾ ನಿಶ್ಚಿತೀ ನಿಜಭಾವಾರ್ಥ।೮೯೦॥ ಐಕೋನ ದೇವಾಚೇ ವಚನ । ಉದ್ಧವ ಆಶಂಕೀ ಆಪಣ । ಏಕಾಚೇನಿ ಮತೇ ಜಾಣ । ಪ್ರಪಂಚ ಭಿನ್ನ ಮಾನಿತೀ ।೮೯೧॥ ಪ್ರಪಂಚಾಸೀ ದೇವೋ ಕಾಂಹೀ । ನಿಜಾಂಗೀ ಆತಳಲಾ ನಾಹೀ । ಐಸೇ ತೂ ಕಲ್ಪಿಸೀ ಕಾಂಹೀ । ಐಕ ತೇವಿಷಯೀ ಸಾಂಗೇನ।೮೯೨॥

ಜಾಗೃತಿಯಲ್ಲಿ ಯಾವ ಯಾವುದು ತೋರುತ್ತಿರುವುವೋ, ಅವುಗಳೆಲ್ಲವೂ ಜಾಗೃತಿಯ ಜೊತೆಯಲ್ಲಿಯೇ ನಾಶವಾಗುತ್ತಿರುವುವು. ಸ್ವಪ್ನದಲ್ಲಿ ಯಾವುಗಳ ಭಾಸವಾಗುತ್ತಿರುವುದೋ, ಅವೆಲ್ಲವೂ ಕೂಡ ಸ್ವಪ್ನದ ಜೊತೆಯಲ್ಲಿಯೇ ಮುಳುಗಿ ಹೋಗುವುವು ।೮೮೧॥ ಜಾಗೃತೀ ಮತ್ತು ಸ್ವಪ್ನ ಇವು ತಮ್ಮ ತಮ್ಮ ಕಾರ್ಯಗಳೊಂದಿಗೆ ಸುಷುಪ್ತಿಯಲ್ಲಿ ಲಯಗೊಳ್ಳುವುವು. ಹಾಗೆಯೇ ಸುಷುಪ್ತಿಯೂ ಸಹ ಜಾಗೃತಿಯಲ್ಲಿ ಇಲ್ಲದಾಗುವುದು. ಈ ಪ್ರಕಾರವಾಗಿ ಪ್ರಪಂಚಕ್ಕೆ ಸತ್ಯತ್ವ ಎಂಬುವುದು ಇಲ್ಲವೇ ಇಲ್ಲ ।೮೮೨॥ ಪ್ರಪಂಚವು ಇದು ಸೃಷ್ಟಿಯ ಪೂರ್ವದಲ್ಲಿ ಇದ್ದಿಲ್ಲ. ಮತ್ತು ಪ್ರಳಯಕಾಲದ ನಂತರವೂ ಇರುವುದಿಲ್ಲ. ಮಧ್ಯದಲ್ಲಿ ಮಾತ್ರ ತೋರುತ್ತಿರುವುದು ಅದು ಮಾಯಿಕವಾಗಿ ಮಿಥ್ಯಾಸ್ವರೂಪವಾಗಿದೆ ಎಂದು ತಿಳಿಯಬೇಕು ।೮೮೩॥ ಪ್ರಪಂಚದ ಆಡಂಬರವು ಈ ಯಾವ ನಾಮರೂಪಗಳ ರಾಶಿಯನ್ನೇ ನಿರ್ಮಾಣ ಮಾಡುತ್ತಿರುವುದು. ಅದು ಆಕಾಶದಲ್ಲಿನ ಗಂಧರ್ವನಗರದಂತೆ ನಶ್ವರವಾಗಿರುವುದನ್ನು ತಾನೇ ಪ್ರತ್ಯಕ್ಷವಾಗಿ ತೋರುತ್ತಿರುವುದು ।೮೮೪॥ ತಂದೆಯು ನೋಡು ನೋಡುತ್ತಿದ್ದಂತೆಯೇ ಮಗನಮರಣವಾಗುವುದು. ಮಕ್ಕಳು ನೋಡುತ್ತಿದ್ದಂತೆಯೇ ತಂದೆಯು ಸೊರಗಿ ಸೊರಗಿ ಕಡ್ಡಿಯಾಗಿ ಹೋಗುವನು.ಕಾಲಾಂತರದಲ್ಲಿ ಸರ್ವವೂ ಇಲ್ಲದಾಗಿ ಬಿಡುವುವು. ಕ್ರಿಯಾ ಕರ್ಮಗಳನ್ನು ಮಾಡಲೂ ಕೂಡ ಯಾರೂ ಉಳಿದುಕೊಳ್ಳುವುದಿಲ್ಲ ।೮೮೫॥ ಸಮುದ್ರದಲ್ಲಿ ಭಾರೀ ತೆರೆಗಳು ಹುಟ್ಟುತ್ತಿರುವುವು. ಅವು ಕೂಡಲೇ ನಾಶವಾಗುತ್ತಿರುವುವು. ಅದರಂತೆ ನಾಮರೂಪಕ್ಕೆ ಬಂದಂತೆ ತೋರುತ್ತ ಅವು ಸಹಜವಾಗಿಯೇ ನಷ್ಟವಾಗಿ ಬಿಡುವುವು ।೮೮೬॥ ಪ್ರಪಂಚವು ಇದು ಹೆಸರಿಗೆ ಮಾತ್ರ ಇರುವುದು. ಇದರ ಹೊರತಾದ ಪರಮಾತ್ಮನಾದ ನಾನು ಮಾತ್ರ ಸ್ವತಂತ್ರವಾಗಿರುವೆನು. ಈ ಪ್ರಕಾರದ ಸಂಸಾರದ ಜನ್ಮಪತ್ರಿಕೆವಿರುವುದು. ಆದರೆ ಇದನ್ನು ತಿಳಿಯದೇ ಜೀವವು ಸಂಸಾರಕ್ಕೆ ಅದು ದುಸ್ತರವಾಗಿದೆ ಎಂದು ಹೀಗೆ ತಿಳಿದುಕೊಳ್ಳುವುದು ।೮೮೭॥ ಯಾವುದರಿಂದ ಈ ಪ್ರಪಂಚವು ಆಗಿರುವುದೋ, ಯಾವುದು ಇದನ್ನು ಪ್ರಕಾಶಗೊಳಿಸಿರುವುದೋ, ಕೊನೆಯಲ್ಲಿ ಪ್ರಪಂಚವು ಯಾವುದರಲ್ಲಿ ಲೀನವಾಗುವುದೋ, ಆ ಆತ್ಮವು ತನ್ನ ಸ್ವರೂಪದಲ್ಲಿಯೇ ಸ್ಥಿರವಾಗಿ ಇರುವುದು ।೮೮೮॥ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯ ಭಾಸವಾಗುವುದು. ಆದರೆ ಅದು ಕಪ್ಪೆಚಿಪ್ಪಾಗಿಯೇ ಇರುವುದು. ಈ ನ್ಯಾಯದಂತೆ ಪ್ರಪಂಚವು ಬ್ರಹ್ಮನಿಂದ ಅಭಿನ್ನವಾಗಿರುವುದು. ಹೇ ಉದ್ಧವಾ, ಪ್ರಪಂಚದ ಯಾವ ಸ್ಫುರಣವಾಗುವುದೋ ಅದೂ ಕೂಡ ಬ್ರಹ್ಮರೂಪವೇ ಆಗಿರುವುದು ।೮೮೯॥ ನನ್ನಿಂದಲೇ ಯಾವ ಶ್ರುತಿ-ಸ್ಮೃತಿಗಳಿಗೆ ಸತ್ಯತ್ವವು ಬಂದಿರುವುದೋ, ಆ ಯಾವ ನಾನು ಸತ್ಯಪ್ರತಿಜ್ಞ ಶ್ರೀಕೃಷ್ಣನು ನಿನಗೆ ಅದರಲ್ಲಿನ ನಿಜ ಭಾವಾರ್ಥವನ್ನು ಹೇಳಿರುವೆನು ।೮೯೦॥ ಈ ಯಾವ ದೇವನ ವಿಚಾರವನ್ನು ಕೇಳಿ ಉದ್ಧವನ ಮನದಲ್ಲಿ ಅನುಮಾನವು ಉಂಟಾಯಿತು. ಜನರು ಈ ಪ್ರಪಂಚವು ಬ್ರಹ್ಮನಿಂದ ಭಿನ್ನವಾಗಿದೆ ಎಂದು ತಿಳಿಯುವರು ।೮೯೧॥ ಆದರೆ ದೇವನು ಪ್ರಪಂಚಕ್ಕೆ ಸ್ಪರ್ಶ ಕೂಡ ಮಾಡುವುದಿಲ್ಲ. ಹೀಗೆ ನಿನ್ನ ಮನದಲ್ಲಿ ಕಲ್ಪನೆ ಮೂಡಬಹುದು. ಈಗ ಇದೇ ವಿಷಯಕ್ಕಾಗಿ ಹೇಳುವೆನು, ಕೇಳು ।೮೯೨॥

ಅವಿದ್ಯಮಾನೋಽಪ್ಯವಭಾಸತೇ ಯೋ, ವೈಕಾರಿಕೋ ರಾಜಸಸರ್ಗ ಏಷಃ ।
ಬ್ರಹ್ಮ ಸ್ವಯಂಜ್ಯೋತಿರತೋ ವಿಭಾತಿ ಬ್ರಹ್ಮೇಂದ್ರಿಯಾರ್ಥಾತ್ಮವಿಕಾರಚಿತ್ರಮ್ ।೨೨॥

ಅರ್ಥ:- ಈ ಯಾವ ವಿಕಾರಮಯೀ ರಾಜಸ ಸೃಷ್ಟಿಯು ಇದು ಇಲ್ಲದಿದ್ದರೂ ತೋರುತ್ತಿರುವುದು. ಬ್ರಹ್ಮವು ಇದು ಸ್ವಯಂ ಪ್ರಕಾಶವಾಗಿರುವುದು. ಆದ್ದರಿಂದ ಇಂದ್ರಿಯ, ವಿಷಯ, ಮನಸ್ಸು ಮತ್ತು ಪಂಚಭೂತಾದಿ ಹೀಗೆ ಇರುವ ಎಲ್ಲ ಚಿತ್ರವಿಚಿತ್ರ ನಾಮರೂಪಗಳು ಇದ್ದ ರೂಪದಿಂದ ಬ್ರಹ್ಮವೂ ಕೂಡ ಪ್ರತೀತವಾಗುವುದು.

ಮುಖ್ಯತ್ವೇ ಮನ ವಿಕಾರೀ ಪೂರ್ಣ । ತ್ಯಾಸೀ ಮಿಳೂನಿ ತಿನೀ ಗುಣ । ನಸತಾಚಿ ಸಂಸಾರ ಜಾಣ । ವಿಚಿತ್ರಾಭರಣ ದಾಖವೀ ।೯೩॥ ಮನ ಬುದ್ಧಿ ಚಿತ್ತ ಅಹಂಕಾರ । ಆಣಿ ಅದಿಷ್ಠಾತೇ ಸುರವರ । ಹೇ ಸತ್ತ್ವಗುಣಾಚೇ ವಿಕಾರ । ಜಾಣ ಸಾಚಾರ ಉದ್ಧವಾ ।೯೪॥ ರಜೋಗುಣಾಚೇ ದಶೇಂದ್ರಿಯೇ । ಪಂಚಭೂತೇ ಪಂಚವಿಷಯೇ । ತಮೋಗುಣಿಯಾ ಜನ್ಮ ಹೋಯೇ । ತೇ ಜನಾಸೀ ಪಾಹೇ ಭುಲವಿತೀ ।೯೫॥ ಜೇವೀ ವೋಡಂಬರಿಯಾಚಾ ಖೇಳ । ನಸತಾಚಿ ಭಾಸೇ ಪ್ರಬಳ । ತೇವೀ ತ್ರಿಗುಣಾಂಚೇ ವಿಚಿತ್ರ ಜಾಳ । ಮಿಥ್ಯಾ ನಿರ್ಮೂಳ ಆಭಾಸೇ ।೯೬॥ ಬ್ರಹ್ಮ ಸ್ವಯೇ ಅಕಾರಣ । ಸ್ವಪ್ನಪ್ರಕಾಶೇ ಪ್ರಕಾಶಮಾನ । ತೇಚಿ ಪ್ರಪಂಚಾಚೇ ಮಹಾಕಾರಣ । ಪ್ರಕಾಶಕ ಜಾಣ ಸ್ವಯೇ ಝಾಲೇ ।೯೭॥ ಜೇವೀ ಛಾಯಾ ಮಂಡಪೀಂಚ್ಯಾ ನಾನಾ ವ್ಯಕ್ತೀ । ತದ್ರೂಪ ಭಾಸೇ ದೀಪದೀಪ್ತೀ । ತೇವೀ ಜಗದಾಕಾರೇ ಸ್ವಯಂ ಜ್ಯೋತೀ । ಭಾಸೇ ಮೀ ಚಿನ್ಮೂರ್ತಿ ಪರಮಾತ್ಮಾ ।೯೮॥ ಏವಂ ಪ್ರಪಂಚಾಚೇ ಜೇ ಸ್ಫುರಣ । ತೇ ಸ್ವಪ್ರಕಾಶ ಬ್ರಹ್ಮ ಪೂರ್ಣ । ಹೇ ಹಾತವಸೂನಿ ಬ್ರಹ್ಮಜ್ಞಾನ । ವಿಕಲ್ಪಭೇದನ ಹರಿ ಸಾಂಗೇ ।೯೯॥

ಏವಂ ಸ್ಫುಟಂ ಬ್ರಹ್ಮವಿವೇಕಹೇತುಭಿಃ ಪರಾಪವಾದೇನ ವಿಶಾರದೇನ ।
ಛಿತ್ತ್ವಾಽಽತ್ಮಸಂದೇಹ ಮುಪಾರಮೇತ ಸ್ವಾನಂದತುಷ್ಟೋಽಖಿಲಕಾಮುಕೇಭ್ಯಃ ।೨೩॥

ಅರ್ಥ:- ಬ್ರಹ್ಮವು ವಿಚಾರದ ಸಾಧನವಾಗಿದೆ. ಶ್ರವಣ, ಮನನ, ನಿಧಿಧ್ಯಾಸ ಮತ್ತು ಸ್ವಾನುಭೂತಿ, ಇವುಗಳಲ್ಲಿ ಆತ್ಮಜ್ಞಾನಿಯು ಗುರುದೇವರ ಸಹಾಯವನ್ನು ಪಡೆಯಬೇಕು. ವಿವೇಕದಿಂದ ಸ್ಪಷ್ಟವಾಗಿ ದೇಹಾದಿ ಅನಿತ್ಯ ಪದಾರ್ಥಗಳ ನಿಷೇಧವನ್ನು ಮಾಡಿ ಆತ್ಮವಿಷಯದ ಸಂದೇಹವನ್ನು ನಷ್ಟಗೊಳಿಸಿ, ಆನಂದರೂಪ ಆತ್ಮತತ್ವದಲ್ಲಿ ಮಗ್ನರಾಗಬೇಕು ಮತ್ತು ಸರ್ವ ಪ್ರಕಾರದ ವಿಷಯವಾಸನೆಗಳಿಂದ ಅಲಿಪ್ತರಾಗಿರಬೇಕು.

ಪೂರ್ವೀ ಬೋಲಿಲೋ ಯಥಾನಿಗುತೀ । ಬ್ರಹ್ಮಜ್ಞಾನ ನಾನಾಯುಕ್ತೀ । ತೇ ಕರತಲಾಮಲಕಸ್ಥಿತೀ । ಪ್ರಕಟ ಪ್ರತೀತೀ ಪ್ರಮಾಣ ।೧೦೦॥ ವೇದ - ವಿವೇಕ - ಅನುಮಾನ । ಬ್ರಹ್ಮ ಉಪದೇಶಾಚೇ ಲಕ್ಷಣ । ಜ್ಞಾನಾಜ್ಞಾನಾಚೇ ಫಳ ಪೂರ್ಣ । ತುಜ ಮ್ಯಾ ಸಂಪೂರ್ಣ ಸಾಂಗಿತಲೇ ।೧೦೧॥

ಮುಖ್ಯವಾಗಿ ಈ ಯಾವ ಮನವು ವಿಕಾರಿಯಾಗಿರುವುದು. ಇದು ಮೂರು ಗುಣಗಳೊಂದಿಗೆ ಕೂಡಿಕೊಂಡು ಇಲ್ಲದೇ ಇರುವ ಸಂಸಾರದ ಚಿತ್ರವಿಚಿತ್ರಸ್ಥಿತಿಗಳನ್ನು ತಿಳಿಸಿ ತೋರಿಸುತ್ತಿರುವುದು ।೯೩॥ ಹೇ ಉದ್ಧವಾ, ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ, ಹಾಗೆಯೇ ಅವುಗಳ ಅಧಿಷ್ಠಾತ್ರೀ ದೇವತೆಗಳು ಈ ಎಲ್ಲವೂ ಸತ್ವಗುಣದ ವಿಕಾರಗಳಾಗಿರುವುವು ।೯೪॥ ಹತ್ತು ಇಂದ್ರಿಯಗಳು ಇವು ರಜೋಗುಣದಿಂದ ಆಗಿರುವುವು. ಪಂಚಮಹಾಭೂತಗಳು, ಮತ್ತು ಐದು ವಿಷಯಗಳು ಇವು ತಮೋಗುಣದ ವಿಕಾರಗಳಾಗಿರುವುವು. ಈ ಎಲ್ಲವೂ ಕೂಡಿಕೊಂಡು ಜನರನ್ನು ಭುಲಾಯಿಸಿಬಿಡುವುವು ।೯೫॥ ಡೊಂಬರದ ಆಟವು ಮಿಥ್ಯೆಯಾಗಿದ್ದರೂ ಅದು ಸತ್ಯ ಎನ್ನುವಂತೆ ಭಾಸವಾಗುತ್ತಿರುವುದು. ಅದರಂತೆ ಈ ತ್ರಿಗುಣಗಳ ಜಾಲಗಳಾಗಿರುವುವು. ಇವು ಮಿಥ್ಯೆಯಾಗಿದ್ದು ಭಾಸಮಾನವಾಗಿರುವುವು ।೯೬॥ ಬ್ರಹ್ಮವು ಇದು ಸ್ವತಃ ಅಕಾರಣವಾಗಿರುವುದು. ಅದು ಸ್ವಯಂ ಪ್ರಕಾಶದಿಂದ ಪ್ರಕಾಶಿಸುತ್ತಿರುವುದು. ಇದು ಪ್ರಪಂಚದ ಮಹಾಕಾರಣವಾಗಿರುವುದು ಮತ್ತು ಸ್ವತಃವೇ ಪ್ರಪಂಚದ ಪ್ರಕಾಶವೂ ಕೂಡ ಆಗಿರುವುದು ।೯೭॥ ಛಾಯಾಮಂಟಪದಲ್ಲಿನ ವಿವಿಧ ಪ್ರಕಾರಗಳ ಚಿತ್ರಗಳಂತೆ ದೀಪದ ಪ್ರಕಾಶವೂ ಸಹ ಇದ್ದ ಹಾಗೆ ಯಾವ ಪ್ರಕಾರವಾಗಿ ಭಾಸವಾಗುವುದೋ ಅದರಂತೆ ಸ್ವಯಂ ಪ್ರಕಾಶ, ಚಿನ್ಮೂರ್ತೀ ಪರಮಾತ್ಮನಾದ ನಾನು ಜಗತ್ತಿನ ಆಕಾರದಿಂದ ಭಾಸಮಾನನಾಗುತ್ತಿರುವೆನು ।೯೮॥ ತಾತ್ಪರ್ಯವೇನೆಂದರೆ, ಪ್ರಪಂಚದ ಯಾವ ಸ್ಫುರಣೆಯು ಅದು ಸ್ವಯಂ ಪ್ರಕಾಶ ಪೂರ್ಣ ಬ್ರಹ್ಮವೇ ಆಗಿರುವುದು. ಈ ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಂಡು ವಿಕಲ್ಪದ ಭೇದವನ್ನು ಹೇಗೆ ಮಾಡಬೇಕೆಂಬುವ ವಿಷಯವನ್ನು ಕುರಿತು ಶ್ರೀಹರಿಯು ಹೇಳುತ್ತಿರುವನು ।೯೯॥

ನಾನಾ ಪ್ರಕಾರದ ಯುಕ್ತಿಗಳಿಂದ ಬ್ರಹ್ಮಜ್ಞಾನವನ್ನು ಹೇಗೆ ಪ್ರಾಪ್ತಮಾಡಿಕೊಳ್ಳಬೇಕೆಂಬುವುದನ್ನು ಹೇಳಿ ಕರತಲಾಮಲಕದಂತೆ ಸ್ಪಷ್ಟ ಮಾಡಿ ತೋರಿಸಿರುವೆನು ।೧೦೦॥ ವೇದಗಳಲ್ಲಿನ ವಿಚಾರಗಳು, ಅನುಮಾನ, ಬ್ರಹ್ಮೋಪದೇಶದ ಲಕ್ಷಣ ಮತ್ತು ಜ್ಞಾನ-ಅಜ್ಞಾನಗಳ ಫಲ ಇವುಗಳನ್ನು ನಾನು ನಿನಗೆ ವಿಸ್ತಾರಪೂರ್ವಕವಾಗಿ ಹೇಳಿರುವೆನು ।೧೦೧॥

ತೇಥೇ ದೇಹೇಂದ್ರಿಯಾಂಚೇ ಮಿಥ್ಯಾಪಣ । ದೇಹಾತ್ಮ ಭಾವಾಚೇ ನಿರಾಕರಣ । ಬ್ರಹ್ಮ ಅದ್ವಯತ್ವೇ ಪರಿಪೂರ್ಣ । ತೇಹೀ ಗುಹ್ಯ ಜ್ಞಾನ ಪ್ರಕಾಶಿಲೇ ॥೬೦೨॥ ಮ್ಯಾ ಪ್ರಕಾಶಿಲೇ ಪೂರ್ಣ ಜ್ಞಾನ । ಜೇ ದುರ್ಲಭ ದುರ್ಗಮ ದುಷ್ಪ್ರಾಪ್ಯ ಜಾಣ । ಹೇಚಿ ಸಿದ್ಧಾಂಚೇ ಸಮಾಧಾನ । ಹೇಚಿ ಸಾಧನ ಸಾಧಕಾ ॥೬೦೩॥ ಜೇ ಮ್ಯಾ ಸಾಂಗಿತಲೇ ಬ್ರಹ್ಮಜ್ಞಾನ । ಹೇಚಿ ಉಪದೇಶಶಸ್ತ್ರ ತೀಕ್ಷ್ಣ । ಸಾಧಕ ಸಾಧೂನಿಯಾ ಪೂರ್ಣ । ಸಂಶಯ ಜಾಣ ಭೇದಿತೀ ॥೬೦೪॥ ಮ್ಯಾ ಸಾಂಗಿತಲೇ ಬ್ರಹ್ಮಜ್ಞಾನ । ತೇಥ ಸಂದೇಹ ಮಾನೀ ಮನ । ತೇಣೇ ಸಂದೇಹೇಸೀ ದೇಹಾಭಿಮಾನ । ಯೇಣೇ ಶಸ್ತ್ರೇ ಜಾಣ ಭೇದಿತೀ ॥೬೦೫॥ ಯಾಪರೀ ಸಂದೇಹಚ್ಛೇದನ । ಕರೂನಿ ದ್ವೈತಾಚೀ ಬೋಳವಣ । ನಿರ್ದಾಳೂನಿಯಾ ಮೀತೂಂಪಣ । ಸ್ವಾನಂದೀ ನಿಮಗ್ನ ಸಾಧಕ ॥೬೦೬॥ ವರ್ಣಾಶ್ರಮ ಕುಳ ಜಾತೀ । ಜೀವಶಿವಾದಿ ಪದಸ್ಥಿತೀ । ಯಾಂಚೀ ಸ್ಫುರೇನಾ ಅಹಂಕೃತೀ । ಯಾ ನಾಂವ '' ಉಪರತಿ'' ಉದ್ಧವಾ ॥೬೦೭॥ ಇಹಾಮುತ್ರಾದಿ ಫಳೇ ಸಮಸ್ತೇ । ಕೋಣ ಕಾಮೀ ತ್ಯಾ ಕಾಮಾತೇ । ವಿಷಯ ವಿಷಯೀ ವಿಷಯಭೋಗಾತೇ । ಸರ್ವಥಾ ತೇಥೇ ಅಸೇನಾ ॥೬೦೮॥ ಯಾಪರೀ ನಿತ್ಯ ನಿಷ್ಕಾಮ । ಸಾಧಕ ಝಾಲೇ ''ಆತ್ಮಾರಾಮ''। ಪರಮಾನಂದೀ ನಿಮಗ್ನ ಪರಮ । ಪಾವಲೇ ''ಉಪರಮ'' ಯೇಣೇ ಯೋಗೇ ॥೬೦೯॥ ದೇಹೇಂದ್ರಿಯೇ ಅಸತಾ ಪ್ರಾಣ । ಕೈಸೇನಿ ಗೇಲಾ ದೇಹಾಭಿಮಾನ । ಉದ್ಧವಾ ಐಸೇ ಕಲ್ಪೀಲ ಮನ । ತೇಚಿ ನಿರೂಪಣ ಹರಿ ಸಾಂಗೇ ॥೬೧೦॥

ನಾತ್ಮಾ ವಪುಃ ಪಾರ್ಥಿವಮಿಂದ್ರಿಯಾಣಿ ದೇವಾ ಹ್ಯಸುರ್ವಾಯುರ್ಜಲಂ ಹುತಾಶಃ ।
ಮನೋಽನ್ನಮಾತ್ರಂ ಧಿಷಣಾ ಚ ಸತ್ತ್ವಮಹಂಕೃತಿಃ ಖಂ ಕ್ಷಿತಿರರ್ಥಸಾಮ್ಯಮ್ ॥೨೪॥

ಅರ್ಥ:-ಪೃಥ್ವಿಯ ವಿಕಾರವಾಗಿರುವುದರಿಂದ ಶರೀರವೆಂದರೆ ಆತ್ಮವಲ್ಲ. ಇಂದ್ರಿಯಗಳು, ಅದಿಷ್ಠಾನ ದೇವತೆಗಳು, ಪ್ರಾಣ, ವಾಯು, ಜಲ, ಅಗ್ನಿ ಮತ್ತು ಮನಸ್ಸು ಇವೂ ಕೂಡ ಆತ್ಮವಲ್ಲ. ಏಕೆಂದರೆ ಇವುಗಳ ಧಾರಣ ಪೋಷಣೆಗಳು ಶರೀರದಂತೆ ಅನ್ನದಿಂದ ಆಗುತ್ತಿರುವುವು. ಬುದ್ಧಿ, ಚಿತ್ತ, ಅಹಂಕಾರ, ಆಕಾಶ, ಪೃಥ್ವೀ, ಶಬ್ದಾದಿ ವಿಷಯಗಳು ಮತ್ತು ಗುಣಗಳ ಸಮ್ಯಾವಸ್ಥಾ ಪ್ರಕೃತೀ ಕೂಡ ಆತ್ಮವಲ್ಲ ಕಾರಣ ಇವು ಸಾರಾಸಗಟವಾಗಿ ಎಲ್ಲವೂ ದೃಶ್ಯ ಮತ್ತು ಜಡವಾಗಿರುವುವು.

ದೇಹ ಆತ್ಮಾ ನವ್ಹೇ ಪಾರ್ಥಿವಪಣೇ। ಇಂದ್ರಿಯೇ ಆತ್ಮಾ ನವ್ಹತೀ ಯೇಣೇ ಗುಣೇ। ತೀ ತಂವ ದೇಹಾಚೀ ಉಪಕರಣೇ । ಏಕದೇಶೀಪಣೇ ವ್ಯಾಪಾರ ॥೬೧೧॥ ಇಂದ್ರಿಯ ಅಧಿಷ್ಠಾತೇ ದೇವ । ತೇಹೀ ಆತ್ಮಾ ನವ್ಹತೀ ಸರ್ವ । ತ್ಯಾಂಸೀ ಇಂದ್ರಿಯಾಂಚಾ ಅಹಂಭಾವ । ಆತ್ಮಪದೀ ಠಾವ ತ್ಯಾ ಕೈಚಾ ॥೬೧೨॥ ದೇಹ ಚಾಳಿತಾ ಜೋ ಪ್ರಾಣ । ತೋಹೀ ಆತ್ಮಾ ನವ್ಹೇ ಜಾಣ । ಪ್ರಾಣ ಕೇವಳ ಅಜ್ಞಾನ । ಕರೀ ಗಮನಾಗಮನ ದೇಹವಶೇ।॥೬೧೩॥

ಅಲ್ಲಿಯೇ ದೇಹ ಇಂದ್ರಿಯಗಳ ಮಿಥ್ಯತ್ವ, ದೇಹಾತ್ಮಭಾವದ ನಿರಾಕರಣೆ ಮತ್ತು ಬ್ರಹ್ಮವು ಅದ್ವಿತೀಯವಾಗಿದ್ದು ಸರ್ವತ್ರ ಪರಿಪೂರ್ಣ ರೂಪದಿಂದ ಇರುವ ಗುಹ್ಯ ಜ್ಞಾನವನ್ನೂ ಸಹ ಪ್ರಕಟಿಸಿರುವೆನು ॥೬೦೨॥ ಯಾವುದು ಅತ್ಯಂತ ದುರ್ಲಭ, ದುರ್ಗಮ ಮತ್ತು ಪ್ರಾಪ್ತಮಾಡಿಕೊಳ್ಳಲು ಅತಿಶಯ ಕಠಿಣವಾಗಿರುವ ಪೂರ್ಣ ಜ್ಞಾನವನ್ನು ನಾನು ಪ್ರಕಟಮಾಡಿರುವೆನು. ಇದು ಸಿದ್ಧಪುರುಷರ ಸಮಾಧಾನ ಮತ್ತು ಸಾಧಕರ ಸಾಧನವಾಗಿರುವುದು ॥೬೦೩॥ ಈಗ ನಾನು ಹೇಳಿರುವ ಬ್ರಹ್ಮಜ್ಞಾನದ ಉಪದೇಶರೂಪ ತೀಕ್ಷ್ಣವಾದ ಶಸ್ತ್ರದಿಂದ ಸಾಧಕನು ಸಂಶಯವನ್ನು ಪರಿಪೂರ್ಣವಾಗಿ ಭೇದಿಸುವನು ॥೬೦೪॥ ನಾನು ಹೇಳಿರುವ ಬ್ರಹ್ಮಜ್ಞಾನ ಸಂಬಂಧವಾಗಿ ಮನದಲ್ಲಿ ಸಂಶಯವು ಬೆಳೆಯುತ್ತಿರುವುದು. ಈ ಸಂಶಯದಿಂದ ದೇಹದ ಅಭಿಮಾನವು ವೃದ್ಧಿಯಾಗುವುದು. ಇಂತಹ ಸಂದೇಹಯುಕ್ತ ದೇಹಾಭಿಮಾನವನ್ನು ಸಾಧಕನು ಈ ಶಸ್ತ್ರದಿಂದ ಭೇದಿಸಿ ಒಗೆಯುವನು ॥೬೦೫॥ ಈ ಪ್ರಕಾರವಾಗಿ ಸಂಶಯದ ಭೇದವನ್ನು ಮಾಡಿ ದ್ವೈತವನ್ನು ದೂರ ಓಡಿಸುವರು ಮತ್ತು ನಾನು ನೀನೆಂಬುವುದನ್ನು ಸಮೂಲವಾಗಿ ನಾಶ ಮಾಡಿ ಸ್ವಾನಂದದಲ್ಲಿ ನಿಮಗ್ನರಾಗುವರು ॥೬೦೬॥ ಹೇ ಉದ್ಧವಾ, ವರ್ಣಾಶ್ರಮ, ಕುಲಜಾತೀ, ಜೀವಶಿವಾದಿ ಅಧಿಕಾರ ಇವುಗಳ ಅಹಂಕಾರವು ಬಾರದಿರುವಿಕೆಗೆ ಉಪರತಿ ಎಂದು ಕರೆಯುವರು ॥೬೦೭॥ ಇಂತಹ ಉಪರತಿಯು ಪ್ರಾಪ್ತವಾದ ನಂತರ ಐಹಿಕ ಹಾಗೂ ಪಾರಲೌಕಿಕದ ಫಲಗಳ ಇಚ್ಛೆಯಾದರೂ ಹೇಗೆ ನಿರ್ಮಾಣವಾಗಲು ಸಾಧ್ಯ ? ॥೬೦೮॥ ಈ ಪ್ರಕಾರವಾಗಿ ನಿತ್ಯ ನಿಷ್ಕಾಮರಾಗಿರುವ ಸಾಧಕರು ಆತ್ಮಾರಾಮಸ್ವರೂಪರಾಗಿ ಪರಮಾನಂದದಲ್ಲಿ ರಮಮಾಣರಾಗಿರುವುದರಿಂದ ಅವರು ''ಉಪರಮ''ವನ್ನು ಪಡೆದುಕೊಳ್ಳುವರು ॥೬೦೯॥ ಹೇ ಉದ್ಧವಾ, ದೇಹ, ಇಂದ್ರಿಯಗಳು ಮತ್ತು ಪ್ರಾಣ ಇವು ಇರುತ್ತಿರಲು ದೇಹದ ಅಭಿಮಾನವು ಹೇಗೆ ಇಲ್ಲದಾಗವುದು? ಹೀಗೆ ನಿನ್ನ ಮನದಲ್ಲಿ ಕಲ್ಪನೆಯು ಮೂಡಬಹುದು. ಅದಕ್ಕಾಗಿಯೇ ಅದೇ ವಿಷಯಕ್ಕಾಗಿ ಶ್ರೀಹರಿಯು ನಿರೂಪಣೆಯನ್ನು ಮಾಡುತ್ತಿರುವನು ॥೬೧೦॥

ದೇಹವು ಇದು ಪೃಥ್ವಿಯ ಅಂಶವಾಗಿರುವುದು. ಅಂದಮೇಲೆ ಅದು ಜಡವಾಗಿರುವುದರಿಂದ ದೇಹವು ಆತ್ಮವಲ್ಲ. ಇದೇ ಗುಣಗಳನ್ನು ಹೊಂದಿರುವ ಯಾವ ಈ ಇಂದ್ರಿಯಗಳೂ ಕೂಡ ಆತ್ಮವಾಗಿರುವುದಿಲ್ಲ. ಆದರೆ ಇವು ದೇಹದ ಉಪಕರಣಗಳಾಗಿರುವುವು. ಇವುಗಳ ವ್ಯವಹಾರವೂ ಕೂಡ ಏಕದೇಶಿಯವಾಗಿರುವುದು ॥೬೧೧॥ ಇಂದ್ರಿಯಗಳ ಅಧಿಷ್ಠಾತ್ರೀ ದೇವತೆಗಳೂ ಸಹ ಆತ್ಮರಲ್ಲ. ಅವರಿಗೆ ಇಂದ್ರಿಯಗಳ ಅಭಿಮಾನವಿರುವುದು. ಆದ್ದರಿಂದ ಅವರಿಗೆ ಆತ್ಮಪದವಿಯ ಸ್ಥಾನವು ಹೇಗೆ ದೊರಕಲು ಸಾಧ್ಯ? ॥೬೧೨॥ ದೇಹವನ್ನು ನಡೆಸುತ್ತಿರುವ ಪ್ರಾಣವಾದರೂ ಆತ್ಮವು ಅಲ್ಲ. ಕಾರಣ ಪ್ರಾಣವು ಕೇವಲ ಅಜ್ಞಾನಿಯಾಗಿರುವುದು. ಅದು ದೇಹದ ವಶವಾಗಿ ಅದರ ಜೊತೆಯಲ್ಲಿ ಹೋಗುವುದು, ಬರುವುದು ಮಾಡುತ್ತಿರುವುದು ॥೬೧೩॥

ಪ್ರಾಣ ಜರೀ ಆತ್ಮಾ ಹೋತಾ । ತರೀ ತೋ ದೇಹಾಸವೇ ನ ವಚತಾ । ಯಾಲಾಗೀ ಪ್ರಾಣಾಸೀ ನಿಜಾತ್ಮತಾ । ಜಾಣ ಸರ್ವಥಾ ಘಡೇನಾ ॥೩೧೪॥ ಆತ್ಮಾ ಪೃಥ್ವೀ ನವ್ಹೇ ಜಡಪಣೇ । ಜಳ ನವ್ಹೇ ದ್ರವತ್ವಗುಣೇ । ಅಗ್ನಿ ನವ್ಹೇ ದಾಹಕಪಣೇ । ಚಂಚಳಪಣೇ ನವ್ಹೇ ವಾಯು ॥೩೧೫॥ ಆತ್ಮಾ ನಭ ನವ್ಹೇ ಶೂನ್ಯಪಣೇ । ಮನ ನವ್ಹೇ ಸಂಕಲ್ಪಗುಣೇ । ಅಂತಃಕರಣ ನವ್ಹೇ ನಶ್ವರಲಕ್ಷಣೇ । ಚಿತ್ತ ಚಿಂತನೇ ನವ್ಹೇ ಆತ್ಮಾ ॥೩೧೬॥ ಆತ್ಮಾ ನವ್ಹೇ ಅಭಿಮಾನ । ತ್ಯಾಸೀ ಸುಖದುಃಖಾಂಚೇ ಬಂಧನ । ಬುದ್ಧಿ ಆತ್ಮಾ ನವ್ಹೇ ಜಾಣ । ಬೋಧಕಪಣ ತೀಮಾಜೀ ॥೩೧೭॥ ಆತ್ಮಾ ನವ್ಹೇ ತಿನೀ ಗುಣ । ಗುಣಾಮಾಜೀ ವಿಕಾರ ಪೂರ್ಣ । ಮಹತ್ತತ್ತ್ವ ಗುಣಾಂಚೇ ಕಾರಣ । ತೇ ಆತ್ಮಾ ಆಪಣ ಕದಾ ನವ್ಹೇ ॥೩೧೮॥ ಪ್ರಕೃತಿ ಜೇ ಗುಣಸಾಮ್ಯಾವಸ್ಥಾ । ತೇಹೀ ಆತ್ಮಾ ನವ್ಹೇ ತತ್ತ್ವತಾ । ಆತ್ಮದೃಷ್ಟೀ ಪ್ರಕೃತಿ ಪಾಹತಾ । ಮಿಥ್ಯಾ ತತ್ತ್ವತಾ ತೇ ಹೋಯ ॥೩೧೯॥ ಜೇಥ ಮೂಳಪ್ರಕೃತಿಚ ವಾವೋ । ತೇಥ ಪ್ರಕೃತಿಕಾರ್ಯಾ ಕೈಚಾ ಠಾವೋ । ಯಾಪರೀ ಆತ್ಮಾನುಭವೋ । ನಿಃಸಂದೇಹೋ ಭೋಗಿತೀ ॥೩೨೦॥ ಯಾಪರೀ ಸಾಧೂನಿಯಾ ಜ್ಞಾನ । ಸಾಧಕೀ ಛೇದಿಲಾ ದೇಹಾಭಿಮಾನ । ಐಸೇ ಹೋಊನಿಯಾ ನಿರಭಿಮಾನ । ಸದಾ ಸುಖಸಂಪನ್ನ ಸಾಧಕ ॥೩೨೧॥ ಏವಂ ಜೇ ನಿತ್ಯ ನಿರಭಿಮಾನ । ತ್ಯಾಂಸೀ ಪ್ರಾರಬ್ಧೇ ವಿಷಯಸೇವನ । ಕರಿತಾ ನ ಬಾಧೀ ದೋಷಗುಣ । ತೇಚಿ ನಿರೂಪಣ ಹರಿ ಸಾಂಗೇ ॥೩೨೨॥

ಸಮಾಹಿತೈಃ ಕಃ ಕರಣೈರ್ಗುಣಾತ್ಮಭಿರ್ಗುಣೋ ಭವೇನ್ಮತ್ಸುವಿವಿಕ್ತಧಾಮ್ನಃ ।
ವಿಕ್ಷಿಪ್ಯಮಾಣೈರುತ ಕಿಂ ನು ದೂಷಣಂ ಘನೈರುಪೇತೈರ್ವಿಗತೈರವೇಃ ಕಿಮ್ ॥೨೫॥

ಅರ್ಥ:- ಹೇ ಉದ್ಧವಾ, ಯಾರಿಗೆ ನನ್ನ ಸ್ವರೂಪದ ಪ್ರಾಪ್ತಿಯಾದ ನಂತರ ಆತನ ವೃತ್ತಿ ಮತ್ತು ಇಂದ್ರಿಯಗಳು ಶಾಂತವಾಗಿದ್ದರೆ ಆತನಿಗೆ ಯಾವ ಲಾಭವಾಗುವುದಿಲ್ಲ. ಒಂದು ವೇಳೆ ಅಶಾಂತವಾಗಿದ್ದರೆ ಆತನಿಗೆ ಯಾವ ಹಾನಿಯೂ ಆಗುವುದಿಲ್ಲ. ಕಾರಣ, ಅಂತಃಕರಣ ಮತ್ತು ಬಾಹ್ಯಕರಣ ಎಲ್ಲವೂ ಗುಣಮಯವಾಗಿರುವುವು. ಆತ್ಮನಲ್ಲಿ ಈ ವಿಷಯಕ್ಕೆ ಯಾವ ಸಂಬಂಧವಿಲ್ಲ. ಆಕಾಶದಲ್ಲಿ ಮೋಡಗಳು ಬಂದರೇನು? ಬಿಟ್ಟರೇನು? ಇದರಿಂದ ಸೂರ್ಯನಿಗೆ ಯಾವ ಪರಿಣಾಮವೂ ಆಗುವುದಿಲ್ಲ.

ದೇಹೇಂದ್ರಿಯಾವೇಗಳಾ ಪಾಹೀ । ಅಪರೋಕ್ಷ ಆತ್ಮ ಜಾಣಿತಲಾ ಜಿಂಹೀ । ತ್ಯಾಸೀ ಇಂದ್ರಿಯನೇಮೇ ಕಾಯೀ । ವಿಕ್ಷೇಪೇ ನಾಹೀ ಹಾನೀ ತ್ಯಾಂಸೀ ॥೩೨೩॥ ದೋರಾಚಾ ಸಾಪ ಖಿಳೋನಿ ಮಂತ್ರೀ । ಮಂತ್ರವಾದಿ ನಿಃಶಂಕ ಧರೀ । ನ ಖಿಳಿತಾ ಜೋ ಧರೀ ಕರೀ । ತ್ಯಾಸೀಹೀ ನ ಕರೀ ಬಾಧಾ ತೋ ॥೩೨೪॥

ಪ್ರಾಣವು ಒಂದು ವೇಳೆ ಆತ್ಮವಾಗಿದ್ದರೆ ಅದು ದೇಹದ ಜೊತೆಯಲ್ಲಿ ಹೋಗುತ್ತಿರಲಿಲ್ಲ. ಆದ್ದರಿಂದಲೇ ಸರ್ವಥಾ ಪ್ರಾಣವು ಆತ್ಮವಲ್ಲ ॥೩೧೪॥ ಪೃಥ್ವಿಯು ಇದು ಜಡವಾಗಿರುವುದರಿಂದ ಆತ್ಮವಾಗಲು ಶಕ್ಯವಿಲ್ಲ. ಜಲಕ್ಕೆ ದ್ರವತ್ವವು ಇರುವುದು. ಈ ಕಾರಣದಿಂದ ಜಲವೆಂದರೆ ಆತ್ಮವಾಗಲಾರದು. ಅಗ್ನಿಯು ದಾಹಕತ್ವದಿಂದ ಅದು ಆತ್ಮವೆನಿಸುವುದಿಲ್ಲ. ವಾಯುವಿಗೆ ಚಂಚಲತೆ ಇರುವುದರಿಂದ ಅದೂ ಕೂಡ ಆತ್ಮವಲ್ಲ ॥೩೧೫॥ ಆಕಾಶವು ಶೂನ್ಯರೂಪವಾಗಿರುವುದರಿಂದ ಆತ್ಮವಲ್ಲ. ಮನಸ್ಸು ಇದು ಸಂಕಲ್ಪವಿಕಲ್ಪಮಯವಾದ್ದರಿಂದ ಆತ್ಮವಾಗುವುದಿಲ್ಲ. ಅಂತಃಕರಣಗಳು ಇವು ನಶ್ವರವಾಗಿರುವುವು. ಆದ್ದರಿಂದ ಇವು ಆತ್ಮವಾಗಲಾರವು. ಚಿತ್ತವು ಚಿಂತನೆಯಿಂದ ಕೂಡಿರುವುದರಿಂದ ಆತ್ಮವಲ್ಲ ॥೩೧೬॥ ಅಭಿಮಾನಕ್ಕೆ ಸುಖದುಃಖಗಳ ಬಂಧನವಿರುವುದು. ಆದ್ದರಿಂದ ಅದು ಆತ್ಮವಲ್ಲ. ಬುದ್ಧಿಯಲ್ಲಿ ಬೋಧಕತ್ವವು ಇರುವುದರಿಂದ ಯಾವ ಈ ಬುದ್ಧಿಯು ಆತ್ಮವಾಗಿರುವುದಿಲ್ಲ ॥೩೧೭॥ ಮೂರು ವಿಕಾರಗಳಿಂದ ತುಂಬಿರುವುದರಿಂದ ಆ ಮೂರೂ ಗುಣಗಳು ಆತ್ಮವಲ್ಲ. ಮಹತ್ತತ್ವವು ಈ ಗುಣಗಳ ಕಾರಣವಾಗಿರುವುದರಿಂದ ಅವು ಎಂದಿಗೂ ಆತ್ಮವಾಗುವುದಿಲ್ಲ ॥೩೧೮॥ ಪ್ರಕೃತಿಗೆ ಗುಣಗಳ ಸಾಮ್ಯಾವಸ್ಥೆ ಇರುವುದರಿಂದ ಅದೂ ಕೂಡ ಆತ್ಮವಲ್ಲ. ಆತ್ಮದೃಷ್ಟಿಯಿಂದ ಪ್ರಕೃತಿಯತ್ತ ನೋಡಲು ಹೋದರೆ ಅದೂ ಕೂಡ ಮಿಥ್ಯೆ ಎಂದು ನಿರ್ಣಯಿಸಲ್ಪಡುವುದು ॥೩೧೯॥ ಮೂಲತಃ ಯಾವ ಪ್ರಕೃತಿಯಲ್ಲಿಯೇ ಮಿಥ್ಯೆ ಎಂದು ನಿರ್ಣಯಿಸಲ್ಪಟ್ಟಾಗ ಅಲ್ಲಿ ಪ್ರಕೃತಿಯ ಕಾರ್ಯಕ್ಕೆ ಸತ್ಯತ್ವವು ಎಲ್ಲಿಂದ ಬರಬೇಕು ? ಈ ಪ್ರಕಾರವಾಗಿ ಸಾಧಕರು ಸಂಶಯರಹಿತರಾಗಿ ಆತ್ಮದ ಅನುಭವವನ್ನು ಪಡೆಯುತ್ತಿರುವರು ॥೩೨೦॥ ಈ ಪ್ರಕಾರವಾಗಿ ಜ್ಞಾನವನ್ನು ಪ್ರಾಪ್ತಮಾಡಿಕೊಂಡು ಸಾಧಕರು ದೇಹದ ಅಭಿಮಾನವನ್ನು ನಷ್ಟಗೊಳಿಸುವರು. ಹೀಗೆ ಅಭಿಮಾನದ ತ್ಯಾಗವನ್ನು ಮಾಡಿ ಸಾಧಕರು ಯಾವಾಗಲೂ ಆನಂದದಲ್ಲಿ ಮಗ್ನರಾಗುತ್ತಿರುವರು ॥೩೨೧॥ ತಾತ್ಪರ್ಯವೇನೆಂದರೆ, ಈ ಯಾವ ನಿರಭಿಮಾನ ಸಾಧಕರಿಗೆ ಪ್ರಾರಬ್ಧಾನುಸಾರವಾಗಿ ವಿಷಯ ಸೇವನೆಯ ಪ್ರಸಂಗಗಳು ಒದಗಿದರೂ ಅವರಿಗೆ ಯಾವ ಗುಣದೋಷಗಳು ಬಾಧಿಸಲಾರವು. ಇದೇ ನಿರೂಪಣೆಯನ್ನು ಶ್ರೀಹರಿಯು ಹೇಳುತ್ತಿರುವನು ॥೩೨೨॥

ದೇಹ ಮತ್ತು ಇಂದ್ರಿಯಗಳು ಇವುಗಳಿಂದ ಆತ್ಮವು ಭಿನ್ನವಾಗಿದೆ ಎಂದು ಯಾರು ಸ್ವಾನುಭವದಿಂದ ತಿಳಿದಿರುವರೋ, ಅವರಿಗೆ ಇಂದ್ರಿಯಗಳ ನಿಗ್ರಹದಿಂದ ಯಾವ ಲಾಭವು ಆಗುವುದಿಲ್ಲ. ಅಥವಾ ವಿಷಯಗಳ ವಿಷಯದಲ್ಲಿ ಮನವು ಚಂಚಲವಾದರೆ ಅವರಿಗೆ ಯಾವ ಹಾನಿಯೂ ಆಗುವುದಿಲ್ಲ ॥೩೨೩॥ ಹಗ್ಗದ ಹಾವನ್ನು ಮಾಂತ್ರಿಕನು ಮಂತ್ರಿಸಿ ಕೈಯಲ್ಲಿ ಹಿಡಿದರೇನು? ಅಥವಾ ಇನ್ನೊಬ್ಬನು ಬೆದರದೇ ಕೈಯಲ್ಲಿ ಹಿಡಿದರೇನು? ಈ ಇಬ್ಬರಿಗೂ ಸರ್ಪದಿಂದ ಯಾವ ಪೀಡೆಯೂ ಆಗುವುದಿಲ್ಲ ॥೩೨೪॥

ಜೋ ಮೃಗಜಳೀ ಪಾಹೋನಿ ಗೇಲಾ । ತೋ ದೈವಾಚಾ ಕಡೇ ಪಡಿಲಾ । ಪೋಹೇಚಿನಾ ತೋ ನಾಹೀ ಬುಡಾಲಾ । ಕೋರಡಾ ಆಲಾ ಐಲತೀರಾ ।೩೨೫॥ ತೇವೀ ದೇಹೇಂದ್ರಿಯಾಂಚೇ ಮಿಥ್ಯಾಭಾನ । ಜಾಣೋನಿ ಝಾಲೇ ತೇ ಸಜ್ಞಾನ। ತ್ಯಾಂಸೀ ಇಂದ್ರಿಯಾಂಚೇ ಬಂಧನ। ಸರ್ವಥಾ ಜಾಣ ಅನುಪೇಗೀ।೩೨೬॥ ಜಯಾಸೀ ಮಾಝೋ ಅಪರೋಕ್ಷ ಜ್ಞಾನ । ತೇಣೇ ಘಾಲೊನಿಯಾ ಆಸನ । ಅಖಂಡ ಧರಿತಾ ಧ್ಯಾನ । ಅಧಿಕ ಉಪೇಗ ಜಾಣ ಅಸೇನಾ ।೩೨೭॥ ಜೇವೀ ಮೀ ಲೀಲಾವಿಗ್ರಹಧಾರೀ । ತೇವೀ ತೇಹೀ ವರ್ತತಾ ಶರೀರೀ । ತೇ ಇಂದ್ರಿಯಕರ್ಮಾವಾರೀ । ಭವಸಾಗರೀ ನ ಬುಡತೀ।೩೨೮॥ ಅಥವಾ ತೋ ಇಂದ್ರಿಯಸಂಗತೀ। ದೈವೇ ಅನೇಕ ವಿಷಯಪ್ರಾಪ್ತೀ। ಭೋಗಿತಾಂಹೀ ಅಹೋರಾತೀ। ಬ್ರಹ್ಮಸ್ಥಿತಿ ಭಂಗೇನಾ।೩೨೯॥ ಸ್ಥಿತಿ ನ ಭಂಗಾವಯಾ ಹೇಚಿ ಕಾರಣ । ಮಾಝೋ ಸ್ವಪ್ರಕಾಶಸ್ವಾನಂದಘನ। ಪಾವಲೇ ನಿಜಧಾಮ ಬ್ರಹ್ಮ ಪೂರ್ಣ। ತೇಥ ವಿಷಯಸ್ಫುರಣ ಬಾಧೀನಾ ।೩೩೦॥ ಜೇವೀ ಸೂರ್ಯ ಉಗವೋನಿ ಗಗನೀ। ಲೋಕ ಸೋಡವೀ ನಿದ್ರೇಪಾಸೂನೀ। ತೇ ಲೋಕ ಕರ್ಮೀ ಪ್ರವರ್ತವೋನೀ। ಅಲಿಪ್ತ ದಿನಮಣಿ ಜನಕರ್ಮಾ ।೩೩೧॥ ತೇವೀ ಮೀ ಪರಮಾತ್ಮಾ ಸ್ವಯಂಜ್ಯೋತೀ । ಪ್ರಭಾ ಪ್ರಕಾಶೀ ತ್ರಿಜಗತೀ । ತ್ಯಾ ಜನಕರ್ಮಾಚ್ಯಾ ಕ್ರಿಯಾಶಕ್ತೀ । ಮೀ ಅಲಿಪ್ತ ನಿಶ್ಚಿತೀ ನಿಜಾತ್ಮಾ ।೩೩೨॥ ಮುಕ್ತಾಸೀ ಸ್ತ್ರೀಪುತ್ರಗೃಹಸಂಗ । ತೇಣೇ ವೇಷ್ಟಲಾ ದಿಸೇ ಚಾಂಗ । ಮ್ಹಣಸೀ ಕೇವೀ ಮಾನೂ ನಿಃಸಂಗ । ತೇ ಸಾಂಗೇ ಶ್ರೀರಂಗ ರವಿದೃಷ್ಟಾಂತೇ ।೩೩೩॥

ಘನೈರುಪೇತ್ಯೈರ್ವಿಗತ್ಯೈ ರವೇಃ ಕಿಮ್ ॥

ಉಂಚ ಲಕ್ಷ ಯೋಜನೇ ರವಿಮಂಡಳ। ಬಾರಾ ಯೋಜನೇ ಮೇಘಪಡಳ। ತೇಣೇ ಸೂರ್ಯ ಝಾಂಕೋಳಿಲಾ ಕೇವಳ । ಲೋಕ ಸಕಳ ಮಾನಿತೀ ।೩೩೪॥ ಪರೀ ಸೂರ್ಯ ಆಣಿ ಆಭಾಳಾಸೀ । ಭೇಟೀ ನಾಹೀ ಕಲ್ಪಾಂತೇಸೀ । ತೇವೀ ಇಂದ್ರಿಯಕರ್ಮ ಸಜ್ಞಾನಾಸೀ । ಕದಾಕಾಳೇಸೀ ಸ್ಪರ್ಶೇನಾ ।೩೩೫॥ ಅಭ್ರ ಆಚ್ಛಾದೀ ಜಗಾಚೇ ಡೋಳೇ । ಜಗ ಮ್ಹಣೇ ಸೂರ್ಯ ಆಚ್ಛಾದಿಲಾ ಆಭಾಳೇ । ಐಸೇಚಿ ವಿಪರೀತ ಜ್ಞಾನ ಕಳೇ । ಮಾಯಾಮೇಳೇ ಭ್ರಾಂತಾಸೀ ।೩೩೬॥

ಮೃಗಜಲದ ನದಿಯಲ್ಲಿ ಈಸಿ ಪಾರಾದವನಿಗೆ ಭಾಗ್ಯವಂತನು ಎಂದು ಹೇಳಬೇಕೆ? ಅಥವಾ ಮೃಗಜಲದಲ್ಲಿ ಈಸಲು ಬಾರದವನಿಗೆ ಮುಳುಗುವನು ಎಂದು ಹೇಳಬೇಕೆ? ಅವನೂ ಕೂಡ ಮುಳುಗದೇ ತೋಯಿಸಿಕೊಳ್ಳದೇ ಆಚೆ ದಂಡೆಗೆ ಬಂದು ಸೇರುವನು ।೩೨೫॥ ಈ ಪ್ರಕಾರವಾಗಿ ದೇಹ, ಇಂದ್ರಿಯಗಳ ಭಾನವು ಮಿಥ್ಯೆ ಎಂದು ತಿಳಿದು ಯಾರು ಜ್ಞಾನಸಂಪನ್ನರಾಗುವರೋ, ಅವರಿಗೆ ಇಂದ್ರಿಯಗಳಿಂದ ಯಾವ ಬಂಧನೆಯೂ ಆಗುವುದಿಲ್ಲ ।೩೨೬॥ ಯಾರಿಗೆ ನನ್ನ ಅಪರೋಕ್ಷ ಜ್ಞಾನವು ಆಗಿರುವುದೋ, ಅವರಿಗೆ ಆಸನವನ್ನು ಹಾಕಿ ಅಖಂಡವಾಗಿ ಧ್ಯಾನವನ್ನು ಮಾಡುವುದರಿಂದ ಯಾವ ಅಧಿಕ ಲಾಭವು ಆಗುವುದಿಲ್ಲ ।೩೨೭॥ ನಾನು ಹೇಗೆ ಲೀಲಾ ಶರೀರವನ್ನು ಧರಿಸಿರುವೆನೋ, ಹಾಗೆಯೇ ಅವರೂ ಕೂಡ ಶರೀರದಲ್ಲಿ ವರ್ತಿಸುತ್ತಿರುವರು. ಅವರು ಇಂದ್ರಿಯಗಳಿಂದ ಕರ್ಮಗಳನ್ನು ಮಾಡುತ್ತಿದ್ದರೂ ಕೂಡ ಮೋಹ ಸಾಗರದಲ್ಲಿ ಮುಳುಗಲು ಶಕ್ಯವಿಲ್ಲ ।೩೨೮॥ ದೈವಯೋಗದಿಂದ ಪ್ರಾಪ್ತವಾದವುಗಳನ್ನು ಇಂದ್ರಿಯಗಳ ಸಂಗತಿಯಿಂದ ಅನೇಕ ವಿಷಯಗಳನ್ನು ಹಗಲು ರಾತ್ರಿ ಭೋಗಿಸುತ್ತ ಇದ್ದರೂ ಕೂಡ ಅವರು ಬ್ರಹ್ಮಸ್ವರೂಪದಿಂದ ವಿಚಲಿತರಾಗುವುದಿಲ್ಲ ।೩೨೯॥ ಅವರ ಸ್ಥಿತಿಯು ಭಂಗವಾಗಲಾರದ ಕಾರಣ ಯಾವುದೆಂದರೆ, ನನ್ನ ಸ್ವಯಂ ಪ್ರಕಾಶ ಆನಂದಘನ ನಿಜಧಾಮವಾಗಿರುವ ಯಾವ ಪೂರ್ಣ ಬ್ರಹ್ಮವು, ಅದರಲ್ಲಿ ಯಾರು ಐಕ್ಯರಾಗುವರೋ, ಅವರಿಗೆ ವಿಷಯಗಳ ಸ್ಫುರಣವು ಬಾಧಿಸುವುದಿಲ್ಲ ।೩೩೦॥ ಸೂರ್ಯನು ಆಕಾಶದಲ್ಲಿ ಉದಯನಾಗಿ ಜನರನ್ನು ನಿದ್ರೆಯಿಂದ ಬಿಡಿಸುವನು ಮತ್ತು ಅವರನ್ನು ಕರ್ಮಗಳಲ್ಲಿ ತೊಡಗಿಸುವನು. ಹೀಗಿದ್ದರೂ ಸೂರ್ಯನು ತಾನು ಮಾತ್ರ ಜಗತ್ತಿನ ಸರ್ವ ಕರ್ಮಗಳಿಂದ ಅಲಿಪ್ತನಾಗಿಯೇ ಇರುವನು ।೩೩೧॥ ಅದರಂತೆ ಸ್ವಯಂ ಪ್ರಕಾಶಕ ಪರಮಾತ್ಮನಾದ ನಾನು ಸರ್ವ ತ್ರೈಲೋಕಕ್ಕೆ ಪ್ರಕಾಶವನ್ನಾಗಿ ಮಾಡುವೆನು. ಹೀಗಾಗಿ ಜನರು ತಮ್ಮ ತಮ್ಮ ಕರ್ಮಗಳನ್ನು ಮಾಡಲಾರಂಭಿಸುವರು. ಆದರೆ ನಾನು ಮಾತ್ರ ಅವರ ಕರ್ಮಗಳಿಂದ ಅಲಿಪ್ತನಾಗಿಯೇ ಇರುವೆನು ।೩೩೨॥ ಮುಕ್ತ ಪುರುಷನಿಗೂ ಕೂಡ ಹೆಂಡತಿ, ಮಕ್ಕಳು, ಮನೆ, ಮಾರು ಇತ್ಯಾದಿಗಳ ಸಂಗವಿರುವುದು. ಸರ್ವ ಪರಿವಾರದೊಂದಿಗೆ ಕೂಡಿಕೊಂಡು ವ್ಯವಹಾರವನ್ನು ಮಾಡುತ್ತಿರುವಂತೆ ತೋರುವನು. ಅಂದಮೇಲೆ ಆತನಿಗೆ ನಿಃಸಂಗನು ಎಂದು ಹೇಗೆ ಹೇಳಬೇಕು? ಹೀಗೆ ಅನುಮಾನವು ಮನದಲ್ಲಿ ಬರಬಹುದೆಂದು ತಿಳಿದು ಅದೇ ವಿಷಯವನ್ನು ಕುರಿತು ಶ್ರೀರಂಗನಾದ ಭಗವಾನ ಶ್ರೀಕೃಷ್ಣನು ಸೂರ್ಯನ ದೃಷ್ಟಾಂತವನ್ನು ಹೇಳುತ್ತಿರವನು ।೩೩೩॥

ಸೂರ್ಯಮಂಡಲವು ಇದು ಭೂಮಿಯಿಂದ ಒಂದು ಲಕ್ಷ ಯೋಜನೆಯಲ್ಲಿ ಮೇಲೆ ಇರುವುದು. ಆದರೆ ಮೇಘಪಟಲವು ಇದು ಹನ್ನೆರಡು ಯೋಜನೆ ಎಷ್ಟು ಎತ್ತರಕ್ಕಿರುವುದು. ಈ ಮೇಘದಿಂದ ಸೂರ್ಯನು ಮುಚ್ಚಿ ಹೋದನು ಎಂದು ಹೀಗೆ ಸರ್ವ ಜನರು ತಿಳಿದಿರುವರು ।೩೩೪॥ ಆದರೆ ನಿಜವಾಗಿ ನೋಡಿದರೆ ಸೂರ್ಯನ ಮತ್ತು ಮೇಘದ ಭೇಟಿಯು ಕಲ್ಪಾಂತಕ್ಕೂ ಆಗುವುದಿಲ್ಲ. ಅದರಂತೆ ಜ್ಞಾನೀ ಪುರುಷನಿಗೆ ಇಂದ್ರಿಯಗಳ ಕರ್ಮಗಳು ಎಂದಿಗೂ ಸ್ಪರ್ಶ ಕೂಡ ಆಗುವುದಿಲ್ಲ ।೩೩೫॥ ಮೋಡಗಳು ಇವು ಜಗತ್ತಿನ ಜನರ ಕಣ್ಣುಗಳನ್ನು ಮುಚ್ಚಿ ಹಾಕುವುವು. ಆದರೆ ಜನರು ಮಾತ್ರ ಮೋಡಗಳಿಂದ ಸೂರ್ಯನು ಮುಚ್ಚಿಕೊಂಡಿರುವನು ಎಂದು ಹೇಳುತ್ತಿರುವರು. ಈ ಪ್ರಕಾರವಾಗಿ ಮಾಯೆಯಿಂದ ಭ್ರಾಂತರಾಗಿರುವ ಜನರಿಗೆ ತಪ್ಪು ತಿಳುವಳಿಕೆಯು ಪ್ರಾಪ್ತವಾಗುವುದು ।೩೩೬॥

ತೇ ಅಭ್ರ ಆಲ್ಯಾ ಗೇಲ್ಯಾಪಾಠೀ । ಸೂರ್ಯಾಸೀ ನ ಪಡೇ ಆಠೀವೇಠೀ । ತೇವೀ ಗೃಹದಾರಾಸಂಗಾಸಾಠೀ । ನ ಪಡೇ ಸಂಕಟೀ ಸಜ್ಞಾನ ।೩೩೭॥ ಜೇವೀ ಸೂರ್ಯಾತೇ ನಾತಳೇ ಆಭಾಳ । ತೇವೀ ಜ್ಞಾತ್ಯಾಸೀ ಸಂಗ ಸಕಳ । ಇಂದ್ರಿಯಕರ್ಮಾಚಾ ವಿಟಾಳ । ಜ್ಞಾತ್ಯಾಸೀ ಅಳುಮಾಳ ಲಾಗೇನಾ ।೩೩೮॥ ಐಕ ತ್ಯಾ ಜ್ಞಾತ್ಯಾಚೇ ರೂಪ ಪರಮ । ತೋ ದೇಹೀ ಅಸೋನಿ ಪರಬ್ರಹ್ಮ । ಯಾಲಾಗೀ ತ್ಯಾಸೀ ಇಂದ್ರಿಯಕರ್ಮ । ಸಮವಿಷಮ ಬಾಧೀನಾ ।೩೩೯॥ ಜ್ಞಾತಾ ಸರ್ವಾರ್ಥೀ ಅಲಿಪ್ತ । ತೇಚಿ ಕರಾವಯಾ ಸುನಿಶ್ಚಿತ । ಆಕಾಶ ದೃಷ್ಟಾಂತೇ ಶ್ರೀಕೃಷ್ಣನಾಥ । ಸ್ವಯೇ ಸಾಂಗತ ಸಾಕ್ಷೇಪೇ ।೩೪೦॥

ಯಥಾ ನಭೋ ವಾಯ್ವನಲಾಂಬುಭೂಗುಣೈರ್ಗತಾಗತೈರ್ವರ್ತುಗುಣೈರ್ನ ಸಜ್ಜತೇ ।
ತಥಾಕ್ಷರಂ ಸತ್ತ್ವರಜಸ್ತಮೋಮಲೈರಹಂಮತೇಃ ಸಂಸೃತಿಹೇತುಭಿಃ ಪರಮ್ ।೨೬॥

ಅರ್ಥ:- ವಾಯು ಆಕಾಶಕ್ಕೆ ಒಣಗಿಸಲಾರದು, ಅಗ್ನಿಯು ಸುಡಲಾರದು, ಜಲವು ತೋಯಿಸಲಾರದು, ಧೂಳು ಮಲಿನಗೊಳಿಸಲಾರದು, ಋತುಗಳ ಧರ್ಮವಾದ ಶೀತ- ಉಷ್ಣ ಅದಕ್ಕೆ ಪ್ರಭಾವಿತಗೊಳಿಸಲಾರವು, ಕಾರಣ ಇವು ಬರುವ ಹೋಗುವ ಕ್ಷಣಿಕ ಭಾವಗಳಾಗಿರುವುವು. ಆಕಾಶವು ಇದು ಸರ್ವರ ಅಧಿಷ್ಠಾನವಾಗಿರುವುದು. ಅದರಂತೆಯೇ ಸತ್ವಗುಣ, ರಜೋಗುಣ ಮತ್ತು ತಮೋಗುಣಗಳ ವೃತ್ತಿಯು ಹಾಗೆಯೇ ಕರ್ಮಗಳು ಅವಿನಾಶಿಯಾದ ಆತ್ಮಕ್ಕೆ ಸ್ಪರ್ಶ ಮಾಡಲಾರವು. ಇದು ಸರ್ವಕ್ಕೂ ಆಚೆಗಿರುವುದು. ಆದರ ಮುಖಾಂತರವಾಗಿ ಅಹಂಕಾರಪಡುವವರು ಸಂಸಾರದಲ್ಲಿ ಅಲೆದಾಡುತ್ತ ತಿರುಗುತ್ತಿರುವರು.

ಪೃಥ್ವೀ ಜಳ ಅನಳ ಅನಿಳ । ತ್ಯಾಂಸೀ ನಭ ವ್ಯಾಪಕ ಸಕಳ । ಪರೀ ಪೃಥ್ವ್ಯಾದಿಕಾಂಚಾ ಮಳ । ನಭಾಸೀ ಅಳುಮಾಳ ಲಾಗೇನಾ ।೩೪೧॥ ನಭ ಪೃಥ್ವೀರಜೇ ಕದಾ ನ ಮೈಳೇ । ಧುರಕಟೇನಾ ಧೂಮಕಲ್ಲೋಳೇ । ಅಗ್ನೀಚೇನಿ ಮಹಾಜ್ವಾಳೇ । ಕದಾಕಾಳೇ ಜಳೇನಾ ।೩೪೨॥ ವಾಯೂಚೇನಿ ಅತಿಝುಡಾಡೇ । ಆಕಾಶ ಕದಾಕಾಳೇ ನ ಉಡೇ । ಉದಕಾಚೇನಿ ಅತಿಚಢೇ । ಆಕಾಶ ನ ಬುಡೇ ಸರ್ವಥಾ ।೩೪೩॥ ಕಾ ಸೂರ್ಯಾಚೇ ನಿದಾಘಕಿರಣೇ । ನಭ ಘಾಮೇಜೇನಾ ಉನ್ಹಾಳೇನೀ । ಅಥವಾ ಹಿಮಾಚಿಯಾ ಹಿಮಕಣೇ । ನಭ ಕಾಂಕಡೋನೀ ಹಿವೇನಾ ।೩೪೪॥ ಪರ್ಜನ್ಯ ವರ್ಷತಾ ಪ್ರಬಳ । ನಭ ವೋಲೇ ನವ್ಹೇ ಅಳುಮಾಳ । ಯಾಪರೀ ನಭ ನಿರ್ಮಳ । ಲಾವಿತಾಂಹೀ ಮಳ ಲಾಗೇನಾ ।೩೪೫॥ ತ್ಯಾ ಆಕಾಶಾಸೀ ಅಲಿಪ್ತ । ಜೇ ಕ್ಷರಾಕ್ಷರಾಹೀ ಅತೀತ । ತೇ ಅಕ್ಷರ ಪರಬ್ರಹ್ಮ ಸದೋದಿತ । ತ್ರಿಗುಣಾತೀತ ಚಿನ್ಮಾತ್ರ ।೩೪೬॥ ಜೇ ಅಜರಾಮರ ಅವಿನಾಶೀ । ಜೇ ಪ್ರಕಾಶಮಾನ ಸ್ವಪ್ರಕಾಶೀ । ಐಸಿಯೇ ವಸ್ತೂಚೀ ಪ್ರಾಪ್ತೀ ಜ್ಯಾಸೀ । ಅದ್ವಯತ್ವೇಸೀ ಫಾವಲೀ ।೩೪೭॥

ಈ ಯಾವ ಮೋಡಗಳು ಬಂದರೇನು? ಹೋದರೇನು? ಯಾವ ಸೂರ್ಯನಿಗೆ ಇವುಗಳಿಂದ ಲಾಭವೂ ಇಲ್ಲ ಯಾವ ಹಾನಿಯೂ ಆಗುವುದಿಲ್ಲ. ಅದರಂತೆ ಆತ್ಮಜ್ಞಾನೀ ಪುರುಷನು ಮನೆ ಮಾರು, ಸ್ತ್ರೀ, ಪುತ್ರ ಇವುಗಳ ಸಂಗತಿಯಿಂದ ಯಾವ ಸಂಕಟಕ್ಕೂ ಗುರಿಯಾಗಲು ಶಕ್ಯವಿಲ್ಲ ।೩೩೭॥ ಸೂರ್ಯನಿಗೆ ಯಾವ ಪ್ರಕಾರವಾಗಿ ಮೋಡಗಳು ಸ್ಪರ್ಶ ಮಾಡಲು ಶಕ್ಯವಿಲ್ಲವೋ, ಅದರಂತೆ ಆತ್ಮಜ್ಞಾನೀ ಪುರುಷನಿಗೆ ಯಾವ ಸಂಗವೂ ಸಹ ಬಾಧಿಸಲು ಸಾಧ್ಯವಿಲ್ಲ. ಇಂದ್ರಿಯಗಳ ಕರ್ಮದ ಮೈಲಿಗೆಯು ಆತನಿಗೆ ಸ್ವಲ್ಪವೂ ಕೂಡ ಹತ್ತಲು ಶಕ್ಯವಿಲ್ಲ ।೩೩೮॥ ಇಂತಹ ಈ ಯಾವ ಆತ್ಮಜ್ಞಾನೀ ಪುರುಷನ ಸ್ವರೂಪವನ್ನು ಹೇಳುವೆನು, ಅದನ್ನು ಕೇಳು. ಆತನು ದೇಹದಲ್ಲಿದ್ದರೂ ಪರಬ್ರಹ್ಮನಾಗಿರುವನು. ಈ ಕಾರಣವಾಗಿ ಆತನಿಗೆ ಇಂದ್ರಿಯಗಳ ಸಮವಿಷಮವಾಗಿರುವ ಯಾವುದೇ ಕರ್ಮಗಳು ಬಾಧಿಸಲಾರವು ।೩೩೯॥ ಆತ್ಮಜ್ಞಾನಿಯು ಸರ್ವತೋಪರಿಯಾಗಿ ಅಲಿಪ್ತನಾಗಿರುವನು. ಇದನ್ನು ನಿಶ್ಚಯಗೊಳಿಸುವುದಕ್ಕಾಗಿ ದ್ವಾರಕಾಧೀಶನಾದ ಶ್ರೀಕೃಷ್ಣನಾಥನು ಸಂಕ್ಷಿಪ್ತವಾಗಿ ಆಕಾಶದ ದೃಷ್ಟಾಂತವನ್ನು ಕೊಟ್ಟು ವಿವರಿಸುತ್ತಿರುವನು ।೩೪೦॥

ಭೂಮಿ, ಜಲ, ಅಗ್ನಿ ಮತ್ತು ವಾಯು ಇವು ಎಲ್ಲಕ್ಕೂ ಆಕಾಶವು ವ್ಯಾಪಿಸಿಕೊಂಡಿರುವುದು. ಆದರೆ ಭೂಮಿ ಇತ್ಯಾದಿಗಳ ಯಾವ ಮಲಿನತ್ವವು ಆಕಾಶಕ್ಕೆ ಸ್ವಲ್ಪು ಮಾತ್ರವೂ ಹತ್ತಲು ಸಾಧ್ಯವಿಲ್ಲ ।೩೪೧॥ ಆಕಾಶವು ಇದು ಪೃಥ್ವಿಯ ಧೂಳಿನಿಂದ ಎಂದಿಗೂ ಮಲಿನವಾಗುವುದಿಲ್ಲ. ಹೊಗೆಯ ಅನೇಕ ಪ್ರವಾಹಗಳು ಎದ್ದರೂ ಕೂಡ ಅದಕ್ಕೆ ಹೊಗೆ ನಾಟುವುದಿಲ್ಲ. ಅಥವಾ ಅಗ್ನಿಯ ದೊಡ್ಡ ದೊಡ್ಡ ಜ್ವಾಲೆಯಿಂದ ಅದು ಎಂದಿಗೂ ಸುಡಲು ಸಾಧ್ಯವಿಲ್ಲ ।೩೪೨॥ ಭಯಂಕರವಾದ ಬಿರುಗಾಳಿಯಿಂದ ಆಕಾಶವು ಎಂದಿಗೂ ಹಾರಿಹೋಗುವುದಿಲ್ಲ. ನೀರಿಗೆ ಎಷ್ಟೇ ಪೂರವು ಬರಲಿ ಅದರಿಂದ ಆಕಾಶವು ಅದರಲ್ಲಿ ಮುಳುಗುವುದಿಲ್ಲ ।೩೪೩॥ ಸೂರ್ಯನ ಪ್ರಖರವಾದ ಕಿರಣಗಳಿಂದ ಆಕಾಶಕ್ಕೆ ಎಂದಿಗೂ ಬೆವರು ಬರುವುದಿಲ್ಲ. ಅಥವಾ ಪ್ರಚಂಡವಾದ ಹಿಮದಿಂದ ಅದು ಎಂದಿಗೂ ಚಳಿಯಿಂದ ನಡುಗುವುದಿಲ್ಲ ।೩೪೪॥ ಮಳೆಯು ಎಷ್ಟೇ ಪ್ರಚಂಡವಾಗಿ ಸುರಿಯಲಿ, ಅದರಿಂದ ಆಕಾಶವು ಸ್ವಲ್ಪವೂ ಕೂಡ ಹಸಿಯಾಗುವುದಿಲ್ಲ ಆಕಾಶವು ನಿರ್ಮಲವಾಗಿರುವುದು. ಅದಕ್ಕೆ ಹೊಲಸನ್ನು ಬಳೆಯಬೇಕೆಂದು ಪ್ರಯತ್ನವನ್ನು ಮಾಡಿದರೂ ಕೂಡ ಅದು ಸಾಧ್ಯವಾಗುವುದಿಲ್ಲ ।೩೪೫॥ ಇಂತಹ ಈ ಯಾವ ಆಕಾಶಕ್ಕೂ ಕೂಡ ಯಾವುದು ಅಲಿಪ್ತವಾಗಿರುವುದೋ, ಯಾವುದು ಕ್ಷರಾಕ್ಷರಕ್ಕೂ ಕೂಡ ಅತೀತವಾಗಿರುವುದೋ, ಆ ಯಾವ ಅಕ್ಷರ ಪರಬ್ರಹ್ಮವು ಯಾವಾಗಲೂ ಗುಣಾತೀತ ಹಾಗೂ ಚಿನ್ಮಾತ್ರವಾಗಿರುವುದು ।೩೪೬॥ ಯಾವುದು ಅಜರಾಮರ, ಅವಿನಾಶೀ, ಸ್ವಯಂಪ್ರಕಾಶದಿಂದ ಪ್ರಕಾಶಮಾನವಾಗಿರುವ ಯಾವ ಪರಬ್ರಹ್ಮದ ಪ್ರಾಪ್ತಿಯು ಯಾರಿಗೆ ಅದ್ವಯತ್ವದಿಂದ ಪ್ರತೀತೀಯಾಗಿರುವುದೋ ।೩೪೭॥

ಜೇವೀ ನ ಮೋಡಿತಾ ಲಾಗವೇಗೇ । ಸೋನಟಕಾ ಸೋನೇ ಝಾಲಾ ಸರ್ವಾಂಗೇ । ತೇವೀ ಕರಣೇವೀಣ ಯೇಣೇ ಯೋಗೇ । ಜೇ ಝಾಲೇ ನಿಜಾಂಗೇ ಪರಬ್ರಹ್ಮ ।೩೪೮॥ ತ್ಯಾಂಸೀ ಗುಣಾಂಚೀ ತ್ರಿಗುಣ ಮಾಗೀ । ಲಾವಿತಾಂಹೀ ನ ಲಗೇ ಅಂಗೀ । ವಿಷಯೀ ಕರಿತಾ ವಿಷಯಭೋಗೀ । ತೇ ವಿಷಯಸಂಗೀ ನಿಃಸಂಗ ।೩೪೯॥ ಘಟೀ ಚಂದ್ರಬಿಂಬ ದಿಸೇ । ತೇ ಘಟಾಸೀ ಸ್ಪರ್ಶಲೇ ನಸೇ । ಓಲೇ ನವ್ಹೇ ಜಳರಸೇ । ದೇಹೀ ಜೀವ ಅಸೇ ಅಲಿಪ್ತ ತೈಸಾ ।೩೫೦॥ ತೇ ಘಟೀ ಕಾಲವಿಲ್ಯಾ ಶೇಣ । ಬಿಂಬಪ್ರತಿಬಿಂಬಾ ನಾತಳೇ ಜಾಣ । ತೇವೀ ದೇಹೀಂಚೇ ಪಾಪಾಚರಣ । ಜೀವಶಿವಸ್ಥಾನ ಠಾಕೀನಾ ।೩೫೧॥ ಘಟೀ ಕಾಲವಿಲ್ಯಾ ಕಸ್ತೂರೀ । ಬಿಂಬಪ್ರತಿಬಿಂಬ ಸುವಾಸ ನ ಧರೀ । ತೇವೀ ದೇಹೀಂಚ್ಯಾ ಪಾಪಪುಣ್ಯಾಚೀ ಥೋರೀ । ಜೀವಶಿವಾವರೀ ಪಾವೇನಾ ।೩೫೨॥ ಆಕಾಶ ಜಳಾವಯಾಲಾಗೀ । ಘ್ರುತೇ ಪೇಟವಿಲೀ ಮಹಾ ಆಗೀ । ಆಕಾಶ ಅಸತಾ ಅಗ್ನಿಸಂಗೀ । ದಾಹೋ ಅಂಗೀ ಲಾಗೇನಾ ।೩೫೩॥ ಆಕಾಶ ಅಸೋನಿ ಅಗ್ನಿಮೇಳೇ । ಅಗ್ನಿಜ್ವಾಳೇ ಕದಾ ನ ಜಳೇ । ತೇವೀ ಜ್ಞಾತಾ ವಿಷಯಕಲ್ಲೋಳೇ। ಕದಾ ಕಾಳೇ ವಿಷಯೀ ನವ್ಹೇ ।೩೫೪॥ ಗುಣಾಂಚೇನಿ ದೇಹಸಂಗೇ । ಯೋಗೀ ವರ್ತತಾ ಯೇಣೇ ಯೋಗೇ । ತೇ ಭೋಗಿತಾಂಹೀ ವಿಷಯಭೋಗೇ । ಅಲಿಪ್ತ ಸರ್ವಾಂಗೇ ಸರ್ವದಾ ।೩೫೫॥ ಹೇ ಕಳಲೇ ಜ್ಯಾ ಭೋಗವರ್ಮ । ತೇ ದೇಹೀ ಅಸೋನ ಪರಬ್ರಹ್ಮ । ತ್ಯಾಂಸೀ ಬಾಧೀನಾ ಭೋಗಭ್ರಮ । ಅಕ್ಷರ ಪರಮ ಸ್ವಯೇ ಝಾಲೇ ।೩೫೬॥ ತೇ ಅಕ್ಷರ ಝಾಲೇ ಆತಾ । ಯಾಹೀ ಬೋಲಾಸೀ ಯೇ ಲಘುತಾ । ಜನ ಜ್ಞಾನೀ ಅಜ್ಞಾನೀ ವರ್ತತಾ । ಅಕ್ಷರತಾ ಅಭಂಗ ।೩೫೭॥ ತೇ ವಿಸರೋನಿ ಬ್ರಹ್ಮರೂಪತಾ। ಮೀ ದೇಹೀ ಮ್ಹಣವೀ ದೇಹಅಹಂತಾ । ತೇಥೇ ವಾಢಲೀ ವಿಷಯಾವಸ್ಥಾ । ದೃಢ ಬದ್ಧತಾ ತೇಣೇ ಝಾಲೀ ।೩೫೮॥ ತೇ ನಿವಾರಾವಯಾ ಬದ್ಧತಾ । ತ್ಯಜಾವೀ ವಿಷಯಲೋಲುಪತಾ । ವಿಷಯ ತ್ಯಾಗೇವೀಣ ಸರ್ವಥಾ । ನಿತ್ಯಮುಕ್ತತಾ ಘಡೇನಾ ।೩೫೯॥ ನ ಜೋಡಿತಾ ನಿತ್ಯಮುಕ್ತತಾ । ಸಾಧಕ ಜರೀ ಝಾಲಾ ಜ್ಞಾತಾ । ತರೀ ತೇಣೇ ಜ್ಞಾತೇಪಣೇ ಸರ್ವಥಾ । ವಿಷಯಾಸಕ್ತತಾ ನ ಕರಾವೀ ।೩೬೦॥

ಹಾಗೆಯೇ ಯಾವ ಪ್ರಕಾರವಾಗಿ ಬಂಗಾರದ ನಾಣ್ಯಗಳು ಇವು ಸರ್ವಾಂಗದಿಂದ ಬಂಗಾರವೇ ಆಗಿರುವುವೋ, ಅದೇ ಪ್ರಕಾರವಾಗಿ ಸಾಧಕರು ಯಾವುದೇ ಕರ್ಮಗಳಿಲ್ಲದೇ ಸ್ವತಃವೇ ಬ್ರಹ್ಮರೂಪರಾಗುವರು ।೩೪೮॥ ಅವರ ಅಂಗಕ್ಕೆ ಗುಣಗಳ ತ್ರಿಪುಟಿಯನ್ನು ಹಚ್ಚುವ ಪ್ರಯತ್ನ ಮಾಡಿದರೂ ಸಹ ಅದು ಹತ್ತುವುದೇ ಇಲ್ಲ. ವಿಷಯಗಳು ಅವರಿಗೆ ವಿಷಯಭೋಗಿಸಲು ಹಚ್ಚಿದರೂ ಕೂಡ ಅವರು ವಿಷಯಸಂಗದಿಂದ ಅಲಿಪ್ತರಾಗಿ ಇರುವರು ।೩೪೯। ಮಡಿಕೆಯಲ್ಲಿ ಚಂದ್ರನ ಪ್ರತಿಬಿಂಬವು ಕಾಣುತ್ತಿರುವುದು. ಆದರೆ ಅದು ಆ ಮಡಿಕೆಗೆ ಸ್ಪರ್ಶ ಕೂಡ ಮಾಡುವುದಿಲ್ಲ. ಹಾಗೂ ಅದರಲ್ಲಿನ ಜಲದಿಂದ ಅದು ಸ್ವಲ್ಪವೂ ಕೂಡ ಹಸಿಯಾಗುವುದಿಲ್ಲ. ಅದರಂತೆ ದೇಹದಲ್ಲಿ ಯಾವ ಜೀವವು ಅಲಿಪ್ತತೆಯಿಂದ ವಾಸ್ತವ್ಯ ಮಾಡುತ್ತಿರುವುದು ।೩೫೦॥ ಆ ಯಾವ ಮಡಿಕೆಯಲ್ಲಿನ ನೀರಿನಲ್ಲಿ ಸಗಣಿಯನ್ನು ಕಲಿಸಲು ಆಗ ಅದು ಚಂದ್ರಬಿಂಬಕ್ಕಾಗಲಿ ಅಥವಾ ಪ್ರತಿಬಿಂಬಕ್ಕಾಗಲಿ ಹತ್ತಿಕೊಳ್ಳುವುದಿಲ್ಲ. ಅದರಂತೆ ದೇಹದ ಪಾಪಾಚರಣೆಗಳು ಜೀವಕ್ಕಾಗಲಿ, ಶಿವಕ್ಕಾಗಲಿ ಸ್ಪರ್ಶ ಮಾಡಲು ಶಕ್ಯವಿಲ್ಲ ।೩೫೧॥ ಮತ್ತು ಅದೇ ಜಲದಲ್ಲಿ ಕಸ್ತೂರಿಯನ್ನು ಕಲಿಸಲು ಆಗ ಅದರ ಸುಗಂಧವು ಬಿಂಬಕ್ಕಾಗಲಿ ಅಥವಾ ಪ್ರತಿಬಿಂಬಕ್ಕಾಗಲಿ ಹತ್ತುವುದಿಲ್ಲ. ಅದರಂತೆ ದೇಹದ ಪಾಪಪುಣ್ಯ ಕರ್ಮಗಳು ಜೀವ, ಶಿವರತ್ತ ಬರುವುದಿಲ್ಲ ।೩೫೨॥ ಆಕಾಶವನ್ನು ಸುಟ್ಟುಬಿಡಬೇಕೆಂದು ತುಪ್ಪವನ್ನು ಸುರಿದು ಮಹಾಅಗ್ನಿಯನ್ನು ಪ್ರಜ್ವಲಿಸಲು ಆಗ ಆಕಾಶವು ಆ ಅಗ್ನಿಗೆ ಪೂರ್ಣವಾಗಿ ಹತ್ತಿಕೊಂಡೇ ಇದ್ದರೂ ಕೂಡ ಅದರ ಅಂಗಕ್ಕೆ ಸ್ವಲ್ಪವೂ ಕೂಡ ಬೆಂಕಿಯು ಹತ್ತಲು ಶಕ್ಯವೇ ಇಲ್ಲ ।೩೫೩॥ ಆಕಾಶವು ಇದು ಅಗ್ನಿಗೆ ಅಂಟಕೊಂಡಿದ್ದರೂ ಸಹ ಅದು ಅಗ್ನಿಯ ಜ್ವಾಲೆಯಿಂದ ಹೇಗೆ ಸುಡುವುದಿಲ್ಲವೋ, ಅದೇ ಪ್ರಕಾರವಾಗಿ ಆತ್ಮಜ್ಞಾನಿಯು ವಿಷಯಗಳ ತೆರೆಗಳಲ್ಲಿ ಎಂದಿಗೂ ವಿಷಯಿಯಾಗಲು ಸಾಧ್ಯವಿಲ್ಲ ।೩೫೪॥ ಜ್ಞಾನಯೋಗಿಗಳು ಗುಣಗಳ ಹಾಗೂ ದೇಹದ ಸಂಗತಿಯಿಂದ ವರ್ತಿಸುತ್ತಿದ್ದರೂ ಕೂಡ, ವಿಷಯ ಭೋಗಗಳನ್ನು ಭೋಗಿಸುತ್ತಿದ್ದರೂ ಸಹ ಅವರು ಸರ್ವಾಂಗದಿಂದ ಅಲಿಪ್ತರಾಗಿಯೇ ಇರುವರು ।೩೫೫॥ ಈ ಭೋಗಗಳ ಮರ್ಮವನ್ನು ಅವರು ಅರಿತಿರುವರು. ಇವರು ದೇಹದಲ್ಲಿದ್ದರೂ ಪರಬ್ರಹ್ಮರಾಗಿರುವರು. ಇವರಿಗೆ ಭೋಗದ ಭ್ರಮೆಯು ಬಾಧಿಸುವುದಿಲ್ಲ. ಅವರು ಸ್ವತಃವೇ ಪರಮ ಅಕ್ಷರರಾಗುವರು ।೩೫೬॥ ''ಅವರೀಗ ಅಕ್ಷರರಾದರು'' ಎಂದು ಹೇಳುವದೂ ಕೂಡ ಗೌಣವಾಗಿರುವುದು. ಕಾರಣ ಜಗತ್ತು ಈ ಜ್ಞಾನದಲ್ಲಿ ಅಥವಾ ಅಜ್ಞಾನದಲ್ಲಿ ವರ್ತಿಸುತ್ತಿದ್ದರೂ ಅವರ ಅಕ್ಷರತೆಯು ಅಭಂಗವಾಗಿಯೇ ಇರುವುದು ।೩೫೭॥ ಈ ಯಾವ ಬ್ರಹ್ಮಸ್ವರೂಪತೆಯನ್ನು ಮರೆತು ದೇಹ ಅಹಂತೆಯು ''ನಾನು ದೇಹೀ'' ಎಂದು ಹೀಗೆ ಹೇಳುವರು. ಇದರಿಂದ ವಿಷಯಾವಸ್ಥೆಯು ಬೆಳೆಯುತ್ತ ಸಾಗುವುದು, ಹೀಗಾಗಿ ಅವರಿಗೆ ದೃಢ ಬಂಧನವು ಪ್ರಾಪ್ತವಾಗುವುದು ।೩೫೮॥ ಈ ಯಾವ ಬಂಧನೆಯ ನಿವಾರಣೆಗಾಗಿ ವಿಷಯದ ಲೋಲುಪ್ಯತೆಯನ್ನು ತ್ಯಜಿಸಬೇಕು. ಕಾರಣ, ಈ ವಿಷಯಗಳ ತ್ಯಾಗವಿಲ್ಲದೇ ನಿತ್ಯ ನೂತನವಾದ ಮುಕ್ತತೆಯು ಸರ್ವಥಾ ಸಾಧಿಸಲು ಸಾಧ್ಯವಿಲ್ಲ ।೩೫೯॥ ನಿತ್ಯಮುಕ್ತತೆಯು ಪ್ರಾಪ್ತವಾಗದೇ ಸಾಧಕನು ಒಂದು ವೇಳೆ ಜ್ಞಾನವನ್ನು ಸಂಪಾದಿಸಲು ಆತನು ನಾನು ಜ್ಞಾನೀ ಎಂಬ ಭಾವದಿಂದ ವಿಷಯಗಳ ಆಸಕ್ತಿಯನ್ನು ಎಂದಿಗೂ ಇಡಬಾರದು ।೩೬೦॥

ತಥಾಪಿ ಸಂಗಃ ಪರಿವರ್ಜನೀಯೋ ಗುಣೇಷು ಮಾಯಾರಚಿತೇಷು ತಾವತ್ ।
ಮದ್‌ಭಕ್ತಿಯೋಗೇನ ದೃಢೇನ ಯಾವದ್ರಜೋ ನಿರಸ್ಯೇತ ಮನಃಕಷಾಯಃ ।೨೭॥

ಅರ್ಥ:- ಹೇ ಉದ್ಧವಾ, ಹೀಗಿದ್ದರೂ ನನ್ನ ಏಕನಿಷ್ಠ ದೃಢ ಭಕ್ತಿಭಾವದಿಂದ, ಮನಸ್ಸಿಗೆ ದೂಷಿತಗೊಳಿಸುವ ರಾಜಸೀ ವಿಷಯಾಸಕ್ತಿಯನ್ನು ಎಲ್ಲಿಯವರೆಗೆ ಇಲ್ಲದಾಗುವುದಿಲ್ಲವೋ, ಅಲ್ಲಿಯವರೆಗೆ ಮಾಯೆಯು ನಿರ್ಮಿಸಿರುವ ವಿಷಯ ಸಂಬಂಧದ ಸರ್ವ ಪ್ರಕಾರದ ಆಸಕ್ತಿಯನ್ನು ತೆಗೆದೊಗೆಯಬೇಕು.

ಸ್ವರವರ್ಣಯುಕ್ತ ಸಂಪೂರ್ಣ । ಚಹೂ ವೇದೀ ಝಾಲಾ ನಿಪುಣ । ತೇಣೇ ಬಳೇ ವಿಷಯಾಚರಣ । ಕರಿತಾ ದಾರುಣ ಬಾಧಕ ।೩೬೧॥ ಸಕಳ ಶಾಸ್ತ್ರಾಂಚೇ ಶ್ರವಣ । ಕರತಳಾಮಲಕ ಝಾಲ್ಯಾ ಪೂರ್ಣ । ಶಬ್ದ ಜ್ಞಾನಾಚೇ ಜೇ ಮುಕ್ತಪಣ । ತೇಣೇಹೀ ವಿಷಯಾಚರಣ ಬಾಧಕ ।೩೬೨॥ ಪ್ರಾಣಾಪಾನಾಂಚಿಯಾ ಸಮತಾ । ಜರೀ ಕಾಳವಂಚನಾ ಆಲೀ ಹಾತಾ । ತರೀ ವಿಷಯಾಂಚೀ ವಿಷಯಾವಸ್ಥಾ । ಜಾಣ ಸರ್ವಥಾ ಬಾಧಕ ।೩೬೩॥ ಶಾಪಾನುಗ್ರಹಸಮರ್ಥ ನರ । ಆಮ್ಹೀ ಜ್ಞಾತೇ ಮಾನೂನಿ ಥೋರ । ತ್ಯಾಂಸಹೀ ವಿಷಯಸಂಚಾರ । ಹೋಯ ಅಪಾರ ಬಾಧಕ ।೩೬೪॥ ಆಸನ ಉಡವಿತೀ ಯೋಗಬಳೇ । ದಾವಿತೀ ನಾನಾ ಸಿದ್ಧೀಂಚೇ ಸೋಹಳೇ । ತ್ಯಾಸಹೀ ವಿಷಯಾಂಚೇ ಭೋಗಲಳೇ । ಹೋತೀ ನಿಜಬಳೇ ಬಾಧಕ ।೩೬೫॥ ಇತರಾಂಚಿ ಕೋಣ ಕಥಾ । ಮಂತ್ರೇ ಮಂತ್ರಮೂರ್ತಿ ಪ್ರಸನ್ನ ಅಸತಾ । ತ್ಯಾಸೀಹೀ ವಿಷಯಾವಸ್ಥಾ । ಜಾಣ ಸರ್ವಥಾ ಬಾಧಕ ।೩೬೬॥ ಕಿಂಚಿತ್ ಝಾಲ್ಯಾ ಸ್ವರೂಪಪ್ರಾಪ್ತೀ । "ಮೀ ಮುಕ್ತ" ಸ್ಫುರೇ ಸ್ಫೂರ್ತೀ । ತಥಾಪಿ ವಿಷಯಾಂಚೀ ಸಂಗತೀ । ತ್ಯಾಸೀಹೀ ನಿಶ್ಚಿತೀ ಬಾಧಕ ।೩೬೭॥ ಅಭಿಮಾನಾಚೇ ನಿರ್ದಳಣ । ಸ್ವಯೇ ಕರೂನಿಯಾ ಆಪಣ । ನಿತ್ಯಮುಕ್ತ ನವ್ಹತಾ ಜಾಣ । ವಿಷಯಾಚರಣ ಬಾಧಕ ।೩೬೮॥ ಜೇವೀ ಚಕಮಕೇಚೀ ಆಗೀ । ಜಾಳೂ ನ ಶಕೇ ನಾಟೇಲಾಗೀ । ತೇವೀ ಬ್ರಹ್ಮಪ್ರಾಪ್ತೀ ಪ್ರಥಮರಂಗೀ । ಪ್ರಪಂಚಸಂಗೀ ವಿನಾಶೇ ।೩೬೯॥ ವಿಷಯ ಮಿಥ್ಯಾ ಮಾಯಿಕ । ತೇ ಭೋಗೀ ಜಂವ ಭಾಸೇ ಹರಿಖ । ತಂವವರೀ ವಿಷಯ ಬಾಧಕ । ಜಾಣ ನಿಷ್ಟಂಕ ಉದ್ಧವಾ ।೩೭೦॥ ತೇ ತ್ಯಾಗಾವಯಾ ವಿಷಯಸೇವನ । ನಿರ್ದಾಳಾವಾ ದೇಹಾಭಿಮಾನ । ಯಾಚಿಯಾಲಾಗೀ ಮಾಝೇ ಭಜನ । ಸಾಕ್ಷೇಪೇ ಜಾಣ ಕರಾವೇ।೩೭೧॥ ವ್ರತ ತಪ ತೀರ್ಥ ದಾನ । ಕರಿತಾ ಯೋಗ ಯಾಗ ಯಜನ । ವೇದಶಾಸ್ತ್ರ ಪುರಾಣಶ್ರವಣ ತೇಣೇ ದೇಹಾಭಿಮಾನ ಢಳೇನಾ ।೩೭೨॥

ಸ್ವರವರ್ಣಯುಕ್ತ ಸಂಪೂರ್ಣತೆಯಿಂದ ನಾಲ್ಕೂ ವೇದಗಳಲ್ಲಿ ಸಾಧಕನು ನಿಪುಣನಾದರೂ ಕೂಡ ಆತನು ಬೇಕೆಂತಲೇ ವಿಷಯಾಚರಣೆಯನ್ನು ಮಾಡಿದರೆ ಆತನಿಗೆ ದಾರುಣವಾದ ಬಾಧಕವಾಗುವುದು ।೩೬೧॥ ಸಕಲ ಶಾಸ್ತ್ರಗಳ ಶ್ರವಣವು "ಕರತಲಾಮಲಕವತ್" ಆದರೂ ಕೂಡ ಆ ಯಾವ ಶಬ್ದಜ್ಞಾನ ಸಂಪನ್ನನಿಗೆ ವಿಷಯಾಚರಣೆಯು ಬಾಧಕವಾಗುವುದು ।೩೬೨॥ ಪ್ರಾಣಾಯಾಮದಿಂದ ಪ್ರಾಣ ಅಪಾನಗಳ ಸಮತೆಯನ್ನು ಸಾಧಿಸಿ ಹಾಗೂ ಮೃತ್ಯುವನ್ನು ಗೆಲ್ಲುವಷ್ಟು ಸಾಮರ್ಥ್ಯವು ಪ್ರಾಪ್ತವಾದರೂ ಕೂಡ ವಿಷಯಾಚರಣೆಯು ಬಾಧಕವಾಗುವುದು ।೩೬೩॥ ಶಾಪವನ್ನು ಕೊಡುವ ಮತ್ತು ವರದಾನವನ್ನು ನೀಡುವ ಸಮರ್ಥ ಪುರುಷರು ನಾವು ಜ್ಞಾನಸಂಪನ್ನರು ಎಂದು ತಿಳಿದುಕೊಂಡು ವಿಷಯಾಚರಣೆಯನ್ನು ಮಾಡುತ್ತಿರಲು ಅವರಿಗೆ ಅತಿಶಯವಾಗಿ ಬಾಧಕವಾಗುವುದು ।೩೬೪॥ ಯೋಗ ಸಾಮರ್ಥ್ಯದಿಂದ ಕುಳಿತ ಆಸನವನ್ನು ಮೇಲಕ್ಕೇರಿಸುವುದು, ಸಿದ್ಧಿಗಳ ಅನೇಕ ಚಮತ್ಕಾರಗಳನ್ನು ತೋರಿಸುವುದು ಇಂತಹ ಸಿದ್ಧಪುರುಷರಿಗೂ ಕೂಡ ವಿಷಯಗಳ ಭೋಗವು ಬಾಧಕವಾಗುವುದು ।೩೬೫॥ ಹೀಗಿದ್ದ ಮೇಲೆ ಇತರ ಸಾಮಾನ್ಯರ ಎಲ್ಲಿಯ ಕಥೆ ? ಇದನ್ನು ಏನೆಂದು ಹೇಳಬೇಕು ? ಮಂತ್ರಗಳ ಅನುಷ್ಠಾನದ ಯೋಗದಿಂದ ಮಂತ್ರದೇವತೆಗಳು ಪ್ರಸನ್ನರಾದರೂ ಸಹ ಇವರಿಗೂ ಕೂಡ ಈ ಯಾವ ವಿಷಯವಾಸನೆಯು ಬಾಧಕವಾಗುವುದು ।೩೬೬॥ ಸ್ವಲ್ಪ ಏನಾದರೂ ಆತ್ಮಾನುಭವ ಪ್ರಾಪ್ತವಾಗುತ್ತಲೇ ನಾನು ಮುಕ್ತನು ಎಂಬ ಭಾವನೆಯು ಉಂಟಾಗುತ್ತಿರುವುದು. ಇವರಿಗೂ ಕೂಡ ಈ ವಿಷಯಗಳ ಸಂಗತಿಯು ನಿಶ್ಚಯಪೂರ್ವಕವಾಗಿ ಬಾಧಕವಾಗುವುದು।೩೬೭॥ ಸ್ವತಃ ಅಭಿಮಾನದ ಸರ್ವನಾಶವನ್ನು ಮಾಡಿ ತಾನು ನಿತ್ಯ ಮುಕ್ತನಾಗುವುದಿಲ್ಲವೋ ಅಲ್ಲಿಯವರೆಗೆ ವಿಷಯಾಚರಣೆಯು ತಪ್ಪದೇ ಬಾಧಕವಾಗುವುದು ।೩೬೮॥ ಚಕಮಕಿಯಿಂದ ನಿರ್ಮಾಣವಾಗಿರುವ ಅಗ್ನಿಯ ಸಣ್ಣ ಕಿಡಿಯು ದೊಡ್ಡದಾದ ತೊಲೆ ಕಂಭ ಸುಡಲಾರದು. ಅದರಂತೆ ಪ್ರಥಮ ರಂಗದ ಬ್ರಹ್ಮಪ್ರಾಪ್ತಿಯು ಪ್ರಪಂಚ ಸಂಗತಿಯಿಂದ ನಾಶವಾಗುವುದು ।೩೬೯॥ ಹೇ ಉದ್ಧವಾ, ವಿಷಯಗಳು ಇವು ಮಿಥ್ಯಾ ಹಾಗೂ ಮಾಯಿಕವಾಗಿರುವುವು. ಇವುಗಳನ್ನು ಭೋಗಿಸುವಾಗ ಎಲ್ಲಿಯವರೆಗೆ ಮನಸ್ಸಿಗೆ ಸಂತೋಷವಾಗುವುದೋ, ಅಲ್ಲಿಯವರೆಗೆ ಈ ವಿಷಯಗಳು ನಿಶ್ಚಯಪೂರ್ವಕವಾಗಿ ಬಾಧಕವಾಗಿಯೇ ಇರುವುವು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೭೦॥ ಈ ಯಾವ ವಿಷಯ ಸೇವನೆಯ ತ್ಯಾಗವನ್ನು ಮಾಡುವುದಕ್ಕಾಗಿ ಮತ್ತು ದೇಹದ ಅಭಿಮಾನವನ್ನು ನಾಶ ಮಾಡುವುದಕ್ಕಾಗಿ ನನ್ನ ಭಜನೆಯನ್ನು ಅತ್ಯಂತ ಆವಶ್ಯಕವಾಗಿ ಮಾಡಬೇಕು ।೩೭೧॥ ವ್ರತ, ತಪ, ತೀರ್ಥ, ದಾನ ಇವುಗಳನ್ನು ಎಷ್ಟೇ ಮಾಡಲಿ ಅಥವಾ ಯೋಗ, ಯಾಗ ಯಜನಗಳನ್ನು ಸಾಧಿಸಲಿ ಹಾಗೂ ವೇದಶಾಸ್ತ್ರ, ಪುರಾಣಗಳ ಶ್ರವಣ ಮಾಡಲಿ ಆದರೂ ಕೂಡ ಈ ದೇಹಾಭಿಮಾನವು ನಾಶವಾಗುವುದಿಲ್ಲ ।೩೭೨॥

ಭಾವೇ ಕರಿತಾ ಮಾಝೇ ಭಜನ । ಸಮೂಳ ಸುಟೇ ದೇಹಾಭಿಮಾನ । ಭಕ್ತಿ ಉತ್ತಮೋತ್ತಮ ಸಾಧನ । ಭಕ್ತೀ ಆಧೀನ ಪರಬ್ರಹ್ಮ ।।೩೭೩।। ಜ್ಞಾನ ವೈರಾಗ್ಯ ನಿವೃತ್ತೀ । ಧೃತಿ ಶಾಂತಿ ಬ್ರಹ್ಮಸ್ಥಿತೀ । ಯಾಂಚಿ ಜನನೀ ಮಾಝೀ ಭಕ್ತೀ । ಜಾಣ ನಿಶ್ಚಿತೀ ಉದ್ಧವಾ ।।೩೭೪।। ಚಹೂ ಮುಕ್ತೀಹೂನಿ ವರತೀ । ಉಲ್ಹಾಸೇ ನಾಂದೇ ಮಾಝೀ ಭಕ್ತೀ । ಮಾಝೇ ಭಕ್ತೀಚೀ ಅನಿವಾರ ಶಕ್ತೀ । ತಿಸೀ ಮೀ ನಿಶ್ಚಿತೀ ಆಕಳಲೋ ।।೩೭೫।। ಮಾಝೇ ಸ್ವರೂಪ ಅನಂತ ಅಪಾರ । ತೋ ಮೀ ಭಕ್ತೀನೇ ಆಕಳಲೋ ಸಾಚಾರ । ಯಾಲಾಗೀ ನಿಜಭಕ್ತಾಂಚೇ ದ್ವಾರ । ಮೀ ನಿರಂತರ ಸೇವಿತಸೇ ।।೩೭೬।। ಭಕ್ತೀನೇ ಆಕಳಲೋ ಜಾಣ । ಯಾಲಾಗೀ ಮೀ ಭಕ್ತಾ ಅಧೀನ । ಮಾಝಿಯೇ ಭಕ್ತೀಚೇ ಮಹಿಮಾನ । ಮಜಹೀ ಸಂಪೂರ್ಣ ಕಳೇನಾ ।।೩೭೭।। ಬಹುತೀ ಕರೂನಿ ಮಾಝೀ ಭಕ್ತೀ । ಮಜ ತೇ ಮೋಕ್ಷ ಚಿ ಮಾಗತೀ । ಉಪೇಕ್ಷೂನಿ ಚಾರೀ ಮುಕ್ತೀ । ಕರೀ ಮದ್ಭಕ್ತೀ ತೋ ಧನ್ಯ ।।೩೭೮।। ಐಶೀ ಜೇಥ ಮಾಝೀ ಭಕ್ತೀ । ತೇಥ ಪಾಯಾ ಲಾಗತೀ ಚಾರೀ ಮುಕ್ತೀ । ತ್ಯಾಸೀ ಸರ್ವಸ್ವೇ ಮೀ ಶ್ರೀಪತೀ । ವಿಕಿಲೋ ನಿಶ್ಚಿತೀ ಭಾವಾರ್ಥೇ ।।೩೭೯।। ತೇ ಭಕ್ತೀಚ ಮುಖ್ಯ ಜ್ಯಾಸ ಸಾಧನ । ಯಾಲಾಗೀ ಮೀ ತ್ಯಾ ಭಕ್ತಾ ಅಧೀನ । ತ್ಯಾಚೇ ಕದಾಕಾಳೇ ವಚನ । ಮೀ ಅಣುಪ್ರಮಾಣ ನುಲ್ಲಂಘೀ ।।೩೮೦।। ತೇ ಮಜ ಮ್ಹಣತೀ ಹೋಈ ಸಗುಣ । ತೈ ಮೀ ಸಿಂಹ ಸೂಕರ ಹೋಯ ಆಪಣ । ತ್ಯಾಲಾಗೀ ಮೀ ವಿದೇಹೀ ಜಾಣ । ಹೋಯ ಸಂಪೂರ್ಣ ದೇಹಧಾರೀ ।।೩೮೧।। ಏಕಾ ಅಂಬರೀಷಾಕಾರಣೇ । ದಹಾ ಜನ್ಮ ಮ್ಯಾ ಸೋಸಣೇ । ಅಜತ್ವಾಚಾ ಭಂಗ ಸಾಹಣೇ । ಪರೀ ಭಕ್ತಾಂಸೀ ಉಣೇ ಯೇಊ ನೇದೀ ।।೩೮೨।। ದ್ರೌಪದೀ ನಗ್ನ ಕರಿತಾ ತಾಂತಡೀ । ತಿಳಭರೀ ಹೋ ನೇದೀಂಚ ಉಘಡೀ । ಝಾಲೋ ನೇಸವಿತಾ ವಸ್ತ್ರೇ ಕೋಡೀ । ಭಕ್ತಸಾಂಕಡೀ ಮೀ ನಿವಾರೀ ।।೩೮೩।। ತೋ ಮೀ ಭಕ್ತಸಾಹಾಕಾರೀ । ಅಜನ್ಮಾ ತ್ಯಾಂಚೇನಿ ಜನ್ಮ ಧರೀ । ಸಮಹೀ ವರ್ತೇ ಅರಿಮಿತ್ರೀ । ಭಕ್ತಕೈವಾರೀ ಹೋಊನಿಯಾ ।।೩೮೪।। ಜೋ ಮಾಝಿಯಾ ಭಕ್ತಾ ಹಿತಕಾರೀ । ತೋ ಮಜ ಪರಮ ಮಿತ್ರ ಸಂಸಾರೀ । ಜೋ ಮಾಝ್ಯಾ ಭಕ್ತಾಂಸೀ ವೈರ ಕರೀ । ತೋ ಮೀ ನಾನಾಪರೀ ನಿರ್ದಳೀ ।।೩೮೫।। ಐಸಾ ಮೀ ಭಕ್ತಸಾಹ್ಯ ಶ್ರೀಕೃಷ್ಣ । ತ್ಯಾ ಮಾಝೇ ನಿಜಭಜನ । ನ ಕರೂನಿಯಾ ಅಭಾಗ್ಯ ಜನ । ಅಧಃಪತನ ಪಾವತೀ ।।೩೮೬।।

ಆದರೆ ಶುದ್ಧ ನಿಃಸ್ವಾರ್ಥ ಭಾವದಿಂದ ನನ್ನ ಭಜನೆಯನ್ನು ಮಾಡಿದರೆ,ದೇಹದ ಅಭಿಮಾನವು ಸಂಪೂರ್ಣವಾಗಿ ಇಲ್ಲದಾಗುವುದು. ಇದಕ್ಕೆ ಭಕ್ತಿಯೊಂದೇ ಉತ್ತಮೋತ್ತಮ ಸಾಧನೆಯಾಗಿರುವುದು. ಕಾರಣ ಪರಬ್ರಹ್ಮವು ಈ ಭಕ್ತಿಯ ಆಧೀನವಾಗಿರುವುದು ।।೩೭೩।। ಹೇ ಉದ್ಧವಾ, ಜ್ಞಾನ, ವೈರಾಗ್ಯ, ನಿವೃತ್ತೀ, ಧೃತಿ, ಶಾಂತೀ, ಬ್ರಹ್ಮಸ್ಥಿತೀ ಇವುಗಳ ಜನನೀ ನನ್ನ ಭಕ್ತಿಯೇ ಆಗಿರುವುದು, ಇದನ್ನು ಲಕ್ಷದಲ್ಲಿಡು ।।೩೭೪।। ನನ್ನ ಭಕ್ತಿಯು ನಾಲ್ಕೂ ಮುಕ್ತಿಗಳ ಮೇಲೆ ಉಲ್ಹಾಸದಿಂದ ವರ್ತಿಸುತ್ತಿರುವುದು. ನನ್ನ ಭಕ್ತಿಯ ಶಕ್ತಿಯು ಮಹತ್ತರವಾಗಿರುವುದು. ಇದರಿಂದ ನಾನು ಕಟ್ಟಲ್ಪಟ್ಟಿರುವೆನು ।।೩೭೫।। ವಾಸ್ತವಿಕವಾಗಿ ನನ್ನ ಸ್ವರೂಪವು ಅನಂತ, ಅಪಾರವಾಗಿರುವುದು. ಆದರೆ ನಾನು ಭಕ್ತಿಯಿಂದ ಬಂಧಿಸಲ್ಪಟ್ಟಿರುವನು. ಆದ್ದರಿಂದ ನಾನು ನಿರಂತರವಾಗಿ ಭಕ್ತರ ಬಾಗಿಲಲ್ಲಿ ನಿಂತುಕೊಂಡಿರುವೆನು ।।೩೭೬।। ನಾನು ಭಕ್ತಿಯಿಂದ ಬದ್ಧನಾಗಿರುವನು, ಆದ್ದರಿಂದ ನಾನು ಭಕ್ತರ ಆಧೀನನು. ನನ್ನ ಭಕ್ತಿಯ ಮಹಿಮೆಯು ನನಗೂ ಸಹ ಸಂಪೂರ್ಣ ತಿಳಿಯದು ।।೩೭೭।। ಎಷ್ಟೋ ಜನರು ನನ್ನ ಭಕ್ತಿಯನ್ನು ಮಾಡಿ ನನ್ನಲ್ಲಿ ಮೋಕ್ಷವನ್ನು ಬೇಡಿರುವರು. ಆದರೆ ನಾಲ್ಕೂ ಮುಕ್ತಿಗಳನ್ನು ತಿರಸ್ಕರಿಸಿ ಯಾರು ನಿಃಸ್ವಾರ್ಥ ಭಾವದಿಂದ ನನ್ನ ಭಕ್ತಿಯನ್ನು ಮಾಡುವನೋ, ಆತನೇ ನಿಜವಾಗಿ ಧನ್ಯ ಧನ್ಯನಾಗಿರುವನು ।।೩೭೮।। ಹೀಗೆ ಎಲ್ಲಿ ನಿಃಸ್ವಾರ್ಥ ಭಕ್ತಿಯು ಇರುವುದೋ, ಅಲ್ಲಿ ನಾಲ್ಕೂ ಮುಕ್ತಿಗಳು ಕಾಲಿಗೆ ಬೀಳುವುವು. ಅವರ ಶುದ್ಧವಾದ ಭಾವಾರ್ಥಕ್ಕೆ ನಾನು ಸರ್ವಸ್ವದಿಂದ ಮಾರಿಕೊಂಡಿರುವೆನು ।।೩೭೯।। ಈ ಭಕ್ತಿಯೇ ಅವರ ಮುಖ್ಯ ಸಾಧನೆಯಾಗಿರುವುದು. ಆ ಭಕ್ತರ ಸ್ವಾಧೀನ ನಾನಾಗಿರುವೆನು. ಅವರ ವಚನಗಳನ್ನು ನಾನು ಯಾವ ಕಾಲಕ್ಕೂ ಅಣುಮಾತ್ರವೂ ಉಲ್ಲಂಘಿಸಲಾರೆನು ।।೩೮೦।। ಅವರು ನನಗೆ ಸಗುಣ ರೂಪದಿಂದ ಪ್ರಕಟನಾಗು ಎಂದು ಹೇಳುವರು. ನಾನು ನೃಸಿಂಹ, ವರಾಹ ಇತ್ಯಾದಿ ಅವತಾರಗಳನ್ನು ಧರಿಸಿದೆನು. ನಾನು ವಿದೇಹಿಯಾಗಿದ್ದರೂ ಅವರಿಗಾಗಿ ಪೂರ್ಣವಾಗಿ ದೇಹಧಾರಿಯಾದೆನು ।।೩೮೧।। ಒಬ್ಬ ಅಂಬರೀಷನಿಗಾಗಿ ನಾನು ಹತ್ತು ಜನ್ಮಗಳನ್ನು ಎತ್ತಿದೆನು. ನಾನು ನನ್ನ ಅಜತ್ವದ ಭಂಗವನ್ನು ಸಹಿಸಿಕೊಳ್ಳುವೆನು. ಆದರೆ ನನ್ನ ಭಕ್ತರಿಗೆ ಯಾವ ಕೊರತೆಯನ್ನೂ ಬರಗೊಡಲಾರೆನು ।।೩೮೨।। ಕೌರವರು ದ್ರೌಪದಿಯನ್ನು ಬತ್ತಲು ಮಾಡುವ ಪ್ರಯತ್ನ ಮಾಡಿದರು. ಅಲ್ಲಿ ನಾನು ಕೂಡಲೇ ಧಾವಿಸಿ, ಆಕೆಯನ್ನು ಎಳ್ಳಷ್ಟೂ ಕೂಡ ಬತ್ತಲು ಮಾಡಿಕೊಡದೇ ಕೋಟಿಗಟ್ಟಲೇ ವಸ್ತ್ರಗಳನ್ನು ಪೂರೈಸಿದೆನು. ಹೀಗೆ ನಾನು ಭಕ್ತರ ಸಂಕಟಗಳನ್ನು ನಿವಾರಣೆ ಮಾಡುತ್ತಿರುವೆನು ।।೩೮೩।। ನಾನು ಭಕ್ತರ ಸಹಾಯಕರ್ತನಾಗಿರುವೆನು. ನಾನು ಜನ್ಮರಹಿತನಾಗಿದ್ದರೂ ಸಹ ಅವರಿಗಾಗಿ ಜನ್ಮವನ್ನು ಧರಿಸುತ್ತಿರುವೆನು. ನಾನು ಭಕ್ತರಿಗೆ ಬೆನ್ನಿಗೆ ಹಾಕಿಕೊಂಡು ಶತ್ರುಮಿತ್ರರಲ್ಲಿ ಸಮಾನವಾಗಿ ವರ್ತಿಸುವೆನು ।।೩೮೪।। ಯಾರು ನನ್ನ ಭಕ್ತರ ಹಿತವನ್ನು ಮಾಡುತ್ತಿರುವರೋ, ಅವರು ಸಂಸಾರದಲ್ಲಿ ನನ್ನ ಪರಮ ಮಿತ್ರರಾಗಿರುವರು. ಮತ್ತು ಯಾರು ನನ್ನ ಭಕ್ತರಲ್ಲಿ ವೈರವನ್ನು ಮಾಡುವರೋ, ಅವರನ್ನು ನಾನು ನಾನಾ ಪ್ರಕಾರವಾಗಿ ನಾಶಪಡಿಸುವೆನು ।।೩೮೫।। ಈ ಪ್ರಕಾರವಾಗಿ ಶ್ರೀಕೃಷ್ಣನಾದ ನಾನು ಸಹಾಯಕರ್ತನಾಗಿದ್ದರೂ ಕೂಡ ಯಾರು ನನ್ನ ಭಜನೆಯನ್ನು ಮಾಡುವುದಿಲ್ಲವೋ, ಅವರು ದುರ್ದೈವಿಗಳಾಗಿ ಅಧಃಪತನ ಹೊಂದುವರು ।।೩೮೬।।

ಮ್ಹಣಶೀ ''ಪಾಪ ಅಸತಾ ಶರೀರೀ । ತುಝೇ ಭಜನ ಘಡೇ ಕೈಶಾ ಪರೀ ''। ಸಕಳ ಪಾಪಾಂಚೀ ಬೋಹರೀ । ಮಾಝೇ ನಾಮ ಕರೀ ನಿಮೇಷಾರ್ಧೇ ।೩೮೭।। ಐಕೋನಿ ನಾಮಾಚಾ ಗಜರ । ಪಳೇ ಮಹಾಪಾತಕಾಂಚಾ ಸಂಭಾರ । ನಾಮಾಪಾಶೀ ಮಹಾಪಾಪಾಸೀ ಥಾರ । ಅಣುಮಾತ್ರ ಅಸೇನಾ ।೩೮೮।। ಮಾಝಿಯಾ ನಿಜನಾಮಾಪುಢೇ । ಸಕಳ ಪಾಪ ತತ್ಕಾಳ ಉಡೇ । ತೇ ಪಾಪ ನಾಮಸ್ಮರತ್ಯಾಕಡೇ । ಕೇವೀ ಬಾಪುಡೇ ಯೇಊ ಶಕೇ ।೩೮೯।। ಅವಚಟೇ ಸೂರ್ಯ ಅಂಧಾರೀ ಬುಡೇ । ತರೀ ಪಾಪ ನ ಯೇ ಭಕ್ತಾಕಡೇ । ಭಕ್ತಚರಣರೇಣು ಜೇಥ ಪಡೇ । ತೇಥ ಸಮೂಲ ಉಡೇ ಪಾಪರಾಶೀ ।೩೯೦।। ಮಾಝೇ ನಾಮ ಬ್ರಹ್ಮಾಸ್ತ್ರ ಜಗೀ । ಮಾಹಪಾಪ ತೇ ಬಾಪುಡೇ ಮುಂಗೀ । ನಾಮಾಪುಢೇ ಉರಾವಯಾಲಾಗೀ । ಕಸ ತ್ಯಾಚೇ ಅಂಗೀ ಅಸೇನಾ ।೩೯೧।। ಮಾಝೇ ನಾಮಾಚಾ ಪ್ರತಾಪ ಐಸಾ । ಮಾ ಮಾಝೇ ಭಕ್ತೀಚೀ ಕೋಣ ದಶಾ । ಪಡಲಿಯಾ ಮದ್ಭಕ್ತೀಚಾ ಠಸಾ । ತೋ ನಾಗವೇ ಸಹಸಾ ಕಳಿಕಾಳಾ ।೩೯೨।। ಯಾಲಾಗೀ ಮಾಝೇ ಭಜನ । ನಿರ್ದಳೀ ದೇಹಾಭಿಮಾನ । ಮಾಝೇ ನಿಜಭಜನೇ ವೀಣ ಜಾಣ । ದೇಹಾಭಿಮಾನ ತುಟೇನಾ ।೩೯೩।। ಜೇಣೇ ತುಟೇ ದೇಹಾಭಿಮಾನ । ತೇ ಕೈಸೇ ಮ್ಹಣಶೀ ತುಝೇ ಭಜನ । ಅಭೇದಭಾವೇ ಭಕ್ತಿ ಪೂರ್ಣ । ತೇಣೇ ದೇಹಾಭಿಮಾನ ನಿರ್ದಳೇ ।೩೯೪।। ಭಗವದ್ಭಾವ ಸರ್ವಾಭೂತೀ । ಯಾ ನಾಂವ ಗಾ ''ಅಭೇದ ಭಕ್ತೀ''। ಹೇ ಆಕಳಲ್ಯಾ ಭಜನಸ್ಥಿತೀ । ಅಹಂಕೃತೀ ಉರೇನಾ ।೩೯೫।। ಮಾಝೇ ನಾಮ ಜ್ಯಾಚೇ ವದನೀ । ಮಾಝೀ ಕೀರ್ತಿ ಜ್ಯಾಚೇ ಶ್ರವಣೀ । ಮಾಝಾ ಭಾವ ಜ್ಯಾಚೇಮನೀ । ಜ್ಯಾಚೇ ಕರಾದಿಚರಣೀ ಕ್ರಿಯಾ ಮಾಝೀ ।೩೯೬।। ಜೋ ಜಾಗೃತೀಮಾಜೀ ಪಾಹೇ ಮಾತೇ । ಜೋ ಸ್ವಪ್ನೀ ದೇಖೇ ಮಜ ಏಕಾಂತೇ । ಜೋ ಮಜವೇಗಳೇ ಚಿತ್ತ ರಿತೇ । ನ ರಾಖೇ ನಿಶ್ಚಿತೇ ನಿಜನಿಷ್ಠಾ ।೩೯೭।। ಯಾಪರೀ ಭಜನಸ್ಥಿತೀ । ತ್ರಿಗುಣ ವಿಕಾರ ಮಾವಳತೀ । ತೇಣೇ ಅಹಂಕಾರಾಚೀ ನಿವೃತ್ತೀ । ವಿಷಯಾಸಕ್ತಿ ನಿರ್ದಳೇ ।೩೯೮।। ಭಕ್ತಾಂಸೀ ವಿಷಯಸೇವನ । ಸರ್ವಥಾ ಬಾಧಕ ನವ್ಹೇ ಜಾಣ । ತೋ ವಿಷಯ ಕರೀ ಮದರ್ಪಣ । ತೇಣೇ ಬಾಧಕಪಣ ನವ್ಹೇ ತ್ಯಾಸೀ ।೩೯೯।। ನಾನಾ ಸಾಧನೇ ವಿಷಯೋ ತ್ಯಾಗಿತೀ । ತ್ಯಾಗಿತಾ ಪರಮ ದುಃಖೀ ಹೋತೀ । ಭಕ್ತ ವಿಷಯೋ ಭಗವಂತೀ ಅರ್ಪಿತೀ । ತೇಣೇ ಹೋತೀ ನಿತ್ಯಮುಕ್ತ ।೪೦೦।।

ದೇಹದಲ್ಲಿ ಪಾಪವು ತುಂಬಿಕೊಂಡಿರಲು ನಿನ್ನ ಭಜನೆಯು ಹೇಗೆ ಸಾಧಿಸುವುದು ? ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು, ನನ್ನ ನಾಮವು ಕ್ಷಣಾರ್ಧದಲ್ಲಿ ಸರ್ವಪಾಪಗಳನ್ನು ನಾಶಪಡಿಸುವುದು ।೩೮೭।। ನಾಮದ ಗರ್ಜನೆಯನ್ನು ಕೇಳುತ್ತಲೇ ಮಹಾಪಾಪಗಳ ಸಮುದಾಯವು ಓಡಲಾರಂಭಿಸುವುದು. ನಾಮದ ಸಮೀಪ ಪಾತಕಗಳಿಗೆ ಉಳಿದುಕೊಳ್ಳಲು ಸ್ವಲ್ಪವೂ ಕೂಡ ಸ್ಥಳವಿರುವುದಿಲ್ಲ ।೩೮೮।। ನನ್ನ ನಾಮದ ಎದುರಿನಲ್ಲಿ ಸರ್ವ ಪಾಪಗಳು ತಕ್ಷಣ ಹಾರಿ ಹೋಗುವುವು. ಪಾಪ ! ಆ ಪಾತಕಗಳು ನಾಮಸ್ಮರಣೆ ಮಾಡುವವರ ಎದುರಿಗೆ ಬರಲು ಹೇಗೆ ಸಾಧ್ಯ ? ।೩೮೯।। ಸೂರ್ಯನು ಒಂದು ವೇಳೆ ಆಕಸ್ಮಾತಾಗಿ ಕತ್ತಲೆಯಲ್ಲಿ ಮುಳುಗಬಹುದಾದರೆ ಮಾತ್ರ ಭಕ್ತರತ್ತ ಪಾಪಗಳು ಬರಬಹುದು. ಭಕ್ತರ ಚರಣರಜ ಎಲ್ಲಿ ಬೀಳುವುವೋ, ಅಲ್ಲಿ ಪಾಪಗಳ ಬೇರುಗಳೇ ಮುರಿದು ಬೀಳುವುವು ।೩೯೦।। ನಿಜವಾಗಿಯೂ ನನ್ನ ನಾಮವೆಂದರೆ ಜಗತ್ತಿನಲ್ಲಿ ಒಂದು ಬ್ರಹ್ಮಾಸ್ತ್ರವೇ ಆಗಿರುವುದು. ಮಹಾಪಾಪಗಳು ಪಾಪ ! ಇರುವೆ ಸಮಾನವಾಗಿರುವುವು. ನಾಮದ ಎದುರಿನಲ್ಲಿ ನಿಲ್ಲಲು ಇವುಗಳಿಗೆ ಯಾವ ಶಕ್ತಿ ಬರಬೇಕು ? ।೩೯೧।। ನನ್ನ ನಾಮದಲ್ಲಿ ಇಂತಹ ಪ್ರತಾಪವು ಇದ್ದ ಮೇಲೆ ನನ್ನ ಭಕ್ತಿಯ ಸ್ಥಿತಿಯನ್ನು ಏನೆಂದು ವರ್ಣಿಸಬೇಕು ? ನನ್ನ ಭಕ್ತಿಯ ಮುದ್ರೆಯು ಬಿದ್ದಿತೆಂದರೆ ಆತನು ಕಲಿಕಾಲನಿಗೂ ಕೂಡ ಬೆದರಲು ಸಾಧ್ಯವಿಲ್ಲ ।೩೯೨।। ಆದ್ದರಿಂದ ಭಜನೆಯು ಇದು ದೇಹಾಭಿಮಾನದ ನಾಶವನ್ನು ಮಾಡುವುದು. ನನ್ನ ಭಜನೆ ಬಿಟ್ಟರೆ ದೇಹದ ಅಭಿಮಾನವು ಬಿಡಲು ಸಾಧ್ಯವೇ ಇಲ್ಲ ।೩೯೩।। ಯಾವುದರಿಂದ ದೇಹಾಭಿಮಾನವು ಮುರಿದುಬೀಳಬೇಕಾದರೆ ಆ ನಿನ್ನ ಭಜನೆಯು ಎಂತಹದ್ದು ? ಹೀಗೆಂದು ನೀನು ಕೇಳಬಹುದು, ಅದಕ್ಕಾಗಿ ಹೇಳುವೆನು, ಕೇಳು. ಅಭೇದ ಭಾವದಿಂದ ಪೂರ್ಣ ಭಕ್ತಿಯನ್ನು ಮಾಡಿದರೆ ದೇಹಾಭಿಮಾನವು ಸಹಜವಾಗಿಯೇ ಇಲ್ಲದಾಗಿಬಿಡುವುದು ।೩೯೪।। ಸರ್ವಪ್ರಾಣಿಮಾತ್ರರಲ್ಲಿ ಭಗವದ್ಭಾವನೆಯನ್ನು ಇಡುವುದೇ ಅಭೇದಭಕ್ತಿಯಾಗಿರುವುದು. ಈ ಭಜನೆಯು ಸಾಧ್ಯವಾಗುತ್ತಲೇ ಅಹಂಕಾರವು ಸ್ವಲ್ಪವೂ ಕೂಡ ಉಳಿಯಲು ಸಾಧ್ಯವಿಲ್ಲ ।೩೯೫।। ಯಾರ ಮುಖದಲ್ಲಿ ಸತತವಾಗಿ ನನ್ನ ನಾಮವಿರವುದೋ, ಯಾರು ನನ್ನ ಕೀರ್ತಿಯನ್ನು ಯಾವಾಗಲೂ ಕೇಳುತ್ತಿರುವರೋ, ಯಾರ ಮನದಲ್ಲಿ ನನ್ನ ಭಕ್ತಿಯ ಭಾವವಿರುವುದೋ, ಮತ್ತು ಯಾರ ಕರಚರಣಗಳಿಂದ ನನ್ನ ಸೇವೆಯು ಸಾಧಿಸುತ್ತಿರುವುದೋ ।೩೯೬।। ಆತನು ಜಾಗೃತಿಯಲ್ಲಿ ಎಲ್ಲೆಲ್ಲಿಯೂ ನನ್ನನ್ನೇ ನೋಡುವನು, ಆತನು ಸ್ವಪ್ನದಲ್ಲಿ ನನ್ನ ಒಬ್ಬನನ್ನೇ ಕಾಣುತ್ತಿರುವನು. ಆತನು ನಿಜವಾಗಿಯೂ ನನ್ನ ಹೊರತಾಗಿ ತನ್ನ ಚಿತ್ತವನ್ನು ಕ್ಷಣ ಕೂಡ ಖಾಲೀ ಇಡುವುದಿಲ್ಲ ।೩೯೭।। ಈ ಪ್ರಕಾರದ ಭಜನೆಯಿಂದ ಮೂರೂ ಗುಣಗಳು ಇಲ್ಲದಾಗಿಬಿಡುವುವು. ಈ ಕಾರಣವಾಗಿ ಅಹಂಕಾರದ ನಿವೃತ್ತಿಯಾಗಿ ವಿಷಯದ ಆಸಕ್ತಿಯು ನಾಶಹೊಂದುವುದು ।೩೯೮।। ಇಂತಹ ಭಕ್ತರಿಗೆ ವಿಷಯಗಳ ಸೇವನೆಯಿಂದ ಎಂದಿಗೂ ಬಾಧಕವಾಗುವುದಿಲ್ಲ. ಕಾರಣವೇನೆಂದರೆ ಅವರು ಸರ್ವ ವಿಷಯಗಳನ್ನು ನನಗೆ ಅರ್ಪಣೆಯನ್ನು ಮಾಡಿಬಿಡುವರು. ಆದ್ದರಿಂದ ವಿಷಯಗಳಿಂದ ಇವರಿಗೆ ಯಾವ ಬಾಧೆಯು ಆಗುವುದಿಲ್ಲ ।೩೯೯।। ಅನೇಕ ಪ್ರಕಾರದ ಕಠೋರ ಸಾಧನೆಗಳನ್ನು ಮಾಡುತ್ತ ಕೆಲವರು ವಿಷಯಗಳ ತ್ಯಾಗವನ್ನು ಮಾಡುತ್ತಿರುವರು. ಅವರಿಗೆ ಈ ವಿಷಯಗಳನ್ನು ಬಿಡುವ ಕಾಲಕ್ಕೆ ಅತಿಶಯವಾಗಿ ದುಃಖವಾಗುತ್ತಿರುವುದು. ಆದರೆ ನನ್ನ ಭಕ್ತರು ತಮ್ಮ ವಿಷಯಗಳನ್ನು ತಪ್ಪದೇ ಭಗವಂತನಿಗೆ ಅರ್ಪಿಸಿ ಬಿಡುವರು. ಇದರಿಂದ ಇವರು ನಿತ್ಯಮುಕ್ತರಾಗುವರು ।೪೦೦।।

ಗ್ರಾಸೋಗ್ರಾಸೀ ಹರಿಸ್ಮರಣ । ತೈ ಅನ್ನಚಿ ಹೋಯ ಪರಬ್ರಹ್ಮ ಪೂರ್ಣ । ತ್ಯಾಸೀ ನಾಹೀ ಬಾಧಕಪಣ । ಬ್ರಹ್ಮಾರ್ಪಣ ಸಹಜೇಚಿ ॥೪೦೧॥ ಭಕ್ತಾಂಚೀ ಭಜನಸ್ಥಿತೀ । ವಿಷಯೀ ಮದ್ರೂಪತಾ ಭಾವಿತೀ । ತೇಣೇ ಮಾವಳೇ ವಿಷಯಸ್ಫೂರ್ತೀ। ನವ್ಹೇ ತೀ ಯಾ ರೀತೀ ಬಾಧಕ॥೪೦೨॥ ಯಾಪರೀ ಮಾಝೇ ಭಜನ। ಕರೀ ಮನೋಮಳ ಕ್ಷಾಳಣ । ವಿಕಾರೇಸೀ ತಿನ್ಹೀ ಗುಣ । ಕರೀ ನಿರ್ದಳಣ ದೇಹಾಭಿಮಾನ ॥೪೦೩॥ ಐಶೀ ನ ಕರಿತಾ ಮಾಝೀ ಭಕ್ತೀ । ನ ನಿರ್ದಾಳಿತಾ ಅಹಂಕೃತೀ । ಕರಣೇ ಜೇ ವಿಷಯಾಸಕ್ತೀ । ತೇ ಜಾಣ ನಿಶ್ಚಿತೀ ಬಾಧಕ ॥೪೦೪॥ ನಾತುಡತಾ ಅಕರ್ತಾತ್ಮಬೋಧ । ಆದರೂ ನಯೇ ವಿಷಯಸಂಬಂಧ । ವಿಷಯಾಂಚಾ ವಿಷಯ ಉದ್ಬೋಧಕ । ಅತಿಅಶುದ್ಧ ಬಾಧಕ ॥೪೦೫॥ ಜರೀ ವಿಷಯ ಮಿಥ್ಯಾ ಮಾಯಿಕ । ತರೀ ಸಾಧಕಾ ಅತಿಬಾಧಕ । ಯೇಚಿ ಅರ್ಥೀ ಯದುನಾಯಕ । ವಿಶದಾರ್ಥೇ ದೇಖ ಸಾಂಗತ ॥೪೦೬॥

ಯಥಾಮಯೋಽಸಾಧುಚಿಕಿತ್ಸಿತೋ ನೃಣಾಂ ಪುನಃ ಪುನಃ ಸಂತುದತಿ ಪ್ರರೋಹಾನ್ ।
ಏವಂ ಮನೋಽಪಕ್ವಕಷಾಯಕರ್ಮ ಕುಯೋಗಿನಂ ವಿಧ್ಯತಿ ಸರ್ವಸಂಗಮ್ ॥೨೮॥

ಅರ್ಥ :- ಅಯೋಗ್ಯ ಉಪಚಾರದಿಂದ ರೋಗವು ಪುನಃ ತಲೆದೋರಿ ರೋಗಿಗೆ ದುಃಖವನ್ನು ಕೊಡುವಂತೆ, ವಿಕೃತ ಪ್ರವೃತ್ತಿಗಳಿಂದ ಪೂರ್ಣ ಪರಿಶುದ್ಧವಾಗದ ಮನಸ್ಸು ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತವಾಗುವುದು. ಪರಿಶುದ್ಧವಾದ ಯೋಗಿಯನ್ನು ಪುನಃ ಪುನಃ ಪೀಡಿಸುವುದು.

ವೈದ್ಯ ನೇಣೇ ರೋಗಾಚೇ ಲಕ್ಷಣ । ನೇಣೇ ಧಾತು ಪುಷ್ಟಕೀ ಕ್ಷೀಣ । ನೇಣೇ ಪಥ್ಯ ನಾ ಅನುಪಾನ । ನಾಡೀಜ್ಞಾನ ಕಳೇನಾ ॥೪೦೭॥ ತ್ಯಾಪಾಸಾವ ವೋಖದ ಘೇತಾ । ಪುನಃ ಪುನಃ ವಾಢೇ ವ್ಯಥಾ । ತೇವೀ ಅವೈರಾಗ್ಯೇ ತ್ಯಾಗ ಕರಿತಾ । ಸಾಧಕಾ ಬಾಧಕತಾ ಅನಿವಾರ ॥೪೦೮॥ ಹೃದಯೀ ನಾಹೀ ವಿಷಯನಿವೃತ್ತಿ । ಬಾಹ್ಯ ತ್ಯಾಗೇ ವಾಢವೀ ವಿರಕ್ತೀ । ಐಶೀ ಜೇ ಬಹಿರ್ಮುದ್ರಾಸ್ಥಿತೀ । ತೇ ಜಾಣ ನಿಶ್ಚಿತೀ ''ಕುಯೋಗ'' ॥೪೦೯॥ ಸಾಂಡೋನಿಯಾ ಭಗವದ್ಭಜನ । ವೇದವಿಧಿಮಾರ್ಗವಿಹೀನ । ಐಸೇ ಜೇ ಕಾ ತ್ಯಾಗಲಕ್ಷಣ । ''ಕಯೋಗ'' ಸಂಪೂರ್ಣ ತ್ಯಾ ನಾಂವ ॥೪೧೦॥ ದ್ರವ್ಯದಾರಾವಿಷಯಾಸಕ್ತೀ । ದೃಢ ವಾಸನಾ ಅಸತಾ ಚಿತ್ತೀ । ಬಾಹ್ಯ ತ್ಯಾಗ ಮಿಥ್ಯಾ ವಿರಕ್ತೀ । ''ಕುಯೋಗ'' ನಿಶ್ಚಿತೀ ಯಾ ನಾಂವ ॥೪೧೧॥ ಆಮ್ಹೀ ರಾಜಯೋಗೀ ಅತಿಶ್ರೇಷ್ಠ । ಮ್ಹಣೋನಿ ವಿಷಯ ಭೋಗೀ ಯಥೇಷ್ಟ । ವೋಸ ಪಡಲೀ ವೈರಾಗ್ಯಪೇಠ । ''ಕುಯೋಗ'' ಚೋಖಟ ಯಾ ನಾಂವ ॥೪೧೨॥

ತುತ್ತುತುತ್ತಿಗೂ ಹರಿಸ್ಮರಣೆಯನ್ನು ಮಾಡಲು ಆಗ ಆ ಅನ್ನವು ಪೂರ್ಣ ಬ್ರಹ್ಮವಾಗುವುದು. ಅದರ ಬಾಧಕತೆಯು ಇಲ್ಲದಾಗಿ ಅದು ಸಹಜವಾಗಿಯೇ ಬ್ರಹ್ಮಾರ್ಪಣೆಯಾಗುವುದು ॥೪೦೧॥ ಭಕ್ತರ ಭಜನೆ ಮಾಡುವ ಪದ್ಧತಿಯು ಹೇಗೆ ಇರುವುದೆಂದರೆ, ಅವರು ವಿಷಯಗಳಲ್ಲಿಯೂ ಕೂಡ ನನ್ನದೇ ಸ್ವರೂಪದ ಭಾವನೆಯನ್ನು ಇಡುವರು. ಇದರಿಂದ ಅವರ ವಿಷಯ ಸ್ಫೂರ್ತಿಯು ಇಲ್ಲದಾಗುವುದು ಹಾಗೂ ವಿಷಯಗಳು ಬಾಧಿಸಲಾರವು ॥೪೦೨॥ ಈ ರೀತಿಯಾಗಿ ನನ್ನ ಭಜನೆಯನ್ನು ಮಾಡಿದರೆ ಅದು ಮನದ ಮಲಿನತ್ವವನ್ನು ನಿರ್ಮೂಲಗೊಳಿಸುವುದು ಮತ್ತು ಮೂರೂ ಗುಣಗಳ ವಿಕಾರ ಸಮೇತವಾಗಿ ದೇಹದ ಅಭಿಮಾನವನ್ನು ನಾಶಪಡಿಸುವುದು ॥೪೦೩॥ ಹೀಗಿದ್ದರೂ ಇಂತಹ ಭಕ್ತಿಯನ್ನು ಮಾಡದೇ, ತಮ್ಮ ಅಹಂಕಾರವನ್ನು ನಾಶಪಡಿಸದೇ, ವಿಷಯಾಸಕ್ತಿಯಲ್ಲಿ ತೊಡಗಿದವರು ಇವರು ನಿಶ್ಚಯವಾಗಿಯೂ ಬಂಧನದಲ್ಲಿ ಸಿಕ್ಕಿಕೊಳ್ಳುವರು ॥೪೦೪॥ ಅಕರ್ತಾತ್ಮ ಬೋಧವು ಪರಿಪೂರ್ಣವಾಗಿ ಮನದಟ್ಟಾಗುವವರೆಗೂ ವಿಷಯಗಳ ಸಂಬಂಧವನ್ನು ಮಾಡಕೂಡದು. ಕಾರಣ ವಿಷಯಸ್ಮರಣೆಯು ಇದು ಅತ್ಯಂತ ಅಶುದ್ಧ ಹಾಗೂ ಬಾಧಕವಾಗಿರುವುದು ॥೪೦೫॥ ವಿಷಯಗಳು ಮಿಥ್ಯೆಯಾಗಿ ಮಾಯಿಕವಾಗಿದ್ದರೂ ಕೂಡ ಸಾಧಕರಿಗೆ ಅತ್ಯಂತ ಬಾಧಕವಾಗುತ್ತಿರುವುವು. ಈ ವಿಷಯನ್ನೇ ಕುರಿತು ಶ್ರೀಕೃಷ್ಣನು ಮುಂದೆ ಸ್ಪಷ್ಟವಾಗಿ ವಿಸ್ತಾರಪೂರ್ವಕವಾಗಿ ಹೇಳುತ್ತಿರುವನು ॥೪೦೬॥

ಯಾವ ಒಬ್ಬ ವೈದ್ಯನಿಗೆ ರೋಗದ ಲಕ್ಷಣವು ತಿಳಿಯುವುದಿಲ್ಲ, ರೋಗಿಯು ಸಶಕ್ತನೋ, ಕ್ಷೀಣಿಸಿರುವನೋ ಎಂಬುವುದು ತಿಳಿಯುವುದಿಲ್ಲ ಆತನಿಗೆ ಪಥ್ಯ ಮತ್ತು ಅನುಪಾನ ಇವುಗಳ ಜ್ಞಾನವೂ ಇಲ್ಲ. ಹಾಗೆಯೇ ಆತನಿಗೆ ನಾಡೀಜ್ಞಾನದ ಅನುಭವವಿಲ್ಲ ॥೪೦೭॥ ಇಂತಹ ವೈದ್ಯನಲ್ಲಿ ಔಷಧವನ್ನು ತೆಗೆದುಕೊಂಡರೆ ಬಾಧೆಯು ಪುನಃ ಪುನಃ ಬೆಳೆಯುತ್ತ ಸಾಗವುದು. ಅದರಂತೆ ವಿರಕ್ತಿ ವಿಲ್ಲದೇ ವಿಷಯಗಳ ತ್ಯಾಗವನ್ನು ಮಾಡಿದರೆ ಸಾಧಕರಿಗೆ ಇದು ಅತಿಶಯವಾಗಿ ಬಾಧಕವಾಗುವುದು ॥೪೦೮॥ ಅಂತಃಕರಣದಲ್ಲಿ ವಿಷಯನಿವೃತ್ತಿಯು ಇಲ್ಲದಿದ್ದರೂ ಕೆಲವರು ಬಾಹ್ಯತ್ಯಾಗದಿಂದ ಮಾತ್ರ ತಮ್ಮ ವೈರಾಗ್ಯವನ್ನು ಪ್ರದರ್ಶಿಸುತ್ತಿರುವರು. ಇವರ ಇಂತಹ ತ್ಯಾಗಕ್ಕೆ ''ಕುಯೋಗ''ವೆಂದು ಕರೆಯುವರು ॥೪೦೯॥ ಕೆಲವರು ಭಗದ್ಭಜನೆಯನ್ನು ಬಿಟ್ಟು ಬಿಡುವರು, ವೇದವಿಧಿಗಳ ಮಾರ್ಗವನ್ನು ತ್ಯಜಿಸುವರು. ಇಂತಹ ತ್ಯಾಗದ ನಾಮವು ''ಕುಯೋಗ''ವೆಂದು ಪೂರ್ಣವಾಗಿ ತಿಳಿಯಬೇಕು ॥೪೧೦॥ ದ್ರವ್ಯ, ಸ್ತ್ರೀ ಹಾಗೂ ಇತರ ನಾನಾ ಪ್ರಕಾರಗಳ ವಿಷಯಗಳು ಚಿತ್ತದಲ್ಲಿ ದೃಢವಾಗಿ ಆಸಕ್ತಿ ಇರಲು, ಹೊರಗೆ ನೋಡಲು ವಿಷಯಗಳ ಸುಳ್ಳು ತ್ಯಾಗವನ್ನು ಮಾಡಿದಂತೆ ತೋರಿಸುತ್ತ ವಿರಕ್ತಿಯನ್ನು ಪ್ರದರ್ಶಿಸುವುದಕ್ಕೆ ''ಕುಯೋಗ'' ಎಂದು ತಿಳಿಯಬೇಕು ॥೪೧೧॥ ನಾವು ರಾಜಯೋಗಿಗಳು, ಅತಿಶ್ರೇಷ್ಠರು ಎಂದು ಹೇಳಿಕೊಳ್ಳುತ್ತ ಯಥೇಚ್ಛವಾಗಿ ವಿಷಯಗಳನ್ನು ಭೋಗಿಸುತ್ತಿರುವುದು, ಅಂಗದಲ್ಲಿ ಎಳ್ಳಷ್ಟೂ ಕೂಡ ವಿರಕ್ತಿವಿಲ್ಲದಿರುವುದು, ಇದಕ್ಕೆ ''ಕುಯೋಗ''ವೆಂದು ಕರೆಯುವರು ॥೪೧೨॥

ಆಪಲೀ ಚೋರೂನಿ ವಿಷಯಾಸಕ್ತೀ । ಬಾಹ್ಯ ಮಿರವೀ ಮಿಥ್ಯಾ ವಿರಕ್ತಿ । ಹೇಚಿ "ಕುಯೋಗಾಚೀ" ಸ್ಥಿತೀ । ಜಾಣ ನಿಶ್ಚಿತೀ ಉದ್ಧವಾ ॥೪೧೩॥ ಐಶಿಯಾ ಕುಯೋಗಿಯಾ ಜಾಣ । ಪುಢತೀ ಜನ್ಮ ಪುಢತೀ ಮರಣ । ದುಃಖಾವರ್ತೀ ಪಡಿಲೇ ಪೂರ್ಣ । ಸೋಡವೀ ಕೋಣ ತಯಾಂಸೀ ॥೪೧೪॥ ನವ್ಹೇಚಿ ಇಹಲೋಕೀಂಚಾ ವಿಷಯಭೋಗ । ನವ್ಹೇಚಿ ಪರಮಾರ್ಥೀ ಶುದ್ಧ ತ್ಯಾಗ । ಅಂತರಲಾ ಉಭಯ ಪ್ರಯೋಗ । ದುಃಖಭಾಗ ಕುಯೋಗ್ಯಾ ॥೪೧೫॥ ಪರಮಾರ್ಥೇ ತ್ಯಾಗಸಾಧನ । ಕರಿತಾ ಅಂತರಾಯ ಆಲೇ ವಿಘ್ನ । ತಯಾಸೀ ಅವಗತೀ ನವ್ಹೇ ಜಾಣ । ಜರೀ ಅನುತಾಪ ಪೂರ್ಣ ಸ್ವಯೇ ಉಪಜೇ ॥೪೧೬॥

ಕುಯೋಗಿನೋ ಯೇ ವಿಹಿತಾಂತರಾಯೈರ್ಮನುಷ್ಯಭೂತೈಸ್ತ್ರಿದಶೋಪಸೃಷ್ಟೈಃ ।
ತೇ ಪ್ರಾಕ್ತನಾಭ್ಯಾಸಬಲೇನಭೂಯೋ ಯುಂಜಂತಿ ಯೋಗಂ ನ ತು ಕರ್ಮ ತಂತ್ರಮ್ ॥೨೯॥

ಅರ್ಥ:- ದೇವತೆ, ಮನುಷ್ಯ, ಮಹಾಭೂತ ಇವುಗಳಿಂದ ಆದ ವಿಘ್ನ ಕಾರಣಕ್ಕೆ ಯಾವ ಯೋಗಿಯು ಅಭ್ಯಾಸದಿಂದ ಪರಾವೃತ್ತನಾಗಿರುವನೋ, ಆ ಯೋಗಿಯು ಮುಂದಿನ ಜನ್ಮದಲ್ಲಿ, ಈ ಜನ್ಮದಲ್ಲಿ ಮಾಡಿದ ಅಭ್ಯಾಸದ ಬಲದಿಂದ ಪುನಃ ಯೋಗದ ವಿಧಿಪೂರ್ವಕವಾಗಿ ಅಭ್ಯಾಸವನ್ನು ಮಾಡಿ ಸಿದ್ಧನಾಗುವನು. ಈತನು ಫಲೋತ್ಪಾದಕ ಕರ್ಮಗಳಲ್ಲಿ ಸಿಲುಕಿಕೊಳ್ಳಲಾರನು.

ಬ್ರಹ್ಮಜ್ಞಾನಾರ್ಥ ಕೇಲಾ ತ್ಯಾಗ । ಅಭ್ಯಾಸಹೀ ಮಾಂಡಿಲಾ ಸಾಂಗ । ಮಧ್ಯೇಚಿ ಪೋಢವಲಾ ಉಪಸರ್ಗ । ವಿಘ್ನೇ ಅನೇಕ ಸಾಧಕಾ ॥೪೧೭॥ ಉಪಜೇ ಕಾಮಾಚಾ ಅತಿವೇಗ । ಖವಳೇ ಕ್ರೋಧಾಚೀ ಲಗಬಗ । ಶಿಷ್ಯ ಸುಹೃದಾಂಚೇ ಉದ್ವೇಗ । ಮನಿ ಉಬಗ ಸ್ವಹಿತಾಚಾ ॥೪೧೮॥ ದಾರಾರೂಪೇ ಉಪಸರ್ಗ । ದೇವ ದೇತೀ ಪೈ ಅನೇಗ । ಐಸಾ ಅಂತರಾಯೀ ಯೋಗಭಂಗ । ಹೋತಾ ಅನುರಾಗ ಉದ್ಧರೀ ॥೪೧೯॥ ಅಭ್ಯಾಸ ಕರಿತಾ ಅತಿನಿಗುತೀ । ದೈವೇ ಅಂತರಾಯ ಯೋಗಾ ಯೇತೀ । ತೇಥ ನಿರ್ವೇದ ಉಪಜಲ್ಯಾ ಚಿತ್ತೀ । ತೋಚಿ ಅಭ್ಯಾಸ ಪುಢತೀ ಕರೀ ಯೋಗೀ ॥೪೨೦॥ ನಿಜಯೋಗ ಅಭ್ಯಾಸಬಳೇ । ಜಾಳೂ ಅಂತರಾಯದೋಷ ಸಮೂಳೇ । ಪರೀ ಕರ್ಮಾಚೀ ಕರ್ಮಠ ಜಾಳೇ । ಯೋಗೀ ಕದಾಕಾಳೇ ಸ್ಪರ್ಶೇನಾ ॥೪೨೧॥ ಅಂತರಾಯೀ ಯೋಗ ಛಳಿತಾ ಜಾಣ । ಜರೀ ಯೋಗೀ ಪಾವಲಾ ಮರಣ । ತರೀ ತೋ ನವ್ಹೇ ಕರ್ಮಾಧೀನ । ಹೇ ಶ್ಲೋಕಾರ್ಥೇ ಶ್ರೀಕೃಷ್ಣ ಬೋಲಿಲಾ ಸ್ವಯೇ ॥೪೨೨॥ ಪೂರ್ವೀ ಕರಿತಾ ಯೋಗಸಾಧನ । ಅದೃಷ್ಟಗತೀ ಅಂತರಾಯ ಜಾಣ । ಯೋಗೀ ಪಾವಲ್ಯಾಹೀ ಮರಣ । ಗತೀ ಕೋಣ ತಯಾಸೀ ॥೪೨೩॥

ಹೇ ಉದ್ಧವಾ, ತಮ್ಮ ಅಂತಃಕರಣದಲ್ಲಿರುವ ವಿಷಯಾಸಕ್ತಿಯನ್ನು ಕದ್ದು ಮುಚ್ಚಿಟ್ಟು ಹೊರಗೆ ವೈರಾಗ್ಯತನವನ್ನು ಪ್ರದರ್ಶಿಸುವ ಕೃತಿಗೆ "ಕುಯೋಗ"ವೆಂದು ನೀನು ನಿಶ್ಚಯಪೂರ್ವಕವಾಗಿ ತಿಳಿ ॥೪೧೩॥ ಇಂತಹ ಕುಯೋಗಿಗಳು ಜನ್ಮಮರಣಗಳ ಚಕ್ರದಲ್ಲಿ ಸಿಕ್ಕಿಕೊಳ್ಳುವರು. ದುಃಖದ ತಿರುಗಣೆಯಲ್ಲಿ ತಿರುಗುತ್ತಲೇ ಇರುವರು. ಇವರಿಗೆ ಈ ದುಃಖದಿಂದ ಯಾರು ಬಿಡಿಸಬೇಕು? ॥೪೧೪॥ ಇಹಲೋಕದ ವಿಷಯಭೋಗಗಳು ಇವೂ ಕೂಡ ಪೂರ್ಣವಾಗದೇ ಹಾಗೂ ಪರಮಾರ್ಥಕ್ಕಾಗಿ ಪೂರ್ಣ ತ್ಯಾಗವೂ ಇರದೇ, ಇವು ಎರಡಕ್ಕೂ ದೂರಾಗಿ ಕುಯೋಗಿಯು ದುಃಖಪಡುತ್ತಿರುವನು ॥೪೧೫॥ ಪರಮಾರ್ಥ ಪ್ರಾಪ್ತಿಗಾಗಿ ವಿಷಯ ಭೋಗಗಳನ್ನು ತ್ಯಜಿಸುವ ಸಾಧನೆಗಳನ್ನು ಮಾಡುತ್ತಿರಲು ಆಗ ಅದಕ್ಕಾಗಿ ಎಷ್ಟೇ ಅಡಚಣೆಗಳು ಹಾಗೂ ವಿಘ್ನಗಳು ನಾನಾ ರೀತಿಯಲ್ಲಿ ಬಂದೊದಗಿದರೂ ಕೂಡ ಯಾರಿಗೆ ಪರಿಪೂರ್ಣವಾಗಿ ಅನುತಾಪವಾಗಿರುವುದೋ ಆತನಿಗೆ ಎಂದಿಗೂ ದುರ್ಗತಿಯು ಪ್ರಾಪ್ತವಾಗುವುದಿಲ್ಲ. ಇದನ್ನು ನೀನು ನಿಶ್ಚಯಪೂರ್ವಕವಾಗಿ ಲಕ್ಷದಲ್ಲಿಡು ॥೪೧೬॥

ಸಾಧಕನು ಬ್ರಹ್ಮಜ್ಞಾನಕ್ಕಾಗಿ ವಿಷಯಗಳನ್ನು ತ್ಯಜಿಸಿ ಹಾಗೂ ಆತನು ಏಕಾಗ್ರತೆಯಿಂದ ಅಭ್ಯಾಸ ಮಾಡುತ್ತಿರಲು ಆಗ ಮಧ್ಯದಲ್ಲಿಯೇ ಏನೇನೋ ಅನೇಕ ವಿಘ್ನಗಳು ನಿರ್ಮಾಣವಾಗುವುವು ॥೪೧೭॥ ಕಾಮದ ಪ್ರಬಲವಾದ ವಿಕಾರಗಳು ಅಂತಃಕರಣದಲ್ಲಿ ಹುಟ್ಟಿಕೊಳ್ಳುವುವು, ಕ್ರೋಧಾಗ್ನಿಯು ಉದ್ರೇಕಗೊಳ್ಳುವುದು. ಶಿಷ್ಯರಿಂದ ಹಾಗೂ ಆಪ್ತೇಷ್ಟರಿಂದ ಪೀಡೆಯುಂಟಾಗುವುದು. ಇದಲ್ಲದೇ ಮನದಲ್ಲಿ ಸ್ವಹಿತಕ್ಕಾಗಿ ಬೇಸರ ಉಂಟಾಗುವುದು ॥೪೧೮॥ ಸ್ತ್ರೀ ರೂಪದಿಂದ ಅನೇಕ ದೇವತೆಗಳೂ ಕೂಡ ಪೀಡೆಯನ್ನು ಕೊಡುವುವು. ಇಂತಹ ವಿಘ್ನಗಳಿಂದ ಯೋಗದ ಭಂಗವಾಗುವುದು. ಅಲ್ಲಿ ಅನುರಾಗವು ಆತನ ಉದ್ಧಾರವನ್ನು ಮಾಡುತ್ತಿರುವುದು ॥೪೧೯॥ ಹೀಗೆ ಏಕನಿಷ್ಠೆಯಿಂದ ಅಭ್ಯಾಸವನ್ನು ಮಾಡುತ್ತಿದ್ದರೂ ದೈವಯೋಗದಿಂದ ಯೋಗದಲ್ಲಿ ವಿಘ್ನಗಳು ಬರುತ್ತಿರುವುವು. ಆ ಸಮಯಕ್ಕೆ ಅಂತಃಕರಣದಲ್ಲಿ ವೈರಾಗ್ಯವು ಪ್ರಕಟಗೊಂಡರೆ ಮಾತ್ರ ಯೋಗಿಯು ಮುಂದಾಗಿ ಉತ್ಸಾಹದಿಂದ ಅಭ್ಯಾಸವನ್ನು ಮಾಡಲಾರಂಭಿಸುವನು ॥೪೨೦॥ ಯೋಗ ಅಭ್ಯಾಸದ ಸಾಮರ್ಥ್ಯದಿಂದ ಆತನು ತನಗೆ ಒದಗಿದ ಎಲ್ಲ ವಿಘ್ನಗಳ ಸಮೂಲ ದೋಷಗಳನ್ನು ಸುಟ್ಟು ಹಾಕುವನು. ಇಂತಹ ಯೋಗಿಯು ಕರ್ಮಗಳ ಕರ್ಮಠತನಕ್ಕೆ ಎಂದಿಗೂ ಸ್ಪರ್ಶ ಮಾಡಲಾರನು ॥೪೨೧॥ ಯೋಗವನ್ನು ಸಾಧಿಸುವ ಸಮಯದಲ್ಲಿ ಆತನಿಗೆ ವಿಘ್ನಗಳು ಒದಗಲು ಆಗ ಆತನು ಮರಣವನ್ನು ಹೊಂದಿದರೆ ಮುಂದಿನ ಜನ್ಮದಲ್ಲಿಯೂ ಸಹ ಕರ್ಮಾಧೀನನಾಗುವುದಿಲ್ಲ. ಇದನ್ನೇ ಶ್ರೀಕೃಷ್ಣನು ಶ್ಲೋಕಾರ್ಥದಲ್ಲಿ ಸ್ವತಃ ಹೇಳಿರುವನು ॥೪೨೨॥ ಪೂರ್ವದಲ್ಲಿ ಯೋಗಸಾಧನೆಯನ್ನು ಮಾಡುತ್ತಿರುವ ಸಮಯದಲ್ಲಿ ದೈವಯೋಗದಿಂದ ಆ ಯೋಗಿಯು ಮೃತನಾಗಲು ಆಗ ಆತನಿಗೆ ಯಾವ ಗತಿಯು ಪ್ರಾಪ್ತವಾಗುವುದು ॥೪೨೩॥

ಅಂತರಾಯಪರತಂತ್ರ । ಝಾಲ್ಯಾ ಯೋಗೀ ಪಾವೇ ಜನ್ಮಮಾತ್ರ । ತೇಥಹೀ ನಾದರೀ ಕರ್ಮತಂತ್ರ । ಪೂರ್ವಾಭ್ಯಾಸೇ ಸ್ವತಂತ್ರ ಪ್ರವರ್ತೇ ಯೋಗೀ ।೫೨೪॥ ಮಾರ್ಗಸ್ಥಾ ಮಾರ್ಗೀ ಗುಂತೀ । ಪಡೋನಿಯಾ ಲಾಗಲೀ ವಸ್ತೀ । ತೋ ಯೇರೆ ದಿವಸೀ ತೇಚಿ ಪಂಥೀ । ಲಾಗೇ ನಿಶ್ಚಿತೀ ನಿಜಮಾರ್ಗಾ ।೫೨೫॥ ಯಾಪರೀ ಯೋಗಿಯಾ ಆಪಣ । ಪ್ರಾಕ್ತನಸಂಸ್ಕಾರೇ ಜಾಣ । ಯೋಗಾಭ್ಯಾಸ ಕರೀಪೂರ್ಣ । ಪರೀ ಕರ್ಮಾಧೀನ ಕದಾ ನವ್ಹೇ ।೫೨೬॥ ಸಾಧನೀ ಅಸತಾ ಮಾಝೀ ಭಕ್ತೀ । ತೈ ಅಣುಮಾತ್ರ ನ ಪಡೇ ಗುಂತೀ । ಮೀ ಭಕ್ತ ಕೈವಾರೀ ಶ್ರೀಪತೀ । ರಾಖೇ ಅಹೋರಾತೀ ನಿಜಭಕ್ತಾ ।೫೨೭॥ ಜೇಥ ಮಾಝೀ ಭಕ್ತೀಚೀ ಆವಡೀ । ತೇಥ ವಿಘ್ನೇ ಕೇವೀ ರಿಘತೀ ಬಾಪುಡೀ। ಮಹಾವಿಘ್ನಾಂಚಿಯಾ ಕೋಡೀ । ಮಾಝೇ ನಾಮ ವಿಭಾಂಡೀ ಉದ್ಧವಾ ।೫೨೮॥ ಭಜನಹೀನ ಯೋಗೀಶ್ವರ । ಅಂತರಾಯೇ ಪಾವೇ ಜನ್ಮಾಂತರ । ತರೀ ತೋ ಕರ್ಮೀ ಕರ್ಮಪರ । ನವ್ಹೇ ಸಾಚಾರ ಪೂರ್ವಸಂಸ್ಕಾರೇ ।೫೨೯॥ ''ಜೇ ಪಾವಲೇ ಜೀವ ಜೀವನ್ಮುಕ್ತೀ । ತೇಹೀ ಪ್ರಾರಬ್ಧಕರ್ಮೇ ವರ್ತತೀ । ಮಾ ಯೋಗಭ್ರಷ್ಟ ಕರ್ಮ ತ್ಯಾಗಿತೀ । ಘಡೇ ಕೈಶಾ ರೀತೀ'' ಮ್ಹಣಶೀಲ ।೫೩೦॥ ಮುಕ್ತಾಚೇ ಜೇ ಮೋಕ್ಷಸ್ಥಾನ । ತೇಚಿ ಸಾಧಕಾಂಚೇ ಮುಖ್ಯ ಸಾಧನ । ಯಾಲಾಗೀ ತ್ಯಾ ದೋಘಾಂಹೀ ಜಾಣ । ಕರ್ಮಬಂಧನ ಬಾಧೀನಾ ।೫೩೧॥ ಮೀ ಏಕ ಕರ್ಮಕರ್ತಾ । ಐಶೀ ಜ್ಯಾಸ ನುಪಜೇ ಅಹಂತಾ । ತ್ಯಾಸೀಹೀ ಜಾಣ ಸರ್ವಥಾ । ಕರ್ಮಬಂಧಕತಾ ಸ್ಪರ್ಶೇನಾ ।೫೩೨॥

ಕರೋತಿ ಕರ್ಮ ಕ್ರೀಯತೇ ಚ ಜಂತುಃ ಕೇನಾಪ್ಯಸೌ ಚೋದಿತ ಆನಿಪಾತಾತ್ ।
ನ ತತ್ರ ವಿದ್ವಾನ್ ಪ್ರಕೃತೌ ಸ್ಥಿತೋಽಪಿ ನಿವೃತ್ತತೃಷ್ಣಃ ಸ್ವಸುಖಾನುಭೂತ್ಯಾ ।೩೦॥

ಅರ್ಥ:- ಜೀವವು ಸಂಸ್ಕಾರ ಇತ್ಯಾದಿಗಳಿಂದ ಪ್ರೇರಿತವಾಗಿ ಜನ್ಮದಿಂದ ಮೃತ್ಯುವರೆಗೆ ಕರ್ಮಗಳಲ್ಲಿ ಇರುತ್ತಿರುವುದು. ಅದರಲ್ಲಿ ಇಷ್ಟ-ಅನಿಷ್ಟ ಬುದ್ಧಿಯೊಂದಿಗೆ ಹರ್ಷ, ವಿಷಾದ ಇತ್ಯಾದಿ ವಿಕಾರಗಳನ್ನು ಪ್ರಾಪ್ತಮಾಡಿಕೊಳ್ಳುವುದು. ಆದರೆ ಯಾವನು ತತ್ವಗಳ ಸಾಕ್ಷಾತ್ಕಾರವನ್ನು ಪ್ರಾಪ್ತಮಾಡಿಕೊಳ್ಳುವನೋ, ಅವನು ಪ್ರಕೃತಿಯಲ್ಲಿ ಸ್ಥಿರವಾಗಿ ಇರುತ್ತಿದ್ದರೂ ಕೂಡ ಅದರಲ್ಲಿ ಇಷ್ಟ-ಅನಿಷ್ಟ ಬುದ್ಧಿಯೊಂದಿಗೆ ಹರ್ಷ ವಿಷಾದ ಇತ್ಯಾದಿ ವಿಕಾರಗಳಿಂದ ಯುಕ್ತನಾಗುವುದಿಲ್ಲ. ಕಾರಣ ಆನಂದ ಸ್ವರೂಪ ಆತ್ಮದ ಸಾಕ್ಷಾತ್ಕಾರದಿಂದ ಆತನ ಸಂಸಾರ ಸಂಬಂಧವಾದ ಸರ್ವ ಆಶೆ, ಆಕಾಂಕ್ಷೆಗಳು ಅಳಿಕಿಹೋಗಿರುವುವು.

ಜನ್ಮಾ ಪಾಸೂನಿ ಮರಣಾಂತ । ಪ್ರಾಣೀ ಜೇ ಜೇ ಕರ್ಮ ಕರಿತ । ತೇ ತೇ ಕೋಣೇ ಏಕ ಪ್ರಾಚೀನ ಏಥ । ಅಸೇ ವರ್ತವೀತ ನಿಜಸತ್ತಾ ।।೫೩೩॥ ತೇಥ ಸಜ್ಞಾನ ಆಣಿ ಅಜ್ಞಾನ । ಪ್ರಾಚೀನ ಕರ್ಮೇ ಕರ್ಮಾಧೀನ । ಅಜ್ಞಾನಾಸೀ ಅಹಂಕರ್ತೇಪಣ । ಜ್ಞಾತೇ ನಿರಭಿಮಾನ ವರ್ತತೀ ಕರ್ಮೀ ।೫೩೪॥

ವಿಘ್ನಗಳ ಆಧೀನನಾಗಿದ್ದಕ್ಕೆ ಯೋಗಿಯು ಪುನಃ ಜನ್ಮವನ್ನು ಧರಿಸುವನು. ಆದರೆ ಈ ಜನ್ಮದಲ್ಲಿ ಆತನು ಕರ್ಮಗಳ ಚಕ್ರದಲ್ಲಿ ಸಿಲುಕಿಕೊಳ್ಳುವುದಿಲ್ಲ. ಪೂರ್ವ ಜನ್ಮದ ಸಂಸ್ಕಾರದಂತೆ ಆತನು ಸ್ವತಂತ್ರವಾಗಿ ಯೋಗಮಾರ್ಗದಲ್ಲಿ ಪ್ರವತ್ತನಾಗುವನು ।೫೨೪॥ ಒಬ್ಬ ಪ್ರವಾಸಿಯು ದಾರಿ ನಡೆಯುತ್ತಿರಲು, ಆಗ ಆತನಿಗೆ ಯಾವುದೋ ಅಡಚಣೆಯುಂಟಾಗಲು ಆಗ ಆತನು ಅಲ್ಲಿಯೇ ವಸತಿ ಮಾಡುವನು. ಮರುದಿನ ಪುನಃ ಆತನು ತನ್ನ ನಿರ್ಣಯದ ಮಾರ್ಗದಲ್ಲಿ ಮುನ್ನಡೆಯುವನು ।೫೨೫॥ ಇದೇ ಪ್ರಕಾರವಾಗಿ ಯೋಗಿಯು ತನ್ನ ಪೂರ್ವಜನ್ಮದ ಸಂಸ್ಕಾರಾನುಸಾರವಾಗಿ ಪೂರ್ಣ ಯೋಗಾಭ್ಯಾಸವನ್ನು ಮಾಡುವನು. ಆತನು ಕರ್ಮಗಳ ಆಧೀನ ಎಂದಿಗೂ ಆಗುವುದಿಲ್ಲ ।೫೨೬॥ ಆತನ ಸಾಧನೆಯಲ್ಲಿ ನನ್ನ ಭಕ್ತಿಯು ಇದ್ದರೆ, ಆತನಿಗೆ ಸ್ವಲ್ಪವೂ ಕೂಡ ವಿಘ್ನವು ಬರುವುದಿಲ್ಲ ಕಾರಣವೇನೆಂದರೆ, ಶ್ರೀಪತಿಯಾದ ನಾನು ಭಕ್ತರ ಕೈವಾರಿಯಾಗಿರುವೆನು. ನಾನು ನನ್ನ ಭಕ್ತರನ್ನು ಹಗಲು ರಾತ್ರಿ ಸಂರಕ್ಷಣೆಯನ್ನು ಮಾಡುತ್ತಿರುವೆನು ।೫೨೭॥ ಎಲ್ಲಿ ನನ್ನ ಭಕ್ತಿಯ ಆಸಕ್ತಿ ಇರುವುದೋ ಅಲ್ಲಿ ವಿಘ್ನಗಳಾದರೂ ಹೇಗೆ ನಿರ್ಮಾಣವಾಗಬೇಕು ? ನನ್ನ ಕೇವಲ ನಾಮವೂ ಕೂಡ ಕೋಟ್ಯಾವಧಿ ವಿಘ್ನಗಳ ನಾಶವನ್ನು ಮಾಡುವುದು ।೫೨೮॥ ಭಜನೆಯನ್ನು ಮಾಡದ ಯೋಗೀಶ್ವರರಿಗೆ ಅಭ್ಯಾಸದಲ್ಲಿ ವಿಘ್ನಗಳು ಉಂಟಾದಾಗ ಅವರು ಪುನಃ ಜನ್ಮವನ್ನು ಧರಿಸುವರು. ಆದರೆ ಆತನೂ ಕೂಡ ಪೂರ್ವ ಸಂಸ್ಕಾರಯೋಗದಿಂದ ನಿಜವಾಗಿಯೂ ಕರ್ಮಗಳಲ್ಲಿ ಸಿಲುಕಿಕೊಂಡು ಇರಲಾರನು ।೫೨೯॥ ಜೀವನ್ಮುಕ್ತರಾದ ಪುರುಷರೂ ಕೂಡ ಪ್ರಾರಬ್ಧಕರ್ಮಾನುಸಾರವಾಗಿ ವರ್ತಿಸುತ್ತ ಇರುತ್ತಿರಲು, ಯೋಗಭ್ರಷ್ಟರು ಕರ್ಮದ ತ್ಯಾಗವನ್ನು ಮಾಡುವರು. ಇದು ಹೇಗೆ ಸಾಧ್ಯ ? ಅದನ್ನು ಹೇಳುವೆನು, ಕೇಳು ।೫೩೦॥ ಮುಕ್ತನ ಯಾವ ಮೋಕ್ಷ ಲಕ್ಷಣವು ಅದೇ ಸಾಧಕನ ಮುಖ್ಯ ಸಾಧನೆಯಾಗಿರುವುದು. ಆದ್ದರಿಂದ ಈ ಈರ್ವರಿಗೂ ಕರ್ಮಬಂಧನವು ಬಾಧಿಸುವುದಿಲ್ಲ ।೫೩೧॥ ''ನಾನೊಬ್ಬ ಕರ್ಮಕರ್ತನಾಗಿರುವೆನು'' ಎಂಬ ಈ ಅಹಂಕಾರವು ಯಾರ ಮನದಲ್ಲಿ ನಿರ್ಮಾಣವಾಗುವುದಿಲ್ಲವೋ, ಆತನಿಗೆ ಕರ್ಮಬಂಧನವು ಎಂದಿಗೂ ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ ।೫೩೨॥

ಹುಟ್ಟಿದಾರಭ್ಯ ಮರಣವಾಗುವವರೆಗೂ ಮನುಷ್ಯನು ಯಾವ ಯಾವ ಕರ್ಮಗಳನ್ನು ಮಾಡುತ್ತಿರುವನೋ, ಅವೆಲ್ಲವೂ ಯಾವುದೋ ಒಂದು ಸನಾತನ ತತ್ವವು ತನ್ನ ಸತ್ತೆಯಿಂದ ಆತನಕಡೆಯಿಂದ ಮಾಡಿಸಿಕೊಳ್ಳುತ್ತಿರುವುದು ।೫೩೩॥ ಜ್ಞಾನಿಯಾಗಿರಲಿ ಅಥವಾ ಅಜ್ಞಾನಿಯಾಗಿರಲಿ ಇವರಿಬ್ಬರೂ ಕೂಡ ಪ್ರಾರಬ್ಧಾನುಸಾರವಾಗಿ ಕರ್ಮಗಳ ಆಧೀನರಾಗಿರುವರು. ಅಜ್ಞಾನಿಗೆ ''ನಾನು ಕರ್ತನಾಗಿರುವೆನು'' ಎಂಬ ಅಹಂಕಾರವಿರುವುದು. ಆದರೆ ಜ್ಞಾನಿಯು ಅಭಿಮಾನರಹಿತನಾಗಿ ಕರ್ಮಗಳನ್ನು ಮಾಡುತ್ತಿರುವನು ।೫೩೪॥

ಮ್ಹಣಸೀ ದೇಹೀ ಅಸತಾ ಪ್ರಾಣ । ಕೇವೀ ನುಠೀ ದೇಹಾಭಿಮಾನ । ಜ್ಞಾತಾ ಸ್ವಸುಖಾನುಭವೇ ಪೂರ್ಣ । ಅಹಂಕರ್ತೇಪಣ ತ್ಯಾ ಸ್ಫುರೇನಾ ।೪೩೫॥ ದೋರಾಚೇ ಸರ್ಪಾಚಾ ಮಹಾಧಾಕ । ದೋರ ಜಾಣಿತಲ್ಯಾ ನುಪಜೇ ದೇಖ । ತೇವೀ ಅನುಭವಿಲ್ಯಾ ಬ್ರಹ್ಮಸುಖ । ಅಹಂತಾ ಬಾಧಕ ಸ್ಫುರೇನಾ ।೪೩೬॥ ಐಕ ಯೊಗಭ್ರಷ್ಟಾಚೇ ಲಕ್ಷಣ । ತ್ಯಾಚಾ ಪ್ರಾಚೀನ ಸಂಸ್ಕಾರ ಜಾಣ । ಉಪಜೋ ನೇದೀ ದೇಹಾಭಿಮಾನ । ಯೋಗ ಸಂಪೂರ್ಣ ಸಿದ್ಧರ್ಥ ।೪೩೭॥ ಜೇ ದೇಹೀ ನಿತ್ಯ ನಿರಭಿಮಾನ । ತೇಚಿ ಬ್ರಹ್ಮಸುಖೇ ಸದಾ ಸಂಪನ್ನ । ತ್ಯಾಂಸೀ ದೇಹೀಂಚೇ ಕರ್ಮಾಚರಣ । ಸರ್ವಥಾ ಜಾಣ ಬಾಧೀನಾ ।೪೩೮॥ ಜ್ಞಾತಾ ದೇಹಕರ್ಮಾಸೀ ಅಲಿಪ್ತ । ಹೇಹೀ ಅಪೂರ್ವ ನವ್ಹೇ ಏಥ । ತೋ ದೇಹೀ ಅಸೋನಿ ದೇಹಾತೀತ । ತೇಚಿ ಶ್ರೀಕೃಷ್ಣನಾಥ ಸ್ವಯೇ ಸಾಂಗೇ ।೪೩೯॥

ತಿಷ್ಠಂತಮಾಸೀನಮುತ ವ್ರಜಂತಂ ಶಯಾನಮುಕ್ಷಂತಮದಂತಮನ್ನಮ್ ।
ಸ್ವಭಾವಮನ್ಯತ್‌ಕಿಮಪೀಹಮಾನಮ್ ಆತ್ಮಾನಮಾತ್ಮಸ್ಥಮತಿರ್ನ ವೇದ ।೩೧॥

ಅರ್ಥ:- ಯಾರು ತಮ್ಮ ಸ್ವರೂಪದಲ್ಲಿ ಸ್ಥಿತರಾಗಿರುವರೋ, ಅವರಿಗೆ ತಮ್ಮ ಶರೀರವು ನಿಂತುಕೊಂಡಿದೆಯೋ ಅಥವಾ ಕುಳಿತುಕೊಂಡಿದೆಯೋ, ನಡೆಯುತ್ತಿದೆಯೋ ಇಲ್ಲವೇ ಮಲಗಿಕೊಂಡಿದೆಯೋ, ಮಲಮೂತ್ರ ವಿಸರ್ಜಿಸುತ್ತಿದೆಯೋ ಅಥವಾ ಭೋಜನವನ್ನು ಮಾಡುತ್ತಿದೆಯೋ, ಅಥವಾ ಸ್ವಾಭಾವಿಕ ಕರ್ಮ ಮಾಡುತ್ತಿದೆಯೋ, ಎಂಬುವುದು ಅವರಿಗೆ ತಿಳಿದಿರುವುದೇ ಇಲ್ಲ. ಕಾರಣ ಅವರ ವೃತ್ತಿಯು ಆತ್ಮಸ್ವರೂಪದಲ್ಲಿ ಲೀನವಾಗಿಕೊಂಡಿರುವುದು.

ದೇಹ ಉಭೇ ಜಾಣ । ಜ್ಞಾತಾ ನ ದೇಖೇ ಉಭೇಪಣ । ಮಾ ಬಸಲ್ಯಾ ಬೈಸಲೇಪಣ । ಮಾನೀ ಕೋಣ ದೇಹಾಚೇ ।೪೪೦॥ ಪರಿಪೂರ್ಣ ಬ್ರಹ್ಮಾ ಚ್ಯಾ ಠಾಯೀ । ಉಠಣೇ ಬೈಸಣೇ ದೋನೀ ನಾಹೀ । ಜ್ಞಾತಾ ತೇಚಿ ಝಾಲಾ ಪಾಹೀ । ಊಠಬೈಸ ಕಾಂಹೀ ಜಾಣೇನಾ ।೪೪೧॥ ದೋರಾಚಾ ಸರ್ಪ ಉಪಜಲಾ । ಭೋಗ ಭೋಗೂನಿ ಸ್ವಯೇ ನಿಮಾಲಾ । ಸತ್ಯತ್ವ ನಾಹೀ ಯಾ ಬೋಲಾ । ತೈಸಾ ದೇಹೋ ಝಾಲಾ ಮುಕ್ತಾಸೀ ।೪೪೨॥ ದೇಹ ದೈವೇ ಅಸೇ ಏಕದೇಶೀ । ಜ್ಞಾತಾ ಸರ್ವಿ ದೇಖೇ ಆಪಣಾಸೀ । ದೇಹ ಜಾತಾ ಪರದೇಶಾಸೀ । ಜ್ಞಾತಾ ಗಮನ ಮಾನಸೀ ದೇಖೇನಾ ।೪೪೩॥ ವಸ್ತು ವಸ್ತುತ್ವೇ ಪರಿಪೂರ್ಣಪಣೇ । ತೇಥ ಕೈಚೇ ಅಸೇ ಯೇಣೇಜಾಣೇ । ಜ್ಞಾತಾ ಸದಾ ತದ್ರೂಪಪಣೇ । ರಾಹಣೇ ಜಾಣೇ ಸ್ಪರ್ಶೇನಾ ।೪೪೪॥ ಜ್ಞಾತಾ ಸ್ವಯೇ ರಿಘೇ ಶಯನೀ । ಪರೀ ಶೇಜಬಾಜ ನ ದೇಖೇ ಅವನೀ । ಮೀ ನಿಜೇಲೋ ಹೇಹೀ ನ ಮನೀ । ನಿಜೇ ನಿಜರೂಪಪಣೇ ಸರ್ವದಾ ।೪೪೫॥

ದೇಹದಲ್ಲಿ ಪ್ರಾಣವು ಇರುತ್ತಿರಲು ದೇಹಾಭಿಮಾನವು ಹೇಗೆ ಉದ್ಭವಿಸುವುದಿಲ್ಲ ? ಎಂದು ನೀನು ಹೀಗೆ ಕೇಳಬಹುದು. ಅದರ ಕಾರಣವನ್ನು ಹೇಳುವೆನು, ಅದನ್ನು ಕೇಳು ಜ್ಞಾನಿಯು ಆತ್ಮಾನಂದದಲ್ಲಿ ಏಕರೂಪನಾಗಿರುವುದರಿಂದ ಆತನಿಗೆ ಅಹಂಕರ್ತನು ಎಂಬುವುದು ಸ್ಫುರಣವೇ ಆಗುವುದಿಲ್ಲ ।೪೩೫॥ ಹಗ್ಗದಲ್ಲಿನ ಹಾವಿನ ಭಯವು ಇದು ಹಗ್ಗವೆಂದು ತಿಳಿದ ನಂತರ ಅದು ಹೇಗೆ ಇರುವುದಿಲ್ಲವೋ, ಅದರಂತೆ ಬ್ರಹ್ಮಾನಂದವನ್ನು ಅನುಭವಿಸಿದ ನಂತರ ಅಹಂಕಾರದ ಬಾಧೆಯು ಸ್ಫುರಣವೇ ಆಗುವುದಿಲ್ಲ ।೪೩೬॥ ಈಗ ಯೋಗಭ್ರಷ್ಟನ ಲಕ್ಷಣವನ್ನು ಕೇಳು. ಆತನ ಪೂರ್ವಜನ್ಮದ ಸಂಸ್ಕಾರವು ತಾನು ಸಾಧಿಸುವ ಯೋಗವು ಪೂರ್ಣವಾಗಿ ಸಿದ್ಧಿಯಾಗಲೆಂದು ಆತನಿಗೆ ದೇಹಾಭಿಮಾನವು ಉತ್ಪನ್ನವಾಗಲು ಬಿಡುವುದಿಲ್ಲ ।೪೩೭॥ ಯಾರು ದೇಹದಲ್ಲಿ ಪರಿಪೂರ್ಣವಾಗಿ ನಿರಭಿಮಾನಿಯಾಗಿರುವರೋ ಅವರೇ ಬ್ರಹ್ಮಾನಂದದಿಂದ ಸದಾ ಸಂಪನ್ನರಾಗಿರುವರು. ಅವರಿಗೆ ದೇಹದ ಕರ್ಮ ಬಂಧನೆಯು ಎಂದಿಗೂ ಬಾಧಿಸುವುದಿಲ್ಲ ।೪೩೮॥ ಜ್ಞಾನಿಯಾದವನು ದೇಹಕರ್ಮದಿಂದ ಅಲಿಪ್ತನಾಗಿರುವನು. ಇದರಲ್ಲಿ ಯಾವ ಆಶ್ಚರ್ಯವೇನೂ ಇರುವುದಿಲ್ಲ. ಆದರೆ ದೇಹದಲ್ಲಿದ್ದುಕೊಂಡು ವಿದೇಹಿಯಾಗಿ ಹೇಗೆ ಇರುವನೆಂಬ ಈ ವರ್ಣನೆಯನ್ನು ಶ್ರೀಕೃಷ್ಣನು ಸ್ವತ: ಮಾಡುತ್ತಿರುವನು ।೪೩೯॥

ಜ್ಞಾನಿ ಪುರುಷನಿಗೆ ದೇಹವು ನಿಂತುಕೊಂಡಿದ್ದರೂ ಆತನಿಗೆ ತಾನು ನಿಂತಿರುವೆ ಎಂಬುದು ತಿಳಿಯುವುದಿಲ್ಲ. ಅಂದಮೇಲೆ ದೇಹವು ಕುಳಿತುಕೊಂಡಾಗ ಅದನ್ನು ಯಾರು ತಿಳಿಯಬೇಕು ।೪೪೦॥ ಪರಿಪೂರ್ಣವಾಗಿರುವ ಬ್ರಹ್ಮನಲ್ಲಿ ಏಳುವಿಕೆ, ಮತ್ತು ಕುಳಿತುಕೊಳ್ಳುವಿಕೆ ಈ ಎರಡೂ ಕ್ರಿಯೆಗಳು ಇರುವುದಿಲ್ಲ. ಜ್ಞಾನಿಯಾದವನು ಬ್ರಹ್ಮರೂಪನಾಗಿರುವನು. ಆತನಿಗೆ ನಿಂತುಕೊಂಡ ಹಾಗೂ ಕುಳಿತುಕೊಂಡ ಇವು ಯಾವವೂ ತಿಳಿಯುವುದಿಲ್ಲ ।೪೪೧॥ ಹಗ್ಗದ ಹಾವು ಹುಟ್ಟಿಕೊಂಡಿತು. ಅದು ಭೋಗಗಳನ್ನು ಭೋಗಿಸಿ ಸ್ವತ: ಇಲ್ಲದಂತಾಯಿತು. ಈ ಹೇಳಿಕೆಯಲ್ಲಿ ಯಾವ ಸತ್ಯತ್ವವು ಇರುವುದಿಲ್ಲ. ಅದರಂತೆ ಮುಕ್ತನಿಗೆ ದೇಹವು ಇರುವುದು ।೪೪೨॥ ಯಾವ ಈ ದೇಹವು ದೈವಯೋಗಾನುಸಾರವಾಗಿ ಏಕದೇಶೀಯವಾಗಿರುವುದು. ಆದರೆ ಜ್ಞಾನಿಯು ತನ್ನನ್ನು ಎಲ್ಲದರಲ್ಲಿಯೂ ಕಾಣುತ್ತಿರುವನು. ದೇಹವು ಪರಸ್ಥಳಕ್ಕೆ ಹೋಗುತ್ತಿರಲು ಆಗ ಆ ಗಮನವು ನನ್ನದಾಗಿದೆ ಎಂದು ಜ್ಞಾನಿಯು ಸರ್ವಥಾ ತಿಳಿಯಲಾರನು ।೪೪೩॥ ಕಾರಣ ಪರಬ್ರಹ್ಮಸ್ವರೂಪದಿಂದ ಸರ್ವವೂ ಪರಿಪೂರ್ಣವಾಗಿರುವುದು. ಅಂದಮೇಲೆ ಅದಕ್ಕೆ ಬರುವುದು, ಹೋಗುವುದು ಎಲ್ಲಿಂದ ಬರಬೇಕು ? ಜ್ಞಾನಿಯು ಸದಾ ತದ್ರೂಪನಾಗಿರುವುದರಿಂದ ಆತನಿಗೆ ಇರುವಿಕೆ, ಹೋಗುವಿಕೆ ಇವು ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ ।೪೪೪॥ ಜ್ಞಾನಿಯು ತಾನು ಮಲಗುವುದಕ್ಕಾಗಿ ಹಾಸಿಗೆಯ ಮೇಲೆ ಹೋಗುವನು. ಆದರೆ ಆತನು ಭೂಮಿ, ಪಲಂಗ, ಗಾದಿ ಇತ್ಯಾದಿ ನೋಡಲಾರನು. ಇಷ್ಟೇ ಏಕೆ? ನಾನು ಮಲಗಿಕೊಂಡಿರುವೆನು ಎಂಬುವುದೂ ಸಹ ಆತನು ತನ್ನ ಮನದಲ್ಲಿ ತರಲಾರನು. ಸ್ವರೂಪಾನಂದದಲ್ಲಿ ಆತನು ಅಖಂಡವಾಗಿ ರಮಮಾಣನಾಗಿರುವನು ।೪೪೫॥

ಜ್ಞಾತಾ ಜೇವೂ ಬೈಸೇ ನಿಜಸುಖೇ । ಪರೀ ಮೀ ಭುಕೇಲೋ ಹೇ ನ ದೇಖೇ । ರಸನೇ ನೇಣತಾ ಸರ್ವ ರಸ ಚಾಖೇ । ಜೇವೀ ಯೇಣೇ ಸುಖೇ ನಿಜಗೋಡೀ ।।೪೪೬।। ದಿಸೇ ಯಾವತ್ತೃಪ್ತ ಜೇವಿಲಾ । ಪರೀ ತೋ ಧಾಲಾ ನಾ ಭುಕೇಲಾ । ತೋ ಉಚ್ಛಿಷ್ಟಹೀ ನಾಹೀ ಝಾಲಾ । ಶೇಖೀ ಆಂಚವಲಾ ಸಂಸಾರಾ ।।೪೪೭।। ಜರೀ ತೋ ಸ್ವಭಾವೇ ಸಾಂಗೇ ಗೋಷ್ಟೀ । ತರೀ ಅಬೋಲಣೇ ಫಾಲೀ ಶಬ್ದಾ ಪೋಟೀ । ಬೋಲೀ ಅತಿರಸಾಳ ಗೋಡೀ ಉಠೀ । ತರೀ ನ ಸುಟೇ ಮಿಠೀ ಮೌನಾಚೀ ।।೪೪೮।। ಮೀ ಏಕ ಚತುರ ಬೋಲಕಾ । ಹಾಹೀ ನುಠೀ ತ್ಯಾ ಆವಾಂಕಾ । ಬೋಲ ಬೋಲೋ ನೇಣೇ ಫಿಕಾ । ಬೋಲೋನಿ ನೇಟಕಾ ಅಬೋಲಣಾ ।।೪೪೯।। ಜ್ಞಾತಾ ಪಾಹೇ ನಿಜಾತ್ಮಸುಖೇ । ಮಾಝೇ ತುಝೇ ಹೇಹೀ ವೋಳಖೇ । ಪರೀ ತೋ ಡೋಳಾಂಚಿ ನ ದೇಖೇ । ದೇಖೇ ಆಪಣ್ಯಾಸಾರಖೇ ತ್ರೈಲೋಕ್ಯ ।।೪೫೦।। ತೋ ಜೋ ದೃಶ್ಯ ಪಾಹೋ ಬೈಸೇ । ತೋ ದೃಶ್ಯಾಚಾ ಠಾವೋಚಿ ಪುಸೇ । ಜೇ ದೇಖೇ ತೇ ಆಪಣ್ಯಾ ಐಸೇ । ನಿಜಾತ್ಮಸೌರಭೇ ಜಗದೇಖೇ ।।೪೫೧।। ಕರೂನಿ ಡೋಳ್ಯಾಂಚಾ ಅಂತ । ಜ್ಞಾತಾ ದೇಖಣೇಪಣೇ ಪಾಹತ । ತ್ಯಾ ದೇಖಣ್ಯಾಚಾ ನಿಜಸ್ವಾರ್ಥ । ನ ಚಢೇ ಹಾತೇ ವೇದಶಾಸ್ತ್ರಾ ।।೪೫೨।। ಜಾಣೇ ಶಬ್ದೀಚೇ ಶಬ್ದಜ್ಞಾನ । ಮೀ ಶ್ರೋತಾ ಹೇ ನುಠೀ ಆಠವಣ । ಉಪೇಕ್ಷೂನಿಯಾ ದೇಹಿಂಚೇ ಕಾನ । ಕರೀ ಶ್ರವಣ ಸರ್ವಾಂಗೇ ।।೪೫೩।। ಯಾಪರೀ ಸ್ವಯೇ ಸಜ್ಞಾನ । ಹೋ ಊನಿಯಾ ಸಾವಧಾನ । ಸೋಲೂನಿಯಾ ಶಬ್ದಜ್ಞಾನ । ಕರೀ ಶ್ರವಣ ಸ್ವಭಾವೇ ।।೪೫೪।। ಜಾಣೇ ಸುವಾಸ ದುರ್ವಾಸ । ಭೋಗೀ ನ ಧರೀ ನಾಕಾಚೀ ಆಸ । ಸುಮನಾ ಸಬಾಹ್ಯ ಜೋ ಸುವಾಸ । ತೋ ಭೋಗೀ ಸಾವಕಾಶ ಸರ್ವದಾ ।।೪೫೫।। ಮೃದುಕಠಿಣಾದಿ ಸ್ಪರ್ಶ ಜಾಣೇ । ಪರೀ ಮೀ ಜಾಣತೋ ಹೇ ಸ್ಫುರೋ ನೇಣೇ । ಅಂಗಾ ಲಾಗೇ ತೇ ನಿಜಾಂಗ ಕರಣೇ । ಹಾ ಸ್ಪರ್ಶ ಭೋಗಣೇ ಸಜ್ಞಾನೀ ।।೪೫೬।। ಜ್ಞಾತಾ ಚಾಲತಾ ದಿಸೇ ಚರಣೇ । ಪರೀ ತೋ ಚಾಲತಾ ಸ್ವಯೇ ಅಚರಣೇ । ಸ್ವೇಚ್ಛಾ ಹಿಂಡತಾಹೀ ಅವನೀ । ತೋ ಠಾಯಾಹೂನೀ ಢಳೇನಾ ।।೪೫೭।। ಹಸ್ತವ್ಯಾಪಾರೀ ದೇತಾ ದಾನ । ಮೀ ದಾತಾ ಹೀ ನುಠೀ ಆಠವಣ । ಘೇತೇದೇತೇ ದಾನ ಹೋಯ ಆಪಣ । ಯಾಪರೀ ಸಜ್ಞಾನ ವರ್ತವೀ ಕರಾ ।।೪೫೮।।

ಜ್ಞಾನಿಯು ಆನಂದದಿಂದ ಭೋಜನವನ್ನು ಮಾಡಲು ಕುಳಿತುಕೊಳ್ಳುವನು. ಆದರೆ ತನಗೆ ಹಸಿವೆಯಾಗಿದೆ ಎಂಬುವುದೂ ಕೂಡ ಆತನಿಗೆ ಸ್ಮರಣೆಗೆ ಬರುವುದಿಲ್ಲ. ನಾಲಿಗೆಗೆ ತಿಳಿಯದೇ ಆತನು ಎಲ್ಲ ರಸಗಳನ್ನು ಭುಂಜಿಸುತ್ತಿರುವನು. ಇಂತಹ ಆತ್ಮಸುಖದ ಆನಂದದಲ್ಲಿ ಆತನು ಭೋಜನವನ್ನು ಮಾಡುತ್ತಿರುವನು ।।೪೪೬।। ಆತನು ಯಥೇಚ್ಛವಾಗಿ ಹೊಟ್ಟೇ ತುಂಬ ಉಂಡವನೆಂಬಂತೆ ತೋರುವನು. ಆದರೆ ಅದರಿಂದ ಆತನು ತೃಪ್ತನಾಗಿಯೂ ಇರುವುದಿಲ್ಲ. ಹಸಿದವನಂತೆಯೂ ಇರುವುದಿಲ್ಲ ಆತನ ಕೈಗಳು ಎಂಜಲಾಗಿಯೂ ಇರುವುದಿಲ್ಲ. ಕೊನೆಗೆ ಸಂಸಾರವನ್ನೇ ಕೈ ತೊಳೆದುಕೊಳ್ಳುವನು ।।೪೪೭।। ಒಂದು ವೇಳೆ ಆತನು ಸ್ವಾಭಾವಿಕವಾಗಿ ಮಾತನಾಡುತ್ತಿದ್ದರೆ ಪ್ರತ್ಯೇಕ ಶಬ್ದಗಳಲ್ಲಿ ನಾನು ಮಾತನಾಡಿಲ್ಲ ಎಂಬುವುದನ್ನೇ ತುಂಬಿಕೊಂಡಿರುವನು. ಆತನ ಭಾಷಣದಲ್ಲಿ ಅಮೃತಮಯ ಮಾಧುರ್ಯವಿದ್ದರೂ ಕೂಡ ಆತನು ತನ್ನ ಮೌನವನ್ನು ಬಿಟ್ಟುಕೊಡಲಾರನು ।।೪೪೮।। ನಾನೊಬ್ಬ ದೊಡ್ಡ ಚತುರನು, ವಾಕ್‌ಚಾತುರ್ಯ ಉಳ್ಳವನು ಎಂಬ ಅಭಿಮಾನವು ಆತನ ಮನದಲ್ಲಿ ಇರುವುದೇ ಇಲ್ಲ. ನಿರರ್ಥಕವಾಗಿ ಮಾತನಾಡುವುದು ಆತನಿಗೆ ಗೊತ್ತೇ ಇರುವುದಿಲ್ಲ. ಮಾತನಾಡಿದರೂ ಮಾತನಾಡಿಲ್ಲದವನಂತೆ ಇರುವನು ।।೪೪೯।। ಜ್ಞಾನಿ ಪುರುಷನು ಸೃಷ್ಟಿಯತ್ತ ಆತ್ಮಸುಖದಿಂದ ಕಾಣುವನು. ನನ್ನದು, ನಿನ್ನದು ಎಂಬುವುದನ್ನು ತಿಳಿದಿರುವನು. ಆದರೆ ಅದನ್ನು ಕಣ್ಣಿನಿಂದ ನೋಡಲಾರನು. ಸಂಪೂರ್ಣ ತ್ರೈಲೋಕ್ಯವನ್ನು ತನ್ನಂತೆಯೇ ಆತ್ಮಸ್ವರೂಪದಿಂದ ಕಾಣುವನು ।।೪೫೦।। ಆತನು ನೋಡುತ್ತಿರುವ ಎಲ್ಲ ದೃಶ್ಯಗಳು ದೃಶ್ಯವಾಗಿ ಕಾಣುವುದೇ ಇಲ್ಲ. ಆತನು ನೋಡುವುದೆಲ್ಲವನ್ನೂ ತನ್ನಂತೆಯೇ ತೋರುತ್ತಿರುವುದು. ಆತನು ಸಂಪೂರ್ಣ ಜಗತ್ತನ್ನು ಸ್ವತಃ ಐಕ್ಯರೂಪದಿಂದ ಕಾಣುತ್ತಿರುವನು ।।೪೫೧।। ಕಣ್ಣುಗಳನ್ನೇ ಅಂತ್ಯಗೊಳಿಸಿ ಜ್ಞಾನಿಯು ನೋಡುವಿಕೆಯಿಂದ ಕಾಣುತ್ತಿರುವನು. ಆದರೆ ಆ ನೋಡುವಿಕೆಯ ಸೂಕ್ಷ್ಮ ಅರ್ಥವನ್ನು ವೇದಶಾಸ್ತ್ರಗಳಿಗೂ ತಿಳಿಯಲು ಶಕ್ಯವಿಲ್ಲ ।।೪೫೨।। ಆತನು ಶಬ್ದಗಳಲ್ಲಿನ ಶಬ್ದಜ್ಞಾನವನ್ನು ತಿಳಿಯುವನು. ಆದರೆ ನಾನು ಶ್ರೋತಾ ಎಂಬುವುದು ಆತನಿಗೆ ನೆನಪಿನಲ್ಲಿರುವುದಿಲ್ಲ. ದೇಹದ ಕಿವಿಗಳನ್ನು ಉಪೇಕ್ಷೆ ಮಾಡಿ ಆತನು ಸರ್ವಾಂಗದಿಂದ ಶ್ರವಣ ಮಾಡುವನು ।।೪೫೩।। ಹೀಗೆ ಆತನು ಸ್ವತಃ ಸಜ್ಞಾನಿಯಾಗಿ ಜಾಗೃತನಾಗಿರುವನು. ಶಬ್ದ ಜ್ಞಾನವನ್ನು ಸುಲಿದು ಅದರಲ್ಲಿನ ಅರ್ಥಗ್ರಹಣ ಮಾಡುವನು ।।೪೫೪।। ಆತನು ಮೂಗಿನಿಂದ ಸುಗಂಧ, ದುರ್ಗಂಧ ತಿಳಿಯುವನು. ಆದರೆ ಅದರ ಭೋಗ ಪಡೆಯುವಾಗ ಆತನು ಮೂಗಿನ ಅಪೇಕ್ಷೆ ಮಾಡುವುದಿಲ್ಲ. ಹೂವಿನ ಒಳಹೊರಗೆ ಇರುವ ಸುಗಂಧವನ್ನು ಆತನು ಆನಂದದಿಂದ ಸದಾ ಸೇವಿಸುತ್ತಿರುವನು ।।೪೫೫।। ತ್ವಚೆಯಿಂದ ಆತನು ಮೃದು ಮತ್ತು ಕಠಿಣ ಇತ್ಯಾದಿ ಸ್ಪರ್ಶವನ್ನು ತಿಳಿಯುವನು. ಆದರೆ ನಾನು ತಿಳಿದುಕೊಂಡೆ ಎಂಬ ಸ್ಫುರಣವು ಆತನಿಗೆ ಆಗುವುದಿಲ್ಲ. ಯಾವುದರ ಸ್ಪರ್ಶವಾಗುವುದೋ, ಅದು ನನ್ನದೇ ಅಂಗವೆಂದು ತಿಳಿಯುವಿಕೆಯು ಇದು ಜ್ಞಾನೀ ಪುರುಷನ ಸ್ಪರ್ಶದ ಅನುಭವವಾಗಿರುವುದು ।।೪೫೬।। ಜ್ಞಾನಿಯು ಕಾಲುಗಳಿಂದ ನಡೆಯುವನು. ಆದರೆ ಆತನು ಚರಣಗಳಿಲ್ಲದೇ ನಡೆಯುತ್ತಿರುವನು. ಸಂಪೂರ್ಣ ಪೃಥ್ವಿಯನ್ನು ತಿರುಗಿ ಬಂದರೂ ಸಹ ಆತನು ವಾಸ್ತವಿಕವಾಗಿ ತನ್ನ ಸ್ಥಳದಿಂದ ಕದಲಿರುವುದಿಲ್ಲ ।।೪೫೭।। ಆತನು ತನ್ನ ಕೈಗಳಿಂದ ದಾನವನ್ನು ಕೊಡುತ್ತಿರಲು ಆಗ ಆತನಿಗೆ ನಾನೊಬ್ಬ ದಾತಾನಾಗಿರುವೆನು ಎಂಬ ಸ್ಮರಣೆಯು ಇರುವುದೇ ಇಲ್ಲ ಕೊಡುತ್ತಿರುವ ಹಾಗೂ ತೆಗೆದುಕೊಳ್ಳುತ್ತಿರುವ ದಾನವನ್ನೂ ಸಹ ತಾನೇ ಸ್ವತಃ ಆಗುವನು. ಈ ಪ್ರಕಾರವಾಗಿ ಜ್ಞಾನಿಯು ತನ್ನ ಕೈಗಳನ್ನು ವರ್ತನೆ ಮಾಡುವನು ।।೪೫೮।।

ಕಾಯಿಕ ವಾಚಿಕ ಮಾನಸಿಕ । ಕರ್ಮ ನಿಘಜತಾ ಸ್ವಾಭಾವಿಕ । ಜ್ಞಾತಾ ಬ್ರಹ್ಮರೂಪೇ ನಿರ್ದೋಖ । ದೇಹಾಸೀ ದೇಖ ಸ್ಪರ್ಶೇನಾ ॥೪೫೯॥ ಅಕರ್ತಾತ್ಮ ನಿಜಸತ್ತಾ । ಜ್ಞಾತಾ ಸರ್ವ ಕರ್ಮೀ ವರ್ತತಾ । ನ ದೇಖೇ ಕರ್ಮ-ಕ್ರಿಯಾ-ಕರ್ತವ್ಯತಾ । ನಿಜೀ ನಿಜಾತ್ಮತಾ ನಿಜಬೋಧೇ ॥೪೬೦॥ ಜ್ಞಾತಾ ನಿತ್ಯ ನಿಜಾತ್ಮಸುಖೇ । ದೇಹೀ ಅಸೋನಿ ದೇಹ ನ ದೇಖೇ । ತೋ ದೇಹಕರ್ಮೀ ಕೇವೀ ಆಡಕೇ । ಪೂರ್ಣ ಪರಮಾತ್ಮಸುಖೇ ಸಂತುಷ್ಟ ॥೪೬೧॥ ಜಗಾಸೀ ಲಾಗಲೇ ಕರ್ಮಬಂಧನ । ತೇಥೇ ಖಾತಾ ಜೇವಿತಾ ಸಜ್ಞಾನ । ಕೇವೀ ನ ಪವೇ ಕರ್ಮಬಂಧನ । ತೇಚಿ ನಿರೂಪಣ ಹರಿ ಸಾಂಗೇ ॥೪೬೨॥

ಯದಿ ಸ್ಮ ಪಶ್ಯತ್ಯಸದಿಂದ್ರಿಯಾರ್ಥ ನಾನಾನುಮಾನೇನ ವಿರುದ್ಧಮನ್ಯತ್ ।
ನ ಮನ್ಯತೇ ವಸ್ತುತಯಾ ಮನೀಷೀ ಸ್ವಾಪ್ನಂ ಯಥೋತ್ಥಾಯ ತಿರೋದಧಾನಮ್ ॥೩೨॥

ಅರ್ಥ:- ಜ್ಞಾನೀ ಪುರುಷನು ಅಶುದ್ಧವಾದ ವಸ್ತುಗಳನ್ನು ಅಥವಾ ಕರ್ಮಗಳನ್ನು ಕಂಡರೂ ಅವುಗಳನ್ನು ಸತ್ಯವೆಂದು ಸ್ವೀಕರಿಸುವುದಿಲ್ಲ. ಅಶುದ್ಧವಾದ ಇಂದ್ರಿಯ ವಿಷಯಗಳು ಮಾಯಿಕ, ದ್ವಂದ್ವದ ಆಧಾರದಲ್ಲಿರುವುದನ್ನು ತಾರ್ಕಿಕವಾಗಿ ತಿಳಿದುಕೊಂಡು ಆತನು ಅವುಗಳನ್ನು ಸತ್ಯಕ್ಕೆ ವಿರುದ್ಧ ಹಾಗೂ ಭಿನ್ನವೆಂದು ತಿಳಿದು ಎಚ್ಚರಾದವನು ಸ್ವಪ್ನವನ್ನು ಸುಳ್ಳು ಎಂದು ತಿಳಿಯುವಂತೆ ವರ್ತಿಸುವನು.

ಹೋ ಕಾ ಲೌಕಿಕಾಚೇ ಪರೀ । ಜ್ಞಾತಾ ವರ್ತೇ ಲೋಕಾಚಾರೀ । ತೋಹೀ ಪ್ರಪಂಚಾಮಾಝಾರೀ । ಕರ್ಮೇ ಕರೀ ಲೌಕಿಕೇ ॥೪೬೩॥ ಪರೀ ಕಾರ್ಯ-ಕರ್ಮ-ಕರ್ತವ್ಯತಾ । ಹೇ ಜ್ಞಾತ್ಯಾಸೀ ನಾಹೀ ಅಹಂತಾ । ತೇಣೇ ಪ್ರಪಂಚಾಮಾಜೀ ನಿಜಾತ್ಮತಾ । ನಿಶ್ಚಯೇ ತತ್ತ್ವತಾ ವಶ್ಯ ಕೇಲೀ ॥೪೬೪॥ ವಿಷಯಾದಿ ಪ್ರಪಂಚಭಾನ । ಸತ್ಯ ಮಾನಿತೀ ಅಜ್ಞಾನ । ತೋ ಪ್ರಪಂಚ ದೇಖತೀ ಸಜ್ಞಾನ । ಬ್ರಹ್ಮ ಪೂರ್ಣ ಪೂರ್ಣತ್ವೇ ॥೪೬೫॥ ಸಾಕರೇಚಾ ಇಂದ್ರಾವಣಘಡೂ । ಜಾಣಾ ಗೋಡ ನೇಣಾ ಕಡೂ । ತೈಸಾ ಪ್ರಪಂಚಾಚಾ ಪಡಿಪಾಡೂ । ಲಾಭ ಆಣಿ ನಾಡೂ ಜ್ಞಾನಾಜ್ಞಾನೇ ॥೪೬೬॥ ಸುವರ್ಣಾಚೀ ಖೋಟೀ । ಮೂರ್ಖ ಮಾನಿತೀ ಕೇವಳ ಗೋಟೀ । ಜ್ಞಾತೇ ಘಾಲೂನಿಯಾ ಮಿಠೀ । ಘೇತೀ ಜ್ಞಾನದೃಷ್ಟೀ ಬಹುಮೋಲೇ ॥೪೬೭॥ ತೇವೀ ಸಂಸಾರಿಕ ಕ್ರಿಯಾಕರ್ಮ । ಮೂರ್ಖಾಮೂರ್ಖಪಣೇ ಭಾಸೇ ವಿಷಮ । ತೇಚಿ ಜ್ಞಾತ್ಯಾಸೀ ಪರಬ್ರಹ್ಮ । ಸ್ವಾನಂದೇ ಆರಾಮ ಸರ್ವದಾ ॥೪೬೮॥ ಪ್ರಪಂಚ ಖಾಣೋನಿ ಸಾಂಡಾವಾ । ಮಗ ಬ್ರಹ್ಮಭಾವ ಮಾಂಡಾವಾ । ಹೇಹೀ ನ ಲಗೇ ತ್ಯಾ ಸದೈವಾ । ಉಖಿತಾಚಿ ಆಘವಾ ಪರಬ್ರಹ್ಮ ॥೪೬೯॥

ಕಾಯಿಕ, ವಾಚಿಕ ಮತ್ತು ಮಾನಸಿಕ ಕರ್ಮಗಳು ಸ್ವಾಭಾವಿಕವಾಗಿ ನಡೆಯುತ್ತಿರುವುವು. ಆದರೆ ಜ್ಞಾನಿಯು ಬ್ರಹ್ಮರೂಪದಿಂದ ನಿರ್ದೋಷನಾಗಿರುವನು. ಆತನು ತನ್ನ ದೇಹಕ್ಕೆ ಸ್ಪರ್ಶ ಕೂಡ ಮಾಡುತ್ತಿರುವುದಿಲ್ಲ ॥೪೫೯॥ ಯಾವ ಈ ಜ್ಞಾನಿಯು ಅಕರ್ತನಾಗಿ ಇದ್ದುಕೊಂಡು ಆತ್ಮಸತ್ತೆಯಿಂದ ಸರ್ವ ಕರ್ಮಗಳಲ್ಲಿಯೂ ವರ್ತಿಸುತ್ತಿರುವನು. ಆತನು ಯಾವಾಗಲೂ ಆತ್ಮ ಬೋಧೆಯಿಂದ ಸ್ವಸ್ವರೂಪದಲ್ಲಿ ಇರುತ್ತಿರುವನು. ಈ ಕಾರಣವಾಗಿ ಕರ್ಮ, ಕ್ರಿಯಾ ಮತ್ತು ಕರ್ತವ್ಯತಾ ಇವುಗಳನ್ನು ಆತನು ಕಾಣಲಾರನು ॥೪೬೦॥ ಜ್ಞಾನಿಯು ನಿತ್ಯವೂ ಆತ್ಮ ಸುಖದಲ್ಲಿ ಇರುವುದರಿಂದ ದೇಹದಲ್ಲಿ ಇದ್ದರೂ ಸಹ ದೇಹದತ್ತ ದೃಷ್ಟಿಯನ್ನಿಡುವುದಿಲ್ಲ. ಆತನು ಪರಮಾತ್ಮ ಸುಖದಿಂದ ಯಾವಾಗಲೂ ಸಂತುಷ್ಟನಾಗಿರುವುದರಿಂದ ಈ ಯಾವ ದೇಹಕರ್ಮಗಳಲ್ಲಿ ಹೇಗೆ ತಾನೇ ಸಿಕ್ಕಿಕೊಳ್ಳುವನು ? ॥೪೬೧॥ ಸರ್ವ ಜಗತ್ತಿಗೆ ಕರ್ಮಬಂಧನವು ಹತ್ತಿಕೊಂಡಿರುವುದು. ಹೀಗಿರಲು ಆ ಜ್ಞಾನಿ ಪುರುಷನು ತಿನ್ನುಣ್ಣುವ ಕ್ರಿಯೆಯನ್ನು ಮಾಡುತ್ತಿದ್ದರೆ ಆತನಿಗೆ ಬಂಧನವು ಹೇಗೆ ಬಾಧಿಸುವುದಿಲ್ಲ ? ಈವಿಷಯವನ್ನು ಕುರಿತು ಈಗ ಶ್ರೀಹರಿಯು ನಿರೂಪಣೆಯನ್ನು ಮಾಡುತ್ತಿರುವನು ॥೪೬೨॥

ಜ್ಞಾನಿಯು ಲೋಕಾರೂಢಿಯಂತೆ, ಲೋಕಾಚಾರದಂತೆ ವರ್ತಿಸುತ್ತಿರುವನು. ಪ್ರಪಂಚದಲ್ಲಿನ ಸರ್ವ ಲೌಕಿಕ ಕರ್ಮಗಳನ್ನು ಆತನು ಮಾಡುತ್ತಿರುವನು ॥೪೬೩॥ ಆದರೆ ಆತನಿಗೆ ಕಾರ್ಯ, ಕರ್ಮ, ಕರ್ತವ್ಯದ ಬಗ್ಗೆ ಯಾವ ಅಹಂಕಾರವೂ ಇರುವುದಿಲ್ಲ. ಆತನು ಪ್ರಪಂಚದಲ್ಲಿದ್ದುಕೊಂಡು ನಿಜವಾಗಿಯೂ ಆತ್ಮಜ್ಞಾನವನ್ನು ಪಡೆದಿರುವನು ॥೪೬೪॥ ಅಜ್ಞಾನೀ ಜನರು ವಿಷಯಾದಿ ಪ್ರಪಂಚದ ಭಾನವನ್ನು ನಿಜವೆಂದೇ ಭಾವಿಸುತ್ತಿರುವರು. ಆದರೆ ಜ್ಞಾನೀ ಪುರುಷರು ಅದೇ ಪ್ರಪಂಚವನ್ನು ಬ್ರಹ್ಮರೂಪವಾಗಿದೆ ಎಂದು ಹೀಗೆ ತಿಳಿದುಕೊಂಡಿರುವರು ॥೪೬೫॥ ಸಕ್ಕರೆಯ ಕಹೀ ಇಂದ್ರಾವಣವನ್ನು ತಯಾರಿಸಲು ಆಗ ಅದನ್ನು ತಿಳಿದವರಿಗೆ ಸಿಹಿ ಎಂದೇ ಭಾವಿಸುವರು. ಇದನ್ನು ತಿಳಿಯಲಾರದವರು ಕಹಿ ಎಂದು ಭಾವಿಸುತ್ತಿರುವರು. ಅದರಂತೆ ಈ ಪ್ರಪಂಚದ ಮಾತಾಗಿರುವುದು. ಲಾಭ ಮತ್ತು ಹಾನಿಯು ಇದು ಜ್ಞಾನ, ಅಜ್ಞಾನದ ಮೇಲೆ ಅವಲಂಬಿಸಿರುವುದು ॥೪೬೬॥ ಬಂಗಾರದ ಗಟ್ಟಿಯನ್ನು ಕಂಡಾಗ ಮೂರ್ಖರು ಅದಕ್ಕೆ ಬೆಣಚು ಹರಳು ಎಂದು ಭಾವಿಸುವರು. ಇದನ್ನು ತಿಳಿದವರು ಮುಗಿಬಿದ್ದು ತುಂಬಾ ಬೆಲೆಕೊಟ್ಟು ಖರೀದಿಸುವರು ॥೪೬೭॥ ಈ ಪ್ರಕಾರವಾಗಿ ಸಂಸಾರದ ಕ್ರಿಯಾಕರ್ಮಗಳು ಮೂರ್ಖನಿಗೆ ತನ್ನ ಮೂರ್ಖತನದಿಂದ ವಿಷಮವಾಗಿ ತೋರುವುದು. ಆದರೆ ಅದೇ ಪ್ರಪಂಚವು ಜ್ಞಾನಿಗೆ ಪರಬ್ರಹ್ಮವಾಗಿ ತೋರುವುದು. ಆತನು ಸ್ವಾನಂದದಲ್ಲಿ ಸರ್ವದಾ ಸಂತುಷ್ಟನಾಗಿರುವನು ॥೪೬೮॥ ಪ್ರಾರಂಭದಲ್ಲಿ ಪ್ರಪಂಚವನ್ನು ಅಗೆದು ಕಿತ್ತೊಗೆಯಬೇಕು, ತದನಂತರ ಬ್ರಹ್ಮಭಾವವನ್ನು ಧರಿಸಬೇಕು ಎನ್ನುವ ಈ ಭಾಗ್ಯವಂತ ಜ್ಞಾನೀ ಪುರುಷನಿಗೆ ಯಾವ ಅವಶ್ಯಕತೆಯು ಇರುವುದಿಲ್ಲ. ಕಾರಣ ಆತನು ಸರ್ವವನ್ನೂ ಪರಬ್ರಹ್ಮರೂಪವಾಗಿಯೇ ಕಾಣುತ್ತಿರುವನು ॥೪೬೯॥

ಮಿಥ್ಯಾ ದೋರಾಚಾ ಸರ್ಪಾಕಾರ । ತೇಥ ಮಿಳೋನಿ ಅಜ್ಞಾನ ನರ । ನಾನಾ ಅನುಮಾನೀ ಭಯಂಕರ । ಸತ್ಯ ಸಾಚಾರ ಮಾನಿತೀ ॥೪೭೦॥ ತೇವೀ ಪ್ರಪಂಚಾಚೇ ಭಾನ । ಬಾಧಕ ಮಾನಿತೀ ಅಜ್ಞಾನ । ತೇಚಿ ಸ್ವಾನುಭವೇ ಸಜ್ಞಾನ । ಜಾಣತೀ ಪೂರ್ಣ ಪರಬ್ರಹ್ಮ ॥೪೭೧॥ ಜೇವೀ ಸ್ವಪ್ನ ಸಾಚ ನಿದ್ರಿತಾಪ್ರತೀ । ತೇವೀ ಪ್ರಪಂಚ ಸಾಚ ನಿಜ ಭ್ರಾಂತೀ । ತೋಚಿ ನಿಜಾತ್ಮಾ ಜಾಗೃತಾಪ್ರತೀ । ಮಿಥ್ಯಾ ನಿಶ್ಚಿತೀ ನಿಜಬೋಧೇ ॥೪೭೨॥ ಮಿಥ್ಯಾ ಪ್ರಪಂಚಾಚೇ ಭಾನ । ಜಾಣೋನಿ ಝಾಲೇ ಜೇ ಸಜ್ಞಾನ । ತ್ಯಾಂಸೀ ಸರ್ವ ಕರ್ಮೀ ವರ್ತತಾ ಜಾಣ । ದೇಹಾಭಿಮಾನ ಕದಾ ನುಪಜೇ ॥೪೭೩॥ ಸಾಧಕಾಂಚಾ ಸಾಧಾವಯಾ ಸ್ವಾರ್ಥ । ಪೂರ್ವೀ ಸರ್ವಸ್ವರೂಪೇ ಭಗವಂತ । ಬೋಲಿಲಾ ತೇಣೇ ವಿಕಾರವಂತ । ಝಾಲಾ ನಿಶ್ಚಿತ ಮ್ಹಣಶೀಲ ॥೪೭೪॥ ವಸ್ತು ನವ್ಹೇ ವಿಕಾರವಂತ । ತೇ ನಿಜಸಾಮ್ಯೇ ಸದೋದಿತ । ತೇಚಿ ಅರ್ಥೀ ಶ್ರೀಕೃಷ್ಣನಾಥ । ಅಸೇ ಸಾಂಗತ ನಿಜಬೋಧೇ ॥೪೭೫॥

ಪೂರ್ವಂ ಗೃಹೀತಂ ಗುಣಕರ್ಮಚಿತ್ರಮಜ್ಞಾನಮಾತ್ಮವಿವಿಕ್ತಮಂಗ: ।
ನಿವರ್ತತೇ ತತ್ಪುನರೀಕ್ಷಯೈವ ನ ಗೃಹ್ಯತೇ ನಾಪಿ ವಿಸೃಜ್ಯ ಆತ್ಮಾ ॥೩೩॥

ಅರ್ಥ:- ಪ್ರಕೃತಿ ಗುಣಗಳ ಚಟುವಟಿಕೆಗಳಿಂದ ಅನೇಕ ವೈವಿಧ್ಯಗಳಾಗಿ ವಿಸ್ತರಿತ ಭೌತಿಕ ಅವಿದ್ಯೆಯನ್ನೇ ಆತ್ಮನೆಂದು ಬದ್ಧಾತ್ಮನು ಅಂಗೀಕರಿಸುವನು. ಆದರೆ, ನನ್ನ ಪ್ರಿಯ ಉದ್ಧವನೇ, ಆಧ್ಯಾತ್ಮಿಕ ಜ್ಞಾನದ ಸಾಧನೆಯಿಂದ ಅದೇ ಅಜ್ಞಾನವು ಮೋಕ್ಷ ಕಾಲದಲ್ಲಿ ನಿವೃತ್ತಿಗೊಳ್ಳುವುದು. ಶಾಶ್ವತವಾದ ಆತ್ಮನಾದರೋ ಸ್ವೀಕೃತನೂ ಆಗುವುದಿಲ್ಲ. ತ್ಯಕ್ತನೂ ಆಗುವುದಿಲ್ಲ.

ಸಂಸಾರ ತೋ ಪೂರ್ವದಶೇ । ಅತಿ ಅತರ್ಕ್ಯ ಮಾಯಾವಶೇ । ಶುದ್ಧ ವಸ್ತು ಬಹುಧಾ ಭಾಸೇ । ಗುಣಕರ್ಮವಿನ್ಯಾಸೇ ಬಹುರೂಪ ॥೪೭೬॥ ನಾಮ ರೂಪ ವ್ಯಕ್ತಿ ವರ್ಣ । ಕುಳ ಗೋತ್ರ ಕ್ರಿಯಾಚರಣ । ಯಾಪರೀ ಪ್ರಪಂಚ ಭಿನ್ನ । ಸತ್ಯ ಅಜ್ಞಾನ ಮಾನಿತೀ ॥೪೭೭॥ ಪ್ರಪಂಚ ವಸ್ತೂಚ್ಯಾ ಠಾಯೀ ಅಧ್ಯಸ್ತ । ಯಾಲಾಗೀ ವಸ್ತು ತದ್ರೂಪ ಭಾಸತ । ಸ್ಫಟಿಕ ನಾನಾರಂಗೀ ಅಲಿಪ್ತ । ಪರೀ ಸಂಬಂಧೇ ಭಾಸತ ತದ್ರೂಪ ॥೪೭೮॥ ಜಗ ಪಾಹತಾ ಯಾಪರೀ । ಭಿನ್ನ ಭಾಸೇ ಅಜ್ಞಾನೇಕರೀ । ತೇಣೇ ಆತ್ಮಾ ಮ್ಹಣತೀ ವಿಕಾರೀ । ನರ ಅವಿಚಾರೀ ಅಜ್ಞಾನೇ ॥೪೭೯॥

ಹಗ್ಗದಲ್ಲಿ ಸರ್ಪಾಕಾರದ ಈ ಆಕಾರವು ಕೇವಲ ಮಿಥ್ಯೆಯಾಗಿರುವುದು. ಆದರೆ ಈ ಯಾವ ಅಜ್ಞಾನಿ ಜನರು ಅದರ ಸುತ್ತು ಸೇರಿಕೊಂಡು ಸರ್ಪದ ಮಿಥ್ಯಾ ಭ್ರಮದಿಂದ ಭಿನ್ನ ಭಿನ್ನ ಪ್ರಕಾರವಾಗಿ ಭಯಾನಕ ಅನುಮಾನಗಳನ್ನು ಮಾಡುತ್ತಿರುವರು. ಈ ಸರ್ಪವು ನಿಜವೆಂದೇ ತಿಳಿದುಕೊಂಡಿರುವರು ॥೪೭೦॥ ಅದರಂತೆಯೇ ಅಜ್ಞಾನಿ ಜನರು ಮಿಥ್ಯೆಯಾಗಿರುವ ಪ್ರಪಂಚದ ಬಂಧನೆಯನ್ನು ನಿಜವಾಗಿದೆ ಎಂದೇ ತಿಳಿದುಕೊಂಡಿರುವರು. ಆದರೆ ಸ್ವಾನುಭವೀ ಜ್ಞಾನೀ ಪುರುಷರು ಅದನ್ನೇ ಪರಿಪೂರ್ಣ ಬ್ರಹ್ಮವಾಗಿದೆ ಎಂದು ತಿಳಿದುಕೊಂಡಿರುವರು ॥೪೭೧॥ ನಿದ್ರಿಸಿರುವ ಮನುಷ್ಯನಿಗೆ ಯಾವ ಸ್ವಪ್ನವು ನಿಜವೆಂದೇ ತೋರುತ್ತಿರುವುದು. ಅದರಂತೆಯೇ ತನ್ನ ಭ್ರಾಂತಿ ಕಾರಣದಿಂದ ಈ ಪ್ರಪಂಚವು ನಿಜವೆಂದೇ ತೋರುತ್ತಿರುವುದು. ಆದರೆ ಯಾರಿಗೆ ಆತ್ಮಜ್ಞಾನವು ಪ್ರಾಪ್ತವಾಗುವುದೋ, ಆತನಿಗೆ ಸ್ವಪ್ನ ಜ್ಞಾನದ ಬೋಧೆಯಿಂದ ಪ್ರಪಂಚವು ಮಿಥ್ಯೆಯಾಗಿ ತೋರುವುದು ॥೪೭೨॥ ಯಾವ ಈ ಪ್ರಪಂಚವು ಪರಿಪೂರ್ಣವಾಗಿ ತೋರಿ ಅಡಗುವ, ಮಿಥ್ಯಾ ಸ್ವರೂಪವಾಗಿದೆ ಎಂದು ತಿಳಿದುಕೊಂಡಿರುವ ಜ್ಞಾನೀ ಪುರುಷನು ಯಾವುದೇ ಪ್ರಕಾರದ ಕರ್ಮದಲ್ಲಿ ವರ್ತಿಸುತ್ತಿರಲು ಆಗ ಆತನಿಗೆ ದೇಹದ ಅಭಿಮಾನವು ಎಂದಿಗೂ ಉತ್ಪನ್ನವಾಗುವುದಿಲ್ಲ ॥೪೭೩॥ ''ಸರ್ವ ಸಾಧಕರ ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ಬಹು ಪೂರ್ವದಲ್ಲಿಯೇ ಸರ್ವ ಸ್ವರೂಪದಿಂದ ಭಗವಂತನೇ ಆಗಿರುವನು'' ಹೀಗೆಂದಕೂಡಲೇ ಆ ಯಾವ ಭಗವಂತನು ನಿಶ್ಚಿತವಾಗಿ ವಿಕಾರವಂತನಾದನು ಎಂದು ಹೀಗೆ ನೀನು ಹೇಳಬಹುದು ॥೪೭೪॥ ಆದರೆ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವು ಅಥವಾ ಆತ್ಮತತ್ತ್ವವು ಇದು ಎಂದಿಗೂ ವಿಕಾರವಂತವಾಗಲು ಸಾಧ್ಯವಿಲ್ಲ. ಅದು ಯಾವಾಗಲೂ ಸಮಸಾಮ್ಯ ಅರ್ಥಾತ ನಿರ್ವಿಕಾರವಾಗಿಯೇ ಇರುವುದು. ಇದೇ ವಿಷಯವನ್ನು ಕುರಿತು ಮುರಲಿ ಮನೋಹರನಾದ ಶ್ರೀಕೃಷ್ಣನಾಥನು ಈಗ ನಿಜಬೋಧೆಯಿಂದ ಹೇಳುತ್ತಿರುವನು ॥೪೭೫॥

ಪೂರ್ವ ದಶೆಯಲ್ಲಿ ಈ ಯಾವ ಸಂಸಾರವು ಸಾಧಕರಿಗೆ ಮಾಯೆಯ ವಶ್ಯಕಾರಣದಿಂದ ಅತ್ಯಂತ ಅತರ್ಕ್ಯವಾಗಿ ತೋರುತ್ತಿರುವುದು. ಆದರೆ ಶುದ್ಧವಾಗಿರುವ ಸಚ್ಚಿದಾನಂದಘನ ಪರಬ್ರಹ್ಮವು ಗುಣಕರ್ಮಗಳ ವಿಭಾಗಾನುಸಾರವಾಗಿ ನಾನಾವಿಧ ರೂಪದಿಂದ ಭಾಸವಾಗುತ್ತಿರುವುದು ॥೪೭೬॥ ನಾಮ, ರೂಪ, ವ್ಯಕ್ತೀ, ವರ್ಣ, ಕುಲ, ಗೋತ್ರ, ಕ್ರಿಯಾಚರಣೆ ಇತ್ಯಾದಿ ಪ್ರಕಾರವಾಗಿ ನಾಶಿವಂತ ಈ ಯಾವ ಪ್ರಪಂಚವು ಭಿನ್ನವಾಗಿದೆ ಮತ್ತು ಸತ್ಯವಾಗಿದೆ ಎಂದು ಹೀಗೆ ಅಜ್ಞಾನೀ ಜನರು ತಿಳಿದುಕೊಂಡಿರುವರು ॥೪೭೭॥ ಆದರೆ ಈ ಪ್ರಪಂಚವು ಬ್ರಹ್ಮನ ಸಾನಿಧ್ಯದಲ್ಲಿ ಇರುವುದು. ಆದ್ದರಿಂದ ಬ್ರಹ್ಮವೂ ಕೂಡ ಪ್ರಪಂಚದಂತೆಯೇ ತದ್ರೂಪವಾಗಿ ತೋರುತ್ತಿರುವುದು. ಸ್ಪಟಿಕ ಮಣಿಯು ಇದು ನಾನಾವಿಧ ಬಣ್ಣಗಳಿಂದ ಅಲಿಪ್ತವಾಗಿಯೇ ಇರುವುದು. ಆದರೆ ಯಾವ ಬಣ್ಣದ ಸಂಬಂಧವು ಉಂಟಾಗುವುದೋ ಆಗ ಆ ಸ್ಪಟಿಕಮಣಿಯು ಆ ಬಣ್ಣದಂತೆಯೇ ತೋರುತ್ತಿರುವುದು ॥೪೭೮॥ ಈ ಪ್ರಕಾರವಾಗಿ ವಿಶಾಲವಾಗಿರುವ ಈ ಜಗತ್ತು ಅಜ್ಞಾನದಿಂದ ಭಿನ್ನವಾಗಿ ತೋರುತ್ತಿರುವುದು. ಆದ್ದರಿಂದ ಆತ್ಮವೂ ಕೂಡ ವಿಕಾರಿಯಾಗಿದೆ ಎಂದು ತಿಳಿಯಲ್ಪಡುವುದು. ಇಷ್ಟೊಂದು ಅಜ್ಞಾನದಿಂದ ಮನುಷ್ಯರು ಅವಿಚಾರಿಯಾಗಿರುವರು ॥೪೭೯॥

ತ್ಯಾ ಅಜ್ಞಾನಾಚೀ ಹೋಯ ನಿವೃತ್ತೀ । ತೇ ಸಾಧಕಾ ಮಾಝೀ ಸುಲಭ ಪ್ರಾಪ್ತೀ । ಯಾಲಾಗೀ ಮಾಝೀ ನಿಜಭಕ್ತೀ । ಮ್ಯಾ ಯಥಾನಿಗುತೀ ಪ್ರಕಾಶಿಲೀ ॥೪೮೦॥ ಸಾಧಕಾಂಚಾ ನಿಜಸ್ವಾರ್ಥ । ಜೇಣೇ ಶೀಘ್ರ ಹೋಯ ಹಸ್ತಗತ । ಯಾಲಾಗೀ ಸರ್ವಭೂತೀ ಭಗವಂತ । ಹಾ ಮ್ಯಾ ನಿಜಗುಹ್ಯಾರ್ಥ ಪ್ರಬೋಧಿಲಾ ॥೪೮೧॥ ಹೇ ಧರೋನಿಯಾ ಅನುಸಂಧಾನ । ಭಾವೇ ಕರಿತಾ ಮಾಝೇ ಭಜನ । ತೇಥ ಮಾವಳೇ ಮೀತೂಪಣ । ಅವಿದ್ಯೇಸೀ ಅಜ್ಞಾನ ಸಮೂಳ ಮಿಥ್ಯಾ ॥೪೮೨॥ ತೇಥ ದೃಶ್ಯ-ದ್ರಷ್ಟಾ-ದರ್ಶನ । ತ್ರಿಗುಣೇಸೀ ಕಾರ್ಯಕಾರಣ । ನುರೇಚಿ ಪ್ರಪಂಚಾಚೇ ಭಾನ । ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೪೮೩॥ ತೇಥ ನಾಮ ರೂಪ ಗುಣ ಜಾತೀ । ನಾಹೀ ಮಹಾಭೂತೇ ಭೂತವ್ಯಕ್ತೀ । ಚೈತನ್ಯ ಪೂರ್ಣ ಸಹಜಸ್ಥಿತೀ । ಬ್ರಹ್ಮೀ ಬ್ರಹ್ಮಸ್ಫೂರ್ತೀ ಅಸೇನಾ ॥೪೮೪॥ ತೇ ಉಂಚ ನಾ ಠೇಂಗಣೇ । ಮೋಠೆ ನಾ ರೋಡ ಹೋಣೇ । ಉಜೂ ನಾ ವಾಂಕುಡೇಪಣೇ । ಅಸೋ ನೇಣೇ ವಿಕಾರೀ ॥೪೮೫॥ ತೇಥ ಶೀತ ನಾ ಉಷ್ಣ । ಮೃದು ನಾ ಕಠಿಣ । ಕಡೂ ನಾ ಗೋಡಪಣ । ಸುಖದುಃಖೇವೀಣ ನಿರ್ದ್ವಂದ್ವ ॥೪೮೬॥ ತೇಥ ಭೇದ ನಾ ಅಭೇದ । ಬೋಲತೇ ನಾ ನಿಃಶಬ್ದ । ಶಾಹಣೇ ನಾ ಮುಗ್ಧ । ದೇಖಣೇ ನಾ ಅಂಧ ಚಿದ್ರೂಪಪಣೇ ॥೪೮೭॥ ತೇ ಏಥೇ ನಾ ತೇಥೇ । ಏತೇ ನಾ ಜಾತೇ । ಜವಳೀ ನಾ ಪರತೇ । ಸದೋದಿತ ಸ್ವತಃಸಿದ್ಧ ॥೪೮೮॥ ತೇ ಖಾತೇ ನಾ ನ ಖಾತೇ । ತೇ ಘೇತೇ ನಾ ದೇತೇ । ಜೀತೇ ನಾ ಮರತೇ । ಪರಾದಿಪರ ತೇ ಪರಾತ್ಪರ ॥೪೮೯॥ ತೇ ಬದ್ಧ ನಾ ಮುಕ್ತ । ನಿತ್ಯ ನಾ ಅನಿತ್ಯ । ಕ್ಷೋಭೇ ನಾ ಪ್ರಸನ್ನ ಹೋತ । ವಸ್ತು ಸದೋದಿತ ಮದ್ರೂಪತ್ವೇ ॥೪೯೦॥ ತೇಥ ಪಾಪ ನಾ ಪುಣ್ಯ । ಆಕಾರ ನಾ ಶೂನ್ಯ । ಸಗುಣ ನಾ ನಿರ್ಗುಣ । ಸ್ವಾನಂದೇ ಪೂರ್ಣ ಸುಖರೂಪ ॥೪೯೧॥ ಸರ್ವಭೂತೀ ಭಗವದ್ಭಜನ । ಕರೂನಿ ಮಾಝೇ ಭಕ್ತಜನ । ಮಾಝೇ ನಿಜರೂಪ ಪರಿಪೂರ್ಣ । ಸ್ವಯೇ ಆಪಣ ಹೋಊನಿ ಠೇಲೇ ॥೪೯೨॥ ತ್ಯಾಂಸೀ ಸಂತ ಮ್ಹಣೋನಿ ಕಾಂಹೀ ಘೇಣೇ । ಅಥವಾ ಅಸಂತ ಮ್ಹಣೋನಿ ಸಾಂಡಣೇ । ಹೇ ನುರೇಚಿ ತ್ಯಾಂಸೀ ವೇಗಳೇಪಣೇ । ಬ್ರಹ್ಮೀ ಬ್ರಹ್ಮಪಣೇ ಪರಿಪೂರ್ಣ ॥೪೯೩॥

ಈ ಅಜ್ಞಾನದ ನಿವೃತ್ತಿಯಾದರೆ ಮಾತ್ರ ಸಾಧಕರಿಗೆ ನನ್ನ ಪರಮಪ್ರಾಪ್ತಿಯು ಅತ್ಯಂತ ಸುಲಭಸಾಧ್ಯವಾಗುವುದು. ಆದ್ದರಿಂದಲೇ ನನ್ನ ನಿಜವಾದ ಭಕ್ತಿಯನ್ನು ನಾನು ಯಥಾರ್ಥ ರೀತಿಯಲ್ಲಿ ಪ್ರಕಾಶಿತಗೊಳಿಸಿರುವೆನು ॥೪೮೦॥ ಸಾಧಕರ ನಿಜಸ್ವಾರ್ಥವು ಶೀಘ್ರವಾಗಿ ಹಸ್ತಗತವಾಗಬೇಕೆಂಬ ಉದ್ದೇಶದಿಂದ ಭಗವಂತನಾದ ನಾನು ಸರ್ವಪ್ರಾಣಿಮಾತ್ರರಲ್ಲಿ ತುಂಬಿಕೊಂಡಿರುವೆನು ಎಂಬ ನನ್ನ ಗುಹ್ಯಾರ್ಥವನ್ನು ಹೇಳಿರುವೆನು ॥೪೮೧॥ ಈ ಅನುಸಂಧಾನವನ್ನೇ ಧರಿಸಿಕೊಂಡು ಅತ್ಯಂತ ಭಾವಪೂರ್ಣವಾಗಿ ನನ್ನ ಆನಂದಮಯ ಭಜನೆಯನ್ನು ಮಾಡಲು ಆಗ ನಾನು, ನೀನು ಎಂಬುವುದು ಇಲ್ಲದಾಗಿ ಅವಿದ್ಯಾ ಹಾಗೂ ಅಜ್ಞಾನವು ಕೂಡ ಪರಿಪೂರ್ಣವಾಗಿ ಇಲ್ಲದಾಗುವುದು ॥೪೮೨॥ ಇಷ್ಟೇ ಅಲ್ಲ, ತಕ್ಷಣವಾಗಿ ದೃಶ್ಯ, ದೃಷ್ಟಾ, ದರ್ಶನ ಎಂಬ ತ್ರಿಗುಣ ಸಹ ಕಾರ್ಯ, ಕಾರಣ ಹಾಗೂ ಪ್ರಪಂಚದ ಭಾನವೂ ಕೂಡ ಉಳಿಯುವುದಿಲ್ಲ ಪರಿಪೂರ್ಣವಾಗಿ ಕೇವಲ ಬ್ರಹ್ಮವೇ ಪೂರ್ಣತ್ವದಿಂದ ತುಂಬಿಕೊಂಡಿರುವುದು ॥೪೮೩॥ ಅಲ್ಲಿ ನಾಮ, ರೂಪ, ಗುಣ, ಜಾತೀ, ಮಹಾಭೂತಗಳು ಹಾಗೂ ಭೂತವ್ಯಕ್ತಿಗಳು ಹೀಗೆ ಯಾವುದೂ ಸಹ ಉಳಿಯುವುದಿಲ್ಲ. ಅತ್ಯಂತ ಸಹಜ ಸ್ಥಿತಿಯಲ್ಲಿ ಪರಿಪೂರ್ಣವಾಗಿ ಸಚ್ಚಿದಾನಂದಘನ ಕೇವಲ ಚೈತನ್ಯವೇ ಉಳಿಯುವುದು. ಬ್ರಹ್ಮನಲ್ಲಿ ಬ್ರಹ್ಮನ ಸ್ಫೂರ್ತಿಯೂ ಸಹ ಉಳಿಯುವುದಿಲ್ಲ ॥೪೮೪॥ ಅದು ಎತ್ತರವಾಗಿಯೂ ಇಲ್ಲ, ಗಿಡ್ಡಾಗಿಯೂ ಇಲ್ಲ. ಭವ್ಯವಾಗಿಯೂ ಇಲ್ಲ, ಕೃಶವಾಗಿಯೂ ಇಲ್ಲ. ನೀಟಾಗಿಯೂ ಇಲ್ಲ, ಅಂಕಡೊಂಕಾಗಿಯೂ ಇಲ್ಲ ಅದಕ್ಕೆ ಯಾವುದೇ ವಿಕಾರವು ಇರುವುದಿಲ್ಲ ॥೪೮೫॥ ಅಲ್ಲಿ ಉಷ್ಣವೂ ಇಲ್ಲ, ಶೀತವೂ ಇಲ್ಲ. ಮೃದುತ್ವವು ಇಲ್ಲ, ಕಠಿಣತ್ವವೂ ಇಲ್ಲ. ಕಹಿಯೂ ಅಲ್ಲ ಮತ್ತು ಸಿಹಿಯಾಗಿಯೂ ಇರುವುದಿಲ್ಲ. ಅದು ಸುಖದುಃಖ ಅಲ್ಲದ ಕೇವಲ ನಿರ್ದ್ವಂದ್ವವೇ ಆಗಿರುವುದು ॥೪೮೬॥ ಅಲ್ಲಿ ಭೇದವೂ ಇಲ್ಲ, ಅಭೇದವೂ ಇಲ್ಲ. ಮಾತನಾಡುವುದೂ ಇಲ್ಲ, ಮೌನವೂ ಇಲ್ಲ. ಅದು ತಿಳಿದವನೂ ಅಲ್ಲ, ತಿಳಿಯಲಾರದವನೂ ಅಲ್ಲ. ಅದು ಚಿದ್ರೂಪವಾಗಿರುವುದು. ಆದ್ದರಿಂದ ಕಣ್ಣಿದ್ದವನೂ ಅಲ್ಲ, ಕುರುಡನೂ ಅಲ್ಲ ॥೪೮೭॥ ಅದು ಇಲ್ಲಿಯೂ ಇಲ್ಲ, ಅಲ್ಲಿಯೂ ಇರುವುದಿಲ್ಲ. ಅದು ಬರುವುದೂ ಇಲ್ಲ, ಹೋಗುವುದೂ ಇಲ್ಲ. ಅದು ಸಮೀಪವಾಗಿಯೂ ಇಲ್ಲ ಮತ್ತು ಬಹು ದೂರಾಗಿಯೂ ಇಲ್ಲ. ಅದು ಯಾವಾಗಲೂ ಸ್ವಯಂಸಿದ್ಧವಾಗಿರುವುದು ॥೪೮೮॥ ಅದು ಭುಂಜಿಸುವುದೂ ಇಲ್ಲ, ಉಪವಾಸವಾಗಿಯೂ ಇರುವುದಿಲ್ಲ. ಅದು ಕೊಡುವುದೂ ಇಲ್ಲ, ಹಾಗೂ ತೆಗೆದುಕೊಳ್ಳುವುದೂ ಇಲ್ಲ. ಜೀವಂತವೂ ಅಲ್ಲ ಮತ್ತು ಮರಣವೂ ಆಗುವುದಿಲ್ಲ. ಅದು ಪರಾದಿ ವಾಚೆಗಳ ಆಚೆಕಡೆ ಇರುವ ಪರಾತ್ಪರವಾಗಿರುವುದು ॥೪೮೯॥ ಅದು ಬದ್ಧವಾಗಿಯೂ ಇರುವುದಿಲ್ಲ ಹಾಗೂ ಮುಕ್ತವಾಗಿಯೂ ಇರುವುದಿಲ್ಲ. ಅದು ನಿತ್ಯವೂ ಅಲ್ಲ ಹಾಗೂ ಅನಿತ್ಯವೂ ಅಲ್ಲ. ಅದು ಎಂದಿಗೂ ಕ್ಷೋಭಿಸುವುದಿಲ್ಲ ಹಾಗೂ ಎಂದಿಗೂ ಪ್ರಸನ್ನವಾಗುವುದಿಲ್ಲ. ಪರಬ್ರಹ್ಮವು ಇದು ಸದೋದಿತವಾಗಿ ಸತ್ವಸ್ವರೂಪದಿಂದಲೇ ಇರುತ್ತಿರುವುದು ॥೪೯೦॥ ಇದರಲ್ಲಿ ಯಾವ ಪಾಪವೂ ಇಲ್ಲ ಹಾಗೂ ಪುಣ್ಯವೂ ಕೂಡ ಇರುವುದಿಲ್ಲ. ಅದು ಸಾಕಾರವೂ ಅಲ್ಲ ಮತ್ತು ನಿರಾಕಾರವೂ ಅಲ್ಲ, ಅದು ಸಗುಣವೂ ಅಲ್ಲ ಹಾಗೂ ನಿರ್ಗುಣವೂ ಅಲ್ಲ. ಅದು ಸ್ವಾನಂದದಿಂದ ಪೂರ್ಣವಾಗಿ ಸುಖಸ್ವರೂಪವಾಗಿರುವುದು ॥೪೯೧॥ ಸರ್ವಪ್ರಾಣಿ ಮಾತ್ರರಲ್ಲಿ ಭಗವಂತನು ಸಮಾನರೂಪದಿಂದ ತುಂಬಿ ಉಳಿದಿರುವನು ಎಂಬ ದೃಷ್ಟಿಯಿಂದ ನನ್ನ ಭಕ್ತರು ಭಜನೆಯನ್ನು ಮಾಡಿ ಅವರು ಸ್ವತಃ ನನ್ನ ಪರಿಪೂರ್ಣವಾದ ಸ್ವರೂಪರಾಗುವರು ॥೪೯೨॥ ಸಂತರೆಂದು ಸ್ವೀಕರಿಸುವಿಕೆ ಹಾಗೂ ಅಸಂತರೆಂದು ತ್ಯಜಿಸುವಿಕೆ ಈ ಭಿನ್ನ ಭಾವವು ಉಳಿಯುವುದೇ ಇಲ್ಲ. ಅವರು ಬ್ರಹ್ಮನಲ್ಲಿ ಪರಿಪೂರ್ಣ ಬ್ರಹ್ಮರಾಗಿಯೇ ಇರುವರು ॥೪೯೩॥

ಬದ್ಧಕಾಳೀ ಬದ್ಧತಾ । ಆತ್ಮೇನಿ ಘೇತಲೀ ನಾಹೀ ತತ್ತ್ವತಾ । ಅಥವಾ ಮುಕ್ತಕಾಳೀಂಚೀ ಮುಕ್ತತಾ । ಆತ್ಮಾ ಸರ್ವಥಾ ಸ್ಪರ್ಶೇನಾ ।೪೯೪॥ ಆತ್ಮಾ ಅವಿಕಾರೀ ಪಾಹೀ । ಯೇಣೇ ನಿರೂಪಣೇ ಪಡೇ ಠಾಯೀ । ಜರಿ ಮ್ಹಣಶೀ ಕಳಲೇ ನಾಹೀ । ಐಕ ತೇಹೀ ಸಾಂಗೇನ ।೪೯೫॥ ಆತ್ಮಾ ಸರ್ವದಾ ನಿತ್ಯ ಪಾಹೀ । ಯಾಲಾಗೀ ತ್ಯಾಸೀ ಉತ್ಪತ್ತಿ ನಾಹೀ । ''ಉತ್ಪತ್ತಿ'' ನ ಲಗೇ ಜ್ಯಾಚೇ ಠಾಯೀ । ತೋ ಗರ್ಭಾಸೀ ಕಂಹೀ ಸ್ಪರ್ಶೇನಾ ।೪೯೬॥ ಗರ್ಭಜನ್ಮ ಜ್ಯಾಸೀ ನಾಹೀ । ತ್ಯಾಸೀ ದೇಹಾಚಾ ಅಭಾವ ಪಾಹೀ । ದೇಹೇವೀಣ ''ವೃದ್ಧಿ'' ಕಂಹೀ । ತ್ಯಾಚೇ ಠಾಯೀ ಸ್ಪರ್ಶೇನಾ ।೪೯೭॥ ಜೋ ಸರ್ವದಾ ವಿದೇಹೀ । ಕರ್ಮ ನ ರಿಘೇ ತ್ಯಾಚ್ಯಾ ಠಾಯೀ ಕರ್ಮೇವೀಣ ಬದ್ಧತಾ ಪಾಹೀ । ಆತ್ಮ್ಯಾಸೀ ಕಂಹೀ ಲಾಗೇನಾ ।೪೯೮॥ ಜೋ ನಿರವಯವ ಸಾಚಾರ । ತ್ಯಾಸೀ ಏಕಹೀ ನ ಘಡೇ ಸಂಸ್ಕಾರ । ಜ್ಯಾಸೀ ನಾಹೀ ಆಕಾರ । ತ್ಯಾಸೀ ವಿಕಾರ ಸ್ಪರ್ಶೇನಾ ।೪೯೯॥ ಜೋ ಗರ್ಭಜನ್ಮಾ ಅತೀತ । ಮರಣ ರಿಘೋ ನ ಶಕೇ ತೇಥ । ಕಾಳಾಚಾಹೀ ನ ಲಗೇ ಘಾತ । ಕ್ಷಯಾತೀತ ಪರಮಾತ್ಮಾ ।೫೦೦॥ ನ ಲಗೇ ಜನ್ಮ ಕರ್ಮ ಮರಣ । ತ್ಯಾಸೀ ವಿಕಾರೀ ಕರೀ ಕೋಣ । ವಸ್ತು ಅವಿಕಾರೀ ಪರಿಪೂರ್ಣ । ಯಾಪರೀ ಜಾಣ ಉದ್ಧವಾ ।೫೦೧॥ ನಿಬಿಡ ದಾಟಲ್ಯಾ ಅಜ್ಞಾನ । ಆತ್ಮಾ ನಾಹೀ ನ ಕರವೇ ಜಾಣ । ಪ್ರಖರ ಝಾಲಿಯಾಹೀ ಜ್ಞಾನ । ಆತ್ಮಾ ನವಾ ಜಾಣ ನುಪಜವೇ ।೫೦೨॥ ಜ್ಞಾನಾಜ್ಞಾನೀ ಅಲಿಪ್ತ । ಆತ್ಮಾ ನಿರ್ವಿಕಾರ ನಿತ್ಯ । ಯೇಚಿ ಅರ್ಥೀ ಸದೃಷ್ಟಾಂತ । ಅಸೇ ಸಾಂಗತ ಶ್ರೀಕೃಷ್ಣ ।೫೦೩॥

ಯಥಾ ಹಿ ಭಾನೋರುದಯೋ ನೃಚಕ್ಷುಷಾಂ ತಮೋ ನಿಹನ್ಯಾನ್ನ ತು ಸದ್ವಿಧತ್ತೇ ।
ಏವಂ ಸಮೀಕ್ಷಾ ನಿಪುಣಾ ಸತೀ ಮೇ ಹನ್ಯಾತ್ತಮಿಸ್ರಂ ಪುರುಷಸ್ಯ ಬುದ್ಧೇಃ ।೩೪॥

ಅರ್ಥ :- ಸೂರ್ಯನು ಉದಯಿಸಿದಾಗ, ಅವನು ಜನರ ಕಣ್ಣುಗಳಿಗೆ ಕವಿದ ಕತ್ತಲೆಯನ್ನು ನಾಶಪಡಿಸುತ್ತಾನೆ. ಆದರೆ ಆಗ ಅವರಿಗೆ ಕಾಣುವ ವಸ್ತುಗಳನ್ನೇನೂ ಅವನು ಸೃಷ್ಟಿಸುವುದಿಲ್ಲ. ಅವು ನಿಜವಾಗಿಯೂ ಮೊದಲೇ ಇದ್ದವು. ಆದರಂತೆ ನನ್ನ ಸಬಲವಾದ ಮತ್ತು ನಿಜವಾದ ಸಾಕ್ಷಾತ್ಕಾರವು ಒಬ್ಬನ ನಿಜವಾದ ಪ್ರಜ್ಞೆಯನ್ನು ಕವಿದ ಕತ್ತಲೆಯನ್ನು ನಾಶಪಡಿಸುವುದು.

ಡೋಳಾ ನಾಂದತೇ ದೃಷ್ಟೀಸೀ । ತಮ ಅವರೋಧೀ ತಿಯೇಸೀ । ಸೂರ್ಯ ಉಗವೂನಿ ತಮಾತೇ ನಿರಸೀ । ಪರೀ ನವೇ ದೃಷ್ಟೀಸೀ ನುಪಜವೀ ।೫೦೪॥ ತೇವೀ ಅವಿದ್ಯಾ ಕ್ಷೋಭೂನಿ ಸಬಳ । ಆತ್ಮಾ ನಾಹೀ ನ ಕರವೇಚ ಕೇವಳ । ಪುರುಷ ಬುದ್ಧೀಸ ಆಣೋನಿ ಪಡಳ । ಮಿಥ್ಯಾ ದ್ವೈತಜಾಳ ದಾಖವೀ ।೫೦೫॥

ಸಂಸಾರದ ಬದ್ಧ ಸಮಯದಲ್ಲಿ ಬದ್ಧತೆಯನ್ನು ಆತ್ಮವು ಸ್ವೀಕರಿಸುವುದಿಲ್ಲ ಮತ್ತು ಮೋಕ್ಷ ಸಮಯದಲ್ಲಿ ಮೋಕ್ಷವನ್ನು ಸ್ಪರ್ಶ ಕೂಡ ಮಾಡುವುದಿಲ್ಲ ।೪೯೪॥ ಆತ್ಮವು ಅವಿಕಾರಿಯಾಗಿರುವುದು ಇದು ಈ ಯಾವ ನಿರೂಪಣೆಯಿಂದ ನಿನಗೆ ತಿಳಿದುಬರಬಹುದು. ಆದರೆ ಇಷ್ಟರಿಂದಲೇ ನನಗೆ ತಿಳಿಯಲಿಲ್ಲ ಎಂದು ಹೇಳಿದರೆ ಪುನಃ ಹೇಳುವೆನು, ಕೇಳು ।೪೯೫॥ ಆತ್ಮವು ಇದು ಯಾವಾಗಲೂ ನಿತ್ಯವಾಗಿರುವುದು. ಆದ್ದರಿಂದ ಅದಕ್ಕೆ ಯಾವ ಉಪಾಧಿಯೂ ಇರುವುದಿಲ್ಲ. ಅದಕ್ಕೆ ಉತ್ಪತ್ತಿಯೇ ಇರುವುದಿಲ್ಲ ಅಂದ ಮೇಲೆ ಅದು ಗರ್ಭಕ್ಕೆ ಎಂದಿಗೂ ಸ್ಪರ್ಶ ಮಾಡುವುದಿಲ್ಲ ।೪೯೬॥ ಯಾವುದಕ್ಕೆ ಗರ್ಭವೂ ಇಲ್ಲ, ಜನ್ಮವೂ ಇಲ್ಲ, ಅಂದಮೇಲೆ ದೇಹವೇ ಇಲ್ಲದಿರಲು ಅದು ಬೆಳೆಯುವುದು ಎನ್ನಲು ಶಕ್ಯವೇ ಇಲ್ಲ ।೪೯೭॥ ಅದು ಯಾವಾಗಲೂ ವಿದೇಹಿಯಾಗಿರುವುದು. ಅದರಲ್ಲಿ ಕರ್ಮವು ಸಂಭವಿಸುವುದಿಲ್ಲ. ಕರ್ಮವಿಲ್ಲದೇ ಇರಲು ಅದಕ್ಕೆ ಎಂದಿಗೂ ಬಂಧನವು ಹತ್ತಿಕೊಳ್ಳಲು ಸಾಧ್ಯವಿಲ್ಲ ।೪೯೮॥ ಅದಕ್ಕೆ ನಿಜವಾಗಿಯೂ ಅವಯವಯಗಳಿರುವುದಿಲ್ಲ. ಅದಕ್ಕೆ ಒಂದಾದರೂ ಸಂಸಾರ ಸಾಧ್ಯವಾಗಲು ಶಕ್ಯವಿಲ್ಲ. ಹಾಗೆಯೇ ಅದಕ್ಕೆ ಆಕಾರವಿರುವುದಿಲ್ಲ. ಆದ್ದರಿಂದ ಅದಕ್ಕೆ ವಿಕಾರವು ಸ್ಪರ್ಶ ಮಾಡಲು ಸಾಧ್ಯವಿಲ್ಲ ।೪೯೯॥ ಯಾವುದು ಗರ್ಭ ಹಾಗೂ ಜನ್ಮರಹಿತವಾಗಿದೆಯೋ, ಅದಕ್ಕೆ ಮರಣವು ಬರುವುದೇ ಇಲ್ಲ ಕಾಲನ ಘಾತವು ಅದಕ್ಕೆ ಬಡೆಯುವುದಿಲ್ಲ. ಪರಮಾತ್ಮನು ಈ ಪ್ರಕಾರವಾಗಿ ಕ್ಷಯಾತೀತನಾಗಿರುನು ।೫೦೦॥ ಯಾವುದಕ್ಕೆ ಜನ್ಮವೂ ಇಲ್ಲ, ಕರ್ಮವೂ ಇಲ್ಲ ಮತ್ತು ಮರಣವೂ ಇಲ್ಲ. ಅಂದಮೇಲೆ ಅದಕ್ಕೆ ವಿಕಾರಿಯನ್ನಾಗಿ ಯಾರು ಮಾಡಬಲ್ಲರು ? ಹೇ ಉದ್ಧವನೇ, ಪರಬ್ರಹ್ಮವು ಇದು ಪೂರ್ಣ ಅಧಿಕಾರಿಯಾಗಿರುವುದು, ಹೀಗೆಂದು ನೀನು ತಿಳಿ ।೫೦೧॥ ಎಷ್ಟೇ ಗಾಢವಾದ ಅಜ್ಞಾನವು ಹರಡಿರಲಿ, ಆದರೂ ಕೂಡ ಆತ್ಮವನ್ನು ಇಲ್ಲದಂತೆ ಮಾಡಲು ಸಾಧ್ಯವಾಗುವುದಿಲ್ಲ. ಅಥವಾ ಪ್ರಖರವಾದ ಜ್ಞಾನವಾಗಲು ಆಗ ಆತ್ಮವನ್ನು ಹೊಸದಾಗಿ ಉತ್ಪನ್ನಗೊಳಿಸಲು ಬರುವುದಿಲ್ಲ ।೫೦೨॥ ಈ ಯಾವ ಆತ್ಮವು ಜ್ಞಾನ ಮತ್ತು ಅಜ್ಞಾನ ಈ ಎರಡರಿಂದಲೂ ಅಲಿಪ್ತವಾಗಿರುವುದು. ಅದು ನಿತ್ಯ ಹಾಗೂ ನಿರ್ವಿಕಾರವಾಗಿರುವುದು. ಈ ವಿಷಯದ ಅರ್ಥವನ್ನೇ ಕುರಿತು ಶ್ರೀಕೃಷ್ಣನು ದೃಷ್ಟಾಂತವನ್ನು ಕೊಟ್ಟು ವಿವರಿಸಿ ಹೇಳುತ್ತಿರುವನು ।೫೦೩॥

ನೇತ್ರಗಳಲ್ಲಿನ ದೃಷ್ಟಿಗೆ ಅಂಧಕಾರ ಕಾರಣದಿಂದ ಕಾಣುತ್ತಿರುವುದಿಲ್ಲ. ಸೂರ್ಯನು ಉದಯಿಸಿ ಅಂಧಕಾರವನ್ನು ಕಳೆಯುವನು. ಆಗ ಆ ದೃಷ್ಟಿಗೆ ಸ್ಪಷ್ಟವಾಗಿ ಕಾಣಲಾರಂಭಿಸುವುದು. ಆದರೆ ಸೂರ್ಯನೇನಾದರೂ ಹೊಸದಾಗಿ ದೃಷ್ಟಿಯನ್ನು ಉತ್ಪನ್ನಗೊಳಿಸುವುದಿಲ್ಲ ।೫೦೪॥ ಅದರಂತೆ ಪ್ರಬಲವಾಗಿರುವ ಮಾಯೆಯು ಎಷ್ಟೇ ಕ್ಷುಬ್ಧಗೊಂಡರೂ ಸಹ ಆತ್ಮವನ್ನು ನಾಶಮಾಡಲು ಸಾಧ್ಯವೇ ಇಲ್ಲ. ಅಥವಾ ಆತ್ಮವನ್ನು ಉತ್ಪನ್ನಗೊಳಿಸಲು ಶಕ್ಯವಿಲ್ಲ. ಅದು ಮನುಷ್ಯನ ಬುದ್ಧಿಗೆ ಆವರಣವನ್ನು ಹಾಕಿ ದ್ವೈತದ ಸುಳ್ಳಾಗಿರುವ ಮಾಯಾ ಜಾಲವನ್ನು ಹರಡಿಸುತ್ತಿರುವುದು ।೫೦೫॥

ತೇಥ ಪಾವಲ್ಯಾ ಶುದ್ಧ ಜ್ಞಾನಾಸೀ । ಅವಿದ್ಯಾ ಮಳ ಮಾತ್ರ ನಿರಸೀ । ಪರೀ ನವೇ ಉಪಜವಾವಯಾ ಆತ್ಮ್ಯಾಸೀ । ಸಾಮರ್ಥ್ಯ ಜ್ಞಾನಾಸೀ ಅಸೇನಾ ॥೫೦೬॥ ಆತ್ಮಾ ನಿಜಪ್ರಕಾಶೀ । ಜ್ಞಾನಾ ಜ್ಞಾನಾತೇ ಪ್ರಕಾಶೀ । ತೇ ಜ್ಞಾನಾ ಜ್ಞಾನ ಪರಮಾತ್ಮ್ಯಾಸೀ । ಕದಾಕಾಳೇಸೀ ಸ್ಪರ್ಶೇನಾ ॥೫೦೭॥ ತೇ ಜ್ಞಾನಾಜ್ಞಾನ ವಿಕಾರ । ಅವಿದ್ಯಾಂತಃಪಾತೀ ಸಾಚಾರ । ಆತ್ಮಾ ಅವಿದ್ಯೇಹೂನಿ ಪರ । ನಿತ್ಯ ನಿರ್ವಿಕಾರ ಯಾ ಹೇತೂ ॥೫೦೮॥ ರಾತ್ರಿ ನಾಹೀ ಸೂರ್ಯಾಸೀ । ಮಾ ದಿವಸು ಕಾಯ ಆಹೇ ತ್ಯಾಸೀ । ತೇವೀ ಜ್ಞಾನಾಜ್ಞಾನ ಆತ್ಮ್ಯಾಸೀ । ಕದಾಕಾಳೇಸೀ ಸ್ಪರ್ಶೇನಾ ॥೫೦೯॥ ಆತ್ಮಾ ನಿರ್ವಿಕಾರ ಸ್ವಯಂಜ್ಯೋತಿ । ಅಲಿಪ್ತ ಜ್ಞಾನಾಜ್ಞಾನಸ್ಥಿತೀ । ತ್ಯಾ ಸ್ವರೂಪಾಚೀ ಸಹಜ ಪ್ರಾಪ್ತೀ । ಉದ್ಧವಾಪ್ರತೀ ಹರಿ ಸಾಂಗೇ ॥೫೧೦॥

ಏಷ ಸ್ವಯಂಜ್ಯೋತಿರಜೋಽಪ್ರಮೇಯೋ ಮಹಾನುಭೂತಿಃ ಸಕಲಾನುಭೂತಿಃ ।
ಏಕೋಽದ್ವಿತೀಯೋ ವಚಸಾಂ ವಿರಾಮೇ ಯೇನೇಷಿತಾ ವಾಗಸವಶ್ಚರಂತಿ ॥೩೫॥

ಅರ್ಥ:- ಉದ್ಧವಾ, ಆತ್ಮವು ಇದು ನಿತ್ಯ ಅಪರೋಕ್ಷವಾಗಿರುವುದು. ಅದರ ಪ್ರಾಪ್ತಿಯನ್ನು ಮಾಡಬೇಕಾಗಿಲ್ಲ. ಅದು ಸ್ವಯಂಪ್ರಕಾಶವಾಗಿರುವುದು. ಅದರಲ್ಲಿ ಅಜ್ಞಾನ ಇತ್ಯಾದಿ ಯಾವುದೇ ಪ್ರಕಾರದ ವಿಕಾರಗಳಿರುವುದಿಲ್ಲ. ಅದು ಜನ್ಮರಹಿತವಾಗಿರುವುದು. ಎಂದಿಗೂ ಯಾವುದೇ ಪ್ರಕಾರದ ವೃತ್ತಿಯಲ್ಲಿ ಆರೂಢವಾಗಲಾರದು. ಆದ್ದರಿಂದ ಅದು ಅಪ್ರಮೇಯವಾಗಿರುವುದು. ಜ್ಞಾನ ಇತ್ಯಾದಿಗಳಿಂದ ಅದನ್ನು ಸಂಸ್ಕಾರಗೊಳಿಸುವುದಾಗುವುದಿಲ್ಲ. ಆತ್ಮದಲ್ಲಿ ದೇಶ, ಕಾಲ ಮತ್ತು ವಸ್ತು ಕೃತ ಪರಿಚ್ಛೇದ ಇಲ್ಲದ್ದಕ್ಕೆ ಅಸ್ತಿತ್ವ, ವೃದ್ಧೀ, ಪರಿವರ್ತನೆ, ಹ್ರಾಸ, ವಿನಾಶ ಇವುಗಳ ಸ್ಪರ್ಶ ಕೂಡ ಆಗುವುದಿಲ್ಲ. ಸರ್ವಪ್ರಕಾರದ ಅನುಭೂತಿಯು ಆತ್ಮಸ್ವರೂಪವಾಗಿರುವುದು. ಯಾವ ಸಮಯಕ್ಕೆ ಮನ ಮತ್ತು ವಾಣಿ ಆತ್ಮಕ್ಕೆ ತಮ್ಮ ಅವಿಷಯವೆಂದು ತಿಳಿದು ನಿವೃತ್ತವಾದಾಗ ಸಜಾತೀಯ, ವಿಜಾತೀಯ ಮತ್ತು ಸ್ವಗತ ಭೇದದಿಂದ ಶೂನ್ಯವಾದ ಒಂದೇ ಅದ್ವಿತಿಯ ಉಳಿಯುವುದು. ವ್ಯವಹಾರ ದೃಷ್ಟಿಯಿಂದ ಅದರ ಸ್ವರೂಪದ ವಾಣೀ ಮತ್ತು ಪ್ರಾಣ ಇತ್ಯಾದಿ ಪ್ರವರ್ತಕದ ರೂಪದಿಂದ ನಿರೂಪಣೆಯನ್ನು ಮಾಡಲಾಗುವುದು.

''ಏಷ ಸ್ವಯಂ ಜ್ಯೋತೀ'' ಜೇ ವ್ಯಾಖ್ಯಾನ । ಪರಮಾತ್ಮಾ ಸ್ವಪ್ರಕಾಶಘನ । ಸಾಧಕ ತದ್ರೂಪ ಆಪಣ । ಅಭಿನ್ನತ್ವೇ ಜಾಣ ಸರ್ವದಾ ॥೫೧೧॥ ಆತ್ಮಾ ಪರಿಪೂರ್ಣ ನಿಜಪೂರ್ಣತಾ । ತ್ಯಾಸೀ ವೇಗಳೀ ಕೈಚೀ ಮಾತಾಪಿತಾ । ಯಾಲಾಗೀ ಆತ್ಮ್ಯಾಸೀ ಜನ್ಮಕಥಾ । ಜಾಣ ಸರ್ವಥಾ ಅಸೇನಾ ॥೫೧೨॥ ತ್ರಿಗುಣಾಂಚೇ ತ್ರಿವಿಧ ಮಳ । ಹೇ ಮಿಥ್ಯಾ ಮಾಯಿಕ ಸಮೂಳ । ಆತ್ಮ್ಯಾಸೀ ನ ಲಾಗತೀ ಅಳುಮಾಳ । ಯಾಲಾಗೀ ''ನಿರ್ಮಳ'' ನಿಜಾತ್ಮಾ ॥೫೧೩॥ ''ಅಪ್ರಮೇಯ'' ಮ್ಹಣಿಪೇ ತೇ ಐಕಾ । ಐಸಾ ತೈಸಾ ಇತುಕಾ ತಿತುಕಾ । ಪೈಲ ತೋ ಅಮುಕಾ ತಮುಕಾ । ಪ್ರಮಾಣ ದೇಖಾ ಕದಾ ನವ್ಹೇ ॥೫೧೪॥

ಶುದ್ಧವಾದ ಜ್ಞಾನದ ಪ್ರಾಪ್ತಿಯಾಗಲು, ಕೂಡಲೇ ಅದು ಅವಿದ್ಯೆಯ ಅಜ್ಞಾನವನ್ನು ನಾಶಪಡಿಸುವುದು. ಆದರೆ ಹೊಸದಾಗಿ ಆತ್ಮವನ್ನು ಉತ್ಪನ್ನಗೊಳಿಸುವ ಸಾಮರ್ಥ್ಯವು ಜ್ಞಾನದ ಅಂಗದಲ್ಲಿ ಸರ್ವಥಾ ಇರುವುದಿಲ್ಲ ॥೫೦೬॥ ಆತ್ಮವು ತನ್ನ ಸ್ವಯಂ ಪ್ರಕಾಶದಿಂದ ಜ್ಞಾನಕ್ಕೆ ಮತ್ತು ಅಜ್ಞಾನಕ್ಕೆ ಪ್ರಕಾಶಿತವನ್ನಾಗಿ ಮಾಡುತ್ತಿರುವುದು. ಅರ್ಥಾತ ಜ್ಞಾನವಾಗಲಿ ಅಥವಾ ಅಜ್ಞಾನವಾಗಲಿ ಇವು ಪರಮೇಶ್ವರನಿಗೆ ಎಂದಿಗೂ ಸ್ಪರ್ಶ ಕೂಡ ಮಾಡಲು ಸಾಧ್ಯವಾಗುವುದಿಲ್ಲ ॥೫೦೭॥ ಜ್ಞಾನ ಮತ್ತು ಅಜ್ಞಾನ ಈ ಎರಡೂ ಕೂಡ ಅವಿದ್ಯೆಯಲ್ಲಿ ಅಂತರ್ಭೂತವಾಗುವ ವಿಕಾರಗಳಾಗಿರುವುವು. ಆತ್ಮವು ಇದು ಅವಿದ್ಯೆಯ ಆಚೆಕಡೆ ಇರುವುದು. ಆದ್ದರಿಂದ ಅದು ನಿತ್ಯ ಮತ್ತು ನಿರ್ವಿಕಾರವಾಗಿರುವುದು ॥೫೦೮॥ ಸೂರ್ಯನಿಗೆ ರಾತ್ರಿಯೇ ಇರುವುದಿಲ್ಲ. ಅಂದ ಮೇಲೆ ಹಗಲು ಆತನಿಗೆ ಎಲ್ಲಿಂದ ತರಬೇಕು? ಅದರಂತೆ ಆತ್ಮಕ್ಕೆ ಜ್ಞಾನವಾಗಲಿ ಅಥವಾ ಅಜ್ಞಾನವಾಗಲಿ ಈ ಎರಡೂ ಕೂಡ ಎಂದಿಗೂ ಸ್ಪರ್ಶವನ್ನು ಮಾಡಲು ಶಕ್ಯವೇ ಇಲ್ಲ ॥೫೦೯॥ ಆತ್ಮವು ನಿರ್ವಿಕಾರವಾಗಿದ್ದು ಸ್ವಯಂಪ್ರಕಾಶವಾಗಿರುವುದು. ಅದು ಜ್ಞಾನದ ಮತ್ತು ಅಜ್ಞಾನದ ಸ್ಥಿತಿಯಿಂದ ಅಲಿಪ್ತವಾಗಿರುವುದು. ಹೀಗಿರುವ ಯಾವ ಆ ಸ್ವರೂಪವು ಸುಲಭವಾದ ಪದ್ಧತಿಯಲ್ಲಿ ಪ್ರಾಪ್ತವಾಗುವ ಮಾರ್ಗವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೫೧೦॥

''ಏಷ ಸ್ವಯಂ ಜ್ಯೋತಿ'' ಈ ವ್ಯಾಖ್ಯಾನದ ಅರ್ಥವು ಹೀಗಿದೆ, ಪರಮಾತ್ಮಾ ಈತನು ಸ್ವಯಂಪ್ರಕಾಶಘನನಾಗಿರುವನು. ಮತ್ತು ಸಾಧಕನೂ ಕೂಡ ಪರಮಾತ್ಮನಲ್ಲಿ ಅಭಿನ್ನನಾಗಿರುವುದರಿಂದ ತದ್ರೂಪನೇ ಆಗಿರುವನು ॥೫೧೧॥ ಆತ್ಮವು ಇದು ತನ್ನ ಪೂರ್ಣತ್ವದಿಂದ ಪರಿಪೂರ್ಣವಾಗಿಯೇ ಇರುವುದು. ಅದಕ್ಕೆ ಭಿನ್ನವಾಗಿರುವ ಮಾತಾ-ಪಿತರನ್ನು ಎಲ್ಲಿಂದ ತರಬೇಕು? ಆದ್ದರಿಂದ ಆತ್ಮಕ್ಕೆ ಜನ್ಮದ ಸರ್ವಥಾ ಅದರ ಹೆಸರೂ ಕೂಡ ಇರುವುದಿಲ್ಲ ॥೫೧೨॥ ತ್ರಿಗುಣದ ಮೂರು ಪ್ರಕಾರದ ಮಲಗಳು ಸಮೂಲವಾಗಿ ಮಿಥ್ಯೆಯಾಗಿರುವುವು. ಅಂದರೆ ಅವು ಮಾಯಿಕವಾಗಿರುವುವು. ಆ ಯಾವ ಆತ್ಮಕ್ಕೆ ಅಣುಮಾತ್ರವೂ ಕೂಡ ಯಾವ ಮಲಗಳು ಹತ್ತಲಾರವು. ಆದ್ದರಿಂದ ಆತ್ಮವು ನಿರ್ಮಲವಾಗಿರುವುದು ॥೫೧೩॥ ಅದಕ್ಕೆ ಅಪ್ರಮೇಯ ಎಂದು ಏಕೆ ಹೇಳುವುರೆಂಬುದಕ್ಕೆ ಹೇಳುವೆನು, ಅದನ್ನು ಕೇಳು. ಆತ್ಮವು ಹೀಗೆ ಇರುವುದು, ಹಾಗೆ ಇರುವುದು, ಇಷ್ಟೇ ಇರುವುದು, ಅಷ್ಟೇ ಇರುವುದು, ಆತ್ಮವು ಆಚೆಕಡೆ ಇರುವುದು, ಅಂತಹದ್ದು, ಇಂತಹದ್ದು ಇತ್ಯಾದಿ ಪ್ರಕಾರಗಳಿಂದ ಅದರ ಪ್ರಮಾಣದ ವರ್ಣನೆಯನ್ನು ಮಾಡಲು ಬರುವುದಿಲ್ಲ ॥೫೧೪॥

ಕಾಳಾ ಗೋರಾ ಸಾಂವಳಾ । ನಿಳಾ ಧವಳಾ ಪಿಂವಳಾ । ಏಕ ತೇಥ ದೂರೀ ಜವಳಾ । ಯಾ ಪ್ರಮಾಣಾವೇಗಳಾ ಪರಮಾತ್ಮಾ ।।೮೧೫।। ''ಮಹಾನುಭೂತಿ'' ಪದವ್ಯಾಖ್ಯಾನ । ಆತ್ಮಾ ಅಖಂಡ ದಂಡಾಯಮಾನ । ನಿಜೀ ನಿಜರೂಪೇ ಸಮಸಮಾನ । ಸ್ವಾನಂದಘನ ಸರ್ವದಾ ।।೮೧೬।। ತೇಥ ದೇಶ ಕಾಳ ವರ್ತಮಾನ । ಧ್ಯೇಯ ಧ್ಯಾತಾ ಅಥವಾ ಧ್ಯಾನ। ಜ್ಞೇಯ ಜ್ಞಾತಾ ಆಣಿ ಜ್ಞಾನ। ಹೇಹೀ ಜಾಣ ಅಸೇನಾ ।।೮೧೭।। ನಾಮ-ರೂಪ-ಜಾತ-ಗೋತ । ಕ್ರಿಯಾ ಕರ್ಮಾಸೀ ಅಲಿಪ್ತ । ಜನ್ಮ ಮರಣ ಕೈಚೇ ತೇಥ । ವಸ್ತು ಸದೋದಿತ ಸ್ವಾನಂದೇ ।।೮೧೮।। ತೇಥ ವೃದ್ಧಿ ಆಣಿ ಹ್ರಾಸ । ಆದಿಮಧ್ಯಾಂತವಿಲಾಸ । ಪರಿಪಾಕಾದಿ ವಿನ್ಯಾಸ । ಯಾಂಚಾಹೀ ಪ್ರವೇಶ ಅಸೇನಾ ।।೮೧೯।। ಮ್ಹಣಶೀ ಪೂರ್ವೋಕ್ತ ಧರ್ಮಸ್ಥಿತೀ। ತೇಥ ನ ರಿಘೇ ಕೈಶಾ ರೀತೀ। ''ಸಕಳಾನುಭೂತಿ'' ಯಾ ಪದೋಕ್ತೀ। ವಸ್ತು ಸರ್ವಾರ್ಥೀ ಅಲಿಪ್ತ ।।೮೨೦।। ಯಾ ರೀತೀ ಧರ್ಮ ಆಣಿ ಅಧರ್ಮ । ಸಕಳ ಭೂತಾಂಚೇ ಕ್ರಿಯಾಕರ್ಮ । ಪ್ರಕಾಶಕ ಮೀ ಆತ್ಮಾರಾಮ । ಯಾಸೀ ಅಲಿಪ್ತ ಪರಮ ಪರಮಾತ್ಮಾ ।।೮೨೧।। ಗಂಗಾಜಳಾ ಆಣಿ ಮದ್ಯಾಸೀ । ಆಕಾಶ ವ್ಯಾಪ್ತ ಅಸೋನಿ ತ್ಯಾಂಸೀ । ಪರೀ ತೇ ಅಲಿಪ್ತ ದೋಹಿಸೀ । ತೇವಿ ಜ್ಞಾನಾಜ್ಞಾನಾಸೀ ಪರಮಾತ್ಮಾ ।।೮೨೨।। ಜೇಥ ಜ್ಞಾನಾಜ್ಞಾನಾಚಾ ಅಭಾವೋ । ತೇಥ ಕರ್ಮಾಕರ್ಮಾ ಕೈಚಾ ಠಾವೋ । ''ಸಕಳಾನುಭೂತಿ'' ಯಾ ನಾಂವ ಪಹಾ ಹೋ । ಅಭೇದಾನ್ವಯೋ ಸ್ವಾನಂದೇ ।।೮೨೩।। ಐಸಾ ಪರಮಾತ್ಮಾ ಪರಮಾನಂದ । ಸಜಾತೀಯ-ವಿಜಾತೀಯ -ಸ್ವಗತಭೇದ । ನಾಸೋನಿಯಾ ವಸ್ತು ಶುದ್ಧ । ಜಾಣ ಪ್ರಸಿದ್ಧ ನಿಜಬೋಧೇ ।।೮೨೪।। ''ವಿಜಾತೀಯ ಭೇದ'' ಮೀ ದೇಹ ಮ್ಹಣಣೇ । ''ಸಜಾತೀಯ ಭೇದ'' ಮೀ ಜೀವಪಣೇ । ''ಸ್ವಗತ ಭೇದ'' ಮೀ ಬ್ರಹ್ಮ ಸ್ಫುರಣೇ । ಹೇ ತಿನೀ ನೇಣೇ ಪರಮಾತ್ಮಾ ।।೮೨೫।। ತೇಥ ಊಣಖೂಣ ಲಕ್ಷ್ಯಲಕ್ಷಣ ಯುಕ್ತಿಪ್ರಯುಕ್ತಿ ಪ್ರಮಾಣ । ಹೇಹೀ ಸರ್ವಥಾ ನ ರಿಘೇ ಜಾಣ । ಬ್ರಹ್ಮ ಪರಿಪೂರ್ಣ ಏಕಾಕೀ ।।೮೨೬।। ಐಸೇ ಏಕಾಕೀ ಪರಬ್ರಹ್ಮ । ನಿಜಗುಹ್ಯಾಚೇ ಗುಹ್ಯ ಉತ್ತಮ । ಹೇ ಜಾಣೇ ತೋ ಸಭಾಗ್ಯ ಪರಮ । ತ್ಯಾಸೀ ಭವಭ್ರಮ ನ ಬಾಧೀ ।।೮೨೭।।

ಕಪ್ಪು ವರ್ಣ, ಗೌರವರ್ಣ, ಮೇಘವರ್ಣ, ನೀಲವರ್ಣ, ಬಿಳಿವರ್ಣ ಅಥವಾ ಇಲ್ಲಿರುವ, ಅಲ್ಲಿರುವ, ದೂರ, ಸಮೀಪ ಇಂತಹ ಸರ್ವ ಪ್ರಮಾಣಗಳಿಂದ ಪರಮಾತ್ಮನು ಭಿನ್ನನಾಗಿಯೇ ಇರುವನು ।೮೧೫।। ''ಮಹಾನುಭೂತಿಃ'' ಎಂಬ ಪದದ ಅರ್ಥವು ಹೀಗಿದೆ; ಆತ್ಮವು ಸತತವಾಗಿ ಜಾಗೃತವಾಗಿರುವುದು. ತನ್ನ ಸ್ವರೂಪದಲ್ಲಿ ಸಮಸಮಾನವಾಗಿರುವುದು. ಮತ್ತು ಸದೈವ ಸ್ವಾನಂದರೂಪವಾಗಿರುವುದು ।೮೧೬।। ಅಲ್ಲಿ ದೇಶ ಕಾಲ ವರ್ತಮಾನ, ಧ್ಯೇಯ, ಧ್ಯಾತಾ, ಧ್ಯಾನ ಅಥವಾ ಜ್ಞೇಯ, ಜ್ಞಾತಾ, ಜ್ಞಾನ ಇವೂ ಕೂಡ ನಿಜವಾಗಿಯೂ ಇರುವುದಿಲ್ಲ ।೮೧೭।। ನಾಮ, ರೂಪ, ಕುಲ, ಗೋತ್ರ, ಹಾಗೂ ಕ್ರಿಯಾ, ಕರ್ಮಗಳಿಂದ ಯಾವುದು ಪರಿಪೂರ್ಣವಾಗಿ ಅಲಿಪ್ತವಾಗಿರುವುದೋ ಅದಕ್ಕೆ ಜನ್ಮ ಮರಣ ಎಲ್ಲಿಂದ ಬರಬೇಕು ? ಆತ್ಮವು ಯಾವಾಗಲೂ ಸ್ವಾನಂದಪೂರ್ಣವೇ ಆಗಿರುವುದು ।೮೧೮।। ಅಲ್ಲಿ ವೃದ್ಧಿಯಾಗಲಿ ಅಥವಾ ಹ್ರಾಸವಾಗಲಿ ಅಥವಾ ಆದಿ,ಮಧ್ಯ ಮತ್ತು ಅಂತ್ಯವಾಗಲಿ ಈ ಅವಸ್ಥೆಗಳು ಹಾಗೂ ಪರಿಣಾಮಾದಿ ವಿಕಾರಗಳಾಗಲಿ ಇವುಗಳ ಯಾವ ಪ್ರವೇಶವೂ ಕೂಡ ಆಗಲಾರದು ।೮೧೯।। ಪೂರ್ವದಲ್ಲಿ ಹೇಳಿರುವ ಧರ್ಮವು ಅದರಲ್ಲಿ ಹೇಗೆ ಪ್ರವೇಶವಾಗುವುದಿಲ್ಲ ? ಎಂದು ನೀನು ಹೀಗೆ ಕೇಳಬಹುದು. ಅದಕ್ಕಾಗಿ ಕೇಳು, ;''ಸಕಲಾನುಭೂತೀ'' ಈ ಪದದ ಅರ್ಥವು ಹೀಗಿರುವುದು ; ಆತ್ಮವಸ್ತುವು ಧರ್ಮ ಮತ್ತು ಅಧರ್ಮ, ಸರ್ವ ಪ್ರಾಣಿಮಾತ್ರರ ಕ್ರಿಯಾಕರ್ಮ, ಈ ಎಲ್ಲಕ್ಕೂ ಪ್ರಕಾಶಕನಾಗಿ ಆತ್ಮಾರಾಮನಾದ ನಾನೇ ಇರುವೆನು. ಆದರೆ ಪರಮಾತ್ಮನು ಈ ಎಲ್ಲಕ್ಕೂ ಅಲಿಪ್ತನಾಗಿಯೇ ಇರುವನು ।೮೨೦।। ಈ ಪ್ರಕಾರವಾಗಿ ಧರ್ಮ, ಅಧರ್ಮ, ಪ್ರಾಣಿಮಾತ್ರರ ಕ್ರಿಯಾಕರ್ಮ ಇವುಗಳ ಪ್ರಕಾಶಕನು ನಾನು ಆತ್ಮಾರಾಮನಾಗಿರುವೆನು. ಶ್ರೇಷ್ಠ ಪರಮಾತ್ಮನು ಇವುಗಳಿಂದ ಅಲಿಪ್ತನು ।೮೨೧।। ಪಾತ್ರೆಯಲ್ಲಿನ ಗಂಗಾಜಲ ಮತ್ತು ಮದ್ಯ ಈ ಎರಡಕ್ಕೂ ಆಕಾಶವು ವ್ಯಾಪಿಸಿಕೊಳ್ಳುವುದು. ಆದರೆ ಅದು ಈ ಎರಡರಿಂದಲೂ ಅಲಿಪ್ತವಾಗಿರುವುದು. ಅದರಂತೆ ಜ್ಞಾನ ಮತ್ತು ಅಜ್ಞಾನದಿಂದ ಪರಮಾತ್ಮನು ಅಲಿಪ್ತನಾಗಿರುವನು ।೮೨೨।। ಎಲ್ಲಿ ಜ್ಞಾನ, ಅಜ್ಞಾನದ ಅಭಾವವಿರುವುದೋ, ಅಲ್ಲಿ ಕರ್ಮ ಅಕರ್ಮಗಳ ಸ್ಥಾನವೇ ಇರುವುದಿಲ್ಲ. ಇದರ ನಾಮವೇ ''ಸಕಲಾನುಭೂತೀ'' ಎಂದು ಇರುವುದು. ಅದರಲ್ಲಿ ಸ್ವಾನಂದಕಾರಣದಿಂದ ಭೇದಭಾವವು ಇರುವುದಿಲ್ಲ ।೮೨೩।। ಪರಮಾತ್ಮನು ಪರಮಾನಂದ ರೂಪನಾಗಿರುವನು. ಆತನಲ್ಲಿ ಸಜಾತೀಯ, ವಿಜಾತೀಯ ಮತ್ತು ಸ್ವಗತ ಭೇದವು ಇರುವುದಿಲ್ಲ. ಈ ಪ್ರಕಾರವಾಗಿ ಆತ್ಮವಸ್ತುವು ಶುದ್ಧವಾಗಿರುವುದು ಪ್ರಸಿದ್ಧವಾಗಿದೆ. ಇದನ್ನು ನಿಜಬೋಧೆಯಿಂದ ತಿಳಿದುಕೊಳ್ಳಬೇಕು ।೮೨೪।।'' ಈ ದೇಹವೇ ನಾನು'' ಎಂದು ತಿಳಿಯುವುದು ಇದು ವಿಜಾತೀಯ ಭೇದವಾಗಿರುವುದು. ''ನಾನು ಜೀವಿಯು'' ಎಂದು ತಿಳಿಯುವುದು ಇದು ಸಜಾತೀಯ ಭೇದವಾಗಿರುವುದು. ''ನಾನು ಬ್ರಹ್ಮನು'' ಎಂದು ಸ್ಫುರಣವಾಗುವಿಕೆಯು ಇದು ಸ್ವಗತ ಭೇದವಾಗಿರುವುದು. ಆದರೆ ಈ ಮೂರು ಭೇದಗಳನ್ನೂ ಕೂಡ ಪರಮಾತ್ಮನು ತಿಳಿಯನು ।೮೨೫।। ಅಲ್ಲಿ ಯಾವುದೇ ಗುಟ್ಟು ರಹಸ್ಯ, ಲಕ್ಷ್ಯಲಕ್ಷಣ, ಯುಕ್ತಿ-ಪ್ರಯುಕ್ತಿ, ಪ್ರಮಾಣ ಇವು ಸರ್ವಥಾ ಉಪಯೋಗವಾಗದು. ಬ್ರಹ್ಮವು ಪರಿಪೂರ್ಣವಾಗಿ ಇದು ಒಂದೇ ಒಂದಾಗಿರುವುದು ।೮೨೬।। ಹೀಗೆ ಇದು ಅದ್ವಿತೀಯವಾಗಿರುವ ಒಂದೇ ಆದ ಪರಬ್ರಹ್ಮವು ಇದು ನಿಜಗುಹ್ಯದಲ್ಲಿನ, ಶ್ರೇಷ್ಠ ಗುಹ್ಯವಾಗಿರುವುದು. ಇದನ್ನು ಯಾರು ತಿಳಿಯುವರೋ, ಅವರೇ ಮಹಾ ಭಾಗ್ಯವಂತರಾಗಿರುವರು. ಅವರಿಗೆ ಸಂಸಾರದ ಭಯವು ಎಂದಿಗೂ ಬಾಧಿಸಲು ಸಾಧ್ಯವಿಲ್ಲ ।೮೨೭।।

ತೋ ದೇಹೀ ಅಸತಾಂಚಿ ಜಾಣ । ತ್ಯಾಸೀ ನ ಬಾಧೀ ದೇಹಗುಣ । ಕದಾ ನ ಬಾಧೀ ಕರ್ಮಾಚರಣ । ಜನ್ಮ ಮರಣ ಬಾಧೀನಾ ।೫೨೮॥ ಐಕೋನಿ ಐಶಿಯಾ ಜ್ಞಾನಾಸೀ । ತೇ ಸ್ವರೂಪ ಸ್ಪಷ್ಟ ಸಾಂಗ ಮ್ಹಣಸೀ । ತರೀ ತೇಥ ರಿಗಮು ನಾಹೀ ವಾಚೇಸೀ । ಶ್ರುತಿ ಶಬ್ದೇಸೀ ಪರತಲ್ಯಾ ।೫೨೯॥ ಜೇಥ ಅತಿವಿವೇಕಸಂಪನ್ನ । ಬುದ್ಧಿ ಪ್ರವೇಶೇನಾ ಆಪಣ । ಸವೇಗಪಣೇ ನ ಪವೇ ಮನ । ತೇ ವಸ್ತು ವಾಚೇಅಧೀನ ಸರ್ವಥಾ ನವ್ಹೇ ।೫೩೦॥ ಖುಂಟಲೀ ಶಾಸ್ತ್ರಾಂಚೀ ವ್ಯುತ್ಪತ್ತೀ । ದರ್ಶನೇ ಅದ್ಯಾಪಿ ವಿವಾದತೀ । ಶ್ರುತಿ ಪರತಲ್ಯಾ ''ನೇತಿ ನೇತಿ'' । ತೇಥ ವಚನೋಕ್ತೀ ವಿರಾಮು ।೫೩೧॥ ಧರೋನಿ ಜಾಣಿವೇಚೀ ಹಾಂವ । ಶಬ್ದ ಜ್ಞಾನೇ ಘೇತಲೀ ಧಾಂವ । ಪರೀ ವಸ್ತೂಚೇ ಏಕಹೀ ನಾಂವ । ಘ್ಯಾವಯಾ ಜಾಣೀವ ನ ಸರೇಚಿ ।೫೩೨॥ ಏವಂ ವಿಚಾರಿತಾ ಸಾಚಾರ । ಪರಾದಿ ವಾಚಾ ನವ್ಹೇ ಉಚ್ಚಾರ । ಯಾಲಾಗೀ ವಸ್ತು ''ಪರಾತ್ಪರ'' । ಕ್ಷರಾಕ್ಷರಾ ಅತೀತ ।೫೩೩॥ ಜೇ ಸರ್ವಾವಯವೀ ಸರ್ವದಾ ಶೂನ್ಯ । ತೇಖೀ ಶೂನ್ಯಹೀ ನವ್ಹೇ ಆಪಣ । ಶೂನ್ಯಪ್ರಕಾಶ ಚಿದ್‌ಘನ । ವಸ್ತು ಪರಿಪೂರ್ಣ ಏಕತ್ವೇ ।೫೩೪॥ ತೇಥ ರಿಘಾವಯಾ ವಚನೋಕ್ತೀ । ಶಬ್ದೇ ಸಾಧಿಲ್ಯಾ ನಾನಾ ಯುಕ್ತೀ । ತ್ಯಾ ಚಿದಾಕಾಶೀ ಮಾವಳತೀ । ಜೇವೀ ಕಾ ಉಗವತಾ ಗಭಸ್ತೀ ಖದ್ಯೋತ ।೫೩೫॥ ಖದ್ಯೋತ ಸೂರ್ಯಾಸೀ ಖೇಂವ ದೇತಾ । ತೈ ವಸ್ತು ಯೇತೀ ವಚನಾಚೇ ಹಾತಾ । ವಸ್ತೂಪಾಶೀ ಶಬ್ದಾಚ್ಯಾ ಕಥಾ । ಜಾಣ ತತ್ತ್ವತಾ ಹಾರಪತೀ ।೫೩೬॥ ಸೂರ್ಯೋದಯ ಝಾಲಿಯಾ ಪಾಹೀ । ಖದ್ಯೋತ ಶೋಧಿತಾ ನ ಪಡೇ ಠಾಯೀ । ತೇವೀ ವಸ್ತು ಪ್ರಾಪ್ತಿ ಪಾವಿಜೇ ಜಂಹೀ । ತೈ ಮಾಗಮೋಸ ನಾಹೀ ಶಬ್ದಾಂಚಾ ।೫೩೭॥ ಹೋ ಕಾ ಅಂಧಾರಿಯೇ ರಾತೀ । ಜ್ಯಾಂಚೇ ದೀಪೇ ಚಾಲೇ ಕ್ರಿಯಾಸ್ಥಿತೀ । ತೇಥ ಝಾಲಿಯಾ ಸುರ್ಯೋದಯಪ್ರಾಪ್ತೀ । ತೇಚಿ ಉಪೇಕ್ಷಿತೀ ದೀಪಾತೇ ।೫೩೮॥ ತೇವೀ ಶಾಬ್ದಿಕಾ ಜ್ಞಾನಯುಕ್ತೀ । ಅನುತಾಪೇ ಬ್ರಹ್ಮ ವಿವಂಚಿತೀ । ಜ್ಯಾಂಸೀ ಝಾಲೀ ಬ್ರಹ್ಮಪ್ರಾಪ್ತೀ । ತೇಚಿ ಉಪೇಕ್ಷಿತೀ ಶಬ್ದಾತೇ ।೫೩೯॥ ಜಂವ ಜಂವ ಶಬ್ದಾಚಾ ಅಭಿಮಾನ । ತಂವ ತಂವ ದೂರೀ ಬ್ರಹ್ಮಜ್ಞಾನ । ಯೇಚಿ ಅರ್ಥೀಚೇ ಉಪಲಕ್ಷಣ । ಐಕ ನಿಜಖೂಣ ಉದ್ಧವಾ ।೫೪೦॥

ಅವರು ದೇಹದಲ್ಲಿ ಇರುತ್ತಿರಲು ದೇಹದ ಗುಣಗಳು ಅವರಿಗೆ ಬಾಧಿಸುವುದಿಲ್ಲ. ಅವರಿಗೆ ಕರ್ಮಾಚರಣೆಗಳೂ ಕೂಡ ಎಂದಿಗೂ ಬಾಧೆ ಕೊಡಲು ಶಕ್ಯವಿಲ್ಲ. ಜನ್ಮಮರಣಗಳ ಬಾಧೆಯೂ ಕೂಡ ಅವರಿಗಾಗಲು ಸಾಧ್ಯವಿಲ್ಲ ।೫೨೮॥ ಈ ಜ್ಞಾನವನ್ನು ಕೇಳಿ ನೀನು ಆ ಸ್ವರೂಪ ವಿಷಯಕ್ಕೆ ಸ್ಪಷ್ಟವಾಗಿ ತಿಳಿಸು ಎಂದು ಹೇಳಬಹುದು. ಆದರೆ ಆ ಸ್ವರೂಪವನ್ನು ಹೇಳಬೇಕೆಂದರೆ ವಾಣಿಯು ಸಮರ್ಥವಾಗಿರುವುದಿಲ್ಲ. ಶ್ರುತಿಯ ಶಬ್ದಗಳು ವರ್ಣಿಸಲು ಸಾಧ್ಯವಾಗದೇ ಹಿಂದಿರುಗಿದವು ।೫೨೯॥ ಅತ್ಯಂತ ವಿವೇಕಸಂಪನ್ನ ಬುದ್ಧಿಯೂ ಸಹ ಅಲ್ಲಿ ಪ್ರವೇಶವನ್ನು ಮಾಡಲು ಶಕ್ಯವಿಲ್ಲ. ಚಂಚಲತ್ವದಿಂದ ಯಾವ ಮನವೂ ಕೂಡ ಅಲ್ಲಿ ಮುಟ್ಟಿಕೊಳ್ಳಲು ಸಾಧ್ಯವಿಲ್ಲ. ಆ ಯಾವ ಪರಬ್ರಹ್ಮವು ವಾಣಿಯ ಆಧೀನವಾಗಿ ಹೇಗೆ ತಾನೇ ಇರಲು ಸಾಧ್ಯ ? ।೫೩೦॥ ಶಾಸ್ತ್ರಗಳ ಉತ್ಪತ್ತಿಯು ನಿಂತುಹೋಯಿತು, ದರ್ಶನಗಳು ಈಗಲೂ ವಾದವಿವಾದಗಳನ್ನು ಮಾಡುತ್ತಲೇ ಕುಳಿತುಕೊಂಡಿರುವುವು. ಶ್ರುತಿಯಾದರೂ ನೇತಿ ನೇತಿ ಅಂದರೆ ಅದು ಅಲ್ಲ, ಅದು ಅಲ್ಲವೆನ್ನುತ್ತ ಹಿಂದಿರುಗಿತು. ಅಂದಮೇಲೆ ಅಲ್ಲಿ ವಾಣಿಯ ಯಾವ ಶಕ್ತಿ ನಡೆದೀತು? ಆ ವಾಣಿಯು ವಿರಾಮಗೊಂಡಿತು ।೫೩೧॥ ನಾನು ತಿಳಿದವನು ಎಂಬ ಅಭಿಲಾಷೆ ಪಟ್ಟು ಶಬ್ದಜ್ಞಾನದಿಂದ ಎಷ್ಟೇ ಓಡಿದರೂ ಪರಬ್ರಹ್ಮದ ಒಂದಾದರೂ ಹೆಸರು ತೆಗೆದುಕೊಳ್ಳಲು ಅವರ ಜ್ಞಾನವು ಸಾಲುವುದಿಲ್ಲ ।೫೩೨॥ ಈ ಪ್ರಕಾರವಾಗಿ ಸೂಕ್ಷ್ಮ ವಿಚಾರ ಮಾಡಿದರೆ ಪರಾದಿ ವಾಣಿಗಳಿಗೂ ಕೂಡ ಇದನ್ನು ಉಚ್ಚರಿಸಲು ಬರುವುದಿಲ್ಲ. ಆದ್ದರಿಂದ ಬ್ರಹ್ಮವು ಇದು ಅಕ್ಷರದ ಅತೀತವಾಗಿದ್ದು ಮತ್ತು ಪರಾತ್ಪರವಾಗಿರುವುದು ।೫೩೩॥ ಇದು ಸದಾ ಸರ್ವದಾ ಸರ್ವ ಅವಯವಗಳಿಂದ ಶೂನ್ಯವು. ಆದರೆ ಕೊನೆಯಲ್ಲಿ ತಾನು ಶೂನ್ಯವಲ್ಲದಾಗುವುದು. ಕಾರಣ ಶೂನ್ಯಕ್ಕೆ ಪ್ರಕಾಶಿತ ಮಾಡುವ ಚಿತ್‌ಸ್ವರೂಪವು ಏಕತ್ವದಿಂದ ಪರಿಪೂರ್ಣವಾಗಿರುವುದು ।೫೩೪॥ ಅಲ್ಲಿ ಪ್ರವೇಶ ಮಾಡಬೇಕೆಂದು ಶಬ್ದಗಳು ಅನೇಕ ಪ್ರಕಾರದ ಯುಕ್ತಿಗಳಿಂದ ಹೋರಾಡಿದವು. ಆದರೆ ಸೂರ್ಯನ ಉದಯವಾಗುತ್ತಲೇ ಮಿಂಚು ಹುಳಗಳು ಹೇಗೆ ಲೋಪವಾಗುವುವೋ, ಅದರಂತೆ ಆ ಪರಬ್ರಹ್ಮನಲ್ಲಿ ಶಬ್ದಗಳು ಲಯವಾಗುವುವು ।೫೩೫॥ ಒಂದು ವೇಳೆ ಮಿಂಚಿನ ಹುಳವು ಸೂರ್ಯನಿಗೆ ಆಲಿಂಗನವನ್ನು ಕೊಡಬಹುದಾದರೆ ಆತ್ಮತತ್ತ್ವವು ವಾಣಿಯ ಕೈಯಲ್ಲಿ ಸಿಗಬಹುದು. ಒಟ್ಟಿನಲ್ಲಿ ಆತ್ಮವಸ್ತುವಿನಲ್ಲಿ ಶಬ್ದಗಳ ಸರ್ವ ಪಾಂಡಿತ್ಯವು ಲೋಪವಾಗುವುದು ।೫೩೬॥ ಸುರ್ಯೋದಯವಾದನಂತರ ಮಿಂಚಿನ ಹುಳವನ್ನು ಯಾವ ಪ್ರಕಾರವಾಗಿ ಶೋಧಿಸಿದರೂ ಸಿಗುವುದಿಲ್ಲವೋ, ಅದರಂತೆ ಯಾರಿಗೆ ಆತ್ಮಜ್ಞಾನವು ಪ್ರಾಪ್ತವಾಗಿದೆಯೋ ಅವರಲ್ಲಿ ಶಬ್ದಗಳ ಸುಳಿವೂ ಕೂಡ ಉಳಿದುಕೊಳ್ಳುವುದಿಲ್ಲ ।೫೩೭॥ ರಾತ್ರಿಯ ಕತ್ತಲಲ್ಲಿ ಯಾರ ಕಾರ್ಯಗಳು ದೀಪಗಳಿಂದ ನಡೆಯುತ್ತಿರುವುವು. ಸೂರ್ಯೋದಯವಾಗುತ್ತಲೇ ಅವರೇ ದೀಪಗಳನ್ನು ಉಪೇಕ್ಷಿಸುವರು ।೫೩೮॥ ಅದರಂತೆ ಸಾಧಕನು ಪ್ರಾರಂಭದಲ್ಲಿ ಶಾಬ್ದಿಕ ಜ್ಞಾನಯುಕ್ತಿಗಳಿಂದ ಪಶ್ಚಾತ್ತಾಪಯುಕ್ತ ಅಂತಃಕರಣದಿಂದ ಬ್ರಹ್ಮದ ವಿಚಾರವನ್ನು ಮಾಡುತ್ತಿರುವನು. ಆದರೆ ಆತನು ಬ್ರಹ್ಮನಲ್ಲಿ ಏಕರೂಪನಾಗುತ್ತಲೇ ಆತನೇ ಶಬ್ದಗಳನ್ನು ಉಪೇಕ್ಷಿಸುವನು ।೫೩೯॥ ಹೇಗೆ ಹೇಗೆ ಶಬ್ದಗಳ ಅಭಿಮಾನವು ಬೆಳೆಯುತ್ತ ಸಾಗುವುದೋ ಹಾಗೆ ಹಾಗೆಯೇ ಬ್ರಹ್ಮಜ್ಞಾನವು ಇದು ದೂರ ಸರಿಯುವುದು. ಹೇ ಉದ್ಧವಾ, ಅದರ ನಿಜಲಕ್ಷಣವನ್ನು ಈಗ ಕೇಳು ।೫೪೦॥

ಕನ್ಯಾ ದ್ಯಾವಯಾ ವರಾಸೀ । ಮಾತಾ ಪಿತಾ ಬಂಧು ಜ್ಯೋತಿಷೀ । ಮೆಳವೂನಿಯಾ ಸುಹೃದಾಂಸೀ । ಕನ್ಯಾ ವರಾಸೀ ಅರ್ಪಿತೀ ।।೫೪೧।। ತೇಥ ಭರ್ತಾರ ಸಂಭೋಗಸೇಜೇಪಾಶೀ । ಜವಳೀ ಮಾತಾಪಿತಾಸುಹೃದೇಸಿ । ಅಸಣೇ ಹಾಚಿ ಅವರೋಧ ತಿಸೀ । ಪತಿಸುಖಾಸೀ ಪ್ರತಿಬಂದ ।।೫೪೨।। ತೇವೀ ಯೋಗ್ಯತಾ ಚಾತುರ್ಯ ಜಾಣ । ಶಬ್ದ ಜ್ಞಾನೇ ಜ್ಞಾತೇಪಣ । ಜವಳೀ ಅಸತಾ ಬ್ರಹ್ಮಜ್ಞಾನ । ಸರ್ವಥಾ ಜಾಣ ಹೋ ನ ಶಕೇ ।।೫೪೩।। ಜೇವೀ ಡೋಳಾ ಅಲ್ಪ ಕಣ ನ ಸಮಾಯೇ । ತೇವೀ ಬ್ರಹ್ಮೀ ಕಲ್ಪನಾ ನಾ ಸಾಹೇ । ಯಾಲಾಗೀ ನಿರ್ವಿಕಲ್ಪೇ ಪಾಹೇ । ಬ್ರಹ್ಮಜ್ಞಾನ ಹೋಯೇ ಸುಟಂಕ ।।೫೪೪।। ಸಮಸ್ತ ಜ್ಞಾನಾಚಾ ಉಪಶಮ । ಸಕಳ ವಚನಾಂಚಾ ವಿರಾಮ । ತೈಚಿ ಪಾವಿಜೇ ಪರಬ್ರಹ್ಮ । ಐಸೇ ಪುರುಷೋತ್ತಮ ಬೋಲಿಲಾ ।।೫೪೫।। ಜೇ ನಾಕಳೇ ಬುದ್ಧೀಚ್ಯಾ ಠಾಯೀ । ಜೇ ಮನಾಸೀ ನಾತುಟೇ ಕಂಹೀ । ಜೇ ವಚನಾಸೀ ವಿಷಯೋ ನವ್ಹೇ ಪಾಹೀ । ಪ್ರಮಾಣಾಚೇ ಪಾಯೀ ಪಾವಲೇ ನ ವಚೇ ।।೫೪೬।। ಯಾಪರೀ ವಸ್ತು ನ ಪಡೇ ಠಾಯೀ । ತರೀ ವಸ್ತುಚೀ ಮ್ಹಣಶೀ ನಾಹೀ । ಐಸೇ ಉದ್ಧವಾ ಕಲ್ಪೀಸೀ ಕಾಂಹೀ । ಐಕ ತೇ ವಿಷಯೀ ಸಾಂಗೇನ ।।೫೪೭।।

(ಮೂಲ ಶ್ಲೋಕದ ಪದ) ''ಯೇನೇಷಿತಾ ವಾಗಸವಶ್ಚರಂತಿ'' ।।

ಯೇಥೇ ದೇಹೇಂದ್ರಿಯಪ್ರಾಣ । ಹೇ ಜಡ ಮೂಢ ಅಚೇತನ । ತ್ಯಾಂಸೀ ಚೇತವೀ ಆತ್ಮಾ ಚಿದ್‌ಘನ । ತೇಹೀ ಉಪಲಕ್ಷಣ ಅವಧಾರೀ ।।೫೪೮।। ಆತ್ಮಪ್ರಭಾ ''ದೃಷ್ಟಿ'' ಪ್ರಕಾಶೇ । ಪರೀ ಆತ್ಮಾ ದೃಷ್ಟೀಸೀ ನ ಸ್ಪರ್ಶೇ । ಆತ್ಮಾ ದೃಷ್ಟೀಸಬಾಹ್ಯ ಅಸೇ । ಪರೀ ದೃಷ್ಟೀಸೀ ನ ದಿಸೇ ಅದೃಶ್ಯತ್ವೇ ।।೫೪೯।। ಆತ್ಮಸತ್ತಾ ಐಕತೀ ''ಶ್ರವಣ''। ಶ್ರವಣಾಂಸೀ ಆತ್ಮಾ ನಾತಳೇ ಜಾಣ । ಶ್ರವಣಾ ಸಬಾಹ್ಯ ಅಸೋನಿ ಪೂರ್ಣ । ಶ್ರವಣವಿಷಯ ಜಾಣ ನವ್ಹೇಚಿ ಆತ್ಮಾ ।।೫೫೦।। ''ವಾಚಾ'' ಆತ್ಮಸತ್ತಾ ಉಠೀ । ಆತ್ಮಾ ನಾತಳೇ ವಾಚಿಕಾ ಗೋಠೀ । ವಸ್ತು ಶಬ್ದಾಚೇ ಪಾಠೀ ಪೋಟೀ । ತೋ ಶಬ್ದ ಶೇವಟೀ ನೇಣೇ ವಸ್ತು ।।೫೫೧।। ''ಮನ'' ಆತ್ಮಸತ್ತೇ ಚಪಳ । ಮನಾ ಸಬಾಹ್ಯ ಆತ್ಮಾ ಕೇವಳ । ತೋ ಮನಾಸೀ ನಾತಳೇ ಅಳುಮಾಳ । ಮನಾಸೀ ಅಕಳ ನಿಜಾತ್ಮಾ ।।೫೫೨।।

ವರನಿಗೆ ಕನ್ಯೆಯನ್ನು ಕೊಡುವ ಪ್ರಸಂಗದಲ್ಲಿ ಮಾತಾ, ಪಿತಾ, ಬಂಧು, ಜ್ಯೋತಿಷಿ, ಇಷ್ಟಮಿತ್ರರು ಇತ್ಯಾದಿ ಎಲ್ಲರೂ ಕೂಡಿ ಆ ಕನ್ಯೆಯನ್ನು ವರನಿಗೆ ಅರ್ಪಣೆಯನ್ನು ಮಾಡುವರು ।।೫೪೧।। ಆದರೆ ಮುಂದೆ ಪತಿ ಪತ್ನಿಯರ ರತಿಕ್ರೀಡೆಯ ಸಮಯದಲ್ಲಿ ಅವರ ಶಯ್ಯಾಗೃಹಕ್ಕೆ ಮಾತಾ, ಪಿತಾ ಇತ್ಯಾದಿ ಆಪ್ತವರ್ಗದವರು ಬಂದರೆ, ಆಗ ಅದು ದೊಡ್ಡ ಪ್ರತಿಬಂಧವಾಗಿ ಅವರ ಸುಖಕ್ಕೆ ಅಡಚಣೆಯು ನಿರ್ಮಾಣವಾಗುವುದು ।।೫೪೨।। ಅದರಂತೆ ಯೋಗ್ಯತೆ, ಚಾತುರ್ಯ, ಶಬ್ದಜ್ಞಾನ, ಜ್ಞಾನತ್ವ ಇವು ಸಮೀಪವಿದ್ದವೆಂದರೆ ಬ್ರಹ್ಮಜ್ಞಾನದ ಪ್ರಾಪ್ತಿಯು ಎಂದಿಗೂ ಆಗುವುದಿಲ್ಲ ।।೫೪೩।। ಕಣ್ಣಿನಲ್ಲಿ ಅತಿಸೂಕ್ಷ್ಮ ಕಣವು ಸೇರಲು ಅದನ್ನು ಸಹಿಸುವುದಾಗುವುದಿಲ್ಲ. ಅದರಂತೆ ಬ್ರಹ್ಮನಲ್ಲಿ ಕಲ್ಪನೆಯು ಸಹಿಸುವುದಾಗುವುದಿಲ್ಲ. ಆದ್ದರಿಂದ ನಿರ್ವಿಕಲ್ಪದಿಂದ ನೋಡಿದರೆ ಮಾತ್ರ ಶುದ್ಧ ಬ್ರಹ್ಮಜ್ಞಾನವು ಪ್ರಾಪ್ತವಾಗುವುದು ।।೫೪೪।। ಯಾವ ಸಮಯದಲ್ಲಿ ಸರ್ವಜ್ಞಾನಗಳ ಅಂತ್ಯವಾಗುವುದೋ ಹಾಗೂ ಸರ್ವ ಭಾಷೆಗಳ ಕೊನೆಯಾಗುವುವೋ, ಆಗ ಮಾತ್ರ ಬ್ರಹ್ಮವು ಸುಗಮವಾಗುವುದು. ಹೀಗೆ ಪುರುಷೋತ್ತಮನಾದ ಶ್ರೀಕೃಷ್ಣನು ಹೇಳಿದನು ।।೫೪೫।। ಯಾವುದನ್ನು ಬುದ್ಧಿಗೆ ಹಿಡಿಯಲು ಬರುವುದಿಲ್ಲವೋ, ಯಾವುದನ್ನು ಮನಸ್ಸಿಗೆ ಎಂದಿಗೂ ಸಿಗುವುದಿಲ್ಲವೋ, ಅದು ಶಬ್ದದ ವಿಷಯವೇ ಆಗಿರುವುದಿಲ್ಲ. ಪ್ರಮಾಣವು ಮಾತ್ರ ತನ್ನ ಒಂದು ಹೆಜ್ಜೆಯನ್ನೂ ಕೂಡ ಮುಂದಿಡುವುದಿಲ್ಲ ।।೫೪೬।। ಹೇ ಉದ್ಧವಾ, ಆತ್ಮವಸ್ತು ಇದು ಯಾವುದರಿಂದಲೂ ಸಿಗುವುದಿಲ್ಲ. ಅದಕ್ಕಾಗಿ ಅದು ವಸ್ತುವೇ ಅಲ್ಲ. ಹೀಗೆಂದು ನಿನ್ನ ಮನದಲ್ಲಿ ಏನಾದರೂ ಕಲ್ಪನೆಯು ಬರಬಹುದು ಆದ್ದರಿಂದ ಆ ವಿಷಯವನ್ನು ಕುರಿತು ಈಗ ಹೇಳುವೆನು, ಅದಕ್ಕಾಗಿ ಸರಿಯಾಗಿ ಶ್ರವಣವನ್ನು ಮಾಡು ।।೫೪೭।।

ಮೂಲ ಶ್ಲೋಕದಲ್ಲಿನ ಪದವು ''ಯೇನೇಷಿತಾ ವಾಗಸವಶ್ಚರಂತಿ'' ಅಂದರೆ ದೇಹ, ಇಂದ್ರಿಯಗಳು ಮತ್ತು ಪ್ರಾಣ ಇವು ಜಡ ಮೂಢ ಮತ್ತು ಅಚೇತನವಾಗಿರುವುವು. ಅವುಗಳಿಗೆ ಚಿದ್‌ಘನ ಆತ್ಮವು ತನ್ನ ಆತ್ಮಪ್ರಕಾಶದಿಂದ ಪ್ರಕಾಶಿತವನ್ನಾಗಿ ಮಾಡುತ್ತಿರುವುದು ।।೫೪೮।। ಆತ್ಮದ ಪ್ರಕಾಶದಿಂದ ದೃಷ್ಟಿಯು ಪ್ರಕಾಶಿತವಾಗುತ್ತಿರುವುದು. ಆದರೆ ಆತ್ಮವು ದೃಷ್ಟಿಗೆ ಮುಟ್ಟುವುದೇ ಇಲ್ಲ. ದೃಷ್ಟಿಯ ಒಳಹೊರಗೆ ಆತ್ಮವೇ ತುಂಬಿಕೊಂಡಿರುವುದು. ಅದು ಅದೃಶ್ಯವಾಗಿರುವುದರಿಂದ ದೃಷ್ಟಿಗೆ ಗೋಚರಿಸುವುದಿಲ್ಲ ।।೫೪೯।। ಆತ್ಮದ ಸತ್ತೆಯಿಂದ ಕಿವಿಗಳು ಶ್ರವಣವನ್ನು ಮಾಡುತ್ತಿರುವುವು. ಆದರೆ ಕಿವಿಗಳಿಗೆ ಆತ್ಮವು ಸ್ಪರ್ಶ ಮಾಡುವುದಿಲ್ಲ. ಅದು ಕಿವಿಗಳ ಒಳಗೆ ಹೊರಗೆ ಪರಿಪೂರ್ಣವಾಗಿ ತುಂಬಿಕೊಂಡಿರುವುದು. ಹೀಗಿದ್ದರೂ ಆತ್ಮವು ಇದು ಶ್ರವಣದ ವಿಷಯವೆಂದು ಎಂದಿಗೂ ಆಗಲು ಶಕ್ಯವಿಲ್ಲ ।।೫೫೦।। ಆತ್ಮಸತ್ತೆಯಿಂದ ವಾಣಿಯ ಪ್ರಕಟತ್ವವು ಆಗುತ್ತಿರುವುದು. ಆದರೆ ವಾಣಿಯ ಶಬ್ದಗಳಿಗೆ ಆತ್ಮವು ಸ್ಪರ್ಶ ಮಾಡಲಾರದು. ಶಬ್ದಗಳ ಹಿಂದೆ ಮುಂದೆ ಆತ್ಮವು ತುಂಬಿಕೊಂಡಿರುವುದು. ಆದರೆ ಅದು ಅದೃಶ್ಯವಾಗಿರುವುದರಿಂದ ಕಾಣಿಸಿಕೊಳ್ಳುವುದಿಲ್ಲ ।।೫೫೧।। ಆತ್ಮ ಸತ್ತೆಯಿಂದ ಈ ಯಾವ ಮನವು ಚಂಚಲವಾಗಿರುವುದು. ಮನದ ಒಳಹೊರಗೆ ಆತ್ಮವು ತುಂಬಿಕೊಂಡಿರುವುದು ಆದರೂ ಕೂಡ ಅದು ಮನಸ್ಸಿಗೆ ಒಂದು ರವೆಯಷ್ಟೂ ಕೂಡ ಸ್ಪರ್ಶವನ್ನು ಮಾಡುವುದಿಲ್ಲ. ಆತ್ಮವನ್ನು ಮನಸ್ಸಿಗೆ ತಿಳಿಯಲು ಸಾಧ್ಯವಾಗುವುದಿಲ್ಲ ।।೫೫೨।।

''ಚಿತ್ತ'' ಚೇತವೀ ಚಿದ್‌ಘನ । ಚಿತ್ಸತ್ತಾ ಚಿತ್ತಾಸೀ ಚಿಂತನ । ಚಿತ್ತಾ ಸಬಾಹ್ಯ ಚೈನತ್ಯ ಪೂರ್ಣ । ತರೀ ಚಿತ್ತಾಸೀ ಚೈತನ್ಯ ಕಳೇನಾ ।೫೫೩॥ ಆತ್ಮಸಂಯೋಗೇ ''ಅಹಂ'' ಉಲ್ಹಾಸೇ । ಅಹಂತಾ ಆತ್ಮಾ ಕದಾ ನ ಸ್ಪರ್ಶೇ । ಅಹಂತಾ ಸಬಾಹ್ಯ ಆತ್ಮಾ ಅಸೇ । ಪರೀ ತೋ ಆತ್ಮಾ ನ ದಿಸೇ ಅಹಂಕಾರೇ ।೫೫೪॥ ಆತ್ಮಪ್ರಭಾಪ್ರಕಾಶವಿಧೀ । ಪ್ರಕಾಶಿಲೀ ''ವಿವೇಕಬುದ್ಧೀ'' । ಬುದ್ಧೀ ಆತ್ಮಾ ನೇಣೇ ತ್ರಿಶುದ್ಧೀ । ಆತ್ಮಾ ಬುದ್ಧೀ-ಸಬಾಹ್ಯ ।೫೫೫॥ ಆತ್ಮಪ್ರಭಾ ''ಪ್ರಾಣ'' ಚಳೇ । ಪರೀ ಪ್ರಾಣಾಸೀ ಆತ್ಮಾ ನಾತಳೇ । ಪ್ರಾಣಸಬಾಹ್ಯ- ಆತ್ಮ ಮೇಳೇ । ತರೀ ಪ್ರಾಣಾಸೀ ನ ಕಳೇ ಪರಮಾತ್ಮಾ ।೫೫೬॥ ಉದ್ಧವಾ ತೂ ಯಾಪರೀ ಪಾಹೇ । ಜಡ ಜಯಾಚೇನಿ ವರ್ತತಾಹೇ । ತೋ ಆತ್ಮಾ ಸ್ವತಃಸಿದ್ಧ ಆಹೇ । ನಾಹೀ ನೋಹೇ ಕಲ್ಪಾಂತೀ ।೫೫೭॥ ಯಾಪರೀ ಆತ್ಮಾ ಸ್ವತಃ ಸಿದ್ಧ । ಭೇದ ನಾಂದವೂನಿ ಅಭೇದ । ದ್ವಂದ್ವ ಪ್ರಕಾಶೋನಿ ನಿರ್ದ್ವಂದ್ವ । ಹಾ ನಿಜಾತ್ಮಬೋಧ ದೃಢ ಕೇಲಾ ।೫೫೮॥ ಏವಂ ಆತ್ಮಾ ನಿರ್ದ್ವಂದ್ವ ಅದ್ವೈತೇ । ತೋ ಆಹೇ ನಾಹೀ ಮ್ಹಣಾವಯಾ ಯೇಥೇ । ಕೋಣೀ ನುರೇಚಿ ಗಾ ಮ್ಹಣತೇ । ಆತ್ಮಾ ನಿಜಾತ್ಮತೇ ಪರಿಪೂರ್ಣ ।೫೫೯॥ ಆತ್ಮಾ ನಿಜಾತ್ಮತಾ ಸದೋದಿತ । ಸಂಸಾರ ತೇಥ ಆರೋಪಿತ । ಯೇಚಿ ಅರ್ಥೀ ಶ್ರೀಕೃಷ್ಣನಾಥ । ಅಸೇ ಸಾಂಗತ ಶ್ಲೋಕಾರ್ಥೇ ।೫೬೦॥

ಏತಾವಾನಾತ್ಮಸಂಮೋಹೋ ಯದ್ವಿಕಲ್ಪಸ್ತು ಕೇವಲೇ । ಆತ್ಮನ್ನೃತೇ ಸ್ವಮಾತ್ಮಾನಮವಲಂಬೋ ನ ಯಸ್ಯ ಹಿ ।೯॥

ಅರ್ಥ:- ಹೇ ಉದ್ಧವಾ, ಅದ್ವಿತೀಯ ಆತ್ಮತತ್ವದಲ್ಲಿ ಅರ್ಥಹೀನವಾದ ನಾಮ ಮುಖಾಂತರವಾಗಿ ವಿವಿಧತೆಯನ್ನು ಮನ್ನಿಸುವುದು ಇದು ಮನಸ್ಸಿನ ಭ್ರಮೆಯಾಗಿದೆ, ಅಜ್ಞಾನವಾಗಿದೆ. ನಿಜವಾಗಿಯೂ ಇದೊಂದು ಮಹಾಮೋಹವಾಗಿದೆ. ಕಾರಣ ತನ್ನ ಆತ್ಮದ ಹೊರತಾಗಿ ಆ ಭ್ರಮಕ್ಕೆ ಇನ್ನೊಂದು ಯಾವ ಅಧಿಷ್ಠಾನವು ಇರುವುದಿಲ್ಲ. ಅಧಿಷ್ಠಾನ ಸತ್ತೆಗೆ ಅಧ್ಯಸ್ತದ ಸತ್ತೆವಿರುವುದಿಲ್ಲ. ಆದ್ದರಿಂದ ಎಲ್ಲವೂ ಕೂಡ ಆತ್ಮತತ್ವವೇ ಆಗಿರುವುವು.

ಆತ್ಮಾ ಕೇವಳ ನಿತ್ಯಯುಕ್ತ । ತ್ರಿಗುಣ ಗುಣಾಂಸೀ ಅತೀತ । ನಭಾಹೂನಿ ಅತಿ ಅಲಿಪ್ತ । ಸದೋದಿತ ಪೂರ್ಣತ್ವೇ ।೫೬೧॥ ಬ್ರಹ್ಮ ಅಖಂಡದಂಡಾಯಮಾನ । ಸರ್ವದಾ ಸ್ವಾನಂದಘನ । ಐಸೇ ಅಲಿಪ್ತೀ ಪ್ರಪಂಚಭಾನ । ತೋ ಮಿಥ್ಯಾ ಜಾಣ ಆರೋಪು ।೫೬೨॥ ಆರೋಪಾಸೀ ಅಧಿಷ್ಠಾನ । ಸ್ವಯೇ ಪರಮಾತ್ಮಾ ಆಪಣ । ಯಾಲಾಗೀ ಪ್ರಪಂಚಾಚೇ ಭಾನ । ತೇಥೇಂಚಿ ಜಾಣ ಆಭಾಸೇ ।೫೬೩॥ ಪರಮಾತ್ಮ್ಯಾಹೂನಿ ಭಿನ್ನ । ಪ್ರಪಂಚಾಸೀ ನಾಹೀ ಸ್ಥಾನ । ಯಾಲಾಗೀ ಉತ್ಪತ್ತಿ ಸ್ಥಿತೀ ನಿದಾನ । ತೇಥೇಂಚಿ ಜಾಣ ಆಭಾಸೇ ।೫೬೪॥

ಚೈತನ್ಯವು ಇದು ಚಿತ್ತಕ್ಕೆ ಚೇತನೆಯನ್ನು ಕೊಡುತ್ತಿರುವುದು. ಚಿತ್‌ಸತ್ತೆಯಿಂದಲೇ ಚಿತ್ತಕ್ಕೆ ಚಿಂತನೆ ಸಾಧಿಸುತ್ತಿರುವುದು. ಚಿತ್ತದ ಒಳಗೆ ಹೊರಗೆ ಪರಿಪೂರ್ಣ ರೂಪದಿಂದ ಚೈತನ್ಯವು ಇರುವುದು. ಹೀಗಿದ್ದರೂ ಸಹ ಚಿತ್ತಕ್ಕೆ ಚೈತನ್ಯವನ್ನು ತಿಳಿಯಲು ಶಕ್ಯವಿರುವುದಿಲ್ಲ ।೫೫೩॥ ಆತ್ಮದ ಸಂಯೋಗದಿಂದ ಅಹಂಕಾರವು ಬೆಳೆಯುವುದು. ಆದರೆ ಆ ಅಹಂಕಾರಕ್ಕೆ ಆತ್ಮವು ಸ್ಪರ್ಶವನ್ನು ಮಾಡುವುದಿಲ್ಲ. ಅಹಂತೆಯ ಒಳಹೊರಗೆ ಆತ್ಮಸತ್ತೆಯು ಇರುವುದು. ಹೀಗಿದ್ದರೂ ಕೂಡ ಅದು ಅಹಂಕಾರಕ್ಕೆ ತೋರುವುದಿಲ್ಲ ।೫೫೪॥ ಆತ್ಮಸತ್ತೆಯ ಪ್ರಕಾಶದಿಂದ ವಿವೇಕಬುದ್ಧಿಯು ಪ್ರಕಾಶಿತಗೊಳ್ಳುವುದು. ಬುದ್ಧಿಯ ಒಳಗೆ, ಹೊರಗೆ ಆತ್ಮಸತ್ತೆಯು ಇರುವುದು. ಆದರೂ ಸಹ ಬುದ್ಧಿಯು ಆತ್ಮವನ್ನು ತಿಳಿಯಲಾರದು ।೫೫೫॥ ಆತ್ಮಪ್ರಭೆಯಿಂದ ಪ್ರಾಣವು ಚಲಿಸುತ್ತಿರುವುದು. ಹೀಗಿದ್ದರೂ ಸಹ ಪ್ರಾಣಕ್ಕೆ ಆತ್ಮವು ಸ್ಪರ್ಶ ಮಾಡುವುದಿಲ್ಲ. ಪ್ರಾಣದ ಒಳಹೊರಗೆ ಆತ್ಮವು ಪರಿಪೂರ್ಣವಾಗಿ ತುಂಬಿಕೊಂಡಿರುವುದು. ಆದರೆ ಪ್ರಾಣಕ್ಕೆ ಪರಮಾತ್ಮನು ತಿಳಿಯಲು ಸಾಧ್ಯವಾಗದು ।೫೫೬॥ ಹೇ ಉದ್ಧವಾ, ಈ ಪ್ರಕಾರವಾಗಿ ನೀನು ಆತ್ಮನನ್ನು ಕಾಣು. ಯಾವುದರ ಯೋಗದಿಂದ ಜಡ ಪದಾರ್ಥಗಳು ವರ್ತಿಸುತ್ತವೆಯೋ, ಅದು ಸ್ವತಃ ಸಿದ್ಧವಾಗಿರುವುದು. ಅದು ಕಲ್ಪಾಂತಕ್ಕೂ ಕೂಡ ನಷ್ಟವಾಗುವುದಿಲ್ಲ ।೫೫೭॥ ಈ ಪ್ರಕಾರವಾಗಿ ಆತ್ಮವು ಸ್ವತಃ ಸಿದ್ಧವಾಗಿರುವುದು. ಅದು ಭೇದಗಳಿಗೆ ವರ್ತಿಸಲು ಹಚ್ಚಿ ತಾನು ಸ್ವತಃ ಭೇದರಹಿತವಾಗಿರುವುದು. ದ್ವಂದ್ವಕ್ಕೆ ಪ್ರಕಾಶಿತವನ್ನಾಗಿ ಮಾಡಿ ತಾನು ಸ್ವತಃ ನಿರ್ದ್ವಂದ್ವವಾಗಿ ಇರುವುದು. ಈ ಯಾವ ನಿಜಾತ್ಮ ಬೋಧೆಯು ದೃಢೀಕರಿಸಬೇಕು ।೫೫೮॥ ತಾತ್ಪರ್ಯವೇನಂದರೆ ಈ ಯಾವ ಆತ್ಮವು ನಿರ್ದ್ವಂದ್ವ ಹಾಗೂ ಅದ್ವೈತವಾಗಿರುವುದು. ಅದು ಇದೆ, ಅಥವಾ ಇಲ್ಲ ಎನ್ನಲು ಇಲ್ಲಿ ಬೇರೆ ಯಾರೂ ಉಳಿಯುವುದೇ ಇಲ್ಲ. ಆತ್ಮವು ಆತ್ಮಸ್ವರೂಪದಿಂದ ಪರಿಪೂರ್ಣವಾಗಿರುವುದು ।೫೫೯॥ ಆತ್ಮವು ಸದೋದಿತವಾಗಿ ಆತ್ಮಸ್ವರೂಪದಿಂದಲೇ ಇರುವುದು. ಅದಕ್ಕೆ ಸಂಸಾರದ ಮಿಥ್ಯೆಯಾದ ಆರೋಪವು ಉಂಟಾಗಿರುವುದು. ಈ ವಿಷಯವನ್ನೇ ಕುರಿತು ಮುಂದಿನ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳುತ್ತಿರುವನು ।೫೬೦॥

ಆತ್ಮವು ಇದು ಕೇವಲ ನಿತ್ಯಮುಕ್ತವಾಗಿರುವುದು. ಇದು ಮೂರು ಗುಣಗಳ ವಿಕಾರಗಳಿಂದ ಅತೀತವಾಗಿರುವುದು. ಆಕಾಶಕ್ಕಿಂತಲೂ ಇದು ಅಲಿಪ್ತವಾಗಿರುವುದು. ಆತ್ಮವು ಯಾವಾಗಲೂ ಪರಿಪೂರ್ಣವಾಗಿ ಇರುವುದು ।೫೬೧॥ ಬ್ರಹ್ಮವು ಇದು ಅಖಂಡ ಹಾಗೂ ಏಕರಸವಾಗಿರುವುದು. ಅದು ಆನಂದಘನವಾಗಿದ್ದುಕೊಂಡು ಪ್ರಪಂಚದಿಂದ ಅಲಿಪ್ತವಾಗಿರುವುದು. ಅದರ ಮೇಲೆ ಪ್ರಪಂಚದ ಸುಳ್ಳು ಆರೋಪವನ್ನು ಹೊರಿಸಲಾಗುತ್ತಿರುವುದು ।೫೬೨॥ ಆ ಆರೋಪಕ್ಕೆ ಅಧಿಷ್ಠಾನವು ಸ್ವತಃ ಪರಮಾತ್ಮನೇ ಆಗಿರುವನು. ಆದ್ದರಿಂದ ಪ್ರಪಂಚದ ಭಾನವು ಪರಮಾತ್ಮನ ಮೇಲೆ ಆಗುತ್ತಿರುವುದು ।೫೬೩॥ ಪ್ರಪಂಚಕ್ಕೆ ಪರಮಾತ್ಮನನ್ನು ಬಿಟ್ಟರೆ ಅದಕ್ಕೆ ಭಿನ್ನವಾದ ಸ್ಥಾನವೇ ಇರುವುದಿಲ್ಲ. ಆದ್ದರಿಂದ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವುಗಳ ಭಾಸವೂ ಕೂಡ ಆತನಲ್ಲಿಯೇ ಆಗುತ್ತಿರುವುದು ।೫೬೪॥

ಜೇವೀ ದೋರಾಚಾ ಸರ್ಪಪಾಹೀ । ದೋರಾವೇಗಳಾ ನ ದಿಸೇ ಕಂಹೀ । ದೋರ ಸರ್ಪ ಝಾಲಾಚಿ ನಾಹೀ । ತರೀ ತ್ಯಾಚಾ ಠಾಯೀ ಆಭಾಸೇ ॥೫೬೫॥ ತೇವೀ ನಿರ್ವಿಕಲ್ಪ ಪೂರ್ಣ ಬ್ರಹ್ಮ । ನಾತಳೇ ರೂಪ ನಾಮ ಗುಣ ಕರ್ಮ । ತರೀ ತ್ಯಾಚ್ಯಾ ಠಾಯೀ ಮನೋಭ್ರಮ । ಪ್ರಪಂಚ ವಿಷಮ ಪರಿಕಲ್ಪೀ ॥೫೬೬॥ ಜೇವೀ ದೋರೀ ಭಾಸೇ ಮಿಥ್ಯಾ ಸರ್ಪ । ತೇವೀ ಬ್ರಹ್ಮೀ ಮಿಥ್ಯಾ ಭವಾರೋಪ । ತೇಥ ಸುಖದುಃಖ ಭಯಕಂಪ । ತೋಹೀ ಖಟಾಟೋಪ ಮಾಯಿಕ ॥೫೬೭॥ ಏವಂ ಪ್ರಪಂಚಾಚೇ ಮಿಥ್ಯಾ ಭಾನ । ವಸ್ತು ಶುದ್ಧತ್ವೇ ಸ್ವಾನಂದಘನ । ಹೇ ನಿರ್ದುಷ್ಟ ಕೇಲೇ ನಿರೂಪಣ । ಬ್ರಹ್ಮ ಪರಿಪೂರ್ಣ ಅದ್ವಯ ॥೫೬೮॥ ಏವಂ ನಾನಾ ಯುಕ್ತೀ ಸುನಿಶ್ಚಿತ । ಬ್ರಹ್ಮ ಸಾಧಿಲೇ ಅಬಾಧಿತ । ಹೇ ನ ಮಾನಿತೀ ಜೇ ಪಂಡಿತ । ತೇ ಮತ ಖಂಡಿತ ಶ್ರೀಕೃಷ್ಣ ॥೫೬೯॥

ಯನ್ನಾಮಾಕೃತಿಭಿರ್ಗ್ರಾಹ್ಯಂ ಪಂಚವರ್ಣ ಮಬಾಧಿತಮ್ ।
ವ್ಯರ್ಥೇನಾಪ್ಯರ್ಥವಾದೋಽಯಂ ದ್ವಯಂ ಪಂಡಿತಮಾನಿನಾಮ್ ॥೩೭॥

ಅರ್ಥ:- ಅನೇಕ ಪಂಡಿತರು ಹೀಗೆ ಹೇಳುವರು; ಈ ಪಂಚಭೌತಿಕ ದ್ವೈತದ ವಿವಿಧ ನಾಮ ಹಾಗೂ ರೂಪಗಳ ರೂಪದಲ್ಲಿ ಇಂದ್ರಿಯಗಳ ದ್ವಾರಾ ಗ್ರಹಣ ಮಾಡಲ್ಪಡುವುದು. ಆದ್ದರಿಂದ ಅದು ಸತ್ಯವಾಗಿದೆ. ಆದರೆ ಅವರ ಈ ಅರ್ಥಹೀನ ವಾಣಿಯು ಆಡಂಬರ ಮಾತ್ರ ಆಗಿರುವುದು. ಕಾರಣ ತತ್ವತಃ ಇಂದ್ರಿಯಗಳ ಭಿನ್ನವಾದ ಸತ್ತೆಯು ಸಿದ್ಧವಾಗುವುದಿಲ್ಲ. ಅಂದಮೇಲೆ ಇವರು ಹೇಗೆ ಪ್ರಮಾಣಿಸುವರು !

ವೇದವೇದಾಂಪ್ರತಿಪಾದ್ಯ ಏಥ । ಸಕಳ ಶಾಸ್ತ್ರಾರ್ಥಾಚೇ ನಿಜಮಥಿತ । ಬ್ರಹ್ಮ ಅದ್ವಯ ಸದೋದಿತ । ಮ್ಯಾ ಸುನಿಶ್ಚಿತ ನೇಮಿಲೇ ॥೫೭೦॥ ತೇ ಹೇ ಮಾಝೇ ನಿಜಮತ । ಉಪೇಕ್ಷೂನಿಯಾ ಜೇ ಪಂಡಿತ । ಜ್ಞಾತೇಪಣೇ ಅತಿ ಉನ್ಮತ್ತ । ಅಭಿಮಾನಯುಕ್ತ ಪಾಂಡಿತ್ಯೇ ॥೫೭೧॥ ತ್ಯಾ ಪಂಡಿತಾಂಚೇ ಪಾಂಡಿತ್ಯಮತ । ಪ್ರಪಂಚ ಪ್ರತ್ಯಕ್ಷ ಅನುಭೂತ । ತೋ ಮಿಥ್ಯಾ ಮಾನೋನಿಯಾ ಏಥ । ಕೈಚೇ ಅದ್ವೈತ ಕಾಢಿಲೇ ॥೫೭೨॥ ಅದ್ವೈತಾಸೀ ನಾಹೀ ಗಾಂವೋ । ಜೇಥ ತೇಥ ಜರೀ ಪಾಹೋ ಜಾವೋ । ಅದ್ವೈತಾ ನಾಹೀ ನೇಮಸ್ತ ಠಾವೋ । ಯಾಲಾಗೀ ಪಹಾ ಹೋ ತೇ ಮಿಥ್ಯಾ ॥೫೭೩॥ ರೂಪ ನಾಮ ಗುಣ ಕರ್ಮ । ಪಂಚಭೂತೇ ಭೌತಿಕೇ ವಿಷಮ । ಚತುರ್ವರ್ಣ ಚಾರೀ ಆಶ್ರಮ । ಸತ್ಯ ಪರಮ ಮಾನಿತೀ ॥೫೭೪॥ ಸತ್ಯ ಮಾನಾವಯಾ ಹೇಚಿ ಕಾರಣ । ಮನೋಭ್ರಮೇ ಭ್ರಮಲೇ ಜಾಣ । ಜ್ಞಾನಾಭಿಮಾನೇ ಛಳಿಲೇ ಪೂರ್ಣ । ಆಪಣ್ಯಾ ಆಪಣ ವಿಸರಲೇ ॥೫೭೫॥

ಹಗ್ಗದಲ್ಲಿನ ಸರ್ಪದಲ್ಲಿ ಹಗ್ಗದ ಹೊರತಾಗಿ ಬೇರೆ ಯಾವುದೂ ಇರುವುದಿಲ್ಲ. ಹಗ್ಗವೇನಾದರೂ ಸರ್ಪವಾಗುವುದಿಲ್ಲ. ಆದರೆ ಅಲ್ಲಿ ಮಾತ್ರ ಸರ್ಪದ ಭಾಸವಾಗಿರುವುದು ॥೫೬೫॥ ಅದರಂತೆ ಬ್ರಹ್ಮವು ಇದು ಪರಿಪೂರ್ಣವಾಗಿ ನಿರ್ವಿಕಲ್ಪರೂಪವಾಗಿರುವುದು. ಅದಕ್ಕೆ ರೂಪ, ನಾಮ, ಗುಣ, ಕರ್ಮ ಇವು ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ. ಹೀಗಿದ್ದರೂ ಸಹ ಅದರಲ್ಲಿ ಮನಸ್ಸಿನ ಭ್ರಮೆಯು ಇದು ವಿಷಯ ಪ್ರಪಂಚದ ಕಲ್ಪನೆಯನ್ನು ಮಾಡುತ್ತಿರುವುದು ॥೫೬೬॥ ಯಾವ ಪ್ರಕಾರವಾಗಿ ಹಗ್ಗದಲ್ಲಿ ಸುಳ್ಳಾದ ಸರ್ಪವು ಭಾಸಿಸುತ್ತಿರುವುದೋ, ಅದೇ ಪ್ರಕಾರವಾಗಿ ಬ್ರಹ್ಮನಲ್ಲಿ ಸಂಸಾರದ ಸುಳ್ಳು ಆರೋಪವು ಆಗುತ್ತಿರುವುದು. ಅದರಲ್ಲಿನ ಸುಖ-ದುಃಖ, ಭಯ, ಕಂಪ ಈ ಎಲ್ಲ ವಿಕಾರಗಳು ಮಾಯಿಕವಾಗಿರುವುವು ॥೫೬೭॥ ತಾತ್ಪರ್ಯವೇನಂದರೆ ಪ್ರಪಂಚದ ಯಾವ ಭಾನವು ಮಿಥ್ಯೆಯಾಗಿರುವುದು. ಆತ್ಮವು ಶುದ್ಧವಾಗಿರುವುದರಿಂದ ಅದು ಆನಂದಘನವಾಗಿರುವುದು. ಹಾಗೆಯೇ ಬ್ರಹ್ಮವು ಇದು ಪರಿಪೂರ್ಣ ಹಾಗೂ ಅದ್ವಯವಾಗಿರುವುದು. ಇದನ್ನು ಈ ನಿರೂಪಣೆಯಿಂದ ಸ್ಪಷ್ಟಮಾಡಲಾಗಿದೆ ॥೫೬೮॥ ಈ ಪ್ರಕಾರವಾಗಿ ಅನೇಕ ರೀತಿಯ ಯುಕ್ತಿಗಳಿಂದ, ಬ್ರಹ್ಮವು ಇದು ಅಬಾಧಿತವಾಗಿದೆ ಎಂದು ಸಿದ್ಧಮಾಡಲಾಯಿತು. ಯಾವ ಪಂಡಿತ ಜನರು ಇದನ್ನು ನಿಜವೆನ್ನುವುದಿಲ್ಲ. ಅವರ ಮತದ ಖಂಡನೆಯನ್ನು ಶ್ರೀಕೃಷ್ಣನು ಈಗ ಮಾಡುತ್ತಿರುವನು ॥೫೬೯॥

ವೇದವೇದಾಂತಗಳಲ್ಲಿ ಪ್ರತಿಪಾದನೆಯನ್ನು ಮಾಡಿರುವ, ಸರ್ವ ಶಾಸ್ತ್ರಗಳ ಮಥಿತಾರ್ಥವು ಯಾವ ಬ್ರಹ್ಮವು ಸದೋದಿತವಾಗಿ ಅದ್ವಯವಾಗಿರುವುದು. ಇದನ್ನು ನಾನು ಸಿದ್ಧಮಾಡಿ ತೋರಿಸಿದೆನು ॥೫೭೦॥ ಆದರೆ ಈ ನನ್ನ ಮತವನ್ನು ಉಪೇಕ್ಷೆ ಮಾಡಿ ಪಂಡಿತರು ಜ್ಞಾನದಿಂದ ಉನ್ಮತ್ತರಾಗಿರುವರು. ಅಭಿಮಾನದಿಂದ ಅವರು ತಮ್ಮ ಪಾಂಡಿತ್ಯವನ್ನು ಸ್ವತಃ ಪ್ರಕಟ ಮಾಡುತ್ತಿರುವರು ॥೫೭೧॥ ಪ್ರಪಂಚದ ಪ್ರತ್ಯಕ್ಷ ಅನುಭವವು ಬರುತ್ತಿರಲು ಅದಕ್ಕೆ ಮಿಥ್ಯೆ ಎಂದು ನಿಶ್ಚಯಿಸಿ ನೀವು ಈ ಅದ್ವೈತವನ್ನು ಎಲ್ಲಿಂದ ಹುಡುಕಿ ತೆಗೆದಿರುವಿರಿ ? ಹೀಗೆ ಆ ಪಂಡಿತರ ಪಾಂಡಿತ್ಯವಿರುವುದು ॥೫೭೨॥ ಅದ್ವೈತಕ್ಕೆ ಸ್ಥಾನವೇ ಇಲ್ಲ. ಎಲ್ಲಿ ನೋಡಿದರೂ ಸಹ ಅದ್ವೈತಕ್ಕೆ ನಿಶ್ಚಿತವಾದ ಯಾವ ಸ್ಥಾನವೂ ಕಾಣುವುದಿಲ್ಲ. ಆದ್ದರಿಂದ ಇದೆಲ್ಲವೂ ಕೇವಲ ಸುಳ್ಳಾಗಿರುವುದು ॥೫೭೩॥ ಈ ಯಾವ ಪಂಡಿತ ಜನರು ರೂಪ, ನಾಮ, ಗುಣ, ಕರ್ಮ,ವಿಷಮವಾಗಿರುವ ಪಂಚಭೂತಗಳು, ಹಾಗೂ ಭೌತಿಕಗಳು ಚತುರ್ವರ್ಣ ಮತ್ತು ಚತುರಾಶ್ರಮ ಇವು ನಿಜವೆಂದೇ ಹೀಗೆ ಮಾನ್ಯ ಮಾಡುವರು ॥೫೭೪॥ ಇವರು ಸತ್ಯವೆಂದು ಹೇಳಲಿಕ್ಕೆ ಕಾರಣವೇನೆಂದರೆ ಅವರು ಮನೋಭ್ರಮೆಯಿಂದ ಭ್ರಮಿಷ್ಠರಾಗಿರುವರು. ಜ್ಞಾನದ ಅಭಿಮಾನದಿಂದ ಅವರು ಮೋಸಕ್ಕೆ ಹೋಗಿರುವರು. ಆದ್ದರಿಂದ ಅವರು ತಮ್ಮನ್ನು ತಾವೇ ಮರೆತಿರುವರು ॥೫೭೫॥

ಮುಖ್ಯ ಮಾನಿತೀ ವಿಷಯಸುಖ । ವಿಷಯಾರ್ಥ ಪುಣ್ಯ ಕರಾವೇ ಚೋಖ । ಸ್ವರ್ಗ ಭೋಗಾವಾ ಆವಶ್ಯಕ । ಹೇ ಸತ್ಯ ದೇಖ ಮಾನಿತೀ ॥೫೭೬॥ ವಿಷಯ ಸತ್ಯ ಮಾನಿತೀ ಪರಮ । ಹೇ ದೇಹಾಭಿಮಾನಾಚೇ ನಿಜ ವರ್ಮ । ತೇಣೇ ಸಜ್ಞಾನ ಕೇಲೇ ಅಧಮ । ಮರಣಜನ್ಮ ಭೋಗವೀ ॥೫೭೭॥ ಪುಢತೀ ಸ್ವರ್ಗ ಪುಢತೀ ನರಕ । ಪುಢತೀ ಜನನೀ ಜಠರ ದೇಖ । ಯಾಪರೀ ಪಂಡಿತ ಲೋಕ । ಕೇಲೇ ಜ್ಞಾನಮೂರ್ಖ ಅಹಂಮಮತಾ ॥೫೭೮॥ ತ್ಯಾಂಚೇ ಜ್ಞಾನ ತೇ ವೇದಬಾಹ್ಯ । ಸರ್ವಥಾ ನವ್ಹೇ ತೇ ಗುಹ್ಯ । ಜೈಸೇ ಅಂತ್ಯಜಾಚೇ ಅನ್ನ ಅಗ್ರಾಹ್ಯ । ತೈಸೇ ತೇ ಹೋಯ ಅತಿತ್ಯಾಜ್ಯ ॥೫೭೯॥ ಜ್ಞಾನಾಭಿಮಾನಿಯಾಚಾ ವಿಚಾರ । ತೇ ಅಜ್ಞಾನಾಚೇ ಸೋಲೀಂವ । ಸಾರ ತಯಾಚಾ ಜೋ ನಿಜನಿರ್ಧಾರ । ತೋ ಜಾಣ ಸಾಚಾರ ಮಹಾಮೋಹೋ ॥೫೮೦॥ ತಯಾಚಾ ಜೋ ನಿಜವಿವೇಕ । ಇಂದ್ರಾವಣಫಳಾಐಸಾ ದೇಖ । ವರೀ ಸಾಜಿರೇ ಆಂತ ವಿಖ । ತೈಸಾ ಪರಿಪಾಕ ಜ್ಞಾನಾಭಿಮಾನಿಯಾಂಚಾ ॥೫೮೧॥ ನಾಮರೂಪಾತ್ಮಕ ಪ್ರಪಂಚ । ಮಿಥ್ಯಾ ಮಾಯಿಕತ್ವೇ ಆಹಾಚ । ಜ್ಞಾನಾಭಿಮಾನೀ ಮಾನೂನಿ ಸಾಚ । ವೃಥಾ ಕಚಕಚ ವಾಢವಿತೀ ॥೫೮೨॥ ಪ್ರಪಂಚ ರಚನೇಚೀ ಕುಸರೀ । ಆಪಣ ಜೈ ಮಾನಾವೀ ಖರೀ । ತೈ ದೇಹಬುದ್ಧಿ ವಾಜಲೀ ಶಿರೀ । ದುಃಖ ದರಿದ್ರೀ ನಿಮಗ್ನ ॥೫೮೩॥ ತ್ಯಾಂಚೇ ಯೋಗ್ಯತಾ ಪಾಹತಾ ಜಾಣ । ಗಾಯತ್ರೀ ತುಲ್ಯ ವೇದಪಠಣ । ಸಕಳ ಶಾಸ್ತ್ರೀ ಜಾಣೇ ಪೂರ್ಣ । ಶ್ರುತಿ ಪುರಾಣ ಇತಿಹಾಸ ॥೫೮೪॥ ಅತಿನಿಃಸೀಮ ವಕ್ತೇಪಣ । ಸಮಯೀಂಚೇ ಸಮಯೀ ಸ್ಫುರೇ ಸ್ಫುರಣ । ತೇಣೇ ವಾಢಲಾ ದೇಹಾಭಿಮಾನ । ಪಂಡಿತಮನ್ಯ ಅತಿಗರ್ವೀ ॥೫೮೫॥ ನೇಣೇ ಅದ್ವೈತಸಮಾಧಾನ । ತರೀ ಯೋಗ್ಯತಾಗರ್ವ ಗಹನ । ನಿಜಮತಾಚಾ ಮತಾಭಿಮಾನ । ಪ್ರಾಣಾಂತೇ ಜಾಣ ಸಾಂಡೀನಾ ॥೫೮೬॥ ಪಂಡಿತಮನ್ಯಾಂಚೇ ಬೋಲಣೇ । ಅವಚಟೇ ನಾಯಕಾವೇ ದೀನೇ । ಜೇ ನಾಗವಲೇ ದೇಹಾಭಿಮಾನೇ । ತ್ಯಾಂಚೇನಿ ಸೌಜನ್ಯೇ ಅಧಃಪಾತ ॥೫೮೭॥ ವಿಷಭಕ್ಷಿತ್ಯಾಚಾ ಪಾಂತೀಕರ । ಅತ್ಯಾಗ್ರಹೇ ಝಾಲಾ ಜೋ ನರ । ತ್ಯಾಸೀ ಅಪ್ರಾರ್ಥಿತಾ ಮರಣಾದರ । ಅತಿದುರ್ಧರ ಜೇವೀ ವಾಜೇ ॥೫೮೮॥ ಯಾಲಾಗೀ ನ ಧರಾವೀ ತೇ ಸಂಗತೀ । ತ್ಯಾಂಸೀ ನ ಕರಾವೀ ವದಂತೀ । ಕದಾ ನ ಜಾವೇ ತ್ಯಾಂಪ್ರತೀ । ತೇ ತ್ಯಾಜ್ಯ ನಿಶ್ಚಿತೀ ಜೀವೇಭಾವೇ ॥೫೮೯॥

ಇವರಿಗೆ ವಿಷಯಗಳ ಸುಖವು ನಿಜವೆನಿಸುವುದು. ವಿಷಯಗಳ ಉಪಭೋಗಕ್ಕಾಗಿ ಪುಣ್ಯ ಮಾಡಿ ಸ್ವರ್ಗದ ಪ್ರಾಪ್ತಿ ಮಾಡಿಕೊಳ್ಳಬೇಕೆನ್ನುವರು ॥೫೭೬॥ ವಿಷಯಗಳಿಗೆ ಸತ್ಯವೆನ್ನುವುದು ಇದು ದೇಹಾಭಿಮಾನದ ರಹಸ್ಯವಾಗಿರುವುದು. ಇದರಿಂದ ಸಜ್ಞಾನ ಜನರಿಗೆ ಅಧಮರನ್ನಾಗಿ ಮಾಡಿ ಅವರಿಗೆ ಜನ್ಮಮರಣದ ಚಕ್ರದಲ್ಲಿ ಸಿಲುಕಿಸುವುದು ॥೫೭೭॥ ಪುನಃ ಸ್ವರ್ಗ, ಪುನಃ ನರಕ, ಪುನಃ ಗರ್ಭವಾಸ, ಈ ಪ್ರಕಾರವಾಗಿ ಪಂಡಿತ ಜನರಿಗೆ ಜ್ಞಾನದ ಅಭಿಮಾನವು ಜ್ಞಾನಮೂರ್ಖರನ್ನಾಗಿ ಮಾಡಿರುವುದು ॥೫೭೮॥ ಅವರ ಈ ಜ್ಞಾನವು ವೇದಬಾಹ್ಯವಾಗಿರುವುದರಿಂದ ಅದು ಸರ್ವಥಾ ಗ್ರಾಹ್ಯವಾಗಲಾರದು. ಅಂತ್ಯಜನ ಅನ್ನವು ಯಾವ ಪ್ರಕಾರವಾಗಿ ಅಗ್ರಾಹ್ಯವಾಗಿರುವುದೋ, ಅದೇ ಪ್ರಕಾರವಾಗಿ ಅವರ ಮತವು ಅತ್ಯಂತ ತ್ಯಾಜ್ಯವೆಂದು ತಿಳಿಯಬೇಕು ॥೫೭೯॥ ಜ್ಞಾನದಿಂದ ಅಭಿಮಾನಿಯಾದ ಜನರ ವಿಚಾರವೆಂದರೆ ಅದು ಅಜ್ಞಾನದ ಶುದ್ಧಸಾರವಾಗಿರುವುದು. ಅವರ ನಿರ್ಧಾರವು ಅದು ನಿಜವಾಗಿಯೂ ಮಹಾಮೋಹಮಯವಾಗಿರುವುದು ॥೫೮೦॥ ಅವರ ವಿವೇಕವು ವೃಂದಾವನ ಫಲದಂತೆ ಇರುವುದು. ಯಾವ ಈ ಫಲವು ಮೇಲ್ನೋಟಕ್ಕೆ ಸುಂದರವಾಗಿದ್ದುಕೊಂಡು ಒಳಗೆ ಮಾತ್ರ ಕಹಿಯಾಗಿರುವುದು. ಜ್ಞಾನದಿಂದ ಅಭಿಮಾನಿಯಾಗಿರುವ ಜನರ ಪರಿಣಾಮವು ಹೀಗೆ ಅನಿಷ್ಟವಾಗಿರುವುದು ॥೫೮೧॥ ನಾಮರೂಪಾತ್ಮಕವಾದ ಈ ಯಾವ ಪ್ರಪಂಚವು ಮಾಯಿಕವಾದ್ದರಿಂದ ಮಿಥ್ಯೆಯಾಗಿರುವುದು. ಇದನ್ನು ತಿಳಿಯದೇ ಜ್ಞಾನಾಭಿಮಾನಿಯು ಅದಕ್ಕೆ ಸತ್ಯವೆಂದು ತಿಳಿದು ವಿನಾಕಾರಣವಾಗಿ ಸಂಘರ್ಷವನ್ನು ಬೆಳೆಸುತ್ತಿರುವನು ॥೫೮೨॥ ಪ್ರಪಂಚದ ರಚನೆಯನ್ನು ನಿಜವೆಂದು ಭಾವಿಸಿದರೆ ಆಗ ''ದೇಹವೇ ನಾನು'' ಎಂಬ ಈ ಬುದ್ಧಿಯು ಬೆಳೆಯುವುದು. ಇದರಿಂದ ದುಃಖ, ದಾರಿದ್ರ್ಯಗಳಲ್ಲಿ ತೊಡಕಿಕೊಳ್ಳಬೇಕಾಗುವುದು ॥೫೮೩॥ ಆ ಯಾವ ಪಂಡಿತರ ಯೋಗ್ಯತೆಯನ್ನು ತಿಳಿದು ನೋಡಿದರೆ ಅವರ ವೇದಪಠಣೆಯು ಗಾಯತ್ರೀತುಲ್ಯವಾಗಿರುವುದು. ಸರ್ವ ಶಾಸ್ತ್ರಗಳು, ಶ್ರುತಿಗಳು, ಪುರಾಣಗಳು, ಇತಿಹಾಸಗಳು ಇವು ಎಲ್ಲವೂ ಅವರಿಗೆ ಮುಖೋದ್ಗತವಾಗಿರುವುವು ॥೫೮೪॥ ಅವರ ವಕ್ತೃತ್ವವು ಅಸ್ಖಲಿತವಾಗಿರುವುದು. ಅವರ ಅಂಗದಲ್ಲಿ ಸಮಯ ಸೂಚಕತೆ ಇರುವುದು. ಇದರಿಂದ ಇವರ ದೇಹಾಭಿಮಾನವು ಬೆಳೆಯುತ್ತ ಸಾಗುವುದು. ಹಾಗೂ ಅವರು ಗರ್ವದಿಂದ ಅತ್ಯಂತ ಉಬ್ಬಿಕೊಳ್ಳುತ್ತಿರುವರು ॥೫೮೫॥ ಅದ್ವೈತದಲ್ಲಿರುವ ಸುಖಸಮಾಧಾನವು ಅವರಿಗೆ ಮನವರಿಕೆಯಾಗುವುದಿಲ್ಲ. ತಮ್ಮ ಸ್ವತಃದ ಯೋಗ್ಯತೆಯಲ್ಲಿ ಅವರಿಗೆ ಅತ್ಯಂತ ಗರ್ವವು ತುಂಬಿಕೊಂಡಿರುವುದು. ಅವರು ತಮ್ಮ ಮನಸ್ಸಿನಲ್ಲಿರುವ ಅಭಿಮಾನವನ್ನು ತಮ್ಮ ಪ್ರಾಣ ಹೋದರೂ ಕೂಡ ಬಿಟ್ಟುಕೊಡಲಾರರು ॥೫೮೬॥ ಇಂತಹ ಪಂಡಿತ ಮಹಾರಾಜರ ವಚನಗಳನ್ನು ಅಪ್ಪಿತಪ್ಪಿಯೂ ಕೂಡ ಕೇಳಕೂಡದು. ಕಾರಣ ದೇಹಾಭಿಮಾನದಿಂದ ಮೋಸಕ್ಕೆ ಒಳಗಾದವರಿಗೆ ಸೌಜನ್ಯದಿಂದ ಅಧಃಪಾತವಾಗುವುದು ॥೫೮೭॥ ವಿಷ ಸೇವನೆಯನ್ನು ಮಾಡುವವರ ಪಂಕ್ತಿಯಲ್ಲಿ ಯಾರಾದರೂ ಅತ್ಯಾಗ್ರಹದಿಂದ ಕುಳಿತುಕೊಳ್ಳಲು ಆತನಿಗೆ ಹೇಳದೇ ಕೇಳದೇ ದುರ್ಧರವಾದ ಮರಣವು ನಿಶ್ಚಿತವಾಗಿ ಪ್ರಾಪ್ತವಾಗುವುದು ॥೫೮೮॥ ಆದ್ದರಿಂದ ಇಂಥವರ ಸಂಗತಿಯನ್ನು ಎಂದೆಂದಿಗೂ ಮಾಡಕೂಡದು. ಅವರಲ್ಲಿ ಭಾಷಣವನ್ನೂ ಕೂಡ ಮಾಡಬಾರದು. ಅವರ ನೆರಳಿನಲ್ಲಿಯೂ ಸಹ ನಿಲ್ಲಬಾರದು. ಜೀವಭಾವದಿಂದ ಅವರನ್ನು ತ್ಯಜಿಸಬೇಕು ॥೫೮೯॥

ತ್ಯಾಂಚೇ ನ ಲಾಗಾವೇ ಬೋಲೀ । ತ್ಯಾಂಚೇ ನ ಚಾಲಾವೇ ಚಾಲೀ । ಜೇ ಜ್ಞಾನಾಭಿಮಾನಭುಲೀ । ಮುಕಲೇ ಆಪುಲೀ ಹಿತವಾರ್ತಾ ॥೫೯೦॥ ತೇ ನಾಣಾವೇ ನಿಜಮಂದಿರಾ । ಸ್ವಯೇ ನ ವಚಾವೇ ತ್ಯಾಂಚ್ಯಾ ದ್ವಾರಾ । ತ್ಯಾಂಸೀ ನ ಪುಸಾವೇ ವಿಚಾರಾ । ಜೇ ಅಭಿಮಾನಾದ್ವಾರಾ ನಾಡಲೇ ॥೫೯೧॥ ತ್ಯಾಂಸೀ ನ ವ್ಹಾವೀ ಹಾಟಭೇಟೀ । ಕದಾ ನ ದೇಖಾವೇ ನಿಜದೃಷ್ಟೀ । ತೇ ತ್ಯಾಜ್ಯ ಗಾ ಉಠಾಉಠೀ । ಜೇವೀ ಧರ್ಮಿಷ್ಟೀ ಪರನಿಂದಾ ॥೫೯೨॥ ವೇದಶಾಸ್ತ್ರಾಂಚಾ ಮಥಿತಾರ್ಥ । ಜೋ ಕಾ ಅದ್ವೈತ ಪರಮಾರ್ಥ । ತೋ ಜ್ಯಾಂಸೀ ನಾವಡೇ ನಿಜಸ್ವಾರ್ಥ । ಚಾವಿರಾ ಅನರ್ಥ ತ್ಯಾಂಪಾಶೀ ॥೫೯೩॥ ಯಾಲಾಗೀ ತ್ಯಾಂಚೇ ಸಂಗತೀ । ಸಾಕ್ಷೇಪೇ ಸಾಂಡಾವೀ ನಿಶ್ಚಿತೀ । ಸಾಧಕಾಚೇ ಯೋಗಸ್ಥಿತೀ । ಅಂತರಾಯನಿವೃತ್ತೀ ಹರಿ ಸಾಂಗೇ ॥೫೯೪॥

ಯೋಗಿನೋಽಪಕ್ವಯೋಗಸ್ಯ ಯುಂಜತಃ ಕಾಯ ಉತ್ಥಿತೈಃ । ಉಪಸರ್ಗೈರ್ವಿಹನ್ಯೇತ ತತ್ರಾಯಂ ವಿಹಿತೋ ವಿಧಿಃ ॥೩೮॥

ಅರ್ಥ:- ಹೇ ಉದ್ಧವಾ, ಯೋಗ ಸಾಧನೆಯು ಪೂರ್ಣವಾಗುವ ಮೊದಲೇ ಒಂದು ವೇಳೆ ಸಾಧಕನ ಶರೀರವು ರೋಗದಿಂದ ಪೀಡಿತವಾದರೆ, ಆತನಿಗೆ ಈ ಉಪಾಯದ ಆಶ್ರಯವನ್ನು ಪಡೆಯಬೇಕು.

ಯೋಗೀ ಪ್ರವರ್ತಲ್ಯಾ ಯೋಗಾಭ್ಯಾಸೀ । ಯೋಗ ಸಂಪೂರ್ಣ ನವ್ಹತಾ ತ್ಯಾಸೀ । ಉಪಸರ್ಗ ಯೇತೀ ಭಳಾವಯಾಸೀ । ತೇಚೀ ಹೃಷೀಕೇಶೀ ಸಾಂಗತ ॥೫೯೫॥ ಶರೀರೀ ಏಖಾದಾ ಉಠೇ ರೋಗ । ಕಾ ಖವಳೇ ವಿಷಯಾಚೀ ಲಗಬಗ । ಅಥವಾ ಸಭ್ರಾಂತ ಉಪಸರ್ಗ । ಕಾ ಯೋಗಭಂಗ ವಿಕಲ್ಪೇ ॥೫೯೬॥ ಜ್ಞಾನಾಭಿಮಾನ ಸಬಳ ಉಠೀ । ತೇಣೇ ಗುಣದೋಷೀ ಬೈಸೇ ದಿಠೀ । ಪರಾಪವಾದಾಚೀ ಚಾವಟೀ । ತ್ಯಾಚೀ ಏಕಾಂತಗೋಷ್ಟೀ ನಿಜಗುಜ ॥೫೯೭॥ ದೇಹೀ ಶೀತಳತಾ ಉಭಡೇ । ಕಾ ಉಷ್ಣತಾ ಅತ್ಯಂತ ಚಡೇ । ಕಿಂವಾ ವಾಯು ಅವ್ಹಾಟೀ ಪಡೇ । ಕಾ ಕ್ಷುಧಾವಾಡೇ ಅನಿವಾರ ॥೫೯೮॥ ವಿಕ್ಷೇಪೇ ಕಷಾಯ ವೋಢವತೀ । ಪರದಾರಾಪರದ್ರವ್ಯಾಸಕ್ತೀ । ಇತ್ಯಾದಿ ಉಪಸರ್ಗ ಯೇತೀ । ಉಪಾಯ ಶ್ರೀಪತೀ ತದರ್ಥ ಸಾಂಗೇ ॥೫೯೯॥

ಯೋಗಧಾರಣಯಾ ಕಾಂಶ್ಚಿದಾಸನೈರ್ಧಾರಣಾನ್ವಿತೈಃ । ತಪೋಮಂತ್ರೌಷಧೈಃ ಕಾಂಶ್ಚಿದುಪಸರ್ಗಾನ್ವಿನಿರ್ದಹೇತ್ ॥೩೯॥

ಅರ್ಥ:- ಉಷ್ಣ, ಶೀತ ಇವುಗಳಿಗೆ ಚಂದ್ರ, ಸೂರ್ಯ ಇತ್ಯಾದಿ ಧಾರಣೆಯಿಂದ, ವಾತ ಇತ್ಯಾದಿ ರೋಗಗಳಿಗೆ ವಾಯುಕ್ಪಾರಣಯುಕ್ತ ಆಸನಗಳಿಂದ ಮತು ಇನ್ನಿತರ ಪ್ರತಿಬಂಧಕಗಳನ್ನು ತಪಸ್ಸು, ಮಂತ್ರ, ಔಷಧಗಳಿಂದ ನಷ್ಟಗೊಳಿಸಬೇಕು.

ಅವರಲ್ಲಿ ಎಂದಿಗೂ ವಾದವಿವಾದಗಳನ್ನು ಮಾಡಬಾರದು. ಅವರ ಮಾರ್ಗದಲ್ಲಿ ಎಂದಿಗೂ ನಡೆಯಬಾರದು. ಯಾರು ಈ ಜ್ಞಾನಾಭಿಮಾನಿಗಳಿಗೆ ಭುಲಾಯಿಸುವರೋ, ಅವರು ತಮ್ಮ ಸ್ವತಃ ಹಿಡಿತವನ್ನು ಕಳೆದುಕೊಳ್ಳುವರು ॥೫೯೦॥ ಅವರನ್ನು ತಮ್ಮ ಮನೆಗೆ ಎಂದಿಗೂ ಕರೆದುತರಬಾರದು. ತಾವು ಅವರ ಮನೆಗೆ ಎಂದಿಗೂ ಹೋಗಬಾರದು. ಅವರ ವಿಚಾರಗಳನ್ನು ಕೇಳಕೂಡದು. ಕಾರಣ ಅವರು ಅಭಿಮಾನದ ಮದದಲ್ಲಿ ಧುಮುಕಿರುವರು ॥೫೯೧॥ ಅವರ ಭೇಟಿಯನ್ನು ಮಾಡಕೂಡದು. ಅವರನ್ನು ತಮ್ಮ ಕಣ್ಣುಗಳಿಂದ ನೋಡಲೂ ಬಾರದು. ಧಾರ್ಮಿಕ ಮನುಷ್ಯನು ಯಾವ ಪ್ರಕಾರವಾಗಿ ಪರನಿಂದೆಯನ್ನು ತ್ಯಾಜ್ಯ ಮಾಡುವನೋ, ಅದರಂತೆಯೇ ಅವರನ್ನು ತತ್ಕಾಲದಲ್ಲಿ ತ್ಯಜಿಸಬೇಕು ॥೫೯೨॥ ವೇದಶಾಸ್ತ್ರಗಳ ಮಥಿತಾರ್ಥವು ಹೇಗಿದೆ ಎಂದರೆ, ಯಾವ ಅದ್ವೈತ ರೂಪ ಪರಮಾರ್ಥವು ಅದು ತಮ್ಮ ನಿಜವಾದ ಸ್ವಾರ್ಥವಾಗಿರುವುದು. ಆದರೆ ಅವರಿಗೆ ಅದು ಹಿಡಿಸುವುದಿಲ್ಲ. ಅವರಲ್ಲಿ ಕೇವಲ ಅನರ್ಥವೇ ವರ್ತಿಸುತ್ತಿರುವುದು ॥೫೯೩॥ ಆದ್ದರಿಂದ ಅವರ ಸಂಗತಿಯನ್ನು ಪರಿಪೂರ್ಣವಾಗಿ ತ್ಯಜಿಸಬೇಕು. ಈಗ ಶ್ರೀಹರಿಯು ಸಾಧಕರ ಯೋಗದ ಸ್ವರೂಪವನ್ನು ಹಾಗೂ ಅದರಲ್ಲಿನ ವಿಘ್ನಗಳ ನಿವೃತ್ತಿಯ ಉಪಾಯಗಳನ್ನು ಹೇಳುತ್ತಿರುವನು ॥೫೯೪॥

ಯೋಗಿಯು ಯೋಗಾಭ್ಯಾಸವನ್ನು ಮಾಡುತ್ತಿರಲು, ಆಗ ಆತನ ಯೋಗವು ಸಫಲವಾಗುವುದಕ್ಕಿಂತ ಮುಂಚಿತವಾಗಿಯೇ ಆತನಿಗೆ ಪೀಡೆಯನ್ನು ಕೊಡುವುದಕ್ಕಾಗಿ ವಿಘ್ನಗಳು ಬರುತ್ತಿರುವುವು. ಈ ವಿಷಯದ ವಿವೇಚನೆಯನ್ನು ಶ್ರೀಕೃಷ್ಣನು ಈಗ ಮಾಡುವನು ॥೫೯೫॥ ಶರೀರದಲ್ಲಿ ಹೇಗೋ ರೋಗವು ಹುಟ್ಟಿಕೊಳ್ಳುವುದು. ಅಥವಾ ವಿಷಯಗಳ ವಿಕಾರಗಳು ಉದ್ಭವಿಸುವುವು. ಇಲ್ಲವೇ ಗಡಿಬಿಡಿಯಿಂದಲೋ ಅಥವಾ ಭ್ರಾಂತಿಯಿಂದಲೋ ತೊಂದರೆಯುಂಟಾಗುವುದು. ಇದಲ್ಲದೇ ವಿಕಲ್ಪಗಳು ನಿರ್ಮಾಣವಾಗಿ ಯೋಗವು ಭಂಗವಾಗುತ್ತಿರುವುದು ॥೫೯೬॥ ಅಥವಾ ಜ್ಞಾನದ ಗರ್ವವು ಬೆಳೆಯುತ್ತಿರುವುದು. ಇದರಿಂದ ಇತರರ ಗುಣದೋಷಗಳತ್ತ ದೃಷ್ಟಿಯು ನಟ್ಟಿಕೊಳ್ಳುವುದು. ಇನ್ನೊಬ್ಬರನ್ನು ಕುಚೋದ್ಯತನವನ್ನು ಮಾಡುವಿಕೆಯು ಇದು ಆತನ ಏಕಾಂತದಲ್ಲಿನ ಹಿತಗುಜವಾಗಿರುವುದು ॥೫೯೭॥ ದೇಹಕ್ಕೆ ಕೆಲವೊಮ್ಮೆ ಶೀತಭಾದೆಯು ಉಂಟಾಗುವುದು ಇನ್ನು ಒಂದು ಸಾರೆ ದೇಹದಲ್ಲಿನ ಉಷ್ಣತೆಯು ಹೆಚ್ಚಾಗುವುದು. ಮತ್ತೊಂದು ಸಾರೆ ಅಪಾನ ವಾಯುವಿನ ಮಾರ್ಗವು ಸರಿದುಕೊಳ್ಳುವುದು ಅಥವಾ ಕೆಲವೊಮ್ಮೆ ಅತಿಶಯವಾಗಿ ಹಸಿವೆ, ನೀರಡಿಕೆಯಾಗುವುವು ॥೫೯೮॥ ವಿಕ್ಷೇಪ ಮತ್ತು ಕಲ್ಪನೆಗಳ ಕೋಲಾಹಲ ನಿರ್ಮಾಣವಾಗುವುದು. ಪರಸ್ತ್ರೀ, ಪರಧನ ಈ ವಿಷಯಗಳಲ್ಲಿ ಆಸಕ್ತಿಯು ಬೆಳೆಯಲಾರಂಭಿಸುವುದು. ಹೀಗೆ ಅನೇಕ ವಿಘ್ನಗಳು ಒದಗುವುವು. ಈಗ ಶ್ರೀಹರಿಯು ಅವುಗಳ ನಿವಾರಣೆಯ ಉಪಾಯವನ್ನು ಹೇಳುತ್ತಿರುವನು ॥೫೯೯॥

ದೇಹೀ ಶೀತಳತಾ ವಾಢಲ್ಯಾ ಜಾಣ । ತೀಸ ನಿವಾರೀ ಅಗ್ನಿಧಾರಣ । ದೇಹೀ ಉಷ್ಮಾ ಚಢಲ್ಯಾ ಪೂರ್ಣ । ಸೋಮಧಾರಣ ಉಚ್ಛೇದೀ ॥೬೦೦॥ ವಾಯು ಅವ್ಹಾಟಲ್ಯಾ ಅವಚಿತಾ । ತ್ಯೆ ದೇಹೀ ವಾಯು ಭರಾವಾ ಪುರತಾ । ವಾಯು ಮೇಳವೂನಿ ವಾಯು ಆಂತೌತಾ । ಆಣಿತೀ ನಿಜಪಂಥಾ ಅಭ್ಯಾಸಬಳೇ ॥೬೦೧॥ ವಾಯು ಕ್ಷೋಭೋನಿ ಸಕೋಪ । ಜ್ಯೆ ಜಠರಾವರೀ ಪಡೇ ಝುಡಪ । ತ್ಯೆ ಕ್ಷುದಾ ಖವಳೇ ಅಮೂಪ । ತೃಪ್ತೀಚೇ ರೂಪ ಉರೀನಾ ॥೬೦೨॥ ತೇಥ ಮೋಕಳಾ ಸಾಂಡೂನಿ ಪ್ರಾಣ । ಅಪಾನ ವಾಢವಾವಾ ಆಪಣ । ತೋ ಜಠರಾ ಆಲಿಯಾ ಜಾಣ । ತೇಥ ಕ್ಷೋಭಲಾ ಪ್ರಾಣ ಸಹಜೇಚಿ ಯೇ ॥೬೦೩॥ ತೇಥ ಪ್ರಾಣಾಪಾನಐಕ್ಯತಾ । ಸಹಜೇ ಯೇ ಸಾಧಕಾಂಚ್ಯಾ ಹಾತಾ । ಮಗ ಷಟ್‌ಚಕ್ರೇ ಭೇದಿತಾ । ಕ್ಷಣಹೀ ಸರ್ವಥಾ ಲಾಗೇನಾ ॥೬೦೪॥ ತೇವ್ಹಾ ಸತರಾವಿಯೇಚೇ ಅಮೃತಪಾನ । ಸಾಧಕಾಂಸೀ ಫಾವೇ ಸಂಪೂರ್ಣ । ಯಾಪರೀ ಕ್ಷುಧಾನಿರ್ದಳಣ । ಯೇಣೇ ಯೋಗೇ ಜಾಣ ಸಾಧಿತೀ ॥೬೦೫॥ ಪರದಾರಾ ಪರದ್ರವ್ಯಾಸಕ್ತೀ । ಹೇ ಪಾಪಕರ್ಮಾಚೀ ಫಳಪ್ರಾಪ್ತೀ । ಯಾಚೀ ಕರಾವಯಾ ನಿವೃತ್ತೀ । ತಪಶ್ಚರ್ಯಾ ನಿಶ್ಚಿತೀ ಉದ್ಧವಾ ॥೬೦೬॥ ಭಾವೇ ಕರಿತಾ ಮಂತ್ರಾನುಷ್ಠಾನ । ತೇಣೇ ವೈರಾಗ್ಯ ಉಪಜೇ ಜಾಣ । ವೈರಾಗ್ಯೇ ವಿಷಯನಿರ್ದಳಣ । ಸಹಜೇ ಜಾಣ ಸಾಧಕಾ ॥೬೦೭॥ ಶುದ್ಧ ಮಂತ್ರಾಚೇ ಪುರಶ್ಚರಣ । ಕರೀ ವಿಘ್ನಾಂಚೇ ನಿರ್ದಳಣ । ತೇಥ ಪಿಶಾಚಬಾಧಾಸಂಚರಣ । ಘೇಊನಿ ಪ್ರಾಣ ಸ್ವಯೇ ಪಳೇ ॥೬೦೮॥ ಶರೀರೀ ಸಂಚರಲ್ಯಾ ವ್ಯಾಧೀ । ತ್ಯಾತೇ ನಿರ್ದಳೀ ದಿವ್ಯ ಔಷಧೀ । ಮನಾಚಾ ಭೇದಾವಯಾ ಆಧೀ । ಯೋಗ ತ್ರಿಶುದ್ಧೀ ಸಾಧಾವಾ ॥೬೦೯॥ ತೇಥ ಸಾಧಲ್ಯಾ ಯೋಗಸಿದ್ಧೀ । ಸಮೂಳ ನಿರ್ದಳೀ ಆಧಿವ್ಯಾಧೀ । ಸಕಳ ವಿಘ್ನಾಂತೇಹೀ ಭೇದೀ । ಜಾಣ ತ್ರಿಶುದ್ಧೀ ಉದ್ಧವಾ ॥೬೧೦॥ ಹೇ ಕಿತೀ ಸಾಂಗೂ ಭಿನ್ನ ಭಿನ್ನ । ಭಾವೇ ಕರಿತಾ ಮಾಝೇ ಧ್ಯಾನ । ಸಕಳ ಉಪಸರ್ಗಾ ನಿರ್ದಳಣ । ತೇಚಿ ನಿರೂಪಣ ಹರಿ ಸಾಂಗೇ ॥೬೧೧॥

ಕಾಂಶ್ಚಿನ್ಮಮಾನುಧ್ಯಾನೇನ ನಾಮಸಂಕೀರ್ತನಾದಿಭಿಃ । ಯೋಗೇಶ್ವರಾನುವೃತ್ತ್ಯಾ ವಾ ಹನ್ಯಾದಶುಭದಾನ್ ಶನೈಃ ॥೪೦॥

ಅರ್ಥ:- ಕಾಮ, ಕ್ರೋಧ ಇತ್ಯಾದಿ ವಿಘ್ನಗಳನ್ನು ನನ್ನ ಚಿಂತನೆಯಿಂದ ಮತ್ತು ನಾಮ ಸಂಕೀರ್ತನೆಯಿಂದ ನಿವಾರಿಸಿಕೊಳ್ಳಬೇಕು. ಹಾಗೆಯೇ ಪತನದತ್ತ ಒಯ್ಯುತ್ತಿರುವ ದಂಭ ಮತ್ತು ಮದ ಇತ್ಯಾದಿ ವಿಘ್ನಗಳನ್ನು ಮೆಲ್ಲಮೆಲ್ಲನೇ ಮಹಾಪುರುಷರ ಸೇವೆಯಿಂದ ದೂರ ಮಾಡಬೇಕು.

ಶರೀರಕ್ಕೆ ಒಂದು ವೇಳೆ ಶೀತದ ಬಾಧೆಯಾಗಲು ಆಗ ಅಗ್ನಿಧಾರಣೆಯಿಂದ ಅದನ್ನು ನಿವಾರಿಸಿಕೊಳ್ಳಬೇಕು. ಶರೀರಕ್ಕೆ ಉಷ್ಣತೆಯು ಬೆಳೆದರೆ ಆಗ ಚಂದ್ರನ ಧಾರಣೆಯಿಂದ ಅದನ್ನು ಇಲ್ಲದಂತಾಗಿ ಮಾಡಬೇಕು ॥೬೦೦॥ ಅಕಸ್ಮಾತ್ತಾಗಿ ವಾತದ ವಿಕಾರವು ಉದ್ಭವಿಸಿದರೆ, ಆಗ ದೇಹದಲ್ಲಿ ಪೂರ್ಣವಾಗಿ ವಾಯುವನ್ನು ತುಂಬಬೇಕು ಮತ್ತು ಒಳಗಿನ ವಾಯುವಿನಲ್ಲಿ ಅದನ್ನು ಕೂಡಿಸಬೇಕು. ಅಂದರೆ ಅಭ್ಯಾಸದ ಯೋಗದಿಂದ ಅದು ಪೂರ್ವ ಸ್ಥಿತಿಗೆ ಬರುವುದು ॥೬೦೧॥ ಒಂದೊಂದು ಸಮಯದಲ್ಲಿ ವಾಯುವಿನ ಕ್ಷೋಭೆಯಾಗಿ ಅದು ಜಠರದ ಮೇಲೆ ಮುತ್ತಿಗೆ ಹಾಕಲು ಆಗ ಅತಿಶಯವಾಗಿ ಹಸಿವೆಯು ಉಂಟಾಗುವುದು. ಎಂದಿಗೂ ತೃಪ್ತಿಯಾಗುವುದಿಲ್ಲ ॥೬೦೨॥ ಇಂತಹ ಸಮಯದಲ್ಲಿ ಪ್ರಾಣವನ್ನು ಮುಕ್ತವಾಗಿ ಬಿಟ್ಟುಕೊಟ್ಟು ಅಪಾನವನ್ನು ಬೆಳೆಸಬೇಕು. ಅದು ಜಠರದತ್ತ ಬರುತ್ತಲೇ ಕ್ಷುಬ್ಧವಾಗಿರುವ ಪ್ರಾಣವು ಸಹಜವಾಗಿಯೇ ಶಾಂತಗೊಳ್ಳುವುದು ॥೬೦೩॥ ಆ ಸಮಯದಲ್ಲಿ ಪ್ರಾಣಾಪಾನದ ಐಕ್ಯವು ಸಹಜವಾಗಿಯೇ ಸಾಧಕನ ಕೈಗೆ ಬರುವುದು. ಇದರಿಂದ ಷಡ್‌ಚಕ್ರಗಳ ಭೇದ ಮಾಡಲು ಒಂದು ಕ್ಷಣವೂ ಕೂಡ ತಡವಾಗುವುದಿಲ್ಲ ॥೬೦೪॥ ಆಗ ಸಾಧಕನಿಗೆ ಸತರಾವಿಯ ಅಮೃತಪಾನವು ಪೂರ್ಣವಾಗಿ ಲಾಭವಾಗುವುದು. ಈ ಪ್ರಕಾರವಾಗಿ ಯೋಗಿಯು ಕ್ಷುಧೆಯ ಬಾಧೆಯನ್ನು ನಿವಾರಿಸಿಕೊಳ್ಳುವನು ॥೬೦೫॥ ಹೇ ಉದ್ಧವನೇ, ಪರದ್ರವ್ಯ ಮತ್ತು ಪರಸ್ತ್ರೀ ಇವುಗಳ ಆಸಕ್ತಿ ಇರುವಿಕೆಯು ಇದು ಪಾಪ ಕರ್ಮಗಳ ಫಲವಾಗಿರುವುದು. ಇದನ್ನು ನಿವಾರಿಸಿಕೊಳ್ಳಬೇಕಾದರೆ ತಪಶ್ಚರ್ಯ ಮಾಡುವುದೇ ಸಾಧನವಾಗಿರುವುದು ॥೬೦೬॥ ಪರಮ ಶ್ರದ್ಧೆಯಿಂದ ಮಂತ್ರದ ಅನುಷ್ಠಾನವನ್ನು ಮಾಡಿದರೆ ವೈರಾಗ್ಯವು ನಿರ್ಮಾಣವಾಗುವುದು. ಈ ಯಾವ ವೈರಾಗ್ಯದ ಆಧಾರದಿಂದ ಸಾಧಕರ ವಿಷಯಾಸಕ್ತಿಯು ನಾಶವಾಗುವುದು ॥೬೦೭॥ ಶುದ್ಧವಾದ ಮಂತ್ರದ ಪುರಶ್ಚರಣೆಯಿಂದ ವಿಘ್ನಗಳ ನಾಶವಾಗುವುದು. ಹಾಗೆಯೇ ಪಿಶಾಚಿಗಳ ಬಾಧೆಯೂ ಕೂಡ ಸಂಪೂರ್ಣವಾಗಿ ಪ್ರಾಣಹಿಡಿದು ಓಡಿಹೋಗುವುದು ॥೬೦೮॥ ಶರೀರದಲ್ಲಿ ರೋಗಗಳು ಪ್ರವೇಶವಾದರೆ ಅದಕ್ಕಾಗಿ ದಿವ್ಯ ಔಷಧಗಳ ಸೇವನೆಯಿಂದ ಅದರ ನಿವಾರಣೆಯಾಗುತ್ತಿರುವುದು. ಮನೋರೋಗವನ್ನು ಕಳೆಯಬೇಕಾದರೆ ಅದಕ್ಕಾಗಿ ನಿಶ್ಚಯಪೂರ್ವಕವಾಗಿ ಯೋಗ ಸಾಧನೆಯನ್ನು ಮಾಡಬೇಕಾಗುವುದು ॥೬೦೯॥ ಇಲ್ಲಿ ಯೋಗ ಸಿದ್ಧಿಯು ಸಾಧ್ಯವಾದರೆ ಆದಿವ್ಯಾಧಿಯು ಸಮೂಲವಾಗಿ ನಾಶವಾಗುವುದು. ಹೇ ಉದ್ಧವಾ, ಈ ಯೋಗ ಸಿದ್ಧಿಯು ಇತರ ವಿಘ್ನಗಳನ್ನೂ ಕೂಡ ನಾಶಪಡಿಸುವುದು ॥೬೧೦॥ ಹೀಗೆ ಭಿನ್ನ ಭಿನ್ನವಾಗಿ ಎಷ್ಟೊಂದು ಉಪಾಯಗಳನ್ನು ಹೇಳಬೇಕು? ಭಕ್ತಿಭಾವದಿಂದ ನನ್ನ ಧ್ಯಾನವನ್ನು ಮಾಡುವುದರಿಂದ ಸರ್ವ ವಿಘ್ನಗಳು, ನಾಶವಾಗುವುವು. ಈ ನಿರೂಪಣೆಯನ್ನೇ ಈಗ ಶ್ರೀಕೃಷ್ಣನು ಮಾಡುತ್ತಿರುವನು ॥೬೧೧॥

ಆಧಿವ್ಯಾಧೀಸೀ ಸಕಳ ವಿಘ್ನ । ವಿಕಲ್ಪ ವಿಕರ್ಮ ದೇಹಾಭಿಮಾನ । ಜ್ಞಾನಾಭಿಮಾನೇಸೀ ದಹನ । ಕರೀ ಧ್ಯಾನಕ್ಷಣ ಉದ್ಧವಾ ॥೬೧೨॥ ಮಾಝಿಯಾ ಧ್ಯಾನಾಚೇ ಪರಿಪಾಠೀ । ಉಪಸರ್ಗ ಪಳತೀ ಉಠಾಉಠೀ । ಶೋಧಿತಾ ವಿಘ್ನ ನ ಪಡೇ ದೃಷ್ಟೀ । ನಿರ್ದ್ವಂದ್ವ ಸೃಷ್ಟೀ ಸಾಧಕಾ ॥೬೧೩॥ ಮಾಝಾ ಲಾಗಲ್ಯಾ ಧ್ಯಾನಭಾವೋ । ಉಪಸರ್ಗಾಚಾ ನುರೇಚಿ ಠಾವೋ । ಸಕಳ ವಿಘ್ನಾಂಚಾ ಅಭಾವೋ । ವಿಕಲ್ಪ ವಾವೋ ಸ್ವಯೇ ಹೋತೀ ॥೬೧೪॥ ಮ್ಹಣಶೀ "ಘಾಲೋನಿ ಆಸನ । ಏಕಾಗ್ರ ಕರೋನಿಯಾ ಮನ । ಕೈ ಠಸಾವೇ ತುಝೇ ಧ್ಯಾನ । ತೈ ಸಾಧಕಾ ವಿಘ್ನ ಬಾಧೀನಾ" ॥೬೧೫॥ ಅಸೋ ನ ಟಕೇ ಮಾಝೇ ಧ್ಯಾನ । ತೈ ಸೋಪಾ ಉಪಾವ ಆಹೇ ಆನ । ಮಾಝೇ ಕರಿತಾ ನಾಮಕೀರ್ತನ । ವಿಘ್ನ ನಿರ್ದಳಣ । ಹರಿನಾಮೇ ॥೬೧೬॥ ಜೇ ನಾಮಾಚಾ ಘಡಘಡಾಟ । ತೇಥ ಉಪಸರ್ಗಾ ನ ಚಲೇ ವಾಟ । ಮಹಾವಿಘ್ನಾಂಚಾ ಕಡಕಡಾಟ । ಕರೀ ಸಪಾಟ ಹರಿನಾಮೇ ॥೬೧೭॥ ಅಖಂಡ ಮಾಝೀ ನಾಮಕೀರ್ತೀ । ಜ್ಯಾಚ್ಯಾ ಮುಖಾಸ ಆಲೀ ವಸ್ತೀ । ತ್ಯಾ ದೇಖೋನಿ ವಿಘ್ನೇ ಪಳತೀ । ಉಪಸರ್ಗಾ ಶಾಂತೀ ನಿಃಶೇಷ ॥೬೧೮॥ ಮಾಝ್ಯಾ ನಾಮಾಚಾ ನಿಜಗಜರ । ಪಳವೀ ಮಹಾಪಾಪಸಂಭಾರ । ಉಪಸರ್ಗಾ ನುರವೀ ಠಾರ । ನಾಮ ಸಧರ ಹರೀಚೇ ॥೬೧೯॥ ಅವಚಟೇ ಘೇತಾ ಮಾಝೇ ನಾವ । ಸಕಳ ಪಾತಕಾ ಕರೀ ಭಸ್ಮ । ಜೇಥ ಅಖಂಡ ಮಾಝೇ ಗುಣನಾಮಕರ್ಮ । ತೇಥ ವಿಘ್ನ ಸಂಭ್ರಮ ಸ್ಪರ್ಶೇನಾ ॥೬೨೦॥ ಮಾಝೇ ನಾಮಕೀರ್ತೀಚೇ ಪವಾಡೇ । ಜ್ಯಾಚೇ ವಾಚಾ ಅಖಂಡ ಪಢೇ । ವಿಘ್ನೇ ನ ಯೇತೀ ತಯಾಕಡೇ । ಜೇವೀ ಸೂರ್ಯಾಪುಢೇ ಆಂಧಾರ ॥೬೨೧॥ ಮಾಝೇ ನಾಮಕೀರ್ತೀವೀಣ ಯೇಥೇ । ಜ್ಯಾಚೇ ತೋಂಡ ನ ರಾಹೇ ರಿತೇ । ತೇ ನಾಗವೇ ಮಹಾವಿಘ್ನಾಂತೇ । ಜೇವೀ ಪತಂಗಾತೇ ಹುತಾಶು ॥೬೨೨॥ ನಾಮಕೀರ್ತೀ ದಾಟುಗೀ ಹೋಯೇ । ಹೇ ವಿಶ್ವಾಸೇ ಮಾನಲೇ ಆಹೇ । ತೇ ನಾಮ ಮುಖೀ ಕೇವೀ ರಾಹೇ । ಕರಾವೇ ಕಾಯೇ ಮ್ಹಣಶೀಲ ॥೬೨೩॥ ಮುಖೀ ನಾಮನಿರ್ವಾಹ ವ್ಹಾವಾ । ಯಾಲಾಗೀ ಕರಾವಾ ಸಾಧುಸೇವಾ । ಸಂತ-ಸೇವನೀ ಸದ್ಭಾವೋ ಜೀವಾ । ತೇಥ ನವ್ಹೇ ರಿಘಾವಾ ವಿಘ್ನಾಂಸೀ ॥೬೨೪॥

ಹೇ ಉದ್ಧವಾ, ಅಂತಃಕರಣಯುಕ್ತವಾಗಿ ಒಂದು ಕ್ಷಣ ಹೊತ್ತು ಮಾತ್ರ ನನ್ನ ಧ್ಯಾನವನ್ನು ಮಾಡಿದರೆ ಸರ್ವ ವಿಘ್ನಗಳು, ವಿಕಲ್ಪಗಳು, ವಿಕರ್ಮಗಳು, ದೇಹಾಭಿಮಾನವು ಜ್ಞಾನಾಭಿಮಾನವು ಹೀಗೆ ಎಲ್ಲವೂ ಇಲ್ಲದಾಗುವುವು ॥೬೧೨॥ ಯಾರು ನನ್ನ ಧ್ಯಾನದ ನಿತ್ಯಯುಕ್ತವಾಗಿ ಅಬ್ಯಾಸವನ್ನು ಮಾಡುವರೋ, ಅವರ ಸರ್ವ ವಿಘ್ನಗಳು ಕೂಡಲೇ ಓಡಿಹೋಗುವುವು. ಈ ಯಾವ ವಿಘ್ನಗಳು ಶೋಧಿಸಿ ನೋಡಿದರೂ ಸಹ ಎಲ್ಲಿಯೂ ಸಿಗುವುದಿಲ್ಲ. ಸಾಧಕರಿಗೆ ಈ ಯಾವ ಸಂಪೂರ್ಣ ಸೃಷ್ಟಿಯು ನಿರ್ದ್ವಂದ್ವಮಯವಾಗಿ ತೋರುವುದು ॥೬೧೩॥ ನನ್ನ ಧ್ಯಾನದಲ್ಲಿ ಅತಿಶಯವಾಗಿ ಪ್ರೇಮವು ನಿರ್ಮಾಣವಾಗಲು ಆಗ ವಿಘ್ನಗಳಿಗೆ ಇರಲು ಸ್ಥಳವೇ ಉಳಿದುಕೊಳ್ಳುವುದಿಲ್ಲ. ಸರ್ವ ವಿಘ್ನಗಳ ಅಭಾವವು ಉಂಟಾಗುವುದು ಮತ್ತು ವಿಕಲ್ಪಗಳು ಇಲ್ಲದಾಗುವುವು ॥೬೧೪॥ ಆಸನವನ್ನು ಹಾಕಿ ಎಂದು ಹೇಗೆ ಕುಳಿತುಕೊಳ್ಳಬೇಕು ? ಮನಸ್ಸನ್ನು ಏಕಾಗ್ರತೆಯನ್ನು ಹೇಗೆ ಮಾಡಬೇಕು ? ಇಷ್ಟೆಲ್ಲ ಮಾಡಿದ ನಂತರ ನಿನ್ನ ಧ್ಯಾನವು ಮನದಲ್ಲಿ ಸ್ಥಿರಗೊಂಡಾಗ ಮಾತ್ರ ಸಾಧಕನ ವಿಘ್ನಗಳು ಇಲ್ಲದಾಗುವುವು ? ಹೀಗೆಂದು ನೀನು ಕೇಳಬಹುದು ॥೬೧೫॥ ಅದಕ್ಕಾಗಿ ಈಗ ಕೇಳು ; ಅಂತಃಕರಣದಲ್ಲಿ ನನ್ನ ಧ್ಯಾನವು ನಟ್ಟಿಕೊಳ್ಳದಿದ್ದರೆ ಬೇರೆ ಇನ್ನೊಂದು ಸುಲಭ ಉಪಾಯದ ಮಾರ್ಗವನ್ನು ಹೇಳುವೆನು. ಅದೇನೆಂದರೆ ನನ್ನ ನಾಮಸಂಕೀರ್ತನೆಯನ್ನು ಮಾಡಬೇಕು. ಹರಿನಾಮದಿಂದ ವಿಘ್ನಗಳ ನಾಶವಾಗುವುದು ॥೬೧೬॥ ಎಲ್ಲಿ ಹರಿನಾಮದ ಘೋಷವು ಆರಂಭವಾಗುವುದೋ, ಅಲ್ಲಿ ವಿಘ್ನಗಳಿಗೆ ಬರಲು ದಾರಿಯೇ ಸಿಗುವುದಿಲ್ಲ. ಹರಿನಾಮದಿಂದ ಮಹಾಮಹಾ ವಿಘ್ನಗಳ ಆರ್ಭಟವು ಪರಿಪೂರ್ಣವಾಗಿ ಇಲ್ಲದಾಗಿ ಬಿಡುವುವು ॥೬೧೭॥ ಯಾರ ಮುಖದಲ್ಲಿ ನನ್ನ ನಾಮದ ಕೀರ್ತಿಯು ಅಖಂಡವಾಗಿ ಇರುವುದೋ, ಆತನನ್ನು ಕಂಡು ವಿಘ್ನಗಳು ದೂರ ಓಡಿ ಹೋಗುವುವು. ಸರ್ವ ಉಪಸರ್ಗ ಅಂದರೆ ಪೀಡೆಗಳು ಸಮೂಲವಾಗಿ ನಾಶವಾಗಿ ಬಿಡುವುವು ॥೬೧೮॥ ನನ್ನ ನಾಮದ ಗರ್ಜನೆಯು ಮಹಾಪಾತಕಗಳ ರಾಶಿ ರಾಶಿಗಳನ್ನೇ ದೂರ ಮಾಡುವುದು. ವಿಘ್ನಗಳಿಗೆ ಸ್ವಲ್ಪವೂ ಕೂಡ ಸ್ಥಳವನ್ನು ಉಳಿಸಿಕೊಡುವುದಿಲ್ಲ. ಇಷ್ಟೊಂದು ಸಾಮರ್ಥ್ಯವು ಹರಿನಾಮದಲ್ಲಿರುವುದು ॥೬೧೯॥ ಅಕಸ್ಮಾತ್ತಾಗಿ, ಅಪ್ಪಿತಪ್ಪಿ ನನ್ನ ನಾಮವನ್ನು ಉಚ್ಚರಿಸಿದರೆ ಸರ್ವ ಪಾಪಗಳ ನಾಶವಾಗುವುದು. ಅಂದಮೇಲೆ ಪ್ರೇಮದಿಂದ ಅಖಂಡವಾಗಿ ಗುಣಾನುವಾದಗಳನ್ನು ಹಾಡುತ್ತಿದ್ದರೆ ಅಲ್ಲಿ ವಿಘ್ನಗಳ ವಾರ್ತೆಯೂ ಕೂಡ ಉಳಿಯುವುದಿಲ್ಲ ॥೬೨೦॥ ಯಾರ ವಾಣಿಯು ನನ್ನ ನಾಮದ ಪವಾಡಗಳನ್ನು ಅಖಂಡವಾಗಿ ಹಾಡುತ್ತಿರುವುದೋ ಆತನ ಎದುರಿನಲ್ಲಿ ವಿಘ್ನಗಳು ಬರುವುದೇ ಇಲ್ಲ. ಸೂರ್ಯನ ಎದುರಿನಲ್ಲಿ ಕತ್ತಲವು ನಿಲ್ಲುವುದೇ ಇಲ್ಲ ॥೬೨೧॥ ಹರಿನಾಮವನ್ನು ಬಿಟ್ಟು ಯಾರ ಮುಖವು ಒಂದು ಕ್ಷಣವೂ ಕೂಡ ಖಾಲೀ ಇರುವುದಿಲ್ಲವೋ, ಆತನು ಪತಂಗಕ್ಕೆ ಅಗ್ನಿಯು ಸುಟ್ಟು ಬೂದಿ ಮಾಡುವಂತೆ ಮಹಾವಿಘ್ನಗಳನ್ನು ಭಸ್ಮ ಮಾಡುವನು ॥೬೨೨॥ ನಾಮಕೀರ್ತಿಯು ಇದು ಅತಿಶಯವಾಗಿ ಶ್ರೇಷ್ಠವಾಗಿರುವುದು. ವಿಶ್ವಾಸಪೂರ್ವಕವಾಗಿ ಮಾನ್ಯ ಮಾಡಿದ ನಂತರ ಅದು ಮುಖದಲ್ಲಿ ಹೇಗೆ ಉಳಿದುಕೊಳ್ಳುವುದು? ಅದಕ್ಕಾಗಿ ಏನು ಮಾಡಬೇಕಾದೀತು? ಹೀಗೆಂದು ನೀನು ಕೇಳಬಹುದು ॥೬೨೩॥ ಮುಖದಲ್ಲಿ ನಾಮವು ಸ್ಥಿರಗೊಳ್ಳುವುದಕ್ಕಾಗಿ ಸಾಧು ಸಂತರ ಸೇವೆಯನ್ನು ಮನೋಭಾವದಿಂದ ಮಾಡಬೇಕು. ಸಂತರ ಸೇವೆಯಲ್ಲಿ ಜೀವಭಾವದಿಂದ ಶ್ರದ್ಧೆಯನ್ನಿಡಬೇಕು. ಆಗ ಅಲ್ಲಿ ಮಾತ್ರ ವಿಘ್ನಗಳು ಪ್ರವೇಶವನ್ನು ಮಾಡಲು ಸಾಧ್ಯವಾಗುವುದಿಲ್ಲ ॥೬೨೪॥

ಸದ್ಭಾವೇ ಧರಿಲ್ಯಾ ಸತ್ಸಂಗತೀ । ತ್ಯಾ ಸಂಗಾಚಿಯೇ ನಿಜಸ್ಥಿತೀ । ಮುಖೀ ಠಸಾವೇ ನಾಮಕೀರ್ತೀ । ವಿಕಲ್ಪ ಚಿತ್ತೀ ಸ್ಫುರೇನಾ ॥೬೨೫॥ ಮುಖೀ ಹರಿನಾಮಾಚೀ ಗೋಡೀ । ಸಂತಸೇವೇಚೀ ಅತಿ ಆವಡೀ । ತಯಾಚೀ ಗಾ ಪ್ರತಾಪಪ್ರೌಢೀ । ಉಪಸರ್ಗಕೋಡೀ ನಿರ್ದಳೀ ॥೬೨೬॥ ಸಾಧಕಾಂಸೀ ಪಾಠಿರಾಖಾ । ಸಂತ ಝಾಲಿಯಾ ನಿಜಸಖಾ । ತೈ ಮಹಾವಿಘ್ನಾಂಚಿಯಾ ಮುಖಾ । ವಿಭಾಂಡೀ ದೇಖಾ ಕ್ಷಣಾರ್ಧೇ ॥೬೨೭॥ ಸೇವಿತೀ ಸಾಧೂಚೇ ಚಣರೋದಕ । ಅತಿಶುದ್ಧ ಹೋತೀ ಸಾಧಕ । ತೇಣೇ ಶುದ್ಧತ್ವೇ ಮಹಾದೋಖ । ಸಮೂಳ ದೇಖ ನಿರ್ದಳೀ ॥೬೨೮॥ ಸಾಧೂಂಚ್ಯಾ ಚರಣತೀರ್ಥಾಪಾಸೀ । ಸಕಲ ತೀರ್ಥೇ ಯೇತೀ ಶುದ್ಧತ್ವಾಸೀ । ಭಾವೇ ಸೇವಿತಾ ತ್ಯಾ ತೀರ್ಥಾಸೀ । ತೇ ಉಪಸರ್ಗಾಸೀ ನಾಗವತೀ ॥೬೨೯॥ ವಂದಿತಾ ಸಾಧುಚರಣರಜ । ಸಾಧಕಾಂಚೇ ಸಿದ್ಧ ಹೋಯ ಕಾಜ । ನಿರ್ದಳೂನಿ ವಿಘ್ನಾಂಚೇ ಬೀಜ । ಸ್ವಾನಂದ ನಿಜ ಸ್ವಯೇ ಭೋಗಿತೀ ॥೬೩೦॥ ನಿಜಭಾಗ್ಯಗತೀ ಅವಚಿತಾ । ಸಂತಚರಣರೇಣು ಪಡಲ್ಯಾ ಮಾಥಾ । ತೋ ಕಳಿಕಾಳಾತೇ ಹಾಣೇ ಲಾಥಾ । ತೇಥ ವಿಘ್ನಾಂಚೀ ಕಥಾ ತೇ ಕೋಣ॥೬೩೧॥ ನಿಧಡಾ ಶೂರ ನಿಜಬಳೇಸೀ । ಧುರಾ ನಿಜಶಸ್ತ್ರ ದೇಊನಿ ತ್ಯಾಸೀ । ಯುದ್ಧೀ ಥಾಪಟಲಿಯಾ ಪಾಠೀಸೀ । ತೋ ವಿಭಾಂಡೀ ಪರಾಂಸೀ ತೇಣೇ ಉಲ್ಹಾಸೇ ॥೬೩೨॥ ತೇವೀ ಸದ್ಭಾವೇ ಸತ್ಸಂಗತೀ । ಮುಖೀ ಅಖಂಡ ನಾಮಕೀರ್ತೀ । ಭಾವೇ ಕರಿತಾ ಸಂತಾಂಚೀ ಭಕ್ತೀ । ಮಹಾಬಾಧಾ ನಿರ್ದಳಿತೀ ಸಾಧಕ ॥೬೩೩॥ ಕೀರ್ತಿ ಭಕ್ತಿ ಸತ್ಸಂಗತೀ । ಹೇ ತ್ರಿವೇಣೀ ಲಾಭೇ ಜ್ಯಾಪ್ರತೀ । ತ್ಯಾಸೀ ಉಪಸರ್ಗ ನಾತಳತೀ । ಪಾವನ ತ್ರಿಜಗತೀ ತ್ಯಾಚೇನೀ ॥೬೩೪॥ ಮಾಝೀ ಭಕ್ತಿ ಆಣಿ ನಾಮಕೀರ್ತೀ । ಯಾಂಚೀ ಜನನೀ ಸತ್ಸಂಗತೀ । ಜೋ ಸತ್ಸಂಗ ಜೋಡಲ್ಯಾ ಹಾತೀ । ವಿಘ್ನೇ ನ ಬಾಧಿತೀ ಸಾಧಕಾ ॥೬೩೫॥ ಯೋಗ ಯಾಗ ಆಸನ ಧ್ಯಾನ । ತಪ ಮಂತ್ರ ಔಷಧೀ ಜಾಣ । ಸಾಧಿತಾ ನ ತುಟೇ ದೇಹಾಭಿಮಾನ । ತೋ ಸತ್ಸಂಗ ಜಾಣ ನಿರ್ದಳೀ ॥೬೩೬॥ ಯೋಗಾದಿ ಸರ್ವ ಉಪಾಯೀ ಜಾಣ । ನಿವಾರಿತೀ ಅಲ್ಪ ವಿಘ್ನ । ವಿಘ್ನಾಂಚಾ ರಾಜಾ ದೇಹಾಭಿಮಾನ । ತೋ ತ್ಯಾಂಚೇನಿ ಜಾಣ ಢಳೇನಾ ॥೬೩೭॥ ತೋ ದುರ್ಧರ ದೇಹಾಭಿಮಾನ । ಜ್ಞಾತೇಪಣೇ ಅತಿದಾರುಣ । ಯಾಚೇ ಸಮೂಳ ನಿರ್ದಳಣ । ಸತ್ಸಂಗ ಜಾಣ ಸ್ವಯೇ ಕರೀ ॥೬೩೮॥

ಸದ್‌ಭಾವನೆಯಿಂದ ಸತ್‌ಸಂಗತಿಯನ್ನು ಹಿಡಿಯಲು ಆಗ ಆ ಸಂಗತಿಯ ಯೋಗದಿಂದ ಮುಖದಲ್ಲಿ ನಾಮಕೀರ್ತಿಯು ನಟ್ಟಿಕೊಳ್ಳುವುದು ಮತ್ತು ಚಿತ್ತದಲ್ಲಿ ಯಾವುದೇ ಪ್ರಕಾರದ ವಿಕಲ್ಪಗಳು ನಿರ್ಮಾಣವಾಗುವುದಿಲ್ಲ ॥೬೨೫॥ ಮುಖದಲ್ಲಿ ಹರಿನಾಮದ ಪ್ರೇಮವು ಮತ್ತು ಮನಸ್ಸಿನಲ್ಲಿ ಸಂತ ಸೇವೆಯ ಆನಂದವು ಇದ್ದರೆ, ಆ ಪ್ರಭಾವದಿಂದ ಕೋಟ್ಯಾವಧಿ ವಿಘ್ನಗಳು ಸಹಜವಾಗಿಯೇ ನಾಶವಾಗುವುವು ॥೬೨೬॥ ಸಾಧಕರನ್ನು ಬೆನ್ನಿಗೆ ಹಾಕಿಕೊಂಡು ರಕ್ಷಿಸುವ ಸತ್ಸಂಗವು ನಮ್ಮ ಸಖನಾಗಲು ಆಗ ಅದು ಕ್ಷಣಾರ್ಧದಲ್ಲಿ ಮಹಾವಿಘ್ನಗಳ ಮುಖಗಳನ್ನು ಒಡೆದು ಚೆಲ್ಲುವುದು ॥೬೨೭॥ ಸಾಧುಗಳ ಚರಣ ತೀರ್ಥದ ಸೇವನೆಯನ್ನು ಮಾಡಲು, ಇದರಿಂದ ಸಾಧಕನು ಅತ್ಯಂತ ಶುದ್ಧನಾಗುವನು. ಈ ಶುದ್ಧತ್ವದಿಂದ ಮಹಾದೋಷಗಳು ಇಲ್ಲದಾಗಿ ಬಿಡುವುವು ॥೬೨೮॥ ಸಾಧುಗಳವರ ಚರಣತೀರ್ಥದಲ್ಲಿ ತೀರ್ಥಗಳು ಶುದ್ಧವಾಗಲು ಬರುತ್ತಿರುವುವು. ಅದಕ್ಕಾಗಿ ಆ ತೀರ್ಥವನ್ನು ಭಕ್ತಿಪೂರ್ವಕವಾಗಿ ಪ್ರಾಶನೆಯನ್ನು ಮಾಡಿದರೆ ಸರ್ವ ಪ್ರಕಾರದ ವಿಘ್ನಗಳು ಇಲ್ಲದಾಗುವುದು ॥೬೨೯॥ ಸಾಧುಸಂತರ ಚರಣರಜವನ್ನು ವಂದಿಸಲು ಆದರಿಂದ ಕಾರ್ಯಸಿದ್ಧಿಯಾಗುತ್ತಿರುವುದು. ವಿಘ್ನಗಳ ಬೀಜವೇ ನಷ್ಟವಾಗಿ ಸಾಧಕನು ಸ್ವತಃ ಆತ್ಮಾನಂದವನ್ನು ಭೋಗಿಸುವನು ॥೬೩೦॥ ನಿಜಭಾಗ್ಯದ ಗತಿಯಿಂದ ಸಾಧುಸಂತರ ಚರಣರಜವು ಸಹಜವಾಗಿ ಮಸ್ತಕಕ್ಕೆ ಬೀಳಲು, ಆಗ ಆ ಮನುಷ್ಯನು ಕಲಿಕಾಲನಿಗೂ ಕೂಡ ಕಾಲಿನಿಂದ ಒದೆಯುವಷ್ಟು ಸಮರ್ಥನಾಗುವನು. ಅಂದಮೇಲೆ ಅಲ್ಲಿ ವಿಘ್ನಗಳ ಯಾವ ಕಥೆ? ॥೬೩೧॥ ಶೂರ, ಪರಾಕ್ರಮಿಯಾದ ಸೈನಿಕನ ಕೈಯಲ್ಲಿ ಶಸ್ತ್ರವನ್ನು ಕೊಟ್ಟು ಆತನಿಗೆ ಮುಂದಾಳತ್ವವನ್ನು ಮಾಡಿ ಬೆನ್ನು ಚಪ್ಪರಿಸಿ ಹುರಿದುಂಬಿಸಿ ಯುದ್ಧಕ್ಕೆ ಕಳಿಸಲು, ಆಗ ಆತನು ಅಧಿಕವಾದ ಶೌರ್ಯದಿಂದ ಶತ್ರುಗಳನ್ನು ನಾಶಪಡಿಸುವನು ॥೬೩೨॥ ಅದರಂತೆ ಸದ್‌ಭಾವನೆಯಿಂದ ಸತ್ಸಂಗತಿಯನ್ನು ಹಿಡಿದು ಮುಖದಿಂದ ಅಖಂಡ ನಾಮಸ್ಮರಣೆಯನ್ನು ಮಾಡುತ್ತ ಹಾಗೂ ಶ್ರದ್ಧಾಯುಕ್ತವಾಗಿ ಸಂತರ ಸೇವೆಯನ್ನು ಸಾಧಿಸುತ್ತಿದ್ದರೆ ಆದರಿಂದ ಸಾಧಕನು ಮಹಾ ವಿಘ್ನಗಳನ್ನು ನಾಶಪಡಿಸಲು ಸಮರ್ಥನಾಗುವನು ॥೬೩೩॥ ನಾಮಕೀರ್ತೀ, ಭಕ್ತೀ, ಮತ್ತು ಸತ್ಸಂಗತಿ ಎಂಬ ಈ ತ್ರಿವೇಣಿಸಂಗಮದಲ್ಲಿ ಯಾರು ಸ್ನಾನವನ್ನು ಮಾಡುವರೋ ಅವರಿಗೆ ವಿಘ್ನಗಳು ಸ್ಪರ್ಶ ಮಾಡಲಾರವು. ಇವರಿಂದ ತ್ರಿಭುವನವು ಪಾವನವಾಗುವುದು ॥೬೩೪॥ ನನ್ನ ಭಕ್ತಿ ಮತ್ತು ನಾಮಕೀರ್ತಿ ಇವರ ತಾಯಿ ಸತ್ಸಂಗತಿಯಾಗಿರುವುದು. ಇಂತಹ ಅಲೌಕಿಕವಾದ ಸತ್ಸಂಗವು ಪ್ರಾಪ್ತವಾಗಲು ವಿಘ್ನಗಳು ಸಾಧಕರಿಗೆ ಬಾಧಿಸಲಾರವು ॥೬೩೫॥ ಯೋಗ, ಯಾಗ, ಆಸನ, ಧ್ಯಾನ, ತಪ, ಮಂತ್ರ, ಔಷಧಗಳನ್ನು ಸಾಧಿಸಿದರೂ ಸಹ ದೇಹದ ಅಭಿಮಾನವು ಬಿಡುವುದಿಲ್ಲ. ಆದರೆ ಸತ್ಸಂಗತಿಯಿಂದ ಮಾತ್ರ ದೇಹದ ಅಭಿಮಾನವು ಪರಿಪೂರ್ಣವಾಗಿ ಇಲ್ಲದಾಗುವುದು ॥೬೩೬॥ ಯೋಗಾದಿಕ ಸರ್ವ ಉಪಾಯಗಳಿಂದ ಸಣ್ಣಪುಟ್ಟ ವಿಘ್ನಗಳು ಮಾತ್ರ ನಿವಾರಣೆಯಾಗುವುವು. ಆದರೆ ಸರ್ವ ವಿಘ್ನಗಳ ರಾಜನಾಗಿರುವ ದೇಹಾಭಿಮಾನವನ್ನು ಆ ಉಪಾಯಗಳಿಂದ ನಿವಾರಿಸಲು ಆಗುವುದಿಲ್ಲ ॥೬೩೭॥ ದೇಹದ ಅಭಿಮಾನವು ಇದು ಅತ್ಯಂತ ದುರ್ಧರವಾಗಿರುವುದು. ಇದು ವಿದ್ವತ್ತೆಯ ಗರ್ವದಿಂದ ಇನ್ನೂ ಅಧಿಕವಾಗಿಯೇ ಭಯಂಕರವಾಗುವುದು. ಇದರ ಸಮೂಲ ನಾಶವು ಕೇವಲ ಸತ್ಸಂಗದಿಂದ ಮಾತ್ರ ಸಾಧ್ಯವಾಗುವುದು ॥೬೩೮॥

ನೇಣಪಣಾಚಾ ಅಭಿಮಾನ । ತತ್ಕಾಳ ಜಾಯ ನಿಘೋನ । ತೈಸಾ ನವ್ಹೇ ಜ್ಞಾನಾಭಿಮಾನ । ಚಾವಿರಾ ಜಾಣ ಜಾಣಿವಾ ॥೬೪೯॥ ತ್ಯಾಹೀ ಅಭಿಮಾನಾಚೇ ನಿರ್ದಳಣ । ಸತ್ಸಂಗ ನಿಜಾಂಗೇ ಕರೀ ಆಪಣ । ಯಾಲಾಗೀ ಸತ್ಸಂಗಾಸಮಾನ । ಆನ ಸಾಧನ ಅಸೇನಾ ॥೬೫೦॥ ಏಕಾಚೇನಿ ನಿಜಮತೇ । ಅಜರಾಮರ ಕರಾವೇ ದೇಹಾತೇ । ತೇಹೀ ಯೋಗಾದಿ ಸಾಧನಾಂತೇ । ಮೂರ್ಖಮತೇ ಸಾಧಿತೀ ॥೬೫೧॥

ಕೇಚಿದ್ದೇಹಮಿಮಂ ಧೀರಾಃ ಸುಕಲ್ಪಂ ವಯಸಿ ಸ್ಥಿರಮ್ । ವಿಧಾಯ ವಿವಿಧೋಪಾಯೈರಥ ಯುಜಂತಿ ಸಿದ್ಧಯೇ ॥೫೧॥

ಅರ್ಥ:- ಕೆಲವು ಬುದ್ಧಿವಂತ ಸಾಧಕರು ಯೋಗ ಹಾಗೂ ಅನೇಕ ಬೇರೆ ಬೇರೆ ಉಪಾಯಗಳಿಂದ ಶರೀರಕ್ಕೆ ಮುಪ್ಪು, ರೋಗಗಳಿಂದ ರಹಿತ ಮಾಡಿ, ತಾರುಣ್ಯದಲ್ಲಿಯೇ ಸ್ಥಿರಗೊಳಿಸಿ ನಿರ್ದ್ವಂದ್ವ ಪ್ರವೇಶ ಇತ್ಯಾದಿ ಸಿದ್ಧಿಗಾಗಿ ಯೋಗವನ್ನು ಅನುಷ್ಠಾನ ಮಾಡುವರು.

ದೇಹೋ ತಿತುಕಾ ಪ್ರಾರಬ್ಧಾಧೀನ । ತ್ಯಾಸೀ ಪ್ರಾರಬ್ಧೇ ಜನ್ಮ ಮರಣ । ತ್ಯಾ ದೇಹಾಸೀ ಅಜರಾಮರಣ । ಪಾಮರಜನ ಕರೂ ಪಹತೀ ॥೬೫೨॥ ತ್ಯಾ ಪ್ರಾರಬ್ಧಾಚೇ ಸೂತ್ರ ಪೂರ್ಣ । ಸರ್ವದಾ ಅಸೇ ಕಾಳಾಧೀನ । ಯಾಲಾಗೀ ಕಾಳಕೃತ ಜನ್ಮ ಮರಣ । ಸರ್ವಾಸೀ ಜಾಣ ಸರ್ವದಾ ॥೬೫೩॥ ಚೌದಾ ಕಲ್ಪ ಆಯುಷ್ಯ ಜೋಡೀ । ತ್ಯಾ ಮಾರ್ಕಂಡೇಯಾಸೀ ಕಾಳ ಝೋಡೀ । ಯುಗಾಂತೀ ಲೋಮ ಝಡೇ ಪರವಡೀ । ತ್ಯಾ ಲೋಮಹರ್ಷಾಚೀ ನರಡೀ ಮುರಡಿಜೇ ಕಾಳೇ ॥೬೫೪॥ ಚತುರ್ಯುಗಸಹಸ್ರ ಸಂಖ್ಯೇಸೀ । ತೋ ದಿವಸ ಗಣಿಜೇ ಬ್ರಹ್ಮಾಸೀ । ಜೋ ಸ್ರಜಿತಾ ಸಕಳ ಸೃಷ್ಟೀಸೀ । ತ್ಯಾಸೀ ಕಾಳ ಗ್ರಾಸೀ ಸ್ವಬಳೇ ॥೬೫೫॥ ಸ್ರಜಿತ್ಯಾ ಬ್ರಹ್ಮ್ಯಾಸೀ ಕಾಳ ಪಿಳೀ । ಪಾಳಿತ್ಯಾ ವಿಷ್ಣೂತೇ ಕಾಳ ಗಿಳೀ । ಪ್ರಲಯರುದ್ರಾಚೀಹೀ ಹೋಳೀ । ಕಾಳ ಮಹಾಬಳೀ ಸ್ವಯೇ ಕರೀ ॥೬೫೬॥ ಯಾಪರೀ ಕಾಳ ಅತಿ ದುರ್ಧರ । ನೇಣೋನಿ ಅವಿವೇಕೀ ನರ । ವಾಂಛಿತೀ ಕಾಳಜಯೋ ಪಾಮರ । ದೇಹ ಅಜರಾಮರ ಕರಾವಯಾ ॥೬೫೭॥ ಜೇ ಜೇ ದಿಸೇ ತೇ ತೇ ನಾಸೇ । ಹೇ ಕಾಳಸತ್ತಾ ಜಗಾಸೀ ಭಾಸೇ । ತರೀ ಅಜರಾಮರತ್ವಾಚೇ ಪಿಸೇ । ಮೂರ್ಖ ಅತಿಪ್ರಯಾಸೇ ವಾಂಛಿತೀ ॥೬೫೮॥ ಥಿಲ್ಲರೀಂಚಾ ತರಂಗ ಜಾಣ । ವಾಂಛೀ ಅಜರಾಮರಪಣ । ತಂವ ಥಿಲ್ಲರಾಸಚಿ ಯೇ ಮರಣ । ತೇಥ ವಾಂಚವೀ ಕೋಣ ತರಂಗಾ ॥೬೫೯॥ ತೇವೀ ಸಂಸಾರಚಿ ನಶ್ವರ । ತ್ಯಾಂತೀಲ ದೇಹ ಅಜರಾಮರ । ವಾಂಛಿತೀ ಪಾಮರ । ಉಪಾಯೀ ಅಪಾರ ಶಿಣೋನಿ ॥೬೬೦॥

ಅಜ್ಞಾನಿ ಜನರ ಅಭಿಮಾನವು ತತ್ಕಾಲದಲ್ಲಿ ಹೊರಟು ಹೋಗುವುದು. ಆದರೆ ಜ್ಞಾನೀ ಜನರ ಅಭಿಮಾನವು ಹೀಗಿರುವುದಿಲ್ಲ. ಅದು ವಿದ್ಯೆಯ ಗರ್ವದಿಂದ ಮಹಾದುಷ್ಟವಾಗಿರುವುದು ॥೬೪೯॥ ಹೀಗಿದ್ದರೂ ಕೂಡ ಯಾವ ಈ ಸತ್ಸಂಗವು ಇಂತಹ ಅಭಿಮಾನದ ನಾಶವನ್ನು ಮಾಡಬಲ್ಲದು. ಆದ್ದರಿಂದಲೇ ಸತ್ಸಂಗ ಸಮಾನವಾದ ಅನ್ಯ ಸಾಧನವು ಇರುವುದಿಲ್ಲ ॥೬೫೦॥ ಕೆಲವು ಜನರ ಮತವು ಹೀಗಿರುವುದು; ತಮ್ಮ ದೇಹವನ್ನು ಅಜರಾಮರವನ್ನಾಗಿ ಮಾಡಬೇಕು. ಈ ಮೂರ್ಖರ ಮತಪ್ರಕಾರವಾಗಿ ಕೆಲವರು ಯೋಗಾದಿಕ ಸಾಧನೆಗಳ ಆಚರಣೆಯನ್ನು ಪ್ರಾರಂಭಮಾಡುವರು ॥೬೫೧॥

ಯಾವ ಈ ದೇಹವು ಪರಿಪೂರ್ಣವಾಗಿ ಪ್ರಾರಬ್ಧಾಧೀನವಾಗಿರುವುದು. ಇದಕ್ಕೆ ಪ್ರಾರಬ್ಧದಿಂದಲೇ ಜನ್ಮ ಮರಣವಾಗುತ್ತಿರುವುದು. ಹೀಗಿದ್ದ ಮೇಲೆ ಕೆಲವು ಪಾಮರರು ದೇಹಕ್ಕೆ ಅಜರಾಮರವನ್ನಾಗಿ ಮಾಡುವ ಪ್ರಯತ್ನವನ್ನು ಮಾಡುತ್ತಿರುವರು ॥೬೫೨॥ ಪ್ರಾರಬ್ಧದ ಸರ್ವ ಸೂತ್ರವು ಕಾಲನ ಆಧೀನವಾಗಿರುವುದು. ಆದ್ದರಿಂದ ಕಾಲನು ಮಾಡಿಟ್ಟಿರುವ ಜನ್ಮ ಮತ್ತು ಮರಣ ಇದು ನಿತ್ಯವೂ ಸರ್ವರಿಗೂ ಲಭಿಸಿರುವುದು ॥೬೫೩॥ ಹದಿನಾಲ್ಕು ಕಲ್ಪದವರೆಗೆ ಆಯುಷ್ಯ ಪಡೆದಿರುವ ಮಾರ್ಕಂಡೇಯನಿಗೆ ಕೊನೆಯಲ್ಲಿ ಕಾಲನು ಕೊನೆಗಾಣಿಸಿದನು. ಪ್ರತಿಯೊಂದು ಯುಗ ಮುಗಿದಾಗ ಒಂದು ರೋಮವು ಉದರಬೇಕು. ಅಂತಹ ಲೋಮಹರ್ಷನ ಕುತ್ತಿಗೆಯನ್ನು ಕಾಲನು ಹಿಚುಕಿ ಒಗೆದನು ॥೬೫೪॥ ಬ್ರಹ್ಮದೇವನ ಒಂದು ದಿವಸ ಮುಗಿಯಬೇಕಾದರೆ ನಾಲ್ಕು ಸಾವಿರ ಯುಗಗಳು ಮುಗಿಯಬೇಕಾಗುವುದು. ಈತನು ಸರ್ವ ಸೃಷ್ಟಿಯನ್ನು ಉತ್ಪನ್ನ ಮಾಡುವವನಾಗಿರುವನು. ಹೀಗಿದ್ದರೂ ಕೂಡ ಕಾಲನು ತನ್ನ ಸಾಮರ್ಥ್ಯದಿಂದ ಆತನನ್ನು ನುಂಗಿಬಿಡುವನು ॥೬೫೫॥ ಸೃಷ್ಟಿಕರ್ತನಾಗಿರುವ ಬ್ರಹ್ಮದೇವನಿಗೆ ಕಾಲನು ಹಿಂಡಿ ಒಗೆಯುವನು ಪಾಲನಕರ್ತನಾಗಿರುವ ವಿಷ್ಣುವಿಗೆ ನುಂಗಿಬಿಡುವನು, ಹಾಗೂ ಪ್ರಳಯಕರ್ತನಾಗಿರುವ ರುದ್ರನಿಗೆ ಈ ಯಾವ ಪ್ರಬಲನಾಗಿರುವ ಕಾಲನು ಸುಟ್ಟು ಭಸ್ಮವನ್ನಾಗಿ ಮಾಡುವನು ॥೬೫೬॥ ಈ ಪ್ರಕಾರವಾಗಿ ಕಾಲನು ಅತ್ಯಂತ ದುರ್ಧರನಾಗಿರುವನು. ಆದರೆ ಇದನ್ನು ತಿಳಿಯದೇ ಪಾಪ ! ಅವಿಚಾರೀ ಜನರು ತಮ್ಮ ದೇಹವನ್ನು ಅಜರಾಮರವನ್ನಾಗಿ ಮಾಡುವ ಪ್ರಯತ್ನದಲ್ಲಿ ಕಾಲನ ಮೇಲೆ ವಿಜಯವನ್ನು ಸಾಧಿಸಲು ಹವಣಿಸುತ್ತಿರುವರು ॥೬೫೭॥ ಯಾವ ಯಾವುದು ಕಣ್ಣಿಗೆ ಕಾಣುತ್ತಿರುವುದೋ, ಅದೆಲ್ಲವೂ ನಾಶವಾಗುವುದು. ಈ ಕಾಲಸತ್ತೆಯು ಜಗತ್ತಿಗೆ ಸ್ಪಷ್ಟವಾಗಿ ತೋರುತ್ತಿರುವುದು. ಹೀಗಿದ್ದರೂ ಕೂಡ ಮೂರ್ಖ ಜನರು ಅಜರಾಮರರಾಗುವ ಹುಚ್ಚುತನದಿಂದ ಅತಿ ಪ್ರಯಾಸಪಡುತ್ತಿರುವರು ॥೬೫೮॥ ಚಿಕ್ಕಮಡುವಿನಲ್ಲಿ ನಿಂತ ನೀರಿನ ತರಂಗಗಳು ತಾವು ಅಜರಾಮರರಾಗಬೇಕೆಂಬ ಬಯಕೆಯನ್ನು ಮಾಡುತ್ತಿರುವುವು. ಆದರೆ ಅಲ್ಲಿನ ನೀರು ಒಣಗಿ ಹೋಗಲು ಆಗ ಆ ತರಂಗಗಳಿಗೆ ಯಾರು ಕೇಳಬೇಕು? ॥೬೫೯॥ ಅದರಂತೆ ಮೂಲತಃ ಈ ಯಾವ ಸಂಸಾರವು ನಾಶಿವಂತವಾಗಿರುವುದು. ಅದರಲ್ಲಿನ ದೇಹವು ಅಜರಾಮರವಾಗಬೇಕೆಂಬ ಬಯಕೆಯನ್ನು ಪಾಮರರು ಮಾಡುತ್ತಿರುವರು. ಅದಕ್ಕಾಗಿ ಅವರು ಅಪಾರ ಕಷ್ಟಗಳನ್ನು ಸೋಸುತ್ತಿರುವರು ॥೬೬೦॥

ದೇಹ ಜಾಈಲ ತರೀ ಜಾವೋ । ಪರೀ ಜೀವ ಹಾ ಚಿರಂಜೀವ ರಾಹೋ । ತದರ್ಥ ಕೀಜೇ ಉಪಾವೋ । ತೈಸೇ ಅಮರತ್ವ ಪಹಾ ಹೋ ನರದೇಹಾ ॥೬೫೧॥ ದೇಹ ಕೇವಳ ನಶ್ವರ । ತ್ಯಾತೇ ಅವಿವೇಕೀ ಮಹಾಧೀರ । ಕರೂ ಮ್ಹಣತೀ ಅಜರಾಮರ । ಉಪಾಯೀ ಅಪಾರ ಶಿಣೋನೀ ॥೬೫೨॥ ಕೇವಳ ಕಾಳಾಚೇ ಖಾಜೇ ದೇಹೋ । ತೋ ಅಮರ ಕರಾವಯಾ ಪಹಾ ಹೋ । ಜೋ ಜೋ ಕೀಜೇ ಉಪಾವೋ । ತೋ ತೋ ಅಪಾವೋ ಸಾಧಕಾ ॥೬೫೩॥ ಏವಂ ಮೂಢತೇಚೇ ಭಾಗೀ । ದೇಹಾಚ್ಯಾ ಅಮರತ್ವಾಲಾಗೀ । ಶಿಣೋನಿ ಉಪಾಯೀ ಅನೇಗೀ । ಹಠಯೋಗೀ ನಾಗವಲೇ ॥೬೫೪॥ ಪರಕಾಯಾಪ್ರವೇಶಾರ್ಥ ಜಾಣ । ಶಿಣಲೇ ಸಾಧಿತಾ ಪ್ರಾಣಧಾರಣ । ಏವಂ ಧರಿತಾ ದೇಹಾಭಿಮಾನ । ಯೋಗೀ ಜನ ನಾಡಲೇ ॥೬೫೫॥ ದೇಹಾಚೇ ನಶ್ವರಪಣ । ಜಾಣೋನಿಯಾ ಜೇ ಸಜ್ಞಾನ । ತೇ ನ ಧರಿತೀ ದೇಹಾಭಿಮಾನ । ತೇಚಿ ನಿರೂಪಣ ಹರಿ ಸಾಂಗೇ ॥೬೫೬॥

ನ ಹಿ ತತ್ಕುಶಲಾದೃತ್ಯಂ ತದಾಯಾಸೋ ಹ್ಯಪಾರ್ಥಕಃ । ಅಂತಾವತ್ತ್ವಾಚ್ಛರೀರಸ್ಯ ಫಲಸ್ಯೇವ ವನಸ್ಪತೇಃ ॥೫೨॥

ಅರ್ಥ:- ದಿವ್ಯಜ್ಞಾನದಲ್ಲಿ ಕುಶಲರಾದವರು ಈ ಶಾರೀರಕ ಯೋಗ ಸಿದ್ಧಿಗೆ ಹೆಚ್ಚಿನ ಬೆಲೆಯನ್ನು ಕೊಡುವುದಿಲ್ಲ. ಇದಕ್ಕಾಗಿ ಮಾಡುವ ಪ್ರಯತ್ನವು ನಿಷ್ಫಯೋಜಕವೆಂದು ತಿಳಿದಿರುವರು. ವೃಕ್ಷಕ್ಕೆ ಹತ್ತಿರುವ ಫಲದಂತೆ ಶರೀರದ ನಾಶವು ನಿಶ್ಚಿತವಾಗಿರುವುದು.

ವಿಚಾರಿತಾ ಹಾ ಸಂಸಾರ । ಸಮೂಳ ಅವಘಾ ನಶ್ವರ । ತೇಥ ದೇಹಾಚಾ ಅಜರಾಮರ । ಜ್ಞಾತೇ ಆದರ ನ ಕರಿತೀ ॥೬೫೭॥ ದೇಹ ಅಜರಾಮರ ವಿಧೀ । ಜ್ಞಾತಾ ಸರ್ವಥಾ ನ ಘಾಲೀ ಬುದ್ಧೀ । ದೇಹೀ ಸಾಧಿಲ್ಯಾ ಜ್ಯಾ ಸಿದ್ಧೀ । ತ್ಯಾಹೀ ತ್ರಿಶುದ್ಧೀ ಬಾಧಿಕಾ ॥೬೫೮॥ ದೇಹ ತಾಪಲ್ಯಾ ಜ್ವರಾದಿ ತಾಪೇ । ತದರ್ಥ ಮರಣಭಯೇ ಕಾಂಪೇ । ತೇಥ ಶೀತಳ ಆಣಲ್ಯಾಹೀ ಸಾಕ್ಷೇಪೇ । ತೇಣೇಹೀ ರೂಪೇ ಮರಣಚಿ ॥೬೫೯॥ ಮಿಥ್ಯಾದೇಹೀಂಚಾ ದೇಹಾಭಿಮಾನ । ಸದಾ ಭೋಗವೀ ಜನ್ಮಮರಣ । ತೋ ಅಜರಾಮರ ಕರಿತಾ ಜಾಣ । ದೇಹಬಂಧನ ದೃಢ ಝಾಲೇ ॥೬೬೦॥ ಸಾಧೋನಿಯಾ ಯೋಗಸಾಧನ । ದೃಢ ಕೇಲೇ ದೇಹಬಂಧನ । ದೇಹೀಂಚ್ಯಾ ಸಿದ್ಧೀ ಭೋಗಿತಾ ಜಾಣ । ಅಧಃಪತನ ಚುಕೇನಾ ॥೬೬೧॥ ಹೋ ಕಾ ಜ್ಞಾನಾರ್ಥ ಯೋಗ ಸಾಧಿತಾ । ಪ್ರಸಂಗೇ ಸಿದ್ಧೀ ಆಲಿಯಾ ಹಾತಾ । ತ್ಯಾಹೀ ತ್ಯಾಗಾವ್ಯಾ ತತ್ತ್ವತಾ । ನಿಜಸ್ವಾರ್ಥಾಲಾಗೂನೀ ॥೬೬೨॥ ಜ್ಯಾಚೀ ಚಾಲ ರಾಯಾಪಾಶೀ । ಲಾಂಚ ಹಾತಾಯೇ ತಯಾಸೀ । ತೇಣೇಚಿ ಪಾವೇ ಅಪಮಾನಾಸೀ । ತೇವೀ ಸಾಧಕಾಸೀ ಘಾತಕಾ ಸಿದ್ಧೀ ॥೬೬೩॥

ದೇಹವು ಹೋದರೂ ಹೋಗಲಿ, ಆದರೆ ಜೀವವು ಮಾತ್ರ ಚಿರಂಜೀವಿಯಾಗಿರಲಿ. ಇದಕ್ಕಾಗಿ ಉಪಾಯವನ್ನು ಮಾಡಬೇಕು. ಇದರಂತೆಯೇ ಈ ನರದೇಹದ ಅಮರತ್ವವಾಗಿರುವುದು ॥೬೫೧॥ ದೇಹವು ಕೇವಲ ನಾಶಿವಂತವಾಗಿರಲು ಅದಕ್ಕೆ ಅವಿವೇಕಿ ಮಹಾಧೀರರು ಅನೇಕ ಪ್ರಕಾರದ ಕ್ಲೇಶಕಾರಕ ಉಪಾಯಗಳನ್ನು ಮಾಡಿ ಅಜರಾಮರವನ್ನಾಗಿ ಮಾಡುವ ಉಪಾಯಗಳನ್ನು ಮಾಡುತ್ತಿರುವರು ॥೬೫೨॥ ದೇಹವು ಇದು ಕೇವಲ ಕಾಲನ ಆಹಾರವಾಗಿರುವುದು. ಹೀಗಿರುತ್ತಿರಲು ಅದಕ್ಕೆ ಅಮರವನ್ನಾಗಿ ಮಾಡುವ ಯಾವ ಯಾವ ಉಪಾಯವನ್ನು ಮಾಡಿದರೂ ಅವೆಲ್ಲವೂ ಸಾಧಕನಿಗೆ ಅಪಾಯವಾಗಿಯೇ ಪರಿಣಮಿಸುವುವು ॥೬೫೩॥ ಈ ಪ್ರಕಾರವಾಗಿ ಮೂರ್ಖತನದಿಂದ ಅನೇಕ ಹಠಯೋಗಿಗಳು ದೇಹವನ್ನು ಅಮರವನ್ನಾಗಿ ಮಾಡಲು ಕಠಿಣವಾದ ಉಪಾಯಗಳನ್ನು ಮಾಡುತ್ತ ಮೋಸಕ್ಕೆ ಹೋಗಿರುವರು ॥೬೫೪॥ ಪರಕಾಯ ಪ್ರವೇಶವನ್ನು ಮಾಡುವ ಉದ್ದೇಶಕ್ಕಾಗಿ ಅನೇಕ ಜನರು ಪ್ರಾಣಧಾರಣೆಯನ್ನು ಮಾಡುತ್ತ ದಣಿದುಕೊಂಡರು. ತಾತ್ಪರ್ಯವೇನೆಂದರೆ ದೇಹದ ಅಭಿಮಾನವನ್ನು ಹಿಡಿದು ಯೋಗಿ ಜನರು ಮೋಸಕ್ಕೆ ಬಲಿಯಾಗಿರುವರು ॥೬೫೫॥ ಸಜ್ಞಾನಿ ಪುರುಷರು ಈ ಯಾವ ದೇಹವು ನಶ್ವರವಾಗಿದೆ ಎಂಬುವುದನ್ನು ಅರಿತುಕೊಂಡು ದೇಹದ ಅಭಿಮಾನವನ್ನು ಹಿಡಿಯಲಾರರು. ಶ್ರೀಹರಿಯು ಈ ವಿಷಯವನ್ನೇ ಕುರಿತು ಈಗ ನಿರೂಪಣೆಯನ್ನು ಮಾಡುತ್ತಿರುವನು ॥೬೫೬॥

ವಿಚಾರವನ್ನು ಮಾಡಿ ನೋಡಿದರೆ ಈ ಯಾವ ಪ್ರಪಂಚವು ಸಮೂಲವಾಗಿ ನಶ್ವರವಾಗಿರುವುದು. ಆದ್ದರಿಂದ ಜ್ಞಾನೀ ಪುರುಷರು ದೇಹದ ಅಮರತ್ವಕ್ಕೆ ಯಾವ ಮಹತ್ವವನ್ನೂ ಕೊಡಲಾರರು ॥೬೫೭॥ ಜ್ಞಾನಿಯಾದವರು ಈ ದೇಹಕ್ಕೆ ಅಜರಾಮರವನ್ನಾಗಿ ಮಾಡುವ ಯಾವ ಪ್ರಯತ್ನವನ್ನೂ ಕೂಡ ಮಾಡಲಾರರು. ಕಾರಣ ದೇಹಕ್ಕೆ ಪ್ರಾಪ್ತವಾಗುವ ಸಿದ್ಧಿಗಳು ಇವು ನಿಜವಾಗಿಯೂ ಬಾಧಕವಾಗಿರುವುವು ॥೬೫೮॥ ಜ್ವರಾದಿಕ ಯೋಗದಿಂದ ದೇಹವು ತಪ್ತಗೊಂಡು ಮರಣದ ಭಯದಿಂದ ನಡುಗಲಾರಂಭಿಸುವುದು. ಆಗ ಅದಕ್ಕೆ ಶೀತೋಪಚಾರವನ್ನು ಮಾಡಿದರೂ ಕೂಡ ಆಗಲೂ ಮರಣವೇ ಪ್ರಾಪ್ತವಾಗುವುದು ॥೬೫೯॥ ಈ ಯಾವ ಮಿಥ್ಯಾ ದೇಹದ ಅಭಿಮಾನವು ಇದು ಯಾವಾಗಲೂ ಜನ್ಮಮರಣವನ್ನು ಭೋಗಿಸಲು ಹಚ್ಚುವುದು. ಇಂತಹ ದೇಹಕ್ಕೆ ಅಜರಾಮರವನ್ನಾಗಿ ಮಾಡಿದರೆ ಅದರಿಂದ ದೇಹಬಂಧನೆಯು ದೃಢವಾಗುತ್ತಿರುವುದು ॥೬೬೦॥ ಯೋಗಸಾಧನೆಯನ್ನು ಮಾಡಿ ದೇಹಬಂಧನವನ್ನು ದೃಢೀಕರಿಸಿದರೂ ಸಹ ಆ ದೇಹದ ಸಿದ್ಧಿಗಳನ್ನು ಭೋಗಿಸಿದರೆ ಕೊನೆಗೆ ಅಧಃಪಾತವು ತಪ್ಪುವುದಿಲ್ಲ ॥೬೬೧॥ ಆದ್ದರಿಂದ ಜ್ಞಾನಪ್ರಾಪ್ತಿಗಾಗಿ ಯೋಗ ಸಾಧನೆಯನ್ನು ಮಾಡುತ್ತಿದ್ದಾಗ ಪ್ರಸಂಗಾನುಸಾರವಾಗಿ ಸಿದ್ಧಿಗಳು ಪ್ರಾಪ್ತವಾದರೂ ಕೂಡ ತಮ್ಮ ಕಲ್ಯಾಣಕ್ಕಾಗಿ ಅವುಗಳನ್ನು ತ್ಯಜಿಸಬೇಕು ॥೬೬೨॥ ರಾಜನ ಸಮೀಪದಲ್ಲಿ ಯಾರ ವರ್ತನೆಯು ಇರುವುದೋ ಅವನು ಲಂಚವನ್ನು ತಿನ್ನುತ್ತಿರುವನು. ಗೊತ್ತಾದಾಗ ಅವನ ಅಪಮಾನವಾಗುವುದು. ಅದರಂತೆ ಸಾಧಕನಿಗೆ ಸಿದ್ಧಿಗಳು ಘಾತಕವಾಗಿರುವುವು ॥೬೬೩॥

ವೃಕ್ಷಾಸೀ ಮೋಡೂನಿ ಆಲಿಯಾ ಫಳೇ । ತ್ಯಾ ಫಳಾಸೀ ವೃಕ್ಷ ನಾತಳೇ । ತೇವೀ ಆಲಿಯಾ ಸಿದ್ಧೀಂಚೇ ಸೋಹಳೇ । ವೈರಾಗ್ಯಬಳೇ ತ್ಯಾಗಾವೇ ।।೬೬೪।। ಕೋರಡೇನಿ ವೈರಾಗ್ಯಬಳೇ । ತ್ಯಾಗ ಕೀಜೇ ತೋ ಆಡಖಳೇ । ತ್ಯಾಗ ವಿವೇಕವೈರಾಗ್ಯಮೇಳೇ । ತೈ ಸಿದ್ಧೀಚೇ ಸೋಹಳೇ ತೃಣಪ್ರಾಯ ।।೬೬೫।। ಆಂಧಳೇ ಹಾತಿರೂ ಮಾತಲೇ । ಪತನ ನ ದೇಖೇ ಆಪುಲೇ । ತೇವೀ ಅವಿವೇಕೇ ತ್ಯಾಗ ಕೇಲೇ । ತೇ ತೇ ಗೇಲೇ ಅಧಃಪಾತಾ ।।೬೬೬।। ಮೂಳೀ ದೇಹಚಿ ನಶ್ವರ ಏಥ । ತೇಥೀಂಚ್ಯಾ ಸಿದ್ಧೀ ಕಾಯ ಶಾಶ್ವತ । ಐಸೇ ವಿವೇಕವೈರಾಗ್ಯಯುಕ್ತ । ಹೋತೀ ಅಲಿಪ್ತ ದೇಹಭೋಗಾ ।।೬೬೭।। ಏಥ ದೇಹ ತಿತುಕಾ ಅನಿತ್ಯ । ಆತ್ಮಾ ಏಕ ನಿತ್ಯ ಸತ್ಯ । ಹೇ ಜಾಣೋನಿ ವಿವೇಕಯುಕ್ತ । ಜಡಲೇ ನಿಶ್ಚಿತ ಆತ್ಮಾಭ್ಯಾಸೀ ।।೬೬೮।।

ಯೋಗಂ ನಿಷೇವತೋ ನಿತ್ಯಂ ಕಾಯಶ್ಚೇತ್ಕಲ್ಪತಾಮಿಯಾತ್ । ತಚ್ಛ್ರದ್ದಧ್ಯಾನ್ನ ಮತಿಮಾನ್ಯೋಗಮುತ್ಸೃಜ್ಯ ಮತ್ಪರಃ ।।೪೩।।

ಅರ್ಥ:- ಅನೇಕ ದಿವಸ ಯೋಗ ಸಾಧನೆಯನ್ನು ಮಾಡಿದ ನಂತರ ಶರೀರವು ಸದೃಢವಾಗಲು ಆಗ ಅಷ್ಟಕ್ಕೆ ಸಂತೋಷಪಡದೇ ಬುದ್ಧಿವಂತನಾದ ಪುರುಷನು ತನ್ನ ಸಾಧನೆಯನ್ನು ಬಿಡಕೂಡದು. ಸತತವಾಗಿ ನನ್ನ ಪ್ರಾಪ್ತಿಗಾಗಿ ಸಂಲಗ್ನನಾಗಿರಬೇಕು.

ಯೋಗ ಸಾಧಿತಾ ಪರಮಾರ್ಥಾ । ಸಿದ್ಧೀ ವಶ್ಯ ಝಾಲಿಯಾ ಹಾತಾ । ತ್ಯಾ ತ್ಯಾಗಾವ್ಯಾ ತತ್ತ್ವತಾ । ನಿಜಹಿತಾರ್ಥಾಲಾಗೂನೀ ।।೬೬೯।। ಸಿದ್ಧೀ ತ್ಯಾಗಿತಾ ನ ವಚತೀ । ಭೋಗಬಳೇ ಗಳಾ ಪಡತೀ । ತರೀ ತೇ ಸಾಂಡೂನಿ ಯೋಗಸ್ಥಿತೀ । ಮಾಝೇ ಭಜನಪಂಥೀ ಲಾಗಾವೇ ।।೬೭೦।। ಮಾಝಿಯೇ ಭಕ್ತೀಚ್ಯಾ ನಿಜಮಾರ್ಗೀ । ರಿಗಮು ನಾಹೀ ವಿಘ್ನಾಲಾಗೀ । ಮೀ ಭಕ್ತಾಂಚ್ಯಾ ಪ್ರೇಮಭಾಗೀ । ರಂಗಲೋ ರಂಗೀ ಶ್ರೀರಂಗ ।।೬೭೧।। ಸದ್ಭಾವೇ ಕರಿತಾ ಮಾಝೀ ಭಕ್ತೀ । ಭಕ್ತಾಂಸೀ ನವ್ಹೇ ವಿಘ್ನಪ್ರಾಪ್ತೀ । ಭಕ್ತ ಸಬಾಹ್ಯ ಮೀ ಶ್ರೀಪತೀ । ಅಹೋರಾತೀ ಸಂರಕ್ಷೀ ।।೬೭೨।। ಕರಿತಾ ಭಗವದ್ಭಜನ । ಭಕ್ತಾಂಸೀ ಬಾಧೀನಾ ವಿಘ್ನ । ತೇ ಭಕ್ತೀಚೇ ಮಹಿಮಾನ । ಸ್ವಯೇ ಶ್ರೀಕೃಷ್ಣ ಸಾಂಗತ ।।೬೭೩।।

ಯೋಗಚರ್ಯಾಮಿಮಾಂ ಯೋಗೀ ವಿಚರನ್ ಮದ್ವ್ಯಪಾಶ್ರಯಃ । ನಾಂತರಾಯೈರ್ವಿಹನ್ಯೇತ ನಿಸ್ಪೃಹಃ ಸ್ವಸುಖಾನುಭೂಃ ।।೪೪।।
ಇತಿ ಶ್ರೀಮದ್‌ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವ ಸಂವಾದೇ ಅಷ್ಟಾವಿಂಶೋಽಧ್ಯಾಯಃ ।।೨೮।।

ಅರ್ಥ:- ಯಾವ ಸಾಧಕನು ನನ್ನ ಆಶ್ರಯವನ್ನು ಪಡೆದು ನನ್ನ ಮುಖಾಂತರವಾಗಿ ಹೇಳಿರುವ ಯೋಗಸಾಧನೆಯಲ್ಲಿ ಸಂಲಗ್ನನಾಗುವನೋ, ಆತನಿಗೆ ಯಾವುದೇ ವಿಘ್ನಗಳು ಬರುವುದಿಲ್ಲ. ಆತನ ಸರ್ವ ಇಚ್ಛೆಗಳು ನಷ್ಟವಾಗುವುವು ಹಾಗೂ ಆತನು ಆತ್ಮಾನಂದದ ಅನುಭವದಲ್ಲಿ ತಲ್ಲೀನನಾಗುವನು.

ವೃಕ್ಷವು ಅದು ಫಲಗಳಿಂದ ತುಂಬಿಕೊಂಡಿದ್ದರೂ ಕೂಡ ಆ ವೃಕ್ಷವು ತನ್ನ ಫಲಗಳನ್ನು ಮುಟ್ಟುವುದಿಲ್ಲ. ಅದರಂತೆ ಸಿದ್ಧಿಗಳ ವೈಭವವು ಪ್ರಾಪ್ತವಾದರೂ ಸಹ ಅದನ್ನು ವೈರಾಗ್ಯದ ಬಲದಿಂದ ಬಿಟ್ಟುಕೊಡಬೇಕು ।।೬೬೪।। ಮೇಲ್ನೋಟದ ಒಣ ವೈರಾಗ್ಯದಿಂದ ತ್ಯಾಗವನ್ನು ಮಾಡಿದರೆ ಅದು ಪ್ರತಿಬಂಧಕವಾಗುವುದು. ವಿವೇಕಯುಕ್ತ ವೈರಾಗ್ಯದಿಂದ ತ್ಯಾಗವನ್ನು ಮಾಡಿದರೆ ಸಿದ್ಧಿಗಳು ತೃಣಸಮಾನವಾಗುವುವು ।।೬೬೫।। ಕುರುಡ ಆನೆಗೆ ಮದವೇರಲು ಆಗ ಅದು ಸ್ವತಃ ತಾನೇ ತೆಗ್ಗಿನಲ್ಲಿ ಬಿದ್ದು ನಾಶವಾಗುವುದು. ಅದರಂತೆ ಅವಿವೇಕದಿಂದ ತ್ಯಾಗವನ್ನು ಮಾಡುವವರು ಅಧೋಗತಿಗೆ ಹೋಗುತ್ತಿರುವರು ।।೬೬೬।। ಯಾವ ಈ ದೇಹವೇ ಮೂಲತಃ ನಶ್ವರವಾಗಿರಲು, ಸಿದ್ಧಿಗಳು ಶಾಶ್ವತವಾಗಿ ಹೇಗಿರಲು ಸಾಧ್ಯ ? ಇಂತಹ ವಿವೇಕದಿಂದ ಯಾರು ವೈರಾಗ್ಯ ಸಂಪನ್ನರಾಗುವರೋ, ಅವರೇ ಭೋಗಗಳಿಂದ ಅಲಿಪ್ತರಾಗುವರು ।।೬೬೭।। ಇಲ್ಲಿ ದೇಹವು ಇಷ್ಟೊಂದು ಅನಿತ್ಯವಾಗಿರುವುದು. ಆದರೆ ಆತ್ಮವು ಮಾತ್ರ ಸತ್ಯ ಹಾಗೂ ನಿತ್ಯವಾಗಿರುವುದು. ಇದನ್ನು ಅರಿತುಕೊಂಡು ವಿವೇಕ ಉಳ್ಳ ಪುರುಷರು ಆತ್ಮಚಿಂತನೆಯಲ್ಲಿ ತಲ್ಲೀನರಾಗಿಬಿಡುವರು ।।೬೬೮।।

ಪರಮಾರ್ಥಕ್ಕಾಗಿ ಯೋಗವನ್ನು ಸಾಧಿಸುತ್ತಿರಲು ಆಗ ಸಿದ್ಧಿಗಳು ವಶವಾಗುವುವು. ಆದರೆ ತನ್ನ ನಿಜಹಿತಕ್ಕಾಗಿ ಆ ಸಿದ್ಧಿಗಳನ್ನು ತ್ಯಜಿಸಬೇಕಾಗುವುದು ।।೬೬೯।। ಆದರೆ ಸಿದ್ಧಿಗಳನ್ನು ತ್ಯಜಿಸುವ ಪ್ರಯತ್ನವನ್ನು ಮಾಡುತ್ತಿದ್ದರೂ ಕೂಡ ಅವುಗಳನ್ನು ಬಿಡುವುದು ಆಗುವುದಿಲ್ಲ. ಅವು ಭೋಗಗಳ ಲೋಭವನ್ನು ತೋರಿಸುತ್ತ ಕೊರಳಿಗೆ ಬೀಳುವುವು. ಇಂತಹ ಸಮಯದಲ್ಲಿ ಯೋಗಾಭ್ಯಾಸವನ್ನು ಬಿಟ್ಟುಕೊಟ್ಟು ನನ್ನ ಭಜನಮಾರ್ಗಕ್ಕೆ ಹತ್ತಬೇಕು ।।೬೭೦।। ನನ್ನ ಭಕ್ತಿಮಾರ್ಗದಲ್ಲಿ ವಿಘ್ನಗಳ ಪ್ರವೇಶವಾಗಲು ಸಾಧ್ಯವಿಲ್ಲ. ಕಾರಣ ಶ್ರೀರಂಗನಾದ ನಾನು ಭಕ್ತರ ಪ್ರೇಮರಸದಲ್ಲಿ ರಮಮಾಣನಾಗಿ ತಲ್ಲೀನಗೊಂಡಿರುವೆನು ।।೬೭೧।। ಸದ್ಭಾವನೆಯಿಂದ ನನ್ನ ಭಕ್ತಿಯನ್ನು ಮಾಡುತ್ತಿರಲು ಭಕ್ತರಿಗೆ ಎಂದಿಗೂ ವಿಘ್ನಗಳು ಬರುವುದೇ ಇಲ್ಲ. ಕಾರಣ ಶ್ರೀಕೃಷ್ಣನಾದ ನಾನು ಭಕ್ತರನ್ನು ಹಗಲು ರಾತ್ರಿ ಒಳಹೊರಗೆ ರಕ್ಷಿಸುತ್ತಿರುವೆನು ।।೬೭೨।। ಆದ್ದರಿಂದ ಭಗವದ್ಭಜನೆಯನ್ನು ಮಾಡುತ್ತಿದ್ದರೆ ಭಕ್ತರಿಗೆ ವಿಘ್ನಗಳು ಬಾಧಿಸಲಾರವು. ಹೀಗೆ ಈ ಯಾವ ಭಕ್ತಿಯ ಮಹಿಮೆಯನ್ನು ಸ್ವತಃ ಶ್ರೀಕೃಷ್ಣನು ಈಗ ಹೇಳುತ್ತಿರುವನು ।।೬೭೩।।

ಅನನ್ಯ ಪ್ರೀತೀ ಮಜ ಶರಣ । ಸರ್ವಭೂತೀ ಮದ್ಭಾವನ । ಅಭೇದಬುದ್ಧೀ ಮಾಝೇ ಭಜನ । ತ್ಯಾಸೀ ಸರ್ವಥಾ ವಿಘ್ನ ಬಾಧೀನಾ ॥೬೭೪॥ ಮಾಝ್ಯಾ ಭಕ್ತಾಚೇ ಉಪಸರ್ಗ । ಸಕಳ ನಿರ್ದಳೀ ಮೀ ಶ್ರೀರಂಗ । ಜ್ಯಾಸೀ ಅನನ್ಯ ಭಜನಯೋಗ । ತ್ಯಾಸೀ ಮಾಝೇ ನಿಜಾಂಗ ವಸ್ತೀಸೀ ॥೬೭೫॥ ಜೇಥ ವಿಘ್ನ ಧಾಂವೇ ಭಕ್ತಾಕಡೇ । ತೇಥ ತತ್ಕಾಳ ಮಾಝೀ ಉಡೀ ಪಡೇ । ನಿವಾರೀ ನಿಜಭಕ್ತಾಂಚೇ ಸಾಂಕಡೇ । ತೀ ಲಳಿವಾಡೇ ಪೈ ಮಾಝೀ ॥೬೭೬॥ ತೀ ಲಳಿವಾಡೇ ಮ್ಹಣಶೀ ಕೈಸೀ । ತ್ಯಾಂಚೇ ಸಾಂಕಡೇ ಮೀ ಸದಾ ಸೋಶೀ । ರಾಜಾ ದಂಡಿತಾ ಪ್ರಹ್ಲಾದಾಸೀ । ಮ್ಯಾ ಸರ್ವಥಾ ತ್ಯಾಂಸೀ ರಕ್ಷಿಲೇ ॥೬೭೭॥ ಸಂಕಟ ಮಾಂಡಿಲೇ ಅಂಬರೀಷಾಸೀ । ತೈ ಮ್ಯಾ ಅಪಮಾನಿಲೇ ದುರ್ವಾಸಾಸೀ । ದಾಹೀ ಗರ್ಭವಾಸ ಮೀ ಸ್ವಯೇ ಸೋಶೀ । ಉಣೇ ಭಕ್ತಾಂಸೀ ಯೇಊ ನೇದೀ ॥೬೭೮॥ ಬಾಧಾ ಹೋತಾ ಗಜೇಂದ್ರಾಸೀ । ಮ್ಯಾ ಹಾತೀ ವಸವೂನಿ ಸುದರ್ಶನಾಸೀ । ಉಡೀ ಘಾಲೂನಿ ತ್ಯಾಪಾಶೀ । ನಿಮಿಷಾರ್ಧೇಸೀ ಸೋಡವಿಲಾ ॥೬೭೯॥ ದ್ರೌಪದೀಚಿಯೇ ಅತಿಸಾಂಕಡೀ । ಸಭೇಸೀ ಕರಿತಾ ತೇ ಉಘಡೀ । ಮ್ಯಾ ನಿಜಾಂಗೇ ಘಾಲೂನಿ ಉಡೀ । ವಸ್ತ್ರಾಂಚ್ಯಾ ಕೋಡೀ ಪುರವಿಲ್ಯಾ ॥೬೮೦॥ ದ್ರೌಪದೀಚಿಯಾ ಹಾತೀ ದೇತಾ ಘಡೀ । ನೇಸತಾ ನೇಸತಾ ದಿಸೇಲ ತೇ ಉಘಡೀ । ಯಾಲಾಗೀ ಮೀ ಲವಡಸವಡೀ । ನೇಸತೀ ಲುಗಡೀ ಸ್ವಯೇ ಝಾಲೋ ॥೬೮೧॥ ದಾವಾಗ್ನೀ ಪೀಡಿತಾ ಗೋಪಾಳ । ನಿಜಮುಖೀ ಮ್ಯಾ ಗಿಳಿಲೀ ಜ್ವಾಳ । ಏಥವರೀ ಭಕ್ತಾಂಚೀ ಕಳವಳ । ಮಜ ಸರ್ವಕಾಳ ಉದ್ಧವಾ ॥೬೮೨॥ ದ್ರೌಣ್ಯಸ್ತ್ರಾಂಚೇ ಬಾಧೇಹಾತೀ । ಮ್ಯಾ ಗರ್ಭೀ ರಕ್ಷಿಲಾ ಪರೀಕ್ಷಿತೀ । ಗೋಕುಳ ಪೀಡಿತಾ ಸುರಪತೀ । ಮ್ಯಾ ಧರಿಲಾ ಹಾತೀ ಗೋವರ್ಧನ ॥೬೮೩॥ ವಾಂಚವಾವಯಾ ಅರ್ಜುನಾಸೀ । ದಿವಸಾ ಲಪವಿಲೇ ಸೂರ್ಯಾಸೀ । ಹಾರೀ ಪತಕರೂನಿ ರಣಭೂಮೀಸೀ । ಸತ್ಯ ಭಿಷ್ಮಾಸೀ ಮ್ಯಾ ಕೇಲೇ ॥೬೮೪॥ ಐಸಾ ಮೀ ಭಕ್ತಸಹಾಕಾರೀ । ನಿತ್ಯ ಅಸತಾ ಶಿರಾವರೀ । ಭಕ್ತಾಂಸೀ ವಿಘ್ನ ಕೋಣ ಕರೀ । ಮೀ ಶ್ರೀಹರಿ ರಕ್ಷಿತಾ ॥೬೮೫॥ ಜೇ ಅನುಸರಲೇ ಮದ್ಭಕ್ತೀಸೀ । ಮೀ ವಿಘ್ನ ಲಾಗೋ ನೇದೀ ತ್ಯಾ ಭಕ್ತಾಂಸೀ । ನಿಜಾಂಗ ಅರ್ಪೋನಿಯಾ ತ್ಯಾಂಸೀ । ನಿಜೇ ಸುಖಸುಖೇಸೀ ನಾಂದವೀ ॥೬೮೬॥ ಭಾವೇ ಕರಿತಾ ಮಾಝೀ ಭಕ್ತೀ । ಸಾಧಕಾ ಸ್ವಸುಖಾಚೀ ಪ್ರಾಪ್ತೀ । ತೇಥೇ ಇಚ್ಛೇಸೀ ಕಾಮಲೋಭ ಜಾತೀ । ಮಾಝೀ ಸುಖಸ್ಥಿತೀ ಮದ್ಭಕ್ತಾ ॥೬೮೭॥

ಯಾರು ಅನನ್ಯ ಪ್ರೇಮದಿಂದ ನನಗೆ ಶರಣು ಬರುವರೋ, ಸರ್ವ ಪ್ರಾಣಿಮಾತ್ರರಲ್ಲಿ ನನ್ನನ್ನೇ ಕಾಣುವರೋ, ಹಾಗೂ ಅಭೇದ ಭಾವದಿಂದ ನನ್ನ ಭಜನೆಯನ್ನು ಮಾಡುವರೋ, ಅವರಿಗೆ ವಿಘ್ನಗಳ ಬಾಧೆಯು ಸರ್ವಥಾ ಉಂಟಾಗುವುದಿಲ್ಲ ॥೬೭೪॥ ನನ್ನ ಭಕ್ತರ ಸರ್ವ ವಿಘ್ನಗಳನ್ನು ಶ್ರೀರಂಗನಾದ ನಾನು ನಿವಾರಣೆಯನ್ನು ಮಾಡುತ್ತಿರುತ್ತೇನೆ. ಯಾರು ನನ್ನ ಅನನ್ಯ ಭಕ್ತಿಯನ್ನು ಮಾಡುವರೋ, ಅವರಿಗೆ ನನ್ನ ಸ್ವರೂಪದ ಆಧಾರವು ಲಭಿಸುವುದು ॥೬೭೫॥ ನನ್ನ ಭಕ್ತರತ್ತ ವಿಘ್ನಗಳು ಧಾವಿಸುತ್ತಲೇ ಅಲ್ಲಿ ನಾನು ಕೂಡಲೇ ಜಿಗಿದು ಓಡಿ ಬಂದು ನನ್ನ ಭಕ್ತರ ಸಂಕಟಗಳನ್ನು ನಿವಾರಿಸುವೆನು. ನನ್ನ ಭಕ್ತರು ನನಗೆ ಬಹು ಸಲುಗೆವುಳ್ಳವರಾಗಿರುವರು ॥೬೭೬॥ ಅವರು ನನಗೆ ಎಷ್ಟೊಂದು ಪ್ರಿಯರಾಗಿರುವರೆಂದರೆ ಅವರ ಸಂಕಟಗಳನ್ನು ನಾನು ನಿರಂತರವಾಗಿ ಸೋಸಿಸುತ್ತಿರುವೆನು. ಪ್ರಹ್ಲಾದನಿಗೆ ರಾಜನು ಶಿಕ್ಷೆಗಳನ್ನು ಕೊಡುತ್ತಲೇ ನಾನು ಅವುಗಳನ್ನು ಸೋಸಿಸಿದೆನು ॥೬೭೭॥ ಅಂಬರೀಷನ ಮೇಲೆ ಸಂಕಟವು ಒದಗಿತು. ಆಗ ನಾನು ದುರ್ವಾಸಋಷಿಯನ್ನು ಅಪಮಾನಗೊಳಿಸಿದೆನು. ಅಂಬರೀಷನಿಗಾಗಿ ಆತನ ಹತ್ತು ಗರ್ಭವಾಸಗಳನ್ನು ನಾನು ಸ್ವತಃ ಸೋಸಿಸಿದೆನು. ನಾನು ಭಕ್ತರಲ್ಲಿ ಯಾವ ಕೊರತೆಯನ್ನೂ ಬರಗೊಡುವುದಿಲ್ಲ ॥೬೭೮॥ ಗಜೇಂದ್ರನ ಮೇಲೆ ವಿಪತ್ತು ಒದಗುತ್ತಲೇ ನಾನು ಕೈಯಲ್ಲಿ ಸುದರ್ಶನ ಚಕ್ರವನ್ನು ತೆಗೆದುಕೊಂಡು ಆತನತ್ತ ಜಿಗಿದು ಓಡಿ ಬಂದೆನು. ಹಾಗೂ ಕ್ಷಣಮಾತ್ರದಲ್ಲಿ ಆತನನ್ನು ಸಂಕಟದಿಂದ ಮುಕ್ತಗೊಳಿಸಿದೆನು ॥೬೭೯॥ ಕೌರವರ ಸಭೆಯಲ್ಲಿ ದ್ರೌಪದಿಯನ್ನು ಬತ್ತಲು ಮಾಡುವ ಘನಘೋರ ಸಂಕಟ ಪ್ರಸಂಗವು ಒದಗಿದಾಗ ನಾನು ಸ್ವತಃ ಅಲ್ಲಿ ಪ್ರಕಟನಾಗಿ ಆಕೆಗೆ ವಸ್ತ್ರಗಳ ರಾಶಿಯನ್ನೇ ಪೂರೈಸಿದೆನು ॥೬೮೦॥ ದ್ರೌಪದಿಯ ಕೈಯಲ್ಲಿ ಸೀರೆಯ ಗಳಿಗೆಗಳನ್ನು ಕೊಟ್ಟಿದ್ದರೆ, ಆಗ ಆಕೆಯು ಅದನ್ನು ತೊಡುವಾಗ ಆಕೆಯ ಅಂಗವು ಬತ್ತಲಾಗುವ ಪ್ರಸಂಗ ಬರಬಹುದೆಂದು ನಾನು ಅತಿತ್ವರೆಯಿಂದ ಆಕೆಯು ತೊಡುವ ಸೀರೆಗಳೇ ನಾನಾದೆನು ॥೬೮೧॥ ದಾವಾಗ್ನಿಯು ಗೋಪಾಲಕರಿಗೆ ಪೀಡೆಯನ್ನು ಕೊಡಲು ಆಗ ನಾನು ನನ್ನ ಮುಖದಿಂದ ಯಾವ ಪ್ರಜ್ವಲಿತ ಜ್ವಾಲೆಯನ್ನು ನುಂಗಿಬಿಟ್ಟೆನು. ಹೇ ಉದ್ಧವಾ, ಈ ಪ್ರಕಾರವಾಗಿ ನನಗೆ ಯಾವಾಗಲೂ ಭಕ್ತರಿಗಾಗಿ ಕಳಕಳಿಯು ಇರುವುದು ॥೬೮೨॥ ನಾನು ಅಶ್ವತ್ಥಾಮನ ಶಸ್ತ್ರಕ್ಕಾಗಿ ಗರ್ಭದಲ್ಲಿಯೇ ಪರೀಕ್ಷಿತಿಯ ರಕ್ಷಣೆಯನ್ನು ಮಾಡಿದೆನು. ಇಂದ್ರನು ಗೋಕುಲಕ್ಕೆ ತೊಂದರೆ ಕೊಡಲು ಆಗ ನಾನು ಗೋವರ್ಧನ ಪರ್ವತವನ್ನು ಕೈಯಿಂದ ಎತ್ತಿ ಹಿಡಿದೆನು ॥೬೮೩॥ ಅರ್ಜುನನಿಗೆ ಬದುಕಿಸುವುದಕ್ಕಾಗಿ ಜಯದ್ರಥನ ಯುದ್ಧ ಪ್ರಸಂಗದಲ್ಲಿ ನಾನು ಹಗಲಿನಲ್ಲಿಯೇ ಸೂರ್ಯನನ್ನು ಅಡುಗಿಸಿದೆನು. ರಣರಂಗದಲ್ಲಿ ನಾನು ಸೋಲನ್ನು ಒಪ್ಪಿಕೊಂಡು ಭೀಷ್ಮನ ಪ್ರತಿಜ್ಞೆಯನ್ನು ಸತ್ಯಗೊಳಿಸಿದೆನು ॥೬೮೪॥ ಹೀಗೆ ನಾನು ಭಕ್ತರ ಸಹಾಯಕರ್ತನಾಗಿ ನಿತ್ಯವೂ ಅವರ ಶಿರದ ಮೇಲೆ ಇರುತ್ತಿರಲು, ಭಕ್ತರಿಗೆ ವಿಘ್ನಗಳನ್ನು ಒಡ್ಡುವವರು ಯಾರಿದ್ದಾರೆ? ಶ್ರೀಹರಿಯಾದ ನಾನು ಅವರನ್ನು ರಕ್ಷಿಸುತ್ತಿರುವೆನು ॥೬೮೫॥ ಯಾರು ನನ್ನ ಭಕ್ತಿಯ ಮಾರ್ಗದಲ್ಲಿ ನಡೆಯುತ್ತಿರುವರೋ, ಆ ನನ್ನ ಭಕ್ತರಿಗೆ ವಿಘ್ನಗಳ ಸ್ಪರ್ಶ ಕೂಡ ಮಾಡಿಸಿಕೊಡಲಾರೆನು. ನಾನು ನನ್ನ ದೇಹವನ್ನು ಅವರಿಗೆ ಅರ್ಪಿಸಿ, ಅವರನ್ನು ನನ್ನ ಆತ್ಮಸುಖದಲ್ಲಿ ಇಡುವೆನು ॥೬೮೬॥ ಸದ್ಭಾವನೆಯಿಂದ ನನ್ನ ಭಕ್ತಿಯನ್ನು ಮಾಡಲು ಸಾಧಕನಿಗೆ ಆತ್ಮಸುಖವು ಲಭಿಸುವುದು. ಆಗ ವಾಸನೆ ಸಹ ಕಾಮಲೋಭಗಳು ನಾಶವಾಗುವುವು. ಅದರಿಂದ ಭಕ್ತರಿಗೆ ಸೌಖ್ಯವು ಪ್ರಾಪ್ತವಾಗುವುದು ॥೬೮೭॥

ಮ್ಹಣಸೀ ಭಕ್ತಾಂಸೀ ದೇಹಾಂತೀ । ಹೋಈಲ ನಿಜಸುಖಾಚೀ ಪ್ರಾಪ್ತೀ । ತೈಶೀ ನವ್ಹೇ ಚೌಥೀ ಭಕ್ತೀ । ದೇಹೀ ವರ್ತತೀ ಸ್ಥಿತೀ ಸುಖರೂಪ ॥೬೮೮॥ ದೇಹ ರಾಹೋ ಅಥವಾ ಜಾವೋ । ಪರೀ ಸುಖಾಸೀ ನಾಹೀ ಅಭಾವೋ । ಯಾಪರೀ ಮದ್ಭಕ್ತ ಪಹಾ ಹೋ । ಸುಖೇ ಸುಖನಿರ್ವಾಹೋ ಭೋಗಿತೀ ॥೬೮೯॥ ಭಕ್ತ ವರ್ತತಾ ದಿಸತೀ ದೇಹೀ । ಪರೀ ತೇ ವರ್ತತೀ ಮಾಝ್ಯಾ ಠಾಯೀ । ಮೀ ಅವಘಾಚಿ ತ್ಯಾಂಚ್ಯಾ ಹೃದಯೀ । ಸರ್ವದಾ ಪಾಹೀ ನಾಂದತ ॥೬೯೦॥ ಭಕ್ತ ನಿಜಬೋಧೇ ಮಜಭೀತರೀ । ಮೀ ನಿಜಾಂಗೇ ತ್ಯಾ ಆಂತಬಾಹೇರೀ । ಏವಂ ನಿಜಸುಖಾಚ್ಯಾ ಮಾಜಘರೀ । ಪರಸ್ಪರೀ ನಾಂದತ ॥೬೯೧॥ ಮೀ ದೇವ ತೋ ಏಕ ಭಕ್ತ । ಹೇಹೀ ಬಾಹೇರಸವಡೀ ಮಾತ । ವಿಚಾರಿತಾ ಆಂತುವಡಾ ಅರ್ಥ । ಮೀ ಆಣಿ ಭಕ್ತ ಏಕಚಿ ॥೬೯೨॥ ತೂಪ ಥಿಜಲೇ ವಿಘುರಲೇ ದೇಖ । ತೇವೀ ಮೀ ಆಣಿ ಭಕ್ತ ದೋನೀ ಏಕ । ಮಜ ಭಕ್ತಾಸೀ ವೇಗಳಿಕ । ಕಲ್ಪಾಂತೀ ದೇಖ ಅಸೇನಾ ॥೬೯೩॥ ಮೀ ತೋ ಏಕಚಿ ಏಥೇ । ಹೇಹೀ ಮ್ಹಣಾವಯಾ ನಾಹೀ ಮ್ಹಣತೇ । ಯಾಪರೀ ಮಿಳೋನಿ ಮಾತೇ । ಭಕ್ತ ನಿಜಸುಖಾತೇ ಪಾವಲೇ ॥೬೯೪॥ ತೋ ಹಾ ಬ್ರಹ್ಮಜ್ಞಾನಾಚಾ ಕಳಸು । ಅಧ್ಯಾಯ ಜಾಣ ಅಠ್ಠಾವಿಸು । ಬಾಪ ವಿಂದಾನೀ ಹೃಷೀಕೇಶು । ತೇಣೇ ದೇಉಳಾಸೀ ಕಳಸು ಮೇಳವಿಲಾ ॥೬೯೫॥ ಜೇವೀ ಅಲಂಕಾರೀ ಮುಕುಟಮಣೀ । ತೇವೀ ಅಠ್ಠಾವಿಸಾವಾ ಬ್ರಹ್ಮಜ್ಞಾನೀ । ಶ್ರೀಕೃಷ್ಣ ಭಕ್ತಾಂಚೀ ನಿಜಜನನೀ । ತೋ ಉದ್ಧವಾಲಾಗೋನೀ ಶೃಂಗಾರೀ ॥೬೯೬॥ ಮಾತಾ ಉತ್ತಮ ಅಲಂಕಾರಕೋಡೀ । ಅಪತ್ಯ ಶೃಂಗಾರೀ ಅತಿ ಆವಡೀ । ತೇವೀ ಉತ್ತಮೋತ್ತಮ ಜ್ಞಾನನಿರವಡೀ । ಉದ್ಧವ ಕಡೋವಿಕಡೀ ಶೃಂಗಾರಿಲಾ ॥೬೯೭॥ ಮಾತೇಸೀ ಆವಡೇ ನಿಪಟಣೇ । ತೇವೀ ಉದ್ಧವ ವೃದ್ಧಪಣೇಂಚೇ ತಾನೇ । ಶ್ರೀಕೃಷ್ಣ ತ್ಯಾಕಾರಣೇ । ಗುಹ್ಯಜ್ಞಾನೇ ಶೃಂಗಾರೀ ॥೬೯೮॥ ಮಾತಾ ಬಾಳಕಾತೇ ಶೃಂಗಾರೀ । ತೇ ಲೇಣೇ ಮಾಗುತೇ ಉತರೀ । ಉದ್ಧವ ಶೃಂಗಾರಿಲಾ ಶ್ರೀಹರೀ । ತೇ ಅಂಗಾಬಾಹೇರೀ ನಿಘೇನಾ ॥೬೯೯॥ ಅಂಗೀ ಲೇಣೇ ಜಡಲೇ ಅಲೋಕಿಕ । ತೇಣೇ ಉದ್ಧವ ಝಾಲಾ ಅಮೋಲಿಕ । ಪಾಯಾ ಲಾಗತೀ ತೀನೀ ಲೋಕ । ಬ್ರಹ್ಮಾದಿಕ ಪೂಜಿತೀ ॥೭೦೦॥

ಭಕ್ತರಿಗೆ ದೇಹಾಂತದಲ್ಲಿ ಆತ್ಮಸುಖವು ಪ್ರಾಪ್ತವಾಗುವುದೆಂದು ನಿನಗೆ ಅನಿಸಬಹುದು. ಆದರೆ ನನ್ನ ನಾಲ್ಕನೆಯ ಭಕ್ತಿಯು ಹಾಗೆ ಇರುವುದಿಲ್ಲ. ಈ ಭಕ್ತಿಯಿಂದ ದೇಹವಿರುತ್ತಲೇ ಆತ್ಮಸುಖದ ಪ್ರಾಪ್ತಿಯಾಗುವುದು ॥೬೮೮॥ ದೇಹವು ಇರಲಿ ಅಥವಾ ಹೋಗಲಿ, ಆ ಸುಖದ ಅಭಾವವು ಎಂದಿಗೂ ಆಗುವುದಿಲ್ಲ. ಈ ಪ್ರಕಾರವಾಗಿ ನನ್ನ ಭಕ್ತರು ಸಹಜವಾಗಿ ಆತ್ಮಸುಖದ ಪ್ರಾಪ್ತಿಯನ್ನು ಮಾಡಿಕೊಳ್ಳುವರು ॥೬೮೯॥ ಭಕ್ತರು ದೇಹದಲ್ಲಿ ವರ್ತಿಸುತ್ತಿರುವಂತೆ ತೋರುತ್ತಿರುವರು. ಆದರೆ ನಿಜವಾಗಿಯೂ ಅವರು ನನ್ನಲ್ಲಿಯೇ ವರ್ತಿಸುತ್ತಿರುವರು. ನಾನೂ ಕೂಡ ಅವರ ಹೃದಯದಲ್ಲಿ ಪರಿಪೂರ್ಣವಾಗಿ ವರ್ತಿಸುತ್ತಿರುವೆನು ॥೬೯೦॥ ಭಕ್ತರಾದವರು ಆತ್ಮಜ್ಞಾನದಿಂದ ನನ್ನಲ್ಲಿ ಇರುವರು ಮತ್ತು ನಾನು ಸ್ವತಃ ಅವರ ಒಳಹೊರಗೆ ಇರುವೆನು. ಈ ಪ್ರಕಾರವಾಗಿ ಆತ್ಮಸುಖದ ನಡುಮನೆಯಲ್ಲಿ ನಾವು ಪರಸ್ಪರರಿಂದ ವರ್ತಿಸುತ್ತಿರುವೆವು ॥೬೯೧॥ ನಾನು ದೇವನು ಮತ್ತು ಆತನು ಭಕ್ತನು ಎಂಬ ಈ ಹೇಳಿಕೆಯು ತೋರಿಕೆ ಮಾತ್ರ ಆಗಿರುವುದು. ಸೂಕ್ಷ್ಮವಾಗಿ ವಿಚಾರಿಸಿ ನೋಡಲು ನಾನು ಮತ್ತು ಭಕ್ತನು ಒಂದೇಯಾಗಿರುವೆವು ॥೬೯೨॥ ಹೆಪ್ಪುಗಟ್ಟಿದ ತುಪ್ಪ ಹಾಗೂ ಕರಗಿದ ತುಪ್ಪ ಇವು ಎರಡೂ ಒಂದೇಯಾಗಿರುವುವು. ಅದರಂತೆಯೇ ನಾನು ಮತ್ತು ಭಕ್ತನು ಇಬ್ಬರೂ ಒಂದೇಯಾಗಿರುವೆವು. ನನ್ನಲ್ಲಿ ಮತ್ತು ಭಕ್ತನಲ್ಲಿ ಕಲ್ಪಾಂತಕ್ಕೂ ಕೂಡ ಭಿನ್ನಭಾವವು ಬಾರದು ॥೬೯೩॥ ನಾನು ಮತ್ತು ಭಕ್ತನು ಒಂದೇಯಾಗಿರುವೆವು ಎಂದು ಹೀಗೆ ಹೇಳಲು ಹೇಳುವುದಕ್ಕಾಗಿ ಯಾರು ಇರುವುದಿಲ್ಲ. ಈ ಪ್ರಕಾರವಾಗಿ ಭಕ್ತನು ನನ್ನ ಸ್ವರೂಪವನ್ನೇ ಪ್ರಾಪ್ತಮಾಡಿಕೊಂಡು ಆತ್ಮಾನಂದದಲ್ಲಿ ಏಕರೂಪನಾಗಿರುವನು ॥೬೯೪॥ ಹೀಗಿರುವ ಈ ಯಾವ ಇಪ್ಪತ್ತೆಂಟನೆಯ ಅಧ್ಯಾಯವೆಂದರೆ ನಿಜವಾಗಿಯೂ ಬ್ರಹ್ಮಜ್ಞಾನದ ಕಳಸವೇ ಆಗಿರುವುದು. ಶ್ರೀಕೃಷ್ಣನು ಶ್ರೇಷ್ಠ ಶಿಲ್ಪಕಾರನಾಗಿರುವನು. ಆತನು ಈ ದೇವಾಲಯದ ಮೇಲೆ ಕಳಸವನ್ನು ಏರಿಸಿರುವನು ॥೬೯೫॥ ಯಾವ ಪ್ರಕಾರವಾಗಿ ಅಲಂಕಾರಗಳಲ್ಲಿ ಮುಕುಟಮಣಿವಿರುವುದೋ, ಅದೇ ಪ್ರಕಾರವಾಗಿ ಬ್ರಹ್ಮಾನಂದದಲ್ಲಿ ಈ ಇಪ್ಪತ್ತೆಂಟನೆಯ ಅಧ್ಯಾಯವಾಗಿರುವುದು. ಶ್ರೀಕೃಷ್ಣನು ಭಕ್ತರ ತಾಯಿಯಾಗಿರುವನು. ಆದ್ದರಿಂದ ಆತನು ಉದ್ಧವನಿಗೆ ಶೃಂಗರಿಸಿರುವನು ॥೬೯೬॥ ಅನೇಕ ಪ್ರಕಾರದ ಅಪ್ರತಿಮ ಅಲಂಕಾರಗಳನ್ನು ತೊಡಿಸಿ ತಾಯಿಯು ತನ್ನ ಬಾಲಕನಿಗೆ ಪ್ರೇಮದಿಂದ ಶೃಂಗಾರ ಮಾಡುತ್ತಿರುವಳು. ಅದರಂತೆ ಉತ್ತಮೋತ್ತಮವಾದ ಜ್ಞಾನನಿರ್ಣಯದಿಂದ ಉದ್ಧವನಿಗೆ ನಖಶಿಖಾಂತದವರೆಗೆ ಶೃಂಗರಿಸಿರುವನು ॥೬೯೭॥ ತಾಯಿಗೆ ತನ್ನ ಕೊನೆಯ ಚಿಕ್ಕ ಬಾಲಕನು ಪ್ರಿಯನಾಗುವನು. ಅದರಂತೆ ಈ ಯಾವ ಉದ್ಧವನು ಶ್ರೀಕೃಷ್ಣನ ವೃದ್ಧಾವಸ್ಥೆಯಲ್ಲಿನ ಬಾಲಕನಾಗಿದ್ದನು. ಆದ್ದರಿಂದ ಶ್ರೀಕೃಷ್ಣನು ಆತನನ್ನು ತನ್ನ ಗುಹ್ಯಜ್ಞಾನದಿಂದ ಶೃಂಗರಿಸಿದನು ॥೬೯೮॥ ತಾಯಿಯು ತನ್ನ ಬಾಲಕನಿಗೆ ಅಲಂಕಾರಗಳಿಂದ ಶೃಂಗರಿಸುವಳು ಹಾಗೆಯೇ ಹಾಕಿರುವ ಅಲಂಕಾರಗಳನ್ನು ಪುನಃ ತೆಗೆದು ಇಡುವಳು. ಆದರೆ ಶ್ರೀಹರಿಯು ಉದ್ಧವನಿಗೆ ಒಮ್ಮೆ ಹಾಕಿರುವ ಅಲಂಕಾರಗಳು ಆತನ ಅಂಗದಿಂದ ಪುನಃ ತೆಗೆಯಲು ಬರಲೇ ಇಲ್ಲ ॥೬೯೯॥ ಆತನ ಅಂಗದಲ್ಲಿ ಅಲೌಕಿಕ ತೊಡುಗೆಗಳು ಅಂಟಿಕೊಂಡೇ ಇರಲ್ಪಟ್ಟವು. ಆದ್ದರಿಂದ ಉದ್ಧವನು ಅಮೌಲ್ಯವಸ್ತುವಾದನು. ಸಂಪೂರ್ಣ ಮೂರು ಲೋಕಗಳು ಆತನ ಚರಣಕಮಲಗಳನ್ನು ವಂದಿಸಲಾರಂಭಿಸಿದವು. ವಿಶ್ವಕರ್ತನಾಗಿರುವ ಬ್ರಹ್ಮದೇವನೂ ಸಹ ಆತನ ಪೂಜೆಯನ್ನು ಮಾಡಲಾರಂಭಿಸಿದನು ॥೭೦೦॥

ನಿಜಾತ್ಮ ಅಳಂಕಾರೇ ಶ್ರೀಪತೀ । ಉದ್ಧವ ಶೃಂಗಾರಿಲಾ ಬ್ರಹ್ಮಸ್ಥಿತೀ । ತೇಣೇ ವಂದ್ಯ ಝಾಲಾ ತ್ರಿಜಗತೀ । ತ್ಯಾತೇ ಪುರಾಣೇ ಪಢತೀ ಮಹಾಕವೀ ॥೭೦೧॥ ಗೋಡೀಮಾಜೀ ಶ್ರೇಷ್ಠ ಅಮೃತ । ತೇಹೀ ಫಿಕೇ ಕರೂನಿ ಏಥ । ಉದ್ಧವಾಲಾಗೀ ಪರಮಾಮೃತ । ಶ್ರೀಕೃಷ್ಣೇ ನಿಶ್ಚಿತ ಪಾಜಿಲೇ ॥೭೦೨॥ ಅಮರ ಅಮೃತಪಾನ ಕರಿತೀ । ತೇಹೀ ಮರಣಾರ್ಣವೀ ಬುಡತೀ । ಉದ್ಧವ ಅಕ್ಷಯೀ ಕೇಲಾ ಶ್ರೀಪತೀ । ಕಥಾಮೃತೀ ನಿವವೂನಿ ॥೭೦೩॥ ತೇಣೇ ತೋ ಸರ್ವಾಂಗೀ ನಿವಾಲಾ । ಪರಮಾನಂದೀ ತೃಪ್ತ ಝಾಲಾ । ತೇಣೇ ಉದ್ಧವತ್ವಾ ವಿಸರಲಾ । ಡೋಲೋ ಲಾಗಲಾ ಸ್ವಾನಂದೇ ॥೭೦೪॥ ತೇವ್ಹಾ ಸ್ವಾನಂದ ಉನ್ಮತ್ತತಾ । ದುಜೇ ನಿರ್ದಳೀ ದೇಖತಾ । ಸಂಸಾರ ಹಾಣೋನಿ ಲಾತಾ । ಚಢೇ ಮಾಥಾ ದೇವಾಂಚ್ಯಾ ॥೭೦೫॥ ಚಢೋನಿ ದೇವಾಂಚಿಯಾ ಮಾಥಾ । ಶೇಖೀ ಗಿಳೀ ದೇವಭಕ್ತತಾ । ಮಗ ಸಚ್ಚಿದಾನಂದಸ್ವಾನಂದತಾ । ನಿಜಾತ್ಮತಾ ಸ್ವಯೇ ಝಾಲಾ ॥೭೦೬॥ ತೇಥ ಸತ್-ಚಿತ್ ಆನಂದ । ಹಾಹೀ ನಾಹೀ ತ್ರಿವಿಧ ಭೇದ । ಸದೋದಿತ ಪರಮಾನಂದ । ಸ್ವಾನಂದ ಶುದ್ಧ ಕೋಂದಲಾ ॥೭೦೭॥ ನಶ್ವರ ತ್ಯಾಗಾಚಿಯೇ ಸ್ಥಿತೀ । ಅನಶ್ವರಾತೇ ''ಸಂತ'' ಮ್ಹಣತೀ । ಜಡಾಚೀ ಕರಿತಾ ನಿವೃತ್ತೀ । ''ಚಿದ್ರೂಪ'' ಮ್ಹಣತೀ ವಸ್ತೂತೇ ॥೭೦೮॥ ಜೇಥ ದುಃಖಾಚಾ ನಾಹೀ ಬಾಧು । ತ್ಯಾತೇ ಮ್ಹಣತೀ ''ಆನಂದು'' । ಏವಂ ಸಚ್ಚಿದಾನಂದ ಶಬ್ದು । ಜ್ಞಾನಸಂಬಂಧು ಮಾಯಿಕಾ ॥೭೦೯॥ ವಸ್ತು ಸಂತ ನಾ ಅಸಂತ । ಚಿತ್ ನವ್ಹೇ ಅಚಿತ್ । ತೇ ಸುಖದುಃಖಾತೀತ । ಜಾಣ ನಿಶ್ಚಿತ ಸನ್ಮಾತ್ರ ॥೭೧೦॥ ಹಾ ಅತ್ಮಾ ವಿಶೀಂಚಾ ನಿಜಬೋಧ । ಉದ್ಧವಾಸೀ ತುಷ್ಟೋನಿ ಗೋವಿಂದ । ದೇತಾ ಝಾಲಾ ಸ್ವಾನಂದಕಂದ । ಭಾಗ್ಯೇ ಅಗಾಧ ತೋ ಏಕ ॥೭೧೧॥ ಸಾಂಡೋನಿ ನಿಜಧಾಮಾ ಜಾಣೇ । ಸ್ವಯೇ ಶ್ರೀಕೃಷ್ಣ ಜ್ಯಾಕಾರಣೇ । ದೇತಾ ಝಾಲಾ ನಿಜಗುಹ್ಯ ಠೇವಣೇ । ತ್ಯಾಚೇ ಭಾಗ್ಯವಾನಣೇ ತೇ ಕಿತೀ ॥೭೧೨॥ ಜೇ ನೇದೀ ಚ ಪಿತ್ಯಾ ವಸುದೇವಾಸೀ । ಜೇ ನೇದೀಚ ಬಂಧು ಬಳಭದ್ರಾಸೀ । ಜೇ ನೇದೀಚ ಪುತ್ರ ಪ್ರದ್ಯುಮ್ನಾಸೀ । ತೇ ಉದ್ಧವಾಸೀ ದೀಧಲೇ ॥೭೧೩॥ ಜೇ ನೇದೀಚ ದೇವಕೀಮಾತೇಸೀ । ಜೇ ನೇದೀಚ ಕುಂತಿ ಆತೇಸೀ । ಶೇಖೀ ನೇದೀಚ ಯಶೋದೇಸೀ । ತೇ ಉದ್ಧವಾಸೀ ದೀಧಲೇ ॥೭೧೪॥

ಶ್ರೀಪತಿಯು ಸ್ವಸ್ವರೂಪ ಅಲಂಕಾರಗಳಿಂದ ಉದ್ಧವನನ್ನು ಭೂಷಿತಗೊಳಿಸಿರುವುದರಿಂದ ಆತನು ಬ್ರಹ್ಮಸ್ಥಿತಿಗೆ ಮುಟ್ಟಿಕೊಂಡನು. ಆದ್ದರಿಂದ ಆತನು ತ್ರಿಭುವನದಲ್ಲಿ ವಂದ್ಯನಾದನು. ಪುರಾಣಗಳಲ್ಲಿಯೂ ಕೂಡ ಮಹಾಕವಿಗಳು ಆತನ ವರ್ಣನೆಯನ್ನು ಮಾಡಲಾರಂಭಿಸಿದರು ॥೭೦೧॥ ರುಚಿಗಳಲ್ಲಿ ಅಮೃತವು ಸರ್ವಶ್ರೇಷ್ಠವಾಗಿರುವುದು. ಅದನ್ನೂ ಕೂಡ ಸಪ್ಪಗೆ ಮಾಡಿ ಶ್ರೀಕೃಷ್ಣನು ಉದ್ಧವನಿಗೆ ಪರಮಾಮೃತವನ್ನು ಕುಡಿಸಿದನು ॥೭೦೨॥ ದೇವತೆಗಳು ಅಮೃತಪಾನವನ್ನು ಮಾಡುವರು. ಆದರೆ ಅವರೂ ಸಹ ಮೃತ್ಯುರೂಪ ಸಂಸಾರದಲ್ಲಿ ಬೀಳುವರು. ಆದರೆ ಶ್ರೀಕೃಷ್ಣನು ಉದ್ಧವನಿಗೆ ಕಥಾರೂಪ ಅಮೃತದಿಂದ ತೃಪ್ತಗೊಳಿಸಿ, ಅಕ್ಷಯನನ್ನಾಗಿ ಮಾಡಿದನು ॥೭೦೩॥ ಉದ್ಧವನು ಸರ್ವಾಂಗದಿಂದ ಶಾಂತನಾದನು. ಹಾಗೂ ಪರಮಾನಂದದಿಂದ ತೃಪ್ತನಾದನು. ಆದ್ದರಿಂದ ಆತನು ತಾನು ಉದ್ಧವನು ಎಂಬುವುದನ್ನೂ ಕೂಡ ಮರೆತುಬಿಟ್ಟನು. ಸ್ವಾನಂದದಿಂದ ತೂಗಾಡಹತ್ತಿದನು ॥೭೦೪॥ ಆತನಿಗೆ ಪರಮಾನಂದದ ಉನ್ಮಾದವೇರಿತು. ಇದರಿಂದ ಇನ್ನೊಂದು ಎಂಬುವುದನ್ನು ಕಾಣುತ್ತಲೇ ಅದರ ನಾಶವನ್ನು ಮಾಡಹತ್ತಿದನು. ಪ್ರಪಂಚಕ್ಕೆ ಕಾಲಿನಿಂದ ಒದ್ದು ದೇವರ ತಲೆಯ ಮೇಲೆ ಏರಿ ಕುಳಿತನು. ಅಂದರೆ ದೇವರಿಗಿಂತಲೂ ಶ್ರೇಷ್ಠ ಪದವಿಯನ್ನು ಪಡೆದನು ॥೭೦೫॥ ದೇವರ ಮಸ್ತಕದ ಮೇಲೆ ಏರಿ ಕೊನೆಗೆ ದೇವತ್ವ ಮತ್ತು ಭಕ್ತತನವನ್ನು ಈತನು ನುಂಗಿಬಿಟ್ಟನು. ತದನಂತರ ಸಚ್ಚಿದಾನಂದದ ಸ್ವಾನಂದದಿಂದ ತಾನೂ ಕೂಡ ಆತ್ಮಸ್ವರೂಪನಾದನು ॥೭೦೬॥ ಅಲ್ಲಿ ಸತ್, ಚಿತ್, ಆನಂದ ಎಂಬ ಈ ತ್ರಿವಿಧ ಭೇದಗಳೂ ಕೂಡ ಅಳಿದು ಹೋದವು. ಸದೋದಿತವಾಗಿ ಪರಮಾನಂದ, ಶುದ್ಧ ಸ್ವಾನಂದವು ತುಂಬಿಕೊಂಡಿತು ॥೭೦೭॥ ನಶ್ವರವನ್ನು ತ್ಯಜಿಸಿದಾಗ ಅವಿನಾಶಕ್ಕೆ ''ಸತ್'' ಎಂದು ಹೇಳುವರು. ಜಡದ ನಿವೃತ್ತಿಯಾಗಲು ವಸ್ತುವಿಗೆ ''ಚಿತ್'' ಎಂದು ಹೇಳುವರು ॥೭೦೮॥ ಎಲ್ಲಿ ದುಃಖದ ಬಾಧೆಯು ಸ್ವಲ್ಪವೂ ಕೂಡ ಇರುವುದಿಲ್ಲವೋ ಅದಕ್ಕೆ ''ಆನಂದ'' ಎಂದು ಹೇಳುವರು. ಈ ಪ್ರಕಾರವಾಗಿ ಸಚ್ಚಿದಾನಂದ ಎಂಬ ಈ ಶಬ್ದವು ಮಾಯಿಕ ಆನಂದಮಯವಾಗಿರುವುದು. ಮಾಯಿಕ ಜ್ಞಾನಸಂಬಂಧವಾಗಿರುವುದು ॥೭೦೯॥ ಕಾರಣ ಆತ್ಮವಸ್ತು ಇದು ಸತ್‌ವೂ ಅಲ್ಲ ಹಾಗೂ ಅಸತ್‌ವೂ ಅಲ್ಲ. ಅದರಂತೆ ಚಿತ್‌ವೂ ಅಲ್ಲ ಅಚಿತ್‌ವೂ ಅಲ್ಲ. ಅದು ಸುಖದುಃಖಾತೀತವಾದ ಕೇವಲ ಆತ್ಮಸ್ವರೂಪವಾಗಿರುವುದು. ಇದನ್ನು ನೀನು ನಿಶ್ಚಿತವಾಗಿ ತಿಳಿ ॥೭೧೦॥ ಆನಂದಕಂದನಾದ ಶ್ರೀಕೃಷ್ಣನು ಸಂತುಷ್ಟನಾಗಿ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಉದ್ಧವನಿಗೆ ಆತ್ಮಬೋಧೆಯನ್ನು ಹೇಳಿದನು. ಆದ್ದರಿಂದ ಅಗಾಧವಾದ ಭಾಗ್ಯವಂತನು ಈತನೊಬ್ಬನೇ ಆಗಿರುವನು ॥೭೧೧॥ ನಿಜಧಾಮಕ್ಕೆ ಹೊರಡುವುದನ್ನು ಬಿಟ್ಟು ತನ್ನ ಗುಪ್ತವಾಗಿರುವ ಜ್ಞಾನವನ್ನು ಶ್ರೀಕೃಷ್ಣನು ಉದ್ಧವನಿಗೆ ಕೊಟ್ಟನು. ಅಂದಮೇಲೆ ಈತನ ಭಾಗ್ಯಕ್ಕಾಗಿ ಎಷ್ಟೆಂದು ವರ್ಣಿಸಬೇಕು ? ॥೭೧೨॥ ಯಾರು ತನ್ನ ಪಿತಾಶ್ರೀ ವಸುದೇವನಿಗೆ ಕೊಡಲಿಲ್ಲ, ಅಣ್ಣನಾದ ಬಲರಾಮನಿಗೂ ಕೊಡಲಿಲ್ಲ, ಪುತ್ರನಾಗಿರುವ ಪ್ರದ್ಯುಮ್ನನಿಗೂ ಕೊಡಲಿಲ್ಲ. ಅಂತಹ ಜ್ಞಾನವನ್ನು ಉದ್ಧವನಿಗೆ ಕೊಟ್ಟನು ॥೭೧೩॥ ಯಾವ ತನ್ನ ಮಾತೋಶ್ರೀ ದೇವಕಿಗೆ ಕೊಡಲಿಲ್ಲ, ಕುಂತಿ ಅತ್ತೆಗೆಗೂ ಕೂಡ ಕೊಡಲಿಲ್ಲ, ಯಶೋಧೆಗೂ ಸಹ ಕೊಡಲಿಲ್ಲ, ಅಂತಹ ಜ್ಞಾನವನ್ನು ಉದ್ಧವನಿಗೆ ಕೊಟ್ಟನು ॥೭೧೪॥

ಮ್ಹಣಾಲ ಸಾಂಗಿತಲೇ ಅರ್ಜುನಾಸೀ । ತೋಹೀ ಅತ್ಯಂತ ಪಢಿಯಂತಾ ತ್ಯಾಸೀ । ತ್ಯಾಹಾತೀ ಉತರಾವಯಾ ಧರಾಭಾರಾಸೀ । ಯುದ್ಧೀ ತ್ವರೇಸೀ ಉಪದೇಶೀಲಾ ॥೭೧೫॥ ತೈಸೇ ನವ್ಹೇ ಉದ್ಧವಾಕಡೇ । ಸಾವಕಾಶ ನಿಜನಿವಾಡೇ । ಗುಪ್ತ ಠೇವಣೇ ಫಾಡೋವಾಡೇ । ಅವಘೇ ತ್ಯಾಪುಢೇ ಅರ್ಪಿಲೇ ॥೭೧೬॥ ಪಿತ್ಯಾಚಿಯಾ ನಿಜಧನಾಸೀ । ಸ್ವಾಮಿತ್ವ ಲಾಭೇ ನಿಜಪುತ್ರಾಸೀ । ತೇವೀ ಶ್ರೀಕೃಷ್ಣಾಚಿಯಾ ಗುಹ್ಯಜ್ಞಾನಾಸೀ । ಝಾಲಾ ಮಿರಾಶೀ ಉದ್ಧವ ॥೭೧೭॥ ಪಾಂಡವಾಮಾಜೀ ಧನ್ಯ ಅರ್ಜುನ । ಯಾದವಾಂಮಾಜೀ ಉದ್ಧವ ಧನ್ಯ । ಯಾ ದೋಘಾಂಚ್ಯಾ ಭಾಗ್ಯಾ ಸಮಾನ । ನ ದಿಸೇ ಆನ ತ್ರಿಜಗತೀ ॥೭೧೮॥ ಸಕಳ ಸಾರಾಚಾ ನಿಜಸಾರಾಂಶ । ತೋ ಹಾ ಏಕಾದಶೀ ಅಠ್ಠಾವೀಸ । ಜೇವೀ ಯತೀಮಾಜೀ ಪರಮಹಂಸ । ತೇವೀ ಅಷ್ಟಾವಿಂಶ ಭಾಗವತೀ ॥೭೧೯॥ ಜೇವೀ ಕ್ಷೀರಾಬ್ಧೀಮಾಜೀ ಶೇಷಶಯನ । ತ್ಯಾವರೀ ಜೈಸಾ ನಾರಾಯಣ । ತೇವೀ ಭಾಗವತಾಮಾಜೀ ಜಾಣ । ಬ್ರಹ್ಮಪರಿಪೂರ್ಣ ಅಷ್ಟಾವಿಂಶ ॥೭೨೦॥ ಜೇವೀ ವೈಕುಂಠ ಪರಮ ಪಾವನ । ತ್ಯಾವರೀ ವಿರಾಜೇ ಶ್ರೀಭಗವಾನ । ತೇವೀ ಭಾಗವತಾಮಾಜೀ ಜಾಣ । ವಿರಾಜಮಾನ ಅಷ್ಟಾವಿಂಶ ॥೭೨೧॥ ಏವಢ್ಯಾ ಮಹತ್ತ್ವಾಚೇ ವೈಭವ । ಕೃಷ್ಣಕೃಪೇನೇ ಪಾವಲಾ ಉದ್ಧವ । ಬಾಪ ನಿಜಭಾಗ್ಯಾಚೀ ಥಾಂವ । ಬ್ರಹ್ಮ ಸ್ವಯಮೇವ ಸ್ವಯೇ ಝಾಲಾ ॥೭೨೨॥ ಉದ್ಧವ ಝಾಲಾ ಬ್ರಹ್ಮಪೂರ್ಣ । ತ್ಯಾಸೀ ಕೃಷ್ಣಕೃಪಾ ಪ್ರಮಾಣ । ತೇ ಮೀ ವಾಖಾಣೀ ಅಜ್ಞಾನ । ದೇಶಭಾಷೇನೇ ಪ್ರಾಕೃತ ॥೭೨೩॥ ಅಂಧಾಸೀ ಸೂರ್ಯ ಪ್ರಸನ್ನ । ಝಾಲಿಯಾ ದೇಖೇ ತೋ ನಿಧಾನ । ತೇವೀ ಪ್ರಕಟೋನಿ ಜನಾರ್ದನ । ಹೇ ಗುಹ್ಯಜ್ಞಾನ ಬೋಲವೀ ॥೭೨೪॥ ಜನಾರ್ದನ ಪ್ರಕಟಲಾ ಆತಾ । ಹೇ ಬೋಲಣೇ ಮಾಝೀ ಮೂರ್ಖತಾ । ತೋ ಸ್ವತಃಸಿದ್ಧ ಸದಾ ಅಸತಾ । ಹೇಹೀ ಝಾಲೋ ಮೀ ಜಾಣತಾ ತ್ಯಾಚಿಯಾ ಕೃಪಾ ॥೭೨೫॥ ತ್ಯಾಚಿಯಾ ಕೃಪೆ ಐಸೇ ಕೇಲೇ । ಮಾಝೇ ಮೀಪಣ ನಿಃಶೇಷ ನೇಲೇ । ನೇಲೇಪಣ ದೇಖೋ ನಾಹೀ ದೀಧಲೇ । ಜೇವೀ ಸೂರ್ಯೇ ಕೇಲೇ ಅಂಧಾರಾ ॥೭೨೬॥ ಮಜ ಕೃಪಾ ಕರೀಲ ಜನಾರ್ದನ । ಹೇಹೀ ನೇಣೇ ಮೀ ಅಜ್ಞಾನ । ತೇಣೇ ದಯಾಳುವೇ ಕೃಪಾ ಕರೂನ । ಹೇ ಗುಹ್ಯಜ್ಞಾನ ಬೋಲವಿಲೇ ॥೭೨೭॥

ತನ್ನ ಸಲುಗೆಯ ಸಖನಾದ ಅರ್ಜುನನಿಗೆ ಈ ಯಾವ ವಿರಾಟ ಬ್ರಹ್ಮಜ್ಞಾನವನ್ನು ಹೇಳಿದ್ದನು ಎಂದು ನೀನು ಹೀಗೆ ಹೇಳಬಹುದು. ಗಾಂಡೀವಧಾರೀ ಅರ್ಜುನನೂ ಕೂಡ ಆತನಿಗೆ ಈತನಂತೆಯೇ ಪ್ರಿಯಕರನಾಗಿದ್ದನು. ಆತನ ಕೈಯಿಂದ ಪೃಥ್ವಿಯ ಭಾರವನ್ನು ಇಳಿಸುವುದಕ್ಕಾಗಿ ಶ್ರೀಕೃಷ್ಣನು ಯುದ್ಧ ಪ್ರಸಂಗದಲ್ಲಿ ಆತನಿಗೆ ಅತ್ಯಂತ ಅವಸರದಿಂದ ಉಪದೇಶವನ್ನು ಮಾಡಿದನು ॥೭೧೫॥ ಆದರೆ ಉದ್ಧವನ ಅವಸ್ಥೆಯು ಹೀಗಿದ್ದಿಲ್ಲ. ಆತನಿಗೆ ದ್ವಾರಕಾಧೀಶನು ತನ್ನ ಮತವನ್ನು ಅತ್ಯಂತ ಸಾವಕಾಶವಾಗಿ ಹಾಗೂ ಸ್ಪಷ್ಟವಾಗಿ ಹೇಳಿದನು. ಮತ್ತು ಅಗಾಧವಾದ ಸರ್ವ ಜ್ಞಾನದ ಗೌಪ್ಯವನ್ನು ಪ್ರಕಟಗೊಳಿಸಿದನು ॥೭೧೬॥ ತಂದೆಯು ಗಳಿಸಿರುವ ಧನಕ್ಕೆ ಆತನ ಪುತ್ರನು ಹೇಗೆ ಸರ್ವ ಸಂಪತ್ತಿನ ವಾರಸದಾರನಾಗುವನೋ, ಅದರಂತೆ ಶ್ರೀಕೃಷ್ಣನ ಗುಹ್ಯವಾದ ಹಾಗೂ ಪರಮಜ್ಞಾನದ ಮಾಲಕನು ಉದ್ಧವನಾದನು ॥೭೧೭॥ ಪಂಚಪಾಂಡವರಲ್ಲಿ ಅರ್ಜುನನು ಧನ್ಯನು. ಮತ್ತು ಯಾದವರಲ್ಲಿ ಶ್ರೀಕೃಷ್ಣನ ಸಖನಾದ ಉದ್ಧವನು ಧನ್ಯಧನ್ಯನು. ಈ ಈರ್ವರಂತೆ ಭಾಗ್ಯವಂತರು ಮೂರು ಲೋಕಗಳಲ್ಲಿಯೂ ಯಾರೂ ಕಾಣುವುದಿಲ್ಲ/॥೭೧೮॥ ಸರ್ವ ಸಾರಗಳಲ್ಲಿ ಸಾರವಾಗಿರುವ ಯಾವ ಏಕಾದಶ ಸ್ಕಂಧದಲ್ಲಿನ ಇಪ್ಪತ್ತೆಂಟನೆಯ ಅಧ್ಯಾಯವಾಗಿರುವುದು. ಯತಿಗಳವರಲ್ಲಿ ಯಾವ ಪ್ರಕಾರವಾಗಿ ಪರಮಹಂಸನು ಶ್ರೇಷ್ಠನೋ, ಅದೇ ಪ್ರಕಾರವಾಗಿ ಸಂಪೂರ್ಣ ಭಾಗವತದಲ್ಲಿ ಈ ಯಾವ ಇಪ್ಪತ್ತೆಂಟನೆಯ ಅಧ್ಯಾಯವು ಶ್ರೇಷ್ಠವಾಗಿರುವುದು ॥೭೧೯॥ ಕ್ಷೀರಸಾಗರದಲ್ಲಿ ಹೇಗೆ ಶೇಷಶಯನವೋ ಹಾಗೂ ಅದರ ಮೇಲೆ ಶ್ರೀಮನ್‌ನಾರಾಯಣನೋ, ಹಾಗೆಯೇ ಭಾಗವತದಲ್ಲಿನ ಈ ಇಪ್ಪತ್ತೆಂಟನೆಯ ಅಧ್ಯಾಯವು ಪೂರ್ಣ ಬ್ರಹ್ಮಸ್ವರೂಪವಾಗಿರುವುದು ॥೭೨೦॥ ಯಾವ ಪ್ರಕಾರವಾಗಿ ಪರಮ ಪಾವನವಾಗಿರುವ ವೈಕುಂಠದಲ್ಲಿ ಶ್ರೀಭಗವಾನನು ಶೋಭಿಸುವನೋ, ಅದೇ ಪ್ರಕಾರವಾಗಿ ಈ ಭಾಗವತದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಶೋಭಾಯಮಾನವಾಗಿ ಕಾಣುತ್ತಿರುವುದು ॥೭೨೧॥ ಇಷ್ಟೊಂದು ಮಹತ್ವದ ವೈಭವವು ಶ್ರೀಕೃಷ್ಣನ ಕೃಪೆಯಿಂದ ಉದ್ಧವನಿಗೆ ಪ್ರಾಪ್ತವಾಯಿತು. ಅಬ್ಬಾ! ಈತನ ನಿಜಭಾಗ್ಯವು ಎಂತಹ ದೊಡ್ಡದಿರಬೇಕು ? ತಾನು ಸ್ವತಃ ಬ್ರಹ್ಮಸ್ವರೂಪನಾದನು ॥೭೨೨॥ ಉದ್ಧವನು ಪೂರ್ಣ ಬ್ರಹ್ಮನಾದನು. ಇದಕ್ಕೆ ಶ್ರೀಕೃಷ್ಣನ ಕೃಪೆಯು ಪ್ರಮಾಣವಾಗಿರುವುದು. ನಾನು ಅಜ್ಞಾನಿಯು, ಪ್ರಾಕೃತ ಭಾಷೆಯಲ್ಲಿ ಇದರ ವರ್ಣನೆಯನ್ನು ಮಾಡುತ್ತಿರುವೆನು ॥೭೨೩॥ ಕುರುಡನಿಗೆ ಸೂರ್ಯನು ಪ್ರಸನ್ನನಾಗಲು ಆತನು ಭೂಮಿಯಲ್ಲಿನ ಗುಪ್ತ ನಿಧಿಯನ್ನೂ ಕೂಡ ಕಾಣಬಲ್ಲನು. ಅದರಂತೆ ಜನಾರ್ದನಸ್ವಾಮಿಯು ಪ್ರಕಟನಾಗಿ ಈ ಗುಹ್ಯ ಜ್ಞಾನವನ್ನು ನನ್ನಿಂದ ನುಡಿಸಿಕೊಳ್ಳುತ್ತಿರುವನು॥೭೨೪॥ ಜನಾರ್ದನಸ್ವಾಮಿಯವರು ಈಗ ಪ್ರಕಟರಾದರು ಎಂಬ ಈ ನನ್ನ ಹೇಳಿಕೆಯೂ ಕೂಡ ಅಜ್ಞಾನದ್ದಾಗಿದೆ. ಕಾರಣ ಅವರು ಸದಾ ಸರ್ವಕಾಲದಲ್ಲಿ ಸ್ವತಃಸಿದ್ಧರಾಗಿರುವರು. ಈ ತಿಳುವಳಿಕೆಯು ನನಗೆ ಅವರ ಕೃಪೆಯಿಂದಲೇ ಆಯಿತು ॥೭೨೫॥ ಅವರ ಕೃಪೆಯಿಂದಲೇ ಇಂತಹ ಅಲೌಕಿಕ ಸ್ಥಿತಿಯುಂಟಾಯಿತು. ನಾನು ನನ್ನದೆಂಬುದು ನಿಃಶೇಷವಾಗಿ ಹಾರಿಹೋಯಿತು. ಸೂರ್ಯನು ಕತ್ತಲನ್ನು ಒಯ್ಯುವನು. ಅದರಂತೆ ಅವರು ''ನಾನು ನನ್ನದು'' ಒಯ್ದದ್ದು ನನಗೆ ತೋರಿಸಲೇ ಇಲ್ಲ ॥೭೨೬॥ ನನ್ನ ಮೇಲೆ ಜನಾರ್ದನಸ್ವಾಮಿಯವರು ಕೃಪೆ ಮಾಡುವರೆಂಬುವುದನ್ನು ಅಜ್ಞಾನಿಯಾದ ನನಗೆ ತಿಳಿಯಲಿಲ್ಲ. ಆದರೆ ಆ ದಯಾಘನನು ಕೃಪೆದೋರಿ ಈ ಗುಹ್ಯಜ್ಞಾನವನ್ನು ನನ್ನಿಂದ ನುಡಿಸಿದನು ॥೭೨೭॥

ನಿಕಟ ಅಸತಾ ಜನಾರ್ದನ । ಮೀ ನೇಣೇ ತ್ಯಾಚೇ ಮಹಿಮಾನ । ತೇಣೇ ಆಪಲಾ ಮಹಿಮಾ ಆಪಣ । ಮಜ ಮುಖೇ ಜಾಣ ಬೋಲವಿಲಾ ॥೬೨೮॥ ಮೀ ಜೇ ಮ್ಹಣೇ ಮಾಝೇ ಮುಖ । ತೇಹೀ ಜನಾರ್ದನ ಝಾಲಾ ದೇಖ । ತೇಣೇ ಮುಖೇ ನಿಜಾತ್ಮ ಸುಖ । ಬೋಲವೀ ನಿಷ್ಟಂಕ ನಿಜಾತ್ಮ ಸತ್ತಾ ॥೬೨೯॥ ಏವಂ ಮಾಝೇನಿ ನಾಂವೇ ಕವಿತಾ । ಪರೀ ಜನಾರ್ದನಚಿ ಝಾಲಾ ವಕ್ತಾ । ತೇಣೇ ವಕ್ತೇಪಣೇ ತತ್ತ್ವತಾ । ರಸಾಳ ಕಥಾ ಚಾಲವಿಲೀ ॥೬೩೦॥ ಬ್ರಹ್ಮರಸೇ ರಸಾಳ ಕಥಾ । ನಿರೂಪಿಲೇ ಶ್ರೀಭಾಗವತಾ । ತ್ಯಾಮಾಜೀ ಬ್ರಹ್ಮ ತಲ್ಲೀನತಾ । ಜಾಣ ತತ್ತ್ವತಾ ಅಷ್ಠಾವಿಂಶ ॥೬೩೧॥ ಅಷ್ಠಾವಿಸಾವ್ಯಾಚೇ ನಿರೂಪಣ । ತೇ ತತ್ತ್ವತಾ ಬ್ರಹ್ಮ ಪರಿಪೂರ್ಣ । ಶ್ರದ್ಧೇನೇ ಕರಿತಾ ಶ್ರವಣ । ಉದ್ಧವ ಸಂಪೂರ್ಣ ನಿವಾಲಾ ॥೬೩೨॥ ಉದ್ಧವ ನಿವೋನಿಯಾ ಆಪಣ । ಸ್ವಯೇ ವಿಚಾರಿತಾ ಝಾಲಾ ಜಾಣ । ಮ್ಹಣೇ ಹೇ ಶುದ್ಧ ಆತ್ಮಜ್ಞಾನ । ಪರೀ ಪ್ರಾಪ್ತಿ ಕಠಿಣ ಅಬಳಾಂಸೀ ॥೬೩೩॥ ಯಾ ಚಿತ್ಸ್ವರೂಪಾಚೀ ಪ್ರಾಪ್ತೀ । ಸುಗಮ ಹೋಯ ಸಾಧಕಾಪ್ರತೀ । ಪುಢೀಲ ಅಧ್ಯಾಯೀ ಯೇಚಿ ಅರ್ಥೀ । ಉದ್ಧವ ವಿನಂತೀ ಕರೀಲ ॥೬೩೪॥ ಕಡಾ ಫೋಡೋನಿ ಮಾರ್ಗ ಕೀಜೇ । ಕಾ ಉಂಚೀ ಫರಸ ಬಾಂಧೀಜೇ । ತೇವೀ ಸುಗಮೇ ನಿರ್ಗುಣ ಪಾವಿಜೇ । ತೋ ಉಪಾಯ ಪುಸಿಜೇ ಉದ್ಧವೇ ॥೬೩೫॥ ಬ್ರಹ್ಮಪ್ರಾಪ್ತೀಚಾ ಸುಗಮ ಉಪಾವೋ । ಸ್ವಯೇ ಸಾಂಗೇಲ ದೇವಾಧಿದೇವೋ । ತೋ ಸುರಸ ಪುಢೀಲ ಅಧ್ಯಾವೋ । ಸಾಧಕಾ ಪಹಾ ಹೋ ಪರಮಾರ್ಥಸಿದ್ಧಿ ॥೬೩೬॥ ಪವ್ಹಣೆಯಾಪರಿಸ ಪಾಯಉತಾರಾ । ಅಬಳೀ ಉತರೀಜೇ ಭವಸಾಗರಾ । ತೈಸಾ ಸಾಧಕಾಲಾಗೀ ಸೋಪಾರಾ । ಉಪಾಯ ಪುಢಾರಾ ಹರಿ ಸಾಂಗೇ ॥೬೩೭॥ ಸೀತೇಚೇನಿ ಕೃಪಾಪಡಿಭಾರೇ । ಸೇತು ಬಾಂಧಿಜೇ ರಾಮಚಂದ್ರೇ । ತೇಥ ಸಮುದ್ರ ತರತೀ ವಾನರೇ । ಜೇ ವನಚರೇ ಅತಿಮಂದೇ ॥೬೩೮॥ ತೇವೀ ಉದ್ಧವಪ್ರಶ್ನ-ಪ್ರೀತೀಸೀ । ಭವಾಬ್ಧಿಸೇತು ಹೃಷೀಕೇಶೀ । ಬಾಂಧಿಲಾ ನಿಜಭಕ್ತಿಉಪಾಯೇಸೀ । ತೇಥ ತರತೀ ಆಪೈಸೀ ಭಾವಿಕೇ ಅಬಳೇ ॥೬೩೯॥ ಕೃಷ್ಣಭಕ್ತಿಸೇತುದ್ವಾರೇ । ತರಲೀ ಜಡ ಮೂಢ ಪಾಮರೇ । ತೇ ಭಕ್ತಿ ಸಾಂಗಿಜೇಲ ಯಾದವೇಂದ್ರೇ । ಶ್ರೋತಾ ಸಾಧರೇ ಪರಿಸಾವೀ ॥೬೪೦॥ ಏಕಾ ಜನಾರ್ದನಾ ಶರಣ । ತೇಣೇ ಶ್ರೋತೇ ಸುಪ್ರಸನ್ನ । ಪುಢೀಲ ಅಧ್ಯಾಯಾಚೇ ಕಥನ । ತೇಣೇ ಸಾಧಕ ಜನ ತರತೀಲ ॥೬೪೧॥

ಜನಾರ್ದನಸ್ವಾಮಿಯವರು ನನ್ನ ಅತಿಸಮೀಪದಲ್ಲಿದ್ದರೂ ಸಹ ನನಗೆ ಅವರ ಮಹಿಮೆಯು ತಿಳಿಯಲಿಲ್ಲ. ಅವರು ತಮ್ಮ ಮಹಿಮೆಯನ್ನು ತಾವೇ ನನ್ನ ಮುಖದಿಂದ ನುಡಿಸಿದರು ॥೬೨೮॥ ನಾನು ನನ್ನ ಮುಖವೆಂದು ಹೇಳುತ್ತೇನೆ. ಆದರೆ ಅದೂ ಕೂಡ ಜನಾರ್ದನಸ್ವಾಮಿಗಳೇ ಆದರು. ಆ ಮುಖದಿಂದ ನಿಃಶಂಕವಾದ ಆತ್ಮಸತ್ತೆಯಿಂದ ಆತ್ಮಸುಖವನ್ನು ನುಡಿಸಿದರು ॥೬೨೯॥ ತಾತ್ಪರ್ಯವೇನೆಂದರೆ, ನನ್ನ ನಾಮದ ಕವಿತೆ ಎಂದು ಕಾಣುವುದು. ಆದರೆ ಜನಾರ್ದನಸ್ವಾಮಿ ಅವರೇ ಅದರ ವಕ್ತಾ ಆಗಿರುವರು. ಅವರೇ ತಮ್ಮ ವಕ್ತೃತ್ವದಿಂದ ಈ ರಸಾಳ ಕಥೆಯನ್ನು ನಡೆಸಿಕೊಟ್ಟಿರುವರು ॥೬೩೦॥ ಬ್ರಹ್ಮರಸದಿಂದ ರಸಭರಿತವಾಗಿರುವ ಈ ಕಥೆಯೇ ಭಾಗವತವಾಗಿರುವುದು. ಅವರು ನಿರೂಪಣೆ ಮಾಡಿದ ಭಾಗವತದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಕೇವಲ ಬ್ರಹ್ಮಸ್ವರೂಪದಿಂದ ತನ್ಮಯಗೊಂಡಿರುವುದು ॥೬೩೧॥ ಈ ಇಪ್ಪತ್ತೆಂಟನೆಯ ಅಧ್ಯಾಯದ ನಿರೂಪಣೆ ಎಂದರೆ ಅದು ಪರಿಪೂರ್ಣ ಬ್ರಹ್ಮವೇ ಆಗಿರುವುದು. ಇದನ್ನು ಪರಮ ಶ್ರದ್ಧೆಯಿಂದ ಸೇವನೆ ಮಾಡಿದ ಉದ್ಧವನಿಗೆ ಪೂರ್ಣ ಸಮಾಧಾನವು ಲಭಿಸಿತು ॥೬೩೨॥ ಉದ್ಧವನು ಸ್ವತಃ ತೃಪ್ತನಾದನು. ನಂತರ ಹೀಗೆ ವಿಚಾರವನ್ನು ಮಾಡಿದನು ; ಈ ಯಾವ ಶುದ್ಧ ಆತ್ಮಜ್ಞಾನವು ಅಜ್ಞಾನೀ ದುರ್ಬಲರಿಗೆ ಪ್ರಾಪ್ತವಾಗುವುದು ಕಠಿಣವಾಗಿರುವುದು ॥೬೩೩॥ ಅದಕ್ಕಾಗಿ ಈ ಚಿತ್ಸ್ವರೂಪದ ಪ್ರಾಪ್ತಿಯು ಸಾಧಕರಿಗೆ ಸುಲಭಸಾಧ್ಯ ಹೇಗಾದೀತು? ಈ ಅರ್ಥದ ವಿನಂತಿಯನ್ನು ಮುಂದಿನ ಅಧ್ಯಾಯದಲ್ಲಿ ಮಾಡುವನು ॥೬೩೪॥ ಪರ್ವತದ ಇಕ್ಕಟ್ಟನ್ನು ಒಡೆದು ಸರಿಯಾದ ಮಾರ್ಗ ಮಾಡುವಂತೆ ಅಥವಾ ಎತ್ತರಕ್ಕೆ ಏರಿ ಹೋಗಲು ಪಾವುಟಣಿಗೆಯನ್ನು ಕಟ್ಟುವಂತೆ ಸುಗಮ ರೀತಿಯಲ್ಲಿ ನಿರ್ಗುಣತ್ವಕ್ಕೆ ಹೇಗೆ ಮುಟ್ಟಬೇಕೆಂಬ ಉಪಾಯವನ್ನು ಉದ್ಧವನು ಕೇಳುವನು ॥೬೩೫॥ ಬ್ರಹ್ಮಪ್ರಾಪ್ತಿಯ ಸುಲಭೋಪಾಯವನ್ನು ದೇವಾಧಿದೇವನು ಸ್ವತಃ ಹೇಳುವನು. ಇಂತಹ ಮುಂದಿನ ಅಧ್ಯಾಯವು ಸುರಸವಾಗಿದ್ದು ಸಾಧಕರಿಗೆ ಪರಮಾರ್ಥದ ಪ್ರಾಪ್ತಿಯನ್ನು ಮಾಡಿಕೊಡುವುದು ॥೬೩೬॥ ಈಜುವ ಶ್ರಮವಿಲ್ಲದೇ ಕೇವಲ ಕಾಲುದಾರಿಯಿಂದ ಅಜ್ಞಾನಿ ಬಾಂಧವರಿಗೆ ಸಂಸಾರಸಾಗರದಿಂದ ಪಾರಾಗುವಂತೆ ಸುಲಭ ಉಪಾಯವನ್ನು ಇನ್ನು ಮುಂದೆ ಶ್ರೀಕೃಷ್ಣನು ಸಾಧಕರಿಗೆ ಹೇಳುವನು ॥೬೩೭॥ ಶ್ರೀರಾಮಚಂದ್ರನು ಸೀತೆಯ ಕೃಪೆಗಾಗಿ ಸೇತುವೆಯನ್ನು ಕಟ್ಟಿದನು. ಆ ಸಮುದ್ರದ ಮೇಲೆ ಕಟ್ಟಿದ ಸೇತುವೆಯ ಮೇಲೆ ಮೂಢವನಚರರಾದ ವಾನರರು ಸಹಜವಾಗಿ ನಡೆದು ಪಾರಾದರು ॥೬೩೮॥ ಅದರಂತೆ ಉದ್ಧವನ ಪ್ರಶ್ನೆಯ ಪ್ರೇಮಕ್ಕಾಗಿ ತನ್ನ ಭಕ್ತಿಯ ಉಪಾಯದೊಂದಿಗೆ ಸಂಸಾರ ಸೇತುವೆಯನ್ನು ಕಟ್ಟಿದನು. ಅದರ ಮೇಲಿಂದ ಭಾವಿಕರಾದ ಅಜ್ಞಾನಿ ಜನರೂ ಕೂಡ ಸಹಜವಾಗಿ ಪಾರಾಗುವರು ॥೬೩೯॥ ಯಾವ ಶ್ರೀಕೃಷ್ಣ ಭಕ್ತಿರೂಪ ಸೇತುವೆಯ ಸಹಾಯದಿಂದ ಜಡ, ಮೂಢ, ಪಾಮರ ಜನರು ಉದ್ಧಾರರಾದರೋ, ಅಂತಹ ಭಕ್ತಿಯನ್ನು ಯಾದವೇಂದ್ರ ಶ್ರೀಕೃಷ್ಣನು ಹೇಳುವನು. ಅದನ್ನು ಶ್ರೋತೃಗಳವರು ಆದರಯುಕ್ತ ಚಿತ್ತದಿಂದ ಶ್ರವಣವನ್ನು ಮಾಡಬೇಕು ॥೬೪೦॥ ಒಬ್ಬ ಶ್ರೀಜನಾರ್ದನರಿಗೆ ಶರಣು ಹೋಗಿದ್ದರಿಂದ ಶ್ರೋತೃಗಳೂ ಕೂಡ ಸುಪ್ರಸನ್ನರಾದರು. ಈಗ ಮುಂದಿನ ಅಧ್ಯಾಯದ ಕಥನದಿಂದ ಸಾಧಕರು ಸಹಜವಾಗಿ ಉದ್ಧಾರರಾಗುವರು ॥೬೪೧॥

ಸಾಂಡೂನಿಯಾ ಏಕಪಣ । ಏಕಾ ಜನಾರ್ದನ ಶರಣ । ಸುಗಮ ಸಾಧೇ ಆತ್ಮ ಜ್ಞಾನ । ತೇ ಭಕ್ತಿಸಾಧನ ಹರಿಸಾಂಗೇ ॥೭೪೨॥

ಇತಿ ಶ್ರೀಮದ್ ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವಸಂವಾದೇ
ಪರಮಹಂಸಸಂಹಿತಾಯಾ ಏಕಾಕಾರಟೀಕಾಯಾಂ ''ಪರಮಾರ್ಥನಿರ್ಣಯೋ'' ನಾಮ
ಅಷ್ಟಾವಿಂಶತಿತಮೋऽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಏಕನಾಥನು ತನ್ನ ಏಕತ್ವವನ್ನು ಬಿಟ್ಟುಕೊಟ್ಟು ಜನಾರ್ದನಸ್ವಾಮಿಯವರ ಚರಣ ಕಮಲಗಳಿಗೆ ಶರಣಾಗಿದ್ದಾನೆ. ಶ್ರೀಹರಿಯು ಈಗ ಆತ್ಮಜ್ಞಾನವು ಸುಲಭಸಾಧ್ಯವಾಗುವ ಭಕ್ತಿರೂಪ ಸಾಧನೆಯನ್ನು ಹೇಳುವನು ।೭೪೨॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಏಕಾದಶ ಸ್ಕಂಧದ ಕೃಷ್ಣೋದ್ಧವ ಸಂವಾದದ ಪರಮಹಂಸಸಂಹಿತೆಯ ಏಕನಾಥ
ಮಹಾರಾಜರಭಾಷ್ಯೆಯ ''ಪರಮಾರ್ಥನಿರ್ಣಯೋ'' ನಾಮದ ಇಪ್ಪತ್ತೆಂಟನೆಯ ಅಧ್ಯಾಯವು ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಇಪ್ಪತ್ತೊಂಭತ್ತನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರುದಯಾರ್ಣವ । ತುಝೀ ಕೃಪೇಸೀ ನಾಹೀ ಠಾಂವ । ಕೃಪೇನೇ ತಾರಿಸೀ ಜೀವ । ಜೀವಭಾವ ಸಾಂಡವೂನಿ ॥೧॥ ಸಾಂಡವೂನಿ ದೇಹಬುದ್ಧೀ । ನಿರಸೋನಿ ಜೀವೋಪಾಧೀ । ಭಕ್ತ ತಾರಿಸೀ ಭವಾಬ್ಧೀ । ಕೃಪಾನಿಧೀ ಕೃಪಾಳುವಾ ॥೨॥ ತುಝೀ ಪಾಹತಾ ಕೃಪಾಳೂಪಣ । ಜೀವಾಸೀ ಜೀವೇ ವಾರಿಸೀ ಪೂರ್ಣ । ನಾಮಾ ರೂಪಾ ಘಾಲಿಸೀ ಶೂನ್ಯ । ಜಾತಿಗೋತ ಸಂಪೂರ್ಣ ನಿರ್ದಳಿಸೀ ॥೩॥ ನಿರ್ದಳೂನಿ ಆಪಪರಾ । ನಿಸಂತಾನ ಕರಿಸೀ ಸಂಸಾರಾ । ತೋ ತೂ ಜೀವಲಗ ಸೋಯರಾ । ಕೃಪಾಳೂ ಖರಾ ಘಡೇ ಕೇವೀ ॥೪॥ ಜೇವೀ ಆಧಾರೀ ನಾಂದತೇ ದೃಷ್ಟೀ । ಭಾಸತೀ ನಕ್ಷತ್ರೇ ಖದ್ಯೋತ ಕೋಟೀ । ತೇ ಅಂಧಾರೇಸೀ ಸೂರ್ಯ ಘೋಟೀ । ತೇವೀ ತುಝೀ ಭೇಟೀ ಸಾಧಕಾ ॥೫॥ ತುಝೀ ಜೇಥ ಸಾಚಾರ ಭೇಟೀ । ತುವಾ ಕೇಲಿಯಾ ಕೃಪಾದೃಷ್ಟೀ । ಸಂಸಾರಭೇದಾಚೀ ತ್ರಿಪುಟೀ । ತ್ರಿಗುಣೇಸೀ ಸೃಷ್ಟೀ ದಿಸೇನಾ ॥೬॥ ನ ದಾಖವೂನಿ ಗುಣಾದಿ ಸೃಷ್ಟೀ । ದಾವಿಸೀ ಅದ್ವಯ ಬ್ರಹ್ಮದೃಷ್ಟೀ । ತುಝೀ ಜಾಲಿಯಾ ಭೇಟೀ । ಭೇಟೀಸೀ ತುಟೀ ಕದಾ ನ ಪಡೇ ॥೭॥ ''ಜೋ ಕದಾ ನ ದೇಖಿಜೇ ದೃಷ್ಟೀ । ತ್ಯಾಸೀ ಕೇವೀ ಹೋಯ ಭೇಟೀ । ಭೇಟೀಸೀ ಕದಾ ನ ಪಡೇ ತುಟೀ । ಹೇಹೀ ಗೋಷ್ಟೀ ಘಡೇ ಕೇವೀ'' ॥೮॥ ಜೈಸಾ ಗರ್ಭ ಮಾತೇಚ್ಯಾ ಪೋಟೀ । ಅಸೋನಿ ಮಾಉಲೀ ನ ದೇಖೇ ದೃಷ್ಟೀ । ತರೀ ತಿಚೇ ಭೇಟೀಸೀ ನವ್ಹೇ ತುಟೀ । ತೇವೀ ತುಝೀ ಪೋಟೀ । ಸಾಧಕ ॥೯॥ ಮಾತಾ ಕಳಕಳೋನಿ ಪಾಳೀ ತಾನ್ಹೇ । ಶೇಖೀ ತೇ ಮಾಉಲಿತೇ ನೇಣೇ । ತೇವೀ ತುಜಮಾಜೀ ಅಜ್ಞಾನೇ । ತುವಾ ಪ್ರತಿಪಾಳಣೇ ನಿಜಲೋಭೇ ॥೧೦॥ ಜನ್ಮಲ್ಯಾ ಬಾಳಾಕಾರಣೇ । ಮಾತಾ ವಾಢವೀ ಶಹಾಣಪಣೇ । ತೇವೀ ತುಝೇನಿ ನಿಜಜ್ಞಾನೇ । ಸಜ್ಞಾನ ಹೋಣೇ ಸಾಧಕೀ ॥೧೧॥

ಹೇ ಓಂಕಾರಸ್ವರೂಪ ಶ್ರೀಸದ್ಗುರು ದಯಾಸಾಗರನೇ, ನಿನಗೆ ನಮಸ್ಕಾರಗಳು. ನಿನ್ನ ಕೃಪೆಗೆ ಅಂತಪಾರವಿಲ್ಲ. ಜೀವತ್ವದ ಧರ್ಮವನ್ನು ಕೃಪೆದೋರಿ ಬಿಡಿಸಿ ನೀನು ಜೀವದ ಉದ್ಧಾರ ಮಾಡುವೆ ॥೧॥ ಹೇ ಕೃಪಾನಿಧಿ ಶ್ರೀಗುರುರಾಯನೇ, ನೀನು ದೇಹಬುದ್ಧಿಯನ್ನು ಬಿಡಿಸಿ ಜೀವೋಪಾದಿ ಇಲ್ಲದಂತೆ ಮಾಡಿ ಭಕ್ತರಿಗೆ ಸಂಸಾರಸಮುದ್ರದಿಂದ ಪಾರು ಮಾಡುವೆ ॥೨॥ ನಿನ್ನ ಕೃಪೆಯ ಪ್ರಭೆಯು ಅಲೌಕಿಕವಾಗಿದೆ. ನೀನು ಜೀವಕ್ಕೆ ಜೀವತ್ವವನ್ನು ಇಲ್ಲದಂತೆ ಮಾಡುವೆ. ಅದರ ನಾಮರೂಪಗಳಿಗೆ ಶೂನ್ಯ ಮಾಡಿಬಿಡುವೆ. ಸರ್ವ ಜಾತಿಗೋತ್ರಗಳ ಸಂಹಾರ ಮಾಡಿಬಿಡುವೆ ॥೩॥ ಆಪಪರ ಭಾವನೆಯ ನಾಶಮಾಡಿ ನೀನು ಸಂಸಾರವನ್ನು ನಾಶಗೊಳಿಸುವೆ. ಅಂದಮೇಲೆ ನೀನು ಜೀವದ ಮಿತ್ರನು ಹಾಗೂ ನಿಜವಾದ ಕೃಪಾವಂತನು ಹೇಗಾಗುವೆ? ॥೪॥ ಕತ್ತಲಲ್ಲಿ ಜೀವಕ್ಕೆ ನಾನಾ ಪ್ರಕಾರಗಳ ಕೋಟ್ಯಾವಧಿ ನಕ್ಷತ್ರಗಳು, ಮಿಂಚುಹುಳಗಳು ತೋರುತ್ತಿರುವುವು. ಆದರೆ ಸೂರ್ಯನು ಆ ಕತ್ತಲೆಯನ್ನು ಹೇಗೆ ಇಲ್ಲದಾಗಿ ಮಾಡುವನೋ, ಅದೇ ಪ್ರಕಾರವಾಗಿ ಸಾಧಕರಿಗೆ ನಿನ್ನ ಭೇಟಿಯಾಗಿರುವುದು ॥೫॥ ನಿಜವಾಗಿಯೂ ನಿನ್ನ ಭೇಟಿಯು ಎಂದಾಗುವುದೋ, ನೀನು ಎಂದು ಕೃಪಾದೃಷ್ಟಿ ಮಾಡುವಿಯೋ ಆಗ ಸಂಸಾರದ ತ್ರಿಪುಟಿಯು ಕಾಣುವುದಿಲ್ಲ. ಹಾಗೆಯೇ ತ್ರಿಗುಣಸಹ ಸೃಷ್ಟಿಯೂ ಕೂಡ ತೋರುವುದಿಲ್ಲ ॥೬॥ ತ್ರಿಗುಣಾತ್ಮಕ ಸೃಷ್ಟಿಯನ್ನು ತೋರಿಸದೇ ದೃಷ್ಟಿಗೆ ಅದ್ವೈತ ಬ್ರಹ್ಮ ತೋರಿಸುವೆ. ನಿನ್ನ ಭೇಟಿಯು ಒಮ್ಮೆ ಆದರೆ ಸಾಕು, ಪುನಃ ಆ ಭೇಟಿಯು ಎಂದಿಗೂ ತಪ್ಪುವುದಿಲ್ಲ ॥೭॥ ಯಾವುದು ಎಂದಿಗೂ ದೃಷ್ಟಿಗೆ ತೋರಲು ಶಕ್ಯವಿಲ್ಲವೋ, ಅದರ ಭೇಟಿಯಾದರೂ ಹೇಗಾಗಲು ಸಾಧ್ಯ? ಮತ್ತು ಭೇಟಿಯು ತಪ್ಪುವುದೇ ಇಲ್ಲ ಎಂಬುವುದು ಹೇಗೆ ಸಾಧಿಸಲು ಸಾಧ್ಯ? ॥೮॥ ತಾಯಿಯ ಉದರದಲ್ಲಿ ಗರ್ಭವು ಬೆಳೆಯುತ್ತಿರುವುದು. ಆದರೆ ಆಕೆಗೆ ಅದು ಕಾಣಿಸುವುದಿಲ್ಲ. ಹೀಗಿದ್ದರೂ ಆಕೆಯ ಮತ್ತು ಗರ್ಭದ ಭೇಟಿಯಲ್ಲಿ ಯಾವ ಅಂತರವಾಗುವುದಿಲ್ಲ. ಅದರಂತೆಯೇ ಸಾಧಕರು ನಿನ್ನ ಬಳಿಯಲ್ಲಿರುವರು ॥೯॥ ತಾಯಿಯು ಅತ್ಯಂತ ಕಳಕಳಿಯಿಂದ ಕೂಸಿನ ಪಾಲನೆ ಪೋಷಣೆ ಮಾಡುತ್ತಿರುವಳು. ಆದರೆ ಆ ಕೂಸು ತಾಯಿಯನ್ನು ತಿಳಿಯುತ್ತಿರುವುದಿಲ್ಲ. ಅದರಂತೆ ನಿನ್ನನ್ನು ತಿಳಿಯಲಾರದ ಅಜ್ಞಾನಿ ಜನರಿರುವರು. ನೀನು ನಿನ್ನ ಪ್ರೇಮಕ್ಕಾಗಿಯೇ ಅವರನ್ನು ಸಂಭಾಳಿಸುತ್ತಿರುವೆ ॥೧೦॥ ಹುಟ್ಟಿದ ಕೂಸಿಗೆ ತಾಯಿಯು ಹೇಗೆ ಬುದ್ಧಿವಂತಿಕೆಯಿಂದ ಬೆಳೆಯಿಸುತ್ತಿರುವಳೋ, ಅದರಂತೆ ನಿನ್ನ ಆತ್ಮಜ್ಞಾನದಿಂದ ಸಾಧಕರು ಜ್ಞಾನಿಗಳಾಗುವರು ॥೧೧॥

ಸಾಧಕೀ ಲಾಧತಾ ತುರ್ಯೀ ಜ್ಞಾನ । ಥಿತೇ ನಾಠವೇ ಮೀತೂಪಣ । ಜೀವ ವಿಸರಲಾ ಜೀವಪಣ । ಅದ್ವಯ ಪೂರ್ಣ ಪರಮಾತ್ಮಾ ॥೧೨॥ ಅಸೋತ ಯಾ ಬಹುತಾ ಗೋಷ್ಟೀ । ನವ್ಹತಾ ಸದ್ಗುರುಕೃಪಾದೃಷ್ಟೀ । ಕರಿತಾ ಉಪಾಯಾಂಚ್ಯಾ ಕೋಟೀ । ನವ್ಹೇ ಭೇಟೀ ಪರಮಾರ್ಥಾ ॥೧೩॥ ಜಾಹಲಿಯಾ ಸದ್ಗುರುಕೃಪಾದೃಷ್ಟೀ । ಸಾಧನೇ ಪಳತೀ ಉಠಾಉಠೀ । ಬ್ರಹ್ಮಾನಂದೇ ಕೋಂದೇ ಸೃಷ್ಟೀ । ಸ್ವಾನಂದಪುಷ್ಟೀ ಸಾಧಕಾ ॥೧೪॥ ಜಾಹಲಿಯಾ ಸದ್ಗುರುಕೃಪಾ ಪ್ರಾಪ್ತ । ಉಪನಿಷದಾಂಚಾ ಮಥಿತಾರ್ಥ । ಸಾಧಕಾಂಚಾ ಚಢೇ ಹಾತ । ಕೃಪಾ ಸಮರ್ಥ ಶ್ರೀಗುರೂಚಿ ॥೧೫॥ ಸದ್ಗುರುಕೃಪಾ ಸಮರ್ಥ । ತೇಣೇ ಕೃಪೇ ಶ್ರೀಭಾಗವತ । ವಾಖಾಣಿಲೇ ಜೇ ಪ್ರಾಕೃತ । ಶುದ್ಧ ಮಥಿತಾರ್ಥ ಸೋಲೀಂವ ॥೧೬॥ ಶ್ರೀಜನಾರ್ದನಕೃಪಾದೃಷ್ಟೀ । ಮಾಝ್ಯಾ ಮರಾಠ್ಯಾ ಆರುಷ ಗೋಷ್ಟೀ । ರಿಘಾಲ್ಯಾ ಏಕಾದಶಾಚೇ ಪೋಟೀ । ಸ್ವಾನಂದತುಷ್ಟೀ ನಿಜಬೋಧೇ ॥೧೭॥ ಸಂಸ್ಕೃತಪ್ರಾಕೃತಪರವಡೀ । ಸಜ್ಞಾನ ಸೇವಿತೀ ಸ್ವಾನಂದಗೋಡೀ । ಗಾಯ ಕಾಳೀ ಆಣಿ ತಾಂಬಡೀ । ಪರೀ ದುಧೀ ವಾಂಕುಡೀ ಚವೀ ನಾಹೀ ॥೧೮॥ ತೇವೀ ಸಂಸ್ಕೃತಪ್ರಾಕೃತ ಬಾಖಾ । ಬ್ರಹ್ಮಾಸೀ ಪಾಲಟ ನಾಹೀ ದೇಖಾ । ಉಭಯ ಅಭೇದೇ ವದಲಾ ಏಕಾ । ಸಾಹ್ಯ ನಿಜಸಖಾ ಜನಾರ್ದನ ॥೧೯॥ ಜನಾರ್ದನಕೃಪೇಸ್ತವ ಜಾಣ । ಅಷ್ಟಾವಿಂಶಾಚೇ ನಿರೂಪಣ । ಗುಹ್ಯ ಗಂಭೀರ ಸ್ವಾನಂದಘನ । ತೇಹೀ ಕೇಲೇ ವ್ಯಾಖ್ಯಾನ ಅತಿಶುದ್ಧ ॥೨೦॥ ತೇಥೇ ನಾನಾವಿಧಾ ಉಪಪತ್ತೀ । ನಿಜಬೋಧೇ ಸಾಧೂನ ಯುಕ್ತೀ । ಸ್ವಯೇ ಬೋಲಿಲಾ ಶ್ರೀಪತೀ । ಬ್ರಹ್ಮಸ್ಥಿತೀ ನಿಷ್ಟಂಕ ॥೨೧॥ ಬ್ರಹ್ಮ ಅದ್ವಯತ್ವೇ ಪರಿಪೂರ್ಣ । ತೇಥ ಹೇತು -ಮಾತು -ಅನುಮಾನ । ನ ರಿಘೇ ಬುದ್ಧೀಯುಕ್ತೀಸೀ ಮನ । ಅಗಮ್ಯ ಜಾಣ ಸರ್ವಾರ್ಥೀ ॥೨೨॥ ನಾಹೀ ದೃಶ್ಯ-ದ್ರಷ್ಟಾ-ದರ್ಶನ । ನಾಹೀ ಧ್ಯೇಯ-ಧ್ಯಾತಾ-ಧ್ಯಾನ । ಕರ್ಮ-ಕರ್ತಾ- ಕಾರಣ । ಮೀ-ತೂಪಣಾ ಅಸೇನಾ ॥೨೩॥ ಯುಕ್ತೀನೇ ಸಾಂಡಿಲಾ ಪ್ರಾಣ । ದೃಷ್ಟಾಂತೀ ವಾಹಿಲೀ ಆಣ । ಪ್ರಮಾಣೇ ಜಾಹಲೀ ಅಪ್ರಮಾಣ । ಬೋಧೇಸೀ ಕ್ಷೀಣ ವಿವೇಕ ಜಹಾಲಾ ॥೨೪॥ ತೇಥ ಬೋಲಣೇ ನಾ ಮೌನ । ಆಕಾರ ನಾ ಶೂನ್ಯ । ಗುಣ ಆಣಿ ನಿರ್ಗುಣ । ಸಮೂಳ ಜಾಣ ಅಸೇನಾ ॥೨೫॥

ಸಾಧಕನಿಗೆ ನಿನ್ನ ಜ್ಞಾನವು ಸಾಧಿಸುತ್ತಲೇ ಆತನಿಗೆ ''ನಾನು-ನೀನು'' ಎಂಬುವ ಯಾವುದೊಂದೂ ಸಹ ಸ್ಮರಣೆಯಾಗುವುದಿಲ್ಲ. ಆತನ ಜೀವವು ಅದ್ವೈತಭಾವದಿಂದ ಪೂರ್ಣ ಪರಮಾತ್ಮನಾಗುವುದು ಹಾಗೂ ಜೀವತ್ವವು ಮರೆತುಹೋಗುವುದು ॥೧೨॥ ಇರಲಿ, ಈಗ ಇದಕ್ಕಾಗಿ ಹೇಳುವಿಕೆ ಸಾಕು. ಸದ್ಗುರುಗಳ ಕೃಪೆಯ ಹೊರತಾಗಿ ಕೋಟ್ಯಾವಧೀ ಪ್ರಕಾರಗಳ ಉಪಾಯಗಳನ್ನು ಮಾಡಿದರೂ ಕೂಡ ಪರಮಾರ್ಥದ ಪ್ರಾಪ್ತಿಯು ಆಗುವುದಿಲ್ಲ ॥೧೩॥ ಸದ್ಗುರುವಿನ ಕೃಪಾದೃಷ್ಟಿಯು ಪ್ರಾಪ್ತವಾಗುತ್ತಲೇ ಸಾಧನೆಗಳು ಕೂಡಲೇ ಓಡಿಹೋಗುವುವು. ಸಾಧನೆಗಳ ಅವಶ್ಯಕತೆಯು ನಿಲ್ಲುವುದು. ಬ್ರಹ್ಮಾನಂದದಿಂದ ಸೃಷ್ಟಿಯು ತುಂಬಿ ತುಳುಕುವುದು. ಸರ್ವತ್ರವೂ ಚೈತನ್ಯ ಪ್ರಕಾಶವು ಕಾಣುವುದು. ಸಾಧಕರಿಗೆ ಆತ್ಮಾನಂದದ ಪುಷ್ಟಿಯು ಲಭಿಸುವುದು ॥೧೪॥ ಸದ್ಗುರುವಿನ ಕೃಪೆಯು ಪ್ರಾಪ್ತವಾಗಲು ಉಪನಿಷದಗಳ ಮತಿತಾರ್ಥವು ಸಾಧಕರ ಕೈಗೆ ಪ್ರಾಪ್ತವಾಗುವುದು. ಸದ್ಗುರುವಿನ ಕೃಪೆಯಲ್ಲಿ ಇಂತಹ ಸಾಮರ್ಥ್ಯವಿರುವುದು ॥೧೫॥ ನನ್ನ ಸದ್ಗುರುವಿನ ಕೃಪೆಯು ಸಮರ್ಥವಾಗಿರುವುದು. ಆದ್ದರಿಂದ ಅವರ ಕೃಪೆಯಿಂದ ಶುದ್ಧ ಹಾಗೂ ಸರಳ ಮಥಿತಾರ್ಥವನ್ನು ನಾನು ಪ್ರಾಕೃತ ಭಾಷೆಯಲ್ಲಿ ಪ್ರಕಟಿಸಲು ಶಕ್ತನಾದೆನು ॥೧೬॥ ಶ್ರೀಜನಾರ್ದನಸ್ವಾಮಿಯವರ ಕೃಪಾದೃಷ್ಟಿಯಿಂದ ನನ್ನ ತೊದಲು ನುಡಿಯ ಮರಾಠೀ ಮಾತುಗಳು ಸ್ವಾನಂದದ ಭರದಲ್ಲಿ ಆತ್ಮಜ್ಞಾನದಿಂದ ಹನ್ನೊಂದನೆಯ ಸ್ಕಂಧದಲ್ಲಿ ಸೇರಿಕೊಂಡವು ॥೧೭॥ ಸಂಸ್ಕೃತ ಮತ್ತು ಮರಾಠೀ ಭಾಷೆಗಳು ಬೇರೆಬೇರೆಯಾಗಿದ್ದರೂ ಸಹ ಎರಡರಲ್ಲಿಯೂ ಸ್ವಾನಂದದ ರಸವನ್ನು ಜ್ಞಾನಿಗಳು ಸೇವಿಸುವರು. ಆಕಳು ಕಪ್ಪಾಗಿರಲಿ ಅಥವಾ ಕೆಂದವಾಗಿರಲಿ ಹಾಲಿನ ಮಾಧುರ್ಯವು ಒಂದೇಯಾಗಿರುವುದು ॥೧೮॥ ಅದರಂತೆಯೇ ಸಂಸ್ಕೃತ ಭಾಷೆಯಾದರೇನು ಅಥವಾ ಮರಾಠೀ ಭಾಷೆಯಾದರೇನು ಬ್ರಹ್ಮಾನಂದದಲ್ಲಿ ಬದಲಾವಣೆಯಾಗಲಾರದು. ಏಕನಾಥನಾದ ನಾನು ಈ ಎರಡೂ ಭಾಷೆಗಳಲ್ಲಿನ ತತ್ವವನ್ನು ಅಭೇದದಿಂದ ಹೇಳಿರುವೆನು. ಇದೇ ನನ್ನ ಜನಾರ್ದನಸ್ವಾಮಿಯವರ ಸಹಾಯವಾಗಿರುವುದು ॥೧೯॥ ಶ್ರೀಜನಾರ್ದನಸ್ವಾಮಿಯವರ ಕೃಪೆಯಿಂದ ಇಪ್ಪತ್ತೆಂಟನೆಯ ಅಧ್ಯಾಯದ ನಿರೂಪಣೆಯನ್ನು ಪ್ರಕಟಗೊಳಿಸಿರುವೆನು. ಅದರಲ್ಲಿನ ಗುಹ್ಯ, ಗಂಭೀರ, ಸ್ವಾನಂದಘನ ಬ್ರಹ್ಮದ ವ್ಯಾಖ್ಯಾನವನ್ನು ಅತ್ಯಂತ ಪರಿಶುದ್ಧವಾಗಿ ಮಾಡಲ್ಪಟ್ಟಿರುವುದು ॥೨೦॥ ಅದರಲ್ಲಿ ಅನೇಕ ಪ್ರಕಾರಗಳ ಯುಕ್ತಿ-ಪ್ರಯುಕ್ತಿಗಳನ್ನು ಸಾಧಿಸಿ, ನಿಃಶಂಕ ಬ್ರಹ್ಮಸ್ವರೂಪವನ್ನು ಸ್ವತಃ ಶ್ರೀಕೃಷ್ಣನು ಹೇಳಿರುವನು ॥೨೧॥ ಯಾವ ಈ ಬ್ರಹ್ಮವು ಅದ್ವಯವಾಗಿರುವುದರಿಂದ ಪರಿಪೂರ್ಣವಾಗಿರುವುದು. ಅದರಲ್ಲಿ ಉದ್ದೇಶ, ಕಥಾವಾರ್ತಾ, ಅನುಮಾನ, ಬುದ್ಧೀ, ಯುಕ್ತೀ ಇವುಗಳೊಂದಿಗೆ ಮನಸ್ಸು ಪ್ರವೇಶ ಮಾಡಲು ಸಾಧ್ಯವಿಲ್ಲ. ಅದು ಸರ್ವ ಸಾಧನೆಗಳಿಗೆ ಅಗಮ್ಯವಾಗಿರುವುದು ॥೨೨॥ ಅಲ್ಲಿ ದೃಶ್ಯ, ದ್ರಷ್ಟಾ,ದರ್ಶನ ಇಲ್ಲ. ಧ್ಯೇಯ, ಧ್ಯಾತಾ, ಧ್ಯಾನವಿಲ್ಲ. ಕರ್ಮ, ಕರ್ತಾ, ಕಾರಣವಿರುವುದಿಲ್ಲ. ಹಾಗೆಯೇ ಯಾವುದೇ ಪ್ರಕಾರದ ನಾನು - ನೀನು ಎಂಬುವುದಿಲ್ಲ ॥೨೩॥ ಅಲ್ಲಿ ಯುಕ್ತಿಗಳು ತಮ್ಮ ಪ್ರಾಣವನ್ನೇ ಬಿಟ್ಟವು. ದೃಷ್ಟಾಂತಗಳು ಆಣೆ ಮಾಡಿಬಿಟ್ಟವು. ಪ್ರಮಾಣಗಳು ಅಪ್ರಮಾಣಗಳಾಗಿಬಿಟ್ಟವು ಹಾಗೂ ಜ್ಞಾನಸಹವರ್ತಮಾನ ವಿಚಾರಗಳು ಕ್ಷೀಣವಾದವು ॥೨೪॥ ಅಲ್ಲಿ ಮಾತನಾಡುವುದೂ ಇಲ್ಲದಾಯಿತು. ಮತ್ತು ಮೌನವೂ ಕೂಡ ಮಾಯವಾಯಿತು. ಆಕಾರವೂ ಇಲ್ಲದಾಯಿತು ಹಾಗೂ ಶೂನ್ಯವು ಕೂಡ ಇಲ್ಲದಾಯಿತು. ಗುಣ ಮತ್ತು ನಿರ್ಗುಣ ಇವು ಇಲ್ಲವೇ ಇಲ್ಲ ॥೨೫॥

ಐಸೀ ಬ್ರಹ್ಮಾಚೀ ನಿಜಸ್ಥಿತೀ । ಕೃಷ್ಣಕೃಪಾ ಉದ್ಧವಾಸೀ ಪ್ರಾಪ್ತೀ । ಅಬಳಾಂಸೀ ಅಗಮ್ಯ ನಿಶ್ಚಿತೀ । ಜನ ಕೈಶಾ ರೀತೀ ತರತೀಲ॥೨೬॥ ಬ್ರಹ್ಮಸ್ಥಿತೀ ಅತಿದುರ್ಗಮ । ಹೇ ಉದ್ಧವಾಸೀ ಕಳಲೇ ವರ್ಮ । ಸಾಧಕಾಂಚೇ ಸಾಧಾವಯಾ ಕಾಮ । ಉಪಾವೋ ಸುಗಮ ಪೂಸತ ॥೨೭॥ ಕೃಷ್ಣ ನಿಜಧಾಮಾ ಜಾಈಲ ಆತಾ । ಮಗ ಬ್ರಹ್ಮಪ್ರಾಪ್ತಿ ನ ಯೇ ಹಾತಾ । ಸಾದಕ ಗುಂತತೀ ಸರ್ವಥಾ । ಉಪಾಯ ತತ್ತ್ವತಾ ಕೋಣ ಸಾಂಗೇ ॥೨೮॥ ಏವಂ ಸಾಧಕಾಂಚಿಯಾ ಹಿತಾ । ಉದ್ಧವ ಕಳವಳೋನಿ ತತ್ತ್ವತಾ । ಸುಗಮತ್ವೇ ಬ್ರಹ್ಮಪ್ರಾಪ್ತೀ ಯೇ ಹಾತಾ । ತೋ ಉಪಾಯ ಅಚ್ಯುತಾ ಪೂಸತ ॥೨೯॥ ಏಕುಣತಿಸಾವಾ ನಿರೂಪಣ । ಬ್ರಹ್ಮಪ್ರಾಪ್ತೀಚೇ ಸುಗಮ ಸಾಧನ । ಸಪ್ರೇಮ ಭಗವದ್ಭಜನ । ತೇ ಭಕ್ತಿಲಕ್ಷಣ ಹರಿ ಸಾಂಗೇ ॥೩೦॥ ಸುಗಮ ಸಾಧನೇ ಬ್ರಹ್ಮಪ್ರಾಪ್ತೀ। ಅಬಳಾಂಸೀ ಲಾಭೇ ಜೈಶಾ ರೀತೀ । ಸಾ ಶ್ಲೋಕೀ ದೇವಾಸೀ ವಿನಂತೀ । ಉದ್ಧವ ತದರ್ಥೀ ಕರಿತಸೇ ॥೩೧॥

ಶ್ರೀ ಉದ್ಧವ ಉವಾಚ :-

ಸುದುಸ್ತರಾಮಿಮಾಂ ಮನ್ಯೇ ಯೋಗಚರ್ಯಾಮನಾತ್ಮನಃ । ಯಥಾಂಜಸಾ ಪುಮಾನ್ ಸಿದ್ಧ್ಯೇತ್ತನ್ಮೇ ಬ್ರೂಹ್ಯಂಜಸಾಚ್ಯುತ ॥೧॥

ಅರ್ಥ:- ಉದ್ಧವನು ನುಡಿದನು :- ಹೇ ಪ್ರಿಯ ಅಚ್ಯುತನೇ, ಯಾವ ಮನುಷ್ಯನಿಗೆ ತನ್ನ ಮನವನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲವೋ ಆತನಿಗೆ ಈ ಯೋಗ ಸಾಧನೆಯು ಅತಿಶಯ ಕಠಿಣವಾಗಿರುವುದು. ಅದಕ್ಕಾಗಿ ತಾವು ಸರಳ ಹಾಗೂ ಸುಗಮವಾದ ಸಾಧನೆಗಳನ್ನು ಹೇಳಿರಿ. ಇದರಿಂದ ಮನುಷ್ಯನು ಅನಾಯಾಸವಾಗಿ ಪರಮಪದವನ್ನು ಪ್ರಾಪ್ತಮಾಡಿಕೊಳ್ಳಲು ಶಕ್ತನಾಗುವನು.

ಪೂರ್ವಾಧ್ಯಾಯೀ ಬ್ರಹ್ಮಸ್ಥಿತೀ । ಸಾಂಗಿತಲೀ ತೇ ದುರ್ಗಮ ಗತೀ । ಭೋಳ್ಯಾ ಭಾವಿಕಾ ಅಬಳಾಂಪ್ರತೀ । ಹೇ ಬ್ರಹ್ಮಪ್ರಾಪ್ತೀ ಸಾಧೇನಾ ॥೩೨॥ ವಸ್ತು ವ್ಯಕ್ತ ನಾ ಅವ್ಯಕ್ತ । ಶೇಖೀ ಪ್ರಕಟ ನಾ ನವ್ಹೇ ಗುಪ್ತ । ನ ಕಳೇ ಮೂರ್ತ ಕೀ ಅಮೂರ್ತ । ಕೇವೀ ಸಾಧಕಾ ತೇಥ ಪ್ರವೇಶು ॥೩೩॥ ಜೇ ಸ್ಥೂಲ ನಾ ಸೂಕ್ಷ್ಮ ಹೋಯೇ । ಜೇ ಆಹೇ ನಾಹೀ ಹಾ ಶಬ್ದ ನ ಸಾಹೇ । ಜೇಥ ಪಾಹತೇ ಪಾಹಣೇ ದೋನೀ ಜಾಯೇ । ತೇ ಸಾಧಕಾ ಹೋಯೇ ಕೇವೀ ಸಾಧ್ಯ ॥೩೪॥ ಜೇ ದಿಸೇ ತೇ ಬ್ರಹ್ಮ ಮ್ಹಣಾವೇ । ತಂವ ತೇ ಮಾಯಾ ರೂಪೇ ನಾಂವೇ । ಆತಾ ನಾಹೀಚಿ ಮ್ಹಣೋನಿ ಸಾಂಡಾವೇ । ತೇಣೇಹೀ ನಾಡಾವೇ ಸಾಧಕೀ ॥೩೫॥ ಜೇ ಆಕಾರ ನಾ ನವ್ಹೇ ಶೂನ್ಯ । ಜೇಥೇ ನ ರಿಘೇ ಧ್ಯೇಯ ಧ್ಯಾನ । ಜ್ಯಾಸೀ ಲಾಜೇ ಜ್ಞೇಯ ಜ್ಞಾನ । ಜ್ಯಾತೇ ಸಾಧನ ಸ್ಪರ್ಶೇನಾ ॥೩೬॥

ಈ ಪ್ರಕಾರದ ಬ್ರಹ್ಮಸ್ಥಿತಿಯು ಶ್ರೀಕೃಷ್ಣನಿಂದ ಉದ್ಧವನಿಗೆ ಪ್ರಾಪ್ತವಾಯಿತು. ಶ್ರೀಕೃಷ್ಣನು ಆತನಲ್ಲಿ ಕೃಪೆಯ ಮಳೆಗರೆದನು. ಆದರೆ ಇದು ದುರ್ಬಲ, ಅಜ್ಞಾನಿ ಜನರಿಗೆ ಪ್ರಾಪ್ತವಾಗುವುದು ಬಹು ಕಠಿಣವು. ಅಂದಮೇಲೆ ಇಂತಹ ಜನರು ಯಾವ ರೀತಿಯಲ್ಲಿ ಉದ್ಧಾರರಾಗಬಹುದು? ॥೨೬॥ ಯಾವ ಈ ಬ್ರಹ್ಮಸ್ಥಿತಿಯು ಅತ್ಯಂತ ದುರ್ಗಮವಾಗಿರುವುದು. ಈ ವರ್ಮವು ಉದ್ಧವನಿಗೆ ತಿಳಿದಿತ್ತು. ಆದ್ದರಿಂದ ಸಾಧಕರ ಕಾರ್ಯ ಸಾಧಿಸುವುದಕ್ಕಾಗಿ ಆತನು ಶ್ರೀಕೃಷ್ಣನಿಗೆ ಸುಲಭವಾಗಿರುವ ಉಪಾಯ ಕೇಳಿದನು ॥೨೭॥ ಶ್ರೀಕೃಷ್ಣನು ಈಗ ನಿಜಧಾಮಕ್ಕೆ ತೆರಳುವನು. ತದನಂತರ ಬ್ರಹ್ಮಪ್ರಾಪ್ತಿಯು ಹಸ್ತಗತವಾಗಲಾರದು. ಸಾಧಕರು ಸರ್ವಥಾ ಸಂಸಾರದಲ್ಲಿಯೇ ಸಿಕ್ಕಿಕೊಂಡುಬಿಡುವರು. ಹಾಗಾದರೆ ನಿಜವಾದ ಉಪಾಯವನ್ನು ಯಾರು ಹೇಳಬಲ್ಲರು? ॥೨೮॥ ಈ ಪ್ರಕಾರವಾಗಿ ಸಾಧಕರ ಹಿತಕ್ಕಾಗಿ ಉದ್ಧವನಿಗೆ ಕಳಕಳಿಯು ಉತ್ಪನ್ನವಾಯಿತು. ಸುಲಭವಾಗಿ ಬ್ರಹ್ಮಪ್ರಾಪ್ತಿಯು ಹೇಗೆ ದೊರಕೀತೆಂಬ ಉಪಾಯವನ್ನು ಆತನು ಶ್ರೀಕೃಷ್ಣನಿಗೆ ಕೇಳುತ್ತಿರುವನು ॥೨೯॥ ಈ ಇಪ್ಪತ್ತೊಂಭತ್ತನೆಯ ಅಧ್ಯಾಯದಲ್ಲಿ ಬ್ರಹ್ಮಪ್ರಾಪ್ತಿಯ ಸುಗಮ ಸಾಧನೆಯು ಯಾವುದೆಂದರೆ ಸಪ್ರೇಮ ಭಜನೆಯಾಗಿರುವುದು. ಆ ಭಕ್ತಿಯ ಸ್ವರೂಪವನ್ನು ಶ್ರೀಕೃಷ್ಣನು ಹೇಳುವವನಾಗಿರುವನು ॥೩೦॥ ಯಾವ ರೀತಿಯಿಂದ ದುರ್ಬಲ, ಅಜ್ಞಾನೀ ಜನರಿಗೆ ಬ್ರಹ್ಮಪ್ರಾಪ್ತಿಯಾಗುವುದೋ, ಅಂತಹ ರೀತಿಯನ್ನು ಹೇಳುವ ವಿಷಯವನ್ನು ಕುರಿತು ಮುಂದಿನ ಆರು ಶ್ಲೋಕಗಳಿಂದ ಉದ್ಧವನು ದೇವನಿಗೆ ವಿನಂತಿಸುವನು ॥೩೧॥

ಉದ್ಧವನು ಹೇಳಿದನು, ಪೂರ್ವಾಧ್ಯಾಯದಲ್ಲಿ ನೀನು ಹೇಳಿರುವ ಬ್ರಹ್ಮಸ್ಥಿತಿಯು ಸಾಧ್ಯವಾಗಲು ಪರಮ ಕಠಿಣವಾಗಿರುವುದು. ದುರ್ಬಲ, ಭೋಳ್ಯಾ ಭಾವಿಕರಿಗೆ ಈ ಬ್ರಹ್ಮಸ್ಥಿತಿಯು ಸಾಧಿಸಲಾರದು ॥೩೨॥ ಯಾವ ಈ ಪರಬ್ರಹ್ಮವು ವ್ಯಕ್ತವೂ ಅಲ್ಲ, ಅವ್ಯಕ್ತವೂ ಅಲ್ಲ. ಅದು ಪ್ರಕಟವೂ ಅಲ್ಲ, ಗುಪ್ತವೂ ಅಲ್ಲ. ಅದು ಮೂರ್ತವಾಗಿದೆಯೋ, ಅಮೂರ್ತವಾಗಿದೆಯೋ ಎಂಬುದು ಶೋಧವಾಗುವುದಿಲ್ಲ. ಅಂದಮೇಲೆ ಅಲ್ಲಿ ಸಾಧಕರ ಪ್ರವೇಶವಾದರೂ ಹೇಗಾಗಬೇಕು? ॥೩೩॥ ಅದು ಸ್ಥೂಲವೂ ಅಲ್ಲ, ಸೂಕ್ಷ್ಮವೂ ಅಲ್ಲ, ಅದು ಇದೆ ಎಂದು ಹೇಳಲು ಬರುವಂತಿಲ್ಲ. ಇಲ್ಲವೆಂತಲೂ ಹೇಳಲು ಬರುವಂತಿಲ್ಲ. ಅದರಲ್ಲಿ ನೋಡುವವರು ಹಾಗೂ ನೋಡುವಿಕೆ ಇವು ಎರಡೂ ಕೂಡ ಇಲ್ಲದಾಗುವುವು. ಹೀಗಿರಲು ಸಾಧಕರಿಗೆ ಹೇಗೆ ಸಾಧ್ಯವಾಗಬಲ್ಲದು? ॥೩೪॥ ಯಾವುದು ತೋರುವುದೋ, ಅದೇ ಬ್ರಹ್ಮವು ಎಂದು ಹೇಳಬೇಕೆಂದರೆ ಅದು ನಾಮರೂಪದಿಂದ ಮಾಯಾತ್ಮಕವಾಗಿರುವುದು. ಅದು ಇಲ್ಲವೆಂದು ಕೈಬಿಡಬೇಕೆಂದರೆ ಸಾಧಕನು ತನಗೆ ತಾನೇ ಮೋಸ ಹೋಗಬೇಕಾಗುವುದು ॥೩೫॥ ಯಾವುದಕ್ಕೆ ಆಕಾರವೂ ಇಲ್ಲ, ಶೂನ್ಯತ್ವವೂ ಇಲ್ಲ. ಅಲ್ಲಿ ಧ್ಯೇಯ, ಧ್ಯಾತಾ, ಧ್ಯಾನ ಇವುಗಳ ಪ್ರವೇಶವಾಗುವುದಿಲ್ಲ. ಅದಕ್ಕೆ ಜ್ಞೇಯ, ಜ್ಞಾನಗಳೂ ಸಹ ನಾಚಿಕೊಂಡವು. ಅದಕ್ಕೆ ಸಾಧನೆಯು ಸ್ಪರ್ಶ ಕೂಡ ಮಾಡಲಾರದು ॥೩೬॥

ಜೇ ನ ಚಢೇ ಶಬ್ದಾಂಚೇ ಹಾತ । ಜೇ ನಾತುಡೇ ಮೌನಾ ಆಂತ । ಆಂತ ಬಾಹೇರ ನಾಹೀ ಜೇಥ । ಕಾಯ ಸಾಧಕೀ ತೇಥ ಧರಾವೇ ।೩೭॥ ನಾಹೀ ಆಂತಬಾಹೇರ ವಿಚಾರಾ । ತೇಥ ಕಾಯ ಧರಾವೇ ನಿರ್ಧಾರಾ । ಜೇಥ ನಿರ್ಧಾರುಹೀ ಪುರಾ । ಧರಾವಯಾ ಧೀರಾ ಧೀರ ನವ್ಹೇ ।೩೮॥ ಸಾಧಕೀ ಸ್ಥಿರ ಕರಾವಯಾ ಮನ । ಕಾಂಹೀ ನ ದಿಸೇ ಅವಲಂಬನ । ತೇಥೇ ಅನಾತ್ಮೇ ಅಜ್ಞಾನ ಜನ । ತ್ಯಾಂಸೀ ದುಸ್ತರ ಜಾಣ ಹಾ ಯೋಗು ।೩೯॥ ಯಾಪರೀ ನಿಜಾತ್ಮ ಪ್ರಾಪ್ತೀ । ಕದಾ ನ ಚಢೇ ಅಬಳಾಹಾತೀ । ಮಜ ತಂವ ಮಾನಲೇ ನಿಶ್ಚಿತೀ । ಹೇ ಆತ್ಮಸ್ಥಿತೀ ದುಸ್ತರು ।೪೦॥ ಐಶಿಯಾ ಬ್ರಹ್ಮಾಚೀ ಪ್ರಾಪ್ತೀ । ಅಜ್ಞಾನ ಅಪ್ರಯಾಸೇ ಪಾವತೀ । ತೈಶೀ ಸುಗಮ ಸಾಧನಸ್ಥಿತೀ । ಸಾಂಗ ಶ್ರೀಪತೀ ಕೃಪಾಳುವಾ ।೪೧॥ ತುವಾ ನಿಜಧಾಮಾ ಪ್ರಯಾಣ । ಮಾಂಡಿಲೇಸೇ ಅತಿ ತ್ವರೇನ । ಏಥ ತರಾವಯಾ ಅಜ್ಞಾನ । ಸುಗಮ ಸಾಧನ ಸಾಂಗಿಜೇ ।೪೨॥ ಮ್ಹಣೋನಿ ಘಾತಲೇ ಲೋಟಾಂಗಣ । ಧಾಂವೋನಿ ಧರಿಲೇ ಶ್ರೀಕೃಷ್ಣ ಚರಣ । ತುಜ ಗೇಲಿಯಾ ಅಜ್ಞಾನ ಜನ । ತರಾವಯಾ ಸಾಧನ ಸುಗಮ ಸಾಂಗೇ ।೪೩॥ ಪವ್ಹಣೆಯಾಪರಿಸ ಪಾಯಉತಾರಾ । ಸ್ತ್ರೀಯಾ ಬಾಳಾ ಅತಿಸೋಪಾರಾ । ತೈಶಿಯಾ ಉಪಾಯ ಪ್ರಕಾರಾ । ಶಾರ್ಙ್ಗಧರಾ ಸಾಂಗಿಜೇ ।೪೪॥ ತುಝ್ಯಾ ಠಾಯೀ ಸದ್ಭಾವ ಪೂರ್ಣ । ಆಣಿ ನೇಣತೀ ಶಬ್ದಜ್ಞಾನ । ಐಸೇ ಜೇ ಅಜ್ಞಾನ ಜನ । ತ್ಯಾಂಸೀ ತರಾವಯಾ ಸಾಧನ ಸುಗಮ ಸಾಂಗೇ ।೪೫॥ ಮನೋನಿಗ್ರಹೋ ಅತಿಕಠಿಣ । ಸಾಧಕಾ ನೇಮವೇನಾ ಸಂಪೂರ್ಣ । ತೇಚಿ ಅರ್ಥೀಚೇ ನಿರೂಪಣ । ಉದ್ಧವ ಆಪಣ ಸಾಂಗತ ।೪೬॥

ಪ್ರಾಯಶಃ ಪುಂಡರೀಕಾಕ್ಷ ಯುಂಜಂತೇ ಯೋಗಿನೋ ಮನಃ । ವಿಷೀದಂತ್ಯಸಮಾಧಾನಾನ್ಮನೋ ನಿಗ್ರಹಕರ್ಶಿತಾಃ ।೨॥

ಅರ್ಥ:- ಹೇ ಕಮಲನಯನನೇ, ಬಹಳಷ್ಟು ಜನರು ತಮ್ಮ ಮನವನ್ನು ಏಕಾಗ್ರಗೊಳಿಸಲು ಸಾಧನೆ ಮಾಡುತ್ತ ಎಷ್ಟು ಪ್ರಯತ್ನಿಸಿದರೂ ಅವರಿಗೆ ಸಫಲತೆಯು ಪ್ರಾಪ್ತವಾಗುವುದಿಲ್ಲ ಎಂಬುವುದು ನಿನಗೆ ತಿಳಿದ ವಿಷಯವಾಗಿದೆ. ಮನಸ್ಸಿನ ಎದುರು ಪರಾಭವವನ್ನು ಒಪ್ಪಿಕೊಳ್ಳಬೇಕಾಗುವುದು. ಹಾಗೆಯೇ ವಶವಾಗದ್ದಕ್ಕೆ ಅವರು ದುಃಖೀಗಳಾಗುವರು.

ಐಕೇ ಕೃಷ್ಣಾ ಕಮಲನಯನಾ । ಶಿಣತಾ ಸಾಧಕ ಸಾಧನಾ । ಕದಾ ನಾಕಳವೇ ಮನಾ । ತೇಹೀ ವಿವಂಚನಾ ಅವಧಾರೀ ।೪೭॥ ನಿಗ್ರಹಾವಯಾ ನಿಜಮನ । ಸಾಧಕ ಸಾಧಿತೀ ಪ್ರಾಣಾಪಾನ । ತ್ಯಾಂಸೀ ಹೀ ಛಳೋನಿಯಾ ಮನ । ಜಾಯ ನಿಘೋನ ತತ್ಕಾಳ ।೪೮॥ ಘಾಲೂನಿಯಾ ಏಕಾಂತೀ ಆಸನ । ಮನೋನಿಗ್ರಹೀ ಜೇ ಸಾವಧಾನ। ತ್ಯಾಂಸೀಹೀ ಠಕೂನಿಯಾ ಮನ । ಜಾಯ ನಿಘೋನ ಚಪಲತ್ವೇ ।೪೯॥

ಇದು ಶಬ್ದದ ವಿಷಯವಾಗಲಾರದು. ಇದು ಮೌನಕ್ಕೆ ಸಿಗಲಾರದು. ಇದಕ್ಕೆ ಒಳಗೆ, ಹೊರಗೆ ಯಾವುದೂ ಇಲ್ಲ. ಅಲ್ಲಿ ಸಾಧಕನು ಏನು ಮಾಡಬೇಕು? ।೩೭॥ ಯಾವುದು ವಿಚಾರದ ಒಳಗಿಲ್ಲ, ಹೊರಗೂ ಇಲ್ಲ. ಅಲ್ಲಿ ಏನೆಂದು ನಿಶ್ಚಯ ಮಾಡಬೇಕು? ಅಲ್ಲಿ ಧೀರನಿಗೂ ನಿಶ್ಚಯ ಮಾಡಲು ಧೈರ್ಯ ಸಾಲದು ।೩೮॥ ಅಲ್ಲಿ ಸಾಧಕರಿಗೆ ತಮ್ಮ ಮನವನ್ನು ಸ್ಥಿರಗೊಳಿಸಲು ಯಾವ ಆಧಾರವೂ ತೋರುವುದಿಲ್ಲ. ಅಲ್ಲಿ ಆತ್ಮಜ್ಞಾನ ತಿಳಿಯಲಾರದ ಅಜ್ಞಾನೀ ಜನರಿಗೆ ಈ ಯೋಗವು ಅತ್ಯಂತ ದುಸ್ತರವಾಗಿರುವುದು ।೩೯॥ ಈ ಪ್ರಕಾರವಾಗಿ ವಿಚಾರಿಸಿ ನೋಡಲು ದುರ್ಬಲರಿಗೆ ಆತ್ಮಪ್ರಾಪ್ತಿಯಾಗುವುದು ಅಶಕ್ಯವೇ ಆಗಿರುವುದು. ನನಗೆ ಮಾತ್ರ ಆತ್ಮಸ್ಥಿತಿಯು ಅತ್ಯಂತ ದುರ್ಗಮವೆಂದು ನಿಶ್ಚಿತವಾಗಿ ತೋರುತ್ತಿದೆ ।೪೦॥ ಹೇ ಕೃಪಾಸಾಗರ ಶ್ರೀಕೃಷ್ಣನೇ, ಹೀಗಿರುವ ಪರಬ್ರಹ್ಮದ ಪ್ರಾಪ್ತಿಯು ಅಜ್ಞಾನೀ ಜನರು ಸಹಜವಾಗಿ ಪ್ರಾಪ್ತಿಮಾಡಿಕೊಳ್ಳುವಂತಹ ಸುಲಭ ಉಪಾಯವನ್ನು ಹೇಳಬೇಕು ।೪೧॥ ನೀನು ಮಾತ್ರ ತ್ವರೆಯಿಂದ ನಿಜಧಾಮಕ್ಕೆ ಪ್ರಯಾಣಿಸಲು ಸಿದ್ಧನಾಗಿರುವೆ. ಅದಕ್ಕಾಗಿಯೇ ಅಜ್ಞಾನೀ ಜನರು ಉದ್ಧಾರರಾಗುವಂತಹ ಸುಗಮ ಸಾಧನೆಯನ್ನು ಹೇಳು ।೪೨॥ ಹೀಗೆ ವಿನಂತಿಸುತ್ತ ಉದ್ಧವನು ಲೋಟಾಂಗಣ ಹಾಕಿ, ಧಾವಿಸುತ್ತ ಸಾಗಿ ಶ್ರೀಕೃಷ್ಣನ ಚರಣಗಳನ್ನು ಹಿಡಿದು ಹೀಗೆ ಹೇಳಹತ್ತಿದನು. ನೀನು ನಿಜಧಾಮಕ್ಕೆ ಹೋದನಂತರ ಅಜ್ಞಾನೀ ಜನರಿಗೆ ಉಪಯೋಗವಾಗುವಂತ ಸುಲಭ ಸಾಧನೆಯನ್ನು ಯಾರು ಹೇಳಬಲ್ಲರು? ।೪೩॥ ತುಂಬಿದ ನದಿಯಲ್ಲಿ ಈಸಿ ಹೋಗುವುದಕ್ಕಿಂತ ಕಾಲುದಾರಿ ಒಳ್ಳೆಯದಲ್ಲವೇ? ಸ್ತ್ರೀಯರಿಗೆ ಹಾಗೂ ಬಾಲಕರಿಗೆ ಈ ಕಾಲು ದಾರಿಯು ಬಹು ಸುಲಭವಾಗುವುದು. ಅದಕ್ಕಾಗಿ ಹೇ ಶ್ರೀಕೃಷ್ಣನೇ, ಈ ಪ್ರಕಾರದ ಸುಲಭ ಉಪಾಯವನ್ನು ಹೇಳು ।೪೪॥ ಯಾರಿಗೆ ನಿನ್ನಲ್ಲಿ ಪೂರ್ಣ ಸದ್ಭಾವನೆ ಇದ್ದು ಅವರಿಗೆ ಬ್ರಹ್ಮಜ್ಞಾನವು ತಿಳಿಯುವುದಿಲ್ಲವೋ ಅಂತಹ ಅಜ್ಞಾನೀ ಜನರಿಗೆ ಉದ್ಧಾರವಾಗುವ ಸುಗಮ ಸಾಧನೆಯನ್ನು ಹೇಳಬೇಕು ।೪೫॥ ಮನೋನಿಗ್ರಹವು ಇದು ಅತ್ಯಂತ ಕಠಿಣವಾಗಿರುವುದು. ಇದು ಸಾಧಕರಿಗೆ ಪರಿಪೂರ್ಣವಾಗಿ ಸಾಧಿಸಲಾರದು. ಇದರ ನಿರೂಪಣೆಯನ್ನೇ ಈಗ ಉದ್ಧವನು ಮಾಡುತ್ತಿರುವನು ।೪೬॥

ಹೇ ಕಮಲನಯನಾ ಶ್ರೀಕೃಷ್ಣಾ, ಕೇಳು. ಸಾಧಕರು ಎಷ್ಟೇ ಸಾಧನೆಗಳನ್ನು ಮಾಡಿ ದಣಿದುಕೊಂಡರೂ ಸಹ ಅವರಿಗೆ ಮನಸ್ಸಿನ ನಿಯಂತ್ರಣ ಮಾಡಲು ಸಾಧ್ಯವಾಗುವುದಿಲ್ಲ. ಅದರ ವಿವೇಚನೆ ಈಗ ಕೇಳು ।೪೭॥ ಮನೋನಿಗ್ರಹವನ್ನು ಮಾಡುವುದಕ್ಕಾಗಿ ಸಾಧಕರು ಪ್ರಾಣಾಪಾನವನ್ನು ಸಾಧ್ಯ ಮಾಡುವರು, ಆದರೆ ಮನವು ಅವರಿಗೆ ಮೋಸ ಮಾಡಿ ತತ್ಕಾಲದಲ್ಲಿ ಹೊರಟು ಹೋಗುವುದು ।೪೮॥ ಕೆಲವರು ಏಕಾಂತದಲ್ಲಿ ಕುಳಿತುಕೊಂಡು ಆಸನವನ್ನು ಹಾಕಿ ಬಲು ಎಚ್ಚರಿಕೆಯಿಂದ ಮನೋನಿಗ್ರಹ ಮಾಡುವ ಪ್ರಯತ್ನ ಮಾಡುವರು, ಆದರೆ ಅವರಿಗೂ ಕೂಡ ಮನವು ಮೋಸಪಡಿಸಿ ಚಪಲತ್ವದಿಂದ ಹೊರಟು ಹೋಗುವುದು ।೪೯॥

ಮನೋನಿಗ್ರಹೀ ಆಮ್ಹೀ ಹಟೀ । ಮ್ಹಣೋನಿ ನಿಘಾಲೇ ಗಿರಿಕಪಾಟೀ। ತ್ಯಾಂಸೀಹೀ ಠಕೂನಿ ಮನ ಶೇವಟೀ । ಜಾಯ ಉಠಾಉಠೀ ಚಪಳತ್ವೇ ।।೮೦।। ಏಕೀ ಆಕಳಾವಯಾ ಮನ । ತ್ಯಜೂನಿ ಬೈಸಲೇ ಅನ್ನ । ತಂವ ಮನೇ ಕೇಲೇ ಆನೇ ಆನ । ಜಾಗ್ರತಿ ಸ್ವಪ್ನ ಅನ್ನಮಯ ।।೮೧।। ಮನೋನಿಗ್ರಹ ಕರಿತಾ ದೇಖ । ಮನ ಖವಳೇ ಅಧಿಕಾಧಿಕ । ಮನೋನೇಮೀ ಸಜ್ಞಾನ ಲೋಕ । ಶಿಣಲೇ ಸಾಧಕ ಸಾಧನೀ ।।೮೨।। ವಾರಾ ಬಾಂಧವೇಲ ಮೋಟೇ । ಅಗ್ನಿ ಪ್ರಾಶವೇಲ ಅವಚಟೇ । ಸಮುದ್ರ ಘೋಂಟವೇಲ ಘೋಟೇ । ಪರೀ ಆತ್ಮನಿಷ್ಠೇ ಮನ ನ ಯೇ ।।೮೩।। ಆಕಾಶ ಕರವೇಲ ಚೌಘಡೀ । ಮಹಾಮೇರು ಬಾಂಧವೇಲ ಪುಡೀ । ಶೂನ್ಯಾಚೀ ಮುರಡವೇಲ ನರಡೀ । ಪರೀ ಯಾ ಮನಾಚ್ಯಾ ವೋಢೀ ಅನಿವಾರ ।।೮೪।। ಕಾಳ ಜಿಂಕವೇಲ ತತ್ತ್ವತಾ । ತ್ರಿಭುವನೀಂಚೀ ಲಾಭೇಲ ಸತ್ತಾ । ಪರೀ ಮನೋನಿಗ್ರಹಾಚೀ ವಾರ್ತಾ । ತುಜವೀಣ ಅಚ್ಯುತಾ ಘಡೇ ಕೇವೀ ।।೮೫।। ಮನ ತಾಪಸಾ ತತ್ಕಾಳ ಛಳೀ । ಮನ ನೇಮಸ್ತಾಂಚಾ ನೇಮ ಟಾಳೀ । ಮನ ಬಳಿಯಾಂಮಾಜೀ ಮಹಾಬಳೀ । ಕರೀ ರಾಂಗೋಳೀ ಧೈರ್ಯಾಚೀ ।।೮೬।। ಮನ ಇಂದ್ರಾತೇ ತಳೀ ಪಾಡೀ । ಮನ ಬ್ರಹ್ಮಯಾತೇ ಹಟೇಂಚಿ ನಾಡೀ । ಐಶೀ ಮನಾಚೀ ವೋಖಟೀ ಖೋಡೀ । ಆಪಲ್ಯಾ ಪ್ರೌಢೀ ನಾವರೇ ।।೮೭।। ಸಾಧನೀ ಸಾಧಕ ಶಿಣತಾ । ಮನೋಜಯೋ ನ ಯೇಚಿ ಹಾತಾ । ತುಜವಾಂಚೂನಿ ಅಚ್ಯುತಾ । ಮನಾ ಸರ್ವಥಾ ನಾವರೇ ।।೮೮।। ಅತ್ಯಂತ ಸಾಧೂನಿ ನಿರವಡೀ । ಮನೋಜಯೋ ಆಣಿತಾ ಜೋಡೀ । ತಂವ ಸಿದ್ಧೀಂಚೀ ದಾಟೇ ಆಡಾಡೀ । ತೇಣೇಹೀ ಮನ ನಾಡೀ ಸಾಧಕಾ ।।೮೯।। ತುಝೀ ಕೃಪಾ ನವ್ಹತಾ ಜಾಣ । ಸಾಧಕಾ ಕದಾ ನಾವರೇ ಮನ । ತೂ ತುಷ್ಟಲ್ಯಾ ಜನಾರ್ದನ । ಮನಪಣಾ ಮನ ಸ್ವಯೇ ವಿಸರೇ ।।೯೦।। ಸರ್ವಭಾವೇ ನ ರಿಘತಾ ಶರಣ । ಸಾಧಕಾ ಕದಾ ನಾವರೇ ಮನ । ಮನೋನಿಗ್ರಹಾರ್ಥ ಜಾಣ । ತುಝೇ ಚರಣ ಶರಣ ರಿಘಾವೇ ।।೯೧।।

ಅಥಾತ ಆನಂದದುಘಂ ಪದಾಂಬುಜಂ ಹಂಸಾಃ ಶ್ರಯೇರನ್ನರವಿಂದಲೋಚನ ।
ಸುಖಂ ನು ವಿಶ್ವೇಶ್ವರ ಯೋಗಕರ್ಮಭಿಸ್ತನ್ಮಾಯಯಾಮೀ ವಿಹತಾ ನ ಮಾನಿನಃ ।।೩।।

ಅರ್ಥ:- ಪದ್ಮಲೋಚನನೇ, ನೀನು ವಿಶ್ವೇಶ್ವರನು. ನಿನ್ನಿಂದ ಸರ್ವ ಸಂಸಾರದ ನಿಯಂತ್ರಣವಾಗುವುದು. ಆದ್ದರಿಂದ ಚತುರರು ನಿನ್ನ ಆನಂದಮಯ ಚರಣಕಮಲಗಳಲ್ಲಿ ಶರಣಾಗುವರು ಮತ್ತು ಅನಾಯಾಸದಿಂದ ಸಿದ್ಧಿಗಳನ್ನು ಪ್ರಾಪ್ತಮಾಡಿಕೊಳ್ಳುವರು. ನಿನ್ನ ಮಾಯೆಯು ಅವರಿಗೆ ಏನೂ ಮಾಡಲು ಸಾಧ್ಯವಿಲ್ಲ. ಕಾರಣ ಅವರಿಗೆ ಯೋಗಸಾಧನೆಯ ಹಾಗೂ ಕಾರ್ಯಾನುಷ್ಠಾನದ ಯಾವ ಅಭಿಮಾನವಿರುವುದಿಲ್ಲ. ಆದರೆ ಯಾರು ನಿನ್ನ ಚರಣಗಳ ಆಶ್ರಯ ಪಡೆಯದ ಯೋಗಿಗಳು ಹಾಗೂ ಕರ್ಮಿಗಳು ತಮ್ಮ ಸಾಧನೆಯ ಗರ್ವದಿಂದ ಅಹಂಕಾರಿಯಾಗುವರು. ನಿನ್ನ ಮಾಯೆಯು ಅವರ ಬುದ್ಧಿಯನ್ನು ಹರಣ ಮಾಡುವುದು.

ಮನೋನಿಗ್ರಹಕ್ಕಾಗಿ ಹಟ ತೊಟ್ಟು ಕೆಲವರು ಗಿರಿಕಂದರಗಳಲ್ಲಿ ವಾಸಿಸುವರು. ಅವರನ್ನೂ ಸಹ ಮನಸ್ಸು ಒಗೆದು ಬಲು ಶೀಘ್ರವಾಗಿ ಹೊರಟು ಹೋಗುವುದು ।।೮೦।। ಕೆಲವರು ಮನೋನಿಗ್ರಹ ಸಾಧಿಸಲು ಅನ್ನವನ್ನು ತ್ಯಜಿಸುವರು. ಆದರೆ ಅದರ ಪರಿಣಾಮವು ಬೇರೆಯೇ ಆಗುವುದು. ಜಾಗೃತಿ, ಸ್ವಪ್ನದಲ್ಲಿ ಆ ಮನವು ಅನ್ನಮಯವಾಗಿ ಬಿಡುವುದು ।।೮೧।। ಈ ಪ್ರಕಾರವಾಗಿ ಮನಸ್ಸಿನ ನಿಯಂತ್ರಣ ಮಾಡಲು ಹೊರಟರೆ ಅದು ಇನ್ನೂ ಅಧಿಕವಾಗಿಯೇ ಉಗ್ರಗೊಳ್ಳುವುದು. ಈ ಪ್ರಕಾರವಾಗಿ ಮನೋನಿಗ್ರಹ ಮಾಡುವ ಮಹಾಮಹಾಜ್ಞಾನೀ ಪುರುಷರು ಸಾಧನೆಗಳನ್ನು ಮಾಡುತ್ತ ವ್ಯರ್ಥವಾಗಿ ಪರಿಶ್ರಮ ಪಡುತ್ತಿರುವರು ।।೮೨।। ಒಂದುವೇಳೆ ಗಾಳಿಯಿಂದ ದೊಡ್ಡ ಗಂಟು ಕಟ್ಟಬಹುದು, ಅಗ್ನಿಯನ್ನು ಸಹಜವಾಗಿ ನುಂಗಬಹುದು, ಸಮುದ್ರವನ್ನು ಒಂದೇ ಗುಟುಕುಮಾಡಿ ಕುಡಿಯಬಹುದು. ಆದರೆ ಮನಸ್ಸು ಮಾತ್ರ ಯಾರಿಗೂ ಆತ್ಮನಿಷ್ಠವಾಗಲಾರದು ।।೮೩।। ಆಕಾಶವನ್ನು ನಾಲ್ಕು ಮಡಿಕೆ ಮಾಡಬಹುದು, ಮಹಾಮೇರು ಪರ್ವತವನ್ನು ಒಂದು ಪೊಟ್ಟಣದಲ್ಲಿ ಕಟ್ಟಬಹುದು, ಶೂನ್ಯದ ಕುತ್ತಿಗೆಯನ್ನು ಹಿಚುಕಿಹಾಕಬಹುದು, ಆದರೆ ಮನಸ್ಸನ್ನು ಅಂಕಿತದಲ್ಲಿಟ್ಟುಕೊಳ್ಳುವುದು ಅತ್ಯಂತ ದುರ್ಲಭವಾಗಿರುವುದು ।।೮೪।। ನಿಜವಾಗಿಯೂ ಕಾಲನನ್ನೂ ಕೂಡ ಜಯಿಸಬಹುದು, ತ್ರಿಭುವನದ ಸರ್ವ ಅಧಿಕಾರವು ಪ್ರಾಪ್ತವಾಗಬಹುದು, ಆದರೆ ಹೇ ಅಚ್ಯುತನೇ, ಮನೋನಿಗ್ರಹದ ವಾರ್ತೆಯು ನಿನ್ನ ಹೊರತಾಗಿ ಹೇಗೆ ಸಾಧ್ಯವಾದೀತು ? ।।೮೫।। ಮನವು ತಪಸ್ವಿಗಳವರನ್ನು ಬಹು ಬೇಗ ಮೋಸ ಮಾಡುವುದು. ಅದು ನೇಮದಿಂದ ನಡೆಯುವವರ ನೇಮವನ್ನು ಮುರಿದುಹಾಕುವುದು. ಈ ಮನವು ಬಲಿಷ್ಠರಲ್ಲಿ ಮಹಾಬಲಿಷ್ಠವಾಗಿರುವುದು. ಧೈರ್ಯದ ಸತ್ಯಾನಾಶ ಮಾಡಿಬಿಡುವುದು ।।೮೬।। ಮನವು ಇಂದ್ರನಿಗೆ ಕೆಳಗೆ ಬೀಳಿಸುತ್ತದೆ, ಮನವು ಬ್ರಹ್ಮದೇವರಿಗೆ ಹಠದಿಂದ ಇಕ್ಕಟ್ಟಿಗೆ ತರುತ್ತದೆ, ಮನಸ್ಸಿನ ಈ ಚೇಷ್ಟೆಯು ಅತ್ಯಂತ ಕೆಟ್ಟದ್ದಾಗಿರುತ್ತದೆ. ಅದನ್ನು ಸಾಧಕರು ತಮ್ಮ ಪ್ರೌಢತ್ವದಿಂದ ಅಂಕಿತ ಮಾಡಿಕೊಳ್ಳಲಾರರು ।।೮೭।। ಎಷ್ಟೇ ಸಾಧನೆಗಳನ್ನು ಮಾಡಿ ಸಾಧಕನು ದಣಿದುಕೊಂಡರೂ ಸಹ ಮನೋಜಯವು ಪ್ರಾಪ್ತವಾಗುವುದಿಲ್ಲ. ಹೇ ಅಚ್ಯುತನೇ, ನಿನ್ನ ಹೊರತಾಗಿ ಈ ಮನಸ್ಸನ್ನು ಜಯಿಸಲು ಸಾಧ್ಯವಿಲ್ಲ ।।೮೮।। ಅತಿಶಯವಾಗಿ ಖಟಾಟೋಪ ಮಾಡಿ ಮನೋಜಯ ಪ್ರಾಪ್ತಮಾಡಿಕೊಳ್ಳಲು ಆಗ ಸಿದ್ಧಿಗಳ ಗದ್ದಲ ಉಕ್ಕೇರುವುದು. ಅದರಿಂದ ಮನವು ಸಾಧಕನಿಗೆ ಮೋಸಮಾಡದೇ ಬಿಡದು ।।೮೯।। ನಿನ್ನ ಕೃಪೆಯಾಗದ ಹೊರತು ಸಾಧಕರಿಗೆ ಮನವು ಎಂದಿಗೂ ಅಂಕಿತವನ್ನಾಗಿ ಮಾಡಲು ಬರುವುದಿಲ್ಲ. ಜನಾರ್ದನನಾದ ನೀನು ಸಂತುಷ್ಟನಾಗಲು ಆಗ ಈ ಮನವು ಸ್ವತಃ ತನ್ನ ಮನತ್ವವನ್ನು ಮರೆತುಬಿಡುವುದು ।।೯೦।। ತಾತ್ಪರ್ಯವೇನೆಂದರೆ, ಭಕ್ತಿಭಾವದಿಂದ ನಿನಗೆ ಶರಣಾಗದ ಹೊರತು ಮನವನ್ನು ಅಂಕಿತವನ್ನಾಗಿ ಮಾಡಲು ಬರುವುದಿಲ್ಲ. ಆದ್ದರಿಂದ ಮನೋನಿಗ್ರಹಕ್ಕಾಗಿ ನಿನ್ನ ಚರಣಗಳಿಗೆ ಶರಣು ಹೋಗಬೇಕಾಗುವುದು ।।೯೧।।

ಕಮಲಾಪತಿ ಕಮಲವದನಾ । ಕಮಲಾಲಯಾ ಕಮಲನಯನಾ । ನಾಭಿಕಮಳೀ ಕಮಲಾಸನಾ । ತುಂವಾ ಬ್ರಹ್ಮಜ್ಞಾನಾ ಅರ್ಪಿಲೇ ।।೬೨।। ತ್ಯಾ ತುಝ್ಯಾ ಚರಣೇಂಚೇ ಚರಣಾಮೃತ । ತುಝ್ಯಾ ಕೃಪಾ ಜ್ಯಾಸ ಹೋಯ ಪ್ರಾಪ್ತ । ಮನೋಜಯ ತ್ಯಾಚಾ ಅಂಕಿತ । ತೋ ಹೋಯ ವಿರಕ್ತ ಭವಭಾವಾ ।।೬೩।। ತುಝ್ಯಾ ಚರಣಾಮೃತಾಚೀ ಗೋಡೀ । ಮನೋಜಯಾತೇ ತತ್ಕಾಳ ಜೋಡೀ । ಆಧಿವ್ಯಾಧಿ ಭವಪಾಶ ತೋಡೀ । ಸ್ವಾನಂದಕೋಡೀ ಸಾಧಕಾ ।।೬೪।। ಸಕಳ ಸಾಧನಾಂಚೇ ನಿಜಸಾರ । ಸಾಂಖ್ಯಯೋಗವಿವೇಕ ಸಧರ । ತ್ಯಾ ಸಾರಾಚೇಹೀ ನಿಜಸಾರ । ತುಝೀ ಭಕ್ತಿ ಸಾಚಾರ ಶ್ರೀಕೃಷ್ಣಾ ।।೬೫।। ಜಾಣೋನಿ ಭಕ್ತೀಚೇ ರಹಸ್ಯ । ಭಜನಪ್ರೇಮಾ ಲೋಭಲೇ ಮಾನಸ । ತೇಚಿ ವಿಜ್ಞಾನ ರಾಜಹಂಸ । ಭಜನಸಾರಾಂಶ ಸೇವಿತೀ ।।೬೬।। ಕಾಯಾ ವಾಚಾ ಆಣಿ ಮನ । ಸದ್ಭಾವೇ ಸದಾ ಸಂಪನ್ನ । ಐಶಿಯಾ ಭಕ್ತಾ ತುಝೇ ಚರಣ । ಸ್ವಾನಂದೇ ಪೂರ್ಣ ದುಭತೀ ।।೬೭।। ಧರ್ಮಅರ್ಥಕಾಮಮೋಕ್ಷಾಂಸೀ । ಸಾಂಗ ಸಾಧನೇ ಸಿದ್ಧೀ ತ್ಯಾಂಸೀ । ವಿಕಳ ಜಾಹಲಿಯಾ ಸಾಧನಾಂಸೀ । ಯೇ ಸಾಧಕಾಂಸೀ ಅಪಾವೋ ।।೬೮।। ತೈಶೀ ತಂವ ತುಝೀ ಭಕ್ತಿ ನವ್ಹೇ । ತುಜ ಭಜತಾ ಜೀವೇ ಭಾವೇ । ಭಜಕಾ ವಿಘ್ನ ಕದಾ ನ ಪಾವೇ । ಶೇಖೀ ಭಕ್ತ ನಾಗವೇ ವಿಘ್ನಾಸೀ ।।೬೯।। ಜೈ ಸೂರ್ಯ ಆಣಿ ಖದ್ಯೋತಾಸೀ । ಭೇಟೀ ಹೋಯ ಸಾವಕಾಶೀ । ತರೀ ವಿಘ್ನೇ ಭಕ್ತಾಪಾಶೀ । ಧೀರು ಯಾವಯಾಸೀ ನ ಧರಿತೀ ।।೭೦।। ಪಡತಾ ಪಂಚಾನನಾಚೀ ಘಾಣೀ । ಹೋಯ ಮದಗಜಾ ಭಂಗಣೀ । ತೇವಿ ತುಝ್ಯಾ ಭಾವಾರ್ಥಭಜನೀ । ಹೋಯ ಧೂಳಧಾಣೀ ವಿಘ್ನಾಂಚೀ ।।೭೧।। ಯೇಣೇಚಿ ನಿಶ್ಚಯೇ ನಿಜಸಂಪನ್ನ । ತುಝ್ಯಾ ಚರಣಾ ಅನನ್ಯಶರಣ। ತ್ಯಾಂಸೀ ನಾತಳೇ ಜನ್ಮ ಮರಣ । ಮಾ ಇತರ ವಿಘ್ನತೇ ಕೈಚೇ ।।೭೨।। ಯೇಣೇ ಭಾವೇ ಜೇ ಅನನ್ಯಶರಣ । ತ್ಯಾಂಸೀ ತುಝೇ ನಿಜಚರಣ । ಸ್ವಾನಂದೇ ಸದಾ ಕರಿತೀ ಪೂರ್ಣ । ಜೇವೀ ಕಾಮಧೇನು ಜಾಣ ನಿಜವತ್ಸಾ ।।೭೩।। ಭಕ್ತಿಸರೋವರೀ ನಿರ್ಮಳ । ನವವಿಧ ರಸೇ ರಸಿಕ ಜಳ । ತೇಥ ತುಝೇ ಚರಣಕಮಳ । ವಿಕಾಸತ ಕೇವಳ ಭಾವಾರ್ಥಸೂರ್ಯೇ ।।೭೪।। ತೇಥ ಸ್ವಾನುಭವಿಕ ಭ್ರಮರ । ಝೋಂಪಾವೋನಿಯಾ ಅರುವಾರ । ಕುಚಂವೋ ನೇದಿತಾ ಕೇಸರ । ಆಮೋದಸುಖಸಾರ ಸೇವಿತೀ ।।೭೫।। ತೇಥ ವಿವೇಕ - ಪರಮಹಂಸ । ತೇ ಸರೋವರೀಂಚೇ ರಾಜಹಂಸ । ಚರಣಕಮಳೀ ಕರೂನಿ ವಾಸ । ಆಮೋದ ಸುರಸ ಸೇವಿತೀ ।।೭೬।।

ಹೇ ಕಮಲಾಪತೀ, ಕಮಲವದನಾ, ಕಮಲನಿವಾಸಾ, ಕಮಲನಯನಾ, ಶ್ರೀಕೃಷ್ಣಾ, ನಿನ್ನ ಕಮಲಾಸನದ ಮೇಲೆ ಕುಳಿತುಕೊಳ್ಳುವ ಬ್ರಹ್ಮದೇವನಿಗೆ ನೀನು ಬ್ರಹ್ಮಜ್ಞಾನವನ್ನು ಅರ್ಪಿಸಿರುವೆ ।।೬೨।। ನಿನ್ನ ಕೃಪೆಯಿಂದ ಯಾರಿಗೆ ನಿನ್ನ ಚರಣಗಳ ಚರಣಾಮೃತವು ಪ್ರಾಪ್ತವಾಗುವುದೋ, ಅವರ ಮನೋಜಯವು ಅಂಕಿತವಾಗಿರುವುದು. ಅವರು ಪ್ರಪಂಚ ವಿಷಯದಲ್ಲಿ ವಿರಕ್ತರಾಗುವರು ।।೬೩।। ನಿನ್ನ ಚರಣಾಮೃತದ ಮಾಧುರ್ಯವು ತತ್ಕಾಲದಲ್ಲಿ ಮನೋಜಯದ ಲಾಭ ಮಾಡಿಕೊಡುವುದು. ಅನೇಕ ಪ್ರಕಾರದ ಆಧಿವ್ಯಾಧೀ ಹಾಗೂ ಸಂಸಾರಪಾಶವನ್ನು ಮುರಿದುಹಾಕುವುದು. ಹೀಗಾಗಿ ಸಾಧಕರಿಗೆ ಸ್ವಾನಂದದ ರಾಶಿ ಪ್ರಾಪ್ತವಾಗುವುದು ।।೬೪।। ಆದ್ದರಿಂದ ಸರ್ವ ಸಾಧನೆಗಳ ಸಾರವು ದೃಢವಾದ ಸಾಂಖ್ಯಯೋಗವಿವೇಕವು. ಇದರ ಸಾರವೆಂದರೆ ಹೇ ಕೃಷ್ಣನೇ, ನಿಜವಾಗಿಯೂ ನಿನ್ನ ಭಕ್ತಿಯಾಗಿರುವುದು ।।೬೫।। ಭಕ್ತಿಯ ರಹಸ್ಯ ತಿಳಿದು ಯಾರ ಮನವು ಹೃದಯದಲ್ಲಿನ ಪ್ರೇಮದತ್ತ ಬಾಗುವುದೋ, ಅವರೇ ವಿಜ್ಞಾನಯುಕ್ತ ರಾಜಹಂಸರಾಗಿ ಭಜನ ಸಾರಾಂಶದ ಸೇವನೆ ಮಾಡುವರು ।।೬೬।। ಯಾರು ಕಾಯಾ, ವಾಚಾ, ಮನದಿಂದ ಸರ್ವದಾ ಸದ್ಭಾವನೆಯುಕ್ತರಾಗಿರುವರೋ, ಆ ಭಕ್ತರಿಗೆ ನಿನ್ನ ಚರಣಗಳು ಪೂರ್ಣ ಆನಂದದಿಂದ ಫಲದ್ರೂಪವಾಗುವುವು ।।೬೭।। ಧರ್ಮ, ಅರ್ಥ, ಕಾಮ, ಮೋಕ್ಷಗಳು ಸಾಧನೆಗಳಿಂದ ಯಥಾಸಾಂಗ ಪ್ರಾಪ್ತವಾಗುವುವು. ಆ ಸಾಧನೆಗಳಲ್ಲಿ ಏನಾದರೂ ಕೊರತೆಯಾದರೆ ಸಾಧಕರಿಗೆ ಅಪಾಯ ಉಂಟಾಗುವುದು ।।೬೮।। ಆದರೆ ನಿನ್ನ ಭಕ್ತಿಯು ಮಾತ್ರ ಆದರಂತೆ ಅಲ್ಲ. ಜೀವಭಾವದಿಂದ ನಿನ್ನನ್ನು ಭಜಿಸುತ್ತಿರಲು, ಭಜನೆ ಮಾಡುವವರಿಗೆ ಎಂದಿಗೂ ವಿಘ್ನಗಳು ಬರಲು ಸಾಧ್ಯವಿಲ್ಲ. ಪ್ರತಿಯಾಗಿ ಭಕ್ತರು ವಿಘ್ನಗಳಿಗೆ ಫಜೀತಿಗೊಳಿಸುವರು ।।೬೯।। ಸೂರ್ಯನ ಹಾಗೂ ಮಿಂಚುಹುಳುವಿನ ಒಂದುವೇಳೆ ಸಾವಕಾಶವಾಗಿ ಇಬ್ಬರ ಭೇಟಿಯಾದರೆ ಮಾತ್ರ ವಿಘ್ನಗಳು ಭಕ್ತರಲ್ಲಿ ಬರಲು ಸಾಧ್ಯವಾದೀತು ।।೭೦।। ಸಿಂಹದ ಕೇವಲ ಅದರ ವಾಸನೆ ಬಂದರೆ ಸಾಕು, ಮದ್ದಾನೆಯು ಓಡುತ್ತ ಪಲಾಯನ ಮಾಡುವುದು. ಅದರಂತೆ ನಿನ್ನ ಭಕ್ತಿಭಾವಪೂರ್ಣ ಭಜನೆಯಿಂದ ವಿಘ್ನಗಳ ಧೂಳಿಪಟವಾಗುವುದು ।।೭೧।। ಹೀಗೆ ನಿಶ್ಚಯದಿಂದ ಸಂಪನ್ನನಾಗಿ ಅವರು ನಿನ್ನ ಚರಣಗಳಿಗೆ ಅನನ್ಯಭಾವದಿಂದ ಶರಣಾಗುತ್ತಿರುವರು. ಅವರಿಗೆ ಜನ್ಮಮರಣವೂ ಕೂಡ ಸ್ಪರ್ಶ ಮಾಡಲಾರದು. ಅಂದಮೇಲೆ ಇತರ ವಿಘ್ನಗಳು ಎಲ್ಲಿಂದ ಬರಬೇಕು? ।।೭೨।। ಕಾಮಧೇನು ಯಾವ ಪ್ರಕಾರವಾಗಿ ತನ್ನ ಕರುವಿಗೆ ತೃಪ್ತಗೊಳಿಸುತ್ತಿರುವುದೋ, ಆದರಂತೆ ಭಕ್ತಿಭಾವದಿಂದ ಶರಣಾದವರಿಗೆ ನಿನ್ನ ಚರಣಗಳು ನಿರಂತರವಾಗಿ ಸ್ವಾನಂದದಿಂದ ಪರಿಪೂರ್ಣಗೊಳಿಸುವುವು ।।೭೩।। ಭಕ್ತಿರೂಪ ನಿರ್ಮಲ ಸರೋವರದಲ್ಲಿ ನವವಿಧ ರಸದ ರಸಿಕ ಜಲವಿರುವುದು. ಭಾವಾರ್ಥ ಸೂರ್ಯನ ಉದಯವಾಗುತ್ತಲೇ ಅದರಲ್ಲಿನ ನಿನ್ನ ಚರಣಕಮಲಗಳು ವಿಕಸಿತವಾಗುವುವು ।।೭೪।। ಅದರಲ್ಲಿ ಸ್ವಾನುಭವಿ ಭ್ರಮರಗಳು ಆ ಕಮಲಗಳ ಮೇಲೆ ಮುಗಿಬೀಳುವುವು. ಒಳಗಿನ ಕೇಸರಿಗೆ ಸ್ವಲ್ಪವೂ ಕೂಡ ಧಕ್ಕೆ ತಾರದೇ ಸೌಖ್ಯ ರೂಪ ಮಕರಂದವನ್ನು ಅವು ಸೇವಿಸುವುವು ।।೭೫।। ಅಲ್ಲಿ ಆತ್ಮನಾತ್ಮವಿವೇಕ ಪಡೆದ ಪರಮಹಂಸರು ಆ ಸರೋವರದಲ್ಲಿನ ರಾಜಹಂಸ ಪಕ್ಷಿಗಳಾಗಿರುವರು. ಅವು ನಿನ್ನ ಕೋಮಲ ಚರಣಕಮಲಗಳ ಹತ್ತಿರವಿದ್ದು ಸುರಸವಾದ ಆಮೋದ ಸೇವಿಸುತ್ತಿರುವುವು ।।೭೬।।

ಹೋ ಕಾ ಆರ್ತ ಜಿಜ್ಞಾಸು ಅರ್ಥಾರ್ಥೀ । ಹೇಹೀ ತೇ ಸರೋವರೀ ಅಸತೀ । ಪರೀ ಕಮಳಾಮೋದ ನೇಣತೀ । ತೇ ಕ್ರೀಡತೀ ಕಮಳಾತಳೀ ॥೭೭॥ ಐಸಿಯಾ ಭೋಳ್ಯಾ ಭಕ್ತಾಂಸೀ । ತೂ ತಾರಿಸೀ ಹೃಷೀಕೇಶೀ । ಏವಂ ಜೇ ಜೇ ಲಾಗಲೇ ಭಕ್ತೀಸೀ । ಅಪಾವೋ ತ್ಯಾಂಸೀ ಅಸೇನಾ ॥೭೮॥ ಭಾವೇ ಕರಿತಾ ತುರ್ಝೇ ಭಜನ । ತೂ ಭಾವಾರ್ಥೇ ಹೋಶೀ ಪ್ರಸನ್ನ । ತುರ್ಝ್ಯಾ ಪ್ರಸನ್ನತಾ ತುರ್ಝೇ ಚರಣ । ಸ್ವಾನಂದ ಪೂರ್ಣ ವರ್ಷತೀ ॥೭೯॥ ತೂ ವಿಶ್ವಮೂರ್ತೀ ವಿಶ್ವೇಶ್ವರು । ತೂ ಬ್ರಹ್ಮಾದಿಕಾಂಚಾ ಈಶ್ವರು । ತುರ್ಝಾ ಜಾಹಲಿಯಾ ಅಭಯ ಕರು । ಭಕ್ತಾ ಭವಭಾರು ಸ್ಪರ್ಶೇನಾ ॥೮೦॥ ತುರ್ಝೀ ಭಕ್ತಿ ತೇ ತ್ಯಾಂಚೇ ಸತ್ಕರ್ಮ । ತುರ್ಝಾ ಭಾವ ತೋ ತ್ಯಾಂಚಾ ಸ್ವಧರ್ಮ । ತುಜ ನೈವೇದ್ಯ ಅರ್ಪಣೇ ಉತ್ತಮ । ತೋಚಿ ಯಾಗ ಪರಮ ಭಕ್ತಾಂಚಾ ॥೮೧॥ ನಿತ್ಯ ಸ್ಮರಣೇ ತುರ್ಝೇ ನಾಮ । ಹಾಚಿ ಭಕ್ತಾಂಚಾ ಜಪಸಂಭ್ರಮ । ತುರ್ಝೇ ಕೀರ್ತನ ಮನೋರಮ । ತೇ ಸಮಾಧಿ ಪರಮ ಭಕ್ತಾಂಚೀ ॥೮೨॥ ಏವಂ ಭಕ್ತ ಕರಿತೀ ಜೇ ಜೇ ಕರ್ಮ । ತೇ ತೇ ತೂ ಹೋಸೀ ಪುರುಷೋತ್ತಮ । ಜ್ಯಾಸೀ ತೂ ತುಷ್ಟಸೀ ಮೇಘಶ್ಯಾಮ । ತ್ಯಾಸೀ ಭವಭ್ರಮ ಸ್ಪರ್ಶೇನಾ ॥೮೩॥ ಯಾಪರೀ ಭಜನಮುಖೇ । ಭಕ್ತ ತಾರಿಸೀ ನಿಜಾತ್ಮಸುಖೇ । ತೇಣೇ ಸುಖಾಚೇನಿ ಹರಿಖೇ । ಅತಿಸಂತೋಖೇ ಡುಲ್ಲಸೀ ॥೮೪॥ ಏವಂ ಅನಪೇಕ್ಷಿತ ಭಕ್ತಜನ । ತೂ ನಿಜಸುಖೇ ಕರಿಸೀ ಪೂರ್ಣ । ತುಜ ನ ರಿಘತೀ ಜೇ ಶರಣ । ತೇ ಮಾಯೇನೇ ಜಾಣ ಮೋಹಿಲೇ ॥೮೫॥ ಜೇ ತುರ್ಝ್ಯಾ ಚರಣಾಂಸೀ ವಿಮುಖ । ತೇ ಸ್ವಪ್ನೀಂಹೀ ನ ದೇಖತೀ ಸುಖ । ಚಢತೇವಾಢತೇ ಭೋಗಿತೀ ದುಃಖ । ಮಾಯೇನೇ ಮೂರ್ಖ ತೇ ಕೇಲೇ ॥೮೬॥ ತ್ಯಜೂನಿ ತುರ್ಝೇ ಚರಣಧ್ಯಾನ । ಕರಿತಾ ಯೋಗಯಾಗಕ್ರಿಯಾ ಸಾಧನ । ತೇ ತೇ ಸಾಧಕಾ ಹೋಯ ಬಂಧನ । ಖವಳೇ ಅಭಿಮಾನ ಜ್ಞಾತೃತ್ವೇ ॥೮೭॥

(ಪೂರ್ವಶ್ಲೋಕಾಚಾ ಚರಣ) ''ತ್ವನ್ಮಾಯಯಾऽಮೀ ವಿಹತಾ ನ ಮಾನಿನಃ''

ಹಾಚಿ ಶ್ಲೋಕಿಂಚಾ ಅಂತೀಂಚಾ ಚರಣ । ಉಪಕ್ರಮೋನಿಯಾ ಆಪಣ । ಪಂಡಿತಾಂಚಾ ಜ್ಞಾನಾಭಿಮಾನ । ಅಭಕ್ತಪಣ ಪ್ರಕಾಶೀ ॥೮೮॥ ಆಮ್ಹೀ ಜ್ಞಾತೇ ಆಮ್ಹೀ ಯೋಗೀ । ಆಮ್ಹೀ ಪ್ರವರ್ತಕ ಕರ್ಮಮಾರ್ಗೀ । ಆಮ್ಹೀ ಶ್ರೋತ್ರಿಯ ಪವಿತ್ರ ಜಗೀ । ಆಮುಚಿ ಮಾಗೀ ಅತಿಶುದ್ಧ ॥೮೯॥

ಆ ಸರೋವರದಲ್ಲಿ ಆರ್ತ, ಜಿಜ್ಞಾಸು ಹಾಗೂ ಅರ್ಥಾರ್ಥೀ ಈ ಭಕ್ತರೂ ಕೂಡ ಇರುವರು. ಆದರೆ ಅವರು ಈ ಯಾವ ಕಮಲದೊಳಗಿನ ಮಕರಂದ ತಿಳಿಯರು. ಕಮಲಗಳ ತಳದಲ್ಲಿ ಅವರು ಕ್ರೀಡೆಗಳನ್ನು ಮಾಡುತ್ತಿರುವರು ॥೭೭॥ ಹೇ ಶ್ರೀಕೃಷ್ಣನೇ, ಹೀಗಿರುವ ಮುಗ್ಧ ಭಕ್ತರಿಗೆ ನೀನು ಉದ್ಧಾರ ಮಾಡುವೆ. ಈ ಪ್ರಕಾರವಾಗಿ ಯಾರು ಯಾರು ನಿನ್ನ ಭಕ್ತಿ ಮಾಡಲು ಆರಂಭಿಸುವರೋ, ಅವರಿಗೆ ಎಂದಿಗೂ ಅಪಾಯವಾಗುವುದಿಲ್ಲ ॥೭೮॥ ಭಕ್ತಿಭಾವನೆಯಿಂದ ನಿನ್ನ ಭಜನೆ ಮಾಡಲು ಅವರ ಶುದ್ಧ ಭಾವನೆಯಿಂದ ನೀನು ಪ್ರಸನ್ನನಾಗುವೆ. ನಿನ್ನ ಪ್ರಸನ್ನತೆಯಿಂದ ನಿನ್ನ ಚರಣಗಳು ಸ್ವಾನಂದದ ಪರಿಪೂರ್ಣ ಮಳೆಗರೆಯುವುವು ॥೭೯॥ ನೀನು ವಿಶ್ವಮೂರ್ತಿಯಾಗಿ ವಿಶ್ವೇಶ್ವರನಾಗಿರುವೆ. ನೀನು ಬ್ರಹ್ಮದೇವಾದಿಕರ ಈಶ್ವರನಾಗಿರುವೆ. ನಿನ್ನ ಅಭಯ ಹಸ್ತದ ಪ್ರಾಪ್ತವಾಗಲು ಭಕ್ತರಿಗೆ ಭವಭಾರವು ಸ್ಪರ್ಶ ಕೂಡ ಮಾಡಲು ಸಾಧ್ಯವಿಲ್ಲ ॥೮೦॥ ನಿನ್ನ ಭಕ್ತಿಯು ಇದೇ ಅವರ ಸತ್ಕರ್ಮವಾಗಿರುತ್ತದೆ. ನಿನ್ನಮೇಲಿರುವ ಭಾವವೇ ಅವರ ಸ್ವಧರ್ಮವಾಗಿರುತ್ತದೆ. ನಿನಗೆ ಉತ್ತಮೋತ್ತಮ ನೈವೇದ್ಯ ಅರ್ಪಿಸುವುದೇ ಈ ಭಕ್ತರ ದೊಡ್ಡ ಯಜ್ಞವಾಗಿರುತ್ತದೆ ॥೮೧॥ ನಿನ್ನ ನಾಮದ ನಿತ್ಯ ಸ್ಮರಣೆಯೇ ಭಕ್ತರ ಜಪವಾಗಿರುವುದು. ನಿನ್ನ ಮನೋಹರ ಮಂಗಲ ಕೀರ್ತನೆ ಮಾಡುವುದೇ ಭಕ್ತರ ಸಮಾಧಿಯಾಗಿರುವುದು ॥೮೨॥ ಈ ಪ್ರಕಾರವಾಗಿ ಭಕ್ತರು ಯಾವ ಯಾವ ಕರ್ಮಗಳನ್ನು ಮಾಡುತ್ತಿರುವರೋ, ಅವೆಲ್ಲವೂ ಪುರುಷೋತ್ತಮನಾದ ನೀನೇ ಆಗುತ್ತಿರುವೆ. ಮೇಘಶ್ಯಾಮನಾದ ನೀನು ಯಾರಲ್ಲಿ ಸಂತುಷ್ಟನಾಗುವಿಯೋ, ಅವರಿಗೆ ಭವಭ್ರಮೆಯು ಎಂದಿಗೂ ಸ್ಪರ್ಶ ಕೂಡ ಮಾಡಲು ಶಕ್ಯವಿಲ್ಲ ॥೮೩॥ ಈ ಪ್ರಕಾರವಾಗಿ ನೀನು ಭಕ್ತರಿಗೆ ಆತ್ಮಸುಖವನ್ನು ಕೊಟ್ಟು ಅವರನ್ನು ಉದ್ಧಾರಮಾಡುವೆ. ಅವರಿಗೆ ಲಭಿಸುವ ಆನಂದ ಕಂಡು ನೀನು ಸಂತೋಷಪಡುವೆ ಹಾಗೂ ಆನಂದದಿಂದ ತೂಗಾಡುವೆ ॥೮೪॥ ಈ ಪ್ರಕಾರವಾಗಿ ನಿರಪೇಕ್ಷ ಭಕ್ತಜನರಿಗೆ ನೀನು ಆತ್ಮಸುಖದಿಂದ ಪರಿಪೂರ್ಣರನ್ನಾಗಿ ಮಾಡುವೆ. ನಿನಗೆ ಯಾರು ಶರಣು ಬರುವುದಿಲ್ಲವೋ, ಅವರು ಮಾಯೆಯಿಂದ ಮೋಹಿತರಾಗಿರುವರು ॥೮೫॥ ನಿನ್ನ ಚರಣಗಳಿಗೆ ಯಾರು ವಿಮುಖರಾಗುವರೋ, ಅವರಿಗೆ ಸ್ವಪ್ನದಲ್ಲಿಯೂ ಕೂಡ ಸುಖವು ಲಾಭವಾಗಲು ಶಕ್ಯವಿಲ್ಲ. ಮೇಲಿಂದಮೇಲೆ ಅವರಿಗೆ ದುಃಖವನ್ನೇ ಭೋಗಿಸಬೇಕಾಗುವುದು. ಮಾಯೆಯು ಅವರಿಗೆ ಇಷ್ಟೊಂದು ಮೂರ್ಖರನ್ನಾಗಿ ಮಾಡಿರುವುದು ॥೮೬॥ ನಿನ್ನ ಚರಣಗಳ ಧ್ಯಾನ ಬಿಟ್ಟು ಯಾರು ಯೋಗಯಾಗಕ್ರಿಯಾ ಸಾಧನೆಗಳನ್ನು ಮಾಡುವರೋ, ಅವರು ಬಂಧನದಲ್ಲಿ ಸಿಲುಕಿಕೊಳ್ಳುವರು. ಈ ಕಾರಣದಿಂದ ಅವರ ಜ್ಞಾನಾಭಿಮಾನವು ಉಗ್ರವಾಗುತ್ತಿರುವುದು ॥೮೭॥

''ತ್ವನ್ಮಾಯಯಾऽಮೀ ವಿಹತಾ ನ ಮಾನಿನಃ'' ಇದು ಶ್ಲೋಕದ ಕೊನೆಯ ಚರಣವಾಗಿರುವುದು. ಇದರ ವಿಚಾರವನ್ನು ಮಾಡಲು, ಅದರಲ್ಲಿ ಪಂಡಿತರ ಜ್ಞಾನಾಭಿಮಾನ ಮತ್ತು ಅಭಕ್ತತನ ಇವು ಪ್ರಕಟವಾಗುತ್ತಿರುವುವು ॥೮೮॥ ನಾವು ಜ್ಞಾನಿಗಳು, ನಾವು ಯೋಗಿಗಳು, ನಾವು ಕರ್ಮಯೋಗದ ಪ್ರವರ್ತಕರಾಗಿರುವೆವು. ನಾವು ಶ್ರೋತ್ರೀಯರು, ಸಂಪೂರ್ಣ ಜಗತ್ತಿನಲ್ಲಿ ನಾವು ಪವಿತ್ರರಾಗಿರುವೆವು. ನಮ್ಮ ದೇ ಮಾರ್ಗವು ಅತಿಶಯ ಶುದ್ಧವಾಗಿರುವುದು ॥೮೯॥

ಲೋಕ ಕೇವಳ ಅಜ್ಞಾನ । ತೈಸೇ ಆಮ್ಹೀ ನವ್ಹೋ ಆಪಣ । ಆಮುಚೇ ವಚನ ಪ್ರಮಾಣ । ಸರ್ವಾರ್ಥೀ ಜಾಣ ಸರ್ವಾಶೀ ॥೯೦॥ ಆಮ್ಹೀ ಜ್ಞಾತೇ ಹೇ ಮಾನೂನಿ ದೃಢ । ಜ್ಞಾನಾಭಿಮಾನೇ ಕೇಲೇ ಮೂಢ । ಪಾಂಡಿತ್ಯೇ ಹೋಊನಿ ಗರ್ವಾರೂಢ । ದುಃಖ ದುರ್ವಾಡ ಭೋಗಿತೀ ॥೯೧॥ ಅಭಿಮಾನಾಐಸಾ ವೈರೀ । ಆನ ನಾಹೀ ಸಂಸಾರೀ । ತೋ ಹಾ ಜ್ಞಾನಾಭಿಮಾನೇಕರೀ । ಘಾಲೀ ದುಸ್ತರೀ ಸಜ್ಞಾನಾ ॥೯೨॥ ಅಸೋ ಹೇ ಅಭಕ್ತಾಂಚೀ ಕಥಾ । ಜೇ ಚುಕಲೇ ಭಕ್ತಿಪಂಥಾ । ಯಾಲಾಗೀ ನಾನಾಪರೀಂಚ್ಯಾ ವ್ಯಥಾ । ದೇಹಅಹಂತಾ ಸೋಸಿತೀ ॥೯೩॥ ಜೆಂಹೀ ಭಕ್ತೀಸೀ ವಿಕೂನಿ ಚಿತ್ತ । ಜಾಹಲೇ ಅನನ್ಯಶರಣಾಗತ । ತ್ಯಾಂಸೀ ತಾರಿತಾ ತೂ ಜಗನ್ನಾಥ । ನಿಜಸುಖೇ ನಿಜಭಕ್ತ ನಾಂದವಿಸೀ ॥೯೪॥ ತುರ್ಝೇ ಜೇ ಕಾ ಭಕ್ತಜನ । ಜೆಂಹೀ ಭಕ್ತೀಸೀ ವಿಕಿಲಾ ಪ್ರಾಣ । ತ್ಯಾಸೀ ನ ಮಾಗತಾಬ್ರಹ್ಮಜ್ಞಾನ । ಸಹಜೇ ಜಾಣ ಠಸಾವೇ ॥೯೫॥ ತುರ್ಝೇ ಕರಿತಾ ನಿಜಭಜನ । ಭಕ್ತಾಂಸೀ ಕದಾ ನ ಬಾಧೀ ವಿಘ್ನ । ಸುಖೇ ಹೋತೀ ಸುಖಸಂಪನ್ನ । ಹೇ ನವಲ ಕೋಣ ಗೋವಿಂದಾ ॥೯೬॥ ಜೇ ತುಜ ಅನನ್ಯಶರಣ । ತೂ ಸರ್ವದಾ ತ್ಯಾ ಅಧೀನ । ತೇಚಿ ಅರ್ಥೀಚೇ ನಿರೂಪಣ । ಉದ್ಧವ ಆಪಣ ಸಾಂಗತ ॥೯೭॥

ಕಿಂ ಚಿತ್ರಮಚ್ಯುತ ತವೈತದಶೇಷಬಂಧೋ ದಾಸೇಷ್ವನನ್ಯಶರಣೇಷು ಯದಾತ್ಮಸಾತ್ತ್ವಮ್ ।
ಯೋಽರೋಚಯತ್ಸಹ ಮೃಗೈಃ ಸ್ವಯಮೀಶ್ವರಾಣಾಂ ಶ್ರೀಮತ್ಕಿರೀಟತಟಪೀಡಿತಪಾದಪೀಠಃ ॥೪॥

ಅರ್ಥ:- ಹೇ ಪ್ರಭುವೇ, ನೀವು ಸರ್ವರ ಹಿತೈಷೀ ಸುಹೃದಯರಾಗಿರುವಿರಿ. ತಾವು ಅನನ್ಯ ಶರಣಾದ ಬಳಿ ಇತ್ಯಾದಿ ಸೇವಕರ ಆಧೀನರಾದಿರಿ. ಇದಾದರೂ ಯಾವ ಆಶ್ಚರ್ಯದ ಮಾತಲ್ಲ. ಕಾರಣ ರಾಮಾವತಾರದಲ್ಲಿ ತಾವು ವಾನರರ ಪ್ರೇಮಕ್ಕೆ ವಶರಾಗಿ ಅವರಲ್ಲಿ ಮಿತ್ರತ್ವದ ವ್ಯವಹಾರ ಮಾಡಿದಿರಿ. ಬ್ರಹ್ಮಾದಿಕ ಈಶ್ವರರ ಅತ್ಯಂತ ಶೋಭಾಯುಕ್ತ ಕಿರೀಟದ ಅಗ್ರಭಾಗವು ಯಾರ ಪಾದವಿಡುವ ಪೀಠಕ್ಕೆ ತಿಕ್ಕಲ್ಪಟ್ಟಿರುವುದೋ ಅಂತಹ ಸ್ವತಃ ತಾವು ಈಶ್ವರನಿಗೂ ಈಶ್ವರರಾಗಿರುವಿರಿ.

ವಿಘ್ನ ನ ಬಾಧೀ ತುರ್ಝ್ಯಾ ಭಕ್ತಾಂಸೀ । ಹೇ ನವಲ ನವ್ಹೇ ಹೃಷೀಕೇಸೀ । ತೂ ಭುಲೋನಿ ಭಕ್ತಪ್ರೇಮಾಸೀ । ಭಕ್ತಾಧೀನ ಹೋಸೀ ಸರ್ವದಾ ॥೯೮॥ ಹೋಊನಿ ನಿಜದಾಸಾಧೀನ । ಮಧ್ಯರಾತ್ರೀ ಪುರವಿಸೀ ಅನ್ನ । ಶೇಖೀ ತುಜ ನ ಮಿಳೇ ಭೋಜನ । ಭುಕೇಲ್ಯಾ ಪಾನ ಭಾಜೀಚೇ ॥೯೯॥ ಉಭಯ ಸೇನೇಚೇ ದೇವ್ಹಡೀ । ಶಸ್ತ್ರೇ ಸುಟತಾ ಅತಿ ಕಡಾಡೀ । ತೇಥ ಸೋಸಿಸೀ ರಥಾಚೇ ವೋಢೀ । ಶೇಖೀ ರಥೀಂಚೇ ಘೋಡೀ ತೂ ಧುಶೀ ॥೧೦೦॥ ತುರ್ಝಾ ಮುಕುಟ ನಾಕಳೇ ವೇದಾಸೀ । ತೇಥ ಭಕ್ತಾಂಚಾ ಚಾಬುಕ ಖೋಂವಿಸೀ । ದೇಖತಾ ಸಕಳಿಕಾ ರಾಯಾಸೀ । ರಣೀ ಘೋಡೇ ಧುಸೀ ನಿಜಾಂಗೇ ॥೧೦೧॥

ಜನರು ಕೇವಲ ಅಜ್ಞಾನಿಗಳಾಗಿರುವರು, ನಾವು ಮಾತ್ರ ಹಾಗಿರುವುದಿಲ್ಲ. ನಮ್ಮ ವಚನಗಳು ಸರ್ವರಿಗೂ ಸರ್ವಥಾ ಪ್ರಮಾಣವಾಗಿರುವುವು ॥೯೦॥ ಈ ಪ್ರಕಾರವಾಗಿ ನಾವು ಜ್ಞಾನಿಗಳು ಎಂದು ಅವರು ತಮ್ಮ ಮನದಲ್ಲಿ ನಿಶ್ಚಿತವಾಗಿ ತಿಳಿದಿರುತ್ತಾರೆ. ಅವರು ಜ್ಞಾನಾಭಿಮಾನದಿಂದ ಮೂಢರಾಗಿರುತ್ತಾರೆ. ಅವರು ಪಾಂಡಿತ್ಯತನದಿಂದ ಗರ್ವಿಷ್ಠರಾಗುತ್ತಾರೆ. ಇದರಿಂದ ಅವರು ಮಹಾದುಃಖಿಗಳನ್ನು ಭೋಗಿಸುತ್ತಾರೆ ॥೯೧॥ ಈ ಯಾವ ಸಂಸಾರದಲ್ಲಿ ಅಭಿಮಾನದಂತಹ ವೈರಿಯು ಬೇರೆ ಯಾವುದೂ ಇರುವುದಿಲ್ಲ. ಅವರು ಜ್ಞಾನದ ಅಭಿಮಾನದಿಂದ ಇತರ ಸಜ್ಞಾನೀ ಜನರನ್ನು ಬಂಧನದಲ್ಲಿ ಹಾಕುವರು ॥೯೨॥ ಇದು ಅಭಕ್ತರ ಮಾತು ಇರಲಿ, ಒಟ್ಟಿನಲ್ಲಿ ಯಾರು ಭಕ್ತಿ ಪಂಥವನ್ನು ಬಿಡುವರೋ, ಅವರಿಗೆ ನಾನಾ ಪ್ರಕಾರದ ವ್ಯಥೆಗಳನ್ನು ದೇಹಅಹಂಕಾರದಿಂದ ಭೋಗಿಸುತ್ತಿರಬೇಕಾಗುವುದು ॥೯೩॥ ಯಾರು ಭಕ್ತಿಗೆ ತಮ್ಮ ಚಿತ್ತ ಮಾರಿಕೊಂಡು ನಿನಗೆ ಶರಣು ಬರುವರೋ, ಜಗನ್ನಾಥನಾದ ನೀನು ಅವರನ್ನು ಉದ್ಧಾರ ಮಾಡುವೆ. ಹಾಗೂ ಭಕ್ತರಿಗೆ ಆತ್ಮಸುಖದಲ್ಲಿ ಸ್ಥಿರಗೊಳಿಸುವೆ ॥೯೪॥ ನಿನ್ನ ಭಕ್ತಿಗಾಗಿ ಯಾರು ತಮ್ಮ ಪ್ರಾಣವನ್ನೇ ಮಾರಿಕೊಳ್ಳುವರೋ, ಅವರು ಬೇಡದೇ ಇದ್ದರೂ ಕೂಡ ನೀನು ಅವರ ಹೃದಯ ಮಂದಿರದಲ್ಲಿ ಬ್ರಹ್ಮಜ್ಞಾನವನ್ನು ಗಟ್ಟಿಯಾಗಿ ಮೂಡಿಸುವೆ ॥೯೫॥ ಹೇ ಶ್ರೀಕೃಷ್ಣನೇ, ನಿಃಸ್ವಾರ್ಥ ಭಾವನೆಯಿಂದ ನಿನ್ನ ಭಜನೆಯನ್ನು ಮಾಡುತ್ತಿದ್ದರೆ, ವಿಘ್ನಗಳು ಎಂದೆಂದಿಗೂ ಬಾಧೆ ಕೊಡಲು ಶಕ್ಯವಿಲ್ಲ. ಹೇ ಗೋವಿಂದನೇ, ಅವರು ಸಹಜವಾಗಿಯೇ ಸುಖಸಂಪನ್ನರಾಗುವರು. ಇದು ಎಂತಹ ಮಹಾ ಆಶ್ಚರ್ಯಕಾರಕವಾಗಿರುವುದು ! ॥೯೬॥ ಯಾರು ನಿನಗೆ ಅನನ್ಯಭಾವದಿಂದ ಶರಣು ಬರುವರೋ, ಅವರಿಗೆ ನೀನು ಸದಾ ಸರ್ವಕಾಲದಲ್ಲಿ ಆಧೀನನಾಗಿರುವೆ. ಇದೇ ವಿಷಯವನ್ನು ಕುರಿತು ಈಗ ಉದ್ಧವನು ನಿರೂಪಣೆ ಮಾಡುವನು ॥೯೭॥

ಹೇ ಶ್ರೀಕೃಷ್ಣನೇ, ನಿನ್ನ ಭಕ್ತರಿಗೆ ವಿಘ್ನಗಳು ಬಾಧಿಸುವುದಿಲ್ಲ ಎನ್ನುವುದರಲ್ಲಿ ಯಾವ ಆಶ್ಚರ್ಯವಿದೆ ? ಕಾರಣ ನೀನು ಭಕ್ತರ ಪ್ರೇಮಕ್ಕೆ ಮರುಳಾಗಿ ಸದಾ ಸರ್ವದಾ ಭಕ್ತರ ಆಧೀನನಾಗಿ ಇರುವೆ ॥೯೮॥ ನೀನು ನಿನ್ನ ದಾಸರ ಆಧೀನನಾದೆ. ಪಾಂಡವರಿಗಾಗಿ ದುರ್ವಾಸರಿಗೆ ಮಧ್ಯರಾತ್ರಿ ಅನ್ನ ಪೂರೈಸಿದೆ. ಕೊನೆಗೆ ನಿನಗೆ ಭೋಜನ ಸಿಗಲಿಲ್ಲ. ಆಗ ನೀನು ಒಂದು ತಪ್ಪಲ ಎಲೆಯಿಂದಲೇ ನಿನ್ನ ಹಸಿವೆ ನೀಗಿಸಿಕೊಂಡೆ ॥೯೯॥ ಎರಡೂ ಸೈನ್ಯಗಳ ಮಧ್ಯ ಶಸ್ತ್ರಗಳ ಕಡಕಡಾಟ ನಡೆಯುತ್ತಿರಲು ನೀನು ಅರ್ಜುನನ ಸಾರಥಿಯಾಗಿ ಕಷ್ಟ ಸೋಸಿದೆ. ಕೊನೆಗೆ ಆತನ ರಥದ ಕುದುರೆಗಳ ಮೈ ನೀನು ತೊಳೆದೆ ॥೧೦೦॥ ನಿನ್ನ ಕಿರೀಟವು ವೇದಗಳಿಗೂ ಸಹ ಅಗಮ್ಯ, ಅದರಲ್ಲಿ ನೀನು ಕುದುರೆಯ ಚಾಬೂಕ ಸಿಗಿಸುತ್ತಿದ್ದೆ. ಸರ್ವ ರಾಜರ ಎದುರಿನಲ್ಲಿಯೇ ರಣರಂಗದಲ್ಲಿ ನೀನು ಕುದುರೆಗಳನ್ನು ತೊಳೆದೆ ॥೧೦೧॥

ವಾಗೋರೇ ಧರೋನಿ ದಾಂತೀ । ಚಾರೀ ಘೋಡೇ ಚಹೂ ಹಾತೀ । ಧುತಾ ನ ಲಾಜಸೀ ಶ್ರೀಪತೀ । ಭಕ್ತಾದೀನ ನಿಶ್ಚಿತೀ ತೂ ಐಸಾ ॥೧೦೨॥ ಬಂದೀಹುನೀ ಸೋಡವಿಲೇ ಜ್ಯಾಸೀ । ತೋ ಉಗ್ರಸೇನ ಸ್ವಾಮೀ ಕರಿಸೀ । ಉಚ್ಛಿಷ್ಟೇ ಧರ್ಮಾಘರೀಂಚೀ ಕಾಢಿಸೀ । ಶೇಖೀ ಗಾಯೀ ರಾಖಿಸೀ ನಂದಾಚ್ಯಾ ॥೧೦೩॥ ಅಸೋ ತೇ ಥೋರಾಂಚೀ ಥೋರ ಮಾತ । ತೂಂಚಿ ಮಿಳೋನಿ ಗೋವಳಾ ಆಂತ । ಉಭಉಭ್ಯಾ ಖಾಸೀ ತ್ಯಾಂಚಾ ಭಾತ । ಛಂದೇ ನಾಚತ ತ್ಯಾಂಚೇನಿ ॥೧೦೪॥ ನ ಮ್ಹಣಸೀ ಸೋವಳೇ ಓವಳೇ । ಪ್ರತ್ಯಕ್ಷ ಕೇವಳ ಗೋವಳೇ । ತ್ಯಾಂಚೇನಿ ಉಚ್ಛಿಷ್ಟಕವಳೇ । ಸ್ವಾನಂದಮೇಳೇ ಡುಲ್ಲಸೀ ॥೧೦೫॥ ದ್ರೌಪದೀಚಿಯೇ ಅತಿಸಾಂಕಡೀ । ನೇಸತೀ ಜಾಹಲಾಸಿ ತೂ ಲುಗಡೀ । ಗೋಪಿಕಾಂಚಿಯಾ ನಿಜಆವಡೀ । ತೂ ಕಡೋವಿಕಡೀ ನಾಚಸೀ ॥೧೦೬॥ ಪೂರ್ಣಕಲಶ ನೇತಾ ಪಾಹೀ । ಕಾಂಟಾ ಮೋಡಲಾ ಗೋಪೀಚೇ ಪಾಯೀ । ತೋ ಪಾಯ ಧರೂನಿ ಹಾತೀ ದೋಹೀ । ತೂ ಕಾಂಟಾ ಲವಲಾಹೀ ಕಾಢಿಸೀ ॥೧೦೭॥ ಖಾಂದೀ ವಾಹಿಲೇ ದುರ್ವಾಸಾಸೀ । ದ್ವಾರಪಾಳ ತೂ ಬಳೀಪಾಶೀ । ಐಸಾ ಭಕ್ತಾಧೀನ ತೂ ಹೋಸೀ । ವಚನೇ ವರ್ತಸೀ ದಾಸಾಂಚ್ಯಾ ॥೧೦೮॥ ದೇವಾ ತೂ ಐಸೇ ಮ್ಹಣಸೀ । "ಗೋವಳತ್ವ ಸತ್ಯ ಮಾನಿಸೀ" । ತೇ ತುಜ ನ ಘಡೇ ಹೃಷೀಕೇಶೀ । ತೂ ಪೂಜ್ಯ ಹೋಸೀ ಸುರನರಾ ॥೧೦೯॥

(ಪೂರ್ವಶ್ಲೋಕೀಚೇ ಪದ) "ಶ್ರೀಮತ್ಕಿರೀಟತಟಪೀಡಿತಪಾದಪೀಠಃ" ॥

ಇಂದ್ರ, ಚಂದ್ರ, ಆಣಿ ಮಹೇಂದ್ರ । ಬ್ರಹ್ಮಾ ಬ್ರಹಸ್ಪತಿ ಆಣಿ ಶಂಕರ । ಐಸೇ ಪೂಜ್ಯ ಜೇ ಕಾ ಈಶ್ವರ । ತೇಹೀ ತುಝೇ ಕಿಂಕರ ಶ್ರೀಕೃಷ್ಣಾ ॥೧೧೦॥ ತುಝೇ ಆಸನಾಚೇ ಪಾದಪೀಠೀ । ತ್ಯಾಂಚ್ಯಾ ಮುಕುಟಮಣಿಯಾಂಚ್ಯಾ ಕೋಟೀ । ಘರ್ಷಣೇ ಝುಣತ್ಕಾರ ಉಠೀ । ನಮಸ್ಕಾರಾ ದಾಟೀ ಸುರವರಾ ॥೧೧೧॥ ತುಝೇ ಆಜ್ಞಾ ನ ಮಾನಿತಾ । ಬ್ರಹ್ಮಾದಿಕಾಂಚಿಯಾ ಮಾಥಾ । ಸಾಟು ವಾಜೇ ಜೇ ಸರ್ವಥಾ । ಮಾ ಇತರಾಂಚೀ ಕಥಾ ತೇ ಕೋಣ ॥೧೧೨॥ ತುಝೇ ಆಜ್ಞೇಭೇಣೇ ಜಾಣ । ವಾಯು ವಾಗವೀ ನೇಮಸ್ತ ಪ್ರಾಣ । ಸೂರ್ಯ ಚಾಲವೀ ದಿನಮಾನ । ತುಝೇ ಆಜ್ಞೇಭೇಣ ಗೋವಿಂದಾ ॥೧೧೩॥ ತುಝೇ ಆಜ್ಞೇಚೇ ಭಯಭಾಗೀ । ಸಮುದ್ರ ಮರ್ಯಾದಾ ನುಲ್ಲಂಘೀ । ತುಝ್ಯಾ ಆಜ್ಞೇಚ್ಯಾ ನಿಯೋಗೀ । ವರ್ಷಿಜೇ ಮೇಘೀ ಜಳ ಕಾಳೀ ॥೧೧೪॥

ಹಲ್ಲುಗಳಲ್ಲಿ ಲಗಾಮು ಹಿಡಿದು ನೀನು ನಿನ್ನ ನಾಲ್ಕೂ ಕೈಗಳಿಂದ ನಾಲ್ಕು ಕುದುರೆಗಳನ್ನು ತೊಳೆಯುತ್ತಿರಲು ನಿನಗೆ ಯಾವ ನಾಚಿಕೆಯೂ ಆಗಲಿಲ್ಲ. ಹೀಗೆ ನೀನು ಭಕ್ತರ ಆಧೀನನಾಗುವೆ ॥೧೦೨॥ ಕಾರಾಗೃಹದಿಂದ ಯಾರಿಗೆ ಬಿಡಿಸಿದೆಯೋ, ಆ ಉಗ್ರಸೇನನಿಗೆ ನೀನು ರಾಜನನ್ನಾಗಿ ಮಾಡಿದೆ. ಧರ್ಮರಾಜನ ಮನೆಯ ಯಜ್ಞ ಪ್ರಸಂಗದಲ್ಲಿ ನೀನು ಎಂಜಲವನ್ನು ತೆಗೆದೆ. ಕೊನೆಗೆ ನಂದನ ಆಕಳಗಳನ್ನೂ ಕೂಡ ಕಾದೆ ॥೧೦೩॥ ಈ ಎಲ್ಲ ದೊಡ್ಡವರ ಮಾತಿರಲಿ, ನೀನು ಬಾಲಗೋಪಾಲಕರಲ್ಲಿ ಕೂಡಿಕೊಂಡು ನಿಂತುಕೊಂಡೇ ಅವರ ಅನ್ನ ತಿನ್ನುತ್ತಿದ್ದೆ. ಅವರ ಪ್ರೇಮತಕ್ಕಂತೆ ಕುಣಿಯುತ್ತಿದ್ದೆ ॥೧೦೪॥ ನೀನು ಮಡಿ ಮೈಲಿಗೆಗಳನ್ನು ಪಾಲಿಸಲಿಲ್ಲ. ದನಕಾಯುವ ಹುಡುಗರ ಎಂಜಲ ತುತ್ತು ತಿನ್ನುತ್ತಿದ್ದಾಗ ನೀನು ಸ್ವಾನಂದದಲ್ಲಿ ತೂಗಾಡುತ್ತಿದ್ದೆ ॥೧೦೫॥ ದ್ರೌಪದಿಯ ಸಂಕಟ ಪ್ರಸಂಗದಲ್ಲಿ ನೀನು ಆಕೆಯ ಸೀರೆ ಕೂಡ ಆದೆ. ಗೋಪಿಕೆಯರ ಮನೋಭಾವದಂತೆ ನೀನು ಅನೇಕ ಪ್ರಕಾರದಿಂದ ಕುಣಿದೆ ॥೧೦೬॥ ಒಂದು ದಿನ ನೀರಿನಿಂದ ತುಂಬಿತುಳುಕುತ್ತಿರುವ ಕೊಡ ಒಯ್ಯುತ್ತಿರುವ ಒಬ್ಬ ಗೋಪಿಯ ಕಾಲಿನಲ್ಲಿ ಮುಳ್ಳು ನಟ್ಟಿತು. ಆಗ ನೀನು ನಿನ್ನ ಎರಡೂ ಕೈಗಳಿಂದ ಆಕೆಯ ಕಾಲು ಹಿಡಿದು ಕೂಡಲೇ ಮುಳ್ಳನ್ನು ತೆಗೆದು ಒಗೆದೆ ॥೧೦೭॥ ದುರ್ವಾಸ ಋಷಿಗೆ ನೀನು ನಿನ್ನ ಹೆಗಲ ಮೇಲೆ ಹೊತ್ತು ಒಯ್ದಿರುವೆ. ಬಳಿಯ ಬಾಗಿಲಬಳಿ ನೀನು ದ್ವಾರಪಾಲಕನಾದೆ. ಹೀಗೆ ನೀನು ಭಕ್ತರ ಆಧೀನನಾಗುವೆ. ಹಾಗೂ ಅವರ ವಚನದಂತೆ ನಡೆಯುವೆ ॥೧೦೮॥ ಹೇ ದೇವನೇ, ನೀನು ಸ್ವತಃಕ್ಕೆ ಗವಳೀ ಎಂದು ಹೇಳಿಸಿಕೊಳ್ಳುವೆ ಹಾಗೂ ಅದನ್ನು ಸತ್ಯವೆಂದು ತಿಳಿದುಕೊಳ್ಳುವೆ. ಆದರೆ ಹೀಗಾಗಲು ಎಂದಿಗೂ ಸಾಧ್ಯವಿಲ್ಲ. ಕಾರಣವೇನೆಂದರೆ ನೀನು ದೇವಾದಿಕರಿಗೂ ಕೂಡ ಪೂಜ್ಯನಾಗಿರುವೆ ॥೧೦೯॥

"ಪೂರ್ವದ ಶ್ಲೋಕದ ಪದ : ಶ್ರೀಮತ್ಕಿರೀಟತಟಪೀಡಿತಪಾದಪೀಠಃ"

ಹೇ ಶ್ರೀಕೃಷ್ಣನೇ, ಇಂದ್ರ, ಚಂದ್ರ, ಮಹೇಂದ್ರ, ಬ್ರಹ್ಮದೇವ, ಬೃಹಸ್ಪತಿ ಮತ್ತು ಶಂಕರ ಹೀಗೆ ಪೂಜ್ಯ ಈಶ್ವರರು, ಇವರು ನಿನ್ನ ದಾಸರು ॥೧೧೦॥ ನಿನ್ನ ಆಸನದ ಚರಣಪೀಠದ ಮೇಲೆ ಅವರ ನಾನಾವಿಧ ಕಿರೀಟಗಳ ಘರ್ಷಣೆಯಿಂದ ಅವುಗಳ ಝಣತ್ಕಾರ ನಾದ ಉಂಟಾಗುವುದು. ಮಹಾ ಮಹಾ ದೇವತೆಗಳ ಇಷ್ಟೊಂದು ದಟ್ಟಣೆಯನ್ನು ನಿನ್ನನಮಸ್ಕಾರಕ್ಕಾಗಿ ನಿನ್ನ ಮುಂದೆ ಇರುವುದು ॥೧೧೧॥ ಒಂದುವೇಳೆ ನಿನ್ನ ಆಜ್ಞೆ ಮನ್ನಿಸದಿದ್ದರೆ ವಿಶ್ವಕರ್ತನಾದ ಬ್ರಹ್ಮದೇವನ ಮಸ್ತಕದ ಮೇಲೆ ಹೊಡೆತ ಬೀಳುವುದು. ಅಂದಮೇಲೆ ಇತರರ ಯಾವ ಗತಿ ಎಂದು ಹೇಗೆ ಹೇಳಬೇಕು ? ॥೧೧೨॥ ನಿನ್ನ ಆಜ್ಞೆಯ ಭಯದಿಂದ ವಾಯುದೇವನೂ ಕೂಡ ನೇಮದಿಂದ ಗಾಳಿ ಬೀಸುವನು. ಅದರಂತೆಯೇ ಹೇ ವಿರಾಟಸ್ವರೂಪ ಗೋವಿಂದನೇ, ನಿನ್ನ ಆಜ್ಞೆಯ ಭಯದಿಂದ ಭಾಸ್ಕರನು ದಿನಮಾನ ನಡೆಸುವನು ॥೧೧೩॥ ನಿನ್ನ ಆಜ್ಞೆಯ ಭಯದಿಂದ ಸಂಪೂರ್ಣ ಸಮುದ್ರವು ತನ್ನಮರ್ಯಾದೆ ರೇಖೆಯನ್ನು ಉಲ್ಲಂಘಿಸುವುದಿಲ್ಲ. ಹಾಗೆಯೇ ನಿನ್ನ ಆಜ್ಞೆಯಿಂದಲೇ ಮೇಘವು ಯೋಗ್ಯ ಕಾಲಕ್ಕೆ ಪರ್ಜನ್ಯಧಾರೆಗಳ ಮಳೆಗರೆಯುವುದು ॥೧೧೪॥

ತುಝೇ ಆಜ್ಞೇಚೀ ಅಗಾಧ ಥೋರೀ। ಸ್ವಯೇ ಮೃತ್ಯು ವಂದೀ ಶಿರೀ । ತೋಹೀ ಸ್ವಕಾಳೇ ಪ್ರಳಯೋ ಕರೀ । ಆಜ್ಞೇಬಾಹೇರೀ ಕದಾ ನ ನಿಘೇ ।।೧೧೫।। ಆಶಂಕಾ ।। ಮೀ ತಂವ ನಂದಾಚಾ ಖಿಲ್ಲಾರೀ । ಉಗ್ರಸೇನಾಚೀ ಸೇವಾ ಕರೀ । ಮಾಝೀ ಹೇ ಏವಢೀ ಥೋರೀ । ''ಮಿಥ್ಯಾ'' ಮುರಾರೀ ಮ್ಹಣಶೀಲ ।।೧೧೬।। ತುಂವಾ ಪಾಡೂನಿ ಕಾಳಾಚೇ ದಾಂತ । ಗುರುಪುತ್ರ ಆಣಿಲಾ ಏಥ । ಇಂದ್ರ ಕೇಲಾ ಮಾನಹತ । ಗೋಕುಳೀ ಅದ್ಭುತ ವರ್ಷತಾ।।೧೧೭।। ಇತರಾಂಚೀ ಗೋಠೀ ಕಾಯಶೀ । ಹೋಊನಿ ವತ್ಸೇ ವತ್ಸಪಾಂಸೀ । ವೇಡ ಲಾವಿಲೇ ವಿಧಾತ್ಯಾಸೀ । ಶೇಖೀ ಗೋವಳ ಹೋಸೀ ನಂದಾಚಾ ।।೧೧೮।। ಬಾಣಕೈವಾರಾಲಾಗುನೀ । ಶಿವ ಆಲಾ ಅತಿಕೋಪೋನೀ । ತೋ ತ್ವಾಂ ಜಿಂಕಿಲಾ ಅರ್ಧಕ್ಷಣೀ । ಶಾರ್ಙ್ಗಪಾಣೀ ಈಶ್ವರೇಶ್ವರಾ ।।೧೧೯।। ತುಝೀ ಭೇಟೀ ಘ್ಯಾವಯಾಕಾರಣೇ । ಉತ್ಕಂಠಾ ವಾಹಿಜೇ ನಾರಾಯಣೇ । ಬ್ರಾಹ್ಮಣ ಅಪತ್ಯದ್ವಾರಾ ತೇಣೇ । ತುಝೀ ಭೇಟೀ ವಾಂಛಿಣೇ ಸರ್ವದಾ ।।೧೨೦।। ತೂ ಭಕ್ತಕಾಜಪಂಚಾನನ । ಸತ್ಯ ಕರಾವಯಾ ಅರ್ಜುನ । ಕ್ಷೀರಸಾಗರೀ ರಿಘೋನಿ ಜಾಣ । ಕೃಷ್ಣನಾರಾಯಣ ಭೇಟಲೇ ।।೧೨೧।। ದೋಹೀಂಚೇ ಭೇಟೀಚೀ ಪರವಡೀ । ಸಂತ ಜಾಣತೀ ನಿಜಆವಡೀ । ದೋಘಾ ಮಿಠೀ ಪಡಲೀ ಗಾಢೀ । ನಿಜಾತ್ಮ ಗೋಡೀ ಅಭಿನ್ನ ।।೧೨೨।। ಕೃಷ್ಣೀ ವಿರಾಲಾ ನಾರಾಯಣ । ಕೀ ನಾರಾಯಣಾಮಾಜೀ ಶ್ರೀಕೃಷ್ಣ । ದೋಘಾ ನಾಹೀ ದೋನೀಪಣ । ಸ್ವರೂಪ ಪರಿಪೂರ್ಣ ಏಕತ್ವೇ ।।೧೨೩।। ತೇಥ ಅರ್ಜುನಾಸೀ ಜಾಹಲೀ ವ್ಯಥಾ । ಥಿತ್ಯಾ ಅಂತರಲೋ ಕೃಷ್ಣನಾಥಾ । ತಂವ ಶೇಷಶಯನೀ ಹೋಯ ದೇಖತಾ । ನಾರಾಯಣತಾ ಶ್ರೀಕೃಷ್ಣೀ ।।೧೨೪।। ತೋ ತೂ ಭಕ್ತಕಾಜಕೈವಾರೀ । ಲೀಲಾವಿಗ್ರಹೀ ಅವತಾರಧಾರೀ । ಅವತಾರ ಧರಿಸೀ ನಾನಾಪರೀ । ದೀನೋದ್ಧಾರೀ ಶ್ರೀಕೃಷ್ಣಾ ।।೧೨೫।। ಯಾಪರೀ ಗಾ ಹೃಷೀಕೇಶೀ । ಅಗಾಧ ಮಹಿಮಾ ತುಝೇಪಾಶೀ । ಯೇಚಿ ಅವತಾರೀ ಆಮ್ಹಾಸೀ । ಪ್ರತೀತೀ ನಿಶ್ಚಯೇಸೀ ಪೈ ಆಲೀ ।।೧೨೬।। ಅಖಂಡ ಐಶ್ವರ್ಯಾಚೀ ಸ್ಥಿತೀ । ಅನಾವೃತ ಜ್ಞಾನಸ್ಫೂರ್ತಿ । ಅದ್ವಯಾನಂದಾ ನಾಹೀ ಚ್ಯುತೀ । ''ಅಚ್ಯುತ'' ನಿಶ್ಚಿತೀ ಯಾ ನಾಂವ ।।೧೨೭।। ಐಸಾ ತೂ ಅನಂತ ಅಪರಂಪಾರ । ನಿಯಂತ್ಯಾ ಈಶ್ವರಾಚಾ ಈಶ್ವರ । ತರೀ ತೂ ಭಕ್ತಕರುಣಾಕರ । ತೋಹೀ ಪ್ರಕಾರ ಅವಧಾರೀ ।।೧೨೮।।

ನಿನ್ನ ಆಜ್ಞೆಯ ಮಹಿಮೆಯು ಬಹು ಅಗಾಧವಾಗಿದೆ. ಈ ಯಾವ ಆಜ್ಞೆಗೆ ಸಾಕ್ಷಾತ್ ಮೃತ್ಯೂ ಕೂಡ ಶಿರಸಾ ವಂದಿಸುತ್ತದೆ. ಯೋಗ್ಯ ಕಾಲದಲ್ಲಿ ಮಾತ್ರ ಅದು ಪ್ರಳಯ ಹೂಡುವುದು. ನಿನ್ನ ಆಜ್ಞೆಯ ಹೊರಗೆ ಒಂದು ಹೆಜ್ಜೆಯನ್ನು ಮುಂದಿಡದು ।।೧೧೫।। (ಆಶಂಕಾ) ಹೇ ಮುರಾರಿಯೇ, ''ನಾನಾದರೂ ನಂದನ ದನಕಾಯುವವನು, ಉಗ್ರಸೇನನ ಸೇವಕನು, ಅಂದಮೇಲೆ ಈ ನನ್ನ ದೊಡ್ಡಸ್ತಿಕೆಯು ವ್ಯರ್ಥವಾಗಿದೆ'' ಎಂದು ನೀನು ಹೀಗೆ ಹೇಳಲು ಸಾಧ್ಯವಿದೆ ।।೧೧೬।। (ಆದರೆ ಹಾಗೆ ಇರುವುದಿಲ್ಲ) ನೀನು ಅಕ್ರಾಳವಿಕ್ರಾಳ ಕಾಲನ ಹಲ್ಲು ಮುರಿದು ಗುರುವಿನ ಮೃತನಾದ ಪುತ್ರನನ್ನು ತಂದು ಕೊಟ್ಟಿರುವೆ. ಇಂದ್ರದೇವನು ಗೋಕುಲದಮೇಲೆ ಅತ್ಯಂತ ಮುಸಲಧಾರಾ ವೃಷ್ಟೀ ಸುರಿಸಿದಾಗ ಆತನನ್ನು ನೀನು ಅಪಮಾನಗೊಳಿಸಿದೆ ।।೧೧೭।। ಇತರರ ಮಾತೇಕೇ ? ಗೋಪಾಲಕರು ಆಕಳುಗಳು ನೀನೇ ಆಗಿ ವಿಶ್ವಕರ್ತ ಬ್ರಹ್ಮದೇವನಿಗೂ ಕೂಡ ಹುಚ್ಚು ಹಿಡಿಸಿದೆ. ಕೊನೆಗೆ ನಂದನ ದನ ಕಾಯುವವನೂ ಸಹ ನೀನೇ ಆದೆ ।।೧೧೮।। ಬಾಣಾಸುರನ ಪಕ್ಷ ಹಿಡಿದು ಪಾರ್ವತೀಪತೀ ಭಗವಾನ ಶಂಕರನು ಬಲು ಕೋಪದಿಂದ ಸಂತಾಪಪಟ್ಟಿದ್ದನು. ಆದರೆ ಹೇ ಶಾರಂಗಪಾಣಿಯೇ, ಹೇ ಈಶ್ವರನೇ, ನೀನು ಅರ್ಧಕ್ಷಣದಲ್ಲಿಯೇ ಆತನನ್ನು ಪರಾಭವಗೊಳಿಸಿದೆ ।।೧೧೯।। ಕ್ಷೀರಸಾಗರವಾಸೀ ಭಗವಾನ ನಾರಾಯಣನಿಗೆ ನಿನ್ನ ಭೇಟಿಯ ಉತ್ಸುಕತೆ ನಿರ್ಮಾಣವಾಯಿತು. ಆತನು ಬ್ರಾಹ್ಮಣ ಬಾಲಕನ ನಿಮಿತ್ತದಿಂದ ನಿನ್ನ ಭೇಟಿಯಾಗಬೇಕೆಂದು ಇಚ್ಛಿಪಡುತ್ತಿದ್ದನು ।।೧೨೦।।ನೀನು ಭಕ್ತರ ಕಾರ್ಯ ನೆರವೇರಿಸುವ ಸಿಂಹನಾಗಿರುವೆ. ಅರ್ಜುನನ ವಚನ ಸತ್ಯಗೊಳಿಸುವುದಕ್ಕಾಗಿ ಕ್ಷೀರಸಾಗರದಲ್ಲಿ ಕೃಷ್ಣ-ನಾರಾಯಣರ ಭೇಟಿಯಾಯಿತು ।।೧೨೧।। ಆ ಈರ್ವರ ಭೇಟಿಯಲ್ಲಿನ ಆನಂದ ಹಾಗೂ ರಹಸ್ಯ ಸಂತರು ಮಾತ್ರ ತಿಳಿಯುವರು. ಆ ಈರ್ವರು ಪರಮಾನಂದಕ್ಕೆ ಗಾಢ ಆಲಿಂಗನ ಕೊಟ್ಟರು. ಆ ಸಮಯದ ಆತ್ಮಸುಖದ ಆನಂದವು ತೀರ ಭಿನ್ನವಾಗಿತ್ತು ।।೧೨೨।। ಕೃಷ್ಣನಲ್ಲಿ ನಾರಾಯಣನು ಲೀನನಾದನೋ, ಅಥವಾ ನಾರಾಯಣನಲ್ಲಿ ಕೃಷ್ಣನು ಲೀನನಾದನೋ, ಇದು ಯಾವುದೂ ತಿಳಿಯಲಿಲ್ಲ. ಇಬ್ಬರಲ್ಲಿನ ದ್ವೈತವು ಪೂರ್ಣವಾಗಿ ಇಲ್ಲದಾಗಿ ಸ್ವರೂಪ ಏಕತ್ವದಿಂದ ಪರಿಪೂರ್ಣರಾದರು ।।೧೨೩।। ಆಗ ನಾನು ಮಾತ್ರ ಶ್ರೀಕೃಷ್ಣನಿಗೆ ವ್ಯರ್ಥವಾಗಿ ಅಂತರನಾದೆನು ಎಂದು ಅರ್ಜುನನ ಮನವು ವ್ಯಥೆಪಟ್ಟಿತು. ಅಷ್ಟರಲ್ಲಿಯೇ ಆತನಿಗೆ ಶೇಷಶಯನದಮೇಲೆ ಶ್ರೀಕೃಷ್ಣನು ನಾರಾಯಣ ಸ್ವರೂಪನಾದದ್ದು ಕಾಣಿಸಿತು ।।೧೨೪।। ಹೀಗೆ ನೀನು ಭಕ್ತರ ಕೈವಾರಿಯಾಗಿರುವೆ. ಹಾಗೂ ಲೀಲಾಮಯ ಶರೀರದಿಂದ ಅವತಾರ ಧರಿಸುವೆ. ಹೇ ದೀನೋದ್ಧಾರಕ ಶ್ರೀಕೃಷ್ಣನೇ ನೀನು ನಾನಾ ಪ್ರಕಾರಗಳ ಅವತಾರ ಧರಿಸುವೆ ।।೧೨೫।। ಹೇ ಶ್ರೀಕೃಷ್ಣನೇ, ಈ ಪ್ರಕಾರವಾಗಿ ನಿನ್ನ ಮಹಿಮೆಯು ನಿಜವಾಗಿಯೂ ಅಗಾಧವಾಗಿದೆ. ಈ ಮಾತು ಇದೇ ಅವತಾರದಲ್ಲಿ ನಾವು ನಿಶ್ಚಯವಾಗಿ ಕಂಡು ಕೊಂಡೆವು ।।೧೨೬।। ಅಖಂಡ ಐಶ್ವರ್ಯದ ಸ್ಥಿತಿ, ಮಾಯೆಯ ಆವರಣವಿಲ್ಲದೇ ಇರುವ ಜ್ಞಾನಸ್ಫೂರ್ತಿ, ಹೀಗಿರುವ ನೀನು ಅದ್ವಯಬ್ರಹ್ಮದಿಂದ ಎಂದಿಗೂ ಕದಲಲು ಶಕ್ಯವಿಲ್ಲದವನು. ಆದ್ದರಿಂದ ನಿನಗೆ ಅಚ್ಯುತ ಎಂದು ಹೇಳುವರು ।।೧೨೭।। ಹೀಗಿರುವ ನೀನು ಅನಂತ ಮತ್ತು ಅಪರಂಪಾರನಾಗಿರುವೆ. ನಿಯಂತ್ಯಾ ಈಶ್ವರನಿಗೂ ಕೂಡ ನೀನು ಈಶ್ವರನಾಗಿರುವೆ. ನೀನು ಭಕ್ತರಲ್ಲಿ ಕರುಣೆಯ ಮಳೆಗರೆಯುವವನಾಗಿರುವೆ ।।೧೨೮।।

(ಪೂರ್ವಶ್ಲೋಕೀಂಚಾ ಚರಣ)''ಯೋ ರೋಚಯನ್ ಸಹಮೃಗೈ: ಸ್ವಯಮೀಶ್ವರಾಣಾಮ್ ॥''

ದೇವಾ ದುರ್ಲಭ ಜೋ ನಮಸ್ಕಾರಾ । ತೋ ತೂ ರಿಸಾ ಆಣಿ ವಾನರಾ । ಖೇಂವ ದೇಸೀ ರಾಮಚಂದ್ರಾ । ಲೀಲಾವತಾರಾಚೇನಿ ನಟನಾಟ್ಯೇ ॥೧೨೯॥ ತುವಾ ಬೋಲಾವೇ ಕೃಪಾ ಕರೂನಿ । ಯಾಲಾಗೀ ವೇದ ತಿಷ್ಠೇ ಸಾವಧಾನೀ । ತೋ ತೂ ವಾನರಾಂಚ್ಯಾ ಕಾನೀ । ಗುಜ ಆಳೋಂಚೂನೀ ಸಾಂಗಶೀ ॥೧೩೦॥ ತುಝೇ ಜ್ಞಾನ ನ ಕಳೇ ವೇದಶಾಸ್ತ್ರಾ । ತೋ ತೂ ವಿಚಾರ ಪುಸಸೀ ವಾನರಾ । ಅನುಸರೋನಿ ತ್ಯಾಂಚ್ಯಾ ಮಂತ್ರಾ । ಉಪಾಯದ್ವಾರಾ ವರ್ತಸೀ ॥೧೩೧॥ ಯಜ್ಞೀಂಚೀ ಅವದಾನೇ ಪ್ರಾಂಜಳೇ । ಕದಾ ನ ಘೇಸೀ ಯಜ್ಞಕಾಳೇ । ತೋ ತೂ ವಾನರಾಂಚೀ ವನಫಳೇ । ಖಾಸೀ ಕೃಪಾಬಳೇ ಸಪ್ರೇಮ ॥೧೩೨॥ ಐಸೇ ಭಕ್ತಾಂಚೇ ನಿಜಪ್ರೇಮ । ತೂ ಪ್ರತಿಪಾಳಿಸೀ ಮೇಘಶ್ಯಾಮ । ತ್ಯಾ ತುಜಮಾಜೀ ನಾಹೀ ವಿಷಮ । ತೂ ಆತ್ಮಾರಾಮ ಜಗಾಚಾ ॥೧೩೩॥

''ಏತದಶೇಷಬಂಧೋ''

ತೂ ಅಂತರ್ಯಾಮೀ ನಿಜಸಖಾ । ಪರಮಾತ್ಮಾ ಹೃದಯಸ್ಥ ದೇಖಾ । ತುಜಮಾಜೀ ಭೂತಾ ಭೌತಿಕಾ । ಭಿನ್ನ ಆವಾಂಕಾ ಅಸೇನಾ ॥೧೩೪॥ ತೂ ಜಡಾತೇ ಚೇತವಿತಾ । ಮೂಢಾತೇ ಜ್ಞಾನದಾತಾ । ಸಕಳ ಜೀವಾ ಆನಂದವಿತಾ । ತುಝಿಯಾ ಚಿತ್ಸತ್ತಾ ಜಗ ನಾಂದೇ ॥೧೩೫॥ ಮಾತಾಪಿತ್ಯಾಂಚೇ ಸಖ್ಯತ್ವ ದೇಖಾ । ತೋ ಪ್ರಪಂಚಯುಕ್ತ ಆವಾಂಕಾ । ತೂ ಹೃದಯಸ್ಥ ನಿಜಸಖಾ । ಸಕಳ ಲೋಕಾ ಸುಖದಾತಾ ॥೧೩೬॥ ಐಸಾ ತೂ ಸರ್ವಾಂಚಾ ಹೃದಯಸ್ಥ । ಸರ್ವವಂದ್ಯತ್ವೇ ಅತಿಸಮರ್ಥ । ಜಾಣಸೀ ಹೃದಯೀಂಚಾ ವೃತ್ತಾಂತ । ಸ್ವಾಮೀ ಕೃಪಾವಂತ ದೀನಾಂಚಾ ॥೧೩೭॥ ಯಾಪರೀ ಗಾ ಹೃಷೀಕೇಶೀ । ದೀನದಯಾಳೂ ನಿಜಭಕ್ತಾಂಸೀ । ಐಶಿಯಾ ಸಾಂಡೂನಿ ಸ್ವಾಮೀಸೀ । ಕೋಣ ಧನಾಂಧಾಸೀ ಭಜೇಲ ॥೧೩೮॥

ತಂ ತ್ವಾಖಿಲಾತ್ಮದಯಿತೇಶ್ವರಮಾಶ್ರಿತಾನಾಂ ಸರ್ವಾರ್ಥದಂ ಸ್ವಕೃತವಿದ್ವಿಸೃಜೇತ ಕೋ ನು ।
ಕೋ ವಾ ಭಜೇತ್ ಕಿಮಪಿ ವಿಸ್ಮೃತಯೇಽನು ಭೂತ್ಯೈ ಕಿಂ ವಾ ಭವೇನ್ನ ತವ ಪಾದರಜೋಜುಷಾಂ ನಃ ॥೮॥

ಅರ್ಥ:- ಹೇ ಪ್ರಭೋ, ನೀವು ಸರ್ವರ ಪ್ರಿಯತಮ ಸ್ವಾಮೀ ಮತ್ತು ಆತ್ಮರಾಗಿರುವಿರಿ. ತಾವು ಅನನ್ಯ ಶರಣಾಗತರಿಗೆ ಎಲ್ಲವನ್ನೂ ಕೊಡುವವರು. ತಾವು ಬಳೀ, ಪ್ರಹ್ಲಾದ ಇತ್ಯಾದಿ ಭಕ್ತರಿಗೆ ಕೊಟ್ಟಿರುವುದನ್ನು ತಿಳಿದು ನೋಡಿ ನಿಮ್ಮನ್ನು ಯಾರು ತಾನೇ ಬಿಟ್ಟುಕೊಡುವರು? ನಿಮ್ಮಿಂದ ಭಿನ್ನವಾಗಿರುವ ಹಾಗೂ ನೀವು ಕೊಟ್ಟಿರುವ ಸ್ವರ್ಗಾದಿ ಭೋಗಗಳು, ಇವು ಕೇವಲ ಇಂದ್ರಿಯಭೋಗಕ್ಕಾಗಿ ಇದ್ದು ಬಹುಬೇಗ ನಿಮ್ಮ ವಿಸ್ಮರಣೆಯು ಉಂಟು ಮಾಡುವುವು. ಇವುಗಳ ಸೇವನೆ ಯಾರು ಮಾಡಬೇಕು? ನಾವು ನಿಮ್ಮ ಚರಣಕಮಲಗಳ ಉಪಾಸಕರು. ನಮಗೆ ದುರ್ಲಭ ಎನ್ನುವುದು ಯಾವುದಿದೆ ?

(ಪೂರ್ವಶ್ಲೋಕದಲ್ಲಿನ ಚರಣ) ''ಯೋ ರೋಚಯನ್ ಸಹಮೃಗೈ: ಸ್ವಯಮೀಶ್ವರಾಣಾಮ್'' ದೇವತೆಗಳಿಗೆ ನಮಸ್ಕಾರ ಮಾಡಲು ದುರ್ಲಭನಾಗಿರುವ ನೀನು ಶ್ರೀರಾಮಚಂದ್ರ ಅವತಾರ ಚರಿತ್ರೆಯಲ್ಲಿ ಕರಡಿಗಳಿಗೆ, ವಾನರರಿಗೆ ಆಲಿಂಗಿಸುತ್ತಿದ್ದೆ ॥೧೨೯॥ ನೀನು ಕೃಪೆ ಮಾಡಿ ಶಬ್ದಗಳನ್ನು ನುಡಿಯಬೇಕೆಂದು ದೇವತೆಗಳು ತತ್ಪರರಾಗಿ ನಿಂತುಕೊಂಡೇ ಇರುವರು. ಹೀಗಿರುವ ನೀನು ನಿನ್ನ ಗುಹ್ಯಗೋಪ್ಯಗಳನ್ನು ವಾನರರ ಕಿವಿಗಳಲ್ಲಿ ಹೇಳುತ್ತಿದ್ದೆ ॥೧೩೦॥ ನಿನ್ನ ಜ್ಞಾನವು ವೇದಶಾಸ್ತ್ರಗಳಿಗೂ ಕೂಡ ತಿಳಿಯಲು ಶಕ್ಯವಿಲ್ಲ. ಹೀಗಿರುವ ನೀನು ವಾನರರಿಗೆ ಅವರ ಸಲಹೆಗಳನ್ನು ಕೇಳುತ್ತಿದ್ದೆ, ಅದರಂತೆ ನಡೆಯುತ್ತಿದ್ದೆ ॥೧೩೧॥ ಯಜ್ಞಗಳಲ್ಲಿನ ಆಹುತಿಯನ್ನೂ ಸಹ ನೀನು ಅಷ್ಟು ಸರಳ ರೀತಿಯಲ್ಲಿ ಸ್ವೀಕರಿಸುವುದಿಲ್ಲ. ಹೀಗಿರುವ ನೀನು ಅತ್ಯಂತ ಪ್ರೇಮದಿಂದ ವಾನರರ ವನಫಲಗಳನ್ನು ಅವರಲ್ಲಿ ಕೃಪೆ ಮಾಡುವುದಕ್ಕಾಗಿ ತಿನ್ನುತ್ತಿದ್ದೆ ॥೧೩೨॥ ಮೇಘಶ್ಯಾಮನಾದ ನೀನು ಹೀಗೆ ಭಕ್ತರಲ್ಲಿ ಪ್ರೇಮ ಮಾಡುವೆ. ನಿನ್ನಲ್ಲಿ ಸ್ವಲ್ಪವೂ ಸಹ ವಿಷಯಭಾವನೆಯು ಇರುವುದಿಲ್ಲ. ನಿಜವಾಗಿಯೂ ನೀನು ಜಗತ್ತಿನ ಆತ್ಮಾರಾಮನೇ ಸರಿ ॥೧೩೩॥

''ಏತದಶೇಷಬಂಧೋ'' ನೀನು ಅಂತರ್ಯಾಮಿಯ ನಿಜಸಖನಾಗಿರುವೆ. ನೀನು ಹೃದಯಸ್ಥ ಪರಮಾತ್ಮನು. ನಿನ್ನಲ್ಲಿ ಭೂತ, ಭೌತಿಕ ಈ ವಿಷಯದಲ್ಲಿ ಯಾವುದೇ ಭೇದಭಾವವಿರುವುದಿಲ್ಲ ॥೧೩೪॥ ನೀನು ಜಡಕ್ಕೆ ಚೈತನ್ಯ ಕೊಡುವವನಾಗಿರುವೆ. ಮೂಢರಿಗೆ ಜ್ಞಾನ ಕೊಡುವವನಾಗಿರುವೆ. ಸರ್ವಪ್ರಾಣಿಗಳಿಗೆ ಆನಂದ ಕೊಡುವವನಾಗಿರುವೆ. ನಿನ್ನ ಚಿತ್‌ಸತ್ತೆಯಿಂದ ಸರ್ವ ಜಗತ್ತು ವರ್ತಿಸುತ್ತಿರುತ್ತದೆ ॥೧೩೫॥ ಮಾತಾಪಿತರ ಪ್ರೇಮವಿರುವುದು ನಿಜ. ಆದರೆ ಅದು ಸಂಸಾರಿಕವಾಗಿರುವುದು. ನೀನು ಹೃದಯಸ್ಥ ನಿಜಸಖನಾಗಿ ಸರ್ವ ಜನರಿಗೆ ಸುಖ ಕೊಡುವವನಾಗಿರುವೆ ॥೧೩೬॥ ಈ ಪ್ರಕಾರವಾಗಿ ನೀನು ಎಲ್ಲರ ಹೃದಯದಲ್ಲಿ ನಿವಾಸ ಮಾಡುವವನಾಗಿರುವೆ. ನೀನು ಅತಿಶಯ ಸಮರ್ಥನಾಗಿರುವುದರಿಂದ ಸರ್ವರಿಗೂ ವಂದ್ಯನಾಗಿರುವೆ. ನೀನು ದೀನರ ಕೃಪಾವಂತ ಸ್ವಾಮಿಯಾಗಿರುವೆ. ನೀನು ಹೃದಯದಲ್ಲಿನ ಹೃದ್ಗತ ತಿಳಿಯುವವನಾಗಿರುವೆ ॥೧೩೭॥ ಹೇ ಶ್ರೀಕೃಷ್ಣನೇ, ನಿನ್ನ ಭಕ್ತರಿಗೆ ನೀನು ದೀನದಯಾಳನಾಗಿರುವೆ. ಹೀಗಿರುವ ಪ್ರಭುವಿಗೆ ಬಿಟ್ಟು ಸಂಪತ್ತಿನ ಮದದಲ್ಲಿರುವ ಜನರ ಹಿಂದೆ ಯಾರು ಹತ್ತಬೇಕು? ॥೧೩೮॥

ವಿಧಾತಾ ಆಣಿ ಹರಿ ಹರ । ಹೇ ಮಾಯಾಗುಣೀ ಗುಣಾವತಾರ । ತೂ ಮಾಯಾನಿಯಂತಾ ಈಶ್ವರ । ಭಕ್ತಕರುಣಾಕರ ಸುಖದಾತಾ ।।೧೪೯।। ತ್ಯಾ ತುಝೀ ಕರಿತಾ ನಿಜಭಕ್ತಿ । ಚಾರೀ ಪುರುಷಾರ್ಥ ಚಾರೀ ಮುಕ್ತಿ । ಭಕ್ತಾಂಸೀ ಲೋಟಾಂಗಣೀ ಯೇತೀ । ಏವಢೀ ಅರ್ಥಪ್ರಾಪ್ತೀ ನಿಜಭಕ್ತಾ ।।೧೫೦।। ನಿಜಭಕ್ತಾಂಚೇ ಮನೋಗತ । ತೂ ಸರ್ವಜ್ಞ ಜಾಣತಾ ಭಗವಂತ । ಭಕ್ತ ಹೃದಯೀಂಚೇ ಹೃದ್ಗತ । ಜಾಣೋನಿ ಸರ್ವಾರ್ಥ ತೂ ದೇಸೀ ।।೧೫೧।। ಭಾವಾರ್ಥಾಚೇ ಭೋಕ್ತೇಪಣ । ಜಾಣತಾ ತೂ ಏಕ ಶ್ರೀಕೃಷ್ಣ । ತುಜವೇಗಳೇ ಹೇ ಲಕ್ಷಣ । ಆಣಿಕಾ ಜಾಣ ಕಳೇನಾ ।।೧೫೨।। ಐಸಾ ಸ್ವಾಮೀ ತೂ ಉತ್ತಮೋತ್ತಮ । ತುಝೇನಿ ಸಾಧಕಾ ಸುಖ ಪರಮ । ಆಣಿಕ ನಾಹೀ ತುಜಸಮ । ತೂ ಸ್ವಾಮೀ ಪುರುಷೋತ್ತಮ ಸರ್ವಾಂಚಾ ।।೧೫೩।। ತೂ ಸರ್ವಾಂಚಾ ಸ್ವಾಮೀ ಹೋಸೀ । ಪರೀ ಕೃಪಾಳು ನಿಜಭಕ್ತಾಂಸೀ । ಅಗ್ನಿವಿಷಾಧಿ ನಾನಾಬಾಧೇಸೀ । ತುವಾ ''ಪ್ರಹ್ಲಾದಾಸೀ'' ರಕ್ಷಿಲೇ ।।೧೫೪।। ತುಜ ಭಕ್ತಾಂಚೀ ಕೃಪಾ ಪ್ರಬಳ । ಉತ್ತಾನಚರಣಾಚೇ ತಾನೇ ಬಾಳ । ಕರೋನಿಯಾ ವೈರಾಗ್ಯಶೀಳ । ''ಧ್ರುವಾಸೀ'' ಅಢಳ ತುವಾ ಕೇಲೇ ।।೧೫೫।। ಶತ್ರುಬಂಧು ''ಬಿಭೀಷಣ'' । ತುಜ ಝಾಲಾ ಅನನ್ಯಶರಣ । ತ್ಯಾಚೇ ಕೃಪೇಸ್ತವ ಜಾಣ । ಸಕುಳೀ ರಾವಣ ಉದ್ಧರಿಲಾ ।।೧೫೬।। ಛಳೋನಿ ಬಾಂಧಿಲೇ ''ಬಳೀಸೀ''। ಶೇಖೀ ಕೃಪಾ ಉಪಜಲೀ ಕೈಸೀ । ತ್ಯಾಚೇ ದ್ವಾರೀ ದ್ವಾರಪಾಳ ಹೋಸೀ । ನಿಜಲಾಜೇಸೀ ಸಾಂಡೂನಿ ।।೧೫೭।। ಐಶೀ ಭಕ್ತಕೃಪಾ ತುಜಪಾಶೀ । ಭಕ್ತಹೃದ್ಗತ ತೂ ಜಾಣಸೀ । ಐಶಾ ಸಾಂಡೂನಿ ನಿಜಸ್ವಾಮೀಸೀ । ಕೋಣ ಧನಾಂಧಾಸೀ ಸೇವೀಲ ।।೧೫೮।। ದೇಹೇಂದ್ರಿಯಾ ಜೇ ಸುಖ ಭಾಸೇ । ತೇ ತುಝೇನಿ ಸುಖಲೇಶೇ । ತೋ ತೂ ಸಕಳಸುಖಸಮಾವೇಶೇ । ಪ್ರಸನ್ನ ಅನಾಯಾಸೇ ನಿಜಭಕ್ತಾ ।।೧೫೯।। ಸಾಧು ಜಾಣತೀ ತುಝಾ ಮಹಿಮಾ । ತೂ ಜ್ಞಾನಿಯಾಂಚಾ ಅಭೇದ ಆತ್ಮಾ । ಭಕ್ತಪ್ರಿಯ ಪುರುಷೋತ್ತಮಾ । ತುಝಾ ಸುಖಾಚಾ ಪ್ರೇಮಾ ಅಪ್ರಮೇಯ ।।೧೬೦।। ತುಝೇ ಸೇವೇಚಿಯಾ ಸಂತೋಷೇ । ಭಕ್ತ ಸುಖಾವಲೇ ನಿಜಸುಖೇ । ತ್ಯಾಂಸೀ ದೇಹದ್ವಂದ್ವಜನ್ಮದುಃಖೇ । ಸ್ವಪ್ನೀಂಹೀ ಸಂಮುಖೇ ಕದಾ ನವ್ಹತೀ ।।೧೬೧।। ತುಝ್ಯಾ ಭಜನಸುಖೇ ತುಝೇ ಭಕ್ತ । ವಿಷಯೀ ಹೋಊನಿ ವಿರಕ್ತ । ತೇ ರಾಜ್ಯ ಸಮುದ್ರವಲಯಾಂಕಿತ । ಥುಂಕೋನಿ ಸಾಂಡಿತ ತುಚ್ಛತ್ವೇ ।।೧೬೨।।

ವಿಶ್ವಕರ್ತಾ ಬ್ರಹ್ಮಾ, ವಿಶ್ವಪಾಲನಕರ್ತಾ ವಿಷ್ಣು, ಮತ್ತು ವಿಶ್ವಪ್ರಳಯಕರ್ತಾ ಮಹೇಶ ಈ ತ್ರಿದೇವರು ಮಾಯಾಗುಣಗಳ ಅವತಾರರಾಗಿರುವರು. ಆದರೆ ನೀನು ಮಾಯೆಯ ನಿಯಂತ್ರಕ ಈಶ್ವರನಾಗಿರುವೆ. ನೀನು ಭಕ್ತರಿಗೆ ಅಪಾರ ಕರುಣೆ ತೋರಿ ಸುಖ ಕೊಡುವವನಾಗಿರುವೆ ।।೧೪೯।। ನಿನ್ನ ಭಕ್ತಿ ಮಾಡುವುದರಿಂದ ನಾಲ್ಕೂ ಪುರುಷಾರ್ಥಗಳು ಮತ್ತು ನಾಲ್ಕೂ ಮುಕ್ತಿಗಳು ಭಕ್ತರಿಗೆ ಲೋಟಾಂಗಣ ಹಾಕುತ್ತ ಬರುವುವು. ಇಷ್ಟೊಂದು ಲಾಭವು ನಿನ್ನ ಭಕ್ತರಿಗಾಗುವುದು ।।೧೫೦।। ಭಗವಂತನಾದ ನೀನು ಸರ್ವಜ್ಞನಾಗಿರುವೆ. ನಿನ್ನ ಸರ್ವ ಮುಗ್ಧ ಭಕ್ತರ ಮನೋಗತವನ್ನು ತಿಳಿಯುವೆ ಹಾಗೂ ಅವರಿಗೆ ಬೇಕಾಗುವುದೆಲ್ಲವನ್ನೂ ಕೊಡುವೆ ।।೧೫೧।। ಭಾವಾರ್ಥದ ಭೋಕ್ತಾ ನೀನೊಬ್ಬನೇ ಶ್ರೀಕೃಷ್ಣನಾಗಿರುವೆ. ಈ ಲಕ್ಷಣವು ನಿನ್ನ ಹೊರತಾಗಿ ಬೇರೆ ಯಾರಿಗೂ ಹೋಲುವುದಿಲ್ಲ ।।೧೫೨।। ಹೀಗೆ ನೀನು ಅತ್ಯುತ್ತಮ ಸ್ವಾಮಿಯಾಗಿರುವೆ. ನಿನ್ನಿಂದ ಸಾಧಕರಿಗೆ ಅಲೌಕಿಕ ಸುಖದ ಪ್ರಾಪ್ತಿಯಾಗುವುದು. ನಿನ್ನ ಹಾಗೆ ಇನ್ನೊಬ್ಬರು ಯಾರೂ ಇರುವುದಿಲ್ಲ. ಪುರುಷೋತ್ತಮನಾದ ನೀನು ಸರ್ವರ ಸ್ವಾಮಿಯಾಗಿರುವೆ ।।೧೫೩।। ನೀನು ಸರ್ವರಿಗೂ ಸ್ವಾಮಿಯಾಗಿದ್ದರೂ ಕೂಡ ನಿನ್ನ ಪ್ರೇಮಳ ಭಕ್ತರಿಗಾಗಿ ಕೃಪಾವಂತನಾಗಿರುವೆ. ಅಗ್ನಿ, ವಿಷ ಇತ್ಯಾದಿ ನಾನಾವಿಧ ಸಂಕಟಗಳಿಂದ ಭಕ್ತಶ್ರೇಷ್ಠ ಪ್ರಹ್ಲಾದನ ರಕ್ಷಣೆ ನೀನೇ ಮಾಡಿರುವೆ ।।೧೫೪।। ನಿನಗೆ ಭಕ್ತರಿಗಾಗಿ ಅತಿಶಯ ಕರುಣೆ ಬರುವುದು. ಉತ್ತಾನಪಾದ ರಾಜನ ಬಾಲಕನಿಗೆ ವೈರಾಗ್ಯಸಂಪನ್ನನಾಗಿ ಮಾಡಿ, ಆ ಧ್ರುವನಿಗೆ ನೀನು ಅಢಳ ಪದವಿ ಕೊಟ್ಟಿರುವೆ ।।೧೫೫।। ಬಿಭೀಷಣನು ಮಾತ್ರ ನಿನ್ನ ಶತ್ರುವಿನ ತಮ್ಮನಾಗಿದ್ದನು. ಆದರೆ ಆತನು ನಿನಗೆ ಅತಿ ಅನನ್ಯಭಾವದಿಂದ ಶರಣು ಬಂದನು. ಆತನಲ್ಲಿ ಅಪಾರ ಕೃಪೆಯ ಮಳೆಗರೆಯುವುದಕ್ಕಾಗಿ ಆತನ ಕುಲಸಮೇತ ರಾವಣನ ಉದ್ಧಾರ ಮಾಡಿದೆ ।।೧೫೬।। ನೀನು ಬಳಿಗೆ ಮೋಸದಿಂದ ಕಟ್ಟಿಹಾಕಿದೆ, ಆದರೆ ಕೊನೆಯಲ್ಲಿ ನಿನಗೆ ಅದೆಷ್ಟು ಕೃಪೆ ನಿರ್ಮಾಣವಾಯಿತೆಂದರೆ, ನೀನು ನಾಚಿಕೆ ಬಿಟ್ಟು ಆತನ ಬಾಗಿಲಲ್ಲಿ ದ್ವಾರಪಾಲಕನಾಗಿ ಇದ್ದುಕೊಂಡೆ ।।೧೫೭।। ಈ ಪ್ರಕಾರವಾಗಿ ನಿನಗೆ ಭಕ್ತರಲ್ಲಿ ಕರುಣೆಯುಂಟಾಗುವುದು. ನೀನು ಭಕ್ತರ ಹೃದ್ಗತ ತಿಳಿಯುವೆ. ಹೀಗಿರುವ ನಿನ್ನಂತಹ ಸರ್ವಶ್ರೇಷ್ಠ ಸ್ವಾಮಿಯನ್ನು ಬಿಟ್ಟುಕೊಟ್ಟು ಧನಾಂಧ ಜನರ ಸೇವೆಯನ್ನು ಯಾರು ತಾನೇ ಮಾಡಿಯಾರು? ।।೧೫೮।। ಚಂಚಲ ದೇಹೇಂದ್ರಿಯಗಳ ಯಾವ ಕ್ಷಣಿಕ ಸುಖದ ಭಾಸವಾಗುವುದೋ, ಅದು ನಿನ್ನ ಸುಖಲೇಶದಿಂದಲೇ ಆಗುತ್ತಿರುವುದು. ಈಗ ನೀನು ಸರ್ವಸುಖದ ನಿಧಿಯೊಂದಿಗೆ ನಿನ್ನ ಮುಗ್ಧ ಭಕ್ತರಿಗೆ ಅನಾಯಾಸವಾಗಿ ಪ್ರಸನ್ನನಾಗುವೆ ।।೧೫೯।। ಈ ನಿನ್ನ ಮಹಿಮೆಯನ್ನು ಸಾಧು ಜನರು ಮಾತ್ರ ತಿಳಿಯುವರು. ನೀನು ಜ್ಞಾನೀ ಪುರುಷರ ಅಭೇದ ಆತ್ಮನಾಗಿರುವೆ. ಹೇ ದಯಾಸಾಗರನಾದ ಪುರುಷೋತ್ತಮಾ, ನೀನು ಭಕ್ತಿಪ್ರಿಯನು.ನಿನ್ನ ಅಗಾಧ ಸುಖದ ಪ್ರೇಮವು ಅತರ್ಕ್ಯವಾಗಿರುವುದು ।।೧೬೦।। ನಿನ್ನ ಪರಮ ಸೇವೆಯ ಆನಂದದಲ್ಲಿ ಭಕ್ತ ಜನರು ನಿಜಸುಖದಿಂದ ಸುಖಪಡುವರು.ದೇಹದ ದ್ವಂದ್ವ ಮತ್ತು ಜನ್ಮಮರಣಗಳ ದುಃಖಗಳು ಸ್ವಪ್ನದಲ್ಲಿಯೂ ಕೂಡ ಅವರ ಮುಂದೆ ಬಂದು ನಿಲ್ಲಲಾರವು ।।೧೬೧।। ನಿನ್ನ ಭಕ್ತ ಜನರು ನಿನ್ನ ಮಧುರವಾದ ಭಜನೆಯ ಸುಖದಿಂದ ವಿಷಯಗಳ ವಿಷಯದಲ್ಲಿ ವಿರಕ್ತರಾಗಿ ಸಮುದ್ರವಲಯಾಂಕಿತ ಪೃಥ್ವಿಯ ರಾಜ್ಯವನ್ನೂ ಕೂಡ ಅತ್ಯಂತ ತುಚ್ಛಮಾಡಿ ಉಗುಳಿಬಿಡುವರು ।।೧೬೨।।

ಸಕಳ ಭೋಗವೈಭವೇಸೀ । ಸ್ವರ್ಗ ಆಲಿಯಾ ಭಕ್ತಾಪಾಶೀ । ತೇ ಉಪೇಕ್ಷಿತೀ ತಯಾಸೀ । ಜೇವೀ ರಾಜಹಂಸೀ ಥಿಲ್ಲರ ॥೧೫೩॥ ಜೇ ವಿನಟಲೇ ಭಜನಾಚ್ಯಾ ಠಾಯೀ । ತೇ ತೂ ಸುಖರೂಪ ಕರಿಸೀ ಪಾಹೀ । ದೇಹೀ ಅಸತಾಂಚಿ ವಿದೇಹೀ । ಸರ್ವಾಠಾಯೀ ಸಮಸಾಮ್ಯೇ ॥೧೫೪॥ ಐಸಾ ಸ್ವಾಮೀ ತೂ ಹೃಷೀಕೇಶೀ । ಸದಾ ಸಂತುಷ್ಟ ನಿಜಭಕ್ತಾಂಸೀ । ಕಠಿಣತ್ವ ನಾಹೀ ಸೇವೇಸೀ । ಕೈಸೇ ಮ್ಹಣಸೀ ತೇ ಐಕ ॥೧೫೫॥ ಜಾಣೇ ನ ಲಗೇ ಪರದೇಶಾಸೀ । ಆಣಿ ಅನವಸರು ನಾಹೀ ಸೇವೇಸೀ । ಭಕ್ತಾನಿಕಟ ಅಹರ್ನಿಶೀ । ತೂ ಹೃದಯನಿವಾಸೀ ನಿಜಾತ್ಮಾ ॥೧೫೬॥ ಸೇವೇಲಾಗೀ ನ ಲಗೇ ಧನ । ಶರೀರಕಷ್ಟ ನ ಲಗತೀ ಜಾಣ । ತುಝ್ಯಾ ಚರಣೀ ಠೇವಿಲ್ಯಾ ಮನ । ತೂ ಸ್ವಾನಂದಘನ ತುಷ್ಟಸೀ ॥೧೫೭॥ ತೂ ತುಷ್ಟೋನಿ ಕರಿಶೀ ಐಸೇ । ಸಾಂಡವಿಸೀ ಪ್ರಪಂಚಾಚೇ ಪಿಸೇ । ತ್ರಿಗುಣೇಸೀ ತ್ರಿಪುಟೀ ನಾಸೇ । ಅನಾಯಾಸೇ ಮಿಥ್ಯಾತ್ವೇ ॥೧೫೮॥ ಐಸಾ ತೂ ಸುಸೇವ್ಯ ಆಣಿ ಕೃಪಾಳೂ । ನಿಜಸ್ವಾಮೀ ತೂ ದೀನದಯಾಳೂ । ತುಝೀ ಸೇವಾ ಸಾಂಡೀ ತೋ ಬರಳೂ । ಮೂರ್ಖ ಕೇವಳೂ ಅತಿಮಂದ ॥೧೫೯॥ ನಿಮಿಷೋನ್ಮೇಷಾಂಚೇ ವ್ಯಾಪಾರ । ತುಝೇನಿ ಚಾಲತೀ ಸಾಚಾರ । ತುಝೀ ಸೇವೇಸೀ ವಿಮುಖ ನರ । ತೇ ಪರಮಪಾಮರ ಅಭಾಗ್ಯ ॥೧೬೦॥ ತುಝೀ ಸೇವಾ ಸುಖರೂಪ ಕೇವಳ । ತೀಸ ಉಪೇಕ್ಷೂನಿಯಾ ಬರಳ । ವಿಷಯಾಂಚೇ ವಿಷಕಲ್ಲೋಳ । ಜೇ ಸರ್ವಕಾಳ ವಾಂಛಿತೀ ॥೧೬೧॥ ಜ್ಯಾ ವಿಷಯಾಂಚಾ ವಿಷಲೇಶ । ಥಿತ್ಯಾ ನಿಜಸುಖಾ ಕರೀ ನಾಶ । ಜನ್ಮಮರಣಾಂಚಾ ವಿಲಾಸ । ದುಃಖ ಅಸೋಸ ಭೋಗವೀ ॥೧೬೨॥ ತ್ಯಾ ವಿಷಯಾಂಚೇ ವಿಷಯದಾತೇ । ಇಂದ್ರ-ಮಹೀಂದ್ರ ಕೃಪಣಚಿತ್ತೇ । ತ್ಯಾಂಸೀ ಭಜತೀ ಜೇ ವಿಷಯಸ್ವಾರ್ಥೇ । ತೇಹೀ ನಿಶ್ಚಿತೇ ಅಭಾಗ್ಯ ॥೧೬೩॥ ತುಝಿಯಾ ಕೃಪಾ ತುಝೇ ಭಕ್ತ । ಸುಖಸಂಪನ್ನ ಅತಿಸಮರ್ಥ । ಸಂಸಾರೀ ಅಸೋನಿ ವಿರಕ್ತ । ಹೇ ನವಲ ಏಥ ನವ್ಹೇ ದೇವಾ ॥೧೬೪॥ ತುಝೇ ಚರಣರಜ ಜೇ ಸೇವಿತೀ । ಪೃಥುಜನಕಾದಿ ನೃಪತೀ । ತ್ಯಾಂಸೀ ಇಂದ್ರಾದಿಕ ವಂದಿತೀ । ಪಾಯಾ ಲಾಗತೀ ಋದ್ಧಿಸಿದ್ಧೀ ॥೧೬೫॥ ಆಕಲ್ಪ ಕರಿತಾ ತಪಃಸ್ಥಿತೀ । ಜ್ಯಾ ಸಿದ್ಧೀಂಚೀ ನವ್ಹೇ ಪ್ರಾಪ್ತೀ । ತ್ಯಾ ಸಿದ್ಧೀ ಭಕ್ತಾ ಶರಣ ಯೇತೀ । ಐಸೀ ಶ್ರೇಷ್ಠ ಭಕ್ತಿ ಪೈ ತುಝೀ ॥೧೬೬॥

ಸರ್ವ ಐಶ್ವರ್ಯ ಸಮೇತವಾಗಿ ಸ್ವರ್ಗವು ಒಂದುವೇಳೆ ಭಕ್ತರ ಹತ್ತಿರ ಬಂದರೆ, ರಾಜಹಂಸ ಪಕ್ಷಿಯು ರಾಡಿ ನೀರಿನ ಮಡುವನ್ನು ಬಿಟ್ಟು ತೊಲಗುವಂತೆ ಭಕ್ತಜನರೂ ಕೂಡ ಸ್ವರ್ಗದ ತಿರಸ್ಕಾರ ಮಾಡುವರು ॥೧೫೩॥ ಯಾರು ನಾದಮಧುರ ಭಜನೆಯಲ್ಲಿ ತನ್ಮಯರಾಗುವರೋ, ಅವರಿಗೆ ನೀನು ಸುಖಸ್ವರೂಪರನ್ನಾಗಿ ಮಾಡುವೆ ಹಾಗೂ ದೇಹದಲ್ಲಿದ್ದಾಗಲೇ ಅವರಿಗೆ ವಿದೇಹಿಯನ್ನಾಗಿ ಮಾಡುವೆ. ಇಂತಹ ಭಕ್ತ ಜನರು ಸರ್ವತ್ರ ಸಮಭಾವನೆ ಇಡುವರು ॥೧೫೪॥ ಹೇ, ಹೃಷೀಕೇಶಿಯೇ, ಸರ್ವಶ್ರೇಷ್ಠನಾದ ಸ್ವಾಮಿಯೇ, ನೀನು ಈ ಪ್ರಕಾರವಾಗಿ ಯಾವಾಗಲೂ ಭಕ್ತರಲ್ಲಿ ಸಂತುಷ್ಟನಾಗಿರುವೆ. ಈ ನಿನ್ನ ಸೇವೆಗೆ ಯಾವ ಕಠಿಣತ್ವವು ಇರುವುದಿಲ್ಲ. ಅದು ಹೇಗೆ ಎಂದು ಕೇಳಿದರೆ ಹೇಳುವೆ, ಕೇಳು ॥೧೫೫॥ ನಿನ್ನ ಸೇವೆ ಮಾಡಲು ಪರದೇಶಕ್ಕೆ ಹೋಗಬೇಕಾಗುವುದಿಲ್ಲ. ನಿನ್ನ ಸೇವೆಗಾಗಿ ಕಾಲವೇಳೆಯನ್ನು ನೇಮಿಸಿರುವುದಿಲ್ಲ. ಹೃದಯದಲ್ಲಿ ವಸತಿ ಮಾಡುವವನಾದ ನೀನು ಆತ್ಮಾರಾಮನು ಭಕ್ತರ ಸಮೀಪವಾಗಿಯೇ ಇರುವೆ ॥೧೫೬॥ ನಿನ್ನ ಸೇವೆಗಾಗಿ ಯಾವ ಧನ ಬೇಕಾಗುವುದಿಲ್ಲ ಅಥವಾ ಶರೀರವನ್ನು ದಂಡಿಸಲೂ ಬೇಕಾಗುವುದಿಲ್ಲ. ನಿನ್ನ ಚರಣಕಮಲಗಳಲ್ಲಿ ಮನವು ಸಂಲಗ್ನವಾದರೆ ಸಾಕು, ಇದರಿಂದ ಸ್ವಾನಂದಘನನಾದ ನೀನು ಸಂತುಷ್ಟನಾಗುತ್ತಿರುವೆ ॥೧೫೭॥ ನೀನು ಸಂತುಷ್ಟನಾಗಿ ಏನು ಮಾಡುವೆ ಎಂದರೆ ಪ್ರಪಂಚದ ಭ್ರಮೆಯನ್ನು ಇಲ್ಲದಾಗಿ ಮಾಡುವೆ. ತ್ರಿಗುಣಸಮೇತವಾಗಿ ಸರ್ವ ತ್ರಿಪುಟಿಗಳು ಮಿಥ್ಯೆಯಾಗಿ ಅವೆಲ್ಲವೂ ಇಲ್ಲದಾಗುವುವು ॥೧೫೮॥ ನೀನು ಇಂತಹ ಸುಸೇವ್ಯ, ಕೃಪಾವಂತ, ದೀನದಯಾಳು ಸ್ವಾಮಿಯಾಗಿರುವೆ. ಭ್ರಮಿಷ್ಠರು, ಮೂರ್ಖರು, ಮತಿಮಂದ ಜನರು ಮಾತ್ರ ನಿನ್ನ ಸೇವೆಯನ್ನು ಮಾಡಲಾರರು ॥೧೫೯॥ ಕಣ್ಣುಗಳ ತೆರೆಯುವ, ಮುಚ್ಚುವ ವ್ಯಾಪಾರವು ಕೇವಲ ನಿನ್ನ ಸತ್ತೆಯಿಂದ ಆಗುತ್ತಿರುವುದು. ಹೀಗಿರುವ ನಿನ್ನ ಸೇವೆಗೆ ಯಾರು ವಿಮುಖರಾಗುವರೋ, ಅವರು ದುರ್ದೈವಿಗಳಾಗಿ, ಪಾಮರರಾಗಿರುವರು ॥೧೬೦॥ ನಿನ್ನ ಸೇವೆಯು ಸುಖಸ್ವರೂಪವಾಗಿರುವುದು. ಇಂತಹ ಸೇವೆಯನ್ನು ತಿರಸ್ಕರಿಸಿ ಯಾರು ವಿಷಯುಕ್ತ ವಿಷಯಗಳ ಬೆನ್ನು ಹತ್ತುವರೋ, ಅವರು ಕೇವಲ ಮೂರ್ಖರಾಗಿರುವರು ॥೧೬೧॥ ಆ ಯಾವ ವಿಷಯಗಳ ಲೇಶಕೂಡ ತನ್ನಲ್ಲಿಯೇ ಇರುವ ಆತ್ಮಸುಖದ ನಾಶ ಮಾಡುವುದು. ಜನ್ಮಮರಣದ ಚಕ್ರದಲ್ಲಿ ತಿರುಗಿಸುತ್ತಲೇ ಇರುವುದು. ಹಾಗೆಯೇ ಸಹಿಸದಾಗದ ದುಃಖಗಳನ್ನು ಭೋಗಿಸಲು ಹಚ್ಚುವುದು ॥೧೬೨॥ ಇಂತಹ ವಿಷಯಗಳ ವಿಷಯದಾತೆಗಳಾದ ಇಂದ್ರ, ಮಹೇಂದ್ರರೂ ಕೂಡ ಕೃಪಣರಾಗಿರುವರು. ಈ ಯಾವ ವಿಷಯಗಳ ಸ್ವಾರ್ಥಕ್ಕಾಗಿ ಅವರನ್ನು ಭಜಿಸುವವರು, ಅವರೂ ಕೂಡ ನಿಜವಾಗಿಯೂ ಅಭಾಗ್ಯರು ॥೧೬೩॥ ಹೇ ದೇವನೇ, ನಿನ್ನ ಕೃಪೆಯ ವೈಭವದಿಂದ ನಿನ್ನ ಭಕ್ತರು ಅತ್ಯಂತ ಸುಖಸಂಪನ್ನರು, ಅತಿಶಯ ಸಮರ್ಥರು ಮತ್ತು ಸಂಸಾರದಲ್ಲಿ ಇದ್ದುಕೊಂಡೇ ವಿರಕ್ತರಾಗುವರು. ಇದರಲ್ಲಿ ಯಾವ ಆಶ್ಚರ್ಯವೇನಿಲ್ಲ ॥೧೬೪॥ ಹೇ ಶ್ರೀಕೃಷ್ಣನೇ, ನಿನ್ನ ಪಾದಧೂಳಿಯ ಸೇವನೆ ಮಾಡುವವರಾದ ಪೃಥೂ, ಜನಕಾದಿಕರು ಯಾವ ಶ್ರೇಷ್ಠ ರಾಜರಾದ ಇವರಿಗೆ ಇಂದ್ರಾದಿಕ ದೇವತೆಗಳೂ ಕೂಡ ವಂದನೆ ಮಾಡುವರು ಮತ್ತು ರಿದ್ಧಿಸಿದ್ಧಿಗಳು ಅವರ ಚರಣಗಳತ್ತ ಬರುವುವು ॥೧೬೫॥ ಆಕಲ್ಪ ತಪಶ್ಚರ್ಯ ಮಾಡಿದರೂ ಸಹ ಯಾವ ಸಿದ್ಧಿಗಳ ಪ್ರಾಪ್ತಿಯಾಗುವುದಿಲ್ಲವೋ, ಆ ಸಿದ್ಧಿಗಳು ಭಕ್ತರಿಗೆ ಶರಣಾಗುವುವು. ಇಷ್ಟೊಂದು ನಿನ್ನ ಭಕ್ತಿಯು ಶ್ರೇಷ್ಠವಾಗಿದೆ ॥೧೬೬॥

ಆಣಿಕ ಸಾಧನೆ ನ ಕರಿತಾ । ತುರ್ಝೀ ಭಜನೀ ಠೇವಿಲ್ಯಾ ಚಿತ್ತಾ । ಸರ್ವಸಿದ್ಧೀ ಹೋತೀ ಶರಣಾಗತಾ । ಸ್ವಭಾವತಾ ಭಕ್ತಾಂಸೀ ।।೧೬೭।। ಯಾಪರೀ ತುರ್ಝೀ ಉಪಕಾರ । ಭಕ್ತಾಪ್ರತೀ ಘಡಲೇ ಅಪಾರ । ತ್ಯಾಸೀ ತೈಚಿ ಘಡೇ ಪ್ರತ್ಯುಪಕಾರ । ಹರಿಚರಣೀ ಸಾಚಾರ ಜೈ ಸ್ವಯೇ ವಿರೇ ।।೧೬೮।। ತೇಚಿ ವಿರಾಲೇಪಣ ಐಸೇ । ಜೇವೀ ಪ್ರತಿಬಿಂಬ ಬಿಂಬೀ ಪ್ರವೇಶೇ । ಕಾ ಘಟಾಕಾಶೀಂಚೇನಿ ಆಕಾಶೇ । ಹೋಈಜೇ ಜೈಸೇ ಮಹದಾಕಾಶ ।।೧೬೯।। ಐಸೇ ತುಜಮಾಜೀ ನ ವಿರತಾ । ಪ್ರತ್ಯುಪಕಾರ ನ ಯೇ ಹಾತಾ । ಜೋ ಪುರವೀ ಸರ್ವ ಸ್ವಾರ್ಥಾ । ತ್ಯಾಸೀ ವಿಸರತಾ ಅಧಃಪಾತು ।।೧೭೦।।

ನೈವೋಪಯಂತ್ಯಪಚಿತಿಂ ಕವಯಸ್ತವೇಶ ಬ್ರಹ್ಮಾಯುಷಾಪಿ ಕೃತಮೃದ್ಧಮುದಃ ಸ್ಮರಂತಃ ।
ಯೋಽಂತರ್ಬಹಿಸ್ತನುಭೃತಾಮಶುಭಂ ವಿಧುನ್ವನ್ನಾಚಾರ್ಯಚೈತ್ಯವಪುಷಾ ಸ್ವಗತಿಂ ವ್ಯನಕ್ತಿ ।।೬।।

ಅರ್ಥ:- ಹೇ ಭಗವಂತನೇ, ನೀನು ಸಮಸ್ತ ಪ್ರಾಣಿಗಳ ಅಂತಃಕರಣದಲ್ಲಿ ಅಂತರ್ಯಾಮಿ ರೂಪದಿಂದ ಮತ್ತು ಹೊರಗೆ ಗುರುರೂಪದಿಂದ ಸ್ಥಿತನಾಗಿ ಸಂಪೂರ್ಣ ಪಾಪ, ತಾಪಗಳನ್ನು ನಾಶಮಾಡುವೆ. ನಿನ್ನ ವಾಸ್ತವಿಕ ಸ್ವರೂಪವನ್ನು ಪ್ರಕಟಗೊಳಿಸುವೆ. ಮಹಾಮಹಾ ಬ್ರಹ್ಮಜ್ಞಾನಿಗಳು ಬ್ರಹ್ಮದೇವನ ಸಮಾನ ದೀರ್ಘ ಆಯುಷ್ಯ ಪ್ರಾಪ್ತಮಾಡಿಕೊಂಡು ಇರುವರು. ಆದರೆ ಇವರಿಗೆ ನಿಮ್ಮ ಉಪಕಾರವನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿನ್ನ ಉಪಕಾರದ ಸ್ಮರಣೆಯನ್ನು ಮಾಡುತ್ತ ಕ್ಷಣಕ್ಷಣಕ್ಕೂ ಅಧಿಕಾಧಿಕ ಆನಂದದ ಅನುಭವ ಪಡೆಯುವರು.

ತುಜಮಾಜೀ ನ ವಿರತಾ ಸಾಚಾರ । ಬ್ರಹ್ಮಾಯು ಹೋಊನಿಯಾ ನರ । ಯೋಗಯಾಗೇ ಶಿಣತಾ ಅಪಾರ । ಪ್ರತ್ಯುಪಕಾರ ಕದಾ ನ ಘಡೇ ।।೧೭೧।। ಅಸೋ ಸಜ್ಞಾನ ಜ್ಞಾತೇ ಜನ । ಕರಿತಾ ನಾನಾವಿಧ ಸಾಧನ । ತುರ್ಝಿಯಾ ಉಪಕಾರಾ ಉತ್ತೀರ್ಣ । ಅಣುಪ್ರಮಾಣ ಕದಾ ನವ್ಹತೀ ।।೧೭೨।। ತೋ ಉಪಕಾರ ಕೋಣ ಮ್ಹಣಸೀ । ನಿಜಭಕ್ತಾಂಚ್ಯಾ ಕಲ್ಮಷಾಂಸೀ । ಸಬಾಹ್ಯಾಭ್ಯಂತರ ನಿರ್ದಳಿಸೀ । ಉಭಯರೂಪೇಸೀ ಕೃಪಾಳುವಾ ।।೧೭೩।। ಅಂತರೀ ಅಂತರ್ಯಾಮೀರೂಪೇ । ಬಾಹ್ಯ ಸದ್ಗುರುಸ್ವರೂಪೇ । ಭಕ್ತಾಂಚೀ ಸಬಾಹ್ಯ ಪಾಪೇ । ಸಹಿತ ಸಂಕಲ್ಪೇ ನಿರ್ದಳಿಸೀ ।।೧೭೪।। ಅಂತರ್ಯಾಮೀ ಆಣಿ ಸದ್ಗುರು । ಉಭಯರೂಪೇ ತೂ ಕರುಣಾಕರು । ನಿರಸೂನಿ ಭಕ್ತಭವಭಾರು । ನಿಜನಿರ್ಧಾರು ಧರವಿಸೀ ।।೧೭೫।। ನಿಜನಿರ್ಧಾರಾಚೇ ಲಕ್ಷಣ । ಸಹಜೇ ಹಾರಪೇ ಮೀತೂಪಣ । ಸ್ವಯೇ ವಿರೇ ದೇಹಾಭಿಮಾನ । ಜನ್ಮಜರಾಮರಣ ಮಾವಳೇ ।।೧೭೬।। ಗೇಲಿಯಾ ಜನ್ಮಜರಾಮರಣ । ಸಹಜೇ ಹೋತೀ ಆನಂದಘನ । ಐಸೇ ತುರ್ಝಿಯಾ ಕೃಪೇ ಜಾಣ । ಉಪಕಾರೇ ಪೂರ್ಣ ನಿಜಭಕ್ತ ।।೧೭೭।।

ಇತರ ಯಾವ ಸಾಧನೆಗಳನ್ನು ಮಾಡದೇ ನಿನ್ನ ಭಜನೆಯಲ್ಲಿ ಮನವು ಏಕರೂಪವಾಗಲು ಸರ್ವ ಸಿದ್ಧಿಗಳು ಸ್ವಾಭಾವಿಕವಾಗಿಯೇ ಭಕ್ತರಿಗೆ ಶರಣಾಗುವುವು ।।೧೬೭।। ಈ ಪ್ರಕಾರವಾಗಿ ಭಕ್ತರಲ್ಲಿ ನಿನ್ನ ಅನಂತ ಉಪಕಾರವಾಗುತ್ತಿರುವುದು. ಆ ಯಾವ ಶ್ರೀಹರಿಯ ಚರಣಗಳಲ್ಲಿ ಲೀನವಾದಾಗ ಮಾತ್ರ ಉಪಕಾರವನ್ನು ತೀರಿಸಿದಂತಾಗುವುದು ।।೧೬೮।। ಈ ಲೀನತ್ವವು ಹೇಗಿದೆ ಎಂದರೆ ಪ್ರತಿಬಿಂಬವು ಬಿಂಬದಲ್ಲಿ ಪ್ರವೇಶ ಮಾಡುವಂತೆ ಅಥವಾ ಘಟಾಕಾಶವು ಮಹದಾಕಾಶದಲ್ಲಿ ಕೂಡಿಕೊಂಡಂತೆ ಇರುವುದು ।।೧೬೯।। ಈ ಪ್ರಕಾರವಾಗಿ ನಿನ್ನಲ್ಲಿ ಏಕರೂಪವಾಗದ ಹೊರತು ಉಪಕಾರದ ಋಣ ತೀರುವುದಿಲ್ಲ. ಯಾರು ನಮಗೆ ಉಪಕಾರ ಮಾಡಿರುವರೋ, ಅವರನ್ನು ಮರೆಯುವುದು ಅದು ಕೇವಲ ಅಧಃಪಾತವಾಗಿರುವುದು ।।೧೭೦।।

ನಿನ್ನ ಸ್ವರೂಪದಲ್ಲಿ ಲೀನನಾಗದೆ ಯಾವ ಪುರುಷನು ಬ್ರಹ್ಮಾಯುಷ್ಯ ಪಡೆದು ಯೋಗಯಾಗ ಮಾಡುತ್ತ ವ್ಯರ್ಥ ಶ್ರಮಪಡುತ್ತಿರುವನೋ, ಆತನ ಕೈಯಿಂದ ಉಪಕಾರ ತೀರಿಸಲು ಸಾಧ್ಯವಾಗುವುದಿಲ್ಲ ।।೧೭೧।। ಜ್ಞಾನಸಂಪನ್ನ ಜನರು ಅನೇಕ ಪ್ರಕಾರದ ಸಾಧನೆಗಳನ್ನು ಮಾಡುವರು. ಆದರೂ ಕೂಡ ನಿನ್ನ ಉಪಕಾರ ಅವರ ಆಯುಷ್ಯದಲ್ಲಿಯೇ ತೀರಿಸಲು ಶಕ್ಯವಿಲ್ಲ ।।೧೭೨।। ಹಾಗಾದರೆ ಉಪಕಾರ ಯಾವುದು? ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು. ಹೇ ದಯಾನಿಧಿಯೇ, ನೀನು ನಿನ್ನ ಭಕ್ತರ ಅಂತರ್ಬಾಹ್ಯ ಪಾತಕಗಳನ್ನು ನಾಶಮಾಡಿಬಿಡುವೆ ।।೧೭೩।। ಅಂತರ್ಯಾಮೀ ರೂಪದಿಂದ ಅಂತಃಕರಣದಲ್ಲಿನ ಪಾತಕಗಳನ್ನು ನಾಶಮಾಡುವೆ ಮತ್ತು ಸದ್ಗುರು ರೂಪದಿಂದ ಭಕ್ತರ ಸಂಕಲ್ಪಸಹ ಪಾತಕಗಳ ನಾಶ ಮಾಡುವೆ ।।೧೭೪।। ಅಂತರ್ಯಾಮೀ ಹಾಗೂ ಸದ್ಗುರು ಈ ರೂಪದಿಂದ ನಿಜವಾಗಿಯೂ ನೀನು ಕರುಣಾಕರನಾಗಿರುವೆ. ನೀನು ಭಕ್ತರ ಸಂಸಾರಭ್ರಮೆಯನ್ನು ನಿರಸನೆ ಮಾಡಿ ಅವರಿಂದ ಆತ್ಮನಿಶ್ಚಯ ಹಿಡಿಸುವೆ ।।೧೭೫।। ಆತ್ಮನಿಶ್ಚಯ ದೃಢವಾಗಿರುವ ಲಕ್ಷಣವೇನೆಂದರೆ ನಾನು, ನೀನು ಎನ್ನುವುದು ಸಹಜವಾಗಿ ಇಲ್ಲದಾಗಿರುವುದು. ದೇಹದ ಅಭಿಮಾನವು ತನಗೆ ತಾನೇ ಲೋಪಗೊಳ್ಳುವುದು. ಹಾಗೆಯೇ ಜನ್ಮ, ಜರಾ, ಮರಣ ಇವೂ ಕೂಡ ಇಲ್ಲದಾಗಿರುವುವು ।।೧೭೬।। ಜನ್ಮ, ಜರಾ, ಮರಣ ಹೊರಟು ಹೋಗಲು ಭಕ್ತನು ಆನಂದಮಯನಾಗಿ ಇರುವನು. ನಿನ್ನ ಇಂತಹ ಅಗಾಧ ಕೃಪೆಯಿಂದ ಭಕ್ತನು ಪೂರ್ಣ ಉಪಕೃತನಾಗುವನು ।।೧೭೭।।

ಐಸೀ ಆಪುಲೀ ಸ್ವರೂಪಸ್ಥಿತೀ । ಭಕ್ತಾ ಅರ್ಪಿಸೀ ಕೃಪಾಮೂರ್ತೀ । ತೋ ತೂ ನಿಜಸ್ವಾಮೀ ಶ್ರೀಪತೀ । ಪೂಜ್ಯ ತ್ರಿಜಗತೀ ತ್ರಿದಶಾಂಸೀ ॥೧೭೮॥ ಐಸೇ ತುಝೇನಿ ನಿಜಪ್ರಸಾದೇ । ಭಕ್ತ ಸುಖೀ ಜಾಹಲೇ ಸ್ವಾನಂದೇ । ತೇ ಉರಲೇನಿ ಪ್ರಾರಬ್ಧೇ । ಸದಾ ಸ್ವಾನಂದಬೋಧೇ ವರ್ತತೀ ॥೧೭೯॥ ತೇ ದೇಹೀ ಅಸೋನಿ ವಿದೇಹೀ । ಕರ್ಮ ಕರೂನಿ ಅಕರ್ತೇ ಪಾಹೀ । ಐಸೇ ಉಪಕಾರ ಭಕ್ತಾಂಚ್ಯಾ ಠಾಯೀ । ತೇ ಕೈಸೇನಿ ಉತರಾಯೀ ಹೋತೀಲ ॥೧೮೦॥ ತುಜ ಕೇವೀ ಹೋಈಜೇ ಉತ್ತೀರ್ಣ । ತುಝೇನಿ ಮನಾಸೀ ಮನಪಣ । ತುಝೇನಿ ಬುದ್ಧೀಸೀ ನಿಶ್ಚಯೋ ಜಾಣ । ಇಂದ್ರಿಯಾ ಸ್ಫುರಣ ತುಝೇನೀ ॥೧೮೧॥ ನಿಮಿಷೋನ್ಮೇಷಾಂಚೇ ವ್ಯಾಪಾರ । ತುಝೇನಿ ಚಾಲತೀ ಸಾಚಾರ । ನೀಚ ನವ್ಹೇ ತುಝೇ ಉಪಕಾರ । ಉತ್ತೀರ್ಣ ನರ ಕದಾ ನವ್ಹತೀ ॥೧೮೨॥ ಜೇ ಜೇ ಕರಾವೇ ಸಾಧನ । ತೇ ಸಿದ್ಧೀ ಪಾವೇ ತುಝೇ ಕೃಪೇನ । ತ್ಯಾ ತುಜ ಉತ್ತೀರ್ಣಪಣ । ಸರ್ವಥಾ ಜಾಣ ಅಸೇನಾ ॥೧೮೩॥ ಯಾಪರೀ ಕರೂನಿ ಉಪಕಾರ । ತುವಾ ಉದ್ಧರಿಲೇ ಥೋರಥೋರ । ಆತಾ ಸುಗಮೋಪಾಯೇ ಭವಸಾಗರ । ತರತೀ ಭೋಳೇ ನರ ತೇ ಸಾಂಗ ॥೧೮೪॥ ಸುಗಮೋಪಾಯೇ ಸ್ವರೂಪಪ್ರಾಪ್ತೀ । ಭಾಳೇಭೋಳೇ ಜನ ಪಾವತೀ । ತೈಸಾ ಉಪಾಯ ಶ್ರೀಪತೀ । ಕೃಪಾಮೂರ್ತಿ ಸಾಂಗಾವಾ ॥೧೮೫॥ ತೂ ಗೇಲಿಯಾ ನಿಜಧಾಮಾ । ದೀನ ತರಾವಯಾ ಮೇಘಶ್ಯಾಮಾ । ಸುಗಮ ಉಪಾಯಾಚಾ ಮಹಿಮಾ । ಪುರುಷೋತ್ತಮಾ ಮಜ ಸಾಂಗ ॥೧೮೬॥ ಮ್ಹಣೋನಿ ಘಾತಿಲೇ ಲೋಟಾಂಗಣ । ಮಸ್ತಕೀ ಧರಿಲೇ ಶ್ರೀಚರಣ । ತರಾವಯಾ ದೀನ ಜನ । ಸುಗಮ ಸಾಧನ ಸಾಂಗಿಜೇ ॥೧೮೭॥ ಉದ್ಧವೇ ಪ್ರಾರ್ಥಿಲಾ ಶ್ರೀಪತೀ । ಅಬಳೇ ಉದ್ಧಾರಾವಯಾ ನಿಶ್ಚಿತೀ । ತ್ಯಾಚೇನಿ ಧರ್ಮೇ ತ್ರಿಜಗತೀ । ತ್ಯಾಸೀ ಕೃಪಾಮೂರ್ತಿ ತುಷ್ಟಲಾ ॥೧೮೮॥ ಉದ್ಧವೇ ಪ್ರಾರ್ಥಿಲಾ ಶ್ರೀಪತೀ । ತೇಣೇ ಸುಖಾವಲಾ ಶುಕಹೀ ಚಿತ್ತೀ । ಉಲ್ಲಾಸೋನಿ ಸ್ವಾನಂದಸ್ಥಿತೀ । ಮ್ಹಣೇ ಪರೀಕ್ಷಿತೀ ಸಾವಧ ॥೧೮೯॥ ಸುಗಮ ಉಪಾಯಸ್ಥಿತೀ । ತರಾವಯಾ ತ್ರಿಜಗತೀ । ಉದ್ಧವೇ ವಿನವಿಲಾ ಶ್ರೀಪತೀ । ತ್ಯಾಸೀ ಕೃಪಾಮೂರ್ತಿ ತುಷ್ಟಲಾ ॥೧೯೦॥ ಸಂಸಾರತರಣೋಪಾಯಬೀಜ । ಬ್ರಹ್ಮಪ್ರಾಪ್ತೀಚೇ ಬ್ರಹ್ಮಗುಜ । ಸುಗಮೇ ಸಾಧೇ ಸಹಜ ನಿಜ । ತೇ ಅಧೋಕ್ಷಜ ಸಾಂಗೇಲ ॥೧೯೧॥

ಹೇ ಕೃಪಾಮೂರ್ತಿಯೇ, ಹೀಗಿರುವ ನಿನ್ನ ಸ್ವರೂಪಸ್ಥಿತಿಯನ್ನು ನೀನು ಭಕ್ತರಿಗೆ ಅರ್ಪಣೆ ಮಾಡುತ್ತಿರುವೆ. ಅದೇ ನೀನು ನಮ್ಮ ಸ್ವಾಮೀ ಶ್ರೀಕೃಷ್ಣನಾಗಿರುವೆ. ತ್ರಿಭುವನದಲ್ಲಿ ನೀನು ದೇವಾದಿಕರ ಪ್ರಿಯನಾಗಿರುವೆ ॥೧೭೮॥ ಇಂತಹ ನಿನ್ನ ಕೃಪಾ ಪ್ರಸಾದದಿಂದ ಭಕ್ತರು ಆನಂದದಿಂದ ಸುಖಿಗಳಾಗುವರು. ಅವರು ಉಳಿದಿರುವ ಪ್ರಾರಬ್ಧ ಪ್ರಕಾರವಾಗಿ ಯಾವಾಗಲೂ ಸ್ವಾನಂದಬೋಧೆಯಿಂದ ವರ್ತಿಸುತ್ತಿರುವರು ॥೧೭೯॥ ಅವರು ದೇಹದಲ್ಲಿದ್ದರೂ ವಿದೇಹಿಯಾಗಿರುವರು ಮತ್ತು ಕರ್ಮಗಳನ್ನು ಮಾಡಿಯೂ ಕೂಡ ಅಕರ್ತರಾಗಿರುವರು. ಹೀಗೆ ಭಕ್ತರಲ್ಲಿ ನಿನ್ನ ಅನಂತ ಉಪಕಾರ ಇರುವುದು. ಹೀಗಿದ್ದ ಮೇಲೆ ಅವರು ನಿನ್ನಿಂದ ಋಣಮುಕ್ತರಾಗಲು ಹೇಗೆ ಸಾಧ್ಯ ? ॥೧೮೦॥ ಅವರು ನಿನ್ನ ಉಪಕಾರವನ್ನು ತೀರಿಸಬೇಕಾದರೂ ಹೇಗೆ? ನಿನ್ನಿಂದಲೇ ಮನಸ್ಸಿಗೆ ಮನತ್ವವು ಬರುವುದು. ನಿನ್ನಿಂದಲೇ ಬುದ್ಧಿಯು ನಿಶ್ಚಯವಾಗುವುದು. ನಿನ್ನಿಂದಲೇ ಇಂದ್ರಿಯಗಳ ಸ್ಫುರಣವಾಗುವುದು ॥೧೮೧॥ ಕಣ್ಣುಗಳ ತೆರೆಯುವ, ಮುಚ್ಚುವ ಕರ್ಮವೂ ಕೂಡ ನಿನ್ನಿಂದಲೇ ಆಗುತ್ತಿರುವುದು. ಹೀಗೆ ನಿತ್ಯ ನೂತನ ನಿನ್ನ ಅನೇಕ ಉಪಕಾರಗಳಿರುವುವು. ಆದ್ದರಿಂದ ನಿನ್ನ ಉಪಕಾರದ ಋಣ ತೀರಿಸಲು ಮಾನವರಿಂದ ಎಂದಿಗೂ ಆಗುವುದಿಲ್ಲ ॥೧೮೨॥ ಯಾವ ಯಾವ ಸಾಧನೆಗಳನ್ನು ಮಾಡಲಿ, ಅವು ನಿನ್ನ ಕೃಪೆಯಿಂದಲೇ ಪೂರ್ಣವಾಗುವುವು, ಸಿದ್ಧಿಗೊಳ್ಳುವುವು. ಈ ನಿನ್ನ ಉಪಕಾರದ ಋಣ ತೀರಿಸುವುದು ಸರ್ವಥಾ ಸಾಧ್ಯವಿಲ್ಲ ॥೧೮೩॥ ಈ ಪ್ರಕಾರವಾಗಿ ಉಪಕಾರ ಮಾಡಿ ನೀನು ಮಹಾ, ಮಹಾನ್ ಜನರ ಉದ್ಧಾರ ಮಾಡಿರುವೆ. ಆದರೆ ಭೋಳೆ ಜನರು ಯಾವ ಸುಲಭ ಉಪಾಯದಿಂದ ಭವಸಾಗರ ದಾಟುವ ವಿಷಯವನ್ನು ಕುರಿತು ಹೇಳು ॥೧೮೪॥ ಹೇ ಕೃಪಾಮೂರ್ತಿ ಶ್ರೀಕೃಷ್ಣನೇ, ಭೋಳೇ ಭಾವಿಕರಿಗೆ ಸ್ವಸ್ವರೂಪದ ಪ್ರಾಪ್ತಿ ಸುಲಭ ರೀತಿಯಲ್ಲಿ ಹೇಗಾಗುವುದು ? ಇಂತಹ ಉಪಾಯವನ್ನು ನೀನು ನನಗೆ ಹೇಳು ॥೧೮೫॥ ಹೇ ಮೇಘಶ್ಯಾಮನೇ, ಹೇ ಪುರುಷೋತ್ತಮನೇ, ನೀನಾದರೂ ನಿಜಧಾಮಕ್ಕೆ ಹೊರಟು ಹೋಗುವೆ. ಆದ್ದರಿಂದ ದೀನ ದುರ್ಬಲರು ಉದ್ಧಾರರಾಗುವಂತಹ ಮಾರ್ಗ ನೀನು ನನಗೆ ಹೇಳಿಡಬೇಕು ॥೧೮೬॥ ಹೀಗೆ ಹೇಳುತ್ತ ಉದ್ಧವನು ಶ್ರೀಕೃಷ್ಣನಿಗೆ ಲೋಟಾಂಗಣ ಹಾಕಿದನು. ಶ್ರೀಕೃಷ್ಣನ ಚರಣಗಳಲ್ಲಿ ಮಸ್ತಕವನ್ನಿಟ್ಟು ಉದ್ಧವನು ಹೀಗೆ ಹೇಳಲಾರಂಭಿಸಿದನು ; ಅಜ್ಞ ಜನರ ಉದ್ಧಾರಕ್ಕಾಗಿ ಸುಲಭಮಾರ್ಗ ನನಗೆ ನೀವು ಹೇಳಿರಿ ॥೧೮೭॥ ಅಜ್ಞ ಜನರ ಉದ್ಧಾರವಾಗುವುದಕ್ಕಾಗಿ ಹಾಗೂ ಅವರ ಧರ್ಮದಿಂದ ತ್ರಿಭುವನ ಉದ್ಧಾರವಾಗಬೇಕೆಂದು ಉದ್ಧವನು ಶ್ರೀಕೃಷ್ಣನನ್ನು ಮನೋಭಾವದಿಂದ ಪ್ರಾರ್ಥನೆ ಮಾಡಿದನು. ಇದರಿಂದ ದಯಾಸಾಗರನಾದ ಶ್ರೀಕೃಷ್ಣನು ಸಂತುಷ್ಟನಾದನು ॥೧೮೮॥ ಉದ್ಧವನು ಅಂತಃಕರಣಪೂರ್ವಕವಾಗಿ ಶ್ರೀಕೃಷ್ಣನ ಪ್ರಾರ್ಥನೆ ಮಾಡಿರುವುದನ್ನು ಕಂಡು ಶುಕಾಚಾರ್ಯರಿಗೆ ಮನಃಪೂರ್ವಕ ಅತಿಶಯ ಆನಂದವಾಯಿತು. ಆ ಆನಂದದ ಭರದಲ್ಲಿ ಅವರು ಹೀಗೆ ಹೇಳಿದರು, ಹೇ ಪರೀಕ್ಷಿತೀ ರಾಜನೇ, ಈಗ ಸಾವಧಾನನಾಗು ಹಾಗೂ ಏಕಾಗ್ರತೆಯಿಂದ ಶ್ರವಣ ಮಾಡು ॥೧೮೯॥ ತ್ರಿಭುವನ ಉದ್ಧಾರ ಮಾಡುವ ಉದ್ದೇಶದಿಂದ ಸುಗಮ ಮಾರ್ಗದ ಕಥನ ಮಾಡಬೇಕೆಂದು ಉದ್ಧವನು ಶ್ರೀಕೃಷ್ಣನಿಗೆ ವಿನಂತಿಸಿರುವನು. ಇದರಿಂದ ಕೃಪಾಮೂರ್ತಿಯು ಸಂತೋಷಪಟ್ಟನು ॥೧೯೦॥ ಸಂಸಾರಸಾಗರವನ್ನು ದಾಟಿ ಹೋಗುವ ಉಪಾಯದ ಬೀಜ, ಬ್ರಹ್ಮಪ್ರಾಪ್ತಿಯ ಗುಹ್ಯ ಮರ್ಮ ಯಾವ ಸುಲಭ ಉಪಾಯದಿಂದ ಸಹಜ ಪ್ರಾಪ್ತಿಯಾಗುವುದನ್ನು ಶ್ರೀಕೃಷ್ಣನು ಈಗ ಹೇಳುವನು ॥೧೯೧॥

ಅಬಳೇ ಉದ್ಧಾರಾವಯಾ ನಿಶ್ಚಿತೀ । ಉದ್ಧವೇ ಪ್ರಾರ್ಥಿಲಾ ಶ್ರೀಪತೀ । ತ್ಯಾಚೇನಿ ಧರ್ಮೇ ತ್ರಿಜಗತೀ । ಸುಗಮಸ್ಥಿತೀ ತರೇಲ ॥೧೯೨॥ ನಿಜಧಾಮಾ ಗೇಲಿಯಾ ಶ್ರೀಕೃಷ್ಣನಾಥ । ದೀನೇ ತರಾವಯಾ ಸಮಸ್ತ । ಉದ್ಧವೇ ಸೇತು ಬಾಂಧಿಲಾ ಏಥ । ಬ್ರಹ್ಮಪ್ರಾಪ್ತ್ಯರ್ಥ ಪ್ರಶ್ನೋಕ್ತೀ ॥೧೯೩॥ ಉದ್ಧವೇ ಪ್ರಾರ್ಥೂನಿ ಶ್ರೀಕೃಷ್ಣ । ಉದ್ಧಾರಾವಯಾ ದೀನ ಜನ । ಬ್ರಹ್ಮಪ್ರಾಪ್ತೀಚೇ ಪವ್ಡೇ ಜಾಣ । ಸುಗಮ ಸಂಪೂರ್ಣ ಘಾತಲೀ ॥೧೯೪॥ ಏವಂ ಉದ್ಧವಪ್ರಶ್ನಸ್ಥಿತೀ । ಶುಕ ಸುಖಾವೇ ವಚನೋಕ್ತೀ । ತೇಚಿ ಪರೀಕ್ಷಿತೀಪ್ರತೀ । ಸುನಿಶ್ಚಿತೀ ಸಾಂಗತ ॥೧೯೫॥

ಶ್ರೀಶುಕ ಉವಾಚ :-

ಇತ್ಯುದ್ಧವೇನಾತ್ಯನುರಕ್ತಚೇತಸಾ ಪೃಷ್ಟೋ ಜಗತ್ಕ್ರೀಡನಕಃ ಸ್ವಶಕ್ತಿಭಿಃ ।
ಗೃಹೀತಶಕ್ತಿತ್ರಯ ಈಶ್ವರೇಶ್ವರೋ ಜಗಾದ ಸಪ್ರೇಮ ಮನೋಹರಸ್ಮಿತಃ ॥೭॥

ಅರ್ಥ:- ಶ್ರೀಶುಕದೇವನು ಹೇಳಿದನು ; ಹೇ ಪರೀಕ್ಷಿತನೇ, ಭಗವಾನ ಶ್ರೀಕೃಷ್ಣನು ಬ್ರಹ್ಮಾದಿಕ ಈಶ್ವರರ ಈಶ್ವರನು. ಅವರು ಸತ್ವ, ರಜ, ತಮ ಈ ಗುಣಗಳ ಮುಖಾಂತರ ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರ ರೂಪ ಧರಿಸಿ ಜಗತ್ತಿನ ಉತ್ಪತ್ತೀ, ಸ್ಥಿತೀ ಇತ್ಯಾದಿಗಳ ಆಟವನ್ನು ಆಡುತ್ತಾರೆ. ಉದ್ಧವನು ಅನುರಾಗಯುಕ್ತ ಅಂತಃಕರಣದಿಂದ ಆತನಿಗೆ ಈ ಪ್ರಶ್ನೆಯನ್ನು ಕೇಳಿದಾಗ ಮಂದಹಾಸ್ಯದಿಂದ ಬಹು ಪ್ರೇಮದಿಂದ ಆತನು ಹೇಳಲಾರಂಭಿಸಿದನು.

ಜೋ ಜ್ಞಾನಿಯಾಂಚಾ ಶಿರೋಮಣೀ । ಜೋ ಬ್ರಹ್ಮಚರ್ಯಾ ಮುಕುಟಮಣೀ । ಜೋ ಯೋಗಿಯಾಂಮಾಜೀ ಅಗ್ರಗಣೀ । ಜೋ ಸಿದ್ಧಾಸನೀ ವಂದಿಜೇ ॥೧೯೬॥ ಜೋ ಬ್ರಹ್ಮಜ್ಞಾನಾಚಾ ನಿಜನಿಧೀ । ಜೋ ಸ್ವಾನಂದಬೋಧಾಚಾ ಉದಧೀ । ಜೋ ಭೂತದಯೇಚಾ ಕ್ಷೀರಾಬ್ಧೀ । ತೋ ಶುಕ ಸ್ವಬೋಧೀ ಬೋಲತ ॥೧೯೭॥ ಪಾಂಡವಕುಳೀ ಉದಾರಕೀರ್ತೀ । ಕೌರವಕುಳೀ ತುಝೇನಿ ಭಕ್ತೀ । ಧರ್ಮಸ್ಥಾಪಕ ತ್ರಿಜಗತೀ । ಐಕ ಪರೀಕ್ಷಿತಿ ಸಭಾಗ್ಯಾ ॥೧೯೮॥ ಜಗ ಜೇ ಭಾಸೇ ವಿಚಿತ್ರಪಣೇ । ತೇ ಜಯಾಚೇ ಲೀಲಾಖೇಳಣೇ । ಖೇಳಣೇಹೀ ಸ್ವಯೇ ಹೋಣೇ । ಶೇಖೀ ಅಲಿಪ್ತಪಣೇ ಖೇಳವೀ ॥೧೯೯॥ ವಿಚಿತ್ರ ಭಾಸೇ ಜಗ ಜಾಣ । ಜ್ಯಾಚೇನಿ ಅಂಗೇ ಕ್ರೀಡೇ ಸಂಪೂರ್ಣ । ಜಗ ಜ್ಯಾಚೇ ಕ್ರೀಡಾಸ್ಥಾನ । ಜಗ ಜಗಪಣ ಜ್ಯಾಚೇನಿ ॥೨೦೦॥ ಐಸಾ ''ಜಗತ್ಕ್ರೀಡನಕ'' ಶ್ರೀಕೃಷ್ಣ । ಜೋ ಈಶ್ವರಾಚಾ ಈಶ್ವರ ಆಪಣ । ಮಾಯಾದಿ ತಿನ್ಹೀ ಗುಣ । ಜ್ಯಾಚೇನಿ ಪೂರ್ಣ ಪ್ರಕಾಶತೀ ॥೨೦೧॥ ಮಾಯಾಗುಣೇ ಗುಣಾವತಾರ । ಜೇ ಉತ್ಪತ್ತಿಸ್ಥಿತಿಕ್ಷಯಕರ । ಬ್ರಹ್ಮಾ ಆಣಿ ಹರಿ ಹರ । ತೇಹೀ ಆಜ್ಞಾಧರ ಜಯಾಚೇ ॥೨೦೨॥ ಐಶಿಯಾ ಶ್ರೀಕೃಷ್ಣಾಪ್ರತೀ । ಉದ್ಧವೇ ಸಪ್ರೇಮ ವಿನಂತೀ । ಕೇಲೀ ಅತಿವಿನೀತಸ್ಥಿತೀ । ತೇಣೇ ಶ್ರೀಪತಿ ತುಷ್ಟಲಾ ॥೨೦೩॥

ನಿಜವಾಗಿಯೂ ದೀನ ಜನರ ಉದ್ಧಾರವಾಗಬೇಕೆಂದು ಉದ್ಧವನು ಶ್ರೀಕೃಷ್ಣನಿಗೆ ಪ್ರಾರ್ಥನೆ ಮಾಡಿದನು. ಇದರ ಧರ್ಮದಿಂದ ತ್ರಿಭುವನವೂ ಕೂಡ ಸಹಜವಾಗಿ ಉದ್ಧಾರವಾಗುವುದು ॥೧೯೨॥ ಶ್ರೀಕೃಷ್ಣನಾಥನು ನಿಜಧಾಮಕ್ಕೆ ತೆರಳಿದ ನಂತರ ಸರ್ವ ಅಜ್ಞ ಜನರಿಗೆ ಉದ್ಧಾರವಾಗುವುದಕ್ಕಾಗಿ ಹಾಗೂ ಬ್ರಹ್ಮಪ್ರಾಪ್ತಿಯಾಗುವುದಕ್ಕಾಗಿ ಪ್ರಶ್ನೆಯ ನಿಮಿತ್ತದಿಂದ ಉದ್ಧವನು ಇದೊಂದು ಸೇತುವೆ ತಯಾರಿಸಿಬಿಟ್ಟಿರುವನು ॥೧೯೩॥ ಈ ಪ್ರಕಾರವಾಗಿ ದೀನ ಜನರ ಉದ್ಧಾರಕ್ಕಾಗಿ ಉದ್ಧವನು ಶ್ರೀಕೃಷ್ಣನಿಗೆ ಪ್ರಾರ್ಥನೆ ಮಾಡಿ ಬ್ರಹ್ಮಪ್ರಾಪ್ತಿಯ ಅರವಟ್ಟಿಗೆ ಕಟ್ಟಿಸಿದನು ॥೧೯೪॥ ಈ ಉದ್ಧವನ ಪ್ರಶ್ನೋಕ್ತಿಯಿಂದ ಶುಕಾಚಾರ್ಯರಿಗೆ ಪರಮ ಸಂತೋಷ ಉಂಟಾಯಿತು. ಇದೇ ನಿರೂಪಣೆಯನ್ನು ಪರೀಕ್ಷಿತಿಗೆ ಹೇಳುತ್ತಿರುವರು ॥೧೯೫॥

ಯಾವ ಜ್ಞಾನಿಗಳವರ ಶಿರೋಮಣಿ, ಯಾವ ಬ್ರಹ್ಮಚರ್ಯಾಗಳವರ ಮುಕುಟಮಣೀ, ಯಾವ ಯೋಗಿಗಳವರ ಅಗ್ರಗಣಿ, ಯಾವ ಸಿದ್ಧಪುರುಷರೂ ಕೂಡ ಇವರನ್ನು ವಂದಿಸುತ್ತಿರುವ ॥೧೯೬॥ ಯಾವ ಬ್ರಹ್ಮಜ್ಞಾನದ ನಿಧಿ, ಯಾವ ಸ್ವಾನಂದಬೋಧೆಯ ಸಾಗರ, ಯಾವ ಭೂತದಯೆಯ ಕ್ಷೀರಸಾಗರ, ಹೀಗಿರುವ ಯಾವ ಶುಕಾಚಾರ್ಯರು ಸ್ವಾನುಭವದಿಂದ ಹೇಳಲಾರಂಭಿಸಿದರು ॥೧೯೭॥ ಹೇ ಭಾಗ್ಯವಂತನಾದ ಪರೀಕ್ಷಿತಿಯೇ, ಪಾಂಡವರ ಕುಲದಲ್ಲಿ ಉದಾರಕೀರ್ತಿ ಪಡೆದ ನೀನು ಕೌರವಕುಲದಲ್ಲಿ ನಿನ್ನ ರೂಪದಿಂದ ಭಕ್ತಿಯು ಬೆಳಗುತ್ತಿದೆ. ನೀನು ತ್ರಿಭುವನದಲ್ಲಿ ಧರ್ಮಸಂಸ್ಥಾಪಕನಾಗಿರುವೆ. ಈಗ ನಾನು ಹೇಳುವುದನ್ನು ಕೇಳು ॥೧೯೮॥ ಯಾವ ಈ ಜಗತ್ತು ವಿಚಿತ್ರವಾಗಿ ತೋರುತ್ತದೆಯೋ, ಅದು ಯಾರ ಲೀಲೆಯ ಆಟವಾಗಿದೆಯೋ, ಯಾರು ಸ್ವತಃ ಆಟವಾಡುವರೋ, ಆತನು ಕೊನೆಯಲ್ಲಿ ಅಲಿಪ್ತತೆಯಿಂದ ಆಟವಾಡಿಸುವನು ॥೧೯೯॥ ವಿಚಿತ್ರವಾಗಿ ತೋರುತ್ತಿರುವ ಈ ಜಗತ್ತು ಆತನಿಂದಲೇ ಪರಿಪೂರ್ಣವಾಗಿ ಕ್ರೀಡಿಸುತ್ತಿರುವುದು. ಈ ಜಗತ್ತು ಆತನ ಕ್ರೀಡಾಸ್ಥಾನವಾಗಿದೆ. ಆತನಿಂದಲೇ ಈ ಜಗತ್ತಿಗೆ ಜಗತತ್ವವು ಪ್ರಾಪ್ತವಾಗಿರುತ್ತದೆ ॥೨೦೦॥ ಹೀಗೆ ಈ ಜಗದ್ರೂಪದಿಂದ ನಟಿಸಿ, ಅದರಲ್ಲಿ ಅನೇಕ ಪ್ರಕಾರದ ಕ್ರೀಡೆ ಮಾಡುವ ಯಾವ ಈ ಶ್ರೀಕೃಷ್ಣನು ಈಶ್ವರನ ಈಶ್ವರನಾಗಿರುವನು. ಈತನಿಂದಲೇ ಮಾಯಾದಿ ಮೂರೂ ಗುಣಗಳು ಪೂರ್ಣ ಪ್ರಕಾಶಿತವಾಗುವುವು ॥೨೦೧॥ ಮಾಯಾಗುಣಗಳ ಅವತಾರ ಯಾವ ಉತ್ಪತ್ತೀ, ಸ್ಥಿತೀ ಮತ್ತು ಸಂಹಾರ ಮಾಡುವವರಾದ ಬ್ರಹ್ಮಾ, ವಿಷ್ಣು ಮತ್ತು ಮಹೇಶ ಇವರೂ ಕೂಡ ಆತನ ಆಜ್ಞೆಯನ್ನು ಪರಿಪಾಲಿಸುವರು ॥೨೦೨॥ ಇಂತಹ ಶ್ರೀಕೃಷ್ಣನಿಗೆ ಉದ್ಧವನು ಅತ್ಯಂತ ಪ್ರೇಮದಿಂದ ಹಾಗೂ ವಿನಯಪೂರ್ವಕವಾಗಿ ವಿನಂತಿಸಿದನು. ಇದರಿಂದ ಶ್ರೀಕೃಷ್ಣನು ಸಂತುಷ್ಟನಾದನು ॥೨೦೩॥

ಬಹುತೀ ಪ್ರಾರ್ಥಿಲಾ ಶ್ರೀಕೃಷ್ಣ । ತೋ ಆಪುಲಾಲ್ಯಾ ಕಾರ್ಯಾರ್ಥ ಜಾಣ । ಉದ್ಧವೇ ಕೇಲಾ ವಿನೀತ ಪ್ರಶ್ನ । ಜಗದುದ್ಧರಣ ಉಪಕಾರೀ ।।೨೦೪।। ಉದ್ಧವಾಚಿಯಾ ಪ್ರಶ್ನೋಕ್ತೀ । ತೋಷೋನಿ ತುಷ್ಟಲಾ ಶ್ರೀಪತೀ । ಸುಗಮೋಪಾಯೇ ಬ್ರಹ್ಮಪ್ರಾಪ್ತೀ । ತೇ ಸಾಧನಸ್ಥಿತೀ ಸಾಂಗೇಲ ।।೨೦೫।। ಭಾಳೇಭೋಳೇ ಸಾತ್ತ್ವಿಕ ಜನ । ಸವೇಗ ಪಾವತೀ ಸಮಾಧಾನ । ತೋ ಉದ್ಧವಪ್ರಶ್ನೇ ಶ್ರೀಕೃಷ್ಣ । ಸೋಪೇ ಬ್ರಹ್ಮಜ್ಞಾನ ಸಾಂಗತ ।।೨೦೬।। ಜ್ಞಾನಮಾರ್ಗೀಚೇ ಕಾಪಡೀ । ಜೀವೇ ಸರ್ವಸ್ವೇ ಘಾಲೂನಿ ಉಡೀ । ಉದ್ಧವಪ್ರಶ್ನಾಚೇ ಆವಡೀ । ಬ್ರಹ್ಮ ಜೋಡೇ ಜೋಡೀ ಸುಗಮತ್ವೇ ।।೨೦೭।। ಲೇಊನಿಯಾ ಮೋಹಮಮತೇಚೀ ಬೇಡೀ । ಜೇ ಪಡಿಲೇ ಅಭಿಮಾನ ಬಾಂದವಡೀ । ತ್ಯಾಂಚೀಹೀ ಸುಟಕಾ ಧಡಪುಡೀ । ಉದ್ಧವೇ ಗಾಢೀ ಚಿಂತಿಲೀ ।।೨೦೮।। ಉದ್ಧವಾಚೇ ಭಾಗ್ಯ ಥೋರ । ಪ್ರಶ್ನ ಕೇಲಾ ಜಗದುಪಕಾರ । ತೇಣೇ ತುಷ್ಟಲಾ ಶಾರ್ಙ್ಗಧರ । ಅತಿಸಾದರ ಬೋಲತ ।।೨೦೯।। ದೀನೋದ್ಧಾರಾಚಾ ಪ್ರಶ್ನ । ಉದ್ಧವೇ ಕೇಲಾ ಅತಿಗಹನ । ತೇಣೇ ಸಂತೋಷೋನಿ ಶ್ರೀಕೃಷ್ಣ । ಹಾಸ್ಯವದನ ಬೋಲತ ।।೨೧೦।। ಕೃಷ್ಣವದನ ಅತಿಸುಂದರ । ತೇಹೀ ಹಾಸ್ಯಯುಕ್ತ ಮನೋಹರ । ಅತಿ ಉಲ್ಹಾಸೇ ಶಾರ್ಙ್ಗಧರ । ಗಿರಾ ಗಂಭೀರ ಬೋಲತ ।।೨೧೧।।

ಶ್ರೀಭಗವಾನುವಾಚ :-

ಹಂತ ತೇ ಕಥಯಿಷ್ಯಾಮಿ ಮಮ ಧರ್ಮಾನ್ ಸುಮಂಗಲಾನ್ ।
ಯಾನ್ ಶ್ರದ್ಧಯಾಚರನ್ಮರ್ತ್ಯೋ ಮೃತ್ಯುಂ ಜಯತಿ ದುರ್ಜಯಮ್ ।।೮।।

ಅರ್ಥ:- ಶ್ರೀಕೃಷ್ಣನು ನುಡಿದನು ;- ಹೇ ಪ್ರಿಯ ಉದ್ಧವಾ, ಈಗ ನಾನು ನಿನಗೆ ಯಾವ ಮಂಗಲಮಯ ಭಾಗವತ ಧರ್ಮದ ಉಪದೇಶ ಮಾಡುತ್ತಿದ್ದೇನೆ. ಯಾವುದರ ಆಚರಣೆಯನ್ನು ಶ್ರದ್ಧೆಯಿಂದ ಮಾಡಲು ಮನುಷ್ಯನು ಸಂಸಾರ ರೂಪ ಮೃತ್ಯುವಿಗೆ ಅನಾಯಾಸವಾಗಿ ಜಯಿಸಬಲ್ಲನು.

ಜೋ ಪ್ರಣವಾಂಚೇ ಸೋಲೀಂವ ಸಾರ । ಜೋ ಜ್ಞಾನಾಚೇ ನಿಜಜಿವ್ಹಾರ । ಜೋ ಚೈತನ್ಯಾಚಾ ಚಮತ್ಕಾರ । ಜೋ ಪರಾತ್ಪರ ಪರಾದಿಕಾ ।।೨೧೨।। ತೋ ಮೇಘಗಂಭೀರ ಗರ್ಜೋನೀ । ಸ್ವಾನಂದೇ ಬೋಲೇ ಶಾರ್ಙ್ಗಪಾಣೀ । ಮ್ಹಣೇ ಉದ್ಧವಾ ತುಝೀ ಧನ್ಯಧನ್ಯ ವಾಣೀ । ತುಝ್ಯಾ ಪ್ರಶ್ನೀ ಮೀ ನಿವಾಲೋ ।।೨೧೩।। ಬಾಳ್ಯಾಭೋಳ್ಯಾ ಬ್ರಹ್ಮಪ್ರಾಪ್ತೀ । ಪಾವಾವಯಾ ಸುಗಮಸ್ಥಿತೀ । ತೇ ಅರ್ಥೀ ದಾಟುಗೀ ಮಾಝೀ ಭಕ್ತೀ । ತಿಸೀ ಮೀ ಶ್ರೀಪತೀ ಸದಾ ವಶ್ಯ ।।೨೧೪।।

ಶ್ರೀಕೃಷ್ಣನಿಗೆ ಇಲ್ಲಿಯವರೆಗೆ ಅನೇಕ ಜನರು ಪ್ರಾರ್ಥನೆ ಮಾಡಿರುವರು, ಆದರೆ ಅದು ಕೇವಲ ತಮ್ಮ ಕಾರ್ಯಕ್ಕಾಗಿ ಇರುತ್ತಿತ್ತು. ಆದರೆ ಉದ್ಧವನು ಜಗತ್ತಿನ ಉದ್ಧಾರಕ್ಕಾಗಿ ನಮ್ರವಾಗಿ ಪ್ರಶ್ನೆಯನ್ನು ಕೇಳುತ್ತಿರುವನು ।।೨೦೪।। ಉದ್ಧವನ ಪ್ರಶ್ನೆಯನ್ನು ಕೇಳಿ ಶ್ರೀಕೃಷ್ಣನು ಪರಮ ಸಂತೋಷಪಟ್ಟನು. ಈಗ ಆತನು ಬ್ರಹ್ಮಪ್ರಾಪ್ತಿಯ ಸುಲಭ ಮಾರ್ಗ ಹೇಳುವನು ।।೨೦೫।। ಭಾಳೇಭೋಳೇ ಸಾತ್ವಿಕ ಜನರು ಬಹುಬೇಗ ಸಮಾಧಾನ ಪಡೆಯುವಂತೆ ಅಂತಹ ರೀತಿಯಲ್ಲಿ ಸಾದಾ ಸುಲಭ ಬ್ರಹ್ಮಜ್ಞಾನವನ್ನು ಉದ್ಧವನ ಪ್ರಶ್ನೆಗಾಗಿ ಶ್ರೀಕೃಷ್ಣನು ಹೇಳುತ್ತಿರುವನು ।।೨೦೬।। ಜ್ಞಾನಮಾರ್ಗದಲ್ಲಿ ದಾರಿ ನಡೆಯುತ್ತಿರುವ ಸಾಧಕರು ಜೀವಭಾವದಿಂದ ಇದರಲ್ಲಿ ಜಿಗಿಯಲು, ಅವರಿಗೂ ಕೂಡ ಉದ್ಧವನ ಪ್ರಶ್ನೆಯ ಪ್ರೀತಿಗಾಗಿ ಸಹಜವಾಗಿಯೇ ಬ್ರಹ್ಮಪ್ರಾಪ್ತಿ ಸಾಧ್ಯವಾಗುವುದು ।।೨೦೭।। ಯಾರು ಮೋಹ ಮಮತೆಯ ಬೇಡಿ ಕಾಲುಗಳಲ್ಲಿ ತೊಡಕಿಸಿಕೊಂಡು ಅಭಿಮಾನವೆಂಬ ಕಾರಾಗೃಹದಲ್ಲಿ ಬಂಧನೆಗೆ ಒಳಗಾಗಿರುವರೋ, ಅವರಿಗೂ ಕೂಡ ಬಿಡುಗಡೆ ಮಾಡುವ ಉದ್ದೇಶದಿಂದ ಉದ್ಧವನು ವಿಚಾರ ಮಾಡಿರುವನು।।೨೦೮।। ನಿಜವಾಗಿಯೂ ಉದ್ಧವನ ಭಾಗ್ಯವು ಬಹು ದೊಡ್ಡದಾಗಿರುವುದು. ಆತನು ಜಗತ್ತಿಗೆ ಉಪಕಾರ ಮಾಡುವುದಕ್ಕಾಗಿಯೇ ಪ್ರಶ್ನೆ ಮಾಡಿರುವನು. ಈ ಕಾರಣಕ್ಕಾಗಿ ಶ್ರೀಹರಿ ಸಂತೋಷಪಟ್ಟು ಅತ್ಯಂತ ಪ್ರೇಮಭಾವದಿಂದ ಹೇಳಲಾರಂಭಿಸಿದನು ।।೨೦೯।। ಉದ್ಧವನು ದೀನರ ಉದ್ಧಾರಕ್ಕಾಗಿ ಯಾವ ಅತಿಶಯ ಗಹನ ಪ್ರಶ್ನೆಯನ್ನು ಮಾಡಿರುವುದರಿಂದ ಶ್ರೀಕೃಷ್ಣನು, ಸಂತೋಷಪಟ್ಟು ಹಾಸ್ಯವದನದಿಂದ ಹೇಳಲಾರಂಭಿಸಿದನು ।।೨೧೦।। ಶ್ರೀಕೃಷ್ಣನ ವದನವು ಮೊದಲೇ ಅತ್ಯಂತ ಸುಂದರ, ಅದರಲ್ಲಿ ಆತನು ಹಾಸ್ಯಯುಕ್ತನಾಗುತ್ತಲೇ ಇನ್ನೂ ಅಧಿಕ ಸುಂದರನಾಗಿ ಕಾಣಹತ್ತಿದನು. ಹೀಗೆ ಯಾವ ಆ ಶಾರಂಗಧರನು ಅತಿಶಯ ಉತ್ಸಾಹದಿಂದ ಗಂಭೀರ ವಾಣಿಯಿಂದ ಹೇಳಲಾರಂಭಿಸಿದನು ।।೨೧೧।।

ಯಾವ ಪ್ರಣವದ ಶುದ್ಧ ಸಾರ, ಯಾವ ಜ್ಞಾನದ ನಿಜ ಜೀವಾಳ, ಯಾವ ಚೈತನ್ಯದ ಚಮತ್ಕಾರ, ಹಾಗೂ ಪರಾವಾಣಿಯ ಆಚೆಕಡೆ ಇರುವವನಾಗಿರುವ ।।೨೧೨।। ಆ ಯಾವ ಶ್ರೀಕೃಷ್ಣನು ಮೇಘದಂತೆ ಗಂಭೀರ ವಾಣಿಯಿಂದ ಗರ್ಜಿಸುತ್ತ ಹೇಳಾರಂಭಿಸಿದನು ; ಹೇ ಉದ್ಧವನೇ, ನಿನ್ನ ವಾಣಿಯು ಧನ್ಯಧನ್ಯವಾಗಿದೆ. ನಿನ್ನ ಪ್ರಶ್ನೆಯಿಂದ ನಾನು ಸಂತೋಷಗೊಂಡಿರುವೆನು ।।೨೧೩।। ಭೋಳ್ಯಾ ಭಾವಿಕರಿಗೆ ಸುಲಭ ರೀತಿಯಲ್ಲಿ ಬ್ರಹ್ಮಪ್ರಾಪ್ತಿಯಾಗಬೇಕಾದರೆ, ಅದಕ್ಕಾಗಿ ನನ್ನ ಭಕ್ತಿ ಮಾತ್ರ ಸಮರ್ಥವಾಗಿರುವುದು. ಶ್ರೀಕೃಷ್ಣನಾದ ನಾನು ಭಕ್ತಿಗೆ ಯಾವಾಗಲೂ ವಶನಾಗುವೆನು ।।೨೧೪।।

ಮಾರ್ಝೀ ಕರಿತಾ ಅನನ್ಯ ಭಜನ । ಮೀ ಸರ್ವಥಾ ಭಕ್ತಾಧೀನ । ತೇಥ ಜಾತೀ ಗೋತ ಜ್ಞಾತೇಪಣ । ಉಂಚ ನೀಚ ವರ್ಣ ಮೀ ನ ಮ್ಹಣೇ ॥೨೧೫॥ ಜೇಣೇ ಘಡೇ ಭಜನ ಪರಮ । ತೇ ಸಾಂಗೇನ ಭಾಗವತಧರ್ಮ । ಜೇಣೇ ನಿರಸೇ ಕರ್ಮಾಕರ್ಮ । ಮರಣಜನ್ಮಚ್ಛೇದಕ ॥೨೧೬॥ ಜೇ ಧರ್ಮ ಸ್ವಯೇ ಆಚರಿತಾ । ಸಮೂಳ ಉನ್ಮಳೀ ಭವವ್ಯಥಾ । ಜ್ಯಾ ಧರ್ಮಾಚ್ಯಾ ಸ್ವಭಾವತಾ । ಸುಖಸಂಪನ್ನತಾ ಸಾಧಕಾ ॥೨೧೭॥ ಜೇ ಸ್ವಯೇ ಧರ್ಮಸ್ತವಿತಾ । ನಿರಸೀ ಅಸತ್ಯಾದಿ ದೋಷಕಥಾ । ಜೇ ಧರ್ಮ ಸಾದರೇ ಐಕತಾ । ವಿಷಯಾವಸ್ಥಾ ನಿರ್ದಳೀ ॥೨೧೮॥ ಮಾರ್ಝೀ ಧರ್ಮ ಅತಿಸುಮಂಗಳ । ದೋಷದಾಹಕ ಕಲಿಮಳ । ಮಂಗಳಾಂಚೇಹೀ ಪರಮ ಮಂಗಳ । ಭಜನ ಕೇವಳ ಪೈ ಮಾರ್ಝೀ ॥೨೧೯॥ ಶ್ರದ್ಧೇನೇ ಆಚರತಾ ಮಾರ್ಝೀ ಧರ್ಮ । ಮಾರ್ಝ್ಯಾ ನಿಜರೂಪೀ ಉಪಜೇ ಪ್ರೇಮ । ತೇಣೇ ಹಾರಪೇ ಭವಭ್ರಮ । ಮರಣಜನ್ಮ ಅಸೇನಾ ॥೨೨೦॥ ಜೋ ಮೃತ್ಯು ಬ್ರಹ್ಮಯಾಚಾ ಗ್ರಾಸ ಕರೀ । ಹರಿಹರಾಂತೇ ಮೃತ್ಯು ಮಾರೀ । ಮೃತ್ಯು ದುರ್ಜಯ ಸಂಸಾರೀ । ಸುರಾಸುರೀ ಕಾಂಪಿಜೇ ॥೨೨೧॥ ತ್ಯಾ ಮೃತ್ಯೂಚೇ ಖಾಣೋನಿ ಖಿತ । ಪಾಡೂನಿ ಕಳಿಕಾಳಾಚೇ ದಾಂತ । ಅದ್ವಯಭಜನೇ ಮಾರ್ಝೀ ಭಕ್ತ । ಸುಖೇ ನಾಂದತ ಸಂಸಾರೀ ॥೨೨೨॥ ಜೇಣೇ ನಿವಾರೇ ದುರ್ಜಯ ಮರಣ । ಐಸೇ ಭಜನ ಮ್ಹಣಸೀ ಕೋಣ । ಐಕ ತ್ಯಾಂಚೇಹೀ ಲಕ್ಷಣ । ತುಜ ಮೀ ಸಂಪೂರ್ಣ ಸಾಂಗೇನ ॥೨೨೩॥ ಉದ್ಧವಾ ತೂ ಮಾರ್ಝಾ ನಿಜಸಖಾ । ಯಾಲಾಗೀ ನಿಜಭಜನ ಆವಾಂಕಾ । ಆರಂಭೂನಿ ಪೂರ್ವಪೀಠಿಕಾ । ಸಂಕ್ಷೇಪೇ ದೇಖಾ ಸಾಂಗೇನ ॥೨೨೪॥ ಕೋಟಿ ಶಸ್ತ್ರೇ ರುಪಲ್ಯಾ ಪಾಹೇ । ತರೀ ಶೂರ ವಾಂಚಲಾ ರಾಹೇ । ತೋಚಿ ವರ್ಮೀಚೇನಿ ಏಕೇ ಘಾಯೇ । ಮರಣ ಲಾಹೇ ತತ್ಕಾಳ ॥೨೨೫॥ ತೇವೀ ಕರಿತಾ ನಾನಾಸಾಧನ । ಅನಿವಾರ್ಯ ಜನ್ಮಮರಣ । ತ್ಯಾಸೀ ಮಾರ್ಝೀ ಹೇ ಸಂಕ್ಷೇಪ ಭಜನ । ಸಮೂಳ ಜಾಣ ನಿರ್ದಳೀ ॥೨೨೬॥ ಕೃಷ್ಣ ಘನಃಶ್ಯಾಮ ಮಹಾಘನ । ಉದ್ಧವಚಾತಕಾಲಾಗೀ ಜಾಣ । ವರ್ಷಲಾ ಸ್ವಾನಂದಜೀವನ । ತೇಣೇ ತ್ರಿಭುವನ ಸುಖೀ ಹೋಯೇ ॥೨೨೭॥ ಲೋಟಲಿಯಾ ವರ್ಷಾಕಾಳ । ಶಾರದೀಚೇ ನಿರ್ಮಳ ಜಳ । ತೇವೀ ಸುಖಾಚೇ ಸುಖಕಲ್ಲೋಳ । ಭಜನೇ ಪ್ರಬಳ ಏಕುಣತಿಸಾವಾ ॥೨೨೮॥

ಅನನ್ಯ ಭಾವದಿಂದ ನನ್ನನ್ನು ಭಜಿಸಲು ನಾನು ಪರಿಪೂರ್ಣವಾಗಿ ಭಕ್ತನ ಆಧೀನನಾಗುವೆನು. ಇದಕ್ಕಾಗಿ ಕುಲ,ಗೋತ್ರ, ಬುದ್ಧಿವಂತಿಕೆ, ಉಚ್ಚ, ನೀಚ ವರ್ಣ ಇವುಗಳ ಯಾವ ವಿಚಾರವನ್ನೂ ಸಹ ನಾನು ಮಾಡುವುದಿಲ್ಲ ॥೨೧೫॥ ಯಾವುದರಿಂದ ಉತ್ತಮ ಭಜನೆ ಸಾಧಿಸಲು ಸಾಧ್ಯವಾಗುವಂತಹ ಭಾಗವತ ಧರ್ಮವನ್ನು ನಾನೀಗ ನಿನಗೆ ಹೇಳುವೆನು. ಈ ಧರ್ಮದ ಆಚರಣೆ ಮಾಡಲು ಕರ್ಮಾಕರ್ಮಗಳು ಎಲ್ಲವೂ ಇಲ್ಲದಾಗುವುವು. ಜನ್ಮಮರಣವೂ ಕೂಡ ನಾಶವಾಗಿ ಬಿಡುವುದು ॥೨೧೬॥ ಯಾವ ಧರ್ಮವನ್ನು ಆಚರಿಸುವುದರಿಂದ ಭವವ್ಯಥೆಯು ಸಮೂಲವಾಗಿ ನಾಶವಾಗುವುದು. ಹಾಗೂ ಆ ಧರ್ಮದ ಆಧಾರದಿಂದ ಸಾಧಕರು ಸ್ವಾಭಾವಿಕವಾಗಿಯೇ ಸುಖಸಂಪನ್ನರಾಗುವರು ॥೨೧೭॥ ಯಾವ ಧರ್ಮದ ಸ್ತುತಿ ಮಾಡುವುದರಿಂದ ಅಸತ್ಯಾದಿ ದೋಷಗಳು ಇಲ್ಲದಾಗುವುವು. ಈ ಯಾವ ಧರ್ಮವನ್ನು ಪ್ರೀತಿಯಿಂದ ಶ್ರವಣ ಮಾಡಲು ವಿಷಯಗಳ ಆಸಕ್ತಿಯು ನಾಶಹೊಂದುವುದು ॥೨೧೮॥ ಈ ನನ್ನ ಧರ್ಮವು ಪರಮ ಪವಿತ್ರವಾಗಿರುವುದು. ಕಲಿಯುಗದಲ್ಲಿನ ಪಾಪಗಳನ್ನು ಹಾಗೂ ದೋಷಗಳನ್ನು ಇಲ್ಲದಾಗಿ ಮಾಡುವುದು. ನನ್ನ ಪ್ರೇಮಮಯ ಭಜನೆಯು ಮಂಗಲದಲ್ಲಿಯೇ ಮಂಗಲವಾಗಿರುವುದು ॥೨೧೯॥ ನನ್ನ ಈ ಧರ್ಮವನ್ನು ಪರಮ ಶ್ರದ್ಧೆಯಿಂದ ಆಚರಿಸಿದರೆ, ನನ್ನ ಸ್ವರೂಪದಲ್ಲಿ ಪ್ರೇಮ ನಿರ್ಮಾಣವಾಗುವುದು. ಹಾಗೂ ಸರ್ವ ಪ್ರಕಾರದ ಭವಭ್ರಮೆಯು ನಿವಾರಣೆಯಾಗುವುದು. ಜನ್ಮಮರಣದ ಚಕ್ರವು ನಿಂತುಬಿಡುವುದು ॥೨೨೦॥ ಯಾವ ಮೃತ್ಯು ಎಂಬುವುದು ಬ್ರಹ್ಮದೇವನಿಗೂ ಕೂಡ ನುಂಗಿಬಿಡುವುದು. ಹರಿಹರರಿಗೂ ಮರಣ ತರುವುದು. ಹೀಗಿರುವ ಈ ಮೃತ್ಯು ಸಂಸಾರದಲ್ಲಿ ಅತ್ಯಂತ ದುರ್ಜಯವಾಗಿರುವುದು. ಈ ಮೃತ್ಯುವಿಗೆ ದೇವದಾನವರೂ ಕೂಡ ಗಡಗಡನೇ ನಡುಗುವರು ॥೨೨೧॥ ಇಂತಹ ಮೃತ್ಯುವಿನ ಭಯವನ್ನು ಅಗೆದೊಗೆದು, ಕಲಿಕಾಲನ ಹಲ್ಲು ಮುರಿದು ನನ್ನ ಭಕ್ತರು ಅದ್ವೈತ ಭಜನೆ ಮಾಡುತ್ತ ಸಂಸಾರದಲ್ಲಿ ಸುಖದಿಂದ ವರ್ತಿಸುತ್ತಿರುವರು ॥೨೨೨॥ ಯಾವುದರಿಂದ ದುರ್ಜಯ ಮರಣವೂ ಕೂಡ ಇಲ್ಲದಾಗುವುದೋ, ಅಂತಹ ನಿನ್ನ ಭಜನೆ ಯಾವುದು ಎಂದು ನೀನು ಕೇಳಬಹುದು, ಅದಕ್ಕಾಗಿ ಅದರ ಲಕ್ಷಣವನ್ನು ಸಂಪೂರ್ಣವಾಗಿ ಹೇಳುವೆನು, ಕೇಳು ॥೨೨೩॥ ಹೇ ಉದ್ಧವನೇ, ನೀನು ನನ್ನ ಪ್ರಿಯ ಸಖನಾಗಿರುವೆ, ಆದ್ದರಿಂದ ನನ್ನ ಭಜನೆಯ ಪ್ರಕಾರವನ್ನು ಪೂರ್ವ ಪೀಠಿಕೆ ಅನುಸರಿಸಿ ನಿನಗೆ ಹೇಳುವೆನು ಅದನ್ನು ಕೇಳು ॥೨೨೪॥ ಕೋಟ್ಯಾವಧಿ ಶಸ್ತ್ರಗಳ ಹೊಡೆತಗಳು ಶರೀರಕ್ಕೆ ಉಂಟಾದರೂ ಕೂಡ ಶೂರನು ಅವುಗಳಿಂದ ಬದುಕಬಲ್ಲನು. ಆದರೆ ಅದೇ ಹೊಡೆತ ಮರ್ಮಸ್ಥಾನಕ್ಕೆ ಬೀಳಲು ತತ್ಕಾಲದಲ್ಲಿ ಮರಣ ಉಂಟಾಗುವುದು ॥೨೨೫॥ ಅದರಂತೆ ನಾನಾವಿಧ ಸಾಧನೆಗಳನ್ನು ಮಾಡಿದರೂ ಕೂಡ ಜನ್ಮಮರಣವು ತಪ್ಪುವುದೇ ಇಲ್ಲ. ಆದರೆ ನನ್ನ ಭಜನೆಯನ್ನು ಪ್ರೇಮದಿಂದ ಸ್ವಲ್ಪ ಮಾಡಿದರೂ ಕೂಡ ಮೃತ್ಯುವಿನ ಸಮೂಲ ನಾಶವಾಗುವುದು ॥೨೨೬॥ ಘನ ಶ್ಯಾಮ ಶ್ರೀಕೃಷ್ಣರೂಪ ಮಹಾಮೇಘವು ಉದ್ಧವರೂಪ ಚಾತಕಪಕ್ಷಿಗಾಗಿ ಸ್ವಾನಂದ ಜಲದ ಮಳೆಗರೆಯಿತು. ಇದರಿಂದ ತ್ರಿಭುವನವು ಸುಖಿಯಾಯಿತು ॥೨೨೭॥ ಮಳೆಗಾಲವು ಮುಗಿಯಿತೆಂದರೆ ಶರದ ಋತುವಿನ ಜಲವು ಸುಂದರ, ಮನೋಹರವಾಗಿ ಕಾಣುವುದು. ಅದರಂತೆ ಈ ಇಪ್ಪತ್ತೊಂಭತ್ತನೆಯ ಅಧ್ಯಾಯವು ಭಜನೆಯಿಂದ ಸಮರ್ಥವಾದ್ದರಿಂದ ಅದರಲ್ಲಿ ಆನಂದದ ತೆರೆಗಳು ನಿರ್ಮಾಣವಾಗುವುವು ॥೨೨೮॥

ಏಕಾದಶಾಚಿಯಾ ಅಂತೀ । ಸುಗಮತ್ವೇ ಬ್ರಹ್ಮಪ್ರಾಪ್ತೀ । ತದರ್ಥೀ ಉತ್ತಮೋತ್ತಮ ಭಕ್ತಿ । ಸ್ವಮುಖೇ ಶ್ರೀಪತೀ ಸಾಂಗತ ।।೩೨೯।।

ಕುರ್ಯಾತ್ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ । ಮರ್ಯ್ಯಪಿ ತಮನಶ್ಚಿತ್ತೋ ಮದ್ಧರ್ಮಾತ್ಮಮನೋರತಿಃ ।೯।।

ಅರ್ಥ:- ಹೇ ಉದ್ಧವಾ, ನನ್ನ ಭಕ್ತನು ಸರ್ವ ಕರ್ಮಗಳನ್ನು ನನಗಾಗಿಯೇ ಮಾಡುತ್ತಿರಬೇಕು. ಆ ಕರ್ಮಗಳನ್ನು ಮಾಡುತ್ತಿರುವಾಗ ನನ್ನ ಸ್ಮರಣೆಯನ್ನು ಮಾಡುವ ಅಭ್ಯಾಸವಿಡಬೇಕು. ಕೆಲವು ದಿನಗಳ ನಂತರ ಮನಸ್ಸು ಹಾಗೂ ಚಿತ್ತ ನನ್ನಲ್ಲಿಯೇ ಸಮರ್ಪಿತವಾಗಿ ಆತನ ಮನಸ್ಸು ಮತ್ತು ಆತ್ಮ ನನ್ನಲ್ಲಿ ಸ್ಥಿರಗೊಳ್ಳುವುದು.

ದೇಶಾಚಾರೇ ಕುಲಾಚಾರೇ ಪ್ರಾಪ್ತ । ವೃದ್ಧಾಚಾರಾದಿ ಜೇ ಏಥ । ಜೇ ಕಾ ವೇದೋಕ್ತ ನಿತ್ಯನೈಮಿತ್ಯ । ''ಕರ್ಮೇ'' ಸಮಸ್ತ ಯಾ ನಾಂವ ।।೩೩೦।। ಮಾಝೇನಿ ಉದ್ದೇಶೇ ಕರ್ಮ ಜೇ ಏಥ । ಯಾ ನಾಂವ ''ಸಾಧಾರಣಮದರ್ಥ''। ಕರ್ಮಾ ಸಬಾಹ್ಯ ಜೇ ಮಜ ದೇಖತ । ''ಮುಖ್ಯತ್ವೇ ಮದರ್ಥ'' ಆಯಾಸ ನ ಕರಿತಾ ।।೩೩೧।। ಸಕಳ ಕರ್ಮ ಮಾಝೇನಿ ಪ್ರಕಾಶೇ । ಕರ್ಮಕ್ರಿಯಾ ಮಾಝೇನಿ ಭಾಸೇ । ಐಸೇ ಸಮೂಳ ಕರ್ಮ ಜೇಥ ದಿಸೇ । ತೇ ''ಅನಾಯಾಸೇ ಮದರ್ಥ'' ।।೩೩೨।। ಕರ್ಮಾಆದಿ ಮೀ ಕರ್ಮಕರ್ತಾ । ಕರ್ಮೀ ಕರ್ಮಸಿದ್ಧೀಚಾ ಮೀ ದಾತಾ । ಕರ್ಮೀ ಕರ್ಮಾಚಾ ಮೀ ಫಳಭೋಕ್ತಾ । ಯಾ ನಾಂವ ''ಕೃಷ್ಣಾರ್ಪಣತಾ'' ಕರ್ಮಾಚೀ ।।೩೩೩।। ಸಹಸಾ ಐಸೇ ನವ್ಹೇ ಮನ । ತೈ ಹೇ ಶನೈಃಶನೈಃ ಅನುಸಂಧಾನ । ಅಖಂಡ ಕರಿತಾ ಆಪಣ । ಸ್ವರೂಪೀ ಪ್ರವೀಣ ಮನ ಹೋಯ ।।೩೩೪।। ಮನಾಸೀ ನಾವಡೇ ಅನುಸಂಧಾನ । ತೈ ಕರಾವೇ ಮಾಝೇ ಸ್ಮರಣ । ಮಾಝೇನಿ ಸ್ಮರಣೇ ಮನ ಜಾಣ । ಧರೀ ಅನುಸಂಧಾನ ಮದ್ಭಜನೀ ।।೩೩೫।। ಭಜನ ಅಭ್ಯಾಸಪರವಡೀ । ಮನಾಸೀ ಲಾಗೇ ನಿಜಾತ್ಮಗೋಡೀ । ತೇಥೇ ಬುದ್ಧಿ ನಿಶ್ಚಯೇಸೀ ದೇ ಬುಡೀ । ದೇಹಅಹಂತಾ ಸೋಡೀ ಅಭಿಮಾನ ।।೩೩೬।। ಮಾಝ್ಯಾ ಸ್ವರೂಪಾವೇಗಳೇ ಕಾಂಹೀ । ಮನಾಸೀ ನಿಘಾವಯಾ ವಾಡೀ ನಾಹೀ । ಐಸೇ ಮನ ಜಡೇ ಮಾಝ್ಯಾ ಠಾಯೀ । ''ಮದರ್ಪಣ'' ಪಾಹೀ ಯಾ ನಾಂವ ।।೩೩೭।। ಐಸೇ ಮದ್ರೂಪೀ ನಿಮಗ್ನ ಮನ । ತರೀ ಆವಡೇ ಮಾಝೇ ಭಜನ । ಮಾಝಿಯಾ ಭಕ್ತೀಸ್ತವ ಜಾಣ । ಪರಮ ಪಾವನ ಮದ್ಭಕ್ತ ।।೩೩೮।। ಮ್ಹಣಸೀ ವಿಷಯನಿಷ್ಠ ಮನ । ಕದಾ ನ ಧರೀ ಅನುಸಂಧಾನ । ತೇಚೀ ಅರ್ಥೀಚಾ ಉಪಾಯ ಪೂರ್ಣ । ಸ್ವಯೇ ಶ್ರೀಕೃಷ್ಣ ಸಾಂಗತ।೩೩೯।।

ದೇಶಾನ್ಪುಣ್ಯಾನ್ ಸಂಶ್ರಯೇತ ಮದ್‌ಭಕ್ತೈಃ ಸಾಧುಭಿಃ ಶ್ರಿತಾನ್ । ದೇವಸುರ ಮನುಷ್ಯೇಷು ಮದ್‌ಭಕ್ತಾಚರಿತಾನಿ ಚ ।।೧೦।।

ಅರ್ಥ:- ಪವಿತ್ರ ಸ್ಥಾನದಲ್ಲಿ ನಿವಾಸ ಮಾಡಿರುವ ಸಾಧು ಜನರಲ್ಲಿ ನನ್ನ ಭಕ್ತನು ಅಲ್ಲಿರಬೇಕು. ದೇವ, ಅಸುರ ಅಥವಾ ಮನುಷ್ಯ ಇವರಲ್ಲಿ ಯಾರು ಅನನ್ಯ ಭಕ್ತರಾಗಿರುವರೋ, ಅವರ ಆಚರಣೆಗಳ ಅನುಕರಣೆ ಮಾಡಬೇಕು.

ಹನ್ನೊಂದನೆಯ ಸ್ಕಂಧದ ಕೊನೆಯ ಭಾಗದಲ್ಲಿ ಸುಲಭ ರೀತಿಯಿಂದ ಬ್ರಹ್ಮಪ್ರಾಪ್ತಿಯಾಗಬೇಕೆಂದು ಶ್ರೀಕೃಷ್ಣನು ಸ್ವಮುಖದಿಂದ ಉತ್ತಮೋತ್ತಮ ಮಂಗಲಮಯ ಭಕ್ತಿಯ ವರ್ಣನೆ ಮಾಡುತ್ತಿರುವನು ।೩೨೯।।

ದೇಶಾಚಾರ, ಕುಲಾಚಾರ ಅಥವಾ ವೃದ್ಧಾಚಾರ ಇತ್ಯಾದಿಕಗಳಿಗೆ ಅನುಸರಿಸಿ ಪ್ರಾಪ್ತವಾಗಿರುವ ವೇದೋಕ್ತ ನಿತ್ಯನೈಮಿತ್ತಿಕಾದಿ ಯಾವ ಕರ್ತವ್ಯಗಳಿಗೆ ಕರ್ಮವೆಂದು ಹೇಳುವರು ।೩೩೦।। ನನ್ನ ಉದ್ದೇಶಕ್ಕಾಗಿ ಮಾಡಲ್ಪಡುವ ಕರ್ಮಗಳಿಗೆ ''ಸಾಧಾರಣ-ಮದರ್ಪಣ'' ಎಂದು ಹೇಳುವರು. ಕರ್ಮದ ಒಳಹೊರಗೆ ನಾನೇ ತುಂಬಿರುವೆನು ಎಂದು ತಿಳಿದುಕೊಂಡು ಮಾಡುವ ಕರ್ಮಗಳಿಗೆ ''ಮುಖ್ಯ-ಮದರ್ಪಣ'' ಎಂದು ಹೇಳುವರು. ಯಾವ ಆಯಾಸವಿಲ್ಲದೇ ಈ ಸ್ಥಿತಿಯುಂಟಾಗುವುದು ।೩೩೧।। ಸರ್ವಕರ್ಮಗಳು ನನ್ನಿಂದಲೇ ಪ್ರಕಾಶಿತವಾಗುತ್ತಿರುವುವು. ಕರ್ಮಕ್ರಿಯೆಗಳೂ ಕೂಡ ನನ್ನಿಂದಲೇ ಭಾಸವಾಗುವುವು. ಇಂತಹ ದೃಷ್ಟಿಯಿಂದ ಎಲ್ಲ ಕರ್ಮಗಳನ್ನು ನೋಡುವಿಕೆಗೆ ಅನಾಯಾಸವಾಗಿ ಆಗುವ ''ಮದರ್ಪಣ'' ಇದಾಗಿರುವುದು ।೩೩೨।। ಕರ್ಮದ ಆದಿ ನಾನಿರುವೆನು, ಕರ್ಮಕರ್ತನು ನಾನಾಗಿರುವೆನು. ಕರ್ಮದಲ್ಲಿ ಕರ್ಮಸಿದ್ಧಾಂತದ ದಾತಾ ನಾನಿರುವೆನು. ಕರ್ಮದಲ್ಲಿನ ಕರ್ಮಭೋಕ್ತಾ ನಾನೇ ಆಗಿರುವೆನು. ಹೀಗೆ ತಿಳಿದುಕೊಂಡ ಕರ್ಮದ ನಾಮವು ''ಕೃಷ್ಣಾರ್ಪಣ''ವಾಗಿರುವುದು ।೩೩೩।। ಆದರೆ ಸಹಸಾ ಮನವು ಹೀಗಾಗುವುದಿಲ್ಲ. ಅದಕ್ಕಾಗಿ ಮೆಲ್ಲಮೆಲ್ಲನೆ ಅನುಸಂಧಾನ ಅಖಂಡವಾಗಿಡಬೇಕು. ಆಗ ಮನವು ಸ್ವರೂಪದಲ್ಲಿ ತಲ್ಲೀನವಾಗುವುದು ।೩೩೪।। ಮನಕ್ಕೆ ಹೀಗೆ ಅನುಸಂಧಾನವು ಹಿಡಿಸದಿದ್ದರೆ ನನ್ನ ಸ್ಮರಣೆ ಮಾಡಬೇಕು. ನನ್ನ ಸ್ಮರಣೆಯಿಂದ ಮನವು ಭಜನೆಯಲ್ಲಿ ಅನುಸಂಧಾನ ಹಿಡಿದುಕೊಳ್ಳುವುದು ।೩೩೫।। ಹೀಗೆ ಭಜನೆಯ ಅಭ್ಯಾಸ ಬೆಳೆಯಲು ಮನಕ್ಕೆ ಆತ್ಮಸ್ವರೂಪದ ಆನಂದವು ಸಹಜವಾಗಿ ನಿರ್ಮಾಣವಾಗುವುದು. ಅಲ್ಲಿ ನಿಶ್ಚಿತ ಬುದ್ಧಿಯು ಮುಳುಗುವುದು, ಅಭಿಮಾನವೂ ದೇಹದ ಮೇಲಿನ ಅಹಂಕಾರ ಬಿಟ್ಟುಕೊಡುವುದು ।೩೩೬।। ನನ್ನ ಸ್ವರೂಪ ಹೊರತಾಗಿ ಮನಕ್ಕೆ ಪ್ರವೇಶ ಮಾಡಲು ಅನ್ಯ ಸ್ಥಳವೇ ಇರುವುದಿಲ್ಲ. ಈ ರೀತಿಯಿಂದ ಮನವು ನನ್ನಲ್ಲಿ ಕೂಡಿಕೊಳ್ಳುವುದಕ್ಕೆ ಮದರ್ಪಣವೆನ್ನುವರು ।೩೩೭।। ಹೀಗೆ ಮನವು ನನ್ನ ಸ್ವರೂಪದಲ್ಲಿ ನಿಮಗ್ನವಾಗುತ್ತಲೇ ಅದಕ್ಕೆ ನನ್ನ ಭಜನೆಯಲ್ಲಿ ಪ್ರೇಮ ಉಂಟಾಗುವುದು. ನನ್ನ ಭಕ್ತಿಯಿಂದ ನನ್ನ ಭಕ್ತರು ಪರಮ ಪವಿತ್ರರಾಗುವರು ।೩೩೮।। ವಿಷಯನಿಷ್ಠ ಮನವು ಭಜನೆಯ ಅನುಸಂಧಾನ ಎಂದಿಗೂ ಹಿಡಿಯುವುದಿಲ್ಲವೆಂದು ನೀನು ಹೇಳಬಹುದು. ಅದಕ್ಕಾಗಿಯೇ ಉತ್ತಮ ಉಪಾಯವನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ।೩೩೯।।

ದೇಶ ಪಾವನ ಕುರುಕ್ಷೇತ್ರ । ಅಯೋಧ್ಯಾ ದೇಶ ಅತಿಪವಿತ್ರ । ಗಂಗಾಯಮುನೇಚೇ ಉಭಯತೀರ । ಪವಿತ್ರ ಅಪಾರ ಅರ್ಬುದಾಚಳ ।೭೪೦॥ ಕಲಾಗ್ರಾಮ ನಂದಿಗ್ರಾಮ । ಪಾವನ ದೇಶ ಬದರಿಕಾಶ್ರಮ । ಪಂಚವಟೀ ಶ್ರೀರಾಮಾಶ್ರಮ । ಪಾವನ ಪರಮ ಗೌತಮೀ ತಟ ।೭೪೧॥ ಜೇಥ ಲಾಗಲೇ ಶ್ರೀರಾಮಚರಣ । ಪಾವನ ದೇಶ ದಂಡಕಾರಣ್ಯ । ಮಥುರಾ ಗೋಕುಳ ವೃಂದಾವನ । ಪರಮ ಪಾವನ ಬ್ರಹ್ಮಗಿರೀ ।೭೪೨॥ ಪಾವನ ಪಾಂಡುರಂಗಕ್ಷಿತೀ । ಜೇ ಕಾ ದಕ್ಷಿಣಾದ್ವಾರಾವತೀ । ಜೇಥ ವಿರಾಜೇ ವಿಠ್ಠಲಮೂರ್ತೀ । ನಾಮೇ ಗರ್ಜತೀ ಪಂಢರೀ ।೭೪೩॥ ನಿರ್ದಳೀ ಸಕಳ ಪಾಪಾಂಸೀ । ಪಂಚಕ್ರೋಶೀ ಜೇ ಕಾ ಕಾಶೀ । ಪುಣ್ಯ ದೇಶ ವಾರಾಣಸೀ । ಸಾಧಕಾಂಸೀ ಅತಿಸಾಹ್ಯ ।೭೪೪॥ ಪುಣ್ಯ ಸರಿತಾ ಜೇಥ ವಾಹತೀ । ತೇಹೀ ಸಾಧಕಾ ಪಾವನ ಕ್ಷಿತೀ । ಗಂಗಾ ಯಮುನಾ ಸರಸ್ವತೀ । ಸಾಬರಮತೀ ವೈತರಣೀ ।೭೪೫॥ ಗಂಡಕೀ ನರ್ಮದಾ ತಪತೀ । ಗೋದಾವರೀ ಭೀಮರಥೀ । ಕೃಷ್ಣಾ ವೇಣ್ಯಾ ತುಂಗಾ ಗೋಮತೀ । ಪಾವನ ಕ್ಷಿತೀ ಶ್ರೀಶೈಲ ।೭೪೬॥ ಕಾವೇರೀಚೇ ಉಭಯ ತೀರ । ಪವಿತ್ರ ಕ್ಷಿತೀ ಚಿದಂಬರ । ಸರಿತಾ ಪ್ರತೀಚೀ ಪವಿತ್ರ । ಜಿಚೇನಿ ಜಳೇ ನರ ಪಾವನ ।೭೪೭॥ ಕೃತಮಾಲಾ ಪಯಸ್ವಿನೀ । ಅತಿಪವಿತ್ರ ತಾಮ್ರಪರ್ಣೀ । ಪವಿತ್ರ ಕ್ಷಿತೀ ನೈಮಿಷಾರಣ್ಯೀ । ಸಾಧಕಾಲಾಗೋನಿ ಸುಸೇವ್ಯ ।೭೪೮॥ ಅಸೋ ಹೇ ಪವಿತ್ರತೇಚೇ ಮಹಿಮಾನ । ಪಾವನಾ ಪಾವನ ಆಹೇ ಆನ । ಜೇಥೇ ವಸಲೇ ಭಕ್ತ ಸಜ್ಜನ । ತೋ ದೇಶ ಪಾವನ ಸರ್ವಾರ್ಥೀ ।೭೪೯॥ ಜೇ ಗಾಂವೀ ವಸತೀ ಮಾಝೇ ಭಕ್ತ । ತತ್ಸಂಗೇ ತೋ ಗಾಂವ ಪುನೀತ । ಜೇ ದೇಶೀ ವಸಲೇ ಸಾಧುಸಂತ । ತೋ ದೇಶ ಪುನೀತ ತ್ಯಾಂಚೇನಿ ।೭೫೦॥ ಭಕ್ತಾಂಚಾ ವಾರಾ ಲಾಗೇ ಜಿಕಡೇ । ಅತಿಪವಿತ್ರತಾ ಹೋಯ ತಿಕಡೇ । ತೇ ಸತ್ಸಂಗತೀ ಜ್ಯಾಂಸೀ ಘಡೇ । ಪವಿತ್ರತಾ ಜೋಡೇ ತಯಾಂಸೀ ।೭೫೧॥ ಚಂದನಾಚೇ ಸಂಗತೀವರೀ । ಸುವಾಸ ಹೋತೀ ಆರೀಬೋರೀ । ತ್ಯಾಂತೇ ದೇವದ್ವಿಜ ವಂದಿತೀ ಶಿರೀ । ತೇವೀ ಸಾಧಕಾ ಕರೀ ಸತ್ಸಂಗ ।೭೫೨॥ ಜೇ ಕೇವಳ ಕಾಷ್ಠ ಕೋರಡೇ । ಸಂಗೇ ಮೋಲ ಪಾವಲೇ ಗಾಢೇ । ತ್ಯಾಚೇ ಶ್ರೀಮಂತಾ ಚಾಡ ಪಡೇ । ಮಸ್ತಕೀ ಚಢೇ ಹರಿಹರಾಂಚ್ಯಾ ।೭೫೩॥ ಜೈ ನಿಜಭಾಗ್ಯಾಚೀ ಸಂಪತ್ತೀ । ತೈಚಿ ಜೋಡೇ ಸತ್ಸಂಗತೀ । ಸತ್ಸಂಗೇ ಪಾವನ ಹೋತೀ । ಜಾಣ ನಿಶ್ಚಿತೀ ಸಾಧಕಾ ।೭೫೪॥

ಕುರುಕ್ಷೇತ್ರವು ಪವಿತ್ರ ದೇಶವಾಗಿದೆ. ಅಯೋಧ್ಯಾ ಇದೂ ಕೂಡ ಅತಿಶಯ ಪಾವನವಾಗಿದೆ. ಗಂಗಾ ಯಮುನಾ ದಂಡೆಯ ಪ್ರದೇಶಗಳು ಹಾಗೂ ಅರ್ಬುದಾಚಳವೂ ಕೂಡ ಅತ್ಯಂತ ಪವಿತ್ರವಾಗಿವೆ ।೭೪೦॥ ಕಲಾಗ್ರಾಮ, ನಂದಿಗ್ರಾಮ, ಬದರಿಕಾಶ್ರಮ ಈ ದೇಶಗಳೂ ಸಹ ಪಾವನವಾಗಿವೆ. ಪಂಚವಟಿಯಲ್ಲಿನ ಶ್ರೀರಾಮಚಂದ್ರನ ಆಶ್ರಮ ಮತ್ತು ಗೋದಾವರೀ ನದಿ ದಂಡೆಯೂ ಕೂಡ ಅತಿಶಯ ಪವಿತ್ರವಾಗಿದೆ ।೭೪೧॥ ಶ್ರೀರಾಮಚಂದ್ರನ ಚರಣಕಮಲಗಳ ಸ್ಪರ್ಶವಾಗಿರುವ ದಂಡಕಾರಣ್ಯ ದೇಶವೂ ಕೂಡ ಪವಿತ್ರವಾಗಿದೆ. ಮಥುರಾ, ಗೋಕುಲ, ವೃಂದಾವನ ಹಾಗೂ ಬ್ರಹ್ಮಗಿರಿಯೂ ಕೂಡ ಪರಮ ಪಾವನವಾಗಿದೆ ।೭೪೨॥ ಪಂಢರಪೂರ ಕ್ಷೇತ್ರವು ಕೂಡ ಪಾವನವಾಗಿದೆ. ಇದಕ್ಕೆ ದಕ್ಷಿಣ ದ್ವಾರಕಾ ಎಂದು ಹೇಳುವರು. ಅಲ್ಲಿ ಶ್ರೀವಿಠ್ಠಲನ ಮೂರ್ತಿ ಇದೆ. ಪಂಢರೀ ಎಂಬ ಹೆಸರಿನಿಂದ ಗರ್ಜನೆ ಮಾಡುವರು ।೭೪೩॥ ಪಂಚಕ್ರೋಶಿಯಾಗಿರುವ ಯಾವ ಕಾಶೀ ಕ್ಷೇತ್ರವು ಸರ್ವಪಾಪಗಳ ಸಂಹಾರ ಮಾಡುತ್ತಿರುವುದು. ವಾರಾಣಸೀ ಇದು ಪುಣ್ಯ ಪ್ರದೇಶವಾಗಿ ಸಾಧಕರಿಗೆ ಸಹಾಯ ಮಾಡುತ್ತಿರುವುದು ।೭೪೪॥ ಎಲ್ಲಿ ಪವಿತ್ರ ನದಿಗಳು ಹರಿಯುತ್ತಿರುವುವೋ, ಆ ಪ್ರದೇಶಗಳೂ ಕೂಡ ಸಾಧಕರಿಗೆ ಪವಿತ್ರವಾಗಿರುವುವು. ಗಂಗಾ, ಯಮುನಾ, ಸರಸ್ವತೀ, ಸಾಬರಮತೀ, ವೈತರಣೀ ।೭೪೫॥ ಗಂಡಕೀ, ನರ್ಮದಾ, ತಾಪೀ, ಗೋದಾವರೀ, ಭೀಮಾ, ಕೃಷ್ಣಾ, ವೇಣ್ಯಾ, ತುಂಗಭದ್ರಾ, ಗೋಮತೀ ಇವು ಪವಿತ್ರ ನದಿಗಳಾಗಿರುವುವು. ಶ್ರೀಶೈಲಸ್ಥಾನವೂ ಕೂಡ ಪವಿತ್ರವಾಗಿರುವುದು ।೭೪೬॥ ಕಾವೇರಿ ನದಿಯ ಎರಡೂ ದಂಡೆಯ ಪ್ರದೇಶಗಳು ಮತ್ತು ಚಿದಂಬರ ಕ್ಷೇತ್ರವೂ ಕೂಡ ಪವಿತ್ರವಾಗಿರುವುದು. ಪ್ರತೀಚೀ ನದಿಯ ಪವಿತ್ರ ಜಲದಿಂದ ಜನರು ಪಾವನರಾಗುವರು ।೭೪೭॥ ಕೃತಮಾಲಾ, ತಪಸ್ವಿನೀ, ತಾಮ್ರಪರ್ಣೀ ಇವು ಅತ್ಯಂತ ಪವಿತ್ರವಾಗಿವೆ. ನೈಮಿಷ್ಯಾರಣ್ಯದಲ್ಲಿನ ಪವಿತ್ರ ದೇಶಗಳು ಇವು ಸರ್ವಸಾಧಕರಿಗೆ ಸೇವನೆ ಮಾಡಲು ಅತಿಶಯ ಯೋಗ್ಯವಾಗಿರುವುವು ।೭೪೮॥ ಈ ಪವಿತ್ರತೆಯ ಮಹಿಮೆ ಇರಲಿ. ಪಾವನಕ್ಕೆ ಪಾವನಗೊಳಿಸುವ ಬೇರೆ ಒಂದು ಸ್ಥಳವಿರುವುದು. ಎಲ್ಲಿ ಸಜ್ಜನ ಭಕ್ತರು ಇರುವರೋ, ಆ ದೇಶವು ಸರ್ವತೋಪರಿಯಾಗಿ ಪಾವನವಾಗಿರುವುದು ।೭೪೯॥ ಯಾವ ಊರಿನಲ್ಲಿ ನನ್ನ ಭಕ್ತರಿರುವರೋ, ಅವರ ಸಂಗತಿಯಿಂದ ಆ ಊರೂ ಕೂಡ ಪವಿತ್ರವಾಗಿಬಿಡುವುದು. ಯಾವ ದೇಶದಲ್ಲಿ ಸಾಧು ಸಂತರ ವಾಸ್ತವ್ಯವಾಗುವುದೋ, ಅವರ ಸಂಗತಿಯಿಂದ ಆ ದೇಶವೂ ಕೂಡ ಪುನೀತವಾಗುವುದು ।೭೫೦॥ ಭಕ್ತರ ಗಾಳಿಯು ಎಲ್ಲಿ ಬೀಸುತ್ತಿರುವುದೋ, ಆ ಭಾಗಗಳೆಲ್ಲವೂ ಕೂಡ ಅತ್ಯಂತ ಪವಿತ್ರವಾಗುವುವು. ಈ ಸತ್ಸಂಗತಿಯು ಯಾರಿಗೆ ಪ್ರಾಪ್ತವಾಗುವುದೋ, ಅವರೂ ಕೂಡ ಪವಿತ್ರರಾಗುವರು ।೭೫೧॥ ಚಂದನ ವೃಕ್ಷದ ಸಂಗತಿಯಿಂದ ಜಾಲೀ ಬಾರೀ ವೃಕ್ಷಗಳೂ ಕೂಡ ಸುವಾಸನೆ ಹೊಂದುವುವು. ಇವುಗಳನ್ನು ದೇವ, ಬ್ರಾಹ್ಮಣರು ಮಸ್ತಕದ ಮೇಲೆ ಧರಿಸುವರು. ಅದರಂತೆಯೇ ಸತ್ಸಂಗವು ಸಾಧಕರಿಗೆ ಸರ್ವವಂದ್ಯರನ್ನಾಗಿ ಮಾಡುವುದು ।೭೫೨॥ ಯಾವ ಕೇವಲ ಒಣಗಿದ ಕಟ್ಟಿಗೆಗೂ ಸಂಗತಿಯಿಂದ ಬಹು ಬೆಲೆ ಬರುವುದು. ಶ್ರೀಮಂತರಿಗೆ ಇದಕ್ಕಾಗಿ ಬೇಡಿಕೆಯುಂಟಾಗುವುದು. ಇಷ್ಟೇ ಅಲ್ಲ, ಹರಿಹರರ ಮಸ್ತಕದ ಮೇಲೆ ಏರುವುದು ।೭೫೩॥ ಎಂದು ನಮ್ಮ ಭಾಗ್ಯೋದಯವಾಗುವುದೋ, ಅಂದು ಮಾತ್ರ ಸತ್ಸಂಗತಿಯು ಸಾಧಿಸುವುದು. ಸತ್ಸಂಗತಿಯಿಂದ ಸಾಧಕನು ಪಾವನನಾಗುವನು ।೭೫೪॥

ಮಾಝ್ಯೀ ಸ್ವರೂಪೀ ಜ್ಯಾಂಚೇ ಚಿತ್ತ । ಅಖಂಡ ಜಡಲೇ ಭಜನಯುಕ್ತ । ತ್ಯಾಂಸೀಚ ಬೋಲಿಜೇ ''ಮದ್ಭಕ್ತ'' । ತೇಚಿ ಸಂತ ಸಜ್ಜನ ।೮೫೫।। ಮಾಝ್ಯೀ ಭಕ್ತಾಂಚೇ ಆಚರಿತ । ಸುರ ನರ ಅಸುರ ವಂದಿತ । ಸಾಧಕೀಂಹೀ ತೇಚಿ ಏಥ । ಸ್ವಯೇ ನಿಶ್ಚಿತ ಸಾಧಾವೇ ।೮೫೬।। ಶ್ರೇಷ್ಠ ವಿನಟಲೇ ಜೇ ಭಕ್ತೀಸೀ । ನಾರದ ಪ್ರಹ್ಲಾದ ಅಂಬರೀಷೀ । ತೇಚಿ ಭಕ್ತಿ ಅಹರ್ನಿಶೀ । ಸಾಧಕೀ ಸದ್ಭಾವೇಸೀ ಸಾಧಾವೀ ।೮೫೭।।

ಪೃಥಕ್ ಸತ್ರೇಣ ವಾ ಮಹ್ಯಂ ಪರ್ವಯಾತ್ರಾಮಹೋತ್ಸವಾನ್ । ಕಾರಯೇದ್ಗೀತನೃತ್ಯಾದ್ಯೈರ್ಮಹಾರಾಜವಿಭೂತಿಭಿಃ ।೧೧।।

ಅರ್ಥ:- ನನ್ನನ್ನು ಉದ್ದೇಶಿಸಿ ಸರ್ವರ ಜೊತೆ ಅಥವಾ ಒಬ್ಬನೇ ಗೀತ, ನೃತ್ಯ ಇತ್ಯಾದಿಗಳ ಹಾಗೂ ಮಹಾರಾಜರ ಐಶ್ವರ್ಯದಿಂದ ಏಕಾದಶೀ ಇತ್ಯಾದಿ ಪರ್ವಕಾಲಗಳನ್ನು, ಯಾತ್ರಾ ಪ್ರಸಂಗದಲ್ಲಿ ಮಹೋತ್ಸವವನ್ನು ನೆರವೇರಿಸಬೇಕು.

ವಾರ್ಷಿಕೀ ಯಾತ್ರಾ ಪರ್ವಪೂಜಾ । ಭಾವೇ ಅರ್ಪಾವೀ ಅಧೋಕ್ಷಜಾ । ಛತ್ರಚಾಮರಾದಿ ವೋಜಾ । ಗರುಡಧ್ವಜಾಂಕಿತ ಚಿನ್ಹೀ ।೮೫೮।। ಐಶಿಯಾ ಮಹಾರಾಜವಿಭೂತೀ । ದೇವಾಸೀ ಅರ್ಪಾವ್ಯಾ ಶ್ರದ್ಧಾಸ್ಥಿತೀ । ಭಜನಾಲಾಗೀ ಅಹೋರಾತೀ । ಉಲ್ಹಾಸ ಚಿತ್ತೀ ಅನಿವಾರ ।೮೫೯।। ಅಶ್ವಗಜಾದಿ ಆಹೋರಣ । ಶೇಷಶಯನ ಗುರುಡಾಸನ । ಮಹಾಮಹೋತ್ಸವ ನರಯಾನ । ರಥೋತ್ಸವ ಜಾಣ ಕರಾವಾ ।೮೬೦।। ಟಾಳ ಘೋಳ ನಿಶಾಣ ಭೇರೀ । ಶಂಖ ಮೃದಂಗ ಮಂಗಲ ತುರೀ । ನಾದ ನ ಸಮಾಯ ಅಂಬರೀ । ಜಯಜಯಕಾರೀ ಗರ್ಜಾವೇ ।೮೬೧।। ತೇಥ ಗೀತನೃತ್ಯ ಪವಾಡೇ । ಕೀರ್ತನ ಕರಾವೇ ವಾಡೇಕೋಡೇ । ಹುಂಬರೀ ಆಖರೀ ಬಾಗಡೇ । ದೇವಾಪುಢೇ ಕರಾವೇ ।೮೬೨।। ತೋಂಡ ಕರೂನಿ ವಾಂಕುಡೇ । ವಾಂಕುಲೀ ದಾವಾವೀ ದೇವಾಕಡೇ । ವರ್ಣಾವೇ ದೇವಾಚೇ ಪವಾಡೇ । ರಂಗಾಪುಢೇ ಗರ್ಜತ ।೮೬೩।। ಗೋಪಾಳಕಾಲ್ಯಾಚಾ ವಿನ್ಯಾಸ । ರಾಸಕ್ರೀಡೇಚಾ ಉಲ್ಹಾಸ । ಗೋಪಾಳವೇಷಾಚಾ ವಿಲಾಸ । ಮನೋಹರ ವೇಷ ದಾವಾವಾ ।೮೬೪।। ದಾವಾವೀ ಮಾಲಖಡ್ಯಾಂಚೀ ಪರೀ । ಝೋಂಬೀ ಘ್ಯಾವೀ ನಾನಾಕುಸರೀ । ದಂಡೀ ಮುಡಪೀ ಉರೀ ಶಿರೀ । ಪರಸ್ಪರೀ ಹಾಣತ ।೮೬೫।। ಮಲ್ಲವಿದ್ಯೇಚ್ಯಾ ಆಸುಡೀ । ಥಡಕ ಹಾಣೋನಿಯಾ ಗಾಢೀ । ಮಾಳಮರ್ದನಾ ಪರವಡೀ । ರಂಗೀ ಗುಢೀ ಉಭವಾವೀ ।೮೬೬।। ಕುವಲಯಾಪೀಡ ಉನ್ಮತ್ತ । ತ್ಯಾಚೇ ಉಪಟೋನಿ ಗಜದಂತ । ಗೋಪಾಳವೇಷೇ ಡುಲ್ಲತ । ರಂಗಾ ಆಂತ ಮಿರವಾವೇ ।೮೬೭।।

ಯಾರ ಚಿತ್ತವು ಭಜನೆಯುಕ್ತವಾಗಿ ನನ್ನ ಸ್ವರೂಪದಲ್ಲಿ ಅಖಂಡ ಅಂಟಿಕೊಂಡವರನ್ನು ನನ್ನ ಭಕ್ತರು ಎಂದು ಹೇಳಬೇಕು. ಅವರೇ ಸಂತರು, ಸಜ್ಜನರಾಗಿರುವರು ।೮೫೫।। ನನ್ನ ಭಕ್ತರ ಪವಿತ್ರ ಪ್ರೇಮಮಯ ಆಚರಣೆಗೆ ಸುರ, ನರ ಹಾಗೂ ಅಸುರರೂ ಕೂಡ ವಂದನೆ ಮಾಡುವರು. ಸಾಧಕನೂ ಕೂಡ ನಿಶ್ಚಯವಾಗಿ ಇದನ್ನೇ ಸಾಧಿಸಬೇಕು ।೮೫೬।। ನಾರದ, ಪ್ರಹ್ಲಾದ, ಅಂಬರೀಷ ಇತ್ಯಾದಿ ಶ್ರೇಷ್ಠ ಭಕ್ತರು ಯಾವ ಭಕ್ತಿಯನ್ನು ಅನುಸರಿಸಿದರೋ, ಅದೇ ಭಕ್ತಿಯನ್ನು ಸಾಧಕರು ಹಗಲು ರಾತ್ರಿ ಸದ್‌ಭಾವನೆಯಿಂದ ಸಾಧಿಸಬೇಕು ।೮೫೭।।

ವಾರ್ಷಿಕ ಯಾತ್ರೆ ಮಾಡಬೇಕು. ಪರ್ವಕಾಲದ ಪೂಜೆಯಲ್ಲಿ ಗರುಡಧ್ವಜಾಂಕಿತ ಚಿನ್ಹೆಗಳಿಂದ ಯುಕ್ತವಾದ ಛತ್ರಚಾಮರಾದಿ ರಾಜೋಪಚಾರಗಳನ್ನು ಭಕ್ತಿಭಾವಯುಕ್ತ ಅಂತಃಕರಣದಿಂದ ಶ್ರೀಕೃಷ್ಣನಿಗೆ ಅರ್ಪಿಸಬೇಕು ।೮೫೮।। ಇಂತಹ ಸಾರ್ವಭೌಮ ರಾಜನ ವೈಭವದಂತೆ ಭೋಗವನ್ನು ಪರಮ ಶ್ರದ್ಧೆಯಿಂದ ದೇವರ ಚರಣಗಳಲ್ಲಿ ಸಮರ್ಪಿಸಬೇಕು. ಭಜನೆಗಾಗಿ ಹಗಲು ರಾತ್ರಿ ಅತಿಶಯ ಉಲ್ಹಾಸ ಹಾಗೂ ಮನಸ್ಸಿನ ಎಳೆತವಿರಬೇಕು ।೮೫೯।। ದೇವರಿಗೆ ಕುದುರೆಯ ಮೇಲೆ, ಆನೆಯ ಮೇಲೆ ಅಥವಾ ಶೇಷ, ಗರುಡ ಇತ್ಯಾದಿ ವಾಹನದ ಮೇಲೆ ಇಲ್ಲವೆ ಪಾಲಖಿಯಲ್ಲಿ ಕುಳ್ಳಿರಿಸಿ ದೊಡ್ಡ ಪ್ರಮಾಣದಲ್ಲಿ ಮೆರವಣಿಗೆ ತೆಗೆಯಬೇಕು. ಅದರಂತೆಯೇ ರಥೋತ್ಸವ ಸಹ ವಿಜೃಂಭಣೆಯಿಂದ ನೆರವೇರಿಸಬೇಕು ।೮೬೦।। ತಾಳ, ಮೃದಂಗ, ಪತಾಕಾ, ಭೇರೀ, ಶಂಖ, ಝಾಂಜ, ತುತೂರಿಗಳು ಇತ್ಯಾದಿ ಮಂಗಲಮಯ ವಾದ್ಯಗಳ ನಾದವು ಆಕಾಶದಲ್ಲಿ ಹಿಡಿಸಲಾರದಷ್ಟು ದೊಡ್ಡ ಪ್ರಮಾಣದಲ್ಲಿ ನಡೆಸಬೇಕು. ಜಯಜಯಕಾರಗಳ ಗರ್ಜನೆ ಮಾಡಬೇಕು ।೮೬೧।। ದೇವರ ಎದುರಿನಲ್ಲಿ ನೃತ್ಯ, ಗೀತ, ಲೋಕಪದಗಳು ಹಾಗೂ ಕೀರ್ತನೆ ಅತ್ಯಂತ ಪ್ರೀತಿಯಿಂದ ಮಾಡಬೇಕು. ಹಾಗೆಯೇ ದೇವರ ಎದುರಿನಲ್ಲಿ ಅನೇಕ ಪ್ರಕಾರದ ಆಟಗಳನ್ನು ಆಡಬೇಕು ।೮೬೨।। ಅನೇಕ ಹಾವಭಾವಗಳನ್ನು ಮಾಡುತ್ತ ದೇವರಿಗೆ ಸೊಟ್ಟ ಮುಖ ಮಾಡಿ ಅಣಕಿಸಬೇಕು. ದೇವರ ಗುಣಗಾನಗಳನ್ನು ಗರ್ಜಿಸುತ್ತ ಹಾಡಬೇಕು ।೮೬೩।। ಗೋಪಾಳಕಾಲದ ಮತ್ತು ರಾಸಕ್ರೀಡೆಯ ಆಟಗಳನ್ನು ಆಡಬೇಕು. ಗೋಪಾಲಕರ ವೇಷಗಳನ್ನು ಧರಿಸಿ ಸುಂದರವಾಗಿ ನಟನೆ ಅಭಿನಯಿಸಬೇಕು ।೮೬೪।। ಕುಸ್ತಿಕಣದಲ್ಲಿನ ಆಟಗಳನ್ನು ನಾನಾ ಪ್ರಕಾರವಾಗಿ ಆಡಿ ತೋರಿಸಬೇಕು. ನಾನಾ ಪ್ರಕಾರದ ಜಗಳದ ಆಟ ಆಡುತ್ತ ಪರಸ್ಪರರ ರಟ್ಟೆಗೆ, ಎದೆಗೆ, ತಲೆಗೆ ಹೊಡೆತ ಹಾಕಬೇಕು ।೮೬೫।। ಮಲ್ಲಯುದ್ಧದ ಚಾತುರ್ಯದಿಂದ ಪರಸ್ಪರರಲ್ಲಿ ಜೋರಾಗಿ ಗುದ್ದಾಟ ನಡೆಯಬೇಕು. ಒಬ್ಬರಿಗೊಬ್ಬರು ಮರ್ದಿಸಿ ಕೊನೆಗೆ ಸಭೆಯಲ್ಲಿ ವಿಜಯ ಸಾಧಿಸಬೇಕು ।೮೬೬।। ಗೋಪಾಲಕೃಷ್ಣನ ವೇಷವನ್ನು ಧರಿಸಿ ಮದವೇರಿದ ಕುವಲಯಾಪೀಡ ಆನೆಯ ದಂತವನ್ನು ಮುರಿದೊಗೆದು ಮೈದೂಗುತ್ತ, ತೂಗುತ್ತ ಸಭೆಯಲ್ಲಿ ಮೆರೆಯಬೇಕು ।೮೬೭।।

ವಾನಾವೀ ದೇವಾಚೀ ವಾಢೀವ । ಕರಾವೀ ದೇವಾಚೀ ಭಾಟೀವ । ಐಸೇ ದಾವೂನಿ ಹಾವಭಾವ । ಮಹಾಮಹೋತ್ಸವ ಕರಾವಾ ॥೨೬೮॥ ಅಸಲ್ಯಾ ಸಾಮರ್ಥ್ಯವೈಭವ । ಸ್ವಯೇ ಕರಾವೇ ಸಕಳ ಉತ್ಸವ । ನಾ ತರೀ ಮಿಳೋನಿಯಾ ಸರ್ವ । ಮಹಾಮಹೋತ್ಸವ ಕರಾವೇ ॥೨೬೯॥ ಐಶಿಯಾ ಅನನ್ಯ ಆವಡೀ । ಭಜನ ಕರಿತಾ ಚಢೋವಢೀ । ಮಾಝಿಯಾ ಭಕ್ತೀಚೀ ಲಾಗಲೀ ಗೋಡೀ । ಜೋಡಿಲೇ ಜೋಡೀ ಹರಿಪ್ರೇಮ ॥೨೭೦॥ ಸಪ್ರೇಮ ಭಕ್ತೀ ಕರಿತಾ ಜಾಣ । ತೇಣೇ ಮೀ ಭಕ್ತಾಂಸೀ ತುಷ್ಟಮಾನ । ಮಾಝೇ ಅಂತರಂಗ ಭಜನ । ಮದ್ಭಕ್ತ ಆಪಣ ಸ್ವಯೇ ಲಾಹೇ ॥೨೭೧॥ ''ಅಂತರಂಗಭಕ್ತಿ'' ಮ್ಹಣಸೀ ಕೋಣ । ತೇ ಭಕ್ತೀಚೇ ನಿಜಲಕ್ಷಣ । ಉದ್ಧವಾಪ್ರತಿ ಶ್ರೀಕೃಷ್ಣ । ಸ್ವಮುಖೇ ಆಪಣ ಸಾಂಗತ ॥೨೭೨॥

ಮಾಮೇವ ಸರ್ವಭೂತೇಷು ಬಹಿರಂತರಪಾವೃತಮ್ । ಈಕ್ಷೇತಾತ್ಮನಿ ಚಾತ್ಮಾನಂ ಯಥಾ ಖಮಮಲಾಶಯಃ ॥೧೨॥

ಅರ್ಥ:- ಶುದ್ಧ ಅಂತಃಕರಣದ ಪುರುಷನು ಆಕಾಶದಂತೆ ಒಳಹೊರಗೆ ಪರಿಪೂರ್ಣನಾಗಿ, ಆವರಣ ಶೂನ್ಯನಾಗಿರುವ ಪರಮಾತ್ಮನಾದ ನನಗೆ ಸರ್ವ ಪ್ರಾಣಿಗಳಲ್ಲಿ ಹಾಗೂ ತನ್ನ ಹೃದಯದಲ್ಲಿ ಕಾಣುವನು.

ಭಾವೇ ಕರಿತಾ ಮಾಝೀ ಭಕ್ತೀ । ಶುದ್ಧ ಹೋಯ ಚಿತ್ತವೃತ್ತೀ । ತೇಣೇ ಆತ್ಮದೃಷ್ಟೀಚೀ ಸ್ಥಿತೀ । ಗುರುಕೃಪಾ ಪಾವತೀ ಮದ್ಭಕ್ತ ॥೨೭೩॥ ಪಾಹತಾ ನಿಜಾತ್ಮದೃಷ್ಟೀವರೀ । ಮೀಚಿ ಸರ್ವ ಭೂತಾಂಚ್ಯಾ ಅಂತರೀ । ಅಂತರೀಂಚಾ ಹಾ ನಿರ್ಧಾರ ಧರೀ । ತಂವ ಭೂತಾಬಾಹೇರೀಹೀ ಮಜಚಿ ದೇಖೇ ॥೨೭೪॥ ಜೋ ಪರಾವರಾದಿ ಅನಂತ । ತೋ ಮೀ ಭೂತಾ ಸಬಾಹ್ಯ ಭಗವಂತ । ಮೀ ತೋಚಿ ಹೋಯ ಮಾಝಾ ಭಕ್ತ । ಮಿಳೋನಿ ಮಜ ಆಂತ ಮದ್ರೂಪೇ ॥೨೭೫॥ ಜೈಸಜೈಸೀ ಮಾಝೀ ವ್ಯಾಪ್ತೀ । ತೈಸತೈಶೀ ಭಕ್ತಾಂಚೀ ಸ್ಥಿತೀ । ಜೇ ಜೇ ದೇಖೇ ಭೂತವ್ಯಕ್ತಿ । ತೇಥ ಸಬಾಹ್ಯ ಪ್ರತೀತೀ ಮದ್ರೂಪೇ ॥೨೭೬॥ ಜೇವೀ ಘಟಾಮಾಜೇ ಘಟಾಕಾಶ । ತೇಚಿ ಘಟಾಸಬಾಹ್ಯ ಮಹದಾಕಾಶ । ತೇವೀ ಭೂತಾಸಬಾಹ್ಯ ಮೀ ಚಿದ್ವಿಲಾಸ । ಮಾಝಾ ರಹಿವಾಸ ನಿಜರೂಪೇ ॥೨೭೭॥ ನಿಶ್ಚಯೇಸೀ ನಿಜಪ್ರತೀತೀ । ಭಗವದ್ಭಾವ ಸರ್ವಾಭೂತೀ । ತೇಚಿ ಭಕ್ತಾಂಚೀ ಭಜತೀ ಸ್ಥಿತೀ । ಯಥಾನಿಗುತೀ ಹರಿ ಸಾಂಗೇ ॥೨೭೮॥

ಇತಿ ಸರ್ವಾಣಿ ಭೂತಾನಿ ಮದ್‌ಭಾವೇನ ಮಹಾದ್ಯುತೇ । ಸಭಾಜಯನ್ಮನ್ಯಮಾನೋ ಜ್ಞಾನಂ ಕೇವಲಮಾಶ್ರಿತಃ ॥೧೩॥

ಅರ್ಥ:- ನಿರ್ಮಲಬುದ್ಧಿಯ ಉದ್ಧವನೇ, ಯಾವ ಸಾಧಕನು ಕೇವಲ ಜ್ಞಾನದೃಷ್ಟಿಯ ಆಶ್ರಯ ಪಡೆದು ಸಂಪೂರ್ಣ ಪ್ರಾಣೀ ಮತ್ತು ಪದಾರ್ಥಗಳಲ್ಲಿ ನನ್ನ ದರ್ಶನ ಪಡೆದು ಅವುಗಳಿಗೆ ನನ್ನ ರೂಪವೇ ಎಂದು ತಿಳಿದು ಸತ್ಕರಿಸುವನು.

ದೇವರ ಮಹಿಮೆಯನ್ನು ಉತ್ತಮ ಪ್ರಕಾರವಾಗಿ ವರ್ಣಿಸಬೇಕು. ಅನೇಕ ಪ್ರಕಾರದಿಂದ ದೇವರ ಸ್ತುತಿ ಮಾಡಬೇಕು. ಈ ಪ್ರಕಾರವಾಗಿ ಅಭಿನಯ ತೋರಿಸುತ್ತ ಮಹೋತ್ಸವವನ್ನು ಶೋಭಾಯಮಾನ ಮಾಡಬೇಕು ॥೨೬೮॥ ತನ್ನಲ್ಲಿ ಹಣದ ಸಾಮರ್ಥ್ಯವಿದ್ದರೆ ಮಹೋತ್ಸವದ ಸರ್ವ ಖರ್ಚು ತಾನೇ ನಿಭಾಯಿಸಬೇಕು. ಅಥವಾ ಸರ್ವರೂ ಕೂಡಿ ಈ ಮಹಾಮಹೋತ್ಸವ ಆಚರಿಸಬೇಕು ॥೨೬೯॥ ಹೀಗೆ ಅನನ್ಯ ಪ್ರೀತಿಯಿಂದ ಹಾಗೂ ಬೆಳೆಯುತ್ತಿರುವ ಆಸಕ್ತಿಯಿಂದ ನನ್ನ ಭಕ್ತಿಯ ರುಚಿಯು ಹತ್ತಿತೆಂದರೆ ಆಗ ಹರಿಪ್ರೇಮವು ಸಹಜವಾಗಿಯೇ ನಟ್ಟಿಕೊಳ್ಳುವುದು ॥೨೭೦॥ ಸಪ್ರೇಮ ಭಕ್ತಿ ಮಾಡುವುದರಿಂದ ನಾನು ಆ ಭಕ್ತನಲ್ಲಿ ಪ್ರಸನ್ನನಾಗುವೆನು. ಇದರಿಂದ ನನ್ನ ಭಕ್ತನಿಗೆ ಅಂತರಂಗ ಭಜನೆಯು ತನ್ನಷ್ಟಕ್ಕೆ ತಾನೇ ಪ್ರಾಪ್ತವಾಗುವುದು ॥೨೭೧॥ ಈಗ ಅಂತರಂಗಭಕ್ತಿ ಅಂದರೆ ಯಾವುದು ? ಹೀಗೆ ನೀನು ಕೇಳಬಹುದು. ಅದಕ್ಕಾಗಿ ಆ ಭಕ್ತಿಯ ಲಕ್ಷಣ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೨೭೨॥

ಶುದ್ಧ ಭಾವನೆಯಿಂದ ನನ್ನ ಭಕ್ತಿ ಮಾಡಲು ಚಿತ್ತಶುದ್ಧಿಯುಂಟಾಗುವುದು. ಈ ಕಾರಣದಿಂದ ಗುರುಕೃಪೆಯೊಂದಿಗೆ ನನ್ನ ಭಕ್ತರಿಗೆ ಆತ್ಮದೃಷ್ಟಿಯ ಪಾತ್ರತೆಯು ಪ್ರಾಪ್ತವಾಗುವುದು ॥೨೭೩॥ ಆ ಯಾವ ವಿಶಾಲ ಆತ್ಮದೃಷ್ಟಿಯಿಂದ ಕಾಣುತ್ತಿರಲು ಸರ್ವ ಪ್ರಾಣಿಮಾತ್ರರ ಒಳಗೆ ನಾನೇ ತೋರುತ್ತಿರುವೆನು. ಹೀಗೆ ಒಳಗೆ ನಾನೇ ಇರುವೆ ಎಂಬ ದೃಢಭಾವನೆಯು ಒಮ್ಮೆ ಉಂಟಾಗಲು ಆಗ ಪ್ರಾಣಿಮಾತ್ರರ ಹೊರಗೂ ಕೂಡ ನಾನೇ ತೋರುತ್ತಿರುವೆನು ॥೨೭೪॥ ಶ್ರೇಷ್ಠ ಹಾಗೂ ಕನಿಷ್ಠ ಇವುಗಳ ಆಚೆ ಇರುವ ನಾನೇ ಪರಮಾತ್ಮನು ಸರ್ವರ ಅಂತರ್ಬಾಹ್ಯ ವ್ಯಾಪಿಸಿಕೊಂಡಿರುವೆನು. ನನ್ನ ಭಕ್ತನೂ ಕೂಡ ನಾನೇ ಆಗಿ ಮದ್ರೂಪದಿಂದ ನನ್ನಲ್ಲಿಯೇ ಕೂಡಿಕೊಳ್ಳುವನು ॥೨೭೫॥ ನನ್ನ ವ್ಯಾಪ್ತಿಯು ಎಷ್ಟಿರುವುದೋ, ಅಷ್ಟೇ ನನ್ನ ಭಕ್ತನ ಸ್ಥಿತಿ ಇರುವುದು. ಆದ್ದರಿಂದ ಆತನು ಯಾವ ಯಾವ ವ್ಯಕ್ತಿಯನ್ನು ಕಾಣುತ್ತಿರುವನೋ, ಅಲ್ಲಿ ಒಳಹೊರಗೆ ನನ್ನದೇ ಸ್ವರೂಪದ ಅನುಭವವು ಆತನಿಗೆ ಬರುತ್ತಿರುವುದು ॥೨೭೬॥ ಯಾವ ಪ್ರಕಾರವಾಗಿ ಘಟದಲ್ಲಿ ಘಟಕಾಶವು ಇದ್ದುಕೊಂಡು ಅದೇ ಘಟದ ಒಳಹೊರಗೆ ಮಹದಾಕಾಶವು ಇರುವುದು. ಅದರಂತೆ ನಾನು ಚೈತನ್ಯಘನನು ಪ್ರಾಣಿಮಾತ್ರರ ಒಳಹೊರಗೆ ಆತ್ಮಸ್ವರೂಪದಿಂದ ಇರುವೆನು ॥೨೭೭॥ ಆತ್ಮ ಪ್ರತೀತಿಯ ನಿಶ್ಚಯದಿಂದ ಸರ್ವಪ್ರಾಣಿಮಾತ್ರರಲ್ಲಿ ಭಗವದ್ಭಾವನೆಯನ್ನು ಧರಿಸುವುದೇ ಭಕ್ತರ ಭಗವದ್ಭಜನೆ ಮಾಡುವ ಪದ್ಧತಿಯಾಗಿರುವುದು. ಅದರ ಯಥಾರ್ಥ ವರ್ಣನೆ ಶ್ರೀಹರಿಯು ಈಗ ಮಾಡುತ್ತಿರುವನು ॥೨೭೮॥

ಉದ್ಧವಾ ತುರೆಝೀ ಭಾಗ್ಯ ಅಮೂಪ । ತೂ ಜ್ಞಾನನಿಧಿ ಕೈವಲ್ಯ ದೀಪ । ಸರ್ವಭೂತೀ ಮಾರೆಝೀ ರೂಪ । ಚಿತ್ಸ್ವರೂಪ ಸಬಾಹ್ಯ ॥೭೭೯॥ ಯಾಪರೀ ಗಾ ಸರ್ವಭೂತೀ । ಮಾಝ್ಯಾ ಸ್ವರೂಪಾಚೀ ಅನುಸ್ಯೂತೀ । ಲಕ್ಷೂನಿ ಜೋ ಕರೀ ಭಕ್ತೀ । ನಾನಾವ್ಯಕ್ತೀ ಸಮಭಾವೇ ॥೭೮೦॥ ಭಿನ್ನ ರೂಪ ಭಿನ್ನ ನಾಮ । ಭಿನ್ನ ಸ್ಥಿತೀ ಭಿನ್ನ ಕರ್ಮ । ಜಗ ದೇಖತಾಂಹೀ ವಿಷಮ । ಮದ್ಭಕ್ತಾ ಸಮ ಸದ್ಭಾವೋ ॥೭೮೧॥ ಭೂತೇ ದೇಖತಾಂಹೀ ಭಿನ್ನ । ಭಿನ್ನತ್ವಾ ನಯೇ ಜ್ಯಾಚೇ ಜ್ಞಾನ । ಮದ್ಭಾವೇ ಭಜೇ ಸಮಾನ । ತ್ಯಾಸೀ ಸುಪ್ರಸನ್ನ ಭಕ್ತಿ ಮಾಝೀ ॥೭೮೨॥ ಜ್ಯಾಸೀ ಪ್ರಸನ್ನ ಮಾಝೀ ಭಕ್ತಿ । ತ್ಯಾಚಾ ಆಜ್ಞಾಧಾರಕ ಮೀ ಶ್ರೀಪತೀ । ಜೋ ಭಗವದ್ಭಾವೇ ಸರ್ವ ಭೂತೀ । ಸುನಿಶ್ಚಿತೀ ಉಪಾಸಕ ॥೭೮೩॥ ಆಶಂಕಾ ॥ "ತುಝೀ ವೇದಾಜ್ಞಾ ತಂವ ಪ್ರಮಾಣ । ಅತಿಶಯೇ ಪೂಜ್ಯ ಬ್ರಾಹ್ಮಣ । ಉಪೇಕ್ಷಾವೇ ಅಸುರಜನ । ಚಾಂಡಾಳ ಜಾಣ ಅತಿನಿಂದ್ಯ ॥೭೮೪॥ ಕರ್ಮಭ್ರಷ್ಟ ಜೇ ಜೇ ಲೋಕ । ತ್ಯಾಂಚೇ ಪಾಹೋ ನಯೇ ಮುಖ । ಹೇ ವೇದಮರ್ಯಾದಾ ದೇಖ । ತುವಾಂಚಿ ನಿಷ್ಟಂಕ ನೇಮಿಲೀ ॥೭೮೫॥ ತೇಥ ಸರ್ವ ಭೂತೀ ಸಮಾನ । ಕೇವೀ ಭಗವದ್ಭಜನ " । ಐಸಾ ವಿಕಲ್ಪ ಧರೀಲ ಮನ । ತರೀ ಐಕೇ ಮಹಿಮಾನ ಭಕ್ತೀಚೇ ॥೭೮೬॥ ಜಂವ ಅಂಧಾರಾಸೀ ಸಬಳ ರಾತೀ । ತಂವಚಿ ಪ್ರತಿಷ್ಠಾ ದೀಪಸ್ಥಿತೀ । ತೇಥೇ ಉಗವಲ್ಯಾ ಗಭಸ್ತೀ । ದೀಪಾಚೀ ದೀಪ್ತೀ ಅಸತಾಂಚಿ ನಾಹೀ ॥೭೮೭॥ ತೇವೀ ಜಂವವರೀ ದೃಢ ಅಜ್ಞಾನ । ತಂವಚಿವರೀ ವೇದಾಜ್ಞಾ ಪ್ರಮಾಣ । ಜ್ಯಾಸೀ ಝಾಲೇ ಅಭೇದಭಜನ । ತಯಾಸೀ ವೇದ ಆಪಣ ಸ್ವಯೇ ವಂದೀ ॥೭೮೮॥ ವೇದ ಬಾಪುಡಾ ತೋ ಕಿತೀ । ಜ್ಯಾಸೀ ಮಾಝೀ ಅಭೇದಭಕ್ತೀ । ತ್ಯಾಸೀ ಮೀ ವಂದೀ ಶ್ರೀಪತೀ । ಸದಾ ವಶವರ್ತೀ ತಯಾಚಾ ॥೭೮೯॥ ಅಭೇದಭಕ್ತಿ ಜೇಥ ಪುರೀ । ಮೀ ನಾಟಕಾರು ತ್ಯಾಚೇ ಘರೀ । ತ್ಯಾಚಾ ಸಂಸಾರ ಮಾಝೇ ಶಿರೀ । ಯೋಗಕ್ಷೇಮ ಕರೀ ಮೀ ತ್ಯಾಚಾ ॥೭೯೦॥ ಅಭೇದಭಕ್ತೀಚೇ ಮಹಿಮಾನ । ತಿಚ್ಯಾ ಪಾಯಾ ಲಾಗೇ ಆತ್ಮಜ್ಞಾನ । ತೇಥ ವಂದ್ಯನಿಂದ್ಯ ಸಮಸಮಾನ । ವಿಷಮೀಂಹೀ ಜಾಣ ವಿಕಾರೇನಾ ॥೭೯೧॥

ಬ್ರಾಹ್ಮಣೇ ಪುಲ್ಕಸೇ ಸ್ತೇನೇ ಬ್ರಹ್ಮಣ್ಯೇಽರ್ಕೇ ಸ್ಫುಲಿಂಗಕೇ । ಅಕ್ರೂರೇ ಕ್ರೂರಕೇ ಚೈವ ಸಮದೃಕ್ಪಂಡಿತೋ ಮತಃ ॥೧೪॥

ಅರ್ಥ:- ಬ್ರಾಹ್ಮಣ, ಚಾಂಡಾಳ, ಚೋರ, ಬ್ರಾಹ್ಮಣಭಕ್ತ, ಸೂರ್ಯ, ಬೆಂಕಿಯಕಿಡಿ, ಕೃಪಾವಂತ, ಕ್ರೂರ ಇವರಲ್ಲಿ ಯಾರು ಸಮದೃಷ್ಟಿಯನ್ನಿಡುವರೋ, ಅವರಿಗೆ ನಿಜವಾದ ಜ್ಞಾನೀ ಎಂದು ಹೇಳಬೇಕು.

ಹೇ ಉದ್ಧವಾ, ನಿಜವಾಗಿಯೂ ನಿನ್ನ ಭಾಗ್ಯವು ಬಹುದೊಡ್ಡದಾಗಿದೆ. ನೀನು ಜ್ಞಾನದ ನಿಧಿಯಾಗಿದ್ದು ಕೈವಲ್ಯದ ದೀಪನಾಗಿರುವೆ. ಸರ್ವ ಭೂತಗಳಲ್ಲಿನ ಸದ್‌ಬಾಹ್ಯ ಚಿತ್‌ಸ್ವರೂಪವು ನನ್ನ ಸ್ವರೂಪವಾಗಿದೆ ॥೭೭೯॥ ಈ ಪ್ರಕಾರವಾಗಿ ಸರ್ವಪ್ರಾಣಿಮಾತ್ರರಲ್ಲಿ ನನ್ನ ಸ್ವರೂಪವು ಸಮಾನತೆಯಿಂದ ಓತಪ್ರೋತ ತುಂಬಿರುವುದು. ಇಂತಹ ಭಾವನೆಯಿಂದ ಯಾರು ನನ್ನ ಭಕ್ತಿಮಾಡುವನೋ, ಆತನು ಭಿನ್ನ ಭಿನ್ನ ವ್ಯಕ್ತಿಗಳನ್ನು ಸಮದೃಷ್ಟಿಯಿಂದ ಕಾಣುವನು ॥೭೮೦॥ ಭಿನ್ನರೂಪ, ಭಿನ್ನನಾಮ, ಭಿನ್ನ ಸ್ಥಿತೀ, ಭಿನ್ನ ಕರ್ಮ ಹೀಗೆ ಇದು ವಿಷಮತೆಯಿಂದ ನಟಿಸಿರುವ ಜಗತ್ತು ತೋರುತ್ತಿದ್ದರೂ ಕೂಡ ನನ್ನ ಭಕ್ತನಲ್ಲಿ ನನ್ನ ಭಾವನೆಯು ಸರ್ವತ್ರ ಸಮವಾಗಿರುವುದು ॥೭೮೧॥ ಭಿನ್ನ ಭಿನ್ನ ಪ್ರಾಣಿಗಳನ್ನು ಕಂಡರೂ ಸಹ ಯಾರ ಜ್ಞಾನದಲ್ಲಿ ದೇಹಭಾವವು ನಿರ್ಮಾಣವಾಗುವುದಿಲ್ಲವೋ, ಆತನು ಮದ್‌ಭಾವನೆಯಿಂದ ಸರ್ವರ ಸಮಾಜ ಸೇವೆ ಮಾಡುತ್ತಿರುವನು ಆತನಲ್ಲಿ ನನ್ನ ಭಕ್ತಿಯು ಪ್ರಸನ್ನವಾಗುತ್ತಿರುವುದು ॥೭೮೨॥ ನನ್ನ ಭಕ್ತಿಯು ಯಾರಲ್ಲಿ ಪ್ರಸನ್ನವಾಗಿದೆಯೋ, ಶ್ರೀಕೃಷ್ಣನಾದ ನಾನು ಆತನಲ್ಲಿ ಆಜ್ಞಾಧಾರಕನಾಗಿ ಇರುವೆನು. ಕಾರಣ ಆತನು ಸರ್ವಭೂತಗಳಲ್ಲಿ ನಿಶ್ಚಿತವಾಗಿ ಭಗವದ್ಭಾವನೆಯನ್ನು ಧರಿಸಿ ಉಪಾಸನೆ ಮಾಡುತ್ತಿರುವನು ॥೭೮೩॥ ಅನುಮಾನ ॥ ನಿನ್ನ ವೇದಾಜ್ಞೆಯು ಪ್ರಮಾಣವೆನ್ನಬೇಕಾದರೆ ಬ್ರಾಹ್ಮಣನು ಅತ್ಯಂತ ಪೂಜ್ಯನು ಎಂದು ನೀನು ಹೇಳಿರುವೆ. ಅಸುರರನ್ನು ತಿರಸ್ಕರಿಸಬೇಕು ಹಾಗೂ ಚಾಂಡಾಲರಿಗೆ ಅತಿಶಯ ನಿಂದ್ಯ ಎಂದು ತಿಳಿಯಬೇಕು ॥೭೮೪॥ ಯಾವ ಯಾವ ಜನರು ಕರ್ಮಭ್ರಷ್ಟರಾಗಿರುವರೋ ಅವರ ಮುಖವನ್ನೂ ಕೂಡ ನೋಡಕೂಡದು. ಹೀಗೆ ನಿಷ್ಠುರ ವೇದಮರ್ಯಾದೆ ಹಾಕಿಟ್ಟಿರುವೆ ॥೭೮೫॥ ಹೀಗಿರಲು ಸರ್ವಪ್ರಾಣಿಮಾತ್ರರು ಸಮಾನವಾಗಿರುವರೆಂಬ ಈ ದೃಷ್ಟಿಯಿಂದ ಭಗವದ್ಭಜನೆಯು ಹೇಗಾಗಲು ಸಾಧ್ಯ ? ಹೀಗೆ ನಿನ್ನ ಮನದಲ್ಲಿ ವಿಕಲ್ಪ ಉಂಟಾಗಬಹುದು. ಅದಕ್ಕಾಗಿ ಈಗ ಭಕ್ತಿಯ ಮಹಿಮೆ ಕೇಳು ॥೭೮೬॥ ಎಲ್ಲಿಯವರೆಗೆ ಅಂಧಕಾರಮಯ ರಾತ್ರಿ ಇರುವುದೋ, ಅಲ್ಲಿಯವರೆಗೆ ದೀಪದ ಮಹತ್ವವಿರುವುದು. ಆದರೆ ಸೂರ್ಯನಾರಾಯಣನು ಉದಯನಾಗುತ್ತಲೇ ದೀಪದ ಪ್ರಕಾಶವು ಇದ್ದೂ ಇಲ್ಲದಂತಾಗುವುದು ॥೭೮೭॥ ಅದರಂತೆ ಅಜ್ಞಾನವು ಎಲ್ಲಿಯವರೆಗೆ ದೃಢವಾಗಿರುವುದೋ, ಅಲ್ಲಿಯವರೆಗೆ ವೇದಾಜ್ಞಾ ಪ್ರಮಾಣವಾಗಿರುವುದು. ಆದರೆ ಯಾರಿಗೆ ನನ್ನ ಅಭೇದ ಭಜನೆಯು ಪ್ರಾಪ್ತವಾಗಿದೆಯೋ, ಆತನಿಗೆ ಸ್ವತಃ ವೇದವು ಬಂದು ವಂದಿಸುವುದು ॥೭೮೮॥ ಪಾಪ ! ವೇದವಾದರೂ ಎಷ್ಟರಮಟ್ಟಿಗೆ, ಯಾರಿಗೆ ನನ್ನ ಅಭೇದ ಭಕ್ತಿಯು ಪ್ರಾಪ್ತವಾಗುವುದೋ, ಆತನಿಗೆ ಶ್ರೀಕೃಷ್ಣನಾದ ನಾನು ವಂದನೆ ಮಾಡುವೆನು ಮತ್ತು ನಾನು ಯಾವಾಗಲೂ ಆತನಿಗೆ ವಶನಾಗಿ ಇರುವೆನು ॥೭೮೯॥ ಎಲ್ಲಿ ಪೂರ್ಣವಾಗಿ ಅಭೇದ ಭಕ್ತಿ ಇರುವುದೋ, ಆತನ ಮನೆಯಲ್ಲಿ ನಾನು ಸೇವಕನಾಗಿ ಇರುವೆನು. ಆತನ ಸಂಸಾರದ ಭಾರವನ್ನು ನಾನು ನನ್ನ ತಲೆಯ ಮೇಲೆ ಹೊತ್ತುಕೊಂಡು ಆತನ ಯೋಗಕ್ಷೇಮ ನಡೆಸುವೆನು ॥೭೯೦॥ ಅಭೇದ ಭಕ್ತಿಯ ಮಹಿಮೆಯು ಹೇಗಿದೆ ಎಂದರೆ ಆತ್ಮಜ್ಞಾನವು ಅದರ ಕಾಲಿಗೆ ಬೀಳುವುದು. ಅಲ್ಲಿ ವಂದ್ಯ, ನಿಂದ್ಯ ಎಲ್ಲವೂ ಸಮಸಮಾನವಾಗಿರುವುವು. ವಿಷಯಮತೆಯಲ್ಲಿಯೂ ಕೂಡ ಭೇದವು ತೋರುವುದಿಲ್ಲ ॥೭೯೧॥

ಜ್ಯಾಂಚೇ ವಂದಿತಾ ಪದರಜ ಜಾಣ । ಪವಿತ್ರ ಹೋಇಜೇ ಆಪಣ । ಐಸೇ ಪುಣ್ಯಪೂಜ್ಯ ಜೇ ಬ್ರಾಹ್ಮಣ । ಜ್ಯಾಂಚಾ ಹೃದಯೀ ಚರಣ ಹರಿ ವಾಹೇ ॥೯೨॥ ಐಸೇ ಅತಿವಂದ್ಯ ಜೇ ಬ್ರಾಹ್ಮಣ । ಆಣಿ ಚಾಂಡಾಳಾಂಮಾಜೀ ನಿಂದ್ಯ ಹೀನ । ತೋ ''ಪುಲ್ಕಸ'' ದ್ವಿಜವರಾಸಮಾನ । ಹರಿರೂಪೇ ಜಾಣ ಭಕ್ತ ದೇಖೇ ॥೯೩॥ ಸುವರ್ಣವಿಷ್ಣು ಸುವರ್ಣಶ್ವಾನ । ಏಕ ಪೂಜ್ಯ ಏಕ ಹೀನ । ವಿಕೂ ಜಾತಾ ಮೋಲ ಸಮಾನ । ವಂದ್ಯನಿಂದ್ಯ ಜಾಣ ಆತ್ಮತ್ವೀ ತೈಸೇ ॥೯೪॥ ಪುಲ್ಕಸ ಆಣಿ ಬ್ರಾಹ್ಮಣ । ಜಾತಿ ಭೇದೇ ವಿಷಮಪಣ । ಆತ್ಮದೃಷ್ಟೀ ಪಾಹತಾ ಜಾಣ । ದೋಘೇ ಸಮಾನ ಚಿದ್ರೂಪೇ ॥೯೫॥ ಜೋ ಬಳೇಚಿ ಬ್ರಹ್ಮಸ್ವ ಚೋರೀ । ಜೋ ಬ್ರಾಹ್ಮಣಾ ಅತಿ ಉಪಕಾರೀ । ದೋಘೇ ನಿಜಾತ್ಮ ನಿರ್ಧಾರೀ । ಸದ್ರೂಪೇಕರೀ ಸಮಸಾಮ್ಯ ಭಕ್ತಾ ॥೯೬॥ ಜೇವೀ ಡಾವಾ ಉಜವಾ ದೋನೀ ಹಾತ । ಏಕ ನರಕೀ ಏಕ ಪುಣ್ಯಾರ್ಥ । ಹಾ ಕರ್ಮಾಕರ್ಮ ವಿಪರೀತಾರ್ಥ । ಸಮಾನ ನಿಶ್ಚಿತ ಜ್ಯಾಚೇ ತ್ಯಾಸೀ ॥೯೭॥ ತೇವೀ ಸರ್ವಸ್ವೇ ಬ್ರಾಹ್ಮಣಾಂಚಾ ದಾತಾ । ಕಾ ಜೋ ಬ್ರಾಹ್ಮಣಾಂಚಾ ಅರ್ಥಹರಿತಾ । ದೋಂಹೀಸೀ ಕರ್ಮಾಚೀ ವಿಷಮತಾ । ನಿಜಾತ್ಮತಾ ಸಮಾನ ॥೯೮॥ ಸೂರ್ಯ ಆಣಿ ಖದ್ಯೋತ । ತೇಜವಿಶೇಷೇ ಭೇದ ಭಾಸತ । ನಿಜಾತ್ಮ ತೇಜೇ ಪಾಹತಾ ತೇಥ । ಸಮಸಾಮ್ಯ ಹೋತ ದೋಹೋಂಸೀ ॥೯೯॥ ದಾವಾಗ್ನಿ ಆಣಿ ದಿವಾ । ಭೇದ ಭಾಸೇ ತೇಜವೈಭವಾ । ನಿಜತೇಜೇ ಸಮಾನಭಾವಾ । ತೇವೀ ತೇಜಪ್ರಭಾವಾ ಆತ್ಮತ್ವೇ ಸಮಾನ ॥೧೦೦॥ ಕರ್ಪೂರಾಗ್ನಿ ಸೋಜ್ವಳ ಕುಂಡೀ । ಪರೀ ರಾಊಸಂಗೇ ತೋ ತಡಫಡೀ । ತೇವೀ ಸತ್ತ್ವತಮಪರವಡೀ । ಶಾಂತಿ ಆಣಿ ಗಾಢೀ ಕ್ರೋಧಾವಸ್ಥಾ ॥೧೦೧॥ ಏಕ ಸತ್ತ್ವವೃತ್ತಿ ಅತಿಶಾಂತ । ಕಾ ಜೋ ಕ್ರೂರ ತಾಮಸ ಕ್ರೋಧಯುಕ್ತ । ಗುಣವೈಷಮ್ಯೇ ಭೇದ ಭಾಸತ । ಆತ್ಮತ್ವೇ ನಿಶ್ಚಿತ ಸಮಸಾಮ್ಯ ಭಕ್ತಾ ॥೧೦೨॥ ಏಕ ಆಪತ್ಕಾಳೀ ಸರ್ವಸತ್ತಾ । ಹೋಯ ಏಕಾಚಾ ಪ್ರಾಣರಕ್ಷಿತಾ । ಏಕ ಪ್ರಾಣದಾತ್ಯಾಚ್ಯಾ ಘಾತಾ । ಪ್ರವರ್ತೇ ಕ್ರೂರತಾ ಕೃತಘ್ನ ಜೋ ॥೧೦೩॥ ಹೇ ಪುಣ್ಯಪಾಪವಿಷಮತಾ ಜಾಣ । ಐಸೇಹೀ ಠಾಯೀ ಭಕ್ತ ಸಜ್ಞಾನ । ವಸ್ತು ದೇಖತೀ ಸಮಸಮಾನ । ಉಭಯತಾ ಜಾಣ ನಿಜಾತ್ಮ ಬೋಧೇ ॥೧೦೪॥ ವೃಕ್ಷಾಸೀ ಜೋ ಪ್ರತಿಪಾಳೀ । ಕಾ ಜೋ ಘಾವ ಘಾಲೀ ಮೂಳೀ । ದೋಘಾಂಹೀ ಸಮಾನ ಪುಷ್ಪೀ ಫಳೀ । ತೇವೀ ಆತ್ಮ ಮೇಳೀ ಘಾತಕಾ ಘಾತೀ ॥೧೦೫॥

ಯಾರ ಪಾದಧೂಳಿಗೆ ವಂದಿಸಿದರೆ ನಾವು ಪಾವನರಾಗುವೆವು. ಇಂತಹ ಪೂಜ್ಯರಾದ ಬ್ರಾಹ್ಮಣರ ಚರಣ ಚಿಹ್ನೆಯನ್ನು ಶ್ರೀಹರಿಯು ತನ್ನ ಹೃದಯದ ಮೇಲೆ ಧರಿಸಿರುವನು ॥೯೨॥ ಹೀಗಿರುವ ಅತ್ಯಂತ ವಂದ್ಯರಾದ ಬ್ರಾಹ್ಮಣರು ಮತ್ತು ಚಾಂಡಾಲರಲ್ಲಿ ಯಾವ ''ಪುಲ್ಕಸ'' ಇವರು ಆ ಯಾವ ಶ್ರೇಷ್ಠ ಬ್ರಾಹ್ಮಣರಂತೆ ಹರಿರೂಪರಾಗಿರುವರು ಎಂದು ಭಕ್ತರು ಕಾಣುವರು ॥೯೩॥ ಬಂಗಾರದ ವಿಷ್ಣು ಹಾಗೂ ಬಂಗಾರದ ನಾಯೀ, ಇವುಗಳಲ್ಲಿ ಒಂದು ವಂದ್ಯವಾಗಿದ್ದರೆ ಇನ್ನೊಂದು ನಿಂದ್ಯವಾಗಿರುವುದು. ಆದರೆ ಮಾರಲು ಹೋದರೆ ಎರಡರ ಬೆಲೆ ಸಮಾನವಾಗುವುದು ॥೯೪॥ ಪುಲ್ಕಸ ಮತ್ತು ಬ್ರಾಹ್ಮಣ, ಜಾತಿಭೇದದಿಂದ ನೋಡಿದರೆ ವಿಷಮವಾಗಿರುವುದು. ಆದರೆ ಆತ್ಮದೃಷ್ಟಿಯಿಂದ ನೋಡಿದರೆ ಇಬ್ಬರೂ ಕೂಡ ಚಿದ್ರೂಪದಿಂದ ಸಮಾನರಾಗಿಯೇ ಇರುವರು ॥೯೫॥ ಯಾವನು ಬಲವಂತವಾಗಿ ಬ್ರಾಹ್ಮಣನ ಹಣ ಕದಿಯುವನೋ, ಹಾಗೂ ಯಾವನು ಬ್ರಾಹ್ಮಣನಲ್ಲಿ ಅತ್ಯಂತ ಉಪಕಾರ ಮಾಡುತ್ತಿರುವನೋ, ಅವರಿಬ್ಬರೂ ಕೂಡ ಭಕ್ತರಿಗೆ ಆತ್ಮದೃಷ್ಟಿಯಿಂದ ಸಮಾನರಾಗಿದ್ದು ಸದ್ರೂಪರಾಗಿ ತೋರುತ್ತಿರುವರು ॥೯೬॥ ಎಡಗೈ, ಬಲಗೈ, ಒಂದೇ ದೇಹದ್ದಾಗಿರುವುವು. ಆದರೆ ಒಂದರ ನರಕದತ್ತ ಹಾಗೂ ಇನ್ನೊಂದರ ಪುಣ್ಯಕರ್ಮದತ್ತ ಯೋಜನೆಯಿರುವುದು. ಇದು ಅವುಗಳ ಕರ್ಮದ ವಿಪರೀತ ಭಾವವಿದ್ದರೂ ಕೂಡ ಎರಡೂ ಕೈಗಳು ಅವರವರಿಗೆ ಒಂದೇ ಆಗಿರುವುವು ॥೯೭॥ ಅದರಂತೆ ಬ್ರಾಹ್ಮಣನಿಗೆ ಸರ್ವಸ್ವ ದಾನ ಮಾಡುವವ ಅಥವಾ ಬ್ರಾಹ್ಮಣನ ಸರ್ವಸ್ವ ಹಣ ದೋಚುವವ ಈ ಈರ್ವರ ಕರ್ಮಗಳು ಪರಸ್ಪರ ವಿರೋಧವಾಗಿರುವುವು. ಆದರೆ ಆತ್ಮಸ್ವರೂಪದಿಂದ ಈರ್ವರೂ ಕೂಡ ಒಂದೇ ಆಗಿರುವರು ॥೯೮॥ ಸೂರ್ಯ ಮತ್ತು ಮಿಂಚುಹುಳ ಇವುಗಳ ತೇಜಗಳಲ್ಲಿ ಭೇದವಿಶೇಷವಿರುವುದು. ಆದರೆ ಆತ್ಮದೃಷ್ಟಿಯಿಂದ ನೋಡಲು ಎರಡೂ ಕೂಡ ಸಮಾನವಾಗಿರುವುವು ॥೯೯॥ ದಾವಾಗ್ನಿ ಮತ್ತು ದೀಪ ಇವುಗಳ ಪ್ರಕಾಶದಲ್ಲಿ ಭೇದವೈಭವ ತೋರುವುದು. ಆದರೆ ಎರಡರಲ್ಲಿನ ಮೂಲ ತೇಜವು ಒಂದೇ ಕಾಣಿಸುತ್ತಿರುವುದು. ಈ ಪ್ರಕಾರವಾಗಿ ತೇಜದಲ್ಲಿಯೂ ಸಹ ಆತ್ಮದೃಷ್ಟಿಯಿಂದ ಸರ್ವಸಾಮ್ಯವಿರುವುದು ॥೧೦೦॥ ಕರ್ಪುರದ ಅಗ್ನಿಯು ಹೋಮಕುಂಡದಲ್ಲಿ ಸೋಜ್ವಳವಾಗಿರುವುದು. ಆದರೆ ಅದರಲ್ಲಿ ಸಾಸ್ವಿ ಹಾಕಲು ಹಾರಹತ್ತುವುದು. ಅದರಂತೆ ಸತ್ವ ಮತ್ತು ತಮ ಇವುಗಳಿಂದ ಅನುಕ್ರಮವಾಗಿ ಶಾಂತೀ ಮತ್ತು ಕ್ರೋಧ ಉತ್ಪನ್ನವಾಗುವುವು ॥೧೦೧॥ ಒಬ್ಬ ಸಾತ್ವಿಕ ವೃತ್ತಿಯ ಪುರುಷನು ಶಾಂತನಾಗಿರುವನು. ಆದರೆ ಇನ್ನೊಬ್ಬ ಮನುಷ್ಯನು ಕ್ರೂರ, ತಾಮಸೀ ಹಾಗೂ ಕ್ರೋಧಯುಕ್ತನಾಗಿರುವನು. ಈ ಭೇದವು ಗುಣಗಳ ವೈಷಮ್ಯದಿಂದ ತೋರುವುದು. ಆದರೆ ಭಕ್ತರಿಗೆ ಆತ್ಮದೃಷ್ಟಿಯಿಂದ ಅವರು ಸಮಾನರಾಗಿಯೇ ತೋರುವರು ॥೧೦೨॥ ಒಬ್ಬನು ಸಂಕಟ ಪ್ರಸಂಗದಲ್ಲಿ ತನ್ನ ಸರ್ವಸ್ವವನ್ನು ಖರ್ಚು ಮಾಡಿ ಪ್ರಾಣದ ರಕ್ಷಣಕರ್ತನಾಗುವನು. ಆದರೆ ಇನ್ನೊಬ್ಬನು ಕೃತಘ್ನನಾಗಿ ತನಗೆ ಪ್ರಾಣದಾನ ಮಾಡಿದವನಿಗೆ ಕೊಲ್ಲಲು ಪ್ರವೃತ್ತನಾಗುತ್ತಿರುವನು ॥೧೦೩॥ ಇಂತಹ ಪುಣ್ಯಪಾಪಗಳ ಪರಸ್ಪರ ವಿರೋಧದಲ್ಲಿ ಜ್ಞಾನೀ ಭಕ್ತನು ಸಮಾನ ಆತ್ಮತತ್ವ ನೋಡುವನು ಹಾಗೂ ಅವರೀರ್ವರೂ ಆತ್ಮದೃಷ್ಟಿಯಿಂದ ಒಂದೇ ಆಗಿರುವರು ಎಂದು ತಿಳಿಯುವನು ॥೧೦೪॥ ವೃಕ್ಷದ ಪಾಲನೆ ಮಾಡುವವನಿಗೂ ಹಾಗೂ ವೃಕ್ಷದ ಬೇರುಸಮೇತ ಭೇದಿಸುವವನಿಗೂ ಹೀಗೆ ಇಬ್ಬರಿಗೂ ಆ ವೃಕ್ಷವು ಫಲ ಪುಷ್ಪಗಳನ್ನು ಸಮಾನವಾಗಿಯೇ ಕೊಡುತ್ತಿರುವುದು. ಅದರಂತೆ ನನ್ನ ಭಕ್ತನು ಪಾಪೀ ಜನರಲ್ಲಿಯೂ ಕೂಡ ಆತ್ಮಸ್ವರೂಪವನ್ನು ಕಾಣುವನು ॥೧೦೫॥

ದ್ವಿಜಾಚೇ ಸೋಂವಳೇ ಧೋತ್ರ । ಕಾ ಮದ್ಯಪಿಯಾಚೇ ಮಲಿನ ವಸ್ತ್ರ । ಸೂತ್ರಸೃಷ್ಟೀ ಸಮಾನ ಸೂತ್ರ । ಮಶಕ ಸೃಷ್ಟಿಕರ ಆತ್ಮತ್ವೀ ತೈಸೇ ।।೩೦೬।। ಮಶಕ ಆಣಿ ಸೃಷ್ಟಿಕರ್ತಾ । ಭಜನೀ ಸಮಾನ ಮದ್ಭಕ್ತಾ । ಹೇ ಚೌಥೇ ಭಕ್ತೀಚೀ ಅವಸ್ಥಾ । ಅಪಾವೋ ಸರ್ವಥಾ ರಿಘೋ ನ ಶಕೇ ।।೩೦೭।। ಜೇಥೂನಿ ರಿಘೋ ಪಾಹೇ ಅಪಾವೋ । ತೇಥೇಂಚಿ ದೇಖತೀ ಭಗವದ್ಭಾವೋ । ತೇವ್ಹಾ ಅಪಾವ ತೋಚಿ ಉಪಾವೋ । ಮದ್ಭಕ್ತಾ ಪಹಾ ಹೋ ಮದ್ಭಜನೀ ।।೩೦೮।। ಈಶ್ವರ ಆಣಿ ಪಾಷಾಣ । ಭಜನೀ ಮದ್ಭಕ್ತಾ ಸಮಾನ। ಹೇ ಭಕ್ತೀಚೇ ಮುಖ್ಯ ಲಕ್ಷಣ । ''ಚೌಥೀ ಭಕ್ತಿ'' ಜಾಣ ಯಾ ನಾಂವ ।।೩೦೯।। ಸ್ವಕರ್ಮಧರ್ಮವರ್ಣಾಚಾರ । ಕರಿತಾಂಹೀ ನಿಜ ವ್ಯವಹಾರ। ಜ್ಯಾಸೀ ಸರ್ವಭೂತೀ ಮದಾಕಾರ । ತೋ ಭಕ್ತ ಸಾಚಾರ ಪ್ರಿಯ ಮಾಝಾ ।।೩೧೦।। ಜ್ಯಾಸೀ ಸರ್ವಭೂತೀ ಬುದ್ಧಿ ಸಮಾನ । ತೇಚಿ ಭಕ್ತಿ ತೇಚಿ ಜ್ಞಾನ । ತೇಚಿ ಸ್ವಾನಂದ ಸಮಾಧಾನ । ಸತ್ಯ ಸಜ್ಞಾನ ಮಾನಿತೀ ।।೩೧೧।। ಅಸೋ ಸಜ್ಞಾನಾಚೀ ಕಥಾ । ಜ್ಯಾಸೀ ಸರ್ವ ಭೂತೀ ಸಮತಾ । ತೋ ಮಜಹೀ ಮಾನಲಾ ತತ್ತ್ವತಾ । ಮೋಕ್ಷ ಹೀ ಸರ್ವಥಾ ವಂದೀ ತ್ಯಾತೇ ।।೩೧೨।। ಸರ್ವಾಭೂತೀ ಆತ್ಮಾರಾಮು । ಐಸೇ ಕಳಲೇ ಜ್ಯಾ ನಿಃಸೀಮು । ತೇಚಿ ಭಕ್ತಿ ಉತ್ತಮೋತ್ತಮು। ಜ್ಞಾನಿಯೇ ಪರಮ ಮದ್ರೂಪೇ ।।೩೧೩।। ಯೋಗ ಯಾಗ ಜ್ಞಾನ ಧ್ಯಾನ । ಸಕಳ ಸಾಧನಾಂಮಾಜೀ ಜಾಣ । ಮುಖ್ಯತ್ವೇ ಹೇಚಿ ಸಾಧನ । ತೇಚಿ ನಿರೂಪಣ ಹರಿ ಸಾಂಗೇ ।।೩೧೪।।

ನರೇಷ್ವಭೀಕ್ಷ್ಣಂ ಮದ್‌ಭಾವಂ ಪುಂಸೋ ಭಾವಯತೋಽಚಿರಾತ್ ।
ಸ್ಪರ್ಧಾಽಸೂಯಾತಿರಸ್ಕಾರಾಃ ಸಾಹಂಕಾರಾ ವಿಯಂತಿ ಹಿ ।।೧೫।।

ಅರ್ಥ:- ಸರ್ವ ನರನಾರಿಯರಲ್ಲಿ ನಿರಂತರವಾಗಿ ನನ್ನನ್ನೇ ನೋಡುತ್ತಿರಲು ಆಗ ಕೆಲವು ದಿನಗಳಲ್ಲಿ ಸಾಧಕನ ಚಿತ್ತದಿಂದ ಸ್ಪರ್ಧೆ, ಈರ್ಷೆ, ತಿರಸ್ಕಾರ ಹಾಗೂ ಅಹಂಕಾರ ಈ ದೋಷಗಳು ದೂರಾಗಿಬಿಡುವುವು.

ಜೋ ಶ್ರೋತ್ರಿಯ ಸದಾಚಾರ ಉತ್ತಮ । ಕಾ ಜೋ ಜಾತಿಸ್ವಭಾವೇ ಅಧಮ । ಕಾ ಅನಾಚಾರೇ ಅಕರ್ಮ । ಯೇಥೇ ಸದ್ಭಾವೇ ಸಮ ದೇಖೇ ಜೋ ವಸ್ತು ।।೩೧೫।। ಚರಾಚರೀ ಭಗವದ್ಭಾವೋ । ದೇಖಣೇ ಹಾ ಶುದ್ಧ ಸ್ವಭಾವೋ । ತರೀ ನರಾಚ್ಯಾಚ ಠಾಯೀ ದೇವೋ । ಸಾಕ್ಷೇಪೇ ಪಹಾ ಹೋ ಕೃಷ್ಣ ಕಾ ಸಾಂಗೇ ।।೩೧೬।। ಮನುಷ್ಯಾಂಚ್ಯಾ ಠಾಯೀ ಜಾಣ । ಪ್ರಕಟ ದಿಸತೀ ದೋಷಗುಣ । ತೇಥ ಸಾಕ್ಷೇಪೇ ಆಪಣ । ಬ್ರಹ್ಮ ಪರಿಪೂರ್ಣ ಪಹಾವೇ ।।೩೧೭।।

ಬ್ರಾಹ್ಮಣನ ಮಡಿ ಧೋತರವಾಗಿರಲಿ ಅಥವಾ ಸೆರೆ ಕುಡಿಯುವ ಮನುಷ್ಯನ ಮಲಿನ ವಸ್ತ್ರವಾಗಿರಲಿ ನೂಲಿನ ದೃಷ್ಟಿಯಿಂದ ಎರಡೂ ಒಂದೇ ಆಗಿರುವುವು. ಅದರಂತೆ ಆತ್ಮಸ್ವರೂಪದಲ್ಲಿ ಸೊಣ ಹಾಗೂ ಬ್ರಹ್ಮದೇವ ಒಂದೇ ಆಗಿರುವರು ।।೩೦೬।। ನನ್ನ ಭಕ್ತರಿಗೆ ಆತ್ಮಸ್ವರೂಪದಲ್ಲಿ ಸೊಣ ಹಾಗೂ ಬ್ರಹ್ಮದೇವ ಒಂದೇಯಾಗಿದ್ದು ಇದು ನಾಲ್ಕನೆ ಭಕ್ತಿಯ ಅವಸ್ಥೆಯಾಗಿರುವುದು. ಇದರಲ್ಲಿ ಅಪಾಯವು ಪ್ರವೇಶಮಾಡಲು ಶಕ್ಯವಿಲ್ಲ ।।೩೦೭।। ಕಾರಣ ಎಲ್ಲಿ ಅಪಾಯದ ಉದ್ಭವವಾಗುವುದೋ, ಅಲ್ಲಿಯೇ ಅವರು ಭಗವದ್ಭಾವನೆ ಧರಿಸುವರು. ಆದ್ದರಿಂದ ನನ್ನ ಭಕ್ತರಿಗೆ ಭಜನೆಯಲ್ಲಿ ಅಪಾಯವೇ ಉಪಾಯವಾಗುವುದು ।।೩೦೮।। ನನ್ನ ಭಕ್ತನಿಗೆ ಭಜನೆಯಲ್ಲಿ ಈಶ್ವರ ಮತ್ತು ಪಾಷಾಣ ಸಮಾನವಾಗಿ ತೋರುವುದು. ಇದೇ ಭಕ್ತಿಯ ಮುಖ್ಯ ಲಕ್ಷಣವಾಗಿರುವುದು. ಇದಕ್ಕೆ ಮಾತ್ರ ನಾಲ್ಕನೆಯ ಭಕ್ತಿ ಎಂದು ಹೇಳುವರು ।।೩೦೯।। ತನ್ನ ಕರ್ಮಗಳಲ್ಲಿ, ಕರ್ಮಾಚಾರಗಳಲ್ಲಿ ಅಥವಾ ತನ್ನ ವ್ಯವಹಾರಗಳಲ್ಲಿ ಯಾರಿಗೆ ಸರ್ವಪ್ರಾಣಿಮಾತ್ರರಲ್ಲಿ ಪರಮೇಶ್ವರ ಸ್ವರೂಪವೇ ತೋರುವುದೋ, ಆತನೇ ನಿಜವಾಗಿಯೂ ನನ್ನ ಪ್ರಿಯ ಭಕ್ತನು ।।೩೧೦।। ಸರ್ವಪ್ರಾಣಿಮಾತ್ರರ ವಿಷಯದಲ್ಲಿ ಸಮಾನ ಬುದ್ಧಿ ಇಡುವುದು ಇದೇ ಭಕ್ತಿ ಇದೇ ಜ್ಞಾನವಾಗಿರುವುದು. ಇದೇ ನಿಜವಾದ ಸ್ವಾನಂದ ಸಮಾಧಾನವಾಗಿರುವುದು. ಹೀಗೆ ಜ್ಞಾನೀ ತಿಳಿದಿರುವನು ।।೩೧೧।। ಇಂತಹ ಸಜ್ಞಾನಿಯ ಮಾತು ಇರಲಿ, ಸರ್ವಪ್ರಾಣಿಮಾತ್ರರಲ್ಲಿ ಸಮಬುದ್ಧಿಯು ಯಾರಲ್ಲಿ ಇರುವುದೋ, ಆತನು ನನಗೂ ಸಹ ನಿಜವಾಗಿಯೂ ಮಾನ್ಯನು. ಆತನಿಗೆ ಮೋಕ್ಷವೂ ಸಹ ವಂದಿಸುವುದು ।।೩೧೨।। ಭೂತಮಾತ್ರರಲ್ಲಿ ಆತ್ಮಾರಾಮನು ಓತಪ್ರೋತ ತುಂಬಿರುವನು ಎಂದು ಯಾರಿಗೆ ನಿಃಸಂಶಯವಾಗಿ ತಿಳಿದಿದೆಯೋ, ಆತನೇ ಉತ್ತಮ ಭಕ್ತನು. ಆತನೇ ತದ್ರೂಪ ಭಾವದಿಂದ ಉತ್ತಮೋತ್ತಮ ಜ್ಞಾನಿಯಾಗಿರುವನು ।।೩೧೩।। ಯೋಗ, ಯಾಗ, ಜ್ಞಾನ, ಧ್ಯಾನ ಈ ಸರ್ವ ಸಾಧನೆಯಲ್ಲಿ ಮುಖ್ಯಸಾಧನೆ ಇದೇ ಆಗಿರುವುದು. ಈ ವಿಷಯವನ್ನು ಕುರಿತು ಈಗ ಶ್ರೀಕೃಷ್ಣನು ನಿರೂಪಣೆ ಮಾಡುವನು ।।೩೧೪।।

ಶ್ರೋತ್ರೀಯ ಉತ್ತಮ ಸದಾಚಾರಸಂಪನ್ನನಾದವನು ಅಥವಾ ಜಾತಿಸ್ವಭಾವದಿಂದ ಅಧಮ ಜಾತಿಯವನಾಗಿ ಅನಾಚಾರದಿಂದ ಕೆಟ್ಟ ಕರ್ಮಗಳನ್ನು ಮಾಡುವವನು ಈ ಈರ್ವರಲ್ಲಿ ಸದ್‌ಭಾವನೆಯಿಂದ ಬ್ರಹ್ಮತತ್ವವು ಸಮಸಮಾನವಾಗಿದೆ ಎಂದು ಕಾಣಬೇಕು ।।೩೧೫।। ಹೀಗೆಯೇ ಸರ್ವ ಚರಾಚರಗಳಲ್ಲಿ ಭಗವದ್‌ಭಾವ ಕಾಣುವುದು ಇದೇ ಶುದ್ಧ ಭಕ್ತಿಯಾಗಿದೆ. ಹೀಗಿರುತ್ತಿರಲು ಮಾನವರಲ್ಲಿ ದೇವನಿರುವನು ಎಂದು ಆಗ್ರಹದಿಂದ ಶ್ರೀಕೃಷ್ಣನು ಏಕೆ ವರ್ಣಿಸುತ್ತಿರುವನು? ।।೩೧೬।।(ಉತ್ತರ) ಮಾನವರಲ್ಲಿ ಗುಣದೋಷಗಳು ಪ್ರಕಟವಾಗುತ್ತಿರುವುವು. ಆದ್ದರಿಂದ ಅವರಲ್ಲಿ ಪರಿಪೂರ್ಣವಾಗಿ ಬ್ರಹ್ಮ ಕಾಣಬೇಕು ।।೩೧೭।।

ಚೌರ್‍ಯಾಂಶೀ ಲಕ್ಷ ಯೋನೀ ಅಪಾರ । ತ್ಯಾಂತ ತ್ರ್ಯಾಂಶೀ ಲಕ್ಷ ನವ್ಯಾಣ್ಣವ ಸಹಸ್ರ । ನವತೇ ನವ್ಯಾಣ್ಣವ ಯೋನೀ ಸಾಚಾರ । ಮುಕ್ತ ನಿರಂತರ ಗುಣದೋಷಾರ್ಥೀ ।೩೧೮॥ ಪರೀ ಮನುಷ್ಯಯೋನೀಚ್ಯಾ ಠಾಯೀ । ದೋಷ ನ ದೇಖೇ ಜೋ ಪಾಹೀ । ತೋಚಿ ದೇಹೀ ವಿದೇಹೀ । ಅನ್ಯಥಾ ನಾಹೀ ಯೇ ಅರ್ಥೀ ।೩೧೯॥ ಮನುಷ್ಯದೇಹೀ ಬ್ರಹ್ಮಭಾವೋ । ದೇಖೇ ತೋ ಸಭಾಗ್ಯ ಪಹಾ ಹೋ । ಚಹೂ ಮುಕ್ತೀಂಚಾ ತೋಚಿ ರಾವೋ । ಜಗೀ ನಿಃಸಂದೇಹೋ ತೋ ಏಕ ।೩೨೦॥ ಸರ್ವ ಭೂತೀ ಭಗವದ್ಭಜನ । ಐಸೇ ಜ್ಯಾಸಿ ಅಖಂಡ ಸಾಧನ । ತಯಾ ನರಾಚಾ ದೇಹಾಭಿಮಾನ । ಕ್ಷಣಾರ್ಧೇ ಜಾಣ ಸ್ವಯೇ ಜಾಯೇ ।೩೨೧॥ ಜಾತಾ ದೇಹೀಂಚಾ ಅಹಂಕಾರ । ನಿಘೇ ಸಕುಟುಂಬ ಸಪರಿವಾರ । ಸ್ಪರ್ಧಾ ಅಸೂಯಾ ತಿರಸ್ಕಾರ । ಯೇಣೇಸೀ ಸತ್ವರ ಸಮೂಳ ನಿಘೇ ।೩೨೨॥ ದೇಹೀ ಮಮತಾ ತೋಚಿ ''ಅಭಿಮಾನ'' । ಆಪಲ್ಯಾ ಜ್ಞಾನೇಸೀ ಸಮಾನ । ತ್ಯಾಚೇ ನಿರ್ಭರ್ತ್ಸಣೇ ಜೇ ಜ್ಞಾನ । ''ಸ್ಪರ್ಧಾ'' ಜಾಣ ಯಾ ನಾಂವ ।೩೨೩॥ ಆಪಣಾಹೂನಿ ಅಧಿಕ ಜ್ಞಾನ । ಐಸೇ ಜಾಣೋನಿ ಆಪಣ । ತ್ಯಾಚೇ ಗುಣೇ ದೋಷಾರೋಪಣ । ಕರಣೇ ತೇ ಜಾಣ ''ಅಸೂಯಾ'' ।೩೨೪॥ ಭಾವಿಕ ಜೇ ಸಾಧಕ ಜನ । ತ್ಯಾಂಚೇ ಛಳೂನ ಸಾಂಡೀ ಸಾಧನ । ಧಿಕ್ಕಾರೂನಿ ನಿರ್ಭರ್ತ್ಸೀ ಪೂರ್ಣ । ''ತಿರಸ್ಕಾರ'' ಜಾಣ ಯಾ ನಾಂವ ।೩೨೫॥ ಇತ್ಯಾದಿ ದೋಷಸಮುದಾವೋ । ಘೇಊನಿ ಪಳೇ ಅಹಂಭಾವೋ । ಸರ್ವಾಭೂತೀ ಭಗವದ್ಭಾವೋ । ದೇಖತಾಂಚ ಪಹಾಹೋ ತತ್ಕಾಳ ।೩೨೬॥ ಸರ್ವ ಭೂತೀ ಸಮತ್ವೇ ಭಜತಾ । ಹೇಚಿ ಶ್ರೇಷ್ಠ ಸಾಧನ ತತ್ತ್ವತಾ । ಯೇಣೇ ಪೂರ್ಣಬ್ರಹ್ಮ ಲಾಭೇ ಹಾತಾ । ಹೇ ಸಾಧೇ ಅವಸ್ಥಾ ನರದೇಹೀ ।೩೨೭॥ ಸಾಂಡಾವೇ ಮಮತೇಚೇ ಕಾಜ । ಸಾಂಡಾವೇ ಯೋಗ್ಯತೇಚೇ ಭೋಜ । ಸಾಂಡಾವೀ ಲೌಕಿಕಾಚೀ ಲಾಜ । ಬ್ರಹ್ಮಸಾಯುಜ್ಯ ತೈ ಲಾಭೇ ।೩೨೮॥ ಸಾಂಡಾವೀ ದೇಹಗರ್ವತಾ । ಸಾಂಡಾವೀ ಸನ್ಮಾನ ಅಹಂತಾ । ಸಾಂಡಾವೀ ಶ್ರೇಷ್ಠತ್ವಪೂಜ್ಯತಾ । ಬ್ರಹ್ಮಸಾಯುಜ್ಯತಾ ತೈ ಲಾಭೇ ।೩೨೯॥ ತತ್ಕಾಳ ಹೋಇಜೇ ಬ್ರಹ್ಮಪೂರ್ಣ । ಯಾ ಪ್ರಾಪ್ತೀಚೇ ಸುಗಮ ಸಾಧನ । ಕೋಣಾಹೀ ನ ಕರವೇ ಜಾಣ । ಲೋಕೇಷಣಾ ದಾರುಣ ಜನಾಸೀ ।೩೩೦॥ ಸಾಂಡಾವಾ ವರ್ಣಾಭಿಮಾನ । ಸ್ವಯೇ ಸಾಂಡೂನಿ ಜಾಣಪಣ । ಅಣುರೇಣೂಂಸೀಹೀ ಲೋಟಾಂಗಣ । ಘಾಲಿತಾ ಪೂರ್ಣ ಬ್ರಹ್ಮಪ್ರಾಪ್ತೀ ।೩೩೧॥

ಒಟ್ಟಿನಲ್ಲಿ ಎಂಬತ್ನಾಲ್ಕು ಲಕ್ಷ ಯೋನಿಗಳಿರುವುವು. ಅವುಗಳಲ್ಲಿ ಎಂಬತ್ತು ಮೂರು ಲಕ್ಷ ತೊಂಬತ್ತು ಒಂಬತ್ತು ಸಾವಿರ ಒಂಬತ್ತು ನೂರಾ ತೊಂಬತ್ತು ಒಂಬತ್ತು ಯೋನಿಗಳು ಗುಣದೋಷಗಳಿಂದ ಯಾವಾಗಲೂ ಮುಕ್ತವಾಗಿವೆ ।೩೧೮॥ ಆದಕ್ಕಾಗಿ ಮನುಷ್ಯಯೋನಿಯಲ್ಲಿ ಯಾವನು ದೋಷ ಕಾಣಲಾರನೋ, ಆತನು ದೇಹದಲ್ಲಿ ಇದ್ದು ವಿದೇಹೀ ಅವಸ್ಥೆ ಪ್ರಾಪ್ತಮಾಡಿಕೊಳ್ಳುವನು. ಇದರಲ್ಲಿ ಯಾವ ಸಂಶಯವೂ ಇಲ್ಲ ।೩೧೯॥ ಮನುಷ್ಯ ದೇಹದಲ್ಲಿ ಯಾವನು ಬ್ರಹ್ಮತತ್ವ ಕಾಣುವನೋ, ಆತನೇ ನಿಜವಾಗಿಯೂ ಭಾಗ್ಯವಂತನು. ಆತನು ನಾಲ್ಕು ಮುಕ್ತಿಗಳ ರಾಜನಾಗಿರುವನು. ಜಗತ್ತಿನಲ್ಲಿ ನಿಃಸಂದೇಹಿ ಆತನೇ ಆಗಿರುವನು ।೩೨೦॥ ಸರ್ವಪ್ರಾಣಿಮಾತ್ರರಲ್ಲಿ ಭಗವದ್ಭಾವದಿಂದ ಕಾಣುವ ಸಾಧನೆಯು ಅಖಂಡವಾಗಿ ಇರುವ ಆ ಯಾವ ಪುರುಷನ ದೇಹಾಭಿಮಾನವು ಒಂದೇ ಕ್ಷಣದಲ್ಲಿ ಸ್ವತಃನಿವಾರಣೆಯಾಗುವುದು ।೩೨೧॥ ದೇಹದ ಅಹಂಕಾರವು ನಷ್ಟವಾಗುತ್ತಲೇ ಸ್ಪರ್ಧಾ, ಅಸೂಯೇ, ತಿರಸ್ಕಾರ ಈ ಎಲ್ಲವೂ ಸಹಕುಟುಂಬ ಸಹಪರಿವಾರಸಮೇತ ಕೂಡಲೇ ಹೊರಟು ಹೋಗುವುವು ।೩೨೨॥ ದೇಹದ ಮೇಲೆ ಮಮತೆಯನ್ನಿಡುವುದೇ ಅಭಿಮಾನವಾಗಿರುವುದು. ತನ್ನ ಜ್ಞಾನದ ಸರಿಸಮಾನವಾಗಿ ಯಾರ ಜ್ಞಾನವಿದೆಯೋ, ಆ ಜ್ಞಾನದ ಅವಹೇಳನೆ ಮಾಡುವಿಕೆಗೆ ಸ್ಪರ್ಧೆ ಎಂದು ಹೇಳುವರು ।೩೨೩॥ ತನಗಿಂತಲೂ ಇನ್ನೊಬ್ಬನ ಜ್ಞಾನವು ಅಧಿಕವಾಗಿದೆ ಎಂದು ತಿಳಿದೂ ಕೂಡ ಆತನ ಗುಣಗಳಿಗೆ ದೋಷಾರೋಪ ಮಾಡುವಿಕೆಗೆ ''ಅಸೂಯೆ'' ಎಂದು ಕರೆಯುವರು. ಇದನ್ನು ನೀನು ತಿಳಿ ।೩೨೪॥ ಭಾವಿಕ ಜನರಿಗೆ ಪೀಡಿಸುತ್ತ ಅವರ ಸಾಧನೆಗಳನ್ನು ನಷ್ಟಗೊಳಿಸಿ ಅವರನ್ನು ಧಿಕ್ಕಾರ ಮಾಡಿ ಅವರನ್ನು ದೂರುವಿಕೆಗೆ ''ತಿರಸ್ಕಾರ'' ಎಂದು ಹೇಳುವರು ।೩೨೫॥ ಸರ್ವಭೂತಗಳಲ್ಲಿ ಭಗವದ್ಭಾವ ಕಾಣುತ್ತಲೇ ಅಹಂಕಾರವು ಈ ಯಾವ ಸರ್ವದೋಷಗಳ ಸಮುದಾಯದೊಂದಿಗೆ ತತ್ಕಾಲದಲ್ಲಿ ಹೊರಟು ಹೋಗುವುದು ।೩೨೬॥ ಸರ್ವಪ್ರಾಣಿಮಾತ್ರರಲ್ಲಿ ಸಮದೃಷ್ಟಿಯನ್ನಿಟ್ಟು ಭಜಿಸಬೇಕು. ನಿಜವಾಗಿ ಇದೇ ಸಾಧನೆಯು ಸರ್ವಶ್ರೇಷ್ಠವಾಗಿರುವುದು. ಈ ಸಾಧನೆಯಿಂದ ಪೂರ್ಣ ಬ್ರಹ್ಮದ ಪ್ರಾಪ್ತಿಯಾಗುವುದು. ಈ ಲಾಭವು ನರದೇಹದಲ್ಲಿ ಮಾತ್ರ ಆಗುವುದು ।೩೨೭॥ ಮಮತೆಯ ಕಾರ್ಯ ತ್ಯಜಿಸಬೇಕು. ತನ್ನ ಯೋಗ್ಯತೆಯ ಅಪೇಕ್ಷೆ ಮನಸ್ಸಿನಿಂದ ಬಿಟ್ಟುಬಿಡಬೇಕು. ಲೋಕಲಜ್ಜೆಯ ಮೇಲೆ ನೀರು ಹಣಿಸಬೇಕು. ಹೀಗೆ ಮಾಡಲು ಬ್ರಹ್ಮಸಾಯುಜ್ಯತೆಯು ಪ್ರಾಪ್ತವಾಗುವುದು ।೩೨೮॥ ದೇಹದ ಗರ್ವವನ್ನು ಕಿತ್ತೊಗೆಯಬೇಕು. ಸನ್ಮಾನ ಹಾಗೂ ಅಹಂಕಾರ ಒಗೆದುಬಿಡಬೇಕು. ದೊಡ್ಡಸ್ಥಿಕೆ ಹಾಗೂ ಪೂಜ್ಯತೆ ತ್ಯಜಿಸಿದಾಗಲೇ ಬ್ರಹ್ಮಸಾಯುಜ್ಯತೆ ಪ್ರಾಪ್ತವಾಗುವುದು ।೩೨೯॥ ತತ್ಕಾಲದಲ್ಲಿ ಪೂರ್ಣ ಬ್ರಹ್ಮನಾಗುವ ಇದು ಸುಲಭವಾದ ಸಾಧನೆಯಾಗಿದೆ. ಹೀಗಿದ್ದರೂ ಇದನ್ನು ಯಾರೂ ಸಾಧಿಸುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಜನರಿಗೆ ಲೌಕಿಕದ ಇಚ್ಛೆಯು ದಾರುಣವಾಗಿರುವುದು ।೩೩೦॥ ವರ್ಣಾಭಿಮಾನಕ್ಕೆ ದೂರ ಒಗೆಯಬೇಕು. ಸ್ವತಃದ ಜಾಣತನ ಬಿಟ್ಟುಬಿಡಬೇಕು ಮತ್ತು ಅಣುರೇಣುವಿಗೂ ಕೂಡ ಲೋಟಾಂಗಣ ಹಾಕಬೇಕು. ಆಗ ಮಾತ್ರ ಪರಬ್ರಹ್ಮದ ಪ್ರಾಪ್ತಿಯಾಗುವುದು ।೩೩೧॥

ಜೋ ಸಾಂಡೀ ಲೋಕೇಷಣೇಚೀ ಲಾಜ । ತ್ಯಾಂಚೇ ತತ್ಕಾಳ ಹೋಯ ಕಾಜ । ತೇಚಿ ವಿಖೀಂಚೇ ನಿಜಗುಜ । ಸ್ವಯೇ ಅಧೋಕ್ಷಜ ಸಾಂಗತ ।೩೩೨॥

ವಿಸೃಜ್ಯ ಸ್ಮಯಮಾನಾನ್ ಸ್ವಾನ್ ದೃಶಂ ವ್ರೀಡಾಂ ಚ ದೈಹಿಕೀಮ್ ।
ಪ್ರಣಮೇದ್ದಂಡವದ್ ಭೂಮಾವಾಶ್ವಚಾಂಡಾಲಗೋಖರಮ್ ।೧೬॥

ಅರ್ಥ:- ತಮ್ಮವರು ನಕ್ಕರೆ ನಗಲಿ ಅದರತ್ತ ಲಕ್ಷಿಸಬಾರದು. ನಾನು ಉತ್ತಮ, ಅವನು ಕೆಟ್ಟವ ಹೀಗೆ ದೇಹದೃಷ್ಟಿ ಹಾಗೂ ಲೋಕಲಜ್ಜೆ ಬಿಟ್ಟುಬಿಡಬೇಕು. ನಾಯೀ, ಚಾಂಡಾಲ, ಆಕಳು, ಕತ್ತೆ ಈ ಪ್ರಾಣಿಗಳಿಗೆ ಎಲ್ಲರ ಎದುರು ಭೂಮಿಯ ಮೇಲೆ ದಂಡವತ್ ಪ್ರಣಾಮ ಪ್ರೇಮದಿಂದ ಮಾಡಬೇಕು.

ಸುಹೃದಾ ದೇಖತಾ ಲೋಟಾಂಗಣ । ಘಾಲತಾ ಹಾಂಸತೀಲ ಸಂಪೂರ್ಣ । ಯಾಲಾಗೀ ವಿದೇಶೀ ಆಪಣ । ಘಾಲಾವೇ ಲೋಟಾಂಗಣ ಗೋ-ಖರ-ಶ್ವಾನಾ ।೩೩೩॥ ಐಶೀ ಲೌಕಿಕಾಚೀ ಲಾಜ । ಧರಿತಾ ಸಿದ್ಧೀ ನ ಪವೇ ಕಾಜ । ಲೋಟಾಂಗಣಾಚೇ ನಿಜಭೋಜ । ನಾಚಾವೇ ನಿರ್ಲಜ್ಜ ಸುಹೃದಾಪಾಶೀ ।೩೩೪॥ ಸಾಸು ಸಾಸರಾ ಜಾಂವಯೀ । ಇಷ್ಟ ಮಿತ್ರ ವ್ಯಾಹೀ ಭಾಈ । ಜ್ಯಾಂಸೀ ದೇಖತಾಂಚಿ ಪಾಹೀ । ವಿರಜೇ ದೇಹೀ ಲಾಜೋನಿ ।೩೩೫॥ ತ್ಯಾಂಸೀ ದೇಖತಾ ಆಪಣ । ಲಾಜ ಸಾಂಡೋನಿಯಾ ಜಾಣ । ಚಾಂಡಾಳಾದಿ ಹೀನ ಜನ । ಗೋ ಖರ ಶ್ವಾನ ವಂದಾವೀ ।೩೩೬॥ ತೇಹೀ ಐಸೇ ಗಾ ವಂದನ । ದಂಡಾಚೇ ಪರೀ ಆಪಣ । ಸರ್ವ ಭೂತಾ ಲೋಟಾಂಗಣ । ಭಗವದ್ಭಾವೇ ಜಾಣ ಘಾಲಾವೇ ।೩೩೭॥ ತೇಥ ಬ್ರಹ್ಮವೇತ್ತೇ ಬ್ರಾಹ್ಮಣ । ಕಾ ಅಂತ್ಯಜಾದಿ ಹೀನ ಜನ । ಯಾಂಚ್ಯಾ ಠಾಯೀ ಲೋಟಾಂಗಣ । ಸಾರಿಖೇ ಜಾಣ ಸದ್ಭಾವೇ ।೩೩೮॥ ಗಾಯ ಗಾಢವ ಸೂಕರ ಶ್ವಾನ । ಯಾಂಚ್ಯಾಹೀ ಠಾಯೀ ಆಪಣ । ದಂಡವತ ಲೋಟಾಂಗಣ । ಸದ್ಭಾವೇ ಸಂಪೂರ್ಣ ಘಾಲಾವೇ ।೩೩೯॥ ಸಾಧಾವಯಾ ನಿಜಕಾರ್ಯ ಪೂರ್ಣ । ಲೋಕಲಾಜ ಸಾಂಡಾವೀ ಖಾಣೋನ । ಮಾಶೀ ಮುಂಗೀ ಮುರಕೂಟ ಜಾಣ । ತ್ಯಾಸೀಹೀ ಲೋಟಾಂಗಣ ದಂಡಪ್ರಾಯ ।೩೪೦॥ ಭಾವೇ ವಂದಿತಾ ಗೋ-ಖರ-ರಜ । ಪ್ರಕಟೇ ಭಗವದ್ಭಜನತೇಜ । ತ್ಯಜೂನಿ ಸ್ವಜನಾಂಚೀ ಲಾಜ । ವಂದೀ ನಿಜಭೋಜ ಲೋಟಾಂಗಣೇಸೀ ।೩೪೧॥ ತ್ಯಜೂನಿ ಸಂದೇಹವಿಷಮತಾ । ಲೋಕಲಜ್ಜೇ ಹಾಣೋನಿ ಲಾತಾ । ಭಗವದ್ಬುದ್ಧೀ ಸರ್ವಭೂತಾ । ಘಾಲಾವೇ ತತ್ತ್ವತಾ ಲೋಟಾಂಗಣ ।೩೪೨॥ ಪುಢಣಸೀ ಐಸೇ ಹೇ ಸಾಧನ । ಕೋಠವರೀ ಕರಾವೇ ಆಪಣ । ತೇಚಿ ಮರ್ಯಾದಾನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ।೩೪೩॥

ಯಾವನು ಲೋಕೇಷಣದ ನಾಚಿಕೆಯನ್ನು ಬಿಟ್ಟುಬಿಡುವನೋ, ಆತನ ಕಾರ್ಯ ತತ್ಕಾಲದಲ್ಲಿ ಪೂರ್ಣವಾಗುವುದು. ಈ ವಿಷಯವನ್ನು ಕುರಿತು ಹಿತವಾದ ಗುಟ್ಟು ಶ್ರೀಕೃಷ್ಣನು ಹೇಳುತ್ತಿರುವನು ।೩೩೨॥

ತನ್ನ ಆಪ್ತೇಷ್ಟರ ಎದುರಿನಲ್ಲಿ ಲೋಟಾಂಗಣ ಹಾಕಿದರೆ ಅವರು ನಗುವರು ಎಂಬ ನಾಚಿಕೆಯಿಂದ ನಿರ್ಜನ ಪ್ರದೇಶದಲ್ಲಿ ಹೋಗಿ ಅಲ್ಲಿ ಆಕಳು, ಕತ್ತೆ, ನಾಯಿಗಳಿಗೆ ಲೋಟಾಂಗಣ ಹಾಕುವುದು ।೩೩೩॥ ಹೀಗೆ ಲೌಕಿಕರ ಲಜ್ಜೆ ಹಿಡಿದರೆ ತನ್ನ ಕಾರ್ಯ ಸಿದ್ಧಿಯಾಗಲಾರದು. ಆದ್ದರಿಂದ ಇಷ್ಟಮಿತ್ರರ ಎದುರಿನಲ್ಲಿಯೇ ನಾಚಿಕೆಯನ್ನು ತೊರೆದು ಲೋಟಾಂಗಣ ಹಾಕುತ್ತ ಕುಣಿಯಬೇಕು ।೩೩೪॥ ಅತ್ತೆ, ಮಾವ, ಅಳಿಯ, ಇಷ್ಟ ಮಿತ್ರರು, ಬೀಗರು, ಅಣ್ಣತಮ್ಮಂದಿರು ಇವರನ್ನು ಕಂಡಾಕ್ಷಣವೇ ಮನದಲ್ಲಿ ನಾಚಿಕೆಯುಂಟಾಗುವುದು ।೩೩೫॥ ಈ ನಾಚಿಕೆ ಬಿಟ್ಟುಕೊಟ್ಟು ಅವರೆಲ್ಲರೂ ನೋಡುತ್ತಿದ್ದಂತೆಯೇ ಚಾಂಡಾಳಾದಿ ಹೀನ ಜನರಿಗೆ ಹಾಗೂ ಆಕಳು, ಕತ್ತೆ, ನಾಯಿಗಳಿಗೆ ಮನಃಪೂರ್ವಕವಾಗಿ ವಂದನೆ ಮಾಡಬೇಕು ।೩೩೬॥ ಮಾಡುವ ಈ ವಂದನೆ ಹೇಗಿರಬೇಕೆಂದರೆ, ಸರ್ವ ಪ್ರಾಣಿಮಾತ್ರರಲ್ಲಿ ಭಗವಂತನ ಭಾವನೆಯನ್ನು ಧರಿಸಿ ದಂಡವತ್ (ಕೋಲಿನಂತೆ) ಲೋಟಾಂಗಣ ಹಾಕಬೇಕು ।೩೩೭॥ ಆಗ ಅಲ್ಲಿ ಬ್ರಹ್ಮವೇತ್ತೆ ಬ್ರಾಹ್ಮಣರಾಗಿರಲಿ, ಅಥವಾ ಅಂತ್ಯಜಾದಿ ನೀಚ ಜನರಾಗಿರಲಿ, ಅವರಿಗೆ ಸದ್‌ಭಾವನೆಯಿಂದ ಒಂದೇರೀತಿಯಾಗಿ ಲೋಟಾಂಗಣ ಹಾಕಬೇಕು ।೩೩೮॥ ಆಕಳು, ಕತ್ತೆ, ಹಂದೀ, ನಾಯೀ ಇವುಗಳಿಗೂ ಕೂಡ ತಾನು ಸರ್ವಪ್ರಾಣಿಗಳು ಭಗವಂತನ ಸ್ವರೂಪವೇ ಆಗಿವೆ ಎಂಬ ಸದ್‌ಭಾವನೆಯಿಂದ ಲೋಟಾಂಗಣ ಹಾಕಬೇಕು ।೩೩೯॥ ತನ್ನ ಕಾರ್ಯ ಪರಿಪೂರ್ಣವಾಗಿ ಸಾಧಿಸುವುದಕ್ಕಾಗಿ ಲೋಕಲಜ್ಜೆಯನ್ನು ಸಮೂಲ ಕಿತ್ತೊಗೆಯಬೇಕು. ನೊಣ, ಇರುವೆ, ಸೊಳ್ಳೆ ಇವುಗಳಿಗೂ ಕೂಡ ದಂಡವತ ಹಾಕಬೇಕು ।೩೪೦॥ ಆಕಳು, ಕತ್ತೆ ಇವುಗಳ ಚರಣಧೂಳಿಗೆ ವಂದನೆ ಮಾಡಲು ಭಗವದ್ಭಜನೆಯ ತೇಜವು ಪ್ರಕಟವಾಗುವುದು. ಆದ್ದರಿಂದ ಸ್ವಜನರ ಲಜ್ಜೆಯನ್ನು ಬಿಟ್ಟುಕೊಟ್ಟು ಸರ್ವರಿಗೂ ಲೋಟಾಂಗಣ ಹಾಕುತ್ತ ವಂದಿಸಬೇಕು ।೩೪೧॥ ಸಂಶಯ ಮತ್ತು ವೈಷಮ್ಯ ಇವೆಲ್ಲವನ್ನೂ ತ್ಯಜಿಸಿ ಲೋಕಲಜ್ಜೆಗೆ ಒದ್ದೋಡಿಸಿ ಭಗವದ್ಬುದ್ಧಿಯಿಂದ ಸರ್ವಪ್ರಾಣಿಮಾತ್ರರಿಗೆ ಪ್ರೇಮಭಾವದಿಂದ ಲೋಟಾಂಗಣ ಹಾಕುತ್ತ ವಂದಿಸಬೇಕು ।೩೪೨॥ ಈ ಸಾಧನೆ ಎಲ್ಲಿಯವರೆಗೆ ಮಾಡಬೇಕೆಂಬ ವಿಚಾರವನ್ನು ನೀನು ಕೇಳಬಹುದು. ಅದಕ್ಕಾಗಿ ಅದರ ಮರ್ಯಾದೆಯ ನಿರೂಪಣೆ ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ।೩೪೩॥

ಯಾವತ್ಸರ್ವೇಷು ಭೂತೇಷು ಮದ್‌ಭಾವೋ ನೋಪಜಾಯತೇ । ತಾವದೇವಮುಪಾಸೀತ ವಾಙ್ಮನಃಕಾಯವೃತ್ತಿಭಿಃ ॥೧೭॥

ಅರ್ಥ:- ಎಲ್ಲಿಯವರೆಗೆ ಸಮಸ್ತ ಪ್ರಾಣಿಮಾತ್ರರಲ್ಲಿ ಭಗವದ್ಭಾವನೆಯು ಉಂಟಾಗುವುದಿಲ್ಲವೋ, ಅಲ್ಲಿಯವರೆಗೆ ಈ ಪ್ರಕಾರವಾಗಿ ಮನ, ವಾಣಿ ಮತ್ತು ಶರೀರದಿಂದ ಸರ್ವ ಸಂಕಲ್ಪ ಕರ್ಮದ್ವಾರ ನನ್ನ ಉಪಾಸನೆ ಮಾಡಬೇಕು.

ಆಪುಲಾ ದೇಹ ಘಾಲೋನಿ ಪುಢೇ । ಜೇ ಜೇ ಭೂತ ದೃಷ್ಟೀ ಆತುಡೇ । ತೇಥ ಭಗವದ್ಭಾವೇ ಠಸಾ ಪಡೇ । ವಾಡೇಕೋಡೇ ನಿಶ್ಚಿತ ॥೩೪೪॥ ದೃಷ್ಟೀ ಪಾಹತಾ ಜೇ ಜೇ ಭಾಸೇ । ದೃಷ್ಟೀ ನಾತುಡತಾ ಜೇ ಜೇ ದಿಸೇ । ತೇ ತೇ ಜ್ಯಾಸೀ ಅನಾಯಾಸೇ । ಭಾಸೇ ಆಪೈಸೇ ಚಿದ್ರೂಪ ॥೩೪೫॥ ಮನಾಚೇ ಕಲ್ಪನೇ ಜೇ ಜೇ ಆಲೇ । ಕಾ ಕಲ್ಪನಾತೀತ ಜೇ ಜೇ ಠೇಲೇ । ತೇ ತೇ ಜ್ಯಾಸೀ ಅನುಭವಾ ಆಲೇ । ಸ್ವರೂಪ ಆಪುಲೇ ಮದ್ರೂಪತ್ವೇ ॥೩೪೬॥ ಕಾಯಿಕ ಕರ್ಮಾಚಾರ । ವೈದಿಕ ಲೌಕಿಕ ವ್ಯಾಪಾರ । ತೇ ಜ್ಯಾಸೀ ದಿಸತೀ ಮದಾಕಾರ । ಚರಾಚರ ಮದ್ರೂಪೇ ॥೩೪೭॥ ಜಾಗೃತಿಸ್ವಪ್ನಸುಷುಪ್ತೀಸೀ । ದೇಖಿಜೇ ಭೋಗಿಜೇ ಜ್ಯಾ ಸುಖಾಸೀ । ತೇ ತೇ ಮದ್ರೂಪ ಜ್ಯಾಸೀ । ನಿಶ್ಚಯೇಸೀ ಠಸಾವೇ ॥೩೪೮॥ ಸ್ವಾಭಾವಿಕ ಜೇ ವ್ಯಾಪಾರ । ದೇಹೀ ನಿಫಜತೀ ಅಪಾರ । ಜ್ಯಾಸೀ ಮದ್ರೂಪೇ ಸಾಚಾರ । ನಿಶ್ಚಯೇ ನಿರ್ಧಾರ ಢಳೇನಾ ॥೩೪೯॥ ಐಶೀ ನ ಜೋಡತಾ ಅವಸ್ಥಾ । ಸರ್ವ ಭೂತೀ ಭಗವದ್ಭಾವತಾ । ಭಜಾವೇ ಗಾ ತತ್ತ್ವತಾ । ನಿಜಸ್ವಾರ್ಥಾಲಾಗೂನೀ ॥೩೫೦॥ ಹೇ ಸಾಂಡೂನಿ ಭಜನಾವಸ್ಥಾ । ನಾನಾ ಸಾಧನೀ ಪ್ರಯಾಸ ಕರಿತಾ । ಮಾಝ್ಯಾ ಅನುಭವಾಚೀ ವಾರ್ತಾ । ನ ಚಢೇ ಹಾತಾ ಕಲ್ಪಾಂತೀ ॥೩೫೧॥ ಐಸೇ ಜಾಣೂನಿಯಾ ಆಪಣ । ಸರ್ವಭೂತೀ ಭಗವದ್ಭಜನ । ಕರಾವೇ ನಿಶ್ಚಯೇಸೀ ಜಾಣ । ಹೇ ಆಜ್ಞಾ ಸಂಪೂರ್ಣ ಪೈ ಮಾಝೀ ॥೩೫೨॥ ಸಾಂಡೋನಿ ಯುಕ್ತಿಚೀ ವ್ಯುತ್ಪತ್ತೀ । ಧರಿತಾ ಭಗವದ್ಭಾವ ಸರ್ವಭೂತೀ । ಯೇಣೇಚೀ ಮಾಝೀ ಸುಗಮ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೩೫೩॥ ಮಾಝಿಯೇ ಪ್ರಾಪ್ತೀಚೇ ಸುಗಮ ಸಾಧನ । ಉದ್ಧವಾ ತುವಾ ಪುಶಿಲೇ ಜಾಣ । ತರೀ ಸರ್ವ ಭೂತೀ ಭಗವದ್ಭಜನ । ತದರ್ಥ ಜಾಣ ಸಾಂಗಿತಲೇ ॥೩೫೪॥ ಹಾ ಬ್ರಹ್ಮಪ್ರಾಪ್ತೀಚಾ ಉಪಾವ ಪೂರ್ಣ । ಮಾಝೇ ಜಿವ್ಹಾರೀಂಚೇ ನಿಜಖೂಣ । ಸುಗಮಪ್ರಾಪ್ತೀಲಾಗೀ ಜಾಣ । ಉತ್ತಮ ಸಾಧನ ಸಾಂಗಿತಲೇ ॥೩೫೫॥ ಯೇಣೇ ಸುಗಮ ಜ್ಞಾನಸ್ಥಿತೀ । ಯೇಣೇ ಸುಗಮ ಮಾಝೀ ಭಕ್ತೀ । ಯೇಣೇ ಸುಗಮ ಮಾಝೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೩೫೬॥ ಸರ್ವಭೂತೀ ಬ್ರಹ್ಮಸ್ಥಿತೀ । ಜ್ಯಾಸೀ ನಿಶ್ಚಯೇ ಜಾಹಲೀ ಪ್ರಾಪ್ತೀ । ತ್ಯಾಚೀ ಉಪರಮೇ ಭಜನವೃತ್ತೀ । ತೇಚಿ ಶ್ರೀಪತೀ ಸಾಂಗತ ॥೩೫೭॥

ತನ್ನ ದೇಹ ಸಮೇತ ಯಾವ ಯಾವ ಪ್ರಾಣಿ ತನ್ನ ದೃಷ್ಟಿಗೆ ಬೀಳುವುವೋ ಅವುಗಳ ಮೇಲೆ ಸಹಜವಾಗಿ ಭಗವತ್ಸರೂಪದ ಭಾವನೆಯು ನಿಶ್ಚಿತವಾಗಿ ಎಂದು ಮೂಡಿಕೊಳ್ಳುವುದೋ ॥೩೪೪॥ ದೃಷ್ಟಿಯಿಂದ ನೋಡಲು ಯಾವುದು ತೋರುವುದೋ ಅಥವಾ ದೃಷ್ಟಿ ಹೊರತಾಗಿ ಯಾವುದು ಕಾಣುವುದೋ, ಅವು ಆತನಿಗೆ ಸ್ವಭಾವತವೇ ಜ್ಞಾನಸ್ವರೂಪವಾಗಿ ತೋರುವುವು ॥೩೪೫॥ ಮನಸ್ಸಿನ ಕಲ್ಪನೆಯಲ್ಲಿ ಯಾವ ಯಾವುದು ಬರುವುವೋ, ಅಥವಾ ಯಾವ ಯಾವುವು ಕಲ್ಪನೆಯ ಹೊರಗೆ ಇರುವುವೋ, ಅವೆಲ್ಲವನ್ನೂ ಮದ್ರೂಪದಿಂದ ತನ್ನ ಸ್ವರೂಪವಾಗಿವೆ ಎಂಬ ಅನುಭವವು ಎಂದು ಬರುವುದೋ ॥೩೪೬॥ ದೇಹದಿಂದಾಗುವ ಕರ್ಮದ ಆಚರಣೆಗಳು ಅಥವಾ ವೈದಿಕ ಹಾಗೂ ಲೌಕಿಕ ಆಚಾರಗಳು, ಈ ಎಲ್ಲ ವ್ಯಾಪಾರಗಳೂ ಮತ್ತು ಚರಾಚರವೂ ಕೂಡ ಯಾರಿಗೆ ಮದ್ರೂಪದಿಂದ ನನ್ನ ಆಕಾರವಾಗಿ ತೋರುವುದೋ ॥೩೪೭॥ ಜಾಗೃತೀ, ಸ್ವಪ್ನ ಹಾಗೂ ಸುಷುಪ್ತಿಯಲ್ಲಿ ಯಾವ ಸುಖವನ್ನು ಕಾಣುವನೋ, ಅಥವಾ ಭೋಗಿಸುವನೋ, ಅವೆಲ್ಲವೂ ಮದ್ರೂಪವಾಗಿವೆ ಎಂಬ ಅನುಭವವು ನಿಶ್ಚಿತವಾಗಿ ಎಂದು ಮನಸ್ಸಿಗೆ ನಾಟುವುದೋ ॥೩೪೮॥ ಅಥವಾ ದೇಹದಲ್ಲಿ ಯಾವ ಸ್ವಾಭಾವಿಕ ಅಸಂಖ್ಯ ವ್ಯಾಪಾರಗಳು ಉತ್ಪನ್ನವಾಗುವುವೋ, ಅವೂ ಕೂಡ ನಿಜವಾಗಿಯೂ ಮದ್ರೂಪವಾಗಿರುವುವು. ಹೀಗೆ ಯಾರ ನಿಶ್ಚಯವಾಗಿದೆಯೋ ॥೩೪೯॥ ಈ ಪ್ರಕಾರದ ಅವಸ್ಥೆಯು ಪ್ರಾಪ್ತವಾಗದಿದ್ದರೆ ಸರ್ವ ಭೂತಗಳಲ್ಲಿ ಭಗವದ್ಭಾವನೆ ಇಟ್ಟು ನಿಜಕಲ್ಯಾಣಕ್ಕಾಗಿ ಭಜನೆ ಮಾಡಬೇಕು ॥೩೫೦॥ ಈ ಭಜನೆಯನ್ನು ಬಿಟ್ಟು ಅನೇಕ ಸಾಧನೆಗಳ ಪ್ರಯಾಸ ಮಾಡಿದರೂ ನನ್ನ ಅನುಭವದ ಪ್ರಾಪ್ತಿ ಎಂದಿಗೂ ಆಗಲಾರದು ॥೩೫೧॥ ಇದನ್ನು ಸರಿಯಾಗಿ ತಿಳಿದು ಸರ್ವ ಭೂತಗಳಲ್ಲಿ ಭಗವದ್ಭಾವವನ್ನಿಟ್ಟು ನನ್ನ ಭಜನೆ ಮಾಡಬೇಕು. ಇದು ನನ್ನ ಪೂರ್ಣ ಆಜ್ಞೆಯಾಗಿರುವುದು ॥೩೫೨॥ ಹೇ ಉದ್ಧವಾ, ಯುಕ್ತಿಯ ಮಾತುಗಳನ್ನು ಬಿಟ್ಟು ಸರ್ವ ಭೂತಮಾತ್ರರಲ್ಲಿ ಈಶ್ವರಭಾವವನ್ನಿಡಲು ಸಹಜವಾಗಿ ನನ್ನ ಪ್ರಾಪ್ತಿಯಾಗುವುದು. ಇದನ್ನು ನಿಶ್ಚಯವಾಗಿ ತಿಳಿ ॥೩೫೩॥ ಹೇ ಉದ್ಧವಾ, ನೀನು ನನ್ನ ಪ್ರಾಪ್ತಿಯ ಸುಲಭ ಸಾಧನೆ ಕೇಳಿದ್ದಕ್ಕೆ ನಾನು ''ಭೂತಮಾತ್ರರಲ್ಲಿ ಈಶ್ವರಭಾವವನ್ನಿಟ್ಟು ನನ್ನನ್ನು ಭಜಿಸಬೇಕು'' ಎಂಬ ಉಪಾಯ ಹೇಳಿರುವೆನು ॥೩೫೪॥ ಇದೇ ಬ್ರಹ್ಮಪ್ರಾಪ್ತಿಯ ನಿಜ ಉಪಾಯವಾಗಿದೆ. ಇದು ನನ್ನ ಹೃದಯದ ರಹಸ್ಯವಾಗಿದೆ, ಸುಲಭವಾಗಿ ಬ್ರಹ್ಮಪ್ರಾಪ್ತಿಗಾಗಿ ಉತ್ತಮ ಸಾಧನೆ ಹೇಳಲಾಗಿದೆ ॥೩೫೫॥ ಹೇ ಉದ್ಧವಾ, ಇದರಿಂದಲೇ ನನ್ನ ಜ್ಞಾನ, ನನ್ನ ಭಕ್ತಿ ಮತ್ತು ನನ್ನ ಪ್ರಾಪ್ತಿ ಸುಗಮವಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೩೫೬॥ ಸರ್ವ ಪ್ರಾಣಿ ಮಾತ್ರರಲ್ಲಿ ಬ್ರಹ್ಮಭಾವನೆಯ ಸ್ಥಿತಿ ಯಾರಿಗೆ ನಿಶ್ಚಯವಾಗಿ ಪ್ರಾಪ್ತವಾಗುವುದೋ, ಅವರ ಭಜನವೃತ್ತಿಯೂ ಕೂಡ ನಿಂತುಕೊಳ್ಳುವುದು. ಇದನ್ನು ಶ್ರೀಕೃಷ್ಣನು ಹೇಳುತ್ತಿರುವನು ॥೩೫೭॥

ಸರ್ವ ಬ್ರಹ್ಮಾತ್ಮಕಂ ತಸ್ಯ ವಿದ್ಯಯಾऽऽತ್ಮಮನೀಷಯಾ । ಪರಿಪಶ್ಯನ್ನುಪರಮೇತ್ ಸರ್ವತೋ ಮುಕ್ತಸಂಶಯಃ ॥೧೮॥

ಅರ್ಥ:- ಹೇ ಉದ್ಧವಾ, ಈ ಪ್ರಕಾರವಾಗಿ ಸರ್ವತ್ರ ಆತ್ಮ ಬುದ್ಧೀ ಬ್ರಹ್ಮ ಬುದ್ಧಿಯ ಅಭ್ಯಾಸ ಮಾಡಲು ಆಗ ಕೆಲವೇ ದಿವಸಗಳಲ್ಲಿ ಆತನಿಗೆ ಜ್ಞಾನ ಪ್ರಾಪ್ತವಾಗಿ ಸರ್ವತ್ರ ಬ್ರಹ್ಮಸ್ವರೂಪ ಕಾಣಲಾರಂಭಿಸುವುದು. ಇಂತಹ ದೃಷ್ಟೀ ಪ್ರಾಪ್ತವಾಗಲು ಸರ್ವ ಸಂಶಯ ಸಂದೇಹಗಳು ಸಹಜವಾಗಿ ನಿವೃತ್ತಗೊಳ್ಳುವುವು. ಸರ್ವತ್ರವೂ ನನ್ನ ಸಾಕ್ಷಾತ್ಕಾರವಾಗಿ ಸಂಸಾರದೃಷ್ಟಿಯ ಉಪಶಮನೆಯಾಗುವುದು.

ಕಾಯಾ ವಾಚಾ ಆಣಿ ಚಿತ್ತೇ । ಸರ್ವ ಭೂತೀ ಭಜಲೇ ಮಾತೇ । ತ್ಯಾಸೀ ಭಗವದ್ರೂಪ ಸರ್ವ ಭೂತೇ । ಸುನಿಶ್ಚಿತೇ ಠಸಾವತೀ ॥೩೫೮॥ ತೇವ್ಹಾ ಮೀ ಏಕ ಏಥೇ । ಭಗವದ್ರೂಪ ಪಾಹೇ ಸರ್ವಭೂತೇ । ಹೇಹೀ ವೃತ್ತಿ ಹಾರಪೇ ತೇಥೇ । ದೇಖೇ ಸಭೋವಂತೇ ಪರಬ್ರಹ್ಮ ॥೩೫೯॥ ಪರಬ್ರಹ್ಮ ದೇಖತೀ ವೃತ್ತೀ । ತೇಹೀ ವಿರೇ ಬ್ರಹ್ಮಾ ಆಂತೌತೀ । ಜೇವೀ ಘೃತಕಣಿಕಾ ಘೃತೀ । ಹೋಯ ಸುನಿಶ್ಚಿತೀ ಘೃತರೂಪ ॥೩೬೦॥ ತೇವ್ಹಾ ಬ್ರಹ್ಮಚಿ ಪರಿಪೂರ್ಣ । ಹೇಹೀ ಸ್ಫೂರ್ತಿ ನುರೇ ಜಾಣ । ಗಿಳೂನಿಯಾ ಮೀತೂಪಣ । ಬ್ರಹ್ಮೀ ಬ್ರಹ್ಮಪಣ ಅಹೇತುಕ ॥೩೬೧॥ ತೇಥೇ ಹೇತು ಮಾತು ದೃಷ್ಟಾಂತು । ಖುಂಟಲಾ ವೇದೇಸೀ ಶಾಸ್ತ್ರಾರ್ಥು । ಹಾರಪಲಾ ದೇವಭಕ್ತು । ಅಖಂಡ ವಸ್ತು ಅದ್ವಯತ್ವೇ ॥೩೬೨॥ ಗೇಲಿಯಾ ದೋರಾಚೇ ಸಾಪಪಣ । ದೋರ ದೋರರೂಪೇ ಪರಿಪೂರ್ಣ । ಹೋ ಕಾ ಭಾಸತಾಂಹೀ ಸಾಪಪಣ ! ದೋರೀ ದೋರಪಣ ಅನಸುಟ ॥೩೬೩॥ ತೇವೀ ಪ್ರಪಂಚ ಸಕಾರಣ । ಗೇಲಿಯಾ ಬ್ರಹ್ಮಚಿ ಪರಿಪೂರ್ಣ । ಕಾ ದಿಸತಾಂಹೀ ಪ್ರಪಂಚಾಚೇ ಭಾನ । ಬ್ರಹ್ಮೀ ಬ್ರಹ್ಮಪಣ ಅನುಚ್ಛಿಷ್ಟ ॥೩೬೪॥ ಯಾಚಿಲಾಗೀ ಸರ್ವ ಭೂತೀ । ಕರಿತಾ ಮಾಝೀ ಭಗವದ್ಭಕ್ತೀ । ಏವಢೀ ಸಾಧಕಾಂಸೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೩೬೫॥ ತತ್ಕಾಳ ಪಾವಾವಯಾ ಬ್ರಹ್ಮಪೂರ್ಣ । ಸಾಂಡೂನಿಯಾ ದೋಷಗುಣ । ಸರ್ವ ಭೂತೀ ಭಗವದ್ಭಜನ । ಹೇಚಿ ಸಾಧನ ಮುಖ್ಯತ್ವೇ ॥೩೬೬॥ ಯಾಹೀ ಸಾಧನಾವರತೇ । ಆಣಿಕ ಸಾಧನ ನಾಹೀ ಸರತೇ । ಹೇಚಿ ಪರಮ ಸಾಧನ ಯೇಥೇ । ಮಜಹೀ ನಿಶ್ಚಿತೇ ಮಾನಲೇ ॥೩೬೭॥

ಅಯಂ ಹಿ ಸರ್ವಕಲ್ಪಾನಾಂ ಸಧ್ರೀಚಿನೋ ಮತೋ ಮಮ । ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯವೃತ್ತಿಭಿಃ ॥೧೯॥

ಅರ್ಥ:- ನನ್ನ ಪ್ರಾಪ್ತಿಗಾಗಿ ಇರುವ ಸರ್ವ ಸಾಧನೆಗಳಲ್ಲಿ ಶ್ರೇಷ್ಠ ಸಾಧನೆ ಯಾವುದೆಂದರೆ, ಸರ್ವ ಪ್ರಾಣಿ ಮಾತ್ರರಲ್ಲಿ ಮತ್ತು ಸರ್ವಪದಾರ್ಥಗಳಲ್ಲಿ ಕಾಯಾ, ವಾಚಾ, ಮನಸಾ ಸಮಸ್ತ ವೃತ್ತಿಯಿಂದ ನನ್ನ ಭಾವನೆಯನ್ನೇ ಧರಿಸುವುದು.

ಸರ್ವ ಭೂತೀ ಭಗವದ್‌ದೃಷ್ಟೀ । ಹೇಚಿ ಭಾಂಡವಲ ಮಾಝೇ ಗಾಂಠೀ । ಯೇಣೇ ಭಾಂಡವಲೇ ಕಲ್ಪಕೋಟೀ । ಕರೋನಿ ಸೃಷ್ಟೀ ಮೀ ಅಕರ್ತಾ ॥೩೬೮॥

ಕಾಯಾ, ವಾಚಾ, ಮನಸಾ ಯಾರು ಸರ್ವ ಭೂತಗಳಲ್ಲಿ ಮದ್‌ಭಾವವನ್ನಿಟ್ಟು ನನ್ನ ಭಜನೆ ಮಾಡುತ್ತಿರುವರೋ, ಅವರಿಗೆ ಸರ್ವ ಭೂತಗಳು ಭಗವದ್‌ಸ್ವರೂಪವಾಗಿವೆ ಎಂಬ ನಿಶ್ಚಯ ಹೃದಯದಲ್ಲಿ ನಟ್ಟಿಕೊಳ್ಳುವುದು ॥೩೫೮॥ ನಾನೊಬ್ಬ ಸರ್ವ ಪ್ರಾಣಿಗಳಲ್ಲಿ ಭಗವದ್‌ಸ್ವರೂಪ ಕಾಣುತ್ತಿರುವೆನು ಎಂಬ ಈ ವೃತ್ತಿಯೂ ಕೂಡ ಆ ಸಮಯಕ್ಕೆ ಇಲ್ಲದಾಗುವುದು ಮತ್ತು ಸರ್ವತ್ರ ಸರ್ವ ಪರಬ್ರಹ್ಮವನ್ನೇ ಕಾಣಹತ್ತುವನು ॥೩೫೯॥ ತುಪ್ಪದ ಕಣಗಳು ಕರಗಿದಾಕ್ಷಣ ಅವು ತುಪ್ಪದಲ್ಲಿಯೇ ಹೇಗೆ ಏಕರೂಪವಾಗುವುವೋ, ಅದರಂತೆ ಸರ್ವತ್ರ ಪರಬ್ರಹ್ಮ ನೋಡುವ ವೃತ್ತಿ ಬ್ರಹ್ಮನಲ್ಲಿ ಲೀನವಾಗಿಬಿಡುವುದು ॥೩೬೦॥ ಆಗ ಸರ್ವತ್ರ ಪರಿಪೂರ್ಣವಾಗಿ ಕೇವಲ ಬ್ರಹ್ಮವೇ ತುಂಬಿಕೊಂಡಿರುವುದು ಎಂಬ ಈ ಸ್ಫೂರ್ತಿಯು ಕೂಡ ಉಳಿದುಕೊಳ್ಳುವುದಿಲ್ಲ. ನಾನು-ನೀನು ಎಂಬುದನ್ನು ನುಂಗಿ ಬ್ರಹ್ಮಸ್ವರೂಪವು ಬ್ರಹ್ಮನಲ್ಲಿ ಅಹೇತುಕದಿಂದ ಏಕರೂಪವಾಗುವುದು ॥೩೬೧॥ ಆಗ ಹೇತು, ಮಾತು, ದೃಷ್ಟಾಂತ, ವೇದ ಸಹ ಶಾಸ್ತ್ರಾರ್ಥ ಈ ಎಲ್ಲವೂ ಕುಂಠಿತವಾಗುವುವು. ದೇವತ್ವ ಮತ್ತು ಭಕ್ತತ್ವ ಇವು ಕೂಡ ಇಲ್ಲದಾಗುವುವು. ಕೇವಲ ಅದ್ವೈತ ಮತ್ತು ಅಖಂಡ ಪರಬ್ರಹ್ಮ ಮಾತ್ರ ಉಳಿದುಕೊಳ್ಳುವುದು ॥೩೬೨॥ ಹಗ್ಗದ ಮೇಲಿನ ಸರ್ಪದ ಭ್ರಮೆಯು ಹೋಯಿತೆಂದರೆ ಹಗ್ಗವು ಪರಿಪೂರ್ಣವಾಗಿ ಹಗ್ಗದ ರೂಪದಿಂದಲೇ ಉಳಿದುಕೊಳ್ಳುವುದು. ಅಥವಾ ಸರ್ಪದಂತೆ ತೋರುತ್ತಿದ್ದರೂ ಆ ಹಗ್ಗದ ಸ್ವರೂಪ ವಿಕಾರರಹಿತವಾಗಿರುವುದು ॥೩೬೩॥ ಅದರಂತೆ ಅವಿದ್ಯಾಕಾರಣ ಸಹ ಪ್ರಪಂಚವು ಇಲ್ಲದಾಗಲು ಆಗ ಸರ್ವತ್ರ ಪರಿಪೂರ್ಣ ಬ್ರಹ್ಮವೇ ಇರುವುದು. ಅಥವಾ ಪ್ರಪಂಚದ ಸ್ವರೂಪ ತೋರುತ್ತಿದ್ದರೂ ಸಹ ಬ್ರಹ್ಮನಲ್ಲಿ ಶುದ್ಧ ಬ್ರಹ್ಮವೇ ಇರುವುದು ॥೩೬೪॥ ಹೇ ಉದ್ಧವನೇ, ಈ ಕಾರಣವಾಗಿ ಸರ್ವಭೂತಗಳಲ್ಲಿ ಭಗವದ್‌ಭಾವನೆಯನ್ನಿಟ್ಟು ನನ್ನ ಭಕ್ತಿ ಮಾಡಲು ಸಾಧಕರಿಗೆ ಇಷ್ಟೊಂದು ಅಲೌಕಿಕ ಲಾಭ ಉಂಟಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೩೬೫॥ ಪೂರ್ಣ ಬ್ರಹ್ಮವು ತತ್ಕಾಲದಲ್ಲಿ ಪ್ರಾಪ್ತವಾಗಬೇಕೆಂದರೆ ಸರ್ವ ಪ್ರಕಾರ ಗುಣದೋಷಗಳನ್ನು ಒಗೆದು ಬಿಡಬೇಕು. ಸರ್ವ ಭೂತಗಳಲ್ಲಿ ಭಗವದ್ಭಾವವನ್ನಿಟ್ಟು ಭಜನೆ ಮಾಡುವುದೇ ಮುಖ್ಯ ಸಾಧನೆಯಾಗಿದೆ ॥೩೬೬॥ ಈ ಸಾಧನೆಯ ಹೊರತಾಗಿ ಶ್ರೇಷ್ಠವಾಗಿರುವ ಅನ್ಯ ಸಾಧನೆ ಇರುವುದಿಲ್ಲ. ಇದೇ ಪರಮಸಾಧನೆಯಾಗಿದೆ. ಇದು ನಿಶ್ಚಯವಾಗಿ ನನಗೂ ಸಹ ಮಾನ್ಯವಾಗಿದೆ ॥೩೬೭॥

ಸರ್ವ ಪ್ರಾಣಿಗಳಲ್ಲಿ ಈಶ್ವರ ದೃಷ್ಟಿಯನ್ನಿಡುವುದೇ ನನ್ನ ಹತ್ತಿರ ಬಂಡವಾಳವಿರುವುದು. ಈ ಬಂಡವಾಳದ ಆಧಾರದಿಂದ ಕೋಟ್ಯಾವಧೀ ಸೃಷ್ಟಿಗಳನ್ನು ನಿರ್ಮಾಣ ಮಾಡಿ ಅಕರ್ತನಾಗಿ ಇದ್ದುಕೊಂಡಿರುವೆನು ॥೩೬೮॥

ಮಜ ಪಾಹತಾ ನಿಜಾತ್ಮಪುಷ್ಟೀ । ಸರ್ವಭೂತೀ ಭಗವದ್‌ದೃಷ್ಟೀ । ಹೇಚಿ ಭಕ್ತಿ ಮಾಝೀ ಗೋಮಟೀ । ಬ್ರಹ್ಮಾಂಡಕೋಟೀತಾರಕ ।೩೬೯॥ ಹೇಚಿ ಭಕ್ತ ಮ್ಯಾ ಕಲ್ಪಾದೀ । ಸರ್ವಭೂತೀ ಭಗವದ್‌ಬುದ್ಧೀ । ನಾಭಿಕಮಳೀ ತ್ರಿಶುದ್ಧೀ । ಬ್ರಹ್ಮಾ ಯಾ ವಿಧೀ ಉಪದೇಶಿಲಾ ।೩೭೦॥ ವ್ರತ ತಪ ಕರಿತಾ ದಾನ । ಯೋಗಯಾಗ ಕರಿತಾ ಧ್ಯಾನ । ವೇದಶಾಸ್ತ್ರಾರ್ಥೇ ಸಾಧಿತಾ ಜ್ಞಾನ । ಮಾಝ್ಯಾ ಭಕ್ತಿಸಮಾನ ತೇ ನವ್ಹತೀ ।೩೭೧॥ ನಾನಾ ಸಾಧನಾಂಚಿಯಾ ಕೋಟೀ । ಸಾಧಕೀ ಸಾಧಿತಾ ಆಟಾಟೀ । ಮಾಝ್ಯಾ ಪ್ರೇಮಾಚೀ ನಾತುಡೇ ಗೋಠೀ । ಮದ್ಭಕ್ತಭೇಟೀವಾಂಚೂನಿ ।೩೭೨॥ ಮಾಝಿಯಾ ಭಕ್ತಾಂಚಿಯೇ ಸಂಗತೀ । ಸಾಧಕಾ ಲಾಭೇ ಮಾಝೀ ಭಕ್ತಿ । ಅಭೇದಭಜನೇ ಮಾಝೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ।೩೭೩॥ ಸರ್ವಭೂತೀ ಭಗವದ್ಭಜನ । ಕರಿತೇ ಐಕ ಪಾ ಲಕ್ಷಣ । ವಿಷಮೇ ಭೂತೇ ದೇಖತಾ ಜಾಣ । ಮನೀ ಭಾವ ಪರಿ ಬ್ರಹ್ಮತ್ವೇ ।೩೭೪॥ ದುಷ್ಟ ದುರಾತ್ಮಾ ಅನೋಳಖ । ನಷ್ಟ ಚಾಂಡಾಳ ಅನಾಮಿಕ । ತೇಥಹೀ ಬ್ರಹ್ಮಭಾವ ಚೋಖ । ಹೇ ''ಮಾನಸಿಕ'' ನಿಜಭಜನ ।೩೭೫॥ ಭೂತೀ ಭಗವಂತ ಪರಿಪೂರ್ಣ । ಐಸೇ ಜಾಣೋನಿ ಆಪಣ । ಭೂತಾಂಸೀ ಲಾಗೇ ದಾರುಣ । ತೇ ಕಠಿಣ ವಚನ ಬೋಲೇನಾ ।೩೭೬॥ ತೇಥೇ ಜಾತಾಂಹೀ ನಿಜಪ್ರಾಣ । ಭೂತಾಂಚೇ ನ ಬೋಲೇ ದೋಷಗುಣ । ಯಾ ನಾಂವ ಗಾ ''ವಾಚಿಕ'' ಭಜನ । ಉದ್ಧವಾ ಜಾಣ ನಿಶ್ಚಿತ ।೩೭೭॥ ಜೇಣೇ ಭೂತಾಂಸೀ ಹೋಯ ಉಪಕಾರ । ತೇ ತೇ ಕರೀ ದೇಹವ್ಯಾಪಾರ । ಭೇದಿತಾಂಹೀ ನಿಜಜಿವ್ಹಾರ । ಜೋ ಅಪಕಾರಾ ಕರ ಉಚಲೀನಾ ।೩೭೮॥ ಸ್ವಯೇ ಸಾಹೂನಿಯಾ ಅಪಕಾರ । ಜೋ ಅಪಕಾರಿಯಾ ಕರೀ ಉಪಕಾರ । ಐಸಾ ಜ್ಯಾಚಾ ಶರೀರ ವ್ಯಾಪಾರ । ತೇ ಭಜನ ಸಾಚಾರ ''ಕಾಯಿಕ'' ।೩೭೯॥ ಯಾಪರೀ ಕಾಯಾ-ವಾಚಾ-ಮನ । ಸರ್ವಭೂತೀ ಭಗವದ್ಭಜನ । ಹೇಚಿ ಮುಖ್ಯತ್ವೇ ಶ್ರೇಷ್ಠ ಸಾಧನ । ಭಕ್ತ ಸಜ್ಞಾನ ಜಾಣತೀ ।೩೮೦॥ ಬ್ರಹ್ಮಪ್ರಾಪ್ತೀಚೇ ಪರಮ ಕಾರಣ । ಹೇಚಿ ಏಕ ಸಗುಮ ಸಾಧನ । ಮಜಹೀ ನಿಶ್ಚಯೇ ಮಾನಲೇ ಜಾಣ । ದೇವಕೀಚೀ ಆಣ ಉದ್ಧವಾ ।೩೮೧॥ ಹಾ ಭಜನಧರ್ಮ ಅತಿಶುದ್ಧ । ಯೇಥೇ ವಿಘ್ನಾಂಚಾ ಸಂಬಂಧ । ಅಲ್ಪಹೀ ರಿಘೋ ನ ಶಕೇ ಬಾಧ । ತೇಚಿ ವಿಶದ ಹರಿ ಸಾಂಗೇ ।೩೮೨॥

ಆತ್ಮದೃಷ್ಟಿಯಿಂದ ನನ್ನತ್ತ ನೋಡಲು ಸರ್ವಭೂತಗಳಲ್ಲಿ ಭಗವಂತನ ದೃಷ್ಟಿ ಇಡುವಿಕೆಯೇ ನನ್ನ ಸರ್ವಾಂಗಸುಂದರ ಭಕ್ತಿಯಾಗಿರುವುದು. ಇದು ಕೋಟ್ಯಾವಧೀ ಬ್ರಹ್ಮಾಂಡಗಳ ಉದ್ಧಾರ ಮಾಡುವಂತಹದ್ದಾಗಿರುವುದು ।೩೬೯॥ ಸರ್ವಭೂತಗಳಲ್ಲಿ ಭಗವದ್ಭಾವನೆ ಇಡುವ ಈ ಭಕ್ತಿಯನ್ನೇ ನಾನು ಕಲ್ಪದ ಆರಂಭದ ಸಮಯದಲ್ಲಿ ನಾಭಿಕಮಲದಲ್ಲಿ ಉತ್ಪನ್ನನಾಗಿದ್ದ ಬ್ರಹ್ಮದೇವನಿಗೆ ಉಪದೇಶರೂಪದಿಂದ ಹೇಳಿದ್ದೆನು ।೩೭೦॥ ವ್ರತ, ತಪ, ದಾನ, ಯೋಗ, ಯಾಗ, ಧ್ಯಾನ ಮಾಡಿದರೂ ಅಥವಾ ವೇದಶಾಸ್ತ್ರಗಳ ಜ್ಞಾನ ಪ್ರಾಪ್ತಮಾಡಿಕೊಂಡರೂ ಇವು ಭಕ್ತಿಯ ಸರಿಸಮಾನವಾಗಲಾರವು ।೩೭೧॥ ಸಾಧಕರು ಬಹು ಸಾಹಸಪಟ್ಟು ಅನೇಕ ಪ್ರಕಾರದ ಕೋಟ್ಯಾವಧೀ ಸಾಧನೆಗಳನ್ನು ಮಾಡಿದರೂ ಕೂಡ ನನ್ನ ಭಕ್ತಿಯ ಭೇಟಿಯಾಗದ ಹೊರತು ನನ್ನ ಪ್ರೇಮದ ವಾರ್ತೆ ಆತನಿಗೆ ದೊರೆಯಲಾರದು ।೩೭೨॥ ನನ್ನ ಭಕ್ತರ ಸಂಗತಿಯಿಂದ ಸಾಧಕರಿಗೆ ನನ್ನ ಭಕ್ತಿಪ್ರಾಪ್ತವಾಗುವುದು. ಹೇ ಭಕ್ತರಾಜನಾದ ಉದ್ಧವನೇ, ಅಭೇದ ಭಜನೆಯಿಂದ ಮಾತ್ರ ನನ್ನ ಪ್ರಾಪ್ತಿಯಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೭೩॥ ಸರ್ವಭೂತಗಳಲ್ಲಿ ಭಗವದ್ಭಜನೆ ಮಾಡುವ ಲಕ್ಷಣ ಈಗ ಕೇಳು. ಪ್ರಾಣಿಗಳು ಭಿನ್ನ ಭಿನ್ನ ರೂಪದಲ್ಲಿ ಕಾಣುತ್ತಿದ್ದರೂ ಕೂಡ ಅವುಗಳ ವಿಷಯದಲ್ಲಿ ಪರಿಪೂರ್ಣವಾಗಿ ಮನದಲ್ಲಿ ಬ್ರಹ್ಮಭಾವನೆ ಇಡಬೇಕು ।೩೭೪॥ ದುಷ್ಟ, ದುರಾತ್ಮಾ, ಅಪರಿಚಿತ, ನಷ್ಟ, ಚಾಂಡಾಲ, ಪತಿತ ಹೀಗಿರುವ ಜನರಲ್ಲಿ ನಿರ್ಮಲವಾಗಿ ಬ್ರಹ್ಮಭಾವನೆಯನ್ನಿಡುವಿಕೆ ''ಮಾನಸಿಕ'' ಭಜನೆಯಾಗುವುದು ।೩೭೫॥ ಸರ್ವ ಪ್ರಾಣಿಮಾತ್ರರಲ್ಲಿ ಪರಿಪೂರ್ಣವಾಗಿ ಭಗವಂತನು ತುಂಬಿಕೊಂಡಿರುವನು. ಇದನ್ನು ತಿಳಿದು ಅವರಿಗೆ ಮನಸ್ಸಿಗೆ ನಾಟುವಂತೆ ನಿಷ್ಠುರ, ಕಠೋರ ಭಾಷಣ ಆತನು ಎಂದಿಗೂ ನುಡಿಯುವುದಿಲ್ಲ ।೩೭೬॥ ಹೇ ಉದ್ಧವಾ, ಆತನು ತನ್ನ ಪ್ರಾಣ ಹೋದರೂ ಜನರ ಗುಣದೋಷಗಳನ್ನು ಹೇಳಲಾರನು. ಇದಕ್ಕೆ ಮಾತ್ರ ''ವಾಚಿಕ'' ಭಜನೆ ಎಂದು ಹೇಳುವರು. ಇದನ್ನು ನೀನು ನಿಶ್ಚಯವಾಗಿ ತಿಳಿ ।೩೭೭॥ ಆತನ ದೇಹ ವ್ಯಾಪಾರವು ಪ್ರಾಣಿಮಾತ್ರರಲ್ಲಿ ಉಪಕಾರ ಮಾಡುವಂತಹದ್ದಾಗಿರುವುದು. ಆತನಿಗೆ ಯಾರಾದರೂ ಮರ್ಮಸ್ಥಾನಕ್ಕೆ ಹೊಡೆದರೂ ಕೂಡ ಆತನು ಎಂದಿಗೂ ಹೀಗೆ ಅಪಕಾರ ಮಾಡಿದವರ ಮೇಲೆ ಕೈ ಎತ್ತಲಾರನು ।೩೭೮॥ ಅವರು ಮಾಡಿದ ಅಪಕಾರ ಸ್ವತಃ ಸಹಿಸಿಕೊಳ್ಳುವುದಲ್ಲದೇ ಅಪಕಾರ ಮಾಡಿದವರಲ್ಲಿ ಉಪಕಾರ ಮಾಡುತ್ತಿರುವುದು ಆತನ ಶರೀರದ ಪ್ರೇಮಯುಕ್ತ ವರ್ತನೆಯಾಗಿರುವುದು. ಇದಕ್ಕೆ ''ಕಾಯಿಕ'' ಭಜನೆ ಎಂದು ಹೇಳುವರು ।೩೭೯॥ ಈ ಪ್ರಕಾರವಾಗಿ ಕಾಯಾ, ವಾಚಾ, ಮನಸಾದೊಂದಿಗೆ ಸರ್ವಭೂತಗಳಲ್ಲಿ ಭಗವದ್ಭಜನೆ ಮಾಡುವುದು ಇದೊಂದು ಶ್ರೇಷ್ಠ ಸಾಧನೆಯಾಗಿರುವುದು. ಹೀಗೆ ಜ್ಞಾನೀ ಭಕ್ತರು ಹೇಳುವರು ।೩೮೦॥ ಹೇ ಉದ್ಧವಾ, ಬ್ರಹ್ಮಪ್ರಾಪ್ತಿಯ ಪರಮ ಕಾರಣ ಹೀಗೆ ಇದೊಂದೇ ಸುಲಭ ಸಾಧನೆಯಾಗಿರುವುದು. ಇದು ನನಗೂ ಸಹ ನಿಶ್ಚಯವಾಗಿ ಮಾನ್ಯವಾಗಿರುವುದು. ಇದನ್ನು ನಾನು ದೇವಕಿಯ ಆಣೆ ಮಾಡಿ ಹೇಳುವೆನು ।೩೮೧॥ ಈ ಭಜನ ಮಾರ್ಗವು ಅತ್ಯಂತ ಶುದ್ಧವಾಗಿದ್ದು ಅದರಲ್ಲಿ ವಿಘ್ನಗಳ ಬಾಧೆಯು ಸ್ವಲ್ಪೂ ಕೂಡ ಪ್ರವೇಶ ಮಾಡಲು ಶಕ್ಯವಿಲ್ಲ. ಇದನ್ನೇ ಈಗ ಶ್ರೀಕೃಷ್ಣನು ಸ್ಪಷ್ಟಮಾಡಿ ಹೇಳುತ್ತಿರುವನು ।೩೮೨॥

ನ ಹ್ಯಂಗೋಪಕ್ರಮೇ ಧ್ವಂಸೋ ಮದ್ಧರ್ಮಸ್ಯೋದ್ಧವಾಣ್ವಪಿ । ಮಯಾ ವ್ಯವಸಿತಃ ಸಮ್ಯಙ ನಿರ್ಗುಣತ್ವಾದನಾಶಿಷಃ ।೨೦॥

ಅರ್ಥ:- ಹೇ ಉದ್ಧವಾ, ಇದು ನನ್ನ ನಿಷ್ಕಾಮ ಧರ್ಮದಲ್ಲಿ ಉಪಕ್ರಮನಾಶಾದಿ ಯಾವುದೇ ಪ್ರಕಾರದ ವೈಗುಣ್ಯವಿರುವುದಿಲ್ಲ. ಕಾರಣ ಗುಣರಹಿತ ಕೇವಲ ಪರಮಾತ್ಮ ಸ್ವರೂಪನಾಗಿರುವ ನಾನೇ ಈ ಧರ್ಮದ ಉತ್ತಮ ವ್ಯವಸ್ಥೆ ಮಾಡಿಟ್ಟಿರುವೆನು.

ಅನೇಕ ಧರ್ಮ ನಾನಾ ಶಾಸ್ತ್ರಾರ್ಥೀ । ಮನ್ವಾದಿ ಮುಖೇ ಬೋಲಿಲೇ ಬಹುತೀ । ಪರೀ ಸರ್ವಭೂತೀ ಭಗವದ್ಭಕ್ತೀ । ಶ್ರೇಷ್ಠ ಸರ್ವಾರ್ಥೀ ಸಾಧಕಾ ।೩೮೩॥ ಯೇ ಭಕ್ತೀಚೇ ಹೇಚಿ ಶ್ರೇಷ್ಠಪಣ । ಇಚೇ ಪೂರ್ವಾರಂಭೀ ಜಾಣ । ಸಾಧಕಾಪಾಶೀ ಅಲ್ಪಹೀ ವಿಘ್ನ । ಬಾಧಕಪಣ ಧರೂ ನ ಶಕೇ ।೩೮೪॥ ಯೇ ಭಕ್ತೀಚೇ ನಿಜಲಕ್ಷಣ । ಪೂರ್ವಾರಂಭೀ ಹೇ ನಿರ್ಗುಣ । ಏಥ ರಿಘಾವಯಾ ವಿಘ್ನ । ದಾಟುಗೇಪಣ ಧರಿನಾ ।೩೮೫॥ ಜೇವೀ ಗರುಡಾಚೇ ಝುಡಪೇಪಳೀ । ಹೋತೀ ಸರ್ಪಾಚ್ಯಾ ಚಿರಫಾಳೀ । ತೇವೀ ಯೇ ಭಕ್ತೀಜವಳೀ । ವಿಘ್ನಾಂಚೀ ಹೋಳೀ ಸ್ವಯೇ ಹೋಯೇ ।೩೮೬॥ ಮಾಝಿಯಾ ನಾಮಾಪುಢೇ । ವಿಘ್ನ ರಾಹೋ ನ ಶಕೇ ಬಾಪುಡೇ । ತೇ ಮಾಝೇ ಭಕ್ತೀಕಡೇ । ಕೋಣ ತೇ ತೋಂಡೇ ಯೇಈಲ ।೩೮೭॥ ಯಾಪರೀ ಹೇ ಭಕ್ತಿ ಸಧರ । ಉದ್ಧವಾ ತುಝೇ ಭಾಗ್ಯ ಥೋರ । ಮ್ಯಾ ಫೋಡೂನಿ ನಿಜಜಿವ್ಹಾರ । ಸಾರಾಚೇ ಸಾರ ಸಾಂಗಿತಲೇ ।೩೮೮॥ ನಿಷ್ಕಾಮ ಜೇ ಮಾಝೀ ಭಕ್ತೀ । ತೇಥ ವಿಘ್ನಾಂಚೀ ನ ಪಡೇ ಗುಂತೀ । ಪರಬ್ರಹ್ಮಾಚೀ ಬ್ರಹ್ಮಸ್ಥಿತೀ । ಸುಲಭತ್ವೇ ಪ್ರಾಪ್ತೀ ಸಾಧಕಾ ।೩೮೯॥ ಹೇತುಕ ಅಹೇತುಕ ಕರ್ಮಾಚರಣ । ತೇಹೀ ಕರೀ ಜೋ ಕೃಷ್ಣಾರ್ಪಣ। ತೇ ಉತ್ತಮ ಮಾಝೀ ಭಕ್ತೀ ಜಾಣ । ತೇಚಿ ನಿರೂಪಣ ಹರಿ ಸಾಂಗೇ ।೩೯೦॥

ಯೋ ಯೋ ಮಯಿ ಪರೇಧರ್ಮಃ ಕಲ್ಪ್ಯತೇ ನಿಷ್ಫಲಾಯ ಚೇತ್ । ತದಾಯಾಸೋ ನಿರರ್ಥಃ ಸ್ಯಾದ್‌ಭಯಾದೇರಿವ ಸತ್ತಮ ।೨೧॥

ಅರ್ಥ:- ಹೇ ಸಾಧುಶ್ರೇಷ್ಠ ಉದ್ಧವಾ, ಯಾವುದೇ ಲೌಕಿಕ ಶ್ರಮ ಅದು ನಿರರ್ಥಕವಾಗಿದ್ದರೂ ಕೂಡ ನಿಷ್ಕಾಮ ಭಾವದಿಂದ ನನ್ನಲ್ಲಿ ಅರ್ಪಿಸಿದರೆ ಅದು ಧರ್ಮವೇ ಆಗುವುದು. ಭಯದಿಂದ ಓಡುವುದು, ಅಳುವುದು ಇತ್ಯಾದಿಗಳಿಂದ ಆಯಾಸವಾಗುವುದು. ಇವುಗಳ ಫಲಾಶೆ ಬಿಟ್ಟು ನನ್ನಲ್ಲಿ ಅರ್ಪಿಸಿದರೆ ಅದೂ ಕೂಡ ಧರ್ಮವೇ ಆಗುವುದು.

ವ್ಯವಹಾರಾರ್ಥ ಜೋ ಪ್ರಯಾಸ ಕೇಲಾ । ಜೋ ನ ಫಳತಾ ವ್ಯರ್ಥ ಗೇಲಾ । ತೋಹೀ ಜೈ ಪರಬ್ರಹ್ಮೀ ಅರ್ಪಿಲಾ । ತೈ ಮದ್ಭಜನೀ ಲಾಗಲಾ ಸದ್ಭಾವೇ ।೩೯೧॥ ಶಿಮಗಿಯಾಚಾ ಮಹಾಸಣ । ತೇಥ ಖೇಳ ಖೇಳಲಾ ಜೋ ಆಪಣ । ತೋಹೀ ಕೇಲ್ಯಾ ಕೃಷ್ಣಾರ್ಪಣ । ತೇಹೀ ಭಕ್ತಿ ಜಾಣ ಮಜ ಅರ್ಪೇ ।೩೯೨॥ ಚೋರಾಭೇಣೇ ಲಪತಾ ವನೀ । ನಿಧಾನ ಆತುಡೇ ಜ್ಯಾಲಾಗೂನೀ । ತೇವೀ ವ್ಯರ್ಥ ಕರ್ಮಹೀ ಮದರ್ಪಣೀ । ಕರಿತಾ ಮದ್ಭಜನೀ ಮಹಾಲಾಭ ।೩೯೩॥

ಮನೂ ಆದಿಯಾಗಿ ಅನೇಕ ಶಾಸ್ತ್ರಕಾರರು ವಿವಿಧ ಪ್ರಕಾರಗಳ ಶಾಸ್ತ್ರಗಳಲ್ಲಿ ಧರ್ಮದ ಅನೇಕ ಸಾಧನೆಗಳನ್ನು ಹೇಳಿರುವರು. ಆದರೆ ಸಾಧಕನಿಗೆ ಸರ್ವ ಭೂತಗಳಲ್ಲಿ ಭಗವದ್ಭಾವವನ್ನಿಡುವುದೇ ಸರ್ವಶ್ರೇಷ್ಠ ಸಾಧನೆಯಾಗಿರುವುದು ।೩೮೩॥ ಈ ಭಕ್ತಿಯ ಶ್ರೇಷ್ಠತನವು ಯಾವುದೆಂದರೆ ಇದರ ಪ್ರಾರಂಭದಿಂದಲೂ ಸಾಧಕನಿಗೆ ಸ್ವಲ್ಪವೂ ಕೂಡ ವಿಘ್ನ ಬಾಧಿಸಲು ಶಕ್ಯವಿಲ್ಲ ।೩೮೪॥ ಈ ಭಕ್ತಿಯ ಲಕ್ಷಣ ಯಾವುದೆಂದರೆ ಇದರ ಮೂಲ ಆರಂಭವು ನಿರ್ಗುಣವಾಗಿರುವುದು. ಆದ್ದರಿಂದ ಅಲ್ಲಿ ವಿಘ್ನಕ್ಕೆ ಪ್ರವೇಶ ಮಾಡಲು ಧೈರ್ಯವೇ ನಿರ್ಮಾಣವಾಗುವುದಿಲ್ಲ ।೩೮೫॥ ಗರುಡನ ಆರ್ಭಟ ಕಾಣುತ್ತಲೇ ಸರ್ಪಗಳು ದಿಕ್ಕೆಟ್ಟು ಕಂಗಾಲಾಗಿ ಓಡಿಹೋಗುವುವು. ಅದರಂತೆ ಭಕ್ತಿಯ ಸಮೀಪ ವಿಘ್ನಗಳು ತಮ್ಮಷ್ಟಕ್ಕೆ ತಾವೇ ಸುಟ್ಟು ಬೂದಿಯಾಗುವುವು ।೩೮೬॥ ನನ್ನ ಕೇವಲ ನಾಮದ ಎದುರಿನಲ್ಲಿ ಪಾಪ ! ವಿಘ್ನಗಳಿಗೆ ನಿಲ್ಲಲೂ ಕೂಡ ಸಾಧ್ಯವಾಗುವುದಿಲ್ಲ. ಅಂದಮೇಲೆ ನನ್ನ ಭಕ್ತಿಯ ಎದುರಿನಲ್ಲಿ ಯಾವ ಮುಖ ತೆಗೆದುಕೊಂಡು ನಿಲ್ಲಲು ಸಾಧ್ಯ ? ।೩೮೭॥ ಈ ಪ್ರಕಾರವಾಗಿ ಈ ಭಕ್ತಿಯು ಸಮರ್ಥವಾಗಿರುವುದು. ನಿನ್ನ ಭಾಗ್ಯವು ಬಹು ದೊಡ್ಡದಾಗಿದೆ. ಆದ್ದರಿಂದ ನಾನು ನನ್ನ ಅಂತಃಕರಣದಲ್ಲಿನ ಸಾರದಲ್ಲಿಯೇ ಸಾರವಾಗಿರುವುದನ್ನು ನಿನಗೆ ಹೇಳಿರುವೆನು ।೩೮೮॥ ನನ್ನ ನಿಷ್ಕಾಮ ಭಕ್ತಿಯಲ್ಲಿ ವಿಘ್ನಗಳ ಯಾವ ಗಡಿಬಿಡಿ ನಡೆಯಲಾರದು. ಆದ್ದರಿಂದ ಸಾಧಕರಿಗೆ ಸಹಜವಾಗಿ ಪರಬ್ರಹ್ಮದ ಪ್ರಾಪ್ತಿಯಾಗಲು ಸಾಧ್ಯವಾಗುವುದು ।೩೮೯॥ ಹೇತುಕವಾಗಿ ಕರ್ಮ ಮಾಡಿರಲಿ ಅಥವಾ ನಿರ್ಹೇತುಕವಾಗಿ ಕರ್ಮ ಮಾಡಿರಲಿ ಈ ಸರ್ವ ಕರ್ಮಗಳು ಯಾವನು ಕೃಷ್ಣಾರ್ಪಣೆ ಮಾಡುವನೋ, ಅದೇ ನನ್ನ ಉತ್ತಮ ಭಕ್ತಿಯಾಗಿರುವುದು. ಇದೇ ವಿಷಯವನ್ನು ಕುರಿತು ಈಗ ಶ್ರೀಹರಿಯು ನಿರೂಪಣೆ ಮಾಡುವನು ।೩೯೦॥

ವ್ಯವಹಾರಕ್ಕಾಗಿ ಏನಾದರೂ ಪ್ರಯತ್ನ ಮಾಡುತ್ತಿರಲು ಆಗ ಆ ಪ್ರಯತ್ನವು ವ್ಯರ್ಥವಾದರೆ, ಅದನ್ನೂ ಕೂಡ ಬ್ರಹ್ಮಾರ್ಪಣೆ ಮಾಡಲು, ಅದರ ಸದ್ಭಾವನೆಯಿಂದ ಆತನೂ ಕೂಡ ನನ್ನ ಭಜನೆಗೆ ಹೊಂದಿಕೊಳ್ಳುವನು ।೩೯೧॥ ಹೋಳಿಹುಣ್ಣಿಮೆಯಲ್ಲಿ ಆಡಿದ ಆಟಗಳನ್ನೂ ಕೂಡ ಕೃಷ್ಣಾರ್ಪಣೆ ಮಾಡಿದರೆ ಆ ಭಕ್ತಿಯೂ ಕೂಡ ನನಗೇನೇ ಅರ್ಪಿತವಾಗುವುದು ।೩೯೨॥ ಕಳ್ಳರ ಭಯದಿಂದ ಅರಣ್ಯದಲ್ಲಿ ಅಡುಗಿಕೊಳ್ಳಲು ಹೊರಟಾಗ ಅಲ್ಲಿ ಅನಾಯಾಸವಾಗಿ ನಿಧಿ ಸಿಕ್ಕ ರೀತಿಯಲ್ಲಿ ನಿರರ್ಥಕವಾಗಿ ಮಾಡಿದ ಕರ್ಮಗಳನ್ನು ನನಗೆ ಅರ್ಪಿಸಿದರೂ ಸಹ ಅದೂ ಕೂಡ ನನ್ನ ಭಜನೆಗೆ ಹೊಂದಿಕೊಂಡು ಬೇಕಾದಷ್ಟು ಲಾಭವಾಗುತ್ತಿರುವುದು ।೩೯೩॥

ನಾಸಲೇ ತೇ ಸಾಂಡಿತಾ ಕ್ಷಿತೀ । ತೇಹೀ ಲಾಗೇ ಮಾಝೀ ಭಕ್ತೀ । ಜರೀ ಬ್ರಹ್ಮಾರ್ಪಣ ಚಿತ್ತೀ । ಸಾಧಕ ನಿಶ್ಚಿತೀ ದೃಢ ಮಾನೀ ।೯೪॥ ಕಡೂ ಭೋಪಳ್ಯಾಚೀ ಖಿರೀ । ಉಪೇಗಾ ನ ಯೇ ಶ್ವಾಸಕರೀ । ತೇ ಉಲ್ಹಾಸೇ ಕೃಷ್ಣಾರ್ಪಣ ಕರೀ । ತೇಹೀ ನಿರ್ಧಾರೀ ಬ್ರಹ್ಮೀ ಅರ್ಪೇ ।೯೫॥ ಜೇ ಹಾರಪಲೇ ನ ದಿಸೇ । ಜೇ ಸಹಜೇ ಉಡೇ ಕಾಳವಶೇ । ತೇಹೀ ಲಾವಿಲ್ಯಾ ಮದುದ್ದೇಶೇ । ಹೋಯ ಅನಾಯಾಸೇ ಮದರ್ಪಣ ।೯೬॥ ಸಕಳ ಸಾರಾಂಚೇ ಸಾರ ಪೂರ್ಣ । ಕರ್ಮಮಾತ್ರ ಕೃಷ್ಣಾರ್ಪಣ । ಸಾಕ್ಷೇಪೇ ಕರಾವೇ ಆಪಣ । ''ಸದ್‌ಬುದ್ಧಿ'' ಸಂಪೂರ್ಣ ಯಾ ನಾಂವ ।೯೭॥

ಏಷಾ ಬುದ್ಧಿಮತಾಂ ಬುದ್ಧಿರ್ಮನೀಷಾ ಚ ಮನೀಷಿಣಾಮ್ । ಯತ್ಸತ್ಯಮನೃತೇನೇಹ ಮರ್ತ್ಯೇನಾಪ್ನೋತಿ ಮಾಮೃತಮ್ ।೨೨॥

ಅರ್ಥ:- ವಿವೇಕ ಜನರ ವಿವೇಕದ ಮತ್ತು ಚತುರ ಜನರ ಚಾತುರ್ಯದ ವಿಶ್ವಪ್ರಯತ್ನ ಇದರಲ್ಲಿರುವುದು. ಅವರು ವಿನಾಶೀ ಹಾಗೂ ಅಸತ್ಯ ಶರೀರ ಮುಖಾಂತರವಾಗಿ ನನ್ನ ಅವಿನಾಶೀ ಸತ್ಯ ತತ್ವವನ್ನು ಪ್ರಾಪ್ತಮಾಡಿಕೊಳ್ಳಬೇಕು.

ಅಂತರೀ ವಿಷಯಾಂಚೀ ಆಸಕ್ತೀ । ವರೀವರೀ ಬ್ರಹ್ಮಾರ್ಪಣ ಮ್ಹಣತೀ । ತೇ ಠಕಿಲೇ ಬಹುತಾ ಅರ್ಥೀ । ತೇಚಿ ಶ್ರೀಪತಿ ಸಾಂಗತ ।೯೮॥ ಏಕ ಬುದ್ಧಿಮಂತ ಹೋತೀ । ತೇ ನಿಜಬುದ್ಧೀ ಘೇಊನ ಹಾತೀ । ಶೇಖೀ ಲಾಗಲೇ ವಿಷಯಸ್ವಾರ್ಥೀ । ತೇ ಠಕಿಲೇ ನಿಶ್ಚಿತೀ ದೇಹಮಮತಾ ।೯೯॥ ಏಕಾಚೀ ಬುದ್ಧಿ ಅತಿಚೋಖಡೀ । ವೇದಶಾಸ್ತ್ರಾರ್ಥೀ ವ್ಯುತ್ಪತ್ತಿ ಗಾಢೀ । ತೇ ಅಭಿಮಾನೇ ಕಡೋವಿಕಡೀ । ಠಕಲೇ ಪಡಿಪಾಡೀ ಜ್ಞಾನಗರ್ವೇ ।೧೦೦॥ ಬುದ್ಧಿಮಂತ ಅಭ್ಯಾಸೀ ಜನ । ಅಭ್ಯಾಸೇ ಸಾಧಿತೀ ಪ್ರಾಣಾಪಾನ । ತೇ ಯೋಗದುರ್ಗೀ ರಿಘತಾ ಜಾಣ । ಠಕಿಲೇ ಸಂಪೂರ್ಣ ಭೋಗ ಸಿದ್ಧೀ ।೧೦೧॥ ಏಕ ಮಾನಿತೀ ಕರ್ಮ ಶ್ರೇಷ್ಠ । ವಾಢವಿತೀ ಕರ್ಮಕಚಾಟ । ವಿಧಿನಿಷೇಧಿ ರುಂಧಿಲೀ ವಾಟ । ಬುಡಾಲೇ ಕರ್ಮಠ ಕರ್ಮಾಮಾಜೀ ।೧೦೨॥ ಯಾಪರೀ ನಾನಾವ್ಯುತ್ಪತ್ತೀ । ಕರಿತಾ ಠಕಿಲೇ ನೇಣೋ ಕೀತೀ । ತೈಸೀ ನವ್ಹೇ ಮಾಝೀ ಭಕ್ತೀ । ಸಭಾಗ್ಯ ಪಾವತೀ ನಿಜಭಾಗ್ಯೇ ।೧೦೩॥ ಮಾಝೀ ಸರ್ವಭೂತೀ ಜ್ಯಾಸೀ ಭಜನ । ತ್ಯಾಚೇ ಬುದ್ಧೀಚೇ ವೃದ್ಧೀ ಮೀ ಆಪಣ । ತೇ ತೂ ಬುದ್ಧೀ ಮ್ಹಣಸೀ ಕೋಣ । ಕರ್ಮ ಬ್ರಹ್ಮಾರ್ಪಣ ''ಮಹಾಬುದ್ಧೀ'' ।೧೦೪॥ ಸರ್ವಭೂತೀ ಮಾಝೀ ಭಜನ । ಸರ್ವ ಕರ್ಮ ಮದರ್ಪಣ । ಹೇ ಬುದ್ಧೀಚಿ ''ಮಹಾಬುದ್ಧಿ'' ಜಾಣ । ಯೇಣೇ ಬ್ರಹ್ಮಪರಿಪೂರ್ಣ ಸ್ವಯೇ ಹೋತೀ ।೧೦೫॥ ಚತುರಾಂಚೇ ಚಾತುರ್ಯ ಗಹನ । ಯಾ ನಾಂವ ಬೋಲಿಜೇ ಗಾ ಆಪಣ । ಮಿಥ್ಯಾ ದೇಹೇ ಕರೂನಿ ಭಜನ । ಬ್ರಹ್ಮ ಸನಾತನ ಸ್ವಯೇ ಹೋತೀ ।೧೦೬॥

ಕೆಟ್ಟುಹೋದ ಪದಾರ್ಥಗಳನ್ನು ನೆಲಕ್ಕೆ ಚೆಲುತ್ತಿರುವರು. ಆದರೆ ಸಾಧಕನು ಆ ಪದಾರ್ಥ ದೃಢ ನಿಶ್ಚಯದಿಂದ ನನಗೆ ಅರ್ಪಿಸಿದರೆ ಅದೂ ಕೂಡ ನನ್ನ ಭಕ್ತಿಗೆ ಕೂಡಿಕೊಳ್ಳುವುದು ।೯೪॥ ಹೆಚ್ಚಿಗೇನು ಹೇಳಬೇಕು ? ವಿಷಕುಂಬಳಕಾಯಿಯ ಖೀರು ಪಶೂ ಸಹ ತಿನ್ನುವುದಿಲ್ಲ. ಅದನ್ನು ಪ್ರೇಮಭಾವದಿಂದ ಕೃಷ್ಣಾರ್ಪಣೆ ಮಾಡಲು ಅದೂ ಕೂಡ ಬ್ರಹ್ಮಾರ್ಪಣೆಯಾಗುವುದು ।೯೫॥ ಕಳೆದ ಪದಾರ್ಥ, ಹಾರಿಹೋಗುತ್ತಿರುವ ಪದಾರ್ಥ ಇವು ಸಹಸಾ ದೊರೆಯಲಾರವು. ಅವುಗಳನ್ನೂ ಕೂಡ ನನ್ನಕಡೆ ಹಚ್ಚಿದರೆ ಮದರ್ಪಣೆಯಾಗುವುದು ।೯೬॥ ಸರ್ವಸಾರಗಳಲ್ಲಿ ಪೂರ್ಣ ಸಾರ ಯಾವುದೆಂದರೆ ಪ್ರತಿಯೊಂದು ಕರ್ಮ ಕೃಷ್ಣಾರ್ಪಣೆ ಮಾಡಬೇಕು. ಅದು ಆದರದಿಂದಿರಬೇಕು. ಅದಕ್ಕೆ ಮಾತ್ರ ಸುಬುದ್ಧಿ ಎಂದು ಹೇಳುವರು ।೯೭॥

ಮನದಲ್ಲಿ ವಿಷಯಗಳ ಆಸಕ್ತಿ ಧರಿಸಿ ಮೇಲ್ನೋಟಕ್ಕೆ ಬ್ರಹ್ಮಾರ್ಪಣೆ ಮಾಡುವುದು. ಹೀಗೆ ಆಚರಿಸುವ ಜನರು ಅನೇಕ ರೀತಿಯಿಂದ ಮೋಸಕ್ಕೆ ಹೋಗುವರು. ಅದನ್ನು ಈಗ ಶ್ರೀಪತಿಯು ಹೇಳುವನು ।೯೮॥ ಕೆಲವರು ಬುದ್ಧಿಜೀವಿಗಳಿರುವರು. ಅವರು ತಮ್ಮ ಬುದ್ಧಿ ಸಾಮರ್ಥ್ಯದಿಂದ ವಿಷಯಗಳ ಸ್ವಾರ್ಥದ ಬೆನ್ನುಹತ್ತುವರು. ಅವರು ದೇಹ ಮಮತೆಯಿಂದ ನಿಶ್ಚಿತವಾಗಿ ಮೋಸಕ್ಕೆ ಗುರಿಯಾಗುವರು ।೯೯॥ ಕೆಲವರ ಬುದ್ಧಿ ಅತಿಶಯ ಕುಶಾಗ್ರವಾಗಿರುವುದು. ಅವರು ವೇದಶಾಸ್ತ್ರಗಳಲ್ಲಿ ಪ್ರವೀಣರಾಗುವರು. ಆದರೆ ಹೆಜ್ಜೆ ಹೆಜ್ಜೆಗೂ ಜ್ಞಾನಗರ್ವದ ಅಭಿಮಾನದಿಂದ ವಂಚನೆಗೆ ಒಳಗಾಗುವರು ।೧೦೦॥ ಕೆಲವು ಬುದ್ಧಿವಾನ ಅಭ್ಯಾಸೀ ಜನರು ಪ್ರಾಣಾಯಾಮ ಸಾಧ್ಯಮಾಡಿ ಕೊಳ್ಳುವರು. ಅವರು ಯೋಗರೂಪ ದುರ್ಗದಲ್ಲಿ ಪ್ರವೇಶ ಮಾಡುವುದರಿಂದ ಅಲ್ಲಿಯ ಸಿದ್ಧಿಗಳ ವೈಭವಕ್ಕೆ ಮರುಳಾಗಿ ಬಿಡುವರು ।೧೦೧॥ ಕೆಲವರು ಕರ್ಮವೇ ಶ್ರೇಷ್ಠವೆನ್ನುವರು. ಕರ್ಮದ ದೊಡ್ಡ ಆಡಂಬರವನ್ನೇ ಬೆಳೆಸುವರು. ವಿಧಿನಿಷೇಧಗಳು ಇವರ ಮಾರ್ಗಕ್ಕೆ ಅಡ್ಡಾಗುವುವು. ಆದ್ದರಿಂದ ಆ ಕರ್ಮಠರು ಕರ್ಮದಲ್ಲಿಯೇ ಮುಳುಗಿಬಿಡುವರು ।೧೦೨॥ ಈ ಪ್ರಕಾರವಾಗಿ ಅನೇಕ ಪ್ರಕಾರದ ಸಾಧನೆಗಳನ್ನು ಮಾಡಿ ಅದೆಷ್ಟು ಜನರು ಮೋಸಕ್ಕೆ ಬಲಿಯಾಗಿರುವರೋ, ಅದರ ಪತ್ತೆಯೇ ಹತ್ತುವುದಿಲ್ಲ. ಆದರೆ ನನ್ನ ಭಕ್ತಿಯು ಹೀಗಿರುವುದಿಲ್ಲ. ಯಾರು ಭಾಗ್ಯವಂತರೋ, ಅವರಿಗೆ ಮಾತ್ರ ಪ್ರಾಪ್ತವಾಗುವುದು ।೧೦೩॥ ಸರ್ವಭೂತಗಳಲ್ಲಿ ಭಗವದ್ಭಜನೆಯು ಯಾರಲ್ಲಿ ಆರಂಭಗೊಂಡಿದೆಯೋ, ಅವರ ಬುದ್ಧಿಯ ಬುದ್ಧಿ ನಾನು ಸ್ವತಃ ಆಗುವೆನು. ಆ ಬುದ್ಧಿ ಯಾವುದು ಎಂದು ನೀನು ಕೇಳಬಹುದು. ಅದಕ್ಕಾಗಿ ಕೇಳು ; ಕರ್ಮಗಳನ್ನು ಬ್ರಹ್ಮಾರ್ಪಣೆ ಮಾಡುವುದು ಇದೇ ''ಮಹಾಬುದ್ಧಿ''ಯಾಗಿರುವುದು ।೧೦೪॥ ಸರ್ವಪ್ರಾಣಿಮಾತ್ರರಲ್ಲಿ ನನ್ನ ಭಜನೆ ಮತ್ತು ಸರ್ವ ಪ್ರಕಾರಗಳ ಕರ್ಮ ನನಗೆ ಅರ್ಪಿಸುವುದೇ ಅದು ಬುದ್ಧಿಯ ''ಮಹಾಬುದ್ಧಿ''ಯಾಗಿರುವುದು ।೧೦೫॥ ಮಿಥ್ಯಾ ದೇಹದಿಂದ ಭಜನೆ ಮಾಡಿ ಸ್ವತಃ ಸನಾತನ ಬ್ರಹ್ಮನಲ್ಲಿ ಏಕರೂಪನಾಗುವಿಕೆಯೇ ಚತುರ ಜನರ ಚಾತುರ್ಯವಾಗಿರುವುದು ।೧೦೬॥

ಆಧೀ ಮಾಯಾಚಿ ತಂವ ವಾವೋ । ಮಾಯಾಕಲ್ಪಿತ ಮಿಥ್ಯಾ ದೇಹೋ । ತೇ ದೇಹಕರ್ಮ ಮಜ ಅರ್ಪಿತಾ ಪಹಾ ಹೋ । ಬ್ರಹ್ಮ ಸ್ವಯಂಮೇವೋ ಸ್ವಯೇ ಹೋತೀ ॥೪೦೭॥ ಮಿಥ್ಯಾ ದೇಹಾಚೇನಿ ಭಜನೇ । ಸತ್ಯ ಪರಬ್ರಹ್ಮ ಸ್ವಯೇ ಹೋಣೇ । ಜೇವೀ ಕೋಂಡಾ ದೇಊನಿ ಆಪಣೇ । ಕಣಾಂಚೀ ಘೇಣೇ ಮಹಾರಾಶೀ ॥೪೦೮॥ ದೇತಾ ಫುಟಕೀ ಕಾಂಚವಟೀ । ಚಿಂತಾಮಣೀ ಜೋಡೇ ಗಾಂಠೀ । ಕಾ ಇಟೇಚ್ಯಾ ಸಾಟೋವಾಟೀ । ಜೋಡೇ ಉಠಾಉರೀ ಅವ್ಹಾ ಶಂಖ ॥೪೦೯॥ ತೇವೀ ಮಿಥ್ಯಾ ದೇಹೀಂಚೇ ಕರ್ಮಾಚರಣ । ಜೇಣೇ ಜೀವಾಸೀ ದೃಢಬಂಧನ । ತೇ ಕರ್ಮ ಕರಿತಾ ಮದರ್ಪಣ । ಬ್ರಹ್ಮ ಪರಿಪೂರ್ಣ ಸ್ವಯೇ ಹೋತೀ ॥೪೧೦॥ ಅನಿತ್ಯ ದೇಹಾಚಿಯಾಸಾಠೀ । ನಿತ್ಯ ವಸ್ತೂಸೀ ಪಡೇ ಮಿಠೀ । ಹೇಚಿ ಬುದ್ಧಿಮತೀ ಬುದ್ಧಿ ಮೋಠೀ । ''ಜ್ಞಾನಾಚೀ ಸಂತುಷ್ಟೀ'' ಯಾ ನಾಂವ ಮ್ಹಣಿಪೇ ॥೪೧೧॥ ನಿಷ್ಟಂಕಿತ ಪರಮಾರ್ಥ । ಸ್ವಮುಖೇ ಬೋಲಿಲಾ ಶ್ರೀಕೃಷ್ಣನಾಥ । ತೋ ಕಳಸಾ ಆಣೋನಿಯಾ ಗ್ರಂಥ । ಉಪಸಂಹಾರಾರ್ಥ ಸಾಂಗತು ॥೪೧೨॥

ಏಷ ತೇಽಭಿಹಿತಃ ಕೃತ್ಸ್ನೋ ಬ್ರಹ್ಮವಾದಸ್ಯ ಸಂಗ್ರಹಃ । ಸಮಾಸವ್ಯಾಸವಿಧಿನಾ ದೇವಾನಾಮಪಿ ದುರ್ಗಮಃ ॥೨೩॥

ಅರ್ಥ:- ಉದ್ಧವಾ, ಸಂಪೂರ್ಣ ಬ್ರಹ್ಮಸ್ಥಿತಿಯ ರಹಸ್ಯ ನಾನು ಸಂಕ್ಷೇಪ ಹಾಗೂ ವಿಸ್ತಾರವಾಗಿ ನಿನಗೆ ಹೇಳಿದೆನು. ಈ ರಹಸ್ಯ ತಿಳಿಯಲು ಮಾನವರಿಗೆ ಅಷ್ಟೇ ಅಲ್ಲ ದೇವತೆಗಳಿಗೂ ಕೂಡ ಅತ್ಯಂತ ಕಠಿಣವಾಗಿರುವುದು.

ಸಂಕ್ಷೇಪೇ ಆಣಿ ಸವಿಸ್ತರೇ । ಸಾಂಡೂನಿ ನಾನಾ ಮತಾಂತರೇ । ಮ್ಯಾ ಸಾಂಗಿತಲೇ ನಿಜನಿರ್ಧಾರೇ । ಬ್ರಹ್ಮಜ್ಞಾನ ಖರೇ ಅತಿಶುದ್ಧ ॥೪೧೩॥ ತುಜ ಸಾಂಗಿತಲೇ ಕರೂನ ಸುಗಮ । ಪರೀ ಹೇ ಬ್ರಹ್ಮಾದಿ ದೇವಾ ದುರ್ಗಮ । ಜೇ ಆಲೋಡಿತೀ ಆಗಮನಿಗಮ । ತ್ಯಾಂಸೀಹೀ ಪರಮ ದುಸ್ತರ ॥೪೧೪॥ ತೇಥೇ ನಾನಾ ಶಾಸ್ತ್ರಶಬ್ದಬೋಧ । ವಸ್ತು ನೇಣೋನಿ ಕರಿತೀ ವಿವಾದ । ಜೇಥ ವೇದಾಂಚಾ ಬ್ರಹ್ಮವಾದ । ಹೋಯ ನಿಃಶಬ್ದ ''ನೇತಿ''ಶಬ್ದೇ ॥೪೧೫॥ ತೇ ಹೇ ಆತ್ಮಜ್ಞಾನಾಚೇ ನಿಜಸಾರ । ಪರಮಾರ್ಥಾಚೇ ಗುಹ್ಯ ಭಾಂಡಾರ । ಮಜ ಪರಮಾತ್ಮ್ಯಾಚೇ ಜಿವ್ಹಾರ । ಫೋಡೂನಿ ಸಾಚಾರ ಸಾಂಗಿತಲೇ ॥೪೧೬॥

ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ । ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ ॥೨೪॥

ಅರ್ಥ:- ನಾನು ಯಾವ ಈ ಜ್ಞಾನವನ್ನು ಸುಸ್ಪಷ್ಟ ಮತ್ತು ಯುಕ್ತಿಯಿಂದ ಪುನಃ ಪುನಃ ವರ್ಣಿಸಿರುವೆನೋ, ಆ ಜ್ಞಾನದ ಮರ್ಮ ಯಾವನು ತಿಳಿಯುವನೋ, ಆತನ ಹೃದಯದಲ್ಲಿನ ಸರ್ವ ಪ್ರಕಾರದ ಸಂಶಯ ಇಲ್ಲದಾಗುವುದು.

ಮೊದಲೇ ಈ ಮಾಯೆಯು ಮೂಲತಃ ಮಿಥ್ಯಾ ಇರುವುದು ಮತ್ತು ಮಾಯೆಯು ಕಲ್ಪಿಸಿರುವ ಈ ದೇಹವು ಮಿಥ್ಯೆಯಾಗಿರುವುದು. ಆದೇ ದೇಹದ ಕರ್ಮಗಳನ್ನು ನನಗೆ ಅರ್ಪಿಸಿದರೆ ಅವರು ಸ್ವತಃ ಬ್ರಹ್ಮಸ್ವರೂಪರಾಗುವರು ॥೪೦೭॥ ತೌಡು ಕೊಟ್ಟು ಧಾನ್ಯದ ರಾಶಿಯನ್ನೇ ಪಡೆದಂತೆ ಮಿಥ್ಯೆಯಾದ ದೇಹದಿಂದ ಭಜನೆಮಾಡಿ ಸ್ವತಃ ಪರಬ್ರಹ್ಮರಾಗುವರು ॥೪೦೮॥ ಅಥವಾ ಒಡೆದ ಗಾಜು ಕೊಟ್ಟು ಅಮೌಲ್ಯ ಚಿಂತಾಮಣಿ ಪಡೆದುಕೊಂಡಂತೆ ಅಥವಾ ಒಂದು ಇಟ್ಟಂಗಿ ಕೊಟ್ಟು ಬಲಮುರಿ ಶಂಖಪಡೆದುಕೊಂಡಂತೆ ಇದಾಗಿರುವುದು ॥೪೦೯॥ ಈ ಪ್ರಕಾರವಾಗಿ ಮಿಥ್ಯೆಯಾಗಿರುವ ಈ ದೇಹದ ಕರ್ಮಾಚರಣೆಯಿಂದ ಜೀವಕ್ಕೆ ದೃಢವಾದ ಬಂಧನೆ ಪ್ರಾಪ್ತವಾಗುತ್ತಿರುವುದು. ಅದನ್ನೇ ನನಗೆ ಅರ್ಪಣೆ ಮಾಡಿ ತಾವು ಸ್ವತಃ ಪರಿಪೂರ್ಣ ಬ್ರಹ್ಮರಾಗುವರು ॥೪೧೦॥ ಅನಿತ್ಯ ದೇಹದಿಂದ ನಿತ್ಯ ವಸ್ತುವಿನ ಪ್ರಾಪ್ತಿಯಾಗುವುದು. ಇದು ಬುದ್ಧಿವಂತರ ಶ್ರೇಷ್ಠ ಬುದ್ಧಿಯಾಗಿರುವುದು. ಇದಕ್ಕೆ ಮಾತ್ರ ''ಜ್ಞಾನದ ಸಂತೋಷ'' ಎಂದು ಹೇಳುವರು ॥೪೧೧॥ ಈ ಪ್ರಕಾರವಾಗಿ ಶ್ರೀಕೃಷ್ಣನು ಪರಮ ಶುದ್ಧವಾಗಿರುವ ಪರಮಾರ್ಥ ಸ್ವಮುಖದಿಂದ ಹೇಳಿದನು. ಈಗ ಗ್ರಂಥವನ್ನು ಪೂರ್ಣಗೊಳಿಸುವುದಕ್ಕಾಗಿ ಉಪಸಂಹಾರ ಹೇಳುವನು ॥೪೧೨॥

ಅನೇಕ ಪ್ರಕಾರದ ಮತಮತಾಂತರಗಳನ್ನು ಬಿಟ್ಟು ನಾನು ನನ್ನ ಸ್ವತಃದ ನಿರ್ಣಯದಿಂದ ನಿಜವಾದ ಮತ್ತು ಅತ್ಯಂತ ಶುದ್ಧ ಬ್ರಹ್ಮಜ್ಞಾನವನ್ನು ಕೆಲವು ಕಡೆ ಸಂಕ್ಷಿಪ್ತವಾಗಿ ಹಾಗೂ ಕೆಲವು ಕಡೆ ವಿಸ್ತಾರವಾಗಿ ಹೇಳಿರುವೆನು ॥೪೧೩॥ ಇದನ್ನು ನಾನು ಅತ್ಯಂತ ಸುಲಭಮಾಡಿ ನಿನಗೆ ಹೇಳಿದೆನು. ಆದರೆ ಇದು ಬ್ರಹ್ಮಾದಿಕರಿಗೂ ಕೂಡ ದುರ್ಲಭವಾಗಿರುವುದು. ಯಾರು ಆಗಮನಿಗಮ ಇತ್ಯಾದಿ ಶಾಸ್ತ್ರಗಳ ಅಭ್ಯಾಸ ಮಾಡಿರುವರೋ, ಅವರಿಗೂ ಕೂಡ ಇದು ಅತ್ಯಂತ ಅಗಮ್ಯವಾಗಿರುವುದು ॥೪೧೪॥ ಅವರು ಪರಬ್ರಹ್ಮ ತಿಳಿಯಲಾರರು. ಅನೇಕ ಪ್ರಕಾರದ ಶಾಸ್ತ್ರಾರ್ಥದ ಪೊಳ್ಳು ಶಬ್ದಜ್ಞಾನದಿಂದ ವಾದ ಮಾಡುತ್ತ ಕುಳಿತುಕೊಳ್ಳುವರು. ಬ್ರಹ್ಮದ ವಾದ ಮಾಡುವಾಗ್ಗೆ ವೇದವೂ ಕೂಡ ''ನೇತಿ ನೇತಿ'' ಶಬ್ದಗಳಲ್ಲಿ ನಿಃಶಬ್ದವಾಗಿ ಇದ್ದುಕೊಂಡಿರುವುದು ॥೪೧೫॥ ಹೀಗಿರುವ ಬ್ರಹ್ಮಜ್ಞಾನದ ಸಾರ ಹಾಗೂ ಪರಮಾರ್ಥದ ಗುಹ್ಯ ಭಾಂಡಾರ, ಪರಮಾತ್ಮನಾದ ನಾನು ನನ್ನ ಅಂತಃಕರಣ ತೆರೆದು ನಿನಗೆ ಹೇಳಿರುವೆನು ॥೪೧೬॥

ಜೇಥ ವೇದಶಾಸ್ತ್ರಾಂಸೀ ಕುವಾಡೇ । ಜೇ ಬೋಲೀ ಬೋಲತಾ ನಾತುಡೇ । ತೇಚಿ ಜ್ಞಾನ ಮ್ಯಾ ತುಜಪುಢೇ । ನಿಜನಿವಾಡೇ ಸಾಂಗಿತಲೇ ॥೪೧೭॥ ಜೇ ಸಾಂಗಿತಲೇ ಶುದ್ಧ ಜ್ಞಾನ । ತೇ ನಾನಾ ಯುಕ್ತೀಕರೂನಿ ಜಾಣ । ದೃಢತೇಲಾಗೀ ನಿರೂಪಣ । ಪುನಃ ಪುನಃ ಜಾಣ ಮ್ಯಾ ಕೇಲೇ ॥೪೧೮॥ ಬಹುತ ನ ಲಾವಿತಾ ಖಟಪಟ । ತುಜ ನ ವಾಟತಾಂಹೀ ಕಷ್ಟ । ಜ್ಞಾನ ಸಾಂಗಿತಲೇ ವಿಸ್ಪಷ್ಟ । ಜೇಣೇ ಹೋತೀ ಸಪಾಟ ಸಂಶಯ ಸರ್ವ ॥೪೧೯॥ ಹೇ ಜಾಣೆತಲಿಯಾ ಜ್ಞಾನ । ಸರ್ವ ಸಂಶಯ ಹೋತೀ ದಹನ । ಸಾಧಕ ಹೋಯ ಬ್ರಹ್ಮ ಸಂಪನ್ನ । ಸ್ವಾನಂದಪೂರ್ಣ ಸರ್ವದಾ ॥೪೨೦॥ ಮ್ಯಾ ಸಾಂಗಿತಲೇ ಗುಹ್ಯಜ್ಞಾನ । ಏಕಾದಶಾಚೇ ನಿರೂಪಣ । ಯಾಚೇ ಶ್ರವಣ ಪಠಣ ಮನನ । ಕರೀ ತೋ ಧನ್ಯ ಉದ್ಧವಾ ॥೪೨೧॥

ಸುವಿವಿಕ್ತಂ ತವ ಪ್ರಶ್ನಂ ಮಯೈತದಪಿ ಧಾರಯೇತ್ । ಸನಾತನಂ ಬ್ರಹ್ಮ ಗುಹ್ಯಂ ಪರಂ ಬ್ರಹ್ಮಾಧಿಗಚ್ಛತಿ ॥೨೫॥

ಅರ್ಥ:- ನಾನು ನಿನ್ನ ಪ್ರಶ್ನೆಯ ಉತ್ತರ ಯೋಗ್ಯ ರೀತಿಯಲ್ಲಿ ಕೊಟ್ಟಿರುವೆನು. ಯಾವ ಪುರುಷನು ಈ ಪ್ರಶ್ನೋತ್ತರದ ತಿಳುವಳಿಕೆ ಯೋಗ್ಯ ಪ್ರಕಾರ ಮಾಡಿಕೊಂಡರೆ ದೇಹದಲ್ಲಿ ವರ್ಣಿಸಿರುವ ಸನಾತನ ಪರಬ್ರಹ್ಮವನ್ನು ಪ್ರಾಪ್ತ ಮಾಡಿಕೊಳ್ಳುವನು.

ಜ್ಞಾತೇ ತರತೀ ಹೇ ನವಲ ಕೋಣ । ಪರೀ ಭಾಳೇಭೋಳೇ ಜೇ ಅಜ್ಞಾನ । ತ್ಯಾಂಸೀ ಉದ್ಧಾರಾವಯಾ ಜಾಣ । ಉದ್ಧವಾ ತುವಾ ಪ್ರಶ್ನ ಪುಶಿಲಾ ॥೪೨೨॥ ತ್ಯಾ ಪ್ರಶ್ನಾನುಸಾರೇ ಜಾಣ । ಮ್ಯಾ ಸಂತೋಷೋನಿ ಆಪಣ । ಸಾಂಗಿತಲೇ ಗುಹ್ಯಜ್ಞಾನ । ಪರಮ ಕಾರಣ ಪರಬ್ರಹ್ಮ ॥೪೨೩॥ ಜೇವೀ ವತ್ಸಾಚೇ ಹುಂಕಾರೇ । ಧೇನು ಸ್ರವತ ಚಾಲೇ ಕ್ಷೀರೇ । ತೇವೀ ತುಝೇನಿ ಪ್ರಶ್ನಾದಾರೇ । ಮೀ ಸ್ವಾನಂದಭರೇ ತುಷ್ಟಲೋ ॥೪೨೪॥ ತೇಥ ನ ಕರಿತಾಂಹೀ ಪ್ರಶ್ನ । ಹೋತಾ ತಾನಯಾಚೇ ಅವಲೋಕನ । ಕೂರ್ಮೀ ನೇತ್ರದ್ವಾರಾ ಆಪಣ । ಅಮೃತಪಾನ ಕರವೀತ ॥೪೨೫॥ ತೇವೀ ಉದ್ಧವಾ ತುಝೇ ಅವಲೋಕನ । ಹೋತಾ ಮಾಝೇ ಹೃದಯೀಚೇ ಬ್ರಹ್ಮಜ್ಞಾನ । ತೇ ಪೋಸಂಡಲೇ ಗಾ ಪರಿಪೂರ್ಣ । ತೇ ಹೇ ನಿರೂಪಣ ಮ್ಯಾ ಕೇಲೇ ॥೪೨೬॥ ಯೇಣೇ ನಿರೂಪಣಮಿಸೇ । ಪರಮಾಮೃತ ಸಾವಕಾಶೇ । ತುಜ ಮ್ಯಾ ಪಾಜಿಲೇ ಅನಾಯಾಸೇ । ಸ್ವಾನಂದರಸೇ ನಿಜಬೋಧು ॥೪೨೭॥ ಸಿಂಧು ಮೇಘಾ ಜಳಪಾನ ಕರವೀ । ತೇಣೇ ಜಳೇ ಮೇಘು ಜಗಾತೇ ನಿವವೀ । ತೇವೀ ಉದ್ಧವಾಚಿಯೇ ಬ್ರಹ್ಮಪದವೀ । ಜಡಮೂಢಜೀವೀ ಉದ್ಧರಿಜೇ ॥೪೨೮॥ ಜೇವೀ ವತ್ಸಾಚೇನಿ ಪ್ರೇಮಭರೇ । ಗಾಯ ದುಭೇ ತೇ ಘರಾಸೀ ಪುರೇ । ತೇವೀ ಉದ್ಧವಾಪ್ರಶ್ನಾದಾರೇ । ಜಗ ಉದ್ಧರೇ ಅನಾಯಾಸೇ ॥೪೨೯॥

ಯಾವುದು ವೇದಶಾಸ್ತ್ರಗಳಿಗೂ ಅಗಮ್ಯವಾಗಿದೆಯೋ, ಯಾವುದು ಹೇಳಲು ಹೊರಟರೆ ಶಬ್ದಗಳಲ್ಲಿ ಸಿಗುವುದಿಲ್ಲವೋ, ಅಂತಹ ಜ್ಞಾನವನ್ನು ನಾನು ನಿನಗೆ ಸ್ಪಷ್ಟವಾಗಿ ಆರಿಸಿ ತೋರಿಸಿಕೊಟ್ಟಿರುವೆನು ॥೪೧೭॥ ಇಷ್ಟೇ ಅಲ್ಲ, ಈ ಯಾವ ಶುದ್ಧ ಜ್ಞಾನ ನಿನ್ನ ಹೃದಯ ಪಟಲದಲ್ಲಿ ದೃಢವಾಗಿ ನಾಟಿಕೊಳ್ಳಲೆಂದು ಅನೇಕ ಪ್ರಕಾರದ ಯುಕ್ತಿಪ್ರಯುಕ್ತಿಗಳಿಂದ ಪುನಃ ಪುನಃ ಒತ್ತಿ ಹೇಳಿರುವೆನು ॥೪೧೮॥ ಅತಿಯಾಗಿ ಖಟಪಟ ಮಾಡದೇ ಹಾಗೂ ನಿನಗೆ ಬಹುವಾಗಿ ತೊಂದರೆ ಕೊಡದೇ ನಾನು ಈ ಜ್ಞಾನ ನಿನಗೆ ಸ್ಪಷ್ಟಮಾಡಿ ಹೇಳಿರುವೆನು. ಇದರಿಂದ ನಿನ್ನ ಸರ್ವ ಸಂಶಯಗಳು ಇಲ್ಲದಾಗಬೇಕು ॥೪೧೯॥ ಈ ಜ್ಞಾನ ತಿಳಿದುಕೊಂಡರೆ ಸರ್ವ ಸಂಶಯಗಳು ಸುಟ್ಟುಹೋಗುವುವು. ಸಾಧಕನು ಬ್ರಹ್ಮಸಂಪನ್ನನಾಗಿ ನಿರಂತರ ಸ್ವಾನಂದದಿಂದ ತೃಪ್ತನಾಗುವನು ॥೪೨೦॥ ಹೇ ಉದ್ಧವಾ ! ಈ ಯಾವ ಹನ್ನೊಂದನೆಯ ಸ್ಕಂಧದಲ್ಲಿ ನಾನು ಹೇಳಿರುವ ಈ ಗುಹ್ಯ ಜ್ಞಾನದ ಶ್ರವಣ, ಪಠಣ ಹಾಗೂ ಮನನ ಯಾರು ಮಾಡುವರೋ, ಅವರು ಧನ್ಯಧನ್ಯರು ॥೪೨೧॥

ಜ್ಞಾನೀ ಪುರುಷರು ಉದ್ಧಾರರಾಗುವುದು ಇದರಲ್ಲೇನು ಆಶ್ಚರ್ಯವಿದೆ ? ಆದರೆ ಮುಗ್ಧ ಭಾವಿಕ ಅಜ್ಞಾನಿಗಳವರಿಗೆ ಅವರ ಉದ್ಧಾರಕ್ಕಾಗಿ ನೀನು ಪ್ರಶ್ನೆ ವಿಚಾರಿಸಿದ್ದೆ ॥೪೨೨॥ ಆ ಪ್ರಶ್ನೆ ಪ್ರಕಾರ ನಾನು ಸಂತುಷ್ಟನಾಗಿ ನಿನಗೆ ಗುಹ್ಯ ಜ್ಞಾನ ಅಂದರೆ ಪರಮ ಕಾರಣವಾದ ಯಾವ ಪರಬ್ರಹ್ಮವನ್ನು ಹೇಳಿರುವೆನು ॥೪೨೩॥ ಕರುವಿನ ಹುಂಕಾರದಿಂದ ಆಕಳು ತನ್ನ ಕೆಚ್ಚಲದಲ್ಲಿ ಹಾಲಿನ ಧಾರೆ ಬಿಡುವುದು. ಅದರಂತೆ ನಿನ್ನ ಆದರಯುಕ್ತ ಪ್ರಶ್ನೆಯಿಂದ ನಾನು ಸ್ವಾನಂದ ಭರಿತನಾಗಿ ತುಷ್ಟನಾದೆನು ॥೪೨೪॥ ಆಮೆ ತನ್ನ ಮರಿಗಳಿಗೆ ಅವು ಕೇಳದೆ ಇದ್ದರೂ ಪ್ರೇಮದೃಷ್ಟಿಯಿಂದ ಪೋಷಣೆ ಮಾಡುತ್ತ ತನ್ನ ನೇತ್ರ ಮಾತ್ರದಿಂದ ಅಮೃತಪಾನ ಮಾಡಿಸುವುದು ॥೪೨೫॥ ಹೇ ಉದ್ಧವನೇ, ಇದೇ ಪ್ರಕಾರವಾಗಿ ನಿನ್ನನ್ನು ನೋಡುತ್ತಲೇ ನನ್ನ ಹೃದಯದಲ್ಲಿನ ಬ್ರಹ್ಮಜ್ಞಾನವು ಉಕ್ಕೇರಿ ಬಂದಿತು. ಇದೇ ನಿರೂಪಣೆ ನಾನು ನಿನಗೆ ಮಾಡಿರುವೆನು ॥೪೨೬॥ ಈ ನಿರೂಪಣೆಯ ನಿಮಿತ್ತದಿಂದ ಸ್ವಾನಂದರಸದಿಂದ ಪರಿಪೂರ್ಣವಾಗಿರುವ ಪರಮಾಮೃತವನ್ನು ನಾನು ನಿನಗೆ ಅನಾಯಾಸವಾಗಿ ಕುಡಿಸಿರುವೆನು ॥೪೨೭॥ ಸಮುದ್ರವು ಮೇಘಕ್ಕೆ ತನ್ನ ಜಲ ಕೊಡುತ್ತಿರುವುದು. ಆದರೆ ಮೇಘವು ಆ ಜಲವನ್ನು ಜಗತ್ತಿಗೆ ಕೊಡುತ್ತಿರುವುದು. ಅದರಂತೆಯೇ ಉದ್ಧವನಿಗೆ ಪ್ರಾಪ್ತವಾಗಿರುವ ಬ್ರಹ್ಮಪದವಿಯಿಂದ ಜಡ-ಮೂಢ ಜೀವಿಗಳ ಉದ್ಧಾರವಾಗುವುದು ॥೪೨೮॥ ತನ್ನ ಕರುವಿನ ಪ್ರೇಮಕ್ಕಾಗಿ ಆಕಳು ತೊರೆ ಬಿಡುತ್ತಿರುವುದು. ಆದರೆ ಆ ಹಾಲು ಮನೆಯ ಎಲ್ಲರಿಗೂ ಪೂರೈಕೆಯಾಗುವುದು. ಅದರಂತೆ ಉದ್ಧವನು ಕೇಳಿದ ಪ್ರಶ್ನೆಯ ನಿಮಿತ್ತದಿಂದ ಸಂಪೂರ್ಣ ಜಗತ್ತಿನ ಉದ್ಧಾರ ಅನಾಯಾಸವಾಗಿ ಆಗುವುದು ॥೪೨೯॥

ತೋ ಹಾ ಪ್ರಶ್ನೋತ್ತರಕಥಾನುವಾದ । ಮಾಝಾ ತುಝಾ ಬ್ರಹ್ಮಸಂವಾದ । ನಿರೂಪಣೇ ಏಕಾದಶಸ್ಕಂಧ । ಹಾ ಅರ್ಥಾವಬೋಧ ಜೋ ರಾಖೇ ॥೪೩೦॥ ಅಥವಾ ಹೇ ನಿರೂಪಣ । ಸಾರ್ಥಕೇ ಜೋ ಕಾ ಕರೀ ಶ್ರವಣ । ತೈ ಶ್ರೋತೇ ವಕ್ತೇ ಉಭಯ ಜಾಣ । ಬ್ರಹ್ಮ ಸನಾತನ ಸ್ವಯೇ ಹೋತೀ ॥೪೩೧॥ ಜಗೀ ಬ್ರಹ್ಮ ಅಸತಾ ಪರಿಪೂರ್ಣ । ಮನಬುದ್ಧಿ ಇಂದ್ರಿಯಾ ನ ದಿಸೇ ಜಾಣ । ಜೇಥೇ ವೇದಾಂಸೀ ಪಡಿಲೇ ಮೌನ । ತೇ ಗುಹ್ಯಜ್ಞಾನ ಪಾವತೀ ॥೪೩೨॥ ಜ್ಞಾನ ಪಾವಲಿಯಾ ಪುಢತೀ । ಕದಾ ಕಾಳೇ ನವ್ಹೇ ಚ್ಯುತೀ । ಹಾ ಏಕಾದಶಾರ್ಥ ಧರಿತಾ ಚಿತ್ತೀ । ಪದಪ್ರಾಪ್ತೀ ಅಚ್ಯುತ ॥೪೩೩॥ ಶ್ರೋತೇ ವಕ್ತೇ ಏಕಾದಶಾರ್ಥೀ । ಏವಢೀ ಪದವೀ ಪಾವತೀ । ಮಾ ಮದ್ಭಕ್ತಾಂಸೀ ಅತಿಪ್ರೀತೀ । ಜೇ ಉಪದೇಶಿತೀ ಹೇ ಜ್ಞಾನ ॥೪೩೪॥ ತ್ಯಾಂಚ್ಯಾ ಫಳಾಚೀ ಫಲಪ್ರಾಪ್ತೀ । ಜ್ಞಾನೋಪದೇಶಾಚೀ ಶುದ್ಧ ಸ್ಥಿತೀ । ಉದ್ಧವಾಲಾಗೀ ಅತಿಪ್ರೀತೀ । ಸ್ವಮುಖೇ ಶ್ರೀಪತೀ ಸಾಂಗತ ॥೪೩೫॥

ಯ ಏತನ್ಮಮ ಭಕ್ತೇಷು ಸಂಪ್ರದದ್ಯಾತ್ ಸುಪುಷ್ಕಲಮ್ । ತಸ್ಯಾಹಂ ಬ್ರಹ್ಮದಾಯಸ್ಯ ದದಾಮ್ಯಾತ್ಮಾನಮಾತ್ಮನಾ ॥೨೬॥

ಅರ್ಥ:- ಈ ಯಾವ ಜ್ಞಾನ ಯಾವನು ನನ್ನ ಭಕ್ತರಲ್ಲಿ ಮುಟ್ಟಿಸುವನೋ, ಆ ಬ್ರಹ್ಮದ ಜ್ಞಾನ ಮಾಡುವ ಜ್ಞಾನ ಉಪದೇಶಕ ದೃಷ್ಟಾಗೆ ನಾನು ಸ್ವತಃ ಆತ್ಮಸ್ವರೂಪ ಅರ್ಪಿಸುವೆನು.

ಕಾಯಾ ವಾಚಾ ಆಣಿ ಚಿತ್ತ । ಗ್ರಹ ದಾರಾ ವಿತ್ತ ಜೀವಿತ । ನಿಷ್ಕಾಮತಾ ಮಜ ಅರ್ಪಿತ । ಅನನ್ಯ ಭಕ್ತ ತೇ ಮಾಝೇ ॥೪೩೬॥ ಐಶಿಯಾ ಭಕ್ತಾಂಚ್ಯಾ ಠಾಯೀ ಜಾಣ । ಅವಶ್ಯ ಉಪದೇಶಾವೇ ಹೇ ಜ್ಞಾನ । ತ್ಯಾಹೀ ಉಪದೇಶಾಚೇ ಲಕ್ಷಣ । ಪಕ್ವ ಪರಿಪೂರ್ಣ ತೇ ಐಸೇ ॥೪೩೭॥ ಜೇಥ ಜೇಥ ಜಾಯ ಸಾಧಕಾಂಚೇ ಮನ । ತೇಥ ತೇಥ ಬ್ರಹ್ಮ ಪರಿಪೂರ್ಣ । ಮನ ನಿಘಾವಯಾ ತೇಥೂನ । ರಿತೇ ಸ್ಥಾನ ಅಸೇನಾ ॥೪೩೮॥ ಐಸೇ ಕರಿತಾ ಅನುಸಂಧಾನ । ಚೈತನ್ಯೀ ಸಮರಸೇ ಮನ । ತ್ಯಾತೇ ಮ್ಹಣಿಜೇ ''ಪುಷ್ಕಲ ಜ್ಞಾನ'' । ಉಪದೇಶ ಪೂರ್ಣ ಯಾ ನಾಂವ ॥೪೩೯॥ ಐಸೇ ಸಮೂಳ ಬ್ರಹ್ಮಜ್ಞಾನ । ಮದ್ಭಕ್ತಾಂಸೀ ಜೋ ಕರೀ ದಾನ । ತ್ಯಾಚಾ ಬ್ರಹ್ಮ ಋಣಿಯಾ ಮೀ ಜಾಣ । ಹೋಯ ಸಂಪೂರ್ಣ ಉದ್ಧವಾ ॥೪೪೦॥ ತ್ಯಾಚಿಯಾ ಉತ್ತೀರ್ಣತ್ವಾಸೀ । ಗಾಂಠೀ ಕಾಂಹೀ ನಾಹೀ ಮಜಪಾಶೀ । ಮೀ ನಿಜರೂಪ ಅರ್ಪೀ ತ್ಯಾಸೀ । ಅಹರ್ನಿಶೀ ಮೀ ತ್ಯಾ ಜವಳೀ ॥೪೪೧॥ ಜೋ ಶಿಷ್ಯಾಂಸೀ ದೇ ಬ್ರಹ್ಮಜ್ಞಾನ । ಮೀ ಪರಮಾತ್ಮಾ ತ್ಯಾ ಅಧೀನ । ಬ್ರಹ್ಮದಾತ್ಯಾಚ್ಯಾ ಬೋಲೇ ಜಾಣ । ಸ್ತ್ರಿಯಾದಿ ಶೂದ್ರಜನ ಮೀ ಉದ್ಧರೀ ॥೪೪೨॥

ಈ ಯಾವ ಪ್ರಶ್ನೋತ್ತರರೂಪದ ಅನುವಾದವೆಂದರೆ ನನ್ನ ಮತ್ತು ನಿನ್ನ ಬ್ರಹ್ಮಸಂವಾದವು ಹನ್ನೊಂದನೆಯ ಸ್ಕಂಧದಲ್ಲಿ ಹೇಳಲ್ಪಟ್ಟಿರುವುದು. ಈ ಅರ್ಥಬೋಧ ಯಾರು ತಿಳಿಯುವರೋ ॥೪೩೦॥ ಅಥವಾ ಈ ನಿರೂಪಣೆಯನ್ನು ಯಾರು ಅರ್ಥಸಹ ಶ್ರವಣ ಮಾಡುವರೋ, ಆ ಶ್ರೋತೃಗಳು ಮತ್ತು ವಕ್ತಾ ಅವರು ಹೀಗೆ ಸರ್ವರೂ ಸ್ವತಃ ಸನಾತನ ಬ್ರಹ್ಮರಾಗುವರು ॥೪೩೧॥ ಈ ಜಗತ್ತಿನಲ್ಲಿ ಯಾವ ಬ್ರಹ್ಮವು ಪರಿಪೂರ್ಣವಾಗಿ ತುಂಬಿಕೊಂಡಿದ್ದರೂ ಸಹ ಮನಸ್ಸಿಗೆ, ಬುದ್ಧಿಗೆ, ಇಂದ್ರಿಯಗಳಿಗೆ ಗೋಚರಿಸುವುದಿಲ್ಲ. ಅದರ ವರ್ಣನೆ ಮಾಡಲು ಹೋಗಿ ವೇದವೂ ಕೂಡ ಮೌನ ತಾಳಿರುವುದು. ಇಂತಹ ಈ ಬ್ರಹ್ಮಜ್ಞಾನವು ಈ ಯಾವ ಶ್ರೋತೃಗಳಿಗೆ ಹಾಗೂ ವಕ್ತಾ ಅವರಿಗೆ ಪ್ರಾಪ್ತವಾಗುವುದು ॥೪೩೨॥ ಈ ಜ್ಞಾನವು ಒಮ್ಮೆ ಪ್ರಾಪ್ತವಾಯಿತೆಂದರೆ ಎಂದಿಗೂ ಅದು ಚ್ಯುತಿಯಾಗುವುದಿಲ್ಲ. ಈ ಹನ್ನೊಂದನೆಯ ಸ್ಕಂಧದಲ್ಲಿನ ಅರ್ಥ ಹೃದಯದಲ್ಲಿ ಧರಿಸಿದರೆ ದೃಢವಾದ ಪರಮ ಪದವಿ ಪ್ರಾಪ್ತವಾಗುವುದು ॥೪೩೩॥ ಈ ಯಾವ ಹನ್ನೊಂದನೆಯ ಸ್ಕಂಧದಿಂದ ಶ್ರೋತೃಗಳಿಗೆ ಹಾಗೂ ವಕ್ತಾ ಅವರಿಗೆ ಇಷ್ಟೊಂದು ದೊಡ್ಡ ಪದವಿಯು ಪ್ರಾಪ್ತವಾಗುತ್ತಿರಲು ನನ್ನ ಭಕ್ತರಿಗೆ ಯಾರು ಅತ್ಯಂತ ಪ್ರೇಮದಿಂದ ಈ ಜ್ಞಾನದ ಉಪದೇಶ ಮಾಡುವರೋ ॥ ೪೩೪॥ ಅವರಿಗೆ ಯಾವ ಫಲಪ್ರಾಪ್ತಿಯಾಗುವುದೆಂಬುದನ್ನು ಮತ್ತು ಜ್ಞಾನೋಪದೇಶದ ಶುದ್ಧ ಸ್ಥಿತಿ ಶ್ರೀಕೃಷ್ಣನು ಉದ್ಧವನಿಗೆ ಅತ್ಯಂತ ಪ್ರೇಮದಿಂದ ಸ್ವಾನುಭವದಿಂದ ಹೇಳುತ್ತಿರುವನು ॥೪೩೫॥

ಕಾಯಾ, ವಾಚಾ, ಮನ, ಗೃಹ, ಪತ್ನಿ, ಪುತ್ರರು, ಧನ ಮತ್ತು ಪ್ರಾಣ ಈ ಎಲ್ಲವನ್ನೂ ಯಾರು ನಿಷ್ಕಾಮ ಬುದ್ಧಿಯಿಂದ ನನಗೆ ಅರ್ಪಣೆ ಮಾಡುವರೋ, ಅವರೇ ನನ್ನ ಅನನ್ಯ ಭಕ್ತರಾಗಿರುವರು ॥೪೩೬॥ ಇಂತಹ ಭಕ್ತರಲ್ಲಿ ಈ ಜ್ಞಾನವನ್ನು ಅವಶ್ಯವಾಗಿ ಉಪದೇಶ ಮಾಡಬೇಕು. ಈ ಉಪದೇಶದ ಪರಿಪಕ್ವ ಮತ್ತು ಪೂರ್ಣ ಲಕ್ಷಣ ಹೀಗಿರುವುದು ॥೪೩೭॥ ಸಾಧಕನ ಮನಸ್ಸು ಎಲ್ಲಿ ಎಲ್ಲಿಗೆ ಹೋಗುತ್ತಿರುವುದೋ, ಅಲ್ಲಲ್ಲಿ ಪರಿಪೂರ್ಣ ಬ್ರಹ್ಮವೇ ಇರುವುದು. ಅಲ್ಲಿಂದ ಮನವು ಹೊರಬರಲು ಅನ್ಯ ಬರಿದಾದ ಸ್ಥಳವೇ ಇರುವುದಿಲ್ಲ ॥೪೩೮॥ ಹೀಗೆ ಅನುಸಂಧಾನ ಹಿಡಿದರೆ ಮನವು ಚೈತನ್ಯದಲ್ಲಿ ಸಮರಸವಾಗುವುದು. ಇದಕ್ಕೆ ''ಪುಷ್ಕಲಜ್ಞಾನ'' ಎಂದು ಹೇಳುವರು. ಇದರ ನಾಮವೇ ಪೂರ್ಣ ಉಪದೇಶ ಎಂದು ಹೇಳುವರು ॥೪೩೯॥ ಹೇ ಉದ್ಧವಾ, ಈ ಪ್ರಕಾರವಾಗಿ ಸಂಪೂರ್ಣ ಬ್ರಹ್ಮಜ್ಞಾನದಿಂದ ಯಾರು ನನ್ನ ಭಕ್ತನಿಗೆ ದಾನ ಮಾಡುವನೋ, ಆತನ ಬ್ರಹ್ಮ ಋಣದಲ್ಲಿ ನಾನಿರುವೆನು ॥೪೪೦॥ ಆತನ ಉಪಕಾರವನ್ನು ತೀರಿಸುವುದಕ್ಕಾಗಿ ನನ್ನಲ್ಲಿ ಏನೂ ಇರುವುದಿಲ್ಲ. ಆದ್ದರಿಂದ ನನ್ನ ಆತ್ಮಸ್ವರೂಪವನ್ನು ಆತನಿಗೆ ಕೊಟ್ಟು ಹಗಲು ರಾತ್ರಿ ಆತನ ಸೇವೆಗಾಗಿ ನಾನು ನಿಂತುಕೊಳ್ಳುವೆನು ॥೪೪೧॥ ಯಾರು ತನ್ನ ಶಿಷ್ಯನಿಗೆ ಬ್ರಹ್ಮಜ್ಞಾನ ಕೊಡುವನೋ, ಆತನ ಅಧೀನ ಪರಮಾತ್ಮನಾದ ನಾನಾಗುವೆನು. ಬ್ರಹ್ಮಜ್ಞಾನ ಕೊಡುವವನ ಶಬ್ದಗಳಿಂದ ನಾನು ಸ್ತ್ರೀಶೂದ್ರಾದಿಕರ ಉದ್ಧಾರ ಮಾಡುವೆನು ॥೪೪೨॥

ದೇಊನಿಯಾ ಪರಬ್ರಹ್ಮ । ಜೋ ಮದ್ಭಕ್ತಾಂಸೀ ಕರೀ ನಿಷ್ಕರ್ಮ । ತ್ಯಾಚಾ ಅಂಕಿತ ಮೀ ಪುರುಷೋತ್ತಮ । ತೋ ಪ್ರಿಯ ಪರಮ ಮಜಲಾಗೀ ।।೪೪೩।। ಜೋ ಬ್ರಹ್ಮಜ್ಞಾನ ದೇ ಮದ್ಭಕ್ತಾ । ತಯಾಹೂನಿ ಆಣಿಕ ಪರತಾ । ಮಜ ಆನ ನಾಹೀ ಗಾ ಪಢಿಯಂತಾ । ಜಾಣ ತತ್ತ್ವತಾ ಉದ್ಧವಾ ।।೪೪೪।। ಜೋ ಆತ್ಮಾ ಮೀ ಶರೀರ ಜಾಣ । ತ್ಯಾಚಾ ದೇಹ ಮೀ ಹೋಯ ಆಪಣ । ತ್ಯಾಚೇ ಜೇ ಜೇ ಕರ್ಮಾಚರಣ । ತೇ ತೇ ಸಂಪೂರ್ಣ ಮೀಚಿ ಹೋಯ ।।೪೪೫।। ಜೈಸಾ ಮೀ ಅವತಾರಧಾರೀ । ತೈಸಾಚಿ ತೋಹೀ ಅವತಾರೀ । ತ್ಯಾ ಆಣಿ ಮಜಮಾಝಾರೀ । ನಾಹೀ ತಿಳಭರೀ ಅಂತರ ।।೪೪೬।। ಜೋ ಯಾ ಬ್ರಹ್ಮಜ್ಞಾನಾಚೇ ಕರೀ ದಾನ । ತ್ಯಾಸೀ ಯಾಪರೀ ಮೀ ಅಪಣ । ಕರೀ ನಿಜಾತ್ಮ ಅರ್ಪಣ । ತರೀ ಉತ್ತೀರ್ಣ ನವ್ಹೇಚಿ ।।೪೪೭।। ಯಾಲಾಗೀ ವರ್ತತಾಂಹೀ ಶರೀರೀ । ಮೀ ಅಖಂಡ ತ್ಯಾಚೀ ಸೇವಾ ಕರೀ । ನಿಜಾತ್ಮ ಅರ್ಪಣ ಪ್ರೀತೀವರೀ । ಮೀ ತ್ಯಾಚ್ಯಾ ಘರೀ ಸರ್ವದಾ ।।೪೪೮।। ತ್ಯಾತೇ ಜೇ ಜೇ ಜಡಭಾರೀ । ತೇಹೀ ಮೀ ವಾಹೇ ಆಪುಲೇ ಶಿರೀ । ಮಾಝೀ ಚೈತನ್ಯ ಸಾಮ್ರಾಜ್ಯಶ್ರೀ । ನಾಂದೇ ತ್ಯಾಚೇ ಘರೀ ಸರ್ವಥಾ ।।೪೪೯।। ಏಕಾದಶಾಚೇ ಬ್ರಹ್ಮಜ್ಞಾನ । ಬೋಧೂನಿ ಮದ್ಭಕ್ತಾ ಜೋ ಕರೀ ದಾನ । ತ್ಯಾಸೀ ಮೀ ಯಾಪರೀ ಜಾಣ । ಆತ್ಮಾರ್ಪಣ ಸ್ವಯೇ ಕರೀ ।।೪೫೦।। ಅಸೋ ನ ಸಾಧವೇ ಬ್ರಹ್ಮಜ್ಞಾನ । ತರೀ ಯಾ ಗ್ರಂಥಾಚೇಚಿ ಪಠಣ । ಜೋ ಸರ್ವದಾ ಕರೀ ಸಾವಧಾನ । ತೋ ಪರಮ ಪಾವನ ಉದ್ಧವಾ ।।೪೫೧।।

ಯ ಏತತ್ಸಮಧೀಯೀತ ಪವಿತ್ರಂ ಪರಮಂ ಶುಚಿ । ಸ ಪೂಯೇತಾಹರಹರ್ಮಾ ಜ್ಞಾನದೀಪೇನ ದರ್ಶಯನ್ ।।೨೭।।

ಅರ್ಥ:- ಉದ್ಧವಾ ! ಈ ಯಾವ ನನ್ನ ಮತ್ತು ನಿನ್ನ ಜ್ಞಾನಸಂವಾದ ಸ್ವಯಂ ಪರಮಪವಿತ್ರವಾಗಿದೆ. ಇತರರಿಗೂ ಪವಿತ್ರಗೊಳಿಸುವುದಾಗಿದೆ. ಯಾವನು ಪ್ರತಿದಿನ ಇದರ ಪಠಣೆಯನ್ನು ಮಾಡುತ್ತ ಇತರರಿಗೂ ಹೇಳುವನೋ, ಆತನು ಈ ಜ್ಞಾನದೀಪದಿಂದ ಇತರರಿಗೆ ನನ್ನ ದರ್ಶನ ಮಾಡಿಸಿ ತಾನೂ ಪವಿತ್ರನಾಗುವನು.

ನಿಖಿಳ ಜೇ ಕಾ ಬ್ರಹ್ಮಜ್ಞಾನ । ತೋ ಹಾ ಮಾಝಾ ತುಝಾ ಸಂವಾದ ಜಾಣ । ಜೋ ಸಾದರೇ ಕರೀ ಪಠಣ । ಸಾವಧಾನ ಶ್ರದ್ಧಾಳೂ ।।೪೫೨।। ಚಢತ್ಯಾವಾಢತ್ಯಾ ಪರವಡೀ । ಶುದ್ಧ ಸಾತ್ತ್ವಿಕೀ ಶ್ರದ್ಧಾ ಗಾಢೀ । ಪದೋಪದೀ ನೀಚ ನವೀ ಗೋಡೀ । ಅದ್ಭುತ ಆವಡೀ ಪಠಣಾಚೀ ।।೪೫೩।। ವಾಚೇಚಿಯಾ ಟವಳ್ಯಾಂಪ್ರತೀ । ಶ್ರದ್ಧಾ ಸ್ನೇಹಾಚೀ ಸಂಪತ್ತಿ । ನಿಜಜಿವ್ಹಾ ಕರೂನಿ ವಾತೀ । ಜೋ ಹೇ ಜ್ಞಾನದೀಪ್ತೀ ಪ್ರಕಾಶೀ ।।೪೫೪।। ಏಕಾದಶಾಚೇ ಜ್ಞಾನದೀಪ್ತೀ । ಏಕಾದಶ ಇಂದ್ರಿಯಾಂಚ್ಯಾ ವಾತೀ । ಉಜಳೂನಿ ಜೇ ಮಜ ವೋಂವಾಳಿತೀ । ತೇ ಪವಿತ್ರ ಕಿತೀ ಮೀ ಸಾಂಗೂ ।।೪೫೫।।

ಭಕ್ತರಿಗೆ ಪರಬ್ರಹ್ಮದ ಪ್ರಾಪ್ತಿ ಮಾಡಿಕೊಟ್ಟು ಯಾರು ನಿಷ್ಕರ್ಮವನ್ನು ಮಾಡುತ್ತಿರುವನೋ, ಆತನು ನನಗೆ ಅತ್ಯಂತ ಪ್ರಿಯನಾಗಿರುವನು. ನಾನು ಪುರುಷೋತ್ತಮನು ಆತನ ಅಂಕಿತನಾಗಿರುವೆನು ।।೪೪೩।। ಹೇ ಉದ್ಧವಾ, ಯಾರು ನನ್ನ ಭಕ್ತರಿಗೆ ಬ್ರಹ್ಮಜ್ಞಾನವನ್ನು ಕೊಡುವನೋ, ಆತನಿಗಿಂತಲೂ ಅಧಿಕ ಪ್ರಿಯರು ನನಗೆ ಅನ್ಯರು ಯಾರೂ ಇರುವುದಿಲ್ಲ. ಹೀಗೆ ನೀನು ನಿಶ್ಚಯವಾಗಿ ತಿಳಿ ।।೪೪೪।। ಆತನು ಆತ್ಮ ಮತ್ತು ನಾನು ಶರೀರನಾಗಿ ಆತನ ಶರೀರವನ್ನೂ ಕೂಡ ನಾನು ಸ್ವತಃ ಆಗುವೆನು. ಹಾಗೆಯೇ ಆತನ ಸರ್ವ ಕರ್ಮಾಚರಣೆ ನಾನೇ ಆಗುವೆನು ।।೪೪೫।। ನಾನು ಹೇಗೆ ಅವತಾರ ಧರಿಸಿರುವೆನೋ, ಹಾಗೆಯೇ ಆತನೂ ಸಹ ಅವತಾರೀಯಾಗಿರುವನು. ಆತನಲ್ಲಿ ಮತ್ತು ನನ್ನಲ್ಲಿ ಸ್ವಲ್ಪವೂ ಕೂಡ ಅಂತರವಿರುವುದಿಲ್ಲ ।।೪೪೬।। ಯಾರು ಈ ಬ್ರಹ್ಮಜ್ಞಾನದ ದಾನ ಮಾಡುವನೋ, ಆತನಿಗೆ ನಾನು ಸ್ವತಃ ಈ ಪ್ರಕಾರವಾಗಿ ಆತ್ಮವನ್ನು ಅರ್ಪಣೆ ಮಾಡುವೆನು. ಆದರೂ ಕೂಡ ಆತನ ಋಣಮುಕ್ತನಾಗಲು ಶಕ್ಯವಾಗುವುದಿಲ್ಲ ।।೪೪೭।। ಈ ಕಾರಣದಿಂದ ನಾನು ಶರೀರದಿಂದ ವರ್ತಿಸುತ್ತಿರುವಾಗಲೂ ಕೂಡ ಆತನ ಅಖಂಡ ಸೇವೆ ಮಾಡುತ್ತಿರುವೆನು. ಆತನ ಪ್ರೇಮಕ್ಕಾಗಿ ನಾನು ನನ್ನ ಆತ್ಮವನ್ನು ಅರ್ಪಿಸಿ ಯಾವಾಗಲೂ ಆತನ ಮನೆಯಲ್ಲಿ ಇರುವೆನು ।।೪೪೮।। ಆತನ ಮೇಲೆ ಯಾವ ಯಾವ ಸಂಕಟಗಳು ಬರುವುವೋ, ಅವುಗಳನ್ನೆಲ್ಲ ನಾನು ನನ್ನ ಮೇಲೆ ತೆಗೆದುಕೊಳ್ಳುತ್ತಿರುವೆನು. ನನ್ನ ಚೈತನ್ಯಸಾಮ್ರಾಜ್ಯದ ವೈಭವವು ಆತನ ಮನೆಯಲ್ಲಿ ಸದಾವಕಾಲ ವರ್ತಿಸುತ್ತಿರುವುದು ।।೪೪೯।। ಈ ಏಕಾದಶಸ್ಕಂಧದಲ್ಲಿನ ಬ್ರಹ್ಮಜ್ಞಾನದ ಉಪದೇಶ ಮಾಡಿ ನನ್ನ ಭಕ್ತರಿಗೆ ಯಾವನು ಜ್ಞಾನದಾನ ಕೊಡುವನೋ, ಆತನಿಗೆ ನಾನು ಈ ಪ್ರಕಾರವಾಗಿ ನನ್ನ ಆತ್ಮ ಅರ್ಪಣೆ ಮಾಡುವೆನು ।।೪೫೦।। ಈ ಬ್ರಹ್ಮಜ್ಞಾನ ಸಾಧಿಸಲು ಒಂದು ವೇಳೆ ಸಾಧ್ಯವಾಗದಿದ್ದರೆ ಹೇ ಉದ್ಧವಾ, ಈ ಗ್ರಂಥದ ಪಠಣೆಯನ್ನು ಯಾವನು ಸರ್ವಕಾಲದಲ್ಲಿ ಲಕ್ಷಕೊಟ್ಟು ಮಾಡುವನೋ, ಅವನೂ ಕೂಡ ಪರಮಪಾವನನಾಗುವನು ।।೪೫೧।।

ಹೇ ಉದ್ಧವಾ, ನಿನ್ನ ಮತ್ತು ನನ್ನ ಈ ಸಂವಾದವು ಶುದ್ಧವಾದ ಬ್ರಹ್ಮಜ್ಞಾನವಾಗಿದೆ. ಯಾವ ಶ್ರದ್ಧಾವಾನನು ಏಕಾಗ್ರಚಿತ್ತದಿಂದ ಮತ್ತು ಆದರಿಂದ ಅದರ ಪಠಣೆ ಮಾಡಲು ।।೪೫೨।। ಆತನು ಉತ್ತರೋತ್ತರವಾಗಿ ಅರಳುವ ಪ್ರೇಮದಿಂದ ಶುದ್ಧ, ಸಾತ್ವಿಕ ಶ್ರದ್ಧೆಯನ್ನು ದೃಢವಾಗಿ ಧರಿಸಿ ನಿತ್ಯ ನೂತನ ಆನಂದದಿಂದ ಮನದಲ್ಲಿ ಪಠಣೆ ಮಾಡುವ ಅಪೇಕ್ಷೆ ಪಡುವನು ।।೪೫೩।। ಆತನು ವಾಣಿ ಎಂಬ ಪಣತಿಯಲ್ಲಿ ಶ್ರದ್ಧೆ ಎಂಬ ತೈಲ ಹಾಕಿ ನಾಲಿಗೆ ಎಂಬ ಬತ್ತಿಯನ್ನು ಮಾಡಿ ಯಾವ ಈ ಜ್ಞಾನದೀಪ ಪ್ರಜ್ವಲಿಸುವನು ।।೪೫೪।। ಯಾವ ಈ ಏಕಾದಶಸ್ಕಂಧದ ಜ್ಞಾನಜ್ಯೋತಿಯಿಂದ ಏಕಾದಶ ಇಂದ್ರಿಯಗಳ ಬತ್ತಿ ಮಾಡಿ ಹಾಗೂ ಅದನ್ನು ಪ್ರಜ್ವಲಿತವನ್ನಾಗಿ ಮಾಡಿ ಯಾರು ನನಗೆ ಬೆಳಗುವರೋ, ಅವರ ಪವಿತ್ರತೆಯ ವರ್ಣನೆ ಏನೆಂದು ಮಾಡಬೇಕು ।।೪೫೫।।

ಯಾಪರೀ ಜೇ ಗ್ರಂಥಪಠಣ । ತೇ ಮಾಝೇ ಜ್ಞಾನ-ನಿರಂಜನ । ತೇಣೇ ಜ್ಞಾನದೀಪೇ ಜೋ ಜಾಣ । ಮಾಝೇ ಸ್ವರೂಪ ಪೂರ್ಣ ಪ್ರಕಾಶೀ ।।೪೫೬।। ತ್ಯಾಚೇ ಲಾಗಲೇ ಜೇ ಸಂಗತೀ । ತ್ಯಾಂತೇ ಬ್ರಹ್ಮಾದಿಕ ವಂದಿತೀ । ತ್ಯಾಂಚೇನಿ ಪಾವನ ತ್ರಿಜಗತೀ । ಜಾಣ ನಿಶ್ಚಿತೀ ಉದ್ಧವಾ ।।೪೫೭।। ಅಸೋ ಜ್ಯಾಂಸೀ ನ ಟಕೇ ಪಠಣ । ತಿಂಹೀ ಶ್ರದ್ಧೇನೇ ಕರಿತಾ ಶ್ರವಣ । ತ್ಯಾಂಸೀ ನ ಬಾಧೀ ಭವಬಂಧನ । ತೇಹೀ ನಿರೂಪಣ ಹರಿ ಸಾಂಗೇ ।।೪೫೮।।

ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ । ಮಯಿ ಭಕ್ತಿಂ ಪರಾಂ ಕುರ್ವನ್ ಕರ್ಮಭಿರ್ನಸ ಬಧ್ಯತೇ ।।೨೮।।

ಅರ್ಥ:- ಯಾರು ಏಕಾಗ್ರಚಿತ್ತದಿಂದ ಇದನ್ನು ಶ್ರದ್ಧಾಪೂರ್ವಕವಾಗಿ ಶ್ರವಣ ಮಾಡುವರೋ, ಅವರಿಗೆ ನನ್ನ ಪರಾ ಭಕ್ತಿ ಪ್ರಾಪ್ತವಾಗುವುದು ಹಾಗೂ ಅವರು ಕರ್ಮಬಂಧನದಿಂದ ಮುಕ್ತರಾಗುವರು.

ಅಸೋ ನ ಕರವೇ ಅಧ್ಯಯನ । ತರೀ ಶ್ರದ್ಧಾಯುಕ್ತ ಸಾವಧಾನ । ಕರಿತಾ ಏಕಾದಶಾಚೇ ಶ್ರವಣ । ಕರ್ಮಬಂದನ ಬಾಧೀನಾ ।।೪೫೯।। ಅತಿ ಶ್ರದ್ಧೇನೇ ಕೇಲೇ ಶ್ರವಣ । ತ್ಯಾಹೂನಿ ದೃಢ ವ್ಹಾವೇ ಮನನ । ಮನನೇವೀಣ ತೇ ನಪುಂಸಕ ಜಾಣ । ಬ್ರಹ್ಮಪ್ರಾಪ್ತಿ ಪೂರ್ಣ ಫಳೇನಾ ।।೪೬೦।। ಸಂಪಲಿಯಾ ಕಥಾಶ್ರವಣ । ಮನೀಂಚೇ ಸಂಪಾವೇ ನಾ ಮನನ । ಜೈಸೇ ಲೋಭಿಯಾಚೇ ಧನ । ಹೃದಯೀ ಆಠವಣ ಸರ್ವದಾ ।।೪೬೧।। ಜೈಸೇ ಜೈಸೇ ಕೀಜೇ ಶ್ರವಣ । ತೈಸೇ ತೈಸೇ ಲಾಗೇ ಮನನ । ಮನನಾನುಸಾರೇ ಭಜನ । ''ಪರಾಭಕ್ತೀ'' ಜಾಣ ಉದ್‌ಬೋಧೇ ।।೪೬೨।। ಆರ್ತ ಜಿಜ್ಞಾಸು ಅರ್ಥಾರ್ಥೀ । ಯಾಚೀ ಸಾಂಡೋನಿಯಾ ಸ್ಥಿತೀ । ಉಲ್ಹಾಸೇ ಮಾಝೀ ಚೌಥೀ ಭಕ್ತೀ । ಜಿತೇ ''ಪರಾ'' ಮ್ಹಣತೀ ಸಜ್ಞಾನ ।।೪೬೩।। ಪರಾಭಕ್ತೀಚೇ ಮಾಝೇ ಭಜನ । ಕ್ರಿಯಾಮಾತ್ರೇ ನಿಜಾತ್ಮದರ್ಶನ । ಯಾಲಾಗೀ ಮದ್ಭಕ್ತಾಂಸೀ ಜಾಣ । ಕರ್ಮಬಂಧನ ಬಾಧೀನಾ ।।೪೬೪।। ಹೇ ಅಸೋ ಅತಿಗುಹ್ಯ ಬೋಲಣೇ । ಯೇಣೇ ಏಕಾದಶಾಚೇನಿ ಶ್ರವಣೇ । ''ಮೀ ತರೇನ'' ಹಾ ವಿಶ್ವಾಸ ಜೇಣೇ । ಅಂತಃಕರಣೇ ದೃಢ ಕೇಲಾ ।।೪೬೫।। ದೃಢ ವಿಶ್ವಾಸ ಮಾನೂನಿ ಪಾಹೀ । ಜೋ ಲೋಧಲಾ ಶ್ರವಣ ವಿಷಯೀ । ಮಾಝೀ ಭಕ್ತೀ ತ್ಯಾಚ್ಯಾ ಠಾಯೀ । ದವಡಿತಾ ಪಾಹೀ ಘರ ರಿಘೇ ।।೪೬೬।। ಘರ ರಿಘೋನ ಭಕ್ತಿ ನಿಷ್ಕಾಮ । ಭಕ್ತಾಂಚೇ ನಿರ್ದಳೀ ಸಕಳ ಕರ್ಮ । ಯಾ ನಾಂವ ''ಪರಾಭಕ್ತಿ'' ಪರಮ । ವಿಶ್ರಾಮಧಾಮ ಶ್ರವಣಾರ್ಥ್ಯಾ ।।೪೬೭।।

ಈ ಪ್ರಕಾರದ ಯಾವ ಗ್ರಂಥ ಪಠಣೆಯು ನನ್ನ ಜ್ಞಾನ - ನಿರಾಂಜನವಾಗಿರುವುದು. ಈ ಜ್ಞಾನದೀಪದಿಂದ ನನ್ನ ಸ್ವರೂಪವನ್ನು ಯಾರು ಪೂರ್ಣ ಪ್ರಕಾಶಿತಗೊಳಿಸುವರೋ, ।।೪೫೬।। ಯಾರು ಇವರ ಸಂಗತಿಯಲ್ಲಿರುವರೋ, ಅವರಿಗೆ ಬ್ರಹ್ಮದೇವಾದಿಕರು ವಂದನೆ ಮಾಡುವರು. ಹೇ ಉದ್ಧವಾ, ಅವರಿಂದ ಈ ತ್ರಿಭುವನವು ನಿಜವಾಗಿಯೂ ಪಾವನವಾಗುವುದು. ಹೀಗೆ ನಿಶ್ಚಯವಾಗಿ ತಿಳಿ ।।೪೫೭।। ಯಾರಿಗೆ ಪಠಣೆ ಮಾಡಲು ಬರುವುದಿಲ್ಲವೋ ಅವರು ಶ್ರದ್ಧೆಯಿಂದ ಶ್ರವಣ ಮಾಡಿದರೆ ಅವರಿಗೂ ಕೂಡ ಸಂಸಾರ ಬಂಧನೆಯು ಬಾಧಿಸಲು ಶಕ್ಯವಿಲ್ಲ. ಈ ನಿರೂಪಣೆಯನ್ನು ಶ್ರೀಹರಿಯು ಈಗ ಮಾಡುತ್ತಿರುವನು ।।೪೫೮।।

ಯಾರಿಗೆ ಈ ಗ್ರಂಥದ ಅಧ್ಯಯನ ಮಾಡಲು ಬರುವುದಿಲ್ಲವೋ ಆತನು ಪರಮ ಶ್ರದ್ಧೆಯಿಂದ ಏಕಾದಶಸ್ಕಂಧದ ಶ್ರವಣ ಮಾಡಿದರೂ ಸಹ ಆತನಿಗೆ ಕರ್ಮಬಂಧನವು ಬಾಧಿಸಲಾರದು ।।೪೫೯।। ಪರಮಶ್ರದ್ಧೆಯಿಂದ ಶ್ರವಣ ಮಾಡಿದ ನಂತರ ಅದಕ್ಕಿಂತಲೂ ಹೆಚ್ಚಾದ ಶ್ರದ್ಧೆಯಿಂದ ಮನನ ಮಾಡಬೇಕು. ಕಾರಣ ಮನನವಿಲ್ಲದ ಶ್ರವಣವು ವ್ಯರ್ಥವಾಗಿರುವುದು. ಕೇವಲ ಶ್ರವಣ ಮಾತ್ರದಿಂದ ಬ್ರಹ್ಮಪ್ರಾಪ್ತಿಯು ಪೂರ್ಣವಾಗಲು ಶಕ್ಯವಿಲ್ಲ ।।೪೬೦।। ಕಥೆ ಕೇಳುವುದು ಮುಗಿದರೂ ಮನದಲ್ಲಿನ ಮನನವು ಮುಗಿಯಬಾರದು. ಲೋಭಿಯಾಗಿರುವ ಮನುಷ್ಯನಿಗೆ ಯಾವ ಪ್ರಕಾರವಾಗಿ ಯಾವಾಗಲೂ ದ್ರವ್ಯದ ಸ್ಮರಣೆವಿರುವುದೋ, ಅದರಂತೆ ಕಥೆಯ ಸ್ಮರಣೆಯನ್ನು ಮನದಲ್ಲಿ ನಿರಂತರ ಇರಬೇಕು ।।೪೬೧।। ನಾವು ಹೇಗೆ ಹೇಗೆ ಶ್ರವಣ ಮಾಡುತ್ತಿರುವೆವೋ, ಅದರಂತೆಯೇ ಮನನವನ್ನೂ ಕೂಡ ಮಾಡುತ್ತಿರಬೇಕು. ಮನನದ ಸಹಾಯದಿಂದ ಭಜನೆಯ ರುಚಿಯು ಬೆಳೆಯುವುದು. ಅದರಿಂದ ಪರಾಭಕ್ತಿಯು ಉತ್ಪನ್ನವಾಗುವುದು ।।೪೬೨।। ಇಂತಹ ಆಚರಣೆಯಿಂದ ಆರ್ತ, ಜಿಜ್ಞಾಸು ಹಾಗೂ ಅರ್ಥಾರ್ಥೀ ಇವುಗಳ ಸ್ಥಿತಿ ಬಿಟ್ಟುಕೊಟ್ಟು ನನ್ನ ನಾಲ್ಕನೆಯ ಭಕ್ತಿಯು ಬೆಳೆಯಲಾರಂಭಿಸುವುದು. ಇದಕ್ಕೇನೇ ಜ್ಞಾನೀ ಪುರುಷರು ''ಪರಾಭಕ್ತೀ'' ಎಂದು ಹೇಳುವರು ।।೪೬೩।। ಪರಾಭಕ್ತಿಯಿಂದ ನನ್ನ ಭಜನೆ ಮಾಡಲು ಆಗ ತತ್ಕಾಲದಲ್ಲಿ ಆತ್ಮದರ್ಶನವಾಗುವುದು. ಆದ್ದರಿಂದ ನನ್ನ ಭಕ್ತರಿಗೆ ಕರ್ಮ ಬಂಧನವು ಬಾಧಿಸುವುದಿಲ್ಲ ।।೪೬೪।। ಇದು ಅತ್ಯಂತ ಗುಹ್ಯವಾದ ಮಾತಾಗಿರುವುದು. ಈ ಏಕಾದಶಸ್ಕಂಧದ ಶ್ರವಣದಿಂದ ನಾನು ಭವಸಾಗರದಿಂದ ಪಾರಾಗುವೆನು ಎಂಬ ವಿಶ್ವಾಸವನ್ನು ಯಾವನು ತನ್ನ ಅಂತಃಕರಣದಲ್ಲಿ ದೃಢವಾಗಿ ಧರಿಸಿರುವನೋ ।।೪೬೫।। ಹಾಗೂ ಆ ಯಾವ ದೃಢವಾದ ವಿಶ್ವಾಸದಿಂದ ಯಾವನು ಶ್ರವಣದಲ್ಲಿ ತಲ್ಲೀನನಾಗುವನೋ, ಆತನು ನನ್ನ ಭಕ್ತಿಗೆ ಹೊರದಬ್ಬಿದರೂ ಅದು ಪುನಃ ಆತನ ಮನೆಗೆ ನಡೆದು ಬರುವುದು ।।೪೬೬।। ಈ ಯಾವ ಭಕ್ತಿಯು ಮನೆಗೆ ಬಂದು ಭಕ್ತರ ಸರ್ವ ಕರ್ಮಗಳನ್ನು ನಾಶ ಮಾಡುವುದು. ಇದರ ನಾಮವೇ ಪರಾಭಕ್ತಿಯಾಗಿರುವುದು. ಇದು ಶ್ರೋತೃಗಳವರ ಪರಮ ವಿಶ್ರಾಂತಿಯ ಸ್ಥಾನವಾಗಿರುವುದು ।।೪೬೭।।

ಏಕಾದಶಾಚೇ ಶ್ರದ್ಧಾಶ್ರವಣ । ಕರಿತಾ ಏವಢಾ ಲಾಭ ಪೂರ್ಣ । ಶ್ರವಣೇ ಉಪಜೇ ಮಾಝೇ ಭಜನ । ಭಜನೇ ಭಕ್ತ ಜನ ನಿರ್ಮುಕ್ತ ।।೪೬೮।। ಅಸೋ ಪಾ ಇತರಾಂಚೀ ವಾರ್ತಾ । ಮ್ಯಾ ತುಜ ನಿರೂಪಿಲೀ ಜೇ ಜ್ಞಾನಕಥಾ । ತೇ ತುಜಿಯಾ ನಿಶ್ಚಿತಾರ್ಥಾ । ಕಾಯ ತತ್ತ್ವತಾ ಪ್ರತಿಬೋಧಲೀ ।।೪೬೯।।

ಅಪ್ಯುದ್ಧವ ತ್ವಯಾ ಬ್ರಹ್ಮಸಖೇ ಸಮವಧಾರಿತಮ್ । ಅಪಿ ತೇ ವಿಗತೋ ಮೋಹಃ ಶೋಕಶ್ಚಾಸೌ ಮನೋಭವಃ ।।೨೯।।

ಅರ್ಥ:- ಹೇ ಪ್ರಿಯ ಮಿತ್ರ ಉದ್ಧವಾ, ನೀನು ಯೋಗ್ಯರೀತಿಯಿಂದ ಬ್ರಹ್ಮದ ಸ್ವರೂಪ ತಿಳಿದುಕೊಂಡಿರುವಿಯಾ ? ಹಾಗೆಯೇ ನಿನ್ನ ಚಿತ್ತದ ಮೋಹ ಮತ್ತು ಶೋಕ ದೂರವಾಯಿತೆ ?

ಉದ್ಧವಾ ತುಝೇ ದೇಖೋನಿ ಪ್ರೇಮ । ಗುಹ್ಯ ಜ್ಞಾನ ಅತಿಉತ್ತಮ । ತುಜ ಮ್ಯಾ ನಿರೂಪಿಲೇ ಪರಬ್ರಹ್ಮ । ಸಾಂಗ ಸುಗಮ ಅತಿಶುದ್ಧ ।।೪೭೦।। ಹೇ ಜ್ಞಾನಾಚೇ ಸೋಲೀಂವ ಜ್ಞಾನ । ಹೇ ವೇದಾಂಚೇ ವಿಸಾವತೇ ಸ್ಥಾನ । ಹೇಚಿ ಅವಿದ್ಯೇಚಿ ಬೋಳವಣ । ಸಮಾಧಾನ ಜೀವಶಿವಾ ।।೪೭೧।। ಐಸೇ ಹೇ ಜೇ ಗುಹ್ಯಜ್ಞಾನ । ಮನಬುದ್ಧಿ ವಾಚೇಸೀ ಅಗಮ್ಯ ಜಾಣ । ತೇ ಮ್ಯಾ ತುಜ ಕೇಲೇ ನಿರೂಪಣ । ಶ್ರದ್ಧಾ ಸಂಪೂರ್ಣ ದೇಖೋನಿ ।।೪೭೨।। ಜೇವೀ ಸಖಾ ಸಖ್ಯಾಪ್ರತೀ । ಆಪುಲಿ ವೋಪೀ ನಿಜಸಂಪತ್ತೀ । ತೇವೀ ಮ್ಯಾ ಹೇ ಬ್ರಹ್ಮಸ್ಥಿತೀ । ತುಝ್ಯಾ ಹಾತೀ ವೋಪಿಲೀ ।।೪೭೩।। ಜೈಸೇ ದಿಧಲೇ ಶ್ರವಣಾಚ್ಯಾ ಹಾತೀ । ತೈಸೇ ಪ್ರವಿಷ್ಟ ಜಾಹಲೇ ತುಝಿಯಾ ಚಿತ್ತೀ । ಕೀ ಮಾಝಾರೀ ಪಡಲೀ ಕಾಂಹೀ ಗುಂತೀ । ವಿಕಲ್ಪವಸ್ತೀ ವಿಕ್ಷೇಪ ।।೪೭೪।। ಮ್ಯಾ ನಿರೂಪಿಲೇ ಸಾರ ಪರಮ । ತೇ ತುಜ ಕಳಲೇ ಪರಬ್ರಹ್ಮ । ನಸೇಲ ತರೀ ಹಾಚಿ ಉಪಕ್ರಮ । ಪುಢತೀ ಸುಗಮ ಸಾಂಗೇನ ।।೪೭೫।। ಚೈತನ್ಯ ಠಸಾವೋನಿ ಚಿತ್ತೀ । ಜೇಥ ಆಕಳಿಲೀ ಬ್ರಹ್ಮಸ್ಥಿತೀ । ತೇಥ ಮೋಹಮಮತೇಚೀ ವಸ್ತೀ । ಸಮೂಳ ನಿಶ್ಚಿತೀ ನಸಾವೀ ।।೪೭೬।। ಆಕಳಲೇ ಬ್ರಹ್ಮಜ್ಞಾನ । ತ್ಯಾಚಿ ಹೇಚಿ ವೋಳಖಣ । ಸಂಕಲ್ಪವಿಕಲ್ಪವಿಂದಾನ । ಪುಢತೀ ಜಾಣ ಉಪಜೇನಾ ।।೪೭೭।। ಉಪಜೇನಾ ಮೀತೂಪಣ । ಉಪಜೇನಾ ಧ್ಯೇಯ ಧ್ಯಾತಾ ಧ್ಯಾನ । ನುಪಜೇ ತ್ಯಾಸೀ ಕರ್ಮಠಪಣ । ಬ್ರಹ್ಮ ಪರಿಪೂರ್ಣ ಜಾಣಿತಲ್ಯಾ ।।೪೭೮।। ಜೇಣೇ ಜಾಣಿತಲೇ ಬ್ರಹ್ಮಜ್ಞಾನ । ತ್ಯಾಸೀ ಬಾಧೀನಾ ಕರ್ಮಬಂಧನ । ಕರ್ಮಾಚೇ ಜೇ ಕರ್ಮಾಚರಣ । ತೇ ಜಾಣ ಆಪಣ ಮಾಯಿಕ ।।೪೭೯।। ಜೇವೀ ಛಾಯಾ ಚಳೇ ಪುರುಷಾಚೇನೀ । ಪರೀ ತಿಯೇಚಾ ಲೋಭ ಪುರುಷ ನ ಮಾನೀ । ತೇವೀ ಕಾಯಾ ಚಾಳೀ ಬ್ರಹ್ಮಜ್ಞಾನೀ । ದೇಹಾಭಿಮಾನೀ ತೋ ನವ್ಹೇ ।।೪೮೦।।

ಏಕಾದಶ ಸ್ಕಂಧದ ಪರಮಶ್ರದ್ಧೆಯ ಶ್ರವಣ ಮಾತ್ರದಿಂದ ಇಷ್ಟೊಂದು ಪೂರ್ಣ ಲಾಭವಾಗುವುದು. ಈ ಶ್ರವಣದ ಯೋಗದಿಂದ ಭಜನೆಯು ಹುಟ್ಟಿಕೊಳ್ಳುವುದು. ಈ ಭಜನೆಯಿಂದ ಭಕ್ತಜನರು ಮುಕ್ತರಾಗುವರು ।।೪೬೮।। ಈ ಎಲ್ಲ ಇತರರ ಮಾತಿರಲಿ. ಆದರೆ ನಿನಗಾದರೂ ಈ ಜ್ಞಾನಕಥೆಯನ್ನು ಹೇಳಿದ್ದು ನಿನಗೆ ದೃಢನಿಶ್ಚಯವಾಗುವುದಕ್ಕಾಗಿ. ಇದರ ತತ್ವಬೋಧೆಯು ನಿನಗೆ ಆಗಿದೆಯೇ ? ।।೪೬೯।।

ಹೇ ಉದ್ಧವಾ, ನಿನ್ನ ಪ್ರೇಮ ಕಂಡು ನಾನು ನಿನಗೆ ಶುದ್ಧವಾಗಿರುವ ಗುಹ್ಯ ಜ್ಞಾನ, ಪರಬ್ರಹ್ಮದ ಸ್ವರೂಪವನ್ನು ಸಂಪೂರ್ಣವಾಗಿ ಹೇಳಿ ಸುಗಮ ರೀತಿಯಲ್ಲಿ ನಿರೂಪಣೆ ಮಾಡಿರುವೆನು ।।೪೭೦।। ಇದು ಜ್ಞಾನದ ಪರಿಶುದ್ಧ ಜ್ಞಾನವಾಗಿದ್ದು ವೇದಗಳಿಗೂ ಕೂಡ ವಿಶ್ರಾಂತಿಸ್ಥಾನವಾಗಿರುವುದು. ಈ ಜ್ಞಾನದಿಂದ ಅವಿದ್ಯೆಯ ನಾಶವಾಗುವುದು. ಹಾಗೂ ಜೀವಶಿವದ ಸಮಾಧಾನವಾಗುವುದು ।।೪೭೧।। ಹೀಗಿರುವ ಈ ಗುಹ್ಯಜ್ಞಾನವು ಮನಬುದ್ಧಿವಾಣಿಗಳಿಗೆ ಅಗಮ್ಯವಾಗಿರುವುದು. ಇಂತಹ ಗುಹ್ಯಜ್ಞಾನವನ್ನು ನಿನ್ನ ಪೂರ್ಣ ಶ್ರದ್ಧೆ ಕಂಡು ನಾನು ನಿನಗೆ ಹೇಳಿರುವೆನು ।।೪೭೨।। ಒಬ್ಬ ಸಖನು ತನ್ನ ಪ್ರೀತಿಯ ಸಖನಿಗೆ ತನ್ನ ಸಂಪತ್ತನ್ನು ಪ್ರೇಮದಿಂದ ಕೊಡುವನು. ಅದರಂತೆ ಈ ಬ್ರಹ್ಮಜ್ಞಾನ ನಿನ್ನ ಕೈಯಲ್ಲಿ ಕೊಟ್ಟಿರುವೆನು ।।೪೭೩।। ನಾನು ಇದನ್ನು ನಿನ್ನ ಕಿವಿಗಳ ಮೇಲೆ ಹಾಕಿರುವೆನು. ಆದರೆ ಅದು ನಿನ್ನ ಮನಸ್ಸಿನಲ್ಲಿ ನಾಟಿಕೊಂಡಿದೆಯೇ? ಅಥವಾ ನಡುವೆಯೇ ಎಲ್ಲಿಯಾದರೂ ವಿಕ್ಷೇಪವಾಗಿ ವಿಕಲ್ಪ ನಿರ್ಮಾಣವಾಗಿದೆಯೇ? ।।೪೭೪।। ನಾನು ನಿನಗೆ ಯಾವ ಪರಮ ಸಾರವನ್ನು ಹೇಳಿರುವೆನು. ಆ ಪರಬ್ರಹ್ಮವು ನಿನಗೆ ತಿಳಿಯಿತೆ? ಒಂದುವೇಳೆ ನಿನಗೆ ಇದು ತಿಳಿಯದೇ ಇದ್ದರೆ ನಾನು ಪುನಃ ಸುಲಭಮಾಡಿ ಹೇಳುವೆನು ।।೪೭೫।। ಚಿತ್ತದಲ್ಲಿ ಚೈತನ್ಯವು ನಟ್ಟಿಕೊಳ್ಳಲು ಅಲ್ಲಿ ಬ್ರಹ್ಮಸ್ಥಿತಿಯು ಪ್ರಾಪ್ತವಾಗುವುದು. ಅಲ್ಲಿ ಮೋಹ ಮಮತೆಯ ವಾಸ್ತವ್ಯ ಮೂಲತಃ ಇರಲೇ ಕೂಡದು ।।೪೭೬।। ಬ್ರಹ್ಮಜ್ಞಾನವು ಪ್ರಾಪ್ತವಾಗಿರುವ ಚಿನ್ಹೆ ಇದಾಗಿರುವುದು. ತದನಂತರ ಸಂಕಲ್ಪವಿಕಲ್ಪಗಳ ವಿಕಾರ ನಿರ್ಮಾಣವಾಗುವುದಿಲ್ಲ ।।೪೭೭।। ಬ್ರಹ್ಮವನ್ನು ಪರಿಪೂರ್ಣವಾಗಿ ತಿಳಿಯಲ್ಪಟ್ಟಾಗ ಯಾವುದೇ ಪ್ರಕಾರದ ನಾನು ನೀನೆಂಬುವುದು ಹುಟ್ಟಿಕೊಳ್ಳುವುದಿಲ್ಲ. ಧ್ಯೇಯ, ಧ್ಯಾತಾ, ಧ್ಯಾನ ಈ ಅವಸ್ಥೆಯೂ ಕೂಡ ಇರುವುದಿಲ್ಲ. ಕರ್ಮಠತನವು ಸ್ವಲ್ಪವೂ ಕೂಡ ಉಳಿದು ಕೊಳ್ಳುವುದಿಲ್ಲ ।।೪೭೮।। ಯಾರು ಬ್ರಹ್ಮಜ್ಞಾನವನ್ನು ತಿಳಿದುಕೊಂಡಿರುವರೋ, ಅವರಿಗೆ ಕರ್ಮಬಂಧನೆಯ ಬಾಧೆಯಾಗುವುದಿಲ್ಲ. ಕರ್ಮದ ಕರ್ಮಬಂಧನೆ ಇದು ಮೂಲತಃ ಮಾಯಿಕವಾಗಿರುವುದು ।।೪೭೯।। ಮನುಷ್ಯನು ನಡೆದಾಡಿದಂತೆ ಆತನ ನೆರಳೂ ಕೂಡ ನಡೆಯುತ್ತಿರುತ್ತದೆ. ಆದರೆ ಅದರ ಲೋಭವನ್ನು ಯಾರೂ ಹಿಡಿಯರು. ಅದರಂತೆ ಬ್ರಹ್ಮ ಜ್ಞಾನಿಯು ದೇಹಕ್ಕೆ ನಡೆಸಿಕೊಳ್ಳುವನು. ಆದರೆ ಆತನು ಯಾವುದೇ ಪ್ರಕಾರದ ದೇಹಾಭಿಮಾನ ಹಿಡಿಯುವುದಿಲ್ಲ ।।೪೮೦।।

ಜೇವೀ ಸೂರ್ಯಾಪುಢೇ ಅಂಧಾರ । ಅರ್ಧ ಕ್ಷಣ ನ ಧರೀ ಧೀರ । ತೇವೀ ಬ್ರಹ್ಮಜ್ಞಾನೀ ಕರ್ಮಾದರ । ಅಣುಮಾತ್ರ ಉರೇನಾ ॥೪೮೧॥ ಕರ್ಮಾಚೇ ಜೇ ಕರ್ಮಬಂಧನ । ತೋ ಮನೋಜನ್ಯ ಸಂಕಲ್ಪ ಜಾಣ । ಜೇಥೇ ಮನಾಚೇ ಮೋಡೇ ಮನಪಣ । ತೇಥೇ ಕರ್ಮಾಚರಣ ನಿರ್ಬೀಜ ॥೪೮೨॥ ವಸ್ತು ನಿತ್ಯ ನಿರ್ವಿಕಲ್ಪ । ತೇಥೇ ನಾಹೀ ಸಂಕಲ್ಪವಿಕಲ್ಪ । ಹೇ ಪರಬ್ರಹ್ಮಾಚೇ ನಿಜಸ್ವರೂಪ । ಹೇಚಿ ರೂಪ ಸ್ವಾನುಭವಾಸೀ ॥೪೮೩॥ ಐಸೇ ಬ್ರಹ್ಮ ಪಾವಲ್ಯಾ ಸ್ವಯಮೇವೋ । ಮಿ ಏಕ ಉದ್ಧವ ಹೇತೋ ಪಹಾ ಹೋ । ತ್ಯಾ ಉದ್ಧವಪಣಾಸೀ ನಾಹೀ ಠಾವೋ । ಮಾ ಶೋಕಮೋಹೋ ತೇಥ ಕೈಚಾ ॥೪೮೪॥ ಉದ್ಧವ ಪಣಾಚಿಯೇ ವಸ್ತೀ । ಶೋಕಮೋಹಾಂಚೀ ಉತ್ಪತ್ತೀ । ತೇ ಉದ್ಧವಪಣ ನಾಠವೇ ಚಿತ್ತೀ । ಜರೀ ಬ್ರಹ್ಮಪ್ರಾಪ್ತಿ ತುಜ ಜಾಹಲೀ ॥೪೮೫॥ ಐಸೇ ಐಕತಾ ದೇವಾಚೇ ವಚನ । ಉಡಾಲೇ ಉದ್ಧವಾಚೇ ಉದ್ಧವಪಣ । ಜಾಹಲಾ ಸ್ವಾನಂದೀ ನಿಮಗ್ನ । ಬೋಲತೇಪಣ ಬುಡಾಲೇ ॥೪೮೬॥ ಪಾವತಾ ಆಪುಲೀ ನಿಜಾತ್ಮತಾ । ಉಡಾಲೀ ಉದ್ಧವತ್ವಾಚೀ ಅವಸ್ಥಾ । ಬುಡಾಲೀ ಸ್ವದೇಹ ಅಹಂತಾ । ನಿಜನಿಮಗ್ನತಾ ಸ್ವಾನಂದೀ ॥೪೮೭॥ ತೇಥೇ ದೇವೇ ಪುಶಿಲಾ ಜೋ ಪ್ರಶ್ನ । ತ್ಯಾಚೇ ಕೋಣ ದೇ ಪ್ರತಿವಚನ । ಕೃಷ್ಣೇಸಹಿತ ಉದ್ಧವಪಣ । ಗಿಳೋನಿ ಪರಿಪೂರ್ಣ ವಸ್ತು ಜಾಹಲಾ ॥೪೮೮॥ ದೇಖೋನಿ ಉದ್ಧವಾಚೀ ಅವಸ್ಥಾ । ಹಾ ಬ್ರಹ್ಮ ಪಾವಲಾ ನಿಜಾತ್ಮತಾ । ಹೇ ಕಳೋ ಸರಲೇ ಶ್ರೀಕೃಷ್ಣನಾಥಾ । ಹೃದಯಸ್ಥಾ ಕಾಯ ನ ಕಳೇ ॥೪೮೯॥ ಶಿಷ್ಯ ಸಾಚಾರ ಅನುಭವ ಲಾಹೇ । ತೇಣೇ ಸದ್ಗುರೂ ಸುಖಾಚಾ ಮೇರು ಹೋಯೇ । ಜೇವೀ ತಾನಯಾಚೇ ಧಣೇ ಮಾಯೇ । ಸುಖಾವಲೀ ರಾಹೇ ಸ್ವಾನಂದೇ ॥೪೯೦॥ ಸೇವಕ ವಿಭಾಂಡಿತಾ ಪರಚಕ್ರ । ತೇಣೇ ರಾಯಾಸಿ ಸಂತೋಷ ಥೋರ । ಗುಢೀ ಉಭಾರೂನಿ ಸಾಚಾರ । ಕರೀ ನಿಜಗಜರ ಸ್ವಾನಂದೇ ॥೪೯೧॥ ತಾನಯಾಚೇ ಲಳೇ ಪುರವಿಣೇ । ಹೇ ವ್ಯಾಲೀಚೇ ವೇದನಾ ವ್ಯಾಲೀ ಜಾಣೇ । ಕಾ ಶಿಷ್ಯಾಸೀ ಸ್ವಾನುಭವ ದೇಣೇ । ಹೇ ಸ್ವಯೇ ಜಾಣೇ ಸದ್ಗುರು ॥೪೯೨॥ ನಿಜಪುತ್ರೇ ಲಾಧಲ್ಯಾ ನಿಧಾನ । ಪಿತಾ ಸಂತೋಷೇ ಆಪಣ । ತೇವೀ ಉದ್ಧವಾಚೇನಿ ಅನುಭವೇ ಜಾಣ । ಸ್ವಯೇ ಶ್ರೀಕೃಷ್ಣ ಸಂತೋಷೇ ॥೪೯೩॥ ಕೃಷ್ಣ ಸುಖೇ ಸುಖರೂಪ ನಿತ್ಯತಾ । ತೋಹೀ ಶಿಷ್ಯಾನುಭವೇ ಸರ್ವಥಾ । ಲಾಹೇ ಸುಖಾಚೀ ಪರಮಾವಸ್ಥಾ । ಹೇ ಗುರುಗಮ್ಯತಾ ಅಗಮ್ಯ ॥೪೯೪॥

ಸೂರ್ಯನ ಎದುರಿನಲ್ಲಿ ಕತ್ತಲೆಯು ಅರ್ಧಕ್ಷಣವೂ ಕೂಡ ನಿಲ್ಲಲಾರದು. ಅದರಂತೆ ಬ್ರಹ್ಮಜ್ಞಾನೀ ಪುರುಷನಿಗೆ ಕರ್ಮಗಳಲ್ಲಿ ಆದರವು ಸ್ವಲ್ಪವೂ ಕೂಡ ಇರುವುದಿಲ್ಲ ॥೪೮೧॥ ಇದರ ಕಾರಣವೇನೆಂದರೆ ಕರ್ಮದ ಕರ್ಮಬಂಧನೆಯು ಇದು ಕೇವಲ ಮನೋಜನ್ಯವಾಗಿರುವ ಸಂಕಲ್ಪವಾಗಿರುವುದು. ಆದರೆ ಎಲ್ಲಿ ಮನಸ್ಸಿನ ಮನತ್ವವೇ ಮಾಯವಾಗಲು ಅಲ್ಲಿ ಕರ್ಮಾಚರಣೆಯು ನಿರ್ಬೀಜವಾಗುವುದು ॥೪೮೨॥ ಪರಬ್ರಹ್ಮವು ನಿತ್ಯ ನಿರ್ವಿಕಲ್ಪವಾಗಿರುವುದು. ಅಲ್ಲಿ ಯಾವುದೇ ಪ್ರಕಾರದ ಸಂಕಲ್ಪವಿಕಲ್ಪ ಇರುವುದಿಲ್ಲ. ಇದೇ ಪರಬ್ರಹ್ಮದ ಮೂಲ ಸ್ವರೂಪವಾಗಿರುವುದು. ಇದೇ ಸ್ವಾನುಭವಕ್ಕೆ ಬರುತ್ತಿರುವುದು ॥೪೮೩॥ ತಾನು ಸ್ವತಃ ಹೀಗಿರುವ ಬ್ರಹ್ಮಸ್ವರೂಪನಾಗಲು ''ನಾನೊಬ್ಬ ಉದ್ಧವನಾಗಿದ್ದೆನು'' ಹೀಗೆ ಉದ್ಧವನ ನಾಮಸ್ಥಾನ ಇರುವುದಿಲ್ಲ. ಅಂದಮೇಲೆ ಅಲ್ಲಿ ಶೋಕ, ಮೋಹ ಎಲ್ಲಿಯದು? ॥೪೮೪॥ ಎಲ್ಲಿಯವರೆಗೆ ನಿನ್ನ ಮನದಲ್ಲಿ ಉದ್ಧವನೆಂಬ ಸ್ಮರಣೆ ಇರುವುದೋ, ಅಲ್ಲಿಯವರೆಗೆ ಶೋಕಮೋಹಗಳ ಉತ್ಪತ್ತಿಯಾಗುತ್ತಿರುವುವು. ನಿನಗೆ ಒಮ್ಮೆ ಬ್ರಹ್ಮಪ್ರಾಪ್ತಿಯಾಯಿತೆಂದರೆ ಆಗ ಉದ್ಧವ ನಾನೆಂಬುವ ಸ್ಮರಣೆಯೂ ಕೂಡ ಇರುವುದಿಲ್ಲ ॥೪೮೫॥ ಹೀಗೆ ಶ್ರೀಕೃಷ್ಣನ ಅಮೃತಮಯ ಮಧುರ ವಿಚಾರ ಕೇಳುತ್ತಲೇ ಉದ್ಧವನಿಗೆ ತಾನು ಉದ್ಧವನೆಂಬ ಸ್ಮರಣೆ ಇಲ್ಲದಾಯಿತು. ಆತನು ಸ್ವಾನಂದದಲ್ಲಿ ನಿಮಗ್ನನಾದನು ಹಾಗೂ ಆತನ ಮಾತುಗಳು ನಿಂತುಹೋದವು ॥೪೮೬॥ ಆತನು ಆತ್ಮಸ್ವರೂಪದಲ್ಲಿ ಏಕರೂಪನಾಗುತ್ತಲೇ ಆತನ ಉದ್ಧವನೆಂಬ ಅವಸ್ಥೆಯು ಇಲ್ಲದಾಯಿತು. ಸ್ವದೇಹದಲ್ಲಿನ ಅಹಂತೆಯು ಕೊನೆಗೊಂಡಿತು ಹಾಗೂ ಆತನು ಸ್ವಾನಂದದಲ್ಲಿ ತಲ್ಲೀನನಾದನು ॥೪೮೭॥ ಹೀಗಾದಮೇಲೆ ದೇವನು ಕೇಳಿದ ಪ್ರಶ್ನೆಗೆ ಉತ್ತರಿಸುವರಾರು? ಶ್ರೀಕೃಷ್ಣ ಸಹ ಉದ್ಧವನೆಂಬ ಸ್ಮರಣೆ ಇಲ್ಲದಾಗಿ ಆತನು ಪೂರ್ಣ ಬ್ರಹ್ಮರೂಪನಾದನು ॥೪೮೮॥ ಉದ್ಧವನ ಈ ಅವಸ್ಥೆ ಕಂಡು, ಉದ್ಧವನು ನಿಜಜ್ಞಾನದಿಂದ ಬ್ರಹ್ಮಸ್ವರೂಪನಾದನು ಎಂಬುವುದನ್ನು ಶ್ರೀಕೃಷ್ಣನಾಥನು ತಿಳಿದುಕೊಂಡನು. ಹೃದಯಸ್ಥನಾಗಿರುವ ಈ ಪರಮಾತ್ಮನಿಗೆ ಸರ್ವ ಮಾತಿನ ಜ್ಞಾನವಿರುವುದು ॥೪೮೯॥ ಕೂಸು ತೃಪ್ತವಾಯಿತೆಂದರೆ ತಾಯಿಗೆ ಸಹಜವಾಗಿ ಆನಂದ ಪ್ರಾಪ್ತವಾಗುತ್ತಿರುತ್ತದೆ. ಅದರಂತೆ ಶಿಷ್ಯನು ಆತ್ಮಾನುಭವ ಪಡೆಯಲಾರಂಭಿಸಲು ಆಗ ಸದ್ಗುರುಗಳು ಸುಖದ ಶಿಖರದ ಮೇಲೆ ಏರುತ್ತಿರುವರು ॥೪೯೦॥ ಸೈನಿಕರು ತನ್ನ ವೈರಿಗಳನ್ನು ಪರಾಭವಗೊಳಿಸಲು ಆಗ ರಾಜನಿಗೆ ಪರಮ ಸಂತೋಷ ಪ್ರಾಪ್ತವಾಗುವುದು. ಆಗ ಆತನು ಧ್ವಜ, ತಳಿರು ತೋರಣಗಳಿಂದ ಶೃಂಗರಿಸಿ ಆನಂದದಿಂದ ಜಯಜಯಕಾರ ಗರ್ಜಿಸುವನು ॥೪೯೧॥ ತನ್ನ ಬಾಲಕನ ಅಕ್ಕರೆ ಹೇಗೆ ಪೂರೈಸಬೇಕೆಂಬುವುದು ಯಾರು ಪ್ರಸೂತಿಯ ವೇದನೆ ಸೋಸಿ ಆತನಿಗೆ ಜನ್ಮ ನೀಡಿರುವಳೋ, ಆ ತಾಯಿ ಮಾತ್ರ ತಿಳಿದಿರುವಳು. ಅದರಂತೆ ಶಿಷ್ಯನಿಗೆ ಆತ್ಮಾನುಭವ ಹೇಗೆ ಕೊಡಬೇಕೆಂಬುವುದು ಒಬ್ಬ ಸದ್ಗುರು ಮಾತ್ರ ತಿಳಿದಿರುವನು ॥೪೯೨॥ ತನ್ನ ಪುತ್ರನಿಗೆ ಸಂಪತ್ತು ಪ್ರಾಪ್ತವಾಗಲು ಆಗ ತಂದೆಯು ಹೇಗೆ ಸಂತೋಷಪಡುವನೋ, ಅದರಂತೆ ಉದ್ಧವನ ಸ್ವಾನುಭವದಿಂದ ದ್ವಾರಕಾಧೀಶ ಶ್ರೀಕೃಷ್ಣನಿಗೂ ಸಂತೋಷವಾಯಿತು ॥೪೯೩॥ ಶ್ರೀಕೃಷ್ಣನು ನಿತ್ಯ ಸುಖರೂಪನಾಗಿಯೇ ಇರುವನು. ಆದರೆ ಆತನೂ ಕೂಡ ಶಿಷ್ಯನ ಆತ್ಮಸುಖದಿಂದ ಸುಖದ ಪರಮಾವಧಿಗೆ ಬಂದು ಮುಟ್ಟಿದನು. ಈ ಗುರುಗಮ್ಯ ಗುರುವೇ ತಿಳಿಯುವನು. ಇತರರಿಗೆ ಇದು ಅಗಮ್ಯವಾಗಿರುವುದು ॥೪೯೪॥

ಶಿಷ್ಯಾಸೀ ಬೋಧ ಕರಿತಾ । ಗುರೂಸೀ ನಸತೀ ಸುಖಾವಸ್ಥಾ । ತರೀ ಉಪದೇಶಪರಂಪರತಾ । ನವ್ಹತೀ ತತ್ತ್ವತಾ ಇಯೇ ಲೋಕೀ ॥೫೯೫॥ ಗುರು ಸಾಂಗೇ ಜೇ ಉಬಗಲೇಸಾರೀ । ತೈ ತೇ ಶಿಷ್ಯಾಸೀ ಬೋಧೇನಾ ಗೋಷ್ಟೀ । ಮಾ ನಿಜಾನುಭವಾಚೀ ಭೇಟೀ । ಕೇವಿ ನಿಜದೃಷ್ಟೀ ದೇಖೇಲ ॥೫೯೬॥ ಜೇವೀ ಬಾಳಾಸೀ ಲೇಣೇ ಲೇವವಿತಾ । ತೇ ನೇಣೇ ಪರೀ ಸುಖಾವೇ ಮಾತಾ । ತೇವೀ ಶಿಷ್ಯಾಸೀ ಅನುಭವ ಹೋತಾ । ಸುಖಾವೇ ತತ್ತ್ವತಾ ಸದ್ಗುರುರಾವೋ ॥೫೯೭॥ ತೈಸಾ ಉದ್ಧವಾಚಾ ಬ್ರಹ್ಮಭಾವೋ । ದೇಖೋನಿ ಸುಖಾವೇ ಕೃಷ್ಣದೇವೋ । ಮಾಝಾ ಉದ್ಧವ ಜಾಹಲಾ ನಿಃಸಂದೇಹೋ । ಯಾಸೀ ಬ್ರಹ್ಮಾನುಭವೋ ಆಕಳಿಲಾ ॥೫೯೮॥ ಉದ್ಧವಾಚೀ ಬ್ರಹ್ಮನಿಷ್ಠತಾ । ಅನುಭವಾ ಆಲೀ ನಿಜಾತ್ಮತಾ । ಹೇ ಕಳೋ ಸರಲೇ ಶ್ರೀಕೃಷ್ಣನಾಥಾ । ಪರೋಪದೇಶಾರ್ಥಾ ಶಿಕವೀತ ॥೫೯೯॥ ತೂ ಪಾವಲ್ಯಾ ಬ್ರಹ್ಮಜ್ಞಾನ । ತೇಥ ಶಿಷ್ಯೋಪದೇಶಲಕ್ಷಣ । ಪಾತ್ರಶುದ್ಧೀಚೇ ಕಾರಣ । ತೇಹೀ ವೋಳಖಣ ಹರಿ ಸಾಂಗೇ ॥೬೦೦॥

ನೈತತ್ತ್ವಯಾ ದಾಂಭಿಕಾಯ ನಾಸ್ತಿಕಾಯ ಶಠಾಯ ಚ । ಅಶುಶ್ರೂಷೋರಭಕ್ತಾಯ ದುರ್ವಿನೀತಾಯ ದೀಯತಾಮ್ ॥೩೦॥

ಅರ್ಥ:- ಹೇ ಉದ್ಧವಾ, ಈ ಜ್ಞಾನವನ್ನು ನೀನು ದಾಂಭಿಕ, ನಾಸ್ತಿಕ, ಶಠ, ಅಶ್ರದ್ಧಾಳು, ಭಕ್ತಿಹೀನ ಹಾಗೂ ಉದ್ಧಟ ಪುರುಷನಿಗೆ ಎಂದಿಗೂ ಹೇಳಬೇಡ.

ಶಠ ನಾಸ್ತಿಕ ದಂಭಯುಕ್ತ । ಅಶುಶ್ರೂಷು ಆಣಿ ಅಭಕ್ತ । ಜ್ಯಾಂಚೀ ಸ್ಥಿತೀ ದುರ್ವಿನೀತ । ತೇ ಶಿಷ್ಯ ನಿಶ್ಚಿತ ತ್ಯಾಗಾವೇ ॥೬೦೧॥ ಜೇಣೇ ಲೋಕರೂಢೀ ಹೋಯ ಗಹನ । ತೇ ತೇ ಬಾಹ್ಯ ಕರ್ಮಾಚರಣ । ವಿಪುಲ ಧನ ಆಣಿ ಸನ್ಮಾನ । ತದರ್ಥೀ ಜಾಣ ಅತಿತೃಷ್ಣಾ ॥೬೦೨॥ ಐಸೇ ಜ್ಯಾಚೇ ದಾಂಭಿಕ ಭಜನ । ತ್ಯಾಸೀ ಹೇ ಏಕಾದಶೀಚೇ ಜ್ಞಾನ । ವೋಸಣತಾ ಗಾ ಆಪಣ । ಸ್ವಪ್ನೀಹೀ ಜಾಣ ನೇದಾವೇ ॥೬೦೩॥ ಮೋಹ ಮಮತೇಚೇ ಆಧಿಕ್ಯ । ತೇಣೇ ನಿರ್ದಳಿಲೇ ನಿಜ ಆಸ್ತಿಕ್ಯ । ವೇದೀ ಶಾಸ್ತ್ರೀ ದೃಢ ನಾಸ್ತಿಕ್ಯ । ದೇವಚಿ ಮುಖ್ಯ ನಾಹೀ ಮ್ಹಣತೀ ॥೬೦೪॥ ನಾಸ್ತಿಕ್ಯವಾದಾಚಿಯಾ ಬಂಡಾ । ಯಾ ಜ್ಞಾನಾಚಾ ಘೋರಕೋಂಡಾ । ಲಾಗೋ ನೇದೀ ತ್ಯಾಂಚಿಯಾ ತೋಂಡಾ । ಜ್ಯಾಂಚಾ ಭಾವ ಕೋರಡಾ ನಾಸ್ತಿಕ್ಯೇ ಕೇಲಾ ॥೬೦೫॥ ನಾಸ್ತಿಕ್ಯವಾದಾಪುಢೇ । ಜ್ಞಾನ ಕಾಯಸೇ ಬಾಪುಡೇ । ಅನೀಶ್ವರವಾದಾಚೇ ಬಂಡಗಾಢೇ । ತೇ ತ್ಯಾಗಾವೇ ರೋಕಡೇ ನಾಸ್ತಿಕ್ಯ ವಾದೀ ॥೬೦೬॥

ಶಿಷ್ಯನಿಗೆ ಬೋಧೆ ಮಾಡುತ್ತಿದ್ದಾಗ ಗುರುವಿಗೆ ಯಾವ ಸುಖವೂ ದೊರೆಯಲಾರದಂತಿದ್ದರೆ, ಈ ಲೋಕದಲ್ಲಿ ನಿಜವಾಗಿಯೂ ಯಾವ ಉಪದೇಶ ಪರಂಪರೆಯು ಉಳಿಯುತ್ತಲೇ ಇದ್ದಿಲ್ಲ ॥೫೯೫॥ ಗುರುವೇ ಒಂದು ವೇಳೆ ಅತಿಶಯ ಗಡಿಬಿಡಿಯಿಂದ ಉಪದೇಶ ಮಾಡಹತ್ತಲು ಇದರಿಂದ ಶಿಷ್ಯನಿಗೆ ಯಾವ ಬೋಧೆಯೂ ಪ್ರಾಪ್ತವಾಗುವುದಿಲ್ಲ. ಅಂದಮೇಲೆ ಆತನಿಗೆ ಆತ್ಮಾನುಭವವಾದರೂ ಹೇಗೆ ಪ್ರಾಪ್ತವಾಗಬೇಕು? ॥೫೯೬॥ ಚಿಕ್ಕ ಬಾಲಕನಿಗೆ ಅನೇಕ ಅಲಂಕಾರಗಳಿಂದ ಶೃಂಗರಿಸಿದರೂ ಕೂಡ ಆ ಬಾಲಕ ಏನೂ ತಿಳಿಯಲಾರನು. ಆದರೆ ಆತನ ತಾಯಿಗೆ ಮಾತ್ರ ಪರಮ ಸಂತೋಷ ಉಂಟಾಗುವುದು. ಅದರಂತೆ ಶಿಷ್ಯನಿಗೆ ಆತ್ಮಾನುಭವ ಪ್ರಾಪ್ತವಾಗಲು ಸದ್ಗುರುವಿಗೂ ಕೂಡ ಪರಮ ಸಂತೋಷ ಪ್ರಾಪ್ತವಾಗುವುದು ॥೫೯೭॥ ಅದರಂತೆಯೇ ತನ್ನ ಉದ್ಧವನು ಬ್ರಹ್ಮಸ್ಥಿತಿಗೆ ಪ್ರಾಪ್ತನಾದದ್ದು ಕಂಡು ಶ್ರೀಕೃಷ್ಣದೇವನಿಗೆ ಪರಮ ಸಂತೋಷವು ಪ್ರಾಪ್ತವಾಯಿತು. ಉದ್ಧವನು ನಿಃಸಂದೇಹಿಯಾದನು ಹಾಗೂ ಆತನಿಗೆ ಬ್ರಹ್ಮಾನುಭವ ಉಂಟಾಯಿತೆಂದು ಆತನು ತಿಳಿದುಕೊಂಡನು ॥೫೯೮॥ ಉದ್ಧವನ ಬ್ರಹ್ಮನಿಷ್ಠತೆಯ ಸ್ಥಿತಿ ಕಂಡು ಆತನಿಗೆ ಆತ್ಮಾನುಭವ ಬಂದಿದ್ದು ಶ್ರೀಕೃಷ್ಣನಾಥನಿಗೆ ತಿಳಿಯಿತು. ಈಗ ಇತರರಿಗೆ ಉಪದೇಶ ಹೇಗೆ ಮಾಡಬೇಕೆಂಬುವುದನ್ನು ಉದ್ಧವನಿಗೆ ಕಲಿಸುತ್ತಿರುವನು ॥೫೯೯॥ ನೀನೀಗ ಬ್ರಹ್ಮಸಂಪನ್ನನಾಗಿರುವೆ. ಶಿಷ್ಯನಿಗೆ ಹೇಗೆ ಉಪದೇಶ ಮಾಡಬೇಕೆನ್ನುವ ಲಕ್ಷಣ ಹಾಗೂ ಶಿಷ್ಯನ ಅಧಿಕಾರ ಹೇಗೆ ತಿಳಿಯಬೇಕು ಎನ್ನುವುದನ್ನು ಹೇಳುವೆನು. ಅದಕ್ಕಾಗಿ ಏಕಾಗ್ರಚಿತ್ತದಿಂದ ಆಲಿಸೆಂದು ಶ್ರೀಕೃಷ್ಣನು ನುಡಿದನು ॥೬೦೦॥

ಶಠ, ನಾಸ್ತಿಕ, ಢೋಂಗೀ, ಸೇವೆಬಾಹೀರ, ದೇವರ ಭಕ್ತಿ ಮಾಡದವ ಹಾಗೂ ಉದ್ಧಟ ಸ್ವಭಾವದ ಶಿಷ್ಯನನ್ನು ಬಿಟ್ಟುಬಿಡಬೇಕು ॥೬೦೧॥ ಜನರು ಬಹು ಮೆಚ್ಚಿ ಜಮಾಯಿಸುವಂತಹ ಬಾಹ್ಯ ಕರ್ಮದ ಆಚರಣೆ ಮಾಡುವವರು, ಮಾನ ಸನ್ಮಾನ ಹಾಗೂ ಹೇರಳವಾಗಿ ಧನಸಂಪಾದನೆಯ ಮಹದಪೇಕ್ಷೆ ಮಾಡುವವರು ॥೬೦೨॥ ಈ ಪ್ರಕಾರವಾಗಿ ಯಾರ ಭಜನೆಯು ಢೋಂಗೀತನದಿಂದ ಕೂಡಿರುವುದೋ, ಅಂತಹವನಿಗೆ ಈ ಏಕಾದಶಸ್ಕಂಧದಲ್ಲಿನ ಅಗಾಧ ಜ್ಞಾನವನ್ನು ಸ್ವಪ್ನದಲ್ಲಿಯೂ ಕೂಡ ಹೇಳಬಾರದು ॥೬೦೩॥ ಮೋಹಮಮತೆಯ ಬಲಾಢ್ಯ ಪ್ರಾಬಲ್ಯವಿರುವುದರಿಂದ ಯಾರ ಆಸ್ತಿಕತ್ವವು ರಸಾತಳಕ್ಕೆ ಹೋಗಿರುವುದು, ವೇದಗಳಲ್ಲಿ, ಶಾಸ್ತ್ರಗಳಲ್ಲಿ ದೃಢವಾದ ನಾಸ್ತಿಕ್ಯವುಳ್ಳ, ಮುಖ್ಯವಾಗಿ ದೇವರೇ ಇಲ್ಲ ಎಂದು ಹೇಳುವರು ॥೬೦೪॥ ಈ ಪ್ರಕಾರವಾಗಿ ನಾಸ್ತಿಕ್ಯದ ಬಂಡಾಯ ಹೂಡುವವರಾದ ಇಂತಹ ಜನರ ಬಾಯಿಗೆ ಈ ವಿರಾಟ ಗುಹ್ಯ ಜ್ಞಾನದ ಸಿಪ್ಪೆಯೂ ಕೂಡ ಮುಟ್ಟಿಸಬಾರದು. ಕಾರಣ ಅವರ ಭಾವನೆಯು ಈ ಯಾವ ನಾಸ್ತಿಕತನದಿಂದ ಅತಿಶಯ ಚೊಕ್ಕ ಬರಿದಾಗಿರುವುದು ॥೬೦೫॥ ನಾಸ್ತಿಕತನದಿಂದ ಪಾಪ ಜ್ಞಾನದ ಯಾವ ಕಥೆ? ದೇವರೇ ಇಲ್ಲ ಎಂಬ ವಾದದ ಬಂಡಾಯವು ಬಹು ಕಠಿಣವಾಗಿರುವುದು. ಇಂತಹ ನಾಸ್ತಿಕವಾದದ ಜನರನ್ನು ಕೂಡಲೇ ತ್ಯಜಿಸಿಬಿಡಬೇಕು ॥೬೦೬॥

ಅನನ್ಯಭಾವೇ ನ ರಿಘೇ ಶರಣ । ಮಿಥ್ಯಾ ಲಾವೂನಿ ಗೋಡಪಣ । ಧೂರ್ತವಾದೇ ಘೇವ್ಹೋ ಪಾಹೇ ಜ್ಞಾನ । ತೇಹೀ ಶಠ ಜಾಣ ತ್ಯಾಗಾವೇ ।।೫೦೭।। ಶಠಾಚೀ ಐಶೀ ನಿಜಮತೀ । ಪುಢಿಲಾಂಚೀ ಠಕೂನಿ ಘೇ ಯುಕ್ತೀ । ಪರೀ ಜೇ ಆಪುಲೀ ವ್ಯುತ್ಪತ್ತೀ । ತೇ ಪುಢಿಲಾಂಪ್ರತೀ ಸಾಂಗೇನ ।।೫೦೮।। ಕಾಯಾ ವಾಚಾ ಮನ ಧನ । ಜೋ ಗುರೂಸೀ ಕರೀ ವಂಚನ । ಜೋ ಗುರೂಚೇ ದೇಖೇ ದೋಷಗುಣ । ತೋಹೀ ಶಠ ಪೂರ್ಣ ತ್ಯಾಗಾವಾ ।।೫೦೯।। ಮಾಝ್ಯೋ ಅತಿಥೋರ ಮಹಿಮಾನ । ಗುರುಸೇವಾ ಕೇವೀ ಕರೂ ಆಪಣ । ಸೇವಾ ನ ಕರೀ ಮಹಿಮೇಭೇಣ । ತೋಹೀ ಶಿಷ್ಯ ಜಾಣ ತ್ಯಾಗಾವಾ ।।೫೧೦।। ಆಪಣ ಶ್ರೇಷ್ಠಾಸನೀ ಬೈಸೋನಿ ಬರವಾ । ಸೇವಕಾಹಾತೀ ಕರವೀ ಗುರುಸೇವಾ । ತೋ ದಾಂಭಿಕ ಶಿಷ್ಯ ಜಾಣಾವಾ । ತೋಹೀ ತ್ಯಾಗಾವಾ ಯೇ ಗ್ರಂಥೀ ।।೫೧೧।। ಸದ್ಗುರೂಪಾಶೀ ಸಮರ್ಥಪಣ । ಜೋ ಆಪಲೀ ಮಿರವೀ ಜಾಣೀವ ಜಾಣ । ಜೋ ಸೇವಾ ನ ಕರೀ ಗರ್ವೇ ಪೂರ್ಣ । ತೋ ಶಿಷ್ಯ ಜಾಣ ತ್ಯಾಗಾವಾ ।।೫೧೨।। ಮೀ ಧನದಾನೀ ಅತಿಸಮರ್ಥ । ನೀಚಸೇವೇಸೀ ನ ಲಾವೀ ಹಾತ । ಐಸಾಹೀ ಜೋ ಗರ್ವಯುಕ್ತ । ತೋಹೀ ನಿಶ್ಚಿತ ತ್ಯಾಗಾವಾ ।।೫೧೩।। ಜೋ ಲೌಕಿಕ ಲಾಜೇಭೇಣ । ಗುರುಸೇವಾ ನ ಕರೀ ಆಪಣ । ಜ್ಯಾಸೀ ಲೌಕಿಕಾಚಾ ಅತಿಅಭಿಮಾನ । ತೋಹೀ ಶಿಷ್ಯ ಜಾಣ ತ್ಯಾಗಾವಾ ।।೫೧೪।। ಜೋ ಗುರುಗೃಹೀಂಚೇ ನೀಚ ಕೃತ್ಯ । ನ ಕರೀ ಮಾನೂನಿ ಮೀ ಸಮರ್ಥ । ತೋ ಮಾನ್ಯತಾ ಅಭಿಮಾನಯುಕ್ತ । ಜಾಣ ನಿಶ್ಚಿತ ತ್ಯಾಗಾವಾ ।।೫೧೫।। ನ ಕರೀ ಗುರುಸೇವಾ ನೀಚವೃತ್ತೀ । ಆಮ್ಹಾ ಅಖಂಡ ಧ್ಯಾನ ಹೇಚಿ ಗುರುಭಕ್ತೀ । ಐಶೀ ಸೇವಾವಂಚಕ ಜ್ಯಾಸೀ ಯುಕ್ತೀ । ತೋಹೀ ನಿಶ್ಚಿತೀ ತ್ಯಾಗಾವಾ ।।೫೧೬।। ನೀಚ ಸೇವಾ ನ ಕರೀ ಆಪಣ । ಮ್ಹಣೇ ಮಾಗಾಲ ತೇ ದೇಈನ ಧನ । ಐಸಾ ಧನಗರ್ವೀ ಶಿಷ್ಯ ಆಪಣ । ಸರ್ವಥಾ ಜಾಣ ನ ಕರಾವಾ ।।೫೧೭।। ಧರೂನಿ ಧನಾಚೀ ಆಸ । ಗುರು ಶಿಷ್ಯಾಸೀ ದೇತ ಉಪದೇಶ । ತೈ ಬ್ರಹ್ಮಜ್ಞಾನ ಪಡಲೇ ವೋಸ । ವಾಢಲಾ ಅಸೋಸ ಧನಲೋಭ ।।೫೧೮।। ಅಥವಾ ವೇಚೂನಿಯಾ ಧನ । ಜೋ ಘೇಈನ ಮ್ಹಣೇ ಬ್ರಹ್ಮಜ್ಞಾನ । ಐಸಾ ಧನಾಭಿಮಾನೀ ಶಿಷ್ಯ ಜಾಣ । ಸರ್ವಥಾ ಆಪಣ ನ ಕರಾವಾ ।।೫೧೯।। ಯಥಾಕಾಳೇ ಜಾಹಲೀ ಪ್ರಾಪ್ತ । ಗುರುಸೇವಾ ಜೇ ಕಾಲೋಚಿತ । ನ ಕರೀ ತೋ ''ಅಶುಶ್ರೂಷು'' ಮ್ಹಣತ । ತೋಹೀ ನಿಶ್ಚಿತ ತ್ಯಾಗಾವಾ ।।೫೨೦।।

ಅನನ್ಯಭಾವದಿಂದ ಶರಣಾಗದೇ ಕೇವಲ ಮೇಲ್ನೋಟಕ್ಕೆ ಸಿಹಿ ಮಾತುಗಳನ್ನಾಡುತ್ತ ಧೂರ್ತತನದಿಂದ ಜ್ಞಾನ ಮಾತ್ರ ಪಡೆಯಬೇಕೆಂದು ಹವಣಿಸುತ್ತಿರುವನು. ಇಂತಹ ಶಠನನ್ನು ತ್ಯಜಿಸಬೇಕು ।೫೦೭।। ಶಠನ ಬುದ್ಧಿಯು ಯಾವ ಪ್ರಕಾರವಾಗಿ ಇರುವುದೆಂದರೆ ಅವನು ಇನ್ನೊಬ್ಬನ ಶ್ರೇಷ್ಠಯುಕ್ತಿಯನ್ನು ಉಪಾಯದೊಂದಿಗೆ ಪಡೆದು, ತದನಂತರ ತನ್ನ ವಿಚಾರ ಹಾಗೂ ಯುಕ್ತಿ ಮಾತ್ರ ಇತರರಿಗೆ ಎಂದಿಗೂ ಕೊಡದವನಾಗಿರುವನು ।೫೦೮।। ಕಾಯಾ, ವಾಚಾ, ಮನಸಾ ಮತ್ತು ಧನದಿಂದ ಇವುಗಳ ವಿಷಯಕ್ಕಾಗಿ ಯಾವನು ತನ್ನ ಶ್ರೇಷ್ಠತೆಯನ್ನು ಗುರುವಿನಲ್ಲಿ ಪ್ರದರ್ಶಿಸುತ್ತಿರುವನೋ, ಹಾಗೂ ಯಾವನು ಗುರುಗಳ ಗುಣದೋಷಗಳನ್ನು ಎಣಿಸುವನೋ, ಅಂತಹ ಶಠನನ್ನು ಸಂಪೂರ್ಣವಾಗಿ ತ್ಯಜಿಸಬೇಕು ।೫೦೯।। ನನ್ನ ಮಹತ್ವವು ಮಹತ್ತರವಾಗಿರುವುದು. ನಾನೇ ಸ್ವತಃ ಗುರುಗಳ ಸೇವೆ ಹೇಗೆ ಮಾಡಬೇಕು? ತನ್ನ ದೊಡ್ಡಸ್ತಿಕೆಯು ಕಡಿಮೆಯಾದೀತೆಂಬ ಭಯದಿಂದ ತನ್ನ ಶ್ರೇಷ್ಠ ಗುರುವಿನ ಸೇವೆಯನ್ನು ತಾನು ಮಾಡದೇ ಇರುವ ಇಂತಹ ಶಿಷ್ಯನನ್ನು ತ್ಯಜಿಸಬೇಕು ।೫೧೦।। ತಾನು ಉಚ್ಚ ಆಸನದ ಮೇಲೆ ಕುಳಿತುಕೊಂಡು ತನ್ನ ಸೇವಕರಿಂದ ಗುರುಗಳ ಸೇವೆ ಮಾಡಿಸುವವನು ಈ ಶಿಷ್ಯನೂ ಕೂಡ ಡಾಂಭಿಕ ವೃತ್ತಿಯವನೆಂದು ತಿಳಿದು ಆತನನ್ನೂ ಸಹ ತ್ಯಜಿಸಬೇಕು. ಅಂತಹವನನ್ನು ಈ ಗ್ರಂಥದ ಅಮೂಲ್ಯ ಉಪದೇಶ ಎಂದಿಗೂ ಮಾಡಬಾರದು ।೫೧೧।। ಸದ್ಗುರುವಿನಲ್ಲಿ ತನ್ನ ಶಬ್ದಪಾಂಡಿತ್ಯದ ಸಾಮರ್ಥ್ಯವನ್ನು ಡೌಲು ಮಾಡಿ ಪ್ರದರ್ಶಿಸುವನು. ಇಂತಹ ಗರ್ವದಿಂದ ಇವನು ಸರಿಯಾಗಿ ಸೇವೆಯನ್ನು ಮಾಡುವುದೇ ಇಲ್ಲ. ಇಂತಹ ಶಿಷ್ಯನ ತ್ಯಾಗ ಮಾಡಬೇಕು ।೫೧೨।। ನಾನು ದೊಡ್ಡ ದ್ರವ್ಯದಾನೀ ಅತಿಸಮರ್ಥನು ಎಂದು ತಿಳಿದು ಯಾವನು ಕೆಳಮಟ್ಟದ ಸೇವೆಗೆ ಕೈಹಚ್ಚಲಾರನೋ, ಅಂತಹ ಅತ್ಯಂತ ಗರ್ವಿಷ್ಠನನ್ನೂ ಕೂಡ ತ್ಯಜಿಸಬೇಕು ।೫೧೩।। ಯಾವನು ಲೋಕಲಜ್ಜೆಯ ಭಯದಿಂದ ಗುರುವಿನ ಸೇವೆ ಮಾಡಲಾರನೋ, ಆತನಿಗೆ ತನ್ನ ಲೌಕಿಕದ ಅತ್ಯಂತ ಅಭಿಮಾನವಿರುವುದು. ಇಂತಹ ಶಿಷ್ಯನನ್ನೂ ಕೂಡ ತ್ಯಾಗ ಮಾಡಬೇಕು ।೫೧೪।। ನಾನೊಬ್ಬ ದೊಡ್ಡ ಶ್ರೀಮಂತನು ಎಂದು ಹೇಳುತ್ತ ಯಾವನು ಗುರುವಿನ ಮನೆಯಲ್ಲಿಯ ಸಾಮಾನ್ಯ ಕೆಲಸವನ್ನು ಮಾಡುವುದಿಲ್ಲವೋ, ಅಂತಹ ಮಾನ್ಯತಾ ಅಭಿಮಾನಯುಕ್ತ ಶಿಷ್ಯನನ್ನು ನಿಶ್ಚಿತವಾಗಿ ಬಿಟ್ಟುಬಿಡಬೇಕು ।೫೧೫।। ಯಾವನು ನಮ್ರಭಾವನೆಯಿಂದ ಗುರುವಿನ ಸೇವೆಯನ್ನು ಮಾಡದೇ, ಅಖಂಡವಾಗಿ ಧ್ಯಾನ ಮಾಡುವುದೇ ಇದೇ ನಮ್ಮ ಗುರುಭಕ್ತಿ ಎಂದು ಯುಕ್ತಿ ಮಂಡಿಸಿ ಗುರುಸೇವೆ ತಪ್ಪಿಸುವನೋ ಆತನನ್ನೂ ಸಹ ತ್ಯಜಿಸಬೇಕು ।೫೧೬।। ನಾನು ಮಾತ್ರ ಇಂತಹ ಕೆಳದರ್ಜೆಯ ಕೆಲಸ ಎಂದಿಗೂ ಮಾಡಲಾರೆನು, ಬೇಕಾದರೆ ನಿಮಗೆ ಬೇಕಾದಷ್ಟು ದ್ರವ್ಯ ಕೊಡುವೆನು. ಹೀಗೆ ಹೇಳುವ ಹಾಗೂ ದ್ರವ್ಯದ ಗರ್ವ ಮಾಡುವ ಶಿಷ್ಯನನ್ನು ಎಂದಿಗೂ ಮಾಡಿಕೊಳ್ಳಬಾರದು ।೫೧೭।। ಮನದಲ್ಲಿ ಧನದ ಆಶೆಯನ್ನು ಹಿಡಿದು ಗುರುವು ಶಿಷ್ಯನಿಗೆ ಉಪದೇಶ ಮಾಡಿದರೆ ಬ್ರಹ್ಮಜ್ಞಾನವು ಬರಿದಾಯಿತೆಂದೇ ತಿಳಿಯಬೇಕು. ಕಾರಣ ದ್ರವ್ಯಲೋಭವು ಬೆಳೆದುಕೊಂಡು ಬಿಡುವುದು ।೫೧೮।। ಅಥವಾ ಧನದ ಸಾಮರ್ಥ್ಯದಿಂದ ನಾನು ಬ್ರಹ್ಮಜ್ಞಾನ ಕೊಂಡುಕೊಳ್ಳುವನು ಎಂದು ಹೇಳುವ ಧನದ ಅಭಿಮಾನಿಯನ್ನು ಶಿಷ್ಯನನ್ನಾಗಿ ಎಂದಿಗೂ ಮಾಡಿಕೊಳ್ಳಬಾರದು ।೫೧೯।। ಪ್ರಸಂಗಾನುಸಾರವಾಗಿ ಪ್ರಾಪ್ತವಾಗಿರುವ ಗುರುಸೇವೆಯನ್ನು ಯಾವನು ಮಾಡಲಾರನೋ, ಆತನಿಗೆ ಅಶುಶ್ರೂಷ ಎಂದು ಹೇಳುವರು. ಇವನನ್ನೂ ಕೂಡ ನಿಶ್ಚಿತವಾಗಿ ತ್ಯಾಗ ಮಾಡಬೇಕು ।೫೨೦।।

''ಕರಿತಾ ಸದ್ಗುರೂಚಿ ಭಕ್ತೀ । ಮೀ ಉದ್ಧರೇನ ನಿಶ್ಚಿತೀ'' । ಐಸಾ ಭಾವ ನಸೇ ಜ್ಯಾಚೇ ಚಿತ್ತೀ । ತೋ ಶಿಷ್ಯ ಹಾತೀ ನ ಧರಾವಾ ॥೫೨೧॥ ಸದ್ಗುರು ತೋಚಿ ಬ್ರಹ್ಮಮೂರ್ತೀ । ಐಸಾ ಭಾವ ನಾಹೀ ಜ್ಯಾಚ್ಯಾ ಚಿತ್ತೀ । ಮುಳೀಂಚ ವಿಕಲ್ಪಾಚೀ ವಸ್ತೀ । ತೋಹೀ ಶಿಷ್ಯ ಹಾತೀ ನ ಧರಾವಾ ॥೫೨೨॥ ಗುರುಹೋನಿ ಬ್ರಹ್ಮ ಭಿನ್ನ । ಐಸೇ ಜ್ಯಾಚೇ ನಿಶ್ಚಿತ ಜ್ಞಾನ । ತೋ ನಿಶ್ಚಯೇಸೀ ''ಅಭಕ್ತ'' ಜಾಣ । ತ್ಯಾಸೀ ಶಿಷ್ಯ ಆಪಣ ನ ಕರಾವೇ ॥೫೨೩॥ ಮನುಷ್ಯ ಮಾನೂನಿ ಸದ್ಗುರುಸೀ । ಜೋ ಉಲ್ಲಂಘೀ ಗುರುವಚನಾಸೀ । ತೋ ಜಾಣ ಪಡಲಾ ಅಪಭ್ರಂಶೀ । ತ್ಯಾ ಶಿಷ್ಯಾಸೀ ತ್ಯಾಗಾವೇ ॥೫೨೪॥ ಸದ್ಗುರೂಹೋನಿ ಅಧಿಕತಾ । ಶಿಷ್ಯ ಆಪುಲೀ ಮಾನೀ ಪವಿತ್ರತಾ । ತೋ ಅಭಕ್ತಾಂಮಾಜೀ ಪೂರ್ಣ ಸರತಾ । ತ್ಯಾಸೀ ತತ್ತ್ವತಾ ತ್ಯಾಗಾವೇ ॥೫೨೫॥ ಗುರೂಚ್ಯಾ ಠಾಯೀ ಬ್ರಹ್ಮಸ್ಥಿತೀ । ಜ್ಯಾಸೀ ಶ್ರದ್ಧಾ ಸಂಪೂರ್ಣ ನಾಹೀ ಚಿತ್ತೀ । ಯಾಚಿ ನಾಂವ ಗಾ ''ಅಭಕ್ತೀ'' । ಜಾಣ ನಿಶ್ಚಿತೀ ಉದ್ಧವಾ ॥೫೨೬॥ ಕಾ ಯೇ ಗ್ರಂಥೀಚೇ ಬ್ರಹ್ಮಜ್ಞಾನ । ಜ್ಯಾಸೀ ನಿಶ್ಚಯೇ ನಮನೇ ಜಾಣ । ತ್ಯಾಸೀ ಕೆವ್ಹಾಂಹೀ ಆಪಣ । ಝಣೇ ವಿಸರೋನ ಶಿಷ್ಯ ಕರಿಸೀ ॥೫೨೭॥ ಯೇ ಗ್ರಂಥೀಂಚೇ ಬ್ರಹ್ಮಸ್ಥಿತೀ । ವಕ್ತಾ ಜೋ ಮೀ ಪರಬ್ರಹ್ಮಮೂರ್ತೀ । ತ್ಯಾ ಮಾಝ್ಯಾ ಠಾಯೀ ನಾಹೀ ಜ್ಯಾಚೇ ಭಕ್ತೀ । ತೋ ಶಿಷ್ಯ ನಿಶ್ಚಿತೀ ತ್ಯಾಗಾವಾ ॥೫೨೮॥ ಯೇ ಗ್ರಂಥೀಂಚೇ ಆವಡೇ ಜ್ಞಾನ । ಗುರೂಚ್ಯಾ ಠಾಯೀ ಶ್ರದ್ಧಾ ಸಂಪೂರ್ಣ । ಪರೀ ಜ್ಯಾಚೇ ಉದ್ಧತ ವರ್ತನ । ತೋ ಶಿಷ್ಯ ಜಾಣ ತ್ಯಾಗಾವಾ ॥೫೨೯॥ ಮಾಝ್ಯಾ ನಿಜಮೂರ್ತಿ ಸಂತ ಸಜ್ಜನ । ಮಾಝೇ ಭಕ್ತ ಮಾಝೇ ಜೀವಪ್ರಾಣ । ತ್ಯಾಂಚೇ ಜೋ ಕರೀ ಹೇಳಣ । ''ದುರ್ವಿನೀತಪಣ'' ಯಾ ನಾಂವ ॥೫೩೦॥ ಮಾಝ್ಯಾ ಭಕ್ತಾಂಮಾಜೀಲ ರಂಕ ಜಾಣ । ತ್ಯಾಚೇ ಸರ್ವಸ್ವೇ ವಂದಾವೇ ಚರಣ । ಹೇ ಜ್ಯಾಸೀ ನಾವಡೇ ಸಂಪೂರ್ಣ । ''ದುರ್ವಿನೀತಪಣ'' ಯಾ ನಾಂವ ॥೫೩೧॥ ಸಾಧುಸಜ್ಜನಾ ಭೇಟೋ ಜಾಯೇ । ಶಠ ನಮ್ರತಾ ವಂದೀ ಪಾಯೇ । ತ್ಯಾಚೇ ಗಿವಸೋನಿ ದೋಷಗುಣ ಪಾಹೇ । ''ದುರ್ವಿನೀತತಾ'' ರಾಹೇ ತೇ ಠಾಯೀ ॥೫೩೨॥ ದುಷ್ಟಬುದ್ಧೀಚೇ ಜೇ ವಿನೀತತಾ । ತೀ ನಾಂವ ಬೋಲಿಜೇ ''ದುರ್ವಿನೀತತಾ । ಐಶೀ ಜ್ಯಾ ಶಿಷ್ಯಾಚೇ ಅವಸ್ಥಾ । ತೋ ಜಾಣ ತತ್ತ್ವತಾ । ತ್ಯಾಗಾವಾ ॥೫೩೩॥ ಐಸೇ ಹೇ ಐಕೋನಿ ನಿರೂಪಣ । ಮ್ಹಣಸೀ ''ಮೀ ಶಿಷ್ಯ ನ ಕರೀ ಜಾಣ'' । ತರೀ ತೇ ಸಚ್ಛಿಷ್ಯಾಸೀ ಉಪದೇಶೀ ಬ್ರಹ್ಮಜ್ಞಾನ । ತೋ ಆತ್ಮಾ ಜಾಣ ಪೈ ಮಾಝಾ ॥೫೩೪॥

''ಸದ್ಗುರುಗಳ ಸೇವೆ ಮಾಡಿದರೆ ನಿಜವಾಗಿಯೂ ನನ್ನ ಉದ್ಧಾರವಾಗುವುದು'' ಹೀಗೆ ಯಾರ ಮನದಲ್ಲಿ ನಿಶ್ಚಯವಿರುವುದಿಲ್ಲವೋ, ಅಂತಹ ಶಿಷ್ಯನ ಕೈ ಹಿಡಿಯಬಾರದು ॥೫೨೧॥ ಸದ್ಗುರುಗಳು ಪರಬ್ರಹ್ಮದ ಮೂರ್ತಿ ಎಂಬ ಈ ಭಾವನೆಯು ಯಾವನ ಚಿತ್ತದಲ್ಲಿ ಇರದೇ, ಚಿತ್ತದಲ್ಲಿ ಅನೇಕ ಪ್ರಕಾರದ ವಿಕಲ್ಪ ತುಂಬಿಕೊಂಡಿರುವುದೋ, ಅಂತಹ ಶಿಷ್ಯನನ್ನು ಎಂದಿಗೂ ಕೈಹಿಡಿಯಬಾರದು ॥೫೨೨॥ ಸದ್ಗುರುಗಳಿಗಿಂತ ಬ್ರಹ್ಮವು ಭಿನ್ನವಾಗಿರುವುದು ಎಂದು ಯಾವನ ದೃಢವಾದ ತಿಳಿವಳಿಕೆ ಇರುವುದೋ, ಅವನು ನಿಶ್ಚಯಪೂರ್ವಕವಾಗಿ ಅಭಕ್ತನೆಂದು ತಿಳಿಯಬೇಕು. ಅವನಿಗೂ ಕೂಡ ಎಂದಿಗೂ ಶಿಷ್ಯನನ್ನಾಗಿ ಮಾಡಕೂಡದು ॥೫೨೩॥ ಗುರುವಿಗೆ ಸಾಮಾನ್ಯ ಮನುಷ್ಯನೆಂದು ತಿಳಿದು ಯಾವನು ಅವರ ಆಜ್ಞೆ ಪರಿಪಾಲಿಸಲಾರನೋ, ಆ ಶಿಷ್ಯನು ಭ್ರಮಿಷ್ಠ ಮಾರ್ಗದಲ್ಲಿ ಬಿದ್ದವನು ಎಂದು ತಿಳಿದು ಅವನನ್ನು ಎಂದಿಗೂ ಶಿಷ್ಯನನ್ನಾಗಿ ಮಾಡಬಾರದು ॥೫೨೪॥ ಯಾವನು ತಾನು ಸ್ವತಃ ಸದ್ಗುರುವಿನಕ್ಕಿಂತಲೂ ಅಧಿಕ ಪವಿತ್ರನಾಗಿರುವೆ ಎಂದು ತಿಳಿದುಕೊಂಡಿರುವನೋ, ಅವನು ಅಭಕ್ತರಲ್ಲಿಯೇ ಅಗ್ರಗಣ್ಯನು. ಅವನನ್ನೂ ಕೂಡ ನಿಶ್ಚಿತವಾಗಿ ತ್ಯಾಗ ಮಾಡಬೇಕು ॥೫೨೫॥ ಹೇ ಉದ್ಧವಾ, ಸದ್ಗುರುಗಳು ಬ್ರಹ್ಮಸ್ವರೂಪರಾಗಿರುವರು. ಈ ವಿಷಯಕ್ಕೆ ಶ್ರದ್ಧೆ ಇಲ್ಲದಿರುವಿಕೆ ಅಭಕ್ತಿಯಾಗಿರುವುದು. ಇದನ್ನು ನೀನು ನಿಶ್ಚಿತವಾಗಿ ತಿಳಿ ॥೫೨೬॥ ಈ ಗ್ರಂಥದಲ್ಲಿನ ಬ್ರಹ್ಮಜ್ಞಾನವಿಷಯದಲ್ಲಿ ನಿಜವಾಗಿ ಯಾರ ನಿಶ್ಚಯವಿರುವುದಿಲ್ಲವೋ, ಆತನಿಗೆ ತಪ್ಪಿಯೂ ಕೂಡ ತನ್ನ ಶಿಷ್ಯನನ್ನಾಗಿ ಮಾಡಕೂಡದು ॥೫೨೭॥ ಅದರಂತೆ ಈ ಗ್ರಂಥದಲ್ಲಿನ ಬ್ರಹ್ಮಜ್ಞಾನ ಉಪದೇಶಕನು ನಾನು ಸಾಕ್ಷಾತ್ ಪರಬ್ರಹ್ಮ ಮೂರ್ತಿಯಾಗಿದ್ದು ನನ್ನಲ್ಲಿ ಯಾರ ಭಾವನೆಯು ದೃಢವಾಗಿರುವುದಿಲ್ಲವೋ, ಆ ಶಿಷ್ಯನನ್ನು ಅವಶ್ಯವಾಗಿ ತ್ಯಾಗ ಮಾಡಬೇಕು ॥೫೨೮॥ ಯಾರಿಗೆ ಈ ಗ್ರಂಥದಲ್ಲಿನ ಜ್ಞಾನವು ಹಿಡಿಸುತ್ತಿರಬಹುದು ಹಾಗೂ ಗುರುವಿನಲ್ಲಿ ಪೂರ್ಣ ಶ್ರದ್ಧೆವಿರಬಹುದು. ಆದರೆ ಅವನ ಆಚರಣೆಯು ಉದ್ಧಟತನದ್ದಾಗಿರಲು, ಆತನನ್ನೂ ಕೂಡ ಅವಶ್ಯವಾಗಿ ತ್ಯಾಗ ಮಾಡಬೇಕು ॥೫೨೯॥ ಯಾವ ಸಂತ ಸಜ್ಜನರು ನನ್ನ ನಿಜಮೂರ್ತಿಯೇ ಆಗಿರುವರು ಮತ್ತು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರಿಯರಾಗಿರುವರು. ಇಂತಹ ಭಕ್ತರನ್ನು ಅಪಹಾಸ್ಯ ಮಾಡುವಿಕೆಗೆ ದುರ್ವಿನೀತತೆ ಎಂದು ಹೇಳುವರು ॥೫೩೦॥ ನನ್ನ ಭಕ್ತರಲ್ಲಿ ಯಾರಾದರೂ ಅತ್ಯಂತ ಬಡವನಾಗಿದ್ದರೆ, ಆತನನ್ನು ಸರ್ವಭಾವದಿಂದ ಚರಣಗಳಿಗೆ ವಂದಿಸಬೇಕು. ಇದು ಯಾರಿಗೆ ಹಿಡಿಸುವುದಿಲ್ಲವೋ, ಆತನಿಗೆ ''ದುರ್ವಿನೀತನು'' ಎಂದು ಹೇಳುವರು ॥೫೩೧॥ ಸಾಧುಸಂತರಿಗೆ ಭೇಟಿಯಾಗಲು ಹೋಗಿ ಅವರನ್ನು ನಿಜವಲ್ಲದ ನಮ್ರತೆಯಿಂದ, ನಾಟಕೀಯವಾಗಿ ವಂದನೆ ಮಾಡುತ್ತ, ಅವರನ್ನು ತನ್ನ ಮನದಲ್ಲಿ ಗುಣದೋಷಗಳನ್ನು ಎಣಿಸುತ್ತಿರುವನು. ಅವನಲ್ಲಿ ''ದುರ್ವಿನೀತ'' ವಾಸ ಮಾಡಿಕೊಂಡಿರುವುದು ॥೫೩೨॥ ಒಟ್ಟಿನಲ್ಲಿ ಒಳಗೆ ದುರ್ಬುದ್ಧಿ ಹಾಗೂ ಹೊರಗೆ ವಿನಯತೆ ತೋರಿಸುವಿಕೆಗೆ ''ದುರ್ವಿನೀತತೆ'' ಎಂದು ಹೇಳುವರು. ಇದು ಯಾವ ಶಿಷ್ಯನಲ್ಲಿ ತೋರುವುದೋ, ಅವನನ್ನೂ ಕೂಡ ನಿಜವಾಗಿಯೂ ತ್ಯಾಗ ಮಾಡಬೇಕು ॥೫೩೩॥ ಈ ನಿರೂಪಣೆಯನ್ನು ಕೇಳಿ ''ನಾನು ಶಿಷ್ಯನನ್ನೇ ಮಾಡಿಕೊಳ್ಳಲಾರೆನು'' ಎಂದು ನೀನು ಹೀಗೆ ಹೇಳಬಹುದು. ಆದರೆ ಯಾವನು ಈ ಶುದ್ಧ ಬ್ರಹ್ಮಜ್ಞಾನದ ಉಪದೇಶ ಮಾಡುವನೋ, ಆತನು ನನ್ನ ಆತ್ಮನಾಗಿರುವನು ಎಂದು ನಾನು ತಿಳಿಯುವೆನು ॥೫೩೪॥

ಜೋ ಉಪದೇಶೀ ಸತ್ಪಾತ್ರ ಪೂರ್ಣ । ತ್ಯಾ ಸಚ್ಛಿಷ್ಯಾಚೇ ಲಕ್ಷಣ । ತುಜ ಮೀ ಸಾಂಗೇನ ನಿರೂಪಣ । ಐಕ ಸಾವಧಾನ ಉದ್ಧವಾ ।೫೩೫॥

ಏತೈರ್ದೋಷೈರ್ವಿಹೀನಾಯ ಬ್ರಹ್ಮಣ್ಯಾಯ ಪ್ರಿಯಾಯ ಚ ।
ಸಾಧಯೇ ಶುಚಯೇ ಬ್ರೂಯಾದ್ ಭಕ್ತಿಃ ಸ್ಯಾಚ್ಛೂದ್ರಯೋಷಿತಾಮ್ ।೩೧॥

ಅರ್ಥ:- ಯಾವನು ಈ ದೋಷಗಳಿಂದ ಮುಕ್ತನೋ, ಬ್ರಾಹ್ಮಣಭಕ್ತನಾಗಿ ಸಾಧುಸ್ವಭಾವದವನೋ ಮತ್ತು ಯಾವನ ಚರಿತ್ರೆಯು ಪವಿತ್ರವಾಗಿರುವುದೋ ಆತನಿಗೆ ಮಾತ್ರ ಈ ಪ್ರಸಂಗದ ವರ್ಣನೆ ಮಾಡಬೇಕು. ಶೂದ್ರರು, ಸ್ತ್ರೀಯರು ನನ್ನಲ್ಲಿ ಪ್ರೇಮಭಕ್ತಿಯನ್ನು ಮಾಡುತ್ತಿದ್ದರೆ ಅವರಿಗೂ ಕೂಡ ಈ ಉಪದೇಶ ಮಾಡಬೇಕು.

ಉಪದೇಶೀ ಮುಖ್ಯ ಅಧಿಕಾರಪಣ । ಧಡಧಡೀತ ವೈರಾಗ್ಯ ಪೂರ್ಣ । ತೇಹೀ ಪಿಶಾಚವೈರಾಗ್ಯ ನವ್ಹೇ ಜಾಣ । ವಿವೇಕಸಂಪನ್ನ ಶಾಸ್ತ್ರೋಕ್ತ ।೫೩೬॥ ದಿವಸ ಚಾರೀ ವೈರಾಗ್ಯ ಕೇಲೇ । ಸವೇಚಿ ವಿಷಯಾರ್ಥೀ ಲಾಗಲೇ । ತೇಥ ಜೇ ಜೇ ಉಪದೇಶಿಲೇ । ತೇ ಸರ್ಪಾಸೀ ಪಾಜಿಲೇ ದುಗ್ಧ ಜೈಸೇ ।೫೩೭॥ ಜೇಥ ವೈರಾಗ್ಯ ನಿಘೋನಿ ಜಾಯೇ । ತೇಥ ಜ್ಞಾನಾಭಿಮಾನ ಉರಲಾ ರಾಹೇ । ತೇಣೇ ಅಭಿಮಾನೇ ಕರೀ ಕಾಯೇ । ಗುಣದೋಷ ಪಾಹೇ ಶ್ರೇಷ್ಠಾಂಚೇ ।೫೩೮॥ ನೀಚ ನಿಂದೀ ಹೇಳಸೂನ । ಶ್ರೇಷ್ಠಾಂಚೇ ಪಾಹೇ ದೋಷಗುಣ । ಜೇಥ ವೈರಾಗ್ಯ ಹೋಯ ಕ್ಷೀಣ । ತೇಥೇ ಜ್ಞಾನಾಭಿಮಾನ ಚಢೇ ಐಸಾ ।೫೩೯॥ ಉದ್ಧವಾ ಜಗೀ ದೋನೀ ಅವಸ್ಥಾ । ವೈರಾಗ್ಯ ಕಾ ವಿಷಯಾಸಕ್ತತಾ । ತಿಸರೇ ಅವಸ್ಥೇಚೀ ಕಥಾ । ಜಾಣ ಸರ್ವಥಾ ಅಸೇನಾ ।೫೪೦॥ ಜೇಥ ವಿವೇಕೇ ವಿಷಯೋ ಹೋಯ ಕ್ಷೀಣ । ತೇಥ ವೈರಾಗ್ಯ ಪ್ರಬಳೇ ಪರಿಪೂರ್ಣ । ಜೇಥ ವಿವೇಕೇಸೀ ವೈರಾಗ್ಯ ಕ್ಷೀಣ । ತೇಥ ವಿಷಯಾಚರಣ ಜ್ಞಾನಾಭಿಮಾನೇ ।೫೪೧॥ ಯಾಲಾಗೀ ಹೋಯ ಜಂವ ಬ್ರಹ್ಮಜ್ಞಾನ । ತಂವ ಜೋ ವೈರಾಗ್ಯ ರಾಖೇ ಪೂರ್ಣ । ವೈರಾಗ್ಯೇ ಗುರೂಸೀ ಅನನ್ಯಶರಣ । ತೇ ''ಅಧಿಕಾರೀರತ್ನ'' ಉಪದೇಶಾ ।೫೪೨॥ ಗತ ಶ್ಲೋಕೀಂಚೇ ದೋಷನಿರೂಪಣ । ಆತಾ ಬೋಲಿಲೋ ವೈರಾಗ್ಯಾರ್ಥ ಜಾಣ । ಇಹೀ ದೋಷೀ ಜ್ಯಾಸೀ ರಹಿತಪಣ । ತೋ ''ಅಧಿಕಾರೀ'' ಪೂರ್ಣ ಸಚ್ಛಿಷ್ಯ ।೫೪೩॥ ಜ್ಯಾಸೀ ಬ್ರಹ್ಮತ್ವೇ ಬ್ರಾಹ್ಮಣಭಕ್ತೀ । ಅನನ್ಯಭಾವೋ ಭಜೇ ಭೂತೀ । ತ್ಯಾಚೀ ಆಂದಣೀ ಭಕ್ತೀ ವಿರಕ್ತೀ । ತೋ ಜಾಣ ನಿಶ್ಚಿತೀ ''ಅಧಿಕಾರೀ'' ।೫೪೪॥ ಗುರೂಚಾ ಪಢಿಯಂತಾಹೀ ಪೂರ್ಣ । ತ್ಯಾಪಾಸೀ ಅಸಲ್ಯಾ ಅಭಕ್ತಪಣ । ತ್ಯಾಸೀ ನವ್ಹೇ ಬ್ರಹ್ಮಜ್ಞಾನ । ಅನನ್ಯ ಭಜನ ಜಂವ ನ ಕರೀ ।೫೪೫॥

ಈಗ ಉಪದೇಶ ಮಾಡಲು ಯೋಗ್ಯ ಸತ್‌ಶಿಷ್ಯನ ಲಕ್ಷಣ ನಾನು ಹೇಳುವೆನು. ಅದಕ್ಕಾಗಿ ಹೇ ಉದ್ಧವನೇ, ಅದನ್ನು ನೀನು ಏಕಾಗ್ರಚಿತ್ತದಿಂದ ಶ್ರವಣ ಮಾಡು ।೫೩೫॥

ಉಪದೇಶ ಮಾಡಲು ಮುಖ್ಯ ಅಧಿಕಾರ ಹೇಗೆ ತಿಳಿಯಬೇಕೆಂದರೆ, ಆತನ ಅಂಗದಲ್ಲಿ ಸಂಪೂರ್ಣವಾಗಿ ಧಡದಢೀತ ವೈರಾಗ್ಯವಿರಬೇಕು. ಅದು ಪಿಶಾಚ ವೈರಾಗ್ಯವಿರದೇ ವಿವೇಕ ಸಂಪನ್ನ ಶಾಸ್ತ್ರೋಕ್ತ ವೈರಾಗ್ಯವಿರಬೇಕು ।೫೩೬॥ ಕೆಲವರು ನಾಲ್ಕು ದಿನಗಳ ಮಟ್ಟಿಗೆ ವೈರಾಗ್ಯವನ್ನು ಧರಿಸಿ, ತದನಂತರ ಕೂಡಲೇ ವಿಷಯಗಳತ್ತ ಹೊರಳುವರು. ಇಂಥವರಲ್ಲಿ ಉಪದೇಶ ಮಾಡಿದ್ದೆಲ್ಲವೂ ಸರ್ಪಕ್ಕೆ ಹಾಲು ಕುಡಿಸಿದಂತಾಗುವುದು ।೫೩೭॥ ಕಾರಣ ವೈರಾಗ್ಯವು ಹೊರಟು ಹೋಗಲು ಜ್ಞಾನಾಭಿಮಾನ ಮಾತ್ರ ಉಳಿದುಕೊಳ್ಳುವುದು. ಈ ಅಭಿಮಾನವು ಬೇರೆ ಯಾವುದೂ ಮಾಡದೇ ಶ್ರೇಷ್ಠ ಜನರ ಗುಣದೋಷಗಳನ್ನು ನೋಡಲಾರಂಭಿಸುವುದು ।೫೩೮॥ ಕನಿಷ್ಠರನ್ನು ತಿರಸ್ಕರಿಸುವುದು, ಅವರನ್ನು ನಿಂದಿಸುವುದು ಹಾಗೂ ಶ್ರೇಷ್ಠರಾದ ಮಹಾಪುರುಷರ ಗುಣದೋಷಗಳನ್ನು ಎಣಿಸುತ್ತ ಕುಳಿತುಕೊಳ್ಳುವುದು. ವೈರಾಗ್ಯವು ಕ್ಷೀಣವಾಯಿತೆಂದರೆ ಹೀಗೆ ಜ್ಞಾನಾಭಿಮಾನವು ಬೆಳೆಯುವುದು ।೫೩೯॥ ಹೇ ಭಕ್ತರಾಜ ಉದ್ಧವಾ, ಈ ಜಗತ್ತಿನಲ್ಲಿ ಎರಡೇ ಅವಸ್ಥೆಗಳಿರುವುವು. ಮೊದಲನೆಯದು ವೈರಾಗ್ಯವು ಎರಡನೆಯದು ವಿಷಯಾಸಕ್ತಿಯಾಗಿರುವುದು. ಮೂರನೆಯ ಅವಸ್ಥೆ ಇರುವುದೇ ಇಲ್ಲ ।೫೪೦॥ ಎಲ್ಲಿ ವಿವೇಕದಿಂದ ವಿಷಯಗಳು ಕ್ಷೀಣವಾಗುವುವೋ, ಅಲ್ಲಿ ಪರಿಪೂರ್ಣವಾಗಿ ವೈರಾಗ್ಯ ಬೆಳೆಯುವುದು. ಅದರಂತೆ ಎಲ್ಲಿ ವಿವೇಕದೊಂದಿಗೆ ವೈರಾಗ್ಯವು ಕ್ಷೀಣವಾಗುವುದೋ, ಅಲ್ಲಿ ಜ್ಞಾನದ ಅಭಿಮಾನದಿಂದ ವಿಷಯಾಚರಣೆ ಉಂಟಾಗುವುದು ।೫೪೧॥ ಈ ಕಾರಣಕ್ಕಾಗಿ ವಿರಾಟ ಬ್ರಹ್ಮಜ್ಞಾನವಾಗುವವರೆಗೂ ಯಾವನು ಸಂಪೂರ್ಣವಾಗಿ ವೈರಾಗ್ಯವನ್ನು ರಕ್ಷಿಸುವನೋ ಹಾಗೂ ವೈರಾಗ್ಯಯುಕ್ತನಾಗಿ ತನ್ನ ಸದ್ಗುರುರಾಯನಿಗೆ ಅನನ್ಯಭಾವದಿಂದ ಶರಣಾಗುವನೋ, ಅವನು ಮಾತ್ರ ಉಪದೇಶಕ್ಕೆ ಅಧಿಕಾರೀ ರತ್ನನು ಎಂದು ತಿಳಿಯಬೇಕು ।೫೪೨॥ ಹಿಂದಿನ ಶ್ಲೋಕದಲ್ಲಿನ ದೋಷಗಳ ನಿರೂಪಣೆಯು ವೈರಾಗ್ಯಕ್ಕಾಗಿ ಇರುವುದು. ಈ ದೋಷಗಳಿಂದ ಯಾವನು ಮುಕ್ತನಾಗುವನೋ, ಆತನೇ ಸಚ್ಛಿಷ್ಯನಾಗಿರುವನು ।೫೪೩॥ ಯಾವನು ಬ್ರಾಹ್ಮಣರನ್ನು ಬ್ರಹ್ಮಭಾವದಿಂದ ಭಕ್ತಿ ಮಾಡುವನೋ, ಯಾವನು ಸರ್ವಭೂತಗಳಲ್ಲಿ ಅನನ್ಯಭಾವದಿಂದ ಭಗವದ್ಭಾವನೆಯಿಂದ ಭಜಿಸುವನೋ, ಆತನಿಗೆ ಭಕ್ತಿ ಮತ್ತು ವಿರಕ್ತಿ ದಾಸಿಯಾಗುವುವು. ಆತನೇ ನಿಜವಾಗಿ ಅಧಿಕಾರೀ ಎಂದು ತಿಳಿಯಬೇಕು ।೫೪೪॥ ಗುರುವಿಗೆ ಪೂರ್ಣವಾಗಿ ಪ್ರೀತಿಗೆ ಪಾತ್ರನಾಗಿದ್ದರೂ ಕೂಡ ಅವನು ಅಭಕ್ತನಾಗಿದ್ದರೆ ಅನನ್ಯಭಾವದಿಂದ ಮಧುರ ಭಜನೆ ಮಾಡುವವರೆಗೂ, ಅವನಿಗೆ ಬ್ರಹ್ಮಜ್ಞಾನದ ಪ್ರಾಪ್ತಿಯು ಆಗುವುದಿಲ್ಲ ।೫೪೫॥

ಪ್ರಿಯ ಆಣಿ ಭಜನ ಶೀಳ । ದೋಷರಹಿತ ನಿರ್ಮಳ । ತ್ಯಾಸೀ ವಿರಕ್ತ ಕರೂನಿ ಅಢಳ । ಉಪದೇಶಾವೇ ಪ್ರಾಂಜಳ ಹೇ ಗುಹ್ಯ ಜ್ಞಾನ ॥೫೪೬॥ ಸ್ವದಾರಾ ಆಣಿ ಸ್ವಧನ । ಯಾಂಚಾ ಲೋಭ ಜ್ಯಾಸೀ ಸಂಪೂರ್ಣ । ತ್ಯಾಸೀ ಸ್ವರ್ಗ ನಾ ಮುಕ್ತಪಣ । ಜನ್ಮ ಮರಣ ಅನಿವಾರ ॥೫೪೭॥ ಪರದಾರಾ ಪರಧನ । ಸರ್ವಥಾ ನಾತಳೇ ಜ್ಯಾಚೇ ಮನ । ಐಸೇ ಜ್ಯಾಪಾಶೀ ಪವಿತ್ರಪಣ । ತ್ಯಾಸೀ ಹೇ ಜ್ಞಾನ ಉಪದೇಶಾವೇ ॥೫೪೮॥ ಜೋ ವೈರಾಗ್ಯಾಚಾ ಪೋತಿಲಾ । ವಿವೇಕೇ ಪೂರ್ಣ ಪೋಸಂಡಲಾ । ಸದ್ಗುರುಸೇವೇಸೀ ಜೇವೇ ವಿಕಲಾ । ಚರಣೇ ವಿನಟಲಾ ಅನನ್ಯತ್ವೇ ॥೫೪೯॥ ಸಾಂಡೂನಿ ನಿಜಮಹಿಮಾನ । ಶ್ರೀಗುರುಸೇವೆಲಾಗೀ ಆಪಣ । ಜ್ಯಾಸಿ ಆವಡೇ ರಂಕಪಣ । ಐಸಾ ಸೇವೇಸೀ ಪೂರ್ಣ ಸದ್ಭಾವ ॥೫೫೦॥ ಅಮರಶ್ರೇಷ್ಠ ಜೇ ಸುರವರ । ತೇ ಮಾನೀ ಸದ್ಗುರೂಚೇ ಕಿಂಕರ । ಸದ್ಗುರೂಹೂನಿಯಾ ಥೋರ । ಹರಿಹರ ಮಾನೀನಾ ॥೫೫೧॥ ಜ್ಯಾಸೀ ನಾಹೀ ಗರ್ವಮದ । ಜ್ಯಾಸೀ ನಾಹೀ ಕಾಮಕ್ರೋಧ । ಜ್ಯಾಸೀ ನಾವಡೇ ವಿಕಲ್ಪಭೇದ । ತೋ ಶಿಷ್ಯ ಶುದ್ಧ ಪರಮಾರ್ಥೀ ॥೫೫೨॥ ಕಾಯಾ ವಾಚಾ ಮನ ಧನ। ಸಾಂಡೂನಿ ಸಮರ್ಥಮಹಿಮಾನ । ಜೋ ಸದ್ಗುರೂಸೀ ಅನನ್ಯಶರಣ। ತೋ ಸಚ್ಛಿಷ್ಯ ಜಾಣ ಸಾಧುತ್ವೇ ॥೫೫೩॥ ಸಾಂಡೂನಿ ಲಜ್ಜಾ ಲೌಕಿಕ । ಜೋ ಬ್ರಹ್ಮಜ್ಞಾನಾಚಾ ಯಾಚಕ । ಸದ್ಗುರುವಚನಾರ್ಥೀ ಚಾತಕ । ತೋ ಆವಶ್ಯಕ ಉಪದೇಶೀ ॥೫೫೪॥ ಜೇ ಕಾ ದ್ವಿಜಜನ್ಮಾ ಹೂನಿ ಬಾಹೇರೀ । ವೇದೇ ವಾಳೂನಿ ಸಾಂಡಿಲೇ ದೂರೀ । ಜೇ ಕಾ ಮಂತ್ರಾರ್ಥೀ ಅಮಂತ್ರೀ । ಜೇ ಅನಾಧಿಕಾರೀ ಶ್ರವಣಾಸೀ ॥೫೫೫॥ ಜ್ಯಾಂಸೀ ನಾಹೀ ಆಶ್ರಮಧರ್ಮ । ಜ್ಯಾಂಸೀ ನಾಹೀ ಶ್ರೌತಕರ್ಮ । ಜ್ಯಾಂಸೀ ನಾಹೀ ಜಪ ಹೋಮ । ಜೇ ವರ್ಣಾಧಮ ಅತಿನೀಚ ॥೫೫೬॥ ಐಸೇ ಜೇ ಕಾ ಶೂದ್ರಜನ । ಐಕೋನಿ ಯೇ ಗ್ರಂಥೀಂಚೇ ಜ್ಞಾನ । ನಿವಾರಾಯಾ ಜನ್ಮಮರಣ । ಉಪಜೇ ದಾರುಣ ವಿರಕ್ತೀ ॥೫೫೭॥ ಉಭಿತಾಂಚ ಏಕಸರೇ ಚಿತ್ತೀ । ಮನೀಹೂನಿ ವಿಟೇ ವಿಷಯಾಂತೇ । ಮಗ ಚಿತ್ತೇ ವಿತ್ತೇ ಜೀವಿತೇ । ರಿಘೇ ಸದ್ಗುರೂತೇ ಅನನ್ಯಶರಣ ॥೫೫೮॥ ಗುರೂಸೀ ಪುಸೋನೇಣೇ ಪ್ರಶ್ನ । ಮ್ಹಣೇ ನಿವಾರೀ ಜನ್ಮಮರಣ । ಭಾವಾರ್ಥೇ ಘಾಲೀ ಲೋಟಾಂಗಣ । ಶುದ್ಧ ಶ್ರದ್ಧಾ ಸಂಪೂರ್ಣ ಪರಮಾರ್ಥೀ ॥೫೫೯॥

ಗುರುಗಳಿಗೆ ಪ್ರಿಯನಾಗಿ ಹಾಗೂ ಭಜನಶೀಲ ಮತ್ತು ನಿರ್ಮಲ, ದೋಷಮುಕ್ತನಾಗಿದ್ದರೆ, ಆತನ ವಿರಕ್ತಿ ದೃಢಗೊಳಿಸಿ ಆತನಿಗೆ ಪ್ರಾಂಜಲ ಭಾವದಿಂದ ಈ ಯಾವ ಗುಹ್ಯ ಮತ್ತು ಅಗಾಧ ಜ್ಞಾನದ ಉಪದೇಶ ಮಾಡಬೇಕು ॥೫೪೬॥ ಸ್ವಸ್ತ್ರೀ ಮತ್ತು ಸ್ವಧನ ಇವುಗಳಲ್ಲಿ ಯಾವನಿಗೆ ಅತ್ಯಂತ ಲೋಭವಿರುವುದೋ, ಅವನಿಗೆ ಸ್ವರ್ಗ ಮತ್ತು ಮುಕ್ತಿ ಇವೆರಡೂ ದೊರಕುವುದಿಲ್ಲ. ಭಯಂಕರವಾದ ಜನ್ಮಮರಣದ ಚಕ್ರದಲ್ಲಿ ಮಾತ್ರ ಭೋಗಿಸುತ್ತಿರಬೇಕಾಗುವುದು ॥೫೪೭॥ ಪರಸ್ತ್ರೀ ಮತ್ತು ಪರಧನ ಇವುಗಳಿಗೆ ಯಾರ ಮನವು ಎಂದಿಗೂ ಸ್ಪರ್ಶಮಾಡುವುದಿಲ್ಲವೋ, ಇಂತಹ ಪವಿತ್ರತೆಯು ಯಾರಲ್ಲಿ ಇರುವುದೋ, ಆತನಿಗೆ ಮಾತ್ರ ಈ ಜ್ಞಾನದ ಉಪದೇಶ ಮಾಡಬೇಕು ॥೫೪೮॥ ಯಾವನು ವೈರಾಗ್ಯದಿಂದ ತುಂಬಿತುಳುಕುವ ಮೂರ್ತಿಯಾಗಿ, ವಿವೇಕದಿಂದ ಪರಿಪೂರ್ಣನಾಗಿ, ನಿಜಭಾವದಿಂದ ಸದ್ಗುರುಗಳ ಸೇವೆಗೆ ತನ್ನನ್ನು ಮಾರಿಕೊಂಡವ ಮತ್ತು ಅನನ್ಯಭಾವದಿಂದ ಅವರ ಚರಣಗಳಿಗೆ ಹಿಡಿದುಕೊಂಡಿರುವ ॥೫೪೯॥ ಹಾಗೆಯೇ ತನ್ನ ದೊಡ್ಡಸ್ತಿಕೆ ಮರೆತಿರುವ, ಸದ್ಗುರುಗಳ ಸೇವೆಗಾಗಿ ಯಾವನಿಗೆ ರಂಕನಾಗಿರಲು ಪ್ರಿಯವಾಗುವಿಕೆ, ಈ ಪ್ರಕಾರವಾಗಿ ಸೇವೆ ವಿಷಯಕ್ಕೆ ಪೂರ್ಣ ಸದ್ಭಾವನೆ ಇರುವುದೋ ॥೫೫೦॥ ಇಂದ್ರನಂತಹ ಮಹಾ ಮಹಾ ದೇವತೆಗಳಿಗೂ ಕೂಡ ಸದ್ಗುರುಗಳ ದಾಸರೆನ್ನುವನೋ, ಹಾಗೆಯೇ ಸದ್ಗುರುರಾಯನಿಗಿಂತಲೂ ಹರಿಹರರನ್ನೂ ಕೂಡ ದೊಡ್ಡವರು ಎಂದು ಭಾವಿಸುವುದಿಲ್ಲವೋ ॥೫೫೧॥ ಯಾವನಿಗೆ ಗರ್ವವಿಲ್ಲ, ಮದವಿಲ್ಲ, ಕಾಮಕ್ರೋಧಗಳು ಇಲ್ಲ, ವಿಕಲ್ಪಭೇದಗಳು ಸ್ವಲ್ಪವೂ ಕೂಡ ಹಿಡಿಸುವುದಿಲ್ಲವೋ, ಇಂತಹ ಶಿಷ್ಯ ಮಾತ್ರ ಶುದ್ಧ ಪರಮಾರ್ಥೀ ಎಂದು ತಿಳಿಯಬೇಕು ॥೫೫೨॥ ಶರೀರದಿಂದ, ವಾಣಿಯಿಂದ, ಮನಸ್ಸಿನಿಂದ, ಧನದಿಂದ ತನ್ನ ಮಹತ್ವ ಬಿಟ್ಟುಕೊಟ್ಟು ಹಾಗೂ ಸಮರ್ಥತೆಯ ಮಹಿಮೆಯನ್ನು ತ್ಯಜಿಸಿ ಯಾವನು ಅನನ್ಯಭಾವದಿಂದ ಸದ್ಗುರುಗಳಿಗೆ ಶರಣಾಗುವನೋ, ಆತನೇ ಸಾಧುತ್ವದ ದೃಷ್ಟಿಕೋನದಿಂದ ಸಚ್ಛಿಷ್ಯ ಎಂದು ತಿಳಿಯಬೇಕು ॥೫೫೩॥ ಲೌಕಿಕ ಮತ್ತು ಲಜ್ಜೆಯನ್ನು ಬಿಟ್ಟುಕೊಟ್ಟು ಯಾವನು ಗುಹ್ಯ ಜ್ಞಾನದ ಯಾಚಕನಾಗುವನೋ ಹಾಗೂ ಓಂಕಾರರೂಪ ಸದ್ಗುರುಗಳ ಉಪದೇಶಕ್ಕಾಗಿ ಚಾತಕನಾಗಿರುವನೋ, ಅವನಿಗೆ ಅವಶ್ಯವಾಗಿ ಜ್ಞಾನೋಪದೇಶ ಮಾಡಬೇಕು ॥೫೫೪॥ ಯಾರು ನೀಚವರ್ಣದ ಆಚೆಕಡೆ ಇರುವವರು, ವೇದವು ಯಾರನ್ನು ತಿರಸ್ಕರಿಸಿ ದೂರ ಮಾಡಿರುವಂತಹವರು, ಯಾರಿಗೆ ಮಂತ್ರದ ಅಧಿಕಾರ ಇಲ್ಲದವರು, ಯಾರು ಶ್ರವಣ ಮಾಡಲೂ ಕೂಡ ಅನಧಿಕಾರಿಯಾಗಿರುವರು ॥೫೫೫॥ ಯಾರಿಗೆ ಆಶ್ರಮಧರ್ಮವಿರುವುದಿಲ್ಲ, ಶ್ರೋತಕರ್ಮವಿರುವುದಿಲ್ಲ, ಜಪವಿಲ್ಲ ಹಾಗೂ ಹೋಮವೂ ಇಲ್ಲ. ಅಧರ್ಮದಿಂದ ಅತ್ಯಂತ ನೀಚರು ॥೫೫೬॥ ಈ ಪ್ರಕಾರವಾಗಿ ಯಾವ ಶೂದ್ರಾದಿಕ ಜನರು, ಇವರಿಗೂ ಕೂಡ ಈ ಯಾವ ಅಮೌಲ್ಯ ಗ್ರಂಥದಲ್ಲಿನ ವಿರಾಟ ಜ್ಞಾನ ಕೇಳಿ ತಮ್ಮ ಜನ್ಮಮರಣ ನಿವಾರಣೆಗಾಗಿ ತೀವ್ರ ವೈರಾಗ್ಯದ ಉತ್ಪತ್ತಿಯಾಗುವುದು ॥೫೫೭॥ ಇಂತಹ ಮನುಷ್ಯರಿಗೆ ಕ್ಷಣಭಂಗುರ ವಿಷಯಗಳ ಜಿಗುಪ್ಸೆ ಮನಃಪೂರ್ವಕ ಉಂಟಾಗುವುದು. ಕಾಯಾ, ವಾಚಾ, ಮನದಿಂದ ಓಂಕಾರರೂಪ ಸದ್ಗುರುರಾಯನಿಗೆ ಅನನ್ಯ ಭಾವದಿಂದ ಶರಣು ಹೋಗುವರು ॥೫೫೮॥ ಗುರುವಿಗೆ ಯಾವ ರೀತಿಯಲ್ಲಿ ಪ್ರಶ್ನಿಸಬೇಕೆಂಬುವುದು ಕೂಡ ಅವರಿಗೆ ತಿಳಿಯುವುದಿಲ್ಲ. ನಮ್ಮನ್ನು ಈ ಜನ್ಮ ಮರಣಗಳಿಂದ ಬಿಡಿಸಿರಿ ಎಂದು ಅವರು ಭಕ್ತಿಭಾವದಿಂದ ಲೋಟಾಂಗಣ ಹಾಕುವರು. ಪರಮಾರ್ಥದಲ್ಲಿ ಅವರ ಶ್ರದ್ಧೆ ನಿರ್ಮಲ ಹಾಗೂ ಪರಿಪೂರ್ಣವಾಗಿರುವುದು ॥೫೫೯॥

ತೇ ಹೋತ ಕಾ ಶೂದ್ರಜನ । ತ್ಯಾಂಸಿ ಉಪದೇಶಿತಾ ಬ್ರಹ್ಮಜ್ಞಾನ । ಉದ್ಧವಾ ಕದಾ ನ ಲಾಗೇ ದೂಷಣ । ಹೇ ಸತ್ಯವಚನ ಪೈ ಮಾಝೇ ॥೫೬೦॥ ಜೇ ಕಾ ಅಪೇಕ್ಷೋನಿಯಾ ವಿತ್ತ । ಚತುರ್ವರ್ಣಾ ಉಪದೇಶಿತ । ತೇ ಧನಲೋಭೇ ಲೋಲುಪ ಏಥ । ನಾಹೀ ಘೇಇಜೇತ ಗುರುತ್ವೇ ॥೫೬೧॥ ಜೇಥ ಗುರೂಶೀಂಚ ಸಲೋಭತಾ । ತೇಥ ಶಿಷ್ಯಾಚೀ ಬುಡೇ ವಿರಕ್ತತಾ । ಐಶಿಯೇ ಠಾಯೀ ಉಪದೇಶ ಘೇತಾ । ಪರಮಾರ್ಥತಾ ಅಪಘಾತು ॥೫೬೨॥ ನಿರ್ಲೋಭತ್ವೇ ಕೃಪೇನೇ ಪೂರ್ಣ । ಸದ್ಗುರು ಉಪದೇಶೀ ಶೂದ್ರಜನ । ಐಸೇನಿ ಕರೀ ಜೋ ದೀನೋದ್ಧರಣ । ತೇಥ ನ ಲಗೇ ದೂಷಣ ಉಪದೇಶಾ ॥೫೬೩॥ ಜೇಣೇ ತಡಫಡೂನಿ ಜಾಣ । ವೈರಾಗ್ಯಾಶೀ ಯೇ ಮರಣ । ಜೇಣೇ ಜ್ಞಾತ್ಯಾಸೀ ಲಾಗೇ ದೂಷಣ । ತೋ ಸ್ತ್ರೀಸಂಗ ಆಪಣ ನ ಕರಾವಾ ॥೫೬೪॥ ಸ್ತ್ರೀ ದೇಖಿತಾಂಚಿ ಅವಚಿತೀ । ತತ್ಕಾಳ ಪಾಡೀ ಅಧಃಪಾತೀ । ತಿಚೀ ಜಾಹಲಿಯಾ ಸಂಗತೀ । ಕೈಚಿ ಧಡಗತೀ ಸಜ್ಞಾನಾ ॥೫೬೫॥ ಪ್ರಮಾದಿ ಪಾಡೀ ಸರ್ವಾರ್ಥೀ । ಹೇ "ಪ್ರಮದಾ" ನಾಮಚೀ ನಿಜಖ್ಯಾತೀ । ತಿಚೀ ಜಾಹಲಿಯಾ ನಿತ್ಯ ಸಂಗತೀ । ಕೇವೀ ಪರಮಾರ್ಥೀ ತರತೀಲ ॥೫೬೬॥ ಜಿಚೇ ದೇಖಿತಾಂಚಿ ವದನ । ಕಾಮ ಮೋಕಲೀ ಕಟಾಕ್ಷ ಬಾಣ । ತೇಥ ಕಾಯಸಾ ಉಪದೇಶ ಜಾಣ । ಆಲೀ ನಾಗವಣ ಪರಮಾರ್ಥಾ ॥೫೬೭॥ ಉದ್ಧವಾ ತುಜ ಹೇಚಿ ಮಾಗತೋ ಜಾಣ । ನಕೋ ಸ್ತ್ರೀಯಾಂಸಿ ಸಂಭಾಷಣ । ನಕೋ ಸ್ತ್ರೀಯಾಂಚೇ ಅವಲೋಕನ । ನಕೋ ಸ್ತ್ರೀವಚನ ಕಾನೀ ಘೇಊ ॥೫೬೮॥ ನಕೋ ನಕೋ ಸ್ತ್ರೀಯಾಂಸೀ ಮಾತ । ನಕೋ ನಕೋ ಸ್ತ್ರೀಯಾಂಸೀ ಏಕಾಂತ । ನಕೋ ನಕೋ ಸ್ತ್ರೀಯಾಂಶೀ ಸಂಗತ । ನಿಂದ್ಯ ಲೋಕಾಂತ ಸರ್ವಾರ್ಥೀ ॥೫೬೯॥ ನಕೋ ನಕೋ ಸ್ತ್ರೀಯಾಂಚಾ ಅನುವಾದ । ನಕೋ ನಕೋ ಸ್ತ್ರೀಯಾಂಚಾ ಸಂವಾದ । ನಕೋ ನಕೋ ಸ್ತ್ರೀಯಾಂಸೀ ಕರೂ ಬೋಧ । ಮಿಥ್ಯಾ ಪ್ರವಾದ ಅಂಗೀ ವಾಜೇ ॥೫೭೦॥ ಸ್ವಭಾವೇ ಸಾತ್ತ್ವಿಕ ವನಿತಾ । ಗೋಷ್ಟೀ ಸಾಂಗೋ ಆಲೀ ಪರಮಾರ್ಥಾ । ತೋಚಿ ವಿಕಲ್ಪ ತತ್ತ್ವತಾ । ಸುಹೃದಾ ಸಮಸ್ತಾ ಪರಿಕಲ್ಪೇ ॥೫೭೧॥ ಯಾಲಾಗೀ ಪ್ರಮದಾ ಜನ । ಸರ್ವಥಾ ತ್ಯಾಗಾವಾ ಆಪಣ । ಪ್ರಮಾದಾಸಂಗತೀ ಬ್ರಹ್ಮಜ್ಞಾನ । ಸರ್ವಥಾ ಜಾಣ ವಾಢೇನಾ ॥೫೭೨॥ ಆಶಂಕಾ ॥ ಉಪದೇಶೀ ತ್ಯಾಜ್ಯ ಸ್ತ್ರೀಯಾ ಜರೀ । ತರೀ ಮಾಗಿಲೀ ಥೋರಥೋರೀ । ಉಪದೇಶಿಲ್ಯಾ ಕೈಶಾಪರೀ । ತೇ ಐಕ ನಿರ್ಧಾರೀ ಸಾಂಗೇನ ॥೫೭೩॥

ಇಂತಹ ಪ್ರಕಾರದ ಜನರು ಶೂದ್ರರೇ ಆಗಿರಲಿ, ಆದರೂ ಕೂಡ ಅವರಿಗೆ ಅಲೌಕಿಕ ಬ್ರಹ್ಮಜ್ಞಾನೋಪದೇಶ ಮಾಡುವುದರಿಂದ ಹೇ ಉದ್ಧವಾ, ಎಂದಿಗೂ ದೋಷ ಉಂಟಾಗಲಾರದು. ಈ ನನ್ನ ವಚನವನ್ನು ನಿಜವೆಂದು ತಿಳಿ ॥೫೬೦॥ ಈಗ ಹಣದ ಆಶೆಯನ್ನು ಧರಿಸಿ ಯಾವನು ಚಾತುರ್ವಣದವರಿಗೆ ಉಪದೇಶ ಮಾಡುವನೋ, ಆತನು ದ್ರವ್ಯಲೋಭಿ ಎಂದು ತಿಳಿಯಬೇಕು. ಆತನಿಗೆ ಗುರುಸ್ಥಾನ ಕೊಡಬಾರದು ॥೫೬೧॥ ಗುರುವಿನಲ್ಲಿಯೇ ಹೀಗೆ ಲೋಭವಿದ್ದಮೇಲೆ ಅಲ್ಲಿ ಶಿಷ್ಯನ ವಿರಕ್ತಿಯು ಸಂಪೂರ್ಣ ಮುಳುಗಿಬಿಡುವುದು. ಇಂತಹ ಜನರಿಗೆ ಉಪದೇಶ ಮಾಡಿದರೆ ಶ್ರೇಷ್ಠವಾಗಿರುವ ಪರಮಾರ್ಥದ ಹಾನಿಯುಂಟಾಗುವುದು ॥೫೬೨॥ ನಿರ್ಲೋಭ ಯುಕ್ತನಾಗಿ ಹಾಗೂ ಪೂರ್ಣ ಕೃಪೆಯಿಂದ ಸದ್ಗುರುಗಳು ಶೂದ್ರಜನರಿಗೆ ಉಪದೇಶ ಮಾಡಿ ಹೀಗೆ ದೀನೋದ್ಧಾರ ಮಾಡಿದರೆ, ಈ ಉಪದೇಶದಿಂದ ಎಂದಿಗೂ ದೂಷಣೆ ತಟ್ಟಲಾರದು ॥೫೬೩॥ ಯಾವುದರಿಂದ ವೈರಾಗ್ಯಕ್ಕೆ ಚಡಪಡಿಸುತ್ತ ಮರಣ ಬರುವುದೋ, ಯಾವುದರಿಂದ ಜ್ಞಾನೀ ಪುರುಷರಿಗೆ ದೋಷ ಹತ್ತುವುದೋ, ಅಂತಹ ಸ್ತ್ರೀಯರ ಸಂಗತಿಯನ್ನು ಮಾತ್ರ ನಾವು ಎಂದಿಗೂ ಮಾಡಕೂಡದು ॥೫೬೪॥ ಸ್ತ್ರೀಯಳ ದರ್ಶನವು ಒಮ್ಮೆಲೆ ಆಗಲು ಆಗ ಕ್ಷಣಾರ್ಧದಲ್ಲಿ ಅಧಃಪಾತವಾಗುವುದು. ಅಂದಮೇಲೆ ಆಕೆಯ ಸಂಗತಿ ಸಾಧಿಸಲು ಜ್ಞಾನೀಗಳವರ ಯಾವ ಗತಿಯಾದೀತು ? ॥೫೬೫॥ ಸರ್ವಾರ್ಥದಿಂದ ಪ್ರಮಾದದಲ್ಲಿ ಬೀಳಿಸುವ ವಸ್ತುವಾದ್ದರಿಂದ ಆಕೆಗೆ "ಪ್ರಮದಾ" ಎಂದು ಹೆಸರು ಬಹು ಪ್ರಸಿದ್ಧವಾಗಿರುವುದು. ಈಕೆಯ ನಿತ್ಯ ಸಂಗತಿಯಾದರೆ ಪರಮಾರ್ಥೀ ಜನರು ಹೇಗೆ ತಾನೇ ಉದ್ಧಾರರಾಗಬೇಕು ? ॥೫೬೬॥ ಆಕೆಯ ಮುಖ ನೋಡಿದರೆ ಸಾಕು, ಕೂಡಲೇ ಕಾಮವು ಕಟಾಕ್ಷ ರೂಪ ಬಾಣ ಬಿಡುವುದು. ಅಂದಮೇಲೆ ಅಲ್ಲಿ ಎಲ್ಲಿಯ ಉಪದೇಶ ? ಇದರಿಂದ ಪರಮಾರ್ಥದ ಹಾನಿಯಾಗದೇ ಇರಲು ಸಾಧ್ಯವೇ ಇಲ್ಲವೆಂದು ತಿಳಿಯಬೇಕು ॥೫೬೭॥ ಆದ್ದರಿಂದ ಹೇ ಪ್ರಿಯ ಉದ್ಧವಾ, ನಾನು ನಿನ್ನಲ್ಲಿ ಈ ಬೇಡಿಕೆಯನ್ನೇ ಬೇಡುವೆನು. ಅದೇನೆಂದರೆ ಸ್ತ್ರೀಯರಲ್ಲಿ ಸಂಭಾಷಣೆ ಮಾಡಬೇಡ, ಸ್ತ್ರೀಯರ ಅವಲೋಕನೆ ಮಾಡಬೇಡ, ಅವರ ಒಂದು ಶಬ್ದವನ್ನೂ ಕೂಡ ಕಿವಿಯಲ್ಲಿ ಹಾಕಿಕೊಳ್ಳಬೇಡ ॥೫೬೮॥ ಬೇಡ, ಬೇಡ ಸ್ತ್ರೀಯರಲ್ಲಿ ಭಾಷಣ, ಬೇಡ ಬೇಡ ಸ್ತ್ರೀಯರಲ್ಲಿ ಏಕಾಂತತನ, ಬೇಡ ಬೇಡ ಸ್ತ್ರೀಯರ ಸಂಗತಿತನ, ಕಾರಣ ಇದು ಲೋಕದಲ್ಲಿ ಸರ್ವತೋಪರಿ ನಿಂದ್ಯ ಕರ್ಮವಾಗಿರುವುದು ॥೫೬೯॥ ಬೇಡ ಬೇಡ ಸ್ತ್ರೀಯರಲ್ಲಿ ಅನುವಾದ, ಬೇಡ ಬೇಡ ಸ್ತ್ರೀಯರಲ್ಲಿ ಸಂವಾದ, ಬೇಡ ಬೇಡ ಸ್ತ್ರೀಯರಿಗೆ ಬೋಧ, ಕಾರಣ ಇಲ್ಲದ ಅಪವಾದವು ಮಾತ್ರ ಅಂಗಕ್ಕೆ ಬಡಿದುಕೊಳ್ಳುವುದು ॥೫೭೦॥ ಸಾತ್ವಿಕ ಸ್ವಭಾವದ ಸ್ತ್ರೀಯಳು ಒಂದುವೇಳೆ ಪರಮಾರ್ಥ ವಿಷಯಕ್ಕೆ ಚರ್ಚಿಸಲು ಬಂದರೆ ಇದರಿಂದ ಇಷ್ಟಮಿತ್ರರಲ್ಲಿ ವಿಕಲ್ಪವು ನಿಜವಾಗಿಯೂ ಉಂಟಾಗುವುದು ॥೫೭೧॥ ಈ ಕಾರಣದಿಂದ ಸ್ತ್ರೀ ಎಂದು ಕೇಳಿದಾಕ್ಷಣವೇ ಆಕೆಯನ್ನು ಸರ್ವತೋಪರಿ ತ್ಯಾಗವನ್ನೇ ಮಾಡಬೇಕು. ಕಾರಣ ಸ್ತ್ರೀ ಜೊತೆಯಲ್ಲಿ ಬ್ರಹ್ಮಜ್ಞಾನವು ಎಂದಿಗೂ ಬೆಳೆಯಲು ಸಾಧ್ಯವಿಲ್ಲ ॥೫೭೨॥ ಅನುಮಾನ ॥ ಉಪದೇಶಕ್ಕೆ ಸ್ತ್ರೀಯರು ಒಂದುವೇಳೆ ಯೋಗ್ಯರಲ್ಲ ಎಂದು ಹೇಳಿದರೆ ಈ ಪೂರ್ವದಲ್ಲಿ ದೊಡ್ಡ ದೊಡ್ಡವರು ಅವರಿಗೆ ಉಪದೇಶ ಹೇಗೆ ತಾನೇ ಮಾಡಿದರು? ಹೀಗೆ ನೀನು ಕೇಳಬಹುದು. ಅದಕ್ಕಾಗಿ ನಿಜಸಂಗತಿ ಹೇಳುವೆ, ಕೇಳು ॥೫೭೩॥

ಶ್ರೇಷ್ಠ ಯಾಜ್ಞವಲ್ಕ್ಯ ಪಾಹೀ । ತೇಣೇ ಉಪನಿಷದಾಂಚ್ಯಾ ಠಾಯೀ । ಉಪದೇಶಿಲೀ ಮೈತ್ರೇಯೀ । ನಾನಾಯುಕ್ತೀ ಪಾಹೀ ಪ್ರಬೋಧೂನಿ ॥೫೭೪॥ ಸ್ವಯೇ ನಾರದ ಮಹಾಮುನೀ । ಪ್ರಹ್ಲಾದಾಚೀ ನಿಜಜನನಿ । ಇಂದ್ರಾಪಾಸೂನಿ ಸೋಡವೂನೀ । ಬ್ರಹ್ಮಜ್ಞಾನೀ ಉಪದೇಶೀ ॥೫೭೫॥ ಅವತರೋನಿ ಕಪಿಲಮುನೀ । ಬೈಸೋನಿಯಾ ಸಿದ್ಧಾಸನೀ । ದೇವಹೂತೀಲಾಗೋನೀ । ಬ್ರಹ್ಮಜ್ಞಾನೀ ಪ್ರಬೋಧೀ ॥೫೭೬॥ ಜೋ ಯೋಗಿಯಾಂಚಾ ಮುಕುಟಮಣೀ । ಕೈಲಾಸಪತಿ ಶೂಳಪಾಣೀ । ಭವ ಉಪದೇಶೀ ಭವಾನೀ । ಬ್ರಹ್ಮಜ್ಞಾನೀ ನಿಜಬೋಧೇ ॥೫೭೭॥ ಇತರಾಂಚೀ ಗೋಠೀ ಕಾಯಶೀ । ತುವಾಂಚಿ ಗಾ ಹೃಷೀಕೇಶೀ । ಉಪದೇಶಿಲೇ ಯಜ್ಞಪತ್ನ್ಯಾಂಸೀ । ಐಸೇ ಮ್ಹಣಸೀ ಉದ್ಧವಾ ॥೫೭೮॥ ಅಸೋ ದೇಖೋನಿಯಾ ಸದ್ಭಾವಾ । ಉಪದೇಶ ಕರೂ ಮ್ಹಣಶೀ ಕಣವಾ । ತರೀ ತೋ ಅಧಿಕಾರ ಓಳಖಾವಾ । ಐಕ ಉದ್ಧವಾ ಸಾಂಗೇನ ॥೫೭೯॥ ಐಕ ಉದ್ಧವಾ ನಿಶ್ಚಿತ । ವಾಚಾಳ ಸ್ತ್ರೀ ತೇ ಅನುಚಿತ । ತೇಥೇ ಉಪದೇಶ ಕರಣೇ ತೇ ವ್ಯರ್ಥ । ಲಾಗೇ ಅಪಘಾತ ಗುರುತ್ವಾ ॥೫೮೦॥ ಜೇಥೇ ಸ್ತ್ರೀಸ ಅತಿ ಬಡಬಡ । ಬ್ರಹ್ಮಜ್ಞಾನೇ ಗರ್ಜೇ ತೋಂಡ । ಜೇಥೇ ವಿಷಯಾಚಾ ಧುಮಾಡ । ಪರಮಾರ್ಥ ಗೋಡ ಪರಪುರುಷೀ ॥೫೮೧॥ ಜೇ ಸ್ತ್ರೀ ಬ್ರಹ್ಮಜ್ಞಾನೀ ಧೀಟ । ಮುಖೀ ಅತ್ಯಂತ ವಟವಟ । ತಿಸೀ ಉಪದೇಶ ಕರೂ ನಯೇ ಸ್ಪಷ್ಟ । ಅಪವಾದಾಚೇ ಬೋಟ ಜೇಣೇ ಲಾಗೇ ॥೫೮೨॥ ತೇಥೇ ಮ್ಯಾ ಹೀ ಕೇಲೀ ವಿನಂತೀ । ಶ್ರೀಜನಾರ್ದನ ಸ್ವಾಮೀ ಪ್ರತಿ । ಸ್ತ್ರಿಯಾ ಶೂದ್ರ ಉಪದೇಶಾರ್ಥ ಯೇತೀ । ಕಾಯ ನಿಶ್ಚಿತೀ ಸಾಂಗಾವೇ ॥೫೮೩॥ ಗುರುವೇಗಳಾ ಮಾರ್ಗನಾಹೀ । ಮ್ಹಣೋನಿ ಯೇತಿ ಲವಲಾಹೀ । ತ್ಯಾಂಸೀ ಉಪದೇಶಾವೇ ಕಾಈ । ಹೇ ಮಾಝ್ಯಾ ಹೃದಯೀ ಸ್ಮರೇನಾ ॥೫೮೪॥ ಹೇ ಐಕೋನಿಯಾ ವಚನ । ಸಂತೋಷಲೇ ಶ್ರೀಜನಾರ್ದನ । ಜೇಣೇ ಹೋಯ ಚಿತ್ತಾಚೇ ಶೋಧನ । ತೇ ''ನಾಮ'' ಜಾಣ ಉಪದೇಶೀ ॥೫೮೫॥ ಚಿತ್ತಶುದ್ಧಿ ಝಾಲಿಯಾ ಜಾಣ । ವೋರಸೋನಿ ಯೇತೇ ಆಪಣ । ಅನನ್ಯ ಭಾವೇ ಮಗ ಶರಣ । ಆಲ್ಯಾ ಜ್ಞಾನ ಉಪದೇಶೀ ॥೫೮೬॥ ಸ್ತ್ರೀ-ಪುರುಷ ಅವಲೋಕನ । ಜಯಾಚೇ ದೃಷ್ಟೀ ಸಮಸಮಾನ । ಐಸೇನಿ ಅನುಭವೇ ಜೋ ಪರಿಪೂರ್ಣ । ತೋಚಿ ಸ್ತ್ರೀಯಾಂಸೀ ಜಾಣ ಉಪದೇಶೀ ॥೫೮೭॥

ಯಾಜ್ಞವಲ್ಕ್ಯರು ಇವರು ಮಹಾನ ಶ್ರೇಷ್ಠರು. ಅವರು ಉಪನಿಷದವನ್ನು ಮೈತ್ರೇಯಿಗೆ ನಾನಾವಿಧ ಯುಕ್ತಿಗಳಿಂದ ಜ್ಞಾನದ ಉಪದೇಶ ಮಾಡಿದರು ॥೫೭೪॥ ನಾರದ ಮಹಾಮುನಿ ಈತನು ಭಕ್ತ ಪ್ರಹ್ಲಾದನ ತಾಯಿಯನ್ನು ಇಂದ್ರನಿಂದ ಬಿಡಿಸಿಕೊಂಡು ಆಕೆಗೆ ಬ್ರಹ್ಮಜ್ಞಾನ ಉಪದೇಶಿಸಿದನು ॥೫೭೫॥ ಕಪಿಲಮುನಿಯವರು ಅವತಾರ ಧರಿಸಿ ಸಿದ್ಧಾಸನದ ಮೇಲೆ ಕುಳಿತುಕೊಂಡು ದೇವಹೂತಿಗೆ ಬ್ರಹ್ಮಜ್ಞಾನೋಪದೇಶ ಮಾಡಿದರು ॥೫೭೬॥ ಯೋಗಿಗಳ ಮುಕುಟಮಣಿ ಯಾವ ಕೈಲಾಸಾಧಿಪತೀ ಶ್ರೀಶಂಕರನು ಭವಾನಿಮಾತೆಗೆ ಆತ್ಮಬೋಧೆಯಿಂದ ಬ್ರಹ್ಮಜ್ಞಾನೋಪದೇಶ ಮಾಡಿರುವನು ॥೫೭೭॥ ಇತರರ ಮಾತೇಕೇ? ಹೇ ಹೃಷೀಕೇಶಿಯೇ, ನೀನೇ ಯಜ್ಞಪತ್ನಿಯರಿಗೆ ಉಪದೇಶ ಮಾಡಿದೆ ಎಂದು ಹೇ ಉದ್ಧವನೇ, ನೀನು ಕೇಳಬಹುದು ॥೫೭೮॥ ಈಗ ಅದು ಇರಲಿ, ಸದ್‌ಭಕ್ತಿ ಕಂಡು ಕಾರುಣ್ಯದೃಷ್ಟಿಯಿಂದ ಸ್ತ್ರೀಯರಿಗೆ ಉಪದೇಶ ಮಾಡಬೇಕೆಂದು ನೀನು ಹೀಗೆ ಹೇಳಬಹುದು. ಆದರೆ ಉದ್ಧವಾ, ಅದಕ್ಕಾಗಿ ಅವರ ಅಧಿಕಾರ ಕಂಡುಹಿಡಿಯಬೇಕಾಗುವುದು ॥೫೭೯॥ ಈ ವಿಷಯವನ್ನೇ ಕುರಿತು ಹೇ ಉದ್ಧವನೇ, ನಿಶ್ಚಯಪೂರ್ವಕವಾಗಿ ಹೇಳುವೆನು, ಈಗ ಕೇಳು. ವಾಚಾಳತನ ಸ್ವಭಾವದ ಸ್ತ್ರೀಯಳು ಅಯೋಗ್ಯವಾಗಿರುವಳು. ಆಕೆಗೆ ಉಪದೇಶ ಮಾಡುವುದು ವ್ಯರ್ಥವಾಗಿದ್ದು ಆದರಿಂದ ಗುರುತ್ವಕ್ಕೆ ಧಕ್ಕೆಯುಂಟಾಗುವುದು ॥೫೮೦॥ ಯಾವ ಸ್ತ್ರೀಯಳಿಗೆ ಬಡಬಡಿಸುವುದೇ ಆಕೆಯ ರೂಢಿಯಾಗಿರುವುದೋ, ಆಕೆಯ ಮುಖದಲ್ಲಿ ಬ್ರಹ್ಮಜ್ಞಾನವು ಗರ್ಜಿಸುತ್ತಿರುವುದೋ, ಆಕೆಯ ಹೃದಯದಲ್ಲಿ ಕ್ಷಣಭಂಗುರ ವಿಷಯಗಳು ಕೋಲಾಹಲ ಎಬ್ಬಿಸಿರುವುವೋ ಮತ್ತು ಪರಪುರುಷರಲ್ಲಿ ಪರಮಾರ್ಥ ಹೇಳಲಿಕ್ಕೆ ಆಕೆಗೆ ಬಹಳ ಹರ್ಷವಾಗುವುದೋ ॥೫೮೧॥ ಯಾವ ಸ್ತ್ರೀಯಳು ಬ್ರಹ್ಮಜ್ಞಾನ ಹೇಳಲಿಕ್ಕೆ ಮಾತ್ರ ಧೀರಳಾಗಿರುವಳೋ, ಮುಖದಿಂದ ವಟವಟ ಮಾಡುತ್ತಿರುವಳೋ, ಆಕೆಗೆ ಉಪದೇಶ ಎಂದಿಗೂ ಮಾಡಕೂಡದು. ಇದರಿಂದ ಅಪವಾದದ ಮಸಿ ಬಡೆದುಕೊಳ್ಳಬೇಕಾಗುವುದು ॥೫೮೨॥ (ಶ್ರೀಏಕನಾಥ ಮಹಾರಾಜರು ಹೇಳುವರು) ನಾನೂ ಕೂಡ ಶ್ರೀಜನಾರ್ದನಸ್ವಾಮಿಯವರಲ್ಲಿ ನಮ್ರತೆಯಿಂದ ಹೀಗೆ ವಿನಂತಿಸಿಕೊಂಡೆನು; ಸ್ತ್ರೀಯರು, ಶೂದ್ರರು ಉಪದೇಶಕ್ಕೆ ಬರುವರು. ಅವರಿಗೆ ಏನೆಂದು ಉಪದೇಶ ಮಾಡಬೇಕು? ಅವರಿಗೆ ನಿಶ್ಚಿತವಾಗಿ ಯಾವುದನ್ನು ಹೇಳಬೇಕು? ॥೫೮೩॥ ಗುರುಹೊರತಾಗಿ ಅನ್ಯಮಾರ್ಗವೇ ಇಲ್ಲ ಎಂದು ತಿಳಿದು ಅವರು ಉಪದೇಶ ಪಡೆಯಲು ಬರುವರು. ಅವರಿಗೆ ಯಾವುದನ್ನು ಉಪದೇಶ ಮಾಡಬೇಕು? ಯಾವುದರಿಂದ ಅವರ ಅಂತಃಕರಣದ ಶುದ್ಧಿಯಾಗುವುದು? ॥೫೮೪॥ ಇದನ್ನು ಕೇಳಿ ಶ್ರೀಜನಾರ್ದನಸ್ವಾಮಿಯವರಿಗೆ ಪರಮಾನಂದವಾಯಿತು. ಅವರು ಹೀಗೆ ಹೇಳಿದರು ; ''ಭಗವನ್ನಾಮ'' ಅವರಿಗೆ ಉಪದೇಶ ಮಾಡಬೇಕು. ಇದರಿಂದ ಅವರ ಅಂತಃಕರಣ ಶುದ್ಧಿಯಾಗುವುದು ॥೫೮೫॥ ಅಂತಃಕರಣ ಶುದ್ಧಿಯಾದನಂತರ ಅವರಿಗೆ ಅಗಾಧವಾದ ಗುಹ್ಯಜ್ಞಾನದ ತೀವ್ರ ಅಪೇಕ್ಷೆಯುಂಟಾಗಿ ಅವರು ಅನನ್ಯಭಾವದಿಂದ ಶರಣು ಬಂದಾಗ ಮಾತ್ರ ಅವರಿಗೆ ವಿಶಾಲವಾದ ಬ್ರಹ್ಮಜ್ಞಾನ ಹೇಳಬೇಕು ॥೫೮೬॥ ಹೀಗೆ (ಶ್ರೀಕೃಷ್ಣನು ಹೇಳುವನು) ಸ್ತ್ರೀಯಾಗಿರಲಿ ಅಥವಾ ಪುರುಷನಾಗಿರಲಿ ಇವರಲ್ಲಿ ಯಾರು ಕಂಡರೂ ಯಾರ ದೃಷ್ಟಿಯಲ್ಲಿ ಸಮಾನರಾಗಿ ಕಾಣುವರೋ, ಇಂತಹ ಅನುಭವದಿಂದ ಯಾವನು ಪರಿಪೂರ್ಣನಾಗಿರುವನೋ, ಆತನು ಮಾತ್ರ ಸ್ತ್ರೀಯರಿಗೆ ಉಪದೇಶ ಮಾಡಬೇಕು ॥೫೮೭॥

ತೋ ಹೀ ಅಧಿಕಾರ ನ ಪಾಹತಾ । ಉಪದೇಶ ನ ಕರೀ ಸರ್ವಥಾ । ತ್ಯಾಹೀ ಉಪದೇಶಾಚೀ ಕಥಾ । ಐಕ ತತ್ತ್ವತಾ ಸಾಂಗೇನ ॥೫೮೮॥ ಮ್ಯಾ ಜ್ಯಾ ಕಾ ನಿಂದಿಲ್ಯಾ ವನಿತಾ । ತ್ಯಾಂಮಾಜೀ ಸಭಾಗ್ಯಾ ಸಾತ್ತ್ವಿಕತಾ । ಸಾಂಡೋನಿಯಾ ವಿಷಯಾವಸ್ಥಾ । ಜೇ ಪರಮಾರ್ಥಾ ಉದ್ಯತ ॥೫೮೯॥ ತ್ಯಜೂನಿಯಾ ಪ್ರಪಂಚಾಚೀ ಹಾವ । ನಾವಡೇ ವಿಷಯಾಚೇ ನಾಂವ । ವೈರಾಗ್ಯೇ ಉಠಲಾ ಸದ್ಭಾವ । ಘೇಊನಿ ಧಾಂವ ಪರಮಾರ್ಥೀ ॥೫೯೦॥ ಅತಿಥೀ ಆಣಿ ಪತಿಪುತ್ರಾಂಸೀ । ಭೋಜನೀ ಸಮತಾ ನಿತ್ಯ ಜಿಸೀ । ಧನಲೋಭ ನಾಹೀ ಮಾನಸೀ । ಪರಮಾರ್ಥೀ ತಿಸೀ ಅಧಿಕಾರು ॥೫೯೧॥ ಜನ್ಮಮರಣನಿವಾರಣೀ । ಜೀವಾಮನಾಚೀ ನಿತ್ಯ ಕಾಚಣೀ । ಮಾಝೀ ಭವಪಾಶಚ್ಛೇದನೀ । ಧರ್ಮದಾತಾ ಕೋಣೀ ಮಿಳತಾ ಕಾ ॥೫೯೨॥ ಸದ್ಗುರು ಪ್ರಾಪ್ತೀಚೀ ಅತಿ ಆರ್ತ । ಕಾಯಾ ವಾಚಾ ವಿತ್ತ ಜೀವಿತ । ಕುರವಂಡೀ ಕರೂನಿ ಸಾಂಡಿತ । ಪರಮಾರ್ಥಾರ್ಥ ಸದ್ಭಾವೇ ॥೫೯೩॥ ಯಾಪರೀ ನಿಜಪರಮಾರ್ಥಾ । ಸದ್ಭಾವೇ ಜೇ ವಿನಟೇ ವನಿತಾ । ಉದ್ಧವಾ ತಿಸೀ ಹೇ ಉಪದೇಶಿತಾ । ದೋಷ ಸರ್ವಥಾ ಲಾಗೇನಾ ॥೫೯೪॥ ಕ್ಷತ್ರಿಯ ವೈಶ್ಯ ಸ್ತ್ರೀ ಶೂದ್ರಜನ । ಯಾಂಚೀ ಸಚ್ಛ್ರದ್ಧಾ ದೃಢ ಪಾಹೂನ । ಉಪದೇಶಿತಾ ಬ್ರಹ್ಮಜ್ಞಾನ । ದೋಷನಿರ್ದಳಣ ಶಿಷ್ಯಾಂಚೇ ॥೫೯೫॥ ಉಪದೇಶಿತಾ ಬ್ರಹ್ಮಜ್ಞಾನ । ಜೈ ಗುರುಸೀಚ ಲಾಗೇ ದೂಷಣ । ತೈ ಶಿಷ್ಯಾಸೀ ಉದ್ಧರೀ ಕೋಣ । ಹೇ ವ್ಯಾಖ್ಯಾನ ಅಬದ್ಧ ॥೫೯೬॥ ಪಹಾವಯಾ ಪಾತ್ರಶುದ್ಧತಾ । ಮೀ ಬೋಲಿಲೋ ದೋಷವಾರ್ತಾ । ವಾಂಚೂನಿ ಬ್ರಹ್ಮಜ್ಞಾನ ಉಪದೇಶಿತಾ । ದೋಷ ಸರ್ವಥಾ ಅಸೇನಾ ॥೫೯೭॥ ಹೇ ಜ್ಞಾನ ಜಾಣಿತಲ್ಯಾಪಾಠೀ । ಜಾಣಣೇಚಿ ಸರೇ ಸೃಷ್ಟೀ । ಸಂಸಾರಾಸೀ ಪಡೇ ತುಟೀ । ತೇಥ ದೋಷಾಚೀ ಗೋಠೀ ಅಸೇನಾ ॥೫೯೮॥

ನೈತದ್ವಿಜ್ಞಾಯ ಜಿಜ್ಞಾಸೋರ್ಜ್ಞಾತವ್ಯಮವಶಿಷ್ಯತೇ । ಪೀತ್ವಾ ಪೀಯೂಷಮಮೃತಂ ಪಾತವ್ಯಂ ನಾವಶಿಷ್ಯತೇ ॥೩೨॥

ಅರ್ಥ:- ದಿವ್ಯವಾದ ಅಮೃತ ಪ್ರಾಶನ ಮಾಡಿದ ನಂತರ ಪುನಃ ಯಾವುದನ್ನು ಪ್ರಾಶನ ಮಾಡುವ ಅವಶ್ಯಕತೆ ಇರುವುದಿಲ್ಲ. ಅದರಂತೆ ಈ ಜ್ಞಾನ ಪ್ರಾಪ್ತ ಮಾಡಿಕೊಂಡ ನಂತರ ಯಾವುದನ್ನೂ ಕೂಡ ತಿಳಿಯಬೇಕಾದುದು ಉಳಿಯುವುದಿಲ್ಲ.

ಯೇ ಗ್ರಂಥೀಂಚೇ ಜಾಣಿತಲ್ಯಾ ಜ್ಞಾನ । ಮುಮುಕ್ಷು ಜೇ ಸಾಧಕ ಜನ । ತ್ಯಾಂಸೀ ಜಾಣಾವಯಾ ಆನ । ಜಾಣತೇಪಣ ಉರೇನಾ ॥೫೯೯॥ ಜೇವೀ ಕೇಲಿಯಾ ಅಮೃತಪಾನ । ಪುಢೇ ಪ್ರಾಶನಾಸೀ ನುರೇ ಆನ । ತೇವೀ ಜಾಣಿತಲ್ಯಾ ಹೇ ಜ್ಞಾನ । ಜ್ಞಾತವ್ಯ ಜ್ಞಾತೇಪಣ ಸಮೂಳ ನುರೇ ॥೬೦೦॥

ಆತನೂ ಸಹ ಅಧಿಕಾರ ನೋಡದೇ ಎಂದಿಗೂ ಉಪದೇಶ ಮಾಡಕೂಡದು. ಈ ಉಪದೇಶದ ಸತ್ಯ ಪ್ರಕಾರ ಈಗ ಹೇಳುವೆನು, ಅದನ್ನು ಕೇಳು ॥೫೮೮॥ ನಾನು ಯಾವ ಸ್ತ್ರೀಯರನ್ನು ನಿಂದಿಸಲ್ಪಟ್ಟಿರುವೆನೋ, ಅವರಲ್ಲಿ ಯಾವ ಸ್ತ್ರೀಯಳು ಸಾತ್ವಿಕ, ಭಾಗ್ಯಶೀಲವಿದ್ದು ವಿಷಯ ವಾಸನೆ ಬಿಟ್ಟುಕೊಟ್ಟು ಪರಮಾರ್ಥಕ್ಕಾಗಿ ಉತ್ಸುಕತಳಾಗಿದ್ದರೆ ॥೫೮೯॥ ಪ್ರಪಂಚದ ಆಶೆಯನ್ನು ತೊರೆದು ವಿಷಯಗಳ ಹೆಸರೂ ಕೂಡ ಆಕೆಗೆ ಹಿಡಿಸದೇ ಪರಮಾರ್ಥಕ್ಕಾಗಿ ಆತುರಳಾಗಿ ವೈರಾಗ್ಯದಿಂದ ಆಕೆಗೆ ಸದ್ಭಕ್ತಿಯು ಉತ್ಪನ್ನವಾಗಿದ್ದರೆ ॥೫೯೦॥ ಭೋಜನ ಸಮಯದಲ್ಲಿ ಆಕೆಗೆ ಬೀಗನು, ಪತಿ, ಪುತ್ರರು ಯಾವಾಗಲೂ ಸಮಾನರಾಗಿಯೇ ಕಾಣುತ್ತಿರಬೇಕು. ಆಕೆಯ ಮನದಲ್ಲಿ ಯಾವ ದ್ರವ್ಯಲೋಭವಿರಬಾರದು. ಹೀಗಿರುವ ಆಕೆಗೆ ಮಾತ್ರ ಪರಮಾರ್ಥದ ಅಧಿಕಾರವಿರುವುದು ॥೫೯೧॥ ಈ ಜನ್ಮಮರಣದ ಚಕ್ರದಿಂದ ಮುಕ್ತಳಾಗಬೇಕು ಎಂಬುವುದೇ ಆಕೆಯ ಜೀವಕ್ಕೆ ಹಾಗೂ ಮನಕ್ಕೆ ತಳಮಳ ಹತ್ತಿರುವುದೋ, ಹಾಗೆಯೇ ನನ್ನ ಸಂಸಾರದ ಪಾಶವನ್ನು ಮುರಿದೊಗೆಯುವ ಯಾರಾದರೂ ಧರ್ಮದಾತಾ ನನಗೆ ದೊರಕಬಹುದೇ? ॥೫೯೨॥ ಈ ಪ್ರಕಾರವಾಗಿ ಸದ್ಗುರು ಪ್ರಾಪ್ತಿಯ ಮಹದಕಾಂಕ್ಷೆಯು ಆಕೆಗೆ ಹತ್ತಿಕೊಂಡಿರುವುದು. ಪರಮಾರ್ಥಕ್ಕಾಗಿ ಭಕ್ತಿಭಾವದೊಂದಿಗೆ ತನ್ನ ಕಾಯಾ, ವಾಚಾ, ಮನ, ಧನ ಮತ್ತು ಜೀವನ ಈ ಸರ್ವವನ್ನೂ ನಿವಾಳಿಸಿ ಒಗೆಯುವಳು ॥೫೯೩॥ ಹೇ ಭಕ್ತರಾಜ ಉದ್ಧವಾ, ಈ ಪ್ರಕಾರವಾಗಿ ಯಾವ ಸ್ತ್ರೀಯಳು ಏಕನಿಷ್ಠೆಯಿಂದ ಪರಮಾರ್ಥ ವಿಷಯಕ್ಕೆ ಉದ್ಯುಕ್ತಳಾಗಿರುವಳೋ, ಆಕೆಗೆ ಉಪದೇಶ ಮಾಡಿದರೆ ಎಂದಿಗೂ ದೋಷ ಹತ್ತುವುದಿಲ್ಲ ॥೫೯೪॥ ಕ್ಷತ್ರಿಯ, ವೈಶ್ಯ, ಸ್ತ್ರೀ ಅಥವಾ ಶೂದ್ರರು ಇವರೆಲ್ಲರ ದೃಢವಾದ ಶ್ರದ್ಧೆ ನೋಡಿ ವಿರಾಟ ಬ್ರಹ್ಮಜ್ಞಾನದ ಉಪದೇಶ ಮಾಡಲು ಆ ಶಿಷ್ಯರ ಸರ್ವ ದೋಷಗಳು ನಾಶವಾಗುವುವು ॥೫೯೫॥ ಬ್ರಹ್ಮಜ್ಞಾನೋಪದೇಶ ಮಾಡುವುದರಿಂದ ಗುರುಗಳಿಗೆ ದೋಷ ಉಂಟಾದರೆ ಶಿಷ್ಯರ ಉದ್ಧಾರ ಯಾರು ಮಾಡಬೇಕು? ಎಂದು ಹೀಗೆ ಹೇಳುವುದು ಅಬದ್ಧವಾಗಿರುವುದು ॥೫೯೬॥ ಉಪದೇಶ ಮಾಡುವಾಗ್ಗೆ, ಪಾತ್ರತೆಯ ಶುದ್ಧತೆಯನ್ನು ಶೋಧಿಸಿ ನೋಡುವುದಕ್ಕಾಗಿಯೇ ನಾನು ಈ ದೋಷಗಳನ್ನು ಹೇಳಿರುವೆನು. ಆದ್ದರಿಂದ ಶುದ್ಧ ಬ್ರಹ್ಮಜ್ಞಾನದ ಉಪದೇಶ ಮಾಡುವುದರಿಂದ ಸರ್ವಥಾ ದೋಷ ತಟ್ಟದು ॥೫೯೭॥ ಈ ಜ್ಞಾನವಾದ ಮೇಲೆ ಸೃಷ್ಟಿಯಲ್ಲಿನ ತಿಳಿದುಕೊಳ್ಳುವಿಕೆಯು ಪೂರ್ಣವಾಗುವುದು. ಸಂಸಾರವು ಮುರಿದುಬೀಳುವುದು. ದೋಷಗಳ ಮಾತೇ ಉಳಿದುಕೊಳ್ಳುವುದಿಲ್ಲ ॥೫೯೮॥

ಈ ಗ್ರಂಥದಲ್ಲಿನ ಜ್ಞಾನ ತಿಳಿದ ನಂತರ ಮುಮುಕ್ಷು ಅಥವಾ ಸಾಧಕನಿಗೆ ತಿಳಿಯಬೇಕಾದ ಅನ್ಯ ಯಾವುದೂ ಉಳಿಯುವುದಿಲ್ಲ ॥೫೯೯॥ ಅಮೃತದ ಪಾನ ಮಾಡಿದ ಮೇಲೆ ಪುನಃ ಬೇರೆ ಯಾವುದೂ ಪ್ರಾಶನಮಾಡಬೇಕಾಗುವುದಿಲ್ಲ. ಅದರಂತೆ ಈ ಜ್ಞಾನ ತಿಳಿದಮೇಲೆ ಜ್ಞಾತವ್ಯ ಹಾಗೂ ಜ್ಞಾನ ಸಂಪೂರ್ಣವಾಗಿ ಇಲ್ಲದಾಗುವುದು ॥೬೦೦॥

''ಆಶಂಕಾ'' ಧರ್ಮಾರ್ಥಕಾಮಮೋಕ್ಷಾಂಪ್ರತೀ । ಸಾಧನೇ ಅಸತೀ ನೇಣೋ ಕಿತೀ । ತುವಾ ಹೇ ಏಕಚಿ ಶ್ರೀಪತಿ । ಕೈಶಾ ರೀತೀ ಪ್ರತಿಪಾದಿಲೇ ।।೬೦೧।। ಉದ್ಧವಾ ಸಾಧನೇ ಜೀ ಆನಾನ । ತೇ ಅಭಕ್ತ ಸೋಶಿತೀ ಆಪಣ । ಮಾಝ್ಯಾ ಭಕ್ತಾಂಸೀ ಗಾ ಜಾಣ । ಮೀಚ ಸಾಧನ ಸರ್ವಾರ್ಥೀ ।।೬೦೨।।

ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಂಢಧಾರಣೇ ।
ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇಽಹಂ ಚತುರ್ವಿಧಃ ।೩೩।।

ಅರ್ಥ:- ಪ್ರಿಯ ಉದ್ಧವಾ, ಮಾನವನಿಗೆ ಜ್ಞಾನ, ಕರ್ಮ, ಯೋಗ, ವಾಣಿಜ್ಯ ಹಾಗೂ ರಾಜದಂಡಾದಿಕದಿಂದ ಕ್ರಮವಾಗಿ ಮೋಕ್ಷ, ಧರ್ಮ, ಕಾಮ ಮತ್ತು ಅರ್ಥಸ್ವ ಫಲ ಪ್ರಾಪ್ತವಾಗುವುದು. ಆದರೆ ನಿನ್ನಂತಹ ಅನನ್ಯಭಕ್ತನಿಗಾಗಿ ಈ ನಾಲ್ಕೂ ಪ್ರಕಾರದ ಫಲ ಕೇವಲ ನಾನೇ ಆಗಿರುವೆನು.

ಮೋಕ್ಷಾಲಾಗೀ ''ಜ್ಞಾನ'' ಸಾಧನ । ಧರ್ಮಾಲಾಗೀ ''ಸ್ವಧರ್ಮಾಚರಣ''। ಸ್ವಾಮಿತ್ವಾಲಾಗೀ ''ದಂಡಧಾರಣ''। ''ಅರ್ಥೋದ್ಯಮ'' ಜಾಣ ಜೀವಿಕಾವೃತ್ತೀ ।।೬೦೩।। ಇಹಾಮುತ್ರ ಕಾಮಭೋಗ । ತದರ್ಥ ಕರಿತೀ ''ಯೋಗಯಾಗ'' । ಚಹೂ ಪುರುಷಾರ್ಥೀ ಹಾ ಚಾಂಗ । ಸಾಧನ ಪ್ರಯೋಗ ಅಭಕ್ತಾ ।।೬೦೪।। ಐಸೇ ಸೋಶಿತಾ ಸಾಧನ । ಸಹಸಾ ಸಿದ್ಧೀ ನ ಪವೇ ಜಾಣ । ಅನೇಕ ವಿಕಳತಾ ದೂಷಣ । ಮಾಜೀ ಥಳೀ ವಿಘ್ನದೇವಾಂಚೇ ।।೬೦೫।। ತೈಸೇ ಮದ್ಭಕ್ತಾಂಸೀ ನವ್ಹೇ ಜಾಣ । ಮಾಝೇ ಕರಿತಾ ಅನನ್ಯಭಜನ । ಚಾರೀ ಪುರುಷಾರ್ಥ ಯೇತೀ ಶರಣ । ಪಾಯಾ ಸುರಗಣ ಲಾಗತೀ ।।೬೦೬।। ಉದ್ಧವಾ ಜೇ ಮಜ ಅನನ್ಯ ಶರಣ । ತ್ಯಾಂಚಾ ಧರ್ಮ ಅರ್ಥ ಮೀಚಿ ಪೂರ್ಣ । ತ್ಯಾಂಚಾ ಕಾಮ ತೋಹೀ ಮೀಚಿ ಜಾಣ । ಮೋಕ್ಷಹೀ ಸಂಪೂರ್ಣ ಮೀ ತ್ಯಾಂಚಾ ।।೬೦೭।। ಅಭಕ್ತಾ ಭೋಗಕ್ಷಯೇ ಪುನರಾವೃತ್ತೀ । ಭಕ್ತಾಂಸೀ ಭೋಗ ಭೋಗಿತಾ ನಿತ್ಯಮುಕ್ತೀ । ಏವಢೀ ಮಾಝ್ಯಾ ಭಕ್ತೀಚೀ ಖ್ಯಾತೀ । ಜಾಣ ನಿಶ್ಚಿತೀ ಉದ್ಧವಾ ।।೬೦೮।। ಐಶೀ ಐಕತಾ ದೇವಾಚೀ ಮಾತ । ಉದ್ಧವ ಪ್ರೇಮೇ ವೋಸಂಡಲಾ ಅದ್ಭುತ । ತೇಣೇ ಪ್ರೇಮೇ ಲೋಧಲಾ ಕೃಷ್ಣನಾಥ । ಹರ್ಷೇ ಬೋಲತ ತೇಣೇಸೀ ।।೬೦೯।। ಉದ್ಧವಾ ತುಝೇ ಚಾರೀ ಪುರುಷಾರ್ಥ । ತೋ ಮೀ ಪ್ರತ್ಯಕ್ಷ ಭಗವಂತ । ಐಸೇ ಬೋಲೋನಿ ಹರ್ಷಯುಕ್ತ । ಹೃದಯಾ ಆಂತ ಆಲಿಂಗೀ ।।೬೧೦।। ಹರ್ಷೇ ದೇತಾ ಆಲಿಂಗನ । ಕೃಷ್ಣ ವಿಸರಲಾ ಕೃಷ್ಣಪಣ । ಉದ್ಧವ ಸ್ವಾನಂದೀ ನಿಮಗ್ನ । ಉದ್ಧವಪಣ ವಿಸರಲಾ ।।೬೧೧।। ಕೈಸೇ ಅಭಿನವ ಆಲಿಂಗನ । ದೋಘಾಂಚೇ ಗೇಲೇ ದೋನೀಪಣ । ಪೂರ್ಣ ಚೈತನ್ಯ ಸ್ವಾನಂದಘನ । ಪರಿಪೂರ್ಣ ಸ್ವಯೇ ಝಾಲೇ ।।೬೧೨।।

ಹೇ ಶ್ರೀಪತಿಯೇ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳಿಗಾಗಿ ಗಣಿತ ಮಾಡಲು ಬಾರದಷ್ಟು ಸಾಧನೆಗಳಿರುವುವು. ಅಂದಮೇಲೆ ನೀನು ಈ ಒಂದನ್ನೇ ಹೇಗೆ ಹೇಳಿದೆ? ।।೬೦೧।। ಹೇ ಉದ್ಧವಾ, ಅನೇಕ ಭಿನ್ನ ಭಿನ್ನ ಸಾಧನೆಗಳನ್ನು ಹೇಳಲ್ಪಟ್ಟಿರುವುವು. ಆದರೆ ಅವುಗಳಿಗೆ ಅಭಕ್ತರು ತಾವಾಗಿಯೇ ಶೋಧಿಸುತ್ತಿರುವರು. ಆದರೆ ನನ್ನ ಭಕ್ತರಿಗೆ ನಾನೇ ಸರ್ವತೋಪರಿ ಸಾಧನೆಯಾಗಿರುವೆ ।।೬೦೨।।

ಮೋಕ್ಷಕ್ಕೆ ಜ್ಞಾನವು ಸಾಧನೆಯಾಗಿರುವುದು. ಧರ್ಮಕ್ಕೆ ಧರ್ಮಾಚರಣೆಯು ಸಾಧನೆಯಾಗಿರುವುದು. ಸನ್ಯಾಸಕ್ಕಾಗಿ ದಂಡಧಾರಣೆಯು ಸಾಧನೆಯಾಗಿರುವುದು ಮತ್ತು ಉಪಜೀವನಕ್ಕಾಗಿ ವ್ಯಾಪಾರವು ಸಾಧನೆಯಾಗಿರುವುದು ।।೬೦೩।। ಐಹಿಕ ಮತ್ತು ಪಾರಲೌಕಿಕ ಸುಖ ಪ್ರಾಪ್ತವಾಗುವುದಕ್ಕಾಗಿ ಯೋಗಯಾಗ ಮಾಡುವರು. ಹೀಗೆ ಈ ನಾಲ್ಕು ಪುರುಷಾರ್ಥಗಳಿಗಾಗಿ ಅಭಕ್ತರ ಸಾಧನೆಗಳ ಪ್ರಕಾರವಾಗಿರುವುದು ।।೬೦೪।। ಇಂತಹ ಸಾಧನೆಗಳನ್ನು ಮಾಡುತ್ತಿರಲು ಅವರಿಗೆ ಸಹಸಾ ಸಿದ್ಧಿ ಪ್ರಾಪ್ತವಾಗುವುದಿಲ್ಲ. ಪ್ರತಿಯಾಗಿ ಅನೇಕ ಪ್ರಕಾರಗಳ ವಿಕ್ಷೇಪ ಹಾಗೂ ವಿಘ್ನಗಳು ಉತ್ಪನ್ನವಾಗುವುವು. ಅದರಲ್ಲಿ ದೇವತೆಗಳೂ ಕೂಡ ವಿಘ್ನಗಳನ್ನು ನಿರ್ಮಾಣ ಮಾಡುತ್ತ ಅವರನ್ನು ಪೀಡುಸುವರು ।।೬೦೫।। ಆದರೆ ನನ್ನ ಭಕ್ತರ ಸ್ಥಿತಿ ಹೀಗಿರುವುದಿಲ್ಲ. ನನ್ನ ಅನನ್ಯ ಭಜನೆ ಮಾಡಲು ನಾಲ್ಕೂ ಪುರುಷಾರ್ಥಗಳು ಆತನಿಗೆ ಶರಣಾಗುವುವು ಹಾಗೂ ದೇವತೆಗಳೂ ಕೂಡ ಆತನ ಕಾಲಿಗೆ ಬೀಳುವರು ।।೬೦೬।। ಉದ್ಧವಾ, ಯಾರು ನನಗೆ ನಿಜವಾಗಿಯೂ ಅನನ್ಯಭಾವದಿಂದ ಶರಣಾಗುವರೋ, ಅವರ ಧರ್ಮ ಹಾಗೂ ಅರ್ಥ ನಾನೇ ಆಗುವೆನು. ಅವರ ಕಾಮವನ್ನೂ ಸಹ ನಾನೇ ಆಗುವೆನು. ಅವರ ಸಂಪೂರ್ಣ ಮೋಕ್ಷವೂ ಕೂಡ ನಾನೇ ಆಗುವೆನು ।।೬೦೭।। ಹೇ ಉದ್ಧವಾ, ಅಭಕ್ತರ ಪುಣ್ಯವು ಮುಗಿಯಿತೆಂದರೆ ಅವರು ಜನ್ಮಮರಣದ ಚಕ್ರದಲ್ಲಿ ತಿರುಗಲಾರಂಭಿಸುವರು. ಆದರೆ ನನ್ನ ಭಕ್ತರು ಭೋಗಗಳನ್ನು ಭೋಗಿಸುತ್ತಲೇ ನಿತ್ಯಮುಕ್ತರಾಗಿರುವರು. ಇಷ್ಟೊಂದು ನನ್ನ ಭಕ್ತಿಯ ಯೋಗ್ಯತೆ ಇರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ।।೬೦೮।। ಹೀಗೆ ದೇವರ ಪ್ರೇಮಮಯ ಮಾತುಗಳನ್ನು ಕೇಳಿ ಉದ್ಧವನ ಪ್ರೇಮವು ಉಕ್ಕೇರಿತು. ಆ ಪ್ರೇಮಕ್ಕೆ ಶ್ರೀಕೃಷ್ಣನೂ ಸಹ ಲುಬ್ಧನಾದನು. ನಂತರ ಹರ್ಷದಿಂದ ಹೇಳಲಾರಂಭಿಸಿದನು ।।೬೦೯।। ಹೇ ಉದ್ಧವಾ, ಪ್ರತ್ಯಕ್ಷ ಭಗವಂತನಾಗಿರುವ ನಾನೇ ನಿನ್ನ ನಾಲ್ಕೂ ಪುರುಷಾರ್ಥನಾಗಿರುವೆನು. ಹೀಗೆ ಹೇಳುತ್ತ ಶ್ರೀಕೃಷ್ಣನು ಪರಮ ಸಂತೋಷದಿಂದ ಉದ್ಧವನಿಗೆ ಹೃದಯಕ್ಕೆ ಒಡಿದು ಆಲಿಂಗನ ಕೊಟ್ಟನು ।।೬೧೦।। ಈ ಪ್ರಕಾರವಾಗಿ ಪರಮಹರ್ಷದಿಂದ ಆಲಿಂಗನ ಕೊಡುತ್ತಲೇ ಕೃಷ್ಣನು ತನ್ನ ಕೃಷ್ಣತ್ವ ಮರೆತನು. ಅದೇ ರೀತಿಯಾಗಿ ಉದ್ಧವನು ಸ್ವಾನಂದದಲ್ಲಿ ನಿಮಗ್ನನಾಗಿ ತಾನೂ ಕೂಡ ಉದ್ಧವತ್ವ ಮರೆತನು ।।೬೧೧।। ಅವರ ಆಲಿಂಗನದ ಪ್ರಭಾವ ಎಂತಹದ್ದು ಎಂದರೆ ಅವರಿಬ್ಬರ ದ್ವೈತವಿಲ್ಲದಾಯಿತು. ಅವರು ಸ್ವತಃ ಸ್ವಾನಂದಪೂರ್ಣ ಬ್ರಹ್ಮರೂಪರಾದರು ।।೬೧೨।।

ತೇಥ ವಿರೋನಿ ಗೇಲಾ ಹೇತು । ವೇದೇಸಹಿತ ಬುಡಾಲೀ ಮಾತು । ಏಕವಟಲಾ ದೇವೀ ಭಕ್ತು । ಏಕೀ ಏಕಾಂತು ಏಕತ್ವೇ ।।೬೧೩।। ತೇಥ ಮಾವಳಲೇ ಧರ್ಮಾಧರ್ಮ । ಕ್ರಿಯೇಸಹಿತ ಉಡಾಲೇ ಕರ್ಮ । ಭ್ರಮ ಆಣಿ ನಿಭ್ರಮ । ಯಾ ದೋಂಹೀಚೇ ನಾಮ ಅಸೇನಾ ।।೬೧೪।। ಭೇದ ಘೇಊನಿ ಗೇಲಾ ಅಭೇದಾ । ಬೋಧ ಘೇಊನಿ ಗೇಲಾ ನಿಜಬೋಧಾ । ಆನಂದ ಲಾಜಲಾ ಆನಂದಾ । ಐಶಿಯಾ ನಿಜಪದಾ ಉದ್ಧವ ಪಾವೇ ।।೬೧೫।। ಮೀ ಜಾಹಲೋ ಪರಬ್ರಹ್ಮ । ಹಾಹೀ ಮುಖ್ಯತ್ವೇ ಜೇಥ ಭ್ರಮ । ಕೃಷ್ಣಾಲಿಂಗನಾಚಾ ಹಾ ಧರ್ಮ । ಜಾಹಲಾ ನಿರುಪಮ ನಿಜವಸ್ತು ।।೬೧೬।। ಯಾವರೀ ಕೃಷ್ಣ ಸರ್ವಜ್ಞ । ಸೋಡೋನಿಯಾ ಆಲಿಂಗನ । ಐಕ್ಯಬೋಧೇ ಉದ್ಧವಾಸೀ ಜಾಣ । ನಿಜಭಕ್ತಪಣ ಪ್ರಬೋಧೀ ।।೬೧೭।। ತೆವ್ಹಾ ಉದ್ಧವ ಚಮತ್ಕಾರಲಾ । ಅತಿಶಯೇ ಚಾಕಾಟಲಾ । ಪರಮ ವಿಸ್ಮಯೇ ದಾಟಲಾ । ತಟಸ್ಥ ಠೇಲಾ ತೇ ಕಾಳೀ ।।೬೧೮।। ಮಗ ಮ್ಹಣೇ ಹೇ ನಿಜಾತ್ಮತಾ । ಸ್ವತಃಸಿದ್ಧ ಜವಳೀ ಅಸತಾ । ಜನಾಸೀ ನ ಕಳೇ ಸರ್ವಥಾ । ಸಾಧಕಾಂಚ್ಯಾ ಹಾತಾ ಚಢೇ ಕೇವೀ ।।೬೧೯।। ತೇ ಉದ್ಧವಾಚೇ ಮನೋಗತ । ಜಾಣೋನಿಯಾ ಶ್ರೀಕೃಷ್ಣನಾಥ । ತದರ್ಥೀಚಾ ಸುನಿಶ್ಚಿತ । ಅಸೇ ಸಾಂಗತ ಉಪಾಯ ।।೬೨೦।।

ಮರ್ತ್ಯೋಯದಾ ತ್ಯಕ್ತ ಸಮಸ್ತಕರ್ಮಾ ನಿವೇದಿತಾತ್ಮಾ ವಿಚಿಕೀರ್ಷಿತೋ ಮೇ ।
ತದಾಮೃತತ್ವಂ ಪ್ರತಿಪದ್ಯಮಾನೋ ಮಯಾತ್ಮಭೂಯಾಯ ಚ ಕಲ್ಪತೇ ವೈ ।।೩೪।।

ಅರ್ಥ:- ಯಾವ ಕಾಲಕ್ಕೆ ಮಾನವನು ಸರ್ವ ಕರ್ಮಗಳ ಪರಿತ್ಯಾಗ ಮಾಡಿ ನನಗೆ ಆತ್ಮಸಮರ್ಪಣೆ ಮಾಡುವನೋ, ಆಗ ಆತನು ನನ್ನ ವಿಶೇಷ ಪ್ರಿಯನಾಗುವನು ಮತ್ತು ನಾನು ಆತನಿಗೆ ಜೀವಭಾವದಿಂದ ಬಿಡಿಸಿ ಅಮೃತರೂಪ ಮೋಕ್ಷದ ಪ್ರಾಪ್ತಿ ಮಾಡಿಕೊಡುವೆನು. ಆತನು ನನ್ನಲ್ಲಿ ಐಕ್ಯರೂಪನಾಗಿ ನನ್ನ ಸ್ವರೂಪನಾಗುವನು.

ಜೇ ಬೋಲಿಲೀ ಧರ್ಮಾರ್ಥಕಾಮ ಮೋಕ್ಷಾರ್ಥ । ತೇ ಸಾಧನೇ ಸಾಂಡೂನಿ ಸಮಸ್ತ । ಜೇ ಅನನ್ಯಭಾವೇ ಮಜ ಭಜತ । ವಿಶ್ವಾಸಯುಕ್ತ ನಿಜಭಾವೇ ।।೬೨೧।। ತ್ಯಾಂಸೀ ಹೇ ಸ್ವರೂಪಸ್ಥಿತೀ । ಜೇ ತ್ವಾಂ ಭೋಗಿಲೀ ಆತ್ಮಪ್ರತೀತೀ । ತೇ ತತ್ಕಾಳ ಹೋಯ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ।।೬೨೨।। ಧರ್ಮಾರ್ಥಕಾಮವಾಸನಾ । ಅಸೋನಿ ಲಾಗಲ್ಯಾ ಮದ್ಭಜನಾ । ತರೀ ತೇಹೀ ಪುರವೂನಿಯಾ ಜಾಣಾ । ಸಾಯುಜ್ಯಸದನಾ ಮೀ ಆಣೀ ।।೬೨೩।। ಭಕ್ತಾಂಸೀ ಸ್ವಧರ್ಮಕರ್ಮಾವಸ್ಥಾ । ತೇಹೀ ಲಾವಿಲ್ಯಾ ಭಜನಪಂಥಾ । ಸ್ವಧರ್ಮಕರ್ಮೀ ಅಕರ್ಮಾತ್ಮತಾ । ಮಾಝಿಯಾ ನಿಜಭಕ್ತಾ ಉದ್ಬೋಧೀ ಮೀ ।।೬೨೪।। ಭಕ್ತ ವಾಂಛೀ ಭೋಗಕಾಮ । ಭೋಗ ಭೋಗೋನಿ ಹೋಯ ನಿಷ್ಕಾಮ । ಐಶಿಯಾ ನಿಜ ಬೋಧಾಚೇ ವರ್ಮ । ಮೀ ಆತ್ಮಾರಾಮ ಉದ್‌ಬೋಧೀ ।।೬೨೫।।

ಅಲ್ಲಿ ಹೇತು ಕರಗಿತು. ವೇದಸಹಿತ ಸರ್ವ ಮಾತುಗಳು ಕುಂಠಿತವಾದವು. ದೇವನಲ್ಲಿ ಭಕ್ತನು ಒಂದಾದನು. ಅವರಿಬ್ಬರೂ ಏಕತ್ವದಿಂದ ಏಕರೂಪರಾದರು ।।೬೧೩।। ಆಗ ಸರ್ವ ಧರ್ಮಾಧರ್ಮಗಳು ಮುಳುಗಿದವು. ಕ್ರಿಯಾ ಸಹಿತ ಕರ್ಮಗಳು ಇಲ್ಲದಾದವು. ಭ್ರಮೆ ಮತ್ತು ನಿಭ್ರಮೆ ಈ ಎರಡರ ಹೆಸರೇ ಉಳಿಯಲಿಲ್ಲ ।।೬೧೪।। ಭೇದವು ಅಭೇದದೊಂದಿಗೆ ಹೊರಟು ಹೋಯಿತು. ಬೋಧೆಯು ಆತ್ಮಬೋಧೆಯನ್ನು ತೆಗೆದುಕೊಂಡು ಹೋಯಿತು. ಆನಂದವು ಈ ಆನಂದಕಂಡು ನಾಚಿಕೆ ಪಟ್ಟಿತು. ಇಂತಹ ಆತ್ಮಸ್ಥಿತಿಗೆ ಉದ್ಧವನು ಮುಟ್ಟಿಕೊಂಡನು ।।೬೧೫।। ''ನಾನು ಪರಬ್ರಹ್ಮರೂಪನಾದೆನು'' ಇದೂ ಕೂಡ ಮುಖ್ಯವಾಗಿ ಭ್ರಮೆಯೇ ಆಗಿದೆ. ಶ್ರೀಕೃಷ್ಣನ ಅಲೌಕಿಕ ಆಲಿಂಗನದ ಮಹಿಮೆಯಿಂದ ಉದ್ಧವನು ತತ್ಕಾಲದಲ್ಲಿ ನಿರೂಪಮ ಬ್ರಹ್ಮರೂಪನಾದನು ।।೬೧೬।। ಆಗ ಸರ್ವಜ್ಞ ಶ್ರೀಕೃಷ್ಣನು ಆಲಿಂಗನ ಬಿಟ್ಟುಕೊಟ್ಟು ಐಕ್ಯಬೋಧೆಯೊಂದಿಗೆ ಉದ್ಧವನಿಗೆ ಆತನ ಭಕ್ತತ್ವದ ಅರಿವು ಮಾಡಿಕೊಟ್ಟನು ।।೬೧೭।। ಆಗ ಉದ್ಧವನಿಗೆ ಮಹದಾಶ್ಚರ್ಯವಾಯಿತು. ವಿಸ್ಮಯಚಕಿತನಾಗಿಬಿಟ್ಟನು.ಕ್ಷಣಕಾಲ ಸ್ತಬ್ಧನಾದನು. ಕೊನೆಗೆ ಮೌನನಾಗಿ ಕುಳಿತುಬಿಟ್ಟನು ।।೬೧೮।। ಉದ್ಧವನು ಮನದಲ್ಲಿ ಹೀಗೆ ವಿಚಾರಿಸಿದನು ; ಈ ಆತ್ಮಸ್ವರೂಪವು ಸ್ವತಃಸಿದ್ಧ ತನ್ನಲ್ಲಿಯೇ ಇರುತ್ತಿರಲು ಜನರಿಗೆ ತಿಳಿಯುವುದಿಲ್ಲ. ಅಂದಮೇಲೆ ಇದು ಸಾಧಕರಿಗೆ ಹೇಗೆ ಪ್ರಾಪ್ತವಾಗಬೇಕು? ।।೬೧೯।। ಉದ್ಧವನ ಈ ಮನೋಗತವನ್ನು ಅರಿತುಕೊಂಡು ಶ್ರೀಕೃಷ್ಣನು ಆತ್ಮಸ್ವರೂಪ ಪ್ರತೀತಿಯ ನಿಜವಾದ ಮತ್ತು ನಿಶ್ಚಿತ ಉಪಾಯ ಹೇಳುತ್ತಿರುವನು ।।೬೨೦।।

ಹೇ ಉದ್ಧವಾ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳಿಗಾಗಿ ಹೇಳಿರುವ ಸರ್ವ ಸಾಧನೆಗಳನ್ನು ಬಿಟ್ಟುಕೊಟ್ಟು ನನಗೆ ಅನನ್ಯಭಾವದಿಂದ, ವಿಶ್ವಾಸಯುಕ್ತನಾಗಿ ಹಾಗೂ ಭಕ್ತಿಯಿಂದ ಯಾವನು ಶರಣಾಗುವನೋ ।।೬೨೧।। ಆತನಿಗೆ ಈಗ ನೀನು ಅನುಭವಿಸಿರುವ ಆತ್ಮಸ್ವರೂಪಸ್ಥಿತಿಯು ತತ್ಕಾಲದಲ್ಲಿ ಬರುವುದು ಮತ್ತು ಬ್ರಹ್ಮಸ್ವರೂಪದ ಪ್ರಾಪ್ತಿಯಾಗುವುದು. ಇದನ್ನು ನೀನು ನಿಶ್ಚಿತವಾಗಿ ತಿಳಿ ।।೬೨೨।। ಧರ್ಮ, ಅರ್ಥ, ಕಾಮ ಇವುಗಳ ವಾಸನೆ ಇದ್ದೂ ಕೂಡ ನನ್ನ ಭಕ್ತಿಯನ್ನು ಮಾಡಲು ಅವರ ಇಚ್ಛೆ ಪೂರ್ಣಮಾಡಿ ಅವರಿಗೆ ಸಾಯುಜ್ಯ ಪದವಿ ಪ್ರಾಪ್ತ ಮಾಡಿಕೊಡುವೆನು ।।೬೨೩।। ಭಕ್ತರಿಗೆ ಸ್ವಧರ್ಮಕರ್ಮದ ಪ್ರೀತಿ ಇದ್ದು ಆ ಕರ್ಮಗಳನ್ನು ನನ್ನ ಭಜನೆ ಮಾರ್ಗಕ್ಕೆ ಹಚ್ಚಿದರೆ ಆ ಸ್ವಧರ್ಮದಲ್ಲಿ ಅಕರ್ಮತೆ ಹೇಗಿರುವುದು ಎಂಬುವ ಉಪದೇಶವನ್ನು ನಾನು ನನ್ನ ಭಕ್ತರಿಗೆ ಮಾಡುತ್ತಿರುವೆನು ।।೬೨೪।। ಅಥವಾ ಒಬ್ಬ ಭಕ್ತನು ಸುಖೋಪಭೋಗದ ಇಚ್ಛೆ ಮಾಡುತ್ತಿದ್ದರೆ ಆಗ ಆತನಿಗೆ ಸುಖದ ಭೋಗ ಭೋಗಿಸುತ್ತಿರಲು ನಿಷ್ಕಾಮ ಕರ್ಮ ಹೇಗೆ ಇರಬೇಕೆಂಬುವ ಜ್ಞಾನಕರ್ಮವನ್ನೂ ಕೂಡ ಆತ್ಮಾರಾಮನಾದ ನಾನು ಆತನಿಗೆ ತಿಳಿಸುವೆನು ।।೬೨೫।।

ಭಕ್ತ ಮಾಗೇ ಅರ್ಥಸಂಪನ್ನತಾ । ತ್ಯಾಚೇ ಗಾಂಠೀ ಧನ ನಸತಾ । ಮಾಝೀ ಷಡ್‌ಗುಣೈಶ್ವರ್ಯಸಮರ್ಥತಾ । ವೋಳಂಗೇ ತತ್ತ್ವತಾ ತ್ಯಾಪಾಶೀ ॥೬೨೬॥ ಸರ್ವ ಭೂತೀ ಮಾಝೀ ಭಕ್ತೀ । ಭಕ್ತ ಭಜೇ ಅನನ್ಯಪ್ರೀತೀ । ತ್ಯೈ ಚಾರೀ ಮುಕ್ತೀ ಶರಣ ಯೇತೀ । ಮದ್ಭಕ್ತಾ ಮುಕ್ತಿ ಸ್ವತಃಸಿದ್ಧ ॥೬೨೭॥ ವೈದ್ಯ ಧಡಪುಡಾ ಪಂಚಾನನ । ನಾನಾ ರೋಗಿಯಾಂಚೀ ವಾಸನಾ ಪೋಖೂನ । ಮಾಗೇ ತೇ ತೇ ದೇಊನಿ ಅನ್ನ । ವಾಂಚವೀ ರಸಜ್ಞ ರಸಪ್ರಯೋಗೇ ॥೬೨೮॥ ತೇವೀ ಧರ್ಮಅರ್ಥಕಾಮವಾಸನಾ । ಭಕ್ತಾಂಚ್ಯಾ ಪೋಖೂನಿಯಾ ಜಾಣಾ । ಮೀ ಆಣೀ ಸಾಯುಜ್ಯಸದನಾ । ತೇಹೀ ವಿವಂಚನಾ ಸಾಂಗೀತಲೀ ॥೬೨೯॥ ನಾನಾ ಸಾಧನಾಭಿಮಾನ । ಸಾಂಡೂನಿಯಾ ಜೋ ಯೇ ಮಜ ಶರಣ। ತ್ಯಾಸೀಹೀ ಸ್ವರೂಪಪ್ರಾಪ್ತಿ ಪೂರ್ಣ । ಉದ್ಧವಾ ಜಾಣ ಸುನಿಶ್ಚಿತ ॥೬೩೦॥ ಭಕ್ತ ಸಕಾಮ ಜರೀ ಚಿತ್ತೀ । ತೋ ಜೈ ಕರೀ ಅನನ್ಯಭಕ್ತೀ । ತ್ಯೈ ಕಾಮ ಪುರವೂನಿ ಮೀ ದೇ ಮುಕ್ತೀ । ಭಕ್ತಾ ಅಧೋಗತೀ ಕದಾ ನ ಘಡೇ ॥೬೩೧॥ ಬಾಳಕೇ ಧಾಯಾ ಘೇಊನಿ ಕಾಂಹೀ । ಮಿಠೀ ಘಾತಲ್ಯಾ ಮಾತೇಚ್ಯಾ ಪಾಯೀ । ಧನ ವೇಂಚೋನಿ ಅರ್ಪೀ ತೇಹೀ । ಪರೀ ಜೀವೇ ಕಾಂಹೀ ಮಾರೀನಾ ॥೬೩೨॥ ತೇವೀ ಮಾಝೀ ಕರಿತಾ ಅನನ್ಯಭಕ್ತೀ । ಜೋ ಜೋ ಕಾಮ ಭಕ್ತ ವಾಂಛೀ ಚಿತ್ತೀ । ತೋ ತೋ ಪುರವೂನಿ ಮೀ ದೇ ಮುಕ್ತೀ । ಪರೀ ಅಧೋಗತೀ ಜಾವೋ ನೇದೀ ॥೬೩೩॥ ದೇಖೋನಿ ಬಾಳಕಾಂಚೀ ವ್ಯಥಾ । ಜೇವೀ ಸರ್ವಸ್ವೇ ಕಳವಳೀ ಮಾತಾ । ತೇವೀ ನಿಜಭಕ್ತಾಂಚೀ ಅವಸ್ಥಾ । ಮಜಹೀ ಸರ್ವಥಾ ಸಹಾವೇನಾ ॥೬೩೪॥ ಕಾಮ ಪುರವೂನಿ ದ್ಯಾವಯಾ ಮುಕ್ತೀ । ಕಾಯ ಮಾಝೀ ಗಾಂಠೀ ಶಕ್ತೀ । ಮೀ ಭಕ್ತಕೈವಾರೀ ಶ್ರೀಪತೀ । ತ್ಯಾಸೀ ಅಧೋಗತೀ ಕದಾ ನ ಘಡೇ ॥೬೩೫॥ ಮಾಝೇ ನಾಮ ಅವಚಟೇ ಆಲ್ಯಾ ಅಂತೀ । ರಂಕ ಲಾಹೇ ಸಾಯುಜ್ಯ ಮುಕ್ತೀ । ಮಾ ಮಾಝೀ ಕರಿತಾ ಅನನ್ಯಭಕ್ತೀ । ಭಕ್ತಾ ಅವಗತೀ ಮಗ ಕೈಚೀ ॥೬೩೬॥ ಮಾಝಾ ಭಕ್ತ ಜಯಾಕಡೇ ಕೃಪೇ ಪಾಹೇ । ತೋಹೀ ಮಾಝೀ ಭಕ್ತೀ ಲಾಹೇ । ಮಾ ಮದ್ಭಕ್ತಾ ಅವಗತೀ ಹೋಯೇ । ಹಾ ಬೋಲ ನ ಸಾಹೇ ಮಜಲಾಗೀ ॥೬೩೭॥ ಸೋಸೂನಿಯಾ ಗರ್ಭವಾಸಾಸೀ । ಮ್ಯಾ ಮುಕ್ತ ಕೇಲಾ ಅಂಬರ್ಷೀ । ವಿದಾರೂನೀ ಹಿರಣ್ಯಕಶಿಪೂಸೀ । ಪ್ರಹ್ಲಾದಾಸೀ ರಕ್ಷಿಲೇ ॥೬೩೮॥

ಯಾವನೋ ಒಬ್ಬ ಭಕ್ತನು ಬಡವನಾಗಿದ್ದ ಕಾರಣ ಆತನು ಒಂದುವೇಳೆ ವಿಪುಲ ಐಶ್ವರ್ಯ ಬೇಡಿದರೆ ಆಗ ನಾನು ನನ್ನ ಷಡ್‌ಗುಣಐಶ್ವರ್ಯವನ್ನೇ ಆತನಿಗೆ ಅರ್ಪಿಸುವೆನು ॥೬೨೬॥ ಭಕ್ತನು ಸರ್ವ ಭೂತಗಳಲ್ಲಿ ಭಗವದ್ಭಾವನೆಯಿಂದ ಕಾಣುತ್ತಿರಲು ಮತ್ತು ಅನನ್ಯ ಪ್ರೇಮದಿಂದ ನನ್ನ ಭಜನೆ ಮಾಡುತ್ತಿದ್ದರೆ ಆಗ ಆತನಿಗೆ ನಾಲ್ಕೂ ಮುಕ್ತಿಗಳು ಶರಣು ಬರುವುವು. ಕಾರಣ ನನ್ನ ಭಕ್ತರಿಗೆ ಮುಕ್ತಿಯು ಸ್ವತಃ ಸಿದ್ಧವಾಗಿರುವುದು ॥೬೨೭॥ ವೈದ್ಯರು ತನ್ನ ವೈದ್ಯಕೀಯ ಕಲೆಯಲ್ಲಿ ಪ್ರವೀಣನಾಗಿದ್ದರೆ ಆತನು ರೋಗಿಗೆ ಆತನ ಇಚ್ಛೆ ಪೂರ್ಣಗೊಳಿಸುತ್ತ ಕೇಳಿದ ಪದಾರ್ಥ ತಿನ್ನಲು ಕೊಡುತ್ತ, ತನ್ನ ಚಾತುರ್ಯದಿಂದ ಔಷಧದ ಅದ್ಭುತ ಪ್ರಭಾವದಿಂದ ರೋಗಿಯನ್ನು ಬದುಕಿಸುವನು ॥೬೨೮॥ ಅದೇ ಪ್ರಕಾರವಾಗಿ ಭಕ್ತನ ಧರ್ಮ, ಅರ್ಥ, ಕಾಮ ಈ ವಾಸನೆಗಳನ್ನು ಪೂರ್ಣಗೊಳಿಸಿ ಭಕ್ತನಿಗೆ ನಾನು ಸಾಯುಜ್ಯತೆ ಪ್ರಾಪ್ತ ಮಾಡಿಕೊಡುವೆನು. ಈ ವಿಚಾರವನ್ನೂ ಕೂಡ ನಾನು ನಿನಗೆ ತಿಳಿಸುತ್ತಿರುವೆನು ॥೬೨೯॥ ಹೇ ಉದ್ಧವಾ, ನಾನಾ ಪ್ರಕಾರದ ಸಾಧನೆಗಳ ಅಭಿಮಾನ ಬಿಟ್ಟುಕೊಟ್ಟು ಯಾವನು ನನಗೆ ಅನನ್ಯಭಾವದಿಂದ ಶರಣು ಬರುವನೋ, ಆತನಿಗೆ ಬ್ರಹ್ಮ ಪ್ರಾಪ್ತಿಯಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೬೩೦॥ ಭಕ್ತನು ಮನದಲ್ಲಿ ಸಕಾಮನಾಗಿದ್ದು ಆತನು ಅನನ್ಯ ಭಕ್ತಿಯನ್ನು ಮಾಡಿದರೆ ಆಗ ಆತನ ಮನದಲ್ಲಿನ ಇಚ್ಛೆಯನ್ನು ಪೂರ್ಣಗೊಳಿಸಿ ನಾನು ಆತನಿಗೆ ಮುಕ್ತಿ ಕೊಡುವೆನು. ನನ್ನ ಭಕ್ತನ ಪತನವು ಎಂದಿಗೂ ಆಗುವುದಿಲ್ಲ ॥೬೩೧॥ ಚಿಕ್ಕ ಬಾಲಕನು ಹಠ ಹಿಡಿದು ತಾಯಿಯ ಕಾಲುಗಳನ್ನು ಗಟ್ಟಿಯಾಗಿ ಹಿಡಿಯಲು ಆಗ ಅವನ ತಾಯಿಯು ತನ್ನಲ್ಲಿಯ ಹಣವನ್ನು ಖರ್ಚಿಸಿ ಕೇಳಿದ ಪದಾರ್ಥ ತಂದುಕೊಡುವಳು. ಅವನ ಜೀವಕ್ಕೆ ದುಃಖ ಕೊಡಲಾರಳು ॥೬೩೨॥ ಅದರಂತೆ ಭಕ್ತನು ನನ್ನ ಅನನ್ಯ ಭಕ್ತಿ ಮಾಡುತ್ತಿರಲು ಮನದಲ್ಲಿ ಯಾವ ಯಾವ ಇಚ್ಛೆಯನ್ನು ಧರಿಸುವನೋ, ಆ ಎಲ್ಲ ಇಚ್ಛೆಗಳನ್ನು ಪೂರ್ಣಗೊಳಿಸಿ ನಾನು ಆತನಿಗೆ ಮುಕ್ತಿ ಕೊಡುವೆನು. ಆತನ ಅಧಃಪಾತ ಎಂದಿಗೂ ಆಗಗೊಡುವುದಿಲ್ಲ ॥೬೩೩॥ ಬಾಲಕನ ದುಃಖ ಕಂಡ ತಾಯಿಗೆ ಹೇಗೆ ತಳಮಳ ಉಂಟಾಗುವುದೋ, ಅದರಂತೆಯೇ ನನ್ನ ಭಕ್ತನ ದುಃಖವು ನನಗೂ ಕೂಡ ಸಹಿಸುವುದಾಗುವುದಿಲ್ಲ ॥೬೩೪॥ ಭಕ್ತನ ಇಚ್ಛೆಯನ್ನು ಪೂರ್ಣಗೊಳಿಸಿ ಆತನಿಗೆ ಮುಕ್ತಿ ಕೊಡುವ ಸಾಮರ್ಥ್ಯವು ನನ್ನಲ್ಲಿಲ್ಲವೇ? ನಾನು ಭಕ್ತನ ಕೈವಾರಿಯಾಗಿರುವೆ. ಆತನಿಗೆ ಎಂದಿಗೂ ಅಧೋಗತಿಯಾಗದು ॥೬೩೫॥ ಮರಣ ಸಮಯದಲ್ಲಿ ಆಕಸ್ಮಾತಾಗಿ ನನ್ನ ನಾಮವು ಮುಖದಲ್ಲಿ ಬಂದರೆ, ಆ ದರಿದ್ರನೂ ಕೂಡ ಮುಕ್ತಿ ಪಡೆಯುವನು. ಅಂದಮೇಲೆ ನನ್ನ ಭಕ್ತಿ ಮಾಡುವವರು ಅಧೋಗತಿಗೆ ಹೇಗೆ ತಾನೇ ಹೋಗಬಹುದು? ॥೬೩೬॥ ನನ್ನ ಭಕ್ತನು ಯಾರಿಗೆ ಕೃಪಾದೃಷ್ಟಿಯಿಂದ ನೋಡುವನೋ, ಆತನಿಗೂ ಕೂಡ ನನ್ನ ಭಕ್ತಿ ಪ್ರಾಪ್ತವಾಗುವುದು. ಹೀಗಿದ್ದ ಮೇಲೆ ನನ್ನ ಭಕ್ತನಿಗೆ ಅಧೋಗತಿ ಯಾದೀತೆಂಬ ಈ ಶಬ್ದವೂ ಕೂಡ ನನಗೆ ಸಹಿಸುವುದಾಗುವುದಿಲ್ಲ ॥೬೩೭॥ ನಾನು ಸ್ವತಃ ಗರ್ಭವಾಸ ಸೋಸಿ ಭಕ್ತ ಅಂಬರೀಷನಿಗೆ ಮುಕ್ತನನ್ನಾಗಿ ಮಾಡಿದೆ. ಹಿರಣ್ಯಕಶ್ಯಪುವಿನ ಹೊಟ್ಟೆ ಹರಿದು ಕೊಂದು ಪ್ರಹ್ಲಾದನ ಅನೇಕ ಸಂಕಟಗಳಿಂದ ರಕ್ಷಿಸಿದೆ ॥೬೩೮॥

ಚಕ್ರ ಘೇಊನಿಯಾ ಹಾತೀ । ಮ್ಯಾ ಗರ್ಭೀ ರಕ್ಷಿಲಾ ಪರೀಕ್ಷಿತೀ । ತೋ ಮೀ ಭಕ್ತಾಂಸೀ ಅಧೋಗತೀ । ಕದಾ ಕಲ್ಪಾಂತೀ ಹೋಊ ನೇದೀ ॥೬೩೯॥ ಮಾಝಿಯೇ ಭಕ್ತಾಚೇನಿ ನಾಂವೇ । ತೃಣ ತೇಹೀ ಮ್ಯಾ ಉದ್ಧರಾವೇ । ಭಕ್ತಾ ಕೇವೀ ಅವಗತೀ ಪಾವೇ । ಜೇ ಜೀವೇಭಾವೇ ಮಜ ಭಜಲೇ ॥೬೪೦॥ ಕಾಯಾ ವಾಚಾ ಮನ ಧನ । ಅವಂಚೂನಿ ಅನನ್ಯಶರಣ । ತ್ಯಾಂಚಾ ಯೋಗಕ್ಷೇಮ ಜಾಣ । ಮೀ ಶ್ರೀಕೃಷ್ಣ ಸ್ವಯೇ ಸೋಶೀ ॥೬೪೧॥ ಐಸಾ ಅನನ್ಯಭಕ್ತೀಚಾ ಮಹಿಮಾ । ಸಾಂಗತಾ ಉತ್ಸಾಹ ಪುರುಷೋತ್ತಮಾ । ತೇಣೇ ಉದ್ಧವಾಸೀ ಲೋಟಲಾ ಪ್ರೇಮಾ । ಸ್ವೇದ ರೋಮಾ ರವರವಿತ ॥೬೪೨॥ ಐಕೋನಿ ಭಕ್ತೀಚೇ ಮಹಿಮಾನ । ದೇಖೋನಿ ಉದ್ಧವಾಚೇ ಪ್ರೇಮಪೂರ್ಣ । ಶ್ರೀಶುಕ ಸುಖಾವಲಾ ಆಪಣ । ಸ್ವಾನಂದಪೂರ್ಣ ಡೋಲತ ॥೬೪೩॥ ಹರಿಖೇ ಮ್ಹಣೇ ಪರೀಕ್ಷಿತೀ । ಧನ್ಯ ಹರಿಭಕ್ತ ತ್ರಿಜಗತೀ । ಜ್ಯಾಂಸೀ ಸರ್ವಾರ್ಥೀ ಮುಕ್ತೀ । ಸ್ವಮುಖೇ ಶ್ರೀಪತೀ ಬೋಲಿಲಾ ॥೬೪೪॥ ಜೈಸೇ ಭಕ್ತೀಚೇ ಮಹಿಮಾನ । ತೈಸೇಚಿ ಉದ್ಧವಾಚೇ ಪ್ರೇಮ ಗಹನ । ಹೇ ಉದ್ಧವಾಚೇ ಪ್ರೇಮಲಕ್ಷಣ । ಶ್ರೀಶುಕ ಆಪಣ ಸಾಂಗತ ॥೬೪೫॥

ಶ್ರೀಶುಕ ಉವಾಚ :-

ಸ ಏವಮಾದರ್ಶಿತಯೋಗಮಾರ್ಗಸ್ತದೋತ್ತಮಃ ಶ್ಲೋಕವಚೋ ನಿಶಮ್ಯ ।
ಬದ್ಧಾಂಜಲಿಃ ಪ್ರೀತ್ಯುಪರುದ್ಧಕಂಠೋ ನ ಕಿಂಚಿದೂಚೇಽಶ್ರುಪರಿಪ್ಲುತಾಕ್ಷಃ ॥೩೫॥
ವಿಷ್ಟಭ್ಯ ಚಿತ್ತಂ ಪ್ರಣಯಾವಘೂರ್ಣಂ ಧೈರ್ಯೇಣ ರಾಜನ್ ಬಹುಮನ್ಯಮಾನಃ ।
ಕೃತಾಂಜಲಿಃ ಪ್ರಾಹ ಯದುಪ್ರವೀರಂ ಶಿರ್ಷ್ಣಾ ಸ್ಪೃಶಂಸ್ತಚ್ಚರಣಾರವಿಂದಮ್ ॥೩೬॥

ಅರ್ಥ:- ಶ್ರೀಶುಕದೇವ ಹೇಳಿದರು ; ಹೇ ಪರೀಕ್ಷಿತರನೇ, ಈಗ ಯೋಗ ಮಾರ್ಗದ ಪೂರ್ಣ ಉಪದೇಶ ಉದ್ಧವನು ಪ್ರಾಪ್ತಮಾಡಿಕೊಂಡಿದ್ದನು. ಭಗವಾನ ಶ್ರೀಕೃಷ್ಣನ ವಿಚಾರ ಕೇಳಿ ಆತನ ನೇತ್ರಗಳಲ್ಲಿ ಅಶ್ರೂ ಬಂದವು. ಪ್ರೇಮದಿಂದ ಆತನ ಕಂಠವು ಬಿಗಿಯಿತು. ಆತನ ಕೈಗಳು ಜೋಡಿಸಲ್ಪಟ್ಟವು. ಮುಖದಿಂದ ಆತನು ಏನನ್ನೂ ಹೇಳಲಾರನಾದನು. ಆತನ ಚಿತ್ತವು ಪ್ರೇಮಭಾವದಿಂದ ತುಂಬಿಕೊಂಡಿತು. ಧೈರ್ಯದಿಂದ ಆತನು ಅದನ್ನು ತಡೆ ಹಿಡಿದು ತನಗೆ ಅತ್ಯಂತ ಸೌಭಾಗ್ಯಶಾಲೀ ಅನುಭವ ಮಾಡಿಕೊಟ್ಟ ಯದುವಂಶ ಶಿರೋಮಣಿ ಭಗವಾನ ಶ್ರೀಕೃಷ್ಣನ ಚರಣ ಕಮಲಗಳಿಗೆ ಸ್ಪರ್ಶ ಮಾಡಿ, ಕೈ ಜೋಡಿಸಿ ಆತನಿಗೆ ಪ್ರಾರ್ಥನೆ ಮಾಡಿದನು.

ಜೋ ಜ್ಞಾನಿಯಾಂಚಾ ಜ್ಞಾನನಿಧೀ । ಜೋ ನಿಜಬೋಧಾಚಾ ಉದಧೀ । ಜೋ ಆನಂದಾಚಾ ಕ್ಷೀರಾಬ್ಧೀ । ತೋ ಶ್ರೀಶುಕ ಸ್ವಾನಂದೀ ತೋಷಲಾ ಬೋಲೇ ॥೬೪೬॥ ಐಕ ಬಾಪಾ ಪರೀಕ್ಷಿತೀ । ಶ್ರವಣಸೌಭಾಗ್ಯಚಕ್ರವರ್ತೀ । ಜ್ಯಾತೇ ಸುರ ನರ ಅಸುರ ವಾನಿತೀ । ಜ್ಯಾಚೀ ಕೀಜೇ ಸ್ತುತೀ ಮಹಾಸಿದ್ಧೀ ॥೬೪೭॥ ಜ್ಯಾತೇ ವೇದ ನಿತ್ಯ ಗಾತೀ । ಯೋಗಿವೃಂದೀ ವಾನಿಜೇ ಕೀರ್ತೀ । ತೇಣೇ ಶ್ರೀಕೃಷ್ಣೇ ಸ್ತವಿಲೀ ಭಕ್ತಿ । ಪರಮ ಪ್ರೀತೀ ಅಚುಂಬಿತ ॥೬೪೮॥

ಕೈಯಲ್ಲಿ ಚಕ್ರ ಧರಿಸಿ ಗರ್ಭದಲ್ಲಿನ ಪರೀಕ್ಷಿತಿಯನ್ನು ರಕ್ಷಣೆ ಮಾಡಿದೆ. ಹೀಗಿರುವ ನಾನು ಭಕ್ತರನ್ನು ಕಲ್ಪಾಂತಕ್ಕೂ ಕೂಡ ಅಧೋಗತಿ ಪ್ರಾಪ್ತಮಾಡಿಕೊಡಲಾರೆನು ॥೬೩೯॥ ನನ್ನ ಭಕ್ತಿಗಾಗಿ ನಾನು ತೃಣಕ್ಕೂ ಕೂಡ ಉದ್ಧರಿಸುವೆನು. ಅಂದಮೇಲೆ ಯಾರು ನನ್ನನ್ನು ತಮ್ಮ ಜೀವಭಾವದಿಂದ ಭಜಿಸುವರೋ, ಅಂತಹ ಭಕ್ತರಿಗೆ ಅಧೋಗತಿಯು ಹೇಗೆ ಪ್ರಾಪ್ತವಾಗಲು ಸಾಧ್ಯ? ॥೬೪೦॥ ಕಾಯಾ, ವಾಚಾ, ಮನಸಾ ಹಾಗೂ ಧನದ ಸಹಾಯದೊಂದಿಗೆ ಯಾರು ನನಗೆ ಶರಣು ಬರುವರೋ, ಅವರ ಯೋಗ ಕ್ಷೇಮದ ಭಾರ ನಾನು ಸ್ವತಃ ಹೊರುವೆನು ॥೬೪೧॥ ಹೀಗೆ ಅನನ್ಯ ಭಕ್ತಿಯ ಮಹಿಮೆಯನ್ನು ಹೇಳುತ್ತಿರಲು ಆಗ ಶ್ರೀಕೃಷ್ಣನು ಅತಿಶಯ ಉಲ್ಲಾಸಿತನಾದನು. ಇದನ್ನು ಕಂಡ ಉದ್ಧವನಿಗೆ ಪ್ರೇಮದ ಪೂರವೇ ಉಕ್ಕೇರಿ,ರೋಮಾಂಚನವಾಯಿತು. ಸರ್ವಾಂಗಕ್ಕೆ ಬೆವರು ಹುಟ್ಟಿತು ॥೬೪೨॥ ಭಕ್ತಿಯ ಮಹಿಮೆ ಕೇಳಿ ಉದ್ಧವನಿಗೆ ಆದ ಪೂರ್ಣ ಪ್ರೇಮ ಕಂಡು ಶುಕಾಚಾರ್ಯರಿಗೂ ಸಹ ಅತಿಶಯ ಆನಂದಉಂಟಾಯಿತು. ಅವರು ಆದ ಆನಂದದಿಂದ ತೂಗಾಡಹತ್ತಿದರು ॥೬೪೩॥ ಅತ್ಯಂತ ಹರ್ಷದಿಂದ ಪರೀಕ್ಷಿತೀಗೆ ಹೀಗೆ ಹೇಳಿದರು ; ನಿಜವಾಗಿಯೂ ಈ ತ್ರಿಲೋಕದಲ್ಲಿ ಭಕ್ತರು ಧನ್ಯ ಧನ್ಯರು . ಅವರಿಗೆ ಸರ್ವಾರ್ಥದಿಂದ ಮುಕ್ತಿ ಶತಸಿದ್ಧ ಎಂದು ಶ್ರೀಕೃಷ್ಣನು ತನ್ನಮುಖದಿಂದ ಹೇಳಿದನು ॥೬೪೪॥ ಭಕ್ತಿಯ ಮಹಿಮೆಯು ಹೇಗೆ ಅಗಾಧವಿರುವುದೋ, ಅದರಂತೆಯೇ ಉದ್ಧವನ ಪ್ರೇಮವೂ ಕೂಡ ಅಗಾಧವಾಗಿತ್ತು. ಈ ಉದ್ಧವನ ಪ್ರೇಮದ ಲಕ್ಷಣ ಶುಕಾಚಾರ್ಯರು ತಾವಾಗಿಯೇ ಹೇಳುತ್ತಿರುವರು ॥೬೪೫॥

ಆತನು ಜ್ಞಾನಿಗಳವರಲ್ಲಿ ಜ್ಞಾನನಿಧೀ, ಆತ್ಮಜ್ಞಾನದ ಸಾಗರ, ಆನಂದದ ಕ್ಷೀರಾಬ್ಧಿ ಹೀಗೆಂದು ಶುಕದೇವನು ಸ್ವಾನಂದದಿಂದ ಸಂತುಷ್ಟನಾಗಿ ಹೇಳುತ್ತಿರುವನು ॥೬೪೬॥ ಹೇ ಶ್ರವಣಸೌಭಾಗ್ಯ ಚಕ್ರವರ್ತೀ ಪರೀಕ್ಷಿತೀ ರಾಜನೇ, ಕೇಳು. ದೇವ, ದಾನವ, ಮಾನವರು ಆತನ ವರ್ಣನೆ ಮಾಡುವರು, ಮಹಾಸಿದ್ಧಮುನಿಗಳು ಆತನನ್ನು ಸ್ತುತಿ ಮಾಡುವರು ॥೬೪೭॥ ದೇವತೆಗಳು ಆತನನ್ನು ನಿರಂತರವಾಗಿ ಹಾಡಿಹೊಗಳುತ್ತಿರುವರು, ಯೋಗೀವೃಂದವು ಆತನ ಕೀರ್ತಿಯ ಗುಣಗಾನ ಮಾಡುತ್ತಿರುವರು. ಅಂತಹ ಶ್ರೀಕೃಷ್ಣನು ಪರಮ ಪ್ರೀತಿಯಿಂದ ಅಪೂರ್ವವಾದ ಭಕ್ತಿಯ ಸ್ತುತಿ ಮಾಡಿದನು ॥೬೪೮॥

ಅನನ್ಯಭಕ್ತಿಪರತೇ ಸುಖ । ಆನ ನಾಹೀಂಚ ವಿಶೇಖ । ಸರ್ವ ಸಾರಾಂಚೇ ಸಾರ ದೇಖ । ಮದ್ಭಕ್ತಿ ಚೋಖ ಸುರವರಾದಿಕಾ ॥೬೪೯॥ ಭಕ್ತಿಯೋಗಾಚಾ ಯೋಗಮಾರ್ಗ । ಸಮೂಳ ಸಪ್ರೇಮ ಶುದ್ಧ ಸಾಂಗ । ಸ್ವಮುಖೇ ಬೋಲಿಲಾ ಶ್ರೀರಂಗ । ತೇ ಉದ್ಧವೇ ಚಾಂಗ ಅವಧಾರಿಲೇ ॥೬೫೦॥ ಐಕತಾ ಭಕ್ತೀಚೇ ನಿರೂಪಣ । ಉದ್ಧವಾಚೇ ದ್ರವಲೇ ಮನ । ನಯನೀ ಅಶ್ರು ಆಲೇ ಪೂರ್ಣ । ಸ್ವಾನಂದ ಜೀವನ ಲೋಟಲೇ ॥೬೫೧॥ ಶರೀರ ಜಾಹಲೇ ರೋಮಾಂಚಿತ । ಚಿತ್ತ ಜಾಹಲೇ ಹರ್ಷಯುಕ್ತ । ತೇಣೇ ಕಂಠೀ ಬಾಷ್ಪ ದಾಟತ । ಸ್ವೇದಕಣ ಯೇತ ಸರ್ವಾಂಗೀ ॥೬೫೨॥ ಪ್ರಾಣ ಪಾಂಗುಳಲಾ ಜೇಥೀಂಚಾ ತೇಥ । ಶರೀರ ಮಂದಮಂದ ಕಾಂಪತ । ನಯನ ಪುಂಜಾಳಲೇ ನಿಶ್ಚಿತ । ಅರ್ಧೋನ್ಮೀಲಿತ ತೇ ಜಾಹಲೇ ॥೬೫೩॥ ಔತ್ಸುಕ್ಯಾಚೇ ಅತಿಪ್ರೀತೀ । ಸ್ವಾನಂದೀ ಸಮರಸೇ ಚಿತ್ತವೃತೀ । ಉದ್ಧವದೇಹಾಚೀ ವಿರತಾ ಸ್ಥಿತೀ । ಪ್ರಾರಬ್ಧೇ ನಿಶ್ಚಿತೀ ತೇ ರಾಖಿಲೇ ॥೬೫೪॥ ಜಳೀ ನಾಂವ ಜಲಥತಾ ಪೂರ್ಣ । ಜೇವೀ ದೋರ ರಾಖೇ ಆವರೂನ। ತೇವೀ ಮಾವಳತಾ ಉದ್ಧವಪಣ । ಪ್ರಾರಬ್ಧೇ ಜಾಣ ರಾಖಿಲೇ ॥೬೫೫॥ ಧೈರ್ಯಾಚೇನಿ ಅತಿಸಾಮರ್ಥ್ಯೇ । ಆವರೂನಿ ಪ್ರೇಮಾಚೇ ಭರಿತೇ । ಮೀ ಕೃತಕೃತ್ಯ ಜಾಹಲೋ ಯೇಥೇ । ಹೇಹೀ ನಿಶ್ಚಿತೇ ಮಾನಿಲೇ ॥೬೫೬॥ ಶ್ರೀಕೃಷ್ಣೇ ಉದ್ಧರಿಲೇ ಮಾತೇ । ಐಶಿಯಾ ಮಾನೂನಿ ಉಪಕಾರಾತೇ । ಕಾಯ ಉತರಾಯೀ ಹೋವೂ ಮೀ ಯಾತೇ । ಐಸೇ ನಿಜಚಿತ್ತೇ ವಿಚಾರೀ ॥೬೫೭॥ ಗುರೂಸೀ ಚಿಂತಾಮಣೀ ದೇವೋ ಆತಾ । ತೋ ಚಿಂತಾ ವಾಢವೀ ಚಿಂತಿಲೇ ದೇತಾ । ಗುರೂನಿ ದಿಧಲೇ ಅಚಿಂತ್ಯಾರ್ಥಾ । ತೇಣೇ ಉತ್ತೀರ್ಣತಾ ಕದಾ ನ ಘಡೇ ॥೬೫೮॥ ಗುರೂಸೀ ಕಲ್ಪತರು ದೇವೋ ಜಾತಾ । ತೋ ಕಲ್ಪನಾ ವಾಢವೀ ಕಲ್ಪಿಲೇ ದೇತಾ । ಗುರೂನೇ ದಿಧಲೀ ನಿರ್ವಿಕಲ್ಪತಾ । ತ್ಯಾಸೀ ಉತ್ತೀರ್ಣತಾ ತೇಣೇ ನವ್ಹಿಜೇ ॥೬೫೯॥ ಗುರೂಸೀ ದೇವೋ ಸ್ಪರ್ಶಮಣೀ । ತೋ ಸ್ಪರ್ಶೇ ಧಾತು ಕರೀ ಸುವರ್ಣೀ । ಬ್ರಹ್ಮತ್ವ ಗುರೂಚರಣಸ್ಪರ್ಶನೀ । ತ್ಯಾಸೀ ನವ್ಹೇ ಉತ್ತೀರ್ಣೀ ಪರೀಸಹೀ ದೇತಾ ॥೬೬೦॥ ಗುರೂಸೀ ಕಾಮಧೇನು ದೇಊ ಆಣೋನೀ । ತೇ ಕಾಮನಾ ವಾಢವೀ ಅರ್ಥ ದೇಊನಿ । ಗುರೂ ನಿಷ್ಕಾಮ ನಿರ್ಗುಣದಾನೀ । ತ್ಯಾಚೇ ಉತ್ತೀರ್ಣೀ ಕಾಮಧೇನು ನವ್ಹೇ ॥೬೬೧॥

ನಿಜವಾಗಿಯೂ ಅನನ್ಯ ಭಕ್ತಿಗಿಂತಲೂ ಅಧಿಕ ಸುಖವು ಬೇರೆ ಯಾವುದರಲ್ಲಿಯೂ ಇಲ್ಲ. ದೇವತೆಗಳವರಿಗೂ ಕೂಡ ಸರ್ವ ಸಾರದಲ್ಲಿನ ಸಾರವಾದ ನನ್ನ ಭಕ್ತಿಯೇ ಶ್ರೇಷ್ಠವೆನಿಸುವುದು ॥೬೪೯॥ ಹೀಗೆಂದು ಭಕ್ತಿಯೋಗದ ಸಮೂಲ ಸಪ್ರೇಮ ಮತ್ತು ಶುದ್ಧ ಯೋಗಮಾರ್ಗ ಶ್ರೀಕೃಷ್ಣನು ಉದ್ಧವನಿಗೆ ಸ್ವಮುಖದಿಂದ ಸಂಪೂರ್ಣವಾಗಿ ಕಥನ ಮಾಡಿದನು. ಅದನ್ನು ಉದ್ಧವನೂ ಸಹ ಏಕಾಗ್ರ ಚಿತ್ತದಿಂದ ಆಲಿಸಿದನು ॥೬೫೦॥ ಈ ಯಾವ ಭಕ್ತಿಯ ನಿರೂಪಣೆ ಕೇಳಿ ಉದ್ಧವನ ಮನವು ದ್ರವಿಸಿತು. ಕಣ್ಣುಗಳು ನೀರಿನಿಂದ ತುಂಬಿಕೊಂಡವು. ಹಾಗೆಯೇ ಸ್ವಾನಂದದ ಪೂರವು ಉಕ್ಕೇರಿತು ॥೬೫೧॥ ಶರೀರವು ರೋಮಾಂಚನವಾಯಿತು. ಚಿತ್ತದಲ್ಲಿ ಹರ್ಷವು ಬಹು ಬೆಳೆಯಿತು. ಆದ್ದರಿಂದ ಕಂಠವು ಬಿಗಿಯಿತು. ಸರ್ವಾಂಗದಲ್ಲಿ ಬೆವರು ಹನಿಗಳು ಮಿಂಚುತ್ತಿದ್ದವು ॥೬೫೨॥ ಪ್ರಾಣವು ತಾನಿದ್ದಲ್ಲೇ ಸ್ಥಿರಗೊಂಡಿತು. ಶರೀರಕ್ಕೆ ಮಂದಮಂದವಾಗಿ ಕಂಪನ ಉಂಟಾಯಿತು. ನಯನಗಳು ನಿಲ್ಲಲು ಸೋತು ಅವು ಅರ್ಧೋನ್ಮೀಲಿತವಾದವು ॥೬೫೩॥ ಔತ್ಸುಕ್ಯದ ಅತ್ಯಂತ ಪ್ರೇಮದಿಂದ ದೇಹವೃತ್ತಿಯು ಸ್ವಾನಂದದಲ್ಲಿ ಏಕರೂಪವಾಯಿತು. ಉದ್ಧವನ ಶರೀರವು ಕರಗಿ ಹೋಗುವ ಪ್ರಸಂಗ ಒದಗಿತು. ಆದರೆ ಪ್ರಾರಬ್ಧವು ಆತನ ರಕ್ಷಣೆ ಮಾಡಿತು ॥೬೫೪॥ ತುಂಬಿದ ನದೀ ನೀರಿನಲ್ಲಿ ಹಡಗವು ಡೋಲಾಯಮಾನವಾಗಿ ಮುಳುಗುವ ಪ್ರಸಂಗ ಒದಗಿದಾಗ ಹಗ್ಗವು ಅದನ್ನು ಸಾವರಿಸಿ ಹಿಡಿದುಕೊಳ್ಳುವುದು. ಅದರಂತೆ ಉದ್ಧವನು ಮುಳುಗುವ ಹಂತಕ್ಕೆ ಬಂದಾಗ ಪ್ರಾರಬ್ಧವು ಆತನನ್ನು ರಕ್ಷಿಸಿತು ॥೬೫೫॥ ತದನಂತರ ಆತನು ಧೈರ್ಯದ ಸಾಮರ್ಥ್ಯದಿಂದ ಉಕ್ಕೇರುತ್ತಿರುವ ಪ್ರೇಮದ ಪೂರಕ್ಕೆ ಆವರಿಸಿ ಹಿಡಿದನು. ನಿಜವಾಗಿಯೂ ನಾನು ಕೃತಕೃತ್ಯನಾದೆನೆಂದು ಆತನಿಗೆ ಅಂತಃಕರಣದಲ್ಲಿ ಅನಿಸಿತು ॥೬೫೬॥ ಶ್ರೀಕೃಷ್ಣನು ನನ್ನ ಉದ್ಧಾರ ಮಾಡಿದನು. ನನ್ನಮೇಲೆ ಮಹದುಪಕಾರ ಮಾಡಿರುವನು. ಈಗ ನಾನು ಅದರಿಂದ ಹೇಗೆ ಋಣಮುಕ್ತನಾಗಬೇಕು? ಹೀಗೆ ಆತನು ಮನದಲ್ಲಿ ವಿಚಾರ ಮಾಡಹತ್ತಿದನು ॥೬೫೭॥ ಗುರುವಿಗೆ ಚಿಂತಾಮಣಿ ಕೊಡಬೇಕೆಂದರೆ, ಅದು ಚಿಂತಿಸಿದ ವಸ್ತು ಕೊಟ್ಟು ಇನ್ನೂ ಹೆಚ್ಚಾದ ಚಿಂತೆಯನ್ನು ಬೆಳೆಸುತ್ತಿರುವುದು. ಆದರೆ ಗುರುಗಳು ಚಿಂತಾರಹಿತ ಆತ್ಮರೂಪ ಕೊಟ್ಟಿರುವರು. ಇದರ ಉಪಕಾರ ತೀರಿಸಲು ಎಂದಿಗೂ ಶಕ್ಯವಾಗುವುದಿಲ್ಲ ॥೬೫೮॥ ಗುರುಗಳಿಗೆ ಕಲ್ಪತರು ಕೊಡಬೇಕೆಂದರೆ ಅದು ಕಲ್ಪಿಸಿದ ವಸ್ತುಗಳನ್ನು ಕೊಟ್ಟು ಕಲ್ಪನೆಗಳ ಜಾಲಗಳನ್ನು ಬೆಳೆಸುತ್ತಿರುವುದು. ಆದರೆ ಗುರುಗಳು ನಿರ್ವಿಕಲ್ಪತೆ ಕೊಟ್ಟಿರುವರು. ಇದರಿಂದ ಉತ್ತೀರ್ಣನಾಗಲು ಸಾಧ್ಯವೇ ಇಲ್ಲ ॥೬೫೯॥ ಗುರುಗಳಿಗೆ ಪರೀಸಮಣಿಯನ್ನು ಕೊಡಬೇಕೆಂದರೆ ಅದು ಕಬ್ಬಿಣಕ್ಕೆ ಸ್ಪರ್ಶಮಾಡಿ ಬಂಗಾರವನ್ನಾಗಿ ಮಾಡುವುದು. ಆದರೆ ಗುರುಚರಣಗಳ ಸ್ಪರ್ಶದಿಂದ ಬ್ರಹ್ಮಸ್ವರೂಪದ ಪ್ರಾಪ್ತವಾಗುವುದು. ಆದ್ದರಿಂದ ಪರೀಸಮಣಿಯನ್ನು ಕೊಟ್ಟು ಗುರುಗಳ ಉಪಕಾರ ತೀರಿಸಲು ಬರುವುದಿಲ್ಲ ॥೬೬೦॥ ಗುರುಗಳಿಗೆ ಕಾಮಧೇನು ತಂದು ಕೊಟ್ಟರೆ ಅದು ಇಚ್ಛೆಗಳನ್ನು ಪೂರೈಸುತ್ತ ಕಾಮನೆಗಳನ್ನು ಬೆಳೆಸುವುದು. ಆದರೆ ಗುರುಗಳು ನಿಷ್ಕಾಮ ಬುದ್ಧಿಯಿಂದ ನಿರ್ಗುಣದ ದಾನಕೊಡುವವರಾಗಿರುವರು. ಆದ್ದರಿಂದ ಕಾಮಧೇನುವಿನಿಂದ ಋಣಮುಕ್ತನಾಗಲು ಬರುವುದಿಲ್ಲ ॥೬೬೧॥

ತ್ರಿಭುವನೀಂಚೀ ಸಂಪತ್ತಿ ಚೋಖ । ಗುರೂಸೀ ದೇತಾ ತೇ ಮಾಯಿಕ । ಜೇಣೇ ದಿಧಲೀ ವಸ್ತು ಅಮಾಯಕ । ತ್ಯಾಸೀ ಕೈಸೇನಿ ಲೋಕ ಉತರಾಯೀ ಹೋತೀ ।೬೬೨॥ ದೇಹೇ ಉತರಾಯೀ ಹೋಊ ಗುರೂಸೀ ।ತಂವ ನಶ್ವರಪಣ ಯಾ ದೇಹಾಸೀ । ನಶ್ವರೇ ಅನಶ್ವರಾಸಿ । ಉತ್ತೀರ್ಣತ್ವಾಸೀ ಕದಾ ನ ಘಡೇ ।೬೬೩॥ ಜೇಣೇ ಅವ್ಹಾಶಂಖ ದೀಧಲಾ ಆವಡೀ । ತ್ಯಾಸೀ ದೇಊನಿ ಪುಟಕೀ ಕವಡೀ । ಉತ್ತೀರ್ಣತ್ವಾಚೀ ವಾಢವೀ ಗೋಡೀ । ತೈಶೀ ಪರವಡೀ ದೇಹಭಾವಾ ।೬೬೪॥ ಜೀವೇ ಉತರಾಯೀ ಹೋಊ ಗುರೂಸೀ । ತಂವ ಜೀವತ್ವಚಿ ಮಿಥ್ಯಾ ತ್ಯಾಸೀ । ಜೇಣೇ ದಿಧಲೇ ಸತ್ಯ ವಸ್ತೂಸೀ । ಮಿಥ್ಯಾ ದೇತಾ ತ್ಯಾಸೀ ಲಾಜಚಿ ಕೀ ।೬೬೫॥ ಜೇಣೇ ದಿಧಲೇ ಅನರ್ಘ್ಯ ರತ್ನಾಸೀ । ವಂಧ್ಯಾಪುತ್ರ ದೇವೋ ಕೇಲಾ ತ್ಯಾಸೀ । ತೇವೀ ಮಿಥ್ಯತ್ವ ಜೀವಭಾವಾಸೀ । ಉತ್ತೀರ್ಣತ್ವಾಸೀ ಕದಾ ನ ಘಡೇ ।೬೬೬॥ ಕಾಯಾ ವಾಚಾ ಮನ ಧನ । ಗುರೂಸೀ ಅರ್ಪಿತಾ ಜೀವ ಪ್ರಾಣ । ತರೀ ಕದಾ ನವ್ಹಿಜೇ ಉತ್ತೀರ್ಣ । ಹೇ ಉದ್ಧವೇ ಸಂಪೂರ್ಣ ಜಾಣಿತಲೇ ।೬೬೭॥ ಜೇಥೇ ಅಣುಮಾತ್ರ ನಾಹೀ ದುಃಖ । ಐಸೇ ದಿಧಲೇ ನಿಜಸುಖ । ತ್ಯಾ ಗುರೂಸೀ ಉತರಾಯೀ ದೇಖ । ನ ಹೋವೇ ನಿಃಶೇಖ ಶಿಷ್ಯಾಂಸೀ ।೬೬೮॥ ಯಾಲಾಗೀ ಮೌನೇಚಿ ಜಾಣ। ಉದ್ಧವೇ ಘಾತಲೇ ಲೋಟಾಂಗಣ । ಶ್ರೀಕೃಷ್ಣಾಂಚೇ ಶ್ರೀಚರಣ। ಮಸ್ತಕೀ ಸಂಪೂರ್ಣ ವಂದಿಲೇ ।೬೬೯॥ ಮಾಗಾ ಶ್ರೀಕೃಷ್ಣೇ ಪುಶಿಲೇ ಪಹಾ ಹೋ । ಉದ್ಧವಾ ತುಝಾ ಗೇಲಾ ಕೀ ಶೋಕಮೋಹೋ । ತೇಣೇ ಉದ್ಧವಾಸೀ ಜಾಹಲಾ ವಿಸ್ಮಯೋ । ಉತ್ತರ ದ್ಯಾವಯಾ ಠಾವೋ ನ ಘಡೇಚಿ ।೬೭೦॥ ಆತಾ ವಂದೋನಿ ಶ್ರೀಚರಣ । ಕೃತಾಂಜಲೀ ಧರೋನಿ ಜಾಣ । ಉತ್ತರ ದ್ಯಾವಯಾ ಆಪಣ । ಶ್ರೀಕೃಷ್ಣವದನ ಅವಲೋಕೀ ।೬೭೧॥ ಜೇವೀ ಸೇವಿತಾ ಚಂದ್ರಕರ । ಚಕೋರ ತೃಪ್ತೀಚೇ ದೇ ಢೇಂಕರ । ತೇವೀ ಉದ್ಧವ ಕೃಷ್ಣಸುಖೇ ಅತಿನಿರ್ಭರ । ಕಾಯ ಪ್ರತ್ಯುತ್ತರ ಬೋಲತ ।೬೭೨॥

ಉದ್ಧವ ಉವಾಚ :-

ವಿದ್ರಾವಿತೋ ಮೋಹಮಹಾಂಧಕಾರೋ ಯ ಆಶ್ರಿತೋ ಮೇ ತವ ಸನ್ನಿಧಾನಾತ್ ।
ವಿಭಾವಸೋಃ ಕಿನ್ನು ಸಮೀಪಗಸ್ಯ ಶೀತಂ ತಮೋ ಭಿಃ ಪ್ರಭವಂತ್ಯಜಾದ್ಯ ।೩೭॥

ಅರ್ಥ:- ಉದ್ಧವನು ನುಡಿದನು :- ಪ್ರಭೋ, ತಾವು ಮಾಯಾ ಮತ್ತು ಬ್ರಹ್ಮ ಇತ್ಯಾದಿಗಳ ಮೂಲ ಕಾರಣರಾಗುವಿರಿ. ನಾನು ಮೋಹದ ಮಹಾನ ಅಂಧಕಾರದಲ್ಲಿ ತಿರುಗುತ್ತಿದ್ದೆನು. ನಿಮ್ಮ ಸತ್ಸಂಗತಿಯಿಂದ ಅದು ಇಲ್ಲದಾಯಿತು. ಹೇ ಬ್ರಹ್ಮದೇವನ ಜನಕನೇ, ಸೂರ್ಯ ಅಥವಾ ಅಗ್ನಿ ಇವರ ಹತ್ತಿರ ಹೋದನಂತರ ಶೀತ, ಅಂಧಕಾರ ಅಥವಾ ಭಯ ಇತ್ಯಾದಿ ಪೀಡೆಗಳು ಪೀಡಿಸಲು ಸಮರ್ಥವಾಗುವುವೇ?

ಮೂರೂ ಲೋಕಗಳಲ್ಲಿನ ಸರ್ವ ಸಂಪತ್ತು ಗುರುಗಳ ಚರಣಕ್ಕೆ ಅರ್ಪಿಸಲು, ಅವೆಲ್ಲವೂ ಕೇವಲ ಮಿಥ್ಯೆಮಾಯಿಕವಾಗಿರುವುವು. ಅವರು ಅಮಾಯಿಕ ಆತ್ಮವಸ್ತು ಕೊಟ್ಟಿರುವರು. ಈ ಉಪಕಾರ ತೀರಿಸುವುದು ಯಾವುದರಿಂದಾಗುವುದು? ।೬೬೨॥ ದೇಹದಿಂದ ಗುರುಗಳ ಉಪಕಾರ ತೀರಿಸಬೇಕೆಂದರೆ ಯಾವ ಈ ದೇಹವು ನಶ್ವರವಾಗಿರುವುದು. ಅಂದಮೇಲೆ ಶಾಶ್ವತ ವಸ್ತುವಿಗೆ ಸಮಾನವಾಗಿ ಅಶಾಶ್ವತ ವಸ್ತು ಕೊಡುವುದರಿಂದ ಉಪಕಾರ ತೀರಿಸಿದಂತೆ ಆಗುವುದಿಲ್ಲ ।೬೬೩॥ ಒಬ್ಬನು ಅತ್ಯಂತ ಪ್ರೇಮದಿಂದ ಬಲಮುರೀಶಂಖ ಕೊಡಲು ಆಗ ಆತನಿಗೆ ಒಡಕು ಕವಡಿ ಕೊಟ್ಟು ಉಪಕಾರ ತೀರಿಸಿದೆನು ಎಂದು ಸಮಾಧಾನ ಪಟ್ಟಂತೆ ದೇಹಭಾವದ ಪ್ರಕಾರವಾಗಿರುವುದು ।೬೬೪॥ ಗುರುಗಳ ಚರಣಕ್ಕೆ ಜೀವವನ್ನೇ ಅರ್ಪಿಸಿ ಋಣಮುಕ್ತನಾಗಬೇಕೆಂದರೆ ಆ ಜೀವಕ್ಕೆ ಮಿಥ್ಯತ್ವ ಇರುವುದು. ಯಾರು ನಮಗೆ ಸತ್ಯವಾದ ಬ್ರಹ್ಮ ಕೊಟ್ಟಿರುವರೋ, ಅವರಿಗೆ ಮಿಥ್ಯೆಯಾಗಿರುವ ಜೀವ ಕೊಡುವುದು ನಾಚಿಕೆಪಡುವದ್ದಾಗಿದೆ ।೬೬೫॥ ಒಬ್ಬನು ಅಮೂಲ್ಯ ರತ್ನಕೊಟ್ಟನು. ಆತನಿಗೆ ಬಂಜೆಯ ಪುತ್ರ ಕೊಟ್ಟರಂತೆ. ಅದರಂತೆ ಜೀವಭಾವಕ್ಕೆ ಮಿಥ್ಯೆತ್ವವಿರುವುದರಿಂದ ಇದರಿಂದ ಎಂದಿಗೂ ಉಪಕಾರ ತೀರಿಸಲು ಆಗುವುದೇ ಇಲ್ಲ ।೬೬೬॥ ಈ ಪ್ರಕಾರವಾಗಿ ಕಾಯಾ, ವಾಚಾ, ಮನಸಾ ಹಾಗೂ ಧನ ಮತ್ತು ಜೀವಭಾವ ಅರ್ಪಣೆ ಮಾಡಿದರೂ ಕೂಡ ಗುರುಗಳ ಉಪಕಾರ ತೀರಿಸಲು ಆಗುವುದಿಲ್ಲ. ಇದನ್ನು ಪರಿಪೂರ್ಣವಾಗಿ ಉದ್ಧವನು ತಿಳಿದುಕೊಂಡನು ।೬೬೭॥ ಅಣುಮಾತ್ರವೂ ಕೂಡ ದುಃಖವಿಲ್ಲದ ಆತ್ಮಸುಖವನ್ನು ಯಾರು ಕೊಟ್ಟಿರುವರೋ, ಅಂತಹ ಗುರುಗಳ ಉಪಕಾರ ತೀರಿಸುವುದು ಶಿಷ್ಯನಿಗೆ ಯಾವ ಮಾರ್ಗವೇ ಇರುವುದಿಲ್ಲ ।೬೬೮॥ ಆದ್ದರಿಂದ ಉದ್ಧವನು ಶ್ರೀಕೃಷ್ಣನ ಎದುರಿನಲ್ಲಿ ಅನನ್ಯ ಭಾವದಿಂದ ಲೋಟಾಂಗಣ ಹಾಕಿದನು. ಹಾಗೂ ಶ್ರೀಕೃಷ್ಣನ ಚರಣ ಕಮಲಗಳನ್ನು ಮಸ್ತಕಕ್ಕೆ ಧರಿಸಿದನು ।೬೬೯॥ ಹೇ ಉದ್ಧವಾ, ನಿಜವಾಗಿಯೂ ನಿನ್ನ ಮೋಹ ಹೋಗಿದೆಯೇ? ಎಂದು ಶ್ರೀಕೃಷ್ಣನು ಈ ಹಿಂದೆ ಉದ್ಧವನಿಗೆ ಕೇಳಿದ್ದನು. ಆದರೆ ಆ ಸಮಯಕ್ಕೆ ಉದ್ಧವನಿಗೆ ವಿಸ್ಮಯ ಉಂಟಾಗಿ ಆತನಿಗೆ ಉತ್ತರಿಸುವ ಎಚ್ಚರ ಉಳಿಯಲಿಲ್ಲ ।೬೭೦॥ ಆದ್ದರಿಂದ ಈಗ ಆತನು ಆತನ ಚರಣಗಳಿಗೆ ವಂದಿಸಿ, ಕೈಗಳನ್ನು ಜೋಡಿಸಿ ಉತ್ತರವನ್ನು ಕೊಡುವುದಕ್ಕಾಗಿ ಶ್ರೀಕೃಷ್ಣನತ್ತ ನೋಡಹತ್ತಿದನು ।೬೭೧॥ ಚಂದ್ರಾಮೃತವನ್ನು ಸೇವಿಸಿದ ಚಕೋರ ಪಕ್ಷಿಯು ತೃಪ್ತವಾಗಿ ಹೇಗೆ ಡೇಕರಿಕೆ ಕೊಡುವುದೋ, ಅದರಂತೆ ಉದ್ಧವನು ಶ್ರೀಕೃಷ್ಣನ ಸುಖದಿಂದ ಪೂರ್ಣ ಆನಂದಿತನಾಗಿ ಏನು ಉತ್ತರಕೊಡುವನೆಂಬುವುದನ್ನು ಕೇಳೋಣ ।೬೭೨॥

ಜೋ ಸಕಳದೇವಚೂಡಾಮಣೀ । ಜೋ ಯಾದವಾಂಮಾಜೀ ಅಗ್ರಗಣೀ । ಜೋ ಅವಿದ್ಯಾರಾತ್ರೀಂಚಾ ತರಣೀ । ಜೋ ಶಿರೋಮಣೀ ಬ್ರಹ್ಮವೇತ್ತ್ಯಾ ॥೬೭೩॥ ಐಶಿಯಾ ಶ್ರೀಕೃಷ್ಣಾಪ್ರತೀ । ಸ್ವಾನಂದಾಚಿಯೇ ನಿಜಸ್ಫೂರ್ತೀ । ಉದ್ಧವೇ ಸಾಂಗತಾ ನಿಜಸ್ಥಿತೀ । ತ್ಯಾಮಾಜೀ ಕರೀ ಸ್ತುತೀ ಆದ್ಯತ್ವೇ ಹರೀಚೀ ॥೬೭೪॥ ಮಜ ತಂವ ವಿಚಾರಿತಾ । ಬ್ರಹ್ಮಾ ಸರ್ವಾಂಚಾ ಆದಿಕರ್ತಾ । ತೋಹೀ ನಾರಾಯಣನಾಭೀ ತತ್ತ್ವತಾ । ಹೋಯ ಜನ್ಮತಾ "ಅಜ" ನಾಮೇ ॥೬೭೫॥ ತೋ ತೂ ಕಮಳನಾಭಿ ನಾರಾಯಣ । ಮಾಯಾಸಂವಲಿತ ಬ್ರಹ್ಮ ಜಾಣ । ತೇ ಮಾಯೇಚೇ ತೂ ಆದ್ಯಕಾರಣ । ಆದ್ಯತ್ವ ಪೂರ್ಣ ತುಜ ಸಾಜೇ ॥೬೭೬॥ ಅವಿದ್ಯೇಚ್ಯಾ ಮಹಾರಾತ್ರೀ । ಅಡಕಲೋ ಹೋತೋ ಮೋಹಅಂಧಾರೀ । ತೇಥೂನಿ ಕಾಢಾವಯಾ ಬಾಹೇರೀ । ಆಣಿಕಾಂಚೀ ಥೋರೀ ಚಾಲೇನಾ ॥೬೭೭॥ ತೇಥ ತುಝೇನಿ ವಚನಭಾಸ್ಕರೇ । ನಾಸೋನಿ ಶೋಕಮೋಹಅಂಧಾರೇ । ಮಜ ಕಾಢಿಲೇ ಜೇ ಬಾಹೇರೇ । ಚಮತ್ಕಾರೇ ಸನ್ನಿಧೀ ತುಝ್ಯಾ ॥೬೭೮॥ ತುಝಿಯೇ ಸನ್ನಿಧೀಪಾಶೀ । ಠಾವ ನಾಹೀ ಅವಿದ್ಯೇಸೀ । ತೇಥ ಮೋಹಮಮತಾ ಕೈಸೀ ಗ್ರಾಸೀ । ಹೃಷೀಕೇಶೀ ತುಜ ಅಸತಾ ॥೬೭೯॥ ಅಂಧಾರೀ ರಾತೀ ಅತಿಗಹನ । ತೇಥ ಶಿತೇ ಪೀಡಿಲಾ ಜೋ ಸಂಪೂರ್ಣ । ತ್ಯಾಸೀ ಆತುಡಲಿಯಾ ಹುತಾಶನ । ಶೀತ ತಮ ಜಾಣ ತತ್ಕಾಳ ಪಳೇ ॥೬೮೦॥ ತೋ ಅಗ್ನಿಸೇವಿತಾ ಸ್ವಯೇ ಸದಾ । ಶೀತತಮಾಂಚೀ ಭಯಬಾಧಾ । ಪುಢತೀ ಬಾಧೋ ನ ಶಕೇ ಕದಾ । ತೇವೀ ಗೋವಿಂದಾ ಸನ್ನಿಧೀ ತುಝ್ಯಾ ॥೬೮೧॥ ತೇವೀ ಶೋಕಮೋಹಮಮತೇಶೀ । ಮಾಯಾ ಜನ ಬಾಂಧೇ ಭವಪಾಶೀ । ತೇ ತುಝಿಯೇ ಸನ್ನಿಧೀಪಾಶೀ । ಜಾತೀ ಆಪೈಸೀ ಹಾರಪೋನೀ ॥೬೮೨॥ ಮರಣಜನ್ಮಾ ಅಪಾಯೇ । ಮಾಗಾ ಅನೇಕ ಸೋಶಿಲೇ ಸ್ವಯೇ । ಜ್ಯಾಸೀ ತಝಿ ಸನ್ನಿಧೀ ಹೋಯೇ । ತ್ಯಾಸೀ ತೇ ಭವಭಯೇ ಸಮೂಳ ಮಿಥ್ಯಾ ॥೬೮೩॥ ತುಝೀ ಸನ್ನಿಧೀಪಾಶೀ ಜಾಣ । ಸಮೂಳ ಮಾಯೇಚೇ ನಿರ್ದಳಣ । ತೇಚಿ ಅರ್ಥೀಚೇ ನಿರೂಪಣ । ಉದ್ಧವ ಆಪಣ ಸಾಂಗತ ॥೬೮೪॥

ಪ್ರತ್ಯರ್ಪಿತೋ ಮೇ ಭವತಾಽನುಕಂಪಿನಾ ಭೃತ್ಯಾಯ ವಿಜ್ಞಾನಮಯಃ ಪ್ರದೀಪಃ ।
ಹಿತ್ವಾ ಕೃತಜ್ಞಸ್ತವ ಪಾದಮೂಲಂ ಕೋಽನ್ಯಂ ಸಮೀಯಾಚ್ಛರಣಂ ತ್ವದೀಯಮ್ ॥೩೮॥

ಅರ್ಥ:- ಭಗವಂತನೇ, ನಿನ್ನ ಮೋಹಿನೀ ಮಾಯೆಯು ನನ್ನ ಜ್ಞಾನದೀಪವನ್ನು ಕಸಿದುಕೊಂಡಿತ್ತು. ಆದರೆ ನಿನ್ನ ಕೃಪೆಯಿಂದ ಅದು ಮರಳಿ ಪ್ರಾಪ್ತವಾಯಿತು. ನೀನು ನನ್ನಲ್ಲಿ ಅನುಗ್ರಹ ಮಾಡಿದೆ ಹಾಗೂ ಕೃಪೆಯ ಮಳೆಗರೆದೆ. ನಿನ್ನ ಕೃಪಾಪ್ರಸಾದ ಅನುಭವಕ್ಕಾಗಿ ನಿನ್ನ ಚರಣ ಕಮಲಗಳನ್ನು ತ್ಯಜಿಸುವವರು ಯಾರಿರುವರು? ಮತ್ತು ಬೇರೆ ಯಾರ ಆಶ್ರಯ ಪಡೆಯಲು ಸಾಧ್ಯ?

ಯಾವ ಸರ್ವದೇವತೆಗಳವರಲ್ಲಿ ಶ್ರೇಷ್ಠನು, ಯಾವ ಯಾದವರಲ್ಲಿ ಅಗ್ರಗಣ್ಯನು, ಯಾವ ಅವಿದ್ಯಾರೂಪ ರಾತ್ರಿಯ ಸೂರ್ಯನು, ಯಾವ ಬ್ರಹ್ಮವೇತ್ತ್ಯಾಗಳವರ ಶಿರೋಮಣಿಯು ॥೬೭೩॥ ಹೀಗಿರುವ ಶ್ರೀಕೃಷ್ಣನಿಗೆ ಸ್ವಾನಂದದ ಸ್ಫೂರ್ತಿಯಿಂದ ಉದ್ಧವನು ತನ್ನಸ್ಥಿತಿ ಹೇಳುತ್ತಿದ್ದಾಗ ಪ್ರಾಮುಖ್ಯವಾಗಿ ಶ್ರೀಹರಿಯ ಸ್ತುತಿ ಮಾಡಲಾರಂಭಿಸಿದನು ॥೬೭೪॥ ನಾವು ವಿಚಾರ ಮಾಡುತ್ತಿರಲು ಬ್ರಹ್ಮದೇವನು ಸರ್ವರ ಆದಿಕರ್ತನಾಗಿರುವನೆಂಬುವುದು ತಿಳಿಯುವುದು. ಆದರೆ ಆತನೂ ಕೂಡ ನಿಜವಾಗಿಯೂ "ಅಜ" ಎಂಬ ನಾಮದಿಂದ ನಾರಾಯಣನ ನಾಭಿಕಮಲದಿಂದ ಜನ್ಮಕ್ಕೆ ಬಂದಿರುವನು ॥೬೭೫॥ ಅದೇ ನೀನು ಕಮಲನಾಭೀ ನಾರಾಯಣನೇ ಮಾಯಾ ಪ್ರಬಲ ಬ್ರಹ್ಮನಾಗಿರುವೆ. ನೀನು ಮಾಯೆಯ ಆದಿಕಾರಣನಾಗಿರುವೆ. ಆದ್ದರಿಂದ ನಿನಗೆ ಆದ್ಯ ಎಂಬುವುದು ಶೋಭಿಸುವುದು ॥೬೭೬॥ ನಾನು ಅವಿದ್ಯೆಯ ಕಡುಕತ್ತಲೆಯ ರಾತ್ರಿಯ ಅಂಧಕಾರದಲ್ಲಿ ಸಿಕ್ಕಿ ಬಿದ್ದವನಿಗೆ ನಿಜವಾಗಿಯೂ ನನಗೆ ಅಲ್ಲಿಂದ ಹೊರಗೆ ತೆಗೆಯುವ ಸಾಮರ್ಥ್ಯವು ಬೇರೆ ಯಾರಲ್ಲಿಯೂ ಇದ್ದಿಲ್ಲ ॥೬೭೭॥ ಆದರೆ ನಿನ್ನ ಉಪದೇಶರೂಪ ಸೂರ್ಯನು ಶೋಕಮೋಹರೂಪೀ ಅಂಧಕಾರದ ನಾಶ ಮಾಡಿದನು. ಹಾಗೆಯೇ ನನ್ನನ್ನು ಅಲ್ಲಿಂದ ನೀನು ನೋಡುತ್ತಿದ್ದಂತೆಯೇ ಮಹಾಚಮತ್ಕಾರವಾಗಿ ಹೊರಗೆ ತಂದನು ॥೬೭೮॥ ನಿನ್ನ ಎದುರಿನಲ್ಲಿ ಅವಿದ್ಯೆಯು ಉಳಿದುಕೊಳ್ಳಲು ಸ್ಥಳವೇ ಇಲ್ಲ. ಅಂದಮೇಲೆ ಶ್ರೀಕೃಷ್ಣನಾದ ನೀನು ಜೊತೆಯಲ್ಲಿರಲು ಮೋಹ ಮಮತೆಯು ನನಗೆ ಹೇಗೆ ಗ್ರಾಸ ಮಾಡೀತು ? ॥೬೭೯॥ ಕಡುಕತ್ತಲೆಯ ದಟ್ಟ ಅಂಧಕಾರದಲ್ಲಿ ಒಬ್ಬ ಮನುಷ್ಯನು ಥಂಡಿಯಿಂದ ಶೆಟೆದು ಹೋಗಲು ಆ ಸಮಯಕ್ಕೆ ಆತನಿಗೆ ಅಗ್ನಿ ದೊರಕಿದರೆ ಥಂಡಿ ಮತ್ತು ಕತ್ತಲೆ ಇವು ಕೂಡಲೇ ಇಲ್ಲದಾಗುವುವು ॥೬೮೦॥ ಯಾವನು ಈ ಅಗ್ನಿಯನ್ನು ಜೋಪಾನ ಮಾಡಲು ಆತನಿಗೆ ಮುಂದೆ ಎಂದಿಗೂ ಚಳಿ ಮತ್ತು ಅಂಧಕಾರ ಇವುಗಳ ಭಯವು ಇರುವುದೇ ಇಲ್ಲ. ಅದರಂತೆ ನಿನ್ನ ಸಾನಿಧ್ಯವಾಗಿರುವುದು ॥೬೮೧॥ ಈ ಪ್ರಕಾರವಾಗಿ ಯಾವ ಈ ಮಾಯೆಯು ಮೋಹಮಮತೆಯಿಂದ ಜನರನ್ನು ಸಂಸಾರಪಾಶದಲ್ಲಿ ಕಟ್ಟಿಹಾಕಿರುವುದು. ಆದರೆ ಈ ಎಲ್ಲ ಪಾಶವು ನಿನ್ನ ಸಾನಿಧ್ಯವು ಸಾಧಿಸುತ್ತಲೇ ಅದರ ಸರ್ವ ಭಯವು ಇಲ್ಲದಾಗಿ ಬಿಡುವುದು ॥೬೮೨॥ ಹಿಂದೆ ಅನೇಕ ಸಲ ಜನ್ಮಮರಣಗಳ ಚಕ್ರವನ್ನು ಸಹಿಸದವರಿಗೆ ನಿನ್ನಸಾನಿಧ್ಯ ದೊರೆಯುತ್ತಲೇ ಭಯವು ಇಲ್ಲದಾಗುವುದು ॥೬೮೩॥ ನಿನ್ನ ಸಾನಿಧ್ಯದಲ್ಲಿ ಮಾಯೆಯ ಭಯವು ಸಮೂಲವಾಗಿ ಇಲ್ಲದಾಗುವುದು. ಈಗ ಉದ್ಧವನು ಇದೇ ಅರ್ಥದಿಂದ ಕೂಡಿಕೊಂಡ ನಿರೂಪಣೆ ಮಾಡುತ್ತಿರುವನು ॥೬೮೪॥

ತುಝೀ ಸನ್ನಿಧಿ ಮಾತ್ರ ದೇಖ । ಸಮೂಳ ಅಜ್ಞಾನಾಸೀ ಘಾತಕ । ಹೇಚಿ ಮುಖ್ಯತ್ವೇ ಆವಶ್ಯಕ । ಭಕ್ತ ಸಾತ್ವಿಕ ಜಾಣತೀ ॥೮೫॥ ಅಸೋ ಇತರಾಂಚೀ ಗೋಷ್ಟೀ । ಮ್ಯಾಂಹೀ ಅನುಭವಿಲೇ ನಿಜದೃಷ್ಟೀ । ಅವಿದ್ಯಾ ನಿರಸಾವಯಾ ಸೃಷ್ಟೀ । ಸತ್ಸಂಗತೀ ಲಾಠೀ ಸರ್ವಾರ್ಥೀ ॥೮೬॥ ಸತ್ಸಂಗಾಹೀಮಾಜೀ ಜಾಣ । ತುಝೀ ಸಂಗತೀ ಅತಿಪಾವನ । ತುವಾ ಉದ್ಧರಾವಯಾ ದೀನಜನ । ಹೇ ನಿಜಾತ್ಮಜ್ಞಾನ ಪ್ರಕಾಶಿಲೇ ॥೮೭॥ ಮಾಝೀ ನಿಮಿತ್ತ ಕರೂನಿ ಜಾಣ । ಉದ್ಧರಾವಯಾ ದೀನ ಜನ । ತ್ಯಾಂಚೇ ನಿರಸಾವಯಾ ಅಜ್ಞಾನ ಘನ । ಜ್ಞಾನದೀಪ ಪೂರ್ಣ ಪ್ರಜ್ವಳಿಲಾ ॥೮೮॥ ಉಪದೇಶಾರ್ಥ ಶ್ರದ್ಧಾಸ್ಥಿತೀ । ಹೇಚಿ ಟವಳೇ ಪೈ ನಿಶ್ಚಿತೀ । ತೇಥೇ ಬೋಧಿಕಾ ಜ್ಯಾ ನಿಜಾತ್ಮಯುಕ್ತೀ । ತೇಚಿ ಟವಳ್ಯಾಂಪ್ರತೀ ಸ್ನೇಹ ಪೂರ್ಣ ॥೮೯॥ ವಿವೇಕವೈರಾಗ್ಯಧಾರಣ । ಹೇಚಿ ತೇಥೀಲ ವಾತೀ ಜಾಣ । ತೇಥ ಪ್ರಜ್ವಳಿಲಾ ಜ್ಞಾನಘನ । ಚಿತ್ಪ್ರಭಾವ ಪೂರ್ಣ ಮಹಾದೀಪ ॥೯೦॥ ನೈರಾಶ್ಯ ತೇಚಿ ವೈರಾಗ್ಯಧಾರಣ । ತೇಥೇ ಪ್ರಜ್ವಳೇ ಜ್ಞಾನದೀಪ ಪೂರ್ಣ । ಆಶಾ ತೇಚಿ ಮಾಲ್ಹವಣ । ಗಡದ ಸಂಪೂರ್ಣ ಪಡೇ ತೇಥೇ ॥೯೧॥ ತೋ ದೀಪ ಕರ್ಣದ್ವಾರೀ ಠೇವಿಲಾ । ತಂವ ಸಬಾಹ್ಯ ಪ್ರಕಾಶ ಜಾಹಲಾ । ಅಜ್ಞಾನಅಂಧಾರ ನಿರ್ದಾಳಿಲಾ । ಸ್ವಯೇ ಪ್ರಬಳಲಾ ಸದ್ರೂಪೇ ॥೯೨॥ ತೇಣೇ ಸಬಾಹ್ಯಸತ್ಪ್ರಕಾಶೇ । ತುಝೀ ಪದವೀ ಪ್ರಕಟ ದಿಸೇ । ಐಸೇ ನಿಜರೂಪ ಹೃಷೀಕೇಶೇ । ಅನಾಯಾಸೇ ಮಜ ಅರ್ಪಿಲೇ ॥೯೩॥ ತುವಾ ಅಂತರ್ಯಾಮಿತ್ವೇ ಆಪುಲೇ । ಸ್ವರೂಪ ಪೂರ್ವಿಂಚ ಮಮ ಅರ್ಪಿಲೇ । ತೇ ತುವಾಂಚ ಮಾಝಾರೀ ಅಚ್ಛಾದಿಲೇ । ಭಜನ ಆಪುಲೇ ಪ್ರಕಟಾವಯಾ ॥೯೪॥ ತುಝ್ಯಾ ನಿಜಭಜನಾಚೇ ಲಕ್ಷಣ । ಸರ್ವಭೂತೀ ಭಗವದ್ಭಜನ । ತೇಣೇ ತೂ ಸಾಚಾರ ಸಂತೋಷೋನ । ಅರ್ಪಿಲೇಚಿ ಜ್ಞಾನ ಅರ್ಪಿಸೀ ಪುಢತೀ ॥೯೫॥ ವಾಢವೂನಿ ನಿಜಭಜನ । ಮಾಝೀ ಮಜ ಅರ್ಪಿಸೀ ಜ್ಞಾನ । ಯಾ ನಾಂವ ''ಪ್ರತ್ಯರ್ಪಣ'' । ಸಾಧು ಸಜ್ಞಾನ ಬೋಲತೀ ॥೯೬॥ ವಾಢವೂನಿ ಆಪುಲೀ ಭಕ್ತೀ । ಮಾಝೀ ಜ್ಞಾನ ದಿಧಲೇ ಮಾಝ್ಯೇ ಹಾತೀ । ದಿಧಲೇ ತೇಥ ಮಾಯಾ ಪುಢತೀ । ವಿಕಲ್ಪವೃತ್ತೀ ಸ್ಪರ್ಶೇನಾ ॥೯೭॥ ಜೇ ದಿಧಲೀ ಸ್ವರೂಪಸ್ಥಿತೀ । ತೇ ಆಚ್ಛಾದೇನಾ ಕದಾ ಕಲ್ಪಾಂತೀ । ಯಾಪರೀ ಗಾ ಶ್ರೀಪತೀ । ಕೃಪಾ ನಿಶ್ಚಿತೀ ತುಂವಾ ಕೇಲೀ ॥೯೮॥

ನಿನ್ನ ಸಾನಿಧ್ಯ ಮಾತ್ರದಿಂದ ಅಜ್ಞಾನಕ್ಕೆ ಸಮೂಲವಾಗಿ ಘಾತವಾಗುವುದು. ಇದರ ಆವಶ್ಯಕತೆಯೇ ಪ್ರಾಮುಖ್ಯವಾಗಿ ಇರುವುದು. ಸಾತ್ವಿಕ ಭಕ್ತರಿಗೆ ಇದರ ಮಹತ್ವವು ತಿಳಿದಿರುವುದು ॥೮೫॥ ಇತರರ ಮಾತು ಇರಲಿ, ನಾನು ಸ್ವತಃ ಇದರ ಅನುಭವ ಪಡೆದಿರುವೆನು. ಅವಿದ್ಯೆಯ ನಾಶವಾಗಬೇಕಾದರೆ ಜಗತ್ತಿನಲ್ಲಿ ಸತ್ಸಂಗತಿಯೇ ಸರ್ವದೃಷ್ಟಿಯಿಂದ ಸಮರ್ಥವಾಗಿರುವುದು ॥೮೬॥ ಸತ್ಸಂಗತಿಯಲ್ಲಿಯೂ ಕೂಡ ಈ ನಿನ್ನ ಸಂಗತಿಯು ಅತ್ಯಂತ ಪವಿತ್ರಕಾರಕವಾಗಿರುವುದು. ನೀನು ಅಜ್ಞಾನೀ ಜನರ ಉದ್ಧಾರ ಮಾಡುವುದಕ್ಕಾಗಿ ನಿನ್ನ ಬ್ರಹ್ಮಜ್ಞಾನವನ್ನು ಪ್ರಕಾಶಿತಗೊಳಿಸಿರುವೆ ॥೮೭॥ ನನ್ನನ್ನು ನಿಮಿತ್ತ ಮಾಡಿ ದೀನರ ಉದ್ಧಾರಕ್ಕಾಗಿ ಹಾಗೂ ಅವರ ಗಾಢ ಅಜ್ಞಾನದ ನಾಶ ಮಾಡುವುದಕ್ಕಾಗಿ ನೀನು ಜ್ಞಾನದೀಪವನ್ನು ಪರಿಪೂರ್ಣವಾಗಿ ಪ್ರಕಾಶಿತವನ್ನಾಗಿ ಮಾಡಿರುವೆ ॥೮೮॥ ಉಪದೇಶಕ್ಕಾಗಿ ಶ್ರದ್ಧೆ ಉತ್ಪನ್ನವಾಗುವಿಕೆಯೇ ಪ್ರಣತಿಯ ಮುಖವಾಗಿರುವುದು. ಆತ್ಮಬೋಧೆಯೇ ಆ ಪ್ರಣತಿಯಲ್ಲಿನ ತೈಲವಾಗಿರುವುದು ॥೮೯॥ ವಿವೇಕ ವೈರಾಗ್ಯ ಧರಿಸುವುದೇ ದೀಪದ ಬತ್ತಿಯಾಗಿರುವುದು. ಅದು ಜ್ಞಾನಘನ ಚಿತ್‌ಪ್ರಭಾವಪೂರ್ಣ ಮಹಾದೀಪವು ಪರಿಪೂರ್ಣವಾಗಿ ಪ್ರಜ್ವಲಿತವನ್ನಾಗಿ ಮಾಡಿರುವುದು ॥೯೦॥ ನೈರಾಶ್ಯ ಇದು ವೈರಾಗ್ಯ ಧರಿಸುವಿಕೆಯಾಗಿರುವುದು. ಇದರಿಂದ ಜ್ಞಾನದೀಪವು ಪರಿಪೂರ್ಣವಾಗಿ ಪ್ರಜ್ವಲಿತವಾಗುವುದು. ಆಶೆಯೇ ಈ ದೀಪ ಆರಿಸುವುದು. ಆಶೆಯು ಉದ್ಭವವಾಯಿತೆಂದರೆ ಜ್ಞಾನವು ಇಲ್ಲದಾಗಿ ಎಲ್ಲೆಲ್ಲಿಯೂ ಗಾಢವಾದ ಅಂಧಕಾರವು ಹರಡಿಕೊಳ್ಳುವುದು ॥೯೧॥ ಈ ಜ್ಞಾನದೀಪವನ್ನು ಕರ್ಣರೂಪ ಬಾಗಿಲಲ್ಲಿ ಇಡುವುದರಿಂದ ಅದರ ಪ್ರಕಾಶವು ಒಳಗೆ ಹಾಗೂ ಹೊರಗೆ ಬೀಳುವುದು. ಅಜ್ಞಾನ ಅಂಧಕಾರ ನಷ್ಟ ಮಾಡಿ ಆ ದೀಪವು ಸ್ವತಃ ಚಿದ್ರೂಪದಿಂದ ಪೂರ್ಣ ಪ್ರಕಾಶವಾಗುವುದು ॥೯೨॥ ಅದರ ಅಂತರ್ಬಾಹ್ಯ ಪ್ರಕಾಶದಿಂದ ನನಗೆ ನಿನ್ನ ಸ್ವರೂಪವು ವ್ಯಕ್ತವಾಗಿರುವುದೆಂದು ತೋರುತ್ತದೆ. ಈ ಪ್ರಕಾರವಾಗಿ ಶ್ರೀಕೃಷ್ಣನು ಆತ್ಮಸ್ವರೂಪವನ್ನು ನನಗೆ ಅರ್ಪಿಸಿರುವನು ॥೯೩॥ ನೀನು ಅಂತರ್ಯಾಮಿತ್ವದಿಂದ ನಿನ್ನ ಸ್ವರೂಪವನ್ನು ನನಗೆ ಪೂರ್ವದಲ್ಲಿಯೇ ಕೊಟ್ಟಿರುವೆ. ಆದರೆ ಈಗ ನಿನ್ನ ಭಜನೆಯು ಪ್ರಕಟವಾಗಬೇಕೆಂದು ಪುನಃ ನೀನು ಅದನ್ನು ಆವರಿಸಿಕೊಂಡಿರುವೆ ॥೯೪॥ ನಿನ್ನ ನಿಜವಾದ ಭಜನೆಯ ಲಕ್ಷಣ ಯಾವುದೆಂದರೆ, ಸರ್ವಭೂತಗಳಲ್ಲಿ ಭಗವದ್ಭಜನೆ ಮಾಡಬೇಕು. ಆಗ ಮಾತ್ರ ನೀನು ನಿಜವಾಗಿಯೂ ಪ್ರಸನ್ನನಾಗಿ ಪೂರ್ವದಲ್ಲಿ ಅರ್ಪಿಸಿರುವ ಜ್ಞಾನವನ್ನು ಮೇಲಿಂದಮೇಲೆ ಅರ್ಪಿಸುತ್ತಿರುವೆ ॥೯೫॥ ಆತ್ಮಭಜನೆಯನ್ನು ಬೆಳೆಯಿಸಿ ನನ್ನ ಜ್ಞಾನವನ್ನೇ ನನಗೆ ಅರ್ಪಿಸಿರುವೆ. ಇದಕ್ಕೇನೇ ಜ್ಞಾನೀ, ಸಾಧು ಪುರುಷರು ''ಪ್ರತ್ಯಾರ್ಪಣ'' ಎಂದು ಹೇಳುವರು ॥೯೬॥ ನಿನ್ನ ಭಕ್ತಿಯನ್ನು ಬೆಳೆಸಿ ನನ್ನ ಜ್ಞಾನವನ್ನೇ ನನ್ನ ಕೈಗೆ ಕೊಟ್ಟಿರುವೆ. ಅದನ್ನು ಕೊಟ್ಟ ಕಾರಣ ಮಾಯೆ ಮತ್ತು ವಿಕಲ್ಪವೃತ್ತಿಗಳು ನನ್ನನ್ನು ಸ್ಪರ್ಶ ಸಹ ಮಾಡಲು ಶಕ್ಯವಿಲ್ಲ ॥೯೭॥ ನೀನು ಕೊಟ್ಟಿರುವ ಯಾವ ಸ್ವರೂಪ ಸ್ಥಿತಿಯು ಅದು ಎಂದಿಗೂ ಕಲ್ಪಾಂತಕ್ಕೂ ಕೂಡ ಹೋಗಲಾರದು. ಈ ಪ್ರಕಾರವಾಗಿ ಹೇ ಶ್ರೀಕೃಷ್ಣನೇ, ನಿಜವಾಗಿಯೂ ನೀನು ನನಗೆ ದೊಡ್ಡ ಉಪಕಾರ ಮಾಡಿರುವೆ ॥೯೮॥

ಯಾಪರೀ ತೂ ಅತಿಕೃಪಾಳೂ । ನಿಜದಾಸಾಲಾಗೀ ದಯಾಳೂ । ತ್ಯಾ ತುಜ ಸಾಂಡೂನಿಯಾ ಬರಳೂ । ಆನಾಸೀ ಗೋವಳೂ ಭಜೋ ಧಾಂವೇ ॥೯೯॥ ತ್ಯಜೂನಿ ಸ್ವಾಮೀ ಹೃಷೀಕೇಶು । ಆನ ಭಜೇಲ ತೋ ಕೇವಳ ಪಶು । ಪಶೂಂಹೀಮಾಜೀ ತೋ ರಾಸಭೇಶು । ಜ್ಯಾಸೀ ನಾಹೀ ವಿಶ್ವಾಸು ಹರಿಭಜನೀ ॥೨೦೦॥ ತುವಾ ಜನಾಸೀ ಕೇಲಾ ಉಪಕಾರು । ಇಂದ್ರಿಯಾ ಪಾಟವ್ಯ ಜ್ಞಾನಾಧಿಕಾರು । ತೋ ಉಪಕಾರ ವಿಸರೇ ಜೋ ನರು । ತೋ ಜಾಣ ಸಾಚಾರು ಕೃತಘ್ನ ॥೨೦೧॥ ಜೇ ಜಾಣತೀ ತುಝ್ಯಾ ಉಪಕಾರಾತೇ । ತೇ ಕಾಯಾ ವಾಚಾ ಚಿತ್ತೇ ವಿತ್ತೇ । ಕದಾ ನ ಭಜತೀ ಆನಾತೇ । ಮಜ ನಿಶ್ಚಿತೇ ಮಾನಿಲೇ ॥೨೦೨॥ ಮಜ ನಿಮಿತ್ತ ಕರೂನಿಯಾ ಜಾಣ । ಜೇ ತ್ವಾಂ ಪ್ರಕಾಶಿಲೇ ನಿಜಾತ್ಮಜ್ಞಾನ । ತೇಣೇ ಜಗಾಚೇ ಉದ್ಧರಣ । ಶ್ರವಣಮನನ ಕೀರ್ತನೇ ॥೨೦೩॥ ಯಾಪರೀ ತೂ ಕೃಪಾಳು ಪೂರ್ಣ । ಮಾಝೇ ಭೇದಿಲೇ ಭವಬಂಧನ । ತೇಚಿ ಅರ್ಥೀಚೇ ನಿರೂಪಣ । ಉದ್ಧವ ಆಪಣ ಸ್ವಯೇ ಸಾಂಗೇ ॥೨೦೪॥

ವೃಕ್ಣಶ್ಚ ಮೇ ಸುದೃಢಃ ಸ್ನೇಹಪಾಶೋ ದಾಶಾರ್ಹವೃಷ್ಣ್ಯಂಧಕಸಾತ್ವತೇಷು ।
ಪ್ರಸಾರಿತಃ ಸೃಷ್ಟಿವಿವೃದ್ಧಯೇ ತ್ವಯಾ ಸ್ವಮಾಯಯಾ ಹ್ಯಾತ್ಮಸುಬೋಧಹೇತಿನಾ ॥೯॥

ಅರ್ಥ:- ನೀವು ನಿಮ್ಮ ಮಾಯೆಯಿಂದ ಸೃಷ್ಟಿವೃದ್ಧಿಗಾಗಿ ದಾಶಾರ್ಹ, ವೃಷ್ಣಿ, ಅಂಧಕ ಮತ್ತು ಸಾತ್ವತವಂಶದಲ್ಲಿ ಯಾದವರ ಜೊತೆಯಲ್ಲಿನನ್ನನ್ನು ಸದೃಢವಾದ ಸ್ನೇಹಪಾಶದಿಂದ ಕಟ್ಟಿಹಾಕಿದ್ದಿರಿ. ಇಂದು ತಾವು ಆತ್ಮಬೋಧೆಯ ತೇಜಸ್ವೀ ಖಡ್ಗದಿಂದ ಆ ಬಂಧನವನ್ನು ಅನಾಯಾಸವಾಗಿ ಮುರಿದು ಒಗೆದಿರುವಿರಿ.

ತುವಾ ಮಾಯೇನೇ ಸೃಜಿಲೇ ಜನ । ತೇ ಸೃಷ್ಟಿ ವ್ಹಾವಯಾ ವರ್ಧಮಾನ । ಸ್ತ್ರೀ ಪುತ್ರ ಸುಹೃದ ಸಜ್ಜನ । ಹಾ ಸ್ನೇಹ ಸಂಪೂರ್ಣ ವಾಢವಿಲಾ ॥೨೦೫॥ ಮೀ ಜನ್ಮಲೋ ಯಾದವ ಕುಳಾಂತ । ತೇಥ ವೃಷ್ಣೀ-ಅಂಧಕ-ಸಾತ್ವತ । ಇತ್ಯಾದಿ ಸಹೃದ ಸಮಸ್ತ । ಅತಿಸ್ನೇಹಯುಕ್ತ ಆಪ್ತತ್ವೇ ॥೨೦೬॥ ತೇ ಸುಹೃದಸ್ತ್ರೀಪುತ್ರ ಸ್ನೇಹಬಂಧನ । ತ್ಯಾ ಸ್ನೇಹಪಾಶಾಚೇ ಭೇದನ । ಮಾಝೇ ಬಾಳಪಣೇ ತ್ವಾಂ ಕೇಲೇ ಜಾಣ । ಜೇ ಖೇಳತಾ ತುಝೇ ಧ್ಯಾನ ಮಜ ಲಾಗಲೇ ॥೨೦೭॥ ಜೇವೀ ವೋಡಂಬರೀ ಖೇಳತಾ ಖೇಳ । ಮೋಹಿನೀ ವಿದ್ಯಾ ಪ್ರೇರೀ ಪ್ರಬಳ । ತೇ ವಿದ್ಯೇಚೇ ಆವರಾವಯಾ ಬಳ । ಶಕ್ತ ಕೇವಳ ಖೇಳ ಖೇಳವಿತಾ ॥೨೦೮॥ ತೇವೀ ತುಝೀ ಸ್ವಮಾಯಾ ಜಾಣ । ಜೇ ಕಾ ಸದಾ ತುಜ ಅಧೀನ । ತಿಚೇ ಸ್ನೇಹಪಾಶ ದಾರುಣ । ತೇಣೇ ಬಾಂಧೋನಿ ಜನ ಅತಿಬದ್ಧ ಕೇಲೇ ॥೨೦೯॥

ಹೀಗೆ ನೀನು ಅತ್ಯಂತ ಕೃಪಾವಂತನು ಮತ್ತು ನಿನ್ನ ಭಕ್ತರ ವಿಷಯದಲ್ಲಿ ದಯಾವಂತನು. ಹೀಗಿರುವ ನಿನ್ನನ್ನು ಮರೆತು ಮೂಢ ಅಜ್ಞಾನಿ ಜನರು ಇತರರನ್ನು ಭಜಿಸಲಿಕ್ಕೆ ಧಾವಿಸುತ್ತಿರುವರು ॥೯೯॥ ಶ್ರೀಕೃಷ್ಣಸ್ವಾಮಿಯನ್ನು ಬಿಟ್ಟುಕೊಟ್ಟು ಯಾವನು ಬೇರೆಯವರ ಭಜನೆಗೆ ಹತ್ತುವನೋ, ಅವನಲ್ಲಿ ಹರಿಭಜನೆಗಾಗಿ ವಿಶ್ವಾಸವಿರುವುದಿಲ್ಲ. ಅವನು ಕೇವಲ ಪಶು ಅಷ್ಟೇ ಅಲ್ಲ ಪಶುಗಳಲ್ಲಿನ ದೊಡ್ಡ ಕತ್ತೆ ಎಂದು ತಿಳಿಯಬೇಕು ॥೨೦೦॥ ನೀನು ಜನರಲ್ಲಿ ಉಪಕಾರ ಮಾಡಿರುವೆ. ಅವರಿಗೆ ಅವ್ಯಂಗ ಇಂದ್ರಿಯಗಳನ್ನು ಕೊಟ್ಟು ಜ್ಞಾನದ ಅಧಿಕಾರ ನೀಡಿರುವೆ. ಇಂತಹ ಉಪಕಾರವನ್ನು ಯಾವ ಮನುಷ್ಯನು ಮರೆಯುವನೋ, ಅವನು ನಿಶ್ಚಯವಾಗಿ ಕೃತಘ್ನನಾಗಿರುವನು ಎಂದು ತಿಳಿಯಬೇಕು ॥೨೦೧॥ ಯಾರು ನಿನ್ನ ಉಪಕಾರ ತಿಳಿದಿರುವರೋ, ಅವರು ಕಾಯಾ, ವಾಚಾ, ಮನಸಾ ಹಾಗೂ ಧನದಿಂದ ಬೇರೆಯವರ ಭಜನೆ ಎಂದಿಗೂ ಮಾಡಲಾರರು. ಇದು ನನಗೂ ಕೂಡ ನಿಶ್ಚಯಪೂರ್ವಕವಾಗಿ ಮಾನ್ಯವಾಗಿರುವುದು ॥೨೦೨॥ ನನ್ನನ್ನು ನಿಮಿತ್ತನನ್ನಾಗಿ ಮಾಡಿ ನೀನು ಯಾವ ಆತ್ಮಜ್ಞಾನವನ್ನು ಪ್ರಕಟ ಮಾಡಿರುವಿಯೋ ಅದರ ಶ್ರವಣದಿಂದ, ಮನನದಿಂದ ಹಾಗೂ ಕೀರ್ತನೆಯಿಂದ ಸರ್ವ ಜಗತ್ತಿನ ಉದ್ಧಾರವು ನಿಶ್ಚಿತವಾಗಿ ಆಗುವುದು ॥೨೦೩॥ ಈ ಪ್ರಕಾರವಾಗಿ ನೀನು ಕೃಪೆಯ ಮಳೆಗರೆದು ನನ್ನ ಭವಭಯಬಂಧನ ಮುರಿದು ಒಗೆದಿರುವೆ. ಇದೇ ಅರ್ಥದ ವಿಷಯವನ್ನು ಕುರಿತು ಉದ್ಧವನು ತಾನು ಸ್ವತಃ ನಿರೂಪಣೆ ಮಾಡುತ್ತಿರುವನು ॥೨೦೪॥

ನೀನು ನಿನ್ನ ಮಾಯೆಯಿಂದ ಲೋಕಗಳನ್ನು ಉತ್ಪನ್ನಗೊಳಿಸಿರುವೆ. ಈ ಯಾವ ಸೃಷ್ಟಿ ಬೆಳೆಯುವುದಕ್ಕಾಗಿ ಸ್ತ್ರೀ, ಪುತ್ರ, ಸುಹೃದ, ಸಜ್ಜನ ಇವರಲ್ಲಿನ ಸ್ನೇಹ ಪರಿಪೂರ್ಣವಾಗಿ ಬೆಳೆಸಿರುವೆ ॥೨೦೫॥ ನಾನು ಯಾದವಕುಲದಲ್ಲಿ ಜನಿಸಿದೆ. ಅವರಲ್ಲಿ ವೃಷ್ಣೀ, ಅಂಧಕ, ಸಾತ್ವತ ಇತ್ಯಾದಿ ನನ್ನ ಸರ್ವ ಬಂಧು ಬಳಗದವರು ಆಪ್ತರಾದ್ದರಿಂದ ನನಗೆ ಅತ್ಯಂತ ಪ್ರಿಯರಾಗಿದ್ದರು ॥೨೦೬॥ ನಾನು ಆಟವಾಡುವ ಚಿಕ್ಕ ವಯಸ್ಸಿನಲ್ಲಿಯೇ ನನಗೆ ನಿನ್ನ ಧ್ಯಾನ ಹತ್ತಿಕೊಂಡಿತ್ತು. ಅದೇ ಸಮಯಕ್ಕೆ ಆ ಯಾವ ಅಣ್ಣತಮ್ಮಂದಿರ ಹಾಗೂ ಸ್ತ್ರೀ ಪುತ್ರರ ಬಂಧನೆಯನ್ನು ನೀನು ಮುರಿದು ಹಾಕಿರುವೆ ॥೨೦೭॥ ಗಾರುಡಿಯು ತನ್ನ ಯಾವ ಆಟದಲ್ಲಿ ಮೋಹಿನಿ ವಿದ್ಯೆಯನ್ನು ಹರಡಿಸಿ ಕಣ್ಣುಕಟ್ಟು ಮಾಡುವನು. ಆ ವಿದ್ಯೆಯ ಪ್ರಭಾವ ಆವರಿಸುವ ಸಾಮರ್ಥ್ಯವು ಕೇವಲ ಆ ಆಟ ಆಡುವವನಲ್ಲಿ ಮಾತ್ರ ಇರುವುದು ॥೨೦೮॥ ಅದರಂತೆ ನಿನ್ನ ಈ ಮಾಯೆಯು ಯಾವಾಗಲೂ ನಿನ್ನ ಆಧೀನದಲ್ಲಿರುವುದು. ಅದರ ಸ್ನೇಹಪಾಶವು ಮಹಾಭಯಂಕರವಾಗಿರುವುದು. ಅದು ಜನರನ್ನು ಅತ್ಯಂತ ಬದ್ಧರನ್ನಾಗಿ ಮಾಡಿರುವುದು ॥೨೦೯॥

ತೇ ಮಾಝೋ ಸ್ನೇಹಪಾಶ ಜಾಣ । ತ್ವಾಂ ಪೂರ್ವೀಂಚ ಛೇದಿಲೇ ಆಪಣ । ಜೈ ಮಜ ಹೋತೇ ಬಾಳಪಣ । ತೈಚಿ ಕೃಪಾ ಪೂರ್ಣ ಮಜ ಕೇಲೀ ॥೨೧೦॥ ತೇ ಭವಬಂಧ ಛೇದಿತೇ ಜೇ ಶಸ್ತ್ರ । ತುವಾ ನಿಜಯುಕ್ತೀ ಘೋಡೋನಿ ಧಾರ । ಸತೇಜ ಕರೂನಿಯಾ ಖಡತರ । ಮಜಲಾಗೀ ಸ್ವತಂತ್ರ ಅರ್ಪಿಲೇ ॥೨೧೧॥ ಜೇಣೇ ಶಸ್ತ್ರಬಳೇ ಮೀ ಜಾಣ । ಛೇದೂ ಶಕೇ ಜಗಾಚೇ ಬಂಧನ । ಏವಢೀ ಮಜವರೀ ಕೃಪಾ ಪೂರ್ಣ । ಕೇಲೀ ಆಪಣ ದಯಾಲುತ್ವೇ ॥೨೧೨॥ ಸಂಸಾರ ದುಃಖರೂಪ ಜೋ ಕಾ ಏಥೇ । ತೋಚಿ ಸುಖರೂಪ ಜಾಹಲಾ ಮಾತೇ । ಐಶಿಯೇ ಕೃಪೇಚೇನಿ ಹಾತೇ । ಮಜ ನಿಶ್ಚಿತೇ ಉದ್ಧರಿಲೇ ॥೨೧೩॥ ಮೀ ಕೃತಕೃತ್ಯ ಜಾಹಲೋ ಏಥೇ । ಪರೀ ಕಾಂಹೀ ಏಕ ಮಾಗೇನ ತೂತೇ । ತೇ ಕೃಪಾ ಕರಾವೀ ಶ್ರೀಕೃಷ್ಣನಾಥೇ । ಮ್ಹಣೋನಿ ಚರಣಾತೇ ಲಾಗಲಾ ॥೨೧೪॥

ನಮೋಽಸ್ತು ತೇ ಮಹಾಯೋಗಿನ್ ಪ್ರಪನ್ನಮನುಶಾಧಿ ಮಾಮ್ । ಯಥಾ ತ್ವಚ್ಚರಣಾಂಭೋಜೇ ರತಿಃ ಸ್ಯಾದನಪಾಯಿನೀ ॥೪೦॥

ಅರ್ಥ:- ಮಹಾಯೋಗೇಶ್ವರರೇ, ನಿಮಗೆ ನನ್ನ ನಮಸ್ಕಾರಗಳು. ಈಗ ಕೃಪೆದೋರಿ ಶರಣಾಗತನಾದ ನನಗೆ ನಿಮ್ಮ ಚರಣ ಕಮಲಗಳಲ್ಲಿ ವಿಚಲಿತನಾಗದಂತೆ ದಯವಿಟ್ಟು ಉಪದೇಶಿಸಿರಿ.

ನ ಪುಢತೇ ಘಡವಿಸೀ ಆಪಣ । ನಾಥಿಲೇ ದಾವಿಸೀ ವಿಂದಾನ । ಜಿತ್ಯಾ ಮೇಲ್ಯಾ ಲಾವೂನಿ ಲಗ್ನ । ನಾಂದವಿಸೀ ಸಂಪೂರ್ಣ ನಿಜಮಾಯಾ ॥೨೧೫॥ ಜೇ ಯೋಗಿಯಾಂಸೀ ಅತಿದುಸ್ತರ । ಜಿಣೇ ನಾಡಿಲೇ ಸ್ರಷ್ಟಾ ಶಂಕರ । ತೇ ಮಾಯಾ ತುಝೀ ಕಿಂಕರ । ತೂ ಪರಾತ್ಪರ ಮಹಾಯೋಗೀ ॥೨೧೬॥ ತ್ಯಾ ತುಝ್ಯಾ ಕೃಪೇಸ್ತವ ಜಾಣ । ಮೀ ಕೃತಕೃತ್ಯ ಜಾಹಲೋ ಆಪಣ । ನ ದೇಖೇ ಭವಭಯಾದಿ ದುಃಖಭಾನ । ಸ್ವಾನಂದೀ ನಿಮಗ್ನ ಸರ್ವದಾ ॥೨೧೭॥ ದೃಶ್ಯ ದ್ರಷ್ಟಾ ದರ್ಶನ । ನಾಹೀ ತ್ರಿಪುಟೀ ನಾ ತ್ರಿಗುಣ । ಹಾರಪಲೇ ಮೀ ತೂ ಪಣ । ಸ್ವಾನಂದಪೂರ್ಣ ನಿಜಬೋಧೇ ॥೨೧೮॥ ನಿಜಬೋಧೇ ಸ್ವಾನಂದಪೂರ್ಣ । ಹೇಹೀ ಬೋಲ ಮಾಯಿಕ ಜಾಣ । ಪರಾದಿವಾಚಾ ಪಾಡಿಲೇ ಶೂನ್ಯ । ಯಾಲಾಗೀ ಮೌನ ವೇದವಾದಾ ॥೨೧೯॥ ಕಾರ್ಯ ಕಾರಣ ಕರ್ತವ್ಯತಾ । ಮಜ ಉರಲೀ ನಾಹೀ ಸರ್ವಥಾ । ತರೀ ಕಾಂಹೀ ಏಕ ಶ್ರೀಕೃಷ್ಣನಾಥಾ । ತುಜ ಮೀ ಆತಾ ಮಾಗೇನ ॥೨೨೦॥ ಜೇವೀ ಕಾ ಬಾಳಕಾಚಾ ಥಾಯಾ । ಕಳವಳೋನಿ ಪುರವೀ ಮಾಯಾ । ತೇವೀ ಮಾಝಿಯಾ ವಚನಾ ಯಯಾ । ಶ್ರೀಕೃಷ್ಣರಾಯಾ ಅವಧಾರೀ ॥೨೨೧॥

ಇಂತಹ ನನ್ನ ಸ್ನೇಹಪಾಶವನ್ನು ನೀನು ಪೂರ್ವದಲ್ಲಿಯೇ ಛೇದಿಸಿ ಒಗೆದಿರುವೆ. ನನ್ನ ಬಾಲತ್ವದಲ್ಲಿಯೇ ನಿನ್ನ ಪೂರ್ಣ ಕೃಪೆಯು ನನ್ನ ಮೇಲೆ ಇದ್ದುಕೊಂಡಿತ್ತು ॥೨೧೦॥ ಭವಬಂಧದ ಛೇದ ಮಾಡಲು ಆ ಯಾವ ಶಸ್ತ್ರಕ್ಕೆ ನೀನು ನಿನ್ನ ಯುಕ್ತಿಯಿಂದ ತೀಕ್ಷ್ಣವಾದ ಧಾರೆ ಒಡಿದು ತೇಜಸ್ವಿಯನ್ನಾಗಿ ಮಾಡಿದೆ. ಹಾಗೂ ನನಗೆ ಸ್ವಾತಂತ್ರ ಕೊಟ್ಟುಬಿಟ್ಟೆ ॥೨೧೧॥ ಆ ಯಾವ ಶಸ್ತ್ರದ ಆಧಾರದಿಂದ ನಾನು ಜಗತ್ತಿನ ಬಂಧನೆಯನ್ನು ಮುರಿಯಲು ಸಾಧ್ಯನಾದೆನು. ನೀನು ದಯಾಪೂರ್ವಕವಾಗಿ ಇಷ್ಟೊಂದು ಕೃಪೆ ನನ್ನಲ್ಲಿ ಮಾಡಿರುವೆ ॥೨೧೨॥ ದುಃಖರೂಪವಾಗಿರುವ ಈ ಲೋಕದ ಸಂಸಾರವು ನನಗೆ ಸುಖರೂಪವಾಯಿತು. ನಿನ್ನ ಕೃಪೆಯ ಸಿದ್ಧಹಸ್ತದಿಂದ ನೀನು ನನ್ನನ್ನು ನಿಜವಾಗಿಯೂ ಉದ್ಧಾರ ಮಾಡಿರುವೆ ॥೨೧೩॥ ಆದ್ದರಿಂದ ನಾನು ನಿಜವಾಗಿಯೂ ಈ ಜನ್ಮದಲ್ಲಿ ಕೃತಕೃತ್ಯನಾಗಿರುವೆನು. ಈಗ ನಾನು ನಿನ್ನ ಬಳಿಯಲ್ಲಿ ಒಂದು ಬೇಡಿಕೆಯನ್ನು ಬೇಡುತ್ತಿರುವೆನು. ಹೇ ಶ್ರೀಕೃಷ್ಣನೇ, ಅದನ್ನು ಕೊಡುವ ಕೃಪೆ ಮಾಡಬೇಕು ಎಂದು ಹೇಳುತ್ತ ಉದ್ಧವನು ಶ್ರೀಕೃಷ್ಣನ ಚರಣಗಳನ್ನು ಒಡಿದುಕೊಂಡನು ॥೨೧೪॥

ನಿನ್ನ ಮಾಯೆಯು ಅಘಟಿತ ಘಟನೆ ಮಾಡುವುದು. ಇಲ್ಲದ ಮಾತಿನ ಚಮತ್ಕಾರ ತೋರಿಸುವುದು. ಚೈತನ್ಯ ಮತ್ತು ಜಡ ದೇಹದ ಲಗ್ನ ಹಚ್ಚುವುದು. ಹೀಗೆ ಎಲ್ಲರನ್ನೂ ವರ್ತಿಸಲು ಕಾರಣವಾಗಿರುವುದು ॥೨೧೫॥ ಈ ಮಾಯೆಯು ಯೋಗಿಗಳವರಿಗೂ ಅತಿದುಸ್ತರವಾಗಿರುವುದು. ಈಕೆಯು ಬ್ರಹ್ಮದೇವ ಮತ್ತು ಶಂಕರ ಇವರಿಗೂ ಕೂಡ ಠಕ್ಕಿಸದೇ ಬಿಟ್ಟಿಲ್ಲ. ಇಂತಹ ಈ ಮಾಯೆಯು ನಿನ್ನ ಆಜ್ಞೆ ಪಾಲನೆ ಮಾಡುವ ದಾಸಿಯಾಗಿರುವಳು. ನೀನು ಮಾತ್ರ ಪರಾತ್ಪರ ಮಹಾಯೋಗಿಯಾಗಿರುವೆ ॥೨೧೬॥ ನಿನ್ನ ಕೃಪೆಯಿಂದ ನನ್ನ ಜೀವನವು ಕೃತಕೃತ್ಯವಾಯಿತು. ನನಗೆ ಭವಭಯಾದಿ ದುಃಖದ ಕಲ್ಪನೆ ಕೂಡ ಇರುವುದಿಲ್ಲ. ನಾನು ಸದಾ ಸರ್ವದಾ ಸ್ವಾನಂದದಲ್ಲಿ ನಿಮಗ್ನನಾಗಿರುವೆನು ॥೨೧೭॥ ದೃಶ್ಯ, ದ್ರಷ್ಟಾ ಮತ್ತು ದರ್ಶನ ಈ ತ್ರಿಪುಟೀ ಹಾಗೂ ಮೂರು ಗುಣಗಳು ಇವೆರಡೂ ಸಹ ಇಲ್ಲದಾಗುವುವು. ನಾನು ನೀನು ಎಂಬುವುದು ಮುಗಿದ ಮಾತಾಯಿತು. ನಾನು ಮಾತ್ರ ಆತ್ಮಜ್ಞಾನದಿಂದ ಪರಿಪೂರ್ಣ ಆನಂದಿತನಾದೆನು ॥೨೧೮॥ ನಾನು ಆನಂದದಿಂದ ಆತ್ಮರೂಪನಾದೆ ಎಂದು ಹೇಳುವುದೂ ಕೂಡ ಮಿಥ್ಯೆಯಾಗಿರುವುದು. ಕಾರಣ ಪರಾದಿ ನಾಲ್ಕೂ ವಾಣಿಗಳ ಗತಿಯು ಕುಂಠಿತವಾಯಿತು. ಆ ಸಮಯದಲ್ಲಿ ವೇದವಾದವು ಮೌನ ತಾಳಿತು ॥೨೧೯॥ ಕಾರ್ಯ, ಕಾರಣ ಮತ್ತು ಕರ್ತವ್ಯ ಇವು ನನಗೆ ಯಾವುವೂ ಉಳಿಯಲೇ ಇಲ್ಲ. ಆದರೂ ಕೂಡ ಹೇ ಶ್ರೀಕೃಷ್ಣನಾಥನೇ, ನಾನು ಈಗ ನಿನ್ನ ಬಳಿ ಏನೋ ಬೇಡಬೇಕೆಂದಿದ್ದೇನೆ ॥೨೨೦॥ ತಾಯಿಯು ತನ್ನ ಬಾಲಕನ ಹಠವನ್ನು ಹೇಗೆ ತಳಮಳೀತ ಅಂತಃಕರಣದಿಂದ ಪೂರೈಸುತ್ತಿರುವಳೋ, ಅದರಂತೆ ನನ್ನ ಈ ಬೇಡಿಕೆಯನ್ನು ಹೇ ಶ್ರೀಕೃಷ್ಣರಾಯನೇ, ಮನಮುಟ್ಟಿ ಕೇಳು ॥೨೨೧॥

ಹೇ ಅಂತೀಚೇ ಮಾಝೇ ಮಾಗತೇಪಣ । ದೇವೇ ಅವಧಾರಾವೇ ಸಾವಧಾನ । ವಂದೂನಿಯಾ ಶ್ರೀಕೃಷ್ಣಚರಣ । ಅಗಮ್ಯ ವಿಂದಾನ ಮಾಗತ ॥೭೨೨॥ ಮಜ ಥೋರ ಭ್ರಮ ಹೋತಾ ಚಿತ್ತೀ । ಗೋಡ ಅಸೇಲ ಜೀವನ್ಮುಕ್ತೀ । ತೇಥ ನ ದೇಖೇ ತುಝೀ ಭಕ್ತೀ । ಕೋರಡೀ ಮುಕ್ತೀ ಮಜ ನ ಲಗೇ ॥೭೨೩॥ ಸದ್ಗುರು ಕೃಪಾವಚನೋಕ್ತೀ । ಶಿಷ್ಯ ತತ್ಕಾಳ ಲಾಹೇ ಮುಕ್ತೀ । ಜ್ಯಾಂತ ಸದ್ಗುರೂಚೀ ನಾಹೀ ಭಕ್ತೀ । ಜಳೋ ತೀ ಮುಕ್ತೀ ಮಜ ನ ಲಗೇ ॥೭೨೪॥ ಯಾಲಾಗೀ ತುಜ ಶರಣ । ಮಾಗುತೇನ ಮೀ ಆಲೋ ಜಾಣ । ಸಾಯುಜ್ಯಾಹೀವರೀ ಪೂರ್ಣ । ತುಝೇ ಗುರುಭಜನ ಮಜ ದೇಈ ॥೭೨೫॥ ಮಾಗಾ ಬಹುತೀ ಕೇಲೀ ಭಕ್ತೀ । ಮ್ಹಣಸೀ ತ್ಯಾಂಸೀ ಮ್ಯಾ ದಿಧಲೀ ಮುಕ್ತೀ । ಪರೀ ಮುಕ್ತಿವರತೀ ಭಕ್ತೀ । ನಾಹೀ ಮಜಪ್ರತೀ ಮಾಗಿತಲೀ ॥೭೨೬॥ ಮಾಗಾ ಜಿಂಹೀ ಜಿಂಹೀ ಕೇಲೀ ಭಕ್ತೀ । ತ್ಯಾಸೀ ತ್ವಾಂ ಠಕಿಲೇ ದೇಊನಿ ಮುಕ್ತೀ । ತೇ ಠಕಡೇಪಣ ಶ್ರೀಪತೀ । ನ ಚಲೇ ಮಜಪ್ರತೀ ಸರ್ವಥಾ ॥೭೨೭॥ ಜ್ಯಾಂಚೀ ಅಹಂಕಾರಶೂನ್ಯ ವೃತ್ತೀ । ಜಾಹಲೇ ಆತ್ಮಾರಾಮ ಸಹಜಗತೀ । ತೇಹೀ ಅಹೇತುಕ ಭಕ್ತೀ ಕರಿತೀ । ಐಶೀ ಸ್ವರೂಪಸ್ಥಿತೀ ಪೈ ತುಝೀ ॥೭೨೮॥

(ಸಮಂತ ಶ್ಲೋಕ) ಆತ್ಮರಾಮಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ ।
ಕುರ್ವಂತ್ಯಹೈತುಕೀ ಭಕ್ತಿಮಿತ್ಥಂಭೂತಗುಣೋ ಹರಿಃ ॥

ಅರ್ಥ:- ಆತ್ಮತತ್ವದಲ್ಲಿ ತನ್ಮಯರಾಗಿರುವ ಹಾಗೂ ನಿರ್ಗ್ರಂಥ ಮುನಿಗಳೂ ಕೂಡ ಸರ್ವಶಕ್ತಿಮಾನ ಹರಿಯ ನಿಷ್ಕಾಮ ಭಕ್ತಿ ಮಾಡುವರು. ಕಾರಣ ಹರಿಯು ಇಂತಹ ಲೋಕೋತ್ತರ ಗುಣಗಳಿಂದ ಯುಕ್ತನಾಗಿರುವನು.

ತೇಥ ತ್ಯಜೋನಿಯಾ ತುಝೀ ಗುರುಭಕ್ತೀ । ಮುಕ್ತೀ ಮಾಗಣೇ ಹೇಚಿ ಭ್ರಾಂತೀ । ಅಸೋ ತುಝೀ ನ ಲಗೇ ಮುಕ್ತಿ । ಮಾಝೀ ಗುರುಭಕ್ತೀ ಮಜ ದೇಈ ॥೭೨೯॥ ಜ್ಯಾಸೀ ಆಕಳಲೀ ನಿಜಮುಕ್ತತಾ । ಮ್ಹಣಸೀ ತ್ಯಾಸೀ ಭಕ್ತೀ ನೇದವೇ ಆತಾ । ಹೇ ಮಜಸೀ ಬೋಲೋ ನಕೋ ಕಥಾ । ತುಝೀ ಸಮರ್ಥತಾ ಮೀ ಜಾಣೇ ॥೭೩೦॥ ತೂ ನ ಘಡೇ ತೇ ಘಡವಿಸೀ । ನ ಚಳೇ ತೇ ಚಾಳವಿಸೀ । ನವ್ಹೇ ತೇ ತೂ ಹೋಯ ಕರಿಸೀ । ನಾಹೀ ಸಾಮರ್ಥ್ಯಾಚೀ ಮರ್ಯಾದಾ ॥೭೩೧॥ ಅಗಮ್ಯ ಸಾಮರ್ಥ್ಯಾಚೀ ಗಣನಾ । ಬುಡತ್ಯಾ ತಾರೂನಿ ಪಾಷಾಣಾ । ತ್ಯಾವರೀ ತಾರಿಸೀ ವಾನರಸೇನಾ । ಸೇತುಬಂಧನಾ ಶ್ರೀರಾಮಾ ॥೭೩೨॥ ಕೇವಳ ಜೇ ಕಾ ವನಚರ । ಪಾಲೇಖಾಈರ ವಾನರ । ಚಾರೀ ಮುಕ್ತೀ ತ್ಯಾಂಚ್ಯಾ ಕಿಂಕರ । ತ್ಯಾಂಸೀ ಸುರವರ ವಂದಿತೀ ಸ್ವಯೇ ॥೭೩೩॥

ಈ ನನ್ನ ಬೇಡಿಕೆಯು ಕೊನೆಯದ್ದಾಗಿದೆ. ದೇವನು ಇದನ್ನು ಲಕ್ಷಕೊಟ್ಟು ಕೇಳಬೇಕು ಎಂದು ಹೇಳುತ್ತ ಉದ್ಧವನು ಶ್ರೀಕೃಷ್ಣನ ಚರಣಗಳಿಗೆ ವಂದಿಸುತ್ತ ಅಗಮ್ಯವಾದ ಬೇಡಿಕೆ ಬೇಡಿದನು ॥೭೨೨॥ ನನ್ನ ಮನದಲ್ಲಿ ಇಲ್ಲಿಯವರೆಗೆ ಜೀವನ್ಮುಕ್ತಿಯು ಅತಿಶಯ ಉತ್ಕೃಷ್ಟವಾಗಿದೆ ಎಂಬ ದೊಡ್ಡ ಭ್ರಮೆಯಾಗಿತ್ತು. ಆದರೆ ಅದರಲ್ಲಿ ನಿನ್ನ ಭಕ್ತಿ ಕಾಣುತ್ತಿಲ್ಲ. ಆದ್ದರಿಂದ ಇಂತಹ ಬರಿದಾದ ಮುಕ್ತಿ ನನಗೆ ಬೇಡ ॥೭೨೩॥ ಸದ್ಗುರುವಿನ ಕೃಪೆಯಿಂದ ಶಿಷ್ಯನಿಗೆ ತತ್ಕಾಲದಲ್ಲಿ ಮುಕ್ತಿ ಲಭಿಸುವುದು. ಆದರೆ ಅಲ್ಲಿ ನಿನ್ನ ಭಕ್ತಿಯು ಕಾಣಿಸುವುದಿಲ್ಲ. ಇಂತಹ ಮುಕ್ತಿಗೆ ಬೆಂಕಿ ಹತ್ತಲಿ, ನನಗೆ ಮಾತ್ರ ಈ ಮುಕ್ತಿ ಬೇಡವೇ ಬೇಡ ॥೭೨೪॥ ಆದ್ದರಿಂದ ನಾನು ನಿನಗೆ ಶರಣು ಬಂದಿರುವೆನು. ಸಾಯುಜ್ಯಮುಕ್ತಿಗಿಂತಲೂ ಶ್ರೇಷ್ಠವಾಗಿರುವ ಗುರುಭಜನೆ ನನಗೆ ದಯಪಾಲಿಸು ॥೭೨೫॥ ಪೂರ್ವದಲ್ಲಿ ಅನೇಕರು ಭಕ್ತಿ ಮಾಡಿದರು. ನಾನು ಅವರಿಗೆ ಮುಕ್ತಿ ಕೊಟ್ಟಿರುವೆನು. ಆದರೆ ಅವರಲ್ಲಿ ಒಬ್ಬರೂ ಕೂಡ ಮುಕ್ತಿಯ ಮೇಲಾಗಿರುವ ಭಕ್ತಿ ಯಾರೂ ಕೇಳಿಲ್ಲವೆಂದು ನೀನು ಹೇಳಬಹುದು ॥೭೨೬॥ ಈ ಪೂರ್ವದಲ್ಲಿ ಯಾರು ಯಾರು ನಿನ್ನ ಭಕ್ತಿ ಮಾಡಿದರೋ, ಅವರನ್ನು ನೀನು ಮುಕ್ತಿಕೊಟ್ಟು ಠಕ್ಕಿಸಿರುವೆ. ಆದರೆ ಹೇ ಶ್ರೀಕೃಷ್ಣನೇ, ನನ್ನಲ್ಲಿ ಮಾತ್ರ ನೀನು ಹಾಗೆ ವರ್ತಿಸಿದರೆ ಅದು ಸರ್ವಥಾ ನಡೆಯುವುದಿಲ್ಲ ॥೭೨೭॥ ಯಾರ ವೃತ್ತಿಯು ಅಹಂಕಾರಶೂನ್ಯವಾಗಿ ಯಾರು ಆತ್ಮಾರಾಮಸ್ವರೂಪರಾಗಿರುವರೋ, ಅವರೂ ಕೂಡ ನಿನ್ನ ನಿಷ್ಕಾಮ ಭಕ್ತಿ ಮಾಡುವರು. ಹೀಗೆ ನಿನ್ನ ಸ್ವರೂಪಸ್ಥಿತಿಯಾಗಿರುವುದು ॥೭೨೮॥

ಆದ್ದರಿಂದ ನಿನ್ನ ಗುರುಭಕ್ತಿ ಬಿಟ್ಟುಕೊಟ್ಟು ಕೇವಲ ಮುಕ್ತಿ ಬೇಡುವಿಕೆಯು ಇದು ಕೇವಲ ಭ್ರಾಂತಿಯಾಗಿರುವುದು. ನಿನ್ನ ಈ ಮುಕ್ತಿಯು ನಿಜವಾಗಿಯೂ ನನಗೆ ಬೇಡವೇ ಬೇಡ. ನನಗೆ ನಿಷ್ಕಾಮ ಗುರುಭಕ್ತಿ ಬೇಕು ॥೭೨೯॥ ಒಮ್ಮೆ ಮುಕ್ತಿ ಸಿಕ್ಕಾಗ ಆತನಿಗೆ ಪರಮ ಭಕ್ತಿ ಕೊಡಲು ಬರುವುದಿಲ್ಲವೆಂದು ನೀನು ಹೀಗೆ ಹೇಳಿದರೆ ಈ ಮಾತನ್ನು ನನಗೆ ಹೇಳಲೇ ಬೇಡ. ಕಾರಣ ನಿನ್ನ ಸಾಮರ್ಥ್ಯ ನಾನು ಪರಿಪೂರ್ಣವಾಗಿ ತಿಳಿದಿರುವೆನು ॥೭೩೦॥ ಯಾವುದು ಎಂದಿಗೂ ಆಗಲು ಸಾಧ್ಯವಿಲ್ಲವೋ, ಅದನ್ನು ನೀನು ಸಾಧಿಸಿ ತೋರಿಸುವೆ. ನಡೆಯಲಾರದ್ದೆಲ್ಲವನ್ನೂ ನಡೆಯಿಸುವೆ. ಯಾರಿಗೂ ಮಾಡಲು ಬಾರದನ್ನು ನೀನು ಮಾಡಿ ತೋರಿಸುವೆ. ನಿನ್ನ ಸಾಮರ್ಥ್ಯಕ್ಕೆ ಎಣೆಯೇ ಇಲ್ಲ ॥೭೩೧॥ ನಿನ್ನ ಅಗಾಧ ಸಾಮರ್ಥ್ಯ ಅಳೆಯಲು ಬರುವುದಿಲ್ಲ. ಹೇ ಶ್ರೀರಾಮನೇ, ಮುಳುಗುವ ಕಲ್ಲುಗಳನ್ನು ನೀರಿನಲ್ಲಿ ತೇಲಿಸಿರುವೆ. ಅದರಮೇಲೆ ವಾನರ ಸೇನೆ ಕರೆದೊಯ್ದಿರುವೆ ॥೭೩೨॥ ಕೇವಲ ವನದಲ್ಲಿ ವಾಸಿಸುವ ಹಾಗೂ ಎಲೆಗಳನ್ನು ತಿನ್ನುವ ವಾನರರಿಗೆ ನಾಲ್ಕೂ ಮುಕ್ತಿಗಳು ಅವರ ಮನೆಯ ಆಳಾದವು. ಮಹಾ ಮಹಾ ದೇವತೆಗಳವರೂ ಸಹ ಅವರನ್ನು ವಂದಿಸಿದರು ॥೭೩೩॥

ಕೇವಳ ಜ್ಯಾ ಕಾ ವ್ಯಭಿಚಾರಿಣೀ । ಶೇಖೀ ಜ್ಯಾ ಘುರಟಾ ಗೌಳಣೀ । ಮೋಕ್ಷ ಲಾಗೇ ತ್ಯಾಂಚ್ಯಾ ಚರಣೀ । ಜೇ ಬ್ರಹ್ಮಾ ಲೋಟಾಂಗಣೀ ಚರಣರಜಾಸೀ ॥೭೩೪॥ ತೂ ಪರಮಾತ್ಮಾ ಪರಮೇಶ್ವರ । ಹೇ ನೇಣತೀ ಗೌಳಣೀ ವಾನರ । ತರೀ ತುರ್ಝೀ ತ್ಯಾಂಸೀ ಭಜನಮಾತ್ರ । ಫಳಲೇ ಸಾಚಾರ ಪರಬ್ರಹ್ಮತ್ವೇ ॥೭೩೫॥ ಐಸೇ ಅಗಾಧ ತುರ್ಝೇ ಭಜನ । ಅಗಮ್ಯ ಭಜನಾಚೇ ಮಹಿಮಾನ । ಭಕ್ತೀ ಅಧೀನ ತುರ್ಝೇ ದೇವಪಣ । ಮಾ ಮೋಕ್ಷಾಸೀ ಕೋಣ ಅಧಿಕಾರೀ ॥೭೩೬॥ ಭಕ್ತೀಚ್ಯಾ ಪೋಟೀ ಜನ್ಮಲೀ ಮುಕ್ತೀ । ವಾಢಲೀ ಮುಕ್ತೀ ಭಕ್ತಿತೇ ಘಾತೀ । ಐಸೀ ಜೇ ಕಾ ಮುಕ್ತೀ ಮಾತೃಹಂತೀ । ತಿಸೀ ಮೀ ಸರ್ವಾರ್ಥೀ ನಾತಳೇ ॥೭೩೭॥ ಫಿಟೇ ಮುಕ್ತೀಚೇ ದೂಷಣ । ಜೇಣೇ ತೇ ಹೋಯ ಅತಿಪಾವನ । ತೇ ಮೀ ಸಾಂಗೇನ ವಿಂದಾನ । ಐಕ ಸಾವಧಾನ ಶ್ರೀಕೃಷ್ಣಾ ॥೭೩೮॥ ಜೋಡಲ್ಯಾಹೀ ಮುಕ್ತಪಣ । ಮಜ ದ್ಯಾವೇ ತುರ್ಝೇ ಗುರುಭಜನ । ತೇಣೇ ಮುಕ್ತೀಹೀ ಹೋಯ ಪಾವನ । ಮ್ಹಣೋನಿ ಲೋಟಾಂಗಣ ಘಾತಲೇ ॥೭೩೯॥ ಮಸ್ತಕೀ ಧರಿಲೇ ಶ್ರೀಚರಣ । ಉದ್ಧವ ಸರ್ವಥಾ ನ ಸೋಡೀ ಜಾಣ । ತೇಣೇ ಟಕಚ ಜಾಹಲಾ ಶ್ರೀಕೃಷ್ಣ । ತ್ಯಾಸೀ ಸಂಪೂರ್ಣ ತುಷ್ಟಲಾ ॥೭೪೦॥ ಜಾಣೋನಿ ಆಪುಲೇ ಮುಕ್ತಪಣ । ಮೀ ನ ಸಾಂಡೀ ನಿಜಭಜನ । ಐಶೀ ಕೃಪಾ ಕರೀ ಪೂರ್ಣ । ಮ್ಹಣೋನಿ ಶ್ರೀಚರಣ ನ ಸೋಡೀ ॥೭೪೧॥ ಮುಕ್ತತಾ ಮಾನಲ್ಯಾ ಸಂಪೂರ್ಣ । ತೈ ರಾಹೋ ಶಕೇ ಸದ್ಗುರುಭಜನ । ಹೇಹೀ ಬಾಧೋ ನ ಶಕೇ ವಿಘ್ನ । ತೈಶೀ ಭಕ್ತಿ ನಿರ್ವಿಘ್ನ ಮಜ ಸಾಂಗ ॥೭೪೨॥ ಕೋಟಿಜನ್ಮೀ ಶಿಣತಾ ಜಾಣ । ಮ್ಹಣಸೀ ನಾತುಡೇ ಮುಕ್ತಪಣ । ತ್ಯಾ ಮೋಕ್ಷಾ ನಾಂವ ಠೇವಿಸೀ ''ವಿಘ್ನ'' । ಮೂರ್ಖ ಸಂಪೂರ್ಣ ಮಜ ಮ್ಹಣಸೀ ॥೭೪೩॥ ಜೇಣೇ ಸುಟೇ ತುರ್ಝೇ ಸದ್ಗುರುಭಜನ । ತೇ ಮೀ ಮಾನೀ ಪರಮ ವಿಘ್ನ । ತುರ್ಝೀ ಭಕ್ತಿವೀಣ ಮುಕ್ತಪಣ । ಅಲವಣೇ ಮಜ ಜಾಣ ಗೋವಿಂದಾ ॥೭೪೪॥ ಮಾಝೀ ನ ಮೋಡೇ ನಿತ್ಯಮುಕ್ತತಾ । ಅಹೇತುಕ ಚಾಲವೀ ಭಕ್ತಿಪಂಥಾ । ಐಸೀ ಕೃಪಾ ಕರೀ ಶ್ರೀಕೃಷ್ಣನಾಥಾ । ಝಣೇ ಸಂಕೋಚತಾ ಮಾನಿಸೀ ॥೭೪೫॥ ಮ್ಹಣಸೀ ಮ್ಯಾ ದಿಧಲೀ ನಿತ್ಯಮುಕ್ತೀ । ತೇ ಮಾಝೀ ಮಜಪಾಶೀ ಸಿದ್ಧ ಹೋತೀ । ''ದಿಧಲೀ'' ಮ್ಹಣಣೇ ಹೇ ಮಿಥ್ಯಾ ವದಂತೀ । ವಾಊಗೀ ಖ್ಯಾತೀ ದಾತೃತ್ವಾಚೀ ॥೭೪೬॥

ಕೇವಲ ವ್ಯಭಿಚಾರಿಗಳಾದ ನಾರುತ್ತಿರುವ ಗೌಳಣೀ ನಾರಿಯರ ಕಾಲಿಗೆ ಮೋಕ್ಷ ತಂದು ಕೊಟ್ಟಿರುವೆ. ಅಷ್ಟೇ ಅಲ್ಲ ಅವರ ಪಾದಧೂಳಿಗೆ ಬ್ರಹ್ಮದೇವ ಲೋಟಾಂಗಣ ಹಾಕಿದನು ॥೭೩೪॥ ನೀನು ಪರಮಾತ್ಮಾ, ಪರಮೇಶ್ವರನಾಗಿರುವೆನೆಂದು ಇದರ ತಿಳವಳಿಕೆ ಗೌಳಣೀ ಹಾಗೂ ವಾನರರಿಗೆ ಇದ್ದಿಲ್ಲ. ಆದರೆ ಕೇವಲ ಭಜನೆಯಿಂದ ಅವರಿಗೆ ಪರಬ್ರಹ್ಮದ ಪ್ರಾಪ್ತಿಯಾಯಿತು ॥೭೩೫॥ ಹೀಗೆ ನಿನ್ನ ಭಜನೆಯು ನಿಜವಾಗಿಯೂ ಅಲೌಕಿಕವಾಗಿರುವುದು. ನಿನ್ನ ಭಜನೆಯ ಮಹಿಮೆ ಅಗಾಧವಾಗಿರುವುದು. ನಿನ್ನ ದೇವತ್ವವು ಭಕ್ತಿಯ ಆಧೀನವಾಗಿರುವುದು. ಅಂದಮೇಲೆ ಮೋಕ್ಷಕ್ಕೆ ಯಾವ ಅಧಿಕಾರವಿರುವುದು? ॥೭೩೬॥ ಭಕ್ತಿಯ ಗರ್ಭದಿಂದ ಮುಕ್ತಿಯು ಜನ್ಮವಾಯಿತು. ಭಕ್ತಿಯಿಂದಲೇ ಮುಕ್ತಿ ಬೆಳೆದಿರುವುದು. ಹೀಗಿರುವ ಮುಕ್ತಿಯೇ ಕೊನೆಯಲ್ಲಿ ಭಕ್ತಿಯನ್ನು ಕೊಲ್ಲಲು ಪ್ರವೃತ್ತಿಯಾಯಿತು. ಹೀಗಿರುವ ಮಾತೃಹಂತಕ ಮುಕ್ತಿಯನ್ನು ನಾನು ಸ್ಪರ್ಶ ಕೂಡ ಮಾಡಲಾರೆನು ॥೭೩೭॥ ಮುಕ್ತಿಗೆ ತಟ್ಟಿರುವ ಈ ದೋಷ ಇಲ್ಲದಂತಾಗಿ ಪವಿತ್ರವಾಗುವಂತೆ ಒಂದು ರಹಸ್ಯ ನಿನಗೆ ಹೇಳುವೆ.ಹೇ ಶ್ರೀಕೃಷ್ಣನೇ, ಲಕ್ಷಕೊಟ್ಟು ಕೇಳು ॥೭೩೮॥ ಈ ರಹಸ್ಯ ಯಾವುದೆಂದರೆ ಮುಕ್ತತೆಯು ದೊರಕಿದ್ದರೂ ಸಹ ನನಗೆ ಗುರುಭಜನೆ ದಯಪಾಲಿಸಬೇಕು. ಇದರಿಂದ ಮುಕ್ತಿಯೂ ಕೂಡ ಪಾವನವಾಗುವುದು. ಹೀಗೆನ್ನುತ್ತ ಉದ್ಧವನು ಶ್ರೀಕೃಷ್ಣನಿಗೆ ಲೋಟಾಂಗಣ ಹಾಕಿದನು ॥೭೩೯॥ ಉದ್ಧವನು ಶ್ರೀಕೃಷ್ಣನ ಚರಣಗಳನ್ನು ದೃಢವಾಗಿ ಮಸ್ತಕಕ್ಕೆ ಧರಿಸಿದನು. ಅಲ್ಲಿಂದ ಕದಲಲು ಸರ್ವಥಾ ಸಿದ್ಧನಾಗಲಿಲ್ಲ. ಇದನ್ನು ಕಂಡು ಶ್ರೀಕೃಷ್ಣನು ಆಶ್ಚರ್ಯಚಕಿತನಾಗಿ ಅತ್ಯಂತ ಸಂತುಷ್ಟನಾದನು ॥೭೪೦॥ ಉದ್ಧವನು ಹೀಗೆ ಹೇಳಹತ್ತಿದನು ; ನಾನು ಮುಕ್ತನಾದೆ ಎಂಬುವುದು ತಿಳಿದರೂ ಕೂಡ ನಿನ್ನ ಮಧುರ ಭಜನೆ ಎಂದಿಗೂ ಬಿಡಲಾರೆನು ಎಂಬ ಭಾವನೆಯಿಂದ ಆತನು ಹಿಡಿದ ಚರಣಗಳನ್ನು ಏನು ಮಾಡಿದರೂ ಬಿಡದಂತಾದನು ॥೭೪೧॥ ಮುಕ್ತತೆಯು ಪರಿಪೂರ್ಣವಾಗಿ ಲಭಿಸಿದ ನಂತರ ಸದ್ಗುರು ಭಜನೆಯು ಉಳಿಯಲು ಸಾಧ್ಯವಿಲ್ಲ. ಆದರೆ ಈ ವಿಘ್ನವು ನನಗೆ ಬಾಧಿಸಲಾರದಂತೆ ನಿರ್ವಿಘ್ನ ಭಜನೆಯ ಸ್ವರೂಪ ನನಗೆ ಹೇಳಬೇಕು ॥೭೪೨॥ ಕೋಟ್ಯಾವಧೀ ಜನ್ಮಗಳವರೆಗೆ ಪ್ರಯತ್ನಿಸಿದರೂ ಸಹ ಮುಕ್ತಿ ದೊರಕುವುದಿಲ್ಲ. ಇಂತಹ ಮುಕ್ತಿಗೆ ನೀನು ವಿಘ್ನ ಎಂದು ಕರೆಯಬೇಕೆಂದರೆ ನೀನು ಅಜ್ಞಾನಿಯೇ ಸರಿ ಎಂದು ನೀನು ಹೀಗೆ ಹೇಳಬಹುದು ॥೭೪೩॥ ಆದರೆ ಹೇ ಶ್ರೀಕೃಷ್ಣನೇ, ಯಾವುದರಿಂದ ನಿನ್ನ ಭಜನೆ ಬಿಡಲ್ಪಡುವುದೋ ಅದಕ್ಕೆ ನಾನು ದೊಡ್ಡ ವಿಘ್ನವೆಂದೇ ಭಾವಿಸುವೆನು. ನಿನ್ನ ಭಕ್ತಿವಿಲ್ಲದ ಮುಕ್ತಿಯು ನನಗೆ ಅರುಚಿಕರವಾಗಿ ತೋರುವುದು ॥೭೪೪॥ ಹೇ ಶ್ರೀಕೃಷ್ಣನಾಥನೇ, ನನ್ನ ನಿತ್ಯಮುಕ್ತತೆಯ ಭಂಗವಾಗದಂತೆ ನಿಷ್ಕಾಮ ಭಕ್ತಿಮಾರ್ಗ ನಡೆಸು. ಹೀಗೆ ನನ್ನಲ್ಲಿ ಕೃಪೆದೋರು. ಇದರಲ್ಲಿ ಯಾವುದೇ ಸಂಕೋಚ ಮಾಡಬೇಡ ॥೭೪೫॥ ನಾನು ನಿನಗೆ ನಿತ್ಯಮುಕ್ತಿ ಕೊಟ್ಟಿರುವೆ ಎಂದು ನೀನು ಹೀಗೆ ಹೇಳಬಹುದು. ಆದರೆ ಆ ಮುಕ್ತಿಯು ನನ್ನಲ್ಲಿ ಸಿದ್ಧವಾಗಿಯೇ ಇತ್ತು. ಅದನ್ನು ನಾನು ಕೊಟ್ಟೆ ಎಂಬ ಹೇಳಿಕೆಯು ವ್ಯರ್ಥವಾಗಿರುವುದು. ಇದು ದಾತೃತ್ವದ ಮಿಥ್ಯೆಯಾದ ಪ್ರೌಢತನವಾಗಿರುವುದು ॥೭೪೬॥

ಮಾಝೀ ಸ್ವತಃಸಿದ್ಧ ನಿತ್ಯಮುಕ್ತತಾ । ತ್ಯಾವರೀ ಭಕ್ತಿ ಮೀ ಮಾಗೇ ಆತಾ । ತೇ ದೇಶೀಲ ತರೀ ತೂ ಸಾಚಾರ ದಾತಾ । ಉದಾರತಾ ಯಾ ನಾಂವ ॥೭೪೭॥ ತೇ ಸಂತೋಷೋನಿ ಭಕ್ತಿ ದೇತಾ । ಉಲ್ಹಾಸ ನ ದೇಖೋ ತುಝ್ಯಾ ಚಿತ್ತಾ । ಥೋರ ಮಾಂಡಲೀ ಕೃಪಣತಾ । ಕೃಷ್ಣನಾಥಾ ಮಜಲಾಗೀ ॥೭೪೮॥ ಜೇ ಸಾಂಡವೀ ಸದ್ಗುರುಭಕ್ತೀ । ಆಮ್ಹಾ ನ ಲಗೇ ತುಝಿಯಾ ಜೀವನ್ಮುಕ್ತೀ । ಮುಕ್ತಿ ಮ್ಹಣಣೇ ಹೇಹೀ ಭ್ರಾಂತೀ । ಐಕ ಶ್ರೀಪತೀ ಸಾಂಗೇನ ॥೭೪೯॥ ಮುಳೀ ಮುಖ್ಯತ್ವೇ ನಾಹೀ ಬದ್ಧತಾ । ತೇಥ ಕೈಚೀ ಕಾಢಿಲೀ ಮುಕ್ತತಾ । ಮಿಥ್ಯಾ ಮುಕ್ತಿ ಮೀ ನಾತಳೇ ಸರ್ವಥಾ । ಮಾಝೀ ಗುರುಭಕ್ತಿತಾ ಮಜ ದೇಈ ॥೭೫೦॥ ಮಾಗೇ ಜ್ಯಾಂಸೀ ತ್ವಾ ದಿಧಲೀ ಮುಕ್ತಿ । ತೇ ಠಕಿಲೇ ಠಕಿಲೇ ಯಾಚ ರೀತೀ । ತೈಸೇ ಚಾಳವೂ ನಕೋ ಶ್ರೀಪತೀ । ಮೋಕ್ಷಾವರೀಲ ಭಕ್ತೀ ಮಜ ದೇಈ ॥೭೫೧॥ ಮ್ಹಣೋನಿ ಘಾತಲೇ ಲೋಟಾಂಗಣ । ಧಾಂವೋನಿ ಧರಿಲೇ ದೋನೀ ಚರಣ । ಪ್ರೇಮೇ ವೋಸಂಡಲಾ ಶ್ರೀಕೃಷ್ಣ । ಉದ್ಧವಾಸೀ ಸಂಪೂರ್ಣ ತುಷ್ಟಲಾ ॥೭೫೨॥ ಮೋಕ್ಷಾಹೀವರೀಲ ಗುರುಭಕ್ತೀ । ಉದ್ಧವೇ ಮಾಗಿತಲೀ ನಾನಾ ಯುಕ್ತೀ । ಜೇ ಜೇ ಚಾಲಲೀ ಉಪಪತ್ತೀ । ತೇಣೇ ಸುಖೇ ಶ್ರೀಪತೀ ಸುಖಾವಲಾ ॥೭೫೩॥ ಸುಖೇ ಸುಖಾವಲೀ ಶ್ರೀಕೃಷ್ಣಮೂರ್ತೀ । ಡೋಲೋ ಲಾಗಲಾ ಸ್ವಾನಂದಸ್ಥಿತೀ । ತೇಣೇ ಸಂತೋಷೇ ಭಕ್ತಿಮುಕ್ತೀ । ಉದ್ಧವಾ ಹಾತೀ ಅರ್ಪಿಲೀ ॥೭೫೪॥ ಜಗೀ ಉದ್ಧವಾಚೇ ಶುದ್ಧ ಪುಣ್ಯ । ಜಗೀ ಉದ್ಧವಚಿ ಧನ್ಯ ಧನ್ಯ । ಜ್ಯಾಲಾಗೀ ಸರ್ವಸ್ವೇ ಶ್ರೀಕೃಷ್ಣ । ಮೋಕ್ಷಾವರೀಲ ಗುರುಭಜನ ಸ್ವಾನಂದೇ ದೇತ ॥೭೫೫॥ ಗುರು ಬ್ರಹ್ಮ ದೋನೀ ಅಭಿನ್ನ । ಹೇಹೀ ಸದ್ಗುರು ಪ್ರಬೋಧೀ ಪೂರ್ಣ । ಯಾಲಾಗೀ ಮೋಕ್ಷಾವರೀಲ ಗುರುಭಜನ । ನವ್ಹೇ ದೂಷಣ ಸಚ್ಛಿಷ್ಯಾ ॥೭೫೬॥ ಮಾಗಿಲಾ ನಿಜಭಕ್ತಾಂಪ್ರತೀ । ಸ್ವಾನಂದೇ ತುಷ್ಟಲಾ ಶ್ರೀಪತೀ । ತಿಹೀ ಮಾಗಿತಲೀ ನಿಜಮುಕ್ತೀ । ತ್ಯಾಂಸೀ ಹೇ ಸ್ಥಿತೀ ಅತರ್ಕ್ಯ ॥೭೫೭॥ ಉದ್ಧವೇ ಥೋರ ಕೇಲೀ ಖ್ಯಾತೀ । ಮುಕ್ತೀಚೇ ಮಾಥಾ ವಾಇಲೀ ಭಕ್ತೀ । ಅಗಮ್ಯ ಮಾಗಿತಲೀ ಸ್ಥಿತೀ । ತೇಹೀ ಶ್ರೀಪತೀ ಅರ್ಪಿತ ॥೭೫೮॥ ಉದ್ಧವಾ ಮುಕ್ತೀವರೀಲ ಜೇ ಭಕ್ತೀ । ತೇ ಮಜ ಅವತಾರಾಂಚೀ ಅವತಾರಶಕ್ತೀ । ಯೇಣೇ ಉತ್ಪತ್ತಿ – ಸ್ಥಿತೀ – ಪ್ರಲಯ ಅಂತೀ । ಕರೂನಿ ಶ್ರೀಪತೀ ಮೀ ಅಲಿಪ್ತ ॥೭೫೯॥

ಕಾರಣ ನಿತ್ಯ ಮುಕ್ತತೆಯು ಅದು ನನ್ನದಾಗಿದ್ದು ನನ್ನಲ್ಲಿ ಸ್ವತಃಸಿದ್ಧವಾಗಿಯೇ ಇರುವುದು. ಇದಕ್ಕಿಂತಲೂ ಮಿಗಿಲಾದ ಭಕ್ತಿ ನಾನು ಬೇಡುತ್ತಿರುವೆನು. ಇದನ್ನು ಕೊಟ್ಟರೆ ಮಾತ್ರ ನೀನು ನಿಜವಾದ ದಾತಾನಾಗುವೆ. ಇದಕ್ಕೇನೇ ನಾನು ಔದಾರ್ಯವೆಂದು ಹೇಳುವೆನು ॥೭೪೭॥ ಆದರೆ ಪ್ರಸನ್ನನಾಗಿ ಭಕ್ತಿ ಕೊಡುವ ನಿನ್ನ ಮನದ ಉಲ್ಹಾಸವು ಕಾಣುತ್ತಿಲ್ಲ. ಹೇ ಶ್ರೀಕೃಷ್ಣನಾಥನೇ, ನೀನು ನನ್ನಲ್ಲಿ ಬಹು ಕೃಪಣತನ ಮಾಡುತ್ತಿರುವೆ ॥೭೪೮॥ ಸದ್ಗುರುಭಕ್ತಿ ದೂರ ಒಗೆದುಬಿಡುವ ಈ ಮುಕ್ತಿಯು ನನಗೆ ಸ್ವಲ್ಪವೂ ಕೂಡ ಪ್ರಿಯವಾಗಲಾರದು. ಇದಕ್ಕೆ ಮುಕ್ತಿ ಎಂದು ಹೇಳುವುದೂ ಕೂಡ ಭ್ರಮವೇ ಆಗಿರುವುದು. ಇದು ಹೇಗೆ ಎಂಬುವುದನ್ನು ಈಗ ನಿನಗೆ ಹೇಳುವೆನು ॥೭೪೯॥ ಬದ್ಧತೆ ಮೂಲತಃ ಇಲ್ಲದಿರಲು ಅಲ್ಲಿ ಮುಕ್ತಿ ಎಲ್ಲಿಂದ ತಂದು ನಿಲ್ಲಿಸಿರುವೆ? ಇಂತಹ ಮಿಥ್ಯೆಯಾಗಿರುವ ಮುಕ್ತಿಗೆ ನಾನು ಸ್ಪರ್ಶ ಕೂಡ ಮಾಡಲಾರೆನು. ನನ್ನ ಗುರುಭಕ್ತಿ ನನಗೆ ಕೊಡು ॥೭೫೦॥ ಈ ಪೂರ್ವದಲ್ಲಿ ನೀನು ಯಾರಿಗೆ ಮುಕ್ತಿ ಕೊಟ್ಟಿರುವೆಯೋ, ಪಾಪ! ಅವರೆಲ್ಲರೂ ಮೋಸ ಹೋದರು. ಹೇ ಶ್ರೀಕೃಷ್ಣನೇ, ಹೀಗೆ ನನಗೆ ಮೋಸಗೊಳಿಸಬೇಡ. ಮೋಕ್ಷಕ್ಕಿಂತಲೂ ಮಿಗಿಲಾಗಿರುವ ಭಕ್ತಿ ನನಗೆ ನೀಡು ॥೭೫೧॥ ಹೀಗೆ ಹೇಳುತ್ತ ಉದ್ಧವನು ಪುನಃ ಲೋಟಾಂಗಣ ಹಾಕಿದನು. ಧಾವಿಸುತ್ತ ಸಾಗಿ ಶ್ರೀಹರಿಯ ಚರಣಕಮಲಗಳನ್ನು ಹಿಡಿದನು. ಆ ಸಮಯದಲ್ಲಿ ಶ್ರೀಕೃಷ್ಣನಿಗೆ ಪ್ರೇಮದ ಪೂರವು ಉಕ್ಕೇರಿತು. ಉದ್ಧವನಲ್ಲಿ ಅತ್ಯಂತ ಪ್ರಸನ್ನನಾದನು .೭೫೨॥ ಉದ್ಧವನು ನಾನಾ ಯುಕ್ತಿ ಪ್ರಯುಕ್ತಿಗಳಿಂದ ವಿವೇಚನೆ ಮಾಡಿ ಜ್ಞಾನೋತ್ತರ ಶ್ರೇಷ್ಠ ಭಕ್ತಿ ಬೇಡಿದ್ದನ್ನು ಕಂಡು ಶ್ರೀಪತಿಯು ಅತಿಶಯ ಪ್ರಸನ್ನನಾದನು ॥೭೫೩॥ ಪ್ರೇಮಸುಖದಿಂದ ಸುಖಿಯಾಗಿ ಶ್ರೀಕೃಷ್ಣನು ಸ್ವಾನಂದದಿಂದ ತೂಗಾಡಹತ್ತಿದನು. ಈ ಯಾವ ಸುಖಕಾರಕ ಸ್ಥಿತಿಯಲ್ಲಿ ಉದ್ಧವನಿಗೆ ಭಕ್ತಿ ಮತ್ತು ಮುಕ್ತಿ ಎರಡನ್ನೂ ಅರ್ಪಿಸಿದನು ॥೭೫೪॥ ಉದ್ಧವನ ಪುಣ್ಯವು ಜಗತ್ತಿನಲ್ಲಿಯೇ ಶುದ್ಧವಾಗಿತ್ತು. ಈ ಜಗತ್ತಿನಲ್ಲಿಯೇ ಉದ್ಧವನು ಧನ್ಯ ಧನ್ಯನು. ಆದ್ದರಿಂದಲೇ ಶ್ರೀಕೃಷ್ಣರಾಯನು ಮೋಕ್ಷಕ್ಕಿಂತಲೂ ಮಿಗಿಲಾಗಿರುವ ಶ್ರೇಷ್ಠ ಗುರುಭಜನೆ ಸ್ವಾನಂದದಿಂದ ಕೊಟ್ಟನು ॥೭೫೫॥ ಗುರು ಮತ್ತು ಬ್ರಹ್ಮ ಇವು ಎರಡೂ ಕೂಡ ಒಂದೇಯಾಗಿರುವುವು. ಇದನ್ನು ಗುರುಗಳೇ ಪರಿಪೂರ್ಣವಾಗಿ ಕಲಿಸುತ್ತಿರುವರು. ಆದ್ದರಿಂದ ಮೋಕ್ಷಕ್ಕಿಂತಲೂ ಶ್ರೇಷ್ಠವಾಗಿರುವ ಗುರುಭಜನೆಯು ಉತ್ತಮ ಶಿಷ್ಯನಿಗೆ ಎಂದೂ ದೂಷಣಕಾರಕವಾಗುವುದಿಲ್ಲ ॥೭೫೬॥ ಪೂರ್ವದ ಭಕ್ತರಲ್ಲಿ ಶ್ರೀಕೃಷ್ಣನು ಆನಂದದಿಂದ ಪ್ರಸನ್ನನಾಗಿ ಭಕ್ತರು ಕೇಳಿದ ಮುಕ್ತಿ ಅವರಿಗೆ ಕೊಟ್ಟನು. ಅವರಿಗೆ ಮುಕ್ತಿ ಕುರಿತಾದ ಯಾವ ತರ್ಕವೂ ಇದ್ದಿಲ್ಲ ॥೭೫೭॥ ಆದರೆ ಉದ್ಧವನು ದೊಡ್ಡ ಖ್ಯಾತಿ ಪ್ರದರ್ಶಿಸಿದನು. ಮುಕ್ತಿಯ ತಲೆಯ ಮೇಲೆ ಭಕ್ತಿಯನ್ನು ಕುಳ್ಳಿರಿಸಿದನು. ಈ ಯಾವ ಅಗಮ್ಯ ಸ್ಥಿತಿಯ ಬೇಡಿಕೆ ಬೇಡಿದನು. ಶ್ರೀಕೃಷ್ಣನೂ ಸಹ ಈ ಸ್ಥಿತಿ ಉದ್ಧವನಿಗೆ ಕೊಟ್ಟನು ॥೭೫೮॥ ಹೇ ಉದ್ಧವಾ, ಮುಕ್ತಿಗಿಂತಲೂ ಶ್ರೇಷ್ಠತಮವಾಗಿರುವ ಭಕ್ತಿ ಇದೇ ನನ್ನ ಅವತಾರದ ಅವತಾರಶಕ್ತಿಯಾಗಿರುವುದು. ಈ ಶಕ್ತಿಯ ಸಹಾಯದಿಂದಲೇ ನಾನು ಸೃಷ್ಟಿ, ಸ್ಥಿತಿ, ಲಯ ಮಾಡುತ್ತ ಕೊನೆಯಲ್ಲಿ ಅಲಿಪ್ತನಾಗಿಯೇ ಇರುವೆನು ॥೭೫೯॥

ಯೇಣೇಂಚಿ ಬಳೇ ಮೀ ತತ್ತ್ವತಾ । ಕರ್ಮೇ ಕರೂನಿ ಅಕರ್ತಾ । ಭೋಗ ಭೋಗೋನಿ ಅಭೋಕ್ತಾ । ಜಾಣ ಸರ್ವಥಾ ಯೇಣೇಂಚಿ ಯೋಗೇ ॥೭೬೦॥ ಹಾ ಯೋಗ ನ ಕಳೇ ಜ್ಯಾಸೀ । ದುಃಖರೂಪ ಸಂಸಾರ ತ್ಯಾಸೀ । ಹಾ ಅಖಂಡ ಯೋಗ ಮಜಪಾಶೀ । ಮೀ ಸಂಸಾರೇಸೀ ಸುಖರೂಪ ॥೭೬೧॥ ಹಾ ಯೋಗ ಸದಾಶಿವ ಜಾಣೇ । ಕಾ ಮ್ಯಾ ಜಾಣಿಜೇ ನಾರಾಯಣೇ । ಇತರಾಂಚೇ ಜೇ ಜಾಣಣೇ । ತೇ ಅಗಮ್ಯಪಣೇ ರಿಘೇನಾ ॥೭೬೨॥ ಐಸೀ ಶ್ರೀಕೃಷ್ಣ ಸಾಂಗೇ ಗುಹ್ಯ ಗೋಷ್ಟೀ । ತೇ ಸ್ಥಿತೀ ಬಾಣಲೀ ಉದ್ಧವಾಚೇ ಪೋಟೀ । ದೋಘಾ ನಿಜಬೋಧೇ ಏಕಗಾಂಠೀ । ಭಜನಕಸವಟೀ ಕಳೋ ಸರಲೀ ॥೭೬೩॥ ಮುಕ್ತೀಸೀ ಭಕ್ತೀಚೀ ಹಾತವಟೀ । ತೇ ಉದ್ಧವಾಸೀ ಕಳಲೀ ಗೋಷ್ಟೀ । ತೋ ಉಲ್ಹಾಸ ನ ಮಾಯೇ ಪೋಟೀ । ಸ್ವಾನಂದಪುಷ್ಟೀ ಕೋಂದಲಾ ॥೭೬೪॥ ಜೇವೀ ಬಾಳಕಾಚ್ಯಾ ಥಾಯಾಕಾರಣೇ । ಮಾತಾ ಲೇವವೀ ನಿಜಭೂಷಣೇ । ತೇವೀ ಉದ್ಧವಾಲಾಗೀ ಶ್ರೀಕೃಷ್ಣೇ । ಅವತಾರಸ್ಥಿತೀ ದೇಣೇ ನಿಶ್ಚಿತ ॥೭೬೫॥ ಮನಾಚೇ ನಾಇಕತೀ ಕಾನ । ಬುದ್ಧೀಚೇ ನ ದೇಖತೀ ನಯನ । ಶೇಖೀ ಗಗನಾತೇಂಹೀ ಚೋರೂನ । ಉದ್ಧವಾಸೀ ಶ್ರೀಕೃಷ್ಣ ನಿಜಸ್ಥಿತೀ ಅರ್ಪೀ ॥೭೬೬॥ ಜೇ ಬ್ರಹ್ಮವೇತ್ತ್ಯಾಸೀ ನಕಳೇ । ಜೇ ವೇದಾನುವಾದಾ ನಾಕಳೇ । ತೇ ಸ್ಥಿತೀ ಉದ್ಧವಾಸೀ ಗೋಪಾಳೇ । ಕೃಪಾಬಳೇ ಅರ್ಪಿಲೀ ॥೭೬೭॥ ಪೂರ್ವೀ ಶ್ರೀಕೃಷ್ಣೇ ಪುಸತಾ ಪಹಾ ಹೋ । ''ಉದ್ಧರಲೋ'' ಮ್ಹಣೇ ಉದ್ಧವೋ । ಆತಾ ಮಾಗೇ ಭಜನಭಾವೋ । ಹಾ ಗೂಢಾಭಿಪ್ರಾವೋ ಹರಿ ಜಾಣೇ ॥೭೬೮॥ ಮುಕ್ತೀವರೀಲ ಮಾಗತಾ ಭಕ್ತಿ । ಶ್ರೀಕೃಷ್ಣಾಚೀ ಅವತಾರಶಕ್ತೀ । ಮಾಯಾನಿಯಂತೃತ್ವಾಚೀ ಪೂರ್ಣ ಸ್ಥಿತೀ । ಉದ್ಧವಾಚೇ ಹಾತೀ ಸ್ವಯೇ ಆಲೀ ॥೭೬೯॥ ಜಾಣೋನಿ ಮಾಯೇಚೇ ಮಿಥ್ಯಾತ್ವಪೂರ್ಣ । ತಿಚೇ ಪ್ರೇರಣ ಆಣಿ ಆವರಣ । ಹೇ ಮಾಯಾನಿಯಂತೃತ್ವಲಕ್ಷಣ । ಉದ್ಧವಾಸೀ ಶ್ರೀಕೃಷ್ಣ ಸ್ವಯೇ ಅರ್ಪೀ ॥೭೭೦॥ ಜಸೇ ಬುದ್ಧಿಬಳಾಚೇ ಪೋಟೀ । ಪೂರ್ವ ಕರ್ಮ ನಸತಾ ಗಾಂಠೀ । ರಾಜಾ ಪ್ರಧಾನ ಪಶು ಪ್ಯಾದಾ ಉಠೀ । ನಿರ್ಧಾರಿತಾ ದೃಷ್ಟೀ ಕಾಷ್ಠ ಏಕ ॥೭೭೧॥ ಏಕಚಿ ಕಾಷ್ಠ ದೋಹೀ ಭಾರೀ । ತೇಥ ಕೋಣ ಕೋಣಾಚಾ ವೈರೀ । ವೈರ ನಸತಾಂಹೀ ಝುಂಜಾರೀ । ಮಾರಾಮಾರೀ ಅಚೇತನಾ ॥೭೭೨॥

ಇದರ ಸಾಮರ್ಥ್ಯದಿಂದ ನಾನು ಕರ್ಮಗಳನ್ನು ಮಾಡಿದರೂ ಕೂಡ ಅಕರ್ತನಾಗಿರುವೆನು. ಹಾಗೆಯೇ ಭೋಗಗಳನ್ನು ಭೋಗಿಸುತ್ತಿದ್ದರೂ ಸಹ ಅಭೋಕ್ತಾನಾಗಿರುವೆನು ॥೭೬೦॥ ಈ ಯಾವ ಭಕ್ತಿಯೋಗವು ಯಾರಿಗೆ ತಿಳಿಯುವುದಿಲ್ಲವೋ, ಅವರಿಗೆ ಈ ಸಂಸಾರವು ದುಃಖರೂಪವಾಗುವುದು. ಆದರೆ ಅಖಂಡ ಯೋಗವು ನನ್ನಲ್ಲಿದ್ದ ಕಾರಣ ನಾನು ಸಂಸಾರದಲ್ಲಿದ್ದುಕೊಂಡೂ ಸಹ ಪೂರ್ಣವಾಗಿ ಸುಖರೂಪನಾಗಿರುವೆನು ॥೭೬೧॥ ಹೀಗಿರುವ ಈ ಭಕ್ತಿಯೋಗವನ್ನು ಒಬ್ಬ ಸದಾಶಿವನು ಮಾತ್ರ ತಿಳಿದಿರುವನು. ನಾರಾಯಣನಾದ ನಾನು ಅರಿತಿರುವೆನು. ಇದು ಅಗಮ್ಯವಾಗಿರುವುದರಿಂದ ಇದರಲ್ಲಿ ಇತರರ ಪ್ರವೇಶವಾಗುವುದು ಅಸಾಧ್ಯವಾಗಿರುವುದು ॥೭೬೨॥ ಹೀಗೆ ಶ್ರೀಕೃಷ್ಣನು ಗುಪ್ತವಾಗಿರುವ ಮಾತು ಹೇಳಿದನು ಮತ್ತು ಇದು ಉದ್ಧವನ ಅಂತಃಕರಣದಲ್ಲಿ ಪರಿಪೂರ್ಣವಾಗಿ ಬಿಂಬಿಸಲ್ಪಟ್ಟಿತು. ಆತ್ಮಜ್ಞಾನದಿಂದ ಈ ಈರ್ವರ ಏಕರೂಪವಾಯಿತು. ಭಜನೆಯ ಮಹಾತ್ಮ್ಯ ತಿಳಿಯಲ್ಪಟ್ಟಿತು ॥೭೬೩॥ ಮುಕ್ತಿಗೆ ನಿಜವಾಗಿಯೂ ಭಕ್ತಿಯ ಆಧಾರವೇ ಇರುವುದು. ಈ ಮಾತು ಉದ್ಧವನಿಗೆ ಪರಿಪೂರ್ಣವಾಗಿ ತಿಳಿಯಲ್ಪಟ್ಟಿತು. ಆದ್ದರಿಂದಲೇ ಆತನಿಗೆ ಆದ ಆನಂದವು ಆತನ ಹೊಟ್ಟೆಯಲ್ಲಿ ಹಿಡಿಸಲಾರದಂತಾಯಿತು. ಅದು ಸ್ವಾನಂದದಿಂದ ಪೂರ್ಣವಾಗಿ ವ್ಯಾಪಿಸಿತು ॥೭೬೪॥ ಚಿಕ್ಕ ಬಾಲಕನ ಹಠ ಕಂಡು ತಾಯಿಯು ತನ್ನ ಆಭರಣಗಳನ್ನು ಆತನಿಗೆ ಹಾಕುವಳು. ಅದರಂತೆಯೇ ಶ್ರೀಕೃಷ್ಣನು ತನ್ನ ಅವತಾರ ಸ್ಥಿತಿ ನಿಶ್ಚಯವಾಗಿ ಉದ್ಧವನಿಗೆ ಕೊಟ್ಟನು ॥೭೬೫॥ ಮನಸ್ಸಿನ ವಿಷಯವಾಗಿರದ, ಬುದ್ಧಿಗೂ ಕೂಡ ತಿಳಿಯಲಾರದ ಕೊನೆಗೆ ಆಕಾಶದಿಂದ ಕದ್ದು ಶ್ರೀಕೃಷ್ಣನು ತನ್ನ ಸ್ವರೂಪ ಉದ್ಧವನಿಗೆ ಅರ್ಪಿಸಿದನು ॥೭೬೬॥ ಯಾವುದು ಬ್ರಹ್ಮವೇತ್ತ್ಯಾನಿಗೂ ಪ್ರತೀತಿಗೆ ಬಾರದ, ಯಾವುದು ವೇದಾನುವಾದಕನಿಗೂ ತಿಳಿಯಲು ಸಾಧ್ಯವಾಗದ, ಅಂತಹ ಸ್ಥಿತಿ ಶ್ರೀಕೃಷ್ಣನು ತನ್ನ ಕೃಪಾಬಲದಿಂದ ಉದ್ಧವನಿಗೆ ಅರ್ಪಿಸಿದನು ॥೭೬೭॥ ಈ ಪೂರ್ವದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ವಿಚಾರಿಸಿದ ಸಮಯದಲ್ಲಿ ''ನಾನು ಉದ್ಧಾರನಾದೆನು'' ಎಂದು ಹೇಳಿದ್ದನು. ಈಗ ಮಾತ್ರ ಆತನು ಜ್ಞಾನೋತ್ತರ ಭಕ್ತಿ ಬೇಡಿದನು. ಇದರ ರಹಸ್ಯದ ಅಭಿಪ್ರಾಯ ಒಬ್ಬ ಶ್ರೀಕೃಷ್ಣನೇ ಬಲ್ಲನು ॥೭೬೮॥ ಮುಕ್ತಿಗಿಂತ ಮಿಗಿಲಾಗಿರುವ ಭಕ್ತಿ ಬೇಡಿಕೊಂಡ ಕಾರಣ ಮಾಯೆಯನ್ನು ನಿಯಂತ್ರಿಸುವ ಯಾವ ಶ್ರೀಹರಿಯ ಶಕ್ತಿಯು ಉದ್ಧವನ ಕೈಗೆ ಸಹಜವಾಗಿ ಪ್ರಾಪ್ತವಾಯಿತು ॥೭೬೯॥ ಮಾಯೆಯ ಮಿಥ್ಯತ್ವ ಪರಿಪೂರ್ಣವಾಗಿ ತಿಳಿದುಕೊಂಡು ಅದರ ಪ್ರೇರಣೆ ಹಾಗೂ ಆವರಣವಾಗಿರುವ ''ಮಾಯಾನಿಯಂತೃತ್ವದ ಲಕ್ಷಣ''ವನ್ನು ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಅರ್ಪಿಸಿದನು ॥೭೭೦॥ ಚದುರಂಗದ ಆಟದಲ್ಲಿ ಪೂರ್ವಕಾರ್ಯದ ಯಾವ ಸಂಗ್ರಹವಿಲ್ಲದೇ, ರಾಜಾ, ಪ್ರಧಾನಿ, ಆನೆ, ಕುದುರೆ, ಕಾಲಾಳು ಇವೆಲ್ಲವೂ ಏಳುವುವು. ಆದರೆ ಸ್ವಲ್ಪ ವಿಚಾರಿಸಿ ನೋಡಿದರೆ ಅವೆಲ್ಲವೂ ಒಂದೇ ಕಾಷ್ಠವಾಗಿರುವುವು ॥೭೭೧॥ ಎರಡೂ ಕಡೆಯ ಸೈನ್ಯಗಳಲ್ಲಿಯೂ ಒಂದು ಕಾಷ್ಠವೇ ಇರುವುದು. ಅವರಲ್ಲಿ ಯಾರು ಯಾರ ವೈರಿ? ಹೀಗೆ ಇವು ಅಚೇತನವಾಗಿ ಯಾವ ವೈರತ್ವವಿಲ್ಲದಿದ್ದರೂ ಸಹ ವ್ಯರ್ಥವಾಗಿ ಒಬ್ಬರಿಗೊಬ್ಬರು ಕಾದಾಡುವರು, ಸಂಘರ್ಷ ಬೆಳೆಸುತ್ತಿರುವರು ॥೭೭೨॥

ಮ್ಹಣತೀ ಹಸ್ತೀ ಘೋಡಾ ಪ್ರಧಾನ ಮೇಲಾ । ತೇಥ ಕಾಯ ತ್ಯಾಂಚಾ ಪ್ರಾಣ ಗೇಲಾ । ಪ್ಯಾದಾ ಹೋತಾ ತೋ ಪ್ರಧಾನ ಜಾಹಲಾ । ತೋ ಕಾಯ ಪಾವಲಾ ಗಜಾಂತಲಕ್ಷ್ಮೀ ॥೭೭೩॥ ಜೀವ ನಸತಾಂಹೀ ನಿರ್ಧಾರೀ । ಮಾರಿಲೇ ಮ್ಹಣತೀ ನಿಜಗಜರೀ । ಏಕಾ ಜೀತ ಏಕಾ ಹಾರೀ । ತೇ ಜ್ಞಾನ ಸಾರೀ ನೇಣತೀ ॥೭೭೪॥ ಸಾರೀ ನಿಮಾಲ್ಯಾ ಪಾಠೀ । ಕೋಣ ಧರ್ಮಾತ್ಮಾ ಚಢೇ ವೈಕುಂಠೀ । ಕೋಣ ಪಡೇ ನರಕಸಂಕಟೀ । ತೇವೀ ಬದ್ಧಮುಕ್ತಗೋಠೀ ಸಮೂಳ ಮಿಥ್ಯಾ ॥೭೭೫॥ ಏವಂ ಬುದ್ಧಿ ಬಳಾಚಿಯೇ ಪರೀ । ಜ್ಯಾಚೀ ನಿಜದೃಷ್ಟಿ ಸಂಸಾರೀ । ತೋಚಿ ಅವತಾರಾಂಚಾ ಅವತಾರೀ । ಜಾಣ ತೋ ನಿರ್ಧಾರೀ ಭಗವಂತ ॥೭೭೬॥ ಸಮೂಳ ಮಿಥ್ಯಾ ಜಾಣೇ ವೇದೋಕ್ತೀ । ಸಮೂಳ ಮಿಥ್ಯಾ ಜಾಣೇ ಬಂಧಮುಕ್ತೀ । ಹೇ ಜಾಣೋನಿ ಆಚರೇ ಜೋ ವೇದವಿಹಿತೀ । ತೇಚಿ ನಿಜಭಕ್ತೀ ಮುಕ್ತೀವರೀಲ ॥೭೭೭॥ ಕರೂನಿ ಸಂಸಾರನಿವೃತ್ತೀ । ಬಹುತ ಪಾವಲೇ ನಿತ್ಯಮುಕ್ತೀ । ತ್ಯಾಂಸೀ ಹೇ ದುರ್ಗಮಭಕ್ತೀ । ಅತರ್ಕ್ಯ ಸ್ಥಿತೀ ತರ್ಕೇನಾ ॥೭೭೮॥ ಐಶೀ ಜ್ಯಾಪಾಶೀ ಮಾಝೀ ಸ್ಥಿತೀ । ತೋಚಿ ಮೋಕ್ಷಾವರೀಲ ಕರೀ ಭಕ್ತೀ । ಇತರಾಂಸೀ ಹೇ ಅತರ್ಕ್ಯ ಗತೀ । ಜಾಣ ನಿಶ್ಚಿತೀ ಉದ್ಧವಾ ॥೭೭೯॥ ಉದ್ಧವ ಪಾವಲಾ ಅಗಾಧ ಗತೀ । ತ್ಯಾಸೀ ಸರ್ವಲೋಕೋಪಕಾರಾರ್ಥೀ । ವಾಂಚವಾವಯಾ ಬ್ರಹ್ಮಶಾಪಾಹಾತೀ । ಉಪಾಯ ಶ್ರೀಪತೀ ಸ್ವಯೇ ಯೋಜೀ ॥೭೮೦॥ ನಾರದಾಸೀ ಬ್ರಹ್ಮಜ್ಞಾನ । ತ್ಯಾಸೀಹೀ ದಕ್ಷಶಾಪಬಂಧನ । ಏಕೇ ಠಾಯೀ ನ ರಾಹೇ ಜಾಣ । ಕರೀ ಪರಿಭ್ರಮಣ ಶಾಪಾಸ್ತವ ॥೭೮೧॥ ಝಾಲಿಯಾಹೀ ಬ್ರಹ್ಮಜ್ಞಾನ । ಬ್ರಹ್ಮಶಾಪ ಅತಿದಾರುಣ । ಹೇ ಜಾಣೋನಿಯಾ ಶ್ರೀಕೃಷ್ಣ । ಉದ್ಧವಾ ಜಾಣ ದೂರೀ ದವಡೀ ॥೭೮೨॥ ಉದ್ಧವ ಜನ್ಮಲಾ ಯಾದವ ವಂಶೀ । ಯಾದವ ನಿಮತೀ ಬ್ರಹ್ಮಶಾಪೇಸೀ । ತೇಥ ವಾಂಚವಾವಯಾಸೀ ಉದ್ಧವಾಸೀ । ಬದರಿಕಾಶ್ರಮಾಸೀ ಸ್ವಯೇ ಧಾಡೀ ॥೭೮೩॥ ಬ್ರಹ್ಮಶಾಪಾಚೇನಿ ಆಘಾತೇ । ಯಾದವ ನಿಮತೀ ಸ್ವಗೋತ್ರಘಾತೇ । ಉದ್ಧವ ವಾಂಚವಾವಯಾ ತೇಥೇ । ಬದರಿಕಾಶ್ರಮಾತೇ ಹರಿ ಪ್ರೇರೀ ॥೭೮೪॥ ಉದ್ಧವಾಸೀ ಜೇ ಝಾಲೇ ಜ್ಞಾನ । ತ್ಯಾಹೂನಿ ಬದರಿಕಾಶ್ರಮ ಪಾವನ । ಹೇ ಸರ್ವಥಾ ನ ಘಡೇ ಜಾಣ । ಬ್ರಹ್ಮಶಾಪಾಭೇಣ ಪಳವೀತ ॥೭೮೫॥ ಉದ್ಧವಾ ಐಸೇ ಅನರ್ಘ್ಯ ರತ್ನ । ಜ್ಯಾಸೀ ಬಾಣಲೀ ಸ್ಥಿತೀ ಪೂರ್ಣ । ತ್ಯಾಸೀ ವಾಂಚವಾವಯಾ ಶ್ರೀಕೃಷ್ಣ । ಪಾಠವೀ ಆಪಣ ಬದರಿಕಾಶ್ರಮಾ ॥೭೮೬॥

ಆನೆ, ಪ್ರಧಾನಿಗೆ ಕೊಲ್ಲಲಾಯಿತು ಎಂದು ಹೇಳುವರು. ಆದರೆ ನಿಜವಾಗಿಯೂ ಅವರ ಪ್ರಾಣವು ಹೋಗಿರುವುದೇ? ಕಾಲಾಳು ಆಗಿದ್ದವನು ಪ್ರಧಾನಿಯಾದನು ಎಂದು ಹೇಳಿದರೆ ಅವನಿಗೆ ಗಜಲಕ್ಷ್ಮಿಯು ಪ್ರಾಪ್ತಳಾದಳೇ? ॥೭೭೩॥ ನಿಜವಾಗಿಯೂ ಜೀವವೇ ಇಲ್ಲದ ಸ್ಥಿತಿಯಲ್ಲಿ ಕೊಂದೆವು ಎಂದು ಹಿಗೆ ಬಹು ಗರ್ಜನೆಯಿಂದ ಹೇಳುತ್ತಿರುವರು. ಒಬ್ಬನು ಗೆಲ್ಲುವನು, ಇನ್ನೊಬ್ಬನು ಸೋಲುವನು. ಆದರೆ ಹೀಗಾದ ಜ್ಞಾನವು ಚದುರಂಗದಲ್ಲಿನ ದಳಗಳಿಗೆ ಇರುವುದಿಲ್ಲ ॥೭೭೪॥ ಈ ಆಟವು ಮುಗಿದ ನಂತರ ಅದರಲ್ಲಿನ ಯಾವ ಮಹಾತ್ಮನು ವೈಕುಂಠಕ್ಕೆ ಹೋಗುವನು ?ಮತ್ತು ಯಾವನು ನರಕಕ್ಕೆ ಹೋಗಿ ಬೀಳುವನು ? ಅದರಂತೆಯೇ ಬಂಧಮೋಕ್ಷಗಳ ಕಥೆಯು ಪರಿಪೂರ್ಣವಾಗಿ ಮಿಥ್ಯೆಯಾಗಿರುವುದು ॥೭೭೫॥ ಈ ಪ್ರಕಾರವಾಗಿ ಈ ಚದುರಂಗದ ಆಟದಂತೆ ಯಾವನ ದೃಷ್ಟಿ ಸಂಸಾರ ವಿಷಯದಲ್ಲಿ ಇರುವುದೋ, ಆತನೇ ಅವತಾರಗಳ ಅವತಾರವಾದ ಭಗವಂತನೇ ಆಗಿರುವನು. ಇದನ್ನು ನಿಶ್ಚಯವಾಗಿ ತಿಳಿಯಬೇಕು ॥೭೭೬॥ ವೇದೋಕ್ತಿಯೂ ಸಹ ಮಿಥ್ಯೆಯಾಗಿರುವುದು. ಬಂಧ ಹಾಗೂ ಮುಕ್ತಿ ಇವೂ ಸಹ ಮಿಥ್ಯೆಯಾಗಿರುವುವು. ಹೀಗೆ ತಿಳಿದೂ ಕೂಡ ವೇದವಿಹಿತ ಧರ್ಮದಿಂದ ನಡೆಯಬೇಕು. ಇದೇ ಮುಕ್ತಿಯ ಮಿಗಿಲಾದ ನಿಜಭಕ್ತಿಯಾಗಿರುವುದು ॥೭೭೭॥ ಅನೇಕ ಪುರುಷರು ಸಂಸಾರದಿಂದ ನಿವೃತ್ತರಾಗಿ ನಿತ್ಯಮುಕ್ತತೆಯನ್ನು ಪಡೆದಿರುವರು. ಆದರೆ ಅವರಿಗೆ ಈ ಭಕ್ತಿಯು ದುರ್ಗಮವಾಗಿರುವುದು. ಅವರಿಗೆ ಈ ಅತರ್ಕ್ಯ ಸ್ಥಿತಿಯ ಕಲ್ಪನೆಯೂ ಕೂಡ ಬರುವುದಿಲ್ಲ ॥೭೭೮॥ ಹೇ ಉದ್ಧವಾ, ಯಾವನು ನನ್ನ ಈ ಸ್ಥಿತಿಗೆ ಬಂದು ಮುಟ್ಟುವನೋ, ಆತನೇ ಮುಕ್ತಿಗಿಂತಲೂ ಮಿಗಿಲಾಗಿರುವ ಭಕ್ತಿ ಮಾಡಬಲ್ಲನು. ಇತರರಿಗೆ ಈ ಗತಿಯು ಅತರ್ಕ್ಯವಾಗಿರುವುದು. ಇದನ್ನು ನಿಶ್ಚಯವಾಗಿ ತಿಳಿ ॥೭೭೯॥ ಈ ಪ್ರಕಾರವಾಗಿ ಉದ್ಧವನಿಗೆ ಅಗಾಧವಾದ ಸ್ಥಿತಿಯು ಪ್ರಾಪ್ತವಾಯಿತು. ಆತನಿಗೆ ಬ್ರಹ್ಮಶಾಪದಿಂದ ಉಳಿಸಲು ಹಾಗೂ ಲೋಕೋಪಕಾರ ದೃಷ್ಟಿಯಿಂದ ಶ್ರೀಕೃಷ್ಣನು ಸ್ವತಃ ಈ ಒಂದು ಉಪಾಯ ಯೋಜಿಸಿದನು ॥೭೮೦॥ ನಾರದರಿಗೆ ಬ್ರಹ್ಮಜ್ಞಾನ ಪ್ರಾಪ್ತವಾಗಿತ್ತು. ಆದರೂ ಕೂಡ ಆತನಿಗೆ ದಕ್ಷಶಾಪದ ಬಂಧನವಿದ್ದು ಆ ಶಾಪದಿಂದ ಆತನಿಗೆ ಒಂದೇ ಸ್ಥಳದಲ್ಲಿ ಇರುವಂತಿರುವುದಿಲ್ಲ. ಶಾಪದ ಯೋಗದಿಂದ ಆತನು ಸಂಪೂರ್ಣ ತ್ರಿಭುವನದಲ್ಲಿ ಸಂಚಾರ ಮಾಡುತ್ತಿರುವನು ॥೭೮೧॥ ಬ್ರಹ್ಮಜ್ಞಾನ ಪ್ರಾಪ್ತವಾದರೂ ಕೂಡ ಬ್ರಹ್ಮಶಾಪದ ಭಯ ತಪ್ಪುವುದಿಲ್ಲ. ಇದನ್ನು ಅರಿತು ಶ್ರೀಕೃಷ್ಣನು ಬ್ರಹ್ಮಜ್ಞಾನದ ಉಪದೇಶ ಮಾಡಿ ಉದ್ಧವನಿಗೆ ದೂರ ಕಳಿಸಿದನು ॥೭೮೨॥ ಉದ್ಧವನ ಜನ್ಮವು ಯಾದವ ಕುಲದಲ್ಲಾಗಿತ್ತು. ಯಾದವರಿಗಾದ ಬ್ರಹ್ಮಶಾಪದಿಂದ ನಾಶವಾಗುತ್ತಿದ್ದನು. ಅದಕ್ಕಾಗಿ ಉದ್ಧವನಿಗೆ ಬದುಕಿಸಲು ಶ್ರೀಕೃಷ್ಣನು ಆತನಿಗೆ ಬದರಿಕಾಶ್ರಮಕ್ಕೆ ಕಳಿಸಿಕೊಟ್ಟನು ॥೭೮೩॥ ಬ್ರಹ್ಮಶಾಪದಿಂದ ಯಾದವರು ತಮ್ಮ ತಮ್ಮಲ್ಲಿಯೇ ಯುದ್ಧಮಾಡಿ ಮೃತ್ಯು ಮುಖದಲ್ಲಿ ಬೀಳುವವರಿದ್ದರು. ಇದರಿಂದ ಬದುಕಿಸಿ ಉಳಿಸಲು ಶ್ರೀಕೃಷ್ಣನು ಉದ್ಧವನಿಗೆ ಬದರಿಕಾಶ್ರಮಕ್ಕೆ ಹೋಗಲು ಪ್ರೇರಣೆ ನೀಡಿದನು ॥೭೮೪॥ ಉದ್ಧವನಿಗೆ ಯಾವ ಜ್ಞಾನ ಪ್ರಾಪ್ತವಾಗಿತ್ತೋ, ಅದಕ್ಕಿಂತಲೂ ಬದರಿಕಾಶ್ರಮವು ಪವಿತ್ರವೆಂದು ಸರ್ವಥಾ ಅಲ್ಲ. ಆದರೆ ಕೇವಲ ಬ್ರಹ್ಮಶಾಪಕ್ಕಾಗಿ ಶ್ರೀಕೃಷ್ಣನು ಉದ್ಧವನಿಗೆ ಅಲ್ಲಿಗೆ ಓಡಿಸಬೇಕಾಯಿತು ॥೭೮೫॥ ಉದ್ಧವನಂತಹ ಅನರ್ಘ್ಯ ರತ್ನಕ್ಕೆ ಬದುಕುಳಿಸುವ ಉದ್ದೇಶಕ್ಕಾಗಿ ಆತನಿಗೆ ಪೂರ್ಣ ಸ್ಥಿತಿ ಪ್ರಾಪ್ತಮಾಡಿಕೊಟ್ಟು ಶ್ರೀಕೃಷ್ಣನು ತಾನಾಗಿಯೇ ಆತನಿಗೆ ಬದರಿಕಾಶ್ರಮಕ್ಕೆ ಕಳುಹಿಸುತ್ತಿರುವನು ॥೭೮೬॥

ಶ್ರೀಭಗವಾನುವಾಚ :-

ಗಚ್ಛೋದ್ಧವ ಮಯಾಽಽದಿಷ್ಟೋ ಬದರ್ಯಾಖ್ಯಂ ಮಮಾಶ್ರಮಮ್ ।
ತತ್ರ ಮತ್ಪಾದತೀರ್ಥೋದೇ ಸ್ನಾನೋಪಸ್ಪರ್ಶನೈಃ ಶುಚಿಃ ॥೪೧॥

ಅರ್ಥ:- ಶ್ರೀಕೃಷ್ಣ ಭಗವಾನ ಹೇಳಿದನು ; ಉದ್ಧವಾ, ಈಗ ನೀನು ನನ್ನ ಆಜ್ಞೆ ಪ್ರಮಾಣದಿಂದ ಬದರಿಕಾಶ್ರಮಕ್ಕೆ ಹೋಗು. ಅಲ್ಲಿ ನನ್ನ ಆಶ್ರಮವಿರುವುದು. ಅಲ್ಲಿ ನನ್ನ ತೀರ್ಥೋದಕದಲ್ಲಿ ಸ್ನಾನ, ಆಚಮನ ದ್ರವ್ಯಾದಿಕಗಳಿಂದ ನೀನು ಪವಿತ್ರನಾಗು.

ಗಂಭೀರಗಿರಾ ಬೋಲೇ ಶ್ರೀಕೃಷ್ಣ । ಉದ್ಧವಾ ತುಜ ಜಾಹಲೇ ಬ್ರಹ್ಮಜ್ಞಾನ । ತುಟಲೇ ಸ್ನೇಹಪಾಶಬಂಧನ । ತರೀ ಮಮಾಜ್ಞಾ ಕರೀ ಗಮನ ಬದರಿಕಾಶ್ರಮಾ ॥೭೮೭॥ ತ್ಯಾ ಬದರಿಕಾಶ್ರಮಾಚೇ ಮಹಿಮಾನ । ಲೋಕಸಂಗ್ರಹಾರ್ಥ ಸಂಪೂರ್ಣ । ತರಾವಯಾ ಜಡಮೂಢ ಜನ । ಸ್ವಮುಖೇ ಶ್ರೀಕೃಷ್ಣ ಸಾಂಗತ ॥೭೮೮॥ ತೋ ಬದರಿಕಾಶ್ರಮ ಮಾಝೇ ಸ್ಥಾನ। ತೇಥ ನಿತ್ಯ ಮಾಝೇ ಅನುಷ್ಠಾನ । ತಯಾ ಸ್ಥಾನಾಚೇ ದೂರದರ್ಶನ । ಕರೀ ನಿರ್ದಳಣ ಕಲಿಕಲ್ಮಷಾ ॥೭೮೯॥ ಜ್ಯಾ ಪರ್ವತಾಚೇ ಸ್ಪರ್ಶನ । ಮಾನವಾ ಕರೀ ಪರಮ ಪಾವನ । ಜೇ ಬದರೀಚೇ ನಾಮಸ್ಮರಣ । ವಿಭಾಂಡೀ ದಾರುಣ ಮಹಾದೋಷಾ ॥೭೯೦॥ ತೇಥೇಹೀ ಮಾಝೇ ಪಾದೋದಕ । ಅಲಕನಂದಾ ಪವಿತ್ರ ದೇಖ । ಜಿಚೇನಿ ಸ್ಪರ್ಶಮಾತ್ರೇ ಲೋಕ । ಹೋತೀ ಅಲೌಕಿಕ ಪಾವನ ॥೭೯೧॥ ಜೇಥ ಶ್ರದ್ಧಾಯುಕ್ತ ಕರಿತಾ ಸ್ನಾನ । ಜೀವಾಂಚೇ ತುಟೇ ಭವಬಂಧನ । ಜ್ಯಾಸೀ ಘಡೇ ಆಚಮನ । ತೋ ಉದ್ಧರೇ ಜಾಣ ಪಿತರೇಸೀ ॥೭೯೨॥ ಐಸೇ ಬದರಿಕಾಶ್ರಮ ಮಾಝೇ ಜಾಣ । ಅತಿಶಯೇ ಪರಮ ಪಾವನ । ಮ್ಹಣಸೀ ಕೈ ಕೇಲೇ ತ್ವಾಂ ತೇ ಸ್ಥಾನ । ತರೀ ಐಕ ತೇ ಕಥನ ಉದ್ಧವಾ ॥೭೯೩॥ ರಜೋಗುಣೇ ಸೃಜಿಲೇ ಜನ । ತೇ ಜಾಹಲೇ ಭೋಗಕರ್ಮೀ ಪ್ರವೀಣ । ಭೋಗಾಸಕ್ತೀ ಬುಡತಾ ಪೂರ್ಣ । ದೋ ರೂಪೀ ಜಾಣ ಮೀ ಅವತರಲೋ ॥೭೯೪॥ ತಮ ನಿರಸೀ ರವಿಚಂದ್ರ ಪೂರ್ಣ । ತೈಸಾ ಮೀ ಜಾಹಲೋ ನಾರಾಯಣ । ಬದರಿಕಾಚಲಾಮಾಜೀ ಜಾಣ । ಕೇಲಾ ಸಂಪೂರ್ಣ ನಿತ್ಯೋದಯೋ ॥೭೯೫॥ ಭಜ್ಯಪೂಜ್ಯತ್ವೇ ಮೀ ನಾರಾಯಣ । ನರರೂಪೇ ಮೀಚಿ ಭಕ್ತ ಜಾಣ । ತೇಥ ಭಕ್ತಿ ವೈರಾಗ್ಯ ಜ್ಞಾನ । ಮ್ಯಾ ಆಚರೋನ ಪ್ರಕಾಶಿಲೇ ॥೭೯೬॥ ತೋ ಬದರಿಕಾಶ್ರಮ ಮಾಝೇ ಸ್ಥಾನ । ತೇಥೇ ಸರ್ವದಾ ಮೀ ಆಪಣ । ಅದ್ಯಾಪಿ ಕರಿತೋ ಅನುಷ್ಠಾನ । ಭಕ್ತಿಜ್ಞಾನವೈರಾಗ್ಯೇ ॥೭೯೭॥ ನರನಾರಾಯಣಸ್ಥಿತೀ । ಮೀ ಅವತರಲೋ ಜೇ ಪರ್ವತೀ । ತೇಥ ತೋಡಿಲೇ ಬೋರೀ ಐಶೀ ಮಾಗುತೀ । ಮಾಝೀ ನಿಜಭಕ್ತೀ ಫಾಂಪಾಇಲೀ ॥೭೯೮॥

ಮುರಲೀಮನೋಹರ ಶ್ರೀಕೃಷ್ಣನು ಗಂಭೀರ ವಾಣಿಯಿಂದ ನುಡಿದನು ; ಹೇ ಭಕ್ತರಾಜ ಉದ್ಧವಾ, ನಿನಗೆ ಈಗ ಅಲೌಕಿಕ ಬ್ರಹ್ಮಜ್ಞಾನ ಪ್ರಾಪ್ತವಾಗಿದೆ. ಇದರಿಂದ ನಿನ್ನ ಸ್ನೇಹಪಾಶ ಸಂಬಂಧವೂ ಕೂಡ ಮುರಿದು ಹೋಗಿದೆ. ಆದ್ದರಿಂದ ನೀನು ನನ್ನ ಆಜ್ಞೆಯಂತೆ ಬದರಿಕಾಶ್ರಮಕ್ಕೆ ಪ್ರಯಾಣ ಮಾಡು ॥೭೮೭॥ ಆ ಯಾವ ಬದರಿಕಾಶ್ರಮದ ಮಹಾತ್ಮ್ಯ ಲೋಕ ಸಂಗ್ರಹಕ್ಕಾಗಿ ಹಾಗೂ ಮೂಢ ಜನರ ಉದ್ಧಾರಕ್ಕಾಗಿ ಭಗವಾನ ಶ್ರೀಕೃಷ್ಣನು ತನ್ನ ಸ್ವಮುಖದಿಂದ ವರ್ಣಿಸುತ್ತಿರುವನು ॥೭೮೮॥ ಆ ಬದರಿಕಾಶ್ರಮವು ನನ್ನ ಸ್ಥಾನವಾಗಿರುವುದು. ಅಲ್ಲಿ ನಾನು ಯಾವಾಗಲೂ ಅನುಷ್ಠಾನ ಮಾಡುತ್ತಿರುವೆನು. ಆ ಸ್ಥಾನವನ್ನು ದೂರದಿಂದ ದರ್ಶನ ಪಡೆದರೂ ಮಹಾ ದೋಷಗಳ ಅಂತ್ಯಯಾಗುವುದು ॥೭೮೯॥ ಆ ಪರ್ವತದ ಕೇವಲ ಸ್ಪರ್ಶ ಮಾಡಿದರೆ ಸಾಕು, ಮನುಷ್ಯನು ಪರಮ ಪವಿತ್ರನಾಗುವನು. ಆ ಬದರಿಯ ಮಧುರ ನಾಮಸ್ಮರಣೆಯಿಂದಲೂ ಕೂಡ ಮಹಾ ಭಯಂಕರ ದೋಷಗಳು ಇಲ್ಲದಾಗುವುವು ॥೭೯೦॥ ಅಲ್ಲಿಯೂ ಸಹ ನನ್ನ ಚರಣ ಕಮಲಗಳ ತೀರ್ಥ ಪವಿತ್ರವಾದ ''ಅಲಕನಂದಾ'' ನಾಮದ ನದಿ ರೂಪದಿಂದ ಹರಿಯುತ್ತಿದೆ. ಅದರ ಸ್ಪರ್ಶ ಮಾತ್ರದಿಂದ ಜನರು ಪರಮಪವಿತ್ರರಾಗುವರು ॥೭೯೧॥ ಅಲ್ಲಿ ಒಂದುವೇಳೆ ಶ್ರದ್ಧೆಯಿಂದ ಸ್ನಾನ ಮಾಡಿದರೆ ಜೀವದ ಸಂಸಾರ ಬಂಧನೆಯು ಮುರಿಯುವುದು. ಯಾರಿಗೆ ಇದರ ಆಚಮನ ಲಭಿಸುವುದೋ ಅವರು ಉದ್ಧಾರರಾಗುವರು ॥೭೯೨॥ ಈ ಪ್ರಕಾರದ ನನ್ನ ಬದರಿಕಾಶ್ರಮ ಸ್ಥಾನವಾಗಿರುವುದು. ಇದು ಅತಿಶಯ ಪವಿತ್ರವಾಗಿರುವುದು. ಹೇ ಪ್ರಿಯ ಉದ್ಧವನೇ, ಈ ಪವಿತ್ರ ಸ್ಥಾನ ಎಂದು, ಏಕೆ ಮಾಡಿದೆ? ಎಂದು ನೀನು ಹೀಗೆ ಕೇಳಬಹುದು. ಅದಕ್ಕಾಗಿ ಅದರ ವರ್ಣನೆಯನ್ನು ಕೇಳು ॥೭೯೩॥ ನಾನು ರಜೋಗುಣದಿಂದ ಜನರನ್ನು ಉತ್ಪನ್ನ ಮಾಡಿದೆ. ಅವರು ಸುಖವಿಲಾಸಗಳಲ್ಲಿ ಮಗ್ನರಾದರು. ಅವರು ಭೋಗಾಸಕ್ತಿಯಲ್ಲಿಯೇ ಸಂಪೂರ್ಣವಾಗಿ ಮುಳುಗಿದರು. ಅದಕ್ಕಾಗಿ ನಾನು ಎರಡು ರೂಪಗಳಿಂದ ಅವತಾರ ಧರಿಸಿದೆ ॥೭೯೪॥ ರವಿಚಂದ್ರರು ಅಂಧಕಾರವನ್ನು ಹೇಗೆ ಪರಿಪೂರ್ಣವಾಗಿ ನಾಶ ಮಾಡುತ್ತಿರುವರೋ, ಅದರಂತೆ ನಾನೂ ಕೂಡ ನರ-ನಾರಾಯಣನಾಗಿ ಯಾವಾಗಲೂ ಬದರಿಕಾಶ್ರಮದಲ್ಲಿ ನಿತ್ಯೋದಯ ಮಾಡುತ್ತಿರುವೆನು ॥೭೯೫॥ ಭಜನ-ಪೂಜನೆಗೆ ಯೋಗ್ಯವಾಗುವಂತೆ ನಾನು ನಾರಾಯಣನಾದೆನು. ಹಾಗೆಯೇ ನರರೂಪದಿಂದ ನಾನೇ ಭಕ್ತನಾಗಿರುವೆನು. ಅಲ್ಲಿ ನಾನು ಭಕ್ತಿ, ಜ್ಞಾನ, ವೈರಾಗ್ಯದ ಪ್ರಕಾಶಿತಗೊಳಿಸಿರುವೆನು ॥೭೯೬॥ ಹೀಗೆ ಆ ಬದರಿಕಾಶ್ರಮವು ನನ್ನ ಸ್ಥಾನವಾಗಿರುವುದು. ಅಲ್ಲಿ ನಾನು ಸ್ವತಃ ಭಕ್ತಿ, ಜ್ಞಾನ, ವೈರಾಗ್ಯದಿಂದ ಈಗಲೂ ಕೂಡ ಸತತವಾಗಿ ಅನುಷ್ಠಾನ ಮಾಡುತ್ತಿರುವೆನು ॥೭೯೭॥ ಯಾವ ಪರ್ವತದ ಮೇಲೆ ನಾನು ಅವತಾರ ಧರಿಸಿರುವೆನೋ, ಅಲ್ಲಿ ಮುರಿದು ಬಿದ್ದ ಬಾರೀ ಹಣ್ಣಿನಂತೆ ನನ್ನ ಭಕ್ತಿಯು ಹಬ್ಬುತ್ತಿರುವುದು ॥೭೯೮॥

ಯಾಲಾಗೀ ''ಬದರಿಕಾಶ್ರಮ'' । ತ್ಯಾ ಸ್ಥಳಾಸೀ ಮ್ಯಾ ಠೇವಿಲೇ ನಾಮ । ತೇಥೇ ಫಿಟೇ ಭವಭ್ರಮ । ಯಾಪರೀ ಪರಮ ಪಾವನ ತೇ ಸ್ಥಳ ॥೭೯೯॥ ತ್ಯಾ ಬದರಿಕಾಶ್ರಮಾಪ್ರತೀ । ತುವಾ ಜಾವೇ ಗಾ ನಿಶ್ಚಿತೀ । ಐಸೇ ಉದ್ಧವಾ ಕಲ್ಪಿಸೀ ಚಿತ್ತೀ । ಮಜ ಕಾಯ ತೀರ್ಥೀ ವಿವಂಚೂ ॥೮೦೦॥ ಮೋಕ್ಷಾಹೀವರೀಲ ಭಕ್ತೀ । ತುವಾ ಅರ್ಪಿಲೀ ಮಾಝ್ಯೇ ಹಾತೀ । ತೇಣೇ ಮೀ ಜಾಹಲೋ ಕೃತಕೃತ್ಯಾರ್ಥೀ । ಮ್ಹಣಸೀ ಮಜ ತೀರ್ಥೀ ಚಾಡ ನಾಹೀ ॥೮೦೧॥ ತುಜ ಮಾಝೀ ಆಜ್ಞಾ ಪ್ರಮಾಣ । ಅವಶ್ಯ ತೇಥೇ ಕರಾವೇ ಗಮನ । ಮಗ ಉದ್ಧವೇ ಧರೋನಿಯಾ ಮೌನ । ಮಸ್ತಕೀ ವಚನ ವಂದಿಲೇ ॥೮೦೨॥ ಸದ್ಭಾವೇ ಕರೂನಿ ನಮನ । ಘೇತಾ ಬದರಿಕಾಶ್ರಮದರ್ಶನ । ತೋ ನರ ಹೋಯ ನಾರಾಯಣ । ಏವಢೇ ಮಹಿಮಾನ ತ್ಯಾ ಸ್ಥಳಾಚೇ ॥೮೦೩॥ ಉದ್ಧವಾ ತುಝ್ಯಾ ಠಾಯೀ ಪೂರ್ಣ ಜ್ಞಾನ । ಜ್ಞಾನ ಅಸೋನಿ ಮಾಝೇ ಭಜನ । ತುಝೇನಿ ಚರಣಸ್ಪರ್ಶೇ ಜಾಣ । ಹೋಈಲ ಪಾವನ ಬದರಿಕಾಶ್ರಮು ॥೮೦೪॥ ಐಸೇ ಐಕೋನಿ ಶ್ರೀಕೃಷ್ಣವಚನ । ಉದ್ಧವಾಸೀ ಆಲೇ ರುದನ । ಧಾಂವೋನಿ ವಂದಿಲೇ ಶ್ರೀಚರಣ । ಸರ್ವಥಾ ಗಮನ ಕರೀನ ಆತಾ ॥೮೦೫॥ ಬ್ರಹ್ಮಶಾಪಾಚೇ ನಿರ್ದಳಣ । ಉದ್ಧವಾಚೇ ಚುಕವಾವಯಾ ಜಾಣ । ಶ್ರೀಕೃಷ್ಣೇ ಪ್ರಬೋಧೋನಿ ಪೂರ್ಣ । ಕರವೀ ಗಮನ ಬದರಿಕಾಶ್ರಮಾ ॥೮೦೬॥ ಉದ್ಧವ ಜ್ಞಾನಿಯಾಂಚೇ ಜ್ಞಾನರತ್ನ । ತ್ಯಾಸೀ ವಾಂಚವೂನಿ ಶ್ರೀಕೃಷ್ಣ । ವಿಸ್ತಾರಾವಯಾ ನಿಜಜ್ಞಾನ । ಕರವೀ ಗಮನ ಬದರಿಕಾಶ್ರಮಾ ॥೮೦೭॥ ಚುಕವಾವಯಾ ಬ್ರಹ್ಮಶಾಪ ದಾರುಣ । ಉದ್ಧವಾಸೀ ''ವಿಶಾಳೀ'' ಗಮನ । ಅನ್ಯಥಾ ಜಾಹಲಿಯಾ ಬ್ರಹ್ಮಜ್ಞಾನ । ಕೃಷ್ಣ ತೀರ್ಥಾಟನ ನೇಮೀನಾ ॥೮೦೮॥ ಉದ್ಧವಾಸೀ ಭವಬಂಧನ । ಬಾಳಪಣೇಂಚೀ ನಾಹೀ ಜಾಣ । ಹೇ ಜಾಣೋನಿಯಾ ಶ್ರೀಕೃಷ್ಣ । ಬ್ರಹ್ಮಶಾಪಾಭೇಣ ತೀರ್ಥಾ ಧಾಡೀ ॥೮೦೯॥ ತೀರ್ಥಯಾತ್ರೇಚಾ ಅಭಿಪ್ರಾವೋ । ಹಾಚಿ ನಿಶ್ಚಿತೇ ನಿಜಭಾವೋ । ಜಾಣೋನಿ ದೇವಾಧಿದೇವೋ । ಮೋಕಲೀ ಉದ್ಧವೋ ಬದರಿಕಾಶ್ರಮಾ ॥೮೧೦॥ ಉದ್ಧವಾ ತುಜ ಗೇಲಿಯಾ ತೇಥ । ಥೋರ ಲೋಕೋಪಕಾರ ಹೋಈಲ ಸತ್ಯ । ತುಝೇನಿ ಧರ್ಮೇ ನಿಶ್ಚಿತ । ದೀನ ಸಮಸ್ತ ಉದ್ಧರತೀ ॥೮೧೧॥ ಮ್ಹಣಸೀ ಪಾವಲ್ಯಾ ತೇ ತೀರ್ಥ । ಮ್ಯಾ ಕೈಸೇ ವಸಾವೇ ತೇಥ । ತೇಹೀ ಅರ್ಥೀ ಲೋಕಹಿತಾರ್ಥ । ತುಜ ಇತ್ಯರ್ಥ ಸಾಂಗೇನ ॥೮೧೨॥

ಆದ್ದರಿಂದಲೇ ನಾನು ಆ ಸ್ಥಾನಕ್ಕೆ ಬದರಿಕಾಶ್ರಮವೆಂದು ಹೆಸರು ಇಟ್ಟಿರುವೆನು. ಅಲ್ಲಿ ಸಂಸಾರದ ಸರ್ವ ಭ್ರಮೆಯು ಇಲ್ಲದಾಗಿಬಿಡುವುದು. ಈ ಪ್ರಕಾರವಾಗಿ ಆ ಸ್ಥಾನವು ಸರ್ವರಿಗೂ ಪರಮ ಪಾವನಗೊಳಿಸುತ್ತಿರುವುದು ॥೭೯೯॥ ಇಂತಹ ಬದರಿಕಾಶ್ರಮಕ್ಕೆ ನೀನು ನಿಶ್ಚಯವಾಗಿ ಹೋಗು. ನನಗೆ ಈಗ ತೀರ್ಥಯಾತ್ರೆಗೆ ಹೋಗುವ ಪ್ರಸಂಗವಾದರೂ ಏನಿರುವುದು ? ಎಂದು ನಿನ್ನ ಮನದಲ್ಲಿ ಇಂತಹ ವಿಚಾರ ಮೂಡಬಹುದು ॥೮೦೦॥ ಮೋಕ್ಷಕ್ಕಿಂತಲೂ ಮಿಗಿಲಾದ ಭಕ್ತಿ ನೀನು ನನ್ನಕೈಯಲ್ಲಿ ಕೊಟ್ಟಿರುವೆ. ಇದರಿಂದ ನನ್ನ ಜೀವನವು ಕೃತಾರ್ಥವಾಗಿರುವುದು. ನನಗೆ ಈಗ ಯಾವ ತೀರ್ಥಗಳ ಅಪೇಕ್ಷೆ ಉಳಿದುಕೊಂಡಿಲ್ಲ ॥೮೦೧॥ ಆದರೆ ನಿನಗೆ ಈಗ ನನ್ನ ಆಜ್ಞೆ ಪ್ರಮಾಣವಾಗಿರುವುದು. ಆದ್ದರಿಂದ ನೀನು ಅವಶ್ಯವಾಗಿ ಅಲ್ಲಿಗೆ ಹೋಗಲೇಬೇಕು. ಹೀಗೆ ಕೇಳುತ್ತಲೇ ಉದ್ಧವನು ಮೌನತಾಳಿದನು. ಹಾಗೆಯೇ ಶ್ರೀಕೃಷ್ಣನ ಚರಣಕಮಲಗಳಿಗೆ ವಂದನೆ ಮಾಡಿದನು ॥೮೦೨॥ ಸದ್ಭಾವನೆಯಿಂದ ವಂದಿಸಿ ಬದರಿಕಾಶ್ರಮದ ದರ್ಶನ ಪಡೆದರೆ ನರನು ನಾರಾಯಣನಾಗುವನು. ಇಷ್ಟೊಂದು ಆ ಪವಿತ್ರ ಸ್ಥಾನದ ಮಹಿಮೆಯಾಗಿರುವುದು ॥೮೦೩॥ ಹೇ ಉದ್ಧವಾ, ನಿನಗೆ ಆತ್ಮಜ್ಞಾನದ ಪ್ರಾಪ್ತಿಯಾಗಿರುವುದು. ಹೀಗಿದ್ದರೂ ಸಹ ನೀನು ನನ್ನ ಭಜನೆ ಮಾಡುತ್ತಿರುವೆ. ಆದ್ದರಿಂದ ನಿನ್ನ ಚರಣಸ್ಪರ್ಶದಿಂದ ಆ ಯಾವ ಬದರಿಕಾಶ್ರಮವು ಪವಿತ್ರವಾಗುವುದು ॥೮೦೪॥ ಹೀಗೆ ಶ್ರೀಕೃಷ್ಣನ ವಚನ ಕೇಳಿ ಉದ್ಧವನ ಕಣ್ಣುಗಳಲ್ಲಿ ನೀರು ಬಂದಿತು. ಆಗ ಆತನು ಧಾವಿಸುತ್ತ ಸಾಗಿ ಶ್ರೀಕೃಷ್ಣನ ಚರಣಗಳಿಗೆ ವಂದಿಸುತ್ತ ಈಗ ನಾನು ಅವಶ್ಯವಾಗಿ ಅಲ್ಲಿಗೆ ಹೋಗುವೆನು ಎಂದು ಹೇಳಿದನು ॥೮೦೫॥ ಬ್ರಹ್ಮಶಾಪದಿಂದ ಉದ್ಧವನಿಗಾಗುವ ನಷ್ಟ ತಪ್ಪಿಸಲು ಶ್ರೀಕೃಷ್ಣನು ಆತನಿಗೆ ಪೂರ್ಣವಾಗಿ ಉಪದೇಶ ಮಾಡಿದನು. ಹಾಗೆಯೇ ಬದರಿಕಾಶ್ರಮಕ್ಕೆಗಮನ ಮಾಡಲು ಹಚ್ಚಿದನು ॥೮೦೬॥ ಉದ್ಧವನು ಜ್ಞಾನಿಗಳವರಲ್ಲಿ ಅಮೌಲ್ಯ ಜ್ಞಾನರತ್ನನಾಗಿದ್ದನು. ಆತನನ್ನು ಬದುಕಿಸಿ ತನ್ನ ಆತ್ಮಜ್ಞಾನದ ಪ್ರಸಾರ ಮಾಡಬೇಕೆನ್ನುವ ಉದ್ದೇಶದಿಂದ ಶ್ರೀಕೃಷ್ಣನು ಆತನಿಗೆ ಬದರಿಕಾಶ್ರಮಕ್ಕೆ ಕಳುಹಿಸಿದನು ॥೮೦೭॥ ಭಯಂಕರವಾಗಿರುವ ಬ್ರಹ್ಮಶಾಪದಿಂದ ತಪ್ಪಿಸುವ ಕಾರಣಕ್ಕಾಗಿ ಶ್ರೀಕೃಷ್ಣನು ಉದ್ಧವನಿಗೆ ಬದರಿಕಾಶ್ರಮಕ್ಕೆ ಹೋಗಲು ಹೇಳಿದನು. ಇತರರಿಗೆ ಬ್ರಹ್ಮಜ್ಞಾನ ಹೇಳಿದ ನಂತರ ತೀರ್ಥಯಾತ್ರೆಗೆ ಹೋಗಲು ಶ್ರೀಕೃಷ್ಣನು ನೇಮಿಸಲಾರನು ॥೮೦೮॥ ಉದ್ಧವನ ಭವಬಂಧನೆಯು ಬಾಲ್ಯದಲ್ಲಿಯೇ ಇಲ್ಲದಾಗಿತ್ತು. ಇದನ್ನು ತಿಳಿದಿದ್ದರೂ ಕೂಡ ಶ್ರೀಕೃಷ್ಣನು ಬ್ರಹ್ಮಶಾಪದ ಭಯದಿಂದ ಆತನಿಗೆ ತೀರ್ಥಕ್ಷೇತ್ರಕ್ಕೆ ಕಳುಹಿಸಿಕೊಟ್ಟನು ॥೮೦೯॥ ತೀರ್ಥಯಾತ್ರೆ ಮಾಡುವ ಪ್ರಧಾನ ಉದ್ದೇಶವೂ ಕೂಡ ಇದೇ ಆಗಿತ್ತು. ಇದೆಲ್ಲವನ್ನೂ ಲಕ್ಷದಲ್ಲಿಟ್ಟುಕೊಂಡು ಶ್ರೀಕೃಷ್ಣನು ಉದ್ಧವನಿಗೆ ಬದರಿಕಾಶ್ರಮಕ್ಕೆ ಪ್ರಯಾಣ ಮಾಡಿಸಿದನು ॥೮೧೦॥ ಹೇ ಉದ್ಧವಾ, ನೀನು ಅಲ್ಲಿಗೆ ಹೋದ ನಂತರ ನಿಜವಾಗಿಯೂ ನಿನ್ನಿಂದ ಲೋಕೋಪಕಾರ ಕಾರ್ಯವಾಗುವುದು. ನಿನ್ನ ಧರ್ಮದಿಂದ ಸರ್ವ ಅಜ್ಞ ಜನರ ಉದ್ಧಾರವಾಗುವುದು ॥೮೧೧॥ ಆ ತೀರ್ಥಕ್ಕೆ ಹೋದ ನಂತರ ನಾನು ಹೇಗೆ ವರ್ತಿಸಬೇಕೆಂದು ನೀನು ಕೇಳಬಹುದು. ಆದಕ್ಕಾಗಿ ಆ ವಿಷಯ ಕುರಿತಾದ ಮಾತನ್ನೂ ಕೂಡ ನಿನಗೆ ಲೋಕಕಲ್ಯಾಣಕ್ಕಾಗಿ ಕೆಲವು ನಿಯಮಗಳನ್ನು ಹೇಳುವೆನು ॥೮೧೨॥

ಉದ್ಧವಾ ತುಝೇ ಜೇ ಆಚರಣ । ತೋಚಿ ಜನಾಂಸೀ ಉಪದೇಶ ಜಾಣ । ಯಾಲಾಗೀ ವೈರಾಗ್ಯ-ಭಕ್ತಿ-ಜ್ಞಾನ । ಸ್ವಧರ್ಮಾಚರಣ ಸಾಂಡೂ ನಕೋ ।।೮೧೩।। ತ್ರಿಭುವನಾಮಾಜೀ ಸರ್ವಥಾ । ಉದ್ಧವಾ ಮಜ ನಾಹೀ ಕರ್ತವ್ಯತಾ । ತೋಹೀ ಮೀ ಲೋಕಸಂಗ್ರಹಾರ್ಥಾ । ಹೋಯ ವರ್ತತಾ ನಿಜಧರ್ಮೀ ।।೮೧೪।। ತೂ ಐಸೇ ಮ್ಹಣಸೀ ಆತಾ । "ತ್ರೈಲೋಕ್ಯ ಅಸೇ ತುಝ್ಯಾ ಮಾಥಾ । ಯಾಲಾಗೀ ಲೋಕಸಂಗ್ರಹಾರ್ಥಾ । ತೂ ಹೋಸೀ ವರ್ತತಾ ಸ್ವಧರ್ಮಕರ್ಮೀ" ।।೮೧೫।। ಮೀ ನಿಜಧಾಮಾ ಜಾತೋ ಆಪಣ । ಯಾಲಾಗೀ ಮಾಝೀ ಸ್ಥಿತೀ ಪೂರ್ಣ । ತೇ ಪೂರ್ಣತಾ ತುಜ ಮ್ಯಾ ಅರ್ಪಿಲೀ ಜಾಣ । ಲೋಕಸಂಗ್ರಹಾರ್ಥ ಪೂರ್ಣ ತೂ ವಿರಕ್ತ ಹೋಈ ।।೮೧೬।। ಅಭೇದಭಕ್ತೀ ವೈರಾಗ್ಯ ಜ್ಞಾನ । ಸ್ವಯೇ ಆಚರೋನಿ ಆಪಣ । ದೇಖೀ ಲಾವಾವೇ ಇತರ ಜನ । "ಲೋಕಸಂಗ್ರಹ" ಜಾಣ ಯಾ ನಾಂವ ।।೮೧೭।।

(ಸಮಂತ ಶ್ಲೋಕ-ಭಗವದ್ಗೀತಾ)

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್ ॥ ಅ.೩-೨೬)

ಅರ್ಥ:- ಜ್ಞಾನೀ ಪುರುಷನು ಕರ್ಮದಲ್ಲಿ ಅಭಿರುಚಿಯಿರುವ ಪಾಮರ ಜನರ ಬುದ್ಧಿಗೆ ಭೇದವನ್ನುಂಟು ಮಾಡಕೂಡದು. ತಾನು ಯೋಗಮುಕ್ತನಾಗಿ ಸರಿಯಾಗಿ ಕರ್ಮ ಮಾಡುತ್ತ ಅವರನ್ನು ಕರ್ಮಕ್ಕೆ ಪ್ರೋತ್ಸಾಹಿಸಬೇಕು.

ಉದ್ಧವಾ ಮಾಝಿಯೇ ಜ್ಞಾನಪ್ರಾಪ್ತೀ । ತೂ ವಂದ್ಯ ಜಾಹಲಾಸೀ ತ್ರಿಜಗತೀ । ತುಝೀ ಜೇ ಆಚರತೀ ಸ್ಥಿತೀ । ತೇಚಿ ಲೋಕೀ ಸಮಸ್ತೀ ಕರಿಜೇಲ ।।೮೧೮।। ಆತಾ ತುಝೇನಿ ಮಿಸೇ ಜಾಣ । ಸಾಡೇತೀನ ಶ್ಲೋಕಿಂಚೇ ನಿರೂಪಣ । ಲೋಕಸಂಗ್ರಹಾರ್ಥ ಸಾಂಗೇನ । ತೈಸೇಚಿ ವರ್ತನ ಕರಾವೇ ತುವಾ ।।೮೧೯।। ತುಜ ಪಾವಲಿಯಾ ಬದರಿಕಾಶ್ರಮಾತೇ । ತೇಥ ವಿದ್ಯಮಾನ ಬಹುತ ತೀರ್ಥೇ । ಪರೀ ಅಲಕನಂದಾ ಮುಖ್ಯ ತೇಥೇ । ಜೇ ನಾಶೀ ದೋಷಾಂತೇ ದರ್ಶನಮಾತ್ರೇ ।।೮೨೦।।

ಈಕ್ಷಯಾಽಲಕನಂದಾಯಾ ವಿಧೂತಾಶೇಷಕಲ್ಮಷಃ । ವಸಾನೋ ವಲ್ಕಲಾನ್ಯಂಗವನ್ಯಭುಕ್ ಸುಖನಿಃಸ್ಪೃಹಃ ।।೪೨।।

ಅರ್ಥ:- ಅಲಕನಂದಾ ನದಿಯ ದರ್ಶನದಿಂದ ನಿನ್ನ ಸರ್ವ ಪಾಪ, ತಾಪಗಳು ನಷ್ಟವಾಗುವುವು. ಪ್ರಿಯ ಉದ್ಧವಾ, ನೀನು ಅಲ್ಲಿ ವೃಕ್ಷದ ಎಲೆಗಳನ್ನು ಪರಿಧಾನ ಮಾಡು. ವನದಲ್ಲಿನ ಕಂದಮೂಲಗಳನ್ನು ಭಕ್ಷಿಸು. ಯಾವುದೇ ಭೋಗದ ಅಪೇಕ್ಷೆ ಮಾಡಬೇಡ. ನಿಃಸ್ಪೃಹ ವೃತ್ತಿಯಿಂದ ನಿನ್ನ ಆತ್ಮತತ್ವದಲ್ಲಿ ತನ್ಮಯನಾಗು.

ಕರೂನಿ ಅಲಕನಂದೇಚೇ ಸ್ನಾನ । ಕರಾವೇ ವಿದ್ಧ್ಯುಕ್ತ ತೀರ್ಥ ವಿಧಾನ । ಮಗ ತೇಥೇ ವಸಾವೇ ಆಪಣ । ವಸತೇ ಲಕ್ಷಣ ತೇ ಐಕ ।।೮೨೧।।

ಹೇ ಉದ್ಧವನೇ, ನಿನ್ನ ಆಚರಣೆಯೇ ಜಗತ್ತಿನ ಜನರಿಗೆ ಉಪದೇಶದಂತಾಗಬೇಕು. ಆದಕ್ಕಾಗಿ ನೀನು ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ಸ್ವಧರ್ಮದ ಆಚರಣೆಗಳನ್ನು ಎಂದಿಗೂ ಬಿಡಬೇಡ ।।೮೧೩।। ಹೇ ಉದ್ಧವಾ, ಈಗ ನನ್ನತ್ತ ನೋಡು ; ಈ ತ್ರಿಭುವನದಲ್ಲಿ ನಿಜವಾಗಿಯೂ ನನಗೆ ಯಾವ ಕರ್ತವ್ಯವೂ ಉಳಿದುಕೊಂಡಿರುವುದಿಲ್ಲ. ಆದರೂ ಸಹ ನಾನು ಲೋಕಸಂಗ್ರಹಕ್ಕಾಗಿ ಸ್ವಧರ್ಮದಿಂದ ವರ್ತಿಸುತ್ತಿರುವೆನು ।।೮೧೪।। ಹೀಗೆ ಹೇಳಿದನಂತರ ನೀನು ನನ್ನನ್ನು ಕೇಳಬಹುದು ; ಸರ್ವ ತ್ರೈಲೋಕ್ಯದ ಆಗುಹೋಗುಗಳು ನಿನ್ನ ತಲೆಯ ಮೇಲೆ ಇದೆ. ಅದಕ್ಕಾಗಿ ನಿನಗೆ ಲೋಕಸಂಗ್ರಹಕ್ಕಾಗಿ ಸ್ವಧರ್ಮಕರ್ಮಗಳನ್ನು ಮಾಡುತ್ತಿರಬೇಕಾಗುವುದು ।।೮೧೫।। ಆದರೆ ನಾನೀಗ ನಿಜಧಾಮಕ್ಕೆ ಹೊರಟಿರುವೆ. ಆದ್ದರಿಂದ ನನ್ನ ಪರಿಪೂರ್ಣ ಸ್ಥಿತಿ ನಿನಗೆ ಅರ್ಪಿಸಿರುವೆನು. ಈಗ ನೀನು ಲೋಕಸಂಗ್ರಹಕ್ಕಾಗಿ ಪರಿಪೂರ್ಣ ವಿರಕ್ತನಾಗು ।।೮೧೬।। ಅಭೇದ ಭಕ್ತಿ, ವೈರಾಗ್ಯ, ಜ್ಞಾನ ಇವುಗಳನ್ನು ಸ್ವತಃ ಆಚರಿಸಿ ಇತರರಿಗೂ ಇದರಂತೆಯೇ ಆಚರಿಸಲು ಕಲಿಸಬೇಕು. ಇದರ ನಾಮವೇ ಲೋಕಸಂಗ್ರಹವಾಗಿರುವುದು ।।೮೧೭।।

ಉದ್ಧವಾ, ನಿನಗೆ ನನ್ನ ಜ್ಞಾನದ ಪ್ರಾಪ್ತಿಯಾಗಿರುವುದು. ಆದ್ದರಿಂದ ನೀನು ತ್ರಿಭುವನದಲ್ಲಿ ವಂದ್ಯನಾಗಿರುವೆ. ಈ ಕಾರಣದಿಂದ ನೀನು ಹೇಗೆ ಆಚರಣೆ ಮಾಡುವಿಯೋ, ಅದರಂತೆಯೇ ಸಂಪೂರ್ಣ ಜನರು ಆಚರಿಸುವರು ।।೮೧೮।। ಈಗ ನಿನ್ನ ನಿಮಿತ್ತವಾಗಿ ಈ ಮುಂದಿನ ಮೂರುವರೆ ಶ್ಲೋಕಗಳಲ್ಲಿ ಲೋಕಸಂಗ್ರಹದ ನಿರೂಪಣೆ ಮಾಡುವೆನು. ಅದರಂತೆ ನೀನು ಆಚರಣೆ ಮಾಡು ।।೮೧೯।। ನೀನು ಬದರಿಕಾಶ್ರಮಕ್ಕೆ ಹೋದನಂತರ ಅಲ್ಲಿ ಅನೇಕ ತೀರ್ಥಗಳಿರುವುವು. ಆದರೆ ಅವುಗಳಲ್ಲಿ ಅಲಕನಂದಾ ಮುಖ್ಯವಾಗಿರುವುದು. ಇದರ ದರ್ಶನದಿಂದ ಸರ್ವ ದೋಷಗಳ ನಾಶವಾಗುವುದು ।।೮೨೦।।

ಅಲಕನಂದಿಯ ಸ್ನಾನಮಾಡಿ ಶಾಸ್ತ್ರೋಕ್ತ ತೀರ್ಥವಿಧಾನ ಮಾಡಬೇಕು. ಹಾಗೂ ನೀನು ಅಲ್ಲಿಯೇ ವಾಸಮಾಡಬೇಕು. ಅಲ್ಲಿ ಹೇಗೆ ಇರಬೇಕು ಎಂಬುವ ಲಕ್ಷಣ ಈಗ ಕೇಳು ।।೮೨೧।।

ತ್ಯಜೂನಿ ವಸ್ತ್ರೇ ಆಪಣ । ಕರಾವೀ ವಲ್ಕಲೇ ಪರಿಧಾನ । ಕರೂನಿ ವನಫಳೇ ಭೋಜನ । ರಹಾವೇ ಆಪಣ ಅನುದ್ವೇಗ ॥೫೨॥ ಆಪುಲೀ ಪೂರ್ಣ ನಿಃಸ್ಪೃಹತಾ । ದಾವಾವೀ ಲೋಕಸಂಗ್ರಹಾರ್ಥಾ । ನಿಜಸುಖೇ ತುಜ ತೇಥೇ ಅಸತಾ । ದ್ವಂದ್ವಸಹಿಷ್ಣುತಾ ದಾವಾವೀ ॥೫೩॥

ತಿತಿಕ್ಷುರ್ದ್ವಂದ್ವಮಾತ್ರಾಣಾಂ ಸುಶೀಲಃ ಸಂಯತೇಂದ್ರಿಯಃ । ಶಾಂತಃ ಸಮಾಹಿತಧಿಯಾ ಜ್ಞಾನವಿಜ್ಞಾನಸಂಯುತಃ ॥೫೩॥

ಅರ್ಥ:- ಶೀತ, ಉಷ್ಣ, ಸುಖ, ದುಃಖ ಹೀಗೆ ಏನೇ ಪ್ರಾಪ್ತವಾಗಲಿ ಅದನ್ನು ಸಹಿಸಿಕೊಂಡು ಇರಬೇಕು. ಸೌಮ್ಯ ಸ್ವಭಾವ ಕಾಯ್ದುಕೊಳ್ಳಬೇಕು. ಇಂದ್ರಿಯಗಳನ್ನು ಸ್ವಾಧೀನದಲ್ಲಿಡಬೇಕು. ಚಿತ್ತವು ಶಾಂತವಾಗಿರಬೇಕು. ಬುದ್ಧಿ ಸಮವಾಗಿರಬೇಕು. ನೀನು ಮಾತ್ರ ನನ್ನ ಸ್ವರೂಪದ ಜ್ಞಾನದಲ್ಲಿ, ಅನುಭವದಲ್ಲಿ ತಲ್ಲೀನನಾಗಿರಬೇಕು.

ತೂ ಜ್ಞಾನವಿಜ್ಞಾನಸಂಪನ್ನ । ತುಜ ದ್ವಂದ್ವಬಾಧಾ ನ ಬಾಧೀ ಜಾಣ । ತರೀ ದ್ವಂದ್ವಸಹಿಷ್ಣುತಾ ಪೂರ್ಣ । ದಾವಾವೀ ಆಪಣ ಲೋಕಹಿತಾರ್ಥ ॥೫೪॥ ತುಜ ನಾಹೀ ವಿಷಯಾಸಕ್ತತಾ । ತರೀ ನೇಮಾವೇ ಇಂದ್ರಿಯಾರ್ಥಾ । ಪ್ರಕಟ ಕರಾವೀ ಸುಶೀಲತಾ । ನಿಜಶಾಂತತಾ ದಾವಾವೀ ॥೫೫॥ ನಿಜಬುದ್ಧೀಚೇ ಸಮಾಧಾನ । ಸಹಜೇ ಪ್ರಕಟವಾವೇ ಆಪಣ । ಮಜಪಾಸೂನಿ ಜೇ ಪ್ರಾಪ್ತ ಜ್ಞಾನ । ತ್ಯಾಚೇ ಅನುಸಂಧಾನ ದಾವಾವೇ ॥೫೬॥

ಮತ್ತೋಽನುಶಿಕ್ಷಿತಂ ಯತ್ತೇ ವಿವಿಕ್ತಮನುಭಾವಯನ್ । ಮಯ್ಯಾವೇಶಿತವಾಕ್‌ಚಿತ್ತೋ ಮದ್ಧರ್ಮನಿರತೋ ಭವ ॥೫೪॥

ಅರ್ಥ:- ನಾನು ನಿನಗೆ ಯಾವ ಜ್ಞಾನವನ್ನು ಕೊಟ್ಟಿರುವೆನೋ, ಅದರ ವಿಚಾರಪೂರ್ವಕ ಅನುಭವ ಏಕಾಂತದಲ್ಲಿ ಪಡೆಯುತ್ತಿರಬೇಕು. ಅದಕ್ಕಾಗಿ ವಾಣಿ ಮತ್ತು ಚಿತ್ತ ನನ್ನಲ್ಲಿಯೇ ತೊಡಗಿಸಬೇಕು ಮತ್ತು ನಾನು ಹೇಳಿರುವ ಭಾಗವತ ಧರ್ಮದಲ್ಲಿ ಪ್ರೇಮದಿಂದ ತಲ್ಲೀನನಾಗಬೇಕು.

ಯಾ ಸ್ಥಿತೀ ತುಜ ಅಸತಾ ಜಾಣ । ಬಹುಸಾಲ ತುಜ ಯೇತೀಲ ಶರಣ । ತೂ ಪಾವಲಾಸೀ ಮಾಝೇ ಜ್ಞಾನ । ಹೇ ಸರ್ವಹೀ ಜನ ಜಾಣತೀ ॥೫೭॥ ಪಾವೋನಿಯಾ ಬ್ರಹ್ಮಜ್ಞಾನ । ಸ್ವಯೇ ಉದ್ಧರಲಾ ಆಪಣ । ನ ಕರೀಚಿ ದೀನೋದ್ಧಾರಣ । ಹೇ ಭೇಡಪಣ ಜ್ಞಾತ್ಯಾಚೇ ॥೫೮॥ ಏಕ ಪಾವೋನಿ ಬ್ರಹ್ಮಜ್ಞಾನ । ಶಿಷ್ಯ ಉಪದೇಶೀ ಆಪಣ । ಬೋಧ ನ ಕರವೇ ಪರಿಪೂರ್ಣ । ತೇ ನಿಷ್ಠಾ ಹೀನ ನಿರ್ವೀರ್ಯ ॥೫೯॥ ಶಿಷ್ಯ ಬೋಧೇವೀಣ ಚರಫಡೀ । ಗುರೂ ಗುರುಪಣೇ ಬಡಬಡೀ । ಘರೀಂಚ್ಯಾ ಘರೀ ಚುಕಾಮುಕೀ ಗಾಢೀ । ಹೇ ಬೋಧಪರವಡೀ ಅಬದ್ಧ ॥೬೦॥ ಪರಚಿತ್ತಪ್ರಬೋಧಕವೃತ್ತೀ । ಹೇ ಸಾಮಾನ್ಯ ನವ್ಹೇ ಸ್ಥಿತೀ । ಬ್ರಹ್ಮಜ್ಞಾನಾಚೀ ಪೂರ್ಣ ನಿಷ್ಪತ್ತೀ । ಯಾ ನಾಂವ ನಿಶ್ಚಿತೀ ಉದ್ಧವಾ ॥೬೧॥ ಸ್ವಯೇ ತರೋನಿ ಜನಾ ತಾರೀ । ಹೇ ಜ್ಞಾನಾಚೀ ಅಗಾಧ ಥೋರೀ । ತೇ ಮ್ಯಾ ದಿಧಲೀ ತುಝ್ಯಾ ಕರೀ । ಜನ ಉದ್ಧರೀ ಉದ್ಧವಾ ॥೬೨॥

ವಸ್ತ್ರ-ಭೂಷಣಗಳ ತ್ಯಾಗ ಮಾಡಿ ವೃಕ್ಷದ ಎಲೆಗಳನ್ನು ಧರಿಸಬೇಕು. ವನದಲ್ಲಿನ ಫಲಗಳನ್ನು ಭುಂಜಿಸಿ ಸಮಾಧಾನ ವೃತ್ತಿಯಿಂದ ಇರಬೇಕು ॥೫೨॥ ಲೋಕಸಂಗ್ರಹಾರ್ಥವಾಗಿ ತಾನು ಪರಿಪೂರ್ಣವಾಗಿ ನಿಃಸ್ಪೃಹವೃತ್ತಿ ಇಡಬೇಕು. ಅಲ್ಲಿ ನಿಜಸುಖದಿಂದ ಇರುತ್ತ ಶೀತ, ಉಷ್ಣ, ಸುಖದುಃಖ ಇತ್ಯಾದಿ ದ್ವಂದ್ವ ವಿಷಯಕ್ಕೆ ಪೂರ್ಣವಾಗಿ ಸಹಿಷ್ಣುತೆ ತೋರಿಸಬೇಕು ॥೫೩॥

ಉದ್ಧವಾ, ನೀನು ಜ್ಞಾನವಿಜ್ಞಾನ ಸಂಪನ್ನನಾಗಿರುವೆ. ಆದ್ದರಿಂದ ನಿನಗೆ ದ್ವಂದ್ವದ ಬಾಧೆಯಾಗಲಾರದು. ಆದರೂ ಕೂಡ ನೀನು ಲೋಕಹಿತಕ್ಕಾಗಿ ದ್ವಂದ್ವದ ಸಹಿಷ್ಣುತೆ ತೋರಿಸಬೇಕು ॥೫೪॥ ನಿನ್ನ ಮನದಲ್ಲಿ ವಿಷಯಗಳ ಆಸಕ್ತಿ ಇರುವುದಿಲ್ಲ. ಆದರೂ ಸಹ ಇಂದ್ರಿಯಗಳನ್ನು ನಿಯಂತ್ರಿಸಬೇಕು. ಅತ್ಯಂತ ಸೌಜನ್ಯದಿಂದ ವರ್ತಿಸುತ್ತ ಆತ್ಮಶಾಂತಿ ತೋರಿಸಬೇಕು ॥೫೫॥ ಆತ್ಮಬುದ್ಧಿಯ ಸಮಾಧಾನ ಸಹಜವಾಗಿ ವ್ಯಕ್ತಮಾಡಬೇಕು. ನನ್ನಿಂದ ನಿನಗೆ ದೊರಕಿರುವ ಜ್ಞಾನದ ಸತತ ಅನುಸಂಧಾನ ಮಾಡುತ್ತಿರಬೇಕು ॥೫೬॥

ಈ ರೀತಿಯಿಂದ ನೀನು ಅಲ್ಲಿ ಇರುತ್ತಿರಲು ಆಗ ಅನೇಕ ಜನರು ನಿನಗೆ ಶರಣು ಬರುವರು. ಕಾರಣ ನನ್ನ ಜ್ಞಾನವು ನಿನಗೆ ಪ್ರಾಪ್ತವಾಗಿದೆ ಎಂಬುವುದು ಸರ್ವ ಜನರಿಗೆ ಗೊತ್ತಾಗಿರುವುದು ॥೫೭॥ ನೀನು ಬ್ರಹ್ಮಜ್ಞಾನ ಪಡೆದು ಸ್ವತಃಕ್ಕೆ ಉದ್ಧಾರಮಾಡಿಕೊಂಡಿರುವೆ. ಆದರೆ ದೀನ ಜನರ ಉದ್ಧಾರ ಮಾಡದೇ ಇದ್ದರೆ ಆ ಜ್ಞಾನಿಗೆ ಮಹತ್ವವಿರುವುದಿಲ್ಲ ॥೫೮॥ ಕೆಲವರು ಬ್ರಹ್ಮಜ್ಞಾನ ಪಡೆದುಕೊಂಡು ಶಿಷ್ಯರಿಗೆ ಅದರ ಉಪದೇಶ ಮಾಡುತ್ತಿರುವರು. ಆದರೆ ಆ ಉಪದೇಶವನ್ನು ಪೂರ್ಣವಾಗಿ ಮಾಡಲು ಬರುತ್ತಿರುವುದಿಲ್ಲ. ಆದ್ದರಿಂದ ಅವರು ನಿಃಸತ್ವರಾಗಿ ನಿರುಪಯೋಗಿಗಳಾಗುವರು ॥೫೯॥ ಸರಿಯಾಗಿ ಬೋಧೆಯಾಗದಿದ್ದರೆ ಶಿಷ್ಯನು ಚರಪಡಿಸುತ್ತಿರುವನು. ಆದರೆ ಗುರು ಮಾತ್ರ ತನ್ನ ಗುರುತ್ವದ ಅಹಂಕಾರದಿಂದ ಬಡಬಡಿಸುತ್ತಲೇ ಇರುವನು. ಇದು ತನ್ನ ಮನೆಯಲ್ಲಿಯೇ ತಾನು ತಪ್ಪಿಸಿಕೊಂಡಂತಾಗುವುದು. ಇಂತಹ ಉಪದೇಶವು ಅಯೋಗ್ಯವಾಗಿರುವುದು ॥೬೦॥ ಇನ್ನೊಬ್ಬನ ಚಿತ್ತದಲ್ಲಿ ಬೋಧದ ದಿವ್ಯ ಪ್ರಕಾಶ ನಿರ್ಮಾಣಗೊಳಿಸುವಿಕೆಯು ಇದೇನು ಸಾಮಾನ್ಯ ಮಾತಲ್ಲ. ಉದ್ಧವಾ, ಇದಕ್ಕೆ ಮಾತ್ರ ಬ್ರಹ್ಮಜ್ಞಾನದ ಪೂರ್ಣಪ್ರಾಪ್ತಿ ಎಂದು ಹೇಳಲ್ಪಡುವುದು ॥೬೧॥ ತಾನು ಸ್ವತಃ ಉದ್ಧಾರನಾಗಿ ಇತರರಿಗೆ ಉದ್ಧರಿಸುವುದು ಇದು ಜ್ಞಾನದ ನಿಜವಾದ ಅಗಾಧ ಮಹಿಮೆಯಾಗಿರುವುದು. ಇದನ್ನು ನಾನು ನಿನ್ನ ಕೈಯಲ್ಲಿ ಕೊಟ್ಟಿರುವೆನು. ಆದ್ದರಿಂದ ಈಗ ಜನರನ್ನು ಉದ್ಧರಿಸುತ್ತ ನಡೆ ॥೬೨॥

ಶಿಷ್ಯಸುಕ್ಷೇತ್ರೀ ಬ್ರಹ್ಮಜ್ಞಾನ । ಜ್ಯಾಚೇ ನವ್ಹೇ ವರ್ಧಮಾನ । ತಂವವರೀ ನಾಹೀ ಪೂರ್ಣಪಣ । ಉದ್ಧವಾ ಜಾಣ ನಿಶ್ಚಿತ ॥೬೩೩॥ ಜೇವೀ ಪಿಕಲಿಯಾ ವೃಕ್ಷಾ ಪ್ರತೀ । ಪಕ್ಷೀ ತುಟಲೇ ಸ್ವಯೇ ಯೇತೀ । ತೇವೀ ನಿಡಾರಲೀ ಬ್ರಹ್ಮಸ್ಥಿತೀ । ತೇಥ ಶಿಷ್ಯ ಪಾವತೀ ಸ್ವಾನಂದ ॥೬೩೪॥ ಬೋಲೇ ಉಪದೇಶಿತೀ ಬ್ರಹ್ಮಜ್ಞಾನ । ಬೋಧ ನವ್ಹೇ ತೇ ನಿರ್ವೀರ್ಯ ಜಾಣ । ತೇ ತೂ ಮ್ಹಣಸೀ ಕಾಯಸೇನ । ಐಕ ಸಾಂಗೇನ ಉದ್ಧವಾ ॥೬೩೫॥ ಅನುಭವಾ ಆಲೇ ಬ್ರಹ್ಮಜ್ಞಾನ । ತೇಣೇ ಅಂಗೀ ಯೇ ಜಾಣಪಣ । ತೇಥ ಸಂಚರೇ ಜ್ಞಾನಾಭಿಮಾನ । ತೇಣೇ ವೀರ್ಯ ಕ್ಷೀಣ ಜ್ಞಾನಾಚೇ ॥೬೩೬॥ ಜಂವ ಜಂವ ಜ್ಞಾತಾ ನಿರಹಂಕಾರ । ತಂವ ತಂವ ಜ್ಞಾನಾಸೀ ವೀರ್ಯ ಥೋರ । ತ್ಯಾಚೇ ಹೋತಾ ಕೃಪಾಮಾತ್ರ । ಬೋಧ ಸಾಚಾರ ಸಚ್ಛಿಷ್ಯಾಸೀ ॥೬೩೭॥ ತುಜ ಫಾವಲೇ ಮಾಝೇ ಜ್ಞಾನ । ಉಪದೇಶಿಸೀ ಶಿಷ್ಯಜನ । ತೇ ತುಜ ದೇತೀಲ ಸನ್ಮಾನ । ತರೀ ತೂ ಜ್ಞಾನಾಭಿಮಾನ ಧರೂ ನಕೋ ॥೬೩೮॥ ಶಿಷ್ಯ ದೇತೀಲ ಸನ್ಮಾನ । ತೋ ''ನೇಘೇ'' ಮ್ಹಣತಾ ಅಪಕ್ವಪಣ । ಘೇತಾ ಆಲಾ ಜ್ಞಾನಾಭಿಮಾನ । ಹೇಹೀ ವಿಘ್ನ ಜ್ಞಾನ್ಯಾಸೀ ॥೬೩೯॥ ಶಿಷ್ಯ ದೇತೀಲ ಸನ್ಮಾನ । ತೋ ಅನುದ್ವೇಗೇ ಘ್ಯಾವಾ ಆಪಣ । ಪರೀ ನ ಧರಾವಾ ಜ್ಞಾನಾಭಿಮಾನ । ಹೇ ಮುಖ್ಯ ಲಕ್ಷಣ ಜ್ಞಾನ್ಯಾಚೇ ॥೬೪೦॥ ತುಜ ಮಾಝ್ಯಾ ಜ್ಞಾನಾಚೀ ಪೂರ್ಣ ಪ್ರಾಪ್ತೀ । ತೇಚಿ ಏಕಾಂತೀ ಲೋಕಾಂತೀ । ನಿತ್ಯ ನಿರಭಿಮಾನಸ್ಥಿತೀ । ಸ್ವಾನಂದಸ್ಫೂರ್ತೀ ಸರ್ವದಾ ॥೬೪೧॥ ತೇಚಿ ನಿರಭಿಮಾನ ಸ್ಥಿತೀ । ಉಪದೇಶೀ ಶಿಷ್ಯಾಂಪ್ರತೀ । ನಿರಭಿಮಾನಾಪರತೀ । ದಶಾ ತ್ರಿಜಗತೀ ಅಸೇನಾ ॥೬೪೨॥ ತೇಚಿ ಉಪದೇಶಲಕ್ಷಣ । ವಾಚೇಸೀ ಮಾಝೇ ನಾಮಕೀರ್ತನ । ಶರೀರೀ ಮಾಝೇ ನಿತ್ಯ ಭಜನ । ಮದ್ರೂಪೀ ಮನ ನಿಮಗ್ನ ಸದಾ ॥೬೪೩॥ ಜ್ಞಾತಾ ಮ್ಹಣತಾ ನ ಧರೀ ಶ್ಲಾಘ । ಮೂರ್ಖ ಮ್ಹಣತಾ ನ ಯಾವಾ ರಾಗ । ಸ್ವಯೇ ರಹಾವೇ ಅನುದ್ವೇಗ । ಹೇ ದಶಾ ಚಾಂಗ ಜ್ಞಾನ್ಯಾಚೀ ॥೬೪೪॥ ಏವಂ ನಿತ್ಯ ನಿರಭಿಮಾನ । ಭಕ್ತಿಯುಕ್ತ ವೈರಾಗ್ಯ ಜ್ಞಾನ । ಸ್ವಯೇ ಆಚರೋನಿ ಆಪಣ । ಶಿಷ್ಯ ಸಜ್ಜನ ಉಪದೇಶಿಜೇ ॥೬೪೫॥ ತುಜ ಜೇ ಶಿಷ್ಯ ಯೇತೀ ಶರಣ । ತೇ ನೀಚ ನ ಮ್ಹಣಾವೇ ಆಪಣ । ಹೇ ಗುರುತ್ವಾಚೇ ಪೂರ್ಣಪಣ । ಶಿಷ್ಯಹೀ ಪೂರ್ಣ ಪೂಜ್ಯತ್ವೇ ದೇಖೇ ॥೬೪೬॥

ಸ್ವರೂಪ ಹೊಲದಲ್ಲಿ ಎಲ್ಲಿಯವರೆಗೆ ಬ್ರಹ್ಮರೂಪ ಜ್ಞಾನ ಉತ್ತಮ ರೀತಿಯಲ್ಲಿ ಬಿತ್ತಲು ಬರುವುದಿಲ್ಲವೋ, ಅಲ್ಲಿಯವರೆಗೆ ಆ ಜ್ಞಾನವು ಪೂರ್ಣತ್ವಕ್ಕೆ ಮುಟ್ಟಲಾರದು. ಹೀಗೆ ನಿಶ್ಚಿತವಾಗಿ ತಿಳಿದುಕೊಳ್ಳಬೇಕು ॥೬೩೩॥ ಯಾವ ಪ್ರಕಾರವಾಗಿ ಪಕ್ವಗೊಂಡ ಫಲಗಳ ವೃಕ್ಷಕ್ಕೆ ಪಕ್ಷಿಗಳು ತಮ್ಮಷ್ಟಕ್ಕೆ ತಾವೇ ಬಂದು ಹೇಗೆ ಸೇರುವುವೋ, ಅದರಂತೆ ಬ್ರಹ್ಮಜ್ಞಾನವು ಪೂರ್ಣತ್ವಕ್ಕೆ ಮುಟ್ಟಿಕೊಂಡಿತೆಂದರೆ ಅಲ್ಲಿಗೆ ಶಿಷ್ಯರು ಆನಂದದಿಂದ ಏಕತ್ರರಾಗುವರು ॥೬೩೪॥ ಕೇವಲ ಶಬ್ದಗಳಿಂದ ಉಪದೇಶ ಮಾಡುವರು. ಆದರೆ ಆ ಶಬ್ದಗಳು ಅಂತಃಕರಣದಲ್ಲಿ ನಾಟಿಕೊಳ್ಳುವುದಿಲ್ಲ. ಇಂತಹ ಬ್ರಹ್ಮಜ್ಞಾನವು ನಿರ್ವೀರ್ಯವಾಗಿರುವುದು. ಹೀಗೆ ಏಕೆ ? ಯಾವುದರಿಂದ ಆಗುವುದು ? ಎಂದು ಕೇಳಿದರೆ, ಹೇಳುವೆನು ಕೇಳು ॥೬೩೫॥ ಬ್ರಹ್ಮಜ್ಞಾನದ ಅನುಭವ ಬರುವುದು ಒಂದೇ ತಡ, ಮನದಲ್ಲಿ ಜ್ಞಾನಾಭಿಮಾನವು ಉಂಟಾಗುವುದು. ಹೀಗೆ ನಾನೊಬ್ಬ ಜ್ಞಾನಿ ಪುರುಷನು ಎಂದು ತಿಳಿಯುತ್ತಲೇ, ಆ ಜ್ಞಾನದ ಸಾಮರ್ಥ್ಯವು ಕ್ಷೀಣಗೊಳ್ಳುವುದು ॥೬೩೬॥ ಜ್ಞಾನೀ ಪುರುಷನು ಹೇಗೆ ಹೇಗೆ ನಿರಹಂಕಾರಿಯಾಗುತ್ತಿರುವನೋ, ಅದರಂತೆಯೇ ಆ ಜ್ಞಾನದ ಸಾಮರ್ಥ್ಯವು ಬೆಳೆಯುತ್ತ ಸಾಗುವುದು. ಆತನ ಕೃಪಾಮಾತ್ರದಿಂದ ಸತ್‌ಶಿಷ್ಯನಿಗೆ ತತ್ಕಾಲದಲ್ಲಿ ಬೋಧೆಯಾಗುವುದು ॥೬೩೭॥ ಹೇ ಉದ್ಧವಾ, ನಿನಗೆ ನನ್ನ ಜ್ಞಾನವು ಪ್ರಾಪ್ತವಾಗಿದೆ. ನೀನು ಈ ಜ್ಞಾನದ ಉಪದೇಶ ಶಿಷ್ಯರಿಗೆ ಮಾಡು. ಉಪದೇಶಗೊಂಡ ಶಿಷ್ಯರು ನಿನಗೆ ಸನ್ಮಾನಿಸುವರು. ಆಗ ನೀನು ಜ್ಞಾನದ ಅಭಿಮಾನ ಹಿಡಿಯಬೇಡ ॥೬೩೮॥ ಶಿಷ್ಯನು ಸನ್ಮಾನಿಸುವಾಗ ಬೇಡವೆಂದರೆ ಅದು ಅಪಕ್ವತನದಂತೆ ಕಾಣುವುದು. ಸನ್ಮಾನ ಸ್ವೀಕರಿಸಿದರೆ ಅಭಿಮಾನ ಬೆಳೆಯುವುದು. ಹೀಗೆ ಜ್ಞಾನಿಗೆ ಇದೊಂದು ವಿಘ್ನವೇ ಆಗಿರುವುದು ॥೬೩೯॥ ಆದ್ದರಿಂದ ಶಿಷ್ಯನು ತನಗೆ ಸನ್ಮಾನ ಮಾಡಿದರೆ ಅದನ್ನು ಸ್ವೀಕರಿಸಬೇಕು. ಆದರೆ ಜ್ಞಾನದ ಅಭಿಮಾನ ಮಾತ್ರ ಹಿಡಿಯಲೇಬಾರದು. ಇದೇ ಜ್ಞಾನಿಯ ಮುಖ್ಯ ಲಕ್ಷಣವಾಗಿರುವುದು ॥೬೪೦॥ ನಿನಗೆ ನನ್ನ ಜ್ಞಾನದ ಪೂರ್ಣ ಪ್ರಾಪ್ತಿಯಾಗಿರುವುದು. ಆದ್ದರಿಂದ ನೀನು ಏಕಾಂತದಲ್ಲಾಗಲಿ, ಲೋಕಾಂತದಲ್ಲಾಗಲಿ ನಿರಭಿಮಾನ ಸ್ಥಿತಿಯಲ್ಲಿರು. ಯಾವಾಗಲು ನಿನ್ನ ಸಚ್ಚಿದಾನಂದ ಸ್ವರೂಪದಲ್ಲಿ ತನ್ಮಯನಾಗಿರು ॥೬೪೧॥ ಈ ಯಾವ ನಿರಭಿಮಾನ ಸ್ಥಿತಿಯ ಉಪದೇಶ ಶಿಷ್ಯರಿಗೆ ಮಾಡು. ಕಾರಣ ನಿರಭಿಮಾನ ಸ್ಥಿತಿಗಿಂತಲೂ ಉತ್ಕೃಷ್ಟ ಸ್ಥಿತಿಯು ಈ ತ್ರಿಭುವನದಲ್ಲಿ ಇರುವುದಿಲ್ಲ. ಇದನ್ನು ನೀನು ತಿಳಿದುಕೊ ॥೬೪೨॥ ಈ ಉಪದೇಶದ ಲಕ್ಷಣವೇನಂದರೆ ವಾಣಿಯಲ್ಲಿ ನನ್ನ ನಾಮದ ಕೀರ್ತನೆ ಇರಬೇಕು. ಶರೀರದಿಂದ ನನ್ನ ಅಖಂಡ ಭಜನೆ ಮಾಡುತ್ತಿರಬೇಕು ಮತ್ತು ಮನಸ್ಸಿನಿಂದ ಯಾವಾಗಲೂ ಸ್ವರೂಪದಲ್ಲಿ ಏಕರೂಪನಾಗಿರಬೇಕು ॥೬೪೩॥ ಯಾರಾದರೂ ನಿನಗೆ ಜ್ಞಾನಿ ಎಂದಾಗ ಉಬ್ಬಿಕೊಳ್ಳಬೇಡ ಅಥವಾ ಯಾರಾದರೂ ಮೂರ್ಖ ಎಂದಾಗಲೂ ಕೂಡ ಕೋಪತಾಳಬೇಡ. ಯಾವಾಗಲೂ ಸಮಾಧಾನ ವೃತ್ತಿಯಿಂದ ಇರಬೇಕು. ಇದೇ ಜ್ಞಾನಿಯ ಸರ್ವೋತ್ತಮ ಸ್ಥಿತಿಯಾಗಿರುವುದು ॥೬೪೪॥ ಈ ಪ್ರಕಾರವಾಗಿ ನಿತ್ಯ ನಿರಭಿಮಾನದಿಂದ ಇದ್ದು ಭಕ್ತಿಯುಕ್ತ ವೈರಾಗ್ಯ ಮತ್ತು ಜ್ಞಾನ ಇವುಗಳ ಸ್ವತಃ ಆಚರಣೆ ಮಾಡಬೇಕು ಮತ್ತು ಸತ್‌ಶಿಷ್ಯರಿಗೆ ಅದೇ ಪ್ರಕಾರದ ಉಪದೇಶ ಮಾಡಬೇಕು ॥೬೪೫॥ ನಿನಗೆ ಶರಣು ಬಂದ ಶಿಷ್ಯರನ್ನು ಎಂದಿಗೂ ನೀಚರೆಂದು ತಿಳಿಯಬೇಡ. ಶಿಷ್ಯನಿಗೆ ಪೂರ್ಣವಾಗಿ ಪೂರ್ಣತ್ವದಿಂದ ಕಾಣುವುದೇ ಗುರುತ್ವದ ಪೂರ್ಣತ್ವದ ಲಕ್ಷಣವಾಗಿರುವುದು ॥೬೪೬॥

ಸದ್ಗುರೂಸೀ ಸರ್ವಾ ಭೂತೀ । ಸರ್ವದಾ ಬ್ರಹ್ಮ ಪ್ರತೀತೀ । ತೇಥ ಶಿಷ್ಯಾಚಿಯೇ ಭೂತವ್ಯಕ್ತೀ । ಕಾಯ ಬ್ರಹ್ಮಸ್ಥಿತೀ ಪಳಾಲೀ ॥೮೪೭॥ ಯಾಲಾಗೀ ಶಿಷ್ಯೀ ನೀಚಪಣ । ಸರ್ವಥಾ ನ ದೇಖಾವೇ ಆಪಣ । ಶಿಷ್ಯ ದೇಖಾವಾ ಬ್ರಹ್ಮ ಪೂರ್ಣ । ಹೇ ಮುಖ್ಯ ಲಕ್ಷಣ ಗುರುತ್ವಾಚೇ ॥೮೪೮॥ ಜೇವೀ ತಾನಯಾಲಾಗೀ ಮಾತಾ । ತೇವೀ ಶಿಷ್ಯಾಚಿಯಾ ನಿಜಸ್ವಾರ್ಥಾ । ಗುರೂಸೀ ಕಳವಳಾ ತತ್ತ್ವತಾ । ಶುದ್ಧ ''ಸದ್ಗುರುತಾ'' ಯಾ ನಾಂವ ॥೮೪೯॥ ಶಿಷ್ಯಲಕ್ಷಣಪ್ರಕಾರ । ಮಾಗಾ ಸಾಂಗಿತಲಾ ವಿಚಾರ । ತೋ ಜೇಥ ದೇಖಸೀ ಅಧಿಕಾರ । ತೇಥ ಸಾಚಾರ ಉಪದೇಶೀ ॥೮೫೦॥ ತುಜ ತೇ ಶಿಕವಿಲೇ ಪ್ರಸ್ತುತ । ತೇ ಶಿಷ್ಯೋಪದೇಶಸಂಗ್ರಹಾರ್ಥ । ತೂ ಠಾಯೀಂಚಾ ಗುಣಾತೀತ । ತುಜ ಹೇ ಸಮಸ್ತ ಸ್ಪರ್ಶೇನಾ ॥೮೫೧॥

ಅತಿವ್ರಜ್ಯ ಗತೀಸ್ತಿಸ್ರೋ ಮಾಮೇಷ್ಯಸಿ ತತಃ ಪರಮ್ ॥೪೪॥

ಅರ್ಥ :- ಕೊನೆಗೆ ಈ ರೀತಿಯಲ್ಲಿ ನೀನು ಐಹಿಕ ತ್ರಿಗುಣಗಳ ಪರಿಧಿಯನ್ನು ದಾಟುವೆ. ಅಂತಿಮವಾಗಿ (ನನ್ನಲ್ಲಿ) ನನ್ನ ಪರಮಾರ್ಥರೂಪದಲ್ಲಿ ಏಕರೂಪನಾಗುವೆ.

ಯಾಪರೀ ಜ್ಞಾನ ಉಪದೇಶಿತಾ। ತುಝೀ ನ ಮೋಡೇ ಗುಣಾತೀತತಾ । ಜ್ಯಾಂಸೀ ಉಪದೇಶೀಸೀ ತತ್ತ್ವತಾ । ತೇಹೀ ತ್ರಿಗುಣಾವಸ್ಥಾ ಜಿಂಕಿತೀ ॥೮೫೨॥ ಪೂರ್ವೋಕ್ತ ಉಪದೇಶಯುಕ್ತೀ । ಜೇ ಶಿಷ್ಯ ಸರ್ವದಾ ವರ್ತತೀ । ತೇ ತ್ರಿಗುಣಾಂಚೀ ತ್ರಿವಿಧ ವೃತ್ತೀ । ಅತಿಕ್ರಮಿತೀ ಗುರುಕೃಪಾ ॥೮೫೩॥ ತ್ರಿಗುಣಾಂಚೇ ತ್ರಿವಿಧಪಣ । ದೃಶ್ಯ ದ್ರಷ್ಟಾ ಆಣಿ ದರ್ಶನ । ಜಾಗೃತಿ ಸುಷುಪ್ತಿ ಆಣಿ ಸ್ವಪ್ನ । ಜ್ಞೇಯ ಜ್ಞಾತಾ ಜ್ಞಾನ ಸಾಕ್ಷೇಪೇ ॥೮೫೪॥ ಕಾರ್ಯ ಕಾರಣ ಆಣಿ ಕರ್ತಾ । ಭೋಜ್ಯ ಭೋಜನ ಆಣಿ ಭೋಕ್ತಾ । ಶತ್ರು ಮಿತ್ರ ಉದಾಸೀನತಾ । ಯಾ ತ್ರಿಗುಣಾವಸ್ಥಾ ಬಾಧಕ ॥೮೫೫॥ ತೇಥ ಯೇಣೇ ಉಪದೇಶೇ ಜಾಣ । ಸಚ್ಛಿಷ್ಯ ಕರೂನಿ ಮಾಝೇ ಭಜನ । ತ್ರಿಗುಣತ್ರಿಪುಟೀ ನಿರ್ದಳೂನ । ಮಾಝೇ ಸ್ವರೂಪ ಪೂರ್ಣ ಸ್ವಯೇ ಹೋತೀ ॥೮೫೬॥ ಮಾಝಿಯಾ ಸ್ವರೂಪಾಪ್ರತೀ । ನಾಹೀ ಗುಣ ನಾ ಗುಣವೃತ್ತೀ । ಭಕ್ತ ಮದ್ಭಾವೇ ಗುಣಾತೀತೀ । ಸಹಜ ಪಾವತೀ ಸ್ವಾನಂದ ॥೮೫೭॥ ಐಸಾ ಆಜ್ಞಾಪಿಲಾ ಉದ್ಧವೋ । ತ್ಯಾಚೇ ಅವಸ್ಥೇಚಾ ಅಭಿಪ್ರಾವೋ । ಪರೀಕ್ಷಿತೀಪ್ರತೀ ಪಹಾ ಹೋ । ಸ್ವಯೇ ಶುಕದೇವೋ ಸಾಂಗತ ॥೮೫೮॥

ಸದ್ಗುರುವಿಗೆ ಸರ್ವ ಪ್ರಾಣಿಮಾತ್ರರಲ್ಲಿ ಯಾವಾಗಲೂ ಸಮಾನ ಬ್ರಹ್ಮ ಕಾಣಿಸುತ್ತಿರುವುದು. ಅವರಲ್ಲಿ ಶಿಷ್ಯನು ಭಿನ್ನನಾಗಿ ತೋರಿದರೆ ಆಗ ಆತನ ಬ್ರಹ್ಮಸ್ಥಿತಿಯು ಇಲ್ಲವೆಂದು ತಿಳಿಯಬೇಕೇನು? ॥೮೪೭॥ ಆದ್ದರಿಂದ ಶಿಷ್ಯನು ನೀಚನೆಂದು ತಾನು ಎಂದಿಗೂ ತಿಳಿಯಕೂಡದು. ಶಿಷ್ಯನಾದರೂ ಕೂಡ ಪರಿಪೂರ್ಣವಾಗಿ ಬ್ರಹ್ಮರೂಪನೇ ಎಂದು ಇದರ ತಿಳಿವಳಿಕೆ ಇಟ್ಟುಕೊಳ್ಳಬೇಕು. ಇದು ಗುರುತ್ವದ ಮುಖ್ಯ ಲಕ್ಷಣವಾಗಿರುವುದು ॥೮೪೮॥ ತನ್ನ ಹೊಟ್ಟೆಯ ಮಗನಲ್ಲಿ ತಾಯಿಗೆ ಹೇಗೆ ಕಳಕಳಿ ಇರುವುದೋ, ಅದರಂತೆಯೇ ತನ್ನ ಸರ್ವ ಶಿಷ್ಯರ ಸರ್ವ ಹಿತದ ಕಳಕಳಿ ಗುರುವಿಗೆ ಇರಬೇಕಾಗುವುದು. ಇದಕ್ಕೆ ಮಾತ್ರ ಸದ್ಗುರುತ್ವ ಎಂದು ಹೇಳುವರು ॥೮೪೯॥ ಶಿಷ್ಯ ಲಕ್ಷಣದ ವಿಚಾರಗಳನ್ನು ನಾನು ನಿನಗೆ ಈ ಪೂರ್ವದಲ್ಲಿಯೇ ಹೇಳಿರುವೆನು. ಅಂತಹ ಅಧಿಕಾರವು ಯಾರಲ್ಲಿ ನಿನಗೆ ಕಂಡುಬರುವುದೋ, ಆತನಿಗೆ ಮಾತ್ರ ನೀನು ಉಪದೇಶ ಮಾಡು ॥೮೫೦॥ ನಿನಗೆ ಇಂದಿನವರೆಗೆ ಯಾವುದನ್ನು ಕಲಿಸಿರುವೆನೋ, ಅದು ಶಿಷ್ಯೋಪದೇಶಕ್ಕಾಗಿ ಹಾಗೂ ಲೋಕಸಂಗ್ರಹ ಮಾಡುವುದಕ್ಕಾಗಿ ಇರುವುದು. ನೀನು ಮಾತ್ರ ಮೊದಲೇ ಗುಣಾತೀತನಾಗಿರುವೆ. ನಿನಗೆ ಗುಣಗಳು ಸ್ಪರ್ಶ ಕೂಡ ಮಾಡಲಾರವು ॥೮೫೧॥

ಈ ಪ್ರಕಾರವಾಗಿ ನೀನು ಉಪದೇಶ ಮಾಡಿದರೆ ಮಾತ್ರ ನಿನ್ನ ಗುಣಾತೀತತೆಯು ಭಂಗವಾಗದೇ ಇರುವುದು ಮತ್ತು ನೀನು ಯಾರಿಗೆ ಉಪದೇಶ ಮಾಡುವಿಯೋ, ಅವರೂ ಕೂಡ ತ್ರಿಗುಣ ಅವಸ್ಥೆಯನ್ನು ನಿಶ್ಚಿತವಾಗಿ ಗೆಲ್ಲುವರು ॥೮೫೨॥ ಈ ಪೂರ್ವದಲ್ಲಿ ಹೇಳಿದ ಉಪದೇಶ ಪ್ರಕಾರದಂತೆ ಯಾವ ಶಿಷ್ಯನು ತನ್ನ ಆಚರಣೆಯನ್ನು ಇಟ್ಟುಕೊಳ್ಳುವನೋ, ಆತನು ಗುರುಕೃಪೆಯಿಂದ ತ್ರಿಗುಣಗಳ ಯಾವ ಮೂರು ವೃತ್ತಿಗಳನ್ನು ದಾಟಿ ಬಿಡುವನು ॥೮೫೩॥ ತ್ರಿಗುಣದ ಮೂರು ಅವಸ್ಥೆಗಳು ಯಾವುವು ಎಂದರೆ, ದೃಶ್ಯ, ದ್ರಷ್ಟಾ ಮತ್ತು ದರ್ಶನ. ಜಾಗೃತಿ, ಸುಷುಪ್ತೀ ಮತ್ತು ಸ್ವಪ್ನ ಹಾಗೂ ಜ್ಞೇಯ, ಜ್ಞಾತಾ ಮತ್ತು ಜ್ಞಾನ ಹೀಗಿರುವುವು ॥೮೫೪॥ ಕಾರ್ಯ, ಕಾರಣ ಹಾಗೂ ಕರ್ತಾ, ಭೋಜ್ಯ, ಭೋಜನ ಹಾಗೂ ಭೋಕ್ತಾ, ಶತ್ರು, ಮಿತ್ರ, ಉದಾಸೀನತಾ ಈ ಮೂರು ಗುಣಗಳ ಮೂರು ಅವಸ್ಥೆಗಳು ಇವು ಬಾಧಕವಾಗಿರುವುವು ॥೮೫೫॥ ಆದರೆ ನಿನ್ನ ಉಪದೇಶ ಪ್ರಮಾಣದಂತೆ ಸತ್‌ಶಿಷ್ಯನು ನನ್ನ ಭಜನೆ ಮಾಡುತ್ತ ತ್ರಿಗುಣಗಳ ತ್ರಿಪುಟಿಗಳನ್ನು ನಾಶಗೊಳಿಸಬೇಕು. ಅಂದರೇನೇ ಆತನು ಸ್ವತಃ ನನ್ನ ಸ್ವರೂಪ ಪ್ರಾಪ್ತಿ ಮಾಡಿಕೊಳ್ಳುವನು ॥೮೫೬॥ ನನ್ನ ಸ್ವರೂಪದಲ್ಲಿ ಯಾವ ಗುಣಗಳೂ ಕೂಡ ಇರುವುದಿಲ್ಲ ಹಾಗೂ ಗುಣವೃತ್ತಿಯೂ ಸಹ ಇರುವುದಿಲ್ಲ. ಆದ್ದರಿಂದ ಭಕ್ತರಾದವರು ಮದ್‌ಭಾವನೆಯಿಂದ ಗುಣಾತೀತರಾಗಿ ಸಹಜವಾಗಿಯೇ ಸ್ವಾನಂದ ಪ್ರಾಪ್ತ ಮಾಡಿಕೊಳ್ಳುವರು ॥೮೫೭॥ ಈ ಪ್ರಕಾರವಾಗಿ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತ ಆಜ್ಞಾಪಿಸಿದನು. ಆಗ ಆದ ಆತನ ಅವಸ್ಥೆಯ ವರ್ಣನೆಯನ್ನು ಶ್ರೀಶುಕದೇವರು ಪರೀಕ್ಷಿತಿಗೆ ಹೇಳುತ್ತಿರುವರು ॥೮೫೮॥

ಶ್ರೀ ಶುಕ ಉವಾಚ :-

ಸ ಏವಮುಕ್ತೋ ಹರಿಮೇಧಸೋದ್ಧವಃ ಪ್ರದಕ್ಷಿಣಂ ತಂ ಪರಿಸೃತ್ಯ ಪಾದಯೋಃ ।
ಶಿರೋ ನಿಧಾಯಾಶ್ರುಕಲಾಭಿರಾರ್ದ್ರಧೀರ್ನ್ಯಷಿಂಚದದ್ವಂದ್ವಪರೋಽಪ್ಯುಪಕ್ರಮೇ ॥೪೫॥

ಅರ್ಥ:- ಶ್ರೀಶುಕದೇವ ನುಡಿದನು:- ಭಗವಾನ ಶ್ರೀಕೃಷ್ಣನ ಸ್ವರೂಪದ ಜ್ಞಾನವು ಸಂಸಾರದಲ್ಲಿನ ಭೇದಭ್ರಮೆಗಳನ್ನು ನಾಶ ಮಾಡುವುದು. ಉದ್ಧವನಿಗೆ ಈ ಉಪದೇಶ ಮಾಡಿದ ನಂತರ ಆತನು ಶ್ರೀಕೃಷ್ಣನಿಗೆ ಪ್ರದಕ್ಷಿಣೆ ಹಾಕಿದನು ಮತ್ತು ಚರಣ ಕಮಲಗಳಲ್ಲಿ ಮಸ್ತಕವನ್ನಿಟ್ಟನು. ವಾಸ್ತವಿಕವಾಗಿ ಉದ್ಧವನು ಸಂಯೋಗ, ವಿಯೋಗಗಳಿಂದಾಗುವ ಸುಖದುಃಖಗಳನ್ನು ದಾಟಿದ್ದನು. ಆತನು ಭಗವಂತನ ಚರಣಗಳಲ್ಲಿ ಶರಣಾಗಿದ್ದನು. ಹೀಗಿದ್ದರೂ ಕೂಡ ಅಲ್ಲಿಂದ ಹೊರಡುವ ಪ್ರಸಂಗದಲ್ಲಿ ಆತನ ಚಿತ್ತಕ್ಕೆ ಪ್ರೇಮದ ಪೂರವು ಉಕ್ಕೇರಿತು. ಆತನು ತನ್ನ ಕಣ್ಣೀರಿನಿಂದ ಭಗವಂತನ ಪಾದಗಳನ್ನು ತೊಳೆದನು.

ಜೋ ನಿಜಮೋಕ್ಷೇ ನಿತ್ಯ ನಿಷ್ಕಾಮ । ಜೇಣೇ ಅನುಭವಿಲೇ ಪರಬ್ರಹ್ಮ । ತ್ಯಾ ಶ್ರೀಶುಕಾಸೀ ಅತಿಸಂಭ್ರಮ । ಉದ್ಧವಾಚೇ ಪ್ರೇಮ ವರ್ಣಾವಯಾ ॥೮೪೯॥ ತೋ ಶುಕ ಮ್ಹಣೇ ಪರೀಕ್ಷಿತೀ । ಉದ್ಧವ ಆಜ್ಞಾಪಿಲಾ ಶ್ರೀಪತೀ । ತ್ಯಾಚಾ ಪ್ರೇಮಾಚೀ ಅದ್ಭುತ ಸ್ಥಿತೀ । ತೇ ಮೀ ತುಜಪ್ರತೀ ಸಾಂಗೇನ ॥೮೫೦॥ ಉದ್ಧವ ಜರೀ ಜಾಹಲಾ ಗುಣಾತೀತ । ತರೀ ಗುರುಚರಣೀ ಪ್ರೇಮ ಅದ್ಭುತ । ಜ್ಯಾಸೀ ಸದ್ಗುರು ಶ್ರೀಕೃಷ್ಣನಾಥ । ಮೂರ್ತಿಮಂತ ಪರಬ್ರಹ್ಮ ॥೮೫೧॥ ತ್ಯಜೂ ನ ಶಕೇ ಹರಿಪದಾ । ಹರೀಚೇ ಠಾಯೀ ಪೂರ್ಣ ಶ್ರದ್ಧಾ । ಯಾಲಾಗೀ ಜಾಣ ''ಹರಿಮೇಧಾ'' । ಬೋಲಿಜೇ ಪ್ರಬುದ್ಧಾ ಉದ್ಧವಾತೇ ॥೮೫೨॥ ಜೋ ಆವಡೀ ಕರೀ ಹರೀಚೇ ಧ್ಯಾನ । ತ್ಯಾಚೇ ಧ್ಯಾನೇಸೀ ಹರಿ ಹರೀ ಮನ । ಜೋ ವಿವಂಚೀ ಶ್ರೀಕೃಷ್ಣ ಸಮಾಧಾನ । ತ್ಯಾಚೇ ಬುದ್ಧೀಚೇ ಹರಣ ಹರಿಕರೀ ॥೮೫೩॥ ಜೋ ಕರೀ ಹರಿಚಿಂತನ । ತ್ಯಾಚೇ ಚಿತ್ತಾಚೇ ಹರಿ ಕರೀ ಹರಣ । ಜೋ ಕರೀ ಹರೀಚೇ ಸ್ಮರಣ । ತ್ಯಾಚಾ ಸಂಸಾರ ಸಂಪೂರ್ಣ ಹರಿ ಹರೀ ॥೮೫೪॥ ಐಶಿಯಾ ಹರೀಚ್ಯಾ ಠಾಯೀ ಸರ್ವದಾ । ಪಾವಲಿಯಾಹೀ ಮುಕ್ತಿಪದಾ । ಉದ್ಧವಾಚೀ ಸಪ್ರೇಮ ಶ್ರದ್ಧಾ । ಯಾಲಾಗೀ ''ಹರಿಮೇಧಾ'' ತ್ಯಾಸೀ ಮ್ಹಣತೀ ॥೮೫೫॥ ಜೇ ಪಾವಲೇ ಗುಣಾತೀತೀ । ತ್ಯಾಂಸೀಹೀ ಆವಡೇ ಜ್ಯಾಚೀ ಭಕ್ತೀ । ತೇಣೇ ಶ್ರೀಕೃಷ್ಣೇ ಉದ್ಧವಾಪ್ರತೀ । ಪ್ರಯಾಣ ನಿಶ್ಚಿತೀ ನೇಮಲೇ ॥೮೫೬॥ ದೂರೀ ಪ್ರಯಾಣ ಬದರಿಕಾಶ್ರಮ । ಮಾಗುತಾ ನ ಭೇಟೇ ಪುರುಷೋತ್ತಮ । ತೋ ಪ್ರಯಾಣಕಾಳ ಉಪಕ್ರಮ । ಜಾಹಲಾ ಸಪ್ರೇಮ ಉದ್ಧವಾಸೀ ॥೮೫೭॥ ಸರ್ವದಾ ಸುಖದುಃಖಾತೀತ । ಉದ್ಧವ ಜಾಹಲಾಸೇ ನಿಶ್ಚಿತ । ತೋಹೀ ಪ್ರಯಾಣಕಾಳೀ ಪ್ರೇಮಯುಕ್ತ । ಪ್ರದಕ್ಷಿಣಾ ಕರೀತ ಶ್ರೀಕೃಷ್ಣಾಸೀ ॥೮೫೮॥ ಚರಣೀ ಮಸ್ತಕ ಠೇವಿತಾ ಜಾಣ । ಆನಂದಾಶ್ರು ಲೋಟಲೇ ನಯನ । ತೇಣೇ ಶ್ರೀಕೃಷ್ಣಾಚೇ ಚರಣಕ್ಷಾಳಣ । ಜಾಹಲೇ ಸಂಪೂರ್ಣ ಪದದ್ವಯಾ ॥೮೫೯॥

ಯಾರು ನಿಜಮುಕ್ತಿಯಿಂದ ನಿತ್ಯ ನಿಷ್ಕಾಮರಾಗಿರುವ, ಯಾರು ಪರಬ್ರಹ್ಮದ ಅನುಭವ ಪಡೆದವರಾದ ಶ್ರೀ ಶುಕಾಚಾರ್ಯರಿಗೆ ಉದ್ಧವನ ಪ್ರೇಮದ ಬಗ್ಗೆ ವರ್ಣಿಸಬೇಕೆಂಬ ಹಂಬಲ ಉತ್ಪನ್ನವಾಯಿತು ॥೮೪೯॥ ಶ್ರೀಶುಕಾಚಾರ್ಯರು ಹೇಳಿದರು ; ಹೇ ಪರೀಕ್ಷಿತೀ ರಾಜನೇ, ಶ್ರೀಕೃಷ್ಣನು ಉದ್ಧವನಿಗೆ ಪ್ರಯಾಣಿಸಲು ಆಜ್ಞೆ ನೀಡಿದನು. ಆಗ ಆತನ ಅದ್ಭುತ ಪ್ರೇಮದ ಸ್ಥಿತಿಯನ್ನು ನಾನು ನಿನಗೆ ಹೇಳುವೆನು, ಅದನ್ನು ಕೇಳು ॥೮೫೦॥ ವಾಸ್ತವಿಕವಾಗಿ ಉದ್ಧವನು ಗುಣಾತೀತನಾಗಿದ್ದನು. ನಿಜ, ಆದರೆ ಗುರುಚರಣಗಳಲ್ಲಿ ಆತನ ವಿಲಕ್ಷಣವಾದ ಪ್ರೇಮವಿತ್ತು. ಆತನ ಗುರುಗಳಾದರೂ ಮೂರ್ತಿಮಂತ ಪರಬ್ರಹ್ಮರೇ ಆಗಿದ್ದರು ॥೮೫೧॥ ಉದ್ಧವನಿಗೆ ಶ್ರೀಹರಿಯ ಚರಣಗಳನ್ನು ಬಿಡಲು ಆಗುತ್ತಿಲ್ಲ. ಶ್ರೀಹರಿಯಲ್ಲಿ ಆತನ ಪರಿಪೂರ್ಣ ಶ್ರದ್ಧೆ ಅಚಲವಾಗಿತ್ತು. ಹೀಗಾಗಿ ಆ ಯಾವ ಜ್ಞಾನಸಂಪನ್ನ ಉದ್ಧವನಿಗೆ ''ಹರಿಮೇಧಾ'' ಎಂದು ಕರೆಯಲಾಗಿದೆ ॥೮೫೨॥ ಯಾವನು ಅತ್ಯಂತ ಪ್ರೇಮದಿಂದ ಶ್ರೀಹರಿಯ ಧ್ಯಾನ ಮಾಡುವನೋ, ಆತನ ಧ್ಯಾನದೊಂದಿಗೆ ಶ್ರೀಹರಿಯು ಮನವನ್ನೇ ಹರಣ ಮಾಡುವನು. ಯಾವನು ಶ್ರೀಹರಿಯ ಸಮಾಧಾನದ ವಿಚಾರ ಮಾಡುವನೋ, ಆತನ ಬುದ್ಧಿ ಶ್ರೀಹರಿಯು ಹರಣ ಮಾಡುವನು ॥೮೫೩॥ ಯಾವನು ಶ್ರೀಹರಿಯ ಚಿಂತನೆ ಮಾಡುವನೋ, ಶ್ರೀಹರಿಯು ಆತನ ಚಿತ್ತದ ಹರಣ ಮಾಡುವನು. ಯಾವನು ಶ್ರೀಹರಿಯನ್ನು ಪ್ರೇಮಭಾವದಿಂದ ಸ್ಮರಿಸುವನೋ ಆತನ ಸರ್ವ ಸಂಸಾರವನ್ನು ಶ್ರೀಹರಿಯು ಹರಣ ಮಾಡುವನು ॥೮೫೪॥ ಉದ್ಧವನು ಮುಕ್ತಿಪದಕ್ಕೆ ಮುಟ್ಟಿಕೊಂಡಿದ್ದರೂ ಸಹ ಶ್ರೀಹರಿಯಲ್ಲಿ ಇಂತಹ ಪ್ರೇಮಮಯ ಶ್ರದ್ಧೆಯು ಆತನ ಅಂತಃಕರಣದಲ್ಲಿತ್ತು. ಆದ್ದರಿಂದ ಆತನಿಗೆ ''ಹರಿಮೇಧಾ'' ಎಂದು ಹೇಳುವರು ॥೮೫೫॥ ಯಾವನು ಗುಣಾತೀತನಾಗಿದ್ದರೂ ಕೂಡ ಯಾರ ಭಕ್ತಿಯು ಓಡಿಸುವುದೋ ಆ ಶ್ರೀಕೃಷ್ಣನು ಉದ್ಧವನ ಪ್ರಯಾಣ ನಿಶ್ಚಯಿಸಿದನು ॥೮೫೬॥ ಬದರಿಕಾಶ್ರಮವು ಬಹು ದೂರ ಅಂತರದಲ್ಲಿರುವುದು. ನಾನು ಅತ್ತ ಹೋದೆನೆಂದರೆ ಶ್ರೀಕೃಷ್ಣನು ನನಗೆ ಭೇಟಿಯಾಗಲಾರನು. ಈ ಕಾರಣದಿಂದ ಶ್ರೀಕೃಷ್ಣನನ್ನು ಬಿಟ್ಟು ಹೋಗುವ ಈ ವಿಚಾರದಿಂದ ಉದ್ಧವನಿಗೆ ಪ್ರೇಮದ ಉದ್ರೇಕವಾಯಿತು ॥೮೫೭॥ ಉದ್ಧವನು ಸರ್ವದಾ ಸುಖದುಃಖ ದ್ವಂದ್ವದಿಂದ ಮುಕ್ತನಾಗಿದ್ದರೂ ಕೂಡ ಪ್ರಯಾಣಕಾಲದಲ್ಲಿ ಆತನ ಹೃದಯವು ಪ್ರೇಮದಿಂದ ತುಂಬಿಬಂದಿತು. ಆದ್ದರಿಂದ ಶ್ರೀಕೃಷ್ಣನಿಗೆ ಪ್ರದಕ್ಷಿಣೆ ಹಾಕಿದನು ॥೮೫೮॥ ಶ್ರೀಕೃಷ್ಣನ ಚರಣಗಳಲ್ಲಿ ಮಸ್ತಕವನ್ನಿಡುತ್ತಲೇ ನೇತ್ರಗಳಿಂದ ಪ್ರೇಮಾಶ್ರು ಹರಿಯಲಾರಂಭಿಸಿ ಶ್ರೀಕೃಷ್ಣನ ಎರಡೂ ಪಾದಗಳು ತೊಳೆಯಲ್ಪಟ್ಟವು ॥೮೫೯॥

ಸದುಸ್ತ್ಯಜಸ್ನೇಹವಿಯೋಗಕಾತರೋ ನ ಶಕ್ನುವಂಸ್ತಂ ಪರಿಹಾತುಮಾತುರಃ ।
ಕೃಚ್ಛ್ರಂ ಯಯೌ ಮೂರ್ಧನಿ ಭರ್ತೃಪಾದುಕೇ ಬಿಭ್ರನ್ನಮಸ್ಕೃತ್ಯ ಯಯೌ ಪುನಃ ಪುನಃ ।।೪೬॥

ಅರ್ಥ:- ಹೇ ಪರೀಕ್ಷಿತೀ, ಭಗವಂತನಲ್ಲಿ ಪ್ರೇಮ ಮಾಡಿ ಆತನ ತ್ಯಾಗ ಮಾಡುವುದು ಅಸಂಭವ. ಶ್ರೀಕೃಷ್ಣನ ವಿಯೋಗದ ಕಲ್ಪನೆಯಿಂದ ಉದ್ಧವನ ಅಂತಃಕರಣವು ನಡುಗಹತ್ತಿತು. ಉದ್ಧವನಿಗೆ ತ್ಯಜಿಸುವುದು ಆಗುತ್ತಿಲ್ಲ. ಆಕ್ರೋಶದಿಂದ ಮೂರ್ಛಿತನಾಗಹತ್ತಿದನು. ಕೊನೆಗೆ ಆತನು ಶ್ರೀಕೃಷ್ಣನ ಪಾದುಕೆಗಳನ್ನು ತನ್ನ ಮಸ್ತಕದಲ್ಲಿ ಧರಿಸಿದನು. ಭಗವಂತನ ಚರಣಕಮಲಗಳಿಗೆ ಪುನಃ ಪುನಃ ವಂದಿಸಿ ಅಲ್ಲಿಂದ ಪ್ರಯಾಣ ಮಾಡಿದನು.

ಆಣಿಕಾಂಚಾ ಸ್ನೇಹ ಅತಿಬಾಧಕ । ತ್ಯಾತೇ ಸಾಂಡವೀ ವೇದವಿವೇಕ । ತೈಸಾ ಕೃಷ್ಣಸ್ನೇಹ ನವ್ಹೇ ದೇಖ । ತೋ ಸುಖದಾಯಕ ಸ್ನೇಹಾಳೂ ।।೮೭೦॥ ಉದ್ಧವಾಸೀ ಸ್ವಾಭಾವಿಕ । ಗುರು ಪರಬ್ರಹ್ಮ ದೋನೀ ಏಕ । ಇತರಾಂಸೀ ಭಾವನಾತ್ಮಕ । ಉದ್ಧವಾಸೀ ದೇಖ ಸ್ವತಃಸಿದ್ಧ ।।೮೭೧॥ ಐಸಾ ಶ್ರೀಕೃಷ್ಣಸ್ನೇಹೋ ಆವಶ್ಯಕ । ಉದ್ಧವಾಸೀ ಸುಖದಾಯಕ । ತ್ಯಾ ಶ್ರೀಕೃಷ್ಣಾಸೀ ಸಾಂಡಿತಾ ದೇಖ । ಆತ್ಯಂತಿಕ ವಿವ್ಹಳ ।।೮೭೨॥ ನಿಃಶೇಷ ನಿಮಾಲೀ ವಿಷಯಾವಸ್ಥಾ । ಜರೀ ವೃದ್ಧ ಜಾಹಲೀ ಪತಿವ್ರತಾ । ತರೀ ತ್ಯಾಗಾವಾ ನಿಜಭರ್ತಾ । ಹೇ ತಿಶೀ ಸರ್ವಥಾ ನಾವಡೇ ।।೮೭೩॥ ತೇವೀ ಅನುಭವೂನಿ ಪರಮಾರ್ಥಾ । ಉದ್ಧವಾ ಪಾವಲಾ ಜೀವನ್ಮುಕ್ತತಾ । ತರೀ ಸದ್ಗುರು ಶ್ರೀಕೃಷ್ಣ ತ್ಯಾಗಿತಾ । ಅತಿ ವಿವ್ಹಳತಾ ಗುರುಪ್ರೇಮೇ ।।೮೭೪॥ ಸ್ನೇಹೇ ದ್ವೇಷೇ ಸಕಾಮೇಸೀ । ಜೇ ಜೇ ವೇಧಲೇ ಶ್ರೀಕೃಷ್ಣಾಸೀ । ತೇ ತೇ ಪಾವಲೇ ಪರಮಾನಂದಾಸೀ । ತ್ಯಾ ಶ್ರೀಕೃಷ್ಣಾಸೀ ತ್ಯಾಜೀ ಕೋಣ ।।೮೭೫॥ ಅವಿಧಿ ರಾತಲೀ ಶ್ರೀಕೃಷ್ಣಾಸೀ। ತೀ ವಂದ್ಯ ಜಾಹಲೀ ಬ್ರಹ್ಮಾದಿಕಾಂಸೀ । ಮಾ ಉದ್ಧವ ವಿಕಲಾ ಗುರುಪ್ರೇಮಾಂಸೀ । ಕೇವೀ ಶ್ರೀಕೃಷ್ಣಾಸೀ ತ್ಯಜೀಲ ।।೮೭೬॥ ಜ್ಯಾಸೀ ಪರಬ್ರಹ್ಮತ್ವೇ ಗುರುಭಕ್ತೀ । ತ್ಯಾಸೀ ತೃಣಪ್ರಾಯ ಜೀವನ್ಮುಕ್ತೀ । ಜಾಹಲೀಹೀ ಮುಕ್ತೀ ಉಪೇಕ್ಷಿತೀ । ವಿಕಿಲೇ ಗುರುಭಕ್ತೀ ಅನನ್ಯತ್ವೇ ।।೮೭೭॥ ಉಲ್ಲಂಘೂ ನಯೇ ಸದ್ಗುರುವಚನ । ಕರಾವೇ ಬದರಿಕಾಶ್ರಮೀ ಗಮನ । ಶ್ರೀಕೃಷ್ಣಪ್ರೇಮಾ ಪಢಿಯೇ ಪೂರ್ಣ । ತೋ ಸರ್ವಥಾ ಜಾಣ ನಿಘೋ ನೇದೀ ।।೮೭೮॥ ಐಸೇ ಉಭಯತಾ ಅತಿಸಂಕಟ । ಉದ್ಧವಾಸೀ ವೋಢವಲೇ ದುರ್ಘಟ । ಶ್ರೀಕೃಷ್ಣಪ್ರೇಮೇ ಉತರೇ ಪೋಟ । ನ ದೇಖೇ ವಾಟ ಬದರೀಚೀ।।೮೭೯॥ ತ್ಯಾಗೋನಿ ಜಾವೇ ಜರೀ ಕೃಷ್ಣನಾಥಾ । ತರೀ ಹಾ ನಿಜಧಾಮಾ ಜಾಈಲ ಆತಾ । ಮಗ ಮೀ ನ ದೇಖೇ ಮಾಗುತಾ । ಯಾಲಾಗೀ ಅವಸ್ಥಾ ಅನಾವರ ।।೮೮೦॥ ನವಜಲದಘನತನು । ಶ್ಯಾಮ ರಾಜೀವ ಲೋಚನು । ಆನಂದವಿಗ್ರಹೀ ಶ್ರೀಕೃಷ್ಣು । ಬ್ರಹ್ಮ ಪರಿಪೂರ್ಣು ಪೂರ್ಣತ್ವೇ ।।೮೮೧॥

ಇತರ ಸರ್ವರಿಗೂ ಸ್ನೇಹವು ಅತಿಶಯ ಬಾಧಕವಾಗಿರುವುದು. ಆದ್ದರಿಂದ ವೇದದಲ್ಲಿ ಅದರ ತ್ಯಾಗ ಮಾಡಲು ಹೇಳಲ್ಪಟ್ಟಿರುವುದು. ಆದರೆ ಶ್ರೀಕೃಷ್ಣನ ಸ್ನೇಹವು ಹಾಗಿರಲಿಲ್ಲ. ಅದು ಪ್ರೇಮಳ ಹಾಗೂ ಸುಖದಾಯಕವಾಗಿತ್ತು ।।೮೭೦॥ ಉದ್ಧವನಿಗೆ ಗುರು ಹಾಗೂ ಪರಬ್ರಹ್ಮ ಇವೆರಡೂ ಕೂಡ ಒಂದೇಯಾಗಿದ್ದವು. ಇತರರಿಗೆ ಈ ಈರ್ವರಲ್ಲಿ ಏಕತ್ವದ ಭಾವನೆ ಮಾಡಬೇಕಾಗುವುದು. ಆದರೆ ಉದ್ಧವನಿಗೆ ಅದು ಸ್ವತಃ ಸಿದ್ಧವಾಗಿತ್ತು ।।೮೭೧॥ ಹೀಗೆ ಶ್ರೀಕೃಷ್ಣನ ಸ್ನೇಹವಿದ್ದರಿಂದ ಆತನು ಅತಿಶಯ ಸುಖಿಯಾಗಿದ್ದನು. ಆದ್ದರಿಂದ ಆತನಿಗೆ ಶ್ರೀಕೃಷ್ಣನನ್ನು ಬಿಟ್ಟು ಹೋಗಲು ಬಹಳ ವ್ಯಥೆಯಾಗಬೇಕಾಯಿತು ।।೮೭೨॥ ಪತಿವ್ರತಾ ಸ್ತ್ರೀಯಳ ವಿಷಯ ವಾಸನೆಯು ಇಲ್ಲದಾಗಿ ಆಕೆಯು ವೃದ್ಧಳಾಗಿದ್ದರೂ ಸಹ ಆಕೆಗೆ ತನ್ನ ಪತಿಯನ್ನು ಬಿಟ್ಟಿರಲು ಎಂದಿಗೂ ಬಯಸುವುದಿಲ್ಲ ।।೮೭೩॥ ಅದರಂತೆ ಉದ್ಧವನು ಪರಮಾರ್ಥದ ಅನುಭವ ಪಡೆದು ಜೀವನ್ಮುಕ್ತನಾಗಿದ್ದನು. ಹೀಗಿದ್ದರೂ ಸಹ ಸದ್ಗುರು ಶ್ರೀಕೃಷ್ಣನಿಗೆ ಬಿಟ್ಟು ಹೋಗಲು ಗುರುಪ್ರೇಮದಿಂದ ಆತನು ಅತಿಶಯ ವ್ಯಾಕುಲಪಟ್ಟನು ।।೮೭೪॥ ಪ್ರೇಮದಿಂದಾಗಲಿ, ದ್ವೇಷದಿಂದಾಗಲಿ ಅಥವಾ ವಿಷಯ ವಾಸನೆಯಿಂದಾಗಲಿ ಯಾರು ಯಾರು ಶ್ರೀಕೃಷ್ಣನಲ್ಲಿ ಬಂದರೋ ಅವರೆಲ್ಲರೂ ಪರಮಾನಂದಕ್ಕೆ ಪ್ರಾಪ್ತರಾದರು. ಹೀಗಿರುವ ಶ್ರೀಕೃಷ್ಣನನ್ನು ಯಾರು ಬಿಟ್ಟಿರಲು ಸಾಧ್ಯ? ।।೮೭೫॥

ಅವಿಧಿಯಿಂದ ಕೃಷ್ಣನಲ್ಲಿ ರತರಾದ ಮನುಷ್ಯರೂ ಸಹ ಬ್ರಹ್ಮದೇವಾದಿಕರಿಗೆ ವಂದ್ಯರಾದರು. ಅಂದಮೇಲೆ ಉದ್ಧವನಾದರೂ ಗುರುಪ್ರೇಮಕ್ಕಾಗಿ ತನ್ನನ್ನು ಮಾರಿಕೊಂಡಿದ್ದನು. ಹೀಗಿರುವ ಆತನು ಶ್ರೀಕೃಷ್ಣನನ್ನು ಹೇಗೆ ಬಿಟ್ಟಿರಲು ಸಾಧ್ಯ? ।।೮೭೬॥ ಯಾವನಿಗೆ ಗುರುಭಕ್ತಿಯು ಪರಬ್ರಹ್ಮತುಲ್ಯವಾಗಿರುವುದೋ, ಆತನಿಗೆ ಜೀವನ್ಮುಕ್ತಿಯು ತೃಣಸಮಾನವು. ಪ್ರಾಪ್ತವಾಗಿರುವ ಮುಕ್ತಿ ಯಾರು ತ್ಯಜಿಸುವರೋ ಅವರು ಅನನ್ಯ ಭಾವದಿಂದ ಗುರುಭಕ್ತಿಗಾಗಿ ತಮ್ಮನ್ನು ಮಾರಿಕೊಳ್ಳುವರು ।।೮೭೭॥ ಸದ್ಗುರುಗಳ ಆಜ್ಞೆಯ ಉಲ್ಲಂಘನೆ ಮಾಡಕೂಡದೆಂದು ಬದರಿಕಾಶ್ರಮಕ್ಕೆ ಹೋಗಬೇಕಾಗಿರುವುದು ನಿಜವಿದೆ. ಆದರೆ ಅತ್ಯಂತ ಪ್ರಿಯನಾಗಿರುವ ಶ್ರೀಕೃಷ್ಣನ ಚರಣಗಳಿಂದ ದೂರಾಗುವುದು ಆತನಿಗೆ ಆಗದ ಮಾತಾಯಿತು ।।೮೭೮॥ ಹೀಗೆ ಎರಡೂ ದೃಷ್ಟಿಯಿಂದ ಉದ್ಧವನ ಮೇಲೆ ದೊಡ್ಡ ಸಂಕಟ ಒದಗಿತು. ಆತನ ಅಂತಃಕರಣದಲ್ಲಿ ಶ್ರೀಕೃಷ್ಣನು ಪ್ರೇಮದಿಂದ ತುಂಬಿಕೊಂಡನು. ಇದರಿಂದ ಆತನಿಗೆ ಬದರಿಕಾಶ್ರಮದ ದಾರಿಯು ಕಾಣದಾಯಿತು ।।೮೭೯॥ ಶ್ರೀಕೃಷ್ಣನಿಗೆ ಬಿಟ್ಟು ಹೋಗಬೇಕೆಂದರೆ ಈಗ ಆತನು ನಿಜಧಾಮಕ್ಕೆ ಹೋಗುವನು. ತದನಂತರ ಆತನು ಪುನಃ ನನ್ನ ದೃಷ್ಟಿಗೆ ಬೀಳಲಾರನು. ಈ ವಿಚಾರದಿಂದ ಆತನು ಅತಿಶಯ ತಳಮಳಿತನಾದನು ।।೮೮೦॥ ಜಲದಿಂದ ತುಂಬಿಕೊಂಡಿರುವ ನೂತನ ಮೇಘದಂತೆ ಶ್ಯಾಮವರ್ಣ, ಕಮಲನಯನನಾಗಿರುವ ಆನಂದಮೂರ್ತಿ ಶ್ರೀಕೃಷ್ಣನು ಪೂರ್ಣತ್ವದಿಂದ ಪರಿಪೂರ್ಣ ಬ್ರಹ್ಮನಾಗಿರುವನು ।।೮೮೧॥

ಮುಕುಟ ಕುಂಡಲೇ ಮೇಖಳಾ । ತಿಲಕ ರೇಖಿಲಾ ಪಿಂವಳಾ । ಪದಕ ಏಕಾವಳೀ ಗಳಾ । ಕಂಠೀ ತೇಜಾಗಳಾ ಕೌಸ್ತುಭ ।।೮೮೨।। ವಾಂಕೀ ಅಂದುವಾಂಚಾ ಗಜರ । ಚರಣೀ ಗರ್ಜತ ತೋಡರ । ವಿದ್ಯುಪ್ರಾಯ ಪೀತಾಂಬರ । ತೇಣೇ ಶಾರ್ಙ್ಗಧರ ಶೋಭತ ।।೮೮೩।। ಕಾಂಸೇ ವಿರಾಜೇ ಸೋನಸಳಾ । ಅಪಾದ ರುಳೇ ವನಮಾಳಾ । ಘವಘವೀತ ಘನಸಾಂವಳಾ । ದೇಖತಾ ಡೋಳಾ ಮನ ನಿವೇ ।।೮೮೪।। ಐಸೇ ಶ್ರೀಕೃಷ್ಣದರ್ಶನ । ಪುಢತೀ ನ ದೇಖೇ ಮೀ ಆಪಣ । ಯಾಲಾಗೀ ಉದ್ಧವ ಜಾಣ । ಪ್ರೇಮೇ ಸಂಪೂರ್ಣ ವಿವ್ಹಳ ।।೮೮೫।। ಉದ್ಧವ ಪಾವಲಾ ಬ್ರಹ್ಮ ಪೂರ್ಣ । ತ್ಯಾಸೀ ಸಗುಣಾಚೀ ಅವಸ್ಥಾ ಕೋಣ । ತರೀ ಶ್ರೀಕೃಷ್ಣಪ್ರಭಾ ಪ್ರಕಾಶೇ ಚಿದ್‌ಘನ । ಆತ್ಮವಸ್ತು ಸಂಪೂರ್ಣ ಶ್ರೀಕೃಷ್ಣ ।।೮೮೬।। ಘೃತ ಥಿಜಲೇ ಕಾ ವಿಘುರಲೇ । ಪರೀ ಘೃತಪಣಾ ನಾಹೀ ಮುಕಲೇ । ತೇವೀ ಸಗುಣನಿರ್ಗುಣತ್ವೇ ಮುಸಾವಲೇ । ಪರಬ್ರಹ್ಮ ಸಂಚಲೇ ಶ್ರೀಕೃಷ್ಣ ।।೮೮೭।। ತ್ಯಾಜ್ಯ ಸಗುಣ ಪೂಜ್ಯ ನಿರ್ಗುಣ । ಹೇಹೀ ದಶಾ ಆರತೀ ಜಾಣ । ಜ್ಯಾಸೀ ಬ್ರಹ್ಮರೂಪ ತೃಣಪಾಷಾಣ । ತ್ಯಾಸೀ ತ್ಯಾಜ್ಯ ಸಗುಣ ಕದಾ ನವ್ಹೇ ।।೮೮೮।। ಏವಂ ಸಗುಣ ಆಣಿ ನಿರ್ಗುಣ । ಉದ್ಧವಾಸೀ ಸಮಸಮಾನ । ಗುರುತ್ವೇ ಕೃಷ್ಣೀ ಪ್ರೇಮ ಗಹನ । ತೋ ತ್ಯಾಗಿತಾ ಪೂರ್ಣ ವಿವ್ಹಳತಾ ।।೮೮೯।। ಪರೀ ಆಜ್ಞಾ ನುಲ್ಲಂಘವೇ ಸರ್ವಥಾ । ಮ್ಹಣೋನಿ ನಿಘಾವೇ ಬದರೀತೀರ್ಥಾ । ತಂವ ಶ್ರೀಕೃಷ್ಣಾಸೀ ಸಾಂಡೋನಿ ಜಾತಾ । ಪರಮಾವಸ್ಥಾ ಉದ್ಧವೀ ।।೮೯೦।। ಉದ್ಧವ ಪ್ರಯಾಣ ಅವಸರೀ । ಲೋಳಣೇ ಘಾಲೀ ಪಾಯಾವರೀ ।ಚರಣ ಆಲಿಂಗುನೀ ಹೃದಯೀ ಧರೀ । ತರೀ ಜಾವಯಾ ದೂರೀ ಧೀರ ನವ್ಹೇ ।।೮೯೧।। ಮಜ ಏಥೋನಿ ಗೇಲಿಯಾ ಆತಾ । ಮಾಗುತೀ ನ ದೇಖೇ ಶ್ರೀಕೃಷ್ಣನಾಥಾ । ತೇಣೇ ಅನಿವಾರ ಅವಸ್ಥಾ । ಪಾಊಲ ಸರ್ವಥಾ ನ ಘಾಲಾವೇ ।।೮೯೨।। ಮೀ ನಿವಾಲೋ ಕೃಷ್ಣಚರಣಾಮೃತೀ । ಮಜ ಚಾಡ ನಾಹೀ ಮಹಾತೀರ್ಥೀ । ತ್ಯಾಹೀ ಮಜ ಅದೃಷ್ಟಗತೀ । ಅಂತೀ ಶ್ರೀಪತೀ ತ್ಯಾಗವೀ ।।೮೯೩।। ಸಪ್ರೇಮ ಚಳಚಳಾ ಕಾಂಪತ । ಕಂಠ ಜಾಹಲಾ ಸದ್ಗದಿತ । ಬಾಷ್ಪೇ ಕ್ಷಣಕ್ಷಣಾ ಸ್ಫುಂದತ । ಸ್ವೇದ ರೋಮಾಂಚಿತ ಉದ್ಧವ ।।೮೯೪।। ಗಮನಾಲಾಗೀ ಅತಿ ಉದ್ಯತ । ಪಾಯಾ ಲಾಗೋನಿ ಪರ್ತ್ಯಾ ಜಾತ । ಸವೇಂಚಿ ಯೇಊನಿ ಪಾಯಾ ಲಾಗತ । ವಿಗುಂತಲೇ ಚಿತ್ತ ಹರಿಪ್ರೇಮೀ ।।೮೯೫।।

ರೀಟ, ಕುಂಡಲಗಳು, ನಡುಪಟ್ಟಿ, ಹಣೆಗೆ ಕೇಶರೀ ತಿಲಕ, ಕೊರಳಲ್ಲಿ ಪದಕಯುಕ್ತ ಒಂದು ಮುತ್ತಿನ ಸರ, ಕಂಠದಲ್ಲಿ ದೇದಿಪ್ಯಮಾನಉಳ್ಳ ಕೌಸ್ತುಭಮಣಿ ।।೮೮೨।। ಬಾಹುಗಳಲ್ಲಿ ವಂಕಿಗಳು, ಕಾಲುಗಳಲ್ಲಿ ಕಲಾತ್ಮಕ ತೋಡೆಗಳ ಝಣತ್ಕಾರ, ಮಿಂಚಿನಂತೆ ಚಮಕಿಸುತ್ತಿರುವ ಪೀತಾಂಬರ, ಇವುಗಳಿಂದ ಶ್ರೀಕೃಷ್ಣನು ಶೋಭಿಸುತ್ತಿದ್ದನು ।।೮೮೩।। ನಡುವಿನಿಂದ ಶೋಭಿಸುತ್ತಿರುವ ಪೀತಾಂಬರ, ಪಾದಗಳವರೆಗೂ ತೂಗಾಡುತ್ತಿರುವ ವನಮಾಲೆ, ಹೀಗೆ ಘಮಘಮಿಸುತ್ತಿರುವ ಘನಶ್ಯಾಮ ಮೂರ್ತಿಯನ್ನು ಕಣ್ಣುಗಳಿಂದ ನೋಡಿದರೆ ಸಾಕು, ಜೀವಕ್ಕೆ ತೃಪ್ತಿ ಲಭಿಸುತ್ತಿತ್ತು ।।೮೮೪।। ಹೀಗೆ ಸರ್ವಾಂಗಸುಂದರ ಶ್ರೀಕೃಷ್ಣನ ದರ್ಶನವು ತನಗೆ ಪುನಃ ಲಭಿಸಲಾರದೆಂದು ತಿಳಿದು ಉದ್ಧವನು ಪ್ರೇಮದಿಂದ ಅತಿಶಯ ತಳಮಳಿತನಾದನು ।।೮೮೫।। ಉದ್ಧವನು ಪರಬ್ರಹ್ಮಪದಕ್ಕೆ ಮುಟ್ಟಿಕೊಂಡಿದ್ದನು. ಅಂದಮೇಲೆ ಆತನಿಗೆ ಸಗುಣರೂಪದಲ್ಲಿ ಇಷ್ಟೊಂದು ಪ್ರೇಮ ಏಕೆ ? ಇದಕ್ಕೆ ಕಾರಣ ಶ್ರೀಕೃಷ್ಣಪ್ರಭೆಯ ಪ್ರಕಾಶದಿಂದ ಚಿತ್‌ಘನ ಆತ್ಮವಸ್ತು ಸಂಪೂರ್ಣವಾಗಿ ಶ್ರೀಕೃಷ್ಣನಾಗಿದ್ದನು ।।೮೮೬।। ತುಪ್ಪವು ಗಟ್ಟಿಯಾಗಿರಲಿ ಅಥವಾ ಕರಗಿರಲಿ ಅವೆರಡೂ ಕೂಡ ತುಪ್ಪವಾಗಿಯೇ ಇರುವುದು. ಅದರಂತೆ ಸಗುಣನಿರ್ಗುಣದಿಂದ ತುಂಬಿಕೊಂಡಿರುವ ಪರಬ್ರಹ್ಮ-ಶ್ರೀಕೃಷ್ಣ ಇವೆರಡೂ ಒಂದೇ ಮೂರ್ತಿಯಾಗಿದ್ದವು. ಅಂದರೆ ಶ್ರೀಕೃಷ್ಣನು ಪರಬ್ರಹ್ಮಸ್ವರೂಪನಾಗಿದ್ದನು ।।೮೮೭।। ಸಗುಣರೂಪವು ತ್ಯಾಜ್ಯ, ನಿರ್ಗುಣಸ್ವರೂಪವು ಪೂಜ್ಯ ಎಂದು ಹೀಗೆ ತಿಳಿಯುವುದು ಯೋಗ್ಯವಲ್ಲ. ಯಾರಿಗೆ ಹುಲ್ಲು, ಕಲ್ಲುಗಳಲ್ಲಿ ಪರಬ್ರಹ್ಮ ತೋರುತ್ತಿರುವುದೋ, ಆತನಿಗೆ ಸಗುಣ ರೂಪವು ಎಂದಿಗೂ ತ್ಯಾಜ್ಯವೆನಿಸುವುದಿಲ್ಲ ।।೮೮೮।। ಈ ಪ್ರಕಾರವಾಗಿ ಉದ್ಧವನಿಗೆ ಸಗುಣ ಮತ್ತು ನಿರ್ಗುಣ ರೂಪಗಳೆರಡೂ ಸಹ ಸರಿಸಮಾನವಾಗಿದ್ದವು. ಶ್ರೀಕೃಷ್ಣಮೇಲಿನ ಗುರುಪ್ರೇಮವು ಅತ್ಯಂತ ಭಾವಯುಕ್ತವಾಗಿತ್ತು. ಆದ್ದರಿಂದ ಕೃಷ್ಣನಿಗೆ ಬಿಟ್ಟುಹೋಗುವ ಸಮಯದಲ್ಲಿ ಉದ್ಧವನು ಅತಿಶಯ ತಳಮಳಿತನಾದನು ।।೮೮೯।। ಆದರೆ ಶ್ರೀಕೃಷ್ಣನ ಆಜ್ಞೆಯನ್ನು ಉಲ್ಲಂಘಿಸಲು ಬಾರದೆಂದು ತಿಳಿದು ಬದರಿಕಾಶ್ರಮಕ್ಕೆ ಹೊರಡಬೇಕೆಂದರೆ ಆತನನ್ನು ಬಿಟ್ಟು ಹೋಗಲು ಉದ್ಧವನು ಅತ್ಯಂತ ಕಷ್ಟಕ್ಕೆ ಒಳಗಾದನು ।।೮೯೦।। ಉದ್ಧವನು ಹೊರಡುವ ಸಮಯದಲ್ಲಿ ಶ್ರೀಕೃಷ್ಣನ ಚರಣಗಳಲ್ಲಿ ಲೋಟಾಂಗಣ ಹಾಕಿದನು. ಚರಣಗಳಿಗೆ ಆಲಿಂಗಿಸಿದನು ಹಾಗೂ ಹೃದಯಕ್ಕೆ ದೃಢವಾಗಿ ಧರಿಸಿ ಆತನಿಗೆ ಬಿಟ್ಟು ದೂರ ಹೋಗಲು ಉದ್ಧವನಿಗೆ ಧೈರ್ಯ ಸಾಲದಾಯಿತು ।।೮೯೧।। ಈಗ ನಾನು ಇಲ್ಲಿಂದ ಒಮ್ಮೆ ಹೊರಟು ಹೋದರೆ ಪುನಃ ಶ್ರೀಕೃಷ್ಣನು ನನಗೆ ಎಂದಿಗೂ ಕಾಣಿಸಲಾರನು. ಈ ವಿಚಾರದಿಂದ ಆತನ ಚಿತ್ತವೃತ್ತಿಯು ಅತ್ಯಂತ ವ್ಯಾಕುಲಗೊಂಡಿತು. ಏನು ಮಾಡಿದರೂ ಅಲ್ಲಿಂದ ಕಾಲುಗಳನ್ನು ಕಿತ್ತಲು ಆಗುತ್ತಿರಲಿಲ್ಲ ।।೮೯೨।। ನಾನು ಶ್ರೀಕೃಷ್ಣನ ಚರಣಾಮೃತದಿಂದ ತೃಪ್ತನಾಗಿರುವೆನು. ನನಗೆ ಈಗ ಯಾವ ಮಹಾತೀರ್ಥಗಳ ಅವಶ್ಯಕತೆಯೇ ಉಳಿದಿರುವುದಿಲ್ಲ. ಹೀಗಿದ್ದರೂ ಕೂಡ ನನ್ನಪ್ರಾರಬ್ಧವು ನನಗೆ ಭಗವಾನ ಶ್ರೀಕೃಷ್ಣನ ವಿಯೋಗ ಸಾಧಿಸುತ್ತಿದೆ ।।೮೯೩।। ಹೀಗೆ ಹೇಳುತ್ತ ಉದ್ಧವನು ಥರಥರನೇ ಕಂಪಿಸಹತ್ತಿದನು. ಆತನ ಕಂಠವು ಗದ್ಗದಿತವಾಯಿತು. ನೇತ್ರಗಳಲ್ಲಿ ಪ್ರೇಮಾಶ್ರೂ ಬರಲಾರಂಭಿಸಿದವು. ಕ್ಷಣಕ್ಷಣಕ್ಕೂ ಬಿಕ್ಕಿ ಬಿಕ್ಕಿ ಅಳಹತ್ತಿದನು. ಮೈತುಂಬ ಬೆವರಿಕೊಂಡು ರೋಮಾಂಚನಾದನು ।।೮೯೪।। ಆತನು ಹೊರಡಲು ಹೊರಟನು, ಕಾಲಿಗೆ ಬಿದ್ದು ಮುಂದೆ ಹೋಗುತ್ತಲೇ ಪುನಃ ಹಿಂದಕ್ಕೆ ನೋಡಿ ಓಡುತ್ತ ಬಂದು ಪುನಃ ಕಾಲಿಗೆ ಬೀಳುವುದು. ಈ ಪ್ರಕಾರವಾಗಿ ಆತನ ಚಿತ್ತವು ಹರಿಪ್ರೇಮದಿಂದ ಕಟ್ಟಲ್ಪಟ್ಟಿತ್ತು ।।೮೯೫।।

ಪುಢತೀ ನಮನ ಪುಢತೀ ಗಮನ । ಪುಢತೀ ಘಾಲೀ ಲೋಟಾಂಗಣ । ಪುಢತೀ ವಂದೀ ಶ್ರೀಕೃಷ್ಣಚರಣ । ಸರ್ವಥಾ ಜಾಣ ನಿಘವೇನಾ ॥೯೬॥ ದೇಖೋನಿ ಉದ್ಧವಾಚಾ ಭಾವೋ । ಪರಮಾನಂದೇ ತುಷ್ಟಲಾ ದೇವೋ । ಯಾಸೀ ಮಾಝ್ಯಾ ಠಾಯೀ ಅತಿಸ್ನೇಹೋ । ಗುರುತ್ವೇ ಪಹಾ ಹೋ ಅನನ್ಯ ॥೯೭॥ ಕೃಪಾ ಉಪಜಲೀ ಯದುನಾಯಕಾ । ಆಪುಲೇ ಚರಣೀಂಚ್ಯಾ ಪಾದುಕಾ । ಉದ್ಧವಾಸೀ ದಿಧಲ್ಯಾ ದೇಖಾ । ತೇಣೇ ನಿಜಮಸ್ತಕಾ ಠೇವಿಲ್ಯಾ ॥೯೮॥ ಪಾದುಕಾ ಠೇವಿತಾಂಚಿ ಶಿರೀ । ಮೀ ಜಾತೋ ಕೃಷ್ಣಾಪಾಸೋನಿ ದೂರೀ । ಹೇ ನಾಠವೇ ಉದ್ಧವಾ ಅಂತರೀ । ಐಶಿಯಾಪರೀ ಪಬೋಧಿಲಾ ॥೯೯॥ ಪಾದುಕಾ ಠೇವಿತಾಂಚಿ ಮಾಥಾ । ಸ್ವಯೇ ಉಪಶಮೇ ಅವಸ್ಥಾ । ನಮಸ್ಕಾರೋನಿ ಶ್ರೀಕೃಷ್ಣನಾಥಾ । ಹೋಯ ನಿಘತಾ ತದಾಜ್ಞಾ ॥೧೦೦॥ ತ್ರಿವಾರ ಕರೋನಿ ಪ್ರದಕ್ಷಿಣಾ । ಅವಲೋಕೂನಿ ಶ್ರೀಕೃಷ್ಣವದನಾ । ನಮಸ್ಕಾರೋನಿ ಶ್ರೀಚರಣಾ । ಉದ್ಧವ ಕೃಷ್ಣಾಜ್ಞಾ ನಿಘಾಲಾ ॥೧೦೧॥ ತೃತೀಯ ಸ್ಕಂಧೀಚೇ ನಿರೂಪಣ । ಉದ್ಧವಾಸೀ ವಿದುರದರ್ಶನ । ದೋಘಾ ಪಡಿಲೇ ಆಲಿಂಗನ । ಕುಶಲ ಸಂಪೂರ್ಣ ಪೂಶಿಲೇ ॥೧೦೨॥ ತೇಥ ಸಾಂಗತಾ ಕೃಷ್ಣನಿಧನ । ಉದ್ಧವ ನವ್ಹೇಚಿ ದೀನವದನ । ತೇ ವಿದುರಾಸೀ ಕಳಲೇ ಚಿನ್ಹ । ಹಾ ಬ್ರಹ್ಮಜ್ಞಾನ ಪಾವಲಾ ॥೧೦೩॥ ಮರತಾ ಗುರು ರಡತಾ ಚೇಲಾ । ದೋಹೀಂಚಾ ಬೋಧ ವಾಯಾ ಗೇಲಾ । ಸಾಚ ಮಾನೀ ಜೋ ಯಾ ಬೋಲಾ । ತೋಹೀ ಠಕಲಾ ನಿಶ್ಚಿತ ॥೧೦೪॥ ಯಾಸೀ ತುಷ್ಟಲೀ ಶ್ರೀಕೃಷ್ಣಕೃಪಾಮೂರ್ತೀ । ನಿಮಾಲೀ ಮೋಹಮಮತಾವೃತ್ತೀ । ಪಾವಲಾ ಪರಮಾನಂದಪ್ರಾಪ್ತೀ । ಸ್ವಾನಂದಸ್ಥಿತೀ ಡುಲ್ಲತ ॥೧೦೫॥ ಶಬ್ದಾ ನಾತಳೋನಿ ಬೋಲ ಬೋಲೇ । ಪೃಥ್ವೀ ನಾತಳೋನಿ ಸಹಜೇ ಚಾಲೇ । ಅಸೋನಿ ನಾಮರೂಪಮೇಳೇ । ನಾಮರೂಪಾ ನಾತಳೇ ಹಾ ಏಕ ॥೧೦೬॥ ಹಾ ರಸನೇವೀಣ ಸುರಸ ಚಾಖೇ । ಡೋಳ್ಯಾವೀಣ ಆಪಣಪೈ ದೇಖೇ । ಇಂದ್ರಿಯಾವೀಣ ಸೋಲೀಂವ ಸುಖೇ । ನಿಜಾತ್ಮತೋಖೇ ಹಾ ಭೋಗೀ ॥೧೦೭॥ ನಿರ್ವಿಕಲ್ಪನಿಜಬೋಧೇಸೀ । ತ್ಯಾವರೀ ಭಕ್ತಿಜ್ಞಾನ ವೈರಾಗ್ಯೇಸೀ । ಸ್ಥಿತೀ ದೇಖೋನಿ ಉದ್ಧವಾಪಾಶೀ । ವಿದುರ ಮಾನಸೀ ನಿವಾಲಾ ॥೧೦೮॥ ಮಗ ತೋ ವಿನವೀ ಉದ್ಧವಾಸೀ । ತುಜ ತುಷ್ಟಲಾ ಹೃಷೀಕೇಶೀ । ತೂ ಪಾವಲಾಸಿ ಬ್ರಹ್ಮಜ್ಞಾನಾಸೀ । ಹೇ ಮಜ ಉಪದೇಶೀ ಸಭಾಗ್ಯಾ ॥೧೦೯॥

ಪುನಃ ನಮಸ್ಕಾರ ಮಾಡುವುದು, ಪುನಃ ಹೋಗುವುದು, ಪುನಃ ಹಿಂದಿರುಗಿ ಲೋಟಾಂಗಣ ಹಾಕುವುದು, ಪುನಃ ಶ್ರೀಕೃಷ್ಣನ ಚರಣಕಮಲಗಳನ್ನು ಧರಿಸುವುದು, ಹೀಗೆಯೇ ಮಾಡುತ್ತ ಆತನು ಅಲ್ಲಿಂದ ಹೊರಡಲು ಸಿದ್ಧನಾಗದಂತಾದನು ॥೯೬॥ ಉದ್ಧವನ ಪ್ರೇಮಭಾವ ಕಂಡು ಶ್ರೀಕೃಷ್ಣನು ಪರಮಾನಂದದಿಂದ ಸಂತುಷ್ಟನಾದನು. ಮನದಲ್ಲಿ ಹೀಗೆ ನುಡಿಯಹತ್ತಿದನು ; ಈತನು ನನ್ನಲ್ಲಿ ಅತ್ಯಂತ ಸ್ನೇಹಭಾವ ಇಟ್ಟಿದ್ದರಿಂದ ಗುರುತ್ವಭಾವದಿಂದ ಪೂರ್ಣ ಅನನ್ಯನಾಗಿಬಿಟ್ಟಿರುವನು ॥೯೭॥ ಯದುನಾಯಕ ಶ್ರೀಕೃಷ್ಣನಿಗೆ ಆತನಿಗಾಗಿ ದಯೆ ಹುಟ್ಟಿತು. ಆಗ ಆತನು ತನ್ನ ಚರಣ ಪಾದುಕೆಗಳನ್ನು ತೆಗೆದು ಉದ್ಧವನಿಗೆ ಕೊಟ್ಟನು. ಅವುಗಳನ್ನು ಆತನು ತನ್ನ ಮಸ್ತಕದ ಮೇಲೆ ಧರಿಸಿದನು ॥೯೮॥ ಶ್ರೀಕೃಷ್ಣನ ಪಾದುಕೆಗಳನ್ನು ಮಸ್ತಕದ ಮೇಲೆ ಧರಿಸುತ್ತಲೇ ''ನನಗೆ ಶ್ರೀಕೃಷ್ಣನ ವಿಯೋಗವಾಗುವುದು'' ಎಂಬ ಸ್ಮರಣೆ ಉದ್ಧವನಿಗೆ ಉಳಿಯಲೇ ಇಲ್ಲ. ಇಂತಹ ಭಾವನೆ ಶ್ರೀಕೃಷ್ಣನು ಆತನಿಗೆ ಪ್ರಬೋಧಿಸಿದನು ॥೯೯॥ ಈ ಪಾದುಕೆಗಳನ್ನು ಮಸ್ತಕದ ಮೇಲೆ ಧರಿಸುವುದೊಂದೇ ತಡ, ಭಕ್ತರಾಜ ಉದ್ಧವನ ಭಾವೋದ್ರೇಕವು ಮೆಲ್ಲಮೆಲ್ಲನೇ ತಾನಾಗಿಯೇ ಶಾಂತವಾಯಿತು. ಆಗ ಆತನ ಸಚ್ಚಿದಾನಂದಘನ ಪ್ರೇಮಮೂರ್ತಿ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಆತನ ಆಜ್ಞೆ ಪ್ರಕಾರ ಹೊರಡಲು ಸಿದ್ಧನಾದನು ॥೧೦೦॥ ಮೂರು ಸಾರೆ ಪ್ರದಕ್ಷಿಣೆ ಹಾಕಿ ಉದ್ಧವನು ಶ್ರೀಕೃಷ್ಣನ ಪ್ರೇಮಮಯ ಮುಖಾವಲೋಕನೆ ಮಾಡಿದನು. ಆತನ ಚರಣಕಮಗಳಿಗೆ ವಂದಿಸಿ ಆತನು ಆಜ್ಞೆಯಂತೆ ಹೊರಟುಬಿಟ್ಟನು ॥೧೦೧॥ ಈಗ ಮೂರನೆಯ ಸ್ಕಂಧದಲ್ಲಿನ ನಿರೂಪಣೆ ; ಉದ್ಧವನಿಗೆ ವಿದುರನ ದರ್ಶನವಾದಾಗ ಅವರಿಬ್ಬರೂ ಪರಸ್ಪರ ಪ್ರೇಮಾಲಿಂಗನ ಮಾಡಿದರು. ತಮ್ಮ ಸರ್ವ ಕ್ಷೇಮ ಸಮಾಚಾರ ಕೇಳಿದರು, ಹೇಳಿದರು ॥೧೦೨॥ ಆಗ ವಿದುರನು ಶ್ರೀಕೃಷ್ಣನ ನಿಧನ ಸಮಾಚಾರ ಹೇಳಿದಾಗ ಉದ್ಧವನ ಮುಖದಲ್ಲಿ ಸ್ವಲ್ಪವೂ ಕೂಡ ದುಃಖದ ಛಾಯೆ ಕಾಣಲಿಲ್ಲ. ಈ ಚಿನ್ಹೆಯಿಂದ ಉದ್ಧವನು ಬ್ರಹ್ಮಜ್ಞಾನಿಯಾಗಿರುವನೆಂದು ವಿದುರನು ಅರಿತುಕೊಂಡನು ॥೧೦೩॥ ಸಾಯುವವ ಗುರು ಅಳುವವ ಶಿಷ್ಯ ಹೀಗಿದ್ದರೆ ಇವರಿಬ್ಬರ ಜ್ಞಾನ ವ್ಯರ್ಥವೆಂದೇ ತಿಳಿಯಬೇಕು. ಅದರಂತೆಯೇ ಈ ಮಾತೂ ಕೂಡ ಸತ್ಯವೆಂದು ತಿಳಿದರೆ ಅವನೂ ಕೂಡ ಠಕ್ಕಿಸಲ್ಪಟ್ಟನೆಂದು ತಿಳಿಯಬೇಕು ॥೧೦೪॥ ಈತನಿಗೆ ಕೃಪಾಸಾಗರ ದ್ವಾರಕಾಧೀಶ ಶ್ರೀಕೃಷ್ಣನು ಪ್ರಸನ್ನನಾಗಿರುವನು. ಆದ್ದರಿಂದ ಈತನ ಮೋಹಮಮತೆಯು ನಷ್ಟವಾಗಿದೆ. ಆದ್ದರಿಂದ ಪರಮಾನಂದದಲ್ಲಿ ನಿಮಗ್ನನಾಗಿ ಆತ್ಮಸ್ವರೂಪದಲ್ಲಿ ತೂಗಾಡಹತ್ತಿರುವನು ॥೧೦೫॥ ಶಬ್ದಗಳಿಗೆ ಸ್ಪರ್ಶಿಸದೇ ಈತನು ಮಾತನಾಡುವನು, ಭೂಮಿಯಮೇಲೆ ಕಾಲುಗಳನ್ನಿಡದೇ ಸುಲಭವಾಗಿ ನಡೆಯುತ್ತಿರುವನು. ನಾಮರೂಪದಲ್ಲಿದ್ದರೂ ಕೂಡ ಆ ನಾಮರೂಪಕ್ಕೆ ಸ್ಪರ್ಶ ಮಾಡುತ್ತಿರುವುದಿಲ್ಲ ॥೧೦೬॥ ನಾಲಿಗೆ ಹೊರತಾಗಿ ರಸ ಸೇವಿಸುವನು, ಕಣ್ಣುಗಳ ಹೊರತಾಗಿ ನೋಡುತ್ತಿರುವನು, ಇಂದ್ರಿಯಗಳ ಹೊರತಾಗಿಯೇ ನಿರ್ಮಲವಾದ ಸುಖವನ್ನು ನಿಜಾತ್ಮತೃಪ್ತಿಯಿಂದ ಭೋಗಿಸುತ್ತಿರುವನು ॥೧೦೭॥ ನಿರ್ವಿಕಲ್ಪವಾಗಿರುವ ಆತ್ಮಜ್ಞಾನ ಪ್ರಾಪ್ತವಾಗಿ ಪುನಃ ಭಕ್ತಿ, ಜ್ಞಾನ, ವೈರಾಗ್ಯದಿಂದಿರುವ ಉದ್ಧವನ ಅವಸ್ಥೆ ಕಂಡು ವಿದುರನ ಮನಸ್ಸಿಗೆ ಪರಮ ಸಂತೋಷ ಪ್ರಾಪ್ತವಾಯಿತು ॥೧೦೮॥ ತದನಂತರ ಆತನು ಉದ್ಧವನಿಗೆ ಹೀಗೆ ವಿನಂತಿಸಿಕೊಂಡನು ; ನಿನ್ನಲ್ಲಿ ಶ್ರೀಕೃಷ್ಣನು ಪ್ರಸನ್ನನಾಗಿರುವುದರಿಂದ ನಿನಗೆ ಬ್ರಹ್ಮಜ್ಞಾನ ಪ್ರಾಪ್ತವಾಗಿದೆ. ಹೇ ಭಾಗ್ಯವಂತನೇ, ನಿನಗಾಗಿರುವ ಬ್ರಹ್ಮಜ್ಞಾನ ನನಗೂ ಕೂಡ ಉಪದೇಶ ಮಾಡು ॥೧೦೯॥

ಉದ್ಧವ ಮ್ಹಣೇ ತುಝೇ ಭಾಗ್ಯ ಧನ್ಯ । ತುಜ ಅಂತೀ ಸ್ಮರಲಾ ಶ್ರೀಕೃಷ್ಣ । ತುಜ ಸಾಂಗಾವಯಾ ಬ್ರಹ್ಮಜ್ಞಾನ । ಮೈತ್ರೇಯಾಸೀ ಜಾಣ ಆಜ್ಞಾಪಿಲೇ ॥೯೧೦॥ ಕೃಷ್ಣ ಮಜ ಜರೀ ಆಜ್ಞಾ ದೇತಾ । ತರೀ ಮೀ ತತ್ಕಾಳ ಬೋಧ ಕರಿತೋ ತತ್ತ್ವತಾ । ತುಜ ಸದ್ಗುರು ಪರಮಾರ್ಥಾ । ಜಾಣ ಸರ್ವಥಾ ಮೈತ್ರೇಯ ॥೯೧೧॥ ಐಕತಾ ಉದ್ಧವಾಚೇ ವಚನ । ವಿದುರ ಪ್ರೇಮೇ ಗಹಿಂವರಲಾ ಪೂರ್ಣ । ಕಾಯ ಬೋಲಿಲಾ ಆಪಣ । ಸಾವಧಾನ ಅವಧಾರಾ ॥೯೧೨॥ ಹೇ ತೃತೀಯಸ್ಕಂಧೀಚೇ ನಿರೂಪಣ । ಪ್ರಸಂಗೇ ಏಥೇ ಆಲೇ ಜಾಣ । ವಿದುರ ಬೋಲಿಲಾ ಅತಿಗಹನ । ತೇಚಿ ವಚನ ಅವಧಾರಾ ॥೯೧೩॥

(ಸಮಂತ ಶ್ಲೋಕ) ಕ್ವಾಹಂ ಕೀಟಕವತ್ತುಚ್ಛ: ಕ್ವ ಚ ಕಾರುಣ್ಯವಾರಿಧಿ: ।
ತೇನಾಹಂ ಸ್ಮಾರಿತೋಽಸ್ಮ್ಯದ್ಯ ಮುಮರ್ಷು: ಕೇಶವಂ ಯಥಾ ॥೧॥

ಅರ್ಥ: - ತುಚ್ಛ ಕೀಟಕನಂತಿರುವ ನಾನು ಎಲ್ಲಿ ? ಆ ಕೃಪಾಸಾಗರನಾದ ಶ್ರೀಕೃಷ್ಣನು ಎಲ್ಲಿ ? ಮರಣ ಸಮಯದಲ್ಲಿ ಮನುಷ್ಯನು ನಾರಾಯಣನ ಸ್ಮರಣೆ ಹೇಗೆ ಮಾಡುವನೋ, ಅದರಂತೆ ನಾನು ಸ್ಮರಿಸಲ್ಪಟ್ಟೆನಲ್ಲ !

ವಿದುರ ಮ್ಹಣೇ ಮೀ ಮಶಕ । ರಂಕಾಮಾಜೀ ಅತಿರಂಕ । ತ್ಯಾ ಮಜ ಸ್ಮರೇ ಯದುನಾಯಕ । ಕೃಪಾ ಅಲೋಕಿಕ ದಾಸಾಂಚೀ ॥೯೧೪॥ ನಾಠವೀಚ ದೇವಕೀವಸುದೇವಾಂಸೀ । ನಾಠವೀಚ ಬಳಿಭದ್ರಪಾಂಡವಾಂಸೀ । ತೋ ಆಠವೀ ಮಜ ದಾಸೀಪುತ್ರಾಸೀ । ಹೃಷೀಕೇಶೀ ಕೃಪಾಳೂ ॥೯೧೫॥ ಜೇವೀ ಮರತಾ ಸ್ಮರೇ ನಾರಾಯಣ । ತೇವೀ ಅಂತೀ ಮಜ ಸ್ಮರಲಾ ಕೃಷ್ಣ । ಯಾಪರೀ ಭಕ್ತಪ್ರತಿಪಾಳೂ ಜಾಣ । ಕೃಪಾಸಿಂಧು ಪೂರ್ಣ ಶ್ರೀಕೃಷ್ಣ ॥೯೧೬॥ ಆಶಂಕಾ ದ್ವಾರಕೇಸೀ ಅಸತಾ ಶ್ರೀಕೃಷ್ಣ । ತೈಚಿ ಉದ್ಧವೇ ಕೇಲೇ ಗಮನ । ತ್ಯಾಸೀ ಪ್ರಭಾಸೀಂಚೇ ಕೃಷ್ಣನಿಧನ । ಮ್ಹಣಾಲ ಸಂಪೂರ್ಣ ಅದೃಶ್ಯ ॥೯೧೭॥ ತರೀ ಉದ್ಧವವಿದುರಸಂವಾದ ಖೂಣ । ಯೇಚಿ ಅರ್ಥೀಚೇ ನಿರೂಪಣ । ಸಮೂಳ ಸಾಂಗೇನ ಕಥನ । ತೇ ಸಾವಧಾನ ಅವಧಾರಾ ॥೯೧೮॥ ಉದ್ಧವ ಜಾತಾ ಮಾರ್ಗೀ ಆಪಣ । ಅವಚಿತೀ ಜಾಹಲೀ ಆಠವಣ । ನ ಪಾಹತಾ ಕೃಷ್ಣನಿಧನ । ಮೀ ಕಾ ಗಮನ ಕರಿತೋ ಹೇ ॥೯೧೯॥ ಶ್ರೀಕೃಷ್ಣಚರಿತ್ರ ಅತಿಗೋಡ । ತೇ ಸಾಂಡೂನಿ ತೀರ್ಥೀ ಕಾಯ ಚಾಡ । ಐಸಾ ವಿಚಾರ ಕರೂನಿ ದೃಢ । ಶ್ರದ್ಧೇನೇ ಪ್ರೌಢ ಶ್ರದ್ಧಾಳೂ ॥೯೨೦॥ ಪರತೋನಿ ಕೃಷ್ಣಾಪಾಶೀ ಜಾತಾ । ತೋ ಮಜ ರಾಹೋ ನೇದೀ ಸರ್ವಥಾ । ಕೃಷ್ಣಾಮಾಗೇ ಕಳೋ ನೇದಿತಾ । ಆಲಾ ಮಾಗುತಾ ಪ್ರಭಾಸೇಸೀ ॥೯೨೧॥

ಆಗ ಉದ್ಧವನು ಹೀಗೆ ಹೇಳಿದನು ; ನೀನು ನಿಜವಾಗಿಯೂ ಭಾಗ್ಯವಂತನು, ಧನ್ಯ ಧನ್ಯನು. ಕಾರಣ ಶ್ರೀಕೃಷ್ಣನು ತನ್ನ ಅಂತ್ಯಕಾಲದಲ್ಲಿ ನಿನ್ನ ಸ್ಮರಣೆ ಮಾಡಿದನು ಹಾಗೂ ನಿನಗೆ ಬ್ರಹ್ಮಜ್ಞಾನ ಉಪದೇಶ ಮಾಡಲು ಮೈತ್ರೇಯನಿಗೆ ಆಜ್ಞಾಪಿಸಿರುವನು ॥೯೧೦॥ ಶ್ರೀಕೃಷ್ಣನು ನನಗೆ ಆಜ್ಞಾಪಿಸಿದ್ದರೆ ಕೂಡಲೇ ನಿನಗೆ ಬ್ರಹ್ಮಜ್ಞಾನ ಉಪದೇಶ ಮಾಡುತ್ತಿದ್ದೆ. ಆದರೆ ನಿನ್ನ ಪರಮಾರ್ಥಿಕ ಗುರು ಮೈತ್ರೇಯನಾಗಿರುವನು ॥೯೧೧॥ ಉದ್ಧವನ ಈ ಮಾತುಗಳನ್ನು ಕೇಳಿ ವಿದುರನು ಪ್ರೇಮದಿಂದ ಅತಿಶಯ ಭಾವೋದ್ರೇಕಗೊಂಡನು. ಈಗ ಆತನು ಏನು ಹೇಳಿದನೆಂಬುವುದನ್ನು ಲಕ್ಷಕೊಟ್ಟು ಕೇಳಿರಿ ॥೯೧೨॥ ಇದು ಭಾಗವತದ ಮೂರನೆಯ ಸ್ಕಂಧದಲ್ಲಿನ ನಿರೂಪಣೆ ಪ್ರಸಂಗಾನುಸಾರವಾಗಿ ಇಲ್ಲಿ ಹೇಳಬೇಕಾಯಿತು. ವಿದುರನು ಅತ್ಯಂತ ಗಹನಯುಕ್ತ ಮಾಡಿದ ಭಾಷಣ ಈಗ ಅದನ್ನು ಕೇಳಿರಿ ॥೯೧೩॥

ವಿದುರನು ನುಡಿದನು; ನಾನೊಬ್ಬ ಕೇವಲ ನೊಣಕ್ಕಿಂತಲೂ ಕೀಡಾಗಿರುವೆನು. ರಂಕರಲ್ಲಿಯೇ ಅತ್ಯಂತ ರಂಕನಾಗಿರುವೆನು. ಹೀಗಿರುವ ನನ್ನ ಸ್ಮರಣೆ ಶ್ರೀಕೃಷ್ಣನು ಮಾಡಿದನೆಂದರೆ ಇದು ದಾಸನಲ್ಲಿ ಮಾಡಿದ ಅಲೌಕಿಕ ಕೃಪೆಯಾಗಿರುವುದು ॥೯೧೪॥ ಆತನು ವಸುದೇವ -ದೇವಕಿಯರ ಸ್ಮರಣೆ ಮಾಡಲಿಲ್ಲ. ಬಲರಾಮ ಅಥವಾ ಪಾಂಡವರನ್ನೂ ಸಹ ಸ್ಮರಣೆ ಮಾಡಲಿಲ್ಲ. ಆದರೆ ಆ ಕೃಪಾವಂತನಾದ ಶ್ರೀಕೃಷ್ಣನು ದಾಸೀಪುತ್ರನಾದ ನನ್ನನ್ನು ಸ್ಮರಿಸಿದನು ॥೯೧೫॥ ಮರಣ ಸಮಯದಲ್ಲಿ ಮನುಷ್ಯನು ನಾರಾಯಣನ ಸ್ಮರಣೆ ಮಾಡುವನು. ಅದರಂತೆ ಶ್ರೀಕೃಷ್ಣನು ತನ್ನ ಅಂತ್ಯಕಾಲದಲ್ಲಿ ನನ್ನ ಸ್ಮರಣೆ ಮಾಡಿದನು. ಹೀಗೆ ಭಕ್ತರಲ್ಲಿ ಕೃಪೆದೋರುವ ಕೃಪಾಸಾಗರನೇ ಶ್ರೀಕೃಷ್ಣನಾಗಿರುವನು ॥೯೧೬॥ ಅನುಮಾನ ॥ ಶ್ರೀಕೃಷ್ಣನು ದ್ವಾರಕೆಯಲ್ಲಿ ಇರುತ್ತಿದ್ದಾಗಲೇ ಉದ್ಧವನು ಅಲ್ಲಿಂದ ಹೊರಟು ಹೋಗಿದ್ದನು. ಅಂದಮೇಲೆ ಪ್ರಭಾಸ ಕ್ಷೇತ್ರದಲ್ಲಿ ನಡೆದ ಘಟನೆ ಶ್ರೀಕೃಷ್ಣನ ಅವತಾರ ಸಮಾಪ್ತಿ ಆತನ ದೃಷ್ಟಿಗೆ ಬೀಳಲು ಹೇಗೆ ಸಾಧ್ಯ? ಎಂದು ಹೇಳಬಹುದು ॥೯೧೭॥ ಆದರೆ ಹಾಗಿರುವುದಿಲ್ಲ. ಅದಕ್ಕಾಗಿ ಉದ್ಧವ ವಿದುರ ಸಂವಾದದ ಅದರ ಚಿನ್ಹೆಯ ಸವಿಸ್ತಾರ ನಿರೂಪಣೆ ಮಾಡುವೆನು. ಅದನ್ನು ಲಕ್ಷಪೂರ್ವಕವಾಗಿ ಶ್ರವಣ ಮಾಡಬೇಕು ॥೯೧೮॥ ಉದ್ಧವನು ಹಿಡಿದ ಮಾರ್ಗದಲ್ಲಿ ನಡೆಯುತ್ತ ಮುಂದೆ ಸಾಗುತ್ತಿರಲು ಅಕಸ್ಮಾತಾಗಿ ಆತನಿಗೆ ಶ್ರೀಕೃಷ್ಣ ನಿಧನ ಕಾಣದೇ ನಾನು ಹೀಗೇಕೆ ಮುಂದೆ ನಡೆಯುತ್ತಿರುವೆನು ಎಂಬ ಅರಿವು ಮೂಡಿತು ॥೯೧೯॥ ಶ್ರೀಕೃಷ್ಣನ ಚರಿತ್ರೆಯು ಅಮೃತಸಮಾನ ವಾಗಿರುವುದು. ಇದನ್ನು ಬಿಟ್ಟುಕೊಟ್ಟು ತೀರ್ಥಕ್ಷೇತ್ರ ಯಾವ ಹೆಚ್ಚಿನದು? ಹೀಗೆ ವಿಚಾರ ಮಾಡಿ ಮನದಲ್ಲಿನ ಶ್ರದ್ಧೆಯನ್ನು ಅತ್ಯಂತ ದೃಢಗೊಳಿಸಿದನು ॥೯೨೦॥ ಆತನು ಮನದಲ್ಲಿ ಹೀಗೆ ವಿಚಾರ ಮಾಡಿದನು. ಈಗ ನಾನು ಕೃಷ್ಣನ ಬಳಿಯಲ್ಲಿ ಹೋದರೆ ಆತನು ನನಗೆ ಇರಗೊಡಲಾರನು. ಆದ್ದರಿಂದ ಕೃಷ್ಣನಿಗೆ ತಿಳಿಯಲಾರದಂತೆ ತನ್ನ ಮಾರ್ಗದಿಂದ ಗುಪ್ತರೂಪದಿಂದ ಪ್ರಭಾಸಕ್ಕೆ ಬಂದನು ॥೯೨೧॥

ತೇಥೇಹೀ ರಾಹೋನಿಯಾ ಗುಪ್ತ । ಪಾಹೋ ಲಾಗಲಾ ಶ್ರೀಕೃಷ್ಣಚರಿತ । ತಂವ ಯಾದವಕುಳಾಚಾ ಘಾತ । ದೇಖಿಲಾ ಸಮಸ್ತ ಉದ್ಧವೇ ॥೯೨೨॥ ಕುಳ ನಿರ್ದಳೂನಿ ಏಕಲಾ । ಕೃಷ್ಣ ಅಶ್ವತ್ಥಾತಳೀ ಬೈಸಲಾ । ತೇಥ ಜರಾವ್ಯಾಧೇ ಬಾಣ ವಿಂಧಿಲಾ । ಚರಣೀ ಲಾಗಲಾ ಮೃಗಶಂಕಾ ॥೯೨೩॥ ಚರಣೀ ಲಾಗತಾಂಚಿ ಘಾವೋ । ಥೋರ ಸುಖೇ ಸುಖಾವಲಾ ದೇವೋ । ಕೃತಕಾರ್ಯ ಜಾಹಲೇ ನಿಃಸಂದೇಹೋ । ನಿಜಧಾಮಾ ಪಹಾ ಹೋ ಜಾವಯಾ ॥೯೨೪॥ ಬಾಣ ಲಾಗತಾ ಭಲತೇಯಾಂಸೀ । ಘಾಯೇ ಹೋತೀ ಕಾಸಾವಿಶೀ । ತೇ ದಶಾ ನಾಹೀ ಶ್ರೀಕೃಷ್ಣಾಸೀ । ದೇಹತ್ವ ತ್ಯಾಸೀ ಅತಿಮಿಥ್ಯಾ ॥೯೨೫॥ ಜೇವೀ ಘಾಯ ಲಾಗತಾ ಛಾಯೇಸೀ । ಪುರುಷ ನವ್ಹೇ ಕಾಸಾವಿಶೀ । ತೇವೀ ವ್ಯಾಧೇ ವಿಂಧಿತಾ ಬಾಣೇಸೀ । ಗ್ಲಾನೀ ಕೃಷ್ಣಾಸೀ ಅಸೇನಾ ॥೯೨೬॥ ತೇ ಸಂಧೀ ಮೈತ್ರೇಯ ಆಲಾ । ತ್ಯಾಸೀ ಜ್ಞಾನೋಪದೇಶ ಕೇಲಾ । ತೇ ಕಾಳೀ ವಿದುರ ಆಠವಲಾ । ಕೃಪಾ ಕಳವಳಲಾ ಶ್ರೀಕೃಷ್ಣ ॥೯೨೭॥ ಆಜೀ ಯೇಥೇ ವಿದುರ ಅಸತಾ । ತರೀ ಮೀ ಬ್ರಹ್ಮಜ್ಞಾನ ಉಪದೇಶಿತೋ ಸರ್ವಥಾ । ಮೈತ್ರೇಯಾ ತುಜ ಸಾಂಗತೋ ಆತಾ । ತ್ಯಾಸೀ ತೂ ತತ್ತ್ವತಾ ಉಪದೇಶೀ ॥೯೨೮॥ ಪಾವೋನಿ ಕೃಷ್ಣಗುಹ್ಯಜ್ಞಾನ । ಮೈತ್ರೇಯಾಸೀ ಪರಮ ಸಮಾಧಾನ । ಮ್ಹಣೇ ಕಲಿಯುಗ ಧನ್ಯ ಧನ್ಯ । ಬ್ರಹ್ಮವಾದೀ ಜನ ಬಹುಸಾಲ ಹೋತೀ ॥೯೨೯॥

ಸರ್ವೇ ಬ್ರಹ್ಮ ವದಿಷ್ಯಂತಿ ಸಂಪ್ರಾಪ್ತೇ ಚ ಕಲೌ ಯುಗೇ ।
ನೈವ ನಿಷ್ಠಂತಿ ಮೈತ್ರೇಯ ಶಿಶ್ನೋದರಪರಾಯಣಾಃ ॥೨॥

ಅರ್ಥ :- ಕಲಿಯುಗದಲ್ಲಿ ಸರ್ವ ಜನರು ಬ್ರಹ್ಮಜ್ಞಾನ ಹೇಳುತ್ತಿರುವರು. ಆದರೆ ಹೇ ಮೈತ್ರೇಯನೇ, ಶಿಶ್ನೋದರಪರಾಯಣರಾದ ಇವರು ಬ್ರಹ್ಮದ ಅನುಷ್ಠಾನ ಮಾಡಲಾರರು ॥೨॥

ವಾದಕತ್ವೇ ಕಲಿಯುಗಾಪ್ರತೀ । ಬಹುಸಾಲ ಬ್ರಹ್ಮವಾದೀ ಹೋತೀ । ಪರೀ ನ ರಾಹತೀ ಬ್ರಹ್ಮಸ್ಥಿತೀ । ಜಾಣ ನಿಶ್ಚಿತೀ ಮೈತ್ರೇಯಾ ॥೯೩೦॥ ವದೂನಿಯಾ ಬ್ರಹ್ಮಜ್ಞಾನ । ಹೋತೀ ಶಿಶ್ನೋದರಪರಾಯಣ । ಜಿವ್ಹಾ ಶಿಶ್ನ ಜೋ ಆವರೀ ಸಂಪೂರ್ಣ । ತ್ಯಾಸೀಚ ಬ್ರಹ್ಮಜ್ಞಾನ ಕಲಿಯುಗೀ ॥೯೩೧॥ ಐಕೋನಿ ಮೈತ್ರೇಯಸಂವಾದಾಸೀ । ಉದ್ಧವ ಆಲಾ ಶ್ರೀಕೃಷ್ಣಾಪಾಶೀ । ಪ್ರದಕ್ಷಿಣಾ ಕರೂನಿ ತ್ಯಾಸೀ । ಮಗ ಪಾಯಾಂಸೀ ಲಾಗಲಾ ॥೯೩೨॥ ಐಕೂನ ಮೈತ್ರೇಯಾಂಚೇ ಜ್ಞಾನ । ದೇಖೋನಿ ಕೃಷ್ಣಾಚೇ ನಿರ್ಯಾಣ । ಉದ್ಧವ ನಿಘಾಲಾ ಆಪಣ । ತೇ ಐಕ ಲಕ್ಷಣ ಪರೀಕ್ಷಿತೀ ॥೯೩೩॥

ಅಲ್ಲಿ ತಾನು ಗುಪ್ತರೀತಿಯಲ್ಲಿದ್ದುಕೊಂಡು ಶ್ರೀಕೃಷ್ಣ ಚರಿತ್ರೆ ಎಲ್ಲವನ್ನೂ ನೋಡುತ್ತಿದ್ದನು. ಆತನು ಯಾದವ ಕುಲದ ಸರ್ವನಾಶವನ್ನು ಪ್ರತ್ಯಕ್ಷ ಕಂಡನು ॥೯೨೨॥ ಸಂಪೂರ್ಣ ಕುಲದ ನಾಶ ಮಾಡಿ ತಾನೊಬ್ಬನೇ ಶ್ರೀಕೃಷ್ಣನು ಅಶ್ವತ್ಥ ವೃಕ್ಷದ ಅಡಿಯಲ್ಲಿ ಕುಳಿತುಕೊಂಡಿದ್ದನು. ಅಲ್ಲಿ ಜರಾ-ವ್ಯಾಧನು ಯಾವುದೋ ಪ್ರಾಣಿ ಎಂದು ಭಾವಿಸಿ ದೂರದಿಂದಲೇ ಬಾಣ ಬಿಟ್ಟನು ॥೯೨೩॥ ಚರಣಕ್ಕೆ ಬಾಣವು ಬಡೆಯುತ್ತಲೇ ದೇವನಿಗೆ ಪರಮ ಸಂತೋಷವಾಯಿತು. ನಿಜಧಾಮಕ್ಕೆ ಹೋಗಲು ಅನಾಯಾಸವಾಗಿ ಕಾರ್ಯ ಸಾಧಿಸಿತು ಎಂದು ನುಡಿದನು ॥೯೨೪॥ ಇದೇ ಬಾಣವು ಬೇರೆಯವರಿಗೆ ನಾಟಿದ್ದರೆ ಅವರ ಜೀವವು ತಳಮಳ ಪಡುತ್ತಿತ್ತು. ಆದರೆ ಶ್ರೀಕೃಷ್ಣನಿಗೆ ಹಾಗೆ ಯಾವುದೂ ಆಗಲಿಲ್ಲ. ಆತನಿಗೆ ದೇಹತ್ವವು ಅತಿ ಮಿಥ್ಯೆಯಾಗಿತ್ತು ॥೯೨೫॥ ತನ್ನ ನೆರಳಿನ ಮೇಲೆ ಹೊಡೆತ ಬೀಳಲು ಮನುಷ್ಯನು ಚಡಪಡಿಸುವುದಿಲ್ಲ. ಅದರಂತೆ ಬೇಡನ ಬಾಣದಿಂದ ಗಾಯವಾದರೂ ಅದರಿಂದ ಶ್ರೀಕೃಷ್ಣನಿಗೆ ಯಾವ ಗ್ಲಾನಿಯಾಗಲಿಲ್ಲ ॥೯೨೬॥ ಅದೇ ಸಂಧಿಯಲ್ಲಿ ಅಲ್ಲಿ ಮೈತ್ರೇಯ ಬಂದನು. ಆತನಿಗೆ ಶ್ರೀಕೃಷ್ಣನು ಜ್ಞಾನೋಪದೇಶ ಮಾಡಿದನು. ಅದೇ ಸಮಯದಲ್ಲಿ ಆತನಿಗೆ ವಿದುರನ ಸ್ಮರಣೆಯಾಗಿ ಕೃಪೆಯಿಂದ ತಳಮಳಿಸಿದನು ॥೯೨೭॥ ಶ್ರೀಕೃಷ್ಣನು ಹೀಗೆ ಹೇಳಿದನು ; ಇಂದು ಇಲ್ಲಿ ವಿದುರನು ಇದ್ದಿದ್ದರೆ ಆತನಿಗೂ ಸಹ ನಾನು ಬ್ರಹ್ಮಜ್ಞಾನದ ಉಪದೇಶ ಮಾಡುತ್ತಿದ್ದೆನು. ಅದಕ್ಕಾಗಿ ಹೇ ಮೈತ್ರೇಯನೇ, ನಾನು ನಿನಗೆ ಈಗ ತಿಳಿಸುವುದೇನಂದರೆ ನೀನೇ ಆತನಿಗೆ ತತ್ತ್ವತಃ ಉಪದೇಶ ಮಾಡು ॥೯೨೮॥ ಈ ಪ್ರಕಾರವಾಗಿ ಶ್ರೀಕೃಷ್ಣನ ಗುಹ್ಯಜ್ಞಾನ ಪ್ರಾಪ್ತವಾಗಿ ಮೈತ್ರೇಯನಿಗೆ ಪರಮ ಸಂತೋಷವಾಯಿತು. ಕಾರಣ ಧನ್ಯ ಧನ್ಯ ಕಲಿಯುಗ, ಇದರಲ್ಲಿ ಬಹಳ ಜನರು ಬ್ರಹ್ಮವೇತ್ತರಾಗುವರು ಎಂದು ತಿಳಿದನು ॥೯೨೯॥

ಆಗ ಶ್ರೀಕೃಷ್ಣನು ಹೀಗೆ ಹೇಳಿದನು ; ಹೇ ಮೈತ್ರೇಯಾ, ಕಲಿಯುಗದಲ್ಲಿ ವಾದಮಾಡುವ ಬ್ರಹ್ಮವಾದಿಗಳು ಅನೇಕರಾಗುವರು. ಆದರೆ ಅವರ ಬ್ರಹ್ಮಸ್ಥಿತಿಯು ಸ್ಥಿರವಾಗಿ ಉಳಿಯಲಾರದು ॥೯೩೦॥ ಬ್ರಹ್ಮಜ್ಞಾನ ಜನರಿಗೆ ಹೇಳುತ್ತ ತಾವು ಮಾತ್ರ ಶಿಶ್ನೋದರಪರಾಯಣರಾಗುವರು. ಅವರಲ್ಲಿ ನಾಲಿಗೆ ಹಾಗೂ ಸ್ತ್ರೀಕಾಮಾಸಕ್ತಿ ಯಾರು ಗೆಲ್ಲುವರೋ, ಅವರಿಗೆ ಮಾತ್ರ ಈ ಕಲಿಯುಗದಲ್ಲಿ ಬ್ರಹ್ಮಜ್ಞಾನ ಪ್ರಾಪ್ತವಾಗುವುದು ॥೯೩೧॥ ಹೀಗೆ ಮೈತ್ರೇಯ ಹಾಗೂ ಶ್ರೀಕೃಷ್ಣನ ಸಂವಾದ ಕೇಳಿ ಉದ್ಧವನು ಶ್ರೀಕೃಷ್ಣನ ಹತ್ತಿರ ಬಂದನು. ಆತನಿಗೆ ಪ್ರದಕ್ಷಿಣೆ ಹಾಕಿ ಚರಣಕಮಲಗಳಿಗೆ ವಂದನೆ ಮಾಡಿದನು ॥೯೩೨॥ ಹೇ ಪರೀಕ್ಷಿತೀ ರಾಜನೇ, ಈ ಪ್ರಕಾರವಾಗಿ ಉದ್ಧವನು ಮೈತ್ರೇಯನ ಜ್ಞಾನ ಕೇಳಿ ಹಾಗೂ ಶ್ರೀಕೃಷ್ಣನ ನಿರ್ಯಾಣ ಕಂಡು ಅಲ್ಲಿಂದ ಹೊರಟನು. ಇದರ ವೃತ್ತಾಂತವನ್ನು ಕುರಿತು ಈಗ ಹೇಳುವೆನು, ಅದನ್ನು ಕೇಳು ॥೯೩೩॥

ತತಸ್ತಮಂತರ್ಹೃದಿ ಸನ್ನಿವೇಶ್ಯ ಗತೋ ಮಹಾಭಾಗವತೋ ವಿಶಾಲಾಮ್ ।
ಯಥೋಪದಿಷ್ಟಾಂ ಜಗದೇಕಬಂಧುನಾ ತಪಃ ಸಮಾಸ್ಥಾಯ ಹರೇರಗಾದ್‌ಗತಿಮ್ ॥೪೭॥

ಅರ್ಥ:- ಭಗವಂತನ ಪರಮ ಪ್ರೇಮಿ ಭಕ್ತ ಉದ್ಧವನು ಹೃದಯದಲ್ಲಿ ಶ್ರೀಕೃಷ್ಣನ ದಿವ್ಯ ಮೂರ್ತಿಯನ್ನು ಧರಿಸಿ ಬದರಿಕಾಶ್ರಮಕ್ಕೆ ಬಂದು ಮುಟ್ಟಿದನು. ಅಲ್ಲಿ ಆತನು ತಪೋಮಯ ಜೀವನ ಸಾಗಿಸುತ್ತ ಜಗತ್ತಿನಲ್ಲಿಯೇ ಏಕೈಕ ಹಿತೈಷೀ ಭಗವಾನ ಶ್ರೀಕೃಷ್ಣನ ಉಪದೇಶದಂತೆ ಆತನ ಸ್ವರೂಪಭೂತ ಪರಮಗತಿ ಪ್ರಾಪ್ತ ಮಾಡಿಕೊಂಡನು.

ಜಗಾಚೇ ವಿಶ್ರಾಮಧಾಮ । ಜೋ ಪುರುಷಾಂಮಾಜೀ ಪುರುಷೋತ್ತಮ । ತೋ ಹೃದಯೀ ಧರೋನಿ ಆತ್ಮಾರಾಮ । ಉದ್ಧವ ಸಪ್ರೇಮ ನಿಘಾಲಾ ॥೯೩೪॥ ಕೃಷ್ಣಾಚೀ ಪೂರ್ಣಸ್ಥಿತೀ । ಹೃದಯೀ ಧರೋನಿ ಸುನಿಶ್ಚಿತೀ । ಉದ್ಧವ ವಿಶಾಲತೀರ್ಥಾಪ್ರತೀ । ಸ್ವಾನಂದಸ್ಥಿತೀ ನಿಘಾಲಾ ॥೯೩೫॥ ಉದ್ಧವ ಸ್ವಾನಂದಸ್ಥಿತಿ ಪೂರ್ಣ । ಜೇಥೇ ತೇಥೇ ಕರೀ ಗಮನ । ತೇ ತೇ ಲೋಕ ಹೋತೀ ಪಾವನ । ಭಕ್ತಿಜ್ಞಾನವೈರಾಗ್ಯೇ ॥೯೩೬॥ ಜೈಸಜೈಸೀ ವಿವೇಕವಿರಕ್ತೀ । ತೈಸತೈಸೀ ಬೋಧಕಶಕ್ತೀ । ಉಪದೇಶಿತ ಜ್ಞಾನಭಕ್ತೀ । ಚಾಲಿಲಾ ತ್ರಿಜಗತೀ ಉದ್ಧರಿತ ॥೯೩೭॥ ಜ್ಯಾಂಸೀ ಉದ್ಧವಾಸೀ ಜಾಹಲೀ ಭೇಟೀ । ತ್ಯಾಂಸೀ ಹರಿಭಜನೀ ಪಡೇ ಮಿಠೀ । ಭವಭಯ ಪಡೋ ನೇದಿ ದೃಷ್ಟೀ । ಬೋಧಕ ಜಗಜೇಠೀ ಉದ್ಧವ ॥೯೩೮॥ ಜೇ ಜೇ ಭಗವದ್ಭಕ್ತಿ ಕರಿತ । ತೇ ತೇ ''ಭಾಗವತ'' ಮ್ಹಣಿಜೇತ । ಮುಕ್ತೀಹೀವರೀ ಭಜನಯುಕ್ತ । ''ಮಹಾಭಾಗವತ'' ಉದ್ಧವ ॥೯೩೯॥ ಉದ್ಧವೇ ಆದರಿಲೀ ಜೇ ಭಕ್ತೀ । ತಿಚೀ ಕಿಂಕರ ನಿತ್ಯಮುಕ್ತೀ । ಯಾಲಾಗೀ ''ಮಹಾಭಾಗವತ'' ಸ್ಥಿತೀ । ಬೋಲಿಜೇ ನಿಶ್ಚಿತೀ ಉದ್ಧವಾ ॥೯೪೦॥ ನಿಜಶಾಂತತಾ ಅತಿನಿರ್ಮಳ । ಆತ್ಮಾನುಭವೇ ಅತಿಪ್ರಾಂಜಳ । ಮೋಕ್ಷಾಹೀವರೀ ಭಜನಶೀಳ । ಭಕ್ತ ವಿಶಾಳ ಉದ್ಧವ ॥೯೪೧॥ ಐಶೀ ಉದ್ಧವಾಚೀ ವಿಶಾಳತಾ । ತೋಹೀ ಪಾವಲಾ ವಿಶಾಲತೀರ್ಥಾ । ''ವಿಶಾಲ'' ಮ್ಹಣಾವಯಾಚೀ ಕಥಾ । ಐಕ ಆತಾ ಸಾಂಗೇನ ॥೯೪೨॥ ಜೇಥ ಶ್ರದ್ಧಾಮಾತ್ರೇ ಚಿತ್ತಶುದ್ಧೀ । ಸ್ಮರಣಮಾತ್ರೇ ನಿರ್ವಿಕಲ್ಪ ಬುದ್ಧೀ । ''ನಾರಾಯಣ'' ನಾಮೇ ಮೋಕ್ಷಸಿದ್ಧೀ । ''ವಿಶಾಲ'' ಯಾ ವಿಧೀ ಬದರಿಕಾಶ್ರಮ ॥೯೪೩॥ ಜೇಥ ಜನಹಿತಾರ್ಥ ನಾರಾಯಣ । ಅದ್ಯಾಪಿ ಕರಿತೋ ಅನುಷ್ಠಾನ । ಮೋಕ್ಷಮಾರ್ಗೀ ಕೃಪಾ ಪೂರ್ಣ । ಯಾಪರೀ ವಿಶಾಳಪಣ ಬದರಿಕಾಶ್ರಮಾತೇ ॥೯೪೪॥ ಜೇಥ ಅಲ್ಪ ತಪೇ ಫಳ ಪ್ರಬಳ । ಅಲ್ಪಧ್ಯಾನೇ ಆಕಳೇ ಸಕಳ । ಅಲ್ಪ ವಿರಕ್ತೀ ಮೋಕ್ಷ ಕೇವಳ । ಐಸಾ ಫಳೋನಿ ವಿಶಾಳ ಬದರಿಕಾಶ್ರಮ ॥೯೪೫॥

ಯಾವ ಜಗತ್ತಿನ ವಿಶ್ರಾಂತಿಸ್ಥಾನ, ಯಾವ ಪುರುಷರಲ್ಲಿ ಪುರುಷೋತ್ತಮ ಅಂತಹ ಆತ್ಮಾರಾಮನನ್ನು ಪ್ರೇಮದಿಂದ ಹೃದಯದಲ್ಲಿ ಧರಿಸಿ ಉದ್ಧವನು ಮುಂದೆ ಸಾಗಿದನು ॥೯೩೪॥ ಶ್ರೀಕೃಷ್ಣನ ಪರಿಪೂರ್ಣ ಆತ್ಮಸ್ವರೂಪವನ್ನು ಹೃದಯದಲ್ಲಿ ಧರಿಸಿಕೊಂಡು ಸ್ವಾನಂದ ಸ್ಥಿತಿಯಲ್ಲಿ ವಿಶಾಲತೀರ್ಥ ಬದರಿಕಾಶ್ರಮಕ್ಕೆ ಹೊರಟನು ॥೯೩೫॥ ಉದ್ಧವನು ಸ್ವಾನಂದಸ್ಥಿತಿಯನ್ನು ಪರಿಪೂರ್ಣವಾಗಿ ಪ್ರಾಪ್ತಮಾಡಿಕೊಂಡಿದ್ದನು. ಆದ್ದರಿಂದ ಆತನು ಯಾವ ಯಾವ ಸ್ಥಳಕ್ಕೆ ಹೋಗುತ್ತಿದ್ದನೋ, ಅಲ್ಲಿಯ ಜನರು ಭಕ್ತಿ, ಜ್ಞಾನ, ವೈರಾಗ್ಯದಿಂದ ಪಾವನರಾಗುತ್ತಿದ್ದರು ॥೯೩೬॥ ಉದ್ಧವನ ಅಂಗದಲ್ಲಿ ವಿವೇಕಯುಕ್ತ ವೈರಾಗ್ಯವು ಯಾವ ರೀತಿಯಲ್ಲಿ ಬೆಳೆಯುತ್ತ ಸಾಗುತ್ತಿತ್ತೋ, ಅದರಂತೆ ಜ್ಞಾನಶಕ್ತಿಯ ಮುಖಾಂತರವಾಗಿ ಭಕ್ತಿಯ ಉಪದೇಶ ಮಾಡುತ್ತ ಮೂರು ಲೋಕಗಳನ್ನೇ ಉದ್ಧರಿಸುತ್ತ ನಡೆದನು ॥೯೩೭॥ ಯಾರೇಯಾಗಲಿ ಉದ್ಧವನ ಭೇಟಿಯಾದರೆ ಸಾಕು, ಆತನಿಗೆ ಹರಿಭಜನೆಯಲ್ಲಿ ಪ್ರೇಮ ಉಂಟಾಗಿ ಭವಭಯ ತೋರುತ್ತಿದ್ದಿಲ್ಲ. ಈ ಪ್ರಕಾರವಾಗಿ ಉದ್ಧವನು ಜಗತ್ತಿನಲ್ಲಿಯೇ ಒಬ್ಬ ಶ್ರೇಷ್ಠ ಉಪದೇಶಕನಾದನು ॥೯೩೮॥ ಯಾರು ಯಾರು ಭಗವದ್ಭಕ್ತಿ ಮಾಡುವರೋ, ಅವರಿಗೆ ಭಾಗವತರು ಎಂದು ಕರೆಯುವರು. ಆದರೆ ಉದ್ಧವನು ಮುಕ್ತಿ ಪ್ರಾಪ್ತಿ ಮಾಡಿಕೊಂಡಿದ್ದರೂ ಸಹ ಭಜನೆ ಮಾಡುತ್ತಿದ್ದನು. ಆದ್ದರಿಂದ ಆತನು ಮಹಾಭಾಗವತನಾಗಿರುವನು ॥೯೩೯॥ ಉದ್ಧವನು ಜ್ಞಾನೋತ್ತರ ಭಕ್ತಿ ಸ್ವೀಕರಿಸಿದ್ದರಿಂದ ನಿತ್ಯಮುಕ್ತಿಯು ಆತನ ದಾಸಿಯಾಗಿದ್ದಳು. ಆದ್ದರಿಂದ ಉದ್ಧವನ ಸ್ಥಿತಿಗೆ ಮಹಾಭಾಗವತ ಸ್ಥಿತಿ ಎಂದು ಹೇಳುವರು ॥೯೪೦॥ ಅತ್ಯಂತ ನಿರ್ಮಲವಾದ ಶಾಂತಿ, ಅತ್ಯಂತ ಪ್ರಾಂಜಲ ಆತ್ಮಾನುಭವ ಮತ್ತು ಮೋಕ್ಷಕ್ಕೂ ಮಿಗಿಲಾದ ಭಜನಶೀಲತೆ, ಹೀಗಿರುವ ಉದ್ಧವನು ವಿಶಾಲನು. ಅಂದರೆ ಶ್ರೇಷ್ಠನಾದ ಭಕ್ತನಾಗಿದ್ದನು ॥೯೪೧॥ ಇಂತಹ ಯೋಗ್ಯತೆ ಇರುವ ಉದ್ಧವನು ವಿಶಾಲ ತೀರ್ಥಕ್ಕೆ ಬಂದು ಮುಟ್ಟಿದನು. ಬದರಿಕಾಶ್ರಮಕ್ಕೆ ವಿಶಾಲತೀರ್ಥವೆಂದು ಏಕೆ ಕರೆಯುವರು ಎಂಬುವ ಕಥೆ ಈಗ ಹೇಳುವೆನು, ಅದನ್ನು ಕೇಳು ॥೯೪೨॥ ಅಲ್ಲಿ ಕೇವಲ ಶ್ರದ್ಧೆ ಮಾತ್ರದಿಂದ ಚಿತ್ತದ ಶುದ್ಧಿಯಾಗುವುದು, ಅಲ್ಲಿ ಕೇವಲ ಶ್ರವಣ ಮಾತ್ರದಿಂದ ಬುದ್ಧಿಯು ನಿರ್ವಿಕಲ್ಪವಾಗುವುದು, ಹಾಗೆಯೇ ಪ್ರೇಮದಿಂದ ನಾರಾಯಣ ನಾಮದ ಉಚ್ಚಾರ ಮಾಡುತ್ತಲೇ ಮೋಕ್ಷಸಿದ್ಧಿ ಪ್ರಾಪ್ತವಾಗುವುದು. ಆದ್ದರಿಂದ ಆ ಬದರಿಕಾಶ್ರಮಕ್ಕೆ ವಿಶಾಲವೆನ್ನುವರು ॥೯೪೩॥ ಅಲ್ಲಿ ಶ್ರೀನಾರಾಯಣನು ಲೋಕಕಲ್ಯಾಣಾರ್ಥವಾಗಿ ಈಗಲೂ ಕೂಡ ಅನುಷ್ಠಾನ ಮಾಡುತ್ತಿರುವನು. ಅಲ್ಲಿ ಮೋಕ್ಷಮಾರ್ಗದ ಕೃಪೆಯು ಪೂರ್ಣ ಪ್ರಾಪ್ತಿಯಾಗುವುದು. ಆದ್ದರಿಂದ ಬದರಿಕಾಶ್ರಮಕ್ಕೆ ವಿಶಾಲತ್ವ ಪ್ರಾಪ್ತಿಯಾಗಿರುವುದು ॥೯೪೪॥ ಅಲ್ಲಿ ಅಲ್ಪಪ್ರಮಾಣದಲ್ಲಿ ತಪವನ್ನಾಚರಿಸಿದರೆ ಮಹತ್ತರವಾದ ಫಲಪ್ರಾಪ್ತಿಯಾಗುವುದು. ಅಲ್ಪಧ್ಯಾನದಿಂದಲೇ ಪೂರ್ಣ ಜ್ಞಾನ ಪ್ರಾಪ್ತಿಯಾಗುವುದು. ಅಲ್ಪವಿರಕ್ತಿಯಿಂದಲೇ ಮೋಕ್ಷ ಪ್ರಾಪ್ತಿಯಾಗುವುದು. ಹೀಗೆ ಬದರಿಕಾಶ್ರಮದ ವಿಶಾಲ ಫಲವಾಗಿರುವುದು ॥೯೪೫॥

ಜೋ ಅಂತರ್ಯಾಮೀ ಗೋವಿಂದು । ಜೋ ಜಗಾಚಾ ಸುಹೃದ ಬಂಧು । ಜೋ ಆತ್ಮಾ ರಾಮ ಪ್ರಸಿದ್ಧು । ಜ್ಯಾಚೇನಿ ನಿಜಬೋಧು ಉದ್ಧವಾ ।।೯೪೬।। ಜೈಸಾ ಕೃಷ್ಣೇ ಕೇಲಾ ಉಪದೇಶು । ತೈಸಾ ಬದರಿಕಾಶ್ರಮೀ ರಹಿವಾಸು । ಉದ್ಧವೇ ಕೇಲಾ ನಿಜವಾಸು । ತೋಚಿ ಜನಾಂಸೀ ವಿಶ್ವಾಸು ಪರಮಾರ್ಥನಿಷ್ಠೇ ।।೯೪೭।। ಜೈಶೀ ಉದ್ಧವಾಚೀ ಸ್ಥಿತೀಗತೀ । ಜೈಶೀ ಉದ್ಧವಾಚೀ ಜ್ಞಾನಭಕ್ತೀ । ಜೈಶೀ ಉದ್ಧವಾಚೀ ವಿರಕ್ತೀ । ತೋಚಿ ಜನಾಂಪ್ರತೀ ಉಪದೇಶ ।।೯೪೮।। ಜೇಥೇ ಗುರೂಸೀ ವಿಷಯಾಸಕ್ತೀ । ತೇಥೇ ಶಿಷ್ಯಾಸೀ ಕೈಚೀ ವಿರಕ್ತೀ । ಜೇಥ ಗುರೂಸೀ ಅಧರ್ಮಪ್ರವೃತ್ತೀ । ತೇಥ ಶಿಷ್ಯಾಸೀ ನಿವೃತ್ತೀ ಕದಾ ನ ಘಡೇ ।।೯೪೯।। ಯಾಲಾಗೀ ಉದ್ಧವಾಚೇ ಆಚರಿತ । ತೇಚಿ ಆಚರತೀ ಜನ ಸಮಸ್ತ । ಏವಂ ಪರೋಪಕಾರಾರ್ಥ । ಉದ್ಧವ ವಿರಕ್ತ ಬದರಿಕಾಶ್ರಮೀ ।।೯೫೦।। ಜೈಸೇ ಶಿಕವೂನಿ ಗೇಲಾ ಶ್ರೀಕೃಷ್ಣನಾಥ । ತೈಸೇಚಿ ಉದ್ಧವ ಆಚರತ । ತ್ಯಾಚೇನಿ ಧರ್ಮೇ ಜನ ಸಮಸ್ತ । ಜಾಹಲೇ ವಿರಕ್ತ ಪರಮಾರ್ಥೀ ।।೯೫೧।। ಪರಬ್ರಹ್ಮಾಚೀ ನಿಜಪ್ರಾಪ್ತೀ । ದೃಢ ಕರೂನಿ ಗೇಲಾ ಶ್ರೀಪತೀ । ತೇಚಿ ಉದ್ಧವಾಸೀ ಬ್ರಹ್ಮಸ್ಥಿತೀ । ಅಹೋರಾತೀ ಅಖಂಡ ।।೯೫೨।। ಬೈಸತಾ ಘಾಲೂನಿ ಆಸನ । ಕಾ ಕರಿತಾ ಗಮನಾಗಮನ । ಉದ್ಧವಾಚೇ ಬ್ರಹ್ಮಪಣ । ಸರ್ವಥಾ ಜಾಣ ಮೋಡೇನಾ ।।೯೫೩।। ವಿರಕ್ತೀ ಆಣಿ ಭೋಗಾಸಕ್ತೀ । ದೋನೀ ದೇಹಾವರೀ ದಿಸತೀ । ಯಾ ದೋಂಹೀಹೂನಿ ಪರತೀ । ಪರಬ್ರಹ್ಮಸ್ಥಿತೀ ಉದ್ಧವೀ ।।೯೫೪।। ವಿರಕ್ತೀ ಮಾಜೀ ನವ್ಹೇ ವಿರಕ್ತ । ಭೋಗಿ ನವ್ಹೇ ಭೋಗಾಸಕ್ತ । ಯಾ ದೋಂಹೀಹೂನ ಅತೀತ । ಬ್ರಹ್ಮ ಸದೋದಿತ ಉದ್ಧವ ।।೯೫೫।। ತೇಥ ಪ್ರಾರಬ್ಧಕ್ಷಯೇ ಜಾಣ । ತ್ಯಾ ದೇಹಾಸೀ ಯೇತಾ ಮರಣ । ಉದ್ಧವ ಬ್ರಹ್ಮೀ ಬ್ರಹ್ಮಪೂರ್ಣ । ಜನ್ಮ ಮರಣ ತೋ ನೇಣೇ ।।೯೫೬।। ದೇಹೀಂಚಾ ದೇಹಾತ್ಮಭಾವೋ । ನಿರ್ದಳೂನಿ ನಿಃಸಂದೇಹೋ । ಉದ್ಧವಾಸೀ ಬ್ರಹ್ಮಾನುಭವೋ । ಶ್ರೀಕೃಷ್ಣೇ ಪಹಾ ಹೋ ದೃಢ ಕೇಲಾ ।।೯೫೭।। ಐಶಿಯಾ ಉದ್ಧವಾಸೀ ದೇಹಾಂತೀ । ''ವಿದೇಹಕೈವಲ್ಯಾ'' ಚೀ ಪ್ರಾಪ್ತೀ । ಮ್ಹಣಣೇ ಹೇ ಪರೀಕ್ಷಿತೀ । ದೃಢ ಭ್ರಾಂತೀ ವಕ್ತ್ಯಾಚೀ ।।೯೫೮।। ಘಡಿತಾ ಮೋಡಿತಾ ಕಾಂಕಣ । ಘಡಮೋಡೀ ನೇಣೇ ಸುವರ್ಣ । ತೇವೀ ದೇಹಾಸೀಚ ಜನ್ಮ ಮರಣ । ಉದ್ಧವ ಪರಿಪೂರ್ಣ ಪರಬ್ರಹ್ಮ ।।೯೫೯।। ಉದ್ಧವಾಸೀ ದೇಹೀ ವರ್ತತಾ । ತೋ ನಿತ್ಯ ಮುಕ್ತ ವಿದೇಹತಾ । ತ್ಯಾಸೀ ದೇಹಾಂತೀ ವಿದೇಹಕೈವಲ್ಯತಾ । ತೇ ಸಮೂಳ ವಾರ್ತಾ ಲೌಕಿಕ ।।೯೬೦।।

ಯಾರು ಅಂತರ್ಯಾಮಿ ಗೋವಿಂದನೋ, ಯಾರು ಜಗತ್ತಿನ ಸುಹೃದ್ ಹಾಗೂ ಬಂಧುವಾಗಿರುವನೋ, ಯಾರು ಪ್ರಸಿದ್ಧ ಆತ್ಮಾರಾಮನೋ, ಅಂತಹ ಶ್ರೀಹರಿಯಿಂದ ಉದ್ಧವನಿಗೆ ಆತ್ಮಜ್ಞಾನ ಪ್ರಾಪ್ತವಾಗಿರುವುದು ।।೯೪೬।। ಆ ಯಾವ ಶ್ರೀಕೃಷ್ಣನು ಯಾವ ರೀತಿಯಲ್ಲಿ ಉಪದೇಶ ಮಾಡಿದ್ದನೋ, ಅದರಂತೆಯೇ ಉದ್ಧವನು ತನ್ನ ಆಚರಣೆ ಬದರಿಕಾಶ್ರಮದಲ್ಲಿ ಇಟ್ಟುಕೊಂಡಿದ್ದನು. ಆತನ ಪರಮಾರ್ಥ ನಿಷ್ಠೆ ಕಂಡು ಜನರಲ್ಲಿ ವಿಶ್ವಾಸವು ಉದ್ಧವನಲ್ಲಿ ನಟ್ಟಿಕೊಂಡಿತು ।।೯೪೭।। ಉದ್ಧವನ ಸ್ಥಿತಿಗತಿಯಂತೆಯೇ, ಆತನ ಜ್ಞಾನಭಕ್ತಿಯಂತೆಯೇ, ಆತನ ವಿರಕ್ತಿಯಂತೆಯೇ ಸರ್ವ ಜನರಿಗೆ ಹಿತೋಪದೇಶವಾಗುತ್ತಿತ್ತು ।।೯೪೮।। ಒಂದುವೇಳೆ ಗುರುವೇ ವಿಷಯಾಸಕ್ತನಾಗಿದ್ದರೆ ಶಿಷ್ಯನಿಗೆ ವಿರಕ್ತಿಯು ಎಲ್ಲಿಂದ ಬರಬೇಕು? ಗುರುಗಳ ಪ್ರವೃತ್ತಿಯು ಅಧರ್ಮದತ್ತ ಇದ್ದರೆ ಅಲ್ಲಿ ಶಿಷ್ಯನಿಗೆ ನಿವೃತ್ತಿಯು ಎಂದಿಗೂ ದೊರಕಲು ಸಾಧ್ಯವೇ ಇಲ್ಲ ।।೯೪೯।। ಆದ್ದರಿಂದ ಉದ್ಧವನು ಯಾವ ಪ್ರಕಾರವಾಗಿ ಧರ್ಮಯುಕ್ತ ಆಚರಣೆ ಮಾಡುತ್ತಿದ್ದನೋ, ಅದರಂತೆಯೇ ಸರ್ವ ಜನರು ಆಚರಿಸಲಾರಂಭಿಸಿದರು. ಈ ರೀತಿಯಿಂದ ಉದ್ಧವನು ಪರೋಪಕಾರಾರ್ಥವಾಗಿ ಬದರಿಕಾಶ್ರಮದಲ್ಲಿ ವಿರಕ್ತನಾಗಿ ಇದ್ದುಕೊಂಡನು ।।೯೫೦।। ಶ್ರೀಕೃಷ್ಣನು ಕಲಿಸಿದಂತೆಯೇ ಉದ್ಧವನು ತನ್ನ ಆಚರಣೆ ಇಟ್ಟುಕೊಂಡನು. ಈತನ ಧರ್ಮದಿಂದ ಸಮಸ್ತ ಜನರು ಪರಮಾರ್ಥೀ ಹಾಗೂ ವಿರಕ್ತರಾದರು ।।೯೫೧।। ಪರಬ್ರಹ್ಮದ ನಿಜಪ್ರಾಪ್ತಿ ಶ್ರೀಕೃಷ್ಣನು ಉದ್ಧವನಿಗೆ ಕೊಟ್ಟಿದ್ದನು. ಆತನು ನಿಜಧಾಮಕ್ಕೆ ಹೊರಟು ಹೋಗಿದ್ದನು. ಬ್ರಹ್ಮಸ್ಥಿತಿಯು ಉದ್ಧವನಲ್ಲಿ ಹಗಲು ರಾತ್ರಿ ಅಖಂಡವಾಗಿ ವಾಸವಾಗಿತ್ತು ।।೯೫೨।। ಆಸನ ಹಾಕಿ ಕುಳಿತುಕೊಂಡಿರಲಿ ಅಥವಾ ಹೋಗಬರುವುದು ಮಾಡುತ್ತಿರಲಿ ಉದ್ಧವನ ಬ್ರಹ್ಮಸ್ಥಿತಿ ಎಂದಿಗೂ ಮುರಿಯುತ್ತಿದ್ದಿಲ್ಲ ।।೯೫೩।। ವಿರಕ್ತಿ ಮತ್ತು ಭೋಗಸ್ಥಿತಿ ಈ ಎರಡೂ ದೇಹಧರ್ಮವಾಗಿವೆ. ಉದ್ಧವನ ಬ್ರಹ್ಮಸ್ವರೂಪಸ್ಥಿತಿಯು ಈ ಎರಡಕ್ಕಿಂತಲೂ ಆಚೆಕಡೆಯದ್ದಾಗಿತ್ತು ।।೯೫೪।। ಉದ್ಧವನು ವಿರಕ್ತಿಯಲ್ಲಿ ಇದ್ದೂ ಕೂಡ ವಿರಕ್ತನಾಗಿದ್ದಿಲ್ಲ. ಭೋಗದಲ್ಲಿದ್ದರೂ ಕೂಡ ಭೋಗಾಸಕ್ತನಾಗಿದ್ದಿಲ್ಲ. ಈ ಎರಡರ ಅತೀತವಾಗಿರುವ ಸದೋದಿತ ಬ್ರಹ್ಮಸ್ವರೂಪನಾಗಿದ್ದನು ।।೯೫೫।। ಇಂತಹ ಅವಸ್ಥೆಯಲ್ಲಿ ಪ್ರಾರಬ್ಧದಂತೆ ಆಯುಷ್ಯ ಮುಗಿದು ದೇಹಕ್ಕೆ ಮರಣ ಬಂದರೂ ಸಹ ಉದ್ಧವನು ಪೂರ್ಣ ಬ್ರಹ್ಮನಾಗಿಯೇ ಇದ್ದನು. ಆತನಿಗೆ ಜನ್ಮಮರಣದ ವಾರ್ತೆಯೂ ಕೂಡ ಇದ್ದಿಲ್ಲ ।।೯೫೬।। ಶ್ರೀಕೃಷ್ಣನು ಉದ್ಧವನ ದೇಹದಲ್ಲಿನ ದೇಹಬುದ್ಧಿ ಇಲ್ಲದಂತೆ ಮಾಡಿ ಆತನಿಗೆ ದೃಢ ಸ್ವರೂಪದ ಬ್ರಹ್ಮಾನುಭವ ಪ್ರಾಪ್ತಮಾಡಿಕೊಟ್ಟಿದ್ದನು ।।೯೫೭।। ಹೇ ಪರೀಕ್ಷಿತೀ ರಾಜನೇ, ಹೀಗಿರುವ ಉದ್ಧವನಿಗೆ ದೇಹಬಿಟ್ಟನಂತರ ಪರಬ್ರಹ್ಮದ ಪ್ರಾಪ್ತಿಯಾಗುವುದು ಎಂದು ಹೀಗೆ ಹೇಳುವಿಕೆಯು ಅದು ಕೇವಲ ಭ್ರಮೆಯಾಗಿರುವುದು।।೯೫೮।। ಬಂಗಾರದ ಬಳೆ ಸಿದ್ಧಗೊಳಿಸಿದರು ಅಥವಾ ಅದನ್ನು ಮುರಿದು ಹಾಕಿದರು, ಎಂಬ ಈ ಘಟನೆಯು ಬಂಗಾರಕ್ಕೆ ಹೇಗೆ ತಿಳಿಯದೋ, ಅದರಂತೆಯೇ ಜನ್ಮ-ಮರಣ ಇದು ಕೇವಲ ದೇಹಕ್ಕೆ ಮಾತ್ರ ಇರುವುದು. ಉದ್ಧವನು ಬ್ರಹ್ಮಸ್ವರೂಪನಾಗಿದ್ದನು ।।೯೫೯।। ಉದ್ಧವನು ದೇಹರೂಪದಿಂದ ಇದ್ದಾಗಲೇ ನಿತ್ಯಮುಕ್ತನಾಗಿದ್ದನು. ಆತನಿಗೆ ವಿದೇಹೀ ಅವಸ್ಥೆಯು ಪ್ರಾಪ್ತವಾಗಿತ್ತು. ಆತನಿಗೆ ದೇಹಬಿಡುವಾಗ್ಗೆ, ವಿದೇಹಮೋಕ್ಷದ ಪ್ರಾಪ್ತಿಯಾಗುವುದು ಎಂದು ಹೇಳುವುದು ಇದು ಲೌಕಿಕವಾಗಿರುವುದು ।।೯೬೦।।

ದೇಹ ರಾಹೋ ಅಥವಾ ಜಾವೋ । ಹಾ ಜ್ಞಾತ್ಯಾಸೀ ನಾಹೀ ಸಂದೇಹೋ । ತ್ಯಾಸೀ ನಿಜಾತ್ಮತಾ ಬ್ರಹ್ಮ ಭಾವೋ । ಅಖಂಡ ಪಹಾ ಹೋ ಅನುಸ್ಯೂತ ॥೯೬೧॥ ದೇಹಾಸೀ ದೈವ ವರ್ತವೀ ಜಾಣ । ದೇಹಾಸೀ ದೈವ ಆಣೀ ಮರಣ । ಜ್ಞಾತಾ ಬ್ರಹ್ಮೀ ಬ್ರಹ್ಮ ಪೂರ್ಣ। ಜನ್ಮ ಮರಣ ತೋ ನೇಣೇ ॥೯೬೨॥ ದೇಹ ಅಸೋ ಕಿಂವಾ ಜಾವೋ । ಆಮ್ಹೀ ಪರಬ್ರಹ್ಮ ಚಿ ಆಹೋ। ದೋರೀ ಸಾಪಪಣ ವಾವೋ। ದೋರೇಚಿ ಪಹಾ ಹೋ ಜೇವೀ ಹೋಯ ॥೯೬೩॥ ಜೇಥ ಮೃಗಜಳ ಆಟಲೇ । ತೇಥ ಮ್ಹ ಣಾವೇ ಕೋರಡೇ ಜಾಹಲೇ । ಜೆವ್ಹಾ ಹೋತೇ ಪೂರ್ಣ ಭರಲೇ । ತೇವ್ಹಾಂಹೀ ಓಲೇ ಅಸೇನಾ॥೯೬೪॥ ತೇವೀ ದೇಹಾಚೀ ವರ್ತತೀ ಸ್ಥಿತೀ। ಸಮೂಳ ಮಿಥ್ಯಾ ಪ್ರತೀತೀ। ತ್ಯಾ ದೇಹಾಚೇ ದೇಹಾಂತೀ । ವಿದೇಹಕೈವಲ್ಯಪ್ರಾಪ್ತೀ ನವೀ ನ ಫಡೇ ॥೯೬೫॥ ಯಾಪರೀ ಬದರಿಕಾಶ್ರಮಾಪ್ರತೀ । ಉದ್ಧವೇ ಬಹುಕಾಳ ಕರೂನಿ ವಸ್ತೀ । ತ್ಯಾಚಿ ನಿಜದೇಹಾಚೇ ಅಂತೀ । ಭಗವದ್ಗತೀ ಪಾವಲಾ ॥೯೬೬॥ ''ಪಾವಲಾ'' ಹೇಹೀ ವದಂತೀ। ಲೌಕಿಕ ಜಾಣ ಪರೀಕ್ಷಿತೀ । ತೋ ಪರಬ್ರಹ್ಮ ಚಿ ಆದ್ಯಂತೀ । ಸಹಜ ಸ್ಥಿತೀ ಪಾವಲಾ ॥೯೬೭॥ ಉದ್ಧವಾಚೀ ಭಗವದ್ಭಕ್ತೀ। ಆಣಿ ನಿದಾನೀಂಚೀ ನಿಜಸ್ಥಿತಿ। ತೇಣೇ ಶುಕ ಸುಖಾವಲಾ ಚಿತ್ತೀ। ಕೃಷ್ಣಕೃಪಾ ನಿಶ್ಚಿತೀ ವರ್ಣಿತ ॥೯೬೮॥

ಯ ಏತದಾನಂದಸಮುದ್ರಸಂಭೃತಂ ಜ್ಞಾನಾಮೃತಂ ಭಾಗವತಾಯ ಭಾಷಿತಮ್ ।
ಕೃಷ್ಣೇನ ಯೋಗೇಶ್ವರಸೇವಿತಾಂಘ್ರಿಣಾ ಸಚ್ಛ್ರದ್ಧಯಾಸೇವ್ಯ ಜಗದ್ವಿಮುಚ್ಯತೇ ॥೪೮॥

ಅರ್ಥ:- ಹೀಗೆ ಎಲ್ಲ ಶ್ರೇಷ್ಠ ಯೋಗ ಪ್ರಭುಗಳು ಸೇವೆಗೈಯುವ ಪಾದಕಮಲಗಳುಳ್ಳ ಭಗವಾನ ಶ್ರೀಕೃಷ್ಣನು ತನ್ನ ಭಕ್ತನಿಗೆ ಈ ಜ್ಞಾನಾಮೃತವನ್ನು ನೀಡಿದನು. ಅದು ಇಡೀ ಆಧ್ಯಾತ್ಮಿಕ ಆನಂದದ ಸಾಗರವನ್ನು ಅಡಕಮಾಡಿಕೊಂಡಿದೆ. ಈ ಬ್ರಹ್ಮಾಂಡದಲ್ಲಿ ಮಹಾ ಶ್ರದ್ಧೆಯಿಂದ ಈ ನಿರೂಪಣೆಯನ್ನು ಸ್ವೀಕರಿಸುವ ಎಲ್ಲರಿಗೂ ಮುಕ್ತಿ ನಿಶ್ಚಿತ.

ಜೇ ಯೋಗೇಶ್ವರ ಯೋಗಸ್ಥಿತೀ । ಜೇ ಪಾವಲೇ ಜೀವನ್ಮುಕ್ತೀ । ತೇಹೀ ಕೃಷ್ಣ ಚರಣ ಸೇವಿತೀ । ಐಶೀ ಪೂಜ್ಯ ಮೂರ್ತೀ ಶ್ರೀಕೃಷ್ಣಾಚೀ ॥೯೬೯॥ ಪದೀ ರಂಗಲೇ ಸನಕಾದಿಕ । ಸಂತ ಸಜ್ಜನ ಅನೇಕ । ಬ್ರಹ್ಮಾದಿಕ ತೇಥೇ ರಂಕ । ಐಸಾ ಶ್ರೇಷ್ಠ ದೇಖ ಶ್ರೀಕೃಷ್ಣ ॥೯೭೦॥ ತೇಣೇ ಶ್ರೀಕೃಷ್ಣೇ ಸ್ವಾನಂದಸ್ಥಿತೀ । ಪ್ರಗಟ ಕೇಲೀ ನಿಜಭಕ್ತೀ । ಅತಿಕೃಪಾ ಉದ್ಧವಾಪ್ರತೀ । ಸ್ವಮುಖೇ ಶ್ರೀಪತೀ ಬೋಲಿಲಾ ॥೯೭೧॥ ಭಗವದ್ಭಕ್ತೀ ಮಹಾಸಾಗರ । ತೇಥೇ ನಿಜಧೈರ್ಯ ತೋಚಿ ಮಂದರ । ಗುರುಶಿಷ್ಯಯುಕ್ತೀ ಸುರಾಸುರ । ಮಥನತತ್ಪರ ಸಾಟೋಪೇ ॥೯೭೨॥

ದೇಹವು ಇರಲಿ ಅಥವಾ ಹೋಗಲಿ ಈ ವಿಷಯಕ್ಕಾಗಿ ಜ್ಞಾನಿಗಳಿಗೆ ಯಾವ ಬಂಧನೆ ಇರುವುದಿಲ್ಲ. ''ನಾನು ಬ್ರಹ್ಮಸ್ವರೂಪನಾಗಿರುವೆ'' ಎಂಬ ಅಖಂಡ ಜಾಗೃತೆಯು ಅವರಿಗೆ ಇರುವುದು ॥೯೬೧॥ ದೇಹವನ್ನು ದೈವವು ನಡೆಯಿಸುವುದು ಮತ್ತು ದೇಹಕ್ಕೆ ಮರಣವನ್ನೂ ಕೂಡ ದೈವವು ತರುವುದು. ಜ್ಞಾನಿಯಾದವನು ಬ್ರಹ್ಮನಲ್ಲಿ ಪೂರ್ಣ ಬ್ರಹ್ಮನಾಗಿ ಇರುವುದರಿಂದ ಜನ್ಮ ಮತ್ತು ಮರಣ ಆತನಿಗೆ ತಿಳಿಯುವುದೇ ಇಲ್ಲ ॥೯೬೨॥ ದೇಹವು ಹೋಗಲಿ ಅಥವಾ ಇರಲಿ, ನಾನು ಪರಬ್ರಹ್ಮವೇ ಆಗಿರುವೆನು ಎಂಬ ಈ ದೃಢ ನಿಶ್ಚಯವು ಆತನಿಗಿರುವುದು. ಹಗ್ಗದಲ್ಲಿ ಸರ್ಪದ ಮಿಥ್ಯೆಯಾದ ಭ್ರಮೆವಿರುವುದು. ಆ ಭ್ರಮೆಯು ನಷ್ಟವಾಗುತ್ತಲೇ ಹಗ್ಗವು ಹಗ್ಗವಾಗಿಯೇ ತೋರುವುದು ॥೯೬೩॥ ಅಲ್ಲಿ ಮೃಗಜಲವು ಬತ್ತಿ ಹೋಯಿತು, ಆದ್ದರಿಂದ ಅಲ್ಲಿನ ಭೂಮಿಯು ಒಣಗಿ ಬರಿದಾಯಿತು ಎಂದು ಹೇಳಬೇಕೆಂದರೆ ಎಲ್ಲಿ ಮೃಗಜಲವು ತುಂಬಿಕೊಂಡಂತೆ ತೋರುವುದೋ, ಅಲ್ಲಿ ಏನಾದರೂ ಭೂಮಿಯು ಸ್ವಲ್ಪಾದರೂ ತೋಯ್ದಿರುವುದೆ ? ॥೯೬೪॥ ಅದರಂತೆ ದೇಹವು ವರ್ತಿಸುತ್ತಿರಲು ಆಗ ಮಿಥ್ಯಾ ಎಂಬ ಪ್ರಚೀತಿ ಬಂದರೆ ದೇಹವು ಅಂತ್ಯಗೊಂಡಾಗ್ಗೆ, ವಿದೇಹ ಕೈವಲ್ಯದ ಪ್ರಾಪ್ತಿಯು ಹೊಸದಾಗಿಯೇ ಹುಟ್ಟಿಕೊಂಡಂತೆ ಆಗುವುದಿಲ್ಲ ॥೯೬೫॥ ಈ ಪ್ರಕಾರವಾಗಿ ಉದ್ಧವನು ಬದರಿಕಾಶ್ರಮದಲ್ಲಿ ಬಹಳ ದಿನಗಳವರೆಗೆ ವಾಸ್ತವ್ಯ ಮಾಡಿ ತದನಂತರ ಆತನ ನಿಜದೇಹದ ಅಂತ್ಯವಾಗಿ ಆತನು ಭಗವದ್‌ಪದಕ್ಕೆ ಪ್ರಾಪ್ತಮಾಡಿಕೊಂಡನು ॥೯೬೬॥ ಭಗವದ್‌ಪದವಿಯನ್ನು ಪ್ರಾಪ್ತಮಾಡಿಕೊಂಡನು ಎಂಬ ಈ ಹೇಳಿಕೆಯೂ ಕೂಡ ಲೌಕಿಕವೇ ಆಗಿರುವುದು. ಕಾರಣ ಆತನು ಆರಂಭದಿಂದಲೂ ಕೊನೆಯವರೆಗೂ ಬ್ರಹ್ಮಸ್ವರೂಪನಾಗಿಯೇ ಇದ್ದನು. ಆತನು ತನ್ನ ಸ್ವಾಭಾವಿಕ ಸ್ವರೂಪದಲ್ಲಿ ಕೂಡಿಕೊಂಡನು ॥೯೬೭॥ ಉದ್ಧವನ ಭಗವದ್ಭಕ್ತೀ ಮತ್ತು ಅಂತ್ಯಕಾಲದ ನಿಜಸ್ಥಿತಿಯನ್ನು ಮನದಲ್ಲಿ ತಂದುಕೊಂಡು ಶುಕಾಚಾರ್ಯರಿಗೆ ಪರಮ ಸಂತೋಷಉಂಟಾಯಿತು. ಈಗ ಅವರು ಶ್ರೀಕೃಷ್ಣ ಕೃಪೆಯ ವರ್ಣನೆ ಮಾಡಲಾರಂಭಿಸಿದರು ॥೯೬೮॥

ಯೋಗಧಾರಣೆಯಿಂದ ಮುಕ್ತರಾಗಿರುವ ಪರಮ ಶ್ರೇಷ್ಠ ಯೋಗಿಗಳು ಹಾಗೂ ಜೀವನ್ಮುಕ್ತರು ಇವರೂ ಸಹ ಶ್ರೀಕೃಷ್ಣನ ಚರಣ ಕಮಲಗಳಲ್ಲಿ ಸೇವೆ ಮಾಡುವರು. ಇಷ್ಟೊಂದು ಶ್ರೀಕೃಷ್ಣನ ಮೂರ್ತಿಯು ಪೂಜ್ಯವಾಗಿರುವುದು ॥೯೬೯॥ ಆತನ ಚರಣಗಳಲ್ಲಿ ಸನಕಾದಿಕರಂತಹ ಅನೇಕ ಸಂತ ಸಜ್ಜನರು ತನ್ಮಯರಾಗುವರು. ಬ್ರಹ್ಮದೇವನೂ ಕೂಡ ಆತನ ಎದುರಿನಲ್ಲಿ ರಂಕನಂತೆ ನಿಂತುಕೊಳ್ಳುವನು. ಹೀಗೆ ಶ್ರೀಕೃಷ್ಣನು ಶ್ರೇಷ್ಠನಾಗಿರುವನು ॥೯೭೦॥ ಹೀಗಿರುವ ಶ್ರೀಕೃಷ್ಣನು ಸ್ವಾನಂದ ಸ್ಥಿತಿಯಲ್ಲಿ ತನ್ನ ಭಕ್ತಿಯ ರಹಸ್ಯವನ್ನು ಪ್ರಕಟ ಮಾಡಿದನು. ಉದ್ಧವನಲ್ಲಿ ಆತನು ಕೃಪೆಯ ಮಳೆಗರೆದನು. ತನ್ನ ಸ್ವಮುಖದಿಂದ ಆತನಿಗೆ ಭಕ್ತಿ ಕುರಿತು ತಿಳಿಸಿ ಹೇಳಿದನು ॥೯೭೧॥ ಭಗವದ್ಭಕ್ತಿ ಎಂಬುವುದು ಮಹಾಸಾಗರವಾಗಿರುವುದು. ಅದರಲ್ಲಿ ಧೈರ್ಯವೇ ಮಂದರಾಚಲ ಪರ್ವತವಾಗಿರುವುದು. ಗುರುಶಿಷ್ಯರ ಯುಕ್ತಿಯೇ ಮಂಥನ ಮಾಡುವುದಕ್ಕಾಗಿ ಸಿದ್ಧರಾಗಿರುವ ಸುರ ಅಸುರರಾಗಿರುವರು ॥೯೭೨॥

ಭಾವ ವಿಶ್ವಾಸ ದೋನೀ ಮಾಂಜರೀ । ಬೋಧ ರವಿದೋರ ದೃಢ ಧರೀ । ಪ್ರತ್ಯಗಾವೃತ್ತಿ ಅಭ್ಯಾಸೇ ಕರೀ । ಮಂಥನ ನಿರ್ಧಾರೀ ಮಾಂಡಿಲೇ ।।೯೭೩।। ತೇಥ ಮಥನೀ ಪ್ರಥಮದೃಷ್ಟೀ । "ಅಹಂ ಜ್ಞಾತಾ" ಹೇ ಹಾಲಾಹಲ ಉಠೀ । ತೇ ವಿವೇಕಶಿವೇ ಧರಿಲೇ ಕಂಠೀ । ಪುಢತೀ ಅಹಂ ನುಠೀ ಗಿಳಿಲೇ ತೈಸೇ ।।೯೭೪।। ನಿರಭಿಮಾನೇ ಮಥೂನಿ ಮಥಿತ । ಕಾಢಿಲೇ ಭಕ್ತಿಸಾರಾಮೃತ । ತೇ ಉದ್ಧವಾಲಾಗೀ ಶ್ರೀಕೃಷ್ಣನಾಥ । ಕೃಪೇನೇ ನಿಶ್ಚಿತ ಅರ್ಪಿಲೇ ।।೯೭೫।। ಧರ್ಮ ಅರ್ಥ ಕಾಮ ಮುಕ್ತೀ । ಚಹೂ ಪುರುಷಾರ್ಥಾಹೀವರತೀ । ಶ್ರೀಕೃಷ್ಣೇ ಸಾರಾಮೃತ-ನಿಜಭಕ್ತೀ । ಉದ್ಧವಾಹಾತೀ ಅರ್ಪಿಲೀ ।।೯೭೬।। ನಿಜಬೋಧಾಚೇ ಪಾತ್ರ ಜಾಣ । ನಿಜಾನುಭವೇ ಆಸಾಊನ । ತೇಥೇ ಹೇ ಸಾರಾಮೃತ ಭರೋನ । ಕರವಿಲೇ ಪ್ರಾಶನ ಉದ್ಧವಾಸೀ ।।೯೭೭।। ತೇಣೇ ಉದ್ಧವ ನಿವಾಲಾ । ತ್ರಿವಿಧ ತಾಪೇ ಸಾಂಡವಲಾ । ಪರಮ ಸುಖೇ ಸುಖಾವಲಾ । ಪರಬ್ರಹ್ಮೀ ಜಡಲಾ ಬ್ರಹ್ಮತ್ವೇ ।।೯೭೮।। ಭಕ್ತಿಸಾರಾಮೃತಪ್ರಾಶನ । ಉದ್ಧವೇ ಕರೋನಿಯಾ ಜಾಣ । ಪಾವಲಾ ಪರಮ ಸಮಾಧಾನ । ಐಸಾ ಕೃಪಾಳು ಶ್ರೀಕೃಷ್ಣ ನಿಜಭಕ್ತಾ ।।೯೭೯।। ಕೃಷ್ಣ ಉದ್ಧವಸಂವಾದ ಪೂರ್ಣ । ಭಕ್ತಿಸಾರಾಮೃತ ಗುಹ್ಯಜ್ಞಾನ । ಯಾಚೇ ಜೋ ಕರೀ ಸೇವನ । ಶ್ರವಣ ಮನನನಿದಿಧ್ಯಾಸೇ ।।೯೮೦।। ಐಸೇ ಜೋ ಕರೀ ಕಥಾಸೇವನ । ತ್ಯಾಭೇಣೇ ಪಳೇ ಭವಬಂಧನ । ಸ್ವಪ್ನೀ ನ ದೇಖೇ ಜನ್ಮ ಮರಣ । ಹಾಹೀ ನವ್ಹೇ ಜಾಣ ನವಲಾವೋ ।।೯೮೧।। ಜೇ ಲಾಗೋನಿ ತ್ಯಾಚೇ ಸಂಗತೀ । ದೃಢಾವಲೇ ಯೇ ಕಥೇಚೇ ಭಕ್ತೀ । ತ್ಯಾಂಸೀ ಭವಭಯಾಚೀ ಪ್ರಾಪ್ತೀ । ನ ಬಾಧೀ ಕಲ್ಪಾಂತೀ ಕುರುರಾಯಾ ।।೯೮೨।। ಜ್ಯಾಸೀ ಯಾ ಕಥೇಚೀ ಶ್ರದ್ಧಾ ಪೂರ್ಣ । ಜ್ಯಾಸೀ ಯಾ ಕಥೇಚೇ ಅನುಸಂಧಾನ । ಜ್ಯಾಸೀ ಯೇ ಕಥೇಚೇ ಅನುಷ್ಠಾನ । ತೋ ಉದ್ಧರೀ ಜಾಣ ಜಗಾತೇ ।।೯೮೩।। ಜೋ ಸೂರ್ಯಾಚೇ ಘರೀ ರಾಹಿಲಾ । ತ್ಯಾಸೀ ರಾತ್ರೀಚಾ ಯಾವಾ ಠೇಲಾ । ಮಾ ಜೋ ತ್ಯಾಚೇ ಗಾವೀಂಚ ವಸಲಾ । ತೋಹೀ ಮುಕಲಾ ರಾತ್ರೀಸೀ ।।೯೮೪।। ಸೂರ್ಯಾಸೀ ರಾತ್ರೀ ನಾಹೀ । ಮಾ ದಿವಸ ಉಗವೇ ಕಂಹೀ । ತೇವೀ ಸ್ವರೂಪಾಚ್ಯಾ ಠಾಯೀ । ಬಂಧಮೋಕ್ಷ ಪಾಹೀ ಅತಿ ಮಿಥ್ಯಾ ।।೯೮೫।। ತೇವೀ ಯೇ ಕಥೇಚೇ ಅನುಸಂಧಾನ । ನ ಘಡೋನಿ ಜ್ಯಾಸೀ ಘಡೇ ಶ್ರವಣ । ತ್ಯಾಸಿಹೀ ಭವಬಂಧನ । ಸರ್ವಥಾ ಜಾಣ ಬಾಧೇನಾ ।।೯೮೬।।

ಭಾವ ಮತ್ತು ವಿಶ್ವಾಸ ಇವೆರಡು ಮಂಥನ ಮಾಡುವ ಹಗ್ಗವಾಗಿರುವುವು. ಬೋಧವೇ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಖಂಬವಾಗಿರುವುದು. ಸ್ವಸ್ವರೂಪದ ಅಭ್ಯಾಸದಿಂದ ಅವರು ಮಂಥನ ಮಾಡಲು ಆರಂಭಿಸಿದರು ।।೯೭೩।। ಆ ಮಂಥನ ಸಮಯದ ಆರಂಭದಲ್ಲಿಯೇ "ಅಹಂಜ್ಞಾತಾ" ಅಂದರೆ ನಾನು ಜ್ಞಾನಿ ಎಂಬ ಅಹಂಕಾರರೂಪ ಹಲಾಹಲ ವಿಷವು ನಿರ್ಮಾಣವಾಯಿತು. ಅದನ್ನು ವಿವೇಕರೂಪ ಶಂಕರನು ಪ್ರಾಶನ ಮಾಡಿದನು. ಆ ದೃಶ್ಯವನ್ನು ಕಂಡ ಅಹಂಕಾರವು ಪುನಃ ಹುಟ್ಟಲೇ ಇಲ್ಲ ।।೯೭೪।। ಈ ಪ್ರಕಾರವಾಗಿ ನಿರಭಿಮಾನದಿಂದ ಮಂಥನ ಮಾಡಿ ಭಕ್ತಿ ಎಂಬ ಅಮೃತವನ್ನು ತೆಗೆದರು. ಇದನ್ನು ಕೃಪೆ ಮಾಡಿ ಶ್ರೀಕೃಷ್ಣನು ಉದ್ಧವನಿಗೆ ಅರ್ಪಣೆ ಮಾಡಿದನು ।।೯೭೫।। ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ನಾಲ್ಕು ಪುರುಷಾರ್ಥಗಳನ್ನು ದಾಟಿರುವ ಮೇಲಾದ ಭಕ್ತಿಸಾರಾಮೃತವನ್ನು ಶ್ರೀಕೃಷ್ಣನು ಉದ್ಧವನ ಕೈಗೆ ಅರ್ಪಿಸಿದನು ।।೯೭೬।। ನಿಜಬೋಧೆ ಎಂಬ ಪಾತ್ರೆಯನ್ನು ನಿಜಾನುಭವದಿಂದ ಸ್ವೀಕರಿಸಿ, ಅದನ್ನು ಸ್ವಚ್ಛಗೊಳಿಸಿ ಅದರಲ್ಲಿ ಈ ಸಾರಾಮೃತವನ್ನು ತುಂಬಿ ಉದ್ಧವನಿಗೆ ಪ್ರಾಶನ ಮಾಡಿಸಿದನು ।।೯೭೭।। ಇದರಿಂದ ಉದ್ಧವನು ತೃಪ್ತನಾದನು. ತ್ರಿವಿಧ ತಾಪಗಳಿಂದ ಆತನ ಬಿಡುಗಡೆಯಾಯಿತು. ಪರಮಸುಖದಿಂದ ಆತನು ಸುಖಿಯಾದನು ಹಾಗೂ ಬ್ರಹ್ಮಸ್ವರೂಪದಿಂದ ಪರಬ್ರಹ್ಮನಲ್ಲಿ ಐಕ್ಯರೂಪನಾದನು ।।೯೭೮।। ಈ ಪ್ರಕಾರವಾಗಿ ಉದ್ಧವನು ಭಕ್ತಿಸಾರಾಮೃತವನ್ನು ಪ್ರಾಶನ ಮಾಡಿ ಪರಮ ಸಂತೋಷಪಟ್ಟನು. ಹೀಗೆ ಶ್ರೀಕೃಷ್ಣನು ನಿಜಭಕ್ತರಲ್ಲಿ ಕೃಪೆ ಮಾಡುವವನಾಗಿದ್ದನು ।।೯೭೯।। ಈ ಯಾವ ಕೃಷ್ಣಉದ್ಧವಸಂವಾದಯುಕ್ತ ಭಕ್ತಿಸಾರಾಮೃತ ಗುಹ್ಯಜ್ಞಾನದ ಶ್ರವಣ-ಮನನ ಮತ್ತು ನಿದಿಧ್ಯಾಸದಿಂದ ಯಾರು ಸೇವನೆ ಮಾಡುವರೋ ।।೯೮೦।। ಅರ್ಥಾತ್ ಈ ಕಥೆಯನ್ನು ಯಾರು ಶ್ರದ್ಧೆಯಿಂದ ಶ್ರವಣ ಮಾಡುವರೋ, ಇದರ ಭಯದಿಂದ ಭವಬಂಧನವು ದೂರ ಓಡಿ ಹೋಗುವುದು. ಸ್ವಪ್ನದಲ್ಲಿಯೂ ಕೂಡ ಅವರಿಗೆ ಜನ್ಮಮರಣ ಕಾಣಿಸಲಾರದು. ಇದರಲ್ಲಿಯೂ ಅಂತಹ ಆಶ್ಚರ್ಯವೇನಿಲ್ಲ ।।೯೮೧।। ಆದರೆ ಯಾರು ಇವರ ಸಂಗತಿಯಲ್ಲಿದ್ದುಕೊಂಡು ಈ ಯಾವ ಕಥೆಯಲ್ಲಿ ತನ್ಮಯಗೊಳ್ಳುವರೋ, ಅವರಿಗೂ ಕೂಡ ಹೇ ಪರೀಕ್ಷಿತಿಯೇ, ಸಂಸಾರ ಬಂಧನದ ಭಯವು ಕಲ್ಪಾಂತಕ್ಕೂ ಬಾಧಿಸಲಾರದು ।।೯೮೨।। ಯಾರಿಗೆ ಈ ಕಥೆಯಲ್ಲಿ ಪರಿಪೂರ್ಣ ಶ್ರದ್ಧೆ ಇರುವುದೋ, ಯಾರಿಗೆ ಈ ಕಥೆಯ ಧ್ಯಾಸ ಹತ್ತಿರುವುದೋ, ಯಾರು ಈ ಕಥೆಯ ಅನುಷ್ಠಾನ ಮಾಡುವರೋ, ಅವರು ಸರ್ವ ಜಗತ್ತಿನ ಉದ್ಧಾರ ಮಾಡಬಲ್ಲರು ।।೯೮೩।। ಯಾವನು ಸೂರ್ಯನ ಮನೆಯಲ್ಲಿರುವನೋ, ಆತನಿಗೆ ರಾತ್ರಿ ಎಂಬುವುದೇ ಇರುವುದಿಲ್ಲ. ಅಂದಮೇಲೆ ಆತನ ಊರಲ್ಲಿಯೇ ಇದ್ದುಕೊಂಡರೆ ರಾತ್ರಿ ಏನಾದರೂ ತೋರುವುದೇ? ।।೯೮೪।। ಸೂರ್ಯನಿಗೆ ರಾತ್ರಿಯೇ ಇಲ್ಲದಿರುವಾಗ ಅಲ್ಲಿ ಹಗಲು ಹೇಗೆ ಹುಟ್ಟಬೇಕು? ಅದರಂತೆ ಆತ್ಮಸ್ವರೂಪದಲ್ಲಿ ಬಂಧ-ಮೋಕ್ಷ ಇವು ಮಿಥ್ಯೆಯಾಗಿರುವುವು ।।೯೮೫।। ಹಾಗೆಯೇ ಈ ಕಥೆಯ ಅನುಷ್ಠಾನವು ಸಾಧಿಸದಾಗದಿದ್ದರೆ ಕೇವಲ ಶ್ರವಣ ಸಾಧಿಸಿದರೆ ಸಾಕು, ಆತನಿಗೂ ಕೂಡ ಸಂಸಾರ ಬಂಧನೆಯು ಬಾಧಿಸಲಾರದು ।।೯೮೬।।

ಅಸೋ ನ ಘಡೇ ಕಥಾಶ್ರವಣ । ಜೋ ಹೇ ಆವಡೀ ಕರೀ ಪಠಣ । ತ್ಯಾಚಾ ದುಃಖದೋಷಾಚೇ ಅತಿ ದಹನ । ಶ್ಲೋಕಶ್ಲೋಕೀ ಜಾಣ ಹೋತಸೇ ॥೯೮೭॥ ನವ್ಹೇ ಶ್ರವಣ ಪಠಣ ಆಟಾಟೀ । ತರೀ ಯಾ ಗ್ರಂಥೀಂಚ್ಯಾ ನಿರೂಪಣಗೋಷ್ಟೀ । ಜೇಣೇ ಬಾಂಧಲ್ಯಾ ಜೀವಾಚ್ಯಾ ಗಾಂಠೀ । ತೋ ವಂದ್ಯ ಸೃಷ್ಟೀ ಸುರನರಾ ॥೯೮೮॥ ಯೇ ಕಥೇಚೀ ಜ್ಯಾಂಸಿ ಪ್ರೀತೀ । ಯೇ ಕಥೇಚೀ ಜ್ಯಾಂಸಿ ಭಕ್ತೀ । ತ್ಯಾಚೀ ಆವಡೇ ಜ್ಯಾಸೀ ಸಂಗತೀ । ತ್ಯಾತೇ ವಂದತೀ ಯಮಕಾಳ ॥೯೮೯॥ ಯೇ ಕಥೇಚೀ ಜ್ಯಾಸೀ ಶ್ರದ್ಧಾ ಪೂರ್ಣ । ಯೇಚಿ ಕಥೇಚೇ ಮುಖ್ಯ ಸೇವನ । ಜೋ ಶ್ರದ್ಧೇನೇ ಕರೀ ಶ್ರವಣ ಮನನ । ತ್ಯಾಪಾಸೂನಿ ಶ್ರೀಕೃಷ್ಣ ಪರತಾ ನವ್ಹೇ ॥೯೯೦॥ ಭಾಳ್ಯಾಭೋಳ್ಯಾ ಐಕತಾ ಗೋಷ್ಟೀ । ಜ್ಯಾಸೀ ಯಾ ಕಥೇಚೀ ಶ್ರದ್ಧಾ ಉಠೀ । ಕೃಷ್ಣ ಪ್ರಕಟೋನಿ ತ್ಯಾಚಾ ಪೋಟೀ । ಛೇದೀ ಉಠಾಉಠೀ ಭವಪಾಶ ॥೯೯೧॥ ಯಾಪರೀ ಶ್ರದ್ಧಾಳುವಾ ಜಾಣ । ಕೃಪಾಳೂ ಸ್ವಾಮೀ ಶ್ರೀಕೃಷ್ಣ । ಯಾಲಾಗೀ ಶ್ರೀಶುಕ ಆಪಣ । ಕರೀ ನಮನ ಅತಿಶ್ರದ್ಧಾ ॥೯೯೨॥

ಭವಭಯಮಪಹಂತುಂ ಜ್ಞಾನವಿಜ್ಞಾನಸಾರಂ ನಿಗಮಕೃದುಪಜಹ್ರೇ ಭೃಂಗವದ್ ವೇದಸಾರಮ್ ।
ಅಮೃತಮುದಧಿತಶ್ಚಾಪಾಯಯದ್ ಭೃತ್ಯವರ್ಗಾನ್ ಪುರುಷಮೃಷಭಮಾದ್ಯಂ ಕೃಷ್ಣಸಂಜ್ಞಂ ನತೋಽಸ್ಮಿ ॥೪೯॥

ಇತಿ ಶ್ರೀಮದ್ ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ ಏಕೋನತ್ರಿಂಶೋಽಧ್ಯಾಯಃ

ಅರ್ಥ:- ಹೇ ಪರೀಕ್ಷಿತಿಯೇ, ಯಾವ ಪ್ರಕಾರವಾಗಿ ಭ್ರಮರವು ಭಿನ್ನ ಭಿನ್ನ ಹೂವುಗಳಿಂದ ಸಾರರೂಪ ಜೇನು ಸಂಗ್ರಹಮಾಡುವುದೋ, ಅದೇ ಪ್ರಕಾರವಾಗಿ ಸ್ವತಃ ವೇದಕ್ಕೆ ಪ್ರಕಾಶಕೊಡುವವನಾದ ಶ್ರೀಕೃಷ್ಣನು ಭಕ್ತರನ್ನು ಸಂಸಾರಸಾಗರದಿಂದ ಮುಕ್ತಗೊಳಿಸುವುದಕ್ಕಾಗಿ ಈ ಜ್ಞಾನ-ವಿಜ್ಞಾನದ ಸಾರ ಹೇಳಿರುವನು. ಆತನು ವೃದ್ಧತ್ವ, ರೋಗ, ಭಯ ಇವುಗಳ ನಿವೃತ್ತಿಗಾಗಿ ಕ್ಷೀರಸಾಗರದಿಂದ ಅಮೃತ ತೆಗೆದಿದ್ದನು. ಆದರಂತೆಯೇ ತನ್ನ ನಿವೃತ್ತಿಮಾರ್ಗದ, ಪ್ರವೃತ್ತಿಮಾರ್ಗದ ಭಕ್ತರಿಗೆ ಪ್ರಾಶನಮಾಡಿಸಿದನು. ಆದ್ದರಿಂದ ಪುರುಷೋತ್ತಮ ಭಗವಾನ ಶ್ರೀಕೃಷ್ಣನು ಸರ್ವ ಜಗತ್ತಿನ ಮೂಲಕಾರಣನು. ನಾನು ಆತನ ಚರಣಕಮಲಗಳಲ್ಲಿ ಮನೋಭಾವದಿಂದ ನಮಿಸುವೆನು.

ಸಂಸಾರಭಯೇ ಅತಿ ತ್ರಾಸಲೇ । ಜೇ ಕೃಷ್ಣಾಸೀ ಶರಣ ಆಲೇ । ತ್ಯಾಂಚೇ ಭವಭಯ ಹರಾವಯಾ ವಹಿಲೇ ಜೇಣೇ ಮಥನ ಕೇಲೇ ವೇದಾರ್ಥಾಚೇ ॥೯೯೩॥ ಮಥೂನಿ ಉಪನಿಷದ್ವಾರ । ಕಾಢಿಲೇ ಜ್ಞಾನವಿಜ್ಞಾನಸಾರ । ಜ್ಯಾಲಾಗೀ ಶಿಣಲೇ ಜ್ಞಾತೇ ನರ । ತಯಾಂಸೀ ಪೈಲ ಮೇರ ಠಾಕೇನಾ ॥೯೯೪॥ ಮ್ಹಣಶೀ ನಿಗಮ ಮಥಿತಾ । ವೇದಾಸೀ ಜಾಹಲೀ ಪರಮ ವ್ಯಥಾ । ಕೃಷ್ಣ ವೇದಾಂಚಾ ಆದಿಕರ್ತಾ । ತೋ ದುಃಖ ಸರ್ವಥಾ ಹೋ ನೇದೀ ॥೯೯೫॥ ಜೇವೀ ಸ್ವಯೇ ವಾಂಸರೂ ಗಾಯ ದುಹಿತಾ । ಬಾಹಲಾ ನ ಲಗೇ ಸರ್ವಥಾ । ತೇವೀ ಶ್ರೀಕೃಷ್ಣ ವೇದ ಮಥಿತಾ । ವೇದಾಸೀ ವ್ಯಥಾ ಬಾಧೀನಾ ॥೯೯೬॥

ಯಾರಿಗಾದರೂ ಈ ಕಥೆಯ ಶ್ರವಣವು ಸಾಧಿಸದಿದ್ದರೆ ಆತನು ಇದರ ಪಠಣೆಯನ್ನು ಮಾಡಿದರೆ ಸಾಕು, ಆತನಿಗೂ ಕೂಡ ಭವಬಂಧನೆಯು ಬಾಧಿಸಲಾರದು ॥೯೮೭॥ ಯಾರಿಗೆ ಶ್ರವಣ-ಪಠಣೆಗಳ ತೊಂದರೆ ಸಹಿಸದಾಗದಿದ್ದರೆ, ಆತನು ಈ ಗ್ರಂಥವಲ್ಲಿನ ನಿರೂಪಣೆಯ ಮಾತುಗಳನ್ನು ತನ್ನ ಜೀವದಲ್ಲಿ ಕಟ್ಟಿಡಲು, ಆಗ ಆತನೂ ಕೂಡ ಈ ಜಗತ್ತಿನಲ್ಲಿ ದೇವಾದಿಕರಿಗೆ ವಂದ್ಯನಾಗುವನು ॥೯೮೮॥ ಈಗ ಹೆಚ್ಚಿಗೆ ಏನು ಹೇಳಬೇಕು ? ಯಾರಿಗೆ ಈ ಕಥೆಯಲ್ಲಿ ಪ್ರೀತಿ ಇದ್ದರೆ, ಯಾರಿಗೆ ಈ ಕಥೆಯಲ್ಲಿ ಭಕ್ತಿ ಇದ್ದರೆ, ಯಾರಿಗೆ ಇವರ ಸಂಗತಿ ಮನಸಾ ಇದ್ದರೆ ಸಾಕು, ಅವರಿಗೂ ಕೂಡ ಯಮ ಮತ್ತು ಕಾಲನು ಬಂದು ವಂದಿಸುವರು ॥೯೮೯॥ ಅಂದಮೇಲೆ ಈ ಕಥೆಯಲ್ಲಿ ಯಾರು ಪೂರ್ಣ ಶ್ರದ್ಧೆಯನ್ನಿಟ್ಟು ಈ ಕಥೆಯ ಸೇವನೆ ಮಾಡುವರೋ, ಯಾರು ಪರಮ ಶ್ರದ್ಧೆಯಿಂದ ಇದರ ಶ್ರವಣ-ಮನನ ಮಾಡುವರೋ, ಅವರಿಂದ ಶ್ರೀಕೃಷ್ಣನು ದೂರಾಗುವುದಿಲ್ಲ ॥೯೯೦॥ ಭೋಳೆಭಾವಿಕತೆಯಿಂದ ಆಡಿದ ಮಾತುಗಳನ್ನು ಕೇಳಿ ಈ ಕಥೆಯಲ್ಲಿ ಯಾವನ ಶ್ರದ್ಧೆಯು ಸ್ಥಿರವಾಗುವುದೋ, ಆತನ ಹೃದಯದಲ್ಲಿ ಶ್ರೀಕೃಷ್ಣನು ಪ್ರಕಟನಾಗಿ ತತ್ಕಾಲದಲ್ಲಿ ಆತನ ಸಂಸಾರ ಪಾಶ ಮುರಿದು ಹಾಕುವನು ॥೯೯೧॥ ಈ ಪ್ರಕಾರವಾಗಿ ಶ್ರದ್ಧಾವಂತರಲ್ಲಿ ಶ್ರೀಕೃಷ್ಣನು ಕೃಪೆ ಮಾಡುವನು. ಆದ್ದರಿಂದ ಶುಕಾಚಾರ್ಯರು ಪರಮ ಶ್ರದ್ಧೆಯಿಂದ ಈ ಕಥೆಯನ್ನು ವಂದಿಸಿದರು ॥೯೯೨॥

ಯಾರು ಸಂಸಾರಭಯಕ್ಕೆ ತೊಂದರೆಗೀಡಾಗಿ ಶ್ರೀಕೃಷ್ಣನಿಗೆ ಶರಣು ಬರುವರೋ, ಅವರ ಸಂಸಾರಭಯವು ಇಲ್ಲದಂತಾಗಿ ಮಾಡಲು ಶ್ರೀಕೃಷ್ಣನು ವೇದಾರ್ಥದ ಮಂಥನ ಮಾಡಿದನು ॥೯೯೩॥ ಉಪನಿಷದ್‌ಗಳನ್ನು ಮಂಥಿಸಿ ಈ ಜ್ಞಾನವಿಜ್ಞಾನದ ಸಾರ ತೆಗೆದನು. ಮಹಾ ಮಹಾಜ್ಞಾನಿಗಳು ಇದಕ್ಕಾಗಿ ದಣಿದುಕೊಂಡರೂ ಸಹ ಅವರಿಗೆ ಇದರ ಅಂತವೇ ಹತ್ತಲಿಲ್ಲ ॥೯೯೪॥ ಶಾಸ್ತ್ರಗಳ ಮಂಥನದಿಂದ ವೇದಗಳಿಗೆಬಹಳ ವ್ಯಥೆಯಾಗಿರಬಹುದೆಂದು ನೀನು ಹೇಳಬಹುದು. ಆದರೆ ಶ್ರೀಕೃಷ್ಣನು ವೇದಗಳ ಆದಿಕರ್ತನಾಗಿರುವುದರಿಂದ ಆತನು ವೇದಗಳಿಗೆ ಕಿಂಚಿತ್ ಕೂಡ ದುಃಖವಾಗಗೊಡಲಿಲ್ಲ ॥೯೯೫॥ ತನ್ನದೇ ಆದ ಕರು ಹಾಲು ಕುಡಿಯುತ್ತಿದ್ದಾಗ, ಆ ಆಕಳಿನ ಕಾಲುಗಳಿಗೆ ಹಗ್ಗ ಕಟ್ಟಬೇಕಾಗುವುದಿಲ್ಲ. ಅದರಂತೆ ಶ್ರೀಕೃಷ್ಣನು ವೇದಗಳ ಮಂಥನ ಮಾಡುತ್ತಿರಲು ಆಗ ವೇದಗಳಿಗೆ ಯಾವ ಬಾಧೆಯೂ ಆಗಲಿಲ್ಲ ॥೯೯೬॥

ಜೋ ಸರ್ವಜ್ಞ ಹೃಷೀಕೇಶ । ವೇದಾರ್ಥಸಾರ-ರಾಜಹಂಸ । ತೇಣೇ ನೇದಿತಾ ದುಃಖಲೇಶ । ವೇದಸಾರಾಂಶ ಕಾಢಿಲಾ ॥೯೯೭॥ ಏವಂ ವೇದಾರ್ಥನಿಜಮಥಿತ । ಜ್ಞಾನವಿಜ್ಞಾನಸಾರಾಮೃತ । ಕೃಷ್ಣೇ ಕಾಢೂನಿ ಇತ್ಥಂಭೂತ । ಭೃತ್ಯಹಿತಾರ್ಥ ಕೃಪಾ ಅರ್ಪೀ ॥೯೯೮॥ ಜೇವೀ ಹಳುವಾರಪಣೇ ಷಟ್‌ಪದ । ಕಾಢೀ ಸುಮನಮಕರಂದ । ತೇವೀ ಮಥೂನಿಯಾ ವೇದ । ಶ್ರೀಕೃಷ್ಣೇ ಸಾರ ಶುದ್ಧ ಕಾಢಿಲೇ ॥೯೯೯॥ ಯಾಪರೀ ಶ್ರೀಕೃಷ್ಣನಾಥ । ಭಕ್ತಕೃಪಾಳೂ ಕೃಪಾವಂತ । ಕಾಢೂನಿ ವೇದಸಾರಾಮೃತ । ನಿಜಭೃತ್ಯಾ ದೇತ ನಿರ್ಭಯ ॥೧೦೦೦॥ ಐಸೇ ವೇದಸಾರಾಮೃತ ಪೂರ್ಣ । ಭೃತ್ಯಾಸೀ ಪಾಜೂನಿ ಶ್ರೀಕೃಷ್ಣ । ನಿಜಭಕ್ತಾಚೇ ಜನ್ಮಮರಣ । ನಿರ್ದಳೀ ಸಂಪೂರ್ಣ ಭವಭಯ ॥೧೦೦೧॥ ಜಗಾಚೇ ಮಾಯಾ ಮುಖ್ಯ ಕಾರಣ । ಕೃಷ್ಣ ಮಾಯೇಚೇಹೀ ನಿಜಕಾರಣ । ಜೇ ಸ್ವರೂಪ ಸಚ್ಚಿದಾನಂದಘನ । ತ್ಯಾಸೀ ಸಂಜ್ಞಾ ''ಶ್ರೀಕೃಷ್ಣ'' ನಾಮಾಚೀ ॥೧೦೦೨॥ ಘೇಊನಿ ಮಾಯಾ ಮನುಷ್ಯನಟ । ಪುರುಷಾಂಮಾಜೀ ಪುರುಷಶ್ರೇಷ್ಠ । ಪೂರ್ಣ ಜ್ಞಾನೇ ಜ್ಞಾನನಿಷ್ಠ । ವಂದ್ಯ ವರಿಷ್ಠ ಶ್ರೀಕೃಷ್ಣ ॥೧೦೦೩॥ ತ್ಯಾಸೀ ಕಾಯಾವಾಚಾ ಆಣಿ ಮನ । ಸರ್ವಾರ್ಥೀ ಅನನ್ಯ ಶರಣ । ಯಾಪರೀ ಶ್ರೀಶುಕ ಆಪಣ । ಕರಿ ಮನೇ ನಮನ ಶ್ರೀಕೃಷ್ಣಾ ॥೧೦೦೪॥ ಐಸೇ ಶ್ರೀಶುಕೇ ಕೇಲೇ ನಮನ । ತೇಣೇ ಪರೀಕ್ಷಿತೀ ಸಪ್ರೇಮ ಪೂರ್ಣ । ಭಕ್ತಕೃಪಾಳೂ ಏಕ ಶ್ರೀಕೃಷ್ಣ । ದುಸರಾ ಜಾಣ ಅಸೇನಾ ॥೧೦೦೫॥ ಉದ್ಧವ ಪಾವಲಾ ಪರಮ ನಿರ್ವಾಣ । ಸರಲೇ ಜ್ಞಾನಕಥಾನಿರೂಪಣ । ಜಗೀ ಶ್ರೇಷ್ಠ ಭಗವದ್ಭಜನ । ಭಕ್ತಾ ಅಧೀನ ಶ್ರೀಕೃಷ್ಣ ॥೧೦೦೬॥ ಜೇ ಜೇ ಭಕ್ತಾಂಚೇ ಮನೋಗತ । ತೇ ತೇ ಪುರವೀ ಶ್ರೀಕೃಷ್ಣನಾಥ । ಶೇಖೀ ನಿಜಪದಹೀ ದೇತ । ಕೃಪಾ ಸಮರ್ಥ ಭಕ್ತಾಂಚೀ ॥೧೦೦೭॥ ನಿಜಧಾಮಾ ನಿಘತಾ ಶ್ರೀಕೃಷ್ಣ । ಜರೀ ಉದ್ಧವ ನ ಕರಿತಾ ಪ್ರಶ್ನ । ತರೀ ಹೇ ಪರಮಾಮೃತಕಥನ । ಸರ್ವಥಾ ಶ್ರೀಕೃಷ್ಣ ನ ಬೋಲತಾ ॥೧೦೦೮॥ ಯಾಲಾಗೀ ಉದ್ಧವಾಚಾ ಮಹಾಥೋರ । ಜಗಾಸೀ ಜಾಹಲಾ ಉಪಕಾರ । ಭಕ್ತಿಜ್ಞಾನವೈರಾಗ್ಯಸಾರ । ಜ್ಯಾಚೇನಿ ಶಾರ್ಙ್ಗಧರ ಸ್ವಯೇ ವದಲಾ ॥೧೦೦೯॥ ಉದ್ಧವಾಚೇನಿ ಧರ್ಮೇ ಜಾಣ । ಭವಾಬ್ಧಿ ತರೇ ತ್ರಿಭುವನ। ಐಸೇ ಬೋಲವಿಲೇ ಗುಹ್ಯಜ್ಞಾನ। ಸಪ್ರೇಮ ಭಜನ ತದ್ಯುಕ್ತ ॥೧೦೧೦॥ ಉಪೇಕ್ಷೂನೀ ಚಾರೀ ಮುಕ್ತೀ । ಉದ್ಧವೇ ಥೋರಾವಿಲೀ ಹರಿಭಕ್ತಿ । ಏವಢೀ ಉದ್ಧವೇ ಕೇಲೀ ಖ್ಯಾತೀ । ತ್ರಿಜಗತೀ ತರಾವಯಾ ॥೧೦೧೧॥

ಶ್ರೀಕೃಷ್ಣನು ಸರ್ವಜ್ಞನಾಗಿದ್ದನು. ವೇದಗಳ ಸಾರ ಹೀರಲು ಆತನು ರಾಜಹಂಸನಾಗಿದ್ದನು. ಆತನು ವೇದಗಳಿಗೆ ತಿಲಮಾತ್ರವೂ ದುಃಖಕೊಡದೇ ವೇದಗಳ ಸಾರಾಂಶವನ್ನು ತೆಗೆದನು ॥೯೯೭॥ ಈ ಪ್ರಕಾರವಾಗಿ ಮಂಥನ ಮಾಡಿ ತೆಗೆದ ವೇದಗಳ ಸಾರ ಅಥವಾ ಜ್ಞಾನವಿಜ್ಞಾನ ವೇದಾಮೃತವನ್ನು ಏಕತ್ರ ಮಾಡಿ ಭಕ್ತರ ಕಲ್ಯಾಣಕ್ಕಾಗಿ ಕೃಪೆಯಿಂದ ಶ್ರೀಕೃಷ್ಣನು ಅರ್ಪಣೆ ಮಾಡಿದನು ॥೯೯೮॥ ಭ್ರಮರವು ಕಮಲ ಪುಷ್ಪಕ್ಕೆ ಸ್ವಲ್ಪವೂ ಕೂಡ ದುಃಖಕೊಡದೇ ಅದರಲ್ಲಿನ ಮಕರಂದವನ್ನು ಹಗುರವಾಗಿ ಹೊರಗೆ ಹೇಗೆ ತೆಗೆದುಕೊಳ್ಳುವುದೋ, ಅದರಂತೆಯೇ ಭಗವಾನ ಶ್ರೀಕೃಷ್ಣನು ವೇದಗಳನ್ನು ಮಂಥಿಸಿ ಶುದ್ಧವಾದ ಸಾರ ಹೊರಗೆ ತೆಗೆದನು ॥೯೯೯॥ ಈ ರೀತಿಯಲ್ಲಿ ಕೃಪಾವಂತನಾದ ಭಕ್ತಕೈವಾರಿಯಾದ ಶ್ರೀಕೃಷ್ಣನು ವೇದಸಾರಾಮೃತವನ್ನು ತೆಗೆದು ನಿರ್ಭಯದಿಂದ ತನ್ನ ಸೇವಕರ ಕೈಯಲ್ಲಿ ಕೊಟ್ಟನು ॥೧೦೦೦॥ ಹೀಗೆ ತನ್ನ ಸೇವಕರಿಗೆ ವೇದಸಾರಾಮೃತವನ್ನು ಪೂರ್ಣವಾಗಿ ಕುಡಿಸಿ ಶ್ರೀಕೃಷ್ಣನು ಅವರ ಜನ್ಮಮರಣ ಹಾಗೂ ಸಂಸಾರದ ಭಯ ಇಲ್ಲದಂತಾಗಿ ಮಾಡಿಬಿಟ್ಟನು ॥೧೦೦೧॥ ನಿಜವಾಗಿ ನೋಡಿದರೆ ಈ ಮಾಯೆಯು ಜಗತ್ತಿನ ಮುಖ್ಯ ಕಾರಣವಾಗಿರುವುದು. ಆದರೆ ಶ್ರೀಕೃಷ್ಣನು ಮಾಯೆಯ ಮೂಲ ಕಾರಣನಾಗಿರುವನು. ಸಚ್ಚಿದಾನಂದ ಸ್ವರೂಪವೆಂಬ ಈ ಯಾವ ಸ್ವರೂಪಕ್ಕೆ ಶ್ರೀಕೃಷ್ಣನೆಂಬ ನಾಮವಿರುವುದು ॥೧೦೦೨॥ ಮಾಯೆಯ ಯೋಗದಿಂದ ಮಾನವ ವೇಷ ಧರಿಸುವ, ಪುರುಷರಲ್ಲಿ ಪುರುಷಶ್ರೇಷ್ಠ, ಪರಿಪೂರ್ಣವಾಗಿ ಜ್ಞಾನನಿಷ್ಠ ಹೀಗಿರುವ ಯಾವ ಶ್ರೀಕೃಷ್ಣನು ಸರ್ವ ವಂದ್ಯ ಪುರುಷರಲ್ಲಿಯೇ ಅತ್ಯಂತ ಶ್ರೇಷ್ಠನಾಗಿರುವನು ॥೧೦೦೩॥ ಆತನಿಗೆ ಕಾಯಾ, ವಾಚಾ, ಮನಸಾ ಸರ್ವದೃಷ್ಟಿಯಿಂದ ಅನನ್ಯ ಭಾವದಿಂದ ಶರಣು ಹೋಗಿ ಶುಕಾಚಾರ್ಯರು ಮನೋಭಾವದಿಂದ ವಂದನೆ ಮಾಡಿದರು ॥೧೦೦೪॥ ಶ್ರೀ ಶುಕಾಚಾರ್ಯರು ನಮನ ಮಾಡುವುದನ್ನು ಕಂಡ ಪರೀಕ್ಷಿತನಿಗೂ ಕೂಡ ಪ್ರೇಮ ಉತ್ಪನ್ನವಾಯಿತು. ಆಗ ಆತನು ಹೀಗೆ ಹೇಳಿದನು; ಭಕ್ತರಲ್ಲಿ ಕೃಪೆ ಮಾಡುವ ಒಬ್ಬ ಶ್ರೀಕೃಷ್ಣನೇ ಆಗಿರುವನು. ನನಗೆ ಬೇರೆ ಯಾರೂ ಕಾಣಿಸುವುದಿಲ್ಲ ॥೧೦೦೫॥ ಉದ್ಧವನು ಪರಮ ನಿರ್ವಾಣಕ್ಕೆ ಮುಟ್ಟಿಕೊಂಡನು. ಇಲ್ಲಿಗೆ ಜ್ಞಾನಕಥೆಯ ನಿರೂಪಣೆಯು ಸಂಪೂರ್ಣವಾಯಿತು. ಜಗತ್ತಿನಲ್ಲಿ ಭಗವದ್ಭಜನೆ ಮಾತ್ರ ಸರ್ವದೃಷ್ಟಿಯಿಂದ ಶ್ರೇಷ್ಠವಾಗಿರುವುದು. ಕಾರಣ ಶ್ರೀಕೃಷ್ಣನು ಭಕ್ತರ ಆಧೀನನಾಗಿರುವನು ॥೧೦೦೬॥ ಭಕ್ತರು ಯಾವುದನ್ನು ಅಪೇಕ್ಷಿಸುವರೋ, ಅವರ ಮನೋರಥವನ್ನು ಶ್ರೀಕೃಷ್ಣನು ಪೂರ್ಣ ಮಾಡುವನು. ಕೊನೆಯಲ್ಲಿ ತನ್ನ ಪದವಿಯನ್ನೂ ಕೂಡ ಆತನಿಗೆ ಅರ್ಪಿಸಿಬಿಡುವನು. ಹೀಗೆ ಆತನು ಭಕ್ತರಲ್ಲಿ ಕೃಪೆಯ ಮಳೆಗರೆಯುವನು ॥೧೦೦೭॥ ಶ್ರೀಕೃಷ್ಣನು ತನ್ನ ನಿಜಧಾಮಕ್ಕೆ ಹೊರಟಿರುವಾಗ್ಗೆ, ಉದ್ಧವನು ಒಂದುವೇಳೆ ಈ ಪ್ರಶ್ನೆಯನ್ನು ಕೇಳದಿದ್ದರೆ ಶ್ರೀಕೃಷ್ಣನು ಈ ಪರಮಾಮೃತದ ಕಥೆಯನ್ನು ಹೇಳುತ್ತಿರಲಿಲ್ಲ ॥೧೦೦೮॥ ಆದ್ದರಿಂದ ಜಗತ್ತಿನ ಮೇಲೆ ಉದ್ಧವನ ದೊಡ್ಡ ಉಪಕಾರವಾಗಿರುವುದು. ಕಾರಣ ಆತನಿಂದಲೇ ಶ್ರೀಕೃಷ್ಣನು ಭಕ್ತಿ, ಜ್ಞಾನ, ವೈರಾಗ್ಯದ ಸಾರವನ್ನು ನಿರೂಪಿಸಿದನು ॥೧೦೦೯॥ ಈ ಯಾವ ಉದ್ಧವನ ಉಪಕಾರದಿಂದಲೇ ಸರ್ವ ತ್ರಿಭುವನವು ಸಹಜವಾಗಿ ಭವಸಾಗರ ದಾಟಿ ಹೋಗುವಂತಹ ಗುಹ್ಯಜ್ಞಾನವನ್ನು ಹಾಗೂ ಪ್ರೇಮಮಯ ಭಜನೆಯನ್ನು ಆತನು ತಿಳಿಸಿ ಹೇಳಿದನು ॥೧೦೧೦॥ ನಾಲ್ಕು ಮುಕ್ತಿಗಳ ಉಪೇಕ್ಷೆ ಮಾಡಿ ಉದ್ಧವನು ಹರಿಭಕ್ತಿಯ ಶ್ರೇಷ್ಠತ್ವವನ್ನು ಬೆಳೆಯಿಸಿದನು. ತ್ರೈಲೋಕ್ಯದ ಉದ್ಧಾರಕ್ಕಾಗಿ ಉದ್ಧವನು ಇಷ್ಟೊಂದು ಖ್ಯಾತಿ ಮಾಡಿದನು ॥೧೦೧೧॥

ಏಕಾದಶಾಚೇನಿ ನಾಂವೇ । ಘಾತಲೀ ಭಕ್ತಿಮುಕ್ತೀಚೀ ಪವ್ಡೇ । ಏವಢೀ ಕೀರ್ತಿ ಕೇಲೀ ಉದ್ಧವೇ । ಜಡಜೀವೇ ತರಾವಯಾ ॥೧೦೧೨॥ ಧೇನೂಚ್ಯಾ ಠಾಯೀ ಕ್ಷೀರ ಪೂರ್ಣ । ಪರೀ ಹಾತಾ ನ ಯೇ ವತ್ಸೇವೀಣ । ತೇವೀ ಶ್ರೀಕೃಷ್ಣಾಚೇ ಪೂರ್ಣ ಜ್ಞಾನ । ಉದ್ಧವೇ ಜಾಣ ಪ್ರಗಟ ಕೇಲೇ ॥೧೦೧೩॥ ಕೃಷ್ಣೋದ್ಧವಸಂವಾದಕಥನ । ತೇ ಅತಿಶಯೇ ಜ್ಞಾನ ಗಹನ । ತೇಥ ಮೀ ಅಪುರತೇ ದೀನ । ಕೇವೀ ವ್ಯಾಖ್ಯಾನ ಕರವಲೇ ॥೧೦೧೪॥ ಕೃಷ್ಣೋದ್ಧವಜ್ಞಾನ ಗಹನ । ತ್ಯಾಚೇ ಕರಾವಯಾ ವ್ಯಾಖ್ಯಾನ । ಸಾಹ್ಯ ಜಾಹಲಾ ಜನಾರ್ದನ । ಜೋ ಸರ್ವೀ ಸರ್ವಜ್ಞ ಸರ್ವಾರ್ಥೀ ॥೧೦೧೫॥ ಪದಪದಾರ್ಥಸಂಗತೀ । ಜ್ಞಾನಾಚೀ ಪರಿಪಾಕಸ್ಥಿತೀ । ವೈರಾಗ್ಯಯುಕ್ತಿ ಭಕ್ತಿಮುಕ್ತೀ । ಹೇಹೀ ವ್ಯುತ್ಪತ್ತೀ ಮೀ ನೇಣೇ ॥೧೦೧೬॥ ಮಾಝೀ ಜೇ ಕಾ ಮೀಪಣ । ತೇಹೀ ಜಾಹಲಾ ಜನಾರ್ದನ । ತೆವ್ಹಾ ಪದಪದಾರ್ಥ ವ್ಯಾಖ್ಯಾನ । ಕರ್ತಾ ಜಾಣ ತೋ ಏಕ ॥೧೦೧೭॥ ತೋ ಏಕಾ ಏಕಪಣಾಚೇನಿ ಭಾವೇ । ಐಕ್ಯತಾ ಫಾವಲೀ ಸ್ವಭಾವೇ । ''ಏಕಾಜನಾರ್ದನ'' ಯೇಣೇ ನಾಂವೇ । ಹಾ ಗ್ರಂಥ ದೇವೇ ವಿಸ್ತಾರಿಲಾ ॥೧೦೧೮॥ ಮಾಝೀ ಬುದ್ಧಿ ಚೇಹೀ ಬುದ್ಧೀ । ಜನಾರ್ದನ ಜಾಹಲಾ ಅರ್ಥಾವಬೋಧೀ । ಕವಿತ್ವಯುಕ್ತೀ-ಪದಬಂಧೀ । ವದತಾ ತ್ರಿಶುದ್ಧೀ ಜನಾರ್ದನ ॥೧೦೧೯॥ ಮಾಝೀ ನಾಮರೂಪ ಕರ್ಮ ಗುಣ । ಮೂಳೀ ಪಾಹತಾ ಮಿಥ್ಯಾ ಜಾಣ । ಪರೀ ತೇಹೀ ಜಾಹಲಾ ಜನಾರ್ದನ । ಐಸೇ ಏಕಪಣ ಪಢಿಯಂತೇ ॥೧೦೨೦॥ ನಾಂವೇ ಭಾವೇ ಏಕಪಣ । ಯಾಲಾಗೀ ತುಷ್ಟಲಾ ಜನಾರ್ದನ । ತೇಣೇ ಮಾಝ್ಯಾ ನಾಂವ ಐಸೇ ಜಾಣ । ಜಗೀ ಏಕಪಣ ಪ್ರಕಾಶಿಲೇ ॥೧೦೨೧॥ ''ಏಕಾ'' ಯಾ ನಾಂವಾಚೇ ಕೌತುಕ । ಪಢಿಯೇ ಜನಾರ್ದನಾಸೀ ಅತ್ಯಂತಿಕ । ತೇಣೇ ತೋ ಮಜಸೀ ಜಾಹಲಾ ಏಕ । ''ಮೀ ತೂ'' ದೇಖ ಮ್ಹಣತಾಂಹೀ ॥೧೦೨೨॥ ''ಏಕಾ'' ಯಾ ನಾಂವಾಚೇ ಕೌತುಕ । ಜನಾರ್ದನಾಸೀ ಐಸೇ ದೇಖ । ಏಕತ್ವೀ ಪ್ರಕಾಶೀ ಅನೇಕ । ಅನೇಕೀ ಏಕ ಅವಿಕಾರೀ ॥೧೦೨೩॥ ನಾಂವೇ ಏಕ ಭಾವೇ ಏಕ । ತ್ಯಾಸೀ ದೇವಾಚೇ ಸರ್ವದಾ ಐಕ್ಯ । ಮಗ ದೇಖತಾ ಏಕಾನೇಕ । ಭಿನ್ನತ್ವ ದೇಖ ಅಸೇನಾ ॥೧೦೨೪॥ ಹೇ ಏಕತ್ವ ಜಂವ ನ ಯೇ ಹಾತಾ । ತಂವ ನ ಲಾಭೇ ದೇವಾಚೀ ಪ್ರಸನ್ನತಾ । ಏಕತ್ವಾವಾಂಚೂನಿ ಸರ್ವಥಾ । ಅಕರ್ತಾತ್ಮತಾ ಕಳೇನಾ ॥೧೦೨೫॥

ಹನ್ನೊಂದನೆಯ ಸ್ಕಂದದ ನಿಮಿತ್ತದಿಂದ ಭಕ್ತಿ ಮತ್ತು ಮುಕ್ತಿ ಇವುಗಳ ಅರವಟ್ಟಿಗೆಯನ್ನೇ ಸ್ಥಾಪಿಸಿದನು. ಜಡಜೀವಿಗಳ ಉದ್ಧಾರಕ್ಕಾಗಿ ಉದ್ಧವನು ಇಂತಹ ಕೀರ್ತಿ ಮಾಡಿಟ್ಟನು ॥೧೦೧೨॥ ಆಕಳಿನ ಕೆಚ್ಚಲದಲ್ಲಿ ಹಾಲು ತುಂಬಿರುವುದೇನೋ ನಿಜ, ಆದರೆ ಅದು ತನ್ನ ಕರುವಿನ ಹೊರತಾಗಿ ನಮ್ಮ ಕೈ ಸೇರುವುದಿಲ್ಲ. ಅದರಂತೆ ಶ್ರೀಕೃಷ್ಣನ ಪೂರ್ಣ ಜ್ಞಾನವನ್ನು ಉದ್ಧವನು ಪ್ರಕಟ ಮಾಡಿದನು ॥೧೦೧೩॥ ಶ್ರೀಕೃಷ್ಣ ಹಾಗೂ ಉದ್ಧವ ಇವರ ಸಂವಾದವು ಗಹನವಾದ ಜ್ಞಾನವಾಗಿರುವುದು. ನಾನು ಮಾತ್ರ ಅಪೂರ್ಣ ಜ್ಞಾನಿಯು. ಆದ್ದರಿಂದ ಇಂತಹ ದೀನನಾಗಿರುವ ನನಗೆ ಇದರ ವ್ಯಾಖ್ಯಾನ ಮಾಡುವುದು ಹೇಗೆ ಸಾಧ್ಯ? ॥೧೦೧೪॥ ಇಂತಹ ಪ್ರಸಂಗದಲ್ಲಿ ಈ ಶ್ರೀಕೃಷ್ಣೋದ್ಧವ ಜ್ಞಾನದ ವ್ಯಾಖ್ಯಾನ ಮಾಡಲು ಸರ್ವಜ್ಞರಾಗಿರುವ ನನ್ನ ಜನಾರ್ದನಸ್ವಾಮಿಯವರು ಸಹಾಯಕರ್ತರಾದರು ॥೧೦೧೫॥ ಪದ ಹಾಗೂ ಪದದ ಅರ್ಥ ಇವುಗಳ ಸಂಬಂಧ ಏನೆಂಬುವುದು ನನಗೆ ತಿಳಿಯದು. ಜ್ಞಾನದ ಪೂರ್ಣಾವಸ್ಥೆಯನ್ನೂ ಕೂಡ ನಾನು ಅರಿಯೆನು. ವೈರಾಗ್ಯಯುಕ್ತ ಭಕ್ತಿ-ಮುಕ್ತಿ ಇವುಗಳ ಪ್ರಕಾರವೂ ಕೂಡ ನನಗೆ ತಿಳಿಯದ ಮಾತಾಗಿರುವುದು ॥೧೦೧೬॥ ನನ್ನಲ್ಲಿನ ನಾನು ಎಂಬುವುದನ್ನು ಜನಾರ್ದನರೇ ಆಗಿಬಿಟ್ಟರು. ಅಂದಮೇಲೆ ಪದಪದಾರ್ಥಗಳ ಸ್ಪಷ್ಟೀಕರಣ ಮಾಡುವವರು ಅವರೇ ಒಬ್ಬರಾಗಿರುವರು ॥೧೦೧೭॥ ಏಕನಾಥನಿಗೆ ಏಕತ್ವದ ಭಾವನೆಯಿಂದ ಐಕ್ಯತೆ ಪ್ರಾಪ್ತವಾಯಿತು. ''ಏಕಾ-ಜನಾರ್ದನ'' ಎಂಬ ಈ ನಾಮದಿಂದ ಈ ಗ್ರಂಥವನ್ನು ದೇವರೇ ಸಿದ್ಧಗೊಳಿಸಿರುವನು ॥೧೦೧೮॥ ಅರ್ಥವನ್ನು ಪ್ರಕಟ ಮಾಡುವ ಪ್ರಸಂಗದಲ್ಲಿ ಜನಾರ್ದನರೇ ನನ್ನ ಬುದ್ಧಿಯಲ್ಲಿನ ಬುದ್ಧಿಯಾದರು. ಅದರಂತೆಯೇ ಪದಬಂಧಗಳಲ್ಲಿ ಕವಿತ್ವಯುಕ್ತಿ ನಿಜವಾಗಿಯೂ ಅವರೇ ಆದರು ॥೧೦೧೯॥ ನನ್ನ ನಾಮ, ರೂಪ, ಕರ್ಮ, ಗುಣ ಇತ್ಯಾದಿಗಳನ್ನು ನೋಡಿದರೆ ಎಲ್ಲವೂ ಮಿಥ್ಯೆಯಾಗಿರುವುವು. ಆದರೆ ಅವುಗಳೂ ಸಹ ಜನಾರ್ದನರೇ ಆಗಿರುವರು. ಇಷ್ಟೊಂದು ಏಕತ್ವವು ಅವರಿಗೆ ಪ್ರಿಯವಾಗಿರುವುದು ॥೧೦೨೦॥ ನನ್ನ ನಾಮದಲ್ಲಿನ ಮತ್ತು ಭಾವನೆಯಲ್ಲಿನ ಏಕತ್ವವಿರುವುದನ್ನು ಕಂಡು ಜನಾರ್ದನರು ಸಂತುಷ್ಟರಾದರು. ಅವರು ನನ್ನ ನಾಮದಂತೆಯೇ ಜಗತ್ತಿನಲ್ಲಿ ಐಕ್ಯತ್ವದ ಪ್ರಕಾಶ ಬೆಳಗಿಸಿದರು ॥೧೦೨೧॥ ಏಕಾ ಅಂದರೆ ಒಂದೇ ಎಂಬ ಈ ನಾಮವು ಜನಾರ್ದನಿಗೆ ಅತಿಶಯ ಕೌತುಕವಾಗಿ ತೋರುವುದು. ಆದ್ದರಿಂದ ಅವರು ನನ್ನಲ್ಲಿ ''ನಾನು-ನೀನು'' ಎಂದು ಹೇಳುತ್ತಿದ್ದರೂ ಸಹ ಅವರು ನನ್ನಲ್ಲಿ ಏಕರೂಪರಾಗಿರುವರು ॥೧೦೨೨॥ ಏಕಾ ಎಂಬ ಈ ನಾಮದಲ್ಲಿ ಜನಾರ್ದನರಿಗೆ ಎಷ್ಟೊಂದು ಕೌತುಕವಿದೆ ಎಂದರೆ ಒಂದರಲ್ಲಿಯೇ ಅನೇಕ ಪ್ರಕಟವಾಗಿ ಮತ್ತು ಅನೇಕದಲ್ಲಿ ಅವಿನಾಶಿಯಾದ ಒಂದೇ ತತ್ವವಿರುವುದನ್ನು ತೋರಿಸಿಕೊಡುವರು ॥೧೦೨೩॥ ಯಾವುದು ನಾಮದಿಂದ ಒಂದೇ ಆಗಿ ಭಾವನೆಯಿಂದಲೂ ಒಂದೇಯಾದರೆ ಅದು ಯಾವಾಗಲೂ ದೇವರಲ್ಲಿ ಐಕ್ಯವಾಗಿರುವುದು. ಆದ್ದರಿಂದ ಮುಂದೆ ಆತನು ಒಂದು ಮತ್ತು ಅನೇಕ ಕಾಣುತ್ತಿದ್ದರೂ ಕೂಡ ಅವುಗಳಲ್ಲಿ ಭಿನ್ನತ್ವವೆಂಬುವುದು ಇರುವುದಿಲ್ಲ ॥೧೦೨೪॥ ಇಂತಹ ಏಕತ್ವವು ಎಲ್ಲಿಯವರೆಗೆ ನಮ್ಮ ಕೈ ಸೇರುವುದಿಲ್ಲವೋ, ಅಲ್ಲಿಯವರೆಗೆ ದೇವರ ಪ್ರಸನ್ನತೆ ಲಭಿಸಲಾರದು. ಏಕತ್ವವಿಲ್ಲದೇ ಅಕರ್ತಾತ್ಮತೆಯು ಸರ್ವಥಾ ತಿಳಿಯಲಾರದು ॥೧೦೨೫॥ ಎಲ್ಲಿಯವರೆಗೆ ನಾನು ಮಾಡಿದೆ ಎಂಬ ಕರ್ತೃತ್ವದ ಅಹಂಕಾರವು ಮನದಲ್ಲಿ ಇರುವುದೋ ಅಲ್ಲಿಯವರೆಗೆ ದೇವರು ಎಂದಿಗೂ ಭೇಟಿಯಾಗಲಾರನು. ಅಹಂಕಾರದಲ್ಲಿ ಬದ್ಧತೆಯಿರುವುದು. ಆ ಅಹಂಕಾರ ಬಿಟ್ಟಾಗಲೇ ಮುಕ್ತಿಯು ಲಭಿಸುವುದು ॥೧೦೨೬॥

ಜಂವ ಕರ್ತವ್ಯಾಚಾ ಅಹಂಭಾವೋ । ತಂವ ಸರ್ವಥಾ ನ ಭೇಟೇ ದೇವೋ । ಅಹಂಪಾಶೀ ಬದ್ಧ ತೇಶೀ ಠಾವೋ । ಮುಕ್ತತಾ ಪಹಾ ಹೋ ತತ್ತ್ಯಾಗೇ ॥೧೦೨೬॥ ನಾಮರೂಪಾ ಏಕಪಣ । ಹೇಚಿ ಮಾಝೇಂ ಅನುಷ್ಠಾನ । ತೇಣೇಂ ತುಷ್ಟಲಾ ಜನಾರ್ದನ । ಮಾಝೇಂ ಮೀಪಣ ತೋಚಿ ಜಾಹಲಾ ॥೧೦೨೭॥ ಜೇವೀ ಬಾಹುಲ್ಯಾಂಚೇ ಖೇಳಣೇಂ । ತೇಥ ರುಸಣೇಂ ಆಣಿ ಸಂತೋಷಣೇಂ । ಹೇ ಖೇಳವಿತ್ಯಾಂಚೇ ಕರಣೇಂ । ಬಾಹುಲೀ ನೇಣೇ ತೋ ಅರ್ಥ ॥೧೦೨೮॥ ತೇವೀ ಮಾಝೇನಿ ನಾಂವೇ ಕವಿತಾ । ಕರೂನ ಜನಾರ್ದನ ಜಾಹಲಾ ವಕ್ತಾ । ಯಾಲಾಗೀ ಹೇ ಗ್ರಂಥಕಥಾ । ಸಾಧುಸಂತಾ ಪಢಿಯಂತೀ ॥೧೦೨೯॥ ದೇಹಅಹಂತಾ ಗ್ರಂಥ ಕರಿತಾ । ಏಕಹೀ ವೋವೀ ನ ಯೇ ಹಾತಾ । ಯೇಥ ಜನಾರ್ದನ ಜಾಹಲಾ ವಕ್ತಾ । ಗ್ರಂಥ ಗ್ರಂಥಾರ್ಥಾ ತೇಣೇಂ ಆಲಾ ॥೧೦೩೦॥ ದೇಖೋನಿ ಮರಾಠೀ ಗೋಠೀ । ನ ಮ್ಹಣಾವೀ ವೃಥಾ ಚಾವಟೀ । ಪಹಾವೀ ನಿಜಬೋಧಕಸವಟೀ । ನಿಜಾತ್ಮದೃಷ್ಟೀ ಸಜ್ಜನೀ ॥೧೦೩೧॥ ಸಂಸ್ಕೃತ ವಂದ್ಯ ಪ್ರಾಕೃತ ನಿಂದ್ಯ । ಹೇ ಬೋಲ ಕಾಯ ಹೋತೀ ಶುದ್ಧ । ಹಾಹೀ ಅಭಿಮಾನದವಾದ । ಅಹಂತಾ ಬಂಧ ಪರಮಾರ್ಥೀ ॥೧೦೩೨॥ ಮೋಲೇ ಭೂಮಿ ಖಣಿತಾ ವೈರಾಗರೀ । ಅವಚಟೇ ಅನರ್ಘ್ಯರತ್ನ ಲಾಭೇ ಕರೀ । ತೇ ರತ್ನ ಸಾಂಪಡಲ್ಯಾ ಕೇರೀ । ಕಾಯ ಚತುರೀ ಉಪೇಕ್ಷಾ ॥೧೦೩೩॥ ತೇವೀ ಸಂಸ್ಕೃತ ಆಟಾಟೀ । ಕರಿತಾ ಪರಮಾರ್ಥೀ ನವ್ಹೇ ಭೇಟೀ । ತೇಚಿ ಜೋಡಲ್ಯಾ ಮರಾಠೀಸಾಠೀ । ತೇಥ ಘಾಲಿತೀ ಮಿಠೀ ಸಜ್ಞಾನ ॥೧೦೩೪॥ ಚಕೋರಾ ಚಂದ್ರಾಮೃತಪ್ರಾಶನ । ವಾಯಸಾ ತೇಥೇ ಪಡೇ ಲಂಘನ । ತೇವೀ ಹಾ ಮಹಾರಾಷ್ಟ್ರ ಗ್ರಂಥ ಜಾಣ । ಫಳಾಫಳಾಪಣ ಜ್ಞಾನಾಜ್ಞಾನೇ ॥೧೦೩೫॥ ದೇವಾಸೀ ನಾಹೀ ಭಾಷಾಭಿಮಾನ । ಸಂಸ್ಕೃತ ಪ್ರಾಕೃತ ದೋನೀ ಸಮಾನ । ಜ್ಯಾ ಭಾಷಾ ಕೇಲೇ ಬ್ರಹ್ಮಕಥನ । ತ್ಯಾ ಭಾಷಾ ಶ್ರೀಕೃಷ್ಣ ಸಂತೋಷೇ ॥೧೦೩೬॥ ಸಾಜುಕ ಆಣಿ ಸುಕಲೀ । ಸುವರ್ಣಸುಮನೀ ನಾಹೀ ಚಾಲೀ । ತೇವೀ ಸಂಸ್ಕೃತ ಪ್ರಾಕೃತ ಬೋಲೀ । ಬ್ರಹ್ಮಕಥೇನೇ ಆಲೀ ಸಮತ್ವಾ ॥೧೦೩೭॥ ಸಂಸ್ಕೃತ ಭಾಷಾ ನಿಂದಾ ಕೇಲೀ । ತರೀ ತೇ ಕಾಯ ಪಾವನ ಜಾಹಲೀ । ಪ್ರಾಕೃತ ಭಾಷಾ ಹರಿಕಥಾ ಕೇಲೀ । ತೇ ವೃಥಾ ಗೇಲೀ ಮ್ಹಣವೇನಾ ॥೧೦೩೮॥ ಜಂವ ಜಂವ ದೃಢ ಭಾಷಾಅಭಿಮಾನ । ತಂವ ತಂವ ವಕ್ತ್ಯಾಸೀ ಬಾಧಕ ಪೂರ್ಣ । ಜ್ಯಾ ಭಾಷಾ ಕೇಲೇ ಬ್ರಹ್ಮಕಥನ । ತೇ ಹೋಯ ಪಾವನ ಹರಿಚರಣೇಂ ॥೧೦೩೯॥

ನಾಮರೂಪದಲ್ಲಿ ಒಂದನ್ನೇ ಕಾಣುವುದೇ ನನ್ನ ಅನುಷ್ಠಾನವಾಗಿರುವುದು. ಇದರಿಂದ ಜನಾರ್ದನರಿಗೆ ಪರಮ ಸಂತೋಷ ಉಂಟಾಯಿತು. ಕೊನೆಗೆ ನನ್ನಲ್ಲಿನ ನಾನು ಎಂಬುವುದನ್ನು ಅವರೇ ಆದರು ॥೧೦೨೭॥ ಸೂತ್ರಗೊಂಬೆಯ ಆಟದಲ್ಲಿ ಗೊಂಬೆಗಳಿಗೆ ಆಡಿಸುತ್ತಿರುವರು ಆ ಗೊಂಬೆಗಳ ಕೆಲವೊಮ್ಮೆ ಮುನಿಸುಗೊಳ್ಳುವುವು. ಪುನಃ ಸಂತೋಷ ಪ್ರಕಟ ಮಾಡುವುವು. ಆದರೆ ಈ ಸರ್ವ ಆಟವು ಆಟ ಆಡಿಸುವವನ ಕೌಶಲ್ಯವಾಗಿರುವುದು. ಗೊಂಬೆಗಳು ಮಾತ್ರ ಇದನ್ನು ಯಾವುದೂ ತಿಳಿಯಲಾರವು ॥೧೦೨೮॥ ಅದರಂತೆಯೇ ಶ್ರೀಜನಾರ್ದನಸ್ವಾಮಿಯವರು ನನ್ನ ನಾಮದಿಂದ ಕಾವ್ಯಗಳನ್ನು ರಚಿಸಿ ತಾವು ಸ್ವತಃ ವಕ್ತಾ ಆಗಿರುವರು. ಆದ್ದರಿಂದಲೇ ಈ ಗ್ರಂಥದಲ್ಲಿನ ಕಥೆಗಳು ಸಾಧು ಸಂತರಿಗೆ ಅತಿಸಯ ಪ್ರಿಯವಾಗಿರುವುವು ॥೧೦೨೯॥ ನಾನು ಒಂದುವೇಳೆ ದೇಹ ಅಹಂಕಾರದಿಂದ ಈ ಗ್ರಂಥ ಬರೆಯಲು ಆರಂಭಿಸಿದ್ದರೆ ನನಗೆ ಒಂದು ವಚನವನ್ನೂ ಕೂಡ ಬರೆಯಲು ಸಾಧಿಸುತ್ತಿದ್ದಿಲ್ಲ. ಆದರೆ ಜನಾರ್ದನರು ಇದರ ಕರ್ತನಾಗಿರುವುದರಿಂದ ಈ ಕಥೆಗೆ ಗ್ರಂಥತ್ವವು ಪ್ರಾಪ್ತವಾಯಿತು ॥೧೦೩೦॥ ಈ ಗ್ರಂಥದಲ್ಲಿನ ಮರಾಠೀ ಭಾಷೆ ಕಂಡು ಇದು ಯೋಗ್ಯವಲ್ಲವೆಂದು ಹೇಳಬಾರದು. ಸಜ್ಜನರಾದವರು ಆತ್ಮಜ್ಞಾನದ ಒರೆಗಲ್ಲಿಗೆ ಹಚ್ಚಿ ಆತ್ಮದೃಷ್ಟಿಯಿಂದ ಈ ಗ್ರಂಥದತ್ತ ನೋಡಬೇಕು ॥೧೦೩೧॥ ಸಂಸ್ಕೃತ ಭಾಷೆಯು ವಂದನೀಯ, ಪ್ರಾಕೃತ ಭಾಷೆಯು ನಿಂದ್ಯನೀಯ ಎಂದು ಹೇಳುವುದು ಸರಿಯಾಗುವುದೇ? ಈ ವಾದವು ಕೇವಲ ಅಭಿಮಾನದಿಂದ ನಿರ್ಮಾಣವಾಗುತ್ತಿರುವುದು. ಅಹಂತೆಯು ಇದು ಪರಮಾರ್ಥಕ್ಕೆ ಬಂಧನಕಾರಕವು ॥೧೦೩೨॥ ಮನುಷ್ಯರಿಗೆ ಹಣಕೊಟ್ಟು ರತ್ನದ ಖಣಿಯನ್ನು ಅಗೆಯಲು ಹಚ್ಚಿದಾಗ ಮಹಾ ಪ್ರಯತ್ನದಿಂದ ಅಮೌಲ್ಯವಾದ ರತ್ನವು ದೊರೆತರೆ ಅದನ್ನು ಮಾತ್ರ ಸ್ವೀಕರಿಸಬೇಕು. ಅದೇ ರತ್ನವು ತಿಪ್ಪೆಯಲ್ಲಿ ದೊರೆತರೆ ಜಾಣ ಮನುಷ್ಯನು ಅದನ್ನು ಒಗೆದು ಬಿಡಬೇಕೆ ? ॥೧೦೩೩॥ ಅದರಂತೆ ಸಂಸ್ಕೃತದ ಖಟಾಟೋಪದಲ್ಲಿ ಬಿದ್ದುಕೊಂಡರೆ ಸಾಯಾಸಪಟ್ಟರೂ ಸಹ ಪರಮಾರ್ಥದ ಪ್ರಾಪ್ತಿಯಾಗುವುದಿಲ್ಲ. ಅದೇ ಪರಮಾರ್ಥವು ಮರಾಠೀ ಭಾಷೆಯ ಮುಖಾಂತರ ದೊರೆತರೆ ಜನರು ಅದರಮೇಲೆ ಮುಗಿಬೀಳದೇ ಇರುವರೆ? ॥೧೦೩೪॥ ಚಕೋರ ಪಕ್ಷಿಯು ಚಂದ್ರಾಮೃತ ಸೇವಿಸುತ್ತಿದ್ದರೆ ಆಗ ಕಾಗೆಯು ಮಾತ್ರ ಉಪಾವಾಸ ಕುಳಿತುಕೊಳ್ಳುವುದು. ಅದರಂತೆಯೇ ಈ ಮಹಾರಾಷ್ಟ್ರ ಗ್ರಂಥವಾಗಿರುವುದು. ಇದರ ಫಲವು ಜ್ಞಾನಿಗೆ ದೊರಕುವುದು. ಅಜ್ಞಾನಿಗೆ ಮಾತ್ರ ದೊರೆಯಲಾರದು ॥೧೦೩೫॥ ದೇವರಿಗೆ ಯಾವುದೇ ಭಾಷೆಯ ಅಭಿಮಾನವಿರುವುದಿಲ್ಲ. ಆತನಿಗೆ ಸಂಸ್ಕೃತವಾಗಲಿ, ಪ್ರಾಕೃತವಾಗಲಿ ಎರಡೂ ಕೂಡ ಸಮಾನವಾಗಿರುವುವು. ಯಾವ ಭಾಷೆಯಲ್ಲಿ ಬ್ರಹ್ಮಕಥನವಾಗುವುದೋ, ಆ ಭಾಷೆಯಿಂದ ಶ್ರೀಕೃಷ್ಣನಿಗೆ ಸಂತೋಷವಾಗುವುದು ॥೧೦೩೬॥ ಚಿನ್ನದ ಹೂವುಗಳಿರಲು ಅದರಲ್ಲಿ ತಾಜಾ ಹಾಗೂ ಬಾಡಿದ ಎಂಬ ಭೇದವಿರುವುದೇ? ಅದರಂತೆಯೇ ಸಂಸ್ಕೃತ ಮತ್ತು ಪ್ರಾಕೃತ ಈ ಎರಡೂ ಭಾಷೆಗಳಲ್ಲಿ ಬ್ರಹ್ಮಕಥನವು ಸಮತ್ವದಿಂದ ಇರುವುದು ॥೧೦೩೭॥ ಸಂಸ್ಕೃತ ಭಾಷೆಯಲ್ಲಿ ನಿಂದೆ ಮಾಡಿದರೆ ಅವರು ಪಾವನರಾಗುವರೆ? ಪ್ರಾಕೃತ ಭಾಷೆಯಲ್ಲಿ ಹರಿ ಕಥೆ ಮಾಡಲು ಅದೇನು ವ್ಯರ್ಥ ಹೋಗುವುದೇ? ಹೀಗಾಗಲು ಸಾಧ್ಯವೇ ಇಲ್ಲ ॥೧೦೩೮॥ ಯಾವ ವಕ್ತಾನೇ ಆಗಿರಲಿ ಆತನು ಯಾವುದೇ ಭಾಷೆಯ ಅಭಿಮಾನ ಧರಿಸಿದರೆ ಅದು ಆತನಿಗೆ ಬಾಧಕವಾಗುವುದು. ಯಾವ ಭಾಷೆಯಲ್ಲಿ ಬ್ರಹ್ಮಕಥನ ಮಾಡಲ್ಪಟ್ಟದೆಯೋ, ಆ ಭಾಷೆಯು ಹರಿಚರಣ ಕಮಲಗಳಲ್ಲಿ ಪಾವನವಾಗುವುದು ॥೧೦೩೯॥

ಮಾಝೀ ಮರಾಠೀ ಭಾಷಾ ಉಘಡೀ । ಪರಿ ಪರಬ್ರಹ್ಮೇಸೀ ಫಳಲೀ ಗಾಢೀ । ಜೇ ಜನಾರ್ದನೇ ಲಾವಿಲೀ ಗೋಡೀ । ತೇ ಚವೀ ನ ಸೋಡೀ ಗ್ರಂಥಾರ್ಥ ॥೧೦೪೦॥ ಹೇ ಜನಾರ್ದನಕವಿತಾ ವಾಡೀ । ಬ್ರಹ್ಮರಸೇ ರಸಾಳ ಗಾಢೀ । ಸಂತಸಜ್ಜನ ಜಾಣತೀ ಗೋಡೀ । ಯಾಲಾಗೀ ಜೋಡೀ ಜೋಡಿಲಾ ಗ್ರಂಥ ॥೧೦೪೧॥ ಉದ್ಧವವ್ಯಾಜೇ ಸ್ವಯೇ ಶ್ರೀಕೃಷ್ಣ । ವದಲಾ ಪೂರ್ಣ ಬ್ರಹ್ಮಜ್ಞಾನ । ಯೇಣೇ ಛೇದೂನಿ ಭವಬಂಧನ । ದೀನಜನ ತರಾವಯಾ ॥೧೦೪೨॥ ತೋ ಹಾ ಏಕಾದಶಾಐಸಾ ಗ್ರಂಥ । ಯೇಥ ಠಾಕಠೋಕ ಪರಮಾರ್ಥ । ಯೇಣೇ ಮಹಾಕವಿ ಸಮಸ್ತ । ನಿಜಹಿತಾರ್ಥ ಪಾವಲೇ ॥೧೦೪೩॥ ಪಕ್ವ ಫಳೀ ಶುಕ ಝೇಂಪಾವೇ । ತೇಥ ಮುಂಗೀಹೀ ಜಾಊನಿ ಪಾವೇ । ತೇವೀ ಮಹಾಕವೀಂಚೇ ಘೇಊನಿ ಮಾಗೋವೇ । ಮೀಹೀ ಪಾವೇ ಪ್ರಾಕೃತ ॥೧೦೪೪॥ ಮಹಾರಾಯಾಚ್ಯಾ ತಾಟಾಪಾಶೀ । ರಿಗಮು ನಾಹೀ ಸಮರ್ಥಾಸೀ । ತೇಥೇ ಸುಖೇ ಬೈಸೇ ಮಾಶೀ । ತೇವೀ ಹಾ ಆಮ್ಹಾಂಸೀ ಪ್ರಾಕೃತ ಗ್ರಂಥ ॥೧೦೪೫॥ ಭೋಜನೀ ಧರೋನಿ ಬಾಪಾಚಾ ಹಾತ । ಗೋಡ ತೇ ಆಧೀ ಬಾಳಕ ಖಾತ । ತೇವೀ ಹಾ ಮಹಾಕವೀಂಚ್ಯಾ ಅನುಭವಾಂತ । ಪ್ರಾಕೃತೇ ಪರಮಾರ್ಥ ಮೀಹೀ ಲಾಭೇ ॥೧೦೪೬॥ ಮೀ ಲಾಧಲೋ ಸದ್ಗುರುಚರಣ । ತೇಣೇ ಹೇ ಚಾಲಿಲೇ ನಿರೂಪಣ । ಬಾಪ ಕೃಪಾಳೂ ಜನಾರ್ದನ । ಗ್ರಂಥ ಸಂಪೂರ್ಣ ತೇಣೇ ಕೇಲಾ ॥೧೦೪೭॥ ಮ್ಹಣಾಲ ಪೂರ್ಣ ಜಾಹಲಾ ಪರಮಾರ್ಥ । ಪುಢೇ ಆಹೇ ಮಹಾಅನರ್ಥ । ತೈಸಾ ನವ್ಹೇ ಗುಹ್ಯಜ್ಞಾನಾರ್ಥ । ಸ್ವಯೇ ಶ್ರೀಕೃಷ್ಣನಾಥ ದಾವೀಲ ॥೧೦೪೮॥ ಮಾತಾ ಪಿತಾ ಸ್ತ್ರೀ ಪುತ್ರ ಜನ । ಜಾತೀ ಗೋತ ಸುಹೃದ ಸಜ್ಜನ । ಸಕಳ ಕುಳಾಸೀ ಯೇತಾ ಮರಣ । ಮಮತಾ ಶ್ರೀಕೃಷ್ಣ ಕದಾ ನ ಧರೀ ॥೧೦೪೯॥ ಕೃಷ್ಣಾ ಆಜ್ಞಾ ಕಾಳ ವಂದೀ ಮಾಥಾ । ಏವಢೀ ಹಾತೀ ಅಸತಾ ಸತ್ತಾ । ತರೀ ಕುಳರಕ್ಷಣಾಚೀ ಮಮತಾ । ಶ್ರೀಕೃಷ್ಣನಾಥಾ ಅಸೇನಾ ॥೧೦೫೦॥ ಜ್ಯಾಸೀ ದೇಹೀ ನಿರಭಿಮಾನತಾ । ಜ್ಯಾಸೀ ಬಾಧೀನಾ ಕುಳಾಚೀ ಮಮತಾ । ತೇ ದೇಹೀಂಚೀ ನಿರಹಂಕಾರತಾ । ಶ್ರೀಕೃಷ್ಣ ಆತಾ ಸ್ವಾಂಗೇ ದಾವೀ ॥೧೦೫೧॥ ತೇ ಜ್ಞಾನಪರಿಪಾಕನಿರ್ವಾಣ । ಅತಿಗೋಡೀಚೇ ನಿರೂಪಣ । ಪುಡಿಲೇ ದೋ ಅಧ್ಯಾಯೀ ಜಾಣ । ಶ್ರೀಶುಕ ಆಪಣ ಸಾಂಗೇಲ ॥೧೦೫೨॥

ನನ್ನ ಮರಾಠೀ ಭಾಷೆಯು ಸಾದಾ ಹಾಗೂ ಸುಲಭವಾದ ಅಮೃತಮಧುರವಾಗಿರುವುದು. ಅದು ಪರಬ್ರಹ್ಮ ಸ್ವರೂಪದಿಂದ ಫಲಿಸಿರುವುದು. ಶ್ರೀ ಜನಾರ್ದನರು ಇದರ ರುಚಿ ತೋರಿಸಿರುವರು. ಆದ್ದರಿಂದ ಗ್ರಂಥಾರ್ಥವು ಎಂದಿಗೂ ತಪ್ಪಲಾರದು ॥೧೦೪೦॥ ಶ್ರೀಜನಾರ್ದನಸ್ವಾಮಿಗಳವರ ಇದು ಕಾವ್ಯರೂಪ ಹಣ್ಣಿನ ತೋಟವಿದ್ದು ಅವುಗಳಲ್ಲಿ ಬ್ರಹ್ಮರಸವು ತುಂಬಿ ಹರಿಯುತ್ತಿದೆ. ಸಂತ ಸಜ್ಜನರು ಇದರ ರುಚಿ ಅರಿತುಕೊಂಡಿರುವರು. ಆದ್ದರಿಂದ ಈ ಗ್ರಂಥವು ಸಿದ್ಧಗೊಂಡಿತು ॥೧೦೪೧॥ ಉದ್ಧವನ ನಿಮಿತ್ತ ಮಾಡಿಕೊಂಡು ಶ್ರೀಕೃಷ್ಣನು ಸ್ವತಃ ಬ್ರಹ್ಮಜ್ಞಾನ ಹೇಳಿರುವನು. ಸಂಸಾರ ಬಂಧನವು ಮುರಿದು ದೀನ ಜನರ ಉದ್ಧಾರವಾಗಬೇಕೆಂಬುದು ಆತನ ಉದ್ದೇಶವಾಗಿರುವುದು ॥೧೦೪೨॥ ಅಂತಹ ಈ ಯಾವ ಹನ್ನೊಂದನೆಯ ಸ್ಕಂಧದಂತಹ ಗ್ರಂತವು, ಅದರಲ್ಲಿ ಠೋಖಠೋಕ ಪರಮಾರ್ಥವು ತುಂಬಿಕೊಂಡಿರುವುದು. ಇದರಿಂದ ಸರ್ವ ಮಹಾಕವಿಗಳು ತಮ್ಮ ಆತ್ಮಕಲ್ಯಾಣ ಸಾಧಿಸಿ ಕೃತಾರ್ಥರಾದರು ॥೧೦೪೩॥ ಪಕ್ವವಾದ ಹಣ್ಣಿನ ಮೇಲೆ ಗಿಳಿಯು ಹಾರಿ ಬರುವುದು. ಅಲ್ಲಿ ಇರುವೆಯೂ ಕೂಡ ಬಂದು ಮುಟ್ಟಿಕೊಳ್ಳುವುದು. ಅದರಂತೆ ಮಹಾಕವಿಗಳ ಅನುಕರಣೆ ಮಾಡಿ ಪ್ರಾಕೃತ ಭಾಷೆಯಲ್ಲಿ ನಾನೂ ಕೂಡ ಮಹಾಕವಿಗಳಂತೆ ವೈಭವ ಅನುಭವಿಸಿದೆನು ॥೧೦೪೪॥ ಸಾರ್ವಭೌಮ ರಾಜನ ತಾಟಿನ ಹತ್ತಿರ ಮಹಾ ಮಹಾ ಸಮರ್ಥರಿಗೂ ಹೋಗುವುದು ಆಗುವುದಿಲ್ಲ. ಆದರೆ ನೊಣವು ಮಾತ್ರ ಅಲ್ಲಿ ಸಹಜವಾಗಿ ಹೋಗಿ ಕುಳಿತುಕೊಳ್ಳುವುದು. ಅದರಂತೆ ಈ ಪ್ರಾಕೃತ ಗ್ರಂಥವು ನಮ್ಮದಾಗಿರುವುದು ॥೧೦೪೫॥ ಭೋಜನಕ್ಕೆ ಕುಳಿತಾಗ ಚಿಕ್ಕ ಬಾಲಕನು ಸಿಹಿ ಪದಾರ್ಥವನ್ನು ತನ್ನ ತಂದೆಯ ಕೈ ಹಿಡಿದು ಮೊದಲು ತಾನು ಸೇವಿಸುವನು. ಅದರಂತೆ ಮಹಾಕವಿಗಳ ಅನುಭವಕ್ಕೆ ಪ್ರಾಪ್ತವಾಗಿರುವ ಈ ಪರಮಾರ್ಥವು ಪ್ರಾಕೃತ ಭಾಷೆಯ ಮುಖಾಂತರವಾಗಿ ನನಗೂ ಕೂಡ ಲಭ್ಯವಾಯಿತು ॥೧೦೪೬॥ ನನಗೆ ಸದ್ಗುರುಗಳ ಚರಣಗಳು ಲಭಿಸಿದವು. ಆದ್ದರಿಂದ ಈ ನಿರೂಪಣೆಯು ನಡೆಯಿತು. ಜನಾರ್ದನಸ್ವಾಮಿಯವರು ಅತ್ಯಂತ ಕೃಪಾವಂತರಾಗಿರುವರು. ಅವರ ಕೃಪೆಯಿಂದಲೇ ಈ ಗ್ರಂಥವು ಪೂರ್ಣಗೊಂಡಿರುವುದು ॥೧೦೪೭॥ ಇನ್ನೇನು ಈಗ ಪರಮಾರ್ಥವು ಮುಗಿದು ಹೋಯಿತು ಎಂದು ನಿಮಗೆ ಅನಿಸಬಹುದು. ಇನ್ನು ಮುಂದೆ ಮಹಾ ಅನರ್ಥ ಪ್ರಸಂಗವಿದೆ ಎಂದೂ ತಿಳಿಯಬಹುದು. ಆದರೆ ಹಾಗೆ ಇರುವುದಿಲ್ಲ. ಗುಹ್ಯಜ್ಞಾನದ ಅನುಭವವು ಹೇಗೆ ಇರುವುದು ಎಂಬುದನ್ನು ಶ್ರೀಕೃಷ್ಣನು ಸ್ವತಃ ತೋರಿಸಿ ಕೊಡುವನು ॥೧೦೪೮॥ ತಂದೆ, ತಾಯೀ, ಹೆಂಡರು, ಮಕ್ಕಳು, ಜಾತಿಯವರು, ಗೋತ್ರಜರು, ಸುಹೃದರು, ಸಜ್ಜನರು ಹೀಗೆ ಸರ್ವರೊಂದಿಗೆ ತನ್ನ ಕುಲದ ಮರಣವು ಬಂದು ಒದಗಿದರೂ ಕೂಡ ಶ್ರೀಕೃಷ್ಣನು ಮಮತೆ ಹಿಡಿಯುವುದೇ ಇಲ್ಲ ॥೧೦೪೯॥ ಶ್ರೀಕೃಷ್ಣನ ಆಜ್ಞೆಯನ್ನು ಕಾಲನು ಶಿರಸಾ ಮಾನ್ಯ ಮಾಡುತ್ತಿರುವನು. ಇಷ್ಟೊಂದು ಪ್ರಚಂಡ ಸತ್ತೆಯು ಕೈಯಲ್ಲಿದ್ದರೂ ಸಹ ಶ್ರೀಕೃಷ್ಣನು ಕುಲದ ಸಂರಕ್ಷಣೆ ಮಾಡುವ ಮಮತೆ ಹಿಡಿಯಲೇ ಇಲ್ಲ ॥೧೦೫೦॥ ಯಾರಿಗೆ ದೇಹದಲ್ಲಿ ಅಭಿಮಾನವಿರುವುದಿಲ್ಲವೋ, ಆತನಿಗೆ ಕುಲದ ಮಮತೆಯು ಎಂದಿಗೂ ಬಾಧಿಸಲು ಶಕ್ಯವಿಲ್ಲ. ಹೀಗೆ ದೇಹದ ಹೊರಗೆ ಇರುವ ನಿರಹಂಕಾರೀ ಶ್ರೀಕೃಷ್ಣನು ಈಗ ಸ್ವತಃ ಅದನ್ನು ತೋರಿಸುವವನಾಗಿರುವನು ॥೧೦೫೧॥ ಅದು ಪರಿಪಕ್ವವಾದ ಜ್ಞಾನವು ನಿರ್ವಾಣದ ಅತ್ಯಂತ ರುಚಿಕರ ನಿರೂಪಣೆಯನ್ನು ಮುಂದಿನ ಎರಡು ಅಧ್ಯಾಯಗಳಲ್ಲಿ ಶ್ರೀಶುಕಾಚಾರ್ಯರು ಸ್ವತಃ ಹೇಳುವರು ॥೧೦೫೨॥

ತೇ ಜ್ಞಾನಗುಹ್ಯ ನಿಜಕಥಾ । ಜನಾರ್ದನಕೃಪಾ ತತ್ತ್ವತಾ । ಏಕಾ ಜನಾರ್ದನ ವಕ್ತಾ । ಅವಧಾನ ಶ್ರೋತಾ ಮಜ ದ್ಯಾವೇ ।।೧೦೫೩।। ಜೇಥ ಸಂತ ಅವಧಾನ ದೇತೀ । ತೇ ಕಥಾ ವೋಢವೇ ಪರಮಾರ್ಥೀ । ಏಕಾ ಜನಾರ್ದನೀ ವಿನಂತೀ । ಅವಧಾನ ಗ್ರಂಥಾರ್ಥೀ ಮಜ ದ್ಯಾವೇ ।।೧೦೫೪।।

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಭಗವದುದ್ಧವಸಂವಾದೇ
ಏಕಾಕಾರಟೀಕಾಯಾಂ ಪರಮಾರ್ಥಪ್ರಾಪ್ತೀ ಸುಗಮೋಪಾಯಕಥನೋದ್ಧವಬದರಿಕಾಮಪ್ರವೇಶೋ
ನಾಮ ಏಕೋನ ತ್ರಿಂಶೋऽಧ್ಯಾಯಃ ।।೨೯।।

।।ಶ್ರೀಕೃಷ್ಣಾರ್ಪಣಮಸ್ತು ।।

ಇಂತಹ ಜ್ಞಾನ-ರಹಸ್ಯದ ನಿಜಕತೆಯನ್ನು ಜನಾರ್ದನಸ್ವಾಮಿಗಳ ಕೃಪೆಯಿಂದ ಏಕಾಜನಾರ್ದನನು ಹೇಳುವನು. ಕೃಪೆ ಮಾಡಿ ಶ್ರೋತೃಗಳವರು ನನ್ನತ್ತ ಲಕ್ಷ ಕೊಡಬೇಕು ।।೧೦೫೩।। ಕಾರಣ, ಯಾವ ಕಥೆಯತ್ತ ಸಂತಸಜ್ಜನರು ಲಕ್ಷ ಕೊಡುವರೋ, ಆ ಕಥೆಯು ಪರಮಾರ್ಥದಲ್ಲಿ ಪ್ರವೇಶಗೊಳಿಸುವುದು. ಆದ್ದರಿಂದ ನನ್ನ ಗ್ರಂಥದ ಅರ್ಥದತ್ತ ತಾವು ಏಕಾಗ್ರತೆಯಿಂದ, ಶ್ರದ್ಧಾಪೂರ್ವಕವಾಗಿ ಲಕ್ಷ ಕೊಡಬೇಕಾಗಿ ಏಕಾಜನಾರ್ದನನು ವಿನಂತಿಸುವನು ।।೧೦೫೪।।

ಇತಿ ಶ್ರೀಮದ್ಭಾಗವತ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಪರಮಹಂಸಸಂಹಿತೆಯಲ್ಲಿನ
ಶ್ರೀಕೃಷ್ಣ ಉದ್ಧವ ಸಂವಾದದ ಶ್ರೀಏಕನಾಥ ಮಹಾರಾಜರ ಭಾಷ್ಯೆಯ ಪರಮಾರ್ಥ ಪ್ರಾಪ್ತಿ ಸುಗಮೋಪಾಯಕಥನ ತಥಾ
ಉದ್ಧವಬದರಿಕಾಶ್ರಮಪ್ರವೇಶ ನಾಮದ ಇಪ್ಪತ್ತೊಂಬತ್ತನೆಯ ಅಧ್ಯಾಯ ಸಂಪೂರ್ಣ.

।। ಶ್ರೀಕೃಷ್ಣಾರ್ಪಣಮಸ್ತು ।।

ಸಾರ್ಥ ಶ್ರೀಏಕನಾಥೀ ಭಾಗವತ

ಮೂವತ್ತನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಜಯ ಜಯ ಸದ್ಗುರು ಅನಾದೀ । ಜಯ ಜಯ ಸದ್ಗುರು ಸರ್ವಾದೀ । ಜಯ ಜಯ ಸದ್ಗುರು ಸರ್ವಸಿದ್ಧೀ । ಜಯ ಜಯ ಕೃಪಾನಿಧಿ ಕೃಪಾಳುವಾ ।೧॥ ಜಯ ಜಯ ವೇದವಾಚಕಾ । ಜಯ ಜಯ ವೇದಾರ್ಥಪ್ರಕಾಶಕಾ । ಜಯ ಜಯ ವೇದಪ್ರತಿಪಾಲಕಾ । ಜಯ ಜಯ ವೇದಾತ್ಮಕಾ ವೇದಜ್ಞಾ ।೨॥ ಜಯ ಜಯ ವಿಶ್ವಪ್ರಕಾಶಕಾ । ಜಯ ಜಯ ವಿಶ್ವಪ್ರತಿಪಾಳಕಾ । ಜಯ ಜಯ ವಿಶ್ವನಿವಾಸಕಾ । ಅಕರ್ತಾತ್ಮಕಾ ಅವ್ಯಯಾ ।೩॥ ತುರ್ಝೀ ಅವ್ಯಯ ಅಕ್ಷರ ಸ್ಥಿತೀ । ನಾಹೀ ನಾಮ ರೂಪ ವರ್ಣ ವ್ಯಕ್ತೀ । ತೋ ತೂ ನಾಂದಸೀ ಜಾತೀಗೋತೀ । ಲೋಕಸ್ಥಿತೀ ವ್ಯವಹಾರೇ ।೪॥ ತುಜ ಜಗೀ ನಾಹೀ ದುಸರೇ । ತೋ ತೂ ಗೃಹಸ್ಥ ಘರದಾರೇ । ತೂ ಪುರುಷ ನಾ ನಪುಂಸಕ ಸಾಚೋಕಾರೇ । ಕೀ ಸ್ತ್ರೀಪುತ್ರೇ ನಾಂದಸೀ ।೫॥ ಅಜ ಆಣಿ ವಂದಿಸೀ ಪಿತಾ । ಅಜನ್ಮಾ ತೋ ನಮಿಸೀ ಮಾತಾ । ಜಗೀ ತುರ್ಝೀ ಸರ್ವಸಮತಾ । ಶೇಖೀ ಅರಿಮಿತ್ರತಾ ಚಾಳಿಸೀ ।೬॥ ತೂ ಜಗನ್ನಾಥ ಜಗಚಾಳಕ । ಕೀ ಏಕಾಚಾ ಹೋಸೀ ಸೇವಕ । ತೂ ಪರಿಪೂರ್ಣ ಪೂರ್ಣಾತ್ಮಕ । ಕೀ ಮಾಗಸೀ ಭೀಕ ರಂಕತ್ವೇ ।೭॥ ತೂ ನೈಷ್ಠಿಕ ಬ್ರಹ್ಮಚಾರೀ । ಕೀ ವ್ಯಭಿಚಾರೇ ತಾರಿಸೀ ನಾರೀ । ತೂ ಸರ್ವಜ್ಞ ಕೀ ಗುರೂಚ್ಯಾ ದ್ವಾರೀ । ತೃಣಕಾಷ್ಠೇ ಶಿರೀ ವಾಹಸೀ ಸ್ವಯೇ ।೮॥ ಜೋ ತೂ ಕಳಿಕಾಳಾತೇ ಗ್ರಾಸಿಸೀ । ತೋ ತೂ ಬಾಗುಲಾಭೇಣೇ ಲಪಸೀ । ತೂ ಮಾಯಾನಿಯಂತಾ ಹೃಷೀಕೇಶೀ । ಶೇಖೀ ಮಾಯಾ ಬಾಂಧಿಜಶೀ ಉಖಳೀ ।೯॥ ತೂ ಆತ್ಮಾರಾಮ ನಿತ್ಯತೃಪ್ತ । ಶೇಖೀ ಗೋವಳಾಂಚಾ ಖಾಶೀ ಭಾತ । ತುರ್ಝಾ ಬ್ರಹ್ಮಾದಿಕಾ ನ ಕಳೇ ಅಂತ ತೋ ತೂ ಉಭಾ ರಡತ ಯಶೋದೇ ಪಾಶೀ ।೧೦॥

ಹೇ ಅನಾದೀ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ಹೇ ಸರ್ವರ ಆದಿ ಸದ್ಗುರುನಾಥನೇ, ನಿನಗೆ ಜಯಜಯಕಾರವಾಗಲಿ. ಹೇ ಸರ್ವಸಿದ್ಧೀ ಸದ್ಗುರುರಾಯನೇ, ನಿನಗೆ ಜಯಜಯಕಾರವಾಗಲಿ. ಹೇ ಕೃಪಾನಿಧೀ ದಯಾಸಾಗರನೇ, ನಿನಗೆ ಜಯಜಯಕಾರವಾಗಲಿ ।೧॥ ಹೇ ವೇದವಕ್ತಾನೇ, ನಿನಗೆ ಜಯಜಯಕಾರವಾಗಲಿ, ಹೇ ವೇದಾರ್ಥ ಪ್ರಕಟಿಸುವವನೇ, ನಿನಗೆ ಜಯಜಯಕಾರವಾಗಲಿ. ಹೇ ವೇದದ ಪ್ರತಿಪಾಲಕನೇ, ನಿನಗೆ ಜಯಜಯಕಾರವಾಗಲಿ. ಹೇ ವೇದಾತ್ಮನೇ, ಹೇ ವೇದಜ್ಞಾನೇ, ನಿನಗೆ ಜಯಜಯಕಾರವಾಗಲಿ ।೨॥ ಹೇ ವಿಶ್ವಪ್ರಕಾಶಕನೇ, ನಿನಗೆ ಜಯಜಯಕಾರವಾಗಲಿ. ಹೇ ವಿಶ್ವಪಾಲಕನೇ, ನಿನಗೆ ಜಯಜಯಕಾರವಾಗಲಿ. ಹೇ ವಿಶ್ವಾಂತರಾಮಿಯೇ, ಹೇ ಅಕರ್ತಾತ್ಮಕನೇ, ಅವ್ಯಯನೇ, ನಿನಗೆ ಜಯಜಯಕಾರವಾಗಲಿ ।೩॥ ನಿನ್ನ ಸ್ವರೂಪವು ಅಕ್ಷರ ಹಾಗೂ ಅವ್ಯಯವಾಗಿರುವುದು.ನಾಮ, ರೂಪ, ವರ್ಣ, ವ್ಯಕ್ತಿರಹಿತ ಹೀಗಿರುವ ನೀನು ನಾನಾ ಕುಲಗೋತ್ರಗಳಿಂದ ಲೋಕವ್ಯವಹಾರದಂತೆ ಯಾವಾಗಲೂ ವರ್ತಿಸುತ್ತಿರುವೆ ।೪॥ ನಿನಗೆ ಈ ಜಗತ್ತಿನಲ್ಲಿ ಬೇರೆ ಯಾರೂ ಇರುವುದಿಲ್ಲ. ಹೀಗಿದ್ದರೂ ಕೂಡ ನೀನು ಗೃಹಸ್ಥಧರ್ಮದಂತೆ ಮನೆಮಾರು ಮಾಡಿಕೊಂಡು ಇರುತ್ತಿರುವೆ. ವಾಸ್ತವಿಕವಾಗಿ ನೋಡಲು ನೀನು ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲ. ಆದರೂ ಸಹ ಸ್ತ್ರೀಪುತ್ರರಲ್ಲಿ ವರ್ತಿಸುತ್ತಿರುವೆ ।೫॥ ನೀನು ಜನ್ಮರಹಿತನು. ಹೀಗಿದ್ದರೂ ಸಹ ವಸುದೇವ, ದೇವಕೀ ಹೀಗೆ ಪಿತಾಶ್ರೀ,ಮಾತಾಶ್ರೀಯವರಿಗೆ ವಂದಿಸುವೆ.ಜಗತ್ತಿನಲ್ಲಿ ನಿನಗೆ ಎಲ್ಲರೂ ಸರಿಸಮಾನರಾಗಿಯೇ ಇರುವರು. ಆದರೂ ಕೂಡ ನೀನು ಶತ್ರು-ಮಿತ್ರರನ್ನಾಗಿ ಆರಿಸುವೆ ।೬॥ ನೀನು ಜಗನ್ನಾಥನಾಗಿ ಜಗತ್ತಿನ ಚಾಲಕನಾಗಿರುವೆ. ಆದರೆ ಒಬ್ಬರ ಸೇವಕನೂ ಸಹ ಆಗುವೆ. ನೀನು ಪರಿಪೂರ್ಣ ಪೂರ್ಣಾತ್ಮಕನಾಗಿದ್ದರೂ ಬಡವನಂತೆ ಭಿಕ್ಷೆಯನ್ನೂ ಕೂಡ ಬೇಡುವೆ ।೭॥ ನೀನು ನೈಷ್ಠಿಕ ಬ್ರಹ್ಮಚಾರಿಯಾಗಿರುವೆ. ವ್ಯಭಿಚಾರದ ನೆಪಮಾಡಿಕೊಂಡು ಗೋಪಿಕೆಯರ ಉದ್ಧಾರ ಮಾಡಿರುವೆ. ನೀನು ಸರ್ವಜ್ಞನಾಗಿದ್ದರೂ ಗುರು ಸಾಂದೀಪನ ಮನೆಯಲ್ಲಿ ತಲೆಯ ಮೇಲೆ ಹುಲ್ಲು ಹಾಗೂ ಕಟ್ಟಿಗೆಗಳನ್ನು ಹೊತ್ತುಕೊಂಡೆ ।೮॥ ನೀನಾದರೂ ಕಲಿಕಾಲನನ್ನು ಗಡಗಡ ನಡುಗಿಸುವೆ. ಆದರೆ ಬೆದರು ಗೊಂಬೆಗಳಿಗೆ ಬೆದರಿ ಅಡಗಿಕೊಳ್ಳುವವನಾದೆ. ನೀನು ಮಾಯೆಯ ನಿಯಂತ್ರಕನು ಹಾಗೂ ಜಗತ್ತಿನ ಚಾಲಕನು. ಹೀಗಿದ್ದರೂ ನಿನಗೆ ಯಶೋಧೆಯು ಒರುಳುಕಲ್ಲಿಗೆ ಕಟ್ಟಿಹಾಕಿದಳು ।೯॥ ನೀನು ನಿತ್ಯತೃಪ್ತ ಆತ್ಮಾರಾಮನಾಗಿರುತ್ತಿರಲು ಗೋಪಾಲಕರ ಅನ್ನ ಭುಂಜಿಸಿದೆ. ನಿನ್ನ ಅಂತವು ಬ್ರಹ್ಮದೇವನಿಗೂ ಕೂಡ ತಿಳಿಯಲಾರದು. ಹೀಗಿರುವ ನೀನು ಯಶೋಧೆ ಹತ್ತಿರ ಅಳುತ್ತ ನಿಂತುಕೊಂಡೆ ।೧೦॥

ತ್ರೈಲೋಕ್ಯ ದಾವಿಸೀ ಉದರೀ । ತೋ ತೂ ಗೋಪಿಕಾಂಚೇ ಕಡಿಯೇವರೀ । ತೂ ಜಗಾಚಾ ಚಾಳಕ ಶ್ರೀಹರೀ । ತ್ಯಾ ಮಜ ಲೇಕುರೀ ಶಿಕವಿಜೇ ಚಾಲೂ ।।೧೧।। ಜೋ ತೂ ಸರ್ವವಂದ್ಯ ಸರ್ವೇಶ್ವರ । ತೋ ತೂ ಹೋಸೀ ಪಾಂಢರಾಡುಕರ । ಏವಂ ಕರಿತಾ ತುಝಾ ನಿರ್ಧಾರ । ವೇದಾಂಸೀ ವಿಚಾರ ಕಳೇನಾ ।।೧೨।। ವೇದೀ ಘೇತಲೇ ಮಹಾಮೌನ । ಜ್ಞಾತೇ ಝಾಲೇ ನೇಣಕೋಣ । ಯೋಗೀ ವಳಂಘಲೇ ರಾನ । ತುಝೇ ಮಹಿಮಾನ ಕಳೇನಾ ।।೧೩।। ಮುಖ್ಯತ್ವೇ ಜನ್ಮ ನಾಹೀ ಜ್ಯಾಸೀ ಜಾಣ । ತೋ ಕೃಷ್ಣ ಕೈಸೇ ದಾವೀ ಮರಣ । ತೇ ಐಕಾವಯಾ ನಿರೂಪಣ ಪರೀಕ್ಷಿತೀ ಪೂರ್ಣ ಶ್ರದ್ಧಾಳೂ ।।೧೪।। ಪ್ರಥಮಾಧ್ಯಾಯೀ ವೈರಾಗ್ಯಾರ್ಥ । ಮುಸಳ ಬೋಲಿಲೇ ಶಾಪಯುಕ್ತ । ತೇಚಿ ಗ್ರಂಥಾವಸಾನೀ ಏಥ । ಅಸೇ ಪುಸತ ಪರೀಕ್ಷಿತೀ ।।೧೫।।

ರಾಜೋವಾಚ :-

ತತೋ ಮಹಾಭಾಗವತೇ ಉದ್ಧವೇ ನಿರ್ಗತೇ ವನಮ್ । ದ್ವಾರವತ್ಯಾಂ ಕಿಮಕರೋದ್ ಭಗವಾನ್ ಭೂತಭಾವನಃ ।।೧।।

ಅರ್ಥ:- ರಾಜಾ ಪರೀಕ್ಷಿತನು ವಿಚಾರಿಸಿದನು :- ಮಹಾಭಾಗವತ ಉದ್ಧವನು ಬದರಿಕಾವನದಲ್ಲಿ ಹೊರಟು ಹೋಗಲು ಆಗ ಭೂತಭಾವನನಾದ ಶ್ರೀಕೃಷ್ಣನು ಏನು ಮಾಡುತ್ತಿದ್ದನು?

ಜೋ ಪಾಂಡವಕುಳೀ ಕುಳರತ್ನ । ಕೀ ಕೌರವಕುಳೀ ಕುಳಭೂಷಣ । ಜೋ ಧರ್ಮಾಚೇ ನಿಜರಕ್ಷಣ । ಕಲೀಚೇ ನಿಗ್ರಹಣ ಜೇಣೇ ಕೇಲೇ ।।೧೬।। ಐಸಾ ರಾಜಾ ಪರೀಕ್ಷಿತೀ । ಧೈರ್ಯವೀರ್ಯಉದಾರಕೀರ್ತಿ । ತೇಣೇ ಸ್ವಮುಖೇ ಶ್ರೀಶುಕಾಪ್ರತೀ । ಕೇಲೀ ವಿನಂತೀ ಅತಿಶ್ರದ್ಧಾ ।।೧೭।। ಉದ್ಧವ ಪಾವೋನಿ ಪೂರ್ಣ ಜ್ಞಾನ । ತೋ ಬದರಿಕಾಶ್ರಮಾ ಗೇಲಿಯಾ ಜಾಣ । ಮಾಗೇ ದ್ವಾರಕೇಸೀ ಶ್ರೀಕೃಷ್ಣ । ಕಾಯ ಆಪಣ ಕರಿತಾ ಝಾಲಾ ।।೧೮।। ಉತ್ಪತ್ತಿಸ್ಥಿತಿನಿದಾನ । ಜೋ ಇಚ್ಛಾಮಾತ್ರೇ ಕರೀ ಜಾಣ । ತೋ ಸ್ವದೇಹಾಚೇ ವಿಸರ್ಜನ । ಕೈಸೇನಿ ಶ್ರೀಕೃಷ್ಣ ಕರಿತಾ ಝಾಲಾ ।।೧೯।।

ಬ್ರಹ್ಮಶಾಪೋಪಸಂಸೃಷ್ಟೇ ಸ್ವಕುಲೇ ಯಾದವರ್ಷಭಃ । ಪ್ರೇಯಸೀಂ ಸರ್ವನೇತ್ರಾಣಾಂ ತನುಂ ಸ ಕಥಮತ್ಯಜತ್ ।।೨।।

ಅರ್ಥ:- ಬ್ರಾಹ್ಮಣರ ಶಾಪದಿಂದ ತನ್ನ ವಂಶವು ನಾಶ ಹೊಂದಿದಮೇಲೆ, ಯದುಶ್ರೇಷ್ಠನು ಸರ್ವ ನಯನಗಳಿಗೂ ಅತ್ಯಂತ ಪ್ರಿಯ ವಸ್ತುವಾದ ತನ್ನ ಶರೀರವನ್ನು ಹೇಗೆ ತಾನೇ ತೊರೆದನು?

ಬ್ರಹ್ಮಶಾಪೇ ಶ್ರೀಕೃಷ್ಣನಾಥ । ನಿಃಶೇಷ ನಿಜಕುಳಾಸೀ ಘಾತ । ಕೈಸೇನಿ ಕರವಿಲಾ ಏಥ । ಹೇ ಸುನಿಶ್ಚಿತ ಸಾಂಗಾವೇ ।।೨೦।।

ನಿನ್ನ ಮುಖದಲ್ಲಿ ಸಂಪೂರ್ಣ ತ್ರೈಲೋಕ್ಯವನ್ನೆ ತೋರಿಸುವವನಾದ ನೀನು ಗೋಪಿಕೆಯರ ನಡುವಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ನೀನು ಜಗತ್ತಿನ ಚಾಲಕನು. ಆದರೆ ಹುಡುಗರು ನಿನಗೆ ನಡೆಯಲು ಕಲಿಸುತ್ತಿದ್ದರು ।।೧೧।। ನೀನು ಸರ್ವರಿಗೂ ವಂದ್ಯನು ಹಾಗೂ ಸರ್ವೇಶ್ವರನು. ಹೀಗಿದ್ದರೂ ಬಿಳಿ ಹಂದಿಯಾಗಿ ವರಾಹ ಅವತಾರವನ್ನು ತಾಳಿದೆ. ಈ ಪ್ರಕಾರವಾಗಿ ನಿನ್ನನ್ನು ನಿರ್ಣಯಿಸಲು ಹೋದರೆ ವೇದಗಳಿಗೂ ವಿಚಾರಗಳು ಹೊಳೆಯದಾದವು ।।೧೨।। ಕೊನೆಗೆ ವೇದಗಳು ಮಹಾಮೌನ ತಾಳಿದವು. ಮಹಾ ಮಹಾ ಶ್ರೇಷ್ಠ ಜ್ಞಾನಸಂಪನ್ನರು ಆಗಿ ಹೋದರು. ಆದರೆ ಅವರು ನಿನ್ನನ್ನು ತಿಳಿಯಲಾರರಾದರು. ಯೋಗಿಗಳು ಅರಣ್ಯ ಸೇರಿ ಧ್ಯಾನಮಾಡಲಾರಂಭಿಸಿದರು. ಆದರೆ ಅವರಿಗೂ ಕೂಡ ನಿನ್ನ ಮಹಿಮೆಯು ತಿಳಿಯಲಿಲ್ಲ ।।೧೩।। ಮೂಲದಲ್ಲಿಯೇ ಶ್ರೀಕೃಷ್ಣನಿಗೆ ಜನ್ಮವೇ ಇಲ್ಲ. ಅಂದಮೇಲೆ ಮರಣವನ್ನು ಹೇಗೆ ತೋರಿಸಿದನು? ಇದರ ವರ್ಣನೆ ಕೇಳುವುದಕ್ಕಾಗಿ ಶ್ರದ್ಧಾವಂತ ಪರೀಕ್ಷಿತೀರಾಜನಿಗೆ ಅತಿಶಯ ಉತ್ಸುಕತೆ ಉಂಟಾಯಿತು ।।೧೪।। ಪ್ರಥಮ ಅಧ್ಯಾಯದಲ್ಲಿ ಶಾಪಯುಕ್ತ ಮುಸಲದ ಕಥೆ ಹೇಳಲ್ಪಟ್ಟಿತ್ತು. ಅದೇ ವಿಷಯವನ್ನು ಕುರಿತು ಈಗ ಈ ಗ್ರಂಥದ ಕೊನೆಯ ಪ್ರಸಂಗದಲ್ಲಿ ಪರೀಕ್ಷಿತೀ ರಾಜನು ಪ್ರಶ್ನೆ ಮಾಡುತ್ತಿರುವನು ।।೧೫।।

ಯಾವ ಪಾಂಡವ ಕುಲದ ರತ್ನನಾಗಿರುವ, ಕೌರವಕುಲದ ಭೂಷಣನಾದ ಧರ್ಮದ ರಕ್ಷಣೆ ಮಾಡುವುದಕ್ಕಾಗಿ ಕಲಿಯನ್ನು ನಿಗ್ರಹ ಮಾಡಿರುವ ।।೧೬।। ಯಾರ ಧೈರ್ಯ, ಶೌರ್ಯ ಹಾಗೂ ಉದಾರತೆಯ ಕೀರ್ತಿಯು ಸುಪ್ರಸಿದ್ಧವಾಗಿರುವ ಪರೀಕ್ಷಿತೀ ರಾಜನು ಪರಮ ಶ್ರದ್ಧೆಯಿಂದ ತನ್ನ ಸ್ವಮುಖದಿಂದ ಶ್ರೀಶುಕಾಚಾರ್ಯರಿಗೆ ವಿನಂತಿ ಮಾಡಿಕೊಂಡನು ।।೧೭।। ಅದಾವುದೆಂದರೆ; ಉದ್ಧವನಿಗೆ ಪೂರ್ಣ ಜ್ಞಾನವು ಪ್ರಾಪ್ತವಾದನಂತರ ಆತನು ಬದರಿಕಾಶ್ರಮಕ್ಕೆ ಹೋದನು. ತದನಂತರ ಶ್ರೀಕೃಷ್ಣನು ದ್ವಾರಕೆಯಲ್ಲಿ ಏನು ಮಾಡಿದನು? ।।೧೮।। ಯಾರು ತನ್ನ ಕೇವಲ ಇಚ್ಛಾಶಕ್ತಿಯಿಂದ ಸಂಪೂರ್ಣ ವಿಶ್ವದ ಉತ್ಪತ್ತೀ, ಸ್ಥಿತೀ ಮತ್ತು ಲಯ ಮಾಡುವ ಸಮರ್ಥನೋ, ಅಂತಹ ಶ್ರೀಕೃಷ್ಣನು ದೇಹದ ತ್ಯಾಗವನ್ನು ಯಾವ ಪ್ರಕಾರವಾಗಿ ಮಾಡಿದನು? ।।೧೯।।

ಶ್ರೀಕೃಷ್ಣನಾಥನು ಬ್ರಹ್ಮಶಾಪಕಾರಣವಾಗಿ ತನ್ನ ಸಂಪೂರ್ಣ ಕುಲದ ನಾಶವನ್ನು ಹೇಗೆ ಮಾಡಿದನೆಂಬುವುದನ್ನು ನೀವು ನನಗೆ ನಿಶ್ಚಯಪೂರ್ವಕವಾಗಿ ಹೇಳಿರಿ ।।೨೦।।

ಜನನಯನಾ ಆಲ್ಹಾದಕರ । ಕೃಷ್ಣತನು ಅತಿಸುಂದರ । ಜೇಸೀ ದೇಖತಾಂಚಿ ತ್ರಿನೇತ್ರ । ಹರ್ಷೇ ನಿರ್ಭರ ಸ್ವಾನಂದೇ ॥೨೧॥ ಐಶೀ ಆಲ್ಹಾದಕಾರಕ ತನು । ಕೈಸೇನಿ ಸಾಂಡೀ ಶ್ರೀಕೃಷ್ಣು । ಬ್ರಹ್ಮಶಾಪಾಸೀ ಭಿಊನು । ತೋ ಕಾ ನಿಜತನು ಸಾಂಡಿತಾ ಝಾಲಾ ॥೨೨॥ ಕೃಷ್ಣ ಪರಬ್ರಹ್ಮ ಪರಿಪೂರ್ಣ । ತ್ಯಾಸೀ ಬಾಧೀನಾ ಶಾಪಬಂಧನ । ತೋಹೀ ಸತ್ಯ ಕರೀ ಬ್ರಹ್ಮವಚನ । ಯಾದವವಂಶೀ ತನು ಸಾಂಡೂನೀ ॥೨೩॥ ದೃಷ್ಟೀ ದೇಖತಾ ಶ್ರೀಕೃಷ್ಣ । ಸುಖೇ ಸುಖಾವೇ ಜೀವಪ್ರಾಣ । ತ್ಯಾಚ್ಯಾ ಸೌಂದರ್ಯಾಚೇ ನಿರೂಪಣ । ರಾಜಾ ಆಪಣ ಸಾಂಗತ ॥೨೪॥

ಪ್ರತ್ಯಾಕೃಷ್ಟುಂ ನಯನಮಬಲಾ ಯತ್ರಲಗ್ನಂ ನ ಶೇಕುಃ ಕರ್ಣಾವಿಷ್ಟಂ ನ ಸರತಿ
ತತೋ ಯತ್ಸತಾಮಾತ್ಮ ಲಗ್ನಮ್ । ಯಚ್ಛ್ರೀರ್ವಾಚಾಂ ಜನಯತಿ ರತಿಂ ಕಿಂ ನು
ಮಾನಂ ಕವೀನಾಂ ದೃಷ್ಟ್ವಾ ಜಿಷ್ಣೋರ್ಯುಧಿ ರಥಗತಂ ಯಚ್ಚ ತತ್ಸಾಮ್ಯಮೀಯುಃ ॥೩॥

ಅರ್ಥ:- ಆ ರೂಪದಲ್ಲಿ ಸಿಲುಕಿಕೊಂಡ ತಮ್ಮ ನೇತ್ರಗಳನ್ನು ಅಲ್ಲಿಂದ ತೆಗೆಯಲು ಸ್ತ್ರೀಯರು ಸಮರ್ಥರಾಗಲಿಲ್ಲ. ಸಂತ ಪುರುಷರು ಆತನ ರೂಪಮಾಧುರ್ಯದ ವರ್ಣನೆ ಕೇಳುತ್ತಲೇ ಅದು ಕರ್ಣ ರಂಧ್ರದಲ್ಲಿ ಕೊರೆದು ಒಳಪ್ರವೇಶಿಸಿ ಅಂತಃಕರಣದಲ್ಲಿ ಸ್ಥಿರಗೊಳ್ಳುತ್ತಿತ್ತು. ಆತನ ಶೋಭೆಯು ಕವಿಗಳ ಕಾವ್ಯದಲ್ಲಿ ನಾನಾ ಪ್ರಕಾರದ ರಂಗು ತುಂಬಿಕೊಳ್ಳುತ್ತ ಆದರಿಂದ ಅವರ ಸನ್ಮಾನ ಬೆಳೆಯುತ್ತಿತ್ತು. ಮಹಾಭಾರತ ಯುದ್ಧದಲ್ಲಿ ಅರ್ಜುನನ ರಥದಲ್ಲಿ ಶ್ರೀಕೃಷ್ಣನು ಕುಳಿತಿದ್ದನು. ಆಗ ಯೋಧರು ಆತನನ್ನು ನೋಡುತ್ತ ತಮ್ಮ ಪ್ರಾಣ ಬಿಡಲು ಆಗ ಅವರಿಗೆ ಸಾರುಪ್ಯಮುಕ್ತಿಯು ಪ್ರಾಪ್ತವಾಯಿತು. ಇಂತಹ ಅದ್ಭುತವಾದ ಶರೀರವು ಹೇಗೆ ಅಂತರ್ಧಾನವಾಯಿತು?

ಜ್ಯಾಚೇ ಅಕರಾಹೀ ಇಂದ್ರಿಯಾ ಸದಾ ಗೋಡೀ । ಭೋಗಿಜೇ ತಂವ ತಂವ ಪ್ರೀತೀ ಗಾಢೀ । ಕದಾ ವೀಟ ನುಪಜೇ ಅನಾವಡೀ । ಅವೀಟ ಗೋಡೀ ಕೃಷ್ಣಾಚೀ ॥೨೫॥ ಬಾಳಾ ಪ್ರೌಢ ಮುಗ್ಧಾ ಪ್ರಗಲ್ಭಾ ವ್ಯಕ್ತೀ । ಐಶೀ ಚತುರ್ವಿಧಾ ಸ್ತ್ರೀಯಾಂಚೀ ಜಾತೀ । ತಿಂಹೀ ದೇಖಿಲ್ಯಾ ಶ್ರೀಕೃಷ್ಣಮೂರ್ತೀ । ದೃಷ್ಟೀ ಮಾಗುತೀ ಪರತೇನಾ ॥೨೬॥ ಜ್ಯಾ ಧಾರ್ಮಿಕಾ ಧೈರ್ಯವೃತ್ತೀ । ಜ್ಯಾ ಪತಿವ್ರತಾ ಮಹಾಸತೀ । ತಿಹೀ ದೇಖಿಲ್ಯಾ ಶ್ರೀಕೃಷ್ಣಮೂರ್ತೀ । ದೃಷ್ಟೀ ಮಾಗುತೀ ಪರತೇನಾ ॥೨೭॥ ಜ್ಯಾ ಕಾ ಅಬಳಾ ಅಭುಕ್ತಕಾಮಾ । ಜ್ಯಾ ಅತಿವೃದ್ಧಾ ಅತಿನಿಷ್ಕಾಮಾ । ತಿಂಹೀ ದೇಖಿಲ್ಯಾ ಮೇಘಶ್ಯಾಮಾ । ನಯನ ಸಕಾಮಾ ಹರಿರೂಪೀ ॥೨೮॥ ಜೇವೀ ಲವಣಜಳಾ ಭೇಟೀ । ತೇವೀ ಶ್ರೀಕೃಷ್ಣೀ ಸ್ತ್ರೀಯಾಂಚೀ ದಿಠೀ । ಮಿಸಳಲಿಯಾ ಉಠಾಉಠೀ । ಪರತೋನಿ ಮಿಠೀ ಸುಟೇನಾ ॥೨೯॥ ಏವಂ ದೇಖಲಿಯಾ ಶ್ರೀಕೃಷ್ಣಮೂರ್ತೀ । ಸ್ತ್ರೀಯಾಂಚಿಯಾ ನಿಜಾತ್ಮಶಕ್ತಿ । ದೃಷ್ಟಿ ಪರತೇನಾ ಮಾಗುತೀ । ಐಸೀ ನಯನಾ ಪ್ರೀತೀ ಹರಿರೂಪೀ ॥೩೦॥

ಶ್ರೀಕೃಷ್ಣನ ಶರೀರವು ಇದು ಸರ್ವರ ನೇತ್ರಗಳಿಗೆ ಆಲ್ಹಾದ ಕೊಡುವದಂತಾಗಿರುವುದು. ಇಂತಹ ಸುಂದರ ಶರೀರ ಕಂಡು ಶ್ರೀಶಂಕರನೂ ಸಹ ಸ್ವಾನಂದದಿಂದ ತೂಗಾಡುತ್ತಿದ್ದನು ॥೨೧॥ ಹೀಗಿರುವ ಆಲ್ಹಾದಕರ ಶರೀರವನ್ನು ಶ್ರೀಕೃಷ್ಣನು ಹೇಗೆ ತ್ಯಜಿಸಿದನು? ಬ್ರಹ್ಮಶಾಪಕ್ಕೆ ಬೆದರಿ ಆತನು ತನ್ನ ಶರೀರವನ್ನು ಏಕೆ ಬಿಡಬೇಕಾಯಿತು? ॥೨೨॥ ಶ್ರೀಕೃಷ್ಣನು ಪರಿಪೂರ್ಣ ಬ್ರಹ್ಮನಾಗಿರುವನು. ಆತನಿಗೆ ಶಾಪವು ಬಾಧಿಸಲು ಶಕ್ಯವೇ ಇಲ್ಲ. ಆದರೂ ಆತನು ಯಾದವ ವಂಶದಲ್ಲಿನ ತನ್ನ ಶರೀರವನ್ನು ಬಿಟ್ಟು ಬ್ರಾಹ್ಮಣರ ವಚನವನ್ನು ಸತ್ಯವೆಂದು ಮಾಡಿ ತೋರಿಸಿದನು ॥೨೩॥ ಶ್ರೀಕೃಷ್ಣನಿಗೆ ಕೇವಲ ನೇತ್ರಗಳಿಂದ ನೋಡಿದರೆ ಸಾಕು, ಜೀವ ಪ್ರಾಣಗಳು ಸುಖರೂಪವಾಗಿಬಿಡುವುವು. ಆತನ ಅಲೌಕಿಕ ಸೌಂದರ್ಯದ ವರ್ಣನೆ ಸ್ವತಃ ರಾಜನು ಹೇಳುತ್ತಿರುವನು ॥೨೪॥

ಹನ್ನೊಂದೂ ಇಂದ್ರಿಯಗಳಿಗೆ ಶ್ರೀಕೃಷ್ಣನ ಮಾಧುರ್ಯ ಹತ್ತಿಕೊಂಡಿರುವುದು. ಯಾವ ಯಾವ ಇಂದ್ರಿಯಗಳಿಂದ ಆತನ ಸ್ವರೂಪದ ಅನುಭವ ಪಡೆಯುತ್ತಿದ್ದಂತೆ ಇನ್ನೂ ಹೆಚ್ಚಾಗಿಯೇ ಪ್ರೇಮ ಉಂಟಾಗುವುದು. ಎಂದಿಗೂ ಈತನ ಬೇಸರ ಉಂಟಾಗುವುದೇ ಇಲ್ಲ. ಹೀಗೆ ಶ್ರೀಕೃಷ್ಣನ ಮಾಧುರ್ಯವು ಬೇಸರರಹಿತವಾಗಿರುವುದು ॥೨೫॥ ಬಾಲಕಿ, ತರುಣೀ, ಪ್ರೌಢ, ವೃದ್ಧ ಹೀಗೆ ನಾಲ್ಕು ಪ್ರಕಾರದ ಸ್ತ್ರೀಯರಿರುವರು. ಇವರೆಲ್ಲರೂ ಸರ್ವಾಂಗ ಸುಂದರ ಶ್ರೀಕೃಷ್ಣನ ಮೂರ್ತಿ ಕಂಡರು. ಕಣ್ಣುಗಳಲ್ಲಿ ಮೂಡಿದ ಮೂರ್ತಿಯು ಅಲ್ಲಿಂದ ಸರಿಯಲು ಸಾಧ್ಯವಾಗದಾಯಿತು ॥೨೬॥ ಯಾವ ಅತಿಶಯ ಧಾರ್ಮಿಕರು,ಮಹಾನ ಪತಿವ್ರತೆಯರು, ಸಾಧ್ವಿಶಿರೋಮಣಿಗಳು ಇವರು ಶ್ರೀಕೃಷ್ಣನ ಮೂರ್ತಿ ನೋಡಿದಾಕ್ಷಣ ಅವರ ದೃಷ್ಟಿಯು ಅಲ್ಲಿಂದ ಮರಳುತ್ತಿದ್ದಿಲ್ಲ ॥೨೭॥ ವಿಷಯದ ಕಲ್ಪನೇ ಬಾರದ ಅಥವಾ ಕಾಮವಿಕಾರ ಶೂನ್ಯವಾಗಿರುವ ವೃದ್ಧ ಸ್ತ್ರೀಯರೂ ಕೂಡ ಶ್ರೀಕೃಷ್ಣನ ಮನೋಹರ ರೂಪ ಕಂಡು ಆತನಲ್ಲಿ ಲುಬ್ಧರಾಗುತ್ತಿದ್ದರು ॥೨೮॥ ಲವಣವು ನೀರಿನಲ್ಲಿ ಬಿದ್ದಿತೆಂದರೆ ಅದು ನೀರಾಗಿ ಬಿಡುವುದು. ಅದರಂತೆ ಶ್ರೀಕೃಷ್ಣನಲ್ಲಿ ಸ್ತ್ರೀಯರ ದೃಷ್ಟಿ ಹೊರಳಿತೆಂದರೆ ಅಲ್ಲಿಂದ ಮರುಳುತ್ತಿದ್ದಿಲ್ಲ ॥೨೯॥ ಈ ಪ್ರಕಾರವಾಗಿ ಶ್ರೀಕೃಷ್ಣನ ಮನೋರಮ ಮೂರ್ತಿಯನ್ನು ನೋಡುತ್ತಲೇ ಸ್ತ್ರೀಯರು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಅವರ ದೃಷ್ಟಿಯು ಅಲ್ಲಿಂದ ಮರಳಿ ಹೊರಳುತ್ತಿದ್ದಿಲ್ಲ. ಅವರ ಕಣ್ಣುಗಳಲ್ಲಿ ಶ್ರೀಕೃಷ್ಣನ ಸ್ವರೂಪದ ಹುಚ್ಚು ಹಿಡಿಯುತ್ತಿತ್ತು ॥೩೦॥

ಸ್ತ್ರಿಯಾ ಬಾಪುಡ್ಯಾ ತ್ಯಾ ಕಿತೀ । ಜೇ ಕಾ ಸಂತ ವಿರಕ್ತ ಪರಮಾರ್ಥೀ । ತ್ಯಾಂಚೇ ಶ್ರವಣೀ ಪಡತಾ ಕೀರ್ತಿ । ಚಿತ್ತೀ ಶ್ರೀಕೃಷ್ಣಮೂರ್ತಿ ಠಸಾವೇ ॥೩೧॥ ಚಿತ್ತೀ ಠಸಾವೋನಿ ಶ್ರೀಕೃಷ್ಣಮೂರ್ತಿ । ಚಿತ್ತಚಿ ಆಣಿ ಕೃಷ್ಣಸ್ಥಿತೀ । ಐಶೀ ಕೃಷ್ಣಾಚೀ ಕೃಷ್ಣಕೀರ್ತಿ । ಚಿತ್ತವೃತ್ತೀ ಆಕರ್ಷಿ ॥೩೨॥ ಸಂತಾಂಚೀ ಆಕರ್ಷಿ ಚಿತ್ತವೃತ್ತೀ । ಹೇ ನವಲ ನವ್ಹೇ ಕೃಷ್ಣಕೀರ್ತಿ । ಕೀರ್ತಿ ಐಕತಾ ಅಸಂತೀ । ತೇಹೀ ಹೋತೀ ತದ್ರೂಪ ॥೩೩॥ ಲಾಗತಾ ಚಂದನಾಚಾ ಪವನ । ಖೈರ ಧಾಮೋಡೇ ಹೋತೀ ಚಂದನ । ತೇವೀ ಕೃಷ್ಣಕೀರ್ತಿಶ್ರವಣ । ದೇ ಸಮಾಧಾನ ಸಮಸಾಮ್ಯೇ ॥೩೪॥ ಭಾವೇ ಐಕತಾ ಶ್ರೀಕೃಷ್ಣಕೀರ್ತಿ । ಅಸಂತಹೀ ಸಂತತ್ವಾ ಯೇತೀ । ಮಗ ಸಂತಾಸಂತ ದೋನೀ ಸ್ಥಿತೀ । ಹಾರಪತೀ ಸಮಸಾಮ್ಯೇ ॥೩೫॥ ಮಹಾಕವಿ ವರ್ಣಿತಾ ಶ್ರೀಕೃಷ್ಣಕೀರ್ತಿ । ಪಾವಲೇ ಪರಮ ಸೌಭಾಗ್ಯಸ್ಥಿತೀ । ತೇ ಕೃಷ್ಣಕೀರ್ತಿ ಜೇ ವರ್ಣಿತೀ । ತೇಹೀ ಪಾವತೀ ತೇ ಶೋಭಾ ॥೩೬॥ ಕವೀಶ್ವರಾ ನವರಸಿಕು । ನವರಂಗಡಾ ಶ್ರೀಕೃಷ್ಣ ಏಕು । ಜೋ ಜೋ ವರ್ಣಿಜೇ ರಸ ವಿಶೇಖು । ತೋ ತೋ ಯದುನಾಯಕು ಸ್ವಯೇ ಹೋಯ ॥೩೭॥ ಮಹಾಕವಿ ಆದಿಕರೂನೀ । ಕವೀಶ್ವರಾಂಚೀ ಕೀರ್ತಿಜನನೀ । ಜೇ ವಿನಟಲೇ ಹರಿಕೀರ್ತನೀ । ವಂದ್ಯ ವಾಣೀ ತಯಾಂಚೀ ॥೩೮॥ ಶ್ರೀಕೃಷ್ಣಕೀರ್ತಿಪವಾಡೇ । ಜ್ಯಾಚೀ ವಾಣೀ ಅಬದ್ಧ ಹೀ ಪಢೇ । ತೇ ವಾಚಾ ವಂದಿಜೇ ಚಂದ್ರಚೂಡೇ । ತ್ಯಾಚ್ಯಾ ಪಾಯಾ ಪಡೇ ಯಮಕಾಳ ॥೩೯॥ ಜೇಥೇ ಶ್ರೀಕೃಷ್ಣಕೀರ್ತಿಕೀರ್ತನ । ತೇಥೇ ಕರ್ಮಾಕರ್ಮಾಚೀ ಉಜವಣ । ಹೋಯ ಸಂಸಾರಾಚೀ ಬೋಳವಣ । ಜನ್ಮ ಮರಣಾಸಮವೇತ ॥೪೦॥ ಯಾಪರೀ ಕೀರ್ತಿಜೇ ಮಹಿಮಾನ । ಸರ್ವಾರ್ಥೀ ಅಗಾಧ ಜಾಣ । ಶ್ರೀಕೃಷ್ಣಕೀರ್ತಿಕವಿತಾ ಜಾಣ । ಪರಮ ಪಾವನ ತಿಂಹೀ ಲೋಕೀ ॥೪೧॥ ಕವೀಶ್ವರಾಂಚೀ ಶ್ರೀಕೃಷ್ಣಕೀರ್ತಿ । ಐಕತಾ ವಾಢೇ ಶ್ರದ್ಧಾ ಪ್ರೀತೀ । ತೇಣೇ ಥೋರಾವೇ ಕೃಷ್ಣಭಕ್ತೀ । ಹೇ ಕವಿತಾಶಕ್ತಿ ಅಗಾಧ ॥೪೨॥ ಐಶೀ ಅಗಾಧ ಶ್ರೀಕೃಷ್ಣಕೀರ್ತಿ । ಮಾ ತ್ಯಾ ಕೃಷ್ಣಾಚೀ ಕೃಷ್ಣಮೂರ್ತಿ । ಜೇ ಅಖಂಡ ಧ್ಯಾನೀ ದೇಖತೀ । ತೇ ತೇ ಹೋತೀ ತದ್ರೂಪ ॥೪೩॥ ಜ್ಯಾಂಸೀ ಅಖಂಡ ಧ್ಯಾನೀ ಶ್ರೀಕೃಷ್ಣಮೂರ್ತಿ । ತೇ ತೇ ತದ್ರೂಪ ಪಾವತೀ । ಹೇ ನವಲ ನವ್ಹೇ ಕೃಷ್ಣಸ್ಥಿತೀ । ಜೇ ದ್ವೇಷೇ ದೇಖತೀ ತೇಹೀ ಮುಕ್ತ ॥೪೪॥

ಪಾಪ! ಸ್ತ್ರೀಯರ ವಿಚಾರವೇಕೇ? ಯಾರು ವಿರಕ್ತರೋ ಪರಮಾರ್ಥದಲ್ಲಿ ಸಂತರಾಗಿರುವರೋ, ಅವರ ಕಿವಿಗಳಿಗೆ ಶ್ರೀಕೃಷ್ಣನ ಕೀರ್ತಿಯು ಪ್ರವೇಶಿಸುತ್ತಲೇ ಅವರ ಹೃದಯಪಟಲದಲ್ಲಿ ಶ್ರೀಕೃಷ್ಣನ ಮೂರ್ತಿಯು ನಾಟಿಕೊಳ್ಳುತ್ತಿತ್ತು ॥೩೧॥ ಚಿತ್ತದಲ್ಲಿ ಶ್ರೀಕೃಷ್ಣಮೂರ್ತಿಯು ನಟ್ಟಿಕೊಂಡು ಚಿತ್ತಕ್ಕೆ ಕೃಷ್ಣಮಯವನ್ನಾಗಿ ಮಾಡುವ ಇಷ್ಟೊಂದು ಕೃಷ್ಣನ ಕೀರ್ತಿಯನ್ನು ಚಿತ್ತವೃತ್ತಿಯು ಆಕರ್ಷಣೆ ಮಾಡುತ್ತಿತ್ತು ॥೩೨॥ ಶ್ರೀಕೃಷ್ಣನ ವೃತ್ತಿಯು ಸಂತರ ಚಿತ್ತಕ್ಕೆ ಆಕರ್ಷಿಸುತ್ತಿರುವುದು ಇದರಲ್ಲೇನು ಆಶ್ಚರ್ಯವಿದೇ? ಆದರೆ ದುರ್ಜನರಿಗೂ ಕೂಡ ಶ್ರೀಕೃಷ್ಣನ ಕೀರ್ತಿ ಕೇಳುತ್ತಲೇ ಅವರು ತದ್ರೂಪರಾಗುತ್ತಿದ್ದರು ॥೩೩॥ ಚಂದನ ವೃಕ್ಷದ ಮೇಲೆ ಹಾದು ಹೋಗುವ ಗಾಳಿಯು ಖದಿರ, ಜಾಲೀ ಇತ್ಯಾದಿ ವೃಕ್ಷಗಳಿಗೆ ಯಾವ ಪ್ರಕಾರವಾಗಿ ಸುಗಂಧವನ್ನಾಗಿ ಮಾಡುವುದೋ, ಅದರಂತೆ ಶ್ರೀಕೃಷ್ಣಕೀರ್ತಿಯ ಶ್ರವಣವು ತದ್ರೂಪವನ್ನಾಗಿ ಮಾಡುತ್ತಿತ್ತು ॥೩೪॥ ಶ್ರೀಕೃಷ್ಣನ ಕೀರ್ತಿಯನ್ನು ಪರಮ ಶ್ರದ್ಧೆಯಿಂದ ಭಕ್ತಿ ಭಾವದಿಂದ ಕೇಳಿದರೆ ದುರ್ಜನರೂ ಕೂಡ ಸಜ್ಜನರಾಗುವರು. ಅಲ್ಲದೇ ದುರ್ಜನ ಹಾಗೂ ಸಜ್ಜನ ಎಂಬ ಎರಡೂ ಅವಸ್ಥೆ ಇಲ್ಲದಾಗಿ ಏಕರೂಪವಾಗುವುದು ॥೩೫॥ ಶ್ರೀಕೃಷ್ಣನ ಕೀರ್ತಿ ವರ್ಣಿಸುವುದರಿಂದ ಮಹಾಕವಿಗಳಿಗೆ ಪರಮಭಾಗ್ಯ ಪ್ರಾಪ್ತವಾಗುವುದು. ಹೀಗೆ ಕೃಷ್ಣಕೀರ್ತಿಯ ವರ್ಣನೆ ಮಾಡುವವರು ಅವರೂ ಸಹ ಹಾಗೆಯೇ ಶೋಭೆ ಪಡೆಯುವರು ॥೩೬॥ ಮಹಾಕವಿಗಳವರಿಗೆ ನವರಸಗಳಲ್ಲಿ ರಂಗು ಕೊಡುವವ ಪುರುಷನೆಂದರೆ ಒಬ್ಬ ಶ್ರೀಕೃಷ್ಣನೇ ಆಗಿರುವನು. ಕವಿಯು ಯಾವುದೇ ರಸದ ವರ್ಣನೆ ಮಾಡಲಿ ಶ್ರೀಕೃಷ್ಣನು ಆ ರಸ ಸ್ವತಃ ಆಗುವನು ॥೩೭॥ ಮಹಾಕವಿಗಳ ಆದಿಯಾಗಿ ಶ್ರೀಕೃಷ್ಣಕೀರ್ತಿಯು ಅವರ ಜನನೀಯಾಗಿರುವುದು. ಯಾರು ಹರಿಕೀರ್ತನೆಯಲ್ಲಿ ತನ್ಮಯರಾಗುವರೋ, ಅವರ ವಾಣಿಯು ಧನ್ಯವು ॥೩೮॥ ಶ್ರೀಕೃಷ್ಣನ ಮಹಿಮೆ ವರ್ಣಿಸುವ ವಾಣಿಯು ಅಶುದ್ಧವಾಗಿದ್ದರೆ, ಆದಕ್ಕೆ ಶ್ರೀಶಂಕರನು ಆ ವಾಣಿಯ ಸ್ತುತಿ ಮಾಡಿರುವನು ಮತ್ತು ಸಾಕ್ಷಾತ್ ಕಾಲನೂ ಕೂಡ ವರ್ಣಿಸುವವನ ಕಾಲಿಗೆ ಬೀಳುವನು ॥೩೯॥ ಎಲ್ಲಿ ಶ್ರೀಕೃಷ್ಣಕೀರ್ತಿಯ ಕೀರ್ತನೆ ನಡೆಯುತ್ತಿರುವುದೋ, ಅಲ್ಲಿ ಕರ್ಮಾಕರ್ಮದ ಸಮಾಪ್ತಿಯಾಗುವುದು ಮತ್ತು ಜನ್ಮ ಮರಣ ಸಹ ಸಂಸಾರದ ಪಲಾಯನವಾಗುವುದು ॥೪೦॥ ಈ ಪ್ರಕಾರವಾಗಿ ಶ್ರೀಕೃಷ್ಣಕೀರ್ತಿಯ ಮಹಿಮೆಯು ಅತ್ಯಂತ ಅಗಾಧವಾಗಿರುವುದು. ಶ್ರೀಕೃಷ್ಣಕೀರ್ತಿಯ ಕವಿತೆಗಳು ಮೂರು ಲೋಕಗಳಲ್ಲಿ ಪರಮಪಾವನವಾಗಿರುವುವು ॥೪೧॥ ಮಹಾಕವಿಗಳು ವರ್ಣಿಸಿರುವ ಶ್ರೀಕೃಷ್ಣ ಕೀರ್ತಿಯನ್ನು ಕೇಳಿದರೆ ಸಾಕು, ಶ್ರದ್ಧೆ, ಪ್ರೇಮವು ಉಕ್ಕೇರಿ ಪ್ರಕಟವಾಗುವುದು. ಶ್ರೀಕೃಷ್ಣನ ಭಕ್ತಿಯು ವೃದ್ಧಿಯಾಗುವುದು. ಇಷ್ಟೊಂದು ಕವಿತೆಯ ಸಾಮರ್ಥ್ಯವು ಅದ್ಭುತವಾಗಿರುವುದು ॥೪೨॥ ಹೀಗೆ ಶ್ರೀಕೃಷ್ಣನ ಕೀರ್ತಿಯು ಅಗಾಧವಾಗಿರುವುದು. ಯಾರು ಈ ಮೇಘ ವರ್ಣ ಶ್ರೀಕೃಷ್ಣನ ಮೂರ್ತಿಯ ಧ್ಯಾನವನ್ನು ಸತತವಾಗಿ ಮಾಡುವರೋ, ಅವರು ಆತನ ದರ್ಶನ ಪಡೆದು ಅವರ ಸರ್ವವೂ ತದ್ರೂಪವಾಗಿ ಬಿಡುವುವು ॥೪೩॥ ಯಾರು ಶ್ರೀಕೃಷ್ಣಮೂರ್ತಿಯ ಅಖಂಡ ಧ್ಯಾನವನ್ನು ಮಾಡುತ್ತಿರುವರೋ, ಅವರು ತದ್ರೂಪರಾಗಿಬಿಡುವರು. ಇದಾದರೂ ಯಾವ ಆಶ್ಚರ್ಯವಾಗಿದೆ? ಆದರೆ ಯಾರು ಶ್ರೀಕೃಷ್ಣನತ್ತ ದ್ವೇಷದಿಂದ ನೋಡುವರೋ, ಅವರೂ ಸಹ ಸಹಜವಾಗಿ ಮುಕ್ತರಾಗುವರು ॥೪೪॥

ಜ್ಯಾಚೇ ರಥೀ ಮೇಘಶ್ಯಾಮ । ಸಾರಥೀ ಝಾಲಾ ಪುರುಷೋತ್ತಮ। ಯಾಲಾಗೀ ಪಾರ್ಥಾಚಾ ಪರಾಕ್ರಮ। ಮಿರವೀ ನಾಮ ವಿಜಯತ್ವೇ ।।೪೫।। ಸದಾ ಜಯಶೀಲ ಸಂಪೂರ್ಣ । ಯಾಲಾಗೀ ಅರ್ಜುನಾ ನಾಮ ''ಜಿಷ್ಣು'' । ಜ್ಯಾಚೇ ಯುದ್ಧೀಂಚಾ ಕಠಿಣಪಣ। ಸಿದ್ಧೀ ಶ್ರೀಕೃಷ್ಣ ಪಾವವೀ ।।೪೬।। ತೋ ಬೈಸೋನಿ ಅರ್ಜುನಾಚೇ ರಥೀ । ವಿಚರತಾ ಯುದ್ಧಕ್ಷಿತೀ । ಜೇ ಜೇ ದೇಖತೀ ಶ್ರೀಕೃಷ್ಣ ಮೂರ್ತೀ । ತೇ ತೇ ಕೃಷ್ಣಸ್ಥಿತೀ ಪಾವಲೇ ।।೪೭।। ಜೇಥ ಕೃಷ್ಣಾಚಾ ಪಡೇ ಪದರೇಣು । ತೇಥೇ ಚಹೂ ಮುಕ್ತಿಸೀ ಹೋಯ ಸಣು । ಐಶೀ ಪಾವನ ಶ್ರೀಕೃಷ್ಣ ತನು । ಕೈಸೇನಿ ಶ್ರೀಕೃಷ್ಣ ಸಾಂಡಿತಾ ಝಾಲಾ ।।೪೮।। ಮ್ಹಣಾಲ ಬ್ರಹ್ಮ ಶಾಪಾಭೇಣ । ಶರೀರ ಸಾಂಡೀ ಶ್ರೀಕೃಷ್ಣ । ಹಾ ಬೋಲಚಿ ಅಪ್ರಮಾಣ । ಕೃಷ್ಣ ಬ್ರಹ್ಮ ಪೂರ್ಣ ಪರಮಾತ್ಮಾ ।।೪೯।। ಹೇಳಣ ಛಳಣ ದುರ್ವಚನ । ದ್ವಿಜಾ ನ ಕರಾವಾ ಅಪಮಾನ । ತ್ಯಾಂಚಾ ವಾಢವಾವಯಾ ಪೂರ್ಣ ಸನ್ಮಾನ । ತನುತ್ಯಾಗೇ ಶ್ರೀಕೃಷ್ಣ ದ್ವಿಜಶಾಪ ಪಾಳೀ ।।೫೦।। ಕೃಷ್ಣ ಪರಮಾತ್ಮಾ ಪರಿಪೂರ್ಣ । ತೇಣೇಹೀ ನಿಜಕುಳ ನಿರ್ದಳೂನ । ಸತ್ಯ ಕರೀ ಬ್ರಾಹ್ಮಣವಚನ । ವಿಪ್ರಶಾಪೇ ಆಪಣ ನಿಜತನು ತ್ಯಾಗೀ ।।೫೧।। ತೋ ತನುತ್ಯಾಗಪ್ರಕಾರ । ಸಾಙ್ಗ ಸಮೂಳ ಸವಿಸ್ತರ । ಸಾಂಗತಾಹೇ ಶುಕ ಯೋಗೀಂದ್ರ । ಪರಿಸೇ ನರೇಂದ್ರ ತ್ಯಕ್ತೋದಕ ।।೫೨।। ಪಾಂಡವಕುಳೀ ಕುಳದೀಪಕ । ಜನ್ಮಲಾ ಪರೀಕ್ಷಿತೀಚ ಏಕ । ಜೋ ಹೋಊನಿ ತ್ಯಕ್ತೋದಕ । ಭಾಗವತಪರಿಪಾಕ ಸೇವಿತ ।।೫೩।। ಬ್ರಹ್ಮಾ ನಾರದವ್ಯಾಸಪರ್ಯಂತ । ಭಾಗವತ- ಉಪದೇಶ ಗುಹ್ಯ ಗುಪ್ತ । ತೋ ಪರೀಕ್ಷಿತೀನೇ ಜಗಾ ಆಂತ । ಕೇಲಾ ಪ್ರಕಟಾರ್ಥ ದೀನೋದ್ಧಾರಾ ।।೫೪।। ಧರ್ಮವಂಶೀ ಅತಿಧಾರ್ಮಿಕ । ಜನ್ಮಲಾ ಪರೀಕ್ಷಿತೀಚ ಏಕ । ಭಾಗವತರಸೀ ಅತಿರಸಿಕ । ಅತಿ ನೇಟಕ ಶ್ರವಣಾರ್ಥೀ ।।೫೫।। ಐಸಾ ಜೋ ಕಾ ಪರೀಕ್ಷಿತೀ । ತೇಣೇ ಅತ್ಯಾದರೇ ಕೇಲೀ ವಿನಂತೀ । ಶುಕ ಸುಖಾವೋನಿ ಚಿತ್ತೀ । ಕಾಯ ತ್ಯಾಪ್ರತೀ ಬೋಲಿಲಾ ।।೫೬।।

ಋಷಿರುವಾಚ :-

ದಿವಿ ಭುವ್ಯಂತರಿಕ್ಷೇ ಚ, ಮಹೋತ್ಪಾತಾನ್ ಸಮುತ್ಥಿತಾನ್ ।
ದೃಷ್ಟ್ವಾಽಽಸೀ ನಾನ್ ಸುಧರ್ಮಾಯಾಂ ಕೃಷ್ಣಃ ಪ್ರಾಹ ಯದೂನಿದಮ್ ।।೪।।

ಅರ್ಥ:- ಶುಕದೇವನು ನುಡಿದನು ; ಹೇ ಪರೀಕ್ಷಿತಿಯೇ, ಶ್ರೀಕೃಷ್ಣನು ಆಕಾಶ, ಭೂಮಿ ಮತ್ತು ಅಂತರಿಕ್ಷಗಳಲ್ಲಿ ಸಂಭವಿಸಿದ ಅನೇಕ ಉದ್ವಿಗ್ನ ಚಿನ್ಹೆಗಳನ್ನು ಕಂಡು ಸುಧರ್ಮ ಸಭೆಯಲ್ಲಿ ನೆರೆದಿದ್ದ ಯದುಗಳನ್ನು ಉದ್ದೇಶಿಸಿ ಹೀಗೆಂದನು.

ಮೇಘಶ್ಯಾಮ ಶ್ರೀಕೃಷ್ಣನು ಅರ್ಜುನನ ರಥದಲ್ಲಿ ಸಾರಥಿಯಾಗಿದ್ದನು. ಆದ್ದರಿಂದಲೇ ಅರ್ಜುನನ ಪರಾಕ್ರಮವು ವಿಜಯೀ ಎಂಬ ಈ ನಾಮದಿಂದ ಸದಾ ಗರ್ಜಿಸುತ್ತಿರುವುದು ।।೪೫।। ಅರ್ಜುನನು ನಿರಂತರವಾಗಿಯೂ ವಿಜಯದೊಂದಿಗೆ ಶೋಭಿಸುವವನಾಗಿದ್ದರಿಂದ ಆತನಿಗೆ ಜಿಷ್ಣೂ ಎಂದು ಹೇಳುವರು. ಯುದ್ಧದಲ್ಲಿ ಆತನ ಪಣವು ಎಂತಹ ಕಠಿಣವಾಗಿದ್ದರೂ ಕೂಡ, ಶ್ರೀಕೃಷ್ಣನು ಅವುಗಳನ್ನೆಲ್ಲ ಸಿದ್ಧಿಗೊಳ್ಳುವಂತೆ ಪೂರ್ಣ ಮಾಡುತ್ತಿದ್ದನು ।।೪೬।। ಆ ಅರ್ಜುನನ ರಥದಲ್ಲಿ ಕುಳಿತುಕೊಂಡು ರಣರಂಗದಲ್ಲಿ ರಥವನ್ನು ತಿರುಗಿಸುತ್ತಿದ್ದಾಗ ಶ್ರೀಕೃಷ್ಣನ ಮೂರ್ತಿ ಯಾರು ನೋಡುತ್ತಿದ್ದರೋ, ಅವರೆಲ್ಲರೂ ಆತನ ಸ್ವರೂಪಕ್ಕೆ ಪ್ರಾಪ್ತರಾದರು ।।೪೭।। ಶ್ರೀಕೃಷ್ಣನ ಕೇವಲ ಪಾದಧೂಳಿಯು ಎಲ್ಲಿ ಬೀಳುತ್ತಿತ್ತೋ, ಅಲ್ಲಿ ನಾಲ್ಕು ಮುಕ್ತಿಗಳು ಹಬ್ಬ ಆಚರಿಸುತ್ತಿದ್ದವು. ಇಂತಹ ಪರಮ ಪಾವನವಾದ ಶರೀರವನ್ನು ಆತನು ಹೇಗೆ ತಾನೇ ಬಿಟ್ಟನು ? ।।೪೮।। ಬ್ರಹ್ಮ ಶಾಪದ ಭಯದಿಂದ ಆತನು ಶರೀರ ಬಿಟ್ಟನು ಎಂದು ತೋರಬಹುದು. ಆದರೆ ಇದು ಅತ್ಯಂತ ಅಪ್ರಮಾಣವಾಗಿರುವುದು. ಕಾರಣ ಶ್ರೀಕೃಷ್ಣನು ಪೂರ್ಣ ಪರಬ್ರಹ್ಮನಾಗಿರುವನು ।।೪೯।। ಯಾರೂ ಎಂದಿಗೂ ಬ್ರಾಹ್ಮಣರ ಅವಹೇಳನೆ, ಪೀಡಿಸುವಿಕೆ ಹಾಗೂ ಅಪಮಾನ ಮಾಡಬಾರದು. ಅವರ ಸನ್ಮಾನ ಮಾಡಬೇಕು ಎಂಬ ಉದ್ದೇಶದಿಂದ ಶ್ರೀಕೃಷ್ಣನು ಶರೀರ ಬಿಟ್ಟು ಬ್ರಾಹ್ಮಣರ ಶಾಪ ಸತ್ಯಗೊಳಿಸಿದನು ।।೫೦।। ಶ್ರೀಕೃಷ್ಣನು ಪರಿಪೂರ್ಣ ಪರಮಾತ್ಮನಾಗಿದ್ದನು. ಆತನು ತನ್ನ ಸರ್ವ ಕುಲದ ಸಂಹಾರಗೊಳಿಸಿ ಬ್ರಾಹ್ಮಣರ ವಚನವನ್ನು ನಿಜಗೊಳಿಸಿದನು ಮತ್ತು ಅವರ ಶಾಪಕ್ಕಾಗಿ ತನ್ನ ದೇಹವನ್ನು ಬಿಟ್ಟನು ।।೫೧।। ಈ ಯಾವ ದೇಹತ್ಯಾಗದ ಸರ್ವ ಪ್ರಕಾರವನ್ನು ಶುಕಾಚಾರ್ಯರು ಸವಿಸ್ತಾರವಾಗಿ ಹೇಳುತ್ತಿರುವರು. ಮತ್ತು ನೀರನ್ನೂ ಸಹ ಸೇವಿಸದ ಪರೀಕ್ಷಿತೀ ರಾಜನು ಏಕಾಗ್ರತೆಯಿಂದ ಕೇಳುತ್ತಿರುವನು ।।೫೨।। ಪಾಂಡವರ ಕುಲದಲ್ಲಿ ಕುಲದೀಪಕನಾಗಿರುವ ಒಬ್ಬ ಪರೀಕ್ಷಿತೀ ರಾಜನು ಮಾತ್ರ ಜನಿಸಿದ್ದನು. ನೀರನ್ನು ತ್ಯಜಿಸಿ ಆತನು ಭಾಗವತ ರಹಸ್ಯದ ಸೇವನೆ ಮಾಡುತ್ತಿದ್ದನು ।।೫೩।। ಬ್ರಹ್ಮದೇವ, ನಾರದ, ವ್ಯಾಸರ ಪರ್ಯಂತವೂ ಭಾಗವತದ ಉಪದೇಶವು ಗೂಢ ಹಾಗೂ ಗುಪ್ತವಾಗಿತ್ತು. ಅದು ದೀನ ಜನರ ಉದ್ಧಾರವಾಗಬೇಕೆಂದು ಪರೀಕ್ಷಿತೀ ರಾಜನ ನಿಮಿತ್ತ ಮಾಡಿ ಶ್ರೀಶುಕಾಚಾರ್ಯರು ಪ್ರಕಟಮಾಡಿದರು ।।೫೪।। ಧರ್ಮರಾಯನ ವಂಶದಲ್ಲಿ ಅತಿಶಯ ಧಾರ್ಮಿಕನಾಗಿ ಒಬ್ಬ ಪರೀಕ್ಷಿತೀ ರಾಜ ಮಾತ್ರ ಜನಿಸಿದ್ದನು. ಆತನಿಗೆ ಭಾಗವತಾಮೃತದ ಅತ್ಯಂತ ಪ್ರೇಮವಿತ್ತು. ಅದಕ್ಕಾಗಿ ಆತನಲ್ಲಿ ಶ್ರವಣಕ್ಕಾಗಿ ಅತಿಶಯ ಉತ್ಸುಕತೆ ಇತ್ತು ।।೫೫।। ಹೀಗಿರುವ ರಾಜನು ಅತ್ಯಂತ ಆದರದಿಂದ ವಿನಂತಿ ಮಾಡಿದನು. ಆಗ ಶ್ರೀಶುಕಾಚಾರ್ಯರು ಸಂತೋಷಪಟ್ಟರು. ಈಗ ಅವರು ಏನು ಹೇಳುವರೆಂಬುದನ್ನು ಕೇಳಿರಿ ।।೫೬।।

ಶುಕ ಮ್ಹಣೇ ಪರೀಕ್ಷಿತೀ । ಉದ್ಧವ ಗೇಲಿಯಾ ವನಾಪ್ರತೀ । ಮಾಗೇ ವಿಘ್ನ ಭೂತ ದ್ವಾರಾವತೀ । ತ್ರಿವಿಧ ಉತ್ಪಾತೀ ಅತಿವ್ಯಾಪ್ತ ॥೫೭॥ ದಿವಿ - ಭುವಿ - ಅಂತರಿಕ್ಷ ಗತ । ಉಠಿಲೇ ಗಾ ಮಹೋತ್ಪಾತ । ದಿವಸಾ ಉಲ್ಕಾಪಾತ ಹೋತ । ಭೂತೇ ಖಾಖಾತ ಅಂತರಿಕ್ಷೀ ॥೫೮॥ ಗಗನೀ ಉಗವಲೇ ತ್ರಿವಿಧ ಕೇತು । ದಂಡಕೇತು ಧೂಮಕೇತು । ಶಿಖಾಕೇತು ಅತಿ ಅದ್ಭುತು । ದಿವಸಾಂಹೀ ದಿಸತು ಸರ್ವಾಂಸೀ ॥೫೯॥ ಧರಾ ಕಾಂಪೋನಿ ಅತಿಗಜರೀ । ಭೂಸ್ಫೋಟ ಝಾಲಾ ನಗರದ್ವಾರೀ । ಭೂಕಂಪ ತೀನ ದಿವಸವರೀ । ಘರೋಘರೀ ಆಂದೋಳ ॥೬೦॥ ವಾರಾ ಸುಟಲಾ ಅತಿ ಝಡಾಡೇ । ಸಮೂಳ ಉನ್ಮಳತೀ ಝಾಡೇ । ದ್ವಾರಕೇ ಮಾಜೀ ಧುಳೀ ಉಡೇ । ಡೋಳಾ ನುಘಡೇ ಜನಾಂಚಾ ॥೬೧॥ ಅಂತರಿಕ್ಷೀ ನಗ್ನ ಭೂತೇ । ಧಾಂವತೀ ಖಾಖಾತೇ ಖಿಂಖಾತೇ । ರುಧಿರವೃಷ್ಟೀ ಹೋಯ ತೇಥೇ । ಅಕಸ್ಮಾತೇ ನಿರಭ್ರೀ ॥೬೨॥ ರವಿಚಂದ್ರಾಂಚೇ ಮಂಡಳ । ಖಳೇ ಕರೀತ ಸರ್ವಕಾಳ । ಗ್ರಹ ಭೇದಿತೀ ಗ್ರಹಮಂಡಳ । ಕ್ರೂರಗ್ರಹಮೇಳ ಶತ್ರುಸದನೀ ॥೬೩॥ ಸನ್ಮುಖ ಆಕಾಶಾಚೇ ಪೋಟೀ । ದಿಗ್ದಾಹ ದೇಖತೀ ದೃಷ್ಟೀ । ಅಭ್ರೇವೀಣ ಕಡಕಡಾಟೀ । ಪಡತೀ ವಿತಂಡೀ ಮಹಾವಿಜಾ ॥೬೪॥ ಘಾರೀ ಝಡಪಿತೀ ಸತ್ರಾಣೇ । ಜೇವಿತಾ ಪುಢೀಲ ನೇತೀ ಭಾಣೇ । ದಿವಸಾ ದಿವಾಭೀತ ಘುಂಗಾಣೇ । ರಾಜದ್ವಾರೀ ಶ್ವಾನೇ ಸ್ಪೈಂಫ ರಡತೀ ॥೬೫॥ ಬೈಸಲ್ಯಾ ಸುಧರ್ಮಾಸಭೇಸೀ । ಸಂಕಲ್ಪ ವಿಕಲ್ಪಾಂಚೀ ನಿವೃತ್ತೀ । ತೇ ಸಭೇಸೀ ವೀರ ವೋಸಣತೀ । ಮಾರೀ ಮಾರೀ ಮ್ಹಣತೀ ಪರಸ್ಪರೇ ॥೬೬॥ ತೇ ಐಕತಾಂಚಿ ಉತ್ತರ । ದಚಕತೀ ಮಹಾಶೂರ । ಸುಧರ್ಮಾಸಭೇಸೀ ಚಿಂತಾತುರ । ಯಾದವವೀರ ಸಮಸ್ತ ॥೬೭॥ ಯಾದವ ಬೈಸಲೇ ಸಭೇಸೀ । ಛಾಯಾ ದೇಖತೀ ವೀಣಶಿಸೀ । ಸುಧರ್ಮಾಸಭೇಪಾಶೀ । ಅರಿಷ್ಟೇ ಐಶೀ ಉಠತೀ॥೬೮॥ ಐಶೀ ಅರಿಷ್ಟೇ ಅನಿವಾರ । ದುಃಖಸೂಚಕೇ ದುಸ್ತರ । ದೇಖೋನಿ ಯಾದವ ಥೋರಥೋರ । ವಿಘ್ನ ವಿಚಾರ ವಿವಂಚಿತೀ॥೬೯॥ ದ್ವಾರಕೇಚೇ ವಿಘ್ನ ನಿರ್ದಳಣ । ಕರೂ ಠೇವಿಲೇಸೇ ಸುದರ್ಶನ । ತೇ ದ್ವಾರಕೇಮಾಜೀ ಮಹಾವಿಘ್ನ । ಕಾಯ ಕಾರಣ ಉಠಾವಯಾ॥೭೦॥ ಜಂವ ಪಾತಯಾ ಪಾತೇ ಲವೇ । ತಂವ ಚಕ್ರ ಏಕವೀಸ ವೇಳಾ ಭಂವೇ। ತೇ ದ್ವಾರಕೇಸೀ ವಿಘ್ನ ಸಂಭವೇ । ದೇಖೋನಿ ಆಘವೇ ಅತಿಚಕಿತ ॥೭೧॥

ಶ್ರೀಶುಕಾಚಾರ್ಯರು ಹೀಗೆ ಹೇಳಿದರು ; ಹೇ ಪರೀಕ್ಷಿತಿಯೇ ಉದ್ಧವನು ಬದರಿಕಾಶ್ರಮಕ್ಕೆ ಹೊರಟು ಹೋದ ನಂತರ ದ್ವಾರಕಾ ನಗರದಲ್ಲಿ ಅನೇಕ ವಿಘ್ನಗಳು ಬಂದು ಒದಗಿದವು. ಮೂರು ಪ್ರಕಾರಗಳ ಉತ್ಪಾತವಾದವು ॥೫೭॥ ಆಕಾಶದಲ್ಲಿ ಪೃಥ್ವಿಯ ಮೇಲೆ ಹಾಗೂ ಅಂತರಿಕ್ಷದಲ್ಲಿ ದೊಡ್ಡ ದೊಡ್ಡ ಉತ್ಪಾತಗಳಾದವು. ಹಗಲಿನಲ್ಲಿಯೇ ನಕ್ಷತ್ರಗಳು ಪತನವಾಗಲಾರಂಭಿಸಿದವು. ಅಂತರಿಕ್ಷದಲ್ಲಿ ಭೂತಗಳು ಖಾ ಖಾ ಎಂದು ಕೇಕೆ ಹೊಡೆಯುತ್ತಿದ್ದವು ॥೫೮॥ ಆಕಾಶದಲ್ಲಿ ಕೋಲಿನಂತೆ ಸರಳವಾಗಿರುವ, ಹಿಂದೆ ಬಾಲವಿರುವ ಮುಂದೆ ಜುಟ್ಟು ಇರುವ ಹೀಗೆ ಮೂರು ಪ್ರಕಾರಗಳ ದಂಡಕೇತು, ಧೂಮಕೇತು ಮತ್ತು ಶಿಖಾಕೇತು ಇವು ಒಮ್ಮಿಂದೊಮ್ಮೆಲೆ ಉತ್ಪನ್ನಗೊಂಡವು. ಅವು ಹಗಲಿನ ಬೆಳಕಿನಲ್ಲಿಯೇ ಎಲ್ಲರಿಗೂ ಕಾಣಿಸಲಾರಂಭಿಸಿದವು ॥೫೯॥ ದೊಡ್ಡ ಗರ್ಜನೆಯೊಂದಿಗೆ ಭೂಮಿಯು ನಡುಗಹತ್ತಿತು. ದ್ವಾರಕಾ ನಗರದ ಹೆಬ್ಬಾಗಿಲದಲ್ಲಿ ಭೂಮಿಯು ಸ್ಫೋಟಗೊಂಡಿತು.ಸತತ ಮೂರು ದಿನಗಳವರೆಗೆ ಭೂಮಿಯು ಕಂಪಿಸಿತು. ಮನೆಮನೆಗಳಲ್ಲಿ ಬೊಂಬಾಟ ಉಂಟಾಯಿತು ॥೬೦॥ ಬಿರುಗಾಳಿಯು ಬಹು ಜೋರಾಗಿ ಬೀಸಹತ್ತಿತು. ಗಿಡಮರಗಳು ಬುಡಮೇಲಾದವು. ದ್ವಾರಕೆಯಲ್ಲಿ ಸುಂಟರಗಾಳಿ ಎದ್ದು ಧೂಳಿನಿಂದ ಜನರಿಗೆ ಕಣ್ಣು ತೆರೆಯಲು ಬಾರದಾಯಿತು॥೬೧॥ ಅಂತರಿಕ್ಷದಲ್ಲಿ ಭೂತಗಳು ಬತ್ತಲಾಗಿ ಕಿರುಚಾಡಹತ್ತಿದವು. ಯಾವ ಮೋಡಗಳಿಲ್ಲದೇ ನಿರಭ್ರ ಆಕಾಶದಿಂದ ಏಕಾಏಕೀ ರಕ್ತದ ಮಳೆ ಬೀಳಹತ್ತಿತು ॥೬೨॥ ರವಿಚಂದ್ರ ಮಂಡಲದಲ್ಲಿ ಸರ್ವಕಾಲದಲ್ಲಿಯೂ ತೇಜೋವಲಯವಾಗುತ್ತಿತ್ತು. ಗ್ರಹಮಂಡಲವನ್ನು ಗ್ರಹಗಳು ಭೇದಿಸಿದವು. ಶತ್ರುಗಳ ನಾಶಕ್ಕಾಗಿ ಸರ್ವ ಗ್ರಹಗಳು ಒಂದುಗೂಡಿದವು ॥೬೩॥ ಆಕಾಶದ ಎದುರನಲ್ಲಿ ದಿಕ್ಕುಗಳು ಸುಡುತ್ತಿರುವಂತೆ ತೋರಹತ್ತಿದವು. ಯಾವ ಮೋಡಗಳಿಲ್ಲದೇ ದೊಡ್ಡ ದೊಡ್ಡ ಗುಡುಗು ಮಿಂಚುಗಳು ಉಂಟಾಗಿ ಸಿಡ್ಲುಗಳು ಬೀಳಹತ್ತಿದವು ॥೬೪॥ ಹದ್ದುಗಳು ಅತಿವೇಗದಿಂದ ಹಾರಿಬಂದು ಊಟಕ್ಕೆ ಕುಳಿತ ಮುಂದಿನ ತಾಟನ್ನೇ ಒಯ್ಯಲಾರಂಭಿಸಿದವು. ಹಗಲಿನಲ್ಲಿಯೇ ಗೂಬೆಗಳು ಭಯಾನಕವಾಗಿ ಒದರಹತ್ತಿದ್ದವು. ನಾಯಿಗಳು ಆಕಾಶದತ್ತ ಮುಖಮಾಡಿ ರೋಧಿಸುವ ಧ್ವನಿಯಲ್ಲಿ ಒದರುತ್ತಿದ್ದವು ॥೬೫॥ ಯಾವ ಸುಧರ್ಮಾ ಸಭೆಯಲ್ಲಿ ಈ ಪೂರ್ವದಲ್ಲಿ ಸಂಕಲ್ಪ-ವಿಕಲ್ಪಗಳ ನಿವೃತ್ತಿಯಾಗುತ್ತಿತ್ತು. ಆದರೆ ಈಗ ಆ ಸಭೆಯಲ್ಲಿಯ ವೀರರು ಒಬ್ಬರಿಗೊಬ್ಬರು ತಮ್ಮ ತಮ್ಮಲ್ಲಿಯೇ ''ಹೊಡೆಯಿರಿ! ಬಡೆಯಿರಿ'' ಎಂದು ದೊಡ್ಡ ಧ್ವನಿಯಿಂದ ಒದರಲು ಆರಂಭಿಸಿದರು ॥೬೬॥ ಹೀಗೆ ಆಕಸ್ಮಿಕವಾಗಿ ಉದ್ಭವಿಸುತ್ತಿರುವ ಜಗಳ ಕೇಳಿ, ಮಹಾ ಮಹಾ ಶೂರರಿಗೂ ಕೂಡ ಗಾಬರಿಯುಂಟಾಯಿತು. ಸುಧರ್ಮಾ ಸಭೆಯಲ್ಲಿನ ಸರ್ವ ಯಾದವ ವೀರರು ಅತಿಶಯ ಚಿಂತಾಕ್ರಾಂತರಾದರು ॥೬೭॥ ಯಾದವರು ಸಭೆಯಲ್ಲಿ ಕುಳಿತುಕೊಂಡಿರಲು ಆಗ ಅವರಿಗೆ ತಮ್ಮ ರುಂಡವಿಲ್ಲದ ಮುಂಡದ ನೆರಳು ತೋರಹತ್ತಿತು. ಈ ಪ್ರಕಾರವಾಗಿ ಸುಧರ್ಮಾ ಸಭೆಯಲ್ಲಿ ಮಹಾ ಅರಿಷ್ಟಗಳು ನಿರ್ಮಾಣಗೊಂಡವು ॥೬೮॥ ಹೀಗೆ ದುಃಖಸೂಚಕ ಹಾಗೂ ಮಹಾಭಯಂಕರ ಅರಿಷ್ಟಗಳನ್ನು ಕಂಡು ಮಹಾ ಮಹಾ ಯಾದವರು ಈ ಯಾವ ವಿಘ್ನಗಳನ್ನು ಕುರಿತು ವಿಚಾರ ಮಾಡಹತ್ತಿದರು ॥೬೯॥ ದ್ವಾರಕೆಯಲ್ಲಿ ವಿಘ್ನಗಳ ನಿವಾರಣೆ ಮಾಡುವುದಕ್ಕಾಗಿಯೇ ಶ್ರೀಕೃಷ್ಣನ ಸುದರ್ಶನ ಚಕ್ರವನ್ನು ಇಟ್ಟಿದ್ದರೂ ಕೂಡ ಇಲ್ಲಿ ವಿಘ್ನಗಳು ನಿರ್ಮಾಣವಾಗುವ ಯಾವ ಕಾರಣವಿರಬಹುದು? ॥೭೦॥ ಕಣ್ಣಿನ ರೆಪ್ಪೆ ಹೊಡೆಯುವಷ್ಟರಲ್ಲಿಯೇ ಸುದರ್ಶನ ಚಕ್ರವು ದ್ವಾರಕಾನಗರದ ಸುತ್ತು ಇಪ್ಪತ್ತೊಂದು ಸಾರೆ ತಿರುಗುತ್ತಿರುವುದು. ಹೀಗಿದ್ದ ಮೇಲೆ ವಿಘ್ನಗಳು ಹೇಗೆ ಬರಲು ಸಾಧ್ಯವಾದವು? ಹೀಗೆನ್ನುತ್ತ ಸರ್ವ ಜನರು ಚಕಿತರಾದರು ॥೭೧॥

ಸರ್ವ ವಿಘ್ನಾಂಚೇ ಆಕರ್ಷಣ । ಕರೀ ಯಾ ನಾಂವ ಮ್ಹಣಿಪೇ ''ಕೃಷ್ಣ''। ತೋ ಕೃಷ್ಣ ಯೇಥೇ ಅಸತಾ ಜಾಣ । ಉತ್ಪಾತ ದಾರುಣ ಕಾ ಉಠತೀ ॥೭೨॥ ಏವಂ ವಿಚಾರರೂಢ ಯಾದವಾಂಸೀ । ಚಿಂತಾತುರ ದೇಖೋನಿಯಾ ತ್ಯಾಂಸೀ । ಬುದ್ಧಿ ಸಾಂಗಾವಯಾ ತ್ಯಾಂಪಾಶೀ । ಕಾಯ ಹೃಷೀಕೇಶೀ ಬೋಲತ ॥೭೩॥

ಶ್ರೀಭಗವಾನುವಾಚ:-

ಏತೇ ಘೋರಾ ಮಹೋತ್ಪಾತಾ ದ್ವಾರ್ವತ್ಯಾಂ ಯಮಕೇತವಃ । ಮುಹೂರ್ತಮಪಿ ನ ಸ್ಥೇಯಮತ್ರ ನೋ ಯದುಪುಂಗವಾಃ ॥೫॥

ಅರ್ಥ:- ಯದುವಂಶದ ಶ್ರೇಷ್ಠ ಜನರೇ, ಈಗ ನೋಡಿರಿ, ದ್ವಾರಕೆಯಲ್ಲಿ ದೊಡ್ಡ ದೊಡ್ಡ ಉಲ್ಕಾಪಾತವಾಗುತ್ತಲಿವೆ. ಅವು ಸಾಕ್ಷಾತ್ ಯಮರಾಜನ ಧ್ವಜದಂತೆ ನಮ್ಮ ಮಹಾ ಅನಿಷ್ಟಗಳ ಸೂಚಕವಾಗಿರುವುವು. ಈಗ ನಾವು ಇಲ್ಲಿ ಒಂದು ಘಳಿಗೆ ಸಹ ಇರಕೂಡದು.

ಜೋ ಜಗಾಚಾ ಸೂತ್ರಧಾರೀ । ಜೋ ಮಯಾಮಂತ್ರೀಂಚಾ ಯಂತ್ರಕಾರೀ । ತೋ ಯಾದವಾಂಪ್ರತೀ ಶ್ರೀಹರೀ । ಆಲೋಚ ಕರೀ ವಿಘ್ನಾಂಚಾ ॥೭೪॥ ಯಾದವಕುಳಾಸೀ ಆಲಾ ಪ್ರಾಂತ । ಹೇ ಜಾಣೇ ಶ್ರೀಕೃಷ್ಣನಾಥ । ಯಾಂಚಾ ದ್ವಾರಕೇಸೀ ಹೋಊ ನಯೇ ಘಾತ । ಯಾಲಾಗೀ ಸಮಸ್ತ ಪ್ರಭಾಸಾ ಧಾಡೀ ॥೭೫॥ ದ್ವಾರಾವತೀ ಸಾತವೀ ಪುರೀ। ಯೇಥೀಲ ಮರಣ ಮೋಕ್ಷೋಪಕಾರೀ। ಯಾದವ ಸಮಸ್ತ ದೇವಾಧಿಕಾರೀ। ಯಾಲಾಗೀ ತೇ ಬಾಹೇರೀ ಶ್ರೀಕೃಷ್ಣ ಕಾಢೀ॥೭೬॥ ಕುಳನಾಶಾಚೇ ಮೂಳ ದೇಖಾ। ಪ್ರಭಾಸೀ ನಿಘಾಲೀಸೇ ಏರಿಕಾ। ಹಾಚಿ ಕೃಷ್ಣಾಚಾಹೀ ಆವಾಂಕಾ । ತೋ ಧಾಡೀ ಸಕಳಿಕಾ ಪ್ರಭಾಸಾಸೀ ॥೭೭॥ ಯಾದವಾಂಸೀ ಬ್ರಹ್ಮಶಾಪ । ಘಡಲಾಸೇ ಘೋರರೂಪ । ಯಾಲಾಗೀ ದ್ವಾರಕೇಮಾಜೀ ಸಂತಾಪ। ಉತ್ಪಾತರೂಪ ಉಠತೀ॥೭೮॥ ಉತ್ಪಾತ ಉಠಲೇ ಅನೇಕ । ಹೇ ಅನಿವಾರ ಅರಿಷ್ಟಸೂಚಕ । ಅವಿಲಂಬೇ ತತ್ಕಾಳಿಕ । ಪರಮ ದುಃಖ ಪಾವಾಲ॥೭೯॥ ಯಾಲಾಗೀ ತುಮ್ಹೀ ಆವಶ್ಯಕ । ಯೇಥೇ ನ ರಾಹಾವೇ ಮುಹೂರ್ತ ಏಕ । ಸ್ತ್ರಿಯಾ ಪುತ್ರ ಸುಹೃದ ಲೋಕ । ತಾತ್ಕಾಳಿಕ ನಿಘಾವೇ॥೮೦॥ ಮ್ಹಣಾಲ ಯಾದವವೀರ ಉದ್ಭಟ । ಆಮ್ಹಾಂಸೀ ಕಾಯ ಕರೀಲ ಅರಿಷ್ಟ । ಯೇಣೇ ಗರ್ವೇ ಅತಿಅನಿಷ್ಟ । ಪರಮ ಕಷ್ಟ ಪಾವಾಲ॥೮೧॥ ಬ್ರಾಹ್ಮಣಾಚೇ ಶಾಪಾಪುಢೇ । ಕಾಯಸೇ ಶೌರ್ಯ ಬಾಪುಡೇ । ತುಮ್ಹೀ ನ ವಿಚಾರಿತಾ ಮಾಗೇಪುಢೇ । ಆತಾಂಚಿ ರೋಕಡೇ ನಿಘಾವೇ॥೮೨॥ ದ್ವಾರಕೇಮಾಜೀ ಆಜಿ ಕೋಣೀ । ಸರ್ವಥಾ ಪಿಊ ನಯೇ ಪಾಣೀ । ಸ್ತ್ರೀಪುತ್ರಸುಹೃದಜನೀ । ಪರಿವಾರೋನಿ ನಿಘಾವೇ ॥೮೩॥ ಕುಳಾಸೀ ಘಡಲಾ ಬ್ರಹ್ಮಶಾಪ । ತೇಣೇ ದ್ವಾರಕೇಸೀ ಉಠಿಲಾ ಸಂತಾಪ । ತೇ ಫೇಡಾವಯಾ ಕುಳಾಚೇ ಪಾಪ । ಕ್ಷೇತ್ರ ಪುಣ್ಯರೂಪ ಪ್ರಭಾಸ ॥೮೪॥

ಸರ್ವ ವಿಘ್ನಗಳ ಆಕರ್ಷಣೆ ಮಾಡುವವನಾದ ಕಾರಣ ಆತನಿಗೆ ''ಕೃಷ್ಣ'' ಎಂದು ಕರೆಯುವರು. ಆ ಕೃಷ್ಣನು ಇಲ್ಲಿಯೇ ಇರುತ್ತಿರಲು ಅತಿಭಯಂಕರವಾದ ಉತ್ಪಾತಗಳು ಏಕೆ ಏಳುತ್ತಿರುವುವು? ॥೭೨॥ ಹೀಗೆಲ್ಲ ವಿಚಾರ ಮಾಡುತ್ತ ಯಾದವರೆಲ್ಲರೂ ಚಿಂತಾತುರರಾದರು. ಆಗ ಅವರಿಗೆ ಉಪಾಯ ತೋರಿಸಿಕೊಡಲು ಶ್ರೀಕೃಷ್ಣನು ಏನು ಹೇಳಿದನೆಂಬುವುದನ್ನು ಈಗ ಕೇಳಿರಿ ॥೭೩॥

ಯಾರು ಸರ್ವ ಜಗತ್ತಿನ ಸೂತ್ರಧಾರನಾದ, ಮಾಯಾಚಕ್ರದ ಚಾಲಕನಾದ ಮಾಯಾಮಂತ್ರದ ನಿರ್ಮಾಪಕನಾದ, ಆ ಶ್ರೀಕೃಷ್ಣನು ಯಾದವರಿಗೆ ಬಂದ ವಿಘ್ನಗಳ ವಿಚಾರ ಮಾಡಲಾರಂಭಿಸಿದನು ॥೭೪॥ ಯಾದವ ಕುಲದ ನಾಶವು ಈಗ ಸಮೀಪ ಬಂದಿರುವುದು. ಎಂದು ಶ್ರೀಕೃಷ್ಣನು ತಿಳಿದುಕೊಂಡನು. ಆದರೆ ಅವರ ನಾಶವು ದ್ವಾರಕೆಯಲ್ಲಿ ಆಗಬಾರದೆಂದು ತಿಳಿದು ಆತನು ಅವರೆಲ್ಲರಿಗೂ ಪ್ರಭಾಸ ಕ್ಷೇತ್ರಕ್ಕೆ ಕಳುಹಿಸಿಕೊಟ್ಟನು ॥೭೫॥ ಇದಕ್ಕೆ ಕಾರಣ ಯಾವುದೆಂದರೆ, ದ್ವಾರಕಾ ನಗರವು ಏಳನೆಯ ಮೋಕ್ಷ ಪುರಿಯಾಗಿರುವುದು. ಆದ್ದರಿಂದ ಅಲ್ಲಿನ ಮರಣವು ಮೋಕ್ಷದಾಯಕವಾಗಿರುವುದು. ಆದರೆ ಯಾದವರೆಲ್ಲರೂ ದೇವಾಧಿಕಾರಿಗಳಾಗಿದ್ದರು. ಅವರಿಗೆ ಕೂಡಲೇ ಮೋಕ್ಷವಾಗಬಾರದೆಂದು ಶ್ರೀಕೃಷ್ಣನು ಅವರಿಗೆ ದ್ವಾರಕೆಯ ಹೊರಗೆ ಹಾಕಿದನು ॥೭೬॥ ಯಾದವ ಕುಲದ ನಾಶಕ್ಕಾಗಿರುವ ನೀರಹಾವುಸೆಗಳು ಪ್ರಭಾಸ ಕ್ಷೇತ್ರದಲ್ಲಿ ಹುಟ್ಟಿಕೊಂಡಿದ್ದವು. ಇಲ್ಲಿಗೆ ಕಳಿಸುವ ಶ್ರೀಕೃಷ್ಣನ ಉದ್ದೇಶವು ಇದೇ ಆಗಿತ್ತು ॥೭೭॥ ಯಾದವರಿಗೆ ಭಯಾನಕ ಸ್ವರೂಪದ ಬ್ರಹ್ಮಶಾಪವಾಗಿದ್ದರಿಂದ ದ್ವಾರಕೆಯಲ್ಲಿ ಉತ್ಪಾತಗಳ ಕೆಟ್ಟ ಚಿನ್ಹೆಗಳು ಸ್ಪಷ್ಟವಾಗಿ ತೋರಹತ್ತಿದವು ॥೭೮॥ ಭಯಂಕರವಾದ ಹಾಗೂ ಅನಿಷ್ಟಸೂಚಕ ಅನೇಕ ಉತ್ಪಾತಗಳು ಏಳಿರುವುವು. ಆದ್ದರಿಂದ ಈಗ ತಡಮಾಡದೇ ಕೂಡಲೇ ಮಹಾ ಸಂಕಟದಲ್ಲಿ ಬೀಳಬೇಕಾದೀತು ॥೭೯॥ ಇದನ್ನು ಗಮನದಲ್ಲಿಟ್ಟುಕೊಂಡು ನೀವು ಇಲ್ಲಿ ಒಂದು ಮುಹೂರ್ತವೂ ಕೂಡ ದ್ವಾರಕೆಯಲ್ಲಿ ಇರಬೇಡಿರಿ. ಸ್ತ್ರೀಯರೊಂದಿಗೆ, ಪುತ್ರ ಆಪ್ತರೊಂದಿಗೆ, ನಿಮ್ಮ ಸರ್ವಮಿತ್ರರೊಂದಿಗೆ ಬಹುಬೇಗ ಇಲ್ಲಿಂದ ಹೊರಡಿರಿ ॥೮೦॥ ''ನಾವು ಮಹಾ ಬಲಾಢ್ಯ ಯಾದವ ವೀರರಿರುವೆವು. ನಮಗೆ ಈ ಅರಿಷ್ಟಗಳು ಏನು ಮಾಡಬಲ್ಲವು?'' ಎಂದು ಹೇಳಿದರೆ ನಿಮ್ಮ ಈ ಗರ್ವದಿಂದ ಅತಿಶಯವಾಗಿ ಅರಿಷ್ಟ ಪರಿಣಾಮಗಳು ನಿರ್ಮಾಣವಾಗುವುವು. ಆಗ ಅತ್ಯಂತ ಅನರ್ಥ ಉಂಟಾದೀತು? ॥೮೧॥ ಬ್ರಾಹ್ಮಣರ ಶಾಪದ ಮುಂದೆ ನಿಮ್ಮ ಪಾಪ! ಶೌರ್ಯಗಳು ಏನು ಮಾಡಲು ಸಾಧ್ಯ? ಆದ್ದರಿಂದ ನೀವು ಹಿಂದೆ ಮುಂದೆ ಯಾವುದನ್ನೂ ನೋಡದೇ ಬಹು ಅವಸರದಿಂದ ಇಲ್ಲಿಂದ ಹೊರಗೆ ಹೊರಡಿರಿ ॥೮೨॥ ಇಂದು ದ್ವಾರಕೆಯಲ್ಲಿ ನೀರು ಕುಡಿಯಲೂ ಸಹ ಯಾರೂ ನಿಲ್ಲಬೇಡಿರಿ. ನಿಮ್ಮ ನಿಮ್ಮ ಹೆಂಡತಿ ಮಕ್ಕಳೊಂದಿಗೆ ಸರ್ವ ಪರಿವಾರಸಮೇತವಾಗಿ ತಕ್ಷಣ ಹೊರಟುಬಿಡಿರಿ ॥೮೩॥ ನಮ್ಮ ಕುಲಕ್ಕೆ ಬ್ರಾಹ್ಮಣರ ಶಾಪ ತಟ್ಟಿರುವುದು. ಅದರಿಂದಲೇ ದ್ವಾರಕೆಯ ಮೇಲೆ ಅರಿಷ್ಟವು ಬಂದೊದಗಿರುವುದು. ಯಾವ ಈ ಕುಲದ ಪಾಪವನ್ನು ತೊಳೆದುಕೊಳ್ಳುವುದಕ್ಕಾಗಿ ಪ್ರಭಾಸವು ಇದು ಪುಣ್ಯಕ್ಷೇತ್ರವಾಗಿರುವುದು ॥೮೪॥

ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಶಂಖೋದ್ಧಾರಂ ವ್ರಜಂತ್ವಿತಃ । ವಯಂ ಪ್ರಭಾಸಂ ಯಾಸ್ಯಾಮೋ ಯತ್ರ ಪ್ರತ್ಯಕ್ ಸರಸ್ವತೀ ॥೬॥

ಅರ್ಥ:- ಆದ್ದರಿಂದ ಸ್ತ್ರೀಯರು, ಬಾಲಕರು, ವೃದ್ಧರು ಇಲ್ಲಿಂದ ಶಂಖೋದ್ಧಾರದತ್ತ ನಡೆಯಿರಿ. ಪಶ್ಚಿಮವಾಹಿನಿಯಾದ ಸರಸ್ವತೀ ನದಿ ಪ್ರಭಾಸ ತೀರ್ಥಕ್ಕೆ ಕೂಡಿರುವುದು. ನಾವೆಲ್ಲರೂ ಅಲ್ಲಿಗೆ ಹೋಗೋಣ.

ವಸ್ತೀಸೀ ಅತಿಗೂಢ ಶಂಖೋದ್ಧಾರ । ತೇಥೇ ಠೇವಾವೀ ಸ್ತ್ರೀವೃದ್ಧಕುಮಾರ । ಆಮ್ಹೀ ಸಮಸ್ತ ಯಾದವವೀರ । ನಿಘಾವೇ ಸತ್ವರ ಪ್ರಭಾಸೇಸೀ ॥೮೫॥ ಜೇಥೇ ಪ್ರಾಚೀ ಸರಸ್ವತೀ । ಮಿಳಾಲೀ ಅಸೇ ಸಾಗರಾಪ್ರತೀ । ತೇಥೇ ಜಾಊನಿ ಸಮಸ್ತೀ । ಕರಾವೇ ವಿಧ್ಯುಕ್ತೀ ತೀರ್ಥವಿಧಾನ ॥೮೬॥

ತತ್ರಾಭಿಷಿಚ್ಯ ಶುಚಯ ಉಪೋಷ್ಯ ಸುಸಮಾಹಿತಾಃ । ದೇವತಾಃ ಪೂಜಯಿಷ್ಯಾಮಃ ಸ್ನಪನಾಲೇಪನಾರ್ಹಣೈಃ ॥೭॥

ಅರ್ಥ:- ಅಲ್ಲಿ ನಾವು ಸ್ನಾನ ಮಾಡಿ ಪವಿತ್ರರಾಗೋಣ, ಉಪವಾಸ ಮಾಡೋಣ, ಏಕಾಗ್ರಚಿತ್ತದಿಂದ ದೇವತೆಗಳಿಗೆ ವಿಗ್ರಹಾಭಿಷೇಕ, ಗಂಧಾನುಲೇಪನ ಮತ್ತು ನೈವೇದ್ಯಗಳಿಂದ ಪೂಜೆ ಸಲ್ಲಿಸೋಣ.

ತೇಥೇ ವೇದೋಕ್ತ ವಿಧಾನ । ಕರಾವೇ ತೀರ್ಥೀ ತೀರ್ಥಸ್ನಾನ । ತೀರ್ಥವಿಧ್ಯುಕ್ತ ಉಪೋಷಣ । ಕರಾವೇ ಆಪಣ ನಿರಾಹಾರ ॥೮೭॥ ತೇಥೇ ಸದ್ಭಾವೇ ಶುಚಿರ್ಭೂತ । ರಾಹೋನಿಯಾ ಸಮಸ್ತ । ತೀರ್ಥದೇವತಾ ವಿಧ್ಯುಕ್ತ । ನಿಃಶಾಪಾರ್ಥ ಪೂಜಾವೀ ॥೮೮॥ ಸ್ನಾನ ವಸ್ತ್ರೀ ಅಲಂಕಾರ । ಚಂದನಾದಿ ಪೂಜಾಸಂಭಾರ । ಸಮರ್ಪೂನಿ ಪೂಜಾ ಷೋಡಶೋಪಚಾರ । ಶ್ರದ್ಧಾ ಹರಿಹರ ಪೂಜಾವೇ ॥೮೯॥

ಬ್ರಾಹ್ಮಣಾಂಸ್ತು ಮಹಾಭಾಗಾನ್ ಕೃತಸ್ವಸ್ತ್ಯಯನಾ ವಯಮ್ । ಗೋಭೂಹಿರಣ್ಯವಾಸೋಭಿರ್ಗಜನಾಶ್ವರಥವೇಶ್ಮಭಿಃ ॥೮॥

ಅರ್ಥ:- ಮಹಾ ಭಾಗ್ಯಶಾಲಿಗಳಾದ ಬ್ರಾಹ್ಮಣರ ನೆರವಿನಿಂದ ಪ್ರಾಯಶ್ಚಿತ್ತ ಪರಿಹಾರ ವಿಧಿಗಳನ್ನು ಆಚರಿಸಿದ ನಂತರ ಅವರಿಗೆ ಗೋವು, ಭೂಮಿ, ಬಂಗಾರ, ವಸ್ತ್ರ ಗಜಾಶ್ವರಥ ಮತ್ತು ನಿವಾಸ ಗೃಹಗಳನ್ನು ನೀಡಿ ಪೂಜಿಸೋಣ.

ವೇದವೇದಾಂಗಪಾರಂಗತ । ಶಮದಮಾದಿತಪಯುಕ್ತ । ಬ್ರಾಹ್ಮಣ ಜೇ ಸ್ವಧರ್ಮನಿರತ । ವಿಘ್ನಶಾಂತ್ಯರ್ಥ ಪೂಜಾವೇ ॥೯೦॥ ವ್ಹಾವಯಾ ಅರಿಷ್ಟನಿರಸನ । ಕರಿತೀ ಶಾಂತ್ಯರ್ಥ ಸ್ವಸ್ತಿವಾಚನ । ತ್ಯಾ ಬ್ರಾಹ್ಮಣಾಂಸೀ ಆಪಣ । ದ್ಯಾವೇ ದಾನ ಶ್ರದ್ಧಾಯುಕ್ತ ॥೯೧॥ ಗೋದಾನ ಭೂದಾನ ಗಜದಾನ । ಅಶ್ವದಾನ ಸುವರ್ಣದಾನ । ತಿಳದಾನ ವಸ್ತ್ರದಾನ । ದ್ಯಾವೇ ಗೃಹದಾನ ಅತಿಶ್ರದ್ಧಾ ॥೯೨॥ ರಥೀ ಸಂಜೋಗೋನಿ ಅಶ್ವವರ । ದಾನ ದ್ಯಾವೇ ರಹಂವರ । ದ್ವಿಜ ಸುಖೀ ಹೋತೀ ಅಪಾರ । ತೋ ತೋ ಪ್ರಕಾರ ಕರಾವಾ ॥೯೩॥ ಜೇ ಜೇ ಬ್ರಾಹ್ಮಣಾ ಅಪೇಕ್ಷಿತ । ತೇ ತೇ ದ್ಯಾವೇ ಶ್ರದ್ಧಾಯುಕ್ತ । ಬ್ರಾಹ್ಮಣ ತುಷ್ಟಮಾನ ಜೇಥ । ಅರಿಷ್ಟ ತೇಥ ರಿಘೇನಾ ॥೯೪॥

ಶಂಖೋದ್ಧಾರ ತೀರ್ಥವು ಇದು ಉಳಿದುಕೊಳ್ಳಲಿಕ್ಕೆ ಅತಿಶಯವಾಗಿ ಸುರಕ್ಷಿತವಾಗಿರುವುದು. ಅಲ್ಲಿ ಸ್ತ್ರೀ, ಪುತ್ರ ಹಾಗೂ ವೃದ್ಧ ಮಂಡಳಿಯವರಿಗೆ ಇಡಬೇಕು. ಹಾಗೆಯೇ ನಾವು ಸರ್ವ ಯಾದವ ವೀರರು ಪ್ರಭಾಸಕ್ಕೆ ಬಹುಬೇಗ ಹೊರಡಬೇಕು ॥೮೫॥ ಅಲ್ಲಿ ಸರಸ್ವತೀ ನದಿಯು ಪಶ್ಚಿಮವಾಹಿನಿಯಾಗಿದ್ದು ಅಲ್ಲಿಂದ ಸಾಗರಕ್ಕೆಕೂಡಿರುವುದು. ಅಲ್ಲಿ ನಾವು ಎಲ್ಲರೂ ಹೋಗಿ ಶಾಸ್ತ್ರೋಕ್ತವಾಗಿ ತೀರ್ಥ ವಿಧಿಯನ್ನು ಆಚರಿಸೋಣ ॥೮೬॥

ಅಲ್ಲಿ ವಿಧಿ ಪ್ರಮಾಣದಂತೆ ತೀರ್ಥದಲ್ಲಿ ಸ್ನಾನ ಮಾಡಬೇಕು. ತೀರ್ಥದ ವಿಧಿಯಂತೆ ನಿರಾಹಾರದಿಂದ ಉಪವಾಸ ಮಾಡಬೇಕು ॥೮೭॥ ಸರ್ವರೂ ಸದ್ಭಾವನೆಯಿಂದ ಶುಚಿರ್ಭೂತರಾಗಿ ಶಾಪದಿಂದ ಮುಕ್ತಿ ದೊರೆಯುವುದಕ್ಕಾಗಿ ತೀರ್ಥ ದೇವತೆಗಳ ಪೂಜೆಯನ್ನು ವಿಧಿಯುಕ್ತವಾಗಿ ಮಾಡಬೇಕು ॥೮೮॥ ಸ್ನಾನ, ವಸ್ತ್ರಗಳು, ಅಲಂಕಾರ, ಚಂದನಾದಿ ಪೂಜೆಯ ಸಾಹಿತ್ಯ ಅರ್ಪಿಸಿ ಷೋಡಶೋಪಚಾರದಿಂದ ಪೆರಮ ಶ್ರದ್ಧೆಯಿಂದ ಹರಿಹರರ ಪೂಜೆ ಮಾಡಬೇಕು ॥೮೯॥

ವೇದವೇದಾಂಗಗಳಲ್ಲಿ ಪ್ರವೀಣರಾದವರು, ಶಮದಮಾದಿ ತಪದಿಂದ ಯುಕ್ತರಾದವರು, ಸ್ವಧರ್ಮದ ಆಚರಣೆ ಮಾಡುವವರು ಇಂತಹ ಬ್ರಾಹ್ಮಣರನ್ನು ವಿಘ್ನಗಳ ನಾಶಕ್ಕಾಗಿ ಪೂಜಿಸಬೇಕು ॥೯೦॥ ಅರಿಷ್ಟಗಳ ಶಾಂತಿಗಾಗಿ ಸ್ವಸ್ತಿವಾಚನ ಮಾಡುವವರಾದ ಬ್ರಾಹ್ಮಣರನ್ನು ನಾವು ಶ್ರದ್ಧಾಪೂರ್ವಕವಾಗಿ ದಾನ ಕೊಡಬೇಕು ಮತ್ತು ಅವರನ್ನು ಸಂತುಷ್ಟಗೊಳಿಸಬೇಕು ॥೯೧॥ ಗೋದಾನ, ಭೂದಾನ, ಗಜದಾನ, ಅಶ್ವದಾನ, ಸುವರ್ಣದಾನ, ತಿಲದಾನ, ವಸ್ತ್ರದಾನ, ಗೃಹದಾನ ಇತ್ಯಾದಿ ಪ್ರಕಾರಗಳ ದಾನಗಳನ್ನು ಪರಮ ಶ್ರದ್ಧೆಯಿಂದ ಕೊಡಬೇಕು ॥೯೨॥ ರಥಕ್ಕೆ ಕುದುರೆಗಳನ್ನುಕಟ್ಟಿ ಆ ರಥವನ್ನು ದಾನ ಮಾಡಬೇಕು. ಯಾವುದರಿಂದ ಬ್ರಾಹ್ಮಣರಿಗೆ ಪರಮಸಂತೋಷವಾಗುವುದೋ, ಅಂತಹ ಉಪಾಯಗಳನ್ನು ಮಾಡಬೇಕು. ಬ್ರಾಹ್ಮಣರು ಸಂತುಷ್ಟರಾದರೆ ಅಲ್ಲಿ ವಿಘ್ನಗಳು ಕಾಲಿಡಲೂ ಕೂಡ ಸಾಧ್ಯವಿಲ್ಲ ॥೯೩॥ ಬ್ರಾಹ್ಮಣರು ಯಾವ ಯಾವುಗಳನ್ನು ಅಪೇಕ್ಷಿಸುವರೋ, ಅವುಗಳನ್ನು ಪರಮಶ್ರದ್ಧೆಯಿಂದ ಅರ್ಪಿಸಬೇಕು. ಬ್ರಾಹ್ಮಣರು ಸಂತುಷ್ಟರಾದರೆ ಅಲ್ಲಿ ಅರಿಷ್ಟಗಳು ಪ್ರವೇಶಿಸಲಾರವು ॥೯೪॥

ವಿಧಿರೇಷ ಹ್ಯರಿಷ್ಟಘ್ನೋ ಮಂಗಲಾಯನಮುತ್ತಮಮ್ । ದೇವದ್ವಿಜಗವಾಂ ಪೂಜಾ ಭೂತೇಷು ಪರಮೋ ಭವ: ॥೯॥

ಅರ್ಥ:- ಈ ವಿಧಿಯು ಸರ್ವ ಪ್ರಕಾರಗಳ ಅಮಂಗಲಗಳನ್ನು ನಾಶಗೊಳಿಸುವುದು ಮತ್ತು ಪರಮ ಮಂಗಲದ ಜನಕವಾಗಿರುವುದು. ದೇವ, ಬ್ರಾಹ್ಮಣ ಮತ್ತು ಆಕಳು ಇವರ ಪೂಜೆಯು ಜಗತ್ತಿನ ಶ್ರೇಷ್ಠ ಉತ್ಕರ್ಷವಾಗಿರುವುದು.

ಜೇಥ ಹರಿಚೇ ದೇವಾತಾರ್ಚನ । ಜೇಥ ಶಾಲಗ್ರಾಮಶಿಲಾರ್ಚನ । ಜೇಥ ಸಾಧುಸಂತಾ ಸನ್ಮಾನ । ತೇ ಅರಿಷ್ಟನಾಶನ ಮಹಾಪೂಜಾ ॥೯೫॥ ಜೇಥ ಸದ್ಭಾವೇ ದ್ವಿಜಪೂಜನ । ಜೇಥ ಭಾವಾರ್ಥೇ ಗೋಶುಶ್ರೂಷಣ । ಜೇಥ ಭೂತದಯಾ ಸಂಪೂರ್ಣ । ತೇಥೇ ಕದಾ ವಿಘ್ನ ರಿಘೇನಾ ॥೯೬॥ ಅಂಧ ಪಂಗು ಅಶಕ್ತ ಜನ । ತೇಥ ಪಾವತೀ ಅವಶ್ಯ ಅನ್ನ । ಜೇಥ ಸುಖೀ ಹೋತೀ ದೀನ । ತೇಥ ಕದಾ ವಿಘ್ನ ಬಾಧೀನಾ ॥೯೭॥ ಜೇಥೇ ಭೂತದಯಾ ಅಲೋಲಿಕ । ತೇ ಸಕಳ ಅರಿಷ್ಟಚ್ಛೇದಕ । ಪರಮ ಮಂಗಳಪ್ರಕಾಶಕ । ಸುಖದಾಯಕ ಸರ್ವಾರ್ಥೀ ॥೯೮॥

ಇತಿ ಸರ್ವೇ ಸಮಾಕರ್ಣ್ಯ ಯದುವೃದ್ಧಾ ಮಧುದ್ವಿಷ: । ತಥೇತಿ ನೌಭಿರುತ್ತೀರ್ಯ ಪ್ರಭಾಸಂ ಪ್ರಯಯೂ ರಥೈ: ॥೧೦॥

ಅರ್ಥ :- ಹೇ ಪರೀಕ್ಷಿತಿಯೇ, ಸರ್ವ ವೃದ್ಧ ಯದುವಂಶೀ ಜನರು ಭಗವಾನ ಶ್ರೀಕೃಷ್ಣನ ವಚನ ಕೇಳಿ ತಥಾಸ್ತು ಎಂದು ಅದಕ್ಕೆ ಅನುಮೋದಿಸಿದರು ಮತ್ತು ತಕ್ಷಣವೇ ಹಡಗದಿಂದ ಸಮುದ್ರ ದಾಟಿ ಪ್ರಭಾಸ ಕ್ಷೇತ್ರಕ್ಕೆ ಪ್ರಯಾಣಿಸಿದರು.

ಜೋ ಮಧುಕೈಟಭಮರ್ದನ । ಜೋ ಮುರಾರೀ ಮಧುಸೂದನ । ಜೋ ಪರಮಾತ್ಮಾ ಶ್ರೀಕೃಷ್ಣ । ತೋ ಕರೀ ಪ್ರೇರಣ ಪ್ರಭಾಸಾ ॥೯೯॥ ಯಾದವಾಂಮಾಜೀ ವೃದ್ಧಸಜ್ಞಾನ । ಪುತ್ರ ಮಿತ್ರ ಸುಹೃದ ಸ್ವಜನ । ತಿಹೀ ಶ್ರೀಕೃಷ್ಣಾಚೇ ವಚನ । ಬಹುಸನ್ಮಾನೇ ವಂದಿಲೇ ॥೧೦೦॥ ಸಕಳ ಸಮೃದ್ಧಿಸಂಭಾರಾ । ಸ್ತ್ರೀವೃದ್ಧಾದಿ ಬಾಳಕುಮಾರಾ । ನಾವಾ ಭರೋನಿಯಾ ಸಮಗ್ರಾ । ಶಂಖೋದ್ಧಾರಾ ನ್ಯಾ ಮ್ಹಣತೀ ॥೧೦೧॥ ಪಾಲಾಣೋನಿ ರಥ ಕುಂಜರ । ಚತುರಂಗ ಸೇನಾ ಸಂಭಾರ । ಕೃಷ್ಣಸಹಿತ ಯಾದವವೀರ । ನಿಘಾಲೇ ಸಮಗ್ರ ಪ್ರಭಾಸಾಸೀ ॥೧೦೨॥

ತಸ್ಮಿನ್ ಭಗವತಾಽಽದಿಷ್ಟಂ ಯದುದೇವೇನ ಯಾದವಾ: । ಚಕ್ರು: ಪರಮಯಾ ಭಕ್ತ್ಯಾ ಸರ್ವಶ್ರೇಯೋಪಬೃಂಹಿತಮ್ ॥೧೧॥

ಅರ್ಥ:- ಅಲ್ಲಿ ತಲುಪಿದ ನಂತರ ಯಾದವರು ಯದುವಂಶ ಶಿರೋಮಣೀ ಭಗವಾನ ಶ್ರೀಕೃಷ್ಣನ ಆದೇಶದಂತೆ ಪರಮ ಶ್ರದ್ಧೆಯಿಂದ ಮತ್ತು ಭಕ್ತಿಯಿಂದ ಶಾಂತಿಪಾಠ ಮತ್ತು ಸರ್ವ ಪ್ರಕಾರದ ಮಂಗಲಕಾರ್ಯಗಳನ್ನು ನೆರವೇರಿಸಿದರು.

ಯಾದವ ಪ್ರಭಾಸಾ ಪಾವೋನ । ಜೈಸೇ ಹೋತೇ ಶ್ರೀಕೃಷ್ಣವಚನ । ತ್ಯಾಹೂನಿ ವಿಶೇಷ ಜಾಣ । ಸ್ನಾನದಾನ ತಿಂಹೀ ಕೇಲೇ ॥೧೦೩॥ ಯಾದವ ಸಮಸ್ತ ಮಿಳೋನ । ಕೇಲೇ ಪಾರಣವಿಧಿಭೋಜನ । ಮಗ ಮಹಾಮದ್ಯ ಆಣೂನಿ ಜಾಣ । ಮದ್ಯಪಾನ ಮಾಂಡಿಲೇ ॥೧೦೪॥

ತತಸ್ತಸ್ಮಿನ್ಮಹಾಪಾನಂ ಪಪುರ್ಮೈರೇಯಕಂ ಮಧು । ದಿಷ್ಟವಿಭ್ರಂಶಿತಧಿಯೋ ಯದ್ದ್ರವೈರ್ಭ್ರಶ್ಯತೇ ಮತಿ:॥೧೨॥

ಅರ್ಥ:- ಇದನ್ನೆಲ್ಲವನ್ನೂ ಅವರು ಮಾಡಿದರು. ಆದರೆ ದೈವವು ಅವರ ಬುದ್ಧಿ ಹರಣ ಮಾಡಿತು. ಅವರು ಮೈರೇಯಕ ನಾಮದ ಮದ್ಯ ಸೇವನೆ ಮಾಡಿದರು. ಆದರ ನಿಶೆಯಿಂದ ಬುದ್ಧಿ ಭ್ರಷ್ಟವಾಯಿತು. ಈ ಮದ್ಯವು ಕುಡಿಯಲು ಅತ್ಯಂತ ರುಚಿಕರವಾಗಿತ್ತು. ಆದರೆ ಇದರ ಪರಿಣಾಮ ಮಾತ್ರ ಸರ್ವ ನಾಶವೇ ಸರಿ.

ಎಲ್ಲಿ ಶ್ರೀಹರಿಯ ಪೂಜೆ, ಶಾಲಿಗ್ರಾಮಶಿಲಾರ್ಚನ ಹಾಗೂ ಸಾಧು-ಸಂತರ ಸನ್ಮಾನವಾಗುವುದೋ, ಅದೇ ಅರಿಷ್ಟನಾಶಕವಾದ ಮಹಾಪೂಜೆಯಾಗಿರುವುದು ॥೯೫॥ ಎಲ್ಲಿ ಭಕ್ತಿಭಾವದಿಂದ ಬ್ರಾಹ್ಮಣರ ಪೂಜೆಯಾಗುವುದೋ, ಎಲ್ಲಿ ಪರಮಶ್ರದ್ಧೆಯಿಂದ ಆಕಳ ಪೂಜೆ ಮಾಡಲ್ಪಡುವುದೋ, ಎಲ್ಲಿ ಪರಿಪೂರ್ಣವಾಗಿ ಭೂತದಯೆ ಸಾಧಿಸುವುದೋ, ಅಲ್ಲಿ ವಿಘ್ನಗಳು ಎಂದಿಗೂ ಪ್ರವೇಶ ಮಾಡಲು ಶಕ್ಯವಿಲ್ಲ ॥೯೬॥ ಎಲ್ಲಿ ಕುರುಡರಿಗೆ, ಕುಂಟರಿಗೆ, ಅಶಕ್ತ ಜನರಿಗೆ ಅನ್ನವು ದೊರಕುತ್ತಿದ್ದರೆ, ಎಲ್ಲಿ ಬಡಜನರು ಸುಖಿಯಾದರೆ, ಅಲ್ಲಿ ವಿಘ್ನಗಳ ಬಾಧೆಯಾಗಲು ಎಂದಿಗೂ ಸಾಧ್ಯವಿಲ್ಲ ॥೯೭॥ ಅಲೌಕಿಕವಾಗಿರುವ ಭೂತದಯೆಯು ಇದು ಸರ್ವ ಅರಿಷ್ಟಗಳ ನಿವಾರಣೆ ಮಾಡುವುದಾಗಿದೆ. ಅದು ಮಂಗಲಕಾರಕ ಮತ್ತು ಸರ್ವ ಪ್ರಕಾರದ ಸುಖಕಾರಕವಾಗಿದೆ ॥೯೮॥

ಮಧುಕೈಟಭ ಮರ್ದನ, ಮುರಾರೀ, ಮಧುಸೂದನನಾದ ಪರಮಾತ್ಮಾ ಶ್ರೀಕೃಷ್ಣನು ಸರ್ವರಿಗೂ ಪ್ರಭಾಸಕ್ಕೆ ಹೋಗಲು ಹೇಳಿದನು ॥೯೯॥ ಯಾದವರಲ್ಲಿ ವೃದ್ಧರು, ಜ್ಞಾನಿಗಳು, ಪುತ್ರ, ಮಿತ್ರ ಹಾಗೂ ಆಪ್ತ ಜನರು ಇವರೆಲ್ಲರೂ ಶ್ರೀಕೃಷ್ಣನ ವಚನವನ್ನು ಅತ್ಯಂತ ಆದರದಿಂದ ಮಾನ್ಯ ಮಾಡಿದರು ॥೧೦೦॥ ಸರ್ವ ಸಾಮಗ್ರಿಗಳನ್ನು ತೆಗೆದುಕೊಂಡು ಸ್ತ್ರೀಯರು ಹಾಗೂ ವೃದ್ಧರು, ಚಿಕ್ಕ ಬಾಲಕರು ಇವರೆಲ್ಲರೂ ನೌಕೆಯಲ್ಲಿ ಕುಳಿತುಕೊಂಡು ತಮ್ಮನ್ನು ಶಂಖೋದ್ಧಾರಕ್ಕೆ ಮುಟ್ಟಿಸಲು ತಿಳಿಸಿದರು ॥೧೦೧॥ ರಥ, ಆನೆ ಇತ್ಯಾದಿ ಸರ್ವವನ್ನೂ ಸಿದ್ಧಗೊಳಿಸಿ ಸರ್ವ ಚತುರಂಗ ಸೇನೆ ಸಮೇತವಾಗಿ ಶ್ರೀಕೃಷ್ಣನೊಂದಿಗೆ ಸರ್ವ ಯಾದವ ವೀರರು ಪ್ರಭಾಸತೀರ್ಥಕ್ಕೆ ಹೊರಡಲು ಪ್ರಾರಂಭಿಸಿದರು ॥೧೦೨॥

ಯಾದವರೆಲ್ಲರೂ ಪ್ರಭಾಸತೀರ್ಥಕ್ಕೆ ಬಂದು ಮುಟ್ಟಿದರು. ಅವರು ಶ್ರೀಕೃಷ್ಣನು ಹೇಳಿರುವುದಕ್ಕಿಂತಲೂ ವಿಶೇಷವಾಗಿ ದಾನ ಇತ್ಯಾದಿ ವಿಧಿಗಳನ್ನು ಆಚರಿಸಿದರು ॥೧೦೩॥ ಸರ್ವ ಯಾದವರು ಕೂಡಿಕೊಂಡು ಭೋಜನ ಮಾಡಿ ವಿಧಿಯುಕ್ತರಾಗಿ ಪಾರಣೆ ಬಿಟ್ಟರು. ತದನಂತರ ಭಾರೀ ಪ್ರಮಾಣದ ಬೆಲೆಬಾಳುವ ಮದ್ಯವನ್ನು ತರಿಸಿ ಎಲ್ಲರೂ ಮದ್ಯಪಾನ ಮಾಡಲಾರಂಭಿಸಿದರು ॥೧೦೪॥

ಕರೂನಿಯಾ ತೀರ್ಥವಿಧಾನ । ಕರಾವೇ ಅರಿಷ್ಟನಿರಸನ । ಬಾಪ ಅದೃಷ್ಟಾಚೇ ವಿಂದಾನ । ತೇಥೇ ಮದ್ಯಪಾನ ಮಾಂಡಿಲೇ ॥೧೦೫॥ ಜ್ಯಾಚೀ ಗೋಡಪಣೇ ಪಡೇ ಮಿಠೀ । ಉನ್ಮಾದತಾ ಅತಿಶಯೇ ಉಠೀ । ತೇ ಮದ್ಯಪಾನ ಉಠಾಉಠೀ । ವಡಿಲೀಧಾಕುಟೇ ಮಾಂಡಿಲೇ ॥೧೦೬॥ ಜ್ಯಾಚಾ ವಾಸ ಯೇತಾಂಚಿ ಘ್ರಾಣೀ । ಉನ್ಮಾದ ಚಢೇ ತತ್‌ಕ್ಷಣೀ । ತೈಶಿಯಾ ಮದ್ಯಾಚೇ ಮದ್ಯಪಾನೀ । ವೀರಶ್ರೇಣೀ ಬೈಸಲ್ಯಾ ॥೧೦೭॥ ''ಮೈರೇಯಕ'' ಮದ್ಯಾಚೀ ಥೋರೀ । ಮಧುರತಾ ಅತಿಶಯೇ ಭಾರೀ । ಲಾಗತಾಂಚಿ ಜಿವ್ಹೇವರೀ । ಭ್ರಾಂತ ಕರೀ ಸಜ್ಞಾನಾ ॥೧೦೮॥ ತೇ ಮದ್ಯಪಾನ ಯಾದವವೀರೀ । ಆದರಿಲೇ ಸ್ವೇಚ್ಛಾಚಾರೀ । ಆಗ್ರಹ ಕರೂನಿ ಪರಸ್ಪರೀ । ಲಹಾನಥೋರೀ ಮಾಂಡಿಲೇ ॥೧೦೯॥

ಮಹಾಪಾನಾಭಿಮತ್ತಾನಾಂ ವೀರಾಣಾಂ ದೃಪ್ತಚೇತಸಾಮ್ । ಕೃಷ್ಣಮಾಯಾವಿಮೂಢಾನಾಂ ಸಂಘರ್ಷಃ ಸುಮಹಾನಭೂತ್ ॥೧೩॥

ಅರ್ಥ:- ಈ ಯಾವ ತೀವ್ರ ಮದ್ಯದ ಸೇವನೆಯಿಂದ ಸರ್ವರಿಗೂ ಉನ್ಮತ್ತತೆಯು ಏರಿತು. ಅವರು ಗರ್ವಕ್ಕೆ ಗುರಿಯಾಗಿ ಒಬ್ಬರಿಗೊಬ್ಬರು ಕಲಹ ಆರಂಭಿಸಿದರು. ನಿಜವಾಗಿ ನೋಡಿದರೆ ಇದು ಶ್ರೀಕೃಷ್ಣನ ಮಾಯೆಯೇ ಈ ಮೂಢತನಕ್ಕೆ ಕಾರಣವಾಗಿತ್ತು.

ಪೂರ್ವಿೀ ಅತಿಮಿತ್ರತ್ವ ಪೋಟಾಂತ । ತೇ ಮಹಾಪಾನೇ ಝಾಲೇ ಮತ್ತ । ವೀರ ಮಾತಲೇ ಅತಿದೃಪ್ತ । ನೋಕೂನಿ ಬೋಲತ ಪರಸ್ಪರೇ ॥೧೧೦॥ ಕೃಷ್ಣಮಾಯಾ ಹರಿಲಾ ಬೋಧ । ಅವಘೇ ಝಾಲೇ ಬುದ್ಧಿಮಂದ । ಸಾಂಡೂನಿ ಸುಹೃದಸಂಬಂಧ । ನಿರ್ವಾಣಯುದ್ಧ ಮಾಂಡಿಲೇ ॥೧೧೧॥ ನೋಕೂನಿ ಬೋಲತಾ ವಿರುದ್ಧ । ಅತಿಶಯೇ ಚಢಲಾ ಕ್ರೋಧ । ಶಸ್ತ್ರೇ ಘೇಊನಿ ಸನ್ನದ್ಧ । ಸುಹೃದೀ ಯುದ್ಧ ಮಾಂಡಿಲೇ ॥೧೧೨॥

ಯುಯುಧುಃ ಕ್ರೋಧಸರಂಬ್ಧಾ ವೇಲಾಯಾಮಾತತಾಯಿನಃ । ಧನುರ್ಭಿರಸಿಭಿರ್ಭಲ್ಲೈರ್ಗದಾಭಿಸ್ತೋಮರರ್ಷ್ಟಿಭಿಃ ॥೧೪॥

ಅರ್ಥ:- ಕ್ರೋಧರಾದ ಅವರು ಬಿಲ್ಲು ಬಾಣಗಳನ್ನೂ, ಕತ್ತಿ ಭಲ್ಲೆಗಳನ್ನೂ, ಗದೆ ಭರ್ಜಿ ಈಟಿಗಳನ್ನೂ ಸೆಳೆದುಕೊಂಡು ಸಮುದ್ರ ತೀರದಲ್ಲಿ ಪರಸ್ಪರ ಯುದ್ಧ ಆರಂಭಿಸಿದರು.

ಕ್ರೋಧೇ ನೇತ್ರ ರಕ್ತಾಂಬರ । ವೇಗೇ ವೋಢೂನಿ ಹಾತಿಯೇರ । ಸಮುದ್ರತೀರೀ ಮಹಾವೀರ । ಯುದ್ಧ ಘೋರಾಂದರ ತೇ ಕರಿತೀ ॥೧೧೩॥ ಧನುಷ್ಯೇ ವಾಊನಿಯಾ ಜಾಣಾ । ಬಾಣ ಸೋಡಿತೀ ಸಣಸಣಾ । ಖಡ್ಗೇ ಹಾಣಿತೀ ಖಣಖಣಾ । ಸುಹೃದಾಂಚ್ಯಾ ಪ್ರಾಣಾ ಘ್ಯಾವಯಾ ॥೧೧೪॥ ಏಕೀ ಉಚಲೋನಿಯಾ ಭಾಲೇ । ಪರಸ್ಪರೇ ಹಾಣಿತೇ ಝಾಲೇ । ಏಕೀ ಗದಾ ಉಚಲೋನಿ ಬಳೇ । ವೀರ ಕಲೇವರೇ ಪಾಡಿತೀ ॥೧೧೫॥

ತೀರ್ಥ ವಿಧಾನ ಮಾಡಿ ಅರಿಷ್ಟನಿರಸನೆ ಮಾಡಬೇಕಾಗಿತ್ತು. ಆದರೆ ಅಬ್ಬಾ! ಎಂತಹ ದೈವಗತಿಯ ಸಾಮರ್ಥ್ಯವಿರಬಹುದು? ಅಲ್ಲಿ ಎಲ್ಲರೂ ಮದ್ಯಪಾನ ಆರಂಭಿಸಿಬಿಟ್ಟರು ॥೧೦೫॥ ಈ ಮದ್ಯಪಾನದ ರುಚಿಯು ಒಮ್ಮೆ ಹತ್ತಿಕೊಂಡರೆ ಅದು ತನಗೆ ಗಂಟುಬಿದ್ದು ಅಂಟಿಕೊಳ್ಳುವುದು. ಇದರಿಂದ ಅತಿಶಯ ಉನ್ಮಾದವು ಬೆಳೆಯುವುದು. ಇಂತಹ ಮದ್ಯವನ್ನು ಸಣ್ಣವರು, ದೊಡ್ಡವರು ಹೀಗೆ ಎಲ್ಲರೂ ಕುಡಿಯಲಾರಂಭಿಸಿದರು ॥೧೦೬॥ ಯಾವ ಮದ್ಯದ ಕೇವಲ ವಾಸನೆ ಮೂಗಿಗೆ ಬಡಿದರೆ ಸಾಕು, ಅದರಿಂದ ನಿಶೆ ಏರುವುದು. ಇತಹ ಮದ್ಯಪಾನ ಮಾಡಲು ಯಾದವವೀರರ ಪಂಕ್ತಿಯ ಮೇಲೆ ಪಂಕ್ತಿಯು ಕುಳಿತುಕೊಂಡಿತು ॥೧೦೭॥ ಮೈರೇಯಕ ನಾಮದ ಮದ್ಯವು ಅತಿಶಯ ಮಧುರವಾಗಿರುತ್ತದೆ. ಅದರ ಸ್ಪರ್ಶವು ನಾಲಿಗೆಗೆ ಹತ್ತಿತೆಂದರೆ ಎಂತಹ ಜ್ಞಾನಿಯೂ ಕೂಡ ಹುಚ್ಚನಾಗಿ ಬಿಡುವನು ॥೧೦೮॥ ಇಂತಹ ಮದ್ಯವನ್ನು ಸರ್ವ ಯಾದವ ವೀರರು ಯಥೇಚ್ಛವಾಗಿ ಪಾನ ಮಾಡಿದರು. ಸಣ್ಣವರು, ದೊಡ್ಡವರು ಎಲ್ಲರೂ ಮನಬಂದಂತೆ ಕುಡಿಯುತ್ತ ಸರ್ವರೂ ಆಗ್ರಹ ಮಾಡುತ್ತ ಇನ್ನೂ ಹೆಚ್ಚಿಗೆ ಕುಡಿಯಹತ್ತಿದರು ॥೧೦೯॥

ಈ ಪೂರ್ವದಲ್ಲಿ ಯಾರು ಅತ್ಯಂತ ಮಿತ್ರರಾಗಿ ಇದ್ದರೋ, ಅವರು ಈ ಮದ್ಯಪಾನದಿಂದ ಉನ್ಮತ್ತರಾದರು ಹಾಗೂ ಅತಿಶಯ ಗರ್ವದಿಂದ ಒಬ್ಬರಿಗೊಬ್ಬರು ಹೀಯಾಳಿಸುತ್ತ ಮಾತನಾಡಲಾರಂಭಿಸಿದರು ॥೧೧೦॥ ಕೃಷ್ಣ ಮಾಯೆಯಿಂದ ಅವರ ಜ್ಞಾನವು ಇಲ್ಲದಂತಾಯಿತು. ಸರ್ವ ಜನರು ಮತಿಮಂದರಾದರು ಮತ್ತು ತಮ್ಮ ಆಪ್ತತ್ವದ ಸಂಬಂಧವನ್ನು ಮರೆತುಬಿಟ್ಟರು. ಕೊನೆಗೆ ಒಬ್ಬರಿಗೊಬ್ಬರು ಯುದ್ಧ ಮಾಡಲಾರಂಭಿಸಿದರು ॥೧೧೧॥ ಒಬ್ಬರಿಗೊಬ್ಬರು ಚುಚ್ಚಿ ಮಾತನಾಡುತ್ತ ಪರಸ್ಪರರ ವಿರುದ್ಧ ಮಾತುಗಳ ಶಬ್ದಗಳಿಂದ ಅವರ ಕ್ರೋಧವು ಭಯಂಕರ ಬೆಳೆಯಿತು. ಇದರಿಂದ ಕೈಯಲ್ಲಿ ಶಸ್ತ್ರಗಳನ್ನು ತೆಗೆದುಕೊಂಡು ಸ್ವಜನರಾದ ಇವರು ತಮ್ಮ ತಮ್ಮಲ್ಲಿಯೇ ಯುದ್ಧ ಮಾಡಹತ್ತಿದರು ॥೧೧೨॥

ಕ್ರೋಧದಿಂದ ಅವರ ಕಣ್ಣುಗಳು ಕೆಂಪಾಗಿ ಅವರು ತಮ್ಮ ಖಡ್ಗಗಳನ್ನು ಭರಾಟೆಯಿಂದ ಎಳೆದುಕೊಂಡು ಆ ಪರಾಕ್ರಮೀ ವೀರ ಸಮುದಾಯವು ಸಮುದ್ರ ದಡದಲ್ಲಿ ಯುದ್ಧ ಮಾಡಹತ್ತಿತು ॥೧೧೩॥ ಧನುಷ್ಯಗಳನ್ನು ತೆಗೆದುಕೊಂಡು ಅವರು ಭರಭರನೇ ಬಾಣಗಳನ್ನು ಬಿಡಲಾರಂಭಿಸಿದರು. ತಮ್ಮ ಆಪ್ತೇಷ್ಟರ ಜೀವ ತೆಗೆದುಕೊಳ್ಳುವುದಕ್ಕಾಗಿ ಖಡ್ಗಗಳಿಂದ ಖಣ್ ಖಣ್ ಎನ್ನುವಂತೆ ಹೊಡೆತ ಹಾಕುತ್ತಿದ್ದರು ॥೧೧೪॥ ಇನ್ನೂ ಕೆಲವರು ಭಾಲೆಗಳನ್ನು ಎತ್ತಿಕೊಂಡು ಒಬ್ಬರ ಮೇಲೊಬ್ಬರು ಮೇಲೆ ಒಗೆಯಹತ್ತಿದರು. ಕೆಲವರು ಗದೆಯ ಪ್ರಹಾರದಿಂದ ಒಬ್ಬರಿಗೊಬ್ಬರು ತಲೆಗಳನ್ನು ಒಡೆದುಕೊಂಡರು ॥೧೧೫॥

ಏಕ ತೋಮರೇ ಲವಲಾಹೀ । ರಾಣೀ ಖಿವಳಲೇ ಭಿಡತೀ ಪಾಹೀ । ಏಕ ಟೋಣಪ್ಯಾಚ್ಯಾ ಘಾಯೀ । ವೀರ ಠಾಯೀ ಪಾಡಿತೀ ।।೧೧೬।। ಯಾಪರೀ ಚತುರಂಗಸೇನಾ । ಮಿಸಳಲೀ ರಣಕಂದನಾ । ಆಪುಲಾಲಿಯಾ ಅಂಗವಣಾ । ಗಜ ರಥ ರಣಾ ಆಣಿತೀ ।।೧೧೭।।

ಪತಪತಾಕೈ ರಥಕುಂಜರಾದಿಭಿಃ ಖರೋಷ್ಟ್ರಗೋಭಿರ್ಮಹಿಷೈರ್ನರೈರಪಿ ।
ಮಿಥಃ ಸಮೇತ್ಯಾಶ್ವತರೈಃ ಸುದುರ್ಮದಾ ನ್ಯಹನ್‌ಶರೈರ್ದದ್ಭಿರಿವ ದ್ವಿಪಾ ವನೇ ।।೧೫।।

ಅರ್ಥ:- ಪತಾಕೆಗಳು ಹಾರಾಡುತ್ತಿರುವ ರಥಗಳು, ಆನೆಗಳು, ಕತ್ತೆಗಳು, ಒಂಟೆಗಳು, ಎತ್ತುಗಳು, ಕೋಣಗಳು, ಖೇಚರರು ಮತ್ತು ಮನುಷ್ಯರು ಇತ್ಯಾದಿಯಾಗಿ ಪರಸ್ಪರರು ಪ್ರಚಂಡವಾಗಿ ಸಂಹಾರ ಮಾಡಹತ್ತಿದರು.

ಪತಾಕಾಂಸೀ ರಥ ಕುಂಜರ । ರಣೀ ಪಾಡಿಲೇ ಅಪಾರ । ಪಾಖರಾಂಸೀ ಅಸಿವಾರ । ಮಾರಿಲೇ ಖರೋಷ್ಟ್ರ ರಣಾಮಾಜೀ ।।೧೧೮।। ಮ್ಹೈಸೇ ಮಾರೂನಿಯಾ ರಣೀ । ಪಾಡಿಲಿಯಾ ವೀರಶ್ರೇಣೀ । ಜೈಸೇ ಉನ್ಮತ್ತ ಗಜ ವನೀ । ದಂತೀ ಖಣಾಣೀ ಭೇಡತ ।।೧೧೯।। ಯಾಪರೀ ಯಾದವವೀರ । ರಣೀ ಮಾತಲೇ ಮಹಾಶೂರ । ಘಾಯ ಮಾರೋನಿ ನಿಷ್ಠುರ । ರಣೀ ಅಪಾರ ಪಾಡಿಲೇ ।।೧೨೦।। ಕೃಷ್ಣಮಾಯಾ ಕೇಲೇ ಭ್ರಾಂತ । ಯುದ್ಧೀ ನ ದೇಖತಾ ಸ್ವಾರ್ಥ । ಪರಸ್ಪರೇ ಪ್ರಾಣಘಾತ । ವ್ಯರ್ಥ ಕರಿತ ಸುಹೃದಾಂಚಾ ।।೧೨೧।। ರಣೀ ಪಾಡಿಲೇ ಅಪಾರ । ತಂವ ಖಿವಳಲೇ ಕೃಷ್ಣಕುಮರ । ಜ್ಯಾಂಚ್ಯಾಮಾಜೀ ಪ್ರೀತಿ ಥೋರ । ತೇ ಯುದ್ಧಾತುರ ಚಾಲಿಲೇ ।।೧೨೨।।

ಪ್ರದ್ಯುಮ್ನಸಾಂಬೌ ಯುಧಿ ರೂಢಮತ್ಸರಾವ್ ಅಕ್ರೂರಭೋಜಾವನಿರುದ್ಧಸಾತ್ಯಕೀ ।
ಸುಭದ್ರಸಂಗ್ರಾಮಜಿತೌ ಸುದಾರುಣೌ ಗದೌ ಸುಮಿತ್ರಾಸುರಥೌ ಸಮೀಯತುಃ ।।೧೬।।

ಅರ್ಥ:- ಪ್ರದ್ಯುಮ್ನನು ಸಾಂಬನ ವಿರುದ್ಧ, ಅಕ್ರೂರನು ಭೋಜನ ವಿರುದ್ಧ, ಅನಿರುದ್ಧನು ಸಾತ್ಯಕಿಯ ವಿರುದ್ಧ, ಸುಭದ್ರನು ಸಂಗ್ರಾಮನ ವಿರುದ್ಧ ಭಗವಾನ ಶ್ರೀಕೃಷ್ಣನ ಅಣ್ಣನು ಗದ ನಾಮದ ಪುತ್ರನ ವಿರುದ್ಧ ಮತ್ತು ಸುಮಿತ್ರನು ಸುರಥನ ವಿರುದ್ಧ, ಹೀಗೆ ಪರಸ್ಪರರು ಯುದ್ಧ ಮಾಡಲಾರಂಭಿಸಿದರು. ಕ್ರೋಧಯುಕ್ತರಾಗಿ ಒಬ್ಬರಿಂದೊಬ್ಬರು ನಾಶವಾಗಹತ್ತಿದರು.

ಜ್ಯಾಂಚ್ಯಾಮಾಜೀ ಅತಿಪ್ರೀತೀ । ತೇ ತೇ ನಿರ್ವಾಣಯುದ್ಧ ಕರಿತೀ । ಬಾಪ ಸಂಹಾರಕ ಕಾಳಗತೀ । ಸಖೇ ಮಾರಿತೀ ಸಖ್ಯಾಂತೇ ।।೧೨೩।। ಪ್ರದ್ಯುಮ್ನ ಸಾಂಬ ಅತಿಮಿತ್ರ । ತ್ಯಾಂಸೀ ಯುದ್ಧ ಮಾಂಡಲೇ ಘೋರಾಂದರ । ಅಕ್ರೂರ ಭೋಜ ದೋನ್ಹೀ ವೀರ । ಯುದ್ಧೀ ಸತ್ವರ ಮಿಸಳಲೇ ।।೧೨೪।। ಅನಿರುದ್ಧ ಆಣಿ ಸಾತ್ಯಕೀ । ಉತಾವಲೇ ಕ್ರೋಧತವಕೀ । ಬಾಣೀ ವರ್ಷೋನಿ ಅನೇಕೀ । ಏಕಮೇಕಾ ಭೇಡತೀ ।।೧೨೫।।

ಕೆಲವರು ಅತಿಶಯ ತ್ವರೆಯಿಂದ ಕಬ್ಬಿಣದ ಸಲಾಕೆಗಳನ್ನು ತೆಗೆದುಕೊಂಡು ಇನ್ನೊಬ್ಬರನ್ನು ಹೊಡೆಯಲಾರಂಭಿಸಿದರು. ಕೆಲವರು ಅತ್ಯಂತ ರಭಸದ ಹೊಡೆತಗಳಿಂದ ವೀರರನ್ನು ಇದ್ದಲ್ಲಿಯೇ ಬೀಳಿಸಿ ಮುಗಿಸುತ್ತಿದ್ದರು ।।೧೧೬।। ಈ ಪ್ರಕಾರವಾಗಿ ಈ ಯಾವ ಚತುರಂಗ ಸೇನೆಯು ಪರಸ್ಪರರ ಸಂಹಾರ ಮಾಡುವ ಘೋರ ಕಾರ್ಯಕ್ಕೆ ಕೈಹಾಕಿತು. ತಮ್ಮ ತಮ್ಮ ಕಡೆಗಳಿಂದ ಯುದ್ಧಕ್ಕಾಗಿ ಆನೆ, ರಥ ಇತ್ಯಾದಿ ಯುದ್ಧ ಸಾಧನೆಗಳನ್ನು ಕೂಡಿಸಹತ್ತಿದರು ।।೧೧೭।।

ಈ ಯಾವ ವೀರರು ಧ್ವಜಗಳಿರುವ ಅಪಾರ ರಥಗಳನ್ನು ಮತ್ತು ಆನೆಗಳನ್ನು ನೆಲಕ್ಕುರುಳಿಸಿದರು. ಸರಪಳಿಯನ್ನು ತೊಟ್ಟಿರುವ, ಶಿರಸ್ತ್ರಾಣವುಳ್ಳ ಕುದುರೆ ಸವಾರರು, ಕತ್ತೆಗಳು, ಒಂಟೆಗಳು ಇತ್ಯಾದಿ ರಣಭೂಮಿಯಲ್ಲಿ ಕೊಲ್ಲಲ್ಪಟ್ಟವು ।।೧೧೮।। ಕೋಣಗಳನ್ನೂ ಸಹ ಆ ರಣರಂಗದಲ್ಲಿ ಕೊಂದುಬಿಟ್ಟರು. ವೀರರೆಲ್ಲರೂ ಗುಂಪುಗುಂಪಾಗಿ ಸತ್ತುಬಿದ್ದರು. ಮದವೇರಿದ ಆನೆಗಳು ವನದಲ್ಲಿ ಒಂದಕ್ಕೊಂದು ತಮ್ಮ ದಂತಗಳಿಂದ ಪ್ರಹಾರ ಮಾಡುವಂತೆ ವೀರರೆಲ್ಲರೂ ಪರಸ್ಪರರಲ್ಲಿ ಹೊಡೆದಾಡುತ್ತಿದ್ದರು ।।೧೧೯।। ಈ ಪ್ರಕಾರವಾಗಿ ಮಹಾಪರಾಕ್ರಮೀ ಶೂರ ಮಹಾವೀರರು ರಣದಲ್ಲಿ ಮತ್ತರಾಗಿ ಅವರು ನಿಷ್ಠುರದಿಂದ ಹೊಡೆತಗಳನ್ನು ಹಾಕುತ್ತ ಅಸಂಖ್ಯ ಜನರನ್ನು ರಣರಂಗದಲ್ಲಿ ಕೊಂದು ಹಾಕಿದರು ।।೧೨೦।। ಶ್ರೀಕೃಷ್ಣನ ಮಾಯೆಯಿಂದ ಅವರ ಬುದ್ಧಿಯು ಹರಣವಾಗಿತ್ತು. ಆದ್ದರಿಂದ ಯುದ್ಧದಲ್ಲಿ ತಮ್ಮ ಹಿತ ಎಲ್ಲಿದೆ ಎಂಬುವುದೆ ಅವರಿಗೆ ತಿಳಿಯದಂತಾಯಿತು. ವಿನಾಕಾರಣವಾಗಿ ಯುದ್ಧ ಮಾಡುತ್ತ ಆಪ್ತೇಷ್ಟರ ಜೀವ ತೆಗೆದುಕೊಳ್ಳಹತ್ತಿದರು ।।೧೨೧।। ಈ ಪ್ರಕಾರವಾಗಿ ರಣರಂಗದಲ್ಲಿ ಅಸಂಖ್ಯಾತ ವೀರರು ಕೊಲ್ಲಲ್ಪಟ್ಟರು. ಇದನ್ನು ಕಂಡು ಶ್ರೀಕೃಷ್ಣನ ಪುತ್ರರು ಅತಿಶಯವಾಗಿ ಕ್ರೋಧಯುಕ್ತರಾಗಿ ಯಾರ ಯಾರಲ್ಲಿ ಅವರ ಪ್ರೀತಿ ವಿಶೇಷವಾಗಿತ್ತೋ, ಅವರಲ್ಲಿಯೇ ಪರಸ್ಪರ ಯುದ್ಧಕ್ಕೆ ಪ್ರವೃತ್ತರಾದರು ।।೧೨೨।।

ಯಾರು ಒಬ್ಬರಿಗೊಬ್ಬರು ಅತಿಶಯ ಪ್ರೇಮ ಮಾಡುತ್ತಿದ್ದರೋ, ಅವರೇ ಈಗ ಭಯಂಕರ ಸ್ವರೂಪದಿಂದ ಯುದ್ಧ ಮಾಡಲಾರಂಭಿಸಿದರು. ಕಾಲನ ಗತಿಯು ಅದೆಂತಹ ಅಗಾಧವಾಗಿದೆ ನೋಡಿರಿ. ಖಾಸ ಅಣ್ಣತಮ್ಮಂದಿರು ಒಬ್ಬರಿಗೊಬ್ಬರು ಕಾದಾಡಲಾರಂಭಿಸಿದರು ।।೧೨೩।। ಪ್ರದ್ಯುಮ್ನ ಮತ್ತು ಸಾಂಬ ಇವರಲ್ಲಿ ಪರಸ್ಪರವಾಗಿ ಅತಿಶಯ ಪ್ರೇಮವಿತ್ತು. ಆದರೆ ಅವರು ಈ ಸಮಯದಲ್ಲಿ ಭಯಂಕರವಾಗಿ ಯುದ್ಧ ಮಾಡಹತ್ತಿದರು. ಅದರಂತೆಯೇ ಅಕ್ರೂರ ಮತ್ತು ಭೋಜ ಇವರೂ ಕೂಡ ಯುದ್ಧ ಪ್ರಾರಂಭ ಮಾಡಿದರು ।।೧೨೪।। ಅನಿರುದ್ಧ ಮತ್ತು ಸಾತ್ಯಕೀ ಇವರು ಕ್ರೋಧಾವೇಶದಿಂದ ಎದ್ದರು. ಪರಸ್ಪರರ ಮೇಲೆ ಬಾಣಗಳ ಮಳೆಗರೆಯಹತ್ತಿದರು ।।೧೨೫।।

ಸುಭದ್ರ ಸಂಗ್ರಾಮಜಿತ ದೋನೀ । ಖವಳಲೇ ರಣಾಂಗಣೇ । ವರ್ಷೋನಿಯಾ ತೀಕ್ಷ್ಣ ಬಾಣೀ । ಉನ್ಮತ್ತ ರಣೀ ಮಾತಲೇ ।।೧೨೬।। ಕೃಷ್ಣಪುತ್ರ ಕೃಷ್ಣಬಂಧು । ದೋಂಹಿಚೇಹೀ ನಾಮ ಗದು । ತ್ಯಾಂಸೀ ಸಮತ್ಸರ ಕ್ರೋಧು । ಯುದ್ಧ ಸಂಬಂಧು ಪರಸ್ಪರೇ ।।೧೨೭।। ಸುಮಿತ್ರ ಆಣಿ ಸುರಥ । ಯಾ ದೋಂಹೀಸೀ ದ್ವೇಷ ಅದ್ಭುತ । ಪರಸ್ಪರೇ ಕರಾವಯಾ ಘಾತ । ಯುದ್ಧಾ ಆಂತ ಮಿಸಳಲೇ ।।೧೨೮।।

ಅನ್ಯೇ ಚ ಯೇ ವೈ ನಿಶಠೋಲ್ಮುಕಾದಯಃ ಸಹಸ್ರಜಿಚ್ಛತಜಿದ್ ಭಾನುಮುಖ್ಯಾಃ ।
ಅನೋನ್ಯಮಾಸಾದ್ಯ ಮಧಾಂಧಕಾರಿತಾ ಜಘ್ನುರ್ಮುಕುಂದೇನ ವಿಮೋಹಿತಾ ಭೃಶಮ್ ।।೧೭।।

ಅರ್ಥ:- ಇವರಲ್ಲದೇ ನಿಶಠ, ಉಲ್ಮುಖ, ಸಹಸ್ರಜಿತ್, ಶತಜಿತ್ ಮತ್ತು ಭಾನು ಇತ್ಯಾದಿ ಯಾದವರೂ ಕೂಡ ಒಬ್ಬರಿಗೊಬ್ಬರು ಯುದ್ಧ ಮಾಡಹತ್ತಿದರು. ಭಗವಾನ ಶ್ರೀಕೃಷ್ಣನ ಮಾಯೆಯು ಅವರನ್ನು ಮೋಹಿತಗೊಳಿಸಿತ್ತು. ಮದ್ಯದ ನಿಶೆಯಲ್ಲಿ ಅವರು ಕುರುಡಾಗಿದ್ದರು.

ಯಾದವಕುಳೀ ಬಳೀ ಅಧಿಕ । ನಿಶಠಾದಿ ಉಲ್ಮುಕಾದಿಕ । ಶತಜಿತ್ಸಹಸ್ರಜಿದ್ಭಾನುಮುಖ್ಯ । ಹೇಹೀ ಯುದ್ಧೀ ದೇಖ ಖವಳಲೇ ।।೧೨೯।। ಮದ್ಯಪಾನೇ ಅತಿಗರ್ವಿತ । ಕೃಷ್ಣಮಾಯಾ ಹರಿಲೇ ಚಿತ್ತ । ಮಹಾಮೋಹೇ ಕೇಲೇ ಭ್ರಾಂತ । ಸುಹೃದಾ ಘಾತ ಸ್ವಯೇ ಕರಿತೀ ।।೧೩೦।। ಬ್ರಹ್ಮಶಾಪಾಚೀ ಕೇವಢೀ ಖ್ಯಾತೀ । ಬಂಧು ಬಂಧೂಂತೇ ಜೀವ ಘೇತೀ । ಕೃಷ್ಣಮಾಯಾ ಪಾಡೀಲೇ ಭ್ರಾಂತೀ । ಯುದ್ಧ ಸ್ವಯಾತೀಮಾರ್ಝಾರೀ ।।೧೩೧।।

ದಾಶಾರ್ಹವೃಷ್ಣ್ಯಂಧಕಭೋಜಸಾತ್ವತಾ ಮಧ್ವರ್ಬುದಾ ಮಾಥೂರಶೂರಸೇನಾ: ।
ವಿಸರ್ಜನಾಃ ಕುಕುರಾಃ ಕುಂತಯಶ್ಚ ಮಿಥಸ್ತತಸ್ತೇऽಥ ವಿಸೃಜ್ಯಸೌಹೃದಮ್ ।।೧೮।।

ಅರ್ಥ:- ದಾಶಾರ್ಹ, ವೃಷ್ಣೀ, ಅಂಧಕ, ಭೋಜ, ಸಾತ್ವತ, ಮಧು, ಅರ್ಬುದ, ಮಾಥುರ, ಶೂರಸೇನ, ವಿಸರ್ಜನ, ಕುಕುರ ಮತ್ತು ಕುಂತಿ ಇತ್ಯಾದಿ ವಂಶದ ಜನರು ಪರಸ್ಪರ ಪ್ರೇಮ ಮರೆತು ಸಂಘರ್ಷ ಮಾಡಲಾರಂಭಿಸಿದರು.

ಯಾದವಾಂಚೀ ಏಕ ಜಾತೀ । ತೇಚಿ ಬಾರಾ ನಾಮೀ ನಾಮಾಂಕಿತೀ । ತ್ಯಾ ಬಾರಾಹೀ ಜ್ಞಾತೀ ಯುದ್ಧೀ ಭಿಡತೀ । ಏಕ ಪರೀಕ್ಷಿತೀ ತೀ ನಾಮೇ ।।೧೩೨।। ದಾಶಾರ್ಹ ಸಾತ್ವಕ ಅಂಧಕ ಜಾಣ । ಅರ್ಬುದ ಮಾಥುರ ಶೂರಸೇನ । ಕುಂತೀ ಕುಕುರ ವಿಸರ್ಜನ । ಮಧು ಭೋಜ ವೃಷ್ಣ್ಯ ಬಾರಾ ನಾಮೇ ।।೧೩೩।। ಪೂರ್ವೀಲ ಯಾದವಾಂಚೇ ಸಾಜಣೇ । ಜ್ಞಾತೀಚೇ ಅಲ್ಪಹೀ ಏಕತಾ ಉಣೇ । ಜೀವೇಸೀ ಸರ್ವಸ್ವ ವೇಂಚಣೇ । ಪರೀ ವಾಂಚವಣೇ ಸ್ವಯಾತೀ ।।೧೩೪।। ತೇಚಿ ಯಾದವ ಪೈ ಗಾ ಆತಾ । ಸಾಂಡೋನಿಯಾ ಸುಹೃದತಾ । ಜ್ಯಾಚೇ ಚರಣೇ ಠೇವಿಜೇ ಮಾಥಾ । ತ್ಯಾಚ್ಯಾ ಜೀವಘಾತಾ ಪೇಟಲೇ ।।೧೩೫।।

ಸುಭದ್ರ ಮತ್ತು ಸಂಗ್ರಾಮಜಿತ ಇವರಿಬ್ಬರೂ ರಣರಂಗದಲ್ಲಿ ರೇಗಾಸಿಬಂದರು ಮತ್ತು ತೀಕ್ಷ್ಣ ಬಾಣಗಳ ಮಳೆಗರೆಯಲಾರಂಭಿಸಿದರು. ಇವರಿಬ್ಬರೂ ಉನ್ಮತ್ತರಾಗಿ ರಣರಂಗದಲ್ಲಿ ಯುದ್ಧ ಮಾಡಲಾರಂಭಿಸಿದರು ।।೧೨೬।। ಕೃಷ್ಣನ ಅಣ್ಣ ಮತ್ತು ಕೃಷ್ಣನ ಪುತ್ರ ಇವರಿಬ್ಬರ ಹೆಸರು ಗದ ಎಂದಾಗಿತ್ತು. ಇವರಿಬ್ಬರೂ ಮತ್ಸರಭಾವದಿಂದ ಬೆಳೆದ ಕ್ರೋಧದಿಂದ ಪರಸ್ಪರರಲ್ಲಿ ಯುದ್ಧ ಹೂಡಿದರು ।।೧೨೭।। ಸುಮಿತ್ರ ಮತ್ತು ಸುರಥ ಇವರಿಬ್ಬರಲ್ಲಿಯೂ ಬಹುದ್ವೇಷ ಹುಟ್ಟಿಕೊಂಡಿತು. ಅವರು ಒಬ್ಬರಿಗೊಬ್ಬರು ಕೊಲ್ಲುವುದಕ್ಕಾಗಿ ಯುದ್ಧ ಮಾಡಲು ಸಿದ್ಧರಾದರು ।।೧೨೮।।

ಯಾದವ ಕುಲದಲ್ಲಿನ ಮಹಾಬಲಾಢ್ಯರಾದ ನಿಶಠ, ಉಲ್ಮುಕಾದಿಕರು, ಶತಜಿತ್, ಸಹಸ್ರಜಿತ್, ಭಾನುಪ್ರವೃತ್ತೀ ಇವರೂ ಸಹ ಯುದ್ಧದಲ್ಲಿ ಕ್ರೋಧಾಯುಕ್ತರಾದರು ।।೧೨೯।। ಮೊದಲೇ ಮದ್ಯಪಾನದಿಂದ ಅತಿ ಗರ್ವವು ಬೆಳೆದಿತ್ತು. ಇದರಲ್ಲಿ ಶ್ರೀಕೃಷ್ಣನ ಮಾಯೆಯಿಂದ ಅವರು ಮೂಢರಾಗಲ್ಪಟ್ಟರು. ಆದರಿಂದ ಮಹಾಮೋಹದಿಂದ ಭ್ರಾಂತರಾದರು. ತಮ್ಮ ಸ್ವಜನರನ್ನೇ ಕೊಲ್ಲಹತ್ತಿದರು ।।೧೩೦।। ಬ್ರಹ್ಮಶಾಪದ ಎಂತಹ ಖ್ಯಾತಿವಿರಬಹುದು? ಅಣ್ಣನೇ ತಮ್ಮನಿಗೆ ಕೊಲ್ಲಹತ್ತಿದನು. ಶ್ರೀಕೃಷ್ಣನು ಭ್ರಾಂತಿ ನಿರ್ಮಾಣ ಮಾಡಿ ತನ್ನ ಕುಲದಲ್ಲಿ ಯುದ್ಧ ನಿರ್ಮಾಣ ಮಾಡಿದನು ।।೧೩೧।।

ಯಾದವರ ಮುಖ್ಯ ಜಾತಿಯು ಒಂದೇಯಾಗಿದ್ದರೂ ಕೂಡ ಅದರಲ್ಲಿ ಹನ್ನೆರಡು ಉಪಜಾತಿಗಳು ಪ್ರಸಿದ್ಧವಾಗಿದ್ದವು. ಈ ಯಾವ ಹನ್ನೆರಡೂ ಜಾತಿಯವರು ಯುದ್ಧಕ್ಕೆ ಪ್ರವೃತ್ತರಾದರು. ಹೇ ಪರೀಕ್ಷಿತಿಯೇ, ಆ ಜಾತಿಗಳ ಹೆಸರುಗಳನ್ನು ಈಗ ಹೇಳುವೆನು, ಕೇಳು ।।೧೩೨।। ದಾಶಾರ್ಹ, ಸಾತ್ವಕ, ಅಂಧಕ, ಅರ್ಬುದ, ಮಾಥುರ, ಶೂರಸೇನ, ಕುಂತಿ, ಕುಕುರ, ವಿಸರ್ಜನ, ಮಧು, ಭೋಜ ಮತ್ತು ವೃಷ್ಣೀ ಇವು ಅವುಗಳ ಹನ್ನೆರಡು ನಾಮಗಳಾಗಿವೆ ।।೧೩೩।। ಪೂರ್ವದಲ್ಲಿ ಯಾದವರ ವಂಶದಲ್ಲಿ ಒಂದು ರೂಢಿ ಇತ್ತು. ಅದೇನೆಂದರೆ ಯಾವುದಾದರೂ ತಮ್ಮ ಜಾತಿಯಲ್ಲಿ ಏನಾದರೂ ಕೊರತೆ ಕಂಡರೆ ಆಗ ಅವರು ತಮ್ಮ ಪ್ರಾಣದ ಪರವೆ ಇಲ್ಲದೇ ತಮ್ಮ ಜಾತಿಯ ರಕ್ಷಣೆ ಮಾಡುತ್ತಿದ್ದರು ।।೧೩೪।। ಆದರೆ ಈಗ ಅದೇ ಯಾದವರು ತಮ್ಮ ಆಪ್ತಸಂಬಂಧವನ್ನು ಮರೆತುಬಿಟ್ಟರು. ಯಾರ ಚರಣಗಳಲ್ಲಿ ಮಸ್ತಕ ಇಡುವಂತಹ ಯೋಗ್ಯ ಶ್ರೇಷ್ಠ ಆಪ್ತರ ಜೀವ ತೆಗೆದುಕೊಳ್ಳಲು ಯುದ್ಧಭೂಮಿಯಲ್ಲಿ ಪ್ರಯತ್ನ ಮಾಡಲಾರಂಭಿಸಿರುವರು ।।೧೩೫।।

ಪುತ್ರಾ ಆಯುಧ್ಯನ್ ಪಿತೃಭಿಭ್ರಾತೃಭಿಶ್ಚ ಸ್ವಸ್ತ್ರೀಯದೌಹಿತ್ರಪಿತೃವ್ಯಮಾತುಲೈ: ।
ಮಿತ್ರಾಣಿ ಮಿತ್ರೈ: ಸುಹೃದ: ಸುಹೃದ್‌ಭಾರ್‌ಜ್ಞಾತೀಂಸ್ತ್ವಹನ್ ಜ್ಞಾತಯ ಏವ ಮೂಢಾ: ।೪೯॥

ಅರ್ಥ:- ವಿಮೂಢರಾದ ಇವರು ಪುತ್ರರು ಪಿತರೊಂದಿಗೂ, ತಮ್ಮಂದಿರು ಅಣ್ಣಂದಿರೊಂದಿಗೂ, ದೌಹಿತ್ರರು ಮಾವಂದಿರೊಂದಿಗೂ, ಪೌತ್ರರು ತಾತಂದಿರೊಂದಿಗೂ, ಮಿತ್ರರೂ ಹಿತೈಷಿಗಳೂ ತಮ್ಮತಮ್ಮಲ್ಲಿಯೇ ಹೊಡೆದಾಡಿದರು. ಹೀಗೆ ಎಲ್ಲ ನಿಕಟ ಸಂಬಂಧಿಗಳೂ ಮಿತ್ರರೂ ಒಬ್ಬರನ್ನೊಬ್ಬರು ಕೊಂದರು.

ಕೃಷ್ಣಮಾಯಾ ಆಕಳಿಲೇ ಚಿತ್ತ । ಅವಘೇ ಝಾಲೇ ಪರಮ ಭ್ರಾಂತ । ನ ಕಳೇ ಆಪ್ತ ಅನಾಪ್ತ । ರಣೀ ಉನ್ಮತ್ತ ಮಾತಲೇ।೧೩೬॥ ಜ್ಯಾಚೇ ಚರಣ ವಂದಿಜೇ ಭಾವಾರ್ಥಾ । ಶ್ರದ್ಧಾ ಘೇಈಜೇ ಚರಣತೀರ್ಥಾ । ತ್ಯಾ ನಿಜಪಿತ್ಯಾಚಿಯಾ ಮಾಥಾ । ಪುತ್ರ ಶಸ್ತ್ರಘಾತಾ ಪ್ರವರ್ತಲೇ ।೧೩೭॥ ಬಂಧು ಶಿರಕಲ್ಯಾ ರಣಾಂಗಣೀ । ಬಂಧು ಬಂಧೂಂತೇ ಸೋಡವೀ ನಿರ್ವಾಣೀ । ತೇಚಿ ಬಂಧು ಬಂಧುಂತೇ ರಣೀ । ನಿರ್ವಾಣಬಾಣೀ ಖೋಂಚಿತೀ ।೧೩೮॥ ಜೋ ಲಳೇ ಪುರವೂನಿ ಖೇಳವಿತಾ । ಜೈಸಾ ಬಾಪ ತೈಸಾ ಚುಲತಾ । ತ್ಯಾಸೀ ಪುತಣ್ಯಾ ಪ್ರವರ್ತೇ ಘಾತಾ । ಶಸ್ತ್ರೀ ಮಾಥಾ ಹಾಣೋನೀ ।೧೩೯॥ ಕನ್ಯೇಚಾ ಸುತ ದೌಹಿತ್ರ । ಜ್ಯಾಸೀ ಶ್ರಾದ್ಧೀ ಅಧಿಕಾರ । ತೋ ಆಜ್ಯಾಸೀ ಕರೀ ಮಾರ । ಘಾಯ ನಿಷ್ಠುರ ಹಾಣೋನೀ ।೧೪೦॥ ಮಾಮಾಭಾಚೇ ಪರಸ್ಪರೀ । ಪ್ರವರ್ತಲೇ ಮಹಾಮಾರೀ । ಸುಹೃದ ಸುಹೃದ್ಯಾಂಚ್ಯಾ ಶಿರೀ । ಸತೇಜ ಶಸ್ತ್ರೀ ಹಾಣಿತೀ ।೧೪೧॥ ಮಿತ್ರ ಮಿತ್ರ್ಯಾಂಚ್ಯಾ ಮಿತ್ರತಾ । ವೇಂಚಿತೀ ಅರ್ಥಾ ಜೀವಿತಾ । ತೇ ಮಿತ್ರ ಮಿತ್ರಾಂಚ್ಯಾ ಮಿತ್ರತಾ । ವೇಂಚಿತೀ ಅರ್ಥಾ ಜೀವಿತಾ । ತೇ ಮಿತ್ರ ಮಿತ್ರಾಂಚ್ಯಾ ಜೀವಘಾತಾ । ಸಕ್ರೋಧತಾ ಉಠಿಲೇ ।೧೪೨॥ ಆಯುಷ್ಯ ಸರಲೇ ನಿಃಶೇಖ । ಚಢಲೇ ಕಾಳಸರ್ಪಾಚೇ ವಿಖ । ಅವಘೇ ಹೋಊನಿಯಾ ಮೂರ್ಖ । ಜ್ಞಾತೀಸೀ ಜ್ಞಾತೀ ದೇಖ ವಧಿತೇ ಝಾಲೇ ।೧೪೩॥

ಶರೇಷು ಕ್ಷೀಯಮಾಣೇಷು ಭಜ್ಯಮಾನೇಷು ಧನ್ವಸು । ಶಸ್ತ್ರೇಷು ಕ್ಷೀಯಮಾಣೇಷು ಮುಷ್ಟಿಭಿರ್ಜಹ್ರುರೇರಕಾ: ।೫೦॥

ಅರ್ಥ:- ಕೊನೆಗೆ ಅವರ ಸರ್ವ ಬಾಣಗಳು ಮುಗಿದವು. ಧನುಷ್ಯಗಳು ಮುರಿದವು ಶಸ್ತ್ರಾಸ್ತ್ರಗಳು ನಷ್ಟ-ಭ್ರಷ್ಟರಾದವು. ಆಗ ಅವರು ತಮ್ಮ ಕೈಗಳಿಂದ ಸಮುದ್ರ ದಂಡೆಯಲ್ಲಿ ಬೆಳೆದಿರುವ ಏರಕಾ ನಾಮದ ದಂಟುಗಳನ್ನು ಕೀಳುತ್ತ ಅದರಿಂದ ಹೊಡೆದಾಡಹತ್ತಿದರು. ಬ್ರಹ್ಮಶಾಪದ ಕಾರಣವಾಗಿ ಲೋಹದ ಮುಸಲದ ಚೂರುಗಳಿಂದ ಆ ಏರಕಾದಂಟುಗಳು ನಿರ್ಮಾಣವಾಗಿದ್ದವು.

ಯುದ್ಧ ಮಾಂಡಿಲೇ ಘೋರಾಂದರ । ಸರಲೇ ಭಾತಡೀಂಚೇ ಶರ । ಧನುಷ್ಯದಂಡೇ ಯೇರಾಯೇರ । ಘಾಯೇ ನಿಷ್ಠುರ ಹಾಣಿತೀ ।೧೪೪॥ ಘಾಯ ಹಾಣಿತಾ ಅತಿಬಳೇ । ಧನುಷ್ಯೇ ಮೋಡಲೀ ತತ್ಕಾಳೇ । ಕ್ಷೀಣ ಝಾಲೀ ಶಸ್ತ್ರೇ ಸಕಳೇ । ಹತಿಯೇರ-ಬಳೇ ಖುಂಟಲೀ ।೧೪೫॥

ಶ್ರೀಕೃಷ್ಣನ ಮಾಯೆಯು ಅವರ ಚಿತ್ತವನ್ನು ಭ್ರಮಿತಗೊಳಿಸಿದ್ದರಿಂದ ಅವರು ಅತಿಶಯ ಧುಂದರಾಗಿಬಿಟ್ಟರು. ಅವರಿಗೆ ತಾವು ಯಾರು ಅವರು ಯಾರು ಎಂಬುವ ಎಚ್ಚರವೇ ಉಳಿಯಲಾರದಂತಾಯಿತು ಇಷ್ಟೊಂದು ರಣರಂಗದಲ್ಲಿ ಮದೋನ್ಮತ್ತರಾದರು ।೧೩೬॥ ಯಾರ ಚರಣಗಳಿಗೆ ಪರಮಭಕ್ತಿಯಿಂದ ವಂದನೆ ಮಾಡಬೇಕೋ, ಅವರ ಚರಣಗಳ ತೀರ್ಥವನ್ನು ಶ್ರದ್ಧೆಯಿಂದ ಪ್ರಾಶನ ಮಾಡಬೇಕೋ, ಅಂತಹ ತಮ್ಮ ತಂದೆಯ ತಲೆಯ ಮೇಲೆ ಶಸ್ತ್ರಗಳಿಂದ ಪ್ರಹಾರ ಮಾಡಲು ಪುತ್ರರು ಪ್ರವೃತ್ತರಾದರು ।೧೩೭॥ ತಮ್ಮ ಬಂಧುಗಳು ರಣರಂಗದಲ್ಲಿ ಪ್ರವೇಶಿಸಿ ಸಂಕಟಕ್ಕೆ ಗುರಿಯಾದರೆ ಅವರಿಗೆ ಸಹಕರಿಸಿ ಬದುಕಿಸುತ್ತಿದ್ದರು. ಅದೇ ಬಂಧುಗಳು ಈಗ ಯುದ್ಧದಲ್ಲಿ ಪ್ರಾಣಘಾತಕ ತೀಕ್ಷ್ಣವಾದ ಬಾಣಗಳಿಂದ ಅವರತ್ತ ಮೇಲಿಂದ ಮೇಲೆ ಪ್ರಹಾರ ಮಾಡುತ್ತಿರುವರು ।೧೩೮॥ ಯಾರು ಅತಿಶಯವಾಗಿ ಸಲುಗೆಯಿಂದ ತಮ್ಮನ್ನು ಆಡಿಸಿರುವರೋ, ಆ ಕಕ್ಕನವರು ತಮಗೆ ಕೇವಲ ಪಿತೃಸಮಾನರು. ಆ ಕಕ್ಕಂದಿರ ಕುತ್ತಿಗೆಗೆ ಅಣ್ಣ ತಮ್ಮಂದಿರ ಮಕ್ಕಳು ಹೊಡೆತಹಾಕುತ್ತ ಪ್ರಾಣತೆಗೆದುಕೊಳ್ಳುವ ಪ್ರವೃತ್ತಿಯಲ್ಲಿರುವರು ।೧೩೯॥ ಮಗಳ ಮಗನಾದ ಮೊಮ್ಮಗನಿಗೆ ತನ್ನ ಅಜ್ಜನ ಶ್ರಾದ್ಧ ಮಡುವ ಅಧಿಕಾರವಿರುವುದು. ಆದರೆ ಅದೇ ಮೊಮ್ಮಗನು ನಿರ್ದಯೆಯಿಂದ ಹೊಡೆತ ಹಾಕುತ್ತ ತನ್ನ ಅಜ್ಜನಿಗೆ ನಿಷ್ಠುರನಾಗಿ ಪ್ರಾಣಕಂಟಕನಾದನು ।೧೪೦॥ ಮಾವ ಮತ್ತು ಸೋದರಳಿಯ ಇವರು ಒಬ್ಬರಿಗೊಬ್ಬರು ಸಂಘರ್ಷಕ್ಕೆ ಇಳಿದರು. ಅತ್ಯಂತ ಜೀವದ ಗೆಳೆಯರು ಲಖಲಖಿತ ಝಳಪಿಸುತ್ತಿರುವ ಶಸ್ತ್ರಗಳಿಂದ ಒಬ್ಬರಿಗೊಬ್ಬರು ಜೀವ ತೆಗೆದುಕೊಳ್ಳುಹತ್ತಿದರು ।೧೪೧॥ ಮಿತ್ರರು ತಮ್ಮ ಮಿತ್ರತ್ವದ ಪ್ರೀತಿಗಾಗಿ ತಮ್ಮ ದ್ರವ್ಯ ಜೀವಿತವನ್ನೇ ಖರ್ಚಿಸುತ್ತಿದ್ದರು. ಆದರೆ ಈಗ ಅದೇ ಮಿತ್ರರು ಒಬ್ಬರಿಂದೊಬ್ಬರ ಪ್ರಾಣ ತೆಗೆದುಕೊಳ್ಳಲು ಅತ್ಯಂತ ಕ್ರೋಧಾವೇಶದಿಂದ ನಿಂತಿರುವರು ।೧೪೨॥ ಯಾರ ಆಯುಷ್ಯವು ಸಂಪೂರ್ಣವಾಗಿ ಮುಗಿಯಿತೆಂದರೆ ಆಗ ಕಾಳಿಂಗ ಸರ್ಪದ ವಿಷವು ಏರುವುದು. ಅದರಂತೆ ಈಗ ಸರ್ವ ಜನರೂ ಮೂರ್ಖರಾಗಿ ಸ್ವತ: ತಮ್ಮ ಜಾತಿಯವರನ್ನು ವಧೆ ಮಾಡಹತ್ತಿರುವರು ।೧೪೩॥

ಯಾದವರು ಹೀಗೆ ಘನಘೋರ ಯುದ್ಧ ಆರಂಭಿಸಿದರು. ಅವರ ಬತ್ತಳಿಕೆಗಳಲ್ಲಿನ ಬಾಣಗಳೆಲ್ಲವೂ ಮುಗಿದು ಹೋದವು. ನಂತರ ಅವರು ನಿಷ್ಠುರತೆಯಿಂದ ಒಬ್ಬರಿಗೊಬ್ಬರು ಧನುಷ್ಯ ದಂಡಗಳಿಂದಲೇ ಫಡಾಫಡ್ ಹೊಡೆಯಲಾರಂಭಿಸಿದರು ।೧೪೪॥ ಅತ್ಯಂತ ಜೋರಾದ ಹೊಡೆತಗಳಿಂದ ಸರ್ವ ಧನುಷ್ಯಗಳೂ ಕೂಡ ಮುರಿದು ಹೋದವು. ಅವೆಲ್ಲವೂ ತುಕಡಿ ತುಕಡಿಯಾಗಿ ಬಿದ್ದವು. ಸರ್ವ ಶಸ್ತ್ರಗಳು ಕ್ಷೀಣಗೊಳ್ಳಲು ಖಡ್ಗಗಳ ಯುದ್ಧವು ಮುಗಿದಂತಾಯಿತು ।೧೪೫॥

ಬ್ರಹ್ಮಶಾಪಾಚೀ ಏರಿಕಾ । ತೀರೀ ನಿಘಾಲೀ ಹೋತೀ ದೇಖಾ । ತೇ ಮುಷ್ಟೀ ಘೇಊನಿ ಕ್ರೋಧತವಕಾ । ಏಕಮೇಕಾ ಹಾಣಿತೀ ।।೧೪೬।।

ತಾ ವಜ್ರಕಲ್ಪಾ ಹ್ಯಭವನ್ ಪರಿಘಾ ಮುಷ್ಟಿನಾ ಭೃತಾಃ ।
ಜಘ್ನುರ್ದ್ವಿಷಸ್ತೈಃ ಕೃಷ್ಣೇನ ವಾರ್ಯಮಾಣಾಸ್ತು ತಂ ಚ ತೇ।।೨೧।।

ಅರ್ಥ:- ಹೇ ರಾಜನೇ, ಕೈಯಲ್ಲಿ ಧರಿಸಿರುವ ಆ ತೃಣಸೃಷ್ಟಿಗಳು ವಜ್ರಪ್ರಾಯವಾಗಿ ಕಬ್ಬಿಣದ ಸಲಾಖೆಯಂತಾದವು. ಇವುಗಳಿಂದ ಅವರು ತಮ್ಮ ತಮ್ಮ ಶತ್ರುಗಳನ್ನು ನಾಶಮಾಡಲಾರಂಭಿಸಿದರು.

ತೇ ಏರಿಕಾ ಘೇತಾಂಚ ಹಾತೀ । ಝಾಲೀ ವಜ್ರಪ್ರಾಯ ಧಗಧಗಿತೀ । ಅತಿತೀಕ್ಷ್ಣ ಪರಿಘಾಕೃತೀ । ತೇಣೇ ಹಾಣಿತೀ ಪರಸ್ಪರೇ ।।೧೪೭।। ನಾನಾ ಶಸ್ತ್ರೇ ಲಾಗತಾ ಪಾಹೀ । ಯಾದವ ನ ಡಂಡಳತೀ ಕಂಹೀ । ತೇಹೀ ಏರಿಕೇಚ್ಯಾ ಘಾಯೀ । ಪಡತೀ ಠಾಯೀ ಅಚೇತನ ।।೧೪೮।। ಏರಿಕೇಚ್ಯಾ ನಿಜಘಾಯೀ । ಯಾದವಾಂಸೀ ಉರೀ ನಾಹೀ । ದುಧಡ ತೋಡೂನಿಯಾ ಪಾಹೀ । ಪಡತೀ ಠಾಯೀ ಪರಸ್ಪರೇ ।।೧೪೯।। ರಣೀ ಪಾಡೂನಿಯಾ ಇತರ । ಯಾದವ ಉರಲೇ ಮಹಾಶೂರ । ಜೇ ಕಾ ನೇಟಕೇ ಝುಂಜಾರ । ನಿಧಡೇ ವೀರ ನಿಜಯೋದ್ಧೇ ।।೧೫೦।। ಯಾದವ ಉರಲೇ ಭದ್ರಜಾತೀ । ಹೇ ಹೇ ಆಣಿಕಾಂಸೀ ನಾಟೋ ಪತೀ । ತ್ಯಾ ನಿರ್ದಳಾವಯಾ ನಿಶ್ಚಿತೀ । ನಿವಾರಣಾರ್ಥೀ ಹರಿ ಧಾಂವೇ ।।೧೫೧।। ತೋ ಮ್ಹಣೇ ಬ್ರಹ್ಮಶಾಪಾಚೀ ಏರಿಕಾ । ಹೇ ಸರ್ವಥಾ ಹಾತೀ ಧರೂ ನಕಾ । ಸಾಂಡಾ ಯುದ್ಧಾಚಾ ಆವಂಕಾ । ಶಿಕವಿಲೇ ಐಕಾ ತುಮ್ಹೀ ಮಾಝೇ ।।೧೫೨।। ಧರ್ಮತಾ ನಿವಾರೀ ಶ್ರೀಕೃಷ್ಣ । ತ್ಯಾಸೀಹೀ ಮಾರೂ ಧಾಂವಲೇ ಜಾಣ । ಹೇ ಕೃಷ್ಣಮಾಯೇಚೇ ವಿಂದಾನ । ನ ಚುಕತ ಮರಣ ಪೈ ಆಲೇ ।।೧೫೩।। ಏಕ ಮ್ಹಣತೀ ಶ್ರೀಕೃಷ್ಣಾಸೀ । ಆಧೀ ಝೋಡೋನಿ ಪಾಡಾ ಯಾಸೀ । ಠಕೂ ಆಲಾ ಆಮ್ಹಾಂಸೀ । ಮ್ಹಣೋನಿ ಏರಿಕೇಸೀ ಧಾಂವಿನ್ನಲೇ ।।೧೫೪।। ಏಕ ಮ್ಹಣತೀ ಧರಾ ಕೇಶೀ । ಏಕ ಮ್ಹಣತೀ ಭೀಡ ಕಾಯಸೀ । ಏಕ ಮ್ಹಣೇ ಮೀ ಶ್ರೀಕೃಷ್ಣಾಸೀ । ಏಕಾ ಘಾಯೇಸೀ ಲೋಳವೀನ ।।೧೫೫।।

ಪ್ರತ್ಯನೀಕಂ ಮನ್ಯಮಾನಾ ಬಲಭದ್ರಂ ಚ ಮೋಹಿತಾಃ ।
ಹಂತು ಕೃತಧಿಯೋ ರಾಜನ್ನಾಪನ್ನಾ ಆತತಾಯಿನಃ ।।೨೨।।

ಅರ್ಥ:- ಶ್ರೀಕೃಷ್ಣನು ಅದಕ್ಕೆ ತಡೆಯುವ ಪ್ರಯತ್ನ ಮಾಡಿದನು. ಆದರೆ ಯಾದವರು ಆತನಿಗೂ, ಬಲರಾಮನಿಗೂ ಶತ್ರುಗಳೆಂದು ತಿಳಿದರು. ಅವರ ಬುದ್ಧಿಯು ಮೂಢವಾಗಿತ್ತು. ಆದ್ದರಿಂದ ಮರಣದತ್ತ ಅವರ ಬುದ್ಧಿ ಧಾವಿಸಹತ್ತಿತು.

ಬ್ರಹ್ಮಶಾಪದಿಂದ ಹುಟ್ಟಿಕೊಂಡ ದಂಟುಗಳು ಸಮುದ್ರತೀರದಲ್ಲಿದ್ದವು. ಅವುಗಳನ್ನು ಕಿತ್ತಿಕೊಂಡು ಮುಷ್ಟಿಯಲ್ಲಿ ಅನೇಕ ದಂಟುಗಳನ್ನು ತುಂಬಿಕೊಂಡು ಒಬ್ಬರಿಗೊಬ್ಬರು ಹೊಡೆಯಲು ಆರಂಭಿಸಿದರು ।।೧೪೬।।

ಆ ದಂಟುಗಳನ್ನು ಯಾದವರು ಕೈಯಲ್ಲಿ ತೆಗೆದುಕೊಳ್ಳುತ್ತಲೇ ಅವು ವಜ್ರದಂತೆ ಧಗಧಗೀತವಾದವು. ಅವು ಅತಿಶಯ ಪ್ರಖರಗೊಂಡು ಪರಿಧಿಯ ಆಕಾರ ಪ್ರಾಪ್ತಗೊಂಡವು. ಇದರಿಂದ ಅವರು ಪರಸ್ಪರ ಹೊಡೆದಾಡಹತ್ತಿದರು ।।೧೪೭।। ಈ ಹಿಂದೆ ಅನೇಕ ಶಸ್ತ್ರಗಳ ಪ್ರಹಾರಗಳಿಂದ ಯಾದವವೀರರು ಜುಮ್ ಎನ್ನುತ್ತಿದ್ದಿಲ್ಲ. ಅವರು ಈಗ ಈ ಲೋಹದ ಕೋಲಿನಂತಿರುವ ದಂಟುಗಳ ಹೊಡೆತ ಬೀಳುತ್ತಲೇ ಇದ್ದ ಇದ್ದಲ್ಲಿಯೇ ಸತ್ತು ಬೀಳಹತ್ತಿದರು ।।೧೪೮।। ಈ ದಂಟುಗಳ ಹೊಡೆತದ ಮುಂದೆ ಯಾದವ ವೀರರ ಶೌರ್ಯ ಏನೂ ನಡೆಯದಂತಾಯಿತು. ಅವರು ಇದರಿಂದಲೇ ಒಬ್ಬರಿಗೊಬ್ಬರು ಶಿರಚ್ಛೇದನ ಮಾಡುತ್ತ ಸತ್ತು ಬೀಳುತ್ತಿದ್ದರು ।।೧೪೯।। ರಣರಂಗದಲ್ಲಿ ಉಳಿದವರೆಲ್ಲರನ್ನೂ ಕೊಂದು ಮಹಾಶೂರ ಯಾದವರು ಮಾತ್ರ ಬದುಕಿ ಉಳಿದಿದ್ದರು. ಅವರು ಮಹಾಯೋದ್ಧರಾಗಿ ಮಹಾ ಬಲಾಢ್ಯರಾಗಿದ್ದರು ।।೧೫೦।। ಈ ಉಳಿದ ಸರ್ವ ಯಾದವವೀರರಿಗೆ ಆನೆಗೆ ಬರುವಂತೆ ಮದವೇರಿತ್ತು. ಅವರು ಯಾರಿಗೂ ಮಣೆಯಲಾರರಾದರು. ಆದ್ದರಿಂದ ಅವರನ್ನು ನಿಶ್ಚಯವಾಗಿ ನಾಶ ಮಾಡುವುದಕ್ಕಾಗಿಯೇ ಶ್ರೀಕೃಷ್ಣನು ಧಾವಿಸಿ ಅಲ್ಲಿಗೆ ಬಂದನು ।।೧೫೧।। ಆ ಯಾದವ ವೀರರಿಗೆ ಹೀಗೆ ಹೇಳಿದನು. ಆ ಯಾವ ಕಬ್ಬಿಣ ಸಲಾಖೆಯಂತಹ ದಂಟುಗಳನ್ನು ಕೈಯಿಂದ ಮುಟ್ಟಬೇಡಿರಿ. ಅವು ಬ್ರಹ್ಮಶಾಪದಿಂದ ಉತ್ಪನ್ನವಾಗಿರುವುವು. ಈಗ ಯುದ್ಧ ಮಾಡುವುದನ್ನು ನಿಲ್ಲಿಸಿರಿ. ನಾನು ಹೇಳುವುದನ್ನು ಸರಿಯಾಗಿ ಕೇಳಿರಿ ।।೧೫೨।। ಈ ಪ್ರಕಾರವಾಗಿ ಧರ್ಮನೀತಿ ಹೇಳುತ್ತ ಅವರ ಮನವೊಲಿಸಲು ಪ್ರಯತ್ನಿಸಿದರೆ ಆಗ ಉಳಿದ ಸರ್ವ ಯಾದವರು ಶ್ರೀಕೃಷ್ಣನಿಗೆ ಕೊಲ್ಲಲು ಆತನ ಮೈಮೇಲೆ ಧಾವಿಸಿ ಬಂದರು. ಇದೆಲ್ಲವೂ ಶ್ರೀಕೃಷ್ಣ ಮಾಯೆಯ ಪ್ರಭಾವವಾಗಿತ್ತು. ಯಾದವರಿಗೆ ತಪ್ಪದೇ ಮರಣ ಒದಗಿತು ।।೧೫೩।। ಕೆಲವರು ಹೀಗೆ ಹೇಳಿದರು; ಈ ಕೃಷ್ಣನಿಗೆ ಮೊದಲು ಹೊಡೆದು ಕೆಡವಿರಿ. ಈತನು ನಮಗೆ ಮೋಸಗೊಳಿಸಲು ಬಂದಿರುವನು. ಹೀಗೆನ್ನುತ್ತ ಅವರು ಆ ದಂಟುಗಳತ್ತ ಬಂದರು ।।೧೫೪।। ಕೆಲವರು ಹೀಗೆ ಹೇಳಹತ್ತಿದರು. ಅರೇ ಏನು ನೋಡುವಿರಿ? ಆತನ ಕೂದಲು ಹಿಡಿದು ಎಳೆಯಿರಿ. ಈತನ ಯಾವ ಭಿಡೆ ಹಿಡಿಯಬೇಡಿರಿ. ಈತನಿಗೆ ಒಂದೇ ಹೊಡೆತಕ್ಕೆ ಕೊಲ್ಲುವೆವು ಎಂದು ಕೆಲವರು ನುಡಿದರು ।।೧೫೫।।

ಪೈಲ ಪೈಲ ತೋ ಬಳಿಭದ್ರು । ಹಾಚಿ ಆಮುಚಾ ಮುಖ್ಯ ಶತ್ರು । ಯಾಸೀ ಚಲಾ ಆಧೀ ಮಾರೂ । ಯಾದವಭಾರೂ ಲೋಟಲಾ ।।೧೫೬।। ಮದಮೋಹೇ ಅತಿದುರ್ಮತೀ । ವಜ್ರಪ್ರಾಯ ಏರಿಕಾ ಹಾತೀ । ಘೇಊನಿ ಬಳಿಭದ್ರಾವರೀ ಯೇತೀ । ತೇಣೇ ತೋಹೀ ನಿಶ್ಚಿತೀ ಕ್ಷೋಭಲಾ ।।೧೫೭।।

ಅಥ ತಾವಪಿ ಸಂಕ್ರುದ್ಧಾವುದ್ಯಮ್ಯ ಕುರುನಂದನ್ । ಏರಕಾಮುಷ್ಟಿಪರಿಘೌ ಚರಂತೌ ಜಘ್ನತುರ್ಯುಧಿ ।।೨೩।।

ಅರ್ಥ:- ಹೇ ಕುರನಂದನನೇ, ಈಗ ಶ್ರೀಕೃಷ್ಣ ಮತ್ತು ಬಲರಾಮ ಇವರೂ ಕೂಡ ಕ್ರೋಧಾವೇಶರಾದರು. ಅತ್ತಂದಿತ್ತ ಓಡಾಡುತ್ತ ಮುಷ್ಟಿ ತುಂಬ ಏರಕಾ ದಂಟು ತೆಗೆದುಕೊಂಡು ತಮ್ಮ ಬಾಂಧವರಿಗೆ ಕೊಲ್ಲಲಾರಂಭಿಸಿದರು.

ಶುಕ ಮ್ಹಣೇ ಕುರುನಂದನಾ । ಯಾದವ ಟೇಂಕಲೇ ಆತ್ಮಮರಣಾ । ತೇ ಮಾರಾವಯಾ ರಾಮಕೃಷ್ಣಾ । ಆತತಾಯೀ ಜಾಣಾ ಲೋಟಲೇ ।।೧೫೮।। ಯಾದವ ಉಠಲೇ ಹನನಾಸೀ । ದೇಖೋನಿ ರಾಮ ಹೃಷೀಕೇಶೀ । ಅತಿಕ್ರೋಧ ಚಢಲಾ ತ್ಯಾಂಸೀ । ತೇಹೀ ಯುದ್ಧಾಸೀ ಮಿಸಳಲೇ ।।೧೫೯।। ಏರಕಾ ಜೇ ಕಾ ಪರಿಘಾಕೃತೀ । ವಜ್ರಪ್ರಾಯ ಧಗಧಗಿತೀ । ದೋಘೀ ಜಣೇ ಘೇಊನಿ ಹಾತೀ । ಯಾದವಾ ಖ್ಯಾತೀ ಲಾವಿಲೀ ।।೧೬೦।। ರಾಮಕೃಷ್ಣಾಂಚ್ಯಾ ನಿಜಘಾತೀ । ಯಾದವಾಂಚೀ ಜಾತೀ ವ್ಯಕ್ತೀ । ಅವಘೇಚಿ ರಣಾ ಯೇತೀ । ಕೃಷ್ಣ ಕಾಳಶಕ್ತೀ ಕ್ಷೋಭಲಾ ।।೧೬೧।। ನಿಜಕುಳಾಚೇ ನಿಧನ । ದೇಖೋನಿಯಾ ಶ್ರೀಕೃಷ್ಣ । ಕರ್ತವ್ಯಾರ್ಥ ಝಾಲಾ ಪೂರ್ಣ । ಐಸೇ ಸಂಪೂರ್ಣ ಮಾನಿಲೇ ।।೧೬೨।।

ಬ್ರಹ್ಮಶಾಪೋಪಸೃಷ್ಟಾನಾಂ ಕೃಷ್ಣಮಾಯಾವೃತಾತ್ಮನಾಮ್ ।
ಸ್ಪರ್ಧಾಕ್ರೋಧಃ ಕ್ಷಯಂ ನಿನ್ಯೇ ವೈಣವೋಽಗ್ನಿರ್ಯಥಾ ವನಮ್ ।।೨೪।।

ಅರ್ಥ:- ಬ್ರಾಹ್ಮಣರ ಶಾಪದಿಂದ ದಗ್ಧರಾಗಿರುವ ಹಾಗೂ ಕೃಷ್ಣನ ಮಾಯೆಯಿಂದ ವಿವೇಕ ಶೂನ್ಯರಾಗಿರುವ ಯಾದವರ ಕ್ರೋಧವು ಗಳಗಳ ಗುಂಪಿನಲ್ಲಿ ಉತ್ಪನ್ನಗೊಂಡ ಅಗ್ನಿಯು ಸರ್ವ ವನವನ್ನು ಸುಟ್ಟು ಹಾಕುವಂತೆ ಯಾದವ ಕುಲದ ನಾಶ ಮಾಡಲ್ಪಟ್ಟಿತು.

ಬ್ರಹ್ಮಶಾಪೇ ಛಳಿಲೇ ವಿಧೀ । ಕೃಷ್ಣಮಾಯಾ ಠಕಲೀ ಬುದ್ಧೀ । ಮದ್ಯಪಾನ ಉನ್ಮಾಮದೀ । ಕ್ರೋಧೇ ತ್ರಿಶುದ್ಧೀ ಕ್ಷಯಾ ನೇಲೇ।।೧೬೩।। ವೇಳುವಾಚ್ಯಾ ವೇಳುಜಾಳೀ । ಜೇವೀ ಕಾಂಚಣೀ ಪಡೇ ಇಂಗಳೀ । ತೇಣೇ ವನಾಚೀ ಹೋಯ ಹೋಳೀ । ತೇವೀ ಯದುಕುಳೀ ಕುಲಕ್ಷಯೋ ।।೧೬೪।।

ಏವಂ ನಷ್ಟೇಷು ಸರ್ವೇಷು ಕುಲೇಷುಖು ಸ್ವೇಷು ಕೇಶವಃ । ಅವತಾರಿತೋ ಭುವೋ ಭಾರ ಇತಿ ಮೇನೇಽವಶೇಷಿತಃ ।।೨೫।।

ಅರ್ಥ:- ತನ್ನ ವಂಶಸ್ಥರೆಲ್ಲರೂ ಹೀಗೆ ನಾಶವಾದುದನ್ನು ಕಂಡು ಶ್ರೀಕೃಷ್ಣನು ಸಂತೋಷಪಟ್ಟನು. ಈ ಭೂಮಿಯ ಭಾರವು ಕೊನೆಗೂ ಕಳೆಯಿತೆಂದುಕೊಂಡನು.

ಕೆಲವರು ಹೀಗೆ ಹೇಳಿದರು; ಅಲ್ಲಿ ನೋಡಿರಿ, ಬಲರಾಮನು ಆಚೆ ನಿಂತುಕೊಂಡಿರುವನು. ಆತನೇ ನಮಗೆ ಮುಖ್ಯ ವೈರಿಯಾಗಿರುವನು. ಆತನನ್ನೇ ಮೊದಲು ಕೊಲ್ಲೋಣ. ಹೀಗೆ ಒದರುತ್ತ ಸರ್ವ ಯಾದವರು ಬಲರಾಮನ ಮೈಮೇಲೆ ಧಾವಿಸಿ ಹೊರಟರು ।।೧೫೬।। ಮಹಾಮೋಹದಿಂದ ಮೂಢರಾಗಿರುವ ಯಾದವರ ಸಮೂಹವು ವಜ್ರದಂತಿರುವ ಏರಿಕಾ ದಂಟುಗಳನ್ನು ಕೈಯಲ್ಲಿ ಹಿಡಿದುಕೊಂಡು ಬಲರಾಮನತ್ತ ಧಾವಿಸಿದರು. ಅದನ್ನು ಕಂಡು ಬಲರಾಮನು ಅತಿಶಯವಾಗಿ ಸಂತಪ್ತನಾದನು ।।೧೫೭।।

ಶ್ರೀಶುಕಾಚಾರ್ಯರು ಹೇಳಿದರು ; ಹೇ ಕುರುನಂದನ ಪರೀಕ್ಷಿತಿಯೇ, ಯಾದವರ ಮರಣವು ಸಮೀಪವಾಗಿರುವುದರಿಂದ ಅವರು ಅತ್ಯಂತ ಆರ್ಭಟಿಸುತ್ತ ಬಲರಾಮ ಶ್ರೀಕೃಷ್ಣ ಇವರನ್ನು ಕೊಲ್ಲಲು ಧಾವಿಸಿದರು ।।೧೫೮।। ಯಾದವರು ತಮ್ಮನ್ನೇ ವಧಿಸಲು ಸಿದ್ಧರಾದದ್ದು ಪ್ರತ್ಯಕ್ಷ ಕಂಡ ಬಲರಾಮ ಶ್ರೀಕೃಷ್ಣರಿಗೆ ಅತಿಶಯ ಕೋಪ ಉಂಟಾಯಿತು. ಅವರೂ ಕೂಡ ಯುದ್ಧ ಮಾಡಲಾರಂಭಿಸಿದರು ।।೧೫೯।। ಇವರೂ ಸಹ ಚಕ್ರಾಕಾರ ಧಗಧಗಿಸುತ್ತಿರುವ ಏರಕಾ ಕೋಲುಗಳನ್ನು ಕೈಯಲ್ಲಿ ಹಿಡಿದುಕೊಂಡು ತಮ್ಮ ಶೌರ್ಯವನ್ನು ಪ್ರದರ್ಶಿಸಲು ಆರಂಭಿಸಿದರು ।।೧೬೦।। ಬಲರಾಮ, ಶ್ರೀಕೃಷ್ಣರ ಪ್ರಭಾವ ಕಂಡು ಯಾದವರು ತಮ್ಮ ಸರ್ವ ಕುಲದವರೊಂದಿಗೆ ರಣರಂಗಕ್ಕೆ ಬಂದರು. ಅವರಿಬ್ಬರ ಮೇಲೆ ಮುಗಿಬಿದ್ದರು. ಆ ಸಮಯದಲ್ಲಿ ಶ್ರೀಕೃಷ್ಣನು ತನ್ನ ಕಾಲಶಕ್ತಿಯಿಂದ ಕ್ಷುಬ್ಧನಾದನು ।।೧೬೧।। ಆಗ ಆತನು ಉಳಿದ ಸರ್ವ ಯಾದವ ಕುಲದ ಸಂಹಾರ ಮಾಡಿದನು. ಇದರಿಂದ ಶ್ರೀಕೃಷ್ಣನಿಗೆ ತಾನು ಕೃತಾರ್ಥನಾದೆನು ಎಂದು ಅನಿಸಿತು ।।೧೬೨।।

ಬ್ರಹ್ಮಶಾಪದಿಂದ ಯಾದವರು ತಮ್ಮ ಕರ್ತವ್ಯದಿಂದ ದೂರ ಸರಿದಿದ್ದರು. ಶ್ರೀಕೃಷ್ಣನ ಮಾಯೆಯಿಂದ ಅವರ ಬುದ್ಧಿಯು ನಷ್ಟವಾಗಿತ್ತು. ಹೀಗಾಗಿರುವ ಯಾದವರು ಮದ್ಯಪಾನದ ನಿಶೆಯಿಂದ ಮತ್ತು ಕ್ರೋಧಕ್ಕೆ ಬಲಿಯಾಗಿ ತಮ್ಮ ಕುಲದ ನಿಃಶೇಷ ನಾಶ ಮಾಡಿಕೊಂಡರು ।।೧೬೩।। ಗಳಗಳ ಗುಂಪಿನಲ್ಲಿ ಅವು ಒಂದಕ್ಕೊಂದು ತಿಕ್ಕಿದಾಗ ಬೆಂಕಿಯ ಕಿಡಿಯು ಹುಟ್ಟಿಕೊಳ್ಳುವುದು. ಇದರಿಂದ ಅದು ಸಂಪೂರ್ಣ ವನವನ್ನೇ ಸುಟ್ಟು ಭಸ್ಮಮಾಡಿಬಿಡುವುದು. ಅದರಂತೆ ಯಾದವರ ಕುಲದ ಸಂಹಾರವಾಯಿತು ।।೧೬೪।।

ಸ್ವಕುಳ ನಾಶೂನಿ ಶ್ರೀಧರ । ಅವಶೇಷ ಧರಾಭಾರ । ಉತರಲಾ ಮಾನೀ ಚಕ್ರಧರ । ತೇಣೇ ಸುಖೇ ಘೋರ ಸುಖಾವೇ।।೧೬೫।। ಜೇವೀ ಕಾ ಆಲೇ ಪೇರೀ ಮಾಳೀ । ನಿಜಜೀವನೇ ಪ್ರತಿಪಾಳೀ । ಶೇಖೀ ತೋಚಿ ಖಣೇ ಸಮೂಳೀ । ತೇವೀ ಯದುಕುಳೀ ಶ್ರೀಕೃಷ್ಣ ।।೧೬೬।। ಯಾದವ ನಿಜಬಳೇ ಪ್ರತಿಪಾಳೀ । ತ್ಯಾಂತೇ ಸ್ವಯೇ ನಿಜಾಂಗೇ ನಿರ್ದಳೀ । ಹೇ ದಾಖವಿತಾ ವನಮಾಳೀ । ಮಮತಾಮೇಳೀ ಅಲಿಪ್ತ ।।೧೬೭।। ಕೃಷ್ಣ ಪಾಳೀ ಯಾದವಾ ಸಮಸ್ತಾ । ತ್ಯಾಂಚೀ ದಾವಲೀ ಅತಿಮಮತಾ । ಶೇಖೀ ಕರೂನಿ ಕುಳಾಚೇ ಘಾತಾ । ನಿರಭಿಮಾನತಾ ಹರಿ ದಾವೀ ।।೧೬೮।। ಸ್ತ್ರೀಪುತ್ರೇಸೀ ನಿಜಜೀವಿತಾ । ಸಕಳ ಕುಳಾಚ್ಯಾ ಹೋತಾ ಘಾತಾ । ಜ್ಞಾತ್ಯಾಸೀ ನುಪಜೇ ಮಮತಾ । ತೇ ''ನಿತ್ಯಮುಕ್ತತಾ'' ಹರಿ ದಾವೀ ।।೧೬೯।। ಜ್ಞಾತ್ಯಾಸೀ ನಾಹೀ ಅಹಂಮಮತಾ । ತೇಚಿ ದಾವಾವಯಾ ತತ್ತ್ವತಾ ಕುಳೇಸೀ ಹೋತಾ ಪುತ್ರಘಾತಾ । ಸ್ವಪ್ನೀಹೀ ಜ್ಞಾತಾ ಗ್ಲಾನಿ ನೇಣೇ ।।೧೭೦।। ಬ್ರಾಹ್ಮಣಾಚಾ ಶಾಪ ದಾರುಣ । ಅನ್ಯಥಾ ಹೋ ನೇದೀ ಶ್ರೀಕೃಷ್ಣ । ನಿಜಕುಳ ನಿರ್ದಳೀ ಆಪಣ । ವಿಪ್ರವಚನ ಸತ್ಯತ್ವಾ ।।೧೭೧।। ಕರೂನಿ ಕುಳ ಕ್ಷಯಾಚೇ ಕಾಮ । ಸುಖ ಮಾನೀ ಪುರುಷೋತ್ತಮ । ತೇ ದೇಖೋನಿ ಮ್ಹಣೇ ಬಳರಾಮ । ಅವತಾರಕರ್ಮ ಸಂಪಲೇ ।।೧೭೨।।

ರಾಮಃ ಸಮುದ್ರವೇಲಾಯಾಂ ಯೋಗಮಾಸ್ಥಾಯ ಪೌರುಷಮ್ ।
ತತ್ಯಾಜ ಲೋಕಂ ಮಾನುಷ್ಯಂ ಸಂಯೋಜ್ಯಾತ್ಮಾನಮಾತ್ಮನಿ ।।೨೬।।

ಅರ್ಥ:- ಹೇ ಪರೀಕ್ಷಿತಿಯೇ, ಬಲರಾಮನು ಸಮುದ್ರ ತೀರದಲ್ಲಿ ಕುಳಿತು ಏಕಾಗ್ರಚಿತ್ತದಿಂದ ಪರಮೇಶ್ವರನ ಚಿಂತನೆ ಮಾಡಿ ಆತ್ಮತತ್ವವನ್ನು ಪರಮ ತತ್ವದಲ್ಲಿ ಏಕರೂಪ ಮಾಡಿ ಮನುಷ್ಯ ಶರೀರವನ್ನು ತ್ಯಾಗ ಮಾಡಿದನು.

ಮಗ ಬಳಿಭದ್ರೇ ಆಪಣ । ಸಮುದ್ರತೀರೀ ಯೋಗಾಸನ । ದೃಢ ಘಾಲೋನಿಯಾ ಜಾಣ । ನಿರ್ವಾಣಧ್ಯಾನ ಮಾಂಡಿಲೇ ।।೧೭೩।। ಆಕರ್ಷೂನಿ ದೇಹಿಂಚಾ ಪ್ರಾಣ । ನಿಃಶೇಷ ಸಾಂಡಿಲಾ ದೇಹಾಭಿಮಾನ । ಮಗ ಪರಮಪುರುಷಧ್ಯಾನ । ಕರಿತಾಂಚಿ ಆಪಣ ತದ್ರೂಪ ಝಾಲಾ ।।೧೭೪।। ಜೇವೀ ಘಟಾಮಾಜೀಲ ಗಗನ । ಸಹಜೇ ಮಹದಾಕಾಶ ಪೂರ್ಣ । ತೇವೀ ಸಾಂಡಿತಾ ದೇಹಾಭಿಮಾನ । ಝಾಲಾ ಸಂಕರ್ಷಣ ಬಳರಾಮ।।೧೭೫।। ಹೋತೇ ಮನುಷ್ಯನಾಟ್ಯ ಅವಲಂಬಿಲೇ । ತೇ ದೇಹ ನಿಃಶೇಷ ತ್ಯಾಗಿಲೇ । ಜೇ ಕಾ ಪೂರ್ವರೂಪ ಆಪುಲೇ । ತೇ ಹೋಊನಿ ಠೇಲೇ ಬಳಿರಾಮ ।।೧೭೬।। ಸಮುದ್ರತೀರೀ ಯೋಗಾಸನ । ತೇ ದೇಹ ಠೇವಿಲೇ ಅಚೇತನ । ಹೇ ರಾಮ ನಿರ್ಯಾಣ ದೇಖೋನ । ಸ್ವಯೇ ಶ್ರೀಕೃಷ್ಣ ಸರಸಾವಲಾ ।।೧೭೭।।

ಈ ಪ್ರಕಾರವಾಗಿ ಚಕ್ರಧರ ಶ್ರೀಕೃಷ್ಣನು ತನ್ನ ಕುಲದ ನಾಶ ಮಾಡಿದನು. ಆಗ ಆತನಿಗೆ ಭೂಮಿಯ ಮೇಲೆ ಉಳಿದಿರುವ ಭಾರವು ಇಳಿಯಿತೆಂಬ ಭಾವನೆ ಉಂಟಾಗಿ ಆತನಿಗೆ ಅತಿಶಯ ಸಮಾಧಾನವಾಯಿತು ।೧೬೫।। ಒಬ್ಬ ತೋಟಿಗನು ತನ್ನ ತೋಟದಲ್ಲಿ ಮಡಿಗಳನ್ನು ತಯಾರಿಸಿ ಕಾಯಿಪಲ್ಲೆಗಳ ಬಿತ್ತಿಗೆ ಮಾಡುವನು. ಅವುಗಳಿಗಾಗಿ ಕಷ್ಟಪಟ್ಟು ಜೋಪಾನ ಮಾಡುವನು. ಕಾರ್ಯ ಮುಗಿಯಲು ಕೊನೆಗೆ ಅವುಗಳೆಲ್ಲವನ್ನೂ ಕೊಯ್ದು ಬಿಸಾಡುವನು. ಅದರಂತೆಯೇ ಶ್ರೀಕೃಷ್ಣನು ತನ್ನ ಯಾದವ ಕುಲದ ಸ್ಥಿತಿಗತಿ ಮಾಡಿದನು ।೧೬೬।। ಶ್ರೀಕೃಷ್ಣನು ತನ್ನ ಸಾಮರ್ಥ್ಯದಿಂದ ಯಾದವರನ್ನು ಪ್ರತಿಪಾಲಿಸಿದನು. ಕೊನೆಗೆ ಆತನೇ ಯಾದವ ಕುಲದ ನಾಶ ಮಾಡಿಬಿಟ್ಟನು. ಮಮಕಾರದಿಂದ ತಾನು ಎಷ್ಟೊಂದು ಅಲಿಪ್ತನಾಗಿರುವೆ ಎಂಬುವುದನ್ನು ಶ್ರೀಕೃಷ್ಣನು ಜಗತ್ತಿಗೆ ನಡೆದು ತೋರಿಸಿದನು ।೧೬೭।। ಶ್ರೀಕೃಷ್ಣನು ಸರ್ವ ಯಾದವರನ್ನು ಸಾಂಭಾಳಿಸಿದನು. ಅವರ ವಿಷಯಕ್ಕೆ ಇಂದಿನವರೆಗೂ ಆತನು ಮಮತೆ ತೋರಿಸಿದ್ದನು. ಕೊನೆಗೆ ಆ ಕುಲದ ನಾಶವನ್ನೇ ಮಾಡಿ ನಿರಭಿಮಾನತೆಯನ್ನು ಪ್ರಕಟಗೊಳಿಸಿದನು ।೧೬೮।। ತನ್ನ ಸ್ತ್ರೀ-ಪುತ್ರರ ಪ್ರಾಣಗಳು ಹೊರಟು ಹೋದವು. ಸರ್ವ ಕುಲದ ಸಂಹಾರವಾಯಿತು. ಆದರೂ ಕೂಡ ಮೋಹದಲ್ಲಿ ಬೀಳದೇ ಇರುವುದು ಇದು ನಿತ್ಯಮುಕ್ತತೆಯ ಲಕ್ಷಣವನ್ನು ಶ್ರೀಕೃಷ್ಣನು ಆಚರಿಸಿ ತೋರಿಸಿದನು ।೧೬೯।। ಜ್ಞಾನೀ ಪುರುಷನಿಗೆ ಅಹಂತೆ ಮತ್ತು ಮಮತೆ ಇರುವುದಿಲ್ಲ. ಸರ್ವ ಕುಲದೊಂದಿಗೆ ತನ್ನ ಪುತ್ರರ ನಾಶವಾದರೂ ಕೂಡ ಜ್ಞಾನಿಯು ಸ್ವಪ್ನದಲ್ಲಿಯೂ ಸಹ ದುಃಖಿಯಾಗಲಾರನು. ಇದನ್ನು ಶ್ರೀಕೃಷ್ಣನು ನಡೆದು ತೋರಿಸಿದನು ।೧೭೦।। ಬ್ರಾಹ್ಮಣರ ಭಯಂಕರ ಶಾಪವನ್ನು ಶ್ರೀಕೃಷ್ಣನು ಸುಳ್ಳು ಮಾಡಲಿಲ್ಲ. ಬ್ರಾಹ್ಮಣರ ವಚನ ಸತ್ಯ ಮಾಡಿ ತೋರಿಸುವುದಕ್ಕಾಗಿ ಆತನು ತನ್ನ ಸರ್ವ ಕುಲವನ್ನು ನಷ್ಟಗೊಳಿಸಿದನು ।೧೭೧।। ಈ ಪ್ರಕಾರವಾಗಿ ಕುಲಕ್ಷಯದ ಕಾರ್ಯವು ಕೊನೆಗೊಂಡಿದ್ದಕ್ಕೆ ಶ್ರೀಕೃಷ್ಣನಿಗೆ ಸಂತೋಷವಾಯಿತು. ಇದನ್ನು ಕಂಡು ಬಲರಾಮನೂ ಸಹ ತನ್ನ ಅವತಾರ ಕಾರ್ಯವು ಇಂದಿಗೆ ಮುಗಿಯಿತೆಂದು ಮನದಲ್ಲಿ ವಿಚಾರಿಸಿಕೊಂಡನು ।೧೭೨।।

ತದನಂತರ ಬಲರಾಮನು ಸಮುದ್ರ ದಂಡೆಯಲ್ಲಿ ದೃಢ ಯೋಗಾಸನ ಹಾಕಿದನು. ನಿರ್ವಾಣಧ್ಯಾನ ಆರಂಭಿಸಿದನು ।೧೭೩।। ದೇಹದಲ್ಲಿನ ಪ್ರಾಣವನ್ನು ಆಕರ್ಷಣೆ ಮಾಡಿ ದೇಹಾಭಿಮಾನವನ್ನು ಬಿಟ್ಟುಕೊಟ್ಟು ಪರಮ ಪುರುಷನ ಧ್ಯಾನ ಮಾಡುತ್ತಲೇ ತಾನು ತದ್ರೂಪನಾಗಿಬಿಟ್ಟನು ।೧೭೪।। ಯಾವ ಪ್ರಕಾರವಾಗಿ ಘಟಾಕಾಶವು ಸಹಜವಾಗಿ ಮಹದಾಕಾಶದಲ್ಲಿ ಲೀನವಾಗುವುದೋ, ಅದೇ ಪ್ರಕಾರವಾಗಿ ಬಲರಾಮನು ದೇಹಾಭಿಮಾನ ಬಿಡುತ್ತಲೇ ಸಂಕರ್ಷಣ ಸ್ವರೂಪನಾದನು ।೧೭೫।। ಮನುಷ್ಯನ ಆಕಾರದ ಸೋಗು ಹಾಕಿಕೊಂಡಿದ್ದ ಆ ದೇಹವನ್ನು ನಿಃಶೇಷವಾಗಿ ತ್ಯಜಿಸುತ್ತಲೇ, ಆತನು ಪೂರ್ವದ ಸ್ವರೂಪವಿದ್ದಂತೆ ಆದನು ।೧೭೬।। ಸಮುದ್ರ ದಂಡೆಯಲ್ಲಿ ಯೋಗಾಸನ ಹಾಕಿ ಆತನು ತನ್ನ ನಿರ್ಜೀವ ದೇಹ ಇಟ್ಟು ಬಿಟ್ಟನು. ಈ ಯಾವ ಬಲರಾಮನ ನಿರ್ವಾಣ ಕಂಡು ಶ್ರೀಕೃಷ್ಣನೂ ಕೂಡ ತನ್ನ ಸಿದ್ಧತೆಯಲ್ಲಿ ಮಗ್ನನಾದನು ।೧೭೭।।

ರಾಮನಿರ್ಯಾಣಮಾಲೋಕ್ಯ ಭಗವಾನ್ ದೇವಕೀಸುತಃ । ನಿಷಸಾದ ಧರೋಪಸ್ಥೆ ತೂಷ್ಣೀಮಾಸಾದ್ಯ ಪಿಪ್ಪಲಮ್ ॥೨೭॥

ಅರ್ಥ:- ತನ್ನ ಅಣ್ಣನಾದ ಬಲರಾಮನು ಪರಮಪದದಲ್ಲಿ ಲೀನನಾದದ್ದು ಶ್ರೀಕೃಷ್ಣನು ಕಂಡನು. ಆಗ ಆತನು ಒಂದು ದೊಡ್ಡ ಅಶ್ವತ್ಥ ವೃಕ್ಷದ ಅಡಿಯಲ್ಲಿ ಸುಮ್ಮನೇ ನೆಲದ ಮೇಲೆ ಕುಳಿತುಕೊಂಡನು.

ಬಳಭದ್ರ ಝಾಲಾ ದೇಹಾತೀತ । ಹೇ ದೇಖೋನಿ ದೇವಕೀ ಸುತ । ಭಗವಾನ್ ಶ್ರೀಕೃಷ್ಣನಾಥ । ಸ್ವಯೇ ಇಚ್ಛಿತ ನಿಜಧಾಮ ॥೧೭೮॥ ತೇವ್ಹಾ ಧರಾತಳೀ ಧರಾಧರ । ಮೌನೇ ಅಶ್ವತ್ಥಾತಳೀ ಸ್ಥಿರ ।ವೀರಾಸನೀ ಶಾರ್ಙ್ಗಧರ । ಶ್ಯಾಮಸುಂದರ ಬೈಸಲಾ ॥೧೭೯॥ ಜ್ಯಾಚ್ಯಾ ಸ್ವರೂಪಾಚೇ ಆವಡೀ । ಶಿವವಿರಿಂಚ್ಯಾದಿ ಝಾಲೀ ವೇಡೀ । ಜ್ಯಾಚ್ಯಾ ದರ್ಶನಾಚೀ ಗೋಡೀ । ದೃಷ್ಟೀ ನೋಸಂಡೀ ಕ್ಷಣಾರ್ಧ ॥೧೮೦॥ ದೃಷ್ಟೀನೇ ಚವೀ ಚಾಖಿಲೀ ಗಾಢೀ । ತಂವ ತಂವ ರಸನಾ ಚರಫಡೀ । ತಿಣೇ ಕೀರ್ತನರಸೇ ರಸಗೋಡೀ । ಚವೀ ಚೋಖಡೀ ಚಾಖಿಲೀ ॥೧೮೧॥ ಪ್ರಾಶನೇವೀಣ ಕೃಷ್ಣರಸ । ರಸನಾ ಸೇವೀ ಅತಿಸುರಸ । ತೇವ್ಹಾ ವಿಷಯರಸ ತೋ ವಿರಸ । ಹೋಯ ನಿರಸ ಸಂಸಾರ ॥೧೮೨॥ ಶ್ರವಣೀ ಪಡತಾ ಶ್ರೀಕೃಷ್ಣಕೀರ್ತೀ । ತ್ರಿವಿಧ ತಾಪಾ ಉಪಶಾಂತೀ । ಜ್ಯಾಚೀ ವರ್ಣಿತಾ ಗುಣನಾಮಕೀರ್ತೀ । ಚಾರೀ ಮುಕ್ತಿ ಕಾಮಾರ್ಯಾ ॥೧೮೩॥ ಚರಣಕಮಲಮಕರಂದ । ತುಳಶೀಮಿಶ್ರಿತ ಆಮೋದ । ಸೇವಿತಾ ಘ್ರಾಣೀ ಪರಮಾನಂದ । ಇತರ ಗಂಧ ತೇ ತುಚ್ಛ ॥೧೮೪॥ ಜ್ಯಾಚಾ ಲಾಗತಾ ಅಂಗಸಂಗ । ದೇಹಬುದ್ಧೀಸೀ ಹೋಯ ಭಂಗ । ಸ್ವಾನಂದವಿಗ್ರಹೀ ಶ್ರೀರಂಗ । ಅಂಗಪ್ರತ್ಯಂಗಸುಖಕಾರೀ ॥೧೮೫॥ ಜ್ಯಾಚೇ ಆವಡೀ ವಂದಿತಾ ಪಾಯೇ । ಸಮಾಧಿ ಲಾಜಿಲೀ ಮಾಗೇ ಠಾಯೇ । ತೋ ಅಶ್ವತ್ಥಾತಳೀ ಪಾಹೇ । ಬೈಸಲಾ ಆಹೇ ನಿಜಶೋಭಾ ॥೧೮೬॥ ತೇ ಅಂತಕಾಳೀಚೇ ಕೃಷ್ಣಧ್ಯಾನ । ಶುಕಾಸೀ ಆವಡಲೇ ಸಂಪೂರ್ಣ । ತೋಹೀ ಸ್ವಾನಂದೇ ವೋಸಂಡೂನ । ಶ್ರೀಕೃಷ್ಣಧ್ಯಾನ ವರ್ಣಿತ ॥೧೮೭॥

ಬಿಭ್ರಚ್ಚತುರ್ಭುಜಂ ರೂಪಂ ಭ್ರಾಜಿಷ್ಣು ಪ್ರಭಯಾ ಸ್ವಯಾ । ದಿಶೋ ವಿತಿಮಿರಾಃ ಕುರ್ವನ್ ವಿಧೂಮ ಇವ ಪಾವಕಃ ॥೨೮॥

ಅರ್ಥ:- ಭಗವಾನ ಶ್ರೀಕೃಷ್ಣನು ಆ ಸಮಯದಲ್ಲಿ ತನ್ನ ಅಂಗಕಾಂತಿಯಿಂದ ದೇದಿಪ್ಯಮಾನ ಚತುರ್ಭುಜ ರೂಪ ಧರಿಸಿದನು. ಹೊಗೆ ಇಲ್ಲದ ಅಗ್ನಿಸಮಾನವಾಗಿ ದಿಕ್ಕುಗಳಿಗೆ ಅಂಧಕಾರರಹಿತ ಪ್ರಕಾಶಮಾನ ಮಾಡಿದನು.

ಪ್ರಾಂತೀಚೇ ಶ್ರೀಕೃಷ್ಣಧ್ಯಾನ । ಪಾಂಚಾ ಶ್ಲೋಕೀ ನಿರೂಪಣ । ಶ್ರೋತಾ ಪರೀಕ್ಷಿತೀ ಸಾವಧಾನ । ವಕ್ತಾ ಜ್ಞಾನಘನ ಶುಕಯೋಗೀಂದ್ರ ॥೧೮೮॥ ಪಿಂಪಳಾತಳೀ ಪ್ರಕಾಶಘನ । ತೇ ಕಾಳೀಂಚೀ ಮೂರ್ತಿ ಜಾಣ । ನಿಜತೇಜೇ ದೇದಿಪ್ಯಮಾನ । ದಿಶಾ ಪರಿಪೂರ್ಣ ತೇಣೇ ತೇಜೇ ॥೧೮೯॥

ಬಲರಾಮನು ದೇಹಬಿಟ್ಟಿದ್ದನ್ನು ಕಂಡು ಭಗವಾನ ಶ್ರೀಕೃಷ್ಣನು ಸ್ವತಃ ತಾನು ನಿಜಧಾಮಕ್ಕೆ ಹೊರಡುವ ಅಪೇಕ್ಷೆ ಮೇರೆಗೆ ಸಿದ್ಧನಾದನು ॥೧೭೮॥ ಪೃಥ್ವಿಯ ಪಾಲನೆ ಮಾಡುವ ಶ್ಯಾಮಸುಂದರ ಶ್ರೀಕೃಷ್ಣನು ಅಶ್ವತ್ಥವೃಕ್ಷದ ಅಡಿಯಲ್ಲಿ ನೆಲದ ಮೇಲೆ ವೀರಾಸನ ಹಾಕಿ ಕುಳಿತುಕೊಂಡನು ॥೧೭೯॥ ಯಾರ ಸ್ವರೂಪದ ಪ್ರೇಮದಿಂದ ಬ್ರಹ್ಮದೇವ ಮತ್ತು ಶಂಕರ ಇವರೂ ಸಹ ಹುಚ್ಚರಾಗಿಬಿಟ್ಟರು. ಯಾರ ದರ್ಶನ ಪ್ರೇಮ ಬಿಟ್ಟು ದೃಷ್ಟಿಯು ಅರ್ಧ ಕ್ಷಣ ಕೂಡ ದೂರ ಸರಿಯಲು ಸಾಧ್ಯವಾಗುವುದಿಲ್ಲ ॥೧೮೦॥ ಶ್ರೀಕೃಷ್ಣನ ರೂಪದ ರುಚಿ ದೃಷ್ಟಿಯು ಸ್ವೀಕರಿಸುತ್ತಲೇ ರಸನೇಂದ್ರಿಯವು ಒಳಗಿಂದೊಳಗೆ ಚರಪಡಿಸಲಾರಂಭಿಸಿತು. ಅದು ಕೀರ್ತನೆಯಂತಹ ರುಚಿಯ ಉತ್ತಮ ಸ್ವಾದ ಸ್ವೀಕರಿಸಿತು ॥೧೮೧॥ ಸುರಸವಾಗಿರುವ ಶ್ರೀಕೃಷ್ಣನ ರುಚಿಯನ್ನು ರಸನೆಯು ಪ್ರಾಶನ ಮಾಡದೆಯೇ ನೆಕ್ಕಿತು. ಆಗ ವಿಷಯಗಳು ನಿರಸವಾಗಿ ಸಂಸಾರವು ಇದು ಅಸಾರವಾಗಿ ಪರಿಣಮಿಸಹತ್ತಿತು ॥೧೮೨॥ ಶ್ರೀಕೃಷ್ಣನ ಕೀರ್ತಿಯು ಕಿವಿಗಳಮೇಲೆ ಬೀಳುವುದೊಂದೇ ತಡ, ತ್ರಿವಿಧ ತಾಪಗಳು ಶಾಂತವಾಗುವುವು. ಆತನ ಗುಣನಾಮ ಕೀರ್ತಿಯ ವರ್ಣನೆಯನ್ನು ಮಾಡಲು ನಾಲ್ಕೂ ಮುಕ್ತಿಗಳು ದಾಸಿಯಾಗುವುವು ॥೧೮೩॥ ಆತನ ಚರಣಕಮಲಗಳ ತುಳಸಿಯ ಸುವಾಸನೆಯಿಂದ ಸುಗಂಧಿತವಾಗಿರುವ ಮಕರಂದವನ್ನು ಮೂಗಿನಿಂದ ಗ್ರಹಣ ಮಾಡಿದರೆ ಉಳಿದ ಎಲ್ಲ ಸುಗಂಧಗಳು ತುಚ್ಛವಾಗುವುವು ॥೧೮೪॥ ಆತನ ಕೇವಲ ದೇಹದ ಸ್ಪರ್ಶವಾದರೆ ಸಾಕು, ದೇಹಬುದ್ಧಿಯೇ ಇಲ್ಲದಾಗಿಬಿಡುವುದು. ಇಂತಹ ಕೇವಲ ಆನಂದದ ಮೂರ್ತಿಯೇ ಆಗಿರುವ ಶ್ರೀಕೃಷ್ಣನು ಶರೀರದ ಪ್ರತ್ಯೇಕ ಅವಯವಗಳಿಗೆ ಸುಖಕರನಾಗಿರುವನು ॥೧೮೫॥ ಪರಮ ಶ್ರದ್ಧೆಯಿಂದ, ಪ್ರೀತಿಪೂರ್ವಕವಾಗಿ ಆತನ ಚರಣಗಳನ್ನು ವಂದಿಸಿದರೆ ಸಮಾಧಿಯೂ ಕೂಡ ನಾಚಿಕೊಂಡು ಹಿಂದಕ್ಕೆ ಸರಿಯುವುದು. ಆ ಯಾವ ಸರ್ವಾಂಗ ಸುಂದರನಾದ ಶ್ರೀಕೃಷ್ಣನು ಅಶ್ವತ್ಥ ವೃಕ್ಷದ ಕೆಳಗೆ ಹೋಗಿ ಕುಳಿತಿರಲು ಆಗ ಆತನು ಅತಿಶಯ ಶೋಭಾಯಮಾನನಾಗಿ ಕಾಣಹತ್ತಿದನು ॥೧೮೬॥ ಆ ಅಂತ್ಯಕಾಲದ ಶ್ರೀಕೃಷ್ಣನ ಮೂರ್ತಿಯು ಶ್ರೀಶುಕಾಚಾರ್ಯರಿಗೆ ಕಣ್ಣೆದುರಿನಲ್ಲಿ ತೋರಲಾರಂಭಿಸಿತು. ಆಗ ಅವರು ಸ್ವಾನಂದದಲ್ಲಿ ತಲ್ಲೀನರಾದರು. ಅದಕ್ಕಾಗಿ ಶ್ರೀಕೃಷ್ಣನ ಧ್ಯಾನ ವರ್ಣನೆ ಮಾಡಲಾರಂಭಿಸಿದರು ॥೧೮೭॥

ಮುಂದಿನ ಐದು ಶ್ಲೋಕಗಳಲ್ಲಿ ಕೃಷ್ಣನ ಕೊನೆಯ ಧ್ಯಾನದ ನಿರೂಪಣೆ ಮಾಡಲಾಗಿದೆ. ಏಕಾಗ್ರಚಿತ್ತದಿಂದ ಕೇಳುವ ಶ್ರೋತೃ ಪರೀಕ್ಷಿತಿಯಾಗಿರುವನು. ಪೂರ್ಣ ಜ್ಞಾನಿಗಳಾದ ಶ್ರೀಶುಕಾಚಾರ್ಯರು ವಕ್ತಾರಾಗಿರುವರು ॥೧೮೮॥ ಅಶ್ವತ್ಥ ವೃಕ್ಷದ ಕೆಳಗೆ ಕುಳಿತುಕೊಂಡ ಆ ಸಮಯದಲ್ಲಿ ಶ್ರೀಕೃಷ್ಣಮೂರ್ತಿಯು ಅತ್ಯಂತ ತೇಜಃಪುಂಜವಾಗಿತ್ತು. ಆ ಯಾವ ದೇದಿಪ್ಯಮಾನ ತೇಜದಿಂದ ಸರ್ವದಿಶೆಗಳು ತುಂಬಿಹೋಗಿದ್ದವು ॥೧೮೯॥

ನಾ ಧೂಮ ನಾ ಇಂಗಳ । ಆರಕ್ತತೇವೀಣ ಅಗ್ನಿಜ್ವಾಳ । ತೈಶೀ ಕೃಷ್ಣ ಮೂರ್ತೀ ತೇಜಾಳ । ಪ್ರಕಾಶ ಪ್ರಬಳ ಅತಿದೀಪ್ತ ।।೧೯೦।। ಕೃಷ್ಣ ಮೂರ್ತಿಚೇ ನಿಜಪ್ರಭಾ । ಲೋಪಲೀ ರವಿಚಂದ್ರಾಚೀ ಶೋಭಾ । ಶೂನ್ಯತ್ವೇ ಠಾವ ನಾಹೀ ನಭಾ । ಸಚ್ಚಿದಾನಂದಗಾಭಾ ಸಾಕಾರ ।।೧೯೧।। ಚೈತನ್ಯ ತೇಜೇ ತನು ಮುಸಾವಲೀ । ಶಾತಿರಸಾಚೀ ವೋತಿಲೀ । ಚತುರ್ಭುಜತ್ವೇ ರೂಪಾ ಆಲೀ । ತೇಣೇ ದಿಶಾಂಚೀ ಗೇಲೀ ಕಾಳಿಮಾ ।।೧೯೨।।

ಶ್ರೀವತ್ಸಾಂಕಂ ಘನಶ್ಯಾಮಂ ತಪ್ತಹಾಟಕವರ್ಚಸಮ್ । ಕೌಶೇಯಾಂಬರಯುಗ್ಮೇನ ಪರಿವೀತಂ ಸುಮಂಗಲಮ್ ।।೭೯।।
ಸುಂದರಸ್ಮಿತವಕ್ತ್ರಾಬ್ಜಂ ನೀಲಾಕುಂತಲಮಂಡಿತಮ್ । ಪುಂಡರೀಕಾಭಿರಾಮಾಕ್ಷಂ ಸ್ಫುರನ್ಮಕರಕುಂಡಲಮ್ ।।೮೦।।

ಅರ್ಥ:- ಮಳೆಗಾಲದ ಮೇಘಸಮಾನ ಸಾದಾಗಪ್ಪು ಶರೀರದಿಂದ ಕಾದ ಚಿನ್ನಸಮಾನವಾಗಿ ಜ್ಯೋತಿಯು ಹೊರಹೊಮ್ಮುತ್ತಿತ್ತು. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿನ್ಹವು ಶೋಭಾಯಮಾನವಾಗಿತ್ತು. ಆತನು ರೇಷ್ಮೇ ಪೀತಾಂಬರದ ಧೋತರ ಮತ್ತು ಅದೇ ಪ್ರಕಾರದ ಶೆಲ್ಲೆ ಧಾರಣ ಮಾಡಿದ್ದನು. ಅತ್ಯಂತ ಮಂಗಲಮಯ ರೂಪ ಆತನದ್ದಾಗಿತ್ತು. ಮುಖಕಮಲದಲ್ಲಿ ಸುಂದರ ಹಾಸ್ಯ ತುಂಬಿಕೊಂಡಿತ್ತು. ಗಲ್ಲಗಳಲ್ಲಿ ಕೇಶಗಳು ಶೋಭಿಸುತ್ತಿದ್ದವು. ಹೀಗೆ ಆತನು ಮನೋಹರನಾಗಿ ತೋರುತ್ತಿದ್ದನು. ಕಮಲಗಳಂತೆ ವಿಶಾಲ ಸುಂದರ ನೇತ್ರಗಳಿದ್ದವು. ಕಿವಿಗಳಲ್ಲಿ ಮಕರಾಕೃತ ಕುಂಡಲಗಳು ಮಿಂಚುತ್ತಿದ್ದವು.

ಕೃಷ್ಣ ಮೂರ್ತಿ ಸ್ವಚ್ಛ ಸ್ವಯಂಭ । ಅಂಗೀ ಪ್ರತ್ಯಂಗೀ ಬಿಂಬಲೇ ನಭ । ತೇಣೇ ಘನಶ್ಯಾಮತಾಶೋಭ । ಅತಿಸಪ್ರಭ ಸಾಜಿರೀ ।।೧೯೩।। ಆಧೀಂಚ ನೇಟಕಾ ಶ್ರೀಕೃಷ್ಣ । ವರೀ ಘನಶ್ಯಾಮತಾ ಬಾಣಲೀ ಪೂರ್ಣ । ತೇಣೇ ಮುಸಾವಲೇ ಬರವೇಪಣ । ಲಾಗಲೇ ಧ್ಯಾನ ನರನಾರೀ ।।೧೯೪।। ನರನಾರೀ ಬಾಪುಡ್ಯಾ ಕಿತೀ । ಸನ್ಯಾಸೀ ಭುಲೋನಿ ಠಾತೀ । ವಿರಕ್ತ ವೇಧಲೇ ಪರಮಾರ್ಥೀ । ದೇಖೋನಿ ಮೂರ್ತೀ ಕೃಷ್ಣಾಚೀ ।।೧೯೫।। ದೇಖತಾ ಶ್ರೀಕೃಷ್ಣದರ್ಶನ । ಶಿವಾಸೀ ಲಾಗಲೇ ನಿತ್ಯಧ್ಯಾನ । ಪಾರ್ವತ್ಯಾಹೀ ನಿಜಮನ । ಕೃಷ್ಣಾರ್ಪಣ ಸ್ವಯೇ ಕೇಲೇ ।।೧೯೬।। ಐಸೇ ಅಂಗೀಂಚೇ ಬರವೇಪಣ । ತ್ಯಾಹೀವರೀ ಹಾಸ್ಯವದನ । ಸಾಜಿರೇ ರಾಜೀವಲೋಚನ । ಆಕರ್ಣ ಪೂರ್ಣ ಆರಕ್ತ ।।೧೯೭।। ಮಸ್ತಕೀಂಚೇ ನೀಲಾಲಕ । ಸುಗಂಧಸುಮನೀ ಗುಂಫಿಲೇ ಚೋಖ । ಕೃಷ್ಣೀ ಕೃಷ್ಣರೂಪ ಮಧುಕ । ಕೃಷ್ಣಕೇಶೀ ದೇಖ ವಿಗುಂತಲೇ ।।೧೯೮।। ಸ್ಫುರತ್ಕುಂಡಲೇ ಮಕರಾಕಾರ । ಐಸೇ ವರ್ಣಿತೀ ಕವಿವರ । ಪರೀ ತೀ ಆಕಾರೀ ನಿರ್ವಿಕಾರ । ಶ್ರವಣೇ ವಿಕಾರ ಮಾವಳತೀ ।।೧೯೯।। ಘಾವಲಿಯಾ ಕೃಷ್ಣಶ್ರವಣ । ಆಕಾರವಿಕಾರಾ ಬೋಳವಣ । ತೇ ಶ್ರೀಕೃಷ್ಣಶ್ರವಣೀ ಪೂರ್ಣ । ದೇದಿಪ್ಯಮಾನ ಕುಂಡಲೇ ।।೨೦೦।।

ಕಪ್ಪಾದ ಹೊಗೆ ಇಲ್ಲದ ಕೆಂಡವಿಲ್ಲದ ಅಗ್ನಿಯಜ್ವಾಲೆಯು ಹೇಗೆ ಕಾಣಬೇಕೋ, ಅದರಂತೆ ಶ್ರೀಕೃಷ್ಣನ ಅಂಗಕಾಂತಿಯು ಸತೇಜ ಮತ್ತು ಪ್ರಖರವಾಗಿ ತೋರುತ್ತಿತ್ತು ।।೧೯೦।। ಶ್ರೀಕೃಷ್ಣನ ಪ್ರಭೆಯಮುಂದೆ ಸೂರ್ಯಚಂದ್ರರ ತೇಜವೂ ಕೂಡ ಮಾಯವಾಯಿತು. ಶೂನ್ಯತ್ವದಿಂದ ಆಕಾಶಕ್ಕೂ ಅವಕಾಶ ಉಳಿಯಲಿಲ್ಲ. ಕಾರಣ ಅಲ್ಲಿ ಸಚ್ಚಿದಾನಂದದ ಸರ್ವ ಸ್ವರೂಪಗಳು ಸಾಕಾರವಾಗಿದ್ದವು ।।೧೯೧।। ಶ್ರೀಕೃಷ್ಣನ ಶರೀರವು ಚೈತನ್ಯ ರಸದಿಂದ ಎರಕಗೊಂಡಿತ್ತು. ಶಾಂತಿರಸದಿಂದಲೇ ಸಿದ್ಧಗೊಂಡ ಚತುರ್ಭುಜ ಮೂರ್ತಿಯು ವ್ಯಕ್ತವಾಗಿತ್ತು. ಆತನ ಅಂಗಕಾಂತಿಯಿಂದ ದಶದಿಕ್ಕುಗಳ ಕತ್ತಲೆಯು ಇಲ್ಲದಾಗಿತ್ತು ।।೧೯೨।।

ಶ್ರೀಕೃಷ್ಣಮೂರ್ತಿಯು ಸ್ವಯಂಭೂ ಹಾಗೂ ಸ್ವಚ್ಛವಾಗಿತ್ತು. ಆತನ ಪ್ರತಿಯೊಂದು ಅವಯವಗಳಲ್ಲಿ ಆಕಾಶವು ಬಿಂಬಿಸಿತ್ತು. ಆದ್ದರಿಂದ ನೀಲಮೇಘದಂತೆ ಅದರ ಕಾಂತಿಯು ಅತಿಶಯ ತೇಜಃಪುಂಜ ಹಾಗೂ ಸರ್ವಾಂಗಸುಂದರವಾಗಿ ಕಾಣುತ್ತಿತ್ತು ।।೧೯೩।। ಮೊದಲೇ ಶ್ರೀಕೃಷ್ಣನ ರೂಪವು ಮನೋಹರವಾಗಿತ್ತು, ಅದರಲ್ಲಿ ಮೇಘಶ್ಯಾಮ ವರ್ಣವು ಬಹಳ ಎದ್ದು ಕಾಣುತ್ತಿತ್ತು. ಆದ್ದರಿಂದ ಆತನಿಗೆ ವಿಶೇಷ ಸೌಂದರ್ಯವು ಪ್ರಾಪ್ತವಾಗಿತ್ತು. ಆದ್ದರಿಂದ ಸ್ತ್ರೀ-ಪುರುಷರ ಮನವು ಆತನಲ್ಲಿ ಗುಂತಾಯಿಸಿತ್ತು ।।೧೯೪।। ಪಾಪ! ಸಾಮಾನ್ಯ ಸ್ತ್ರೀ-ಪುರುಷರ ಆ ಸ್ಥಿತಿಯು ಎಂತಹದ್ದು ? ಪರಮಾರ್ಥ ಮಾರ್ಗದಲ್ಲಿರುವ ವಿರಕ್ತ ಸನ್ಯಾಸಿಯೂ ಕೂಡ ಆ ರೂಪವನ್ನು ಕಂಡು ಭುಲಾಯಿಸಿ ಬಿಡುತ್ತಿದ್ದನು. ಶ್ರೀಕೃಷ್ಣನ ಮೂರ್ತಿಯನ್ನು ನೋಡುತ್ತಲೇ ಜನರು ಹುಚ್ಚರಾಗುತ್ತಿದ್ದರು ।।೧೯೫।। ಶ್ರೀಕೃಷ್ಣನ ದರ್ಶನ ಒಮ್ಮೆ ಆಗುತ್ತಲೇ ಶಿವನಿಗೆ ಆತನ ನಿತ್ಯಧ್ಯಾನವೇ ಹತ್ತಿಕೊಂಡಿತು. ಪಾರ್ವತಿಯೂ ಕೂಡ ಶ್ರೀಕೃಷ್ಣನಿಗೆ ತನ್ನ ಮನವನ್ನು ಅರ್ಪಣೆ ಮಾಡಿದಳು ।।೧೯೬।। ಹೀಗೆ ಮೂಲತಃ ಅಪ್ರತಿಮ ಸೌಂದರ್ಯವಿದ್ದು ಅದರಲ್ಲಿ ಸುಹಾಸ್ಯ ವದನ ಮತ್ತು ಕಮಲಸಮಾನ ಆರಕ್ತ ವರ್ಣದ ಹಾಗೂ ಆಕರ್ಣ ಶೋಭಿಸುವಂತಹ ನೇತ್ರಗಳು ।।೧೯೭।। ಮಸ್ತಕಮೇಲಿನ ಕಡುಕಪ್ಪಾಗಿರುವ ಕೇಶಗಳು ಮತ್ತು ಅದರಲ್ಲಿ ಸುಂದರ ಸುವಾಸಿಕ ಪುಷ್ಪಗಳು ಹೆಣೆಯಲ್ಪಟ್ಟಿದ್ದವು ಹೀಗಿರುವ ಶ್ರೀಕೃಷ್ಣನ ರೂಪದಲ್ಲಿ ಕಪ್ಪಾಗಿರುವ ಭ್ರಮರಗಳು ಕೇಶಗಳಲ್ಲಿ ಲುಬ್ಧವಾಗಿ ಕುಳಿತಿದ್ದವು ।।೧೯೮।। ಕರ್ಣಗಳಲ್ಲಿ ಮಕರಾಕಾರದ ಕುಂಡಲಗಳು ಝಳಪಿಸುತ್ತಿದ್ದವು. ಹೀಗೆಲ್ಲ ಕವಿಗಳು ವರ್ಣಿಸುತ್ತಿರುವರು. ಆದರೆ ಅದು ಸಾಕಾರದಲ್ಲಿ ನಿರ್ವಿಕಾರವೇ ಆಗಿತ್ತು. ಕಾರಣ ಅದರ ಶ್ರವಣದಿಂದ ವಿಕಾರವೇ ಇಲ್ಲದಾಗುವುದು ।।೧೯೯।। ಶ್ರೀಕೃಷ್ಣನ ವಿಷಯವಾಗಿ ಶ್ರವಣವು ಲಭಿಸುತ್ತಲೇ ಆಕಾರ ಮತ್ತು ವಿಕಾರಗಳ ನಿವೃತ್ತಿಯಾಗುವುದು. ಶ್ರೀಕೃಷ್ಣನ ಕರ್ಣಗಳಲ್ಲಿ ದೇದಿಪ್ಯಮಾನ ಕುಂಡಲಗಳಿದ್ದವು ।।೨೦೦।।

ತಪ್ತ ಸುವರ್ಣಾಸಮಾನ । ಉಭಯ ಪೀತಾಂಬರ ಜಾಣ । ಏಕ ಕಾಸೇ ವಿರಾಜಮಾನ । ದುಜಾ ಪ್ರಾವರಣ ಶೋಭತ ॥೨೦೧॥ ಬ್ರಹ್ಮಣ್ಯದೇವೋ ಶ್ರೀಕೃಷ್ಣ । ಲಕ್ಷ್ಮೀ ಡಾವಲೂನಿ ಪೂರ್ಣ । ದಕ್ಷಿಣಾಂಗೀ ವಿಪ್ರಚರಣ । ಶ್ರೀವತ್ಸ ಲಾಂಛನ ಗೋವಿಂದ ॥೨೦೨॥

ಕಟಿಸೂತ್ರಬ್ರಹ್ಮಸೂತ್ರಕಿರೀಟಕಟಾಕಾಂಗದೈ: । ಹಾರನೂಪುರಮುದ್ರಾಭಿ: ಕೌಸ್ತುಭೇನ ವಿರಾಜಿತಮ್ ॥೩೧॥
ವನಮಾಲಾಪರೀತಾಂಗಂ ಮೂರ್ತಿಮದ್ಭಿರ್ ನಿಜಾಯುಧೈ: । ಕೃತ್ವೋರೌ ದಕ್ಷಿಣೇ ಪಾದಮಾಸೀನಂ ಪಂಕಜಾರುಣಮ್ ॥೩೨॥

ಅರ್ಥ:- ಕಟಿಸೂತ್ರವನ್ನೂ ಜನಿವಾರವನ್ನೂ ಭುಜಕೀರ್ತಿಯನ್ನೂ ಸರಿಗೆಯನ್ನೂ ದೇಹದಲ್ಲಿ ಧರಿಸಿದ್ದನು ಮತ್ತು ಕಿರೀಟ, ಕೌಸ್ತುಭಮಣಿ, ಹಾರ, ನೂಪುರ, ಮುಂತಾದ ರಾಜಲಕ್ಷಣಗಳಿಂದ ಭೂಷಿತನಾಗಿದ್ದನು. ಕೊರಳಲ್ಲಿ ಪುಷ್ಪಮಾಲೆಗಳು ಆತನ ಶರೀರವನ್ನು ಸುತ್ತುವರಿದಿದ್ದವು. ಆತನ ನಿಜಾಯುಧಗಳು ಮೂರ್ತಿಮಂತಾಗಿದ್ದವು. ಹೀಗೆ ವಿರಾಜಿಸುತ್ತ ಕಮಲದಂತೆ ಕೆಂಪಾದ ತನ್ನ ಎಡ ಪಾದವನ್ನು ಬಲತೊಡೆಯ ಮೇಲೂರಿ ಅಲ್ಲಿ ಕುಳಿತಿದ್ದನು.

ಕಂಠೀ ಕೌಸ್ತುಭ ಸೋಜ್ವಳಾ । ಕಟೀ ಮಿರವೇ ರತ್ನಮೇಖಳಾ । ಬ್ರಹ್ಮಸೂತ್ರ ರುಳೇಗಳಾ । ಅಪಾದ ವನಮಾಳಾ ಶೋಭತ ॥೨೦೩॥ ಮಾಥಾ ಮುಕುಟಾಚೇ ಖೇವಣೇ ಲಖಲಖೀತ ಅನರ್ಘ್ಯ ರತ್ನೇ । ಕೀರ್ತಿಮುಖೇ ಬಾಹುಭೂಷಣೇ । ವೀರಕಂಕಣೇ ವಿಚಿತ್ರೇ ॥೨೦೪॥ ಯಂತ್ರ ಉಪಾಸ್ತೀ ಉಪಾಸಕಾ । ತೈಶಾ ಕರಾಗ್ರೀ ಕರಮುದ್ರಿಕಾ । ತ್ರಿಕೋಣ ಷಟ್‌ಕೋಣ ಕರ್ಣಿಕಾ । ಜಡಿತಮಾಣಿಕಾ ಶಾಸ್ತ್ರೋಕ್ತ ॥೨೦೫॥ ವೈಜಯಂತೀಚಾ ಸೋಹಳಾ । ಪದಕ ಏಕಾವಳೀ ಗಳಾ । ನಾನಾ ರತ್ನೇ ಹಾರ ಮುಕ್ತಫಳಾ । ತುಳಶೀಮಾಳಾ ಸುಗಂಧಾ ॥೨೦೬॥ ದೋನೀ ಮೋತೀ ಲಗ ಪದರ । ರತ್ನೇ ಜಡಿತ ಪೀತಾಂಬರ । ಕಿಂಕಿಣೀ ಕ್ಷುದ್ರಘಂಟಿಕಾ ವಿಚಿತ್ರ । ಮನೋಹರ ಶೋಭತೀ ॥೨೦೭॥ ವಾಂಕೀ ಅಂದುವಾಂಚಾ ಗಜರ । ಚರಣೀ ನೂಪುರಾಂಚಾ ಝುಣತ್ಕಾರ । ರುಳೇ ಬಿರುದಾಂಚಾ ತೋಡರ । ಮನೋಹರ ಹರಿಚರಣೀ ॥೨೦೮॥ ರಾತೋತ್ಪಲಾ ಕಠಿಣಪಣ । ತ್ಯಾಂಹೂನಿ ಸುಕುಮಾರ ಚರಣ । ಘವಘವೀತ ಶ್ರೀಕೃಷ್ಣ । ಶೋಭಾ ಸಂಪೂರ್ಣ ಶೋಭತ ॥೨೦೯॥ ಶಂಖ ಚಕ್ರ ಗದಾ ಕಮಳ । ಮೂರ್ತಿಮಂತ ಆಯುಧೇ ಸಕಳ । ಆತ್ರಊನಿ ಪಿಂಪಳ । ಬೈಸಲಾ ಕೇವಳ ವೀರಾಸನೀ ॥೨೧೦॥ ತ್ಯಾ ವೀರಾಸನಾಚೇ ಲಕ್ಷಣ । ತಳೀ ಸೂನಿ ದಕ್ಷಿಣ ಚರಣ । ತ್ಯಾಚಿ ಮಾಂಡೀವರೀ ಜಾಣ । ವಾಮಚರಣ ಅಲೋಹಿತ ॥೨೧೧॥ ಲಾಜವೂನಿ ಸಂಧ್ಯಾರಾಗಾಸೀ । ಉಣೇ ಆಣೋನಿ ಬಾಳಸೂರ್ಯಾಸೀ । ಚರಣಶೋಭಾ ಹೃಷೀಕೇಶೀ । ಅತಿದೀಪ್ತೀಸೀ ಆರಕ್ತ ॥೨೧೨॥

ಮುಸಲಾವಶೇಷಾಯ:ಖಂಡಕೃತೇಷುರ್ಲುಬ್ಧಕೋ ಜರಾ । ಮೃಗಾಸ್ಯಾಕಾರಂ ತಚ್ಚರಣಂ ವಿವ್ಯಾಧ ಮೃಗಶಂಕಯಾ ॥೩೩॥

ಅರ್ಥ:- ಹೇ ಪರೀಕ್ಷಿತಿಯೇ, ಜರಾ ನಾಮದ ಒಬ್ಬ ಬೇಡನಿದ್ದನು. ಆತನು ಮುಸಲದ ಚೂರ್ಣವಾಗದೇ ಉಳಿದ ತುಣುಕು ಮೀನದ ಹೊಟ್ಟೆಯಲ್ಲಿ ಸಿಕ್ಕ ಆ ಕಬ್ಬಿಣದ ತುಂಡನ್ನೇ ಬಾಣಕ್ಕೆ ಸೇರಿಸಿದ್ದನು. ದೂರದಿಂದ ಆತನಿಗೆ ಭಗವಾನ ಶ್ರೀಕೃಷ್ಣನ ಕೆಂಪಾಗಿರುವ ಅಂಗಾಲು ಜಿಗರೆಯ ಮುಖದಂತೆ ಭಾಸವಾಗಿ ಆತನು ಅದಕ್ಕೆ ತನ್ನ ಬಾಣ ಬಿಟ್ಟನು.

ತಪ್ತಗೊಂಡ ಚಿನ್ನದಂತೆ ಹೊಳೆಯುತ್ತಿರುವ ಹಳದೀ ವರ್ಣದ ವಸ್ತ್ರಗಳು ಆತನ ದೇಹದಲ್ಲಿ ಶೋಭಿಸುತ್ತಿದ್ದವು. ಒಂದು ನಡುವಿನ ಪೀತಾಂಬರವಾದರೆ ಇನ್ನೊಂದು ದೇಹದ ಮೇಲಿನ ಉತ್ತರೀಯ ವಸ್ತ್ರ ಅಂದರೆ ಶೆಲ್ಲೆಯಾಗಿತ್ತು ॥೨೦೧॥ ಬ್ರಾಹ್ಮಣರಿಗೆ ದೇವರು ಎಂದು ಭಾವಿಸುವ ಶ್ರೀಕೃಷ್ಣನು ಲಕ್ಷ್ಮೀಗೆ ಬದಿಗೆ ಇಟ್ಟು ಬಲಭಾಗದಲ್ಲಿ ಬ್ರಾಹ್ಮಣನ ಚರಣವಾಗಿರುವ ಶ್ರೀವತ್ಸಲಾಂಛನ ಧರಿಸಿದ್ದನು ॥೨೦೨॥

ಕೊರಳಲ್ಲಿ ಪ್ರಕಾಶಮಾನ ಕೌಸ್ತುಭಮಣೀ, ನಡುವಿನಲ್ಲಿ ಶೋಭಿಸುವಂತಹ ರತ್ನಖಚಿತ ಉಡದಾರ, ಕೊರಳಲ್ಲಿ ಸುತ್ತುವರೆದ ಜನಿವಾರ, ಪಾದದವರೆಗೂ ತೂಗಾಡುತ್ತಿರುವ ವನಮಾಲೆಯು ಶೋಭಿಸುತ್ತಿತ್ತು ॥೨೦೩॥ ಮಸ್ತಕದಮೇಲೆ ರತ್ನಜಡಿತ ಕಿರೀಟವು, ಅದರಲ್ಲಿ ಮಿಂಚುತ್ತಿರುವ ಅಮೌಲ್ಯ ರತ್ನಗಳು, ಕೀರ್ತಿಮುಖದ ಬಾಹುಭೂಷಣೆಗಳು ಮತ್ತು ವಿಚಿತ್ರವಾದ ವೀರಕಂಕಣಗಳು ॥೨೦೪॥ ಉಪಾಸಕರ ಯಂತ್ರದಂತೆ ಕೈಗಳ ಕರಾಗ್ರಗಳಲ್ಲಿ ತ್ರಿಕೋಣ, ಷಟ್‌ಕೋಣ ಇತ್ಯಾದಿ ಪ್ರಕಾರಗಳ ರತ್ನಖಚಿತ ಮಿಂಚುತ್ತಿರುವ ಉಂಗುರಗಳು ॥೨೦೫॥ ಕೊರಳಲ್ಲಿ ವೈಜಯಂತೀ ಮಾಲೆ ಹಾಗೂ ಮುತ್ತಿನ ಪದಕವುಳ್ಳ ಒಂದು ಸರ, ಅನೇಕ ಪ್ರಕಾರಗಳ ರತ್ನದ ಹಾರಗಳು, ಮುಕ್ತಫಳಾ, ತುಳಶೀ ಮಾಲೆ ಸುಗಂಧಯುಕ್ತವಾಗಿತ್ತು ॥೨೦೬॥ ಮೈಮೇಲಿನ ಪೀತಾಂಬರವು ರತ್ನಜಡಿತವಾಗಿತ್ತು. ಅದರ ಎರಡೂ ಸೆರಗಿಗೆ ಮುತ್ತಿನ ಜಾಳಿಗೆ ಹೆಣೆಯಲಾಗಿತ್ತು. ಭಿನ್ನ ಭಿನ್ನ ಆಕಾರಗಳ ಗೆಜ್ಜೆಗಳು ಶೋಭಿಸುತ್ತಿದ್ದವು ॥೨೦೭॥ ವಂಕಿಗಳು, ತೋಡೆಗಳು, ಪೈಜಣಗಳ ಝುಣತ್ಕಾರ, ಬಿರುದಾವಳಿಯ ಗೆಜ್ಜೆಗಳು, ಇವುಗಳಿಂದ ಶ್ರೀಕೃಷ್ಣನ ಮನೋರಮ ಚರಣಗಳು ಶೋಭಿಸುತ್ತಿದ್ದವು ॥೨೦೮॥ ಕಮಲದ ಹೂವೂ ಕೂಡ ಕಠಿಣವೆನ್ನುವಂತೆ ಶ್ರೀಕೃಷ್ಣನ ಚರಣಗಳು ಕೋಮಲವಾಗಿದ್ದವು. ಈ ಪ್ರಕಾರದ ದೇದಿಪ್ಯಮಾನನಾದ ಶ್ರೀಕೃಷ್ಣನು ಅಪ್ರತಿಮವಾಗಿ ಶೋಭಿಸುತ್ತಿದ್ದನು ॥೨೦೯॥ ಶಂಖ, ಚಕ್ರ, ಗದಾ, ಪದ್ಮ ಈ ಸರ್ವ ಆಯುಧಗಳನ್ನು ತೆಗೆದುಕೊಂಡು ಆತನು ಅಶ್ವತ್ಥವೃಕ್ಷದ ಅಡಿಯಲ್ಲಿ ವೀರಾಸನ ಹಾಕಿ ಕುಳಿತುಕೊಂಡಿದ್ದನು ॥೨೧೦॥ ಆ ವೀರಾಸನವೆಂದರೆ ಬಲಗಾಲು ಕೆಳಗಿಟ್ಟು ಅದರ ತೊಡೆಯ ಮೇಲೆ ತನ್ನ ಆರಕ್ತ ಎಡಗಾಲನ್ನು ಇಟ್ಟುಕೊಂಡಿದ್ದನು ॥೨೧೧॥ ಸಾಯಂಕಾಲದ ಸಂಧಿಯ ಪ್ರಕಾಶಕ್ಕೆ ನಾಚಿಕೆ ಬರುವಂತಹ ಹಾಗೂ ಬಾಲಸೂರ್ಯನಿಗೆ ಲೋಪಿಸುವಂತಹ ಅತ್ಯಂತ ದೇದಿಪ್ಯಮಾನ ಹಾಗೂ ಕೋಮಲ ಆರಕ್ತವಾಗಿರುವ ಕಾಂತಿಯು ಶ್ರೀಕೃಷ್ಣನ ಚರಣಕಮಲಗಳಿಗೆ ಭೂಷಿಸುತ್ತಿತ್ತು ॥೨೧೨॥

ಕರೂನಿ ನಿಜಕುಳಾಚೀ ಹೋಳೀ । ಸರಸ್ವತೀ ತೀರೀ ವನಮಾಳೀ । ಟೇಕೋನಿ ಬೈಸಲಾ ಪಿಂಪಳಾತಳೀ । ಚರಣನವಾಳೀ ಆರಕ್ತ ।೨೧೩॥ ಆರಕ್ತ ಶ್ರೀಕೃಷ್ಣ ಚರಣ । ಭಾವೂನಿ ಮೃಗಮುಖಾಸಮಾನ। ಜರಾವ್ಯಾಧೇ ವಿಂಧಿಲಾ ಬಾಣ । ಅತಿಸತ್ರಾಣ ಭೇದಿಲಾ ।೨೧೪॥ ಬ್ರಹ್ಮಶಾಪಾಚೇ ಮುಸಲ ಘನ । ಯಾದವೀ ಪಿಷ್ಟ ಕರಿತಾ ಜಾಣ । ಉರಲಾ ಅವಶೇಷ ಲೋಹಕಣ । ತೋ ಸಮುದ್ರೀ ಜಾಣ ಟಾಕಿಲಾ ।೨೧೫॥ ತೋ ಪಡತಾಂಚಿ ಸಮುದ್ರಜಳೀ । ತ್ಯಾತೇ ಮೀನ ಸಗಳೇಚಿ ಗಿಳೀ । ತ್ಯಾ ಮಿನಾತೇ ಜರಾವ್ಯಾಧ ಗಳೀ । ಜಾಳ್ಯಾಮೇಳೀ ಆಕಳಿತ ।೨೧೬॥ ವ್ಯಾಧ ಕರೀ ಮೀನವಿದಾರಣ । ತಂವ ನಿಘಾಲಾ ತೋ ಲೋಹಕಣ । ತ್ಯಾಚಾ ಜರಾವ್ಯಾಧೇ ಕೇಲಾ ಬಾಣ । ತೇಣೇ ಕೃಷ್ಣ ಚರಣ ವಿಂಧಿಲಾ ।೨೧೭॥ ಮತ್ಸ್ಯೋದರೀಂಚಾ ಲೋಹಘನ । ತ್ಯಾಚಾ ಕೇಲಿಯಾ ದೃಢ ಬಾಣ । ಘೋರ ಪಾರಧೀ ಸಾಧೇ ಸಂಪೂರ್ಣ । ವ್ಯಾಧೇ ಜಾಣೋನಿ ಬಾಣ ತೋ ಕೇಲಾ ।೨೧೮॥ ಭೋದಾವಯಾ ಕೃಷ್ಣ ಚರಣ । ಮುಳೀ ಬ್ರಹ್ಮಶಾಪಚಿ ಕಾರಣ । ಯಾಲಾಗೀ ಜರಾವ್ಯಾಧಾಚಾ ಬಾಣ । ಕೃಷ್ಣ ಚರಣೀ ಪೂರ್ಣ ಖಡತರಲಾ ।೨೧೯॥ ವ್ಯಾಧೇ ಅವಚಿತೇ ವಿಂಧಿಲಾ । ಪರೀ ಕೃಷ್ಣನಾಹೀ ದಚಕಲಾ । ಬಾಣ ಸತ್ರಾಣೇ ಖಡತರಲಾ । ತೇಣೇ ಸುಖೀ ಝಾಲಾ ಶ್ರೀಕೃಷ್ಣ ।೨೨೦॥

ಚತುರ್ಭುಜಂ ತಂ ಪುರುಷಂ ದೃಷ್ಟ್ವಾ ಸ ಕೃತಕಿಲ್ಬಿಷಃ । ಭೀತಃ ಪಪಾತ ಶಿರಸಾ ಪಾದಯೋರಸುರದ್ವಿಷಃ ।೩೪॥

ಅರ್ಥ:- ತದನಂತರ ಆ ಬೇಡನು ಚತುರ್ಭುಜಾಕೃತಿಯನ್ನು ಕಂಡು ತಾನು ಮಾಡಿದ ಅಪರಾಧದಿಂದ ಭೀತನಾಗಿ ರಾಕ್ಷಸವೈರಿಯಾದ ಭಗವಂತನ ಪಾದಗಳಿಗೆ ತನ್ನ ತಲೆಯೂರಿ ಬಿದ್ದುಕೊಂಡನು.

ಬಾಣ ಶ್ರೀಕೃಷ್ಣ ಚರಣೀ ಪೂರ್ಣ ಭೇದಲಾ । ಜರಾವ್ಯಾಧಾಚಾ ಹಾತ ನಿವಾಲಾ । ಮ್ಹಣೇ ಮ್ಯಾ ಮೋಠಾ ಮೃಗ ವಿಂಧಿಲಾ । ಮ್ಹಣೋನಿ ಧಾಂವಲಾ ಧರಾವಯಾ ।೨೨೧॥ ದೇಖೋನಿ ಚತುರ್ಭುಜ ಪುರುಷಾಸೀ । ಭಯ ಸುಟಲೇ ಜರಾವ್ಯಾಧಾಸೀ । ಮ್ಹಣೇ ಮಜ ಘಡಲ್ಯಾ ಮಹಾಪಾಪರಾಶೀ । ಪರಮಪುರುಷಾಸೀ ವಿಂಧಿಲೇ ।೨೨೨॥ ಮ್ಹಣೇ ಕಟಕಟಾ ರೇ ಅದೃಷ್ಟಾ । ಆಚರವಿಲೇ ಕರ್ಮಾ ದುಷ್ಟಾ । ಐಶಿಯಾ ಮಜ ಮಹಾಪಾಪಿಷ್ಠಾ । ದುಃಖದುರ್ಘಟಾ ಕೋಣ ವಾರೀ ।೨೨೩॥ ಜಗಾಚಾ ಪರಮಾತ್ಮಾ ಶ್ರೀಹರೀ । ತೋ ಮ್ಯಾ ವಿಂಧಿಲಾ ಬಾಣೇಕರೀ । ಮಾಝ್ಯಾ ಪಾಪಸಮಾನ ಘೋರೀ । ನಾಹೀ ಸಂಸಾರೀ ಆನಾಸೀ ।೨೨೪॥

ತನ್ನ ಕುಲದ ನಾಶ ಮಾಡಿ ಶ್ರೀಕೃಷ್ಣನು ಸರಸ್ವತೀ ನದಿಯ ದಂಡೆಯ ಮೇಲೆ ಅಶ್ವತ್ಥ ವೃಕ್ಷಕ್ಕೆ ಆಧರಿಸಿಕೊಂಡು ಕುಳಿತುಕೊಂಡಿದ್ದನು. ಆತನ ಚರಣಕಮಲಗಳ ಕಾಂತಿಯು ಕೆಂಪಾಗಿ ಕಾಣುತ್ತಿತ್ತು ।೨೧೩॥ ಆ ಶ್ರೀಕೃಷ್ಣನ ಆರಕ್ತ ಚರಣವನ್ನು ''ಜರಾ'' ಎಂಬ ನಾಮದ ಬೇಡನು ದೂರದಿಂದ ನೋಡಿದನು. ಅದು ಜಿಗರೆಯ ಮುಖವಿರಬಹುದೆಂದು ಆತನಿಗೆ ಅನಿಸಿತು. ಆಗ ಆತನು ಕೂಡಲೇ ತೀವ್ರ ವೇಗದಿಂದ ಬಾಣವನ್ನು ಬಿಟ್ಟನು. ಇದರಿಂದ ಶ್ರೀಕೃಷ್ಣನ ಚರಣವು ಬಾಣನಟ್ಟಿ ಗಾಯವಾಯಿತು ।೨೧೪॥ ಬ್ರಾಹ್ಮಣರ ಶಾಪದಿಂದ ಯಾವ ಕಬ್ಬಿಣದ ಸಲಾಖೆಯಾಗಿತ್ತೋ, ಅದನ್ನು ಯಾದವರು ಪೂರ್ಣವಾಗಿ ಚೂರ್ಣಮಾಡಿ ಉಳಿದ ವಜ್ರಪ್ರಾಯ ತುಣುಕನ್ನು ಸಮುದ್ರದಲ್ಲಿ ಒಗೆದಿದ್ದರು ।೨೧೫॥ ಆ ತುಣುಕನ್ನು ಒಂದು ಮೀನವು ನುಂಗಿಬಿಟ್ಟಿತ್ತು. ಆ ಮೀನವನ್ನು ಜರಾಬೇಡನು ತನ್ನ ಬಲೆಯಲ್ಲಿ ಹಿಡಿದಿದ್ದನು ।೨೧೬॥ ಆತನು ಆ ಮೀನವನ್ನು ಕೊಯ್ಯುತ್ತಲೇ ಅದರ ಹೊಟ್ಟೆಯಲ್ಲಿ ಕಬ್ಬಿಣದ ಆ ತುಣುಕು ಹೊರಟಿತು. ಅದೇ ತುಣುಕಿನಿಂದ ಜರಾ ಬೇಡರವನು ಬಾಣವನ್ನಾಗಿ ಮಾಡಿದ್ದನು. ಅದೇ ಬಾಣದಿಂದ ಶ್ರೀಕೃಷ್ಣನ ಚರಣಕ್ಕೆ ಹೊಡೆದುಬಿಟ್ಟನು ।೨೧೭॥ ಮೀನದ ಹೊಟ್ಟೆಯಿಂದ ಹೊರಟ ಕಬ್ಬಿಣದ ತುಕಡಿಯಿಂದ ಬಾಣ ತಯಾರಿಸಲು ಬೇಟೆಯಲ್ಲಿ ಅದರಿಂದ ನಿಶ್ಚಿತ ಯಶಪ್ರಾಪ್ತಿಯಾಗುವುದೆಂಬ ಭಾವನೆಯಿಂದ ಬೇಡರವನು ಆ ಕಬ್ಬಿಣ ತುಂಡಿನ ಬಾಣ ತಯಾರಿಸಿದ್ದನು ।೨೧೮॥ ಈ ಪ್ರಕಾರವಾಗಿ ಶ್ರೀಕೃಷ್ಣನ ಚರಣದ ಭೇದವಾಗುವ ಮುಖ್ಯ ಕಾರಣವೇನಂದರೆ ಅದಕ್ಕೆ ಬ್ರಾಹ್ಮಣರ ಶಾಪವೇ ಆಗಿರುವುದು. ಆದ್ದರಿಂದಲೇ ಜರಾ ವ್ಯಾಧನ ಆ ಬಾಣವು ಶ್ರೀಕೃಷ್ಣನ ಚರಣಕ್ಕೆ ಬಡೆದು ಸಿಕ್ಕಿಕೊಂಡಿತು ।೨೧೯॥ ಬೇಡನು ಅಕಸ್ಮಾತ ಬಾಣ ಬಿಟ್ಟಿದ್ದನು. ಆದರೆ ಇದರಿಂದ ಶ್ರೀಕೃಷ್ಣನು ಸ್ವಲ್ಪವೂ ಕೂಡ ದಚಕಲಿಲ್ಲ. ಬದಲಾಗಿ ಬಾಣವು ಜೋರಾಗಿ ಬಂದು ಬಡೆದಿದ್ದಕ್ಕೆ ಶ್ರೀಕೃಷ್ಣನಿಗೆ ಅಧಿಕ ಸಂತೋಷವಾಯಿತು ।೨೨೦॥

ಶ್ರೀಕೃಷ್ಣನಿಗೆ ಬಾಣವು ತಾಕುತ್ತಲೇ ವ್ಯಾಧನ ಹಸ್ತವು ಪೂರ್ಣ ವಿಜಯೀಯಾಯಿತು. ನಾನು ಇಂದು ಒಂದು ದೊಡ್ಡ ಮೃಗವನ್ನು ಕೊಂದೆನು ಎಂದು ಹೀಗೆ ಮನದಲ್ಲಿ ತಿಳಿದುಕೊಂಡು ಆ ಮೃಗವನ್ನು ಪಡೆಯಲು ಧಾವಿಸಿ ಬಂದನು ।೨೨೧॥ ಅಲ್ಲಿರುವ ಚತುರ್ಭುಜ ಪುರುಷನನ್ನು ಕಂಡು ಆತನಿಗೆ ಮಹಾಭಯವು ಹುಟ್ಟಿಕೊಂಡಿತು. ನನಗೆ ಮಹಾಪಾಪ ಇಂದು ನನಗೆ ಒದಗಿತೆಂದನು. ನಾನೊಬ್ಬ ಮಹಾಪುರುಷನ ನಾಶ ಮಾಡಿದೆನು. ಎಂತಹ ಮಹಾಪಾತಕವು ನನ್ನ ಕೈಯಿಂದ ನಡೆದುಬಿಟ್ಟಿತೆಂದು ವ್ಯಥೆಪಟ್ಟನು ।೨೨೨॥ ಹೇ ದೇವರೇ, ನೀನು ನನ್ನಿಂದ ಎಂತಹ ದುಷ್ಟ ಕಾರ್ಯವನ್ನು ಮಾಡಿಸಿಬಿಟ್ಟೆ. ಈಗ ನನ್ನಿಂದಾದ ಈ ಮಹಾಪಾಪದ ಭಯಂಕರ ದುಃಖವನ್ನು ಯಾರು ನಿವಾರಣೆ ಮಾಡುವರು? ।೨೨೩॥ ಸಂಪೂರ್ಣ ಜಗತ್ತಿನ ಪರಮಾತ್ಮನಾದ ಶ್ರೀಕೃಷ್ಣನಿಗೆ ನಾನು ಬಾಣದಿಂದ ಭೇದಿಸಿದೆನು. ನನ್ನಿಂದಾದ ಈ ಮಹಾಪಾಪದಂತಹ ಬೇರೆ ಯಾವ ಪಾಪವೂ ಜಗತ್ತಿನಲ್ಲಿ ಇಲ್ಲ ।೨೨೪॥

ಭಯೇ ಸುಟಲಾ ಥೋರ ಕಂಪ । ಮಜ ಘಡಲೇ ಮಹಾಪಾಪ । ಜಗಾಚೇ ಜೇ ಧ್ಯೇಯ ಸ್ವರೂಪ । ತ್ಯಾಸೀ ಸಂತಾಪ ಮ್ಯಾ ದಿಧಲಾ ॥೭೨೫॥ ಜ್ಯಾಚೇ ಅಮರ ವಂದಿತೀ ಚರಣ । ಜ್ಯಾಸೀ ಸಂತ ಯೇತೀ ಲೋಟಾಂಗಣ । ತ್ಯಾ ಶ್ರೀಕೃಷ್ಣಾಸೀ ವಿಂಧಿಲಾ ಬಾಣ । ಪಾಪ ಸಂಪೂರ್ಣ ಮಜ ಘಡಲೇ ॥೭೨೬॥ ಅವಚಟೇ ಆತ್ಮಹತ್ಯಾ ಘಡೇ । ತೇ ಪಾಪ ಕದಾ ನ ಝುಡೇ । ಜಗಾಚಾ ಆತ್ಮಾ ಕೃಷ್ಣ ವಾಡೇಕೋಡೇ । ತೇ ಆತ್ಮಹತ್ಯಾ ಪಡೇ ಮಸ್ತಕೀ ಮಾಝೇ ॥೭೨೭। ಜಗಾಚೇ ಆತ್ಮಹನನ । ಕರ್ತಾ ಮೀ ಏಕ ಪಾಪೀ ಪೂರ್ಣ । ತ್ಯಾ ಪಾಪಾಚೇ ಪುರಶ್ಚರಣ । ಸರ್ವಥಾ ಜಾಣ ದಿಸೇನಾ ॥೭೨೮॥ ಪ್ರಮಾದೇ ಬ್ರಹ್ಮಹತ್ಯಾ ಘಡೇ । ತೇಣೇ ಪಾಪೇ ತೋ ಸಮೂಳ ಬುಡೇ । ತೇ ಪೂರ್ಣಬ್ರಹ್ಮ ಮ್ಯಾ ಮೂಢೇ । ಬಾಣೇ ಸದೃಢೇ ವಿಂಧಿಲೇ ॥೭೨೯॥ ಪಾಪಕರ್ಮಾ ಮೀ ವ್ಯಾಧರೂಪ । ತೇಣೇ ಮ್ಯಾ ಜೋಡಲೇ ಪಾಪ ಅಮೂಪ । ಕೃಷ್ಣ ಪರಮಾತ್ಮಾ ಚಿತ್ಸ್ವರೂಪ । ತ್ಯಾಸೀಹೀ ಸಂತಾಪ ದಿಧಲಾ ಮ್ಯಾ ॥೭೩೦॥ ಯೇಣೇ ಅನುತಾಪೇ ತಪ್ತ ಪೂರ್ಣ । ಧಾಂವೋನಿ ಘಾಲೀ ಲೋಟಾಂಗಣ । ಶ್ರೀಕೃಷ್ಣಾಚೇ ಶ್ರೀಚರಣ । ಮಸ್ತಕೀ ಜಾಣ ದೃಢ ಧರಲೇ ॥೭೩೧॥ ಮರ್ದಿ ದೈತ್ಯಾಂಚಾ ಅಭಿಮಾನ । ಮಧುದ್ವೇಷ್ಟಾ ಜೋ ಮಧುಸೂದನ । ತ್ಯಾಚೇ ದೃಢ ಧರೂನಿ ಚರಣ । ಕರೀ ರುದನ ಅಟ್ಟಹಾಸೇ ॥೭೩೨॥ ಚರಣೇ ಘಾತಲೀ ಪರಮ ಮಿಠೀ । ಉಠವಿತಾ ಕದಾ ನುಠೀ। ಮಜ ಕ್ಷಮಾ ಕರೀ ಕೃಪಾದೃಷ್ಟೀ । ಕೃಪಾಳೂ ಸೃಷ್ಟೀ ತೂಚಿ ಏಕ ॥೭೩೩॥

ಅಜಾನತಾ ಕೃತಮಿದಂ ಪಾಪೇನ ಮಧುಸೂದನ । ಕ್ಷಂತುಮರ್ಹಸಿ ಪಾಪಸ್ಯ ಉತ್ತಮಃ ಶೋಕಮೇಽನಘ ॥೩೫॥

ಅರ್ಥ:- ವ್ಯಾಧ ಹೇಳಿದನು ; ಹೇ ಮಧುಸೂದನನೇ, ನಾನು ತಿಳಿಯದೇ ಈ ಪಾಪಕಾರ್ಯ ಮಾಡಿರುವೆ. ನಿಜವಾಗಿಯೂ ನಾನು ಮಹಾಪಾಪಿಯು. ಆದರೆ ನೀವು ಪರಮ ಯಶಸ್ವಿಗಳಾಗಿರುವಿರಿ. ತಾವು ದಯಮಾಡಿ ನನ್ನ ಅಪರಾಧವನ್ನು ಕ್ಷಮಿಸಿರಿ.

ಅತಿಭೀತ ಜರಾವ್ಯಾಧ । ಮ್ಹಣೇ ಮೀ ಪಾಪಾತ್ಮಾ ಅತಿಅಶುದ್ಧ । ನೇಣತಾ ಘಡಲಾ ಹಾ ಅಪರಾಧ । ಲಿಂಗಬೇಧ ಮಜ ಘಡಲಾ ॥೭೩೪॥ ಜೋ ಈಶ್ವರಪ್ರತಿಮಾ ಉಚ್ಛೇದೀ । ತೋ ಮಹಾಪಾಪೀ ಲಿಂಗಭೇದೀ । ತ್ಯಾ ತುಜ ಈಶ್ವರಾಸೀ ಮ್ಯಾ ದುರ್ಬುದ್ಧೀ । ಅದೃಷ್ಟವಿಧೀ ವಿಂಧಿಲೇ ॥೭೩೫॥ ಐಸಾ ಮೀ ಪಾಪೀ ಪಾಪಕರ್ಮಾ । ಮಹಾಪಾಪೀ ಪಾಪಾತ್ಮಾ । ಮಾಝ್ಯಾ ಅಪರಾಧ ಕರಾವಾ ಕ್ಷಮಾ । ಪುರುಷೋತ್ತಮಾ ಕೃಪಾಳುವಾ ॥೭೩೬॥

ಭಯಗ್ರಸ್ತನಾಗಿ ಆತನು ಗಡಗಡ ನಡುಗಹತ್ತಿದನು. ನನ್ನ ಕೈಯಿಂದ ಬಹು ದೊಡ್ಡ ಪಾಪವು ನಡೆದುಬಿಟ್ಟಿತು. ಜಗತ್ತಿನ ಧ್ಯೇಯಸ್ವರೂಪನಾದವನಿಗೆ ನಾನು ತಾಪ ಕೊಟ್ಟೆನು ॥೭೨೫॥ ಯಾವ ದೇವತೆಗಳು ಯಾರ ಚರಣಗಳಿಗೆ ವಂದನೆ ಮಾಡುವರೋ, ಯಾವ ಸಂತರು ಯಾರಲ್ಲಿ ಲೋಟಾಂಗಣೆಯನ್ನು ಹಾಕುವರೋ, ಅಂತಹ ಶ್ರೀಕೃಷ್ಣನಿಗೆ ನಾನು ಬಾಣದಿಂದ ಘಾಸಿ ಮಾಡಿದೆನು. ಇದರಿಂದ ನನಗೆ ಭಯಂಕರವಾದ ಪಾಪವು ತಟ್ಟಿಬಿಟ್ಟಿತು ॥೭೨೬॥ ಅಕಸ್ಮಾತಾಗಿ ಆತ್ಮಹತ್ಯೆಯು ನಡೆದರೆ ಆಗ ಆ ಪಾಪವು ಎಂದಿಗೂ ಹೋಗುವುದಿಲ್ಲ. ಇಲ್ಲಿ ನೋಡಿದರೆ ಶ್ರೀಕೃಷ್ಣನು ಜಗತ್ತಿನ ಆತ್ಮನಾಗಿರುವನು. ಇದು ಎಂತಹ ಆತ್ಮಹತ್ಯೆಯು ನನ್ನ ತಲೆಯ ಮೇಲೆ ಬಂದು ಬಿದ್ದಿತಲ್ಲಾ ॥೭೨೭॥ ಸರ್ವ ಜಗತ್ತಿನ ಆತ್ಮಹತ್ಯೆ ಮಾಡಿರುವ ನಾನೊಬ್ಬ ಪೂರ್ಣ ಪಾತಕಿಯಾಗಿರುವೆ. ಈ ಪಾತಕದ ನಿವೃತ್ತಿಯಾಗುವಂತಹ ಪ್ರಾಯಶ್ಚಿತ್ತವು ನನಗೆ ಸರ್ವಥಾ ತೋರುತ್ತಿಲ್ಲ ॥೭೨೮॥ ಅಪ್ಪಿತಪ್ಪಿ ಬ್ರಹ್ಮಹತ್ಯೆಯು ನಡೆಯಿತೆಂದರೆ ಆ ಪಾಪದಿಂದ ಆತನು ಸಂಪೂರ್ಣವಾಗಿ ಮುಳುಗಿ ಹೋಗುವನು. ಆದರೆ ಮೂರ್ಖನಾದ ನಾನು ಮಾತ್ರ ಪೂರ್ಣ ಬ್ರಹ್ಮನನ್ನೇ ಬಾಣದಿಂದ ತೀವ್ರ ಗಾಯಗೊಳಿಸಿರುವೆನು ॥೭೨೯॥ ನಾನಾದರೂ ಮೂಲತಃ ಪಾಪ ಕಾರ್ಯ ಮಾಡುವ ಬೇಡನು. ಅದರಲ್ಲಿ ಅಪಾರವಾದ ಪಾಪವನ್ನು ತುಂಬಿಸಿಬಿಟ್ಟೆನು. ಚಿತ್ಸ್ವರೂಪನಾದ ಪರಮಾತ್ಮಾ ಶ್ರೀಕೃಷ್ಣನಿಗೂ ಸಹ ನಾನು ದುಃಖ ಕೊಟ್ಟೆನು ॥೭೩೦॥ ಹೀಗೆ ಪೂರ್ಣ ಪಶ್ಚಾತ್ತಾಪದಿಂದ ಆತನು ತುಂಬಾ ವ್ಯಾಕುಲಪಟ್ಟನು. ಆತನು ಧಾವಿಸಿ ಬಂದು ಲೋಟಾಂಗಣ ಹಾಕಿ ಶ್ರೀಕೃಷ್ಣನ ಚರಣಗಳನ್ನು ತನ್ನ ಮಸ್ತಕಕ್ಕೆ ಗಟ್ಟಿಯಾಗಿ ಹಿಡಿದುಕೊಂಡನು ॥೭೩೧॥ ದೈತ್ಯರ ಅಭಿಮಾನ ಇಲ್ಲದಂತೆ ಮಾಡುವವನಾದ, ಮಧು ದೈತ್ಯದ ಸಂಹಾರ ಮಾಡಿರುವ ಯಾವ ಮಧುಸೂದನನ ಚರಣಗಳನ್ನು ಗಟ್ಟಿಯಾಗಿ ಹಿಡಿದು ಆ ಬೇಡನು ಜೋರು ಜೋರಾಗಿ ಅಳಲಾರಂಭಿಸಿದನು ॥೭೩೨॥ ಆತನು ಶ್ರೀಕೃಷ್ಣನ ಚರಣಗಳಿಗೆ ಬಿಗಿಯಾಗಿ ತೆಕ್ಕೆ ಬಿದ್ದು ಏನು ಮಾಡಿದರೂ ಅಲ್ಲಿಂದ ಬಿಟ್ಟೇಳಲು ಸಿದ್ಧನಾಗಲಿಲ್ಲ. ಕೃಪಾದೃಷ್ಟಿಯಿಂದ ನನ್ನನ್ನು ಕ್ಷಮಿಸಬೇಕು. ಈ ಸೃಷ್ಟಿಯಲ್ಲಿ ನೀನೊಬ್ಬನೇ ಮಾತ್ರ ದಯಾವಂತನಾಗಿರುವೆ ಎಂದು ಹೇಳಹತ್ತಿದನು ॥೭೩೩॥

ಅತಿಶಯ ಭಯಭೀತನಾದ ಜರಾವ್ಯಾಧನು ಹೀಗೆ ಹೇಳಿದನು; ನಾನು ಮಹಾ ದುಷ್ಟ ಪಾತಕನು. ನನ್ನಿಂದ ಈ ಅಪರಾಧವು ತಿಳಿಯದೇ ನಡೆದು ಹೋಗಿದೆ. ಈಶ್ವರ ಅವತಾರದ ಭಂಗ ನಾನೇ ಮಾಡಿದಂತಾಯಿತು ॥೭೩೪॥ ಈಶ್ವರ ಪ್ರತಿಮೆಯಾದ ಲಿಂಗವನ್ನು ಯಾವನು ಭಗ್ನಗೊಳಿಸುವನೋ, ಅಂತಹ ಮೂರ್ತಿಭಂಗ ಮಾಡುವ ಮಹಾಪಾತಕೀ ನಾನಾಗಿರುವೆನು. ಈಶ್ವರನಾದ ನಿನಗೆ ನಾನು ನನ್ನ ದುರ್ದೈವದಿಂದ ಬಾಣಬಿಟ್ಟು ಹೊಡೆದಿಟ್ಟೆ ॥೭೩೫॥ ಹೀಗೆ ನಾನು ಪಾಪಕರ್ತನು, ಮಹಾಪಾತಕಿಯಾಗಿರುವೆನು. ನನ್ನ ಪಾಪಕ್ಕೆ ಸಮಾನವಾದ ಪಾಪವು ಈ ಜಗತ್ತಿನಲ್ಲಿಯೇ ಇಲ್ಲ. ಹೇ ಕೃಪಾವಂತನೇ, ನನ್ನ ಈ ಅಪರಾಧಕ್ಕೆ ಕ್ಷಮೆ ಮಾಡು ॥೭೩೬॥

ತೂ ಕೃಪಾಳು ತ್ರಿಜಗತೀ । ಗರ್ಭೀ ರಾಖಿಲಾ ಪರೀಕ್ಷಿತೀ । ಗಜೇಂದ್ರಾಚೇ ಅತಿ ಆಕಾಂತೀ । ಉಡೀ ಕೃಪಾಮೂರ್ತೀ ಘಾತಲೀ ।೮೩೭॥ ಪಾಂಡವ ಜಳತಾ ಜೋಹರೀ । ತುವಾ ಕಾಢಿಲೇ ವಿವರದ್ವಾರೀ । ಶೇಖೀ ಅರ್ಜುನಾಚಾ ಕೈವಾರೀ । ಘೇಶೀ ಜುಂಝಾರೀ ಭೀಷ್ಮಾಸೀ।೮೩೮॥ ದ್ರೌಪದೀಚೇ ಅತಿಸಾಂಕಡೀ । ಧಾಂವಲಾಸೀ ಲವಡ ಸವಡೀ । ತಿಳಭರೀ ನ ದಿಸತಾ ಉಘಡೀ । ನೇಸತೀ ಲುಗಡೀ ತೂ ಹೋಸೀ ।೮೩೯॥ ಐಸೀ ಕೃಪಾಳುತ್ವಾಚೀ ಖ್ಯಾತೀ । ಶ್ರುತಿ ಪುರಾಣೇ ವಾಖಾಣಿತೀ । ತುಝೀ ಉತ್ತಮ ಶ್ಲೋಕಕೀರ್ತೀ । ಋಷಿ ವರ್ಣಿತೀ ಮಹಾಸಿದ್ಧ ।೮೪೦॥ ನೇಣತಾ ಆಚರಲೋ ದುಷ್ಕರ್ಮಾ । ತೇ ಮಜ ಕರಾವಯಾ ಕ್ಷಮಾ । ತೂ ಕೃಪಾಳು ಪರಮಾತ್ಮಾ । ಪುರುಷೋತ್ತಮಾ ಕ್ಷಮಾಶೀಲ ।೮೪೧॥ ಅಜಾಮಿಳ ದುರಾಚಾರೀ । ಪುತ್ರಲೋಭೇ ನಾಮ ಉಚ್ಚಾರೀ । ತ್ಯಾಚೇ ಪಾಪಾಚೀ ಝಾಲೀ ಬೋಹರೀ । ಐಶೀ ನಿಷ್ಪಾಪ ಥೋರೀ ನಾಮಾಚೀ ।೮೪೨॥ ನಾಮೇ ನಿಷ್ಪಾಪ ದುರ್ಮತೀ । ನಾಮೇ ನಿಷ್ಪಾಪ ಪಿತೃಘಾತೀ । ನಾಮೇ ದುರಾಚಾರೀ ತರತೀ । ಹೇ ನಿಷ್ಪಾಪ ಖ್ಯಾತೀ ನಾಮಾಚೀ ।೮೪೩॥

ಯಸ್ಯಾನುಸ್ಮರಣಂ ನೃಣಾಂ ಅಜ್ಞಾನಧ್ವಾಂತನಾಶನಮ್ । ವದಂತಿ ತಸ್ಮೈ ತೇ ವಿಷ್ಣೋ ಮಯಾಸಾಧು ಕೃತಂ ಪ್ರಭೋ ।೩೬॥

ಅರ್ಥ:- ಸರ್ವವ್ಯಾಪಕ ಸರ್ವಶಕ್ತಿಮಾನ ಪ್ರಭುವೇ, ಮಹಾತ್ಮಾ ಪುರುಷರು ಹೀಗೆ ಹೇಳುವರು; ನಿಮ್ಮ ಸ್ಮರಣೆಯಿಂದ ಅಜ್ಞಾನ ಅಂಧಕಾರವು ಇಲ್ಲದಾಗುವುದು. ಮಹಾ ಖೇದಪಡುವ ಮಾತೆಂದರೆ ನಾನು ಸ್ವತಃ ನನ್ನ ಅನಿಷ್ಟತನ ಎಸಗಿರುವೆನು.

ಜ್ಯಾ ವಿಷ್ಣೂಚೇ ನಾಮಸ್ಮರಣ । ಕೋಟಿ ಜನ್ಮಾಂಚೇ ಘನ ಅಜ್ಞಾನ । ನರಾಚೇ ನಿರ್ದಾಳೀ ಪೂರ್ಣ । ಸಕಳ ಕಲ್ಯಾಣದಾಯಕ ।೮೪೪॥ ಐಸೇ ಜ್ಯಾಚೇ ನಾಮಸ್ಮರಣ । ತ್ಯಾಚೇ ಸ್ವರೂಪಾಸೀ ಮ್ಯಾ ಜಾಣ । ನಿಜಬಳೇ ವಿಂಧಿಲಾ ನಿರ್ವಾಣ ಬಾಣ । ಅಪರಾಧ ಪೂರ್ಣ ಹಾ ಮಾಝಾ ।೮೪೫॥ ಜ್ಯಾಚೇ ಅಗಾಧ ಮಹಿಮಾನ । ಸದಾ ವರ್ಣಿತೀ ಸಾಧು ಸಜ್ಜನ । ಜೋ ಸ್ವರೂಪೇ ಸಚ್ಚಿದ್‌ಘನ । ಸ್ವಾಮೀ ಶ್ರೀಕೃಷ್ಣ ಜಗಾಚಾ ।೮೪೬॥ ಜಗಾಚೇ ಜೀವನ ಶ್ರೀಕೃಷ್ಣ । ತ್ಯಾ ಕೃಷ್ಣಾಸಹೀ ಮೀ ಆಪಣ। ವಿಂಧಿಲಾ ನಿರ್ವಾಣೇಂಚಾ ಬಾಣ । ಹಾ ಅಪರಾಧ ಪೂರ್ಣ ಪೈ ಮಾಝಾ ।೮೪೭॥ ತ್ರೈಲೋಕ್ಯರಾಜಾ ಕೃಷ್ಣಸಮರ್ಥ । ತೋ ಮ್ಯಾ ಕೇಲಾ ರಾಜಘಾತ । ಜಗಾಚಾ ಆತ್ಮಾ ಶ್ರೀಕೃಷ್ಣನಾಥ । ತೋ ಆತ್ಮಘಾತ ಮ್ಯಾ ಕೇಲಾ ।೮೪೮॥

ನಿಜವಾಗಿ ನೋಡಿದರೆ ಈ ಮೂರು ಲೋಕಗಳಲ್ಲಿ ನೀನು ಮಾತ್ರ ನಿಜವಾದ ಕೃಪಾವಂತನಾಗಿರುವೆ. ಪರೀಕ್ಷಿತಿಯನ್ನು ಗರ್ಭದಲ್ಲಿ ನೀನೇ ರಕ್ಷಣೆ ಮಾಡಿದೆ. ಹೇ ಕೃಷ್ಣಮೂರ್ತಿಯೇ, ಗಜೇಂದ್ರನು ಕಕ್ಕುಲತೆಯಿಂದ ಕರೆಯುತ್ತಲೇ ದಯಾನಿಧಿಯಾದ ನೀನು ಜಿಗಿದು ಓಡಿ ಬಂದೆ ।೮೩೭॥ ಪಾಂಡವರು ಅರಗಿನಮನೆಯಲ್ಲಿ ಸುಟ್ಟು ಹೋಗುವುದನ್ನು ನೀನೇ ಗವಿಯ ಮುಖಾಂತರವಾಗಿ ಅವರಿಗೆ ಹೊರಗೆ ತೆಗೆದು ರಕ್ಷಿಸಿದೆ. ಕೊನೆಗೆ ಅರ್ಜುನನ ಕೈವಾರನಾಗಿ ಭೀಷ್ಮನೊಂದಿಗೆ ಯುದ್ಧ ಮಾಡಿದೆ ।೮೩೮॥ ದ್ರೌಪದಿಯ ಮೇಲೆ ಸಂಕಟ ಪ್ರಸಂಗ ಒದಗುತ್ತಲೇ ನೀನು ತ್ವರಿತವಾಗಿ ಧಾವಿಸಿ ಬಂದು ಆಕೆಯ ರಕ್ಷಣೆ ಮಾಡಿದೆ. ತಿಲಮಾತ್ರವೂ ಬತ್ತಲಾಗದಂತೆ ಆಕೆಯು ತೊಡುವ ಸೀರೆಗಳಾದೆ ।೮೩೯॥ ಈ ಪ್ರಕಾರವಾಗಿ ನಿನ್ನ ಕೃಪಾಳೂತನದ ಖ್ಯಾತಿಯನ್ನು ವೇದ, ಪುರಾಣಗಳು, ವರ್ಣನೆ ಮಾಡುತ್ತಲಿವೆ. ಮಹಾ ಮಹಾ ಸಿದ್ಧ ಮಹರ್ಷಿಗಳವರು ನಿನ್ನ ಉತ್ತಮಶ್ಲೋಕದ ಕೀರ್ತಿಯನ್ನು ಹಾಡಿ ಹೊಗಳುತ್ತಿರುವರು ।೮೪೦॥ ನನ್ನ ಕೈಯಿಂದ ತಿಳಿಯದೇ ದುಷ್ಕರ್ಮವು ನಡೆಯಿತು. ಅದಕ್ಕಾಗಿ ತಾವು ನನ್ನನ್ನು ಕ್ಷಮಿಸಿರಿ. ಹೇ ಪುರುಷೋತ್ತಮನೇ, ನೀನು ಪರಮಾತ್ಮನಾಗಿದ್ದು ಕೃಪಾವಂತ ಹಾಗೂ ಕ್ಷಮಾಶೀಲನಾಗಿರುವೆ ।೮೪೧॥ ಅಜಾಮಿಳನು ಮಹಾ ದುರಾಚಾರಿಯಾಗಿದ್ದನು. ಆತನು ಕೇವಲ ಪುತ್ರವ್ಯಾಮೋಹದಿಂದ ನಿನ್ನ ನಾಮದ ಉಚ್ಚಾರ ಮಾಡಿದನು. ಅಷ್ಟರಿಂದಲೇ ಆತನ ಸರ್ವ ಪಾಪಗಳು ಭಸ್ಮವಾದವು. ಇಷ್ಟೊಂದು ನಿಷ್ಪಾಪ ಮಾಡುವ ವಿಷಯದಲ್ಲಿ ನಿನ್ನ ನಾಮದ ದೊಡ್ಡಸ್ತಿಕೆವಿರುವುದು ।೮೪೨॥ ನಿನ್ನ ಪ್ರೇಮಮಯ ನಾಮದ ಉಚ್ಚಾರದಿಂದ ದುರ್ಮತಿಯವರು, ಪಿತೃ ಘಾತಕರು, ದುರಾಚಾರಿಗಳು ಹೀಗೆ ಸರ್ವ ಜನರೂ ನಿಷ್ಪಾಪರಾಗಿ ಭವಸಾಗರದಿಂದ ಪಾರಾಗಿ ಬಿಡುವರು. ಇಂತಹ ಸಾಮರ್ಥ್ಯವು ನಿನ್ನ ನಾಮದಲ್ಲಿರುವುದು ।೮೪೩॥

ಯಾವ ವಿಷ್ಣುವಿನ ನಾಮಸ್ಮರಣೆಯನ್ನು ಮಾಡಲು ಮನುಷ್ಯನ ಕೋಟ್ಯಾವಧೀ ಜನ್ಮಗಳ ಗಾಢ ಅಜ್ಞಾನವು ಇಲ್ಲದಂತೆ ಆಗಿ ಸರ್ವ ಪ್ರಕಾರದ ಕಲ್ಯಾಣವಾಗುವುದು ।೮೪೪॥ ಇಷ್ಟೊಂದು ಯಾರ ನಾಮಸ್ಮರಣೆಯಲ್ಲಿ ಅಗಾಧವಾದ ಯೋಗ್ಯತೆ ಇರುವುದೋ, ಆತನ ರೂಪಕ್ಕೆ ಅಂದರೆ ಶರೀರಕ್ಕೆ ನನ್ನ ಕೈಯಿಂದ ನಿರ್ವಾಣ ಬಾಣ ಪ್ರಯೋಗಿಸಿ ಘಾಸಿ ಮಾಡಿದೆನು. ಇದು ನನ್ನ ಇಂತಹ ಪೂರ್ಣ ಅಪರಾಧವಾಗಿರುವುದು ।೮೪೫॥ ಸಾಧು, ಸಂತರು, ಮಹಾತ್ಮರು ಯಾರನ್ನು ನಿರಂತರವಾಗಿ ವರ್ಣಿಸುತ್ತಿರುವರೋ, ಯಾವುದು ಸ್ವರೂಪದಿಂದ ಕೇವಲ ಸಚ್ಚಿದಾನಂದವಾಗಿದೆಯೋ, ಆತನು ಸರ್ವ ಜಗತ್ತಿನ ಸ್ವಾಮಿಯಾಗಿರುವನು ।೮೪೬॥ ಶ್ರೀಕೃಷ್ಣನೆಂದರೆ ಜಗತ್ತಿನ ಕೇವಲ ಜೀವನನಾಗಿರುವನು. ಇಂತಹ ಶ್ರೀಕೃಷ್ಣನಿಗೆ ನಾನು ನಿರ್ವಾಣದ ಬಾಣ ಹೊಡೆದು ಗಾಯಗೊಳಿಸಿದೆನು. ಇದು ನನ್ನ ಅತ್ಯಂತ ಮಹಾ ಅಪರಾಧವಾಗಿರುವುದು ।೮೪೭॥ ಶ್ರೀಕೃಷ್ಣನು ಈ ಮೂರು ಲೋಕಗಳ ಸಮರ್ಥ ರಾಜನು. ನನ್ನ ಕೈಯಿಂದ ಆ ರಾಜಘಾತವಾಯಿತು. ಹಾಗೆಯೇ ಶ್ರೀಕೃಷ್ಣನು ಈ ಸಂಪೂರ್ಣ ಜಗತ್ತಿನ ಆತ್ಮನಾಗಿರುವುದರಿಂದ ನಾನು ಅಂತಹ ಆತ್ಮಘಾತ ಮಾಡಿದೆನು।೮೪೮॥

ಶ್ರೀಕೃಷ್ಣ ಜಗಾಚಾ ಜನಿತಾ । ತ್ಯಾ ಮ್ಯಾ ಕೇಲೇ ಪಿತೃಘಾತಾ । ಜಗಪ್ರತಿಪಾಳಣೇ ಶ್ರೀಕೃಷ್ಣ ಮಾತಾ। ತ್ಯಾ ಮಾತೃ ಘಾತಾ ಮ್ಯಾ ಕೇಲೇ ।೨೪೯॥ ಶ್ರೀಕೃಷ್ಣ ಬ್ರಾಹ್ಮಣ ಬ್ರಹ್ಮ ಬೋಧ । ತೋ ಮ್ಯಾ ಕೇಲಾ ಬ್ರಹ್ಮ ವಧ । ಯಾಹೀಹೋನ ಅಗಾಧ । ಜಗೀ ಅಪರಾಧ ಅಸೇನಾ ।೨೫೦॥ ರಾಜಘಾತ ಆತ್ಮ ಘಾತ। ಮಾತೃಪಿತೃಬ್ರಹ್ಮ ಘಾತ। ಮಜಚಿ ಘಡಲಾ ಸಮಸ್ತ । ಜೋ ಮ್ಯಾ ಶ್ರೀಕೃಷ್ಣನಾಥ ವಿಂಧಿಲಾ ।೨೫೧॥

ತನ್ಮಾಶು ಜಹಿ ವೈಕುಂಠ ಪಾಪ್ಮಾನಂ ಮೃಗಲುಬ್ಧಕಮ್ । ಯಥಾ ಪುನರಹಂ ತ್ವೇವಂ ನ ಕುರ್ಯಾಂ ಸದತಿಕ್ರಮಮ್ ।೩೭॥

ಅರ್ಥ:- ಹೇ ವೈಕುಂಠನಾಯಕನೇ, ನಾನು ನಿರಪರಾಧಿ ಜಿಗರೆಗಳಿಗೆ ಕೊಲ್ಲುವ ಮಹಾಪಾಪಿಯಾಗಿರುವೆನು. ನೀವು ಈಗಿಂದೀಗಲೇ ನನ್ನನ್ನು ಕೊಂದುಬಿಡಿರಿ. ಕಾರಣ ನನಗೆ ಮೃತ್ಯು ಪ್ರಾಪ್ತವಾಗಲು ಪುನಃ ನನ್ನಕೈಯಿಂದ ಮಹಾಪುರುಷರ ಇಂತಹ ವಧೆಯು ಎಂದಿಗೂ ಆಗುವುದಿಲ್ಲ.

ಐಶಿಯಾ ಮಜ ಪಾಪರೂಪಾಸೀ । ಕೃಪಾ ಕರಾವೀ ಹೃಷೀಕೇಶೀ । ನಿಷ್ಕೃತೀ ಹೋಯ ಪಾಪಿಸೀ । ತ್ಯಾ ಉಪಾಯಾಸೀ ಕರೀ ವೇಗೀ ।೨೫೨॥ ಕೋರಡಿಯೇ ಕೃಪೇಚಾ ಸಂಬಂಧ । ತೇಣೇ ನ ಫಿಟೇ ದೋಷಬಾಧ । ಮಾರ್ಝಾ ಜೇವ್ಹಾ ತೂ ಕರಿಸೀ ವಧ । ತೇವ್ಹಾ ಮೀ ಶುದ್ಧ ಹೋಈನ ।೨೫೩॥ ಮೀ ಲುಬ್ಧಕ ಪಾಪಬುದ್ಧೀ । ಮೃಗಲೋಭೀ ಪಶುಪಾರಧೀ । ತ್ಯಾ ಮಜ ತೂ ನಿಜಹಸ್ತೇ ವಧೀ । ತೈ ಮೀ ತ್ರಿಶುದ್ಧೀ ಉದ್ಧರಲೋ ।೨೫೪॥ ಜೇಣೇ ದೇಹೇ ಕೇಲೇ ಪಾಪ ಕರ್ಮಾ । ತೂ ದೇಹ ನಿವಟೀ ಪುರುಷೋತ್ತಮಾ । ಪುಢತೀ ಐಶಿಯಾ ಅಸತ್ಕರ್ಮಾ ।ನ ಕರೀ ಅಧರ್ಮಾ ತೇ ಕರೀ ।೨೫೫॥ ಬಾಣ ವಿಂದಿಲಾ ತುಜಿಯಾ ಪಾಯಾ । ಹೇ ಅಗಾಧ ಪಾಪ ಕೇಲೇ ಕಾಯಾ। ತೀಸೀ ಶೀಘ್ರ ವಧಾವೇ ಯದುರಾಯಾ । ತೈ ಮಹಾಪಾಪಾ ಯಾ ಹೋಯ ನಿಸ್ತಾರು ।೨೫೬॥ ಜೇಣೇ ದೇಹೇ ಕೇಲೇ ಪಾಪಾಚರಣ । ತ್ಯಾಚೇ ಪ್ರಾಯಶ್ಚಿತ್ತ ಹೇಚಿ ಪೂರ್ಣ । ಕರೀ ನಿಜಹಸ್ತೇ ದೇಹದಂಡಣ । ಮ್ಹಣೋನಿ ಚರಣ ದೃಢ ಧರಿಲೇ ।೨೫೭॥ ದೇಹೇ ಕೇಲೇ ಪಾಪಾಚರಣ । ದೇಹಲೋಭೀ ತೋ ಪಾಪೀ ಪೂರ್ಣ । ಸ್ಥೂಲ ಲಿಂಗ ಆಣಿ ಕಾರಣ । ಯಾಂಚೇ ಕರೀ ಭೇದನ ನಿಜತೇಜಚಕ್ರೇ ।೨೫೮॥

ಯಸ್ಯಾತ್ಮಯೋಗರಚಿತಂ ನ ವಿದುರ್ವಿರಿಂಚೋ ರುದ್ರಾದಯೋಽಸ್ಯ ತನಯಾಃ ಪತಯೋ ಗಿರಾಂ ಯೇ ।
ತ್ವನ್ಮಾಯಯಾ ಪಿಹಿತದೃಷ್ಟಯಾ ಏತದಂಜಃ ಕಿಂ ತಸ್ಯ ತೇ ವಯಮಸದ್ಗತಯೋ ಗೃಣೀಮಃ ।೩೮॥

ಅರ್ಥ:- ಬ್ರಹ್ಮನೇ ಆಗಲಿ ಅಥವಾ ರುದ್ರ ಮುಂತಾದ ಆತನ ಮಕ್ಕಳೇ ಆಗಲಿ ಇಲ್ಲವೇ ವೇದಮಂತ್ರಗಳ ಗುರುಗಳಾದ ಯಾವ ಮಹರ್ಷಿಯೇ ಆಗಲಿ ನಿನ್ನ ಯೋಗಮಾಯೆಯ ವಿಲಾಸವನ್ನು ತಿಳಿಯಲಾರರು. ಕಾರಣ ಅವರ ದೃಷ್ಟಿಯು ಯೋಗ ಮಾಯೆಯಿಂದ ಆವೃತವಾಗಿದೆ. ಇಂತಹದರಲ್ಲಿ ನಮ್ಮಂತಹ ಪಾಪಿ ಜನರು ಈ ವಿಷಯದಲ್ಲಿ ಏನು ಹೇಳಲು ಸಾಧ್ಯ?

ಶ್ರೀಕೃಷ್ಣನು ಈ ಸರ್ವ ಜಗತ್ತಿನ ಪಿತನಾಗಿರುವನು. ಆದ್ದರಿಂದ ನಾನು ಪಿತೃಘಾತವನ್ನೂ ಮಾಡಿದಂತಾಯಿತು. ಜಗತ್ತಿನ ಪ್ರತಿಪಾಲನೆ ಮಾಡುವ ಶ್ರೀಕೃಷ್ಣನಾದ್ದರಿಂದ ಆತನು ಜಗತ್ತಿನ ಮಾತೃನಾಗಿರುವನು. ಆದ್ದರಿಂದ ನಾನು ಮಾತೃಘಾತವನ್ನು ಮಾಡಿಬಿಟ್ಟೆನು।೨೪೯॥ ಶ್ರೀಕೃಷ್ಣನು ಬ್ರಹ್ಮವೇತ್ತಾನಾಗಿರುವುದರಿಂದ ಆತನು ಬ್ರಾಹ್ಮಣನು. ಅಂದಮೇಲೆ ನನ್ನ ಕೈಯಿಂದ ಬ್ರಹ್ಮಹತ್ಯೆಯೂ ಆಯಿತು. ಈ ಅಪರಾಧಕ್ಕಿಂತಲೂ ದೊಡ್ಡದಾದ ಅಪರಾಧವು ಜಗತ್ತಿನಲ್ಲಿ ಬೇರೆ ಯಾವುದೂ ಇರುವುದಿಲ್ಲ ।೨೫೦॥ ಒಟ್ಟಿನಲ್ಲಿ ರಾಜಘಾತ, ಆತ್ಮಘಾತ, ಪಿತೃಘಾತ, ಮಾತೃಘಾತ, ಬ್ರಹ್ಮಘಾತ ಈ ಸರ್ವ ಘಾತಗಳು ನಾನು ಶ್ರೀಕೃಷ್ಣನಿಗೆ ಬಾಣದಿಂದ ಹೊಡೆದ ಕಾರಣ ನನ್ನ ತಲೆಯ ಮೇಲೆ ಬಂದಿರುವುವು ।೨೫೧॥

ಹೇ ಪುರುಷೋತ್ತಮನೇ, ಪಾಮರನಾದ ನನಗೆ ನೀನು ಕ್ಷಮಿಸಬೇಕು. ಯಾವುದರಿಂದ ಈ ಪಾಪದ ಕ್ಷಾಲನೆಯಾದೀತೆಂಬ ಉಪಾಯವನ್ನು ನನಗೆ ಬೇಗನೇ ತಿಳಿಸು ।೨೫೨॥ ನಿನ್ನ ಕೇವಲ ಕೃಪೆಯಿಂದ ನಾನು ದೋಷಮುಕ್ತನಾಗಲು ಸಾಧ್ಯವಿಲ್ಲ. ನೀನು ನನಗೆ ವಧಿಸಿದರೆ ಮಾತ್ರ, ಆಗ ನಾನು ಶುದ್ಧನಾಗುವೆನು ।೨೫೩॥ ನಾನು ಮೊದಲೇ ಬೇಡರವನಾಗಿರುವೆ. ಮೊದಲಿನಿಂದಲೂ ನನ್ನಲ್ಲಿ ಪಾಪ ಬುದ್ಧಿಯೇ ಇರುವುದು. ನಾನು ಮೃಗಗಳ ಲೋಭಿಯಾಗಿರುವೆನು. ಯಾವಾಗಲೂ ಪಶುಹತ್ಯೆ ಮಾಡುವವನಾಗಿರುವೆನು. ಆದ್ದರಿಂದ ಈಗ ನೀನು ನಿನ್ನ ಕೈಯಿಂದಲೇ ನನ್ನನ್ನು ವಧಿಸಿಬಿಡು. ಹಾಗಾದರೆ ಮಾತ್ರ ನನ್ನ ಉದ್ಧಾರವಾಗುವುದು ।೨೫೪॥ ಹೇ ಪುರುಷೋತ್ತಮನೇ, ಯಾವ ದೇಹದಿಂದ ನಾನು ಈ ಪಾಪ ಕರ್ಮವನ್ನು ಮಾಡಿರುವೆನೋ, ಆ ದೇಹವನ್ನೇ ನೀನು ಇಲ್ಲದಂತೆ ಮಾಡು. ಇದರಿಂದ ಇನ್ನು ಮುಂದೆ ಇಂತಹ ಅಸತ್ಕರ್ಮ ಅಥವಾ ಅಧರ್ಮ ಕಾರ್ಯವಾಗಲು ಶಕ್ಯವಾಗುವುದಿಲ್ಲ ।೨೫೫॥ ನಿನ್ನ ಚರಣಕ್ಕೆ ಬಾಣ ಹೊಡೆದು ಛಿದ್ರಗೊಳಿಸಿದೆನು. ಇದು ಈ ದೇಹದ ಹಸ್ತದಿಂದ ಮಹಾ ಪಾತಕವಾಗಿರುವುದು. ಅದಕ್ಕಾಗಿ ಹೇ ಶ್ರೀಕೃಷ್ಣನೇ, ನೀನೇ ಈ ದೇಹವನ್ನು ವಧಿಸಿಬಿಡು. ಅಂದರೇನೇ ಈ ಮಹಾಪಾಪದ ನಿವೃತ್ತಿಯಾಗುವುದು ।೨೫೬॥ ಯಾವ ದೇಹದಿಂದ ಪಾಪದ ಆಚರಣೆಯಾಗಿದೆಯೋ, ಅದಕ್ಕೆ ಇದೇ ಯೋಗ್ಯವಾದ ಪ್ರಾಯಶ್ಚಿತ್ತವಾಗಿರುವುದು. ನೀನು ನಿನ್ನ ಕೈಯಾರೇ ಅದಕ್ಕೆ ಶಿಕ್ಷೆಯನ್ನು ಕೊಡಬೇಕು. ಹೀಗೆನ್ನುತ್ತ ಆತನು ಶ್ರೀಕೃಷ್ಣನ ಚರಣವನ್ನು ಹಿಡಿದನು ।೨೫೭॥ ಈ ದೇಹವು ಪಾಪಾಚರಣೆ ಮಾಡಿರುವುದು.ದೇಹದ ಲೋಭಿಯು ಮಾತ್ರ ಪೂರ್ಣ ಪಾತಕಿಯೇ ಆಗಿರುವನು. ಆದ್ದರಿಂದ ನೀನು ನನ್ನ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ದೇಹವನ್ನೂ ಕೂಡ ನಿನ್ನ ಚಕ್ರದಿಂದ ಭೇದಿಸು ।೨೫೮॥

ದೇಹಸಂಭವಾಚೇ ಮೂಳ । ಸ್ಥೂಲ ಸೂಕ್ಷ್ಮ ಆಣಿ ಕಾರಣ । ಯಾಸೀ ನಾತಳತಾ ತೂ ಶ್ರೀಕೃಷ್ಣ । ಚತುರ್ಭುಜ ಪರಿಪೂರ್ಣ ದೇಹ ಧರಿಸೀ ।೭೫೯॥ ಸ್ಥೂಳ-ಸೂಕ್ಷ್ಮ-ಕಾರಣತಾ । ಯೇ ತಿನ್ಹೀ ತ್ರಿಗುಣೇಸೀ ನಾತಳತಾ । ತೂ ಯೋಗಮಾಯೇಚಿಯಾ ಸತ್ತಾ । ನಾನಾ ಅವತಾರತಾ ದೇಹ ಧರಿಸೀ ।೭೬೦॥ ನವಲ ತುಝಾ ಲೀಲಾವಿಗ್ರಹೋ । ಮತ್ಸ್ಯ ಕೂರ್ಮ ಶ್ವೇತವರಾ ಹೋ । ಹೋತಾ ನ ಧರಿಸೀ ಸಂದೇಹೋ । ಜನ್ಮ ಭಯೋ ತುಜ ನಾಹೀ ।೭೬೧॥ ವೋಡವಲ್ಯಾ ಜನ್ಮ ಏಕ । ಬ್ರಹ್ಮಾದಿಕ ಹೋತೀ ರಂಕ । ತೋ ತೂ ಅವತಾರ ಅನೇಕ । ಧರಿಸೀ ನಿಃಶಂಕ ನಿಜಾತ್ಮತಾ।೭೬೨॥ ಅದೃಷ್ಟಾಚಿಯೇ ನಿಜಗತೀ । ದೇಹಾಸೀ ನಾನಾ ಭೋಗ ಹೋತೀ । ತೂ ಅದೃಷ್ಟೇವೀಣ ಶ್ರೀಪತೀ । ನಾನಾ ಭೋಗಸಂಪತ್ತೀ ಭೋಗಿಸೀ ।೭೬೩॥ ಆಯುಷ್ಯ ತಂವವರೀ ದೇಹಧಾರಣ। ವೇದೇ ನೇಮಸ್ತ ಕೇಲೇ ಜಾಣ । ನವಲ ತುಝೇ ಲೀಲಾವಿಂಧಾನ । ಆಯುಷ್ಯೇ ವೀಣ ದೇಹ ಧರಿಸೀ ।೭೬೪॥ ಕಾಳಸತ್ತಾ ದುರ್ಧರ ಪೂರ್ಣ । ಬ್ರಹ್ಮಾದಿಕಾ ಅಲೋಟ ಮರಣ । ತುಜ ಕಾಳ ವೇಳ ನಸತಾ ಜಾಣ । ಸ್ವಲೀಲಾ ಮರಣ ದಾವಿಸೀ ।೭೬೫॥ ತುಝೇ ಯೋಗಮಾಯೇಚೇ ಯೋಗಗತೀ । ಲೀಲಾವಿಗ್ರಹೇ ದೇಹಸ್ಥಿತೀ । ಅತರ್ಕ್ಯ ಸರ್ವಾಂಸೀ ಸರ್ವಾರ್ಥೀ । ತೇಹೀ ಉಪಪತ್ತೀ ನಿರ್ಧಾರೀ ।೭೬೬॥ ಬ್ರಹ್ಮಾ ಜಗಾಚಾ ಆದಿಕರ್ತಾ । ತ್ಯಾಸಹೀ ನ ಕಳೇ ತುಝೀ ಸತ್ತಾ । ತೂ ನಾನಾ ಅವತಾರೀ ದೇಹ ಧರಿತಾ । ತ್ಯಾಚಾ ಕರ್ತಾ ನವ್ಹೇ ಬ್ರಹ್ಮಾ ।೭೬೭॥ ತೂ ಸ್ವಲೀಲಾ ದೇಹ ಕೈಸಾ ಧರಿಸೀ । ಅವತಾರಚರಿತ್ರೇ ಕೈಸೀ ಕರಿಸೀ । ಕೈಸೇನಿ ತೋ ದೇಹೋ ಸಾಂಡಿಸೀ । ಹೇ ಬ್ರಹ್ಮಾದಿಕಾಂಸೀ ಕಳೇನಾ ।೭೬೮॥ ಜ್ಯಾಸೀ ತೂ ಮಾನಿಸೀ ಅತಿಸನ್ಮಾನೀ । ಸದಾಶಿವ ಜೋ ಕಾ ತ್ರಿಕಾಳಜ್ಞಾನೀ । ತ್ಯಾಸೀಹೀ ಅತರ್ಕ್ಯ ತುಝೀ ಕರಣೀ । ಶಾರ್ಙ್ಗಪಾಣೀ ಶ್ರೀಕೃಷ್ಣಾ ।೭೬೯॥ ಸದಾಶಿವಾಚೇ ನಿಜವಚನೀ । ತೂ ದುಜೇನ ಝಾಲಾಸೀ ಮೋಹಿನೀ । ತೇ ಶಿವಾಸೀ ನ ಕಳೇ ತುಝೀ ಕರಣೀ । ತತ್ಕ್ಷಣೀ ತೋ ಭುಲಲಾ ।೭೭೦॥ ಜಾಣೋನಿ ಯೋಗ ಜ್ಞಾನ ದೋನೀ । ಸನಕಾದಿಕ ಬ್ರಹ್ಮಜ್ಞಾನೀ । ಜಿಂಹೀ ಮಾಯಾಪಡಳ ಭೇದೂನೀ । ಸ್ವಾನಂದಭುವನೀ ಸುಖರೂಪ ।೭೭೧॥ ತ್ಯಾಂಸೀಹೀ ತುಝೀ ಸ್ವಲೀಲಾಶಕ್ತೀ । ಸರ್ವಥಾ ನ ಕಳೇಚಿ ಶ್ರೀಪತೀ । ತೇ ಜಯವಿಜಯಾ ಶಾಪ ದೇತೀ । ಸಕೋಪಸ್ಥಿತೀ ವೈಕುಂಠೀ ।೭೭೨॥

ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಇವು ಮೂರೂ ಶರೀರಗಳು ದೇಹದ ಉತ್ಪತ್ತಿಯ ಮೂಲವಾಗಿರುವುವು ಶ್ರೀಕೃಷ್ಣನಾದ ನೀನು ಈ ಮೂರೂ ದೇಹಗಳಿಗೆ ಸ್ಪರ್ಶ ಮಾಡದೇ ಪೂರ್ಣ ಚತುರ್ಭುಜ ದೇಹ ಧಾರಣೆ ಮಾಡಿರುವೆ ।೭೫೯॥ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಈ ಮೂರು ದೇಹಗಳಿಗೆ ಮತ್ತು ಮೂರು ಗುಣಗಳಿಗೆ ಸ್ಪರ್ಶ ಸಹ ಮಾಡದೇ ನಿನ್ನ ಯೋಗಮಾಯೆಯ ಸತ್ತೆಯಿಂದ ನಾನಾ ಪ್ರಕಾರಗಳ ಅವತಾರದೇಹಗಳನ್ನು ಧರಿಸುತ್ತಿರುವೆ ।೭೬೦॥ ನಿನ್ನ ಲೀಲಾ ಶರೀರಗಳು ವಿಚಿತ್ರವಾಗಿವೆ. ಮತ್ಸ್ಯ, ಕೂರ್ಮ, ಶ್ವೇತವರಾಹ ಇವುಗಳ ಜನ್ಮ ತೆಗೆದುಕೊಳ್ಳಲು ನಿನಗೆ ಯಾವುದೇ ಪ್ರಕಾರದ ಸಂದೇಹವೇ ಆಗಲಿಲ್ಲ. ಕಾರಣ ನಿನಗೆ ಜನ್ಮಗಳ ಯಾವ ಭಯವೂ ಇರುವುದಿಲ್ಲ ।೭೬೧॥ ಒಂದೇ ಜನ್ಮವು ಒದಗಲು ಬ್ರಹ್ಮದೇವಾದಿಕರೂ ಕೂಡ ದೀನರಾಗುವರು. ಆದರೆ ನೀನು ನಿನ್ನ ಆತ್ಮಸಾಮರ್ಥ್ಯದಿಂದ ಅನೇಕ ಅವತಾರಗಳ ಅನೇಕ ಜನ್ಮಗಳನ್ನು ಧರಿಸಿರುವೆ ।೭೬೨॥ ಪ್ರಾರಬ್ಧ ಕರ್ಮಾನುಸಾರವಾಗಿ ದೇಹಕ್ಕೆ ಅನೇಕ ಪ್ರಕಾರಗಳ ಭೋಗಗಳನ್ನು ಭೋಗಿಸಬೇಕಾಗುವುದು. ಆದರೆ ಶ್ರೀಕೃಷ್ಣನೇ, ನೀನು ಪ್ರಾರಬ್ಧವಿಲ್ಲದೇ ನಾನಾ ಪ್ರಕಾರಗಳ ಭೋಗಸಂಪತ್ತುಗಳ ಉಪಭೋಗ ಪಡೆಯುವೆ ।೭೬೩॥ ಆಯುಷ್ಯ ಮುಗಿಯುವವರೆಗೂ ದೇಹಧಾರಣೆ ಮಾಡಬೇಕಾಗುವುದು. ಹೀಗೆ ವೇದವು ನೇಮಿಸಲ್ಪಟ್ಟಿರುವುದು. ಆದರೆ ನಿನ್ನ ಲೀಲೆಯು ಅಗಾಧವಾಗಿದೆ. ನೀನು ಯಾವ ಆಯುಷ್ಯವಿಲ್ಲದೇ ದೇಹಧಾರಣೆ ಮಾಡಬಲ್ಲೆ ।೭೬೪॥ ಕಾಲನ ಸತ್ತೆಯು ಅತ್ಯಂತ ದುರ್ಧರವಾಗಿರುವುದು. ಬ್ರಹ್ಮದೇವಾದಿಕರಿಗೂ ಮೃತ್ಯು ತಪ್ಪಿರುವುದಿಲ್ಲ. ನೀನು ಕಾಲಸಮಯ ಯಾವುದನ್ನೂ ಲೆಕ್ಕಿಸದೇ ಲೀಲಾಮಾತ್ರದಿಂದ ನಿನ್ನ ಮರಣವನ್ನು ತೋರಿಸುವೆ ।೭೬೫॥ ನಿನ್ನ ಯೋಗಮಾಯೆಯ ಯೋಗ ಮಾರ್ಗವು ಹಾಗೂ ಲೀಲಾಶರೀರದ ಸ್ಥಿತಿಯು ಸರ್ವರಿಗೂ ಅತರ್ಕ್ಯವಾಗಿರುವುದು. ಅದರ ಕಾರಣ ಈಗ ಹೇಳುವೆನು ।೭೬೬॥ ಬ್ರಹ್ಮದೇವನು ಈ ಯಾವ ಜಗತ್ತಿನ ಆದಿಕರ್ತನು, ಆದರೆ ಆತನಿಗೂ ಸಹ ನಿನ್ನ ಸತ್ತೆಯು ತಿಳಿಯಲು ಸಾಧ್ಯವಾಗಿಲ್ಲ. ನೀನು ನಾನಾ ಅವತಾರಗಳನ್ನು ಧರಿಸುತ್ತಿರುವೆ. ಆದರೆ ಆ ದೇಹಗಳ ಕರ್ತ ಬ್ರಹ್ಮದೇವನಲ್ಲ ।೭೬೭॥ ನೀನು ನಿನ್ನ ಲೀಲೆಯಿಂದಲೇ ದೇಹ ಧಾರಣ ಮಾಡುವೆ. ಅವತಾರ ಚರಿತ್ರೆ ಹೇಗೆ ಮಾಡುತ್ತಿರುವೆ, ಆ ದಿವ್ಯ ದೇಹವನ್ನು ಹೇಗೆ ವಿಸರ್ಜಿಸುವೆ ಇದು ಬ್ರಹ್ಮದೇವನಿಗೂ ಕೂಡ ತಿಳಿಯಲಾರದು ।೭೬೮॥ ಹೇ ಶಾರಂಗಧರನಾದ ಶ್ರೀಕೃಷ್ಣನೇ, ನೀನು ಯಾರನ್ನು ಪೂಜ್ಯಭಾವದಿಂದ ಮನ್ನಣೆ ಕೊಡುತ್ತಿರುವಿಯೋ, ಆ ತ್ರಿಕಾಲ ಜ್ಞಾನೀ ಸದಾಶಿವನಿಗೂ ಸಹ ನಿನ್ನ ಲೀಲೆ ಅತರ್ಕ್ಯವಾಗಿರುವುದು ।೭೬೯॥ ಸದಾಶಿವನ ವಿನಂತಿಮೇರೆಗೆ ನೀನು ಎರಡನೆಯ ಸಾರೆ ಮೋಹಿನೀ ರೂಪ ತಾಳಿದೆ. ಆದರೆ ನಿನ್ನ ಈ ಕೃತಿ ಆತನಿಗೆ ತಿಳಿಯಲಿಲ್ಲ. ಆತನು ತತ್ಕಾಲದಲ್ಲಿ ಆಕೆಯಲ್ಲಿ ಭುಲಾಯಿಸಿದನು ।೭೭೦॥ ಹೇ ಶ್ರೀಕೃಷ್ಣನೇ, ಯೋಗ ಮತ್ತು ಜ್ಞಾನ ಈ ಎರಡನ್ನೂ ತಿಳಿದಿರುವ ಬ್ರಹ್ಮಜ್ಞಾನೀ ಸನಕಾದಿಕರು ಇವರು ಮಾಯೆಯ ಪರದೆಯನ್ನು ದೂರ ಮಾಡಿ ಆತ್ಮಸ್ವರೂಪದಲ್ಲಿ ಸುಖರೂಪರಾಗಿರುವರು ।೭೭೧॥ ಅವರಿಗೂ ಕೂಡ ನಿನ್ನ ಲೀಲೆಯಿಂದ ಧರಿಸಿರುವ ವೃತ್ತಿ ತಿಳಿಯಲಿಲ್ಲ. ಅವರು ವೈಕುಂಠಕ್ಕೆ ಬಂದು ಜಯವಿಜಯರಿಗೆ ಕ್ರೋಧದಿಂದ ಶಾಪ ಕೊಟ್ಟರು ।೭೭೨॥

ಪಾರಂಗತ ವೇದಶಾಸ್ತ್ರಾರ್ಥೀ । ಬ್ರಹಸ್ಪತ್ಯಾದಿ ವಾಚಸ್ಪತೀ । ತ್ಯಾಂಸೀಹೀ ಲೀಲಾವಿಗ್ರಹಸ್ಥಿತೀ । ನ ಕಳೇ ನಿಶ್ಚಿತೀ ಶ್ರೀಕೃಷ್ಣಾ ।೨೭೩॥ ಜೇ ಸಜ್ಞಾನ ಜ್ಞಾತೇ ಪರಮಾರ್ಥೀ । ತಾಂಸೀಹೀ ಅತರ್ಕ್ಯ ಅವತಾರಶಕ್ತೀ । ಮಾ ಇಂದ್ರಾದಿ ದೇವಾಂಸೀ ತೇ ಸ್ಥಿತೀ । ಕೈಶಾ ರೀತೀ ಕಳೇಲ ।೨೭೪॥ ಇಂದ್ರಾದಿ ದೇವಾ ದಿವಿಭೋಗನಿಷ್ಠೀ । ಮಾಯಾ ಆಚ್ಛಾದೀ ತಯಾಂಚ್ಯಾ ದೃಷ್ಟೀ । ತ್ಯಾಂಸೀ ತುಝೀ ಲೀಲೇಚೀ ಗೋಷ್ಟೀ । ನ ಕಳೇ ಜಗಜೇಠೀ ನಿಶ್ಚಿತ ।೨೭೫॥ ತೇಥ ಮಾಯಾವೀ ದೇಹವಂತಾ । ಉದ್‌ಬೋಧ ನವ್ಹೇ ಪೈ ಸರ್ವಥಾ । ತುಝೀ ಲೀಲಾ ಶ್ರೀಕೃಷ್ಣನಾಥಾ । ಅತರ್ಕ್ಯ ಸರ್ವಥಾ ಸರ್ವಾಂಸೀ।೨೭೬॥ ಸುಖೇ ಹೋಈಲ ಬ್ರಹ್ಮಜ್ಞಾನ । ಪರೀ ತುಝೀ ಸ್ವಲೀಲಾದೇಹಧಾರಣ । ಯಾಚೇ ನೇಣತೀ ಪರ್ಯವಸಾನ । ಅತಿ ಸಜ್ಞಾನ ಸಾಕಲ್ಯೇ ।೨೭೭॥ ತೇಥ ಮೀ ತಂವ ಅಧಮ ಜನ । ಅಸದ್ಗತೀಚೇ ಭಾಜನ । ತ್ಯಾ ಮಜ ತುಝೀ ಲೀಲಾವರ್ಣನ । ಸರ್ವಥಾ ಜಾಣ ಅತರ್ಕ್ಯ ।೨೭೮॥ ಆತಾ ಅಸೋ ಹೇ ನಿರೂಪಣ । ಬಹು ಬೋಲಾಚೇ ಕಾಯ ಕಾರಣ । ಮಾಝ್ಯಾ ಪಾಪಾಚೇ ಪುರಶ್ಚರಣ । ದೇಹದಂಡಣ ಕರೀ ಕೃಷ್ಣಾ ।೨೭೯॥ ತುಝೇನಿ ಹಸ್ತೇ ದೇಹದಂಡಣ । ತೇಣೇ ಸಕಳ ಪಾಪಾಂಚೇ ನಿರ್ದಳಣ । ಮಜ ಉದ್ಧರಾವಯಾ ಜಾಣ । ಹೇ ಕೃಪಾ ಪೂರ್ಣ ಕರಾವೀ ।೨೮೦॥ ಮ್ಹಣೋನಿ ಘಾತಲೇ ಲೋಟಾಂಗಣ । ಧಾಂವೋನಿ ಧರಿಲೇ ದೋನೀ ಚರಣ । ಐಕೋನಿ ವ್ಯಾಧಾಚೇ ಸ್ತವನ । ಕೃಪಾ ಶ್ರೀಕೃಷ್ಣ ತುಷ್ಟಲಾ ।೨೮೧॥

ಶ್ರೀಭಗವಾನುವಾಚ :-

ಮಾ ಭೈರ್ಜರೇತ್ವಮುತ್ತಿಷ್ಠ ಕಾಮ ಏಷ ಕೃತೋ ಹಿ ಮೇ । ಯಾಹೀ ತ್ವಂ ಮದನುಜ್ಞಾತಃ ಸ್ವರ್ಗಂ ಸುಕೃತಿನಾಂ ಪದಮ್ ।೩೯॥

ಅರ್ಥ:- ಶ್ರೀಕೃಷ್ಣನು ನುಡಿದನು ; ಪ್ರಿಯ ಜರಾ ಬೇಡನೇ, ಹೆದರದೇ ಎದ್ದೇಳು. ಆಗುವುದೆಲ್ಲ ನನ್ನ ಇಚ್ಛಾನುಸಾರವಾಗಿಯೇ ಆಗಿದೆ. ಈಗ ನನ್ನ ಆಜ್ಞೆಯಂತೆ ಪುಣ್ಯಸ್ಥಾನವಾದ ಆಧ್ಯಾತ್ಮಿಕ ಲೋಕಕ್ಕೆ ತೆರಳು ಎಂದು ಉತ್ತರಿಸಿದನು.

ಜೋ ವೇದಾರ್ಥಾಚಾ ಮಥಿತ ಬೋಧ । ಜೋ ಜಗದಾದಿ- ಆನಂದಕಂದ । ಜೋ ಸ್ವರೂಪೇ ಸ್ವಾನಂದ ಶುದ್ಧ । ತೋ ವ್ಯಾಧೇಸೀ ಗೋವಿಂದ ಸಕೃಪ ಬೋಲೇ ।೨೮೨॥ ತೂ ಜೀವಘಾತಕ ಪಾರಧೀ । ಭಯೆ ಮಾನಿಸೀ ಮಮಾಪರಾಧೀ । ತುಜ ಅಭಯ ಗಾ ತ್ರಿಶುದ್ಧೀ । ಮಾಝೀ ಕಾರ್ಯಸಿದ್ಧೀ ತ್ವಾಂ ಕೇಲೀ ।೨೮೩॥ ಕುಮಾರೀ ಸಾಂಬ ಕೇಲಾ ಸ್ತ್ರೀರೂಪ । ಕಪಟೇ ಬ್ರಾಹ್ಮಣಾ ಆಲಾ ಕೋಪ । ಕುಳಾಸೀ ಝಾಲಾ ಬ್ರಹ್ಮಶಾಪ । ಹಾ ತ್ರಿವಿಧ ಸಂಕಲ್ಪ ಮಾಝಾಚಿ ।೨೮೪॥

ವೇದಶಾಸ್ತ್ರಪಾರಾಂಗತರಾಗಿರುವ ಬ್ರಹಸ್ಪತಿ ಮೊದಲು ಮಾಡಿ ವಾಣಿಯ ನಿಯಂತ್ರಕರು ಇವರಿಗೂ ಸಹ ಹೇ ಶ್ರೀಕೃಷ್ಣನೇ, ನಿನ್ನ ಲೀಲಾದೇಹದ ಆಟ ನಿಜವಾಗಿಯೂ ತಿಳಿಯಲಾರದಾಯಿತು ।೨೭೩॥ ಪರಮಾರ್ಥಿ ಸಜ್ಞಾನೀ ಜನರು ನಿನ್ನ ಅತರ್ಕ್ಯ ಅವತಾರ ಶಕ್ತಿ ತಿಳಿಯಲಾರರು. ಅಂದಮೇಲೆ ಇಂದ್ರಾದಿಕ ದೇವತೆಗಳವರಿಗೆ ಇದು ಹೇಗೆ ತಿಳಿಯಲು ಸಾಧ್ಯ? ।೨೭೪॥ ಹೇ ಜಗಜೇಠೀ ಶ್ರೀಕೃಷ್ಣನೇ, ಇಂದ್ರಾದಿ ದೇವತೆಗಳವರಿಗೆ ಸ್ವರ್ಗದಲ್ಲಿನ ದಿವ್ಯ ಭೋಗಗಳ ಲಾಲಸೆಯಿರುವುದು. ಆದ್ದರಿಂದ ಅವರ ದೃಷ್ಟಿಯು ಮಾಯೆಯಿಂದ ಮುಚ್ಚಿ ಹೋಗಿರುವುದು. ಆದ್ದರಿಂದ ಅವರಿಗೆ ನಿನ್ನ ಲೀಲಾ ವಿಲಾಸಗಳು ಸ್ವಲ್ಪವೂ ಕೂಡ ತಿಳಿಯಲು ಸಾಧ್ಯವಾಗುವುದಿಲ್ಲ ।೨೭೫॥ ಅಂದಮೇಲೆ ಅವಿದ್ಯಾತ್ಮಕ ದೇಹ ಧರಿಸಿರುವವರಿಗೆ ಈ ಮಾತಿನ ಜ್ಞಾನವಾದರೂ ಹೇಗಾಗಲು ಸಾಧ್ಯ ? ಹೇ ಶ್ರೀಕೃಷ್ಣನೇ, ನಿನ್ನ ಲೀಲೆಯು ಸರ್ವರಿಗೂ ಸರ್ವತೋಪರೀ ಅತರ್ಕ್ಯವಾಗಿರುವುದು ।೨೭೬॥ ಬ್ರಹ್ಮಜ್ಞಾನವನ್ನು ಸಹಜವಾಗಿ ಪಡೆಯಬಹುದು. ಆದರೆ ನಿನ್ನ ಲೀಲಾದೇಹಧಾರಣ ಮತ್ತು ಅದರ ನಾಶ ಮಹಾ ಮಹಾ ವಿದ್ವಾನರಿಗೂ ಕೂಡ ಪರಿಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ ।೨೭೭॥ ಇವರಲ್ಲಿ ನಾನು ಮಾತ್ರ ಅಧಮ ಮನುಷ್ಯನಾಗಿದ್ದು ಕೇವಲ ಅಸದ್‌ವೃತ್ತಿಯ ಪಾತ್ರನು. ಹೀಗಿರುವ ನನಗೆ ಲೀಲೆಯ ವರ್ಣನೆ ಪರಿಪೂರ್ಣವಾಗಿ ಮಾಡುವುದು ಅಶಕ್ಯವಾದ ಮಾತಾಗಿದೆ ।೨೭೮॥ ಈಗ ಈ ಮಾತುಗಳು ಇರಲಿ, ಅಧಿಕ ಮಾತನಾಡುವ ಕಾರಣವಾದರೂ ಏನಿದೆ ? ಹೇ ಮನೋಹರ ಶ್ರೀಕೃಷ್ಣನೇ,ನನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ನನಗೆ ದೇಹದಂಡನೆ ಮಾಡು ।೨೭೯॥ ನಿನ್ನ ಕೈಯಿಂದಲೇ ನನ್ನ ದೇಹದ ವಧೆಯಾಗಲು ಸರ್ವ ಪಾಪಗಳ ನಾಶವಾಗುವುದು. ನನ್ನ ಉದ್ಧಾರಕ್ಕಾಗಿ ದಯಮಾಡಿ ಇಷ್ಟೊಂದು ಪೂರ್ಣವಾಗಿ ಕೃಪೆ ಮಾಡಬೇಕು ।೨೮೦॥ ಹೀಗೆ ಹೇಳುತ್ತ ಆತನು ಲೋಟಾಂಗಣ ಹಾಕಿದನು ಪುನಃ ಶ್ರೀಕೃಷ್ಣನ ಎರಡೂ ಚರಣಗಳನ್ನು ಹಿಡಿದನು. ಈ ವ್ಯಾಧನ ಸ್ತುತಿ ಕೇಳಿ ಶ್ರೀಕೃಷ್ಣನು ಸಂತುಷ್ಟನಾಗಿ ಕೃಪೆದೋರಿದನು ।೨೮೧॥

ಯಾವ ವೇದಾರ್ಥದ ಜ್ಞಾನದ ಸಾರನಾದ, ಯಾವ ಜಗದಾದಿ ಆನಂದಕಂದನಾದ, ಯಾವ ಸ್ವರೂಪದಿಂದ ಶುದ್ಧ ಸ್ವಾನಂದನಾದ ಆ ಗೋವಿಂದನು ಕೃಪಾಪೂರಿತನಾಗಿ ವ್ಯಾಧನಿಗೆ ಹೀಗೆ ಹೇಳಿದನು ।೨೮೨॥ ನೀನು ಪ್ರಾಣಿಗಳನ್ನು ಕೊಲ್ಲುವ ಬೇಡನಾಗಿರುವೆ. ಈಗ ನನ್ನ ಈ ಅಪರಾಧ ಮಾಡಿದ್ದಕ್ಕಾಗಿಯೇ ಅತ್ಯಂತ ಭಯಗ್ರಸ್ತನಾಗಿರುವೆ. ಆದರೆ ನಾನು ನಿನಗೆ ಪೂರ್ಣವಾಗಿ ಅಭಯ ನೀಡುವೆನು. ಕಾರಣ ನೀನು ನನ್ನ ದೊಡ್ಡ ಕಾರ್ಯ ಮಾಡಿರುವೆ ।೨೮೩॥ ಕುಮಾರ ಸಾಂಬನಿಗೆ ಸ್ತ್ರೀರೂಪ ಕೊಡಲಾಗಿತ್ತು. ಇವರ ಕಪಟ ಕೃತ್ಯದಿಂದ ಬ್ರಾಹ್ಮಣರಿಗೆ ಕ್ರೋಧ ಉಂಟಾಯಿತು. ಇದರಿಂದ ನಮ್ಮ ಯಾದವ ಕುಲಕ್ಕೆ ಶಾಪ ತಟ್ಟಿತು. ಈ ತ್ರಿವಿಧ ಸಂಕಲ್ಪವು ನನ್ನದೇ ಆಗಿದೆ ।೨೮೪॥

ಶಾಪಾವಶೇಷ ಲೋಹ ಜಾಣ । ತ್ಯಾಚಾ ತುವಾ ಕರೋನಿ ಬಾಣ । ಮೃಗಲೋಭೇ ವಿಂಧಿಲಾ ಚರಣ । ಯಾಸಹೀ ಕಾರಣ ಸಂಕಲ್ಪ ಮಾಝಾ ।೨೮೫॥ ಮೀ ಬುದ್ಧೀಚೇ ಅನಾದಿ ಬುದ್ಧೀ । ಮೀ ಕ್ರಿಯೇಚೀ ಕ್ರಿಯಾ ತ್ರಿಶುದ್ಧೀ । ತೇಥೇ ಅಹಂಕರ್ತೃತ್ವಾಚೀ ವಿಧೀ । ತೂ ವೃಥಾ ಅಪರಾಧೀ ಮ್ಹಣವಿಸೀ ।೨೮೬॥ ಮಿಥ್ಯಾ ಧರೂನಿ ದೇಹಾಭಿಮಾನ । ಮ್ಹಣಸೀ ಘಡಲೇ ಮಜ ಪಾಪ ಪೂರ್ಣ । ತ್ಯಾಹೀ ಪಾಪಾಸೀ ಪುರಶ್ಚರಣ । ಮಾಝೇ ದರ್ಶನ ಮುಖ್ಯತ್ವೇ ।೨೮೭॥ ಮಾಝಿಯಾ ನಾಮಾ ಏಕಾಸಾರೀ । ಜಳತೀ ಮಹಾಪಾತಕಾಂಚ್ಯಾ ಕೋಟೀ । ತ್ಯಾ ಮಜ ತುವಾ ದೇಖಿಲೇ ದೃಷ್ಟೀ । ಪರಮ ಭಾಗ್ಯೇ ಭೇಟೀ ಘಡಲೀ ತುಜ ।೨೮೮॥ ಮಾಝೀ ಘ್ಯಾವಯಾ ಕ್ಷಣಾರ್ಧ ಭೇಟೀ । ಏಕ ರಿಘಾಲೇ ಗಿರಿಕಪಾಟೀ । ಏಕ ಯೋಗಯಾಗಸಂಕಟೀ । ಝಾಲೇ ಮಹಾಹಟೀ ನೇಮಸ್ತ ।೨೮೯॥ ಏವಂ ನಾನಾ ನೇಮ ಆಟಾಟೀ । ಶಿಣತಾಂಹೀ ಕಲ್ಪಕೋಟೀ । ಸ್ವಪ್ನೀಂಹೀ ನ ಲಭೇ ಮಾಝೀ ಭೇಟೀ । ತ್ಯಾ ಮಜ ತ್ವಾಂ ದೃಷ್ಟೀ ದೇಖಿಲೇ ।೨೯೦॥ ಮಾಝೇ ಹೋತಾಂಚಿ ದರ್ಶನ ।ಸಕಳ ಪಾತಕಾ ನಿರ್ದಳಣ । ತೂ ತಂವ ಪುಣ್ಯಾತ್ಮಾ ಪರಿಪೂರ್ಣ । ಪಾಪಾಭಿಮಾನ ಧರೂ ನಕೋ ।೨೯೧॥ ಪಾಪಾಭಿಮಾನೇ ಅಧೋಗತೀ । ಪುಣ್ಯಾಭಿಮಾನೇ ಸ್ವರ್ಗಾ ಜಾತೀ । ನಿರಭಿಮಾನೇ ಮಾಝೀ ಪ್ರಾಪ್ತೀ । ಸತ್ಯ ವಚನೋಕ್ತೀ ಪೈ ಮಾಝೀ ।೨೯೨॥ ತೂ ಐಸೇ ಮಾನಿಸೀ ಆಪಣ । ಪರಬ್ರಹ್ಮ ಪರಮಾತ್ಮಾ ಶ್ರೀಕೃಷ್ಣ । ತ್ಯಾಸೀ ವಿಂಧಿಲಾ ನಿರ್ವಾಣಬಾಣ । ಹೇ ಪಾಪ ದಾರುಣ ಅನಿವಾರ ।೨೯೩॥ ಲೋಹಪರಿಸಾ ಆಲಿಂಗನ । ತೇಣೇ ಲೋಹ ಹೋಯ ಸುವರ್ಣ । ತ್ಯಾಸೀ ಫೋಡೂ ಆಲ್ಯಾ ಲೋಹಘಣ । ಆಘಾತೇ ಸುವರ್ಣ ತೋ ಹೋಯ ।೨೯೪॥ ತೇವೀ ಭಕ್ತೀ ಘೇತಲ್ಯಾ ಮಾಝೀ ಭೇಟೀ । ಪಾತಕೇ ಜಾತೀ ಉಠಾಉಠೀ । ಕಾ ದ್ವೇಷೇ ದೇಖಿಲ್ಯಾ ಮಜ ದೃಷ್ಟೀ । ಪಾತಕಾ ತುಟೀ ತತ್ಕಾಳ ।೨೯೫॥ ಹೋ ಕಾ ಇತರಾಂಚ್ಯಾ ಅಪರಾಧತಾ । ಪ್ರಾಣೀ ಪಾವೇ ಅಧಃಪಾತಾ । ತೋಚಿ ಅಪರಾಧ ಮಾಝಾ ಕರಿತಾ । ನಿತ್ಯಮುಕ್ತತಾ ಅಪರಾಧ್ಯಾ ।೨೯೬॥ ಮಮಾಪರಾಧೇ ನರಕ ಪಾವೇ । ತೈ ಮಾಝೇ ಸಾಮರ್ಥ್ಯ ಬುಡಾಲೇ ಆಘವೇ । ಮಾಝೇನಿ ಅಪರಾಧೇ ಸುಖ ಪಾವೇ । ಮುಕ್ತಿವೈಭವೇ ಭಯನಿರ್ಮುಕ್ತ ।೨೯೭॥ ವಿಷ ಮ್ಹಣೋನಿ ಅಮೃತಪಾನ । ಕೇಲ್ಯಾ ಅಮರತ್ವ ನ ಚುಕೇ ಜಾಣ । ತೇವೀ ದ್ವೇಷೇಹೀ ಮಾಝೇ ದರ್ಶನ । ಕರೀ ಪಾವನ ಪ್ರಾಣ್ಯಾಸೀ ।೨೯೮॥

ಈ ಶಾಪದಿಂದ ಉಳಿದುಕೊಂಡಿದ್ದ ಯಾವ ಕಬ್ಬಿಣದ ಚೂರನ್ನು ನೀನು ಬಾಣವನ್ನಾಗಿ ಮಾಡಿ ಮೃಗದ ಲೋಭಕ್ಕಾಗಿ ನನ್ನ ಚರಣವನ್ನು ಛಿದ್ರಗೊಳಿಸಿದೆ. ಅದಕ್ಕೂ ಕೂಡ ನನ್ನ ಸಂಕಲ್ಪವೇ ಕಾರಣೀಭೂತವಾಗಿದೆ ।೨೮೫॥ ಬುದ್ಧಿಯ ಅನಾದಿ ಬುದ್ಧೀ ನಾನೇ ಆಗಿರುವೆನು. ಕ್ರಿಯೆಗಳ ಕ್ರಿಯೆಯೂ ಕೂಡ ನಿಜವಾಗಿಯೂ ನಾನೇ ಆಗಿರುವೆನು. ಹೀಗಿರಲು ನೀನು ಮಾತ್ರ ವ್ಯರ್ಥವಾಗಿ ಅಭಿಮಾನದಿಂದ ನಾನು ಅಪರಾಧೀ ಎಂದು ಹೇಳುತ್ತಿರುವೆ ।೨೮೬॥ ಮಿಥ್ಯೆಯಾದ ದೇಹಾಭಿಮಾನವನ್ನು ಹಿಡಿದು ನನಗೆ ಪಾಪವು ತಟ್ಟಿತು ಎಂದು ಹೀಗೆ ನೀನು ಹೇಳುತ್ತಿರುವೆ. ಆದರೆ ನನ್ನ ದರ್ಶನವೇ ಆ ಪಾಪದ ಪ್ರಾಯಶ್ಚಿತ್ತವಾಗಿರುವುದು ।೨೮೭॥ ನನ್ನ ಒಂದೇ ನಾಮದಿಂದ ಕೋಟ್ಯಾವಧೀ ಪಾಪಗಳು ನಷ್ಟವಾಗುವುವು. ಹೀಗಿರುವ ನನ್ನನ್ನು ನೀನು ನಿನ್ನ ಸಾಕ್ಷಾತ್ ದೃಷ್ಟಿಯಿಂದ ನೋಡಿರುವೆ. ನಿನಗೆ ಈ ದರ್ಶನವು ಮಹಾಭಾಗ್ಯದಿಂದ ಪ್ರಾಪ್ತವಾಗಿದೆ ।೨೮೮॥ ನನ್ನ ಅರ್ಧಕ್ಷಣದ ಭೇಟಿಗಾಗಿ ಕೆಲವು ಯೋಗಿ ಜನರು ಪರ್ವತದ ಗುಹೆಯಲ್ಲಿ ಹೋಗಿ ಕುಳಿತುಕೊಳ್ಳುವರು. ಕೆಲವರು ಅತ್ಯಂತ ಕಷ್ಟ ಸೋಸುತ್ತ ಯೋಗ ಯಾಗ ಮಾಡುವರು. ಇನ್ನೂ ಕೆಲವರು ಹಠಯೋಗ ಆಚರಿಸುವರು ।೨೮೯॥ ಒಟ್ಟಾರೆ ಹೇಳಬೇಕೆಂದರೆ, ಅನೇಕ ಪ್ರಕಾರದ ಸಾಯಾಸಪಡುತ್ತ ಕೋಟ್ಯಾವಧೀ ಕಲ್ಪಗಳವರೆಗೆ ಶ್ರಮವಹಿಸಿದರೂ ಕೂಡ ಸ್ವಪ್ನದಲ್ಲಿಯೂ ಸಹ ನನ್ನ ಭೇಟಿಯಾಗಲು ಸಾಧ್ಯವಿಲ್ಲ. ಹೀಗಿರುವ ನನ್ನನ್ನು ನೀನು ಇಂದು ಪ್ರತ್ಯಕ್ಷವಾಗಿ ದರ್ಶನ ಪಡೆದಿರುವೆ ।೨೯೦॥ ನನ್ನ ದರ್ಶನವಾಗುತ್ತಲೇ ಸರ್ವ ಪಾಪಗಳ ನಾಶವಾಗುವುದು. ನೀನು ಪರಿಪೂರ್ಣವಾಗಿ ಪುಣ್ಯಾತ್ಮನು. ವ್ಯರ್ಥವಾಗಿ ಪಾಪದ ಅಭಿಮಾನ ಹಿಡಿಯಬೇಡ ।೨೯೧॥ ಪಾಪದ ಅಭಿಮಾನದಿಂದ ಅಧೋಗತಿಯು ಪ್ರಾಪ್ತವಾಗುವುದು. ಪುಣ್ಯದ ಅಭಿಮಾನದಿಂದ ಸ್ವರ್ಗಸುಖದ ಪ್ರಾಪ್ತಿಯಾಗುವುದು. ಆದರೆ ನಿರಾಭಿಮಾನದಿಂದ ನನ್ನ ಪ್ರಾಪ್ತಿಯಾಗುವುದು. ಈ ನನ್ನ ವಚನೋಕ್ತಿಯು ಪರಿಪೂರ್ಣವಾಗಿ ಸತ್ಯವೆಂದು ತಿಳಿ ।೨೯೨॥ ನೀನು ಹೀಗೆ ತಿಳಿದುಕೊಂಡಿರಬಹುದು. ಶ್ರೀಕೃಷ್ಣನು ಪರಬ್ರಹ್ಮ ಪರಮಾತ್ಮನು. ಹೀಗಿರುವ ಆತನಿಗೆ ನಾನು ನಿರ್ವಾಣ ಬಾಣದಿಂದ ಭೇದಿಸಿಬಿಟ್ಟೆನು. ಇದೊಂದು ಘನಘೋರ ಪಾಪದ ಕಾರ್ಯವಾಗಿರುವುದು ।೨೯೩॥ ಆದರೆ ಹೀಗಿದೆ ನೋಡು, ಕಬ್ಬಿಣಕ್ಕೆ ಪರೀಸ ಮಣಿಯ ಸ್ಪರ್ಶವಾಗುತ್ತಲೇ ಅದು ಬಂಗಾರವಾಗುವುದು. ಪರೀಸಮಣಿಗೆ ಕಬ್ಬಿಣದ ಸುತ್ತಿಗೆಯಿಂದ ಹೊಡೆತ ಹಾಕುತ್ತಲೇ ಅದು ತಕ್ಷಣ ಸುವರ್ಣಮಯವಾಗುವುದು ।೨೯೪॥ ಅದರಂತೆ ಭಕ್ತಿಯಿಂದ ನನ್ನ ಭೇಟಿಯಾಗುವುದೊಂದೇ ತಡ, ಪಾಪಗಳು ಕೂಡಲೇ ನಷ್ಟವಾಗುವುವು. ಅಥವಾ ದ್ವೇಷದಿಂದ ನನ್ನತ್ತ ನೋಡಿದರೂ ಸಹ ಕೂಡಲೇ ಪಾಪಗಳು ಇಲ್ಲದಾಗುವುವು ।೨೯೫॥ ಇತರರಿಗೆ ಅಪರಾಧವೆಸಗಲು ಆ ಮನುಷ್ಯನು ಅಧಃಪಾತಕ್ಕೆ ಹೋಗುವನು. ಆದರೆ ಅದೇ ಅಪರಾಧವನ್ನು ನನ್ನಲ್ಲಿ ಮಾಡಿದರೆ, ಆ ಅಪರಾಧಿಗೆ ನಿತ್ಯಮುಕ್ತಿಯು ಪ್ರಾಪ್ತವಾಗುವುದು ।೨೯೬॥ ನನ್ನಲ್ಲಿ ಅಪರಾಧ ಮಾಡಿದವರಿಗೆ ನರಕಪ್ರಾಪ್ತಿಯಾಯಿತೆಂದರೆ ನನ್ನ ಸರ್ವ ಸಾಮರ್ಥ್ಯವು ಮುಳುಗಿಹೋಯಿತು ಎಂದು ತಿಳಿಯಬೇಕಾದೀತು. ನನ್ನಲ್ಲಿ ಆಪರಾಧ ಮಾಡಿದವನು ನಿರ್ಭಯನಾಗುವನು ಹಾಗೂ ಆತನಿಗೆ ಮುಕ್ತಿಯ ಐಶ್ವರ್ಯವು ದೊರಕಿ ಸುಖಿಯಾಗುವನು ।೨೯೭॥ ವಿಷವೆಂದು ತಿಳಿದು ಅಮೃತಪಾನ ಮಾಡಲು ಆಗ ದೊರಕುವ ಅಮರತ್ವವು ತಪ್ಪುವುದಿಲ್ಲ. ಅದರಂತೆ ದ್ವೇಷದಿಂದಾಗಲಿ ನನ್ನ ದರ್ಶನ ಪಡೆದರೆ ಸರ್ವಪ್ರಾಣಿಗಳು ಪಾವನರಾಗುವುದರಲ್ಲಿ ಯಾವ ಸಂದೇಹವಿಲ್ಲ ।೨೯೮॥

ಜಾಣೋನಿ ಅಗ್ನಿ ಲಾವಿಲಾ ಘರೀ। ತೋ ಜಾಳೂನಿ ಸರ್ವಹೀ ಭಸ್ಮ ಕರೀ। ಮಾ ನೇಣತಾಂಹೀ ಠೇವಿಲಾ ವಳಚಣೀ ವರೀ । ತೋಹೀ ಕರೀ ತೈಸೇಚಿ ।।೨೯೯।। ತೇವೀ ಭಾವೇ ಅಥವಾ ದ್ವೇಷೇ ಪೂರ್ಣ । ಜ್ಯಾಸೀ ಘಡೇ ಮಾಝೇ ದರ್ಶನ । ತೋ ಹೋಯ ಪರಮ ಪಾವನ । ಹೇ ಸತ್ಯ ಜಾಣ ಜರಾವ್ಯಾಧಾ ।।೩೦೦।। ಮಜ ಠಾಕಾವಯಾ ನಿಜಧಾಮ । ತ್ವಾಂ ಸಿದ್ಧ ಕೇಲೇ ಮಾಝೇ ಕಾಮ । ತೇಣೇ ತುಷ್ಟಲೋ ಮೀ ಆತ್ಮಾರಾಮ । ತೂ ಪಾವನ ಪರಮ ತಿಂಹೀ ಲೋಕೀ ।।೩೦೧।। ಜ್ಯಾ ನಾಂವ ಮ್ಹಣಸೀ ''ಪಾಪ'' ಪೂರ್ಣ । ಜೇಣೇ ದೇಹೇ ಮಜ ವಿಂದಿಲಾ ಬಾಣ । ತೇಣೇಂಚೀ ದೇಹೇ ತೂ ಆಪಣ । ಹೋಸೀ ಸ್ವರ್ಗಭೂಷಣ ಸುರವಂದ್ಯ ।।೩೦೨।। ಯಾಗ ಕರೂನಿ ಯಾಜ್ಞಿಕ । ಪಾವತೀ ಸುಖ ಪತನಾತ್ಮಕ । ತೈಸೇ ತುಜ ನ ಘಡೇ ದೇಖ । ತೂ ಅಕ್ಷಯ ಸುಖ ಪಾವಸೀ ।।೩೦೩।। ಮಾಝಿಯಾ ದರ್ಶನಾಚೇ ಪುಣ್ಯ । ದಿವಿಭೋಗೇ ನವ್ಹೇ ಕ್ಷೀಣ । ಯಾಲಾಗೀ ಅಕ್ಷಯ ಸುಖ ಸಂಪೂರ್ಣ । ತೂ ಸರ್ವಥಾ ಜಾಣ ಪಾವಸೀ ।।೩೦೪।। ತೂ ವಿಕಲ್ಪ ಸಾಂಡೋನಿಯಾ ಪೋಟೀ । ಜರಾವ್ಯಾಧಾ ಸವೇಗ ಉಠೀ । ಮಿಥ್ಯಾ ನವ್ಹತೀ ಮಾಝ್ಯಾ ಗೋಷ್ಟೀ। ತೂ ಅಕ್ಷಯ್ಯ ತುಷ್ಟೀ ಪಾವಸೀ ।।೩೦೫।। ತೂ ಐಸೇ ಜೀವೀ ಕಲ್ಪೇಸೀ । ಆಪಣ ನಿಘಾಲಾ ನಿಜಧಾಮಾಸೀ । ಮಾಗೇ ಅಕ್ಷಯ ಸುಖಾಸೀ । ಕೋಣಾಪಾಶೀ ಮಾಗಾವೇ ।।೩೦೬।। ಜೈಸೇ ಬೋಲತೀ ಇತರ ಲೋಕ । ಮಮಾಜ್ಞಾ ತೈಶೀ ನವ್ಹೇ ದೇಖ । ಠಾಕಠೋಕ ಆತಾಂಚಿ ಠೋಖ । ಅಕ್ಷಯ ಸುಖ ಪಾವಸೀ ।।೩೦೭।। ಮಾಝೇ ಆಜ್ಞೇಚೇ ಲಾಹೋನಿ ಬಳ । ಧ್ರುವ ಅದ್ಯಾಪಿ ಝಾಲಾ ಅಢಳ । ಮಾಝೀ ಆಜ್ಞಾ ವಂದೀ ಕಳಿಕಾಳ । ಕೋಣೇಪರೀ ವಿಕಳ ಕರೂ ನ ಶಕೇ ।।೩೦೮।। ಐಸೇ ಶ್ರೀಮುಖೇ ಆಪಣ । ಜಂವ ಬೋಲಲೋ ನಪುರೇ ಶ್ರೀಕೃಷ್ಣ । ತಂವ ಘವಘವೀತ ವಿಮಾನ । ವ್ಯಾಧಾಸೀ ಜಾಣ ಉತರಲೇ ।।೩೦೯।।

ಇತ್ಯಾದಿಷ್ಟೋ ಭಗವತಾ ಕೃಷ್ಣೇನೇಚ್ಛಾಶರೀರಿಣಾ । ತ್ರಿಃ ಪರಕ್ರಮ್ಯ ತಂ ನತ್ವಾ ವಿಮಾನೇನ ದಿವಂ ಯಯೌ ।।೪೦।।

ಅರ್ಥ:- ಶುಕದೇವ ಹೇಳಿದನು; ಹೇ ಪರೀಕ್ಷಿತೀ, ಭಗವಾನ ಶ್ರೀಕೃಷ್ಣನು ತನ್ನ ಇಚ್ಛೆಯಿಂದ ಶರೀರ ಧರಿಸುವವನು. ಜರಾವ್ಯಾಧನಿಗೆ ಆದೇಶ ನೀಡಿದಾಗ ಆತನು ಶ್ರೀಕೃಷ್ಣನಿಗೆ ಮೂರು ಸಾರೆ ಪ್ರದಕ್ಷಣೆ ಮಾಡಿ, ನಮಸ್ಕರಿಸಿ ವಿಮಾನದಲ್ಲಿ ಕುಳಿತುಕೊಂಡು ಸ್ವರ್ಗಕ್ಕೆ ಹೋದನು.

ಜೋ ಸದಾ ಪೂಜಿಜೇ ಸುರಾಸುರೀ । ಜೋ ಪರಮಾತ್ಮಾ ಚರಾಚರೀ । ಜೋ ಲೀಲಾವಿಗ್ರಹದೇಹಧಾರೀ । ಜೋ ಯೋಗೀಶ್ವರೀ ವಂದಿಜೇ ।।೩೧೦।।

ಇದು ಅಗ್ನಿ ಎಂದು ತಿಳಿದು ಮನೆಗೆ ಅಗ್ನಿ ಇಡಲು ಅಲ್ಲಿ ಆ ಎಲ್ಲ ಮನೆಯು ಸುಟ್ಟು ಬೂದಿಯಾಗುವುದು. ಅಥವಾ ಅಪ್ಪಿತಪ್ಪಿ ಚಪ್ಪರದ ಮನೆಗೆ ಅಗ್ನಿಯನ್ನು ಇಟ್ಟರೆ ಅದು ಕೂಡ ಅದೇ ಪರಿಣಾಮ ಮಾಡುವುದು ।೨೯೯।। ಅದರಂತೆ ಭಕ್ತಿಯಿಂದಾಗಲಿ ಅಥವಾ ದ್ವೇಷದಿಂದಾಗಲಿ ನನ್ನ ದರ್ಶನವಾದರೆ ನಿಜವಾಗಿಯೂ ಆತನು ಅತ್ಯಂತ ಪಾವನನಾಗುವನು. ಹೇ ಜರಾವ್ಯಾಧನೇ, ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ೩೦೦।। ನನಗೆ ನಿಜಧಾಮಕ್ಕೆ ಹೋಗುವುದಕ್ಕಾಗಿ ನೀನು ನನ್ನ ಈ ಕಾರ್ಯ ಮಾಡಿಕೊಟ್ಟಿರುವೆ. ಆದ್ದರಿಂದ ನಾನು ಆತ್ಮರಾಮನು ಸಂತುಷ್ಟನಾಗಿರುವೆನು. ನೀನು ಮೂರು ಲೋಕಗಳಲ್ಲಿ ಪರಮ ಪಾವನನಾಗಿರುವೆ ।೩೦೧।। ಯಾವ ದೇಹದಿಂದ ನೀನು ನನ್ನ ಮೇಲೆ ಬಾಣ ಬಿಟ್ಟಿರುವಿಯೋ, ಆ ದೇಹಕ್ಕೆ ನೀನು ಪಾತಕೀ ಎಂದು ಹೇಳುತ್ತಿರುವೆ. ಆದರೆ, ಅದೇ ದೇಹದಿಂದ ನೀನು ದೇವತೆಗಳಿಗೆ ವಂದ್ಯನಾಗುವೆ ಮತ್ತು ಸ್ವರ್ಗದ ಭೂಷಣನಾಗುವೆ ।೩೦೨।। ಯಾಜ್ಞಿಕರು ಯಜ್ಞ ಮಾಡಿ ಅಶಾಶ್ವತ ಸ್ವರ್ಗಸುಖದ ಉಪಭೋಗ ಪಡೆಯುತ್ತಿರುವರು. ಆದರೆ ನಿನಗೆ ಹಾಗೆ ಆಗುವುದಿಲ್ಲ. ನೀನು ಅಕ್ಷಯ ಸುಖದಲ್ಲಿ ಯಾವಾಗಲೂ ಇರುವೆ ।೩೦೩।। ನನ್ನ ದರ್ಶನದಿಂದ ಸ್ವರ್ಗದ ಭೋಗವು ಕ್ಷೀಣವಾಗಲಾರದು. ಆದ್ದರಿಂದ ನೀನು ಯಾವಾಗಲೂ ಅಕ್ಷಯ ಸುಖದಲ್ಲಿಯೇ ಇರುವೆ ।೩೦೪।। ಹೇ ಜರಾವ್ಯಾಧನೇ, ಮನದಲ್ಲಿನ ಎಲ್ಲ ಸಂಶಯಗಳನ್ನು ಹೊರಗೆ ಚೆಲ್ಲು. ಬೇಗನೇ ಏಳು. ನನ್ನ ಮಾತುಗಳು ಮಿಥ್ಯೆಯಲ್ಲ. ನಿನಗೆ ಅಕ್ಷಯ ಸುಖವು ಲಭಿಸುವುದು ।೩೦೫।। ಈಗ ನೀನು ಹೀಗೆಯೂ ಮನದಲ್ಲಿ ಕಲ್ಪಿಸಬಹುದು; ಶ್ರೀಕೃಷ್ಣನು ಈಗ ನಿಜಧಾಮಕ್ಕೆ ಹೊರಟಿರುವನು. ನಂತರ ನಾನು ಅಕ್ಷಯ ಸುಖವನ್ನು ಯಾರಲ್ಲಿ ಬೇಡಬೇಕು? ।೩೦೬।। ಆದರೆ ಇತರ ಜನರು ಹೇಳುತ್ತಿರುವಂತೆ ನನ್ನ ಆಜ್ಞೆಯು ಹಾಗೆ ಇರುವುದಿಲ್ಲ. ರೋಖಠೋಕ ಈಗಿಂದೀಗಲೇ ಅಕ್ಷಯ ಸುಖಕ್ಕೆ ಮುಟ್ಟಿಕೊಳ್ಳುವೆ ।೩೦೭।। ನನ್ನ ಆಜ್ಞೆಯ ಸಾಮರ್ಥ್ಯದಿಂದ ಧ್ರುವನು ಈಗಲೂ ಅಢಳಪದವಿಯಲ್ಲಿ ಸ್ಥಿರವಾಗಿರುವನು. ಕಲಿಕಾಲನೂ ಕೂಡ ನನ್ನ ಆಜ್ಞೆಗೆ ಶಿರಸಾವಂದಿಸುವನು. ಅಂದಮೇಲೆ ನಿನಗೆ ಅಡತಡೆ ಒಡ್ಡುವವರು ಯಾರಿರುವರು? ।೩೦೮।। ಇಂಥ ವಚನಗಳು ಶ್ರೀಕೃಷ್ಣನ ಮುಖದಿಂದ ಹೊರಬೀಳುವುದೊಂದೇ ತಡ, ಕೂಡಲೇ ವ್ಯಾಧನಿಗಾಗಿ ಒಂದು ಸೊಗಸಾದ ವಿಮಾನವು ಕೆಳಗೆ ಇಳಿದು ಬಂದಿತು ।೩೦೯।।

ಯಾರ ಪೂಜೆಯನ್ನು ಸುರ-ಅಸುರರು ಸದಾ ಸರ್ವದಾ ಮಾಡತ್ತಿರುವರೋ, ಯಾರು ಚರಾಚರಗಳಲ್ಲಿ ಪರಮಾತ್ಮನಾಗಿರುವನೋ, ಯಾರು ಸ್ವಲೀಲೆಯಿಂದ ದೇಹ ಧರಿಸುವವನಾಗಿರುವನೋ, ಮಹಾ ಮಹಾ ಯೋಗಿಗಳೂ ಸಹ ಯಾರ ವರ್ಣನೆ ಮಾಡುತ್ತಿರುವರೋ ।೩೧೦।।

ಐಸಾ ಅತಿವರಿಷ್ಠ ಶ್ರೀಕೃಷ್ಣ । ತೇಣೇ ಜರಾವ್ಯಾಧ ಆಜ್ಞಾಪೂನ । ಕೃಷ್ಣ ಇಚ್ಛಾಮಾತ್ರೇ ವಿಮಾನ । ದೇದೀಪ್ಯಯಾನ ಜೇ ಆಲೇ ।೩೧೧॥ ವ್ಯಾಧೇ ದೇಖೋನಿ ವಿಮಾನಾ । ಹರ್ಷೇ ನಿರ್ಭರ ಝಾಲಾ ಮನಾ । ತೀನ ಪ್ರದಕ್ಷಿಣಾ ಕರೂನಿ ಕೃಷ್ಣಾ । ನಮೂನಿ ವಿಮಾನಾ ಆರೂಢೇ ।೩೧೨॥ ವ್ಯಾಧ ಆರೋಢೋನಿ ವಿಮಾನಾ । ಕ್ರಮೂನಿ ಇಂದ್ರಚಂದ್ರಗ್ರಹಗಣಾ । ಅಕ್ಷಯ ಸುಖ ಸ್ವರ್ಗಭುವನಾ । ಕೃಷ್ಣಕೃಪೇ ಜಾಣಾ ತೋ ಪಾವಲಾ ।೩೧೩॥ ಜೇಣೇ ಅಪಕಾರ ಕೇಲಾ ಪೂರ್ಣ । ತ್ಯಾಸೀ ಉಪಕಾರ ಕರಾವಾ ಆಪಣ । ಹೇ ನಿಜ ಶಾಂತಿಜ್ಞಾನಲಕ್ಷಣ । ಸ್ವಾಂಗೇ ಶ್ರೀಕೃಷ್ಣ ಸ್ವಯೇ ದಾವೀ।೩೧೪॥ ಬ್ರಹ್ಮಜ್ಞಾನಾಚೇ ಬೋಲ ಬೋಲತೀ । ತೈಸೇ ನಾಹೀ ಕೃಷ್ಣನಾಥೀ । ಅಂಗೇ ದಾವೂನಿಯಾ ಸ್ಥಿತೀ । ವ್ಯಾಧ ನಿಶ್ಚಿತೀ ಉದ್ಧರಿಲಾ ।೩೧೫॥ಸಕಳ ಕುಳಾಚೇ ನಿರ್ದಳಣ । ಝಾಲ್ಯಾಹೀ ಮೋಹ ನ ಧರೀ ಶ್ರೀಕೃಷ್ಣ । ಜೇಣೇ ನಿಜಾಂಗೇ ವಿಂಧಿಲಾ ಬಾಣ । ತೋ ವ್ಯಾಧಹೀ ಜಾಣ ಸುಖೀ ಕೇಲಾ ।೩೧೬॥ ಸಮುದ್ರತೀರೀ ಘೇಊನಿ ರಥ । ದಾರುಕ ಉಭಾ ಹೋತಾ ತೇಥ । ತೇಣೇ ನ ದೇಖತಾ ಶ್ರೀಕೃಷ್ಣನಾಥ । ಗವೇಷಣಾರ್ಥ ನಿಘಾಲಾ ।೩೧೭॥

ದಾರುಕಃ ಕೃಷ್ಣಪದವೀಮನ್ವಿಚ್ಛನ್ನಧಿಗಮ್ಯತಾಮ್ । ವಾಯುಂ ತುಲಸಿಕಾಮೋದಮಾಘ್ರಾಯಾಭಿಮುಖಂ ಯಯೌ ।೪೧॥

ಅರ್ಥ:- ಆಗ ತನ್ನ ಸ್ವಾಮಿ ಕೃಷ್ಣನನ್ನು ಶೋಧಿಸುತ್ತ ಬಂದ ದಾರುಕನು ಭಗವಂತನು ಕುಳಿತಿದ್ದ ಸ್ಥಳವನ್ನು ಸಮೀಪಿಸಿದಾಗ, ಗಾಳಿಯಲ್ಲಿ ತೇಲಿ ಬಂದ ತುಳಸೀಯ ಸುವಾಸನೆ ಹಿಡಿದು ಆ ದಿಸೆಯಲ್ಲಿಯೇ ಗಮಿಸಿ ಬಂದನು.

ಕೃಷ್ಣ ನ ದೇಖತಾ ದಾರುಕ । ಕಾಸಾವೀಸ ಝಾಲಾ ದೇಖ । ಶೋಧೀತ ಶ್ರೀಕೃಷ್ಣಪದಾಂಕ । ಪೃಥ್ವೀ ಸಮ್ಯಕ್ ಅವಲೋಕೀ ।೩೧೮॥ ತಂವ ಕೃಷ್ಣಕಂಠೀಚ್ಯಾ ತುಳಸೀಮಾಳಾ । ತ್ಯಾಂಚಾ ಆಮೋದ ದಾರುಕಾ ಆಲಾ । ತೇಣೇ ಗಂಧಾಭಿಮುಖೇ ನಿಘಾಲಾ । ತಂವ ದೇಖತಾ ಝಾಲಾ ಮಹಾತೇಜ ।೩೧೯॥

ತಂ ತತ್ರ ತಿಗ್ಮದ್ಯುಭಿರಾಯುಧೈರ್ವೃತಂ ಹ್ಯಶ್ವತ್ಥಮೂಲೇ ಕೃತಕೇತನಂ ಪತಿಮ್ ।
ಸ್ನೇಹಪ್ಲುತಾತ್ಮಾ ನಿಪಪಾತ ಪಾದಯೋ ರಥಾದವಾಪ್ಲುತ್ಯ ಸಬಾಷ್ಪಲೋಚನಃ ।೪೨॥

ಅರ್ಥ:- ಅಲ್ಲಿ ಅಶ್ವತ್ಥ ವೃಕ್ಷದಡಿಯಲ್ಲಿ ತನ್ನ ಕಾಂತಿಯುತ ಆಯುಧಗಳಿಂದ ಆವೃತನಾಗಿ ವಿಶ್ರಮಿಸಿಕೊಳ್ಳುತ್ತಿದ್ದ ಶ್ರೀಕೃಷ್ಣನನ್ನು ಕಂಡು ದಾರುಕನು ತನ್ನ ಹೃದಯದಲ್ಲಿ ಹುಟ್ಟಿಕೊಂಡ ಪ್ರೀತಿಭಾವವನ್ನು ತಡೆದುಕೊಳ್ಳಲಾರದೇ ರಥದಿಂದಿಳಿದು ಧಾವಿಸಿದನು. ಬರುತ್ತಲೇ ಭಗವಂತನ ಪಾದಗಳಿಗೆರಗಿದಾಗ ಆತನ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು.

ತಂವ ಧಗಧಗೀತ ತೇಜಾಗಳಾ । ದಿವ್ಯ ಆಯುಧಾಂಚಾ ಮೇಳಾ । ತ್ಯಾಂಮಾಜೀ ಘನಸಾಂವಳಾ । ಶ್ರೀಕೃಷ್ಣ ಡೋಳಾ ದೇಖಿಲಾ ।೩೨೦॥

ಅಂಥ ಅತ್ಯಂತ ಶ್ರೇಷ್ಠನಾಗಿರುವ ಯಾವ ಶ್ರೀಕೃಷ್ಣನು ಜರಾವ್ಯಾಧನಿಗೆ ಆಜ್ಞೆ ಮಾಡಿದನು. ಆಗ ಶ್ರೀಕೃಷ್ಣನ ಪ್ರಬಲ ಇಚ್ಛೆಯಿಂದಲೇ ದೇದಿಪ್ಯಮಾನವಾದ ವಿಮಾನವು ಅಲ್ಲಿಗೆ ಬಂದಿತು ।೩೧೧॥ ಆ ವಿಮಾನವನ್ನು ಕಂಡು ಜರಾವ್ಯಾಧನಿಗೆ ಅತಿಶಯ ಆನಂದ ಉಂಟಾಯಿತು. ಆತನು ಶ್ರೀಕೃಷ್ಣನಿಗೆ ಮೂರು ಪ್ರದಕ್ಷಿಣೆಗಳನ್ನು ಹಾಕಿ ಪುನಃ ನಮಸ್ಕರಿಸಿದನು. ತದನಂತರ ವಿಮಾನದಲ್ಲಿ ಹತ್ತಿ ಕುಳಿತನು ।೩೧೨॥ ಈ ಪ್ರಕಾರವಾಗಿ ಬೇಡನು ವಿಮಾನದಲ್ಲಿ ಕುಳಿತುಕೊಂಡು ಇಂದ್ರಲೋಕ, ಚಂದ್ರಲೋಕ, ಗ್ರಹಮಂಡಳ ಈ ಎಲ್ಲವನ್ನೂ ಆಕ್ರಮಣ ಮಾಡಿ ಸ್ವರ್ಗಲೋಕದ ಆತ್ಮಸುಖಕ್ಕೆ ಶ್ರೀಕೃಷ್ಣನ ಕೃಪೆಯ ಪ್ರಸಾದದಿಂದ ಪ್ರಾಪ್ತನಾದನು ।೩೧೩॥ ಯಾರು ನಮ್ಮ ಮೇಲೆ ಅಪಕಾರವನ್ನು ಎಸಗಿರುವರೋ, ಅವರಲ್ಲಿ ನಾವು ಉಪಕಾರ ಮಾಡಬೇಕು. ಈ ಆತ್ಮಶಾಂತಿಯ ಲಕ್ಷಣವನ್ನು ಶ್ರೀಕೃಷ್ಣನು ಸ್ವತಃ ಆಚರಿಸಿ ತೋರಿಸಿದನು ।೩೧೪॥ ಬ್ರಹ್ಮಜ್ಞಾನವನ್ನು ಕೇವಲ ಮುಖದಿಂದ ನುಡಿಯುವವರು ಅನೇಕರಿರುವರು. ಆದರೆ ಶ್ರೀಕೃಷ್ಣನು ಅದರಂತೆ ಇದ್ದಿಲ್ಲ. ಆತನು ಹೇಳುವಂತೆ ಆಚರಣೆ ಮಾಡಿ ತೋರಿಸಿ ಬೇಡನನ್ನು ಉದ್ಧರಿಸಿದನು ।೩೧೫॥ ತನ್ನ ಕುಲದ ಸಂಪೂರ್ಣ ಸಂಹಾರವಾದರೂ ಕೂಡ ಶ್ರೀಕೃಷ್ಣನು ಮೋಹದಿಂದ ವ್ಯಾಕುಲ ಪಡಲಿಲ್ಲ. ಬಾಣದಿಂದ ತನ್ನನ್ನು ಛಿದ್ರಗೊಳಿಸಿರುವ ವ್ಯಾಧನಿಗೂ ಕೂಡ ಶ್ರೀಕೃಷ್ಣನು ಸುಖೀ ಮಾಡಿದನು ।೩೧೬॥ ಆ ಕಡೆ ಸಮುದ್ರದ ದಂಡೆಯ ಮೇಲೆ ಶ್ರೀಕೃಷ್ಣನ ಸಾರಥಿಯಾದ ದಾರುಕನು ರಥವನ್ನು ತೆಗೆದುಕೊಂಡು ನಿಂತುಕೊಂಡಿದ್ದನು. ಶ್ರೀಕೃಷ್ಣನು ಕಾಣಲಾರದಕ್ಕೆ ಆತನು ಆತನಿಗಾಗಿ ಶೋಧಮಾಡಲಾರಂಭಿಸಿದನು ।೩೧೭॥

ಶ್ರೀಕೃಷ್ಣನು ಎಲ್ಲಿಯೂ ತೋರಲಾರದ್ದಕ್ಕೆ ದಾರುಕನ ಜೀವವು ತಳಮಳಿಸಲಾರಂಭಿಸಿತು. ಆತನು ಶ್ರೀಕೃಷ್ಣನ ಹೆಜ್ಜೆಯ ಗುರುತನ್ನು ಲಕ್ಷಿಸುತ್ತ ಆತನ ಶೋಧ ಮಾಡುತ್ತ ಸೂಕ್ಷ್ಮದೃಷ್ಟಿಯಿಂದ ಅತ್ತಿತ್ತ ಗಮನ ಹರಿಸುತ್ತಿದ್ದನು ।೩೧೮॥ ಆಗ ಆತನಿಗೆ ಶ್ರೀಕೃಷ್ಣನ ಕೊರಳಲ್ಲಿನ ತುಳಸೀಮಾಲೆಯ ಒಳ್ಳೆಯ ಸುಗಂಧವು ಬಂದಿತು. ಆ ಸುಗಂಧವನ್ನು ನಿರೀಕ್ಷಿಸುತ್ತ ಅದರತ್ತ ನಡೆದನು. ಆಗ ಆತನಿಗೆ ದಿವ್ಯವಾದ ಮಹಾತೇಜವು ಕಾಣಿಸಿತು ।೩೧೯॥

ಅಲ್ಲಿ ಲಖಲಖೀತ ತೇಜಃಪುಂಜ ದಿವ್ಯ ಆಯುಧಗಳ ಸಮುದಾಯದಲ್ಲಿರುವ ಮೇಘಶ್ಯಾಮ ಶ್ರೀಕೃಷ್ಣನು ದಾರುಕನ ದೃಷ್ಟಿಗೆ ಗೋಚರಿಸಿದನು ।೩೨೦॥

ಅಶ್ವತ್ಥಾತಳೀ ಧರೂನಿ ಸ್ಥಾನ । ಘಾಲೂನಿಯಾ ವೀರಾಸನ । ನಿಜತೇಜೇ ವಿರಾಜಮಾನ । ದಾರುಕೇ ಶ್ರೀಕೃಷ್ಣ ದೇಖಿಲಾ ಸ್ವಯೇ ।೩೨೧॥ ಕೃಷ್ಣ ದೇಖತಾ ಲವಡಸವಡೀ । ರಥಾಖಾಲೀ ಘಾಲೂನಿ ಉಡೀ । ಪೋಟೀಂಚ್ಯಾ ಸಪ್ರೇಮ ಆವಡೀ । ಧರಿಲೇ ತಾಂತಡೀ ಹರಿಚರಣ ।೩೨೨॥ ನೇತ್ರೀ ಅಶ್ರೂಂಚಿಯಾ ಧಾರಾ । ಅಂಗ ಕಾಂಪೇ ಥರಥರಾ । ತುಜ ವೇಗಳೇ ಶಾರ್ಙ್ಗಧರಾ । ಅಂಧತಮ ನೇತ್ರಾ ದೃಢ ದಾಟೇ ।೩೨೩॥

ಅಪಶ್ಯತಸ್ತ್ವಚ್ಚರಣಾಂಬುಜಂ ಪ್ರಭೋ ದೃಷ್ಟಿ: ಪ್ರಣಷ್ಟಾ ತಮಸಿ ಪ್ರದಿಷ್ಟಾ ।
ದಿಶೋನ ಜಾನೇ ನ ಲಭೇ ಚ ಶಾಂತಿಂ ಯಥಾ ನಿಶಾಯಾಮುಡುಪೇ ಪ್ರಣಷ್ಟೇ ।೪೩॥

ಅರ್ಥ:- ದಾರುಕನು ನುಡಿದನು; ಹೇ ಪ್ರಭುವೇ, ಚಂದ್ರನಿಲ್ಲದ ರಾತ್ರಿಯ ಕತ್ತಲೆಯಲ್ಲಿ ಪ್ರವೇಶಿಸಿದ ಜನರು ಹೇಗೆ ದಾರಿ ಕಾಣರೋ ಹಾಗೆಯೇ ನಿನ್ನ ಪಾದಕಮಲಗಳನ್ನು ನಾನು ಕಾಣದಾಗಿರುವೆ. ನನ್ನ ದೃಷ್ಟಿಯು ಕಳೆದು ಕತ್ತಲಲ್ಲಿ ಕುರುಡಾಗಿ ಅಲೆದಾಡುತ್ತಿದ್ದೇನೆ. ನನಗೆ ಯಾವ ದಿಕ್ಕೂ ತೋಚದೇ ಶಾಂತಿಯೂ ಲಭಿಸಿದಂತಾಗಿದೆ.

ಐಕೇ ಸ್ವಾಮೀ ಶ್ರೀಕೃಷ್ಣಾ । ನ ದೇಖತಾ ತುಝಿಯಾ ಶ್ರೀಚರಣಾ । ಜಗದಾಂಧ್ಯ ಪಡೇ ನಯನಾ । ದಿಶಾಂಚೀ ಗಣನಾ ಗಣೀ ಕೋಣ ।೩೨೪॥ ಜ್ಞಾನೇಸೀ ಮಾವಳಲಾ ವಿವೇಕ । ಅಣುಮಾತ್ರ ನ ಲಭೇ ಸುಖ । ತುಜ ನ ದೇಖತಾ ಮೀ ದೇಖ । ಜಡ ಮೂಢ ಮೂರ್ಖ ಹೋಊನಿ ಠೇಲೋ ।೩೨೫॥ ಜೇವೀ ನಷ್ಟಚಂದ್ರಾಚಿಯೇ ರಾತ್ರೀ । ನಿಬಿಡ ಅಂವಸೇಚಿಯೇ ಆಂಧಾರೀ । ತೇವೀ ತುಜವೀಣ ಶ್ರೀಹರೀ । ದೃಢ ದಾಟೇ ಸಂಸಾರೀ ಅಂಧತಮ ।೩೨೬॥ ತುಝೇ ದೇಖತಾಂಚಿ ಶ್ರೀಚರಣ । ಅಂಧತಮಾ ನಿರ್ದಳಣ । ಜೇವೀ ಪ್ರಕಟತಾ ರವಿಕಿರಣ । ಅಂಧಾರೇಸೀ ಜಾಣ ನಿಶಾ ನಾಸೇ ।೩೨೭॥

ಇತಿ ಬ್ರುವತಿ ಸೂತೇ ವೈ ರಥೋ ಗರುಡಲಾಂಛನ: । ಖಮುತ್ಪಪಾತ ರಾಜೇಂದ್ರ ಸಾಶ್ವಧ್ವಜ ಉದೀಕ್ಷತ: ।೪೪॥

ಅರ್ಥ:- ಹೇ ಪರೀಕ್ಷಿತನೇ, ದಾರುಕನು ಹೀಗೆ ಹೇಳುತ್ತಿರಲು ಆತನ ಎದುರಿನಲ್ಲಿಯೇ ಭಗವಂತನ ಗರುಡಧ್ವಜ, ರಥ, ಪತಾಕೆ ಹಾಗೂ ಕುದುರೆಸಮೇತವಾಗಿ ಆಕಾಶಕ್ಕೆ ಮೇಲೇರಿದವು.

ಐಸೇ ವಿನವೀ ಜಂವ ದಾರುಕ । ತಂವ ಪರಮಾಶ್ಚರ್ಯ ಕಾಂಹೀ ಏಕ । ದೇಖತಾ ಝಾಲಾ ಅಲೌಕಿಕ । ಪಾಖೇವೀಣ ದೇಖ ಉಡಲಾ ರಥು ।೩೨೮॥ ಚಹೂ ವಾರುವಾಂಸಂಯುಕ್ತ । ಗರುಡಧ್ವಜೇಸೀ ಶ್ರೀಕೃಷ್ಣರಥ । ಊರ್ಧ್ವಗತೀ ಗಗನಾ ಆಂತ । ದಾರುಕಾದೇಖತ ಉಡಾಲಾ ।೩೨೯॥ ಶುಕ ಮ್ಹಣೇ ಪರೀಕ್ಷಿತೀ । ನಿಜಧಾಮಾ ಜಾತಾ ಶ್ರೀಪತೀ । ಆಪುಲೀ ಐಶ್ವರ್ಯಸಂಪತ್ತೀ । ಸ್ವೇಚ್ಛಾ ಊರ್ಧ್ವಗತೀ ಸ್ವಯೇ ನೇತ ।೩೩೦॥ ಇಹಲೋಕೀ ಠೇವೂನಿ ಕೀರ್ತೀ । ನಿಜವೈಭವವಿಲಾಸಸಂಪತ್ತೀ । ಆವರೂನಿಯಾ ನಿಜಶಕ್ತೀ । ಸ್ವಯೇ ಊರ್ಧ್ವಗತೀ ಸ್ವಸತ್ತಾ ನೇತ ।೩೩೧॥

ಅಶ್ವತ್ಥ ವೃಕ್ಷದಡಿಯಲ್ಲಿ ವೀರಾಸನ ಹಾಕಿಕೊಂಡು ಕುಳಿತಿರುವ ಹಾಗೂ ಆತ್ಮತೇಜದಿಂದ ಶೋಭಿಸುತ್ತಿರುವ ಶ್ರೀಕೃಷ್ಣನು ದಾರುಕನಿಗೆ ತೋರಿದನು ।೩೨೧॥ ಶ್ರೀಕೃಷ್ಣನನ್ನು ಕಾಣುತ್ತಲೇ ತ್ವರಿತವಾಗಿ ರಥದಿಂದ ಕೆಳಗೆ ಜಿಗಿದನು. ಆಗ ಅಂತಃಕರಣದಲ್ಲಿನ ಪ್ರೇಮದ ಒತ್ತಡದಿಂದ ಆತನು ತ್ವರಿತವಾಗಿ ಶ್ರೀಕೃಷ್ಣನ ಚರಣಗಳನ್ನು ಹಿಡಿದನು ।೩೨೨॥ ಆತನ ನೇತ್ರಗಳಿಂದ ನೀರು ಹರಿಯತೊಡಗಿತು. ಆತನ ಅಂಗವು ಥರಥರನೇ ನಡುಗ ಹತ್ತಿತು. ಆಗ ಆತನು ಹೀಗೆ ನುಡಿದನು; ಹೇ ಶ್ರೀಕೃಷ್ಣನೇ, ನಿನ್ನ ಹೊರತಾಗಿ ನನ್ನ ಕಣ್ಣೆದುರಿನಲ್ಲಿ ಗಾಢ ಅಂಧಕಾರವು ಹರಡಿಕೊಂಡಿರುವುದು ।೩೨೩॥

ಹೇ ಶ್ರೀಕೃಷ್ಣಸ್ವಾಮಿಯೇ, ಕೇಳು. ನಿನ್ನ ಚರಣಗಳು ದೃಷ್ಟಿಗೆಬೀಳದಿದ್ದರೆ ನನಗೆ ಜಗತ್ತೇ ಕಣ್ಣಿಗೆ ಕಾಣದಂತಾಗವುದು. ಅಂದಮೇಲೆ ದಿಕ್ಕುಗಳ ಗಣನೆ ಯಾರು ಮಾಡಬೇಕು ।೩೨೪॥ ಜ್ಞಾನ ಸಹ ವಿವೇಕವು ಹೊರಟು ಹೋಗಿರುವುದು. ಸ್ವಲ್ಪವೂ ಸುಖವು ತೋರುತ್ತಿಲ್ಲ. ನೀನು ನನಗೆ ಕಾಣದಿದ್ದಕ್ಕೆ ನಾನು ಜಡ, ಮೂಢ ಹಾಗೂ ಮೂರ್ಖನಾಗಿಬಿಟ್ಟಿರುವೆನು ।೩೨೫॥ ಅಮವಾಸ್ಯೆಯ ಕತ್ತಲಲ್ಲಿ ಚಂದ್ರನಿಲ್ಲದೇ ಯಾವ ಅವಸ್ಥೆಯಾಗುವುದೋ, ಅದೇ ಪ್ರಕಾರವಾಗಿ ಶ್ರೀಕೃಷ್ಣನೇ, ನಿನ್ನ ಹೊರತಾಗಿ ಈ ಸಂಸಾರದಲ್ಲಿ ಸರ್ವತ್ರವೂ ಅಂಧಕಾರವು ತುಂಬಿಕೊಳ್ಳುವುದು ।೩೨೬॥ ಆದರೆ ನಿನ್ನ ಚರಣಗಳನ್ನು ಕಂಡಾಕ್ಷಣವೇ ಸೂರ್ಯನ ಎದುರಿನಲ್ಲಿ ಅಂಧಕಾರವು ಹೇಗೆ ಉಳಿಯಲಾರದೋ, ಅದರಂತೆ ಅಜ್ಞಾನ ಅಂಧಕಾರವು ಇಲ್ಲದಾಗಿಬಿಡುವುದು ।೩೨೭॥

ಈ ಪ್ರಕಾರವಾಗಿ ದಾರುಕನು ವಿನಂತಿ ಮಾಡುತ್ತಿರಲು ಆಗ ಒಂದು ಅದ್ಭುತ ಆಶ್ಚರ್ಯ ಘಟನೆ ನಡೆಯಿತು. ಆತನ ಹತ್ತಿರದಲ್ಲಿ ಇದ್ದ ರಥವು ಯಾವ ರೆಕ್ಕೆಗಳಿಲ್ಲದೇ ಆಕಾಶಕ್ಕೆ ಹಾರಿತು ।೩೨೮॥ ಗರುಡಧ್ವಜಯುಕ್ತವಾಗಿರುವ ಆ ಶ್ರೀಕೃಷ್ಣನ ರಥವು ನಾಲ್ಕೂ ಕುದುರೆಗಳ ಸಮೇತವಾಗಿ ಊರ್ಧ್ವಗತಿಯಿಂದ ಹೊರಟಿತು. ದಾರುಕನು ನೋಡು ನೋಡುತ್ತಲೇ ಅದು ಆಕಾಶದಲ್ಲಿ ಹೊರಟು ಹೋಯಿತು ।೩೨೯॥ ಶ್ರೀಶುಕಾಚಾರ್ಯರು ಹೇಳಿದರು; ಹೇ ಪರೀಕ್ಷಿತಿಯೇ, ಶ್ರೀಕೃಷ್ಣನು ತನ್ನ ನಿಜಧಾಮಕ್ಕೆ ಹೊರಡುವಾಗ್ಗೆ, ತನ್ನ ಐಶ್ವರ್ಯವನ್ನು ತನ್ನ ಸಂಗಡವೇ ಊರ್ಧ್ವಗತಿಯಿಂದ ಸ್ವತಃ ಒಯ್ದನು ।೩೩೦॥ ಶ್ರೀಕೃಷ್ಣನು ಇಹಲೋಕದಲ್ಲಿ ತನ್ನ ಕೀರ್ತಿಯನ್ನು ಸ್ಥಾಪಿಸಿದನು ಮತ್ತು ತನ್ನ ನಿಜವೈಭವ ಹಾಗೂ ವಿಲಾಸಸಂಪತ್ತನ್ನು ತನ್ನ ಶಕ್ತಿ ಆವರಿಸಿ ತನ್ನ ಸತ್ತೆಯಿಂದ ಊರ್ಧ್ವಗತಿಯಿಂದ ಒಯ್ದನು ।೩೩೧॥

ತಮನ್ವಗಚ್ಛನ್ ದಿವ್ಯಾನಿ ವಿಷ್ಣುಪ್ರಹರಣಾನಿ ಚ । ತೇನಾತಿವಿಸ್ಮಿತಾತ್ಮಾನಂ ಸೂತಮಾಹ ಜನಾರ್ದನಃ ।೪೫॥

ಅರ್ಥ:- ತದನಂತರ ಭಗವಂತನ ದಿವ್ಯ ಆಯುಧಗಳೂ ಕೂಡ ಹೋದವು. ಈ ಎಲ್ಲವನ್ನು ಕಾಣುತ್ತಿರಲು ದಾರುಕನು ಅತಿಶಯ ಆಶ್ಚರ್ಯಚಕಿತನಾದನು. ಆ ಸಮಯದಲ್ಲಿ ಭಗವಂತನು ಆತನನ್ನು ಕುರಿತು ಹೀಗೆ ಹೇಳಿದನು.

ರಥ ಜಾತಾ ಊರ್ಧ್ವಮಂಡಳ । ಶಂಖ ಚಕ್ರ ಗದಾ ಕಮಳ । ತದನುಲಕ್ಷಿತ ತತ್ಕಾಳ । ದಿವ್ಯಾಯುಧೇ ಸಕಳ ನಿಘಾಲೀ ।೩೩೨॥ ಊರ್ಧ್ವಮಂಡಳೀ ಉಡಾಲಾ ರಥ । ದಿವ್ಯಾಯುಧೇಹೀ ಸಮಸ್ತ । ತೇ ದೇಖೋನಿ ಅತಿವಿಸ್ಮಿತ । ಠೇಲಾ ತಟಸ್ಥ ದಾರುಕ ।೩೩೩॥ ಧುರೇ ಬೈಸೋನಿಯಾ ನಿತ್ಯ । ಮೀ ವಾಗವೀ ಶ್ರೀಕೃಷ್ಣರಥ । ತೋ ರಥ ಊರ್ಧ್ವಗತೀ ಕೃಷ್ಣನೇತ । ಮಜ ಕಾ ಏಥ ಸಾಂಡಿಲೇ ।೩೩೪॥ ಮಜ ಸಾಂಡೂನಿಯಾ ಗೋವಿಂದೇ । ನೇಲೀ ಆಪುಲೀ ದಿವ್ಯಾಯುಧೇ । ಮೀ ಅಭಾಗ್ಯ ಭಾಗ್ಯಮದೇ । ತ್ಯಜಿಲೋ ಮುಕುಂದೇ ನಿಶ್ಚಿತ ।೩೩೫॥ ಮ್ಯಾ ಉಡೀ ಘಾತಲೀ ರಥಾಖಾಲತೀ । ಹೇಚಿ ಮಾಝೀ ಮಂದಮತೀ । ಯೇರವೀ ಮೀಹೀ ಜಾತೋ ಊರ್ಧ್ವಗತೀ । ಕಾ ಶ್ರೀಪತೀ ರುಸಲಾ ।೩೩೬॥ ಜೇಣೇ ಚರಣೀ ವಿಂಧಿಲಾ ಬಾಣ । ತೋ ವ್ಯಾಧಹೀ ಉದ್ಧರಿಲಾ ಜಾಣ । ಮೀ ಭಾಗ್ಯೇ ಅಭಾಗೀ ಪೂರ್ಣ । ಯಾಲಾಗೀ ಶ್ರೀಕೃಷ್ಣ ಮಜ ತ್ಯಾಗೀ ।೩೩೭॥ ನಿತ್ಯ ಕೃಷ್ಣ ದೃಷ್ಟೀ ಪುಢೇ । ಧುರೇ ಬೈಸೋನಿ ವಾಗವೀ ಘೋಡೇ । ತೋ ಮೀ ಕೃಷ್ಣಾವೇಗಳಾ ಪಡೇ । ಭಾಗ್ಯ ಕುಡೇ ಪೈ ಮಾಝೇ ।೩೩೮॥ ಮೀ ಶ್ರೀಕೃಷ್ಣಾಚಾ ಸಾರಥೀ । ಐಶೀ ತ್ರಿಲೋಕೀ ಝಾಲೀ ಖ್ಯಾತೀ । ತೋ ಮೀ ವೇಗಳಾ ಪಡೇ ಅಂತೀ । ಕಾ ಶ್ರೀಪತೀ ರುಸಲಾ ।೩೩೯॥ ಯಾವಜ್ಜನ್ಮ ಭೋಗಿಲೇ ಕೃಷ್ಣಸುಖ । ತ್ಯಾ ಮಜ ವೋಢವಲೇ ವಿಯೋಗದುಃಖ । ಕೃಷ್ಣಾ ಕಾ ಝಾಲಾಸೀ ವಿಮುಖ । ಮೀ ದೀನ ರಂಕ ಪೈ ತುಝೇ ।೩೪೦॥ ಮಾಝಾ ಬೋಲ ಅಣುಭರೀ । ನಾಹೀ ಅವ್ಹೇರಿಲಾ ಹರೀ । ತ್ಯಾ ಮಜ ತೂ ಶ್ರೀಹರೀ । ಅಂತೀ ದುರ್ಧರೀ ದುರಾವಿಶೀ ಕಾ ।೩೪೧॥ ಅಪರಾಧಿಯಾ ತಾರಿಲೇ ವ್ಯಾಧಾಸೀ । ಅಶ್ವ-ಧ್ವಜೇಸೀ ರಥ ನೇಸೀ । ತೋ ತೂ ಮಜ ಉದ್ಧರಾವಯಾಸೀ । ಕಾ ಉಬಗಲಾಸೀ ಗೋವಿಂದಾ ।೩೪೨॥ ಐಸಾ ಅವಸ್ಥಾಭೂತ ಪೂರ್ಣ । ಪಾಹತಾ ಶ್ರೀಕೃಷ್ಣಾಚೇ ವದನ । ದಾರುಕಾಸೀ ಆಲೇ ರುದನ । ಆಸುವೀ ನಯನ ಲೋಟಲೇ ।೩೪೩॥ ದೀರ್ಘಸ್ವರೇ ದೇಊನಿ ಹಾಂಕ । ದಾರುಕ ರಡೇ ಅಧೋಮುಖ । ಅಂತೀ ಶ್ರೀಕೃಷ್ಣ ಝಾಲಾ ವಿಮುಖ । ಹೇ ಅತಿದುಃಖ ಮಜಲಾಗೀ ।೩೪೪॥

ಆ ಯಾವ ರಥವು ಊರ್ಧ್ವಗತಿಯಿಂದ ಹೋಗುತ್ತಲೇ ಶಂಖ, ಚಕ್ರ, ಗದಾ, ಪದ್ಮ ಈ ದಿವ್ಯ ಆಯುಧಗಳು ಕೂಡಲೇ ಅದರ ಹಿಂದೆಯೇ ಹೊರಟವು ।೩೩೨॥ ರಥವು ಹೇಗೆ ಆಕಾಶಕ್ಕೆ ಹಾರಿತೋ, ಅದೇ ಪ್ರಕಾರವಾಗಿ ಸರ್ವ ಆಯುಧಗಳೂ ಕೂಡ ಹಾರಿದವು. ಇದನ್ನು ಕಂಡು ದಾರುಕನು ಆಶ್ಚರ್ಯಚಕಿತನಾಗಿ ತಟಸ್ಥನಾದನು ।೩೩೩॥ ಶ್ರೀಕೃಷ್ಣನು ರಥವನ್ನು ಊರ್ಧ್ವಗತಿಯಿಂದ ಒಯ್ದನು. ಆದರೆ ನಾನು ಯಾವಾಗಲೂ ಉತ್ಕೃಷ್ಟವಾದ ಮುಂದಿನ ಭಾಗದಲ್ಲಿ ಕುಳಿತುಕೊಂಡು ಶ್ರೀಕೃಷ್ಣನ ರಥವನ್ನು ನಡೆಸುತ್ತಿದ್ದೆನು. ಹೀಗಿದ್ದ ಮೇಲೆ ಆತನು ನನ್ನನ್ನು ಇಲ್ಲಿಯೇ ಏಕೆ ಬಿಟ್ಟು ಹೋದನು? ।೩೩೪॥ ಶ್ರೀಕೃಷ್ಣನು ನನ್ನನ್ನು ಇಲ್ಲಿಯೇ ಬಿಟ್ಟುಕೊಟ್ಟು ತನ್ನ ದಿವ್ಯ ಆಯುಧಗಳೊಂದಿಗೆ ಹೊರಟು ಹೋದನು. ನಾನು ಅಭಾಗ್ಯ, ದೈವಹೀನನೆಂದು ಗೋವಿಂದನು ನನ್ನನ್ನು ತ್ಯಜಿಸಿರುವನು ।೩೩೫॥ ನಾನೇನು ಆ ರಥದಿಂದ ಕೆಳಗೆ ಜಿಗಿದೆನೋ, ಅದೇ ತನ್ನ ದೊಡ್ಡ ಮೂರ್ಖತನವಾಯಿತು. ಹಾಗೆ ಮಾಡದಿದ್ದಲ್ಲಿ ನಾನೂ ಕೂಡ ಆ ರಥದ ಜೊತೆಯಲ್ಲಿ ಸಹಜವಾಗಿ ಹೋಗಿ ಬಿಡುತ್ತಿದ್ದೆನು. ಹೇ ಶ್ರೀಕೃಷ್ಣನೇ, ನೀನು ನನ್ನಲ್ಲಿ ಏಕೆ ಕೋಪಿಸಿಕೊಂಡಿರುವೆ? ।೩೩೬॥ ಯಾರು ನಿನ್ನ ಚರಣವನ್ನು ಛಿದ್ರಗೊಳಿಸಿದನೋ, ಆ ವ್ಯಾಧನನ್ನೂ ನೀನು ಉದ್ಧಾರ ಮಾಡಿದೆ. ನಾನು ಮಾತ್ರ ದುರ್ದೈವೀ, ಪೂರ್ಣ ಅಭಾಗ್ಯನೆಂದೇ ಶ್ರೀಕೃಷ್ಣನು ನನ್ನ ತ್ಯಾಗ ಮಾಡಿರುವನು ।೩೩೭॥ ನಾನು ಶ್ರೀಕೃಷ್ಣನಿಗೆ ನಿತ್ಯವೂ ನೋಡುತ್ತಿದ್ದೆನು. ರಥದ ಮುಂಭಾಗದ ಉತ್ತಮ ಆಸನದಲ್ಲಿ ಕುಳಿತು ನಾನು ಆತನ ಕುದುರೆಗಳನ್ನು ಓಡಿಸುತ್ತಿದ್ದೆನು. ಹೀಗಿರುವ ನಾನು ಈಗ ಶ್ರೀಕೃಷ್ಣನಿಲ್ಲದೇ ಬತ್ತಲಾಗಿ ಬಿಟ್ಟಿದ್ದೇನೆ. ನನ್ನ ಭಾಗ್ಯವೇ ಬಹು ಕೆಟ್ಟದ್ದಾಗಿದೆ ।೩೩೮॥ ನಾನು ಶ್ರೀಕೃಷ್ಣನ ಸಾರಥಿ ಎಂದು ತ್ರಿಭುವನದಲ್ಲಿ ಪ್ರಸಿದ್ಧವಾಗಿರುವುದು. ಅದೇ ನಾನು ಈಗ ಭಿನ್ನನಾಗಿಬಿಟ್ಟೆನು. ಹೇ ಶ್ರೀಕೃಷ್ಣನೇ! ನೀನು ನನ್ನಲ್ಲಿ ಯಾವ ಕಾರಣಕ್ಕೆ ಮುನಿಸುಗೊಂಡಿರುವೆ? ।೩೩೯॥ ಯಾವನು ತನ್ನ ಜೀವನ ತುಂಬಾ ಶ್ರೀಕೃಷ್ಣನ ಸುಖ ಭೋಗಿಸಿರುವನೋ, ಆತನಿಗೆ ಈಗ ಆತನ ವಿಯೋಗ ದುಃಖವು ಪ್ರಾಪ್ತವಾಗಿರುವುದು. ಶ್ರೀಕೃಷ್ಣನೇ, ನಾನು ನಿನ್ನ ದೀನ ದಾಸನಾಗಿದ್ದರೂ ಸಹ ನೀನೇಕೆ ನನಗೆ ವಿಮುಖನಾದೇ? ।೩೪೦॥ ಹೇ ಶ್ರೀಕೃಷ್ಣನೇ, ನನ್ನ ಶಬ್ದಗಳನ್ನು ನೀನು ಎಂದಿಗೂ ತಿರಸ್ಕರಿಸಿಲ್ಲ .ಹೀಗಿರುವ ನನ್ನನ್ನು ಈಗ ಏಕೆ ದೂರು ಮಾಡಿದೆ ? ।೩೪೧॥ ಹೇ ಗೋವಿಂದನೇ, ಅಪರಾಧೀ ಬೇಡನಿಗೂ ನೀನು ಉದ್ಧರಿಸಿದೆ, ಕುದುರೆ, ಪತಾಕಾಗಳೊಂದಿಗೆ ರಥವನ್ನು ಆಕಾಶದಲ್ಲಿ ಒಯ್ದುಬಿಟ್ಟೆ. ನನ್ನ ಉದ್ಧಾರಕ್ಕಾಗಿ ನೀನೇಕೆ ಬೇಸರ ಮಾಡಿಕೊಳ್ಳುವೆ? ।೩೪೨॥ ಈ ಪ್ರಕಾರವಾಗಿ ದಾರುಕನು ದುಃಖದಿಂದ ಅತಿಶಯ ವ್ಯಾಕುಲನಾದನು. ಆಗ ಶ್ರೀಕೃಷ್ಣನು ಎದುರಿಗೆ ಬಂದನು. ಆತನ ಮುಖಕಮಲ ಕಾಣುತ್ತಲೇ ಆತನಿಗೆ ದುಃಖವು ಉಕ್ಕೇರಿತು. ಆತನ ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದವು ।೩೪೩॥ ಆತನು ಕೆಳಗೆ ಮುಖ ಮಾಡಿ ದೊಡ್ಡ ಧ್ವನಿಯಿಂದ ಚೀರಾಡಿ ಅಳಹತ್ತಿದನು. ಆತನು ಹೀಗೆ ಹೇಳಿದನು ;ಕೊನೆಯಲ್ಲಿ ಶ್ರೀಕೃಷ್ಣನು ವಿಮುಖನಾದನಲ್ಲ? ಇದರಿಂದ ನನಗೆ ತಡೆಯಲಾರದಂತಹ ದುಃಖವಾಗುತ್ತಿದೆ ।೩೪೪॥

ದುಃಖೇ ಚರಫಡೀತ ಮೋಠಾ । ಕರೇ ಪಿಟೀತ ಲಲಾಟಾ । ಮರ ಮರ ವಿಧಾತಯಾ ನಷ್ಟಾ । ವೋಖಟೇ ಅದೃಷ್ಟಾ ಕಾಯ ಲಿಹಿಲೇ ।೩೪೫॥ ಮಗ ಮ್ಹಣೇ ಶ್ರೀಕೃಷ್ಣನಾಥಾ । ತುಜಪುಢೇ ಬಾಪುಡೇ ವಿಧಾತಾ । ತುಜವೇಗಳಾ ಮೀ ರಾಹತಾ । ಅತಿದೀನತಾ ಪಾವೇನ ।।೩೪೬॥ ತುಝೇನಿ ಬಳೇ ಶ್ರೀಕೃಷ್ಣಾ । ಮ್ಯಾ ಕಳಿಕಾಳಾ ಘಾತಲಾ ಆಂಕಣಾ । ತೋ ಮೀ ಕಾಳಾಚಾ ವೋಳಂಗಣಾ । ಕಾ ಕರೀಸೀ ಪೋಸಣಾ ಜಗಾಚಾ ।೩೪೭॥ ಐಸೇ ಐಕೋನಿಯಾ ವಚನ । ''ನಾ ಭೀ ನಾ ಭೀ''ಮ್ಹಣೇ ಜನಾರ್ದನ । ಮಗ ಆಶ್ವಾಸೂನ ಪೂರ್ಣ । ಗುಹ್ಯ ಆಲೋಚನ ಸಾಂಗತ ।೩೪೮॥ ಆಜಿಚ್ಯಾ ಕಾಳಾಚೇ ಕಾಳಗತೀ । ತೂ ಏಕ ಉರಲಾಸೀ ನಿಕಟವರ್ತೀ । ತುಜ ಮ್ಯಾ ರಾಖಿಲೇ ನಿಜಕಾರ್ಯಾರ್ಥೀ । ವೇಗೀ ದ್ವಾರಾವತೀ ತೂ ಜಾಈ ।೩೪೯॥

ಗಚ್ಛ ದ್ವಾರಾವತೀಂ ಸೂತ ಜ್ಞಾತೀನಾಂ ನಿಧನಂ ಮಿಥಃ । ಸಂಕರ್ಷಣಸ್ಯ ನಿರ್ಯಾಣಂ ಬಂಧುಭ್ಯೋ ಬ್ರೂಹಿ ಮದ್ದಶಾಮ್ ।೫೬॥
ದ್ವಾರಕಾಯಾಂ ಚ ನ ಸ್ಥೇಯಂ ಭವದ್ಭಿ ಸ್ವಬಂಧುಭಿಃ । ಮಯಾ ತ್ಯಕ್ತಾಂ ಯದುಪುರೀಂ ಸಮುದ್ರಃ ಪ್ಲಾವಯಿಷ್ಯತಿ ।೫೭॥
ಸ್ವಂ ಸ್ವಂ ಪರಿಗ್ರಹಂ ಸರ್ವೇ ಆದಾಯ ಪಿತರೌ ಚ ನಃ । ಅರ್ಜುನೇನಾವಿತಾಃ ಸರ್ವ ಇಂದ್ರಪ್ರಸ್ಥಂ ಗಮಿಷ್ಯಥ ।೫೮॥

ಅರ್ಥ:- ದಾರುಕಾ, ಈಗ ನೀನು ದ್ವಾರಕೆಗೆ ಹೋಗು. ಅಲ್ಲಿ ಯದುವಂಶದ ಪಾರಂಪಾರಿಕ ಸಂಹಾರ, ಅಣ್ಣ ಬಲರಾಮನ ಪರಮಗತೀ ಮತ್ತು ನನ್ನ ಸ್ವಧಾಮಗಮನದ ವಾರ್ತೆ ತಿಳಿಸು. ಅವರಿಗೆ ಹೀಗೆ ಹೇಳಬೇಕು; ಈಗ ನೀವು ನಿಮ್ಮ ಪರಿವಾರಸಮೇತ ದ್ವಾರಕೆಯಲ್ಲಿ ಇರಬೇಡಿರಿ. ಶ್ರೀಕೃಷ್ಣನು ಇಲ್ಲದ್ದರಿಂದ ಸಮುದ್ರವು ದ್ವಾರಕಾನಗರವನ್ನು ಮುಳುಗಿಸಿಬಿಡುವುದು. ಸರ್ವ ಜನರು ತಮ್ಮ ತಮ್ಮ ಧನಸಂಪತ್ತಿನೊಂದಿಗೆ ಮತ್ತು ತಮ್ಮ ಕುಟುಂಬಸಮೇತರಾಗಿ ನನ್ನ ತಂದೆ ತಾಯಿಯವರಿಗೆ ಅರ್ಜುನನ ರಕ್ಷಣೆಯಲ್ಲಿ ಇಂದ್ರಪ್ರಸ್ಥಕ್ಕೆ ಕರೆದೊಯ್ಯಿರಿ.

ತೂ ಜಾಊನಿ ದ್ವಾರಕೇಆಂತ । ಯಾದವಾಂಚಾ ನಿಧನವೃತ್ತಾಂತ । ಪರಸ್ಪರೇ ಕಲಹಯುಕ್ತ । ನಿಮಾಲೇ ಸಮಸ್ತ ಹೇ ಸಾಂಗ ।೩೫೦॥ ಬಳಿಭದ್ರೇ ನಿಜಾತ್ಮಸ್ಥಿತೀ । ದೇಹೋತ್ಯಜಿಲಾ ಯೋಗಗತೀ । ಮಾಝೀಹೀ ದಶಾ ಸಮಸ್ತಾಂಪ್ರತೀ । ಯಥಾನಿಗುತೀ ಸಾಂಗಾವೀ ।೩೫೧॥ ತುವಾ ಜಾಊನಿಯಾ ತ್ಯಾಂಪಾಶೀ । ಶೀಘ್ರ ಸಾಂಗಾವೇ ಸಮಸ್ತಾಂಶೀ । ಕೋಣೇ ನ ರಹಾವೇ ದ್ವಾರಕೇಸೀ । ನಿಘಾವೇ ವೇಗೇಸೀ ಮಮಾಜ್ಞಾ ।೩೫೨॥ ದ್ವಾರಕಾ ತ್ಯಾಗಾವಯಾಚೇ ಕಾರಣ । ತುಜ ಮೀ ಸಾಂಗೇನ ಆಪಣ । ದಾರುಕಾ ತೂ ಅತಿಸಜ್ಞಾನ । ವಿಶ್ವಾಸ ಪೂರ್ಣ ಮಜ ತುಜಾ ।೩೫೩॥ ಯಾಲಾಗೀ ತುಜ ರಾಹವೂನಿ ಏಥ । ಅಂತಕಾಳೀಂಚೇ ಗುಜ ಸಾಂಗತ । ತುವಾ ಜಾಊನಿ ದ್ವಾರಕೇಂತ । ಬಾಹೇರ ಸಮಸ್ತ ಕಾಢಾವೇ ।೩೫೪॥ ಬಾಹೇರ ಕಾಢಾವಯಾಚೇ ಕಾರಣ । ಮ್ಯಾ ದ್ವಾರಕಾ ತ್ಯಾಗಿತಾ ಜಾಣ । ಸಮುದ್ರ ಯೇಊನಿ ಆಪಣ । ನಗರ ಸಂಪೂರ್ಣ ಬುಡವೀಲ ।೩೫೫॥

ತನು ದುಃಖದಿಂದ ಅತ್ಯಂತ ಚಡಪಡಿಸಲಾರಂಭಿಸಿದನು. ಕೈಯಿಂದ ಜೋರಾಗಿ ತನ್ನ ಹಣೆಯನ್ನು ಬಡೆದುಕೊಳ್ಳುತ್ತ ಹೇಳಹತ್ತಿದನು. ಹೇ ವಿಧಾತನೇ, ನಷ್ಟನೇ, ನೀನೀಗ ಸತ್ತು ಹೋಗು. ನನ್ನ ಹಣೆಯಲ್ಲಿ ಹೀಗೇಕೆ ಬರೆದಿರುವೆ? ।೩೪೫॥ ತದನಂತರ ಆತನು ಶ್ರೀಕೃಷ್ಣನಾಥನಿಗೆ ಹೇಳಿದನು; ನಿನ್ನೆದುರು ಪಾಪ! ಆ ವಿಧಾತಾ ಏನು ಮಾಡಬಲ್ಲನು? ನಿನ್ನನ್ನು ಬಿಟ್ಟು ನಾನಿದ್ದರೆ ಮಾತ್ರ ಅತಿಶಯ ದೀನನಾಗಬೇಕಾಗುವುದು ।೩೪೬॥ ಹೇ ಶ್ರೀಕೃಷ್ಣನೇ, ನಿನ್ನ ಆಧಾರದಿಂದ ನಾನು ಕಲಿಕಾಲನಿಗೂ ಕೂಡ ಬೆದರಿಸುತ್ತಿದ್ದೆನು. ಹೀಗಿರುವ ನನ್ನನ್ನು ಈಗ ನೀನು ಅದೇ ಕಾಲನ ದಾಸನನ್ನಾಗಿ ಮಾಡಿದೆ. ಜಗತ್ತಿನ ಆಶ್ರಯಪಡೆಯಬೇಕಾಗಿದೆ ।೩೪೭॥ ಈ ದಾರುಕನ ವಿಚಾರ ಕೇಳಿ ಶ್ರೀಕೃಷ್ಣನು ಆತನಿಗೆ ನೀನು ಭಯಪಡಬೇಡ ಎಂದು ಅಭಯವನ್ನು ಕೊಟ್ಟು ನಂತರ ಜನಾರ್ದನ ಶ್ರೀಕೃಷ್ಣನು ಆತನಿಗೆ ಆಶ್ವಾಸನೆಯನ್ನು ಕೊಟ್ಟು ಗುಹ್ಯ ಯುಕ್ತಿ ಹೇಳಿದನು ।೩೪೮॥ ಇಂದು ನೀನು ಕಾಲಗತಿಯಂತೆ ನನ್ನ ಹತ್ತಿರ ಉಪಲಬ್ಧನಾಗಿರುವೆ. ನಾನು ನನ್ನ ಕಾರ್ಯಕ್ಕಾಗಿಯೇ ನಿನ್ನನ್ನು ಉಳಿಸಿದ್ದೇನೆ. ಕಾರಣ ನೀನು ಬೇಗನೇ ದ್ವಾರಕೆಗೆ ಹೋಗು ।೩೪೯॥

ನೀನು ದ್ವಾರಕಾ ನಗರಕ್ಕೆ ಹೋಗಿ ಅಲ್ಲಿ ಯಾದವರೆಲ್ಲರೂ ತಮ್ಮ ತಮ್ಮಲ್ಲಿಯೇ ಕಲಹ ಮಾಡಿ ಸಂಹರಿಸಲ್ಪಟ್ಟರು ಎಂಬ ಈ ಸರ್ವ ವೃತ್ತಾಂತವನ್ನು ನೀನು ಅವರಿಗೆ ತಿಳಿಸಿ ಹೇಳು ।೩೫೦॥ ಹಾಗೆಯೇ ಬಲರಾಮನು ತನ್ನ ಯೋಗಶಕ್ತಿಯಿಂದ ದೇಹ ವಿಸರ್ಜನೆ ಮಾಡಿದ ವಾರ್ತೆ, ಮತ್ತು ನನ್ನದೂ ಸಹ ಸಂಪೂರ್ಣ ವೃತ್ತಾಂತವನ್ನು ನಡೆದಂತೆಯೇ ಹೇಳು ।೩೫೧॥ ನೀನು ದ್ವಾರಕೆಗೆ ಹೋಗಿ ಹೀಗೆ ಎಲ್ಲ ಸಮಾಚಾರ ಅವರಿಗೆ ಬೇಗನೇ ಹೇಳು. ಹಾಗೆಯೇ ನೀವೆಲ್ಲರೂ ದ್ವಾರಕೆಯಲ್ಲಿ ಇರಬೇಡಿರಿ, ಈ ದ್ವಾರಕೆಯಿಂದ ಬಹುಬೇಗ ಹೊರಗೆ ಬೀಳಿರಿ. ಇದು ನನ್ನ ಆಜ್ಞೆಯಾಗಿದೆ ಎಂದು ಅವರಿಗೆ ವಿವರಿಸು ।೩೫೨॥ ದ್ವಾರಕೆಯನ್ನು ಬಿಟ್ಟು ಹೋಗಬೇಕಾದ ಕಾರಣ ನಾನು ನಿನಗೆ ತಿಳಿಸುವೆ. ಹೇ ದಾರುಕನೇ, ನೀನು ಅತಿಶಯ ಸೂಜ್ಞನಾಗಿರುವೆ. ನಿನ್ನಲ್ಲಿ ನನ್ನ ಪರಿಪೂರ್ಣ ವಿಶ್ವಾಸವಿರುವುದು ।೩೫೩॥ ಈ ಕಾರಣಕ್ಕಾಗಿಯೇ ನಿನಗೆ ಇಲ್ಲಿ ಇಟ್ಟು ಅಂತ್ಯಕಾಲದ ಗುಹ್ಯ ಮಾತುಗಳನ್ನು ನಾನು ನಿನಗೆ ತಿಳಿಸುತ್ತಿರುವೆನು. ನೀನು ದ್ವಾರಕೆಗೆ ಹೋಗಿ ಕೂಡಲೇ ಅತಿ ಶೀಘ್ರವಾಗಿ ಎಲ್ಲರನ್ನೂ ದ್ವಾರಕೆಯ ಹೊರಗೆ ಹಾಕು ।೩೫೪॥ ಇವರಿಗೆಲ್ಲರೂ ಹೊರಗೆ ತೆಗೆಯುವ ಕಾರಣವೇನೆಂದರೆ ನಾನು ದ್ವಾರಕೆಯನ್ನು ಬಿಟ್ಟೆನು ಎಂಬ ಮಾತು ತಿಳಿಯುತ್ತಲೇ ಸಮುದ್ರವು ಸಂಪೂರ್ಣ ದ್ವಾರಕೆಯನ್ನು ಮುಳುಗಿಸಿಬಿಡುವುದು ।೩೫೫॥

ಠಾವ ಮಾಗೂನಿ ಸಮುದ್ರಾಪಾಶೀ ಮ್ಯಾ ವಸವಿಲೇ ದ್ವಾರಕೇಸೀ । ಮಜ ಗೇಲಿಯಾ ನಿಜಧಾಮಾಸೀ । ತೋ ಅವಶ್ಯೇಸೀ ಬುಡವೀಲ ।೩೫೬॥ ಯಾಲಾಗೀ ಸತ್ವರ ಗಮನ । ಶೀಘ್ರ ಕರಾವೇ ಆಪಣ । ಮಾಝೀ ಮಾತಾ ಪಿತಾ ಸಮಸ್ತ ಜನ । ದ್ವಾರಕೇಹೂನ ಕಾಢಾವೀ ।೩೫೭॥ ಜಂವ ಸಮುದ್ರ ಬುಡವಿಲಾ ತೋ ಠಾವೋ । ತಂವ ಆಪುಲಾಲಾ ಸಮುದಾವೋ । ಘೇಊನಿ ಸಕಳ ಪರಿಗ್ರಹೋ । ಶೀಘ್ರತರ ಪಹಾ ಹೋ ನಿಘಾವೇ ।೩೫೮॥ ಝಾಲಿಯಾ ರಾಜ್ಯಲೋಟ । ಚೋರಾ ಕುಳಿತ ಹೋಈಲ ವಾಟ । ಕೋಣೇ ನವ ಜಾವೇ ಏಕಟ । ಅವಘೀ ಏಕವಟ ಕರಾವೀ ।೩೫೯॥ ಅರ್ಜುನಾಚೇನಿ ಸಾಂಗಾತೇ । ಏಕತ್ರ ಮಿಳೂನಿ ಸಮಸ್ತೇ । ಶೀಘ್ರ ಜಾವೇ ಇಂದ್ರಪ್ರಸ್ಥಾತೇ । ತೋ ಮಾರ್ಗೀ ತ್ಯಾತೇ ರಕ್ಷೀಲ ।೩೬೦॥ ಐಸೇ ಐಕತಾ ಶ್ರೀಕೃಷ್ಣವಚನ । ದಾರುಕಾಸೀ ಆಲೇರುದನ । ನ ವಚೇ ಸಾಂಡೂ ಪಾಹೇ ಪ್ರಾಣ । ಜಳೇವೀಣ ಮೀನ ಜೈಸಾ ।೩೬೧॥ ನಿಜಕುಳಾಸೀ ಕರೂನಿ ಘಾತ । ಗೇಲಾ ಗೇಲಾ ರೇ ಕೃಷ್ಣನಾಥ । ಮೀ ಕಾಳಮುಖಾ ದ್ವಾರಕೇ ಆಂತ । ಜಾವೋ ಹಾ ವೃತ್ತಾಂತ ಸಾಂಗಾವಯಾ ।೩೬೨॥ ಗಿಳೂನಿ ಶ್ರೀಕೃಷ್ಣ ನಿಜಸುಖಾ । ಮ್ಹಣತೀ ಹಾ ಆಲಾ ಕಾಳಮುಖಾ । ಸಕಳ ಜಗಾಚಿಯಾ ದುಃಖಾ । ಸೂಚಕ ದೇಖಾ ಮೀ ಹೋಈನ ।೩೬೩॥ ಐಕತಾ ಮಾಝಿಯಾ ವಚನಾಸೀ । ಪ್ರಾಣಾಂತ ಹೋಈಲ ಸರ್ವಾಂಸೀ । ಏವಢ್ಯಾ ದ್ಯಾವಯಾ ಮಹಾದುಃಖಾಸೀ । ನ ವಚೇ ಹೃಷೀಕೇಶೀ ಮೀ ತೇಥೇ ।೩೬೪॥ ಜ್ಯಾಸೀ ಮ್ಯಾ ಸಾಂಗಾವೀ ಹೇ ವಾರ್ತಾ । ತ್ಯಾಂಚ್ಯಾ ಕರಾವೇ ಜೀವಘಾತಾ । ಏವಢೀ ಘೋರ ನಿಷ್ಠುರತಾ । ನವ್ಹೇ ಕೃಷ್ಣನಾಥಾ ಮಾಝೇನಿ ।೩೬೫॥ ಬಹುತಾ ಮುಂಗ್ಯಾಂಚ್ಯಾ ವಿವರಾಸೀ । ಜೇವೀ ಆಗೀ ಲಾವಾವೀ ಹೃಷೀಕೇಶೀ । ತೇವೀ ಹೇ ವಾರ್ತಾ ದ್ವಾರಕೇಸೀ । ಮ್ಯಾ ಸುಹೃದಾಂಪಾಶೀ ಸಾಂಗಾವೀ ।೩೬೬॥ ಜೇವೀ ಫಳತೇ ಫುಲತೇ ವನೀ । ಭಡಕೋನಿ ಲಾವಾವಾ ದಾವಾಗ್ನೀ । ತೈಸಾ ಭಡಕಾ ಹಾ ಸುಹೃದಾಂಚೇ ಕಾನೀ । ಕೃಷ್ಣನಿಧನಾಗ್ನೀ ಕೋಣ ಲಾವೀ ।೩೬೭॥ ಜೇವೀ ಬುಡತಯಾಚೇ ಮಾಥಾ । ಪಾಷಾಣ ನ ದೇವವೇ ಸರ್ವಥಾ । ತೇವೀ ಕೃಷ್ಣಸಹಿತ ಕುಳಾಚ್ಯಾ ಘಾತಾ । ಮೀ ನವ್ಹೇ ಸಾಂಗತಾ ಸುಹೃದಾಂಸೀ ।೩೬೮॥ ಸುಖ ದ್ಯಾವೇ ಸುಹೃದಾಂಸೀ । ನ ರಾಹಿಲೇ ಹೃಷೀಕೇಶೀ । ಘೇಊನಿಯಾ ಮಹಾದುಃಖಾಂಚಿಯಾ ರಾಶೀ । ಸುಹೃದಾಂಪಾಶೀ ಮೀ ನ ವಚೇ ।೩೬೯॥

ಏಕೆಂದರೆ ಈ ಹಿಂದೆ ನಾನು ಸಮುದ್ರದಿಂದ ಸ್ಥಳ ಕೇಳಿಕೊಂಡು ಅದರಲ್ಲಿ ಸುಂದರವಾದ ದ್ವಾರಕಾನಗರವನ್ನು ನಿರ್ಮಾಣ ಮಾಡಿದ್ದೆನು. ನಾನೀಗ ನಿಜಧಾಮಕ್ಕೆ ಹೋಗುವುದೊಂದೇ ತಡ, ಆ ಸಮುದ್ರವು ಅವಶ್ಯವಾಗಿ ಅದನ್ನು ಮುಳುಗಿಸುವುದು ।೩೫೬॥ ಆದ್ದರಿಂದ ನೀನು ಲಗುಬಗೆಯಿಂದ ಹೋಗು. ಅಲ್ಲಿ ನನ್ನ ತಂದೆ, ತಾಯೀ ಮತ್ತು ಸರ್ವ ಜನರಿಗೆ ದ್ವಾರಕೆಯಿಂದ ಹೊರಗೆ ತೆಗೆ ।೩೫೭॥ ಸಮುದ್ರವು ಆ ಸ್ಥಳವನ್ನು ಮುಳುಗಿಸುವ ಒಳಗಾಗಿಯೇ ನೀನು ನಮ್ಮ ಸರ್ವ ಪರಿವಾರವನ್ನು, ಜನರನ್ನು ಅಲ್ಲಿಂದ ಹೊರಗೆ ಕರೆದುಕೊಂಡು ಬಂದು ಬಿಡು ।೩೫೮॥ ರಾಜ್ಯದಾಡಳಿತ ನಷ್ಟವಾದ್ದರಿಂದ ಎಲ್ಲ ಮಾರ್ಗಗಳು ಕಳ್ಳರಿಂದ ತುಂಬಿ ಹೋಗುವುವು. ಆದ್ದರಿಂದ ಒಬ್ಬರೇ ಯಾರೂ ಹೋಗುವಂತಿಲ್ಲ. ಎಲ್ಲರೂ ಕೂಡಿಕೊಂಡೇ ಒಂದೇ ಗುಂಪಾಗಿ ಹೊರಗೆ ಹೊರಡಬೇಕು ।೩೫೯॥ ಅರ್ಜುನನಿಗೆ ಸಂಗಡವಿಟ್ಟುಕೊಳ್ಳಬೇಕು. ಸರ್ವರೂ ಏಕತ್ರ ಕೂಡಿಕೊಂಡು ಕೂಡಲೇ ಇಂದ್ರಪ್ರಸ್ಥಕ್ಕೆ ಹೋಗಬೇಕು. ಆಗ ಅರ್ಜುನನು ಮಾರ್ಗದಲ್ಲಿ ಎಲ್ಲರನ್ನೂ ರಕ್ಷಿಸುವನು ।೩೬೦॥ ಈ ಶ್ರೀಕೃಷ್ಣನ ಭಾಷಣ ಕೇಳಿ ದಾರುಕನಿಗೆ ಜೋರಾಗಿ ಅಳು ಉಕ್ಕೇರಿತು. ಆತನು ತನ್ನ ಪ್ರಾಣ ಕೊಡಲು ಸಿದ್ಧನಾದನು. ನೀರಿನಿಂದ ಮೀನವನ್ನು ಹೊರಗೆ ತೆಗೆಯಲು ಆಗ ಅದಕ್ಕಾಗುವ ಅವಸ್ಥೆಯೇ ದಾರುಕನಿಗಾಯಿತು ।೩೬೧॥ ಆತನು ಹೀಗೆ ಹೇಳಹತ್ತಿದನು ; ತನ್ನ ಸರ್ವ ಕುಲದ ನಾಶ ಮಾಡಿ ಶ್ರೀಕೃಷ್ಣನು ಹೊರಟೇ ಹೋದನು ಎಂಬ ಈ ವೃತ್ತಾಂತವನ್ನು ನಾನು ಕಪ್ಪು ಮುಖ ಧರಿಸಿ ದ್ವಾರಕೆಗೆ ಹೋಗಿ ಹೇಗೆ ಹೇಳಲಿ? ।೩೬೨॥ ಆಗ ಅವರು ಸರ್ವರೂ ಶ್ರೀಕೃಷ್ಣರೂಪ ನಿಜಸುಖ ಕಳೆದುಕೊಂಡು ಇವನು ತನ್ನ ಕಪ್ಪು ಮುಖ ತೋರಿಸಲು ಇಲ್ಲಿಗೆ ಬಂದಿರುವನು ಎಂದು ಹೇಳಲಾರಂಭಿಸುವರು. ಹೀಗೆ ಜಗತ್ತಿನ ಸರ್ವ ದುಃಖಕ್ಕೆ ನಾನೇ ಕಾರಣನಾಗುವೆನು ।೩೬೩॥ ನನ್ನ ವಚನೋಕ್ತಿಗಳನ್ನು ಕೇಳು ಕೇಳುತ್ತಲೇ ಸರ್ವ ಜನರೂ ಪ್ರಾಣ ಬಿಟ್ಟಾರು. ಆದ್ದರಿಂದ ಹೇ ಶ್ರೀಕೃಷ್ಣನೇ, ಇಂಥ ಭಯಾನಕ ದುಃಖ ಕೊಡಲು ನಾನು ಅಲ್ಲಿಗೆ ಹೋಗಲು ಸಿದ್ಧನಿಲ್ಲ ।೩೬೪॥ ಕಾರಣ ಯಾರಿಗೆ ನಾನು ಈ ವಾರ್ತೆ ಹೇಳುವೇನೋ ಅವರ ಜೀವವನ್ನು ತೆಗೆದುಕೊಂಡಂತಾಗುವುದು. ಹೇ ಶ್ರೀಕೃಷ್ಣನೇ, ಇಷ್ಟೊಂದು ಮಹಾ ನಿಷ್ಠುರತೆಯು ನನ್ನ ಕೈಯಿಂದ ಆಗದ ಮಾತಾಗಿರುವುದು ।೩೬೫॥ ಹೇ ಶ್ರೀಕೃಷ್ಣನೇ, ಅಸಂಖ್ಯ ಇರುವೆಗಳ ಹುತ್ತಿಗೆ ಬೆಂಕಿ ಹಚ್ಚುವುದು ಒಂದೇ, ನಾನು ಈ ವಾರ್ತೆಯನ್ನು ದ್ವಾರಕೆಯ ಸರ್ವ ಸುಹೃದರಿಗೆ ತಿಳಿಸುವುದು ಒಂದೇ ।೩೬೬॥ ಫಲಪುಷ್ಪಗಳಿಂದ ಭರಿತವಾದ ವನಕ್ಕೆ ಬೆಂಕಿ ಹಚ್ಚಿದರೆ ಏನಾಗುವುದೋ, ಅದೇ ಪ್ರಕಾರವಾದ ನಿನ್ನ ಗಮನದ ಜ್ವಾಲೆಯನ್ನು ನಿನ್ನ ಸುಹೃದರ ಕಿವಿಗಳಿಗೆ ಯಾರು ಹೋಗಿ ಹಚ್ಚಬೇಕು? ।೩೬೭॥ ನೀರಿನಲ್ಲಿ ಮುಳುಗುವವನ ತಲೆಯ ಮೇಲೆ ಕಲ್ಲು ಸರ್ವಥಾ ಒಗೆಯಲು ಬರುವುದಿಲ್ಲ. ಅದರಂತೆ ಶ್ರೀಕೃಷ್ಣ ಸಹ ಸರ್ವ ಕುಲದ ಸಂಹಾರವಾದ ಈ ವಾರ್ತೆಯನ್ನು ಆಪ್ತೇಷ್ಟರಿಗೆ ಹೇಳುವುದು ನನ್ನಿಂದ ಆಗಲಾರದು ।೩೬೮॥ ಹೇ ಶ್ರೀಕೃಷ್ಣನೇ, ಆಪ್ತ ಜನರಿಗೆ ಸುಖ ಕೊಡಬೇಕೆಂಬ ಮಾತು ಒಂದೆಡೆ ಇರಲಿ, ಈ ಮಹಾದುಃಖದ ರಾಶಿ ಹೊತ್ತುಕೊಂಡು ಇಷ್ಟ ಮಿತ್ರರಲ್ಲಿ ನಾನು ಹೋಗುವುದು ಸಾಧ್ಯವೇ ಇಲ್ಲ ।೩೬೯॥

ಆಶಂಕಾ ॥ ಮ್ಹಣಸೀ ಜನ್ಮವರೀ ಅವಜ್ಞಾ । ತುವಾ ನಾಂಹೀ ಕೇಲೀ ಅತಿಪ್ರಜ್ಞಾ । ತೋ ತೂ ಅಂತಕಾಳೀಂಚ್ಯಾ ವಚನಾ । ಕಾ ಅವಜ್ಞಾ ಕರಿತೋಸೀ ।೩೭೦॥ ಕೃಷ್ಣಾ ಅಂತಕಾಳೀಂಚೇ ತುರ್ಝೇ ಶ್ರೀಮುಖ । ಪಾಹತಾ ಮಜ ಅತ್ಯಂತ ಸುಖ । ತೇ ಸಾಂಡೂನಿ ಜನಾಂಸೀ ದುಃಖ । ದ್ಯಾವಯಾ ದೇಖ ಮೀ ನ ವಚೇ ।೩೭೧॥ ಕುಳನಿಧನಾಚೇ ಘೋರ ದುಃಖ । ಕೃಷ್ಣ ನಿಧನೇ ಸಂತಾಪಕ । ಮಾರ್ಝೇ ವಚನಮಾತ್ರೇ ಹೇ ವಿಖ । ಜಗಾಸೀ ದೇಖ ನ ದೇವವೇ ।೩೭೨॥ ತುರ್ಝೇ ಆಜ್ಞೇಕರಿತಾ ದೇಖ । ಜಗಾಸೀ ದ್ಯಾವೇ ಮಹಾದುಃಖ । ತುರ್ಝೇ ಅವಜ್ಞೇಚಾ ಉಲ್ಲೇಖ । ನರಕದಾಯಕ ಮಜ ಹೋಯ ।೩೭೩॥ ಮಾ ಆಪಣಚಿ ಘೇಊನಿ ವಿಖ । ತುಜಪುಢೇ ಮರತಾ ದೇಖ । ಉತ್ತಮ ಗತಿ ಅಲೋಲಿಕ । ಮೀ ನಿಜನಿಷ್ಟಂಕ ಪಾವೇನ ।೩೭೪॥ ಐಸೇ ಮ್ಹಣೋನಿ ಆಪಣ । ದಾರುಕೇ ಘಾತಲೇ ಲೋಟಾಂಗಣ । ಮಸ್ತಕೀ ಧರಿಲೇ ಶ್ರೀಚರಣ । ಸರ್ವಥಾ ಜಾಣ ಸೋಡೀನಾ ।೩೭೫॥ ದೇಖೋನಿ ದಾರುಕಾಚಾ ಭಾವೋ । ಕೃಪೇ ದ್ರವಲಾ ದೇವಾಧಿದೇವೋ । ಜೇಣೇ ನಿರ್ದಳೇ ಶೋಕಮೋಹೋ । ತೇ ವರ್ಮ ಪಹಾ ಹೋ ಸಾಂಗತ ।೩೭೬॥

ತ್ವಂ ತು ಮದ್ಧರ್ಮಮಾಸ್ಥಾಯ ಜ್ಞಾನನಿಷ್ಠ ಉಪೇಕ್ಷಕಃ । ಮನ್ಮಾಯಾರಚನಾಮೇತಾಂ ವಿಜ್ಞಾಯೋಪಶಂ ವ್ರಜ ।೪೯॥

ಅರ್ಥ:- ದಾರುಕಾ, ನೀನು ನನ್ನ ಭಾಗವತ ಧರ್ಮದ ಆಶ್ರಯ ಮಾಡಿ ಜ್ಞಾನನಿಷ್ಠ ಹಾಗೂ ಉದಾಸೀನನಾಗಿಯೂ ನನ್ನ ಮಾಯೆಯ ರಚನೆ ತಿಳಿದುಕೊಂಡು ಶಾಂತಿ ಮಾರ್ಗವನ್ನು ಅನುಸರಿಸು.

ಮಾರ್ಝ್ಯಾ ಧರ್ಮಾಚೇ ನಿಜಲಕ್ಷಣ । ದೃಢ ಆಶ್ರಯಿತಾ ಆಪಣ । ಪಾವೋನಿ ಮಾರ್ಝೇ ಜ್ಞಾನ ವಿಜ್ಞಾನ । ತೂ ಬ್ರಹ್ಮ ಸಂಪನ್ನ ಸ್ವಯೇ ಹೋಸೀ ।೩೭೭॥ ಮಾರ್ಝೇ ಧರ್ಮಾಚೇ ನಿಜಲಕ್ಷಣ । ತೂ ಮ್ಹಣಸೀ ತೇ ಕೋಣ ಕೋಣ । ಐಕ ದಾರುಕಾ ಸಾವಧಾನ । ಮದ್ಧರ್ಮ ಪೂರ್ಣ ತೇ ಐಸೇ ।೩೭೮॥ ಹೃದಯೀ ನಿತ್ಯ ಮಾರ್ಝೇ ಧ್ಯಾನ । ಮುಖೀ ಮಾರ್ಝೇ ನಾಮಕೀರ್ತನ । ಶ್ರವಣೇ ಮಾರ್ಝೇ ಕಥಾಶ್ರವಣ । ಕರೀ ಮದರ್ಚನ ಸರ್ವದಾ ।೩೭೯॥ ನಯನೀ ಮಮ ಮೂರ್ತಿದರ್ಶನ । ಚರಣೀ ಮದಾಲಯಾ ಗಮನ । ರಸನೇ ಮಮ ತೀರ್ಥ ಪ್ರಾಶನ । ಮತ್ಪ್ರಸಾದ ಭೋಜನ ಅತ್ಯಾದರೇ ।೩೮೦॥ ಸಾಷ್ಟಾಂಗೇ ಮಜಚಿ ನಮನ । ಆಲ್ಹಾದೇ ಮದ್ಭಕ್ತಾ ಆಲಿಂಗನ । ಸಪ್ರೇಮ ಮಾರ್ಝೇ ಸೇವೇವೀಣ । ರಿತಾ ಅರ್ಧಕ್ಷಣ ಜಾಊ ನೇದೀ ।೩೮೧॥

ಹೀಗೆಂದ ಮಾತ್ರಕ್ಕೆ ನೀನು ಹೀಗೆ ಹೇಳಬಹುದು ; ನೀನು ಬುದ್ಧಿವಂತನು, ಆಯುಷ್ಯದಲ್ಲಿ ನೀನು ಎಂದಿಗೂ ನನ್ನ ಆಜ್ಞೆ ಮೀರಿದವನಲ್ಲ. ಹೀಗಿದ್ದರೂ ಈ ನನ್ನ ಅಂತ್ಯಕಾಲದ ವಾರ್ತೆ ತಿಳಿಸಲು ಏಕೆ ಅವಜ್ಞಾ ಮಾಡುವೆ? ।೩೭೦॥ ಹೇ ಶ್ರೀಕೃಷ್ಣನೇ, ಅಂತ್ಯಕಾಲದಲ್ಲಿ ನಿನ್ನ ಮುಖ ಕಮಲ ಕಾಣುವ ಸುಖವನ್ನು ಬಿಟ್ಟುಕೊಟ್ಟು ಜನರಿಗೆ ಅತಿಶಯ ದುಃಖ ಕೊಡುವಂತಹ ಆರೋಪ ತೆಗೆದುಕೊಂಡು ನಾನೆಂದಿಗೂ ಹೋಗಲಾರೆನು ।೩೭೧॥ ಕುಲನಾಶದ ದುಃಖ ಮಾತ್ರ ಅತಿಶಯ ಭಯಾನಕವಾಗಿರುವುದು. ಶ್ರೀಕೃಷ್ಣನ ಗಮನವು ಇದಾದರೂ ಅತ್ಯಂತ ತಾಪದಾಯಕವಾಗಿರುವುದು. ಇಂಥ ವಿಷ ಸಮಾನ ಭಾಷಣ ನನ್ನಿಂದ ಹೇಳುವುದು ಆಗದ ಮಾತಾಗಿರುವುದು ।೩೭೨॥ ನಾನು ಎಂತಹ ದುರಂತದಲ್ಲಿ ಬಿದ್ದಿರುವೆ ನೋಡು. ನಿನ್ನ ಆಜ್ಞೆ ಪಾಲಿಸಬೇಕೆಂದರೆ ಜಗತ್ತಿಗೆ ಮಹಾದುಃಖ ಕೊಡಬೇಕಾಗುವುದು. ನಿನ್ನ ಅವಜ್ಞೆ ಮಾಡಬೇಕೆಂದರೆ ನನಗೆ ನರಕಕ್ಕೆ ಹೋಗಬೇಕಾಗುವುದು ।೩೭೩॥ ಆದ್ದರಿಂದ ನಾನು ಸ್ವತಃ ನಿನ್ನ ಎದುರಿನಲ್ಲಿಯೇ ವಿಷಪ್ರಾಶನೆ ಮಾಡುವೆನು. ಅಂದರೆ ಅದರಿಂದಾಗುವ ಮರಣದಿಂದ ನಿಶ್ಚಯವಾಗಿ ಅಲೌಕಿಕವಾಗಿರುವ ಉತ್ತಮ ಗತಿಯು ನನಗೆ ಪ್ರಾಪ್ತವಾಗುವುದು ।೩೭೪॥ ಹೀಗೆ ಹೇಳುತ್ತ ದಾರುಕನು ಶ್ರೀಕೃಷ್ಣನಿಗೆ ಲೋಟಾಂಗಣ ಹಾಕಿದನು ಹಾಗೆಯೇ ಶ್ರೀಹರಿಯ ಚರಣಕಮಲಗಳನ್ನು ತನ್ನ ಮಸ್ತಕಕ್ಕೆ ಧರಿಸಿದನು. ಏನು ಮಾಡಿದರೂ ಬಿಟ್ಟು ಏಳಲಾರನಾದನು ।೩೭೫॥ ಈ ಯಾವ ದಾರುಕನ ನಿಜ ಪ್ರೇಮಭಾವವನ್ನು ಕಂಡು ಶ್ರೀಕೃಷ್ಣನ ಹೃದಯದಲ್ಲಿ ಕೃಪೆಯು ದ್ರವಿಸಿತು. ಯಾವುದರಿಂದ ಆತನ ಶೋಕ ಮತ್ತು ಮೋಹ ನಷ್ಟವಾಗಬೇಕೋ ಅಂಥ ತತ್ತ್ವವನ್ನು ಆತನಿಗೆ ಹೇಳಲಾರಂಭಿಸಿದನು ।೩೭೬॥

ಹೇ ದಾರುಕಾ, ನೀನು ನನ್ನ ಭಾಗವತ ಧರ್ಮದ ಲಕ್ಷಣಗಳನ್ನು ದೃಢವಾಗಿ ಆಶ್ರಯ ಮಾಡಿದರೆ ಆಗ ನನ್ನ ಜ್ಞಾನ ವಿಜ್ಞಾನವು ನಿನಗೆ ಪ್ರಾಪ್ತವಾಗಿ ನೀನು ಬ್ರಹ್ಮಸ್ವರೂಪನಾಗುವೆ ।೩೭೭॥ ಈಗ ನೀನು ಧರ್ಮದ ಲಕ್ಷಣಗಳು ಯಾವ ಯಾವುವು? ಎಂದು ವಿಚಾರಿಸಬಹುದು. ಅದನ್ನು ಹೇಳುವೆ, ಲಕ್ಷಕೊಟ್ಟು ಕೇಳು. ನನ್ನ ಸರ್ವ ಸದ್‌ಧರ್ಮಗಳು ಹೀಗಿರುವುವು ।೩೭೮॥ ಹೃದಯದಲ್ಲಿ ನಿರಂತರವಾಗಿ ನನ್ನ ಧ್ಯಾನ ಮಾಡು, ಮುಖದಲ್ಲಿ ಯಾವಾಗಲೂ ನನ್ನ ನಾಮಕೀರ್ತನೆ ಇರಬೇಕು. ಕಿವಿಗಳಿಂದ ನನ್ನ ಕಥೆಯನ್ನು ಶ್ರವಣ ಮಾಡು. ಕೈಗಳಿಂದ ಯಾವಾಗಲೂ ನನ್ನ ಪೂಜೆಯನ್ನು ಮಾಡು ।೩೭೯॥ ನಯನಗಳಿಂದ ನನ್ನ ಮೂರ್ತಿಯ ದರ್ಶನ ಪಡೆ. ಕಾಲುಗಳಿಂದ ನನ್ನ ದೇವಾಲಯಕ್ಕೆ ಹೋಗು. ರಸನೆಯಿಂದ ನನ್ನ ತೀರ್ಥ ಪ್ರಾಶನೆ ಮಾಡು. ನನ್ನ ಪ್ರಸಾದವನ್ನು ಅತ್ಯಂತ ಆದರದಿಂದ ಭೋಜನ ಮಾಡು ।೩೮೦॥ ನನಗೆ ಸಾಷ್ಟಾಂಗ ನಮಸ್ಕಾರ ಹಾಕು. ನನ್ನ ಸರ್ವಭಕ್ತರಿಗೆ ಪ್ರೇಮದಿಂದ ಆಲಿಂಗಿಸು. ಪ್ರೇಮದಿಂದ ನನ್ನ ಸೇವೆಯ ಹೊರತಾಗಿ ಅರ್ಧಕ್ಷಣವನ್ನೂ ಸಹ ವ್ಯರ್ಥ ಮಾಡಬೇಡ ।೩೮೧॥

ಐಸೀ ಸೇವಾ ಕರಿತಾ ಪಹಾ ಹೋ । ಸರ್ವಭೂತೀ ದೇಖೇ ಮದ್ಭಾವೋ । ಹಾ ಸರ್ವಧರ್ಮಾಮಾಜೀ ರಾವೋ । ತೇಥೇ ಅಪಾವೋ ಕದಾ ನ ರಿಘೇ ।।೩೮೨।। ಸರ್ವಭೂತೀ ಮಾಝೇ ದರ್ಶನ । ತೇವ್ಹಾ "ವೈರಾಗ್ಯ" ವೋಸಂಡೇ ಸಂಪೂರ್ಣ । ತೇಥ ಸಹಜೇ ಹೋಯ ಶುದ್ಧ ಜ್ಞಾನ । ದೇಹಾಭಿಮಾನ ಛೇದಕ ।।೩೮೩।। ದೇಹಾಭಿಮಾನ ಹೋತಾ ಕ್ಷೀಣ । ಅಪೇಕ್ಷೇಸೀ ಪಡೇ ಶೂನ್ಯ । ತೇವ್ಹಾ "ನಿರಪೇಕ್ಷತಾ" ಪೂರ್ಣ । ಸಹಜೇ ಜಾಣ ಠಸಾವೇ ।।೩೮೪।। ನಿರಪೇಕ್ಷತೇಚೀ ದಶಾ ಕೈಶೀ । ವಿಷಯ ಭೇಟಲಿಯಾ ಇಂದ್ರಿಯಾಂಸೀ । ಉಪೇಕ್ಷಾ ಕರೀ ತ್ಯಾಂಸೀ । ಜೇವೀ ಮೃಗಜಳಾಸೀ ಸಜ್ಞಾನ ।।೩೮೫।। ಯಾ ದೃಷ್ಟೀ ಪಾಹತಾ ಚರಾಚರ । ಸಮೂಳ ಮಿಥ್ಯಾ ವ್ಯವಹಾರ । ಜೇವೀ ದೋರಾಚಾ ಸರ್ಪಾಕಾರ । ತೇವೀ ಭ್ರಮೇ ಸಂಸಾರ ಭಾಸತ ।।೩೮೬।। ಕೇವಳ ದೋರಾಚಾ ಸರ್ಪಾಕಾರ । ತೋ ಶ್ವೇತ ಕೃಷ್ಣ ಕೀ ರಕ್ತಾಂಬರ । ತೇವೀ ವಿಷಯೀ ವಿಷಯವ್ಯವಹಾರ । ಮಿಥ್ಯಾ ಸಂಸಾರ ಮಾಯಿಕ ।।೩೮೭।। ಜೇವೀ ಶುಕ್ತಿಕೇಚಾ ರಜತಾಕಾರ । ನ ಘಡೇ ಏಕಹೀ ಅಲಂಕಾರ । ತೇವೀ ಹಾ ಆಭಾಸೇ ಸಂಸಾರ । ಮಿಥ್ಯಾ ವ್ಯವಹಾರ ಮಾಯಿಕ ।।೩೮೮।। ಮೂಳೀ ಮಿಥ್ಯಾ ಭವಭಾನ । ತ್ಯಾಚೇ ಭ್ರಾಂತಾಸೀಚ ಬಂಧನ । ತೇಥೀಲ ಜೇ ಮುಕ್ತಪಣ । ತೋಹೀ ಭ್ರಮ ಜಾಣ ಸೋಲೀಂವ ।।೩೮೯।। ಆಮ್ಹೀ ಸಜ್ಞಾನ ಪೂರ್ಣ । ನಿರ್ದಳೂನಿ ಭವಬಂಧನ । ದೃಢ ಸಾಧಿಲೇ ಮುಕ್ತಪಣ । ಹೇಹೀ ಜಲ್ಪನ ಮಾಯಿಕ ।।೩೯೦।। ಸಂಸಾರ ಮಾಯಿಕ ರಚನಾ । ಹೇ ಸತ್ಯತ್ವೇ ಕಳಲೇ ಜ್ಯಾಚಾ ಮನಾ । ತೈ ಮನಚಿ ಲಾಜೇ ಮನಪಣಾ । "ವಿಜ್ಞಾನ" ಜಾಣಾ ತ್ಯಾ ನಾಂವ ।।೩೯೧।। ಜಾಗೃತಿ ಸುಷುಪ್ತಿ ಆಣಿ ಸ್ವಪ್ನ । ಸಂಸಾರಾಚೇ ಮಿಥ್ಯಾ ಜ್ಞಾನ । ಹೇ ಜ್ಯಾಸೀ ಠಸಾವಲೇ ಸಂಪೂರ್ಣ । "ವಿಜ್ಞಾನ" ಜಾಣ ತ್ಯಾ ನಾಂವ ।।೩೯೨।। ಮುಖ್ಯ ವಿಜ್ಞಾನಾಚೇ ಲಕ್ಷಣ । ಸಾಧಕ ಹೋಯ ಬ್ರಹ್ಮ ಪೂರ್ಣ । ಜಗೀ ನ ದೇಖೇ ಮೀತೂಪಣ । "ಉಪಶಮ" ಜಾಣ ಯಾ ನಾಂವ ।।೩೯೩।। ಐಸಾ ಉಪಶಮ ಜ್ಯಾಸೀ ಪೂರ್ಣ । ತ್ಯಾಸೀ ಮಜಸೀ ನಾಹೀ ಭಿನ್ನಪಣ । ದಾರುಕೇ ಐಕತಾ ನಿರೂಪಣ । ಹೃದಯೀ ತೇ ಖೂಣ ಚಮತ್ಕಾರಲೀ ।।೩೯೪।। ಅಲಂಕಾರ ಸೋನೇ ಪಾಹೂ ಗೇಲಾ । ತಂವ ತೋಚಿ ಸೋನೇ ಹೋಊನಿ ಠೇಲಾ । ತೇವೀ ಮೀ ತಂವ ಕೃಷ್ಣರಸೇ ವೋತಲಾ । ವಿಯೋಗ ನಾಥಿಲಾ ದೇಹಲೋಭೇ ।।೩೯೫।।

ಈ ಪ್ರಕಾರವಾಗಿ ನನ್ನ ಸೇವೆ ಮಾಡುತ್ತಿರಲು ಆಗ ಸರ್ವ ಪ್ರಾಣಿ ಮಾತ್ರರಲ್ಲಿ ನನ್ನ ಭಾವನೆಯನ್ನೇ ಹಿಡಿಯಬೇಕು. ಇದೇ ಸರ್ವ ಧರ್ಮಗಳಲ್ಲಿ ಶ್ರೇಷ್ಠವಾದ ಧರ್ಮವಾಗಿರುವುದು. ಅಲ್ಲಿ ಮಾತ್ರ ಎಂದಿಗೂ ವಿಘ್ನಗಳಿಗೆ ಪ್ರವೇಶ ಮಾಡಲು ಸಾಧ್ಯವಾಗುವುದಿಲ್ಲ ।।೩೮೨।। ಸರ್ವ ಪ್ರಾಣಿಮಾತ್ರರಲ್ಲಿ ನಾನೇ ತುಂಬಿರುವ ಭಾವನೆ ಉಂಟಾಗಲು ವೈರಾಗ್ಯವು ಪೂರ್ಣವಾಗಿ ತುಂಬಿಕೊಳ್ಳುವುದು ಹಾಗೂ ದೇಹಾಭಿಮಾನದ ಛೇದ ಮಾಡುವ ಶುದ್ಧ ಜ್ಞಾನವು ಸಹಜವಾಗಿ ಉತ್ಪನ್ನವಾಗುವುದು ।।೩೮೩।। ದೇಹದ ಅಭಿಮಾನವು ಇಲ್ಲದಾಯಿತೆಂದರೆ ಆಶೆ ಎಂಬುವುದು ಶೂನ್ಯವಾಗುವುದು ಮತ್ತು ನಿರಪೇಕ್ಷತೆಯು ಸಹಜವಾಗಿ ಸ್ಥಿರಗೊಳ್ಳುವುದು ।।೩೮೪।। ಈ ನಿರಪೇಕ್ಷತೆಯ ಸ್ಥಿತಿಯು ಹೇಗಿರುವುದು ಎಂದು ಕೇಳಿದರೆ ತಿಳಿದ ಜಾಣರು ಮೃಗಜಲದ ಅಪೇಕ್ಷೆ ಪಡೆಯಲಾರದಂತೆ ಇಂದ್ರಿಯಗಳಿಗೆ ವಿಷಯಗಳು ಭೇಟಿಯಾದರೂ ಕೂಡ ಅದಕ್ಕಾಗಿ ಅಪೇಕ್ಷೆ ಮಾಡುವುದಿಲ್ಲ ।।೩೮೫।। ಈ ದೃಷ್ಟಿಯಿಂದಲೇ ಸರ್ವ ಚರಾಚರಗಳನ್ನು ಕಾಣುತ್ತಿದ್ದರೆ ಈ ಸರ್ವ ಪ್ರಪಂಚವು ತೋರಿ ಅಡಗುವ ಮಿಥ್ಯಾ ಎಂದು ತಿಳಿಯುವುದು. ಹಗ್ಗವು ಸರ್ಪದ ಆಕಾರದಂತೆ ತೋರುವುದು. ಅದರಂತೆ ಭ್ರಮೆಯಿಂದ ಸಂಸಾರದ ಭಾಸವಾಗುತ್ತಿರುವುದು ।।೩೮೬।। ಅದು ಕೇವಲ ಹಗ್ಗದ ಸರ್ಪಾಕಾರವಿರುವುದು. ಅದು ಬಿಳಿಯಾಗಿ, ಕಪ್ಪಾಗಿ ಅಥವಾ ಕೆಂಪಾಗಿ ಭಾಸವಾಗುತ್ತಿರುವುದು, ಅದರಂತೆಯೇ ವಿಷಯಗಳಲ್ಲಿನ ಈ ಸಂಸಾರವು ಮಿಥ್ಯಾ ಅಂದರೆ ಮಾಯಿಕವಾಗಿರುವುದು ।।೩೮೭।। ಸಿಂಪಿನ ಬಣ್ಣವು ಬೆಳ್ಳಿಯಂತೆ ತೋರುವುದು. ಆದರೆ ಅದರಿಂದ ಒಂದಾದರೂ ಆಭರಣವಾಗುವುದಿಲ್ಲ. ಅದರಂತೆಯೇ ಈ ಸಂಸಾರವೂ ಕೂಡ ಮಿಥ್ಯೆ ಅಂದರೆ ತೋರಿ ಅಡಗುವ ಮಾಯಿಕ ವ್ಯವಹಾರವಾಗಿರುವುದು ।।೩೮೮।। ಸಂಸಾರದಲ್ಲಿ ತೋರುವುದೆಲ್ಲವೂ ಮೂಲತಃ ಮಿಥ್ಯೆಯಾಗಿರುವುದು. ಇದರಿಂದಲೇ ಭ್ರಾಂತನಿಗೆ ಬಂಧನ ಉಂಟಾಗುವುದು. ಮುಕ್ತಿಯಾದರೂ ಕೂಡ ಕೇವಲ ಭ್ರಮವೇ ಆಗಿರುವುದು ।।೩೮೯।। ನಾವು ಪೂರ್ಣ ಜ್ಞಾನಿಗಳು, ಸಂಸಾರಬಂಧನವನ್ನು ಮುರಿದು ಮುಕ್ತಿ ಪ್ರಾಪ್ತ ಮಾಡಿಕೊಂಡಿರುವೆವು. ಇಂಥ ವಿಚಾರ ಶ್ರೇಣಿಯೂ ಕೂಡ ಮಾಯಿಕವಾಗಿದೆ ।।೩೯೦।। ಯಾರ ಮನಸ್ಸಿಗೆ ಯಾವ ಈ ಸಂಸಾರವು ಮಾಯಿಕವೆಂದು ತಿಳಿಯುವುದೋ ಆಗ ಆತನ ಮನವು ತನ್ನ ಮನಸ್ಸಿನಿಂದ ನಾಚಿಕೆಪಡುವುದು. ಇದಕ್ಕೆ ವಿಜ್ಞಾನವೆಂದು ಹೇಳುವರು ।।೩೯೧।। ಜಾಗೃತೀ, ಸ್ವಪ್ನ, ಸುಷುಪ್ತಿ ಹಾಗೂ ತೋರುವ ಸಂಸಾರ, ಇವು ಎಲ್ಲವೂ ಮಿಥ್ಯೆಯಾಗಿವೆ ಎಂದು ಮನದಲ್ಲಿ ಪರಿಪೂರ್ಣವಾಗಿ ನಟ್ಟಿಕೊಂಡಾಗ ಅದರ ನಾಮವು ವಿಜ್ಞಾನ ಎಂದಾಗಿರುವುದು ।।೩೯೨।। ಸಾಧಕನು ಪರಿಪೂರ್ಣವಾಗಿ ಬ್ರಹ್ಮರೂಪನಾಗುವಿಕೆಯೇ ವಿಜ್ಞಾನದ ಮುಖ್ಯ ಸಾಧನೆಯಾಗಿರುವುದು ಮತ್ತು ಜಗತ್ತಿನಲ್ಲಿ ನಾನು, ನೀನು ಎಂಬುವುದು ಸ್ವಲ್ಪವೂ ಕೂಡ ತೋರದೇ ಇರುವ ಸ್ಥಿತಿಗೆ "ಉಪಶಮ" ಎಂದು ಹೇಳುವರು ।।೩೯೩।। ಇಂಥ ಉಪಶಮ ಯಾರಿಗೆ ಪ್ರಾಪ್ತವಾಗುವುದೋ, ಆತನಲ್ಲಿ ಮತ್ತು ನನ್ನಲ್ಲಿ ಯಾವ ಭೇದವೂ ಉಳಿಯುವುದಿಲ್ಲ. ಈ ನಿರೂಪಣೆಯನ್ನು ದಾರುಕನು ಕೇಳುತ್ತಲೇ ಆದು ಆತನಿಗೆ ಈ ಬೋಧೆಯು ಪೂರ್ಣವಾಗಿ ಮನವರಿಕೆಯಾಯಿತು ।।೩೯೪।। ಅಲಂಕಾರವು ಸುವರ್ಣ ನೋಡಲು ಹೋಗಿ ಆಗ ಅದು ಸ್ವತಃ ಸುವರ್ಣರೂಪವೇ ಆಗುವುದು. ಅದರಂತೆ ನಾನೂ ಕೂಡ ಕೃಷ್ಣರಸದಿಂದ ತುಂಬಿದವನಾಗಿರುವೆನು. ಅಂದಮೇಲೆ ದೇಹಲೋಭದ ವಿಯೋಗವು ಕೂಡ ಮಿಥ್ಯೆಯಾಗಿರುವುದು ।।೩೯೫।।

ಮೀ ಕೃಷ್ಣರೂಪ ಆಪಣ। ಮಜ ಕೃಷ್ಣೇಸೀ ನಾಹೀ ಭಿನ್ನಪಣ । ಐಸೀ ಚಮತ್ಕಾರಲೀ ಖೂಣ । ಮೀ ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ।।೯೬।।

ಇತ್ಯುಕ್ತಸ್ತಂ ಪರಿಕ್ರಮ್ಯ ನಮಸ್ಕೃತ್ಯ ಪುನಃ ಪುನಃ ತತ್ಪಾದೌ ಶೀರ್ಷ್ಣ್ಯುಪಾದಾಯ ದುರ್ಮನಾಃ ಪ್ರಯಯೌ ಪುರೀಮ್ ।।೫೦।।
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಯದುಕುಲಸಂಕ್ಷಯೋ ನಾಮ ತ್ರಿಂಶೋಽಧ್ಯಾಯಃ ।।೩೦।।

ಅರ್ಥ: -ಭಗವಂತನ ಈ ಆದೇಶ ತಿಳಿದು ದಾರುಕನು ಶ್ರೀಕೃಷ್ಣನಿಗೆ ಪ್ರದಕ್ಷಿಣೆ ಹಾಕಿದನು. ಆತನ ಚರಣಕಮಲಗಳಲ್ಲಿ ಮಸ್ತಕವನ್ನಿಟ್ಟು ಪುನಃ ಪುನಃ ವಂದಿಸಿದನು. ತದನಂತರ ಆತನು ಉದಾಸ ಮನದಿಂದ ದ್ವಾರಕೆಯತ್ತ ಹೊರಟನು.

ಐಸೇ ಐಕೋನಿ ಶ್ರೀಕೃಷ್ಣ ವಚನಾ । ಶಿರೀ ವಂದೂನಿ ಶ್ರೀಕೃಷ್ಣಾಜ್ಞಾ । ಖೇದ ಸಾಂಡೋನಿಯಾ ಮನಾ । ಕೃಷ್ಣಚರಣಾ ಲಾಗಲಾ ।।೯೭।। ಕರೂನಿ ತ್ರಿವಾರ ಪ್ರದಕ್ಷಿಣಾ । ಪುನಃ ಪುನಃ ಲಾಗೋನಿ ಚರಣಾ । ಚರಣೀ ಮಾಥಾ ಠೇವೂನಿ ಜಾಣಾ । ಘೇಊನಿ ಕೃಷ್ಣಾಜ್ಞಾ ನಿಘಾಲಾ ।।೯೮।। ಬ್ರಹ್ಮಸರ್ವತ್ರ ಪರಿಪೂರ್ಣ । ತ್ಯಾಚಾ ಬೋಧಕ ಶ್ರೀಕೃಷ್ಣ । ತೋ ನಿಜಧಾಮಾ ಗೇಲಾ ಆಪಣ । ತೇಣೇ ದುರ್ಮನ ದಾರುಕ ।।೯೯।। ಪುಢತೀ ಶ್ರೀಕೃಷ್ಣ ದರ್ಶನ । ಸರ್ವಥಾ ನ ಲಭೇ ಆಪಣ । ಯಾಲಾಗೀ ಅತಿದುರ್ಮನ । ಕರೀ ಗಮನ ದ್ವಾರಕೇಸೀ ।।೧೦೦।। ದಾರುಕ ಧಾಡಿಲಾ ದ್ವಾರಕೇಸೀ । ತಂವ ಮೈತ್ರೇಯ ಆಲಾ ಕೃಷ್ಣಾಪಾಶೀ । ತೇಚಿ ಕಾಳೀ ಹೃಷೀಕೇಶೀ । ಬ್ರಹ್ಮಜ್ಞಾನ ತ್ಯಾಸೀ ಉಪದೇಶೀ ।।೧೦೧।। ತೋ ಬ್ರಹ್ಮಜ್ಞಾನ ಉಪದೇಶವಿಧಿ । ಶುಕ ಬೋಲಿಲಾ ತೃತೀಯಸ್ಕಂಧೀ । ಮ್ಹಣೋನಿ ತೇ ನಿರೂಪಣ ಯೇ ಸಂಧೀ । ನ ಪ್ರತಿಪಾದೀ ಪುನರುಕ್ತ ।।೧೦೨।। ಪಾಹಾವಯಾ ಕೃಷ್ಣನಿರ್ಯಾಣ । ಉದ್ಧವ ಗುಪ್ತ ಹೋತಾ ಆಪಣ । ತೇಣೇ ಐಕೋನಿ ಜ್ಞಾನನಿರೂಪಣ । ಸಂತೋಷೇ ನಮನ ಕರೀ ಕೃಷ್ಣಾ ।।೧೦೩।। ತೇಚಿ ಕಾಳೀ ಮೈತ್ರೇಯಾಸೀ । ಸ್ವಮುಖೇ ಬೋಲಿಲಾ ಹೃಷೀಕೇಶೀ । ವಿದುರ ಯೇಈ ತುಜಪಾಶೀ । ತ್ಯಾಸೀ ತೂ ಉಪದೇಶೀ ಗುಹ್ಯಜ್ಞಾನ ।।೧೦೪।। ಉಪದೇಶೂನಿ ಮೈತ್ರೇಯಾಸೀ । ದೇವೇ ಧಾಡಿಲಾ ತೋ ಸ್ವಾಶ್ರಮಾಸೀ । ಉದ್ಧವೇಹೀ ನಮೂನಿ ಹೃಷೀಕೇಶೀ । ತೋಹೀ ಬದರೀಸೀ ನಿಘಾಲಾ ।।೧೦೫।। ದಾರುಕ ಧಾಡಿಲಾ ದ್ವಾರಕೇಸೀ । ಮೈತ್ರೇಯ ಧಾಡಿಲಾ ಸ್ವಾಶ್ರಮಾಸೀ । ಉದ್ಧವ ಧಾಡಿಲಾ ಬದರೀಸೀ ।ವ್ಯಾಧ ಅಧಮಾಸೀ ಧಾಡಿಲೇ ಸ್ವರ್ಗಾ ।।೧೦೬।। ನಿಜರಥಸಹಿತ ಘೋಡೇ । ನಿಜಾಯುಧೇಸೀ ಧಾಡಿಲೇ ಪುಢೇ । ಆತಾ ಆಪಣಹೀ ವಾಡೇಕೋಡೇ । ನಿಜಧಾಮಾಕಡೇ ನಿಘೇಲ ।।೧೦೭।। ನಿಜಧಾಮಾ ನಿಘತಾ ಶ್ರೀಪತೀ । ಸಮಸ್ತ ದೇವ ಪಾಹೋ ಯೇತೀ । ತೇ ಸುರಸ ಕಥಾಸಂಗತೀ । ಪುಢಿಲೇ ಅಧ್ಯಾಯಾರ್ಥೀ ಅತಿಗೋಡ ।।೧೦೮।।

ನಾನು ಸ್ವತಃ ಕೃಷ್ಣರೂಪನಾಗಿರುವೆನು. ನನ್ನಲ್ಲಿ ಮತ್ತು ಶ್ರೀಕೃಷ್ಣನಲ್ಲಿ ಯಾವುದೊಂದೂ ಭಿನ್ನತ್ವವಿರುವುದಿಲ್ಲ.ನಾನು ಪೂರ್ಣತ್ವದಿಂದ ಪರಿಪೂರ್ಣ ಬ್ರಹ್ಮರೂಪವೇ ಆಗಿರುವೆನು. ಈ ಯಾವ ರಹಸ್ಯವು ನನಗೆ ಪೂರ್ಣವಾಗಿ ಮನದಟ್ಟಾಯಿತು ।।೯೬।।

ಶ್ರೀಕೃಷ್ಣನ ಈ ವಚನಗಳನ್ನು ಕೇಳಿ ಹಾಗೂ ಆತನ ಆಜ್ಞೆಯನ್ನು ಶಿರಸಾ ವಂದಿಸಿ ಆ ದಾರುಕನು ತನ್ನ ಮನದಲ್ಲಿನ ಖೇದ ಒಗೆದುಬಿಟ್ಟು ಮುರಲಿ ಮನೋಹರ ಶ್ರೀಕೃಷ್ಣನ ಚರಣಗಳಿಗೆ ವಂದಿಸಿದನು ।।೯೭।। ಆತನಿಗೆ ಮೂರು ಸಾರೆ ಪ್ರದಕ್ಷಿಣೆ ಮಾಡಿ ಪುನಃ ಪುನಃ ನಮಸ್ಕರಿಸಿ ಆತನ ಚರಣಗಳಿಗೆ ಮಸ್ತಕವನ್ನಿಟ್ಟು ಶ್ರೀಕೃಷ್ಣನ ಆಜ್ಞೆ ಪಡೆದು ಆತನು ಹೊರಟು ಬಿಟ್ಟನು ।।೯೮।। ಬ್ರಹ್ಮವು ಇದು ಸರ್ವತ್ರ ಪರಿಪೂರ್ಣ ರೂಪದಿಂದಿರುವ ಈ ಜ್ಞಾನಪ್ರಾಪ್ತ ಮಾಡಿಕೊಡುವ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗುತ್ತಿರುವ ವಿಚಾರದಿಂದ ದಾರುಕನ ಮನವು ಅತಿಶಯವಾಗಿ ಉದಾಸವಾಯಿತು ।।೯೯।। ಶ್ರೀಕೃಷ್ಣನ ದರ್ಶನವು ಪುನಃ ಆಗಲು ಸಾಧ್ಯವಿಲ್ಲವೆಂದು ತಿಳಿದು ಆತನು ಅತ್ಯಂತ ಖಿನ್ನನಾದನು. ಹಾಗೆಯೇ ದ್ವಾರಕೆಯತ್ತ ಹೊರಟನು ।।೧೦೦।। ದಾರುಕನಿಗೆ ದ್ವಾರಕೆಗೆ ಕಳಿಸಿದನು. ಅಷ್ಟರಲ್ಲಿಯೇ ಮೈತ್ರೇಯ ಕೃಷ್ಣನ ಹತ್ತಿರ ಬಂದನು. ಆಗ ಶ್ರೀಕೃಷ್ಣನು ಆತನಿಗೂ ಸಹ ಬ್ರಹ್ಮಜ್ಞಾನದ ಉಪದೇಶ ಮಾಡಿದನು ।।೧೦೧।। ಆ ಯಾವ ಬ್ರಹ್ಮಜ್ಞಾನದ ಉಪದೇಶ ಶುಕಾಚಾರ್ಯರು ತೃತೀಯ ಅಧ್ಯಾಯದಲ್ಲಿ ಹೇಳಿರುವರು. ಆದ್ದರಿಂದ ಆ ನಿರೂಪಣೆಯನ್ನು ಈ ಪ್ರಸಂಗದಲ್ಲಿ ಮಾಡಿ ಪುನರುಕ್ತಿ ಮಾಡುವುದಿಲ್ಲ ।।೧೦೨।। ಶ್ರೀಕೃಷ್ಣನ ನಿರ್ಯಾಣ ಕಾಣುವುದಕ್ಕಾಗಿ ಉದ್ಧವನು ಅಲ್ಲಿ ಗುಪ್ತವಾಗಿ ಇದ್ದನು. ಆತನು ಈ ಜ್ಞಾನದ ನಿರೂಪಣೆ ಕೇಳಿದನು.ನಂತರ ಶ್ರೀಕೃಷ್ಣನಿಗೆ ನಮಸ್ಕರಿಸಿದನು ।।೧೦೩।। ಆ ಸಮಯದಲ್ಲಿ ಶ್ರೀಕೃಷ್ಣನು ಸ್ವಮುಖದಿಂದ ಮೈತ್ರೇಯನಿಗೆ ಹೀಗೆ ಹೇಳಿದನು ; ನಿನ್ನಲ್ಲಿ ವಿದುರನು ಯಾವ ಸಮಯಕ್ಕೆ ಬರುವನೋ, ಆಗ ನೀನು ಈ ಗುಹ್ಯ ಜ್ಞಾನದ ಉಪದೇಶ ಆತನಿಗೆ ಮಾಡು ।।೧೦೪।। ಶ್ರೀಕೃಷ್ಣನು ಮೈತ್ರೇಯನಿಗೆ ಉಪದೇಶ ಮಾಡಿ ಆತನಿಗೆ ಆತನ ಆಶ್ರಮಕ್ಕೆಕಳುಹಿಸಿದನು. ಆಗ ಉದ್ಧವನೂ ಕೂಡ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಬದರಿಕಾಶ್ರಮಕ್ಕೆ ಹೊರಟು ಹೋದನು ।।೧೦೫।। ದಾರುಕನಿಗೆ ದ್ವಾರಕಕ್ಕೆ ಕಳುಹಿಸಿದನು. ಮೈತ್ರೇಯನಿಗೆ ಆತನ ಆಶ್ರಮಕ್ಕೆ ಕಳುಹಿಸಿದನು. ಉದ್ಧವನಿಗೆ ಬದರಿಕಾಶ್ರಮಕ್ಕೆ ಕಳುಹಿಸಿದನು ಮತ್ತು ಅಧಮ ವ್ಯಾಧನಿಗೆ ಸ್ವರ್ಗಕ್ಕೆ ಕಳುಹಿಸಿದನು ।।೧೦೬।। ಕುದುರೆಗಳ ಸಮೇತ ತನ್ನ ರಥ, ಆಯುಧಗಳನ್ನು ಮುಂದೆ ಕಳುಹಿಸಿಕೊಟ್ಟನು. ಈಗ ತಾನು ಸ್ವತಃ ಆನಂದದಿಂದ ನಿಜಧಾಮಕ್ಕೆ ತೆರಳುತ್ತಿರುವನು ।।೧೦೭।। ಶ್ರೀಕೃಷ್ಣನು ನಿಜಧಾಮಕ್ಕೆ ಹೋಗುವ ಪ್ರಸಂಗದಲ್ಲಿ ಸರ್ವ ದೇವದೇವತೆಯವರು ಆತನನ್ನು ನೋಡಲು ಬರುವರು. ಈ ಸುರಸವಾದ ಮಧುರ ಕಥೆಯು ಮುಂದಿನ ಅಧ್ಯಾಯದಲ್ಲಿರುವುದು ।।೧೦೮।।

ಅಜನ್ಮಾ ತೋ ಜನ್ಮ ಮಿರವೀ । ವಿದೇಹಾಅಂಗೀ ದೇಹಪದವೀ । ಸ್ವಯೇ ಅಕ್ಷಯೀ ತೋ ಮರಣ ದಾವೀ । ಅತಿಲಾಘವೀ ಶ್ರೀಕೃಷ್ಣ ॥೫೦೯॥ ಜ್ಯಾಚೇ ನಿಜಧಾಮಗಮನ । ಶಿವವಿರಿಂಚ್ಯಾದಿಕಾ ಅತರ್ಕ್ಯ ಖೂಣ । ತ್ಯಾಚೇ ಸಾಂಗೇನ ಉಪಲಕ್ಷಣ । ಶ್ರೋತಾ ಅವಧಾನ ಮಜ ದ್ಯಾವೇ ॥೫೧೦॥ ಏಕಾದಶಾಚಾ ಕಳಸ ಜಾಣ । ಶ್ರೀಕೃಷ್ಣಾಚೇ ನಿಜನಿರ್ಯಾಣ । ಜೇಥ ನಾಹೀ ದೇಹಾಭಿಮಾನ । ತೇ ಬ್ರಹ್ಮ ಪೂರ್ಣ ಪರಿಪಕ್ವ ॥೫೧೧॥ ಭಯ ನಾಹೀ ಜನ್ಮ ಧರಿತಾ । ಭಯ ನಾಹೀ ದೇಹೀ ವರ್ತತಾ । ಭಯ ನಾಹೀ ದೇಹ ತ್ಯಾಗಿತಾ । ''ಹೇ ಬ್ರಹ್ಮ-ಪರಿಪೂರ್ಣತಾ'' ಹರಿ ದಾವೀ ॥೫೧೨॥ ಏಕಾ ಜನಾರ್ದನಾ ಶರಣ । ಪುಢೇ ಅಚುಂಬಿತ ನಿರೂಪಣ । ಸಂತೀ ಮಜ ದ್ಯಾವೇ ಅವಧಾನ । ಸಾಂಗೇನ ವ್ಯಾಖ್ಯಾನ ಸದ್ಗುರುಕೃಪಾ ॥೫೧೩॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂದೇ ಪರಮಹಂಸಸಂಹಿತಾಯಾಂ
ಏಕಾಕಾರಟೀಕಾಯಾಂ ''ಸ್ವಕುಲನಿರ್ದಳಣ'' ನಾಮ ತ್ರಿಂಶತ್ತಮೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಆತನು ಜನ್ಮರಹಿತನಾಗಿದ್ದರೂ ಜನ್ಮಕ್ಕೆ ಬರುವನು. ವಿದೇಹಿಯಾಗಿದ್ದರೂ ದೇಹ ಧರಿಸುವನು. ಸ್ವತಃ ಅಕ್ಷಯನಾಗಿದ್ದರೂ ಮರಣ ತೋರಿಸುವನು. ಹೀಗೆ ಶ್ರೀಕೃಷ್ಣನು ಅತಿಶಯ ಚಮತ್ಕಾರಿಯಾಗಿರುವನು ॥೫೦೯॥ ಆತನು ನಿಜಧಾಮಕ್ಕೆ ಹೋಗುವ ವಿಷಯವು ಶಂಕರಬ್ರಹ್ಮದೇವರಿಗೂ ಕೂಡ ಅತರ್ಕ್ಯವಾಗಿರುವುದು. ಅದರ ಲಕ್ಷಣವನ್ನು ನಾನು ಹೇಳುವೆನು. ಹೇ ಶ್ರೋತೃಗಳವರೇ, ಈಗ ಲಕ್ಷ ಕೊಟ್ಟು ಕೇಳಬೇಕು ॥೫೧೦॥ ಶ್ರೀಕೃಷ್ಣನ ನಿಜನಿರ್ಯಾಣವೆಂದರೆ ಅದು ಹನ್ನೊಂದನೆಯ ಸ್ಕಂಧದ ಕಳಸವೇ ಆಗಿರುವುದು. ಯಾರಿಗೆ ದೇಹಾಭಿಮಾನವು ಇರುವುದಿಲ್ಲವೋ, ಆತನು ಪೂರ್ಣ ಪರಿಪೂರ್ಣ ಹಾಗೂ ಪರಿಪಕ್ವವಾದ ಪರಬ್ರಹ್ಮನು ॥೫೧೧॥ ಜನ್ಮ ಧರಿಸಿದರೂ ಭಯವಿಲ್ಲ, ದೇಹದಲ್ಲಿ ವರ್ತಿಸುತ್ತಿದ್ದರೂ ಭಯವಿಲ್ಲ. ಪಡೆದ ದೇಹ ತ್ಯಾಗ ಮಾಡುವಾಗಲೂ ಭಯವಿಲ್ಲ. ಈ ಬ್ರಹ್ಮಪರಿಪೂರ್ಣತೆಯನ್ನು ಶ್ರೀಹರಿಯು ನಡೆದು ತೋರಿಸಿದನು ॥೫೧೨॥ ಏಕನಾಥನು ಜನಾರ್ದನರಿಗೆ ಶರಣಾದನು. ಮುಂದೆ ಅತ್ಯಂತ ಸುರಸ ಮತ್ತು ಅದ್ಭುತ ನಿರೂಪಣೆವಿರುವುದು. ಸದ್ಗುರುಗಳ ಕೃಪೆಯಿಂದ ನಾನು ಅದರ ವ್ಯಾಖ್ಯಾನ ಮಾಡುವೆನು. ಅದಕ್ಕಾಗಿ ಸಂತರು ಕೃಪೆ ಮಾಡಿ ನನ್ನತ್ತ ಏಕಾಗ್ರತೆಯಿಂದ ಲಕ್ಷ ಕೊಡಬೇಕಾಗಿ ವಿನಂತಿಸುವೆನು ॥೫೧೩॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಪರಮಹಂಸಸಂಹಿತೆಯ ಏಕನಾಥ ಮಹಾರಾಜರ ಭಾಷ್ಯೆಯ
''ಸ್ವಕುಲ ನಿರ್ದಳಣ'' ನಾಮದ ಮೂವತ್ತನೆಯ ಅಧ್ಯಾಯ ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಮೂವತ್ತೊಂದನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಶ್ರೀಸದ್ಗುರು ಅಚ್ಯುತಾ । ತೂ ದೇಹೀ ಅಸೋನಿ ದೇಹಾತೀತಾ । ಗುಣೀ ನಿರ್ಗುಣತ್ವೇ ವರ್ತತಾ । ದೇಹಮಮತಾ ತುಜ ನಾಹೀ ॥೧॥ ದೇಹಮಮತಾ ನಾಹೀ ನಿಃಶೇಖ । ತಾನೇಪಣೀ ಪ್ಯಾಲಾಸೀ ವಿಖ । ಪೂತನಾ ಶೋಷಿಲೀ ಪ್ರತ್ಯಕ್ಷ । ದಾವಾಗ್ನಿ ದೇಖ ಪ್ರಾಶಿಲಾ ॥೨॥ ಜೋ ತೂ ವೈಕುಂಠಪೀಠವಿರಾಜಮಾನ । ತ್ಯಾ ತುಜ ನಾಹೀ ದೇಹಾಭಿಮಾನ । ಹೋಊನಿ ಗೋವಳಾಸಮಾನ । ಹುಂಬರೀ ಜಾಣ ಘಾಲಿಶೀ ಸ್ವಯೇ ॥೩॥ ತುಜ ಪಾವಾವಯಾ ಕರ್ಮಬಳೇ । ಸದಾ ಸೋಶಿತೀ ಸೋವಂಳೇ ಓಂವಳೇ । ತೋ ತೂ ಮೇಳವೂನಿ ಗೋವಳೇ । ಜೇವಣೇ ಖೇಳೇಮೇಳೇ ಸ್ವಯೇ ಕರಿಸೀ ॥೪॥ ಜ್ಯಾತೇ ಮ್ಹಣತೀ ದುರಾಚಾರ । ತೋ ತುಂವಾ ಕರೂನಿ ವ್ಯಭಿಚಾರ । ಕೇಲಾ ಗೋಪಿಕಾಂಚಾ ಉದ್ಧಾರ । ಹೇ ಅಗಮ್ಯ ಚರಿತ್ರ ವೇದಶಾಸ್ತ್ರಾ ॥೫॥ ಘರೀ ಸೋಳಾ ಸಹಸ್ರನಾರೀ । ನಾಂದಸೀ ಏಕಲಕ್ಷ ಸಾಠೀ ಸಹಸ್ರ ಕುಮರೀ । ತರೀ ತೂ ಬಾಳಬ್ರಹ್ಮಚಾರೀ । ತುಜ ಸನತ್ಕುಮಾರೀ ವಂದಿಜೇ ॥೬॥ ತುರ್ಝೇ ಬ್ರಹ್ಮಚರ್ಯಾಚೀ ಥೋರೀ । ಶುಕ ನಾರದ ವಂದಿತೀ ಶಿರೀ । ಹನುಮಂತ ಲೋಳೇ ಪಾಯಾಂವರೀ । ತೂ ಬ್ರಹ್ಮಚಾರೀ ನೈಷ್ಠಿಕ ॥೭॥ ವ್ರತಬಂಧ ನವ್ಹತಾ ಆಧೀ । ತುಂವಾ ಭೋಗಿಲೀ ಗೋವಳೀ ಪೇಂಧೀ । ತೋ ತೂ ಊರ್ಧ್ವರೇತು ತ್ರಿಶುದ್ಧೀ । ತುಜ ಭೀಷ್ಮ ವಂದೀ ಸರ್ವದಾ ॥೮॥ ನವಲಕ್ಷ ಗೋಕಂಠಪಾಶೀ। ತುಜ ಬಾಂಧವೇನಾ ಹೃಷೀಕೇಶೀ । ತೋ ತೂ ಭಾವಾರ್ಥೇ ಬಾಂಧಿಲಾಸೀ । ರಾಸಕ್ರೀಡೇಸೀ ಗೋಪಿಕೀ ॥೯॥ ಜೈಸೇ ಜೈಸೇ ತ್ಯಾಂಚೇ ಮನೋರಥ । ತೈಸತೈಸಾ ತೂ ಕ್ರೀಡಾ ಕರಿತ । ಸಾಮಾಸ ರಾತ್ರಿ ಕರೂನಿ ತೇಥ । ತತ್ಪ್ರೇಮಯುಕ್ತ ವಿಚರಸೀ ॥೧೦॥ ತೋ ತೂ ಕಾಮಾಸೀ ನಾತಳತ । ಕಾಮೀನೀಕಾಮ ಪೂರ್ಣ ಕರಿತ । ಲಾಜವೂನಿ ವಿಧಿವೇದಾರ್ಥ । ಗೋಪಿಕಾ ಸಮಸ್ತ ತಾರಿಲ್ಯಾ ॥೧೧॥

ಹೇ ಓಂಕಾರರೂಪ ಸದ್ಗುರುರಾಯನೇ, ಅಚ್ಯುತನೇ, ನಿನಗೆ ನನ್ನ ನಮಸ್ಕಾರಗಳು. ನೀನು ದೇಹಾತೀತನಾಗಿದ್ದರೂ ದೇಹಧಾರಿಯಾಗಿರುವೆ. ಗುಣಗಳಲ್ಲಿ ಇದ್ದರೂ ನಿರ್ಗುಣತ್ವದಿಂದ ಇರುತ್ತಿರುವೆ. ನಿನಗೆ ಯಾವುದೇ ಪ್ರಕಾರದ ದೇಹದ ಮಮತೆವಿರುವುದಿಲ್ಲ ॥೧॥ ನಿನಗೆ ಸ್ವಲ್ಪವೂ ಕೂಡ ದೇಹದ ಮಮತೆ ಇಲ್ಲದಿರುವುದರಿಂದ ಚಿಕ್ಕವನಿದ್ದಾಗಲೇ ನೀನು ವಿಷ ಕುಡಿದೆ. ಪೂತನೆಗೆ ಪ್ರತ್ಯಕ್ಷವಾಗಿ ಶೋಷಣೆ ಮಾಡಿದೆ. ದಾವಾಗ್ನಿಯನ್ನೂ ಪ್ರಾಶನ ಮಾಡಿದೆ ॥೨॥ ನೀನು ವೈಕುಂಠದ ಸಿಂಹಾಸನದಲ್ಲಿ ಕುಳಿತುಕೊಳ್ಳುವವನಾಗಿದ್ದರೂ ನಿನಗೆ ದೇಹಾಭಿಮಾನ ಇಲ್ಲ. ನೀನು ದನಕಾಯುವವನಾಗಿ ಅವರ ಸಂಗಡ ಅಂಬಾ ಎಂದು ಕೂಗಿದೆ ॥೩॥ ಕರ್ಮಠರು ಕರ್ಮದ ಬಲದ ಮೇಲೆ ನಿನ್ನನ್ನು ಮುಟ್ಟಿಕೊಳ್ಳಲು ಯಾವಾಗಲೂ ಮಡಿಮೈಲಿಗೆ ಮಾಡುತ್ತಿರುವರು. ಆದರೆ ನೀನು ಗೌಳಿಯರ ಹುಡುಗರನ್ನು ಕೂಡಿಸಿ ಅವರ ಊಟವನ್ನು ಪ್ರೀತಿಯಿಂದ ಭುಂಜಿಸಿದೆ ॥೪॥ ಯಾರಿಗೆ ದುರಾಚಾರೀ ಎನ್ನುವರೋ, ಅಂಥ ಗೋಪಿಕೆಯರ ವ್ಯಭಿಚಾರ ಮಾಡಿ ಅವರನ್ನು ಉದ್ಧರಿಸಿದೆ. ಈ ನಿನ್ನ ಚರಿತ್ರಯು ವೇದಶಾಸ್ತ್ರಗಳಿಗೂ ತಿಳಿಯಲಾರದು ॥೫॥ ನಿನ್ನ ಮನೆಯಲ್ಲಿ ಹದಿನಾರು ಸಾವಿರ ಪತ್ನಿಯರು ಮತ್ತು ಒಂದು ಲಕ್ಷ ಅರವತ್ತು ಸಾವಿರ ಮಕ್ಕಳು ಇದ್ದರೂ ಸಹ ನೀನು ಬಾಲಬ್ರಹ್ಮಚಾರೀ ಎಂದು ಸನತ್ಕುಮಾರಾದಿ ನಿನಗೆ ವಂದಿಸುವರು ॥೬॥ ನಿನ್ನ ಬ್ರಹ್ಮಚರ್ಯದ ಘನತ್ವ ಕಂಡು ಶುಕನಾರದರೂ ಕೂಡ ಶಿರಸಾ ವಂದಿಸುತ್ತಿರುವರು. ಹನುಮಂತನು ನಿನ್ನ ಚರಣಗಳಲ್ಲಿ ಲೋಟಾಂಗಣ ಹಾಕುತ್ತಿರುವನು. ಹೀಗೆ ನೀನು ನೈಷ್ಠಿಕ ಬ್ರಹ್ಮಚಾರಿಯಾಗಿರುವೆ ॥೭॥ ನಿನ್ನ ಉಪನಯನ ಆಗುವ ಮುನ್ನವೇ ಪೇಂಧೀ ಗೌಳಿಯಳನ್ನು ಭೋಗಿಸಿದೆ. ನೀನು ನಿಶ್ಚಿತವಾಗಿ ಊರ್ಧ್ವರೇತು ಆಗಿರುವುದರಿಂದ ಭೀಷ್ಮನೂ ನಿನಗೆ ನಿರಂತರವಾಗಿ ವಂದಿಸಿದನು ॥೮॥ ಹೇ ಶ್ರೀಕೃಷ್ಣನೇ, ನಿನಗೆ ಒಂಬತ್ತು ಲಕ್ಷ ಆಕಳುಗಳ ಹಗ್ಗದಿಂದ ಕಟ್ಟಲಾಗಲಿಲ್ಲ. ಆದರೆ ಗೋಪಿಕೆಯರು ನಿನಗೆ ರಾಸ ಕ್ರೀಡೆಯಲ್ಲಿ ಕಟ್ಟಿ ಹಾಕಿದರು ॥೯॥ ಅವರ ಮನಸ್ಸಿನ ಭಾವನೆಯಂತೆ ಅವರಲ್ಲಿ ಕ್ರೀಡಿಸಿದೆ. ಆರು ತಿಂಗಳವರೆಗೆ ರಾತ್ರಿಮಾಡಿ ನೀನು ಅವರಲ್ಲಿ ಪ್ರೇಮದಿಂದ ವಿಹರಿಸಿದೆ ॥೧೦॥ ಹೀಗೆ ನೀನು ಕಾಮಕ್ಕೆ ಸ್ಪರ್ಶ ಮಾಡದೇ ಸ್ತ್ರೀಯರ ಕಾಮಗಳನ್ನು ಪೂರ್ಣಗೊಳಿಸಿದೆ. ವಿಧಿವೇದಾರ್ಥಗಳಿಗೆ ನಾಚಿಸಿ ನೀನು ಸರ್ವ ಗೋಪಿಕೆಯರನ್ನು ಉದ್ಧರಿಸಿದೆ ॥೧೧॥

ಗೋಪೀ ತಾರಿಲ್ಯಾ ಪ್ರೇಮಾದ್ಭುತೇ । ಗಾಯೀ ತಾರಿಲ್ಯಾ ವೇಣುಗೀತೆ । ಗೌಳಿಯೇ ತಾರಿಲೇ ಸಮಸ್ತೇ । ಶ್ರೀಕೃಷ್ಣನಾಥೇ ನಿಜಯೋಗೇ ॥೧೨॥ ಕಂಸ ತಾರಿಲಾ ದುಷ್ಟಬುದ್ಧೀ । ವ್ಯಾಧ ತಾರಿಲಾ ಅಪರಾಧೀ । ಐಸಾ ಕೃಪಾಳು ತೂ ತ್ರಿಶುದ್ಧೀ । ಸಂಸಾರಅವಧೀ ಶ್ರೀಕೃಷ್ಣಾ ॥೧೩॥ ನುಲ್ಲಂಘವೇ ಶ್ರೀಕೃಷ್ಣಾಚ್ಯಾ ಬೋಲಾ । ಯಮೇ ಗುರುಪುತ್ರ ಆಣೂನಿ ದಿಧಲಾ । ತೋ ಶ್ರೀಕೃಷ್ಣ ನಿಜತನು ತ್ಯಾಗಿತಾ ಜಾಹಲಾ । ಜೋ ನವ್ಹೇ ಅಂಕಿಲಾ ಕಳಿಕಾಳಾ ॥೧೪॥ ಭಾಗವತೀ ಕಳಸಾಧ್ಯಾವೋ । ಜೇಥೇ ನಿಜಧಾಮಾ ಜಾಈಲ ದೇವೋ । ತೋ ಅತಿಗಹನ ಅಭಿಪ್ರಾವೋ । ಸಾಂಗೇ ಶುಕದೇವೋ ಪರೀಕ್ಷಿತೀಸೀ ॥೧೫॥ ಕಳಸಾವರತೇ ನ ಚಢೇ ಕಾಮ । ತೇವೀ ದೇವೇ ಠಾಕಿಲ್ಯಾ ನಿಜಧಾಮ । ರಾಹಿಲಾ ನಿರೂಪಣಸಂಭ್ರಮ । ''ಕಳಸೋಪಕ್ರಮ'' ಯಾ ಹೇತು ॥೧೬॥ ವೇದಶಾಸ್ತ್ರಾರ್ಥನಿಜನಿರ್ವಾಹೋ । ದೇಹೀ ನುಪಜೇ ಅಹಂಭಾವೋ । ತೋಹಾ ಏಕತಿಸಸಾವಾ ಅಧ್ಯಾವೋ । ಜೇಥ ನಿಜಧಾಮಾ ದೇವೋ ಸ್ವೇಚ್ಛಾ ನಿಘೇ ॥೧೭॥ ಶ್ರೀಕೃಷ್ಣಾಚೇ ನಿಜಧಾಮಗಮನ । ಬ್ರಹ್ಮಾದಿಕಾ ಅತರ್ಕ್ಯ ಜಾಣ । ಏಕಾ ಜನಾರ್ದನಕೃಪಾ ಪೂರ್ಣ । ವಿಶದ ವ್ಯಾಖ್ಯಾನ ಸಾಂಗೇನ ॥೧೮॥ ದಾರುಕೇ ದ್ವಾರಕಾ ಪ್ರಯಾಣ । ಕೇಲಿಯಾ ನಿಜಧಾಮಾ ನಿಘೇ ಶ್ರೀಕೃಷ್ಣ । ತೇ ನಿರ್ಯಾಣಕಾಳೀಂಚೇ ದರ್ಶನ । ಪಾಹೋ ದೇವಗಣ ಸ್ವಯೇ ಆಲೇ ॥೧೯॥ ತೇಚಿ ಅರ್ಥೀಂಚೇ ನಿರೂಪಣ । ಶ್ರೀಶುಕ ಸಾಂಗೇ ಆಪಣ । ಶ್ರೋತಾ ಪರೀಕ್ಷಿತೀ ಸಾವಧಾನ । ಶ್ರೀಕೃಷ್ಣನಿರ್ಯಾಣಶ್ರವಣಾರ್ಥೀ ॥೨೦॥

ಶ್ರೀಶುಕ ಉವಾಚ :-

ಅಥ ತತ್ರಾಗಮದ್‌ಬ್ರಹ್ಮಾ ಭಾವಾನ್ಯಾ ಚ ಸಮಂ ಭವಃ । ಮಹೇಂದ್ರ ಪ್ರಮುಖಾ ದೇವಾ ಮುನಯಃ ಸಪ್ರಜೇಶ್ವರಾಃ ॥೧॥
ಪಿತರಃ ಸಿದ್ಧಗಂಧರ್ವಾ ವಿದ್ಯಾದರಮಹೋರಗಾಃ । ಚಾರಣಾ ಯಕ್ಷರಕ್ಷಾಂಸಿ ಕಿನ್ನರಾಪ್ಸರಸೋ ದ್ವಿಜಾ ॥೨॥

ಅರ್ಥ:- ಶುಕದೇವನು ನುಡಿದನು ; ಹೇ ಪರೀಕ್ಷಿತಿಯೇ, ದಾರುಕನು ಹೊರಟು ಹೋದನಂತರ ಬ್ರಹ್ಮಾ, ಶಿವಪಾರ್ವತೀ, ಇಂದ್ರಾದಿ,ಲೋಕಪಾಲರು, ಮರೀಚಿ, ಪ್ರಜಾಪತೀ, ಮಹಾ ಮಹಾ ಋಷಿ-ಮುನಿಗಳು, ಪಿತರರು, ಸಿದ್ಧರು, ಗಂಧರ್ವರು, ವಿದ್ಯಾಧರರು, ನಾಗ-ಚಾರಣರು, ಯಕ್ಷ-ರಾಕ್ಷಸರು, ಕಿನ್ನರರು, ಅಪ್ಸರೆಯರು, ಹಾಗೂ ಗರುಡಲೋಕದ ಅನೇಕ ಪಕ್ಷಿಗಳು ಮತ್ತು ಮೈತ್ರೇಯಾದಿ ಬ್ರಾಹ್ಮಣರು.

ಜೋ ವ್ಯಾಸಾಚೇ ನಿಜಜೀವನ । ಜೋ ಯೋಗಿಯಾಂಚೇ ಚೂಡಾರತ್ನ । ತೋ ಶ್ರೀಶುಕ ಸ್ವಯೇ ಆಪಣ । ಶ್ರೀಕೃಷ್ಣನಿರ್ಯಾಣ ನಿರೂಪೀ ॥೨೧॥ ಶುಕ ಮ್ಹಣೇ ಪರೀಕ್ಷಿತೀ । ನಿಜಧಾಮಾ ನಿಘತಾ ಶ್ರೀಪತೀ । ಸಕಳ ದೇವ ದರ್ಶನಾರ್ಥ ಯೇತೀ । ವಿಮಾನಪಂಕ್ತೀ ಸವೇಗ ॥೨೨॥

ನೀನು ನಿನ್ನ ಅದ್ಭುತ ಪ್ರೇಮದಿಂದ ಗೋಪಿಕೆಯರನ್ನು ಉದ್ಧರಿಸಿದೆ. ಮುರಲಿಯ ಮಧುರ ಧ್ವನಿಯಿಂದ ನೀನು ಗೋವುಗಳನ್ನು ಉದ್ಧರಿಸಿದೆ ಮತ್ತು ನಿನ್ನ ಯೋಗಸಾಮರ್ಥ್ಯದಿಂದ ಸರ್ವ ಗೌಳಿಗರನ್ನು ಉದ್ಧರಿಸಿದೆ ॥೧೨॥ ದುಷ್ಟ ಬುದ್ಧಿಯ ಕಂಸ ಮತ್ತು ಅಪರಾಧೀ ವ್ಯಾಧ ಇವರಿಗೂ ಸಹ ನೀನು ಉದ್ಧರಿಸಿದೆ. ಹೇ ಶ್ರೀಕೃಷ್ಣನೇ, ಹೀಗೆ ನೀನು ಕೃಪೆಯ ಸಾಗರನಾಗಿರುವೆ. ನೀನು ಸಂಸಾರದ ಸೀಮೆಯಾಗಿರುವೆ ॥೧೩॥ ಶ್ರೀಕೃಷ್ಣನ ಶಬ್ದ ಮುರಿಯಲುಬಾರದೆಂದು ಯಮನೂ ಕೂಡ ಮೃತ ಗುರುಪುತ್ರನನ್ನು ಪುನಃ ತಂದುಕೊಟ್ಟನು. ಯಾವ ಕಲಿಕಾಲನಿಗೂ ಎಂದಿಗೂ ಅಂಕಿತನಾಗದ ಶ್ರೀಕೃಷ್ಣನು ತನ್ನ ನಿಜತನುವನ್ನು ತ್ಯಾಗ ಮಾಡುವನೆಂದರೆ ಏನಿದು ? ॥೧೪॥ ಈ ಅಧ್ಯಾಯವು ಭಾಗವತದ ಕಳಸವಾಗಿರುವುದು. ಇದರಲ್ಲಿ ಶ್ರೀಕೃಷ್ಣನು ನಿಜಧಾಮಕ್ಕೆ ಹೋದ ಪ್ರಸಂಗವನ್ನು ಭಾವಪೂರ್ಣವಾಗಿ ವರ್ಣಿಸಲ್ಪಟ್ಟಿರುವುದು. ಅದರಲ್ಲಿ ಅತ್ಯಂತ ಗಹನವಾಗಿರುವ ಅಭಿಪ್ರಾಯ ಶುಕದೇವನು ರಾಜನಿಗೆ ಹೇಳುತ್ತಿರುವನು ॥೧೫॥ ಕಳಸದ ಮೇಲೆ ಯಾವ ಕಾರ್ಯವೂ ಮಾಡುವಂತೆ ಇರುವುದಿಲ್ಲ. ಶ್ರೀಕೃಷ್ಣನು ನಿಜಧಾಮಕ್ಕೆ ಹೋದನಂತರ ಪುನಃ ನಿರೂಪಣೆಯು ಏನೂ ಉಳಿಯುವುದಿಲ್ಲ. ಆದ್ದರಿಂದ ಈ ಅಧ್ಯಾಯಕ್ಕೆ ಕಳಸವೆಂದು ಕರೆಯಲಾಗಿದೆ ॥೧೬॥ ವೇದಶಾಸ್ತ್ರದಲ್ಲಿನ ರಹಸ್ಯವೂ ಕೂಡ ದೇಹದಲ್ಲಿ ಅಹಂಭಾವ ಇರಕೂಡದು ಎಂದು ಪ್ರತಿಪಾದಿಸಿರುವುದು. ಅದು ಈ ಮೂವತ್ತೊಂದನೆಯ ಅಧ್ಯಾಯದಲ್ಲಿರುವುದು. ಶ್ರೀಕೃಷ್ಣನು ಸ್ವೇಚ್ಛೆಯಿಂದ ನಿಜಧಾಮಕ್ಕೆ ಹೊರಡುತ್ತಿರುವನು ॥೧೭॥ ಶ್ರೀಕೃಷ್ಣನ ನಿಜಧಾಮಗಮನವು ಬ್ರಹ್ಮಾದಿಕರಿಗೂ ಕೂಡ ಅತರ್ಕ್ಯವಾಗಿರುವುದು. ಆದರೆ ಶ್ರೀಜನಾರ್ದನಸ್ವಾಮಿಯವರ ಕೃಪೆಯು ಪರಿಪೂರ್ಣವಾಗಿ ಲಭಿಸಿರುವುದರಿಂದ ಏಕನಾಥನು ಅದರ ವ್ಯಾಖ್ಯಾನ ವಿಶದವಾಗಿ ಹೇಳುವನು ॥೧೮॥ ದಾರುಕನು ದ್ವಾರಕೆಗೆ ಹೋದ ನಂತರ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗಲು ಸಿದ್ಧನಾದನು. ಆಗ ಆತನ ನಿರ್ಯಾಣಕಾಲದ ದರ್ಶನ ಪಡೆಯಲು ಸರ್ವ ದೇವತೆಗಳು ಅಲ್ಲಿಗೆ ಸ್ವತಃ ಬಂದರು ॥೧೯॥ ಇದೇ ಅರ್ಥದ ನಿರೂಪಣೆ ಶ್ರೀ ಶುಕಾಚಾರ್ಯರು ಮಾಡುತ್ತಿರುವರು ಮತ್ತು ಶ್ರೋತಾ ಪರೀಕ್ಷಿತರಾಜನು ಶ್ರೀಕೃಷ್ಣನ ನಿರ್ಯಾಣದ ಶ್ರವಣಕ್ಕಾಗಿ ಚಿತ್ತವನ್ನು ಏಕಾಗ್ರಗೊಳಿಸಿ ಕುಳಿತಿರುವನು ॥೨೦॥

ಯಾವ ವ್ಯಾಸಮುನಿಗಳ ಕೇವಲ ಪ್ರಾಣನಾಗಿರುವ, ಯಾವ ಯೋಗಿಗಳ ಮುಕುಟಮಣಿಯಾಗಿರುವ, ಶುಕಾಚಾರ್ಯರು ತಾವಾಗಿಯೇ ಸ್ವತಃ ಶ್ರೀಕೃಷ್ಣನ ನಿರ್ಯಾಣದ ನಿರೂಪಣೆ ಮಾಡುತ್ತಿರುವರು ॥೨೧॥ ಶ್ರೀಶುಕಾಚಾರ್ಯರು ಹೇಳಿದರು; ಹೇ ಪರೀಕ್ಷಿತರಾಜನೇ, ಶ್ರೀಕೃಷ್ಣನು ನಿಜಧಾಮಕ್ಕೆ ಹೊರಡುವ ಪ್ರಸಂಗದಲ್ಲಿ ಆತನ ದರ್ಶನ ಪಡೆಯಲು ವಿಮಾನಗಳ ಪಂಕ್ತಿಯಲ್ಲಿ ಸರ್ವ ದೇವತೆಗಳು ಅತಿಶಯ ತ್ವರೆ ಮಾಡಿ ಬಂದರು ॥೨೨॥

ಬ್ರಹ್ಮಾ ಸತ್ವರ ಆಲಾ ತೇಥ । ಭವಭವಾನೀಸಮವೇತ । ಇಂದ್ರಮುಖ್ಯ ದೇವ ಸಮಸ್ತ । ಸ್ವಗಣಯುಕ್ತ ತೇ ಆಲೇ ।೨೩॥ ಸನಕಾದಿಕ ಮುನಿಪಂಕ್ತೀ । ಆಲೇ ದಕ್ಷಾದಿ ಪ್ರಜಾಪತೀ । ಅರ್ಯಮಾದಿ ಪಿತರ ಯೇತೀ । ಕಪಿಲಾದಿ ಧಾಂವತೀ ಮಹಾಸಿದ್ಧ ।೨೪॥ ಆಲೇ ಗಂಧರ್ವ ವಿದ್ಯಾಧರ । ಯಕ್ಷ ಚಾರಣ ಕಿನ್ನರ । ವಿಭೀಷಣಾದಿ ರಾಕ್ಷಸ ಥೋರ । ವೇಗೀ ಶ್ರೀಧರ ಪಾಹೋ ಯೇತೀ ।೨೫॥ ಪಹಾವಯಾ ಶ್ರೀರಂಗ । ಆಲೇ ಪಾತಾಳೀಂಚೇ ಪನ್ನಗ । ಜ್ಯಾಂತೇ ಮ್ಹಣತೀ ಮಹೋರಗ । ತೇಹೀ ಸವೇಗ ಪೈ ಆಲೇ ।೨೬॥ ದ್ವಿಜ ಆಲೇ ದತ್ತಾತ್ರೇಯಾದಿಕ । ನಾರದ ಪಾಹೋ ಆಲಾ ಕೌತುಕ । ದ್ವಿಜ-ಪಕ್ಷೀ ಗರುಡಪ್ರಮುಖ । ಸತ್ವರ ದೇಖ ತೇ ಆಲೇ ।೨೭॥ ರಂಭಾ ಉರ್ವಶೀ ಮೇನಕಾ । ಅಪ್ಸರಾ ಜ್ಯಾ ಅಷ್ಟನಾಯಿಕಾ । ಶ್ರೀಕೃಷ್ಣ ದರ್ಶನಾ ಆವಾಂಕಾ । ಧರೋನಿ ದೇಖಾ ತ್ಯಾ ಆಲ್ಯಾ ।೨೮॥ ಶ್ರೀಕೃಷ್ಣಸ್ವರೂಪ ಪಹಾವಯಾ । ನಯನೀ ಥೋರ ಘೇತಲಾ ಥಾಯಾ । ಯಾಲಾಗೀ ದೇವಸಮುದಾಯಾ । ಯೇಣೇ ಲವಲಾಹ್ಯಾ ಜಾಹಲೇ ಏಥೇ ।೨೯॥

ದ್ರಷ್ಟುಕಾಮಾ ಭಗವತೋ ನಿರ್ಯಾಣಂ ಪರಮೋತ್ಸುಕಾಃ । ಗಾಯಂತಶ್ಚ ಗೃಣಂತಶ್ಚ ಶೌರೇಃ ಕರ್ಮಾಣಿ ಜನ್ಮ ಚ ।೩॥

ಅರ್ಥ:- ಭಗವಾನ ಶ್ರೀಕೃಷ್ಣನ ಪರಮಧಾಮ ಪ್ರಸ್ಥಾನವನ್ನು ನೋಡುವುದಕ್ಕಾಗಿ ಅತ್ಯಂತ ಉತ್ಸುಕತೆಯಿಂದ ಅವರೆಲ್ಲರೂ ಅಲ್ಲಿಗೆ ಬಂದರು ಮತ್ತು ಭಗವಾನ ಶ್ರೀಕೃಷ್ಣನ ಜನ್ಮ ಹಾಗೂ ಲೀಲಾವಿಲಾಸಗಳ ವರ್ಣನೆ ಮಾಡುತ್ತ ಗಾಯನ ಮಾಡುತ್ತಿದ್ದರು.

ಕೃಷ್ಣ ಪಾಹಾವಯಾ ಆವಡೀ । ದೃಷ್ಟೀ ಧಾಂವೇ ಲವಡಸವಡೀ । ಹೋತ ಡೋಳ್ಯಾ ಆಡಾಡೀ । ಅಭಿನವ ಗೋಡೀ ಕೃಷ್ಣಾಚೀ ।೩೦॥ ಶ್ರೀಕೃಷ್ಣನಿರ್ಯಾಣದರ್ಶನ । ಪಾಹಾವಯಾ ಉತ್ಸಾಹಪೂರ್ಣ । ಸತ್ವರ ಆಲೇ ಸುರಗಣ । ಪುಢತೀ ಶ್ರೀಕೃಷ್ಣದರ್ಶನ ಆಮ್ಹಾ ಕೈಚೇ ।೩೧॥ ಸೌಂದರ್ಯಾಚೀ ನಿಜಸೀಮಾ । ಘನಶ್ಯಾಮ ಸುಂದರ ಪ್ರತಿಮಾ । ತೋ ಕೃಷ್ಣ ಗೇಲಿಯಾ ನಿಜಧಾಮಾ । ದರ್ಶನ ಆಮ್ಹಾ ಮಗ ಕೈಚೇ ।೩೨॥ ಶ್ರೀಕೃಷ್ಣದರ್ಶನಾಚೀ ಗೋಡೀ । ಸುರಗಣಾ ಲಾಗಲೀಸೇ ಗಾಢೀ । ಯಾಲಾಗೀ ತೇ ಅತಿತಾಂತಡೀ । ಆಲೇ ಆವಡೀ ದರ್ಶನಾರ್ಥ ।೩೩॥ ಶ್ರೀಕೃಷ್ಣಕರ್ಮೇ ಸ್ವಯೇ ವರ್ಣಿತ । ಕೃಷ್ಣಚರಿತ್ರೇ ಗೀತೀ ಗಾತ । ಮಿಳೋನಿ ಸುರವರ ಸಮಸ್ತ । ಆಲೇ ದರ್ಶನಾರ್ಥ ಸತ್ವರ ।೩೪॥

ವವರ್ಷುಃ ಪುಷ್ಪವರ್ಷಾಣಿ ವಿಮಾನಾವಲಿಭಿರ್ನಭಃ । ಕುರ್ವಂತಃ ಸಂಕುಲಂ ರಾಜನ್ ಭಕ್ತ್ಯಾ ಪರಮಯಾ ಯತಾಃ ।೪॥

ಅರ್ಥ:- ದೇವತೆಗಳವರ ವಿಮಾನಗಳಿಂದ ಸರ್ವ ಆಕಾಶವು ತುಂಬಿ ಹೋಯಿತು. ಅವರು ಭಕ್ತಿಭಾವದಿಂದ ಭಗವಂತನ ಮೇಲೆ ಹೂವುಗಳ ಮಳೆಗರೆಯಹತ್ತಿದರು.

(ಬ್ರಹ್ಮದೇವನು ತೀವ್ರವಾಗಿ ಬಂದನು, ಶಂಕರನು ಪಾರ್ವತಿಸಮೇತವಾಗಿ ಬಂದನು, ಇಂದ್ರನೂ ಕೂಡ ತನ್ನ ಸರ್ವ ದೇವಗಣರೊಂದಿಗೆ ಆಗಮಿಸಿದನು ।೨೩॥ ಸನಕಾದಿಕ ಮುನಿಗಳ ಸಮುದಾಯ, ದಕ್ಷಾದಿ ಪ್ರಜಾಪತೀ, ಅರ್ಯಮಾದಿ ಪಿತರರು, ಕಪಿಲಾದಿ ಮಹಾಸಿದ್ಧರು ಧಾವಿಸಿ ಬಂದರು ।೨೪॥ ಗಂಧರ್ವರು ಹಾಗೂ ವಿದ್ಯಾಧರರು ಬಂದರು. ಯಕ್ಷರು, ಚಾರಣರು, ಕಿನ್ನರರು ಮತ್ತು ವಿಭೀಷಣಾದಿ ಮಹಾ ಮಹಾ ರಾಕ್ಷಸರೂ ಕೂಡ ಶ್ರೀಕೃಷ್ಣನನ್ನು ನೋಡುವುದಕ್ಕಾಗಿ ಅಲ್ಲಿ ಧಾವಿಸಿ ಬಂದರು ।೨೫॥ ಶ್ರೀಕೃಷ್ಣನನ್ನು ನೋಡುವುದಕ್ಕಾಗಿ ಪಾತಾಳದಲ್ಲಿನ ನಾಗದೇವತೆಗಳೂ ಬಂದರು. ಅವರಿಗೆ ಮಹೋರಗ ಅಂದರೆ ಪ್ರಚಂಡ ಸರ್ಪವೆಂದು ಹೇಳುವರು. ಇವೂ ಕೂಡ ತ್ವರೆಯಾಗಿ ಧಾವಿಸಿ ಬಂದವು ।೨೬॥ ದತ್ತಾತ್ರೇಯಾದಿ ದ್ವಿಜರೂ ಸಹ ಬಂದರು. ಈ ಕೌತುಕವನ್ನು ಕಾಣಲು ನಾರದನೂ ಬಂದನು. ಪ್ರಮುಖವಾಗಿರುವ ಗರುಡ ಪಕ್ಷಿಸಮೇತ ಅನೇಕ ಪಕ್ಷಿಗಳೂ ಕೂಡ ಅಲ್ಲಿ ಕೂಡಿದವು ।೨೭॥ ರಂಭೆ, ಉರ್ವಶೀ, ಮೇನಕಾ ಇತ್ಯಾದಿ ಅಷ್ಟನಾಯಿಕಾ ಅಪ್ಸರೆಯರೂ ಕೂಡ ಶ್ರೀಕೃಷ್ಣನ ದರ್ಶನಕ್ಕಾಗಿ ಅಲ್ಲಿಗೆ ಬಂದರು ।೨೮॥ ನೇತ್ರಗಳಿಂದ ಶ್ರೀಕೃಷ್ಣನ ಸ್ವರೂಪ ದರ್ಶನ ಕಾಣುವ ತವಕದಿಂದ ಸರ್ವ ದೇವತೆಗಳ ಸಂಪೂರ್ಣ ಸಮುದಾಯವು ಅಲ್ಲಿ ಏಕತ್ರವಾಗಿ ಕೂಡಿಕೊಂಡಿತು ।೨೯॥)

ಶ್ರೀಕೃಷ್ಣನ ಸ್ವರೂಪ ಕಾಣುವುದಕ್ಕಾಗಿ ದೃಷ್ಟಿಯು ಬಹು ತ್ವರೆಯಿಂದ ಧಾವಿಸಹತ್ತಿತು. ನೇತ್ರಗಳ ಉತ್ಕಂಠತೆ ಬೆಳೆದು ನಿಂತಿತು. ಇಷ್ಟೊಂದು ಶ್ರೀಕೃಷ್ಣನ ಅಭಿರುಚಿ ವಿಲಕ್ಷಣವಾಗಿತ್ತು ।೩೦॥ ನಿಜಧಾಮಕ್ಕೆ ಹೋದನಂತರ ಶ್ರೀಕೃಷ್ಣನ ದರ್ಶನ ನಮಗೆಂದಾಗಬೇಕು? ಈ ಉದ್ದೇಶದಿಂದಲೇ ನಿರ್ಯಾಣಕಾಲದ ದರ್ಶನ ಪಡೆಯುವುದಕ್ಕಾಗಿಯೇ ಅತ್ಯಂತ ಆಸ್ತೆಯಿಂದ ಸರ್ವ ದೇವತೆಗಳವರು ತ್ವರೆ ಮಾಡಿ ಬಂದಿದ್ದರು ।೩೧॥ ಘನಶ್ಯಾಮ ಶ್ರೀಕೃಷ್ಣನ ಸರ್ವಾಂಗಸುಂದರ ಮೂರ್ತಿಯು ನಿಜಧಾಮಕ್ಕೆ ಹೊರಟು ಹೋದ ನಂತರ ನಮಗೆ ಪುನಃ ಆ ಸುಲಕ್ಷಣ ಸೌಂದರ್ಯದ ದರ್ಶನ ಹೇಗಾಗಲು ಸಾಧ್ಯ? ।೩೨॥ ದೇವತೆಗಳವರಿಗೆ ಶ್ರೀಕೃಷ್ಣನ ದರ್ಶನಕ್ಕಾಗಿ ಅತ್ಯಂತ ಹಂಬಲ ಉಂಟಾಗಿತ್ತು. ಆದ್ದರಿಂದಲೇ ಅವರು ಗಡಿಬಿಡಿಯಿಂದ ಬಹು ಪ್ರೇಮದಿಂದ ದರ್ಶನಕ್ಕಾಗಿ ಬಂದರು ।೩೩॥ ಕೆಲವರು ಶ್ರೀಕೃಷ್ಣನ ಕರ್ಮ ಕುರಿತು ವರ್ಣಿಸುತ್ತಿದ್ದರೆ ಕೆಲವರು ಶ್ರೀಕೃಷ್ಣ ಚರಿತ್ರೆಯ ಹಾಡುಗಳನ್ನು ಹಾಡುತ್ತಿದ್ದರು. ಹೀಗೆ ಸರ್ವರೂ ಗಾನಮಾಡುತ್ತ ಹಾಗೂ ವರ್ಣಿಸುತ್ತ ದರ್ಶನ ಪಡೆಯಲು ತೀವ್ರಗತಿಯಿಂದ ಬಂದಿದ್ದರು ।೩೪॥

ವಿಮಾನ ಶ್ರೇಣೀ ಆಕಾಶೀ । ತೇಥ ದಾಟಲಿಯಾ ಚೌಪಾಶೀ । ಸಂಮುಖ ದೇಖೋನಿ ಹೃಷೀಕೇಶೀ । ಜಯಜಯಕಾರಾಸೀ ತಿಂಹೀ ಕೇಲೇ ।।೩೫।। ದೇಖೋನಿ ಶ್ರೀಕೃಷ್ಣನಾಥ । ಭಕ್ತಿ ಉದ್ರೇಕ ಜಾಹಲೇ ಚಿತ್ತ । ದಿವ್ಯ ಸುಮನಾಂತೇ ವರ್ಷತ । ಮಿಳೂನಿ ಸಮಸ್ತ ಸಮಕಾಳೇ ।।೩೬।। ದಿವ್ಯ ಸುಮನಾಂಚಾ ರೋಳಾ । ಕೃಷ್ಣಾ ಚೌಪಾಶೀ ವಿಖುರಲಾ । ತೇಣೇ ಶ್ರೀಕೃಷ್ಣ ಶೋಭಲಾ ತ್ಯಾ ಕಾಳಾ । ಘನಶ್ಯಾಮಲೀಳಾ ಸಾಜಿರೀ ।।೩೭।।

ಭಗವಾನ್ ಪಿತಾಮಹಂ ವೀಕ್ಷ್ಯ ವಿಭೂತೀರಾತ್ಮನೋ ವಿಭುಃ । ಸಂಯೋಜ್ಯಾತ್ಮನಿ ಚಾತ್ಮಾನಂ ಪದ್ಮನೇತ್ರೇ ನ್ಯಮೀಲಯತ್ ।೮।।

ಅರ್ಥ:- ಸರ್ವವ್ಯಾಪಕ ಭಗವಾನ ಶ್ರೀಕೃಷ್ಣನು ಬ್ರಹ್ಮಾ ಮತ್ತು ತನ್ನ ವಿಭೂತಿ ಸ್ವರೂಪ ದೇವತೆಗಳವರನ್ನು ಕಂಡು ಆತ್ಮತತ್ವವನ್ನು ಸ್ವರೂಪದಲ್ಲಿ ಸ್ಥಿರಗೊಳಿಸಿದನು. ಹಾಗೆಯೇ ಕಮಲಸಮಾನ ನೇತ್ರಗಳನ್ನು ಮುಚ್ಚಿದನು.

ದೇವ ಪಾವಲೇ ಶೀಘ್ರಗತೀ । ಬ್ರಹ್ಮಾ ದೇಖಿಲಾ ಸಂಮುಖಸ್ಥಿತೀ । ಸದಾಶಿವಸಮ ವಿಭೂತೀ । ತ್ಯಾಂತೇಹೀ ಶ್ರೀಪತೀ ದೇಖತಾ ಜಾಹಲಾ ।।೩೮।। ಇಂದ್ರಾದಿಕ ನಿಜವಿಭೂತೀ । ತ್ಯಾಂತೇ ದೇಖೋನಿ ಶ್ರೀಪತೀ । ಸ್ವನೇತ್ರ ಪದ್ಮದಲಾಕೃತೀ । ತೇ ಸಹಜಸ್ಥಿತೀ ಝಾಂಕಿಲೇ ।।೩೯।। ಝಾಂಕಿಲೇ ಅಥವಾ ಉಘಡೇ ನಯನ । ಪರೀ ಸ್ಥಿತೀ ನಾಹೀ ಅಧಿಕ ನ್ಯೂನ । ತೋ ಆತ್ಮಾ ಆತ್ಮತ್ವೇ ಪರಿಪೂರ್ಣ । ತರೀ ಕಾ ಶ್ರೀಕೃಷ್ಣ ನಯನ ಝಾಂಕೀ ।।೪೦।। ದೇಖೋನಿ ದೇವಸಮುದಾವೋ । ಕಾಂಹೀ ನ ಬೋಲತಾ ದೇವೋ । ನೇತ್ರ ಝಾಂಕಾವಯಾ ಕೋಣ ಭಾವೋ । ತೋ ಅಭಿಪ್ರಾವೋ ಅವಧಾರಾ ।।೪೧।। ದ್ವಾರಕೇ ಅಸತಾ ಶ್ರೀಕೃಷ್ಣನಾಥ । ಸುರವರ ಪ್ರಾರ್ಥೂ ಆಲೇ ತೇಥ । ತಿಹೀ ವಿನವಿಲಾ ದೇವಕೀಸುತ । ದಾಸ ಸಮಸ್ತ ಕೃಪಾ ಪಾಹೀ ।।೪೨।। ಸ್ವರ್ಲೋಕಾದಿ ಲೋಕಪಾಳ । ಆಮ್ಹೀ ತುಝೇ ದಾಸ ಸಕಳ । ನಿಜಧಾಮಾ ಜಾತಾ ಏಕ ವೇಳ । ಆಶ್ರಮ ಸಕಳ ಪುನೀತ ಕೀಜೇ ।।೪೩।। ತ್ಯಾ ಸಮಸ್ತ ದೇವಾಂಪ್ರತೀ । ಸ್ವಮುಖೇ ಬೋಲಿಲಾ ಶ್ರೀಪತೀ । ಯದುಕುಳಕ್ಷಯಾಚೇ ಅಂತೀ । ಯೇ ಈನ ನಿಶ್ಚಿತೀ ತೇಣೇ ಮಾರ್ಗೇ ।।೪೪।। ಐಕೋನಿ ಶ್ರೀಕೃಷ್ಣವದಂತೀ । ಸುರವರ ಸಂತೋಷಲೇ ಚಿತ್ತೀ । ಆಮ್ಹಾಸೀ ವಶ್ಯ ಝಾಲಾ ಶ್ರೀಪತೀ । ವಚನೋಕ್ತೀ ನುಲ್ಲಂಘೀ ।।೪೫।। ತೇ ಸಂಧೀಚಾ ಠಾಕೂನ ಠಾವೋ । ಆಲಾ ಸುರವರ ಸಮುದಾವೋ । ತ್ಯಾಚಾ ಛಳಾವಯಾ ಅಹಂಭಾವೋ । ನಿಜನೇತ್ರ ಪಹಾ ಹೋ ಹರಿ ಝಾಂಕೀ ।।೪೬।।

ಆಕಾಶದಲ್ಲಿ ನಾಲ್ಕೂ ಕಡೆಯಿಂದ ವಿಮಾನಗಳ ದಟ್ಟಣೆ ತುಂಬಿಕೊಂಡಿತು. ಶ್ರೀಕೃಷ್ಣನ ಎದುರಿಗೆ ಬಂದು ದರ್ಶನ ಪಡೆದು ಸರ್ವ ದೇವತೆಗಳವರು ಜಯ ಜಯಕಾರ ಮಾಡಿದರು ।।೩೫।। ಶ್ರೀಕೃಷ್ಣನನ್ನು ಕಾಣುತ್ತಲೇ ಅವರ ಚಿತ್ತವು ಭಕ್ತಿಯಿಂದ ದ್ರವಿಭೂತವಾಯಿತು. ಆಗ ಅವರೆಲ್ಲರೂ ಕೂಡಿ ಒಮ್ಮಿಂದೊಮ್ಮೆಲೇ ಶ್ರೀಕೃಷ್ಣನ ಮೇಲೆ ಪುಷ್ಪವೃಷ್ಟೀ ಮಾಡಿದರು ।।೩೬।। ಆಗ ಶ್ರೀಕೃಷ್ಣನ ನಾಲ್ಕೂ ಕಡೆಗಳಲ್ಲಿ ದಿವ್ಯ ಸುಗಂಧ ಪುಷ್ಪಗಳ ರಾಶಿಯೇ ಹರಡಿಕೊಂಡಿತು. ಆ ಸಮಯದಲ್ಲಿ ಘನಶ್ಯಾಮ ಶ್ರೀಕೃಷ್ಣನು ಅತಿಶಯವಾಗಿ ಶೋಭಾಯಮಾನನಾಗಿ ಕಾಣಹತ್ತಿದನು ।।೩೭।।

ಸರ್ವ ದೇವತೆಗಳವರು ಶೀಘ್ರಗತಿಯಿಂದ ಅಲ್ಲಿಗೆ ಬಂದರು. ಆಗ ಶ್ರೀಕೃಷ್ಣನು ತನ್ನ ಎದುರಿನಲ್ಲಿರುವ ಬ್ರಹ್ಮದೇವನನ್ನು ನೋಡಿದನು. ತನ್ನ ಸಮಾನ ವಿಭೂತಿಯಾಗಿರುವ ಶಂಕರನನ್ನೂ ನೋಡಿದನು ।।೩೮।। ತನ್ನ ವಿಭೂತಿಗಳೇ ಆಗಿರುವ ಇಂದ್ರಾದಿಕ ದೇವತೆಗಳವರನ್ನು ಶ್ರೀಕೃಷ್ಣನು ನೋಡಿ ತನ್ನ ಪದ್ಮದಂತಿರುವ ನೇತ್ರಗಳನ್ನು ಸಹಜವಾಗಿ ಮುಚ್ಚಿದನು ।।೩೯।। ನೇತ್ರಗಳನ್ನು ತೆರೆದರೇನು, ಮುಚ್ಚಿದರೇನು, ಅದರಲ್ಲಿ ಯಾವ ಹೆಚ್ಚು ಕಡಿಮೆ ತೋರಲಿಲ್ಲ. ಆತನು ಆತ್ಮಸ್ವರೂಪದಿಂದ ಪರಿಪೂರ್ಣ ಆತ್ಮನೇ ಆಗಿದ್ದನು. ಹೀಗಿದ್ದ ಮೇಲೆ ಶ್ರೀಕೃಷ್ಣನು ಕಣ್ಣುಗಳನ್ನು ಏಕೆ ಮುಚ್ಚಿದನು? ।।೪೦।। ದೇವತೆಗಳ ಸಮೂಹ ಕಂಡು ಅವರಿಗೆ ಏನೂ ಹೇಳದೇ ದೇವನು ಕಣ್ಣುಮುಚ್ಚಿದನು. ಅದರ ಅಭಿಪ್ರಾಯ ಏನೆಂಬುದು ಈಗ ಕೇಳಿರಿ ।।೪೧।। ಶ್ರೀಕೃಷ್ಣನು ದ್ವಾರಕೆಗೆ ಬಂದ ಸಮಯದಲ್ಲಿ ಅಲ್ಲಿ ಮಹಾ ಮಹಾ ದೇವತೆಗಳವರು ಪ್ರಾರ್ಥಿಸಲು ಆಗಮಿಸಿದ್ದರು. ಆಗ ಅವರು ದೇವಕೀತನಯ ಶ್ರೀಕೃಷ್ಣನಿಗೆ ಪರಮ ಆದರಭಾವದಿಂದ ನಮ್ಮತ್ತ ತಮ್ಮ ಕೃಪೆ ಇರಲಿ, ದಾಸರಾದ ನಮ್ಮನ್ನು ನೀವು ರಕ್ಷಿಸಿರಿ ಎಂದು ವಿನಂತಿಸಿದರು ।।೪೨।। ಸರ್ವ ದೇವತೆಗಳ ಸಮುದಾಯ, ಸರ್ವಲೋಕಾದಿ ಲೋಕಪಾಲಕರು ಹೀಗೆ ನಾವೆಲ್ಲರೂ ನಿನ್ನ ದಾಸರಾಗಿದ್ದೇವೆ. ಆದ್ದರಿಂದ ತಾವು ನಿಜಧಾಮಕ್ಕೆ ಹೋಗುವಾಗ್ಗೆ ಒಂದು ಸಾರೆ ನಮ್ಮಲ್ಲಿ ಬಂದು ನಮ್ಮ ಆಶ್ರಮಗಳನ್ನು ಪಾವನ ಮಾಡಬೇಕು ।।೪೩।। ಆಗ ಆ ಸರ್ವ ದೇವತೆಗಳವರಿಗೆ ಯಾದವ ಕುಲದ ಕ್ಷಯವಾದ ನಂತರ ಕೊನೆಯಲ್ಲಿ ನಾನು ಆ ಮಾರ್ಗದಿಂದ ನಿಶ್ಚಿತ ಬರುವೆ ಎಂದು ಶ್ರೀಕೃಷ್ಣನು ಸ್ವಮುಖದಿಂದ ಹೇಳಿದನು ।।೪೪।। ಈ ಯಾವ ಶ್ರೀಕೃಷ್ಣನ ವಚನ ಕೇಳಿ ಸರ್ವ ದೇವತೆಗಳವರಿಗೆ ಪರಮ ಸಂತೋಷವಾಯಿತು. ಅವರು ಮನದಲ್ಲಿ ಹೀಗೆ ವಿಚಾರಿಸಿದರು; ಶ್ರೀಕೃಷ್ಣನು ನಮಗೆ ವಶನಾದನು. ಆದ್ದರಿಂದ ಆತನು ನಮ್ಮ ವಿನಂತಿ ಅಮಾನ್ಯ ಮಾಡಲಿಲ್ಲ ।।೪೫।। ಹೀಗೆ ಕೊಟ್ಟಿರುವ ವಚನದ ಸ್ಮರಣೆಯನ್ನಿಟ್ಟುಕೊಂಡು ಹಾಗೂ ಆ ಸಂಧಿಯ ಲಾಭ ಪಡೆಯುವುದಕ್ಕಾಗಿ ದೇವತೆಗಳ ಸಮುದಾಯವು ಆಗಮಿಸಿತ್ತು. ಅವರ ಅಹಂಕಾರ ದೂರು ಮಾಡುವುದಕ್ಕಾಗಿಯೇ ಶ್ರೀಕೃಷ್ಣನು ತನ್ನ ಕಣ್ಣುಗಳನ್ನು ಮುಚ್ಚಿದನು ।।೪೬।।

ದೇವಾಂಚಾ ಬಹು ಸಮುದಾವೋ । ತೇಥ ಮೀ ಕೋಠಕೋಠೇ ಜಾವೋ । ತ್ಯಾಂಸೀ ಠಕಾವಯಾ ಪಹಾ ಹೋ । ನೇತ್ರ ಝಾಂಕೋನಿ ದೇವೋ ಸಮಾಧಿ ದಾವೀ ॥೪೭॥ ನಾಹೀ ಸಮಾಧಿ ಆಣಿ ವ್ಯುತ್ಥಾನ । ಕೃಷ್ಣ ಪರಬ್ರಹ್ಮ ಪರಿಪೂರ್ಣ । ತೋಹೀ ನಿಜನೇತ್ರ ಝಾಂಕೂನ । ಸಮಾಧಿಲಕ್ಷಣ ಮೃಷಾ ದಾವೀ ॥೪೮॥ ಸ್ವಚ್ಛಂದ ಮೃತ್ಯು ಯೋಗಿಯಾಂಸೀ । ತೇ ಸ್ಥಿತಿ ನಾಹೀ ಶ್ರೀಕೃಷ್ಣಾಪಾಶೀ । ಅತರ್ಕ್ಯಗತಿ ಶಿವಾದಿಕಾಂಸೀ । ತೇ ಪರೀಕ್ಷಿತೀಸೀ ಶುಕ ಸಾಂಗೇ ॥೪೯॥

ಲೋಕಾಭಿರಾಮಾಂ ಸ್ವತನುಂ ಧಾರಣಾಧ್ಯಾನಮಂಗಲಂ । ಯೋಗಧಾರಣಯಾಗ್ನೇಯ್ಯಾಽದಗದ್ಧ್ವಾ ಧಾಮಾವಿಶತ್ಸ್ವಕಮ್ ॥೬॥

ಅರ್ಥ :- ಭಗವಂತನ ಶ್ರೀವಿಗ್ರಹವು ಉಪಾಸಕರ ಧ್ಯಾನ ಮತ್ತು ಧಾರಣದ ಮಂಗಲಮಯ ಆಧಾರ ಮತ್ತು ಸಮಸ್ತ ಲೋಕಕ್ಕಾಗಿ ಪರಮ ರಮಣೀಯ ಆಶ್ರಯವಾಗಿರುವುದು. ಆದ್ದರಿಂದ ಆತನು ಯೋಗಧಾರಣೆಯ ಮುಖಾಂತರವಾಗಿ ಶರೀರಕ್ಕೆ ಅಗ್ನಿ ಕೊಡಲಿಲ್ಲ, ಸದೇಹವಾಗಿ ತನ್ನ ನಿಜಧಾಮಕ್ಕೆ ಮರಳಿ ಹೋದನು.

ಕಳಿಕಾಳ ಜಿಣೋನಿ ಜಾಣ । ಸ್ವಚ್ಛಂದ ಮೃತ್ಯು ಯೋಗೀಜನ । ತೇ ಅಗ್ನಿಧಾರಣಾ ಕರೂನಿ ಪೂರ್ಣ । ಸ್ವದೇಹ ಜಾಳೂ ನ ಸ್ವರೂಪ ಹೋತೀ ॥೫೦॥ ಘೃತ ಥಿಜಲೇ ತೇ ವಿಘುರಲೇ । ತೈಸೇ ಸಗುಣ ನಿರ್ಗುಣತ್ವ ಆಲೇ । ಯಾ ನಾಂವ ಯೋಗಾಗ್ನಿಧಾರಣ ಬೋಲಿಲೇ । ಶ್ರೀಕೃಷ್ಣೇ ದೇಹ ದಾಹಿಲೇ ಹೇ ಕದಾ ನ ಘಡೇ ॥೫೧॥ ಕೃಷ್ಣಸ್ವರೂಪ ಪರಿಪೂರ್ಣ । ತೋ ಕಾ ಕರೀಲ ಯೋಗಧಾರಣ । ತ್ಯಾಚಾ ಲೀಲಾವಿಗ್ರಹೀ ದೇಹ ಜಾಣ । ಕರಾವೇ ದಹನ ಕಶಾಚೇ ॥೫೨॥ ದೇಖತಾ ಡೋಳ್ಯಾ ಲಾಗೇ ಧ್ಯಾನ । ಸಂಪೂರ್ಣ ಜೇಥೇ ವಿಗುಂತೇ ಮನ । ಏವಢೇ ಶ್ರೀಕೃಷ್ಣಸೌಂದರ್ಯ ಸಂಪೂರ್ಣ । ನಿಜಮೋಹನ ಜಗಾಚೇ ॥೫೩॥ ಜ್ಯಾಂಚೇ ದೇಖತಾ ಬರವೇಪಣ । ಮದನ ಪೋಟಾ ಆಲಾ ಆಪಣ । ಲಕ್ಷ್ಮೀ ಭುಲಲೀ ದೇಖೋನ ಚರಣ । ಚೈತನ್ಯಘನ ಶ್ರೀಕೃಷ್ಣ ॥೫೪॥ ಜ್ಯಾಚೇ ಯೋಗಿಯಾ ಸದಾ ಧ್ಯಾನ । ಶಿವಾದಿಕಾ ನಿತ್ಯ ಚಿಂತನ । ಸಕಳ ಮಂಗಲಾಚೇ ಆಯತನ । ಚೈತನ್ಯಘನ ಶ್ರೀಕೃಷ್ಣ ॥೫೫॥ ಶ್ರೀಕೃಷ್ಣ ಸ್ವಯೇ ಆತ್ಮಾರಾಮ । ಯಾಲಾಗೀ ತೋ ಜಗಾಚಾ ಆರಾಮ । ಲೀಲಾವಿಗ್ರಹೀ ಘನಶ್ಯಾಮ । ಧ್ಯಾನ ಗಮ್ಯ ಚಿದ್ರೂಪ ॥೫೬॥ ಜೈಶೀ ಘೃತಾಚೀ ಪುತಳೀ । ಥಿಜೋನಿ ಜಾಹಲೀ ಏಕೇ ಕಾಳೀ । ತೈಸೀ ಚೈತನ್ಯಾಸೀ ಮುಸಾವಲೀ । ಸ್ವಲೀಲಾ ಜಾಹಲೀ ಶ್ರೀಕೃಷ್ಣಮೂರ್ತೀ ॥೫೭॥

ದೇವತೆಗಳ ಸಮುದಾಯ ಬಹು ದೊಡ್ಡದಾಗಿರುವುದು. ಅಂದಮೇಲೆ ನಾನು ಎಲ್ಲಿ ಎಲ್ಲಿ ಎಂದು ಹೋಗಲಿ? ಹೀಗೆ ತಿಳಿದು ಅವರಿಗೆ ಠಕ್ಕಿಸುವುದಕ್ಕಾಗಿಯೇ ಕಣ್ಣುಗಳನ್ನು ಮುಚ್ಚಿಕೊಂಡನು ಹಾಗೂ ಸಮಾಧಿ ಹತ್ತಿಕೊಂಡಂತೆ ತೋರಿಸಿದನು ॥೪೭॥ ಶ್ರೀಕೃಷ್ಣನು ಪರಿಪೂರ್ಣ ಬ್ರಹ್ಮನಾಗಿದ್ದನು. ಆತನಿಗೆ ಸಮಾಧೀ ಹಾಗೂ ವ್ಯುತ್ಥಾನ ಎರಡೂ ಇರುವುದಿಲ್ಲ. ಆತನು ಎರಡೂ ಕಣ್ಣುಗಳನ್ನು ಮುಚ್ಚಿ ಮೇಲ್ನೋಟಕ್ಕೆ ಸಮಾಧಿಯ ಲಕ್ಷಣ ತೋರಿಸಿದನು ॥೪೮॥ ಯೋಗಿ ಜನರು ಇಚ್ಛಾಮರಣಿಯಾಗಿರುವರು. ಆದರೆ ಶ್ರೀಕೃಷ್ಣನ ಪ್ರಕಾರವು ಹೀಗೆಯೂ ಕೂಡ ಇದ್ದಿಲ್ಲ. ಶಂಕರಾದಿಯವರಿಗೂ ಆತನ ಗತಿಯು ಅತರ್ಕ್ಯವಾಗಿತ್ತು. ಇದರ ವರ್ಣನೆ ಶುಕಾಚಾರ್ಯರು ಪರೀಕ್ಷಿತೀ ರಾಜನಿಗೆ ಹೇಳುವರು ॥೪೯॥

ಯೋಗಿ ಜನರು ಕಲಿಕಾಲನನ್ನು ಗೆಲ್ಲುವರು ಹಾಗೂ ಇಚ್ಛಾಮರಣಿಯಾಗುವರು. ಅವರು ಪೂರ್ಣವಾಗಿ ಅಗ್ನಿಧಾರಣೆ ಮಾಡಿ ತಮ್ಮ ದೇಹವನ್ನು ಸುಟ್ಟು ಸ್ವರೂಪಕ್ಕೆ ಕೂಡಿಕೊಳ್ಳುವರು ॥೫೦॥ ತುಪ್ಪವು ಯಾವ ಪ್ರಕಾರವಾಗಿ ಹೆಪ್ಪುಗಟ್ಟುವುದು ಮತ್ತು ಕರಗುವುದು ಹೇಗೋ, ಅದೇ ಪ್ರಕಾರವಾಗಿ ಸಗುಣರೂಪವು ನಿರ್ಗುಣಕ್ಕೆ ಪ್ರಾಪ್ತವಾಗುವುದು. ಇದಕ್ಕೆ ಯೋಗಾಗ್ನಿ ಧಾರಣ ಎಂದು ಹೇಳುವರು. ಹೀಗೆ ಶ್ರೀಕೃಷ್ಣನು ದೇಹವನ್ನು ದಗ್ಧಗೊಳಿಸುವುದು ಎಂದಿಗೂ ಸಾಧ್ಯವೇ ಇಲ್ಲ ॥೫೧॥ ಶ್ರೀಕೃಷ್ಣನ ಸ್ವರೂಪವು ಪರಿಪೂರ್ಣವಾಗಿತ್ತು. ಆತನು ಯೋಗಧಾರಣ ಏಕೆ ಮಾಡುವನು? ಆತನ ದೇಹವು ಲೀಲಾವಿಗ್ರಹವಾಗಿತ್ತು. ಅಂದಮೇಲೆದಹನ ಯಾವುದಕ್ಕೆ ಮಾಡಬೇಕು? ॥೫೨॥ ಆತನನ್ನು ಕಣ್ಣುಗಳಿಂದ ನೋಡುತ್ತಲೇ ನೋಡುವವನಿಗೆ ಧ್ಯಾನ ಹತ್ತುವುದು. ಸಂಪೂರ್ಣ ಮನವು ಅಲ್ಲಿಯೇ ಸಿಲುಕಿಕೊಳ್ಳುವುದು. ಇಷ್ಟೊಂದು ಶ್ರೀಕೃಷ್ಣನ ಸೌಂದರ್ಯವು ಪರಿಪೂರ್ಣವಾಗಿದ್ದು ಜಗತ್ತನ್ನೇ ಮೋಹಿಸುವಂತಾಗಿತ್ತು ॥೫೩॥ ಆತನ ಸೌಂದರ್ಯವನ್ನು ಕಂಡು ಸ್ವತಃ ಮದನನು ಆತನ ಹೊಟ್ಟೆಯಲ್ಲಿ ಜನ್ಮ ತಾಳಿದನು. ಚೈತನ್ಯ ಘನ ಶ್ರೀಕೃಷ್ಣನ ಚರಣಗಳನ್ನು ಕಂಡು ಲಕ್ಷ್ಮಿಯೂ ಕೂಡ ಭುಲಾಯಿಸಿದಳು ॥೫೪॥ ಯೋಗಿಗಳು ನಿರಂತರವಾಗಿ ಆತನ ಧ್ಯಾನ ಮಾಡುತ್ತಿರುವರು. ಶಂಕರಾದಿಯವರೂ ಸಹ ಆತನ ನಿತ್ಯ ಚಿಂತನೆ ಮಾಡುತ್ತಿರುವರು. ಯಾವುದು ಮಂಗಳಕ್ಕೆ ಅಧಿಷ್ಠಾನವೋ ಅದೇ ಚೈತನ್ಯಘನ ಶ್ರೀಕೃಷ್ಣನಾಗಿರುವನು ॥೫೫॥ ಶ್ರೀಕೃಷ್ಣನು ಸ್ವತಃ ಆತ್ಮಾರಾಮನಾಗಿರುವುದರಿಂದ ಆತನು ಜಗತ್ತಿನ ವಿಶ್ರಾಂತಿಸ್ಥಾನನಾಗಿರುವನು. ಲೀಲಾದೇಹ ಧರಿಸುವವನಾದ ಜ್ಞಾನರೂಪ ಘನಶ್ಯಾಮನ ಧ್ಯಾನವು ಅಗಮ್ಯವಾಗಿರುವುದು ॥೫೬॥ ತುಪ್ಪವು ಹೆಪ್ಪುಗಟ್ಟಿ ಅದರಿಂದ ಮೂರ್ತಿಯಾಗುವಂತೆ ಚೈತನ್ಯ ರಸವನ್ನು ಸುರಿದು ಅದರಿಂದ ಸ್ವಲೀಲೆಯಿಂದ ಶ್ರೀಕೃಷ್ಣಮೂರ್ತಿಯು ಸಿದ್ಧವಾಯಿತು ॥೫೭॥

ದಾವಾಗ್ನಿ ಪ್ರಾಶಿಲಾ ಪ್ರತ್ಯಕ್ಷ । ನ ಚಢೇಚಿ ಕಾಳಿಯಾಚೇ ವಿಖ । ತೋ ದೇಹಚಿ ನವ್ಹೇ ದೇಖ । ಮಾ ಮರಣಾತ್ಮಕ ತೇಥೇ ಕೈಚೇ॥ ೫೮॥ ಕೃಷ್ಣ ಪ್ರಕಟೇ ಜ್ಯಾಚೇ ಹೃದಯೀ । ತೋ ದೇಹೀಂಚ ಹೋಯ ವಿದೇಹೀ । ಮಾ ತ್ಯಾ ಕೃಷ್ಣಾಚ್ಯಾ ಠಾಯೀ । ದೇಹತ್ವ ಕಾಯೀ ಅಸೇಲ ॥೫೯॥ ಕೃಷ್ಣದೇಹೋ ನಾಹೀ ನಿಮಾಲಾ । ತೋ ಆಭಾಸಚಿ ಸಹಜತ್ವಾ ಆಲಾ । ಜೈಸಾ ದರ್ಪಣೀಂಚಾ ಲಪಲಾ । ಪ್ರತಿಬಿಂಬ ಆಪುಲಾ ಆಪುಲೇ ಠಾಯೀ ॥೬೦॥ ಜ್ಯಾಚೇ ಕರಿತಾ ನಾಮಸ್ಮರಣ । ಭಕ್ತಾಂಚೇ ನಿರಸೇ ಜನ್ಮ ಮರಣ । ತೋ ಕೃಷ್ಣ ಪಾವೇ ಜೈ ನಿಧನ । ತೈ ಭಕ್ತಾಂಸೀ ಕೋಣ ಉದ್ಧರೀ ॥೬೧॥ ಆತ್ಮ ಮಾಯೇಚೇ ಸ್ವಲೀಲಾ । ಕೃಷ್ಣ ಕೃಷ್ಣರೂಪೇ ಪ್ರಗಟ ಜಾಹಲಾ । ತೇ ಲೀಲಾ ತ್ಯಾಗೋನಿ ಸಂಚಲಾ । ನಿಜರೂಪೀ ಠೇಲಾ ನಿಜತ್ವೇ ॥೬೨॥ ಕೃಷ್ಣೇ ದೇಹೋ ನೇಲಾ ನಾ ತ್ಯಾಗಿಲಾ । ತೋ ಲೀಲಾವಿಗ್ರಹೇ ಸಂಚಲಾ । ಭಕ್ತಧ್ಯಾನೀ ಪ್ರತಿಷ್ಠಿಲಾ । ಸ್ವಯೇ ಗೇಲಾ ನಿಜಧಾಮಾ ॥೬೩॥ ಜೈಸಜೈಸಾ ಭಕ್ತಾಚಾ ಭಾವೋ । ತೈಸಾ ತೈಸಾ ಹೋಯ ದೇವೋ । ತೋ ಭಕ್ತಧ್ಯಾನೀ ಸ್ಥಾಪೂನಿ ದೇಹೋ । ನಿಜಧಾಮಾ ಪಹಾ ಹೋ ನ ವಚೋನಿ ಗೇಲಾ ॥೬೪॥ ಹೋ ಕಾ ಕೃಷ್ಣಮೂರ್ತಿ ಜರೀ ಸಗುಣ । ತರೀ ದೇಹಾ ದಾಹ ನ ಘಡೇ ಜಾಣ । ಕೃಷ್ಣಾಶ್ರಯೇ ಜಗ ಸಂಪೂರ್ಣ । ತೇವ್ಹಾ ಹೋಈಲ ದಹನ ಜಗಾಚೇ ॥೬೫॥ ಜೇಣೇ ಮಾಯೇಸೀ ನಿಜಪೋಟೀ । ದಾವಿಲ್ಯಾ ಬ್ರಹ್ಮಾಂಡಾಂಚ್ಯಾ ಕೋಟೀ । ತ್ಯಾ ಶ್ರೀಕೃಷ್ಣದೇಹದಾಹಾಪಾಠೀ । ಜಗಾಚೀ ಗೋಠೀ ನುರವೀ ॥೬೬॥ ಐಶಿಯಾಹೀ ಯುಕ್ತಿ ವಿಚಾರಿತಾ । ಅತಿಸ್ಥೂಳ ತೇ ಯೋಗ್ಯತಾ । ಶ್ರೀಕೃಷ್ಣದೇಹಚಿ ವಿದೇಹತಾ । ತೇಥ ದಾಹಕತಾ ತೋ ಕೈಚೇ ॥೬೭॥ ಕೃಷ್ಣಾಚೇ ಅಸಣೇ ಜಾಣೇ । ಹೇಹೀ ಶ್ರೀಕೃಷ್ಣಚೀ ಸ್ವಯೇ ಜಾಣೇ । ತೇಥ ದೇಹಾಂಚೇಹೀ ಬೋಲಣೇ । ಜಾಣಪಣೇ ಸರೇನಾ ॥೬೮॥ ಹೇ ಕೃಷ್ಣಚ ಅಗಮ್ಯ ಗತೀ । ಶಿವವಿರಿಂಚ್ಯಾದಿ ನೇಣತೀ । ತ್ಯಾಂಚೇ ಕಲ್ಪನಾ ಐಶೀ ಚಿತ್ತೀ । ಆಮ್ಹಾಸವೇ ಶ್ರೀಪತೀ ಯೇಈಲ ॥೬೯॥ ಐಸೇನಿ ಅಭಿಪ್ರಾಯೇ ಪೂರ್ಣ । ಆನಂದಲೇ ಸುರಗಣ । ಅವಘೇ ಹೋಊನಿ ಸಾವಧಾನ । ಉಲ್ಹಾಸ ಪೂರ್ಣ ಮಾಂಡಿಲಾ ॥೭೦॥

ದಿವಿ ದುಂದುಭಯೋ ನೇದುಃ ಪೇತುಃ ಸುಮನಸಶ್ಚ ಖಾತ್ ।
ಸತ್ಯಂ ಧರ್ಮೋ ಧೃತಿರ್ಭೂಮೇಃ ಕೀರ್ತಿಃ ಶ್ರೀಶ್ಚಾನು ತಂ ಯಯುಃ ॥೭॥

ಅರ್ಥ:- ಆ ಸಮಯದಲ್ಲಿ ಸ್ವರ್ಗದಲ್ಲಿ ನಗಾರೆಗಳು ಬಾರಿಸಹತ್ತಿದವು. ಆಕಾಶದಿಂದ ಹೂವುಗಳ ಮಳೆಯಾಗಹತ್ತಿತು. ಪರೀಕ್ಷಿತನೇ, ಭಗವಾನ ಶ್ರೀಕೃಷ್ಣನ ಬೆನ್ನು ಹಿಂದೆಯೇ ಸತ್ಯ, ಧರ್ಮ, ಧೈರ್ಯ, ಕೀರ್ತೀ ಹಾಗೂ ಶ್ರೀದೇವೀ ಹೊರಟರು.

ಆದ್ದರಿಂದ ಅಂಥ ದೇಹದಿಂದ ದಾವಾಗ್ನಿ ಪ್ರಾಶನ ಮಾಡಿದನು. ಆತನಿಗೆ ಕಾಲಿಯಾ ಮಹಾಸರ್ಪದ ವಿಷವೇರಲಿಲ್ಲ. ಕಾರಣ ಆತನು ಮೂಲತಃ ದೇಹಸ್ವರೂಪನಿದ್ದಿಲ್ಲ. ಹೀಗಿದ್ದ ಮೇಲೆ ಆ ದೇಹಕ್ಕೆ ಮರಣ ಎಲ್ಲಿಂದ ಬರಬೇಕು ? ॥೫೮॥ ಯಾರ ಹೃದಯದಲ್ಲಿ ಶ್ರೀಕೃಷ್ಣನು ಪ್ರಕಟನಾಗುವನೋ, ಆತನು ದೇಹದಲ್ಲಿದ್ದಾಗಲೇ ವಿದೇಹಿಯಾಗುವನು. ಇಂಥ ಯಾವ ಶ್ರೀಕೃಷ್ಣನಲ್ಲಿ ದೇಹವು ಹೇಗೆ ಇರಲು ಸಾಧ್ಯ? ॥೫೯॥ ಶ್ರೀಕೃಷ್ಣನ ದೇಹವು ನಷ್ಟವಾಗಲಿಲ್ಲ. ಕನ್ನಡಿಯಲ್ಲಿನ ಪ್ರತಿಬಿಂಬವು ಯಾವ ಪ್ರಕಾರವಾಗಿ ಇದ್ದಲ್ಲಿಯೇ ಲೋಪವಾಗುವುದೋ, ಅದರಂತೆ ಆತನು ಆಭಾಸಲೀನನಾದನು ಮತ್ತು ತನ್ನ ಮೂಲ ಸ್ವರೂಪದಲ್ಲಿ ಏಕರೂಪನಾದನು ॥೬೦॥ ಯಾರ ನಾಮಸ್ಮರಣೆ ಮಾಡಿದರೆ ಭಕ್ತನ ಜನ್ಮ ಮರಣವು ತೀರಿ ಹೋಗುವುದು. ಅಂಥ ಶ್ರೀಕೃಷ್ಣನು ಮರಣನಾದನೆಂದರೆ ಭಕ್ತರ ಉದ್ಧಾರ ಯಾರು ಮಾಡಬೇಕಾದೀತು? ॥೬೧॥ ತನ್ನ ಮಾಯೆಯ ಲೀಲೆಯಿಂದ ಶ್ರೀಕೃಷ್ಣನು ಅವತಾರೀ ದೇಹ ಧಾರಣೆ ಮಾಡಿ ಪ್ರಕಟನಾಗಿದ್ದನು. ಆ ಲೀಲೆಯನ್ನು ಒಗೆದು ಆತನು ಸ್ವಸ್ವರೂಪದಲ್ಲಿ ಆತ್ಮರೂಪದಿಂದ ಲೀನನಾದನು ॥೬೨॥ ಕೃಷ್ಣನ ದೇಹವನ್ನು ಯಾರೂ ಒಯ್ಯಲಿಲ್ಲ ಅಥವಾ ಆತನೂ ಸಹ ಒಗೆಯಲಿಲ್ಲ. ಆತನು ಆ ಲೀಲಾಶರೀರದಲ್ಲಿ ಓತಪ್ರೋತವಾಗಿ ತುಂಬಿಕೊಂಡಿದ್ದನು. ಭಕ್ತರ ಹೃದಯಪಟಲದ ಮೇಲೆ ಆ ಮೂರ್ತಿಯನ್ನು ಸ್ಥಿರಪಡಿಸಿ ಆತನು ಸ್ವತಃ ನಿಜಧಾಮಕ್ಕೆ ಹೊರಟು ಹೋದನು ॥೬೩॥ ಭಕ್ತನ ಭಾವನೆಯು ಹೇಗೆ ಇರುವುದೋ ಹಾಗೆಯೇ ದೇವನಾಗುವನು. ಆತನು ಆ ದೇಹದ ಪ್ರತಿಮೆಯನ್ನು ಭಕ್ತರ ಧ್ಯಾನದಲ್ಲಿ ಸ್ಥಾಪಿಸಿ ತಾನು ಸ್ವತಃ ಹೋಗದೇ ನಿಜಧಾಮಕ್ಕೆ ಹೊರಟು ಹೋದನು ॥೬೪॥ ಶ್ರೀಕೃಷ್ಣನ ಮೂರ್ತಿಯು ಸಗುಣವಾಗಿದ್ದರೂ ಕೂಡ ದೇಹ ದಹಿಸುವುದು ಶಕ್ಯವಿದ್ದಿಲ್ಲ. ಕಾರಣ ಸಂಪೂರ್ಣ ಜಗತ್ತು ಶ್ರೀಕೃಷ್ಣನ ಆಶ್ರಯದಲ್ಲಿ ಇರುತ್ತಿರುವುದರಿಂದ ಶ್ರೀಕೃಷ್ಣನ ದೇಹದ ದಹನವಾಯಿತೆಂದರೆ ಸರ್ವ ಜಗತ್ತಿನ ದಹನವಾಗುತ್ತಿತ್ತು ॥೬೫॥ ಯಾರು ಸ್ವತಃ ತನ್ನ ತಾಯಿಗೆ ಬಾಲ್ಯಾವಸ್ಥೆಯಲ್ಲಿಯೇ ಮುಖದಲ್ಲಿ ಅನಂತ ಬ್ರಹ್ಮಾಂಡಗಳನ್ನು ತೋರಿಸಿರುವ ಆ ಕೃಷ್ಣನ ದೇಹವು ದಹನವಾಯಿತೆಂದರೆ ಸರ್ವ ಜಗತ್ತೇ ಇಲ್ಲದಂತಾಗುವುದು ॥೬೬॥ ಹೀಗೆಲ್ಲ ವಿಚಾರ ಮಾಡಲು ಆತನ ಯೋಗ್ಯತೆಯು ವಿಲಕ್ಷಣವಾಗಿ ತೋರುವುದು. ಶ್ರೀಕೃಷ್ಣನು ವಿದೇಹರೂಪದಿಂದ ಇರುತ್ತಿರಲು ಆತನ ದಹನವು ಹೇಗಾಗಲು ಸಾಧ್ಯ ? ॥೬೭॥ ಶ್ರೀಕೃಷ್ಣನ ಇರುವಿಕೆ ಹಾಗೂ ಹೋಗುವಿಕೆ ಇದು ಶ್ರೀಕೃಷ್ಣನೇ ತಿಳಿಯಬಲ್ಲನು. ಈ ವಿಷಯಕ್ಕೆ ವೇದಗಳೂ ಕೂಡ ಮೌನ ಧರಿಸುವುವು. ಅವುಗಳ ಜ್ಞಾನವು ಇದಕ್ಕೆ ಸಾಲುವುದಿಲ್ಲ ॥೬೮॥ ಶ್ರೀಕೃಷ್ಣನ ಅಗಮ್ಯ ಗತಿಯು ಬ್ರಹ್ಮದೇವ ಹಾಗೂ ಶಂಕರ ಇವರಿಗೂ ಸಹ ತಿಳಿಯಲು ಶಕ್ಯವಿಲ್ಲ. ಅವರ ಮನದಲ್ಲಿ ಶ್ರೀಕೃಷ್ಣನು ನಮ್ಮ ಜೊತೆಯಲ್ಲಿಯೇ ಬರುವನು ಎಂಬ ವಿಚಾರವಿತ್ತು ॥೬೯॥ ಇದೇ ಅಭಿಪ್ರಾಯಮೇರೆಗೆ ಆ ಸರ್ವ ದೇವತೆಗಳ ಸಮುದಾಯವು ಸಂತುಷ್ಟವಾಗಿತ್ತು. ಆದ್ದರಿಂದ ದೊಡ್ಡ ಆನಂದೋತ್ಸವವನ್ನೇ ಮಂಡಿಸಿದರು ॥೭೦॥

ಉಲ್ಹಾಸಲೇ ಸುರಗಣ । ದಿವಿ ದುಂದುಭಿ ತ್ರಾಹಾಟಿಲ್ಯಾ ಜಾಣ । ದಿವ್ಯ ಸುಮನೇ ಗಗನೀಹೂನ । ವರ್ಷಲೇ ಪೂರ್ಣ ಶ್ರೀಕೃಷ್ಣಾವರೀ ॥೭೧॥ ವೈಕುಂಠಾದಿ ಸ್ವರ್ಗ ಸಂಪತ್ತೀ । ಭೂಲೋಕಾ ಆಣಿಲ್ಯಾ ಶ್ರೀಪತೀ । ತೋ ಯೇತಾ ನಿಜಧಾಮಾಪ್ರತಿ । ಆಯುಚ್ಯಾ ಆಮ್ಹಾ ಹಾತೀ ದೇಈಲ ವೇಗೀ ॥೭೨॥ ಐಸೇನಿ ದೇವ ಉಲ್ಹಾಸೋನಿ । ಪುನಃ ಪುನಃ ವರ್ಷತೀ ಸುಮನೀ । ಶಿವಾದಿ ಪಾಹತೀ ಸಾವಧಾನೀ । ಅತರ್ಕ್ಯ ಗಮನೀ ಹರಿ ಗೇಲಾ ॥೭೩॥ ಆಮ್ಹೀ ಸಕಳ ಮಾಯೇಚೇ ನಿಯಂತೇ । ಆಮ್ಹೀ ಸರ್ವದ್ರಷ್ಟೇ ಸರ್ವಜ್ಞಾತೇ । ಐಸಾ ಅಭಿಮಾನ ಹೋತಾ ದೇವಾಂತೇ । ತ್ಯಾಂಸೀ ಶ್ರೀಕೃಷ್ಣನಾಥೇ ಲಾಜವಿಲೇ ॥೭೪॥ ಅಲಕ್ಷ್ಯ ಶ್ರೀಕೃಷ್ಣಾಚೀ ನಿಜಗತೀ । ಶಂಭೂ ಸ್ವಯಂಭೂ ಸ್ವಯೇ ನೇಣತೀ । ತೇಣೇ ವಿಸ್ಮಿತ ತೇ ಹೋತೀ । ಆಶ್ಚರ್ಯ ಮಾನಿತೀ ಸುರವರ ॥೭೫॥ ದೇವ ಪರಮಾಶ್ಚರ್ಯ ಜಂವ ಮಾನಿತೀ । ತಂವ ಸತ್ಯ-ಧರ್ಮ-ಶ್ರೀ-ಧೃತಿ-ಕೀರ್ತೀ । ಶ್ರೀಯೇ ಸಮವೇತ ನಿಘತೀ । ಸಾಂಡೂನಿ ಕ್ಷಿತೀ ಕೃಷ್ಣಲಕ್ಷೀ ॥೭೬॥ ಸತ್ಯ-ಧರ್ಮ-ಶ್ರೀ-ಧೃತಿ-ಕೀರ್ತೀ । ಯಾಂಚೀ ಶ್ರೀಕೃಷ್ಣ ಚರಣೀ ನಿತ್ಯ ವಸ್ತೀ । ಯಾಲಾಗೀ ಕೃಷ್ಣಾಸವೇ ತ್ಯಾಹೀ ನಿಘತೀ । ಸಾಂಡೋನಿ ಕ್ಷಿತೀ ತತ್ಕಾಳ ॥೭೭॥ ತೂ ಐಸೇ ಮಾನಿಶೀ ಪರೀಕ್ಷಿತೀ । ಜೇ ಸತ್ಯ ಧರ್ಮಶ್ರೀ ಧೃತಿ ಕೀರ್ತೀ । ನಿಃಶೇಷ ಸಾಂಡೂನಿ ಗೇಲೀ ಕ್ಷಿತೀ । ಐಕ ತೇ ಅರ್ಥೀ ವಿಚಾರ ॥೭೮॥ ಮಜ ಪಾಹತಾ ಶ್ರೀಕೃಷ್ಣಮೂರ್ತೀ । ಸ್ಥಿರಾವಲೀ ಜ್ಯಾಚೇ ಚಿತ್ತೀ । ತೇಥ ಸತ್ಯ ಧರ್ಮ ಶ್ರೀ ಧೃತಿ ಕೀರ್ತೀ । ಸಾಮ್ರಾಜ್ಯೇ ವಸತೀ ಕುರುರಾಯಾ ॥೭೯॥ ಕೇವಳ ಭಕ್ತಾನುಗ್ರಹೀ । ಕೃಷ್ಣ ಸ್ವವೇ ಲೀಲಾವಿಗ್ರಹೀ । ತ್ಯಾ ಕೃಷ್ಣಾಚೀ ಗತೀ ಪಾಹೀ । ನ ಪಡೇ ಠಾಯೀ ಬ್ರಹ್ಮಾದಿಕಾ ॥೮೦॥

ದೇವಾದಯೋ ಬ್ರಹ್ಮಮುಖ್ಯಾ ನ ವಿಶಂತಂ ಸ್ವಧಾಮನಿ । ಅವಿಜ್ಞಾತಗತಿಂ ಕೃಷ್ಣಂ ದದೃಶುಶ್ಚಾತಿವಿಸ್ಮಿತಾಃ ॥೮॥

ಅರ್ಥ:- ಭಗವಾನ ಶ್ರೀಕೃಷ್ಣನ ಗತಿಯು ಮನ ಮತ್ತು ವಾಣಿಯ ಆಚೆಕಡೆ ಇರುವುದು. ಆದ್ದರಿಂದ ಭಗವಾನನು ತನ್ನ ಧಾಮಕ್ಕೆ ಪ್ರವೇಶ ಮಾಡಲ್ಪಟ್ಟನು. ಹೀಗಾಗಿ ಬ್ರಹ್ಮಾದಿ ದೇವತೆಗಳವರಿಗೂ ಆತನನ್ನು ನೋಡುವುದು ಶಕ್ಯವಾಗಲಿಲ್ಲ. ಈ ಘಟನೆಯಿಂದ ಅವರೆಲ್ಲರೂ ಆಶ್ಚರ್ಯಚಕಿತರಾದರು.

ಇಂದ್ರ ಬ್ರಹಸ್ಪತೀ ಮುಖ್ಯತ್ವೇ ಬ್ರಹ್ಮಾ । ದೇವ ಪಾಡೂನಿ ಪರಮ ಭ್ರಮಾ । ಶ್ರೀಕೃಷ್ಣ ಪ್ರವೇಶಲಾ ನಿಜಧಾಮಾ । ಅತರ್ಕ್ಯ ಮಹಿಮಾ ಹರೀಚಾ ॥೮೧॥ ಅತರ್ಕ್ಯ ಶ್ರೀಕೃಷ್ಣಾಚೀ ಗತೀ । ದೇವಾಂಸೀ ಲಕ್ಷೇನಾ ನಿಜಶಕ್ತೀ । ಅತಿ ವಿಸ್ಮಯ ಪಾವೋನಿ ಚಿತ್ತೀ । ಸ್ವಧಾಮಾಪ್ರತೀ ನಿಘಾಲೇ ॥೮೨॥

ದೇವತೆಗಳವರಿಗೆ ಅತಿಶಯ ಉಲ್ಹಾಸವಾಯಿತು. ಅವರು ದಿವ್ಯ ದುಂದುಭಿಗಳನ್ನು ಬಾರಿಸಲು ಆರಂಭಿಸಿದರು. ಆಕಾಶದಿಂದ ದಿವ್ಯ ಸುಗಂಧ ಪುಷ್ಪವೃಷ್ಟಿ ಶ್ರೀಕೃಷ್ಣನ ಮೇಲೆ ಮಾಡಲ್ಪಟ್ಟರು ॥೭೧॥ ವೈಕುಂಠದಲ್ಲಿನ ಹಾಗೂ ಸ್ವರ್ಗದಲ್ಲಿನ ದಿವ್ಯ ಸಂಪತ್ತು ಶ್ರೀಕೃಷ್ಣನು ಈ ಮೃತ್ಯುಲೋಕದಲ್ಲಿ ತಂದಿರುವನು. ಅದೆಲ್ಲವನ್ನೂ ತಾನೀಗ ನಿಜಧಾಮಕ್ಕೆ ಹೋಗುವಾಗ ನಮ್ಮ ಸ್ವಾಧೀನ ಮಾಡುವನು ॥೭೨॥ ಹೀಗೆ ತಿಳಿದುಕೊಂಡ ದೇವತೆಗಳವರಿಗೆ ಬಲು ಹರ್ಷವಾಯಿತು. ಆದ್ದರಿಂದ ಅವರು ಪುನಃ ಪುನಃ ಪುಷ್ಪವೃಷ್ಟಿ ಮಾಡಹತ್ತಿದರು. ಆದರೆ ಶಂಕರಾದಿ ದೇವತೆಗಳು ಲಕ್ಷ ಕೊಟ್ಟು ನೋಡುನೋಡುತ್ತಿದ್ದಂತೆಯೇ ಅತರ್ಕ್ಯಗತಿಯಿಂದ ಶ್ರೀಕೃಷ್ಣನು ನಿಜಧಾಮಕ್ಕೆ ಹೋದನು ॥೭೩॥ ನಾವು ಸರ್ವ ಮಾಯೆಗಳ ನಿಯಂತ್ರಕರು. ನಾವು ಸರ್ವವನ್ನೂ ಕಾಣುವ ಸರ್ವಜ್ಞರು ಎಂಬ ಮಹಾ ಅಭಿಮಾನವು ಈ ದೇವತೆಗಳಿಗಿತ್ತು. ಆದರೆ ಶ್ರೀಕೃಷ್ಣನು ಅವರನ್ನು ನಾಚಿಕೊಳ್ಳುವಂತೆ ಮಾಡಿದನು ॥೭೪॥ ಶ್ರೀಕೃಷ್ಣನ ಗತಿಯು ಅತರ್ಕ್ಯವಾಗಿತ್ತು. ಅದು ಬ್ರಹ್ಮದೇವ ಹಾಗೂ ಶಂಕರರಿಗೂ ತಿಳಿಯಲಿಲ್ಲ. ಇದರಿಂದ ಅವರು ವಿಸ್ಮಿತರಾದರು ಮತ್ತು ಸರ್ವ ದೇವತೆಯವರೂ ಕೂಡ ಆಶ್ಚರ್ಯಚಕಿತರಾದರು ॥೭೫॥ ದೇವತೆಗಳವರು ಪರಮಾಶ್ಚರ್ಯ ಚಕಿತರಾಗಿ ನೋಡುತ್ತಿದ್ದಂತೆಯೇ ಸತ್ಯ, ಧರ್ಮ, ಶ್ರೀ, ಧೃತೀ ಮತ್ತು ಕೀರ್ತೀ ಈ ದೇವತೆಗಳೂ ಕೂಡ ಲಕ್ಷ್ಮೀ ಸಹ ಈ ಪೃಥ್ವಿಯ ತ್ಯಾಗ ಮಾಡಿ ಕೂಡಲೇ ಶ್ರೀಕೃಷ್ಣನ ಜೊತೆಯಲ್ಲಿಯೇ ನಡೆದರು ॥೭೬॥ ಸತ್ಯ, ಧರ್ಮ, ಶ್ರೀ, ಧೃತಿ ಮತ್ತು ಕೀರ್ತೀ ಇವರ ವಸ್ತಿಯು ಯಾವಾಗಲೂ ಶ್ರೀಕೃಷ್ಣನ ಚರಣಕಮಲಗಳಲ್ಲಿಯೇ ಇರುತ್ತಿತ್ತು. ಆದ್ದರಿಂದಲೇ ಅವರು ತ್ವರೆಯಿಂದ ಭೂಲೋಕ ಬಿಟ್ಟು ಶ್ರೀಕೃಷ್ಣನ ಜೊತೆಯಲ್ಲಿಯೇ ಹೊರಟರು ॥೭೭॥ ಹೇ ಕುರುಶ್ರೇಷ್ಠನಾದ ಪರೀಕ್ಷಿತಿಯೇ, ಸತ್ಯ, ಧರ್ಮ, ಶ್ರೀ, ಧೃತೀ ಮತ್ತು ಕೀರ್ತೀ ಇವು ಪೃಥ್ವಿಯಿಂದ ನಿಃಶೇಷವಾಗಿ ಬಿಟ್ಟು ಹೋದರು ಎಂದು ನೀನು ಹೀಗೆ ತಿಳಿದುಕೊಳ್ಳಬಹುದು ಅದರ ವಿಚಾರ ಹೇಳುವೆ, ಕೇಳು ॥೭೮॥ ಹೇ ಕುರುರಾಯನೇ, ಈ ಯಾವ ಸತ್ಯ, ಧರ್ಮ, ಶ್ರೀ, ಧೃತೀ ಮತ್ತು ಕೀರ್ತೀ ಇವು ಯಾರ ಹೃದಯಮಂದಿರಲ್ಲಿ ಶ್ರೀಕೃಷ್ಣನ ಮೂರ್ತಿಯು ಸ್ಥಿರವಾಗಿರುವುದೋ ಅಲ್ಲಿ ಅವರ ಸಾಮ್ರಾಜ್ಯವಿರುವುದು ನಿಶ್ಚಿತವೆಂದು ನನಗೆ ತೋರುವುದು ॥೭೯॥ ಶ್ರೀಕೃಷ್ಣನು ಕೇವಲ ಭಕ್ತರಲ್ಲಿ ಅನುಗ್ರಹಿಸುವುದಕ್ಕಾಗಿಯೇ ಲೀಲಾದೇಹ ಧರಿಸಿದ್ದನು. ಈ ಶ್ರೀಕೃಷ್ಣನ ಗತಿಯು ಬ್ರಹ್ಮಾದಿಕರಿಗೂ ತಿಳಿಯುವುದಿಲ್ಲ ॥೮೦॥

ಇಂದ್ರ, ಬ್ರಹಸ್ಪತೀ ಮತ್ತು ಪ್ರಾಮುಖ್ಯವಾಗಿ ಬ್ರಹ್ಮದೇವ ಇವರನ್ನು ಭಾರೀ ಭ್ರಮೆಯಲ್ಲಿ ನೂಕಿ ಶ್ರೀಕೃಷ್ಣನು ತನ್ನ ನಿಜಧಾಮದಲ್ಲಿ ಪ್ರವೇಶ ಮಾಡಿದನು. ಇಂತಹ ಈ ಹರಿಯ ಮಹಿಮೆ ಅತರ್ಕ್ಯವಾಗಿರುವುದು ॥೮೧॥ ತಮ್ಮ ಸಾಮರ್ಥ್ಯದಿಂದ ಶ್ರೀಕೃಷ್ಣನ ಈ ಅತರ್ಕ್ಯ ಗತಿಯು ದೇವತೆಗಳಿಗೂ ತಿಳಿಯಲಿಲ್ಲ. ಅಂತೆಯೇ ಅವರು ತಮ್ಮ ಮನಸ್ಸಿನಲ್ಲಿ ವಿಸ್ಮಿತರಾಗಿ ತಮ್ಮ ತಮ್ಮ ಲೋಕಕ್ಕೆ ಹೊರಟರು ॥೮೨॥

ದೇವ ಜಾತಾ ಸ್ವಧಾಮಾಪ್ರತೀ । ಕ್ಷಣಕ್ಷಣಾ ಆಶ್ಚರ್ಯ ಕರಿತೀ । ಅಲಕ್ಷ್ಯ ಲಕ್ಷೇನಾ ಕೃಷ್ಣಗತೀ । ಅತರ್ಕ್ಯ ಸ್ಥಿತೀ ಶಿವಾದಿಕಾ ।೮೩॥ ತೇಚಿ ಶ್ರೀಕೃಷ್ಣಾಚೀ ಅತರ್ಕ್ಯ ಗತೀ । ದೇವಾಂಸೀ ಲಕ್ಷೇನಾ ದೈವೀ ಶಕ್ತೀ । ತೇಚಿ ವಿಶದ ದೃಷ್ಟಾಂತೀ । ಪರೀಕ್ಷಿತೀಪ್ರತೀ ಶುಕ ಸಾಂಗೇ ।೮೪॥

ಸೌದಾಮನ್ಯಾ ಯಥಾಽಽಕಾಶೋ ಯಾಂತ್ಯಾ ಹಿತ್ವಾಽಭ್ರಮಂಡಲಮ್ । ಗತಿರ್ನ ಲಕ್ಷ್ಯತೇ ಮರ್ತ್ಯೈಸ್ತಥಾ ಕೃಷ್ಣಸ್ಯ ದೈವತೈಃ ।೯॥

ಅರ್ಥ:- ಮಿಂಚು ಮೇಘಮಂಡಲಬಿಟ್ಟು ಆಕಾಶದಲ್ಲಿ ಪ್ರವೇಶ ಮಾಡಲು ಆ ಸಮಯದಲ್ಲಿ ಮಾನವನು ಅದರ ಗತಿ ನೋಡಲು ಸಾಧ್ಯವಾಗುವುದಿಲ್ಲ. ಅದರಂತೆ ಮಹಾ ಮಹಾ ದೇವತೆಗಳೂ ಕೂಡ ಶ್ರೀಕೃಷ್ಣನ ಗತಿಯ ಸಂಬಂಧವಾಗಿ ಯಾವುದನ್ನೂ ತಿಳಿಯಲು ಶಕ್ಯವಾಗಲಿಲ್ಲ.

ವೀಜ ತಳಪೇ ಅಭ್ರಮಂಡಳೀ । ತೇ ಕೋಠೋನಿ ಆಲೀ ಕೋಠೇ ಗೇಲೀ । ಗತಿ ನರಾ ನ ಲಕ್ಷೇ ಭೂತಳೀ । ತೈಶೀ ಶ್ರೀಕೃಷ್ಣಗತಿ ಜಾಹಲೀ ದುರ್ಗಮ ದೇವಾ ।೮೫॥ ವೀಜ ಸಕಳ ಮನುಷ್ಯೇ ದೇಖತೀ । ಪರೀ ನ ಕಳೇ ಯೇತೀ ಜಾತೀ ಗತೀ । ತೇವೀ ಶ್ರೀಕೃಷ್ಣಾಚೀ ಅವತಾರಶಕ್ತೀ । ನ ಕಳೇ ನಿಶ್ಚಿತೀ ದೇವಾಂಸೀ ।೮೬॥ ತೇಥೂನಿಯಾ ಯೇಥೇ ಯೇಣೇ । ಕಾ ಯೇಥೂನಿಯಾ ತೇಥೇ ಜಾಣೇ । ಹೇ ನಾಹೀ ಶ್ರೀಕೃಷ್ಣಾಸ ಕರಣೇ । ತೋ ಸರ್ವತ್ರ ಪೂರ್ಣಪಣೇ ಪರಿಪೂರ್ಣ ಸದಾ ।೮೭॥ ದ್ಯಾವಯಾ ಆಕಾಶಾಸೀ ಬಿಢಾರ। ಸರ್ವಥಾ ರಿತೇ ನ ಮಿಳೇ ಘರ। ತೇವೀ ಶ್ರೀಕೃಷ್ಣ ಪರಮಾತ್ಮಾ ಸರ್ವತ್ರ । ಗತ್ಯಂತರ ತ್ಯಾ ನಾಹೀ ।೮೮॥ ಐಸಾ ಶ್ರೀಕೃಷ್ಣ ಗೇಲಾ ನಿಜಧಾಮಾ । ಪರಮಾದ್ಭುತ ಜ್ಯಾಚಾ ಮಹಿಮಾ । ಅಲಕ್ಷ್ಯ ಲಕ್ಷೇನಾ ಕೃಷ್ಣ ಗರಿಮಾ । ಜಾಣೋನಿ ಸ್ವಾಶ್ರಮಾ ನಿಘಾಲೇ ದೇವ ।೮೯॥

ಬ್ರಹ್ಮರುದ್ರಾದಯಸ್ತೇ ತು ದೃಷ್ಟ್ವಾ ಯೋಗಗತಿಂ ಹರೇಃ । ವಿಸ್ಮಿತಾಸ್ತಾಂ ಪ್ರಶಂಸಂತಃ ಸ್ವಂ ಸ್ವಂ ಲೋಕಂ ಯಯುಸ್ತದಾ ।೧೦॥

ಅರ್ಥ:- ಬ್ರಹ್ಮದೇವ ಮತ್ತು ಶಂಕರ ಇತ್ಯಾದಿ ದೇವತೆಗಳವರು ಭಗವಂತನ ಈ ಪರಮಯೋಗಮಯ ಗತಿ ಕಂಡು ಅತ್ಯಾಶ್ಚರ್ಯಪಟ್ಟು ಆತನನ್ನು ಪ್ರಶಂಸಿಸುತ್ತ ತಮ್ಮ ತಮ್ಮ ಲೋಕಗಳಿಗೆ ಮರಳಿ ಹೋದರು.

ಆಮ್ಹೀ ಮಾಯಾನಿಯಂತೇ ನಿಜಶಕ್ತೀ । ಆಮ್ಹೀ ಜಾಣೋ ದುರ್ಗಮಾ ಯೋಗಗತೀ । ಆಮ್ಹೀ ಸರ್ವದ್ರಷ್ಟೇ ತ್ರಿಜಗತೀ । ಹಾ ಅಭಿಮಾನ ಚಿತ್ತೀ ದೇವಾಂಸೀ ।೯೦॥ ತಿಂಹೀ ದೇಖೋನಿ ಕೃಷ್ಣಗತೀ । ಗಳಾಲೀ ಜಾಣೀವೇಚೀ ವೃತ್ತೀ । ಲಾಜೇ ಪಳಾಲೀ ಅಭಿಮಾನ ಸ್ಥಿತೀ । ತಿಂಹೀ ಮಾಂಡಿಲೀ ಸ್ತುತೀ ಶ್ರೀಕೃಷ್ಣಾಚೀ ।೯೧॥ ರುದ್ರ ಪಂಚಮುಖೀ ಕರೀ ಸ್ತುತೀ । ಬ್ರಹ್ಮಾ ಚಹೂ ಮುಖೀ ವರ್ಣೀ ಕೀರ್ತೀ । ದೇವ ವಿಸ್ಮಯಾತೇ ಪಾವತೀ । ಅಗಾಧ ಗತೀ ಶ್ರೀಕೃಷ್ಣಾಚೀ ।೯೨॥

ದೇವತೆಗಳೆಲ್ಲರೂ ತಮ್ಮ ತಮ್ಮ ಲೋಕಗಳಿಗೆ ಹೋಗುತ್ತಿರಲು ಕ್ಷಣಕ್ಷಣಕ್ಕೂ ಅವರು ಆಶ್ಚರ್ಯ ವ್ಯಕ್ತಮಾಡುತ್ತ ಶ್ರೀಕೃಷ್ಣನ ಗತಿಯು ಬಹು ಅತರ್ಕ್ಯವೆಂದು ತಿಳಿದುಕೊಂಡರು. ಇದು ಲಕ್ಷಕ್ಕೆ ಬರುವಂತೆ ಇದ್ದಿಲ್ಲ. ಶ್ರೀಶಂಕರನಿಗೂ ಆ ಗತಿಯು ಅತರ್ಕ್ಯವಾಗಿರುವುದು ।೮೩॥ ಹೀಗಿರುವ ಶ್ರೀಕೃಷ್ಣನ ಅತರ್ಕ್ಯಗತಿಯು ದೇವತೆಗಳವರಿಗೆ ದೈವಿಕ ಶಕ್ತಿಯಿಂದಲೂ ತಿಳಿಯಲಿಲ್ಲ. ಅದೇ ಶ್ರೀಕೃಷ್ಣನ ಅತರ್ಕ್ಯ ಗತಿಯನ್ನು ಶ್ರೀಶುಕನು ಪರೀಕ್ಷಿತೀಗೆ ದೃಷ್ಟಾಂತದಿಂದ ಸ್ಪಷ್ಟಮಾಡಿ ಹೇಳುತ್ತಿರುವನು ।೮೪॥

ಮೇಘಮಂಡಲದಲ್ಲಿ ಮಿಂಚು ಚಮಕಿಸುವುದು. ಅದು ಎಲ್ಲಿಂದ ಬಂದು ಎಲ್ಲಿಗೆ ಹೋಯಿತು ಎಂಬ ಇದರ ಗತಿಯು ಪೃಥ್ವಿಯ ಮೇಲಿರುವ ಮನುಷ್ಯರಿಗೆ ತಿಳಿಯುವುದಿಲ್ಲ. ಅದರಂತೆ ಶ್ರೀಕೃಷ್ಣನ ಗತಿಯೂ ಕೂಡ ದೇವತೆಗಳಿಗೆ ದುರ್ಗಮವಾಯಿತು ।೮೫॥ ಮಿಂಚುತ್ತಿರುವುದು ಇದು ಸರ್ವರಿಗೂ ಕಾಣುತ್ತಿರುವುದು. ಆದರೆ ಅದರ ಬರು ಹೋಗುವ ಗತಿಯು ಯಾರಿಗೂ ಏನೂ ತಿಳಿಯುವುದಿಲ್ಲ. ಅದರಂತೆ ಶ್ರೀಕೃಷ್ಣನ ಅವತಾರ ಶಕ್ತಿಯು ದೇವತೆಗಳಿಗೆ ತಿಳಿಯಲಿಲ್ಲ ।೮೬॥ ವೈಕುಂಠದಿಂದ ಮೃತ್ಯುಲೋಕಕ್ಕೆ ಬರುವುದು ಮತ್ತು ಇಲ್ಲಿಂದ ಪುನಃ ವೈಕುಂಠಕ್ಕೆ ಹೋಗುವುದು ಇದು ಶ್ರೀಕೃಷ್ಣನಿಗೆ ಸಂಭವಿಸುವುದಿಲ್ಲ. ಕಾರಣ ಆತನು ಸರ್ವದಾ ಸರ್ವತ್ರ ಪರಿಪೂರ್ಣ ತುಂಬಿಕೊಂಡಿರುವನು ।೮೭॥ ಆಕಾಶಕ್ಕೆ ಮನೆಕಟ್ಟಿ ಕೊಡಲು ಅಂಥ ಬರಿದಾದ ಸ್ಥಳವು ಎಲ್ಲಿಯೂ ಇರುವುದಿಲ್ಲ. ಅದರಂತೆ ಪರಮಾತ್ಮನು ಸರ್ವತ್ರ ಇರುವುದರಿಂದ ಆತನಿಗೆ ಬೇರೆ ಕಡೆ ಹೋಗಲು ಸ್ಥಳವೇ ಇರುವುದಿಲ್ಲ ।೮೮॥ ಈ ಪ್ರಕಾರವಾಗಿ ಶ್ರೀಕೃಷ್ಣನು ನಿಜಧಾಮಕ್ಕೆ ಹೋದನು. ಆತನ ಮಹಿಮೆಯು ಅತ್ಯಂತ ಅದ್ಭುತವಾಗಿರುವುದು. ಶ್ರೀಕೃಷ್ಣನ ಗರಿಮೆಯು ಬಹು ಅತರ್ಕ್ಯವೆಂದು ತಿಳಿದುಕೊಂಡು ಸರ್ವ ದೇವತೆಗಳವರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಹೋದರು ।೮೯॥

ನಾವು ನಮ್ಮ ಶಕ್ತಿಯಿಂದ ಮಾಯೆಯನ್ನು ನಿಯಂತ್ರಿಸುವವರಾಗಿರುವೆವು. ನಾವು ದುರ್ಗಮವಾದ ಯೋಗಗತಿಯನ್ನು ತಿಳಿದವರಾಗಿರುವೆವು. ನಾವು ಮೂರು ಲೋಕಗಳಲ್ಲಿಯೂ ಸರ್ವಜ್ಞರಾಗಿರುವೆವು. ಹೀಗೆ ದೇವತೆಗಳವರ ಮನದಲ್ಲಿ ಅಭಿಮಾನ ಉಂಟಾಗಿತ್ತು ।೯೦॥ ಶ್ರೀಕೃಷ್ಣನ ಗತಿ ಕಂಡು ಅವರ ಸರ್ವಜ್ಞತೆಯ ಗರ್ವವು ಇಲ್ಲದಾಯಿತು. ಅಭಿಮಾನವೂ ನಾಚಿ ಓಡಿ ಹೋಯಿತು. ದೇವತೆಗಳವರು ಶ್ರೀಕೃಷ್ಣನ ಸ್ತುತಿ ಮಾಡಲಾರಂಭಿಸಿದರು ।೯೧॥ ರುದ್ರನು ತನ್ನ ಪಂಚ ಮುಖಗಳಿಂದ, ಬ್ರಹ್ಮದೇವನು ತನ್ನ ನಾಲ್ಕು ಮುಖಗಳಿಂದ ಆತನ ಕೀರ್ತಿ ವರ್ಣಿಸಹತ್ತಿದರು. ಶ್ರೀಕೃಷ್ಣನ ಅಗಮ್ಯ ಗತಿ ಕಂಡು ಸರ್ವ ದೇವತೆಗಳು ಆಶ್ಚರ್ಯಚಕಿತರಾದರು ।೯೨॥

ಕರಿತಾ ಶ್ರೀಕೃಷ್ಣಾಚೀ ಸ್ತುತೀ। ದೇವಾಂಸೀ ನ ಬಾಣೇ ತೃಪ್ತೀ। ವರ್ಣಿತ ಶ್ರೀಕೃಷ್ಣ ಕೀರ್ತೀ। ಸ್ವಲೋಕಾಪ್ರತೀ ಸುರ ಗೇಲೇ ॥೯೩॥ ಪೂರ್ವಿ ಸಾಂಗಿತಲೀ ಕೃಷ್ಣ ಗತೀ। ತೇಚಿ ಸಾಂಗಾವಯಾ ವಿಶದ ಸ್ಥಿತೀ। ಪರತೋನಿ ಪರೀಕ್ಷಿತೀಪ್ರತೀ। ಅತಿಪ್ರೀತೀ ಶುಕ ಸಾಂಗೇ ॥೯೪॥

ರಾಜನ್ಪರಸ್ಯ ತನುಭೃಜ್ಜನನಾಪ್ಯಯೇಹಾ ಮಾಯಾವಿಡಂಬನಮವೇಹಿ ಯಥಾ ನಟಸ್ಯ।
ಸೃಷ್ಟ್ವಾಽಽತ್ಮನೇದಮನು ವಿಶ್ಯ ವಿಹೃತ್ಯ ಚಾಂತೇ ಸಂಹೃತ್ಯ ಚಾತ್ಮಮಹಿನೋಪರತಃ ಸ ಆಸ್ತೇ ॥೧೧॥

ಅರ್ಥ:- ಪರೀಕ್ಷಿತನೇ, ನಟನು ಅನೇಕ ಪ್ರಕಾರದ ಸೋಗು ಹಾಕುತ್ತಿರುವನು. ಆದರೆ ಅದರಿಂದ ಅಲಿಪ್ತನಾಗಿರುವನು. ಅದರಂತೆಯೇ ಭಗವಂತನು ಮನುಷ್ಯ ಸಮಾನ ಜನ್ಮ ಧರಿಸುವುದು, ಲೀಲೆ ಮಾಡುವುದು, ಲೀಲೆ ಆವರಿಸುವುದು ಇವೆಲ್ಲವೂ ಮಾಯೆಯ ವಿಲಾಸವಾಗಿರುವುದು, ಕೇವಲ ಅಭಿನಯವಾಗಿರುವುದು. ಆತನು ಸ್ವತಃ ಜಗತ್ತನ್ನು ನಿರ್ಮಾಣ ಮಾಡಿ ಅದರಲ್ಲಿಯೇ ಪ್ರವೇಶ ಮಾಡಿ ವಿಹರಿಸುತ್ತಿರುವನು ಮತ್ತು ಕೊನೆಯಲ್ಲಿ ಸಂಹಾರಲೀಲ ಮಾಡಿ ತನ್ನ ಅನಂತ ಮಹಿಮಾಮಯ ಸ್ವರೂಪದಲ್ಲಿ ಸ್ಥಿತನಾಗುವನು.

ಐಕೇ ರಾಯಾ ಪರೀಕ್ಷಿತೀ। ಸಕಳ ಕಾರಣಾ ಕಾರಣ ಶ್ರೀಪತೀ। ಮಾಯೇಚೀಹೀ ಚೇತನಾಶಕ್ತೀ। ಜಾಣ ನಿಶ್ಚಿತೀ ಶ್ರೀಕೃಷ್ಣ ॥೯೫॥ ಜ್ಯಾಸೀ ನಾಹೀ ವ್ಯಕ್ತಿ ವರ್ಣ। ಜ್ಯಾಸೀ ನಾಹೀ ರೂಪ ಗುಣ। ತೋ ಸ್ವಲೀಲಾ ಶ್ರೀಕೃಷ್ಣ। ಯದುವಂಶೀ ಜಾಣ ಅವತರಲಾ ॥೯೬॥ ಜೋ ಸಕಳವಂಶವಂಶಜ ಜಾಣ। ಜೋ ಸಕಳ ಗೋತ್ರ, ಗೋತ್ರಜ ಪೂರ್ಣ। ಜೋ ಸಕಳ ಜಾತೀಂಚೀ ಜಾತೀ ಜಾಣ। ಸ್ವಯೇ ಶ್ರೀಕೃಷ್ಣ ಸರ್ವಾದಿ॥೯೭॥ ತ್ಯಾಸೀ ಯದುವಂಶೀ ಜೇ ಜನ್ಮ। ಗೋವರ್ಧನೋದ್ಧಾರಣಾದಿ ಕರ್ಮ। ಕುಲಕ್ಷಯೋ ನಿಧನಧರ್ಮ। ಹೇ ಸ್ವಲೀಲಾಕರ್ಮ ಯೋಗಮಾಯಾ ॥೯೮॥ ಯೋಗಮಾಯೇಚಿಯಾ ಸತ್ತಾ। ಮತ್ಸ್ಯಕೂರ್ಮಾದಿ ಅವತಾರತಾ। ಶೇಖೀ ಧರೀ ಶ್ವೇತವರಾಹತಾ। ತೇ ಅತರ್ಕ್ಯ ಯೋಗ್ಯತಾ ಕೃಷ್ಣಾಚೀ ॥೯೯॥ ಶ್ರೀಕೃಷ್ಣ ನವ್ಹೇ ನವ್ಹೇ ಅವತಾರ। ಹಾ ಅವತಾರೀ ಪುರ್ಣ ಚಿನ್ಮಾತ್ರ। ತ್ಯಾಚೇ ಅತಿ ಅತರ್ಕ್ಯ ಚರಿತ್ರ। ಬ್ರಹ್ಮಾದಿ ರುದ್ರ ನೇಣತೀ ॥೧೦೦॥ ಜೈಸೇ ಆರಿಸಾ ಪ್ರತಿಬಿಂಬ ಬಿಂಬಲೇ। ತೈಸೇ ಯದುವಂಶೀ ಕೃಷ್ಣಜನ್ಮ ಜಾಹಲೇ। ಆರಿಸಾ ಹಾವ ಭಾವ ಪಾಹಿಲೇ। ತೈಸೇ ಕರ್ಮ ಕೇಲೇ ಶ್ರೀಕೃಷ್ಣೇ ॥೧೦೧॥ ತೋ ಆರಿಸಾ ಹಾತೀಂಚಾ ತ್ಯಾಗಿತಾ। ಹಾರಪೇ ಪುಢೀಲ ಪ್ರತಿಬಿಂಬತಾ। ತ್ಯಾ ನಾಂವ ಕೃಷ್ಣ ನಿಧನತಾ। ಮಿಥ್ಯಾ ವಾರ್ತಾ ಮಾಯಿಕ ॥೧೦೨॥ ಜೈಸಾ ನಟ ಧರೀ ನಾನಾ ವೇಶ। ಸವೇಂಚಿ ಸಾಂಡೀ ತ್ಯಾ ವೇಷಾಂಸ। ಪರೀ ನಟಾಸೀ ನಾಹೀ ನಾಶ। ತೈಸಾ ಪೈ ಹೃಷೀಕೇಶ ಅವತಾರೀ ॥೧೦೩॥ ಯದುವಂಶೀ ಶ್ರೀಕೃಷ್ಣನಾಥ। ಸರ್ವ ಕರ್ಮಿ ಸದಾ ಅಲಿಪ್ತ। ಸೃಷ್ಟಿಸ್ಥಿತ್ಯಂತೀ ನಿತ್ಯಮುಕ್ತ। ತ್ಯಾಸೀ ಪರಮಾದ್ಭುತ ತೇ ಕಾಯೀ ॥೧೦೪॥

ಶ್ರೀಕೃಷ್ಣನ ಸ್ತುತಿ ಮಾಡುತ್ತಿರಲು ದೇವತೆಗಳವರಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ಅವರೆಲ್ಲರೂ ಶ್ರೀಕೃಷ್ಣನ ಕೀರ್ತಿಯ ವರ್ಣನೆ ಮಾಡುತ್ತ ತಮ್ಮ ತಮ್ಮ ಲೋಕಗಳಿಗೆ ಮರಳಿ ಹೋದರು ॥೯೩॥ ಈ ಪೂರ್ವದಲ್ಲಿ ಶ್ರೀಕೃಷ್ಣನ ಗತಿಯನ್ನು ಕುರಿತು ಹೇಳಲಾಗಿದೆ. ಅದನ್ನು ಸ್ಪಷ್ಟಗೊಳಿಸುವುದಕ್ಕಾಗಿ ಶುಕಾಚಾರ್ಯರು ಅತ್ಯಂತ ಪ್ರೇಮದಿಂದ ವಿಶದಪಡಿಸುತ್ತಿದ್ದಾರೆ ॥೯೪॥

ಹೇ ಪರೀಕ್ಷಿತೀ ರಾಜನೇ, ಕೇಳು, ಶ್ರೀಕೃಷ್ಣನು ಈ ಸರ್ವ ಕಾರಣಗಳ ಕಾರಣನಾಗಿರುವನು. ಹಾಗೆಯೇ ಆತನು ಮಾಯೆಯ ಚೇತನಶಕ್ತಿಯಾಗಿರುವನು ॥೯೫॥ ಯಾರಿಗೆ ಜಾತೀ, ವರ್ಣ, ರೂಪ, ಗುಣ ಇವು ಯಾವುವೂ ಇಲ್ಲದ ಆ ಶ್ರೀಕೃಷ್ಣನು ತನ್ನ ಲೀಲೆಯಿಂದ ಯಾದವ ಕುಲದಲ್ಲಿ ಅವತಾರ ಧರಿಸಿರುವನು ॥೯೬॥ ಯಾರು ಸರ್ವ ವಂಶದ ಮೂಲಪುರುಷನು, ಸರ್ವ ಗೋತ್ರಗಳ ಗೋತ್ರಜನು, ಸರ್ವ ಜಾತಿಗಳ ಜಾತಿಯಾದ ಈತನೇ ಶ್ರೀಕೃಷ್ಣನು ಸ್ವತಃ ಸರ್ವರ ಆದಿಸ್ಥಾನನಾಗಿರುವನು ॥೯೭॥ ಆತನ ಯದುವಂಶದಲ್ಲಿನ ಜನ್ಮ, ಹಾಗಯೇ ಗೋವರ್ಧನ ಪರ್ವತವನ್ನು ಎತ್ತಿ ಹಿಡಿಯುವಿಕೆ ಇತ್ಯಾದಿ ಕರ್ಮಗಳು, ಸ್ವಕುಲದ ಕ್ಷಯ ಹಾಗೂ ಸ್ವತಃದ ನಿರ್ಯಾಣ ಈ ಎಲ್ಲವನ್ನೂ ಆತನು ಯೋಗಮಾಯೆಯಿಂದ ಮಾಡಿದ ಲೀಲೆಯಾಗಿರುವುದು ॥೯೮॥ ಯೋಗಮಾಯೆಯ ಸತ್ತೆಯಿಂದ ಆತನು ಮತ್ಸ್ಯಕೂರ್ಮಾದಿ ಅವತಾರ ಧರಿಸಿದನು. ಕೊನೆಗೆ ಶ್ವೇತವರಾಹರೂಪ ತಾಳಿದನು. ಈ ಶ್ರೀಕೃಷ್ಣನ ಯೋಗ್ಯತೆಯು ಕೇವಲ ಅತರ್ಕ್ಯವಾಗಿರುವುದು ॥೯೯॥ ಶ್ರೀಕೃಷ್ಣನು ಕೇವಲ ಅವತಾರಿಯಲ್ಲ. ಅದಕ್ಕಾಗಿ ಸಾಕ್ಷಾತ್ ಚಿತ್ಸ್ವರೂಪ ಬ್ರಹ್ಮವೇ ಅವತರಿಸಲ್ಪಟ್ಟಿತ್ತು. ಆತನ ಚರಿತ್ರೆಯು ಅತ್ಯಂತ ಅತರ್ಕ್ಯವಾಗಿರುವುದು. ಬ್ರಹ್ಮದೇವ ಶಂಕರ ಇವರಿಗೂ ಸಹ ತಿಳಿಯಲು ಸಾಧ್ಯವಿಲ್ಲ ॥೧೦೦॥ ಕನ್ನಡಿಯಲ್ಲಿ ಪ್ರತಿಬಿಂಬವು ಹೇಗೆ ಬೀಳುವುದೋ, ಅದರಂತೆ ಯದುವಂಶದಲ್ಲಿ ಶ್ರೀಕೃಷ್ಣನ ಜನ್ಮವಾಯಿತು. ಕನ್ನಡಿಯಲ್ಲಿ ಹಾವಭಾವ ತೋರುವಂತೆ ಶ್ರೀಕೃಷ್ಣನ ಸರ್ವ ಕರ್ಮಗಳನ್ನು ಮಾಡಿದನು ॥೧೦೧॥ ಅದೇ ಕನ್ನಡಿಯನ್ನು ಕೈಯಿಂದ ದೂರ ಮಾಡಲು ಯಾವ ಪ್ರಕಾರವಾಗಿ ಪ್ರತಿಬಿಂಬವು ಇದ್ದ ಇದ್ದಲ್ಲಿಯೇ ಇಲ್ಲದಾಗುವುದೋ ಅದೇ ಪ್ರಕಾರವಾಗಿ ಶ್ರೀಕೃಷ್ಣನ ನಿಧನವು ಮಿಥ್ಯೆ ಹಾಗೂ ಮಾಯಿಕವಾಗಿರುವುದು ॥೧೦೨॥ ನಟನು ನಾನಾ ಪ್ರಕಾರದ ವೇಷಗಳನ್ನು ಧರಿಸುವನು. ಕೊನೆಗೆ ಅವುಗಳನ್ನು ಒಗೆದುಬಿಡುವನು. ಆದರೆ ಅವುಗಳಂತೆ ನಟನು ಇಲ್ಲದಾಗುವುದಿಲ್ಲ. ಅದೇ ರೀತಿಯಾಗಿ ಶ್ರೀಕೃಷ್ಣನ ಅವತಾರವಾಗಿತ್ತು ॥೧೦೩॥ ಶ್ರೀಕೃಷ್ಣನು ಯದುವಂಶದಲ್ಲಿ ಜನ್ಮತಾಳಿದ್ದನು. ಆದರೆ ಸರ್ವ ಕರ್ಮಗಳಿಂದಲೂ ಆತನು ಅಲಿಪ್ತನಾಗಿದ್ದನು. ಉತ್ಪತ್ತೀ, ಸ್ಥಿತೀ, ಲಯ ಇವು ಮೂರು ಅವಸ್ಥೆಗಳಲ್ಲಿ ಆತನು ನಿತ್ಯ ಮುಕ್ತನಾಗಿದ್ದನು. ಆತನಿಗೆ ಪರಮಾದ್ಭುತ ಎಂಬುವುದೇ ಇರುವುದಿಲ್ಲ ॥೧೦೪॥

ನ ಮೇಳವಿತಾ ಸಾಹ್ಯ ಸಂಗೇ । ಕೃಷ್ಣ ಸೃಷ್ಟಿ ಸೃಜೀ ನಿಜಾಂಗೇ । ತೇ ಪ್ರತಿಪಾಳೂನಿ ಯಥಾಭಾಗೇ । ಸಂಹಾರೂನಿ ವೇಗೇ ಸ್ವಯೇ ಉರೇ ।೧೦೫॥ ಶ್ರೀಕೃಷ್ಣ ಸೃಜೀ ಪಾಳೀ ಸಂಹಾರೀ । ಹೇ ಪ್ರತ್ಯಕ್ಷ ಜಗೀ ದಿಸೇ ಥೋರೀ । ಕರ್ಮೇ ಕರೂನಿ ತೋ ಅವಿಕಾರೀ । ಕದಾ ವಿಕಾರೀ ನವ್ಹೇ ಕೃಷ್ಣಾ ।೧೦೬॥ ಶ್ರೀಕೃಷ್ಣ ಅಂತರ್ಯಾಮೀ ಸರ್ವ ಭೂತಾ । ಜಗಕರ್ಮಾಚಾ ಕೃಷ್ಣ ಕರ್ತಾ । ಕರ್ಮ ಕರೂನಿ ತೋ ಅಕರ್ತಾ । ವಿದೇಹತಾ ನಿಜರೂಪೇ ।೧೦೭॥ ಐಸಾ ಅಗಾಧ ಶ್ರೀಕೃಷ್ಣ ಮಹಿಮಾ । ಮರ್ಯಾದಾ ನ ಪವೇ ಶಿವ ಶಕ್ರ ಬ್ರಹ್ಮಾ । ತ್ಯಾಚಾ ದೇಹಚಿ ವಿದೇಹಾತ್ಮಾ । ಗೇಲಾ ನಿಜಧಾಮಾ ತೇಣೇ ಯೋಗೇ ।೧೦೮॥ ಯೇಚಿ ಅವತಾರೀ ಶ್ರೀಕೃಷ್ಣನಾಥೇ । ದೇಹೀ ದಾವಿಲೇ ವಿದೇಹಕರ್ಮಾತೇ । ತೇ ಮಾಗೇ ಪರಿಸವಿಲೇ ತೂತೇ । ಐಕ ಮಾಗುತೇ ಸಾಂಗೇನ ।೧೦೯॥ ಸಾತ ದಿವಸ ಗೋವರ್ಧನ । ನಿಜಕರೀ ಧರೂನಿ ಜಾಣ । ಇಂದ್ರಾಚಾ ಹರಿಲಾ ಮಾನ । ವಿದೇಹೀ ಪೂರ್ಣ ಶ್ರೀಕೃಷ್ಣ ।೧೧೦॥ ದಾವಾಗ್ನಿ ಪ್ರಾಶೂನಿ ಆಪಣ । ಲಾಜವಿಲಾ ಹುತಾಶನ । ರಾಸಕ್ರೀಡಾ ಕರೂನಿ ಜಾಣ । ಹರಿಲಾ ಮಾನ ಮದನಾಚಾ ।೧೧೧॥ ಸಮುದ್ರ ಸಾರೂನಿ ಮಾಘಾರಾ । ವಸವಿಲೇ ನಿಜನಗರಾ । ನಿದ್ರಾ ನ ಮೋಡಿತಾ ಮಥುರಾ । ದ್ವಾರಕಾಪುರಾ ಆಣಿಲೀ ।೧೧೨॥ ಸೇವೂನಿ ಭಾಜೀಚೇ ಪಾನ । ತೃಪ್ತ ಕೇಲೇ ಋಷಿಜನ । ಶ್ರೀಕೃಷ್ಣ ಅಂತರ್ಯಾಮೀ ಆಪಣ । ಹೇ ನಿಜಲಕ್ಷಣ ದಾವಿಲೇ ।೧೧೩॥ ಯೇಣೇಚಿ ದೇಹೇ ಶ್ರೀಕೃಷ್ಣನಾಥ । ಜಾಹಲಾ ವತ್ಸೇ ವತ್ಸಪ ಸಮಸ್ತ । ಬ್ರಹ್ಮಾ ಲಾಜವೂನಿ ತೇಥ । ಗರ್ವಹತ ತೋ ಕೇಲಾ ।೧೧೪॥

ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ ತ್ವಾಂ ಚಾನಯಚ್ಛರಣದಃ ಪರಮಾಸ್ತ್ರದಗ್ಧಮ್ ।
ಜಿಗ್ಯೇಽಂತಕಾಂತಕಮಪೀಶಮಸಾವನೀಶಃ ಕಿಂ ಸ್ವಾವನೇ ಸ್ವರನಯನ್ ಮೃಗಯುಂ ಸದೇಹಮ್ ।೧೨॥

ಅರ್ಥ:- ಸಾಂದೀಪನೀ ಗುರುಗಳ ಪುತ್ರನು ಯಮಲೋಕಕ್ಕೆ ಹೋಗಿದ್ದನು. ಆದರೆ ಆತನಿಗೆ ಆತನು ಮನುಷ್ಯ ಶರೀರ ಸಹ ಮರಳಿ ತಂದುಕೊಟ್ಟನು. ನಿಮ್ಮ ಶರೀರವು ಬ್ರಹ್ಮಾಸ್ತ್ರದಿಂದ ಸುಡುತ್ತಿತ್ತು. ಆದರೆ ಆತನು ನಿಮಗೆ ಜೀವಂತನನ್ನಾಗಿ ಮಾಡಿದನು. ಆತನ ಶರಣಾಗತ ವಾತ್ಸಲ್ಯವು ಈ ಪ್ರಕಾರದ್ದಾಗಿರುವುದು. ಆತನು ಕಾಲನಿಗೆ ಮಹಾಕಾಲನಾಗಿರುವ ಶಂಕರನಿಗೆ ಯುದ್ಧದಲ್ಲಿ ಜಯಿಸಿದನು. ಅತ್ಯಂತ ಅಪರಾಧೀ, ತನ್ನ ಶರೀರಕ್ಕೆ ಪ್ರಹಾರ ಮಾಡಿದ ವ್ಯಾಧನಿಗೆ ಸದೇಹ ಸ್ವರ್ಗಕ್ಕೆ ಕಳುಹಿಸಿದನು. ಪ್ರಿಯ ಪರೀಕ್ಷಿತಿಯೇ, ಹೀಗಿರುವ ಈತನಿಗೆ ಇಲ್ಲಿ ಸದ್ಯೆವ ಶರೀರವಿಡಲು ಸಾಧ್ಯವಾಗದೇ? ನಿಶ್ಚಿತವಾಗಿ ಇಡಲು ಶಕ್ಯವಿತ್ತು.

ಶ್ರೀಕೃಷ್ಣೇ ಯೇಣೇಂಚಿ ದೇಹೇಂಸೀ । ಜಾವೂನಿಯಾ ಯಮಲೋಕಾಸೀ । ನಿಗ್ರಹೂನಿ ಯಮಕಾಳಾಸೀ । ನಿಮಾಲ್ಯಾ ಗುರುಸುತಾಸೀ ಆಣಿಲೇ ।೧೧೫॥ ಉತ್ತರೇಚಿಯೇ ಗರ್ಭಸ್ಥಿತೀ । ಜಳತಾ ಬ್ರಹ್ಮಾಸ್ತ್ರಮಹಾಶಕ್ತೀ । ತುಜ ರಾಖಿಲೇ ಆಕಾಂತೀ । ಸ್ವಚಕ್ರ ಶ್ರೀಪತೀ ಪ್ರೇರೋನಿ ।೧೧೬॥

ಯಾರಿಂದಲೂ ಯಾವುದೇ ರೀತಿಯಲ್ಲಿ ಸಹಾಯ ಪಡೆಯದೇ ಕೃಷ್ಣನು ಸ್ವತಃ ಸೃಷ್ಟೀ ಉತ್ಪನ್ನಗೊಳಿಸುವನು. ಅದರ ಯಥಾಯೋಗ್ಯ ಸಂರಕ್ಷಿಸುವನು ಹಾಗೆಯೇ ಸಂಹಾರವನ್ನೂ ಮಾಡಿ ತಾನು ಸ್ವತಃ ಉಳಿಯುವನು ।೧೦೫॥ ಹೀಗೆ ಶ್ರೀಕೃಷ್ಣನು ಸೃಷ್ಟಿಯ ಉತ್ಪನ್ನ, ಸಂರಕ್ಷಣೆ ಮತ್ತು ಸಂಹಾರ ಮಾಡುವ ಆತನ ಮಹಿಮೆಯು ಪ್ರತ್ಯಕ್ಷ ತೋರುವುದು. ಆತನು ಸರ್ವ ಕರ್ಮಗಳನ್ನು ಮಾಡಿ ಅವಿಕಾರಿಯು. ಎಂದಿಗೂ ವಿಕಾರನಾಗುವುದಿಲ್ಲ ।೧೦೬॥ ಸರ್ವಪ್ರಾಣಿಮಾತ್ರರ ಅಂತರ್ಯಾಮೀ ಶ್ರೀಕೃಷ್ಣನಾಗಿರುವನು. ಜಗತ್ತಿನ ಸರ್ವ ಕರ್ಮಗಳ ಕರ್ತನಾಗಿರುವನು. ಎಲ್ಲವನ್ನೂ ಮಾಡಿ ಅಕರ್ತನು. ಆತ್ಮಸ್ವರೂಪದಿಂದ ಆತನು ವಿದೇಹಿಯು ।೧೦೭॥ ಹೀಗೆ ಶ್ರೀಕೃಷ್ಣನ ಮಹಿಮೆಯು ಅತ್ಯಂತ ಅಗಾಧವಾಗಿರುವುದು. ಇಂದ್ರ, ಬ್ರಹ್ಮದೇವ, ಶಂಕರ ಇವರಿಗೆ ಆತನ ಅಂತವು ಹತ್ತುವುದಿಲ್ಲ. ಆತನು ವಿದೇಹಿಯಾಗಿದ್ದನು. ಈ ಯೋಗದಿಂದ ನಿಜಧಾಮಕ್ಕೆ ಹೋದನು ।೧೦೮॥ ಈ ಅವತಾರದಲ್ಲಿ ಶ್ರೀಕೃಷ್ಣನು ದೇಹದಲ್ಲಿದ್ದರೂ ವಿದೇಹೀ ಕರ್ಮಗಳನ್ನು ಮಾಡಿ ತೋರಿಸಿದನು. ಇದನ್ನು ಪೂರ್ವದಲ್ಲಿಯೇ ತಿಳಿಸಿರುವೆನು. ಪುನಃ ಹೇಳುವೆನು, ಕೇಳು ।೧೦೯॥ ಶ್ರೀಕೃಷ್ಣನು ಏಳು ದಿನಗಳವರೆಗೆ ತನ್ನ ಕೈಯಿಂದ ಗೋವರ್ಧನ ಪರ್ವತ ಎತ್ತಿ ಹಿಡಿದನು, ಇಂದ್ರನ ಗರ್ವಹರಣ ಮಾಡಿದನು. ಹೀಗೆ ಶ್ರೀಕೃಷ್ಣನು ಪೂರ್ಣ ವಿದೇಹಿಯಾಗಿದ್ದನು ।೧೧೦॥ ದಾವಾಗ್ನಿಯನ್ನು ಸ್ವತಃ ಪ್ರಾಶನ ಮಾಡಿ ಅಗ್ನಿಯನ್ನು ನಾಚಿಸಿದನು. ರಾಸಕ್ರೀಡೆಯನ್ನು ಮಾಡಿ ಮದನನ ಮಾನ ಹರಣ ಮಾಡಿದನು ।೧೧೧॥ ಸಮುದ್ರವನ್ನು ಹಿಂದಕ್ಕೆ ಸರಿಸಿ ಆತನು ತನ್ನ ದ್ವಾರಕಾನಗರ ಸ್ಥಾಪಿಸಿದನು. ಜನರ ನಿದ್ದೆ ಕೆಡಿಸದೇ ಮಥುರಾ ನಗರ ದ್ವಾರಕೆಗೆ ತಂದನು ।೧೧೨॥ ದ್ರೌಪದಿಯ ಪಾತ್ರೆಯಲ್ಲಿನ ತಪ್ಪಲ ಎಲೆ ತಿಂದು ದುರ್ವಾಸಾದಿ ಸರ್ವ ಋಷಿಗಳಿಗೆ ತೃಪ್ತಿ ಪಡಿಸಿದನು. ಶ್ರೀಕೃಷ್ಣನು ಸರ್ವರ ಅಂತರ್ಯಾಮೀ ಎಂಬುವುದನ್ನು ತೋರಿಸಿಕೊಟ್ಟನು ।೧೧೩॥ ಇದೇ ದೇಹದಿಂದ ಶ್ರೀಕೃಷ್ಣನು ಎಲ್ಲ ಆಕಳುಕರಗಳಾಗಿ ಹಾಗೂ ದನಕಾಯುವ ಗೋಪಾಲಕರಾಗಿ ತಾನೇ ಆದನು. ಇದರಿಂದ ಬ್ರಹ್ಮದೇವನಿಗೆ ನಾಚಿಸಿ ಆತನ ಅಹಂಕಾರ ಮುರಿದನು ।೧೧೪॥

ಶ್ರೀಕೃಷ್ಣನು ಇದೇ ದೇಹದಿಂದ ಯಮಲೋಕಕ್ಕೆ ಹೋಗಿ ಯಮ ಕಾಲನ ನಿಗ್ರಹ ಮಾಡಿದನು. ಮೃತನಾಗಿರುವ ಗುರುಪುತ್ರನನ್ನು ಆತನ ಮನುಷ್ಯ ಶರೀರ ಸಹ ಮರಳಿ ತಂದುಕೊಟ್ಟನು ।೧೧೫॥ ನೀನು ಉತ್ತರೆಯ ಗರ್ಭದಲ್ಲಿದ್ದಾಗ ಬ್ರಹ್ಮಾಸ್ತ್ರದ ಮಹಾಶಕ್ತಿಯು ನಿನ್ನನ್ನು ಸುಟ್ಟುಹಾಕುತ್ತಿರಲು ಹೇ ಪರೀಕ್ಷಿತೀ ರಾಜನೇ, ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರದಿಂದ ನಿನ್ನ ರಕ್ಷಣೆ ಮಾಡಿದನು ।೧೧೬॥

ತುಜ ರಾಖಾವಯಾ ಹೇಚಿ ಕಾರಣ । ತುಝೀ ಮಾತಾ ರಿಘಾಲೀ ಶರಣ । ಶ್ರೀಕೃಷ್ಣ ಶರಣಾಗತಾ ಶರಣ್ಯ । ಸಂಕಟಹರಣ ನಿಜಭಕ್ತಾ ॥೧೧೭॥ ಯಾದವಾದೇಖತಾ ದ್ವಾರಕಾಪುರೀ । ದ್ವಿಜಸುತ ರಾಖಿಲಾ ಸಟೀಚೇ ರಾತ್ರೀ । ಅರ್ಜುನ ನೇಮೇಸೀ ಪ್ರತಿಜ್ಞಾ ಕರೀ । ತಂವ ತೋ ಸಶರೀರೀ ಹಾರಪಲಾ ॥೧೧೮॥ ಬ್ರಾಹ್ಮಣೇ ನಿರ್ಭರ್ತ್ಸಿಲೇ ತ್ಯಾಸೀ । ಘೋರ ಲಾಜ ಜಾಹಲೀ ಅರ್ಜುನಾಸೀ । ತೇಣೇ ಕಳವಳಲಾ ಹೃಷೀಕೇಶೀ । ಭಕ್ತ ಸಾಹ್ಯಾಸೀ ಪಾವಲಾ ॥೧೧೯॥ ಅರ್ಜುನಾಸಹಿತ ಹೃಷೀಕೇಶೀ । ರಥೇಸೀ ರಿಘೇ ಕ್ಷೀರಸಾಗರಾಸೀ । ದ್ವಿಜಸುತ ಹೋತೇ ನಾರಾಯಣಾ ಪಾಶೀ । ತೇ ದ್ವಾರಕೇಸೀ ಆಣಿಲೇ ॥೧೨೦॥ ಏವಂ ಭಕ್ತಸಂಕಟನಿವಾರಣ । ನಿಜಾಂಗೇ ಕರೀ ಶ್ರೀಕೃಷ್ಣ । ಕೃಷ್ಣ ಪ್ರತಾಪಾಚೇ ಮಹಿಮಾನ । ಐಕ ಸಾಂಗೇನ ಅಲೌಕಿಕ ॥೧೨೧॥ ಬಾಣಾಸುರಾಚಾ ಕೈವಾರೂ । ಕರೂ ಆಲಾ ಮಹಾರುದ್ರು । ಸವೇ ನಂದೀ ಭೃಂಗೀ ವೀರಭದ್ರು । ಸ್ವಾಮಿಕಾರ್ತಿಕೇಸೀ ಹರು ಜಿಂತಿಲಾ ಕೃಷ್ಣೇ ॥೧೨೨॥ ಉಗ್ರಾಸೀಹೀ ಅತಿ ಉಗ್ರ । ಭಯಂಕರಾಹೀ ಭಯಂಕರ । ತೋ ಜಿಣೋನಿ ಕಾಳಾಗ್ನಿ ರುದ್ರ ।ಬಾಣಭುಜಾಭಾರ ಛೇದಿಲಾ ॥೧೨೩॥ ಶ್ರೀಕೃಷ್ಣವಚನ ಅತಿ ಅಗಾಧ । ಜೇಣೇ ಕೇಲಾ ಅಪರಾಧ । ತೋ ಸ್ವದೇಹೇಸೀ ಜರಾವ್ಯಾಧ । ಸ್ವರ್ಗಾ ಪ್ರಸಿದ್ಧ ಧಾಡಿಲಾ ॥೧೨೪॥ ಏವಢೇ ಸಾಮರ್ಥ್ಯ ಶ್ರೀಕೃಷ್ಣಾಪಾಶೀ । ತೋ ಕಾಯ ರಾಖೂ ನ ಶಕೇ ಸ್ವದೇಹಾಸೀ । ದೇಹೀ ದೇಹತ್ವ ನಾಹೀ ತ್ಯಾಸೀ । ಗೇಲಾ ನಿಜಧಾಮಾಸೀ ನಿಜಾತ್ಮತಾ ॥೧೨೫॥ ಏವಢೇ ಸಾಮರ್ಥ್ಯ ಶ್ರೀಕೃಷ್ಣಾಪಾಶೀ । ತರೀ ಕಾ ಗೇಲಾ ನಿಜಧಾಮಾಸೀ । ಯೇ ಲೋಕೀ ತೇಣೇ ದೇಹೇಸೀ । ರಾಹತಾ ತ್ಯಾಸೀ ಭಯ ಕಾಯ ॥೧೨೬॥ ಐಸಾ ಪೋಟೀಂಚಾ ಆವಾಂಕಾ । ಧರೂನ ಧರಿಶೀ ಆಶಂಕಾ । ಲೋಕಾಭಿಮಾನ ನಾಹೀ ಯದುನಾಯಕಾ । ಸ್ವೇಚ್ಛಾ ದೇಖಾ ಸ್ಥಿತೀ ತ್ಯಾಚೀ ॥೧೨೭॥

ತಥಾಪ್ಯಶೇಷಸ್ಥಿತಿಸಂಭವಾಪ್ಯಯೇಷ್ವನನ್ಯಹೇತುರ್ಯದಶೇಷಶಕ್ತಿಧೃಕ್ ।
ನೈಚ್ಛತ್ಪ್ರಣೇತುಂ ವಪುರತ್ರ ಶೇಷಿತಂ ಮರ್ತ್ಯೇನ ಕಿಂ ಸ್ವಸ್ಥಗತಿಂ ಪ್ರದರ್ಶಯನ್ ॥೧೩॥

ಅರ್ಥ:- ಶ್ರೀಕೃಷ್ಣ ಭಗವಂತನು ಅನಂತ ಶಕ್ತಿಯುಳ್ಳವನಾಗಿದ್ದರೂ, ಅಸಂಖ್ಯ ಜೀವಿಗಳ ಸೃಷ್ಟಿ, ಸ್ಥಿತಿ, ಲಯಗಳಿಗೆ ಏಕೈಕ ಕಾರಣನಾಗಿದ್ದರೂ ಈ ಲೋಕದಲ್ಲಿ ತನ್ನ ಶರೀರವನ್ನು ಉಳಿಸಿಕೊಳ್ಳಲು ಬಯಸಲಿಲ್ಲ. ಈ ರೀತಿ ಆತ್ಮನಿಷ್ಠರಿಗೆ ಗತಿಯನ್ನು ತೋರಿಸುತ್ತ ಈ ಮೃತ್ಯುಲೋಕ ನಿತ್ಯಸತ್ಯವಲ್ಲ, ಇಲ್ಲಿಯೇ ಬದುಕಿರಬೇಕೆಂಬ ಪ್ರಯತ್ನ ಮಾಡಬಾರದೆಂಬುದನ್ನು ಪ್ರದರ್ಶಿಸಿದನು.

ಮಾಯಾದಿ ತೀನ್ಹೀ ಗುಣ । ಇತ್ಯಾದಿ ಕಾರಣಾ ಕಾರಣ । ನಿಜಾಂಗೇ ಶ್ರೀಕೃಷ್ಣ ಆಪಣ । ಸ್ವಯೇ ಅಕಾರಣ ಅನಾದಿತ್ವೇ ॥೧೨೮॥

ಶ್ರೀಕೃಷ್ಣನು ನಿನ್ನ ಸಂರಕ್ಷಣೆ ಮಾಡುವ ಕಾರಣವೇನೆಂದರೆ ನಿನ್ನ ತಾಯಿಯು ಆತನಿಗೆ ಶರಣಾಗಿದ್ದಳು. ಆತನು ಶರಣಾದವರನ್ನು ರಕ್ಷಿಸುವನು. ತನ್ನ ಭಕ್ತರ ಸಂಕಟಗಳ ನಿವಾರಣೆ ಮಾಡುತ್ತಿರುವನು ॥೧೧೭॥ ದ್ವಾರಕಾ ನಗರದಲ್ಲಿನ ಬ್ರಾಹ್ಮಣ ಪುತ್ರನ ಷಷ್ಠಿಪೂಜೆಯ ದಿನ ಅರ್ಜುನನು ಯಾದವರ ಎದುರಿನಲ್ಲಿ ''ನಾನು ಅದರ ರಕ್ಷಣೆ ಮಾಡುವೆನು'' ಎಂದು ಪ್ರತಿಜ್ಞೆ ಮಾಡಿದ್ದನು. ಅದು ಸಾಧ್ಯವಾಗದೇ ಕೂಸು ಮೃತಪಟ್ಟಿತು ॥೧೧೮॥ ಆ ಸಮಯದಲ್ಲಿ ಬ್ರಾಹ್ಮಣನು ಅರ್ಜುನನ ಅತ್ಯಂತ ಅವಹೇಳನ ಮಾಡಿದನು. ಹೀಗಾದ್ದರಿಂದ ಅರ್ಜುನನು ಬಲು ನಾಚಿಕೊಂಡನು. ಆಗ ಶ್ರೀಕೃಷ್ಣನಿಗೆ ದಯೆ ಹುಟ್ಟಿತು. ಆತನು ಭಕ್ತನಿಗೆ ಸಹಾಯ ಮಾಡಲು ಸಿದ್ಧನಾದನು ॥೧೧೯॥ ಶ್ರೀಕೃಷ್ಣನು ಅರ್ಜುನನಿಗೆ ಜೊತೆಯಲ್ಲಿ ತೆಗೆದುಕೊಂಡು ರಥದಲ್ಲಿ ಕುಳಿತನು. ಕ್ಷೀರಸಾಗರದತ್ತ ಹೊರಟು ಅಲ್ಲಿ ಶ್ರೀನಾರಾಯಣನಲ್ಲಿ ಇರುವ ಬ್ರಾಹ್ಮಣನ ಪುತ್ರರನ್ನು ದ್ವಾರಕೆಗೆ ತಂದನು ॥೧೨೦॥ ಈ ರೀತಿಯಾಗಿ ಶ್ರೀಕೃಷ್ಣನು ಭಕ್ತರ ಸಂಕಟಗಳನ್ನು ದೂರ ಮಾಡುವವನಾಗಿರುವನು. ಹೀಗೆ ಶ್ರೀಕೃಷ್ಣಪ್ರತಾಪದ ಮಹಿಮೆಯು ಅಲೌಕಿಕವಾಗಿದ್ದು ಅದನ್ನು ನಾನು ಹೇಳುವೆನು, ಕೇಳು ॥೧೨೧॥ ಬಾಣಾಸುರನ ಬೆಂಬಲಕ್ಕಾಗಿ ಮಹಾರುದ್ರ ಶ್ರೀಶಂಕರನು ಯುದ್ಧಕ್ಕೆ ಬಂದನು. ಆ ಸಮಯದಲ್ಲಿ ಶ್ರೀಕೃಷ್ಣನು ಆತನನ್ನು ನಂದೀ, ಭೃಂಗೀ, ವೀರಭದ್ರ, ಕಾರ್ತಿಕಸ್ವಾಮಿ ಸಹ ಜಯಿಸಿದನು ॥೧೨೨॥ ಉಗ್ರರಲ್ಲಿ ಅತಿ ಉಗ್ರನು, ಭಯಂಕರಕ್ಕಿಂತಲೂ ಅತಿಭಯಂಕರನು ಹೀಗಿರುವ ಯಾವ ಕಾಲಾಗ್ನಿ ರುದ್ರನನ್ನು ಗೆದ್ದು ಆತನು ಬಾಣಾಸುರನ ಭುಜಗಳ ಭಾರ ಛೇದಿಸಿದನು ॥೧೨೩॥ ಶ್ರೀಕೃಷ್ಣನ ವಚನವು ಅತ್ಯಂತ ಅಗಾಧವಾಗಿದೆ. ಯಾರು ಮಹಾಪರಾಧ ಮಾಡಿದನೋ ಆ ಜರಾವ್ಯಾಧನಿಗೆ ಆತನು ದೇಹಸಹಿತವಾಗಿ ಪ್ರಸಿದ್ಧ ಸ್ವರ್ಗಕ್ಕೆ ಕಳುಹಿಸಿದನು ॥೧೨೪॥ ಇಷ್ಟೊಂದು ಮಹಾನ್ ಸಾಮರ್ಥ್ಯ ಯಾರಲ್ಲಿರುವುದೋ, ಆತನು ತನ್ನ ಸ್ವತಃದ ದೇಹ ಕಾಯ್ದುಕೊಳ್ಳಲು ಅಸಾಧ್ಯವಾಗುವನೇ? ಆದರೆ ಆತನ ದೇಹಕ್ಕೆ ದೇಹತ್ವವು ಇದ್ದಿಲ್ಲ. ಆದ್ದರಿಂದ ಆತನು ತನ್ನ ಆತ್ಮಸ್ವರೂಪದಿಂದ ನಿಜಧಾಮಕ್ಕೆ ಹೋದನು ॥೧೨೫॥ ಶ್ರೀಕೃಷ್ಣನಲ್ಲಿ ಇಂಥ ಅಲೌಕಿಕ ಸಾಮರ್ಥ್ಯವಿರಲು ಆತನು ನಿಜಧಾಮಕ್ಕೆ ಏಕೆ ಹೋದನು? ಇದೇಲೋಕದಲ್ಲಿ ಇದೇ ದೇಹದಿಂದ ಇರುವುದಕ್ಕೆ ಆತನಿಗೆ ಯಾವ ಪ್ರಕಾರದ ಭಯವಿತ್ತು? ॥೧೨೬॥ ಹೀಗೆ ನಿನ್ನ ಮನದಲ್ಲಿ ಅನುಮಾನ ಉಂಟಾದೀತು. ಅದಕ್ಕಾಗಿ ಕೇಳು. ಶ್ರೀಕೃಷ್ಣನಿಗೆ ಲೋಕಾಭಿಮಾನವು ಸ್ವಲ್ಪೂ ಸಹ ಇದ್ದಿಲ್ಲ. ಆತನ ಸ್ಥಿತಿಯು ಸ್ವೇಚ್ಛಿತನದ್ದಾಗಿತ್ತು ॥೧೨೭॥

ಮಾಯಾ ಮತ್ತು ಅದರ ಸಾತ್ವಿಕ, ರಾಜಸ, ತಾಮಸ ಈ ಮೂರು ಗುಣಗಳ ಕಾರಣನು ಶ್ರೀಕೃಷ್ಣ ಸ್ವತಃ ತಾನಾಗಿರುವನು. ಅನಾದಿತ್ವದಿಂದ ಆತನಿಗೆ ಮಾತ್ರ ಯಾರೂ ಕಾರಣರಾಗಲಾರರು ॥೧೨೮॥

ಬ್ರಹ್ಮಾಂಡೇ ಕೋಟೀ ಅನಂತ । ಉತ್ಪತ್ತಿಸ್ಥಿತಿಪ್ರಲಯಾವರ್ತ । ಕರೂನಿ ಶ್ರೀಕೃಷ್ಣ ಅಲಿಪ್ತ । ಸಾಮರ್ಥ್ಯೇ ಅದ್ಭುತ ಶ್ರೀಕೃಷ್ಣೀ ॥೧೨೯॥ ಅಶೇಷಾಂಹೀ ಪರಮ ಶಕ್ತೀ । ಶ್ರೀಕೃಷ್ಣಲೇಶೇ ಸಾಮರ್ಥ್ಯವಂತೀ । ಕೃಷ್ಣದೇಹ ತೋ ವಿದೇಹಸ್ಥಿತೀ। ಸ್ವೇಚ್ಛಾಶಕ್ತೀ ಸ್ವಧಾಮಾ ಗೇಲಾ॥೧೩೦॥ ಇಹಲೋಕೀಂಚೀ ಆಸಕ್ತೀ । ಶ್ರೀಕೃಷ್ಣಾಸೀ ನಾಹೀ ಚಿತ್ತೀ । ನಿಜಧಾಮಾಚೀ ಅತಿಪ್ರೀತೀ । ತೇಹೀ ನಿಶ್ಚಿತೀ ಅಸೇನಾ ॥೧೩೧॥ ನಿಜದೇಹೇಹೀ ಇಹಲೋಕೀ ವಸ್ತೀ । ಸ್ವೇಚ್ಛಾ ನ ಮಾನೀಚ ಶ್ರೀಪತೀ । ಮಾಝ್ಯಾ ದೇಹಾಚೀ ಅಗಮ್ಯ ಗತೀ । ತೇಣೇ ಸಾಧಕಸ್ಥಿತೀ ಭ್ರಂಶೇಲ ॥೧೩೨॥ ಮಾಝಾ ದೇಹ ಚೈತನ್ಯಘನ । ತೇಥೇ ಬಾಧೀನಾ ವಿಷಯಸೇವನ । ಹೇ ದೇಖೋನಿ ಸಾಧಕ ಜನ । ದೇಹಸಾಧನ ಮಾಂಡಿತೀ ॥೧೩೩॥ ವಾಯೋ ಸಾಧೂನಿಯಾ ಪೂರ್ಣ । ದೃಢ ಕರೂನಿ ದೇಹಧಾರಣ । ಮಾಝ್ಯಾ ಐಸೇ ವಿಷಯಸೇವನ । ಕರಾವಯಾ ಅಭಿಮಾನ ವಾಢೇಲ ॥೧೩೪॥ ಐಸಾ ವಾಢಲ್ಯಾ ದೇಹಾಭಿಮಾನ । ಮಾಝೇ ಮಾವಳೇಲ ನಿಜಾತ್ಮ ಜ್ಞಾನ । ಯಾಲಾಗೀ ವಿದೇಹ ಶ್ರೀಕೃಷ್ಣ । ಗೇಲಾ ನಿಘೋನ ನಿಜಧಾಮಾ ॥೧೩೫॥ ಮಾಝೇ ನಾಕಳತಾ ನಿಜಾತ್ಮ ಜ್ಞಾನ । ಪರೀ ಮಾಝ್ಯಾ ಐಸೇ ವಿಷಯಸೇವನ । ಕರೂ ಲಾಗತೀ ಯೋಗೀ ಜನ । ಯಾಲಾಗೀ ಶ್ರೀಕೃಷ್ಣ ನಿಜಧಾಮಾ ಗೇಲಾ ॥೧೩೬॥ ಮಾಝ್ಯಾ ದೇಹಾಚೀ ಸ್ಥಿತೀ ಗತೀ । ಶಂಭು ಸ್ವಯಂಭೂ ಕದಾ ನೇಣತೀ । ಮಾ ಇತರಾಂಸೀ ತೇ ಗತೀ । ಕೈಶಾ ರೀತೀ ಕಳೇಲ ॥೧೩೭॥ ಪರೀ ಮಾಝೇ ಐಸಾ ದೇಹಾಭಿಮಾನ । ವಾಢವಿತೀಲ ಯೋಗೀ ಜನ । ಹೇ ಜಾಣೋನಿಯಾ ಶ್ರೀಕೃಷ್ಣ । ವಿದೇಹೇ ಆಪಣ ನಿಜಧಾಮಾ ಗೇಲಾ ॥೧೩೮॥ ಜ್ಯಾಚೇ ದೇಹಾಚೇ ದರ್ಶನ । ದೇಖತಾ ಸಬಾಹ್ಯ ನಿವೇ ಮನ । ತ್ಯಾಹೀ ದೇಹಾಚೇ ಮಿಥ್ಯಾತ್ವ ಪೂರ್ಣ । ದಾವೂನಿ ಶ್ರೀಕೃಷ್ಣ ನಿಜಧಾಮಾ ಗೇಲಾ ॥೧೩೯॥ ಏವಂ ತ್ಯಾಗಾವಯಾ ದೇಹಾಭಿಮಾನ । ಕೃಷ್ಣ ನಿಜಧಾಮಾ ಕರೀ ಗಮನ । ತರಾವಯಾ ಸಾಧಕ ಜನ । ಕೃಪಾಳೂ ಪೂರ್ಣ ದೀಕ್ಷಾ ದಾವೀ ॥೧೪೦॥ ಏಥವರೀ ವೈರಾಗ್ಯದೃಢಸ್ಥಿತೀ । ದೇಹಾಭಿಮಾನಾಚ್ಯಾ ವಿರಕ್ತೀ । ಸಾಧಾವೀ ನಿಜಾತ್ಮಪ್ರಾಪ್ತೀ । ಹೇ ದೀಕ್ಷಾ ಶ್ರೀಪತೀ ದಾವೂನಿ ಗೇಲಾ ॥೧೪೧॥ ಜೇಣೇ ದೇಹೇ ಸ್ವಯೇ ಶ್ರೀಕೃಷ್ಣ । ಆಚರಲಾ ಅನೇಕ ವಿಂದಾನ । ಪರೀ ಜ್ಞಾತ್ಯಾಸೀ ನ ಲಗೇ ದೂಷಣ । ಹೇ ಪೂರ್ಣತ್ವ ಪೂರ್ಣ ಪ್ರಕಾಶಲೇ ॥೧೪೨॥

ಅನಂತ ಕೋಟಿ ಬ್ರಹ್ಮಾಂಡಗಳ ಉತ್ಪತ್ತೀ, ಸ್ಥಿತೀ ಮತ್ತು ಲಯ ಮಾಡಿ ಶ್ರೀಕೃಷ್ಣನು ಅಲಿಪ್ತನಾಗಿಯೇ ಇರುವನು. ಆತನಲ್ಲಿ ಅನೇಕ ಅದ್ಭುತ ಸಾಮರ್ಥ್ಯಗಳಿರುವುವು ॥೧೨೯॥ ಜಗತ್ತಿನಲ್ಲಿ ಯಾವ ಯಾವ ಮಹಾಶಕ್ತಿಗಳಾಗಿರುವುವೋ, ಅವುಗಳಿಗೆ ಶ್ರೀಕೃಷ್ಣನ ಶಕ್ತಿಯ ಅಂಶದಿಂದ ಸಾಮರ್ಥ್ಯ ಪ್ರಾಪ್ತವಾಗಿರುವುವು. ಶ್ರೀಕೃಷ್ಣನ ದೇಹವು ವಿದೇಹಸ್ಥಿತಿಯಾಗಿರುವುದರಿಂದ ಸ್ವತಃ ತನ್ನ ಇಚ್ಛಾಶಕ್ತಿಯಿಂದ ಆತನು ನಿಜಧಾಮಕ್ಕೆ ಹೋದನು ॥೧೩೦॥ ಶ್ರೀಕೃಷ್ಣನ ಮನದಲ್ಲಿ ಇಹಲೋಕದಲ್ಲಿ ಪ್ರೇಮವಿರಲಿಲ್ಲ. ಅದರಂತೆಯೇ ನಿಜಧಾಮದ ಪ್ರೇಮವಾದರೂ ನಿಶ್ಚಿತವಾಗಿ ಇದ್ದಿಲ್ಲ ॥೧೩೧॥ ತನ್ನ ಯಾವ ಈ ದೇಹದಿಂದ ಇಹಲೋಕದಲ್ಲಿ ಇರುವುದು ಶ್ರೀಕೃಷ್ಣನಿಗೆ ಯೋಗ್ಯವೆನಿಸಲಿಲ್ಲ. ಕಾರಣ, ಆತನು ಹೀಗೆ ವಿಚಾರ ಮಾಡಿದನು; ನನ್ನ ದೇಹದ ಅಗಮ್ಯ ಗತಿ ಕಂಡು ಸಾಧಕರ ಸ್ಥಿತಿಯು ಭ್ರಂಶವಾಗಬೇಕಾದೀತು ॥೧೩೨॥ ನನ್ನ ದೇಹವು ಚೈತನ್ಯ ಘನವಾಗಿರುವುದರಿಂದ ಅದಕ್ಕೆ ವಿಷಯ ಸೇವನೆಯು ಬಾಧಿಸುವುದಿಲ್ಲ. ಆದರೆ ಇದನ್ನು ಕಂಡು ಸಾಧಕರ ಬುದ್ಧಿಯು ಭ್ರಮಿತವಾಗುವುದು ಮತ್ತು ಅವರು ಯೋಗಬಲದಿಂದ ದೇಹಸಿದ್ಧಿ ಪ್ರಾಪ್ತ ಮಾಡಿಕೊಳ್ಳುವುದಕ್ಕಾಗಿ ಪ್ರಯತ್ನಿಸಬಹುದು ॥೧೩೩॥ ವಾಯುವಿನ ಪರಿಪೂರ್ಣವಾಗಿ ನಿರೋಧ ಮಾಡಿ ತಮ್ಮ ದೇಹವನ್ನು ಅಮರವನ್ನಾಗಿ ಮಾಡಿ ನನ್ನ ಪ್ರಕಾರವೇ ವಿಷಯ ಸೇವನೆ ಮಾಡುವಂತೆ ಅವರಿಗೆ ಮೋಹ ಉತ್ಪನ್ನವಾಗಿ ಅದರಿಂದ ದೇಹಾಭಿಮಾನವೂ ಕೂಡ ಬೆಳೆಯಬಹುದು ॥೧೩೪॥ ಈ ಪ್ರಕಾರವಾಗಿ ಅಭಿಮಾನವು ಬೆಳೆದರೆ ಅವರ ನಿಜಾತ್ಮ ಜ್ಞಾನ ನಷ್ಟವಾಗಿ ಬಿಡುವುದು. ಹೀಗೆ ವಿಚಾರ ಮಾಡಿ ಶ್ರೀಕೃಷ್ಣನು ವಿದೇಹದಿಂದ ನಿಜಧಾಮಕ್ಕೆ ಹೊರಟು ಹೋದನು ॥೧೩೫॥ ನನ್ನ ಆತ್ಮಜ್ಞಾನ ಮಾತ್ರ ಪ್ರಾಪ್ತವಾಗಲಾರದು, ಆದರೆ ಯೋಗೀ ಜನರು ನನ್ನಂತೆಯೇ ವಿಷಯ ಸೇವನೆ ಮಾತ್ರ ಮಾಡಲಾರಂಭಿಸುವರು. ಅದಕ್ಕಾಗಿ ಶ್ರೀಕೃಷ್ಣನು ಸ್ವಧಾಮಕ್ಕೆ ಹೊರಟು ಹೋದನು ॥೧೩೬॥ ನನ್ನ ದೇಹದ ಸ್ಥಿತಿಗತಿಯು ಸ್ವಯಂಭೂ ಶಂಕರನಿಗೂ ಸಹ ತಿಳಿಯುವುದಿಲ್ಲ. ಅಂದಮೇಲೆ ಇತರರಿಗೆ ಈ ಗತಿಯು ತಿಳಿಯಲು ಹೇಗೆ ಶಕ್ಯವಾದೀತು ? ॥೧೩೭॥ ಆದರೆ ಈ ಯಾವ ಯೋಗೀ ಜನರು ನನ್ನ ಪ್ರಕಾರವೇ ದೇಹಾಭಿಮಾನ ಬೆಳೆಸುವರೆಂದು ತಿಳಿದು ಶ್ರೀಕೃಷ್ಣನು ವಿದೇಹರೂಪದಿಂದ ನಿಜಧಾಮಕ್ಕೆ ಹೊರಟು ಹೋದನು ॥೧೩೮॥ ಯಾರ ದರ್ಶನ ಪಡೆದರೆ ಮನವು ಅಂತರ್ಬಾಹ್ಯವಾಗಿ ತೃಪ್ತಿ ಪಡೆಯುವುದೋ, ಅಂತಹ ದೇಹವೂ ಕೂಡ ಮಿಥ್ಯೆಯಾಗಿದೆ ಎಂಬುವುದನ್ನು ತೋರಿಸಿ ಕೊಟ್ಟು ಶ್ರೀಕೃಷ್ಣನು ನಿಜಧಾಮಕ್ಕೆ ತೆರಳಿಬಿಟ್ಟನು ॥೧೩೯॥ ಈ ರೀತಿಯಾಗಿ ದೇಹಾಭಿಮಾನದಿಂದ ತ್ಯಾಗ ಮಾಡುವುದಕ್ಕಾಗಿ ಶ್ರೀಕೃಷ್ಣನು ಸ್ವಧಾಮಕ್ಕೆ ಗಮನ ಮಾಡಿದನು. ಆ ಯಾವ ಕೃಪಾಸಾಗರನು ಸಾಧಕ ಜನರಿಗಾಗಿ ಈ ದೀಕ್ಷೆ ತೋರಿಸಿಕೊಟ್ಟನು ॥೧೪೦॥ ವೈರಾಗ್ಯಕ್ಕಾಗಿ ಇಷ್ಟೊಂದು ದೃಢ ಸ್ಥಿತಿಗೆ ಮುಟ್ಟಿಕೊಂಡು ದೇಹಾಭಿಮಾನ ವಿಷಯಕ್ಕಾಗಿ ವಿರಕ್ತಿ ಧರಿಸಿ ಆತ್ಮಪ್ರಾಪ್ತಿ ಮಾಡಿಕೊಳ್ಳಬೇಕೆಂಬುದಕ್ಕೆ ಶ್ರೀಹರಿಯು ಈ ಉದಾಹರಣೆ ಹಾಕಿ ಇಟ್ಟನು ॥೧೪೧॥ ಶ್ರೀಕೃಷ್ಣನು ಯಾವ ತನ್ನ ದೇಹದಿಂದ ಅನೇಕ ಲೀಲೆಗಳನ್ನು ಮಾಡಿದನು. ತಥಾಪಿ ಆ ದೇಹದ ಕರ್ಮಗಳಿಂದ ಆತ್ಮಜ್ಞಾನಕ್ಕೆ ಯಾವ ದೂಷಣವೂ ಹತ್ತುವುದಿಲ್ಲ. ಅದನ್ನೂ ಸಹ ಆತನು ಪರಿಪೂರ್ಣವಾಗಿ ತೋರಿಸಿಕೊಟ್ಟನು ॥೧೪೨॥

ಜೈತ ಅಥವಾ ಆಲ್ಯಾ ಹಾರೀ । ಜ್ಞಾನ ಮೈಳೇನಾ ದೋಹೀಪರೀ । ಜ್ಯಾಸೀ ಮಿಥ್ಯಾ ಭಾಸ ನರನಾರೀ । ತೋ ಸದಾ ಬ್ರಹ್ಮಚಾರೀ ವ್ಯಭಿಚಾರಾಮಾಜೀ ॥೧೪೩॥ ಸ್ತ್ರೀಪುತ್ರಾದಿ ಗೃಹವಾಸೀ । ಅಸೋನಿ ನಿತ್ಯ ಸನ್ಯಾಸೀ । ಹೇಹೀ ಲಕ್ಷಣ ಹೃಷೀಕೇಶೀ । ಯೇಣೇ ಅವತಾರೇಸೀ ದಾವಿಲೇ ॥೧೪೪॥ ಅಂಗೀ ಬಾಣಲೇ ಗೋವಳೇಪಣ । ಸವೇಚಿ ಸ್ವಾಮಿತ್ವ ಆಲೇ ಪೂರ್ಣ । ಶೇಖೀ ಸೇವಕಹೀ ಜಾಹಲಾ ಆಪಣ । ತರೀ ಪೂರ್ಣಪಣ ಮೈಳೇನಾ ॥೧೪೫॥ ಏಕಾಚೇ ಘರೀ ಉಚ್ಛಿಷ್ಟೇ ಕಾಢೀ । ಏಕಾಚೀ ಅಂಗೇ ಧೂತಸೇ ಘೋಡೀ । ತರೀ ಪೂರ್ಣತ್ವಾಚಿಯೇ ಜೋಡೀ । ಉಣೇ ಕವಡೀ ನವ್ಹೇಚಿ ॥೧೪೬॥ ಏಕಾಚೀ ನಿಮಾಲೀ ಆಣಿಲೀ ಬಾಳೇ । ಏಕಾಚೀ ಸಮೂಳ ನಿರ್ದಾಳಿಲೀ ಕುಳೇ । ಇಂಹೀ ದೋಹೀ ಪರೀ ಜ್ಞಾನ ನ ಮೈಳೇ । ಹೇಹೀ ಪ್ರಾಂಜಳೇ ಪ್ರಕಾಶಿಲೇ ॥೧೪೭॥ ಏಕಾಚಾ ಪೂರ್ಣ ಜಾಹಲಾ ಕೈವಾರೀ । ಏಕಾಚಾ ಜಾಹಲಾ ಪೂರ್ಣ ವೈರೀ । ಪರೀ ಏಕಾತ್ಮತಾ ಚರಾಚರೀ । ಅಣುಭರೀ ಢಳೇನಾ ॥೧೪೮॥ ಏಕೀ ಉದ್ಧಾರಿಲೀ ಚರಣೇ ಲಾಗತಾ । ತೋಹೀ ಏಕಾಚೇ ಚರಣೇ ಠೇವೀ ಮಾಥಾ । ಬಾಪ ಜ್ಞಾನಾಚೀ ಉದಾರತಾ। ನ್ಯೂನಪೂರ್ಣತಾ ತರೀ ನ ಘಡೇ ॥೧೪೯॥ ಇತರ ಜ್ಞಾತೇ ಜ್ಞಾನಸ್ಥಿತೀ । ಬೋಲ ಬೋಲೋನಿ ದಾವಿತೀ । ತೈಶೀ ನವ್ಹೇ ಶ್ರೀಕೃಷ್ಣಮೂರ್ತಿ । ಆಚರೋನಿ ಸ್ಥಿತೀ ದಾವಿಲೀ ಅಂಗೇ ॥೧೫೦॥ ಅತಿಗುಹ್ಯ ಜ್ಞಾನಲಕ್ಷಣೇ । ಆಚರೋನಿ ದಾವಿಲೀ ಶ್ರೀಕೃಷ್ಣೇ । ಪರೀ ಅಣುಮಾತ್ರಹೀ ಉಣೇ । ನೇದೀಚ ಪೂರ್ಣಪಣೇ ಅಂಗೀ ಲಾಗೋ ॥೧೫೧॥ ಏವಢೀ ಜ್ಯಾ ದೇಹಾಚೀ ಖ್ಯಾತೀ । ಜೇಣೇ ದೇಹೇ ದೀನ ಉದ್ಧರತೀ । ಜ್ಯಾ ದೇಹಾತೇ ಸುರವರ ವಂದಿತೀ । ಜ್ಯಾ ದೇಹಾಚಿ ಕೀರ್ತಿ ತ್ರೈಲೋಕ್ಯ ವರ್ಣೀ ॥೧೫೨॥ ತ್ಯಾ ದೇಹಾಚೀ ಅಹಂಕೃತೀ । ನಿಃಶೇಷ ಸಾಂಡೂನಿ ಶ್ರೀಪತೀ । ಗೇಲಾ ನಿಜಧಾಮಾಪ್ರತೀ । ಠೇವೂನಿ ನಿಜಮೂರ್ತಿ ಸ್ವಭಕ್ತಧ್ಯಾನೀ ॥೧೫೩॥ ಶ್ರೀಕೃಷ್ಣೇ ದೇಹ ನೇಲಾ ನಾ ತ್ಯಾಗಿಲಾ । ತೋ ಲೀಲಾವಿಗ್ರಹೇ ಸಂಚಲಾ । ನಿಜಭಕ್ತಧ್ಯಾನೀ ಪ್ರತಿಷ್ಠಿಲಾ । ಸ್ವಯೇ ನಿಜಧಾಮಾ ಗೇಲಾ ನಿಜಾತ್ಮಯೋಗೇ ॥೧೫೪॥

ಯ ಏತಾಂ ಪ್ರಾತರುತ್ಥಾಯ ಕೃಷ್ಣಸ್ಯ ಪದವೀ ಪರಾಮ್ ।
ಪ್ರಯತಃ ಕೀರ್ತಯೇದ್‌ಭಕ್ತ್ಯಾ ತಾಮೇವಾಪ್ನೋತ್ಯನುತ್ತಮಾಮ್ ॥೧೪॥

ಅರ್ಥ:- ಯಾವ ಪುರುಷನು ಪ್ರಾತಃಕಾಲದಲ್ಲಿ ಎದ್ದು ಶ್ರೀಕೃಷ್ಣನ ಪರಮಧಾಮಗಮನದ ಕಥೆಯನ್ನು ಏಕಾಗ್ರತೆಯಿಂದ ಮತ್ತು ಭಕ್ತಿಭಾವದಿಂದ ಕೀರ್ತಿಸುವನೋ ಆತನಿಗೆ ಭಗವಂತನ ಸರ್ವಶ್ರೇಷ್ಠ ಪರಮ ಪದವಿ ಪ್ರಾಪ್ತವಾಗುವುದು.

ಜಯವು ದೊರೆಯಲಿ ಅಥವಾ ಪರಾಜಯವು ಪ್ರಾಪ್ತವಾಗಲಿ, ಈ ಎರಡೂ ಸ್ಥಿತಿಯಿಂದ ಜ್ಞಾನವು ಮಲಿನವಾಗುವುದಿಲ್ಲ. ಯಾರಿಗೆ ಸ್ತ್ರೀ ಮತ್ತು ಪುರುಷ ಈ ಎರಡರ ಭಾಸವೂ ಕೂಡ ಮಿಥ್ಯೆಯಾಗಿ ತೋರುವುದೋ, ಆತನು ವಿಷಯಗಳಲ್ಲಿ ಇದ್ದರೂ ಸಹ ಬ್ರಹ್ಮಚಾರಿಯಾಗಿರುವನು ॥೧೪೩॥ ಸ್ತ್ರೀ-ಪುತ್ರಾದಿ ಯುಕ್ತನಾಗಿ ಗೃಹಸ್ಥಾಶ್ರಮದಲ್ಲಿ ಇದ್ದು ನಿತ್ಯ ಸನ್ಯಾಸಿಯಾಗಲು ಬರುವುದು, ಇದರ ಲಕ್ಷಣವನ್ನೂ ಕೂಡ ಶ್ರೀಕೃಷ್ಣನು ಈ ಅವತಾರದಲ್ಲಿ ತೋರಿಸಿಕೊಟ್ಟನು ॥೧೪೪। ಆತನು ಸ್ವತಃ ಗೌಳಿಯಾಗಿದ್ದನು. ಕೂಡಲೇ ಆತನಿಗೆ ಮಥುರೆಯಲ್ಲಿ ಸ್ವಾಮಿತ್ವವು ಪ್ರಾಪ್ತವಾಯಿತು. ಕೊನೆಗೆ ಆತನು ಸೇವಕನೂ ಆದನು, ಆದರೂ ಸಹ ಆತನ ಪೂರ್ಣತ್ವಕ್ಕೆ ಯಾವ ಬಾಧೆಯಾಗಲಿಲ್ಲ ॥೧೪೫॥ ಆತನು ಪಾಂಡವರ ಮನೆಯಲ್ಲಿ ಎಂಜಲ ಎಲೆಗಳನ್ನು ತೆಗೆದನು. ಅರ್ಜುನನ ಕುದುರೆಗಳನ್ನು ತೊಳೆದನು. ಆದರೂ ಆತನ ಪೂರ್ಣತ್ವವು ಸ್ವಲ್ಪಾದರೂ ಕಡಿಮೆಯಾಗಲಿಲ್ಲ ॥೧೪೬॥ ಒಬ್ಬನ ಮೃತ ಪುತ್ರನನ್ನು ಮರಳಿ ತಂದುಕೊಟ್ಟನು. ಇದಲ್ಲದೇ ಒಬ್ಬರ ಕುಲದ ಸಂಪೂರ್ಣ ನಾಶಮಾಡಿಬಿಟ್ಟನು. ಆದರೆ ಈ ಎರಡೂ ಕರ್ಮಗಳಲ್ಲಿ ಆತನ ಜ್ಞಾನವು ಮಲಿನವಾಗಲಿಲ್ಲ. ಇದನ್ನು ಆತನು ಸ್ಪಷ್ಟವಾಗಿ ತೋರಿಸಿಕೊಟ್ಟನು ॥೧೪೭॥ ಆತನು ಒಬ್ಬರ ಪೂರ್ಣ ಕೈವಾರಿಯಾದನು. ಇದಲ್ಲದೇ ಒಬ್ಬರ ಪೂರ್ಣ ವೈರಿಯೂ ಆದನು. ಆದರೆ ಚರಾಚರಗಳಲ್ಲಿರುವ ಐಕ್ಯವು ಒಂದು ಕಣದಷ್ಟೂ ಕೂಡ ಕಡಿಮೆಯಾಗಲಿಲ್ಲ ॥೧೪೮॥ ಆತನು ಚರಣ ಸ್ಪರ್ಶದಿಂದ ಅಹಿಲ್ಯೆಯ ಉದ್ಧಾರ ಮಾಡಿದನು. ಒಬ್ಬನ ಚರಣಗಳಿಗೆ ಆತನು ತನ್ನ ಮಸ್ತಕವನ್ನಿಟ್ಟನು. ಆದರೂ ಕೂಡ ಆತನ ಜ್ಞಾನದ ಗರಿಮೆಯು ದೊಡ್ಡದಾಗಿದ್ದರಿಂದ ಪರಸ್ಪರ ವಿರುದ್ಧ ಕೃತಿಗಳಿಂದಲೂ ಸಹ ಆ ಜ್ಞಾನದ ಅಧಿಕ-ನ್ಯೂನ್ಯತೆ ಯಾವುದೂ ಆಗಲಿಲ್ಲ ॥೧೪೯॥ ಇತರ ಮಹಾ ಮಹಾ ಜ್ಞಾನೀ ಜನರು ತಮ್ಮ ಜ್ಞಾನವನ್ನು ಕೇವಲ ಶಬ್ದಗಳಿಂದ ನುಡಿದು ತೋರಿಸುವರು. ಆದರೆ ಶ್ರೀಕೃಷ್ಣನ ರೀತಿಯು ಅವರಂತೆ ಇದ್ದಿಲ್ಲ. ಆತನು ಸ್ವತಃ ಆಚರಿಸಿ ಮಾರ್ಗ ತೋರಿಸಿದನು ॥೧೫೦॥ ಜ್ಞಾನದ ಅತ್ಯಂತ ಗುಹ್ಯವಾಗಿರುವ ಲಕ್ಷಣಗಳನ್ನು ಶ್ರೀಕೃಷ್ಣನು ಆಚರಿಸಿ ತೋರಿಸಿದನು. ಆದರೆ ಆತನು ತನ್ನ ಪೂರ್ಣತ್ವದಲ್ಲಿ ಒಂದು ಕಣದಷ್ಟೂ ಕೂಡ ಕಡಿಮೆ ಆಗಗೊಡಲಿಲ್ಲ ॥೧೫೧॥ ಇಷ್ಟೊಂದು ಆ ದೇಹದ ಖ್ಯಾತಿಯಾಗಿತ್ತು. ಆ ದೇಹದಿಂದ ದೀನಜನರ ಉದ್ಧಾರವಾಗುತ್ತಿತ್ತು. ಆ ದೇಹಕ್ಕೆ ದೇವ, ದಾನವ, ಮಾನವ ಹೀಗೆ ಮನೋಭಾವದಿಂದ ವಂದನೆ ಮಾಡುತ್ತಿದ್ದರು. ಆ ದೇಹದ ಕೀರ್ತಿಯು ತ್ರಿಭುವನದಲ್ಲಿ ವರ್ಣಿಸಲ್ಪಟ್ಟಿರುವುದು ॥೧೫೨॥ ಹೀಗಿರುವ ದೇಹದ ನಿಃಶೇಷ ಅಭಿಮಾನ ತ್ಯಜಿಸಿ ತನ್ನ ಮೂರ್ತಿಯನ್ನು ಭಕ್ತರ ಧ್ಯಾನದಲ್ಲಿಟ್ಟು ಶ್ರೀಕೃಷ್ಣನು ನಿಜಧಾಮಕ್ಕೆ ಹೋದನು ॥೧೫೩॥ ಶ್ರೀಕೃಷ್ಣನು ತನ್ನ ದೇಹವನ್ನು ಒಯ್ಯಲಿಲ್ಲ ಅಥವಾ ಅದರ ತ್ಯಾಗವನ್ನೂ ಮಾಡಲಿಲ್ಲ. ಆತನು ತನ್ನಲೀಲೆಯಿಂದ ಭಕ್ತರ ಧ್ಯಾನದಲ್ಲಿ ಬಿಟ್ಟುಕೊಟ್ಟು ಸ್ವತಃ ತನ್ನ ಆತ್ಮರೂಪದಿಂದ ನಿಜಧಾಮಕ್ಕೆ ಹೋದನು ॥೧೫೪॥

ಶ್ರೀಕೃಷ್ಣ ಅವತಾರಾಚೇ ಅಂತೀ । ಕೃಷ್ಣಾಚೀ ಜೇ ಪರಮ ಗತೀ । ಅತಿ ಉತ್ಕೃಷ್ಟ ಯೋಗಸ್ಥಿತೀ । ಅತರ್ಕ್ಯ ನಿಶ್ಚಿತೀ ಸುರಶ್ರೇಷ್ಠಾ ।।೧೫೫।। ಜೇ ಗತಿಹೂನಿ ವರತೀ । ಚಢೇನಾ ಅಧಿಕ ಗತೀ । ತೀತೇ "ಪರಾ ಪದವೀ" ಮ್ಹಣತೀ । ವೇದಶಾಸ್ತ್ರೋಕ್ತೀ ಸಜ್ಞಾನ ।।೧೫೬।। ಹೇ "ಶ್ರೀಕೃಷ್ಣ ಪರಮಪದವೀ" । ಜೋ ಕೋಣೇ ಭಕ್ತಿಯುಕ್ತ ಸದ್ಭಾವೀ । ನಿತ್ಯ ನೇಮಸ್ತ ಧರೂನೀ ಜೀವೀ । ಪಢೇ ನಿಜಭಾವೀ ಪ್ರಾತಃಕಾಳೀ ।।೧೫೭।। ಭಕ್ತಿಯುಕ್ತ ಹೃದಯ ಕಮಳೀ । ಯಾ ಚೌದಾ ಶ್ಲೋಕಾಂಚೀ ಜಪಮಾಳೀ । ಜಿವ್ಹಾಗ್ರೀ ಅನುದಿನೀ ಚಾಳೀ । ನಿತ್ಯ ಪ್ರಾತಃಕಾಳೀ ನೇಮಸ್ತ ।।೧೫೮।। ಕೇಲಿಯಾ ಯಾ ನೇಮಾಸೀ । ಸಾಂಡಣೇ ನಾಹೀ ಪ್ರಾಣಾಂತೇಸೀ । ಐಸೀ ನಿಷ್ಠಾ ಜಯಾಪಾಶೀ । ಉತ್ತಮ ತ್ಯಾಸೀ ತೋ ಪಾವೇ ।।೧೫೯।। ಶ್ರೀಕೃಷ್ಣ ಪದವೀ ಗಾತಾ ಗೀತೀ । ಪಾಯಾ ಲಾಗತೀ ಚಾರೀ ಮುಕ್ತೀ । ತ್ಯಾಂಚಿಹೀ ಉಪೇಕ್ಷೂನಿ ಸ್ಥಿತೀ । ಕೃಷ್ಣ ಪದವೀ ನಿಶ್ಚಿತೀ ಸ್ವಯೇ ಪಾವೇ ।।೧೬೦।। ಹೇ ಚೌದಾಹೀ ಶ್ಲೋಕ ಜಾಣ । ಚೌದಾ ವಿದ್ಯಾಂಚೇ ಜನ್ಮಸ್ಥಾನ । ಜೋ ಪ್ರಾತಃಕಾಳೀ ಕರೀ ಪಠಣ । ಕೃಷ್ಣ ಪದವೀ ತೋ ಪಾವೇ ।।೧೬೧।। ಹೇ ಚೌದಾಹೀ ಶ್ಲೋಕ ಜಾಣ । ಚೌದಾ ಭುವನಾಂಚೇ ನಿಜಜೀವನ । ಕೃಷ್ಣಪದವೀ ಪಾವಿಜೇ ಪೂರ್ಣ । ನೇಮಸ್ತ ಪಠಣ ಕೇಲಿಯಾ ।।೧೬೨।। ಹೇ ಚೌದಾಹೀ ಶ್ಲೋಕ ಜಾಣ । ಚೌದಾ ಪದೇ ಗಯಾವರ್ಜನ । ಪದೀ ಪಿಂಡಾ ಸಮಾಧಾನ । ನೇಮಸ್ತ ಪಠಣ ಕೇಲಿಯಾ ।।೧೬೩।। ಹೇ ಚೌದಾಹೀ ಶ್ಲೋಕ ಜಾಣ । ಚೌದಾ ಇಂದ್ರಾಚ್ಯಾ ಜೀವಾ ಜೀವನ । ಇಂದ್ರಾಂಚಾ ಇಂದ್ರ ಹೋಇಜೇ ಆಪಣ । ನೇಮಸ್ತ ಪಠಣ ಕೇಲಿಯಾ ।।೧೬೪।। ಹೇ ಚೌದಾಹೀ ಶ್ಲೋಕ ಜಾಣ । ಚೌದಾ ಕಾಂಡೇ ವೇದ ಸಂಪೂರ್ಣ । ವೇದವಾದಾ ಸಮಾಧಾನ । ನೇಮಸ್ತ ಪಠಣ ಕೇಲಿಯಾ ।।೧೬೫।। ಹೇ ಚೌದಾಹೀ ಶ್ಲೋಕ ಜಾಣ । ಸಂಸಾರಾಚೇ ಗುಣಕರ್ಮವರ್ಣ । ಮೋಡೂನಿ ಕರೀ ಬ್ರಹ್ಮ ಪೂರ್ಣ । ನೇಮಸ್ತ ಪಠಣ ಕೇಲಿಯಾ ।।೧೬೬।। ಪ್ರಾತಃಕಾಳೀ ನೇಮಸ್ತ ಪಠಣ । ಕರಿತಾ ಪಾವಿಜೇ ಬ್ರಹ್ಮ ಪರಿಪೂರ್ಣ । ಮಾ ತ್ರಿಕಾಳೀ ಜೋ ಕರೀ ಪಠಣ । ತೋ ಸ್ವದೇಹೇ ಶ್ರೀಕೃಷ್ಣ ಸ್ವಯೇ ಹೋಯ ।।೧೬೭।। ಏಥ ಪಢೋನಿ ಜೋ ಅರ್ಥ ಪಾಹೇ । ತೋ ಸ್ವಯೇ ಸ್ವಯಂಭ ಶ್ರೀಕೃಷ್ಣ ಹೋಯೇ । ಶ್ರೀಕೃಷ್ಣಾಚೀ ಪೂರ್ಣ ಪದವೀ ಪಾಹೇ । ಆಂದಣೀ ಹೋಯೇ ತಯಾಚೀ ।।೧೬೮।।

ಶ್ರೀಕೃಷ್ಣ ಅವತಾರದ ಕೊನೆಯಲ್ಲಿ ಶ್ರೀಕೃಷ್ಣನ ಯಾವ ಪರಮಗತಿಯಾಯಿತೋ, ಅದು ಅತ್ಯಂತ ಉತ್ಕೃಷ್ಟ ಯೋಗಸ್ಥಿತಿಯಾಗಿರುವುದು. ನಿಜವಾಗಿಯೂ ಅದು ದೇವಶ್ರೇಷ್ಠರಿಗೂ ಕೂಡ ಅತರ್ಕ್ಯವಾಗಿರುವುದು ।।೧೫೫।। ಆ ಗತಿಗಿಂತ ಶ್ರೇಷ್ಠ ಗತಿಯು ಬೇರೆ ಯಾವುದೂ ಇರುವುದಿಲ್ಲ. ಆದ್ದರಿಂದ ಜ್ಞಾನೀ ಪುರುಷರು ವೇದಶಾಸ್ತ್ರಗಳಲ್ಲಿ ಅದಕ್ಕೆ "ಪರಾ ಪದವಿ" ಎಂದು ಕರೆಯುವರು ।।೧೫೬।। ಈ ಶ್ರೀಕೃಷ್ಣನ ಪರಮಪದವಿಯನ್ನು ಭಕ್ತಿಭಾವನೆಯಿಂದ, ಅಂತಃಕರಣಪೂರ್ವಕವಾಗಿ ಹಾಗೂ ನಿತ್ಯನೇಮದಿಂದ ಪ್ರಾತಃಕಾಲದಲ್ಲಿ ಪಠಣೆ ಮಾಡಿದರೆ ।।೧೫೭।। ಹೃದಯ ಕಮಲದಲ್ಲಿ ಭಕ್ತಿಯುಕ್ತವಾಗಿ ಈ ಹದಿನಾಲ್ಕು ಶ್ಲೋಕಗಳ ಜಪ ಮಾಡಿದರೆ ಮತ್ತು ನಿತ್ಯನೇಮದಿಂದ ಪ್ರಾತಃಕಾಲದಲ್ಲಿ ಯಾರು ಆಚರಿಸುವರೋ ।।೧೫೮।। ಹೀಗೆ ಹಿಡಿದಿರುವ ನೇಮವನ್ನು ಪ್ರಾಣವಿರುವವರೆಗೂ ಬಿಡಲಾರದಂತೆ ಯಾರಲ್ಲಿ ನಿಷ್ಠೆಯಿರುವುದೋ, ಆತನು ಉತ್ತಮ ಗತಿ ಪ್ರಾಪ್ತ ಮಾಡಿಕೊಳ್ಳುವನು ।।೧೫೯।। ಈ ಯಾವ ಶ್ರೀಕೃಷ್ಣನ ಪದವಿಯನ್ನು ಯಾರು ಸಂಗೀತದಲ್ಲಿ ಗಾಯನ ಮಾಡುವರೋ, ಅವರಿಗೆ ನಾಲ್ಕೂ ಮುಕ್ತಿಗಳು ಅವರ ಪಾದಕ್ಕೆ ಬೀಳುವುವು. ಅವರಿಗೆ ಶ್ರೀಕೃಷ್ಣಪದವಿ ಪ್ರಾಪ್ತವಾಗುವುದು ।।೧೬೦।। ಈ ಯಾವ ಹದಿನಾಲ್ಕು ಶ್ಲೋಕಗಳೆಂದರೆ ಹದಿನಾಲ್ಕು ವಿದ್ಯೆಗಳ ಜನ್ಮಸ್ಥಾನವಾಗಿರುವುವು. ಇವುಗಳ ಪಠಣೆಯನ್ನು ಪ್ರಾತಃಕಾಲದಲ್ಲಿ ಯಾರು ಪಠಿಸುವರೋ, ಅವರು ಪರಿಪೂರ್ಣವಾಗಿ ಶ್ರೀಕೃಷ್ಣ ಪದವಿಗೆ ಮುಟ್ಟಿಕೊಳ್ಳುವರು ।।೧೬೧।। ಈ ಹದಿನಾಲ್ಕು ಶ್ಲೋಕಗಳೆಂದರೆ ಹದಿನಾಲ್ಕು ಲೋಕಗಳ ಕೇವಲ ಜೀವವೇ ಆಗಿರುವುವು. ಇವುಗಳನ್ನು ನಿತ್ಯ ನೇಮದಿಂದ ಪಠಣೆ ಮಾಡುವುದರಿಂದ ಶ್ರೀಕೃಷ್ಣನ ಪೂರ್ಣ ಪದವಿಯು ಪ್ರಾಪ್ತವಾಗುವುದು ।।೧೬೨।। ಈ ಯಾವ ಹದಿನಾಲ್ಕು ಶ್ಲೋಕಗಳೆಂದರೆ ಹದಿನಾಲ್ಕು ಪದಗಳ ಗಯಾ ವರ್ಜನೆಯಾಗಿರುವುದು. ಇದನ್ನು ನಿತ್ಯ ನಿಯಮದಿಂದ ಪಠಣೆ ಮಾಡಲು ವಿಷ್ಣುಪಾದದಲ್ಲಿ ಪಿಂಡದಾನ ಮಾಡಿದ ಶ್ರೇಯಸ್ಸು ಪ್ರಾಪ್ತವಾಗುವುದು ।।೧೬೩।। ಈ ಹದಿನಾಲ್ಕು ಶ್ಲೋಕಗಳೆಂದರೆ ಇಂದ್ರನ ಜೀವದ ಜೀವನವಾಗಿದೆ. ಇದನ್ನು ನಿತ್ಯನೇಮದಿಂದ ಪಠಣೆ ಮಾಡಲು ತಾನು ಇಂದ್ರನ ಇಂದ್ರನಾಗುವನು ।।೧೬೪।। ಈ ಹದಿನಾಲ್ಕು ಶ್ಲೋಕಗಳೆಂದರೆ ಹದಿನಾಲ್ಕು ಕಾಂಡಗಳ ವೇದವೇ ಆಗಿರುವುದು. ಇದನ್ನು ನಿತ್ಯನೇಮದಿಂದ ಪಠಣೆ ಮಾಡುವುದರಿಂದ ವೇದ ಪಠಣೆಯ ಸಮಾಧಾನ ಹಾಗೂ ಶ್ರೇಯಸ್ಸು ಪ್ರಾಪ್ತವಾಗುವುದು ।।೧೬೫।। ಈ ಯಾವ ಹದಿನಾಲ್ಕು ಶ್ಲೋಕಗಳನ್ನು ನಿತ್ಯ ನಿಯಮದಿಂದ ಪಠಣೆ ಮಾಡಲು ಸಂಸಾರದಲ್ಲಿನ ಗುಣಕರ್ಮ ಮತ್ತು ವರ್ಣ ಇವುಗಳ ನಾಶವಾಗಿ ಪೂರ್ಣ ಬ್ರಹ್ಮತ್ವವು ಪ್ರಾಪ್ತವಾಗುವುದು ।।೧೬೬।। ಇದನ್ನು ಪ್ರಾತಃಕಾಲದಲ್ಲಿ ಪಠಣೆ ಮಾಡುವುದರಿಂದ ಪರಿಪೂರ್ಣವಾಗಿ ಬ್ರಹ್ಮಪ್ರಾಪ್ತಿಯಾಗುವುದು. ಅಂದಮೇಲೆ ಇದನ್ನು ತ್ರಿಕಾಲದಲ್ಲಿ ಪಠಣೆ ಮಾಡಿದರೆ ಆತನು ಮಾತ್ರ ತನ್ನ ದೇಹದಿಂದಲೇ ಕೃಷ್ಣಸ್ವರೂಪನಾಗುವನು ।।೧೬೭।। ಇವುಗಳ ಪಠಣೆ ಮಾಡಿ ಯಾವನು ಅದರ ಅರ್ಥ ತಿಳಿದುಕೊಳ್ಳುವನೋ, ಆತನು ಸ್ವತಃ ಶ್ರೀಕೃಷ್ಣನಾಗುವನು. ಶ್ರೀಕೃಷ್ಣನ ಪೂರ್ಣ ಪದವಿಯು ಆತನಿಗೆ ಕಾಣಿಕೆ ಕೊಟ್ಟ ದಾಸಿಯಾಗುವುದು ।।೧೬೮।।

ಶ್ರೀಕೃಷ್ಣಪದವೀ ನಿಜನಿರ್ಯಾಣ । ಶ್ರವಣೇ ಪಠಣೇ ಅರ್ಥೇ ಜಾಣ । ಸಾಧಕಾ ಕರೀ ಬ್ರಹ್ಮ ಪರಿಪೂರ್ಣ । ಹೇ ಗುಹ್ಯ ನಿರೂಪಣ ಪರಮಾರ್ಥ ಸಿದ್ಧೀ ॥೧೬೯॥ ಏಥ ನ ಕರಿತಾ ಅತಿಸಾಧನ । ಅನಾಯಾಸೇ ಬ್ರಹ್ಮಜ್ಞಾನ । ಕೃಷ್ಣಪದವೀ ಪಾವಿಜೇ ಪೂರ್ಣ । ಶ್ರದ್ಧಾಯುಕ್ತ ಪಠಣ ನೇಮಸ್ತ ಕರಿತಾ ॥೧೭೦॥ ತಕ್ಷಕಭಯಾಚೀ ನಿವೃತ್ತೀ । ದೇಹೀ ಪಾವಾವಯಾ ವಿದೇಹಪ್ರಾಪ್ತೀ । ಹೇ ಸುಗಮೋಪಾಯಸ್ಥಿತೀ । ಕೃಪೇನೇ ಪರೀಕ್ಷಿತೀಪ್ರತೀ ಶುಕ ಸಾಂಗೇ ॥೧೭೧॥ ಹೇ ಕೃಷ್ಣಪದವೀ ನಿಜನಿರ್ಯಾಣ । ಶ್ರದ್ಧಾಯುಕ್ತ ನೇಮಸ್ತ ಪಠಣ । ಕರಿತಾ ಪಾವಿಜೇ ಬ್ರಹ್ಮ ಪೂರ್ಣ । ಹೇ ಪ್ರತಿಜ್ಞಾ ಪೂರ್ಣ ಶ್ರೀಶುಕಾಚೀ ॥೧೭೨॥ ಐಶೀ ಹೇ ಸುಗಮ ಪರೀ । ಅಸತಾ ಜೋ ಶ್ರದ್ಧಾ ನ ಧರೀ । ತೋ ಬುಡಾಲಾ ಸಂಸಾರಸಾಗರೀ । ಅವಿದ್ಯೇಘರೀ ಘರಜಾಂವಯೀ ತೋ ॥೧೭೩॥ ತೋಚಿ ಅವಿದ್ಯೇಚಾ ಪೋಸಣಾ । ವಿಷಯೀ ಪ್ರತಿಪಾಳಿಲಾ ಸುಣಾ । ಅಹಂಥಾರೋಳಾ ಬೈಸಣಾ । ಸರ್ವದಾ ಜಾಣಾ ವಸವಸಿತ ॥೧೭೪॥ ಅಸೋತ ಯಾ ಮೂಢ ಗೋಷ್ಟೀ । ರಚಲ್ಯಾ ಸುಖಾ ಪಡೇಲ ತುಟೀ । ಯಾ ಶ್ಲೋಕಪಠಣಾಸಾಠೀ । ಹೋಯ ಭೇಟೀ ಪರಬ್ರಹ್ಮೀ ॥೧೭೫॥ ಕೃಷ್ಣನಿಜಪದವೀ ವ್ಯಾಖ್ಯಾನ । ಕರಾವಯಾ ಮೀ ಅಪುರತೇ ದೀನ । ಜನಾರ್ದನೇ ಕೃಪಾ ಕರೂನ । ಹೇ ನಿರೂಪಣ ಬೋಲವಿಲೇ ॥೧೭೬॥ ಏಕಾ ಜನಾರ್ದನಾ ಶರಣ । ಶ್ರೀಕೃಷ್ಣಪದವೀನಿರೂಪಣ । ತೋ ಹಾ ''ಏಕಾದಶಾಚಾ ಕಳಸ'' ಪೂರ್ಣ । ವ್ಯಾಸೇ ಜಾಣೋನ ವಾಯಿಲಾ ॥೧೭೭॥ ಶ್ರೀಕೃಷ್ಣಪದವೀಪರತೇ । ನಿರೂಪಣ ನ ಚಢೇ ಏಥೇ । ತೋ ಹಾ ''ಕಳಸ'' ಏಕಾದಶಾತೇ । ವ್ಯಾಸೇ ನಿಶ್ಚಿತೇ ನಿರ್ವಾಳಿಲಾ ॥೧೭೮॥ ನಿರ್ವಾಳಿಲೇ ನಿರೂಪಣ । ಹೇ ಜನಾರ್ದನಕೃಪಾ ಪೂರ್ಣ । ಏಕಾ ಜನಾರ್ದನಾ ಶರಣ । ಯಾಪರೀ ಶ್ರೀಕೃಷ್ಣ ನಿಜಧಾಮಾ ಗೇಲಾ ॥೧೭೯॥ ಯೇರೀಕಡೇ ದ್ವಾರಕೇಸೀ । ದಾರುಕ ಪಾವಲಾ ವಿವ್ಹಳತೇಸೀ । ತೇಥೀಲ ವರ್ತಲೇ ಕಥೇಸೀ । ಪರೀಕ್ಷಿತೀಸೀ ಶುಕ ಸಾಂಗೇ ॥೧೮೦॥

ದಾರುಕೋ ದ್ವಾರಕಾಮೇತ್ಯ ವಸುದೇವೋಗ್ರಸೇನಯೋಃ । ಪತಿತ್ವಾ ಚರಣಾವಸ್ರೈರ್ನ್ಯಷಿಂಚತ್ಕೃಷ್ಣವಿಚ್ಯುತಃ ॥೧೫॥

ಅರ್ಥ:- ಇತ್ತ ದಾರುಕನು ಶ್ರೀಕೃಷ್ಣನ ವಿರಹದಿಂದ ವ್ಯಾಕುಳನಾಗಿ ದ್ವಾರಕೆಗೆ ಬಂದನು. ವಸುದೇವ ಮತ್ತು ಉಗ್ರಸೇನರ ಚರಣಗಳಲ್ಲಿ ಬಿದ್ದು ಕಣ್ಣೀರಿನಿಂದ ಅವರ ಚರಣಗಳನ್ನು ತೋಯಿಸಿಬಿಟ್ಟನು.

ಈ ಯಾವ ಶ್ರೀಕೃಷ್ಣ ಪದವಿಯು ಶ್ರವಣದಿಂದ, ಪಠಣೆಯಿಂದ ಮತ್ತು ಅರ್ಥ ತಿಳಿಯುವುದರಿಂದ ಸಾಧಕರಿಗೆ ಪೂರ್ಣ ಬ್ರಹ್ಮವನ್ನಾಗಿ ಮಾಡುವುದು. ಇದೇ ಪರಮಾರ್ಥ ಸಿದ್ಧಿಯ ಗುಹ್ಯವಾದ ನಿರೂಪಣೆಯಾಗಿರುವುದು ॥೧೬೯॥ ಇಲ್ಲಿ ಅನೇಕ ಪ್ರಕಾರಗಳ ಸಾಧನೆಗಳನ್ನು ಮಾಡದೇ ಅನಾಯಾಸವಾಗಿ ಬ್ರಹ್ಮಪ್ರಾಪ್ತಿಯಾಗುವುದು. ಶ್ರದ್ಧೆಯಿಂದ, ನಿತ್ಯ ನೇಮದಿಂದ ಪಠಣೆ ಮಾಡುವುದರಿಂದ ಕೃಷ್ಣನ ಪೂರ್ಣ ಪದವಿಯು ಪ್ರಾಪ್ತವಾಗುವುದು ॥೧೭೦॥ ತಕ್ಷಕನ ಭಯದಿಂದ ಮುಕ್ತನಾಗುವುದಕ್ಕಾಗಿ ಮತ್ತು ದೇಹದಲ್ಲಿದ್ದೂ ವಿದೇಹೀ ಅವಸ್ಥೆ ಪ್ರಾಪ್ತಮಾಡಿಕೊಳ್ಳುವುದಕ್ಕಾಗಿ ಇದೊಂದು ಬಲು ಸುಲಭ ಉಪಾಯವಾಗಿರುವುದು ಎಂದು ಶ್ರೀಶುಕಾಚಾರ್ಯರು ಪರಮ ಕೃಪೆಯಿಂದ ಪರೀಕ್ಷಿತಿಗೆ ಹೇಳಿದರು ॥೧೭೧॥ ಶ್ರೀಕೃಷ್ಣನ ಈ ಯಾವ ನಿರ್ಯಾಣಪದವಿಯ ಪಠಣೆಯನ್ನು ನಿತ್ಯನಿಯಮದಿಂದ ಶ್ರದ್ಧೆಯಿಂದ ಮಾಡುವುದರಿಂದ ಪೂರ್ಣ ಬ್ರಹ್ಮದ ಪ್ರಾಪ್ತಿಯಾಗುವುದು. ಇದು ಶ್ರೀ ಶುಕಾಚಾರ್ಯರ ಪರಿಪೂರ್ಣ ಪ್ರತಿಜ್ಞೆಯಾಗಿರುವುದು ॥೧೭೨॥ ಈ ರೀತಿಯಾಗಿ ಇದೊಂದು ಸುಲಭ ಉಪಾಯವಿರುತ್ತಿರಲು ಯಾವನು ಅದರಲ್ಲಿ ಶ್ರದ್ಧೆಯನ್ನಿಡಲಾರನೋ, ಅವನು ಸಂಸಾರದಲ್ಲಿ ಮುಳುಗಿ ಹೋಗುವನು. ಅಲ್ಲದೇ ಅವಿದ್ಯೆಯ ಮನೆ ಅಳಿಯನಾಗುವನು ॥೧೭೩॥ ಅವನು ಅವಿದ್ಯೆಯ ಗುಲಾಮನಾಗುವನು. ವಿಷಯಗಳಿಂದ ಜೋಪಾನ ಮಾಡಿದ ನಾಯಿಯಾಗುವನು. ಅಹಂಕಾರದ ತೆಗ್ಗಿನಲ್ಲಿ ಕುಳಿತುಕೊಂಡು ಯಾವಾಗಲೂ ಬೊಗಳುತ್ತಿರುವನು ॥೧೭೪॥ ಈಗ ಈ ಮೂರ್ಖರ ಮಾತಿರಲಿ, ಇದರಿಂದ ಸಿಕ್ಕ ಈ ಆನಂದಕ್ಕೆ ವ್ಯತ್ಯಯ ಉಂಟಾದೀತು. ತಾತ್ಪರ್ಯವೇನೆಂದರೆ ಯಾವ ಈ ಶ್ಲೋಕಗಳ ಪಠಣೆಯಿಂದ ಪರಬ್ರಹ್ಮದ ಪ್ರಾಪ್ತಿಯಾಗುವುದು ॥೧೭೫॥ ಈ ಶ್ರೀಕೃಷ್ಣನ ನಿಜಾನಂದ ಪದವಿಯ ವರ್ಣನೆ ಮಾಡುವುದಕ್ಕೆ ನಾನು ಅಸಮರ್ಥನಾಗಿರುವೆನು, ದೀನನಾಗಿರುವೆನು. ಆದರೆ ಸದ್ಗುರು ಜನಾರ್ದನ ಸ್ವಾಮಿಯವರು ನನ್ನಲ್ಲಿ ಕೃಪೆ ಮಾಡಿದರು ಹಾಗೂ ಈ ನಿರೂಪಣೆ ನನ್ನ ಮುಖದಿಂದ ಪ್ರಕಟಿಸಿದರು ॥೧೭೬॥ ಏಕನಾಥನು ಜನಾರ್ದನರಿಗೆ ಶರಣಾಗಿರುವನು. ಶ್ರೀಕೃಷ್ಣ ಪದವಿಯ ನಿರೂಪಣೆಯು ಇದು ಹನ್ನೊಂದನೆಯ ಸ್ಕಂಧದ ಪೂರ್ಣತ್ವದ ಕಳಸವಾಗಿರುವುದು. ಶ್ರೀವ್ಯಾಸಮುನಿಗಳವರು ಇದನ್ನು ಪೂರ್ಣತ್ವಕ್ಕೆ ಮುಟ್ಟಿಸಿರುವರು ॥೧೭೭॥ ಶ್ರೀಕೃಷ್ಣಪದವಿಗಿಂತಲೂ ಮಿಗಿಲಾದ ನಿರೂಪಣೆ ಆಗಲು ಶಕ್ಯವೇ ಇಲ್ಲ. ಆದ್ದರಿಂದ ಹನ್ನೊಂದನೆಯ ಸ್ಕಂಧದ ಕಳಸಾಧ್ಯಾಯವೆಂದು ಇದಕ್ಕೆ ಕರೆಯುವರು. ಇದನ್ನು ಶ್ರೀವ್ಯಾಸರೇ ಮಹಾಮಂಗಲ ಮಾಡಿರುವರು ॥೧೭೮॥ ಈ ನಿರೂಪಣೆಯು ಸಂಪೂರ್ಣವಾಯಿತು. ಇದು ಶ್ರೀಜನಾರ್ದನಸ್ವಾಮಿಯವರ ಪೂರ್ಣ ಕೃಪೆಯಾಗಿರುವುದು. ಈ ಪ್ರಕಾರವಾಗಿ ಶ್ರೀಕೃಷ್ಣನು ನಿಜಧಾಮಕ್ಕೆ ಹೋದನು. ಆದ್ದರಿಂದ ಏಕನಾಥನು ಜನಾರ್ದನರಿಗೆ ಶರಣಾದನು ॥೧೭೯॥ ಇತ್ತ ದಾರುಕನು ಅತಿಶಯ ದುಃಖಿಯಾಗಿ ದ್ವಾರಕಕ್ಕೆ ಹೋಗಿ ಮುಟ್ಟಿದನು. ಅಲ್ಲಿ ನಡೆದ ಸರ್ವ ವೃತ್ತಾಂತವನ್ನು ಶ್ರೀಶುಕಾಚಾರ್ಯರು ಪರೀಕ್ಷಿತಿ ರಾಜನಿಗೆ ಹೇಳುತ್ತಿರುವರು ॥೧೮೦॥

ದಾರುಕ ದ್ವಾರಕಾ ದೇಖತ । ಜೈಸೇ ಕಾ ಪ್ರಾಣೇವೀಣ ಪ್ರೇತ । ಕಾ ರಾಜಾ ಜೈಸಾ ದೈವಹತ । ತೈಶೀ ದಿಸತ ಕಳಾಹೀನ ॥೧೮೧॥ ಜೇವೀ ಕಾ ವನಿತಾ ಪತಿವೀಣ । ಸರ್ವಾರ್ಥೀ ದಿಸೇ ದೀನ । ತೈಶೀ ದ್ವಾರಾವತೀ ಜಾಣ । ಕಳಾಹೀನ ಆಭಾಸೇ ॥೧೮೨॥ ರಸ ಪಿಳಿಲ್ಯಾ ಜೈಸಾ ಊಂಸ । ಕಣೇವೀಣ ಫಳಕಟ ಭೂಸ । ತೈಶೀ ಶ್ರೀಕೃಷ್ಣೇವೀಣ ಉದ್ವಸ । ದಿಸೇ ಚೌಪಾಸ ದ್ವಾರಕಾ ॥೧೮೩॥ ದಾರುಕ ಪ್ರವೇಶೇ ರಾಜಭುವನ । ದೇಖೋನಿ ವಸುದೇವ ಉಗ್ರಸೇನ । ಅಶ್ರುಧಾರಾ ಸ್ರವತೀ ನಯನ । ಆಕ್ರಂದೋನಿ ಚರಣ ಧರಿಲೇ ತ್ಯಾಂಚೇ ॥೧೮೪॥ ಕೃಷ್ಣವಿಯೋಗೇ ತಾಪಲಾ ಪೂರ್ಣ । ಜೈಸೇ ಅತಿಸಂತಪ್ತ ಜೀವನ । ತೈಸೇ ಅಶ್ರುಧಾರಾ ಸ್ರವತೀ ನಯನ । ತೇಣೇ ಪೋಳತೀ ಚರಣ ವಸುದೇವಾಚೇ ॥೧೮೫॥ ಉಕಸಾಬುಕಸೀ ಸ್ಫುಂದೇ ಪೋಟ । ದುಃಖೇ ಹೋಊ ಪಾಹೇ ಹೃದಯಸ್ಫೋಟ । ಜಿವ್ಹೇಸೀ ಬೋಬಡೀ ವಾಳಲೇ ಓಂಠ । ಸದ್ಗದೇ ಕಂಠ ದಾಟಲಾ ॥೧೮೬॥ ಬೋಲ ನ ಬೋಲವೇ ಸರ್ವಥಾ । ದೇಖೋನಿ ದಾರುಕಾಚೀ ವ್ಯಥಾ । ದ್ವಾರಕೇಚ್ಯಾ ಜನಾ ಸಮಸ್ತಾ । ಅತಿವ್ಯಾಕುಲತಾ ವೋಢವಲೀ ॥೧೮೭॥ ದೇವಕೀ ಆಣಿ ರೋಹಿಣೀ । ಆಲ್ಯಾ ಅತ್ಯಂತ ಹಡಬಡೋನೀ । ಅತಿವ್ಯಾಕುಲತಾ ದೇಖೋನಿ । ಕೃಷ್ಣಪತ್ನೀ ಯೇಥೇ ಆಲ್ಯಾ ॥೧೮೮॥ ರಾಣೇವಸಾಚಿಯಾ ನರನಾರೀ । ಧಾಂವಲ್ಯಾ ಸಭಾಮಂಡಪಾಭೀತರೀ । ತಂವ ದಾರುಕಾಚೀ ಅವಸ್ಥಾ ಭಾರೀ । ದೇಖೋನಿ ಜಿವ್ಹಾರೀ ದಚಕಲ್ಯಾ ॥೧೮೯॥ ಸ್ಫುಂದತಾ ಉಕಸಾಬುಕಸೀ । ಶ್ವಾಸ ಪರತೇನಾ ದಾರುಕಾಸೀ । ಸಾಂಗತಾ ಕೃಷ್ಣವಿಯೋಗಾಸೀ । ಮೂರ್ಚ್ಛಾ ತ್ಯಾಸೀ ಪೈ ಆಲೀ ॥೧೯೦॥ ತೇಥೇ ವಸುದೇವ ಉಗ್ರಸೇನ । ಕರೂನಿ ತ್ಯಾಚೇ ಸಾಂತವನ । ವೃತ್ತಾಂತ ಪುಸತಾ ಸಾವಧಾನ । ಕಾಯ ತೋ ವಚನ ಬೋಲಿಲಾ ॥೧೯೧॥

ಕಥಯಾಮಾಸ ನಿಧನಂ ವೃಷ್ಣೀನಾಂ ಕೃತ್ಸ್ನಶೋ ನೃಪ । ತಚ್ಛ್ರುತ್ವೋದ್ವಿಗ್ನಹೃದಯಾ ಜನಾಃ ಶೋಕವಿಮೂರ್ಚ್ಛಿತಾಃ ॥೧೬॥

ಅರ್ಥ:- ಹೇ ಪರೀಕ್ಷಿತಿಯೇ, ಆತನು ತನ್ನನ್ನು ಆವರಿಸಿಕೊಂಡು ಯದುವಂಶದ ವಿನಾಶದ ಸಂಪೂರ್ಣವಾಗಿ ವಿವರವನ್ನು ಹೇಳಿದನು. ಅದನ್ನು ಕೇಳುತ್ತಲೇ ಸರ್ವ ಜನರು ಅತ್ಯಂತ ದುಃಖಿಯಾದರು ಹಾಗೂ ಮಹಾಶೋಕದಿಂದ ಮೂರ್ಛೆಗೊಂಡರು.

ದಾರುಕ ಮ್ಹಣೇ ತುಮ್ಹೀ ಸಮಸ್ತ । ಪಳಾ ಪಳಾ ಅರ್ಜುನಾಸಮವೇತ । ಅರ್ಧಕ್ಷಣ ನ ರಹಾವೇ ಏಥ । ಯಾದವ ಸಮಸ್ತ ನಿಮಾಲೇ ॥೧೯೨॥ ಯಾದವೀ ಜಾಊನಿ ಪ್ರಭಾಸಾಸೀ । ಕೇಲಾ ತೀರ್ಥವಿಧಿ ವಿಧಾನೇಸೀ । ದಾನ ಭೋಜನೇ ದೇಊನಿ ದ್ವಿಜಾಂಸೀ । ಮದ್ಯಪಾನಾಸೀ ಮಾಂಡಿಲೇ ॥೧೯೩॥

ದಾರುಕನು ದ್ವಾರಕೆಯನ್ನು ನೋಡಿದನು. ಆತನಿಗೆ ಆ ದ್ವಾರಕೆಯು ಪ್ರಾಣವಿಲ್ಲದ ಪ್ರೇತದಂತೆ ಅಥವಾ ಪದಚ್ಯುತ ರಾಜನಂತೆ ಅತ್ಯಂತ ಕಳಾಹೀನವಾಗಿ ತೋರುತ್ತಿತ್ತು ॥೧೮೧॥ ಪತಿ ಇಲ್ಲದ ಸ್ತ್ರೀಯಳು ಸರ್ವತೋಪರಿ ನಿಸ್ತೇಜಳಾಗಿ ಹೇಗೆ ಕಾಣುವಳೋ ಅದರಂತೆ ದ್ವಾರಕೆಯೂ ಕೂಡ ಕಳಾಹೀನವಾಗಿ ಕಾಣಹತ್ತಿತು ॥೧೮೨॥ ರಸ ಹಿಂಡಿ ತೆಗೆದ ನಂತರ ಕಬ್ಬು ಹೇಗೆ ತೋರಬೇಕೋ ಅಥವಾ ಕಾಳು ಕಳೆದುಕೊಂಡ ತೆನೆಗಳು ಹೇಗೆ ಕಾಣುವುವೋ, ಅದರಂತೆ ಕೃಷ್ಣನನ್ನು ಕಳೆದುಕೊಂಡ ದ್ವಾರಕೆಯೂ ಕೂಡ ನಾಲ್ಕೂ ಕಡೆಗಳಿಂದ ಉದಾಸವಾಗಿ ತೋರುತ್ತಿತ್ತು ॥೧೮೩॥ ದಾರುಕನು ರಾಜವಾಡೆಯಲ್ಲಿ ಪ್ರವೇಶ ಮಾಡಿದನು. ವಸುದೇವ ಮತ್ತು ಉಗ್ರಸೇನ ಇವರನ್ನು ಕಂಡಾಕ್ಷಣವೇ ಆತನ ಕಣ್ಣುಗಳಿಂದ ನೀರು ಹರಿಯಹತ್ತಿತು. ಆಗ ದೊಡ್ಡ ಧ್ವನಿಯಿಂದ ಚೀರುತ್ತ ಅವರ ಕಾಲುಗಳನ್ನು ಹಿಡಿದನು ॥೧೮೪॥ ಶ್ರೀಕೃಷ್ಣನ ವಿಯೋಗದಿಂದ ದಾರುಕನ ಕಣ್ಣೀರು ಬಿಸಿಯಾಗಿತ್ತು. ಆ ಕಣ್ಣುಗಳಿಂದ ಹೊರಬರುವ ಬಿಸಿ ನೀರಿನಿಂದ ವಸುದೇವನ ಚರಣಗಳು ಸುಡಲಾರಂಭಿಸಿದವು ॥೧೮೫॥ ದಾರುಕನು ಬಿಕ್ಕಿ ಬಿಕ್ಕಿ ಜೋರಾಗಿ ಅಳಲಾರಂಭಿಸಿದನು. ಅತಿಯಾದ ದುಃಖದಿಂದ ಆತನ ಹೃದಯ ಸ್ಫೋಟವಾಗುವಂತಾಯಿತು. ಆತನ ನಾಲಿಗೆಯು ತೊದಲಾಯಿತು. ತುಟಿಗಳು ಒಣಗಿ ಹೋದವು, ಕಂಠವು ಬಿಗಿದುಕೊಂಡಿತು ॥೧೮೬॥ ಆತನ ಮುಖದಿಂದ ಶಬ್ದಗಳು ಹೊರಗೆ ಬಾರದಂತಾದವು. ಈ ಯಾವ ದಾರುಕನ ಭಯಾನಕ ಅವಸ್ಥೆ ಕಂಡ ಸರ್ವ ಜನರಿಗೂ ದೊಡ್ಡ ಚಿಂತೆ ನಿರ್ಮಾಣವಾಯಿತು. ಅವರೆಲ್ಲರೂ ಅತ್ಯಂತ ವ್ಯಾಕುಲರಾದರು ॥೧೮೭॥ ದೇವಕೀ ಮತ್ತು ರೋಹಿಣೀ ಇವರೂ ಸಹ ಗಾಬರಿಯಾಗಿ ಅಲ್ಲಿ ಬಂದರು. ಅಲ್ಲಿ ಆಗುತ್ತಿರುವ ಗಿಡಿಬಿಡಿ ಕಂಡು ಕೃಷ್ಣ ಪತ್ನಿಯರೆಲ್ಲರೂ ಅಲ್ಲಿಗೆ ಬಂದುಬಿಟ್ಟರು ॥೧೮೮॥ ರಾಣೀ ವಂಶದ ಸರ್ವ ಸ್ತ್ರೀಪುರುಷರು ಸಭಾಮಂಟಪಕ್ಕೆ ಧಾವಿಸುತ್ತ ಧಾವಿಸುತ್ತ ಸರ್ವರೂ ಏಕತ್ರರಾದರು. ದಾರುಕನ ಈ ದುಃಖಸ್ಥಿತಿಯನ್ನು ಕಂಡು ಸರ್ವರೂ ಮನದಲ್ಲಿ ಅಂಜಿಕೊಂಡರು ॥೧೮೯॥ ದಾರುಕನು ಎಷ್ಟೊಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದನೆಂದರೆ ಆತನಿಗೆ ಸರಿಯಾಗಿ ಶ್ವಾಸವೂ ಕೂಡ ತೆಗೆದುಕೊಳ್ಳಲಾಗುತ್ತಿದ್ದಿಲ್ಲ. ಕೃಷ್ಣನ ವಿಯೋಗ ಹೇಳುತ್ತಿದ್ದಂತೆಯೇ ಆತನಿಗೆ ಮೂರ್ಛೆ ಬಂದು ಕೆಳಗೆ ಬಿದ್ದುಬಿಟ್ಟನು ॥೧೯೦॥ ಆಗ ವಸುದೇವ ಹಾಗೂ ಉಗ್ರಸೇನ ಆತನ ಹತ್ತಿರ ಬಂದು ಅವರು ಆತನಿಗೆ ಎಚ್ಚರಿಸಿದರು. ಅಲ್ಲದೇ ಅವರು ಆತನಿಗೆ ಸಾಂತ್ವನ ಮಾಡಿದರು. ಸ್ವಸ್ಥ ಚಿತ್ತದಿಂದ ವೃತ್ತಾಂತ ಕೇಳಲು ಆಗ ಆತನು ಏನು ಹೇಳಿದನೆಂಬುವುದನ್ನು ಕೇಳಿರಿ ॥೧೯೧॥

ದಾರುಕನು ಹೇಳಲಾರಂಭಿಸಿದನು ; ಮೊದಲು ಇಲ್ಲಿಂದ ನೀವೆಲ್ಲರೂ ಕೂಡಿ ಶ್ರೀಕೃಷ್ಣ ಸಖನಾದ ಅರ್ಜುನನೊಂದಿಗೆ ಓಡುತ್ತ ಹೊರಗೆ ನಡೆಯಿರಿ. ಇಲ್ಲಿ ಅರ್ಧಕ್ಷಣ ಕೂಡ ಇರಬೇಡಿರಿ. ಯಾದವರು ಸಾರಾಸಗಟವಾಗಿ ಸರ್ವರೂ ಮೃತರಾದರು ॥೧೯೨॥ ಯಾದವರು ಪ್ರಭಾಸಕ್ಕೆ ಹೋಗಿ ಅಲ್ಲಿ ಶಾಸ್ತ್ರೋಕ್ತ ತೀರ್ಥ ವಿಧಾನ ಮಾಡಿ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು ಅವರಿಗೆ ಭೋಜನ ಮಾಡಿಸಿದರು. ತದನಂತರ ಅವರೆಲ್ಲರೂ ಮದ್ಯಪಾನ ಮಾಡಲು ಆರಂಭಿಸಿದರು ॥೧೯೩॥

ಚಢಲಾ ಮದ್ಯಾಚಾ ಉನ್ಮಾದು । ಯಾದವ ಸಖೇ ಸಗೋತ್ರ ಬಂಧು । ಪರಸ್ಪರೇ ಯುದ್ಧಸಂಬಧು । ಗೋತ್ರವಧು ತೇಥ ಘಡಲಾ ॥೧೯೪॥ ಶಸ್ತ್ರೇಕರೂನಿ ಸ್ವಯಮೇವ । ಕೋಣೀ ನ ಮರತೀಚ ಯಾದವ । ತೇಥ ಘಡಲೇ ಏಕ ಅಪೂರ್ವ । ಏರಿಕೇನೇ ಸರ್ವ ನಿಮಾಲೇ ॥೧೯೫॥ ಬಳಿಭದ್ರೇ ತ್ಯಾಗಿಲೇ ದೇಹಾಸೀ । ಶ್ರೀಕೃಷ್ಣ ಹೀ ಗೇಲಾ ನಿಜ ಧಾಮಾಸೀ । ಮಜ ಧಾಡಿಲೇ ತುಮ್ಹಾ ಪಾಶೀ । ಕ್ಷಣ ದ್ವಾರಕೇಸೀ ನ ರಹಾವೇ ॥೧೯೬॥ ಹರೀನೇ ತ್ಯಾಗಿಲೇ ದ್ವಾರಕೇಸೀ । ಸಮುದ್ರ ಬುಡವೀಲ ಶೀಘ್ರತೇಶೀ । ಹೇ ಕೃಷ್ಣೇ ಸಾಂಗಿತಲೇ ತುಮ್ಹಾಂಸೀ । ಏಥೂನಿ ತ್ವರೇಸೀ ನಿಘಾವೇ ॥೧೯೭॥ ಐಕೂನಿ ದಾರುಕಾಚೀ ಗೋಠೀ । ದ್ವಾರಕೇಸೀ ಏಕ ಬೋಂಬ ಉಠೀ । ಉಗ್ರಸೇನ ಕಪಾಳ ಪೀಟೀ । ಮಸ್ತಕ ಆಪಟೀ ವಾಸುದೇವ ॥೧೯೮॥ ಏಕ ಕುಸ್ಕರಿತೀ ದೋನೀ ಹಾತ । ಏಕ ಅತ್ಯಂತ ಚರಫಡತ । ಏಕ ಆಕ್ರೋಶೇ ಆಕ್ರಂದತ । ಏಕೇ ಮೂರ್ಚ್ಛಿತ ಪೈ ಪಡಲೀ ॥೧೯೯॥ ಏಕಾ ರಡತಾ ಶೋಷಲೇ ಕಂಠ । ಏಕಾಚೇ ದೋನೀ ಫುಟಲೇ ಓಂಠ । ಏಕಾಚಾ ಹೋಊ ಪಾಹೇ ಹೃದಯಸ್ಫೋಟ । ದುಃಖ ಅಚಾಟ ಸರ್ವಾಂಸೀ ॥೨೦೦॥ ಏಕ ಸ್ಫುಂಧತೀ ಉಕಸಾಬುಕಶೀ । ಏಕ ಪಿಟಿತೀ ಹೃದಯಾಸೀ । ಏಕ ತೋಡಿತೀ ಕಾನ-ಕೇಸೀ । ಏಕೇ ದುಃಖೇ ಪಿಶೀ ಪೈ ಜಾಹಲೀ ॥೨೦೧॥ ಏಕ ದೇತೀ ದೀರ್ಘ ಹಾಕ । ಏಕೇ ಪಡಲೀ ಅಧೋಮುಖ । ಏಕೇ ಮೀನಾಚ್ಯಾ ಐಸೇ ದೇಖ । ಆತ್ಯಂತಿಕ ತಳಮಳತೀ ॥೨೦೨॥ ಬೋಂಬ ಉಠಲೀ ನರನಾರೀ । ಶಂಖ ಕರಿತೀ ಘರೋಘರೀ । ಕೋಣ ಕೋಣಾತೇ ನಿವಾರೀ । ಸಮಸ್ತಾ ಸರೀ ಸಮದುಃಖ ॥೨೦೩॥ ದೇವಕೀ ಆಣೀ ರೋಹಿಣೀ । ಮೂರ್ಚ್ಛಿತ ಪಡಲ್ಯಾ ಧರಣೀ । ಸವೇಂಚಿ ಉಠತೀ ಆಕ್ರಂದೋನೀ । ದೀರ್ಘಸ್ವನೀ ವಿಲಪತೀ ॥೨೦೪॥ ಕೃಷ್ಣಾ ವಿಸಾವಿಯಾ ನಿಜಾಚಿಯಾ । ವೇಗೀ ಭೇಟೀ ದೇ ಈ ಕಾ ರೇ ಕಾನ್ಹಯಾ । ಕಾ ರುಸಲಾಸೀ ರೇ ತಾನ್ಹಯಾ । ತುಝಿಯಾ ಪಾಯಾ ಲಾಗೇನ ॥೨೦೫॥ ಶ್ರೀಕೃಷ್ಣ ತೂ ಮಾಝಾ ಕೈವಾರೀ । ಶ್ರೀಕೃಷ್ಣ ತೂ ಮಾಝಾ ಸಹಾಕಾರೀ । ಶೇಖೀ ಮಜ ಸಾಂಡೋನಿ ದುರಂಧರೀ । ತೂ ದೂರಚೇ ದೂರೀ ಗೇಲಾಸೀ ॥೨೦೬॥ ಜಿಣೋನಿ ಕಂಸಕೇಶಿಯಾತೇ । ಬಂದೀಸೋಡವಿಲೇ ಆಮುತೇ । ಶೇಖೀ ತುವಾ ಸಾಂಡಿಲೇ ಏಥೇ । ನಿಷ್ಠುರ ಚಿತ್ತೇ ಝಾಲಾಸೀ ॥೨೦೭॥

ಆ ಮದ್ಯದ ನಿಶೆಯು ಮಸ್ತಕಕ್ಕೆ ಏರಿತು. ಯಾದವರ ಮಿತ್ರರಲ್ಲಿ, ಅಣ್ಣ ತಮ್ಮಂದಿರಲ್ಲಿ, ಬಂಧು ಬಳಗದವರಲ್ಲಿ ಹೀಗೆ ಎಲ್ಲರಲ್ಲಿಯೂ ಯುದ್ಧವೇ ನಡೆದು ಸರ್ವ ಕುಲದ ನಾಶವಾಯಿತು ॥೧೯೪॥ ಯಾವುದೇ ಆಯುಧಗಳಿಂದ ಯಾವ ಯಾದವರೂ ಮೃತರಾಗುತ್ತಿದ್ದಿಲ್ಲ. ಆದರೆ ಅಲ್ಲಿ ಅಪೂರ್ವ ಚಮತ್ಕಾರವು ನಡೆಯಿತು. ಎಲ್ಲರೂ ಏರಿಕಾ ಎಂಬ ಕಪ್ಪಿ ಜೆಂಡಿನ ದಂಟುಗಳಿಂದ ಮೃತರಾದರು ॥೧೯೫॥ ಬಲರಾಮನು ದೇಹತ್ಯಾಗ ಮಾಡಿದನು, ಶ್ರೀಕೃಷ್ಣನೂ ಸಹ ನಿಜಧಾಮಕ್ಕೆ ಹೋದನು. ಈಗ ನೀವು ಕ್ಷಣವೂ ಕೂಡ ದ್ವಾರಕೆಯಲ್ಲಿ ರಬಾರದೆಂದು ನಿಮಗೆ ತಿಳಿಸಲು ಶ್ರೀಕೃಷ್ಣನೇ ನನಗೆ ಇಲ್ಲಿಗೆ ಕಳುಹಿಸಿರುವನು ॥೧೯೬॥ ಶ್ರೀಹರಿ ಭಗವಾನ ಶ್ರೀಕೃಷ್ಣನು ದ್ವಾರಕಾ ಬಿಟ್ಟನು. ಈಗ ದ್ವಾರಕೆಯನ್ನು ಸಾಗರವು ಕೂಡಲೇ ಮುಳುಗಿಸುವುದು. ಅದಕ್ಕಾಗಿ ನೀವೆಲ್ಲರೂ ಇಲ್ಲಿಂದ ತೀವ್ರಗತಿಯಿಂದ ಹೊರಗೆ ನಡೆಯಿರಿ. ಇದು ಶ್ರೀಕೃಷ್ಣನ ಸಂದೇಶವಾಗಿರುವುದು ॥೧೯೭॥ ಈ ಯಾವ ದಾರುಕನ ವಚನಗಳನ್ನು ಕೇಳಿದಾಕ್ಷಣವೇ ದ್ವಾರಕೆಯಲ್ಲಿ ಎಲ್ಲ ಕಡೆಯಲ್ಲಿಯೂ ಹಾಹಾಃಕಾರವು ಭುಗುಲೆದ್ದಿತು. ಉಗ್ರಸೇನನು ತನ್ನ ಹಣೆ ಬಡೆದುಕೊಳ್ಳಲಾರಂಭಿಸಿದನು. ವಸುದೇವನು ಮಾತ್ರ ತನ್ನ ತಲೆ ಅಪ್ಪಳಿಸಹತ್ತಿದನು ॥೧೯೮॥ ಕೆಲವರು ತಮ್ಮ ಎರಡೂ ಕೈಗಳನ್ನು ಹೊಡೆದುಕೊಳ್ಳಹತ್ತಿದರು, ಕೆಲವರಂತೂ ಅತ್ಯಂತ ಚರಪಡಿಸಹತ್ತಿದನು. ಇನ್ನೂ ಕೆಲವರು ಜೋರಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದರು. ಕೆಲವರು ಮಾತ್ರ ಒಮ್ಮಿಂದೊಮ್ಮೆಲೆ ಮೂರ್ಛೆ ಬಂದು ಬಿದ್ದು ಬಿಟ್ಟರು ॥೧೯೯॥ ಕೆಲವರ ಕಂಠವು ಅತ್ತು ಅತ್ತು ಒಣಗಿ ಹೋಯಿತು. ಕೆಲವರ ಎರಡೂ ತುಟಿಗಳು ಸೀಳಿಹೋದವು. ಕೆಲವರ ಹೃದಯಾಘಾತಸ್ಥಿತಿಯುಂಟಾಯಿತು. ಹೀಗೆ ಸರ್ವರಿಗೂ ತಡೆಯಲಾರದ ಭಯಂಕರ ದುಃಖವಾಗತೊಡಗಿತು ॥೨೦೦॥ ಕೆಲವರು ತಾಳದೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಕೆಲವರು ಎದೆ ಎದೆ ಬಡೆದುಕೊಳ್ಳಹತ್ತಿದರು ಕೆಲವರು ಕಿವಿ ಕೂದಲುಗಳನ್ನು ಎಳೆಯುತ್ತ ಹರೆದುಕೊಳ್ಳುತ್ತಿದ್ದರು. ಕೆಲವರಂತೂ ಅತಿದುಃಖದಿಂದ ಹುಚ್ಚರಾದರು ॥೨೦೧॥ ಕೆಲವರು ಚೀರಾಡಿ ಜೋರಾಗಿ ಒದರಲಾರಂಭಿಸಿದರು, ಕೆಲವರು ಕೆಳಮುಖಮಾಡಿಕೊಂಡು ಮೇಲಕ್ಕೇಳುವುದೇ ಮರೆತುಬಿಟ್ಟರು. ಇನ್ನೂ ಕೆಲವರು ನೀರಿನಿಂದ ತೆಗೆದ ಮೀನಿನಂತೆ ತಳಮಳಿಸಲಾರಂಭಿಸಿದರು ॥೨೦೨॥ ಸ್ತ್ರೀ, ಪುರುಷರಲ್ಲಿ ಒಂದೇ ಗೊಂದಲದ ಗದ್ದಲವಾಯಿತು. ಮನೆ ಮನೆಗಳಲ್ಲಿ ಬೊಬ್ಬೆ ಹೊಡೆಯಹತ್ತಿದರು. ಸರ್ವರಿಗೂ ಸಮಾನ ದುಃಖವು ಆವರಿಸಿಕೊಂಡಿತು. ಹೀಗಾಗಿ ಯಾರು ಯಾರಿಗೆ ದುಃಖದಿಂದ ಬಿಡಿಸಬೇಕು? ॥೨೦೩॥ ದೇವಕೀ, ರೋಹಿಣಿಯವರಂತೂ ಮೂರ್ಛಿತರಾಗಿ ನೆಲದಲ್ಲಿ ಬಿದ್ದುಬಿಟ್ಟರು. ಕೂಡಲೇ ಎದ್ದು ತಡೆಯಲಾರದ ದುಃಖದಿಂದ ಬಿಕ್ಕಿ ಬಿಕ್ಕಿ ಹಾಡ್ಹಾಡಿ ಅಳಹತ್ತಿದರು ॥೨೦೪॥ ದೇವಕೀ ಹೇಳಿದಳು; ಹೇ ಕೃಷ್ಣಾ, ಜೀವದ ಜೀವನಾ, ನನಗೆ ದರ್ಶನ ನೀಡೋ! ಹೇ ಕನ್ಹಯ್ಯಾ ಹೇ ಕಂದಾ! ಏಕೆ ಮುನಿಸಿಕೊಂಡೆಯೋ! ನಿನ್ನ ಕಾಲಿಗೆ ಬೀಳುವೆನು, ಬಾರೋ ॥೨೦೫॥ ಹೇ ಕೃಷ್ಣಾ ನೀನು ನನ್ನ ಕೈವಾರೀ, ಸಹಕಾರೀ, ಹೀಗಿದ್ದರೂ ಕೊನೆಗೆ ನನ್ನನ್ನು ಕತ್ತಲೆಯಲ್ಲಿ ಬಿಟ್ಟು ಬಹು ದೂರ ಹೇಗೆ ಹೊರಟು ಹೋದೆ? ॥೨೦೬॥ ದುಷ್ಟ ಕಂಸ ಹಾಗೂ ಕೇಶೀ ಇವರನ್ನು ಜಯಿಸಿ ನಮಗೆ ನೀನು ಕಾರಾಗೃಹದಿಂದ ಬಿಡಿಸಿದೆ. ಈಗ ಕೊನೆಯಲ್ಲಿ ನನಗೆ ಇಲ್ಲಿಯೇ ಬಿಟ್ಟು ಹೇ ಕೃಷ್ಣಾ ಏಕೆ ಮೋಸಗೊಳಿಸಿದೆ? ॥೨೦೭॥

ಆಣೂನಿ ನಿಮಾಲ್ಯಾ ಪುತ್ರಾಂತೇ । ತುವಾ ಮಜ ಸುಖೀ ಕೇಲೇ ಯೇಥೇ । ಅಂತೀ ಠಕಿಲೇ ಠಕಿಲೇ ಮಾತೇ । ಶ್ರೀಕೃಷ್ಣನಾಥೇ ನಾಡಿಲೇ ।।೨೦೮।। ಕೃಷ್ಣಾ ನಿರಸೂನಿ ಮಾಝೇ ದುಃಖ । ತುವಾ ದಿಧಲೇ ಪರಮ ಸುಖ । ತೋ ತೂ ನಿಷ್ಠುರ ಜಾಹಲಾಸೀ ದೇಖ । ಅಂತೀ ನಿಃಶೇಖ ಸಾಂಡಿಲೇ ।।೨೦೯।। ಮಾಝಿಯಾ ಪುತ್ರಾ ಕೃಷ್ಣರಾಯಾ । ವೇಗೀ ಯೇ ಕಾ ರೇ ಕಾನ್ಹಯಾ । ಮಾಝ್ಯಾ ನಾಹೀ ಪ್ರಾಶಿಲೇ ಪಾನ್ಹಯಾ । ಮ್ಹಣೋನಿ ತಾನ್ಹಯಾ ರುಸಲಾಸೀ ।।೨೧೦।। ಜಿಚೇ ಕೇಲೇ ಸ್ತನಪಾನ । ತೇ ಯಶೋದಾಹೀ ಜಾಹಲೀ ದೀನ । ತುಝೇ ನ ದೇಖತಾ ವದನ । ಕೈಸೇನಿ ಪ್ರಾಣ ರಾಹತೀಲ ।।೨೧೧।। ಕೃಷ್ಣಾ ಯೇ ರೇ ಯೇ ರೇ ಧಾಂವೋನ । ಚೌಭುಜೀ ಮಜ ದೇ ಆಲಿಂಗನ । ತುಝೇ ಚುಂಬೀನ ರೇ ವದನ । ಮೀ ಅತಿದೀನ ತುಜಲಾಗೀ ।।೨೧೨।। ಮಾಝಿಯಾ ಶ್ಯಾಮಸುಂದರಾ । ರಾಜೀವಲೋಚನಾ ಸುಕುಮಾರಾ । ಚತುರ್ಭುಜಾ ಶಾರ್ಙ್ಗಧರಾ । ಯೇ ಕಾ ರೇ ಉದಾರಾ ಶ್ರೀಕೃಷ್ಣಾ ।।೨೧೩।। ತುಝೇ ಪದ್ಮಾಂಕಿತ ಪಾಯೇ । ಮಜ ಆಠವತೀ ಪಾಹೇ । ತೇಣೇ ಹೃದಯ ಫುಟತಾಹೇ । ಕರೂ ಮೀ ಕಾಯೇ ಶ್ರೀಕೃಷ್ಣಾ ।।೨೧೪।। ಕೃಷ್ಣಾ ತುಜಹೂನಿ ವೇಗಳೀ । ಮೀ ಜಾಹಲೇ ರೇ ಆಂಧಳೀ । ಮಾಝೀ ಧರಾವಯಾ ಆಂಗೋಳೀ । ಧಾಂವ ವನಮಾಳೀ ಶ್ರೀಕೃಷ್ಣಾ ।।೨೧೫।। ಮಜ ಅಂಧಾಚೀ ಕೃಷ್ಣ ಕಾಠೀ । ಕೋಣೇ ಘಾತಲೀ ಗೇ ವೈಕುಂಠೀ । ಆತಾ ಮೀ ಮಾರ್ಗ ಕೇವೀ ಕಂಠೀ । ಪಾವ ಜಗಜೇಠೀ ಶ್ರೀಕೃಷ್ಣಾ ।।೨೧೬।। ಪುತ್ರ ನಾತೂ ವಂಶಾವಳೀ । ಏಕೇ ವೇಳೀ ಜಾಹಲೀ ಹೋಳೀ । ಕೋಣೇ ನುರೇಚಿ ಯದುಕುಳೀ । ವಕ್ಷಃಸ್ಥಳೀ ಪಿಟಿತೀ ।।೨೧೭।। ಯಾದವ ಪಡಲೇ ರೇ ಕೇಉತೇ । ತುಜ ಕೋಠೂನಿ ಧಾಡಿಲೇ ಕೃಷ್ಣನಾಥೇ । ವೇಗೀ ನ್ಯಾ ರೇ ಮಜ ತೇಥೇ । ಪಾಹೀನ ಸಮಸ್ತೇ ತಾನುಲೀ ।।೨೧೮।। ಐಕೋನಿ ದೇವಕೀಚೇ ರುದನ । ವಸುದೇವಾದಿ ಉಗ್ರಸೇನ । ಆಕ್ರಂದೋನಿ ಸಕಳ ಜನ । ಪ್ರಭಾಸಾಸೀ ಜಾಣ ನಿಘಾಲೇ ।।೨೧೯।।

ತತ್ರ ಸ್ಮ ತ್ವರಿತಾ ಜಗ್ಮುಃ ಕೃಷ್ಣವಿಶ್ಲೇಷವಿಹ್ವಲಾಃ । ವ್ಯಸವಾಃ ಶೇರತೇ ಯತ್ರ ಜ್ಞಾತಯೋಘ್ನಂತ ಆನನಮ್ ।।೧೮।।

ಅರ್ಥ:- ಭಗವಾನ ಶ್ರೀಕೃಷ್ಣನ ವಿಯೋಗದಿಂದ ವ್ಯಾಕುಲರಾಗಿದ್ದ ಸರ್ವ ಜನರು ತಮ್ಮ ಹಣೆ ಬಡೆದುಕೊಳ್ಳುತ್ತ ಪ್ರಭಾಸದತ್ತ ಕೂಡಲೇ ಬಂದು ಮುಟ್ಟಿದರು. ತಮ್ಮ ಬಂಧುಗಳು ಗತಪ್ರಾಣರಾಗಿ ಬಿದ್ದದ್ದನ್ನು ಕಂಡರು.

ಸ್ತ್ರೀಯಾ ಪುರುಷ ಸುಹೃಜ್ಜನ । ಮಿಳೋನಿ ಸ್ವಗೋತ್ರಸ್ವಜನ । ಶೀಘ್ರ ಪ್ರಭಾಸಾ ಗಮನ । ಕರೀತ ರುದನ ನಿಘಾಲೇ ।।೨೨೦।।

ಮರಣ ಹೊಂದಿದ್ದ ನನ್ನ ಎಲ್ಲ ಪುತ್ರರನ್ನೂ ನೀನು ನನಗೆ ಮರಳಿ ತಂದುಕೊಟ್ಟು ನನ್ನನ್ನು ಸುಖಿಯನ್ನಾಗಿ ಮಾಡಿದೆ. ಆದರೆ ಕೊನೆಯಲ್ಲಿ ನನಗೆ ಠಕ್ಕಿಸಿ ಇಲ್ಲಿಯೇ ಏಕೆ ಬಿಟ್ಟು ಹೋದೆ? ಹೇ ಕೃಷ್ಣಾ ಏಕೆ ಇಷ್ಟು ಕಠೋರನಾದೇ ? ।।೨೦೮।। ಹೇ ಕೃಷ್ಣನೇ, ನೀನೇ ನನ್ನ ಸರ್ವ ದುಃಖಗಳ ಪರಿಹಾರ ಮಾಡಿದೆ. ಪರಮ ಸುಖ ನೀಡಿದೆ. ಅದೇ ನೀನು ಅತ್ಯಂತ ಕಠೋರ ಹೃದಯದಿಂದ ಕೊನೆಗೆ ನನ್ನನ್ನು ಬಿಟ್ಟುಕೊಟ್ಟೆಯಾ? ।।೨೦೯।। ನನ್ನ ಪ್ರೀತಿಯ, ಸಲುಗೆಯ ಪುತ್ರ ಕೃಷ್ಣರಾಯಾ! ಕಂದಾ, ಬಹುಬೇಗ ಬಾರಯ್ಯಾ. ಹೇ ಕಾನ್ಹಯಾ, ನನ್ನ ಎದೆಹಾಲು ಕುಡಿಯಲಿಲ್ಲವೆಂದು ಮುನಿಸುಕೊಂಡಿರುವಿಯಾ? ।।೨೧೦।। ನೀನು ಯಾರ ಸ್ತನಪಾನ ಮಾಡಿರುವಿಯೋ, ಆ ಯಶೋದೆಯೂ ಕೂಡ ಅತ್ಯಂತ ದೀನಳಾಗಿ ಕುಳಿತಿರುವಳು. ನಿನ್ನ ಮುಖಕಮಲ ನೋಡದಿದ್ದರೆ ಆಕೆಯ ಪ್ರಾಣವಾದರೂ ಹೇಗೆ ಉಳಿದೀತು? ।।೨೧೧।। ಹೇ ಕೃಷ್ಣಾ! ಬಾ, ಬಾ, ಬೇಗ ಬಾರೋ, ಧಾವಿಸಿ ಬಂದು ನಿನ್ನ ನಾಲ್ಕೂ ಬಾಹುಗಳಿಂದ ನನಗೆ ಪ್ರೇಮಾಲಿಂಗನ ಕೊಡು. ಅರೇ ನಾನು ನಿನ್ನ ಮುಖಕ್ಕೆ ಚುಂಬಿಸುವೆನು. ನಿನಗಾಗಿ ನಾನು ಅತಿ ದೀನಳಾಗಿರುವೆನು ।।೨೧೨।। ಹೇ ನನ್ನ ಶ್ಯಾಮಸುಂದರನೇ, ಶ್ರೀಕೃಷ್ಣನೇ, ಹೇ ಸುಕುಮಾರನೇ, ಹೇ ಕಮಲಾಕ್ಷನೇ, ಹೇ ಚತುರ್ಭುಜನೇ, ಹೇ ಶಾರಂಗಧರನೇ, ಹೇ ಉದಾರ ಶ್ರೀಕೃಷ್ಣರಾಯನೇ ಬೇಗನೇ ಬಾರಯ್ಯಾ ।।೨೧೩।। ಪದ್ಮಚಿನ್ಹೆಯ ನಿನ್ನ ಚರಣಕಮಲಗಳು ನನಗೆ ನೆನಪು ಆಗುತ್ತಲೇ ಇದೆ. ಇದರಿಂದ ನನ್ನ ಹೃದಯವು ಒಡೆಯುವುದೊಂದೇ ಉಳಿದಿರುವುದು ಹೇ ಶ್ರೀಕೃಷ್ಣನೇ, ನಾನು ಈಗೇನು ಮಾಡಲಿ? ಹೇಳಯ್ಯಾ ।।೨೧೪।। ಹೇ ಕೃಷ್ಣನೇ, ನೀನಿಲ್ಲದ್ದಕ್ಕೆ ನಾನು ಕುರುಡಿಯಾಗಿರುವೆನು. ಹೇ ಮನೋಹರ ಶ್ರೀಕೃಷ್ಣನೇ, ಹೇ ವನಮಾಳಿಯೇ ನನ್ನ ಕರಾಂಗುಳಿ ಹಿಡಿಯಲು ಧಾವಿಸುತ್ತ ಬೇಗ ಬಾರೋ ।।೨೧೫।। ಕುರುಡಿಯಾಗಿರುವ ನನಗೆ ಕೃಷ್ಣನೇ ಕೋಲಾಗಿದ್ದನು. ಅದನ್ನು ಯಾರೋ ಒಯ್ದು ವೈಕುಂಠದಲ್ಲಿ ಬಿಟ್ಟಿರುವರು. ಈಗ ನಾನು ನನ್ನ ಮಾರ್ಗ ಹೇಗೆ ಸಾಧಿಸಲಿ? ಹೇ ಜಗಜೇಠೀ ಶ್ರೀಕೃಷ್ಣನೇ, ಬೇಗ ಕರುಣಿಸೋ ।।೨೧೬।। ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲ ವಂಶಜರು ಒಂದೇ ಸಮಯಕ್ಕೆ ನಾಶವಾಗಿಬಿಟ್ಟರು. ಯಾದವರ ಕುಲದಲ್ಲಿ ಯಾರೂ ಉಳಿದುಕೊಂಡಿರುವುದಿಲ್ಲ ಎಂದು ಹೇಳುತ್ತ ಎದ ಎದೆ ಬಡೆದುಕೊಳ್ಳಲಾರಂಭಿಸಿದಳು ।।೨೧೭।। ಅರೇ, ಯಾದವರು ಎಲ್ಲಿ ಬಿದ್ದುಕೊಂಡಿರುವರು? ಶ್ರೀಕೃಷ್ಣನು ನಿನ್ನನ್ನು ಎಲ್ಲಿಂದ ಕಳುಹಿಸಿಕೊಟ್ಟನು ? ಅಪ್ಪಗಳಿರಾ, ನನಗೆ ಬಲು ಬೇಗನೇ ಅಲ್ಲಿಗೆ ಒಯ್ಯಿರಿ. ಎಲ್ಲ ಮಕ್ಕಳನ್ನೂ ಒಮ್ಮೆ ನಾನು ನೋಡುವೆನು ।।೨೧೮।। ಹೀಗೆ ದೇವಕಿಯ ಅಳುವಿಕೆ ಕಂಡು ವಸುದೇವ, ಉಗ್ರಸೇನ ಇತ್ಯಾದಿ ಸರ್ವರೂ ಅಳುತ್ತ, ಅಳುತ್ತ, ಚೀರಾಡುತ್ತ ಪ್ರಭಾಸದತ್ತ ನಡೆದರು ।।೨೧೯।।

ಸ್ತ್ರೀಯರು, ಪುರುಷರು, ಬಂಧುಬಳಗ ಇತ್ಯಾದಿಯಾಗಿ ಎಲ್ಲ ಗೋತ್ರಜರೂ ಸೇರಿ ದುಃಖದಿಂದ ಅಳುತ್ತ, ಅಳುತ್ತ ಪ್ರಭಾಸಕ್ಕೆ ಹೋಗಲು ಹೊರಟರು ।।೨೨೦।।

ಹಾಕಾಬೋಂಬಾಚೇ ಬಂಬಾಳ । ಸ್ತ್ರೀಯಾ ಕರಿತೀ ಕೋಲ್ಹಾಳ । ಕೃಷ್ಣ ವಿಯೋಗೇ ಸಕಳ । ದುಃಖವಿವ್ಹಳ ನಿಘಾಲೀ ।೨೨೧॥ ರಣೀ ಪಡಿಲೇ ಯಾದವ । ಪ್ರಾಣರಹಿತ ನಿರ್ಜೀವ । ತೇಥ ಪಾವಲೀ ತೇ ಸರ್ವ । ಬೋಂಬಾರವ ಖಂತೀ ಕರಿತೀ ।೨೨೨॥

ದೇವಕೀ ರೋಹಿಣೀ ಚೈವ ವಸುದೇವಸ್ತಥಾ ಸುತೌ । ಕೃಷ್ಣರಾಮಾವಪಶ್ಯಂತ ಶೋಕಾರ್ತಾ ವಿಜುಹುಃ ಸ್ಮೃತಿಮ್ ।೧೮॥
ಪ್ರಾಣಾಂಶ್ಚ ವಿಜುಹುಸ್ತತ್ರ ಭಗವದ್ವಿರಹಾತುರಾಃ । ಉಪಗುಹ್ಯ ಪತೀಂಸ್ತಾತ ಚಿತಾಮಾರುರುಹುಃ ಸ್ತ್ರಿಯಾಃ ।೧೯॥

ಅರ್ಥ:- ದೇವಕೀ, ರೋಹಿಣೀ ಮತ್ತು ವಸುದೇವ ಇವರು ತಮ್ಮ ಪ್ರೀತಿಯ ಪುತ್ರರಾದ ಶ್ರೀಕೃಷ್ಣ, ಬಲರಾಮ ಕಾಣಲಾರದ್ದಕ್ಕೆ ಶೋಕದಿಂದ ಮೂರ್ಚ್ಛಿತರಾದರು. ಅವರು ಶ್ರೀಹರಿಯ ವಿರಹ ವೇದನೆಯಿಂದ ವ್ಯಾಕುಲರಾಗಿ ಅಲ್ಲಿಯೇ ಪ್ರಾಣ ಬಿಟ್ಟರು. ಸ್ತ್ರೀಯರು ತಮ್ಮ ತಮ್ಮ ಪತಿಯ ಮೃತದೇಹ ಗುರುತಿಸಿ ತಮ್ಮ ಹೃದಯಕ್ಕೆ ಅಪ್ಪಿಕೊಂಡು ಆ ಮೃತದೇಹದೊಂದಿಗೆ ಚಿತೆಯಲ್ಲಿ ಕುಳಿತು ಭಸ್ಮರಾದರು.

ದೇವಕೀ ಆಣಿ ರೋಹಿಣೀ । ವಸುದೇವ ಉಗ್ರಸೇನ ದೋನೀ । ಯಾದವ ನಿಮಾಲೇ ರಣಾಂಗಣೀ । ತೇ ಸ್ಥಾನೀ ಪಾಹೋ ಯೇತೀ ।೨೨೩॥ ದೀರ್ಘಶಯನೇ ಯುದ್ಧಧರಣೀ । ಪಡಿಲ್ಯಾ ಯಾದವವೀರಶ್ರೇಣೀ । ತೇಥೇ ರಾಮಕೃಷ್ಣ ಪುತ್ರ ದೋನೀ । ಪಾಹತಾ ನಯನೀ ನ ದೇಖತೀ ।೨೨೪॥ ಕೃಷ್ಣವಿರಹೇ ಶೋಕಾಕುಲಿತ । ದುಃಖ ನ ಸಂಠೇಚಿ ಅತಿಅದ್ಭುತ । ಚೌಘೇ ಜಣೇ ಆಕ್ರಂದತ । ಪಡಿಲೀ ಮೂರ್ಚ್ಛಿತ ಅತಿದುಃಖೇ ।೨೨೫॥ ನಿಮಾಲ್ಯಾ ರಾಮಕೃಷ್ಣಾಂಚೇ ಮುಖ । ಆಮ್ಹೀ ನ ದೇಖೋ ನಿಃಶೇಖ । ತೇಣೇ ಉಥಳಲೇ ಪರಮ ದುಃಖ । ದುಃಖಾಸವೇ ದೇಖ ನಿಮಾಲಾ ಪ್ರಾಣ ।೨೨೬॥ ಪ್ರಾಣೇ ಕರಾವೇ ಉತ್ಕ್ರಮಣ । ತ್ಯಾಂಸೀಹೀ ಶ್ರೀಕೃಷ್ಣದುಃಖ ದಾರುಣ । ದುಃಖೇ ನಿಮಾಲೇ ಸ್ವಯೇ ಪ್ರಾಣ । ವಾಂಚವೀ ಕೋಣ ರಡತ್ಯಾಂಸೀ ।೨೨೭॥ ನ ದೇಖತಾ ರಾಮ ಕೃಷ್ಣ । ತೇ ಮೂರ್ಚ್ಛೇಸವೇಂಚಿ ಜಾಣ । ಚೌಘೀ ಜಣೇ ತ್ಯಜಿಲೇ ಪ್ರಾಣ । ಅರ್ಧ ಕ್ಷಣ ನ ಲಾಗತಾ ।೨೨೮॥ ಸಮಸ್ತ ಯಾದವಾಂಚ್ಯಾ ಸ್ತ್ರಿಯಾ । ಧರೂನಿ ಆಪುಲಾಲೇ ಪ್ರಿಯಾ । ಅಗ್ನಿಪ್ರವೇಶ ಕರಾವಯಾ । ಚಢಲ್ಯಾ ಲವಲಾಹ್ಯಾ ಚಿತೇಮಾಜೀ ।೨೨೯॥ ಯಾದವಾಂಚಿಯಾ ಸ್ತ್ರೀಯಾ ಬಹುತೀ । ಕೋಣ ಪ್ರವೇಶಲ್ಯಾ ಕೈಶಾ ರೀತೀ । ತೇಹೀ ಅಗ್ನಿಪ್ರವೇಶಾಚೀ ಸ್ಥಿತೀ । ಪರೀಕ್ಷಿತೀಪ್ರತೀ ಶುಕ ಸಾಂಗೇ ।೨೩೦॥

ರಾಮಪತ್ನ್ಯಶ್ಚ ತದ್ದೇಹಮುಪಗುಹ್ಯಾಗ್ನಿಮಾವಿಶನ್ । ವಸುದೇವಪತ್ನ್ಯಸ್ತದ್ಗಾತ್ರಂ ಪ್ರದ್ಯುಮ್ನಾದೀನ್ ಹರೇಃ ಸ್ನುಷಾಃ ।
ಕೃಷ್ಣ ಪತ್ನ್ಯೋಽವಿಶನ್ನಗ್ನಿಂ ರುಕ್ಮಿಣ್ಯಾದ್ಯಾಸ್ತದಾತ್ಮಿಕಾಃ ।೨೦॥

ಅರ್ಥ:- ಬಲರಾಮನ ಪತ್ನಿಯು ಆತನ ಶರೀರಕ್ಕೆ, ವಸುದೇವನ ಪತ್ನಿಯರು ಆತನ ಮೃತದೇಹಕ್ಕೆ ಮತ್ತು ಭಗವಾನ ಶ್ರೀಕೃಷ್ಣನ ಸೊಸೆಯಂದಿರು ತಮ್ಮ ತಮ್ಮ ಪತಿಗಳ ಮೃತದೇಹ ತೆಗೆದುಕೊಂಡು ಅಗ್ನಿಯಲ್ಲಿ ಪ್ರವೇಶ ಮಾಡಿದರು. ಭಗವಾನ ಶ್ರೀಕೃಷ್ಣನ ಪತ್ನಿಯರಾದ ರುಕ್ಮಿಣೀ ಇತ್ಯಾದಿ ಅನೇಕ ಪ್ರಿಯ ರಾಣಿಯರು ಆತನ ಧ್ಯಾನದಲ್ಲಿ ಮಗ್ನರಾಗಿ ಅಗ್ನಿಯಲ್ಲಿ ಪ್ರವೇಶ ಮಾಡಿದರು.

ಹಾಹಾಕಾರದ, ಬೊಬ್ಬಾಟದ ಒಂದೇ ಗೊಂದಲದ ಬಹು ಗದ್ದಲವಾಗಿ ಬಿಟ್ಟಿತು. ಸ್ತ್ರೀಯರು ಮಾತ್ರ ಅತಿಯಾದ ಗದ್ದಲ ಎಬ್ಬಿಸಿದರು. ಈ ಪ್ರಕಾರವಾಗಿ ಸರ್ವರೂ ಶ್ರೀಕೃಷ್ಣ ವಿಯೋಗದಿಂದ ಅತ್ಯಂತ ದುಃಖದಿಂದ ವ್ಯಾಕುಲರಾಗಿ ಪ್ರಭಾಸಕ್ಕೆ ಹೊರಟರು ।೨೨೧॥ ಯಾದವರೆಲ್ಲರೂ ಮೃತರಾಗಿ ರಣರಂಗದಲ್ಲಿ ನಿರ್ಜೀವರಾಗಿ ಬಿದ್ದಿದ್ದರು. ಈ ಎಲ್ಲ ಜನರು ಅಳುತ್ತ, ಒದರುತ್ತ ಅಲ್ಲಿಗೆ ಬಂದರು ।೨೨೨॥

ದೇವಕೀ, ರೋಹಿಣೀ, ವಸುದೇವ, ಉಗ್ರಸೇನ ಇವರು ಮೃತರಾಗಿರುವ ಯಾದವರೆಲ್ಲರನ್ನೂ ಕಾಣಲು ಯುದ್ಧ ನಡೆದ ರಣಾಂಗಣಕ್ಕೆ ಬಂದು ಮುಟ್ಟಿದರು ।೨೨೩॥ ಆ ಯುದ್ಧ ಭೂಮಿಯಲ್ಲಿ ಯಾದವ ವೀರರ ಮೃತದೇಹಗಳು ರಾಶಿ ರಾಶಿಯಾಗಿ ಬಿದ್ದುಕೊಂಡಿದ್ದವು. ಆದರೆ ಅದರಲ್ಲಿ ಶ್ರೀಕೃಷ್ಣ ಮತ್ತು ಬಲರಾಮ ಈ ಯಾವ ಅವರ ಇಬ್ಬರು ಪುತ್ರರು ಕಾಣಲಿಲ್ಲ ।೨೨೪॥ ಆಗ ಶ್ರೀಕೃಷ್ಣನ ವಿರಹದಿಂದ ಅತ್ಯಂತ ಶೋಕಗ್ರಸ್ತರಾಗಿ ಅವರ ದುಃಖವು ಅವರಿಗೆ ತಡೆಯುವುದು ಆಗಲೇ ಇಲ್ಲ. ಆಗ ಆ ನಾಲ್ವರೂ ಕೂಡ ಆಕ್ರೋಶ ಮಾಡುತ್ತ ಅಲ್ಲಿಯೇ ಮೂರ್ಛಿತರಾಗಿ ಬಿದ್ದುಬಿಟ್ಟರು ।೨೨೫॥ ದೇಹಬಿಟ್ಟ ರಾಮಕೃಷ್ಣರ ಕೊನೆಯ ಮುಖದರ್ಶನವೂ ಕೂಡ ನಮಗಾಗಲಿಲ್ಲವೆಂದು ತಿಳಿದು ಅವರಿಗೆ ಅತ್ಯಂತ ದುಃಖವಾಯಿತು. ಕೊನೆಗೆ ಅದೇ ದುಃಖದಿಂದ ಅವರ ಪ್ರಾಣ ಪಕ್ಷಿಗಳು ಹಾರಿಹೋದವು ।೨೨೬॥ ಯಾರು ತಮ್ಮ ಪ್ರಾಣಗಳಿಂದ ಮೇಲಕ್ಕೆ ಅಂದರೆ ಊರ್ಧ್ವಗತಿಗೆ ಹೋಗಬೇಕೋ, ಅವರಿಗೆ ಶ್ರೀಕೃಷ್ಣನ ಅತ್ಯಂತ ವಿರಹ ದುಃಖವಾದ ಕಾರಣದಿಂದ ಅವರ ಪ್ರಾಣಗಳು ಸ್ವತಃ ಹೊರಟು ಹೋದವು. ಇಂಥ ಅಳುವವರನ್ನು ಯಾರು ಉಳಿಸಬೇಕು? ।೨೨೭॥ ರಾಮಕೃಷ್ಣರು ಕಾಣಲಾರದ್ದಕ್ಕೆ ತಕ್ಷಣ ಆ ನಾಲ್ವರಿಗೂ ಮೂರ್ಛೆ ಬಂದು ಅರ್ಧಕ್ಷಣದಲ್ಲಿಯೇ ತಮ್ಮ ಪ್ರಾಣಗಳನ್ನು ಬಿಟ್ಟರು ।೨೨೮॥ ಸರ್ವ ಯಾದವ ಸ್ತ್ರೀಯರು ತಮ್ಮ ತಮ್ಮ ಪತಿಗಳ ಪ್ರೇತ ಪಡೆದು ತಕ್ಷಣ ಸತೀ ಹೋಗುವ ವಿಚಾರದಿಂದ ಚಿತೆಯಲ್ಲಿ ಏರಿದರು ।೨೨೯॥ ಯಾದವರಲ್ಲಿ ಅಸಂಖ್ಯ ಸ್ತ್ರೀಯರಿದ್ದರು. ಅವರಲ್ಲಿ ಯಾರು ಯಾರು ಯಾವ ಯಾವ ಪ್ರಕಾರವಾಗಿ ಅಗ್ನಿ ಪ್ರವೇಶ ಮಾಡಿದರು ಎಂಬ ಈ ವೃತ್ತಾಂವನ್ನು ಶ್ರೀಶುಕಾಚಾರ್ಯರು ಪರೀಕ್ಷಿತೀ ರಾಜನಿಗೆ ಹೇಳುತ್ತಿರುವರು ।೨೩೦॥

ಬಳರಾಮಾಚಿಯಾ ಪತ್ನೀ । ರೇವತ್ಯಾದಿ ಮುಖ್ಯ ಕರೂನಿ । ಸ್ವಪತೀಚಾ ದೇಹ ಮನೀ ಧರೂನೀ । ಪ್ರವೇಶಲ್ಯಾ ಅಗ್ನೀ ತದ್ಧ್ಯಾನಯುಕ್ತ ।೨೩೧॥ ನಿಮಾಲ್ಯಾ ದೇವಕೀ ರೋಹಿಣೀ । ಇತರಾ ಜ್ಯಾ ವಸುದೇವಪತ್ನೀ । ತ್ಯಾಹೀ ಪ್ರವೇಶಲ್ಯಾ ಅಗ್ನೀ । ದೇಹ ಧರೂನೀ ಸ್ವಪತೀಚಾ ।೨೩೨॥ ಪ್ರದ್ಯುಮ್ನಾಸವೇ ರತೀ । ಪ್ರವೇಶಲೀ ಮಹಾಸತೀ। ಸಾಂಬಾಸವೇ ರೂಪವತೀ। ಪ್ರವೇಶೇ ನಿಶ್ಚಿತೀ ದುರ್ಯೋಧನಕನ್ಯಾ ।೨೩೩॥ ಅನಿರುದ್ಧಾಸವೇ ದೇಖಾ । ಪ್ರವೇಶೇ ರೋಚನಾ ಆಣಿ ಉಖಾ । ಏವಂ ಕೃಷ್ಣಸುನಾ ಸಕಳಿಕಾ । ಯಾದವ ನಾಯಿಕಾ ಪ್ರವೇಶಲ್ಯಾ ಅಗ್ನೀ ।೨೩೪॥ ಅಗ್ನಿಪ್ರವೇಶೇ ಶ್ರೀಕೃಷ್ಣಪತ್ನೀ । ತ್ಯಾಂಚೀ ಅಲೋಕಿಕ ಕರಣೀ । ತ್ಯಾಂಮಾಜೀ ಮುಖ್ಯ ರುಕ್ಮಿಣೀ । ಸತ್ಯಾಶಿರೋಮಣೀ ಜಗನ್ಮಾತಾ ।೨೩೫॥ ಕೃಷ್ಣ ನಿರ್ಯಾಣೀ ರುಕ್ಮಿಣೀ । ತದ್ರೂಪ ಜಾಹಲೀ ತತ್‌ಕ್ಷಣೀ । ಜೇವೀ ಜ್ವಾಳಾ ಮಿಳೇ ವಹ್ನೀ । ತೇವೀ ಕೃಷ್ಣಪಣೀ ತದಾತ್ಮಕ ।೨೩೬॥ ಕೃಷ್ಣ ಗೇಲಾ ಜಾಣೋನಿ ರುಕ್ಮಿಣೀ । ತಟಸ್ಥ ಠೇಲೀ ತೇ ತತ್‌ಕ್ಷಣೀ । ಸಾಂಡೂನಿ ದೇಹಾಚೀ ಗವಸಣೀ । ಕೃಷ್ಣಸ್ವರೂಪಮಿಳಣೀ ತದಾತ್ಮಕ ಝಾಲೀ ।೨೩೭॥ ರುಕ್ಮಿಣೀಚಾ ದೇಹ ದಹನ । ಕರಾವಯಾ ನುರೇಚಿ ಪ್ರೇತಪಣ । ಕೃಷ್ಣ ಪೂರ್ಣತ್ವೇ ಸ್ವಯಂಭ ಪೂರ್ಣ । ಗತಿ ಸಮಾನ ದೋಹೀಂಚೀ ।೨೩೮॥ ಯೇರೀ ಪಟ್ಟಮುಖ್ಯಾ ಸಾತಜಣೀ । ಆಣಿ ಸೋಳಾ ಸಹಸ್ರ ಕಾಮಿನೀ । ಸವೇ ಪ್ರವೇಶಲ್ಯಾ ಅಗ್ನೀ । ಶ್ರೀಕೃಷ್ಣಚರಣೀ ತದಾತ್ಮಕ ।೨೩೯॥ ಜಿಂಹೀ ಭೋಗಿಲೇ ಕೃಷ್ಣಸುರತಸುಖ । ತ್ಯಾಂಸೀ ಗತಿ ನ್ಯೂನಾಧಿಕ । ಬೋಲತಾ ವಾಚೇಸೀ ಲಾಗೇ ದೋಖ । ಜಾಹಲ್ಯಾ ತದಾತ್ಮಕ ಕೃಷ್ಣಸಂಗೇ ।೨೪೦॥ ಜೋ ವಾಚೇ ಸ್ಮರೇ ''ಕೃಷ್ಣ ಕೃಷ್ಣ'' । ತೋ ತದಾತ್ಮತಾ ಪಾವೇ ಪೂರ್ಣ । ಮಾ ಜಿಂಹೀ ಸ್ವಯೇ ಭೋಗಿಲಾ ಶ್ರೀಕೃಷ್ಣ । ತ್ಯಾಂಚೀ ದಶಾ ನ್ಯೂನ ಕದಾ ನ ಘಡೇ ।೨೪೧॥ ಜ್ಯಾಸೀ ಲಾಗೇ ಕೃಷ್ಣಾಚಾ ಅಂಗಸಂಗ । ತ್ಯಾಚ್ಯಾ ಲಿಂಗದೇಹಾ ಹೋಯ ಭಂಗ । ತ್ಯಾಸೀ ಪೂರ್ಣ ಪದವೀ ಅಭಂಗ । ಭೋಗಿತಾ ಭೋಗ ತಾದಾತ್ಮ್ಯ ನಿತ್ಯ ।೨೪೨॥ ಜ್ಯಾಚ್ಯಾ ಧ್ಯಾನೀ ವಸೇ ಶ್ರೀಕೃಷ್ಣಮೂರ್ತೀ । ತ್ಯಾಸೀ ಚಾರೀ ಮುಕ್ತಿ ವಂದಿತೀ । ಮಾ ಜಿಂಹೀ ಸ್ವಯೇ ಭೋಗಿಲಾ ಶ್ರೀಪತೀ । ತ್ಯಾಂಸೀ ಅನ್ಯಗತೀ ಅಸೇನಾ ।೨೪೩॥

ಶ್ರೀಕೃಷ್ಣನ ಜೇಷ್ಠ ಬಂಧು ಬಲರಾಮನ ಪತ್ನಿಯರಲ್ಲಿ ಮುಖ್ಯವಾಗಿ ರೇವತೀ ಸಮವೇತ ಸರ್ವ ಸ್ತ್ರೀಯರೂ ತಮ್ಮ ಪತಿಯ ದೇಹ ಮನದಲ್ಲಿ ಧರಿಸಿ ಆತನ ಚಿಂತನೆ ಮಾಡುತ್ತ ಅಗ್ನಿ ಪ್ರವೇಶ ಮಾಡಿದರು ।೨೩೧॥ ದೇವಕೀ ಮತ್ತು ರೋಹಿಣೀ ಇವರು ಮೊದಲೇ ಮೃತರಾಗಿದ್ದರು. ಉಳಿದ ವಸುದೇವನ ಪತ್ನಿಯರು ಅವರೂ ಸಹ ತಮ್ಮ ಪ್ರಿಯ ಪತಿಯ ಮೃತದೇಹದೊಂದಿಗೆ ಸಹಗಮನ ಮಾಡಿದರು ।೨೩೨॥ ಶ್ರೀಕೃಷ್ಣನ ಪುತ್ರ ಪ್ರದ್ಯುಮ್ನನ ಜೊತೆಯಲ್ಲಿ ಮಹಾಸತಿ ರತೀಯೂ ಕೂಡ ಸಹಗಮನ ಮಾಡಿಕೊಂಡಳು ಮತ್ತು ಸಾಂಬನ ಜೊತೆಯಲ್ಲಿ ದುರ್ಯೋಧನನ ಪುತ್ರಿ ರೂಪವತಿಯೂ ಸಹ ಸಹಗಮನ ಮಾಡಿದಳು ।೨೩೩॥ ಅದರಂತೆಯೇ ಅನಿರುದ್ಧನ ಜೊತೆಯಲ್ಲಿ ರೋಚನಾ ಮತ್ತು ಉಖಾ ಇವರಿಬ್ಬರೂ ಅಗ್ನಿಯಲ್ಲಿ ಪ್ರವೇಶ ಮಾಡಿದರು. ಈ ಪ್ರಕಾರವಾಗಿ ಭಗವಾನ ಶ್ರೀಕೃಷ್ಣನ ಸೊಸೆಯರೆಲ್ಲರೂ ಹಾಗೂ ಯಾದವ ನಾಯಕಿಯರು ಹೀಗೆ ಸರ್ವರೂ ಅಗ್ನಿ ಪ್ರವೇಶ ಮಾಡಿದರು ।೨೩೪॥ ಶ್ರೀಕೃಷ್ಣನ ಪತ್ನಿಯರು ಅಗ್ನಿ ಪ್ರವೇಶ ಮಾಡಿದ ಕೃತಿಯು ದಿವ್ಯ ಹಾಗೂ ಅಲೌಕಿಕವಾಗಿತ್ತು. ಆ ಸರ್ವರಲ್ಲಿ ಸತಿಶಿರೋಮಣೀ ಜಗನ್ಮಾತಾ ಶ್ರೀಕೃಷ್ಣ ಪ್ರಿಯ ರುಕ್ಮಿಣೀಯು ಮುಖ್ಯಳಾಗಿದ್ದಳು ।೨೩೫॥ ಶ್ರೀಕೃಷ್ಣನ ನಿರ್ಯಾಣ ವಾರ್ತೆ ಕೇಳಿದಾಕ್ಷಣವೇ ರುಕ್ಮಿಣೀ ಅದೇ ಕ್ಷಣದಲ್ಲಿ ತದ್ರೂಪಳಾದಳು. ಜ್ವಾಲೆಯು ಅಗ್ನಿಯಲ್ಲಿ ಹೋಗಿಕೂಡಿಕೊಳ್ಳುವಂತೆ ಶ್ರೀಕೃಷ್ಣನ ತತ್ವದಲ್ಲಿ ತಾದಾತ್ಮ್ಯಳಾದಳು ।೨೩೬॥ ಹೀಗೆ ಶ್ರೀಕೃಷ್ಣನು ಹೋದನೆಂಬುವುದನ್ನು ತಿಳಿದಾಕ್ಷಣವೇ ರುಕ್ಮಿಣೀಯು ತಟಸ್ಥಳಾದಳು. ಹಾಗೂ ದೇಹದ ಗವಸಣಿಕೆ ಬಿಟ್ಟು ಕೃಷ್ಣಸ್ವರೂಪದಲ್ಲಿ ಕೂಡಿ ತಾದಾತ್ಮ್ಯಳಾದಳು ।೨೩೭॥ ರುಕ್ಮಿಣೀಯ ದೇಹವು ದಹನ ಮಾಡಲು ಪ್ರೇತರೂಪದಿಂದ ಉಳಿಯಲೇ ಇಲ್ಲ. ಶ್ರೀಕೃಷ್ಣನು ಯಾವ ಪ್ರಕಾರವಾಗಿ ಸ್ವಯಂಭೂ ಪರಿಪೂರ್ಣನಾಗಿದ್ದನೋ ಅದೇ ಪ್ರಕಾರವಾಗಿ ಆಕೆಯೂ ಕೂಡ ಪರಿಪೂರ್ಣಳಾಗಿದ್ದಳು. ಆದ್ದರಿಂದ ಅವರಿಬ್ಬರ ಗತಿಯು ಒಂದೇ ಸಮಾನವಾಯಿತು ।೨೩೮॥ ರುಕ್ಮಿಣೀ ಹೊರತಾಗಿ ಇನ್ನೂ ಏಳು ಜನ ಪಟ್ಟರಾಣಿಯರಿದ್ದರು. ಅವರೆಲ್ಲರೂ ಹಾಗೂ ಹದಿನಾರು ಸಾವಿರ ಪತ್ನಿಯರೂ ತಾದಾತ್ಮ್ಯಭಾವದಿಂದ ಅಗ್ನಿಯಲ್ಲಿ ಪ್ರವೇಶ ಮಾಡಿದರು ।೨೩೯॥ ಯಾರಿಗೆ ಶ್ರೀಕೃಷ್ಣನ ದಿವ್ಯ ಸ್ಪರ್ಶ ಲಭಿಸಿದ್ದರಿಂದ ಅವರಿಗೆ ಹೆಚ್ಚು ಕಡಿಮೆ ಗತಿಯು ಪ್ರಾಪ್ತವಾಯಿತೆಂದು ಹೀಗೆ ಹೇಳಿದರೆ ವಾಣಿಗೆ ಪಾಪ ತಟ್ಟುವುದು. ಶ್ರೀಕೃಷ್ಣನ ಸಂಗತಿಯಿಂದ ಅವರು ಜ್ಞಾನಸ್ವರೂಪರಾಗಿದ್ದರು ।೨೪೦॥ ಯಾರು ತಮ್ಮ ವಾಣಿಯಿಂದ ''ಕೃಷ್ಣ ಕೃಷ್ಣ'' ನಾಮದ ಉಚ್ಚಾರ ಮಾಡುವರೋ ಅವರಿಗೆ ಸಾಯುಜ್ಯ ಮುಕ್ತಿಯು ದೊರೆಯುವುದು. ಅಂದಮೇಲೆ ಕೃಷ್ಣನ ಅಂಗಸಂಗ ಲಭಿಸಿದವರಿಗೆ ಅವರ ಯೋಗ್ಯತೆಯು ನ್ಯೂನವಾದೀತೆ? ।೨೪೧॥ ಯಾರಿಗೆ ಶ್ರೀಕೃಷ್ಣನ ಅಂಗಸಂಗದ ಲಾಭವಾಗುವುದೋ, ಅವರ ವಾಸನಾತ್ಮಕ ಲಿಂಗದೇಹದ ಭಂಗವಾಗಿಬಿಡುವುದು. ಅವರಿಗೆ ಅವಿನಾಶೀ ಪದವಿಯು ಪ್ರಾಪ್ತವಾಗುವುದು. ಅವರು ಭೋಗಗಳನ್ನು ಭೋಗಿಸುತ್ತಿದ್ದರೂ ಕೃಷ್ಣನಲ್ಲಿ ಸತತ ತಾದಾತ್ಮ್ಯವಿರುವುದು ।೨೪೨॥ ಯಾವನ ಚಿತ್ತದಲ್ಲಿ ಶ್ರೀಕೃಷ್ಣನ ಮೂರ್ತಿಯು ಸತತವಾಗಿರುವುದೋ ಆತನಿಗೆ ನಾಲ್ಕು ಮುಕ್ತಿಗಳು ವಂದಿಸುವುವು. ಅಂದಮೇಲೆ ಕೃಷ್ಣನ ಜೊತೆಯಲ್ಲಿ ಕ್ರೀಡಿಸಿದವರಿಗೆ ಅನ್ಯ ಗತಿಯು ಹೇಗೆ ಪ್ರಾಪ್ತವಾದೀತು? ।೨೪೩॥

ಜ್ಯಾಂಸೀ ಇಹಲೋಕೀ ಶ್ರೀಕೃಷ್ಣ ಸಂಗತೀ । ತ್ಯಾಸೀ ಪರಲೋಕೀ ಅನ್ಯ ಗತೀ । ಬೋಲತಾ ಸಜ್ಞಾನ ಕೋಪತೀ । ತ್ಯಾಂಸೀ ಪೂರ್ಣ ಪ್ರಾಪ್ತೀ ಪೂರ್ಣತ್ವೇ ।೨೪೪॥ ಜೋ ಅಡಖಳೋನಿ ಗಂಗೇಸೀ ಪಡೇ । ತ್ಯಾಚೇ ಪಾತಕ ತತ್ಕಾಳ ಉಡೇ । ಮಾ ಜ್ಯಾಸೀ ವಿಧ್ಯುಕ್ತ ಸ್ನಾನ ಘಡೇ । ತ್ಯಾಂಚೇ ಪಾಪ ನ ಝುಡೇ ಮಗ ಕೈಸೇನೀ ।೨೪೫॥ ತೇವೀ ಕೃಷ್ಣವ್ಯಭಿಚಾರಸಂಗತೀ । ಗೋಪೀ ಉದ್ಧರಲ್ಯಾ ನೇಣೋ ಕಿತೀ । ತ್ಯಾಚ್ಯಾ ನಿಜಪತ್ನ್ಯಾಂಸೀ ಅನ್ಯ ಗತೀ । ಕೈಶಾ ರೀತೀ ಘಡೇಲ ।೨೪೬॥ ತೃಣ ವಲ್ಲೀ ಮೃಗ ಪಾಷಾಣ । ಗಾಯೀ ಗೋಪಿಕಾ ಗೌಳೀಜನ । ಕೃಷ್ಣ ಸಂಗೇ ತರಲೇ ಪೂರ್ಣ । ತ್ಯಾಚಿಯಾ ಸ್ತ್ರೀಯಾಂಸೀ ಅನ್ಯ ಗತಿ ಕೈಶೀ ।೨೪೭॥ ಯಾಲಾಗೀ ಕೃಷ್ಣ ಸಂಗತೀ । ಜ್ಯಾಂಸೀ ಘಡೇ ಭಲತ್ಯಾ ರೀತೀ । ತೇ ಉದ್ಧರಲೇ ಗಾ ನಿಶ್ಚಿತೀ । ಜಾಣ ಪರೀಕ್ಷಿತೀ ಕುರುರಾಯಾ ।೨೪೮॥

ಅರ್ಜುನಃ ಪ್ರೇಯಸಃ ಸಖ್ಯುಃ ಕೃಷ್ಣಸ್ಯ ವಿರಹಾತುರಃ । ಆತ್ಮಾನಂ ಸಾಂತ್ವಯಾಮಾಸ ಕೃಷ್ಣಗೀತೈಃ ಸದುಕ್ತಿಭಿಃ ।೨೧॥

ಅರ್ಥ:- ಹೇ, ಪರೀಕ್ಷಿತೀಯೇ, ತನ್ನ ಪ್ರಿಯತಮ ಮತ್ತು ಭಗವಾನ ಶ್ರೀಕೃಷ್ಣನ ಸಖನಾಗಿರುವ ಅರ್ಜುನನು ವಿರಹ ತಾಪದಿಂದ ಪ್ರಾರಂಭದಲ್ಲಿ ಅತ್ಯಂತ ವ್ಯಾಕುಲನಾದನು. ತದನಂತರ ಶ್ರೀಗೀತೆಯ ಸದುಪದೇಶದ ಸ್ಮರಣೆ ಮಾಡಿಕೊಂಡು ಆತನು ತನ್ನ ಮನವನ್ನು ತಾನೇ ಸಂತೈಸಿದನು.

ಜ್ಯಾಚಾ ರಥ ವಾಗವೀ ಆಪಣ । ಜ್ಯಾಚಾ ಸಾರಥೀ ಶ್ರೀಕೃಷ್ಣ । ಐಸಾ ಪ್ರಿಯಸಖಾ ಅರ್ಜುನ । ಕೃಷ್ಣವಿರಹೇ ಪೂರ್ಣ ಉದ್ವಿಗ್ನ ಜಾಹಲಾ ।೨೪೯॥ ತಂವ ಕೃಷ್ಣಗೀತಾ ಸದುಕ್ತೀ । ಆಠವಲ್ಯಾ ತ್ಯಾಚ್ಯಾ ಚಿತ್ತೀ । ಮಗ ಆಪಣ ಆಪಣಾಪ್ರತೀ । ಬೋಲಿಲಾ ಉಪಪತ್ತೀ ತ್ಯಾ ಐಕಾ ।೨೫೦॥ ಕೃಷ್ಣ ಮಾಝ್ಯಾ ಮನಾಚೇ ''ಮನ'' । ಕೃಷ್ಣ ''ಬುದ್ಧೀಚೇ'' ಆಯತನ । ಕೃಷ್ಣಪ್ರಭಾ ಹೇ ಪ್ರಕಾಶೇ ''ಜ್ಞಾನ''। ತೇಥ ಬಿನ್ನಪಣ ಮಜ ಕೈಚೇ ।೨೫೧॥ ಕೃಷ್ಣಪ್ರಭಾ''ದೃಷ್ಟೀ'' ದೇಖೇ । ಕೃಷ್ಣ ಅವಧಾನೇ''ಶ್ರವಣ'' ಐಕೇ । ಕೃಷ್ಣಾನುವಾದೇ''ಬೋಲ''ಬೋಲಕೇ । ತೇಥೇ ''ಮೀ'' ವೇಗಳಿಕೇ ವೃಥಾ ಮಾನೀ ।೨೫೨॥ ಕೃಷ್ಣಹೃದಯಸ್ಥ ''ಆತ್ಮಾ'' ಅವ್ಯಂಗ । ಕೃಷ್ಣ ಮಾಝ್ಯಾ ಅಂಗಾಚೇ ಅಂಗ । ತ್ಯಾ ಕೃಷ್ಣಾಸೀ ಮಜ ವಿಯೋಗ । ಹಾ ಮಿಥ್ಯಾ ಪ್ರಯೋಗ ಮಾಯಿಕ ।೨೫೩॥ ಕೃಷ್ಣ ಮಾಝ್ಯಾ ಜೀವಾಚೇ ಜೀವನ । ಕೃಷ್ಣ ಸಬಾಹ್ಯ ಪರಿಪೂರ್ಣ । ಕೃಷ್ಣವಿಯೋಗ ಮಾನೀ ಜೇ ಮೀಪಣ । ತೇಹೀ ನಿಮಗ್ನ ಶ್ರೀಕೃಷ್ಣೀ ।೨೫೪॥

ಯಾರಿಗೆ ಈ ಲೋಕದಲ್ಲಿ ಶ್ರೀಕೃಷ್ಣನ ಸಂಗತಿಯು ಸಾಧಿಸಿರುವುದೋ ಅವರಿಗೆ ಪರಲೋಕದಲ್ಲಿ ಅನ್ಯಗತಿ ಪ್ರಾಪ್ತವಾಗುವುದು ಎಂದು ಹೇಳಿದರೆ ಜ್ಞಾನೀ ಪುರುಷರಿಗೆ ಕೋಪ ಉಂಟಾಗುವುದು. ಅವರಿಗೆ ಪೂರ್ಣತ್ವದಿಂದ ಪೂರ್ಣ ಪ್ರಾಪ್ತಿಯಾಯಿತು ।೨೪೪॥ ಒಬ್ಬ ಮನುಷ್ಯನು ಜಾರಿ ಗಂಗೆಯಲ್ಲಿ ಬಿದ್ದರೆ ಆತನ ಪಾಪಗಳು ಕೂಡಲೇ ಇಲ್ಲದಾಗುವುವು. ಅಂದಮೇಲೆ ಶಾಸ್ತ್ರ ವಿಧಿ ಪ್ರಕಾರ ಗಂಗೆಯಲ್ಲಿ ಸ್ನಾನ ಮಾಡಲು ಆತನ ಪಾಪವು ನಷ್ಟವಾಗಲಿಕ್ಕಿಲ್ಲವೆ? ।೨೪೫॥ ಇದರಂತೆ ಶ್ರೀಕೃಷ್ಣನ ವ್ಯಭಿಚಾರ ಸಂಗತಿಯಿಂದ ಅದೆಷ್ಟೋ ಗೋಪಿಕೆಯರ ಉದ್ಧಾರವಾಯಿತು. ಇದರ ಗಣನೆಯೇ ಇಲ್ಲ. ಅಂದಮೇಲೆ ವಿವಾಹಿತ ಪತ್ನಿಯರಿಗೆ ಅನ್ಯಗತಿಯು ಪ್ರಾಪ್ತವಾಗಲು ಹೇಗೆ ಸಾಧ್ಯ? ।೨೪೬॥ ಹೆಚ್ಚಿಗೇನು ಹೇಳಬೇಕು? ಶ್ರೀಕೃಷ್ಣನ ಪಾದಸ್ಪರ್ಶದಿಂದ, ಅಂಗಸ್ಪರ್ಶದಿಂದ ಗೋಕುಲ ವೃಂದಾವನದಲ್ಲಿನ, ತೃಣ, ಬಳ್ಳಿ, ಮೃಗ, ಪಾಷಾಣ, ಗೋವು, ಗೋಪಿಕೆಯರು, ಗೌಳೀ ಜನರು ಹೀಗೆ ಇವರೆಲ್ಲರೂ ಉದ್ಧರಿಸಿದರೆಂದರೆ ಆತನ ಸ್ವತಃ ಪತ್ನಿಯರಿಗೆ ಅನ್ಯಗತಿ ಹೇಗಾದೀತು? ।೨೪೭॥ ಆದ್ದರಿಂದ ಹೇ ಕುರುರಾಜ ಪರೀಕ್ಷಿತೀಯೇ, ಶ್ರೀಕೃಷ್ಣನ ಸಂಗತಿಯು ಯಾವುದೇ ಪ್ರಕಾರದಿಂದ ಯಾರಿಗೆ ದೊರೆಯುವುದೋ, ಅವರ ಉದ್ಧಾರವು ನಿಶ್ಚಯವಾಗಿ ಆಗುವುದು ।೨೪೮॥

ಯಾರ ಸಾರಥಿಯಾಗಿ ಆತನ ರಥ ನಡೆಸುತ್ತಿದ್ದನೋ, ಅಂಥ ಶ್ರೀಕೃಷ್ಣನ ಪ್ರಿಯ ಸಖನಾಗಿರುವ ಅರ್ಜುನನಂತೂ ಶ್ರೀಕೃಷ್ಣನ ವಿರಹದಿಂದ ಅತಿಶಯವಾಗಿ ದುಃಖಿಯಾದನು ।೨೪೯॥ ಆಗ ಆತನಿಗೆ ಶ್ರೀಕೃಷ್ಣನು ಉಪದೇಶಿಸಿರುವ ಭಗವದ್ಗೀತೆಯ ಸ್ಮರಣೆಯಾಯಿತು. ಆದ್ದರಿಂದ ತಾನು ತನ್ನ ಮನಸ್ಸಿಗೆ ಹೇಗೆ ತಿಳಿವಳಿಕೆ ಕೊಟ್ಟನೆಂಬುವುದನ್ನು ಈಗ ಕೇಳಿರಿ ।೨೫೦॥ ಶ್ರೀಕೃಷ್ಣನಾದರೂ ನನ್ನ ಮನದ ಮನಸ್ಸಾಗಿರುವನು. ಕೃಷ್ಣನು ನನ್ನ ಬುದ್ಧಿಯ ಅಧಿಷ್ಠಾನನಾಗಿರುವನು. ಶ್ರೀಕೃಷ್ಣನ ಪ್ರಕಾಶದಿಂದ ನನ್ನ ಜ್ಞಾನವು ಪ್ರಕಾಶಿತವಾಗುವುದು. ಹೀಗಿದ್ದ ಮೇಲೆ ನನ್ನಲ್ಲಿ ಮತ್ತು ಆತನಲ್ಲಿ ಭಿನ್ನಭಾವವಿಲ್ಲ ।೨೫೧॥ ಶ್ರೀಕೃಷ್ಣಪ್ರಭೆಯಿಂದ ಕಣ್ಣುಗಳು ನೋಡುವುವು. ಶ್ರೀಕೃಷ್ಣನ ಅವಧಾನಶಕ್ತಿಯಿಂದ ಕಿವಿಗಳು ಕೇಳುತ್ತಿರುವುವು. ಶ್ರೀಕೃಷ್ಣನ ಅನುವಾದಶಕ್ತಿಯಿಂದ ವಾಣಿಯು ನುಡಿಯುವುದು. ಹೀಗಿರುತ್ತಿರಲು ನಾನು ಭಿನ್ನನೆಂದು ವ್ಯರ್ಥವಾಗಿ ತಿಳಿದೆನು ।೨೫೨॥ ಶ್ರೀಕೃಷ್ಣನು ನನ್ನ ಹೃದಯದಲ್ಲಿರುವ ಅವ್ಯಂಗ ಆತ್ಮನು. ಆತನೇ ನನ್ನ ಶರೀರದ ಅವಯವಗಳಾಗಿರುವನು. ಅಂದಮೇಲೆ ಶ್ರೀಕೃಷ್ಣನ ವಿಯೋಗವಾಯಿತು ಎಂದು ಹೇಳುವಿಕೆಯು ಮಿಥ್ಯೆ ಹಾಗೂ ಮಾಯಿಕವಾಗಿರುವುದು ।೨೫೩॥ ಶ್ರೀಕೃಷ್ಣನು ನನ್ನ ಜೀವದ ಜೀವನನು. ಶ್ರೀಕೃಷ್ಣನು ನನ್ನ ಒಳಹೊರಗೆ ತುಂಬಿಕೊಂಡಿರುವನು. ಶ್ರೀಕೃಷ್ಣನ ವಿಯೋಗ ತಿಳಿದುಕೊಳ್ಳುವ ಯಾವ ನಾನು ಎಂಬುವುದು ಅದೂ ಕೂಡ ಶ್ರೀಕೃಷ್ಣನಲ್ಲಿ ತಲ್ಲೀನವಾಗಿರುವುದು ।೨೫೪॥

ಭಿನ್ನ ಭಿನ್ನ ಭೂತಾಕೃತೀ । ತ್ಯಾಮಾಜೀ ಅಭಿನ್ನ ಕೃಷ್ಣಸ್ಥಿತೀ । ವಿಷಮೀ ಸಮಾನ ಶ್ರೀಪತೀ । ತ್ಯಾಸೀ ವಿಯೋಗಪ್ರಾಪ್ತೀ । ಕದಾ ನ ಘಡೇ ॥೨೫೫॥ ಘಟ ಮೃತ್ತಿಕೇಸೀ ನವ್ಹೇ ಭಿನ್ನ । ಪಟ ನ ನಿವಡೇ ತಂತು ತ್ಯಾಗೂನ । ತೈಸಾ ಶ್ರೀಕೃಷ್ಣವೇಗಳಾ ಅರ್ಜುನ । ಮಾಝೀ ಮೀಪಣ ನಿವಡೇನಾ ॥೨೫೬॥ ಕೃಷ್ಣಾ ವಿಯೋಗ ಮೀ ಮಾನೀ ಜೇಥ । ತೇಥೇಹೀ ಅಸೇ ಶ್ರೀಕೃಷ್ಣನಾಥ । ವಿಯೋಗ ಮಾನಿತೀ ಜೇ ಸತ್ಯ । ತೇ ಕೇವಳ ಭ್ರಾಂತ ಅತಿಮೂರ್ಖ ॥೨೫೭॥ ನಿತ್ಯ ಸರ್ವಗತ ಪರಿಪೂರ್ಣ । ಕೃಷ್ಣ ಅಖಂಡ ದಂಡಾಯಮಾನ । ತ್ಯಾಸೀ ಮಜಸೀ ವೇಗಳೇಪಣ । ಸರ್ವಥಾ ಜಾಣ ಅಸೇನಾ ॥೨೫೮॥ ''ನ ಜಾಯತೇ ಮ್ರಿಯತೇ'' ಹೇ ವಚನ । ಸ್ವಮುಖೇ ಬೋಲಿಲಾ ಶ್ರೀಕೃಷ್ಣ । ತ್ಯಾ ಕೃಷ್ಣಾಚೇ ಜನ್ಮ ಮರಣ । ಮೂರ್ಖಜನ ಮಾನಿತೀ ॥೨೫೯॥ 'ಅಕ್ಷರಂ ಬ್ರಹ್ಮ ಪರಮಂ' । ಸ್ವಯೇ ಬೋಲಿಲಾ ಪುರುಷೋತ್ತಮ । ತ್ಯಾ ಕೃಷ್ಣಾಸೀ ಮರಣಜನ್ಮ । ಮೂರ್ಖ ಮನೋಧರ್ಮ ಕಲ್ಪಿತೀ ॥೨೬೦॥ ಜೋ 'ಕ್ಷರಾಕ್ಷರಾತೀತ' । 'ಉತ್ತಮ ಪುರುಷ' ಶ್ರೀಕೃಷ್ಣನಾಥ । ತ್ಯಾಸೀ ಜನ್ಮ ಮರಣಾದೀ ಆವರ್ತ । ಕಲ್ಪಿತೀ ಭ್ರಾಂತ ಮನೋಧರ್ಮೇ ॥೨೬೧॥ ತ್ಯಾ ಕೃಷ್ಣಾಸೀ ಮಜ ವೇಗಳೇಪಣ । ಕಲ್ಪಾಂತೀಹೀ ನಾಹೀ ಜಾಣ । ಕರಿತಾ ಗೀತಾರ್ಥಾಚೇ ಸ್ಮರಣ । ಆಪುಲೇ ಆಪಣ ಪೂರ್ಣತ್ವ ದೇಖೇ ॥೨೬೨॥ ಮೀ ಅಜ ಆದ್ಯ ಅಚಳ । ಮೀ ನಿಜ ನಿತ್ಯ ನಿರ್ಮಳ । ಮಾಝ್ಯಾ ಸ್ವರೂಪಾ ನಾಹೀ ಚಳ । ತ್ರೈಲೋಕ್ಯ ಖೇಳ ಪೈ ಮಾಝಾ ॥೨೬೩॥ ಜಗಾತೇ ನೇಮಿತಾ ವೇದ । ತೋ ನಿಃಶ್ವಸಿತ ಮಾಝಾ ಬೋಧ । ಮೀ ಆನಂದಾ ಪರಮಾನಂದ । ಸ್ವಾನಂದಕಂದ ನಿಜಾಂಗೇ ॥೨೬೪॥ ಮೀ ಆಪರೂಪೇ ಆಪ । ಮೀ ಪ್ರಕೃತಿಪುರುಷಾಂಚಾ ಬಾಪ । ಮೀ ಅವತಾರೀ ಅವತರೇ ಕೃಷ್ಣರೂಪ । ಹಾ ಸತ್ಯಸಂಕಲ್ಪ ಪೈ ಮಾಝಾ ॥೨೬೫॥ ಧರೋನಿಯಾ ಮಾಝ್ಯಾ ಸ್ವರೂಪಾಚಾ ಆಧಾರ । ಮೀಚಿ ಕೃಷ್ಣೀ ಕೃಷ್ಣರೂಪ ಅವತಾರ । ಕರೂನಿ ಸ್ವಲೀಲಾ ನಾನಾಚರಿತ್ರ । ಅಂತೀ ಸಾಮಾವೇ ಸಾಚಾರ ಮಜಮಾಜೀ ಮೀಚ ॥೨೬೬॥ ಮಾಝ್ಯಾ ನಿಜಸ್ವರೂಪಾಚೇನಿ ಬಳೇ । ಮೀಚ ಕೃಷ್ಣರೂಪೇ ಖೇಳ ಖೇಳೇ । ಅಂತೀ ಮಜ ಮಾಜೀ ಮೀ ಮಿಳೇ । ನಿಜಾತ್ಮಮೇಳೇ ನಿಜನಿಷ್ಠಾ ॥೨೬೭॥ ಏಕ ನರ ಏಕ ನಾರಾಯಣ । ಪರಸ್ಪರೇ ತೇ ಜಾಣ ಅಭಿನ್ನ । ಯಾಲಾಗೀ ಪೂರ್ಣತೇ ಅರ್ಜುನ । ಆಪಣ್ಯಾ ಆಪಣ ಸ್ವಯೇ ದೇಖೇ ॥೨೬೮॥

ಭೂತಾಕೃತಿಗಳು ಭಿನ್ನ ಭಿನ್ನವಾಗಿರುವುವು. ಅವುಗಳಲ್ಲಿ ಶ್ರೀಕೃಷ್ಣನು ಐಕ್ಯರೂಪದಿಂದಿರುವನು. ವಿಷಮದಲ್ಲಿಯೂ ಸಹ ಸಮವಾಗಿ ಇರುವ ಯಾವ ಶ್ರೀಹರಿಯ ವಿಯೋಗವು ಎಂದಿಗೂ ಆಗಲು ಸಾಧ್ಯವೇ ಇಲ್ಲ ॥೨೫೫॥ ಘಟವು ಮಣ್ಣಿನಿಂದ ಭಿನ್ನವಿರುವುದಿಲ್ಲವೋ ಅಥಾವ ವಸ್ತ್ರವು ನೂಲಿನಿಂದ ಭಿನ್ನವಾಗಿರುವುದಿಲ್ಲವೋ, ಅದರಂತೆ ಅರ್ಜುನನು ಶ್ರೀಕೃಷ್ಣನಿಂದ ಭಿನ್ನನಾಗಿರುವುದಿಲ್ಲ. ಕಾರಣ ನನ್ನ ಅಹಂತತ್ವವು ಆತನಿಂದ ಭಿನ್ನವಿಲ್ಲ ॥೨೫೬॥ ಶ್ರೀಕೃಷ್ಣನ ವಿಯೋಗವಾಯಿತೆಂದು ಹೀಗೆ ನಾನು ತಿಳಿಯುತ್ತಿದ್ದರೆ ಅಲ್ಲಿಯೂ ಸಹ ಶ್ರೀಕೃಷ್ಣನು ಇದ್ದೇ ಇರುವನು. ಅದಕ್ಕಾಗಿ ವಿಯೋಗವು ಇದು ನಿಜವೆಂದು ತಿಳಿಯುವವರು ಅತ್ಯಂತ ಭ್ರಾಂತರು ಹಾಗೂ ಮೂರ್ಖರಾಗಿರುವರು ॥೨೫೭॥ ನಿತ್ಯ, ಸರ್ವಗತ, ಪರಿಪೂರ್ಣ, ಅಖಂಡ, ಏಕರೂಪ ಹೀಗಿರುವ ಆ ಕೃಷ್ಣನಲ್ಲಿ ಮತ್ತು ನನ್ನಲ್ಲಿ ಭೇದ ಮಾತ್ರ ಇಲ್ಲವೇ ಇಲ್ಲ ॥೨೫೮॥ ''ನ ಜಾಯತೇ ಮ್ರಿಯತೇ'' ಅಂದರೆ ಆತ್ಮವು ಜನ್ಮಕ್ಕೆ ಬರುವುದಿಲ್ಲ ಮತ್ತು ಸಾಯುವುದಿಲ್ಲ. ಹೀಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿರುವನು. ಆ ಶ್ರೀಕೃಷ್ಣನಿಗೆ ಜನ್ಮ-ಮರಣ ಇದೆ ಎಂದು ಮೂರ್ಖ ಜನರು ತಿಳಿಯುವರು ॥೨೫೯॥ ನಾನು ಯಾವಾಗಲೂ ಅಕ್ಷರ ಮತ್ತು ಪರಬ್ರಹ್ಮನಾಗಿರುವೆನು. ಹೀಗೆ ಸ್ವತಃ ಆ ಪುರುಷೋತ್ತಮನೇ ಹೇಳಿರುವನು. ಆ ವಸುದೇವ ಪುತ್ರ ಶ್ರೀಕೃಷ್ಣನಿಗೆ ಜನ್ಮ-ಮರಣವು ಇದು ಮೂಢರ ಮಾತ್ರ ಮನದ ಕಲ್ಪನೆಯಾಗಿರುವುದು ॥೨೬೦॥ ಕ್ಷರ ಮತ್ತು ಅಕ್ಷರ ಇವುಗಳಿಂದಲೂ ಆಚೆ ಕಡೆ ಇರುವ ಪುರುಷೋತ್ತಮ ಮುರಲೀಧರ ಶ್ರೀಕೃಷ್ಣನು, ಆತನಿಗೆ ಭ್ರಮಿಷ್ಠ ಜನರು ಮಾತ್ರ ತಮ್ಮ ಮನದಿಂದಲೇ ಜನ್ಮ ಮರಣರೂಪ ತಿರುಗಾಟದ ಕಲ್ಪನೆ ಮಾಡುವರು ॥೨೬೧॥ ಆ ಕೃಷ್ಣನಿಗೂ ಮತ್ತು ನನಗೂ ಯಾವ ಕಲ್ಪಾಂತಕ್ಕೂ ಕೂಡ ಭಿನ್ನತ್ವವು ಇರುವುದಿಲ್ಲ. ಈ ಪ್ರಕಾರವಾಗಿ ಭಗವದ್ಗೀತೆಯ ಜ್ಞಾನದ ಸ್ಮರಣೆ ಮಾಡುತ್ತಲೇ ಆತನಿಗೆ ತನ್ನ ಪೂರ್ಣತ್ವದ ಅನುಭವವು ಪರಿಪೂರ್ಣವಾಗಿ ಬಂದಿತು ॥೨೬೨॥ ನಾನು ಅಜನ್ಮನು, ಆದ್ಯನು, ಅಚಲನು, ನಿತ್ಯನು ಹಾಗೂ ಆತ್ಮ ಸ್ವರೂಪಿಯಾಗಿರುವೆನು. ನನ್ನ ಸ್ವರೂಪಕ್ಕೆ ಎಂದಿಗೂ ಬದಲಾವಣೆಯಾಗದು. ತ್ರೈಲೋಕ್ಯದಲ್ಲಿ ನನ್ನದೇ ಆದ ಒಂದು ಆಟವಾಗಿರುವುದು ॥೨೬೩॥ ವಿಶಾಲವಾಗಿರುವ ಈ ಜಗತ್ತಿಗೆ ನಿಯಮಗಳನ್ನು ಹಚ್ಚಿಕೊಡುವ ಆ ಯಾವ ವೇದವು ನನ್ನ ಶ್ವಾಸೋಚ್ಛ್ವಾಸದಿಂದ ಹೊರಟ ಬೋಧೆಯಾಗಿರುವುದು. ಆನಂದದ ಪರಮಾನಂದ ಮತ್ತು ಸ್ವಾನಂದದ ಕಂದ ಈ ಪ್ರಕಾರದ ಸ್ವಯಂ ನಾನೇ ಆಗಿರುವೆನು ॥೨೬೪॥ ನಾನು ಉದಕರೂಪದಿಂದ ಉದಕನು, ಸರ್ವ ಪ್ರಕೃತಿಪುರುಷರ ಜನಕನು ನಾನು, ನಾನೇ ಕೃಷ್ಣರೂಪದಿಂದ ಅವತಾರ ಧರಿಸಿ ಬಂದಿರುವೆ. ಇದು ನನ್ನ ಸತ್ಯಸಂಕಲ್ಪವಾಗಿದೆ ॥೨೬೫॥ ನನ್ನದೇ ಆದ ಸ್ವರೂಪದ ಸಹಾಯದಿಂದ ನಾನೇ ಕೃಷ್ಣರೂಪದಿಂದ ಅವತಾರ ಧರಿಸಿ ನನ್ನದೇ ಆದ ಲೀಲೆಯಿಂದ ನಾನಾವಿಧ ಚರಿತ್ರೆಗಳನ್ನು ಆಚರಿಸಿ ಕೊನೆಯಲ್ಲಿ ಸ್ವಸ್ವರೂಪದಲ್ಲಿಯೇ ಸಮಾವಿಷ್ಟನಾದೆನು ॥೨೬೬॥ ನನ್ನ ನಿಜಸ್ವರೂಪದ ಶಕ್ತಿಯಿಂದ ನಾನು ಕೃಷ್ಣಸ್ವರೂಪದಿಂದ ನಾನಾವಿಧವಾದ ಆಟಗಳನ್ನು ಆಡಿದೆನು. ಕೊನೆಗೆ ನನ್ನಲ್ಲಿಯೇ ನಾನು ಆತ್ಮನಿಷ್ಠೆಯಿಂದ ಏಕರೂಪನಾಗಿ ನನ್ನಲ್ಲಿಯೇ ಕೂಡಿಕೊಂಡೆನು ॥೨೬೭॥ ಒಬ್ಬನು ನರನು ಮತ್ತೊಬ್ಬನು ನಾರಾಯಣನು, ಅವರಿಬ್ಬರೂ ಪರಸ್ಪರ ಅಭಿನ್ನರಾಗಿಯೇ ಇದ್ದರು. ಆದ್ದರಿಂದ ಕೃಷ್ಣಸಖ ಅರ್ಜುನನು ತಾನೇ ತನ್ನನ್ನು ಪೂರ್ಣ ಸ್ವರೂಪದಲ್ಲಿ ಕಾಣಹತ್ತಿದನು ॥೨೬೮॥

ಬಾಪ ಕೃಪಾಳು ಕೃಪಾನಿಧಿ । ಉಪದೇಶಿಲಾ ಯುದ್ಧಸಂಧೀ । ಪರೀ ಲಾವಿಲೀ ಜೇ ಸಮಾಧೀ । ತೇ ನ ಮೋಡೇ ತ್ರಿಶುದ್ಧೀ ಕಲ್ಪಾಂತಕಾಳೀ ।।೧೬೯।। ನಾಹೀ ಸ್ಥಾನಶುದ್ಧೀ ಚೋಖಟ । ಸೈಂಘ ರಥಾಂಚೇ ಘಡಘಡಾಟ । ಸುಟತಾ ಶಸ್ತ್ರಾಂಚೇ ಕಡಕಡಾಟ । ಲಾವಿಲೀ ನಿರ್ದುಷ್ಟ ಪರಮಾರ್ಥನಿಷ್ಠಾ ।।೧೭೦।। ಕೈಶೀ ಲಾವಿಲೀ ಸಮಾಧೀ । ಜೀ ನ ಮೋಡೇಚ ಮಹಾಯುದ್ಧೀ । ಶೇಖೀ ಕೃಷ್ಣಾವಸಾನ ಅವಧೀ । ತೋಚಿ ಬೋಧ ಉದ್ಬೋಧೀ ಪರಿಪೂರ್ಣತ್ವೇ ।।೧೭೧।। ಜ್ಯಾಸೀ ಗೀತಾ ಉಪದೇಶೀ ಶ್ರೀಕೃಷ್ಣ । ತ್ಯಾಸೀ ನ ಬಾಣೇ ಪೂರ್ಣಪಣ । ಐಸೇ ಬೋಲತಾ ವಚನ । ಪರಮ ದೂಷಣ ವಾಚೇಸೀ ।।೧೭೨।। ತೇ ವಾಚಾ ಗಲಿತಕುಷ್ಠೇ ಝಡೇ । ತೀ ಸೀ ವಿಕಲ್ಪಾಚೇ ಪಡತೀ ಕೀಡೇ । ತೇ ವಾಚಾಚಿ ಸಮೂಳ ಉಡೇ । "ಕೃಷ್ಣೋಕ್ತೀ ನ ಘಡೇ ಬೋಧ" ಮ್ಹಣತಾ ।।೧೭೩।। ಗೀತಾ ಉಪದೇಶೇ ಪೂರ್ಣಪಣ । ನವ್ಹೇ ಐಸೇ ಮ್ಹಣತಾ ಜಾಣ । ವಾಗ್ದೇವತಾ ಕಾಂಪೇ ಆಪಣ । ಇತರಾಂಚಾ ಕೋಣ ಪಡಿಪಾಡೂ ।।೧೭೪।। ಗೀತಾ ಐಕೇ ಪಾಹೇ ಪಢೇ । ಜ್ಯಾಸೀ ಗೀತಾಸ್ಮರಣ ಘಡೇ । ತ್ಯಾಸೀ ಪರಿಪೂರ್ಣತ್ವ ಸ್ವಯೇ ಜೋಡೇ । ಮಾ ಉಪದೇಶೇ ನಾತುಡೇ ಪರಿಪೂರ್ಣತ್ವ ಕೈಸೇ ।।೧೭೫।। ಗೀತಾರ್ಥಾಚೇ ಪುರ್ಣಪಣ । ವಕ್ತಾ ಜಾಣೇ ಶ್ರೀಕೃಷ್ಣ । ಕಾ ಶ್ರೋತಾ ಜಾಣೇ ಅರ್ಜುನ । ತ್ಯಾಸೀ ತೇ ಖೂಣ ಬಾಣಲೀ ।।೧೭೬।। ಸಾರಾಂಶ ಕಾಢೂನಿ ವೇದಾರ್ಥಾ । ಶ್ರೀಕೃಷ್ಣೇ ಪ್ರಕಟ ಕೇಲೀ ಗೀತಾ । ಜೇಥಿಲ ಅಭಿಪ್ರಾಯೋ ಪಾಹತಾ । ಜೋಡೇ ಆಇತಾ ನಿಜಮೋಕ್ಷ ।।೧೭೭।। ಪರದೇಶೀ ಜಾಹಲಾ ಹೋತಾ ವೇದಾಂತ । ತ್ಯಾಸೀ ಸಹಾಯ ಜಾಹಲಾ ಗೀತಾರ್ಥ । ತೇಣೇ ಬಳೇ ಮತೇ ಸಮಸ್ತ । ಜಿಣೋನಿ ಸಮರ್ಥ ತೋ ಝಾಲಾ ।।೧೭೮।। ಕೃಷ್ಣನಿಃಶ್ವಾಸೀ ಜನ್ಮಲೇ ವೇದ । ಗೀತಾ ಶ್ರೀಕೃಷ್ಣಮುಖೇ ಪ್ರಗಟಲೀ ಶುದ್ಧ । ಯಾಲಾಗೀ ಗೀತಾರ್ಥ ಅಗಾಧ । ಧಡೌತೇ ವೇದ ತೇಣೇ ಜಾಹಲೇ ।।೧೭೯।। ವೇದೇ ಆಪ್ತ ಕೇಲೇ ತಿನೀ ವರ್ಣ । ದುರಾವಲೇ ಸ್ತ್ರೀಶೂದ್ರಾದಿ ಜನ । ನ ಶಿವೇಚಿ ತ್ಯಾಂಚೇ ಕಾನ । ಹೇ ವೇದಾಂಸೀ ನ್ಯೂನಪಣ ಪೈ ಆಲೇ ।।೧೮೦।। ತೇ ವೇದಾಚೇ ಫೇಡಾವಯಾ ಉಣೇ । ಗೀತಾ ಪ್ರಗಟ ಕೇಲೀ ಶ್ರೀಕೃಷ್ಣೇ । ಗೀತೇಚೇನಿ ಶ್ರವಣೇ ಪಠಣೇ । ಉದ್ಧರಣೇ ಸಮಸ್ತೀ ।।೧೮೧।।

ಅಬ್ಬಾ ! ಆ ಕೃಪಾಸಾಗರನು ಎಂತಹ ಕೃಪಾವಂತನು ! ಯುದ್ಧದ ಸಂಧಿಯಲ್ಲಿ ಶ್ರೀಕೃಷ್ಣನು ತನ್ನ ಸಖನಾದ ಅರ್ಜುನನಿಗೆ ಉಪದೇಶ ಮಾಡಿದನು. ಆದರೆ ಆ ಸಮಯದಲ್ಲಿ ಆತನಿಗೆ ಹತ್ತಿದ ಸಮಾಧಿಯು ಕಲ್ಪಾಂತಕ್ಕೂ ನಿಜವಾಗಿಯೂ ಭಂಗವಾಗದಂತಾಗಿರುವುದು ।।೧೬೯।। ನಿಜವಾಗಿ ನೋಡಿದರೆ ಆ ಸ್ಥಳವು ಅತಿಶಯ ಪವಿತ್ರ ಹಾಗೂ ಏಕಾಂತವಾಗಿದ್ದಿಲ್ಲ. ಅನೇಕ ರಥಗಳ ಘಡಘಡಾಟವು ಆರಂಭವಾಗಿತ್ತು. ಶಸ್ತ್ರಗಳ ಝಣತ್ಕಾರವೂ ಆರಂಭಗೊಂಡಿತ್ತು. ಅಂತಹ ಸ್ಥಳದಲ್ಲಿಯೂ ನಿರ್ದೋಷ ಪರಮಾತ್ಮ ನಿಷ್ಠೆಯನ್ನು ಆತನ ಹೃದಯಕ್ಕೆ ಬಿಂಬಿಸಿದನು ।।೧೭೦।। ಅದು ಎಂತಹ ಸಮಾಧಿವಿರಬಹುದು? ಅದು ಅತಿ ಭಯಂಕರ ಯುದ್ಧದಲ್ಲಿಯೂ ಕೂಡ ಭಂಗವಾಗಲಿಲ್ಲ. ಕೊನೆಗೆ ಆ ಬೋಧೆಯು ಭಗವಾನ ಶ್ರೀಕೃಷ್ಣನ ನಿರ್ಯಾಣ ಪ್ರಸಂಗದಲ್ಲಿ ಪರಿಪೂರ್ಣವಾಗಿ ಪ್ರಕಟವಾಯಿತು ।।೧೭೧।। ಯಾರಿಗೆ ಶ್ರೀಕೃಷ್ಣನು ಸ್ವತಃ ತಾನೇ ಗೀತೆಯ ಉಪದೇಶ ಮಾಡಿದನೋ, ಆತನಿಗೆ ಪೂರ್ಣತ್ವವು ಇಲ್ಲವೆಂದು ಹೇಳಿದರೆ ಆ ವಾಣಿಗೆ ದೋಷ ಉಂಟಾಗುವುದು ।।೧೭೨।। ಆ ವಾಣಿಯು ಗಲಿತಕುಷ್ಠರೋಗದಿಂದ ಉದುರಿಹೋದಿತು. ಆ ವಾಣಿಗೆ ವಿಕಲ್ಪದ ಹುಳಗಳು ಬೀಳುವುವು. ಶ್ರೀಕೃಷ್ಣೋಕ್ತಿಯಿಂದ ಬೋಧವು ಸಾಧಿಸಲಿಲ್ಲ ಎಂದು ಹೇಳುವವರ ನಾಲಿಗೆಯೇ ಉದುರಿ ಬೀಳುವುದು ।।೧೭೩।। ಗೀತೋಪದೇಶದಿಂದ ಪೂರ್ಣತ್ವವು ಪ್ರಾಪ್ತವಾಗುವುದಿಲ್ಲವೆಂದು ಹೇಳಿದರೆ ವಾಣಿಯ ದೇವತೆ ಶಾರದೆಯು ಗಡಗಡ ನಡುಗಬೇಕಾದೀತು. ಅಂದಮೇಲೆ ಇತರ ಜನರ ಯಾವ ಕಥೆ ಹೇಳಬೇಕು ? ।।೧೭೪।। ಯಾರು ಶ್ರೀಮದ್‌ಭಗವದ್ಗೀತೆಯನ್ನು ಕೇಳುವರೋ, ನೋಡುವರೋ ಮತ್ತು ಅದರ ಪಠಣೆ ಮಾಡುವರೋ, ಕೇವಲ ಸ್ಮರಿಸುವರೋ, ಇವರಿಗೂ ಕೂಡ ಸಂಪೂರ್ಣ ಪೂರ್ಣತ್ವವು ಬರುವುದು. ಹೀಗಿರಲು ಯಾರಿಗೆ ಪ್ರತ್ಯಕ್ಷವಾಗಿಯೇ ಗೀತೋಪದೇಶವಾಗಿರುವುದರಿಂದ ಆತನಿಗೆ ಪೂರ್ಣತ್ವವು ಹೇಗೆ ತಾನೇ ಬರಲಿಕ್ಕಿಲ್ಲ ? ।।೧೭೫।। ಗೀತಾರ್ಥದ ಪೂರ್ಣತ್ವವನ್ನು ಒಬ್ಬ ಅದರ ವಕ್ತಾ ಪುರುಷೋತ್ತಮ ಶ್ರೀಕೃಷ್ಣನು ತಿಳಿದಿರುವನು. ಶ್ರೋತೃನಾದ ಗಾಂಡೀವಧಾರೀ ಅರ್ಜುನನು ತಿಳಿಯಬಲ್ಲನು. ಕಾರಣ ಅವರಲ್ಲಿ ಗೀತಾ ರಹಸ್ಯವು ಅವರ ಅಂತಃಕರಣದಲ್ಲಿಯೇ ಪೂರ್ಣವಾಗಿ ಬಿಂಬಿಸಲ್ಪಟ್ಟಿತ್ತು ।।೧೭೬।। ವೇದಾರ್ಥದ ಸಾರಾಂಶ ತೆಗೆದು ಭಗವಾನ ಶ್ರೀಕೃಷ್ಣನು ಭಗವದ್ಗೀತೆ ಪ್ರಕಟಿಸಿದನು. ಆ ಗೀತೆಯ ರಹಸ್ಯ ತಿಳಿದುಕೊಂಡರೆ ಸಹಜವಾಗಿ ಮೋಕ್ಷವು ಪ್ರಾಪ್ತವಾಗುವುದು ।।೧೭೭।। ವೇದಾಂತವು ಪೂರ್ಣವಾಗಿ ಪರದೇಶಿಯಾಗಿತ್ತು. ಆ ವೇದಾಂತಕ್ಕೆ ಗೀತಾರ್ಥದಿಂದ ಆಶ್ರಯಸ್ಥಾನ ಕೊಡಲ್ಪಟ್ಟಿತು. ಈ ಗೀತೆಯ ಶಕ್ತಿ ಆಧಾರದಿಂದ ವೇದಾರ್ಥವು ಸರ್ವರ ಸರ್ವ ಮತಗಳನ್ನು ಜಯಿಸಿ ಸಮರ್ಥವಾಗಿರುವುದು ।।೧೭೮।। ವೇದಗಳು ದ್ವಾರಕಾಧೀಶ ಶ್ರೀಕೃಷ್ಣನ ಶ್ವಾಸೋಚ್ಛ್ವಾಸದಿಂದ ಹುಟ್ಟಿಕೊಂಡಿರುವುವು. ಆದರೆ ಈ ಗೀತೆಯು ಪ್ರತ್ಯಕ್ಷ ಆ ಭಗವಾನ ಶ್ರೀಕೃಷ್ಣನ ಮುಖದಿಂದ ಪ್ರಕಟವಾಗಿರುವುದು. ಆದ್ದರಿಂದ ಗೀತೆಯ ಅರ್ಥವು ಅತ್ಯಂತ ಅಗಾಧವಾಗಿರುವುದು. ಇದರಿಂದಲೇ ವೇದಗಳು ಅತ್ಯಂತ ಧಪ್ಪುಪುಪ್ಪವಾದವು ।।೧೭೯।। ವೇದಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳಿಗೆ ಮಾತ್ರ ತನ್ನ ಆಪ್ತರನ್ನಾಗಿ ಮಾಡಿಕೊಂಡಿದ್ದವು. ಸ್ತ್ರೀ ಶೂದ್ರರಿಗೆ ದೂರ ಒಗೆದುಬಿಟ್ಟಿದ್ದವು. ಇವರ ಕಿವಿಗಳಿಗೆ ಅವು ಮುಟ್ಟಿ ಕೊಳ್ಳಲಿಲ್ಲ. ಇದು ವೇದಗಳ ನ್ಯೂನತೆಯಾಗಿತ್ತು ।।೧೮೦।। ಈ ವೇದಗಳ ನ್ಯೂನತೆ ಅಂದರೆ ಗೌಣತ್ವ ತೆಗೆದು ಹಾಕಲು ಗೋಕುಲವಾಸಿ ಶ್ರೀಕೃಷ್ಣನು ಗೀತೆಯನ್ನು ನಿರ್ಮಿಸಿದನು. ಗೀತೆಯ ಶ್ರವಣದಿಂದ ಮತ್ತು ಪಠಣೆಯಿಂದ ಸರ್ವಪ್ರಾಣಿಮಾತ್ರರ ಉದ್ಧಾರವಾಗುವುದು ।।೧೮೧।।

ಅರ್ಜುನಾಚೇ ಪ್ರೀತೀಕಾರಣೇ । ಗೀತಾರ್ಥ ಪ್ರಕಾಶಿಲಾ ಶ್ರೀಕೃಷ್ಣೇ । ತೇ ಗೀತೇಚೇನಿ ಶ್ರವಣೇ ಪಠಣೇ । ಉದ್ಧರಣೇ ಜಡಜೀವೀ ।೨೮೨॥ ಅಸೋ ಅಗಾಧ ಗೀತಾಮಹಿಮಾನ । ತೇಣೇ ಗೀತಾರ್ಥೇ ತೋ ಅರ್ಜುನ । ಕರೂನಿ ಆಪುಲೇ ಸಾಂತ್ವನ । ಜಾಹಲಾ ಸಾವಧಾನ ಪ್ರಕೃತಿಸ್ಥ ।೨೮೩॥

ಬಂಧೂನಾಂ ನಷ್ಟಗೋತ್ರಾಣಾಮರ್ಜುನಃ ಸಾಂಪರಾಯಿಕಮ್ । ಹತಾನಾಂ ಕಾರಯಾಮಾಸ ಯಥಾವದನುಪೂರ್ವಶಃ ।೨।।

ಅರ್ಥ:- ಯದುವಂಶದ ಮೃತ ವ್ಯಕ್ತಿಗಳಲ್ಲಿ ಅವರಿಗಾಗಿ ಪಿಂಡ ಕೊಡಲು ಯಾರೂ ಇರಲಿಲ್ಲ. ಅವರ ಶ್ರಾದ್ಧ ಕರ್ಮಗಳನ್ನು ಅರ್ಜುನನು ಕ್ರಮವಾಗಿ ವಿಧಿಪೂರ್ವಕ ನೆರವೇರಿಸಿದನು.

ಯಾದವ ನಿಮಾಲೇ ಕುಳವಂಶೇಸೀ । ಗೋತ್ರಜ ನಾಹೀ ಕರ್ಮಾಂತರಾಸೀ । ವಜ್ರ ರಾಹಿಲಾ ದ್ವಾರಕೇಸೀ । ತೇ ವಿಧೀ ಅರ್ಜುನಾಸೀ ಕರಣೇ ಪಡಲೀ ।೨೮೪॥ "ಮೀ ಪಾವಲೋ ನಿಷ್ಕರ್ಮ ಬ್ರಹ್ಮ । ತೋ ಮೀ ನ ಕರೀ ಅಂತ್ಯೇಷ್ಟೀಕರ್ಮ"। ಐಸಾ ಜ್ಞಾನಗರ್ವೋಪಕ್ರಮ । ತೋಹೀ ಸೂಕ್ಷ್ಮ ಭ್ರಮ ಅರ್ಜುನೀ ನಾಹೀ ।೨೮೫॥ "ಕರ್ಮಣ್ಯಕರ್ಮ ಯಃ ಪಶ್ಯೇತ್" । ಹಾ ಅರ್ಜುನಾಸ ಬಾಣಲಾ ಪೂರ್ಣದಂಶ । ತೇಣೇ ತೋ ಅಂತ್ಯೇಷ್ಟಿಕರ್ಮಾಸ । ಸ್ವಯೇ ಸಾವಕಾಶ ಕರಿತಾ ಜಾಹಲಾ ।೨೮೬॥ ಪ್ರಥಮ ಜ್ಯೇಷ್ಠಾಂಚೇ ದಹನ । ಪಾಠೀ ಕನಿಷ್ಠಾಂಚೇ ಜಾಣ । ತೈಸೇಚಿ ಕರೀ ಪಿಂಡದಾನ । ತಿಳತರ್ಪಣ ಸರ್ವಾಂಚೇ ।೨೮೭॥ ಉತ್ತರಕ್ರಿಯಾ ಕರೂನಿ ಸಂಪೂರ್ಣ । ದ್ವಾರಕೇಸಿ ಆಲಾ ಅರ್ಜುನ । ತೇಥೇಹೀ ವರ್ತಲೇ ಆನೇ ಆನ । ಸಮುದ್ರ ದಾರುಣ ಕ್ಷೋಭಲಾ ।೨೮೮॥

ದ್ವಾರಕಾಂ ಹರಿಣಾಂ ತ್ಯಕ್ತಾಂ ಸಮುದ್ರೋಽಪ್ಲಾವಯತ್ಕ್ಷಣಾತ್ । ವರ್ಜಯಿತ್ವಾ ಮಹಾರಾಜ ಶ್ರೀಮದ್ಭಗವದಾಲಯಮ್ ।೩॥
ನಿತ್ಯಂ ಸನ್ನಿಹಿತಸ್ತತ್ರ ಭಗವಾನ್ಮಧುಸೂದನಃ । ಸ್ಮೃತ್ಯಾಶೇಷಾಶುಭಹರಂ ಸರ್ವಮಂಗಲಮಂಗಲಮ್ ।೪॥

ಅರ್ಥ:- ಹೇ ಮಹಾರಾಜನೇ, ಭಗವಂತನ ವಾಸ್ತವ್ಯವು ಇರಲಾರದ್ದಕ್ಕೆ ಸಮುದ್ರವು ಶ್ರೀಕೃಷ್ಣನ ಏಕಮಾತ್ರ ವಾಸ್ತವ್ಯಸ್ಥಾನ ಬಿಟ್ಟು ಒಂದೇ ಕ್ಷಣದಲ್ಲಿ ಸಂಪೂರ್ಣ ದ್ವಾರಕಾನಗರವನ್ನು ನೀರಿನಲ್ಲಿ ಕೂಡಿಸಿಕೊಂಡಿತು. ಶ್ರೀಕೃಷ್ಣನು ಇಂದಿಗೂ ಅಲ್ಲಿ ನಿವಾಸ ಮಾಡುತ್ತಿರುವನು. ಆ ಸ್ಥಾನದ ಸ್ಮರಣಮಾತ್ರದಿಂದ ಸರ್ವ ಪಾಪ ತಾಪಗಳು ನಾಶವಾಗುವುವು.

ದ್ವಾರಕಾ ಸಾಂಡೂನಿ ಗೇಲಾ ಶ್ರೀಕೃಷ್ಣ । ತೇಥೇ ಸಮುದ್ರ ಯೇಊನಿ ಆಪಣ । ಬುಡವಿಲೀ ನ ಲಾಗತಾ ಕ್ಷಣ । ಪಳಾಲೇ ಜನ ಹಾಹಾಭೂತ ।೨೮೯॥ ದ್ವಾರಕಾ ಬುಡವಿಲೀ ಸಂಪೂರ್ಣ । ರಾಖಿಲೇ ಭಗವಂತಾಚೇ ಸ್ಥಾನ । ಜೋ ಆಲಾ ಪಾತಾಳೀಹೂನ । ಕುಶ ನಿರ್ದಳಣ ಕರಾವಯಾ ।೨೯೦॥ ತೇ ಭಗವಂತಾಚೇ ಸ್ಥಾನ । ಸಮುದ್ರ ನ ಕರೀಚಿ ನಿಮಗ್ನ । ತೇಥೇ ಹರೀಚೇ ಸನ್ನಿಧಾನ । ನಿತ್ಯ ಜಾಣ ಸ್ಫೂರದ್ರೂಪ ।೨೯೧॥

ಅರ್ಜುನನ ಪ್ರೇಮಕ್ಕಾಗಿ ಶ್ರೀಕೃಷ್ಣನು ಗೀತಾರ್ಥ ಪ್ರಕಟ ಮಾಡಿದನು. ಆ ಜ್ಞಾನಗಂಗೋತ್ರೀ ಗೀತೆಯ ಶ್ರವಣದಿಂದ ಮತ್ತು ಪಠಣೆಯಿಂದ ಜಡಜೀವಿಗಳ ಉದ್ಧಾರವಾಗುವುದು ।೨೮೨॥ ಒಟ್ಟಿನಲ್ಲಿ ಗೀತೆಯ ಮಹಿಮೆಯು ಅಗಾಧವಾಗಿರುವುದು. ಈ ಯಾವ ಗೀತೆಯ ಅರ್ಥದಿಂದಲೇ ಅರ್ಜುನನು ತಾನು ತನ್ನನ್ನೇ ಸಾಂತ್ವನ ಮಾಡಿಕೊಂಡು ಆತನು ಪೂರ್ಣವಾಗಿ ದೇಹಭಾಸಕ್ಕೆ ಬಂದು ಸ್ವಸ್ಥಚಿತ್ತನಾದನು ।೨೮೩॥

ಯಾದವರೆಲ್ಲರೂ ಸರ್ವಕುಲಸಮೇತರಾಗಿ ಮೃತರಾಗಿದ್ದರು. ಅಂದಮೇಲೆ ಅವರ ಉತ್ತರಕ್ರಿಯೆ ಮಾಡುವುದಕ್ಕಾಗಿ ಯಾರೂ ಗೋತ್ರಜರು ಉಳಿಯಲಿಲ್ಲ. ಅನಿರುದ್ಧನ ಪುತ್ರನಾದ ಒಬ್ಬ ವಜ್ರನು ಮಾತ್ರ ದ್ವಾರಕೆಯಲ್ಲಿ ಉಳಿದುಕೊಂಡಿದ್ದನು. ಆದ್ದರಿಂದ ಆ ಸಂಪೂರ್ಣ ಕಾರ್ಯ ಅರ್ಜುನನಿಗೆ ಮಾಡಬೇಕಾಯಿತು ।೨೮೪॥ ನಾನು ನಿಷ್ಕರ್ಮ ಬ್ರಹ್ಮಸ್ವರೂಪನಾಗಿರುವೆನು. ಅಂದಮೇಲೆ ನಾನೀಗ ಈ ಯಾವ ಅಂತ್ಯಕರ್ಮ ಮಾಡಲಾರೆನು ಎಂಬ ಜ್ಞಾನಗರ್ವದ ಅಭಿಮಾನ ಅಂದರೆ ಸೂಕ್ಷ್ಮ ಭ್ರಮೆಯು ಅರ್ಜುನನಲ್ಲಿರಲಿಲ್ಲ ।೨೮೫॥ "ಕರ್ಮಣ್ಯಕರ್ಮ ಯಃ ಪಶ್ಯೇತ್" ಅಂದರೆ ಕರ್ಮಗಳಲ್ಲಿಯೇ ಯಾವನು ಅಕರ್ಮ ಕಾಣುವನೋ, ಆತನೇ ಬುದ್ಧಿವಾನ ಯೋಗಿಯು. ಈ ಸೂಕ್ಷ್ಮ ಗೀತಾರಹಸ್ಯವು ಅರ್ಜುನನ ಹೃದಯಪಟಲದಲ್ಲಿ ಬಿಂಬಿಸಿತ್ತು. ಆದ್ದರಿಂದ ಆತನು ಸರ್ವರ ಅಂತ್ಯಕರ್ಮ ಅತಿಶಯ ಶಾಂತಿಯಿಂದ ನೆರವೇರಿಸಿದನು ।೨೮೬॥ ಮೊದಲು ಜೇಷ್ಠರ ತದನಂತರ ಕನಿಷ್ಠರ ದಹನ ಮಾಡಿದನು. ಇದೇ ಅನುಕ್ರಮದಿಂದ ಸರ್ವರ ಪಿಂಡದಾನ ಮಾಡಿ ಸರ್ವರ ತಿಲತರ್ಪಣ ಕೂಡ ಮಾಡಿದನು ।೨೮೭॥ ಹೀಗೆ ಸರ್ವ ಉತ್ತರಕ್ರಿಯೆ ಮುಗಿಸಿ ಅರ್ಜುನನು ದ್ವಾರಕೆಗೆ ಮರಳಿದನು. ಅಲ್ಲಿ ಆತನಿಗೆ ಇನ್ನೊಂದು ಉದ್ಭವಿಸಿದ ಅರಿಷ್ಟವು ಕಾಣಿಸಿತು. ಸಮುದ್ರವು ಅತಿಶಯ ಉಗ್ರವಾಗಿತ್ತು ।೨೮೮॥

ಶ್ರೀಕೃಷ್ಣನು ದ್ವಾರಕೆಯನ್ನು ಬಿಟ್ಟು ಹೋಗುತ್ತಲೇ ಅಲ್ಲಿ ಸಮುದ್ರ ದೇವತೆ ಬಂದು ಒಂದು ಕ್ಷಣ ಕೂಡ ವಿಲಂಬ ಮಾಡದೇ ಮುಳುಗಿಸಿಬಿಟ್ಟಿತು. ಆಗ ಸರ್ವ ಜನರು ಹಾಹಾಃಕಾರ ಮಾಡುತ್ತ ಸೈರಾವೈರಾ ಓಡಲಾರಂಭಿಸಿದರು ।೨೮೯॥ ಸಂಪೂರ್ಣ ದ್ವಾರಕಾ ನಗರವನ್ನು ಸಮುದ್ರವು ಮುಳುಗಿಸಿತು. ಆದರೆ ಭಗವಂತನ ಸ್ಥಾನ ಮಾತ್ರ ಸಮುದ್ರವು ಸ್ಥಿರವಾಗಿ ಉಳಿಸಿತು. ಕಾರಣ ಪಾತಾಳದಿಂದ ಕುಶನಿರ್ದಳಣ ಮಾಡಲು ಬಂದಿದ್ದನು (?) ।೨೯೦॥ ಭಗವಂತನ ಆ ಯಾ ಪೂಜ್ಯ ಪವಿತ್ರ ಸ್ಥಾನ ಮಾತ್ರ ಸಮುದ್ರವು ಮುಳುಗಿಸಲಿಲ್ಲ. ಕಾರಣ ಆತನು ಅಲ್ಲಿ ಮನೋಹರ ಶ್ರೀಕೃಷ್ಣನ ಸನ್ನಿಧಾನವು ಯಾವಾಗಲೂ ಸ್ಫುರದ್ರೂಪವಾಗಿರುವುದು ।೨೯೧॥

ಜ್ಯಾಚೇ ಕರಿತಾಂಚೆ ಸ್ಮರಣ । ಮಹಾಪಾತಕಾ ನಿರ್ದಳಣ । ಸಕಳ ಮಂಗಳಾಚೇ ಆಯತನ । ತೇ ಹರೀಚೇ ಸ್ಥಾನ ಉರಲೇ ಅಸೇ ।೮೯೨॥ ತೇ ದ್ವಾರಕೇಮಾಜೀ ನಿತ್ಯಪೂಜಾ । ಅದ್ಯಾಪಿ ಹೋತಸೇ ಗರುಡಧ್ವಜಾ । ಐಕ ಪರೀಕ್ಷಿತೀ ಮಹಾರಾಜ । ತೇ ಅಧೋಕ್ಷಜಾಚೇ ಸ್ಥಾನ ।೮೯೩॥

ಸ್ತ್ರೀಬಾಲವೃದ್ಧಾನಾದಾಯ ಹತಶೇಷಾನ್ ಧನಂಜಯಃ ।
ಇಂದ್ರಪ್ರಸ್ಥಂ ಸಮಾವೇಶ್ಯ ವಜ್ರ ತತ್ರಾಭ್ಯಷೇಚಯತ್ ।೨೫॥

ಅರ್ಥ:- ಬದುಕುಳಿದ ಸ್ತ್ರೀಯರನ್ನು, ಬಾಲಕರನ್ನು ಮತ್ತು ವೃದ್ಧರನ್ನು ಕೂಡಿಕೊಂಡು ಅರ್ಜುನನು ಇಂದ್ರಪ್ರಸ್ಥ ರಾಜಧಾನಿಗೆ ಬಂದನು. ಅಲ್ಲಿ ಸರ್ವರ ಯೋಗ್ಯರೀತಿಯಲ್ಲಿ ವಾಸ್ತವ್ಯ ನಿಯೋಜಿಸಿ ಅನಿರುದ್ಧನ ಪುತ್ರ ವಜ್ರನನ್ನು ರಾಜ್ಯಾಭಿಷೇಕ ಮಾಡಿ ಯದುರಾಜನನ್ನಾಗಿ ಮಾಡಿದನು.

ಏವಂ ದ್ವಾರಕಾ ಜಾಲಿಯಾ ನಿಮಗ್ನ । ಉರಲೇ ಬಾಲ ವೃದ್ಧ ಸ್ತ್ರೀಜನ । ತ್ಯಾಂಸೀ ಘೇಊನಿಯಾ ಅರ್ಜುನ । ನಿಘಾಲಾ ಆಪಣ ಇಂದ್ರಪ್ರಸ್ಥಾ ।೮೯೪॥ ಯಾದವ ಪ್ರಭಾಸಾಪರ್ಯಂತ । ಗೇಲೇ ತೇ ನಿಮಾಲೇ ಸಮಸ್ತ । ಉರಲೇ ಜೇ ದ್ವಾರಕೇ ಆಂತ । ವಜ್ರಾದಿಕಾಸಮವೇತ ಅರ್ಜುನ ನಿಘೇ ।೮೯೫॥ ಏವಂ ಘೇಊನಿಯಾ ಸಮಸ್ತಾಂಸೀ । ಪಾರ್ಥ ಆಲಾ ಇಂದ್ರಪ್ರಸ್ಥಾಸೀ । ರಾಜ್ಯಧರ ಯಾದವವಂಶೀ । ತೇಥ ವಜ್ರಾಸೀ ಅಭಿಷೇಕೀ ।೮೯೬॥ ಅನಿರುದ್ಧಾಚಾ ಪುತ್ರ ವಜ್ರ । ಯಾದವವಂಶೀ ರಾಜ್ಯಧರ । ಅಭಿಷೇಕೂನಿ ಅರ್ಜುನವೀರ । ನಿಘೇ ಸತ್ವರ ಧರ್ಮಾಪ್ರತೀ ।೮೯೭॥

ಶ್ರುತ್ವಾ ಸುಹೃದ್ವಧಂ ರಾಜನ್ನರ್ಜುನಾತ್ತೇ ಪಿತಾಮಹಾಃ ।
ತ್ವಾಂ ತು ವಂಶಧರಂ ಕೃತ್ವಾ ಜಗ್ಮುಃ ಸರ್ವೇ ಮಹಾಪಥಮ್ ।೨೬॥

ಅರ್ಥ:- ರಾಜಾ, ನಿನ್ನ ಪಿತಾಮಹರಾದ ಯುಧಿಷ್ಠಿರ ಇತ್ಯಾದಿ ಪಾಂಡವರಿಗೆ ಯದುವಂಶದ ಸಂಹಾರ ವಾರ್ತೆಯು ಅರ್ಜುನನಿಂದ ತಿಳಿಯಿತು. ಆಗ ಅವರು ವಂಶದ ಆಧಾರಸ್ತಂಭ ನಿನ್ನನ್ನು ಮಾಡಿ ರಾಜ್ಯ ಪದದಲ್ಲಿ ಸ್ಥಾಪಿಸಿ ಹಿಮಾಲಯದ ವೀರಯಾತ್ರಾ ಮಾಡಿದರು.

ನಿಜಧಾಮಾ ಗೇಲಾ ಶ್ರೀಪತೀ । ಅರ್ಜುನ ಸಾಂಗತಾ ಧರ್ಮಾಪ್ರತೀ । ತುಜ ರಾಜ್ಯ ದೇಊನಿ ಪರೀಕ್ಷಿತೀ । ಲಾಗಲೇ ಮಹಾಪಂಥೀ ತತ್ಕಾಳಚಿ ।೮೯೮॥ ನಿಜಧಾಮಾ ಗೇಲಾ ಶ್ರೀಕೃಷ್ಣ । ಐಕತಾ ಕುಂತ್ಯಾ ವನೀ ಸಾಂಡಿಲಾ ಪ್ರಾಣ । ದ್ರೌಪದೀಸಹಿತ ಪಾಂಚಹೀ ಜಣ । ಮಹಾಪಂಥೀ ಜಾಣ ನಿಘಾಲೇ ।೮೯೯॥

ಯ ಏತದ್ದೇಶೇವದೇವಸ್ಯ ವಿಷ್ಣೋಃ ಕರ್ಮಾಣಿ ಜನ್ಮ ಚ ।
ಕೀರ್ತಯೇತ್ ಶ್ರದ್ಧಯಾ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ ।೨೭॥

ಅರ್ಥ:- ಹೇ ಪರೀಕ್ಷಿತೀಯೇ, ನಾನು ನಿನಗೆ ದೇವತೆಗಳ ಆರಾಧ್ಯ ದೈವತ ಭಗವಾನ ಶ್ರೀಕೃಷ್ಣನ ಜನ್ಮಲೀಲಾ ಮತ್ತು ಮರ್ಲೀಲಾ ಹೇಳಿದೆನು. ಯಾವ ಮನುಷ್ಯನು ಶ್ರದ್ಧಾ ಭಾವನೆಯಿಂದ ಇದರ ಕೀರ್ತನೆ ಮಾಡುವನೋ, ಆತನು ಸರ್ವ ಪಾಪಗಳಿಂದ ಮುಕ್ತನಾಗುವನು.

ಇದರ ಸ್ಮರಣೆ ಮಾಡುತ್ತಲೇ ಸರ್ವ ಸಂಪೂರ್ಣ ಮಹಾಪಾಪಗಳ ನಾಶವಾಗುವುದು. ಇಂತಹ ಸರ್ವ ಮಂಗಲಗಳ ಅಧಿಷ್ಠಾನವಾಗಿ ಈ ಯಾವ ಶ್ರೀಹರಿಯ ಸ್ಥಾನವು ಮಾತ್ರ ಹಾಗೆಯೇ ಉಳಿದಿರುವುದು ।೮೯೨॥ ಆ ತೀರ್ಥಕ್ಷೇತ್ರ ದ್ವಾರಕೆಯಲ್ಲಿ ಈಗಲೂ ಕೃಪಾಸಾಗರ ಶ್ರೀಕೃಷ್ಣನ ಪೂಜೆಯು ಆಗುತ್ತಿರುವುದು. ಹೇ ಪರೀಕ್ಷಿತೀ ರಾಜನೇ, ಅದು ಅಧೋಕ್ಷಜನ ಜಾಗೃತ ಸ್ಥಾನವಾಗಿರುವುದು ।೮೯೩॥

ಒಟ್ಟಿನಲ್ಲಿ ದ್ವಾರಕೆಯು ಮುಳುಗಿದ ನಂತರ ಉಳಿದಿರುವ ಚಿಕ್ಕ ಚಿಕ್ಕ ಬಾಲಕರು, ವಯೋವೃದ್ಧ ಮಂಡಳಿಯವರು, ಸ್ತ್ರೀಯರು ಈ ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಶ್ರೀಕೃಷ್ಣ ಸಖನಾದ ಅರ್ಜುನನು ಇಂದ್ರಪ್ರಸ್ಥಕ್ಕೆ ಹೋಗಲು ಸಿದ್ಧನಾದನು ।೮೯೪॥ ಪ್ರಭಾಸಕ್ಕೆ ಬಂದಿದ್ದ ಸರ್ವ ಯಾದವರೂ ಮೃತರಾಗಿದ್ದರು. ವಜ್ರ ಇತ್ಯಾದಿ ಕೆಲವರು ಮಾತ್ರ ದ್ವಾರಕೆಯಲ್ಲಿ ಉಳಿದುಕೊಂಡವರನ್ನು ಅರ್ಜುನನು ಜೊತೆಗೂಡಿ ಹೊರಟನು ।೮೯೫॥ ಈ ಪ್ರಕಾರವಾಗಿ ಆ ಸರ್ವರನ್ನೂ ಕರೆದುಕೊಂಡು ಅರ್ಜುನನು ಇಂದ್ರಪ್ರಸ್ಥಕ್ಕೆ ಬಂದನು ಮತ್ತು ಯಾದವ ವಂಶದಲ್ಲಿನ ರಾಜ್ಯಕರ್ತನನ್ನಾಗಿ ಆತನು ವಜ್ರನಿಗೆ ರಾಜ್ಯಾಭಿಷೇಕವನ್ನು ವಿಧಿವತ್ತಾಗಿ ಮಾಡಿದನು ।೮೯೬॥ ಅನಿರುದ್ಧನ ಪುತ್ರನಾದ ವಜ್ರನೇ ಯಾದವ ವಂಶಕ್ಕೆ ರಾಜ್ಯದ ವಾರಸುದಾರನಾಗಿದ್ದನು. ಆದ್ದರಿಂದ ಆತನಿಗೆ ರಾಜ್ಯಾಭಿಷೇಕ ಮಾಡಿ ಶೂರವೀರನಾದ ಅರ್ಜುನನು ಕೂಡಲೇ ಧರ್ಮರಾಜನತ್ತ ನಡೆದನು ।೮೯೭॥

ಧರ್ಮರಾಜನಿಗೆ ಅರ್ಜುನನು ಶ್ರೀಕೃಷ್ಣ ಪರಮಾತ್ಮ ನಿಜಧಾಮಕ್ಕೆ ಹೋದ ವಾರ್ತೆಯನ್ನು ಹೇಳಿದನು. ಆಗ ಹೇ ಪರೀಕ್ಷಿತಿಯೇ, ನಿನಗೆ ರಾಜ್ಯವನ್ನು ಕೊಟ್ಟು ಅವರು ಕೂಡಲೇ ನಿರ್ಯಾಣದ ಮಾರ್ಗಕ್ಕೆ ಹತ್ತಿದರು ।೮೯೮॥ ಭಗವಾನ ಶ್ರೀಕೃಷ್ಣನು ನಿಜಧಾಮಕ್ಕೆ ಹೋದ ವಾರ್ತೆ ಕೇಳುತ್ತಲೇ ಕುಂತಿಯು ವನದಲ್ಲಿಯೇ ಪ್ರಾಣತ್ಯಾಗಮಾಡಿದಳು. ದ್ರೌಪದಿಯನ್ನು ಕೂಡಿಕೊಂಡು ಶೂರವೀರರಾದ ಪಂಚ ಪಾಂಡವರು ಮಹಾಪಂಥಕ್ಕೆ ಪ್ರಸ್ಥಾನ ಮಾಡಿದರು ।೮೯೯॥

ದೇವಾಧಿದೇವ ಸರ್ವೇಶ್ವರ । ತ್ಯಾಚೇ ಮತ್ಸ್ಯಕೂರ್ಮಾದಿ ಅವತಾರ । ಜನ್ಮಕರ್ಮಾದಿ ನಾನಾ ಚರಿತ್ರ । ಗಾತೀ ತೇ ಪವಿತ್ರ ಪುಣ್ಯರಾಶೀ ।೩೦೦॥ ತೇಚಿ ಚರಿತ್ರ ತತ್ತ್ವತಾ । ಶ್ರದ್ಧಾಯುಕ್ತ ಗೀತೀ ಗಾತಾ । ಪ್ರಯಾಗಾದಿ ಸಮಸ್ತ ತೀರ್ಥಾ । ಹೋಯ ಪವಿತ್ರತಾ ತ್ಯಾಚೇನಿ ।೩೦೧॥ ಶ್ರದ್ಧಾಯುಕ್ತ ಹರಿಕೀರ್ತನ । ತ್ಯಾಚೇ ಪವಿತ್ರತೇ ಸಮಾನ । ಆನ ನಾಹೀ ಗಾ ಪಾವನ । ತುಝೀ ಆಣ ಗಾ ಪರೀಕ್ಷಿತೀ ।೩೦೨॥ ತೇ ತೂ ''ಶ್ರದ್ಧಾ'' ಕೋಣ ಮ್ಹಣಸೀ । ಜೇವೀ ಧನಲೋಭೀ ಧನಾಸೀ । ಗುಳೀ ಆವಡೀ ಮಾಕೋಡ್ಯಾಂಸೀ । ತೈಸೀ ಕೀರ್ತನಾಸೀ ನಿಜ ಆವಡೀ ।೩೦೩॥ ಜೇವೀ ಶಿಣತಾ ಕಾಳೇ ಬಹುತೇ । ವಂಧ್ಯಾ ಪ್ರಸವೇ ಏಕೋಲತೇ । ತೇ ಕಳವಳೀ ಜೈಶೀ ತ್ಯಾತೇ । ತೇವೀ ಕೀರ್ತನಾತೇ ಅತಿಪ್ರೀತೀ ।೩೦೪॥ ಜೋ ಕೀರ್ತನಾಚೇನಿ ವೈಭವೇ । ಹರಿಚರಿತ್ರ ಗಾವಯಾ ಸದ್ಭಾವೇ । ಪತಂಗಾಚ್ಯಾ ಪರೀ ಐಸೇ ಧ್ವಾವೇ । ''ಶ್ರದ್ಧಾ'' ತ್ಯಾ ನಾಂವೇ ಕುರುರಾಯಾ ।೩೦೫॥ ಐಶಿಯಾ ಶ್ರದ್ಧಾಸಂಪತ್ತೀ । ವರ್ಣಿತಾ ಭಗವದ್ಗುಣ ಕೀರ್ತೀ । ಶ್ರದ್ಧಾಳುವಾ ಪರಮ ಪ್ರಾಪ್ತೀ । ಜಾಣ ನಿಶ್ಚಿತೀ ನೃಪನಾಥಾ ।೩೦೬॥ ಜರೀ ಆಪಣ ಪರಮೇಶ್ವರ । ಸ್ವಲೀಲಾ ಧರೀ ನಾನಾವತಾರ । ತರೀ ಶ್ರೀರಾಮಕೃಷ್ಣ ಚರಿತ್ರ । ಅತಿ ಗಂಭೀರ ಪಾವನತ್ವೇ ।೩೦೭॥ ಶ್ರೀಕೃಷ್ಣಾಚೀ ಚೋರೀ ಗೀತೀ ಗಾತಾ । ಸುವರ್ಣಸ್ತೇಯಾ ಪಾವನತಾ । ಕೃಷ್ಣವ್ಯಭಿಚಾರ ವರ್ಣಿತಾ । ಗುರುತಲ್ಪಗತಾ ಹರೀ ದೋಷ ।೩೦೮॥ ಪೂತನಾಪಯಃಪಾನಶೋಷಣ । ಹೇ ಚರಿತ್ರ ಕರಿತಾ ಪಠಣ । ಸುರಪಾನಾದಿ ದೋಷ ದಾರುಣ । ಹರತೀ ಸಂಪೂರ್ಣ ವಿಶ್ವಾಸಕಾಂಚೇ ।೩೦೯॥ ರಾಕ್ಷಸಕುಳಿಂಚಾ ರಾವಣ । ಪರೀ ತೋ ಜಾತೀಚಾ ಶುದ್ಧ ಬ್ರಾಹ್ಮಣ । ನಿತ್ಯ ಕರೀ ವೇದಪಠಣ । ಬ್ರಹ್ಮಯಾಚಾ ಜಾಣ ತೋ ಪಣತೂ ।೩೧೦॥ ತ್ಯಾಚೇ ಸಕುಳ ನಿರ್ದಳಣ । ಶ್ರೀರಾಮ ಕರೀ ಆಪಣ । ತೇ ಚರಿತ್ರ ಕರಿತಾ ಪಠಣ । ಬ್ರಹ್ಮಹತ್ಯಾ ಜಾಣ ನಾಸತೀ ।೩೧೧॥ ಕರ್ಮಸಾಹ್ಯಕಾರೀ ಶ್ರೀಕೃಷ್ಣ । ಕೇಲೇ ಪಾಂಡವಾಂಚೇ ರಕ್ಷಣ । ತ್ಯಾ ಭಾರತಾಚೇನಿ ಶ್ರವಣೇ ಜಾಣ । ನಿಮಾಲೇ ಬ್ರಾಹ್ಮಣ ವಾಂಚವಿಲೇ ।೩೧೨॥ ಅಠರಾ ಬ್ರಹ್ಮಹತ್ಯಾ ಜನಮೇಜಯಾಸೀ । ಅಠರಾ ಪರ್ವೇ ಸಾಂಗೋನಿ ತ್ಯಾಸೀ । ನಿಮಾಲ್ಯಾ ಉಠವಿಲೇ ದ್ವಿಜಾಂಸೀ । ಕೃಷ್ಣಕೀರ್ತಿ ಐಸೀ ಪಾವನ ।೩೧೩॥

ಇಂತಹ ಯಾವ ದೇವಾಧಿದೇವ, ಸರ್ವೇಶ್ವರನ ಮತ್ಸ್ಯಕೂರ್ಮಾದಿ ಅವತಾರ ಹಾಗೂ ಜನ್ಮಕರ್ಮಾದಿ ನಾನಾವಿಧ ಚರಿತ್ರೆಗಳ ಗೀತೆಯನ್ನು ಯಾರು ಹಾಡುವರೋ, ಅವರು ಅತ್ಯಂತ ಪವಿತ್ರ ಹಾಗೂ ಪುಣ್ಯರಾಶಿಯಾಗುವರು ।೩೦೦॥ ಈ ಚರಿತ್ರೆಗಳನ್ನು ಸತ್ಯವಾಗಿ ಶ್ರದ್ಧೆಯಿಂದ ಗಾಯನ ಮಾಡುವುದರಿಂದ ಪ್ರಯಾಗಾದಿ ಸರ್ವ ಇತರ ತೀರ್ಥಗಳೂ ಕೂಡ ಈತನಿಂದ ಪವಿತ್ರತೆಯನ್ನು ಪಡೆಯುವುವು ।೩೦೧॥ ಹೇ ಪರೀಕ್ಷಿತೀಯೇ, ಹರಿಕೀರ್ತನೆಯನ್ನು ಶ್ರದ್ಧಾಪೂರ್ವಕವಾಗಿ ಮಾಡಿದರೆ ಆತನ ಪವಿತ್ರತೆಗೆ ಸಮಾನವಾದ ಪವಿತ್ರವು ಜಗತ್ತಿನಲ್ಲಿ ಇನ್ನೊಂದಿರುವುದಿಲ್ಲ. ಹೀಗೆ ನಾನು ನಿನ್ನ ಆಣೆ ಇಟ್ಟು ಹೇಳುವೆನು ।೩೦೨॥ ಆ ಶ್ರದ್ಧೆಯು ಇರುವುದಾದರೂ ಹೇಗೆ ಎಂದು ನೀನು ಕೇಳಬಹುದು, ಅದಕ್ಕಾಗಿ ಕೇಳು. ಧನಲೋಭಿಯು ಹೇಗೆ ಧನದಲ್ಲಿಯೇ ಅಂಟಿಕೊಂಡಿರುವಂತೆ ಅಥವಾ ಇರುವೆಗಳು ಬೆಲ್ಲಕ್ಕೆ ಪ್ರೇಮದಿಂದ ಮುತ್ತಿಕೊಳ್ಳುವಂತೆ ಈ ಕೀರ್ತನೆಯಲ್ಲಿ ಅತಿಶಯ ಪ್ರೀತಿವಿರಬೇಕು ।೩೦೩॥ ಬಹಳ ದಿನಗಳ ನಂತರ ಬಹು ಕಷ್ಟ ಸೋಸಿದಾಗ ಬಂಜೆಗೆ ಒಂದೇ ಒಂದು ಗಂಡು ಮಗು ಆಯಿತೆಂದರೆ ಆಗ ಆಕೆಗೆ ಆ ಮಗುವಿನಲ್ಲಿ ಹೇಗೆ ಪ್ರೇಮವಿರುವುದೋ ಅದೇ ಪ್ರಕಾರ ಕೀರ್ತನೆಯಲ್ಲಿ ಅಪಾರ ಪ್ರೇಮವಿರಬೇಕು ।೩೦೪॥ ಹೇ ಪರೀಕ್ಷಿತೀ ರಾಜನೇ, ಕೀರ್ತನದ ವೈಭವದಲ್ಲಿ ಮೈಮರೆತು ಕೃಪಾಸಾಗರ ಶ್ರೀಹರಿಯ ಚರಿತ್ರೆಯನ್ನು ಭಕ್ತಿಪೂರ್ವಕವಾಗಿ ಕೀರ್ತನಕ್ಕಾಗಿ ಪತಂಗದಂತೆ ಧಾವಿಸುವಿಕೆಯ ನಾಮವು ''ಶ್ರದ್ಧೆ'' ಯಾಗಿರುವುದು ।೩೦೫॥ ಈ ಪ್ರಕಾರವಾಗಿ ಶ್ರದ್ಧಾ ಸಂಪತ್ತಿನಿಂದ ಯುಕ್ತನಾಗಿ ಪ್ರೇಮಳ ಭಗವಂತನ ಗುಣಾನುವಾದ ಕೀರ್ತಿಯ ವರ್ಣನೆ ಮಾಡಲು ಹೇ ರಾಜಶ್ರೇಷ್ಠನೇ, ಆ ಶ್ರದ್ಧಾವಂತನಿಗೆ ಪರಮಾತ್ಮನ ಪ್ರಾಪ್ತಿಯುಂಟಾಗುವುದೆಂದು ನಿಶ್ಚಯವಾಗಿ ತಿಳಿ ।೩೦೬॥ ಪರಮೇಶ್ವರನು ತನ್ನ ಅಗಾಧ ಲೀಲೆಯಿಂದ ವಿವಿಧ ಪ್ರಕಾರಗಳ ಅವತಾರ ಧರಿಸಿದ್ದರೂ ಕೂಡ ಅವುಗಳಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀರಾಮ ಮತ್ತು ನಂದಕಿಶೋರ ಶ್ರೀಕೃಷ್ಣ ಇವರ ಚರಿತ್ರೆಗಳು ಅತಿಶಯ ಗಂಭೀರ ಮತ್ತು ಪಾವನವಾಗಿರುವುವು ।೩೦೭॥ ಶ್ರೀಕೃಷ್ಣನ ಕಳ್ಳತನದ ಪ್ರಸಂಗವನ್ನು ಗೀತೆಯಲ್ಲಿ ಗಾಯನ ಮಾಡುವುದರಿಂದ ಸುವರ್ಣಸ್ತೇಯ ಪಾಪವು ನಷ್ಟವಾಗುವುದು. ಶ್ರೀಕೃಷ್ಣನ ವ್ಯಭಿಚಾರಗಳ ವರ್ಣನೆ ಮಾಡಲು ಗುರುಪತ್ನಿಗಮನದ ಪಾಪವು ತತ್ಕಾಲದಲ್ಲಿ ನಷ್ಟವಾಗುವುದು ।೩೦೮॥ ಪೂತನೆಯ ದುಗ್ಧಪ್ರಾಶನದ ಚರಿತ್ರೆಯ ಪಠಣೆ ಮಾಡುವುದರಿಂದ ಶ್ರದ್ಧಾವಂತ ಮನುಷ್ಯನ ಸುರಾಪಾನಾದಿ ಮಹಾ ಭಯಾನಕ ದೋಷಗಳ ಪರಿಹಾರವಾಗುವುದು ।೩೦೯॥ ರಾವಣನು ರಾಕ್ಷಸ ಕುಲದಲ್ಲಿ ಇದ್ದರೂ ಸಹ ಆತನು ಜಾತಿವಂತ ಶುದ್ಧ ಬ್ರಾಹ್ಮಣನಾಗಿದ್ದನು. ಆತನು ನಿತ್ಯನೇಮದಿಂದ ವೇದ ಪಠಣೆ ಮಾಡುತ್ತಿದ್ದನು. ಕಾರಣ ಆತನು ವಿಶ್ವನಿರ್ಮಾಣಕರ್ತ ಬ್ರಹ್ಮದೇವನ ಮರಿಮಮ್ಮಗನಾಗಿದ್ದನು ।೩೧೦॥ ಶ್ರೀರಾಮಚಂದ್ರನು ಆ ಸರ್ವ ಕುಲದ ನಾಶ ಮಾಡಿದನು. ಆ ಚರಿತ್ರೆಯನ್ನು ಪಠಣೆ ಮಾಡುವುದರಿಂದ ಬ್ರಹ್ಮಹತ್ಯೆಯ ಪಾಪವು ಲಯವಾಗುವುದು ।೩೧೧॥ ಭಗವಾನ ಶ್ರೀಕೃಷ್ಣನು ಮಾತ್ರ ಧರ್ಮಸಹಾಯಕರ್ತನಾಗಿದ್ದನು. ಆದ್ದರಿಂದ ಆತನು ಪಾಂಡವರ ರಕ್ಷಣೆ ಮಾಡಿದನು. ಆ ಮಹಾಭಾರತದ ಶ್ರವಣದಿಂದ ಮೃತರಾಗಿದ್ದ ಬ್ರಾಹ್ಮಣರು ಪುನಃ ಜೀವಂತರಾದರು ।೩೧೨॥ ಜನಮೇಜಯನ ಕೈಯಿಂದ ಹದಿನೆಂಟು ಬ್ರಹ್ಮಹತ್ಯೆಗಳಾಗಿದ್ದವು. ಆತನಿಗೆ ಮಹಾಭಾರತದ ಹದಿನೆಂಟು ಪರ್ವಗಳನ್ನು ಹೇಳಿ ಮರಣ ಹೊಂದಿದ್ದ ಸರ್ವ ಹದಿನೆಂಟು ಬ್ರಾಹ್ಮಣರನ್ನು ಜೀವಂತ ಎಬ್ಬಿಸಿದರು. ಈ ಪ್ರಕಾರವಾಗಿ ಶ್ರೀಕೃಷ್ಣನ ಕೀರ್ತಿಯು ಪರಮ ಪಾವನವಾಗಿರುವುದು ।೩೧೩॥

ಐಕತಾ ಶ್ರೀರಾಮಕೃಷ್ಣಕೀರ್ತಿ। ಮಹಾಪಾತಕೇ ಬಾಪುಡೀ ಕಿತೀ। ಪಾಯಾ ಲಾಗತೀ ಚಾರೀ ಮುಕ್ತೀ। ಶ್ರದ್ಧಾಸಂಪತ್ತೀ ಕೀರ್ತಿ ಗಾತಾ ॥೩೧೪॥ ಶ್ರದ್ಧೇಚಿಯಾ ಅತಿಸಂಪತ್ತೀ। ಆವಡೀ ಗಾತಾ ಶ್ರೀಕೃಷ್ಣಕೀರ್ತಿ। ಸಹಜೇ ಸಾಯುಜ್ಯತಾ ಪಾವತೀ। ದೇಹಸ್ಥಿತೀ ಅಸತಾಂಹೀ ॥೩೧೫॥ ಹರಿಕೀರ್ತಿಕೀರ್ತನ ಜ್ಯಾಚ್ಯಾ ಠಾಯೀ। ತೋಹೀ ವರ್ತತಾ ದಿಸೇ ದೇಹೀ। ಪರೀ ದೇಹೀ ನಾ ತೋ ಹರೀಚ್ಯಾ ಠಾಯೀ। ಹರಿ ತ್ಯಾಚೇ ಹೃದಯೀ ಅವಘಾಚಿ ॥೩೧೬॥ ತೋಹೀ ಅವಘಾ ಹರೀಭೀತರೀ। ಹರಿ ತ್ಯಾ ಸಬಾಹ್ಯ ಅಭ್ಯಂತರೀ। ಪರೀಕ್ಷಿತೀ ಐಶಿಯಾಪರೀ। ಕೀರ್ತಿವಂಶ ಸಂಸಾರೀ ನಾಂದತೀ ॥೩೧೭॥ ಯಾಲಾಗೀ ಹರಿಕೀರ್ತನಾಪರತೇ। ಸುಗಮ ಸಾಧನ ನಾಹೀ ಏಥೇ। ಜೇ ವಿನಟಲೇ ಹರಿಕೀರ್ತನಾತೇ। ತೇ ದೇಹಬಂಧಾತೇ ನಾತಳತೀ ॥೩೧೮॥ ಕೃಷ್ಣಕೀರ್ತನೇ ಉಜಳಲೀ ಸ್ಥಿತೀ। ತೇ ಮೈಳೇನಾ ಕದಾ ಕಲ್ಪಾಂತೀ। ಜರೀ ದೇಹ ಕರ್ಮೆ ಕರಿತೀ। ತರೀ ಜಾಹಲೀ ಸ್ಥಿತೀ ಮೈಳೇನಾ ॥೩೧೯॥ ಆಕಾಶ ಪರ್ಜನ್ಯೇ ನವ್ಹೇ ವೋಲೇ। ಕಾ ರವಿಬಿಂಬ ಥಿಲ್ಲರಜಳೇ। ಅಸೋನಿಯಾ ತೇಣೇ ಮೇಳೇ। ಕದಾಕಾಳೇ ತಿಂಬೇನಾ ॥೩೨೦॥ ತೇವೀ ಹರಿಕೀರ್ತಿಕೀರ್ತನಕಲ್ಲೋಳೇ। ಜಯಾಚೀ ನಿಷ್ಕಾಮದಶಾ ಉಜಳೇ। ತೇ ವರ್ತತಾ ದೇಹಕರ್ಮಮೇಳೇ। ದೇಹವಿಟಾಳೇ ಅಲಿಪ್ತ ॥೩೨೧॥ ನಿಜಭಕ್ತಾಂಚೇ ಶರೀರಕರ್ಮ। ಸ್ವಯೇ ಚಾಲವೀ ಪುರಷೋತ್ತಮ। ಯಾಲಾಗೀ ಭಕ್ತಾಂಸೀ ಕರ್ಮಭ್ರಮ। ಅಧಮೋತ್ತಮ ಬಾಧೀನಾ ॥೩೨೨॥ ಭಕ್ತ ಅಭಕ್ತಾಂಚೀ ಕರ್ಮಗತೀ। ಭಗವಂತ ಚಾಲವೀ ನಿಶ್ಚಿತೀ। ತೇಥ ಭಕ್ತಾಂಚೀ ಕಾ ಅಲಿಪ್ತಸ್ಥಿತೀ। ಅಭಕ್ತ ಕಾ ಹೋತೀ ಅತಿಬದ್ಧ ॥೩೨೩॥ ಕರಿತಾ ಶ್ರೀಕೃಷ್ಣ ಕೀರ್ತಿಕೀರ್ತನ। ಭಕ್ತಾಂಚಾ ನಿರಸೇ ದೇಹಾಭಿಮಾನ। ಯಾಲಾಗೀ ತೇ ಅಲಿಪ್ತ ಜಾಣ। ಅಭಕ್ತಾ ಬಂಧನ ಅಹಂಭಾವೇ ॥೩೨೪॥ ಹೇ ದಶಾ ಮಾಗಿತಲ್ಯಾ ಪಾವತೀ। ಐಸೇ ನ ಘಡೇ ಗಾ ಪರೀಕ್ಷಿತೀ। ಆವಡೀ ಗಾತಾ ಕೃಷ್ಣಕೀರ್ತಿ। ಸಹಜೇ ಹೇ ಸ್ಥಿತೀ ಠಸಾವೇ ॥೩೨೫॥ ಶ್ರೀಕೃಷ್ಣಕೀರ್ತಿಕೀರ್ತನೇ। ಬಹುತಾಂಚೇ ಸಂಸಾರಧರಣೇ। ಉಠವಿಲೇ ಸ್ವಯೇ ಶ್ರೀಕೃಷ್ಣೇ। ಚರಿತ್ರಪಠಣೇ ತುಷ್ಟೋನೀ ॥೩೨೬॥

ಕೃಪಾಸಾಗರ ಶ್ರೀರಾಮ ಮತ್ತು ಪ್ರೇಮಮೂರ್ತಿ ಶ್ರೀಕೃಷ್ಣ ಇವರ ಕೀರ್ತಿಗಳನ್ನು ಕೇಳುವುದರಿಂದ ಪಾಪ ! ಆ ಮಹಾಪಾಪಗಳ ಯಾವ ಕಥೆ ? ಶ್ರದ್ಧಾ ಭಕ್ತಿಯಿಂದ ಕೀರ್ತಿಯ ಗಾಯನ ಮಾಡುವುದರಿಂದ ನಾಲ್ಕೂ ಮುಕ್ತಿಗಳು ಆತನ ಚರಣಗಳಲ್ಲಿ ಧಾವಿಸಿ ಬರುವುವು ॥೩೧೪॥ ಶ್ರದ್ಧೆಯ ವೈಭವದಿಂದ ಮತ್ತು ಅತ್ಯಂತ ಪ್ರೇಮದಿಂದ ವಾತ್ಸಲ್ಯಕೃಪಾಸಿಂಧೂ ಶ್ರೀಕೃಷ್ಣನ ಕೀರ್ತಿಯ ಗಾಯನ ಮಾಡಲು ದೇಹವು ಸಹಜವಾಗಿ ಸಾಯುಜ್ಯ ಸ್ಥಿತಿಗೆ ಮುಟ್ಟಿಕೊಳ್ಳುವುದು ॥೩೧೫॥ ಯಾವನ ಹೃದಯದಲ್ಲಿ ಮತ್ತು ಮುಖದಲ್ಲಿ ಸತತವಾಗಿ ಹರಿಕೀರ್ತನೆವಿರುವುದೋ, ಆತನು ದೇಹದಲ್ಲಿ ವರ್ತಿಸುತ್ತಿರುವಂತೆ ತೋರುವನು. ಆದರೆ ಆತನು ದೇಹದಲ್ಲಿರದೇ ಶ್ರೀಹರಿಯಲ್ಲಿಯೇ ಇರುವನು ಮತ್ತು ಶ್ರೀಹರಿಯೂ ಸಹ ಆತನ ಹೃದಯದಲ್ಲಿ ವಾಸ್ತವ್ಯ ಮಾಡುವನು ॥೩೧೬॥ ಆತನಾದರೂ ಪರಿಪೂರ್ಣವಾಗಿ ಶ್ರೀಹರಿಯಲ್ಲಿಯೇ ಇರುವನು ಮತ್ತು ಶ್ರೀಹರಿಯಾದರೂ ಆತನ ಒಳಹೊರಗೆ ವ್ಯಾಪಿಸಿಕೊಂಡಿರುವನು. ಹೇ ಪರೀಕ್ಷಿತೀ ರಾಜನೇ, ಈ ಪ್ರಕಾರವಾಗಿ ಕೀರ್ತಿಯ ಗುಣಗಾನ ಮಾಡುವವನು ಸಂಸಾರದಲ್ಲಿ ಆನಂದದಿಂದ ವರ್ತಿಸುತ್ತಿರುವನು ॥೩೧೭॥ ಆದ್ದರಿಂದ ಈ ಮೃತ್ಯುಲೋಕದಲ್ಲಿ ಹರಿಕೀರ್ತನೆಗಿಂತಲೂ ಅಧಿಕ ಸುಲಭವಾದ ಬೇರೆ ಸಾಧನೆ ಇರುವುದಿಲ್ಲ. ಯಾವನು ಹರಿಕೀರ್ತನೆಯಲ್ಲಿ ತನ್ಮಯನಾಗುವನೋ, ಆತನು ದೇಹಬಂಧನಕ್ಕೆ ಸ್ಪರ್ಶ ಕೂಡ ಮಾಡಲಾರನು ॥೩೧೮॥ ಒಂದು ಸಾರೆ ಶ್ರೀಕೃಷ್ಣನ ಕೀರ್ತನೆಯಿಂದ ಪ್ರೇಮವೃತ್ತಿಯು ಪ್ರಕಾಶಿತವಾಯಿತೆಂದರೆ ಸಾಕು ಅದು ಕಲ್ಪಾಂತಕ್ಕೂ ಎಂದಿಗೂ ಮಲಿನವಾಗುವುದಿಲ್ಲ. ದೇಹದಿಂದ ಸರ್ವಕರ್ಮಗಳನ್ನು ಮಾಡುತ್ತಿದ್ದರೂ ಅಂತರಂಗದಲ್ಲಿನ ಶುದ್ಧ ಪ್ರೇಮವು ಮಲಿನವಾಗುವುದಿಲ್ಲ ॥೩೧೯॥ ಆಕಾಶವು ಎಂದಿಗೂ ಮಳೆಯಿಂದ ತೋಯಿಸಿಕೊಳ್ಳುವುದಿಲ್ಲ ಅಥವಾ ಸೂರ್ಯನ ಪ್ರತಿಬಿಂಬವು ಮಡುವಿನ ನೀರಿನಲ್ಲಿ ಬಿದ್ದರೂ ಕೂಡ ಆ ನೀರಿನಿಂದ ಅದು ಎಂದಿಗೂ ಹಸಿಯಾಗುವುದಿಲ್ಲ ॥೩೨೦॥ ಅದರಂತೆ ಹರಿಕೀರ್ತನೆಯ ಗರ್ಜನೆಯಿಂದ ಒಂದು ಸಲ ವೃತ್ತಿಯು ನಿಷ್ಕಾಮತೆಯಿಂದ ಸ್ವಚ್ಛವಾಯಿತೆಂದರೆ ಆಗ ದೇಹಕರ್ಮಗಳು ನಡೆಯುತ್ತಿದ್ದರೂ ದೇಹಕರ್ಮದ ಬಂಧನದಿಂಧ ಆತನು ದೂರನಿರುವನು ॥೩೨೧॥ ತನ್ನ ಭಕ್ತನ ಶರೀರ ಕರ್ಮಗಳನ್ನು ಪುರುಷೋತ್ತಮನು ಸ್ವತಃ ನಡೆಸುತ್ತಿರುವನು. ಆದ್ದರಿಂದ ಭಕ್ತನಿಗೆ ಅಧಮೋತ್ತಮ ಕರ್ಮಬಂಧನೆಯು ಬಾಧಿಸುವುದಿಲ್ಲ ॥೩೨೨॥ ವಾಸ್ತವಿಕವಾಗಿ ನೋಡಲು ಭಕ್ತರ ಮತ್ತು ಅಭಕ್ತರ ಕರ್ಮಗಳನ್ನು ಭಗವಂತನೇ ನಡೆಸುತ್ತಿರುವನು. ಹೀಗಿದ್ದ ಮೇಲೆ ಭಕ್ತರ ಸ್ಥಿತಿಯು ಅಲಿಪ್ತವಾಗಿದ್ದು ಅಭಕ್ತರ ಸ್ಥಿತಿಯು ಬಂಧನಕಾರಕ ಏಕಾಗುವುದು ? ॥೩೨೩॥ ಇದಕ್ಕೆ ಕಾರಣ ಯಾವುದೆಂದರೆ ಶ್ರೀಕೃಷ್ಣಕೀರ್ತಿಯ ಕೀರ್ತನೆ ಮಾಡುವುದರಿಂದ ಭಕ್ತರ ದೇಹಾಭಿಮಾನವು ನಷ್ಟವಾಗುತ್ತಿರುವುದು. ಆದ್ದರಿಂದ ಅವರು ಅಲಿಪ್ತರಾಗಿರುವರು. ಅಭಕ್ತರಿಗೆ ಅಹಂಭಾವವಿರುವುದರಿಂದ ಅವರಿಗೆ ಬಂಧನವು ಪ್ರಾಪ್ತವಾಗುವುದು ॥೩೨೪॥ ಹೇ ಪರೀಕ್ಷಿತೀ, ಈ ಅವಸ್ಥೆಯು ಕೇಳಿ ಪಡೆಯುವಂತೆ ಇರುವುದಿಲ್ಲ. ಅದಕ್ಕಾಗಿ ಶ್ರದ್ಧಾಪೂರ್ವಕವಾಗಿ ಅಂತಃಕರಣದಿಂದ ಪ್ರೇಮದಿಂದ ಶ್ರೀಕೃಷ್ಣನ ಕೀರ್ತಿ ಹಾಡುತ್ತಿದ್ದರೆ ತಾನಾಗಿಯೇ ಈ ಸ್ಥಿತಿಯು ಪ್ರಾಪ್ತವಾಗುವುದು ॥೩೨೫॥ ತನ್ನ ಚರಿತ್ರೆಯ ಪಠಣೆಯಿಂದ ಶ್ರೀಕೃಷ್ಣನು ಸಂತುಷ್ಟನಾಗಿ ಹರಿಕೀರ್ತನೆ ಮಾಡುವವರ ಅನೇಕರ ಸಂಸಾರದ ಬಂಧನೆಯನ್ನು ಸ್ವತಃ ತಾನೇ ಮುರಿದು ಒಗೆದಿರುವನು ॥೩೨೬॥

ಕೃಷ್ಣಕೀರ್ತಿಕೀರ್ತನಗೋಡೀ । ಅಹಂಕಾರಾಚೀ ಬಾಂದವಡೀ ಫೋಡೀ । ಜೀವಾಚೀ ಜೀವಬಂಧನ ತೋಡೀ । ನಿಃಸೀಮ ಆವಡೀ ಕೀರ್ತಿ ಗಾತಾ ।೩೨೭॥ ಏವಂ ಕೃಷ್ಣಕೀರ್ತಿಕೀರ್ತನೇ । ಭಕ್ತೀ "ಕೃಷ್ಣಪದವೀ" ಸ್ವಯೇ ಘೇಣೇ । ಜಗ ಉದ್ಧರಾವಯಾಕಾರಣೇ । ಕೀರ್ತಿ ಶ್ರೀಕೃಷ್ಣೇ ವಿಸ್ತಾರಿಲೀ ।೩೨೮॥ ಜನ್ಮಾಪಾಸೂನಿ ಅಂತಪರ್ಯಂತ । ಶ್ರೀಕೃಷ್ಣಚರಿತ್ರ ಪರಮಾದ್ಭುತ । ತುಜ ಮ್ಯಾ ಸಾಂಗಿತಲೇ ಸಾದ್ಯಂತ । ಪರಮಾಮೃತ ನಿಜಸಾರ ।೩೨೯॥

ಇತ್ಥಂ ಹರೇರ್ಭಗವತೋ ರುಚಿರಾವತಾರವೀರ್ಯಾಣಿ ಬಾಲಚರಿತಾನಿ ಚ ಶಂತಮಾನಿ ।
ಅನ್ಯತ್ರ ಚೇಹ ಚ ಶ್ರುತಾನಿ ಗೃಣನ್ಮನುಷೋ ಭಕ್ತಿಂ ಪರಾಂ ಪರಮಹಂಸಗತೌ ಲಭೇತ ।೨೮॥

ಅರ್ಥ:- ಹೇ ಪರೀಕ್ಷಿತೀಯೇ, ಯಾವ ಮನುಷ್ಯನು ಈ ಪ್ರಕಾರವಾಗಿ ಭಕ್ತಭಯಹಾರೀ ಸೌಂದರ್ಯ ಮಾಧುರ್ಯನಿಧೀ ಶ್ರೀಕೃಷ್ಣನ ಅವತಾರಸಂಬಂಧದ ಪರಾಕ್ರಮ ಮತ್ತು ಈ ಶ್ರೀಮದ್ ಭಾಗವತ ಮಹಾಪುರಾಣದಲ್ಲಿ ತಥಾ ಬೇರೆ ಪುರಾಣದಲ್ಲಿ ವರ್ಣಿಸಿರುವ ಪರಮಾನಂದಮಯೀ ಬಾಲಲೀಲಾ, ಕಿಶೋರಲೀಲಾ ಇತ್ಯಾದಿಗಳ ಸಂಕೀರ್ತನೆ ಮಾಡುವನೋ ಆತನು ಪರಮಹಂಸ ಶ್ರೀಕೃಷ್ಣನ ಚರಣಗಳ ಪರಮಭಕ್ತಿಗೆ ಪ್ರಾಪ್ತನಾಗುವನು.

ಇತಿ ಶ್ರೀ ಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂದೇ ಏಕತ್ರಿಂಶೋಽಧ್ಯಾಯಃ ।೩೧॥ ಸಮಾಪ್ತ ಏಕದಶಸ್ಕಂಧಃ ॥

ಜನ್ಮಾ ಪಾಸೂನಿ ಜ್ಞಾನಘನ । ಶ್ರೀಕೃಷ್ಣಚರಿತ್ರ ಅತಿಪಾವನ । ಜ್ಯಾಚೇ ಸಂಗತೀ ಗೋಂವಳೇ ಜಾಣ । ಅಜ್ಞಾನ ಜನ ಉದ್ಧರಿಲೇ ।೩೩೦॥ ಜ್ಯಾಚಿಯಾ ವ್ಯಭಿಚಾರಸಂಗತೀ । ಗೋಪೀ ಉದ್ಧರಲ್ಯಾ ನೇಣೋ ಕಿತೀ । ಕೃಷ್ಣ ಶ್ಯಾಮಸುಂದರಮೂರ್ತೀ । ಅಭಿಲಾಷ ಚಿತ್ತೀ ದೃಢ ಧರಿತಾ ।೩೩೧॥ ದೇಖೋನಿ ಸುಂದರ ಕೃಷ್ಣ ಮೂರ್ತೀ । ಗಾಯೀ ವೇಧಲ್ಯಾ ತಟಸ್ಥ ಠಾತೀ । ಪಶು ಉದ್ಧರಲೇ ಕೃಷ್ಣಸಂಗತೀ । ಮಾ ಗೋಪೀ ನುದ್ಧರತೀ ಕೈಸೇನಿ ।೩೩೨॥ ಗಾಯೀಗೋಪಿಕಾಂಚೇ ನವಲ ಕೋಣ । ವೃಂದಾವನೀಂಚೇ ತೃಣ ತರು ಪಾಷಾಣ । ಕೃಷ್ಣಸಂಗೇ ತರಲೇ ಜಾಣ । ಐಸಾ ಜ್ಞಾನಘನ ಶ್ರೀಕೃಷ್ಣ ।೩೩೩॥ ವಿಷೇ ಭರೋನಿಯಾ ನಿಜಸ್ತನಾ । ಪೂತನಾ ಘೇಊ ಆಲೀ ಪ್ರಾಣಾ । ತೇಹೀ ಕೃಷ್ಣಸಂಗೇ ಜಾಣಾ । ತ್ಯಾಚ ಕ್ಷಣಾ ಉದ್ಧರಲೀ ।೩೩೪॥ ಕಂಸಶಿಶುಪಾಳಾದಿಕಾಂಸೀ । ದ್ವೇಷೇಂಚಿ ತಾರೀ ಹೃಷೀಕೇಶೀ । ಚಂದನ ಲಾವಿತಾ ಅಂಗಾಸೀ । ಅಂಗಸಂಗೇ ಕುಬ್ಜೇಸೀ ತಾರಿಲೇ ।೩೩೫॥ ಉನ್ಮತ್ತ ಮದೇ ಅತಿಮೂಢ । ಮಾರೂ ಆಲಾ ಕುವಲಯಾಪೀಡ । ತ್ಯಾಸೀ ಮೋಕ್ಷಾಚಾ ಸುರವಾಡ । ಉದ್ಧರಿಲಾ ಸದೃಢ ಕೃಷ್ಣಾಭಿಘಾತೇ ।೩೩೬॥ ಅರಿಷ್ಟ ಕರೂ ಆಲಾ ಶ್ರೀಕೃಷ್ಣಾಲಾಗೀ । ತೋ ಅರಿಷ್ಟ ತಾರಿಲಾ ಧರೂನಿ ಶಿಂಗೀ । ಅಘಾಸುರೇ ಗಿಳಿತಾ ವೇಗೀ । ಚಿರೋನಿ ದೋ ಭಾಗೀ ಉದ್ಧರೀ ಕೃಷ್ಣಾ ।೩೩೭॥

ಶ್ರೀಕೃಷ್ಣನ ಕೀರ್ತಿಯ ಮಧುರತೆಯು ಅಹಂಕಾರದ ಕಾರಾಗೃಹವನ್ನು ಮುರಿದು ಒಗೆಯುವುದು ಮತ್ತು ಶುದ್ಧ ಪ್ರೇಮದಿಂದ ಮತ್ತು ಅಂತಃಕರಣದಿಂದ ಕೀರ್ತಿಯನ್ನು ಹಾಡುತ್ತಿರಲು ಜೀವದ ಬಂಧನೆಯು ಹರಿದು ಹೋಗುವುದು ।೩೨೭॥ ಈ ಪ್ರಕಾರವಾಗಿ ಶ್ರೀಕೃಷ್ಣನ ಕೀರ್ತಿಯ ಕೀರ್ತನೆ ಮಾಡಿ ಭಕ್ತರು ಶ್ರೀಕೃಷ್ಣನ ಪದವಿಯನ್ನು ಪ್ರಾಪ್ತಮಾಡಿಕೊಂಡಿರುವರು. ಜಗತ್ತಿನ ಉದ್ಧಾರಕ್ಕಾಗಿ ಶ್ರೀಕೃಷ್ಣನು ಕೀರ್ತಿ ಹರಡಿಸಿರುವನು ।೩೨೮॥ ಹೀಗೆ ಪರಮಾಮೃತದ ಸಾರವು ಅತ್ಯಂತ ಅದ್ಭುತವಾಗಿದ್ದು ಶ್ರೀಕೃಷ್ಣಚರಿತ್ರೆ ಜನ್ಮದಿಂದ ಆರಂಭಿಸಿ ಅಂತ್ಯದವರೆಗೆ ಸವಿಸ್ತಾರವಾಗಿ ನಿನಗೆ ಹೇಳಿದೆನು ।೩೨೯॥

ಜ್ಞಾನಸ್ವರೂಪವಾಗಿರುವ ಶ್ರೀಕೃಷ್ಣನ ಚರಿತ್ರೆಯು ಜನ್ಮದಿಂದಲೇ ಅತ್ಯಂತ ಪಾವನವಾಗಿದೆ. ಆತನ ಸಂಗತಿಯಿಂದ ಗೌಳಿಯಂತಹ ಅಜ್ಞಾನಿ ಜನರು ಉದ್ಧಾರರಾದರು ।೩೩೦॥ ಆ ಯಾವ ಶ್ಯಾಮಸುಂದರ ಶ್ರೀಕೃಷ್ಣನ ಮೂರ್ತಿ ಕಂಡು ಗೋಪಿಕೆಯರ ಮನದಲ್ಲಿ ಅಭಿಲಾಷೆ ಉತ್ಪನ್ನವಾಯಿತು. ಅವರ ವ್ಯಭಿಚಾರದಿಂದ ಎಷ್ಟೊಂದು ಗೋಪಿಕೆಯರ ಉದ್ಧಾರವಾಯಿತೋ ಇದರ ಗಣನೆಯೇ ಇಲ್ಲ ।೩೩೧॥ ಶ್ರೀಕೃಷ್ಣನ ಮನಮೋಹಕ ಮೂರ್ತಿಯನ್ನು ಕಂಡು ಗೋವುಗಳಿಗೂ ಕೂಡ ಮೋಹವಾಗಿ ಅವು ನಿಂತಲ್ಲೇ ತಟಸ್ಥ ನಿಂತುಬಿಡುತ್ತಿದ್ದವು. ಈ ಪ್ರಕಾರವಾಗಿ ಶ್ರೀಕೃಷ್ಣನ ಸಂಗತಿಯಿಂದ ಪಶುಗಳ ಉದ್ಧಾರವೂ ಆಗುತ್ತಿತ್ತು. ಅಂದಮೇಲೆ ಗೋಪಿಕೆಯರ ಉದ್ಧಾರವಾಗಲಿಕ್ಕಿಲ್ಲವೇ? ।೩೩೨॥ ಗೋವು-ಗೋಪಿಕೆಯರ ಉದ್ಧಾರವಾಗಿರುವುದು ಯಾವ ಆಶ್ಚರ್ಯ? ಆ ವೃಂದಾವನದಲ್ಲಿನ ತೃಣ ಪಾಷಾಣಗಳೂ ಕೂಡ ಉದ್ಧರಿಸಿದವು. ಹೀಗೆ ಶ್ರೀಕೃಷ್ಣನು ಜ್ಞಾನದ ಮೂರ್ತಿಮಂತ ಪುತ್ಥಳಿಯಾಗಿದ್ದನು ।೩೩೩॥ ಪೂತನೆಯು ತನ್ನ ಸ್ತನಗಳಲ್ಲಿ ವಿಷ ತುಂಬಿಕೊಂಡು ಶ್ರೀಕೃಷ್ಣನ ಪ್ರಾಣ ಹೀರಲು ಪ್ರಯತ್ನ ಮಾಡಿದಳು. ಆದರೆ ಆಕೆಯೂ ಕೂಡ ಶ್ರೀಕೃಷ್ಣನ ಸಂಗತಿಯಿಂದ ಉದ್ಧಾರಳಾದಳು ।೩೩೪॥ ಕಂಸ, ಶಿಶುಪಾಲ ಇತ್ಯಾದಿಯಾಗಿ ಶ್ರೀಕೃಷ್ಣನು ದ್ವೇಷ ಮಾಡಿದವರನ್ನೂ ಉದ್ಧರಿಸಿದನು. ಕುಬ್ಜೆಯು ಶ್ರೀಕೃಷ್ಣನ ಅಂಗಕ್ಕೆ ಚಂದನ ಹಚ್ಚಿದ ಸ್ಪರ್ಶಕಾರಣದಿಂದ ಉದ್ಧಾರಳಾದಳು ।೩೩೫॥ ಗರ್ವದಿಂದ ಅತಿಶಯ ಸೊಕ್ಕೇರಿದ ಮಹಾಮೂರ್ಖ ಕುವಲಯಾಪೀಡ ಆನೆಯು ತನಗೆ ಕೊಲ್ಲಲು ಬಂದಿದ್ದಕ್ಕೆ ಶ್ರೀಕೃಷ್ಣನು ಅದನ್ನು ಘಾತ ಮಾಡಿ ಮೋಕ್ಷ ಪ್ರಾಪ್ತಮಾಡಿಕೊಟ್ಟನು ।೩೩೬॥ ಶ್ರೀಕೃಷ್ಣನನ್ನು ಅರಿಷ್ಟಗೊಳಿಸಲು ಅರಿಷ್ಟಾಸುರ ಬಂದಿದ್ದನು. ಆಗ ಅದರ ಕೊಂಬುಗಳನ್ನು ಹಿಡಿದೊಗೆದು ಆತನನ್ನು ಉದ್ಧರಿಸಿದನು. ಅಘಾಸುರನು ತ್ವರಿತವಾಗಿ ಶ್ರೀಕೃಷ್ಣನನ್ನು ನುಂಗಿಬಿಟ್ಟಿದ್ದನು. ಆಗ ಆತನಿಗೆ ಎರಡು ತುಂಡಾಗಿ ಸೀಳಿ ಆತನನ್ನೂ ಉದ್ಧರಿಸಿದನು ।೩೩೭॥

ಕೃಷ್ಣಲಕ್ಷೀ ಲಾವೂನಿ ಟಾಳೀ । ಬಕ ಧ್ಯಾನಸ್ಥ ಯಮುನಾಜಳೀ । ತೋಹೀ ಶ್ರೀಕೃಷ್ಣಾ ಸವೇಗ ಗಿಳೀ । ಕರೂನಿ ದೋನ ಫಾಳೀ ತಾರಿಲಾ ಕೃಷ್ಣೇ ।।೩೩೮।। ಉಡವೂ ಆಲಾ ತೃಣಾವರ್ತ । ತ್ಯಾಸೀ ಕೃಷ್ಣೇ ಭವಂಡಿಲಾ ಆವರ್ತ । ಅಂಗಸಂಗೇಚಿ ಕೃಷ್ಣನಾಥ । ಕೃಪಾವಂತ ವೈರಿಯಾ ।।೩೩೯।। ಗೋಪಾಳ ನೇಲೇ ಚೋರಚೋರೂ । ಠಕೂ ಆಲಾ ವ್ಯೋಮಾಸರೂ । ತ್ಯಾಚಾಹೀ ಕೇಲಾ ಉದ್ಧಾರೂ । ಮೋಕ್ಷೀ ಉದಾರೂ ಶ್ರೀಕೃಷ್ಣ ।।೩೪೦।। ಕೇಶಿಯಾ ಕಂಸಾಚಾ ಘೋಡಾ । ಶ್ರೀಕೃಷ್ಣೇ ಮಾರುನಿ ತಾರಿಲಾ ಪುಡಾ । ಮಲ್ಲ ಮರ್ದೂನಿ ಮಾಲಖಡಾ । ಮೋಕ್ಷಾಚಾ ಉಘಡಾ ಸುಕಾಳ ಕೇಲಾ ।।೩೪೧।। ಕಾಳಿಯಾ ನಾಥಿಲಾ ವಿಖಾರೂ । ವೃಕ್ಷೀ ಉಪಾಡಿಲಾ ವತ್ಸಾಸುರೂ । ಭವಾಬ್ಧೀಮಾಜೀ ಶ್ರೀಕೃಷ್ಣ ತಾರೂ । ಸಂಗೇ ಉದ್ಧಾರೂ ಜಡಮೂಢಾ ।।೩೪೨।। ಜೆಂಹೀ ಖೇಳವಿಲಾ ಚಕ್ರಪಾಣೀ । ಜ್ಯಾಂಚೇ ಘರೀಂಚೇ ಪ್ಯಾಲಾ ಪಾಣೀ । ಜ್ಯಾಂಚೇ ಚೋರೂನಿ ಖಾದಲೇ ಲೋಣೀ । ತ್ಯಾಹೀ ಗೌಳಣೀ ಉದ್ಧರಿಲ್ಯಾ ।।೩೪೩।। ರುಕ್ಮಯಾ ತಾರಿಲಾ ವಿಟಂಬೋನೀ । ಬಾಣ ತಾರಿಲಾ ಭುಜಾ ಛೇದೋನೀ । ಕುಶ ತಾರಿಲಾ ನಿರ್ದಳೂನೀ । ಮೋಕ್ಷದಾನೀ ಶ್ರೀಕೃಷ್ಣ ।।೩೪೪।। ಜೇ ಜೇ ಮಿನಲೇ ಸೋಯರಿಕೇ । ಜೇ ಕಾ ಪಾಹೂ ಆಲೇ ಕೌತುಕೇ । ತೇ ತೇ ತಾರಿಯೇಲೇ ಯದುನಾಯಕೇ । ದರ್ಶನಸುಖೇ ನಿವವೂನಿ ।।೩೪೫।। ಪಾಂಡವ ತಾರಿಲೇ ಪಕ್ಷಪಾತೇ । ವೈರೀ ತಾರಿಲೇ ಶಸ್ತ್ರಘಾತೇ । ಯಾಪರೀ ಶ್ರೀಕೃಷ್ಣನಾಥೇ । ಉದ್ಧರಿಲೀ ಬಹುತೇ ನಿಜಸಂಗೇ ।।೩೪೬।। ವೈರೀ ತಾರಿಲೇ ದ್ವೇಷಭಾವೇ। ಭಕ್ತ ಪಾವಲೇ ಭಜನಭಾವೇ । ಗೋಪೀ ತಾರಿಲ್ಯಾ ಸಂಗಾನುಭವೇ । ಜ್ಯಾ ಜೇವೇ ಭಾವೇ ಅನುಸರಲ್ಯಾ ।।೩೪೭।। ಗಾಯೀ ತಾರಿಲ್ಯಾ ಸಂರಕ್ಷಣೇಸೀ । ಮಯೂರ ತಾರಿಲೇ ಮೋರವಿಶೀ । ವೃಕ್ಷ ತಾರಿಲೇ ತುರಂಬೋನಿ ಘೋಸೀ । ತಾರಕ ಹೃಷೀಕೇಶೀ ಪೂರ್ಣಬ್ರಹ್ಮತ್ವೇ ।।೩೪೮।। ಪೂರ್ಣ ಬ್ರಹ್ಮ ಶ್ರೀಕೃಷ್ಣಾವತಾರ । ಜ್ಞಾನಪ್ರಾಧಾನ್ಯ ಲೀಲಾ ವಿಚಿತ್ರ । ತ್ಯಾಂತ ಪರಮ ಪಾವನ ಬಾಳಚರಿತ್ರ । ವಂದ್ಯ ಸರ್ವತ್ರ ಸಜ್ಞಾನಾ ।।೩೪೯।। ಫೇಲೂನಿ ಷಡ್‌ಗುಣ್ಯೈಶ್ವರ್ಯಸಂಪತ್ತೀ । ಅವತರಲೀ ಶ್ರೀಕೃಷ್ಣಮೂರ್ತೀ । ಯಶ - ಶ್ರೀ - ಔದಾರ್ಯ - ಕೀರ್ತೀ । ಜ್ಞಾನ - ವೈರಾಗ್ಯಸ್ಥಿತೀ ಅಭಂಗ ।।೩೫೦।।

ಶ್ರೀಕೃಷ್ಣನತ್ತ ಲಕ್ಷವಿಟ್ಟು ಯಮುನಾ ನದಿಯಲ್ಲಿ ಬಕಾಸುರನು ಧ್ಯಾನಸ್ಥನಂತೆ ನಟಿಸಿದನು. ಅವನು ಶ್ರೀಕೃಷ್ಣನನ್ನು ನುಂಗಿಬಿಟ್ಟನು. ಆಗ ಶ್ರೀಕೃಷ್ಣನು ಆ ಬಕನನ್ನು ಎರಡು ಭಾಗವಾಗಿ ಸೀಳಿ ಒಗೆದು ಆತನನ್ನು ಉದ್ಧರಿಸಿದನು ।।೩೩೮।। ತೃಣಾವರ್ತ ರಾಕ್ಷಸನು ಶ್ರೀಕೃಷ್ಣನನ್ನು ಮೇಲಕ್ಕೆ ಹಾರಿಸಿ ಒಗೆಯಲು ಬಂದಿದ್ದನು. ಆ ಸಮಯದಲ್ಲಿ ಶ್ರೀಕೃಷ್ಣನೇ ಅವನಿಗೆ ಮೇಲಕ್ಕೆ ಗಿರಿಗಿರಿ ತಿರುಗಿಸಿ ಒಗೆದು ಆತನಿಗೆ ಉದ್ಧರಿಸಿದನು. ಈ ಪ್ರಕಾರವಾಗಿ ಕೃಪಾವಂತ ಶ್ರೀಕೃಷ್ಣನು ಆ ವೈರಿಗಳಿಗೂ ತನ್ನ ಅಂಗಸಂಗದಿಂದ ಉದ್ಧರಿಸಿದನು ।।೩೩೯।। ಗೋಪಾಲಕರಿಗೆ ಕಳ್ಳರು ಕದ್ದೊಯ್ದರು. ವ್ಯೋಮಾಸುರನು ಮೋಸ ಮಾಡಲು ಬಂದಿದ್ದನು. ಆತನನ್ನೂ ಶ್ರೀಕೃಷ್ಣನು ಉದ್ಧರಿಸಿದನು. ಹೀಗೆ ಈ ಶ್ರೀಕೃಷ್ಣನು ಉದಾರನಾಗಿ ಮೋಕ್ಷದಾತಾನಾಗಿರುವನು ।।೩೪೦।। ಕಂಸನ ಕುದುರೆ ಕೇಶೀ ರಾಕ್ಷಸನನ್ನು ಶ್ರೀಕೃಷ್ಣನು ಕೊಂದು ಆತನನ್ನು ಉದ್ಧರಿಸಿದನು. ಕುಸ್ತಿಕಣದಲ್ಲಿ ಮಹಾ ಮಹಾ ಮಲ್ಲರ ಸಂಹಾರ ಮಾಡಿದನು. ನಂತರ ಅವರಿಗೆ ಮೋಕ್ಷದ ಸುಕಾಳ ಮಾಡಿದನು ।।೩೪೧।। ಅತ್ಯಂತ ವಿಷಪೂರಿತ ಕಾಲಿಯಾ ಮಹಾಸರ್ಪಕ್ಕೆ ಶೋಷಣೆ ಮಾಡಿದನು. ವತ್ಸಾಸುರನಿಗೆ ವೃಕ್ಷಕ್ಕೆ ಒಗೆದು ಕೊಂದು ಹಾಕಿದನು. ಈ ಪ್ರಕಾರವಾಗಿ ಶ್ರೀಕೃಷ್ಣನು ಸಂಸಾರ ಸಾಗರದಲ್ಲಿನ ತಾರಕನಾಗಿರುವನು. ಆತನು ಸ್ವ ಸಂಗತಿಯಿಂದ ಜಡಮೂಢ ಜೀವಿಗಳ ಉದ್ಧಾರ ಕೂಡಲೇ ಮಾಡುವನು ।।೩೪೨।। ಯಾರು ಶ್ರೀಕೃಷ್ಣನಿಗೆ ಆಡಿಸಿದ್ದರೋ, ಯಾರ ಮನೆಯ ನೀರು ಆತನು ಕುಡಿದಿದ್ದನೋ, ಯಾರ ಮನೆಯಲ್ಲಿನ ಬೆಣ್ಣೆ ಕದ್ದು ತಿಂದಿದ್ದನೋ ಆ ಗೌಳಿಯರನ್ನೂ ಸಹ ಆತನು ಉದ್ಧರಿಸಿದನು ।।೩೪೩।। ರುಕ್ಮಿಣೀಯ ಅಣ್ಣಾ ರುಕ್ಮೀಗೆ ಶ್ರೀಕೃಷ್ಣನು ಅವಹೇಳನ ಮಾಡಿ ಆತನನ್ನೂ ಉದ್ಧರಿಸಿದನು. ಬಾಣಾಸುರನ ಭುಜಗಳನ್ನು ಕತ್ತರಿಸಿ ಆತನನ್ನು ಉದ್ಧರಿಸಿದನು. ಕುಶ ರಾಕ್ಷಸನ ವಧೆ ಮಾಡಿ ಆತನನ್ನು ಉದ್ಧರಿಸಿದನು. ಹೀಗೆ ಶ್ರೀಕೃಷ್ಣನು ನಿಜವಾಗಿಯೂ ಮೋಕ್ಷದಾತಾನಾಗಿರುವನು ।।೩೪೪।। ಶ್ರೀಕೃಷ್ಣನಲ್ಲಿ ಬೀಗತನ ಸಂಬಂಧ ಬೆಳೆಸಿದವರನ್ನು ಅಥವಾ ಕೌತುಕದಿಂದ ಆತನನ್ನು ನೋಡಲು ಬಂದವರನ್ನು ಶ್ರೀಕೃಷ್ಣನು ತನ್ನ ದರ್ಶನ ಸುಖದಿಂದ ತೃಪ್ತಗೊಳಿಸಿ ಅವರನ್ನೂ ಉದ್ಧರಿಸಿದನು ।।೩೪೫।। ಪಾಂಡವರ ಪಕ್ಷ ಹಿಡಿದು ಅವರ ಉದ್ಧಾರವನ್ನೂ ಮಾಡಿದನು. ವೈರಿಗಳಿಗೆ ಶಸ್ತ್ರಗಳ ಆಘಾತದಿಂದ ಉದ್ಧರಿಸಿದನು. ಈ ಪ್ರಕಾರವಾಗಿ ತನ್ನ ಸಂಗತಿಯಿಂದ ಅನೇಕ ಜನರನ್ನು ಉದ್ಧಾರ ಮಾಡಿದನು ।।೩೪೬।। ವೈರಿಗಳು ದ್ವೇಷಭಾವನೆಯಿಂದ ಉದ್ಧಾರರಾದರು. ಭಕ್ತಿಭಾವದಿಂದ ಭಕ್ತರು ಉದ್ಧಾರರಾದರು ಮತ್ತು ಜೀವಭಾವದಿಂದ ಆತನಲ್ಲಿ ಲೋಲುಪ್ತರಾದ ಗೋಪಿಕೆಯರು ತನ್ನ ಸಂಗತಿಯಿಂದ ಉದ್ಧಾರರಾದರು ।।೩೪೭।। ಸಂರಕ್ಷಣೆ ಮಾಡುತ್ತ ಗೋವುಗಳಿಗೆ ಶ್ರೀಕೃಷ್ಣನು ಉದ್ಧರಿಸಿದನು. ಕಿರೀಟ ಮೇಲೆ ನವಿಲಗರಿ ಧರಿಸಿ ನವಿಲುಗಳಿಗೆ ಉದ್ಧರಿಸಿದನು. ಕೇಶಗಳಲ್ಲಿ ಹೂವುಗಳ ಗುಚ್ಛ ಧರಿಸಿ ವೃಕ್ಷಗಳ ಉದ್ಧಾರ ಮಾಡಿದನು. ಹೀಗೆ ಈ ಶ್ರೀಕೃಷ್ಣನು ಪೂರ್ಣ ಪರಬ್ರಹ್ಮನಾಗಿರುವುದರಿಂದ ಸರ್ವರಿಗೂ ತಾರಕನಾಗಿರುವನು ।।೩೪೮।। ಶ್ರೀಕೃಷ್ಣನು ಪೂರ್ಣಬ್ರಹ್ಮನಾಗಿದ್ದನು. ಆತನ ಲೀಲಾ ಚರಿತ್ರೆಯು ಜ್ಞಾನಪ್ರಧಾನವಾಗಿತ್ತು. ಆರಂಭದ ಆತನ ಬಾಲಚರಿತ್ರೆಯು ಪರಮ ಪಾವನವಾಗಿರುವುದು. ಇದು ಸರ್ವತ್ರ, ಜ್ಞಾನೀ ಪುರುಷರಿಗೆ ವಂದ್ಯವಾಗಿದೆ ।।೩೪೯।। ಶ್ರೀಕೃಷ್ಣನಲ್ಲಿ ಯಶ, ಶ್ರೀ, ಔದಾರ್ಯ, ಜ್ಞಾನ, ಕೀರ್ತಿ ಮತ್ತು ವೈರಾಗ್ಯ ಹೀಗೆ ಷಡ್‌ಗುಣೈಶ್ವರ್ಯ ಸಂಪತ್ತಿರುವುದು. ಇವುಗಳನ್ನು ತೆಗೆದುಕೊಂಡೇ ಶ್ರೀಕೃಷ್ಣನ ಮೂರ್ತಿಯು ಅವತರಿಸಿತ್ತು. ಇವು ಅಕ್ಷಯವಾಗಿದ್ದವು ।।೩೫೦।।

ಇತರ ಅವತಾರೀ ಅವತರಣ । ತೇಥೇ ಗುಪ್ತ ಕೇಲೇ ಸಾಹೀ ಗುಣ । ಕೃಷ್ಣಾವತಾರ ಬ್ರಹ್ಮ ಪರಿಪೂರ್ಣ । ಪೂರ್ಣ ಷಡ್‌ಗುಣ ಪ್ರಕಾಶಿಲೇ ॥೩೫೧॥ ಯಾಲಾಗೀ ಶ್ರೀಕೃಷ್ಣಾವತಾರೀ ಜಾಣ । ಅನವಚ್ಛಿನ್ನ ಸಾಹೀ ಗುಣ । ತ್ಯಾಚೇನಿ ಅಂಗಸಂಗೇ ಉದ್ಧರಣ । ಸರ್ವಾಸೀ ಜಾಣ ಸರ್ವದಾ ॥೩೫೨॥ ಉದ್ಧರಲೇ ಶ್ರೀಕೃಷ್ಣಸಂಗತೀ । ಅಥವಾ ಕೃಷ್ಣಾಚಿಯಾ ಅತಿಪ್ರೀತೀ । ತರಲೇ ದೇಖತಾ ಶ್ರೀಕೃಷ್ಣಮೂರ್ತೀ । ಹೇ ನವಲ ನಿಶ್ಚಿತೀ ನವ್ಹೇ ಏಥೇ ॥೩೫೩॥ ಹೇಚಿ ಪೈ ಗಾ ಶ್ರೀಕೃಷ್ಣಕೀರ್ತೀ । ಅತ್ಯಾವಡೀ ಗಾತಾ ಗೀತೀ । ಉದ್ಧರಲೇ ನೇಣೋ ಕಿತೀ । ಅದ್ಯಾಪಿ ಉದ್ಧರತೀ ಶ್ರದ್ಧಾಳೂ ॥೩೫೪॥ ಆವಡೀ ಗಾತಾ ಶ್ರೀಕೃಷ್ಣಕೀರ್ತೀ । ಕೀರ್ತಿಮಂತಾ ಲಾಭೇ ಪರಮ ಭಕ್ತೀ । ಜೀತೇ ''ಪರಾ'' ಐಸೇ ಮ್ಹಣತೀ । ತೇ ಚೌಥೀ ಭಕ್ತಿ ಘರ ರಿಘೇ ॥೩೫೫॥ ಆರ್ತಜಿಜ್ಞಾಸು - ಅರ್ಥಾರ್ಥೀ । ತ್ಯಾಂಚೀ ಸಹಜೇ ರಾಹೇ ಸ್ಥಿತೀ । ಅಖಂಡ ಪ್ರಕಟೇ ಚೌಥೀಭಕ್ತೀ । ಶ್ರೀಕೃಷ್ಣಕೀರ್ತೀ ಸ್ವಯೇ ಗಾತಾ ॥೩೫೬॥ ಆವಡೀ ಗಾತಾ ಶ್ರೀಕೃಷ್ಣಕೀರ್ತೀ । ಸಹಜೇ ಹೋಯ ವಿಷಯವಿರಕ್ತಿ । ಶಮದಮಾದಿ ಸಂಪತ್ತೀ । ಪಾಯಾ ಲಾಗತೀ ಸಹಜೇಚಿ ॥೩೫೭॥ ಶ್ರೀಕೃಷ್ಣಕೀರ್ತೀಚೀ ಜಪಮಾಳೀ । ಜೋ ಅಖಂಡ ಜಪೇ ಜಿವ್ಹಾಮೂಳೀ । ಶ್ರೀಕೃಷ್ಣ ಸರ್ವಕಾಳೀ । ತ್ಯಾಜವಳೀ ಸರ್ವದಾ ॥೩೫೮॥ ಆದರೇ ಜಪತಾ ಶ್ರೀಕೃಷ್ಣಕೀರ್ತೀ । ಶ್ರೀಕೃಷ್ಣ ಪ್ರಕಟೇ ಸರ್ವಭೂತೀ । ಸಹಜೇ ಠಸಾವೇ ಚೌಥೀ ಭಕ್ತೀ । ಪರಮಾತ್ಮಸ್ಥಿತೀಸಮವೇತ ॥೩೫೯॥ ಜೇ ಭಕ್ತೀಮಾಜೀ ಜಾಣ । ಪೂಜ್ಯ ಪೂಜಕ ಹೋಯ ಶ್ರೀಕೃಷ್ಣ । ಮಗ ಪೂಜಾವಿಧಿವಿಧಾನ । ದೇವೋಚಿ ಆಪಣ ಸ್ವಯೇ ಹೋಯೇ ॥೩೬೦॥ ''ಅತ್ರ ಗಂಧ ಧೂಪ ದೀಪ'' ಜಾಣ । ಅವಘೇಚಿ ಹೋಯ ಶ್ರೀಕೃಷ್ಣ । ಹೇ ಚೌಥೇ ಭಕ್ತೀಚೇ ಲಕ್ಷಣ । ಆಪಣಾ ಆಪಣ ಸ್ವಯೇ ಭಜೇ ॥೩೬೧॥ ಚೌಥೇ ಭಕ್ತೀಚೇ ವಿಂದಾನ । ಭೋಗ್ಯ ಭೋಕ್ತಾ ಹೋಯ ಶ್ರೀಕೃಷ್ಣ । ಕೃಷ್ಣೇಂಸೀ ವೇಗಳೇಪಣ । ಭಕ್ತಾ ಅರ್ಧಕ್ಷಣ ಅಸೇನಾ ॥೩೬೨॥ ತೇ ಕಾಳೀ ಭಕ್ತಾಂಸೀ ಜಾಣ । ದೇಹ ಗೇಹ ಹೋಯ ಶ್ರೀಕೃಷ್ಣ । ಜಾತ ಗೋತ ಶ್ರೀಕೃಷ್ಣಚಿ ಆಪಣ । ಸಂಸಾರ ಸಂಪೂರ್ಣ ಶ್ರೀಕೃಷ್ಣ ಹೋಯೇ ॥೩೬೩॥ ಐಶೀ ಲಾಹೋನಿ ಚೌಥೀ ಭಕ್ತೀ । ಪರಮಹಂಸಾಚೀ ಶ್ರೀಕೃಷ್ಣಗತೀ । ತೇ ಕೃಷ್ಣಸ್ವರೂಪ ಸ್ವಯೇ ಹೋತೀ । ಶ್ರೀಕೃಷ್ಣಕೀರ್ತೀ ವರ್ಣಿತಾ ॥೩೬೪॥

ಇತರ ಅವತಾರಗಳಲ್ಲಿ ಆತನು ಈ ಆರು ಗುಣಗಳನ್ನು ಗುಪ್ತವಾಗಿಟ್ಟಿದ್ದನು. ಆದರೆ ಶ್ರೀಕೃಷ್ಣಾವತಾರವು ಇದು ಪರಿಪೂರ್ಣ ಬ್ರಹ್ಮವಾಗಿದ್ದರಿಂದ ಈ ಗುಣಗಳು ಪರಿಪೂರ್ಣವಾಗಿ ಪ್ರಕಟವಾಗಿದ್ದವು ॥೩೫೧॥ ಆದ್ದರಿಂದ ಕೃಷ್ಣಾವತಾರ ಆರು ಗುಣಗಳಿಂದ ಸಂಪನ್ನವಾಗಿತ್ತು. ಆದ್ದರಿಂದ ಆತನ ಸಂಗತಿಯಿಂದ ಎಲ್ಲರ ಉದ್ಧಾರವು ಸದಾವಕಾಲ ಆಗುತ್ತಿತ್ತು ॥೩೫೨॥ ಶ್ರೀಕೃಷ್ಣನ ಸಂಗತಿಯಿಂದ ಉದ್ಧಾರರಾದರು, ಶ್ರೀಕೃಷ್ಣನಲ್ಲಿ ಅತ್ಯಂತ ಪ್ರೇಮವಿಟ್ಟು ಉದ್ಧಾರರಾದರು, ಶ್ರೀಕೃಷ್ಣನನ್ನು ಕಂಡ ಜನರು ಉದ್ಧಾರರಾದರು. ಇದರಲ್ಲಿ ನಿಜವಾಗಿಯೂ ವಿಶೇಷ ಆಶ್ಚರ್ಯವೇನಿಲ್ಲ ॥೩೫೩॥ ಆದರೆ ಶ್ರೀಕೃಷ್ಣನ ಕೀರ್ತಿಗಳನ್ನು ಅತ್ಯಂತ ಪ್ರೇಮದಿಂದ ಹಾಡಿ ಹೊಗಳುತ್ತ ಅದೆಷ್ಟು ಜನರು ಉದ್ಧಾರರಾದರೆಂಬುದಕ್ಕೆ ಲೆಕ್ಕವೇ ಇಲ್ಲ. ಅದರಂತೆಯೇ ಈಗಲೂ ಕೂಡ ಶ್ರದ್ಧಾಯುಕ್ತ ಜನರ ಉದ್ಧಾರವಾಗುತ್ತಿರುವುದು ॥೩೫೪॥ ಶ್ರೀಕೃಷ್ಣಕೀರ್ತಿಗಳನ್ನು ಪ್ರೇಮದಿಂದ ಹಾಡಿ ಹೊಗಳುವುದರಿಂದ ಸದ್ಗತಿಯು ಪ್ರಾಪ್ತವಾಗುವುದು. ಯಾವುದಕ್ಕೆ ಪರಾ ಭಕ್ತಿ ಎಂದು ಕರೆಯುವರೋ ಆ ನಾಲ್ಕನೆಯ ಭಕ್ತಿಯು ಆತನ ಮನೆಗೆ ನಡೆದು ಬರುವುದು ॥೩೫೫॥ ಶ್ರೀಕೃಷ್ಣ ಕೀರ್ತಿಯನ್ನು ತಾನು ಸ್ವತಃ ಹಾಡಿ ಹೊಗಳುವುದರಿಂದ ಆರ್ತ, ಜಿಜ್ಞಾಸು, ಅರ್ಥಾರ್ಥಿ ಈ ಅವಸ್ಥೆಗಳು ಸಹಜವಾಗಿ ಹೊರಟು ಹೋಗುವುವು ಮತ್ತು ನಾಲ್ಕನೆಯ ಭಕ್ತಿ ಅವಸ್ಥೆಯು ಹೃದಯದಲ್ಲಿ ಪ್ರಕಟವಾಗುವುದು ॥೩೫೬॥ ಶ್ರೀಕೃಷ್ಣಕೀರ್ತಿಯನ್ನು ಪ್ರೇಮದಿಂದ ಹಾಡುವುದರಿಂದ ವಿಷಯಗಳ ವಿಷಯದಲ್ಲಿ ಸಹಜವಾಗಿಯೇ ವಿರಕ್ತಿ ನಿರ್ಮಾಣವಾಗುವುದು ಮತ್ತು ಶಮದಮಾದಿ ಸಂಪತ್ತೂ ಕೂಡ ಕಾಲಿಗೆ ಬೀಳುವುದು ॥೩೫೭॥ ಯಾರ ನಾಲಿಗೆಯಲ್ಲಿ ಅಖಂಡವಾಗಿ ಶ್ರೀಕೃಷ್ಣಕೀರ್ತಿಯ ಜಪ ನಡೆಯುವುದೋ ಅಲ್ಲಿ ಶ್ರೀಕೃಷ್ಣನು ಸತತವಾಗಿ ಆತನಲ್ಲಿ ವಸತಿ ಮಾಡುವನು ॥೩೫೮॥ ಶ್ರೀಕೃಷ್ಣನ ಕೀರ್ತಿಯನ್ನು ಭಕ್ತಿಭಾವದಿಂದ ಜಪಿಸುವುದರಿಂದ ಸರ್ವಪ್ರಾಣಿಮಾತ್ರರಲ್ಲಿ ಶ್ರೀಕೃಷ್ಣನು ಪ್ರಕಟನಾಗುವನು ಮತ್ತು ಪರಮಾತ್ಮಸ್ಥಿತಿಯೊಂದಿಗೆ ನಾಲ್ಕನೆಯ ಭಕ್ತಿಯು ತಾನೇ ತಾನಾಗಿ ಹೃದಯದಲ್ಲಿ ಬಿಂಬಿಸುವುದು ॥೩೫೯॥ ಯಾವ ಭಕ್ತಿಯಲ್ಲಿ ಪೂಜ್ಯ ಮತ್ತು ಪೂಜಕ ಇವೆರಡರಲ್ಲಿ ಶ್ರೀಕೃಷ್ಣನಿರಲು ಆಗ ಪೂಜೆ, ಅರ್ಚನೆ ಇತ್ಯಾದಿ ಸರ್ವ ಪ್ರಕಾರದ ಉಪಚಾರಗಳು ಸ್ವತಃ ದೇವರೇ ಆಗುವನು ॥೩೬೦॥ ಗಂಧ, ಧೂಪ, ದೀಪ ಇವೆಲ್ಲವೂ ಶ್ರೀಕೃಷ್ಣನಾಗುವನು. ತಾನು ಸ್ವತಃ ತನ್ನನ್ನು ತಾನೇ ಭಜಿಸುವುದಕ್ಕೆ ಇದು ನಾಲ್ಕನೆಯ ಭಕ್ತಿಯ ಲಕ್ಷಣವಾಗಿರುವುದು ॥೩೬೧॥ ನಾಲ್ಕನೆಯ ಭಕ್ತಿಯ ಸ್ವರೂಪವು ಹೇಗಿದೆ ಎಂದರೆ ಭೋಗ್ಯ ಮತ್ತು ಭೋಕ್ತಾ ಶ್ರೀಕೃಷ್ಣನೇ ಆಗಿರುವುದರಿಂದ ಭಕ್ತನಿಗೆ ಮತ್ತು ಶ್ರೀಕೃಷ್ಣನಿಗೆ ಒಂದು ಕ್ಷಣ ಕಾಲವೂ ಭಿನ್ನತ್ವವು ಇರುವುದಿಲ್ಲ ॥೩೬೨॥ ಆ ಸಮಯದಲ್ಲಿ ಭಕ್ತನಿಗೆ ತನ್ನ ದೇಹ, ಮನೆ ಮಾರು ಎಲ್ಲವೂ ಶ್ರೀಕೃಷ್ಣನಾಗುವನು. ಆತನ ಕುಲ, ಗೋತ್ರ ಮತ್ತು ಆತನ ಸರ್ವ ಸಂಸಾರವು ಶ್ರೀಕೃಷ್ಣಸ್ವರೂಪವಾಗುವುದು ॥೩೬೩॥ ಶ್ರೀಕೃಷ್ಣಕೀರ್ತಿಯ ವರ್ಣನೆ ಮಾಡುತ್ತಿದ್ದರೆ ಇಂತಹ ಪರಾಭಕ್ತಿಯು ಪ್ರಾಪ್ತವಾಗುವುದು ಮತ್ತು ಭಕ್ತನು ಪರಮಹಂಸದ ಗತಿಯಾಗಿರುವ ಶ್ರೀಕೃಷ್ಣನಲ್ಲಿ ತದ್ರೂಪನಾಗುವನು ॥೩೬೪॥

ಜೇ ಸ್ವರೂಪೀ ನಾಹೀ ಚ್ಯುತೀ । ತೇ ಕೃಷ್ಣಸ್ವರೂಪ ನಿಶ್ಚಿತೀ । ಭಕ್ತ ತದ್ರೂಪ ಸ್ವಯೇ ಹೋತೀ । ಶ್ರೀಕೃಷ್ಣ ಕೀರ್ತೀ ವರ್ಣಿತಾ ।।೩೬೫।। ಶ್ರೀಕೃಷ್ಣ ಕೀರ್ತೀಚೇ ಏಕೇಕ ಅಕ್ಷರ । ಚಹೂ ವೇದಾಂಚೇ ನಿಜಜಿವ್ಹಾರ । ಸಕಳ ಶಾಸ್ತ್ರಾಂಚೇ ಪರಮ ಸಾರ । ಶ್ರೀಕೃಷ್ಣ ಚರಿತ್ರ ಕುರುರಾಯಾ ।।೩೬೬।। ಜೇ ವೇದಾಂಚೇ ಜನ್ಮಸ್ಥಾನ । ಸಕಳ ಶಾಸ್ತ್ರಾಂಚೇ ಸಮಾಧಾನ । ಷಡ್ ದರ್ಶನಾ ಋುಝೂವಣ । ತೋ ಆಠವಾ ಶ್ರೀಕೃಷ್ಣ ಪೂರ್ಣಾವತಾರ ।।೩೬೭।। ಅನಂತ ಅವತಾರ ಝಾಲೇ ಜಾಣ । ಪರೀ ಶ್ರೀಕೃಷ್ಣಾವತಾರ ಜ್ಞಾನಘನ । ತ್ಯಾಚೇ ಚರಿತ್ರ ಅತಿಪಾವನ । ಭವಬಂಧನಚ್ಛೇದಕ ।।೩೬೮।। ತ್ಯಾ ಶ್ರೀಕೃಷ್ಣಾಚೀ ಕೃಷ್ಣಕೀರ್ತೀ । ಆದರೇ ಆಠವಿತಾ ಚಿತ್ತೀ । ಹೋಯ ಭವಬಂಧನಾಚೀ ಸಮಾಪ್ತಿ । ಜಾಣ ನಿಶ್ಚಿತೀ ನೃಪನಾಥಾ ।।೩೬೯।। ವೈಭವ ಶ್ರೀಕೃಷ್ಣಕೀರ್ತೀಸೀ । ವೈರಾಗ್ಯ ಶ್ರೀಕೃಷ್ಣಕೀರ್ತೀಪಾಸೀ । ಶ್ರೀಕೃಷ್ಣ ಕೀರ್ತೀ ವಸೇ ಜ್ಯಾ ಮಾನಸೀ । ತೇ ಕಳಿಕಾಳಾಸೀ ನಾಗವತೀ ।।೩೭೦।। ಆಳಸೇ ಸ್ಮರತಾ ಕೃಷ್ಣಕೀರ್ತೀ । ಸಕಳ ಪಾತಕೇ ಭಸ್ಮ ಹೋತೀ । ತೇ ಶ್ರೀಕೃಷ್ಣಕೀರ್ತಿ ಜೇ ಸದಾ ಗಾತೀ । ತ್ಯಾಂಸೀ ಚಾರೀ ಮುಕ್ತೀ ಆಂಧಣ್ಯಾ ।।೩೭೧।। ಶ್ರೀಕೃಷ್ಣಕೀರ್ತೀಚೇ ಏಕೇಕ ಅಕ್ಷರ । ನಿರ್ದಳೀ ಮಹಾಪಾತಕ ಸಂಭಾರ । ಮೋಕ್ಷ ದೇಊನಿ ಅತಿ ಉದಾರ ಜಗದುದ್ಧಾರಕಾರಕ ।।೩೭೨।। ಬಹು ಅವತಾರೀ ಅವತರೇ ದೇವೋ । ಪರೀ ಯೇ ಅವತಾರೀಂಚಾ ನವಲಾವೋ । ಜ್ಞಾನಪ್ರಧಾನ ಲೀಲಾ ಪಹಾ ಹೋ । ಅಗಮ್ಯ ಅಭಿಪ್ರಾವೋ ಬ್ರಹ್ಮಾದಿ ದೇವಾ ।।೩೭೩।। ಜನ್ಮಾಪಾಸೂನ ಜೋ ಜೋ ದೇಹಾಡಾ । ತೋ ತೋ ನೀಚ ನವಾ ಪವಾಡಾ । ಬ್ರಹ್ಮಸುಖಾಚಾ ಉಘಡಾ । ಕೇಲಾ ರೋಕಡಾ ಸುಕಾಳ ।।೩೭೪।। ಅವತಾರಾಂಮಾಜೀ ಶ್ರೀಕೃಷ್ಣ । ನಿಜನಿಷ್ಟಂಕ ಬ್ರಹ್ಮ ಪೂರ್ಣ । ತ್ಯಾಚೇ ಚರಿತ್ರ ಜ್ಞಾನಘನ । ಪಠಣೇ ಪಾವನ ಜನ ಹೋತೀ ।।೩೭೫।। ಐಶೀ ಪಾವನ ಕೃಷ್ಣಕೀರ್ತೀ । ಪಢತಾ ವಾಚಕ ಉದ್ಧರತೀ । ಶ್ರದ್ಧೇನೇ ಜೇ ಶ್ರವಣ ಕರಿತೀ । ತೇಹೀ ತರತೀ ಭವಸಿಂಧು ।।೩೭೬।। ಕಲಿಯುಗೀ ಜನ ಮಂದಮತೀ । ತ್ಯಾಂಸೀ ತರಾವಯಾ ಸುಗಮಸ್ಥಿತೀ । ಶ್ರೀಕೃಷ್ಣ ಪಾವನ ಕೀರ್ತೀ । ಕೃಪೇನೇ ನಿಶ್ಚಿತೀ ವಿಸ್ತಾರಲೀ ।।೩೭೭।। ಐಸೀ ಪಾವನ ಭಗವತ್ಕೀರ್ತೀ । ವಿಸ್ತಾರಲೀ ಶ್ರೀಭಾಗವತೀ । ತ್ಯಾಂತ ದಶಮಸ್ಕಂಧಾಪ್ರತೀ । ಶ್ರೀಕೃಷ್ಣಕೀರ್ತೀ ಅತಿಗೋಡ ।।೩೭೮।।

ಯಾವ ಸ್ವರೂಪದಿಂದ ಚ್ಯುತನಾಗುವ ಯಾವುದೇ ಭಯವು ಎಂದಿಗೂ ಆಗದ ಶ್ರೀಕೃಷ್ಣನ ಸ್ವರೂಪಕ್ಕೆ ಭಕ್ತನು ಶ್ರೀಕೃಷ್ಣನ ಕೀರ್ತಿಯ ಯೋಗದಿಂದ ಪ್ರಾಪ್ತನಾಗುವನು ।।೩೬೫।। ಶ್ರೀಕೃಷ್ಣಕೀರ್ತಿಯ ಒಂದೇ ಅಕ್ಷರವು ಅದು ವೇದದ ರಹಸ್ಯವಾಗಿರುವುದು. ಹೇ ಪರೀಕ್ಷಿತಿಯೇ ಶ್ರೀಕೃಷ್ಣನ ಚರಿತ್ರೆಯು ಇದು ಸಕಲ ಶಾಸ್ತ್ರಗಳ ಪರಮಸಾರವಾಗಿರುವುದು ।।೩೬೬।। ಯಾವ ವೇದಗಳ ಜನ್ಮಸ್ಥಾನ, ಆರು ಶಾಸ್ತ್ರಗಳ ಸಮಾಧಾನ, ಆರು ದರ್ಶನಗಳ ಜ್ಞಾನವಾಗಿರುವ ಇದು ಶ್ರೀಕೃಷ್ಣನ ಎಂಟನೆಯ ಪೂರ್ಣಾವತಾರವಾಗಿರುವುದು ।।೩೬೭।। ಶ್ರೀಹರಿಯ ಅನಂತ ಅವತಾರಗಳಾಗಿರುವುವು. ಆದರೆ ಶ್ರೀಕೃಷ್ಣಾವತಾರವು ಇದು ಜ್ಞಾನಘನಯುಕ್ತ ಅವತಾರವಾಗಿರುವುದು. ಆತನ ಚರಿತ್ರೆಯು ಪಾವನ ಸ್ವರೂಪದ್ದಾಗಿರುವುದು. ಇದರಿಂದ ಭವಬಂಧನೆಯು ನಿಶ್ಚಿತವಾಗಿ ಛೇದಿಸಲ್ಪಡುವುದು ।।೩೬೮।। ಹೇ ನೃಪನಾಥನೇ, ಆ ಶ್ರೀಕೃಷ್ಣಕೀರ್ತಿಯನ್ನು ಆದರ ಭಾವದಿಂದ ಅಂತಃಕರಣಪೂರ್ವಕವಾಗಿ ಸ್ಮರಣೆ ಮಾಡಿದರೆ, ಸರ್ವ ಪ್ರಕಾರದ ಸಂಸಾರ ಬಂಧನೆಗಳ ಸಮಾಪ್ತಿಯಾಗುವುದು ।।೩೬೯।। ಶ್ರೀಕೃಷ್ಣಕೀರ್ತಿಯೊಂದಿಗೆ ವೈಭವವು ಇರುವುದು ಹಾಗೂ ವೈರಾಗ್ಯವೂ ಇರುವುದು. ಯಾವನ ಚಿತ್ತದಲ್ಲಿ ಸತತವಾಗಿ ಶ್ರೀಕೃಷ್ಣಕೀರ್ತಿವಿರುವುದೋ ಆತನು ಕಲಿಕಾಲನಿಗೂ ಕೂಡ ಭಯಪಡಲಾರನು ।।೩೭೦।। ಆಲಸ್ಯತನದಿಂದಲಾದರೂ ಶ್ರೀಕೃಷ್ಣಕೀರ್ತಿಯನ್ನು ಸ್ಮರಿಸಿದರೆ ಸರ್ವ ಪ್ರಕಾರದ ಪಾಪಗಳು ಭಸ್ಮವಾಗಿಬಿಡುವುವು. ಯಾರು ಶ್ರೀಕೃಷ್ಣ ಕೀರ್ತಿಯನ್ನು ಸತತವಾಗಿ ಹಾಡುತ್ತಿದ್ದರೆ ನಾಲ್ಕೂ ಮುಕ್ತಿಗಳು ಅವರ ದಾಸಿಯಾಗುವುವು ।।೩೭೧।। ಶ್ರೀಕೃಷ್ಣಕೀರ್ತಿಯ ಒಂದೊಂದೇ ಅಕ್ಷರಗಳೂ ಕೂಡ ಮಹಾಪಾಪಗಳ ರಾಶಿಯನ್ನೇ ದಗ್ಧಗೊಳಿಸುವುವು. ಅವು ಮೋಕ್ಷ ಕೊಟ್ಟು ಅತಿಶಯ ಆದರದಿಂದ ಸರ್ವಜಗತ್ತಿನ ಉದ್ಧಾರ ಮಾಡುವುವು ।।೩೭೨।। ದೇವನು ಅನೇಕ ಅವತಾರಗಳನ್ನು ಧರಿಸಿರುವನು. ಆದರೆ ಈ ಅವತಾರದ ಪ್ರಭಾವವು ಅಪೂರ್ವವಾಗಿರುವುದು. ಈ ಅವತಾರದ ಎಲ್ಲ ಲೀಲೆಗಳೂ ಜ್ಞಾನಪ್ರಾಧಾನ್ಯ ಸ್ವರೂಪದಿಂದ ಕೂಡಿರುವುವು. ಇದರಲ್ಲಿನ ರಹಸ್ಯವು ಅಗಮ್ಯವಾಗಿರುವುದು. ಇದು ಬ್ರಹ್ಮದೇವಾದಿಕರಿಗೂ ಸಹ ತಿಳಿಯುವಂತಿರುವುದಿಲ್ಲ ।।೩೭೩।। ಹುಟ್ಟಿದಾರಭ್ಯವಾಗಿ ಯಾವ ಯಾವ ಕೃತಿಗಳನ್ನು ಮಾಡಿದನೋ ಅವು ಒಂದಕ್ಕಿಂತ ಒಂದು ಅಧಿಕ ಅದ್ಭುತಸ್ವರೂಪದ್ದಾಗಿರುವುವು. ನಿತ್ಯನೂತನ ಚಮತ್ಕಾರಕ ಮತ್ತು ಬ್ರಹ್ಮಸುಖದ ತೆರೆದ ಸುಕಾಳವಾಗಿರುವುದು ।।೩೭೪।। ಸರ್ವ ಅವತಾರಗಳಲ್ಲಿನ ಶ್ರೀಕೃಷ್ಣನೇ ನಿಶ್ಚಿತವಾಗಿ ಪೂರ್ಣ ಬ್ರಹ್ಮಸ್ವರೂಪನಾಗಿರುವನು. ಆತನ ಜ್ಞಾನಸಂಪನ್ನ ಚರಿತ್ರೆಯ ಪಠಣೆಯಿಂದ ಜನರು ಪರಮ ಪಾವನರಾಗುವರು ।।೩೭೫।। ಹೀಗೆ ಈ ಶ್ರೀಕೃಷ್ಣಕೀರ್ತಿಯು ಪಾವನವಾಗಿರುವುದು. ಇದರ ಪಠಣೆಯಿಂದ ವಾಚಕರ ಉದ್ಧಾರವಾಗುವುದು. ಹಾಗೆಯೇ ಪರಮ ಶ್ರದ್ಧೆಯಿಂದ ಶ್ರವಣ ಮಾಡಿದರೆ ಸಂಸಾರಸಾಗರದಿಂದ ಉದ್ಧಾರವಾಗಲು ಸಾಧ್ಯವಾಗುವುದು ।।೩೭೬।। ಕಲಿಯುಗದಲ್ಲಿ ಜನರು ಮಂದಬುದ್ಧಿಯವರಾಗುವರು. ಅವರನ್ನು ಉದ್ಧರಿಸುವುದಕ್ಕಾಗಿ ಈ ಸುಗಮ ಮಾರ್ಗ ಮಾಡಲ್ಪಟ್ಟಿರುವುದು. ಈ ಪರಮ ಪವಿತ್ರ ಶ್ರೀಕೃಷ್ಣಕೀರ್ತಿಯು ಬಹು ಕೃಪೆಯಿಂದ ಎಲ್ಲೆಲ್ಲಿಯೂ ಹರಡಿಕೊಂಡಿರುವುದು ।।೩೭೭।। ಹೀಗಿರುವ ಪರಮಪಾವನ ಭಗವಂತನ ಕೀರ್ತಿಯು ಶ್ರೀಭಾಗವತದಲ್ಲಿ ಸವಿಸ್ತಾರ ಸ್ವರೂಪದಲ್ಲಿ ವರ್ಣನೆ ಮಾಡಿರುವುದು. ಆ ಭಾಗವತದ ಹತ್ತನೆಯ ಸ್ಕಂಧದಲ್ಲಿ ಶ್ರೀಕೃಷ್ಣನ ಕೀರ್ತಿ ಮಾತ್ರ ವಿಶೇಷವಾಗಿ ಮಧುರವಾಗಿರುವುದು ।।೩೭೮।।

ಉಪಜಲ್ಯಾ ದಿವಸಾಪಾಸೂನೀ । ಚಢೋವಢೀ ಪ್ರತಿದಿನೀ । ಕೀರ್ತೀ ವಿಸ್ತಾರೀ ಚಕ್ರಪಾಣೀ । ದೀನಜನೀ ತರಾವಯಾ ।।೩೭೯।। ಧರೂನಿ ನರ-ನಟಾಚಾ ವೇಷ । ಅವತರಲಾ ಹೃಷೀಕೇಶ । ತೇಥೇ ನಾನಾಚರಿತ್ರವಿಲಾಸ । ದಿವಸೇಂದಿವಸ ವಿಸ್ತಾರೀ ।।೩೮೦।। ತ್ಯಾಹೀಮಾಜೀ ಬಾಳಚರಿತ್ರ । ಮಧುರ ಸುಂದರ ಅತಿಪವಿತ್ರ । ಮಾಲಖಡಾಜೀ ಕೇಲೇ ಕ್ಷಾತ್ರ । ಪರಮ ಪವಿತ್ರ ಪಾವನತ್ವೇ ।।೩೮೧।। ಜರಾ ಸಂಧ ಪರಾಭವೂನ । ಕಾಳಯವನಾತೇ ನಿರ್ದಾಳೂನ । ತೇ ಅತಿವಿಚಿತ್ರ ವಿಂಧಾನ । ಲಾಘವೀ ಶ್ರೀಕೃಷ್ಣ ಸ್ವಯೇ ದಾವೀ ।।೩೮೨।। ರುಕ್ಮಯಾ ರಣೀ ವಿಟಂಬೂನ । ಶಿಶುಪಾಳಾದಿ ವೀರ ಗಾಂಜೂನ । ಕೃಷ್ಣಕರೀ ಭೀಮಕೀಹರಣ । ತೇ ಪರಮಪಾವನ ಹರಿಲೀಲಾ ।।೩೮೩।। ಪಟ್ಟಮಹಿಷೀಂಚೇ ವರಣ । ಭೌಮಾಸುರಾಚೇ ನಿರ್ದಳಣ । ಪಾರಿಜಾತಾಚೇ ಹರಣ । ಪಾಣಿಗ್ರಹಣ ಸೋಳಾಸಹಸ್ರಾಂಚೇ ।।೩೮೪।। ಸಮುದ್ರೀ ವಸವೂನಿ ದ್ವಾರಾವತೀ । ನಿದ್ರಾ ನ ಮೋಡಿತಾ ನಿಶ್ಚಿತೀ । ಮಥುರಾ ಆಣಿಲೀ ರಾತೋರಾತೀ । ಹೇ ಅಭಿನವ ಕೀರ್ತೀ ಕೃಷ್ಣಾಚೀ ।।೩೮೫।। ವತ್ಸೇ ವತ್ಸಪ ಹೋಊನಿ ಆಪಣ । ಆಪುಲೇ ದಾವೀ ಪೂರ್ಣಪಣ । ಬ್ರಹ್ಮಾದಿಕಾ ನ ಕಳೇ ಜಾಣ । ಅವತಾರೀ ಶ್ರೀಕೃಷ್ಣ ಪೂರ್ಣಾಂಶೇ ।।೩೮೬।। ಖಾಊನಿ ಭಾಜೀಚೇ ಪಾನ । ತೃಪ್ತ ಕೇಲೇ ಋಷಿಜನ । ಐಸೀ ಚರಿತ್ರೇ ಜ್ಞಾನಪ್ರಾಧಾನ್ಯ । ಪರಮ ಪಾವನ ಆಚರಲಾ ।।೩೮೭।। ಐಸೀ ಶ್ರೀಕೃಷ್ಣಲೀಲಾ ಪರಮಾದ್ಭುತ । ಪಾತಕಾ ಕರೀ ಪರಮ ಪುನೀತ । ತೇ ದಶಮಾಮಾಜೀ ಸಮಸ್ತ । ಕಥಾ ಸಾದ್ಯಂತ ಸಾಂಗಿತಲೀ ।।೩೮೮।। ಏಕಾದಶಾಚೀ ನವಲ ಸ್ಥಿತೀ । ಮೂಳಾಪಾಸೂನಿ ಪರಮ ಪ್ರಾಪ್ತೀ । ಜ್ಞಾನ - ವೈರಾಗ್ಯ - ಭಕ್ತಿ - ಮುಕ್ತಿ । ಸ್ವಮುಖೇ ಶ್ರೀಪತೀ ಸಂವಾದಲಾ ।।೩೮೯।। ಪ್ರಥಮಾಧ್ಯಾಯೀ ವೈರಾಗ್ಯ ಪೂರ್ಣ । ಮುಖ್ಯ ಅಧಿಕಾರಾಚೇ ಲಕ್ಷಣ । ನಾರದವಸುದೇವಸಂವಾದ ಜಾಣ । ಭೂಮಿಶೋಧನ ಸಾಧಕಾ ।।೩೯೦।। ತೇಥೇ ನಿಮಿಜಯಂತಸಂವಾದನ । ನಿರ್ಭಯಾಚೇ ಕೋಣ ಸ್ಥಾನ । ಉತ್ತಮ ಭಾಗವತ ತೇ ಕೋಣ । ಮಾಯಾತರಣ ಕರ್ಮ ಬ್ರಹ್ಮ ।।೩೯೧।। ಇತ್ಯಾದಿ ವಿದೇಹಾಚೇ ನವ ಪ್ರಶ್ನ । ನಾವಾಂಚೇ ನವಹೀ ಉತ್ತರೇ ಪೂರ್ಣ । ತೇಚಿ ನವ ನಾಂಗರಣ । ಕ್ಷೇತ್ರಕರ್ಷಣ ಅತಿಶುದ್ಧ ।।೩೯೨।।

ದೀನರಾಗಿರುವ ಜನರಿಗೆ ಈ ಯಾವ ಭವಸಾಗರದಿಂದ ಪಾರಾಗಿ ಹೋಗುವುದಕ್ಕಾಗಿ ಶ್ರೀಕೃಷ್ಣನು ಜನ್ಮ ಧರಿಸಿದ ದಿನದಿಂದಲೇ ಪ್ರತಿದಿನವೂ ಅಧಿಕಾಧಿಕವಾಗಿಯೇ ಕೀರ್ತಿ ಹರಡಿಸಿರುವನು ।।೩೭೯।। ಶ್ರೀಕೃಷ್ಣನು ನರರೂಪ ನಟನ ವೇಷ ಧರಿಸಿ ಅವತಾರ ತೆಗೆದುಕೊಂಡನು. ಆದ್ದರಿಂದ ಆತನು ನಾನಾ ಪ್ರಕಾರಗಳ ಚರಿತ್ರೆಗಳನ್ನು ಪ್ರತಿನಿತ್ಯವೂ ಮಾಡಿ ತೋರಿಸುತ್ತಿದ್ದನು ।।೩೮೦।। ಅದರಲ್ಲಿಯೂ ಆತನ ಬಾಲಚರಿತ್ರೆಯು ಅತ್ಯಂತ ಮಧುರ, ಸುಂದರ ಮತ್ತು ಪವಿತ್ರವಾಗಿರುವುದು. ಕುಸ್ತಿ ಕಣದಲ್ಲಿ ಮಹಾ ಮಲ್ಲರನ್ನು ಪರಾಭವಗೊಳಿಸಿ ಅವರ ಗರ್ವಹರಣ ಮಾಡಿರುವ ಚರಿತ್ರೆಯು ಪರಮ ಪಾವನವಾಗಿರುವುದು ।।೩೮೧।। ಜರಾಸಂಧನನ್ನು ಪರಾಭವಗೊಳಿಸಿ, ಕಾಲಯವನನ ನಾಶ ಮಾಡಿ, ಮಹಾ ಚಮತ್ಕಾರೀ ಶ್ರೀಕೃಷ್ಣನು ಅದ್ಭುತ ಚರಿತ್ರೆ ಮಾಡಿ ತೋರಿಸಿದನು ।।೩೮೨।। ಶ್ರೀಕೃಷ್ಣನು ರುಕ್ಮಯಾನನ್ನು ಯುದ್ಧದಲ್ಲಿ ಅವಮಾನ ಮಾಡಿದನು. ಆತನು ಶಿಶುಪಾಲಾದಿ ವೀರರನ್ನು ವ್ಯಥೆ ಪಡಿಸಿ ರುಕ್ಮಿಣೀಯ ಹರಣ ಮಾಡಿದನು. ಈ ಯಾವ ಶ್ರೀಹರಿಯ ಲೀಲೆಯು ಪರಮ ಪಾವನವಾಗಿರುವುದು ।।೩೮೩।। ರುಕ್ಮಿಣೀ, ಸತ್ಯಭಾಮಾ ಇತ್ಯಾದಿ ಅಷ್ಟನಾಯಿಕಾ ಪಟ್ಟರಾಣಿಯರನ್ನಾಗಿ ವಿವಾಹ ಮಾಡಿಕೊಂಡ, ಭೌಮಾಸುರನ ಸಂಹಾರ, ಪಾರಿಜಾತ ವೃಕ್ಷದ ಹರಣ, ಹದಿನಾರು ಸಾವಿರ ಸ್ತ್ರೀಯರ ಪಾಣಿಗ್ರಹಣ ।।೩೮೪।। ಸಮುದ್ರರಾಜನಕಡೆಯಿಂದ ಭೂಮಿ ಬೇಡಿ ಅದರಲ್ಲಿ ದ್ವಾರಕಾ ನಗರವನ್ನು ನಿರ್ಮಿಸಿದನು. ಯಾರ ನಿದ್ರೆಯನ್ನೂ ಕೆಡಿಸದೇ ಒಂದೇ ರಾತ್ರಿಯಲ್ಲಿ ಸಂಪೂರ್ಣ ಮಥುರಾ ನಗರವನ್ನು ಅಲ್ಲಿಗೆ ತಂದನು. ಈ ಶ್ರೀಕೃಷ್ಣನ ಕೀರ್ತಿಯು ಅಲೌಕಿಕವಾಗಿರುವುದು ।।೩೮೫।। ಗೋವು ಕರುಗಳು, ಗೋಪಾಲಕರು ತಾನೇ ಆಗಿ ಆತನು ತನ್ನ ಪೂರ್ಣತ್ವವನ್ನು ತೋರಿಸಿಕೊಟ್ಟನು. ಹೀಗೆ ಈ ಶ್ರೀಕೃಷ್ಣನ ಅವತಾರವು ಪೂರ್ಣತ್ವದಿಂದ ಕೂಡಿರುವುದು. ಇದು ಬ್ರಹ್ಮಾದಿಕರಿಗೂ ಸಹ ತಿಳಿಯಲಿಲ್ಲ ।।೩೮೬।। ತಪ್ಪಲದ ಒಂದು ಎಲೆ ಮಾತ್ರ ತಾನು ತಿಂದು ದುರ್ವಾಸಾದಿ ಸರ್ವ ಋಷಿಗಳವರಿಗೆ ತೃಪ್ತಗೊಳಿಸಿದನು. ಹೀಗೆ ಜ್ಞಾನಪ್ರಧಾನ ಚರಿತ್ರೆಗಳನ್ನು ಆತನು ಆಚರಿಸಿ ತೋರಿಸಿದನು ।।೩೮೭।। ಇಂತಹ ಶ್ರೀಕೃಷ್ಣನ ಲೀಲೆಗಳು ಅತ್ಯಂತ ಅದ್ಭುತವಾಗಿರುವುವು. ಇವುಗಳನ್ನು ಯಾರು ಪಠಣೆ ಮಾಡುವರೋ ಅವರು ಪುನೀತರಾಗುವರು. ಭಾಗವತದ ಹತ್ತನೆಯ ಸ್ಕಂಧದಲ್ಲಿ ಇವುಗಳ ಸವಿಸ್ತಾರಪೂರ್ವಕ ವರ್ಣನೆ ಇರುವುದು ।।೩೮೮।। ಹನ್ನೊಂದನೆಯ ಸ್ಕಂಧದ ವಿಷಯ ಮಾತ್ರ ಅತಿಅಪೂರ್ವವಾಗಿರುವುದು. ಅದರಲ್ಲಿ ಆರಂಭದಿಂದಲೇ ಪರಮಪದದ ಪ್ರಾಪ್ತಿ ಇರುವುದು. ಜ್ಞಾನ, ವೈರಾಗ್ಯ, ಭಕ್ತಿ ಮತ್ತು ಮುಕ್ತಿ ಇವುಗಳ ವರ್ಣನೆಯನ್ನು ಶ್ರೀಹರಿಯು ತನ್ನ ಮುಖದಿಂದ ಮಾಡಿರುವನು ।।೩೮೯।। ಮೊದಲನೆಯ ಅಧ್ಯಾಯದಲ್ಲಿ ನಾರದ ಮತ್ತು ವಸುದೇವ ಇವರ ಸಂವಾದವಿರುವುದು. ಅದರಲ್ಲಿ ಮುಖ್ಯ ಅಧಿಕಾರದ ಕಾರಣವು ಯಾವ ವೈರಾಗ್ಯದ ವಿಷಯವು ಪರಿಪೂರ್ಣವಾಗಿ ತುಂಬಿರುವುದು. ಇದೇ ಸಾಧಕನ ಬಿತ್ತಿ ಬೆಳೆಯಲು ಭೂಮಿಶುದ್ಧಿಯಾಗಿರುವುದು ।।೩೯೦।। ಇದರಲ್ಲಿ ನಿಮಿಜಯಂತರ ಸಂವಾದ, ನಿರ್ಭಯ ಸ್ಥಾನ ಯಾವುದು? ಉತ್ತಮ ಭಾಗವತನು ಯಾರು? ಮಾಯಾ ಮತ್ತು ಅದರ ತರುಣೋಪಾಯ, ಕರ್ಮ ಮತ್ತು ಬ್ರಹ್ಮ ।।೩೯೧।। ಇತ್ಯಾದಿ ಜನಕರಾಜನ ಒಂಬತ್ತು ಪ್ರಶ್ನೆಗಳಿರುವುವು ಮತ್ತು ಆ ಒಂಬತ್ತು ಪ್ರಶ್ನೆಗಳ ಸಂಪೂರ್ಣ ಉತ್ತರಗಳಿರುವುವು. ಇವೇ ಒಂಬತ್ತು ರಂಟೆಗಳಾಗಿರುವುವು. ಅವರು ಭೂಮಿಯನ್ನು ರಂಟೆ ಹೊಡೆದು ಅತಿಶುದ್ಧವಾಗಿ ಹೊಲನಿರ್ಮಾಣ ಮಾಡಿದರು ।।೩೯೨।।

ತೇ ಪಂಚಾಧ್ಯಾಯೀಂಚ್ಯಾ ಅಂತೀ । ದೇವೀ ಪ್ರಾರ್ಥಿಲಾ ಶ್ರೀಪತೀ । ಕೃಷ್ಣ ಕುಲಕ್ಷಯಾಚ್ಯಾ ಪ್ರಾಂತೀ । ನಿಜಧಾಮಾಪ್ರತೀ ನಿಘೇಲ ॥೯೩॥ ಹೇ ಉದ್ಧವೇ ಜಾಣೋನಿ ಆಪಣ । ನಿರ್ವೇದ ಕೇಲಾ ಜೋ ಸಂಪೂರ್ಣ । ತೇಚಿ ಕಲ್ಪನಾಕಾಶಾಚೇ ನಿರ್ದಳಣ । ಪಾಲವ್ಯಾ ಛೇದನ ವಿಕಲ್ಪಾಂಚ್ಯಾ ॥೯೪॥ ಕಾಮಲೋಭಾಂಚೇ ಗುಪ್ತ ಖುಂಟ । ಆಡವೂ ಲಾಗಲೇ ಉದ್ಭಟ । ತೇ ಸಮೂಳ ಕೇಲೇ ಸಪಾಟ । ಅತಿತಿಖಟ ಅನುತಾಪೇ ॥೯೫॥ ಕ್ರೋಧಾಚಿಯಾ ಅತಿಜಾಡೀ । ಸಮೂಳ ಉಪಡಿಲ್ಯಾ ಮಹಾಪೇಡೀ । ಶಾಂತಿ ನಿವಡಕ ಚೋಖಡೀ । ಸಮೂಳ ಉಪಡೀ ಮೂಳೇಸಿ ॥೯೬॥ ಉದ್ಧವಚಾತಕ ಆರ್ತಿಹರಣ । ವೋಳಲಾ ಶ್ರೀಕೃಷ್ಣ ಕೃಪಾಘನ । ಕ್ಷೇತ್ರ ವೋಲಾವತೀ ಸಬಾಹ್ಯ ಪೂರ್ಣ । ಲಾಗಲೀ ಸಂಪೂರ್ಣ ನಿಜಬೋಧವಾಫ ॥೯೭॥ ತೇಥೇ ಪೂರ್ಣಬ್ರಹ್ಮ ನಿಜಬೀಜ । ಚಾಡೇ ತಂತು ಸರ್ವ ಪರಿತ್ಯಜ್ಯ । ಶ್ರವಣನಳೇ ಅಧೋಕ್ಷಜ । ಪೇರಿಲೇಂಚೀ ಸಹಜ ಸ್ವಯೇ ಪೇರೀ ॥೯೮॥ ಯದು ಅವಧೂತ ಸಂವಾದಸ್ಥಿತೀ । ಚೋವಿಸಾ ಗುರೂಂಚೀ ಉಪಪತ್ತೀ । ಆಗಡು ಖಣವಿಲಾ ಕ್ಷೇತ್ರಾಪ್ರತೀ । ವೋಢಾಳ ಪುಢತೀ ರಿಘೋ ನ ಶಕೇ ॥೯೯॥ ಚಿಕಭರಿತ ಜಾಹಲ್ಯಾ ಪಿಕಾತೇ । ಭೋರಡ್ಯಾ ವೋರಬಡಿತೀ ತೇಥೇ । ತೇ ದಶಮಾಧ್ಯಾಯೀ ಶ್ರೀಅನಂತೇ । ಉಡವಿಲೀ ಮತೇ ಭಜನಗೋಫಣಾ ॥೧೦೦॥ ಅಕರಾವೇ ಅಧ್ಯಾಯೀ ಜಾಣಾ । ಹುರಡಾ ಓಂಬ್ಯಾ ಆಣಿ ಘೋಳಾಣಾ । ತಿಳಗುಳೇಸಿ ಚಾಖವಿಲೇ ಸುಜಾಣಾ । ಮುಕ್ತಲಕ್ಷಣಾಂಚೇನಿ ಹಾತೇ ॥೧೦೧॥ ತೇ ಶ್ರೀಯೇಚೇ ಭೋಕ್ತೇ ಏಥ । ಸತ್ಸಂಗತೀ ಭಗವದ್ಭಕ್ತ । ತೇ ಬಾರಾವೇ ಅಧ್ಯಾಯೀ ಸಾದ್ಯಂತ । ಕೃಪಾಯುಕ್ತ ಸಾಂಗಿತಲೇ ॥೧೦೨॥ ವಿಷಯಾಂಚೀ ವಿಷಯಾವಸ್ಥಾ । ಬಾಧಕ ನೋಹೇ ಸಾಧಕಾಂಚ್ಯಾ ಚಿತ್ತಾ । ತೇಚ ತ್ರಯೋದಶೀ ಕಥಾ । ಜಾಣ ತತ್ತ್ವತಾ ಸಾಂಗಿತಲೀ ॥೧೦೩॥ ಏವಂ ತೇರಾವ್ಯಾ ಅಧ್ಯಾಯಾಪ್ರತೀ । ಜಾಹಲೀ ಪಿಕಾಚೀ ಪೂರ್ಣನಿಷ್ಪತ್ತೀ । ತೇಚಿ ಹಂಸಗೀತ ಉಪಪತ್ತೀ । ಸಮಾಧಿ ಶ್ರೀಪತೀ ಸಾಂಗೋನಿ ಗೇಲಾ ॥೧೦೪॥ ಸಮಾಧೀ ಸಾಂಠವಲೇ ಜೇ ಪೀಕ । ತೇ ಕೈಸೇನಿ ಪಾವತೀ ಸಾಧಕ । ತದರ್ಥೀ ಭಜನಪೂರ್ವಕ । ಚೌದಾವಾ ದೇಖ ನಿರೂಪಿಲಾ ॥೧೦೫॥ ಪೀಕ ಚಢತಾಚಢತಾ ಹಾತೀ । ಮಾರ್ಘಾರೀ ಋದ್ಧಿಸಿದ್ಧೀ ಝಡಪೋನಿ ನೇತೀ । ತೇ ಸಿದ್ಧಿತ್ಯಾಗಾಚೀ ಉಪಪತ್ತೀ । ಪಂಧರಾವ್ಯಾಪ್ರತೀ ದಾವಿಲೀ ॥೧೦೬॥

ದನಂತರ ಐದು ಅಧ್ಯಾಯಗಳ ಕೊನೆಯಲ್ಲಿ ದೇವತೆಗಳು ಶ್ರೀಕೃಷ್ಣನನ್ನು ನಿಜಧಾಮಕ್ಕೆ ಆಗಮಿಸಲು ಪ್ರಾರ್ಥನೆ ಮಾಡಿದರು. ಆಗ ಲಕ್ಷಯದ ಕಾರ್ಯ ನಂತರ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗುವ ನಿರ್ಣಯವಾಯಿತು ॥೯೩॥ ಈ ವಾರ್ತೆಯು ಉದ್ಧವನಿಗೆ ತಿಳಿಯುತ್ತಲೇ ಆತನು ಖೇದ ಪ್ರದರ್ಶಿಸಿದನು. ಆತನು ಕಲ್ಪನಾಕಾಶದ ನಾಶಮಾಡಿ ವಿಕಲ್ಪಗಳ ಪಲ್ಲವಗಳನ್ನು ಹರಿದು ಹಾಕಿದನು ॥೯೪॥ ಕಾಮ ಮತ್ತು ಕ್ರೋಧಗಳೆಂಬ ಕೊಯ್ಲಿಗಳು ಮಧ್ಯದಲ್ಲಿ ಉಳಿದುಕೊಂಡಿದ್ದವು. ಅವು ಅಡ್ಡಿಯನ್ನುಂಟು ಮಾಡಹತ್ತಿದವು. ಆಗ ಅವುಗಳನ್ನು ತೀವ್ರ ಅನುತಾಪದಿಂದ ಸಮೂಲವಾಗಿ ಕಿತ್ತೊಗೆದು ಸಂಪೂರ್ಣ ಹೊಲವನ್ನು ಸಪಾಟವನ್ನಾಗಿ ಮಾಡಲಾಯಿತು ॥೯೫॥ ಕ್ರೋಧವೆಂಬ ಬಹು ದೊಡ್ಡ ಬೇರುಗಳು ಇದ್ದವು. ಅವುಗಳನ್ನೂ ಕೂಡ ಕಿತ್ತೊಗೆಯಲಾಯಿತು. ಸಾತ್ವಿಕ ಶಾಂತಿ ಪ್ರಕಟ ಮಾಡಲಾಯಿತು. ಹೀಗೆ ಅಶಾಂತಿಯ ಸಮೂಲವಾಗಿ ನಾಶ ಮಾಡಲ್ಪಟ್ಟಿತು ॥೯೬॥ ಉದ್ಧವರೂಪ ಚಾತಕಪಕ್ಷಿಯ ತೃಷೆಯನ್ನು ತೃಪ್ತಗೊಳಿಸುವುದಕ್ಕಾಗಿ ಶ್ರೀಕೃಷ್ಣನು ಕೃಪಾರೂಪ ನೀರಿನ ಮಳೆಗರೆದನು. ಅದರಿಂದ ಸಂಪೂರ್ಣ ಹೊಲವು ಒಳಹೊರಗೆ ಹಸಿಯಾಯಿತು. ಅದರಲ್ಲಿ ಆತ್ಮಬೋಧೆಯ ಬಿತ್ತನೆ ಆರಂಭಿಸಲಾಯಿತು ॥೯೭॥ ಅಲ್ಲಿ ಪೂರ್ಣಬ್ರಹ್ಮ ಎಂಬುವುದೇ ಆತ್ಮ ಬೀಜವಾಗಿತ್ತು. ಬೀಜಗಳಲ್ಲಿನ ಕಸಕಡ್ಡಿಗಳನ್ನು ಒಗೆದು ಶ್ರವಣರೂಪ ಬಿತ್ತುವ ನಳಿಕೆಯಿಂದ ಶ್ರೀಕೃಷ್ಣನು ಸ್ವತಃ ಸರ್ವತ್ರ ಬಿತ್ತಿದನು ॥೯೮॥ ತದನಂತರ ಯದು- ಅವಧೂತ ಸಂವಾದದ ರೂಪದಿಂದ ಇಪ್ಪತ್ನಾಲ್ಕು ಗುರುಗಳ ಪ್ರಕಾರ ಹೇಳಲ್ಪಟ್ಟಿತು. ಇದೇ ಆ ಹೊಲದ ಸುತ್ತುಮುತ್ತು ಕಂದಕ ಅಗೆಯಲಾಯಿತು. ಇದರಿಂದ ಅಲ್ಲಿ ಉಡಾಳ ದನಗಳ ಕಾಟವು ತಪ್ಪಿತು ॥೯೯॥ ತದನಂತರ ಬೆಳೆ ಬೆಳೆಯಲು ಆರಂಭಿಸಿದಂತೆಯೇ ಅಲ್ಲಿ ಬೆಳೆ ನಾಶಮಾಡಲು ನಾನಾವಿಧ ಮತಗಳ ರೂಪ ಪಕ್ಷಿಗಳು ತುಂಬಿಕೊಂಡವು. ಹತ್ತನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಭಜನರೂಪ ಕವಣೆಯಿಂದ ಅವುಗಳನ್ನು ಹಾರಿಸಿಬಿಟ್ಟನು. ಅಂದರೆ ಆ ಎಲ್ಲ ಮತಗಳ ಖಂಡನೆ ಮಾಡಿದನು ॥೧೦೦॥ ಹನ್ನೊಂದನೆಯ ಅಧ್ಯಾಯದಲ್ಲಿ ಮುಕ್ತ ಲಕ್ಷಣದ ಹಸ್ತದಿಂದ ಜ್ಞಾನೀಗಳವರಿಗೆ ಎಳ್ಳು ಬೆಲ್ಲ ಸಮೇತವಾಗಿ, ಜೋಳದ ಬೆಳಸಿ, ಗೋದಿಯ ತೆನೆಗಳನ್ನು ಮತ್ತು ಸಜ್ಜೆಯ ಬೆಳೆಸಿ ಭುಂಜಿಸಲು ಕೊಡಲಾಯಿತು ॥೧೦೧॥ ಆ ವೈಭವದ ಭೋಕ್ತೆಯವರು ಸತ್ಸಂಗತಿ ಧರಿಸಿರುವ ಭಗವದ್ಭಕ್ತರಾಗಿದ್ದರು. ಹೀಗೆ ಕೃಪಾಯುಕ್ತವಾಗಿರುವ ಹನ್ನೆರಡನೆಯ ಅಧ್ಯಾಯ ಹೇಳಲ್ಪಟ್ಟಿತು ॥೧೦೨॥ ವಿಷಯಗಳ ವಿಷಯಾವಸ್ಥೆಯು ಸಾಧಕರ ಚಿತ್ತಕ್ಕೆ ಯಾವುದರಿಂದ ಬಾಧಕವಾಗಲಾರದೋ ಅಂತಹ ಕಥೆ ಹದಿಮೂರನೆಯ ಅಧ್ಯಾಯದಲ್ಲಿ ಹೇಳಲಾಯಿತು ॥೧೦೩॥ ಈ ಪ್ರಕಾರವಾಗಿ ಹದಿಮೂರನೆಯ ಅಧ್ಯಾಯದಲ್ಲಿ ಬೆಳೆಯು ಪರಿಪೂರ್ಣವಾಗಿ ಬೆಳೆದು ನಿಂತಿತು. ಇದುವೇ ಹಂಸಗೀತೆಯ ನಿರೂಪಣೆ ಮತ್ತು ಸಮಾಧಿ ವಿಷಯ ಶ್ರೀಕೃಷ್ಣನು ಹೇಳಿದನು ॥೧೦೪॥ ಆ ಸಮಾಧಿಯಲ್ಲಿ ಸಂಗ್ರಹಿಸಲ್ಪಟ್ಟ ಬೆಳೆಯನ್ನು ಸಾಧಕರಿಗೆ ಹೇಗೆ ಪ್ರಾಪ್ತವಾದೀತೆಂಬ ಈ ಉದ್ದೇಶದಿಂದ ಭಜನಪೂರ್ವಕವಾಗಿ ಹದಿನಾಲ್ಕನೆಯ ಅಧ್ಯಾಯದಲ್ಲಿ ವರ್ಣನೆ ಮಾಡಿರುವುದು ॥೧೦೫॥ ಈ ಬೆಳೆಯು ಕೈಸೇರಬೇಕೆನ್ನುವಷ್ಟರಲ್ಲಿ ಋದ್ಧಿ-ಸಿದ್ಧಿಗಳು ನಡುವೆಯೇ ಬಂದು ತೊಂದರೆಗೀಡು ಮಾಡುವುವು. ಅದಕ್ಕಾಗಿ ಸಿದ್ಧಿಗಳ ಖಂಡನೆಯ ಉಪದೇಶ ಹದಿನೈದನೆಯ ಅಧ್ಯಾಯದಲ್ಲಿ ತೋರಿಸಿಕೊಟ್ಟಿರುವುದು ॥೧೦೬॥

ಪೀಕ ನ ಮಾಯೇ ತ್ರಿಜಗತೀ । ತರೀ ತ್ಯಾಚ್ಯಾ ಸಾಂಠವಣಾ ಕಿತೀ । ತ್ಯಾ ಷೋಡಶ್ಯಾಧ್ಯಾಯೀ ವಿಭೂತೀ । ಉದ್ದೇಶೇ ಶ್ರೀಪತೀ ದಾವೂನಿ ಗೇಲಾ ।।೪೦೭।। ಕ್ಷೇತ್ರ ಅಧಿಕಾರೀ ಏಥೇ ಜಾಣ। ಚಾರೀ ಆಶ್ರಮ ಚಾರೀ ವರ್ಣ । ಸತರಾವಾ ಅಠರಾವಾ ನಿರೂಪಣ । ವಾಂಟೇ ಸಂಪೂರ್ಣ ವಿಭಾಗಿಲೇ ।।೪೦೮।। ಏಕೂಣಿಸಾವ್ಯಾ ಅಧ್ಯಾಯೀ ಜಾಣ । ಕರೂನಿ ಪಿಕಾಚೀ ಸಂವಗಣ । ಜೇಣೇ ಕೋಡೇನಿ ವಾಢಲೇ ಕಣ । ತೋ ಕೋಂಡಾ ಸಾಂಡೂನಿ ಜಾಣ ಕಣ ಘ್ಯಾವೇ ।।೪೦೯।। ಐಸೇ ನಿವಡಿಲೇ ಜೇ ಶುದ್ಧ ಕಣ। ತೇಥೇ ಪ್ರಾಪ್ತಾಪ್ರಾಪ್ತೀಚೇ ಲಕ್ಷಣ । ತ್ರಿವಿಧ ವಿಭಾಗನಿರೂಪಣ । ವಿಸಾವಾ ಜಾಣನಿರೂಪಿಲಾ ।।೪೧೦।। ಜೇ ಭಾಗಾ ಆಲೇ ಶುದ್ಧ ಕಣ । ತೇ ರಾಖಾವೇ ಆಪಲೇ ಆಪಣ । ಗುಣದೋಷಾಂಚೇ ಚೋರಟೇ ಜಾಣ । ಖಳೇ ಫೋಡೂನ ಕಣ ನೇತೀ ।।೪೧೧।। ಸರ್ವಾಚ್ಯಾ ಭಾಗಾ ಯೇತಾತೀ ಕಣ । ಪರೀ ಖಾವೋ ನ ಲಾಹತೀ ಚೋರಾ ಭೇಣ। ಥೋರ ಥೋರ ನಾಗವಿಲೇ ಜಾಣ । ಯಾಲಾಗೀ ಸಂರಕ್ಷಣ ದೃಢ ಕೀಜೇ ।।೪೧೨।। ಗುಣದೋಷಾಂಚೀ ನವಲಕಥಾ। ಮಿಳಣೇ ಮಿಳೋನಿ ಆಪ್ತತಾ । ಠಕೂನಿ ನೇತೀ ಸ್ವರ್ವಸ್ವತಾ । ದಾಣಾಹೀ ಹಾತಾ ನೇದಿತೀ ಯೇವೋ।।೪೧೩।। ಗುಣದೋಷ ಆತುರ್ಬಳೀ। ಸಜ್ಞಾನಾತೇ ತತ್ಕಾಳ ಛಳೀ। ಜೋ ಗುಣದೋಷಾಂತೇ ನಿರ್ದಳೀ । ತೋ ಮಹಾಬಳೀ ತಿಹೀ ಲೋಕೀ ।।೪೧೪।। ಹೇ ಶಿಕವಣ ಉದ್ಧವೇ ಐಕತಾ । ತೋ ಮ್ಹಣೇ ಚೋರಾಂಚಾ ಪ್ರತಿಪಾಳಿತಾ । ತುರ್ಝಾ ವೇದಚಿ ಗಾ ತತ್ತ್ವತಾ । ಗುಣದೋಷಪ್ರಬಳತಾ । ತ್ಯಾಚೇನಿ ಅಂಗೇ ।।೪೧೫।। ಮುಖ್ಯ ಚೋರಾಂಚಾ ಕುರುತಾ । ತುರ್ಝಾ ವೇದಚಿ ಮಹಾಖಾಟಾ । ತ್ಯಾಮಾಜೀ ಗುಣದೋಷಾಚಾ ಘರಟಾ । ನಾನಾ ಚೇಷ್ಟಾ ತೋ ಶಿಕವೀ ।।೪೧೬।। ಏವಂ ಪ್ರತಿಪಾಳೋನಿ ಗುಣದೋಷಾಂಸೀ । ವೇದ ನಾಗವೀ ಸಮಸ್ತಾಂಸೀ । ಏವಂ ಉದ್ಧವೇ ವೇದಾಂಚ್ಯಾ ಶಿಸೀ । ಕುಡೇಪಣಾಸೀ ಸ್ಥಾಪಿಲೇ ।।೪೧೭।। ತೋ ವೇದಾನುವಾದ ನವ್ಹೇ ಕುಡಾ । ಐಸಾ ಪ್ರತಿಪಾದೀ ದಿಧಲಾ ಝಾಡಾ । ತೇ ನಿರೂಪಣೇ ಅತಿ ಚೋಖಡಾ । ಅಧ್ಯಾಯ ರೋಕಡಾ ಏಕವಿಸಾವಾ ।।೪೧೮।। ಚೋರ ಕೋಣ ಮಾರ್ಗೇಯೇತೀ । ಪಿಕಲೇ ಪೀಕ ಜ್ಯಾ ವಾಟಾ ನೇತೀ । ತೋ ಮಾರ್ಗ ಬುಜಾವಯಾ ನಿಶ್ಚಿತೀ । ತತ್ತ್ವಸಂಖ್ಯಾ ಉಪಪತ್ತೀ ಬಾವಿಸಾವಾ ।।೪೧೯।। ಮುಖ್ಯತ್ವೇ ಜ್ಞಾನಾಚೇ ಸಂರಕ್ಷಣ । ದೃಢ ಶಾಂತೀಚೇ ಕಾರಣ । ತೇ ಭಿಕ್ಷುಗೀತ ನಿರೂಪಣ । ಸ್ವಯೇ ಶ್ರೀಕೃಷ್ಣಸಾಂಗೋನಿ ಗೇಲಾ ।।೪೨೦।।

ಈ ಬೆಳೆಯು ಮೂರು ಲೋಕಗಳಲ್ಲಿಯೂ ಹಿಡಿಸದಂತಾಯಿತು. ಅದರ ಸಂಗ್ರಹ ಮಾಡುವ ಸ್ಥಾನಗಳ ವಿಷಯಕ್ಕೆ ಶ್ರೀಕೃಷ್ಣನು ಹದಿನಾರನೆಯ ಅಧ್ಯಾಯದಲ್ಲಿ ವಿಭೂತಿಗಳ ರೂಪದಲ್ಲಿ ವರ್ಣಿಸಿ ತೋರಿಸಿಕೊಟ್ಟಿರುವನು ।।೪೦೭।। ಹದಿನೇಳನೆಯ ಮತ್ತು ಹದಿನೆಂಟನೆಯ ಅಧ್ಯಾಯದಲ್ಲಿನ ನಿರೂಪಣೆಯಲ್ಲಿ ಈ ಹೊಲದ ಅಧಿಕಾರಿಗಳಾದ ಯಾವ ನಾಲ್ಕು ವರ್ಣ ಮತ್ತು ನಾಲ್ಕು ಆಶ್ರಮಗಳ ವಿಭಾಗ ಮಾಡಿಕೊಟ್ಟನು ।।೪೦೮।। ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಬೆಳೆಯ ಕೊಯ್ಲು ಮಾಡಿ ತೆನೆಗಳಲ್ಲಿನ ಬೀಜಗಳನ್ನು ಆರಿಸಿಕೊಳ್ಳುವ ರೀತಿಯಲ್ಲಿ ಪ್ರತಿಪಾದನೆ ಮಾಡಲ್ಪಟ್ಟಿರುವುದು ।।೪೦೯।। ಹೀಗೆ ಆರಿಸಿ ತೆಗೆದ ಕಾಳುಗಳು ತಮಗೆ ಹೇಗೆ ಹಸ್ತಗತವಾಗುವುದೆಂಬ ವಿಷಯವನ್ನು ತ್ರಿವಿಧ ಭಾಗ ನಿರೂಪಣೆಯಿಂದ ಪ್ರಾಪ್ತಾಪ್ರಾಪ್ತಿಯ ಲಕ್ಷಣವನ್ನು ಇಪ್ಪತ್ತನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿರುವುದು ।।೪೧೦।। ತನ್ನ ಪಾಲಿಗೆ ಬಂದ ಧಾನ್ಯ ತಾನು ಜೋಪಾನವಾಗಿ ಕಾಯ್ದುಕೊಳ್ಳಬೇಕು. ಏಕೆಂದರೆ ಗುಣದೋಷಗಳೆಂಬ ಕಳ್ಳರು ಕಣ ಹೊಡೆದು ಲೂಟಿಮಾಡುವ ಪ್ರಸಂಗವಿರುವುದು. ಈ ವಿಷಯವಾಗಿ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ನಿರೂಪಣೆ ಮಾಡಿರುವುದು ।।೪೧೧।। ಸರ್ವರ ಪಾಲಿಗೆ ಬೆಳೆದ ಕಾಳುಗಳು ಪ್ರಾಪ್ತವಾಗುವುವು. ಆದರೆ ಕಳ್ಳರ ಭಯದಿಂದ ಅವುಗಳನ್ನು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಮಹಾ ಮಹಾ ಶಕ್ತಿಶಾಲಿ ಜನರಿಂದಲೂ ಈ ಕಳ್ಳರು ಲುಟಾಯಿಸಿ ಒಯ್ದಿರುವರು. ಆದ್ದರಿಂದ ಬೆಳೆದ ಧಾನ್ಯವನ್ನು ಕಾಳಜಿಪೂರ್ವಕವಾಗಿ ರಕ್ಷಿಸಬೇಕು ।।೪೧೨।। ಗುಣದೋಷಗಳ ವಿಷಯವು ಬಹು ಚಮತ್ಕಾರಿಕವಾಗಿರುವುದು. ಈ ಕಳ್ಳರು ನಮ್ಮಲ್ಲಿ ಕೂಡಿಕೊಂಡು ಪ್ರೀತಿಯಿಂದ ಸ್ನೇಹ ಬೆಳೆಸುವರು. ನಂತರ ಮೋಸಗೊಳಿಸಿ ಸರ್ವವನ್ನೂ ಲೂಟಿ ಮಾಡಿ ಒಯ್ದುಬಿಡುವರು. ಒಂದು ಕಾಳೂ ಕೂಡ ಬಿಡುವುದಿಲ್ಲ ।।೪೧೩।। ಗುಣದೋಷಗಳು ಅತಿಶಯ ಶಕ್ತಿಶಾಲಿಗಳಾಗಿರುವುವು. ಸಜ್ಞಾನರಿಗೆ ಇವು ನಿಶ್ಚಿತಪೂರ್ವಕವಾಗಿ ತೊಂದರೆ ಕೊಡುವುವು. ಯಾರು ಈ ಗುಣದೋಷಗಳ ಸಂಹಾರ ಮಾಡುವರೋ, ಅವರೇ ಈ ಮೂರು ಲೋಕಗಳಲ್ಲಿ ಬಲಾಢ್ಯರಾಗುವರು ।।೪೧೪।। ಉದ್ಧವನು ಈ ಉಪದೇಶ ಕೇಳುತ್ತಲೇ ಆಗ ಆತನು ಹೀಗೆ ಹೇಳಿದನು. ಈ ಕಳ್ಳರಿಗೆ ನಿನ್ನ ವೇದಗಳೇ ಪ್ರೋತ್ಸಾಹ ಕೊಡುತ್ತಿರುವುವು. ಅವುಗಳ ಸಹಾಯದಿಂದಲೇ ಗುಣದೋಷಗಳು ಬೆಳೆದು ನಿಂತಿರುವುವು ।।೪೧೫।। ವೇದಗಳು ನಿಜವಾಗಿಯೂ ಸುಳ್ಳಾಗಿರುವುವು. ಅವೇ ಮುಖ್ಯವಾಗಿ ಕಳ್ಳರ ಕಳ್ಳರಾಗಿರುವುವು. ಅವೇ ಗುಣದೋಷಗಳಿಗೆ ಸ್ಥಾನ ನೀಡಿವೆ. ಅವೇ ಕಳ್ಳರಿಗೆ ಅನೇಕ ಪ್ರಕಾರದ ಚೇಷ್ಟೆ ಕಲಿಸಿರುವುವು ।।೪೧೬।। ಈ ಪ್ರಕಾರವಾಗಿ ವೇದಗಳು ಗುಣದೋಷಗಳ ಪ್ರತಿಪಾಲನೆ ಮಾಡಿ ಇವು ಎಲ್ಲರನ್ನೂ ಮೋಸಗೊಳಿಸುತ್ತಲಿವೆ. ಹೀಗೆ ಉದ್ಧವನು ದೇವನ ಎದುರಿನಲ್ಲಿ ಈ ಖೊಟ್ಟಿತನದ ಆರೋಪ ಮಾಡಿರುವನು ।।೪೧೭।। ಆಗ ಶ್ರೀಕೃಷ್ಣನು ಹೀಗೆ ತಿಳಿಸಿದನು; ವೇದ - ಅನುವಾದವು ಖೊಟ್ಟಿಯಾಗಿರುವುದಿಲ್ಲ ಹೀಗೆ ಸುರೇಖ ಪ್ರತಿಪಾದನೆಯನ್ನು ಮಾಡಿರುವನು. ಈ ಇಪ್ಪತ್ತೊಂದನೆಯ ಅಧ್ಯಾಯವು ಸುರಸವಾಗಿರುವುದು ।।೪೧೮।। ಕಳ್ಳರು ಯಾವ ರಸ್ತೆಯಿಂದ ಬರುವರು, ಬೆಳೆದ ಬೆಳೆಯನ್ನು ಯಾವ ಮಾರ್ಗದಿಂದ ಒಯ್ಯುವರು ।।೪೧೯।। ಆ ಮಾರ್ಗವನ್ನು ಮುಚ್ಚಿ ಹಾಕುವುದಕ್ಕಾಗಿ ತತ್ವ ಸಂಖ್ಯೆಗಳ ವಿಚಾರವನ್ನು ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಪ್ರತಿಪಾದನೆ ಮಾಡಲ್ಪಟ್ಟಿರುವುದು ।।೪೧೯।।

ಮುಖ್ಯ ಚೋರಾಂಚೇ ಚೋರಟೇಪಣ। ಮನಾಪಾಶೀ ಅಸೇ ಜಾಣ । ತೇ ಮನೋಜಯಾ ಚೇ ಲಕ್ಷಣ । ಭಿಕ್ಷು ಗೀತನಿರೂಪಣ ತೇವಿಸಾವಾ ।।೫೨೧।। ಚೋರ ಜನ್ಮ ತೀ ಜಿಚೇ ಪೋಟೀ । ತೇ ಮುಖ್ಯತ್ವೇ ಪ್ರಕೃತಿ ಖೋಟೀ । ಪಿಕಲ್ಯಾ ಪಿಕಾ ಕರೂನಿ ಲುಟೀ । ಲಪತೀ ಶೇವಟೀ ತೀಮಾಜೀ ।।೫೨೨।। ಆದಿ ನಿರ್ಗುಣ ಅಂತೀ ನಿರ್ಗುಣ । ಮಧ್ಯೆ ಮಿಥ್ಯಾ ಪ್ರಕೃತೀಸೀ ತ್ರಿಗುಣ । ಹೇ ಮುಖ್ಯ ಪಿಕಾಚೇ ಸಂರಕ್ಷಣ । ಕೇಲೇ ನಿರೂಪಣ ಚೋವಿಸಾವಾ ।।೫೨೩।। ಮೋಕಳೇ ಪೀಕ ಅಸತಾ ಶೇತೀ । ಪಶುಪಕ್ಷೀ ಚೋರ ರಿಘೋನ ಶಕತೀ । ತೇ ಸಹಜ ಸಂರಕ್ಷಣ ಉಪಪತ್ತೀ । ನಿರ್ಗುಣೋಕ್ತೀ ಪಂಚವಿಸಾವಾ ।।೫೨೪।। ಸ್ತ್ರೀಕಾಮಾಚೀ ಧಾಡೀ ಜಾಣ । ಸಕಳ ಪಿಕಾಸೀ ನಾಗವಣ । ಪುರೂರವಾ ನಾಗವಲಾ ಆಪಣ । ಇತರಾಂಚಾ ಕೋಣ ಪಡಿಪಾಡೂ ।।೫೨೫।। ಕಾಮಾಸಕ್ತಿ ಕರಿತಾ ಜಾಣ । ಪ್ರಮದಾಬಂದೀ ಪಡಿಲೇ ಪೂರ್ಣ। ತ್ಯಾಂಸೀ ಅನುತಾಪ ಕರೀ ಸೋಡವಣ । ಹೇ ಕೇಲೇ ನಿರೂಪಣ ಸವ್ವಿಸಾವಾ ।।೫೨೬।। ನಿಕೋಪ ಪೀಕ ಲಾಗಲ್ಯಾ ಹಾತೀ । ತ್ಯಾಚೀ ಕರಾವಯಾ ನಿಷ್ಪತ್ತೀ । ಕ್ರಿಯಾಯೋಗಾಚೀ ನಿಜಸ್ಥಿತೀ । ಸತ್ತಾವಿಸಾವ್ಯಾಪ್ರತೀ ಪ್ರಕಾಶಿಲೀ ।।೫೨೭।। ಏವಂ ಪೀಕ ಭೋಗಿಲೇ ಸಕಳ । ತ್ಯಾಚಾ ಪರಿಪಾಕ ಪಕ್ವಾನ್ನ ಸಬಳ । ಅಠ್ಠಾವಿಸಾವಾ ಅಮೃತಫಳ । ಅತಿರಸಾಳ ನಿಜಗೋಡ್ಯಾ ।।೫೨೮।। ಮೃದು ಮಧುರ ಅತಿಅರುವಾರ। ತೇಣೇ ವಾಸೇಚಿ ನಿವೇ ಜೇವಣಾರ । ತ್ಯಾಚಾ ಸೇವಿತಾ ಗ್ರಾಸಮಾತ್ರ । ಸಬಾಹ್ಯ ಅಭ್ಯಂತರ ನಿತ್ಯತೃಪ್ತೀ ।।೫೨೯।। ಆಕಾಂಕ್ಷೇಸೀ ನಿವಾಲೀ ಭೂಕ । ಸುಖಾವರೀ ಲೋಳೇ ತೃಪ್ತಿಸುಖ । ತೋ ಹಾ ಅಠ್ಠಾವಿಸಾವಾ ದೇಖ । ಅಲೋಕಿಕ ನಿಜಗೋಡ್ಯಾ ।।೫೩೦।। ಅಠ್ಠಾವಿಸಾವ್ಯಾ ನಿಜಗೋಡೀ । ಚಾಖಾಯಾ ಅತಿ ಆವಡೀ । ಬ್ರಹ್ಮಾದಿಕಾ ಅವಸ್ಥಾ ಗಾಢೀ । ಚವೀ ಚೋಖಡೀ ಅನುಮಪ ।।೫೩೧।। ಹೇ ಜಿವ್ಹೇವೀಣ ಜೇವಣ । ರಸನೇವೀಣ ಗೋಡಪಣ। ಅದಂತಾಚೇ ದಾಂತ ಪಾಡೂನಿ ಪೂರ್ಣ । ಆಪುಲೀ ಆಪಣ ಚವೀ ಚಾಖೇ।।೫೩೨।। ಶ್ರೀಕೃಷ್ಣೇ ಪರವಡೀ ಐಶೀ। ತಾಟ ಕೇಲೇ ಉದ್ಧವಾಸೀ। ಏಕಾ ಜನಾರ್ದನ ಚರಣೇಂಚೀ ಮಾಶೀ । ಸುಖೇ ತ್ಯಾ ರಸಾಸೀ ಸ್ವಯೇ ಸೇವೀ ।।೫೩೩।।

ಇಪ್ಪತ್ತೂರನೆಯ ಅಧ್ಯಾಯದಲ್ಲಿ ಜ್ಞಾನದ ಸಂರಕ್ಷಣೆ ಮತ್ತು ಶಾಂತಿಯ ಕಾರಣದ ಮುಖ್ಯವಾಗಿರುವ ಯಾವ ಭಿಕ್ಷು ಗೀತದ ನಿರೂಪಣೆಯನ್ನು ಶ್ರೀಕೃಷ್ಣನು ಮಾಡಿರುವನು ।।೫೨೦।। ಮುಖ್ಯವಾಗಿ ಕಳ್ಳರ ಕಳ್ಳತನವು ಇದು ತನ್ನ ಮನಸ್ಸಿನಲ್ಲಿಯೇ ಇರುವುದು. ಆ ಮನೋಜಯದ ಲಕ್ಷಣವನ್ನೇ ಇಪ್ಪತ್ತೂರನೆಯ ಅಧ್ಯಾಯದಲ್ಲಿ ವಿವರಿಸುವ ಭಿಕ್ಷು ಗೀತ ನಿರೂಪಣೆಯಾಗಿರುವುದು ।।೫೨೧।। ಕಳ್ಳ ಯಾರ ಹೊಟ್ಟೆಯಲ್ಲಿ ಹುಟ್ಟುವನೋ ಆ ಪ್ರಕೃತಿಯೇ ಮೂಲತಃ ಸುಳ್ಳಾಗಿರುವುದು. ಆದ್ದರಿಂದ ಬೆಳೆದ ಬೆಳೆಯನ್ನು ಲೂಟ ಮಾಡಿ ಕೊನೆಗೆ ಆ ಕಳ್ಳನು ಅದರಲ್ಲಿಯೇ ಅಡಗಿ ಕುಳಿತುಕೊಳ್ಳುವನು ।।೫೨೨।। ಆದಿಯಲ್ಲಿಯೂ ನಿರ್ಗುಣವಿರುವುದು ಮತ್ತು ಕೊನೆಯಲ್ಲಿಯೂ ನಿರ್ಗುಣವಿರುವುದು. ನಡುವೆಯೇ ಮಾತ್ರ ಪ್ರಕೃತಿಯ ಸತ್ವರಜಾದಿ ಮೂರು ಗುಣಗಳು ಪ್ರಕಟವಾಗುವುವು. ಅದಕ್ಕಾಗಿಯೇ ಮುಖ್ಯವಾಗಿ ಬೆಳೆಯ ಸಂರಕ್ಷಣೆ ಮಾಡಬೇಕು ।।೫೨೩।। ಹೊಲದಲ್ಲಿ ಬೆಳೆಯೇ ಇಲ್ಲದಿರಲು ಅಲ್ಲಿ ಪಶುಪಕ್ಷಿಗಳಾಗಲಿ ಅಥವಾ ಕಳ್ಳರಾಗಲಿ ಯಾರೂ ನುಗ್ಗಲಾರರು. ಇಂತಹ ಸಂರಕ್ಷಣೆಯ ಉಪಾಯವನ್ನು ನಿರ್ಗುಣೋಕ್ತಿಯಿಂದ ಇಪ್ಪತ್ತೈದನೆಯ ಅಧ್ಯಾಯದಲ್ಲಿ ಪ್ರತಿಪಾದನೆ ಮಾಡಲಾಗಿರುವುದು ।।೫೨೪।। ಸ್ತ್ರೀಕಾಮಾಸಕ್ತಿಯ ಆಪತ್ತು ಒದಗಲು ಆಗ ಸರ್ವ ಬೆಳೆಯ ನಾಶವಾಗಿಬಿಡುವುದು. ಸ್ವತಃ ಪುರುರವಾ ರಾಜನು ಇದರಿಂದ ಪರಿಪೂರ್ಣವಾಗಿ ಬಂಧಿಸಲ್ಪಟ್ಟನು. ಹೀಗಿರಲು ಇತರರ ಯಾವ ಕಥೆ ? ಇದನ್ನು ಇಪ್ಪತ್ತಾರನೆಯ ಅಧ್ಯಾಯದಲ್ಲಿ ವಿವರಿಸಿರುವುದು ।।೫೨೫।। ಕಾಮಾಸಕ್ತಿಯಿಂದ ಯಾವನು ಪರಿಪೂರ್ಣವಾಗಿ ಸ್ತ್ರೀಯರ ಮೋಹಪಾಶದಲ್ಲಿ ಬೀಳುವನೋ, ಆತನಿಗೆ ಅದರಿಂದ ಪಶ್ಚಾತ್ತಾಪವು ಬಿಡಿಸುವುದು. ಈ ನಿರೂಪಣೆಯು ಇಪ್ಪತ್ತಾರನೆಯ ಅಧ್ಯಾಯದಲ್ಲಿರುವುದು ।।೫೨೬।। ಆರೋಗ್ಯಕರ ಬೆಳೆಯು ಕೈ ಸೇರಲು ಆಗ ಅದರ ಪಾಕನಿಷ್ಪತ್ತಿ ಉತ್ತಮ ಪ್ರಕಾರವಾಗಿ ಮಾಡಲು ಬರಬೇಕೆಂಬ ಉದ್ದೇಶದಿಂದ ಕರ್ಮಯೋಗದ ಸ್ವರೂಪವನ್ನು ಇಪ್ಪತ್ತೇಳನೆಯ ಅಧ್ಯಾಯದಲ್ಲಿ ಪ್ರತಿಪಾದನೆ ಮಾಡಲಾಗಿದೆ ।।೫೨೭।। ಈ ಪ್ರಕಾರವಾಗಿ ಉತ್ತಮ ಪೀಕ ಪದರಿನಲ್ಲಿ ಬೀಳಲು ಅದರ ಸ್ವಾಧಿಷ್ಟ, ಮಧುರ ಪಕ್ವಾನ್ನಗಳನ್ನು ಮಾಡಿ ಕೊಡಲಾಗಿದೆ. ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ತನ್ನ ಮಾಧುರ್ಯದಿಂದ ರಸಾಳ ಅಮೃತಫಲದ ರುಚಿ ಪ್ರಾಪ್ತವಾಗಲಿದೆ ।।೫೨೮।। ಈ ಮಧುರ ಪಕ್ವಾನ್ನ ಎಷ್ಟೊಂದು ಮೃದು, ಮಧುರ ಗರಗರೆಯಾಗಿದ್ದವೆಂದರೆ ಅವುಗಳ ಘಮಘಮಿಸುವ ವಾಸನೆಯಿಂದಲೇ ಭೋಜನ ಮಾಡುವವರು ತೃಪ್ತರಾಗುವರು. ಅವುಗಳ ತುತ್ತು ಸ್ವೀಕರಿಸುತ್ತಲೇ ಅಂತರ್ಬಾಹ್ಯದಲ್ಲಿ ನಿತ್ಯತೃಪ್ತಿಯು ಪ್ರಾಪ್ತವಾಗುವುದು ।।೫೨೯।। ಇಚ್ಛೆಯ ಹಸಿವೆಯು ಸಂಪೂರ್ಣ ಶಾಂತವಾಗುವುದು. ಸುಖದ ಮೇಲೆ ಸುಖವು ಉಂಟಾಗಿ ಅಧಿಕ ತೃಪ್ತಿಯಾಗುವುದು. ಹೀಗೆ ಈ ಅಧ್ಯಾಯವು ತನ್ನ ಸ್ವಾಭಾವಿಕ ಮಾಧುರ್ಯದಿಂದ ಅಲೌಕಿಕವಾಗಿರುವುದು ।।೫೩೦।। ಈ ಇಪ್ಪತ್ತೆಂಟನೆಯ ಅಧ್ಯಾಯದ ಮಾಧುರ್ಯವು ಎಷ್ಟೊಂದು ವಿಲಕ್ಷಣವಾಗಿದೆ ಎಂದರೆ ಇದನ್ನು ಸೇವಿಸುವುದಕ್ಕಾಗಿ ಬ್ರಹ್ಮದೇವಾದಿಕರಂತಹವರೂ ಸಹ ತಳಮಳಿಸುತ್ತಿರುವರು. ಹೀಗೆ ಇದರ ರುಚಿಯು ಅಪೂರ್ವ ಸ್ವರೂಪದ್ದಾಗಿರುವುದು ।।೫೩೧।। ಈ ಭೋಜನವು ನಾಲಿಗೆ ಇಲ್ಲದೇ ಭುಂಜಿಸಬೇಕಾಗಿದೆ. ರಸನೆಯ ಹೊರತಾಗಿ ಅದರಲ್ಲಿನ ಮಾಧುರ್ಯ ಪಡೆಯಬೇಕಾಗಿದೆ. ಆನಂತರ ದಂತಗಳನ್ನು ಕೀಳಿ ತಾನೇ ತಾನಾಗಿ ರುಚಿ ನೋಡಬೇಕಾಗಿದೆ ।।೫೩೨।। ಶ್ರೀಕೃಷ್ಣನು ಇಂತಹ ಪಕ್ವಾನ್ನ ನಿರ್ಮಾಣ ಮಾಡಿ ಉದ್ಧವನಿಗೆ ಎಲೆ ಹಾಕಿ ಕುಳ್ಳಿರಿಸಿದನು. ಆಗ ಜನಾರ್ದನರ ನೊಣವಾಗಿರುವ ಏಕನಾಥನು ಆ ರಸವನ್ನು ಸ್ವತಃ ಯಥೇಚ್ಛವಾಗಿ ಸೇವಿಸಲಾರಂಭಿಸಿದನು ।।೫೩೩।।

ಜೇಥ ರಿಗಮು ನಾಹೀ ಥೋರಥೋರಾಂಸೀ । ತೇಥೇ ಸುಖೇಚಿ ರಿಘೇ ಮಾಶೀ । ಏವಂ ಧಾಕುಟೇ ಜೇ ಹೋತೀ ಸರ್ವಾಂಶೀ । ಕೃಷ್ಣರಸ ತ್ಯಾಂಸೀ ಸುಸೇವ್ಯ ॥೪೩೪॥ ಅಗಮ್ಯ ಯೋಗೇ ಯೋಗಭಾಂಡಾರ । ಗುಹ್ಯಜ್ಞಾನೇ ಜ್ಞಾನಗಂಭೀರ । ಪರಮ ಸುಖಾಚೇ ಸುಖಸಾರ । ಅತಿಗಂಭೀರ ಅಠ್ಠಾವಿಸಾವಾ ॥೪೩೫॥ ಯಾ ಜೇವಣೇ ಜೇ ಧಾಲೇ ನರ । ತ್ಯಾಂಚೇ ತೃಪ್ತೀಚೇ ಸುಖೋದ್ಗಾರ । ತೋ ಏಕೂಣತಿಸಾವಾ ಸಧರ । ಅತಿವಿಚಿತ್ರ ನಿರೂಪಣ ॥೪೩೬॥ ಏಕೂಣತಿಸಾವ್ಯಾಚೀ ಸ್ಥಿತೀ । ದೃಢ ಆಕಳಲೀ ಹೋಯ ಹಾತೀ । ತೈ ಸಕಳ ಭಾಗವತಾಚೀ ಗತೀ । ಯೇ ಧಾಂವತೀ ತಯಾಪಾಶೀ ॥೪೩೭॥ಏಕೂಣತಿಸಾವಾ ಅಧ್ಯಾವೋ । ಸಾಧ್ಯಸಾಧನಾ ಏಕಾತ್ಮ ಭಾವೋ । ನಿರ್ದಳೋನಿ ಅಹಂಭಾವೋ । ಪರಮಾನಂದೇ ಪಹಾ ಹೋ ಉದ್ಗಾರ ದೇತ ॥೪೩೮॥ ಸಕಳ ಭೋಜನಾ ಮಂಡಣ । ತಾಂಬೂಲ ಆಣಿ ಚಂದನ । ತೋ ತಿಸಾವಾ ಏಕತಿಸಾವಾ ಜಾಣ । ಶ್ರೀಕೃಷ್ಣನಿರ್ಯಾಣ ನಿಜಭೋದು ॥೪೩೯॥ ಯೇಣೇ ಭೋಜನೇ ಜೇ ನಿತ್ಯ ತೃಪ್ತ । ತ್ಯಾಸೀ ಮಮತಾಬಾಧ ನವ್ಹೇ ಪ್ರಾಪ್ತ । ಸಕಳ ಕುಳ ನಿರ್ದಳೂನಿ ಏಥ । ನಿಜಧಾಮಾ ನಿಶ್ಚಿತ ಹರಿ ಗೇಲಾ ॥೪೪೦॥ ಪೂರ್ಣ ಬ್ರಹ್ಮಾನುಭವ ಜ್ಯಾಸೀ । ಏಥವರೀ ಮಮತಾ ನಸಾವೀ ತ್ಯಾಸೀ । ಹೇ ಸ್ವಾಂಗೇ ದಾವೂನಿ ಹೃಷೀಕೇಶೀ । ನಿಜಧಾಮಾಸೀ ಸ್ವಯೇ ಗೇಲಾ ॥೪೪೧॥ ಶ್ರೀಭಾಗವತ ಮಹಾಕ್ಷೇತ್ರ । ತೇಥೇ ಬ್ರಹ್ಮಾ ಮುಖ್ಯ ಬೀಜಧರ । ನಾರದ ತೇಥೇ ಮಿರಾಸೀಕರ । ಪೇರಣೇ ವಿಚಿತ್ರ ತೇಣೇ ಕೇಲೀ ॥೪೪೨॥ ತೇಥೇ ಶ್ರೀವ್ಯಾಸೇ ಅತಿಶುದ್ಧ । ಬಾಂಧಾರೇ ಘಾತಲೇ ದಶವಿಧ । ಪೀಕ ಪಿಕಲೇ ಅಗಾಧ । ಸ್ವಾನಂದಬೋಧ ನಿಡಾರೇ ॥೪೪೩॥ ತೇಥ ಶುಕ ಬೈಸಲಾ ಸೋಂಕಾರಾ । ತೇಣೇ ಪೋಡಿಲಾ ಹರಿಕಥಾಪಾಗೋರಾ । ಪಾಪಪಕ್ಷ್ಯಾಂಚ್ಯಾ ಥಾರಾ । ಉಡವಿಲಾ ಪುರಾ ನಿಃಶೇಷ ॥೪೪೪॥ ತ್ಯಾಚೀ ಏಕಾದಶೀ ಜಾಣ । ಉದ್ಧವೇ ಕೇಲೀ ಸಂವಗಣ । ಕಾಢಿಲೇ ನಿಡಾರಾಚೇ ಕಣ । ಅತಿಸಘನ ಕೃಷ್ಣೋಕ್ತೀ ॥೪೪೫॥ ತೇಥ ನಾನಾಯುಕ್ತಿಪಡಿಪಾಡೀ । ಉತ್ತಮೋತ್ತಮ ಪ್ರಶ್ನ ಪರವಡೀ । ಕೇಲೀ ಪಕ್ವಾನ್ನೇ ಚೋಖಡೀ । ತ್ಯಾಂಚೀ ನೀಚ ನವೀ ಗೋಡೀ ಅವಿನಾಶೀ ॥೪೪೬॥ ತೇ ಅವಿನಾಶೀ ನಿಜಗೋಡೀ । ಪದೋಪದೀ ಅತಿಚೋಖಡೀ । ಏಕಾದಶಾಮಾಜೀ ರೋಕಡೀ । ಉದ್ಧವಾಚಿಯೇ ಜೋಡೀ ಉಪಕಾರ ಜಗಾ ॥೪೪೭॥

ಅಲ್ಲಿ ಮಹಾ ಮಹಾ ಪುರುಷರಿಗೂ ಪ್ರವೇಶ ಅಸಾಧ್ಯವಾಗಿರಲು ಅಲ್ಲಿ ನೊಣವು ಮಾತ್ರ ನಿರಾತಂಕವಾಗಿ ಪ್ರವೇಶ ಮಾಡುವುದು. ತಾತ್ಪರ್ಯವೇನೆಂದರೆ ಯಾವನು ಎಲ್ಲರಕ್ಕಿಂತಲೂ ಚಿಕ್ಕವನಾಗುವನೋ, ಆತನಿಗೆ ಭಗವದ್‌ರಸವು ಸಹಜವಾಗಿ ಸೇವನೆ ಮಾಡಲು ಸಾಧ್ಯವಾಗುವುದು ॥೪೩೪॥ ಇಂಥ ಅಗಮ್ಯ ಜ್ಞಾನದ ಯೋಗಭಾಂಡಾರ, ಗುಹ್ಯ ಜ್ಞಾನದ ಗಂಭೀರ ಜ್ಞಾನ, ಪರಮ ಸುಖದ ಸುಖಸಾರದ ಅತ್ಯಂತ ಗಂಭೀರವು ಇಪ್ಪತ್ತೆಂಟನೆಯ ಅಧ್ಯಾಯವಾಗಿರುವುದು ॥೪೩೫॥ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ಈ ಭೋಜನದಿಂದ ತೃಪ್ತರಾದವರು ತಮ್ಮ ತೃಪ್ತಿಯ ಉದ್ಗಾರ ಪ್ರಕಟಿಸಿದರು. ಇದರಲ್ಲಿನ ನಿರೂಪಣೆಯು ಅಲೌಕಿಕ ಸ್ವರೂಪದಿಂದ ಕೂಡಿದೆ ॥೪೩೬॥ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿನ ಸಾರವು ಹೃದಯದಲ್ಲಿ ಬಿಂಬಿಸಿದರೆ ಸರ್ವ ಭಾಗವತದ ಫಲವು ಆತನಲ್ಲಿ ಧಾವಿಸಿ ಬರುವುದು ॥೪೩೭॥ ಈ ಇಪ್ಪತ್ತೊಂಬತ್ತನೆಯ ಅಧ್ಯಾಯವು ಅಹಂಭಾವದ ನಾಶ ಮಾಡಿ ಸಾಧ್ಯ-ಸಾಧನೆಗಳ ಏಕಾತ್ಮ ಭಾವವನ್ನು ವ್ಯಕ್ತಗೊಳಿಸುವುದು, ಪರಮಾನಂದದ ಡರಕೆ ಕೊಡುವುದು ॥೪೩೮॥ ಸರ್ವ ಭೋಜನದ ಶೋಭೆ ಎಂದರೆ ತಾಂಬೂಲ ಮತ್ತು ಚಂದನವು ಅದುವೇ ಮೂವತ್ತನೆಯ ಮತ್ತು ಮೂವತ್ತೊಂದನೆಯ ಅಧ್ಯಾಯವಾಗಿರುವುದು. ಅವುಗಳಲ್ಲಿ ಶ್ರೀಕೃಷ್ಣನಿರ್ಯಾಣದ ನಿಜಬೋಧೆಯು ತುಂಬಿರುವುದು ॥೪೩೯॥ ಈ ಭೋಜನದಿಂದ ಯಾರಿಗೆ ನಿಜತೃಪ್ತಿಯಾಗುವುದೋ ಅವರಿಗೆ ಮಮತಾಪಾಶವು ಎಂದಿಗೂ ಬಾಧೆ ಕೊಡಲು ಸಾಧ್ಯವಿಲ್ಲ. ಈ ಪ್ರಕಾರವಾಗಿ ಸರ್ವ ಕುಲದ ನಾಶ ಮಾಡಿ ಶ್ರೀಕೃಷ್ಣನು ತಾನು ನಿಜಧಾಮಕ್ಕೆ ಹೋದನು ॥೪೪೦॥ ಯಾರಿಗೆ ಪೂರ್ಣ ಬ್ರಹ್ಮಾನುಭವವು ಪ್ರಾಪ್ತವಾಗಿದೆಯೋ ಅವರಿಗೆ ಇಂಥಸ್ಥಿತಿವರೆಗೂ ಮಮತೆವಿರಬಾರದು. ಇದನ್ನು ಸ್ವತಃ ಆಚರಿಸಿ ತೋರಿಸಿಕೊಟ್ಟು ಶ್ರೀಹರಿಯು ನಿಜಧಾಮಕ್ಕೆ ಹೋದನು ॥೪೪೧॥ ಭಾಗವತವು ಇದೊಂದು ದೊಡ್ಡ ಹೊಲವಾಗಿದೆ. ಅಲ್ಲಿ ಬ್ರಹ್ಮವೆಂಬುವುದೇ ಮುಖ್ಯ ಬೀಜವಾಗಿ ಪರಿಗಣಿಸಲಾಗಿದೆ. ನಾರದರು ಅಲ್ಲಿನ ವಹಿವಾಟದಾರರಾಗಿರುವರು. ಅವರು ಈ ವಿಚಿತ್ರ ಬೀಜದ ಬಿತ್ತಿಗೆ ಮಾಡಿದರು ॥೪೪೨॥ ಅಲ್ಲಿ ಶ್ರೀವ್ಯಾಸರು ಹತ್ತು ಪ್ರಕಾರಗಳ ಶುದ್ಧ ಒಡ್ಡುಗಳನ್ನು ಹಾಕಿರುವರು. ಹೀಗಾಗಿ ಅಲ್ಲಿ ಅಗಾಧವಾದ ಬೆಳೆಯು ಬೆಳೆಯಿತು ಮತ್ತು ಅಲ್ಲಿಂದಲೇ ಸ್ವಾನಂದ ಬೋಧೆಯು ಪರಿಪಕ್ವವಾಯಿತು ॥೪೪೩॥ ಅಲ್ಲಿ ಶ್ರೀಶುಕಾಚಾರ್ಯರು ಆ ಹೊಲಕಾಯಲು ಕುಳಿತುಕೊಂಡು ಅವರು ಹರಿಕಥೆ ಎಂಬ ಕವಣೆಯಿಂದ ಪಾಪರೂಪ ಪಕ್ಷಿಗಳನ್ನು ಪರಿಪೂರ್ಣವಾಗಿ ಹಾರಿಸಿಬಿಟ್ಟರು ॥೪೪೪॥ ಉದ್ಧವನು ಹನ್ನೊಂದನೆಯ ಸ್ಕಂಧದಲ್ಲಿ ಅದರ ಕೊಯ್ಲು ಮಾಡಿದನು ಮತ್ತು ಕೃಷ್ಣೋಕ್ತಿಯಿಂದ ಕೇರಿದ ಭಾರೀ ಕಾಳುಗಳನ್ನು ಕೂಡಿ ಹಾಕಿದನು ॥೪೪೫॥ ಅಲ್ಲಿ ನಾನಾ ಪ್ರಕಾರಗಳ ಹೊಸ ಹೊಸ ಯುಕ್ತಿಗಳಿಂದ ಅನೇಕ ಪ್ರಶ್ನೆಗಳನ್ನು ಮಾಡಿ ರುಚಿಕರ ಪಕ್ವಾನ್ನಗಳನ್ನು ಸಿದ್ಧಗೊಳಿಸಿದನು. ಅದರ ಮಾಧುರ್ಯವು ನಿತ್ಯನೂತನವಾಗಿದ್ದು ಅವಿನಾಶೀಯಾಗಿರುವುದು ॥೪೪೬॥ ಹನ್ನೊಂದನೆಯ ಸ್ಕಂಧದಲ್ಲಿ ಹೀಗೆ ನಿತ್ಯ ಅವಿನಾಶೀ ಮಧುರತ್ವವು ತುಂಬಿಕೊಂಡಿರುವುದು. ಅದು ಪುನಃ ಪುನಃ ಅತ್ಯಂತ ರುಚಿ ನಿರ್ಮಾಣ ಮಾಡುವುದು. ಇದರ ಉಪಕಾರವು ಉದ್ಧವನ ಜೊತೆಯಲ್ಲಿ ಜಗತ್ತಿನ ಜನರಿಗೂ ಆಗಿರುವುದು ॥೪೪೭॥

ತ್ಯಾ ಉದ್ಧವಾಚೇ ಮಾಗಿಲೇ ಪಂಕ್ತೀ । ತ್ಯಕ್ತೋದಕ ಶ್ರವಣಾರ್ಥೀ । ಶುಕಮುಖೇ ಪರೀಕ್ಷಿತೀ । ನಿಜಾತ್ಮತೃಪ್ತೀ ನಿಮಾಲಾ ।।೪೪೮।। ತ್ಯಾ ಸಮರ್ಥಾಚಿಯೇ ಪಂಕ್ತೀ । ಭಾವಾರ್ಥದೀಪಿಕಾ ಧರೋನಿ ಹಾತೀ । ಶ್ರೀಧರೇ ದಾವಿತಾ ಪದಪದಾರ್ಥೀ । ನಿಜಾತ್ಮಸ್ಥಿತೀ ನಿವಾಲಾ ।।೪೪೯।। ತೇಥ ದೇಶಭಾಷಾ ಪದಪಕ್ಷೇಸೀ । ಏಕಾಜನಾರ್ದನಕೃಪೇಚಿ ಮಾಶೀ । ತೃಪ್ತ ಹೋಯ ಅವಘ್ಯಾಸರಶೀ । ನಿಷೇಧ ತಿಶೀ ಅಸೇನಾ ।।೪೫೦।। ಏಕಾ-ಜನಾರ್ದನೀ ಮಾಂಜರ ವೇಡೇ । ಭಾವಾರ್ಥದೀಪಿಕಾ ಉಜಿಯೇಡೇ । ಹೇ ರಸ ದೇಖೋನಿ ಚೋಖಡೇ । ತಾಟಾಪುಢೇ ಪೈ ಆಲೇ ।।೪೫೧।। ''ಮಿಯೋ ಮೀಯೋ'' ಕರಿತಾ ಸ್ಮರಣ । ಕೃಪೇನೇ ತುಷ್ಟಲೇ ಸಜ್ಜನ । ಶೇಷ ಪ್ರಸಾದ ದೇಊನಿ ಜಾಣ । ಸಂತೃಪ್ತ ಪೂರ್ಣ ಮಜ ಕೇಲೇ ।।೪೫೨।। ಏಕಾ ಜನಾರ್ದನಾಚೇ ಪೋಸಣೇ । ಮೀ ಮಾಂಜರ ಜಾಹಲೋ ನೀಚಪಣೇ । ಚಾಟಿತಾ ಸಂತಾಂಚೇ ಶೇಷಭಾಣೇ । ಮ್ಯಾ ತೃಪ್ತೀ ಪಾವಣೇ ಪರಿಪೂರ್ಣ ।।೪೫೩।। ಹೋ ಕಾ ತ್ಯಾ ಸಮರ್ಥಾಂಚ್ಯಾ ತಾಟೀ । ಬ್ರಹ್ಮರಸೇ ಪೂರ್ಣ ಭರಲೀ ವಾಟೀ । ತೇ ಮೀ ಅತ್ಯಂತ ಪ್ರೇಮೇ ಚಾಟೀ । ಸ್ವಾನಂದಪುಷ್ಟೀ ಸಂತೋಷೇ ।।೪೫೪।। ಜೋ ಕಾಯಾ ಮನೇ ಆಣೀ ವಾಚಾ । ಸದ್ಭಾವೇ ವಿನೀತ ಹೋಯ ನೀಚಾ । ತೋಚಿ ಅಧಿಕಾರೀ ಏಕಾದಶಾಚಾ । ಹಾ ಜನಾರ್ದನಾಚಾ ಉಪದೇಶ ।।೪೫೫।। ಜಂವ ಜಂವ ದೇಹೀ ಜ್ಞಾನಾಭಿಮಾನ । ಜಂವ ಜಂವ ಯೋಗ್ಯತಾ ಸನ್ಮಾನ । ತಂವ ತಂವ ಏಕಾದಶಾಚೇ ಜ್ಞಾನ । ಸರ್ವಥಾ ಜಾಣ ಅನೋಳಖ ।।೪೫೬।। ಸರ್ವಭೂತೀ ಭಗದ್ಭಜನ । ಸದ್ಭಾವೇ ಜಂವ ನುಪಜೇ ಪೂರ್ಣ । ತಂವವರೀ ಏಕಾದಶಾಚೇ ಜ್ಞಾನ । ಸರ್ವಥಾ ಜಾಣ ಕಳೇನಾ ।।೪೫೭।। ಯಾಪರೀ ಶ್ರೀಭಾಗವತಕ್ಷೇತ್ರ । ಪೀಕ ಪಿಕಲೇಪರಮ ಪವಿತ್ರ । ತೇಥೇಸುಖೀ ಹೋತೀ ಸಾಧಕ ನರ । ಜ್ಯಾಂಸೀ ಅತ್ಯಾದರ ಸರ್ವಭೂತೀ ।।೪೫೮।। ಏಕಾದಶ ಕ್ಷೇತ್ರ ನವ್ಹೇ ಜಾಣ । ಹಾ ಚಿತ್ಸಮುದ್ರ ಪರಿಪೂರ್ಣ । ಯೇಥೇ ಜೋ ಜೈಸಾ ಹೋಯ ನಿಮಗ್ನ । ತೋ ತೈಸಾಚಿ ಆಪಣ ರತ್ನೇ ಲಾಭೇ।।೪೫೯।। ಹಾ ಏಕಾದಶ ನವ್ಹೇ ನಿರ್ಧಾರೀ । ಜೀವಗಜೇಂದ್ರಾಚ್ಯಾ ಉದ್ಧಾರೀ । ಸವೇಗವೇಗೇ ಪಾವಲಾ ಶ್ರೀಹರೀ । ಜ್ಞಾನ ಚಕ್ರ ಕರೀ ಘೇಊನಿ ।।೪೬೦।। ಹೇಹೀ ನವ್ಹೇ ಏಕಾದಶಾಚೇ ಥೋರೀ । ಅಹಂ - ಹಿರಣ್ಯಕಶಿಪೂ ವಿದಾರೀ । ತೋ ಹಾ ಪ್ರಕಟಲಾ ನರಹರೀ । ಭಕ್ತ ಕೈವಾರೀ ಕೃಪಾಪೂರ್ಣ ।।೪೬೧।।

---

೩ ಉದ್ಧವನ ಹಿಂದಿನ ಪಂಕ್ತಿಯಲ್ಲಿ ನೀರನ್ನೂ ಸಹ ಸೇವಿಸದೇ ಶ್ರವಣಕ್ಕೆ ಕುಳಿತಿರುವ ಪರೀಕ್ಷಿತೀ ರಾಜನು ಶ್ರೀಶುಕಾಚಾರ್ಯರ ಮುಖದಿಂದ ಪ್ರಕಟವಾದ ಆತ್ಮಜ್ಞಾನದಿಂದ ತೃಪ್ತನಾದನು ಮತ್ತು ಸಮಾಧಾನ ಪಡೆದನು ।।೪೪೮।। ಅದೇ ಶ್ರೇಷ್ಠ ಪರುಷರ ಪಂಕ್ತಿಯಲ್ಲಿ ಶ್ರೀಧರಸ್ವಾಮಿಯವರು ಭಾವಾರ್ಥದೀಪಿಕಾ ದೀಪವನ್ನು ಕೈಯಲ್ಲಿ ಹಿಡಿದು ಪದರೂಪ ಪದಾರ್ಥಗಳನ್ನು ತೋರಿಸಿ ಆತ್ಮಜ್ಞಾನದಿಂದ ಅಖಂಡ ತೃಪ್ತರಾದರು ।।೪೪೯।। ಆಗ ದೇಶ ಭಾಷೆಯ ಪದಗಳಿಂದ ಜನಾರ್ದನ ಕೃಪೆಯ ನೊಣವಾಗಿರುವ ಏಕನಾಥನು ಸರ್ವರ ಜೊತೆಯಲ್ಲಿ ತೃಪ್ತನಾದನು. ಆತನಿಗೆ ಎಲ್ಲಿಯೂ ಪ್ರತಿಬಂಧವಾಗಲೇ ಇಲ್ಲ ।।೪೫೦।। ಏಕನಾಥ ಇವನು ಜನಾರ್ದನಸ್ವಾಮಿಗಳವರ ಮೂಢತನದ ಬೆಕ್ಕು ಆಗಿರುವನು. ಅದು ಭಾವಾರ್ಥದೀಪಿಕೆಯ ದಿವ್ಯ ಪ್ರಕಾಶಮಯ ಮತ್ತು ಅಮೃತಮಯ ಮಧುರ ರಸವನ್ನು ಕಂಡು ತಾಟಿನ ಹತ್ತಿರ ಬಂದು ಕುಳಿತುಕೊಂಡಿತು ।।೪೫೧।। ತನಗೂ ಬೇಕೆಂಬ ಭಾವದಿಂದ ಅದು ಮ್ಯಾಂವ ಮ್ಯಾಂವ ಎಂದು ಸ್ಮರಣೆ ಮಾಡುತ್ತಿರುವುದನ್ನು ಕಂಡು ಸಜ್ಜನರಿಗೆ ದಯೆ ಹುಟ್ಟಿತು ಹಾಗೂ ಅವರು ಪ್ರಸನ್ನರಾಗಿ ತಮ್ಮ ತಾಟಿನಲ್ಲಿಯ ಶೇಷ ಪ್ರಸಾದ ಕೊಟ್ಟು ಅದನ್ನು ಸಂತುಷ್ಟಗೊಳಿಸಿದರು ।।೪೫೨।। ಏಕನಾಥನಾದ ನಾನು ಶ್ರೀಜನಾರ್ದನರ ದಾಸನಾದ್ದರಿಂದ ನಮ್ರಭಾವದಿಂದ ಬೆಕ್ಕು ಆದೆನು. ಸಂತರ ಎಂಜಲ ತಾಟನ್ನು ನೆಕ್ಕುತ್ತ ಪೂರ್ಣ ತೃಪ್ತನಾದೆನು ।।೪೫೩।। ಆ ಸಂತ ಸಮರ್ಥರ ತಾಟಿನಲ್ಲಿ ಬ್ರಹ್ಮರಸದಿಂದ ತುಂಬಿದ ಬಟ್ಟಲವಿತ್ತು. ಅದನ್ನು ನಾನು ಅತ್ಯಂತ ಪ್ರೇಮದಿಂದ ನೆಕ್ಕಿದೆನು ಮತ್ತು ಸ್ವಾನಂದದ ಬಲದಿಂದ ಸಂತುಷ್ಟನಾದೆನು ।।೪೫೪।। ಯಾರು ಕಾಯಾ ವಾಚಾ ಮನದಿಂದ ಸದ್ಭಾವದೊಂದಿಗೆ ನಮ್ರರಾಗುವರೋ ಅವರೇ ಈ ಹನ್ನೊಂದನೆಯ ಸ್ಕಂಧದ ಅಧಿಕಾರಿಯಾಗಿರುವರು. ಹೀಗೆ ಶ್ರೀಜನಾರ್ದನಸ್ವಾಮಿಯವರ ಉಪದೇಶವಾಗಿರುವುದು ।।೪೫೫।। ಯಾರಾದರೂ ಮನದಲ್ಲಿ ತಮ್ಮ ಯೋಗ್ಯತೆಯ ಅಭಿಮಾನ ಹಿಡಿದು ಮತ್ತು ತಮಗೆ ಸನ್ಮಾನವಾಗಬೇಕೆಂಬ ಬಯಕೆ ಬೆಳೆಸುತ್ತಿದ್ದರೆ ಅವರಿಗೆ ಈ ಹನ್ನೊಂದನೆಯ ಸ್ಕಂಧದ ಜ್ಞಾನವು ಸರ್ವಥಾ ಪ್ರಾಪ್ತವಾಗಲಾರದು ।।೪೫೬।। ಪರಿಪೂರ್ಣವಾದ ಸದ್ಭಾವನೆಯಿಂದ ಸರ್ವಪ್ರಾಣಿಮಾತ್ರರಲ್ಲಿ ಎಲ್ಲಿಯವರೆಗೆ ಭಗವದ್ಭಾವವು ಉತ್ಪನ್ನವಾಗುವುದಿಲ್ಲವೋ ಅಲ್ಲಿಯವರೆಗೆ ಈ ಹನ್ನೊಂದನೆಯ ಸ್ಕಂಧದ ಜ್ಞಾನವು ಎಂದಿಗೂ ತಿಳಿಯಲು ಸಾಧ್ಯವಿಲ್ಲ ।।೪೫೭।। ಈ ಪ್ರಕಾರದ ಶ್ರೀಮದ್‌ಭಾಗವತ ರೂಪ ಹೊಲದಲ್ಲಿ ಪರಮಪವಿತ್ರವಾದಬೆಳೆಯು ಬೆಳೆದಿರುವುದು. ಯಾರಿಗೆ ಸರ್ವಪ್ರಾಣಿಗಳ ವಿಷಯದಲ್ಲಿ ಅತ್ಯಂತ ಆದರಯುಕ್ತ ಭಾವನೆ ಇರುವುದೋ ಅದೇ ಸಾಧಕ ಜನರು ಸುಖೀ-ಸಮಾಧಾನಿಯಾಗುವರು ।।೪೫೮।। ಹನ್ನೊಂದನೆಯ ಸ್ಕಂಧದ ಇದು ಕೇವಲ ಹೊಲವಲ್ಲ ಆದರೆ ಅದು ಪರಿಪೂರ್ಣ ಚಿತ್ಸಮುದ್ರವಾಗಿರುವುದು. ಯಾರು ಯಾವ ರೀತಿಯಲ್ಲಿ ಈ ಸಮುದ್ರದ ಆಳದಲ್ಲಿ ಒಳಸೇರುವರೋ, ಅವರಿಗೆ ಆಯಾ ಪ್ರಮಾಣದಂತೆ ಚಿದ್ರತ್ನಗಳು ಕೈಸೇರುವುವು ।।೪೫೯।। ನಿಜವಾಗಿಯೂ ಈ ಹನ್ನೊಂದನೆಯ ಸ್ಕಂಧವಾಗಿರದೇ ಕೇವಲ ಜೀವರೂಪ ಗಜೇಂದ್ರನ ಉದ್ಧಾರಕ್ಕಾಗಿ ಜ್ಞಾನಚಕ್ರವನ್ನುಕೈಯಲ್ಲಿ ಧರಿಸಿ ವೇಗದಿಂದ ಬಂದ ಶ್ರೀಹರಿಯೇ ಆಗಿರುವುದು ।।೪೬೦।। ಈ ಯಾವ ದೃಷ್ಟಾಂತದಿಂದಲೂ ಸಹ ಹನ್ನೊಂದನೆಯ ಸ್ಕಂಧದ ನಿಜವಾದ ಮಹಿಮೆ ವರ್ಣನೆ ಮಾಡಲು ಬರುವುದಿಲ್ಲ. ಆದಕ್ಕಾಗಿ ಅಹಂಕಾರರೂಪ ಹಿರಣ್ಯಕಶ್ಯಪೂವಿನ ನಾಶಮಾಡುವುದಕ್ಕಾಗಿ ಕೃಪಾವಂತ, ಭಕ್ತ ಕೈವಾರೀಯಾದ ನರಹರಿಯೇ ಪ್ರಕಟನಾಗಿರುವನು ।।೪೬೧।।

ಗಂಗಾ ಯಮುನಾ ದೋನೀ ಸಾಂಗ । ಕೃಷ್ಣ ಉದ್ಧವ ಉತ್ತಮ ಚಾಂಗ । ಗುಪ್ತ ಸರಸ್ವತೀ ಜ್ಞಾನಬೋಧ । ತ್ರಿವೇಣೀ-ಪ್ರಯಾಗ ಏಕಾದಶ ।೪೬೨॥ ತೇಥ ವೈರಾಗ್ಯ-ಮಾಘಮಾಸೀ ಜಾಣ । ಶ್ರದ್ಧಾ ಅರುಣೋದಯೀ ನಿತ್ಯಸ್ನಾನ । ಕರಿತಾ ಹೋಊನಿ ಪಾವನ । ಕೃಷ್ಣಪದವೀ ಪೂರ್ಣ ಪಾವತೀ ।೪೬೩॥ ಹೇಹೀ ಏಕಾದಶಾಚೀ ನವ್ಹೇ ಕೋಟೀ । ಕೃಷ್ಣ ಉದ್ಧವಾಂಚೀ ಗುಹ್ಯ ಗೋಷ್ಟೀ । ಹೇ ಬಹುಕಲ್ಪ ಕಪಿಲಾಷಷ್ಟೀ । ಪರ್ವಣೀಗೋಮಟೀ ನಿಜಸಾಧಕಾ ।೪೬೪॥ ತೇ ಪರ್ವಕಾಳೀ ಜೇ ನಿಮಗ್ನ । ತೇ ತತ್ಕಾಳ ಪಾವತೀ ಕಲ್ಯಾಣ । ಬಾಧೂ ನ ಶಕೇ ಜನ್ಮ ಮರಣ । ಬ್ರಹ್ಮ ಪರಿಪೂರ್ಣ ಸ್ವಯೇ ಹೋತೀ ।೪೬೫॥ ಹಾ ಏಕಾದಶ ನವ್ಹೇ ಜಾಣ । ಏಕತಿಸಾ ಖಣಾಂಚೇ ವೃಂದಾವನ । ಏಥ ನಿತ್ಯ ವಸೇ ಶ್ರೀಕೃಷ್ಣ । ಸ್ವಾನಂದಪೂರ್ಣ ನಿಜಸತ್ತಾ ।೪೬೬॥ ಏಥ ಪಂಧ್ರಾಶತೇ ಶ್ಲೋಕ । ತೇಚೀ ಪಾನೇ ಅತ್ಯಂತ ಚೋಖ । ಮಾಜೀ ಜ್ಞಾನಮಂಜರೀಚೇ ಘೋಖ । ಅತಿಸುರೇಖ ಶೋಭತೀ ।೪೬೭॥ ತೇಥ ಜೇ ಘಾಲಿತೀ ನಿಜಜೀವನ । ತೇ ಹೋತೀ ಪರಮಪಾವನ । ಸ್ವಯೇ ಠಾಕತೀ ಕೃಷ್ಣಸದನ । ಬ್ರಹ್ಮ ಪರಿಪೂರ್ಣ ಸ್ವಾನಂದೇ ।೪೬೮॥ ತೇ ವಂದಿತೀ ಮುಳಿಂಚ್ಯಾ ಉದಕಾ । ಜೇ ಲಾವಿತೀ ಮೂಳಮೃತ್ತಿಕಾ । ತೇ ವಂದ್ಯ ಹೋತೀ ತಿಹೀ ಲೋಕಾ । ನಿತ್ಯ ನಿಜಸಖಾ ಶ್ರೀಕೃಷ್ಣ ಜೋಡೇ ।೪೬೯॥ ಜೇ ಪಠಣರೂಪೇ ಜಾಣಾ । ಪ್ರತ್ಯಗಾವೃತ್ತಿ ಪ್ರದಕ್ಷಿಣಾ । ಸದ್ಭಾವೇ ಕರಿತೀ ಸುಜಾಣಾ । ತೇ ಶ್ರೀಕೃಷ್ಣಚರಣಾ ವಿನಟತೀ ।೪೭೦॥ ಯೇ ಕಥೇಚ್ಯಾ ವಿಚಿತ್ರ ಲೀಲಾ । ಜೇ ನಿತ್ಯ ಘಾಲಿತೀ ರಂಗಮಾಳಾ । ತೇ ನಾಗವತೀ ಕಳಿಕಾಳಾ । ಸದಾ ತ್ಯಾಂಜವಳಾ ಶ್ರೀಕೃಷ್ಣ ।೪೭೧॥ ಹೇ ಏಕಾದಶಾಚೇ ವೃಂದಾವನ । ಜೋ ಶ್ರವಣೇ ಕರೀ ನಿತ್ಯ ಪೂಜನ । ತ್ಯಾಸೀ ಪ್ರಸನ್ನ ಹೋಊನಿ ಶ್ರೀಕೃಷ್ಣ । ದೇಹಾಭಿಮಾನ ನಿರ್ದಳೀ ।೪೭೨॥ ತೇಥ ಮನನಾಚೀ ಪುಷ್ಪಾಂಜಳೀ । ಜೋ ಅನುದಿನೀ ಅರ್ಪೀ ತ್ರಿಕಾಳೀ । ತೋಹೀ ಪಾವೇ ಹರಿಜವಳೀ । ನಿಜಾತ್ಮ ಮೇಳೀ ನಿಜನಿಷ್ಠಾ ।೪೭೩॥ ಹೇ ಶ್ರೀಭಾಗವತ-ವೃಂದಾವನ । ಮೇಳವೂನಿ ಸಂತ ಸಜ್ಜನ । ಯೇ ಕಥೇಚೇ ಕರೀ ಜೋ ವ್ಯಾಖ್ಯಾನ । ತೇ ಮಹಾಪೂಜನ ನಿರಪೇಕ್ಷ ।೪೭೪॥ ಹೇ ದೇಖೂನಿ ಮಹಾಪೂಜನ । ಸಂತೋಷೇ ಶ್ರೀಜನಾರ್ದನ । ಶ್ರೋತೇ ವಕ್ತೇ ಜೇ ಸಾವಧಾನ । ತ್ಯಾಂಸೀ ನಿಜಾತ್ಮಜ್ಞಾನ ಸ್ವಯೇ ದೇತ ।೪೭೫॥

ಅಥವಾ ಶ್ರೀಕೃಷ್ಣಮತ್ತು ಉದ್ಧವ ಇವರಿಬ್ಬರೂ ಗಂಗಾ ಯಮುನಾ ಸ್ವರೂಪರಾಗಿರುವರು ಮತ್ತು ಜ್ಞಾನಬೋಧೆಯು ಇದು ಗುಪ್ತ ಸರಸ್ವತಿಯಾಗಿರುವುದು. ಆದ್ದರಿಂದ ಈ ಹನ್ನೊಂದನೆಯ ಸ್ಕಂಧವು ತ್ರಿವೇಣೀ ಸಂಗಮದ ಪ್ರಯಾಗವಾಗಿರುವುದು ।೪೬೨॥ ಅಲ್ಲಿ ವೈರಾಗ್ಯ ರೂಪ ಮಾಘಮಾಸದಲ್ಲಿ ಶ್ರದ್ಧೆ ಎಂಬ ಪ್ರಾತಃಕಾಲದಲ್ಲಿ ಯಾರು ನಿತ್ಯ ಸ್ನಾನ ಮಾಡಿ ಪಾವನರಾಗುವರೋ ಅವರು ಕೃಷ್ಣ ಪದವಿಗೆ ಪೂರ್ಣ ಪ್ರಾಪ್ತರಾಗುವರು ।೪೬೩॥ ವಿಚಾರಿಸಿ ನೋಡಲು ಈ ದೃಷ್ಟಾಂತವೂ ಕೂಡ ಹನ್ನೊಂದನೆಯ ಸ್ಕಂದಕ್ಕೆ ಸರಿತೋರುವುದಿಲ್ಲ. ಹಾಗಾದರೆ ಇದು ಕೃಷ್ಣ- ಉದ್ಧವರ ಗುಹ್ಯಗೋಷ್ಠಿಯು ಅರವತ್ತು ವರ್ಷಕ್ಕೆ ಬರುವ ಕಪಿಲಾಷಷ್ಠಿಯ ಪರಮ ಪಾವನ ಪರ್ವಕಾಳ ವಾಗಿರುವುದು ।೪೬೪॥ ಈ ಪರ್ವ ಕಾಲದಲ್ಲಿ ಯಾರು ಸ್ನಾನ ಮಾಡುವರೋ ಅವರ ಕಲ್ಯಾಣವು ತತ್ಕಾಲದಲ್ಲಾಗುವುದು. ಅವರಿಗೆ ಜನ್ಮ-ಮರಣಗಳು ಬಾಧಿಸಲಾರವು. ಅವರು ಸ್ವತಃ ಪರಿಪೂರ್ಣ ಬ್ರಹ್ಮನಲ್ಲಿ ಏಕರೂಪರಾಗುವರು ।೪೬೫॥ ಇದು ಹನ್ನೊಂದನೆಯ ಸ್ಕಂಧವಾಗಿರದೇ ಮೂವತ್ತೊಂದು ಅಂಕಣಗಳ ತುಳಸೀ ವೃಂದಾವನವಾಗಿರುವುದು. ಅದರಲ್ಲಿ ನಿಜಸತ್ತೆಯಿಂದ ಸ್ವಾನಂದಪೂರ್ಣ ಶ್ರೀಕೃಷ್ಣನು ನಿತ್ಯ ನಿವಾಸ ಮಾಡುವನು ।೪೬೬॥ ಈ ವೃಂದಾವನದ ಹದಿನೈದು ನೂರು ಶ್ಲೋಕಗಳೇ ಸುಂದರವಾದ ವಿಸ್ತೃತ ಎಲೆಗಳಾಗಿರುವುವು. ಅದರಲ್ಲಿನ ಜ್ಞಾನಮಂಜರಿಯ ಸುರೇಶ ಗೊಂಚಲಗಳು ಅತಿಶಯ ಶೋಭಾಯಮಾನವಾಗಿ ತೋರುವುವು।೪೬೭॥ ಇದಕ್ಕೆ ಯಾರು ತಮ್ಮ ಜೀವಿತರೂಪ ಜಲ ಅರ್ಪಣೆ ಮಾಡುವರೋ ಅವರು ಪರಮ ಪಾವನರಾಗುವರು ಮತ್ತು ಸ್ವತಃ ಪರಿಪೂರ್ಣ ಬ್ರಹ್ಮರಾಗಿ ಸ್ವಾನಂದದಿಂದ ಶ್ರೀಕೃಷ್ಣಸದನಕ್ಕೆ ಹೋಗಿ ಮುಟ್ಟಿಕೊಳ್ಳುವರು ।೪೬೮॥ ತುಳಸಿಯ ಬುಡದಲ್ಲಿನ ಜಲಕ್ಕೆ ಯಾರು ವಂದನೆ ಮಾಡುವರೋ, ಅಲ್ಲಿನ ಮಣ್ಣನ್ನು ಮಸ್ತಕಕ್ಕೆ ಧರಿಸುವರೋ ಅವರು ತ್ರಿಭುವನದಲ್ಲಿ ವಂದ್ಯರಾಗುವರು. ಶ್ರೀಕೃಷ್ಣನು ಅವರ ನಿತ್ಯ ಸಖನಾಗಿ ಇರುವನು ।೪೬೯॥ ಯಾರು ಸದ್ಭಾವನೆಯಿಂದ ಪಠಣವೃತ್ತಿರೂಪ ಪ್ರದಕ್ಷಿಣೆ ಮಾಡುವರೋ ಅವರು ಶ್ರೀಕೃಷ್ಣ ಚರಣಕ್ಕೆ ಪ್ರಾಪ್ತರಾಗಬಲ್ಲರು ।೪೭೦॥ ಯಾರು ಈ ಕಥಾರೂಪ ವಿವಿಧ ವರ್ಣಗಳ ರಂಗೋಲಿಯನ್ನು ವೃಂದಾವನದ ಎದುರಿನಲ್ಲಿ ಹಾಕುವರೋ ಅವರು ಸಹಜವಾಗಿಯೇ ಕಲಿಕಾಲನಲ್ಲಿ ವಿಜಯ ಸಂಪಾದಿಸಲು ಶಕ್ತರಾಗುವರು. ಅವರ ಹಿಂದೆ ಮುಂದೆ ಶ್ರೀಕೃಷ್ಣನು ಯಾವಾಗಲೂ ನಿಂತುಕೊಂಡಿರುವನು ।೪೭೧॥ ಈ ಹನ್ನೊಂದನೆಯ ಸ್ಕಂಧದ ವೃಂದಾವನಕ್ಕೆ ಯಾರು ಶ್ರವಣರೂಪದಿಂದ ನಿತ್ಯ ಪೂಜಿಸುವರೋ, ಅವರಲ್ಲಿ ಶ್ರೀಕೃಷ್ಣನು ಪ್ರಸನ್ನನಾಗಿ ಅವರ ದೇಹಾಭಿಮಾನವನ್ನು ಇಲ್ಲದಂತೆ ಮಾಡುವನು ।೪೭೨॥ ಅಲ್ಲಿ ಯಾರು ಮನನರೂಪ ಪುಷ್ಪಾಂಜಲಿಯನ್ನು ಪ್ರತಿದಿನ ತ್ರಿಕಾಲದಲ್ಲಿ ಅರ್ಪಿಸುವರೋ ಅವರು ಆತ್ಮನಿಷ್ಠೆಯಿಂದ ಶ್ರೀಹರಿಯ ಚರಣಗಳಲ್ಲಿ ಹೋಗಿ ಮುಟ್ಟಿಕೊಳ್ಳುವರು ।೪೭೩॥ ಶ್ರೀಭಾಗವತರೂಪ ವೃಂದಾವನ ಹತ್ತಿರ ಸಂತ ಸಜ್ಜನರನ್ನು ಏಕತ್ರ ಕೂಡಿಸಿ ಈ ಕಥೆಯ ನಿರೂಪಣೆ ಮಾಡುವರೋ ಅವರು ವೃಂದಾವನದ ನಿರಪೇಕ್ಷವಾದ ಮಹಾಪೂಜೆ ಮಾಡಿದಂತಾಗುವುದು ।೪೭೪॥ ಈ ಮಹಾಪೂಜೆಯನ್ನು ಕಂಡು ಶ್ರೀಜನಾರ್ದನಸ್ವಾಮಿಗಳವರು ಸಂತುಷ್ಟರಾಗುವರು ಮತ್ತು ಶ್ರೋತೃಗಳು ಲಕ್ಷಕೊಟ್ಟು ಕೇಳುತ್ತಿದ್ದರೆ ಅವರಿಗೆ ಅವರು ಸ್ವತಃ ಆತ್ಮಜ್ಞಾನ ಕೊಡುವರು ।೪೭೫॥

ಶ್ರವಣೇ ಪಠಣೇ ಮನನೇ । ಅರ್ಥಾವ ಬೋಧ ವ್ಯಾಖ್ಯಾನೇ । ಏಕಾದಶೇ ಸಮಾನ ದೇಣೇ । ಜಾಣೇ ತಾನೇ ತ್ಯಾ ನಾಹೀ ।।೪೭೬।। ಶ್ರವಣ ಮನನ ನವ್ಹೇ ಪಠಣ । ತರೀ ಏಕಾದಶಾಚೇ ಪುಸ್ತಕ ಜಾಣ । ಬ್ರಾಹ್ಮಣಾಸೀ ದ್ಯಾವೇ ದಾನ । ವಿವೇಕಜ್ಞಾನ ತೇಣೇ ಉಪಜೇ ।।೪೭೭।। ಏಕಾದಶ ದ್ಯಾವೇದಾನ । ಕರಾವೇ ಏಕಾದಶಾಚೇ ಪೂಜನ । ಕರಿತಾ ಏಕಾದಶಾಚೇ ಸ್ಮರಣ । ಪಾಪ ಸಂಪೂರ್ಣ ನಿರ್ದಳೇ ।।೪೭೮।। ಏಕಾದಶಸಂಗ್ರಹ ಜೋ ಕರೀ । ಶ್ರೀಕೃಷ್ಣ ತಿಷ್ಠೇ ತ್ಯಾಚೇ ಘರೀ । ಜೋ ಏಕಾದಶಾಚೀ ಶ್ರದ್ಧಾ ಧರೀ । ಜ್ಞಾನ ತ್ಯಾಮಾರ್ಘಾರೀ ಸ್ವಯೇ ರಿಘೇ ।।೪೭೯।। ಶ್ಲೋಕ ಶ್ಲೋಕಾರ್ಥ ಪಾದಮಾತ್ರ । ನಿತ್ಯ ಸ್ಮರೇ ಜ್ಯಾಚೇ ವಕ್ತ್ರ । ತೋಹೀ ಹೋಯ ಪರಮ ಪವಿತ್ರ । ಅತಿ ಉದಾರ ಏಕಾದಶ ।।೪೮೦।। ಅವಚಟೇ ಜಾತಾ ಕಾರ್ಯಾಂತರೀ । ದೃಷ್ಟೀ ಪಡೇ ಏಕಾದಶಾವರೀ । ತೈ ಪಾತಕಾ ಹೋಯ ರಾನಭರೀ । ಆಪಧಾಕೇ ದೂರೀ ತೀ ಪಳತೀ ।।೪೮೧।। ತೋ ಏಕಾದಶ ಜ್ಯಾಚೇ ಕರೀ । ದೇವ ವಂದಿತೀ ತ್ಯಾತೇ ಶಿರೀ । ತೋನಿಜಾಂಗೇ ಜಗ ಉದ್ಧರೀ । ಏವಢೀ ಥೋರೀ ಏಕಾದಶಾ ।।೪೮೨।। ಸಕಳ ಪುರಾಣಾಂಮಾರ್ಘಾರೀ। ಹಾ ಏಕಾದಶ ವನಕೇಸರೀ । ಭವಗಜಾತೇ ವಿದಾರೀ । ಕ್ಷಣಾಮಾರ್ಘಾರೀ ಶ್ಲೋಕಾರ್ಧೇ ।।೪೮೩।। ''ಮಾಮೇಕಮೇವ ಶರಣಂ''। ಯಾಚಿ ಶ್ಲೋಕಾಂಚೇ ಕರಿತಾ ಪಠಣ । ಮಾಯೇಚಾ ಗಳಾ ಧರೋನಿ ಜಾಣ । ಆಪಧಾಕೇ ಪೂರ್ಣ ಸಂಸಾರ ನಿಮೇ ।।೪೮೪।। ''ನಿರಪೇಕ್ಷಂ ಮುನಿಂ ಶಾಂತಂ'' । ಹಾ ಶ್ಲೋಕ ಚಢೇ ಜ್ಯೈ ಹಾತ । ತ್ಯೆ ಸೇವಕಾ ಸೇವೀ ಶ್ರೀಕೃಷ್ಣನಾಥ । ಭವಭಯ ತೇಥ ಉರೇ ಕೈಚೇ ।।೪೮೫।। ಏಕಾದಶಾಚಾ ಏಕೇಕ ಶ್ಲೋಕ । ಹೋಯ ಭವಬಂಧಚ್ಛೇದಕ । ಜೇಥ ವಕ್ತಾ ಯದುನಾಯಕ । ತೇಥ ಹಾ ವಿಶೇಖ ಮ್ಹಣೋ ನಯೇ ।।೪೮೬।। ಶ್ರೀಭಾಗವತಾಮಾಜೀ ಜಾಣ । ಏಕಾದಶ ಮೋಕ್ಷಾಚೇ ಸ್ಥಾನ । ಯಾಲಾಗೀ ಶ್ಲೋಕಾರ್ಧಮಾತ್ರೇ ಪರಿಪೂರ್ಣ । ಭವಬಂಧನ ನಿರ್ದಳೀ ।।೪೮೭।। ಶ್ರೀಕೃಷ್ಣ ವೇದಾಂಚೇ ಜನ್ಮಸ್ಥಾನ । ತ್ಯಾಚೇ ಮುಖೀಂಚೇ ಹೇ ನಿರೂಪಣ । ತೇಥೇ ಸಕಳ ವೇದಾರ್ಥ ಜಾಣ । ಮಾಹೇರಾ ಆಪಣ ಸ್ವಯೇ ಯೇತೀ ।।೪೮೮।। ಯಾಲಾಗೀ ಏಕಾದಶೀ ವೇದಾರ್ಥ । ಮಾಹೇರೀ ಸುಖಾವಲೇ ಸಮಸ್ತ । ತೇ ಸಾಧಕಾಸೀ ಪರಮಾರ್ಥ । ಸ್ವಾನಂದ ದೇತ ಸಂಪೂರ್ಣ ।।೪೮೯।।

ಶ್ರವಣದಿಂದ, ಪಠಣೆಯಿಂದ, ಮನನದಿಂದ ಮತ್ತು ಅರ್ಥದ ನಿರೂಪಣೆಯಿಂದ ಈ ಹನ್ನೊಂದನೆಯ ಸ್ಕಂಧವು ಸಮಾನ ಸ್ವರೂಪದ ಫಲ ನೀಡುವುದು. ಅದರಲ್ಲಿ ಮೂಢ, ಬಲ್ಲವರೆಂಬ ಭೇದಭಾವವಿರುವುದಿಲ್ಲ ।।೪೭೬।। ಶ್ರವಣ, ಮನನ ಅಥವಾ ಪಠಣೆ ಇವುಗಳನ್ನು ಸಾಧಿಸಲು ಆಗದಿದ್ದರೆ ಈ ಹನ್ನೊಂದನೆಯ ಸ್ಕಂಧದ ಗ್ರಂಥವನ್ನು ಬ್ರಾಹ್ಮಣನಿಗೆ ದಾನ ಕೊಡಬೇಕು. ಇದರಿಂದ ವಿವೇಕ ಜ್ಞಾನವು ಪ್ರಾಪ್ತವಾಗುವುದು ।।೪೭೭।। ಈ ಹನ್ನೊಂದನೆಯ ಸ್ಕಂಧದ ದಾನ ಕೊಡಬೇಕು, ಈ ಹನ್ನೊಂದನೆಯ ಸ್ಕಂಧದ ಪೂಜೆ ಮಾಡಬೇಕು ಅಥವಾ ಶ್ರದ್ಧೆಯಿಂದ ಈ ಹನ್ನೊಂದನೆಯ ಸ್ಕಂಧದ ಸ್ಮರಣೆ ಮಾಡಬೇಕು. ಹೀಗೆ ಮಾಡುವುದರಿಂದ ಸರ್ವ ಪಾಪಗಳ ನಾಶವಾಗುವುದು ।।೪೭೮।। ಈ ಹನ್ನೊಂದನೆಯ ಸ್ಕಂಧದ ಗ್ರಂಥವನ್ನು ಯಾರು ಸಂಗ್ರಹ ಮಾಡುವರೋ, ಅವರ ಮನೆಯಲ್ಲಿ ಶ್ರೀಕೃಷ್ಣನು ವಾಸಮಾಡುತ್ತಿರುವನು. ಯಾರು ಈ ಹನ್ನೊಂದನೆಯ ಸ್ಕಂಧದಲ್ಲಿ ಪರಮ ಶ್ರದ್ಧೆಯನ್ನಿಡುವರೋ ಅವರಿಗೆ ಸಹಜವಾಗಿಯೇ ಆತ್ಮಜ್ಞಾನವು ಪ್ರಾಪ್ತವಾಗುವುದು ।।೪೭೯।। ಯಾರ ಮುಖದಲ್ಲಿ ಇದರಲ್ಲಿನ ಒಂದೇ ಶ್ಲೋಕವಾಗಲಿ, ಅರ್ಧ ಶ್ಲೋಕವಾಗಲಿ ಅಥವಾ ಪಾದ ಶ್ಲೋಕವಾಗಲಿ ಸಹಜವಾಗಿ ಉಚ್ಚರಿಸುತ್ತಿದ್ದರೆ ಅವರೂ ಸಹ ಪರಮ ಪಾವನರಾಗುವರು. ಹೀಗೆ ಈ ಹನ್ನೊಂದನೆಯ ಸ್ಕಂಧವು ಉದಾರವಾಗಿರುವುದು ।।೪೮೦।। ಯಾವುದೇ ಕಾರ್ಯಕ್ಕೆ ಹೊರಟು ನಿಂತಾದ ಅಕಸ್ಮಾತ ಈ ಹನ್ನೊಂದನೆಯ ಸ್ಕಂಧದ ಮೇಲೆ ತಮ್ಮ ದೃಷ್ಟಿ ಬೀಳಲು ಅವರ ಸರ್ವ ಪಾಪಗಳು ದೂರ ಓಡಿಹೋಗುವುವು ।।೪೮೧।। ಈ ಹನ್ನೊಂದನೆಯ ಸ್ಕಂಧವು ಯಾರ ಕೈಯಲ್ಲಿ ಇರುವುದೋ ಆತನಿಗೆ ದೇವದೇವತೆಗಳು ಶಿರಸಾ ವಂದಿಸುವರು. ಆತನು ಸ್ವತಃ ಸರ್ವ ಜಗತ್ತಿನ ಉದ್ಧಾರ ಮಾಡಬಲ್ಲನು. ಇಷ್ಟೊಂದು ಮಹತ್ವವು ಈ ಗ್ರಂಥದ ಮಹಿಮೆಯಾಗಿರುವುದು ।।೪೮೨।। ಸರ್ವ ಪುರಾಣಗಳಲ್ಲಿ ಈ ಹನ್ನೊಂದನೆಯ ಸ್ಕಂಧವು ಅಪೂರ್ವ ಸಿಂಹವಾಗಿರುವುದು. ಅದು ಭವರೂಪ ಆನೆಯನ್ನು ಅರ್ಧ ಶ್ಲೋಕದಿಂದ ಕ್ಷಣ ಮಾತ್ರದಲ್ಲಿ ಕೊಂದು ಹಾಕುವುದು ।।೪೮೩।। ''ಮಾಮೇಕಮೇವ ಶರಣಂ''(ಅ.೧೨-ಶ್ಲೋ.೧೫ ನನ್ನನ್ನೇ ಶರಣಾಗು) ಈ ಶ್ಲೋಕದ ಪಠಣೆ ಮಾಡುವುದರಿಂದ ಮಾಯೆಯ ಕುತ್ತಿಗೆ ಹಿಚಕಲ್ಪಟ್ಟು ಕೇವಲ ಭಯಮಾತ್ರದಿಂದ ಸಂಸಾರವು ಇದ್ದಲ್ಲಿಯೇ ಗತಪ್ರಾಣವಾಗುವುದು ।।೪೮೪।। ''ನಿರಪೇಕ್ಷಂ ಮುನಿಂ ಶಾಂತಂ'' (ಅ.೧೪ ಶ್ಲೋ.೧೬. ಭಕ್ತನು ನಿರಪೇಕ್ಷನು, ಶಾಂತನು, ನನ್ನ ಲೀಲೆಯಲ್ಲಿ ಮೈಮರೆತವನು) ಈ ಶ್ಲೋಕವು ಹಸ್ತಗತವಾದರೆ ಆ ಭಕ್ತನ ಸೇವೆಯನ್ನು ಕೃಷ್ಣನೇ ಮಾಡುವನು. ಅಂದಮೇಲೆ ಅಲ್ಲಿ ಸಂಸಾರದ ಭಯವಾದರೂ ಹೇಗೆ ನಿಲ್ಲಲು ಸಾಧ್ಯ ।।೪೮೫।। ಹನ್ನೊಂದನೆಯ ಸ್ಕಂಧದಲ್ಲಿನ ಪ್ರತಿಯೊಂದು ಶ್ಲೋಕಗಳು ಈ ಯಾವ ಭವ ಬಂಧನೆಯನ್ನು ಭೇದಿಸುವುವು. ಅಲ್ಲಿ ಶ್ರೀಕೃಷ್ಣನು ವಕ್ತಾನಾಗಿರುವನು. ಅದ್ದರಿಂದ ಯಾವ ಶ್ಲೋಕಗಳಿಗೂ ಉತ್ತಮ ಕನಿಷ್ಠ ಎನ್ನುವಂತಿಲ್ಲ. ಎಲ್ಲವೂ ಸಮಾನ ಯೋಗ್ಯತೆಯಿಂದ ಕೂಡಿರುವುವು ।।೪೮೬।। ಶ್ರೀಭಾಗವತದಲ್ಲಿ ಹನ್ನೊಂದನೆಯ ಸ್ಕಂಧವು ಮೋಕ್ಷದ ಸ್ಥಾನವಾಗಿರುವುದು. ಆದ್ದರಿಂದ ಅರ್ಧ ಶ್ಲೋಕದಿಂದಲೂ ಕೂಡ ಸಂಸಾರ ಬಂಧನವು ಪರಿಪೂರ್ಣವಾಗಿ ಇಲ್ಲದಾಗುವುದು ।।೪೮೭।। ಶ್ರೀಕೃಷ್ಣನು ಯಾವ ವೇದಗಳ ಜನ್ಮಸ್ಥಾನವಾಗಿರುವನು. ಆತನ ಮುಖದಿಂದಲೇ ಈ ನಿರೂಪಣೆಯು ಪ್ರಕಟಗೊಂಡಿರುವುದು. ಆದ್ದರಿಂದ ಸರ್ವ ವೇದಗಳು ತಮ್ಮ ತವರು ಮನೆಗೆ ಬಂದಿರುವುವು ।।೪೮೮।। ಈ ಕಾರಣವಾಗಿ ಈ ಹನ್ನೊಂದನೆಯ ಸ್ಕಂಧದಲ್ಲಿ ವೇದಾರ್ಥವು ತನ್ನ ತವರು ಮನೆಯಲ್ಲಿ ವಾಸ ಮಾಡಿ ಸುಖೀಯಾಯಿತು. ಇದು ಸಾಧಕರಿಗೆ ಸ್ವಾನಂದದಿಂದ ಪರಿಪೂರ್ಣ ಪರಮಾರ್ಥ ಕೊಡುತ್ತಿರುವುದು ।।೪೮೯।।

ಮಂಥೋನಿ ವೇದಶಾಸ್ತ್ರಾರ್ಥ । ವ್ಯಾಸೇ ಕೇಲೇ ಮಾಹಾಭಾರತ । ತ್ಯಾ ಭಾರತಾಚಾ ಮಥಿತಾರ್ಥ । ಶ್ರೀಭಾಗವತ-ಹರಿಲೀಲಾ ॥೪೯೦॥ ತ್ಯಾ ಭಾಗವತಾಚಾ ಸಾರಾಂಶ । ತೋ ಹಾ ಜಾಣ ಏಕಾದಶ । ತೇಥ ವಕ್ತಾ ಸ್ವಯೇ ಹೃಷೀಕೇಶ । ಪರಬ್ರಹ್ಮ ರಸ ಪ್ರಬೋಧೀ ॥೪೯೧॥ ಭಾಗವತಾಮಾಜೀ ಏಕಾದಶ । ಜೈಸಾ ಯತೀಮಾಜೀ ಪರಮಹಂಸ । ಕಾ ದೇವಾಂಮಾಜೀ ಜಗನ್ನಿವಾಸ । ತೈಸಾ ಏಕಾದಶ ಅತಿ ವಂದ್ಯ ॥೪೯೨॥ ಪಕ್ಷ್ಯಾಂಮಾಜೀ ರಾಜಹಂಸ । ರಸಾಂಮಾಜೀ ಸಿದ್ಧರಸ । ತೈಸಾ ಭಾಗವತಾಮಾಜೀ ಏಕಾದಶ । ಪರಮ ಸುರಸ ಸ್ವಾನಂದೇ ॥೪೯೩॥ ತೀರ್ಥ ಕ್ಷೇತ್ರ ವಾರಣಾಸೀ । ಪಾವನತ್ವೇ ಗಂಗಾ ಜೈಸೀ । ಜೀವೋದ್ಧಾರೀ ಏಕಾದಶೀ । ಮಹಿಮಾ ತೈಸೀ ಅನಿರ್ವಾಚ್ಯ ॥೪೯೪॥ ತ್ಯಾ ಏಕಾದಶಾಚೀ ಟೀಕಾ । ಜನಾರ್ದನಕೃಪಾ ಕರೀ ಏಕಾ । ತೋ ಏಕತ್ವಾಚ್ಯಾ ನಿಜಸುಖಾ । ಫಳೇ ಭಾವಿಕಾ ಸದ್ಭಾವೇ ॥೪೯೫॥ ಧರೋನಿ ಬಾಲಕಾಚಾ ಹಾತು । ಬಾಪ ಅಕ್ಷರೇ ಸ್ವಯೇ ಲಿಹಿವಿತು । ತೈಸಾ ಏಕಾದಶಾಚಾ ಅರ್ಥು । ಬೋಲವಿಲಾ ಪರಮಾರ್ಥು ಜನಾರ್ದನೇ ॥೪೯೬॥ ಕೈಸಾ ಚಾಲವಾವಾ ಗ್ರಂಥ । ಕೇವೀ ರಾಖಾವಾ ಪದಪದಾರ್ಥ । ಯೇ ವ್ಯುತ್ಪತ್ತೀಚೀ ನೇಣೇ ಮೀ ಮಾತ । ಬೋಲವೀ ಸಮರ್ಥ ಜನಾರ್ದನ ॥೪೯೭॥ ಜನಾರ್ದನೇ ನವಲ ಕೇಲೇ । ಮಜ ಮೂರ್ಖಾಹಾತೀ ಜ್ಞಾನ ಬೋಲವಿಲೇ । ಗ್ರಂಥೀ ಪರಮಾರ್ಥ ರೂಪ ಆಣಿಲೇ । ವಾಖಾಣವಿಲೇ ಏಕಾದಶಾ ॥೪೯೮॥ ಏಕಾದಶಾಚಾ ಪದಪದಾರ್ಥ । ಶಾಸ್ತ್ರವಕ್ತ್ಯಾ ಅತಿಗೂಢಾರ್ಥ । ತೋಹೀ ವಾಖಾಣವಿಲಾ ಪರಮಾರ್ಥ । ಕೃಪಾಳೂ ಸಮರ್ಥ ಜೇ ಜನಾರ್ದನ ॥೪೯೯॥ ಜನಾರ್ದನೇ ಐಸೇ ಕೇಲೇ । ಮಾಝೇ ಮೀಪಣ ನಿಃಶೇಷ ನೇಲೇ । ಮಗ ಪರಮಾರ್ಥಾ ಅರ್ಥವಿಲೇ । ಬೋಲವೂನಿ ಬೋಲೇ ನಿಜಸತ್ತಾ ॥೫೦೦॥ ಖಾಂಬಸೂತ್ರಾಚೀ ಬಾಹುಲೀ । ಸೂತ್ರಧಾರ ನಾಚವೀ ಭಲೀ । ತೇವೀ ಗ್ರಂಥಾರ್ಥಾಚೀ ಬೋಲೀ । ಬೋಲವಿಲೀ ಶ್ರೀಜನಾರ್ದನೇ ॥೫೦೧॥ ಅವಘಾ ಶ್ರೀಜನಾರ್ದನಚಿ ದೇಖಾ । ತೋಚಿ ಆಡನಾಂವೇ ಜಾಹಲಾ ''ಏಕಾ''। ತೇಣೇ ನಾಂವೇ ಗ್ರಂಥ ನೇಟಕಾ । ಅರ್ಥೂನಿ ತಾತ್ತ್ವಿಕಾ ತತ್ತ್ವಾರ್ಥ ದಾವೀ ॥೫೦೨॥ ಕವಿತ್ವೀ ಘಾತಲೇ ಮಾಝೇ ನಾಂವ । ಶೇಖೀ ನಾಂವಾಚಾ ನುರವೀ ಠಾವ । ಐಸೇ ಜನಾರ್ದನವೈಭವ । ಅತಿಅಭಿನವ ಅಲೌಕಿಕ ॥೫೦೩॥

ವೇದಾರ್ಥಗಳ ಮಂಥನೆ ಮಾಡಿ ಮಹರ್ಷೀ ವ್ಯಾಸರು ಮಹಾಭಾರತದ ರಚನೆ ಮಾಡಿದರು. ಆ ಮಹಾಭಾರತದ ಮಥಿತಾರ್ಥವೇ ಶ್ರೀಭಾಗವತ-ಹರಿಲೀಲೆಯಾಗಿರುವುದು ॥೪೯೦॥ ಹೀಗೆ ಈ ಭಾಗವತದ ಸಾರಾಂಶವೇ ಈ ಯಾವ ಹನ್ನೊಂದನೆಯ ಸ್ಕಂಧವಾಗಿರುವುದು. ಇದರಲ್ಲಿ ಶ್ರೀಕೃಷ್ಣನು ವಕ್ತಾನಾಗಿ ಪರಬ್ರಹ್ಮದ ಸುರಸವಾದ ಉಪದೇಶ ಮಾಡಿರುವನು ॥೪೯೧॥ ಸನ್ಯಾಸಿಯವರಲ್ಲಿ ಪರಮಹಂಸನಂತೆ ಅಥವಾ ದೇವತೆಗಳವರಲ್ಲಿ ಶ್ರೀ ವಿಷ್ಣುವಿನಂತೆ ಭಾಗವತದಲ್ಲಿ ಈ ಹನ್ನೊಂದನೆಯ ಸ್ಕಂಧವು ಪರಮ ವಂದನೀಯವಾಗಿರುವುದು ॥೪೯೨॥ ಪಕ್ಷಿಗಳಲ್ಲಿ ರಾಜಹಂಸ ಪಕ್ಷಿಯಂತೆ, ರಸಗಳಲ್ಲಿ ಅಮೃತದಂತೆ ಭಾಗವತದಲ್ಲಿ ಈ ಹನ್ನೊಂದನೆಯ ಸ್ಕಂಧವು ಸ್ವಾನಂದ ಸ್ವರೂಪವಾಗಿ ಪರಮ ಸುರಸವಾಗಿರುವುದು ॥೪೯೩॥ ತೀರ್ಥ ಕ್ಷೇತ್ರಗಳಲ್ಲಿ ಕಾಶೀ ಕ್ಷೇತ್ರದಂತೆ ಅಥವಾ ಪಾವನಗೊಳಿಸುವಲ್ಲಿ ಗಂಗಾ ನದಿಯಂತೆ ಹಾಗೂ ವ್ರತಗಳಲ್ಲಿ ಉದ್ಧಾರ ಮಾಡುವಂತಹ ಏಕಾದಶೀ ವ್ರತದಂತೆ ಈಯಾವ ಹನ್ನೊಂದನೆಯ ಸ್ಕಂಧದ ಮಹಿಮೆಯು ಅವರ್ಣನೀಯವಾಗಿರುವುದು ॥೪೯೪॥ ಹೀಗಿರುವ ಈ ಹನ್ನೊಂದನೆಯ ಸ್ಕಂಧದ ಭಾಷ್ಯೆಯನ್ನು ಶ್ರೀಜನಾರ್ದನಸ್ವಾಮಿಯವರ ಕೃಪೆಯಿಂದ ಏಕನಾಥನು ಮಾಡಿದನು. ಈ ಭಾಷ್ಯೆಯನ್ನು ಯಾರು ಸದ್ಭಾವದಿಂದ ಓದುವರೋ ಅವರು ಏಕತ್ವದ ನಿಜಸುಖಕ್ಕೆ ನಿಶ್ಚಿತಪೂರ್ವಕವಾಗಿ ಪಾತ್ರರಾಗುವರು ॥೪೯೫॥ ಬಾಲಕನ ಕೈ ಹಿಡಿದು ತಂದೆಯು ತಾನೇ ಸ್ವತಃ ಅಕ್ಷರಗಳನ್ನು ಬರೆಯುತ್ತಿರುವನು. ಅದರಂತೆಯೇ ಹನ್ನೊಂದನೆಯ ಸ್ಕಂಧದ ಅರ್ಥವನ್ನು ಅಂದರೆ ಪರಮಾರ್ಥವನ್ನು ಶೀಜನಾರ್ದನಸ್ವಾಮಿಯವರು ನನ್ನಿಂದ ನುಡಿಸಿರುವರು ॥೪೯೬॥ ಗ್ರಂಥ ಹೇಗೆ ಮುನ್ನಡೆಸಬೇಕು, ಪದಗಳ ಅರ್ಥ ಹೇಗೆ ಜೋಡಿಸಬೇಕು ಎನ್ನುವುದು ನನಗೆ ಯಾವುದೊಂದೂ ಗೊತ್ತಿರುವುದಿಲ್ಲ. ಆದರೆ ಸಮರ್ಥರಾದ ಶ್ರೀಜನಾರ್ಧನಸ್ವಾಮಿಯವರೇ ನನ್ನಿಂದ ನುಡಿಸುತ್ತಿರುವರು ॥೪೯೭॥ ಶ್ರೀಜನಾರ್ದನಸ್ವಾಮಿಯವರು ಎಂತಹ ಆಶ್ಚರ್ಯಕಾರಕ ಕಾರ್ಯಮಾಡಿದರೆಂದರೆ ನನ್ನಂತಹ ಮೂರ್ಖನ ಮುಖದಿಂದ ಜ್ಞಾನವನ್ನು ನುಡಿಸಿದರು. ಗ್ರಂಥದಲ್ಲಿ ಪರಮಾರ್ಥದ ಸ್ವರೂಪ ತಂದುಕೊಟ್ಟರು. ಹೀಗೆ ಹನ್ನೊಂದನೆಯ ಸ್ಕಂಧದ ವರ್ಣನೆ ಮಾಡಿಸಿದರು ॥೪೯೮॥ ಈ ಹನ್ನೊಂದನೆಯ ಸ್ಕಂಧದಲ್ಲಿನ ಪದ-ಪದಾರ್ಥಗಳು ಶಾಸ್ತ್ರವೇತ್ತ್ಯಾರಾದವರಿಗೂ ಕೂಡ ಅತ್ಯಂತ ಗೂಢವಾಗಿ ತೋರುವುವು. ಈ ಪ್ರಕಾರದ ಪರಮಾರ್ಥವನ್ನು ಅವರು ನನ್ನಿಂದ ನುಡಿಸಿದರು ! ಹೀಗೆ ಜನಾರ್ದನರು ಸಮರ್ಥರು ಕೃಪಾವಂತರು ॥೪೯೯॥ ಶ್ರೀಜನಾರ್ದನಸ್ವಾಮಿಯವರು ಪುನಃ ಏನು ಮಾಡಿದರೆಂದರೆ ನನ್ನಲ್ಲಿನ ನನ್ನತನ ಸಂಪೂರ್ಣವಾಗಿ ಇಲ್ಲದಾಗಿ ಮಾಡಿದರು. ನಂತರ ಪರಮಾರ್ಥವನ್ನು ತಮ್ಮ ಸತ್ತೆಯಿಂದ ಹೇಳಿದರು ॥೫೦೦॥ ಸೂತ್ರಧಾರನು ತನ್ನ ಸೂತ್ರ ಗೊಂಬೆಗಳನ್ನು ಹೇಗೆ ಉತ್ತಮ ಪ್ರಕಾರವಾಗಿ ಕುಣಿಸುವನೋ, ಅದೇ ಪ್ರಕಾರವಾಗಿ ಗ್ರಂಥಾರ್ಥದ ಭಾಷ್ಯ ಶ್ರೀಜನಾರ್ದನಸ್ವಾಮಿಯವರು ಹೇಳಿಸಿರುವರು ॥೫೦೧॥ ಎಲ್ಲೆಲ್ಲಿಯೂ ಶ್ರೀಜನಾರ್ದರೇ ತುಂಬಿರುವರು. ಅವರು ಅಡ್ಡ ಹೆಸರಿನಿಂದ ಏಕನಾಥರಾಗಿರುವರು ಮತ್ತು ಆ ಹೆಸರಿನಿಂದಲೇ ಈ ಗ್ರಂಥವನ್ನು ಅತಿಶಯ ಉತ್ತಮವಾಗಿ ರಚಿಸಿ ಸಾತ್ವಿಕ ಜನರಿಗೆ ಅದರ ತತ್ತ್ವಾರ್ಥ ತೋರಿಸಿಕೊಟ್ಟಿರುವರು ॥೫೦೨॥ ಕವಿತ್ವದಲ್ಲಿ ಅವರು ನನ್ನ ಹೆಸರು ಹಾಕಿರುವುದು ನಿಜ, ಆದರೆ ಕೊನೆಯಲ್ಲಿ ಅವರು ಆ ಹೆಸರಿಗೂ ಕೂಡ ಅವಕಾಶ ಕೊಡಲಿಲ್ಲ. ಹೀಗೆ ಶ್ರೀ ಜನಾರ್ದನರ ವೈಭವವು ಅತ್ಯಂತ ಆಶ್ಚರ್ಯಕಾರಕ ಮತ್ತು ಅಲೌಕಿಕ ಸ್ವರೂಪದಿಂದ ಕೂಡಿರುವುದು ॥೫೦೩॥

ಗ್ರಂಥ ದೇಖೋನಿಯಾ ಸಜ್ಞಾನ । ಮ್ಹಣತೀ ಜ್ಞಾತಾ ಏಕಾ ಜನಾರ್ದನ । ಜವಳೀ ಜಾಹಲಿಯಾ ದರ್ಶನ । ಮೂರ್ಖ ಸಂಪೂರ್ಣ ಮಾನಿತೀ ।।೫೦೪।। ಏಕಾ ಜನಾರ್ದನಾಚಾ ವೃತ್ತಾಂತ । ಏಕ ಮ್ಹಣತೀ ಭಲಾ ಭಕ್ತ । ಏಕ ಮ್ಹಣತೀ ಜೀವನ್ಮುಕ್ತ । ಪ್ರಪಂಚೀ ನಿಶ್ಚಿತ ಮಾನಿತೀ ಏಕ ।।೫೦೫।। ಅಹೋ ಹಾ ಏಕಾ ಜನಾರ್ದನ । ನಾಹೀ ಆಸನ ನ ದೇಖೆ ಧ್ಯಾನ । ಮಂತ್ರ ಮುದ್ರಾ ಮಾಳಾ ಜಪನ । ಉಪಾಸಕಲಕ್ಷಣ ಯಾ ನಾಹೀ ।।೫೦೬।। ಕೋಣ ಮಂತ್ರ ಅಸೇ ಯಾಸೀ । ಕಾಯ ಉಪದೇಶೀ ಶಿಷ್ಯಾಂಸೀ । ಹೇ ಕಳೋ ನೇದೀ ಕೋಣಾಸೀ । ಭುಲಲೀ ಭಾವಿಕೇ ತ್ಯಾಸೀ ಅತಿಭಾವಾರ್ಥೇ ।।೫೦೭।। ''ನುಸತ್ಯಾ ಹರಿನಾಮಾಚೇ ಘೋಷ । ಲಾವೂನಿ ಭುಲವಿಲೇ ಯೇಣೇ ಲೋಕ''। ಐಸೇ ನಾನಾ ವಿಕಲ್ಪ ಅನೇಕ । ಜನಾರ್ದನ ದೇಖ ಉಪಜವೀ ಸ್ವಯೇ ।।೫೦೮।। ಮೀ ಜೇಥ ಝಾಡಾ ದೇಊ ಜಾಯೇ । ತೇ ಬೋಲಣೇ ಜನಾರ್ದನಚಿ ಹೋಯೇ । ಯುಕ್ತಿಪ್ರಯುಕ್ತೀಚೇ ಪಾಹೇ । ಮೀಪಣ ನ ರಾಹೇ ಮಜಮಾಜೀ ।।೫೦೯।। ಏವಂ ಮಾಝೇ ಮೀಪಣ ಸಮೂಳೀ । ಶ್ರೀಜನಾರ್ದನ ಸ್ವಯೇ ಗಿಳೀ । ಆತಾ ಮಾಝೀ ಹಾಲೇ ಜೇ ಅಂಗುಳೀ । ತೇ ತೇ ಕ್ರಿಯಾ ಚಾಳೀ ಶ್ರೀಜನಾರ್ದನ ।।೫೧೦।। ನಿಮೇಷೋನ್ಮೇಷಾಂಚೇ ಸಂಚಾರ । ಶ್ವಾಸೋಚ್ಛ್ವಾಸಾಂಚೇ ಪರಿಚಾರ । ಸಕಳ ಇಂದ್ರಿಯಾಂಚಾ ವ್ಯಾಪಾರ । ಚಾಳಿತಾ ಸಾಚಾರ ಶ್ರೀಜನಾರ್ದನ ।।೫೧೧।। ಜೇಥ ಮೀ ಮ್ಹಣೋ ಜಾಯೇ ಕವಿತಾ । ತೇ ಜನಾರ್ದನಚಿ ಹೋಯ ತತ್ತ್ವತಾ । ಮಾಝೇ ಮೀಪಣ ಧರಾವಯಾ ಪುರತಾ । ಠಾವ ರಿತಾ ನುರೇಚಿ ।।೫೧೨।। ಮಾಝೇ ಜೇ ಕಾ ಮೀಪಣ । ಜನಾರ್ದನ ಜಾಹಲಾ ಆಪಣ । ಏಕಾ ಜನಾರ್ದನಾ ಶರಣ । ಗ್ರಂಥ ಸಂಪೂರ್ಣ ತೇಣೇ ಕೇಲಾ ।।೫೧೩।। ಹೇಹೀ ಬೋಲ ಬೋಲತಾ ಜಾಣ । ಖುಣಾ ವಾರೀ ಜನಾರ್ದನ । ಝಾಡಾ ಸೂಚಿತಾ ಸಂಪೂರ್ಣ । ವೇಗಳೇಪಣ ಅಂಗೀ ಲಾಗೇ ।।೫೧೪।। ಆತಾ ವೇಗಳಾ ಅಥವಾ ಏಕ । ಅವಘಾ ಜನಾರ್ದನ ಸ್ವಯೇ ದೇಖ । ತೇಣೇ ಗ್ರಂಥಾರ್ಥಾಚೇ ಲೇಖ । ಅತ್ಯಂತ ಚೋಖ ವಿಸ್ತಾರಿಲೇ ।।೫೧೫।। ಗ್ರಂಥ ದೇಶಭಾಷಾ ವ್ಯುತ್ಪತ್ತೀ । ಮ್ಹಣೋನಿ ನುಪೇಕ್ಷಾವಾ ಪಂಡಿತೀ । ಅರ್ಥ ಪಹಾವಾ ಯಥಾರ್ಥೀ । ಪರಮಾತ್ಮಸ್ಥಿತೀ ನಿಜನಿಷ್ಠಾ ।।೫೧೬।। ಜರೀ ಸಂಸ್ಕೃತ ಗ್ರಂಥ ಪೂರ್ಣ । ತರೀ ದೇಶಭಾಷಾವ್ಯಾಖ್ಯಾನ । ಮಾ ಹೇ ಆಯತೇ ನಿರೂಪಣ । ಸಾಧಕ ಸಜ್ಞಾನ ನುಪೇಕ್ಷಿತೀ ।।೫೧೭।।

ಜ್ಞಾನೀ ಪುರುಷರು ಈ ಗ್ರಂಥವನ್ನು ಕಂಡು ಏಕಾ ಜನಾರ್ದನನು ಜ್ಞಾನಿಯಾಗಿರುವನು ಎಂದು ಹೇಳಬಹುದು. ಆದರೆ ಅವರು ಆತನತ್ತ ಬಂದು ಪ್ರತ್ಯಕ್ಷ ಕಾಣಲು ಆಗ ಅವರು ಆತನಿಗೆ ಮೂರ್ಖನೆಂದು ತಿಳಿಯುವರು ।।೫೦೪।। ಈಗ ಏಕಾಜನಾರ್ದನ ವಿಷಯಕ್ಕೆ ಹೇಳಬೇಕೆಂದರೆ ಕೆಲವರು ಆತನಿಗೆ ಭಾವಿಕನು ಎಂದು ಹೇಳುವರು. ಕೆಲವರು ಈತನು ಪ್ರಪಂಚದಲ್ಲಿದ್ದು ಜೀವನ್ಮುಕ್ತನು ಎಂದು ನಿಶ್ಚಯವಾಗಿ ಮನ್ನಿಸುವರು ।।೫೦೫।। ಇನ್ನೂ ಕೆಲವರು ಆತನು ಆಸನ ಹಾಕುವುದಿಲ್ಲ, ಧ್ಯಾನ ಮಾಡುವುದಿಲ್ಲ, ಮಂತ್ರ ಮುದ್ರೆಮಾಳಾ ಯಾವುದೂ ತಿಳಿದಿಲ್ಲ, ಯಾವ ಉಪಾಸನೆಯ ಒಂದು ಲಕ್ಷಣವೂ ತೋರುತ್ತಿಲ್ಲ ।।೫೦೬।। ಈತನ ಮಂತ್ರವಾದರೂ ಯಾವುದು ? ಈತನು ಶಿಷ್ಯರಿಗೆ ಯಾವುದನ್ನು ಉಪದೇಶ ಮಾಡುವನು ? ಯಾರಿಗೂ ಯಾವ ಮಂತ್ರವನ್ನೂ ಕೊಡುವುದಿಲ್ಲ. ಕೇವಲ ಭಾವನೆಯಿಂದ ಭಾವಿಕ ಜನರು ಆತನಲ್ಲಿ ಭುಲಾಯಿಸಿರುವರು ।।೫೦೭।। ಈತನು ಕೇವಲ ಹರಿನಾಮದ ಘೋಷ ಮಾಡುತ್ತ ಜನರಿಗೆ ಮರಳು ಮಾಡುತ್ತಿರುವನು ! ಹೀಗೆ ನಾನಾ ಪ್ರಕಾರವಾಗಿ ವಿಕಲ್ಪಗಳನ್ನು ಶ್ರೀಜನಾರ್ದನರೇ ಜನರಲ್ಲಿ ಉತ್ಪನ್ನ ಮಾಡಿರುವರು ।।೫೦೮।। ಇವುಗಳಿಗೆ ಉತ್ತರ ಕೊಡಲು ನಾನೇನಾದರೂ ಪ್ರಯತ್ನಿಸಿದರೆ ಆಗ ಶ್ರೀಜನಾರ್ದನಸ್ವಾಮಿಯವರೇ ಹೇಳಲಾರಂಭಿಸುವರು. ಯುಕ್ತಿ ಪ್ರಯುಕ್ತಿಗಳ ನನ್ನತನ ನನ್ನಲ್ಲಿ ಯಾವುದೂ ಉಳಿಯುವುದಿಲ್ಲ ।।೫೦೯।। ಈ ಪ್ರಕಾರವಾಗಿ ನಾನೆಂಬುವುದನ್ನು ಶ್ರೀಜನಾರ್ದನಸ್ವಾಮಿಯವರು ನುಂಗಿಬಿಟ್ಟಿರುವರು. ಈಗ ನನ್ನ ಬೆರಳು ಅಲುಗಾಡುತ್ತಿರುವ ಕ್ರಿಯೆಯೂ ಕೂಡ ಶ್ರೀಜನಾರ್ದನ ಸ್ವಾಮಿಯವರಿಂದ ಆಗುತ್ತಿರುವುದು ।।೫೧೦।। ಹೆಚ್ಚಿಗೇನು ಹೇಳಬೇಕು? ಕಣ್ಣುಗಳ ರೆಪ್ಪೆ ಹೊಡೆಯುವಿಕೆಯು, ಉಸಿರಾಟದ ಕಾರ್ಯವು, ಇಂದ್ರಿಯಗಳ ಸರ್ವ ವ್ಯಾಪಾರವು, ಇವೆಲ್ಲವೂ ಶ್ರೀಜನಾರ್ದನರಿಂದಲೇ ನಡೆಯುವುವು ।।೫೧೧।। ನಾನು ಕವಿತ್ವ ಮಾಡಿದೆ ಎಂದು ಹೇಳಬೇಕೆನ್ನುತ್ತಲೇ ಆಗ ಅದೂ ಕೂಡ ತತ್ವತಃ ಶ್ರೀಜನಾರ್ದನರೇ ಆಗಿಬಿಡುವರು. ತಾತ್ಪರ್ಯವೇನೆಂದರೆ ನನ್ನ ನನ್ನತನವು ಹಿಡಿಯಲೂ ಸಹ ಸ್ಥಳಾವಕಾಶ ಸ್ವಲ್ಪವೂ ಬರಿದಾಗಿ ಉಳಿದಿರುವುದಿಲ್ಲ ।।೫೧೨।। ನನ್ನಲ್ಲಿ ಯಾವುದೋ ರೀತಿಯಲ್ಲಿ ನನ್ನತನ ಎಂಬುವುದು ಇತ್ತು. ಅದನ್ನು ಶ್ರೀ ಜನಾರ್ದನರು ತಾವೇ ಸ್ವತಃ ಆಗಿಬಿಟ್ಟರು. ಹೀಗೆ ಏಕನಾಥನು ಜನಾರ್ದನಸ್ವಾಮಿಯವರಿಗೆ ಪರಿಪೂರ್ಣವಾಗಿ ಶರಣಾಗಿರುವುದರಿಂದ ಆತನೇ ಈ ಗ್ರಂಥವನ್ನು ಸಮಗ್ರವಾಗಿ ಸಿದ್ಧಗೊಳಿಸಿರುವನು ।।೫೧೩।। ಆದರೆ ಈ ರೀತಿಯಾಗಿ ಹೇಳಲು ಪ್ರಯತ್ನಿಸಿದರೆ ಆಗ ಶ್ರೀಜನಾರ್ದನಸ್ವಾಮಿಯವರು ಇದನ್ನೂ ಕೂಡ ಹೇಳಬೇಡ ಎಂದು ಸನ್ನೆ ಮಾಡುವರು. ನೀನು ಹೀಗೆ ಪರಿಹಾರ ಕೊಡುತ್ತಿದ್ದರೆ ಅಂಗದಲ್ಲಿ ಮತ್ತೇನಾದರೂ ಸೇರಿಕೊಳ್ಳಬಹುದು ಎಂದು ಹೇಳುವರು ।।೫೧೪।। ಈಗ ಬೇರೆಯೇ ಆಗಿರಲಿ, ಅಥವಾ ಒಂದೇಯಾಗಿರಲಿ ಶ್ರೀಜನಾರ್ದನ ಸ್ವಾಮಿಯವರು ಸ್ವತಃ ಸರ್ವತ್ರ ತುಂಬಿರುವರು. ಅವರೇ ಈ ಗ್ರಂಥಾರ್ಥದ ಲೇಖನ ಅತಿಶಯ ಉತ್ತಮ ಪ್ರಕಾರವಾಗಿ ವಿಸ್ತರಿಸಿರುವರು ।।೫೧೫।। ಈ ಗ್ರಂಥವು ದೇಶಭಾಷೆಯ ಮರಾಠಿಯಲ್ಲಿ ಬರೆದಿರುವುದು ಎಂದು ಪಂಡಿತರು ಅದರ ತಿರಸ್ಕಾರ ಮಾಡಬಾರದು. ಆತ್ಮನಿಷ್ಠೆಯಿಂದ ಅದರಲ್ಲಿನ ಪರಮಾರ್ಥ ವಿಷಯದ ನಿಜವಾದ ಅರ್ಥದತ್ತ ನೋಡಬೇಕು ।।೫೧೬।। ಒಂದುವೇಳೆ ಈ ಸಂಪೂರ್ಣ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಬರೆದಿದ್ದರೂ ಸಹ ದೇಶ ಭಾಷೆಯಲ್ಲಿಯೇ ಅದರ ಅರ್ಥವನ್ನು ಹೇಳಬೇಕಾಗುವುದು. ಅಂದಮೇಲೆ ಇದು ಅನಾಯಾಸವಾಗಿಯೇ ದೊರೆತ ನಿರೂಪಣೆಗೆ ಸಜ್ಞಾನೀ ಸಾಧಕರು ಹೇಗೆ ತಿರಸ್ಕರಿಸಲು ಸಾಧ್ಯ ? ।।೫೧೭।।

ಜೇ ಯಾ ಗ್ರಂಥಾ ಆದರ ಕರಿತೀ । ಅಥವಾ ಜೇ ಕಾ ಉಪೇಕ್ಷಿತೀ । ಕೇವಳ ಜೇ ಕೋಣೀ ನಿಂದಿತೀ । ತೇಹೀ ಆಮ್ಹಾ ಬ್ರಹ್ಮ ಮೂರ್ತಿ ಸದ್ಗುರುರೂಪೇ ।।೫೧೮।। ಹೇಚಿ ಶಿಕವಿಲೇ ಜನಾರ್ದನೇ । ಸರ್ವ ಭೂತೀ ಮಜಚಿ ಪಾಹಣೇ । ಪ್ರಕೃತಿಗುಣಾಂಚೀ ಲಕ್ಷಣೇ । ಸರ್ವಥಾ ಆಪಣೇ ನ ಮಾನಾವೀ ।।೫೧೯।। ಶಿಷ್ಯಾಚೇ ಕ್ಷೋಭ ನ ಸಾಹವತೀ । ನಿಂದಕಾಂಚೀ ನಿಂದಾ ನ ಜಿರೇ ಚಿತ್ತೀ । ತೈ ತೋ ಕೋರಡಾಚಿ ಪರಮಾರ್ಥೀ । ಕ್ಷೋಭೇ ನಿಶ್ಚಿತೀ ನಾಗವಲಾ ।।೫೨೦।। ಏವಂ ಪರಾಚೇ ಪ್ರಕೃತಿಗುಣ । ಪಾಹತಾ ಸರ್ವಥಾ ಕ್ಷೋಭೇ ಮನ । ತೇ ನ ಪಹಾವೇ ಆಪಣ । ಸರ್ವಭೂತೀ ಚೈತನ್ಯ ಸಮತ್ವೇ ಪಹಾವೇ ।।೫೨೧।। ಯೇಚಿ ಉಪದೇಶೀ ಅತ್ಯಾದರ । ಜನಾರ್ದನೇ ಕೇಲಾ ಥೋರ । ಯಾವೇಗಳಾ ಭವಾಬ್ಧಿ ಪಾರ । ಸಜ್ಞಾನ ನರ ಪಾವೋ ನ ಶಕೇ ।।೫೨೨।। ಯೇಣೇ ನಿರ್ಧಾರೇ ಗುರು ತೋ ಗುರು । ಆಮ್ಹಾ ಶಿಷ್ಯ ತೋಹೀ ಸಂವಾದಗುರು । ನಿಂದಕ ತೋ ಪರಮ ಗುರು । ನಿಪರಾದ ಸದ್ಗುರು ಜನಾರ್ದನಕೃಪಾ ।।೫೨೩।। ಜನಾರ್ದನಕೃಪಾ ಏಥೇ । ಗುರುವೇಗಳೇ ನುರೇಚಿ ರಿತೇ । ಮೀಪಣಾಸಹಿತ ಸಕಳ ಭೂತೇ । ಗುರುತ್ವಾ ನಿಶ್ಚಿತೇ ಆಣಿಲೀ ತೇಣೇ ।।೫೨೪।। ತೇಣೇಂಚಿ ಹೇ ಗ್ರಂಥಕಥಾ । ಸಿದ್ಧೀ ಪಾವವಿಲೀ ಪರಮಾರ್ಥಾ । ಮಾಝೀ ಗಾಂಠೀಚೀ ನವ್ಹೇ ಯೋಗ್ಯತಾ । ಹೇ ಜಾಣಿತಲೇ ಶ್ರೋತಾ ಗ್ರಂಥಾರಂಭೀ ।।೫೨೫।। ಗ್ರಂಥಾರಂಭ ಪ್ರತಿಷ್ಠಾನೀ । ತೇಥ ಪಂಚಾಧ್ಯಾಯೀ ಸಂಪಾದೂನೀ । ಉತ್ತರ ಗ್ರಂಥಾಚೇ ಕರಣೀ । ಆನಂದವನೀ ವಿಸ್ತಾರಿಲೀ ।।೫೨೬।। ''ಅವಿಮುಕ್ತ'' ''ಮಹಾಶ್ಮಶಾನ'' । ''ವಾರಣಾಸಿ'' ''ಆನಂದವನ'' । ಏಕಾಸೀಚೀ ನಾಂವೇ ಜಾಣ । ಐಕಾ ಲಕ್ಷಣ ತ್ಯಾಚೇಹೀ ।।೫೨೭।। ಅತಿಶಯೇ ಜೇಥೇ ಮುಕ್ತೀ । ಅಧಮೋತ್ತಮಾ ಏಕಚಿ ಗತಿ । ಪುಢತೀ ನಾಹೀ ಪುನರಾವೃತ್ತೀ । ''ಅವಿಮುಕ್ತ'' ಮ್ಹಣತೀ ಯಾ ಹೇತೂ ।।೫೨೮।। ಜೇ ಶ್ಮಶಾನೀ ಸಾಂಡಿಲ್ಯಾ ಪ್ರಾಣ । ಪ್ರಾಣೇ ಪುಢೇ ನ ದೇಖೇ ಮಸಣ । ಯಾಲಾಗೀ ಹೇ ''ಮಹಾಶ್ಮಶಾನ'' । ಅಂತೀ ಬ್ರಹ್ಮಜ್ಞಾನ ಶಿವ ಸಾಂಗೇ ।।೫೨೯।। ಮರ್ಯಾದಾ ಶ್ವೇತ ''ವರುಣಾ'' ''ಅಶೀ'' । ಮಧ್ಯೇ ನಾಂದೇ ಪಂಚಕ್ರೋಶೀ । ರಿಗಮ ನಾಹೀ ಪಾತಕಾಂಸೀ । ಯಾಲಾಗೀ ''ವಾರಾಣಸೀ'' ಮ್ಹಣಿಪೇ ಇತಿ ।।೫೩೦।। ''ವರುಣಾ'' ಪಾತಕಾಂಚೇ ವಾರೀ । ''ಅಶೀ'' ಮಹಾದೋಷ ಸಂಹಾರೀ । ಮಧ್ಯೇ ವಿಶ್ವೇಶ್ವರಾಚೀ ನಗರೀ । ''ವಾರಾಣಸೀ'' ಖರೀ ಯಾ ಹೇತು ।।೫೩೧।।

ಯಾರು ಈ ಗ್ರಂಥಕ್ಕೆ ಮನಃಪೂರ್ವಕವಾಗಿ ಆದರ ಮಾಡಲಿ ಅಥವಾ ತಿರಸ್ಕರಿಸಲಿ, ಇಲ್ಲವೇ ಕೇವಲ ಇದರ ನಿಂದೆಯನ್ನೇ ಮಾಡುತ್ತಿರಲಿ ಅವರೆಲ್ಲರೂ ನನಗೆ ಸದ್ಗುರು ರೂಪ ಬ್ರಹ್ಮ ಮೂರ್ತಿಯಾಗಿರುವರು ।।೫೧೮।। ಸರ್ವ ಪ್ರಾಣಿಮಾತ್ರರಲ್ಲಿ ನನ್ನನ್ನೇ ಕಾಣಬೇಕೆಂದು ಶ್ರೀಜನಾರ್ದನಸ್ವಾಮಿಯವರು ನನಗೆ ಇದನ್ನು ಕಲಿಸಿರುವರು. ಪ್ರಕೃತಿಯ ಗುಣಗಳತ್ತ ನಾವು ಎಂದೆಂದಿಗೂ ನೋಡಬಾರದು ।।೫೧೯।। ಯಾರಿಗೆ ತನ್ನ ಶಿಷ್ಯರ ಕ್ಷೋಭೆ ಸಹಿಸುವುದಾಗುವುದಿಲ್ಲ, ನಿಂದಕರ ನಿಂದೆ ಹೊಟ್ಟೆಯಲ್ಲಿ ಜೀರ್ಣಿಸುವುದಿಲ್ಲ. ಅಂಥ ಸಾಧಕನು ಪರಮಾರ್ಥದಲ್ಲಿ ಬರಿದಾಗಿಯೇ ಇರುವನು. ಆತನಿಗೆ ಈ ಕ್ಷೋಭೆಯೇ ನಿಶ್ಚಿತವಾಗಿ ಮುಳುಗಿಸುವುದು ಎಂದು ತಿಳಿಯಬೇಕು ।।೫೨೦।। ತಾತ್ಪರ್ಯವೇನೆಂದರೆ ಇನ್ನೊಬ್ಬರ ಪ್ರಕೃತಿಯ ಗುಣಗಳನ್ನು ಕಂಡು ಮನವು ಕ್ಷುಬ್ಧಗೊಳ್ಳುವುದು. ಆದ್ದರಿಂದ ನಾವು ಅದನ್ನು ನೋಡಲೇಬಾರದು. ಸರ್ವ ಪ್ರಾಣಿಮಾತ್ರರಲ್ಲಿ ಸಮರೂಪದಲ್ಲಿ ಚೈತನ್ಯವು ತುಂಬಿಕೊಂಡಿರುವುದು ಎಂದೇ ಯಾವಾಗಲೂ ಕಾಣಬೇಕು ।।೫೨೧।। ಇದೇ ಉಪದೇಶವನ್ನು ನನಗೆ ಶ್ರೀಜನಾರ್ದನಸ್ವಾಮಿಯವರು ಅತ್ಯಂತ ಆಗ್ರಹದಿಂದ ಮಾಡಿರುವರು. ಏಕೆಂದರೆ ಹೀಗೆ ತಿಳಿಯದ ಹೊರತು ಜ್ಞಾನೀ ಪುರುಷರು ಈ ಭವಸಾಗರದಿಂದ ಪಾರಾಗಲು ಸಾಧ್ಯವಿಲ್ಲ ।।೫೨೨।। ಈ ನಿಶ್ಚಯದಿಂದ ನಮಗೆ ಶ್ರೀಗುರುಗಳು ಗುರುಗಳೇ ಆಗಿರುವರು. ಆದರೆ ಶಿಷ್ಯನೂ ಕೂಡ ನಮಗೆ ಸಂವಾದ ಗುರು ಹಾಗೂ ನಿಂದಕನು ಮಾತ್ರ ಪರಮ ಗುರುವೇ ಆಗಿರುವನು. ಇದು ಶ್ರೀಜನಾರ್ದನಸ್ವಾಮಿಯವರ ಕೃಪಾಭರಿತ ಬೋಧೆಯಾಗಿರುವುದು ।।೫೨೩।। ಶ್ರೀಜನಾರ್ದನಸ್ವಾಮಿಯವರ ಕೃಪೆಯಿಂದ ಗುರುಹೊರತಾದ ಯಾವ ಖಾಲೀ ಸ್ಥಳವೇ ನನಗೆ ಕಾಣಿಸುವುದಿಲ್ಲ. ಅವರೇ ನಿಜವಾಗಿಯೂ ನನ್ನದೆಂಬುವುದರೊಂದಿಗೆ ಸರ್ವಪ್ರಾಣಿಮಾತ್ರರನ್ನು ಗುರುಸ್ವರೂಪಕ್ಕೆ ತಂದಿರುವರು ।।೫೨೪।। ಅವರೇ ಈ ಗ್ರಂಥಕಥೆಯ ಪರಮಾರ್ಥವನ್ನು ಸಿದ್ಧಿಸ್ವರೂಪಕ್ಕೆ ತಂದು ಮುಟ್ಟಿಸಿದರು. ಈ ಯೋಗ್ಯತೆಯು ನನ್ನ ಸ್ವತಃದ್ದಲ್ಲ, ಇದನ್ನು ನಾನು ಈ ಗ್ರಂಥದ ಆರಂಭದಲ್ಲಿಯೇ ಹೇಳಿರುವೆನು ।।೫೨೫।। ಈ ಗ್ರಂಥದ ಆರಂಭ ಪೈಠಣದಲ್ಲಿ ಮಾಡಲಾಯಿತು. ಅಲ್ಲಿ ಐದು ಅಧ್ಯಾಯಗಳನ್ನು ಪೂರ್ಣಗೊಳಿಸಿ ಮುಂದಿನ ಅಧ್ಯಾಯಗಳನ್ನು ಆನಂದವನದಲ್ಲಿ ಅಂದರೆ ಕಾಶೀ ಕ್ಷೇತ್ರದಲ್ಲಿ ಪೂರ್ಣ ಮಾಡಲಾಯಿತು ।।೫೨೬।। ಅವಿಮುಕ್ತ, ಮಹಾಸ್ಮಶಾನ, ವಾರಾಣಸೀ, ಆನಂದವನ ಈ ಎಲ್ಲವೂ ಒಂದೇ ಕಾಶೀ ಕ್ಷೇತ್ರದ ಹೆಸರುಗಳಾಗಿರುವುವು. ಅದರ ಕಾರಣವನ್ನೂ ಕೇಳಿರಿ ।।೫೨೭।। ಅಲ್ಲಿ ಅಂತಿಮ ಮುಕ್ತಿ ದೊರೆಯುವುದು, ಅಧಮ, ಉತ್ತಮರಿಗೆ ಒಂದೇ ಗತಿ ಪ್ರಾಪ್ತವಾಗುವುದು. ಪುನಃ ಜನ್ಮ ಮರಣಗಳ ತಿರುಗಾಟವು ತೀರಿಹೋಗುವುದು. ಆದ್ದರಿಂದ ಈ ಕ್ಷೇತ್ರಕ್ಕೆ ಅವಿಮುಕ್ತ ಎಂದು ಕರೆಯುವರು ।।೫೨೮।। ಯಾವ ಸ್ಮಶಾನದಲ್ಲಿ ಒಮ್ಮೆ ಮರಣವಾದಮೇಲೆ ಪುನಃ ಆ ಪ್ರಾಣಿಗೆ ಸ್ಮಶಾನ ಕಾಣಬೇಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಮಹಾಸ್ಮಶಾನವೆಂದು ಹೇಳುವರು. ಇಲ್ಲಿ ಅಂತ್ಯಕಾಲದಲ್ಲಿ ಶ್ರೀಶಂಕರನು ಜೀವಿಗಳಿಗೆ ಬ್ರಹ್ಮೋಪದೇಶ ಮಾಡುವನು ।।೫೨೯।। ''ವರುಣಾ'' ಮತ್ತು ''ಅಶೀ'' ಎಂಬ ಈ ಎರಡು ನದಿಗಳ ಸೀಮೆಯ ಒಳಭಾಗದಲ್ಲಿ ಪಂಚಕ್ರೋಶಿ ವಿರುವುದು. ಅಲ್ಲಿ ಪಾಪಗಳಿಗೆ ಪ್ರವೇಶವಿರುವುದಿಲ್ಲ. ಆದ್ದರಿಂದ ಅದಕ್ಕೆ ವಾರಾಣಶೀ ಎಂದು ಕರೆಯುವರು ।।೫೩೦।। ವರುಣಾ ನದಿಯು ಪಾಪಗಳ ನಾಶ ಮಾಡುವುದು ಮತ್ತು ಅಶೀ ನದಿಯು ಮಹಾದೋಷಗಳ ನಿವಾರಣೆ ಮಾಡುವುದು, ಇವೆರಡರ ಮಧ್ಯದಲ್ಲಿ ವಿಶ್ವೇಶ್ವರನ ನಗರವಿರುವುದು. ಆದ್ದರಿಂದ ಆ ನಗರಕ್ಕೆ ವಾರಾಣಶೀ ಎಂದು ಹೇಳುವರು ।।೫೩೧।।

ಜೇ ವಿಶ್ವೇಶ್ವರಾಚೇ ಕ್ರೀಡಾಸ್ಥಾನ। ಜೇಥ ಸ್ವಾನಂದೇ ಶಿವ ಕ್ರೀಡೇ ಆಪಣ । ಯಾಲಾಗೀ ತೇ ಆನಂದವನ । ಜ್ಯಾಲಾಗೀ ಮರಣ ಅಮರ ವಾಂಛಿತೀ ।೫೩೨॥ ಜೇಥೇ ಜಿತಾ ಸದನ್ನೇ ಭುಕ್ತೀ । ಮೇಲ್ಯಾಮಾಗೇ ಅಚುಕ ಮುಕ್ತೀ । ಯಾಲಾಗೀ ''ಆನಂದವನ'' ಮ್ಹಣತೀ । ಪಾರ್ವತೀಪ್ರತೀ ಸದಾಶಿವ ಸಾಂಗೇ ।೫೩೩॥ ತಯಾ ವಾರಾಣಸೀ ಮುಕ್ತಿಕ್ಷೇತ್ರೀ । ಮಣಿಕರ್ಣಿಕಾಮಹಾತೀರೀ । ಪಂಚಮುದ್ರಾಪೀಠಾಮಾಝಾರೀ । ಏಕಾದಶಾವರೀ ಟೀಕಾಕೇಲೀ ।೫೩೪॥ ಐಕತಾ ಸಂತೋಷಲೇ ಸಜ್ಜನ । ಸ್ವಾನಂದೇ ತುಷ್ಟಲಾ ಜನಾರ್ದನ । ಪಂಚಾಧ್ಯಾಯೀ ಸಂಪತಾ ಜಾಣ । ಸ್ವಮುಕೇ ಆಪಣ ವರದ ವದಲಾ ।೫೩೫॥ ಗ್ರಂಥ ಸಿದ್ಧೀ ಪಾವೇಲ ಯಥಾರ್ಥೀ । ಯೇಣೇ ಸಜ್ಞಾನಹೀ ಸುಖೀ ಹೋತೀ । ಮುಮುಕ್ಷು ಪರಮಾರ್ಥ ಪಾವತೀ । ಸಾಧಕ ತರತೀ ಭವಸಿಂದು ।೫೩೬॥ ಭಾಳೇಭೋಳೇ ವಿಷಯೀ ಜನ । ಯಾಚೇ ಕರಿತಾ ಶ್ರವಣ ಪಠಣ । ತೇ ಹರಿಭಕ್ತ ಹೋತೀ ಜಾಣ । ಸನ್ಮಾರ್ಗೀ ಪೂರ್ಣ ಬಹುತ ಹೋತೀ ।.೫೩೭॥ ''ಹೇ ಟೀಕಾ ತರಿ ಮರಾಠೀ । ಪರೀ ಜ್ಞಾನದಾನೇ ಹೋಈಲ ಲಾಠೀ'' । ಐಸೀ ನಿಜಸುಖೀ ಬೋಲೋನಿ ಗೋಠೀ । ಕೃಪಾದೃಷ್ಟೀ ಪಾಹಿಲೇ ।೫೩೮॥ ತೇಥ ಮ್ಯಾ ಹೀ ಕೇಲೀ ವಿನಂತೀ । ''ಜೇ ಯೇ ಗ್ರಂಥೀ ಅರ್ಥಾರ್ಥೀ ಹೋತೀ । ತ್ಯಾಂಸೀ ಬ್ರಹ್ಮ ಭಾವೇ ಬ್ರಾಹ್ಮಣೀ ಭಕ್ತೀ । ನಾಮೀ ಪ್ರೀತೀ ಅಖಂಡ ದ್ಯಾವೀ ।೫೩೯॥ ತೇ ನ ವ್ಹಾವೇ ಬ್ರಹ್ಮದ್ವೇಷೀ । ನಿಂದಾ ನಾತಳಾವೀ ತ್ಯಾಂಸೀ । ಸಮೂಳ ಕ್ಷಯ ಬ್ರಹ್ಮದ್ವೇಷೇಸೀ । ''ನಿಂದೇಪಾಸೀ ಸಕಳ ಪಾಪೇ'' ।೫೪೦॥ ಐಸೀ ಐಕತಾ ವಿನವಣ । ಕೃಪೇನೇ ತುಷ್ಟಲಾ ಶ್ರೀಜನಾರ್ದನ । ಜೇ ಜೇ ಮಾಗಿತಲೇ ತೇ ತೇ ಸಂಪೂರ್ಣ । ವರದ ಆಪಣ ಸ್ವಯೇ ವದಲಾ ।೫೪೧॥ ಯೇ ಗ್ರಂಥೀ ಜ್ಯಾ ಅತ್ಯಂತ ಭಕ್ತೀ । ನಿಂದಾದ್ವೇಷ ನ ರಿಘೇ ತ್ಯಾಚೇ ಚಿತ್ತೀ । ಶ್ರೀರಾಮನಾಮೀ ಅತಿಪ್ರೀತೀ । ಸುನಿಶ್ಚಿತೀ ವಾಢೇಲ ।೫೪೨॥ ಅವಿದ್ಯ ಸುವಿದ್ಯ ವ್ಯುತ್ಪತ್ತೀ । ನ ಕರಿತಾ ಬ್ರಾಹ್ಮಣಜಾತೀ । ಬ್ರಹ್ಮಭಾವೇ ಹೋಈಲ ಭಕ್ತೀ । ತೇಣೇ ಬ್ರಹ್ಮಪ್ರಾಪ್ತೀ ಅಚೂಕ ।೫೪೩॥ ನಾಮಾಪರತಾ ಸಾಧಕಾ ಸದ್ಭಾವೋ । ನಾಹೀ ಬ್ರಾಹ್ಮಣಾಪರತಾ ಆನ ದೇವೋ । ತೋ ಯೇ ಗ್ರಂಥೀ ಭಜನಭಾವೋ । ನಿತ್ಯ ನವಾ ಪಹಾ ಹೋ ವಾಢೇಲ ।೫೪೪॥ ಐಸೇ ದೇವೋನಿ ವರದಾನ । ಹೃದಯೀ ಆಲಿಂಗೀ ಜನಾರ್ದನ । ಮ್ಹಣೇ ಯೇ ಗ್ರಂಥೀ ಜಯಾ ಭಜನ । ತ್ಯಾಚೇ ಭವಬಂಧನ ಮೀ ಛೇದೀ ।೫೪೫॥

ದು ಶ್ರೀವಿಶ್ವೇಶ್ವರನ ಕ್ರೀಡಾಸ್ಥಾನವಾಗಿರುವುದು. ಇಲ್ಲಿ ಸ್ವತಃ ಶ್ರೀಶಂಕರನು ಸ್ವಾನಂದದಿಂದ ಕ್ರೀಡಿಸುತ್ತಿರುವನು. ಆದ್ದರಿಂದ ಈ ಸ್ಥಳಕ್ಕೆ ಆನಂದವನವೆಂದು ಹೇಳುವರು. ಇಲ್ಲಿ ಅಮರರೂ ಸಹ ಮರಣದ ಇಚ್ಛೆ ಮಾಡುತ್ತಿರುವರು ।೫೩೨॥ ಇಲ್ಲಿ ಜೀವಂತನಾಗಿರುತ್ತಿರಲು ಸುಗ್ರಾಸ ಅನ್ನ ದೊರಕಿ ತೃಪ್ತಿ ಪ್ರಾಪ್ತವಾಗುವುದು ಹಾಗೂ ಕೊನೆಗೆ ಮರಣೋತ್ತರದಲ್ಲಿ ನಿಶ್ಚಿತವಾಗಿ ಮುಕ್ತಿಯು ದೊರೆಯುವುದು. ಆದ್ದರಿಂದ ಇದಕ್ಕೆ ಆನಂದವನವೆಂದು ಹೇಳುವರು. ಹೀಗೆಂದು ಶ್ರೀಶಂಕರನು ಪಾರ್ವತಿಗೆ ಹೇಳಿರುವನು ।೫೩೩॥ ಹೀಗಿರುವ ಯಾವ ವಾರಾಣಶೀ ನಾಮದ ಮುಕ್ತಿ ಕ್ಷೇತ್ರದಲ್ಲಿ ಮಣಿಕರ್ಣಿಕಾ ಮಹಾತೀರದಲ್ಲಿ, ಪಂಚಮುದ್ರಾ ಎಂಬ ಪೀಠದಲ್ಲಿ ಈ ಹನ್ನೊಂದನೆಯ ಸ್ಕಂಧದ ಭಾಷ್ಯ ಬರೆಯಲಾಯಿತು ।೫೩೪॥ ಇದನ್ನು ಕೇಳಿ ಸಜ್ಜನರಿಗೆ ಸಂತೋಷವಾಯಿತು. ಹಾಗೆಯೇ ಶ್ರೀಜನಾರ್ದನಸ್ವಾಮಿಯವರು ಆನಂದದಿಂದ ಪ್ರಸನ್ನರಾದರು. ಐದು ಅಧ್ಯಾಯ ಮುಗಿಯುತ್ತಲೇ ಅವರು ತಮ್ಮ ಮುಖದಿಂದ ಮಂಗಲಕಾರಕ ವರ ನೀಡಿದರು ।೫೩೫॥ ವರಕೊಟ್ಟ ಪ್ರಕಾರವೇನೆಂದರೆ ಈ ಗ್ರಂಥವು ನಿರ್ವಿಘ್ನವಾಗಿ ಪೂರ್ಣಗೊಳ್ಳುವುದು. ಇದರಿಂದ ಸಜ್ಞಾನೀ ಪುರುಷರೂ ಸಹ ಸುಖೀಯಾಗುವರು. ಮುಮುಕ್ಷು ಜನರಿಗೆ ಪರಮಾರ್ಥದ ಲಾಭವಾಗುವುದು. ಸಾಧಕರು ಸಂಸಾರಸಾಗರವನ್ನು ದಾಟಿ ಹೋಗುವರು ।೫೩೬॥ ಭಾಳೇಭೋಳೇ ಮುಗ್ಧ ಜನರು ಹಾಗೂ ವಿಷಯೀ ಜನರು ಈ ಗ್ರಂಥದ ಪಠಣೆ ಮಾಡಿದರೆ ಹರಿಭಕ್ತರಾಗುವರು ಹಾಗೂ ಸನ್ಮಾರ್ಗಕ್ಕೆ ಹತ್ತುವರು ।೫೩೭॥ ಈ ಭಾಷ್ಯವು ಮರಾಠೀಯಲ್ಲಿದ್ದರೂ ಕೂಡ ಜ್ಞಾನದಾನ ಮಾಡುವ ವಿಷಯದಲ್ಲಿ ಮಹಾ ಸಮರ್ಥವಾಗಿರುವುದು. ಹೀಗೆ ತಮ್ಮ ವಾಣಿಯಿಂದ ನುಡಿದು ನನ್ನತ್ತ ಕೃಪಾದೃಷ್ಟಿಯಿಂದ ನೋಡಿದರು ।೫೩೮॥ ಆಗ ನಾನು ಅವರನ್ನು ಹೀಗೆ ವಿನಂತಿಸಿದೆನು ; ಈ ಗ್ರಂಥದ ಅರ್ಥ ಇಚ್ಛಿಸುವವರಿಗೆ ಬ್ರಹ್ಮ ಭಾವದಿಂದ ಬ್ರಾಹ್ಮಣಭಕ್ತಿ ಹಾಗೂ ಹರಿನಾಮದಲ್ಲಿ ಅಖಂಡ ಪ್ರೀತಿಯುಂಟಾಗುವಂತೆ ಮಾಡಿರಿ ।೫೩೯॥ ಅವರು ಬ್ರಹ್ಮದ್ವೇಷಿಯಾಗಬಾರದು. ಅವರು ನಿಂದೆಗಳಿಗೆ ಸ್ಪರ್ಶ ಕೂಡ ಮಾಡಬಾರದು. ಕಾರಣ ಬ್ರಹ್ಮದ್ವೇಷದಿಂದ ಎಲ್ಲವೂ ಕ್ಷಯಗೊಳ್ಳುವುದು ಮತ್ತು ನಿಂದೆಯ ಹತ್ತಿರ ಸರ್ವಪಾಪಗಳಿರುವುವು ।೫೪೦॥ ಹೀಗೆ ವಿನಂತಿ ಕೇಳಿ ಶ್ರೀಜನಾರ್ದನಸ್ವಾಮಿಯವರು ಕೃಪೆಯಿಂದ ಸಂತುಷ್ಟರಾದರು ಮತ್ತು ನಾನು ಕೇಳಿದ ವರದಾನಗಳನ್ನೆಲ್ಲ ಕೊಟ್ಟರು ।೫೪೧॥ ಈ ಗ್ರಂಥದಲ್ಲಿ ಯಾರ ಅನನ್ಯ ಭಕ್ತಿ ಇರುವುದೋ, ಅವರ ಮನದಲ್ಲಿ ನಿಂದೆ, ದ್ವೇಷವಾಗುವುದೇ ಇಲ್ಲ. ಅವರಲ್ಲಿ ರಾಮನಾಮದಮೇಲೆ ಅತಿಶಯ ಪ್ರೇಮ ಉಂಟಾಗುವುದು ।೫೪೨॥ ಬ್ರಾಹ್ಮಣರಲ್ಲಿ ವಿದ್ವಾನನು, ಅವಿದ್ವಾನನು ಎಂಬ ಭೇದಭಾವ ಮಾಡದೇ ಬ್ರಹ್ಮ ಭಾವನೆಯಿಂದ ಅವರಲ್ಲಿ ಭಕ್ತಿಯುಂಟಾಗಿ ಅದರಿಂದ ಅವರಿಗೆ ತಪ್ಪದೇ ಬ್ರಹ್ಮಪ್ರಾಪ್ತಿಯಾಗುವುದು ।೫೪೩॥ ಹರಿನಾಮದ ಹೊರತಾಗಿ ಅನ್ಯ ಸದ್ಭಾವನೆಯ ಸಾಧನೆ ಇರುವುದಿಲ್ಲ. ಬ್ರಾಹ್ಮಣನಂತಹ ಅನ್ಯ ದೇವರು ಇಲ್ಲ. ಈ ಭಜನೆ ಭಾವನೆಯು ಈ ಗ್ರಂಥಮೂಲಕ ನಿತ್ಯ ನೂತನವಾಗಿ ಬೆಳೆಯುತ್ತಿರುವುದು ।೫೪೪॥ ಹೀಗೆ ವರದಾನವನ್ನು ಕೊಟ್ಟು ಶ್ರೀಜನಾರ್ದನಸ್ವಾಮಿಯವರು ನನ್ನನ್ನು ಹೃದಯಕ್ಕೆ ಅಪ್ಪಿಕೊಂಡರು, ಆಲಿಂಗಿಸಿದರು ಹಾಗೂ ಈ ಗ್ರಂಥಕ್ಕೆ ಯಾರು ಪ್ರೀತಿಸುವರೋ, ಅವರ ಸಂಸಾರ ಬಂಧನೆಯನ್ನು ನಾನು ಮುರಿದುಹಾಕುವೆನು ಎಂದು ಹೇಳಿದರು ।೫೪೫॥

ಹೇಹೀ ಅಲಂಕಾರಪದವೀ । ಸ್ವಯೇ ಜನಾರ್ದನಚಿ ವದವೀ । ಏವಂ ಕೃಪಾಕೇಲೀ ಜನಾರ್ದನದೇವೀ । ಹೇ ಠೇವಾಠೇವೀ ಮೀ ನೇಣೇ ।।೫೪೬।। ಥೋರ ಭಾಗ್ಯೇ ಮೀ ಪುರತಾ । ಪೂರ್ಣ ಕೃಪಾ ಕೇಲೀ ಸಮಸ್ತ ಶ್ರೋತಾ । ಸಮೂಳ ಸಾಂಭಾಳಿಲೇ ಗ್ರಂಥಾರ್ಥಾ । ಅರ್ಥಪರಮಾರ್ಥಾ ಸಮಸಾಮ್ಯೇ ।।೫೪೭।। ಪುಢೇ ಯಾ ಗ್ರಂಥಾಚೇ ವ್ಯಾಖ್ಯಾನ । ಜೇಥ ಹೋಈಲ ಕಥಾಕಥನ । ತೇಥ ದ್ಯಾವೇ ಅವಧಾನ । ಹೇ ಪ್ರಾರ್ಥನ ದೀನಾಚೇ ।।೫೪೮।। ಹೇ ಐಕೋನೀ ಪ್ರಾರ್ಥನ । ಸಂತೋಷಲೇ ಶ್ರೋತೇಸಜ್ಜನ । ಹೇ ಕಥಾ ಆಮುಚೇ ನಿಜಜೀವನ । ಜೇಥ ವ್ಯಾಖ್ಯಾನ ತೇಥ ಆಮ್ಹೀ ।।೫೪೯।। ಐಸೇ ಸಂತುಷ್ಟಲೇ ಶ್ರೋತೇಜನ । ವರದೇ ತುಷ್ಟಲಾ ಶ್ರೀಜನಾರ್ದನ । ಏಕಾ ಜನಾರ್ದನ ಶರಣ। ಗ್ರಂಥ ಸಂಪೂರ್ಣ ತೇಣೇ ಜಾಹಲಾ ।।೫೫೦।। ವಾರಾಣಸೀ ಮಹಾಮುಕ್ತಿ ಕ್ಷೇತ್ರ । ವಿಕ್ರಮಶಕ ''ವೃಷ'' ಸಂವತ್ಸರ । ಶಕೇ ಸೋಳಾಶೇ ತೀಸೋತ್ತರ । ಟೀಕಾ ಏಕಾಕಾರ ಜನಾರ್ದನಕೃಪಾ ।।೫೫೧।। ಮಹಾಮಂಗಳ ಕಾರ್ತಿಕಮಾಸೀ । ಶುಕ್ಲ ಪಕ್ಷ ಪೌರ್ಣಿಮೇಸೀ । ಸೋಮವಾರಶಿವಯೋಗೇಸೀ । ಟೀಕಾ ಏಕಾದಶೀ ಸಮಾಪ್ತ ಕೇಲೀ ।।೫೫೨।। ಸ್ವದೇಶಿಂಚಾ ಶಕ ಸಂವತ್ಸರ । ದಂಡಕಾರಣ್ಯ ಶ್ರೀರಾಮಕ್ಷೇತ್ರ । ಪ್ರತಿಷ್ಠಾನ ಗೋದಾತೀರ । ತೇಥೀಲ ಉಚ್ಚಾರ ತೋ ಐಕಾ ।।೫೫೩।। ಶಾಲಿವಾಹನಶಕವೈಭವ । ಸಂಖ್ಯಾ ಚೌದಾಶೇ ಪಂಚಾಣ್ಣವ । ''ಶ್ರೀಮುಖ'' ಸಂವತ್ಸರಾಚೇ ನಾಂವ । ಟೀಕಾ ಅಪೂರ್ವ ತೇ ಜಾಹಲೀ ।।೫೫೪।। ಏವಂ ಏಕಾದಶಾಚೀ ಟೀಕಾ । ಜನಾರ್ದನಕೃಪಾ ಕರೀ ಏಕಾ । ತೇ ಹೇ ಉಭಯದೇಶ ಆವಾಂಕಾ । ಲಿಹಿಲಾ ನೇಟಕಾ ಶಕಸಂವತ್ಸರ ।।೫೫೫।। ಪಂಧ್ರಾಶತೇ ಶ್ಲೋಕ ಸುರಸ । ಏಕತೀಸ ಅಧ್ಯಾಯ ಜ್ಞಾನರಹಸ್ಯ । ಸ್ವಮುಖೇ ಬೋಲಿಲಾ ಹೃಷೀಕೇಶ । ಏಕಾಕೀ ಏಕಾದಶ ದುಜೇನೀವೀಣ ।।೫೫೬।। ಏಕಾದಶ ಮ್ಹಣಜೇ ಏಕ ಏಕ । ತೇಥ ದುಜೇಪಣಾಚಾ ನ ರಿಘೇ ಅಂಕ । ತೇಚಿ ಏಕಾದಶ ಇಂದ್ರಿಯೀ ಸುಖ । ಏಕತ್ವೀ ಅಲೋಲಿಕ ಡಾರಲೇ ಪೂರ್ಣ ।।೫೫೭।। ತ್ಯಾ ಏಕಾದಶಾಚೀ ಟೀಕಾ । ಏಕರಸೀ ಕರೀ ಏಕಾ । ತ್ಯಾ ಏಕತ್ವಾಚ್ಯಾ ನಿಜಸುಖಾ । ಫಳೇಲ ಸಾಧಕಾ ಜನಾರ್ದನಕೃಪಾ ।।೫೫೮।।

ಈ ಯಾವ ಅಲಂಕಾರಿಕ ಭಾಷೆಯನ್ನೂ ಸಹ ಸ್ವತಃ ಶ್ರೀಜನಾರ್ದನರೇ ನುಡಿಸುತ್ತಿರುವರು. ಹೀಗೆ ಶ್ರೀಜನಾರ್ದನ ದೇವನು ಕೃಪೆ ಮಾಡಿದನು. ಇದೂ ಸಹ ನನಗೆ ತಿಳಿಯಲಿಲ್ಲ ।।೫೪೬।। ಸಮಸ್ತ ಶ್ರೋತೃಗಳವರು ನನ್ನಲ್ಲಿ ಪೂರ್ಣ ಕೃಪೆದೋರಿದರು. ಇದು ನನ್ನ ದೊಡ್ಡ ಭಾಗ್ಯವು. ಅರ್ಥ-ಪರಮಾರ್ಥದ ದೃಷ್ಟಿಯಿಂದ ಅವರು ನನಗೆ ಸತತವಾಗಿ ಪರಿಪೂರ್ಣವಾಗಿ ಸಾಂಭಾಳಿಸಿದರು ।।೫೪೭।। ಮುಂದಾದರೂ ಈ ಗ್ರಂಥದ ನಿರೂಪಣೆ ಎಲ್ಲಿ ನಡೆಯುವುದೋ, ಅಥವಾ ಇದರ ಕಥೆಯನ್ನು ಎಲ್ಲಿ ಹೇಳಲಾಗುವುದೋ, ಅಲ್ಲಿ ಹೀಗೆಯೇ ಲಕ್ಷ ಕೊಟ್ಟು ಕೇಳಬೇಕು. ಹೀಗೆ ದೀನನಾದ ನನ್ನ ನಮ್ರ ಭಾವನೆಯ ಅಂತಃಕರಣಪೂರ್ವಕ ಪ್ರಾರ್ಥನೆ ಇರುವುದು ।।೫೪೮।। ಈ ನಮ್ರ ಪ್ರಾರ್ಥನೆ ಕೇಳಿ ಶ್ರೋತೃಗಳವರಿಗೆ ಪರಮ ಸಂತೋಷವಾಯಿತು. ಹಾಗೂ ಈ ಕಥೆಯು ನಮಗೆ ನಮ್ಮ ಪ್ರಾಣಕ್ಕಿಂತಲೂ ಅಧಿಕ ಪ್ರಿಯವಾಗಿರುವುದು. ಇದರ ನಿರೂಪಣೆ ಎಲ್ಲಿ ನಡೆಯುವುದೋ ಅಲ್ಲಿ ನಾವು ನಿಶ್ಚಿತವಾಗಿ ಇರುವೆವು ಎಂದು ಹೇಳಿದರು ।।೫೪೯।। ಈ ಪ್ರಕಾರವಾಗಿ ಶ್ರೋತೃಗಳವರು ಸಂತುಷ್ಟರಾದರು, ವರವನ್ನು ಕೊಟ್ಟು ಶ್ರೀಜನಾರ್ದನಸ್ವಾಮಿಯವರೂ ಪ್ರಸನ್ನರಾದರು. ಏಕನಾಥನು ಶ್ರೀಜನಾರ್ದನಸ್ವಾಮಿವಯರಿಗೆ ಅನನ್ಯ ಭಾವದಿಂದ ಪೂರ್ಣ ಶರಣಾದನು. ಆದ್ದರಿಂದ ಈ ಗ್ರಂಥವು ಸಂಪೂರ್ಣವಾಯಿತು ।।೫೫೦।। ವಾರಾಣಶೀ ನಾಮದ ಮಹಾಮುಕ್ತಿ ಕ್ಷೇತ್ರದಲ್ಲಿ ವಿಕ್ರಮ ಶಕೆ ಹದಿನಾರುನೂರಾ ಮೂವತ್ತನೆಯ ವೃಷನಾಮ ಸಂವತ್ಸರದಲ್ಲಿ ಶ್ರೀಜನಾರ್ದನಸ್ವಾಮಿವಯರ ಕೃಪೆಯಿಂದ ಈ ಭಾಷ್ಯೆಯು ಪೂರ್ಣಗೊಂಡಿತು ।।೫೫೧।। ಮಹಾಮಂಗಲಮಯ ಕಾರ್ತಿಕ ಮಾಸದ ಶುದ್ಧ ಪೌರ್ಣಿಮೆಯ ಸೋಮವಾರ ಶಿವಯೋಗದ ಶುಭ ದಿನದಂದು ಈ ಹನ್ನೊಂದನೆಯ ಸ್ಕಂಧದ ಭಾಷ್ಯೆಯು ಪೂರ್ಣಗೊಂಡಿತು ।।೫೫೨।। ಸ್ವದೇಶಿಯ ಶಕೆ ಹಾಗೂ ಸಂವತ್ಸರ, ದಂಡಕಾರಣ್ಯದಲ್ಲಿನ ಶ್ರೀರಾಮಕ್ಷೇತ್ರದ ಹಾಗೂ ಗೋದಾವರೀ ತೀರದಲ್ಲಿನ ಪೈಠಣ ಕ್ಷೇತ್ರದ ಉಲ್ಲೇಖ ಹೇಳುವೆನು, ಕೇಳಿರಿ ।।೫೫೩।। ಶ್ರೀಶಾಲಿವಾಹನ ಶಕೆ ಹದಿನಾಲ್ಕುನೂರಾ ತೊಂಬತ್ತೈದನೆಯ ಶ್ರೀಮುಖನಾಮ ಸಂವತ್ಸರದ ವರ್ಷದಲ್ಲಿ ಈ ಅಪೂರ್ವ ಭಾಷ್ಯೆಯು ಪೂರ್ಣವಾಯಿತು ।।೫೫೪।। ಈ ರೀತಿಯಲ್ಲಿ ಈ ಯಾವ ಹನ್ನೊಂದನೆಯ ಸ್ಕಂಧಕ್ಕೆ ಶ್ರೀಜನಾರ್ದನಸ್ವಾಮಿಗಳವರ ಕೃಪೆಯಿಂದ ಏಕನಾಥನು ಭಾಷ್ಯೆ ಬರೆದನು. ಇದರ ಎರಡೂ ಸ್ಥಾನಗಳ ಶಕೆ-ಸಂವತ್ಸರಗಳ ಸ್ಪಷ್ಟ ಉಲ್ಲೇಖ ಮಾಡಲಾಯಿತು ।।೫೫೫।। ಈ ಗ್ರಂಥದಲ್ಲಿ ಒಟ್ಟು ಹದಿನೈದುನೂರು ಸುರಸ ಶ್ಲೋಕಗಳಿರುವುವು ಹಾಗೂ ಮೂವತ್ತೊಂದು ಅಧ್ಯಾಯಗಳಿರುವುವು. ಶ್ರೀಕೃಷ್ಣನು ಸ್ವತಃ ಜ್ಞಾನರಹಸ್ಯ ಹೇಳಿರುವನು. ಈ ಹನ್ನೊಂದನೆಯ ಸ್ಕಂಧವು ಐಕ್ಯ ಭಾವನೆಯಿಂದ ತುಂಬಿಕೊಂಡಿರುವುದು. ಇದರಲ್ಲಿ ಯಾವುದೇ ಪ್ರಕಾರದ ಭಿನ್ನಭಾವವಿರುವುದಿಲ್ಲ ।।೫೫೬।। ಹನ್ನೊಂದು ಎಂದರೆ ಒಂದು, ಒಂದು. ಅದರಲ್ಲಿ ಬೇರೆ ಅಂಕೆ ಕೂಡಲು ಅವಕಾಶವೇ ಇರುವುದಿಲ್ಲ. ಅದೇ ಹನ್ನೊಂದು ಇಂದ್ರಿಯಗಳಲ್ಲಿನ ಸುಖವು ಇದರಲ್ಲಿ ಒಂದೇ ರೂಪದಿಂದ ವಿಲಕ್ಷಣ ರೀತಿಯಲ್ಲಿ ಐಕ್ಯರೂಪದಿಂದ ತುಂಬಿರುವುದು ।।೫೫೭।। ಈ ಯಾವ ಹನ್ನೊಂದನೆಯ ಸ್ಕಂಧದ ಭಾಷ್ಯೆಯನ್ನು ಏಕನಾಥನು ಒಂದೇ ಬ್ರಹ್ಮರಸದಿಂದಲೇ ಬರೆದಿರುವನು. ಇದು ಶ್ರೀಜನಾರ್ದಸ್ವಾಮಿಗಳವರ ಕೃಪೆಯಿಂದ ಏಕತ್ವದ ಆತ್ಮಸುಖದ ಫಲವು ಸಾಧಕರಿಗೆ ನಿಶ್ಚಿತವಾಗಿ ದೊರೆಯುವುದು ।।೫೫೮।।

ಹಾ ಜ್ಞಾನಗ್ರಂಥ ಚಿದ್ರತ್ನ । ಯಥಾರ್ಥ ಅರ್ಥಿಲಾ ಸಂಪೂರ್ಣ । ಮಾರ್ಥೇನಿ ನಾಂವೇ ಶ್ರೀಜನಾರ್ದನ । ಗ್ರಂಥಕರ್ತಾ ಆಪಣ ಸ್ವಯೇ ಜಾಹಲಾ ।೫೫೯॥ ಏಕಾ ಜನಾರ್ದನಾ ಶರಣ । ಜನಾರ್ದನಾ ಪಢಿಯೇ ಏಕಪಣ । ಜೇವೀ ಕಾ ಸೂರ್ಯಾಚೇ ಕಿರಣ । ಸೂರ್ಯತೇಜೇ ಪೂರ್ಣ ನಿರಸಿತಮ ।೫೬೦॥ ತೇವೀ ಶ್ರೀಜನಾರ್ದನತೇಜೇ ಜಾಣ । ಪ್ರಕಾಶಲೇ ಏಕಪಣ । ತೇಣೇ ಪ್ರಕಾಶೇ ಗ್ರಂಥ ಸಂಪೂರ್ಣ । ಜನಾರ್ದನಾರ್ಪಣ ಏಕಪಣೇಸೀ ।೫೬೧॥ ''ಜನ ಜನಾರ್ದನ ಏಕ''। ಜಾಣೇ ತೋ ಸುಟಲಾ ನಿಃಶೇಖ । ಹೇಚಿ ನೇಣೋನಿಯಾ ಲೋಕ । ಗುಂತಲೇ ಅನೇಕ ನಿಜಾತ್ಮ ಭ್ರಮೇ ।೫೬೨॥

ಇತಿ ಶ್ರೀಭಾಗವತೇ ಮಹಾಪುರಾಣೇ ಪರಮಹಂಸಸಂಹಿತಾಯಾ ಏಕದಶಸ್ಕಂಧೇ ಶ್ರೀಕೃಷ್ಣ
ಉದ್ಧವಸಂವಾದೇ ಏಕಾಕಾರಟೀಕಾಯಾಂ ''ಮೌಸಲೋಪಾಖ್ಯಾನಂ'' ನಾಮ ಏಕತ್ರಿಂಶೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥


ಈ ಹನ್ನೊಂದನೆಯ ಸ್ಕಂಧವೆಂದರೆ ಜ್ಞಾನರೂಪ ಚಿದ್‌ರತ್ನವೇ ಆಗಿರುವುದು. ನನ್ನ ನಾಮದಿಂದ ಶ್ರೀಜನಾರ್ದಸ್ವಾಮಿಯವರು ಸ್ವತಃ ಗ್ರಂಥಕರ್ತರಾಗಿರುವರು. ಅವರು ನನ್ನ ಮುಖದಿಂದ ಈ ಯಾವ ಭಾವಪೂರ್ಣ ಸಂಪೂರ್ಣ ಅರ್ಥವನ್ನು ಯಥಾರ್ಥವಾಗಿ ನುಡಿಸಿದರು ।೫೫೯॥ ಏಕನಾಥನು ಶ್ರೀಜನಾರ್ದನಸ್ವಾಮಿಯವರಿಗೆ ಪೂರ್ಣ ಶರಣಾಗಿರುವನು. ಶ್ರೀಜನಾರ್ದಸ್ವಾಮಿಯವರಿಗೆ ಏತಕ್ಕದ ಅತ್ಯಂತ ಪ್ರೀತಿವಿರುವುದು. ಸೂರ್ಯನ ಕಿರಣಗಳು ಯಾವ ಪ್ರಕಾರವಾಗಿ ಸೂರ್ಯನ ತೇಜದಿಂದ ಅಂಧಃಕಾರವನ್ನು ಪರಿಪೂರ್ಣವಾಗಿ ದೂರ ಮಾಡುವುವೋ ।೫೬೦॥ ಅದೇಪ್ರಕಾರವಾಗಿ ಶ್ರೀಜನಾರ್ದನಸ್ವಾಮಿಯವರ ತೇಜದಿಂದ ಏಕತ್ವವು ಪ್ರಕಾಶಗೊಂಡಿತು. ಆದ್ದರಿಂದ ಸಂಪೂರ್ಣ ಗ್ರಂಥವು ದಿವ್ಯ ತೇಜದಿಂದ ಪ್ರಕಾಶಿತವಾಗಿರುವುದು. ಈ ಗ್ರಂಥವನ್ನು ಏಕತ್ವದಿಂದ ಶ್ರೀಜನಾರ್ದನಸ್ವಾಮಿಯವರಿಗೆ ಅಂತಃಕರಣಪೂರ್ವಕವಾಗಿ ಪ್ರೇಮಭಾವದಿಂದ ಅರ್ಪಣೆ ಮಾಡಲಾಗಿರುವುದು ।೫೬೧॥ ಸರ್ವ ಜನರಲ್ಲಿ ಒಬ್ಬನೇ ಜನಾರ್ದನನಿರುವನು. ಇದರ ಜ್ಞಾನವು ಯಾರಿಗೆಪೂರ್ಣವಾಗಿ ಇರುವುದೋ, ಅವರು ಸಂಪೂರ್ಣವಾಗಿ ಮುಕ್ತರಾಗುವರು. ಆದರೆ ಇದರ ಜ್ಞಾನವು ಇಲ್ಲವಾದ್ದರಿಂದ ಅನೇಕ ಜನರು ಸಂಸಾರ ಚಕ್ರದಲ್ಲಿ ಸಿಲುಕಿಕೊಂಡು ತಿರುಗುತ್ತಿರುವರು ।೫೬೨॥

ಈ ಪ್ರಕಾರವಾಗಿ ಶ್ರೀಮದ್ಭಾಗವತ ಮಹಾಪುರಾಣದ ಪರಮಹಂಸ ಸಂಹಿತೆಯಲ್ಲಿನ ಹನ್ನೊಂನೆಯ ಸ್ಕಂಧದ
ಏಕನಾಥ ಮಹಾರಾಜರ ಭಾಷ್ಯೆಯ ಮೌಸಲೋಪಾಖ್ಯಾನ ನಾಮದ ಮೂವತ್ತೊಂದನೆಯ ಅಧ್ಯಾಯವು ಪೂರ್ಣಗೊಂಡಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ಪುಂಡಲೀಕ ವರದ ಹರಿ ವಿಠ್ಠಲ ಶ್ರೀಜ್ಞಾನದೇವ ತುಕಾರಾಮ

ಶ್ರೀಸಂತ ಏಕನಾಥ ಮಹಾರಾಜರ ಜಲಸಮಾಧಿ ದೃಶ್ಯ



ಶ್ರೀಸಂತ ವಾಙ್ಮಯ ಸೇ[illegible]ಪ್ಪಳ, ಸದಸ್ಯರು

ಶ್ರೀ ಪಾಂಡುರಂಗ ದೇವಸ್ಥಾನ, ಗ[illegible]ಸ್ತೆ, ಕೊಪ್ಪಳ – 583 231.

1. ಹ.ಭ.ಪ. ಕೃಷ್ಣಾಜೀರಾವ ದೋಂಗ್ರಪ್ಪ ಜ್ಞಾನಮೋತೆ, ಕೊಪ್ಪಳ. ಮೊ : 9343300379 (ಅಧ್ಯಕ್ಷರು)
2. ಹ.ಭ.ಪ. ಪಾಂಡುರಂಗಸಾ ಲಕ್ಷಣಸಾ ಮೇರವಾಡೆ, ಇಂಜಿನೀಯರ್, ಗದಗ - ಬೆಟಗೇರಿ. ಮೊ : 9986032896 (ಉಪಾಧ್ಯಕ್ಷರು)
3. ಹ.ಭ.ಪ. ಪಾಂಡುರಂಗರಾವ ದತ್ತೋಬರಾವ ಮಹೇಂದ್ರಕರ, ನಿವೃತ್ತಶಿಕ್ಷಕರು, ಗದಗ. ಫೋ: 08372-230275 ಪಿ.ಪಿ. (ಕಾರ್ಯದರ್ಶಿ)
4. ಶ್ರೀಯುತ ವಿರುಪಣ್ಣಾ ಅಂಬರಕರ ಚಾರ್ಟರ್ಡ ಅಕೌಂಟಂಟ್, ದಾವಣಗೆರೆ. ಮೊ : 9341357304 (ಕೋಶಾಧ್ಯಕ್ಷರು)
5. ಹ.ಭ.ಪ. ನರಸಪ್ಪ ಯಮನಪ್ಪ ಹಡಪದ, ಕೊಪ್ಪಳ. ಫೋ : 08539 – 221162 (ಸದಸ್ಯರು)
6. ಹ.ಭ.ಪ. ಎಸ್.ಎಲ್. ಅಶ್ವತ್ಥನಾರಾಯಣ, ಪ್ರೋ : ಶ್ರೀ ಹರಿಸಿಲ್ಕ್ಸ್, ಬೆಂಗಳೂರು. ಮೊ : 9845123122 (ಸದಸ್ಯರು)
7. ಶ್ರೀಯುತ ಜಿ. ಮಂಜುನಾಥರಾವ ನಿವೃತ್ತ ಎಕ್ಸರೇ ಇಂಜಿನೀಯರ್ ಡಿ.ಈ. ಎಲೆಕ್ಟ್ರೀಕಲ್ ಶಂಕರಪುರಂ ಗಾಂಧಿಬಜಾರ್ ಬೆಂಗಳೂರು. ಮೊ : 9900113956 (ಸದಸ್ಯರು)
8. ಹ.ಭ.ಪ. ಪುಂಡಲೀಕರಾವ ವಿಠೋಬರಾವ ಜ್ಞಾನಮೋತೆ, ಹೊಸಪೇಟೆ. ಮೊ : 9448826874 (ಸದಸ್ಯರು)
9. ಹ.ಭ.ಪ. ರುಕ್ಮಾಜೀರಾವ ನಾರಾಯಣರಾವ ಹಲಾಲೇ, ಬಿ.ಕಾಂ., ಹಗರಿಬೊಮ್ಮನಹಳ್ಳಿ. ಮೊ : 9880630938 (ಸದಸ್ಯರು)
10. ಹ.ಭ.ಪ. ಆರ್. ತಿಮ್ಮಾರೆಡ್ಡಿ ಹನುಮಂತರೆಡ್ಡಿ, ಯರಂಗಳಿಗಿ. ಫೋ : 08393-269269 (ಸದಸ್ಯರು)
11. ಹ.ಭ.ಪ. ವೆಂಕಟರಾವ ತಿಪ್ಪುರಾವ ಮೋಹಿತೆ, ಆದೋನಿ. ಮೊ : 9247433179 (ಸದಸ್ಯರು)